ಸಂಪುಟ ೨೮

ಇತಿಹಾಸ ದರ್ಶನ



KARNATAKA ITIHASA ACADEMY
कर्नाटक इतिहास अकादमि

ಕರ್ನಾಟಕ ಇತಿಹಾಸ ಅಕಾದೆಮಿ (ರಿ.), ಬೆಂಗಳೂರು

೨೦೧೩

ಇತಿಹಾಸ ದರ್ಶನ

ಸಂಪುಟ ೨೮ / ೨೦೧೩

೨೦೧೨ರ ಸೆಪ್ಟಂಬರ್ ೨೨ರಿಂದ ೨೪ರವರೆಗೆ ಕರ್ನಾಟಕ ಇತಿಹಾಸ ಅಕಾದೆಮಿ ಹಾಗೂ
ಶ್ರೀಮದ್ ಜಗದ್ಗುರು ಆದಿಶಂಕರಾಚಾರ್ಯ ಮಹಾಸಂಸ್ಥಾನಮ್, ದಕ್ಷಿಣಾಮ್ನಾಯ
ಶ್ರೀ ಶಾರದಾ ಪೀಠಮ್, ಶೃಂಗೇರಿ ಇವರ ಸಂಯುಕ್ತ ಆಶ್ರಯದಲ್ಲಿ ಶೃಂಗೇರಿಯಲ್ಲಿ
ಸಮಾವೇಶಗೊಂಡಿದ್ದ ಕರ್ನಾಟಕ ಇತಿಹಾಸ ಅಕಾದೆಮಿಯ ೨೬ನೆಯ ವಾರ್ಷಿಕ ಸಮ್ಮೇಳನದಲ್ಲಿ
ಅಕಾದೆಮಿಯ ಸದಸ್ಯರು ಮಂಡಿಸಿದ ವಿದ್ವತ್ ಪ್ರಬಂಧಗಳ ಸಂಪುಟ.

ಸಂಪಾದಕರು

ಡಾ|| ಪಿ.ವಿ. ಕೃಷ್ಣಮೂರ್ತಿ

ಎಸ್. ರಾಜೇಂದ್ರಪ್ಪ

ಕರ್ನಾಟಕ ಇತಿಹಾಸ ಅಕಾದೆಮಿ (ರಿ.) ಬೆಂಗಳೂರು

ITIHĀSA DARŚANA - ***Volume 28 / 2013***

The Volume of the Scholarly papers presented and the General body Proceedings of the 26th Annual Conference of

The Karnataka Ithihasa Academy (Regd.,)
held at Srimad Jagadguru Adi Shankaracharya Mahasamstanam
Dakshinamnaya Sri Sharadha Pitam, Sringeri, Chikkamagaluru Dist.
on 22nd, 23rd & 24th September 2012

ಪುಟಗಳು : ೫೭೬ + xxxvi + Plates XII

Pages : 576 + xxxvi + Plates XII

Edited by : **Dr. P. V. Krishna Murthy**
S. Rajendrappa

Published by : Secretary
Karnataka Itihasa Academy (Regd.)
B.M. Shri Kalabhavana premises
3rd Main, Narasimharaja Colony
Bangalore - 560 019.

e-mail : **karnatakaitihasaacademy25@gmail.com**
Blog : **itihasaacademy.blogspot.in**
Web : **www.karnatakaithihasaacademy.org**

Price : ₹ **600**

ಬೆಲೆ : ₹ ೬೦೦

ಆರ್ಥಿಕ ನೆರವು : ಕರ್ನಾಟಕ ಸರ್ಕಾರದ ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ.
ಶ್ರೀ ಜಗದ್ಗುರು ರಂಭಾಪುರಿ ವೀರಸಿಂಹಾಸನ ಮಹಾಸಂಸ್ಥಾನ ಪೀಠ, ಬಾಳೇಹೊನ್ನೂರು.

ಮುಖಪುಟದ ಚಿತ್ರ : ಹಿರಿಯ ಕೆಂಪೇಗೌಡರ ಕಂಚಿನ ಪ್ರತಿಮೆ, ಶಿವಗಂಗೆ.

ISBN No. 978-81-921255-3-4

Printed at
ಲಕ್ಷ್ಮೀ ಮುದ್ರಣಾಲಯ
LAKSHMI MUDRANALAYA Bangalore
ಚಾಮರಾಜಪೇಟೆ, ಬೆಂಗಳೂರು-೧೮
ದೂರವಾಣಿ : ೨೬೬೧ ೩೧೨೩, ೨೬೬೧ ೮೭೫೨



ಶ್ರೀ ಜಗದ್ಗುರು ರಂಭಾಪುರೀ ವೀರಸಿಂಹಾಸನ ಮಹಾಸಂಸ್ಥಾನ ಪೀಠ

ಬಾಳೇಹೊನ್ನೂರು-೫೭೭ ೧೧೨ ಚಿಕ್ಕಮಗಳೂರು ಜಿಲ್ಲೆ

ಶ್ರೀಮದ್ ರಂಭಾಪುರಿ ವೀರಸಿಂಹಸನಾಧೀಶ್ವರ ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು
ಪ್ರಸನ್ನ ರೇಣುಕ ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರು

ದಿನಾಂಕ : ೧೦.೦೮.೧೩ | ವಾಸ್ತವ್ಯ : ಶ್ರೀಪೀಠ, ಬಾಳೆಹೊನ್ನೂರು

ಶುಭಾಶೀರ್ವಾದ ಸಂದೇಶ

ಸತ್ಯದಿಂದ ಧರ್ಮ,ಯೋಗದಿಂದ ವಿದ್ಯೆ,ಸ್ವಚ್ಛತೆಯಿಂದ ರೂಪ, ಸದ್ವರ್ತನೆಯಿಂದ ಕುಲದ ರಕ್ಷಣೆಯಾಗುತ್ತದೆ. ಇತಿಹಾಸ ಮತ್ತು ಆದರ್ಶ ಪರಂಪರೆಯನ್ನು ಮರೆತರೆ ಬದುಕಿದರೂ ಸತ್ತಂತೆ ಎಂಬುದನ್ನು ಮರೆಯಬಾರದು. ವ್ಯಕ್ತಿಯೇ ಆಗಲಿ,ಜನಾಂಗವೇ ಆಗಲಿ ಶ್ರದ್ಧೆಯನ್ನು ಕಳೆದುಕೊಂಡರೆ ನಾಶ ಸಮೀಪಿಸಿದಂತೆ. ನಾವು ನಮ್ಮ ಏಳ್ಗೆಯನ್ನಷ್ಟೇ ಗಮನದಲ್ಲಿಟ್ಟುಕೊಂಡು ಕೆಲಸ ಮಾಡುತ್ತೇವೆ. ಅದರ ಜೊತೆಗೆ ದಿನನಿತ್ಯ ಅರ್ಧಗಂಟೆ ದೇಶದ ಇತಿಹಾಸ ಮತ್ತು ಅಭಿವೃದ್ಧಿಯನ್ನು ಕೇಂದ್ರೀಕರಿಸಿ ಕೆಲಸ ಮಾಡಿದರೆ ಅದರ ಪರಿಣಾಮ ಅದ್ಭೂತ. ನೀತಿ ಧರ್ಮಗಳು ನಮ್ಮನ್ನು ಬಂಧಿಸುವುದಿಲ್ಲ, ರಕ್ಷಿಸುತ್ತವೆ ಎಂಬುದನ್ನು ಮರೆಯಬಾರದು.

ಹೊಸ ಸಂಬಂಧ ಸಿಕ್ಕ ತಕ್ಷಣ ಜನ ಹಳೆಯದನ್ನು ಮರೆತು ಬಿಡುವುದು ಒಳ್ಳೆಯ ಲಕ್ಷಣವಲ್ಲ. ಹಳೆಯದು ಹೊಸತನಕ್ಕೆ ಭದ್ರ ಬುನಾದಿ. ಜಗತ್ತನ್ನು ಬದಲಿಸುವುದು ಯಾರಿಂದಲೂ ಸಾಧ್ಯವಿಲ್ಲ. ಪುಸ್ತಕ ಬದಲಿಸಬಹುದು, ಪುಟ ಬದಲಿಸಬಹುದು ಆದರೆ ಇತಿಹಾಸವನ್ನು ಬದಲಿಸುವುದು ಬಲುಕಷ್ಟವಾಗುತ್ತದೆ. ಕಬ್ಬಿಣ ಎಷ್ಟೇ ಗಟ್ಟಿಯಾಗಿದ್ದರೂ ತುಕ್ಕಿನಿಂದ ದುರ್ಬಲಗೊಳ್ಳುತ್ತದೆ. ಮನಸ್ಸು ಗಟ್ಟಿಯಾಗಿರದಿದ್ದರೆ ಆದರ್ಶ ಮೌಲ್ಯಗಳನ್ನು ಮತ್ತು ಆದರ್ಶಗಳನ್ನು ಉಳಿಸುವುದು ಬಲುಕಷ್ಟವಾಗುತ್ತದೆ. ಜಾಗತೀಕರಣ, ಉದಾರೀಕರಣ, ಆಧುನೀಕರಣ, ಖಾಸಗೀಕರಣದಿಂದ ಪ್ರಾಚೀನ ಇತಿಹಾಸ ಮರೆಯುತ್ತಿರುವುದು ನೋವಿನ ಸಂಗತಿ. ಇವುಗಳನ್ನು ಉಳಿಸಿ ಬೆಳೆಸುವುದೇ ಇತಿಹಾಸಕಾರರ ಪರಮ ಕರ್ತವ್ಯವಾಗಿದೆ.

ಅರಣ್ಯದಲ್ಲಿರುವ ಒಂದು ಮರದಿಂದ ಲಕ್ಷಾಂತರ ಬೆಂಕಿಕಡ್ಡಿಗಳನ್ನು ತಯಾರಿಸಬಹುದು. ಅದೇ ಬೆಂಕಿಕಡ್ಡಿ ಇಡೀ ಅರಣ್ಯವನ್ನು ಸುಟ್ಟು ಹಾಕಬಹುದು. ಇತಿಹಾಸದ ಆಳ ಅಗಲಗಳನ್ನು ಅರಿಯದೇ ಹೋದರೆ ಭವಿಷ್ಯತ್ತಿಗೆ ಬೆಲೆ ಸಿಗಲಾರದು. ಸುಂದರವಾದ ಮನೆಯನ್ನು ಬಹಳ ಜನ ಕಟ್ಟಬಲ್ಲರು. ಆದರೆ ಆ ಮನೆಯಲ್ಲಿ ಸುಂದರವಾಗಿ ಬದುಕುವುದನ್ನು ಕೆಲವರು ಮಾತ್ರ ಬಲ್ಲವರಾಗಿದ್ದಾರೆ. ಹೃದಯವಂತಿಕೆ ಇಲ್ಲದಿರುವಾಗ ಬುದ್ಧಿವಂತಿಕೆ ಎಷ್ಟೇ ಇದ್ದರೂ ಪ್ರಯೋಜನಕ್ಕೆ ಬಾರದು. ಬುದ್ಧಿ ಮನಸ್ಸು ವಿಕಾಸಗೊಳ್ಳಲು ಪ್ರಾಚೀನ ಸಾಹಿತ್ಯ, ಸಂಸ್ಕೃತಿ ಮತ್ತು ಇತಿಹಾಸ ಸ್ಫೂರ್ತಿದಾಯಕ. ಮನಸ್ಸು ಮೃದುವಾಗಬೇಕು. ಹೃದಯ ಅರಳಬೇಕು. ಅದುವೇ ನಿಜವಾದ ಸಂಸ್ಕೃತಿ. ಸಂಪತ್ತು ನಷ್ಟವಾದರೆ ಚಿಂತಿಸಬೇಕಾಗಿಲ್ಲ. ಆರೋಗ್ಯ ಕೆಟ್ಟರೆ ಕಂಗೆಡಬೇಕಾಗಿಲ್ಲ. ಆದರೆ ಇತಿಹಾಸ ಮತ್ತು ಪರಂಪರೆ ಮರೆತು ನಡೆದರೆ ಎಲ್ಲವನ್ನು ಕಳೆದುಕೊಂಡಂತೆ ಎಂಬುದನ್ನು ಯಾರೂ ಮರೆಯಬಾರದು. ಸಂಶೋಧನೆಯ ಹೆಸರಿನಲ್ಲಿ ಇತಿಹಾಸಕ್ಕೆ ಅಪಚಾರವಾಗಬಾರದು. ಸ್ವಾರ್ಥಕ್ಕಾಗಿ ಮೌಲ್ಯಗಳು ನಾಶವಾಗಬಾರದು. ನಮ್ಮ ಅಂತರಂಗದ ಪುಸ್ತಕ ತೆರೆದಿರುವ ತನಕ ಉಳಿದೆಲ್ಲ ಪುಸ್ತಕಗಳು ಉಪಯೋಗಕ್ಕೆ ಬರುವುದಿಲ್ಲ. ಕರ್ತವ್ಯ , ಶಿಸ್ತು, ಶ್ರದ್ಧೆ, ಛಲ ಮತ್ತು ಸಮರ್ಪಣೆ ಮನೋಭಾವ ಬೆಳೆದುಬರಬೇಕು. ಕಣ್ಣೊಳಗಿನ ಕಣ್ಣಾಲಿಯನ್ನು ಸಣ್ಣದು ಎನ್ನಬೇಡ. ಅದು ಲೋಕವನ್ನೆಲ್ಲ ಕಾಣಬಲ್ಲದು. ಬೆಂಕಿಯಲ್ಲಿ ಚಿನ್ನ ಸುಡುತ್ತಿದ್ದರೂ ಕಪ್ಪಾಗದೇ ಹೊಳೆಯುತ್ತದೆ. ವೈಚಾರಿಕತೆ ಬಿರುಗಾಳಿ ಎಷ್ಟೇ ಬೀಸಿದರೂ ಪವಿತ್ರವಾದ ಧರ್ಮ,ಸಂಸ್ಕೃತಿ, ಪರಂಪರೆ ಉಳಿದುಬೆಳೆದುಕೊಂಡು ಬರುತ್ತಿರುವುದು ಇತಿಹಾಸದ ಗಟ್ಟಿತನಕ್ಕೆ ಸಾಕ್ಷಿಯಾಗಿದೆ.

ಕರ್ನಾಟಕ ಇತಿಹಾಸ ಅಕಾದೆಮಿ (ರಿ.) ಅತ್ಯುತ್ತಮ ಕಾರ್ಯ ಮಾಡುತ್ತ ಮುನ್ನಡೆದಿದೆ. ನಿರ್ಲಕ್ಷ್ಯಕ್ಕೆ ಒಳಗಾದ ಇತಿಹಾಸವನ್ನು ಭವಿಷ್ಯತ್ತಿನ ಜನಸಮುದಾಯಕ್ಕೆ ತಿಳಿಸುವುದೇ ಇದರ ಗುರಿ. 26ನೇ ವಾರ್ಷಿಕ ಸಮ್ಮೇಳನದಲ್ಲಿ ಮಂಡಿತವಾದ ನೂರಾರು ಪ್ರಬಂಧಗಳನ್ನು 28ನೇ ಸಂಪುಟಕ್ಕಾಗಿ ಸಂಪಾದಿಸಿರುವುದು ಅತ್ಯಂತ ಸಂತೋಷದಾಯಕ. ಹಲವಾರು ವರುಷಗಳಿಂದ ಇತಿಹಾಸ ದರ್ಶನ ಸಂಪುಟ ಮುದ್ರಣಕ್ಕಾಗಿ ರೂ.25,000/- (ಇಪ್ಪತ್ತೈದು ಸಾವಿರ) ಕೊಡುತ್ತಾ ಬಂದಿದ್ದೇವೆ. ಈ ವರ್ಷವೂ ಸಹ ಇತಿಹಾಸ ದರ್ಶನ ಮುದ್ರಣಕ್ಕಾಗಿ 25000/-(ಇಪ್ಪತ್ತೈದು ಸಾವಿರ) ರೂಪಾಯಿಗಳನ್ನು ಚೆಕ್ ಮೂಲಕ ಶ್ರೀ ಪೀಠ ಆಶೀರ್ವದಿಸುತ್ತದೆ. ಈ ಅಪೂರ್ವ ಕಾರ್ಯದಲ್ಲಿ ತೊಡಗಿಸಿಕೊಂಡ ಗೌರವ ಅಧ್ಯಕ್ಷ ಡಾ॥ ಸೂರ್ಯನಾಥ ಕಾಮತ್, ಅಧ್ಯಕ್ಷರಾದ ಡಾ॥ ದೇವರ ಕೊಂಡಾರೆಡ್ಡಿ ಉಪಾಧ್ಯಕ್ಷರಾದ ಡಾ॥ ಎಂ.ಜಿ.ನಾಗರಾಜ್ ಇನ್ನೂ ಮೊದಲಾದ ಇತಿಹಾಸ ತಜ್ಞರ ಸೇವೆ ಅವಿಸ್ಮರಣೀಯ.

ಪರಮದಯಾಳು ಶ್ರೀ ಪಾರ್ವತೀ ಪರಮೇಶ್ವರರು, ಶ್ರೀ ಜಗದ್ಗುರು ರೇಣುಕಾಚಾರ್ಯರು ಮತ್ತು ಕ್ಷೇತ್ರನಾಥ ಶ್ರೀ ವೀರಭದ್ರಸ್ವಾಮಿ ಸರ್ವರಿಗೂ ಮಂಗಲಪರಂಪರೆಯನ್ನು ಅನುಗ್ರಹಿಸಲಿ.

ದಿನಾಂಕ:10-08-2013.

ಬಾಳೆಹೊನ್ನೂರು
577 112


ಶುಭಾಶೀರ್ವಾದಗಳೊಂದಿಗೆ,
ಶ್ರೀ ರಂಭಾಪುರೀ ಜಗದ್ಗುರುಗಳು,
ಬಾಳೆಹೊನ್ನೂರು.

ವಾರ್ಷಿಕನಿಧಿ ರೂ. ೨೫ ಸಾವಿರ ಕೊಡುಗೆ ಆರಂಭಿಸಿದ ವರ್ಷ : ೨೦೦೫

ಕರ್ನಾಟಕ ಇತಿಹಾಸ ಅಕಾದೆಮಿಯ
ಇಪ್ಪತ್ತೇಳನೆಯ ವಾರ್ಷಿಕ ಸಮ್ಮೇಳನ



ಶ್ರೀ ಕ್ಷೇತ್ರ ಶೃಂಗೇರಿಯ ಶಾರದಾಂಬ



ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳು

ಶೃಂಗೇರಿ ಶ್ರೀ ಶಾರದಾಪೀಠ



ಡಾ. ಎಸ್. ವಿ. ವೆಂಕಟೇಶಯ್ಯ




ಕರ್ನಾಟಕ ಇತಿಹಾಸ ಅಕಾದೆಮಿಯ ೨೬ನೆಯ ವಾರ್ಷಿಕ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ, ಸಮ್ಮೇಳನಾಧ್ಯಕ್ಷ ಡಾ. ಎಸ್.ವಿ. ವೆಂಕಟೇಶಯ್ಯ, ಶೃಂಗೇರಿ ಪೀಠದ ಆಡಳಿತಾಧಿಕಾರಿಗಳಾದ ಡಾ.ವಿ.ಆರ್. ಗೌರಿಶಂಕರ್, ವಿಧಾನಪರಿಷತ್ತಿನ ಮಾನ್ಯ ಸಭಾಪತಿಗಳಾದ ಶ್ರೀ ಡಿ. ಎಚ್. ಶಂಕರಮೂರ್ತಿ, ಡಾ.ಎ.ಕೆ.ಶಾಸ್ತ್ರೀ, ಕರ್ನಾಟಕರಾಜ್ಯ ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಆಯುಕ್ತರಾದ ಶ್ರೀ ಕೆ.ಆರ್. ರಾಮಕೃಷ್ಣ. ಕ.ಆ.ಸೇ., ಡಾ. ದೇವರಕೊಂಡಾರೆಡ್ಡಿ ಮತ್ತು ಎಸ್. ರಾಜೇಂದ್ರಪ್ಪ



ಬಿ.ಆರ್.ಆರ್. ಫ್ಯಾಮಿಲಿ ಚಾರಿಟಬಲ್ ಟ್ರಸ್ಟ್ ಅವರು ನೀಡುತ್ತಿರುವ
ಮೊದಲನೆಯ ವರ್ಷದ 'ಇತಿಹಾಸ ಸಂಸ್ಕೃತಿಶ್ರೀ' ಪ್ರಶಸ್ತಿ ಸ್ವೀಕರಿಸುತ್ತಿರುವ ಪ್ರೊ॥ ಲಕ್ಷ್ಮಣ್ ತೆಲಗಾವಿ



ಶ್ರೀ ಸೀತಾರಾಮ ಜಾಗೀರದಾರ್ ಅವರಿಗೆ ಡಾ. ಬಾ.ರಾ. ಗೋಪಾಲ್ ಪ್ರಶಸ್ತಿ ಪ್ರದಾನ



ಸಮ್ಮೇಳನಾಧ್ಯಕ್ಷ ಡಾ. ಎಸ್.ವಿ. ವೆಂಕಟೇಶಯ್ಯ ಅವರಿಗೆ ಸನ್ಮಾನ




ಕರ್ನಾಟಕ ಇತಿಹಾಸ ಅಕಾದೆಮಿಯ ೨೬ನೆಯ ವಾರ್ಷಿಕ ಸಮ್ಮೇಳನದಲ್ಲಿ
ಇತಿಹಾಸ ದರ್ಶನ ಸಂಪುಟ – ೨೭ರ ಬಿಡುಗಡೆಯ ಕ್ಷಣ



ಕರ್ನಾಟಕ ಇತಿಹಾಸ ಅಕಾದೆಮಿಯ ೨೬ನೆಯ ವಾರ್ಷಿಕ ಸಮ್ಮೇಳನದಲ್ಲಿ
ಪಿಎಚ್.ಡಿ. ಪಡೆದಿದ್ದ ಯುವ ಸಂಶೋಧಕರಿಗೆ ಸನ್ಮಾನ



ಶೃಂಗೇರಿ ಸಮ್ಮೇಳನದ ಸಭಿಕರ ದೃಶ್ಯ



ಕರ್ನಾಟಕ ಇತಿಹಾಸ ಅಕಾದೆಮಿಯ ೨೬ನೆಯ ವಾರ್ಷಿಕ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ
ಮಾತನಾಡುತ್ತಿರುವ ಶೃಂಗೇರಿ ಮಠದ ಆಡಳಿತಾಧಿಕಾರಿ ಡಾ. ವಿ.ಆರ್. ಗೌರಿಶಂಕರ್



ಸಮ್ಮೇಳನಾಧ್ಯಕ್ಷರಾದ ಡಾ. ಎಸ್.ವಿ. ವೆಂಕಟೇಶಯ್ಯ



ಡಾ. ದೇವರಕೊಂಡಾರೆಡ್ಡಿ ಅಧ್ಯಕ್ಷರು ಕ.ಇ.ಅ.



ಡಾ. ವಿ.ಆರ್. ಗೌರಿಶಂಕರ್, ಆಡಳಿತಾಧಿಕಾರಿ ಶೃಂಗೇರಿಪೀಠ



ಶೃಂಗೇರಿಯ ಸಮ್ಮೇಳನದ ವಿದ್ವತ್ ಸಭೆ



ಇತಿಹಾಸ ಅಕಾದೆಮಿ ಸದಸ್ಯರ ಶೈಕ್ಷಣೀಯ ಸ್ಥಳಗಳ ಪ್ರವಾಸ, ಆವನಿ



ಇತಿಹಾಸ ಅಕಾದೆಮಿ ಸದಸ್ಯರಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರವಾಸ




ಇತಿಹಾಸ ಅಕಾದೆಮಿಯ 'ಐತಿಹಾಸಿಕ ಪರಂಪರೆ ಉಳಿಸಿ' ಕಾರ್ಯಕ್ರಮದ ಭಾಗವಾಗಿ ಸ್ಪರ್ಧಾತ್ಮಕ ಪರೀಕ್ಷೆಯ ಪ್ರಶಸ್ತಿ ಪ್ರದಾನ



'ಐತಿಹಾಸಿಕ ಪರಂಪರೆ ಉಳಿಸಿ' ಕಾರ್ಯಕ್ರಮದ ಉದ್ಘಾಟನಾ ಸಮಾರಂಭ ಡಾ. ಇಂದಿರಾ ಹೆಗಡೆ, ಡಾ. ದೇವರಕೊಂಡಾರೆಡ್ಡಿ, ನ್ಯಾಷನಲ್ ಕಾಲೇಜಿನ ಪ್ರಾಚಾರ್ಯ ಪ್ರೊ. ಎ.ಎಚ್. ರಾಮರಾವ್, ಡಾ. ಸೂರ್ಯನಾಥ ಯು.ಕಾಮತ್ ಹಾಗೂ ಆಯುಕ್ತ ಡಾ. ಕೆ.ಆರ್. ರಾಮಕೃಷ್ಣ ಕ.ಆ.ಸೇ.



ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮ, ಬಳ್ಳಾರಿ



ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮ, ಕಡೂರು



ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮ, ಗದಗ



ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮ, ಕನ್ನಡ ಸಂಶೋಧನಾ ಸಂಸ್ಥೆ, ಧಾರವಾಡ



ಬೆಂಗಳೂರಿನಲ್ಲಿ ಐತಿಹಾಸಿಕ ಪರಂಪರೆ ಉಳಿಸಿ ಸಪ್ತಾಹದ ಅಂಗವಾಗಿ ಆಯೋಜಿಸಿದ್ದ ಸ್ಪರ್ಧಾತ್ಮಕ ಪರೀಕ್ಷೆ

ಅಧ್ಯಕ್ಷರ ನುಡಿ

ಕರ್ನಾಟಕ ಇತಿಹಾಸ ಅಕಾದೆಮಿಯು ಇಂದು ೨೭ ಸಂವತ್ಸರಗಳನ್ನು ಯಶಸ್ವಿಯಾಗಿ ಪೂರೈಸಿದೆ. ಇದರ ಬೆಳವಣಿಗೆಯಲ್ಲಿ ಅಂದಿನ-ಇಂದಿನ ಸದಸ್ಯರ ಕೊಡುಗೆ ಅಪಾರ. ಡಾ. ಜಿ.ಎಸ್. ದೀಕ್ಷಿತ್, ಡಾ. ಸೂರ್ಯನಾಥ ಕಾಮತ್, ಡಾ. ಅ. ಸುಂದರ, ಡಾ. ಎಚ್. ಚಂದ್ರಶೇಖರ್, ಶ್ರೀ ಎಂ.ಬಿ. ಪಾಟೀಲ, ಡಾ. ಎಂ.ಜಿ. ನಾಗರಾಜ್, ಡಾ. ಎಚ್.ಎಸ್. ಗೋಪಾಲರಾವ್, ಡಾ. ಬಿ. ರಾಜಶೇಖರಪ್ಪ, ಪ್ರೊ. ಲಕ್ಷ್ಮಣ ತೆಲಗಾವಿ ಮೊದಲಾದ ಹಿರಿಯರ ಪರಿಶ್ರಮ ಇದರ ಬೆಳವಣಿಗೆಯ ಹಿಂದಿದೆ. ಅನೇಕ ಮಠ, ಸಂಸ್ಥೆಗಳು ನಮ್ಮ ಬೆಳವಣಿಗೆಯಲ್ಲಿ ಪರೋಕ್ಷವಾಗಿ ಸಹಕರಿಸಿವೆ. ಕರ್ನಾಟಕ ಇತಿಹಾಸ ಅಕಾದೆಮಿ ಪ್ರೌಢ ಛಾಪು ಒತ್ತಿದ ವಿದ್ವಾಂಸರಿಗಷ್ಟೇ ಸೀಮಿತವಾಗದೆ ಪಾಮರರ, ವಿದ್ಯಾರ್ಥಿಗಳ, ಯುವ ಸಂಶೋಧಕರ ಜ್ಞಾನವಿಸ್ತರಣೆ ಹಾಗೂ ವಿಕಾಸಕ್ಕೂ ದಾರಿದೀಪವಾಗಿದೆ. ಯಾವುದೇ ಒಂದು ವರ್ಗಕ್ಕೆ ಸೀಮಿತಗೊಳಿಸದೆ, ಆಸಕ್ತಿ ಇರುವ ಎಲ್ಲ ವರ್ಗದವರನ್ನೂ ಒಂದೇ ವೇದಿಕೆಯಲ್ಲಿ ತರುವ ಪ್ರಯತ್ನ ಮಾಡಿದೆ. ಅದರಲ್ಲಿ ಯಶಸ್ವಿಯೂ ಆಗಿದೆ. ಇವೆಲ್ಲಕ್ಕಿಂತ ಮುಖ್ಯವಾಗಿ ಕರ್ನಾಟಕ ಇತಿಹಾಸ ಅಕಾದೆಮಿ ಹಾಗೂ ಅದರ ಸದಸ್ಯರ ನಡುವೆ ಇರುವ ಆತ್ಮೀಯ ಸಂಬಂಧವೂ ಇದರ ಬೆಳವಣಿಗೆಗೆ ಕಾರಣವಾಗಿದೆ.

ಎಲ್ಲಾ ವರ್ಗದ ವಿದ್ವಾಂಸರ-ಸಂಶೋಧಕರ ಜ್ಞಾನವನ್ನು ಹಿಡಿದಿಡುವ ಪ್ರಯತ್ನದ ಫಲವಾಗಿ 'ಇತಿಹಾಸ ದರ್ಶನ' ಎಂಬ ವಾರ್ಷಿಕ ಸಂಪುಟವನ್ನು ತರಲು ಯೋಜಿಸಿ ಮೊದಲ ಸಮ್ಮೇಳನದಲ್ಲಿಯೇ ಒಂದನೆಯ ಸಂಪುಟವನ್ನು ಹೊರತರಲಾಯಿತು. ಅಂದಿನಿಂದ ಇಂದಿನವರೆಗೆ ಅಕಾದೆಮಿಯ ಸದಸ್ಯರು ವಾರ್ಷಿಕ ಸಮ್ಮೇಳನಗಳಲ್ಲಿ ಮಂಡಿಸುವ ಪ್ರಬಂಧಗಳನ್ನು 'ಇತಿಹಾಸ ದರ್ಶನ' ಎಂಬ ಹೆಸರಿನ ವಾರ್ಷಿಕ ಸಂಪುಟದಲ್ಲಿ ಮುದ್ರಿಸಿ ಹೊರತರಲಾಗುತ್ತಿದೆ. ಇದು ಈಗ ೨೮ನೆಯ ಸಂಪುಟವಾಗಿ ಹೊರ ಬರುತ್ತಿದೆ. ಅನೇಕ ಹಿರಿಯ ವಿದ್ವಾಂಸರು ಈ ಸಂಪುಟಕ್ಕೆ ಲೇಖನಗಳನ್ನು ನೀಡಿ ಇದರ ಮಹತ್ವ ಹೆಚ್ಚಿಸಿದ್ದಾರೆ. ಯುವ ಸಂಶೋಧಕರಿಗೆ ಮಾರ್ಗದರ್ಶಕರಾಗಿದ್ದಾರೆ. ಹಾಗೆಯೇ ಕರ್ನಾಟಕ ಇತಿಹಾಸಕ್ಕೆ ಈ ಮೂಲಕ ಅಮೂಲ್ಯ ಮಾಹಿತಿ ಹಾಗೂ ಕೊಡುಗೆ ನೀಡಿದ್ದಾರೆ. ಯುವ ಸಂಶೋಧಕರು ತಮ್ಮ ಮುದ್ರಿತ ಪ್ರಬಂಧಗಳನ್ನು ನೋಡಿ ಉತ್ಸಾಹಗೊಂಡಿದ್ದಾರೆ. ಹೀಗಾಗಿ ಕರ್ನಾಟಕ ಇತಿಹಾಸ ಅಕಾದೆಮಿಯ ಶಾಶ್ವತ ಅಸ್ತಿತ್ವವನ್ನು ಇತಿಹಾಸ ದರ್ಶನ ಮಾಡಿದೆ.

ಪ್ರಾಂತೀಯ ಭಾಷೆಗಳಲ್ಲಿ ವಿಶ್ವವಿದ್ಯಾಲಯಗಳನ್ನು ಹೊರತುಪಡಿಸಿ ವ್ಯವಸ್ಥಿತವಾಗಿ ಇಂತಹ ಸಂಪುಟ ತರುತ್ತಿರುವುದು ಇತಿಹಾಸ ಅಕಾದೆಮಿ ಮಾತ್ರ ಎಂದರೆ ತಪ್ಪಾಗಲಾರದು. ಕರ್ನಾಟಕವೇ ಏಕೆ ಇಡೀ ದಕ್ಷಿಣ ಭಾರತದಲ್ಲಿ ಇಂತಹ ಸಂಪುಟ ವ್ಯವಸ್ಥಿತವಾಗಿ ಬರುತ್ತಿಲ್ಲವೆಂಬುದನ್ನು ಯೋಚಿಸಿದಾಗ ಇದಕ್ಕಿರುವ ಮೌಲ್ಯ ಅರ್ಥವಾಗುತ್ತವೆ. ಕನ್ನಡ ಭಾಷೆ ಈ ಸಂಪುಟಗಳಲ್ಲಿ ನಿಶ್ಚಿತವಾಗಿ ಸಂಶೋಧನ ಭಾಷೆಯಾಗಿ ಪರಿವರ್ತಿತವಾಗಿದೆ. ಇದು ಶಾಸ್ತ್ರೀಯ ಕನ್ನಡ ಭಾಷೆಯ ಬೆಳವಣಿಗೆಗೆ ನೀಡಿದ ಕೊಡುಗೆಯಾಗಿದೆ.

ಇತಿಹಾಸ ದರ್ಶನ ಸಂಪುಟ ೨೮ರಲ್ಲಿ ಪ್ರಕಟವಾಗಿರುವ ಲೇಖನಗಳು ೨೦೧೨ರ ಸೆಪ್ಟೆಂಬರ್ ತಿಂಗಳ ೨೨, ೨೩ ಮತ್ತು ೨೪ರಂದು ಶೃಂಗೇರಿಯಲ್ಲಿ ನಡೆದ ಕರ್ನಾಟಕ ಇತಿಹಾಸ ಅಕಾದೆಮಿಯ ೨೬ನೆಯ ವಾರ್ಷಿಕ ಸಮ್ಮೇಳನದಲ್ಲಿ ಮಂಡಿಸಿದ ಪ್ರಬಂಧಗಳಾಗಿವೆ. ಒಟ್ಟು ೧೨೫ ಪ್ರಬಂಧಗಳು ಈ ಸಂಪುಟದಲ್ಲಿ ಪ್ರಕಟವಾಗಿವೆ. ಇವುಗಳಲ್ಲಿ ಬಹುತೇಕ ಲೇಖನಗಳು ಯುವಪೀಳಿಗೆಯವರು ಬರೆದವುಗಳಾಗಿವೆ. ಅನೇಕ ಲೇಖನಗಳು ಸ್ಥಳೀಯ ಇತಿಹಾಸವನ್ನು ಕುರಿತಂತೆ ಇವೆ. ಈ ಸಂಪುಟವನ್ನು ಸಂಪಾದಕರಾದ ಡಾ. ಪಿ.ವಿ. ಕೃಷ್ಣಮೂರ್ತಿ ಮತ್ತು ಶ್ರೀ ರಾಜೇಂದ್ರಪ್ಪ ಅವರು ಅಚ್ಚುಕಟ್ಟಾಗಿ ಸಂಪಾದಿಸಿದ್ದಾರೆ. ಅದರಲ್ಲೂ ಡಾ. ಪಿ.ವಿ. ಕೃಷ್ಣಮೂರ್ತಿ ಅವರು ಹೆಚ್ಚಿನ ಶ್ರಮ ಹಾಗೂ ಮುತುವರ್ಜಿ ವಹಿಸಿದ್ದಾರೆ. ಇವರೊಂದಿಗೆ ಎಸ್. ಕಾರ್ತಿಕ್ ಅವರು ಸತತವಾಗಿ ಸಹಕರಿಸಿದ್ದಾರೆ.

ಸಂಪುಟದ ಪುಟಗಳು ಹಾಗೂ ಲೇಖನಗಳು ಮತ್ತು ಪ್ರಕಟಣಾವೆಚ್ಚ ಹೆಚ್ಚುತ್ತಲೇ ಇವೆ. ಇಂತಹ ಕಷ್ಟ ಕಾಲದಲ್ಲಿ ೨೦೦೫ನೆಯ ಇಸವಿಯಿಂದ ಶ್ರೀಮದ್ರಂಭಾಪುರಿ ವೀರಸಿಂಹಾಸನ ಮಹಾಸಂಸ್ಥಾನ ಪೀಠದ ಜಗದ್ಗುರುಗಳಾದ ಶ್ರೀಮದ್ ಪ್ರಸನ್ನ ರೇಣುಕ ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರು ವಾರ್ಷಿಕವಾಗಿ ರೂ. ೨೫,೦೦೦/-ಗಳನ್ನು ಸಂಪುಟದ ಪ್ರಕಟಣೆಗಾಗಿ ನೀಡುತ್ತಾ ಬಂದಿದ್ದಾರೆ. ಹಾಗೆಯೇ ಕರ್ನಾಟಕ ಸರ್ಕಾರದ ಪ್ರಾಚ್ಯವಸ್ತು, ಸಂಗ್ರಹಾಲಯ ಗಳು ಮತ್ತು ಪರಂಪರೆ ಇಲಾಖೆಯವರು ಒಟ್ಟು ಮೂರು ಲಕ್ಷ (೩.೦೦.೦೦೦.೦೦/-) ರೂ.ಗಳನ್ನು ಅನುದಾನವಾಗಿ ನೀಡಿದ್ದು, ಇದರಲ್ಲಿ ಒಂದು ಲಕ್ಷ ರೂ.ಗಳನ್ನು ಇದರ ಪ್ರಕಟಣೆಗಾಗಿ ನಿಗದಿಗೊಳಿಸಿದ್ದಾರೆ. ಈ ಎರಡೂ ಸಂಸ್ಥೆಗಳ ಸಹಾಯವನ್ನು ತುಂಬು ಹೃದಯದಿಂದ ನೆನೆಯುತ್ತೇವೆ. ಎಂದಿನಂತೆ ಈ ಸಂಪುಟವನ್ನು ವಿದ್ವತ್ ವಲಯದ ಜನರು ಹಾರ್ದಿಕವಾಗಿ ಸ್ವಾಗತಿಸುವರೆಂದು ಆಶಿಸಿದ್ದೇವೆ.

ದೇವರಕೊಂಡಾರೆಡ್ಡಿ
ಅಧ್ಯಕ್ಷರು
ಕರ್ನಾಟಕ ಇತಿಹಾಸ ಅಕಾದೆಮಿ (ರಿ.)

೧೯ ಸೆಪ್ಟೆಂಬರ್, ೨೦೧೩
ಬೆಂಗಳೂರು

ಸಂಪಾದಕೀಯ

ಚಾರಿತ್ರಿಕವಾಗಿ ಬೆಂಗಳೂರು ಪ್ರದೇಶ ಸಾಕಷ್ಟು ಪ್ರಾಚೀನತೆಯನ್ನು ಪಡೆದಿದೆ. ಪ್ರಾಗೈತಿಹಾಸಿಕ ಕಾಲದ ಅವಶೇಷಗಳು ಈ ನಗರದ ಪರಿಸರದ ಪ್ರದೇಶಗಳಾದ ಜಾಲಹಳ್ಳಿ, ಭೈರಸಂದ್ರ, ಹುಳಿಮಾವು, ಬೇಗೂರು, ಚಿಕ್ಕಜಾಲ, ಚೂಡಸಂದ್ರ, ಮುಂತಾದ ಎಡೆಗಳಲ್ಲಿ ಅಲ್ಲದೆ ರೇಸ್ ಕೋರ್ಸ್, ಎಚ್.ಎ.ಎಲ್., ಬೆಳ್ಳಂದೂರು, ಕೋರಮಂಗಲ ಪ್ರದೇಶಗಳಲ್ಲಿ ಕಂಡುಬಂದಿದ್ದು, ಅವು ಬೃಹತ್ ಶಿಲಾಯುಗ, ನೂತನ ಶಿಲಾಯುಗ ಮತ್ತು ಸೂಕ್ಷ್ಮ ಶಿಲಾಯುಗಗಳಿಗೆ ಸಂಬಂಧಿಸಿದವಾಗಿದೆ. 'ಯಶವಂತಪುರ, ಜಾಲಹಳ್ಳಿ ಮುಂತಾದ ಸ್ಥಳಗಳಲ್ಲಿ ರೋಮನ್ ನಾಣ್ಯಗಳು ಲಭ್ಯವಾಗಿವೆ. ಅಷ್ಟೇ ಅಲ್ಲ ಬಸವನಗುಡಿಯ ಕಹಳೆ ಬಂಡೆ, ಗವಿಗಂಗಾಧರೇಶ್ವರ ದೇವಾಲಯದ ಪರಿಸರಗಳೂ ಪ್ರಾಗೈತಿಹಾಸಿಕ ನೆಲೆಗಳಾಗಿದ್ದವೆಂಬ ಅಭಿಪ್ರಾಯವೂ ಇದೆ. ಹಾಗಾಗಿ ಏನಿಲ್ಲವೆಂದರೂ ಕ್ರಿ.ಪೂ. ೬–೭ ಸಾವಿರ ವರ್ಷಗಳಷ್ಟು ಹಿಂದಿನಿಂದಲೇ ಈ ಪ್ರದೇಶ ಜನವಸತಿಯಿಂದ ಕೂಡಿದ್ದಿತೆಂದರೆ ತಪ್ಪಾಗಲಾರದು. ಹಾಗಾದರೆ ಈ ಪ್ರದೇಶದಲ್ಲಿರುವ ಬೆಂಗಳೂರು ಸ್ಥಳ ಎಷ್ಟು ಪ್ರಾಚೀನ? ಬೆಂಗಳೂರಿನ ಇತಿಹಾಸಕಾರರಿಗೆಲ್ಲ ತಿಳಿದಿರುವಂತೆ ಕ್ರಿ.ಶ. ೯ನೆಯ ಶತಮಾನಕ್ಕಾಗಲೇ ಶಾಸನವೊಂದರಲ್ಲಿ 'ಬೆಂಗುಳೂರಿನ'ನ ಪ್ರಸ್ತಾಪ ಬಂದಿದೆ. ಅದು 'ಬೆಂಗುಳೂರು ಕಾಳಗ'ವನ್ನು ಪ್ರಸ್ತಾಪಿಸುತ್ತದೆ. ಅಂದರೆ ೯ನೆಯ ಶತಮಾನಕ್ಕಾಗಲೇ 'ಬೆಂಗುಳೂರು' ಎಂಬ ಊರು ಇದ್ದಿತು. ಆ ಸ್ಥಳಕ್ಕೆ ಸಂಬಂಧಿಸಿದಂತೆ ಒಂದು ಯುದ್ಧ ಏರ್ಪಟ್ಟಿದ್ದುದು ಕೂಡ ತಿಳಿಯುತ್ತದೆ. ಅನಂತರದಲ್ಲಿ ಕ್ರಿ.ಶ. ೧೨೪೭ರ ಮಡಿವಾಳದ ಸೋಮೇಶ್ವರ ದೇವಾಲಯದ ಶಾಸನದಲ್ಲಿ 'ವೆಂಗಳೂರಿನ' ಪ್ರಸ್ತಾಪವಿದ್ದು ಮುಂದೆ ೧೭ರಿಂದ ೧೯ನೆಯ ಶತಮಾನದ ಸುಮಾರು ೮–೧೦ ಶಾಸನಗಳಲ್ಲಿ ಬೆಂಗಳೂರಿನ ಹೆಸರು ಕಂಡುಬಂದಿದೆ. ಅಂದರೆ 'ಬೆಂಗಳೂರು' ಈಗ್ಗೆ ಸುಮಾರು ಒಂದು ಸಾವಿರ ವರ್ಷಕ್ಕೂ ಹಿಂದಿನಿಂದಲೇ ಪ್ರಸಿದ್ಧವಾಗಿದ್ದಿತೆಂಬುದು ದೃಢಪಡುತ್ತದೆ. ಈ ಮಧ್ಯೆ ಹೊಯ್ಸಳ ವೀರಬಲ್ಲಾಳನಿಗೆ ಸಂಬಂಧಿಸಿದ ಬೆಂದಕಾಳೂರಿನ ಐತಿಹ್ಯವು ಹೆಚ್ಚು ಪ್ರಚಲಿತವಿದೆ. ಈ ಐತಿಹ್ಯದಿಂದ ನಾವು ಹೊಯ್ಸಳರ ಕಾಲದಲ್ಲೇ ಬೆಂಗಳೂರು ಆಗಂತುಕರಿಗೆ ಆಶ್ರಯ ನೀಡುತ್ತಿದ್ದ ತಾಣವಾಗಿದ್ದಿತೆಂದು ಗ್ರಹಿಸಬಹುದಾಗಿದೆ. ಆದರೆ ಜನಜನಿತವಾಗಿ ಕ್ರಿ.ಶ. ೧೫೩೭ರಲ್ಲಿ ಯಲಹಂಕ ಪ್ರಭು ಹಿರಿಯ ಕೆಂಪೇಗೌಡನು ಇದನ್ನು ಕಟ್ಟಿಸಿದನೆಂದು ಹೇಳಲಾಗಿದೆ. ಅಂದರೆ ಈ ಕಾಲಕ್ಕೂ ಎಷ್ಟೋ ಮೊದಲೇ ಬೆಂಗಳೂರು ಇದ್ದಿತು ಎಂಬುದು ಸರಿಯಷ್ಟೆ. ಅಲ್ಲದೆ ಕೆಂಪೇಗೌಡ ಈ ಊರನ್ನು ಕಟ್ಟಿಸಲಿಲ್ಲ ಎಂಬುದು ಖಚಿತವಾಗುತ್ತದೆ. ಆದರೆ ಬೆಂಗಳೂರಿಗೂ ಕೆಂಪೇಗೌಡನಿಗೂ ಅವಿಭಾಜ್ಯ ಸಂಬಂಧವಿದೆ. ಎಂಬುದರಲ್ಲಿ ಸಂಶಯವಿಲ್ಲ.

ಆದರೆ ಈ ಶಾಸನೋಕ್ತ ಕಾಲಕ್ಕಾಗಲೇ ಬೆಂಗಳೂರು ಸ್ಥಳ ಇದ್ದುದರಿಂದ ಅಂದಿನ ಆಳರಸನಾದ ಕೆಂಪೇಗೌಡನು ಆ ಸ್ಥಳವನ್ನು ಗುರುತಿಸಿ, ಅಲ್ಲಿ ವ್ಯಾಪಾರ ವಹಿವಾಟುಗಳ ಸಲುವಾಗಿ ಒಂದು ಪಟ್ಟಣವನ್ನು ಏರ್ಪಡಿಸುವ ಕಾರ್ಯವನ್ನು ಕೈಗೊಂಡನೆಂಬುದರಲ್ಲಿ ಸಂದೇಹವಿಲ್ಲ. ಆ ಪಟ್ಟಣವನ್ನು ಏರ್ಪಡಿಸಿದ ಸ್ಥಳ ಬಹಳ ವಿಶಿಷ್ಟವಾಗಿತ್ತು. ಏಕೆಂದರೆ ಅದು ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ ಹೀಗೆ ಎಲ್ಲಾ ದಿಕ್ಕುಗಳಿಗೆ ಸಂಬಂಧವನ್ನು ಕಲ್ಪಿಸುವ ವಾಣಿಜ್ಯ ಮಾರ್ಗಗಳು ಸಂಧಿಸುವ ಸ್ಥಳವಾಗಿತ್ತು. ಹಾಗಾಗಿ ವ್ಯಾಪಾರ ವಹಿವಾಟಿಗಾಗಿ ಅಲ್ಲಿ ಜನ ಬಂದು ನೆರೆಯುತ್ತಿದ್ದರು. ತಂಗುತ್ತಿದ್ದರು ತಮ್ಮ ವ್ಯಾಪಾರ ವಸ್ತುಗಳನ್ನು ವಿನಿಮಯ ಮಾಡಿಕೊಳ್ಳುತ್ತಿದ್ದರು. ಈ ವಾಣಿಜ್ಯ ಕ್ರಿಯೆ ಈ ಸ್ಥಳದಲ್ಲಿ ಅನೇಕ ವರ್ಷಗಳಿಂದ ನಡೆದುಕೊಂಡು ಬಂದಿದ್ದಿತು ಎಂಬುದಕ್ಕೆ ಸಾಕ್ಷಿಯೇ ಈ ಸ್ಥಳದಲ್ಲಿ ದೊರೆತ ರೋಮನ್ ನಾಣ್ಯಗಳು ಹಾಗೂ ಲಭ್ಯವಿರುವ ಪ್ರಾಗೈತಿಹಾಸಿಕ ಕುರುಹುಗಳು ಎಂದರೆ ತಪ್ಪಾಗಲಾರದು. ತಮ್ಮ ಆಳ್ವಿಕೆಯ ಪ್ರದೇಶದಲ್ಲಿ ಇಂತಹ ಒಂದು ವಿಶಿಷ್ಟ ಎಡೆ ಇರುವುದನ್ನು ಸೂಕ್ಷ್ಮಮತಿಗಳಾದ ಕೆಂಪೇಗೌಡನ ವಂಶೀಯರು ಗಮನಿಸಿ ವಿಚಾರ ಮಾಡಿ, ಅಲ್ಲಿ ನಡೆಯುತ್ತಿದ್ದ ವ್ಯಾಪಾರ ವಹಿವಾಟುಗಳಿಗೆ ಒಂದು ಸೂಕ್ತ ವ್ಯವಸ್ಥೆಯನ್ನು ಕಲ್ಪಿಸಲು ತೆಗೆದುಕೊಂಡ ವ್ಯವಸ್ಥಿತ ಕ್ರಮವೇ ಇಂದಿನ ಬೆಂಗಳೂರು. ಇಲ್ಲಿಗೆ ಬರುತ್ತಿದ್ದ ವಣಿಕರಿಗೆ ಅಗತ್ಯ ಆಚಾರ ವಿಚಾರಗಳಿಗೆ ಪೂರಕವಾಗುವಂತಹ ಮೂಲಭೂತ ಸೌಕರ್ಯಗಳು ಉಂಟಾದುದು ಕೂಡ. ಈ ಸ್ಥಳದ ಆರ್ಥಿಕ ಚಟುವಟಿಕೆಗಳ ಏಳಿಗೆಗೆ ಕಾರಣವಾಯಿತೆಂದು ಹೇಳಬಹುದು.

ಬೆಂಗಳೂರಿನಲ್ಲಿ ಇದೇ ಸೆಪ್ಟೆಂಬರ್ ೨೧, ೨೨, ೨೩ರಂದು ಅಕಾದೆಮಿಯ ೨೭ನೆಯ ವಾರ್ಷಿಕ ಸಮ್ಮೇಳನ ನಡೆಯುತ್ತಿದೆ. ಇದಕ್ಕೆ ಪೂರ್ಣ ಸಹಕಾರವನ್ನು ನೀಡುತ್ತಿರುವ ಮಿಥಿಕ್ ಸೊಸೈಟಿ ಹಾಗೂ ಅದರ ಪದಾಧಿಕಾರಿಗಳಿಗೆ ಕರ್ನಾಟಕ ಇತಿಹಾಸ ಅಕಾದೆಮಿ ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

ಈ ಸಂದರ್ಭದಲ್ಲಿ ೨೭ನೆಯ ವಾರ್ಷಿಕ ಸಮ್ಮೇಳನದ ಸರ್ವಾಧ್ಯಕ್ಷತೆಯನ್ನು ಖ್ಯಾತ ಪುರಾತತ್ತ್ವವಿದರಾದ ಡಾ. ಎಸ್.ಕೆ. ಜೋಷಿಯವರು ವಹಿಸಿರುವುದು ಸಂತಸದ ಸಂಗತಿಯಾಗಿದೆ. ಈ ಬಾರಿಯ ಡಾ. ಬಾ.ರಾ. ಗೋಪಾಲ್ ಶಾಸನದ ಪ್ರಶಸ್ತಿಯು ಅನಂತಪುರದ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ತೌಲನಿಕ ಅಧ್ಯಯನ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ, ಈಗ ನಿವೃತ್ತರಾಗಿರುವ ಡಾ. ಆರ್. ಶೇಷಶಾಸ್ತ್ರಿ ಅವರಿಗೆ ಸಲ್ಲುತ್ತಿದೆ. ಈ ಇಬ್ಬರೂ ವಿದ್ವಾಂಸರಿಗೂ ನಮ್ಮ ಅಭಿನಂದನೆಗಳು. ಕಳೆದ ವರ್ಷ ಬಿ.ಆರ್.ಆರ್. ಟ್ರಸ್ಟ್‌ನ ಸನ್ಮಾನ್ಯ ಅಶೋಕ್‌ಕುಮಾರ್ ಅವರು ಸ್ಥಾಪಿಸಿದ ವಿಶೇಷ ಪುರಸ್ಕಾರ ಈ ವರ್ಷ ಡಾ॥ ಸೂರ್ಯನಾಥ ಕಾಮತ್ ಅವರಿಗೆ ಸಲ್ಲುತ್ತಿರುವುದು ಸಂತೋಷದ ಸಂಗತಿಯಾಗಿದೆ.

ಪ್ರಸ್ತುತ ಇತಿಹಾಸ ದರ್ಶನ ಸಂಪುಟ ೨೮, ಕಳೆದ ವರ್ಷ ಶೃಂಗೇರಿಯಲ್ಲಿ ಸಮಾವೇಶಗೊಂಡಿದ್ದ ಅಕಾದೆಮಿಯ ೨೬ನೆಯ ವರ್ಷದ ಸಮ್ಮೇಳನದಲ್ಲಿ ಮಂಡಿತವಾದ ಪ್ರಬಂಧಗಳ ಸಂಕಲನವಾಗಿದೆ. ಇತಿಹಾಸ ದರ್ಶನದ ಸಂಪಾದನ ಸಂದರ್ಭದಲ್ಲಿ ಅಕಾದೆಮಿಯ ಕಾರ್ಯಾಧ್ಯಕ್ಷರು, ಪದಾಧಿಕಾರಿಗಳು ಮುಂತಾದವರು ಸಕಾಲಿಕ ಸಲಹೆ, ಸಹಕಾರ, ನೆರವು ನೀಡಿದ್ದಾರೆ. ಎಲ್ಲರಿಗೂ ನಮ್ಮ ಕೃತಜ್ಞತೆಗಳು. ಇತಿಹಾಸ ದರ್ಶನ ಸಂಪುಟವನ್ನು ೧೯೮೬ರಿಂದಲೂ ಅಚ್ಚುಕಟ್ಟಾಗಿ ಮುದ್ರಿಸಿಕೊಡುತ್ತಿರುವ ಶ್ರೀ ಅಶೋಕ್‌ಕುಮಾರ್ ಅವರಿಗೂ, ಲಕ್ಷ್ಮೀ ಮುದ್ರಣಾಲಯದ ಮಾಲೀಕರಾದ ಶ್ರೀ ಕೆ.ಎಸ್. ಮಂಜು ಅವರಿಗೂ, ಅಕ್ಷರ ಜೋಡಣೆ, ವಿನ್ಯಾಸ ಸಿದ್ಧಪಡಿಸಿದ ಶ್ರೀ ವಿ.ಎಸ್. ಪ್ರಸನ್ನಕುಮಾರ್, ಪಿ.ಎಸ್. ಸುಬ್ರಮಣಿ ಬಾಬು ಹಾಗೂ ಶ್ರೀಮತಿ ಮಾಲಾ ಅವರಿಗೂ ಹಾಗೂ ಇತರ ಸಿಬ್ಬಂದಿ ವರ್ಗದವರಿಗೂ ಹೃತ್ಪೂರ್ವಕ ಕೃತಜ್ಞತೆಗಳು. ಎಂದಿನಂತೆ ಸನ್ಮಿತ್ರರಾದ ಎಸ್. ಕಾರ್ತಿಕ್ ಅವರು ಸಂಪ್ರಬಂಧಗಳ ಕರಡಚ್ಚನ್ನು ತಿದ್ದಿಕೊಟ್ಟಿರುವುದಲ್ಲದೆ ಸಂಪಾದನೆಯ ಕಾರ್ಯದಲ್ಲಿಯೂ ಹೆಚ್ಚಿನ ನೆರವು ನೀಡಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು.

ಈ ಸಂಪುಟದ ಸಂಪಾದನೆಯ ಕಾರ್ಯದಲ್ಲಿ ನಾವು ಅನುಸರಿಸಿರುವ ಕ್ರಮಗಳು ಹಾಗೂ ಇತರ ಸೂಚನೆಗಳು ಇಂತಿವೆ:

೧. ಲೇಖಕರ ಅಭಿಪ್ರಾಯಗಳನ್ನು ಯಾವುದೇ ರೀತಿಯಿಂದಲೂ ತಿದ್ದಲು ಹೋಗಿಲ್ಲ. ಅನಿವಾರ್ಯವಾದ ಕಡೆ ಮಾತ್ರ ಸಂಪಾದಕೀಯ ಟಿಪ್ಪಣಿಗಳನ್ನು ಬರೆಯಲಾಗಿದೆ.

೨. ಲೇಖನಗಳನ್ನು ಮೂಲಕ್ಕೆ ಧಕ್ಕೆಯೊದಗದಂತೆ ಭಾಷೆ, ಬಂಧ, ವಾಕ್ಯರಚನೆ, ವಸ್ತುವಿಷಯದ ದೃಷ್ಟಿಯಿಂದ ಪರಿಷ್ಕರಿಸಲಾಗಿದೆ. ಅನೇಕ ಲೇಖಕರು ಆಧಾರಗ್ರಂಥ ಸೂಚಿ ಮತ್ತು ಟಿಪ್ಪಣಿಗಳನ್ನು ಸಮರ್ಪಕವಾಗಿ ನೀಡಿರುವುದಿಲ್ಲ. ತಪ್ಪುಗಳೂ ಸಾಕಷ್ಟಿವೆ. ಇವುಗಳನ್ನು ಯಥಾಶಕ್ತಿಯಾಗಿ ಸರಿಪಡಿಸಲಾಗಿದೆ.

೩. ನಮ್ಮ ಗಮನಕ್ಕೆ ಬಂದಂತಹ ಬೇರೆಡೆ ಈ ಮೊದಲೇ ಪ್ರಕಟವಾದಂತಹ ಒಬ್ಬರೇ ಲೇಖಕರ ಪ್ರಬಂಧಗಳನ್ನು ನೇರವಾಗಿ ತಿರಸ್ಕರಿಸಲಾಗಿದೆ. ಜೊತೆಗೆ ಬೇರೊಬ್ಬರಿಂದ ಪ್ರಕಟವಾಗಿದ್ದು ಇಲ್ಲಿ ಮತ್ತೊಬ್ಬರು ಅದನ್ನೇ ಪ್ರಕಟಿಸಲು ಕಳುಹಿಸಿಕೊಟ್ಟವುಗಳನ್ನು ಕೂಡ ತಿರಸ್ಕರಿಸಲಾಗಿದೆ.

೪. ಒಂದೇ ವಿಷಯವನ್ನು [ಉದಾಹರಣೆಗೆ : ಶಾಸನ, ನಾಣ್ಯ, ಪುರಾತತ್ತ್ವ ಇತ್ಯಾದಿ] ಒಂದೇ ರೀತಿಯಲ್ಲಿ ಇಬ್ಬರು ಮತ್ತು ಹೆಚ್ಚು ಲೇಖಕರು ಮಂಡಿಸಿರುವುದು ಕಂಡುಬಂದ ಹಿನ್ನೆಲೆಯಲ್ಲಿ ಅಂತಹ ಸಂಪ್ರಬಂಧಗಳನ್ನು ತಿರಸ್ಕರಿಸಲಾಗಿದೆ.

೫. ಕೆಲವು ಲೇಖಕರ ಹಸ್ತಾಕ್ಷರಗಳು ಅರ್ಥವೇ ಆಗದಂತಿವೆ. ಸಾಧ್ಯವಾಗುವ ಮಟ್ಟಿಗೂ ಶ್ರಮವಹಿಸಿ ಓದಿ ಅಕ್ಷರ ಸಂಯೋಜನೆ ಮಾಡಲಾಗಿದೆ. ಕೆಲವು ಭಾಗಗಳಂತೂ ಅರ್ಥವೇ ಆಗದಂತಿವೆ. ಅಂತಹವುಗಳನ್ನು ಸಂದರ್ಭಾನುಸಾರವಾಗಿ ಉಳಿಸಿಕೊಂಡು ಇಲ್ಲವೆ ಸಂಪಾದನೆಗೈದು ತೊಡಕುಗಳನ್ನು ನಿವಾರಿಸಿಕೊಳ್ಳಲಾಗಿದೆ. ಇಂತಹ ತೊಂದರೆಗೆ ಲೇಖಕರೇ ಕಾರಣವೆಂಬುದನ್ನು ಒತ್ತಿ ಹೇಳಬೇಕಾಗಿದೆ. ಇದನ್ನು ಸಂಶೋಧಕ ಲೇಖಕರು ಗಮನಿಸುವುದು ಸೂಕ್ತ.

೬. ಕೆಲವು ಲೇಖಕರು ತಮ್ಮ ಹೆಸರು ಮತ್ತು ವಿಳಾಸಗಳನ್ನು ನೀಡಿಲ್ಲದೆ ಇರುವುದರಿಂದ ಅಂತಹವರ ಹೆಸರು ಮತ್ತು ವಿಳಾಸಗಳನ್ನು ಸಸಂದೇಹವಾಗಿ ದಾಖಲಿಸಲಾಗಿದೆ. ಇದಕ್ಕೆ ಸಂಪಾದಕರು ಯಾವುದೇ ರೀತಿಯಿಂದಲೂ ಹೊಣೆಯಲ್ಲ.

೭. ಹಲವು ಲೇಖನಗಳು ಆಯಾ ವಿಷಯಗಳ ಅರಿವಿಲ್ಲದೆಯೇ ಬರೆದಂತಹ ಲೇಖನಗಳಾಗಿವೆ. ಇವುಗಳನ್ನು ನಿಜಕ್ಕೂ ಎಚ್ಚರಿಕೆಯಿಂದ ಬಳಸಿಕೊಳ್ಳಬೇಕು. ಇಂತಹ ಲೇಖನಗಳಲ್ಲಿ ಸ್ವೋಪಜ್ಞತೆಯೇ ಇಲ್ಲದಿರುವುದು ಗಮನಿಸಬೇಕಾದ ಅಂಶ. ಇದು

ಆರೋಗ್ಯವಾದ ಬೆಳವಣಿಗೆಯಲ್ಲ. ಲೇಖಕರು ಇಂತಹಬರಹಗಳನ್ನು ವರ್ಜಿಸುವುದು ಸಂಶೋಧನೆಯ ದೃಷ್ಟಿಯಿಂದ ಉತ್ತಮವಾದ ಮಾರ್ಗ.

೮. ಕನಾಟಕ ಇತಿಹಾಸ ಅಕಾದೆಮಿಯು ಗೌರವಾನ್ವಿತ ಸಂಸ್ಥೆಯಾಗಿದ್ದು ಇತಿಹಾಸ ದರ್ಶನದಲ್ಲಿ ಪ್ರಕಟಿಸಲು ಕಳುಹಿಸಿಕೊಡುವ ಸಂಶೋಧನ ಲೇಖನಗಳು ಉತ್ತಮ ಕಾಗದದಲ್ಲಿ ಒಂದೇ ಬದಿಯಲ್ಲಿ ಸ್ಫುಟವಾಗಿ ಬರೆದು ಅಥವಾ ಡಿ.ಟಿ.ಪಿ. ಮಾಡಿ ಸಿ.ಡಿ. ಅನ್ನು ಕಳುಹಿಸಿಕೊಡುವುದು ಸಂಶೋಧಕರಿಗೊಂದು ಶೋಭೆ.

೯. ಸಂಶೋಧಕರು ನೇರವಾಗಿ ಸ್ಪಷ್ಟವಾಗಿ ವಿಷಯಕ್ಕೆ ಸಂಬಂಧಿಸಿದ ಅಂಶಗಳನ್ನು ಮಾತ್ರ ತಮ್ಮ ಸಂಪ್ರಬಂಧಗಳಲ್ಲಿ ಚರ್ಚಿಸಲು ಕೋರಲಾಗಿದ್ದು, ಆಯಾ ವಿಷಯಕ್ಕೆ ಸಂಬಂಧಿಸದ ಅಂಶಗಳಿದ್ದಲ್ಲಿ ಮತ್ತು ಇತರೆಡೆ ದೊರಕುವ ಸಾಮಾನ್ಯ [=ಉಜಟಜಡಿಚಿಟ] ವಿಷಯಗಳನ್ನು ಆದಷ್ಟು ಮಟ್ಟಿಗೆ ಚರ್ಚಿಸದಿರಲು ಕೋರಿದೆ.

೧೦.ಸಾಹಿತ್ಯ, ಜಾನಪದ, ಮತೀಯ ಇತ್ಯಾದಿ ವಿಷಯಗಳನ್ನು ಚರ್ಚಿಸಲು ಅದರದ್ದೇ ಆದ ವೇದಿಕೆಗಳಿರುವುದರಿಂದ ಇಲ್ಲಿ ಅದರ ಅವಶ್ಯಕತೆ ಕಂಡುಬರುವುದಿಲ್ಲ. ನಮ್ಮ ಇತಿಹಾಸ ಅಕಾದೆಮಿಯು ಇತಿಹಾಸ, ಶಾಸನ, ಪುರಾತತ್ತ್ವ, ನಾಣ್ಯ ಇಂತಹ ಚಾರಿತ್ರಿಕ ವಿಷಯಗಳಿಗೆ ಸಂಬಂಧಪಟ್ಟ ಸಂಶೋಧನೆಗೆ ಹೆಚ್ಚಿನ ಮಹತ್ತ್ವ ನೀಡುತ್ತದೆ ಎಂದು ತಮ್ಮ ಗಮನಕ್ಕೆ ತರಬಯಸುತ್ತೇವೆ.

೧೧. ಇತಿಹಾಸ ದರ್ಶನದ ಪ್ರಕಟನೆಗೆ ಅಕಾದೆಮಿಯ ಸೀಮಿತ ಆರ್ಥಿಕತೆಯಿಂದ ವಿಸ್ತಾರ ಗಾತ್ರದಲ್ಲಿ ಪ್ರಕಟನೆ ಕಷ್ಟಸಾಧ್ಯ. ಆದ್ದರಿಂದ ನಮ್ಮ ಸಂಶೋಧಕರ ಬರಹಗಳು ಸಾಧ್ಯವಾದಷ್ಟು ಪುಟ ಮಿತಿಯನ್ನು ಹೊಂದಿರಲಿ ಎಂದು ಕೋರುತ್ತೇವೆ.

೧೨. ಯುವ ಸಂಶೋಧಕರು ಸಮ್ಮೇಳನದಲ್ಲಿ ಮಂಡಿಸಿದ ಸಂಪ್ರಬಂಧಗಳನ್ನು ಲೇಖನ ರೂಪದಲ್ಲಿ ಕೊಡುವದಕ್ಕೆ ಮೊದಲು ಆಯಾ ಕ್ಷೇತ್ರದ ಅನುಭವಿ ಹಿರಿಯ ವಿದ್ವಾಂಸರಿಂದ ಪರಿಶೀಲನೆಗೊಳಪಡಿಸಿ ಕೊಡುವುದು ಸೂಕ್ತ. ಏಕೆಂದರೆ ಇತಿಹಾಸ ದರ್ಶನದ ಬರಹಗಳು ರಾಷ್ಟ್ರಮಟ್ಟದಲ್ಲೂ ಮಾನ್ಯತೆ ಪಡೆದಿರುವ ಕಾರಣದಿಂದ ಹಾಗೂ ಇನ್ನೂ ಹೆಚ್ಚಿನ ರೀತಿಯಲ್ಲಿ ಅತ್ಯುತ್ತಮ ಸಂಶೋಧನ ಸಂಪುಟವನ್ನಾಗಿ ತರುವ ಜವಾಬ್ದಾರಿ ನಮ್ಮ ನಿಮ್ಮ ಮೇಲಿದೆ.




೧೩. ಲೇಖಕರು ಲೇಖನದ ಜೊತೆಯಲ್ಲಿ ವಿಳಾಸಗಳನ್ನು ಪಿನ್‌ಕೋಡ್, ಇ-ಮೇಲ್, ದೂರವಾಣಿ ಸಂಖ್ಯೆಗಳ ಸಹಿತ ಕಡ್ಡಾಯವಾಗಿ ನೀಡಬೇಕು. ಇದನ್ನು ಅಕಾದೆಮಿಯಲ್ಲಿಯೂ ಸಹ ದಾಖಲಿಸಬೇಕು. ವಿಳಾಸ ಬದಲಾದಲ್ಲಿ ಕೂಡಲೇ ಪತ್ರಮುಖೇನ ಸರಿಯಾಗಿ ತಿಳಿಸಬೇಕು.







ಬೆಂಗಳೂರು : ೧೯.೯.೨೦೧೩
ವಿಜಯ ಸಂವತ್ಸರ
ಭಾದ್ರಪದ ಶುದ್ಧ ಪೂರ್ಣಿಮಾ ಗುರುವಾರ



ಪಿ.ವಿ. ಕೃಷ್ಣಮೂರ್ತಿ
ಎಸ್. ರಾಜೇಂದ್ರಪ್ಪ

ಪರಿವಿಡಿ


ಈವರೆಗೆ ಕರ್ನಾಟಕ ಇತಿಹಾಸ ಅಕಾದೆಮಿಯ ವಾರ್ಷಿಕ ಅಧಿವೇಶನಗಳ ಸರ್ವಾಧ್ಯಕ್ಷರು ಹಾಗೂ ಇತರ ವಿವರಗಳು


ಸಂಖ್ಯೆ	ದಿನಾಂಕ-ವರ್ಷ/ಸ್ಥಳ	ಆಶ್ರಯ/ಸಹಯೋಗ	ಸರ್ವಾಧ್ಯಕ್ಷರು	
೧.	೧೫-೧೭ ಮೇ ೧೯೮೭ ಬೆಂಗಳೂರು	*ಕರ್ನಾಟಕ ಇತಿಹಾಸ ಅಕಾದೆಮಿ*	**ಡಾ|| ಎಂ. ಚಿದಾನಂದಮೂರ್ತಿ**	
೨.	೨೩-೨೪ ಅಕ್ಟೋಬರ್ ೧೯೮೮ ತುಮಕೂರು	*ಸಿದ್ಧಗಂಗಾಕ್ಷೇತ್ರ : ಡಾ| ಶಿವಕುಮಾರ ಸ್ವಾಮಿಗಳು ಮತ್ತು ತುಮಕೂರು ಜಿಲ್ಲಾ ಇತಿಹಾಸ ಪರಿಷತ್ತು*	**ಡಾ|| ಜಿ. ಎಸ್. ಗಾಯಿ**	
೩.	೧೦-೧೧ ಜೂನ್ ೧೯೮೯ ಗದಗ	*ಶ್ರೀ ಮ. ನಿ. ಪ್ರ. ಜ|| ಡಾ|| ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು, ಶ್ರೀ ತೋಂಟದಾರ್ಯ ಮಠದ ವೀರಶೈವ ಅಧ್ಯಯನ ಸಂಸ್ಥೆ*	**ಡಾ|| ಶ್ರೀನಿವಾಸ ರಿತ್ತಿ**	
೪.	೨೧-೨೨ ಜುಲೈ ೧೯೯೦ ದಾವಣಗೆರೆ	*ಡಾ|| ಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ, ಹಿರೇಮಠ*	**ಡಾ|| ಎಸ್. ಆರ್. ರಾವ್**	
೫.	೧೨-೧೪ ಜುಲೈ ೧೯೯೧ ಚಿತ್ರದುರ್ಗ	*ಚಿನ್ಮೂಲಾದ್ರಿ ಶ್ರೀ ಮುರುಘ ರಾಜೇಂದ್ರ ಬೃಹನ್ಮಠ*	**ಡಾ|| ಬಾ. ರಾ. ಗೋಪಾಲ್**	
೬.	೧೧-೧೩ ಜುಲೈ ೧೯೯೨ ರಾಯಚೂರು	*ಪಂಡಿತ್ ತಾರಾನಾಥ ಶಿಕ್ಷಣ ಸಂಸ್ಥೆ ರಾಯಚೂರು*	**ಡಾ|| ಕೆ. ವಿ. ರಮೇಶ್**	
೭.	೨೩-೨೫ ಜುಲೈ ೧೯೯೩ ಮೈಸೂರು	*ಸುತ್ತೂರು ಮಠದ ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಜೆ. ಎಸ್. ಎಸ್. ಸಂಸ್ಥೆ*	**ಡಾ|| ಅ. ಸುಂದರ**	
೮.	೯-೧೦ ಜುಲೈ ೧೯೯೪ ಸೊಂಡೂರು	*ಶ್ರೀ ಎಂ. ವೈ. ಘೋರ್ಪಡೆ ಕರ್ನಾಟಕ ಸೇವಾ ಸಂಘ*	**ಡಾ|| ಎಂ. ಎಂ. ಕಲಬುರ್ಗಿ**	

ಸಂಖ್ಯೆ	ದಿನಾಂಕ-ವರ್ಷ/ಸ್ಥಳ	ಆಶ್ರಯ/ಸಹಯೋಗ	ಸರ್ವಾಧ್ಯಕ್ಷರು	
೯.	೯-೧೧ ಸೆಪ್ಟೆಂಬರ್ ೧೯೯೫ ಬೆಳಗಾವಿ	ಶ್ರೀ ಮ. ನಿ. ಪ್ರ. ಸಿದ್ಧರಾಮ ಮಹಾಸ್ವಾಮಿಗಳು - ಶ್ರೀ ನಾಗನೂರು ರುದ್ರಾಕ್ಷಿಮಠದ ವೀರಶೈವ ಅಧ್ಯಯನ ಅಕಾದೆಮಿ	ಡಾ|| ಎ.ವಿ. ನರಸಿಂಹಮೂರ್ತಿ	
೧೦.	೭-೯ ಜೂನ್ ೧೯೯೬ ಧಾರವಾಡ	ಕರ್ನಾಟಕ ವಿಶ್ವವಿದ್ಯಾಲಯ ಮತ್ತು ಶ್ರೀ ಮ. ನಿ. ಪ್ರ. ಶಿವಯೋಗಿ ಮಹಾಸ್ವಾಮಿಗಳು ಶ್ರೀ ಮುರುಘಾಮಠ	ಡಾ|| ಜಿ. ಎಸ್. ದೀಕ್ಷಿತ್	
೧೧.	೨೫-೨೭ ಅಕ್ಟೋಬರ್ ೧೯೯೭ ಸಿರಸಿ	ಶ್ರೀ ಸೋಂದಾ ಸ್ವರ್ಣವಲ್ಲಿ ಮಹಾಸಂಸ್ಥಾನ ಮಠ ಹಾಗೂ ಸರ್ವಜ್ಞೇಂದ್ರ ಸರಸ್ವತೀ ಪ್ರತಿಷ್ಠಾನ, ಸಿರಸಿ	ಪ್ರೊ|| ಕೆ. ಅಭಿಶಂಕರ್	
೧೨.	೧೪-೧೬ ನವೆಂಬರ್ ೧೯೯೮ ಬೆಂಗಳೂರು	ಕರ್ನಾಟಕ ಇತಿಹಾಸ ಅಕಾದೆಮಿ ದಿ ಮಿಥಿಕ್ ಸೊಸೈಟಿ, ಬೆಂಗಳೂರು	ಡಾ|| ಎಸ್. ನಾಗರಾಜು	
೧೩.	೧೧-೧೩ ಜೂನ್ ೧೯೯೯ ಹರಪನಹಳ್ಳಿ	ಮಾನ್ಯ ಸಚಿವ ಶ್ರೀ ಡಿ. ನಾರಾಯಣದಾಸ್ ಮತ್ತು ಆಯೋಜಕರಾದ ಶ್ರೀ ಕುಂ. ಬಾ. ಸದಾಶಿವಪ್ಪ, ಸ್ವಾಗತ ಸಮಿತಿ, ಹರಪನಹಳ್ಳಿ	ಡಾ|| ಶ್ರೀನಿವಾಸ ಹಾವನೂರ	
೧೪.	೮-೧೦ ಜುಲೈ ೨೦೦೦ ಹಂಪಿ	ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ	ಶ್ರೀ ಸಿ. ಟಿ. ಎಂ. ಕೊಟ್ರಯ್ಯ	
೧೫.	೧೩-೧೫ ಅಕ್ಟೋಬರ್ ೨೦೦೧ ಉಡುಪಿ	ಪೂಜ್ಯ ಶ್ರೀ ವಿಶ್ವೇಶ್ವರ ತೀರ್ಥ ಪಾದಂಗಳು ಪೇಜಾವರ ಮಠಾಧೀಶರು, ಉಡುಪಿ	ಡಾ|| ಜೋತ್ಸ್ನಾ ಕಾಮತ್	
೧೬.	೨೨-೨೪ ಸೆಪ್ಟೆಂಬರ್ ೨೦೦೨ ಹೊಸನಗರ	ಪೂಜ್ಯಶ್ರೀ ರಾಘವೇಶ್ವರ ಭಾರತೀ ಸ್ವಾಮಿಗಳು ಶ್ರೀ ರಾಮಚಂದ್ರಾಪುರ ಮಠ	ಡಾ. ಎ.ಕೆ. ಶಾಸ್ತ್ರಿ	
೧೭.	೧೩-೧೫ ಸೆಪ್ಟೆಂಬರ್ ೨೦೦೩ ಬಾದಾಮಿ	ವಿಶ್ವಚೇತನ ಸಂಸ್ಥೆ ಬಾದಾಮಿ	ಡಾ. ಎಸ್. ರಾಜಶೇಖರ್	

ಸಂಖ್ಯೆ	ದಿನಾಂಕ-ವರ್ಷ/ಸ್ಥಳ	ಆಶ್ರಯ/ಸಹಯೋಗ	ಸರ್ವಾಧ್ಯಕ್ಷರು	
೧೮.	೨೪-೨೬ ಸೆಪ್ಟೆಂಬರ್ ೨೦೦೪ ಹೊನ್ನಾಳಿ	ಶ್ರೀ ಚನ್ನಪ್ಪಸ್ವಾಮಿ ವಿದ್ಯಾಪೀಠ ಚನ್ನ-ಚೇತನ ಪ್ರಕಾಶನ ಮತ್ತು ಹಿರೇಕಲ್ಮಠ	**ಶ್ರೀ ಕೆಳದಿ ಗುಂಡಾ ಜೋಯಿಸ್**	
೧೯.	೧೧-೧೩ ಸೆಪ್ಟೆಂಬರ್ ೨೦೦೫ ಸೇಡಂ	ಶ್ರೀ ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಂಸ್ಥೆ	ಡಾ. ಬಿ.ವ್ಹಿ. ಶಿರೂರ	
೨೦.	೯-೧೧ ಸೆಪ್ಟೆಂಬರ್ ೨೦೦೬ ನಂಜನಗೂಡು	ಶ್ರೀ ರಾಘವೇಂದ್ರ ಸ್ವಾಮಿಗಳ ಮಠ ನಂಜನಗೂಡು	ಡಾ. ಸೂರ್ಯನಾಥ ಕಾಮತ್	
೨೧.	೮-೧೦ ಸೆಪ್ಟೆಂಬರ್ ೨೦೦೭ ರಾಮನಗರ, ಹಗರಿಬೊಮ್ಮನಹಳ್ಳಿ	ಹಗರಿಬೊಮ್ಮನಹಳ್ಳಿಯ ಶ್ರೀರಾಮ ಯುವಕ ಸಂಘ	ಪ್ರೊ. ಲಕ್ಷ್ಮಣ್ ತೆಲಗಾವಿ	
೨೨.	೧೮-೨೧ ಸೆಪ್ಟೆಂಬರ್ ೨೦೦೮ ಧರ್ಮಸ್ಥಳ	ಧರ್ಮಸ್ಥಳ ಮಂಜುನಾಥೇಶ್ವರ ದೇವಾಲಯ ಸಂಸ್ಥೆ	ಡಾ. ವಸುಂಧರಾ ಫಿಲಿಯೋಜಾ	
೨೩.	೧೦-೧೨ ಅಕ್ಟೋಬರ್ ೨೦೦೯ ಬಾಳೆಹೊನ್ನೂರು	ಶ್ರೀ ಜಗದ್ಗುರು ರಂಭಾಪುರಿ ವೀರ ಸಿಂಹಾಸನ ಮಹಾಸಂಸ್ಥಾನ ಪೀಠ	ಡಾ. ಎಂ.ಜಿ. ನಾಗರಾಜ್	
೨೪.	೧೩-೧೫ ನವೆಂಬರ್ ೨೦೧೦ ಆದಿಚುಂಚನಗಿರಿ	ಶ್ರೀ ಆದಿಚುಂಚನಗಿರಿ ಮಹಾ ಸಂಸ್ಥಾನ ಮಠ	ಡಾ. ಎಂ.ಎಸ್. ಕೃಷ್ಣಮೂರ್ತಿ	
೨೫.	೯-೧೧ ಸೆಪ್ಟೆಂಬರ್ ೨೦೧೧ ಬೆಂಗಳೂರು	ಮಿಥಿಕ್ ಸೊಸೈಟಿ ಬೆಂಗಳೂರು	ಡಾ. ಎಚ್.ಎಸ್.ಗೋಪಾಲರಾವ್	



ಡಾ॥ ಬಾ.ರಾ. ಗೋಪಾಲ್ ಶಾಸನ ದತ್ತಿ ಪ್ರಶಸ್ತಿ ಸನ್ಮಾನಿತರು

ಸಂಖ್ಯೆ	ದಿನಾಂಕ-ವರ್ಷ	ಸ್ಥಳ	ಸನ್ಮಾನಿತರು	
೧	೧೫ನೇ ವಾರ್ಷಿಕ ಸಮ್ಮೇಳನ ಅಕ್ಟೋಬರ್ ೨೦೦೧	ಉಡುಪಿ	ಡಾ. ಕೆ.ವಿ. ರಮೇಶ	
೨	೧೬ನೇ ವಾರ್ಷಿಕ ಸಮ್ಮೇಳನ ಸೆಪ್ಟಂಬರ್ ೨೦೦೨	ಹೊಸನಗರ	ಡಾ. ಶ್ರೀನಿವಾಸ ರಿತ್ತಿ	
೩	೧೭ನೇ ಸಮ್ಮೇಳನದ ಸೆಪ್ಟಂಬರ್ ೨೦೦೩	ಬಾದಾಮಿ	ಡಾ. ದೇವರಕೊಂಡಾರೆಡ್ಡಿ	
೪	೧೮ನೇ ಸಮ್ಮೇಳನ ಸೆಪ್ಟಂಬರ್ ೨೦೦೪	ಹೊನ್ನಾಳಿ	ಡಾ. ಬಿ. ರಾಜಶೇಖರಪ್ಪ	
೫	೧೯ನೇ ಸಮ್ಮೇಳನ ಸೆಪ್ಟಂಬರ್ ೨೦೦೫	ಸೇಡಂ	ಡಾ. ಕೆ.ಆರ್. ಗಣೇಶ್	
೬	೨೦ನೇ ಸಮ್ಮೇಳನ ಸೆಪ್ಟೆಂಬರ್ ೨೦೦೬	ನಂಜನಗೂಡು	ಡಾ. ಎಂ.ಜಿ. ನಾಗರಾಜ್	

ಸಂಖ್ಯೆ	ದಿನಾಂಕ-ವರ್ಷ	ಸ್ಥಳ	ಸನ್ಮಾನಿತರು	
೭	೨೧ನೇ ಸಮ್ಮೇಳನ ಸೆಪ್ಟೆಂಬರ್ ೨೦೦೭	ಹಗರಿಬೊಮ್ಮನಹಳ್ಳಿ	**ಡಾ. ಎಚ್.ಎಸ್. ಗೋಪಾಲರಾವ್**	
೮	೨೨ನೇ ಸಮ್ಮೇಳನ ಸೆಪ್ಟೆಂಬರ್ ೨೦೦೮	ಧರ್ಮಸ್ಥಳ	**ಡಾ. ಪಿ.ಎನ್. ನರಸಿಂಹಮೂರ್ತಿ**	
೯	೨೩ನೇ ಸಮ್ಮೇಳನ ಅಕ್ಟೋಬರ್ ೨೦೦೯	ಬಾಳೇಹೊನ್ನೂರು	**ಶ್ರೀಮತಿ ಹನುಮಾಕ್ಷಿ ಗೋಗಿ**	
೧೦	೨೪ನೇ ಸಮ್ಮೇಳನ ನವೆಂಬರ್ ೨೦೧೦	ಆದಿಚುಂಚನಗಿರಿ	**ಡಾ. ಪಿ.ವಿ. ಕೃಷ್ಣಮೂರ್ತಿ**	
೧೧	೨೫ನೇ ಸಮ್ಮೇಳನ ಸೆಪ್ಟೆಂಬರ್ ೨೦೧೧	ಬೆಂಗಳೂರು	**ಶ್ರೀ ಕೆ. ಮೊಹಮ್ಮದ್ ಶರೀಫ್**	
೧೨	೨೬ನೇ ಸಮ್ಮೇಳನ ಸೆಪ್ಟೆಂಬರ್ ೨೦೧೨	ಶೃಂಗೇರಿ	**ಶ್ರೀ ಸೀತಾರಾಮ್ ಜಾಗೀರ್‌ದಾರ್**	
೧೩	೨೭ನೇ ಸಮ್ಮೇಳನ ಸೆಪ್ಟೆಂಬರ್ ೨೦೧೩	ಬೆಂಗಳೂರು	**ಡಾ|| ಆರ್. ಶೇಷಶಾಸ್ತ್ರಿ**	

ಶ್ರೇಷ್ಠ ಇತಿಹಾಸ ತಜ್ಞರಿಗಾಗಿ ಜಿ.ಆರ್.ಆರ್. ಟ್ರಸ್ಟಿನ ಸನ್ಮಾನ್ಯ ಅಶೋಕ್‌ಕುಮಾರ್ ಅವರು ಸ್ಥಾಪಿಸಿರುವ

ಇತಿಹಾಸ ಸಂಸ್ಕೃತಿ ಶ್ರೀ ವಿಶಿಷ್ಟ ಪ್ರಶಸ್ತಿ

೧. ೨೬ನೆಯ ಸಮ್ಮೇಳನ ೨೨.೦೯.೨೦೧೨ ಶೃಂಗೇರಿ	ಶ್ರೀಮದ್ ಜಗದ್ಗುರು ಆದಿ ಶಂಕರಾಚಾರ್ಯ ಮಹಾಸಂಸ್ಥಾನಮ್, ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠಮ್, ಶೃಂಗೇರಿ	ಪ್ರೊ. ಲಕ್ಷ್ಮಣ್ ತೆಲಗಾವಿ	
೨. ೨೭ನೆಯ ಸಮ್ಮೇಳನ ಬೆಂಗಳೂರು	ದಿ ಮಿಥಿಕ್ ಸೊಸೈಟಿ, ಬೆಂಗಳೂರು	ಡಾ. ಸೂರ್ಯನಾಥ ಕಾಮತ್	

ಕರ್ನಾಟಕ ಇತಿಹಾಸ ಅಕಾದೆಮಿ ೨೬ನೆಯ ವಾರ್ಷಿಕ ಸಮ್ಮೇಳನ

ಶ್ರೀಮದ್ ಜಗದ್ಗುರು ಆದಿ ಶಂಕರಾಚಾರ್ಯ ಮಹಾಸಂಸ್ಥಾನಮ್, ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠಮ್, ಶೃಂಗೇರಿ

ದಿನಾಂಕ ೨೨ ಸೆಪ್ಟೆಂಬರ್ ೨೦೧೨

ಸಮ್ಮೇಳನಾಧ್ಯಕ್ಷರು : **ಡಾ॥ ಎಸ್.ವಿ. ವೆಂಕಟೇಶಯ್ಯ***

ಅಧ್ಯಕ್ಷ ಭಾಷಣ

ವಿದ್ಯಾಧಿದೇವತೆಯು ಶೃಂಗೇರಿ ಕ್ಷೇತ್ರದ ಅಧಿದೇವತೆಯೂ ಆದ ಶ್ರೀ ಶಾರದಾಂಬೆಯನ್ನೂ ಶ್ರೀಮತ್ ಶಂಕರಾಚಾರ್ಯರ ದಕ್ಷಿಣಾಮ್ನಾಯ ಪೀಠದ ಪ್ರಸ್ತುತ ಅಧಿಪತಿಗಳಾದ ಪರಮಪೂಜ್ಯ ಶ್ರೀಗಳನ್ನು ಭಕ್ತಿಪೂರ್ವಕವಾಗಿ ಸ್ಮರಿಸಿ, ಕರ್ನಾಟಕ ಸರ್ಕಾರದ ವಿಧಾನ ಪರಿಷತ್ತಿನ ಸನ್ಮಾನ್ಯ ಸಭಾಪತಿಗಳಾದ ಶ್ರೀ ಡಿ.ಎಚ್. ಶಂಕರಮೂರ್ತಿಯವರೇ, ಕರ್ನಾಟಕ ಇತಿಹಾಸ ಅಕಾದೆಮಿಯ ಗೌರವಾಧ್ಯಕ್ಷರೂ ನಾಡಿನ ಹಿರಿಯ ವಿದ್ವಾಂಸರೂ ಆದ ಡಾ॥ ಸೂರ್ಯನಾಥ ಕಾಮತ್‌ರವರೇ, ಅಕಾದೆಮಿಯ ಪ್ರಸ್ತುತ ಅಧ್ಯಕ್ಷರಾದಂತಹ ಡಾ॥ ದೇವರಕೊಂಡಾರೆಡ್ಡಿಯವರೇ, ಉಪಾಧ್ಯಕ್ಷರುಗಳಾದ ಸನ್ಮಾನ್ಯ ಡಾ॥ ಎಂ.ಜಿ. ನಾಗರಾಜ್ ಮತ್ತು ಡಾ॥ ಬಿ. ರಾಜಶೇಖರಪ್ಪನವರೇ ಹಾಗೂ ಅಕಾದೆಮಿಯ ಕಾರ್ಯಕಾರಿ ಸಮಿತಿಯ ಸದಸ್ಯರೇ, ಸಭಾಂಗಣದಲ್ಲಿರುವ ವಿದ್ವನ್ಮಿತ್ರರೇ ಹಿರಿಯರೇ ಕಿರಿಯರೇ,

ಇಂದು ನಡೆಯುತ್ತಿರುವ ೨೬ನೇ ವಾರ್ಷಿಕ ಇತಿಹಾಸ ಸಮ್ಮೇಳನಕ್ಕೆ ಸಮ್ಮೇಳನಾಧ್ಯಕ್ಷನನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಿ ಗೌರವಿಸಿರುವುದಕ್ಕಾಗಿ ಕರ್ನಾಟಕ ಇತಿಹಾಸ ಅಕಾದೆಮಿಗೂ ಮತ್ತು ನಿಮ್ಮೆಲ್ಲರಿಗೂ ನಾನು ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಪ್ರಾಚೀನ ಸ್ಮಾರಕಗಳು ಅಂದಿನ ಸಮಾಜದ ಸಾಂಸ್ಕೃತಿಕ ಪರಂಪರೆಯ ಪ್ರತೀಕಗಳು. ಇವುಗಳಲ್ಲಿ ಅಂದಿನ ಸಾಮಾಜಿಕ, ಆರ್ಥಿಕ, ವಿಜ್ಞಾನ, ತಂತ್ರಜ್ಞಾನ, ಕಲೆ, ವಾಸ್ತು, ಇತ್ಯಾದಿಗಳ ಬೆಳವಣಿಗೆಗಳನ್ನು ಗುರುತಿಸಬಹುದಾಗಿದೆ. ವಾಸದ ವಾಸ್ತುವಿನಿಂದ ಹಿಡಿದು ಯಾವುದೇ ಸ್ಮಾರಕದ ನೆಲೆಯನ್ನು ಗುರುತಿಸುವಲ್ಲಿ ಮಾನವ ಪರಿಸರ ಮತ್ತು ಭೌಗೋಳಿಕ ಪ್ರಜ್ಞೆಯನ್ನು ಮೆರೆದಿದ್ದಾನೆ. ಅಂತೆಯೇ ಅನೇಕ ಭೌಗೋಳಿಕ ಭಾಗಗಳಲ್ಲಿ ವಿವಿಧ ಧರ್ಮಗಳ, ವಿವಿಧ ಪರಿಸರದ ವಿವಿಧ ಅವಶ್ಯಕತೆಗಳ ಅನುಗುಣವಾಗಿ ಸ್ಮಾರಕಗಳೂ ನೆಲೆಗಳೂ ಸೃಷ್ಟಿಯಾದವು. ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯವು ಸಹ ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿದೆ.

ಪುರಾತತ್ವರಂಗದಲ್ಲಿ ನನ್ನ ೩೩ ವರ್ಷಗಳ ಸೇವೆಯನ್ನು ಗಮನಿಸಿ ನನ್ನನ್ನು ಈ ಸ್ಥಾನಕ್ಕೆ ಆಯ್ಕೆ ಮಾಡಿದ್ದೀರೆಂದು ನನ್ನ ನಂಬಿಕೆ. ಈ ದೀರ್ಘಾವಧಿಯ ಸೇವೆಯಲ್ಲಿ ನನ್ನ ವಿಶೇಷ ಆಕರ್ಷಣೆಯು ಕಾರ್ಯರಂಗವೂ ಆಗಿದ್ದಿದ್ದು ಪ್ರಾಚೀನ ಸ್ಮಾರಕಗಳ ಸಂರಕ್ಷಣೆ ಇದಲ್ಲದೆ ಆಗಾಗ್ಗೆ ಅನ್ವೇಷಣೆ ಮತ್ತು ಉತ್ಖನನಗಳನ್ನು ನಡೆಸಿದ್ದೇನೆ. ಈ ಸಂದರ್ಭದಲ್ಲಿ ಜರುಗಿದ ಕೆಲವು ಅನುಭವಗಳನ್ನು ವಿದ್ವತ್‌ರಂಗಕ್ಕೆ ಸಲ್ಲಿಸಿದ ಮುನ್ನಡೆಯನ್ನು ಈ ಭಾಷಣದಲ್ಲಿ ಪ್ರಸ್ತಾಪಿಸಲು ಇಚ್ಛಿಸುತ್ತೇನೆ.

ನಾನು ಉಪ–ಅಧೀಕ್ಷಕ ಪುರಾತತ್ವವಿದನಾಗಿ ಒಂಭತ್ತು ವರ್ಷಗಳ ಕಾಲ ಬೆಂಗಳೂರು ವೃತ್ತದಲ್ಲಿ ಸಲ್ಲಿಸಿದ ಸೇವೆಯ ಫಲವಾಗಿ ಕರ್ನಾಟಕದ ಉದ್ದಗಲಕ್ಕೂ ಅನೇಕ ಸ್ಮಾರಕಗಳ ಹತ್ತಿರದ ಪರಿಚವಾಯಿತು. ವಿಶೇಷವಾಗಿ ಬಾದಾಮಿ, ಪಟ್ಟದಕಲ್ಲು, ಐಹೊಳೆ, ಲಕ್ಕುಂಡಿ, ಬಿಜಾಪುರ ಮತ್ತು ಹಂಪಿಯ ಸ್ಮಾರಕಗಳು; ಹಂಪಿಯ ರಾಷ್ಟ್ರೀಯ ಉತ್ಖನನ ಯೋಜನೆಯ ಅಡಿಯಲ್ಲಿ ಸ್ವಲ್ಪಕಾಲ ಅಧಿಕಾರಿಯಾಗಿ ನನ್ನ ಕರ್ತವ್ಯವನ್ನು ನಿರ್ವಹಿಸುವಾಗ ಉತ್ಖನನ ಮತ್ತು ಸಂರಕ್ಷಣೆಯ ವಿಭಾಗದಲ್ಲಿ ವಿಶೇಷ ಆಸಕ್ತಿ ಉಂಟಾಯಿತು. ಮುಂದುವರಿದು ನನ್ನ ಪದೋನ್ನತಿ ಆಗಿ ಮಹಾರಾಷ್ಟ್ರಕ್ಕೆ ವರ್ಗಾವಣೆ ಆದಾಗ ಅಲ್ಲಿಯ ಗುಹಾ ದೇವಾಲಯಗಳನ್ನು ಕಂಡು ನನ್ನಲ್ಲಿ ಸಂಭ್ರಮಾಶ್ಚರ್ಯಗಳುಂಟಾದವು. ನಮ್ಮ ಪೂರ್ವಜರ ಪರಿಸರದ ಪ್ರಾಜ್ಞತೆಗೆ, ಧರ್ಮದ ಕಲ್ಪನೆ, ಆರ್ಥಿಕ, ಸಾಮಾಜಿಕ ಮತ್ತು ವಿಜ್ಞಾನ–ತಂತ್ರಜ್ಞಾನಗಳನ್ನು ಮೇಳೈಸಿ, ಸೃಜಿಸಲ್ಪಟ್ಟ ಜೀವಂತ ಸಾಕ್ಷಿಗಳೇ ಈ ಸ್ಮಾರಕಗಳು.

ಪುರಾತತ್ವರಂಗಕ್ಕೆ ನನ್ನ ನೇರ ಅಧ್ಯಯನ ಪ್ರಾರಂಭವಾಗಿದ್ದು ಮಹಾರಾಷ್ಟ್ರದಲ್ಲಿ. ಮಹಾರಾಷ್ಟ್ರದ ಔರಂಗಬಾದ್ ವೃತ್ತದಲ್ಲಿ ಪ್ರಾಗಿತಿಹಾಸ ಕಾಲದ ಇನಾಂಗಾವ್, ದೈಮಾಬಾದ್‌ಗಳಲ್ಲದೆ ಇತಿಹಾಸಕಾಲದ ಶಿಲೆಯಲ್ಲಿ ಕಂಡರಿಸಿದ ಬೌದ್ಧ, ಜೈನ, ವೈದಿಕ ಧರ್ಮದ ಗುಹಾದೇವಾಲಯಗಳನ್ನು ಕಟ್ಟಡದ ನಿರ್ಮಿತಿಗಳನ್ನೂ ಕೋಟೆ ಕೊತ್ತಲಗಳನ್ನೂ ಉಲ್ಲೇಖಿಸುವುದು

* ರೀಜನಲ್ ಡೈರೆಕ್ಟರ್, (ನಿವೃತ್ತ), ದಕ್ಷಿಣ ವಲಯ, ಭಾರತೀಯ ಪುರಾತತ್ತ್ವ ನಿರ್ದೇಶನಾಲಯ, ಬೆಂಗಳೂರು.

[illegible]. ಅದರಲ್ಲೂ ಅಂದರೇ ವಿಶೇಷವಾಗಿ ಅಜಂತಾ, ಎಲ್ಲೋರಾ, ಎಲಿಫೆಂಟಾ, ಕನ್ಹೇರಿ, ದೌಲತಾಬಾದ್, ಔರಂಗಾಬಾದ, ರಾಯಗಡ, ಜಂಜೀರಾ, ನಾಶಿಕ್, ಕಾರ್ಲಾ, ಭಾಜಾ, ಬೇಡ್ಸಾ, ಶಿವನೇರಿ ಮೊದಲಾದವು ಬಹುಮುಖ್ಯವೆಂದರೆ ತಪ್ಪಾಗಲಾರದು. ದಖ್ಖನಿನ ಟ್ರಾಪ್ ಶಿಲೆಯಲ್ಲಿ ಖಂಡರಿಸಲಾದ ಗುಹಾದೇವಾಲಯಗಳು ಸಹಸ್ರಕ್ಕಿಂತಲೂ ಹೆಚ್ಚು ಇವೆ. ಮಹಾರಾಷ್ಟ್ರದಲ್ಲಿನ ನನ್ನ ಸೇವಾವಧಿಯಲ್ಲಿ ಬೃಹತ್ ಪ್ರಮಾಣದ ಸಂರಕ್ಷಣಾ ಯೋಜನೆಯೊಂದು ಜಪಾನ್ ಸರ್ಕಾರದ OECF (ಓವರ್‌ಸೀಸ್ ಎಕನಾಮಿಕ್ ಕೋ-ಆಪರೇಶನ್ ಫಂಡ್) ಎಂಬ ಶೀರ್ಷಿಕೆಯಡಿಯಲ್ಲಿ ಅಜಂತಾ, ಎಲ್ಲೋರಾ ಡೆವಲಪ್‌ಮೆಂಟ್ ಪ್ರೋಗ್ರಾಮ್ ಎಂಬ ಯೋಜನೆಯು ಅಸ್ತಿತ್ವದಲ್ಲಿತ್ತು. ಜಗತ್ಪ್ರಸಿದ್ಧವಾದ ಅಜಂತಾ, ಎಲ್ಲೋರಾ, ಪೀತಲ್‌ಕೋರಾ ಮತ್ತು ಔರಂಗಬಾದಿನ ಗುಹಾಲಯಗಳಲ್ಲಿ ಹೆಚ್ಚುಕಡಿಮೆ ಒಂದೇ ರೀತಿಯ ಸಮಸ್ಯೆಗಳು ಕಾಣಿಸಿಕೊಂಡಿದ್ದವು. ಡೆಕ್ಕನ್ ಟ್ರಾಪ್‌ನ ಬಸಾಲ್ಟಿಕ್ ಶಿಲೆಯಲ್ಲಿ ಓರೆ-ಕೋರೆಯ ಜಾಯಿಂಟ್‌ಗಳು ಇರುವುದರಿಂದ ಮಳೆಯ ನೀರಿನ ಸಂಪರ್ಕವಾದಾಗ ಉಂಟಾಗುವ ರಾಸಾಯನಿಕ ಪ್ರಕ್ರಿಯೆಯಿಂದ ಶಿಲೆಯು ನಶಿಸಿ ಜೋಯಿಂಟುಗಳು ಶಕ್ತಿಹೀನವಾಗಿ ಗುಹಾದೇವಾಲಯಗಳ ಮುಖಮಂಟಪಗಳಿಂದ ಶಿಲೆಯು ನೆಲಕ್ಕೆ ತುಂಡು-ತುಂಡಾಗಿ ಬೀಳುತ್ತಿದ್ದುದು (Rock fall) ಸರ್ವೇಸಾಮಾನ್ಯವಾಗಿತ್ತು. ಅಲ್ಲದೇ ಮೇಲ್ಛಾಣಿಯು ಇದೇ ಕಾರಣದಿಂದಾಗಿ ಬಿರುಕುಗೊಂಡು ಬಹುತೇಕ ಗುಹಾಲಯಗಳಲ್ಲಿ ನೀರಿನ ಸೋರಿಕೆಯಾಗುತ್ತಿದ್ದುದು ಸಹ ಸಾಮಾನ್ಯ ವಿಷಯವಾಗಿತ್ತು. ವಿಶೇಷವಾಗಿ ಅಜಂತಾದ ಜಗತ್ಪ್ರಸಿದ್ಧ ವರ್ಣಚಿತ್ರಗಳು ಹೆಚ್ಚು ಹಾನಿಗೊಳಗಾಗಿದ್ದವು. ಹಾಗೆಯೇ ಎಲ್ಲೋರಾದ ಕೈಲಾಸನಾಥ ದೇವಾಲಯವು ಇತರ ಗುಹಾಲಯಗಳೂ ಅಲ್ಲದೇ, ದೌಲತಾಬಾದಿನ ಕೋಟೆ ಮತ್ತು ಸ್ಮಾರಕಗಳು; ಔರಂಗಬಾದಿನ ಬೀಬಿಕಾ ಮಕ್‌ಬರ್ ಈ ಯೋಜನೆಯಡಿಯಲ್ಲಿ ಸಮ್ಮಿಳಿತವಾಗಿದ್ದವು. ಇವುಗಳ ಸಂರಕ್ಷಣಾ ಕಾರ್ಯವು ಭಾರತ ಸರ್ಕಾರದ ನಾಗಪುರದ ಭೂವಿಜ್ಞಾನ ಇಲಾಖೆಯಿಂದ (Geological Survey of India) (Geo.Technical Inviestigation) ಭೂತಾಂತ್ರಿಕ ಪರಿಶೋಧನೆಯನ್ನು ಕೈಗೊಳ್ಳಲಾಯಿತು. ಈ ಸಮಸ್ಯೆಯನ್ನು ಬಗೆಹರಿಸುವ ನಿಟ್ಟಿನಲ್ಲಿ ಭಾರತ ಪುರಾತತ್ವ ಮತ್ತು ಸಂಗ್ರಹಾಲಯ ಇಲಾಖೆಯು ಸೂಕ್ತ ಯೋಜನೆಯನ್ನು ರೂಪಿಸಿದ್ದು ಸಂರಕ್ಷಣಾ ಕಾರ್ಯವು ಪ್ರಗತಿಯಲ್ಲಿದೆ. ಮಹತ್ವವಾದ ಈ ಪ್ರಾರಂಭಿಕ ಘಟ್ಟದ ಕಾರ್ಯಗಳನ್ನು ಸಮರ್ಥವಾಗಿ ನಿರ್ವಹಿಸಲು ನನಗೆ ಅವಕಾಶ ದೊರಕಿದ್ದು, ಅದನ್ನು ಸಾಧಿಸಿದ್ದು ನನಗೆ ಇಂದಿಗೂ ಸಂತಸದ ವಿಷಯವಾಗಿದೆ.

ಈ ರೀತಿಯಾಗಿರಲು ಅಜಂತಾ, ಎಲ್ಲೋರಾದ ಭೇಟಿಯು ಸಂಬಂಧಪಟ್ಟ ಅಧಿಕಾರಿಗಳ ಜೊತೆ ಆಗಾಗ್ಗೆ ನಡೆಯುತ್ತಲಿತ್ತು. ಒಮ್ಮೆ ನನ್ನ ಮನಸಿನ ಮೂಲೆಯಲ್ಲಿ ಅವ್ಯಕ್ತಭಾವನೆಯೊಂದು ಕಾಡುತ್ತಲಿತ್ತು. ಇಂತಹ ಬೃಹತ್ ಗುಹಾಲಯಗಳನ್ನು ಕೊರೆಯಬೇಕಾದರೆ ಅಜಂತಾದಲ್ಲಿ ಕುಶಲಕರ್ಮಿಗಳು, ಸ್ಥಪತಿಗಳು ತಂತ್ರಜ್ಞರು, ಧರ್ಮಗುರುಗಳು, ಬೌದ್ಧಭಿಕ್ಷುಗಳು ಆಶ್ರಯದಾತರು ಮತ್ತು ಆಸಕ್ತರು ಯಾವ ರೀತಿಯಲ್ಲಿ ಭಾಗವಹಿಸಿರಬೇಕು. ಇವರೆಲ್ಲ ಎಲ್ಲಿಂದ ಬಂದಿರಬಹುದು. ಇಲ್ಲಿ ಸೇರಿದ ನಂತರ ಯಾವ ಭಾಗದಲ್ಲಿ ವಾಸಿಸುತ್ತಿರಬೇಕು ಎಂಬಿವೇ ಸಂದೇಹಗಳು ಕಾಡುತ್ತಿದ್ದವು. ಈ ವಿಚಾರವಾಗಿ ಪ್ರೊ॥ ವಾಲ್ಟರ್ ಸ್ಪಿಂಕ್ ಎಂಬ ವಿದ್ವಾಂಸರೊಡನೆ ಮೇಲಿಂದ ಮೇಲೆ ಚರ್ಚಿಸುತ್ತಾ ಇದ್ದೆನು. ಹೀಗಿರುವಾಗ ಒಮ್ಮೆ ಅಜಂತಾ ಗುಹಾ ದೇವಾಲಯಗಳ ಮೇಲ್ಛಾವಣಿಯನ್ನು ಪರೀಕ್ಷಿಸುತ್ತಿರಬೇಕಾದರೆ ವಾಗೋರ ನದಿಯ ಬಲದಂಡೆಯ ಮೇಲೆ ಮಹಾರಾಷ್ಟ್ರ ಸರ್ಕಾರದ ವತಿಯಿಂದ ನಿರ್ಮಿಸಲ್ಪಟ್ಟ ಪಾದಚಾರಿ ಪಥವು ಸ್ವಲ್ಪ ವಿಚಿತ್ರವಾಗಿ ಕಂಡಿತು. ಆರನೇಯ ಗುಹಾಲಯದ ಮೇಲಿನಿಂದ ಇದನ್ನು ಮತ್ತೊಮ್ಮೆ ಸೂಕ್ಷ್ಮವಾಗಿ ಅವಲೋಕಿಸಿದಾಗ ಚದುರಿದ ಇಟ್ಟಿಗೆಯ ಚೂರುಗಳು ಮತ್ತು ಅಂತವೇ ಇಟ್ಟಿಗೆಗಳನ್ನು ಉಪಯೋಗಿಸಿ ನಿರ್ಮಿಸಿದ ಸಂಚಾರಿ ಪಾದಪಥವು ಸ್ಪಷ್ಟವಾಗಿ ಗೋಚರಿಸಿತು. ಇದರಿಂದ ಕುತೂಹಲವನ್ನು ತಾಳಲಾರದೇ ಸಣ್ಣಪ್ರಮಾಣದ ಪರೀಕ್ಷಣಾ ಗುಂಡಿಯನ್ನು ತೋಡಿಸಿದಾಗ ಸ್ಪಷ್ಟ ಗೋಡೆಯೊಂದು ಕಂಡುಬಂದಿತು. ಅಂತೆಯೇ ಈ ನೆಲೆಯಲ್ಲಿ ವಿಸ್ತೃತ ಉತ್ಖನನವನ್ನು ಕೈಗೊಳ್ಳಲಾಯಿತು. ಅದರ ಫಲವಾಗಿ ವಿಹಾರವೊಂದು ಬೆಳಕಿಗೆ ಬಂದಿತು. ಇದು ವಾಗೋರ ನದಿಯ ಕಡೆಗೆ ಮುಖಮಾಡಿದ್ದು, ಬಲಪಾರ್ಶ್ವದಲ್ಲಿ ನಾಲ್ಕು ಮತ್ತು ಎಡಪಾರ್ಶ್ವದಲ್ಲಿ ಮೂರು ಕೋಣೆಗಳಿದ್ದು ಮಧ್ಯಭಾಗದಲ್ಲಿ ಮುಖ್ಯ ಕೋಣೆಯಿದ್ದು ಅದರ ಮುಂದೆಯೇ ಸ್ತೂಪದ ಅವಶೇಷಗಳಿದ್ದು ಹದಿನೇಳನೆಯ ಗುಹಾ ದೇವಾಲಯಗಳ ವರ್ಣಚಿತ್ರವನ್ನು ಕಂಡುಬರುವ ಅಧಿಷ್ಠಾನ ಮತ್ತು ಭಿತ್ತಿ ಭಾಗಗಳ ಚಿತ್ರವನ್ನು ವಿಹಾರದ ತಳಪಾಯದ ಅಧಿಷ್ಠಾನದಲ್ಲಿ ಕಂಡುಬಂದಿದೆ. ಅಲ್ಲದೆ ಸ್ತೂಪದ ಹತ್ತಿರ ಅರೆಯುವ ಕಲ್ಲೊಂದು ಸಿಕ್ಕಿದ್ದು, ಅದರ ಪಕ್ಕದಲ್ಲಿಯೇ ಕೆಂಪು ಮತ್ತು ಹಳದಿಯ ಬಣ್ಣದ ಸುದ್ದೆಮಣ್ಣು (Red & Yellow ochre) ಮತ್ತು ಸುಣ್ಣದಕಲ್ಲಿನ ಮಣ್ಣು ಸಹ ಅರೆಯುವ ಕಲ್ಲಿನ ಬಳಿಯೇ ದೊರೆತವು. ಸುಟ್ಟಮಣ್ಣಿನ ಒಂದು ಮಹಿಷಾಸುರಮರ್ದಿನಿ ವಿಗ್ರಹ, ಬೈಜಾಂಟೈನ್ ಇಮ್ಮಡಿ ಥಿಯೋಡೊಸಿಯಸ್ ಚಕ್ರವರ್ತಿಯ (ಕ್ರಿ.ಶ.೪೦೨ರಿಂದ

೪೫೦) ಒಂದು ಚಿನ್ನದ ನಾಣ್ಯ, ಅಲ್ಲದೆ ಕ್ಷತ್ರಪ ವಂಶದ ವಿಶ್ವಸೇನಾ ಎಂಬ ದೊರೆಯ ಬೆಳ್ಳಿಯ ನಾಣ್ಯವೂ ಸಹ ದೊರಕಿದ್ದು ಇವೆಲ್ಲಾ ಅಜಂತಾ ಗುಹೆಗಳ ಕಾಲಮಾನವನ್ನು ಸೂಚಿಸುತ್ತವೆ. ಸಂಕ್ಷಿಪ್ತವಾಗಿ ಹೇಳಬಹುದಾದರೇ ವಾಗೋರ ನದಿಯ ಎಡದಂಡೆಯಲ್ಲಿ ಕಲ್ಲಿನಿಂದ ಖಂಡರಿಸಿದ ಗುಹಾದೇವಾಲಯದ ಚಟುವಟಿಕೆಗಳನ್ನು ಕಂಡರೇ ಅದೇ ನದಿಯ ಬಲದಂಡೆಯ ಮೇಲೆ ಇಟ್ಟಿಗೆಗಳಿಂದ ನಿರ್ಮಿಸಲಾದ ಕಟ್ಟಡಗಳನ್ನು ಮತ್ತು ಇಟ್ಟಿಗೆಗಳ ಅವಶೇಷಗಳನ್ನು ಸಾತಕುಂಡ ಜಲಪಾತದವರೆಗೂ ಕಾಣಬಹುದಾಗಿದೆ. ಇತ್ತೀಚಿನ ದಿನಗಳಲ್ಲಿ ಇದೊಂದು ಮಹತ್ವದ ಶೋಧನೆಯೆಂದರೇ ತಪ್ಪಾಗಲಾರದು. ಬಹುಶಃ ಈ ನಿರ್ಮಿತಿಗಳ ನಿರ್ಮಾಣದಲ್ಲಿ ಕೈಜೋಡಿಸಿರುವ ಕುಶಲಕರ್ಮಿಗಳ ವಸತಿ ನೆಲೆ ಇಲ್ಲೇ ಇದ್ದಿರಬಹುದೆಂದು ಸಾಂದರ್ಭಿಕ ಸಾಕ್ಷ್ಯಗಳ ಹಿನ್ನೆಲೆಯಲ್ಲಿ ವಿವೇಚಿಸಬಹುದಾಗಿದೆ.

ಅಜಂತಾದಂತೆಯೇ ಇನ್ನೊಂದು ವಿಶ್ವ ಪರಂಪರಾ ಪಟ್ಟಿಯ ಮಾನ್ಯತೆಯನ್ನು ಪಡೆದ ಎಲಿಫೆಂಟಾದ ಮಹೇಶ ಮೂರ್ತಿಯ ಗುಹಾದೇವಾಲಯವು ಸಹ ಸಾಕಷ್ಟು ಶಿಥಿಲಗೊಂಡಿದ್ದು ಸೋರಿಕೆಯ ಸಮಸ್ಯೆಯು ತೀವ್ರವಾಗಿದ್ದು ಗುಹಾದೇವಾಲಯದ ಮುಖಮಂಟಪದ ಛಜ್ಜವು ಸಂಪೂರ್ಣವಾಗಿ ಶಿಥಿಲಗೊಂಡಿದ್ದು ಇಡೀ ಗುಹಾ ದೇವಾಲಯವು ಅಪಾಯವನ್ನು ಎದುರಿಸುವ ಪ್ರಕ್ಷುಬ್ಧ ಸ್ಥಿತಿಯಲ್ಲಿತ್ತು. ಈ ಸಂದರ್ಭದಲ್ಲಿ UNESCO ಪ್ರತಿನಿಧಿಯಾಗಿ ಬಂದ ವಿಶ್ವಪ್ರಸಿದ್ಧ ಸ್ಮಾರಕ ಸಂರಕ್ಷಣಾ ತಜ್ಞರಾದ ಸರ್ ಬರ್ನಾಡ್ ಫೀಲ್ಡನ್‌ರವರು ಸ್ಮಾರಕವನ್ನು ವೀಕ್ಷಿಸಿ, ಇದನ್ನು ವಿಶ್ವಪರಂಪರಾ ಪಟ್ಟಿಯಿಂದ ತೆಗೆಯಬೇಕೆಂದು ಆಗ್ರಹಿಸಿದರು. ಈ ಸ್ಮಾರಕದಲ್ಲಿ ಬಿರುಕುಗೊಂಡ ಮೇಲ್ಛಾವಣಿ ಮತ್ತು ಸ್ತಂಭಗಳನ್ನು ಸಂರಕ್ಷಿಸುವುದು ಅತ್ಯಗತ್ಯವಾಗಿತ್ತು. ಆದುದರಿಂದ ಸಿಮೆಂಟ್ ಮತ್ತು ಸ್ಟೈನ್‌ಲೇಸ್ ಸ್ಟೀಲನ್ನು ಬಳಸಿ ಮೇಲ್ಛಾವಣಿ, ಸ್ತಂಭ ಮತ್ತು ಮುಖಮಂಟಪಗಳನ್ನು ಸಂರಕ್ಷಿಸಿದೆವು. ಸಿಮೆಂಟ್ ಬಳಕೆಯು ಸ್ಮಾರಕ ಸಂರಕ್ಷಣೆಯಲ್ಲಿ ಅಸಂಪ್ರದಾಯಿಕವೆಂದೂ ಸರ್ ಬರ್ನಾಡ್ ಫೀಲ್ಡನ್‌ರವರು ತಮ್ಮ ಆಕ್ಷೇಪವನ್ನು ಆರಂಭದಲ್ಲಿ ವ್ಯಕ್ತಪಡಿಸಿದ್ದರಾದರೂ, ತದನಂತರದ ದಿನಗಳಲ್ಲಿ ಸಿಮೆಂಟಿಗೆ ಪರ್ಯಾಯ ಬಳಕೆಯು ದಖ್ಖನ್ ಟ್ರಾಪ್‌ನ ಬೆಸಾಲಿಟಿಕ್ ಶಿಲೆಗೆ ಇಲ್ಲವೆಂದು ಒಪ್ಪಿಕೊಳ್ಳಬೇಕಾಯಿತು. ಹಾಗಾಗಿ ಮಹಾರಾಷ್ಟ್ರದ ಬಹುತೇಕ ಗುಹಾದೇವಾಲಯಗಳ ಸಂರಕ್ಷಣೆಗೆ ಸಿಮೆಂಟನ್ನು ಇಂದಿಗೂ ಉಪಯೋಗಿಸಲಾಗುತ್ತಿದೆ.

ಪ್ರವಾಸಿಗರಿಗೆ ಅನುಕೂಲವಾಗಲೆಂದು UNESCO ವತಿಯಿಂದ ತಯಾರಿಸಲಾದ Visitor Management ಪ್ಲಾನನ್ನು ಅನುಷ್ಠಾನಗೊಳಿಸಲಾಯಿತು. ಹಾಗೆಯೇ ಶನಿವಾರವಾಡದ ಕೋಟೆಯ ಸುತ್ತಲೂ ೧೯೭೧ರ ಪಾಕಿಸ್ತಾನ ಯುದ್ಧಾನಂತರ ಸ್ಥಳಾಂತರಗೊಂಡ ಭಾರತೀಯರಿಗೆ ಆಶ್ರಯತಾಣವಾಗಿತ್ತು. ೧೯೯೯ ಮತ್ತು ೨೦೦೦ರ ಮಧ್ಯೆ ಈ ಎಲ್ಲಾ ಅತಿಕ್ರಮಣಕಾರರನ್ನು ತೆರವುಗೊಳಿಸಿ ಶನಿವಾರ ವಾಡದ ಸಂಪೂರ್ಣ ಜೀರ್ಣೋದ್ಧಾರವನ್ನು ಕೈಗೊಂಡಿದ್ದಲ್ಲದೇ ಪರಿಸರ ಸೌಂದರ್ಯೀಕರಣ ಮತ್ತು ರಾತ್ರಿಯ ವೇಳೆ ಧ್ವನಿ ಮತ್ತು ಬೆಳಕಿನ ಕಾರ್ಯಕ್ರಮವನ್ನು ಆಯೋಜಿಸಿ, ಅದು ಈಗ ಪುಣೆಯ ಬಹುಪ್ರಸಿದ್ಧ ಸ್ಮಾರಕವಾಗುವಂತೆ ಮಾಡಿದ್ದು, ಹಾಗೆಯೇ ಛತ್ರಪತಿ ಶಿವಾಜಿಯ ರಾಯಗಡ ಕೋಟೆ-ಕೊತ್ತಲ, ಒಳಗಿನ ಪ್ರಾಚೀನ ಸ್ಮಾರಕಗಳು ಮತ್ತು ಜಗದೀಶ್ವರಿ ದೇವಾಲಯದ ಸಂರಕ್ಷಣೆಯನ್ನು ಮಾಡಲಾಯಿತು. ಈ ಕಾಲದ ಸ್ಮಾರಕಗಳಲ್ಲಿ ವಿಜಯನಗರ ಶೈಲಿಯ ಪ್ರಭಾವವನ್ನು ಸ್ಪಷ್ಟವಾಗಿ ಗುರುತಿಸಿರುವುದು ಇನ್ನೊಂದು ವಿಶೇಷ. ದೌಲತಾಬಾದ್ ಕೋಟೆಯು ಭಾರತೀಯ ಪುರಾತತ್ವ ಸರ್ವೇಕ್ಷಣೆಯಿಂದ ಸಂರಕ್ಷಿಸಲ್ಪಟ್ಟಿದ್ದರೂ, ಕೋಟೆಯಲ್ಲದೇ, ಕೋಟೆಯೊಳಗಿನ ಬಹುತೇಕ ಸ್ಮಾರಕಗಳು ಜೀರ್ಣಾವಸ್ಥೆಯಲ್ಲಿದ್ದವು. ವಿಶೇಷವಾಗಿ ಭಾರತಮಾತೆಯ ಮಂದಿರದ ಇಕ್ಕೆಲಗಳಲ್ಲಿಯ ಮಾರ್ಗವು ದುಸ್ತರವಾಗಿದ್ದು, ಪ್ರವಾಸಿಗರಿಗೆ ಅಸಹನೀಯವಾಗಿತ್ತು. ಕೋಟೆಯ ಮಹಾದ್ವಾರದ ಪ್ರಾಂಗಣದಲ್ಲಿರುವ ಎರಡು ಪ್ರಾಚೀನ ಬಾವಿಗಳನ್ನು ಪುನರುಜ್ಜೀವನಗೊಳಿಸಿ, ಕೋಟೆಯ ಮಧ್ಯಭಾಗದಲ್ಲಿರುವ ಸುಂದರವಾದ ಮೂರು ಹಮಾಮ್ ಖಾನಗಳನ್ನು ದುರಸ್ತಿಗೊಳಿಸುವುದರ ಜೊತೆಗೆ ಕೋಟೆಯ ಮೇಲುಭಾಗವಾದ ಛಾರಾದರಿ ಮಾರ್ಗಮಧ್ಯದಲ್ಲಿ ಸಿಗುವ ಡಾರ್ಕ್ ಪ್ಯಾಸೇಜ್ (ಕತ್ತಲೆಯ ದಾರಿ)ಗಳನ್ನು ಜೀರ್ಣೋದ್ಧಾರಗೊಳಿಸಿ, ಲಭ್ಯವಿದ್ದ ಪ್ರಾಚೀನ ಅವಶೇಷಗಳನ್ನು ಉಪಯೋಗಿಸಿ ಕೋಟೆಯಲ್ಲೊಂದು ವಸ್ತುಸಂಗ್ರಹಾಲಯವನ್ನು ಪ್ರಾರಂಭಿಸುವ ಅವಕಾಶ ನನ್ನದಾಯಿತು.

ಈ ಮೇಲಿನ ವಿಷಯಗಳೆಲ್ಲಾ ಮಹಾರಾಷ್ಟ್ರಕ್ಕೆ ಸಂಬಂಧಿಸಿದವು. ನಾನು ಈ ವಿಷಯಗಳನ್ನು ಏಕೆ ವಿಸ್ತರಿಸಿದ್ದೇನೆ ಎಂಬ ಅನುಮಾನ ನಮಗೆ ಉಂಟಾಗಿರಬಹುದು. ಆದರೆ ಆ ಪ್ರದೇಶದಲ್ಲಿ ನಾನು ಕಾಣುತ್ತಿದ್ದುದು ಕರ್ನಾಟಕ ಸಂಸ್ಕೃತಿಯ ಕಂಪನ್ನು ಇಲ್ಲಿನ ಬಹುತೇಕ ವಾಸ್ತುಸ್ಮಾರಕಗಳು ಕರ್ನಾಟಕ ಸಾಮ್ರಾಜ್ಯಗಳಾದ ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ಸೇವುಣ – ಈ ಸಾಮ್ರಾಜ್ಯಗಳ ಆಶ್ರಯದಲ್ಲೇ ರಚಿತವಾದವು ಎಂಬುದು ಗಮನೀಯ ಅಂಶ.

ಮಹಾರಾಷ್ಟ್ರದ ಔರಂಗಬಾದ್ ವೃತ್ತದಿಂದ ಕರ್ನಾಟಕದ ಧಾರವಾಡ ವೃತ್ತಕ್ಕೆ ಜುಲೈ ೨೦೦೧ರಲ್ಲಿ ವರ್ಗಾವಣೆಯಾಯಿತು. ಆದಾಗಲೇ ಸ್ಮಾರಕಗಳ ಸಾಕಷ್ಟು ಪರಿಚಯ

ವಿದ್ದುದರಿಂದ ಯಾವುದೇ ಕಾಲಾವಕಾಶದ ನಷ್ಟವಿಲ್ಲದೇ ಧಾರವಾಡ ವೃತ್ತದ ಮುಖ್ಯ ಸ್ಮಾರಕಗಳಿರುವ ಬಾದಾಮಿ, ಪಟ್ಟದಕಲ್ಲು ಐಹೊಳೆಗಳ ಕಡೆ ಸಹಜವಾಗಿಯೇ ನನ್ನ ಗಮನ ಹರಿದು ಕಾರ್ಯ ಯೋಜನೆಯನ್ನು ಹಮ್ಮಿಕೊಳ್ಳಲು ನೆರವಾಯಿತು.

ಬಾದಾಮಿ, ಪಟ್ಟದಕಲ್ಲು ಮತ್ತು ಐಹೊಳೆಗಳ ಸಂರಕ್ಷಣಾ ಕಾರ್ಯದಲ್ಲಿ ಡಾ॥ ಎಸ್.ಆರ್.ರಾವ್ ಅವರ ಅವಿಸ್ಮರಣೀಯ ಸೇವೆ ನನಗೆ ಮಾರ್ಗದರ್ಶಕವಾಗಿತ್ತು. ಅಂದು ಅವರು ಹಾಕಿಕೊಟ್ಟ ಬುನಾದಿಯೇ ಮುಂದಿನ ಎಲ್ಲಾ ಬೆಳವಣಿಗೆಗೆ ನಾಂದಿಯಾಯಿತು. ನಾನು ಈ ನಿಟ್ಟಿನಲ್ಲಿ ಕೈಗೊಂಡ ಕಾರ್ಯಗಳು ನನಗೆ ಹಾಗೂ ಸಹಸ್ರಾರು ವೀಕ್ಷಕರಿಗೆ ಸಂತೋಷವನ್ನು ನೀಡುತ್ತಿವೆ. ನಾನು ಕೈಗೊಂಡ ಮೊಟ್ಟಮೊದಲನೆಯ ಕೆಲಸವೆಂದರೇ ಸ್ಮಾರಕಗಳ ಮತ್ತು ಪರಿಸರದ ಸ್ವಚ್ಚತಾ ಕಾರ್ಯ, ಬೀಡಿ–ಸಿಗರೇಟಿನ ತುಂಡುಗಳು, ಗುಟ್ಕಾದ ಚೀಟುಗಳು, ಐಸ್‌ಕ್ರೀಂನ ಲೋಟಗಳು, ಪ್ಲಾಸ್ಟಿಕ್ ಬ್ಯಾಗುಗಳು ಪ್ರವಾಸಿಗರಿಂದ ನಿರ್ದಾಕ್ಷಿಣ್ಯವಾಗಿ ಎಸೆಯಲ್ಪಟ್ಟು ಸ್ಮಾರಕಗಳನ್ನು ಕಿಂಚಿತ್ತೂ ಗಣನೆಗೆ ತೆಗೆದುಕೊಳ್ಳದೆ ಅವುಗಳನ್ನು ದುರುಪಯೋಗಪಡಿಸಿಕೊಳ್ಳುತ್ತಾ ಅವುಗಳ ಬಗ್ಗೆ ಅವರು ತೋರುತ್ತಿದ್ದ ಒಂದು ರೀತಿಯ ಅಲಕ್ಷ್ಯ ಅಗೌರವಗಳನ್ನು ಕಂಡು ಬಹಳ ಯಾತನೆಯಾಯಿತು. ಆದ್ದರಿಂದ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರನ್ನು ಹುರಿದುಂಬಿಸಿ ಕೇವಲ ಮೂರು ತಿಂಗಳಲ್ಲಿ ಈ ಮೇಲೆ ಹೇಳಿದ ಎಲ್ಲಾ ವಸ್ತುಗಳನ್ನು ಹೆಕ್ಕಿ ಪರಿಶುದ್ಧಗೊಳಿಸಿ ವ್ಯವಸ್ಥಿತ ಮಾರ್ಗಗಳನ್ನು ಕಲ್ಪಿಸಿ ಪ್ರವಾಸಿಗರಿಗೆ ಆಹ್ಲಾದವೆನಿಸುವ ವಾತಾವರಣವನ್ನು ಕಲ್ಪಿಸಲಾಯಿತು. ಈವೊಂದು ಕ್ರಮ, ಪ್ರವಾಸಿಗರಿಗೂ ಮತ್ತು ಇಲಾಖೆಯ ಸಿಬ್ಬಂದಿಗೂ ಪ್ರೇರಣೆಯಾಗಿ ಇತರ ಸ್ಮಾರಕಗಳಲ್ಲಿ ಇದೇ ರೀತಿಯ ಸ್ವಚತಾ ಕಾರ್ಯವನ್ನು ಪಾಲಿಸಲು ಮುಂದಾದರು. ಅಂತೆಯೇ ಪಟ್ಟದಕಲ್ಲಿನ ಸ್ಮಾರಕಗಳಿಗೆ ಅತ್ಯುತ್ತಮ ನಿರ್ವಹಣಾ ಪರಿಸರ ಸ್ನೇಹಿ ಸ್ಮಾರಕಗಳೆಂದು ಗುರುತಿಸಿ Award of Excellence ಎಂಬ ರಾಷ್ಟ್ರ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

ಪಟ್ಟದಕಲ್ಲು ವಿಶ್ವಪರಂಪರೆ ಪಟ್ಟಿಯಲ್ಲಿದ್ದು, ನಾಗರ ಪ್ರಾಸಾದ ಮತ್ತು ದ್ರಾವಿಡ ಪ್ರಾಸಾದದ ಶಿಖರ ಶೈಲಿಗಳ ವಿಕಸನದ ಅತ್ಯುತ್ಕೃಷ್ಟ ನಿದರ್ಶನಗಳಾಗಿದ್ದು ಈ ಎರಡೂ ಶೈಲಿಗಳ ಸಂಗಮ ಕೇಂದ್ರವಾಗಿದೆ. ಪಟ್ಟದಕಲ್ಲಿನ ಜೈನ ದೇವಾಲಯವು ಸ್ಮಾರಕ ಸಮುಚ್ಚಯದಿಂದ ದೂರವಿದ್ದು, ತಳಪಾಯದ ಕುಸಿತದಿಂದ ಗೋಡೆ, ಮೇಲ್ಛಾವಣಿ ಮತ್ತು ಸ್ತಂಭಗಳಲ್ಲಿ ಬಿರುಕು ಕಾಣಿಸಿ ವಿಪರೀತ ಸೋರಿಕೆಯಿಂದ ಇಡೀ ದೇವಾಲಯವು ಯಾವುದೇ ಕ್ಷಣದಲ್ಲಿ ಕುಸಿದು ಬೀಳುವ ಅಪಾಯದ ಸ್ಥಿತಿಯಲ್ಲಿತ್ತು ಆದ್ದರಿಂದ ಈ ದೇವಾಲಯದ ಜೀರ್ಣೋದ್ಧಾರವನ್ನು ಬಹಳ ಬೇಗ ಕೈಗೆತ್ತಿಕೊಂಡೆವು. ಶಾಸ್ತ್ರೀಯವಾಗಿ ಇಡೀ ದೇವಾಲಯದ ದಾಖಲೀಕರಣವನ್ನು ಪೂರ್ಣಗೊಳಿಸಿದ ನಂತರ ದೇವಾಲಯದ ತಳಪಾಯದ ವರೆಗೂ ಬಿಚ್ಚಿಡಲಾಯಿತು. ಈ ಪ್ರಕ್ರಿಯೆಯಲ್ಲಿ ಗರ್ಭಗುಡಿಯ ಬಲಭಾಗದ ಬಾಗಿಲುವಾಡದ ಕೆಳಗೆ ಶಿಲಾನ್ಯಾಸದ ವಿಧಿವಿಧಾನವನ್ನು ಪಾಲಿಸಿದ್ದು ಚೌಕಾಕಾರದ ಸಮತಟ್ಟಾದ ಕಲ್ಲಿನಲ್ಲಿ ಒಂಭತ್ತು ಗುಣಿಗಳಿಂದ ಕೂಡಿದ ಗರ್ಭಪಾತ್ರೆಯಲ್ಲಿ ಬಂಗಾರದ ಹಾಳೆಗಳಲ್ಲಿ ಮೂಡಿಸಿರುವ ವಾಸ್ತುಪುರುಷ, ನಂದಿ, ಮೇಕೆ, ಕೊಳವೆ, ಸರ್ಪದಂತೆ ಕಾಣುವ ತಂತಿ, ತಾಮ್ರದ ನಾಣ್ಯಗಳು, ಹಾಗೂ ಪ್ರಶಸ್ತ ಕಾರ್ಮೆಲಿಯನ್ ಕಲ್ಲಿನ ಮಣಿಯು ಸಹ ಕಂಡುಬಂದಿದೆ. ಇದಲ್ಲದೆ ತಳಪಾಯವು ಎಂಟು ಸ್ತರಗಳಿಂದ ಕೂಡಿದ್ದು, ತಳಗಡೆಯ ಮೂರು ಪದರಗಳು ಆಕಾರವಿಲ್ಲದ ಕಲ್ಲುಗಳ ಹಾಸಿನ ಮೇಲೆ ಮಣ್ಣಿನ ಪದರವಿದ್ದು, ಗಟ್ಟಿಯಾಗಿ ಗಟ್ಟಿಸಿ ಆನಂತರ ಒಂದರ ಮೇಲೊಂದರಂತೆ ಜೋಡಿಸಿ ದೇವಾಲಯದ ತಳಪಾಯವನ್ನು ನಿರ್ಮಿಸಿದ್ದಾರೆ. ಮೇಲಿನ ಪದರಗಳಲ್ಲಿ, ಭಿತ್ತಿ ಮತ್ತು ಮೇಲ್ಛಾವಣಿಯಲ್ಲಿ ಯಾವುದೇ ಕೂಡಿಸುವ (binding) ವಸ್ತುವನ್ನು ಉಪಯೋಗಿಸಿಲ್ಲ. ಆದರೆ ಕಬ್ಬಿಣದ ಕಂಬಿಗಳನ್ನು ಎರಡು ಕಲ್ಲಿನ ಮಧ್ಯೆ ಗಟ್ಟಿಯಾಗಿ ಹಿಡಿದಿಡುವ ಸಾಧನವಾಗಿ ಉಪಯೋಗಿಸಿದ್ದಾರೆ. ಚಪ್ಪಡಿಕಲ್ಲು ಪರಸ್ಪರ ಭದ್ರವಾಗಿ ಹಿಡಿದಿಡುವಂತೆ ಉಬ್ಬು–ತಗ್ಗುಗಳ ಪರಿಕಲ್ಪನೆ ಇದ್ದು, ಸಮರ್ಥ ರೀತಿಯಲ್ಲಿ ಕಟ್ಟಡವನ್ನು ನಿರ್ಮಿಸಿದ್ದಾರೆ. ಇದೇ ಸಂದರ್ಭದಲ್ಲಿ ಅಗತ್ಯವಿದ್ದ ಸೂಕ್ತ ಪ್ರಮಾಣದ ಕಲ್ಲನ್ನು ಪಡೆಯಲು ಪ್ರಯತ್ನಿಸಿದಾಗ ಪಟ್ಟದಕಲ್ಲಿಗೆ ಸುಮಾರು ನಾಲ್ಕು ಕಿ.ಮೀ. ದೂರದಲ್ಲಿರುವ ಅಕ್ಕರಗಲ್ಲಿನ ಶಂಕರಲಿಂಗನಗುಂಡು ಮತ್ತು ವೋಟಾರ ಮರಡಿಯಲ್ಲಿ ಪ್ರಾಚೀನ ಕಲ್ಗಣಿಯ ಶೋಧವಾಯಿತು. ಈ ಪ್ರಾಚೀನ ಕಲ್ಗಣಿಯಲ್ಲಿ ಸುಮಾರು ೧೦ ಶಾಸನಗಳು ದೊರಕಿದ್ದು ಕಲ್ಲಿನಲ್ಲಿ ಕೊರೆದ ಪ್ರಾಣಿ ಮತ್ತು ದೇವತೆಗಳ ಚಿತ್ತಾರಗಳಿದ್ದು, ಕಾರ್ಮಿಕರ ಅಥವಾ ಸ್ತಪತಿಗೆ ಸಂಬಂಧಪಟ್ಟ ಲೆಕ್ಕದ ಚಿಹ್ನೆಗಳಿದ್ದು, ಶಾಸನಗಳಲ್ಲಿ ಶಿಲ್ಪಿಗಳ ಹೆಸರು ಇರುವುದು. ಅನಪೇಕ್ಷಿತ ಹಾಸುಕಲ್ಲುಗಳು–ತೊಲೆಗಳು ಕಂಡುಬಂದಿದ್ದು, ಸವಕಲು ಜಾಗಕ್ಕೆ ತಿರಸ್ಕೃತಗೊಂಡ ಕಲ್ಲನ್ನು ತುಂಬಿ ಪಥಸಂಚಲಕ್ಕೆ ಅನುವು ಮಾಡಿಕೊಂಡಿದ್ದರು. ಇದಲ್ಲದೆ, ಕಲ್ಲನ್ನು ಕೊರೆಯಬೇಕೆಂದರೆ ಮೂಡುವ ರಂಧ್ರಗಳು ಮತ್ತು ಆ ರಂಧ್ರದಲ್ಲಿ ಕಂಡಿರುವ ಸುತ್ತಿಗೆ ಮತ್ತು ಉಳಿಗಳ ಮೇಲಿರುವ ಬರಹವು ಸುಮಾರು ಕ್ರಿ.ಶ.೮ನೇ ಶತಮಾನಕ್ಕೆ ಸೇರಿದ್ದಾಗಿವೆ. ನಿರ್ಮಾಣಕ್ಕೆ ಬೇಕಾಗುವ ಕಲ್ಲಿನ ಸಾಮಗ್ರಿಗಳು ಎಲ್ಲಿಂದ ಬಂದವು ಎನ್ನುವುದಕ್ಕೆ ಇದು ಸ್ಪಷ್ಟ ಉತ್ತರವಾಗಿದ್ದು, ಇದೊಂದು ಮಹತ್ವದ ಸಂಶೋಧನೆ

ಎಂದರೆ ತಪ್ಪಾಗಲಾರದು. ಮುಂದುವರೆದು ಹೇಳುವುದಾದರೆ ಜೈನ ದೇವಾಲಯದ ಪುನರ್‌ಜೋಡಣೆಯ ಕೆಲಸದಲ್ಲಿ ಮೂಲತಃ ಇದ್ದಂತಹ ಕಲ್ಲಿನ ಭಾಗಗಳನ್ನೇ ಉಪಯೋಗಿಸಿ ಎಲ್ಲೆಲ್ಲಿ ಶಿಥಿಲವಾಗಿದ್ದವೋ ಅವುಗಳನ್ನು ವೈಜ್ಞಾನಿಕವಾಗಿ ಜೋಡಿಸಿ ಅಥವಾ ಗಟ್ಟಿಗೊಳಿಸಿ ಭದ್ರತೆಗೆ ಯಾವುದೇ ತೊಂದರೆ ಇಲ್ಲದಂತೆ ಪುನಃ ಉಪಯೋಗಿಸಲಾಯಿತು. ನವರಂಗದಲ್ಲಿರುವ ಎರಡು ಸ್ತಂಭಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಸ್ತಂಭದ ಮೇಲ್ಭಾಗದಲ್ಲಿರುವ ಶಿಥಿಲವಾದ ಬೋದಿಗೆಗಳನ್ನು ರಂಧ್ರದ ಮೂಲಕ ಸ್ಟೈನ್‌ಲೇಸ್ ಸ್ಟೀಲ್ ಕಂಬಿಯನ್ನು ಸೇರಿಸಿ ಮೂಲಸ್ವರೂಪಕ್ಕೆ ವ್ಯತ್ಯಯವಾಗದಂತೆ ಜೋಡಿಸಿ ಸಮರ್ಥವಾಗಿ ಮೇಲ್ಛಾವಣಿಯ ಭಾರವನ್ನು ಹೊರಲು ಸಾಧ್ಯವಾಗುವಂತೆ ಮಾಡಲಾಯಿತು. ಗರ್ಭಗೃಹದ ಹಿಂಬದಿಯಲ್ಲಿರುವ ಕಲ್ಲಿನ ಗೋಡೆಯು ಸಂಪೂರ್ಣವಾಗಿ ಬರಿದಾಗಿತ್ತು. ಈ ಗೋಡೆಯನ್ನು ಸುರಕ್ಷತಾ ದೃಷ್ಟಿಯಿಂದ, ದೇವಾಲಯದ ಪೂರ್ಣಸ್ವರೂಪದ ದೃಷ್ಟಿಯಿಂದ ಮತ್ತು ಗಾಳಿಯಲ್ಲಿ ಚಾಚಿಕೊಂಡಿದ್ದಂತಹ ಶಿಖರಕ್ಕೆ ಇಂಬು ನೀಡಲು ಹೊಸ ಕಲ್ಲನ್ನು ಉಪಯೋಗಿಸಿ UNESCOದ ಚಾರ್ಟರ್‌ನ ಅಧಿನಿಯಮಕ್ಕೆ ಅನುಗುಣವಾಗಿ ಸಂರಕ್ಷಣಾ ಕಾರ್ಯ ಕೈಕೊಳ್ಳ ಲಾಯಿತು. ಈ ಕಾರ್ಯಕ್ಕೆ UNESCOದ ಮೆಚ್ಚುಗೆಯ ಪತ್ರವನ್ನು ಪಡೆದಿರುವುದು ಉಲ್ಲೇಖಾರ್ಹ.

ಪಟ್ಟದಕಲ್ಲು ವಿಶೇಷವಾಗಿ ಬಾದಾಮಿ ಚಾಲುಕ್ಯರ ಕಾಲದ ಸುಂದರ ದೇವಾಲಯಗಳಿಗೆ ಪ್ರಸಿದ್ಧವಾಗಿದ್ದರೂ, ಈ ಸ್ಥಳವು ಬಹು ಹಿಂದಿನಿಂದಲೇ ಆ ಪ್ರದೇಶದ ಮುಖ್ಯ ಸ್ಥಳವಾಗಿತ್ತೆಂಬುದು ಸಮೀಪದ ಬಾಚನಗುಡ್ಡದಲ್ಲಿ ನಾವು ನಡೆಸಿದ ಉತ್ಖನನದಿಂದ ತಿಳಿದುಬಂದಿದೆ.

ಬಾಚನಗುಡ್ಡದ ಉತ್ಖನನದಲ್ಲಿ ಬೃಹತ್ ಕಲ್ಗೋರಿಯ ಕಾಲಕ್ಕೆ ಸೇರಿದ ನೀರಿನ ಕಟ್ಟೆ ಅಲ್ಲದೆ ಶಾತವಾಹನರು ರಠಿ ಮತ್ತು ಮಹಾರಠಿಗಳ ಸುಮಾರು ೩೦೦ ನಾಣ್ಯಗಳ ದೊರಕಿವೆ. ಅಲ್ಲದೇ ಅರೆ ಪ್ರಶಸ್ತಕಲ್ಲಿನಿಂದ ಮಾಡಿದ ಮಣಿಗಳು, ಶೆಲ್ಲಿನ ಬಳೆಗಳು ಮತ್ತು ಸುಟ್ಟ ಮಣ್ಣಿನ ಸೂಕ್ಷ್ಮ ವಿಗ್ರಹಗಳು, ಕಬ್ಬಿಣದ ಚೂರುಗಳು ಮತ್ತು ಬೆಳ್ಳಿಯ ಮುದ್ರಾಂಕಿತ ನಾಣ್ಯ (punch marked)ಗಳು ವಿಶೇಷವಾಗಿವೆ. ಇದಲ್ಲದೇ ಒಂದು ಇಟ್ಟಿಗೆಯ ಚತುಶ್ಶಾಲಾ ಕಟ್ಟಡ ಸಹ ಕಂಡುಬಂದಿದೆ. ಮಧ್ಯದಲ್ಲಿ ಎತ್ತರದ ಕೋಣೆಯಿದ್ದು ನಾಲ್ಕು ಕಡೆಯಲ್ಲೂ ಕಿರಿದಾದ ಕೋಣೆಗಳಿಂದ ಆವೃತವಾಗಿದೆ. ಇದಲ್ಲದೇ ಆ ಕಾಲಕ್ಕೆ ಸಂಬಂಧಿಸಿದ ಕುಲುಮೆಯೂ ಸಹ ಕಂಡುಬಂದಿತು.

ಇದೇ ರೀತಿ, ಬಾದಾಮಿ ಸಹ ವಿಶೇಷ ರಕ್ಷಣಾ ಕಾರ್ಯ ಕ್ಕಾಗಿ ಕಾಯುತ್ತಿತ್ತು. ಅಗಸ್ತ್ಯತೀರ್ಥ ಹೊಂಡವು ಸಾಕಷ್ಟು ಕೊಳೆತು ನಾರುತ್ತಿದ್ದು, ಚಿಂದಿಬಟ್ಟೆಗಳಿಂದ ತುಂಬಿಹೋಗಿತ್ತು. ಬಾದಾಮಿಯ ಮಧ್ಯಭಾಗದಲ್ಲಿ ಅಗಸ್ತ್ಯತೀರ್ಥವಿದ್ದು, ಅಗಸ್ತ್ಯತೀರ್ಥದ ದಕ್ಷಿಣ ಭಾಗಕ್ಕಿರುವ ಗುಡ್ಡದಲ್ಲಿ ಕ್ರಮೇಣ ಶೈವ, ವೈಷ್ಣವ, ಜೈನ ಗುಹಾದೇವಾಲಯಗಳಿದ್ದು, ಉತ್ತರಕ್ಕೆ ಮೇಗಣ ಶಿವಾಲಯ ಮತ್ತು ಕೆಳಗಣ ಶಿವಾಲಯಗಳಲ್ಲದೇ ಗುಡ್ಡದ ತಳಭಾಗದಲ್ಲಿ ಮಲ್ಲಿಕಾರ್ಜುನ ದೇವಾಲಯ ಮತ್ತು ಭೂತನಾಥ ದೇವಾಲಯ ಸಮೂಹಗಳಿದ್ದು, ಪೂರ್ವಕ್ಕೆ ಭೂತನಾಥನ ದೇವಾಲಯ ಮತ್ತು ಕೊಪ್ಪರಾಯನ ದೇವಾಲಯಗಳಿದ್ದು, ಪಶ್ಚಿಮ ದಿಕ್ಕಿಗೆ ಅಗಸ್ತ್ಯತೀರ್ಥ ಮುಖ್ಯ ದಂಡೆಯ ಮೇಲೆ ರೇಣುಕಾ ಎಲ್ಲಮ್ಮನ ದೇವಾಲಯವಿದೆ. ವಿಪರ್ಯಾಸವೆಂದರೇ ಬೆಳೆಯುತ್ತಿರುವ ತ್ವರಿತ ನಗರೀಕರಣ ದಿಂದಾಗಿ ಬಾದಾಮಿಯಲ್ಲಿ ಪ್ರಾಚೀನ ಸ್ಮಾರಕಗಳಿಗಾಗಲಿ ಅಥವಾ ಕೋಟೆಗಳಿಗಾಗಲಿ ಕಿಂಚಿತ್ ಗೌರವಿಸುವ ಪ್ರಮೇಯ ವಿಲ್ಲದೇ, ಅತಿಕ್ರಮಣದಿಂದ ಮನೆಗಳನ್ನು ನಿರ್ಮಿಸಿ ಕೊಳ್ಳಲಾಗುತ್ತಿದೆ. ಇರುವ ಕಡಿಮೆ ಸಿಬ್ಬಂದಿಯ ಕೊರತೆ ಯಿಂದಾಗಿಯೋ ಅಥವಾ ಸಿಬ್ಬಂದಿಯ ನಿಷ್ಕಳಜಿಯೋ ಅಥವಾ ಇನ್ನಾವುದೋ ಕಾರಣಕ್ಕೆ ಒಟ್ಟಾರೆ ಅಕ್ರಮ ಕಟ್ಟಡಗಳು ತಲೆ ಎತ್ತಲಾರಂಭಿಸಿದೆ. ಹಾಗಾಗಿ ಬಾದಾಮಿಯಲ್ಲಿ ಇಲಾಖೆಯ ಸ್ಮಾರಕಗಳ ಎಲ್ಲೆಯನ್ನು ಗುರುತಿಸಿ ಲಭ್ಯವಿರುವ ಜಾಗವನ್ನು ಪರಿಣಾಮಕಾರಿಯಾದ ಗೋಡೆಯನ್ನು ನಿರ್ಮಿಸಿ ಶಾಶ್ವತವಾಗಿ ಅಕ್ರಮವಾದ ಮನೆಗಳು ತಲೆಯೆತ್ತದಂತೆ ಮಾಡಲಾಯಿತು. ಹಾಗೆಯೇ ಬಹುತೇಕ ಸ್ಮಾರಕಗಳ ಜೀರ್ಣೋದ್ಧಾರವನ್ನು ಕೈಗೆತ್ತಿಕೊಳ್ಳಲಾಯಿತು.

ಇಲ್ಲಿ ಮುಖ್ಯವಾಗಿ ಸ್ಮರಿಸ ಬಯಸುವುದೆಂದರೇ ಬಾದಾಮಿಯ ಅಗಸ್ತ್ಯತೀರ್ಥದ ಜೀರ್ಣೋದ್ಧಾರದ ಕೆಲಸ. ೧೯೬೪ಳರಲ್ಲಿ ಅತಿಯಾದ ಮಳೆಯ ಕೊರತೆಯಿಂದಾಗಿ ಉತ್ತರ ಕರ್ನಾಟಕದಲ್ಲಿ ಕ್ಷಾಮ ಉಂಟಾದಾಗ ಅಗಸ್ತ್ಯತೀರ್ಥವು ಬಹುತೇಕ ಬತ್ತಿಹೋಗಿತ್ತು. ಅಂತಹುದೇ ಪರಿಸ್ಥಿತಿ ೨೦೦೩-೦೪ರಲ್ಲಿ ಮರುಕಳಿಸಿತು. ಇಲ್ಲಿ ಇನ್ನೂ ಒಂದು ಸ್ಮರಿಸಬೇಕಾದ ಅಂಶವೆಂದರೇ ತಟಕೋಟೆಯ ಆಸುಪಾಸಿನ ಪರಿಸರ, ಕಪ್ಪೆ ಅರೆಭಟ್ಟನ ಶಾಸನದ ಪರಿಸರದಲ್ಲಿ ಕೆಲವೊಂದು ಮನೆಗಳು ಅಕ್ರಮವಾಗಿ ತಲೆ ಎತ್ತಿದ್ದವು. ತಟಕೋಟೆಯ ಪಶ್ಚಿಮ ಭಾಗವು ಕಪ್ಪೆ ಅರಭಟ್ಟನ ಶಾಸನದ ಮತ್ತು ಅಗಸ್ತ್ಯತೀರ್ಥದ ಮಧ್ಯ ಭಾಗದಲ್ಲಿ ಇದ್ದು ಅದೊಂದು ಸಾರ್ವಜನಿಕ ಶೌಚಾಲಯ ವಾಗಿತ್ತು. ಅಲ್ಲದೇ ಇಲ್ಲಿ ಹಂದಿಗಳನ್ನು ಸಾಕಿ ಕಸದ ತಿಪ್ಪೆಯನ್ನು ಒಟ್ಟಿದ್ದರು. ಒಟ್ಟಾರೇ ಆ ಪರಿಸರದಲ್ಲಿ ಪ್ರವಾಸಿಗರಿಗೆ ಭಯದ ವಾತಾವರಣವನ್ನು ಮೂಡಿಸುವಂತಿತ್ತು. ಹೀಗಿರುವಾಗ ಪ್ರವಾಸಿಗರು ಕೊಪ್ಪರಾಯನ ಗುಡಿಯತನಕ ಹೋಗುವುದೆಲ್ಲಿ? ಆದ್ದರಿಂದ ಬಾಗಲಕೋಟೆಯ ಅಂದಿನ ಜಿಲ್ಲಾಧಿಕಾರಿ

ಯಾದಂತಹ ಶ್ರೀ ಕೆ.ಎಸ್.ಪ್ರಭಾಕರ್ ಅವರ ಮುತುವರ್ಜಿಯಿಂದ ಅಲ್ಲಿದ್ದ ಮನೆಗಳನ್ನು ಸ್ಥಳಾಂತರಿಸಿ, ಇಲಾಖೆಗೆ ಜಾಗೆಯನ್ನು ವಹಿಸಿಕೊಟ್ಟರು. ಇದಾದ ಮೂರು ತಿಂಗಳಿನಲ್ಲಿ ಅಗಸ್ತ್ಯಹೊಂಡದ ಹೂಳನ್ನು ಎತ್ತಿ ವೈಜ್ಞಾನಿಕವಾಗಿ ಹಳೆಕೊಳದ ಮೂಲ ಸ್ವರೂಪವನ್ನು ಉಳಿಸಿಕೊಳ್ಳಲು ಕೊರೆದು ಹೋಗಿದ್ದ ಭಾಗಗಳನ್ನು ಅಗಸ್ತ್ಯ ತೀರ್ಥದ ಮರಳಿನಿಂದ ತುಂಬಿಸಲಾಯಿತು. ಇದಾದ ಮೂರು ತಿಂಗಳಿನಲ್ಲಿ ಮಣ್ಣು ಕೊರೆತವನ್ನು ತಪ್ಪಿಸಲು ಸೂಕ್ತವಾದ ಹುಲ್ಲಿನ ಹಾಸನ್ನು ಬೆಳೆಸಲಾಯಿತು. ಇದು ಸ್ಥಳೀಯರಿಗೆ ಮತ್ತು ಪ್ರವಾಸಿಗರಿಗೆ ಅತ್ಯಂತ ಆಕರ್ಷಣೀಯ ಸ್ಥಾನವಾಯಿತು. ಇದೇ ಸಂದರ್ಭಗಳಲ್ಲಿ ಅಗಸ್ತ್ಯತೀರ್ಥದ ಕಟ್ಟೆಗೋಡೆಯನ್ನು ಬಿಚ್ಚಿ ವ್ಯವಸ್ಥಿತವಾಗಿ ಪುನರ್‌ಜೋಡಿಸಲಾಯಿತು. ಇದಲ್ಲದೇ ಪೂರ್ವ ದಿಕ್ಕಿನಲ್ಲಿರುವ ಭೂತನಾಥ ಗುಡಿಯ ಕಟ್ಟಡದಲ್ಲಿ ಅಲೆಗಳ ಹೊಡೆತದಿಂದ ಮತ್ತು ಮರಳಿನ ಜಾರುವಿಕೆಯಿಂದ ಬಹುದೊಡ್ಡ ಬಿರುಕುಗಳು ಕಾಣಿಸಿಕೊಂಡಿದ್ದವು. ಈ ಕಟ್ಟಡವನ್ನು ಬಿಚ್ಚಿ ಗಟ್ಟಿಗೊಳಿಸಿ ಪುನರ್ ನಿರ್ಮಿಸಲಾಯಿತು. ಈ ಪ್ರಕ್ರಿಯೆಯಲ್ಲಿ ಸುಮಾರು ಎಂಟು ಸೋಪಾನಗಳನ್ನು ಮುಚ್ಚಿದ ಮಣ್ಣಿನ ಹೊಳನ್ನು ತೆಗೆಯುವ ಮೂಲಕ ಬಿಡಿಸಲಾಯಿತು. ಇದೇ ಅಂದಾಜಿನಂದ ಹೂಳೆತ್ತುವ ಕಾರ್ಯಕ್ರಮವನ್ನು ಕೈಗೊಳ್ಳಲಾಯಿತು. ಇದಲ್ಲದೇ ಸುಮಾರು ಆರು ಎಕರೆಗಳಷ್ಟು ಪ್ರದೇಶವನ್ನು ಬಾದಾಮಿಯ ಕ್ಷೇತ್ರದ ಹಾಲಿ ಶಾಸಕರಾದ ಸನ್ಮಾನ್ಯ ಎಂ.ಕೆ. ಪುಟ್ಟಣ್ಣ ಶೆಟ್ಟಿಯವರು ಆಸಕ್ತಿ ವಹಿಸಿ ಖಾಸಗಿ ವ್ಯಕ್ತಿಯಿಂದ ಇಲಾಖೆಗೆ ಉಚಿತವಾಗಿ ಕೊಡಮಾಡುವಂತೆ ಶ್ರಮಿಸಿದರು. ಪರಿಸರವನ್ನು ಸೌಂದರ್ಯೀಕರಣಗೊಳಿಸಿ ಬಾದಾಮಿಯನ್ನು ದೊಡ್ಡ ಆಕರ್ಷಣಾಕೇಂದ್ರವಾಗಿ ಮಾಡುವಲ್ಲಿ ಕೈಜೋಡಿಸಿದರು. ತರುವಾಯ ವಸ್ತುಸಂಗ್ರಹಾಲಯವನ್ನು ವಿಸ್ತರಿಸಲಾಯಿತು.

ಇದಲ್ಲದೇ ಮೂರು ಮತ್ತು ನಾಲ್ಕನೆಯ ಗುಹಾಲಯದ ತಳಭಾಗದಲ್ಲಿರುವ ಪ್ರಾಂಗಣವು ಸಾರ್ವಜನಿಕ ಶೌಚಾಲಯವಾಗಿತ್ತು. ಗುಹೆಗಳನ್ನು ಸಂದರ್ಶಿಸಲು ಹೋದ ಪ್ರವಾಸಿಗರಿಗೆ ಬಾದಾಮಿಯ ಕೆಲವೊಂದು ವ್ಯಕ್ತಿಗಳ ಖಾಯಂ ಶೌಚಾಲಯವಾಗಿದ್ದರಿಂದ ಪ್ರವಾಸಿಗರಿಗೆ ಬಹಿರ್ದಶೆಯ ಕಡ್ಡಾಯ ದರ್ಶನವಾಗುತ್ತಿತ್ತು. ಈ ಒಂದು ದುರ್ದಶೆಯನ್ನು ತಪ್ಪಿಸಲು ಆ ಪ್ರದೇಶವನ್ನು ಸ್ವಚ್ಛಗೊಳಿಸಿ ಸುಂದರವಾದ ಹಸಿರುಹುಲ್ಲಿನ ಹಾಸನ್ನು ತಯಾರಿಸಲಾಯಿತು. ಹಾಗೆಯೇ ಇಲಾಖೆಯಿಂದ ನಿರ್ವಹಿಸುತ್ತಿದ್ದ ಶೌಚಾಲಯವನ್ನು ದುರಸ್ತಿಗೊಳಿಸಿ ಸಾರ್ವಜನಿಕರ ಉಪಯೋಗಕ್ಕೆ ಅನುವು ಮಾಡಿಕೊಡಲಾಯಿತು. ಹಾಗೆಯೇ ಒಂದನೆಯ ಗುಹಾಲಯದ ಮುಂದೆ ಪ್ರವಾಸಿಗರಿಗೆ ಅನುಕೂಲವಾಗಲೆಂದು ಸಮತಟ್ಟಾದ ಕಲ್ಲಿನ ಹೊದಿಕೆಯ ಪ್ರಾಂಗಣವನ್ನು ಕಲ್ಪಿಸಿಕೊಡಲಾಯಿತು. ಈ ಎಲ್ಲಾ ಕಾರಣಗಳಿಂದ ಬಾದಾಮಿಯು ಪ್ರವಾಸಿಗರ ವಿಶೇಷ ಆಕರ್ಷಣೆಯ ಕೇಂದ್ರಬಿಂದುವಾಯಿತು.

ಹಾಗೆಯೇ ಭಾರತೀಯ ವಾಸ್ತುಪ್ರಾಸಾದದ ಪ್ರಯೋಗ ಶಾಲೆಯ ತೊಟ್ಟಿಲು ಎಂಬ ಪ್ರಸಿದ್ಧಿಗೆ ಒಳಗಾಗಿರುವ ಐಹೊಳೆಯ ದುರ್ಗಾಗುಡಿ ಸಂಕೀರ್ಣ, ವೇಣಿಯಾರ್ ಗುಡಿಗಳ ಸಂಕೀರ್ಣ, ಜ್ಯೋತಿರ್ಲಿಂಗ ಗುಡಿ, ಮಲ್ಲಿಕಾರ್ಜುನ ಗುಡಿ, ಗಳಗನಾಥ ಗುಡಿ ಹಾಗೂ ರಾಮಲಿಂಗೇಶ್ವರ ಗುಡಿ ಸಂಕೀರ್ಣಗಳಲ್ಲಿ ಸಂರಕ್ಷಣಾ ಕಾರ್ಯವನ್ನು ಕೈಗೆತ್ತಿಕೊಂಡು ಚಕ್ರಗುಡಿ, ನಾದರ್ ಗುಡಿ, ಅಂಬಿಗೇರ ಗುಡಿ ಸಂಕೀರ್ಣದಲ್ಲಿರುವ ಮೇಲ್ಭಾಗದ ಗುಡಿಯನ್ನು, ದುರ್ಗಾಗುಡಿಯ ಸಂಕೀರ್ಣದಲ್ಲಿರುವ ಮಹಾದ್ವಾರವನ್ನು, ಜ್ಯೋತಿರ್ಲಿಂಗದ ಎರಡು ಗುಡಿಗಳನ್ನು, ಜೋಯಿಸರ್ ಗುಡಿ, ಹಚ್ಚಿಬಸಪ್ಪನ ಗುಡಿ, ಮಲ್ಲಿಕಾರ್ಜುನ ಗುಡಿ, ಕರಿಗುಡಿ ಮತ್ತು ಬಿಳಿಗುಡಿಗಳನ್ನು ಸಂಪೂರ್ಣವಾಗಿ ಬಿಚ್ಚಿ ಪುನರ್‌ಜೋಡಿಸಲಾಯಿತು. ವಿಶೇಷವೆಂದರೇ ಐಹೊಳೆಯ ಚಕ್ರಗುಡಿಯನ್ನು ಹೊರತುಪಡಿಸಿದರೆ ಅಲ್ಲಿರುವ ಎಲ್ಲಾ ಪ್ರಾಚೀನ ಬಾವಿಗಳನ್ನು ಪುನರುಜ್ಜೀವನಗೊಳಿಸಿ ಸೂಕ್ತ ರೀತಿಯಲ್ಲಿ ಸಂರಕ್ಷಿಸಲಾಯಿತು ಮುಖ್ಯವಾಗಿ ಉದಾಹರಿಸಬೇಕೆಂದರೇ ತಾರಬಸಪ್ಪನ ಗುಡಿಯಲ್ಲಿರುವ ಪ್ರಾಚೀನ ಬಾವಿಯನ್ನು ಶೋಧಿಸಿ ಪುನರುಜ್ಜೀವನಗೊಳಿಸಿ ಸಂರಕ್ಷಿಸಲಾಯಿತು. ಇವುಗಳಲ್ಲದೇ ಹುಚ್ಚಮಲ್ಲಿ ಗುಡಿ, ವೇಣಿಯಾರ್ ಗುಡಿ, ಮಲ್ಲಿಕಾರ್ಜುನ ಗುಡಿಯಲ್ಲಿರುವ ಪ್ರಾಚೀನ ಬಾವಿಗಳನ್ನು ಪುನರುಜ್ಜೀವನಗೊಳಿಸಿದ್ದಲ್ಲದೆ ಹಾಗೂ ಜ್ಯೋತಿರ್ಲಿಂಗ ಸಮೂಹದಲ್ಲಿರುವ ಪುಷ್ಕರಣಿಯನ್ನು ಶೋಧಿಸಿ ಪುನರುಜ್ಜೀವನಗೊಳಿಸಿ ಸೂಕ್ತರೀತಿಯಲ್ಲಿ ಸಂರಕ್ಷಿಸಲಾಯಿತು. ಲಾಡಖಾನ್ ದೇವಾಲಯದ ಹಿಂಭಾಗದ ಪ್ರಾಂಗಣದಲ್ಲಿ ಆಕ್ರಮಿಸಿಕೊಂಡಿದ್ದ ನಿವಾಸಿಗಳನ್ನು ಓಲೈಸಿ ಪ್ರೀತಿಪೂರ್ವಕವಾಗಿ ಅವರಿದ್ದ ಮನೆಗಳನ್ನು ಸ್ಥಳಾಂತರಿಸಿ ಇರುವ ಜಾಗೆಯನ್ನು ಸೌಂದರ್ಯೀಕರಣಗೊಳಿಸಲಾಯಿತು. ಮುಖ್ಯವಾಗಿ ಸ್ಮರಿಸಬಹುದಾದ ವಿಷಯವೆಂದರೆ ಕೋಟೆಯ ಗೋಡೆಯ ಹೊರಭಾಗದ ಸಂಪೂರ್ಣ ಜೀರ್ಣೋದ್ಧಾರ ಮತ್ತು ಸಂಗ್ರಹಾಲಯದ ವಿಸ್ತರಣೆ.

ಅದೇ ರೀತಿ ಲಕ್ಕುಂಡಿಯಲ್ಲಿ ನನೇಶ್ವರ ದೇವಾಲಯ, ಕಾಶಿ ವಿಶ್ವೇಶ್ವರ ದೇವಾಲಯ, ಬ್ರಹ್ಮಜಿನಾಲಯಗಳಿಗೆ ಸೂಕ್ತವಾದ ಪೌಳಿಯನ್ನು ನಿರ್ಮಿಸಿ ಸಂಗ್ರಹಾಲಯವನ್ನು ವಿಸ್ತರಿಸಿ ಪ್ರವಾಸಿಗರಿಗೆ ನೀರು ಮತ್ತು ಶೌಚಾಲಯಗಳ ಸೇವೆಯನ್ನು ಒದಗಿಸಿ ಸ್ಮಾರಕಗಳ ಮೇಲ್ಛಾವಣಿಯಲ್ಲಿ ಸೋರಿಕೆಯನ್ನು ತಡೆಗಟ್ಟಿ, ವಿಶೇಷವಾಗಿ ಮಾಣಿಕೇಶ್ವರ ದೇವಾಲಯ ಹಾಗೂ ಮುಸುಕಿನ ಬಾವಿಯ ಪರಿಸರವನ್ನು ಸ್ವಚ್ಛಗೊಳಿಸಿ

ಪೌಳಿಯನ್ನು ನಿರ್ಮಿಸಿ ಹಸಿರುಹುಲ್ಲಿನ ಹಾಸನ್ನು ಕಲ್ಪಿಸಿ ಸ್ಮಾರಕಗಳನ್ನು ಸೂಕ್ತ ರೀತಿಯಲ್ಲಿ ಸುಧಾರಿಸಿ ಪ್ರವಾಸಿಗಳಿಗೆ ಅನುಕೂಲ ಕಲ್ಪಿಸಲಾಯಿತು.

ಹಾಗೆಯೇ ಡಂಬಳದ ಸ್ಮಾರಕಗಳ ಬಗ್ಗೆ ಹೇಳುವುದಾದರೇ, ಇಲಾಖೆಗೂ ಮತ್ತು ಸ್ಥಳೀಯರಿಗೂ ಇದ್ದ ಭಿನ್ನಾಭಿಪ್ರಾಯದಿಂದಾಗಿ ಸ್ಮಾರಕಗಳು ಸಾಕಷ್ಟು ಸೊರಗಿದ್ದವು. ತೋಂಟದ ಶ್ರೀಗಳ ಆಸಕ್ತಿ ಮತ್ತು ಕಳಕಳಿಯಿಂದಾಗಿ ಸ್ಥಳಿಯರ ಜೊತೆ ಸ್ನೇಹ, ಸೌಹಾರ್ದ ಉಂಟಾಗಿ, ಶ್ರೀಗಳ ಮುತುವರ್ಜಿಯಿಂದ ವೀರಶೈವ ಸೇವಾಸಂಘದ ವತಿಯಿಂದ ೨೧ ಗುಂಟೆ, ವಾಸಣ್ಣ ಸರಟೂರು ಅವರಿಂದ ೩೩ ಗುಂಟೆ ಜಮೀನು ಇಲಾಖೆಗೆ ಉಚಿತವಾಗಿ ಲಭಿಸಿತು. ಇದರಿಂದಾಗಿ ಬಸಪ್ಪ ದೇವಾಲಯುದ ಪರಿಸರವನ್ನು ಅಚ್ಚುಕಟ್ಟುಗೊಳಿಸಿ ದೇವಾಲಯದ ಜಾಗಕ್ಕೆ ಸುತ್ತಲೂ ಸುಭದ್ರ ಸುಂದರ ಪೌಳಿಯುನ್ನು ನಿರ್ಮಿಸಿ ಹಸಿರುಹುಲ್ಲಿನ ಹಾಸನ್ನು ಕಲ್ಪಿಸಲಾಯಿತು. ಮುಂದುವರೆದು ಹೇಳುವುದಾದರೆ ಶ್ರೀಗಳವರ ಪ್ರೇರಣೆಯಂತೆ ಹುಸೇನ್ ಸಾಬ್‌ಆಲೂರ್‌ರವರು ೧೫ ಗುಂಟೆ ಜಮೀನನ್ನು ಉಚಿತವಾಗಿ ಇಲಾಖೆಗೆ ನೀಡಿದರು. ಇದರಿಂದಾಗಿ ಸೋಮೇಶ್ವರ ದೇವಾಲಯಕ್ಕೆ ಪೌಳಿಯನ್ನು ನಿರ್ಮಿಸಿ, ಅದರ ಒಳಗಿನ ಜಾಗವನ್ನು ಸೌಂದರ್ಯೀಕರಣಗೊಳಿಸಲು ಸಾಧ್ಯವಾಯಿತು. ಇದಲ್ಲದೇ ದಿವಂಗತ ಸಿದ್ಧಲಿಂಗ ಪಟ್ಟಣಶೆಟ್ಟಿಯುವರು ಕಲ್ಯಾಣದ ಚಾಲುಕ್ಯ ಕಾಲದ ಸುಂದರವಾದ ಜಪ್ಪದ ಬಾವಿಯನ್ನು ಏಳು ಗುಂಟೆಗಳ ಸಮೇತ ಇಲಾಖೆಗೆ ಉಚಿತವಾಗಿ ಕೊಡಮಾಡಿಸಿದರು. ದಿವಂಗತರ ಪುತ್ರರಾದ ರಾಜಶೇಖರ ಸಿದ್ಧಲಿಂಗಪಟ್ಟಣಶೆಟ್ಟಿಯವರಿಂದ ಇನ್ನೂ ೧೪ ಗುಂಟೆ ಜಮೀನನ್ನು ಉಚಿತವಾಗಿ ಕೊಡಿಸುತ್ತಿದ್ದಾರೆ. ಸ್ಥಳೀಯ ಜನರ ಸಹಕಾರ ಎಲ್ಲಾ ಸ್ಮಾರಕದ ರಕ್ಷಣೆಗೆ ಅತ್ಯವಶ್ಯ ಹಾಗೂ ಸ್ಫೂರ್ತಿಯದಾಯಕ ಎಂಬುದನ್ನು ಡಂಬಳದ ನಾಗರೀಕರು ಇಲ್ಲಿ ತೋರಿಸಿಕೊಟ್ಟಿರುವುದು ಅತ್ಯಂತ ಗಮನಾರ್ಹ ವಿಷಯ.

ಇದೇ ರೀತಿ ಕೊಪ್ಪಳ ಜಿಲ್ಲೆಯ ಇಟಗಿಯ ಮಹಾದೇವ ದೇವಾಲಯಕ್ಕೂ ಸಹ ತೋಂಟದ ಶ್ರೀಗಳು ಆಸಕ್ತಿ ಮತ್ತು ಕಳಕಳಿಯನ್ನು ತೋರಿದರು. ಅನೇಕ ದಶಕಗಳಿಂದ ಕಾರಣಾಂತರಗಳಿಂದ ಈ ಭಾಗವು ಹೈದ್ರಾಬಾದಿನ ವೃತ್ತಕ್ಕೆ ಒಳಪಟ್ಟಿದ್ದರೂ ಸ್ಮಾರಕಗಳ ಜೀರ್ಣೋದ್ಧಾರ ಸಾಕಷ್ಟು ಪ್ರಮಾಣದಲ್ಲಿ ಆಗಲಿಲ್ಲ. ದೇವಾಲಯದ ಸಮುಚ್ಚಯದಲ್ಲಿ ಸುಮಾರು ಮನೆಗಳು ಅಕ್ರಮವಾಗಿ ತಲೆ ಎತ್ತಿದ್ದು ಅವುಗಳ ಸ್ಥಳಾಂತರಕ್ಕೆ ಹಲವಾರು ಪ್ರಯತ್ನಗಳು ನಡೆದಿದ್ದರು ಮನೆಗಳ ಸ್ಥಳಾಂತರವು ಸಾಧ್ಯವಾಗಲಿಲ್ಲ. ಈ ಬಗ್ಗೆ ತೋಂಟದ ಶ್ರೀಗಳು ನನ್ನನ್ನು ಹಲವಾರು ಬಾರಿ ಸಂಪರ್ಕಿಸಿದರು. ಈ ವಿಷಯದಲ್ಲಿ ಇಲಾಖೆಯಲ್ಲಿ ಕೇರ್‌ಟೇಕರ್ ಆಗಿದ್ದ ಮುಲ್ಲಾರವರನ್ನು ನೆನೆಯುಬೇಕಾಗುತ್ತದೆ. ಒಮ್ಮೆ ಶ್ರೀಗಳವರು ಇಟಗಿ ದೇವಾಲಯದ ಪ್ರಾಂಗಣದಲ್ಲಿ ವಾಸವಿದ್ದ ಎಲ್ಲಾ ನಿವಾಸಿಗಳ ಸಭೆಯನ್ನು ಕರೆದು ನಮ್ಮ ಸಂಸ್ಕೃತಿ ಮತ್ತು ಪರಂಪರೆಯ ಬಗ್ಗೆ ತಿಳಿಸಿ ಹೇಳುತ್ತಾ ಎಲ್ಲರನ್ನೂ ಒಪ್ಪಿಸಿದ್ದರ ಪರಿಣಾಮವಾಗಿ ತಾವಾಗಿಯೇ ಸ್ವಪ್ರೇರಣೆಯಿಂದ ೨೧ ಮನೆಗಳನ್ನು ತೆರವುಗೊಳಿಸಿ ಸ್ಥಳಾಂತರ ಮಾಡಿಕೊಟ್ಟರು. ದೇವಾಲಯುದ ಪ್ರಾಂಗಣದಲ್ಲಿದ್ದ ಮಸೀದಿ ಮತ್ತು ದರ್ಗಾಗಳನ್ನು ಸರ್ವಗೌರವಗಳೊಂದಿಗೆ ಸೂಕ್ತ ಸ್ಥಳಕ್ಕೆ ಸ್ಥಳಾಂತರಿಸಲಾಯಿತು. ಇದೊಂದು ಶ್ಲಾಘನೀಯ ಬೆಳವಣಿಗೆಯೆಂದು ಸದಾ ಸ್ಮರಿಸುತ್ತಿರುತ್ತೇನೆ. ಇದರ ಫಲವಾಗಿ ಇಟಗಿ ದೇವಾಲಯ ಸಮುಚ್ಚಯಕ್ಕೆ ಸಂಪೂರ್ಣವಾಗಿ ಪೌಳಿಯುನ್ನು ನಿರ್ಮಿಸಿ ಸರಸ್ವತಿ ಮಂಟಪವನ್ನು ಜೀರ್ಣೋದ್ಧಾರಗೊಳಿಸಿ ಪುಷ್ಕರಣಿಯ ಪರಿಸರವನ್ನು ಅಚ್ಚುಕಟ್ಟುಗೊಳಿಸಿದ್ದಲ್ಲದೆ ಪುಷ್ಕರಣಿಯನ್ನು ಸಹ ಸೂಕ್ತ ಜೀರ್ಣೋದ್ಧಾರದ ಮೂಲಕ ಪುನರುಜ್ಜೀವನಗೊಳಿಸಿ ಕೆಲವೊಂದು ಪರಿವಾರ ದೇವತೆಗಳ ಗುಡಿಯನ್ನು ಜೀರ್ಣೋದ್ಧಾರಗೊಳಿಸಿ ಬಹಳಷ್ಟು ಪ್ರಮಾಣದಲ್ಲಿ ಸಂರಕ್ಷಿಸಲಾಗಿದೆ. ದೇವಾಲಯದ ಆವರಣವನ್ನು ಹುಲ್ಲುಹಾಸಿನೊಂದಿಗೆ ಸೌಂದರ್ಯೀಕರಿಸಲಾಗಿದೆ. ಆದ್ದರಿಂದ ಈ ದೇವಾಲಯವನ್ನು ಇತರ ಪ್ರಮುಖ ದೇವಾಲಯಗಳೊಂದಿಗೆ ನಿರ್ವಹಣಾ ದೃಷ್ಠಿಯಿಂದ ಹೋಲಿಸಬಹುದಾಗಿದೆ.

ಬಾದಾಮಿ ಬಳಿಯ ಬನಶಂಕರಿಯ ಹರಿದ್ರಾತೀರ್ಥದ ಹೊಂಡವನ್ನು ಪುನರುಜ್ಜೀವನಗೊಳಿಸಿದ್ದೂ ಸಹ ದೊಡ್ಡ ಸಾಧನೆಯೇ ಸರಿ. ಇತಿಹಾಸ ಅಕಾದೆಮಿಯ ಬಾದಾಮಿಯ ಸಮ್ಮೇಳನಕ್ಕೆ ಪೂರ್ವದಲ್ಲಿ ಬನಶಂಕರಿ ದೇವಾಲಯದ ಹರಿದ್ರತೀರ್ಥದ ಹೂಳೆತ್ತುವ ಕಾರ್ಯವನ್ನು ಕೈಗೊಳ್ಳಲಾಗಿತ್ತು. ಹೂಳೆತ್ತುವ ಕಾರ್ಯವು ಮುಗಿದ ಮೇಲೂ ಸಹ ನೀರಿನ ಒರತೆ ಕಂಡುಬರಲಿಲ್ಲ. ಆದ್ದರಿಂದ ಮತ್ತೂ ೬೦x೪೦ ಅಡಿಯ ಗುಂಡಿಯನ್ನು ಹೊಂಡದ ಮಧ್ಯೆ ನೀರಿನ ಬುಗ್ಗೆಯಿದ್ದ ಸ್ಥಳದಲ್ಲಿ ತೋಡಿಸಲಾಯಿತು. ಆಗ ಅಲ್ಲೊಂದು ವಿಚಿತ್ರ ಸಂಘಟನೆಯೊಂದು ನಡೆಯಿತು. ಸುಮಾರು ೭-೮ ಅಡಿಗಳ ಆಳದಲ್ಲಿ ನೀರಿನ ಒರತೆ ಕಾಣಲಾರಂಭಿಸಿತು. ಇದನ್ನು ಗಮನಿಸುತ್ತಿದ್ದ ಕೆಲವು ವ್ಯಕ್ತಿಗಳು ಓಡಿಬಂದು ಭಕ್ತಿಪೂರ್ವಕರಾಗಿ ಪೂಜಿಸಿ ತೆಂಗಿನಕಾಯಿಯನ್ನು ಒಡೆದರು. ಈ ಪೂಜೆಯಾದ ಕೆಲವೇ ನಿಮಿಷಗಳಲ್ಲಿ ಬಂದಿದ್ದ ನೀರು ಇಂಗತೊಡಗಿತು. ವಿಸ್ಮಯದಿಂದ ಕಾರಣಗಳನ್ನು ಹುಡುಕಲಾಗಿ ಅಂದು ಬೆಳಗಿನಿಂದ ಮಧ್ಯಾಹ್ನದವರೆವಿಗೂ ವಿದ್ಯುಚ್ಛಕ್ತಿಯ ಪ್ರಸರಣದ ಪೂರೈಕೆಯಿಂದಾಗಿ ಬನಶಂಕರಿಯ

ಸುತ್ತಮುತ್ತಲಿನ ೮೦-೯೦ ಕೊಳವೆ ಬಾವಿಗಳ ಚಾಲನೆ ಪ್ರಾರಂಭಗೊಂಡಿತ್ತು. ಆದ್ದರಿಂದಲೇ ನೀರಿನ ಸ್ತರವು ಕೆಳಹಂತಕ್ಕೆ ಕುಸಿದು ಹರಿದ್ರಾ ತೀರ್ಥದಲ್ಲಿ ಜಲವೆಲ್ಲ ಬತ್ತಿಹೋಯಿತು. ಆದರೇ ಸುದೈವದಿಂದ ೨೦೦೭-೦೮ರಲ್ಲಿ ಸುರಿದ ವಿಪರೀತ ಮಳೆಯಿಂದಾಗಿ ಜಲಸ್ತರವು ಹೆಚ್ಚಾಗಿ ಈಗ ಎಂದಿನಂತೆ ಹರಿದ್ರಾತೀರ್ಥವು ನೀರಿನಿಂದ ತುಂಬಿ ತುಳುಕುತ್ತಿದೆ.

ಇನ್ನು ಬಿಜಾಪುರದ ಸ್ಮಾರಕಗಳ ಜೀರ್ಣೋದ್ಧಾರದ ವಿಷಯಕ್ಕೆ ಬಂದರೆ ವಿಶ್ವಪ್ರಸಿದ್ಧವಾದ ಗೋಲ್‌ಗುಂಬಸ್ ಬಹಳ ಮುಖ್ಯವಾದದ್ದು. ಕಾರಣಾಂತರಗಳಿಂದ ಗೋಲ್ ಗುಂಬಜ್‌ನ ಸುತ್ತಲಿನ ಕೋಟೆಭಾಗ ಮತ್ತು ರಸ್ತೆಯ ಬದಿಯ ಪೌಳಿಯು ಅನೇಕ ಅವಘಡಗಳಿಗೆ ಕಾರಣವಾಗುತ್ತಿತ್ತು. ರೈಲ್ವೆ ನಿಲ್ದಾಣದ ಕೆಳಗಿರುವ ಕೋಟೆಭಾಗವು ಬಹುತೇಕ ಶಿಥಿಲ ಗೊಂಡಿದ್ದು ಅನಧಿಕೃತವಾಗಿ ಸಮಾಜಘಾತುಕ ಶಕ್ತಿಗಳ ಪ್ರವೇಶ ವಾಗುತ್ತಿದ್ದಿತ್ತಲ್ಲದೇ ಹಂದಿಗಳ ಪ್ರವೇಶವಾಗಿ ಪ್ರವಾಸಿಗರ ಸ್ವಾಸ್ಥವನ್ನು ಕೆಡಿಸುತ್ತಿದ್ದವು. ಹೀಗಾಗಿ ಗೋಲ್‌ಗುಂಬಸ್ ರಕ್ಷಣೆಯು ಬಹು ಕಷ್ಟಕರ ಎನಿಸುತ್ತಿತ್ತು. ಆದ್ದರಿಂದ ಇಲಾಖೆಯು ಕೈಗೊಂಡ ಮೊಟ್ಟಮೊದಲ ಕ್ರಮವೆಂದರೇ ಕೋಟೆಯ ಗೋಡೆಯನ್ನು ಭದ್ರಗೊಳಿಸಿ ರಸ್ತೆಯ ಬದಿಯ ಪೌಳಿಯನ್ನು ಎತ್ತರಿಸುವುದು ಮುಖ್ಯವಾಗಿತ್ತು. ಕೆಲವೊಂದು ವ್ಯಕ್ತಿಗಳು ರಸ್ತೆಯ ಬದಿಯಿಂದಲೇ ಹಂದಿಗಳನ್ನು ಪೌಳಿಯ ಮೇಲಿನಿಂದ ಬಿಸಾಕಿ ಮನಬಂದಾಗ ಅವುಗಳನ್ನು ಮತ್ತೆ ಕೊಂಡೊಯ್ಯುತ್ತಿದ್ದರು. ಅದಲ್ಲದೇ ಸರಳವಾಗಿ ಯಾವುದೇ ವ್ಯಕ್ತಿಯು ಹೊರಗಿನಿಂದ ಒಳಗೆ ಜಿಗಿಯಲು ಅನುಕೂಲವಿತ್ತು. ಆದ್ದರಿಂದ ಸ್ಮಾರಕದ ಚಿತ್ತಾರದ ನೋಟಕ್ಕೆ ಎರವಾಗದಂತೆ ಪೌಳಿಯನ್ನು ಸೂಕ್ತವಾಗಿ ಎತ್ತರಿಸಿ ಈ ಸಮಾಜಘಾತುಕ ಶಕ್ತಿಗಳ ಮತ್ತು ಹಂದಿಗಳ ಪ್ರವೇಶವನ್ನು ತಡೆಗಟ್ಟಲಾಯಿತು. ಹಾಗೆಯೇ ಈ ಸ್ಮಾರಕದ ವಿಶೇಷವೆಂದರೆ ಪ್ರಪಂಚದ ಮೂರನೆಯ ಬೃಹತ್ ಗಾತ್ರದ ಗುಮ್ಮಟವಿದಾಗಿದ್ದು, ಯಾವುದೇ ಶಬ್ದದ ಪ್ರತಿಧ್ವನಿಯನ್ನು ಏಳು ಬಾರಿ ನೀಡುವ ಪಿಸುಮಾತಿನ ಗ್ಯಾಲರಿ (Whispering Gallery)ಯಿಂದಾಗಿ ಅತಿ ಹೆಚ್ಚು ಪ್ರವಾಸಿಗರು ಸಂದರ್ಶಿಸುವ ತಾಣವೆಂದೇ ಹೇಳಬೇಕು. ಪ್ರವಾಸಿಗರ ಸಂದಣಿಯು ಹೆಚ್ಚಾದಂತೆಲ್ಲಾ ಕ್ಲೋಕ್ ರೂಮ್, ಕುಡಿಯುವ ನೀರಿನ ಸೌಲಭ್ಯ ಮತ್ತು ವಾಹನ ನಿಲುಗಡೆ ಸ್ಥಳದ ಅವಶ್ಯಕತೆ ಇತ್ತು. ಅಲ್ಲದೇ ಪ್ರವಾಸಿಗರು ತಮ್ಮೊಡನೆ ತರುವ ತಿಂಡಿಪದಾರ್ಥ ಮತ್ತಿತರ ಸಾಮಾನು ಗಳನ್ನು ತಮ್ಮೊಡನೆ ಒಯ್ದು ಹುಲ್ಲುಹಾಸಿನ ಮೇಲೆ ಕುಳಿತು ಅಸ್ತಾವ್ಯಸ್ತವಾಗಿ ಚೆಲಿಸಿ, ಸ್ಮಾರಕ ವೀಕ್ಷಣೆಯ ವ್ಯವಸ್ಥೆಯನ್ನು ಹದಗೆಡಿಸುವಂತಿತ್ತು. ಆದ್ದರಿಂದ ಗೋಲ್‌ಗುಂಬಸ್ ಪ್ರವೇಶ ದ್ವಾರದ ಎಡ ಮತ್ತು ಬಲಭಾಗಗಳಲ್ಲಿ ಸೂಕ್ತವಾದ ಬುಕಿಂಗ್ ಕೌಂಟರ್‌ನ್ನು ಮಾಡಿ ಇನ್ನೊಂದು ಬದಿಯಲ್ಲಿ ಪ್ರವಾಸಿಗರ ಸಾಮಾನುಗಳನ್ನು ಇಟ್ಟುಕೊಳ್ಳಲು ಕ್ಲಾಕ್‌ರೂಮ್‌ವೊಂದನ್ನು ಮಾಡಿ ಅದರ ಪಕ್ಕದಲ್ಲಿಯೇ ಸಾಕಷ್ಟು ವಾಹನಗಳನ್ನು ನಿಲ್ಲಿಸಲು ಅನುವು ಮಾಡಿಕೊಡಲಾಯಿತು. ಹಾಗೆಯೇ ಸುಲಭ್ ಶೌಚಾಲಯವನ್ನು ಅದರ ಪಕ್ಕದಲ್ಲಿಯೇ ಕಲ್ಪಿಸ ಲಾಯಿತು. ಅಲ್ಲದೇ ಸ್ಮಾರಕವನ್ನು ವೀಕ್ಷಿಸಲು ಬಂದಂತಹ ಪ್ರವಾಸಿಗರ ವಿಶ್ರಾಂತಿಗಾಗಿ ಮತ್ತು ಅವರ ತಿನಿಸುಗಳ ಉಪಯೋಗಕ್ಕಾಗಿ ನಿಲುಗಡೆ ಸ್ಥಳಧ ಪಕ್ಕದಲ್ಲಿಯೇ ಸುಮಾರು ೩೦ಕ್ಕಿಂತಲೂ ಹೆಚ್ಚು ಕಟ್ಟೆಯನ್ನು ಮರಗಳ ಸುತ್ತ ನಿರ್ಮಿಸಲಾಯಿತು. ಈ ಕಟ್ಟೆಯಲ್ಲಿ ೨೦ರಿಂದ ೩೦ ಜನಗಳು ಆರಾಮವಾಗಿ ಕುಳಿತುಕೊಳ್ಳಲು ಅವಕಾಶವಿದ್ದು ಬಂದಂತಹ ಪ್ರವಾಸಿಗರಿಗೆ ಸೂಕ್ತ ಪಥಿಕಮಾರ್ಗಗಳನ್ನು ನಿರ್ಮಿಸಿ ಹೆಚ್ಚಿನ ಶೌಚಾಲಯವನ್ನು ಕಲ್ಪಿಸಿ ಕುಡಿಯುವ ನೀರಿನ ಅನುಕೂಲತೆ ಯನ್ನು ಒದಗಿಸುವ ಮೂಲಕ ವಿಶಿಷ್ಟವಾದ ಅನುಭವವನ್ನು ಕೊಡುವಂತಹ ತಾಣವನ್ನಾಗಿ ಮಾಡಲಾಯಿತು. ಗಗನ್ ಮಹಲ್ ಮತ್ತು ಬಾರಾಕಮಾನಿನ ಸ್ಮಾರಕಗಳಲ್ಲಿ ಜೀರ್ಣೋದ್ಧಾರದ ಕಾರ್ಯವನ್ನು ಸಂಪೂರ್ಣ ಕೈಗೊಂಡು ಹೆಚ್ಚಿನ ಪ್ರವಾಸೋದ್ಯಮಕ್ಕೆ ಅನುವು ಮಾಡಿಕೊಡಲಾಗಿದೆ. ಮುಲ್ಕ್-ಎ-ಮೈದಾನ್ ತೋಪಿನ ಸ್ಮಾರಕ ಹಾಗೂ ಉಪ್ಪಲಿ ಬುರ್ಜ್‌ಗಳಲ್ಲಿ ಸಾಕಷ್ಟು ಸಂರಕ್ಷಣಾ ಕಾರ್ಯವನ್ನು ಕೈಗೊಂಡಿದ್ದಲ್ಲದೇ ಈ ಪರಿಸರದ ಕೋಟೆಯ ಮುಂದಿನ ಭಾಗದಲ್ಲಿ ತೆರವುಗೊಳಿಸಲ್ಪಟ್ಟ ಸ್ಥಳಗಳಲ್ಲಿ ಸೂಕ್ತ ರೀತಿಯ ತಡೆಗೋಡೆಯನ್ನು ನಿರ್ಮಿಸಿ ಇಲಾಖೆಯ ಸ್ಮಾರಕಗಳಿಗೆ ಭದ್ರತೆಯನ್ನು ಒದಗಿಸಲಾಯಿತು. ಇಲ್ಲಿ ನನಗೆ ಅತ್ಯಂತ ಹೆಚ್ಚಿನ ಸಂತೋಷ ಕೊಡುವ ಕಾರ್ಯವೆಂದರೇ ಚಾಂದ್ ಬಾವಡಿಯ ಪುನರುಜ್ಜೀವನ, ಕೊಳೆತು ನಾರುತ್ತಿದ್ದ ಅನೇಕ ರೋಗ-ರುಜಿನಗಳಿಗೆ ಮೂಲಸ್ಥಾನವಾಗಿದ್ದ ಚಾಂದ್‌ಬಾವಡಿ ಪುನರುಜ್ಜೀವನಗೊಂಡ ನಂತರ ಸೂಕ್ತ ಕಾಯಕಲ್ಪದೊಂದಿಗೆ ಒಂದು ಸುಂದರ ಜಲರಾಶಿಯಾಗಿದೆ. ಇದೇ ರೀತಿ ಕಮತಗಿಯ ವಾಟರ್ ಪೆವಿಲಿಯನ್ನನ್ನು ಸಹ ಸಂರಕ್ಷಿಸ ಲಾಯಿತು. ಬಿಜಾಪುರವನ್ನು ವಿಶ್ವಪರಂಪರೆ ಪಟ್ಟಿಗೆ ಸೇರಿಸಲು ಪ್ರಯತ್ನಗಳನ್ನು ಮಾಡಲಾಗಿದೆ. ಹಾಗೆಯೇ ಗುಲ್ಬರ್ಗಾದ ಜಾಮಿಯಾ ಮಸೀದಿ ಮತ್ತು ವಾರಂಗಲ್ಲಿನ ಕಾಕತೀಯರ ಕಾಲದ ಮಠವನ್ನು ಸಹ ಸಂರಕ್ಷಿಸಲಾಗಿದೆ. ಸಾತ್‌ಗುಂಬಜ್ ಸ್ಮಾರಕವನ್ನು ಸ್ವಚ್ಛಗೊಳಿಸಿ ಮಳೆಯ ನೀರಿನ ಸೋರಿಕೆಯನ್ನು ತಡೆಗಟ್ಟಿ ಪರಿಸರವನ್ನು ಸೌಂದರ್ಯೀಕರಣಗೊಳಿಸಲಾಗಿದೆ.

ಇನ್ನು ಬೀದರ್‌ನ ಸ್ಮಾರಕಗಳ ಬಗ್ಗೆ ಹೇಳುವುದಾದರೆ ಅಲ್ಲಿನ ಕೋಟೆಯ ಗುಂಬಸ್ ದರ್ವಾಜಾ, ಫತೇ ದರ್ವಾಜಾ, ಶಾರ್ಜಾ ದರ್ವಾಜಾ, ರಂಗೀನ್ ಮಹಲ್, ತರ್ಖಾಶ್

ಮಹಲ್, ಗಗನ್‌ಮಹಲ್ ತಖ್ತ್ ಮಹಲ್, ಸೋಲಾಕಂಬಾ ಮಸೀದಿ, ದಿವಾನದ-ನೇ-ಹಾಮ್, ದಿವಾನ್-ಎ-ಖಾಸ್ ಮುಂತಾದವು ಬಹಳ ಮುಖ್ಯ ಭಾಗಗಳಾಗಿವೆ. ಇದಲ್ಲದೇ ಮಹಮ್ಮದ್ ಗವಾನನ ಮದರಸಾ, ಸಲೀಲ್ ಚೌಖಂಡಿ, ಬರೀದ್ ಷಾಹಿ ಸಮಾಧಿ ಮತ್ತು ಅಷ್ಟೂರಿನ ಬಹುಮನ ಗೋರಿಗಳು ಮುಖ್ಯವಾದವು. ಕಾರಣಾಂತರಗಳಿಂದ ಜೀರ್ಣೋದ್ಧಾರದ ಕೆಲಸಗಳು ತಕ್ಕ ಪ್ರಮಾಣದಲ್ಲಿ ನಡೆದಿರಲಿಲ್ಲವಾದ್ದರಿಂದ ಈ ಮೇಲೆ ಹೇಳಿದ ಎಲ್ಲಾ ಸ್ಮಾರಕಗಳು ಅಪಾಯದ ಸ್ಥಿತಿಯನ್ನು ತಲುಪಿದ್ದವು. ಹಾಗಾಗಿ ಸೋಲಾಕಂಬ್ ಮಸೀದಿಯನ್ನು ಸೋರಿಕೆಯಿಂದ ತಪ್ಪಿಸಲು ಮತ್ತು ನೆಲಭಾಗದಲ್ಲಿ ಬಹಳಷ್ಟು ಎಗ್ಗು-ತಗ್ಗುಗಳು ಇದ್ದುದರಿಂದ, ಅದರ ಮುಂದಿನ ಭಾಗದ ಪ್ರಾಚೀನ ಉದ್ಯಾನವನ್ನು ಪುನರುಜ್ಜೀವನಗೊಳಿಸಲು ಜೀರ್ಣೋದ್ಧಾರದ ಕಾರ್ಯವನ್ನು ಕೈಗೊಳ್ಳಲಾಯಿತು. ಅದರಂತೆಯೇ ಗಗನ್ ಮಹಲ್ ಮತ್ತು ತರ್ಕಾಶ್ ಮಹಲ್‌ನ ಕಾರ್ಯಗಳು ಸಹ ಪ್ರಾರಂಭಗೊಂಡವು. ಒಟ್ಟಾರೆ ಮೇಲೆ ಹೇಳಿದ ಎಲ್ಲಾ ಸ್ಮಾರಕಗಳಲ್ಲಿ ಜೀರ್ಣೋದ್ದಾರ ಕೈಗೊಂಡು ಸೌಂದರ್ಯೀಕರಣವನ್ನು ಮಾಡಲಾಯಿತು. ಇದಲ್ಲದೇ ವಸ್ತುಸಂಗ್ರಹಾಲಯದ ವಿಸ್ತರಣೆಯನ್ನು ಸಹ ಕೈಗೊಳ್ಳಲಾಯಿತು. ಇದೆಲ್ಲದರ ಪರಿಣಾಮವಾಗಿ ಹೈದ್ರಾಬಾದ್‌ನ ಗೋಲ್ಕೊಂಡ ಸ್ಮಾರಕಕ್ಕೆ ಸೆಡ್ಡು ಹೊಡೆಯುವಂತೆ ಸ್ಮಾರಕಗಳಲ್ಲಿ ಹೊಸ ಜೀವಕಳೆ ತುಂಬಿಕೊಂಡಿತು. ಇದರ ಪರಿಣಾಮವಾಗಿ ಪ್ರವಾಸಿಗರ ಸಂಖ್ಯೆ ಬಹುಮಟ್ಟಿಗೆ ಹೆಚ್ಚಳವಾಯಿತು. ಒಂದು ಅಂದಾಜಿನ ಪ್ರಕಾರ ದಿನನಿತ್ಯ ೫೦೦-೧೦೦೦೦ ಪ್ರವಾಸಿಗಳು ಭೇಟಿ ನೀಡುತ್ತಿದ್ದಾರೆ. ಈ ಜೀರ್ಣೋದ್ಧಾರ ಸಮಯದಲ್ಲಿ ನಾನು ಗಮನಿಸಿದ ಕೆಲವು ಅಂಶಗಳೆಂದರೆ:

ಹೀರೆಬೆಣಕಲ್‌ನ ಬೃಹತ್ ಕಲ್ಗೋರಿಗಳು ಕೇವಲ ಅಂದಿನ ಸಮಾಜದ ಗತಿಸಿದ ವ್ಯಕ್ತಿಗಳ ಶವಸಂಸ್ಕಾರಕಷ್ಟೆ ಮೀಸಲಾಗಿರಲಿಲ್ಲ. ಸುಮಾರು ೪೦೦ಕ್ಕೂ ಹೆಚ್ಚು ಕಲ್ಗೋರಿಗಳು ಕಲ್ಗಣಿಯಿಂದ ಸೀಳಿದ ಪದರ ಕಲ್ಲುಗಳನ್ನು ಉಪಯೋಗಿಸಿ ಮೇಲ್ಛಾವಣಿಯನ್ನು ಕ್ಯಾಪ್‌ಸ್ಟೋನ್‌ನಿಂದ (ಹೊದಿಕೆಯ ಕಲ್ಲು) ನಿಲ್ಲಿಸಿದ ನಾಲ್ಕು ಕಡೆ ಬಂಡೆಗಲ್ಲು (Orthostat) ಬಾಗಿಲು ಅಥವಾ ಪ್ರವೇಶದ್ವಾರವೆಂಬಂತೆ Port Holeನ್ನು ಉಪಯೋಗಿಸಲಾಗಿದೆ. ಮೇಲಾಗಿ ಈ ಎಲ್ಲಾ ಕಲ್ಗೋರಿಗಳ ನಿರ್ಮಾಣದಲ್ಲಿ ಕೆರೆಯ ರೀತಿಯಲ್ಲಿರುವ ಒಂದು ಜಾಗದಲ್ಲಿ ಕಲ್ಲನ್ನು ಎಬ್ಬಿಸಿ ಆಳವಾದ ಗುಂಡಿಯನ್ನು ಮೂಡಿಸಿ ಅದರಲ್ಲಾಗುವ, ಮಳೆಯ ನೀರಿನ ಸಂಗ್ರಹಣೆಯಿಂದ ಅಲ್ಲಿನ ನಿವಾಸಿಗಳಿಗೆ ಬಹುತೇಕ ಒಂದು ವರ್ಷಕ್ಕೆ ಸಾಕಾಗುವಷ್ಟು ನೀರಿನ ಸಂಗ್ರಹಣೆಯ ಯೋಜನೆಯ ಪ್ರಯತ್ನವೊಂದು ಕಂಡುಬಂದಿದೆ. ಇದಲ್ಲದೇ ಕಲ್ಗೋರಿಗಳ ಸಮೀಪದಲ್ಲಿಯೇ ಮೂರು ಸ್ತರಗಳ ಬಯಲು ಪ್ರದೇಶವನ್ನು ಸಹ ಕಾಣಬಹುದಾಗಿದೆ. ಮೇಲಾಗಿ ಬಹುತೇಕ ೪೫ ಡಿಗ್ರಿಗಳಲ್ಲಿ ನಿಂತಿರುವ ಸುಮಾರು ಒಂದೂವರೆ ಮೀಟರ್‌ನಷ್ಟು ಅಗಲವಿರುವ ಗುಂಡುಕಲ್ಲನ್ನು ಸಮತಟ್ಟಾಗಿ ಸೀಳಿದ ಸಾಧನವೊಂದನ್ನು ಕಲ್ಗೋರಿಗಳ ಪಕ್ಕದ ದೊಡ್ಡ ಬಂಡೆಯ ಮೇಲೆ ಕಾಣಬಹುದಾಗಿದೆ. ಪ್ರಾಯಶಃ ಇದು ಕರ್ನಾಟಕದ ಅತ್ಯಂತ ಪ್ರಾಚೀನ ನಗಾರಿ ಕಲ್ಲೆಂದು ನನ್ನ ಅಭಿಪ್ರಾಯ. ಒಂದು ನಿರ್ದಿಷ್ಟ ಬಿಂದುವಿನಲ್ಲಿ ನಾಜೂಕಾಗಿ ತಟ್ಟಿದರು ಸಾಕು ಅದರ ಶಬ್ದವನ್ನು ಸುಮಾರು ೨ ಕಿ.ಮೀ. ದೂರದವರೆಗೂ ಕೇಳಬಹುದಾಗಿದೆ. ಇದನ್ನು ಶತ್ರುಗಳ ಅಪಾಯ ಅಥವಾ ಅಲ್ಲಿನ ನಿವಾಸಿಗಳನ್ನು ಸಭೆಗಳಿಗೆ ಕರೆಯುವ ಸೂಚಕವಾಗಿಯೋ ಅಥವಾ ಇನ್ನಿತರ ಧಾರ್ಮಿಕ ವಿಧಿವಿಧಾನಗಳಿಗೆ ಉಪಯೋಗಿಸಿದ್ದಿರಬೇಕು. ಇದಲ್ಲದೇ ಬಂಡೆಗಲ್ಲಿನ ವರ್ಣಚಿತ್ರಗಳು ಕಾಣಬಂದಿರುವುದರಿಂದ ಬಹುಶಃ ಈ ನೆಲೆಯಲ್ಲಿ ವ್ಯವಸಾಯ ಪಶುಸಂಗೋಪನೆ ಮತ್ತು ಶಾಶ್ವತ ನಿವಾಸಗಳನ್ನು ಕಂಡುಕೊಂಡಿರಬೇಕು. ಆದ್ದರಿಂದ ನನ್ನ ಅಭಿಪ್ರಾಯದಂತೆ ಹೀರೆಬೆಣಕಲ್ಲಿನ ಕಲ್ಗೋರಿಗಳೇ ಕರ್ನಾಟಕದ ವಾಸ್ತು ಬೆಳವಣಿಗೆಗೆ ಅತ್ಯಂತ ಪ್ರಾಚೀನ ಉದಾಹರಣೆ, ಇದರ ಬಗ್ಗೆ ವಿದ್ವಾಂಸರ ಪರಿಶೀಲನೆ ಇನ್ನೊಮ್ಮೆ ಆಗಲೆಂದು ಈ ಸಭೆಯಲ್ಲಿ ಕಳಕಳಿಯಿಂದ ಪ್ರಾರ್ಥಿಸುತ್ತೇನೆ.

ಐಹೊಳೆಯನ್ನು ವಾಸ್ತುಪ್ರಸಾದದ ಅಥವಾ ವಿವಿಧ ಶಿಖರಶೈಲಿಗಳ ಪ್ರಯೋಗದ ತೊಟ್ಟಿಲು ಎಂದು ಕರೆಯಲಾಗಿದೆ. ಹಾಗೆಯೇ ನಾಗರ ಮತ್ತು ದ್ರಾವಿಡ ಪ್ರಾಸಾದಗಳೆರಡು ಪಟ್ಟದಕಲ್ಲಿನಲ್ಲಿ ವಿಕಸಿತ ರೂಪವನ್ನು ಪಡೆದಿದ್ದರಿಂದ ವಿಶ್ವಪರಂಪರೆ ಪಟ್ಟಿಯಲ್ಲಿ ಸೇರಿಸಲಾಗಿದೆ. ನನ್ನ ಕುತೂಹಲವೇನೆಂದರೆ ಉತ್ತರ ಭಾರತದಲ್ಲಿ ನಾಗರಶೈಲಿಯೇ ಏಕೆ ಬೆಳವಣಿಗೆಯಾಯಿತು? ದಕ್ಷಿಣ ಭಾರತದಲ್ಲಿ ದ್ರಾವಿಡ ಶೈಲಿಯೇ ಏಕೆ ಬೆಳವಣಿಗೆಯಾಯಿತು? ಇವೆರೆಡರ ಸಂಗಮವು ಪಟ್ಟದಕಲ್ಲಿನಲ್ಲಿಯೇ ಏಕೆ ಆಯಿತು ಮತ್ತು ಹೇಗೆ ಆಯಿತು?

ಹಾಗೆಯೇ ಬಾದಾಮಿಯಲ್ಲಿ ಅಗಸ್ತ್ಯತೀರ್ಥದ ಪರಿಸರವು ವೈದಿಕ ಸಂಸ್ಕೃತಿಗೆ ಸೇರಿದ್ದು. ಅಗಸ್ತ್ಯತೀರ್ಥದ ಹೊಂಡದ ಕಟ್ಟೆಯ ಮೇಲೆಯೇ ಶೈವ ದೇವಾಲಯವಿದ್ದು ಮುಂದುವರೆದು ಮಲ್ಲಿಕಾರ್ಜುನ, ಉತ್ತರ ಮತ್ತು ಪೂರ್ವದಿಕ್ಕಿನಲ್ಲಿ ಭೂತನಾಥ ದೇವಾಲಯಗಳ ಸಮೂಹವಿದ್ದು ಕೀರ್ತಿವರ್ಮನ, ಮಂಗಳೇಶನ, ಹಾಗೂ ಕಪ್ಪೆ ಅರಭಟ್ಟನ ಶಾಸನಗಳಿದ್ದು ಇನ್ನೂ ಮೇಲಿನ ಸ್ಥಳಗಳಲ್ಲಿ ಮೂರು ಶೈವ ದೇವಾಲಯಗಳಿದ್ದು ಇದೊಂದು ವೈದಿಕ ಸಂಸ್ಕೃತಿಯ

ಕೇಂದ್ರಸ್ಥಾನವಾಗಿತ್ತು. ಹೀಗಿರಬೇಕಾದರೇ ಗುಹಾ ದೇವಾಲಯದ ಹೃದಯ ಭಾಗದಂತಿರುವ ಪ್ರಾಂಗಣದಲ್ಲಿ ಆದಿಲ್‌ಷಾಹಿಯ ಕಾಲದ ಸಮಾಧಿ ಮತ್ತು ಪಕ್ಕದಲ್ಲಿಯೇ ಮಸೀದಿ ಇದ್ದು, ಪ್ರಸನ್ನ ವೆಂಕಟದಾಸರ ಕಟ್ಟೆಯ ಅಕ್ಕ–ಪಕ್ಕದಲ್ಲಿ ಅನ್ಯಮತೀಯರ ಮನೆಗಳ ವಾಸಸ್ಥಾನ ಮತ್ತು ಅದೇ ಕಟ್ಟೆಯ ಮುಂಭಾಗದಲ್ಲಿ ಮತ್ತು ಮೇಲಿನ ಶಿವಾಲಯಕ್ಕೆ ಹೋಗುವ ದಾರಿಯಲ್ಲಿ ಇಸ್ಲಾಂ ಶೈಲಿಯ ದ್ವಾರಬಾಗಿಲುಗಳು ಮತ್ತು ಸಂತೆಯ ಬೀದಿಯಿಂದ ಸಂಗ್ರಹಾಲಯಕ್ಕೆ ಹೋಗುವ ದಾರಿಯ ಎಡಭಾಗದಲ್ಲಿದ್ದ ಉರ್ದು ಶಾಲೆಯನ್ನು ಇತ್ತೀಚೆಗೆ ದುರಸ್ತಿಗೊಳಿಸಲು ತಳಪಾಯದ ಉತ್ಖನನವನ್ನು ಕೈಗೊಂಡಾಗ ವಿಜಯನಗರ ಕಾಲದ ಕಟ್ಟಡವೊಂದರ ಅಧಿಷ್ಠಾನ ಭಾಗವು ಕಂಡುಬಂದಿದ್ದೇಕೆ? ಇದಕ್ಕೆ ಪೂರಕ ಹಿನ್ನೆಲೆ ಮತ್ತು ಮಾರ್ಪಾಡಿಗೆ ಕಾರಣಗಳೇನೆಂದು ಪರಿಶೀಲಿಸಬೇಕಿದೆ.

ಇಂದಿನ ಬಾದಾಮಿ, ಪಟ್ಟದಕಲ್ಲು ಮತ್ತು ಐಹೊಳೆಯ ಶಿಲ್ಪಗಳಲ್ಲಿ ಶೇಕಡ ೯೮ರಷ್ಟು ಶಿಲ್ಪಗಳು ಮುಕ್ಕಾಗಿರುವುದೇಕೆ? ಮುಕ್ಕಾದರೂ ಬಹುತೇಕ ರೂಪವನ್ನು ಉಳಿಸಿಕೊಂಡಿದ್ದು ಹೇಗೆ ಎಂಬ ಅನುಮಾನಗಳು ಕಾಡಿದರು ತಕ್ಕಮಟ್ಟಿಗೆ ಉತ್ತರಗಳು ಸಿಕ್ಕುತ್ತಿದ್ದರೂ ಪೂರ್ಣಪ್ರಮಾಣದ ಸತ್ಯಶೋಧನೆ ಆಗಬೇಕಾಗಿದೆ.

ಈಗಾಗಲೇ ಡಾ॥ ಸೂರ್ಯನಾಥ ಕಾಮತ್ ಅವರು ೧೯೭೮–೭೯ರ ಆಸುಪಾಸಿನಲ್ಲಿ ಕಂಡಂತೆ ಬಸವ ಕಲ್ಯಾಣದ ಸಮೀಪವಿರುವ ನಾರಾಯಣಪುರದಲ್ಲಿ ಕಲ್ಯಾಣ ಚಾಲುಕ್ಯರ ಹಲವಾರು ದೇವಾಲಯಗಳಿದ್ದು ಅವುಗಳಿಗೆ ಸಂಬಂಧಪಟ್ಟ ಅನೇಕ ವಿಗ್ರಹಗಳು ಕಟ್ಟಡದ ಸಾಮಗ್ರಿಯಂತೆ ಮನೆಗಳ ನಿರ್ಮಾಣದಲ್ಲಿ ಉಪಯೋಗಿಸಿದೆ. ಇಂತಹ ಅನೇಕ ಉದಾಹರಣೆಗಳು ಬಸವಕಲ್ಯಾಣದ ಆಸುಪಾಸಿನಲ್ಲಿ ಕಾಣಬರುತ್ತದೆ. ಈ ನಿಟ್ಟಿನಲ್ಲಿ ಹೆಚ್ಚಿನ ಪರಿಶೋಧನೆ ಅಗತ್ಯವಿದೆ.

ಮಾಂಡುವಿನ (ಮಧ್ಯಪ್ರದೇಶ) ಮೊಗಲ್ ಕಾಲದ ಉದ್ಯಾನದ ಶೋಧ; ಚಂದೇರಿಯ ಪ್ರಾಚೀನ ನೆಲಮಾಳಿಗೆ ಅರಮನೆ ಮತ್ತದರ ಬಾವಿಯ ಶೋಧನೆ ಮತ್ತು ಸಂರಕ್ಷಣೆ; ವಿಶ್ವವಿಖ್ಯಾತ ಸಾಂಚಿ ಸ್ತೂಪ ಪರಿಸರದಲ್ಲಿ ಕೈಗೊಂಡ ಸಂರಕ್ಷಣಾ ಕಾರ್ಯ ಮತ್ತು ಪ್ರವಾಸಿ ಸೌಲಭ್ಯ ವ್ಯವಸ್ಥೆಯನ್ನು ಕಲ್ಪಿಸುವಲ್ಲಿ ದೊರೆತ ಸಾರ್ವಜನಿಕ ಪ್ರಶಂಸೆ ಸದಾ ಸ್ಫೂರ್ತಿದಾಯಕವಾಗಿದೆ. ಖಜುರಾಹೊದ ಸಂರಕ್ಷಣಾ ಕಾರ್ಯದ ಅನುಭವವೂ ಅವಿಸ್ಮರಣೀಯ.

ಬಾದಾಮಿ, ಐಹೊಳೆ ಹಾಗೂ ಪಟ್ಟದಕಲ್ಲಿನ ದೇವಾಲಯಗಳ ಸಂರಕ್ಷಣಾ ಕಾರ್ಯದಲ್ಲಿ ಭಾಗವಹಿಸಿದ ಕುಶಲಕರ್ಮಿಗಳು ಹಾಗೂ ಸ್ಥಪತಿಗಳು ಸ್ಥಳೀಯರೇ ಆಗಿದ್ದು, ಬಾದಾಮಿ ಶಿಲ್ಪಕಲೆಯು ಅವರಲ್ಲಿ ಇಂದಿಗೂ ಜೀವಂತವಿದೆ. ಇದೇ ಕಲೆಯನ್ನು ಅವರ ಜೀವನೋಪಾಯಕ್ಕಾಗಿ ವ್ಯವಸ್ಥಿತವಾಗಿ ರೂಪಿಸಲು ಯಥೇಚ್ಛ ಅವಕಾಶವಿದೆ. ಇಷ್ಟೆಲ್ಲಾ ಬೆಳವಣಿಗೆಗಳ ಮಧ್ಯೆ ಕಾಡುವ ಒಂದು ಕೊರತೆಯೆಂದರೆ ಕರ್ನಾಟಕದ ಬಹಳಷ್ಟು ಸ್ಮಾರಕಗಳು ಅಲಕ್ಷಕ್ಕೆ ಒಳಪಟ್ಟಿವೆ. ಇದರ ಬಗ್ಗೆ ಸಂಬಂಧಪಟ್ಟವರೆಲ್ಲರೂ ಗಮನ ಹರಿಸಿ ಸೂಕ್ತ ಕ್ರಮವನ್ನು ಕೈಗೊಂಡರೇ ನಮ್ಮ ಸಾಂಸ್ಕೃತಿಕ ಪರಂಪರೆಯ ಪ್ರತೀಕಗಳು ನಮಗಷ್ಟೇ ಅಲ್ಲದೇ ಅವುಗಳ ಅಮೂಲ್ಯ ಸಂದೇಶವನ್ನು ಮುಂದಿನ ಜನಾಂಗಕ್ಕೂ ಕೊಂಡೊಯ್ಯಬಹುದಾಗಿದೆ.

ಈ ದಿಕ್ಕಿನಲ್ಲಿ, ಧರ್ಮಸ್ಥಳದ ಧರ್ಮೋತ್ಥಾನ ಟ್ರಸ್ಟ್‌ನ ನಿಗಮ ಮಂಡಳಿಗಳು ಸಾಕಷ್ಟು ದೊಡ್ಡ ಪ್ರಮಾಣದಲ್ಲಿ ಸಂರಕ್ಷಣಾ ಕಾರ್ಯದಲ್ಲಿ ಆಸಕ್ತಿ ವಹಿಸಿವೆ. Infosys Foundationನ ಮುಖ್ಯಸ್ಥರಾದಂತಹ ಡಾ॥ ಸುಧಾಮೂರ್ತಿ ಅವರು ಲಕ್ಷ್ಮೇಶ್ವರದ ಸೋಮೇಶ್ವರ ದೇವಾಲಯದ ಸಂಕೀರ್ಣವನ್ನು ಸಂಪೂರ್ಣವಾಗಿ ಜೀರ್ಣೋದ್ಧಾರ ಗೊಳಿಸಲು ಉಪಕ್ರಮಿಸಿದ್ದು ಈಗಾಗಲೇ ಕರ್ನಾಟಕ ಸರ್ಕಾರದ ಪ್ರಾಚ್ಯವಸ್ತು ಇಲಾಖೆಯೊಡನೆ ಒಡಂಬಡಿಕೆಯನ್ನು ಮಾಡಿಕೊಂಡಿದ್ದಾರೆ. ದಾಖಲೀಕರಣ ಮತ್ತು ಸ್ಥಿತಿಸೂಚಕ ನಕಾಸೆಯ (Condition Maping) ರಚನಾಕಾರ್ಯವು ಮುಗಿದಿದೆ. ಮುಂದಿನ ಹಂತದ ಕಾರ್ಯ ಯೋಜನೆಯನ್ನು ರೂಪಿಸಲಾಗುತ್ತಿದೆ.

ಸ್ಮಾರಕಗಳ ಉಳಿಯುವಿಕೆಗೆ ಸೂಕ್ತ ಸಂರಕ್ಷಣಾ ಕಾರ್ಯವು ಅತ್ಯಗತ್ಯ ಈ ನಿಟ್ಟಿನಲ್ಲಿ ಇಂದಿನ ವ್ಯವಸ್ಥೆಗೆ ಅಗತ್ಯ ಮಾರ್ಪಾಡುಗಳನ್ನು ತರುವ ಮೂಲಕ ಸಂರಕ್ಷಣಾ ಕಾಯಕಲ್ಪವನ್ನು ಸಾಧಿಸಬಹುದಾಗಿದೆ. ಹೇಗೆಂದರೆ:

೧. ಕರ್ನಾಟಕದ ಸ್ಮಾರಕಗಳಿಗೆ ಉಚಿತ ಪ್ರಮಾಣದ ಹಣವನ್ನು ಬಿಡುಗಡೆ ಮಾಡುವುದು.

೨. ಅವಶ್ಯಕ ಸಿಬ್ಬಂದಿಯನ್ನು ನಿಯೋಜಿಸುವುದು.

೩. ನಿಯೋಜಿತಗೊಂಡ ಸಿಬ್ಬಂದಿ ಮತ್ತು ಅಧಿಕಾರಿಗಳಿಗೆ ಪ್ರಾಚೀನ ಕಾಲದ ವಾಸ್ತು ಮತ್ತು ಶಿಲ್ಪಶಾಸ್ತ್ರಗಳನ್ನು ಪರಿಚಯಿಸುವುದು. ಪ್ರಾಚೀನ ಶಾಸ್ತ್ರೀಯ ಗ್ರಂಥಗಳಲ್ಲಿ ಉಲ್ಲೇಖಿತವಾಗಿರುವ ಪ್ರಾದೇಶಿಕ ವಾಸ್ತುಶಿಲ್ಪ ಗುಣಲಕ್ಷಣಗಳನ್ನೇ ಸ್ಮಾರಕಗಳ ಸಂರಕ್ಷಣಾ ಕಾರ್ಯಯೋಜನೆಗಳಲ್ಲಿ ಸೂಕ್ತವಾಗಿ ಬಳಸಿಕೊಳ್ಳುವುದು ಇದೇ ರೀತಿ ಸಂರಕ್ಷಣಾ ಕಾರ್ಯದಲ್ಲಿ ಆಯಾ ಪ್ರಾಂತ್ಯದ ಆಯಾ ಧರ್ಮದ ಸ್ಮಾರಕಗಳಿಗೆ ಅನುಗುಣವಾಗಿ ಸಂರಕ್ಷಣಾ ಕೈಪಿಡಿಯನ್ನು ರೂಪಿಸುವ

ಅಗತ್ಯವಿದೆ. ಅವುಗಳದೇ ಆದ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಸ್ಮಾರಕಗಳ ಪರಿಸರವನ್ನು ಸೌಂದರ್ಯೀಕರಣಗೊಳಿಸುವುದರ ಜೊತೆಗೆ ಇಲಾಖೆಯ ಅಧಿನಿಯಮಗಳಿಗೆ ಆಕ್ಷೇಪವಾಗದಂತೆ ಪ್ರವಾಸಿ ಸೌಲಭ್ಯಕ್ಕೆ ಸೂಕ್ತಸ್ಥಳವನ್ನು ಕಲ್ಪಿಸಿದರೆ ಸಂರಕ್ಷಣಾ ಕಾರ್ಯವು ಹೆಚ್ಚಿನ ಔಚಿತ್ಯಪೂರ್ಣವಾಗುತ್ತದೆ.

೪. ಇತ್ತೀಚೆಗೆ ಪರಿಷ್ಕೃತಗೊಂಡ ಪ್ರಾಚೀನ ಸ್ಮಾರಕ, ಪ್ರಾಚ್ಯನೆಲೆ ಮತ್ತು ಅವಶೇಷಗಳ ಕಾಯ್ದೆ ೨೦೧೦ (AM & ASR Act, 2012) ಮತ್ತು (Validation Act) ಇದರ ಬಗ್ಗೆ ಸಾರ್ವಜನಿಕರಲ್ಲಿ ಉಂಟಾಗಿರುವ ತಪ್ಪು ತಿಳುವಳಿಕೆಗಳನ್ನು ತೊಲಗಿಸಿ, ಹೆಚ್ಚಿನ ಜಾಗೃತಿಯನ್ನು ಮೂಡಿಸಲು ಮುಂದಾಗ ಬೇಕಿದೆ. ಸ್ಮಾರಕಗಳ ಬಗ್ಗೆ ಗೌರವ, ಕಾಳಜಿ ಮತ್ತು ಜವಾಬ್ದಾರಿ ಗಳು ಉಂಟಾಗುವಂತೆ ಸರ್ಕಾರ, ಸಾರ್ವಜನಿಕ ಮತ್ತು ಆಸಕ್ತ ಸಂಘ-ಸಂಸ್ಥೆಗಳು ತ್ವರಿತ ಕಾರ್ಯಯೋಜನೆಗಳನ್ನು ಕೈಗೆತ್ತಿಕೊಂಡರೇ ಈ ನಿಟ್ಟಿನಲ್ಲಿ ಸಮಸ್ಯೆಗಳನ್ನು ಬಗೆಹರಿಸಬಹು ದಾಗಿದೆ. ಎದುರಾಗಬಹುದಾದ ಇನ್ನೊಂದು ವಿಷಯವೆಂದರೇ ಪ್ರಾಥಮಿಕ ಶಾಲೆಯ ನಾಲ್ಕು ಮತ್ತು ಐದನೆಯ ತರಗತಿಯಲ್ಲಿ ನಮ್ಮ ಸಾಂಸ್ಕೃತಿಕ ಪರಂಪರೆಯ ಪ್ರತೀಕಗಳಾದ ಸ್ಮಾರಕಗಳ ಮಹತ್ವವನ್ನು ತಿಳಿಸುವ ಮತ್ತು ಇಂತಹ ಸ್ಮಾರಕಗಳನ್ನು ಹೇಗೆ ವಿರೂಪಗೊಳಿಸಬಾರದು? ಹೇಗೆ ಅವುಗಳನ್ನು ಗೌರವದಿಂದ ಕಾಣಬೇಕು? ಹೇಗೆ ಅವನ್ನು ರಕ್ಷಿಸಬೇಕು? ಈ ನಿಟ್ಟಿನಲ್ಲಿ ನಮ್ಮ ಜವಾಬ್ದಾರಿ ಏನು? ಎಂಬ ಮಹತ್ವದ ಸಂಗತಿಗಳನ್ನು ತಿಳಿಸಿಕೊಡುವ ಪಾಠವನ್ನು ಅಧ್ಯಾಯ ಪಠ್ಯಕ್ರಮದಲ್ಲಿ ಸೇರಿಸಬೇಕಾಗಿದೆ ಅಂದಾಗಲೇ ಮಕ್ಕಳಲ್ಲಿ ಸ್ಮಾರಕಗಳ ಬಗ್ಗೆ ಸರಿಯಾದ ಪ್ರಜ್ಞೆಯು ಮೂಡಿ ಗೌರವ ಮತ್ತು ಜವಾಬ್ದಾರಿಗಳಿಂದ ನಮ್ಮ ಸಂಸ್ಕೃತಿಯನ್ನು ರಕ್ಷಿಸಿ ಕೊಳ್ಳಲು ಸಾಧ್ಯವಾಗುತ್ತದೆ.

ಇಂತಿಷ್ಟು ವಿಚಾರಗಳನ್ನು ತಮ್ಮ ಮುಂದಿಡಲು ಅವಕಾಶ ಕಲ್ಪಿಸಿಕೊಟ್ಟ ಕರ್ನಾಟಕ ಇತಿಹಾಸ ಅಕಾದೆಮಿಯ ಕಾರ್ಯಕಾರಿ ಸಮಿತಿಗೂ ತಮ್ಮೆಲ್ಲರಿಗೂ ನನ್ನ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸುತ್ತಿದ್ದೇನೆ.

ಜೈ ಭಾರತ ಜೈ ಕರ್ನಾಟಕ

ಸಂಕ್ಷಿಪ್ತ ಇತಿವೃತ್ತ

ಹೆಸರು : **ಡಾ॥ ಎಸ್.ವಿ. ವೆಂಕಟೇಶಯ್ಯ**

ಜನನ : ೮ ಏಪ್ರಿಲ್ ೧೯೫೨

ಜನ್ಮಸ್ಥಳ : ಶ್ರಾವಂಡಹಳ್ಳಿ, ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ.

ವಿದ್ಯಾರ್ಹತೆ : ಪ್ರಾಥಮಿಕ – ವಿದ್ಯಾಭ್ಯಾಸ ಶ್ರಾವಂಡಹಳ್ಳಿ ಮತ್ತು ಕೊಡಗೇನಹಳ್ಳಿ ಹೈಸ್ಕೂಲು

ಪಿಯುಸಿ – ಗೌರಿಬಿದನೂರು ಸರ್ಕಾರಿ ಕಾಲೇಜು

ಬಿ.ಎಸ್ಸಿ. – ತುಮಕೂರು ಸರ್ಕಾರಿ ಕಾಲೇಜು

ಎಂ.ಎ. – ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ಶಾಸ್ತ್ರ, ಮೈಸೂರು ವಿಶ್ವವಿದ್ಯಾನಿಲಯ

ಶಾಸನ ಶಾಸ್ತ್ರದಲ್ಲಿ ಪಿ.ಜಿ. ಡಿಪ್ಲೊಮೋ, ಮೈಸೂರು ವಿಶ್ವವಿದ್ಯಾನಿಲಯ

ಪಿಎಚ್.ಡಿ. – ಅಜಂತಾದ ಚಿತ್ರಗಳು ಒಂದು ಅಧ್ಯಯನ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ

ಉದ್ಯೋಗ : ೧೯೭೬ರಲ್ಲಿ ಮೈಸೂರು ಅರಮನೆಯಲ್ಲಿ ಗೈಡ್ ಆಗಿ ಸೇವೆ ನಂತರ ಸಹಾಯಕ ಕ್ಯುರೇಟರ್ ಆಗಿ ಬಡ್ತಿ, ೧೯೮೧ರಲ್ಲಿ ಬಸವ ಕಲ್ಯಾಣ ಕರ್ನಾಟಕ ಪ್ರಾಚ್ಯ ವಸ್ತುಸಂಗ್ರಹಾಲಯದಲ್ಲಿ ಸೇವೆ.

೧೯೮೩ ರಿಂದ ೧೯೮೫ರವರೆಗೂ ಗೌರಿಬಿದನೂರಿನ ಆಚಾರ್ಯ ಜೂನಿಯರ್ ಕಾಲೇಜಿನಲ್ಲಿ ಉಪನ್ಯಾಸಕ.

೧೯೮೫ರಲ್ಲಿ ಭಾರತೀಯ ಪುರಾತತ್ತ್ವ ಇಲಾಖೆಯಲ್ಲಿ ಡೆಪ್ಯೂಟಿ ಸೂಪರಿಟೆಂಡಿಂಗ್ ಆರ್ಕ್ಯಾಲಜಿಸ್ಟ್ ಆಗಿ ಬೆಂಗಳೂರು ಸರ್ಕಲ್‌ನಲ್ಲಿ ನೇಮಕ.

೧೯೯೪ರಲ್ಲಿ ಸೂಪರಿಟೆಂಡಿಂಗ್ ಆರ್ಕ್ಯಾಲಜಿಸ್ಟ್ ಆಗಿ ಬಡ್ತಿ, ಮುಂಬೈನ ಕಸ್ಟಮ್ಸ್‌ನಲ್ಲಿ ಸೇವೆ.

೧೯೯೭ರಲ್ಲಿ ಔರಂಗಾಬಾದ್ ಸರ್ಕಲ್‌ಗೆ ವರ್ಗಾವಣೆ.

೨೦೦೧ ರಿಂದ ೨೦೦೬ರವರೆಗೆ ಕರ್ನಾಕ ಧಾರವಾಡ ವಲಯದಲ್ಲಿ ಸೂಪರಿಟೆಂಡಿಂಗ್ ಆರ್ಕ್ಯಾಲಜಿಸ್ಟ್ ಆಗಿ ಸೇವೆ.

೨೦೦೭ ರಿಂದ ೨೦೦೮ರವರೆಗೆ ಶಾಸನ ತಜ್ಞರ ಕಚೇರಿಯಲ್ಲಿ ಸೇವೆ.

೨೦೦೯ ಜುಲೈನಿಂದ ಏಪ್ರಿಲ್ ೨೦೧೦ರವರೆಗೆ ದಕ್ಷಿಣ ವಲಯದ ರೀಜನಲ್ ಡೈರೆಕ್ಟರ್ ಆಗಿ ಸೇವೆ ಸಲ್ಲಿಸಿ ನಿವೃತ್ತಿ.

ನಿರ್ವಹಿಸಿದ ಗೌರವ ಹುದ್ದೆ :

* ಜಪಾನಿನ ಸಾಗರೋತ್ತರ ಆರ್ಥಿಕ ನಿಧಿಯ ಸಹಕಾರದೊಂದಿಗೆ ಅಜಂತಾ ಮತ್ತು ಎಲ್ಲೋರ ಅಭಿವೃದ್ಧಿಯ ಕಾರ್ಯಾಚರಣೆಯಲ್ಲಿ ಸಕ್ರಿಯ ಪಾಲ್ಗೊಳ್ಳುವಿಕೆ.
* ಪ್ರಧಾನಮಂತ್ರಿಯವರ ಯೋಜನೆ ನಿಧಿಯಿಂದ ರಾಯಘಡ ಕೋಟೆಯ ಸಂರಕ್ಷಣೆ ಮತ್ತು ಅಭಿವೃದ್ಧಿ, NCF ಅಡಿಯಲ್ಲಿ ಪುಣೆಯ 'ಶನಿವಾರ ವಾಡದ' ಅಭಿವೃದ್ಧಿ.
* ಯುನಸ್ಕೊ ಯೋಜನೆಯಡಿಯಲ್ಲಿ ಎಲಿಫಂಟಾ ಗುಹೆಗಳ ನಿರ್ವಹಣಾ ಕಾರ್ಯ.

* ೧೯೯೯-೨೦೦೦ ಅವಧಿಯಲ್ಲಿ ಅಜಂತಾದ ವಾಘೋರ ನದಿಯ ಬಲದಂಡೆಯಲ್ಲಿ (ಅಜಂತಾ ಗುಹೆಯ ಮುಂಭಾಗದಲ್ಲಿ) ಸ್ತೂಪದ ನೆಲೆಯನ್ನು ಕಂಡುಹಿಡಿದಿದ್ದು.
* ೨೦೦೨ರಲ್ಲಿ ಪಟ್ಟದಕಲ್ಲಿನ ಸಮೀಪದಲ್ಲಿ ಚಲುಕ್ಯ ದೇವಾಲಯಗಳಿಗೆ ಬಳಸಲಾಗುತ್ತಿದ್ದ ಕಲ್ಲಿನ ಗಣಿಯ ಪತ್ತೆ.
* ಪಟ್ಟದಕಲ್ಲಿನಲ್ಲಿ ಜಿನ ದೇವಾಲಯ ಮತ್ತು ಐಹೊಳೆಯ ದುರ್ಗಾ ದೇವಾಲಯದ ಮಹಾದ್ವಾರದ ಪುನರ್ ಜೋಡಣೆಯ ನಿರ್ವಹಣೆ.
* ಪಟ್ಟದಕಲ್ಲಿನಲ್ಲಿ ಚಲುಕ್ಯರಿಗೂ ಶಾತವಾಹನರಿಗೂ ಮಧ್ಯೆ ಇದ್ದ ಕೊಂಡಿಯ ಹುಡುಕಾಟಕ್ಕಾಗಿ ಉತ್ಖನನ.
* ಹಿರೇಬೆಣಕಲ್‌ನಲ್ಲಿ ಇತಿಹಾಸ ಪೂರ್ವ ಕಾಲದ ಭೇರಿ ಪತ್ತೆ ಮಾಡಿದ್ದು.
* ಚಂದೇರಿಯಲ್ಲಿ (ಮಧ್ಯಪ್ರದೇಶ) ಹುದುಗಿಹೋಗಿದ್ದ ಅರಮನೆ ಸಮೇತ ಕೊಳವನ್ನು ಕಂಡುಹಿಡಿದಿದ್ದು, ಮಧ್ಯಪ್ರದೇಶದ ಮಾಂಡುವಿನ ಲಾಲ್‌ಬಾಗ್ ಪ್ರದೇಶದಲ್ಲಿ 'ಮೊಗಲ್ ಗಾರ್ಡನ್'ನ್ನು ಕಂಡುಹಿಡಿದದ್ದು.

ಪುರಸ್ಕಾರಗಳು :

* ೨೦೦೦ನೆಯ **ಅವಾರ್ಡ್ ಆಫ್** ಎಕ್ಸಲೆನ್ಸ್.
* **ಕರ್ನಾಟಕ ರಾಜ್ಯೋತ್ಸವ ಸನ್ಮಾನ.**
* **ವಿಕ್ರಮಾದಿತ್ಯ ಪ್ರಶಸ್ತಿ,** (೨೦೦೬).
* ಯುನೆಸ್ಕೋದಿಂದ **ಲೆಟರ್ ಆಫ್ ಅಪ್ರಿಸಿಯೇಷನ್,** (೨೦೦೬).
* ಪಟ್ಟದಕಲ್ಲಿನಲ್ಲಿ ನಡೆದ ಜೀರ್ಣೋದ್ಧಾರಕ್ಕಾಗಿ ಸ್ಥಳೀಯರಿಂದ **ಚಾಳುಕ್ಯ ಕಲಾರತ್ನ** ಬಿರುದು.
* ಬೆಂಗಳೂರಿನಲ್ಲಿ ನಡೆದ ಕರ್ನಾಟಕ ಇತಿಹಾಸ ಅಕಾದೆಮಿಯ ೨೫ನೆಯ ವಾರ್ಷಿಕ **ಸಮ್ಮೇಳನದ ಸರ್ವಾಧ್ಯಕ್ಷತೆ** – ೨೦೧೧.
* ಜಿನ ದೇವಾಲಯದ ಜೀರ್ಣೋದ್ಧಾರ ಮಾಡಿದ್ದಕ್ಕೆ **'ಬೆಳ್ಳಿಯ ಕಲಶ'** ನೀಡಿ ಸನ್ಮಾನ.
* ಭಾರತದಾದ್ಯಂತ ಸ್ಥಳೀಯ, ರಾಷ್ಟ್ರೀಯ ಹಾಗೂ ಯುನೆಸ್ಕೋ ಆಯೋಜಿತ ಅನೇಕ ವಿಚಾರಗೋಷ್ಠಿಗಳಲ್ಲಿ ಭಾಗವಹಿಸಿ ವಿವಿಧ ದೇವಾಲಯಗಳ, ಬಾವಿಗಳ ಜೀರ್ಣೋದ್ಧಾರ ಮಾಡಿರುವ ವಿಶೇಷ ಪ್ರಬಂಧಗಳ ಮಂಡನೆ.

೧

ಚಳ್ಳಕೆರೆ ತಾಲ್ಲೂಕು ಕೊಂಡ್ಲಹಳ್ಳಿ ಹಟ್ಟಿಯಲ್ಲಿ ಬೃಹತ್ ಶಿಲಾಯುಗದ ನೆಲೆಯ ಶೋಧ

ಮಂಜಣ್ಣ ಪಿ.ಬಿ.* ಕೆ.ಎಸ್. ಶರತ್‌ಬಾಬು**

ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕು ಪ್ರಾಗ್ಯೈತಿಹಾಸಿಕ ದೃಷ್ಟಿಯಿಂದ ವಿಶಿಷ್ಟ ಸ್ಥಾನವನ್ನು ಪಡೆಯುತ್ತದೆ. ಚಳ್ಳಕೆರೆಯಿಂದ ವಾಯವ್ಯಕ್ಕೆ ೩೦ ಕಿ.ಮೀ. ಅಂತರದಲ್ಲಿರುವ ಕೊಂಡ್ಲಹಳ್ಳಿ ಹಟ್ಟಿ ಗ್ರಾಮ ಚಿನ್ನಹಗರಿನದಿ ಬಲದಂಡೆ ಮೇಲಿದೆ.

ಕೊಂಡ್ಲಹಳ್ಳಿ ಹಟ್ಟಿ ಪರಿಸರದಲ್ಲಿ ಒಟ್ಟು ಒಂಬತ್ತು ಬೃಹತ್ ಶಿಲಾ ಸಮಾಧಿಗಳು ಚಿನ್ನಹಗರಿ ನದಿ ಬಲ ದಂಡೆಯ ಮೇಲಿವೆ. ಕೊಂಡ್ಲಹಳ್ಳಿ ಹಟ್ಟಿಯ ಆಗ್ನೇಯಕ್ಕೆ ಎರಡು, ಈಶಾನ್ಯಕ್ಕೆ ಆರು, ನಾಯಕನಹಟ್ಟಿಯ ಉತ್ತರಕ್ಕೆ ಒಂದು ಸಮಾಧಿಗಳಿವೆ. ಇವುಗಳಲ್ಲಿ ಮೂರು ಸಮಾಧಿಗಳು ಶಿಲಾವೃತ್ತ, ಆರು ಕಲ್ಗುಪ್ಪೆ ಸಮಾಧಿಗಳು. ಇವುಗಳನ್ನು ಸ್ಥಳೀಯರು ಪಾಂಡವರ ಮಟ್ಟಿ, ಕೊಂಡ್ಲಹಳ್ಳಿ ಹಟ್ಟಿ ಮಟ್ಟಿ, ಗದುಗಿನ ತಿಪ್ಪಯ್ಯನ ಮಟ್ಟಿ ಎಂಬುದಾಗಿ ಕರೆಯುತ್ತಾರೆ. ಈ ಸಮಾಧಿಗಳ ವ್ಯಾಸ ಒಂದೇ ಆಗಿರದೆ ಬೇರೆ ಬೇರೆ ಆಗಿರುವುದು ವಿಶೇಷವಾಗಿದೆ. ಇವುಗಳಲ್ಲಿ ನಾಲ್ಕು ಸಮಾಧಿಗಳು ೪೦x೪೦ ಅಡಿ, ಮೂರು ೨೦x೨೦ ಅಡಿ, ಮತ್ತೊಂದು ಸಮಾಧಿ ೧೫x೧೫ ಅಡಿ ಒಂದು ೫x೫೦ ಅಡಿ ವ್ಯಾಸ ಹೊಂದಿದೆ. ಇವುಗಳಲ್ಲಿ ಮೂರು ಸಮಾಧಿಗಳನ್ನು ಎರಡರಿಂದ ಮೂರು ಅಡಿ ಎತ್ತರದ ಮಣ್ಣಿನ ಗುಡ್ಡೆಯ ಮೇಲೆ ಕಲ್ಲುಗಳನ್ನು ವೃತ್ತಾಕಾರವಾಗಿ ಇಟ್ಟು ಸಮಾಧಿ ಮಾಡಲಾಗಿದೆ. ಕೊಂಡ್ಲಹಳ್ಳಿ ಹಟ್ಟಿಯ ಈಶಾನ್ಯಕ್ಕಿರುವ ಆರು ಕಲ್ಗುಪ್ಪೆ ಸಮಾಧಿಗಳು ತುಂಬಾ ವಿಶೇಷವಾಗಿವೆ. ಇವು ಒಂದೇ ವ್ಯಾಸವಾಗಿರದೆ ಬೇರೆ ಬೇರೆಯಾಗಿದ್ದು ನೆಲದ ಮೇಲೆ ಎರಡರಿಂದ ಮೂರು ಅಡಿ ಎತ್ತರವಿದ್ದು ಸ್ಥಳೀಯವಾಗಿ ದೊರೆಯುವ ಚಿಕ್ಕ ಕಲ್ಲುಗಳನ್ನು ಬಳಸಿ ಸಮಾಧಿ ಮಾಡಲಾಗಿದೆ. ಇವುಗಳ ಮಧ್ಯೆ ವಿಶಾಲವಾದ ಬಯಲಿರುವುದು ವಿಶೇಷವಾಗಿದೆ. ಇದರಲ್ಲಿ ಎರಡು ಸಮಾಧಿಗಳನ್ನು ನಿಧಿಗಳ್ಳರು ಅಗೆದಿದ್ದು, ಅಲ್ಲಿ ಕಪ್ಪು ಬಣ್ಣದ ಮಡಕೆ ಚೂರುಗಳು ದೊರೆತಿವೆ. ಈ ರೀತಿಯ ಸಮಾಧಿಗಳು ಅದೇ ಪರಿಸರದ ಕೂನಬೇವು, ಚಿಪ್ಪಿನಕೆರೆ, ಬ್ರಹ್ಮಗಿರಿ, ನೆರೆನಹಾಳು ಪರಿಸರದಲ್ಲೂ ದೊರೆತಿವೆ.

ಎಂ.ಹೆಚ್. ಕೃಷ್ಣ, ಮಾರ್ಟಿಮ್ಹರ್ ವೀಲ್ಹರ್ ಬ್ರಹ್ಮಗಿರಿ ಮತ್ತು ಚಂದ್ರವಳ್ಳಿಗಳಲ್ಲಿ ನಡೆಸಿದ ಉತ್ಖನನಗಳಲ್ಲಿ ದೊರೆತ



ಅವಶೇಷಗಳಿಂದ ಹಾಗೂ ಚಿತ್ರದುರ್ಗ ತಾಲ್ಲೂಕು ಕೂನಬೇವು, ಚಿಪ್ಪಿನಕೆರೆಯಲ್ಲಿ ಎಸ್.ವೈ. ಸೋಮಶೇಖರ್ ಶೋಧಿಸಿದ ಪ್ರಾಕ್ಚಾರಿತ್ರಿಕ ಕುರುಹುಗಳು ಈ ನೆಲೆಗೆ ಹೋಲಿಕೆ ಆಗುವುದರಿಂದ ಈ ಪ್ರದೇಶವು ಬೃಹತ್ ಶಿಲಾಯುಗ ಅಥವಾ ಕಬ್ಬಿಣ ಯುಗ ಕಾಲಕ್ಕೆ ಸೇರಿದ ನೆಲೆಯಾಗಿರಬಹುದೆಂದು ತರ್ಕಿಸಬಹುದಾಗಿದೆ.

ಆಧಾರಸೂಚಿ

೧. ಷೇಕ್ ಅಲಿ.ಬಿ [ಪ್ರ.ಸಂ], ೧೯೯೭, **ಕರ್ನಾಟಕ ಚರಿತ್ರೆ, ಸಂಪುಟ** ೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨. ಶಿವತಾರಕ್ ಕೆ.ಬಿ, ೨೦೦೧, **ಕರ್ನಾಟಕದ ಪುರಾತತ್ತ್ವ ನೆಲೆಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩. **ಇತಿಹಾಸ ಮತ್ತು ಪುರಾತತ್ತ್ವ, ಕನ್ನಡ ವಿಷಯ ವಿಶ್ವಕೋಶ,** ೨೦೦೯, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೪. ಗೋಪಾಲ್ ಆರ್. [ಸಂ]., ೨೦೦೫, **ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ತ್ವ,** ಕರ್ನಾಟಕ ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ.

೫. ಕ್ಷೇತ್ರ ಕಾರ್ಯದ ವರದಿ.

* ಪಿಎಚ್.ಡಿ., ಸಂಶೋಧನಾರ್ಥಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ-೫೮೩೨೭೬.

** ಕಲ್ಲೂನಬೇವು, ಚಿತ್ರದುರ್ಗ ತಾಲ್ಲೂಕು-೫೭೭೫೧೭.

ಪ್ರಾಗೈತಿಹಾಸಿಕ ಕುರುಹುಗಳ ಶೋಧ (ಹಿರಿಯೂರು ತಾಲ್ಲೂಕು)

ಕೆ.ಎಸ್. ಶರತ್‌ಬಾಬು*

ಚಿತ್ರದುರ್ಗ-ಬೆಂಗಳೂರು ಹೆದ್ದಾರಿಯ ಬಲಭಾಗಕ್ಕೆ ೨೦ ಕಿ.ಮೀ. ದೂರದಲ್ಲಿರುವುದೇ ಹಿರಿಯೂರು ತಾಲ್ಲೂಕಿಗೆ ಸೇರಿದ ಐತಿಹಾಸಿಕ ಪಾಲವ್ವನಹಳ್ಳಿ. ಹೆಸರೇ ಸೂಚಿಸುವಂತೆ 'ಪಾಲವ್ವ' ಎನ್ನುವ ನಾಗತಿ ವಾಸವಾಗಿದ್ದರಿಂದ 'ಪಾಲವ್ವನಹಳ್ಳಿ' ಎಂದು ಹೆಸರು ಬಂದಿದೆ. ಈ ಗ್ರಾಮದಲ್ಲಿ ಸಾವಿರಾರು ಜನರು ಧಾರ್ಮಿಕ ಸಹಿಷ್ಣುತೆ ಯಿಂದ ಲಕ್ಷ್ಮೀನರಸಿಂಹ ಜಾತ್ರೆಯನ್ನು ಆಚರಿಸಿಕೊಂಡು ಬರುತ್ತಿದ್ದಾರೆ. ಪಶ್ಚಿಮಕ್ಕೆ ಇರುವ ಬೆಟ್ಟ ಸಾಲುಗಳು, ಕುರುಮರಡಿಕೆರೆ, ಸಿದ್ದವ್ವನಹಳ್ಳಿ ಕೆರೆ, ಬೆಟ್ಟಗಳಲ್ಲಿ ಸಿಗುವ ಕಬ್ಬಿಣದ ನಿಕ್ಷೇಪಗಳು ಪಾಲವ್ವನಹಳ್ಳಿ ಪರಿಸರವನ್ನು ಶ್ರೀಮಂತ ಗೊಳಿಸಿದೆ. ಗ್ರಾಮದ ಹೊರಭಾಗದಲ್ಲಿರುವ ಲಕ್ಷ್ಮೀನರಸಿಂಹ ದೇವಸ್ಥಾನ ಹಾಗೂ ತಿಮ್ಮಣ್ಣನಾಯಕನ ಶಾಸನ ಐತಿಹಾಸಿಕ ಸ್ಮಾರಕಗಳು.

ಪ್ರಸ್ತುತ ನವಶಿಲಾಯುಗದ ಕಲ್ಲಿನ ಕೊಡಲಿಗಳನ್ನು ಬೃಹತ್ ಶಿಲಾಗೋರಿಗಳನ್ನು ಸ್ನೇಹಿತ ಹರ್ಷವರ್ಧನ ಜೊತೆಗೆ ಶೋಧಿಸಿ ಪತ್ತೆ ಮಾಡಿದ್ದೇವೆ. ಈ ಹಿಂದೆ ಎಸ್.ವೈ. ಸೋಮಶೇಖರ್, ಎಸ್. ತಿಪ್ಪೇಸ್ವಾಮಿ ಮತ್ತು ತಂಡದವರು ನೆರೆನಾಳ್ ಪರಿಸರದಲ್ಲಿ ಬೃಹತ್ ಶಿಲಾಗೋರಿಯನ್ನು, ಶಾತವಾಹನರ ನೆಲೆಯನ್ನು ಹಾಗೂ ಕುರುಮರಡಿಕೆರೆಯಲ್ಲಿ ನವಶಿಲಾಯುಗದ ಕಲ್ಲಿನ ಕೊಡಲಿ ಶೋಧಿಸಿ ಬೆಳಕಿಗೆ ತಂದಿದ್ದರು. ಇವರು ಮಾಡಿದ ಶೋಧದ ದಾರಿಯಲ್ಲಿ ಸಾಗಿದಾಗ ಹೊಸ ಅವಶೇಷಗಳು ದೊರಕಿದವು. ಅವುಗಳನ್ನು ವಿಶ್ಲೇಷಣೆ ಮಾಡಿ ಪ್ರಸ್ತುತಪಡಿಸಲಾಗಿದೆ.

ಪ್ರಾಗೈತಿಹಾಸಿಕ ಕಾಲಘಟ್ಟದಲ್ಲಿ ನವಶಿಲಾಯುಗ ಮತ್ತು ಬೃಹತ್ ಶಿಲಾಯುಗವನ್ನು ನನ್ನ ಅಧ್ಯಯನದಲ್ಲಿ ವಿವರಿಸಲಾಗಿದೆ. ನವಶಿಲಾಯುಗದ ಮಾನವನು ಈ ಹಿಂದಿನ ಮಾನವನಿಗಿಂತ ಭಿನ್ನವಾಗಿ ಬದುಕಿದ್ದರಿಂದ ನವಶಿಲಾಯುಗ ಎಂತಲೂ, ಹೆಚ್ಚಾಗಿ ನಯವಾದ ಕಲ್ಲಿನ ಕೊಡಲಿ ಬಳಸಿದ್ದರಿಂದ ಕಲ್ಲಿನ-ಕೊಡಲಿ ಸಂಸ್ಕೃತಿ ಎಂದೂ ಕರೆಯಲಾಗಿದೆ. ಈ ಮಾನವರ ನೆಲೆಗಳನ್ನು ಉದ್ಯಮನೆಲೆ, ವಸತಿ ನೆಲೆಗಳೆಂದು ವಿಭಾಗಿಸಲಾಗಿದೆ. ಕರ್ನಾಟಕದಲ್ಲಿ ೧೮೭೨ರ ನಂತರ ಸಾಕಷ್ಟು ನೆಲೆಗಳು ಶೋಧಗೊಂಡಿವೆ. ಅಂತಹವುಗಳಲ್ಲಿ ಬ್ರಹ್ಮಗಿರಿ, ಮಸ್ಕಿ, ಪಿಕ್ಲಿಹಾಳ್, ತೆಕ್ಕಲಕೋಟೆ, ಕುಪ್ಪಗಲ್, ಹಳ್ಳೂರು, ಟಿ. ನರಸಿಪುರ, ಮುಂತಾದ ನೆಲೆಗಳು ಉತ್ಖನನಕ್ಕೆ ಒಳಗಾಗಿವೆ. ಇದರ ಫಲವಾಗಿ ನವಶಿಲಾಯುಗದ ಮಾನವರ ಸಂಸ್ಕೃತಿಯನ್ನು ಕಟ್ಟಿಕೊಡಲು ಹಾಗೂ ಮುಂದಿನ ಸಂಶೋಧನೆಗಳಿಗೆ ವಸ್ತುವನ್ನು ಒದಗಿಸಲು ಸಾಧ್ಯವಾಗಿದೆ.

ಪ್ರಸ್ತುತ ಪಾಲವ್ವನಹಳ್ಳಿಯ ಪೂರ್ವಕ್ಕೆ ಎರಡು ಕಿ.ಮೀ. ದೂರ ಸಾಗಿದರೆ ಕಲ್ಲುಗಣಿಯಿಂದ ನಾಶವಾಗುತ್ತಿರುವ ಬೂದಿಹೊಲ ಕಂಡುಬಂದಿತು. ಈ ನೆಲೆಯು ಸುಮಾರು ೫ ಎಕರೆ ವಿಸ್ತಾರವಾಗಿದ್ದು, ಶೋಧನೆ ಮಾಡುವಾಗ ಇತಿಹಾಸ ಆರಂಭಿಕ ಕಾಲದ ಮಡಕೆ ಚೂರುಗಳು ಮೊದಲಿಗೆ ಕಂಡು ಬಂದವು. ತರುವಾಯ ಸಿಕ್ಕಿದ್ದು ಕ್ರಿ.ಪೂ. ಸು. ೧೮೦೦ ವರ್ಷಗಳ ಹಿಂದಿನ ಕಲ್ಲಿನ ಕೊಡಲಿ. ಈ ಕಲ್ಲಿನ ಕೊಡಲಿ ಯನ್ನು ಸರ್ಕಾರಿ ಕಲಾಕಾಲೇಜು ಚಿತ್ರದುರ್ಗಕ್ಕೆ ನೀಡಿ ಸಂರಕ್ಷಿಸಲಾಗಿದೆ. ಇಂತಹದೇ ಕಲ್ಲಿನ ಕೊಡಲಿಗಳು ಪಾಲವ್ವನಹಳ್ಳಿಯ ಮಾರಮ್ಮನ ಗುಡಿಯಲ್ಲಿ ಪೂಜೆಗೆ ಒಳಪಟ್ಟಿರುವುದನ್ನು ಗುರುತಿಸಿದ್ದೇವೆ. ಕಲ್ಲಿನ ಕೊಡಲಿಗಳು ೦೯ ಇಂಚು ಉದ್ದ, ೪ ಇಂಚು ದಪ್ಪವಿದ್ದು ತ್ರಿಭುಜಾಕೃತಿಯಲ್ಲಿ ರಚಿತಗೊಂಡಿವೆ. ಕೊಡಲಿಗಳ ತಳಭಾಗ ಹರಿತವಾಗಿದ್ದು, ಮೇಲ್ಭಾಗ ಕಿರಿದಾದ ಹಿಡಿಕೆಯನ್ನು ಹೊಂದಿದೆ. ನುಣುಪಾಗಿ ಹೊಳೆಯುತ್ತಿರುವುದರಿಂದ ತಯಾರಿಕೆ ವಿಧಾನದ ನಾಲ್ಕನೇ ಹಂತವೆಂದೇ ಹೇಳಬಹುದು. ಇವುಗಳನ್ನು ಗಿಡ ಕಡಿಯಲು, ಚರ್ಮ ಕತ್ತರಿಸಲು ಬಳಸಿರಬಹುದು. ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ಬೂದಿಹೊಲದಲ್ಲಿ ಸಾಂಸ್ಕೃತಿಕ ಅವಶೇಷಗಳು ಅಡಗಿವೆ ಎಂದು ತಿಳಿದುಬರುವುದು. ಪುರಾತತ್ತ್ವ ಇಲಾಖೆ ಉತ್ಖನನ ಮಾಡಿದರೆ ನವಶಿಲಾಯುಗ, ಬೃಹತ್ ಶಿಲಾಯುಗ ಹಾಗೂ ಚಾರಿತ್ರಿಕ ಶಿಲಾಯುಗ, ಸಾಂಸ್ಕೃತಿಕ ಸ್ತರಗಳು ಸಿಗುವ ಸಾಧ್ಯತೆಗಳಿವೆ.

ನೂತನ ಶಿಲಾಯುಗದ ಮಾನವರು ಕಲ್ಲಿನ ಕೊಡಲಿಯಿಂದ ಸಮಗ್ರ ಕೃಷಿ ಅಸಾಧ್ಯವೆಂದು, ಕಬ್ಬಿಣವನ್ನು ಆವಿಷ್ಕಾರ

* ಇತಿಹಾಸ ಸಂಶೋಧಕ, ಕೂನಬೇವು, ಚಿತ್ರದುರ್ಗ ತಾಲ್ಲೂಕು, ಜಿಲ್ಲೆ-೫೭೭೫೧೭

ಮಾಡಿಕೊಂಡಿದ್ದರಿಂದ ಕಬ್ಬಿಣ ಯುಗವೆಂದು ಕರೆಯಲಾಗಿದೆ. ಇದೇ ಮಾನವ ಬೃಹತ್ ಆದ ಕಲ್ಲುಗಳನ್ನು ಬಳಸಿಕೊಂಡು ಮಾನವ ಶಕ್ತಿಯಿಂದ ೧೦ಕ್ಕೂ ಹೆಚ್ಚು ಮಾದರಿಯಲ್ಲಿ ಸಮಾಧಿಗಳನ್ನು ರಚಿಸಿದನು. ಈ ಕಾರಣದಿಂದ ಬೃಹತ್ ಶಿಲಾಯುಗವೆಂದು ಕರೆಯಲಾಗುತ್ತಿದೆ. ಚಕ್ರದ ಸಹಾಯದಿಂದ ಕಪ್ಪು ಮತ್ತು ಕೆಂಪು ವರ್ಣದ ಮಡಕೆಗಳನ್ನು ತಯಾರಿಸಿ ಗಮನ ಸೆಳೆದಿದ್ದಾರೆ. ಕರ್ನಾಟಕದಲ್ಲಿ ಮೊದಲಿಗೆ ಮೆಡೋಸ್ ಟೇಲರ್ ಗುಲ್ಬರ್ಗ, ಬಳ್ಳಾರಿ, ರಾಯಚೂರು, ಪ್ರದೇಶಗಳಲ್ಲಿ ಶೋಧಿಸಿದರು. ಕ್ರಿಶ. ೧೯೪೭-೪೮ ರಲ್ಲಿ ವೀಲರ್ ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿಯಲ್ಲಿ ಉತ್ಖನನ ಮಾಡಿದ ನಂತರ ಕಬ್ಬಿಣಯುಗದ ಮಾನವರ ಸಾಂಸ್ಕೃತಿಕ ಚಟುವಟಿಕೆಯನ್ನು



ನವಶಿಲಾಯುಗದ ಕಲ್ಲಿನ ಕೊಡಲಿ
ಮಾರಮ್ಮನ ಗುಡಿ, ಪಾಲವ್ವನಹಳ್ಳಿ

ತಿಳಿಯಲು ಸಾಧ್ಯವಾಯಿತು. ಈ ಶೋಧಗಳು ಪ್ರಸ್ತುತ ಕಬ್ಬಿಣ ಯುಗದ ಬೃಹತ್ ಶಿಲಾ ಸಮಾಧಿಗಳನ್ನು ಗುರುತಿಸಲು ಸಾದ್ಯವಾಗಿದೆ. ಕಾಲಮಾನ ದೃಷ್ಟಿಯಿಂದ ಕ್ರಿಪೂ. ಸು. ೧೦೨೦-೨೫೦ ಎಂದು ಗುರುತಿಸಲಾಗಿದೆ.

ಪಾಲವ್ವನಹಳ್ಳಿ ಗ್ರಾಮದ ಒಳಭಾಗದಿಂದ ಪಶ್ಚಿಮಕ್ಕೆ ಎರಡು ಕಿ.ಮೀ. ದೂರ ಸಾಗಿದರೆ ಕುರುಮರಡಿಕೆರೆ ಸಿಗುವುದು. ಈ ಕೆರೆಯ ಮುಂಭಾಗ ಕಲ್ಲುಗುಡ್ಡ ಮತ್ತು ದೇವರಗುಡ್ಡವಿದ್ದು, ಕೆರೆಗೆ ಅಡ್ಡವಾಗಿ ನಿಂತಿವೆ. ಗಿಡಗಂಟೆಗಳಿಂದ ಕೂಡಿದ ಪೊದೆಗಳನ್ನು ಸರಿಸಿ ನೋಡಿದಾಗ ಕಬ್ಬಿಣಯುಗದ ಬೃಹತ್ ಶಿಲಾಸಮಾಧಿಗಳು ದೊರಕಿದವು. ೨೦ಕ್ಕೂ ಹೆಚ್ಚು ಶಿಲಾ ಸಮಾಧಿಗಳಿದ್ದು, ವೃತ್ತಾಕಾರವಾಗಿವೆ. ಸಾಕಷ್ಟು ಸಮಾಧಿಗಳು ಅಳಿವಿನ ಅಂಚಿನಲ್ಲಿದ್ದು, ಉಳಿದವುಗಳು ಸ್ಪಷ್ಟವಾಗಿ ಕಾಣ ಸಿಗುತ್ತವೆ. ಶಿಲಾವೃತ್ತ ಸಮಾಧಿಗಳನ್ನು ಎರಡು ಅಡಿ ಎತ್ತರವುಳ್ಳ ಕಬ್ಬಿಣ ಮಿಶ್ರಿತ ಕಲ್ಲುಗಳನ್ನು ಬಳಸಿಕೊಂಡು ವೃತ್ತಾಕಾರವಾಗಿ ಜೋಡಿಸಿ ಮಧ್ಯೆ ದಿನ್ನೆ ಬರುವಂತೆ ನಿರ್ಮಿಸಿದ್ದಾರೆ. ಇದೇ ರೀತಿಯಾದ ಸಮಾಧಿಗಳನ್ನು ದೇವರಗುಡ್ಡದಲ್ಲಿ ಸಹ ಕಾಣಬಹುದು.



ಕಬ್ಬಿಣಯುಗದ ಶಿಲಾಸಮಾಧಿ
ಕುರುಮರಡಿಕೆರೆ (ಕಲ್ಲು ಗುಡ್ಡ)

ಒಟ್ಟಾಗಿ ಪಾಲವ್ವನಹಳ್ಳಿ ಪರಿಸರದಲ್ಲಿ ನವಶಿಲಾಯುಗದಿಂದ ಚಾರಿತ್ರಿಕ ಕಾಲದವರೆಗೂ ಪ್ರಾಚ್ಯಾವಶೇಷಗಳು ಕಂಡುಬಂದಂತಾಗಿದೆ. ಪ್ರಸ್ತುತ ಶಿಲಾ ಸಮಾಧಿ ನೆಲೆಗಳಿಗೆ ದೇವರ ಗುಡ್ಡ, ಕಲ್ಲುಗುಡ್ಡ ಎಂದು ಕರೆದಿರುವುದು ವಿಶೇಷ. ಬೂದಿ ಹೊಲದಲ್ಲಿ ಐತಿಹಾಸಿಕ ಅವಶೇಷಗಳು ಸಿಗುವುದರಿಂದ ಮತ್ತಷ್ಟು ಸೂಕ್ಷ್ಮ ಅಧ್ಯಾಯನಕ್ಕೆ ಅಳವಡಿಸುವ ಅಗತ್ಯತೆಯಿದೆ. ಪ್ರಸ್ತುತ ನೆಲೆಗಳು ಗಣಿಗಾರಿಕೆಯಿಂದ ನಾಶವಾಗುತ್ತಿವೆ. ಆದ್ದರಿಂದ ಪುರಾತತ್ತ್ವ ಇಲಾಖೆ ಗಮನಿಸಬೇಕು.

ಆಧಾರಸೂಚಿ

೧. ಅ. ಸುಂದರ (ಸಂ), **ಇಂಡಿಯನ್ ಪ್ರೀ ಹಿಸ್ಟರಿ ಅಂಡ್ ಪ್ರೋಟೋ ಹಿಸ್ಟರಿ**, ಹೊಸಪೇಟೆ, ೨೦೦೪.

೨. ಅ. ಸುಂದರ (ಸಂ), **ಕರ್ನಾಟಕ ಪ್ರಾಗೈತಿಹಾಸಿಕ ಅಥವಾ ಇತಿಹಾಸ ಪೂರ್ವ ಕಾಲ**, ಐ.ಬಿ.ಹೆಚ್. ಪ್ರಕಾಶನ, ಬೆಂಗಳೂರು, ೧೯೭೧.

೩. **ಇತಿಹಾಸ ದರ್ಶನ** ಸಂಪುಟ-೨೩, ಇತಿಹಾಸ ಅಕಾದೆಮಿ, ಬೆಂಗಳೂರು, ೨೦೦೮.

೪. **ಎಪಿಗ್ರಾಫಿಯ ಕರ್ನಾಟಿಕ**-೧೧ (ರೈಸ್), ಹಿರಿಯೂರು-೭, ೧೯೦೩.

೫. ಎಸ್.ವೈ. ಸೋಮಶೇಖರ್ ಮತ್ತು ತಂಡ, ನವಶಿಲಾಯುಗದ ಕಲ್ಲಿನ ಕೊಡಲಿ ಪತ್ತೆ, **ಪ್ರಜಾವಾಣಿ**, ೧೯/೦೫/೨೦೦೮.

೬. ಕೆ.ಬಿ. ಶಿವತಾರಕ್ (ಸಂ), **ಕರ್ನಾಟಕದ ಪುರಾತತ್ತ್ವ ನೆಲೆಗಳು**, ಕನ್ನಡ ವಿ.ವಿ. ಪ್ರಸಾರಾಂಗ, ಹಂಪಿ, ೨೦೦೧.

૨


ಚಿಕ್ಕಮಗಳೂರು ಜಿಲ್ಲೆ ಕೊಪ್ಪ ತಾಲ್ಲೂಕಿನ ಬೃಹತ್ ಶಿಲಾಯುಗ ಸಂಸ್ಕೃತಿಯ ಗೋರಿಗಳ ಕುರಿತು ವಿವೇಚನೆ

ಶೇಷೇಶ್ವರ.ಆರ್.*

ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲ್ಲೂಕಿನಲ್ಲಿ ಜಿ.ಆರ್. ಸುಂದರರವರು ಕಂಡು ಹಿಡಿದ ಬೆಳುವನ ಕುಡಿಗೆ ಬಿಟ್ಟರೆ ಚಿಟ್ಟೆಮಕ್ಕಿ ರಸ್ತೆಯಲ್ಲಿ ಕಂಡು ಬರುವ ಈ ಬೃಹತ್ ಶಿಲಾಯುಗ ಸಮಾಧಿಗಳು ೨ನೆಯವು ಎಂದು ಹೇಳಬಹುದು.

ಈ ನೆಲೆಯು ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲ್ಲೂಕಿನ (ಭುವನಕೋಟೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ) ದಯಂಬಳ್ಳಿ ಗ್ರಾಮದ ಹೊಸಹಳ್ಳಿ ಕನ್ನೆಮಡ್ಲು ಮತ್ತು ಚಿಟ್ಟೆಮಕ್ಕಿ ಬಸ್ ನಿಲ್ದಾಣದಿಂದ ಹೊರಡುವ ಸಣ್ಣ ರಸ್ತೆಯ ಇಕ್ಕೆಲಗಳಲ್ಲಿ ಕಂಡು ಬರುತ್ತದೆ. ಸದರಿ ಸ್ಥಳ ಕೊಪ್ಪದಿಂದ ಸುಮಾರು ೨೪ ಕಿ.ಮೀ. ದೂರದಲ್ಲಿ ಕೊಪ್ಪ – ಜಯಪುರ ರಸ್ತೆಯ ಬಲಬದಿಯಲ್ಲಿದೆ. ಹೊಸಳ್ಳಿ ಗ್ರಾಮದ ಚಿಟ್ಟೆಮಕ್ಕಿ ರಸ್ತೆ ನಿರ್ಮಿಸಲು ಜೆ.ಸಿ.ಬಿ ಯಂತ್ರವನ್ನು ಬಳಸಿ ನೆಲ ಸಮತಟ್ಟು ಮಾಡುತ್ತಿದ್ದ ಸಮಯದಲ್ಲಿ ಈ ಕೆಲವು ಕಲ್ಗೋರಿಗಳು ಪತ್ತೆಯಾಗಿದ್ದವು, ದಟ್ಟ ಅರಣ್ಯದ ನಡುವೆ ಇವುಗಳು ಕಂಡು ಬರುತ್ತವೆ, ಅಲ್ಲಿ ವಿಸ್ತೃತವಾದ ಕ್ಷೇತ್ರ ಅಧ್ಯಯನ ಕೈಗೊಂಡಾಗ ಅದರಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಗೆ ಸಂಬಂಧಿಸಿದ ಕೆಂಪು ಮತ್ತು ಕಪ್ಪು ಬಣ್ಣದ ಮೃತ್ ಪಾತ್ರೆಗಳು ಹಾಗೂ ಕೆಲವು ಕಬ್ಬಿಣದ ಆಯುಧಗಳು ಪತ್ತೆಯಾಗಿದ್ದು ಮೂವತ್ತಕ್ಕೂ ಹೆಚ್ಚು ಶಿಲಾಗೋರಿಗಳು ಕಂಡುಬಂದಿವೆ. ಆದರೂ ಈಗ ಬೆಳಕಿಗೆ ಬಂದಿರುವ (ಜೆ.ಸಿ.ಬಿ ಅಗೆತದಿಂದ) ಗೋರಿಗಳನ್ನು





ಪರಿಶೀಲಿಸಲಾಗಿ ಅವು ಬೃಹತ್ ಶಿಲಾಯುಗದ ಕೋಣೆ ಗೋರಿಗಳ ಮಾದರಿಗಳ ಗೋರಿಗಳು ಎಂದು ಹೇಳಬಹುದು, ಆಯತಾಕಾರದಲ್ಲಿ ನಿರ್ಮಿಸಲಾಗಿರುವ ಈ ಗೋರಿಗಳು ನಾಲ್ಕು ಕಡೆ ಕಣಶಿಲೆಯ ಹಲಗೆಗಳನ್ನು ಜೋಡಿಸಿ ಕೊಠಡಿಯಾಕಾರದಲ್ಲಿ ನಿರ್ಮಿಸಲಾಗಿವೆ. ಈ ಗೋರಿಗಳ ಅಳತೆ ೨.೧೦ X ೧.೫೦ X ೧.೧೦ಮೀ ಗಳಿದ್ದು ಕೋಣೆಯ ಮೇಲೆ ಸ್ವಾಭಾವಿಕ ಕಣಶಿಲೆಯ ಹಲಗೆಗಳಿಂದ ಮುಚ್ಚಲಾಗಿದೆ.

ಪ್ರಸ್ತುತ ದೊರಕಿರುವ ಈ ಮೃತ್ ಪಾತ್ರೆಗಳು ಹಾಗೂ ಆಯುಧದ ಆಧಾರದ ಮೇಲೆ ಈ ಗೋರಿಗಳ ಕಾಲವನ್ನು ಕ್ರಿ.ಪೂ ೮೦೦–೧೦೦ ಅಸುಪಾಸೆಂದು ಅಂದಾಜಿಸಲಾಗಿದೆ. ಇಲ್ಲಿರುವ ಕೆಲವು ಕಲ್ಲು ಚಪ್ಪಡಿಗಳನ್ನು ಸ್ಥಳೀಯರು ಮನೆಗಳಿಗೆ ಉಪಯೋಗಿಸಿಕೊಂಡಿರುವುದು ಕಂಡುಬರುತ್ತದೆ.

ಆಧಾರಸೂಚಿ

೧. ಕ್ಷೇತ್ರ ಕಾರ್ಯದಲ್ಲಿ ಸಹಕರಿಸಿದ ಹಾಗೂ ಲೇಖನ ರಚಿಸಲು ಮಾರ್ಗದರ್ಶಕರಾದ ಡಾ. ಜಗದೀಶ ಮತ್ತು ಡಾ. ಎಸ್.ಜಿ. ಸಾಮಕ್ ಇವರುಗಳಿಗೆ ನಾನು ಅಭಾರಿಯಾಗಿರುತ್ತೇನೆ.

೨. ಸಂಗ್ರಹಿಸಿದ ಪ್ರಾಚ್ಯಾವಶೇಷಗಳನ್ನು ಈಗ ಶಿವಪ್ಪನಾಯಕ ಅರಮನೆ ಶಿವಮೊಗ್ಗ ಇಲ್ಲಿನ ವಸ್ತುಸಂಗ್ರಹಾಲಯದಲ್ಲಿ ಸಂರಕ್ಷಿಸಿಡಲಾಗಿದೆ.

* ಕ್ಯೂರೇಟರ್. ಶ್ರೀಮತಿ ಬಾಯಿ ಸ್ಮಾರಕ ಸರ್ಕಾರಿ ವಸ್ತುಸಂಗ್ರಹಾಲಯ ಮತ್ತು ಪರಂಪರೆ ಇಲಾಖೆ. ಬಿಜೈ, ಮಂಗಳೂರು-೫೭೫೦೦೪

೪

ಪಾವಗಡ ತಾಲ್ಲೂಕಿನಲ್ಲಿ ಇತ್ತೀಚೆಗೆ ದೊರೆತ ಕೆಲವು ಪ್ರಾಗೈತಿಹಾಸದ ನೆಲೆಗಳು

ರವೀಶ್ ಜಿ.ಎನ್.*

ಪಾವಗಡ ತಾಲ್ಲೂಕು ತುಮಕೂರು ಜಿಲ್ಲೆಯಲ್ಲಿದ್ದು, ಈಗಾಗಲೇ ಇಲ್ಲಿ ಹಲವು ಪ್ರಾಗೈತಿಹಾಸ ಕಾಲದ ನೆಲೆಗಳನ್ನು ವಿವಿಧ ಕಾಲಘಟ್ಟದ ಸಂಸ್ಕೃತಿಗಳೆಂದು ವಿಂಗಡಿಸಿ ಶೋಧಿಸಲಾಗಿದೆ. ಯಲ್ಲಪ್ಪನಾಯಕನ ಹಳ್ಳಿಯಲ್ಲಿ ಆದಿ ಹಳೇ ಶಿಲಾಯುಗ, ನಿಡುಗಲ್ಲಿನಲ್ಲಿ ಮಧ್ಯ ಹಳೇ ಶಿಲಾಯುಗ, ನಾಗಲಾಪುರದಲ್ಲಿ ಅಂತ್ಯ ಮತ್ತು ಸೂಕ್ಷ್ಮತೆಯುಗ, ಬೂದಿಬೆಟ್ಟ, ನವಶಿಲಾಯುಗ, ಕಣಿಕಲಬಂಡೆ, ಬೃಹತ್ ಶಿಲಾಯುಗ, ಪಾವಗಡ ಇತಿಹಾಸ ಆರಂಭ ಕಾಲ ಎಂದು ಇನ್ನು ಹಲವು ನೆಲೆಗಳನ್ನು ಶೋಧಿಸಲಾಗಿದೆ.

ಪಾವಗಡ ತಾಲ್ಲೂಕಿನಲ್ಲಿ ಇತ್ತೀಚಿನ ಹಲವು ಸ್ಥಳಗಳ ಅನ್ವೇಷಣೆಯಲ್ಲಿ ಕೆಲವು ನೆಲೆಗಳು ಪತ್ತೆಯಾಗಿವೆ.

ಕನ್ನಮೇಡಿ : ಇದು ಪಾವಗಡ ತಾಲ್ಲೂಕಿನ ಕಸಬಾ ಹೋಬಳಿಯಲ್ಲಿದ್ದು, ಪಾವಗಡದಿಂದ ಸುಮಾರು ೧೬ ಕಿ.ಮೀ. ದೂರದಲ್ಲಿದೆ. ಕನ್ನ ಮೇಡಿ ಬೆಟ್ಟದ ತಪ್ಪಲಿನಲ್ಲಿ ವೆಂಕಾವಧೂತ ಸ್ವಾಮಿ ಗುಹೆಗೆ ಹೋಗುವ ದಾರಿಯಲ್ಲಿ ನವಶಿಲಾಯುಗದ ವಸತಿ ನೆಲೆಯಿದ್ದು, ಸಗಣಿಯ ಕಿಟ್ಟ ಅಥವಾ ಬೂದಿಯ ದಿನ್ನೆಯು ಸುಮಾರು ಮೂರು ಎಕರೆಯಲ್ಲಿ ಹರಡಿಕೊಂಡಿದೆ. ಈ ನೆಲೆಯಲ್ಲಿ ನವಶಿಲಾಯುಗಕ್ಕೆ ಸಂಬಂಧಿಸಿದ ಕೈಗೊಡಲಿ, ಸುತ್ತಿಗೆ, ಹೆರೆಚಕ್ಕೆ, ಕಲ್ಲಿನ ಜಿಲ್ಲೆ, ಕವಣೆಕಲ್ಲು, ರೆಡ್ ಓಕರ್ ಸ್ಟೋನ್ ಮೊದಲಾದ ಉಪಕರಣಗಳು ಹಾಗೂ ಬೂದು, ಕಂದುಬಣ್ಣ, ನುಣುಪುಗೊಳಿಸಿದ ಬೂದು ಬಣ್ಣದ ಮೃತ್‌ಪಾತ್ರೆಗಳು ದೊರೆಯುತ್ತವೆ. ಮಡಕೆ ತಯಾರಿಕೆಗೆ ಬಳಸುತ್ತಿದ್ದ ಮಣ್ಣಿನ ಡಾಬರ್ ದೊರೆತಿರುವುದು ವಿಶೇಷ. ಜೊತೆಗೆ ಒಂದು ಮಡಕೆ ಚೂರಿನ ತಳಭಾಗದಲ್ಲಿ ಈಚಲು ಚಾಪೆಯ ಗುರುತುಗಳಿರುವುದು ಪತ್ತೆಯಾಗಿದ್ದು, ಇವರಿಗೆ ಚಾಪೆ ಎಣೆಯುವ ಜ್ಞಾನವಿತ್ತದೆಂದು ಇದು ತಿಳಿಸುತ್ತದೆ.

ಈ ನೆಲೆಯಲ್ಲಿ ಬೃಹತ್ ಶಿಲಾಯುಗಕ್ಕೆ ಸಂಬಂಧಿಸಿದ ನುಣುಪುಗೊಂಡ ಕಪ್ಪು, ಕಪ್ಪು ಮತ್ತು ಕೆಂಪು ಬಣ್ಣದ ಮೃತ್‌ಪಾತ್ರೆಗಳು ಹಾಗೂ ಕಬ್ಬಿಣದ ಕಿಟ್ಟ ಸಿಗುತ್ತವೆ. ಆರಂಭ ಇತಿಹಾಸ ಕಾಲಕ್ಕೆ ಸಂಬಂಧಿಸಿದ ಕೆಂಪು ಬಣ್ಣದ ಸಾಕಷ್ಟು ಮೃತ್‌ಪಾತ್ರೆಗಳು ದೊರೆತಿದ್ದು, ಅವುಗಳ ಮೇಲ್ಭಾಗ ಕಪ್ಪು ಮಿಶ್ರಿತ ಕಂದು ಬಣ್ಣ ಮತ್ತು ಸುಣ್ಣದಿಂದ ಅಲಂಕರಿಸಲ್ಪಟ್ಟಿದೆ.

ಕನ್ನಮೋಡಿಯ ಪಶ್ಚಿಮ ದಿಕ್ಕಿನಲ್ಲಿರುವ ವೆಂಕಾವಧೂತ ಗುಹೆಯ ಬಳಿ ಇರುವ ಹೆಬ್ಬಂಡೆಯಲ್ಲಿ ಬಿಳಿ ಮತ್ತು ಕೆಂಪು ಬಣ್ಣದಲ್ಲಿ ಮನುಷ್ಯರ, ಗೂಳಿಯ, ಬಿಲ್ಲುಹಿಡಿದ ವ್ಯಕ್ತಿ, ದನಗಳನ್ನು ಒಡೆಯಲು ಕೋಲು ಹಿಡಿದಿರುವ ವ್ಯಕ್ತಿ, ಮೆರವಣಿಗೆ ಹೊರಡುತ್ತಿರುವ ದೃಶ್ಯ, ಕೋತಿ ಮೊದಲಾದ ದೃಶ್ಯಗಳನ್ನು ಚಿತ್ರಿಸಿದ್ದಾನೆ. ಈ ಗೀರು ಚಿತ್ರಗಳ ಬಳಿ ನವಶಿಲಾಯುಗದ ಎರಡು ಆಯುಧಗಳಿವೆ.

ನಲಿಗಾನಹಳ್ಳಿ : ಇದು ಪಾವಗಡ ತಾಲ್ಲೂಕಿನ ಕಸಬಾ ಹೋಬಳಿಯಲ್ಲಿದ್ದು, ಪಾವಗಡದಿಂದ ೬ ಕಿ.ಮೀ. ದೂರದಲ್ಲಿದೆ. ನಲಿಗಾನಹಳ್ಳಿ ಗ್ರಾಮದಿಂದ ಪೂರ್ವಕ್ಕೆ ಛತ್ತದ ಗುಂಡು ಎಂಬ ಹೆಬ್ಬಂಡೆಯ ಬಳಿ ನವಶಿಲಾಯುಗಕ್ಕೆ ಸಂಬಂಧಿಸಿದ ಕೈಗೊಡಲಿ, ಹೆರೆಚಕ್ಕೆಗಳು, ಮೈಕ್ರೋಲಿತಿಕ್ ಬ್ಲೇಡ್, ತಿರುಳ್ಗಲ್ಲು [microtihic blade and core] ಕವಣೆಕಲ್ಲು ಮೊದಲಾದ ಉಪಕರಣಗಳು ಡೈಕ್, ಒಸಾಲ್ಟ್, ಚರ್ಟ್ ಶಿಲೆಯಲ್ಲಿರುವುದು ದೊರೆತಿವೆ. ಜೊತೆಗೆ ಬೂದು ಬಣ್ಣದ ಮೃತ್‌ಪಾತ್ರೆಗಳು ಸಿಕ್ಕಿವೆ. ಬೃಹತ್ ಶಿಲಾಯುಗಕ್ಕೆ ಸಂಬಂಧಿಸಿದ ಸ್ವಸ್ತಿಕ್, ವೃತ್ತಾಕಾರದ ಕಲ್ಲುಮಾದರಿ, ಚಪ್ಪಟೆಯಾಕಾರದ ಕಲ್ಲು ಮಾದರಿ, ನಿಲುವು ಮಾದರಿ ಹೀಗೆ ನಾಲ್ಕು ಮಾದರಿಗಳಲ್ಲಿ ಒಟ್ಟು ೨೮ ಸಮಾಧಿಗಳಿವೆ. ಛತ್ತದ ಗುಂಡಿನ ತುದಿಯ ಭಾಗದಲ್ಲಿ ಚಪ್ಪಟೆ ಬಂಡೆಯ ಕೆಳಭಾಗದಲ್ಲಿ ಬಿಳಿಬಣ್ಣದ ಮನುಷ್ಯನ ವಿವಿಧ ರೀತಿಯಲ್ಲಿರುವ ಗೀಟು ಚಿತ್ರಗಳಿವೆ. ಈ ನೆಲೆಯಿಂದ ಉತ್ತರ ದಿಕ್ಕಿಗೆ ಒಂದು ಕಿ.ಮೀ. ದೂರದಲ್ಲಿ ಚಪ್ಪಟೆಯಾಕಾರದ ಕಲ್ಲುಮಾದರಿಯ ಒಂದು ಸಮಾಧಿಯಿದ್ದು, ಇಲ್ಲಿ ಇತಿಹಾಸ ಆರಂಭಕ್ಕೆ ಸೇರುವ ಕೆಂಪು ಮೃತ್‌ಪಾತ್ರೆಗಳು ಸಿಗುತ್ತವೆ.

* S/o ನಾರಾಯಣಪ್ಪ, ಗುಂಡಾರ್ಲಹಳ್ಳಿ, ಬ್ಯಾಡನೂರು ಅಂಚೆ, ಪಾವಗಡ ತಾಲ್ಲೂಕು, ತುಮಕೂರು ಜಿಲ್ಲೆ-೫೬೧೨೦೨.

೫

ಬೆಂಗಳೂರು ದಕ್ಷಿಣ ತಾಲ್ಲೂಕಿನ ಕೆಲವು ನವಶೋಧಿತ ಪ್ರಾಚ್ಯಾವಶೇಷಗಳು

ಡಾ. ಮುತ್ತುರಾಜು*

ಬೆಂಗಳೂರು ದಕ್ಷಿಣ ತಾಲ್ಲೂಕಿನ ಕನಕಪುರ ಮುಖ್ಯ ರಸ್ತೆಯ ದೊಡ್ಡ ಕಲ್ಲಸಂದ್ರವು ಪ್ರಾಚೀನ ಗ್ರಾಮವಾಗಿದ್ದು ಕಲ್ಲು ಸ್ಥಳನಾಮದಿಂದ ನಿಷ್ಪತ್ತಿಯಾದ ಗ್ರಾಮವಾಗಿದೆ. ಇಲ್ಲಿ ಹೊಸದಾಗಿ ನಿರ್ಮಿತವಾಗುತ್ತಿರುವ ಗೋಕುಲ ಬಡಾವಣೆಯ ರಸ್ತೆಯ ಬದಿಯಲ್ಲಿ ಪುಟ್ಟದಾದ ಮುನೇಶ್ವರ ಗುಡಿ ಇದೆ. ಅದರಲ್ಲಿ ನವಶಿಲಾಯುಗದ (ಕ್ರಿ.ಪೂ.ಸು. ೩೦೦೦) ಶಿಲಾ ಕೈಗೊಡಲಿಯೊಂದನ್ನೂ ಪೂಜಿಸಲಾಗುತ್ತಿದೆ. ಇದು ೨೨ ಅಂಗುಲ ಎತ್ತರ ಮತ್ತು ೬ ಅಂಗುಲ ಅಗಲದಿಂದ ಕೂಡಿದ ಸಿಸ್ಟ್ ಶಿಲೆ ಆಗಿದೆ. ಇದು ತ್ರಿಕೋನಾಕಾರವಾಗಿದ್ದು ಮೇಲುಗಡೆ ಬಲಭಾಗದಲ್ಲಿ ಸ್ವಲ್ಪ ಒಡೆದುಹೋಗಿದೆ.

ಇದೇ ದೊಡ್ಡ ಕಲ್ಲಸಂದ್ರ ಗ್ರಾಮದ ಈಶ್ವರ ದೇವಾಲಯದ ಮೇಲಿನ ಮಧ್ಯದ ಗೂಡೊಂದರಲ್ಲಿ ಮೂರು ನವಶಿಲಾಯುಗದ ಶಿಲಾ ಕೈಗೊಡಲಿಗಳಿವೆ. ಎಡಭಾಗದ ಶಿಲಾಯುಧವು ೧೨ ಅಂಗುಲ ಎತ್ತರ ೫ ಅಂಗುಲ ಅಗಲವಾಗಿದ್ದು ತ್ರಿಕೋನಾಕಾದಲ್ಲಿರುವ ಸಿಸ್ಟ್ ಕಲ್ಲಿನದು ಬಳಿಯಲ್ಲಿರುವ ಶಿಲಾಕೈಗೊಡಲಿಯು ೧೫ ಅಂಗುಲ ಎತ್ತರ ೫ ಅಂಗುಲ ಅಗಲವಾಗಿದ್ದು, ದೊಡ್ಡದಾಗಿದೆ. ಇದನ್ನು ಸಹ ಸಿಸ್ಟ್ ಕಲ್ಲಿನಿಂದಲೇ ಮಾಡಲಾಗಿದೆ. ಬಳಿಯಲ್ಲಿರುವ ಮತ್ತೊಂದು ಶಿಲಾ ಕೈಗೊಡಲಿಯು ೯ ಅಂಗುಲ ಎತ್ತರ ೪ ಅಂಗುಲ ಅಗಲವಾಗಿದ್ದು ತ್ರಿಕೋನಾಕಾರದಲ್ಲಿರುವ ಸಿಸ್ಟ್ ಕಲ್ಲಿನದು. ಈ (ಕ್ರಿ.ಪೂ. ಸು. ೩೦೦೦) ಶೋಧನೆಗಳಿಂದಾಗಿ ಈ ಹಿಂದೆ ಈ ಪರಿಸರದಲ್ಲಿ ನವಶಿಲಾಯುಗದ ಕಾಲದಿಂದಲೇ ಜನಜೀವನ ಅಸ್ತಿತ್ವದಲ್ಲಿ ಇದ್ದಿತೆಂಬುದಕ್ಕೆ ಆಧಾರಗಳು ಲಭಿಸಿದಂತಾಗಿವೆ.

ಬಳಿಯಲ್ಲಿರುವ ಅಗರ ಗ್ರಾಮವು ಪ್ರಾಚೀನ ಗ್ರಾಮವೇ ಆಗಿದ್ದು ಇದು ಕೆಂಗೇರಿ ಹೋಬಳಿಗೆ ಸೇರಿದೆ. ಇಲ್ಲಿನ ಆಂಜನೇಯ ದೇವಾಲಯದ ಹಿಂಬದಿಯಲ್ಲಿ ಬಲಭಾಗಕ್ಕೆ ಉತ್ತರದಿಕ್ಕಿಗೆ ಮುಖ ಮಾಡಿ ನಿಲ್ಲಿಸಿರುವ ತುರುಗಾಳಗದ ವೀರಗಲ್ಲು ಕಣಶಿಲೆಯ ಒಂದು ಮೂರುವರೆ ಅಡಿ ಎತ್ತರ ೩ ಅಡಿ ಅಗಲ ಮತ್ತು ಮೂರೂವರೆ ಅಂಗುಲ ದಪ್ಪದಿಂದ ಕೂಡಿದೆ. ಇದರಲ್ಲಿ ವೀರನ ಚಿತ್ರಣ ಪ್ರಧಾನವಾಗಿದ್ದು ಗಂಗ ಅರಸರ ಕಾಲದ (ಕ್ರಿ.ಶ. ಸು. ೧೧ನೇ ಶತಮಾನ) ಶೈಲಿಯಲ್ಲಿ ಇದೆ. ವೀರನು ತನ್ನ ಬಲದ ಕೈಯಲ್ಲಿ ಬಿಲ್ಲನ್ನು ಹಿಡಿದಿದ್ದು ಎಡದ ಕೈಯಲ್ಲಿ ಖಡ್ಗವನ್ನು ಹಿಡಿದಿದ್ದಾನೆ. ಬೆನ್ನಿನಲ್ಲಿನ ಬತ್ತಳಿಕೆಯಲ್ಲಿ ಬಾಣಗಳಿವೆ. ಅಂದರೆ ಈತ ಬಿಲ್ವಿದ್ಯೆ ಮತ್ತು ಖಡ್ಗ ಪ್ರಹಾರಗಳಲ್ಲಿಯೂ ಪರಿಣಿತನಾಗಿದ್ದ ಎಂಬುದನ್ನು ತಿಳಿಯಬಹುದಾಗಿದೆ. ಶಿರದಲ್ಲಿ ಎಡಭಾಗಕ್ಕೆ ಎತ್ತಿಕಟ್ಟಿರುವ ಶಿರೋಮುಡಿ ಇದ್ದು ಕಿವಿಯಲ್ಲಿ ಕುಂಡಲಗಳಿವೆ. ಮುಖ ಲಕ್ಷಣ ಸ್ಪಷ್ಟವಾಗಿದ್ದು ನೇತ್ರಾ, ನಾಸಿಕ ಮತ್ತು ತುಟಿಗಳ ಸ್ಪಷ್ಟ ರೂಪಗಳು ಚಿತ್ರೀಕರಣವಾಗಿವೆ. ಕೊರಳಲ್ಲಿ ಸರಗಳಿದ್ದು, ಮುಂಗೈ ಮತ್ತು ಕಾಲುಗಳಲ್ಲಿ ಕಡಗಗಳಿವೆ, ಈತನಿಗೆ ಅಲಂಕೃತ ವೀರಗಚ್ಚೆಯ ಉಡುಪು ಇದ್ದು ನಡುವಿನಲ್ಲಿ ಚಿಚ್ಚುಗತ್ತಿ ಇದೆ.

ಈತನ ಬಲಬದಿಯಲ್ಲಿ ಅಶ್ವವಿದ್ದು ಅದರಿಂದ ಬಂದಿಳಿದ ಈತ ಶತ್ರುಗಳೊಡನೆ ಯುದ್ಧ ಮಾಡಿದ್ದಾನೆ. ಇವನ ಎಡಬದಿಯಲ್ಲಿ ಬಲ ಮುಖವಾಗಿರುವ ಎರಡು ತುರುಗಳು ಇದ್ದು ಇವುಗಳನ್ನು ತನ್ನ ಶತ್ರುಗಳಿಂದ ರಕ್ಷಿಸುವಲ್ಲಿ ವೀರ ಯಶಸ್ವಿಯಾಗಿದ್ದಾನೆ. ಈತನ ಪಾದಗಳ ಬಳಿಯಲ್ಲಿ ಮತ್ತು ಮುಂದುಗಡೆ ಬಲ ಭಾಗದಲ್ಲಿ ನಾಲ್ವರು ಸಂಗೀತ ವಾದ್ಯಗಳಾದ ತಮಟೆ ಕಹಳೆಗಳ ಜೊತೆ ಇವನನ್ನು ಯುದ್ಧಕ್ಕೆ ಕರೆದೊಯ್ಯುವ ದೃಶ್ಯವಿರುವುದರಿಂದ ಇವನೊಬ್ಬ ಪ್ರಮುಖ ಸ್ಥಳೀಯ ನಾಯಕನಾಗಿದ್ದನೆಂದು ಪರಿಗಣಿಸಬಹುದಾಗಿದೆ. ಬಲಬದಿಯ ಮೇಲೆ ಶಿವಲಿಂಗದ ರೇಖಾ ಚಿತ್ರಣವಿದೆ. ಎಡಭಾಗದ ಅಶ್ವ ಚಿತ್ರಣದ ಮೇಲೆ ತುರುಗಳಿಗಾಗಿ ಶತ್ರುಗಳೊಡನೆ ಹೋರಾಡಿ ತನ್ನ ಪ್ರಾಣವನ್ನು ಅರ್ಪಿಸುವ ಈ ವೀರನನ್ನು ಅಪ್ಸರೆಯರಿಬ್ಬರು ಮೇನೆಯಲ್ಲಿ ಸ್ವರ್ಗಕ್ಕೆ ಕರೆದೊಯ್ಯುವ ದೃಶ್ಯವಿದ್ದು ತದನಂತರ ಕೈಲಾಸದಲ್ಲಿ ಪದ್ಮಾಸನಬದ್ಧವಾಗಿ ಕೈಮುಗಿದು ಕುಳಿತಿರುವ ದೃಶ್ಯವಿದೆ. ಇಲ್ಲಿಯೇ ಶಿವಗಣವೊಬ್ಬನ ಚಿತ್ರಣವಿದ್ದು ಒಡೆದುಹೋಗಿದೆ.

* ಕನ್ನಡ ಅಧ್ಯಾಪಕರು, ಜವಾಹರ್ ನವೋದಯ ವಿದ್ಯಾಲಯ, ಕಾನ್ಷಿವಾಡಾ ಜಿಲ್ಲೆ ಶಿವನಿ (ಮ ಪ್ರ)-೪೮೦೬೬೧

ಕ್ರಿ.ಶ. ಸು. ೧೧ನೇ ಶತಮಾನಕ್ಕೆ ಸೇರುವ ಈ ವೀರಗಲ್ಲು ಬೇಗೂರಿನಲ್ಲಿರುವ ಗಂಗರ ಕಾಲದ ವೀರಗಲ್ಲೊಂದನ್ನು ಹೋಲುತ್ತದೆ.

ಇದೇ ಆಂಜನೇಯ ದೇವಾಲಯದ ಎಡಬದಿಗೆ ದಕ್ಷಿಣ ದಿಕ್ಕಿಗೆ ಮುಖ ಮಾಡಿ ನಿಲ್ಲಿಸಿರುವ ವೀರಗಲ್ಲೊಂದನ್ನು ಐದು ಅಡಿ ಎತ್ತರ ಮೂರು ಮುಕ್ಕಾಲು ಅಡಿ ಅಗಲ ಮತ್ತು ಮೂರುವರೆ ಅಂಗುಲ ದಪ್ಪವಾಗಿರುವ ಕಣಶಿಲೆಯ ಸ್ಮಾರಕ ಇದನ್ನು ಮೂರು ಹಂತಗಳಲ್ಲಿ ಮೂಡಿಸಲಾಗಿದೆ. ಮೊದಲ ಹಂತದ ಬಲಭಾಗದಲ್ಲಿ ಅಶ್ವವೊಂದರ ಚಿತ್ರಣವಿದ್ದು ಮಹಿಳೆಯೊಬ್ಬಳು ಎತ್ತರವಾದ ಛತ್ರಿಯನ್ನು ಹಿಡಿದಿದ್ದಾಳೆ. ಈಕೆ ಎಡಭಾಗದಲ್ಲಿರುವ ಅಲಂಕೃತ ಅಶ್ವವನ್ನು ನೋಡುತ್ತಾ ತನ್ನ ಎಡಗೈನಿಂದ ಛತ್ರಿಯನ್ನು ಹಿಡಿದಿದ್ದಾಳೆ. ಈಕೆಯ ಮುಂದುಗಡೆ ಇಬ್ಬರು ವೀರರು ತಮ್ಮ ಬಲದ ಕೈಗಳಿಂದ ಎತ್ತಿದ ಖಡ್ಗಗಳನ್ನು ಹಿಡಿದು ಎಡ ಕೈಯಲ್ಲಿ ಗುರಾಣಿಗಳನ್ನು ಹಿಡಿದು ಎದುರಿಗೆ ಇರುವ ಇಬ್ಬರು ಶತ್ರುಗಳನ್ನು ಎದುರಿಸುತ್ತಿದ್ದಾರೆ ಇವರಿಗೂ ಕೈಯಲ್ಲಿ ಖಡ್ಗ ಗುರಾಣಿಗಳಿವೆ.

ಈ ಸ್ಮಾರಕದ ಎರಡನೆಯ ಹಂತದಲ್ಲಿಯೂ ಯುದ್ಧದ ಚಿತ್ರಣವೇ ಮುಂದುವರೆದಿದ್ದು ಚಿತ್ರಣದ ಪ್ರಮಾಣ ದೊಡ್ಡದಾಗಿದೆ. ಖಡ್ಗ ಗುರಾಣಿ ಹಿಡಿದು ಯುದ್ಧನಿರತ ರಾಗಿರುವ ವೀರರ ನಡುವೆ ಓರ್ವ ಮಹಿಳೆ ನಿಂತ ಚಿತ್ರಣವಿದೆ. ಸರ್ವಾಲಂಕೃತ ವೇಷಭೂಷಣಗಳಿಂದ ಅಲಂಕೃತವಾಗಿರುವ ಈ ಮೂವರ ಮುಂದುಗಡೆಯಲ್ಲಿ ಅಡ್ಡವಾಗಿ ಖಡ್ಗ ಮತ್ತು ಗುರಾಣಿ ಹಿಡಿದು ಹೋರಾಡುವ ಶತ್ರುಗಳ ಚಿತ್ರಣವನ್ನು ಕೆತ್ತಲಾಗಿದ್ದು, ಸ್ಥಳಾಭಾವದಿಂದ ಇಲ್ಲಿ ಈ ಪರಿವರ್ತನೆ ಮಾಡಿಕೊಳ್ಳಲಾಗಿದೆ. ಮೂರನೇ ಹಂತದಲ್ಲಿ ಮಡಿದ ಇಬ್ಬರು ವೀರರು ಮತ್ತು ನಡುವೆ ಓರ್ವ ಮಹಿಳೆ ಕೈಲಾಸದಲ್ಲಿ ಕೈಮುಗಿದು ನಿಂತಿದ್ದಾರೆ. ಯುದ್ಧದಲ್ಲಿ ಈಕೆಯೂ ಹೋರಾಡಿ ಮಡಿದಳೇ ಅಥವಾ ಸತಿ ಪದ್ಧತಿ ಅನುಸರಿಸಿ ಅಗ್ನಿಪ್ರವೇಶ ಮಾಡಿ ಮಡಿದಳೇ ಇಲ್ಲಿ ಸ್ಪಷ್ಟವಿಲ್ಲ. ಇವರ ಮುಂದೆ ಅಲಂಕೃತ ಮಂಟಪದಲ್ಲಿ ಶಿವಲಿಂಗದ ಚಿತ್ರಣವಿದ್ದು ಮುಂದೆ ವೇದಿಕೆಯ ಮೇಲೆ ನಂದಿಯ ಚಿತ್ರಣ ಮತ್ತು ಮೇಲ್ಭಾಗದಲ್ಲಿ ಸೂರ್ಯ ಚಂದ್ರರಿದ್ದಾರೆ.

ಇಲ್ಲಿ ಯುದ್ಧ ನಡೆಸಿದ ಕಾರಣಗಳ ಸ್ಪಷ್ಟ ಚಿತ್ರಣ ವಿಲ್ಲವಾಗಿ ಇದೊಂದು ರಾಜಕೀಯ ಕಾರಣಕ್ಕಾಗಿ ನಡೆದ ಹೋರಾಟವೆಂದು ನಿರ್ಧರಿಸಬಹುದಾಗಿದೆ. ಅತ್ಯಂತ ಕಲಾತ್ಮಕವಾಗಿ ಮೂಡಿಬಂದಿರುವ ಈ ಪ್ರಾಚೀನ ವೀರಗಲ್ಲು ಸ್ಮಾರಕದ ಕಾಲಮಾನವು ಕ್ರಿ.ಶ. ಸು. ೧೧ನೇ ಶತಮಾನವೆಂದು ನಿರ್ಧರಿಸಬಹುದಾಗಿದೆ.

ಅಗರದಿಂದ ತುಸು ದೂರದಲ್ಲಿರುವ ಭೈರಸಂದ್ರ ಮಾರಮ್ಮನ ಗುಡಿಯ ಹಿಂದೆ ಹುಣಸೆ ಮರದ ಕೆಳಗಡೆ ೫ ಅಡಿ ಅಗಲ ಮತ್ತು ೬ ಅಡಿ ಎತ್ತರದ ಕಣ ಶಿಲೆಯ ಪ್ರಾಚೀನ ವೀರಗಲ್ಲುವೊಂದಿದೆ. ಇದರಲ್ಲಿ ಒಂದೇ ಹಂತದ ಚಿತ್ರಣವನ್ನು ಮೂಡಿಸಲಾಗಿದೆ. ಈ ಪ್ರಾಚೀನ ಸ್ಮಾರಕದಲ್ಲಿ ಯುದ್ಧದ ಸನ್ನಿವೇಶ ರೋಚಕವಾಗಿ ಮೂಡಿ ಬಂದಿದೆ. ಸ್ಮಾರಕದ ಎಡಭಾಗದಲ್ಲಿ ಅಶ್ವವೊಂದರ ಮೇಲೆ ಕುಳಿತ ವೀರನ ಚಿತ್ರಣವಿದ್ದು ಇವನ ಶಿರಕ್ಕೆ ಬರುವಂತೆ ಮೂರು ಛತ್ರಿಗಳಿವೆ. ಇವುಗಳ ಮೇಲೆ ರಾಜ ಚಿಹ್ನೆಗಳೆರಡರ ಚಿತ್ರಣವಿದ್ದು, ಎಕ್ಸ್ ಆಕಾರದಲ್ಲಿವೆ. ಛತ್ರಿಗಳ ಮುಂದೆ ಇಬ್ಬರು ಸಂಗೀತವಾದಕರ ಚಿತ್ರಣವಿದ್ದು ಇವರಲೊಬ್ಬ ಕಹಳೆ ಊದುತ್ತಿದ್ದರೆ ಮತ್ತೊಬ್ಬ ತಮಟೆ ನುಡಿಸುತ್ತಿದ್ದಾನೆ. ಇವರ ಮುಂದೆ ವೀರನ ಚಿತ್ರಣ ಪ್ರಧಾನವಾಗಿದ್ದು ಈತ ತನ್ನ ಬಲಭಾಗಕ್ಕೆ ಬರುವ ಹಾಗೆ ಮುಖ ಮಾಡಿ ವೀರತನದಿಂದ ನಿಂತಿದ್ದು ಎಡ ಕೈಯಲ್ಲಿ ಬಿಲ್ಲನ್ನು ಹಿಡಿದಿದ್ದು ಬಲ ಕೈಯಲ್ಲಿ ಆಯುಧವನ್ನು ಮೂಡಿಸಿಲ್ಲ, ಶಿರದಲ್ಲಿ ಎಡಕ್ಕೆ ಬರುವಂತೆ ಕಟ್ಟಿದ ತುರುಬು ಇದ್ದು ಅಂದವಾದ ಮುಖ ಲಕ್ಷಣವಿದ್ದು ದಪ್ಪನೆಯ ಮೀಸೆಯಿದೆ.

ತೋಳು ಮತ್ತು ಕಾಲುಗಳಲ್ಲಿ ಕಡಗಗಳಿವೆ. ವೀರಗಚ್ಚೆಯ ಉಡುಪು ಇದ್ದು ನಡುವಿನಲ್ಲಿ ಬಿಚ್ಚುಗತ್ತಿ ಇದೆ ಇವನ ಕಾಲುಗಳ ನಡುವೆ ರಡು ಶತ್ರು ಶವಗಳು ಬಿದ್ದಿದ್ದು ಇವುಗಳನ್ನು ದಾಟಿ ವೀರ ನಡೆಯುತ್ತಿದ್ದಾನೆ. ಇವನ ಮುಂದೆ ಮೂರು ಜನ ವೀರರ ಕಿರು ಕೆತ್ತನೆ ಇದ್ದು, ಇವರು ಸಹ ಬಿಲ್ಲಿಗೆ ಬಾಣಗಳನ್ನು ಹೂಡಿ ವೀರತನದಿಂದ ಯುದ್ಧ ಮಾಡುತ್ತಾ ಮುನ್ನಡೆಯುತ್ತಿದ್ದಾರೆ. ಇವರ ಕಾಲ ಕೆಳಗೆ ನೆಲಕ್ಕೆ ಉರುಳಿರುವ ಶತ್ರುವೊಬ್ಬನ ಶವವೊಂದು ಬಿದ್ದಿದೆ. ಇವರ ಮುಂದೆ ಇಬ್ಬರು ಶತ್ರುಗಳು ಯುದ್ಧ ಮಾಡುವ ಚಿತ್ರಣವಿದ್ದು, ಈ ಚಿತ್ರಣದಲ್ಲಿ ಶತ್ರುಗಳು ಒಬ್ಬರ ಮೇಲೆ ಒಬ್ಬರು ಇರುವಂತೆ ಚಿತ್ರಣ ಬಂದಿದೆ. ಕೆಳಗಿರುವ ಶತ್ರುವು ಖಡ್ಗ-ಗುರಾಣಿ ಯೊಂದಿಗೆ ವೀರನನ್ನು ಎದುರಿಸುತ್ತಿದ್ದರೆ ಮೇಲ್ಭಾಗದ ಚಿತ್ರಣದ ವೀರನು ಬಿಲ್ಲು ಮತ್ತು ಬಾಣದಿಂದ ವೀರನೊಡನೆ ಯುದ್ಧ ಮಾಡುತ್ತಿದ್ದಾನೆ. ಇವನ ಮೇಲ್ಭಾಗದಲ್ಲಿ ಅಂದರೆ ವೀರಗಲ್ಲಿನ ಬಲಭಾಗದ ಮೇಲ್ತುದಿಯಲ್ಲಿ ವೀರನೊಬ್ಬನು ಮಂಡಿಕಾಲ ನ್ನೂರಿ ಕುಳಿತು ಶತ್ರುವೊಬ್ಬನನ್ನು ಹಿಡಿದುಕೊಂಡು ತನ್ನ ಖಡ್ಗದಿಂದ ಅವನ ಉದರಕ್ಕೆ ಇರಿದು ಸಾಯಿಸುತ್ತಿದ್ದಾನೆ ಚೀತ್ಕರಿಸುವಂತೆ ಶತ್ರುವಿನ ಚಿತ್ರಣ ಮೂಡಿಬಂದಿದೆ. ಈ ಚಿತ್ರಣದ ಹಿಂಬದಿಯಲ್ಲಿ ಅಂದರೆ ವೀರಗಲ್ಲಿನ ಮೇಲ್ಭಾಗದ ಮಧ್ಯದಲ್ಲಿ ಮಡಿದ ವೀರನು ಸ್ವರ್ಗದಲ್ಲಿ ಅರೆಸುಖಾಸನದಲ್ಲಿ ಕುಳಿತು ಅಪ್ಸರೆಯರಿಂದ ಚಾಮರಸೇವೆ ಪಡೆಯುವ

ಚಿತ್ರಣವಿದೆ. ಬೀಭತ್ಸವಾದ ಯುದ್ಧ ಚಿತ್ರಣವನ್ನು ಕಟ್ಟಿಕೊಡುವ ಈ ವೀರಗಲ್ಲಿನ ಯುದ್ಧದ ಕಾರಣ ಸ್ಪಷ್ಟವಿಲ್ಲವಾಗಿದ್ದು, ಇದೊಂದು ರಾಜಕೀಯ ಕಾರಣದಿಂದ ಉಂಟಾದ ವೀರಗಲ್ಲು ಆಗಿರುವಂತಿದೆ. ಬೇಗೂರಿನ ವೀರಗಲ್ಲಿನ ಹೋಲಿಕೆಯನ್ನು ಇದು ಪಡೆದಿರುವುದರಿಂದ ಇದರ ಕಾಲಮಾನವನ್ನು ಕ್ರಿ.ಶ. ಸು. ೧೦ನೇ ಶತಮಾನಕ್ಕೆ ಗುರುತಿಸಬಹುದಾಗಿದೆ.

ಇಲ್ಲಿಯೇ ಬಳಿಯಲ್ಲಿ ಐದು ಅಡಿ ಎತ್ತರ ಎರಡು ಅಡಿ ಅಗಲ ಮತ್ತು ಅರ್ಧ ಅಡಿ ದಪ್ಪದ ಕಣ ಶಿಲೆಯ ಪ್ರಾಚೀನ ವೀರಗಲ್ಲು ಒಂದು ನಿಂತಿದ್ದು ಇದರಲ್ಲಿ ವೀರನು ಯುದ್ಧ ಮಾಡುವ ಪ್ರಧಾನ ಚಿತ್ರವನ್ನೇ ಮೂಡಿಸಲಾಗಿದೆ. ಬಹುತೇಕ ನೆಲದಲ್ಲಿ ಹುದುಗಿಹೋಗಿರುವ ಈ ವೀರಗಲ್ಲಿನ ಚಿತ್ರಣದಲ್ಲಿ ಎಡಭಾಗದಲ್ಲಿ ಅಶ್ವವೊಂದರ ಪುಟ್ಟ ಪ್ರಮಾಣದ ಚಿತ್ರಣವಿದೆ. ವೀರನು ಅಶ್ವವನ್ನೇರಿ ಯುದ್ಧಕ್ಕೆ ಬಂದಿರುವುದನ್ನು ಇದು ಸೂಚಿಸುತ್ತದೆ. ವೀರನ ಪ್ರಧಾನ ಚಿತ್ರಣದಲ್ಲಿ ವೀರನು ತನ್ನ ಎಡ ಕೈಯಲ್ಲಿ ಬಿಲ್ಲನ್ನು ಹಿಡಿದಿದ್ದು ಬಲ ಕೈಯಲ್ಲಿ ಖಡ್ಗವನ್ನು ಹಿಡಿದಿದ್ದಾನೆ. ಶಿರೋಮುಡಿಯನ್ನು ವಸ್ತ್ರದಿಂದ ಕಟ್ಟಲ್ಪಟ್ಟಿದ್ದು, ಎಡಭಾಗಕ್ಕೆ ತುರುಬಿನ ಗಂಟು ಬಂದಿದೆ. ಮುಖದ ಲಕ್ಷಣ ತ್ರಿಕೋನಾಕಾರವಾಗಿದ್ದು ನೇತ್ರ ನಾಸಿಕ ಮತ್ತು ತುಟಿಗಳನ್ನು ಗಮನಿಸಬಹುದಾಗಿದೆ. ಕಿವಿಗಳಲ್ಲಿ ಆಭರಣ ಕೊರಳಲ್ಲಿ ಸರಗಳಿದ್ದು ವೀರಗಚ್ಚೆಯ ಉಡುಪು ಇದೆ. ನಡುವಿನಲ್ಲಿ ಬಿಚ್ಚುಗತ್ತಿ ಇದ್ದು ಇವನ ಶರೀರಕ್ಕೆ ಹಲವಾರು ಶತ್ರುಗಳಿಂದ ಬಾಣಗಳು ಹೊಕ್ಕಿವೆ. ವೀರಗಲ್ಲಿನ ಮೇಲ್ಭಾಗದಲ್ಲಿ ಸ್ವರ್ಗದಲ್ಲಿ ಪದ್ಮಾಸನ ಬದ್ಧನಾಗಿ ಕೈಮುಗಿದು ಕುಳಿತ ವೀರನಿಗೆ ಅಪ್ಸರೆಯರಿಬ್ಬರು ಚಾಮರಸೇವೆ ನಡೆಸುತ್ತಿದ್ದಾರೆ. ಯಾವುದೋ ಕಾರಣದಿಂದ ಶತ್ರುಗಳೊಡನೆ ಹೋರಾಡಿ ಇಲ್ಲಿನ ವೀರ ಸ್ವರ್ಗಸ್ಥನಾಗಿದ್ದಾನೆ. ಗಂಗರಸರ ಕಾಲದ ಇತರ ವೀರಗಲ್ಲುಗಳನ್ನು ಇದು ಹೋಲುವುದರಿಂದ ಈ ವೀರಗಲ್ಲಿನ ಕಾಲಮಾನವನ್ನು ಕ್ರಿ.ಶ. ಸು. ೧೦ನೆಯ ಶತಮಾನದ್ದೆಂದು ನಿರ್ಧರಿಸಬಹುದಾಗಿದೆ.

ಇದರ ಬಳಿಯಲ್ಲಿಯೇ ಇರುವ ಮತ್ತೊಂದು ಪ್ರಾಚೀನ ವೀರಗಲ್ಲು ಸಹ ಭೂಮಿಯಲ್ಲಿ ಹುದುಗಿಹೋಗಿದ್ದು, ಭೂಮಿಯಿಂದ ಮೇಲಕ್ಕೆ ೫ ಅಡಿ ಎತ್ತರ ಮತ್ತು ೩ ಅಡಿ ಅಗಲ ಹೊಂದಿದ ಕಣಶಿಲೆಯ ಸ್ಮಾರಕವಾಗಿದೆ. ಈ ವೀರಗಲ್ಲಿನ ಎಡಭಾಗದಲ್ಲಿ ಅಶ್ವವೊಂದರ ಚಿತ್ರಣ ಇರುವುದರಿಂದ ಇವನು ಸಹ ಅಶ್ವರೂಢನಾಗಿ ಯುದ್ಧಕ್ಕೆ ಬಂದಿದ್ದಾನೆ. ಇವನಿಗೂ ಶಿರದಲ್ಲಿ ಎಡಭಾಗಕ್ಕೆ ಬರುವಂತೆ ತುರುಬು ಇದ್ದು ವಸ್ತ್ರದಿಂದ ಕಟ್ಟಲ್ಪಟ್ಟಿದೆ. ಕರ್ಣಗಳಲ್ಲಿ ಆಭರಣಗಳು ಮತ್ತು ಕೊರಳಲ್ಲಿ ಹಾರವಿದೆ. ಇವನ ಚಿತ್ರಣದಲ್ಲಿಯೂ ಸಹ ಎಡ ಕೈಯಲ್ಲಿ ಧನುಸ್ಸು ಇದ್ದು ಮೇಲ್ಭಾಗಕ್ಕೆ ಬರುವಂತೆ ಎತ್ತಿಹಿಡಿದಿದ್ದಾನೆ. ಬಲದ ಕೈಯಲ್ಲಿ ಹಿರಿದಾದ ಖಡ್ಗವಿದೆ ಶತ್ರುವಿನಿಂದ ಬಿಡಲ್ಪಟ್ಟ ಬಾಣವೊಂದು ಇವನ ಶರೀರವನ್ನು ಛೇದಿಸಿಕೊಂಡು ಬೆನ್ನಿನಿಂದ ಹೊರಬಂದಿದೆ. ಈ ಸ್ಮಾರಕದ ಎಡಭಾಗದ ಮೇಲ್ತುದಿಯಲ್ಲಿ ಮಡಿದ ವೀರನು ಸ್ವರ್ಗದಲ್ಲಿ ಸುಖಾಸೀನನಾಗಿ ಕೈಮುಗಿದು ಕುಳಿತಿದ್ದು ಅಪ್ಸರೆಯರಿಂದ ಚಾಮರಸೇವೆ ಪಡೆಯುತ್ತಿದ್ದಾನೆ. ಬಹುತೇಕ ಭೂಮಿಯಲ್ಲಿ ಹುದುಗಿ ಹೋಗಿರುವ ವೀರಗಲ್ಲು ಇದಾಗಿರುವುದರಿಂದ ಹೆಚ್ಚಿನ ವಿವರಗಳು ಪ್ರಸ್ತುತ ಅಲಭ್ಯವಾಗಿವೆ. ಈ ಪ್ರಾಚೀನ ವೀರಗಲ್ಲು ಸಹ ಗಂಗರ ಕಾಲದ ವೀರಗಲ್ಲನ್ನೇ ಹೋಲುವುದರಿಂದ ಇದರ ಕಾಲಮಾನವನ್ನು ಸಹ ಕ್ರಿ.ಶ. ಸು. ೧೦ನೇ ಶತಮಾನದ್ದೆಂದು ನಿರ್ಧರಿಸಬಹುದಾಗಿದೆ.

ಅಗರದಿಂದ ಬಂಜಾರ ಪಾಳ್ಯಕ್ಕೆ ಹೋಗುವ ಮುಖ್ಯ ರಸ್ತೆಯಲ್ಲಿ ತುರುಗೊಳದ ಪ್ರಾಚೀನ ವೀರಗಲ್ಲೊಂದು ನಿಂತಿದ್ದು ಐದು ಅಡಿ ಎತ್ತರ ಎರಡೂವರೆ ಅಡಿ ಅಗಲ ಮತ್ತು ಏಳೂವರೆ ಅಂಗುಲ ದಪ್ಪದಿಂದ ಕೂಡಿದ ಕಣಶಿಲೆಯ ಸ್ಮಾರಕ ಇದಾಗಿದೆ. ಇದರಲ್ಲಿಯೂ ವೀರನ ಚಿತ್ರಣವೇ ಪ್ರಧಾನವಾಗಿದ್ದು, ಈತನು ತನ್ನ ಎಡಕೈಯಲ್ಲಿ ಬೃಹತ್ತಾದ ಧನಸ್ಸನ್ನು ಹಿಡಿದಿದ್ದಾನೆ. ಬಲಕೈಯಲ್ಲಿ ಪುಟ್ಟ ಚಾಕುವಿನಂತಹ ಆಯುಧವನ್ನು ಹಿಡಿದಿದ್ದಾನೆ. ಇವನ ಬಲಗಡೆಯ ನಡುವಿನಲ್ಲಿ ಖಡ್ಗವಿದೆ. ಶತ್ರುಗಳು ಬಿಟ್ಟಿರುವ ಬಾಣಗಳು ಇವನ ಶಿರ, ಎದೆ ಮತ್ತು ಗೋಳುಗಳನ್ನು ಹೊಕ್ಕಿವೆ. ಶಿರದಲ್ಲಿ ಎಡಭಾಗಕ್ಕೆ ವಸ್ತ್ರದಿಂದ ಕಟ್ಟಿದ ಶಿರೋಮುಡಿ ಇದ್ದು ಮುಖ ಮತ್ತು ಶರೀರ ಭಾಗ ಸವೆದು ಹೋಗಿದೆ. ನಡುವಿನಲ್ಲಿ ಅಲಂಕಾರ ಯುಕ್ತವಾದ ವಸ್ತ್ರದ ಪೋಷಾಕು ಇವನಿಗೆ ಇದೆ. ಈತನ ಪಾದಗಳ ಬಳಿಯಲ್ಲಿ ತುರುವೊಂದು ಬಲು ಮುಖ ಮಾಡಿ ನಿಂತಿದೆ. ಅಂದರೆ ವೀರನು ಶತ್ರುಗಳಿಂದ ಗೋವನ್ನು ರಕ್ಷಿಸು ವಲ್ಲಿ ಸಫಲನಾಗಿದ್ದು ತಾನು ಮಾತ್ರ ಸ್ವರ್ಗಸ್ಥನಾಗಿದ್ದಾನೆ. ಈ ವೀರಗಲ್ಲಿನ ಮೇಲ್ಭಾಗದಲ್ಲಿ ಮಡಿದ ವೀರ ಅರೆ ಪದ್ಮಾಸನದಲ್ಲಿ ಅಪ್ಸರೆಯರಿಂದ ಚಾಮರಸೇವೆ ಪಡೆಯುತ್ತಾ ಸ್ವರ್ಗದಲ್ಲಿ ಕುಳಿತಿದ್ದಾನೆ. ಕ್ರಿ.ಶ. ಸು. ೯ನೇ ಶತಮಾನಕ್ಕೆ ಈ ವೀರಗಲ್ಲು ಸೇರುತ್ತದೆ.

ಈ ತುರುಗಾಳಗದ ವೀರಗಲ್ಲಿನ ಹಿಂಬದಿಯಲ್ಲಿಯೇ ಬಿಲ್ಲನ್ನು ಹಿಡಿದಿರುವ ಕೈ ಚಿತ್ರಣದ ತುಣುಕೊಂದು ಬಿದ್ದಿದ್ದು ಮತ್ತಷ್ಟು ಹಿಂದೆ ಒಂದುವರೆ ಅಡಿ ಎತ್ತರ ಮತ್ತು ಅಷ್ಟೇ ಅಗಲದ ವೀರನ ಚಿತ್ರಣವಿರುವ ವೀರಗಲ್ಲೊಂದು ಬಿದ್ದಿದೆ. ಪ್ರಾಯಶಃ ಇದು ತುರುಗಾಳಗದ ವೀರಗಲ್ಲೇ ಆಗಿದ್ದು ಕ್ರಿ.ಶ. ಸು. ೧೫ನೇ ಶತಮಾನಕ್ಕೆ ಸೇರುತ್ತದೆ. ಈ ಪ್ರಾಚ್ಯಾವಶೇಷಗಳ ಹೊಸ ಶೋಧನೆಯಿಂದಾಗಿ ಬೆಂಗಳೂರು ದಕ್ಷಿಣ ಭಾಗದ






ನವ ಶಿಲಾಯುಗದ ಶಿಲಾ ಆಯುಧಗಳು, ದೊಡ್ಡಕಲ್ಲಸಂದ್ರ

ನವಶಿಲಾಯುಗ ಶಿಲಾ ಕೈಗೊಡಲಿ ದೊಡ್ಡಕಲ್ಲಸಂದ್ರ



ತುರುಗಾಳಗದ ವೀರಗಲ್ಲು, ಅಗರ



ಆಂಜನೇಯ ದೇವಾಲಯದ ಬಳಿಯ ವೀರಗಲ್ಲು, ಅಗರ



ವೀರಗಲ್ಲು, ಅಗರದ ಭೈರಸಂದ್ರ



ವೀರಗಲ್ಲು, ಅಗರದ ಭೈರಸಂದ್ರ ಮಾರಮ್ಮನ ದೇವಾಲಯದ ಬಳಿ



ವೀರಗಲ್ಲು, ಅಗರದ ಭೈರಸಂದ್ರ ಮಾರಮ್ಮನ ದೇವಾಲಯದ ಬಳಿ



ತುರುಗಾಳಗದ ವೀರಗಲ್ಲು, ಬಂಜಾರಪಾಳ್ಯದ ಮುಖ್ಯರಸ್ತೆ, ಅಗರ

ಈ ಪ್ರದೇಶದಲ್ಲಿ ಪ್ರಾಗೈತಿಹಾಸಿಕ ಕಾಲವಾದ ನವ ಶಿಲಾಯುಗದಿಂದ (ಕಾಲ ಕ್ರಿ.ಪೂ. ೩೦೦೦) ಇಂದಿನವರೆಗೆ ಸತತವಾಗಿ ಜನ ಸಂಸ್ಕೃತಿ ಅಸ್ತಿತ್ವದಲ್ಲಿರುವುದು ಬೆಳಕಿಗೆ ಬಂದಂತಾಗಿದೆ.

ಹಿರೇಮ್ಯಾಗಳಗೇರಿ ಪರಿಸರದ ಪ್ರಾಚ್ಯಾವಶೇಷಗಳು

ಪ್ರೊ. ಜಿ.ಕೆ. ಮಲ್ಲಿಕಾರ್ಜುನಪ್ಪ*

ಹಿರೇಮ್ಯಾಗಳಗೇರಿ, ಹರಪನಹಳ್ಳಿ ತಾಲ್ಲೂಕಿನ ಒಂದು ಗ್ರಾಮ ಪಂಚಾಯಿತಿ ಕೇಂದ್ರ, ಇದೊಂದು ಐತಿಹಾಸಿಕ ಗ್ರಾಮವಾಗಿದ್ದು, ಸುಮಾರು ೨೦೦೦ ಮನೆಗಳು ಹಾಗೂ ೫೦೦೦ ಜನಸಂಖ್ಯೆಯನ್ನು ಹೊಂದಿದೆ. ಶಾಸನಗಳಲ್ಲಿ ಈ ಗ್ರಾಮ ಮೇಗಣಗೆರೆ ಎಂದು ಉಲ್ಲೇಖಿತವಾಗಿದೆ. ಈ ಗ್ರಾಮವು ಹರಪನಹಳ್ಳಿಯಿಂದ ದಕ್ಷಿಣಕ್ಕೆ ೩೬ ಕಿ.ಮೀ. ದಾವಣಗೆರೆಯಿಂದ ಉತ್ತರಕ್ಕೆ ೧೨ ಕಿ.ಮೀ. ದೂರದಲ್ಲಿದೆ. ಉಚ್ಚಂಗಿದುರ್ಗ ೭ ಕಿ.ಮೀ. ಚಿಕ್ಕಮ್ಯಾಗಳಗೇರಿ ೩ ಕಿ.ಮೀ. ಮಾಗನಹಳ್ಳಿ ೬ ಕಿ.ಮೀ. ದೂರದಲ್ಲಿವೆ. ಪ್ರಸ್ತುತ ಸಂಪ್ರಬಂಧದಲ್ಲಿ ಹಿರೇಮ್ಯಾಗಳಗೇರಿ, ಚಿಕ್ಕಮ್ಯಾಗಳಗೇರಿ ಮತ್ತು ಮಾಗನಹಳ್ಳಿ ಗ್ರಾಮಗಳಲ್ಲಿ ನಾನು ಕ್ಷೇತ್ರ ಕಾರ್ಯವನ್ನು ಕೈಗೊಂಡು ಪರಿಶೀಲಿಸಿದ ಪ್ರಾಚ್ಯಾವಶೇಷ ಹಾಗೂ ಪರಿಶೋಧಿತ ಅಂಶಗಳನ್ನು ಸಾದರಪಡಿಸಲಾಗಿದೆ.

ಹರಪನಹಳ್ಳಿ ತಾಲ್ಲೂಕಿನ ಈ ಗ್ರಾಮಗಳ ಸುತ್ತಲೂ ಪುಣಬುಗಟ್ಟ, ಕಂಚಿಕೇರಿ, ಸತ್ತೂರು, ರಾಮಘಟ್ಟ, ಉಚಂಗಿ ದುರ್ಗ, ಅಣಜಿಗೆರೆ ಮುಂತಾದ ಐತಿಹಾಸಿಕ ಗ್ರಾಮಗಳು ಕಂಡುಬರುತ್ತವೆ. ಇವುಗಳನ್ನು ಉಲ್ಲೇಖಿಸುವ ಶಾಸನಗಳು ಈ ಮೇಲ್ಕಂಡ ಸ್ಥಳದಲ್ಲಿ ಕಂಡುಬರುತ್ತವೆ. ಈ ಪ್ರದೇಶದಲ್ಲಿ ಕಂಡುಬರುವ ಅತಿ ಹೆಚ್ಚಿನ ಶಾಸನಗಳು ಕಲ್ಯಾಣ ಚಾಲುಕ್ಯರಿಗೂ ಹಾಗೂ ಅವರ ಸಾಮಂತರಾದ ನೊಳಂಬ ಹಾಗೂ ಪಾಂಡ್ಯ ರಾಜಮನೆತನಗಳಿಗೆ ಸಂಬಂಧಿಸಿವೆ. ಹೀಗಾಗಿ ಈ ಪ್ರದೇಶವು ಕಲ್ಯಾಣಚಾಲುಕ್ಯರ ಪ್ರಭುತ್ವಕ್ಕೆ ಒಳಪಟ್ಟಿತ್ತು ಕಲ್ಯಾಣ ಚಾಲುಕ್ಯ ಪೂರ್ವದ ಯಾವುದೇ ರಾಜಮನೆತನದ ಶಾಸನಗಳು ಇಲ್ಲಿ ಕಂಡುಬರುವುದಿಲ್ಲ.

ಹಿರೇಮ್ಯಾಗಳಗೇರಿ ಗ್ರಾಮದಲ್ಲಿ ಕಲ್ಯಾಣ ಚಾಲುಕ್ಯರಿಗೆ ಸಂಬಂಧಿಸಿದ ನಾಲ್ಕು ಶಾಸನಗಳು ದೊರೆತಿವೆ. ಇವು ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೧ರಲ್ಲಿ ಪ್ರಕಟಗೊಂಡಿದ್ದು ಕ್ರಿ.ಶ. ೧೦೨೧ರಿಂದ ೧೧೭೨ರ ನಡುವಿನ ಕಾಲದ ಉಲ್ಲೇಖಗಳನ್ನು ಹೊಂದಿವೆ. ಈ ಶಾಸನಗಳಲ್ಲಿ ಚಾಲುಕ್ಯ ಜಗದೇಕಮಲ್ಲದೇವ ಮತ್ತವನ ದಂಡನಾಯಕ ಪುಳಲಮಯ್ಯ,



ನೊಳಂಬ ಸಾಮಂತ ಬ್ರಹ್ಮದಿರಾಜ, ತ್ರೈಲೋಕ್ಯಮಲ್ಲದೇವನ ಮಹಾಮಂಡಳೇಶ್ವರ ಸಿಂಘಣದೇವ ಹಾಗೂ ಮೇಗಣಗೆರೆಯ ದಂಡನಾಯಕ ಕೇಸಿಮಯ್ಯ, ಶಾಸನಕವಿ ಬ್ರಹ್ಮದೇವ ಮುಂತಾದವರ ಉಲ್ಲೇಖಗಳು ಕಂಡುಬರುತ್ತವೆ.

ಕ್ರಿ.ಶ. ೧೧೭೨ರ ಇನ್ನೊಂದು ಶಾಸನದಲ್ಲಿ ಉಚ್ಚಂಗಿ ಪಾಂಡ್ಯರ ವಂಶಾವಳಿ ಉಲ್ಲೇಖಿತವಾಗಿದೆ. ಇದೇ ಗ್ರಾಮದಲ್ಲಿ ಕ್ರಿ.ಶ. ೧೭೧೮ರ ಕಾಲಮಾನದ ಉಲ್ಲೇಖವುಳ್ಳ ಶಾಸನ ದೊರೆತಿದೆ ಎಂದು ಕುಂ.ಬಾ. ಸದಾಶಿವಪ್ಪ ನವರು ಉಲ್ಲೇಖಿಸುತ್ತಾರೆ. ಈ ಶಾಸನದಲ್ಲಿ **'ಬಸವಂತ ರಾಯ'**ರ ಕಾರ್ಯಕರ್ತರಾದ ಮೇಗಣಗೆರೆಯ ಸ್ಥಾನಿಕ ಬಾಬಾ ನಾಯಕನು ಸಿದ್ಧನಬಾವಿಯನ್ನು ಕಟ್ಟಿಸಿ ಕಲ್ಲೇಶ್ವರ ಹಾಗೂ ಅನಂತಶಯನ ಗುಡಿಯನ್ನು ಜೀರ್ಣೋದ್ಧಾರ ಮಾಡಿಸಿದ ನೆಂದು ಹೇಳಿದ್ದಾರೆ. ಈ ಹಿನ್ನೆಲೆಯಲ್ಲಿ ನಾನು ಈ ಪರಿಸರದಲ್ಲಿ ಕ್ಷೇತ್ರ ಕಾರ್ಯವನ್ನು ಕೈಗೊಂಡು ಹೆಚ್ಚಿನ ಐತಿಹಾಸಿಕ ವಿಚಾರಗಳಿಗಾಗಿ ಪರಿಶೀಲನೆ ನಡೆಸಿದಾಗ ಕಂಡುಬಂದ ಅಂಶಗಳೆಂದರೆ : ಹಿರೇಮ್ಯಾಗಳಗೇರಿ ಗ್ರಾಮವು ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಒಂದು ಪ್ರಮುಖ ಕೇಂದ್ರವಾಗಿತ್ತು. ಅನಂತರ ಈ ಗ್ರಾಮವು, ವಿಜಯನಗರ ಸಾಮ್ರಾಜ್ಯ ಅಸ್ತಿತ್ವಕ್ಕೆ ಬಂದ ನಂತರ ಹರಪನಹಳ್ಳಿ ಪಾಳೆಯಗಾರರ ಕಾಲದಲ್ಲಿ ಅವರ ಪ್ರಮುಖ ಆಡಳಿತ ಕೇಂದ್ರವಾಗಿತ್ತು ಎಂದು ಊಹಿಸ

* ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಇತಿಹಾಸ ವಿಭಾಗ, ಎ.ಆರ್.ಜಿ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ದಾವಣಗೆರೆ-೫೭೭೦೦೧.

ಬಹುದು ; ಏಕೆಂದರೆ ಗ್ರಾಮದ ಸುತ್ತಲೂ ದೊಡ್ಡ ಬಲಿಷ್ಠ ಕೋಟೆ ಇತ್ತು ಎಂದು ಹಾಗೂ ಇದರ ಸುತ್ತಲೂ ಬಹು ದೊಡ್ಡ ಕಂದಕವನ್ನು ನಿರ್ಮಿಸಿ ಅದಕ್ಕೆ ನೀರು ತುಂಬಿಸಲಾಗುತ್ತಿತ್ತು ಎಂದು ಸ್ಥಳೀಯರ ಹೇಳಿಕೆಗಳಿಂದ ತಿಳಿದುಬರುತ್ತದೆ. ಇದರ ಅವಶೇಷಗಳನ್ನು ಇಂದಿಗೂ ನೋಡಬಹುದಾಗಿದೆ. ಕೋಟೆ ಒಳಗಡೆ ಗ್ರಾಮ ವಸತಿ ಕಂಡುಬರುತ್ತದೆ. ಹರಪನಹಳ್ಳಿ ಪಾಳೆಯಗಾರನು ತನ್ನ ಹಿರೇಮಗಳನ್ನು ಈ ಊರಿನ ನಾಯಕನಿಗೆ ವಿವಾಹ ಮಾಡಿ ಕೊಟ್ಟಿದ್ದನಂತೆ, ಅದರಿಂದಾಗಿ ಈ ಊರಿಗೆ ಹಿರೇಮ್ಯಾಗಳಗೇರಿ ಎಂದು ಹೆಸರು ಬಂತೆಂದು ಸ್ಥಳೀಯರು ಹೇಳುತ್ತಾರೆ.

ಪಾಳೆಯಗಾರರಿಗೆ ಸಂಬಂಧಿಸಿದ ಆಂಜನೇಯ ದೇವಾಲಯ, ದೀಪಸ್ಥಂಭ, ಉಯ್ಯಾಲೆ ಕಂಬ, ಓಕಳಿಗುಂಡಿ ಇಲ್ಲಿ ಕಂಡುಬರುತ್ತವೆ. ಪ್ರತಿವರ್ಷ ವಿಜಯದಶಮಿ ದಿನ ಆಂಜನೇಯಸ್ವಾಮಿಯ ಉತ್ಸವ ನಡೆಸಿ ಓಕಳಿ ಆಟದ ನಂತರ ಸ್ವಾಮಿಯ ಮೂರ್ತಿಯನ್ನು ಉಯ್ಯಾಲೆ ಕಂಬದಲ್ಲಿ ಜೋಕಾಲಿ ಆಡಿಸುತ್ತಾರೆ. ಈ ಆಂಜನೇಯ ದೇವಸ್ಥಾನ ಕೋಟೆಯ ಬಾಗಿಲಿಗೆ ಇದೆ. ಇದರ ಮುಂಭಾಗದ ರಸ್ತೆಯನ್ನು ರಾಜಬೀದಿ ಎಂದು ಕರೆಯುತ್ತಾರೆ.

ಇದೇ ಗ್ರಾಮದಲ್ಲಿ ಉಚ್ಚಂಗಿ ಅಮ್ಮನ ಉತ್ಸವಾಂಬ ದೇವಸ್ಥಾನವಿದೆ. ಸ್ಥಳೀಯರ ಹೇಳಿಕೆಯಂತೆ ಈ ಗ್ರಾಮ ಉಚ್ಚಂಗೆಮ್ಮನ ತವರು ಮನೆ ಎಂಬ ನಂಬಿಕೆಯಿದೆ. ದೇವಿಯ ರಥೋತ್ಸವದಂದು ಪಕ್ಕದ ಉಚ್ಚಂಗಿದುರ್ಗದಿಂದ ದೇವಿಯನ್ನು ಹೆಣ್ಣುಮಕ್ಕಳನ್ನು ತವರು ಮನೆಗೆ ಕರೆತರುವ ರೀತಿಯಲ್ಲಿ ಶಾಸ್ತ್ರೋಕ್ತ ವಿಧಿವಿಧಾನದಿಂದ ಕರೆತಂದು ಜಾತ್ರೆಯ ತರುವಾಯ ಸರ್ವ ಬಾಗಿನಗಳೊಂದಿಗೆ ಕಳುಹಿಸಿಕೊಡುತ್ತಾರೆ.

೩. ಇಲ್ಲಿಯ ಬಸವಣ್ಣ ದೇವಸ್ಥಾನವನ್ನು ಹಾಲಸ್ವಾಮಿ ಮಠ ಎಂದು ಕರೆಯುತ್ತಾರೆ. ಬಸವಣ್ಣನ ಶಿಲ್ಪಗಳಿವೆ. ಇಲ್ಲಿಯ ನಂದಿಯ ಶಿಲ್ಪದ ಮೇಲೆ ಶಿವಪಾರ್ವತಿಯರು ಆಸೀನರಾಗಿ ಸವಾರಿ ಮಾಡುತ್ತಿರುವ ಅಪರೂಪದ ವಿಶಿಷ್ಟ ಶಿಲ್ಪ ಆಕರ್ಷಣೀಯವಾಗಿದೆ. ಇದೇ ದೇವಸ್ಥಾನದ ಮುಂಭಾಗದಲ್ಲಿ ಇರುವ ಶಾಸನದಲ್ಲಿ ಅನಂತಶಯನನ ಮನೋಹರವಾದ ಶಿಲ್ಪವಿದೆ. ಇದೇ ಗ್ರಾಮದಲ್ಲಿ ೫೦ಕ್ಕೂ ಹೆಚ್ಚು ಸಣ್ಣಪುಟ್ಟ ದೇವಾಲಯಗಳು ಕಂಡುಬರುತ್ತವೆ.

೪. ಪಾಳೆಯಗಾರರ ಕಾಲದ ಕುಸ್ತಿ ಕ್ರೀಡೆಗಾಗಿ ಗರಡಿ ಮನೆ ಇಲ್ಲಿತ್ತು. ಇಂದು ಸಂಪೂರ್ಣ ಶಿಥಿಲವಾಗಿದ್ದು ಇತ್ತೀಚೆಗೆ ಹೊಸ ಗರಡಿ ಮನೆಯನ್ನು ಕರ್ನಾಟಕ ಸರ್ಕಾರ ನಿರ್ಮಿಸಿದೆ.

೫. ಸ್ಥಳೀಯರು ಹೇಳುವಂತೆ ಇಲ್ಲಿಯ ನಾಯಕರು ಉಚ್ಚಂಗಿದುರ್ಗದ ನಾಯಕರಿಗೆ, ಆನಂತರ ಹರಪನಹಳ್ಳಿ ನಾಯಕರಿಗೆ, ವಸಾಹತು ಕಾಲದಲ್ಲಿ ಬ್ರಿಟಿಷರಿಗೆ ತಮ್ಮ ಕಪ್ಪಕಾಣಿಕೆ ಹಾಗೂ ಕಂದಾಯ ಗಳನ್ನು ಸಲ್ಲಿಸುತ್ತಿದ್ದರಂತೆ. ವಸಾಹತು ಕಾಲದ ಕೆಲ ಕಟ್ಟಡಗಳು ಇಲ್ಲಿ ಕಂಡು ಬರುತ್ತವೆ. ಪಾಳೆಯಗಾರರ ಕಾಲಕ್ಕೆ ಸಂಬಂಧಿಸಿದ ಒಂದು ವೀರಗಲ್ಲು ಇಲ್ಲಿ ಕಂಡುಬರುತ್ತದೆ. ವೀರನು ಕುದುರೆಯೊಂದಿಗೆ ಇದ್ದು ವೀರ ಮತ್ತು ಕುದುರೆ ಎರಡು ಶೃಂಗರಿಸಲ್ಪಟ್ಟಿವೆ. ನನ್ನ ಪರಿಶೀಲನೆಯಲ್ಲಿ ಮಾಡ್ಲಗೆರೆಯಲ್ಲಿ ಖಡ್ಗಗಳು, ಕಹಳೆಗಳು ಕಂಡುಬಂದಿವೆ. ಈ ಎಲ್ಲ ಪ್ರಾಚ್ಯಾವ ಶೇಷಗಳ ಅವಲೋಕನದ ಆಧಾರದ ಮೇಲೆ ಹಿರೇಮ್ಯಾಗಳ ಗೇರಿ ಹರಪನಹಳ್ಳಿ ಪಾಳೆಯಗಾರರ ಕಾಲದಲ್ಲಿ ಅವರ ಸಾಮಂತನ ಆಳ್ವಿಕೆಗೆ ಒಳಪಟ್ಟಿದ್ದ ಒಂದು ಪ್ರಮುಖ ಆಡಳಿತ ಕೇಂದ್ರವಾಗಿತ್ತು ಎಂದು ಅಭಿಪ್ರಾಯಪಟ್ಟರು.



ಚಿಕ್ಕಮ್ಯಾಗಳಗೇರಿ

ಹಿರೇಮ್ಯಾಗಳಗೇರಿಗೆ ಸಮೀಪದಲ್ಲಿಯೇ ಚಿಕ್ಕಮ್ಯಾಗಳ ಗೇರಿ ಇದ್ದು, ಹರಪನಹಳ್ಳಿ ಪಾಳೆಯಗಾರನೊಬ್ಬ ತನ್ನ ಚಿಕ್ಕ ಮಗಳನ್ನು ಮದುವೆ ಮಾಡಿಕೊಟ್ಟಿದ್ದನೆಂದೂ ವರದಕ್ಷಿಣೆಯಾಗಿ ಒಂದು ಕೆರೆಯನ್ನು ಕಟ್ಟಿಸಿಕೊಟ್ಟನೆಂದೂ, ಆ ಕಾರಣದಿಂದಲೇ ಈ ಊರಿಗೆ ಚಿಕ್ಕ + ಮಗಳ + ಕೆರೆ = ಚಿಕ್ಕಮ್ಯಾಗಳಗೇರಿ ಎಂಬ ಹೆಸರು ಬಂದಿತೆಂದು ಸ್ಥಳೀಯರು ಹೇಳುತ್ತಾರೆ. ಆದರೆ ಹರಪನಹಳ್ಳಿಯ ಪಾಳೆಗಾರನ ಹೆಸರು ತಿಳಿದು ಬರುವುದಿಲ್ಲ. ಈ ಊರಿನ ಕೆರೆಯ ಏರಿಯ ಮೇಲೆ ಕಲ್ಯಾಣ ಚಾಳುಕ್ಯರ ಕಾಲದ ದೇವಾಲಯ ಕಂಡುಬರುತ್ತದೆ. ಇಲ್ಲಿಯೇ ಒಂದು ಅಪ್ರಕಟಿತ ಶಾಸನ ಇದೆ. ತುಂಬಾ ಅಳಿಸಿ ಹೋಗಿದ್ದು ಸ್ಥಳೀಯರು ಎಣ್ಣೆ ಹಾಕಿ ಅದನ್ನು ಓದಲು ಬಾರದಂತೆ ಮಾಡಿದ್ದಾರೆ.

ಈ ಊರಿನಲ್ಲಿಯೂ ಸಹ ಕೋಟೆ ಹಾಗೂ ಅದನ್ನು ಸುತ್ತುವರೆದ ಬೃಹತ್ತಾದ ಕಂದಕ ಇತ್ತಂತೆ. ಇಂದು ಕೋಟೆಯ ಅವಶೇಷಗಳು ಕಂಡುಬರುವುದಿಲ್ಲ. ಆದರೆ ಕಂದಕದ ಅವಶೇಷಗಳು ಕಂಡುಬರುತ್ತವೆ. ಕೋಟೆಯ ಬಾಗಿಲಿಗೆ ಅಂಟಿಕೊಂಡಂತೆ ಆಂಜನೇಯ ಗುಡಿ, ದೀಪಸ್ತಂಭ ಕಂಡುಬರುತ್ತವೆ. ಇದರ ಆಧಾರದ ಮೇಲೆ ಹರಪನಹಳ್ಳಿ ಪಾಳೆಯಗಾರರ ಕಾಲದಲ್ಲಿ ಇದೊಂದು ಪ್ರಮುಖ ಕೇಂದ್ರವೆಂದು ಗಮನಿಸಬಹುದು. ದುರ್ಗಾಂಬಿಕಾ ದೇವಾಲಯ ಆಧುನಿಕವಾಗಿದ್ದು ದೇವತೆಯರ ಜೋಡಿ ಮೂರ್ತಿಗಳು ಕಂಡುಬರುತ್ತವೆ. ಸ್ಥಳೀಯರು ಈ ಮೂರ್ತಿಗಳನ್ನು ಅಕ್ಕತಂಗಿಯರು ಎಂದು ಕರೆಯುತ್ತಾರೆ.

ಮಾಗಾನಹಳ್ಳಿ

ಮಾಗಾನಹಳ್ಳಿ ದಾವಣಗೆರೆ ತಾಲ್ಲೂಕಿನ ಒಂದು ಗ್ರಾಮವಾಗಿದ್ದು ಹಿರೇಮ್ಯಾಗಳಗೇರಿಯಿಂದ ಆರು ಕಿ.ಮೀ. ದೂರದಲ್ಲಿದೆ. ಈ ಗ್ರಾಮದ ಹೆಸರಿನ ಮೂಲ ಕುರಿತಂತೆ ಮಗಳ+ಗಂಡನ+ಹಳ್ಳಿ= ಮಾಳಗೊಂಡನಹಳ್ಳಿ ಆಯಿತೆಂದು ಕ್ರಮೇಣ ಇದು ಮಾಗಾನಹಳ್ಳಿ ಆಯಿತು ಎಂದು ಸ್ಥಳೀಯರು ಹೇಳುತ್ತಾರೆ. ಇಲ್ಲಿಯೂ ಸಹ ಕಲ್ಯಾಣ ಚಾಳುಕ್ಯರ ಕಾಲದ ಪ್ರಾಚೀನ ದೇವಾಲಯವಿದ್ದು ಇಂದು ಆಧುನಿಕರಣಗೊಂಡಿದೆ. ಮಾಗಾನಹಳ್ಳಿ, ಹರಪನಹಳ್ಳಿ ಪಾಳೆಯಗಾರರಿಗೆ ದಕ್ಷಿಣದ ಗಡಿ ಆಗಿತ್ತು ಎಂದು ಕುಂ.ಬಾ. ಸದಾಶಿವಪ್ಪ ಉಲ್ಲೇಖಿಸಿದ್ದಾರೆ. ನನ್ನ ಪರಿಶೀಲನೆಯಲ್ಲಿ ಹಾಗೂ ಸ್ಥಳೀಯರು ಹೇಳುವಂತೆ ಈ ಗ್ರಾಮಕ್ಕೆ ಒಂದು ಬೃಹತ್ತಾದ ಕೋಟೆ ಹಾಗೂ ಸುತ್ತಲೂ ಒಂದು ಕಂದಕ ಇದ್ದಿತೆಂದು ಗೊತ್ತಾಗುತ್ತದೆ. ಆದರೆ ಇಂದು ಕೋಟೆಯ ಅವಶೇಷಗಳಾವುದು ಕಂಡುಬರುವುದಿಲ್ಲ. ಕಂದಕದ ನಿದರ್ಶನಗಳು ಮಾತ್ರ ಕಂಡುಬರುತ್ತವೆ. ಕೋಟೆಯ ಬಾಗಿಲಲ್ಲಿ ಪಾಳೆಯಗಾರರ ಕಾಲದ್ದು ಎಂದು ಹೇಳಬಹುದಾದ ಬಾವಿ, ಕಟ್ಟಡ ಹಾಗೂ ಆಂಜನೇಯ ದೇವಾಲಯಗಳು ಕಂಡುಬರುತ್ತವೆ. ಕೋಟೆಪ್ರದೇಶದಲ್ಲಿ ಸರ್ಕಾರದ ಆಶ್ರಯ ಮನೆಗಳು ತಲೆಯೆತ್ತಿವೆ. ಆಂಜನೇಯ ದೇವಾಲಯ ಸಂಪೂರ್ಣ ಶಿಥಿಲವಾಗಿದೆ. ಮಾಡ್ಲಗೇರಿ ನಿರ್ಮಿತ ಅನೇಕ ಖಡ್ಗಗಳು ಇಲ್ಲಿ ಕಂಡುಬಂದಿವೆ. ಇದೇ ಗ್ರಾಮದಲ್ಲಿ ನೂತನ ವೆಂಕಟೇಶ್ವರ ದೇವಾಲಯ ನಿರ್ಮಾಣ ಹಂತದಲ್ಲಿದೆ, ಇದರ ಮುಂಭಾಗದಲ್ಲಿ ಒಂದು ಪ್ರಾಚೀನ ಗೋಕಲ್ಲು ಕಂಡುಬಂದಿದೆ.

ಶಾಸನ ಪರಿಶೋಧನೆ

ಬಡಿಗೇರ್ ಕಾಳಚಾರಿ ಹೊಲದಲ್ಲಿ ಹರಪನಹಳ್ಳಿ ಪಾಳೇಯಗಾರರ ಕಾಲದ ಒಂದು ಅಪ್ರಕಟಿತ ಶಾಸನವು ಪತ್ತೆ ಆಗಿದೆ. ಇದು ೩ ೧/೨ ಅಡಿ ಎತ್ತರವಾಗಿದ್ದು ೨ ೧/೨ ಅಡಿ ಅಗಲವಾಗಿದೆ. ೧೬ ಸಾಲುಗಳನ್ನು ಹೊಂದಿರುವ ಈ ಶಾಸನದ ಮೇಲ್ಭಾಗದಲ್ಲಿ ಸೂರ್ಯ ಚಂದ್ರರನ್ನು ಕೊರೆಯಲಾಗಿದೆ. ಸ್ವಸ್ತಿಶ್ರೀ ಶ್ಲೋಕದೊಂದಿಗೆ ಆರಂಭವಾಗುವ ಈ ಶಾಸನ ಪ್ಲವಂಗ ಸಂವತ್ಸರವನ್ನು ಉಲ್ಲೇಖಿಸುತ್ತದೆ. ಲಿಪಿ ಆಧಾರದ ಮೇಲೆ ಕ್ರಿ.ಶ. ೧೭–೧೮ನೇ ಶತಮಾನವೆಂದು ಹೇಳಬಹುದು.

ಹಿಟ್ಟುಗಲ್ಲಿನಲ್ಲಿ ರಚಿತವಾಗಿರುವ ಈ ಶಾಸನದ ಸುತ್ತ ತುದಿಗಳು ಅಳಿಸಿಹೋಗಿದ್ದು ಮಧ್ಯಭಾಗ ಮಾತ್ರ ಸ್ಪಷ್ಟವಾಗಿ ಓದಲು ಸಾಧ್ಯವಾಗುತ್ತದೆ, ಇದೊಂದು ದಾನ ಶಾಸನವಾಗಿದ್ದು (ಮಾ)ಧವಾಚಾರ್ಯ ಎಂಬುವವರಿಗೆ ಉಂಬಳಿ ನೀಡಿದ ಉಲ್ಲೇಖವಿದೆ. ಇದನ್ನು ದೃಢಪಡಿಸಲು ನಾಲ್ಕು ದಿಕ್ಕಿನಲ್ಲಿ ಲಿಂಗಮುದ್ರೆಗಳು ಸಹ ನನ್ನ ಪರಿಶೀಲನೆಯಲ್ಲಿ ಕಂಡುಬಂದಿವೆ.

ಗ್ರಾಮದಲ್ಲಿ ಪಾಳೆಯಗಾರರ ಕಾಲದ ಬಾವಿಗಳು ಕಂಡುಬರುತ್ತವೆ. ಕೃಷಿ ಚಟುವಟಿಕೆಗಳಲ್ಲಿ ಉಪಯೋಗಿಸುವ ಅಸಂಖ್ಯ ರೋಣಗಲ್ಲುಗಳು ಕಂಡುಬಂದಿವೆ. ಆ ಕಾಲದ ಕೃಷಿ ಸಮೃದ್ಧಿಯ ಮೇಲೆ ಇವು ಬೆಳಕು ಚೆಲ್ಲುತ್ತವೆ. ಹಿಂದೆ ಈ ಗ್ರಾಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬ್ರಾಹ್ಮಣ ಕುಟುಂಬಗಳಿದ್ದು, ಭೂಮಿಯನ್ನೂ ಹೊಂದಿದ್ದು, ಅವರೆಲ್ಲಾ ಈಗ ವಲಸೆ ಹೋಗಿರುವರು ಎಂದು ಸ್ಥಳೀಯರು ಹೇಳುತ್ತಾರೆ.

ಈ ಮೂರು ಗ್ರಾಮಗಳ ಪ್ರಾಚ್ಯಾವಶೇಷಗಳ ಪರಿಶೀಲನೆಯಿಂದ ಕಂಡುಬರುವುದೇನೆಂದರೆ ; ಈ ಹರಪನಹಳ್ಳಿ ಪಾಳೆಯಗಾರರ ಆಡಳಿತಕ್ಕೆ ಒಳಪಟ್ಟ ಪ್ರಬಲ ಸೈನಿಕ ಕೇಂದ್ರಗಳು ಇವಾಗಿದ್ದು ಗಡಿಭಾಗದ ರಕ್ಷಣೆಯಲ್ಲಿದ್ದವೆಂದು ಮಹತ್ತರವಾದ ಪಾತ್ರಗಳನ್ನು ವಹಿಸುತ್ತಿದ್ದವು ಎಂದು ಅಭಿಪ್ರಾಯಪಡಬಹುದು.

[ಈ ಪ್ರಬಂಧವನ್ನು ಸಿದ್ಧಪಡಿಸುವಲ್ಲಿ ಡಾ. ಎಂ. ಕೊಟ್ರೇಶ್, ಉಪನ್ಯಾಸಕರಾದ ಶಂಕರಯ್ಯ, ಮಲ್ಲಿಕಾರ್ಜುನ ಮತ್ತು ಕ್ಷೇತ್ರ ಕಾರ್ಯದಲ್ಲಿ ನನ್ನೊಂದಿಗೆ ಇದ್ದ ಸಹೋದರ ಮೃತ್ಯುಂಜಯ, ಅಶ್ವಿನ್‌ಕುಮಾರ್ ಜವಳಿ ಹಾಗೂ ಮಾಹಿತಿ ನೀಡಿದ ಸ್ಥಳೀಯರಿಗೂ ಕೃತಜ್ಞತೆಗಳು.]

ಆಧಾರಸೂಚಿ

೧. ಡಾ. ದೇವರಕೊಂಡಾರೆಡ್ಡಿ ಮತ್ತು ಇತರರು (ಸಂ), ೧೯೯೮, **ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–೧**, ಬಳ್ಳಾರಿ ಜಿಲ್ಲೆ, ಹಂಪಿ.
೨. ಡಾ. ಎಂ. ಕೊಟ್ರೇಶ್, ೨೦೦೬, **ಐತಿಹಾಸಿಕ–ಧಾರ್ಮಿಕ ಶ್ರೀಕ್ಷೇತ್ರ ಉಚ್ಚಂಗಿದುರ್ಗ**, ಸಮ್ಮೂರ ಪ್ರಕಾಶನ, ಉಚ್ಚಂಗಿದುರ್ಗ.
೩. ಡಾ. ಎಂ. ಕೊಟ್ರೇಶ್, ೨೦೧೦, **ಹರಪನಹಳ್ಳಿ ತಾಲ್ಲೂಕಿನ ರಕ್ಷಣಾ ಸ್ಮಾರಕಗಳು**, ಪ್ರಸಾರಾಂಗ, ಕ.ವಿ.ವಿ. ಹಂಪಿ.
೪. ಕುಂ.ಬಾ. ಸದಾಶಿವಪ್ಪ, ೨೦೦೬, **ಹರಪನಹಳ್ಳಿ ಪಾಳೆಯಗಾರರ ಇತಿಹಾಸ ದರ್ಶನ**, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.
೫. ಕುಂ.ಬಾ. ಸದಾಶಿವಪ್ಪ, ೨೦೦೮, **ಹರಪನಹಳ್ಳಿ ತಾಲ್ಲೂಕು ಪರಿಚಯ**, ಮಾಲತೇಶ ಪ್ರಕಾಶನ, ಹರಪನಹಳ್ಳಿ.
೬. ಟಿ. ಗಿರಿಜಾ, ೨೦೦೬, ದಾವಣಗೆರೆ, ಇದು ನಮ್ಮ ಜಿಲ್ಲೆ, ನಿಹಾರಿಕಾ ಪ್ರಕಾಶನ, ದಾವಣಗೆರೆ.
೭. ಬಸವರಾಜ ಕುಂಚೂರು, ೨೦೧೦, ನಮ್ಮೂರ ಕೆರೆಗಳು, ಶ್ರೀಚಕ್ರ ಪ್ರಕಾಶನ, ಕುಂಚೂರು, ಹರಪನಹಳ್ಳಿ.
೮. **ಪ್ರಜಾವಾಣಿ** ದಿನಪತ್ರಿಕೆ, ೮ನೇ ಮಾರ್ಚ್ ೨೦೧೨.
೯. ಕ್ಷೇತ್ರಕಾರ್ಯ, ದಿನಾಂಕ ೫ನೇ ಆಗಸ್ಟ್ ೨೦೧೨.

೭

ತಾಳಿಕೋಟೆಯ ಪ್ರಾಚ್ಯಾವಶೇಷಗಳು

ಶಿವಪ್ಪ ಎನ್. ನೀರಲಗಿ*

ಹಗರಟಿಗೆ ಮುನ್ನೂರರಲ್ಲಿರುವ ಪಟ್ಟಣ ತಾಳಿಕೋಟೆಯು ಅನೇಕ ಐತಿಹಾಸಿಕ ಘಟನಾವಳಿಗಳಿಂದ ಪ್ರಸಿದ್ಧವಾಗಿದೆ. ತಾಳಿಕೋಟೆಯ ಯುದ್ಧ, ತಾಳಿಕೋಟೆಯ ಕೋಟೆ, ತಾಳಿಕೋಟೆಯ ದ್ಯಾಮವ್ವ, ತಾಳಿಕೋಟೆಯ ದೇಗುಲಗಳು, ಪಾಶುಪತ ಕಾಳಾಮುಖರ ಭೈರವ ಆರಾಧನಾ ಕೇಂದ್ರ ಹಾಗೂ ಬೃಹತ್ ಮತ್ತು ನೂತನ ಶಿಲಾಯುಗ ಸಂಸ್ಕೃತಿಯ ನೆಲೆಯಾಗಿಯೂ ಈ ಊರು ಖ್ಯಾತಿಯನ್ನು ಪಡೆದಿದೆ.

ನೂತನ ಶಿಲಾಯುಗ ಸಂಸ್ಕೃತಿ : ನೂತನ ಶಿಲಾಯುಗ ಸಂಸ್ಕೃತಿಗೆ ಸೇರಿದ ದಪ್ಪ, ಕೆಂಪು ಹಾಗು ಕಪ್ಪು ಮಡಿಕೆ ಚೂರುಗಳು ಈ ಸ್ಥಳದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಲಭ್ಯವಾಗಿವೆ. ಕಪ್ಪು ಕರಿಕಲ್ಲಿನಲ್ಲಿ ತಯಾರಿಸಿದ ಅರ್ಧಚಂದ್ರಾಕೃತಿಯ ನಯಗೊಳಿಸಿದ ಕೈಗೊಡಲಿಯು ಸಹ ಈ ಸ್ಥಳದಲ್ಲಿ ಲಭ್ಯವಾಗಿದೆಯಲ್ಲದೆ ಅರೆಯುವ ಕಲ್ಲುಗಳೂ ಸಹ ಸಿಕ್ಕಿವೆ.

ಬೃಹತ್ ಶಿಲಾಯುಗ ಸಂಸ್ಕೃತಿಯ ನೆಲೆ : ತಾಳಿಕೋಟೆಯಿಂದ ಪೂರ್ವಕ್ಕೆ ದಕ್ಷಿಣೋತ್ತರವಾಗಿ ಹರಿಯುವ ಹಳ್ಳವಿದ್ದು, ಇದನ್ನು 'ಮೈಲೇಶ್ವರ ಹಳ್ಳ' ವೆಂದು ಕರೆಯುತ್ತಾರೆ. ಈ ಹಳ್ಳವು ಮೊದಲು ವರ್ಷದ ಹನ್ನೆರಡು ತಿಂಗಳು ತುಂಬಿ ಹರಿಯುತ್ತಿತ್ತು. ಈ ಹಳ್ಳದ ನೀರ ಹಿಂದೆ ಕಾಡು ಪ್ರಾಣಿಗಳಿಗೂ ಹಾಗೂ ಆದಿಮಾನವನಿಗೂ ಆಸರೆಯಾಗಿರಬಹುದು. ಈ ಹಳ್ಳದ ದಡದಲ್ಲಿಯೇ ಪೂರ್ವಕ್ಕೆ ದಾವೂದ್ ಲಾಹೋರಿಯವರ ಹೊಲವಿದ್ದು, ಈ ಲಾಹೋರಿಯವರು ಒಂದು ಎಕರೆಹೊಲದಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಯ ಕುರುಹುಗಳಾದ ಕಬ್ಬಿಣದ ಕಿಟ್ಟದ ಉಂಡೆಗಳು ಹೊಲದ ತುಂಬೆಲ್ಲಹರಡಿವೆ ಈ ಹೊಲದಲ್ಲಿ ಸ್ಥಳೀಯ ಸೇದಿಕಲ್ಲಿನಿಂದ ಕಟ್ಟಿದ ಎರಡು ಪ್ರಾಚೀನ ಬಾವಿಗಳಿವೆ. ಅದರಲ್ಲಿ ಒಂದನ್ನು 'ದ್ಯಾಮವ್ವನ ಬಾವಿಯೆಂದು ಕರೆಯುತ್ತಾರೆ. ತಾಳಿಕೋಟೆಗೆ ಈ ದ್ಯಾಮವ್ವನೆಂಬ ಕುರುಬರ ಸ್ತ್ರೀಯನ್ನು ಬಲಿಕೊಡಲಾಗಿತ್ತು. ಈ ದ್ಯಾಮವ್ವನ ಮನೆತನದವರು ತಾಳಿಕೋಟೆಗೆ ಕುರುಬ ಗಾವುಂಡರಾಗಿದ್ದರು.



ಬ್ರಾಹ್ಮಿ ಅಕ್ಷರದ ತುಣುಕು ಶಾಸನಶಿಲೆ : ಪ್ರಾಚೀನ ಬ್ರಾಹ್ಮಿಲಿಪಿಯನ್ನು ಹೊಂದಿರುವ ಸೇದಿ ತುಣುಕು ಶಿಲೆಯು ಸಹ ಇದೆ ಹೊಲದಲ್ಲಿಯೇ ದೊರಕಿದ್ದು, ಅಕ್ಷರಗಳ ಸ್ವರೂಪವನ್ನು ಅವಲೋಕಿಸಿದಾಗ ಈ ಲಿಪಿಗಳು ಸನ್ನತಿಯ ಲಿಪಿಗಳನ್ನು ಹೋಲುತ್ತಿದ್ದು, ಕ್ರಿ.ಪೂ. ಒಂದನೇ ಶತಮಾನಕ್ಕೆ ಸೇರುತ್ತದೆ. ತ್ರುಟಿತ ಶಾಸನದ ಲಭ್ಯವಿರುವ ಅಕ್ಷರಗಳನ್ನು 'ರಗರಾಶಿ'ಯೆಂದು ಓದಲಾಗಿದೆ. ಕ್ರಿ.ಶ. ೧೧೮೪ರ ತಾಳಿಕೋಟೆಯ ನಾಲ್ಕನೇ ಸೋಮೇಶ್ವರನ ಶಾಸನವು 'ಬೌದ್ಧರ ನಾಲಿಗೆಯಂ ಕೀಳ್ವವವರು' ಎಂದು ಉಲ್ಲೇಖಿಸಿರುವುದರಿಂದ ಹಿಂದೆ ಈ ಸ್ಥಳದಲ್ಲಿ 'ಬೌದ್ಧ ಸ್ತೂಪ ಚೈತ್ಯಗಳು ಇರಬಹುದು.




* ರಾಘವ ನಿಲಯ ದುರ್ಗಿಗುಡಿ, ಆನೇ ಅಡ್ಡರಸ್ತೆ, ಪಾರ್ಕ್ ಬಡಾವಣೆ, ಶಿವಮೊಗ್ಗ.



ಬೃಹತ್ ಶಿಲಾಯುಗದ ಕಬ್ಬಿಣದ ಕಿಟ್ಟ, ಅರೆಯುವ ಕಲ್ಲು

ಹೀಗಾಗಿ ಈ ಸ್ಥಳದಲ್ಲಿ ಶಾತವಾಹನರ ಕಾಲದ ಸ್ತೂಪ ಅಥವಾ ಚೈತ್ಯ ನಾಶವಾಗಿರಬಹುದಾಗಿದೆ.

ಬ್ರಹ್ಮಜೆಟ್ಟಿಯ ದೇವಾಲಯ : ಈ ಊರಿನ ಸ್ಥಳೀಯರ ಹೇಳಿಕೆಯ ಪ್ರಕಾರ ಈ ಊರನ್ನು ಹಿಂದೆ ಕುರುಬ ಗಾವುಂಡರಾಳುತ್ತಿದ್ದು (ಕ್ರಿ.ಶ. ೧೧೮೪ರ ಮಿಣಜಗಿಯ ನಾಲ್ಕನೇ ಸೋಮೇಶ್ವರನ ಶಾಸನ) ಅವರು ತಮ್ಮ ಕುಲದೈವವಾದ ಬ್ರಹ್ಮಜೆಟ್ಟಿಗೆ ಶಿಶು ಬಲಿಯನ್ನು ಅರ್ಪಿಸುತ್ತಾರೆ. ಆಗ ಈ ತಾಳಿಕೋಟೆಯ ಜನಸಮುದಾಯವೂ ಕುರುಬರ ಈ ಶಿಶುಬಲಿಯನ್ನು ಪ್ರತಿಭಟಿಸಿದ್ದು ಅವರಿಂದ ಊರ ಗೌಡಿಕೆಯನ್ನು ಕಿತ್ತುಕೊಳ್ಳುತ್ತಾರೆ. ಮೂಲ ಜೆಟ್ಟಿಂಗರಾಯನ ದೇವಸ್ಥಾನವನ್ನು ಮರಗಮ್ಮನ ದೇವಸ್ಥಾನವನ್ನಾಗಿ ನಿರ್ಮಿಸು



ತ್ತಾರೆ. ಈಗ ಈ ಸ್ಥಳವು ದಲಿತರ ಕೇರಿ ಆಗಿ ಮಾರ್ಪಟ್ಟಿದೆ. ಈ ಊರಿನ ಮೂಲಿಗರಾದ ಕುರುಬ ಗಾವುಂಡರು ಸಮೀಪದಲ್ಲಿಯೇ ಇರುವ ಮಸ್ಕಾನಾಳಕ್ಕೆ ಪಲಾಯನ ಗೈದಿದ್ದಾರೆ. ಬ್ರಹ್ಮಜೆಟ್ಟಿಂಗ ದೇವಾಲಯವನ್ನು



ನೂತನ ಶಿಲಾಯುಗದ ನಯಗೊಳಿಸಿದ ಅರ್ಧ ಚಂದ್ರಾಕೃತಿಯ ಕೊಡಲಿ

ಈಗ ಬೇರೆಡೆಗೆ ಸ್ಥಳಾಂತರಿಸಲಾಗಿದೆ. ಮರಗಮ್ಮನ ಗುಡಿಯ ಹತ್ತಿರ ಹಾಳಾದ ದೇಗುಲದ ಸ್ತಂಭವೊಂದರಲ್ಲಿ ತ್ರುಟಿತ ಹಿಂದಿ ಶಾಸನವಿದೆ. (ಸಂಸ್ಕೃತ?)

ಗಚ್ಚಿನಮಠದ ಸ್ವಾಮಿಗಳ ಸಮಾಧಿಗಳು : ಆನಂದರಾವ್ ರಾಸ್ತೆಯವರು ಈ ಜಮೀನನ್ನು ಈ ಗಚ್ಚಿನ ಮಠದ ಸ್ವಾಮಿಗಳಿಗೆ ದಾನಗೈದರೆಂದು ಈ ಮಠದ ಸ್ವಾಮಿಗಳ ಹೇಳಿಕೆಯಾಗಿದೆ. ಈ ಹೊಲದಲ್ಲಿ ಸುಮಾರು ಶಾಸನೋಕ್ತ ಸ್ವಾಮಿಗಳ ಸಮಾಧಿಗಳಿವೆ.



ಹೀಗೆ ತಾಳಿಕೋಟೆಯು ಪ್ರಾಚೀನ, ಮಧ್ಯಕಾಲೀನ ಹಾಗೂ ಅರ್ವಾಚೀನ ಇತಿಹಾಸಕ್ಕೆ ತನ್ನದೇ ಆದ ಕೊಡುಗೆಗಳನ್ನು ನೀಡಿದೆ ಎಂದರೆ ತಪ್ಪಾಗಲಾರದು.

[ಈ ಲೇಖನವನ್ನು ತಯಾರಿಸುವಲ್ಲಿ ಸಹಕರಿಸಿದ ಡಾ॥ ದೇವರ ಕೊಂಡಾರೆಡ್ಡಿ, ಕೋಟೆ ಶರತ್‌ಬಾಬು ಕೂನಬೇವು ಹಾಗೂ ಕ್ಷೇತ್ರ ಕಾರ್ಯದಲ್ಲಿ ಸಹಕರಿಸಿದ ಬ್ರ.ಕು. ದೇವರಾಜ ಬಾಗೇವಾಡಿ, ಎಂ.ಪಿ. ಆಲ್ಯಾಳ ಶಿಕ್ಷಕರು, ಮತ್ತು ಮಲ್ಲನಗೌಡ ಬಿ. ಪಾಟೀಲ, ತಾಳಿಕೋಟೆ ಇವರಿಗೆ ಲೇಖಕರ ಕೃತಜ್ಞತೆಗಳು].

ಆಧಾರಸೂಚಿ

೧. **ಪ್ರಾಚ್ಯವಸ್ತು ಸಂಶೋಧನೆ,** ಡಾ. ಅ. ಸುಂದರ.
೨. **ಪುರಾತತ್ತ್ವ ಶೋಧನೆ,** ಡಾ. ಎಸ್. ಶ್ರೀಕಂಠಶಾಸ್ತ್ರಿ.

೮

ಹಿರಿಯೂರು ತಾಲ್ಲೂಕಿನ ಧರ್ಮಪುರದ ಪ್ರಾಚ್ಯಾವಶೇಷಗಳು

ಡಿ. ಸ್ಮಿತಾರೆಡ್ಡಿ*

ಧರ್ಮಪುರವು ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲೂಕಿನ ಒಂದು ಹೋಬಳಿ ಹಾಗೂ ನೊಳಂಬವಾಡಿ ೩೨೦೦೦ದ ಅಂತರ್ಗತ ಪ್ರದೇಶವಾಗಿತ್ತು. ಕ್ರಿ.ಶ. ೮-೧೧ನೇ ಶತಮಾನದವರೆಗೆ ಆಳ್ವಿಕೆ ನಡೆಸಿದ ನೊಳಂಬರು ತುಮಕೂರು ಮತ್ತು ಚಿತ್ರದುರ್ಗದ ಕೆಲವು ಭಾಗಗಳು, ಅನಂತಪುರ ಜಿಲ್ಲೆಯ ಕೆಲವು ಪ್ರದೇಶಗಳು, ಸೇಲಂ ಮತ್ತು ಉತ್ತರ ಆರ್ಕಾಟ್ ಜಿಲ್ಲೆಗಳ ಕೆಲವು ಭಾಗಗಳನ್ನು ಒಳಗೊಂಡ ನೊಳಂಬವಾಡಿ ೩೨೦೦೦ ಸಾವಿರದಲ್ಲಿ ಆಳ್ವಿಕೆ ನಡೆಸಿದರು. ಇವರು ಸ್ವತಂತ್ರವಾಗಿ ಆಳ್ವಿಕೆ ನಡೆಸಿದ್ದಕ್ಕಿಂತ ಹೆಚ್ಚಾಗಿ ಗಂಗ, ರಾಷ್ಟ್ರಕೂಟ ಮತ್ತು ಬಾದಾಮಿ ಚಾಲುಕ್ಯರ ಸಾಮಂತರಾಗಿಯೇ ಹೆಚ್ಚಿನ ಕಾಲ ಆಳ್ವಿಕೆ ನಡೆಸಿದರು. ಗಂಗ, ಪಲ್ಲವ, ಬಾಣ ರೊಂದಿಗೆ ವೈವಾಹಿಕ ಸಂಬಂಧವನ್ನು ಏರ್ಪಡಿಸಿಕೊಂಡಿದ್ದರು. ಸಿಂಹಪೋತ, ಚಾರುಪೊನ್ನೇರ, ವೀರಮಹೇಂದ್ರ, ಅಯ್ಯಪದೇವ, ದಿಲೀಪರಸ ಈ ವಂಶದ ಪ್ರಸಿದ್ಧ ಅರಸರಾಗಿದ್ದಾರೆ. ವಿಜಯನಗರದ ಅರಸರ ಆಳ್ವಿಕೆಗೂ ಈ ಪ್ರದೇಶ ಒಳಪಟ್ಟಿತ್ತು ಎಂಬುದಕ್ಕೆ ಇಲ್ಲಿ ದೊರೆತಿರುವ ದೇವರಾಯನ ಕಾಲದ ಶಾಸನ ಹಾಗೂ ವಿಜಯನಗರ ಕಾಲದ ಹಲವಾರು ವೀರಗಲ್ಲು-ಮಾಸ್ತಿಗಲ್ಲುಗಳು ಸಾಕ್ಷಿಭೂತವಾಗಿ ನಿಂತಿವೆ. ಧರ್ಮಪುರವು ನೊಳಂಬರ ರಾಜಧಾನಿ ಹೆಂಜೇರುವಿನಿಂದ ಕೇವಲ ೧೩ ಕಿ.ಮೀ.ಗಳ ಅಂತರದಲ್ಲಿದೆ. ಈ ಹೋಬಳಿಯು ಚಾರಿತ್ರಿಕವಾಗಿ ಮಹತ್ವದ ಸ್ಥಾನವನ್ನು ಪಡೆದಿದೆ. ಇಲ್ಲಿರುವ ಪಂಚಲಿಂಗೇಶ್ವರ ಕಾಲೇಜಿನ ಕನ್ನಡ ಅಧ್ಯಾಪಕರಾದ ಶ್ರೀ ಜೆ. ಸಿದ್ದೇಶ್ವರಪ್ಪನವರು ಸುಮಾರು ೨೫ ವರ್ಷಗಳ ಹಿಂದೆ ಈ ಗ್ರಾಮದ ಆಸುಪಾಸಿನಲ್ಲಿ ದೊರೆತಿರುವ ಅಪೂರ್ವವಾದ ಬಿಡಿ ಶಿಲ್ಪಗಳನ್ನೆಲ್ಲಾ ತಮ್ಮ ವಿದ್ಯಾರ್ಥಿಗಳ ಸಹಾಯದಿಂದ ತಂದು ಇಲ್ಲಿ ನಿಲ್ಲಿಸಿದ್ದಾರೆ. ಶಿಲ್ಪಕಲೆಯ ದೃಷ್ಟಿಯಿಂದ ವೈಶಿಷ್ಟ್ಯಪೂರ್ಣವಾದ ಈ ಶಿಲ್ಪಗಳ ಬಗ್ಗೆ ಈವರೆಗೆ ನಮ್ಮ ಗಮನಕ್ಕೆ ಬಂದಂತೆ ಯಾವುದೇ ಸಂಶೋಧನ ಲೇಖನಗಳು ಪ್ರಕಟವಾಗಿಲ್ಲ.

ಇಲ್ಲಿರುವ ಪ್ರಾಚ್ಯಾವಶೇಷಗಳು ತುಂಬಾ ವಿಭಿನ್ನ ಕಾಲಘಟ್ಟಕ್ಕೆ ಸೇರಿದ್ದು ವೈಶಿಷ್ಟ್ಯಪೂರ್ಣವಾಗಿವೆ. ಇಲ್ಲಿರುವ ಕೆಲವು ಶಿಲ್ಪಗಳು ನೊಳಂಬರ ಶೈಲಿಯೆಂದು ಗುರುತಿಸಲಾಗುವ ಶಿಲ್ಪಕಲೆಗೆ ಮಾದರಿಯಾಗಿವೆ ಮತ್ತು ಬಹುತೇಕ ಶಿಲ್ಪಗಳು ಹೇಮಾವತಿಯಲ್ಲಿ ದೊರೆತಿರುವ ಶಿಲ್ಪಗಳ ಮಾದರಿಯಲ್ಲಿಯೇ ಇವೆ. ಇವು ಶಿಲ್ಪಕಲೆಯ ದೃಷ್ಟಿಯಿಂದ ಅಭ್ಯಸನೀಯ ಯೋಗ್ಯವಾಗಿವೆ. ಇಲ್ಲಿ ದೊರೆತಿರುವ ಶಿಲ್ಪಗಳನ್ನು ಅಧ್ಯಯನದ ದೃಷ್ಟಿಯಿಂದ ಮೂರು ರೀತಿಯಲ್ಲಿ ವರ್ಗೀಕರಿಸಬಹುದಾಗಿದೆ.

I ವೈದಿಕ ಶಿಲ್ಪಗಳು

II ಜೈನ ಶಿಲ್ಪಗಳು

III ಸ್ಮಾರಕ ಶಿಲೆಗಳು

I ವೈದಿಕ ಶಿಲ್ಪಗಳು:

ವೈದಿಕ ಶಿಲ್ಪಗಳಲ್ಲಿ ಬಹುತೇಕ ಶಿಲ್ಪಗಳು ಸಪ್ತಮಾತೃಕಾ ಪರಿವಾರದ ಶಿಲ್ಪಗಳಾಗಿವೆ ಎಂದರೆ ಚಾಮುಂಡಾ, ಮಾಹೇಶ್ವರಿ ಶಿಲ್ಪಗಳು ಹಾಗೂ ಸಪ್ತಮಾತೃಕೆಯರ ಪರಿವಾರ ದೇವತೆಗಳಾದ ಭೈರವ ಮತ್ತು ಗಣಪತಿಯ ಶಿಲ್ಪಗಳು ಇವೆ. ಇವಲ್ಲದೆ ಭೈರವಿಯ ಶಿಲ್ಪವೂ ಇಲ್ಲಿದೆ. ಚಾಮುಂಡಾ ಶಿಲ್ಪವು ಅರ್ಧಪರ್ಯಂಕಾಸನದಲ್ಲಿ ಕುಳಿತಭಂಗಿಯಲ್ಲಿದೆ. ಇದು ಅತ್ಯಂತ ಸುಂದರ ಹಾಗೂ ಆಕರ್ಷಕವಾದ ಶಿಲ್ಪವಾಗಿದೆ. ನರವಾಹನೆಯಾಗಿದ್ದು ರುಂಡಮಾಲೆಯನ್ನು ಧರಿಸಿದ್ದಾಳೆ. ಹೊಟ್ಟೆಯ ಭಾಗವನ್ನು ಆಕರ್ಷಕವಾಗಿ ಚಿತ್ರಿಸಲಾಗಿದೆ (ತಳೋದರಿಯಾಗಿದ್ದಾಳೆ) ಚತುರ್ಭುಜೆಯಾದ ಚಾಮುಂಡಾ ಎಡಮುಂಗೈಯಲ್ಲಿ ಕಪಾಲವನ್ನು ಹಾಗೂ ಹಿಂಗೈನಲ್ಲಿ ಡಮರುಗವನ್ನು ಹಿಡಿದಿದ್ದಾಳೆ. ಕೊರಳಲ್ಲಿ ಒಂದು ಕಂಠಿಹಾರವಿದೆ.

ಬಲಮುಂಗೈಯಲ್ಲಿ ತ್ರಿಶೂಲ ಹಿಡಿದಿದ್ದಾಳೆ. ಹಿಂಗೈಯಲ್ಲಿ ಹಿಡಿದಿರುವ ವಸ್ತುವೇನೆಂದು ಸ್ಪಷ್ಟವಿಲ್ಲ. ದೇಹದ

* ಶಾಖಾಧಿಕಾರಿ, ಭಾಷಾಂತರ ಶಾಖೆ, ೨೧೬ ಬಿ, ಕರ್ನಾಟಕ ವಿಧಾನ ಪರಿಷತ್ತು ಸಚಿವಾಲಯ, ವಿಧಾನಸೌಧ, ಬೆಂಗಳೂರು-೫೬೦೦೦೧.

ಸರ್ವಾಂಗವೂ ಸರ್ಪಭೂಷಿತವಾಗಿದೆ. ಸರ್ಪಕುಂಡಲಗಳನ್ನು, ಸರ್ಪಕೇಯೂರಗಳನ್ನು ಧರಿಸಿದ್ದಾಳೆ. ಮಸ್ತಕಾಭರಣವೂ ಎಂದರೆ ಕಿರೀಟವೂ ಸಹ ಸರ್ಪಗಳಿಂದ ಅಲಂಕೃತವಾಗಿದೆ. ಕೋರೆದಾಡೆಗಳನ್ನು ಬಿಡಿಸಲಾಗಿದೆ. ಪ್ರಭಾವಳಿಯು ತುಂಬಾ ಸರಳವಾಗಿ ಸುಂದರವಾಗಿದೆ. ಸೊಂಟಕ್ಕೆ ಸುತ್ತಿರುವ ಒಂದು ಕಟಿಸೂತ್ರದ ಹೊರತಾಗಿ ಶಿಲ್ಪವು ನಗ್ನವಾಗಿರುವಂತೆ ತೋರುತ್ತದೆ. ನೊಳಂಬರ ಕಾಲಘಟ್ಟದ ಅತ್ಯಾಕರ್ಷಕ, ಮಹತ್ವದ ಶಿಲ್ಪಗಳ ಸಾಲಿಗೆ ಇದನ್ನು ಸೇರಿಸಬಹುದು.

ಭೈರವಿ ಶಿಲ್ಪವೂ ಸಹ ಚಾಮುಂಡಾ ಶಿಲ್ಪದಂತೆ ತುಂಬಾ ಸುಂದರವಾಗಿದೆ. ಎತ್ತರವಿಲ್ಲದ ಪೀಠದ ಮೇಲೆ ಅರ್ಧಪರ್ಯಂಕಾಸನದಲ್ಲಿ ಕುಳಿತ ಭಂಗಿಯಲ್ಲಿರುವ ಈ ಭೈರವಿ ಶಿಲ್ಪದ ಪಾದಗಳ ಕೆಳಗೆ ಪೀಠದ ಮೇಲೆ ಚೇಳನ್ನು ಬಿಡಿಸಲಾಗಿದೆ. ಅಷ್ಟಭುಜೆಯಾದ ಭೈರವಿ ಡಮರುಗ, ತ್ರಿಶೂಲ, ಖಡ್ಗ, ಗುರಾಣಿ, ಕಪಾಲ, ಬಿಲ್ಲು, ಕತ್ತಿ ಮುಂತಾದ ಆಯುಧಗಳನ್ನು ಧರಿಸಿದ್ದಾಳೆ. ಪತ್ರ ಕುಂಡಲಗಳನ್ನು ದೊಡ್ಡದಾಗಿ ಬಿಡಿಸಲಾಗಿದೆ. ಕೊರಳಲ್ಲಿ ಒಂದು ಕಂಠಿಯನ್ನು ಹಾಗೂ ಕೊರಳಿಂದ ಬಂದು ಕುಚಗಳ ಮಧ್ಯಭಾಗದಿಂದ ಹೊಟ್ಟೆಯ ಮೇಲೆ ಹರಡಿದಂತಿರುವ ಒಂದು ಹಾರವನ್ನು ಬಿಡಿಸಲಾಗಿದೆ. ಇದಲ್ಲದೆ ವಸ್ತ್ರಯಜ್ಞೋಪವೀತ ಮಾದರಿಯ ಒಂದು ಹಾರವನ್ನು ಎಡ ಭುಜಭಾಗದಿಂದ ಕೆಳಗೆ ಕಾಲಿನವರೆಗೆ ಧರಿಸಿರುವಂತೆ ಕಂಡರಿಸಲಾಗಿದೆ. ಕಿರೀಟ ಚಾಮುಂಡಾ ಶಿಲ್ಪದ ಕಿರೀಟದಂತೆಯೇ ಇದ್ದು ದ್ರಾವಿಡ ಶೈಲಿಯ ದೇವಾಲಯಗಳ ಮಾದರಿಯಲ್ಲಿದೆ. ಕಟಿಸೂತ್ರದ ಹೊರತಾಗಿ ಶಿಲ್ಪ ನಗ್ನವಾಗಿದೆ.

ಮಾಹೇಶ್ವರಿ ಶಿಲ್ಪ ಹಿಂದಿನ ಶಿಲ್ಪಗಳ ಮಾದರಿಯಲ್ಲಿಯೇ ಅರ್ಧಪರ್ಯಂಕಾಸನದಲ್ಲಿ ಕುಳಿತ ಭಂಗಿಯಲ್ಲಿರುವ ಮಾಹೇಶ್ವರಿ ಶಿಲ್ಪದ ಎಡಭಾಗ ಭಗ್ನಗೊಂಡಿದೆ. ಹಾಗಾಗಿ ಶಿಲ್ಪದ ಎಡಭಾಗದ ಒಂದು ಕೈ ಹಾಳಾಗಿದ್ದು ಮತ್ತೊಂದು ಕೈಯಲ್ಲಿ ಕಪಾಲವಿದೆ. ಒಂದು ಬಲಗೈಯಲ್ಲಿ ಖಡ್ಗ ಹಾಗೂ ಮತ್ತೊಂದು ಕೈಯಲ್ಲಿ ತ್ರಿಶೂಲವಿದೆ. ಮುಖದಭಾಗ ಸವೆದುಹೋಗಿದೆ. ದೊಡ್ಡ ಪತ್ರ ಕುಂಡಲಗಳಿವೆ. ಕಿರೀಟ ಹಿಂದಿನ ಶಿಲ್ಪಗಳ ಮಾದರಿ ಯಲ್ಲಿಯೇ ಇದ್ದರೂ, ಕಿರೀಟದಲ್ಲಿನ ಅಲಂಕಾರಿಕ ಮಜಲುಗಳ ಸಂಖ್ಯೆ ಹೆಚ್ಚಾಗಿದೆ. ಮಧ್ಯದಲ್ಲಿ ಸರ್ಪಾಲಂಕೃತವಾಗಿದೆ. ಕಾಲಿನ ಬಳಿ ವೃಷಭವನ್ನು ಕಂಡರಿಸಲಾಗಿದೆ. ರುಂಡಮಾಲೆಯನ್ನು ಧರಿಸಿದ್ದಾಳೆ. ಈ ಶಿಲ್ಪವು ಭೈರವಿ ಶಿಲ್ಪದ ಮಾದರಿಯಲ್ಲಿಯೇ ಇದೆ. ಎರಡೂ ಕೈಗಳಲ್ಲಿ ಕಂಕಣಗಳನ್ನು ಹಾಗೂ ತೋಳುಗಳಲ್ಲಿ ಮಣಿಮಾಲಾಯುಕ್ತ ಕೇಯೂರಗಳನ್ನು ಬಿಡಿಸಲಾಗಿದೆ. ಎಡಗಾಲಿನಲ್ಲಿ ನಾಲ್ಕು ವಲಯಗಳೊಂದಿಗೆ ಒಂದು ಕಿಂಕಿಣಿಯನ್ನು ಬಲಗಾಲಿನಲ್ಲಿ ಮೂರು ವಲಯಗಳೊಂದಿಗೆ ಒಂದು ಕಿಂಕಿಣಿಯನ್ನು ಕಂಡರಿಸಲಾಗಿದೆ. ಶಿಲ್ಪ ಕಟಿವಸ್ತ್ರವನ್ನು ಧರಿಸಿದ್ದು ಅದರ ನಿರಿಗೆಗಳು ಕಾಣುವಂತಿವೆ. ಕೊರಳಲ್ಲಿ ಹಿಂದಿನ ಭೈರವಿ ಶಿಲ್ಪದ ಮಾದರಿಯಲ್ಲಿ ಒಂದು ಕಂಠಿಯನ್ನು ಹಾಗೂ ಒಂದು ಹಾರವನ್ನು ಬಿಡಿಸಲಾಗಿದೆ.

ಭೈರವನ ಶಿಲ್ಪವೂ ಸಹ ಅರ್ಧ ಪರ್ಯಂಕಾಸನದಲ್ಲಿ ಪೀಠದ ಮೇಲೆ ಕುಳಿತ ಭಂಗಿಯಲ್ಲಿದೆ. ಶಿಲ್ಪದ ಮುಖದ ಭಾಗ ಸವೆದು ಹೋಗಿರುವುದರಿಂದ ಮುಖಭಾವ ಸ್ಪಷ್ಟವಾಗಿ ಕಾಣುತ್ತಿಲ್ಲ. ಈ ಶಿಲ್ಪದ ಜಟೆಯನ್ನು ತುಂಬಾ ವಿಶಿಷ್ಟವಾಗಿ ಬಿಡಿಸಲಾಗಿದೆ. ಸಾಮಾನ್ಯವಾಗಿ ಭೈರವನ ಕೂದಲನ್ನು ಪ್ರಳಯಸದೃಶವಾಗಿ ಜ್ವಾಲೆಯಂತೆ ಬಿಡಿಸಲಾಗಿರುತ್ತದೆ. ಆದರೆ ಈ ಶಿಲ್ಪದಲ್ಲಿ ಸುರುಳಿ-ಸುರುಳಿ ಯಾಕಾರದ ಗುಂಗುರು ಕೂದಲುಗಳು ನಾಲ್ಕು ಪದರುಗಳಾಗಿ ತಲೆಯ ಹಿಂದೆ ಪ್ರಭಾವಳಿಯಂತೆ ಹರಡಿಕೊಂಡಿವೆ. ರುಂಡಮಾಲೆ ಧರಿಸಿದ್ದು, ಚತುರ್ಭುಜಧಾರಿಯಾಗಿದೆ. ಸರ್ಪಕೇಯೂರಗಳನ್ನು ಶಿಲ್ಪಿಸಲಾಗಿದೆ. ಎಡಮುಂಗೈನಲ್ಲಿ ಕಪಾಲ ಮತ್ತು ಹಿಂಗೈನಲ್ಲಿ ಡಮರುಗವಿದ್ದರೆ, ಬಲ ಮುಂಗೈನಲ್ಲಿ ತ್ರಿಶೂಲವಿದೆ. ಹಿಂಗೈ ತುಂಡಾಗಿದೆ. ಕಿವಿಯಲ್ಲಿ ದುಂಡಾದ ಹಾಗೂ ಅಗಲವಾದ ಆಭರಣವಿದೆ. ಪೀಠದ ಮೇಲೆ ಚೇಳನ್ನು ಬಿಡಿಸಲಾಗಿದೆ. ಶಿಲ್ಪ ಹೆಂಜೇರಿನ ಸಿದ್ದಪ್ಪನ ಶಿಲ್ಪದ ಮಾದರಿಯಲ್ಲಿಯೇ ಇದೆ.

ಈ ಶಿಲ್ಪದ ಪಕ್ಕದಲ್ಲಿಯೇ ನಾಗಶಯನ ಶಿಲ್ಪವೊಂದಿದ್ದು, ಬಹುಶಃ ಭೈರವನ ಶಿಲ್ಪವೆಂದು ಊಹಿಸ ಬಹುದಾಗಿದೆ. ಶಿಲ್ಪದ ಮುಖ ವಿರೂಪಗೊಂಡಿದೆ. ಎಡ ಹಿಂಗೈನಲ್ಲಿ ಡಮರುಗ ಮತ್ತು ಮುಂಗೈನಲ್ಲಿ ಕಪಾಲವಿದ್ದರೆ, ಬಲ ಹಿಂಗೈನಲ್ಲಿ ತ್ರಿಶೂಲ ಮತ್ತು ಮುಂಗೈನಲ್ಲಿ ಖಡ್ಗವಿದೆ. ಕೊರಳಲ್ಲಿ ಹಾರವಿದೆ ಹಾಗೂ ವಸ್ತ್ರಯಜ್ಞೋಪವೀತವನ್ನು ಎಡಭುಜದಿಂದ ಬಲಭಾಗಕ್ಕೆ ಇಳಿಬಿಡಲಾಗಿದೆ. ಕಿವಿಯಲ್ಲಿ ಪತ್ರ ಕುಂಡಲಗಳಿವೆ. ತೋಳುಗಳಲ್ಲಿ ದುಂಡಾದ ಕೇಯೂರಗಳಿವೆ. ಬಲಗಾಲಲ್ಲಿ ಕಡಗ ಮತ್ತು ಕಿಂಕಿಣಿಗಳೆರಡನ್ನೂ ಕಾಣಬಹುದು. ಮೊಣಕಾಲುಗಳ ಬಳಿ ಸೊಂಟದ ಬಳಿ ವಸ್ತ್ರದ ನೆರಿಗೆಗಳನ್ನು ಸ್ಪಷ್ಟವಾಗಿ ಬಿಡಿಸಲಾಗಿದೆ. ಸೊಂಟದಲ್ಲಿ ಕಟಿಸೂತ್ರ ಸ್ಪಷ್ಟವಾಗಿ ಕಂಡುಬರುತ್ತದೆ.

ಗಣಪತಿಯ ಜೀರ್ಣಾವಸ್ಥೆಯಲ್ಲಿರುವ ಶಿಲ್ಪವೊಂದು ಈ ಆವರಣದಲ್ಲೇ ಇದ್ದು, ಸರಳವಾದ ಕೆತ್ತನೆಯಿಂದ ಕೂಡಿದ್ದು ೧೦ನೇ ಶತಮಾನಕ್ಕೆ ಸೇರಿದೆ. ಅಲ್ಲದೆ ಸಪ್ತಮಾತೃಕೆಯರ ಫಲಕದ ಭಗ್ನಗೊಂಡ ಒಂದು ಫಲಕವಿದೆ. ಆದರೆ, ಹಿಂದೆ ವಿವರಿಸಲಾದ ಬಿಡಿ ಮಾತೃಕಾ ಶಿಲ್ಪಗಳಿಗೂ, ಈ ಫಲಕಕ್ಕೂ

ಸಂಬಂಧವಿಲ್ಲ. ಇವಲ್ಲದೆ, ವಿಜಯನಗರ ಕಾಲಘಟ್ಟದ ಇಬ್ಬರು ಭಕ್ತರ ಶಿಲ್ಪಗಳು ಇಲ್ಲಿವೆ.

ಧರ್ಮಪುರ ಗ್ರಾಮದ ಕೆರೆಯ ಏರಿಯ ಮೇಲೆ ಒಂದು ಭಗ್ನಾವಸ್ಥೆಯಲ್ಲಿರುವ ಸುಮಾರು ೫ ಅಡಿಗಳಷ್ಟು ಎತ್ತರವಿರುವ ಸಮಪಾದ ಭಂಗಿಯಲ್ಲಿ ನಿಂತಿರುವ ಸೂರ್ಯನ ಶಿಲ್ಪವಿದೆ. ಶಿಲ್ಪದ ಪಾದಗಳ ಸ್ವಲ್ಪ ಭಾಗ ಭೂಮಿಯಲ್ಲಿ ಹುದುಗಿ ಹೋಗಿದೆ. ನಾಲ್ಕು ಕೈಗಳೂ ಮುರಿದುಹೋಗಿದೆ. ಶಿಲ್ಪಕ್ಕೆ ಎಣ್ಣೆ ಹಾಗೂ ಕುಂಕುಮಗಳನ್ನು ಹಾಕಿರುವುದರಿಂದ ಶಿಲ್ಪದ ಮುಖಭಾವವೂ ಸ್ಪಷ್ಟವಿಲ್ಲ. ಎಡಭುಜಭಾಗದಿಂದ ಮೊಣಕಾಲಿನವರೆಗೆ ಅಜಿನ ಯಜ್ಞೋಪವೀತ ವನ್ನು ಬಿಡಿಸಲಾಗಿದೆ. ಯಜ್ಞೋಪವೀತವನ್ನು ಶಿಲ್ಪದ ಹಿಂಭಾಗದಲ್ಲೂ ಸ್ಪಷ್ಟವಾಗಿ ಬಿಡಿಸಲಾಗಿದೆ. ಉದರಬಂಧವಿದೆ. ಕಟಿಸೂತ್ರಗಳನ್ನು ಮೂರು ಹಂತಗಳಲ್ಲಿ ಶಿಲ್ಪಿಸಲಾಗಿದೆ. ಮೊದಲನೆಯದು ಒಂದು ಸಾಮಾನ್ಯ ವಸ್ತ್ರವನ್ನು ಸುತ್ತಿರುವಂತಿದ್ದರೆ, ಎರಡನೇ ಹಂತದಲ್ಲಿ ಸೊಂಟದ ಸುತ್ತಲೂ ದಾರದಂತಿದ್ದು ಮಧ್ಯದಲ್ಲಿ ಬ್ರಹ್ಮಸೂತ್ರದಂತೆ ಬಿಡಿಸಲಾಗಿದೆ. ಮೂರನೇ ಹಂತದಲ್ಲಿ ನಾಲ್ಕು ಎಳೆಗಳ ವಸ್ತ್ರಮೇಖಲಾವನ್ನು ಜಿಗಿದುಕಟ್ಟಲಾಗಿದೆ. ಶಿಲ್ಪದ ಹಿಂಭಾಗದಲ್ಲೂ ಇದನ್ನು ಸ್ಪಷ್ಟವಾಗಿ ತೋರಿಸಲಾಗಿದೆ. ವಸ್ತ್ರಮೇಖಲಾದ ಉಳಿದ ಭಾಗವನ್ನು ಸೊಂಟದ ಎಡ ಮತ್ತು ಬಲಭಾಗಗಳಲ್ಲಿ ಅಲಂಕಾರಿಕವಾಗಿ ಗಂಟುಹಾಕಿ ಅವುಗಳನ್ನು ಕೆಳಗೆ ಕಾಲಿನವರೆಗೆ ಇಳಿಬಿಡಲಾಗಿದೆ. ಕಿರೀಟಮುಕುಟ ಉದ್ದವಾಗಿದೆ. ಶಿಲ್ಪದ ಹಿಂಭಾಗ ಮತ್ತು ಮುಂಭಾಗದಲ್ಲಿ ಸೂರ್ಯಕಿರಣಗಳ ಸುಂದರ ಪ್ರಭಾವಳಿಯಿದೆ. ಕಿವಿಯಲ್ಲಿ ಸುಂದರವಾದ ಮಕರಕುಂಡಲಗಳಿವೆ. ಕತ್ತಿನಲ್ಲಿ ಒಂದು ಮಣಿಹಾರ ಮತ್ತು ಇತರ ಹಾರಗಳಿವೆ. ಹೇಮಾವತಿಯಲ್ಲಿನ ಸೂರ್ಯಶಿಲ್ಪಗಳು ವಸ್ತ್ರಾಭರಣದ ಹೊರತಾಗಿ ಇದೇ ಭಂಗಿ-ಮಾದರಿಯಲ್ಲಿವೆ.

ಪದ್ಮಪುರಾಣ ಮತ್ತು ಶಿಲ್ಪರತ್ನಕೃತಿಗಳ ಪ್ರಕಾರ ಸೂರ್ಯನ ಪಾದಗಳು ಕಾಣುವಂತಿರಬಾರದು. ಸಾಮಾನ್ಯವಾಗಿ ಉತ್ತರಭಾರತದಲ್ಲಿ ದೊರೆತ ಸೂರ್ಯಶಿಲ್ಪಗಳ ಪಾದಗಳನ್ನು ರಥದಿಂದಾಗಲಿ ಅಥವಾ ಪಾದರಕ್ಷೆಗಳನ್ನು ಹಾಕುವ ಮೂಲಕವಾಗಲಿ ಮರೆಮಾಡಿ ಈ ಸಂಪ್ರದಾಯವನ್ನು ಅನುಸರಿಸಲಾಗುತ್ತದೆ. ಆದರೆ ದಕ್ಷಿಣಭಾರತದ ಶಿಲ್ಪಗಳನ್ನು ಈ ಸಂಪ್ರದಾಯದಲ್ಲಿ ಶಿಲ್ಪಿಸದೆ, ಬರಿಗಾಲು ಸ್ಪಷ್ಟವಾಗಿ ಕಾಣುವಂತೆ ಚಿತ್ರಿಸಿರುವುದು ಕಂಡುಬರುತ್ತದೆ. (Shantilal Nagar, 1995/138).

ಅದೇ ಕೆರೆಯ ಏರಿಯ ಮೇಲೆ ನೊಳಂಬರ ಕಾಲದ ಭೀಮೇಶ್ವರ ದೇವಾಲಯದ ಬಳಿಯಲ್ಲಿ ಸಪ್ತಮಾತೃಕೆಯರ ಶಿಲಾಫಲಕವಿದೆ. ಈ ಎಲ್ಲ ಶಿಲ್ಪಗಳೂ ನೊಳಂಬರ ಕಾಲಾವಧಿಗೆ ಸೇರಿದ ಶಿಲ್ಪಗಳಾಗಿ ಪ್ರಮಾಣಬದ್ಧವಾಗಿ ಕಂಡರಿಸಲಾದ ತುಂಬ ಆಕರ್ಷಕವಾದ ಶಿಲ್ಪಗಳಾಗಿವೆ.

II ಜೈನ ಶಿಲ್ಪಗಳು

ಹಿರಿಯೂರು ತಾಲೂಕಿನಲ್ಲಿ ಕ್ರಿ.ಶ. ೧೫ನೇ ಶತಮಾನದ ವರೆಗೆ ಜೈನಧರ್ಮ ಅಸ್ತಿತ್ವದಲ್ಲಿತ್ತು. ಇಲ್ಲಿರುವ ಒಂದನೆಯ ದೇವರಾಯನ ಆಳ್ವಿಕೆಯ ಕ್ರಿ.ಶ. ೧೪೧೦ರ ಅವಧಿಯ ತ್ರುಟಿತ ಶಾಸನವೊಂದು ದತ್ತಿ ನೀಡಿದ್ದನ್ನು ದಾಖಲಿಸುತ್ತದೆ. ಆದರೆ ಈ ಶಾಸನಕ್ಕಿಂತ ಹೆಚ್ಚಾಗಿ ಶಾಸನ ಶಿಲ್ಪ ಹೆಚ್ಚು ಗಮನ ಸೆಳೆಯುತ್ತದೆ. ಶಾಸನದ ಮಧ್ಯಭಾಗದಲ್ಲಿ ಮುಕ್ಕೊಡೆಯ ಮತ್ತು ಏಳು ಹೆಡೆಗಳ ಸರ್ಪದ ಕೆಳಗೆ ಪಾರ್ಶ್ವನಾಥ ಪದ್ಮಾಸನದಲ್ಲಿ ಧ್ಯಾನಸ್ಥ ಭಂಗಿಯಲ್ಲಿ ಕುಳಿತಿದ್ದಾನೆ. ಶಿಲ್ಪದ ಬಲಭಾಗದಲ್ಲಿ ಆಕಳು ಮತ್ತು ಕರುವಿನ ಶಿಲ್ಪವಿದೆ. ಪಾರ್ಶ್ವನಾಥನ ಎಡಭಾಗದಲ್ಲಿ ಚತುರ್ಭುಜೆಯಾದ ಪದ್ಮಾವತಿ ಯಕ್ಷಿಯನ್ನು ಪಾರ್ಶ್ವನಾಥನ ಕಡೆಗೆ ತಿರುಗಿಕೊಂಡು ನಿಂತುಕೊಂಡಿರುವ ಹಾಗೆ ಕಂಡರಿಸಲಾಗಿದೆ. ಈ ಭಾಗದಲ್ಲಿ ಕಲ್ಲು ಸೀಳುಬಿಟ್ಟಿರುವುದರಿಂದ ಕೈಗಳಲ್ಲಿ ಏನನ್ನು ಹಿಡಿದಿದ್ದಾಳೆಂಬುದು ಸ್ಪಷ್ಟವಿಲ್ಲ. ಪದ್ಮಾವತಿ ಯಕ್ಷಿಯ ಪಕ್ಕದಲ್ಲಿ ಯಕ್ಷಿಯ ವಾಹನವಾದ ಕುಕ್ಕುಟಸರ್ಪದ (ಸರ್ಪದ ತಲೆ ಕೋಳಿಯ ದೇಹ) ಶಿಲ್ಪವಿದೆ.

ಅಂಬಿಕಾ ಯಕ್ಷಿ ಶಿಲ್ಪವು ಕುಳಿತ ಭಂಗಿ ಯಲ್ಲಿದೆ. ಶಿಲ್ಪ ಭಗ್ನಗೊಂಡಿದ್ದು, ಒಂದು ಕೈ ತುಂಡಾಗಿದೆ. ಮತ್ತೊಂದು ಕೈಯಲ್ಲಿ ಯಾವುದೋ ಒಂದು ಫಲದಂತಹ ವಸ್ತುವನ್ನು ಹಿಡಿದುಕೊಂಡಿದ್ದು ಅದು ಏನೆಂಬುದು ಸ್ಪಷ್ಟವಾಗಿ ಕಾಣಿಸುವುದಿಲ್ಲ, ಕೂದಲನ್ನು ಅಲಂಕಾರಿಕವಾಗಿ ಕಿರೀಟದಂತೆ ಸುತ್ತಲಾಗಿದೆ. ತಲೆ ಹಾಗೂ ಪ್ರಭಾವಳಿಯ ಸ್ಥಳದಲ್ಲಿ ಮಾವಿನ ಮರ ಮತ್ತು ಮಾವಿನ ಕಾಯಿಗಳನ್ನು ಕೆತ್ತಲಾಗಿದೆ. ಕತ್ತಿನಲ್ಲಿ ದ್ರಾಕ್ಷಾಫಲಹಾರದಂತಹ ಒಂದು ದೊಡ್ಡ ಹಾರವಿದೆ. ತೋಳಿನಲ್ಲಿ ಸುಂದರವಾದ ಪುಷ್ಪ ಕೇಯೂರವಿದೆ. ಸೊಂಟದಲ್ಲಿ ಕಟಿವಸ್ತ್ರವಿದ್ದು ಅದರ ನೆರಿಗೆಗಳನ್ನು ಕಾಲಿನವರೆಗೂ ಸುಂದರವಾಗಿ ಬಿಡಿಸಲಾಗಿದೆ. ಶಿಲ್ಪದ ಎಡಭಾಗದಲ್ಲಿ ಒಂದು ಹೆಣ್ಣುಮಗು ಮತ್ತು ಬಲಭಾಗದಲ್ಲಿ ಒಂದು ಗಂಡುಮಗುವಿನ ಶಿಲ್ಪಗಳನ್ನು ಬಿಡಿಸಲಾಗಿದೆ. ಗಂಡು-ಹೆಣ್ಣು ಮಕ್ಕಳನ್ನು ಪ್ರತ್ಯೇಕವಾಗಿ ಗುರುತಿಸುವ ಸಲುವಾಗಿ ಹೆಣ್ಣು ಮಗುವಿನ ದೇಹದ ಮೇಲೆ ಹೆಚ್ಚು ಆಭರಣಗಳನ್ನು ಬಿಡಿಸಲಾಗಿದೆ. ಗಂಡು ಮಗುವಿನ ದೇಹದ ಮೇಲೆ ಯಜ್ಞೋಪವೀತವನ್ನು ಸ್ಪಷ್ಟವಾಗಿ ಚಿತ್ರಿಸಲಾಗಿದೆ. ಇಲ್ಲಿ ಮತ್ತೊಂದು ಭಗ್ನಗೊಂಡ ಶಿಲ್ಪವಿದ್ದು ಬಹುಶಃ ಯಕ್ಷನ ಶಿಲ್ಪವಿರಬಹುದೆಂದು ತೋರುತ್ತದೆ.

ಸ್ಮಾರಕ ಶಿಲೆಗಳು

ಚಿತ್ರದುರ್ಗ ಜಿಲ್ಲೆ ಅಂತೆಯೇ ಹಿರಿಯೂರು ತಾಲೂಕು ಗಂಗ-ರಾಷ್ಟ್ರಕೂಟ-ಬಾಣ-ನೊಳಂಬರ ಹಾಗೂ ತದನಂತರ ವಿಜಯನಗರ ಮತ್ತು ವಿಜಯನಗರೋತ್ತರ ಕಾಲಘಟ್ಟದ ಹಲವಾರು ಯುದ್ಧಗಳಿಗೆ ವೇದಿಕೆಯಾಗಿತ್ತು. ಇಲ್ಲಿ ದೊರೆತಿರುವ ವೀರಗಲ್ಲು ಮತ್ತು ಮಾಸ್ತಿಗಲ್ಲುಗಳು ಈ ಅಂಶವನ್ನು ಮತ್ತಷ್ಟು ಪುಷ್ಟೀಕರಿಸುತ್ತವೆ.

ಪಂಚಲಿಂಗೇಶ್ವರ ಕಾಲೇಜಿನ ಆವರಣದಲ್ಲಿರುವ ಒಂದು ವೀರಗಲ್ಲು ನೊಳಂಬರ ಕಾಲಕ್ಕೆ ಸೇರಿದೆ. ಮೂರು ಹಂತಗಳನ್ನು ಒಳಗೊಂಡಿರುವ ಈ ವೀರಗಲ್ಲಿನ ಕೆಳಭಾಗದ ಸ್ವಲ್ಪಭಾಗ ಹಾಳಾಗಿದೆ. ಕೆಳಹಂತದಲ್ಲಿ ವೀರ ಗುರಾಣಿ ಹಾಗೂ ಕತ್ತಿಯನ್ನು ಹಿಡಿದುಕೊಂಡು ಹೋರಾಡುತ್ತಿದ್ದಾನೆ. ಅವನ ಹಿಂದೆ ಇಬ್ಬರು ವೀರರು ನಂತಿದ್ದಾರೆ. ಆ ವೀರರ ಕೆಳಭಾಗದಲ್ಲಿ ಆನೆ ಹುಲಿಯೊಂದಿಗೆ ಹೋರಾಟ ಮಾಡುತ್ತಿದ್ದು, ಹುಲಿಯ ಕಾಲನ್ನು ಆನೆ ಸೊಂಡಿಲಿನಿಂದ ಸುತ್ತಿ ಹಿಡಿದುಕೊಂಡಿದೆ. ಆನೆಯ ಮೇಲೆ ಒಬ್ಬ ವೀರ ಕುಳಿತುಕೊಂಡಿದ್ದಾನೆ. ಮಧ್ಯಹಂತದಲ್ಲಿ ವೀರನನ್ನು ಅಪ್ಸರೆಯರು ಸ್ವರ್ಗಕ್ಕೆ ಕೊಂಡೊಯ್ಯುತ್ತಿದ್ದಾರೆ. ಅಪ್ಸರೆಯ ಪಕ್ಕದಲ್ಲಿ ಒಬ್ಬ ಚಾಮರಧಾರಿ ಚಾಮರ ಬೀಸುತ್ತಿದ್ದಾಳೆ. ಮೂರನೇ ಹಂತದಲ್ಲಿ ಎಂದರೆ ಮೇಲ್ಭಾಗದಲ್ಲಿ ವೀರ ಶಿವನ ಸಾನಿಧ್ಯದಲ್ಲಿದ್ದಾನೆ. ಮಧ್ಯದಲ್ಲಿ ಶಿವಲಿಂಗವಿದ್ದು ಅದಕ್ಕೆ ಒಬ್ಬ ಯತಿ ಪೂಜೆ ಸಲ್ಲಿಸುತ್ತಿದ್ದಾನೆ. ಯತಿಯ ಕೂದಲನ್ನು ತಲೆಯಿಂದ ಇಳಿಬಿಡಲಾಗಿದ್ದು, ಬಹುಶಃ ಕಾಳಾಮುಖಯತಿಯಾಗಿರುವಂತೆ ತೋರುತ್ತದೆ.

ಎರಡು ಹಂತಗಳಲ್ಲಿರುವ ವಿಜಯನಗರ ಕಾಲದ ವೀರಗಲ್ಲಿನಲ್ಲಿ ವೀರ ಕುದುರೆಯ ಮೇಲೆ ಕುಳಿತು ಯುದ್ಧಸನ್ನದ್ಧನಾಗಿರುವಂತೆ ಚಿತ್ರಿಸಲಾಗಿದೆ. ಬಲಗೈಯಲ್ಲಿ ಈಟಿಯನ್ನು ಹಿಡಿದುಕೊಂಡು, ಎಡಗೈಯಲ್ಲಿ ಕುದುರೆಯ ಜೀನನ್ನು ಹಿಡಿದಿದ್ದಾನೆ. ತಲೆಗೆ ಬೋಗುಣಿ ಯಾಕಾರದ ಅಲಂಕಾರಿಕ ಕಿರೀಟ ಧರಿಸಿದ್ದಾನೆ. ಎರಡನೇ ಹಂತದಲ್ಲಿ ಮಧ್ಯದಲ್ಲಿ ಲಿಂಗವಿದ್ದು ವೀರ ಎಡಭಾಗದಲ್ಲಿ ನಿಂತು ಪೂಜೆ ಮಾಡುತ್ತಿದ್ದಾನೆ. ಬಲಭಾಗದಲ್ಲಿ ನಂದಿಯನ್ನು ಚಿತ್ರಿಸಲಾಗಿದೆ.

ವೀರಮಾಸ್ತಿ ಶಿಲ್ಪ ವಿಜಯನಗರ ಕಾಲಾವಧಿಯದ್ದಾಗಿದ್ದು, ವೀರ ಎಡಗೈಯಲ್ಲಿ ಕತ್ತಿ ಹಿಡಿದು ಕೊಂಡು ಬಲಗೈಯನ್ನು ಇಳಿಬಿಟ್ಟು ವಿಶ್ರಾಂತ ಸ್ಥಿತಿಯಲ್ಲಿ ನಿಂತುಕೊಂಡಿದ್ದರೆ, ವೀರನ ಹೆಂಡತಿ ಎರಡೂ ಕೈಗಳನ್ನು ಮೇಲಕ್ಕೆತ್ತಿಕೊಂಡು ನಿಂತಿದ್ದಾಳೆ. ಬಲಗೈಯಲ್ಲಿ ನಿಂಬೆಹಣ್ಣು ಎಡಗೈಯಲ್ಲಿ ಒಂದು ವಸ್ತುವನ್ನು (ಕನ್ನಡಿ ?) ಹಿಡಿದುಕೊಂಡು ನಿಂತಿದ್ದಾಳೆ. ತುರುಬನ್ನು ಕೊಂಡೆ ಮಾಡಿ, ಅದಕ್ಕೆ ನವಿಲು ಗರಿಚುಚ್ಚಿಕೊಂಡಿರುವ ಮಾದರಿಯಲ್ಲಿ ಕೇದಗೆ ಹೂವಿನಿಂದ ಅಲಂಕಾರ ಮಾಡಲಾಗಿದೆ.

ಮತ್ತೊಂದು ವೀರಮಾಸ್ತಿ ಕಲ್ಲಿನಲ್ಲಿ ವೀರ ಮೊದಲಿನ ಶಿಲ್ಪದಂತೆಯೇ ಕತ್ತಿ ಹಿಡಿದುಕೊಂಡು ವಿಶ್ರಾಂತ ಸ್ಥಿತಿಯಲ್ಲಿ ನಿಂತಿದ್ದರೆ, ಆತನ ಪತ್ನಿ ಕೊಂಡಕ್ಕೆ ಹಾರುವ ಭಂಗಿಯಲ್ಲಿ ಎರಡೂ ಕೈಗಳನ್ನೂ ಮೇಲಕ್ಕೆತ್ತಿಕೊಂಡು ನಿಂತಿದ್ದಾಳೆ. ಬಲಗೈಯಲ್ಲಿ ನಿಂಬೆಹಣ್ಣು ಹಾಗೂ ಎಡಗೈಯಲ್ಲಿ ಕನ್ನಡಿ ಹಿಡಿದುಕೊಂಡಿದ್ದಾಳೆ. ತಲೆಯನ್ನು ಬಾಚಿ ಉದ್ದವಾಗಿ ಜಡೆ ಹೆಣೆಯಲಾಗಿದೆ. ತಲೆಗೆ ಜೈತಲೆಯನ್ನು ಹಾಕಿ ಮೇಲ್ಭಾಗದಲ್ಲಿ ಹೂವಿನಿಂದ ಅಲಂಕಾರ ಮಾಡಲಾಗಿದೆ. ಸೊಂಟದಿಂದ ಇಳಿ ಬಿಟ್ಟಿರುವ ವಸ್ತ್ರ ಮೊಳಕಾಲಿನವರೆಗೂ ಇದ್ದು ಕಾಲಿನ ಇಕ್ಕೆಲಗಳಲ್ಲಿ ಮಡಿಕೆಗಳನ್ನು ಹಾಗೂ ಮಧ್ಯಭಾಗದಲ್ಲಿ ನೆರಿಗೆಗಳನ್ನು ಅಲಂಕಾರಿಕವಾಗಿ ಶಿಲ್ಪಿಸಲಾಗಿದೆ.

ಮಾಸ್ತಿಗಲ್ಲಿನಲ್ಲಿ ಮಾಸ್ತಿ ಶಿಲ್ಪ ಮಾತ್ರವಿದೆ. ಮಾಸ್ತಿ ಎರಡೂ ಕೈಗಳನ್ನು ಮೇಲೆತ್ತಿಕೊಂಡು ಎಡಗೈಯಲ್ಲಿ ಕನ್ನಡಿ, ಬಲಗೈಯಲ್ಲಿ ನಿಂಬೆಹಣ್ಣು ಹಿಡಿದುಕೊಂಡು ಕೊಂಡಕ್ಕೆ ಹಾರಲು ಸನ್ನದ್ಧಳಾಗಿದ್ದಾಳೆ. ಸರ್ವಾಭರಣ ಭೂಷಿತೆಯಾಗಿದ್ದಾಳೆ. ಜಡೆಯನ್ನು ಅತ್ಯಂತ ಸುಂದರವಾಗಿ ಬಿಡಿಸಲಾಗಿದೆ. ತಲೆಯ ಮೇಲೆ ಕೇದಗೆ (?) ಹೂವಿನ ಅಲಂಕಾರವಿದೆ. ವಸ್ತ್ರದ ನೆರಿಗೆಗಳು ಸಹ ಅತ್ಯಂತ ಸುಂದರವಾಗಿದೆ. ಈ ಶಿಲ್ಪ ಬಹುತೇಕ ೧ನೇ ಚಿತ್ರದ ಮಾಸ್ತಿಯಂತೆಯೇ ಇದ್ದು ಬಹುಶಃ ಒಬ್ಬನೇ ಶಿಲ್ಪಿ ಒಂದೇ ಅವಧಿಯಲ್ಲಿ ಈ ಶಿಲ್ಪಗಳನ್ನು ಕೆತ್ತಿರಬಹುದೆಂದು ತೋರುತ್ತದೆ.

ಈ ಎಲ್ಲ ವೀರಗಲ್ಲು ಹಾಗೂ ವೀರಮಾಸ್ತಿ ಕಲ್ಲುಗಳು (ಮೊದಲ ವೀರಗಲ್ಲನ್ನು ಹೊರತುಪಡಿಸಿ) ವಿಜಯನಗರ ಕಾಲಘಟ್ಟಕ್ಕೆ ಸೇರುತ್ತವೆ.

ಧರ್ಮಪುರದ ಪಂಚಲಿಂಗೇಶ್ವರ ಕಾಲೇಜಿನ ಆವರಣದಲ್ಲಿರುವ ಶಿಲ್ಪಗಳಲ್ಲಿ ವೈದಿಕ ಶಿಲ್ಪಗಳಲ್ಲಿ ಹೆಚ್ಚಿನವು ನೊಳಂಬರ ಕಾಲಾವಧಿಯ ಶಿಲ್ಪಗಳಾಗಿವೆ. ಅವುಗಳಲ್ಲಿ ಚಾಮುಂಡಿ, ಶಿಲ್ಪವು ಅತ್ಯಾಕರ್ಷಕ ಅತ್ಯಪರೂಪದ ಕಲಾಕೃತಿಯಾಗಿದೆ. ಶಿಲ್ಪದಲ್ಲಿ ಆಂಗಿಕ ಸೌಂದರ್ಯಕ್ಕೆ ಹೆಚ್ಚು ಆದ್ಯತೆ ನೀಡಿರುವುದನ್ನು ಕಾಣಬಹುದು. ಉಳಿದ ಭೈರವಿ, ಮಾಹೇಶ್ವರಿ, ಭೈರವನ ಶಿಲ್ಪಗಳೂ ಸಹ ತುಂಬಾ ಸುಂದರವಾಗಿದೆ. ಈ ರೀತಿಯ ವಿಶಿಷ್ಟವಾದ ಶಿಲ್ಪಗಳು ಕರ್ನಾಟಕದಲ್ಲಿ ಅತ್ಯಂತ ಅಪರೂಪದವುಗಳಾಗಿವೆ. ನೊಳಂಬರ ಕಾಲದ ಶಿಲ್ಪಕಲೆಗೆ ಅತ್ಯುತ್ತಮ ಉದಾಹರಣೆಯಾಗಿ ನಿಲ್ಲುತ್ತವೆ. ನೊಳಂಬರ ಶಿಲ್ಪಕಲೆಯ ಬಗ್ಗೆ ಕೆ. ಕೃಷ್ಣಮೂರ್ತಿಯವರ "Indeed the Nolamba art, in all its gandeur, impress us greatly by its


rhythm, symmetry and decorative beauty and perfect handling of the figural, floral and animal motifs" ಮಾತುಗಳು ಇಲ್ಲಿನ ಶಿಲ್ಪಗಳ ಕುರಿತಂತೆ ಹೇಳಿರುವರೇನೋ ಎಂಬ ಭಾವನೆ ಮೂಡುತ್ತದೆ. ಇಲ್ಲಿನ ಭೈರವ, ಚಾಮುಂಡಾ, ಸೂರ್ಯ, ಗಣೇಶನ ಶಿಲ್ಪಗಳು ಹೇಮಾವತಿಯ ಶಿಲ್ಪಗಳ ಮಾದಿರಿಯಲ್ಲಿ ಇವೆ. ಬಹುಶಃ ಇಲ್ಲಿನ ಮಾಹೇಶ್ವರಿ, ಚಾಮುಂಡಿ, ಭೈರವಿ ಶಿಲ್ಪಗಳನ್ನು ಗಮನಿಸಿದರೆ, ಇವು ಸಪ್ತಮಾತೃಕೆಯರ ಬಿಡಿ ಶಿಲ್ಪಗಳಾಗಿರು ವಂತೆ ತೋರುತ್ತದೆ. ಮತ್ತಷ್ಟು ಕ್ಷೇತ್ರಕಾರ್ಯ ಕೈಗೊಂಡಲ್ಲಿ ಸಪ್ತಮಾತೃಕೆಯರ ಉಳಿದ ಬಿಡಿಶಿಲ್ಪಗಳೂ ದೊರೆಯಬಹುದು.

ಜೈನಶಾಸನ ಶಿಲ್ಪದಲ್ಲಿ ಪದ್ಮಾವತಿ ಯಕ್ಷಿಯ ಶಿಲ್ಪ ವಿಶಿಷ್ಟ ಭಂಗಿಯಲ್ಲಿದ್ದು, ಪದ್ಮಾವತಿ ಯಕ್ಷಿಯನ್ನು ಸಾಮಾನ್ಯ ಲೌಕಿಕ ಶಿಲ್ಪಗಳ ಮಾದರಿಯಲ್ಲಿ ಶಿಲ್ಪಿಸಲಾಗಿದೆ. ಇಲ್ಲಿರುವ ಅಂಬಿಕಾ ಯಕ್ಷಿ ಮತ್ತು ಯಕ್ಷನ ಶಿಲ್ಪಗಳನ್ನು ಗಮನಿಸಿದಾಗ ಈ ಪ್ರದೇಶದಲ್ಲಿ ಕ್ರಿ.ಶ. ೧೫ನೇ ಶತಮಾನದಲ್ಲೂ ಜೈನಧರ್ಮ ಅಸ್ತಿತ್ವದಲ್ಲಿತ್ತೆಂದು ತಿಳಿದುಬರುತ್ತದೆ.

ವಿಜಯನಗರ ಕಾಲದ ವೀರಗಲ್ಲು ಹಾಗೂ ವೀರಮಾಸ್ತಿ ಕಲ್ಲುಗಳು ಅವುಗಳ ಶಿಲ್ಪಕಲೆಯ ದೃಷ್ಟಿಯಿಂದ ಗಮನ ಸೆಳೆದರೆ, ಮಾಸ್ತಿಯ ಅಲಂಕಾರವನ್ನು ಶಿಲ್ಪಿ ತುಂಬಾ ಮೋಹಕವಾಗಿ ಪಡಿಮೂಡಿಸಿದ್ದಾನೆ. ಧರ್ಮಪುರದ ಪೊಲೀಸ್ ಠಾಣೆಯ ಬಳಿ ರಾಷ್ಟ್ರಕೂಟರ ಕಾಲದ ಒಂದು ಅಪೂರ್ವ ತುರುಗೋಳ್ ವೀರಗಲ್ಲು ಶಾಸನವಿದ್ದು, ಇದನ್ನು ಶ್ರೀಮತಿ ಯಶೋದಮ್ಮನವರು ಇತಿಹಾಸ ದರ್ಶನ ಸಂಪುಟದಲ್ಲಿ ಈಗಾಗಲೇ ದಾಖಲಿಸಿದ್ದಾರೆ. ಈ ಪ್ರದೇಶದಲ್ಲಿ ಮತ್ತಷ್ಟು ಕ್ಷೇತ್ರಕಾರ್ಯ ಕೈಗೊಂಡಲ್ಲಿ ಇನ್ನೂ ಹೆಚ್ಚು ಹೆಚ್ಚು ವಿಷಯಗಳು ಬೆಳಕಿಗೆ ಬರಬಹುದು. ಪ್ರಕೃತ ಲೇಖನದಲ್ಲಿ ಅನಿವಾರ್ಯ ಕಾರಣಗಳಿಂದ ಇಲ್ಲಿ ವಿವರಿಸಿರುವ ಎಲ್ಲಾ ಶಿಲ್ಪಗಳ ಛಾಯಾಚಿತ್ರಗಳನ್ನು ಸೇರಿಸಲು ಸಾಧ್ಯವಾಗದೇ ಇದೆ. ಇದಕ್ಕಾಗಿ ವಿಷಾದಿಸುತ್ತೇವೆ.

[ಈ ಬಗ್ಗೆ ಮಾಹಿತಿ ನೀಡಿ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ನನಗೆ ನೆರವು ನೀಡಿದ ಸಹೋದ್ಯೋಗಿ ಮಿತ್ರರಾದ ಶ್ರೀ ಎಂ.ಆರ್. ವೆಂಕಟರಮಣ ಹಾಗೂ ಅವರ ಪುತ್ರ ಎಂ.ವಿ. ಕೃತಿಕ್‌ರವರಿಗೆ ಹಾಗೂ ನನ್ನ ಮಗಳಾದ ಎಸ್.ಜಿ. ಸೃಷ್ಟಿಗೆ ಕೃತಜ್ಞತೆಗಳು.]




ಆಧಾರಸೂಚಿ

೧. *Nolamba Sculptures – A Cultural Study* – K. Krishna Murthy, 1987.
೨. *Sapta Matrka - Worship and Sculptures* – Shivaji K. Panikkar, 1996.
೩. *Surya and Sun Cult*, Shantilal Nagar, 1995.
೪. *Mysore Gazetter*, Vol – 1, B.L.Rice, 1897.
೫. *Epigraphia Carnatica*, XI, B.L.Rice, 1903.

೬

ಬೆಳಗೆರೆ ಗ್ರಾಮದ ಪ್ರಾಚ್ಯಾವಶೇಷಗಳು

ಬಿ. ಪರಮೇಶ*

ಬೆಳಗೆರೆ ಚಳ್ಳಕೆರೆಯಿಂದ ಸಾಣಿಕೆರೆ ಮಾರ್ಗವಾಗಿ ಹುಲಿಕುಂಟೆ, ಜಡೇಕುಂಟೆ ಮೂಲಕವಾಗಿ ೨೯ ಕಿ.ಮೀ. ದೂರದಲ್ಲಿರುವ ಗ್ರಾಮವಾಗಿದೆ. ಒನಕೆ ಓಬವ್ವಳ ವಂಶಿಕರಾದ ಕಹಳೆ ತೊಟ್ಟ ಹನುಮಪ್ಪನು ಲಕ್ಷ್ಮಿನರಸಿಂಹ ದೇವಾಲಯವನ್ನು ಸ್ಥಾಪಿಸಿದ್ದಾನೆ. ಈ ಗ್ರಾಮವು ಪ್ರಾಚೀನ ಗ್ರಾಮವಾಗಿದ್ದು ವೇದಾವತಿ ನದಿಯ ಎಡದಂಡೆಯ ಮೇಲಿದೆ. ಬೆಳಗೆರೆ ಮತ್ತು ನಾರಾಯಣಪುರ ಮಜಿರೆ ಗ್ರಾಮಗಳಾಗಿವೆ. ವೇದಾವತಿ ನದಿ ದಕ್ಷಿಣದ ಕಡೆಯಿಂದ ಉತ್ತರ ದಿಕ್ಕಿಗೆ ಹರಿಯುತ್ತದೆ. ಅಮೃತ ಮಹಲ್ ಕಾವಲು ಇದೆ. ಈ ಭಾಗದಲ್ಲಿ ದ್ವಾರನ ಕುಂಟೆ, ಶಕ್ಕರ, ನಂದಿಹಳ್ಳಿ, ಅಬ್ಬಿನ ಹೊಳೆ, ಅಂಬಲಗೆರೆ, ಬೆಳಗೆರೆ, ಹೀಗೆ ಉದ್ದಕ್ಕೂ ಶೈವದೇವಾಲಯಗಳಿದ್ದು, ಅವನ್ನು ಕ್ರಮೇಣ ವೈಷ್ಣವ ದೇವಾಲಯಗಳನ್ನಾಗಿ ಪರಿವರ್ತಿಸಲಾಗಿದೆ. ಕಾಡು ಗೊಲ್ಲರೇ ಭಕ್ತಾದಿಗಳು ಒಕ್ಕಲು ಪೂಜಾರಿಗಳು ಇದ್ದಾರೆ.

೧. ಶ್ರೀರಂಗನಾಥಸ್ವಾಮಿ ದೇವಾಲಯ : ಈ ದೇವಾಲಯ ಊರಿನ ಪೂರ್ವ ಭಾಗದಲ್ಲಿದೆ. ಕೆರೆ ಹಿಂಭಾಗದಲ್ಲಿದೆ. ದಕ್ಷಿಣಕ್ಕೆ ಸಭಾಮಂಟಪದಲ್ಲಿ ದ್ವಾರ ಬಾಗಿಲು ಇದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯವು ಗ್ರಾನೈಟ್ ಶಿಲೆ, ಗಾರೆ, ಇಟ್ಟಿಗೆ ಬಳಸಿಕೊಂಡು ನಿರ್ಮಾಣ ಮಾಡಿದ್ದಾರೆ. ದೇವಾಲಯದ ಕಾಲ ಮತ್ತು ವಾಸ್ತುವಿನ ಬೆಳವಣಿಗೆ ದೇವಾಲಯದ ಪಕ್ಕದಲ್ಲಿ ಶಾಸನದಿಂದ ನಿರ್ಧರಿಸಬಹುದು. ವಿಜಯನಗರೋತ್ತರ ಮತ್ತು ಪಾಳೇಗಾರರ ಆಳ್ವಿಕೆಯನ್ನು ಗಮನಿಸಬಹುದು. ಗರ್ಭಗುಡಿಯಲ್ಲಿನ ಶ್ರೀರಂಗನಾಥ ಸ್ವಾಮಿ ವಿಗ್ರಹವು ಮೂರು ಅಡಿ ಎತ್ತರವಿದ್ದು, ನಿಂತಿರುವ ಭಂಗಿಯಲ್ಲಿದೆ. ಪೀಠದ ಮೇಲೆ ಪೂರ್ವಕ್ಕೆ ಮುಖವಿದೆ. ಗರ್ಭಗುಡಿ ಮಧ್ಯಾಂಕಣದಲ್ಲಿ ಶಿವಲಿಂಗವಿದೆ ಎದುರಿಗೆ ನಂದಿ ಇದೆ, ಇದು ರಂಗನಾಥಸ್ವಾಮಿಮೂರ್ತಿ ಎಡಗಡೆಯಲ್ಲಿದೆ. ಸಭಾಮಂಟಪದ ಪೂರ್ವ ಮತ್ತು ದಕ್ಷಿಣದ ಭಾಗಗಳಲ್ಲಿ ಎರಡು ದ್ವಾರಗಳನ್ನು ಹೊಂದಿದೆ. ಮಧ್ಯದ ಅಂಕಣದ ಭಿತ್ತಿಯಲ್ಲಿ ಭಕ್ತರು ಕೈಮುಗಿಯುತ್ತಿರುವ, ಪಶ್ಚಿಮದ ಭಿತ್ತಿಯಲ್ಲಿ ಹನುಮಂತನ, ದಕ್ಷಿಣದ ಭಿತ್ತಿಯಲ್ಲಿ ನಾಗಶಿಲ್ಪಗಳಿವೆ. ೪ ಕಂಬಗಳಿದ್ದು ೪ ದಿಕ್ಕುಗಳಲ್ಲಿ ನಾಗಬಂಧ, ಹನುಮಂತ, ಶಂಖ, ಚಕ್ರ, ಹಂಸ, ಹಸುವು ಕರುವಿಗೆ ಹಾಲುಣಿಸುವ ಚಿತ್ರವಿದೆ.

ಪ್ರದಕ್ಷಿಣ ಪಥ: ದೇವಾಲಯದ ಸುತ್ತಲೂ ವಿಶಾಲ ಪ್ರದಕ್ಷಿಣ ಪಥವಿದ್ದು, ಭಿತ್ತಿಯ ಹೊರಭಾಗದಲ್ಲಿ ರಾಮಾಯಣ ಕಥೆಗಳು, ಪಟ್ಟಿಕೆಯಲ್ಲಿ ಗಿಳಿಗಳ ಸಾಲು ಗರ್ಭಗುಡಿಯ ಮೇಲೆ ದ್ರಾವಿಡ ಶೈಲಿಯ ಚಿತ್ರವಿದೆ. ಭಿತ್ತಿಯ ದಕ್ಷಿಣದಲ್ಲಿ ಹಲ್ಲಿಯ ದೇಹ ಮುಖ ಮಂಗನದಾಗಿದೆ. ದ್ವಾರ ಬಾಗಿಲಿನ ಮೇಲೆ ಸಪ್ತ ಮಾತೃಕೆಯರ ಮೂರ್ತಿ ಶಿಲ್ಪಗಳಿವೆ. ಭಿತ್ತಿಯ ಹೊರಭಾಗ ಇಟ್ಟಿಗೆ, ಗಾರೆ, ಗಚ್ಚು ಸುಣ್ಣ ಬಳಸಿದ್ದಾರೆ. ಮೇಲ್ಚಾವಣಿ ಗಾರೆ ಮಿಶ್ರಿತ ಹಾಸುಬಂಡೆಗಳಿಂದ ಮಾಡಲ್ಪಟ್ಟಿದೆ.

ದೀಪಸ್ಥಂಭ: ದೇವಾಲಯದ ಎದುರಿಗೆ ೧೦ ಅಡಿ ಎತ್ತರವಿರುವ ೨ ದೀಪ ಸ್ತಂಭಗಳಿವೆ. ದೀಪ ಸ್ತಂಭದ ತುದಿಯಲ್ಲಿ ೪ ಭಾಗದಲ್ಲಿ ಚಕ್ರವಿರುವ ಪಟ್ಟಿಕೆಗಳಿವೆ.

ಶಾಸನ: ದೇವಾಲಯದ ದಕ್ಷಿಣ ಭಾಗದಲ್ಲಿದೆ. ಇದು ೪ ೧/೨ ಅಡಿ ಎತ್ತರವಿದ್ದು ಬಿಳಿ ಶಿಲೆಯಲ್ಲಿ ಕೊರೆಯಲಾಗಿದೆ, ೧ ೧/೨ಅಡಿ ಅಗಲವಿದೆ. ಕ್ರಿ.ಶ. ೧೫ನೇ ಶತಮಾನದಲ್ಲಿ ಕೆತ್ತಿಸಿದ ಶಾಸನ. ಹೊಯ್ಸಳರ ಸಂಸ್ಕೃತಿಯನ್ನು ತಿಳಿಸುತ್ತದೆ. ಈ ದೇವಾಲಯದ ವಿಶೇಷತೆ ಎಂದರೆ ಕಂಕಳ ಧಾರಣೆ ಗಂಗಾಪೂಜೆ, ೧೦೧ಎಡೆ ಪೂಜೆ, ರಂಗನಾಥ ಸ್ವಾಮಿ ಲಕ್ಷ್ಮಿಗೆ ಲಗ್ನ ಮಾಡಿಸುವುದು, ಮಾತುಗಾರಿಕೆ, ಬಲಿಅನ್ನ, ರಥೋತ್ಸವ, ಪಾರ್ವಾಟ, ವಿಷ್ಣುವಿನ ದಶಾವತಾರದ ಪ್ರಸ್ಥಾವನೆ. ಇದು ಕರಡಿ ಗೊಲ್ಲರ ಮನೆ ದೇವರು ಅವರೇ ಅರ್ಚಕರು.

೨. ಲಕ್ಷ್ಮಿದೇವಾಲಯ : ಇದು ರಂಗನಾಥಸ್ವಾಮಿ ದೇಗುಲದ ಉತ್ತರಭಾಗದಲ್ಲಿದೆ. ಪೂರ್ವಾಭಿಮುಖಿ ದ್ವಾರ ಬಾಗಿಲಿದೆ. ಗರ್ಭಗುಡಿ ನಾಲ್ಕು ಕಂಬಗಳ ಮಂಟಪವಿದೆ.

ಗರ್ಭಗುಡಿ: ಪೀಠದ ಮೇಲೆ ಲಕ್ಷ್ಮಿಯ ಮೂರ್ತಿ ಶಿಲ್ಪವನ್ನು ಕಪ್ಪು ಶಿಲೆಯಲ್ಲಿ ಕೆತ್ತಲಾಗಿದೆ. ಇದು ೨ ಅಡಿ


* ಇತಿಹಾಸ ಉಪನ್ಯಾಸಕರು. ಹೆಚ್ ಪಿ.ಪಿ.ಸಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು. ಚಳ್ಳಕೆರೆ.

ಬೆಳಗೆರೆ ಗ್ರಾಮದ ಪ್ರಾಚ್ಯಾವಶೇಷಗಳು





















ಎತ್ತರವಿದೆ. ಲಕ್ಷ್ಮಿ ಕುಳಿತ ಭಂಗಿಯಲ್ಲಿ ಕಮಲದ ಹೂವನ್ನು ಎರಡೂ ಕೈಯಲ್ಲಿ ಹಿಡಿದಿದ್ದಾಳೆ. ತಲೆ ಹಿಂಭಾಗ ಸಿಂಹ ಚಿತ್ರವಿದೆ. ಬಲಗೈ ಆಶೀರ್ವಾದ ಮಾಡುತ್ತಿರುವ ಹಸ್ತವಿದೆ. ಎಡಗಡೆ ಕೈಕೆಳಗೆ ಬಾಗಿರುವ ಶಿಲ್ಪವಿದೆ. ದ್ವಾರ ಬಾಗಿಲಿನ ಎರಡೂಕಡೆ ದ್ವಾರಪಾಲಕರ ಶಿಲ್ಪಗಳಿವೆ. ದ್ವಾರ ಬಾಗಿಲಮೇಲೆ ಗಣೇಶನ ಮೂರ್ತಿ ಶಿಲ್ಪವಿದೆ. ದೇವಿಗೆ ಅಲಂಕಾರ, ಸೀರೆ, ಬಳೆ ಧರಿಸುತ್ತಾರೆ. ಇಲ್ಲಿಯೂ ಗೊಲ್ಲರೇ ಪೂಜೆ ಸಲ್ಲಿಸುತ್ತಾರೆ. ಪ್ರತೀ ವರ್ಷ ಚೈತ್ರ ಮಾಸದ ಹುಣ್ಣಿಮೆಯಲ್ಲಿ ಜಾತ್ರೆ ನಡೆಯುತ್ತದೆ. ಬೇಲೂರು ರಂಗನಾಥ ಸ್ವಾಮಿ ದೇ, ಬಿಳಿಗಿರಿ ರಂಗನಾಥ ಸ್ವಾಮಿ ದೇವಾಲಯಗಳು ಚೈತ್ರ ಮಾಸದಲ್ಲೇ ಜಾತ್ರೆ ನಡೆಯುವುದು ವಿಶೇಷವಾಗಿದೆ.

೩. ತಿಮ್ಮಪ್ಪನ ಗುಡಿ: ಈ ದೇವಾಲಯವು ಈಶಾನ್ಯ ದಿಕ್ಕಿಗಿದೆ. ರಂಗನಾಥಸ್ವಾಮಿ ದೇಗುಲದಿಂದ ೧/೨ ಕಿ.ಮೀ. ಪಾಸಲೆಯಲ್ಲಿದೆ. ಪೂರ್ವಕ್ಕೆ ದ್ವಾರ ಬಾಗಿಲು, ಗರ್ಭಗುಡಿಯಲ್ಲಿ ತಿಮ್ಮಪ್ಪನ ಮೂರ್ತಿಯಿದೆ. ಮೇಲಿನ ಭಾಗ ಹಾಸು ಬಂಡೆಯಿಂದ ಕೂಡಿದೆ ದೇವಾಲಯದ ಎದುರಿಗೆ ೩೦ ಅಡಿ ಅಂತರದಲ್ಲಿ ೧೨ ಅಡಿ ಎತ್ತರದ ಬಂಡೆಯ ಮೇಲೆ ತಿಮ್ಮಪ್ಪನ ಶಿಲ್ಪವನ್ನು ಕೆತ್ತಲಾಗಿದೆ. ಪಾದಗಳ ಕೆಳಗೆ ಹೂವಿನ ಹಾರವಿದೆ. ತಿಮ್ಮಪ್ಪ ಕೈಮುಗಿದು ನಿಂತಿರುವ ಮೂರ್ತಿ ಇದೆ. ತಲೆಯ ಎರಡೂ ಕಡೆ ಶಂಖ ಚಕ್ರವಿದೆ.

೪. ಲಕ್ಷ್ಮೀನರಸಿಂಹಸ್ವಾಮಿ ದೇವಾಲಯ: ಈ ದೇವಾಲಯವು ಕಳೇಕೆಂಚನ ಹೆಂಡತಿ ಓಬವ್ವನ ವಂಶಸ್ಥರ ಮೊಮ್ಮಗ ದೇವಾಲಯವನ್ನು ಪ್ರತಿಷ್ಠಾಪನೆ ಮಾಡಿದನೆಂದು ಆದಿ ದ್ರಾವಿಡರು ಪೂಜಿಸುತ್ತಾರೆ. ಈ ದೇವಾಲಯದ ಎದುರುಗಡೆ ಸ್ಥಂಭವಿದೆ. ಕಂಬದಲ್ಲಿ ನರಸಿಂಹನ ಮೂರ್ತಿ ಇದೆ. ಇಡೀ ಚಿತ್ರದುರ್ಗ ಜಿಲ್ಲೆಯಲ್ಲಿ ಆದಿದ್ರಾವಿಡರ ಕಟ್ಟೆ ಮನೆಯಾಗಿದೆ. ಈಗ ಈ ದೇವಾಲಯವನ್ನು ಜೀರ್ಣೋದ್ದಾರ ಮಾಡುತ್ತಿದ್ದಾರೆ.

೫. ಮುಂಡದೇವಾಲಯ: ಬೆಳಗೆರೆ ಪೂರ್ವಭಾಗದಲ್ಲಿದೆ ವೇದಾವತಿ ಎಡದಂಡೆ ಮೇಲಿದೆ. ರಾಜನ ಅಂಗರಕ್ಷಕ ಪ್ರತಿಜ್ಞೆ ಮಾಡುತ್ತಿದ್ದ ನನ್ನ ಜೀವಾವಧಿಯಲ್ಲಿ ರಾಜನನ್ನು ರಕ್ಷಣೆ ಮಾಡುವುದು ನನ್ನ ಕರ್ತವ್ಯ ಅದಕ್ಕೆ ತಪ್ಪಿದಾಗ ಶಿರಚ್ಛೇದ ಮಾಡಿಕೊಳ್ಳುತ್ತೇನೆ ಎನ್ನುವ ಪ್ರತಿಜ್ಞೆ ಇದೆ. ಅಂಗರಕ್ಷಕ ಕತ್ತಿ ಹಿಡಿದುಕೊಂಡಿದ್ದಾನೆ ಯಕ್ಷಗಳು ಒಂದು ರುಂಡವನ್ನು ಯಕ್ಷಲೋಕಕ್ಕೆ ತೆಗೆದುಕೊಂಡು ಹೋಗುತ್ತಿರುವ ಶಿಲ್ಪವಿದೆ. ಕತ್ತರಿಸಿದ ರುಂಡ ಮೇಲಕ್ಕೆ, ಡುಬ್ಬ ಕೆಳಗಡೆ ಇರುವ ಶಿಲ್ಪವಿದೆ. ಗರುಡ ಅಂಗರಕ್ಷಕ.

೬. ತೂತು ಬಂಡೆ ರಂಗಪ್ಪ ಮತ್ತು ಅಮೃತ ಕಾವಲು: ರಂಗನಾಥಸ್ವಾಮಿ ದೇವಾಲಯದ ೧ ೧/೨ ಕಿ.ಮೀ. ದೂರದಲ್ಲಿ ಕೆರೆಯಲ್ಲಿದೆ. ಕರಿಕಲ್ಲುಗಳ ಹೊರಳಿನಾಕಾರದ ರಂಧ್ರಗಳಿದ್ದು ಯಾವಾಗಲೂ ೩೬೫ ದಿನಗಳು ನೀರು ಇರುವುದು ವಿಶೇಷ. ರಂಗನಾಥಸ್ವಾಮಿ ಬೇಟೆಗೆ ಹೋಗಿ ನೀರು ಕುಡಿದಾಗ ರಂಧ್ರಗಳು ಉಂಟಾಗಿವೆ ಎಂದು ಭಕ್ತಾದಿಗಳ ನಂಬಿಕೆ. ಅಮೃತ ಮಹಲ್ ಕಾವಲ್ ಸಾವಿರಾರು ಎಕರೆ ಇದೆ ಮೈಸೂರು ಅರಸರಿಗೆ ಸೇರಿದ ಗೋವುಗಳು ಏಳು ಗೂಡಿನ ದನಗಳು ಮಲಗುತ್ತಿದ್ದವು. ಹುಲಿಕುಂಟೆ, ರಂಗೇನಹಳ್ಳಿ, ಸಿಡ್ಲಯ್ಯನ ಕೋಟೆ, ಕಲ್ಲಮರಹಳ್ಳಿ , ಬೆಳೆಗೆರೆ ಗಡಿ ಒಳಗೊಂಡ ಭೂ ಪ್ರದೇಶವೇ ಅಮೃತಮಹಲ್ ಕಾವಲ್.

೭. ಕಲ್ಲಿನ ಮಂಟಪ: ಇದು ನೆಲದಿಂದ ನಾಲ್ಕು ಅಡಿ ಎತ್ತರದಲ್ಲಿ ಬಂಡೆಗಳನ್ನು ಹಾಸಲಾಗಿದೆ. ಕಲ್ಲಿನ ಕಂಬಗಳ ತೆರೆದ ಮಂಟಪವಿದೆ. ಪ್ರಸ್ತುತ ಶಿಥಿಲಗೊಂಡಿದೆ.

೮. ಓಕುಳಿ ಕಟ್ಟೆ: ಇದು ರಂಗನಾಥಸ್ವಾಮಿ ದೇವಾಲಯದ ಪೂರ್ವದಿಕ್ಕಿಗೆ ಇದೆ. ಒಂದು ಅಡಿ ಎತ್ತರವಿರುವ ಹಾಸು ಬಂಡೆಗಳಿಂದ ಇದ್ದು, ಮಧ್ಯದಲ್ಲಿ ಪದ್ಮಾಕಾರದ ದಳಗಳ ಚಿತ್ರವಿದೆ. ರಂಗನಾಥಸ್ವಾಮಿಯನ್ನು ಕೂರಿಸುವ ಜಾಗವೆಂದು ಹೇಳುತ್ತಾರೆ.

[ಈ ಲೇಖನ ಬರೆಯುವಲ್ಲಿ ಸಹಕರಿಸಿದ ಬೆಳಗೆರೆ ಕೃಷ್ಣಶಾಸ್ತ್ರಿ, ಡಾ॥ ಎಸ್. ತಿಪ್ಪೇಸ್ವಾಮಿ, ಕೆ. ರಾಜಣ್ಣ, ರಾಜೀವ ಲೋಚನ, ನನ್ನ ಶ್ರೀಮತಿ ಪಿ. ರೂಪ, ಮಗಳಾದ ಪಿ. ಮೇಘನ, ವಿದ್ಯಾರ್ಥಿಯಾದ ಕ್ಷೀರಸಾಗರ ಛಾಯಾಗ್ರಾಹಕ ಅಪ್ಪಿ. ಇವರಿಗೆ ನನ್ನ ಕೃತಜ್ಞತೆಗಳು.]

ಆಧಾರಸೂಚಿ

೧. ಟಿ. ಗಿರಿಜಾ, **ಚಿತ್ರದುರ್ಗ ಜಿಲ್ಲಾದರ್ಶಿನಿ.**
೨. **ಇತಿಹಾಸ ದರ್ಶನ,** ಕರ್ನಾಟಕ ಇತಿಹಾಸ ಅಕಾಡಮಿ, ಸಂ. ೨೬.
೩. ಲಕ್ಷ್ಮಣ್ ತೆಲಗಾವಿ, **ಸ್ಥಳೀಯ ಚರಿತ್ರೆ ಅಧ್ಯಯನದ ತಾತ್ವಿಕತೆ ಮತ್ತು ಸ್ವರೂಪ.**
೪. ಹುಲ್ಲೂರು ಶ್ರೀನಿವಾಸ ಜೋಯಿಸರು, **ಐತಿಹಾಸಿಕ ಲೇಖನಗಳು.**
೫. ಬಿ. ರಾಜಶೇಖರಪ್ಪ, **ಇತಿಹಾಸ ಕಥನ.**
೬ ಬಿ. ಬಸವರಾಜು, **ಚೋಳರ ವಾಸ್ತು ಮತ್ತು ಶಿಲ್ಪ.**
೭. ಎಸ್.ಜಿ. ರಾಮದಾಸ್ ರೆಡ್ಡಿ, ಪಿ. ಮಹದೇವಪುರದ ಪ್ರಾಕ್ ಚಾರಿತ್ರಿಕ ಕುರುಹುಗಳು, **ಇತಿಹಾಸ ಅಕಾಡೆಮಿ,** ಸಂ. ೨೧.
೮. **ಕರ್ನಾಟಕ ಇತಿಹಾಸ ದರ್ಶನ,** ಸಂ. ೨೧, ಸಂ. ೨೦, ಸಂ. ೨೪.
೯. ರಾಮದಾಸ್ ರೆಡ್ಡಿ, **ಚಿತ್ರದುರ್ಗ ಜಿಲ್ಲೆಯ ಪ್ರಾಕ್ ಚಾರಿತ್ರಿಕ ಅಧ್ಯಯನ.**
೧೦. ಕೃಷ್ಣ ಶಾಸ್ತ್ರಿಗಳ ಮೌಖಿಕ ಮಾಹಿತಿ. ಕ್ಷೇತ್ರ ಕಾರ್ಯಗಳ ವರದಿ. ಛಾಯಾಚಿತ್ರಗಳು.

ಹೊಸಕೋಟೆ ತಾಲ್ಲೂಕು ಅರೇಹಳ್ಳಿಯ ಪ್ರಾಚ್ಯಾವಶೇಷಗಳು

ಆದಪ್ಪ ಪಾಸೋಡಿ*


ಅರೇಹಳ್ಳಿಯು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲ್ಲೂಕು ಕೇಂದ್ರದಿಂದ ಆಗ್ನೇಯ ದಿಕ್ಕಿಗೆ ರಾಷ್ಟ್ರೀಯ ಹೆದ್ದಾರಿ ೨೦೭ ರಲ್ಲಿ ೨೧ ಕಿ.ಮೀ. ದೂರದಲ್ಲಿದೆ. ಈ ಗ್ರಾಮವು ಅನುಗೊಂಡನಹಳ್ಳಿ ಹೋಬಳಿಯ ಕಲ್ಕುಂಟೆ ಅಗ್ರಹಾರ ಗ್ರಾಮ ಪಂಚಾಯ್ತಿ ವ್ಯಾಪ್ತಿಗೊಳಪಟ್ಟಿರುತ್ತದೆ. ಇಲ್ಲಿಯ ಗೋಪಾಲಸ್ವಾಮಿ ದೇವಸ್ಥಾನದ ದಕ್ಷಿಣ ದಿಕ್ಕಿಗೆ ವೀರಬಲ್ಲಾಳದೇವನ ಕ್ರಿ.ಶ. ೧೩೧೫ರ ಗ್ರಂಥ ಮತ್ತು ತಮಿಳು ಶಾಸನದಲ್ಲಿ ಅರ್ೈಯೂರನಪಳ್ಳಿಯ ಸೇವಿಂದೈನಾಯನಾರ್ ದೇವರ ಉಲ್ಲೇಖ ಬರುತ್ತದೆ. ಮುತ್ತಕೂರು ವಿಭಾಗದಲ್ಲಿದ್ದ ಅರ್ೈಯೂರನಪಳ್ಳಿಯು ಈಗಲೂ ಅರೇಹಳ್ಳಿ ಎಂದು ಕರೆಯಲ್ಪಡುತ್ತಿದೆ. ಅರ್ೈ(ಯೂರ)ನಪಳ್ಳಿ > ಅರೇಹಳ್ಳಿ; 'ಅರೆ' ಎಂಬುದು ಶಿಲಾವಾಚಕ ಸ್ಥಳನಾಮ. ದ್ರಾವಿಡ ಮೂಲದ 'ಪಳ್ಳಿ' ಸ್ಥಳನಾಮವಾರ್ಗಿಕ ದಕ್ಷಿಣ ಭಾರತದ ಸ್ಥಳನಾಮಗಳಲ್ಲಿ ವಿಶೇಷವಾಗಿ ಕಂಡುಬರುತ್ತದೆ. ಪಳ್ಳಿ ಶಬ್ದವು ಸಣ್ಣ ಊರು ಅಥವಾ ಸ್ಥಳ ಎಂಬ ಅರ್ಥಗಳನ್ನು ಕೊಡುವುದರಿಂದ, ಸ್ಥಳನಾಮದ ಮಧ್ಯದ ಪದ 'ಯೂರ' ಲೋಪವಾಗಿ 'ಪಳ್ಳಿ' ಹಳ್ಳಿಯಾಗಿರುತ್ತದೆ.

ಅರೇಹಳ್ಳಿಯಲ್ಲಿ ಗಂಗರ ಕಾಲದ ಒಂದು ವೀರಗಲ್ಲು, ಹೊಯ್ಸಳ ಆಡಳಿತಾವಧಿಯ ಭೈರವಶಿಲ್ಪ ಮತ್ತು ತ್ರಿಶೂಲದ ಉಬ್ಬುಶಿಲ್ಪ, ಸುಮಾರು ೧೫-೧೬ನೇ ಶತಮಾನದ ಮಾಸ್ತಿಗುಡಿ-ಇವು ಪ್ರಮುಖ ಪ್ರಾಚ್ಯಾವಶೇಷಗಳೆನಿಸುತ್ತವೆ.


ವೀರಗಲ್ಲು: ಅರೇಹಳ್ಳಿಯ ಆಂಜನೇಯ ದೇವಸ್ಥಾನದ ಹಿಂಭಾಗದಲ್ಲಿ ಪೂರ್ವಾಭಿಮುಖವಾಗಿ ನಿಲ್ಲಿಸಿರುವ ವೀರಗಲ್ಲು ೪'೧೦" ಅಗಲ ಹಾಗೂ ನೆಲಮಟ್ಟದಿಂದ ಮೇಲೆ ೪'೪" ಎತ್ತರದ ಬಿಳಿಯ ಕಲ್ಲಿನಲ್ಲಿ ಮಾಡಲ್ಪಟ್ಟಿದೆ. ಇದರಲ್ಲಿ ವೀರನನ್ನು ಸ್ವಲ್ಪ ದೊಡ್ಡದಾಗಿಯೂ, ಅವನ ಆಕಾರಕ್ಕಿಂತ ಸ್ವಲ್ಪ ಕಡಿಮೆ ಪ್ರಮಾಣದಲ್ಲಿ ಎದುರಾಳಿಗಳ ಶಿಲ್ಪವನ್ನೂ ಬಿಡಿಸಲಾಗಿದೆ. ವೀರನು ಆಯುಧಪಾಣಿಯಾಗಿದ್ದು, ಎದುರಿನಿಂದ ನುಗ್ಗುತ್ತಿರುವ ಮೂವರು ಶತ್ರುಗಳನ್ನು ದೃಷ್ಟಿಯಲ್ಲಿರಿಸಿಕೊಂಡು ತನ್ನ ಬಲಗೈಯಲ್ಲಿದ್ದ ಖಡ್ಗವನ್ನು ಮೇಲೆತ್ತಿದ್ದಾನೆ. ಎಡಗೈಯಲ್ಲಿ ತನ್ನ ಭುಜದಷ್ಟು ಎತ್ತರವಾದ ಬರ್ಜಿಯಿಂದ ಕಾಲುಗಳಡಿಯಲ್ಲಿ ಎರಗುತ್ತಿರುವ ಶತ್ರುವಿನ ಬೆನ್ನಿಗೆ ಇರಿಯುತ್ತಿದ್ದಾನೆ. ಆಲೀಢಾಸನದಲ್ಲಿರುವ ವೀರನ ಅಂಗಸೌಷ್ಠವ ಬಿಳಿಕಲ್ಲಿನ ಸ್ವಭಾವದಿಂದಾಗಿ ಚೆನ್ನಾಗಿ ಮೂಡಿಬಂದಿದೆ. ವೀರನು ತನ್ನ ಸೊಂಟಕ್ಕೆ ಕಟ್ಟಿಕೊಂಡಿರುವ ಉಡುಪು ಮೊಣಕಾಲಿನವರೆಗೆ ಇದೆ. ಸೊಂಟದಲ್ಲಿ ಖಡ್ಗದ ಕವಚವಿದ್ದು, ಶಿಲ್ಪಿಯು ಕೈಕಡಗ, ಕಾಲುಕಡಗ, ಕಿವಿಯೋಲೆ, ತಲೆಯ ಮೇಲೆ ಮುಡಿ, ಕಂಠಹಾರ ಗಳನ್ನು ಕಂಡರಿಸಿದ್ದಾನೆ. ವೀರನ ಎದುರಿನಿಂದ ಬರುತ್ತಿರುವ ಮೂವರು ಶತ್ರುಗಳೂ ಸಹ ಆಲೀಢಾಸನದಲ್ಲಿದ್ದು, ಎಲ್ಲರೂ ಬಲಗಾಲುಗಳನ್ನು ಮುಂದಿಟ್ಟು, ಎರಡೂ ಕೈಗಳಿಂದ ಹಿಡಿದ ಬರ್ಜಿಗಳನ್ನು ವೀರನತ್ತ ತಿವಿಯುತ್ತಿರುವಂತಿದೆ.

ಅದಾಗಲೇ ವೀರನ ಸೊಂಟಕ್ಕೆ ಎದುರಾಳಿಗಳಿಂದ ನಾಲ್ಕು ಬಾಣಗಳು ನೆಟ್ಟಿರುತ್ತವೆ. ಇವರು ತಮ್ಮ ಗುಂಪಿನ ವೀರರಿಬ್ಬರು ನೆಲಕ್ಕೆ ಬಿದ್ದಿರುವುದನ್ನು ಲೆಕ್ಕಿಸದೆ ಅವರ ಮೇಲೆಯೇ ಹೆಜ್ಜೆಗಳನ್ನಿಟ್ಟು ಮುನ್ನುಗ್ಗಿ ಬರುತ್ತಿರುವವರ ರೌದ್ರಭಾವವನ್ನು ಶಿಲ್ಪಿಯು ಪರಿಪೂರ್ಣವಾಗಿ ಬಿಡಿಸಿದ್ದಾನೆ. ವೀರನ ಬರ್ಜಿಯು ತನ್ನ ಬೆನ್ನಲ್ಲಿ ತಿವಿಯುತ್ತಿದ್ದರೂ ಶತ್ರುವೊಬ್ಬ ನೆಲಕ್ಕೆ ಬಿದ್ದುಕೊಂಡೇ ತನ್ನ ಬಲಗೈಯಲ್ಲಿರುವ ಕಠಾರಿಯಿಂದ ವೀರನ ಕಾಲಿಗೆ ಏಟು ಹಾಕುವ ಪ್ರಯತ್ನದಲ್ಲಿದ್ದರೆ, ಅವನ ಹಿಂದಿರುವ ಇನ್ನೊಬ್ಬ ಶತ್ರುವೂ ತನ್ನ ಅಕ್ರಮಣವನ್ನು ಮುಂದುವರೆಸು ತ್ತಿದ್ದಾನೆ. ಒಬ್ಬ ವೀರ, ಐದು ಜನ ಶತ್ರುಗಳನ್ನು ಎದುರಿಸುತ್ತಿರುವ ಈ ಚಿತ್ರಣದ ಸುತ್ತಲೂ ಶಿಲ್ಪಿಯು ಆಯತಾಕಾರದ ಒಂದು ಪಟ್ಟಿಕೆಯನ್ನು ಹಾಕಿಕೊಂಡಿದ್ದಾನೆ. ನುರಿತ ಶಿಲ್ಪಿಯೇನೋ ನಿಜ ಆದರೆ ವೀರನು ತನ್ನ ಬಲಗೈಯಲ್ಲಿ ಮೇಲೆತ್ತಿರುವ ಖಡ್ಗದ ಚಿತ್ರಣ ಪಟ್ಟಿಕೆಯ ಹೊರಗೂ ಮೂಡಿದೆ. ಪಟ್ಟಿಕೆಯ ಎಡಕ್ಕೆ ಮೇಲ್ಭಾಗದಲ್ಲಿ ಹೋರಾಟದಲ್ಲಿ ಮಡಿದ ವೀರನನ್ನು ಇಬ್ಬರು ಅಪ್ಸರೆಯರು ಸ್ವರ್ಗಕ್ಕೆ ಕೊಂಡೊಯ್ಯುತ್ತಿರುವುದನ್ನು ಚಿಕ್ಕದಾಗಿ ತೋರಿಸಲಾಗಿದೆ. ಇಲ್ಲಿ ವೀರನು ಕೈಮುಗಿದು ಕುಳಿತಿದ್ದು, ಅವನ ಪಕ್ಕದಲ್ಲಿ

* ಆಂಗ್ಲಭಾಷಾ ಶಿಕ್ಷಕ, ಸರ್ಕಾರಿ ಪ್ರೌಢಶಾಲೆ, ಅಗರ, ಬೆಂಗಳೂರು-೫೬೦೦೧೦೭.




ತ್ರಿಶೂಲದ ಉಬ್ಬುಶಿಲ್ಪ



ಮಾಸ್ತಿಗುಡಿ



ಗಂಗರ ಕಾಲದ ವೀರಗಲ್ಲು



ಕುಳಿಭರಿತ ಚಪ್ಪಡಿಕಲ್ಲು – ಮಾಸ್ತಿಗುಡಿ

ಲಿಂಗ ಮತ್ತು ನಂದಿಯನ್ನು ತೋರಿಸಲಾಗಿದೆ. ಶಿಲ್ಪದ ವಿವರಗಳು ವೀರಗಲ್ಲಿನ ತಳಭಾಗದಲ್ಲಿ ಆರಂಭವಾಗಿ ಮೇಲಕ್ಕೆ ಹೋಗುತ್ತವೆ. ಅಂದರೆ ಭೂಲೋಕದಲ್ಲಿ ಯುದ್ಧ ನಡೆದು ಮೇಲಿರುವ ಸ್ವರ್ಗಕ್ಕೆ ವೀರನು ಹೋಗುತ್ತಾನೆಂಬ ನಂಬಿಕೆ ಇಲ್ಲಿ ಪರಿಣಾಮಕಾರಿಯಾಗಿ ತೋರುತ್ತದೆ. ಹೀಗೆ ಎರಡು ಹಂತಗಳಲ್ಲಿಯೇ ಶಿಲ್ಪವಿನ್ಯಾಸ ಕ್ರಮ ಸಾಗುತ್ತದೆ. ಪಟ್ಟಿಕೆಯ ಬಲಮೂಲೆಯಲ್ಲಿ ಕಲ್ಲು ಚಕ್ಕೆ ಎದ್ದಿರುವುದನ್ನು ಮನಗಂಡು ಸ್ಥಳ ಖಾಲಿ ಬಿಡಲಾಗಿದೆ. ಅರೇಹಳ್ಳಿಯ ವೀರಗಲ್ಲುಶಿಲ್ಪದಲ್ಲಿ ವೀರನು ವೀರಗಲ್ಲಿನ ಬಲಭಾಗದಿಂದಲೂ, ಶತ್ರು ಪಕ್ಷದ ಐದು ಜನರು ಎಡಭಾಗದಿಂದಲೂ ಬಂದು ಹೋರಾಡು ತ್ತಿರುವಂತೆ ಬಿಡಿಸಲಾಗಿದೆ. ಇದು ಎಲ್ಲಾ ವೀರಗಲ್ಲುಗಳಲ್ಲಿ ಆರಂಭ ಕಾಲದಿಂದಲೂ ಗಮನಿಸಬಹುದಾದ ಒಂದು ಸಂಪ್ರದಾಯವಾದರೂ ಏಕೆ ಈ ಕ್ರಮವು ಅನುಸರಿಸಲ್ಪಟ್ಟಿದೆ ಎಂಬುದಕ್ಕೆ ಉತ್ತರ ಸಿಗದು. ಬಳಕೆ ಮಾಡಲಾದ ಬಿಳಿಕಲ್ಲು, ಅಗಲ ವಿಶಾಲ ಕಲ್ಲಿನ ಆಯ್ಕೆ ಹಾಗೂ ಶಿಲ್ಪ ಲಕ್ಷಣಗಳನ್ನಾ ಧರಿಸಿ ಇದನ್ನು ಗಂಗರ ಕಾಲದ ವೀರಗಲ್ಲು ಎನ್ನಬಹು ದಾಗಿದೆ.[೧] ಇಂತಹ ವೀರಗಲ್ಲುಗಳು, ಹೊಸಕೋಟೆ ತಾಲ್ಲೂಕು ದೊಡ್ಡಹುಲ್ಲೂರು, ಬೆಂಗಳೂರು ನಗರ ಜಿಲ್ಲೆ ಕೃಷ್ಣರಾಜಪುರ ತಾಲ್ಲೂಕಿನ ಮೇಡಹಳ್ಳಿ, ಕುರುಡುಸೊಣ್ಣೇನಹಳ್ಳಿಯ ಎಲೆಮಲ್ಲಪ್ಪನಕೆರೆ ದಂಡೆಯ ಮೇಲೆ ಕಂಡುಬರುತ್ತವೆ. ೫ನೇ ಶತಮಾನದಿಂದ ಕೋಲಾರನ್ನು ರಾಜಧಾನಿಯಾಗಿ ಮಾಡಿಕೊಂಡು ಆಳ್ವಿಕೆ ಆರಂಭಿಸಿದ ಗಂಗರಾಜರ ಗಂಗವಾಡಿ ಪ್ರದೇಶಕ್ಕೆ ಬೆಂಗಳೂರು ಸೇರಿತ್ತು. ಹೀಗಾಗಿ ಗಂಗರಸರ ಕಾಲದ ವೀರಗಲ್ಲುಗಳು ಬೆಂಗಳೂರಿನ ಸುತ್ತಮುತ್ತಲಿನ ಪರಿಸರದಲ್ಲಿ ಯಥೇಚ್ಚವಾಗಿ ಕಂಡುಬರುತ್ತವೆ. ಗಂಗ ವಂಶದ ೧೪ನೇ ಅರಸು ಶ್ರೀಪುರುಷ (ಸು. ಕ್ರಿ.ಶ. ೭೨೫–೭೮೮) ನ ಕಾಲದ ಮಾರೆಯನ ವೀರಗಲ್ಲು ಶಾಸನವು ಕೃಷ್ಣರಾಜಪುರ ದಲ್ಲಿದೆ.[೨]

ಕಟ್ಟೆಯ ಮೇಲಿನ ಕಂಬಕ್ಕೆ ನಿಲ್ಲಿಸಿರುವ ಭೈರವಶಿಲ್ಪ: ಒಂದು ಅಡಿ ಅಗಲ ಹಾಗೂ ಎರಡು ಅಡಿ ಎತ್ತರದ ಮೃದುವಾದ ಕಪ್ಪು ಶಿಲೆಯಲ್ಲಿ ಭೈರವ ಶಿಲ್ಪವಿದ್ದು, ಇತ್ತೀಚೆಗೆ ಕಟ್ಟಲಾದ ಕಟ್ಟೆಯ ಮೇಲಿನ ಕಂಬವೊಂದಕ್ಕೆ ಪೂರ್ವಕ್ಕೆ ಮುಖಮಾಡಿ ನಿಲ್ಲಿಸಲಾಗಿದೆ. ಸಮಭಂಗಿಯಲ್ಲಿ ನಿಂತಿರುವ ಭೈರವನಿಗೆ ಮೈಮೇಲೆ ವಸ್ತ್ರಗಳಿರುವುದಿಲ್ಲ. ಬದಲಾಗಿ ಕಟಿಸೂತ್ರದಲ್ಲಿ ಮೂರು ಪಟ್ಟಿಗಳನ್ನು ಮಾತ್ರ ತೋರಿಸಲಾಗಿದೆ. ನಾಲ್ಕು ಕೈಗಳಿದ್ದು, ಮೊದಲನೇ ಬಲಗೈಯಲ್ಲಿದ್ದ ತ್ರಿಶೂಲವನ್ನು ಬಲಭುಜದ ಮೇಲಿರಿಸಲಾಗಿದೆ. ಎರಡನೆಯ ಬಲಗೈಯಲ್ಲಿ ಡಮರುಗ, ಮೊದಲನೆಯ ಎಡಗೈಯಲ್ಲಿ ಪಾಶ ಹಾಗೂ ಎರಡನೆಯ ಎಡಗೈಯಲ್ಲಿ ಬಟ್ಟಲನ್ನು ಕಂಡರಿಸಲಾಗಿದೆ. ಯಜ್ಞೋಪವೀತ, ಕಂಠಹಾರಗಳಿರುತ್ತವೆ. ಕಿವಿಯಲ್ಲಿ ದುಂಡಾದ ಓಲೆಗಳು, ತಲೆಯ ಮೇಲೆ ಬೆಂಕಿಯ ಜ್ವಾಲೆಯನ್ನು ತೋರಿಸಲಾಗಿದೆ.

'ಶಿವಪುರಾಣ'ದಲ್ಲಿ ಭೈರವನನ್ನು 'ಶಂಕರನ ಪೂರ್ಣ ರೂಪ' ಎನ್ನಲಾಗಿದೆ. ಇವನು ತನ್ನ ಭಯಾನಕ (ಭೀಷಣ) ರೂಪದಿಂದ ಜಗತ್ತನ್ನು ರಕ್ಷಿಸುತ್ತಾನೆ. ಸಾವಿನೊಡೆಯನಾದ ಕಾಳನೂ ಭೈರವನನ್ನು ನೋಡಿ ಅಧೀರನಾಗುವುದರಿಂದ ಕಾಳಭೈರವನೆಂದೂ, ಕೆಟ್ಟವರನ್ನು ಮರ್ದನ ಮಾಡುವುದರಿಂದ



ಭೈರವ ಶಿಲ್ಪ

ಅಮರ್ಧಕನೆಂದೂ; ಭಕ್ತರ ಪಾಪವನ್ನು ನುಂಗುವುದರಿಂದ ಪಾಪಭಕ್ಷಕನೆಂದೂ; ಕಾಶಿಯ ಒಡೆಯನೆಂದೂ ಕರೆಯಲ್ಪಡುತ್ತಾನೆ. 'ವಿಷ್ಣುಧರ್ಮೋತ್ತರಪುರಾಣ'ದ ಪ್ರಕಾರ ಭೈರವನಿಗೆ ಡುಮ್ಮ ಹೊಟ್ಟೆ, ದುಂಡನೆಯ ಹಳದಿ ಕಣ್ಣುಗಳು, ಕೋರೆಹಲ್ಲು, ಅಗಲವಾದ ಮೂಗಿನ ಹೊಳ್ಳೆಗಳು ಇದ್ದು, ರುಂಡಮಾಲೆ ಧರಿಸಿರುತ್ತಾನೆ. ನಾಗಾಭರಣವನ್ನು ಧರಿಸಿದ ಇವನು ಕಾಳಮೇಘವರ್ಣದವನಾಗಿರುತ್ತಾನೆ.[೩]

ದಕ್ಷಿಣ ಭಾರತದ ಇತರೆಡೆಗಳಲ್ಲಿರುವಂತೆ, ಅರೇಹಳ್ಳಿಯ ಭೈರವನು ತ್ರಿಶೂಲ, ಡಮರು, ಪಾಶ, ಕಪಾಲಗಳನ್ನು ಹಿಡಿದಿದ್ದು, ಯಾವುದೇ ವಸ್ತ್ರಗಳನ್ನು ಧರಿಸಿರುವುದಿಲ್ಲ. ಜಟಾಮುಕುಟದಲ್ಲಿ ಜ್ವಾಲೆಗಳಿದ್ದು, ಕೊರಳಲ್ಲಿ ಉದ್ದನೆಯ ಕಂಠಹಾರವಿರುತ್ತದೆ. ಈ ಕಂಠಹಾರವು ಚಿಕ್ಕ ಗಂಟೆಗಳಿಂದ ಮಾಡಲ್ಪಟ್ಟಿದೆ. ದುಂಡನೆಯ ದೊಡ್ಡ ಕಣ್ಣುಗುಡ್ಡೆಗಳಿದ್ದು, ಕೋರೆಹಲ್ಲುಗಳು ಸ್ಪಷ್ಟವಾಗಿ ಕಾಣುತ್ತಿಲ್ಲ. ಭೈರವನ ಹಿನ್ನೆಲೆಯಲ್ಲಿರುವ ನಾಯಿಯ ಶಿಲ್ಪವು ಸವೆದಿರುವಂತೆ ತೋರುತ್ತದೆ.

ಶೈವ ಪಂಥದ ಪಾಶುಪತರಲ್ಲಿ ಕೆಲವರು ಕಾಳಭೈರವನ ಆರಾಧಕರಾಗಿ ದ್ದರೆಂದೂ, ಅವರ ಶಿಷ್ಯರು ಹಲವೆಡೆ ಭೈರವ ದೇವಾಲಯಗಳನ್ನು ನಿರ್ಮಿಸಿದ್ದರೆಂದು ಶಾಸನಗಳಿಂದ ತಿಳಿದುಬರುತ್ತದೆ.[೪] ಅರೇಹಳ್ಳಿಯ ಭೈರವ ಶಿಲ್ಪಕ್ಕೆ ಇಂದಿಗೂ ಭಕ್ತರು ವಿಭೂತಿಯನ್ನು ಹಚ್ಚಿ ಆರಾಧಿಸುವ ಕ್ರಮವನ್ನು ಗಮನಿಸಿದರೆ ಇದೊಂದು ಭೈರವ ಕ್ಷೇತ್ರವೆಂದು ಸ್ಪಷ್ಟವಾಗುತ್ತದೆ.

ಬಳಪದ ಕಲ್ಲಿನಲ್ಲಿ ತ್ರಿಶೂಲದ ಉಬ್ಬುಶಿಲ್ಪ: ಭೈರವನ ಕಟ್ಟೆಯ ಮೆಟ್ಟಿಲುಗಳನ್ನು ಏರುವಾಗ ಬಲಭಾಗದಲ್ಲಿ ನೆಡಲಾದ ಕಪ್ಪು ಬಣ್ಣದ ಮೃದುವಾದ ಕಲ್ಲು ಛಾವಣಿಯ ಮೇಲರ್ಧದ ಭಾಗದಲ್ಲಿ ತ್ರಿಶೂಲದ ಉಬ್ಬುಶಿಲ್ಪವನ್ನು ಕಂಡರಿಸಲಾಗಿದೆ. ಮೇಲಿನ ಎಡ-ಬಲ ಮೂಲೆಗಳಲ್ಲಿ ಎರಡು ಚಕ್ಕೆಗಳು ಒಡೆದು ಹೋಗಿರುತ್ತವೆ. ಬಲಮೂಲೆಯಲ್ಲಿ ಚಿಕ್ಕದಾಗಿ ಸೂರ್ಯ, ಎಡಮೂಲೆಗೆ ಚಂದ್ರನನ್ನು ತೋರಿಸಲಾಗಿದೆ. ಉಬ್ಬುಶಿಲ್ಪದಲ್ಲಿ ತ್ರಿಶೂಲವು ಒಂದು ದಂಡದಿಂದ ಮೇಲೇರುವುದರ ಬದಲಿಗೆ, ನಿಲುಗಡೆ (ಸ್ಟ್ಯಾಂಡ್) ಯಿಂದ ಮೇಲೇರಿ ಮೂರು ಭಾಗಗಳಾಗಿ ಸೀಳಿಕೊಂಡಿರುತ್ತದೆ. ಪೂರ್ಣಚಂದ್ರನ ಗುಂಡಾದ ಎರಡು ಭಾಗಗಳ ನಡುವೆ ಚೂಪಾದ ಚೂರಿಯನ್ನು ಇರಿಸಿದಂತೆ ಕಾಣುತ್ತದೆ. ಮೂರು ಭಾಗಗಳಾಗಿರುವ ಇದರಲ್ಲಿ ಮೂರು ಶಕ್ತಿಗಳಿವೆಯೆಂದು ಹೇಳಲಾಗುತ್ತದೆ. ತ್ರಿಶೂಲದ ನಿಲುಗಡೆಯ ಹಿನ್ನೆಲೆಯಲ್ಲಿ ನಾಲ್ಕು ಕಾಲುಗಳ ಪ್ರಾಣಿಯೊಂದರ ರೇಖಾಚಿತ್ರ ಇರುತ್ತದೆ. ಮುಖದ ಕಡೆಗೆ ರೇಖೆಗಳು ತೃಟಿತವಾಗಿದ್ದು, ಪ್ರಾಣಿಯ ಹಿಂಭಾಗದ ರೇಖೆಗಳು ಮಾತ್ರ ಕಾಣಿಸುತ್ತವೆ. ಇದನ್ನು ನಾಯಿ ಅಥವಾ ಜಿಂಕೆ ಎಂದು ಭಾವಿಸಬಹುದಾಗಿದೆ. ಏಕೆಂದರೆ ವಟುಕ ಭೈರವನಿಗೆ ನಾಯಿ, ಕಂಕಾಲ ಭೈರವನಿಗೆ ಜಿಂಕೆಯನ್ನು ಹಿನ್ನೆಲೆಯಲ್ಲಿ ತೋರಿಸಲಾಗುತ್ತದೆ.[೫] ತ್ರಿಶೂಲದಲ್ಲಿ ಆರಣಿ, ಜನನೀ ಮತ್ತು ರೋದಯಿನಿತ್ರಿ ಎಂಬ ಮೂರು ಭಾಗಗಳಿದ್ದು, ಜನ್ಮನೀ ಸೃಷ್ಟಿಯನ್ನು ಅಂದರೆ ಜೀವಗಳಿಗೆ ತನು, ಕರಣ, ಭುವನ ಭೋಗಗಳನ್ನು ನೀಡಿ ಜೀವಗಳನ್ನು ಭೋಗಗಳಲ್ಲಿ ತೊಡಗಿಸುತ್ತದೆ. ರೋದಯಿನಿತ್ರಿ ರಕ್ಷಣೆಯನ್ನು ಹಾಗೂ ಆರಣಿ ಭಾಗವು ತತ್ವಾಂತ್ಯವನ್ನು ಸೇರುವಂತೆ ನಾಶವನ್ನೊಳಗೊಂಡಿರುತ್ತದೆ. ತ್ರಿಶೂಲವು ಶಿವನ ಶ್ರೇಷ್ಠ ಆಯುಧವಾಗಿದ್ದು, ಪರಾಶಕ್ತಿಗೂ ಆಯುಧವಾಗಿದೆ. ಇದು ಬ್ರಹ್ಮ-ವಿಷ್ಣು-ರುದ್ರರನ್ನು; ಸತ್ವ-ರಜಸ್ಸು-ತಮೋ ಗುಣಗಳನ್ನು ಸೂಚಿಸುತ್ತದೆ.[೬] ಶೂಲಕ್ಕೆ ಆರಿಸಿಕೊಂಡ ಎತ್ತರವನ್ನು ೧೩ ಸಮಭಾಗಗಳನ್ನಾಗಿ ಮಾಡಿ, ಅದರಲ್ಲಿ ೯ ಭಾಗಗಳನ್ನು ಶೂಲದಂಡವಾಗಿ ರೂಪಿಸಬೇಕೆಂಬ ನಿಯಮವು ಅರೇಹಳ್ಳಿಯ ಉಬ್ಬುಶಿಲ್ಪದಲ್ಲಿ ಅನುಪಾಲನೆಯಾಗಿರುವುದಿಲ್ಲ. ಶೂಲದಂಡದ ಎತ್ತರವನ್ನು ಮೊಟಕುಗೊಳಿಸಿ ನಿಲುಗಡೆ ರಚಿಸಲಾಗಿದೆ. ಶೂಲದ ಎತ್ತರ ೬ ಭಾಗಗಳಲ್ಲಿದೆ. ಮಧ್ಯಶೂಲವು ೧ ಭಾಗ ಹೆಚ್ಚು ಎತ್ತರವಿದೆಯಲ್ಲದೆ ಇದರ ಅಗಲ ೬ ಭಾಗಗಳಲ್ಲಿರುವುದು ಕಂಡುಬರುತ್ತದೆ. ಕ್ರಿ.ಶ. ೧೩೧೫ರ ವೀರಬಲ್ಲಾಳದೇವರ ಮಹಾಸಾಮಂತಾಧಿಪತಿ ಶಕ್ಕಯನಾಯಕನ ಮಗನಾದ ವೈಶಂದಾಗಳಿದೇವನು ಹಾಕಿಸಿದ ಶಾಸನದ ಹಿಂಭಾಗದಲ್ಲಿ ಇದೇ ಬಗೆಯ ತ್ರಿಶೂಲದ ರೇಖಾಚಿತ್ರವನ್ನು ಬಿಡಿಸಲಾಗಿದೆ. ಈ ಶಾಸನವು ಅರೇಹಳ್ಳಿಯ ಭೈರವ ಶಿಲ್ಪ ಹಾಗೂ ತ್ರಿಶೂಲದ ಉಬ್ಬುಶಿಲ್ಪಗಳ ಹತ್ತಿರದಲ್ಲೇ ಇರುತ್ತದೆ. ಅರೇಹಳ್ಳಿಯ ಶಾಸನೋಕ್ತ ಶೇವಿಂದೈನಾಯನಾರ್ ದೇವರು ಭೈರವನ ಮತ್ತೊಂದು ಹೆಸರಾಗಿರಬಹುದೇ? ಹಾಗಾದಲ್ಲಿ ಅರೇಹಳ್ಳಿಯಲ್ಲಿ ಈ ದೇವರಿಗೆ ಪ್ರತಿನಿತ್ಯ ದೀಪ ಮತ್ತು ನೈವೇದ್ಯಕ್ಕಾಗಿ ನಾಲ್ಕು ಕುಳಗ ಭೂಮಿ ಹಾಗೂ ಒಂದು ಯುರಿ ಅಕ್ಕಿಯನ್ನು ಸರ್ವಮಾನ್ಯವಾಗಿ ಕೊಡಲಾಗುತ್ತಿತ್ತು. ಈ ಅಂಶವನ್ನು ಗಮನಿಸಿದಾಗ ಅರೇಹಳ್ಳಿಯು ಒಂದು ದೊಡ್ಡ ಭೈರವನೆಲೆಯಾಗಿತ್ತೆಂದು ತಿಳಿದುಬರುತ್ತದೆ.

ಮಾಸ್ತಿ ಗುಡಿ: ಅರೇಹಳ್ಳಿಯಿಂದ ಆಗ್ನೇಯ ದಿಕ್ಕಿಗೆ ಊರ ಹೊರಗಿನ ಮಾವಿನತೋಪಿನಲ್ಲಿ ಮಾಸ್ತಿಕಲ್ಲು ವೀರಗಲ್ಲುಗಳನ್ನು ಜೊತೆಯಾಗಿ ಪೂರ್ವಾಭಿಮುಖವಾಗಿ ನೆಡಲಾಗಿದೆ. ಎಡ-ಬಲಕ್ಕೆ ಕಲ್ಲು-ಚಪ್ಪಡಿ ನಿಲ್ಲಿಸಿ ಅದರ ಮೇಲೆ ಮತ್ತೊಂದು ಕಲ್ಲು ಚಪ್ಪಡಿಯನ್ನು ಹೊದಿಸಿರುವುದರಿಂದ ಇದನ್ನು 'ಮಾಸ್ತಿಗುಡಿ' ಎನ್ನಲಾಗಿದೆಯಷ್ಟೆ. ೩' x ೨' ೬" ವಿಸ್ತೀರ್ಣದ ಮಾಸ್ತಿಕಲ್ಲಿನಲ್ಲಿರುವ ಸ್ತ್ರೀಯು ಬಲಗೈ ಮೇಲಕ್ಕೆತ್ತಿ ತನ್ನ ಐದೂ ಬೆರಳುಗಳನ್ನು ಮೇಲ್ಮುಖ

ವಾಗಿ ಪ್ರದರ್ಶಿಸಿದ್ದಾಳೆ. ಸೊಂಟದಲ್ಲಿ ಕಟ್ಟಿಕೊಂಡಿರುವ ಉಡುಪು ಪಾದದವರೆಗೂ ಇದ್ದು ನಿರಿಗೆಗಳನ್ನು ಕಂಡರಿಸಲಾಗಿದೆ. ಸತಿಯರು ಚಿತೆಯನ್ನೇರಲು ಹೋಗುವಾಗ ಕುಂಕುಮದಲ್ಲಿ ಕೈಯನ್ನು ಅದ್ದಿ ಬಾಗಿಲಿನ ಮೇಲೆ ತಮ್ಮ ಬೆರಳುಗಳನ್ನು ಮೂಡಿಸುತ್ತಿದ್ದರು. ಬಹುಶಃ ಈಗ ದೊರಕುವ ಮಾಸ್ತಿಕಲ್ಲುಗಳ ಮೇಲಿನ ಎತ್ತಿದ ತೋಳು ಮತ್ತು ಬೆರಳುಗಳು ಸಹಗಮನ ಮಾಡಿದ ಸ್ತ್ರೀಯ ಬೆರಳುಗಳ ಪಡಿಯಚ್ಚಾಗಿರಬಹುದು. ಒಟ್ಟಾರೆ ಮಹಾಸತಿಯ ಬಲಗೈ ಶುಭದ, ಸೌಭಾಗ್ಯದ, ಧನ್ಯಜೀವನದ ಸಂಕೇತವಾಗಿದೆ. ೧೯ನೆಯ ಶತಮಾನದವರೆಗೂ ಈ ಸಹಗಮನ ನಡೆಯುತ್ತಿತ್ತು. ಗಂಡನ ಶವದ ಸಂಗಡವೇ ಸತಿಯು ಜೀವಸಹಿತವಾಗಿ ಚಿತೆಯೇರಿದ ಸ್ಮಾರಕವಾಗಿ ಈ ಮಾಸ್ತಿಕಲ್ಲುಗಳಿರುತ್ತವೆ. ಸಹಗಮನದ ಸತಿಯನ್ನು ನೋಡಲು ಸಾವಿರಾರು ಜನರು ಸೇರುತ್ತಿದ್ದರು. ಜೀವಸಹಿತ ಬೆಂದುಹೋಗುವ ಸತಿಯು ಲಕ್ಷ್ಮಿಯಂತೆ ಪೂಜ್ಯನೀಯಳಾಗುತ್ತಿದ್ದಳು.[೭] ಈ ಮಾಸ್ತಿ ಗುಡಿಯಲ್ಲಿರುವ ವೀರಗಲ್ಲು ಮೊದಲು ಪ್ರತ್ಯೇಕವಾಗಿದ್ದು ನಂತರದಲ್ಲಿ ತಂದು ನಿಲ್ಲಿಸಲಾಗಿದೆ ಎಂಬ ಭಾವನೆ ಮೂಡುತ್ತದೆ. ಇದರಲ್ಲಿ ವೀರನು ಬಲಗೈಯಲ್ಲಿ ಖಡ್ಗ ಹಾಗೂ ಎಡಗೈಯಲ್ಲಿ ಗುರಾಣಿ ಹಿಡಿದಿರುತ್ತಾನೆ. ಮಾಸ್ತಿಗುಡಿಗೆ ಮೇಲ್ಛಾವಣಿಯಾಗಿ ಬಳಸಿರುವ ಕಲ್ಲುಚಪ್ಪಡಿಯ ಮೇಲೆ ದಕ್ಷಿಣದ ಅಂಚಿನಲ್ಲಿ ಎರಡು ಇಂಚು ಆಳದ ನಾಲ್ಕು ಕುಳಿಗಳು ಪೂರ್ವದಂಚಿನಲ್ಲಿ ನಾಲ್ಕು ತೇಲಾದ ಕುಳಿಗಳು, ದಕ್ಷಿಣಕ್ಕೆ ಐದು ಕುಳಿಗಳು; ಉಳಿದಂತೆ ಕಲ್ಲಿನ ಮಧ್ಯಭಾಗದಲ್ಲಿ ೧೩ ತೇಲಾದ ಕುಳಿಗಳಿರುತ್ತವೆ. ಶಿಲೋಪಕರಣಗಳ ಮೊನೆಗಳನ್ನು ಮಸೆದು ಹರಿತಗೊಳಿಸಿದ ಕಾರಣವಾಗಿ ಈ ಮೇಲ್ಛಾವಣಿ ಚಪ್ಪಡಿಯು ಕುಳಿಭರಿತವಾಗಿರುವ ಸಾಧ್ಯತೆ ಇದೆ. ಇನ್ನು ಬಂಡೆಗಳ ಮೇಲೆ ಇನ್ನೂ ಸ್ವಲ್ಪ ಆಳ ಹಾಗೂ ಹೆಚ್ಚಿನ ಸಂಖ್ಯೆಯ ತಗ್ಗುಗಳು ಅಥವಾ ಕುಳಿಗಳು ಬಳ್ಳಾರಿ ಜಿಲ್ಲೆ ಸಂಗನಕಲ್ಲು, ಸಣ್ಣರಸಮ್ಮನಗುಡ್ಡ, ಬಳ್ಳಾರಿಯ ಉತ್ತರ ದಿಕ್ಕಿನಬೆಟ್ಟ, ಕರ್ನೂಲು ಜಿಲ್ಲೆಯ ಕಪ್ಪರಳಗುಡ್ಡ, ಹೈದ್ರಾಬಾದ್ ಪ್ರಾಂತ್ಯದ ಪುಲ್ಲಯ್ಯಗುಡ್ಡ ಹಾಗೂ ಚಿತ್ರದುರ್ಗ ಪರಿಸರದಲ್ಲಿ ಕಂಡುಬಂದಿವೆ.[೮] ಬಂಡೆಯ ಮೇಲಿರುವ ಈ ಕುಳಿಗಳಿಗೂ ಅರೇಹಳ್ಳಿಯ ಕಲ್ಲುಚಪ್ಪಡಿಯ ಮೇಲಿರುವ ಕುಳಿಗಳಿಗೂ ಸಾಕಷ್ಟು ವ್ಯತ್ಯಾಸಗಳಿವೆ. ಕಾಲಮಾನದ ಅಂತರ ಬಹಳಷ್ಟಿದೆ. ಆದರೆ ಕುಳಿಗಳ ಆಕೃತಿ ಪಡೆಯುವ ಪ್ರಕ್ರಿಯೆಯ ಉದ್ದೇಶ ಒಂದೇ ಆಗಿರುತ್ತದೆ.

ಸಂಕ್ರಾಂತಿ ಹಬ್ಬದಂದು ಅರೇಹಳ್ಳಿಯ ಜನರು ಈ ಮಾವಿನತೋಪಿನಲ್ಲಿರುವ ಮಾಸ್ತಿ ಮತ್ತು ವೀರನನ್ನು ಪೂಜಿಸಿ, ಪ್ರಾಣಿಬಲಿ ಕೊಡುವುದನ್ನು ರೂಢಿಸಿಕೊಂಡಿದ್ದಾರೆ. ರೈತರು ಇವರನ್ನು ದನಕರುಗಳನ್ನು ಕಾಪಾಡುವ ದೇವರು ಎಂಬ ನಂಬಿಕೆಯಿಟ್ಟುಕೊಂಡಿರುತ್ತಾರೆ. ಒಟ್ಟಿನಲ್ಲಿ ಅರೇಹಳ್ಳಿಯ ಪರಿಸರವು ಪ್ರಾಕ್ಚಾರಿತ್ರಿಕ ಅವಧಿಯಿಂದ ಹಿಡಿದು ಗಂಗರ ಕಾಲದ ವೀರಗಲ್ಲು ಹೊಯ್ಸಳರ ಅವಧಿಯ ಭೈರವ, ತ್ರಿಶೂಲದ ಉಬ್ಬುಶಿಲ್ಪಗಳು ಹಾಗೂ ೧೬, ೧೭ನೇ ಶತಮಾನಗಳ ಮಾಸ್ತಿ–ವೀರಗಲ್ಲುಗಳನ್ನು ಹೊಂದಿರುವ ಒಂದು ನೆಲೆಯಾಗಿದೆ.

(ಪ್ರಾಚ್ಯಾವಶೇಷಗಳ ಕ್ಷೇತ್ರಕಾರ್ಯಕ್ಕೆ ಸಹಕರಿಸಿದ ವೈಟ್‌ಫೀಲ್ಡ್‌ನ ಚೌಡೇಶ್ವರಿ ಖಾದಿ ಭಂಡಾರದ ನೌಕರ ಶ್ರೀ ವಸಂತಪ್ಪನವರು ಹಾಗೂ ಪ್ರಬಂಧ ಮಂಡಿಸಿ ಲೇಖನಕ್ಕೆ ಮಾರ್ಗದರ್ಶನ ಮಾಡಿದ ಗುರುಗಳಾದ ಡಾ. ಪಿ.ವಿ. ಕೃಷ್ಣಮೂರ್ತಿರವರಿಗೆ ಕೃತಜ್ಞತೆಗಳು)

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಡಾ. ಶೇಷಶಾಸ್ತ್ರಿ ಆರ್., **'ಕರ್ನಾಟಕದ ವೀರಗಲ್ಲುಗಳು'**, ಕ.ಸಾ.ಪ., ಬೆಂಗಳೂರು–೧೯೮೨, ಪುಟ ೩೦೧–೩೦೩.

೨. **ಬೆಂಗಳೂರು ದರ್ಶನ**, ಸಂ. ೧, ಉದಯಭಾನು ಕಲಾಸಂಘ, ಬೆಂಗಳೂರು, ಡಾ. ಸೂರ್ಯನಾಥಕಾಮತ್‌ರವರ ಲೇಖನ 'ಇತಿಹಾಸ' ಪುಟ ೬–೭.

೩. Gopinatha Rao T.A.-'*Elements of Hindu Iconography*, Vol-2, Part-I' Motilal Banarsidass Publishers Pvt. Ltd., Delhi-1914; Pages – 177-179

೪. **ಇತಿಹಾಸ ದರ್ಶನ**, ಸಂ. ೨೧, ಕರ್ನಾಟಕ ಇತಿಹಾಸ ಅಕಾಡೆಮಿ (ರಿ) ಬೆಂಗಳೂರು, ೨೦೦೬, ಡಾ. ವಸಂತಲಕ್ಷ್ಮಿರವರ ಲೇಖನ, **'ಮುಳಗುಂದದ ಭೈರವಶಿಲ್ಪ'**, ಪುಟ, ೧೧೧.

೫. Jitendranath Banerjee – '*The Development of Hindu Iconography*'; Munshiram Manoharlal Publishers Pvt.Ltd.,-2002, Page 465.

೬. ಜಿ. ಜ್ಞಾನಾನಂದ, **'ಶ್ರೀ ಬ್ರಾಹ್ಮೀಯ ಚಿತ್ರಕರ್ಮ ಶಾಸ್ತ್ರಂ'**, ಸಂಸ್ಕೃತಿ ಸಾಹಿತ್ಯ ಪ್ರಸಾರ ಸಮಿತಿ, ಕೆ.ಜಿ.ಎಫ್., ಪುಟ ೭೦೬–೭೦೭.

೭. ಡಾ. ಚಿದಾನಂದಮೂರ್ತಿ. ಎಂ., **'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ'**, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೧೧, ಪುಟ ೩೫೨–೩೫೩.

೮. **ಇತಿಹಾಸ ದರ್ಶನ**, ಸಂ. ೨೧, ಕರ್ನಾಟಕ ಇತಿಹಾಸ ಅಕಾಡೆಮಿ (ರಿ) ಬೆಂಗಳೂರು, ೨೦೦೬, ಪ್ರೊ. ಲಕ್ಷ್ಮಣ ತೆಲಗಾವಿರವರ ಲೇಖನ **'ಚಿತ್ರದುರ್ಗದ ಕುಳಿಭರಿತ ಬಂಡೆಗಳು'**, ಪುಟ ೨–೩.

೧೧

ಪೆರ್ಜೇನಹಳ್ಳಿ ಪ್ರಾಚ್ಯಾವಶೇಷಗಳು

ವೇಮಗಲ್ ಮೂರ್ತಿ*

ನೊಳಂಬರಾಜ ಒಂದನೆಯ ಪೊಳಲ್ಚೋರ (ಸಂ. ೮೫೦-೮೭೦)ನು ಗಂಗರಿಗೆ ಆತ್ಮೀಯನಾಗಿದ್ದವನು. ಈ ಸಮಯದಲ್ಲಿ ಒಂದನೆಯ ಅಮೋಘವರ್ಷ ನೃಪತುಂಗನು ರಾಷ್ಟ್ರಕೂಟ ದೊರೆಯಾಗಿದ್ದು, ಅಪ್ರಾಪ್ತ ವಯಸ್ಕನಾದ ಕಾರಣ ಇದರ ಅವಕಾಶವನ್ನು ಬಳಸಿಕೊಂಡು, ಒಂದನೆಯ ರಾಚಮಲ್ಲನ ಆಡಳಿತಾವಧಿಯಲ್ಲಿ ಸ್ವತಂತ್ರರಾದ ಗಂಗರು, ಪಲ್ಲವರನ್ನು ಸೋಲಿಸಿ, ಇವರ ಸಾಮಂತರಾಗಿದ್ದ 'ಬಾಣರ' ವಶದಲ್ಲಿದ್ದ 'ಗಂಗರುಸಾವಿರವನ್ನು ಅವರಿಂದ ಪಡೆದು ತಮ್ಮ ಅಳಿಯನಾದ ನೊಳಂಬ ಪೊಳಲ್ಚೋರನಿಗೆ ಅದರ ಆಡಳಿತ ವನ್ನು ವಹಿಸುತ್ತಾರೆ. ಈ ನೊಳಂಬ ಪೊಳಲ್ಚೋರನು ಬಾಣರ ಮಾಂಡಲೀಕ ಪೊಂಪಲನನ್ನು ಕೊಲ್ಲುತ್ತಾನೆ. ಇವನೇ ಕೋಲಾರ ತಾಲ್ಲೂಕ್ ವೇಮಗಲ್ ಪ್ರದೇಶವನ್ನು ಆಳುತ್ತಿದ್ದವನು ಎಂದು ಇತಿಹಾಸ ಹೇಳುತ್ತದೆ.

ಈ ವೇಮಗಲ್ಲಿನ ಹತ್ತಿರವಿರುವ ಪುಟ್ಟಗ್ರಾಮವೇ 'ಪೆರ್ಜೇನಹಳ್ಳಿ'. ಈ ಪರಿಸರದಲ್ಲಿ 'ಹೆಜ್ಜೇನು' ಹೆಚ್ಚು ಇದ್ದ ಕಾರಣ ಈ ಹೆಸರು ಬಂತೆಂದು ತಿಳಿದುಬರುತ್ತದೆ. ಈ ಗ್ರಾಮವು ಕೈವಾರ ಮತ್ತು ಸೀತಿ ಗ್ರಾಮಕ್ಕೆ ಹತ್ತಿರವಿರುವುದರಿಂದ ಕೈವಾರ ನಾಡಿಗೆ ಹಿಂದೆ ಸೇರಿತ್ತೆಂದು ಊಹಿಸಬಹುದು. ಇಲ್ಲಿನ ಸುತ್ತಮುತ್ತಲಿನ ಪರಿಸರದಿಂದ ಈ ಗ್ರಾಮವು ಸಂಪದ್ಭರಿತ ವಾಗಿತ್ತೆಂದು ಗ್ರಹಿಸಬಹುದು. ಇಲ್ಲಿ ಹರಿಯುವ ಪಾಲಾರ್ ನದಿ ಹಳ್ಳಿ, ವಿಶಾಲವಾದ ಕೆರೆ, ಕೆರೆ ಕೆಳಗಿನ ಗದ್ದೆ ಬಯಲು. ಈ ಗದ್ದೆ ಬಯಲಿನಲ್ಲಿ ನಮ್ಮ ಮುತ್ತಾತಂದಿರಾದ ವೇದಾಧ್ಯಯನ ಪ್ರವೀಣ ರಾಮಾಭಟ್ಟರಿಗೆ ಅಂದಿನ ರಾಜರಿಂದ ಗದ್ದೆ ಮತ್ತು ಹುಣಸೇಮರ ದಾನವಾಗಿ ಬಂದಿತ್ತು. ಅಲ್ಲಲ್ಲಿ ಕಾಣಬರುವ ಉಪ್ಪನ್ನು ತಯಾರಿಸುತ್ತಿದ್ದ 'ಉಪ್ಪುಮಡಿಗಳು' (ಉಪ್ಪುಮಣ್ಣಿನ ದಿಬ್ಬಗಳು) ಊರ ಹೊರವಲಯದ ಸುತ್ತಮುತ್ತ ಅಲ್ಲಲ್ಲಿ ಶ್ರೀಗಂಧದ ಮರಗಳಿಂದ ಕೂಡಿದ ಪ್ರದೇಶ. ಇಂತಹ ಪರಿಸರ ದಲ್ಲಿನ ನನ್ನ ಕ್ಷೇತ್ರ ಕಾರ್ಯದಲ್ಲಿ ಅನೇಕ ಪ್ರಾಚ್ಯಾವಶೇಷಗಳು ಕಂಡುಬಂದಿದ್ದು, ಅವುಗಳ ವಿಶ್ಲೇಷಣೆ ಯನ್ನು ಇಲ್ಲಿ ಕೊಡಲಾಗಿದೆ.

ಇಲ್ಲಿನ ರೈತಾಪಿ ಜನರು ಹೆಚ್ಚಾಗಿ ಹಸು, ಎತ್ತು, ಎಮ್ಮೆ, ಕುರಿ ಇತ್ಯಾದಿಗಳನ್ನು ಸಾಕುವುದು ಒಂದು ಉದ್ಯೋಗ ವಾಗಿದ್ದು, ಇದರ ಜೊತೆಗೆ ಶ್ರೀಗಂಧದ ಜೇಡು ಹಾಗೂ ಉಪ್ಪನ್ನು ತಯಾರಿಸುತ್ತಿದ್ದ ಕಾರಣ ಈ ಊರು ಹಿಂದೆ ವ್ಯಾಪಾರ ಕೇಂದ್ರವಾಗಿತ್ತೆಂದು ತರ್ಕಿಸಬಹುದು. ಇಲ್ಲಿನ ಪ್ರಾಚ್ಯಾವಶೇಷಗಳನ್ನು ಕೆಳಗೆ ವಿವರಿಸಲಾಗಿದೆ.

೧) **ಕೋಟೆ :** ಇದು ಸುಮಾರು ೧೫೦-೨೦೦ ವರ್ಷಗಳಷ್ಟು ಹಳೆಯದೆಂದು ಹಾಗೂ ಸುಮಾರು ೮



ಅಡಿಗಿಂತಲೂ ಹೆಚ್ಚು ಎತ್ತರದ ಕಲ್ಲಿನ ಕೋಟೆಯಾಗಿತ್ತೆಂದು ಸ್ಥಳೀಯ ಹಿರಿಯರಿಂದ ತಿಳಿದುಬರುತ್ತದೆ. ಆದರೆ ಇಂದು ಕೋಟೆಯ ತಳಪಾಯ ಪಾತ್ರ ಊರ ಸುತ್ತಲೂ ಹಾಗೆಯೇ ಇದ್ದು, ಕೋಟೆಯ ಬಾಗಿಲು ಇಂದು ಊರ ಬಾಗಿಲಾಗಿ ನವೀಕೃತಗೊಂಡಿದೆ.

೨) ಯಂತ್ರದ ಕಲ್ಲು : ಯಂತ್ರದ ಕಲ್ಲನ್ನು ಊರಬಾಗಿಲ ಬಳಿ ಪೂರ್ವಾಭಿಮುಖವಾಗಿ ನೆಟ್ಟಿದ್ದು, ಸುಮಾರು ೭೦ ಸೆಂ.ಮೀ. ಉದ್ದ, ೫೦ ಸೆಂ.ಮೀ. ಅಗಲವಿದೆ. ಕಲ್ಲಿನ ಮೇಲೆ ಸ್ಪಷ್ಟವಾಗಿ ಸೂರ್ಯ, ಚಂದ್ರರನ್ನು ಬಿಡಿಸಿ, ಇವೆರಡರ ಮಧ್ಯೆ ಕನ್ನಡ ಲಿಪಿಯಲ್ಲಿ 'ವೀರಭದ್ರ' ಎಂದು ಕೆತ್ತಲಾಗಿದ್ದು, ಇದರ ಕೆಳಗಡೆ ಯಂತ್ರವನ್ನು ಬಿಡಿಸಿ, ಯಂತ್ರದ ಕೆಳಗಡೆ 'ಕಾಲಭೈರವ' ಎಂದು ಕೆತ್ತಲಾಗಿದೆ. ಯಂತ್ರದ ಕಲ್ಲಿನ ಮೇಲೆ 'ವೀರಭದ್ರ' ಹಾಗೂ 'ಕಾಲಭೈರವ' ಎಂದು ಬರೆದಿರುವುದಕ್ಕೆ ಕಾರಣ ಬಹುಶಃ ಪೆರ್ಜೇನಹಳ್ಳಿ ಗ್ರಾಮವು ಒಕ್ಕಲಿಗರ ಆರಾಧ್ಯ ದೇವರ ಕ್ಷೇತ್ರವಾದ 'ದಕ್ಷಿಣ ಕಾಶಿ' ಎಂದು ಹೆಸರು ಪಡೆದಿರುವ


* # ೧೮೩, ೩ನೇ ಮುಖ್ಯರಸ್ತೆ, ಅರೆಹಳ್ಳಿ, ಎ.ಜಿ.ಎಸ್. ಲೇಔಟ್, ಸುಬ್ರಹ್ಮಣ್ಯಪುರ ಅಂಚೆ, ಬೆಂಗಳೂರು-೫೬೦೦೬೧.



ಮತ್ತು 'ಕಾಲಭೈರವ' ಹಾಗೂ 'ವೀರಭದ್ರ' ನೆಲೆಸಿರುವ 'ಸೀತಿ ಬೆಟ್ಟವು' ಈ ಗ್ರಾಮಕ್ಕೆ ಅತೀ ಸಮೀಪವಿರುವುದೇ ಆಗಿದ್ದು, ಆ ದೇವರುಗಳ ಹೆಸರಲ್ಲಿ ಯಂತ್ರದ ಕಲ್ಲು ಹಾಕಿಸಿರಬಹುದೆನಿಸುತ್ತದೆ. ಸ್ಥಳೀಯ ಹಿರಿಯರ ಪ್ರಕಾರ ಈ ಯಂತ್ರದ ಕಲ್ಲನ್ನು ಊರ ಬಾಗಿಲ (ಹಿಂದೆ ಕೋಟೆ ಬಾಗಿಲು ಇದ್ದ ಸ್ಥಳ) ಬಳಿ ಹಾಗೂ ಕೋಟೆಯ ಸಮೀಪವೇ ನೆಟ್ಟಿರುವುದರಿಂದ ಊರಿಗೆ ಒಳ್ಳೆಯದಾಗಲೆಂದು ಹಾಕಿಸಿರಬಹುದೆಂದು ಅಭಿಪ್ರಾಯಪಡುತ್ತಾನೆ. ಎಲ್ಲಾ ಊರುಗಳಂತೆ ಇಲ್ಲಿಯೂ ಈ 'ಯಂತ್ರ'ದ ಕಲ್ಲಿಗೆ ಹಬ್ಬ ಹರಿದಿನಗಳಲ್ಲಿ ಹಾಗೂ ಗ್ರಾಮದ ವಿಶೇಷ ದಿನಗಳಲ್ಲಿ ಪೂಜೆ ಮಾಡುವ ಪದ್ಧತಿಯನ್ನು ಇಂದಿಗೂ ನಡೆಸಿಕೊಂಡು ಬರುತ್ತಿದ್ದಾರೆ. ಲಿಪಿಯ ಆಧಾರದ ಮೇಲೆ ಇದು ವಿಜಯನಗರೋತ್ತರದೆಂದು ತಿಳಿಯಬಹುದಾಗಿದೆ.

೩) ಎತ್ತಿನ ಚಿತ್ರವಿರುವ ಶಿಲಾಸ್ಮಾರಕ-ಒಂದು : ಈ ಸ್ಮಾರಕವು ಯಂತ್ರದ ಕಲ್ಲಿನ ಸಮೀಪವಿದ್ದು, ಉತ್ತರಾಭಿಮುಖವಾಗಿ ನೆಡಲಾಗಿದೆ. ಈ ಸ್ಮಾರಕವು ಸುಮಾರು ೯೦ ಸೆಂ.ಮೀ. ಉದ್ದ ಮತ್ತು ೬೨ ಸೆಂ.ಮೀ. ಅಗಲವಿದೆ. ಎತ್ತಿನ ಚಿತ್ರವನ್ನು ಸ್ಪಷ್ಟವಾಗಿ ಬಿಡಿಸಲಾಗಿದೆ ಚಿತ್ರದ ಕೆಳಗಡೆ. 'ಸಕ್ಕರಪ್ಪನ ಎತ್ತು' ಎಂದು ದಪ್ಪ ಅಕ್ಷರಗಳಲ್ಲಿ ಕೆತ್ತಲಾಗಿದ್ದು ಲಿಪಿ ಇತ್ತೀಚಿನದಾಗಿದೆ. ಎತ್ತು ಸಮಾಧಿಯಾದ ದಿನಾಂಕವನ್ನು ೧೧.೨.೦೨ ಎಂದು ಹಾಕಿರುವುದರಿಂದ, ಈ ಸ್ಮಾರಕವು ಸುಮಾರು ೧೧೧ ವರ್ಷಗಳಷ್ಟು ಹಳೆಯದೆಂದು ತಿಳಿಯಬಹುದು. ಈ ಸ್ಮಾರಕದಲ್ಲಿನ ಹೆಸರಿನ ಮನೆತನದವರು ಇಂದಿಗೂ ಈ ಊರಿನಲ್ಲಿದ್ದು ಅವರ ಪ್ರಕಾರ ಪ್ರೀತಿಯಿಂದ ಸಾಕಿದ ಎತ್ತಿನ ಮೇಲಿನ ಮಮಕಾರಕ್ಕೆ ಈ ಸ್ಮಾರಕವನ್ನು ಹಾಕಿರುವದೆಂದು ತಿಳಿಸುತ್ತಾರೆ. ಇಂದಿಗೂ ಇವರು ಹಾಗೂ ಊರಿನ ಜನ ಸ್ಮಾರಕಕ್ಕೆ ಪೂಜೆ ಮಾಡಿಕೊಂಡು ಬರುತ್ತಿದ್ದಾರೆ.

೪) ಎತ್ತಿನ ಚಿತ್ರ ವಿರುವ ಶಿಲಾಸ್ಮಾರಕ-ಎರಡು : ಈ ಶಿಲಾಸ್ಮಾರಕವು ಮೇಲೆ ಹೇಳಿರುವ ಎತ್ತಿನ ಸ್ಮಾರಕದ ಪಕ್ಕದಲ್ಲಿದ್ದು, ಇದೂ ಸಹ ಉತ್ತರಾಭಿ ಮುಖವಾಗಿದೆ. ಇದು ಚಿಕ್ಕದಾಗಿದ್ದು ಸುಮಾರು ೮೦ ಸೆಂ.ಮೀ. ಉದ್ದ, ೬೦ ಸೆಂ.ಮೀ. ಅಗಲವಿದೆ. ಎರಡೂ ಸ್ಮಾರಕಗಳು ಒಂದೇ ಸ್ಥಳದಲ್ಲಿರುವುದರಿಂದ ಎರಡೂ ಎತ್ತುಗಳು ಒಬ್ಬರಿಗೇ ಸೇರಿದ್ದಾಗಿದೆ. ಈ ಸ್ಮಾರಕವನ್ನು ಯಾವುದೇ ತೆರನಾದ ಲಿಪಿಯಲ್ಲಿ ಇವರ ೩೧-೯-೧೮೮೮ ಎಂದು ದಿನಾಂಕವನ್ನು ಸ್ಪಷ್ಟವಾಗಿ ಹಾಕಲಾಗಿದೆ. ಇದು ಸುಮಾರು ೧೫೦ ವರ್ಷಗಳಷ್ಟು ಹಳೆಯದಾಗಿದ್ದು, ಇತ್ತೀಚಿನದು ಎನಿಸಿದೆ.



ಈ ಸ್ಮಾರಕಕ್ಕೂ ಪೂಜೆಯನ್ನು ಮಾಡುತ್ತಾರೆ.

೫) ಕಲ್ಲಿನ ಗಾಣಗಳು : ಗಾಣಗಳು ಊರಿನ ಮಧ್ಯೆ ಇದ್ದು, ಇವುಗಳನ್ನು ಹಿಂದೆ ಎಣ್ಣೆ ತೆಗೆಯಲು ಬಳಸುತ್ತಿದ್ದರು. ಸುಮಾರು ೧೫೦-೨೦೦ ವರ್ಷಗಳಷ್ಟು ಹಳೆಯದಾಗಿದೆ. ಒಂದು ಕಲ್ಲಿನ ಗಾಣದ ಮೇಲೆ ಲಿಪಿ ಇದ್ದು, ಅಸ್ಪಷ್ಟವಾಗಿದೆ. ಇಂದು ಗಾಣಗಳನ್ನು ಬಳಸದೆ ಹಾಗೆ ಬಿಡಲಾಗಿದೆ.

೬) ಛತ್ರ, ಅರಳಿಕಟ್ಟೆ, ಹೊರೆಕಲ್ಲು, ಸೀಸಂದ್ರ, ಬಾವಿ: ಸ್ಥಳೀಯರ ಪ್ರಕಾರ ಸುಮಾರು ೧೫೦ ವರ್ಷಗಳ ಹಿಂದೆ ಈ ಊರಲ್ಲಿ ಒಂದು ಛತ್ರ ಇದ್ದಿದ್ದು, ಇಂದು ಅದು ಮನೆಯಾಗಿ ಮಾರ್ಪಟ್ಟಿದೆ. ಛತ್ರ ಇತ್ತು ಎನ್ನುವುದಕ್ಕೆ ಕುರುಹುಗಳೇನೂ



ಇಲ್ಲ. ಆದರೆ, ಇದೇ ಪರಿಸರದಲ್ಲಿ ಅರಳಿಕಟ್ಟೆ, ಬಾವಿ, ಹೊರೆಕಲ್ಲು, ಸೀಸಂದ್ರ ಒಂದು ಶಾಸನ ಇರುವುದರಿಂದ ಹಿಂದೆ ಇಲ್ಲಿ ಒಂದು **ಛತ್ರ** ಇತ್ತೆಂದು ಹೇಳಬಹುದು. ಬಾವಿಯಲ್ಲಿ ನೀರಿಲ್ಲದ ಕಾರಣ ಕಲ್ಲು ಚಪ್ಪಡಿಯಿಂದ ಮುಚ್ಚಿದ್ದಾರೆ. ಊರಿನಲ್ಲಿ ನಲ್ಲಿಗಳು ಇರುವುದರಿಂದ ಇಂದು ಸೀಸಂದ್ರ ಬಳಸುತ್ತಿಲ್ಲ. ಆದರೆ 'ಸೀಸಂದ್ರ' ಬಳಸುತ್ತಿದ್ದ ಕಾಲದಲ್ಲಿ ಊರಿನ ಗ್ರಾಮಸ್ಥರು ಸೀಸಂದ್ರದಲ್ಲಿ ನೀರನ್ನು





ತುಂಬಿ, ವ್ಯಾಪಾರ ಕೇಂದ್ರ ವಾಗಿದ್ದ ಕಾರಣ, ವ್ಯಾಪಾರ ಕ್ಕಾಗಿ ಬರುತ್ತಿದ್ದ ಜನರಿಗೂ ಹಾಗೂ ದಾರಿಯ ಪ್ರಯಾಣಿಕ ರಿಗೂ ಅನುಕೂಲ ವಾಗಲೆಂದು ಬಳಸಲ್ಪಡುತ್ತಿತ್ತು. ಇದೊಂದು ಜನೋಪಕಾರವೂ ಆಗಿತ್ತು. **ಹೊರೆಕಲ್ಲು**, ವ್ಯಾಪಾರಕ್ಕಾಗಿ ಈ ಊರಿಗೆ ಬಂದ ಜನರಿಗೂ ಹಾಗೂ ಆ ದಾರಿಯಲ್ಲಿ ಪ್ರಯಾಣಿಸುತ್ತಿದ್ದ ಕಾಲು ನಡಿಗೆಯ ವರಿಗೂ ಮತ್ತು ಇತರರಿಗೆ ತಮ್ಮ ಸರಕುಗಳನ್ನು 'ಹೊರೆಕಲ್ಲು' ಮೇಲೆ ಇಟ್ಟು ವಿಶ್ರಾಂತಿ ಪಡೆಯುವ ಉದ್ದೇಶವೇ ಆಗಿತ್ತು. ಇದು ಇನ್ನು ಸುಸ್ಥಿತಿಯಲ್ಲಿದ್ದು, ಹೆಚ್ಚು ಬಳಸಲ್ಪಡುತ್ತಿಲ್ಲ. **ಅರಳಿಕಟ್ಟೆ** ಅಳಿವಿನ ಅಂಚಿನಲ್ಲಿದೆ.

೭) ಅಪ್ರಕಟಿತ ಶಾಸನ : ಈ ಮೇಲೆ ಹೇಳಿರುವ ಪರಿಸರ ದಲ್ಲಿ ಒಂದು ಅಪ್ರಕಟಿತ ಶಾಸನವಿದ್ದು, ಇದನ್ನು (ಛತ್ರದ) ಮನೆಯ ಕಾಂಪೌಂಡಿನ ಕಲ್ಲುಚಪ್ಪಡಿಗಳ ಸಾಲಿನಲ್ಲಿ ನೆಟ್ಟಿದ್ದಾರೆ. ಇದರಿಂದ ಇದು ಸುಲಭವಾಗಿ ಯಾರಿಗೂ ತಿಳಿಯುವುದಿಲ್ಲ. ಇದರಲ್ಲಿನ ಲಿಪಿ ಸ್ಪಷ್ಟವಾಗಿದೆ. ಶಾಸನದಲ್ಲಿ ೬ ಸಾಲುಗಳಿದ್ದು, ಲಿಪಿಯ ಆಧಾರದ ಮೇಲೆ ಸುಮಾರು ೧೫೦ ವರ್ಷಗಳಷ್ಟು ಹಳೆಯದೆಂದು ಹೇಳಬಹುದು. ಶಾಸನದ ಪಾಠ ಈ ಕೆಳಗಿನಂತಿದೆ.




೧ ಗೌ । ತಿಂ
೨ ಮಂಣನ
೩ ಮಗ ಚೌಡ
೪ ವ್ಯ । ಮುತ್ತಮ್ಮ
೫ ಯಿವರು ಮಾ
೬ ಡಿಶಿದ ಕೆಲಸ

ಈ ಶಾಸನವಿರುವ ಪರಿಸರದಲ್ಲೇ ಛತ್ರ, ಬಾವಿ, ಹೊರೆಕಲ್ಲು, ಸೀಸಂದ್ರ, ಅರಳಿಕಟ್ಟೆ ಎಲ್ಲವೂ ಇಂದಿಗೂ ಇರುವು ದರಿಂದ ಹಾಗೂ ಶಾಸನದಲ್ಲಿರುವ ಪಾಠವನ್ನು ಗಮನಿಸಿದರೆ ಗೌಡರ ತಿಂಮಣನ ಮಗ ಚೌಡಪ್ಪ ಮತ್ತು ಮುತ್ತಮ್ಮ (ಅಂದರೆ ತಿಂಮಣನ ಮಗ ಚೌಡಪ್ಪ ಮತ್ತು ಸೊಸೆ ಮುತ್ತಮ್ಮ ಎಂದು ಊಹಿಸಬಹುದು) ಜನೋಪಕಾರಿ ಕೆಲಸಗಳನ್ನು ಮಾಡುವ ವ್ಯಕ್ತಿಗಳಾಗಿದ್ದು, ಆ ಹಾದಿಯಲ್ಲಿ ಹಾದು ಹೋಗುವ ಜನರಿಗೆ ಆ ಸಂದರ್ಭಗಳಲ್ಲಿ ಎಲ್ಲಾ ಅನುಕೂಲತೆಗಳು ಒಂದೇ ಕಡೆ ಸಿಗಲಿ ಎನ್ನುವ ಉದ್ದೇಶದಿಂದ ಛತ್ರ, ಅರಳಿಕಟ್ಟೆ, ಸೀಸಂದ್ರ ಕಟ್ಟಿಸಿ, ಬಾವಿ ತೋಡಿಸಿ, ಹೊರೆಕಲ್ಲು ಹಾಕಿಸಿದ್ದಾರೆಂದು ತಿಳಿಯುತ್ತದೆ.




೮) ಚನ್ನರಾಯಸ್ವಾಮಿ ಗುಡಿ : ಊರಿನ ಪಶ್ಚಿಮ ದಿಕ್ಕಿನ ಕುಬೇರ ಮೂಲೆಯಲ್ಲಿ ಚನ್ನರಾಯಸ್ವಾಮಿ ಗುಡಿ ಇದ್ದು, 'ಮೂರ್ತಿ' ಬೃಂದಾವನ ರೂಪದಲ್ಲಿರುವುದು ವಿಶೇಷ ವಾಗಿದೆ. ಗುಡಿಯನ್ನು ಇತ್ತೀಚೆಗೆ ನವೀಕರಿಸ ಲಾಗಿದೆ. ಹಳೆಯ ದೇಗುಲವಿದ್ದ ಪರಿಸರ ಇಂದಿಗೂ ಎದ್ದು ಕಾಣುತ್ತದೆ. ಬೃಂದಾವನವು ವಿಜಯ ನಗೋರತ್ತರ ದ್ದಾಗಿತ್ತು. ಸ್ವಾಮಿಗೆ ತಪ್ಪದೆ ಪೂಜೆ ನಡೆಯುತ್ತಿದೆ.

೯) ತಾಟಪ್ಪರಾಯನ ಗುಡಿ: ಈ ಗುಡಿ ಊರ ಹೊರಗೆ ಇದ್ದು, ಯಾವುದೇ 'ಮೂರ್ತಿ' ಇಲ್ಲ. ಆದರೆ ಮೂರ್ತಿಯು



೩ ಕಲ್ಲುಗಳ ರೂಪದಲ್ಲಿವೆ. ಸಂಕ್ರಾಂತಿ ಹಬ್ಬದ ದಿನಗಳಲ್ಲಿ ವಿಶೇಷವಾಗಿ ಪೂಜೆ ಮಾಡುತ್ತಾರೆ.

೧೦) ಶಿಲಾವೃತ್ತ ಸಮಾಧಿಗಳು : ಬೃಹತ್ ಶಿಲಾಯುಗಕ್ಕೆ ಸೇರಿದ ೪ ಶಿಲಾವೃತ್ತ ಸಮಾಧಿಗಳು ಊರ ಬಳಿಯ



ಹೊಲದಲ್ಲಿದ್ದು ಎಲ್ಲವೂ ಚೆನ್ನಾಗಿದೆ. ಇದನ್ನು ಈಗಾಗಲೇ ಪರಿಷ್ಕೃತ ಜಿಲ್ಲಾ ಗೆಜೆಟಿಯರ್ ಕೋಲಾರ ಮತ್ತು ಡಾ॥ ಕೆ.ಪಿ. ಶಿವತಾರಕರವರ 'ಕರ್ನಾಟಕದ ಪುರಾತತ್ತ್ವ ನೆಲೆಗಳು ಪುಸ್ತಕಗಳಲ್ಲಿ ದಾಖಲಿಸಿದ್ದಾರೆ. ಇವುಗಳ ಸಂಶೋಧನೆಯಿಂದ ಅನೇಕ ಹೊಸ ವಿಷಯಗಳು ಹೊರಬರಬಹುದು ಎನಿಸುತ್ತದೆ.

ಹೀಗೆ 'ಪೆರ್ಜೇನಹಳ್ಳಿ' ಗ್ರಾಮವು ಹಲವಾರು ಪ್ರಾಚ್ಯಾವಶೇಷಗಳಿಂದ ಕೂಡಿರುವುದಷ್ಟೇ ಅಲ್ಲದೆ ಬೃಹತ್ ಶಿಲಾಯುಗಕ್ಕೂ ಸೇರಿದ ಪ್ರದೇಶ ಆಗಿದೆ ಎಂದು ಹೇಳಬಹುದು.

[ಕೃತಜ್ಞತೆಗಳು : ಕ್ಷೇತ್ರಕಾರ್ಯದಲ್ಲಿ ನೆರವಾದವರು : ಪೆರ್ಜೇನಹಳ್ಳಿಯ ಸೊಣ್ಣಪ್ಪ, ಸುಬ್ರಮಣಿ, ನಾಗೇಶ್, ವೇಮಗಲ್ಲಿನ ವಿಜಯ್ ಹಾಗೂ ನನ್ನ ಮಗ ಪಿ.ಎಂ. ದೀಪ್ತ ಸುಬ್ರಹ್ಮಣ್ಯಂ, ಇವರಿಗೆ ಹಾಗೂ ಸಲಹೆ ಸೂಚನೆಗಳನ್ನಿತ್ತ ಗುರುಗಳಾದ ಪಿ.ಪಿ. ಕೃಷ್ಣಮೂರ್ತಿ ಹಾಗೂ ಶ್ಯಾಮಲರತ್ನ ಕುಮಾರಿಯವರಿಗೆ ನನ್ನ ವಂದನೆಗಳು.]

೧೨

ಹಾನಗಲ್‌ನ ಹಳೇ ಕೋಟೆಯಲ್ಲಿ ದೊರೆತ ಬನವಾಸಿ ಕದಂಬರ ತಾಮ್ರಶಾಸನ

ಡಾ. ದೇವರಕೊಂಡಾರೆಡ್ಡಿ*

೨೦೧೨ನೆಯ ಇಸವಿ ಏಪ್ರಿಲ್ ತಿಂಗಳಲ್ಲಿ ಹಾನಗಲ್ಲಿನ ಹಳೆಯ ಕೋಟೆಯ ಪ್ರದೇಶದಲ್ಲಿ ಖಾಸಗಿ ವ್ಯಕ್ತಿಗಳು ಮಣ್ಣು ತೆಗೆಯುತ್ತಿದ್ದಾಗ ಮಣ್ಣು ತೆಗೆಯುತ್ತಿದ್ದ ಯಂತ್ರಕ್ಕೆ ಹಿತ್ತಾಳೆ ಹಾಗೂ ಕಂಚಿನ ದೀಪದ ಕಂಬಗಳು ಮುಕ್ಕಾಲಿ ನೀರಿನ ಹೂಜಿಗಳು ಮೊದಲಾದವು ದೊರೆತವು. ಅವುಗಳ ಸಂಗಡ ಮೂರು ತಾಮ್ರಪಟದ ಗುಚ್ಛಗಳೂ ದೊರೆತವು.[೧] ಅವುಗಳಲ್ಲಿ ಒಂದು ಬನವಾಸಿ ಕಂದರರದಾದರೆ ಇನ್ನೊಂದು ಗಂಗರದು. ಇನ್ನೊಂದು ದೇವಗಿರಿ ಯಾದವರ ಕಾಲದ್ದು. ಇವುಗಳಲ್ಲಿ ಗಂಗರ ಹಾಗೂ ಕದಂಬರ ಶಾಸನಗಳು ಕನ್ನಡ ಲಿಪಿ ಹಾಗೂ ಸಂಸ್ಕೃತ ಭಾಷೆಯಲ್ಲಿದ್ದರೆ, ದೇವಗಿರಿ ಯಾದವರ ಶಾಸನ ನಾಗರಿಲಿಪಿ ಹಾಗೂ ಸಂಸ್ಕೃತದಲ್ಲಿದೆ. ಈಗ ಈ ಮೂರೂ ಶಾಸನಗಳು ಪ್ರಾಚ್ಯವಸ್ತು ಮತ್ತು ವಸ್ತು ಸಂಗ್ರಹಾಲಯದ ವಶದಲ್ಲಿವೆ.

ಪ್ರಸ್ತುತ ಶಾಸನವು ಮೂರು ಹಲಗೆಗಳನ್ನು (ಪಟ) ಹೊಂದಿದ್ದು ಪ್ರತಿ ಹಲಗೆಯೂ ೧೬.೫ ಎಂ x ೬.೫ ಸಿಎಂ. ಅಳತೆಯಲ್ಲಿವೆ. ಮೂರೂ ಹಲಗೆಗಳನ್ನು ಸೇರಿಸಿದ ಬಳೆ ಇದ್ದು, ಬಳೆಯ ಎರಡೂ ಭಾಗಗಳನ್ನು ಕಂಚಿನ ಮುದ್ರೆಯಿಂದ ಬಂಧಿಸಲಾಗಿದೆ. ಮುದ್ರೆಯ ವೃತ್ತಾಕಾರದಲ್ಲಿದ್ದು, ಲಾಂಛನವಿಲ್ಲ. ಖಾಲಿ ಇದೆ.

ಹಲಗೆಗಳಲ್ಲಿ ಮೊದಲನೆಯ ಹಲಗೆಯ ಒಳಭಾಗ ದಿಂದ ಬರೆವಣಿಗೆ ಪ್ರಾರಂಭವಾಗಿ ಮೂರನೆಯ ಹಲಗೆಯ ಒಳಭಾಗದಲ್ಲಿ ಮುಗಿದಿದೆ. ಪ್ರತಿ ಹಲಗೆಯಲ್ಲಿ ನಾಲ್ಕು-ನಾಲ್ಕು ಸಾಲುಗಳಿದ್ದು ಒಟ್ಟು ೧೬ ಸಾಲುಗಳನ್ನು ಈ ಶಾಸನ ಹೊಂದಿದೆ.


ಶಾಸನದಲ್ಲಿ ಬಳಕೆಯಾಗಿರುವ ಲಿಪಿಯು ಕ್ರಿ.ಶ. ಐದನೆಯ ಶತಮಾನದ ಉತ್ತರಾರ್ಧ ಹಾಗೂ ಆರನೆಯ ಶತಮಾನದ ಪೂರ್ವಾರ್ಧಕ್ಕೆ ಸೇರುವಂತಹ ಕನ್ನಡ ಲಿಪಿಯಾಗಲಿ ಅಕ್ಷರಗಳ ಮೇಲೆ ಪೆಟ್ಟಿಗೆಯ ತಲೆ ಕಟ್ಟಿಲ್ಲ. ಸಣ್ಣ ಗೆರೆಯಿದೆ. 'ಕ' ಕಾರ ಹಾಗೂ 'ರ'ಗಳು ಕೆಳಮುಖವಾಗಿ ಬೆಳೆದು ಮೇಲಕ್ಕೆ ತಿರುಗಿ ಸ್ವಲ್ಪ ಬೆಳೆದಿವೆ.




ಶಾಸನ ಪಾಠದಲ್ಲಿ ಹೇಳಿಕೊಳ್ಳುವಂತ ದೋಷಗಳೇನಿಲ್ಲ. ಕದಂಬರ ನೈಜ ಶಾಸನಗಳಲ್ಲಿ ಕಾಣಬರುವ ಅಪರೂಪದ ಅಪರೂಪದ ಸಾಮಾನ್ಯ ಸ್ವಾಲಿತ್ಯಗಳು ಇಲ್ಲಿಯೂ ಕಂಡು ಬಂದಿವೆ. ಮೇಲಿನ ಲಿಪಿ ಹಾಗೂ ಭಾಷೆಯ ಬಳಕೆಯನ್ನು ಗಮನಿಸಿ ಇದು ಕದಂಬರ ನೈಜ ಶಾಸನವಾಗಿದೆ ಯೆಂದು ಹೇಳಬಹುದಾಗಿದೆ.

ಶಾಸನದಲ್ಲಿ ಕಾಲದ ಉಲ್ಲೇಖ ಬಂದಿದ್ದು ಅದು ಅಪೂರ್ಣ ವಾಗಿದೆ. ಕದಂಬರ ಎಲ್ಲಾ ಶಾಸನಗಳಂತೆ ರಾಜನ ಪ್ರಥಮ ಸಂವತ್ಸರದ ಆಶ್ವಯುಜದ ೧೨ನೆಯ ದಿನವೆಂದಿದೆ. ಹೀಗಾಗಿ ಸರಿಯಾದ ಕಾಲ ನಿರ್ಣಯ ಮಾಡಲು ವಿವರಗಳು ಸಾಲವು. ರಾಜನ ತಂದೆ-ತಾತಂದಿರ ಹೆಸರನ್ನೂ ಈ ಶಾಸನದಲ್ಲಿ ಹೇಳಿಲ್ಲ. ಹೀಗಾಗಿ ಲಿಪಿ ದೃಷ್ಟಿಯಿಂದ ಈ ಶಾಸನವನ್ನು ಕ್ರಿ.ಶ. ಸು. ೫೦೦ ರಿಂದ ೫೨೦ ಕಾಲಾವಧಿಗೆ ಸೇರಿಸಬಹುದಾಗಿದೆ.


* # ೩೫/೧, ೨೦ 'ಎ' ಮುಖ್ಯರಸ್ತೆ, ವೆಂಕಟೇಶ್ವರ ಲೇಔಟ್, ಬಿ.ಟಿ.ಎಂ. ಲೇಔಟ್, ಮೊದಲ ಹಂತ, ಬೆಂಗಳೂರು-೫೬೦೦೭೬




ಮೊದಲ ಹಲಗೆ ಹಿಂಭಾಗ



ಎರಡನೆಯ ಮುಂಭಾಗ



ಎರಡನೆಯ ಹಲಗೆ ಹಿಂಭಾಗ



ಮೂರನೆಯ ಮುಂಭಾಗ

ಕದಂಬರ ಪಾರಂಪರಿಕ ವರ್ಣನೆಗಳಿಂದ ಆರಂಭವಾಗುವ ಈ ಶಾಸನದಲ್ಲಿ ಹಿಂದೆಯೇ ಹೇಳಿದಂತೆ ಮಹಾರಾಜನ ತಂದೆ-ತಾತಂದಿರ ಉಲ್ಲೇಖವಿಲ್ಲ. ರಾಜನ ಹೆಸರೂ ಇದುವರೆವಿಗೆ ಗಮನಿಸಿದ ಅಥವಾ ಉಲ್ಲೇಖಗೊಂಡಿರುವ ಹೆಸರುಗಳಿಗಿಂತ ಭಿನ್ನವಾಗಿದೆ. 'ಕದಮ್ಬಾನಾಧರ್ಮ ಮಹಾರಾಜೋ ತೊಡುವ ರಾಶಿ ? ಸ್ವಭುಜೇನ' ಎಂದು ಹೇಳದೆ ಮೂಲ ಕದಂಬರ ಬಿರುದುಗಳನ್ನೇ ಇವನೂ ಹೇಳಿಕೊಂಡಿದ್ದಾನೆ. ಹೀಗಾಗಿ ಇವನು ಕದಂಬರ ಯಾವ ಶಾಖೆಗೆ ಸೇರಿದವನೆಂದು ನಿರ್ಧರಿಸುವುದು ಕಷ್ಟದ ವಿಷಯ. ಇದು ಬಿರುದೋ ಹೆಸರೋ ಹೇಳುವುದು ಕಷ್ಟ ಬಿರುದಾದರಲ್ಲಿ ಯಾವ ರಾಜನಿಗೆ ಇದು ಇತ್ತು ಎಂಬುದು ಸ್ಪಷ್ಟವಾಗುತ್ತಿಲ್ಲ. ಹೀಗಾಗಿ ಕ್ರಿ.ಶ. ೫೦೦ರ ನಂತರ ಕದಂಬರ ರಾಜ್ಯವು ಸಿಕ್ಕ ಸಿಕ್ಕವರ ಪಾಲಾಗಿ ಅನೇಕ ರಾಜರು ಇದನ್ನು ಆಳುತ್ತಿದ್ದಂತೆ ಊಹಿಸಬಹುದು.

ಶಾಸನದಲ್ಲಿ ಬಂದಿರುವ ದಾನದ ಭಾಗ ಮತ್ತು ಎಲ್ಲೆಗಳ ವಿವರದಿಂದ ಈಗ ನಿರ್ದಿಷ್ಟ ಸ್ಥಳವನ್ನು ಗುರುತಿಸುವುದು ಕಷ್ಟ. ಗ್ರಾಮದ ಹೆಸರೂ ಸಂಸ್ಕೃತೀಕರಣಗೊಂಡಿದೆ. ಹಾರಿತ ಗೋತ್ರದ ದಾಮೋದರ ಸ್ವಾಮಿ ಎಂಬುವವನಿಗೆ ಕ್ಷುದ್ರ ಚಿನ್ತ ಗ್ರಾಮವನ್ನು ನೀಡಿದಂತೆ ಹೇಳಿದೆ. 'ಕ್ಷುದ್ರ ಚಿನ್ತ' ಎಂದರೆ ಕನ್ನಡದಲ್ಲಿ 'ಹಾಳು ಹುಣುಸೆ' ಎಂದು ಅರ್ಥೈಸಬಹುದು. ಆದರೂ ಕ್ಷುದ್ರ ಎಂಬುದಕ್ಕೆ 'ಚಿಕ್ಕ' ಎಂತಲೂ ಅರ್ಥ ಮಾಡಬಹುದು. ಹಾಗಾದಲ್ಲಿ ಚಿಕ್ಕಹುಣಸೆ ಎಂಬ ಅರ್ಥವೂ ಬರುತ್ತದೆ. ಎಲ್ಲೆಗಳನ್ನು ಹೇಳುವಾಗಲೂ ಈ ಸಂಸ್ಕೃತೀಕರಣ ವಿದೆ. ಪೂರ್ವಕ್ಕೆ ವಾಲುಕ ತಟಾಕ (ವಾಲುಕ ಕೆರೆ), ದಕ್ಷಿಣಕ್ಕೆ ನಾವಿಕ ಕೊಣ್ಡಿ, ಮನಸಾ ನದೀ, ಉತ್ತರಕ್ಕೆ ಮಹಾಕೇರ (ದೊಡ್ಡಕೆರೆ), ಅಮ್ಬಣಿ ಕ್ಷೇತ್ರ, ಮುಂತಾಗಿ ಉಲ್ಲೇಖವಿದೆ. ಈಗಾಗಲೇ ಈ ಸ್ಥಳಗಳು ನಾಶವಾಗಿರಬಹುದಾದ್ದರಿಂದ ಈ ಶಾಸನ ಯಾವ ಪ್ರದೇಶಕ್ಕೆ ನಿರ್ದಿಷ್ಟವಾಗಿ ಸೇರಿತ್ತೆಂದು ಹೇಳಲು ಸಾಧ್ಯವಾಗುತ್ತಿಲ್ಲ. ಗುರುತಿಸಲು ಆಗುತ್ತಿಲ್ಲ.

ಶಾಸನ ಪಾಠ

ಮೊದಲ ಹಲಗೆ ಹಿಂಭಾಗ

೧ ಸ್ವಸ್ತಿ ॥ ಶ್ರೀ ವಿಜಯ ವೈಜನ್ತ್ಯಾ ಸ್ವಾಮಿ ಮಹಾಸೇನ ಮಾತೃಗ
೨ ಣಾನುಧ್ಯಾತಾ ಭಿಷಿಕ್ತಾನಾ ಮಾನವ್ಯಸ ಗೋತ್ರಾಣಾ ಹಾರಿತೀ ಪುತ್ರಾಣಾಂ ಪ್ರ
೩ ತಿಕೃತ ಸ್ವಾಧ್ಯಾಯ ಚರ್ಚಾ ಪಾರಾಣಾಂ ಅಶ್ವಮೇಧಾವ ಭೃತ ಸ್ನಾನ ಪ
೪ ವಿತ್ರೀ ಕೃತಾನ್ವಯ ಶರೀರಾಣಾಂ ಆಶ್ರಿತ ಜನಾಮ್ಬಾನಾಂ ಕದಮ್ಬಾನಾಧ

ಎರಡನೆಯ ಮುಂಭಾಗ

೫ ರ್ಮ ಮಹಾರಾಜೋ ತೊಡುವ . . ಶಿ ಸ್ವ ಭುಜೇನ . . . . .
೬ ಮಾಪ್ತ ವಿಜಯ ಶ್ರೀರಾಯರಾರೋಗ್ಯೈಶ್ವರ್ಯ ಪ್ರಮಂರ್ಧ್ನನ ಕರೇಸವತ್ಸ
೭ ರೇ ಪ್ರಥಮೇ ಆಶ್ವಯುಜೇ ದ್ವಾದಶ್ಯಾಂ ದಿವಸೇ ಪಿಪ್ರಾಯ ಹಾರಿ
೮ ತಾಯ ದಾಮೋದರಸ್ವಾಮಿ ನಾಯ ಕ್ಷುದ್ರ ಚಿನ್ತ ಗ್ರಾಮ ದತ್ತವಾನ್ ಪೂರ್ವ

ಎರಡನೆಯ ಹಲಗೆ ಹಿಂಭಾಗ

೯ ತಃ ವಾಲುಕ ತಟಾಕಾದುತ್ತರ . . . ಕ್ಷಿಣತಃ ನಾಳಿಕ ಕೊಣ್ಡಿ ಪ
೧೦ ತಃ ಮನಸಾ ನದೀ ಉತ್ತರಃ ಮಹಾಕೆರ ಗ್ರಮ ಕ್ಷೇತ್ರಾತ್ ಪೂ
೧೧ ರ್ವ್ವತಃ ಅಮ್ಬಣೀ ಕ್ಷೇತ್ರೇ ಸೀಮಾ ಮರ್ಯ್ಯಾದಾಯ ಏತಾದಭಿರ
೧೨ ಕ್ಷತಿ ಸತತಪುಣ್ಯಾಫಲ ಭಾಗ್ಯವತಿ ಯೋ ಹಾ ಹರೇತಿ ಸಪಞ್ಚ ಮಹಾಪಾ

ಮೂರನೆಯ ಮುಂಭಾಗ

೧೩ ತಕ ಸಂಯುಕ್ತಾ ಸ್ಯಾತ್ ಉಕ್ತಞ್ಚ ಮಾನವೇ . . ಸಹ
೧೪ . ಶಕ್ಯ ಮನ್ಯಾರ್ಥ ಪಾಲನಂ ವಾ ಪಾಲನಂ ವೇತಿ ದಾನಾ ಚ್ಛ್ರೇ ಯೋನು ಪಾ
೧೫ ಲನಂ ॥ ಸ್ವದತ್ತ ಪರದತ್ತಾಂ ವಾಯೋ ಹರೇತಿ ವಸುನ್ಧರಾ
೧೬ ಷಷ್ಠಿ ವರ್ಷ ಸಹಸ್ರಾಣಿ ವಿಷಾಯಾ ಜಾಯತೇ ಕ್ರಿಮಿರಿತಿ ॥

[ಶಾಸನಗಳು ಮತ್ತು ಈ ವಸ್ತುಗಳು ದೊರೆತಾಗ ಸ್ಥಳೀಯ ತಹಸೀಲ್ದಾರರು ಅವನ್ನು ತಮ್ಮ ವಶಕ್ಕೆ ಪಡೆದಿದ್ದರು. ಹಾನಗಲ್ಲಿನ ಹವ್ಯಾಸಿ ಸಾಹಿತಿ ಹಾಗೂ ಹೋಟೆಲ್ ಉದ್ಯಮಿಗಳಾದ ಶ್ರೀ ಉದಯನಾಸಿಕ್ ಎಂಬ ಮಿತ್ರರು ಮತ್ತು ಅವರ ಸ್ನೇಹಿತರು ಈ ಬಗ್ಗೆ ನನಗೆ ದೂರವಾಣಿ ಮಾಡಿ ಹಾನಗಲ್ಲಿಗೆ ದಿನಾಂಕ ೨೦.೪.೨೦೧೨ರಂದು ಬರಮಾಡಿಕೊಂಡು ತಹಸೀಲ್‌ದಾರರನ್ನು ವಿನಂತಿಸಿ ಕಿಲುಬು ಕಟ್ಟಿದ್ದ ತಾಮ್ರ ಶಾಸನಗಳನ್ನು ತೊಳೆಸಲು ಹಾಗೂ ಅವುಗಳ ಛಾಯಾಗ್ರಹಣ ಮಾಡಿಕೊಳ್ಳುವಲ್ಲಿ ನೆರವಾದವರು ಈ ಮೂರೂ ಶಾಸನಗಳ ವಿಷಯದ ಬಗ್ಗೆ ತಹಸಿಲ್‌ದಾರರಿಗೆ ಬರವಣಿಗೆಯಲ್ಲಿ ಮಾಹಿತಿ ನೀಡಿದೆ. ಪತ್ರಿಕಾ ಮಾಧ್ಯಮದವರ ನೆರವಿನಿಂದ ಮಾರನೆಯ ದಿನ ಪತ್ರಿಕೆಗಳಲ್ಲಿ ಶಾಸನಗಳ ಬಗ್ಗೆ ವರದಿಯಾಯಿತು. ಈ ಬಗ್ಗೆ ಸಹಕರಿಸಿದ ಶ್ರೀ ಉದಯನಾಸಿಕ್ ಮತ್ತು ಮಿತ್ರರಿಗೂ, ತಹಸಿಲ್‌ದಾರರಿಗೂ ಕೃತಜ್ಞತೆಗಳು.]

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಶಾಸನಗಳು ಮತ್ತು ಈ ವಸ್ತುಗಳು ದೊರೆತಾಗ ಸ್ಥಳೀಯ ತಹಸಿಲ್‌ದಾರರು ಅವನ್ನು ತಮ್ಮ ವಶಕ್ಕೆ ಪಡೆದಿದ್ದರು. ಹಾನಗಲ್ಲಿನ ಹವ್ಯಾಸಿ ಸಾಹಿತಿ ಹಾಗೂ ಹೋಟೆಲ್ ಉದ್ಯಮಿಗಳಾದ ಶ್ರೀ ಉದಯನಾಸಿಕ್ ಎಂಬ ಮಿತ್ರರು ಮತ್ತು ಅವರ ಸ್ನೇಹಿತರು ಈ ಬಗ್ಗೆ ನನಗೆ ದೂರವಾಣಿ ಮಾಡಿ ಹಾನಗಲ್ಲಿಗೆ ದಿನಾಂಕ : ೨೦.೪.೨೦೧೨ರಂದು ಬರಮಾಡಿಕೊಂಡು ತಹಸಿಲ್‌ದಾರರನ್ನು ವಿನಂತಿಸಿ ಕಿಲುಬು ಕಟ್ಟಿದ್ದ ತಾಮ್ರಶಾಸನಗಳನ್ನು ತೊಳೆಸಲು ಹಾಗೂ ಅವುಗಳ ಛಾಯಾಗ್ರಹಣ ಮಾಡಿಕೊಳ್ಳುವಲ್ಲಿ ನೆರವಾದರು. ಈ ಮೂರೂ ಶಾಸನಗಳ ವಿಷಯದ ಬಗ್ಗೆ ತಹಸಿಲ್‌ದಾರರಿಗೆ ಬರವಣಿಗೆಯಲ್ಲಿ ಮಾಹಿತಿ ನೀಡಿದೆ. ಪತ್ರಿಕಾ ಮಾಧ್ಯಮದವರ ನೆರವಿನಿಂದ ಮಾರನೆಯ ದಿನ ಪತ್ರಿಕೆಗಳಲ್ಲಿ ಶಾಸನಗಳ ಬಗ್ಗೆ ವರದಿಯಾಯಿತು. ಈ ಬಗ್ಗೆ ಸಹಕರಿಸಿದ ಶ್ರೀ ಉದಯನಾಸಿಕ್ ಮತ್ತು ಮಿತ್ರರಿಗೂ, ತಹಸಿಲ್‌ದಾರರಿಗೂ ಕೃತಜ್ಞತೆಗಳು.

೧೩

ರಾಷ್ಟ್ರಕೂಟರ ಒಂದು ಹೊಸ ವೀರಗಲ್ಲು

ರವಿಕುಮಾರ ಕೆ. ನವಲಗುಂದ*

ಹಿರೇಕೆರೂರು ತಾಲ್ಲೂಕು ರಟ್ಟಿಹಳ್ಳಿಯಿಂದ ೪ ಕಿ.ಮೀ. ದೂರವಿರುವ ಗ್ರಾಮ ಕಡೂರು. ಇಲ್ಲಿಗೆ ೪ ಕಿ.ಮೀ. ದೂರದ ಭಗವತಿ ಘಟ್ಟದಲ್ಲಿ ಒಂದು ವೀರಗಲ್ಲು ಪತ್ತೆಯಾಯಿತು. ಗುಡ್ಡದ ಏರಿಯ ಮುಳ್ಳಿನ ಪೊದೆಯಲ್ಲಿ ಮಣ್ಣು ಮೆತ್ತಿದ ಸ್ಥಿತಿಯಲ್ಲಿತ್ತು. ನೇಗಿಲು ಚಿತ್ರ, ಲಿಪಿ ಸ್ವರೂಪದಿಂದ ಈ ಕಲ್ಲು ಒಂಬತ್ತನೇ ಶತಮಾನದ ರಾಷ್ಟ್ರಕೂಟರ ಕಾಲಕ್ಕೆ ಸೇರಿದ್ದು ಎಂದು ಖಚಿತವಾಯಿತು. 'ಜೋತನಾಳು' ಸರಹದ್ದಿಗೆ ಸೇರುವ ವೀರಗಲ್ಲು ಒಟ್ಟು ಐದು ಸ್ತರಗಳನ್ನು ಹೊಂದಿದೆ. ೧ನೇ ಸ್ತರದಲ್ಲಿ ವೀರನೊಬ್ಬ ಸೊಂಟದಲ್ಲಿ ಪುಟ್ಟ ಕತ್ತಿ, ಎಡಗೈಯಲ್ಲಿ ಬಿಲ್ಲು, ಬಲಗೈಯಲ್ಲಿ ಬಾಕು ಹಿಡಿದು ಕೆಳಗೆ ಬಿದ್ದ ಎದುರಾಳಿಯನ್ನು ಮೆಟ್ಟನಿಂತಿದ್ದಾನೆ. ಇವನಿಗೆ ಮೂರು ಬಾಣಗಳು ನಾಟಿದ್ದರೂ, ಧನುರ್ಧಾರಿ ಶತ್ರುಗಳನ್ನು ವೀರಾವೇಶದಿಂದ ಎದುರಿಸುತ್ತಿದ್ದಾನೆ. ವೀರನ ಹಿಂದೆ ಇಬ್ಬರು ಸಹಾಯಕರಿದ್ದಾರೆ. ೨ನೇ ಹಂತದಲ್ಲಿ ಊರಳಿವಿನಲ್ಲಿ ಹೋರಾಡಿ ಮಡಿದ ವೀರನನ್ನು ಅಪ್ಸರೆಯರು ಸ್ವರ್ಗಕ್ಕೆ ಕೊಂಡೊಯ್ಯುವ ಚಿತ್ರಗಳು ಕಂಡುಬರುತ್ತವೆ. ಅಲ್ಲದೆ ನಭದಿಂದ ದೇವಕನ್ನಿಕೆಯರು ಪುಷ್ಪಹಾರವನ್ನೂ ವೀರನಿಗೆ ಹಾಕುವ ದೃಶ್ಯ, ಅಕ್ಕಪಕ್ಕ ಕೈ ಮುಗಿಯುವ ಮೂರು ಶಿಲ್ಪಗಳು, ಅಭಯ ಮುದ್ರೆಯ ಒಂದು ಶಿಲ್ಪ ಕಂಡುಬರುತ್ತದೆ. ಈ ಚೌಕದ ಮೇಲಿನ ಪಟ್ಟಿಕೆಯಲ್ಲಿ ೩ ಸಾಲಿನ ಶಾಸನವಿದೆ. ೩ನೇ ಹಂತದಲ್ಲಿ ವೀರ ಸಿಂಹಪೀಠದಲ್ಲಿ ರಾಜಭಂಗಿಯಲ್ಲಿ ಕುಳಿತು ಸ್ವರ್ಗಸುಖವನ್ನು ಅನುಭವಿಸುತ್ತಿರುವ ಸುಂದರ ಚಿತ್ರಣವಿದೆ. ವೀರನ ಎಡ-ಬಲದಲ್ಲಿ ಬೀಸಣಿಕೆ ಮತ್ತು ಚಾಮರಧಾರಿ ಅಪ್ಸರೆಯರಿದ್ದಾರೆ. ಇವರ ಹಿಂದೆ ಇನ್ನಿಬ್ಬರು ಅಪ್ಸರೆಯರನ್ನು ಕಾಣಬಹುದು. ನಾಲ್ಕನೆಯ ಹಂತದಲ್ಲಿರುವ ವಾದ್ಯಮೇಳ ಇಲ್ಲಿರುವ ನಾಲ್ಕು ವಾದ್ಯಗಳಲ್ಲಿ ಇಬ್ಬರು ಕೊಳಲು ವಾದಕರು, ಇಬ್ಬರು ಹಾಡುಗಾರರು ಕುಳಿತಿದ್ದಾರೆ. ಐದನೇ ಹಂತದಲ್ಲಿ ಎಕ್ಸ್ ಆಕಾರದ ಐದು ಹೂಗಳ ಚಿತ್ರವಿದ್ದು, ಇವುಗಳಲ್ಲಿ ಎರಡು ಹೂಗಳ ಚಿತ್ರ ಸ್ಪಷ್ಟವಿದೆ. ವೀರಗಲ್ಲು ಅಲ್ಲಲ್ಲಿ ಸ್ವಲ್ಪ ಒಡೆದಿದೆ.

ಶಾಸನ : ಪ್ರಸ್ತುತ ವೀರಗಲ್ಲು ರಾಷ್ಟ್ರಕೂಟರ ೨ನೇ ಕೃಷ್ಣನ ಕಾಲಕ್ಕೆ ಸಂಬಂಧಿಸಿದ್ದು ಇವನ ಕಾಲ ಕ್ರಿ.ಶ. ೮೭೭ರಿಂದ ೯೧೨. ರಾಜನ ಹೆಸರು 'ಇನ್ನಪಯ್ಯ' ಎಂದು ತಿಳಿದು ಬರುತ್ತದೆ. ಈ ಹೆಸರಿನ ಶಾಸನಗಳು ಕೆಲವುಕಡೆ ಕಾಣಸಿಗುತ್ತವೆ. ಪ್ರಸ್ತುತ ಶಾಸನವು ಅಲ್ಲಲ್ಲಿ ತ್ರುಟಿತಗೊಂಡು ವೀರನ ಹೆಸರಿನ ಕೊನೆಯ ಅಕ್ಷರ 'ಪ'ಕಾರ ಮಾತ್ರ ಉಳಿದಿದೆ. ವೀರನ ಮೈದುನ ಪರಸಿಂಗ ಈ ವೀರಗಲ್ಲನು ನಿಲ್ಲಿಸಿದ್ದಾನೆ ೩ನೇ ಸಾಲಿನ ಪ್ರಾರಂಭದ 'ಅಳಿವಿನಾ' ಪದ ವೀರ ಊರಳಿವಿನಲ್ಲಿ ಮಡಿದಿದ್ದಾನೆ ಎಂಬ ವಿಷಯವನ್ನು ಸ್ಪಷ್ಟಪಡಿಸುತ್ತದೆ.

ಭಗವತಿ ಘಟ್ಟ : ದೋಣಿಯಾಕಾರದ ಬೆಟ್ಟದ ಸಾಲು ಕಡೂರು ಗ್ರಾಮಕ್ಕೆ ಹೊಂದಿಕೊಂಡಿದ್ದು, ಇದಕ್ಕೆ 'ಭಗವತಿ ಘಟ್ಟ' ಎಂಬುದು ಸ್ಥಳೀಯರು ಇಟ್ಟ ಹೆಸರು. ಹನುಮಂತ ದೇವರ ಗುಡಿಯ ಮುಂದೆ ಇರುವ ಕಲ್ಯಾಣ ಚಾಳುಕ್ಯರ ಶಾಸನದಲ್ಲಿಯೂ ಈ ಬೆಟ್ಟ ಉಲ್ಲೇಖವಿದೆ. ಈ ಸ್ಥಳವನ್ನು ವೀಕ್ಷಣೆ ಮಾಡಿದಾಗ ತುಂಬಾ ವಿಶಾಲವಾಗಿದ್ದು ಹಿಂದೆ ರಣಭೂಮಿಯಾಗಿರುವ ಸಾಧ್ಯತೆ ಇದೆ. ಗ್ರಾಮಸ್ತರು ಹೇಳುವ ಪ್ರಕಾರ ಈ ಜಾಗದಲ್ಲಿ ಇನ್ನೂ ೮–೧೦ ವೀರಗಲ್ಲು ಶಾಸನಗಳಿವೆ. ಅವು ಮಣ್ಣಿನಲ್ಲಿ ಹೂತುಹೋಗಿರುವ ಸಾಧ್ಯತೆ ಇದೆ. ವೀರಗಲ್ಲು ದೊರೆತ ಫಾಸಲೆ ದೂರದಲ್ಲಿ ಅಂದರೆ ಉತ್ತರಕ್ಕೆ ಗಜಲಕ್ಷ್ಮಿ ಶಿಲ್ಪವಿದೆ. ದಕ್ಷಿಣಕ್ಕೆ ಭಗವತಿಯ ತೆರೆದ ದೇವಾಲಯವಿದೆ. ಇದರ ಪಕ್ಕಕ್ಕೆ ವಿಶಾಲವಾದ ಭಗವತಿ ಕೆರೆವೂ ಕಾಣಸಿಗುತ್ತದೆ. ಕೆರೆಯ ಉತ್ತರಕ್ಕೆ ಒಂದು ತೂಬು ಇರುವುದನ್ನು ಕಾಣಬಹುದು.

ಶಾಸನ ಪಾಠ

೧ ಸ್ವಸ್ತಿಸಮಧಿಘತ ಪಞ್ಚಮಹಾಶಬ್ದ ಮಹಾಸಾಮನ್ತಾದಿ ಪತಿ (ಪೃ?) ಸೆಗನಿಪ್ಪಸರ

೨ ಮ್ಬರಜಮ ಛಲದಗ್ಗಮಿ...... ವಿನ್ನಪಯ್ಯ ಬನಮಸಿ ನಾಡಾನಾಳೆ....

೩ ಅಳಿವಿನಾ......ಪ ಸತ್ತಂ ಆತನ ಮಯ್ದನ ಪರನೆಜ್ಞ ಮಾಡಿ (ಸಿದ)

ಆಧಾರಸೂಚಿ

೧. **ರಾಷ್ಟ್ರಕೂಟರ ಶಾಸನಗಳು,** ಸಂ. (ಸಂ) ಬಿ.ಆರ್. ಭಾರತೀ, ಮೈಸೂರು ವಿಶ್ವವಿದ್ಯಾಲಯ.

೨. **ಧಾರವಾಡ ಜಿಲ್ಲೆಯ ಶಾಸನ ಸೂಚಿ,** ಎಂ.ಎಂ. ಕಲಬುರ್ಗಿ (ಸಂ).

* ಸಂಶೋಧನ ವಿದ್ಯಾರ್ಥಿ, ಶಾಸನಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ ಹಂಪಿ. ವಿದ್ಯಾರಣ್ಯ–೫೮೩೨೭೬.

೧೪


ಕುಂದವಾಡದ ಉಚ್ಚಂಗಿ ಪಾಂಡ್ಯರ ಕಾಲದ ಅಪ್ರಕಟಿತ ಶಾಸನ (ಕ್ರಿ.ಶ. ೧೧೨೩)

ಬುರುಡೇಕಟ್ಟೆ ಮಂಜಪ್ಪ*

ಕಲ್ಯಾಣಚಾಳುಕ್ಯ ದೊರೆ ತ್ರಿಭುವನಮಲ್ಲದೇವನು ಆಳುತ್ತಿರಲು, ಚಾಳುಕ್ಯರ ಸಾಮಂತರಾದ ಉಚ್ಚಂಗಿಪಾಂಡ್ಯರ ದೊರೆ ರಾಯಪಾಂಡ್ಯದೇವನು ನೊಳಂಬವಾಡಿ ಮೂವತ್ತೆರಡು ಸಾವಿರವನ್ನು ಉಚ್ಚಂಗಿಯಿಂದ ಆಳುತ್ತಿರಲು, ಆತನ ಮಂತ್ರಿಯಾದ ಆದಿತ್ಯದಂಡನಾಥನು ದಕ್ಷತೆಯಿಂದ ರಾಜ್ಯದ ಕೀರ್ತಿ ಹೆಚ್ಚಿಸಿ, ಅನೇಕ ಪ್ರಶಸ್ತಿಗಳನ್ನು ಧರಿಸಿ ರಾಜ್ಯ ರಕ್ಷಣೆಯ ಕಾರ್ಯದಲ್ಲಿ ತೊಡಗಿದ್ದನು. ಶಕ ವರ್ಷ ೧೦೪೫ನೆಯ ಶೋಭಕೃತ ಸಂವತ್ಸರದ ಭಾದ್ರಪದ ಶುದ್ಧ ೧೨ ಸೋಮವಾರ, ಶ್ರವಣ ನಕ್ಷತ್ರದಲ್ಲಿ ಕುಂದವಾಡ ಮಂತ್ರಿಯು ಧರ್ಮಕಾರ್ಯಗಳಿಗಾಗಿ ಚಾಳುಕ್ಯ ಚಕ್ರವರ್ತಿ ತ್ರಿಭುವನಮಲ್ಲದೇವನಿಂದ ಪಡೆದ ತಾಮ್ರ ಶಾಸನವು ಏನೆಂದರೆ, ಕುಂದವಾಡದ ಶ್ರೀ ಸೋಮನಾಥದೇವರ ಅಂಗಭೋಗ, ರಂಗಭೋಗ, ಚೈತ್ರ, ಪವಿತ್ರ, ವೇದ, ಶಾಸ್ತ್ರ, ಖಂಡಕದ ಉಪಾಧ್ಯಾಯರ ರಕ್ಷಣೆಗೆ, ಓದುವ, ಕೇಳುವ ವಿದ್ಯಾರ್ಥಿಗಳ ದಾಸೋಹ, ಬಟ್ಟೆಗೆ, ದೇವರ ನೈವೇದ್ಯಕ್ಕೆ ದೇವಾಲಯದ ಜೀರ್ಣೋದ್ಧಾರಕ್ಕೆ, ಅಲ್ಲಿಯ ನೊಣಂಬಗಾವುಂಡನನ್ನು ಮುಂದಿಟ್ಟುಕೊಂಡು ಧಾರಾಪೂರ್ವಕವಾಗಿ ಬಿಟ್ಟ ದಾನವೆಂದರೆ, ಹುಲ್ಲೆಯ ಜೀಯನ ಕೆರೆಯ (ಶಾಮನೂರು) ಮಲ್ಲಿಕಾರ್ಜುನ ದೇವರಿಗೆ ತ್ರಿಕಾಲಪೂಜೆ ನೈವೇದ್ಯ, ನಂದಾದೀವಿಗೆ ಚೈತ್ರ ಪವಿತ್ರಕ್ಕೆ ಬಿಟ್ಟ ಗದ್ದೆ ನಾರಣಗೆರೆಯ ಕೆಳಗೆ ಕಂಭ ೨೦೦, ಆ ಕೆರೆಯ ಹಡುವಗೋಡಿಯ (ಆನಗೋಡು) ಬಡಗಲೆರೆಯ ಬೆದ್ದಲು ಮತ್ತರು ೨, ಹುಲ್ಲೆಯ ಜೀಯನ ಕೆರೆಯ ತೆಂಕಲು ತೋಟ ಕಂಬ ೧೨೫, ಈ ಧರ್ಮವನ್ನು ಪಾಲಿಸಿದವರಿಗೆ ವಾರಣಾಸಿ–ಕುರುಕ್ಷೇತ್ರದಲ್ಲಿ ಲಕ್ಷ ಆಕಳುಗಳ ಕೋಡಿಗೆ ಹೊನ್ನು ರತ್ನಗಳನ್ನು ಕಟ್ಟಿಸಿ ಚತುರ್ವೇದ ಬ್ರಾಹ್ಮಣರಿಗೆ ಕೊಟ್ಟ ಫಲ ಸಿಗುವುದು. ಇದನ್ನು ಕೆಡಿಸಿದವರು ೬೦ ಸಾವಿರ ವರ್ಷ ಕ್ರಿಮಿಗಳಾಗಿ ಹುಟ್ಟುವರು.

ಶಾಸನದ ಮಹತ್ವ

ಈ ಶಾಸನದಿಂದ ಉಚ್ಚಂಗಿಯ (ನೊಳಂಬವಾಡಿ ೩೨ ಸಾವಿರದ ರಾಜ) ರಾಯಪಾಂಡ್ಯರಾಜನ ಮಂತ್ರಿ



ಆದಿತ್ಯ ದಂಡನಾಥನ ಹೆಸರನ್ನು ಸೂಚಿಸುವ ಏಕೈಕ ಶಾಸನ. ಉಚ್ಚಂಗಿಪಾಂಡ್ಯರ ಕಾಲದಲ್ಲಿ ಕುಂದವಾಡ ದೊಡ್ಡ ಅಗ್ರಹಾರವಾಗಿದ್ದು ಉಪಾಧ್ಯಾಯರು ವಿದ್ಯಾರ್ಥಿಗಳು ಪಂಡಿತರು ಅನುಭಾವಿಗಳು ಇದ್ದು ಸಾಹಿತ್ಯ ರಚನೆಯಲ್ಲಿ ತೊಡಗಿದ್ದರು ಎಂಬುದು ತಿಳಿಯುತ್ತದೆ.

ಮಹಾಮಂತ್ರಿ ಆದಿತ್ಯದಂಡನಾಥನ ಬಿರುದುಗಳಾದ ಮಂತ್ರಿಶಿರೋಮಣಿ, ಪ್ರಧಾನಗುಣಸಾಮ್ರಾಜ್ಯ, ಸತ್ಯಗುಣಾಲಂಕೃತ, ರುಂದ್ರಯಶೋನಿಧಿ, ಪ್ರಶಸ್ತಿಗಳನ್ನು ಹೊಂದಿದೆ.

* ಇತಿಹಾಸ ಸಂಶೋಧಕ.

ಹುಲ್ಲೆಯ ಜೀಯನಕೆರೆ (ಶಾಮನೂರು) ಕುಂದವಾಡ, ಹಡುವಗೋಡು (ಆನಗೋಡು), ಉಚ್ಚಂಗಿ (ಉಚ್ಚಂಗಿ ದುರ್ಗ) ನಾರಣಗರೆ (ನಾರಾಯಣನಕೆರೆ ?) ನೊಳಂಬವಾಡಿ ೩೨ ಸಾವಿರ ಸ್ಥಳನಾಮಗಳ ಉಲ್ಲೇಖವಿದೆ.

ಕುಂದವಾಡದ ಶ್ರೀ ಸೋಮನಾಥ ದೇವರು ಹಾಗೂ ಹುಲ್ಲೆಯಜೀಯನಕೆರೆಯ ಶ್ರೀ ಮಲ್ಲಿಕಾರ್ಜುನ ದೇವರು ಕ್ರಿ.ಶ. ೧೧೨೩ರಲ್ಲಿ ಈ ನಾಡಿನ ದೊಡ್ಡ ದೇವಾಲಯಗಳಾಗಿದ್ದವು. ಉಚ್ಚಂಗಿ ಪಾಂಡ್ಯರ ಇತಿಹಾಸದ ಮೇಲೆ ಹೊಸ ಬೆಳಕು ಚೆಲ್ಲುವ ಈ ಶಾಸನವು ಕುಂದವಾಡದ ಉತ್ತರ ದಿಕ್ಕಿನ ಅಡಕೆ ತೋಟದಲ್ಲಿ ಹಾಳಾದ ಬನಶಂಕರಿ ದೇವಾಲಯದ ಅವಶೇಷಗಳ ಬಳಿ ಇದೆ.

ಶಾಸನ ಪಾಠ

೧ ಶ್ರೀನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರಾಚಾರವೇ ತ್ರೈಲೋಕ್ಯ ನಗರಾರಂಭ

೨ ಮೂಲಸ್ತಂಭಾಯ ಶಂಭವೆ । ನಮಃ ಶಿವಾಯ

೩ ಸ್ವಸ್ತಿಶ್ರೀಪೃಥ್ವೀವಲ್ಲಭ ಮಹಾರಾಜಧಿರಾಜ ಪರಮೇಶ್ವರ ಪರಮ ಭಟ್ಟಾರಕ ಸತ್ಯಾಶ್ರಯ

೪ ಕುಳತಿಳಕಂ ಚಾಳುಕ್ಯಾಭರಣಂ । ಶ್ರೀಮತ್ರಿಭುವನಮಲ್ಲದೇವ ವಿಜಯರಾಜ್ಯ ಮುತ್ತ

೫ ರೋತ್ತರಾಭಿವೃದ್ಧಿ ಪ್ರವರ್ಧಮಾನಮಾಚಂದ್ರಾರ್ಕ್ಕ ತಾರಾಂಬರಂ ಸಲುತ್ತಮಿರೆ । ತತ್ಪಾದಪ

೬ ದ್ಮೋಪಜೀವಿ । ಸ್ವಸ್ತಿ ಸಮಧಿಗತ ಪಂಚಮಹಾಶಬ್ದ ಮಹಾಮಾಂಡೇಶ್ವರಂ । ಕಾಂಚೀಪುರವರಾಧೀಶ್ವರಂ । ಯ

೭ ದುವಂಶಾಬರದ್ಯುಮಣಿ ಸುಭಟಚೂಡಾಡಾಮಣಿ । ಶ್ರೀಶಂಕರನಾರಾಯಣ ಚರಣಾಸ್ಮರಣ ಪ

೮ ರಿಣಿತಾತಃಕರಣಂ/ಪಾಂಡ್ಯಕುಳಕಮಳ ಮಾರ್ತಾಂಡಂ । ಪರಿಚ್ಛೇದಿಗಣ್ಡಂ ।

೯ ರಾಜಿಗಚೋಳಮನೋಭಂಗಂ ಸಾಹಸೋತ್ತುಂಗಮೆನಿಸಿದ ಶ್ರೀಮದ್ರಾಯಪಾಂಡ್ಯದೇವರು ನೊ

೧೦ ಣಂಬವಾಡಿ ಮೂವತ್ತಿಚ್ಛಾಸಿರಮುಮಂ ದುಷ್ಟನಿಗ್ರಹ ಶಿಷ್ಟ ಪ್ರತಿಪಾಳನದಿನಾಳುತ್ತ ವು

೧೧ ಚ್ಚಂಗಿಯ ನೆಲೆವೀಡಿನೊಳು ಸುಖಸಂಕಥಾ ವಿನೋದದಿಂ ರಾಜ್ಯಂಗೆಯುತ್ತಮಿರೆ ॥ ಶ್ರೀಮತ್ರಿ

೧೨ ಭುವನಮಲ್ಲ ಮಹಾಮಾನವ ಚಕ್ರವರ್ತಿವರ್ದಿತ ವಿಭವೋದ್ದಾಮಂ ನೆಗಳ್ದಂ ಮಂತ್ರಿಶಿರೋಮಣಿ

೧೩ ಯಾದಿತ್ಯದಣ್ಣನಾಥಂಧರೆಯೊಳು ॥ ಶ್ರೀಕರಣಂ ಮೊದಲಾಗಿರನೇಕನಿಯೋಗಾಧಿಕಾರಿ ಸರ್ವ್ವಾ

೧೪ ದ್ಯಕ್ಷಂ ರಾಕೇಂದು ವಿಶದಕೀರ್ತಿಲತಾಕಂದಂ ಸಂದನೆಳೆಯೊಳಾದಿತ್ಯಾಂತಂ ॥ ತ್ರಿಭುವನಮಲ್ಲ ವಿ

೧೫ ವರ್ದ್ಧಿತ ವಿಭವಂ ಭೂಲೋಕಮಲ್ಲಮಾನಿತಮಹಿಮಂಪಿಭಪಿ ಜಗದೇಕಮಲ್ಲ ಪ್ರಭು ಭಾ

೧೬ ವಿತಭಾರ್ಯನೆನಿಪನೆಸೆವಾದಿತ್ಯಂ ॥ ಪೂಜ್ಯರೇಬಗೆಗೊಳೆ ಮೂಯಿಂ ರಾಜ್ಯದೊಳಂ ತಂನ ಮಾ

೧೭ ತೆ ಮಾತೆನೆ ಪಡೆದಂ ಪ್ರಾಜ್ಯಪ್ರಧಾನಗುಣಸಾಮ್ರಾಜ್ಯಮನಾದಿತ್ಯನ ಹಿತ ಕುಮು

೧೮ ಕುಮುದಾದಿತ್ಯಂ ॥ ಇಂದ್ರನೂರ್ಜ್ಜಿತ ಪದದೊಳುಪೇಂದ್ರಂ ನಿಲಿಪಂತೆ ನಿಲಿಸಿದಂ ನಿಜಪದದೊಳೆ

೧೯ ರುಂದ್ರ ಯಶೋನಿಧಿಪಾಂಡ್ಯನುಪೇಂದ್ರನನಾದಿತ್ಯದಂಡನಾಥ ಲಲಾಮಂ ॥ ಪ್ರತ್ಯ

೨೦ ಕ್ಷಧರ್ಮ್ಮಪುತ್ರನಮಾತ್ಮ ಶಿರೋಮಣಿ ಮನುಪ್ರಶಸ್ತಿಚರಿತ್ರಂ ಸತ್ಯಗುಣಾ

೨೧ ಳಂಕೃತನಾದಿತ್ಯಂ ದ್ರವಿಳಾನ್ವವಾಯ ಕಮಳಾದಿತ್ಯಂ ॥ ವಚನ ॥ ಅಂತು ನೆಗಳ್ತವೆತ್ತಾದಿತ್ಯ

೨೨ ದಣ್ಣನಾಥಂ ಶ್ರೀಮತ್ಸಕವರ್ಷ ೧೦೪೭ನೆಯ ಶೋಭಕೃತ್ಸಂತ್ಸರದ ಭಾದ್ರಪದಶುದ್ಧ ೧೨ ಸೋ

೨೩ ಮವಾರ ಶ್ರವಣನಕ್ಷತ್ರವ್ಯತೀಪಾತಯುಕ್ತಮಪ್ಪ ಧರೆಯೊಳು ಕುಂದವಾಡಮಂ

೨೪ ತ್ರಿಭೋಗಾಭ್ಯಂತರವಾಗಿ ಚಾಳುಕ್ಯಚಕ್ರವರ್ತಿ ತ್ರಿಭುವನಮಲ್ಲ ದೇವನೊಳೆ ತಾಂಬ್ರಶಾಸನ

೨೫ ಮಂ ಪಡೆದಾ ಕುಂದವಾಡಮನಲ್ಲಿಯ ಶ್ರೀಸೋಮನಾಥ ದೇವರಂಭೋಗ ರಂಗಭೋಗ ಚೈತ್ರಪ

೨೬ ವಿತ್ರ ವೇದಶಾಸ್ತ್ರ ಖಂಡಿಕದುಪಾಧ್ಯಾಯರಕ್ಷಿಣೆ ಯೋದುವಾ ಕೇಳ್ವಾಛ್ಛಾತ್ತರಶನಾಛ್ಛಾ

೨೭ ದನ ದೇವರಗ್ರಾಶನ ಖಂಡಸ್ಪುಟಿತ ಜೀರ್ಣೋದ್ಧಾರ ವಿಂತಿನೀತಕ್ಕವೆಂದಲ್ಲಿಯ ನೊಣಂಬ

೨೮ ಗಾವುಂಡನಂ ಮುಂದಿಟ್ಟು ಸರ್ವನಮಸ್ಯವಾಗಿ ಧಾರಾಪೂರ್ವಕಂ ಮಾಡುವಲ್ಲಿ ಹುಲ್ಲೆ

೨೯ ಯ ಜೀಯನ ಕೆರೆಯ ಮಲ್ಲಿಕಾರ್ಜುನ ದೇವರ್ಗೆ ತ್ರಿಕಾಲಪೂಜೆ ನೈವೇದ್ಯ ನಂದಾದೀವಿಗೆ ಚೈತ್ರ

೩೦ ಪವಿತ್ರಕ್ಕೆವೆಂದು ಬಿಟ್ಟಗದ್ದೆ ನಾರಣಕೆರೆಯ ಕೆಳಗೆ ಕಂಬವಿಂನೂರು ೨೦೦ ಆ

೩೧ ಕೆರೆಯಕೆಳಗೆ ಹಡುವಗೋಡಿಯಿಂ ಬಡಗಲೆರೆಯ ಬೆದ್ದಲೆ ಮತ್ತರೆರಡು ೨ ಹುಲ್ಲೆ

೩೨ ಯಜೀಯನಕೆರೆಯಿಂ ತೆಂಕಲು ತೋಂಟದಸ್ಥಳ ಕಂಬ ನೂರಿಪ್ಪತ್ತೈದು ೧೨೫ ಈ

೩೩ ಧರ್ಮ್ಮಮಂಪ್ರತಿಪಾಳಿಸಿದರ್ಗ್ಗೆ ವಾರಣಾಸಿ ಕುರುಕ್ಷೇತ್ರಂಗಳೊಳು ಲಕ್ಷ

೩೪ ಕವಿಲೆಯಂ ಕೋಡುಂಗಕೊಳಗಮಂ ಪೊಂನುರಂನದಿಂ ಕಟ್ಟಿಸಿ ಚತುರ್ವೇದಪಾರ

೩೫ ಗರ್ಗ್ಗೆ ಕೊಟ್ಟ ಪಳಂ//ಸ್ವದತ್ತಾಂ ಪರದತ್ತಾಂವಾಯೋಹರೇತ ವಸುಂಧರಾ

೩೬ ಷಷ್ಟಿ ವರ್ಷ ಸಹಸ್ರಾಣಿ ವಿಷ್ಟಾಯಾಂ ಜಾಯತೇ ಕ್ರಿಮಿಃ॥

[ಶಾಸನದ ಪಾಠ ಓದಲು ಸಹಕಾರ, ಮಾರ್ಗದರ್ಶನ ಮಾಡಿದ ಗುರುಗಳಾದ ಖ್ಯಾತ ಶಾಸನ ತಜ್ಞರಾದ ಸನ್ಮಾನ್ಯಶ್ರೀ ಡಾ॥ ಬಿ. ರಾಜಶೇಖರಪ್ಪ ಇವರಿಗೆ ಕೃತಜ್ಞತೆಗಳು]

೧೫

ತೀರ್ಥಹಳ್ಳಿ ತಾಲ್ಲೂಕಿನ ಮೂರು ಸ್ಮಾರಕ ಶಾಸನಗಳು

ಜಿ.ಕೆ. ದೇವರಾಜಸ್ವಾಮಿ*

ತೀರ್ಥಹಳ್ಳಿ ತಾಲ್ಲೂಕಿನಿಂದ ಸುಮಾರು ೧೫ ಕಿ.ಮೀ. ದೂರದಲ್ಲಿ ಹೆದ್ದೂರು ಗ್ರಾಮವಿದೆ. ಈ ಗ್ರಾಮದ ಬೆಂಡೆಕೊಪ್ಪ ಮಲ್ಲಿಕಾರ್ಜುನ ದೇವಾಲಯದ ಆವರಣದಲ್ಲಿರುವ ಶಾಸನ.

ಶಾಸನವು ೪ ಅಡಿ ೬ ಇಂಚು ಎತ್ತರ, ೩ ಅಡಿ ಅಗಲವಾಗಿದೆ. ಬಳಪದ ಕಲ್ಲಿನಲ್ಲಿ ಕೆತ್ತಲಾಗಿದೆ. ಕೆಳಗಿನ ಪಟ್ಟಿಕೆಯಲ್ಲಿ ನಾಲ್ಕು ಜನ ಯೋದರಿದ್ದಾರೆ. ಮಧ್ಯದಲ್ಲಿ ಇಬ್ಬರು ಗುರಾಣಿ ಮತ್ತು ಭರ್ಜಿಯನ್ನು ಹಿಡಿದು ಹೋರಾಡುತ್ತಿರುವ ದೃಶ್ಯವಿದೆ. ಇವರ ಎಡಕ್ಕೆ ಒಬ್ಬ ಖಡ್ಗ ಗುರಾಣಿ ಹಿಡಿದವನಿದ್ದಾನೆ. ಎರಡೂ ಬದಿಯಲ್ಲಿ ಬಿಲ್ಲು ಮತ್ತು ಖಡ್ಗವನ್ನು ಹಿಡಿದ ಯೋಧರ ಚಿತ್ರವನ್ನು ಚಿತ್ರಿಸಲಾಗಿದೆ.

ಎರಡನೇ ಪಟ್ಟಿಕೆಯಲ್ಲಿ ಮಧ್ಯದಲ್ಲಿ ಕುದುರೆ ಮೇಲೆ ಖಡ್ಗ ದಾರಿಯಾದವನನ್ನು ಕೆತ್ತಲಾಗಿದೆ. ಅವನಿಗೆ ಹಿಂಭಾಗದಿಂದ ಛತ್ರಿಯನ್ನು ಒಬ್ಬ ಹಿಡಿದಿದ್ದಾನೆ. ಛತ್ರಿ ಹಿಡಿದವನ ಹಿಂಭಾಗದಲ್ಲಿ ಒಬ್ಬ ಗಿಂಡಿಯನ್ನು ಹಿಡಿದಿರುವಂತಿದೆ. ಕುದುರೆಯ ಮುಂಭಾಗದಲ್ಲಿ ಒಬ್ಬ ಕುದುರೆಯ ಹಗ್ಗವನ್ನು ಹಿಡಿದಿರುವಂತಿದೆ. ಮತ್ತೊಬ್ಬ ಯೋಧ ಕಹಳೆಯನ್ನು ಊದುತ್ತಿದ್ದಾನೆ. ಒಟ್ಟಾರೆ ಯುದ್ಧಕ್ಕೆ ಹೋಗುವ ಚಿತ್ರಣ ಕಂಡುಬರುತ್ತಿದೆ. ಮೂರನೇ ಪಟ್ಟಿಕೆಯಲ್ಲಿ ಮಧ್ಯದಲ್ಲಿ ಶಿವಲಿಂಗವಿದ್ದು, ಎಡ-ಬಲಕ್ಕೆ ಸ್ತ್ರೀಯರ ಚಿತ್ರವಿದೆ. ಈ ಸ್ತ್ರೀಯರ ಪಕ್ಕದಲ್ಲಿ ಕೈ ಮುಗಿದು ಕುಳಿತಿರುವ ವೀರರ ಚಿತ್ರವಿದೆ. ಕೈ ಮುಗಿದು ಕುಳಿತ ವೀರರ ಬಲಕ್ಕೆ ಖಡ್ಗದ ಚಿತ್ರಣವಿದೆ. ಎಡಭಾಗದಲ್ಲಿರುವ ಸ್ತ್ರೀ ಕೈ ಮುಗಿದು ಕುಳಿತ ವೀರನಿಗೆ ಸಂತೈಸುವ ರೀತಿಯಲ್ಲಿ ಹಾಗೂ ಬಲಭಾಗದಲ್ಲಿರುವ ಸ್ತ್ರೀ ಕೈಯಲ್ಲಿ ಏನೋ ಹಿಡಿದಿರುವಂತೆ ಅನಿಸುತ್ತದೆ. ಮೇಲ್ಭಾಗದಲ್ಲಿ ಜಟಾಧಾರಿ ಅರ್ಚಕ/ಮುನಿ ಶಿವನಿಗೆ ಘಂಟೆ ಬಾರಿಸುತ್ತಾ ಆರತಿ ಬೆಳಗುತ್ತಿದ್ದಾನೆ. ಮುನಿಯ ಎಡ ಪಕ್ಕದಲ್ಲಿ ಮೇಲ್ಭಾಗದಲ್ಲಿ ಚಂದ್ರ ಕೆಳಭಾಗವನ್ನು ಹಸು-ಕರುವನ್ನು ಕೆತ್ತಲಾಗಿದೆ. ಬಲಭಾಗದ ಮೇಲ್ಭಾಗದಲ್ಲಿ ಸೂರ್ಯ ಹಾಗೂ ಶಿವದೇವಾಲಯದಲ್ಲಿರುವ ಬಸವನಂತೆ ಬಸವನನ್ನು ಕೆತ್ತಲಾಗಿದೆ. ಶಾಸನದ ಸುತ್ತಲೂ ಪಟ್ಟಿಕೆಯನ್ನು ರಚಿಸಿದ್ದಲ್ಲದೆ ಅಲಂಕಾರಿಕ ಹೂ-ಬಳ್ಳಿಯಿಂದ ಕೆತ್ತಿದೆ. ಮೇಲ್ಭಾಗದ ಕೊನೆಯಲ್ಲಿ ಸಿಂಹ ಮುಖವನ್ನು ಕೆತ್ತಲಾಗಿದೆ. ಮೂರು ಅಡ್ಡ ಪಟ್ಟಿಕೆಗಳಲ್ಲಿ ಹಾಗೂ ಕೆಳಭಾಗವು ಕೆತ್ತಲಾಗಿದೆ. ಲಿಪಿ ಅಲಂಕಾರವಾಗಿದ್ದರೂ ಭಾಷಾ ಸ್ಪಷ್ಟತೆ ಇಲ್ಲ. ಇದರ ಕಾಲ ಕ್ರಿ.ಶ. ೭-೧೦-೧೨೫೪ (ಶಾ.ಶ. ೧೧೭೬).

ಶಾಸನ ಪಾಠ

೧ ಆನಂದ ಸಂವಚಾರದ ಆಶಿಜ ಬ ೧೦ ಲು ಗುರ[ವಾ]

೨ ರ ಬೊ[ಂ]ಮ್ಮೆರು ನಾಯಕನ ಮರ(ಗ) ಲಿಂಗಣನು ಮಾಳೂರ ಆರು

೩ ಕಿಲಾರ ಸೀಮೆಯ ಸುರುಳಿಯ ಕೋಟೆಯ ಹೋರು

೪ ತಾ[ಂ]ನಲಿ ಹುಲುರಾಶಿಯ



* # ೫೭, 'ತ್ರಯೀ' ಮೈಸೂರು ಲ್ಯಾಂಪ್ಸ್ ಲೇಔಟ್, ಚನ್ನನಾಯಕನಪಾಳ್ಯ, ೨ನೇ ಹಂತ, ನಾಗಸಂದ್ರ ಅಂಚೆ, ಬೆಂಗಳೂರು-೫೬೦೦೭೩

೫ ತಂಮಗೌಉ[ಡ]

೬ ನ್ಮಮಗ . . ಹೋರೆಹಾಯದಾಡಿ[ಪಾಯ್ದಳ]? ಸಹಿತಂ ಏರಿ

೭ ದಂ . ಹಾವರು . . . . ಬಯಲು

೮ ಸಾಲು ಸ್ಪಷ್ಟವಾಗಿಲ್ಲ

ಶಾಸನದಲ್ಲಿ ಪ್ರಮುಖ ವ್ಯಕ್ತಿಯಾದ ಲಿಂಗಣ ಹಾಗೂ ಇನ್ನೊಬ್ಬ ವ್ಯಕ್ತಿ ಮರಣ ಹೊಂದಿರುವುದನ್ನು ದಾಖಲಿಸಿದೆ. ಚಿತ್ರದ ಹಿನ್ನೆಲೆಯಲ್ಲಿ ಗಮನಿಸಿದಾಗ ಈ ಸತ್ತ ವ್ಯಕ್ತಿಗಳಲ್ಲಿ ಒಬ್ಬ ಪ್ರಮುಖನಾದ ಮಾಂಡಲೀಕನ ಅಥವಾ ಗಾವುಂಡನೋ ಆಗಿರಬೇಕು. ಹೆಚ್ಚಿನ ಮಾಹಿತಿಯು ತಿಳಿಯುತ್ತಿಲ್ಲ.

೨. ಬೆಂಡೆಕೊಪ್ಪ ಮಲ್ಲಿಕಾರ್ಜುನ ದೇವಾಲಯದ ಆವರಣದಲ್ಲಿರುವ ಎರಡನೆಯ ಶಾಸನ

ಶಾಸನದಲ್ಲಿ ಕಾಲದ ಉಲ್ಲೇಖವಿಲ್ಲ. ಇದು ೪ ಅಡಿ ಎತ್ತರ, ೩ ಅಡಿ ಅಗಲ ಅಳತೆ ಉಳ್ಳದ್ದಾಗಿದೆ. ಶಾಸನವನ್ನು ಬಳಪದ ಕಲ್ಲಿನ ಮೇಲೆ ಕೆತ್ತಲಾಗಿದೆ. ಶಾಸನದ ಕೆಳಗಿನ ಪಟ್ಟಿಕೆಯ ಬಲಭಾಗದಲ್ಲಿ ಒಬ್ಬ ವೀರ ಕುದುರೆ ಮೇಲೆ ಕುಳಿತು ಈಟಿಯನ್ನು ಹಿಡಿದು ತಿವಿಯಲು ಸಿದ್ಧನಾದಂತಿದೆ. ಕುದುರೆಯು ಎರಡು ಕಾಲುಗಳನ್ನು ಎತ್ತಿ ಜಿಗಿಯುತ್ತಿರುವಂತೆ ಕೆತ್ತಲಾಗಿದೆ. ಎದುರಾಳಿ ವೀರನು ಕುದುರೆಯ ತಲೆ ಹಿಡಿದು ಭರ್ಜಿಯಿಂದ ಕುತ್ತಿಗೆಯನ್ನು ತಿವಿಯುತ್ತಿರುವಂತಿದೆ. ಅವನ ಕಾಲಿನ ಕೆಳಗೆ ಒಂದು ಕುದುರೆ ಬಿದ್ದಂತೆ ಚಿತ್ರಿಸಲಾಗಿದೆ. ಅವನ ಹಿಂಭಾಗದಲ್ಲಿರುವ ಒಬ್ಬ ವೀರನು ಬಿಲ್ಲನ್ನು ಎಳೆದುಬಿಡುವಂತೆ ಚಿತ್ರಿಸಿದೆ. ಶಾಸನದ ಎರಡನೆಯ ಪಟ್ಟಿಕೆಯ ಬಲಭಾಗದಲ್ಲಿ ಇಬ್ಬರು ಕುದುರೆ ಮೇಲೆ ಕುಳಿತು ಯುದ್ಧ ಮಾಡುತ್ತಿದ್ದಾರೆ. ಕೆಳಗಿನ ಪಟ್ಟಿಕೆಯ ದೃಶ್ಯ ಮುಂದುವರೆದಂತಿದೆ. ಎದುರಾಳಿಯು ಕುದುರೆಯನ್ನು ಭರ್ಜಿಯಿಂದ ತಿವಿದು ಎಡಕೈಯಲ್ಲಿ ಹಿಡಿದಿದ್ದಾನೆ. ಬಲಕೈ ಏನೋ ಹಿಡಿದಿರುವಂತಿದೆ. ಕುದುರೆಯ ಮೇಲೆ ಕುಳಿತ ಎರಡನೆಯವನು ಈಟಿಯನ್ನು ಹಿಡಿದು ಮುನ್ನುಗ್ಗುತ್ತಿರುವಂತಿದೆ. ಮುಂದಿನ ಕುದುರೆ ಸವಾರನ ಸಹಾಯಕ್ಕೆ ಬರುತ್ತಿರುವಂತೆ ಚಿತ್ರಿಸಿದೆ. ಮೂರನೇ ಪಟ್ಟಿಕೆಯಲ್ಲಿ ಕೆಳಗೆ ನಿಂತು ಹೋರಾಡು ತ್ತಿರುವ ಎದುರಾಳಿ ವೀರ ಮಡಿದಿರಬೇಕು. ಅವನನ್ನು ನಾಲ್ಕು ಜನ ಅಪ್ಸರೆಯರು ಹೆಗಲ ಮೇಲೆ ಕೈ ಹಾಕಿ ಸ್ವರ್ಗಕ್ಕೆ ಕರೆದೊಯ್ಯುತ್ತಿರುವಂತೆ ಚಿತ್ರಿಸಿದೆ. ಮೇಲ್ಭಾಗದಲ್ಲಿ ದೇವಾಲಯವನ್ನು ಹೋಲುವಂತೆ ಸಾಂಕೇತಿಕವಾಗಿ ಮಂಟಪದ ರೀತಿಯಲ್ಲಿ ಕೆತ್ತಲಾಗಿದೆ. ಮಂಟಪದ ಮಧ್ಯದಲ್ಲಿ ಶಿವಲಿಂಗದ ಎಡಕ್ಕೆ ವೀರ ಕೈ ಮುಗಿದು ಕುಳಿತಿದ್ದಾನೆ. ಬಲಕ್ಕೆ ಜಟಾಧಾರಿ ಮುನಿಯು ಶಿವಲಿಂಗವನ್ನು ಪೂಜಿಸುತ್ತಿದ್ದಾನೆ. ಮಂಟಪದ ಹೊರಭಾಗ ಎಡಕ್ಕೆ ಸೂರ್ಯ ಹಾಗೂ ಹಸು-ಕರುವನ್ನು ಚಿತ್ರಿಸಲಾಗಿದೆ. ಬಲಭಾಗದಲ್ಲಿ ಚಂದ್ರ ಮತ್ತು ಜಟಾಧಾರಿ ವ್ಯಕ್ತಿ ಏನನ್ನೋ ಕೈ ಹಿಡಿದು ತರುತ್ತಿರುವ ದೃಶ್ಯವಿದೆ. ಈ ಮೇಲಿನ ಪಟ್ಟಿಕೆ ಭಾಗದಲ್ಲಿ ಮಾತ್ರ ಕಮಾನಿಂದ ಕೂಡಿ ಅಲಂಕಾರ ಕೆತ್ತನೆಗಳಿಂದ ಕೂಡಿದೆ. ಮೂರು ಅಡ್ಡಪಟ್ಟಿಕೆಯಲ್ಲಿ ಹಾಗೂ ಕೆಳಭಾಗದಲ್ಲಿ ಶಾಸನವನ್ನು ಕೆತ್ತಲಾಗಿದೆ.

ಶಾಸನ ಪಾಠ

೧ ಶ್ರೀಸ್ವಸ್ತಿ ಶಮಸ್ತ ಪ್ರಸಸ್ತಿ ಸಹಿತಂ ಭಡ್ತಕೋರ

೨ . . . ಸಿ . . ಸಃ . . . . ಗಮ ಮಾದ . . . . ಉರವಿ

೩ ಣ್ಣದ . . ಒಲ್ಲೆಸಿರಣದ . . . ಪಂ ಲೋಸ ಹುತ್ಯೆಯ

೪ ಸ . ತ . . . .

೫ ದ . ಕಂರ ತುಲೆಯವ.ಕ..ಗ.ಸ.ರದಕ್ತಯ ಕುಸಂಸಿವಸ್ತಂ

೬ ಯಕನಮಾ ಹ ಳಿ ನ[ಸ್ತು]?ಶಸ್ತ ಸಮಸ್ತ ಮಹಾಮಣ್ಡಳೇಶ್ವರಂ . . ಪ್ರತ್ಪಾ[ವ] ಹಿರಣ್ಯಾವ

೭ ಸ್ತ್ರದಾನ . . ರಸಿರಸಿಂ . ಸನವ . . . .

೮ ರಿರವಿವಾದಲನಾಡರವ . . ಜಿಮ . . . ರಿಸಿ ರೆರುಡೂಲೆಃ ವಿಧಃವಿದು

೯ ಸತ್ತ್ಯೆಲ್ಪಗೌಡ[ನ] ಧನಕನಕ [ದಿಂದೆ] ಸಪುಣ್ಯ ಮುಮಿದೆ ಇಳಂಬಿ. ಯರೆಸಿಕುಮ

೧೦ ರಾನ(ಸೂ)ಪುಂಡಯರಸಮ . . . . . [ಮೊರಡಿ]. ಲಾಕಣಭಂದದುಯಿಡರ್‍ಯಗರೊಲೊಮಾ

೧೧ ದಾನಂ . . . .


೧೨ (ಶಾಸನದ ಕೆಳಭಾಗ ಭೂಮಿಯಲ್ಲಿ ಹೂತುಹೋಗಿದ್ದು, ಮುಂದಿನ ಸಾಲಿನ ಲಿಪಿಯು ಸ್ಪಷ್ಟವಾಗಿಲ್ಲ.)




ಪ್ರಸ್ತುತ ಶಾಸನವು ತ್ರುಟಿತ ವಾಗಿದ್ದು, ಪಾಠ ನಿರ್ಧರಿಸಲು ಕಷ್ಟಸಾಧ್ಯ. ಶಾಸನದ ಲಿಪಿ, ಭಾಷಾ ದೃಷ್ಟಿಯಿಂದ ಇದನ್ನು ಕ್ರಿ.ಶ. ೧೨-೧೩ನೇ ಶತಮಾನದ್ದೆನ್ನಬಹುದು. ಮಹಾಮಂಡಳೇಶ್ವರ ತೈಲಪಗೌಡ ಇತ್ಯಾದಿ ಸ್ಪಷ್ಟತೆಯಿಂದ ಪ್ರಾದೇಶಿಕ ವಾಗಿ ಸಾಂತರರ ಕಾಲದ್ದೆಂದು ಊಹಿಸಬಹುದಾಗಿದೆ.

೩. ಮುನ್ನೂರಿನ ತುರುಗೋಳ್ ಪೆಣ್ಬುಯ್ಯಲ್ ವೀರಗಲ್ಲು

ತೀರ್ಥಹಳ್ಳಿ ತಾಲ್ಲೂಕಿನಿಂದ ೫ ಕಿ.ಮೀ. ದೂರದಲ್ಲಿ ಮುನ್ನೂರು ಗ್ರಾಮವಿದೆ. ಗ್ರಾಮದ ಶ್ರೀ ಮೋಹನ್‌ರವರ ಮನೆಯ ಆವರಣದಲ್ಲಿ ಈ ಶಾಸನವಿದೆ. ಈ ವೀರಗಲ್ಲು ಶಾಸನವು ೫ ಅಡಿ ೨ ಇಂಚು ಎತ್ತರ ಹಾಗೂ ೩ ಅಡಿ ಅಗಲವಿದೆ. ಕಣಶಿಲೆಯಲ್ಲಿ ಶಿಲ್ಪದೊಂದಿಗೆ ಶಾಸನವನ್ನು ಕಂಡರಿಸಲಾಗಿದೆ. ಶಾಸನವು ೪ ಹಂತಗಳ ಚಿತ್ರ ಪಟ್ಟಿಕೆಯನ್ನು ಒಳಗೊಂಡಿದೆ. ಶಾಸನದ ಕೆಳಭಾಗದ ಪಟ್ಟಿಕೆಯಲ್ಲಿ ನಾಲ್ಕು ಜನರನ್ನು ಕೆತ್ತಲಾಗಿದೆ. ಈ ಉಬ್ಬುಶಿಲ್ಪದಲ್ಲಿ ಒಬ್ಬನನ್ನು ಹಸುವು ತುಳಿದು ನಿಂತಿದೆ. ಹಸುವಿನಿಂದ ತುಳಿಯಲ್ಪಟ್ಟವನನ್ನು ಒಬ್ಬನು ತಿವಿಯುತ್ತಿರುವಂತಿದೆ. ಉಳಿದ ಇಬ್ಬರು ಸ್ತ್ರೀಯರು ಕೈ ಕೈ ಹಿಡಿದಿದ್ದಾರೆ. ಕೈ ಹಿಡಿದ ಮಧ್ಯದಲ್ಲಿ ಮರ ಅಥವಾ ತ್ರಿಶೂಲದ ರೀತಿಯಲ್ಲಿ ಕೆತ್ತಲಾಗಿದೆ. ಎರಡನೆಯ ಪಟ್ಟಿಕೆಯಲ್ಲಿ ನಾಲ್ಕು ಜನರನ್ನು ಸ್ಪಷ್ಟವಾಗಿ ಕೆತ್ತಲಾಗಿದೆ. ಎಡಭಾಗದಲ್ಲಿರುವ ವ್ಯಕ್ತಿಯನ್ನು ಇಬ್ಬರು ಸ್ತ್ರೀಯರನ್ನು ಅಪಹರಿಸುತ್ತಿರುವ ವ್ಯಕ್ತಿಯು ಕತ್ತಿಯಿಂದ ತಿವಿಯುತ್ತಿದ್ದಾನೆ. ಅಪಹರಿಸುತ್ತಿರುವ ಸ್ತ್ರೀಯರು ಪರಸ್ಪರ ಕೈಯನ್ನು ಹಿಡಿದಿದ್ದಾರೆ. ಹಾಗೂ ಬಲಭಾಗದ ಕೊನೆಯಲ್ಲಿರುವ ಸ್ತ್ರೀಯು ಕೈಯಲ್ಲಿ ಆಯುಧವನ್ನು ಹಿಡಿದು ಪ್ರತಿಭಟಿಸುತ್ತಿರುವಂತಿದೆ. ಅವಳ ಪಕ್ಕದಲ್ಲಿ ಚಿತ್ರಣವಿದ್ದು, ಸ್ಪಷ್ಟವಾಗುತ್ತಿಲ್ಲ. ಮೂರನೆಯ ಪಟ್ಟಿಕೆಯಲ್ಲಿ ಮಧ್ಯದಲ್ಲಿ ಇಬ್ಬರು ವೀರರು





ಪರಸ್ಪರ ಕೈಯನ್ನು ಹಿಡಿದುಕೊಂಡಿದ್ದು ಅವರ ಪಕ್ಕದಲ್ಲಿ ಅಪ್ಸರೆಯರ ಸೂಚಕವಾಗಿ ಸ್ತ್ರೀಯರ ಚಿತ್ರ ಕೆತ್ತಲಾಗಿದೆ. ನಾಲ್ಕು ಜನರೂ ಕೈ ಹಿಡಿದು ಹೋಗುತ್ತಿರುವಂತಿದೆ. ಮೇಲ್ಭಾಗದ ಮಧ್ಯದಲ್ಲಿ ಗಜಲಕ್ಷ್ಮಿ ಚಿತ್ರಣ, ಎಡಕ್ಕೆ ಚಂದ್ರ ಹಸುವಿನ ಚಿತ್ರವಿದೆ. ಬಲಕ್ಕೆ ಸೂರ್ಯ, ಕುದುರೆ ಚಿತ್ರವನ್ನು ಕೆತ್ತಲಾಗಿದೆ. ಶಿಲ್ಪದ ಮಧ್ಯದ ಮೂರೂ ಪಟ್ಟಿಕೆ ಹಾಗೂ ಅಕ್ಕಪಕ್ಕದ ಪಟ್ಟಿಕೆಗಳಲ್ಲಿ ಶಾಸನವನ್ನು ಕೆತ್ತಲಾಗಿದೆ. ಪಟ್ಟಿಕೆ ಕೆಳಭಾಗ ದಲ್ಲಿಯೂ ಶಾಸನವನ್ನು ಬರೆಯಲಾಗಿದೆ.

ಶಾಸನ ಪಾಠ

ಮೇಲ್ಭಾಗದ ಪಟ್ಟಿಕೆ

೧ . . . . . ಲೆಕಪಸಲೆಬಃ

ಎರಡು ಮತ್ತು ಮೂರನೆಯ ಪಟ್ಟಿಕೆ ಸವೆದಿದೆ

ಶಾಸನದ ಎಡಭಾಗದ ಪಟ್ಟಿಕೆ

೧ ಮೃಚುರುಲ . ಳಯ . . . .

ಶಾಸನದ ಬಲಭಾಗದ ಪಟ್ಟಿಕೆ

೧ . . . ಮಲೆಂ ಪುಗೆನ ಮೃತಳನ . .

ಶಾಸನದ ಕೆಳಭಾಗದಲ್ಲಿ

೧ ಅ ಪಡೆದ ಇವೂರ ತುರುವುಂತೊಳ್ದಿ

೨ ಭಾಳಗಮ್ಮ ಮಡಿದ ಕಲ್ಲೋಡಿ(ಟಿ) ವೀರೋ

೩ ಜ ಬರೆ(ದ) ಇ ಕಲ

ಪಟ್ಟಿಕೆಯಲ್ಲಿರುವಂತಹ ಲಿಪಿಯು ತ್ರುಟಿತವಾಗಿದ್ದು ಪಾಠ ಸ್ಪಷ್ಟವಾಗುತ್ತಿಲ್ಲ. ಕೆಳಭಾಗದ ಪಾಠ ಓದಬಹುದು. ಈವೂರ ತುರುವು ತುಳಿದು ಬಾಳಗಮ್ಮ ಎಂಬುವನು ಮಡಿದ ಹಾಗೂ ಕಲ್ಲನ್ನು ಕಲೋಟಿ ವಿರೋಜ ಬರೆದ ಎಂದಿದೆ. ಶಾಸನ ಗಮನಿಸುವಲ್ಲಿ, ಬಾಳಗಮ್ಮ ಎಂಬುವನು ಹಸುವಿನಿಂದಲೇ ತುಳಿದು ಸತ್ತ ಎಂದು ಶಾಸನವು ಉಲ್ಲೇಖಿಸುತ್ತದೆ. ಈ ಘಟನೆಯನ್ನು ಉಲ್ಲೇಖಿಸುವ ಶಾಸನವು ಇದೇ ಮೊದಲನೆಯದೆನ್ನಬಹುದು. ಕಾರಣ ತುರುಗೋಳ್/ಪೆಣ್ಬುಯ್ಯಲ್ ಶಾಸನಗಳಲ್ಲಿ ವಿದ್ವಾಂಸರು ಗಮನಿಸಿ ಉಲ್ಲೇಖಿಸಿದಂತೆ ಕಾಳಗದಲ್ಲಿ ಮಡಿದ ವೀರನನ್ನು ಹಸುಗಳು ತುಳಿದುಕೊಂಡು/ದಾಟಿಕೊಂಡು ಹೋದವು ಎಂದು ಕಾವ್ಯ ಶಾಸನಗಳಲ್ಲಿದೆ. ಆದರೆ ಹಸುವೇ ತುಳಿದು ಸತ್ತನೆಂಬುದು ಶಾಸನೋಕ್ತ ಉಲ್ಲೇಖವು ಮೊದಲನೆಯದಾಗಿದೆ. ಚಿತ್ರಣದಲ್ಲೂ ಶಿಲ್ಪಿಯು ಸ್ಪಷ್ಟವಾಗಿ ಬಿದ್ದ ವ್ಯಕ್ತಿಯ ಮೇಲೆ ಹಸುವು ತುಳಿದು ನಿಂತಂತೆ ಕೆತ್ತಿದ್ದಾನೆ. ಚಿತ್ರ ಗಮನಿಸಿದರೆ ಪೆಣ್ಬುಯ್ಯಲನ್ನೂ ಚಿತ್ರಿಸಿದಂತಿದೆ. ಶಾಸನದ ಅರ್ಧಭಾಗದಷ್ಟು ಪಾಠವಿಲ್ಲ ಮತ್ತು ಕಣಶಿಲೆಯಾದ್ದರಿಂದ ಸ್ತ್ರೀ/ಪುರುಷ ಉಬ್ಬು ಶಿಲ್ಪವನ್ನು ಸೂಕ್ಷ್ಮತೆಯಿಂದ ಗಮನಿಸಬೇಕಾಗಿದೆ. ಒಟ್ಟಾರೆ ಹಸುವಿನಿಂದ ತುಳಿದು ಸತ್ತದ್ದನ್ನು ಶಾಸನವು ಉಲ್ಲೇಖಿಸಿರುವುದು ಗಮನಾರ್ಹವಾಗಿದೆ. ಚಿತ್ರದ ಹಿನ್ನೆಲೆಯಲ್ಲಿ ಈ ಶಾಸನವು ತುರುಗೋಳ್ ಹಾಗೂ ಪೆಣ್ಬುಯ್ಯಲನ್ನು ದಾಖಲಿಸಿದೆ.

೧೬

ಹರ್ಲಾಪೂರದ ಒಂದು ಅಪ್ರಕಟಿತ ಶಿಲಾಶಾಸನ

ಶಂಕ್ರಪ್ಪ ಬಡಿಗೇರ*

ಗದಗ ಜಿಲ್ಲೆಯ ಗದಗ ತಾಲ್ಲೂಕಿನಿಂದ ಹದಿನಾರು ಕಿ.ಮೀ. ಅಂತರದಲ್ಲಿ ಹರ್ಲಾಪೂರ ಗ್ರಾಮವಿದೆ. ನಾನು ಕೈಗೊಂಡ ಕ್ಷೇತ್ರ ಕಾರ್ಯದಲ್ಲಿ ಈ ಅಪ್ರಕಟಿತ ಶಾಸನ ಲಭಿಸಿದೆ.

ಶಾಸನದ ಪಾಠ

೧ ಸ್ವಸ್ತಿಶ್ರೀಸರ್ವನಮಸ್ಯೆ ಅಗ್ರಹಾರ . . ಗ್ರವ . ದೇವರ . .

೨ ಕಮ್ಮಾರನ ಮಗ ಪಮ್ಮೋಜನ ಅಳಿಯ ಮಾಧೋಜ ತನ್ನ . . . .

೩ ಸಿರಿಯೂರಿನ ನಾಕಿಗಾವುಂಡನ ಕೆಯಲು ದಾನ ಬಿಟ್ಟ ವೃತ್ತಿ ಮೆರೆಸುವುದು ದಾನಬಿಟ್ಟ ವೃತ್ತಿ ಒಂದು ಎರೆ ಮತ್ತರ

೪ ಸ್ತ್ರೀ ಒಂದು ಎರೆ ಮತ್ತರ . . . ಬಿಟ್ಟಂ ವೃತ್ತಿ

೫ ಪ್ರತಿಪಾಳಿಸುವ . . ಪ್ರತಿಪಾಳಿಸದವಂ ಪಂಚಮಹಾ ಪಾತಕರಂ ॥

೬ ವಿಪಾತಕಂ .

ಶಾಸನದ ಸಾರಾಂಶ

ಈ ಶಾಸನ ಶಿಲಾಫಲಕವು ೪' ಉದ್ದ ೨¹/₂' ಅಗಲ ವಾಗಿದ್ದು, ೬" ದಪ್ಪವಾಗಿದೆ. ಮೇಲ್ಭಾಗದ ಪಟ್ಟಿಕೆಯಲ್ಲಿ ಆಕಳು-ಕರು(ಕಾಮಧೇನು), ಮಧ್ಯದಲ್ಲಿ ಧ್ಯಾನಾಸಕ್ತ ಮುನಿ, ಸೂರ್ಯ-ಚಂದ್ರರ ಉಬ್ಬುಶಿಲ್ಪಗಳಿವೆ. ಪಟ್ಟಿಕೆಯ ಕೆಳಭಾಗದ ಶಿಲಾಫಲಕದ ಒಂದು ಮುಖದ ಮೇಲೆ ಪ್ರಸ್ತುತ ಶಾಸನವನ್ನು ಕೊರೆಯಲಾಗಿದೆ. ಕನ್ನಡ ಲಿಪಿ ಮತ್ತು ಭಾಷೆಯ ಈ ಶಾಸನ ದಲ್ಲಿ ಆರು ಸಾಲುಗಳಿವೆ. ಈ ಶಾಸನವು ಹರ್ಲಾಪೂರದಿಂದ ದಕ್ಷಿಣ ದಿಕ್ಕಿನಲ್ಲಿರುವ ಎಸ್.ವಿ. ಲಕ್ಕುಂಡಿಯವರ ಹೊಲದಲ್ಲಿ ದೊರೆತಿದೆ. ಇದು ಲಿಪಿ ಮತ್ತು ಭಾಷೆಯ ಆಧಾರದ ಮೇಲೆ ಕಲ್ಯಾಣ ಚಾಳುಕ್ಯರ ಕಾಲದ್ದು ಎನ್ನಲಾಗಿದೆ. ಈ ಶಾಸನದಲ್ಲಿ ಕಮ್ಮಾರನ ಮಗ ಪಮ್ಮೋಜನ ಅಳಿಯ ಮಾಧೋಜನ ಬಗ್ಗೆ ಮಾಹಿತಿಯಿದೆ. ಸಿರಿಯೂರಿನ ಅಗ್ರಹಾರಕ್ಕೆ ನಾಕಿಗಾವುಂಡನು ಒಂದು ಮತ್ತರು (೩-೩/೪ ಎಕರೆಗೆ ಸಮವಾಗುತ್ತದೆ,) ಎರೆ ಭೂಮಿಯನ್ನು ದಾನ ನೀಡಿದ ಬಗ್ಗೆ ಉಲ್ಲೇಖವಿದೆ. ಈ ಪರಿಸರದ ಹೊಸೂರು ಗ್ರಾಮದ ಕ್ರಿ.ಶ. ೧೧೦೩ರ ಆರ ನೆಯ ವಿಕ್ರಮಾ ದಿತ್ಯನ ಶಾಸನದಲ್ಲಿ ಮೊರಕಕುಲದ ರೇಚ ಗಾವುಂಡ ಮತ್ತು ಇವನ ಹೆಂಡತಿ ಕಂಚಿ ಗಾವುಂಡಿಯರ ಮಕ್ಕಳು ಬೊಪ್ಪಗಾವುಂಡ ಮತ್ತು ನಾಕಿ ಗಾವುಂಡರು. ನಾಕಿ ಗಾವುಂಡನು ಈ ಪರಿಸರದಲ್ಲಿ ತುಂಬಾ ಪ್ರಸಿದ್ಧಿಯಾಗಿದ್ದನು. ಪರಾಕ್ರಮಿಯಾದ ಈತನು ವೈರಿ ಸೈನ್ಯಕ್ಕೆ ಪ್ರಳಯ ಭೈರವನಂತಿ ದ್ದನು. ಮೊರಕಕುಲದ ಈತನು "ಪೊಸವೂರುನೇಕ ಭೋಗದಿ ನರ್ದ ಸುಖಸಂಕಥಾ ವಿನೋದದಿನಿಳ್ದು" ಶ್ರೀ ಮೊರಕೇಶ್ವರ ಆಲಯವನ್ನು ಮಾಡಿಸಿ ಜ್ಞಾನಾಸಕ್ತದೇವರ ಕಾಲನ್ನು ತೊಳೆದು ದೇವರಿಗೆ ತೋಟ ಮತ್ತು ಹೊಲವನ್ನು ದಾನವಾಗಿ ಬಿಡುತ್ತಾನೆ. ಇದರಲ್ಲಿ ಕಮ್ಮಾರರ ಬಗ್ಗೆ ಉಲ್ಲೇಖ ಇರುವುದು ವಿಶೇಷ ವಾಗಿದೆ. ಹೊಸೂರಿನ ಶಾಸನದಲ್ಲಿ ಬರುವ ನಾಕಿಗಾವುಂಡನು ಮತ್ತು ಪ್ರಸ್ತುತ ಶಾಸನದಲ್ಲಿ ಇರುವ ನಾಕಿಗಾವುಂಡನು ಒಂದೇ ಎಂಬುದು ಸ್ಪಷ್ಟವಾಗುತ್ತದೆ. ಆದ್ದರಿಂದ ಇದು ಕಲ್ಯಾಣದ ಚಾಲುಕ್ಯರ ಕಾಲಕ್ಕೆ ಸಂಬಂಧಿಸಿದ್ದಾಗಿದೆ. ನಾಕಿಗಾವುಂಡನು ಆರನೆಯ ವಿಕ್ರಮಾದಿತ್ಯನ ಅಧಿಕಾರಿಯಾಗಿದ್ದನು ಎಂಬ ಅಂಶಗಳು ಈ ಶಾಸನದ ಮೂಲಕ ಸ್ಪಷ್ಟವಾಗುತ್ತದೆ.



[ಈ ಶಾಸನ ಶೋಧನೆಗೆ ಸಹಕರಿಸಿದ ಕೆ. ಶರತ್‌ಬಾಬು, ಎಸ್.ಎಚ್. ಬೆಳವಟಗಿ ಮತ್ತು ಈ ಶಾಸನದ ಪ್ರತಿಯನ್ನು ಓದಿದ ಡಾ. ಕಲವೀರ ಮನ್ವಾಚಾರ್ ಹಾಗೂ ಸಹಕರಿಸಿದ ಗ್ರಾಮಸ್ಥರಿಗೂ ಕೃತಜ್ಞತೆಗಳು.]

ಆಧಾರಸೂಚಿ

೧. ಕಲಬುರ್ಗಿ ಎಂ.ಎಂ. (ಸಂ), **ಧಾರವಾಡ ಜಿಲ್ಲೆಯ ಶಾಸನಸೂಚಿ.**
೨. **ಇತಿಹಾಸ ದರ್ಶನ**, ಸಂಪುಟ ೬, (೧೯೯೧).
೩. SII, ಸಂಪುಟ-೧೧, ಭಾಗ-೨, ಸಂ. ೧೫೨.

* ಸಂಶೋಧನಾ ವಿದ್ಯಾರ್ಥಿ, ಪ್ರಾಚೀನ ಇತಿಹಾಸ ಪುರಾತತ್ತ್ವ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ-೫೮೩೨೭೬.

೧೭

ಸಂಗಣ್ಣರಸನ ನಂದಳಿಕೆಯ ಶಾಸನ

ಡಾ. ಅರುಣಕುಮಾರ್ ಎಸ್.ಆರ್.*

ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕಿನ ಕುದುರೆಮುಖ-ಪಡುಬಿದ್ರಿ ರಾಜ್ಯ ಹೆದ್ದಾರಿಯ ಬದಿಯಲ್ಲಿ, ಬೆಳ್ಮಣ್ಣಿನ ಪಕ್ಕದಲ್ಲಿರುವ ಊರು ನಂದಳಿಕೆ. ನಂದನೆಂಬವನ ಆಳ್ವಿಕೆಗೆ ಒಳಪಟ್ಟ ಪ್ರದೇಶವೇ ನಂದ-ಆಳಿಕೆ. ಇದೇ ನಂದಳಿಕೆ ಯಾಯಿತು. The Original form of name is nanda-alike. Which means the territory of nanda. This was the Seat of a small cheftaincy called the Heggade of Nandalike[೧] ಎಂದು ಗುರುರಾಜಭಟ್ಟರು ವಿವರಿಸುತ್ತಾರೆ. ನಂದಳಿಕೆ ಎಂದರೆ ನಂದ+ಅಳಿಕೆ, ಅರ್ಥಾತ್ ನಂದನು ಆಳಿಕೊಂಡು ಬಂದ ಭೂಪ್ರದೇಶವೆಂದು ತಿಳಿದುಬರುತ್ತದೆ. ಈ ಬಗ್ಗೆ ತೃಪ್ತಿಕರ ಖಚಿತ ದಾಖಲೆ ಸಿಗುವುದಿಲ್ಲ. ಕ್ರಿ.ಶ. ೧೬ನೇ ಶತಮಾನದ ದಾಖಲೆಗಳಲ್ಲಿ ಕೃಷ್ಣಾನಂದ ಹೆಗ್ಗಡೆಯ ಉಲ್ಲೇಖ ದೊರಕುತ್ತದೆ. ಈತನು ನಂದಳಿಕೆಯ ಒಡೆಯ ನಾಗಿದ್ದಂತೆ ತಿಳಿದು ಬರುತ್ತದೆ. ಪರಂಪರೆಯಲ್ಲಿ ಕೃಷ್ಣಾನಂದ ಎಂಬೀ ಅಂಕಿತನಾಮ ಅನುಕ್ರಮವಾಗಿ ಬಂದಿರಲೂಬಹುದು. ಈ ಹೆಸರಿನ ಚಿಕ್ಕ ರೂಪವು 'ನಂದ' ಎಂದಾಗಿ ಆ ಹೆಸರಿನಿಂದ 'ನಂದಳಿಕೆ' ಎಂಬೀ ಅಭಿಧಾನವು ಬಳಕೆಗೆ ಬಂದಿರಬಹುದು. ಕ್ರಿ.ಶ. ೧೫೨೮ ಹಾಗೂ ೧೫೪೩ ಕಾಲಘಟ್ಟಕ್ಕೆ ಸಂಬಂಧಿಸಿದ ನಾಲ್ಕು ತಾಮ್ರಪಟಗಳಲ್ಲಿ ಕೃಷ್ಣಾನಂದ ಒಡೆಯರ ಹಾಗೂ ನಂದಳಿಕೆ ದೈವಗಳ ವಿಚಾರ ಉಲ್ಲೇಖವಾಗಿರುವುದನ್ನು ಡಾ. ಗುರುರಾಜ ಭಟ್ಟರು ಗುರುತಿಸಿದ್ದಾರೆ.[೨]



೧೫೦೭ರ ಉದ್ಯಾವರ ಶಾಸನದಲ್ಲಿ 'ಬಲಿಪೂಜೆ ಕೊಂಬ' ನಂದಳಿಕೆ ದೈವಗಳಿಗೆ ನಾಗಣಬಂನ ಎಂಬಾತನು ಮಾಡಿದ ಧರ್ಮದ ವಿಚಾರವೂ ತಿಳಿದುಬರುತ್ತದೆ. ಈ ಶಾಸನಕ್ಕಿಂತ ಕನಿಷ್ಠತಮ ಒಂದು ಶತಮಾನಕ್ಕೆ ಮೊದಲಾದರೂ ನಂದಳಿಕೆಯ ರಾಜ್ಯವು ಅಸ್ತಿತ್ವದಲ್ಲಿರಬೇಕೆಂದು ಊಹಿಸಿದರೆ ಸುಮಾರು ಕ್ರಿ.ಶ. ೧೪ನೇ ಶತಮಾನದ ಅಂತ್ಯಪಾದದಿಂದ ನಂದಳಿಕೆಯು ಒಂದು ತುಂಡು ರಾಜ್ಯವಾಗಿ ತನ್ನ ಕಾರ್ಯಕಲಾಪಗಳನ್ನು ನಡೆಸುತ್ತಿದ್ದಿರಬೇಕೆಂದು ಡಾ. ಗುರುರಾಜ ಭಟ್ಟರು ಅಭಿಪ್ರಾಯಪಡುತ್ತಾರೆ.[೩] ನಂದಳಿಕೆ ಅವಿಭಜಿತ ದ.ಕ. ಜಿಲ್ಲೆಯ ಪ್ರಮುಖವಾದ ಆದಿ ಸಿರಿಆಲಡೆಗಳಲ್ಲಿ ಒಂದು. ನಾಲ್ಕು ಸ್ಥಾನ ನಂದಳಿಕೆ ಎಂದು ಹೆಸರು ಪಡೆದ ಈ ಆಲಡೆ ತುಳು ಸಿರಿಪಾಡ್ದನದ ಕತೆಯಲ್ಲಿ ಬರುವ ಸಿರಿಯ ಮೊಮ್ಮಕ್ಕಳಾದ ಅಬ್ಬಗ-ದಾರಗರು ನೆಲೆಯಾದ ಕ್ಷೇತ್ರ. ನಂದಳಿಕೆಯಲ್ಲಿ ಅವರ ಹುಟ್ಟು ಎಂಬುದು ಅವರ ಕುರಿತಾಗಿ ತುಳುವಿನಲ್ಲಿರುವ ಪ್ರಸಿದ್ಧವಾದ ಮಾತು. ಬ್ರಹ್ಮದೇವರ ಗಣಗಳಾಗಿದ್ದು, ಗುರುಮಾರ್ಲ ಮತ್ತು ಸೊನ್ನೆ ದಂಪತಿಗಳು ಬೆರ್ಮರಿಗೆ ಸಲ್ಲಿಸಬೇಕಾದ ಹರಿಕೆಯನ್ನು ತೀರಿಸದಿರುವುದಕ್ಕಾಗಿ, ಉರ್ಕಿತೊಟ್ಟಿಗೆ ಬ್ರಾಹ್ಮಣರೂಪದಲ್ಲಿ ಬಂದ

* ಮುಖ್ಯಸ್ಥ. ಕನ್ನಡ ವಿಭಾಗ. ಶ್ರೀ ಭುವನೇಂದ್ರ ಕಾಲೇಜು. ಕಾರ್ಕಳ-೫೭೪೧೦೪

ಬೆರ್ಮರು ಅವರ ಅವಳಿಮಕ್ಕಳಾದ ಅಬ್ಬಗ-ದಾರಗರಲ್ಲಿ ಚೆನ್ನೆಮಣೆ ಆಡಿಸಿದಾಗ, ಅವಳಿಗಳು ಪರಸ್ಪರ ಹೊಡೆದಾಡಿಕೊಂಡು ಸತ್ತನಂತರ, ಮುಂದಿನ ಏಳು ದಿನದಲ್ಲಿ ಮುಜಲೊಟ್ಟು ಬೆರ್ಮರ ಆದೇಶದಂತೆ ಬೋಳದರಸರ ಮಡದಿಯರನ್ನು ಮಾಯಕಮಾಡಿ, ಅವರಿಗಿಟ್ಟ ಕಲಶವನ್ನು ಮಿಂದು, ಶಕ್ತಿದೈವಗಳಾಗಿ, ಕುಮಾರನೊಂದಿಗೆ ನಂದಳಿಕೆಯಲ್ಲಿ ನೆಲೆಯಾಗಿ, ನಂದಳಿಕೆಯನ್ನು ಆಳುತ್ತಿದ್ದ ಹೂವಯ್ಯ ಹೆಗ್ಗಡೆ ಮನೆತನಕ್ಕೆ ಹತ್ತಿರವಾದರು. ನಂದಳಿಕೆಯಲ್ಲಿ ಆಗಲೇ 'ನಂದಳಿಕೆಯ ದೈವ'ಗಳೆಂದು ಪ್ರಸಿದ್ಧರಾಗಿದ್ದ ವೀರಭದ್ರ, ನಂದಿಗೋಣ, ಖಡ್ಗೇಶ್ವರಿ, ರಕ್ತೇಶ್ವರಿ, ಭಲೇಶ್ವರ, ಗಜಮಲ್ಲ ಮುಂತಾದ ದೈವಗಳೊಂದಿಗೆ ಪ್ರಮುಖರಾಗುತ್ತಾರೆ. ಒಂದು ಕಾಲದಲ್ಲಿ ಕೇವಲ ದೈವಸಾನ್ನಿಧ್ಯವನ್ನು ಹೊಂದಿ ಆಲಡೆಯಾಗಿದ್ದ ಈ ಕ್ಷೇತ್ರಕ್ಕೆ, ಹದಿನಾರನೇ ಶತಮಾನದಲ್ಲಿ ಉಡುಪಿಯ ಸೋದೆಮಠದ ಶ್ರೀ ವಾದಿರಾಜರು ಬಂದು ಶ್ರೀ ಮಹಾಲಿಂಗೇಶ್ವರನ ಪ್ರತಿಷ್ಠೆಗೆ ಸೂಚನೆ ನೀಡಿದಾಗ ಇದೇ ಅಬ್ಬಗ-ದಾರಗರು ಆಡಳಿತಗಾರರಾಗಿದ್ದ ಹೆಗ್ಗಡೆ ಯವರಿಗೆ ಕನಸಿನಲ್ಲಿ ಕಂಡುಬಂದಂತೆ ಹತ್ತಿರದ ಪಿಲಾರಕಾನ ದಿಂದ ಪಂಚಲೋಹದ ಶ್ರೀ ಮಹಾಲಿಂಗೇಶ್ವರ ದೇವರನ್ನು ತಂದರು ಎಂಬ ಪ್ರತೀತಿ ಇದೆ. ಕೊಡ್ಸರಬಟ್ಟಿನ ಗುಣಪಾಲರು ಕಟ್ಟಿಸಿದ ಜಿನಮಂದಿರದಲ್ಲಿ ಪಿಲಾರಕಾನದಿಂದ ತಂದ ಪಂಚಲೋಹದಮೂರ್ತಿ ಶಿವನೊಂದಿಗೆ, ಬ್ರಹ್ಮ, ಗಣಪತಿ, ಯಂತ್ರದೇವತೆಯನ್ನು ಪ್ರತಿಷ್ಠಾಪನೆ ಮಾಡಲಾಯಿತು. ದೇವಳದ ಹೊರಸುತ್ತಿನಲ್ಲಿ ಶ್ರೀ ಅಣ್ಣಪ್ಪಸ್ವಾಮಿಯನ್ನು ಪ್ರತಿಷ್ಠಾಪಿಸ ಲಾಯಿತು.

ಜನಮಾನಸದಲ್ಲಿ 'ನಾಲ್ಕು ಸ್ಥಾನ ನಂದಳಿಕೆ' ಎಂದು ಪ್ರಸಿದ್ಧವಾಗಿರುವ ಈ ಕ್ಷೇತ್ರದಲ್ಲಿ ನಾಲ್ಕು ದಿಕ್ಕುಗಳಲ್ಲಿ ನಾಗಬನವಿದೆ. ಇದರಿಂದಾಗಿ ಈ ನಾಲ್ಕು ಸ್ಥಾನ ಎಂಬುದಾಗಿ ಹೆಸರು ಬಂತೋ ಇಲ್ಲವೇ ನಾಲ್ಕು ಪ್ರಮುಖ ಆಲಡೆಗಳಲ್ಲಿ (ಬೆಳ್ಳಿಬೆಟ್ಟು, ಕವತ್ತಾರು, ಹಿರಿಯಡ್ಕ ಉಳಿದ ಆಲಡೆಗಳು) ಇದೂ ಒಂದು ಎಂಬ ಕಾರಣಕ್ಕಾಗಿ ಬಂತೋ ಎಂಬುದು ಇನ್ನೂ ಬಿಡಿಸಲಾಗದ ಒಗಟಾಗಿದೆ. ಮಹಾಲಿಂಗೇಶ್ವರ, ಗಣಪತಿ ಸಾನ್ನಿಧ್ಯ, ಸಿರಿಪರಿವಾರ, ಬ್ರಹ್ಮರು ಮತ್ತು ಯಂತ್ರದೇವತೆ ಈ ನಾಲ್ಕು ಶಕ್ತಿಗಳು ಒಂದೆಡೆ ನೆಲೆ ಪಡೆದಿರುವ ಕಾರಣಕ್ಕಾಗಿ ಈ ಹೆಸರು ಬಂದಿರಬೇಕು ಎಂದು ಜನಪದ ಸಂಶೋಧಕ ಕೆ.ಎಲ್. ಕುಂಡಂತಾಯರು ಅಭಿಪ್ರಾಯ ಪಡುತ್ತಾರೆ.[೪] ಶ್ರೀಮತಿ ಇಂದಿರಾ ಹೆಗ್ಗಡೆಯವರು ಮೂಡಬಿದಿರೆಯ ಚೌಟರಿಗೂ, ಕಾರ್ಕಳ ಪಾಂಡ್ಯಪ್ಪರಸರಿಗೂ ನಡೆದ ಒಪ್ಪಂದವನ್ನು ಉಲ್ಲೇಖಿಸುವ ತಾಮ್ರ ಶಾಸನದಲ್ಲಿ (ಕ್ರಿ.ಶ. ೧೫೪೩) ನಾಲ್ಕು ಸ್ಥಾನದ ಉಲ್ಲೇಖವಿರುವುದನ್ನು ಗಮನಿಸಿದ್ದಾರೆ. ಇದರ ಶಾಪಾಶಯದಲ್ಲಿ 'ಈ ಕಬ್ಬಿಗೆ ತಪ್ಪಿದರೆ ಗುಮಟನಾಥ ನೇಮೀಶ್ವರಗೂ ನಮಗೂ ಸುಲಲಿತಕೀರ್ತಿ ಭಟಾರಕರಿಗೂ ನಂದಳಿಕೆ ನಾಲ್ಕು ಸ್ಥಾನದ ದೈವಗಳಿಗೂ ತಪ್ಪಿದವರು' ಎಂಬ ಉಲ್ಲೇಖವಿದೆ ಎಂಬುದನ್ನು ಗಣಪತಿರಾವ್ ಐಗಳ್ ಗುರುತಿಸಿರುವುದನ್ನು ಉಲ್ಲೇಖಿಸುತ್ತಾರೆ[೫]. ಆ ನಾಲ್ಕು ಸ್ಥಾನಗಳೆಂದರೆ ೧. ನಂದಳಿಕೆ ಮೂಲಸ್ಥಾನ, ೨. ಉರ್ಕಿತೊಟ್ಟು ಮೂಲಸ್ಥಾನ, ೩. ಮುಜಲೊಟ್ಟು ಮೂಲಸ್ಥಾನ, ೪. ಬೆಳ್ಮಣ್ಣು ಮೂಲಸ್ಥಾನ, ನಂದಳಿಕೆಯ ಜಾತ್ರೆ ಮೊದಲು ಮಾರ್ಚ್ ೧೮ನೇ ತಾರೀಕಿನಂದು (ಸುಗ್ಗಿ ತಿಂಗಳ ಸಂಕ್ರಾಂತಿಯ ೪ನೇ ದಿನ) ಬೆಳ್ಮಣ್ಣು ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಜಾತ್ರ ನಡೆಯುತ್ತದೆ. ಅನಂತರ ಮುಜಲೊಟ್ಟು, ಉರ್ಕಿತೊಟ್ಟು, ನಂದಳಿಕೆ ಹಾಗೂ ಕೆದಿಂಜೆಯ ನಾಗಬ್ರಹ್ಮರಿಗೆ ಕ್ರಮವಾಗಿ ಜಾತ್ರೆ ನಡೆಯುತ್ತದೆ. ಈ ಹಿನ್ನೆಲೆಯಲ್ಲಿ ಇಂದಿರಾ ಹೆಗ್ಗಡೆಯವರು ನಾಲ್ಕು ಸ್ಥಾನವೆಂಬುದನ್ನು ನಂದಳಿಕೆಯನ್ನೊಳಗೊಂಡು ಅದಕ್ಕೆ ಸಂಬಂಧಪಟ್ಟ ಉಳಿದ ಸ್ಥಳಗಳೆನ್ನುತ್ತಾರೆ.[೬]

ನಂದಳಿಕೆಯ ಕ್ಷೇತ್ರದ ಕುರಿತಾಗಿ ಖ್ಯಾತ ಇತಿಹಾಸ ಸಂಶೋಧಕ ಡಾ. ಗುರುರಾಜ ಭಟ್ಟರು ಸಾಕಷ್ಟು ಅಧ್ಯಯನ ನಡೆಸಿದ್ದಾರೆ. ೧೯೭೦ರ ಉದಯವಾಣಿ ದಿನಪತ್ರಿಕೆಯಲ್ಲಿ ನಂದಳಿಕೆಯ ಬಗ್ಗೆ ದೊರಕಿದ ಶಾಸನಗಳ ಕುರಿತಾಗಿ 'ಮಧ್ಯಕಾಲೀನ ರಾಜಕೀಯ ಒಪ್ಪಂದ' ಎಂಬ ಶೀರ್ಷಿಕೆ ಯಡಿಯಲ್ಲಿ ಕ್ರಿ.ಶ. ೧೫೪೩ರ ಎರಡು ಶಾಸನಗಳನ್ನು ಚರ್ಚಿಸಿದ್ದಾರೆ. ಕಾರ್ಕಳದ ಪಾಂಡ್ಯಪ್ಪರಸರು ಪುತ್ತಿಗೆಯ ತಿರುಮಲರಸರಿಗೂ, ತಿರುಮಲರಸರು ಪಾಂಡ್ಯಪ್ಪರಸರಿಗೂ ಬರೆದುಕೊಟ್ಟ ಒಪ್ಪಂದದ ಶಾಸನಗಳಿವು. ಇವುಗಳಲ್ಲಿ ಉಲ್ಲೇಖಿತವಾದ ಅಂಶವೆಂದರೆ ತಿರುಮಲರಸರೂ, ಪಾಂಡ್ಯಪ್ಪರಸರೂ ಪರಸ್ಪರ ಸೌಹಾರ್ದದಿಂದಿರುವುದಲ್ಲದೆ ಅವರಿಗೆ ವೈಮನಸ್ಸು ತಂದೊಡ್ಡುವ ಯಾರಿಗೂ ಆಶ್ರಯವೀಯಬಾರದು; ಅನ್ಯಶತ್ರುಗಳು ಬಂದರೆ ಪರಸ್ಪರರು ಸಹಕರಿಸಿ ಅವರನ್ನು ಹೊಡೆದೋಡಿಸಬೇಕೆಂದು; ಅಪಮರ್ಯಾದೆಯನ್ನು ಮಾಡಬಾರದೆಂದು; ಇದಕ್ಕೆ ತಪ್ಪಿದರೆ ಪುತ್ತಿಗೆಯ ಸೋಮನಾಥ ದೇವರಿಗೂ. ನಂದಳಿಕೆಯ ನಾಲ್ಕು ಸ್ಥಾನದ ದೈವಗಳಿಗೂ, ಕಾರ್ಕಳದ ಗೋಮಟೇಶ್ವರನಿಗೂ, ಭೈರವಸರ ಗುರುಗಳಾದ ಶ್ರೀ ಲಲಿತಕೀರ್ತಿಭಟ್ಟಾರಕರಿಗೂ, ದ್ರೋಹವನ್ನು ಬಗೆದ ಪಾಪವುಂಟಾಗುವುದೆಂದು ಶಾಸನದ ಕೊನೆಗೆ ಶಾಪಾಶಯದ ಒಕ್ಕಣೆಯಲ್ಲಿ ತಿಳಿಸಲಾಗಿದೆ. 'ನಂದಳಿಕೆಯ ದೈವಗಳು' ಎಂದರೆ ಅಬ್ಬಗ-ದಾರಗರು ಎಂಬುದಾಗಿ ನಂದಳಿಕೆಯ ಹಾಗೂ ಉದ್ಯಾವರ ಶಾಸನ ಗಳನ್ನು ಅಧ್ಯಯನ ಮಾಡಿದ ಡಾ. ಪಿ. ಗುರುರಾಜ ಭಟ್ಟರು

ತರ್ಥೈಸಿಕೊಂಡು ವಿವರಿಸಿದ್ದಾರೆ.[೭] ಸಿರಿ ಮತ್ತು ಕುಮಾರರಿಗೆ ಬೆಳ್ಳಿಬೆಟ್ಟು (ಬೊಳ್ಳಿಬೊಟ್ಟು) ಪ್ರಮುಖವಾದರೆ (ಕಥೆಯ ವಿವಕ್ಷೆಯಲ್ಲಿ) ಅಬ್ಬಗ-ದಾರರಿಗೆ ಈ ಆಲಡೆಯೇ ಪ್ರಮುಖವಾಗುತ್ತದೆ. ಅಬ್ಬಗ-ದಾರಗರು ಮೊತ್ತಮೊದಲಿಗೆ ಸಾನ್ನಿಧ್ಯ ವಹಿಸಿದ ಆಲಡೆ ಇದಾದರೂ, 'ನಂದಳಿಕೆಯ ದೈವಂಗಳು' ಎಂಬುದಾಗಿ ಅವರನ್ನೇ ಕರೆದಿರಬಹುದೇ ಎಂಬುದು ಜಿಜ್ಞಾಸೆಯ ವಿಷಯವಾಗಿದೆ. ಅಬ್ಬಗ-ದಾರಗರು ಎಂದೂ 'ದೈವಗಳು' ಎಂಬುದಾಗಿ ಜನಮಾನಸದಲ್ಲಿ ಬಿಂಬಿತವಾಗಿಲ್ಲ. ಹಾಗಾಗಿ ಆ ದೈವಗಳು ಖಂಡಿತವಾಗಿಯೂ ಇವರೇ ಆಗಿರಬೇಕಾಗಿಲ್ಲ. ನಂದಳಿಕೆಯು ಬಹಳ ಹಿಂದಿನಿಂದಲೇ ಬೇರೆ ಬೇರೆ ದೈವಗಳ ಆವಾಸಸ್ಥಾನವಾದುದರಿಂದ ಆ ಕ್ಷೇತ್ರ ದೈವಸ್ಥಾನವಾಗಿಯೇ ಪ್ರಸಿದ್ಧಿಯನ್ನು ಪಡೆದಿರಬೇಕು. ಈ ಮಾತನ್ನು ಪುಷ್ಟೀಕರಿಸುವಂತೆ ಡಾ. ಗುರುರಾಜ ಭಟ್ಟರು ತಮ್ಮ ಲೇಖನದಲ್ಲಿ 'ನಂದಳಿಕೆಯ ದೈವಗಳು (ಎಂದರೆ ಅಬ್ಬಕ್ಕ-ದಾರಕ್ಕ ಸಿರಿಗು ಮುಖ್ಯವಾಗಿ ಇನ್ನಿತರ ದೈವಗಳು) ೧೬ನೇ ಶತಮಾನದಲ್ಲಿ ಸಾಕಷ್ಟು ಕೀರ್ತಿ, ಪ್ರಭಾವಿತವಾಗಿದ್ದುವೆಂದು' ಅಭಿಪ್ರಾಯಪಡುತ್ತಾರೆ. ಮಾತ್ರವಲ್ಲ ಈ ಕಾಲದಲ್ಲಿ ನಂದಳಿಕೆಯ ಚಾವಡಿಯು ರಾಜಕೀಯದಲ್ಲಿ ಸಾಕಷ್ಟು ಪ್ರಭಾವಶಾಲಿಯೂ ಎನ್ನುತ್ತಾರೆ.[೮], ನಂದಳಿಕೆಯ ಕುರಿತಾಗಿ ಉಲ್ಲೇಖವಿರುವ ಇನ್ನೊಂದು ಶಾಸನವನ್ನು ಪತ್ತೆ ಹಚ್ಚಿದ್ದು ಅದರ ಕಾಲ ಕ್ರಿ.ಶ. ೧೩೮೭. ಈ ಶಾಸನ ನಂದಳಿಕೆ ಮತ್ತು ಉರ್ಕಿತೊಟ್ಟಿನ ಸಮೀಪದಿಂದ ಕೆದಿಂಜೆ ಪರಾರಿಯ ಜಾರುಮಾರ್ಲರ ಮನೆಯ ಹಿಂಬದಿಯ ಗದ್ದೆಯಲ್ಲಿದ್ದು, ಇದೊಂದು ಅಪ್ರಕಟಿತ ಶಾಸನ. ಈ ಶಾಸನವನ್ನು ಈ ಮೊದಲೇ ಖ್ಯಾತ ಇತಿಹಾಸ ಸಂಶೋಧಕ ಡಾ. ಪಿ.ಎನ್. ನರಸಿಂಹಮೂರ್ತಿಯವರು ಓದಿದ್ದರೂ, ಇದುವರೆಗೂ ಪ್ರಕಟಗೊಂಡಿಲ್ಲ. ಸದರಿ ಲೇಖಕ ಸಂಶೋಧಕರಾದ ಡಾ. ಎಸ್.ಆರ್. ವಿಘ್ನರಾಜ, ಇತಿಹಾಸತಜ್ಞ ಡಾ. ಉಮಾನಾಥ ಶೆಣೈಯವರ ಸಹಾಯದಿಂದ ಇದನ್ನು ಓದಿದಾಗ ಇದು 'ಸಂಗಣ್ಣರಸನ ನಂದಳಿಕೆಯ ಶಾಸನ'ವೆಂದು ಗುರುತಿಸಲಾಗಿದ್ದು ಇದರಲ್ಲಿ ವಿಜಯನಗರ ಸಾಮ್ರಾಜ್ಯವನ್ನು ಇಮ್ಮಡಿ ಹರಿಹರನು (ಕ್ರಿ.ಶ. ೧೩೭೭-೧೪೦೪) ಆಳುತ್ತಿದ್ದಾಗ ಬಾರಕೂರನ್ನು ಆ ಚಕ್ರವರ್ತಿಯಿಂದ ನೇರವಾಗಿ ನೇಮಕಾತಿ ಹೊಂದಿದ್ದ ಮಹಾಪ್ರಧಾನ ಮೂರನೇ ಮಲ್ಲಪ್ಪ ಒಡೆಯರು ಆಳ್ವಿಕೆ ನಡೆಸುತ್ತಿದ್ದ ಸಮಯದಲ್ಲಿ ಕಾರ್ಕಳದ ಬ್ರಹ್ಮೇಶ್ವರ ದೇವರ ಕೆಲವು ಧಾರ್ಮಿಕ ವಿಧಿ-ವಿಧಾನಗಳಿಗಾಗಿ ಸ್ಥಳೀಯ ಆಡಳಿತಗಾರ ಸಂಗಣ್ಣ ಜಯ ಅರಸ ಎಂಬುವನು ನಂದಳಿಕೆಯ ಊರಿನ ಏಳು ವಿಭಿನ್ನ ಸಮಾಜದವರಿಗೆ ಸೇರಿದ ಭೂಮಿಯನ್ನು ದಾನಕೊಟ್ಟ ವಿವರಗಳಿವೆ. ಸಂಗಣ್ಣ ಜಯ ಅರಸ ಶೈವಸಂಪ್ರದಾಯದ ವ್ಯಕ್ತಿಯಾಗಿದ್ದು, ಬ್ರಹ್ಮನಿಗೆ ಸಂಬಂಧಿಸಿದ ಭೂಮಿಗಳನ್ನು ಧಾರ್ಮಿಕ ವಿಧಾನಕ್ಕೆ ಕೊಟ್ಟಿರುವುದನ್ನು ಸ್ಪಷ್ಟಪಡಿಸುವುದಲ್ಲದೆ, ಆ ಧಾರ್ಮಿಕ ಕಾರ್ಯಕ್ರಮಗಳನ್ನು ವರ್ಷಂಪ್ರತಿ ಶ್ರಾವಣಮಾಸದಲ್ಲಿ ನಡೆಸಬೇಕೆಂದು ನಿರ್ದೇಶಿಸುತ್ತದೆ. ಒಂದು ವೇಳೆ ಅದನ್ನು ನಡೆಸದಿದ್ದರೆ ಅರಸನಿಗೆ (ಪ್ರಾಯಶಃ ಕಾರ್ಕಳದ ಜೈನ ಅರಸರಿಗೆ) ೫೦೦ ಗದ್ಯಾಣವನ್ನು ತಪ್ಪುದಂಡವಾಗಿಯೂ, ಬ್ರಹ್ಮದೇವರಿಗೆ ೨೫೦ ಗದ್ಯಾಣವನ್ನು ತಪ್ಪುದಂಡಗವಾಗಿ ಕೊಡಬೇಕು. ಈ ವ್ಯವಸ್ಥೆಯನ್ನು ನಿರ್ವಹಿಸುವ ಜವಾಬ್ದಾರಿ ಕೋಟೇಶ್ವರ ಎಂಬ ಸ್ಥಳದ ಮೇಲಾಧಿಕಾರಿಗಳಿಗೆ ಸೇರಿದ್ದು, ಒಂದು ವೇಳೆ ಅವರು ತಪ್ಪಿದರೆ ಅಷ್ಟೇ ಮೊತ್ತದ ದ್ರವ್ಯ (ಹಣ)ವನ್ನು ಅರಸರಿಗೆ ಕೊಡಬೇಕು. ಈ ವ್ಯವಸ್ಥೆಯನ್ನು ನಡೆಸದಿದ್ದರೆ ಅವರು ವಾರಣಾಸಿಯಲ್ಲಿ 'ಕನ್ನರತಿ' ಕಪಿಲೆಗಳ ಕೊಂದ ದೋಷಕ್ಕೆ ಸಂಗಣ್ಣರಸರ ಸಹಿತವಾಗಿ ಹೋಗುವರು.

ಈ ಶಾಸನವನ್ನು ಬರೆದಾತ ಸಂಗಣ್ಣ ಜಯ ಅರಸನ ಭಾವನಾದ ವಿಟ್ಟಂಣ ಎಂಬವನು. ಎಲ್ಲಾ ಶಾಸನಗಳಲ್ಲಿರುವಂತೆ ಇಲ್ಲಿಯೂ ದಾನದ ಶಾಪಾಶಯವನ್ನು ನೀಡಲಾಗಿದೆ.

ಈ ಶಾಸನದ ಪ್ರಕಾರ ನಂದಳಿಕೆ ಎಂಬ ಊರು ಕ್ರಿ.ಶ. ೧೩೮೭ರ ಮೊದಲೇ ಕಾರ್ಕಳ ತಾಲ್ಲೂಕಿನಲ್ಲಿ ಪ್ರಚಲಿತವಾಗಿತ್ತು. ಆದರೆ ಆ ಕಾಲಘಟ್ಟದಲ್ಲಿ ನಂದಳಿಕೆಯಲ್ಲಿ ದೈವಗಳ ಸಾನ್ನಿಧ್ಯವಿರಲಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಕ್ರಿ.ಶ. ೧೪೦೦ರ ಅನಂತರವೇ ನಂದಳಿಕೆಯಲ್ಲಿ ದೈವಗಳು ಸ್ಥಾಪನೆಗೊಂಡು ಆಲಡೆಯೆನಿಸಿರಬೇಕು. ಅನಂತರ ಸಿಗುವ ನಂದಳಿಕೆಯ ಕುರಿತಾದ ಎಲ್ಲಾ ಶಾಸನಗಳಲ್ಲಿ ನಂದಳಿಕೆಯ ದೈವಗಳ ಉಲ್ಲೇಖವಿದೆ. ಆದ್ದರಿಂದ ಆಲಡೆಗಳು ರೂಪುಗೊಂಡಿರುವುದು ಸುಮಾರು ೧೪ನೇ ಶತಮಾನದಿಂದೀಚೆಗೆ ಎಂಬುದು ಸ್ಪಷ್ಟವಾಗುತ್ತದೆ. ಲಂಕೆಲೋಕನಾಡು, ಬೆಳ್ಳಿಬೆಟ್ಟು ಆಲಡೆಗಳು ಮೊದಲೇ ಇದ್ದುದರ ಬಗಗೆ ಮೌಕಿಕ ಮಾಹಿತಿ ಇದ್ದರೂ, ತುಳುವರ ಆಲಡೆಗಳ ಕುರಿತು ನಿಖರವಾದ ಶಾಸನಾತ್ಮಕ ಉಲ್ಲೇಖಗಳು ಸಿಗುವುದಿಲ್ಲ. ಮೌಕಿಕ ಆಧಾರದಲ್ಲೂ ಕೂಡ ನಂದಳಿಕೆಯೇ ಅವಳಿ ದೈವಗಳಾದ ಅಬ್ಬಗ-ದಾರಗರ ಮೊದಲ ಆಲಡೆ. ಆನಂತರವೇ ಈ ಅವಳಿ ದೈವಗಳನ್ನು ನಂಬುವ ಇತರ ಆಲಡೆಗಳ ಸ್ಥಾಪನೆಯಾಗಿರಬೇಕು. ಆಲಡೆಗಳ ಪ್ರಸರಣ ದೃಷ್ಟಿಯಿಂದ ನಂದಳಿಕೆ ಎಲ್ಲದಕ್ಕೂ ಮೂಲ. ಇಂದು ಎಲ್ಲಾ ಆಲಡೆಗಳಲ್ಲಿ ಅಬ್ಬಗ-ದಾರಗರನ್ನು ನಂಬುತ್ತಾರೆಯೆ ವಿನಹ ಸಿರಿಯನ್ನಲ್ಲ. ೧೪ನೇ ಶತಮಾನದ ನಂತರವೇ ಆಲಡೆಗಳಲ್ಲಿ ಸಿರಿಗಳನ್ನು ನಂಬುವ ಪದ್ಧತಿ ಬಂದಿರಬಹುದು. ನಂದಳಿಕೆಯ ಇತಿಹಾಸದಲ್ಲಿ

ದೈವಾರಾಧನೆಯ ಆರಂಭದ ಕುರಿತಾಗಿ ಮಾಹಿತಿಗಳಿಲ್ಲದಿರುವ ಶಾಸನ ಇದಾಗಿದ್ದು, ಈ ಕಾಲಘಟ್ಟದ ನಂತರವೇ ಅಲ್ಲಿ ದೈವಗಳ ಸಮುಚ್ಚಯ ಬಂದಿರಬೇಕೆಂಬುದರಲ್ಲಿ ಎರಡು ಮಾತಿಲ್ಲ.

ಸಂಗಣ್ಣರಸನ ನಂದಳಿಕೆಯ ಪ್ರಾಚೀನ ಶಾಸನ–೧೩೭೯

ಶಾಸನದ ಸ್ಥಳ : ಕಾರ್ಕಳ ತಾಲ್ಲೂಕಿನ ನಂದಳಿಕೆಯ ಬಳಿಯಿರುವ ಉರ್ಕಿತೊಟ್ಟಿನ ಅಬ್ಬಗದಾರಗ ಕ್ಷೇತ್ರದ ಎದುರು ಭಾಗದ ಬಯಲು ಗದ್ದೆಯ ಮೇಲ್ಭಾಗದ ಬೆಟ್ಟುಗದ್ದೆಯಲ್ಲಿರುವ ಶಾಸನ.

ಶಾಸನದ ಕಾಲ : ೧೩೭೯ ಅಕ್ಷರ : ಕನ್ನಡ

ಶಾಸನದ ಎತ್ತರ : ೩.೫" ಅಗಲ : ಕೆಳಗೆ ೧.೨೫" ಮೇಲೆ ೧.೫೦"

ಶಾಸನದ ತುದಿಯಲ್ಲಿರುವ ಚಿತ್ರಗಳ ವಿವರ – ಮಧ್ಯ ಶಿವಲಿಂಗ, ಅದರ ಮೇಲ್ಭಾಗದಲ್ಲಿ ಸೂರ್ಯಚಂದ್ರ, ಎಡಭಾಗದಲ್ಲಿ ದೈವದ ಕತ್ತಿ ಮತ್ತು ದೀಪ, ಬಲಭಾಗದಲ್ಲಿ ಸುಂದರವಾದ ದನ ಕರುವಿನ ಚಿತ್ರವಿದೆ.

ಶಾಸನದ ಆರಂಭ

೧ ಶ್ರೀ ನಮಸ್ತುಂಗ ಶಿರಸ್ತುಂಭ ಚಂದ್ರ ಚಾಮರಚಾರವೇ ತ್ರೈಲೋಕ್ಯ ನಗರಾ
೨ ರಂಭಯ ಮೂಲಸ್ತಂಭಾಯ ಸಂಭವೇ ॥ ಸ್ವಸ್ತಿ ಶ್ರೀ ಶಖ ವರ್ಷ ೧೦೩೯ ನೆಯ
೩ ಪ್ರಭವ ಸಂವತ್ಸರದ ಆಶ್ವೀಜಬಹುಳ ೩. ಆದಿ ಶ್ರೀಮತ್ ಅರಿರಾಯ ವಿಬಾಡ
೪ ಬರ ಗೆ ತಪ್ಪುವ ರಾಯರಗಂಡ ಪೂರ್ವ ದಕ್ಷಿಣ ಪಶ್ಚಿಮ ಸಮುದ್ರಾ
೫ ದಿಶ್ವರಂ ಶ್ರೀ ವೀರ ಹರೆಯಪ್ಪ ವೊಡೆಯರು ಸಾಂಬ್ರಾಜ್ಯ ಸ್ತಾ
೬ ಯಿಗಳಾಗಿದ್ದಲ್ಲಿ ಆಹರಿಯಪ್ಪಲ್ಯ ಡೆಯರ ನಿರೂಪದಿಂ
೭ ಶ್ರೀ ಮಂನ್ಮಾಹಾ ಪ್ರದಾನಂ ಮಲ್ಲಪ್ಪೊಡೆಯರು ಬಾರಕೂರ ರಾ
೮ ಜವ್ಯನಾಳಲ್ಲು ಆ ಮಲ್ಲಪ್ಪ ಒಡೆಯರು ದತ್ತಾ(ಳ್ವ)ರ ಬಳಿಯ ರಾ
೯ ಜ್ಯವನು ಸಂಗಣ ಜಯರ್ಸರಿಂಗೆ ಕೊಟ್ಟಲ್ಲಿ ಆ ಸಂಗಣ ಜಯ
೧೦ ರ್ಸರು ನಂದಳಿಕೆಯ ಊರು ಏಳು ಬಳಿ ಎಂದು ಪ್ರಜೆ ಜನಿನಿಗ
೧೧ ಳು ಕಾರಕಳದ ಆರೂರು ನಖರ ಮ ಮಂತಾಗಿ ಕೋಟೆಶ್ವರನಾಳ್ವರು
೧೨ ಸಾಲೆತ್ತಿ ಬಳಿದಾ ಸಿದ್ವಾಯ ನೆಲವಳಿಯ ಜನನದ ಇಷ್ಟಿಕ್ಕಿದರು.
೧೩ ಆ ನಂದಳಿಕೆಯ ಏಳು ಬಳಿ ಎಂದು ಪ್ರಜೆ ಜನನಿಗಳು ಕೋಟೇಶ್ವರಾ
೧೪ ಶ್ವರೆಗು ಕಡಂಬಾಳ್ವರೆಗ ಮ ನಂದಳಿಕೆಯಲ್ಲಿ ಸಿದ ಕಿನ್ನಿಮಾಜಿ
೧೫ ಬೆಟ್ಟು ಕೊಟೆಶ್ವರಾಳ್ವರ ಬ್ರಂಹ್ಮದಾಯಕ ಮ್‌ಡುಕ ಎಂಬ
೧೬ ಭದು ಕಡಂಬಾಳ್ವರ ಬ್ರಹ್ಮದಾಯಿಯ ವಕ್ಕಲು ಎಂತ ಬ
೧೭ ಯಲು ಆಲೂರವ ಪ್ರಜೆ ಜನನಿಗಳೂ ಆ ಬಾಳಿಂಗೆ ಎಳು ಸಿದ್ದಾ
೧೮ ದಾಯ ಎಲ್ಲ ವ್ಯಸಗೆ ದುಕ್ಕದಿಲ್ಲಾ ನಟು ಬೆಡುದಿಲ್ಲಾ ಅನಾಯವಿಲ್ಲಾ ಹೊ
೧೯ ರ ದೊನ ವರೆಗೆ ಯಿಕ್ಕುವ ವಿಲ್ಲಯಿ ಬಾಳಿಂಗೆ ಸೆಲ್ಪ ಮಾ
೨೦ ನ್ಯ ಅಂಣ ತಂಮಂದಿರು ಬಾಸಿರವಲ್ಲಿ (ಬಾಳುವಲ್ಲಿ) ಸಂಗಣ ಜಯ ಅರ್ಸರು ಮಾ
೨೧ ಡಿಸಿದ ದರ್ಮ ಕಾರಕಳದ ಬ್ರಂಹೇಸ್ವರ ದೇವರಿಗೆ ಶ್ರಾವಣ
೨೨ ಮಾಸದಲು ಪುರಾಣದೊಳು(ದು)ವ ಬ್ರಾಂಹಣರಿಗೆ ಯಿ
೨೩ ಬ್ಬರ ಬಾಳಿಂದಲೂ ಗಂಡುಗದ (ಕ) ಲು ಆರುಳೊಡುಕವ(ತ್ತವ) ಕೊ (ಕಾ)ಡುವ

೨೪ ರು ವರುಷ ಪ್ರತಿಯುಲು ನಡೆಸುವ ಬಾರೂರುಯ ಅಡಕಕ್ಕೆ ನಾಡುತ
೨೫ ಪ್ಪಿ ದಡೆ ಅರಸಿಂಗೆ ಗ೫೦೦ ತೆರುವರು ದೇವರಿಂಗೆ ಗ೨೫೦ತೆರುವರು ಆ ಕೋಟೀ
೨೬ ಶ್ವರಾಳ್ವರೂ ತಪ್ಪಿದಡೆ ಅರಸಿಂಗೆ ಗ ೫೦೦ ತೆರುವರು ದೇವರಿಂಗೆ ಗ೨೫೦ ತೆರುವ
೨೭ ರು ತೆತುವಿರ ಅಡಕಕ್ಕೆ ನಿಲುವರು ಯಿ ಅಡಕೆಕ್ಕೆ ಆರೊಬ್ಬರು ತಪ್ಪಿದ
೨೮ ಡೆ ವಾರಣಾಸಿಯಲ್ಲಿ ಕನ್ನರತಿ ಕಪಿಲೆಯ ಕೊಂದಾದೊಸ ಮತಿ(ತೆ)ಯಿ ಅ
೨೯ ಡಕಕ್ಕೆ ನಿಲುವರು ಸಂಗಣ ಜಯ ಅರ್ಸರರಸಿನ ಬಾವ ವಿ
೩೦ ಟ್ಟಂ ಣನ ಬರಹೊ ॥ಸುದತ್ತಾಂ ಪರದತ್ತಾಂ ವಾಯೊ ದೂರೆ
೩೧ ತ್ರ ವಸುಂದರ ಸಷ್ಟ್ಯಾರ್ವರು (ದ್ವರು)ಸಹಸ್ರಾಣಿ ವೃದ್ಧಾಂಯಾಂಜಾ
೩೨ ಯತಿ ಕ್ರಿಮಿ ॥ದಾನ ಪಾಲನಯೊಮ್ಮೆದ್ಯೆ ದಾನಾತ್ಸೆಯೊನು
೩೩ ಪಾಲನಾ ದಾನಾತ್ಸಗ್ಗ ಮನಾತಿ ಪಾಲನಾ ದಶ್ಯು ತಂಪದಂ ॥
೩೪ ಮಂಗಳಂ ॥ ಶ್ರೀ ಶ್ರೀ ಶ್ರೀ.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಡಾ. ಗುರುರಾಜ ಭಟ್, ೧೯೬೩, *Antiquities of South Canara*, Milagres College, Kallyanpur, ಪು೧ ೧೬.
೨. ಡಾ. ಗುರುರಾಜ ಭಟ್, ೧೯೬೯, ನಂದಳಿಕೆಯ ಪರಿಚಯ (ಲೇ). **ಭವ್ಯವಾಣಿ,** ಪುಟ-೧೬.
೩. ಅದೇ ಪುಸ್ತಕ, ೧೯೬೯, ಪುಟ ೪೩.
೪. ಕೆ.ಎಲ್. ಕುಂಡಂತಾಯ, ೨೦೦೫, ನಾಲ್ಕು ಸ್ಥಾನ ನಂದಳಿಕೆ ಕ್ಷೇತ್ರ (ಲೇ) ಉದಯವಾಣಿ ದಿನಪತ್ರಿಕೆ, ೨೩.೦೩.೧೯೭೦.
೫. ಗಣಪತಿರಾವ್ ಐಗಳ್, ೧೯೨೩, **ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ,** ಡಾ. ಪಾದೇಕಲ್ಲು ವಿಷ್ಣು ಭಟ್ಟ (ಸಂ) ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ, ಎಂ.ಜಿ.ಎಂ. ಕಾಲೇಜು, ಉಡುಪಿ, ಪುಟ-೨೮೮.
೬ ಇಂದಿರಾ ಹೆಗ್ಗಡೆ, ೨೦೦೮, ಬೆಳ್ಮಣ್ಣಿನ ತಾಮ್ರ ಶಾಸನ: ಒಂದು ಸಾಂಸ್ಕೃತಿಕ ನೋಟ (ಲೇ) **ಇತಿಹಾಸ ದರ್ಶನ,** ಡಾ. ಎಂ.ಜಿ. ನಾಗರಾಜ್, ಡಾ. ಪಿ.ವಿ. ಕೃಷ್ಣಮೂರ್ತಿ (ಸಂ), ಕರ್ನಾಟಕ ಇತಿಹಾಸ ಅಕಾಡೆಮಿ (ರಿ), ಬೆಂಗಳೂರು, ಪುಟ ೧೧೪-೧೧೯.
೭. ಡಾ. ಪಿ. ಗುರುರಾಜ ಭಟ್ಟ, ೧೯೭೦, ಮಧ್ಯಕಾಲೀನ ರಾಜಕೀಯ ಒಪ್ಪಂದ, **ಉದಯವಾಣಿ** ದಿನಪತ್ರಿಕೆ, ೧೭.೦೮.೧೯೭೦.
೮. ಡಾ. ಪಿ. ಗುರುರಾಜ ಭಟ್ಟ, ೧೯೭೦, ಮಧ್ಯಕಾಲೀನ ರಾಜಕೀಯ ಒಪ್ಪಂದ, **ಉದಯವಾಣಿ** ದಿನಪತ್ರಿಕೆ, ೧೭.೦೮.೧೯೭೦.

ಪತ್ರಿಕೆಗಳು

೧. ಕೆ.ಎಲ್. ಕುಂಡಂತಾಯ, ೨೦೦೫, ನಾಲ್ಕು ಸ್ಥಾನ ನಂದಳಿಕೆ ಕ್ಷೇತ್ರ (ಲೇ) **ಉದಯವಾಣಿ** ದಿನಪತ್ರಿಕೆ, ೨೩.೦೩.೧೦೭೦.
೨. ಡಾ. ಪಿ. ಗುರುರಾಜಭಟ್ಟ, ೧೯೭೦, ಮಧ್ಯಕಾಲೀನ ರಾಜಕೀಯ ಒಪ್ಪಂದ, **ಉದಯವಾಣಿ** ದಿನಪತ್ರಿಕೆ, ೧೭.೦೮.೧೯೭೦.
೩. ಡಾ. ಪಿ. ಗುರುರಾಜಭಟ್ಟ, ೧೯೭೦, ಮಧ್ಯಕಾಲೀನ ರಾಜಕೀಯ ಒಪ್ಪಂದ, **ಉದಯವಾಣಿ** ದಿನಪತ್ರಿಕೆ, ೧೭.೦೮.೧೯೭೦.

೧೮

ವಿದ್ಯಾರಣ್ಯರ ಉಲ್ಲೇಖ ಇರುವ ಒಂದು ಪ್ರಾಚೀನ ಶಿಲಾಶಾಸನ

ಡಾ. ಪಿ.ಎನ್. ನರಸಿಂಹಮೂರ್ತಿ*

ವಿಜಯನಗರ ಸ್ಥಾಪನೆಯ ವಿಚಾರದಲ್ಲಿ ವಿದ್ಯಾರಣ್ಯ ಶ್ರೀಪಾದಂಗಳ ಪಾತ್ರದ ಬಗ್ಗೆ ಬಹಳ ಚರ್ಚೆಗಳಾಗಿವೆ. ಈ ಚರ್ಚೆಗಳು ನಾನಾ ಮನೋಭಿಲಾಷೆಯ ಸ್ವರೂಪದವುಗಳಾಗಿರುವುದು ಎಲ್ಲರಿಗೂ ತಿಳಿದ ವಿಷಯ. ಈ ಚರ್ಚೆಗಳಿಗೆ ಗ್ರಾಸವಾಗಿದ್ದುದು ಆ ಕಾಲಕ್ಕೆ ಸಂಬಂಧಿಸಿದಂತೆ ಸರಿಯಾದ ಪುರಾವೆಗಳು ಅಲಭ್ಯವಾಗಿದ್ದುದು. ಆದರೆ ದೊರೆತಿದ್ದ ಕೆಲವು ಆಧಾರಗಳನ್ನು ಕೂಟ ಎಂದು ಕಡೆಗಾಣಿಸಿದ್ದೂ ಇದೆ. ಇವುಗಳಿಗೆ ಉತ್ತರ ಎಂಬಂತೆ ದೊರೆತಿದೆ ಹಾಲ್ಯಾವಟಗಿ ತಾಮ್ರಶಾಸನ. ಬಹುತೇಕ ಒಂದೇ ರೀತಿಯಲ್ಲಿ ವಿದ್ಯಾರಣ್ಯರನ್ನು ಈ ಶಾಸನಗಳು ಚಿತ್ರಿಸಿವೆ. ಈ ತಾಮ್ರಶಾಸನ ಒಂದು ರೀತಿಯಲ್ಲಿ ಎಲ್ಲ ವಾದಗಳಿಗೂ ತೆರೆ ಎಳೆಯು ವಂತಿದ್ದರೂ ಅದಕ್ಕೆ ಬಲ ಕೊಡಬಲ್ಲ ಇತರೇ ಮೂಲದ ಆಧಾರದ ಕೊರತೆ ಇತ್ತು. ಆ ಕಾಲದ ಶಿಲಾಶಾಸನಗಳಾವುವೂ ವಿದ್ಯಾರಣ್ಯರನ್ನು ಉಲ್ಲೇಖಿಸಿರಲಿಲ್ಲ ಅಥವಾ ಅವರನ್ನು ಹೆಸರಿಸುವ ಪ್ರಾಚೀನ ಶಿಲಾಶಾಸನ ಯಾವುದೂ ದೊರೆತಿರಲಿಲ್ಲ. ಈಗ ಆ ಕೊರತೆ ನೀಗಿದೆ. ವಿದ್ಯಾರಣ್ಯರನ್ನು 'ವಿದ್ಯಾರಣ್ಯ ಶ್ರೀಪಾದಂಗಳು' ಎಂದೇ ಹೆಸರಿಸಿ ಅವರಿಗೆ ಒಂದನೆಯ ಬುಕ್ಕರಾಯನು ಭೂ ದಾನ ಮಾಡಿದ ವಿಷಯವನ್ನು ತಿಳಿಸುವ ಶಿಲಾಶಾಸನವೊಂದು ಮಂಗಳೂರು ಬಳಿಯ ನೀರುಮಾರ್ಗ ಗ್ರಾಮದಲ್ಲಿ ದೊರೆತಿದೆ. ಇದರ ಕಾಲ ಕ್ರಿ.ಶ. ಸುಮಾರು ೧೩೫೩. ಪ್ರಾಯಶಃ ವಿದ್ಯಾರಣ್ಯರನ್ನು ಹೆಸರಿಸುವ ಇಷ್ಟು ಪ್ರಾಚೀನವಾದ ಶಿಲಾಶಾಸನ ಇದೊಂದೇ ಆಗಿದೆ. ೭೬ ಮುಡಿ ಬೀಜ ಬಿತ್ತುವ ವಿಸ್ತಾರವಾದ ಭೂಮಿಯನ್ನು ಒಂದನೆಯ ಬುಕ್ಕರಾಯನಿಂದ ಪಡೆದು ಅದರ ಉತ್ಪತ್ತಿಯಿಂದ ಅಲ್ಲಿಯ ದೇವಾಲಯದಲ್ಲಿ ಪೂಜಾಕಾರ್ಯಗಳು ಮತ್ತು ಅದರ ಛತ್ರದಲ್ಲಿ ಊಟದ ವ್ಯವಸ್ಥೆ ತಡೆಯಿಲ್ಲದೆ ನಿತ್ಯ ನಡೆಯುವಂತೆ ಮಾಡಿದರು ವಿದ್ಯಾರಣ್ಯ ಶ್ರೀಪಾದಂಗಳು. ನೀರು ಮಾರ್ಗದ ಈ ಶಿಲಾ ಶಾಸನ ವಿಜಯನಗರದ ಸ್ಥಾಪಕ ಅರಸರಿಗೂ ಮತ್ತು ವಿದ್ಯಾರಣ್ಯರಿಗೂ ಸಂಬಂಧವಿದ್ದುದನ್ನು ಪರೋಕ್ಷವಾಗಿ ತಿಳಿಸುತ್ತದೆ. ಇದರಿಂದ ವಿದ್ಯಾರಣ್ಯರೆಂಬ ಒಬ್ಬ ಮುನಿ ಇದ್ದರೆ ಮತ್ತು ಅವರಿಗೂ ವಿಜಯನಗರಕ್ಕೂ ಸಂಬಂಧವಿತ್ತೇ ಎಂಬ ಪ್ರಶ್ನೆಗಳು ಇನ್ನು ಅಪ್ರಸ್ತುತವಾಗುತ್ತವೆ.

ಶಾಸನ ಪತ್ತೆಯಾದ ರೀತಿ : ನೀರುಮಾರ್ಗದ ಕ್ಷೇತ್ರಕಾರ್ಯ ಮಾಡುವ ಸಂದರ್ಭದಲ್ಲಿ ಅನಿರೀಕ್ಷಿತವಾಗಿ ಬೆಳಕಿಗೆ ಬಂದ ದಾಖಲೆ ಇದು. ಬಾವಿಕಟ್ಟೆಯ ನೆಲಕ್ಕೆ ಹಾಕಲಾಗಿದ್ದ ಈ ಕಲ್ಲು ಕಾಲು ತೊಳೆಯಲು ಅಲ್ಲಿಗೆ ಹೋದಾಗ ಗೋಚರಕ್ಕೆ ಬಂತು. ಮನೆಯ ಯಜಮಾನರಿಗೆ (ಶಾಲಾ ಅಧ್ಯಾಪಕರು) ಈ ಶಾಸನದ ಪ್ರಾಮುಖ್ಯತೆಯ ಬಗ್ಗೆ ಅಲ್ಲೇ ತಿಳಿಸಿ ಅದನ್ನು ಸರಿಯಾದ ರೀತಿಯಲ್ಲಿ ರಕ್ಷಿಸ ಬೇಕೆಂದು ಕೇಳಿಕೊಂಡೆ. ಕೆಲ ವರ್ಷಗಳ ನಂತರ ಅದೇ ಗ್ರಾಮಕ್ಕೆ ಹೋಗಬೇಕಾದ ಸಂದರ್ಭ ಬಂದಾಗ ಈ ಶಾಸನ ಕಲ್ಲನ್ನು ನೋಡಲು ಹೋದೆ. ನಾನು ಮೊದಲು ನೋಡಿದ ಸ್ಥಳದಲ್ಲೇ ಬಟ್ಟೆ ಒಗೆಯುವ ಕಲ್ಲಾಗಿಯೇ ಈ ಶಾಸನ ಕಲ್ಲು ಇತ್ತು. ಅದರ ಸ್ಥಿತಿ ನೋಡಿ ಖೇದವಾಯಿತು. ಶಿಕ್ಷಕರಾದರೂ ದಾಖಲೆಗಳನ್ನು, ಸ್ಮಾರಕಗಳನ್ನೂ ಸರಿಯಾದ ರೀತಿಯಲ್ಲಿ ರಕ್ಷಿಸಬೇಕೆಂಬ ಮನೋಭಾವ ಅವರಲ್ಲಿ ಬೆಳೆಯದಿದ್ದುದು ಬೇಸರ ಹುಟ್ಟಿಸುವ ಸಂಗತಿಯಾಗಿತ್ತು. ಈ ಶಾಸನದ ಪಡಿಯಚ್ಚನ್ನು ತೆಗೆದುಕೊಳ್ಳುವುದಕ್ಕೆ ನನ್ನೊಂದಿಗೆ ಸಹಕರಿಸಿದವರು ಇವರೇ! ಅದಕ್ಕಾಗಿ ಇವರಿಗೆ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಕಲ್ಲಿನಲ್ಲಿ ಬರಹದ ಸ್ಥಿತಿ: ಬಟ್ಟೆ ಒಗೆಯುವ ಕಲ್ಲಾಗೇ ಬಹಳ ಕಾಲದಿಂದ ಉಪಯೋಗಿಸುತ್ತಾ ಇರುವುದರಿಂದ ಇದರಲ್ಲಿನ ಬರಹ ಬಹಳ ಮಾಸಿದೆ. ಸುಮಾರು ೧೮ X ೨೩ ಇಂಚು ಅಳತೆಯ ಈ ಕಲ್ಲಿನ ಬಲದ ಮೂಲೆ ಸ್ವಲ್ಪ ತುಂಡಾಗಿದೆ. ಇದರಿಂದ ಕೊನೆಯ ಎರಡು ಸಾಲಿನ ಕೆಲವು ಅಕ್ಷರಗಳು ನಷ್ಟವಾಗಿವೆ. ಕಲ್ಲಿನ ಮೇಲ್ಭಾಗ ವೃತ್ತಾಕಾರ ದಲ್ಲಿದ್ದು ಇದರ ಪರಿಧಿಯಲ್ಲಿ ಒಂದು ಸಾಲು ಬರಹ ಇದೆ. ಇದರ ಕೆಳಗೆ ಸರಳ ರೇಖೆಯಲ್ಲಿ ಒಂದು ಸಾಲು ಬರಹ ಇದೆ. ಇದರ ಕೆಳಗೆ ಹದಿಮೂರು ಸಾಲು ಬರಹ ಇದೆ. ಒಟ್ಟು ಹದಿನೈದು ಸಾಲುಗಳು.

ಶಾಸನ ಪಾಠ :

೧ * * * ವಿಜೆಯ * ಮ * * * * * *
೨ * (ಹಡಪ) * * * ಡೆ * * * * *
೩ ಸ್ವಸ್ತಿ ಶ್ರೀ ವೀರ ಬುಕ್ಕರಾಯನ ನಿರೂಪದಿಂದ ಪಂ-
೪ ಡರಿ ದೇವ(ರು) ಗಳು ನೀರುಮಾರ್ಗದೊಳಗೆ (ಕಟ್ಟಿ)ದ ಮಠ
೫ ಛತ್ರದ (ಧರ್ಮದ) ವೋರೆಯನು * * (ಸೋಮ)

* # ೨೦೩೧, ಗುರುಕೃಪ, ೧೧ನೆಯ ಅಡ್ಡರಸ್ತೆ, ಕಲ್ಲಹಳ್ಳಿ, ವಿ.ವಿ. ನಗರ, ಮಂಡ್ಯ-೫೭೧೪೦೧.

* * * * *
೬ * ನಿವೇದ್ಯ ಯತಿಗಳ (ಭಿಕ್ಷೆ) * * ಶ್ರೀ ವಿದ್ಯಾರಂ-
೭ ಣ್ಯ ಶ್ರೀ ಪದ(ಂ)ಗಳಿಗೆ ಧಾರಾ ಪೂರ್ವಕವಾಗಿ
೮ ಬಿತ್ತುವಾನೆ * * ಮ ಮೂಡೆ ೭೬ ಯಿದಕುಳ್ಳ (ವತ್ತಾರ)
೯ ಕುರುಂಭೆ ನಡಿಲು ಚತು ಸೀಮೆ ಸಹಿತ ಕೊಟ-
೧೦ ರು ಮಲ್ಲಿಯ ವೊಡೆತನ ಶ್ರೀ ಪದಂಗಳಿಗೆ ಅ-
೧೧ ಲ್ಲದೆ ಮತಾರಿಗೆ ಸಲ್ಲದು [।*] ಆರೊಬ್ಬರು ತಪ್ಪಿ-
೧೨ ದಾದಡೆ ಅರ (ಸಿಂಗೆ ಕ) ಗ ೨೦೦೦ ತಪ್ಪಿದ
೧೩ ಅಡಕ [।*] ಈ ಧರ್ಮ್ಮಕೆ ವೊಕ್ರವಾದಡೆ
೧೪ ೧೦೦೦ ಕವಿಲೆನೂ ಕೊಂದ ದೋ (ಷ) * *
೧೫ ಗಳ ಮಹಾ ಶ್ರೀ ಶ್ರೀ ಶ್ರೀ * * * * * [॥*]

ಇದರ ಅರ್ಥ: (ಒಂದನೆಯ) ಬುಕ್ಕರಾಯನ ನಿರೂಪದಿಂದ ಪಂಡರಿದೇವನು ನೀರುಮಾರ್ಗದಲ್ಲಿ ನಿರ್ಮಿಸಿದ ಮಠ ಮತ್ತು ಛತ್ರ, ಇಲ್ಲಿ ನಡೆಯುವ (ದೇವರ ಪೂಜೆ) ನೈವೇದ್ಯ ಮತ್ತು ಯತಿಗಳ ಭಿಕ್ಷೆಗಾಗಿ ೭೬ ಮುಡಿ (ಬೀಜ) ಬಿತ್ತುವ (ಅಷ್ಟು ವಿಸ್ತಾರವಾದ) ಭೂಮಿಯನ್ನು ಅದಕ್ಕಿದ್ದ ಚತುಃಸೀಮೆ ಸಹಿತ ಶ್ರೀ ವಿದ್ಯಾರಣ್ಯ ಶ್ರೀ ಪಾದಂಗಳಿಗೆ ಧಾರೆಯೆರದು ಕೊಟ್ಟ. ಇದರ ಮೇಲಿನ ಒಡೆತನ ಶ್ರೀ ಪಾದಂಗಳಿಗಲ್ಲದೆ ಬೇರಾರಿಗೂ ಸಲ್ಲದು ಎಂದು ಕಟ್ಟು ಮಾಡಿದ. ಇದಕ್ಕೆ ತಪ್ಪಿದರೆ ಅರಸನಿಗೆ (ದಂಡ ಕ.)ಗದ್ಯಾಣ ೨೦೦೦ (ತೆರುವ) ಅಡಕ. ಈ ಧರ್ಮಕ್ಕೆ ಅಡ್ಡಿಬಂದರೆ ೧೦೦೦ ಕವಿಲೆಯನು ಕೊಂದ ದೋಷ. ಮಂಗಳವಾಗಲಿ ಶ್ರೀ.

ಶಾಸನದ ಕಾಲ: ಶಾಸನದಲ್ಲಿ ಅಕ್ಷರಗಳು ಸ್ವಲ್ಪ ಮಾಸಿರುವುದರಿಂದ ಇಲ್ಲಿ ಇರಬಹುದಾದ ಕಾಲ ನಿರ್ದೇಶನ ಸರಿಯಾಗಿ ಅರ್ಥವಾಗುವುದಿಲ್ಲ. ಮೊದಲನೆಯ ಸಾಲಿನಲ್ಲಿ 'ವಿಜೆಯ' ಎಂಬ ಅಕ್ಷರಗಳನ್ನು ಗುರುತಿಸಬಹುದಾದರೆ ಎರಡನೆಯ ಸಾಲಿನಲ್ಲಿ ಅಸ್ಪಷ್ಟವಾಗಿ 'ಹಡಪ' ಅಕ್ಷರಗಳನ್ನು ಗುರುತಿಸಬಹುದು. ಇಲ್ಲಿ 'ವಿಜೆಯ' ಏನನ್ನು ಸೂಚಿಸುತ್ತದೆ ಎಂಬುದನ್ನು ಸುಲಭವಾಗಿ ಹೇಳಲು ಆಗುವುದಿಲ್ಲ. ಆದರೆ 'ಹಡಪ' ಎನ್ನುವುದನ್ನು ಅರ್ಥೈಸಬಹುದು. ಒಂದನೆಯ ಹರಿಹರನ ಆಳ್ವಿಕೆ ಕಾಲದಲ್ಲಿ ಹಡಪದ ಗೌತರಸ ಎಂಬಾತ ಮಂಗಳೂರು ರಾಜ್ಯದ ರಾಜ್ಯಪಾಲನಾಗಿ ಕಾರ್ಯ ನಿರ್ವಹಿಸಿದ್ದ. ಈ ವಿಷಯವನ್ನು ತಿಳಿಸುವ ಒಂದು ದಾಖಲೆ ಕಾರ್ಕಳ ತಾಲೂಕಿನಲ್ಲಿದೆ. ಈ ಶಿಲಾ ಶಾಸನ ಕಾಂತಾವರದ ಕಾಂತೇಶ್ವರ ದೇವಾಲಯದ ಪ್ರಾಕಾರದಲ್ಲಿದೆ (ಎಸ್. ಐ. ಐ. ಸಂ. ೭, ನಂ. ೨೩೧). ಇದರ ತೇದಿ ಸರ್ವಧಾರಿ ಸಂವತ್ಸರ, ವೃಷಭ ೪, ಮಂಗಳವಾರ. ಇಲ್ಲಿ ಶಕವರ್ಷದ ಉಲ್ಲೇಖ ಇಲ್ಲ. ಪೂರಕ ಮಾಹಿತಿಗಳ ಆಧಾರದಲ್ಲಿ ಡಾ. ಕೆ. ವಿ. ರಮೇಶ ಅವರು ಇದರ ಕಾಲವನ್ನು (ಶಕ ೧೨೭೦) ಕ್ರಿ. ಶ. ೧೩೪೮ ಏಪ್ರಿಲ್ ೨೯ ಎಂದು ನಿಗದಿಪಡಿಸಿದ್ದಾರೆ (ನೋಡಿ: **"ಎ ಹಿಸ್ಟರಿ ಆಫ್ ಸೌತ್ ಕೆನರ"**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ (೧೯೭೦) ಪು. ೧೫೧). ಈ ಶಾಸನದಲ್ಲಿ ಗೌತರಸನನ್ನು 'ಪ್ರಧಾನಂ' ಎಂದು ಉಲ್ಲೇಖಿಸಲಾಗಿದೆ. ಅಂದರೆ ಒಂದನೆಯ ಹರಿಹರನ ಪ್ರಧಾನಿಯಾಗಿದ್ದ ಈತ ಮಂಗಳೂರಿನಂತಹ ಆಯಕಟ್ಟಿನ ರಾಜ್ಯಕ್ಕೆ ಆಡಳಿತಾಧಿಕಾರಿಯಾಗಿ (ರಾಜ್ಯಪಾಲನಾಗಿ) ನಿಯುಕ್ತನಾಗಿದ್ದ. ಇದು ರಾಜನೊಂದಿಗೆ ಈತನಗಿದ್ದ ನಿಕಟತೆಯನ್ನು ಪರೋಕ್ಷವಾಗಿ ತಿಳಿಸುತ್ತದೆ. ಈ ದೃಷ್ಟಿಯಲ್ಲಿ ನೋಡಿದಾಗ 'ವಿಜೆಯ' ವನ್ನು ಸಂವತ್ಸರವಾಗಿ ತೆಗೆದುಕೊಂಡರೆ ಅದು ಶಕ ೧೨೭೫ ಆಗುತ್ತದೆ. ಇದು ಕ್ರಿ.ಶ. ೧೩೫೩–೫೪ ಕ್ಕೆ ಸರಿಹೊಂದುತ್ತದೆ.

ಪ್ರಾಯಶಃ ಹಡಪದ ಗೌತರಸನು ಮಂಗಳೂರು ರಾಜ್ಯದ ರಾಜ್ಯಪಾಲನಾಗಿದ್ದಾಗ ಪಂಡರಿದೇವನು ಸ್ವಲ್ಪ ಸಮಯ ಇಲ್ಲಿದ್ದು ಬುಕ್ಕರಾಯನ ಆಣತಿಯಂತೆ ನೀರು ಮಾರ್ಗದಲ್ಲಿ ಒಂದು ಮಠ ಮತ್ತು ಛತ್ರಗಳನ್ನು ನಿರ್ಮಿಸಿ ಅಲ್ಲಿಯ ದೇವರ ಪೂಜೆ, ನೈವೇದ್ಯಾದಿಗಳಿಗೆ ಮತ್ತು ಯತಿಗಳ ಭಿಕ್ಷೆಗಾಗಿ ವಿಶಾಲವಾದ ಭೂಮಿಯನ್ನು ಶ್ರೀ ವಿದ್ಯಾರಣ್ಯ ಶ್ರೀ ಪಾದಂಗಳಿಗೆ ಧಾರಾಪೂರ್ವಕವಾಗಿ ಕೊಟ್ಟ. ನೀರು ಮಾರ್ಗದ ಈ ಮಠದಲ್ಲಿ ಯತಿಗಳು ಇದ್ದರು. ಇವರು ಶೃಂಗೇರಿ ಪರಂಪರೆಯ ಅದ್ವೈತ ಸಂಪ್ರದಾಯದವರು. ಇವರ ಭಿಕ್ಷಾ ಕಾರ್ಯ ನಿರಂತರ ನಡೆಯುವ ಸಲುವಾಗಿಯೂ ಭೂಮಿ ದಾನ ಮಾಡಿರುವುದು. ಇದನ್ನು ಸ್ವೀಕರಿಸಿದವರು (ಶೃಂಗೇರಿಯ) ಗುರುಗಳಾದ ವಿದ್ಯಾರಣ್ಯ ಶ್ರೀಪಾದಂಗಳು. ಇದೊಂದು ಮುಖ್ಯವಾದ ವಿಷಯ.

ಒಂದನೆಯ ಬುಕ್ಕರಾಯನು ಶೃಂಗೇರಿ ಮಠಕ್ಕೆ ಅದರಲ್ಲೂ ಮುಖ್ಯವಾಗಿ ವಿದ್ಯಾರಣ್ಯ ಶ್ರೀ ಪಾದಂಗಳಿಗೆ ಮಂಗಳೂರು ಭಾಗದಲ್ಲಿ ಹಲವಾರು ದಾನಗಳನ್ನು ಮಾಡಿದ ಉಲ್ಲೇಖ ಇವನ ಶಾಸನಗಳಲ್ಲಿವೆ. ಇವೆಲ್ಲವೂ ಶಿಲಾ ಶಾಸನಗಳು. ಇಲ್ಲಿ ಒಂದನ್ನು ಉದಾಹರಿಸುವುದು ಸೂಕ್ತ. ಕ್ರಿ.ಶ. ೧೩೭೫ ಅಕ್ಟೋಬರ್ ೨೫ಕ್ಕೆ ಸೇರುವ ಈ ಶಾಸನ ಕುಡುಪು ದೇವಾಲಯದಲ್ಲಿ ದೊರೆತುದು (ಎಸ್.ಐ.ಐ. ಸಂಪುಟ ೨೭, ಸಂ. ೫೬).

'ಸಿಂಗೇರಿಯ ಶ್ರೀ ವಿದ್ಯಾರಣ್ಯ ಶ್ರೀ ಪಾದಂಗಳಿಗೆ' ಸ್ವತಃ ಬುಕ್ಕರಾಯನೇ ಕೊಡಮಾಡಿದ ದಾನವನ್ನು ಈ ಕುಡುಪು ಶಾಸನ ದಾಖಲಿಸಿದೆ. ಶಾಸನದಲ್ಲಿ ಕುಡುಪು ಮತ್ತು ಮಾಲೂರು ಎಂಬ ಎರಡು ಗ್ರಾಮಗಳನ್ನು, ೨೪೦ ಕಾಟಿ ಗದ್ಯಾಣಗಳನ್ನು ಮತ್ತು ವಾರ್ಷಿಕ ೪೨೦ ಮುಡಿ ಉತ್ಪತ್ತಿಯ ಗದ್ದೆಗಳನ್ನು ಶ್ರೀ ವಿದ್ಯಾರಣ್ಯರಿಗೆ ರಾಜ ದಾನ ಮಾಡಿದ ವಿಚಾರ ಉಲ್ಲೇಖಗೊಂಡಿದೆ. ಆಗ ಮಂಗಳೂರು ರಾಜ್ಯಕ್ಕೆ ರಾಜ್ಯಪಾಲನಾಗಿದ್ದವ ಮೇಲೆ ಹೆಸರಿಸಿರುವ ಪಂಡರಿದೇವನೇ.

ಕುಡುಪು ಮತ್ತು ನೀರುಮಾರ್ಗ ಗ್ರಾಮಗಳು ಮಂಗಳೂರು ತಾಲೂಕಿನಲ್ಲಿರುವ ಅಕ್ಕ–ಪಕ್ಕದ ಗ್ರಾಮಗಳು. ಕಾರ್ಕಳ–ಮಂಗಳೂರು ಹೆದ್ದಾರಿ ಕುಡುಪು ಮೂಲಕ ಹೋಗಿರುವುದರಿಂದ ಈ ಸ್ಥಳ ಹೆಚ್ಚು ಪರಿಚಿತವಾಗಿದೆ. ಆದರೆ ನೀರುಮಾರ್ಗ ಒಳನಾಡಿನ ಭಾಗವಲ್ಲಿದ್ದು ಇಂದಿನ ಸೌಕರ್ಯಗಳಿಂದ ವಂಚಿತವಾಗಿದೆ. ಭೌಗೋಳಿಕವಾಗಿ

ಎರಡೂ ಗ್ರಾಮಗಳು ಬೆಟ್ಟ-ಗುಡ್ಡ, ಕಣಿವೆ-ಕಾಡುಗಳಿಂದ ಆವೃತವಾಗಿವೆ. ನಂಬಿಕೆ ಮತ್ತು ಐತಿಹ್ಯಗಳ ಪ್ರಕಾರ ಈ ಎರಡೂ ಗ್ರಾಮಗಳಿಗೆ ಪ್ರಾಚೀನ ಕಾಲದಲ್ಲಿ (ನಾಗಾರಾಧನೆ ವಿಷಯವಾಗಿ) ಪರಸ್ಪರ ಸಂಬಂಧ ಇತ್ತು. ಬುಕ್ಕರಾಯನ ಶೃಂಗೇರಿಯ ಶ್ರೀ ವಿದ್ಯಾರಣ್ಯರಿಗೆ ಕೊಡಮಾಡಿದ ದಾನಗಳನ್ನು ಉಲ್ಲೇಖಿಸುವ ಶಾಸನಗಳು ಈ ಗ್ರಾಮಗಳಲ್ಲೂ ದೊರೆತಿವೆ. ಇದು ವಿಜಯನಗರದ ಆಳ್ವಿಕೆಯ ಪ್ರಾರಂಭಿಕ ಕಾಲದಲ್ಲಿ ಈ ಎರಡೂ ಗ್ರಾಮಗಳು ಹೊಂದಿದ್ದ ಪ್ರಾಮುಖ್ಯತೆಯನ್ನು ಸೂಚಿಸುತ್ತದೆ. ಎರಡು ಕಡೆಗಳಲ್ಲಿ ಪ್ರಾಚೀನವಾದ ಸುಬ್ರಹ್ಮಣ್ಯ ದೇವಾಲಯಗಳಿವೆ. ನೀರುಮಾರ್ಗದಲ್ಲಿ ೧೦-೧೧ನೆಯ ಶತಮಾನಕ್ಕೆ ಸೇರುವ ಸುಂದರವಾದ ಸ್ಕಂದನ ವಿಗ್ರಹ ಇದ್ದರೆ ಕುಡುಪುವಿನಲ್ಲಿ ನಾಗ-ಸುಬ್ರಹ್ಮಣ್ಯ; ಆದರೆ ಇಲ್ಲಿ ದೇವರನ್ನು ಅನಂತಪದ್ಮನಾಭ ಸ್ವಾಮಿ ಎಂದು ಕರೆಯುತ್ತಾರೆ.

ಕುಡುಪು ಶಾಸನೋಕ್ತ ದಾನದಲ್ಲಿರುವ ವಿಶೇಷತೆ :

ಕುಡುಪು ದಾನದಲ್ಲಿ ಹಲವು ವಿಶೇಷತೆಗಳಿವೆ. ರಾಜ ಕೊಡಮಾಡಿರುವ ದಾನವನ್ನು ಯಾವ ರೀತಿಯಲ್ಲಿ ಉಪಯೋಗಿಸಿಕೊಳ್ಳಬೇಕು ಎಂಬುದಕ್ಕೆ ನಿರ್ದೇಶನವಿದೆ. 'ರಾಯನ ಸಿಂಗೇರಿಯ ವಿದ್ಯಾರಣ್ಯ ಶ್ರೀ ಪಾದಂಗಳಿಗೆ ಸಮರ್ಪಿಸಿದ ಧರ್ಮದ ಕ್ರಮವೆಂತೆಂದತಾ (ವೆಂತೆಂದರೆ) ಕುಡುಪಿನ ದೇವಾಲ್ಯದಲು ಯತಿಗಳು ಬ್ರಾಹ್ಮಣರಿಗೆ ಪ್ರತಿ ದಿನ (ಜನ) ೧೨೬೦ ಭೋಜನ ನಡವಂತಾಗಿ (ಶಾಸನ ಪಾಠ ಸಾಲು:೫-೮). ಇದನ್ನು ನಿರ್ವಹಿಸುವ ಛತ್ರದ ವೆಚ್ಚಕ್ಕಾಗಿ ೩೬೦ ಮುಡಿ ಬತ್ತ ಮತ್ತು ಇದರ ಮೇಲು ವೆಚ್ಚಕ್ಕಾಗಿ ೯೦ ಮಂಗಳೂರು ಕಾಟಿ ಗದ್ಯಾಣ ಗಳನ್ನು ನಿಗದಿ ಮಾಡಿದ. ದಾನದ ಎರಡನೆಯ ಭಾಗ: 'ಕುಡುಪಿನ ದೇವರಿಗೆ ಯಿರುಳಿನ ನಿವೇದ್ಯಕ್ಕೆ ಮಾಲೂರು ಹರವರಿಯಿಂದ ಭತ್ತ ಮೂಡೆ ೬೦ ಕುಡಿ. ಅಕಿ ಹಾನೆ (೩೨) ನು ನಡವುದು' (ಶಾಸನ ಪಾಠ ಸಾಲು: ೧೧-೧೩). ಮುಂದೆ 'ಶಂಕರ ದೇವರ ಅಮೃತಪಡಿ * * ಮಂಗಳೂರು ಕಾ.ಗ. ೧೫೦ ಅಂತು ಕಾ.ಗ. ೨೪೦ ಭತ್ತ ಮೂಡೆ ೪೨೦ ವರುಷಂ ಪ್ರತಿಯಲು ನಡೆವುದು' ಎಂದು ಹೇಳಿ ನಂತರ 'ಯಿ ಸ್ತಾನವನೂ ಧರ್ಮವನೂ ಶ್ರೀಪಾದಂಗಳ ನರೂಪದಿಂದಲಿ * * * ಶಂಕರ ರಾಮನಾಥ ದೇವರಿಗೆ ಧಾರಾಪೂರ್ವ್ವಕ ನಡವಂತಾಗಿ ಕೊಟ್ಟರು' ಎಂದಿದೆ (ಶಾಸನ ಪಾಠ ಸಾಲು: ೧೫-೧೭). ಆಂದರೆ ಕುಡುಪಿನ ಈ ದೇವಾಲಯದಲ್ಲಿ ಒಂದು ಮಠ ಸಹ ಇತ್ತು, ಅದರಲ್ಲಿ ಯತಿಗಳೂ ಇದ್ದರು. ಇದಕ್ಕೆ ಸೇರಿದಂತೆ ಒಂದು ಛತ್ರವೂ ಇತ್ತು. ಪ್ರಾಯಶಃ ಇವುಗಳ ಪುನರುತ್ಥಾನವನ್ನು ಶ್ರೀ ವಿದ್ಯಾರಣ್ಯರು ಮಾಡಿದರು. ಆಗ ಕಂಡುಬಂದ ನ್ಯೂನತೆಗಳನ್ನು ಸರಿಪಡಿಸುವ ಸಲುವಾಗಿ ಬುಕ್ಕರಾಯ ಇದಕ್ಕೆ ಭೂ ಮತ್ತು ಹಿರಣ್ಯ ದಾನಗಳನ್ನು ಮಾಡಿದ. ಅದರೊಂದಿಗೆ ವ್ಯವಸ್ಥೆ ನಡೆಯಬೇಕಾದ ರೂಪು ರೇಖೆಗಳನ್ನೂ ನಿರೂಪಿಸಿ ಕೊಟ್ಟ. ಕೊನೆಯಲ್ಲಿ 'ಯಿ (ಯೀ)ಊರ ವೊಡೆತನಮುಂ ಶ್ರೀ ಪಾದಂಗಳಿಗಲ್ಲದೆ ಅರಸಿನ ವೊಡೆತನ ಸಲ್ಲದು' ಎಂದು ಕಟ್ಟು ಮಾಡಿ ದಾನವನ್ನು ಸಂಪೂರ್ಣ ತೆರಿಗೆ ರಹಿತವನ್ನಾಗಿ ಮಾಡಿ ಶಾಸನ ಹಾಕಿಸಿ ಕೊಟ್ಟ.

ನೀರುಮಾರ್ಗದ ಶಾಸನದ ಪ್ರಕಾರ ಬುಕ್ಕರಾಯನ ಆಜ್ಞಾವರ್ತಿಯಾದ ಪಂಡರಿದೇವನು ನೀರುಮಾರ್ಗದಲ್ಲಿ ಮಠವನ್ನು ಕಟ್ಟಿಸಿ ಅಲ್ಲಿಯ ದೇವಾಲಯ, ಛತ್ರ ಮತ್ತು ಮಠಗಳಲ್ಲಿನ ಕಾರ್ಯಗಳು ನಿರಂತರವಾಗಿ ನಡೆಯುವಂತೆ ವ್ಯವಸ್ಥೆ ಮಾಡಿದ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ನೆರೆಯ ಗ್ರಾಮಗಳೆರಡರಲ್ಲೂ ಶೃಂಗೇರಿಯ ಅದ್ವೈತ ಪರಂಪರೆಗೆ ಸೇರಿದ ಮಠಗಳು ಇದ್ದುದು ಮತ್ತು ಅಲ್ಲಿ ಯತಿಗಳೂ ಇದ್ದರು ಎಂಬುದು. ಇದು ಸಾಧ್ಯವೇ ಎಂಬ ಸಮಸ್ಯೆ ಬಂದರೆ ಅಲ್ಲೆ 'ಇದು ಹೀಗಿರಬಾರದೆಂದೇನು ಇಲ್ಲವಲ್ಲ!' ಎಂಬ ಉತ್ತರ ಇದೆ.

ಬುಕ್ಕರಾಯನು ೧೩೫೩ರ ವೇಳೆಗೆ ಯುವರಾಜ ನಾಗಿದ್ದ. ಅದನ್ನೇನು ನೀರುಮಾರ್ಗದ ಶಾಸನ ಹೇಳುವುದಿಲ್ಲ. ಆದರೆ ವಿದ್ಯಾರಣ್ಯರನ್ನು 'ಶ್ರಿ ಪಾದಂಗಳು' ಎಂದು ಉಲ್ಲೇಖಿಸಿರುವು ಗಮನಾರ್ಹ. ಆಗ ಶೃಂಗೇರಿಯ ಪೀಠಾಧಿಪತಿಗಳಾಗಿದ್ದವರು ಶ್ರೀ ಭಾರತಿ (ಭಾರತೀ ಕೃಷ್ಣ) ತೀರ್ಥರು. ಇವರ ಉಲ್ಲೇಖ ಎರಡೂ ಶಾಸನಗಳಲ್ಲಿ ಇಲ್ಲ. ಹಾಗೆಂದ ಮಾತ್ರಕ್ಕೆ ಈ ಶಾಸನಗಳನ್ನು ಕೂಟ ಎಂದು ನಿರ್ಧರಿಸುವುದಕ್ಕಾಗಲಿ ಅಥವಾ ವಿದ್ಯಾರಣ್ಯರ ಪಾತ್ರವನ್ನು ಕೀಳು ಅಭಿರುಚಿಯಿಂದ ನೋಡುವುದಕ್ಕಾಗಲೀ ಆಸ್ಪದವಿಲ್ಲ. ಒಂದನೆಯ ಬುಕ್ಕರಾಯನಿಗೆ ವಿದ್ಯಾರಣ್ಯರು ಒಂದು ಸಂಚಾರೀ ಶಕ್ತಿಯಾಗಿದ್ದರು. ಅವರನ್ನು ಕೇವಲ ಯತಿಗಳೆಂದು ಸಂಬೋಧಿಸುವ ಮನಸ್ಸು ಇವನಿಗೆ ಇಲ್ಲವಾಗಿತ್ತು. ಹಾಗಾಗಿ ಅವರನ್ನು 'ಶ್ರೀಪಾದ'ರೆಂದೇ ಸಂಬೋಧಿಸಿ ತನ್ನ ಭಕ್ತಿ. ಶ್ರದ್ಧೆ ಮತ್ತು ನಂಬಿಕೆಗಳನ್ನು ಈತ ಪ್ರಕಟಿಸಿದ. ರಾಜನ ಈ ಭಾವನೆಗೆ ಯಾರಿಂದಲೂ ವಿರೋಧವಿರಲಿಲ್ಲವಾದರೂ ಸ್ವತಃ ವಿದ್ಯಾರಣ್ಯರು ತಮಗೆ ಸಂದಾಯವಾದ ಎಲ್ಲ ಗೌರವ. ಸಮ್ಮಾನಗಳನ್ನು ವಿನಮ್ರತೆಯಿಂದ ಗುರುಗಳಾದ ಭಾರತೀ ತೀರ್ಥರಿಗೆ ಅರ್ಪಿಸಿ ಗುರು-ಶಿಷ್ಯ ಸಂಬಂಧದ ಮಹತ್ವವನ್ನು ಎತ್ತಿ ಹಿಡಿದರು. ಒಟ್ಟಿನಲ್ಲಿ ವಿದ್ಯಾರಣ್ಯರನ್ನು ಉಲ್ಲೇಖಿಸುವ ಪ್ರಥಮ ಮತ್ತು ಪ್ರಾಚೀನ ಶಿಲಾಶಾಸನವಾಗಿದೆ ನೀರುಮಾರ್ಗದ ಈ ಶಾಸನ [ಈ ಶಾಸನದ ಪಾಠ ಶೃಂಗೇರಿ ಮಠದೊಂದಿಗೆ ದಕ್ಷಿಣ ಕನ್ನಡದ ಸಂಬಂಧ-ಲೇಖಕರು : ಪಿ.ಎನ್. ನರಸಿಂಹ ಮೂರ್ತಿ, ಪ್ರಕಟನೆ : ಶತನಮನ {ಜಿ.ವಿ. ಅಭಿನಂದನ ಗ್ರಂಥ. (ಪ್ರ ಸಂ) ಪಿ.ವಿ. ನಾರಾಯಣ}, ಶ್ರೀಜಯರಾಮ ಸೇವಾ ಮಂಡಲಿ, ಜಯನಗರ, ಬೆಂಗಳೂರು-೨೦೧೨, ಪುಟ ೯೪ ಎಂಬಲ್ಲಿಯೂ ಪ್ರಕಟವಾಗಿದೆ].

[ವಿದ್ಯಾರಣ್ಯರ ಶಾಸನಗಳ ಸೂಚಿಯನ್ನು ಬೆಂಗಳೂರಿನ ಸಂಶೋಧಕರಾದ ಎಸ್. ಕಾರ್ತಿಕ್ ಅವರು ಸಿದ್ಧಪಡಿಸಿದ್ದಾರೆ. ಅದನ್ನು ಇಲ್ಲಿ ನೀಡಲಾಗಿದೆ. ಈ ಸೂಚಿಯನ್ನು ಉಲ್ಲೇಖಿಸುವವರು ಎಸ್. ಕಾರ್ತಿಕ್ ಅವರ ಹೆಸರಿನಲ್ಲಿ ಉಲ್ಲೇಖಿಸಬೇಕು. ಇಲ್ಲಿ ಇದನ್ನು ಪ್ರಕಟಿಸಲು ಒಪ್ಪಿಗೆಯಿತ್ತ ಎಸ್. ಕಾರ್ತಿಕ್ ಅವರಿಗೆ ಕೃತಜ್ಞತೆಗಳು.]

ವಿದ್ಯಾರಣ್ಯರ ಜೀವಿತಾವಧಿಯಲ್ಲಿನ ಶಾಸನಗಳ ಸೂಚಿ [ಕ್ರಿ.ಶ. ೧೩೩೬-೧೩೮೬]

-ಎಸ್ ಕಾರ್ತಿಕ್

ಕ್ರಮ ಸಂಖ್ಯೆ	ಶಾಸನ ದೊರೆತ ಸ್ಥಳ	ಜಿಲ್ಲೆ/ ತಾಲ್ಲೂಕು/ ರಾಜ್ಯ	ಕಾಲ (ಕ್ರಿ.ಶಕೆಯಲ್ಲಿ ಚಾಂದ್ರಮಾನ ಪಂಚಾಂಗದಂತೆ)	ಭಾಷೆ	ಲಿಪಿ	ಪ್ರಕಟಿತ ಆಕರಗಳು	ವಿವರಗಳು
೧	ಹಾಲ್ಕಾವಟಗಿ ಗ್ರಾಮದ ದತ್ತಾತ್ರೇಯ ಶಿವರಾ ಮ ಪುರೋಹಿತರ ಮನೆಯ ತಾಮ್ರಪಟ	ರಾಯಚೂ ರು/ಲಿಂಗ ಸೂಗೂರು/ ಕರ್ನಾಟಕ	೧೮-೪-೧೩೩೬	ಸಂಸ್ಕೃತ + ಕನ್ನಡ	ನಂದಿ ನಾಗರೀ	ವಿಜಯನಗರ ಅಧ್ಯಯನ-೧೦. ೨೦೦೫. ಪ್ರಕಟನೆ : ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ. ಮೈಸೂರು. ೨೦೦೫. ಪು ೧೬-೨೯	ಈ ಶಾಸನದ ಸಂಪಾದಕರು ಇದನ್ನು ಕೃತಕ ಶಾಸನವೆಂದೇ ಹೇಳಿದ್ದಾರೆ.
೨	ಬೆಸ್ತರಹಳ್ಳಿಯ ತಾಮ್ರಶಾಸನ	ಚಿಕ್ಕಬಳ್ಳಾ ಪುರ/ ಬಾಗೇಪಲ್ಲಿ/ ಕರ್ನಾಟಕ	೧೮-೪-೧೩೩೬	ಸಂಸ್ಕೃತ + ತೆಲುಗು	ಕನ್ನಡ	(ಅ) ಎಪಿಗ್ರಾಫಿಯಾ ಕರ್ಣಾಟಿಕಾ-೧೦. ಭಾಗ-೨. ಬಾಗೇಪಲ್ಲಿ-೭೦. ಪುಟ ೨೯೧ (ರೈಸ್ ಆವೃತ್ತಿ) (ಆ) Uttankita Sanskrit Vidya-Aranya Epigraphs (Vidyaranya, Volume-1), Preparad by Uttankita Vidya-Aranya Trust, Bharatiya Vidya Bhavan, Bombay, 1985, p 35-47	ಇದು ಮೂಲ ತಾಮ್ರ ಶಾಸನದ ನಕಲು ಕಾಗದದ ಪ್ರತಿ.
೩	ನೆಲ್ಲೂರು ಕಲೆಕ್ಟರ್ ಕಛೇರಿಯಲ್ಲಿದ್ದಕಾಪ ಲೂರು ತಾಮ್ರಶಾಸನ	ನೆಲ್ಲೂರು/ ನೆಲ್ಲೂರು/ ಆಂಧ್ರ ಪ್ರದೇಶ	೧೮-೪-೧೩೩೬	ಸಂಸ್ಕೃತ + ತೆಲುಗು	ನಂದಿನಾ ಗರೀ	(ಅ) A Collection of the Inscriptions on Copper-Plate and Stones in the Nellore District {Part -1, (Ed) Alan Butterworth & V. Venugopal Chetty, Madras-1905; Asian Educational Services, Delhi, Madras-1990, No-15, p 109-124 (ಆ) Uttankita Sanskrit Vidya-Aranya Epigraphs (Vidyaranya, Vol-1) , p 47-59	ಈ ಶಾಸನ ಪತ್ತೆಯಾದ ಸ್ಥಳದ ವಿವರ ಅಜ್ಞಾತವಾಗಿದೆ.
೪	ಮುಡಿಯನೂರು ಗ್ರಾಮದಲ್ಲಿದ್ದ ತಾಮ್ರಶಾಸನ	ಕೋಲಾರ/ ಮುಳಬಾ ಗಲು/ ಕರ್ನಾಟಕ	೨೩-೩-೧೩೪೪	ಸಂಸ್ಕೃತ + ತೆಲುಗು	ಕನ್ನಡ	(ಅ) ಎಪಿಗ್ರಾಫಿಯಾ ಕರ್ಣಾಟಿಕಾ-೧೦. ಭಾಗ-೨. ಮುಳಬಾಗಲು-೧೫೮. ಪು ೧೦೭-೧೧೦ (ರೈಸ್) (ಆ) Uttankita Sanskrit Vidya-Aranya Epigraphs (Vidyaranya, Volume-1) , No-3	ಇದರಲ್ಲಿ ಕಾಲ ರಸಾಬ್ಧಿ ನಯನೇಂದು. ತಾರಣ ಸಂವತ್ಸರ. ಚೈತ್ರಶುಕ್ಲ ನವಮೀ ಎಂದಿದೆ. ಗೌರೀಬಿದನೂರು-೪೬ ಶಾಸನಕ್ಕೂ ಈ ಶಾಸನಕ್ಕೂ ಬಹಳವಾಗಿ ಪಾಠಸಾಮ್ಯವಿದ್ದು ಒಂದೇ ಶಾಸನದ ಎರಡು ಪ್ರತಿಗಳಿರ ಬೇಕೆಂದು ತರ್ಕಿಸಲು ಅವಕಾಶವಿದೆ
೫	ಬೊಮ್ಮಸಂದ್ರ ಹೋಬಳಿ ಹೊಸೂರು ರಮಾಪುರದ ಪಟೇಲ ಜಟಾವಲ್ಲಭನಲ್ಲಿದ್ದ ತಾಮ್ರಶಾಸನ	ಚಿಕ್ಕಬಳ್ಳಾ ಪುರ/ ಗೌರೀಬಿದ ನೂರು/ ಕರ್ನಾಟಕ	೨೩-೩-೧೩೪೪	ಸಂಸ್ಕೃತ + ತೆಲುಗು	ನಂದಿ ನಾಗರೀ	ಎಪಿಗ್ರಾಫಿಯಾ ಕರ್ಣಾಟಿಕಾ-೧೦. ಭಾಗ-೨. ಗೌರೀಬಿದನೂರು-೪೬. ಪು ೨೯೨-೨೯೬ (ರೈಸ್ ಆವೃತ್ತಿ)	ಈ ಶಾಸನದಲ್ಲಿ ಕಾಲವನ್ನು ರಸಾಬ್ಧಿ ನಯನೇಂದು. ತಾರಣ ಸಂವತ್ಸರ ಚೈತ್ರ ಶುಕ್ಲ ನವಮೀ ಎಂದು ಹೇಳಿದೆ. ಇದು ಶಕ ೧೨೬೪ ಕ್ಕೆ ಸರಿಹೊಂದುತ್ತದೆ. ಆದರೆ ಬುಕ್ಕರಾಯನ ಆಳ್ವಿಕೆಯ ವರ್ಷಕ್ಕೆ ಸರಿಹೊಂದು ವುದಿಲ್ಲ

							ರೈಸ್ ಅವರು ಇದನ್ನು ಗಮನಿಸಿ ಶಕ ೧೨೯೨. ಸಾಧಾರಣ ಸಂವತ್ಸರವನ್ನು ಗ್ರಹಿಸಿದ್ದಾರೆ. ಆದರೆ ಮುಳಬಾಗಲು-೧೫೮ ರ ಪಾಠಕ್ಕೂ ಇದಕ್ಕೂ ತುಂಬಾ ಸಾಮ್ಯವಿದೆ. ರಸಭೂ ಎಂಬುದನ್ನು ಮುಳಬಾಗಲು ಶಾಸನದ ಪಾಠದಂತೆ ರಸಾಭ್ರ ಎಂದು ತಿದ್ದಿಕೊಂಡರೆ ಕಾಲ ಯಾವುದೇ ಗೊಂದಲಗಳೂ ಇಲ್ಲದೆ ಸರಿಹೊಂದುತ್ತದೆ. ಇಲ್ಲಿ ರಸಾಭ್ರನಯನೇಂದು ಎಂಬ ಪಾಠವನ್ನೇ ಗ್ರಹಿಸಿದೆ.
೬	ನೀರುಮಾರ್ಗದ ಶ್ರೀನಿವಾಸ ಭಟ್ಟರ ಮನೆಯ ಬಾವಿಯ ಬಳ ಹಾಸಿರುವ ಕಲ್ಲು	ದಕ್ಷಿಣಕನ್ನಡ /ಮಂಗ ಳೂರು/ ಕರ್ನಾಟಕ	ಸುಮಾರು ೧೩೫೩-೫೪	ಕನ್ನಡ	ಕನ್ನಡ	(ಅ) ಶತನಮನ {ಜಿ.ವಿ. ಅಭಿನಂದನ ಗ್ರಂಥ. (ಪ್ರಸಂ) ಪಿ.ವಿ. ನಾರಾಯಣ}. ಶ್ರೀಜಯರಾಮ ಸೇವಾಮಂಡಲಿ. ಜಯನಗರ. ಬೆಂಗಳೂರು-೨೦೧೨. ಪು ೬೪ (ಆ) ವಿದ್ಯಾರಣ್ಯರ ಉಲ್ಲೇಖ ಇರುವ ಒಂದು ಪ್ರಾಚೀನ ಶಿಲಾಶಾಸನ-ಪಿ.ಎನ್. ನರಸಿಂಹ ಮೂರ್ತಿ, ಇತಿಹಾಸ ದರ್ಶನ-೨೮, ೨೦೧೩. ಸಂಖ್ಯೆ-೧೮. ಪು ೮೩	ಈ ಶಾಸನದಲ್ಲಿ ಕಾಲದ ಉಲ್ಲೇಖವಿರುವ ಭಾಗ ಬಹುಶಃ ತ್ರುಟಿತವಾಗಿದೆ. ಪಿ.ಎನ್. ನರಸಿಂಹಮೂರ್ತಿ ಅವರು ಶಾಸನೋಕ್ತ ವಿವರಗಳು ಮತ್ತು ಬಾಹ್ಯಾಧಾರಗಳ ಸಹಾಯ ದಿಂದ ಶಾಸನದ ಕಾಲವನ್ನು ನಿರ್ಣಯಿಸಿದ್ದಾರೆ.
೭	ಉಳಾಯಿಬೆಟ್ಟಿನ ಶಿವದೇವಾಲಯದ ಪ್ರಾಕಾರದಲ್ಲಿ ನಿಲ್ಲಿಸಿರುವ ಶಿಲಾ ಶಾಸನ	ದಕ್ಷಿಣಕನ್ನಡ /ಮಂಗಳೂ ರು/ಕರ್ನಾ ಟಕ	೧೪-೬-೧೩೭೫	ಕನ್ನಡ	ಕನ್ನಡ	(ಅ) ಸೌತ್ ಇಂಡಿಯನ್ ಇನ್ಸ್‌ಕ್ರಿಪ್ಷನ್ಸ್-೨೭. ಸಂಖ್ಯೆ-೫೫ (ಆ) Inscriptions of the Vijayanagara Rulers {Vol-1,Part-1, Kannada Inscriptions},(Ed) Srinivasa Ritti, B.R. Gopal, I.C.H.R. & Northern Book Centre, New Delhi, 2004, p 252, No-125 (ಇ) ಮಾಧ್ವ ಮಠಗಳ ಶಾಸನಗಳು (ಸಂಪುಟ-೨) (ಸಂ) ಎಂ.ಜಿ. ಮಂಜುನಾಥ, ಕೆ.ಜಿ. ಗೋಪಾಲಕೃಷ್ಣ ರಾವ್. ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲ ಮಹಾಸಂಸ್ಥಾನ. ಮಂತ್ರಾಲಯ-೨೦೦೮. ಸಂಖ್ಯೆ-೧೫. ಪು ೩೩-೩೫	ಇದರಲ್ಲಿ ವಿದ್ಯಾರಣ್ಯರನ್ನು ವಿದ್ಯಾಗಿರಿ ತೀರ್ಥ ಎಂದು ಕರೆಯಲಾಗಿದೆ ಎಂಬುದಾಗಿ ಪಿ.ಎನ್. ನರಸಿಂಹಮೂರ್ತಿ ಅವರ ಅಭಿಪ್ರಾಯ
೮	ಕುಡುಪು ಅನಂತ ಪದ್ಮನಾಭಸ್ವಾಮಿ ದೇವಾಲಯದ ಹೊರ ಪ್ರಾಕಾರದಲ್ಲ ಇರುವ ಎರಡು ಭಾಗವಾಗಿ ರುವ ಶಿಲಾಶಾಸನ	ದಕ್ಷಿಣಕನ್ನಡ /ಮಂಗಳೂ ರು/ಕರ್ನಾ ಟಕ	೨೫-೧೦-೧೩೭೫	ಕನ್ನಡ	ಕನ್ನಡ	(ಅ) Uttankita Sanskrit Vidya-Aranya Epigraphs (Vidyaranya, Vol-1) ,page 84-86 (ಆ) ಸೌತ್ ಇಂಡಿಯನ್ ಇನ್ಸ್‌ಕ್ರಿಪ್ಷನ್ಸ್-೨೭. ಸಂಖ್ಯೆ-೫೬ (ಇ) Inscriptions of the Vijayanagara Rulers {Volume-1, Part-1, Kannada Inscriptions} - p 254-256. No-126	ಇದರ ಪಾಠ ಕಡತದಲ್ಲಿ ನಕಲಾಗಿದ್ದು 'ಶೃಂಗೇರಿಮಠದ ಕಡತ ಗಳಲ್ಲಿಯ ಆಯ್ದ ಚಾರಿತ್ರಿಕ ದಾಖಲೆಗಳು'- ಎ.ಕೆ. ಶಾಸ್ತ್ರಿ, ಕರ್ನಾಟಕರಾಜ್ಯ ಪತ್ರಾಗಾರ ನಿರ್ದೇಶನಾಲಯ. ಬೆಂಗಳೂರು-೨೦೦೩. ಪುಟ ೧೨೭-೧೨೭. ಸಂಖ್ಯೆ-೧೯ ರಲ್ಲಿ ಪ್ರಕಟವಾಗಿದೆ. ಆದರೆ ಕಾಲ ಮಾತ್ರ ಶಕ ೧೫೨೭ ಎಂದು ತಪ್ಪಾಗಿ ಅಚ್ಚಾಗಿದೆ. ಮೂಲ ಶಿಲಾಶಾಸನವೂ ಲಭ್ಯವಾಗಿರುವುದು ಗಮನಿಸಬೇಕಾದ ಅಂಶ

೯	ನಾಗಲಾಪುರ ನಾಗೇಶ್ವರ ದೇವಾಲಯದ ಬಳಿ ಈಶಾನ್ಯ ದಿಕ್ಕಿನಲ್ಲಿ ನೆಟ್ಟಿರುವ ಒಂದನೆಯ ಕಲ್ಲು	ಚಿಕ್ಕಮಗಳೂರು/ ನರಸಿಂಹರಾಜಪುರ/ ಕರ್ನಾಟಕ	೫-೧೦-೧೩೭೭	ಕನ್ನಡ	ಕನ್ನಡ	(ಅ) ಎಪಿಗ್ರಾಫಿಯಾ ಕರ್ಣಾಟಿಕಾ-೬. ಕೊಪ್ಪ-೧೯ (ರೈಸ್) (ಆ) ಎಪಿಗ್ರಾಫಿಯ ಕರ್ನಾಟಿಕ (ಪರಿಷ್ಕೃತ)-೧೨. ನರಸಿಂಹರಾಜಪುರ -೧೫. ಪು ೪೫೫-೪೫೬ (ಇ) Uttankita Sanskrit Vidya-Aranya Epigraphs (Vidyaranya, Volume-1) , p 87-90 (ಈ) Inscriptions of the Vijayanagara Rulers {Volume-1, Part-2, Kannada Inscriptions}, page 323-325, No-157	ಶಾಸನದಲ್ಲಿ ಶಕವರ್ಷ ೧೩೩೧ ಎಂದು ತಪ್ಪು ಬಿದ್ದಿದೆ. ಆದರೆ ಈ ಶಾಸನದಲ್ಲಿ ಇಮ್ಮಡಿ ಹರಿಹರನ ಉಲ್ಲೇಖವಿರುವುದು ರಿಂದಲೂ ಶಕವರ್ಷ ೧೨೯೯ ಎಂದಿರಬೇಕು.
೧೦	ಭಂಡಿಗಡಿ ವಿಶ್ವೇಶ್ವರ ದೇವಾಲಯದಲ್ಲಿ ನೆಟ್ಟಿರುವ ಕಲ್ಲು	ಚಿಕ್ಕಮಗಳೂರು/ ಕೊಪ್ಪ/ ಕರ್ನಾಟಕ	೧೧-೬-೧೩೭೮	ಕನ್ನಡ	ಕನ್ನಡ	(ಅ) ಎಪಿಗ್ರಾಫಿಯಾ ಕರ್ಣಾಟಿಕಾ-೬. ಕೊಪ್ಪ-೩೦ (ರೈಸ್) (ಆ) ಎಪಿಗ್ರಾಫಿಯ ಕರ್ನಾಟಿಕ (ಪರಿಷ್ಕೃತ)-೧೨. ಕೊಪ್ಪ-೨೫. ಪು ೩೦೫-೩೦೬ (ಇ) Uttankita Sanskrit Vidya-Aranya Epigraphs (Vidyaranya, Vol-1), p 91-94 (ಈ) Inscriptions of the Vijayanagara Rulers {Volume-1, Part-2, Kannada Inscriptions}, p 405-406, No-189	
೧೧	ಪಡುವರಿ ಸೋಮೇಶ್ವರ ದೇವಸ್ಥಾನದ ರಸ್ತೆ ಸಮೀಪದ ಹೊಲವೊಂದರಲ್ಲಿ ನಟ್ಟಿರುವ ಶಾಸನ	ಉಡುಪಿ/ ಕುಂದಾಪುರ/ಕರ್ನಾಟಕ	೨೯-೧೨-೧೩೭೮	ಕನ್ನಡ	ಕನ್ನಡ	(ಅ) ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್-೨೭. ಸಂಖ್ಯೆ-೫೯ (ಆ) ಕುಂದನಾಡಿನ ಶಾಸನಗಳು-(ಸಂ) ಪಿ.ಎನ್. ನರಸಿಂಹಮೂರ್ತಿ, ಸ್ವಾಗತ ಸಮಿತಿ, ಅಖಿಲ ಭಾರತ ೭೮ ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಉಡುಪಿ-೨೦೦೬. ಪು ೨೦೯. ಶಾಸನ ಸಂಖ್ಯೆ-೪೪	ಶಾಸನದಲ್ಲಿ ಶಕ ೧೪೦೨ ಎಂದು ತಪ್ಪಾಗಿ ಕೆತ್ತಲಾಗಿದೆ. ಈ ಶಾಸನದಲ್ಲಿ ಬರುವ ವಿದ್ಯಾನಾಥರು ವಿದ್ಯಾರಣ್ಯರಿರಬೇಕೆಂದು ಪಿ.ಎನ್. ನರಸಿಂಹಮೂರ್ತಿ ಅವರು ಅಭಿಪ್ರಾಯಪಡುತ್ತಾರೆ.
೧೨	ಶೃಂಗೇರಿ ಮಠದಲ್ಲಿರುವ ಕಡತದಲ್ಲಿನ ತಾಮ್ರ ಶಾಸನದ ನಕಲು ಪ್ರತಿ	ಚಿಕ್ಕಮಗಳೂರು/ ಶೃಂಗೇರಿ/ ಕರ್ನಾಟಕ	೨೭-೧೧-೧೩೮೦	ಕನ್ನಡ	ಕನ್ನಡ	(ಅ) ಮೈಸೂರು ಪುರಾತತ್ತ್ವ ಇಲಾಖೆಯ ವಾರ್ಷಿಕ ವರದಿ-೧೯೩೩. ಸಂಖ್ಯೆ-೩೩. ಪುಟ ೨೧೧-೨೨೮ (ಆ) Inscriptions of the Vijayanagara Rulers {Vol-1, Part-2, Kannada Inscriptions}– p 378, No-180 (ಇ) The Records of the Sringeri Dharma samsthana - (Ed) A.K. Shastry, Sringeri Matha, Sringeri-2009. ಪು ೪೬-೫೨. ಸಂಖ್ಯೆ-೩	ಇದು ಮೂಲ ತಾಮ್ರಶಾಸನದ ನಕಲು. ಕಡತದಲ್ಲಿ ಬರೆಯಲಾಗಿದೆ
೧೩	ಕುಂಢ್ಯೆರೆ ಮಲ್ಲಿಕಾರ್ಜುನದೇವಾಲಯದ ಬಳಿಯ ಶಿಲಾಶಾಸನ	ಚಿಕ್ಕಮಗಳೂರು/ ಕೊಪ್ಪ/ ಕರ್ನಾಟಕ	೨೩-೮-೧೩೮೧	ಕನ್ನಡ	ಕನ್ನಡ	(ಅ) ಎಪಿಗ್ರಾಫಿಯ ಕರ್ನಾಟಿಕ (ಪರಿಷ್ಕೃತ)-೧೨. ಕೊಪ್ಪ-೪೨. ಪು ೪೮೭-೪೮೮ (ಆ) ಕೊಪ್ಪ ತಾಲ್ಲೂಕಿನ ಹೊಸ ಶಾಸನಗಳು-(ಸಂ) ಮೇಕನಗದ್ದೆ ಲಕ್ಷ್ಮಣಗೌಡ, ಓಣಿಮನೆ ಪ್ರಕಾಶನ, ಮೇಕನಗದ್ದೆ-೨೦೦೨, ಸಂಖ್ಯೆ-೧	

						(ಇ) ಶಾಸನ ಸಂಪದ-ಎಚ್. ಎಂ. ನಾಗರಾಜರಾವ್. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ. ಮೈಸೂರು-೨೦೧೧. ಪು ೩೨-೩೫ (ಈ) Kundkere Inscription of Harihara-2, by H. M. Nagaraja Rao, Sri Puspanjali (Dr. C.R. Srinivasan commemoration volume), Bharatiya Kala Prakashan, Delhi-2004, p 376-378	
೧೪	ಸ್ವಾದಿ ಜೈನಮಠದಲ್ಲಿದ್ದ ಹೊಸಹಳ್ಳಿ ತಾಮ್ರಶಾಸನ	ಉತ್ತರ ಕನ್ನಡ/ ಶಿರಸಿ/ ಕರ್ನಾಟಕ	೩-೫-೧೩೮೪	ಸಂಸ್ಕೃತ ಕನ್ನಡ	ನಂದಿನಾಗರೀ	(ಅ) Journal of Bombay Historical Society, Volume-1, No-2, p 121 (ಆ) Uttankita Sanskrit Vidya-Aranya Epigraphs (Vidyaranya, Volume-1), p 95-103	ಈ ಶಾಸನದಲ್ಲಿ ವಿದ್ಯಾರಣ್ಯರ ಹೆಸರಿನ ಜೊತೆಗೆ ಕ್ರಿಯಾಶಕ್ತಿಗಳ ಹೆಸರೂ ಇದೆ. ಶಾಸನದಲ್ಲಿ ಸಂಖ್ಯಾಶಬ್ದಗಳಲ್ಲಿ ಶಕ ವರ್ಷವನ್ನು ೧೩೦೮ ರಕ್ತಾಕ್ಷಿ ಸಂವತ್ಸರ ಎಂದು ಹೇಳಲಾಗಿದೆ. ಆದರೆ ಶಕ ೧೩೦೮ ರಲ್ಲಿ ರಕ್ತಾಕ್ಷಿ ಸಂವತ್ಸರ ಬರುವುದಿಲ್ಲ. ಶಕ ೧೩೦೬ ರಲ್ಲಿ ಬರುತ್ತದೆ. ಆದ ಕಾರಣ ಶಕ ೧೩೦೬ ರಕ್ತಾಕ್ಷಿ ಸಂವತ್ಸರ ಎಂದು ಪರಿಗಣಿಸಿ ಕಾಲವನ್ನು ನೀಡಲಾಗಿದೆ. ಅಥವಾ ಸಂಖ್ಯಾಶಬ್ದವಾದ ವಸು ಎಂಬುದರ ಪಾಠವೇ ತಪ್ಪಾಗಿದೆಯೋ ಎಂಬ ಅಂಶ ವಿಚಾರಣೀಯ. ಈ ಶಾಸನವನ್ನು ವಿದ್ವಾಂಸರು ಕೂಟವೆಂದು ಪರಿಗಣಿಸಿದ್ದಾರೆ. ಆದರೆ ಕೂಟವೆಂದು ಪರಿಗಣಿಸಲು ನೀಡಿರುವ ಆಧಾರಗಳು ಸಮರ್ಥನೀಯವಾಗಿಲ್ಲ.
೧೫	ಶೃಂಗೇರಿ ಮಠ ದಲ್ಲಿರುವ ಎರಡನೆಯ ತಾಮ್ರಶಾಸನ (ಬೆಳುಗುಳ ತಾಮ್ರ ಶಾಸನ)	ಚಿಕ್ಕಮಗಳೂರು/ ಶೃಂಗೇರಿ/ ಕರ್ನಾಟಕ	೨೫-೧೧-೧೩೮೪	ಸಂಸ್ಕೃತ +ಕನ್ನಡ	ನಾಗರೀ	(ಅ) ಮೈಸೂರು ಪುರಾತತ್ತ್ವ ಇಲಾಖೆಯ ವಾರ್ಷಿಕ ವರದಿ-೧೯೩೩, ಸಂಖ್ಯೆ-೨೩. ಪುಟ ೧೩೨-೧೩೮ (ಆ) ಎಪಿಗ್ರಾಫಿಯ ಕರ್ನಾಟಕ (ಪರಿಷ್ಕೃತ)-೧೧. ಶೃಂಗೇರಿ-೩೧. ಪು ೨೬೧-೨೬೫ (ಇ) Uttankita Sanskrit Vidya-Aranya Epigraphs (Vidyaranya, Volume-1), No-10 (ಈ) Inscriptions of the Vijayanagara Rulers {Vol-1, Part-2, Kannada Inscriptions}, p 440, No-205	ಈ ಶಾಸನದಲ್ಲಿ ವಿದ್ಯಾರಣ್ಯರ ಶಿಷ್ಯರಾದ ಸೂರಪ್ಪ ಮತ್ತು ಕೃಷ್ಣಪ್ಪ ಎಂಬವರಿಗೆ ಬೆಳಗೊಳ ಗ್ರಾಮವನ್ನು ದಾನ ನೀಡಿದ ವಿವರಗಳಿವೆ.
೧೬	ಪಶ್ಚಿಮವಾಹಿನಿ ಗೋಪೀನಾಥ ಗುಡಿಯ ಮುಂದೆ ನೆಟ್ಟಿರುವ ಎರಡನೆಯ ಕಲ್ಲು	ಚಿಕ್ಕಮಗಳೂರು/ ಶೃಂಗೇರಿ/ ಕರ್ನಾಟಕ	೨೯-೧-೧೩೮೬	ಕನ್ನಡ	ನಾಗರೀ	(ಅ) ಮೈಸೂರು ಪುರಾತತ್ತ್ವ ಇಲಾಖೆಯ ವಾರ್ಷಿಕ ವರದಿ-೧೯೩೪. ಸಂಖ್ಯೆ-೩೭. ಪುಟ ೧೩೯-೧೪೨ (ಆ) ಎಪಿಗ್ರಾಫಿಯ ಕರ್ನಾಟಕ (ಪರಿಷ್ಕೃತ)-೧೧. ಶೃಂಗೇರಿ-೭೮. ಪು ೩೪೬-೩೪೭ (ಇ) Uttankita Sanskrit Vidya-Aranya Epigraphs (Vidyaranya, Volume-1),No-11	

೧೭	ಶೃಂಗೇರಿ ಮಠ ದಲ್ಲಿರುವ ಮೂರ ನೆಯ ತಾಮ್ರಶಾಸನ (ವಿದ್ಯಾರಣ್ಯಪುರ ತಾಮ್ರಶಾಸನ)	ಚಿಕ್ಕಮಗ ಳೂರು/ ಶೃಂಗೇರಿ/ ಕರ್ನಾಟಕ	೨೭-೫-೧೩೮೬	ಸಂಸ್ಕೃತ + ಕನ್ನಡ	ನಾಗರೀ	(ಅ) ಮೈಸೂರು ಪುರಾತತ್ತ್ವ ಇಲಾಖೆಯ ವಾರ್ಷಿಕ ವರದಿ-೧೯೩೩, ಸಂಖ್ಯೆ-೨೪, ಪು ೧೩೮-೧೪೩ (ಆ) ಎಪಿಗ್ರಾಫಿಯ ಕರ್ನಾಟಿಕ (ಪರಿಷ್ಕೃತ)-೧೧, ಶೃಂಗೇರಿ-೩೨, ಪು ೨೭೫-೨೩೮ (ಇ) Uttankita Sanskrit Vidya-Aranya Epigraphs (Vidyaranya, Volume-1), No-12 (ಈ) Inscriptions of the Vijayanagara Rulers {Volume-1, Part-2, Kannada Inscriptions}, p 446-449, No-208 (ಉ) The Records of the Sringeri Dharma samsthana - (Ed) A.K. Shastry, Sringeri Matha, Sringeri-2009, ಪು ೫೪-೫೯ ಸಂಖ್ಯೆ-೭	ಈ ಶಾಸನವು ವಿದ್ಯಾರಣ್ಯರು ಮುಕ್ತರಾದಾಗ ಅವರ ಹೆಸರಿನಲ್ಲಿ ಇಮ್ಮಡಿ ಹರಿಹರನಿಂದ ವಿದ್ಯಾರಣ್ಯಪುರ ಅಗ್ರಹಾರವು ಸ್ಥಾಪಿಸಲ್ಪಟ್ಟಿತು ಎಂಬ ವಿವರ ನೀಡುತ್ತದೆ. ಈ ಶಾಸನವು ಎಲ್ಲಾ ಆಕರಗಳಲ್ಲಿಯೂ ಅಸಮಗ್ರವಾಗಿ ಪ್ರಕಟವಾಗಿದೆ. ಈ ಶಾಸನದ ನಕಲು ಪ್ರತಿಯೊಂದು ಕಡತದಲ್ಲಿ ದಾಖಲಾಗಿ ಶೃಂಗೇರಿ ಮಠದಲ್ಲಿಯೇ ಇದ್ದು ಶಾಸನದ ಪೂರ್ಣಪಾಠ ಸಮಗ್ರವಾಗಿ ದೊರೆಯುತ್ತದೆ. ಇದನ್ನು ಎ.ಕೆ. ಶಾಸ್ತ್ರಿ ಅವರು ಪ್ರಕಟಿಸಿದ್ದಾರೆ. ಆದರೆ ಮೂಲ ಶಾಸನವು ಅಸಮಗ್ರವಾಗಿ ಪ್ರಕಟವಾಗಿರುವುದು ಎ.ಕೆ. ಶಾಸ್ತ್ರಿಯವರ ಗಮನಕ್ಕೆ ಬಂದಿಲ್ಲ.
೧೮	ಇನಾಂ ಆಫೀಸ್ ಸೂಪರಿಂಟೆಂಡೆಂಡ್ ಅವರಿಂದ ಕಳುಹಿ ಸಲ್ಪಟ್ಟ ಶೃಂಗೇರಿ ಗ್ರಾಮದ ತಾಮ್ರ ಶಾಸನ	ಬೆಂಗಳೂರು / ಬೆಂಗಳೂರು / ಕರ್ನಾಟಕ	೩೦-೫-೧೩೮೬	ಕನ್ನಡ	ನಾಗರೀ	(ಅ) ಎಪಿಗ್ರಾಫಿಯಾ ಕರ್ನಾಟಿಕಾ (ಸಂಪುಟ-೯, ಬೆಂಗಳೂರು ಜಿಲ್ಲೆಯ ಅಪ್ರಕಟಿತ ಪುರವಣಿ), ಸಂಖ್ಯೆ-೧೪೭, ಪುಟ ೨೭-೨೭	ಈ ಅಸಮಗ್ರ ಶಾಸನವು ಮೊದಲು ೧೯೦೮ ರ ಮೈಸೂರು ಪುರಾತತ್ತ್ವ ಇಲಾಖೆಯ ವಾರ್ಷಿಕ ವರದಿಯಲ್ಲಿ ಸಾರಾಂಶ ಮಾತ್ರವಾಗಿ ದಾಖಲಾಗಿದೆ. ಈ ಶಾಸನದ ನಕಲು ಪ್ರತಿಯೊಂದಿದ್ದು The Records of the Sringeri Dharmasamsthana - (Ed) A.K. Shastry, Sringeri Matha, Sringeri-2009, ಪುಟ ೫೩-೫೪ ರಲ್ಲಿ ಪ್ರಕಟವಾಗಿದೆ. ಮೂಲ ಶಾಸನ ಮತ್ತು ನಕಲು ಪ್ರತಿ ಎರಡೂ ದೊರಕಿರುವುದು ಗಮನಾರ್ಹ ಅಂಶ. ಶಾಸನದಲ್ಲಿ ಕಾಲ 'ಶಕ ೧೩೦೮ ಸಂದು ವರ್ತಮಾನ ಕ್ಷಯ ಸಂವತ್ಸರ, ದ್ವಿತೀಯಾ ಷಾಢ ಶುದ್ಧ, ಬಿದಿಗೆ, ಮಂಗಳ ವಾರ' ಎಂದಿದೆ. ದ್ವಿತೀಯಾಷಾಢ ಎಂದರೆ ಅಧಿಕಮಾಸ ಎಂದರ್ಥ. ಆದರೆ ಮತ್ತೊಂದು ಆಕರದಂತೆ ೧೩೮೬ ರಲ್ಲಿ ಜೇಷ್ಠಮಾಸ ಅಧಿಕಮಾಸವಾಗಿರುತ್ತದೆ. ದ್ವಿತೀಯ ಎಂಬ ಪೂರ್ವಪದವನ್ನು ಅಧಿಕ ಎಂದು ತಿಳಿಯಬೇಕೇ ? ನಿಜಮಾಸ ಎಂದು ತಿಳಿಯಬೇಕೇ ? ಎಂಬುದು ವಿಚಾರಣೀಯ ಆದರೆ ಲಭ್ಯವಿರುವ ಇತರ ಪ್ರಯೋಗಗಳ ಆಧಾರದಿಂದ ನಿಜಮಾಸ ಎಂದು ಅರ್ಥೈಸುವುದು ಸೂಕ್ತ. ಈ ಶಾಸನದಲ್ಲಿ ನಾರಾಯಣ ವಾಜಪೇಯಿ, ನರಹರಿ ಸೋಮಯಾಜಿ, ಪಾಂಡುರಂಗ ದೀಕ್ಷಿತರಿಗೆ ದಾನಕೊಟ್ಟ ವಿವರಗಳಿವೆ.
೧೯	ಕಂಚಿಯ ವರದರಾಜ ಸ್ವಾಮಿ ದೇವಾಲಯದ ಶಿಲಾ ಶಾಸನ	ಕಾಂಚೀ ಪುರಂ/ ಕಾಂಚೀ ಪುರಂ/ ತಮಿಳು ನಾಡು	ಸುಮಾರು ೧೩೫೦	ಸಂಸ್ಕೃತ	ಗ್ರಂಥ	(ಅ) ಎಪಿಗ್ರಾಫಿಯಾ ಇಂಡಿಕಾ-೩, ಪುಟ ೧೧೮-೧೧೯ (ಆ) Uttankita Sanskrit Vidya-Aranya Epigraphs (Vidyaranya, Volume-1),p 33-34	ಇದು ವಿದ್ಯಾರಣ್ಯರ ಪೂರ್ವಾಶ್ರಮದ ಸಂಬಂಧಗಳನ್ನು ತಿಳಿಸುವ ಶಾಸನ. ಇದರಲ್ಲಿ ಕಾಲದ ಉಲ್ಲೇಖವಿಲ್ಲ. ಕ್ರಿ.ಶ. ಸುಮಾರು ೧೩೫೦ ಎಂದು ಹೇಳಬಹುದು. ಇದರ ಪಾಠ ತ್ರುಟಿತವಾಗಿದ್ದು ಸ್ವಾಲತ್ಯ ಗಳಿಂದ ಕೂಡಿದೆ. ಆದರೆ ಡಿ. ವಿ. ಜಿ ಅವರು ಬಾಹ್ಯಾಧಾರಗಳ ಬಲದಿಂದ ಓದಿರುವ ಪಾಠ ತೃಪ್ತಿಕರವಾಗಿದ್ದು ಗ್ರಾಹ್ಯವಾದುದೆಂದು ಹೇಳಬಹುದು. (ನೋಡಿ : ಡಿ.ವಿ.ಜಿ. ಕೃತಿ ಶ್ರೇಣಿ-೪, ಪುಟ ೨೩೯-೩೪೦, ೨೦೦೫ ರ ಆವೃತ್ತಿ).

ಗೊಂದಲಗಳಿಂದ ಕೂಡಿರುವ ವಿದ್ಯಾರಣ್ಯರಿಗೆ ಸಂಬಂಧಿಸಿದ ಶಾಸನಗಳು							
೧	ಶೃಂಗೇರಿ ಮಠದ ಕಡತದಲ್ಲಿ ದಾಖಲಾಗಿರುವ ತಾಮ್ರಶಾಸನದ ನಕಲು	ಚಿಕ್ಕಮಗಳೂರು/ ಶೃಂಗೇರಿ/ ಕರ್ನಾಟಕ		ಕನ್ನಡ	ಕನ್ನಡ	(ಅ) ಶೃಂಗೇರಿಮಠದ ಕಡತಗಳಲ್ಲಿಯ ಆಯ್ದ ಚಾರಿತ್ರಿಕ ದಾಖಲೆಗಳು -ಎ. ಕೆ. ಶಾಸ್ತ್ರಿ, ಕರ್ನಾಟಕ ರಾಜ್ಯ ಪತ್ರಾಗಾರ ನಿರ್ದೇಶನಾಲಯ, ಬೆಂಗಳೂರು-೨೦೦೩, ಪು ೧೦೪-೧೦೬, ಸಂಖ್ಯೆ-2	ಈ ಶಾಸನದ ಮತ್ತೊಂದು ನಕಲು ರಾಮಚಂದ್ರಾಪುರ ಮಠದಲ್ಲಿಯೂ ಇದೆ. ಶೃಂಗೇರಿಯ ಕಡತದಲ್ಲಿನ ಪಾಠದಲ್ಲಿ 'ಶಕ ೧೩೧೧ ಶುಕ್ಲ ಸಂವತ್ಸರ, ಮಾಘ ಬಹುಳ ೩೦' ಎಂದಿದ್ದರೆ , ರಾಮಚಂದ್ರಾಪುರ ಮಠದ ಪ್ರತಿಯಲ್ಲಿ 'ಶಕ ೧೩೨೧ ಶುಕ್ಲ ಸಂವತ್ಸರ, ಮಾಘ ಬಹುಳ ೩೦' ಎಂದಿದೆ. ಶುಕ್ಲ ಸಂವತ್ಸರ ಬರುವುದು ಶಕ ೧೩೧೧ ರಲ್ಲಿ. ರಾಮಚಂದ್ರಾಪುರ ಮಠದ ಪ್ರತಿ ಯಲ್ಲಿ ಶಕವರ್ಷವನ್ನು ತಪ್ಪಾಗಿ ಪ್ರತಿ ಮಾಡಲಾಗಿದೆ. ಆದರೆ ಶಕ ೧೩೧೧ ರ ಶುಕ್ಲ ಸಂವತ್ಸರದ ವೇಳೆಗೆ ವಿದ್ಯಾರಣ್ಯರು ಮುಕ್ತಿ ಹೊಂದಿದ್ದರು. ಈ ಶಾಸನದಲ್ಲಿ ಪ್ರತಾಪ ದೇವರಾಯನು ಆಳುತ್ತಿದ್ದಂತೆ ಹೇಳಿದೆ. ಪ್ರತಾಪ ಎನ್ನುವ ಬಿರುದು ಸಂಗಮ ವಂಶದ ಇಬ್ಬರು ದೇವರಾಯ ರಿಗೂ ಇದ್ದಿತು. ಮೊದಲನೆಯ ದೇವರಾಯನ ಕಾಲ ಕ್ರಿ.ಶ. ೧೪೦೬-೧೪೨೨. ಇಮ್ಮಡಿ ದೇವರಾಯನ ಕಾಲ ಕ್ರಿ.ಶ. ೧೪೨೪-೧೪೪೯. ಶುಕ್ಲ ಸಂವತ್ಸರವು ಇಮ್ಮಡಿ ದೇವ ರಾಯನ ಕಾಲದಲ್ಲಿ ಮಾತ್ರ ಬರುತ್ತದೆ (ಕ್ರಿ.ಶ. ೧೪೪೯-೧೪೫೦). ಈ ಕಾರಣಗಳಿಂದ ಈ ಶಾಸನವನ್ನು ಪೂರ್ಣವಾಗಿ ಪ್ರಮಾಣವಾಗಿ ಸ್ವೀಕರಿಸುವುದು ಕಷ್ಟಸಾಧ್ಯ. [ಹೆಚ್ಚಿನ ಮಾಹಿತಿಗೆ ನೋಡಿ : ಶ್ರೀರಾಮಚಂದ್ರಪುರ ಮಠಕ್ಕೆ ಸಂಬಂಧಿಸಿದ ಗೋಕರ್ಣದ ದಾಖಲೆ ಗಳು- ಎ.ಕೆ. ಶಾಸ್ತ್ರಿ, ಇತಿಹಾಸ ದರ್ಶನ-೧೮ (೨೦೦೩), ಪುಟ ೨೪೧-೨೪೪].
೨	ಶ್ರೀರಂಗಂ ದೇವಾಲಯದ ನಾಲ್ಕನೆಯ ಪ್ರಾಕಾರದ ಪೂರ್ವ ಗೋಡೆಯಲ್ಲಿರುವ ಶಿಲಾಶಾಸನ	ತಿರುಚಿನಾಪಳ್ಳಿ/ ತಿರುಚಿನಾಪಳ್ಳಿ/ ತಮಿಳುನಾಡು		ಸಂಸ್ಕೃತ	ಗ್ರಂಥ	(ಅ) ಸೌತ್ ಇಂಡಿಯನ್ ಇನ್ಸ್‌ಕ್ರಿಪ್ಷನ್ಸ್-೨೪, ಸಂಖ್ಯೆ-೨೯೪ (ಆ) Uttankita Sanskrit Vidya-Aranya Epigraphs (Vidyaranya, Volume-1), p 121-124	ಈ ಶಾಸನವು ಇಮ್ಮಡಿ ಹರಿಹರನ ಮಗ ನಾದ ಮೊದಲನೆಯ ವಿರೂಪಾಕ್ಷನು ವಿದ್ಯಾರಣ್ಯರಿಗೆ ಸಾಷ್ಟಾಂಗ ನಮಸ್ಕಾರ ವನ್ನು ಮಾಡಿದನೆಂಬ ವಿವರ ನೀಡುತ್ತದೆ. ಇದನ್ನು ಒಪ್ಪಬಹುದಾದರೆ ಈ ಶಾಸನದ ಕಾಲವು ೧೩೮೬ ರ ಸುಮಾರಿನದಾಗುತ್ತದೆ. ಇಲ್ಲವೇ ವಿದ್ಯಾರಣ್ಯರ ಸಮಾಧಿಗೆ ನಮ ಸ್ಕಾರವನ್ನು ಮಾಡಿದನೆಂದು ಗ್ರಹಿಸಿದರೆ ಕ್ರಿ.ಶ. ೧೩೮೬-೧೪೦೫ ರೊಳಗೆ ಎಂದು ಶಾಸನದ ಕಾಲವನ್ನು ಹೇಳ ಬಹುದು. ವಿರೂಪಾಕ್ಷನ ರಾಜ್ಯಾಡಳಿತದ ಕಾಲ ಕ್ರಿ.ಶ. ೧೪೦೪-೧೪೦೫

೩	ಕೂಡ್ಲೀ ಶೃಂಗೇರಿ ಮಠದಲ್ಲಿರುವ ತಾಮ್ರಶಾಸನ	ಶಿವಮೊಗ್ಗ/ ಶಿವಮೊಗ್ಗ/ ಕರ್ನಾಟಕ	೯-೩-೧೩೯೫	ಕನ್ನಡ	ಕನ್ನಡ	ಶ್ರೀಮತ್ ಜಗದ್ಗುರು ಶ್ರೀ ಕೂಡ್ಲಿ ಶೃಂಗೇರಿ ಸಂಸ್ಥಾನದ ಪ್ರಾಚೀನ ಶಾಸನ ಲೇಖನ ಸಂಗ್ರಹ (ಭಾಗ-೧) - ಶ್ರೀಮತ್ ಜಗದ್ಗುರು ಶ್ರೀ ಕೂಡ್ಲಿ ಶೃಂಗೇರಿ ಸಂಸ್ಥಾನ. ಶಿವಮೊಗ್ಗ-೧೯೬೫. ಸಂಖ್ಯೆ ೪. ಪು ೬-೭	ಈ ಶಾಸನದಲ್ಲಿ ಕಾಲವು ಶಕ ೧೩೧೬ ಭಾವ ಸಂವತ್ಸರ. ಫಾಲ್ಗುಣ ಶುದ್ಧ ೧೦ ಗುರುವಾರ ಎಂದಿದೆ. ಇದು ಜೂಲಿಯನ್ ಪಂಚಾಂಗದಂತೆ ಕ್ರಿ.ಶ. ೯-೩-೧೩೯೫. ಭಾನುವಾರಕ್ಕೆ ಸರಿಹೊಂದುತ್ತದೆ. ಈ ಸಮಯಕ್ಕೆ ವಿದ್ಯಾರಣ್ಯರು ಮುಕ್ತಿಹೊಂದಿದ್ದರು. ಈ ಶಾಸನದಲ್ಲಿ ನಾರಾಯಣ ವಾಜಪೇಯಿ. ನರಹರಿ ಸೋಮಯಾಜಿ. ಪಾಂಡುರಂಗ ದೀಕ್ಷಿತರಿಗೆ ದಾನಕೊಟ್ಟ ವಿವರಗಳಿವೆ. ಇದೇ ವ್ಯಕ್ತಿಗಳಿಗೆ ದಾನ ಕೊಟ್ಟ ವಿವರಗಳಿರುವ ಇನ್ನೆರಡು ಶಾಸನ ಗಳಿದ್ದು ಇವು ವಿದ್ಯಾರಣ್ಯರ ಜೀವಿತಾವಧಿಯ
							ಶಾಸನಗಳಾಗಿವೆ. ಆದ ಕಾರಣ ಈ ಶಾಸನವನ್ನು ಪ್ರಮಾಣವಾಗಿ ಗ್ರಹಿಸುವುದು ಕಷ್ಟಸಾಧ್ಯ. ಜೊತೆಗೆ ಈ ಶಾಸನವು ಕೂಡ್ಲಿ ಮಠಕ್ಕೆ ಸಂಬಂಧಪಟ್ಟುದೇ ಅಲ್ಲ.
೪	ಹಂಪೆಯ ದೇವಾಲಯದಲ್ಲಿರುವ ಶಾಸನ (?)	ಬಳ್ಳಾರಿ/ ಹೊಸಪೇಟೆ/ ಕರ್ನಾಟಕ	೧೮-೪-೧೩೩೭	ಡಿ.ವಿ.ಜಿ. ಅವರು ಈ ಶಾಸನದಲ್ಲಿ ದಾಖಲಾಗಿರುವ ಕಾಲದ ವಿವರಗಳುಳ್ಳ ಶ್ಲೋಕಗಳನ್ನು ದಾಖಲಿಸಿದ್ದಾರೆ. ಆದರೆ ಶಾಸನ ಇರುವ ಸ್ಥಳ. ಪ್ರಕಟವಾಗಿದ್ದರೆ ಅದರ ವಿವರ ಮುಂತಾದ ಅಂಶಗಳನ್ನು ನೀಡಿರುವುದಿಲ್ಲ (ನೋಡಿ : ಡಿ.ವಿ.ಜಿ. ಕೃತಿ ಶ್ರೇಣಿ-೪. ಪುಟ ೨೪೪-೨೪೫. ೨೦೦೫ ರ ಆವೃತ್ತಿ) ಇದು ಕೂಡ ಅತ್ಯಂತ ಅಮೂಲ್ಯವಾದ		ಶಾಸನವಾಗಿದ್ದು ದೊರಕದಿರುವುದು ಖೇದಕರ ಅಂಶ. ಇದರ ಶೋಧಅತ್ಯಗತ್ಯ. ಆದರೆ ಡಿ.ವಿ.ಜಿ ಅವರು ಉದಾಹರಿಸಿರುವ ಶ್ಲೋಕಗಳು ಖಚಿತವಾಗಿ ಕಾಶೀ ಲಕ್ಷ್ಮಣ ಶಾಸ್ತ್ರಿಯ ಗುರುವಂಶ ಕಾವ್ಯದ ೬ ನೆಯ ಸರ್ಗದ ೮ ನೆಯ ಶ್ಲೋಕಗಳಾಗಿವೆ (ಶ್ರೀ ವಾಣೀ ವಿಲಾಸ ಮುದ್ರಾಲಯ. ಶ್ರೀರಂಗಂ-೧೯೬೬. ಪುಟ ೫೩). ಡಿ.ವಿ.ಜಿ. ಅವರ ದಾಖಲಾತಿಗೆ	ಆಧಾರವೇನೋ ತಿಳಿಯದಾಗಿದೆ. ಆದ ಕಾರಣ ಈ ಶ್ಲೋಕವು ಶಾಸನದ್ದೆಂದು ಪರಿಗಣಿಸಲು ಸಾಧ್ಯವಿಲ್ಲ. ಕಾವ್ಯದ ಶ್ಲೋಕಗಳನ್ನೇ ಶಾಸನವಲ್ಲಿ ಬಳಸಿದ್ದರೂ ಆಶ್ಚರ್ಯವೇನಿಲ್ಲ. ಆದ ಕಾರಣ ಇದರ ವಿವರಗಳಲ್ಲಿ ಸಂದಿಗ್ಧತೆ ಇದ್ದು ಪ್ರಮಾಣವಾಗಿ ಗ್ರಹಿಸುವುದು ಕಷ್ಟಸಾಧ್ಯ.

೧೯

ಉಡುಪಿಯ ಅಪ್ರಕಟಿತ ಕೊಜಕುಳಿ ಶಾಸನ

ಪ್ರೊ. ಟಿ. ಮುರುಗೇಶಿ* ಶ್ರೀಧರ್‌ಭಟ್ ಕಲ್ಯಾಣಪುರ**

ಉಡುಪಿ ತೆಂಕನಿಡಿಯೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಕೆಳಾರ್ಕಳ ಬೆಟ್ಟುವಿನ ಕೊಜಕುಳಿ ಎಂಬ ಸ್ಥಳದಲ್ಲಿ ಹೊಸ ಶಾಸನವೊಂದು ಪತ್ತೆಯಾಗಿದೆ. ಕೊಜಕುಳಿಯ ಪ್ರಗತಿಪರ ರೈತ ಮಹಿಳೆ ಶ್ರೀಮತಿ ಹೇಮಲತಾ ಬಿ. ಶೆಟ್ಟಿಯವರ ಮನೆಯ ಹಿಂಭಾಗದ ಗದ್ದೆಯಲ್ಲಿ ಈ ಶಾಸನ ಕಂಡು ಬಂದಿದೆ.[೧]

೯ ಇಂಚು ಅಗಲ ಮತ್ತು ೫ ಇಂಚು ದಪ್ಪನೆಯ ಆಯತಾಕಾರದ ಪಾಂಡು ಶಿಲೆಯಲ್ಲಿ ರಚಿತವಾಗಿರುವ ಈ ಶಾಸನದ ಮೇಲ್ಭಾಗವನ್ನು ಕುದುರೆ ಲಾಳದಂತೆ ವಿನ್ಯಾಸ ಗೊಳಿಸಲಾಗಿದೆ. ಮೇಲೆ ಮಧ್ಯಭಾಗದಲ್ಲಿ ಚಿಕ್ಕ ಪಾಣಿಪೀಠದ ಮೇಲೆ ದೊಡ್ಡ ಲಿಂಗವಿದ್ದು, ಪೀಠ ಮತ್ತು ಲಿಂಗಗಳು ಪ್ರಮಾಣ ಬದ್ಧವಾಗಿಲ್ಲ. ಎಡ–ಬಲದಲ್ಲಿ ಸೂರ್ಯ–ಚಂದ್ರರ ಉಬ್ಬು ಶಿಲ್ಪಗಳಿವೆ. ಮೂರು ಸಾಲುಗಳಲ್ಲಿ ಈ ಶಾಸನವನ್ನು ಬರೆಯಲಾಗಿದೆ. ಕನ್ನಡ ಲಿಪಿ ಮತ್ತು ಭಾಷೆಯ ಈ ಶಾಸನದಲ್ಲಿ ಎರಡು ತುಳು ಮೂಲದ ಪದಗಳಿವೆ. ಈ ಶಾಸನ ಅಧ್ಯಯನದ ಉದ್ದೇಶವೇ ಈ ಪ್ರಬಂಧದ ಆಶಯವಾಗಿದೆ.

ಶಾಸನದ ಪಾಠ

೧ ೦ ಶ್ರೀ ಮ ತು ಪಿ ೦ ಗ ಲ್ಸ ೦ (ವ) ರ (ದ) ಕು ೦ ದ ಯ
೨ ೦ ಪಿ ರು ೦ ಗೊ ಕೊ ಯ ಕು ಳಿ ಯ ಬ ಯ ಲ
೩ ೦ ಬೊ ರ ಗೆ ಎ ರ ದ ಧ ರ್ಮ – – –

ಶಾಸನದ ಮಹತ್ವ : ಪ್ರತಿಯೊಂದು ಸಾಲನ್ನು ಶೂನ್ಯ ಬಿಂದುವಿನೊಂದಿಗೆ ಪ್ರಾರಂಭಿಸಲಾಗಿದೆ. ಶಾಸನೋಕ್ತ ವಿಷಯದ ಪ್ರಕಾರ ಪಿಂಗಳ ಸಂವತ್ಸರದಲ್ಲಿ ಕೊಯಕುಳಿ ಬಯಲನ್ನು ಬೋರ ಎಂಬ ವ್ಯಕ್ತಿಗೆ ದಾನವಾಗಿ ನೀಡಿರುವು ದನ್ನು ಪ್ರಸ್ಥಾಪಿಸಲಾಗಿದೆ. ಪ್ರಸ್ತುತ ಶಾಸನ ದೊರೆತ ಈಗಿನ ಕೊಜಕುಳಿಯನ್ನು ಕೊಯಕುಳಿ ಎಂದು ಶಾಸನದಲ್ಲಿ ಉಲ್ಲೇಖಿಸಲಾಗಿದೆ. ಇದರಿಂದ ಕೊಜಕುಳಿಯ ಸ್ಥಳನಾಮದ ಅಧ್ಯಯನಕ್ಕೆ ಸದರಿ ಶಾಸನ ಹೆಚ್ಚಿನ ಸಹಾಯ ಒದಗಿಸುತ್ತದೆ. ಶಾಸನದ ಎರಡನೇ ಸಾಲಿನಲ್ಲಿರುವ ಪಿರುಂಗೊ ಕೊಯಕುಳಿ ಎಂಬ ಪದಗಳು ತುಳು ಮೂಲದ ಪದಗಳಾ ಗಿವೆ. ಈಗಲೂ ಮಡಕೆ ತಯಾರಿಸುವ ಮಣ್ಣನ್ನು ತುಳುವಿನಲ್ಲಿ ಕೊಜೆತ್ತ ಮಣ್ಣ್/ಕೊಜೆ ಮಣ್ಣು ಎಂದು ಕರೆಯಲಾಗುತ್ತದೆ. ಆದರೆ ಕೊಯಕುಳಿಯ ಪೂರ್ವೋಕ್ತ 'ಪಿರುಂಗೊ' ಪದದ ಅರ್ಥ ಅಸ್ಪಷ್ಟವಾಗಿದೆ. ಕುಂದಯನ ಮೂಲವೂ ಇನ್ನು ಸ್ಪಷ್ಟವಾಗಿಲ್ಲ. ಮೂರನೇ ಸಾಲಿನ ನಂತರ ಶಾಸನದ ಅಕ್ಷರ ಗಳನ್ನು ಕೆತ್ತಿ ತೆಗೆದಂತೆ ಕಂಡು ಬರುತ್ತದೆ. ಶಾಸನ ಇರುವ ಭಾಗದ ಮೇಲ್ಮೈಗೂ ಕೆಳಭಾಗದ ಮೇಲ್ಮೈಗೂ ಇರುವ ಅಂತರ ಸ್ಪಷ್ಟವಾಗಿ ಕಂಡುಬರುತ್ತಿದ್ದು, ಕೆತ್ತಿದ ಗುರುತುಗಳನ್ನೂ ಸೂಕ್ಷ್ಮವಾಗಿ ಅವಲೋಕಿಸಿದರೆ ಇದನ್ನು ಕಾಣಬಹುದು.

ಶಾಸನದ ಕಾಲ

ಶಾಸನದಲ್ಲಿ ಪಿಂಗಳ ಸಂವತ್ಸರ ಉಲ್ಲೇಖದ ಹೊರತಾಗಿ ಕಾಲಮಾನದ ಬೇರಾವುದೇ ಉಲ್ಲೇಖವಿಲ್ಲ. ಶಾಸನದಲ್ಲಿ ಬಳಕೆಯಾಗಿರುವ 'ಕು' ಹಾಗೂ 'ಳಿ' ಅಕ್ಷರಗಳು ವಿಜಯ ನಗರೋತ್ತರ ಲಿಪಿ ಲಕ್ಷಣವನ್ನು ಅಭಿವ್ಯಕ್ತಗೊಳಿಸುತ್ತವೆ. ಆದರೆ 'ಪಿ' ಮತ್ತು 'ರ' ಅಕ್ಷರಗಳು ಆರಂಭಿಕ ವಿಜಯನಗರದ ಲಿಪಿ ಲಕ್ಷಣಗಳನ್ನು ಹೊಂದಿವೆ. ತುಳುನಾಡಿನ ಲಿಪಿ ಲಕ್ಷಣದ ಈ ವಿಶಿಷ್ಟ ತೊಡಕು ಲಿಪಿ ಲಕ್ಷಣದ ಆಧಾರದ ಮೇಲೆ ಕಾಲಮಾನವನ್ನು ನಿರ್ಧರಿಸುವಲ್ಲಿ ಸವಾಲಾಗಿದೆ. ಶಾಸನಾ ರಂಭದ 'ಶ್ರೀ' ಅಕ್ಷರ ಸ್ಪಷ್ಟವಾಗಿ ವಿಜಯನಗರೋತ್ತರ ಶೈಲಿಯಲ್ಲಿದೆ, ಆದ್ದರಿಂದ ಶಾಸನವನ್ನು ವಿಜಯನಗರೋತ್ತರ ಕಾಲದ ಶಾಸನವೆಂದು ಪರಿಗಣಿಸಬಹುದಾಗಿದೆ. ಪಿಂಗಳ ಕ್ರಿ.ಶ. ೧೬೧೭ ಮತ್ತು ೧೬೭೭ ಕ್ಕೆ ಸರಿಹೊಂದುತ್ತದೆ ಯಾದ್ದರಿಂದ, ಸದರಿ ಶಾಸನದ ಕಾಲವನ್ನು ಲಿಪಿ ಲಕ್ಷಣದ ಆಧಾರದಲ್ಲಿ ಕ್ರಿ.ಶ. ೧೬೭೭ ಕ್ಕೆ ಅನ್ವಯಿಸಬಹುದಾಗಿದೆ.

ಆಧಾರಸೂಚಿ

೧. Murugeshi T., Kojakuliyalli Shasana Patte, Prajavani, 25-08-2009.

* ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ವಿಭಾಗ, ಎಂಎಸ್‌ಆರ್‌ಎಸ್ ಕಾಲೇಜು, ಶಿರ್ವ–೫೭೪೧೧೬.

** ಹಿರಿಯ ಶಿಕ್ಷಕರು, ಕಮಲಾ ಬಾಯಿ ಪ್ರೌಢಶಾಲೆ, ಕಡಿಯಾಳಿ, ಉಡುಪಿ–೫೭೬೧೦೧.

೧೦

ಯಲಹಂಕ ನಾಡಪ್ರಭುಗಳ ಕಾಲದ ಒಂದು ಅಪ್ರಕಟಿತ ತಾಮ್ರ ಶಾಸನ

ಡಾ. ಬಿ.ಎಸ್. ಪುಟ್ಟಸ್ವಾಮಿ*

ಯಲಹಂಕ ನಾಡಪ್ರಭುಗಳ ಕಾಲಕ್ಕೆ ಸಂಬಂಧಿಸಿದಂತೆ ಕ್ಷೇತ್ರಕಾರ್ಯ ಮಾಡುವ ಸಂದರ್ಭದಲ್ಲಿ ಮಾಗಡಿ ಪ್ರದೇಶದಲ್ಲಿ ಒಂದು ಅಪ್ರಕಟಿತ ತಾಮ್ರ ಶಾಸನವಿರುವುದು ನನ್ನ ಗಮನಕ್ಕೆ ಬಂದಿತು. ಅದನ್ನು ಸಂರಕ್ಷಿಸಿಕೊಂಡು ಬಂದಿರುವ ಮಾಗಡಿಯ ಡಾ. ಎಂ.ಆರ್. ಗುರುದೇವ್ ಎಂಬುವವರ ಬಳಿ ಹೋಗಿ ಪಡೆದು ಅದರ ಪೂರ್ಣ ಪಾಠವನ್ನು ಸಿದ್ಧಪಡಿಸಿದ್ದೇನೆ. ಶಾಸನವನ್ನು ತಾಮ್ರದ ತಗಡಿನಲ್ಲಿ ಎರಡೂ ಕಡೆಯಲ್ಲೂ ಬರೆಯಲಾಗಿದೆ. ತಾಮ್ರ ಪತ್ರವು ೧೪ ಅಂಗುಲ ಉದ್ದ, ೮ ಅಂಗುಲ ಅಗಲವಿದ್ದು ಮೇಲು ಭಾಗದಲ್ಲಿ ಸೂರ್ಯ, ಚಂದ್ರ ಮಧ್ಯದಲ್ಲಿ ಶಿವಲಿಂಗವಿದೆ. ಮುಮ್ಮುಖದಲ್ಲಿ ೩೨ ಸಾಲುಗಳು, ಹಿಮ್ಮುಖದಲ್ಲಿ ೧೦ ಸಾಲುಗಳಿವೆ. ಲಿಪಿ ಹದಿನೆಂಟನೇ ಶತಮಾನದ ಕನ್ನಡ ಬರವಣಿಗೆಯಾಗಿದ್ದು ಸುಲಭವಾಗಿ ಓದಬಹುದಾಗಿದೆ. ಬರವಣಿಗೆಯಲ್ಲಿ ಅಲ್ಲಲ್ಲಿ ಸ್ಖಾಲಿತ್ಯ ಕಂಡುಬಂದರೂ ಶಾಸನದ ಪಾಠವನ್ನು ಸರಳವಾಗಿ ಅರ್ಥ ಮಾಡಿಕೊಳ್ಳಬಹುದಾಗಿದೆ. ಶಾಸನವು ಬರೆಯಲ್ಪಟ್ಟ ತಾರೀಖನ್ನು, ಆಗ ಆಳುತ್ತಿದ್ದ ದೊರೆಗಳನ್ನು ಸ್ಪಷ್ಟವಾಗಿ ನಮೂದಿಸಲಾಗಿದೆ. ಶಾಸನ ಬರೆದದ್ದು ಶಾಲಿವಾಹನ ಶಕ. ೧೬೩೪, ವಿಜಯ ಸಂವತ್ಸರ ವೈಶಾಖ ಶುದ್ಧ ಹತ್ತರಂದು, ಅಂದರೆ ಕ್ರಿ.ಶ. ೧೭೧೨ರ ಸೆಪ್ಟಂಬರ್ ತಿಂಗಳೆಂದು ತಿಳಿದುಬರುತ್ತದೆ. ಯಲಹಂಕ ನಾಡ ಕೊನೆಯ ಪ್ರಭುಗಳಾದ ಸದಾಶಿವಗೋತ್ರದ ಮುಮ್ಮಡಿ ಕೆಂಪೇಗೌಡರ ಪುತ್ರರಾದ, ಮುಮ್ಮಡಿ ದೊಡ್ಡವೀರಪ್ಪಗೌಡರ ಪುತ್ರರಾದ, ಕೆಂಪವೀರಪ್ಪಗೌಡರು ಬರೆಸಿಕೊಟ್ಟ ತಾಮ್ರಶಾಸನ ಎಂದಿದೆ. ಇದರಲ್ಲಿ ಮಾಗಡಿ ಸೀಮೆಗೆ ಸಲ್ಲುವ ಉದ್ದಂಡನಹಳ್ಳಿ ಗ್ರಾಮವನ್ನು ದಾನ ನೀಡಿದ ವಿವರಗಳು ಇವೆ. ಶಾಸನದ ಕೊನೆಯಲ್ಲಿ ಶಾಪಾಶಯ ಭಾಗವಿದೆ.

ಈ ಶಾಸನವು ಯಲಹಂಕ ನಾಡಪ್ರಭುಗಳ ಕಾಲ, ರಾಜ್ಯದ ಸರಹದ್ದುಗಳನ್ನು ತಿಳಿಸುವುದಲ್ಲದೆ ಅವರ ಧಾರ್ಮಿಕ, ಸಾಮಾಜಿಕ ಜೀವನದ ಮೇಲೆ ಬೆಳಕನ್ನು ಚೆಲ್ಲುತ್ತದೆ. ಶಾಸನದ ಪೂರ್ಣ ವಿವರಣೆ ಅದರ ರಾಜಕೀಯ ಮತ್ತು ಧಾರ್ಮಿಕ ಪ್ರಾಮುಖ್ಯತೆಯನ್ನು ವಿವರಿಸುತ್ತದೆ.

ಶಾಸನದ ಪಾಠ

ಶುಭಮಸ್ತು ಶಾಸನಮಸ್ತು ಶ್ರೀಮದ್ಗವಿಗಂಗಾಧರಾಯ ನಮಃ
ನಮಸ್ತುಂಗ ಶಿರಸ್ಚುಂಭಿ ಚಂದ್ರಚಾಮರ ಚಾರವೆ ತ್ರೈಲೋಕ್ಯನಗ
ರಾರಂಭ ಮೂಲಸ್ತಂಭಾಯ ಶಂಭವೆ॥ ಸ್ವಸ್ತಿಶ್ರೀ ವಿಜಯಾಭ್ಯು
ದಯ ಶಾಲಿವಾಹನ ಶಕ ವರ್ಷಂಗಳು ೧೬೩೪ನೇ
ವಿಜಯಸಂವ
ತ್ಸರ ವೈಶಾಖ ಶುದ್ಧ ೧೦ರಲ್ಲೂ ಶ್ರೀಮತು ದೇವೋತ್ತಮ
ದೇವತಾಸಾ
ರ್ವಭೌಮರಾದ ಗವಿಗಂಗಾಧರಸ್ವಾಮಿಯವರ ದಿವ್ಯ ಚ
ರಣಾರವಿಂಧಗಳ ಸೇವೆಗೈಯುತ್ತಾ ಶ್ರೀಮದ್ರಾಜಧಿರಾಜ ರಾಜ
ಪರಮೆ
ಶ್ವರ ಶ್ರೀವೀರಪ್ರತಾಪ ಶ್ರಿರಂಗದೇವಮಹಾರಾಯ ರೈಯ್ಯನವರು
ಘನಗರಿಯಲ್ಲು ರತ್ನಾಸಿಂಹಾಸನಾರೂಢರಾನ್ನಿಪ್ಪ
ಪೃಥ್ವೀಸ್ಥಿರ ಸಾಂಬ್ರ
ಜ್ಯಂ ಗೈಯುತ್ತಿರಲು ನಿಮ್ಮ ಪ್ರಿಯ ಭಕ್ತರಾದ
ಸದಾಶಿವಗೋತ್ರದ ಯ
ಲಹಂಕನಾಡ ಪ್ರಭುಗಳಾದ ಮುಮ್ಮಡಿ ಕೆಂಪ್ಪಗಉಡರ
ಪಾತ್ರರಾದ ಮುಂ
ಮ್ಮಡಿ ದೊಡ್ಡವೀರಪ್ಪಗಉಡರ ಪುತ್ರರಾದ ಮುಂಮ್ಮಡಿ
ಕೆಂಪ್ಪವೀರಪ್ಪ
ಗಉಡರು ಬಿಂನಹಂಮಾಡಿ ಬರೆಶಿ ಕೊಟ್ಟ ತಾಂಬ್ರಶಾಸನದ ಕ್ರಮ
ವೆಂತೆಂದರ್ರೆ ಮಾಗಡಿ ಶೀಮೆಗೆ ಸಲುವ ಉದ್ದಂಡನಹಳ್ಳಿ
ಗ್ರಾಮವಂನು
ಸಮರ್ಪಿಸ್ತಿನಾದ ಕಾರಣ ಯಿ ಗ್ರಾಮಕ್ಕೆ ಸಲುವ ಚತುಶೀಮೆ
ಯೊಳಗೆ ನಿಧಿನಿಕ್ಷೇಪ ಜಲಪಾಷಾಣ ಅಕ್ಷೀಣಿ ಆಗಾಮಿ ಸಿದ್ಧಸಾ
ಧ್ಯಂಗಳೆಂಬ ಅಷ್ಟಭೋಗಕೆ ಬಸಾಮ್ಯಗಳಂನು ದಾನಾದಿ
ಕ್ರಿಯ ವಿನಿಮಯ ಭೋಗ್ಯಂಗಳಿಗೆ ಯೋಗ್ಯವಾಗಿ ನಿತ್ಯ ಶ್ರೀನಿತ್ಯ
ಮಂಗಳವಾಗಿ ಆಚಂದ್ರಾರ್ಕವಾಗಿ ದೇವರ ಸೇವಾರ್ಥವಾಗಿ ನಿತ್ಯ
ಕಟಳೆ ಪಡಿತರ ದೀಪಾರಾಧನೆ ಮಹಾರಥೋತ್ಸವ ಪುತ್ರೋತ್ಸವ

* ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ವಿ.ವಿ. ಪುರಂ ಕಾಲೇಜು, ಬೆಂಗಳೂರು-೫೬೦೦೦೪.

ಪರ್ವತಿಥಿಸಕಲ ಉತ್ಸವಗಳಂನು ನಂನ್ನಾನಲ್ಲಿ ಪೂರ್ವ ಕಟಾಕ್ಷವಿಟ್ಟು ಅಂಗೀಕರ್‍ರಿಶಿ ನನಗೆ ಯಿಷ್ಟಾಭಿಷ್ಟಗಳು ಕೊಟ್ಟು ರಕ್ಷಿಸ ಬೇಕೆಂದು ಬಿಂನಹಂ ಮಾಡಿ ಬರೆಶಿಕೊಟ ತಾಂಬ್ರಶಾಸನ\\ ಸ್ವದತ್ತಾದ್ವಿಗುಣಂ ಪುಂಣ್ಯಂಪರದತ್ತಾನು ಪಾಲನಂ ಪರದತ್ತಾಪಹಾರೇಣ ಸ್ವದತ್ತಂ ನಿಷ್ಪಲಂಭವೇತು ನವಿಷಂಮಿ ಹತ್ಯಾ ಹುಂ\\ ದೇವಸ್ವಂವಿಷಮುಚ್ಯತ್ತೇ ವಿಷಮೇ ಕಾಕಿನಂಹಂ ದೇವಸ್ವಂಪುತ್ರ ಪೌತ್ರಕಂ ಸ್ವದತ್ತಾಂಪರದತ್ತಾವ್ವಾಯೋ ಹರೆತ ವಸುಂಧರಾ ಷಷ್ಠಿವರ್ಷಸಹಸ್ರಾಣಿ ವಿಷ್ಟಾಂಯಾಂಜಾಯತೇ ಕ್ರಿಮಿಃ\\ ಯಿ ಧರ್ಮಕ್ಕೆ ದೊರೆಗಳೇ ಆಗಲಿ ಉದ್ಯೋಗಸ್ಥರೇ ಆಗಲಿ ದ್ರೋಹಬುದ್ದಿಯಣೆಶಿದರೆ ಆದಕೆ ಅವರು ತ್ರಿಮೂರ್ತಿಗಳಿಗೂ ಹೊರಗೂ ಯಿಹಪರಕ್ಕೆ ಸಲ್ಲದವರ್‍ರು ಯೀ ತಾಂಬ್ರಶಾಸನವಂನು ನಿಯೊಗಿ ಅಂಣಪ್ಯೆನ ಮುಂದಿರಿಸಿ

ಹಿಂಬದಿ

ಕೊಟ್ಟು ರಾಯಸ್ತ **ವೆಂಕಟಪತಿ**ಕೈಲ್ಲಿ ಸರ್ವ ಮಾನ್ಯ ಬರೆಶಿ
ಕೊಟ್ಟ ಶಾಸನಾ\\ ಸ್ವಾಮಿ ಅರ್ಚನೆ ಆಗ **ವೆಂಕೊಮಾರೈ**ಗೆ
ಶಿರ್ವಾಪಿತವಾಗಿ ಕೊಟ್ಟೆಉ ಪಂಚಂಗದ **ಉಂಮ್ಮಣ**ಗೆ ಆಗಮ
ಶಿರ್ವಾಪಿತವಾಗಿ ಕೊಟ್ಟೆಉ\\ ಆಗಮ ಉಭಯತ್ರಾ
ಮಾಡಿಕೊಂಡುಯಿರುವವರು
ಸ್ವಸ್ತಿ ಶ್ರೀಯಲವಂಕವಂಶ ತಿಲಕ ಶ್ರೀಕೆಂಪಭೂಪಾತ್ಮಜ
ಶ್ರೀವೀರಕ್ಷಿತಿ
ಪಾಲ ಸೂನುರಖಿಲಕ್ಷಾಮಂಡಲಾಧೀಶ್ವರ ಶ್ರೀಮನ್ಮುಮ್ಮಡಿ **ಕೆಂಪ**
ವೀರ ನೃಪತೆ ಸೋಮೇಶ್ವರ ಸ್ಥಾಪಕೋ ಜೀಯಾತ್ಸಜನಪಾಲನಾ
ಯಾ ರಚಿತಃ ಕ್ಷೇಮ ಗ್ರಹಾರಶಿರಂ\\ ಕೆಂಪವೀರಪ್ಪ
ಗಡಿಸ್ತಳದ ಪಂಚಂಗ **ಉಮ್ಮಂಣ**ಗೆ ಶಿವಾರ್ಪಿತವಾಗಿ ಕೊಟ್ಟೆಉ
ಉರಿಗಸಾಗರ ಅಗ್ರಹರ ಗಣಶಂಕೆ ೧೪ **ಕೆಂಪವೀರಪ್ಪ**\\

ಎಂಬ ವಿಷಯ ತಾಮ್ರಪಟ ಶಾಸನದಿಂದ ತಿಳಿದು ಬರುತ್ತದೆ. ಇದು ಯಲಹಂಕ ನಾಡಪ್ರಭುಗಳ ಸಂತತಿಯ ಕೊನೆಯ ದೊರೆ ಮುಮ್ಮಡಿ ಕೆಂಪವೀರಪ್ಪಗೌಡರ ಕಾಲದಲ್ಲಿ ನೀಡಿದ ದಾನ ಶಾಸನವಾಗಿರುತ್ತದೆ. ಮಾಗಡಿಶೀಮೆಯ ಉದ್ದಂಡನಹಳ್ಳಿಯನ್ನು ನಿಯೋಗಿ (ಸರ್ಕಾರಿ ಅಧಿಕಾರಿ) **ಅಂಣಪೈಯ್ಯ**ನು, ಶಿವಗಂಗೆಯ ಗವಿಗಂಗಾಧರೇಶ್ವರಸ್ವಾಮಿಯ ಧಾರ್ಮಿಕ ಆಚರಣೆ ಇತ್ಯಾದಿಗಳಿಗೆ ರಾಯಸ್ತ **ವೆಂಕಟಪತಿ**ಯ ಕೈಯಿಂದ ಬರೆಸಿ **ವೆಂಕೊಮಾರೈಯ್ಯ** ಹಾಗು **ಉಂಮ್ಮಣ**ಗೆ ಕೊಟ್ಟಂತಹ ಗಣಶಂಕೆ ೧೪, ಉರಿಗಸಾಗರ ಎಂಬ ಅಗ್ರಹಾರವನ್ನು ನೀಡಿದ ದಾನ ಶಾಸನವಾಗಿರುತ್ತದೆ.

ಯಲಹಂಕ ನಾಡ ಪ್ರಭುಗಳ ಕಾಲದಲ್ಲಿ ರಾಜಕೀಯ ಶಕ್ತಿಯ ಪ್ರಭಾವದಿಂದಲೋ ಅಥವಾ ಶೈವ ಮಠದ ಗುರುಗಳ ಪ್ರಭಾವದಿಂದಲೋ ವೀರಶೈವ ಧರ್ಮದ ಧಾರ್ಮಿಕ ಆಚರಣೆ, ಸಂಪ್ರದಾಯಗಳು ವ್ಯಾಪಕತೆಯನ್ನು ಕಂಡುಕೊಂಡವು. ಇವರ ಆಳ್ವಿಕೆಯಲ್ಲಿ ಮಾಗಡಿ ಶೀಮೆಯಲ್ಲಿ ಸುಮಾರು ೪೦೦ ಶೈವಮಠಗಳಿದ್ದವೆಂದು ತಿಳಿದು ಬರುತ್ತದೆ. ಶೈವಮಠಗಳಿಗೆ ಉದಾರ ದಾನದತ್ತಿಗಳನ್ನು ನೀಡುತ್ತಿದ್ದು, ಈ ಬಗ್ಗೆ ನಾಡಿನಲ್ಲಿ ಪಕ್ಷಪಾತ ಮಾಡಿದ್ದಾರೆಂದು ವೈಷ್ಣವರು ಆರೋಪಿಸಿ, ಆಳುವ ವರ್ಗಕ್ಕೂ ವೈಷ್ಣವರಿಗೂ ದ್ವೇಷಾಸೂಯೆಗಳುಂಟಾಗಿ, ಮುಮ್ಮಡಿ ಕೆಂಪವೀರಪ್ಪಗೌಡರ ವಿರುದ್ಧ ಪಿತೂರಿ ನಡೆಸಿದರು. ಧಾರ್ಮಿಕ ಸಂಚನ್ನು ರೂಪಿಸಿದ ವೈಷ್ಣವರು ಮೈಸೂರಿನ ದೊಡ್ಡ ಕೃಷ್ಣರಾಜ ಒಡೆಯನಿಗೆ ಚಾಡಿ ಹೇಳಿ ಸಹಾಯ ಯಾಚಿಸಿದರು. ಆನಂತರ ದಳವಾಯಿ ನಂಜರಾಜಯ್ಯ ಮಾಗಡಿ ಮೇಲೆ ಆಕ್ರಮಣ ಮಾಡಿ ಮುಮ್ಮಡಿ ಕೆಂಪವೀರಪ್ಪಗೌಡನನ್ನು ಬಂಧಿಸಿ ಶ್ರೀರಂಗಪಟ್ಟಣದ ಸೆರೆಮನೆಯಲ್ಲಿ ಹಾಕುವುದರೊಂದಿಗೆ ಯಲಹಂಕ ನಾಡಪ್ರಭುಗಳ ಆಳ್ವಿಕೆ (೧೭೨೮) ಅಂತ್ಯವಾಗುತ್ತದೆ.

[ಮಾಗಡಿಯ ಹೋಮಿಯೋಪತಿ ವೈದ್ಯರೂ, ಮಾಜಿ ಶಾಸಕರೂ ಆದ ಡಾ. ಸಿ.ಆರ್. ರಂಗೇಗೌಡರಿಗೆ ಸ್ಥಳೀಯ ಚರಿತ್ರೆ ಬಗ್ಗೆ ಆಸಕ್ತಿ ಇದ್ದು ಆ ಮೂಲಕ ಕೆಲವು ಆಕರಗಳ ಸಂಗ್ರಹಣೆಯಲ್ಲಿ ತೊಡಗಿದ್ದರು. ಇತಿಹಾಸಕ್ಕೆ ಸಂಬಂಧಪಟ್ಟಂತೆ ದೇವಾಲಯಗಳ ಪರಿಕರಗಳು, ತಾಳೆಗರಿಗಳು, ತಾಮ್ರಪಟ ಶಾಸನಗಳು ಇನ್ನೂ ಮುಂತಾದವನ್ನು ಸಂಗ್ರಹಿಸಿದ್ದು ಕೆಲವನ್ನು ತಮ್ಮ ಸ್ನೇಹಿತರಾದ ಹೆಚ್.ಎಲ್. ನಾಗೇಗೌಡರ ಜಾನಪದ ಲೋಕಕ್ಕೆ ನೀಡಿದ್ದು, ಪ್ರಸ್ತುತ ತಾಮ್ರಶಾಸನವನ್ನು ಸಂರಕ್ಷಿಸಿಟ್ಟುಕೊಂಡಿರುವ ಅವರಿಗೆ ಕೃತಜ್ಞತೆಗಳು.]

ಆಧಾರಸೂಚಿ

೧. ರೈಸ್. ಬಿ.ಎಲ್. (ಸಂ)., ಎ.ಕ. IX. ಬೆಂಗಳೂರು.

೨. ಸೂರ್ಯನಾಥ ಕಾಮತ್. (ಸಂ)., ಬೆಂಗಳೂರು ಗ್ರಾಮಾಂತರ ಜಿಲ್ಲಾ ಗ್ಯಾಸೆಟಿಯರ್.

೩. ಕರ್ಲಮಂಗಲ ಶ್ರೀಕಂಠಯ್ಯ., **ಗೌಡಕುಲ ವಿಭೂಷಣ ಕೆಂಪೇಗೌಡನ ಜಯಪ್ರಶಸ್ತಿ.**

೪. ಮಂಜುನಾಥ್. ಎಂ.ಜಿ. (ಸಂ)., **ಯಲಹಂಕ ನಾಡಪ್ರಭುಗಳ ಶಾಸನ ಸಂಪುಟ**, ೨೦೦೬.

೫. ಪುಟ್ಟಸ್ವಾಮಿ. ಬಿ.ಎಸ್., **ಯಲಹಂಕ ನಾಡಪ್ರಭು ಕೆಂಪೇಗೌಡ ಮತ್ತು ಆತನ ವಂಶಸ್ಥರು**, ೨೦೧೧.

೨೧

ಚಿಕ್ಕಜಾಲೋಡು ಅಪ್ರಕಟಿತ ತಾಮ್ರಶಾಸನ

ಪಾವಗಡ ಚೆಲುವರಾಜ್*

ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕು ವೈ.ಎನ್. ಹೊಸಕೋಟೆಯ ಚಿಕ್ಕಜಾಲೋಡು ಗ್ರಾಮದ ರುದ್ರಪ್ಪ ಮತ್ತು ಮಧು ಎಂಬುವವರ ಬಳಿ ೩ ಹಟಗೆಗಳಿಂದ ಕೂಡಿದ ವಿಜಯನಗರದ ದೊರೆ ಬುಕ್ಕರಾಯನ ಹೆಸರಿನೊಂದಿಗೆ ಕೊರೆದಿರುವ ತಾಮ್ರಶಾಸನ ಪತ್ತೆಯಾಗಿದೆ.

ವಿಜಯನಗರ ಕಾಲಕ್ಕೆ ಸೇರುವ ೧೪ನೇ ಶತಮಾನದ ಈ ತಾಮ್ರಶಾಸನದಲ್ಲಿ ಕನ್ನಡ ಮತ್ತು ತೆಲುಗು ಭಾಷೆಯ ಮಿಶ್ರಿಲಿಪಿ ಇದೆ.

೧೫೦ ಸಾಲುಗಳಿಂದ ಕೂಡಿದ ಈ ಶಾಸನವನ್ನು ಮೂರು ಹಟಗೆಯ ಆರು ಮುಖದ ಮೇಲೆ ಕೊರೆಯಲಾಗಿದೆ. ಸದರಿ ಶಾಸನವನ್ನು ಶಂಕರಭಟ್ಟನೆಂಬುವವನು ಬರೆದಿರುವನೆಂದು ಶಾಸನದ ಕೊನೆಯಲ್ಲೂ ಬರೆದಿದೆ. ಶಾಸನದ ಹಟಗೆಗಳು ೧೦.೫'x೬' ಇದ್ದು ಇನ್ನೆರಡು ಹಟಗೆಗಳು ೧೦'x೫' ಅಳತೆಯಲ್ಲಿದೆ.

'ಶ್ರೀ ವಿರೂಪಾಕ್ಷಾಯ ನಮಃ ಎಂದು ಪ್ರಾರಂಭವಾಗುವ ಶಾಸನ ವಿಜಯನಗರದ ದೊರೆ ಬುಕ್ಕಿರಾಯನ ಬಿರುದು ಬಾವಲಿಗಳೊಂದಿಗೆ ಮುಂದುವರೆಯುತ್ತದೆ. ಇಲ್ಲಿ ನಮೂದಾಗಿರುವ ಕಾಲಮಾನದ ಇಸವಿ ಅವನ ಕಾಲಕ್ಕೆ ಸರಿ ಹೊಂದುವುದಿಲ್ಲ. ಲಿಪಿಯೂ ೧೬ನೇ ಶತಮಾನದ್ದಾಗಿದೆ. ಆದರೆ ಸದರೀಯಲ್ಲಿ ನಮೂದಾಗಿರುವ ಎಲ್ಲಾ ವಿಷಯಗಳೂ ಇಲ್ಲಿನ ಇತಿಹಾಸ ಸ್ಥಳ ಭೂಗೋಳಗಳಿಗೆ ಹೊಂದಿಕೆಯಾಗುತ್ತದೆ. ಮೂಲಶಾಸನವನ್ನು ಪುನಃ ನಕಲು ಮಾಡಿರುವ ಶಾಸನ ಇದಾಗಿರಬಹುದು.

ಹೊಸಕೋಟೆ, ಆಂಧ್ರದ ಅನಂತಪುರ ಜಿಲ್ಲೆಯ ಕಲ್ಯಾಣದುರ್ಗದ ಪ್ರಾಂತ್ಯದಲ್ಲಿ ಶಾಸನದಲ್ಲಿ ನಮೂದಾಗಿರುವ ಜಾಲೋಡು ಗದ್ದಲಪತೀ, ಭೂಮುನಿಕುಂಟ, ಗರುಡ ಹನುಮನಿಪಲ್ಲಿ, ಅನುಮಪ್ಪನಾಯುನಿಪಾಳ್ಯಂ, ಕವುಲೋಡು ವಿಜಯನಗರಂ ಪಲ್ಲೆ, ಸೋಂಪುರ, ಕರುಕಲೋಡು ಗ್ರಾಮಗಳು ಹಾಳುಬಿದ್ದು ಅವಶೇಷಗಳು ಕಂಡುಬರುತ್ತವೆ. ಇದರ ಜೊತೆಗೆ ಜಾಲೋಡುಗ್ರಾಮ ಮತ್ತು ಕೆರೆ ಜೀವಂತವಾಗಿವೆ. ಶಾಸನದಲ್ಲಿ ನಮೂದಾಗಿರುವ ಎಲ್ಲಾ ದೇವಾಲಯಗಳೂ ಇಂದಿಗೂ ಇವೆ. ಶಾಸನದಲ್ಲಿ ಹೇಳಿರುವ ಅನೇಕ ಮಾನ್ಯಗಳ ಹೆಸರು ಇಂದಿಗೂ ಚಾಲ್ತಿಯಲ್ಲಿದೆ.

ಒಂದನೇ ಹಲಗೆ ಒಂದನೇ ಮುಖ

ಶ್ರಿ ವಿರೂಪಾಕ್ಷಾಯ ನಮಃ

೧ ಸ್ವಸ್ತಿ ಶ್ರೀ ವಿಜಯಭ್ಯಾದಯ ಶಾಲೀವಾಹನ ಶಖ ವರ್ಷಂಬುಲು ೧೧೧೯ ಯಂಡಲ್ಲ

೨ ಅಗುನೇಟಿ ಜಯನಾಮ ಸಂ । ಆಶ್ವಿಯುಜ ಶುದ್ದ ೧೦ಲು ಶ್ರಿಮದ ರಾಜಾಧಿರಾಜ

೩ ರಾಜ ಪರಮೇಶ್ವರ ವಿದ್ಯಾಶಂಕರ ಪಾದಕಮಲಾಧಾರ ಮೃತರನಿ ಪ್ರಾವಾಹಮುಲು ಶೃಂಗಾಯಮಾನ

೪ ಪದವಾಕ್ಯ ಪ್ರವಾಣ ಸಕಲ ಬಿರುದಾವಳಿ ವಿರಾಜಮಾಸ ಶ್ರಿವಿದ್ಯಾನಗರ

೫ ಸಿಂಹಾಸನಾಧೀಶ್ವರ ಸಕೆಲ ಕರ್ನಾಟಕ ಸಮುಸ್ಥಾನ ಪ್ರತಿಷ್ಠಾ

೬ ಪನಾ ಚಾರ್ಯ ಶ್ರೀವಿರಪ್ರತಾಪ ಅಷ್ಟದಿಗ್ರಾಜುಲಕುಲ ಮನೋ ಭಯಂಕರ

೭ ಶ್ರೀ ವಿಜಯ ಬುಕ್ಕಿರಾಯುಲು ವಿಶ್ವದಿ ಸಾಮ್ರಾಜ್ಯ ಮೇಲು ಉಚುಂಡಗ

೮ ಶ್ರಿಮನ್ ಮಹಾಮಂಡಲೇಶ್ವರ ಬಗರಾವಿ ಗುತ್ತಿ ಗುತ್ತಿ

೯ ದುರ್ಗಂಬುಲಕು ಚಲ್ಲೆರಾಜ ವಂಶ ತಿಪ್ಪರಾಜಯ್ಯಗಾರು ಚಾಲಾ

೧೦ ದಯವುಂಚಿ ನಗರಮುನುಂಚಿ ಬಂಡ್ಲತೋ ವಚ್ಚಿನ ಕುರುಬ ಮಲ್ಲೇದೇವ

೧೧ ಕು ಮಾರುಳ್ಳು ದೇವಗುಂಡುಡು ಕರೆಗುಂಡುಡು ಗುತ್ತಿ ಗುಂಡುಡು

೧೨ ಕಮ್ಮ ಗುಂಡುಡು ಬುಳುಗುಂಡಡು ವೀರೈದುಗುರು ಬಕೆತಲ್ಲ ಕುಮಾಳ್ಳು

* ಮುನಿಸಿಪಲ್ ಕಚೇರಿ ರಸ್ತೆ, ಪಾವಗಡ–೫೬೧೨೦೨.

೧೩ ಗನುಕ ಪೆದ್ದ ಗೌಡು ಇಲಾ ಐದುಗುರುನುಕಿ ರಾಯಿಂಚಿನ ದಾನಪತ್ರಂ.

೧೪ ಗುತ್ತಿ ದುರ್ಗಾನುಕು ಚೆಲ್ಲುಚೇನುಮಾಗಾಣಿ ಶಿಲಾಲಕ್ಕು ಹುಗ್ಗಿ ಪೋಯಿಂಚಿ

೧೫ ಗೌಳ್ಳಪೇರುತೋ ಕಟ್ಟಿಂಚಿನದಿ ಗ್ರಾಮಂ ಜಾಲೋಡು. ಕಾಶೀ

೧೬ ಗೋತ್ರಂ ಕೋಡ್ಯೆ ನಾಗಗುವುಡುನಿಕುಮಾರುಡು ಸಿದ್ದನಗೌಡು

೧೭ ಹನುಮಂತಗೌಡು ಮಿರಿಯಾಲಗೋತ್ರಂ ಕರೀಗೌಡುನ ಕುಮಾರುಡು

೧೮ ಮುದ್ದನಗೌಡು ಕೆಂಚನಗೌಡು ಉಭಯಲೂ ಕಟ್ಟಿಂಚಿನ ಗ್ರಾಮಮು

೧೯ ನಕು ಮಜರಾಲು ಗದ್ದಲಪರ್ತಿ೧ಭೂಮುನಿ ಕುಂಟ ೧ ಗರುಡ ಹನುಮನಿ

೨೦ ಪಲ್ಲಿ, ಹನುಮನಾಯುನಿ ಪಾಳ್ಯಂ. ಕವುಲೋಡುಗ್ರಾಮಂ ೧

೨೧ ವಿಜಯನಗರಂ ಪಲ್ಲೆ ಸೋಂಪುರಂ ಗ್ರಾಮಂ ಕರುಕಲೋಡು

೨೨ ಅಂತುಕು...ಕೂಡ ಗ್ರಾಮಂ ತಟಾಕಂ ವಿವರಂ ಜಾಲೋಡು

೨೩ ಗ್ರಾಮಮ್ ದೆಗ್ಗರ ಕಟ್ಟಿಂಚಿನ ತಟಾಕಂಕಿಂದ ಬಂಡಿಯಲ್ಲನ್ನ

೨೪ ಗೌಡು ಚೇತುನುಂಚಿ ಈಶ್ವರಸ್ವಾಮಿ ದೇವಾಲಯಂ ತಟಾಕಂಕಿಂದ

೨೫ ಯಲ್ಲನ್ನಗೌಡು ಚೇತುನುಂಚಿ ಇಚ್ಚಿನ ೨೧೨೦ ವರಹಾಲು ಬಂಡಿ ಎಲ್ಲನ್ನ

೨೬ ಗೌಡು ಕಟ್ಟಿಂಚಿನ ಗೋಪಾಲಸ್ವಾಮಿ ದೇವಾಲಯಾನಿಕಿ ಕಿಂದನ ಯಾಬೈ

೨೭ ರಾಮ ವರಹಾಲು ನೂಟ ಎನಬೈರೆಂಡು ಅಂಕಿ ಅನುಮಪ್ಪನಾಯುನಿಪಾಳ್ಯ

೨೮ ತಟಾಕಂ ಮಿರಿಯಾಲ ಗೊತ್ರಲ ಇಂಟ ರಾಮನಗರಂ ಮುದ್ದನಗೌಡು ಕಟ್ಟಿಂಚಿನ

ಒಂದನೇ ಹಲಗೆ ೨ನೇ ಮುಖ

೨೯ ಶೆಟ್ಟಿ ತನಾನುಕು ಈ ತಟಾಕಂಕಿಂದ ಮಾನ್ಯೆಮಡಿಲು ೪೦ ಗ್ರಾಮಮುನುಕು

೩೦ ತೂರ್ಪು ಪೆದ್ದಗುಟ್ಟ ಚೇನು. ಅಂಕೆಲ ಅನುಮಪ್ಪ ನಾಯುನಿಪಾಳ್ಯಂ

೩೧ ತಟಾಕಂಕಿಂದ ಮಾನ್ಯಂ ೧ ಪುವ್ವಲಯಾತಂ ಫಲರುಕ್ಷಾಲು ಕಮ್ಮಾರಿ

೩೨ ತನಾನುಕು ಈತಟಾಕಂಕಿಂದ ಮಾನ್ಯಂ ಮಡಿಲು ೪೦ ಮಾನ್ಯಚೇನು

೩೩ ರೇಣಿಮಾನು ಚೇನುನುಂಡಿ ಅಂಕ ಹನುಮಪ್ಪನಾಯಣಿ ಪಾಳ್ಯಂ ತಟಾಕಂ

೩೪ ಕಿಂದ ಮಾನ್ಯಂ ಮಡಿಲು ೧೦. ಕವುಲೋಡು ಗ್ರಾಮಮ್ ತಟಾಕಂಕಿಂದ

೩೫ ಮಾನ್ಯಂ ಮಡಿಲು ಪುವ್ವುಲಯಾತಂ ೧ ಫಲರುಕ್ಷಾಲು ೨ ವಡ್ರಂಗಿ ತನಾನುಕು

೩೬ ಈಗ್ರಾಮಂ ತಟಾಕಂ ಕಿಂದ ಮಾನ್ಯಂಮಡಿಲು ೪೦. ವೀರಪೇರುಕು ವಿರಟ

೩೭ ಮಾನ್ಯಂ ದೇವಾದಾಯಂ ಪೆರುಮಾಳ್ಳುಕು ತೂರ್ಪುನ ಬಂಡಚೇನುಕು ೬೧

೩೮ ತಟಾಕಂ ಕಿಂದ ಮಾನ್ಯಂ ಮಡಿಲು ೪೦ ಗೋಪಾಲಸ್ವಾಮಿ ಮಾನ್ಯಂ ದಕ್ಷಿಣಾ

೩೯ ಂದಿ ಉನ್ನ ಚೇನು ತಟಾಕಂ ಕಿಂದ ಮಾನ್ಯಂ ಮಡಿಲು ೧. ಈಶ್ವರ ಸ್ವಾಮಿಕಿ

೪೦ ಮಾನ್ಯಂ ತೂರ್ಪುನ ರಾತಿಗುಟ್ಟ ಚೇನು. ತಟಾಕಂ ಕಿಂದ ಮಾನ್ಯಂ ಮಡಿಲು

೪೧ ೪೦ ಅಂಕಿ ಅನುಮಪ್ಪನಾಯುನಿ ಪಾಳ್ಯಂ ಆಂಜನೇಯುನಿಕಿ ಮಾನ್ಯಂ ದಕ್ಷಿಣ

೪೨ ತಗ್ಗುಚೇನು. ಈ ತಟಾಕಂಕಿಂದ ಮಾನ್ಯಂ ಮಿಡಲು ೪೦. ಕವುಲೋಡು

೪೩ ಆಂಜನೇಯಸ್ವಾಮಿಕಿ ಪರಮಟ ನೆಲ್ಲರಾಳ್ಳ ಚೇನು– ೬೧ ತಟಾಕಂಕಿಂದ

೪೪ ಮಾನ್ಯಂಮಡಿಲು ೪೦ ಕವುಲೋಡಕಾಶಿ ವಿಶ್ವನಾಥುನಿಕಿ ಮಾನ್ಯಂ ನಲ್ಲ

೪೫ ಕಟುವಚೇನು. ೬೧ ಈ ತಟಾಕಂಕಿಂದ ಮಾನ್ಯಂ ಮಡಿಲು ೧೦ ಗರುಕಲೋಡು

೪೬ ಆಂಜನೇಯುನಿಕಿ ಮಾನ್ಯಂ ಕುಂಟತಡಿಚೇನು. ತಟಾಕಂಕಿಂದ ಮಾನ್ಯಂ

೪೭ ಮಡಿಲು–೪೦ ಪೋತರಾಜು ಮಾನ್ಯಂ ಕೊಂಡ ಚೇನು ೬೧ ತಟಾಕಂಕಿಂದ

೪೮ ಮಡಿಲು.೪೦ ಜಾಲೋಡು ಬೀರೇದೇವರಕು ಮಾನ್ಯಂ ೪೦ ತೂರ್ಪುಕು

೪೯ ಕಟುವ ಕಿಂದ ಚೇನು. ತಟಾಕಂ ಕಿಂದ ಮಾನ್ಯಂ ಮಡಿಲು ೬೧ ಕವಲೋಡು

೫೦ ಗ್ರಾಮಂ ತಟಾಕಂ ಕಿಂದ ಈಜರ ದೇವುಲಕು ಮಾನ್ಯಂ ಜಾಲೋಡು

೫೧ ಮಡಿಲು ೧ ದಕ್ಷಿಣಂ ಕುಂಡ ಚೇನು ಜಾಲೋಡು ಪರಮಟ ಮಠಮಾನ್ಯಂ

೫೨ ಬಲದಿ ಬಾವಿ ಕಲ್ಲು ಗುಂಡ್ಲು ಬಾವಿಸ್ಥಳಂಲೋ ಗದ್ದಲಪರ್ತಿ ಆಂಜನೇಯುನಿಕಿ

೫೩ ಮಾನ್ಯಂ ನಲ್ಲ ಕಟ್ಟಲಚೇನು. ತಟಾಕಂ ಕಿಂದ ಮಾನ್ಯಂ ಮಡಿಲು ೧೦. ತೆಳಾರಿ

೫೪ ತನಾನಕು ಮಾನ್ಯಂ ನೇರುತಾಳಲು ಸನಿಚೇನು ೬೧ ಇಂದು ಕು ದಕ್ಷಿಣಂ ನೆಲ

೫೫ ಬಂಡ ಚೇನು.೬೧ ತಟಾಕಂ ಕಿಂದ ಮಾನ್ಯಂ ಮಡಿಲು ೪೦ ಮಾನ್ಯಂಚೇನು ಯರ್ರ

೫೬ ದಿನ್ನಚೇನು.೪೦ ಕವಲೋಡು ಗ್ರಾಮಂ ತಟಾಕಂ ಕಿಂದ ಮಾನ್ಯಂ ಮಡಿಲು ೪೦

೫೭ ಕಮ್ಮಾರ ತನಾನಕು ಮಾನ್ಯಂ ತೂರ್ಪುವಂಕಚೇನು. ೬೧ ಈತಟಾಕಂಕಿಂದ

೫೮ ಮಾನ್ಯಂ ಮಡಿಲು ೧೦ ಚಾಕಿಲಿ ಮಾನ್ಯಂ ಯರ್ರಚೇನು. ತಟಾಕಂ ಕಿಂದ

೫೯ ಮಾನ್ಯಂ ಮಡಿಲು ೧೦. ಚಾಕಿಲಿ ತನಾನಕು ಮಾನ್ಯಂ ಪರಮಟ ಚೇನು

೬೦ ದಾನಿಕಿಂದ ಮಾನ್ಯಂ ಮಡಿಲು ೧೦ ಚಾಕಲಿ ತನಾನಕು ಮಾನ್ಯಂ ದಕ್ಷಿಣಂ ನಲ್ಲ

೬೧ ದಾನಿಕಿಂದ ಮಾನ್ಯಂ ಮಡಿಲು ೧೦ ಚಾಕಲಿ ತನಾನಕು ಮಾನ್ಯಂ ದಕ್ಷಿಣಂ ನಲ್ಲ

೬೧ ಕಟುವ ಚೇನು. ತಟಾಕಂಕಿಂದ ಮಾನ್ಯಂ ಮಡಿಲು ೬೧ ಮೋಟಿಕಾಪಿತನಾ

೬೨ ನಕು ಮಾನ್ಯಂ ಕುಂಡ ನಡಿಮೀದ ಚೇನು. ದೇವಾದಾಯ ಬ್ರಹ್ಮಾದಾಯಮುಗಾ.

ಹಲಗೆ-೩ ೩ನೇ ಮುಖ

ಕುಮಾರುಡು ಮುದ್ದನಗೌಡು

೩ನೇ ಮುಖ

೬೩ ಕವುಲೋಡು ಗ್ರಾಮಮ್ ದೆಗ್ಗರ ತಟಾಕಂ ವಂಕ ಕಟ್ಟಿಂಚಿನ ಮಹಾ

೬೪ ಕೌಂಡಿಲ ಗೋತ್ರ ಕಾಶೀಗೋತ್ರಂ ಕುಂಚಹನುಮೆ ಗೌಡು ಕಟ್ಟಿಂಚಿನ

೬೫ ಚೇನುವಂಕ ಭರಾಂವರಾಹಾಲು ೨೧೮೦. ಈ ಪ್ರಕಾರಂ ಕಟ್ಟಿಂಚಿನದಿ

೬೬ ಕಾಶಿ ಲಿಂಗಾರಜ ದರೋಜಿ....ಮಲ್ಲಾಜಿ, ಯಲ್ಲಾಜಿ ವೀರಲು

೬೭ ಯರಕತೋ ಕಟ್ಟಿಂಚಿನ ಗುಳ್ಳು ತಟಾಕಮುಲು ಇಂದುಕು ಯೊಕ್ಕ

೬೮ ಆಯಗಾರ್ನ ವಿವರಂ. ರೆಡ್ಡಿತನಾನಕು ಬಂಡಿ ಒಂದಕಾಯುಲು ಹನುಮಂತನ್ನ

೬೯ ಮರಿಯು ಮಿರಿಯಾಲಗೋತ್ರ ಕೆಂಚನಗೌಡು ಕಾಶಿಗೋತ್ರಂ ಸಿದ್ದನಗೌಡು ಇದ್ದುರೂ ರೆಡ್ಡಿ ತನಾನುಕು

೭೦ ಪುರೋಹಿತನಾನಕು ಶಂಕರಭಟ್ಲು. ಶೆಟ್ಟಿ ತನಾನುಕು ನಗರಸೀಮ

೭೧ ನುಂಚಿವಚ್ಚಿನ ಚೆನ್ನವೀರಪ್ಪಕುಮಾರುಡು ವೀರಭದ್ರಪ್ಪ ಪ್ರಭಯ್ಯ

೭೨ ಕಮ್ಮಾರ ತನಾನಕು ನಗರಸೀಮ ಲಿಂಗೋಜಿ ಕುಮಾರುಡು ದೇವೋಜಿ

೭೩ ವಡ್ರಂಗಿ ತನಾನಕು ನಗರಸೀಮ ಲಿಂಗೋಜಿ ಕುಮಾರುಡು ಅರಸೋಜಿ

೭೪ ಸರಾಬು ತನಾನುಕು ನಗರ ಸೀಮನುಂಚಿ ವಚ್ಚಿನ ಮುಮ್ಮಳ್ಳೆ ಓಬನ್ನ

೭೫ ಕುಮಾರುಳ್ಳು ಓಬಿಗಾಡು ಹನುಮಗಾಡು ಮೋಟಕಾಪು ತನಾನುಕು

೭೬ ಮಾದಪ್ಪಕುಲ ಕಿರಿದಾಳಪು ರುದ್ರಪ್ಪ ಕಮ್ಮಾರತನಾನಕು ಶಾಲಿವಾನ

೭೭ ಲಿಂಗಶೆಟ್ಟಿ ಚಾಕಲಿತನಾನಕು ನಗರ ಸೀಮನುಂಚಿ ವಚ್ಚಿನ ಲಿಂಗುಡು

೭೮ ಯರ ಲಿಂಗುಡು ಮಂಗಳ ತನಾನಕು ನಗರಸೀಮ ನುಂಚಿ ನಾಗೋಜಿ

೭೯ ಚಾಕರಿ ತನಾನಕು ನಗರಸೀಮನುಂಚಿ ವಚ್ಚಿನ ಮುಮ್ಮಳ ಗೋತ್ರ

೮೦ ನರಸಿಗಾನಿ ಕುಮಾರುಡು ಕಂಬದೂರು ನರಸೀಯಪ್ಪ ಬಾನಿ ಸ್ವಾಸ್ತಿ ಲೋ ಸಗಪಾಲು ಇಚ್ಚಿ

೮೧ ಮಲ್ಲೆಗೋತ್ರಂ ಯರಪೆನ್ನುಡು ವಾಣಿಕುಮಾರುಡು ನಾಗುಡು ಇಂದುಕು

೮೨ ತಗಿನ ಮಾನ್ಯ ಸ್ವಾಸ್ತುಲ ವಿವರಮುಲು ರೆಡ್ಡಿ ತನಾನುಕು ಮರಚೇನು ೬೧

೮೩ ಸಾಲುಕಟುವಚೇನು ೬೧ ಈ ತಟಾಕಂಕಿಂದ ಮಾನ್ಯಂ ಮಡಿಲು ೨೧ ಮುಂಡಾಸು

೮೪ ಮಾನ್ಯಂ ನಲಗುಟ್ಟಚೇನು. ಅಂಕ ಅನುಮಪ್ಪ ನಾಯನಿಪಾಳ್ಯಂ ಕಿಂದ ತಟಾಕಂ

೮೫ ಕಿಂದ ಮಾನ್ಯಂ ಮಡಿ ೧ ಮಾನ್ಯಚೇನು ಪೆಲವರಿ ಮಾನಿ ಚೇನು ಮುದ್ದ

೮೬ ಮಾನ್ಯಚೇನು. ನಲ್ಲರಾಳ್ಳಚೇನು ಕವುಲೋಡು ಗ್ರಾಮ ತಟಾಕಂಕಿಂದ

೮೭ ಮಾನ್ಯಂ ಮಾನ್ಯಮಡಿಲು ೭ ಊರಿಕಿಲುತ್ತರಾನ ಮಾನ್ಯಂ ಚೇನು ವಂಕ

೮೮ ಚೇನು ಮುಂಡಾಸು ಮಾನ್ಯಂ ಮರವಚೇನು ಫಲರುಕ್ಷಾಲು ಪುವ್ವ

೮೯ ಯಾತಂ ಭಾವಿ ಕರಣಿಕ ತನಾನುಕು ಜಾಲೋಡ ತಟಾಕಂಕಿಂದ ಮಾನ್ಯಂ ಮಡಿಲು ೪೦

೯೦ ಊರಿಕಿತೂರ್ಪುನ ಮಾನ್ಯ ಗೂಡಚೇನು ೬೧ ಕವುಲೋಡು ತಟಾಕಂ

೯೧ ಕಿಂದ ಮಾನ್ಯಂ ೧ ಬಾ ಫಲರುಕ್ಷಾಲು ೪ ಪುರೋಹಿತ ತನಾನುಕು ಮಾನ್ಯಂ

೯೨ ಗುಂಡ್ಲಚೇನು ೧ ದಕ್ಷಿಣಂ ಈ ತಟಾಕಾನಿಕಿಂದ ಮಡಿಲು ೧ ಅಂಕ ಅನುಮಪ್ಪ

೯೩ ನಾಯುನಿಪಾಳ್ಯಂ ತಟಾಕಂಕಿಂದ ಮಾನ್ಯಂ ಮಡಿಲು ೨ ತೂರ್ಪು ಮರುವ

೯೪ ಚೇನು. ಕವುಲೋಡು ಗ್ರಾಮಂ ತಟಾಕಂ ಕಿಂದ ಮಾನ್ಯಂ ಮಡಿಲು ೪೦

೩ನೇ ಹಲಗೆ ೪ನೇ ಮುಖ

೯೫ ಪುಲಿಮಿಕಿ ವಿಭರಾಂ ಬರ ವರಹಾಲು ೪೦ ಕಾ ಉವ ಕಟ್ಲುಕು

೯೬ ದಳ್ಳುನಿರಾಮಪ್ಪವಾರಿ....ಶಿವಯ್ಯಗಾರಿ....ಆಯಕಟ್ಟು ೧೦ ಇಂದುಕು

೯೭ ಶಿಲಾನಿನ....ಮಾನಕು ತೂರ್ಪುನ ಕಂಬಿಕು ದಕ್ಷಿಣಂ ನಾಗಲಾಪುರನಕು

೯೮ ಪಶ್ಚಿಮಾನಕು ಪೋಟಿಗುಂಡು ಲೋನು....ಬಂಡಕು ಮುದ್ರಿಕ. ಗುಂಡುಕು

೯೯ ಉತ್ತರಾನ ಸಾಲು ಪಾತರಾಯಿಕಿ ಮುದ್ರಿಕ. ಯಿಂದು ಉತ್ತರಂ....ಕಟುವ

೧೦೦ ಚೇನುಕು ಉನ್ನನು ಕ್ರಿಠ್ಯಪ ಶೀಲ ಪಾತರಾಯಿ ಮುದ್ರಿಕ. ಇಂದುಕು ಉತ್ತರಂ

೧೦೧ ಗುಂಡ ಮೀದ ಬಂಡಕು ಮುದ್ರಿಕ ೧೧೦. ಇಂದು ಪರಮಟನ ಲಕಿಲ ಪರ್ತಿ ಪೊ

೧೦೨ ಲಾನಕು ದಕ್ಷಿಣಂ ಪುಟ್ಟ ಬಂಡಕು ಮುದ್ರಿಕ. ಇಂದು ಕು ಪರಮಟ ಈ ಗ್ರಾಮ

೧೦೩ ಮುನಕು ಯನುಮಲದೊಡ್ಡಿ ಪೊಲಾನಕು ನಲಗುಟ್ಟನ ಮುಗ್ಗುಂಡು ಕುಮುದ್ರಿಕ

೧೦೪ ಇಂದುಕು ದಕ್ಷಿಣಂ ಸಾಲುಪಾತರಾಯಿಕಿ ಮುದ್ರಿಕ. ಇಂದುಕು ದಕ್ಷಿಣಂ ಈ ಗ್ರಾಮ

೧೦೫ ಮುನಕು ಪರಮಟ ತೆನಗೆಲ್ಲು ಪೊಲಾನಿಕಿ ತೂರ್ಪುನ ಕಳ್ಳಿಮಾನಿ ಗುಟ್ಟಲೋನ

೧೦೬ ನೆಲಬಂಡಕು ಮುದ್ರಿಕ ಇಂದುಕು ದಕ್ಷಿಣಂ ಸಾಲು ಪಾತರಾಯಿಕಿ ಮುದ್ರಿ

೧೦೭ ಯಿರಿದು ಕು ದಕ್ಷಿಣಂ ಕಂಚಿಗಾನಿಪಲ್ಲಿ ಪೊಲಾನಿಕಿ ತೂರ್ಪುನ ನಿಲುವು

೧೦೮ ರಾತಿಕಿ ಮುದ್ರಿಕ. ಯಿಂದುಕು ದಕ್ಷಿಣಂ ಶಿವಪುರಂ ಪೊಲಾನಿಕಿ ತೂರ್ಪುನ

೧೦೯ ಅಂಕಿ ಅನುಮಪ್ಪನಾಯುನಿಪಾಳ್ಯಂ ಪರಮಟ ನೆಲಬಂಡಕು ಮುದ್ರಿಕ. ಯಿಂದು

೧೧೦ ದಕ್ಷಿಣಂ ಸಾಲು ಕುಂಡನಡುನ ಜರುಗು ಬಂಡಕು ಮುದ್ರಿಕ. ಇಂದಿಕು ದಕ್ಷಿಣಂ

೧೧೧ ಕೊಂಡ ಮೀದ ಗವಿಗುಂಡುಕು ಮುದ್ರಿಕ ಯಿಂದುಕು ದಕ್ಷಿಣಂ ಸಾಲು ನಿಡುಗಲ್ಲು

೧೧೨ ಪೊಲಾನಕು ಉತ್ತರಂ ಗ್ರಾಮಮುನಕು ದಕ್ಷಿಣಂ.... ಪಾತರಾಯಿಕಿ ಮುದ್ರಿಕ.

೧೧೩ ಯಿಂದುಕು ತೂರ್ಪುನ ಪೆದ್ದಕುಂಟಮೀದ ಬಂಡಕು ಮುದ್ರಿಕ. ಯಿಂದುಕು

೧೧೪ ತೂರ್ಪುನ ಸಾಲುಕಟ್ಟಮಾನಕಿಂದ ಪಾತರಾಯಿಕಿ ಮುದ್ರಿಕ ಯಿಂದುಕು

೧೧೫ ತೂರ್ಪುನ ಸಾಲುಪಾತರಾಯಿಕಿ ಮುದ್ರಿಕ. ಇಂದುಕು ತೂರ್ಪುನ. ಮುಖ್ಯ

೧೧೬ ಪ್ರಾಣಸ್ವಾಮಿ ಬಂಡಕು ಮುದ್ರಿಕ. ಯಿಂದುಕು ತೂರ್ಪುನ ಸಾಲುಪಾತ ರಾಯಿಕಿ ಮುದ್ರಿಕ.

೩ನೇ ಹಲಗೆ ೫ನೇ ಮುಖ

೧೧೭ ಯಿಂದುಕು ತೂರ್ಪುನ ಸಾಲುನ ಮಿಮಿಕುಂಡ ಮೀದ ಜರತಿ ಬಂಡಕು ಮುದ್ರಿಕ

೧೧೮ ಯಿಂದುಕು ತೂರ್ಪುನ ಬಿಂಗಿ ಶಿರಾಳುನ ಸಾಲು ಪಾತರಾಯಿಕಿ ಮುದ್ರಿಕ.

೧೧೯ ಯಿಂದುಕು ತೂರ್ಪುನ....ಉತ್ತರಂ ಗರಕಲೋಡುಕು ದಕ್ಷಿಣಂ ಕಾವಲು

೧೨೦ ನಡಿಮಕೊಂಡ ಮೀದ ಲೋನುನ್ನ ಮುದ್ರಿಕ. ಯಿಂದುಕ ಉತ್ತರಂ ಕನ್ನಿಕ

೧೨೧ ಕೊಂಡಕು ತೂರ್ಪುನ ಆರುದಟಲೋ ಪಾತರಾಯಿಕಿ ಮುದ್ರಿಕ. ಯಿಂದುಕು

೧೨೨ ನೈರುತ್ಯಂ ಸಾಲುನಲ್ಲರಾಯಿಪಾತಿನ ಬಂಡಕು ಮುದ್ರಿಕ. ಯಿಂದುಕು

೧೨೩ ಉತ್ತರಂ ಸಾಲು ನಲ್ಲ ಕಟುವಲೋನು ನಲ್ಲರಾಯಿಕಿ ಮುದ್ರಿಕ. ಇಂದುಕು

೧೨೪ ಉತ್ತರಂ ಸಾಲುಪಾತರಾಯಿಕಿ ಮುದ್ರಿಕ. ಯಿಂದುಕು ಉತ್ತರಂ ಎನುದಿನ್ನ

೧೨೫ ಪಾತರಾಯಿಕಿ ಮುದ್ರಿಕ ಯಿಂದುಕು ಉತ್ತರಂ ಸಾಲುವಂಕಲೋನು ಪಾತ

೧೨೬ ರಾಯಿಕಿ ಮುದ್ರಿಕ ಯಿಂದುಕು ಉತ್ತರಂ ಸಾಲು ಕಂಬದೂರು ನಾಗಲಾಪುರಂ

೧೨೭ ಜಾಲೋಡು ಮೂಡಗ್ರಾಮಾನಿಕಿ ಸರಹದ್ದು ಮುಗ್ಗುಡ ಕುತ್ತೆಗುಲುನ್ನಯೀ

೧೨೮ ಶಾಸನಂ ಕೊಂಡಮೀದ ಬಂಡಕು ಶಾಸನಂ ವೇಯಿಂಚಿ ತರುವಾತ

೧೨೯ ಬೋಗಿನಾಯುಡು ಅನ್ನ ಚೆನ್ನಮನಾಯುಡು ಅನುಮಪ್ಪನಾಯುಡು, ಜೋ

೧೩೦ ತಿನಾಯುಡು ಜಕ್ಕಿನಾಯುಡು ಯಿ ಐದುಗುರು ಸುರಲು ಬಂಡಿ ಬಂದರಾಯ

೧೩೧ ಲು ತೋಗೂಡಿ ವುಡುಗೊರು ಕಾನಕಲಿಚ್ಚಿ ...... ತಿಪ್ಪರಾಜಯ್ಯಗಾರಿ

೧೩೨ ಅನುಭವಿಸಿನ ನಿಜವುಲ ಜಾಲೋಡು ಗ್ರಾಮಂ ಲೋಕಿ ... ಮಜರಾಲು

೧೩೩ ಗದ್ದಲಪರ್ತಿ ಭೂಮುನಿಕುಂಟ೧ಗರುಡ ಹನುಮಸಿ ಪಲ್ಲಿ ೧ ಅಂಕ ಅನುಮ

೧೩೪ ನಾಯುನಿಪಾಳ್ಯಂ೧ ಕವುಲೋಡು ಗ್ರಾಮಂ ೧ ವಿಜಯನಗರಂಪಲ್ಲಿ ೧

೧೩೫ ಸೋಮ್‌ಪುರಂ ೧ ಕರಕಲೋಡು ೧ ಅಂತು-ಗ್ರಾಮಾಲು ಜಾಲೋಡು ಗ್ರಾಮಾಲು.

೧೩೬ ಬಂಡಿ ಬಂದರಾಯಲು ದೊರಲಕು ಯಿಂದಲೂ ಚೇಯಿಂಚಿನ ವಾಡು

೧೩೭ ಜೋತಿನಾಯುಡು ಕಾಶಿಗೋತ್ರಂ ಸಿದ್ದನಗೌಡು ಹನುಮಪ್ಪಗೌಡು.

೧೩೮ ಮಿರಿಯಾಲ ಗೋತ್ರಂ ಕೆಂಚನ ಗೌಡುನಿಕಿ ಅಲ್ಲುಡು ಕುಮಾರುಲು

೩ನೇ ಹಲಗೆ ೬ನೇ ಮುಖ

೧೩೯ ಅನಿಕುಮಾರ ಪದವಿ ಯಿಚ್ಚಿತನೆ ಶಾಸನಂ

೧೪೦ ಸಗಪಾಲು ಮನ್ನಿಂಚಿಯಿಚ್ಚಿ ದೊರಲು

೧೪೧ ಸಮ್ಮತಿನಿ ರಾಯಲುವಾರಿ ಸಮ್ಮತಿನ ಶ್ರೀ

೧೪೨ ವಿರೂಪಾಕ್ಷುನಿ ದೇವಾಲಯಮಂದು ಶಿಲ

೧೪೩ ಮೀದ ಶಾಸನಂ ವೇಯಿಂಚಿ ಪುತ್ರ

೧೪೪ ಪೌವುತ್ರ ಪಾರಂಪರಿಯಂತು ಆ ಚಂದ್ರರ್ಕ

೧೪೫ ಸ್ಥಾಯಿಗಾ ಅನುಭವಿಂಚು ಪಯುಂಡೆದಿ ಅನಿ

೧೪೬ ವ್ರಾಸಿ ಇಚ್ಚಿನ ದಾನಶಾಸನಂ ಯಿಂದುಕು

೧೪೭ ಆಕ್ಷೇಪಣ ಚೇಸಿ ಕಾಶಿಲೋ ಬ್ರಹ್ಮಹತ್ಯಾ

೧೪೮ ಗೋಹತ್ಯಾ ಚೇಸಿನ ಪಾಪಾನುಕುಬಡುರು.

೧೪೯ ಅನಿದಾನಮುಗ ರಾಯಿಂಚಿನ ದಾನಪತ್ರಂ.

೧೫೦ ರಾಸಿನ ಶಂಕರಬಟ್ಲು ರಾಸಿನ ದಾನಪತ್ರಂ.

[ಕೃತಜ್ಞತೆಗಳು: ಮೇಲಿನ ತಾಮ್ರ ಶಾಸನವನ್ನು ಜಾನಪದ ಸಂಶೋಧಕರಾದ 'ಸಣ್ಣನಾಗಪ್ಪ' ನವರು ನನಗೆ ಒದಗಿಸಿಕೊಟ್ಟಿರುವುದೇ ಅಲ್ಲದೆ ಅದನ್ನು ಓದುವುದಲ್ಲಿ ಸಹಕಾರ ಮಾಡಿರುತ್ತಾರೆ. ಹಾಲಿ ಸಣ್ಣನಾಗಪ್ಪನವರು ವೈ.ಎನ್. ಹೊಸಕೋಟೆ, ಪಿ.ವಿ. ಕಾಲೇಜಿನಲ್ಲಿ ಪ್ರಾಂಶುಪಾಲರಾಗಿದ್ದಾರೆ. ಅವರಿಗೆ ಈ ಸಂಬಂಧ ಅಭಿನಂದನೆಗಳು.]

೨೨

ತುಮಕೂರು ಜಿಲ್ಲೆಯ ಕಸಾಪುರ, ಮಿಡಿಗೇಶಿ ಹಾಗೂ ಆಂಧ್ರಪ್ರದೇಶದ ಮಡಕಶಿರಾ ತಾಲ್ಲೂಕಿನ ಕೆಲವು ಅಪ್ರಕಟಿತ ಶಾಸನಗಳು

ಡಾ. ಎನ್. ನಂದೀಶ್ವರ*


ಕಸಾಪುರ ಗ್ರಾಮ ತಾಲ್ಲೂಕು ಕೇಂದ್ರ ಮಧುಗಿರಿಯಿಂದ ೨೨ ಕಿ.ಮೀ. ಹಾಗೂ ಜಿಲ್ಲಾ ಕೇಂದ್ರವಾದ ತುಮಕೂರಿನಿಂದ ೬೩ ಕಿ.ಮೀ. ದೂರದಲ್ಲಿದೆ. ಈ ಗ್ರಾಮವು ಪ್ರಾಗೈಸಿಹಾಸದ ಕಾಲದಿಂದಲೂ ಬಹಳ ಪ್ರಸಿದ್ಧವಾಗಿದೆ. ಈ ಗ್ರಾಮದ ಛಲವಾದಿ (ಆದಿದ್ರಾವಿಡರ) ಬಸಣ್ಣನ ಹತ್ತಿರ ಕಂಚಿನ ಹರೆ ಇದೆ. ಈ ಹರೆಯನ್ನು ಮಿಡಿಗೇಶಿಯ ಕುಂಚಿಟಗರ ಶೆಟ್ಟೇನವರ ಮನೆದೇವರಾದ ಶ್ರೀಲಕ್ಷ್ಮೀದೇವರಿಗೆ ಬಡೆಯುವ ಹರೆಯಾಗಿದ್ದು, ಇದರ ಮೇಲೆ ಅಪ್ರಕಟಿತ ಶಾಸನವಿದೆ. ಶ್ರೀಲಕ್ಷ್ಮೀ ದೇವತೆಗೆ ಹರೆಯನ್ನು ಮಾತ್ರ ಬಡಿಯುತ್ತಾರೆ. ಹರೆಯನ್ನು ೫ ಕಟ್ಟುಗಳಲ್ಲಿ ರಚಿಸಿ, ೪ ಮನೆಗಳನ್ನು ಮಾಡಲಾಗಿದೆ. ಶಾಸನವನ್ನು ೨ ಭಾಗಗಳಲ್ಲಿ ಬರೆಯಲಾಗಿದೆ.

ಶಾಸನದ ಪ್ರಾರಂಭದಲ್ಲಿ ಚಂದ್ರ ಎಡಭಾಗದಲ್ಲಿ ಬರೆದಿದ್ದರೆ, ಬಲಭಾಗದಲ್ಲಿ ಸೂರ್ಯನನ್ನು ಬರೆಯಲಾಗಿದೆ. ಶಾಸನವು ೬ ಸಾಲುಗಳಲ್ಲಿ ಬರೆಯಲ್ಪಟ್ಟಿದ್ದು, ಕನ್ನಡ ಭಾಷೆಯಲ್ಲಿದೆ. ಶಾಸನದ ಕಾಲ ೧೭೮೭ ಜೂನ್ ೨೯ ಗುರುವಾರವಾಗಿರುತ್ತದೆ. ಮಿಡಿಗೇಶಿಯ ಕುಂಚಿಟಿಗ ಜನಾಂಗದ ಶೆಟ್ಟೇನವರ ಕುಲದ ಮನೆದೇವರಾದ ಮಿಡಿಗೇಶಿಯ ಶ್ರೀಲಕ್ಷ್ಮೀ ದೇವರಿಗೆ ಬೆಂಗಳೂರಿನ ಶೆಟಿಪನ ಮಗ ಯಿರ ಚಿಕಂಣನು ಮಾಡಿಸಿ ಕೊಟ್ಟ ಅರೆ. ಮಿಡಿಗೇಶಿಯ ಶಾನುಭೋಗ ಅರುಣಚಲೈನವರು ಬರೆದ ಬರಹವೆಂದು ಇದೆ. ಈ ಹರೆಯನ್ನು ಬಾಳಮಂಡೆ ಬಸಪನ ಮೊಮ್ಮಗನ ಕೊರಳಿಗೆ ಲಕ್ಷ್ಮೀ ದೇವರಿಗೆ ದೇವರ ಉತ್ಸವ ಹಬ್ಬ ಹರಿದಿನಗಳಲ್ಲಿ ಬಡಿಯಲು ಹಾಕಿಸಿರುವ ಹರೆಯಾಗಿರುತ್ತದೆ.

ಶಾಸನ ಪಾಠ

೧ ಪ್ಲವಂಗ ಸಂವತ್ಸರದ ಅಷಾಡ ಶು ೧೪ಲ್ಲು ಮಿ
೨ ಡಿಗೇಶಿ ಶ್ರೀ ಲಕ್ಷ್ಮೀ ದೇವತಿಗೆ ಬೆಂಗಳೂರು ಶೆಟೆಪ್ಪನ
೩ ಮಗ ಯಿರ ಚಿಕಂಣ ಮಾಡಿಶಿ ಕೊಟ ಅರ್‍ರೆ ಮಿಡಿಗೇ
೪ ಶಿ ಶಾನುಬಾಗ ಆರುಣಚಲೈನ ಬರಹ ॥
೫ ಯಿ ಹರ್‍ರೆ ಬಾಳಮಂಡೆ ಬಸಪನ ಮೊಮಗ
೬ ನ ಕೊರಳಿಗೆ ಹಾಕಿದ ಹರೆ ॥

ಮಿಡಿಗೇಶಿಯ ಹರೆ ಶಾಸನ



ಮಿಡಿಗೇಶಿಯ ಆದಿದ್ರಾವಿಡ ಜನಾಂಗದ ಕಾವೇರಪ್ಪನ ಮಗ ಹನುಮಂತರಾಯಪ್ಪನ ಹತ್ತಿರ ಒಂದು ಹರೆ ಇದೆ. ಇದನ್ನು ಗಡಿಭಾಗದ ಆಂಧ್ರಪ್ರದೇಶದ ಗೊಟ್ಟುಗುರಿಕೆಯಿಂದ ತಂದಿಟ್ಟುಕೊಂಡಿರುತ್ತಾರೆ. ಇದನ್ನು ಇಂದು ಎಲ್ಲಾ ದೇವರಿಗೂ ಬಡಿಯುತ್ತಾರೆ. ಇದರ ಮೇಲೆ ಅಪ್ರಕಟಿತ ಶಾಸನವಿದೆ.

ಹರೆಯನ್ನು ೫ ಕಟ್ಟುಗಳಲ್ಲಿ ರಚಿಸಿ, ೪ ಮನೆಗಳನ್ನು ಮಾಡಲಾಗಿದೆ. ಶಾಸನದ ಪ್ರಾರಂಭದಲ್ಲಿ ಎಡಭಾಗದಲ್ಲಿ ಚಂದ್ರನನ್ನು, ಬಲಭಾಗದಲ್ಲಿ ಸೂರ್ಯನನ್ನು ಬರೆಯಲಾಗಿದೆ. ಶಾಸನವನ್ನು ೨ ಭಾಗಗಳಲ್ಲಿ ಬರೆಯಲಾಗಿದೆ. ಶಾಸನವು ೮ ಸಾಲುಗಳಲ್ಲಿ ಬರೆಯಲ್ಪಟ್ಟಿದೆ. ಶಾಸನವು ಕನ್ನಡ ಭಾಷೆಯಲ್ಲಿ

* ಪ್ರಾಂಶುಪಾಲರು, ಎಸ್.ಎಂ.ಆರ್.ಪಿ.ಯು. ಕಾಲೇಜು, ಕಳ್ಳಂಬೆಳ್ಳ, ಸಿರಾ ತಾಲ್ಲೂಕು, ತುಮಕೂರು ಜಿಲ್ಲೆ-೫೭೨೧೩೫.

ಬರೆಯಲ್ಪಟ್ಟಿದೆ. ಶಾಸನದ ಕಾಲ ೧೭೭೭ ಏಪ್ರಿಲ್ ೮, ಸೋಮವಾರವಾಗಿರುತ್ತದೆ.

ಗೊಟ್ಟುಗುರಿಕೆ ಏತಂಣನ ಮಗನಾದ ನಲ್ಲನಿಂಗಣ್ಣನು ಶ್ರೀ ಪಾತಪ್ಪದೇವರಿಗೆ ಹರೆ ಬಡಿಯಲು ಭಕ್ತಿಯಿಂದ ಕೊಟ್ಟಿರುವರು. ಇಂದಿಗೂ ಗೊಟ್ಟುಗುರಿಕೆಯಲ್ಲಿ ತೆರೆದ ಅಂಕಣದಲ್ಲಿ ಶ್ರೀಪಾತಪ್ಪ ದೇವಸ್ಥಾನವಿದೆ. ಇಂದು ನಾಯಕ (ತಳವಾರ) ಜನಾಂಗದವರ ಮನೆದೇವರಾಗಿದೆ. ಈ ದೇವರನ್ನು ಹಬ್ಬಹರಿದಿನಗಳಲ್ಲಿ ವಿಶೇಷವಾದ ಪೂಜೆ ಮಾಡುತ್ತಾರೆ. ನಾಯಕ ಜನಾಂಗದವರೇ ಅರ್ಚಕರಾಗಿರುತ್ತಾರೆ. ಪಕ್ಕ ಕರ್ನಾಟಕದ ಗಡಿಯಲ್ಲಿಯಲ್ಲಿನ ಗ್ರಾಮ ರೆಡ್ಡಿಹಳ್ಳಿ. ಈ ರಡಿಅಳಿ(ರೆಡ್ಡಿಹಳ್ಳಿ)ಯ ಹಳೆ ಮಗನಾದ ಚೆಲವಾದಿನಾಗನ ಮಗ ನರಸನ ಕೊರಳಿಗೆ ಹಾಕಿಸಿರುವರು. ರತ್ನಗಿರಿಯ ಚಿತ್ರಗಾರ ಪುಟ್ಟಲಿಂಗಪ್ಪ ಶಾಸವನ್ನು ಬರೆದಿರುವನು.

ಶಾಸನ ಪಾಠ

೧ ಶ್ರೀ

೨ ಶ್ರೀ ಹೇವಳಂಬಿ ಸಂಮತ್ಸರದ ಚೈತ್ರ ಸುದ ೧ ಯ

೩ ಲ್ಲು ಶ್ರೀ ಮತು ಗೊಟ್ಟು ಗುರಿಕೆ ಏತಂಣನ ಮಗ

೪ ನಲ್ಲ ನಿಂಗಣ ಶ್ರೀಪಾತಪ್ಪ ದೇವರಿಗೆ ಕೊಡಿಶಿದ

೫ ಆರೆ ಭಕ್ತಿ ಸದರಿ ಆರೆ ಅಳೆ ಮಗನಾದ ರಡಿ


೬ ಅಳಿ ಚೆಲವಾದಿ ನಾಗನ ಮಗ ನರಸನ ಕೊ

೭ ಳಿಗೆ ಆಕಿದ ಅರೆ

೮ ॥ ರತ್ನಗಿರಿ ಚಿತ್ರಗಾರ

೯ ಪುಟ್ಟಲಿಂಗಪ್ಪ

ಹೇಮಾವತಿಯ ಶಾಸನ



ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಮಡಕಶಿರಾ ತಾಲ್ಲೂಕಿನ ಹೇಮಾವತಿಯು ನೊಳಂಬರ ರಾಜಧಾನಿಯಾಗಿತ್ತು. ಇಲ್ಲಿನ ಪ್ರಸಿದ್ಧವಾದ ಸಿದ್ದೇಶ್ವರ ದೇವಸ್ಥಾನದ ದ್ವಾರಬಂಧವಲ್ಲಿ ಅಪ್ರಕಟಿತ ಶಾಸನವಿದೆ. ಬಾಗಿಲುವಾಡಕ್ಕೆ ಹಾಕಿದ್ದ ಬೆಳ್ಳಿಯ ತಗಡನ್ನು ಜೀರ್ಣೋದ್ಧಾರದ ಸಂದರ್ಭದಲ್ಲಿ ತೆಗೆದಿದ್ದರಿಂದ ಈ ಶಾಸನ ಕಂಡುಬಂದಿತು.

ಶಾಸನವು ೨ ಸಾಲುಗಳಲ್ಲಿ ಬರೆಯಲ್ಪಟ್ಟಿದ್ದು, ಕನ್ನಡ ಭಾಷೆಯಲ್ಲಿದೆ. ಲಿಪಿಯು ೧೨ನೇ ಶತಮಾನದ ಲಿಪಿಯನ್ನು ಹೋಲುತ್ತದೆ. ಗರೆಯ ಪಲೆಯ ಎಂಬುವನು ಹೂವಿನ ಕಲ್ಲುದ್ವಾರಬಂದವನ್ನು ಮಾಡಿಸಿದ ವಿಷಯ ಎಂದು ಊಹಿಸಬಹುದಾಗಿದೆ.

ಶಾಸನ ಪಾಠ

೧ ಶ್ರೀಮತು ಗರೆಯ ಪಲೆಯ ಹುಪಿನ ಕಲುದರವಂದ ಮಾ

೨ ಡಿಸಿದ

ಪೇಲುಬಂಡೆಯ ಶಾಸನ



ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಮಡಕಶಿರಾ ತಾಲ್ಲೂಕಿನ ಹೇಮಾವತಿಗೆ ಹತ್ತಿರದ ಗ್ರಾಮ ಪೇಲುಬಂಡೆ. ಇಲ್ಲಿನ ಪ್ರಸಿದ್ಧವಾದ ರಂಗನಾಥಸ್ವಾಮಿ ದೇವಸ್ಥಾನದ ಯಾಗಶಾಲೆಯ ದ್ವಾರಬಂಧದಲ್ಲಿ ಒಂದು ಅಪ್ರಕಟಿತ ಶಾಸನವಿದೆ.

ಶಾಸನವು ೩ ಸಾಲುಗಳಲ್ಲಿ. ಕನ್ನಡ ಭಾಷೆಯಲ್ಲಿ ಬರೆಯಲ್ಪಟ್ಟಿದೆ. ಲಿಪಿಯು ೧೮ನೇ ಶತಮಾನವನ್ನು ಹೋಲುತ್ತದೆ. ಶಾಸನವು ನಿಡಗಲ್ಲು ಮಹಾನಾಯಕಚಾರ್ಯರಾದ ನಿಡಗಲ್ಲು ಇಮ್ಮಡಿ ತಿಮ್ಮಣ್ಣ ನಾಯಕನು ಯಾಗಶಾಲೆಯನ್ನು ಕಟ್ಟಿಸಿದ ವಿಷಯವನ್ನು ತಿಳಿಸುತ್ತದೆ. ಆದರೆ ಈ

ಯಾಗಶಾಲೆಯ ಕಂಬಗಳನ್ನು ನೋಡಿದರೆ ಇದು ಅವರ ಕಾಲದಲ್ಲಿ ನಿರ್ಮಿತವಾದಂತೆ ಕಂಡುಬರುವುದಿಲ್ಲ. ಆದರೆ ಅದಾಗಲೇ ಅಸ್ತಿತ್ವದಲ್ಲಿದ್ದ ಪೇಲುಬಂಡೆಯ ರಂಗನಾಥ ಸ್ವಾಮಿಯ (ನೊಳಂಬರ ಕಾಲದಲ್ಲಿ ರಚನೆ) ಶಿಥಿಲವಾದ ಪಳೆಯುಳಿಕೆ ಉಪಯೋಗಿಸಿ ಅಥವಾ ರಂಗನಾಥಸ್ವಾಮಿ ದೇವಸ್ಥಾನಕ್ಕೆ ಉಪಯೋಗಿಸಿ ಉಳಿದ ಕಂಬಗಳಿಂದ ಈ ಯಾಗಶಾಲೆಯನ್ನು ನಿರ್ಮಿಸಿರಬಹುದು. ನಿಡಗಲ್ಲು ನಾಯಕರ ವಂಶಾವಳಿಯಲ್ಲಿ ಹಲವಾರು ಜನ ತಿಮ್ಮಣ್ಣ ನಾಯಕರು ಬಂದರೂ ಹರತಿ ವಂಶಾವಳಿಯ ವೀರತಿಮ್ಮಣ್ಣ ನಾಯಕನೇ ಇರಬಹುದು. ಈತನು ೧೭೫೮ ರಿಂದ ೧೭೮೫ರವರೆಗೆ ಆಳ್ವಿಕೆ ನಡೆಸಿರುವನು.

ಶಾಸನ ಪಾಠ

೧ ಶುಭಮಸ್ತು ಪಾರ್ಥಿವ ಸಂವತ್ಸರದ ಮಾಘ ಶುಧ ೫ ಲೂ ಶ್ರೀ ಮನ್ಮಹಾನಾಯಕಾಚಾರ್ಯರಾದ ನಿಡುಗಲ ಯಿಮಡಿ ತಿಮಣ್ಣ ನಾಯ

೨ ಕ ಅಯ್ಯನವರ ರಾಯಸದ ರಾಂಯಣನೂ ಕಟ್ಟಿಸಿದ ಪೆಯಲಬಂಡೆ ರಂಗನಾಥನ ಯಾಗಶಾಲೆಯ ಬಾಗಿಲಿ ವಾ

೩ ವಾಡದ (ಅಂಕಣ ಕ) ಮಂಗಳ ಮಹಾ ಶ್ರೀಶ್ರೀ ರಾಮಚಂದ್ರ ಸಹಾಯ



[ಶಾಸನ ಓದಲು ನೆರವಾದ ಸುಂಕಂ ಗೋವರ್ಧನ, ಡಾ. ಪಿ.ವಿ. ಕೃಷ್ಣಮೂರ್ತಿ ಹಾಗೂ ಡಾ.ಬಿ. ರಾಜಶೇಖರಪ್ಪ ರವರಿಗೆ ಕೃತಜ್ಞತೆಗಳು.]

ಆಧಾರಸೂಚಿ

೧. **ಎಪಿಗ್ರಾಫಿಯ ಕರ್ನಾಟಕ,** ಸಂಪುಟ ೧೨, ತುಮಕೂರು ಜಿಲ್ಲೆ.

೨. **ಎಪಿಗ್ರಾಫಿಯ ಕರ್ನಾಟಕ,** ಸಂಪುಟ ೧೬, ತುಮಕೂರು ಜಿಲ್ಲೆ.

೩. **ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ** ೫, **ಆಂಧ್ರಪ್ರದೇಶದ ಕನ್ನಡ ಶಾಸನಗಳು, ಭಾಗ ೧ ಮತ್ತು ೨,** (ಸಂ. ಗಣೇಶ ಕೆ.ಆರ್. ಹಾಗೂ ಶೇಷಶಾಸ್ತ್ರಿ ಆರ್.,) ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧.

೪. ಡಾ.ಎನ್. ನಂದೀಶ್ವರ, ೨೦೦೮ **ಶಿರಾ ತಾಲ್ಲೂಕಿನ ಸ್ಮಾರಕಗಳು ಹಾಗೂ ಶಾಸನಗಳು,** ಪೂರ್ಣಚಂದ್ರ ತೇಜಸ್ವಿ ಪ್ರಕಾಶನ, ಶಿರಾ

೫. ಡಾ.ಎನ್. ನಂದೀಶ್ವರ, ೨೦೦೮ **ಶಿರಾ ತಾಲ್ಲೂಕು ದರ್ಶನ,** ಪೂರ್ಣಚಂದ್ರ ತೇಜಸ್ವಿ ಪ್ರಕಾಶನ, ಶಿರಾ

೬ **ಕುಂಟಿಗರ ಸಂದೇಶ** ಮಾಸ ಪತ್ರಿಕೆ.

ಕಳಸೇಶ್ವರ ದೇವಾಲಯದ ನಿರೂಪಗಳು

ಜಿ.ವಿ.ಕಲ್ಲಾಪುರ*

'ಕಳಸ' ಗ್ರಾಮವು ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆಯಿಂದ ೬೦ ಕಿ.ಮೀ. ದೂರದಲ್ಲಿದೆ. ಭದ್ರಾನದಿಯ ಬಲದಂಡೆಯ ಮೇಲಿನ ಈ ಗ್ರಾಮ ಇತಿಹಾಸ ಪ್ರಸಿದ್ಧ ಸ್ಥಳವಾಗಿದ್ದು, ಇಲ್ಲಿ ಕಳಸೇಶ್ವರ ಅಥವಾ ಕಳಸನಾಥ ದೇವಾಲಯವಿದೆ. ಈ ಪ್ರದೇಶದಲ್ಲಿ ಕೋಟಿತೀರ್ಥ, ರುದ್ರತೀರ್ಥ, ಅಂಬುತೀರ್ಥ, ನಾಗತೀರ್ಥ ಮತ್ತು ವಸಿಷ್ಠತೀರ್ಥಗಳೆಂಬ ಐದು ತೀರ್ಥಗಳಿವೆ. ಕಳಸವು ಪಂಚ ಶೈವ ಕ್ಷೇತ್ರಗಳಲ್ಲೊಂದೆಂದು ಗುರುತಿಸಲಾಗಿದೆ. ಈ ಪ್ರಾಂತವನ್ನು ಸಾಂತರ ಭೈರರಸವೊಡೆಯನು ಆಳುತ್ತಿದ್ದನೆಂದು ತಿಳಿದು ಬರುತ್ತದೆ.

ಕಳಸದ ಪೂರ್ವದಿಕ್ಕಿನ ಒಂದು ಸಣ್ಣಗುಡ್ಡದ ಮೇಲೆ ಕಳಸೇಶ್ವರ ದೇವಾಲಯವಿದೆ. ಸುತ್ತಲಿನ ಪ್ರಾಕಾರವನ್ನು ಹೊಸದಾಗಿ ನಿರ್ಮಿಸಲಾಗಿದೆ. ಮುಂದಿನ ಮಂಟಪವು ಹಳೆಯದಾಗಿದೆ. ಪ್ರಧಾನ ದೇವಾಲಯವು ವಿಜಯನಗರ ಶೈಲಿಯಲ್ಲಿ ನಿರ್ಮಾಣವಾಗಿದ್ದು, ಇದನ್ನು ಸಾಂತರಸರು ಜೀರ್ಣೋದ್ಧಾರ ಮಾಡಿದ್ದಾಗಿ ತಿಳಿದು ಬರುತ್ತದೆ. ಗರ್ಭಗೃಹ, ನವರಂಗ, ಮುಖಮಂಟಪ, ಸಿಂಹಯಾಳಿಗಳಿಂದ ಕೂಡಿದೆ. ಭುವನೇಶ್ವರಿಯನ್ನು ಕಲಾತ್ಮಕವಾಗಿ ರಚಿಸಲಾಗಿದೆ. ಇಲ್ಲಿ ಗಣಪತಿ ಮತ್ತು ಅಗಸ್ತ್ಯೇಶ್ವರ ದೇವಾಲಯಗಳಿವೆ. ಗಣಪತಿ ದೇವಾಲಯವು ಹೊಯ್ಸಳ ಶೈಲಿಯಲ್ಲಿದೆ. ಶಿಖರವಿದೆ. ಕ್ಷೇತ್ರಪಾಲ ಮತ್ತು ಪಾರ್ವತಿ ದೇವಾಲಯಗಳಿಂದ ಕೂಡಿದೆ.

ಕಳಸದಲ್ಲಿ ವೆಂಕಟರಮಣ, ಆಂಜನೇಯ, ವೀರನಾರಾಯಣ, ಗೋಪಾಲಕೃಷ್ಣ, ಗಂಗಾಧರೇಶ್ವರ, ಗಣಪತಿ, ಚೆನ್ನಕೇಶವ, ಬಿಂದುಮಾಧವ, ದುರ್ಗಾ, ಕಾಲಭೈರವ, ಚಂದ್ರನಾಥ ಜೈನ ಬಸದಿಗಳಿವೆ. ಕಳಸಕ್ಕೆ ಸಮೀಪದಲ್ಲಿಯೇ ಪ್ರಸಿದ್ಧವಾದ ಅನ್ನಪೂರ್ಣೇಶ್ವರಿ ಕ್ಷೇತ್ರವಿದೆ.

ಕಳಸೇಶ್ವರ ದೇವಾಲಯದಲ್ಲಿದ್ದ ಕಡತಗಳನ್ನು ಕೆಳದಿ ವಸ್ತುಸಂಗ್ರಹಾಲಯದಲ್ಲಿ ಸಂಗ್ರಹಿಸಿಡಲಾಗಿದೆ. ಇವು ಅಪರೂಪದ ಐತಿಹಾಸಿಕ ದಾಖಲೆಗಳಾಗಿವೆ. ಈ ಕಡತಗಳಲ್ಲಿ ದೇವಾಲಯಕ್ಕೆ ಸಂಬಂಧಿಸಿದ ದಿನನಿತ್ಯದ ಲೆಕ್ಕ ಪತ್ರಗಳು, ದೇವಾಲಯಕ್ಕೆ ಬಂದ ಧಾನ್ಯಗಳ ವಿವರಗಳು, ವರ್ಷಂಪ್ರತಿ ನಡೆಯುತ್ತಿದ್ದ ವಿವಿಧ ಉತ್ಸವಗಳ ವಿವರಗಳು, ಉಪಾದಿವಂತರು ತಮ್ಮ ಉಪಾದಿಗಳನ್ನು ಬೇರೆಯವರಿಗೆ ವಹಿಸಿಕೊಟ್ಟ ನಿರೂಪಗಳು ಇತ್ಯಾದಿ ಅನೇಕ ವಿಚಾರಗಳು ದಾಖಲಾಗಿವೆ. ಅವುಗಳಲ್ಲಿ ಉಪಾದಿಗೆ ಸಂಬಂಧಿಸಿದ ಮೂರು ನಿರೂಪಗಳನ್ನು ಆಯ್ದು ಇಲ್ಲಿ ಕೊಡಲಾಗಿದೆ.

ನಿರೂಪ ೧

೧. ಕಲಸೇಶ್ವರಸ್ವಾಮಿಯವರು

೨. ಬಾಳೆಹೊಂನ್ನೂರು ವೆಂಕಪ್ಪಗೆ ಬರೆಶಿ ಕಳುಹಿಸಿದ ನಿರೂಪಾ ಸ್ವಸ್ತ್ರೀಜಯಾಭ್ಯುದಯಾ

೩. ಶಾಲಿವಾಹನಶಕವರುಷ ೧೭೬೧ನೆ ಪರಿವರ್ತ ಮಾನಕೆ ಸಲ್ಲುವ ವಿಕಾರಿನಾಮಸಂವತ್ಸರದ

೪. ಮಾಘಶು ೨ ಗುರುವಾರ್‍ರದಲ್ಲು ಭಂಡಾರದ ಲೇಖಕೆ ಬರೆಸಿಯಿರವದ್ದು ಲಕ್ಕವಳ್ಳಿತ್ತಾಲೂಕ್ಕೂ

೫. ಆರುವಳಿ ಮಾಗಣೆ ಬೈಸಗಾರ್‍ರು ಗ್ರಾಮದಲ್ಲು ಯಿರ್‍ರುವ ಗದೆ ಖಿ೬ಕ್ಕೆ ಸಿಸ್ತು



* ಕೆಳದಿ ವಸ್ತು ಸಂಗ್ರಹಾಲಯ, ಕೆಳದಿ-೫೭೭೪೦೧.

೬. ಗ ೩ಿಲೂ ಮೂರ್ರುವರಹಾಲು ಆರ್ರು ಹಣವಿನ ಭೂಮಿಯಲ್ಲೂ ನಿನೂ ಸಾಗುವಳಿಮಾ

೭. ಡುವಗದೆ ಖ॥೦ ಹೆ ಸಿಸ್ತು ಗ ೧೬೦ ೮॥= ವರಾಹಾಲು ನಾಲ್ಕು ಹಣೌ ವಂದ್ದು

೮. ಹಾಗ ಉ ಮೂರ್ರು ವಿಸ ಕಂದಾಯ ಬರ್ರು ಹಣಕ್ಕೆ ಸಂನಿಧ್ಧಿಯಲ್ಲು ನಿತ್ಯಗಂ

೯. ಗಾ ಸ್ನಾನದ ಉಪಾದಿಗೆ ಅಡಿಗಳ ಪುಟ್ಟರಾಮಾಜೋಯಿಸಗೆ ಅಪ್ಪಣೆ ಆಗಬೆಕೆಂ

೧೦. ದಾಗಿ ಬಿಂನ್ನವವಂ ಮಾಡಿಕೊಂಡದಕ್ಕೆ ನಿನ್ನ ಅಪೆಕ್ಷ ಪ್ರಕಾರ ಪುಟ್ಟರಾಮಾಜೋಯಿಸ

೧೧. ಗೆ ನಿತ್ಯ ಗಂಗಾಸ್ನಾನದ ಉಪಾದಿ ಬಗೆ ಕಟಲೆ ಮಾಡಿಶಿಯಿರುತ್ತದೆ। ಯೀಗ ಸಾ

೧೨. ಗವಳಿ ಆಗಿಯಿರ್‍ರುವ ಗದ್ದೆ ಸಿಸ್ತಿನ ಹಣ ಹೊರತ್ತೂ ಯಿಂನ್ನೂಯಿರ್ರುವ ಗದ್ದೆ॥

೧೩. ಯುಂ ಸಾಗುವಳಿಮಾಡ್ಸಿವುದು ಯೀಗ ಬರ್ರುವ ಹಣ ಗ ೧೬೪॥= ವಂದ್ದು ವರ

೧೪. ಹ ರಾ ಹಾಗೂ ಮೂರ್ರುವೀಸ್ವನ್ನೂ ಯೀಪುಟ್ಟರಾಮಾಜೋಯಿಸ

೧೫. ಸ್ತು ವಂಶಪಾರಂಪರ್ಯವಾಗಿ ಕೊಟ್ಟುಕೊಂದು ಯಿಂನ್ನೂಯಿರ್ರುವಗದೆ ಸಾಗು

೧೬. ಂದು ಉತ್ಸವಕೆ ಉಪಯುಕ್ತ ಆಗುವಂತೆ ನಡದ್ದು

ಈ ದಾಖಲೆಯು ಕ್ರಿ.ಶ. ೧೮೩೯ರ ಡಿಸೆಂಬರ್ ೮ ಭಾನುವಾರ ತಾರಿಕಿಗೆ ಸವಾನಾವಾಗುತ್ತದೆ. ಇಲ್ಲಿ ಉಲ್ಲೇಖಿತವಾಗಿರುವ ಬಾಳೆಹೊನ್ನೂರು ವೆಂಕಪ್ಪ ಎಂಬುವ ವ್ಯಕ್ತಿ ರೆವಿನ್ಯೂ ಅಧಿಕಾರಿಯಾಗಿದ್ದಾನೆ. ಇದರಲ್ಲಿ ಗಂಗಾಸ್ನಾನದ ಉಪಾದಿಯನ್ನು ಅಡಿಗಳ ಪುಟರಾಮಾಜೋಯಿಸಗೆ ವಹಿಸಿಕೊಡುವಂತೆ ಆದೇಶಿಸಲಾಗಿದೆ. ಇದರಲ್ಲಿ ಅವನಿಂದದೆ ಪಡೆಯಬೇಕಾದ ತೆರಿಗೆಗಳ ಭೂಮಿಗಳ ವಿವರಗಳನ್ನು ದಾಖಲಿಸಿಲಾಗಿದೆ.

ನಿರೂಪ –೨

೧. ಶ್ರೀಕಲಸೇಶ್ವರಸ್ವಮಿಯರ್ರು

೨. ಆಡುವಳಿ ವಾಗಣಿಸ್ತಳ ಶಾನಭಾಗವಸ್ತಾರ ಕಳಸೈನಮಗ ರಾಮೈ

೩. ಗೆ ಬರಶಿ ಕಳುಹಿದ ನಿರೂಪ ಸ್ವಸ್ತಿಶ್ರೀಜಯಾಭ್ಯುದಯ ಶಾಲಿವಾಹನಶಕ

೪. ವರ್ರುಷ ೧೭೬೧ನೆ ವರ್ತಮಾನಕೆ ಸಲುವ ವಿಕಾರ್ರಿ ನಾಮ ಸಂವತ್ಸರದ ಮಾಘ



೫. ಶು ೩ಿಯು ಶುಕ್ರವಾರದಲ್ಲು ಭಂಡಾರದ ಲೆಖಿಕೆ ಬರೆಶಿಯಿರ್ರುವದೂ

೬. ನಿಂನ ವಾಗಣಿ ಪೈಕಿ ಬಾಳೆಹೊಂನೂರ್ರು ವೆಂಕಪ್ಪಯ್ಯನ್ನೂ ಸಾಗುಮಾಡುವ ಬೈ

೭. ಸ ಗಾರ್ರುಗ್ರಾಮದಲ್ಲು ಉತ್ತಾರ ಗದ್ದೆ ೫೩ಕ್ಕೆ ಸಿಸ್ತು ಗ ೩। ಮೂರ್ರುವರಹಾ

೮. ಉ ಆರ್ರುಹಣವಿನಲ್ಲು ಗದ್ದೆ ಬಿಜವರ್ರಿ ೫ ೨॥೦ ಸಿಸ್ತು ಗ೧೬೪।= ವಂದು

೯. ವರಹಾಲು ನಾಲ್ಕು ಹಣಾ ಹಾಗೂ ಮೂರ್ರು ವಿಸಕ್ಕೆ ನಿತ್ಯದಲ್ಲೂ ಗಂಗಾಸ್ನಾನದ ಬಗ್ಯೆ

೧೦. ಅಡಿಗಳ ಪುಟರಾಮಾಜೋಯಿಸರಿಗೆ ಅಪ್ಪಣೆ ಆಗಬೆಕೂಯಂಬದಾಗಿ ಬಾಳೆ

೧೧. ಹೊಂನ್ನೂರು ವೆಂಕಪ್ಪನು ಅಪೇಕ್ಷೆ ಉಳವನಾಗಿ ಬಿಂನಹಂ ಮಾಡಿ ಕೊಂಡವ

೧೨. ರ್‍ರಿಂದ ಅವನ ಅಪೆಕ್ಸೆ ಪ್ರಕಾರ ಗಂಗಾಸ್ನಾನದ ಉಪಾದಿ ಬಗ್ಯೆ ಅಡಿಗಳ ಪುಟರಾಂ

೧೩. ಮಾ ಜೋಯಿಸಗೆ ಕಾಲಂಪ್ರತಿಯಲ್ಲೂ ಕೊಟ್ಟು ನಡೆಶಿಬರ್ರುವಂತೆ ಕಟಳೆ

೧೪. ಮಾಡಿಸಿಯಿರುತ್ತೆ ಯಿಾಗ ಸಾಗುವಳಿಯಾಗಿರುವ ಗದ್ದೆ ಶಿಸ್ತಿನ

೧೫. ಗಣ ಹೊರತ್ತೂಯಿಂನ್ನೂಯಿರುವಗದ್ದೆ ಸಾಗುವಳಿ ಮಾಡಿಶಿ ಭಂಡಾ

೧೬. ರಕೆ ಹಣಬಂದು ಉತ್ಸವಕ್ಕೆ ಉಪಯುಕ್ತ ಆಗುವಂತೆ ಸಹಾ ಬಾಳವ

೧೭. ದಾಗಿಸದಂ ಇಸ್ತಾಳ ಶ್ಯಾಗುಲಕ್ಷ್ಮೀನರಸೈನ ಅಕ್ಷರದಲ್ಲು ಬರಕೊಟ್ಟ ಪಟನಕಲು

ಈ ದಾಖಲೆ ಕ್ರಿ.ಶ. ೧೮೫೯ ಡಿಸೆಂಬರ್ ೯ ಸೋಮವಾರಕ್ಕೆ ಸರಿ ಹೊಂದುತ್ತದೆ. ಈ ಹಿಂದಿನ ದಾಖಲೆಯಲ್ಲಿ ಗಂಗಾಸ್ನಾನದ ಉಪಾದಿ ಬಗ್ಗೆ ಕೇಳಿಕೊಂಡಿದ್ದಕ್ಕೆ ಉತ್ತರವಾಗಿ ಈ ನಿರೂಪ ಹೊರಟಿದೆ. ಅದರಲ್ಲಿನ ಬೇಡಿಕೆಯನ್ನು ಇಲ್ಲಿ ಬದ್ದ ಆಗಿಸಲಾಗಿದೆ. ಅಡಿಗಳ ಪುಟರಾಮಾ ಜೋಯಿಸರಿಗೆ ಗಂಗಾಸ್ನಾನದ ಉಪಾದಿಯನ್ನು ಕೆಲವು ಷರತ್ತುಗಳಿಗೆ ಒಳಪಟ್ಟು ವಹಿಸಿಕೊಡಲಾಗಿದೆ. ಇದಕ್ಕಾಗಿ ನೀಡಿದಭೂಮಿಯಿಂದ ಬರುವ ಉತ್ಪತ್ತಿಗೆ ಸಂಬಂಧಪಟ್ಟ ತೆರಿಗೆಯನ್ನು ಶ್ರೀಕಳಸೇಶ್ವರ ದೇವಾಲಯದ ಭಂಡಾರಕ್ಕೆ ಒಪ್ಪಿಸುವುದು ಹಾಗೂ ಆ ಹಣವನ್ನು ಉತ್ಸವಗಳಿಗೆ ಬಳಸುವುದು ಎಂದು ಆದೇಶಿಸಲಾಗಿದೆ.

ನಿರೂಪ – ೩

೧. ಶ್ರೀಕಲಸೇಶ್ವರಸ್ವಾಮಿಯರ್ರು

೨. ಶಾರ್ವರಿಸಂವತ್ಸರದ ವಾಾಘಬ ೪೦ವು ಕುಜವಾರದಲು ದೆವಸ್ತಾನ ಮಜ್ಜುರ್ರು

೩. ಮೇಲಿನ ಅಗ್ರ್ರಾರದಲು ಯಿರ್ರುವ ಶಿಂಗಾಭಟನ ಮಗ ರಾಂಭಟರಿಗೆ ಬರಶಿಕೊಟ ನಿ

೪. ರ್ರುಪಾ ಅದಾಗಿ ನಂಮ್ಮ ಉತ್ತಾರದ ಸ್ವಾಸ್ತಿವಳಗಣ ಹೊಸಕೆರ್ರೆ ಗ್ರ್ರಾಮದ ಪೈಕಿ ನಿಗ

೫. ದಿ ವ್ಯೆಶಿರ್ರಿ ಬಾಬ್ತು ಯುಡದಾಳು ಪುಟ್ಟನ ವಗಣಂಗತದಿಂದಾ ವಿರೋಧಿಸಂವ



೬ ತ್ಸರಲಾಗ್ಯಾತ್ತು ನಾವಗಾಲು ಬಂಜರ್ರುಯಿರ್ರುವ ವಿರಕ್ತಮಠದ ಪ್ರ್ರಭುಮಾನ್ಯ ಪಾ

೭ ಲು ಗದ್ದೆ ಖ೫ ಅಂಕೆ ಸಿಸ್ತು ಪೆಟೆಯಿಂದಾ ಗ ೨ ॥೧॥= ಯರಡುವರಹಾರ ಆರ್ರುಹಣ ಯರಡು

೮. ಯರಡು ಹಾಗ ಯರಡುವೀಸ ಶಿವ್ಹಾ ಮಾಪಿನಕೆರ್ರೆ ಗ್ರ್ರಾಮದ ಪೈಕಿಬಳಗೂಡು ಐಭಟನೂ

೯. ಜನಾಯ ಕೊಟಬಾಬ್ತು ಯಡದಾಳಲು ಯಿರ್ರುವ ಗ** ೮॥೦ಕೆ ಸಿಸ್ತು ಗ ೨೬೪ ದಿಪದ

೧೦. ಹೊಂನಬದಿ ಬಾಬ್ತು ಗ ೧೬೦ ಉಭಯಂ ಗ ೨೬೪ ಅಂತ್ಹೂ ಗದೆ ಖಂಡ ೧೩॥೦ ಗೆ ಸಿಸ್ತು ಗ೫೦॥

೧೧. ದಿಪಾದ ಹೊಂನ ಬದಿ ಗ ೧೬೦ ಉಭಯಂ ಗ೬೬೦॥= ಆರ್ರುವರಾಹಾಲು ಯರಡು ಹಾ

೧೨. ಗ ಉ ಯರಡು ವಿಸದ ಭೂಮಿಯನ್ನು ನನಗೆ ಸಲತಕ ಉಪಾದಿಸಂಬಳಕೆ ಬಾಳುತ್ತಾ

೧೩. ರಕೆ ಅಪ್ಪಣೆ ಆಗಬೆಕೆಂಬುದಾಗಿ ವಿಳಂಬಿ ಸಂವತ್ಸರದ ವೌಶಾಖ ಶು ೨ ಯು ಗು

೧೪. ರ್ರುವಾರದಲು ಕೊಪ್ಪದ ಹೋಬಳಿ ಗಂಜಿದಾರ ಕಸ್ತೂರಿ ರಂಗ್ಯೆಗೆ ಬರಕೊಡು ಅರ್ಜಿ

೧೫. ಮೆರ್ರಿಗೆ ಯಿತ್ತಾರಿಕಿನಲು ನಿಂನಕ್ಯೆಯ್ಯಲು ಕಾಣಿಕೆತ್ತೆಗೆದು ಕೊಂಡದು ಯಿಕೆರ್ರಿ ಗ ೨೬೦

೧೬. ಯರಡು ವರಹಾತ್ತೆಗೆದು ಕೊಂಡು ಯಿಇಸ್ತಳದ ಭೂಮಿಯನ್ನೂ ನಿನಗೆ ಸಲತಕ

೧೭. ಉಪಾದಿ ಸಂಬಳದ ಬಗ್ಗ್ಯೆ ಬಾಳುತ್ತಾರಕೆ ದಯಾಪಾಲಿಶಿಯಿರ್ರುವದರ್ರಿಂದಾ ನಿನ್ನು

೧೮. ಯೀ ಭೂಮಿಯಂನ್ನು ಚೌ ಮೂಲಗಂಧವಾಗಿ ಸಾಗುವಳಿ ಮಾಡಿಕೊಂದು ನಿಂನ

೧೯. ಸಂತಾನ ಪಾರಂಪರ್ಯವಾಗಿ ಅನುಭವಿಸಿ ಕೊಂಡು ಬಾಹಾದುಯಮ್ಮು ಬ

೨೦. ರಶಿ ಕೊಟ ನಿರ್ರೂಪ.

ಈ ದಾಖಲೆಯು ಕ್ರಿ.ಶ. ೧೮೪೦ರ ಡಿಸೆಂಬರ್ ೧೨ರ ಶನಿವಾರಕ್ಕೆ ಸರಿಹೊಂದುತ್ತದೆ. ಕಳಸ ಅಗ್ರಹಾರದ ಶಿಂಗಾಭಟರ ಮಗ ರಾಮಭಟರಿಗೆ ಬಾಳುತ್ತಾರವನ್ನು ಕಾಣಿಕೆ ತೆಗೆದುಕೊಂಡು ಬರಕೊಟ್ಟಿರುವ ನಿರೂಪದ ಪ್ರತಿ. ಕ್ರಿ.ಶ. ೧೮೫೯ರ ಹೇವಿಳಂಬಿ ಸಂವತ್ಸರದ ಎಪ್ರಿಲ್ ೧೫ ಸೋಮವಾರ ಬರೆದುಕೊಂಡ ಅರ್ಜಿಯನ್ನು ಶಾರ್ವರಿ ಸಂವತ್ಸರದ ಕ್ರಿ.ಶ. ೧೮೪೦ರಲ್ಲಿ ಒಪ್ಪಿಗೆ ನೀಡಿ ಆದೇಶಿಸಲಾಗಿದೆ.

೨೪

ಇಕ್ಕೇರಿ ಅಘೋರೇಶ್ವರ ದೇವಾಲಯದ ದಾಖಲೆಗಳು

ಡಾ. ಕೆಳದಿ ವೆಂಕಟೇಶ್ ಜೋಯಿಸ್*

ಕ್ರಿ.ಶ. ೧೪೯೯ರಲ್ಲಿ ಜನ್ಮ ತಾಳಿದ ಕೆಳದಿ ಸಂಸ್ಥಾನಕ್ಕೆ ದಕ್ಷಿಣ ಭಾರತದ ಇತಿಹಾದಲ್ಲಿ ವಿಶಿಷ್ಟ ಸ್ಥಾನವಿದೆ. ಮಧ್ಯಕಾಲೀನ ಇತಿಹಾಸ ಕೊನೆಯ ಹಾಗೂ ಆಧುನಿಕ ಯುಗದ ಮೊದಲ ಕಾಲದ ಅರಸರುಗಳಲ್ಲಿ ಈ ಮನೆತನವು ಪ್ರಮುಖವಾದುದು. ಕ್ರಿ.ಶ. ೧೫೬೫ರಲ್ಲಿ ವಿಜಯನಗರದ ಪತನದ ನಂತರ ಇವರು ಸ್ವತಂತ್ರರಾದರೂ ವಿಜಯನಗರದವರು ಹಾಕಿಕೊಟ್ಟ ಮಾರ್ಗ ದಲ್ಲಿಯೇ ಮುನ್ನಡೆದವರಿವರು. ತಮ್ಮ ೨೬೩ ವರ್ಷ ಆಡಳಿತದ ಅವಧಿಯಲ್ಲಿ ರಾಜಕೀಯ, ಆಡಳಿತ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ವಿಶೇಷ ನೈಪುಣ್ಯತೆಯನ್ನು ತೋರುತ್ತಾ ವಿಜಯನಗರದ ಸಂಸ್ಕೃತಿಗೆ ಕುಂದು ಬಾರದಂತೆ ನಡೆದು ಬಂದರು.

ಕೆಳದಿ ಇತಿಹಾಸ ಆಕರಗಳು

ಕೆಳದಿ ಇತಿಹಾಸ ಮತ್ತು ಸಂಸ್ಕೃತಿಯನ್ನು ತಿಳಿಯಲು ಕೆಳದಿ ಆಡಳಿತದ ಕೊನೆಯ ಕಾಲದಲ್ಲಿದ್ದ ಲಿಂಗಣ್ಣ ಕವಿ ರಚಿಸಿದ ಕೆಳದಿ ನೃಪವಿಜಯ ಮತ್ತು ಕೆಳದಿ ರಾಜನಾದ ಬಸಪ್ಪನಾಯಕನು ರಚಿಸಿದ ಶಿವತತ್ವರತ್ನಾಕರ ಪ್ರಮುಖವಾಗಿದೆ. ಅಲ್ಲದೆ ಪುರಾತತ್ವಕ್ಕೆ ಪ್ರಮುಖ ಕುರುಹುಗಳಾಗಿ ಶಾಸನಗಳು, ನಿರೂಪಗಳು ಸಾಕಷ್ಟು ದೊರೆತಿವೆ. ತಾಡಪತ್ರಗಳು, ಕಡತಗಳು ಮೊದಲಾದವುಗಳಲ್ಲಿ ಇಂದೂ ಸಹ ದೊರೆಯುತ್ತಿವೆ. ಇವುಗಳ ಜೊತೆಗೆ ವಿದೇಶಿ ಮಾಹಿತಿಗಳಾದ ಮೆಕಂಜಿಸಂಗ್ರಹ, ಪೋರ್ಚುಗೀಸ್, ಡಚ್, ಬಟಾವಿಯಾ ಡಾಗ್ ರಿಜಿಸ್ಟರುಗಳು, ಈಸ್ಟ್ ಇಂಡಿಯಾ ಕಂಪೆನಿಯ ಉಲ್ಲೇಖಗಳು ಮೊದಲಾದವು ಗಳಲ್ಲಿ ಈ ಅರಸು ಮನೆತನದ ಚರಿತ್ರೆಯನ್ನರಿಯಲು ಪ್ರಮುಖವಾಗಿವೆ.

ಇಕ್ಕೇರಿ ಅಘೋರೇಶ್ವರ

ಕೆಳದಿ ದೊಡ್ಡ ಸಂಕಣ್ಣನಾಯಕನು ಕ್ರಿ.ಶ. ೧೫೪೬–೧೫೫೯ರ ಆಸುಪಾಸಿನಲ್ಲಿ ಇಕ್ಕೇರಿಯಲ್ಲಿ ಶ್ರೀ ಅಘೋರೇಶ್ವರ ದೇವಾಲಯವನ್ನು ಕಟ್ಟಿಸಿ ಮೂವತ್ತೆರಡು ಕೈಗಳ ಬೃಹತ್ ಶ್ರೀ ಅಘೋರೇಶ್ವರನನ್ನು ಸ್ಥಾಪಿಸಿ ಆಗಮೊಕ್ತ ರೀತಿಯಲ್ಲಿ ಕಟ್ಟಲೆ ಪ್ರಕಾರ ಪೂಜಾಧಿಗಳಿಗೆ ವ್ಯವಸ್ಥೆ ಮಾಡಿದ್ದ ಬಗ್ಗೆ ತಿಳಿದುಬರುತ್ತದೆ. ಈ ದೇವಾಲಯವು ತನ್ನದೇ ಆದ, ಕೆಳದಿ ಕಾಲದ ವಾಸ್ತು ಶೈಲಿಯನು ಹೊಂದಿದೆ. ಅಲ್ಲಿ ಹಿಂದಿನ ಪೀಠ ಮಾತ್ರ ಇದೆ. ಅದರ ಮೇಲೆ ಈಶ್ವರ ಲಿಂಗವನ್ನು ಸ್ಥಾಪಿಸಲಾಗಿದೆ. ಮೂಲ ಪೀಠದ ಮೇಲಿನ ಮೂರ್ತಿ ಈಗಿಲ್ಲ. ಅದು ಬಿಜಾಪುರದ ಅದಿಲ್ ಶಾಹೀ ಸುಲ್ತಾನನ ದಂಡನಾಯಕರಲ್ಲೊಬ್ಬನಾಗಿದ್ದ ರಣದುಲ್ಲಾಖಾನನು ಕ್ರಿ.ಶ. ೧೬೩೭ರ ಡಿಸೆಂಬರ್ ೩೦ರಲ್ಲಿ ಕೆಳದಿ ಮೇಲೆ ಆಕ್ರಮಣ ಮಾಡಿದ ಸಂದರ್ಭದಲ್ಲಿ ಇಕ್ಕೇರಿ ನಗರಕ್ಕೆ ದಾಳಿಯಿಟ್ಟು ನಾಶವಾಗಿದೆ. ಈ ದೇವಾಲಯಕ್ಕೆ ಸಂಬಂಧಿಸಿದ ಒಂದೂ ಶಾಸನ ದೊರೆಯದಿರುವುದು ಆಶ್ಚರ್ಯ. ಬಹುಶಃ ಇವೂ ಸಹ ರಣದುಲ್ಲಾಖಾನನ ದಂಡಯಾತ್ರೆ ಕಾಲದಲ್ಲಿ ನಾಶವಾಗಿರಬಹುದಾಗಿದೆ. ಪಿಯತ್ರೋಡೆಲ್ಲಾವಲ್ಲೆ ನವೆಂಬರ್ ೧೬೨೩ರಲ್ಲಿ ಇಕ್ಕೇರಿಗೆ ಭೇಟಿ ಇತ್ತ ಸಂದರ್ಭದಲ್ಲಿ ಈ ಮೂರ್ತಿಯ ವರ್ಣನೆ ಮಾಡಿರುವುದು ಕಂಡುಬರುತ್ತದೆ. ಇವನು ರಣದುಲ್ಲಾಖಾನನ ದಂಡಯಾತ್ರೆಗೂ ಮೊದಲು ಇಕ್ಕೇರಿಯಲ್ಲಿದ್ದನು. ಈ ವಿಗ್ರಹವನ್ನು 'ಅಗೋರ್ ಪೌರಾ' ಎಂದು ಕರೆದಿದ್ದಾನೆ. ಪಾರ್ವತಿ ವಿಗ್ರಹವನ್ನೂ ಉಲ್ಲೇಖಿಸು ತ್ತಾನೆ. ಕರ್ನಲ್ ಮೆಕಂಜಿ ಸಂಗ್ರಹದಲ್ಲಿಯೂ ಈ ದೇವಾಲ ಯದ ಬಗ್ಗೆ ಸಾಗರ ಕೈಫಿಯತ್ತಿನಲ್ಲಿ ಮಾಹಿತಿ ದೊರೆಯುತ್ತದೆ.

ಕ್ರಿ.ಶ. ೧೬೪೧ರಲ್ಲಿನ ವೀರಭದ್ರನಾಯಕನ ಕಾಲದ ಶಾಸನವು ಅಘೋರೇಶ್ವರ ದೇವರ ಸಹಸ್ರ ಕಲಶಾಭಿಷೇಕದ ಉಲ್ಲೇಖ ಕಂಡುಬರುತ್ತದೆ. ಬಹುಶಃ ಈ ಕಾಲದಲ್ಲಿ ಅಘೋರೇಶ್ವರ ಮೂರ್ತಿಯ ಸ್ಥಳದಲ್ಲಿ ಲಿಂಗ ಬಂದಿರಬಹು ದಾಗಿದೆ. ಇದನ್ನು ಮೆಕಂಜಿ ದಾಖಲೆಯು ಪುಷ್ಟೀಕರಿಸುತ್ತದೆ. ಇಲ್ಲಿ ಉಲ್ಲೇಖವಾಗುವ 'ಜೀಕಲ್ಲುನಿಂದಾ ಬಸವೇಶ್ವರನ ಮಾಡಿಯಿಟ್ಟು' ಎಂಬುದು ಇದಕ್ಕೆ ಹೆಚ್ಚು ಪುರಾವೆ ನೀಡುತ್ತದೆ. ಮೂಲ ವಿಗ್ರಹವು ಗಂಗೆ ಕೆರೆಯಲ್ಲಿ ಬಿದ್ದಿರುವುದಾಗಿ ತಿಳಿಸುತ್ತದೆ.

* ಕೆಳದಿ ವಸ್ತು ಸಂಗ್ರಹಾಲಯ ಮತ್ತು ಇತಿಹಾಸ ಸಂಶೋಧನಾಲಯ, ಕೆಳದಿ, ಸಾಗರ ತಾ||, ಶಿವಮೊಗ್ಗ ಜಿಲ್ಲೆ–೫೭೭೪೦೧.

ನಂದಿ ಮಂಟಪ

ಪಿಯಾತ್ರೋಡೆಲ್ಲಾವಲ್ಲೆ ನವೆಂಬರ್ ೧೬೨೩ರಲ್ಲಿ ಇಕ್ಕೇರಿಗೆ ಭೇಟಿ ಇತ್ತ ಸಂದರ್ಭದಲ್ಲಿ ಬಂದಾಗ ನಂದಿ ಮಂಟಪದ ಕೆಲಸ ನಡೆಯುತ್ತಿದ್ದುದನ್ನು ಉಲ್ಲೇಖಿಸುತ್ತಾನೆ. ಇದರಿಂದ ಈ ಮೊದಲು ನಂದಿ ಮಂಟಪ ಮೊದಲು ಇರಲಿಲ್ಲವೆಂದು ತಿಳಿದುಬರುತ್ತದೆ.

ಈ ದೇವಾಲಯವಲ್ಲದೆ ಕೋಟೆಯಲ್ಲಿ ವೀರಭದ್ರ, ಟಂಕಸಾಲೆ, ಗಣಪತಿ (ಈಗ ದೇವಾಲಯ ಜೀರ್ಣೋದ್ಧಾರ ವಾಗಿದೆ.) ಮಹಾನವಮಿ ದಿಬ್ಬ ಮೊದಲಾದ ಅವಶೇಷಗಳು ಇವೆ. ಉಳಿದಂತೆ ಊರಿನಲ್ಲಿ ಶ್ರೀ ಆಂಜನೇಯ ದೇವಾಲಯ, ಶ್ರೀಕಾಳಮ್ಮ, ಶ್ರೀಮಾರಮ್ಮ, ಗಂಡಗತ್ತಿ ಬಸವನ ದೇವಾಲಯ, ಚಿಪ್ಪಳಿ ಗೋಪಾಲಕೃಷ್ಣ ದೇವಾಲಯ, ಹೊಸೂರು ಸಿದ್ಧಿವಿನಾಯಕ ದೇವಾಲಯ, ಗದ್ದೆಮನೆ ಮಾರುತಿ ದೇವಾಲಯ ಹೊಸೂರು ಬಸ್ತಿ, ಚೌಡೇಶ್ವರಿ ದೇವಾಲಯ, ಸಿದ್ದೇಶ್ವರ ದೇವಾಲಯ ಮೊದಲಾದ ದೇವಾಲಯವಲ್ಲದೆ ಅತ್ತೆ ಸೊಸೆ ಬಾವಿ ಮೊದಲಾದ ಸಾಕಷ್ಟು ಬಾವಿಗಳ ಅವಶೇಷಗಳಿವೆ. ಇಕ್ಕೇರಿ ರಥದ ಬಗ್ಗೆ ಪಿಯಾತ್ರೋಡೆಲ್ಲಾವಲ್ಲೆ ಉಲ್ಲೇಖಿಸಿದ್ದು ಆ ರಥ ಇಂದಿಲ್ಲ.

ಇತ್ತೀಚೆಗೆ ದೊರೆತಿರುವ ಇಕ್ಕೇರಿ ದೇವಾಲಯಕ್ಕೆ ಸಂಬಂಧಿಸಿದ ನಿರೂಪಗಳು

ಇಕ್ಕೇರಿ ಶ್ರೀ ಅಘೋರೇಶ್ವರ ದೇವರಿಗೆ ಸಂಬಂಧಿಸಿ ದಂತಹ ಶಿಲಾ, ತಾಮ್ರ ಶಾಸನಗಳು ಇದುವರೆಗೂ ದೊರೆತಿಲ್ಲ. ಆದರೆ ಇದೇ ದೇವರ ಪ್ರಧಾನ ಅರ್ಚಕರಾದ ಶ್ರೀ ಬನವಾಸಿ ಆಚಾರ್ಯ ಮಧುಲಿಂಗಭಟ್ಟರ ವಂಶಸ್ಥರಾರ ಶ್ರೀ ರಾಮಭಟ್ಟರ ಮನೆಯಲ್ಲಿ ಕೆಲವು ಹಸ್ತಪ್ರತಿಗಳಿದ್ದು ಅದರಲ್ಲಿ ಕೆಲವು ನಿರೂಪಗಳು ಕಂಡುಬಂದಿವೆ. ಇದನ್ನು ಶ್ರೀ ಹುಲಿಮನೆ ಗಣಪತಿ ಎಂಬುವವರು ಕೆಳದಿ ಹಸ್ತಪ್ರತಿ ಸಂಪನ್ಮೂಲ ಕೇಂದ್ರದ ನಿಮಿತ್ತ ಸಂರಕ್ಷಣೆಗೆ ಹಸ್ತಪ್ರತಿಗಳನ್ನು ಒಳಪಡಿಸುವ ಸಂದರ್ಭದಲ್ಲಿ ನನ್ನ ಗಮನಕ್ಕೂ ತಂದು ಗುರುತಿಸಿದ್ದಾರೆ. ಈ ಹಸ್ತಪ್ರತಿಗಳೆಲ್ಲ ತಿಗಳಾರಿ ಲಿಪಿಯಲ್ಲಿವೆ. ದೇವಾಲಯ ಪೂಜಾ ವಿಧಾನ, ಅಷ್ಟಬಂಧ ವಿಧಿ ಮೊದಲಾದ ಮಂತ್ರದ ಪುಸ್ತಕದ ಮಧ್ಯದಲ್ಲಿ ತಾಳೆಗರಿಗಳಲ್ಲಿ ಪ್ರತಿ ಮಾಡಿಕೊಂಡಿರುವ ಈ ನಿರೂಪಗಳು ಕೆಳದಿ ಇತಿಹಾಸಕ್ಕೆ ಪ್ರಮುಖ ಆಕರ ಗಳಾಗುತ್ತವೆ. ಇವುಗಳನ್ನು ಸಂಶೋಧನೆಗೆ ಬಳಸಿಕೊಳ್ಳಲು ಅವಕಾಶವಿತ್ತ ಇವರೆಲ್ಲರಿಗೂ ನಾನು ಅಭಾರಿಯಾಗಿದ್ದೇನೆ.

ಈ ಕಟ್ಟಿನಲ್ಲಿ ಸುಮಾರು ೨೫ಕ್ಕೂ ಹೆಚ್ಚು ನಿರೂಪಗಳು ದೊರೆತಿವೆ. ಅವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ದಾಖಲಿಸಲು ಇಚ್ಛಿಸುತ್ತೇನೆ.

ನಿರೂಪ ೧

ಶಾಲಿವಾಹನ ಶಕ ವರ್ಷ ೧೪೫೮ನೇ ದುರ್ಮುಖಿ ಸಂ।ದಲ್ಲು ಕೆಳದಿ ಶೀಮೆ ಹಳ್ಳಿ ಬಯಲ ತೋಲಗೌಡರ ಮಗ ಚೌಡಗೌಡ ಭದ್ರಗೌಡರು ರಾಯರ ಬಳಿಯಲ್ಲಿ ಇತ್ತಂಡದಲ್ಲೂ ಇರುತ್ತಿದ್ದಲ್ಲಿ ಜಾಲೀಹಳ್ಳಿ ಯಡವ ಮುರಾರಿ ಯೆಂಬ ಇಬ್ಬರು ಅಣ್ಣತಂಮಂದಿರು। ಯಡಪ್ರಟೆಗಾರರಾಗಿ ಯಾರಿಗೂ ಹಣಿಯದೆ ಇದ್ದಲ್ಲಿ। ರಾಯರು ದಂಡು ಯೆದ್ದು ಹೋಗಬೇಕೆಂದು ಪಯಣವಾದಲ್ಲಿ ಈ ಭದ್ರಯ್ಯನು ತಂನ ಅಂತಃಕರಣವರ ಕರದು ಮಾತನಾಡಿಕೊಂಡು ಆ ಮೇಲೆ ದೇವರು ಚಿತ್ತೈಸುವ ಪ್ರಸ್ತುತವೇನುತ ನಮಗೆ ಅಪ್ಪಣೆ ಕೊಡು ಬೇಕೆನುತ ಹೇಳಿಕೊಂಡಲ್ಲಿ ಕೃಷ್ಣರಾಯರು ಭದ್ರಯ್ಯನ ಸಂಗಡ ಮದ್ದಿ ಕುದುರೆ ಕುಡಿಸಿ ಕಳುಹಿಸಿ ಇದ್ದಲ್ಲಿ – ಆ ಭದ್ರಯ್ಯನು ಜಾಲಿಹಳಿ ಕೋಟೆಗೆ ಮುತ್ತಿಗೆ ಹಾಕಿ ತೆಗದುಕೊಂಡು ವಳಗೆ ಇದ್ದ ಎಡವಮುರಾರಿ ಇಬ್ಬರ ಕೈಸೆರೆ ಹಿಡಿತಂದು ವಪ್ಪಿಸಿದರು. ಆ ಇಲ್ಲಿ ಕೆಳದಿ ಕೆಸನೂರು, ಕಲಸೆ ಮಂತಸಾಲೆ ಆತವಾಡಿ ಯಲಗಳಲೆ ಈ ಆರು ಶೀಮೆಯನ್ನು ಅಮರವಾಗಿ ಕೊಟ್ಟರು. ಆ ಮೇಲೆ ಹೇಮಳಂಬಿ ಸಂ॥ ಹಾಡೀ ಹಳುವಿಗೆ ಸ್ವಾದಿ ಭೇಟಿ ಹೊರಟಲ್ಲಿ ಮೊಲ ನಾಯಿ ಅಟ್ಟಿ ತಂದಿದ್ದು ಕಂಡು ಈ ನೆಲ ಬಲಿಷ್ಠಾ ಎನುತ ಆಗಳೆ ಹೇಮಳಂಬಿ ಸಂ। ಮಾಘ ಶು ೨ ಯು ಚನ್ದ್ರವಾರದಲ್ಲೂ ತಾಸು ೬ಲು ಕೇಸರದಲ್ಲಿ ಮುಹೂರ್ತಮಾಡಿಸಿ ಎಡ ಬಲ ಹುಡೆ ಹಾಕಿಸಿ। ಇದಕೆ ಇಕ್ಕೇರಿಯೆಂಬ ಹೆಸರನಟ್ಟು ಆ ಮೇಲೆ ಕೋಟೆ ಹಾಕಿಸಿ ಪಟ್ಟಣವಾಯಿತು. ಆ ಮೇಲೆ ವಿಳಂಬಿ ಸಂ।ದಲ್ಲು ಕೃಷ್ಣರಾಯರು ಪಟ್ಟವ ಕಟ್ಟಿ ಸದಾಶಿವಪ್ಪನಾಯಕರು ಎಂಬ ಹೆಸರ ಇಟ್ಟು ಎಡವ ------ ಹೊಗಳಿಕೆಯನು ಇಟ್ಟು ಇವರ ಪರಾಕ್ರಮ ವರಿತು ಸೇವೆ ಸತ್ಯಕ್ಕೆ ಮಡ್ಡಿ ವಜೀರಕ್ಕೆ ಕೊಟ್ಟು ಹಸರು ನಿಶಾನೆ ಶಂಖಚಕ್ರ ಆರದೆಲೆ ಮುಂತಾದ ಬಹಳ ಬಿರುದು ಕೊಟ್ಟು ಇಕ್ಕೇರಿ ಮಾಗಣಿ ಸಹ ಕೊಟ್ಟರು ಆ ಮೇಲೆ। ವಿಕಾರಿ ಸಂ। ಕಾರ್ತಿಕ ಶುದ್ಧ।೭ ಲು ಗುರುವಾರದಲ್ಲೂ ರಾಮರಾಜನಾಯಕರಿಗೆ ಪಟ್ಟವಾದ ಮೇಲೆ ಪ್ಲವಂಗ ಸಂ। ಆಶ್ವೀಜ ಬಹುಳ ೧೨ಲು ಹಿರೇಸಂಕಣ್ಣನಾಯಕರಿಗೆ ಪಟ್ಟವಾದ ಮೇಲೆ ತಮ್ಮ ಚಿಕ್ಕ ಸಂಕಣ್ಣನಾಯಕರು ಅಂಣ ತಂಮಂದಿರು ಇದ್ದಲ್ಲಿ ರಾಕ್ಷಸ ಸಂ।ಲು ಕೃಷ್ಣರಾಯರು ಇವರ ಗೋವೆ ಅರಸಿನಮಾಲದಂಡು ಯೆತ್ತಿ ಹೋದಲ್ಲಿ ಕಡುದಾಡಿ ಇವರ ಪರಾಕ್ರಮಕ್ಕೆ ಮೆಚ್ಚಿ ವರ್ಜದ ಟೀಹ ಸೆರುಶಾನ ಬಹಳ ಬಿರುದು ಕೊಟ್ಟರು. ಆಮೇಲೆ ಕೃಷ್ಣರಾಯರು ಸಂಕಣ್ಣ ನಾಯಕರು ಮಾತನಾಡಿಕೊಂಡು ಕಕ್ಷಿಣ ಪುಜ್ಯವ ಕೊಟ್ಟರು. ಆ ಮೇಲೆ ಸಂಕಣ್ಣನಾಯಕರು ಅಘೋರಸ್ವಾಮಿಯು ಪ್ರತ್ಯಕ್ಷವಾಗಿ ದೇವಾಲಯ ಜೀರ್ಣೋದ್ಧಾರ ವಿಸ್ತಾರವಾಗಿ

ಮುಹೂರ್ತ ಮಾಡಿದ್ದರು. ನಳ ಸಂ।ಪಾಲ್ಗುಣ ಶು ೫ಯು ರವಿವಾರದಲ್ಲಿ ಮುಹೂರ್ತವ ಇಟ್ಟು ಹಿರೆ ಸಂಕಣ್ಣನಾಯಕರ ಪಟ್ಟವರು ಆದ ಮೇಲೆ ಈಶ್ವರ ಸಂ।ಭಾದ್ರಪದ ಶುದ್ಧ ೧೧ ಯಲ್ಲಿ ಸದಾಶಿವಪನಾಯಕರು ವಾ ೭ ಆ ಮೇಲೆ ಸ್ವಭಾನು ಸಂ।ಶ್ರಾವಣ ಶುದ್ಧ ೭ ಲು ಭದ್ರಪ್ಪನಾಯಕರು ವ ೨ ಆದ ಮೇಲೆ ಸರ್ವಜಿತು ಸಂ।ಕಾರತೀಕ ಬಹುಳ ೧ಲು ಯೆಂಕಟಪ್ಪನಾಯಕರು ವ ೪೨ ನಾಳಿದರು. ಅವರು ಇದ್ದಾಗಲೇ ಶುಕ್ಲ ಸಂ।ವೈಶಾಖ ಶುದ್ಧ ೭ಯು ಗುರುವಾರ ದಂದು ದೇವರ ಅಷ್ಟಬಂಧ ಮಹೋತ್ಸವ ಮಾಡಿದೆ. ಬಹಾ ಬಿರುದು ಕೊಟ್ಟು ಇಕ್ಕೇರಿಯನ್ನು ತಹೀರಾಗಿಟ್ಟು ಆ ಮೇಲೆ ಸಂ।ಶಾವಣ ಶುದ್ಧ ೫ಲು ಶಿಮೆಯಾಗಿ ಅಘೋರೇಶ್ವರ ದೇವರಿಗೆ ೮೮೬೮॥೩॥=ನ್ನು ಅಮರವಾಗಿ ಬಿಟ್ಟರು.

ಈ ನಿರೂಪವು ಶಾ. ಶ ೧೪೫೫ ಅಂದರೆ ಕ್ರಿ.ಶ. ೧೫೩೭ಕ್ಕೆ ಸರಿಹೊಂದುತ್ತದೆ. ಇದರಲ್ಲಿ ಕೆಳದಿಯ ಮೊದಲ ಅರಸು ತೋಲಗೌಡರ ಮಗ ಚೌಡಗೌಡ ಭದ್ರಗೌಡ ಎಂದು ಹೇಳಿರುವುದು ವಿಶೇಷವಾಗಿದೆ. ಇವರು ಜಾಲಿಹಳ್ಳಿ ಯಡವ ಮುರಾರಿಗಳನ್ನು ಸೋಲಿಸಿ ವಿಜಯನಗರಕ್ಕೆ ಸಹಾಯ ಮಾಡಿದ್ದನ್ನೂ ಅನಂತರ ಅಮರಮಾಗಣಿಯನ್ನು ಪಡೆದದ್ದನ್ನು ನಿರೂಪ ಹೇಳುತ್ತದೆ. ಮುಖ್ಯವಾಗಿ ಅಘೋರೇಶ್ವರ ದೇವರಿಗೆ ವೆಂಕಟಪ್ಪನಾಯಕರ ಕಾಲದಲ್ಲಿ ಅಂದರೆ ಕ್ರಿ.ಶ.----- ವೈಶಾಖ ಶುದ್ಧ ೭ ಗುರುವಾರದಲ್ಲಿ ಅಷ್ಟಬಂಧ ಆದದ್ದನ್ನು ನಿರೂಪ ಉಲ್ಲೇಖಿಸುತ್ತದೆ. ಸುಮಾರು ೮೮೬೮॥೩॥= ನ್ನು ಅಮರವಾಗಿ ಬಿಟ್ಟಿರುವುದನ್ನು ಹೇಳುತ್ತದೆಯಾದರೂ ಈ ಕುರಿತಂತೆ ಶಾಸನಗಳಲ್ಲಿ ಎಲ್ಲಿಯೂ ಉಲ್ಲೇಖ ಕಂಡುಬರುವುದಿಲ್ಲ.

ನಿರೂಪ ೨

ಮುಂಭಾಗ

ಪೂರ್ವದಲ್ಲಿ ಕೆಳದಿಯೆಂಬ ಗ್ರಾಮದ ವಳಗಣ ಹಲ್ಲೆಬಯಲು ಸ್ಥಳದಲ್ಲಿದ್ದ ಬಾಳೆಹಳ್ಳಿ ಮಠದ ಶಿಷ್ಯ ಬಸಪ್ಪರ ಮಕ್ಕಳು ಚವುಡಪ್ಪ ಭದ್ರಪರು ಗದ್ದೆ ಮಾಡಿಕೊಂಡಿರಲು ಇವರ ಮನೆ ಗದ್ದೆ ದನಕರುಗಳನ್ನು ನೋಡಲು ಹೊಲೆರ್ರ ಯಡವ ಮುರಾರಿ ಯೆಂಬವರು ನೋಡಿಕೊಂಡಿದ್ದರು. ಒಂದು ದಿನ ಯಡವ ಮುರಾರ್ರ ಯೆಂಬವರ್ರು ಗದ್ದೆ ಊಳುತ್ತ ಯಿದ್ದರು. ಚವುಡಗೊಂಡ ಆಯಾಸದಿಂದ ಮಲಗಿರಲು ಅವನ ತಲೆಯ ಮೆಲೆ ಬಿಸಿಲು ಬಿದ್ದಿರಲು ನಾಗಸರ್ಪವೊಂದು ಮರೆಮಾಡಿ ನಿಂತಿದ್ದನ್ನು ಕಂಡ ಗ್ರಾಮದ ಜ್ಯೊಯ್ಸರು ಅಲ್ಲಿ ನಿಂತು ಹಾವು ಹೊದ ಮೆಲೆಚೌಡಗೌಡನನ್ನು ಯಚ್ಚರಿಸಿ ಪಂಚಾಂಗ ಹೇಳಿ ನಿನಗೆ ರಾಜಾಧಿಕಾರ ಬರುತ್ತಾಯಿದೆ ಎಂಬುದಾಗಿ ಹೇಳಿದರು. ಹೀಗೆ ವಂದುದಿನ ಯಡವಮುರ್ರರಿ ಯರು ಗದ್ದೆ ಊಳುವಾಗ ನೆಗಿಲಿಗೆ ಕೊಪ್ಪರಿಗೆ ಸಿಕ್ಕಿತು. ದೇವಿ ಮುರಾರ್ರಿಯ ಮೈಮೆಲೆ ಬಂದು ನರಬಲಿಕೊಟರೆ ಬರುತ್ತಾಯಿಧೇನೆ ಹೇಳಿದಂತಾಯಿತು. ಚೌಡಪ್ಪನು ತನಗೆ ನರಬಲಿ ಕೊಡುವ ಸಾಧ್ಯವಿಲ್ಲ ಯೆಂದು ಯೊಚನೆ ಮಾಡಿದನು. ಯಡವಮುರಾರ್ರಿಯರು ನಿನಗೆ ದೊರೆತನ ಬಂದರೆ ನಮಗೆ ಹೆಸರು ಹೊಗಳು ಹಾಗೆ ಮಾಡುವುದು ನಾವು ನರಬಲಿ ಹೊಗುವೆವು ಯಂದು ಚೌಡಪನು ಬೆಡೆಂದರೂ ಕೇಳದೆ ನರಬಲಿಗೆ ಮುಂದಾದರು. ಅವರ

ಹಿಂಭಾಗ

ಹೆಂಡತಿಯರಾದ ಮಾರಿ ದುರ್ಗಿಯರು ಸತಿ ಹೊಗಲು ಸಿದ್ಧರಾದರು. ಅಂತು ಸಿದ್ಧಾರ್ಥಿ ಸಂವತ್ಸರದ ಮಾಘ ಬಹುಳ ೧೪ರಂದು ದಿನನಿಗದಿ ಮಾಡಿಕೊಂಡು ಅಂದು ಪ್ರಾಣ ಬಿಟ್ಟರು. ಸಿಕ್ಕ ಕೊಪ್ಪರಿಗೆಯಿಂದ ವಿಜಯನಗರದ ರಾಯರ ಅಪಣೆ ಪಡೆದು ನಾಯಕನಾಗಿ ಚೌಡಪ ಆಳ್ವಿಕೆ ನಡಸಿದನು. ಮರದಲ್ಲಿ ಗೊಂಬೆ ಮಾಡಿಸಿದನು.ಕೊಪ್ಪರಿಗೆ ಸಿಕ್ಕಲ್ಲಿ ಬಾವಿ ತೊಡಿಸಿದನು. ಬಲಿಯಾದ ಜಾಗದಲ್ಲಿ ಕಟ್ಟೆ ಕಟ್ಟಿಸಿ ಹಾಲು ಮರ ನೆಡಸಿದನು. ದೂತರಥ ಮಾಡಿಸಿ ಪ್ರತಿವರ್ಷವು ಗ್ರಾಮದಲ್ಲಿ ಕಾರ್ತೀಕ ಅಮಾವಾಸೆಯಂದು ಮತ್ತು ಗ್ರಾಮ ದೇವರಾದ ರಾಮೇಶ್ವರ ದೇವರ ತೇರಿನ ನಚಿತರದ ಓಕಳಿಯ ದಿನ ರಾತ್ರಿಯಲ್ಲಿ ದೂತರನ್ನು ಕೂರಿಸಿ ತೇರು ಯಳೆಯುವ ಹಾಂಗೆ ಮಾಡಿದನು. ಶಾಸನ ಬರೆಸಿದನು. ಯಡವ ಮುರಾರ್ರಿ ಯಂದು ಬಿರುದು ಮೆರೆಸಿದನು. ಕೆಳದಿ ಪುರದ ಮಠದ ಗುರುಗಳು ತೊರಿದ ಹಾದಿಯಲ್ಲಿ ನಡೆದನು.॥ಯಥಾಪ್ರತಿ॥

ಕೊಲ್ಲೂರಿನ ಹಸ್ತಪ್ರತಿ ಸಂರಕ್ಷಣಾ ಸಂದರ್ಭದಲ್ಲಿ ಅಲ್ಲಿಯ ಕಟ್ಟಿನಲ್ಲಿ ದೊರೆತ ತಿಗಳಾರಿ ಲಿಪಿಯಲ್ಲಿ ಇರುವ ಈ ನಿರೂಪ ಕೆಳದಿ ಇತಿಹಾಸದ ಮೇಲೆ ಬೆಳಕು ಚೆಲ್ಲಲು ಸಹಕಾರಿಯಾಗಿದೆ.

ನಿರೂಪ ೩

ಸ್ವಸ್ತಿ ಶ್ರೀಮದ್ಯಜನಾದಿ ಷಟ್ಕರ್ಮ ನಿರುತರಾದಂಥಾ ವೆದಮೂರ್ತಿ ಇಕ್ಕೇರಿ ತಾಂತ್ರಿಕ ಸುಬ್ಬಾ ಭಟ್ಟರಿಗೆ ಹಾಸುಗಲ್ಲ ವೆಂಕಣ್ಣನು ಮಾಡುವ ನಮಸ್ಕಾರ। ನಾವು ಪರಿಣಾಮದಲ್ಲಿ ಇದೇನೆ. ನಿಂಮ ಪರಿಣಾಮದಕ್ಕೆ ಬರಸಿ ಕಳುಹಬೇಕು। ಸೊರಬದ ದೇವರ ಅಷ್ಟಬಂಧ ಆಗಬೇಕುಬಿದರೂರಿನಿಂದ ಹರಿಕಾರ ಉಳವರಿ ಸಹ ಬಂದಿದಾರೆ।ನಿಮ್ಮನು ಕರಸಿಕೊಳ್ಳ ಹೇಳಿ ವಾಲೆ ಬರಸಿ ಕಳುಹಿದಾರೆ।ಅವರೂ ನೀವು ಒಂದೇ ಕುಟುಂಬದವರು ಆಗಿದ್ದಲ್ಲಿ ಅವರ ಕೈಯಲ್ಲಿ ಮಾಡಿಸಿದರೆ ಬಿದರೂರವಳಗೆ ಸಮನ ಆಗದಿದರಿಂದ ನಿಮ್ಮ ಕರಸಿ

ಕೊಳಹೇಳಿ ಬರದಿದ್ರು। ಉಪೇಕ್ಷೆ ಮಾಡದೇ ಕ್ಷಿಪ್ರ ಹೊರಟು ಬರುವದು। ಚಿತ್ರಭಾನು ಸಂ।ಭಾದ್ರಪದ ಬ ೨ ದಿವಸ ಲಗ್ನ ಮೂರು ವರೆ ವಳಗೆ ಮಾಡಿ ಅದೆ। ಈ ಶುದ್ಧ ೧೨ಗೆ ಮುಟ್ಟುವಂತೆ ತಾಂತ್ರಿಕದ ಪುಸ್ತಕ ತೆಗದುಕೊಂಡು ಬಾ। ರೀತಿ ಮಾಡಸಬೇಕು॥ ಇಂತಿ ನಮಸ್ಕಾರ॥ ವಾಲೆ ಪ್ರತಿ ಶ್ರೀ.

ಇದು ಸೊರಬದ ಶ್ರೀ ರಂಗನಾಥ ದೇವರ ಅಷ್ಟಬಂಧ ಕುರಿತು ನಡೆದಿರುವ ಪತ್ರ ವ್ಯವಹಾರವನ್ನು ತಿಳಿಸುವ ನಿರೂಪವಾಗಿದೆ. ಇದರಲ್ಲಿ ಬಿದರೂರಿನಿಂದ ಹರಿಕಾರರನ್ನು ಕಳುಹಿಸಿ, ಇಕ್ಕೇರಿ ತಾಂತ್ರಿಕ ಸುಬ್ಬಾಭಟ್ಟರನ್ನೇ ಕರೆಸಿಕೊಳ್ಳುವಂತೆ ಹೇಳಿರುವುದನ್ನು, ತಾಂತ್ರಿಕದ ಪುಸ್ತಕವನ್ನು ತೆಗೆದುಕೊಂಡು ಉಪೇಕ್ಷೆ ಮಾಡದೆ ತಕ್ಷಣ ಹೊರಟು ಬರುವಂತೆ ಹೇಳಿರುವುದು ವಿಶೇಷವಾಗಿದೆ.

ನಿರೂಪ ೪

ಸ್ವಸ್ತಿಯಡವ ಮುರಾರಿ ಕೋಟೆ ಕೋಲಾಹಲ ಸಿದ್ಧಾಂತ ಪ್ರತಿಷ್ಠಾಪಕ ಶಿವಭಕ್ತಿ ಪರಾಯಣ ಕಾಶೀ ಕಾಂಚೀ ಶ್ರೀ ಶೈಲ ಕ್ಷೇತ್ರ ಯಾತ್ರೆ ಪರಶಿವಗುರುಪಾದಪಾಂಸುರೇಣುಗಣಸಾಮ್ಯ ಶಿವಭಕ್ತ ಕುಲತಿಲಕ ಕರ್ನಾಟಕ ರಾಜ್ಯ ವೈಭವ ಪರರಾಯ ವೀರ ವೀರಕುಂಜರ ಚಾರುಕಂಟೀರವ ಶೂನ್ಯ ವಿಚಾರ ಪರತರ ಪ್ರೇಮಾಂತರಂಗ ಶ್ರೀಮದ್ ಕೆಳದೀ ಸಿದ್ಧ ಬಸವಪ್ಪ ನಾಯಕರ ಧರ್ಮಪತ್ನೀ ಚಂನ ವೀರಮ್ಮಾಜಿಯವರ ಪುತ್ರನಾದ ಬಸವಪನಾಯಕನು ಇಕ್ಕೇರಿ ಚಂದ್ರಗುತ್ತಿ ಶಿಖಾರಿಪುರ ಆನಂದಪುರದ ಹೋಬಳಿಯಲು ಆಗುತ್ತಿದ್ದ ತಾಂತ್ರಿಕ ಅಷ್ಟಬಂಧ ಸಂಪ್ರೋಕ್ಷಣ್ಯ ರಥ ಉತ್ಸವಗಳನ್ನೂ ಇಕ್ಕೇರಿ ಮಧುಲಿಂಗಾಭಟ್ಟನ ಕೈಯಲು ಮಾಡುಸುವ ಹಾಗೆ ಅಪ್ಪಣೆ ಕೊಟ್ಟು ಅದೆ. ಅದೇ ಪ್ರಕಾರ ಆ ಸಾಮ್ಯವನ್ನು ಅವನಿಗೆ ಕೊಟ್ಟು ಆಗುವ ಕ್ರಿಯೆಗಳನ್ನು ಮಾಡನಿವಹದಾಗಿ।ಯಂದು ಬರಸಿಕೊಟ್ಟ ನಿರೂಪು। ಶುಕ್ಲ ಸಂವತ್ಸರದ ಫಾಲ್ಗುಣ ಬಹುಳ ೭ ಯಲು ಅಪಣೆ ವಾಲೇಪ್ರತಿ.

ನಿರೂಪ ೫

ಶ್ರೀಮತು ಷಡಕ್ಷರ್‍ಯ್ಯನವರು ಆನಂದಪುರದ ನಾಡಿಗ ಸೊಮಂಣಗೆ ಮಾಡುವ ಶರಣಾರ್ಥಿ। ಆನಂದಪುರದ ಹೋಬಳಿಯಲು ನಡೆವ ಉತ್ಸಹ ಸ್ನಪನ ಸಂಪ್ರೋಕ್ಷಣ್ಯ ರಥ ಉತ್ಸವಗಳನ್ನು ಇಕ್ಕೆರಿ ದೇವರ ಅರ್ಚಕ ಮಧುಲಿಂಗಾ ಭಟ್ಟರ ಕೈಯ್ಯಲ್ಲಿ ಮಾಡಸುವುದೆಂಬ ಹುಜೂರು ಅಪ್ಪಣೆ ಅಗಿ ಅದೆ. ಈ ದೇವ ದೇವಿಯರ ಅರ್ಚಕರಾದ ಮಧುಲಿಂಗಾ ಭಟ್ಟರ ಕೈಯ್ಯಲ್ಲಿ ಮಾಡಿಸಿ ಆ ಸಾಮ್ಯ ಮುಂತಾದನು ಇವರಿಗೆ ಕೊಟ್ಟು ಮುಂದೆ ನಮ್ಮ ವಾಲೆ ಹೊರತಾಗಿ ಊರುಕರ ಸಲಾಗ ಉ. ವಿಕು ಸಂವತ್ಸರ ಮಾಘ ಶುದ್ಧ ೭ಯಲು ಸೆನಬೋಗ ಗಿರಿಯಂಣ ಮಣೆಗಾರ ವೀರಂಣಗೆ ಅಪಣೆ। ಇಂತಿ ಶರಣಾರ್ಥಿ ವಾಲೆ ಪ್ರತಿ॥

ನಿರೂಪ ೬

ಶ್ರೀಮತು ಸಕಲಾಗುಣ ಸಂಪಂನರಾದ ಸಿದ್ಧ ಬಸವೈಯ್ಯನವರು ಕಾಣಗೀರ ಚಂನಂಣಗೆ ಶರಣಾರ್ಥಿ। ಶಿಖಾರಿಪುರದ ಹೋಬಳಿಯಲ್ಲು ತಾಂತ್ರಿಕ ಉತ್ಸಹ ಅಷ್ಟಂಬಂಧವನ್ನು ಇಕ್ಕೇರಿ ಬೊಮ್ಮಣ ಭಾಟ್ಟಗೆ ಅಪ್ಪಣೆ ಕೊಟ್ಟು ಅದೆ ಅವನ ಕೈಯ್ಯಲಿ ಮಾಡಿಸ್ ಸಾಮ್ಯ ಮುಂತಾದನು ಕೊಟ್ಟು ಬಾಹದು ಯಂದು ಬರಸಿಕೊಟ್ಟ ಶಿಖೆ ಉಪರಿ ಮಾಲೆ ಪ್ರತಿ.

ನಿರೂಪ ೭

ಶ್ರೀಮತು ರಾಮಪ್ಪಯ್ಯನವರು ಮಂಡಲಾದ್ದೇ ನಾಗಣ್ಣಗೆ ಆಶೀರ್ವಾದ ಇಕ್ಕೇರಿ ಬೊಮ್ಮಣಭಟ್ಟರು ಇಲ್ಲಿಗೆ ಬಂದು ಇಕ್ಕೇರಿ ಅಘೋರೇಶ್ವರ ದೇವರ ಸನ್ನಿಧಿಯಲ್ಲಿ ಶ್ರಾವಣ ಮಾಸ ಸಂಬಂಧ ವಿಶೇಷ ಕಟ್ಟಾಲೆಯಾಗಿ ಮಾಡಿಸುವ ಶತರುದ್ರಾಭಿಷೇಕದ ಸಂಬಂಧ ತಮಗೆ ಸಲುವ ಸಾಮ್ಯವನ್ನು ಪರಿಚಾರಕ ಸಂಕಂಣನೆಂಬವನು ಕೊಡದೆ ತಾನೇ ದುಡುಕಿನ ಮೇಲೆ ತೆಗದುಕೊಂಡು ಬರುತ್ತಾನೆಂದು ಹೇಳಿದರು।ಪ್ರಾಕ್ ಸರ್ವಧಾರಿ ಸಂವತ್ಸರದಲ್ಲೂ ಇವರಿಬ್ಬರನ್ನು ಇಲ್ಲಿಗೆ ಕರಸಿ ಇವರಿಗೆ ಸಲುವಂಥಾ ಸಾಅಮ್ಯವನ್ನು ಇವರಿಗೆ ಕೊಟ್ಟು ಉಳಿದಿದ್ದ ನ್ನು ತೆಗೆದುಕೊಂಡು ಹಾಬೆ ಕಟ್ಟು ಮಾಡಿಸಿತ್ತು। ಈ ರೀತಿ ಕಟ್ಟು ಮಾಡಿಸಿದ ಮೇಲೆ ದುಡುಕಿನಲ್ಲೂ ತೆಗದುಕೊಂಡು ಬಾಹಾಗೆ ಅವಗೆ ಸುಖ ಬಂಧೀತೇ ಕ್ರಯದ ಬಗ್ಗೆ ದೀಪದ ಸಂಕಣ್ಣನಿಂದ ಈಗ್ಗೆ ಗ ೫೦ ತ್ತು ವರಹವನ್ನು ತರುಸಿ ಗಂಟು ಕಟ್ಟಿಸಿ ಅವನ ಸಹ ನಮ್ಮ ಬಳಿಗೆ ಸಂಗಡ ಮನುಷ್ಯರ ಕೂಡಿಸಿ ಕಳುಹವದು। ಮುಂದೆ ನಮ್ಮ ವಾಲೆ ಹೊರತಾಗಿ ಯೇನೂ ಸಾಮ್ಯವನ್ನು ಕೊಡಲಾಗದಾಗಿ ಇಂದಿ ಆಶೀರ್ವಾದ ॥ ವಾಲೆ ಪ್ರತಿ ॥ ೧ ॥=॥

ನಿರೂಪ ೮

॥ಶ್ರೀಮದ್ಜನಾದಿ ಷಟ್ ಕರ್ಮ ನಿರತರಾದ ಚಿಪ್ಪಳಿ ಗೋಪಾಲ ಭಟ್ಟರು ಲಿಂಗಾಭಟ್ಟರಿಗೆ ಉಡುಕುಂದದ ಪರಮೇಶ್ವರ ಶಾತ್ರಿಗಳು ಮಾಡುವ ನಮಸ್ಕಾರ॥ ನಾವು ಯಲ್ಲಿವರೂ ಕ್ಷೇಮದಲ್ಲಿ ಇದೇವೆ. ನಿಮ್ಮ ಕ್ಷೇಮಸಮಾಚಾರಕ್ಕೆ ಬರಸಿ ಕಳುಹುಸುತ್ತಾ ಬಾಹಾಗೆ ಮಾಡಿಸಬೇಕು।ಅಘೋರೇಶ್ವರ ದೇವಸ್ಥಾನಾ ಮಹಾಜನಂಗಳು।ನಮ್ಮವರು ಉಪಾಧಿವಂತರ

ಕೋಡೆ ಶ್ರಿಂಗೇರಿಗೆ ಕಾಣಿಕೆ ಹಣ ಬರಬೇಕೆಂದು ಕೇಳುತ್ತಾರಂತೆ। ಪೂರ್ವದಾರಭ್ಯ ರಾಮಚಂದ್ರಾಪುರಾ ಮಠಕ್ಕೆ ಕೊಡುತ್ತಿದ್ದ ಬಳಿಕ ಇವರು ಕೇಳತಾರಂತೆ।ಸಂಪ್ರದಾಯವನ್ನು ನೀವು ತಿಳದ ವಿಷಯ॥ವಾಲೆಪ್ರತಿ ॥೧॥=॥ ವಿಭವ ಸಂ॥ ವೈಶಾಖ ಶು ೫ ಲ್ಲು ಇಕ್ಕೇರಿ ದೇವಸ್ಥಾನದ ಸ್ಥಾನಿಕ ಸುಬ್ಬಾಭಟ್ಟರು ರಾಮಭಾಟ್ಟರು ಅಮ್ಮನವರ ಸುಬ್ಬಾಭಟ್ಟರು ಅಭಿಷೇಕದ ರಾಮಕೃಷ್ಣಭಟ್ಟರು ನಗರೇಶ್ವರದ ವೆಂಕಟ ಭಾಟ್ಟರು ಅಗ್ರಹಾರದ ಲಿಂಗಾಭಾಟ್ಟರು ಚಿಟ್ಟಲ ತಮ್ಮಣ ಭಾಟ್ಟರು ಕೊಂಡಿಭಾಟ್ಟರ ಯಲ್ಲಂಡೂರು ಮುಚಡಿ ಲಿಂಗಾಭಟ್ಟರು ಕಸೂರಿ ವೆಂಕಟೇಶ್ವರ ಭಾಟರು ಮಕರಾಲ ವೆಂಕಟಭಟ್ಟರು ಶ್ರೀನಿವಾಸಾಚಾರ್ಯರು ತೀರ್ಥದ ಹಳ್ಳಿ ಕೃಷ್ಣ ಭಟ್ಟರು ಆದಾಯನ ದೇವರು ಭಾಟ್ಟರು ಸಹ ॥ ಗ ೧೫ ॥ ಕೊಟ್ಟರು ॥=॥

ನಿರೂಪ ೯

ಶ್ರೀಮತು ನಿರ್ವಾಣ್ಯೈಯ್ಯನವರು ಚಣ್ಣಣ್ಣಗೆ ಶರಣಾರ್ಥಿ। ಗುತ್ತಿ ಮಹಂಮಾಯಿ ದೆವಸ್ಥಾನದ ರಥೋತ್ಸಹದ ತಾಂತ್ರಿಕ ತನದ ಸಾಮ್ಯವನ್ನು ಹಿಂದಾರಭ್ಯ ಬೊಮ್ಮಣ್ಣ ಭಾಟ್ಟಗೆ ನಡದು ಬರುತ್ತಿದ್ದಲ್ಲಿ। ಈ ಕಾಲ ಆ ರೀತಿ ಕೊಡದೇ ಆದಾಯ ಪ್ರಂಆಣು ಕೊಟ್ಟೆನೆಂದು ಹೇಳುತ್ತಿದ್ದೀಯಂತೆ।ಈ ರೀತಿ ಆದರೆ ಸರಿಯೇ ಸೇನಬೋಗರ ಲೆಖ್ಖವನ್ನೋಡಿಸಿ ಬರದ ಪ್ರಂಆನ ಕೊದಾಸುವುದು।ಈ ವಿಷಯಕ್ಕೆ ಮೊದಲು ಬರಸಿತ್ತು।ದೂರು ತರಸದೆ ಕೊಡುಸುವ ಹಾಗೆ ಮಾಡಸುವುದಾಗಿ॥ ಇಂತಿ ಶರಣಾರ್ಥಿ ವಾಲೆ ಲ್ರತಿ ॥ ೧ ॥

ನಿರೂಪ ೧೦

ಶ್ರೀಮತು ರಾಮಪ್ಪಯ್ಯನು ಕೇಶವಗೆ ಆಶ್ಸೀರ್ವಾದ। ಸಾಗರದ ಮಹಾಗಣೇಶರ ದೇವರ ರಥೋತ್ಸಹವನ್ನು ಪೂರ್ವದಾರಭ್ಯ ಮಧುಲಿಂಗಭಾಟ್ಟರ ಬೊಮ್ಮಣಭಟ್ಟರು ಮಾಡಿ ಬರುತ್ತಿದ್ದಲ್ಲಿ। ಕೋಠಿ ಶಂಕರಭಟ್ಟನು ತಾನು ಮಾಡಬೇಕೆಂದು ಬಂದಿದ್ದಾನಂತೆ।ಅವಗೆ ಸಂಬಂಧವೇನು। ಪೂರ್ವದಾರಭ್ಯ ನಡಸಿಕೊಂಡು ನಡಸಿಕೊಂಡು ಬಂದ ಬೊಮ್ಮಣಭಟ್ಟರ ಕೈಯ್ಯ ಮಾಡುಸುವದು ಆ ಬಗ್ಗೆ ಸಾಮ್ಯವನ್ನು ಇಲ್ಲಿಗೆ ಕಳುಹಿಸಿ ಕೊಡುವದು। ಆಲಸ್ಯ ಮಾಡಿದಲ್ಲಿ ಗೊಲ್ಲ ಬಂದು ನಿಷ್ಪಂಕವ ಮಾಡ್ಯಾನು। ಇಂತಿ ಆಶೀರ್ವಾದ ॥ ವಾಲೆ ಪ್ರತಿ॥ ೧ ॥

ನಿರೂಪ ೧೧

ಶ್ರೀಮತು ನಿರ್ವಾಣ್ಯೈಯ್ಯನವರು ಚಂನಂಣಗೆ ಶಸ್ರಣಾರ್ಥಿ। ಇಕ್ಕೇರಿ ಅಘೋರೇಶ್ವರ ದೇವಸ್ಥಾನದ ಪಂಚಪರ್ವ ಶ್ರಾವಣ ಮಾಸ ವಿಶೇಷ ಕಟ್ಟಲೆ ಶತರುದ್ರಾಭಿಷೇಕ ಹಣ್ಣುಕಾಯಿ ಮಹಾನೈವೇದ್ಯ ಸಹಾ ಹಿಂದಾರಭ್ಯ ಮಧುಲಿಂಗಾಭಟ್ಟರ ಬೊಮ್ಮಣಭಟ್ಟಗೆ ನಡಡು ಬರುತ್ತಿದ್ದಲ್ಲಿ। ಈ ಕಾಲ ಆ ರೀತಿ ಕೊಡದೇ ಆದಾಯ ಪ್ರಮಾಣು ಕೊಟ್ಟೆ ನೆಂದು ಹೇಳುತ್ತಿದ್ದೀಯಂತೆ। ಈ ರೀತಿ ಆದರೆ ಸರಿಯೇ ಸೇನಬೋವ್ಸರ ಲೆಖ್ಖವ ನೋಡಿ ಬರದ ಪ್ರಮಾಣು ಸಲ್ಲುವ ಕೊಡುವದಾಗಿ ಈ ವಿಷಯಕ್ಕೆ ಮದಲು ಸರ್ವಧಾರಿ ಸಂವತ್ಸರದಲ್ಲೂ ಬರದು ಹಳುಹಿತ್ತು ಇನ್ನು ಮೇಲೆ ದೂರು ತರುಸದ ರೀತಿ ಇವ್ರಿಗೆ ಸಲುವ ಸಾಂಮ್ಯವನ್ನು ಕೊಡದೆ ಇದ್ದರೆ ನಿನಗೆ ಸುಖ ಬಂಧೀತು. ಬ್ರದ ಪ್ರಮಾಣು ಕೊಡಸುವುದಾಗಿ ದುರ್ಮುಖೀ ಸಂವತ್ಸರದ ಮಾಘ ಶುಧ್ಧ ೭ಯಲ್ಲು ಸೇನಭೋಗ ವಿಶ್ವೇಶ್ವರಯ್ಯ ಲ್ಮಣೆಗಾರ ಪೀರ್ಯೈಯ್ಯಗೆ ಕಟ್ಟು ಮಾದಿಸಿದರು ಇಂತಿ ಶರಣಾರ್ಥಿ ॥ ವಾಲೆ ಪ್ರತಿ॥

ನಿರೂಪ ೧೨

ಸ್ವಸ್ತಿ ಶ್ರೀ ಅಘೋರೇಶ್ವರ ದೇವರ ನಿತ್ಯ ಕಟ್ಟಲೆ ವೆಚ್ಚದ ವಿವರ ॥ ಉಗ್ರಾಣದಿಂದ ದಿನಕ್ಕೆ ವೆಚ್ಚದ ಜಿನಸು ॥ ಕುಪ್ಪಸ ೨= ಬೆಲ್ಲ ಸ ೨ ।= ಜೇನತುಪ್ಪ ಪ ॥ ಕಾಯಿ ೨ ಹಣ್ಣು ೨೮ ಯಲೆ ೧೩ಲ್ಲು ಅಡಿಕೆ ಹೋಳು ೫೬ ಯಣ್ಣೆ ಸ ೯ ।= ಅಕ್ಕಿ ಹ ೯ ಸ ೩ ॥ ಉದ್ದು ಸ ೧ ॥= ಹೆಸರು ಸ ಪಾ ೨ ಯಾಲಕ್ಕಿ ಗ ೩ ಜೀರಿಗೆ ಗ ೩ ಇಂಗು ಗ ೫ ಶುಂಠಿ ಗ ೩ ಹತ್ತಿ ಪ । ಧೂಪ ಪ । ತಿಲಾಕ್ಷತಿ ಪ । ಅಂಗವಸ್ತ್ರ । ತಿಂ । ೧ । ಕ । ೨ ಅನ್ನದ ರುಮಾಲ । ೧ । ಕ । ೨ ಅಭ್ಯಂಗದ ಯಣ್ಣೆ । ತಿಂ ।೧।೧ ಶ । ೫೪ ಅಭಿಷೇಕದ ಕಾಯಿ ತಿಂ ।೧। ಕ ೪ ವಿಂಗಡದ ಕಟ್ಟಲೆ ಲ್ಹಣ ಗ ೭ ॥ ೦ ಅಂತೂ ಈ ಪ್ರಕಾರ ಹಣ ಜೀನಸಿನ ವೆಚ್ಚ ॥ =॥

ನಿರೂಪ ೧೩

ಚಿತ್ರಭಾನು ಸಂವತ್ಸರದ ಮಾಘ ಶುದ್ಧ ೧೨ಲು ಶುಭೇದಾರಾದ ವೆಂಕಟಪ್ಪನವರು ಇಕ್ಕೇರಿ ಸ್ಥಾನಿಕ ಸುಬ್ಬಾಭಟ್ಟಗೆ ನಮಸ್ಕಾರ ।ಶ್ರೀ ಅಘೋರೇಶ್‌ಅರ ದೇವರ ಸಾಗಿಸಿಕೊಂಡು ಬಾಹ ಬಗ್ಗೆ ಉಗ್ರಾಣದ ತಿಮ್ಮನ ಕಳುಹಿಸಿ ಅದೆ। ದೇವರ ತೇರೆಳಿಸಿಕೊಂಡು ಬಹದಾಗಿ । ಶ್ರೀ ರಾಮವಾಲೆ ಪ್ರತಿ ॥ ೧॥

ನಿರೂಪ ೧೪

ಚಿತ್ರಭಾನು ಸಂವತ್ಸರದ ಮಾಘ ಶುದ್ಧ ೧೧ಲು ಸುಭೇದಾರ ವೆಂಕಟೈಪ್ಪಯ್ಯನವ್ರು ಇಕ್ಕೇರಿ ದೇವಸ್ಥಾನದ ಪ್ರಾಕು ಮಣೆಗಾರ ವೆಂಕಣ್ಣಗೆ ಬರಸಿಕಳುಹಿದ ನಂಜಿಗೆ ನೀನು ಯಾವದಕ್ಕೂ ಯೋಚಿಸದೆ ನಮ್ಮ ನಂಬಿಗೆ ದೇವರ ತೆರಳಿಸಿಕೊಂಡು ವಿನಿಯೋಗದವರು ಕರಡಾಸಾರವರು ಸಹಕಾರಕೊಂಡು ಬಹದಾಗಿ ಶ್ರೀ ರಾಮ ವಾಲೆಪ್ರತಿ

ನಿರೂಪ ೧೫

ಕೆಳದಿ ವೀರಭದ್ರ ರಾಮೇಶ್ವರ ದೇವರ ಅಷ್ಟಬಂಅ ಸಂಬಂಧ ಮನ್ಮಥ ಸಂವತ್ಸರದ ಮಾಘ ಶುದ್ಧ ೨ಯಲ್ಲು ಆವಿನಹಳ್ಳಿ ನರಸಪ್ಪಯ್ಯಗೆ ಬರದು ಕಳುಹಿದ ನಿರೂಪು. ವಂದು ತಾಂತ್ರಿಕತನವನ್ನು ಮಧುಲಿಂಗಾಭಟ್ಟರ ಬೊಮ್ಮಣ ಭಟ್ಟರ ಕೈಯಲ್ಲೇ ನಡೆಸುವಾಯಂಬ ಹಾಗೆ ಹುಜೀರಿಂದ ಬಂದ ಕಾಗದ ಶೀಖೆ ಉದವರಿ ೧ ಕೋರೇ ರಾಂ ಭಟ್ಟರು ತಾಂತ್ರಿಕತ್ವ ತಮದೆಂದು ಮರೆಮಾಸಿ ಹೇಳಿ ವಾಲೆ ತಂದಲ್ಲಿ ಈ ಬೊಮ್ಮಣ ಭಟ್ಟ ಕಾಲಭಟ್ಟನ ಸಹಾ ನಿರ್ವಣಯ್ಯನ ಬಳಿಗೆ ಕಳುಹಿದ್ದಲ್ಲಿ ಅವರು ವಿಚಾರಿಸಿ ಬಕ್ಕಸದ ಸಿದ್ಧ ಬಸವೈಯ್ಯನವರಿಗೆ ಬರದ ವಾಲೆ ಪ್ರತಿ.

ನಿರೂಪ ೧೬

ಶ್ರೀಮತು ಸಕಲ ಗುಣ ಸಂಪನ್ನರಾದ ಸಿದ್ಧ ಬಸವೈಯ್ಯನವರಿಗೆ ನಿರ್ವಾಣೈಯ್ಯನು ಮಾಡುವ ಶರಣಾರ್ಥಿ ಕೆಳದಿ ವೀರಭಾದ್ರ ರಾಮೇಶ್ವರ ದೇವಾ ಅಷ್ಟಬಂಧ ಈ ಬೊಮ್ಮಣ ಭಟ್ಟನ ಕೈಯಲ್ಲೆ ಮಾಡಿಸಿ ಸಲುವ ಸಾಮ್ಯ ಮುಂತಾದಂನು ಈ ಬೊಮ್ಮಣಭಾಟ್ಟನ ಕೈಯಲ್ಲೇ ಕೊಡುವುದಾಗಿ ಇಂತಿ ಶರಣಾರ್ತಿ ವಾಲೆ ಪ್ರತಿ ಮುಂದೆ ದೂರು ತರಲಾಗದು.

ನಿರೂಪ ೧೭

ಪೂರ್ವದಲ್ಲಿ ಕೆಳದಿಯೆಂಬ ಗ್ರಾಮದ ವಳಗಣ ಹಳ್ಳಿ ಬಯಲು ಸ್ಥಳದಲ್ಲಿದ್ದ ಬಾಳೆಹಳ್ಳಿ ಮಠದ ಶಿಷ್ಯ ಬಸಪ್ಪರ ಪುತ್ರರಾದ ಚೌಡಪ್ಪ ಭದ್ರಪ್ಪರು ಗದ್ದೆ ಮಾಡಿಕೊಂಡಿರಲು ಇವರ ಮನೆ ದನಕರು ಗದ್ದೆಗಳನ್ನು ಹೊಲೆಯಾಳು ಯಡವ ಮುರಾರಿ ಎಂಬವರು ನೊಡಿಕೊಂಡಿದ್ದರು. ಒಂದು ದಿನ ಯಡವ ಮುರಾರಿಯರು ಗದ್ದೆ ಹೂಡುತ್ತಿರಲು, ಚವುಡಪ್ಪನು ಆಯಾಸದಿಂದ ಮಲಗಿರಲು ಅವನ ತಲೆ ಮೆಲೆ ಬಿದ್ದ ಬಿಸಿಲನ್ನು ನಾಗಸರ್ಪವು ಮರೆಮಾಡಿತ್ತು. ಇತ್ತ ಕಡೆ ಬರುತ್ತಿದ್ದ ಜೊಯಿಸರು ಇದನ್ನು ಅಲ್ಲಿ ನಿಂತು ನೋಡಿ ಹಾವು ಹೋದ ಮೇಲೆ ಚವುಡಪ್ಪನಿಗೆಎಚ್ಚರಿಸಿ ನಿನಗೆ ರಾಜಾಧಿಕಾರ ಬರುತ್ತದೆ ಎಂಬುದಾಗಿ ಹೇಳಿದರು.

ಈ ತರಹದ ನಿರೂಪಗಳು ಈ ಸುತ್ತಮುತ್ತಲಲ್ಲಿ ಇಂದೂ ಸಾಕಷ್ಟು ಪ್ರಮಾಣದಲ್ಲಿ ದೊರೆಯುತ್ತಲೇ ಇವೆ. ಆದರೆ ಇವುಗಳು ಹೆಚ್ಚಾಗಿ ತಿಗಳಾರಿ, ನಾಗರಿ ಲಿಪಿಯಲ್ಲಿವೆ. ಸುಬ್ರಹ್ಮಣ್ಯ ದೇವಾಲಯದಲ್ಲಿ ಕೆಳದಿ ಅರಸರ ನಾಲ್ಕಾರು ನಿರೂಪಗಳು ಇರುವುದನ್ನು ಕೇಳಿದ್ದೇನೆ. ಅವೂ ಸಹ ತಿಗಳಾರಿಯಲ್ಲಿರುವುದಾಗಿ ಕೇಳಿದ್ದೇನೆ. ಕೊಲ್ಲೂರು ಅಡಿಗರ ಮನೆಯ ಹಸ್ತಪ್ರತಿ ಸಂಗ್ರಹದಲ್ಲಿ ಸುಮಾರು ಐವತ್ತಕ್ಕೂ ಹೆಚ್ಚು ಕೆಳದಿ ಅರಸರ ಕಾಲದ ನಿರೂಪಗಳನ್ನು ನಾನು ಗಮನಿಸಿದ್ದೇನೆ. ಇಂತಹ ನಿರೂಪಗಳನ್ನು ಸಂಗ್ರಹಿಸುವ, ಅವುಗಳನ್ನು ಪ್ರಕಟಿಸುವ ಕೆಲಸ ಆಗಬೇಕಿದೆ. ಇದಕ್ಕೆ ತಿಗಳಾರಿ ಲಿಪಿಯ ಪರಿಚಯ ಹೆಚ್ಚು ಮುಖ್ಯವಾಗಿದೆ.

೨೫

ಶ್ರೀ ಶಿವಗಂಗಾ ಶ್ರೀ ಮಠಕ್ಕೆ ಕೊಡಲ್ಪಟ್ಟ ಸನ್ನದುಗಳು ಮತ್ತು ಕೆಲವು ಕಾಗದ ಪತ್ರಗಳು

ಡಾ. ಬಿ. ನಂಜುಂಡಸ್ವಮಿ*

ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕ್ ಶಿವಗಂಗಾ ಕ್ಷೇತ್ರದಲ್ಲಿ ವೀರಶೈವ ಧರ್ಮ ಪರಂಪರೆಯ ೬೪ ಮಠಗಳು ಇದ್ದು ಅವುಗಳ ೫೮ ಮಠಗಳ ಹೆಸರುಗಳನ್ನು, ಅಳಿದು ಉಳಿದು ಮಠಗಳ ಐತಿಹಾಸಿಕ ಮಾಹಿತಿಗಳನ್ನು ಸಂಗ್ರಹಿಸಿ ಶ್ರೀ ಸಿದ್ಧಗಂಗಾ ಮಠದ ಶತಮಾನೋತ್ಸವ ಸಂದರ್ಭದಲ್ಲಿ ಹೊರತಂದ ೧೦೮ ಪುಸ್ತಕಗಳ ಪೈಕಿ ೫೬ನೇ ಗ್ರಂಥಪುಷ್ಪವಾಗಿ 'ಶಿವಗಂಗಾ ಕ್ಷೇತ್ರ ಹಾಗೂ ವೀರಶೈವ ಮಠಗಳು' ಪುಸ್ತಕವನ್ನು ಬರೆದಿದ್ದೇನೆ. ಶಿವಗಂಗಾ ಕ್ಷೇತ್ರದಲ್ಲಿ ನೆಲೆಸಿರುವ ಶ್ರೀ ಶಿವಗಂಗಾ ಶ್ರೀಮಠ ಅಥವಾ ಇಂದಿನ ಜನರು ಕವಿಯುವ ಶ್ರೀ ಶಿವಗಂಗಾ ಮಠಕ್ಕೆ ಸಂಬಂಧಪಟ್ಟ ೩೬ ಪ್ರಮುಖ ದಾಖಲೆಗಳನ್ನು ಈ ಲೇಖನದಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ೪೫ ಪುಟದ ಈ ಪುಸ್ತಕದ ಮುಖಪುಟದಲ್ಲಿ ಶ್ರೀಮತ್ಪರಮಹಂಸ ಪರಿವ್ರಾಜಾಜೋತ್ಯಾದಿ ಬಿರುದಾಂಕಿತ ಶ್ರೀಮಚ್ಛಂಕರ ಭಗವತ್ಪಾದ ಶಿಷ್ಯಪರಂಪರಾಪ್ರಾಪ್ತ ಶ್ರೀ ಶಿವಗಂಗಾ ಶ್ರೀಮಠಕ್ಕೆ ಆಗಿಂದಾಗ್ಗೆ ಅನೇಕ ಮಹಾರಾಜರಿಂದಲು ಸರಕಾರದಿಂದಲೂ ಕೊಡಲ್ಪಟ್ಟ ಸನ್ನದ್ದುಗಳಲ್ಲಿ ಕೆಲವು ಕಾಗದ ಪತ್ರಗಳು ಎಂದು ಮುದ್ರಿಸಲಾಗಿದೆ. ಈ ಪುಸ್ತಕ ೧೮೮೮ರಲ್ಲಿ ಮೈಸೂರು ನಗರದ ಶ್ರೀರಾಂಪೇಟೆ ಲಕ್ಷ್ಮೀನರಸಿಂಹ ಮುದ್ರಾ ಶಾಲೆಯಲ್ಲಿಯು, ವಿದ್ಯಾತರಂಗಿಣೀ ಮುದ್ರಾಶಾಲೆಯಲ್ಲಿ ಸಹ ಮುದ್ರಿಸಲ್ಪಟ್ಟಿತು. ಪ್ರಕಟಿತ ಪುಸ್ತಕದಲ್ಲಿ ಈ ದಾಖಲೆಗಳಿವೆ.

೧ ದೇಶ ವಿಭಾಗ ಪತ್ರಿಕೆ ನಕಲು

೨ ದಳವಾಯಿ ದೇವರಾಜಯ್ಯರಸನವರ ಕಾಲದಲ್ಲಿ ಹುಟ್ಟಿದ ಜಯರೇಖೆ ನಕಲು

೩ ದಳವಾಯಿ ದೇವರಾಜೈಯ್ಯನ ಪತ್ರ

೪ ದೊಡ್ಡ ನವಾಬರ ವಟ್ಟು ರಹದಾರಿ ನಕಲು

೫ ದಿವಾನ್ ಪೂರ್ಣಯ್ಯನವರ ರಹದಾರಿ ನಕಲು ೨೩ನೇ ಡಿಸೆಂಬರು ೧೮೦೬

೬ ದಿವಾನ್ ಪೂರ್ಣಯ್ಯನವರ ವಿಜ್ಞಾಪನಾ ಪತ್ರಿಕೆ

೭ ದಿವಾನ್ ಪೂರ್ಣಯ್ಯನವರು ಕೂಡ್ಲಿ ಶಂಕರಭಾರತೀ ಸ್ವಾಮಿಗಳಿಗೆ ಬರೆದ ವಿಜ್ಞಾಪನಾ ಪತ್ರ

೮ ದಿವಾನ್ ಪೂರ್ಣೈಯ್ಯನವರ ಬಿನ್ನಹ ಪತ್ರ

೯ ಮುಮ್ಮಡಿ ಕೃಷ್ಣರಾಜ ಒಡೆಯರವರು ಅರಮನೆ ಶೀಮೆಡಗಿಗಳ ಆಮಿಲ್ ಕಿಲ್ಲೆದಾರರಿಗೆ ಕಳುಹಿಸಿದ ನಿರೂಪ ೨೬ ಏಪ್ರೇಲ್ ೧೮೧೪

೧೦ ಮುಮ್ಮಡಿ ಕೃಷ್ಣರಾಜ ಒಡೆಯರವರ ವಿಜ್ಞಾಪನಾ ಪತ್ರ

೧೧ ಮುಮ್ಮಡಿ ಕೃಷ್ಣರಾಜ ಒಡೆಯರವರು ಅಮಲ್ದಾರ ಕಿಲೇದಾರರಿಗೆ ಬರಸಿ ಕಳುಹಿಸಿದ ನಿರೂಪ ೧೯ನೇ ಸೆಪಟಂಬರ್ ೧೮೩೦

೧೨ ಕೂಡ್ಲಿ ಶೃಂಗೇರಿ ಶ್ರೀ ಜಗದ್ಗುರು ಶ್ರೀ ಶಂಕರಭಾರತೀ ಸ್ವಾಮಿಗಳು ಬೆಂಗಳೂರು ಮಠಮುದ್ರೆ ಕೈಪು ಚಂದ್ರಶೇಖರಶಾಸ್ತ್ರಿ ಬರೆದ ಆಶೀರ್ವಾದ ಪತ್ರ

೧೩ ಮುಮ್ಮಡಿ ಕೃಷ್ಣರಾಜ ಒಡೆಯರವರು ಪಟ್ಣ ಅಷ್ಟಗ್ರಾಮ ತಾಲ್ಲೂಕು ಅಮಲ್‌ದಾರ್‌ಗೆ ಬರೆದ ನಿರೂಪ ೭ನೇ ಸಪಟಂಬರ್ ೧೮೧೯

೧೪ ಮುಮ್ಮಡಿ ಕೃಷ್ಣರಾಜ ಒಡೆಯರವರು ಶೀಮೆ ಗಡಿಗಳ ಅಮಿಲ್ ಕಿಲ್ಲೆದಾರ್ರಿಗೆ ಕಳುಹಿಸಿದ ನಿರೂಪ

೧೫ ಛೀಫ್ ಕಮಿಷನ್‌ನ್ನ ಪತ್ರ ೨೬ ಸೆಪಟಂಬರು ೧೮೩೮

೧೬ ಮುಮ್ಮಡಿ ಕೃಷ್ಣರಾಜ ಒಡೆಯರವರು ಶ್ರೀ ಶೃಂಗೇರಿ ಶ್ರೀ ಶಿವಗಂಗಾ ಶ್ರೀ ಮದಭಿಮ್‌ಸಚ್ಚಿದಾನಂದ ಭಾರತೀ ಸ್ವಾಮಿಗಳವರ ಸನ್ನಿಧಾನಂಗಳಿಗೆ ಬರೆದ ವಿಜ್ಞಾಪನಾ ಪತ್ರ

೧೭ ಮೈಸೂರು ಚೀಫ್ ಕಮಿಷನರ್ ನೆಲಮಂಗಲ ತಾಲ್ಲೂಕು ಅಮಲುಲದಾರ್ರಿಗೆ ಸಾದರುಪಡಿಸಿದ ಹುಕ್ಕುಂ ೧೦/೨/೧೮೫೫

* ಪಂಡಿತ್ ತಾರಾನಾಥ್ ಆಯುರ್ವೇದ ಚಿಕಿತ್ಸಾಲಯ, ತುಮಕೂರು ಷಾಪಿಂಗ್ ಕಾಂಪ್ಲೆಕ್ಸ್, ಬಿ.ಹೆಚ್. ರಸ್ತೆ, ತುಮಕೂರು-೫೭೨ ೧೦೨.

೧೯ ಮುಮ್ಮಡಿ ಕೃಷ್ಣರಾಜ ಒಡೆಯರ್ ಶ್ರೀಗಂಗೆ ಶ್ರೀಮಠದ ಪಾರುಪತ್ಯೆಗಾರ ವೆಂಕಟೇಶಯ್ಯನಿಗೆ ಬರಸಿ ಕಳುಹಿಸಿದ ನಿರೂಪ ೧೩/೧/೧೮೧೩

೨೦ ಹೈದರಾಬಾದ್ ನಿಜಾಮರು ಬರೆಸಿಕೊಟ್ಟ ಪರವಾನೆ

೨೧ ಮೈಸೂರು ಚೀಫ್ ಕಮಿಷ್ನರವರು ಮದ್ದಗಿರಿ ಅಮಲ್‌ದಾರಿಗೆ ಸಾದರ ಪಡಿಸಿದ ಹುಕ್ಕುಂ ೧೩/೭/೧೮೫೪

೨೨ ಮೈಸೂರು ಕಮಿಷ್ನರ್ ಶೀಮೆಗಡಿಗಳ ಅಮಾಲ್ ಕಿಲ್ಲೇದಾರಿಗೆ ಕೊಟ್ಟ ನಿರೂಪ ೨೬/೨/೧೮೫೩

೨೩ ಮೈಸೂರು ಕಮಿಷ್ನರವರು ಶೀಮೆಗಡಿಗಳ ಆಮಾಲ್ ಕಿಲ್ಲೇದಾರಿಗೆ ೧೮.೧೦.೧೮೭೯

೨೪ ಶ್ರೀ ಶಿವಂಗಾ ಶ್ರೀ ಗಂಗಾಧರ ಭಾರತೀ ಸ್ವಾಮಿಯವರ ಚರಣ ಸನ್ನಿಧಾನಗಳಿಗೆ ಪರಮಶಿಷ್ಯೆ ಅಕ್ಕಣ್ಣಾ ಮಾದಣ್ಣ ಹೈದರಾಬಾದ್ ಗೋಲಕೊಂಡೆ ಇವರು ಬರೆದ ಜಯಪತ್ರ ಶಾಲಿ ಶಕ ೧೪೯೩ನೇ ಸಂದ ಪರೀಧಾವಿ ನಾಮ ಸಂವತ್ಸರದ ಕಾರ್ತಿಕ ಶುದ್ಧ ೧೩ ಈ ಪತ್ರದ ಕಾಲ ಕ್ರಿ.ಶ. ೧೬೭೧

೨೫ ಕಮೀಷನರು ಮೈಸೂರು ಶೀಮೆಗಡಿಗಳ ಅಮಲ್ ಕಿಲೇದಾರರಿಗೆ ಬರೆಸಿ ಕಳುಹಿಸಿದ ನಿರೂಪ ೧೦/೪/೧೮೭೬

೨೬ ಚೀಫ್ ಕಮೀಷ್ನರವರ ಹುಜೂರನಿಂದ ರಹದಾರಿ ಪತ್ರ ೧೮.೧೦.೧೮೭೯

೨೭ ಶ್ರೀ ಶಿವಗಂಗಾ ಮಠದ ಭಂಡಾರಕ್ಕೆ ಶೃಂಗೇರಿ ಮಠದ ಬ್ರಾಹ್ಮಣರು ಬರೆದುಕೊಟ್ಟ ಕೈಕಾಗದ

೨೮ ದಿವಾನ್ ಪೂರ್ಣಯ್ಯನವರು ಅಮೀಲಿ ಮಧ್ವರಾಯನಿಗೆ ನಿರೂಪ

೨೯ ಶ್ರೀ ಶಿವಗಂಗಾ ಮಠದ ಭಂಡಾರಕ್ಕೆ ಬೆಂಗಳೂರು ಮಹಾಸ್ವಾಮಿಗಳು ಬರೆದು ಒಪ್ಪಿಸಿದ ಕಾಗದ

೩೦ ಶಿವಗಂಗಾ ಮಠದ ಭಂಡಾರಕ್ಕೆ ಶೃಂಗೇರಿ ಮಠದ ಅಹೋಬಲಶಾಸ್ತ್ರಿ ಮತ್ತು ನಾರಣಭಟ್ಟ ಬರೆಸಿ ಒಪ್ಪಿಸಿದ ಕೈಕಾಗದ

೩೧ ಶ್ರೀ ಶಿವಗಂಗಾ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮಿಗಳವರಿಗೆ ಮಧ್ವರಾಯನ ವಿಜ್ಞಾಪನಾ ಪತ್ರ

೩೨ ಶ್ರೀ ಶಿವಗಂಗಾ ಮಠದ ಪಾರುಪತ್ತೇಗಾರ್ ವೆಂಕಟೇಶಯ್ಯನವರಿಗೆ ಸುಬೇದಾರ್ ಶೇಷಗಿರಿರಾವ್ ರವರ ಪತ್ರ

೩೩ ಶ್ರೀ ಶಿವಗಂಗಾ ಶ್ರೀ ಸಚ್ಚಿದಾನಂದ ಸ್ವಾಮಿಗಳಿಗೆ ಶ್ರೀರಂಗಪಟ್ಟಣದ ವಿದ್ವತ್ ಜನರು ಬರೆದ ಪತ್ರ, ತೆಲುಗು ಭಾಷೆಯಲ್ಲಿದೆ.

೩೪ ಶ್ರೀ ಶಿವಗಂಗಾ ಭಾರತೀಸ್ವಾಮಿಗಳಿಗೆ ಬೆಂಗಳೂರು ಅಗ್ರಹಾರದಲ್ಲಿ ಇರುವ ವಿದ್ವಾಂಸರು ಬರೆದುಕೊಂಡ ವಿಜ್ಞಾಪನಾ ಪತ್ರ

೩೫ ಶ್ರೀ ಶಿವಗಂಗಾ ಅಭಿನವ ಗಂಗಾಧರ ಭಾರತೀ ಸ್ವಾಮಿಗಳಿಗೆ ಶ್ರೀರಂಗಪಟ್ಟಣ ನಿವಾಸಿ ಭಾಸ್ಕರಾಚಾರ್ಯುಲು ಶೆಟ್ಟಿ ಬರೆದುಕೊಂಡ ತೆಲುಗು ಭಾಷೆಯ ಪತ್ರ

೩೬ ಭಾಸ್ಕರಾಚಾರ್ಯರ ವಿಜ್ಞಾಪನಾ ಪತ್ರ, ಶಿವಗಂಗಾ ಶೃಂಗೇರಿಮಠಕ್ಕೆ ಕಾಣಿಕೆ ಅರ್ಪಿಸುವಂತೆ ವೈಶ್ಯ ಜನಂಗಳಿಗೆ ಆಜ್ಞಾಪಿಸಿರುವ ವಿವಿಯಾರ್ಥ ಪತ್ರ ತೆಲುಗು ಭಾಷೆಯಲ್ಲಿ ಇದೆ

ಐತಿಹಾಸಿಕ ಮಹತ್ತ್ವ ಇರುವ ಈ ಎಲ್ಲಾ ದಾಖಲೆಗಳನ್ನು ಯಥಾವತ್ತಾಗಿ ಈ ಲೇಖನದಲ್ಲಿ ಪ್ರಕಟಿಸಲು ಸಾಧ್ಯವಿಲ್ಲ. ಕೆಲವು ದಾಖಲೆಗಳನ್ನು ಯಥಾವತ್ತಾಗಿ ಕೊಟ್ಟು ಮಿಕ್ಕ ದಾಖಲೆಗಳ ಲಘು ಸಂಯಮವನ್ನು ಮಾಡಿ ಕೊಡಲಾಗುತ್ತದೆ.

ಪತ್ರ ೧


ದೇಶ ವಿಭಾಗ ಪತ್ರಿಕೆ ನಕಲು

ಶ್ರೀಮತ್ಪರಮಹಂಸ ಪರಿತ್ರಾಜಕಾಚಾರ್ಯ ವರ್ಯೇತ್ಯಾದಿ
ಯಥೋಕ್ತ ಬಿರುದಾಂಕಿತ ಶ್ರೀ ಶೃಂಗೇರಿ ಶ್ರೀಕೂಡ್ಲಿ
ಶ್ರೀ ವಿದ್ಯಾಶಂಕರ ಪಾದಪದ್ಮಾರಾಧಕ ಶ್ರೀ ನರಸಿಂಹ
ಭಾರತೀ ಸ್ವಾಮೀಜಿ

ಕರಕಮಲ ಸಂಜಾತ ಶ್ರೀಶಂಕರಭಾರತೀ ಸ್ವಾಮಿಗಳವರು

ದುರ್ಮುಖಿ ಸಂವತ್ಸರದ ವೈಶಾಖ ಶುದ್ಧ ೨ಯಲ್ಲು ನಮ್ಮ ಶಿಷ್ಯನಾದ ಸರ್ವಜೇಷ್ಠನಾದ ಹೊನ್ನವಳ್ಳಿ ನರಸಿಂಹಭಾರತೀಗೆ, ವಿದ್ಯಾರಣ್ಯಾಭಾರತೀಗೆ, ಚಿಕ್ಕ ನರಸಿಂಹಭಾರತೀಗೆ, ಅಭಿನವ ವಿದ್ಯಾರಣ್ಯ ಭಾರತೀಗೆ, ಗಂಗಾಧರ ಭಾರತೀಗೆ ಸಹಾ ಸಂಚಾರದೇಶ ವಿಭಾಗ ಮಠಗಳು ನಿರ್ದೇಶ ಮಾಡಿದ ಕ್ರಮವೆಂತೆಂದರೆ ಜೇಷ್ಠನಾದ ನರಸಿಂಹಭಾರತೀಗೆ ವಿದ್ಯಾನಗರ ಪೀಠ ಶ್ರೀಶೈಲ ಪರಿಯಂತ ಪೂರ್ವದೇಶ ಸಂಚಾರ ವಿದ್ಯಾರಣ್ಯ ಭಾರತೀಗೆ ಕೊಡ್ಲೀ ಮಠದಲ್ಲಿ ಚಂದ್ರಮೌಳೀಶ್ವರಸ್ವಾಮಿಯವರ ಚವುಕಿ ಪ್ರತ್ತರದೇಶ ವಿಜಾಪೂರ್ ಪರಿಯಂತ ನರಸಿಂಹ ಭಾರತೀಗೆ ಕೊಡ್ಲೀ ಮಠದಲ್ಲಿ ವಿದ್ಯಾಶಂಕರ ಸ್ವಾಮಿಯವರ ಚವುಕಿ

ಚಿತ್ರಕಲ್ಲಾದಿಯಾಗಿ ಭಾಗಾನಗರ ಪರಿಯಂತೆ ದೇಶ ಅಭಿನವ ವಿದ್ಯಾರಣ್ಯ ಭಾರತೀಗೆ ಅಮರಗಿರಿ ಮಠ ಶ್ರೀರಂಗ ಪರಿಯಂತದೇಶ ಗಂಗಾಧರ ಭಾರತೀಗೆ ಶಿವಗಂಗಾಮಠ


ಶ್ರೀರಸ್ತು

ಶ್ರೀಜಯಪುಗಮೇಶ್ವರ

ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯೇತ್ಯಾದಿ
ಬಿರುದಾಂಕಿತ ಶ್ರೀಮಚ್ಛಂಕರ ಭಗವತ್ಪಾದ
ಶಿಷ್ಯಪರಂಪರಾಪ್ರಾಪ್ತ
ಶ್ರೀಶಿವಗಂಗಾಶ್ರೀಮಠಕ್ಕೆ
ಆಗಿಂದಾಗ್ಯೆ ಅನೇಕ ಮಹಾ ರಾಜರಿಂದಲು ಸರಕಾರದಿಂದಲು
ಕೊಡಲ್ಪಟ್ಟ ಸನ್ನದ್ದುಗಳಲ್ಲಿ ಕೆಲವುಕಾಗದಪತ್ರಗಳು

ಲಕ್ಷ್ಮೀನರಸಿಂಹಮುದ್ರಾಶಾಲೆಯಲ್ಲಿಯು
ವಿದ್ಯಾತರಂಗಿಣೀಮುದ್ರಾಶಾಲೆಯಲ್ಲಿಸಹ
ಮುದ್ರಿಸಲ್ಪಟ್ಟಿತು
ಶ್ರೀರಾಂಪೇಟೆ ಮೈಸೂರು
೧೮೮೮

ಕಾವೇರಿ ತುಂಗಭದ್ರಾ ಮಧ್ಯೆ ಕರ್ನಾಟಕ ದೇಶ ಈ ಐದು ಮಂದೀಗು ಮಠಗಳು ದೇಶಸಂಚಾರಗಳು ಆಚಾರ ವಿಚಾರ ವ್ಯವಹಾರ ಪ್ರಾಯಶ್ಚಿತ್ತಗಳು ತಮ್ಮ ತಮ್ಮ ದೇಶಗಳಲ್ಲಿ ಸಂಚಾರ ಮಾಡಿಕೊಂಡು ಮಠ ಧರ್ಮಗಳು ದೀಪಾರಾಧನೆ ವರ್ತನೆ ವಸ್ತು ವಾಹನ ಪತ್ರ ಚಾಮರ ಆಂದೋಳಿಕಾದಿಗಳಿಂದ ಸಂಚಾರ ಮಾಡಿಕೊಂಡು ಅನ್ಯೋನ್ಯವಾಗಿ ಯಿರಲುಳ್ಳವರೆಂದು ಬರೆಸಿಕೊಟ್ಟ ದೇಶ ವಿಭಾಗ ಪತ್ರಿಕೆ ಯಿದಕ್ಕೆ ಯಾರು ತಪ್ಪಿದರೂ ಗುರು ದ್ರೋಹಿಗಳು ಯಿದಕ್ಕೆ ಜಗತ್ಸಾಕ್ಷಿಯಾದ ಶ್ರೀ ಪರಮೇಶ್ವರನೇ ಸಾಕ್ಷಿ.

ಈ ದೇಶ ವಿಭಾಗ ಪತ್ರಿಕೆ ನಮಗೆ ಗೊತ್ತಿಲ್ಲದ ಹಲವು ಮಾಹಿತಿಯನ್ನು ನೀಡುತ್ತದೆ. ಶ್ರೀಮತ್ಪರಹಂಸ ಪರಿವ್ರಾಜಕಾ ಚಾರ್ಯವರೋತ್ಯಾದಿ ಯಥೋಕ್ತ ಬಿರುದಾಂಕಿತ ಶ್ರೀ ಶೃಂಗೇರಿ ಶ್ರೀಕೂಡ್ಲಿ ಶ್ರೀ ವಿದ್ಯಾಶಂಕರ ಪಾದಪದ್ಮಾರಾಧಕ ಶ್ರೀ ನರಸಿಂಹಭಾರತೀ ಸ್ವಾಮಿಗಳ ಕರಕಮಲಸಂಜಾತ ಶ್ರೀಶಂಕರ ಭಾರತೀಸ್ವಾಮಿಗಳವರು ದುರ್ಮುಖಿ ಸಂವತ್ಸರದ ವೈಶಾಖ ಶುದ್ಧ ೨೦ಯಲ್ಲು ನಮ್ಮ ಶಿಷ್ಯನಾದ ಹೊನ್ನವಳ್ಳಿ ನರಸಿಂಹಭಾರತೀಗೆ 'ವಿದ್ಯಾನಗರಪೀಠ' ಶ್ರೀಶೈಲ ಪರಿಯಂತ ಪೂರ್ವದೇಶ ಸಂಚಾರ. ಇಲ್ಲಿ ಪ್ರಸ್ತಾಪವಾಗಿರುವ ವಿದ್ಯಾನಗರ ಮಠ ಅಥವಾ ಪೀಠ ಹಂಪಿಯ ವಿರೂಪಾಕ್ಷೇಶ್ವರ ದೇವಾಲಯದ ಆವರಣದಲ್ಲಿರುವ 'ವಿದ್ಯಾನಗರಮಠ'. ಈ ಮಠದ ಪೀಠದ ಮೇಲೆ ಅಸೀನರಾಗಿ ಶ್ರೀಶೈಲ ಪರಿಯಂತ ಪೂರ್ವದೇಶದ ಸಂಚಾರದ ಹಕ್ಕು. ಇಲ್ಲಿ ಪ್ರಸ್ತಾಪವಾಗಿರುವ ಹೊನ್ನವಳ್ಳಿ, ತುಮಕೂರು ಜಿಲ್ಲೆ ತಿಪಟೂರು ತಾಲ್ಲೂಕಿನ ಒಂದು ಪ್ರಮುಖವಾದ ಗ್ರಾಮ. ಈ ಗ್ರಾಮದಲ್ಲಿ ಹಲವಾರು ಶತಮಾನಗಳಿಂದ ಆಚಾರವಂತ, ವಿದ್ಯಾವಂತರಾದ ಬ್ರಾಹ್ಮಣ ಕುಟುಂಬಗಳು ನೆಲೆಸಿವೆ. ಈ ಗ್ರಾಮದಲ್ಲಿ ೬೩ ಶೀಲಾಚರಣೆಗೆ ಪ್ರಸಿದ್ಧವಾದ 'ಹೊನ್ನವಳ್ಳಿ ಕರಿಸಿದ್ಧೇಶ್ವರ' ಚರ ಗದ್ದುಗೆ ವೀರಶೈವ ಮಠ ಇದೆ. ಈ ಮಠದಲ್ಲಿ ನೂರಾರು ಹಸ್ತಪ್ರತಿಗಳು ಇದ್ದು ಅವೆಲ್ಲ ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ಹಸ್ತಪ್ರತಿ ಭಂಡಾರದಲ್ಲಿ ರಕ್ಷಿಸಲ್ಪಟ್ಟಿವೆ.

ಶ್ರೀ ವಿದ್ಯಾರಣ್ಯ ಭಾರತೀಗೆ ಕೊಡ್ಲೀಮಠದಲ್ಲಿ ಚಂದ್ರಮೌಳೀಶ್ವರ ಸ್ವಾಮಿಯವರ ಚವುಕಿಯಲ್ಲಿ ಪೂಜೆ ಮಾಡುವ ಹಕ್ಕು, ಉತ್ತರದೇಶದ ವಿಜಾಪುರ ಪರಿಯಂತರ ಸಂಚಾರ ಮಾಡಿ ಕಾಣಿಕೆ ಪಡೆಯುವ ಹಕ್ಕು ಕೊಡ್ಲೀಮಠದ ಇತಿಹಾಸದಲ್ಲಿ ಶ್ರೀ ಶಂಕರಭಾರತೀ ನಂತರ ಶ್ರೀ ಅಭಿನವ ವಿದ್ಯಾರಣ್ಯಭಾರತೀ (೧೬೪೩-೧೬೬೪) ಇದ್ದ ದಾಖಲೆ ಇದೆ ದೇಶ ವಿಭಾಗ ಪತ್ರದಲ್ಲಿ ಉಲ್ಲೇಖಗೊಂಡಿರುವವರು ಶ್ರೀ ಅಭಿನವ ವಿದ್ಯಾರಣ್ಯ ಭಾರತೀ ಸ್ವಾಮಿಗಳೇ ಇರಬೇಕು. ಅನ್ಯ ದಾಖಲೆಗಳ ಸಹಾಯದಿಂದ ಈ ಗೊಂದಲವನ್ನು ಪರಿಹರಿಸಿಕೊಳ್ಳಬಹುದು.

ನರಸಿಂಹ ಭಾರತೀಗೆ ಕೊಡ್ಲೀಮಠದಲ್ಲಿ ವಿದ್ಯಾಶಂಕರ ಸ್ವಾಮಿಯವರ ಚೌಕಿಯ ಪೂಜೆ ಚಿತ್ರಕಲ್ಲುದುರ್ಗಾದಿ ಭಾಗನಗರಿ ಪರಿಯಂತ ಅಂದರೆ ಚಿತ್ರದುರ್ಗದಿಂದ ಹೈದರಾಬಾದ್ ತನಕ ಕಾಣಿಕೆ ಪಡೆಯುವ ಹಕ್ಕು. ಇಲ್ಲಿ ಉಲ್ಲೇಖಗೊಂಡಿರುವ ಸ್ವಾಮಿ ಕೊಡ್ಲೀಮಠ ಪರಂಪರೆಯ ತೃತೀಯ ಶ್ರೀ ನರಸಿಂಹಭಾರತೀ (೧೭೫೮-೭೮) ಸ್ವಾಮಿಗಳು ಆಗಿರಬಹುದು.

ಅಭಿನವ ವಿದ್ಯಾರಣ್ಯ ಭಾರತೀಗೆ ಅಮರಗಿರಿ ಮಠ, ಶ್ರೀರಂಗ ಪರಿಯಂತ ದೇಶ ಸಂಚಾರವನ್ನು ಕಾಣಿಕೆ ಸಂಗ್ರಹಕ್ಕೆ ಈ ಸ್ವಾಮಿಗಳು ಮಾಡಬಹುದು.

ಶ್ರೀ ಗಂಗಾಧರ ಭಾರತೀಗೆ ಶಿವಗಂಗಾಮಠ ಕಾವೇರಿ-ತುಂಗಭದ್ರಾ ಮಧ್ಯೆ ಇರುವ ಕರ್ನಾಟಕ ದೇಶದಲ್ಲಿ ಕಾಣಿಕೆಯನ್ನು ಸಂಗ್ರಹಿಸಬಹುದು. ಈ ಐದು ಮಂದಿಗೂ ಮಠಗಳು ದೇಶಸಂಚಾರಗಳು ಆಚಾರ ವ್ಯವಹಾರ

ಪ್ರಾಯಶ್ಚಿತ್ತಗಳು, ತಮ್ಮ ತಮ್ಮ ದೇಶಗಳಲ್ಲಿ ಸಂಚಾರ ಮಾಡಿಕೊಂಡು ಮಠ ಧರ್ಮಗಳ ರಕ್ಷಣಾರ್ಥವಾಗಿ ದೀಪಾರಾಧನೆ ಕಾಣಿಕೆ ಸಂಗ್ರಹ, ಆಚಾರ, ವಿಚಾರ, ವ್ಯವಹಾರ, ಪ್ರಾಯಶ್ಚಿತ್ತಗಳನ್ನು ಮಾಡಿಸುತ್ತಾ ತಮ್ಮ ತಮ್ಮ ದೇಶಗಳನ್ನು ಸಂಚಾರ ಮಾಡಿಕೊಂಡು ಮಠ ಧರ್ಮಗಳ ದೀಪಾರಾಧನೆ, ವರ್ತನೆ, ವಸ್ತು ವಾಹನ ಛತ್ರ ಚಾಮರ ಆಂದೋಳಿಕಾದಿಗಳಿಂದ ಸಂಚಾರ ಮಾಡಿಕೊಂಡು ಅನ್ಯೋನ್ಯವಾಗಿ ಇರಬೇಕೆಂದು ಒರವೆ ಕೊಟ್ಟ 'ದೇಶವಿಭಾಗ ಪತ್ರಿಕೆ' ಇದಕ್ಕೆ ಯಾರು ತಪ್ಪಿದರೂ ಗುರುದ್ರೋಹಿಗಳು ಇದಕ್ಕೆ ಸಾಕ್ಷಿ ಶ್ರೀ ಪರಮೇಶ್ವರನೆ ಎಂದು ಉಲ್ಲೇಖಿಸಲಾಗಿದೆ.

ಶ್ರೀಮಜ್ಜಗದ್ಗುರು ಶೃಂಗೇರಿ ಶಾರದಾ ಮಹಾಪೀಠದ ಸಂಕ್ಷಿಪ್ತ ಇತಿಹಾಸ ಪುಸ್ತಕದಲ್ಲಿ ಪುಟ ಕೊಟ್ಟಿದ್ದೇನೆ. ೬೩ರಲ್ಲಿ ಉಲ್ಲೇಖಗೊಂಡ ಸ್ವಾಮಿಗಳ ಹೆಸರು ಈ ದಾಖಲೆಯಲ್ಲಿರುವ ಸ್ವಾಮಿಗಳ ಕಾಲಾನುಕ್ರಮಣಿಕೆ ಇಲ್ಲಿ ಉಲ್ಲೇಖಗೊಂಡಿರುವ ಶ್ರೀ ಕೂಡಲೀ ಶೃಂಗೇರಿ ಶಾರದಾ ಮಹಾಪೀಠದ ಪರಂಪರೆ ಸ್ವಾಮಿಗಳ ಕಾಲಾನುಕ್ರಮಣಿಕೆ ಈ ರೀತಿ ಇದೆ.

ದ್ವಿತೀಯ ಶ್ರೀ ನರಸಿಂಹ ಭಾರತಿ	೧೫೯೯–೧೬೨೮
ಪ್ರಥಮ ಶ್ರೀ ಶಂಕರಭಾರತೀ	೧೬೨೩–೧೬೫೯
ಅಭಿನವ ವಿದ್ಯಾರಣ್ಯಭಾರತೀ	೧೬೪೩–೧೬೬೪
ತೃತೀಯ ಶ್ರೀ ನರಸಿಂಹಭಾರತೀ	೧೬೫೮–೧೬೭೮

ಕೂಡಲೀ ಶೃಂಗೇರಿ ಜಗದ್ಗುರುಗಳ ಗುರುಕುಲದಲ್ಲಿ ಬೆಳೆದ ಇವರುಗಳನ್ನು ಮುಂದೆ ತಮ್ಮ ಪರಂಪರೆಯ ಮಠಗಳಿಗೆ ಸ್ವಾಮಿಗಳನ್ನಾಗಿ ಮಾಡಿ ಆ ನಂತರ ಕೂಡಲೀ ಶೃಂಗೇರಿ ಶಾರದಾ ಪೀಠದ ಜಗದ್ಗುರುಗಳು ಆದರು. ಈ ದೇಶವಿಭಾಗ ಪತ್ರದಲ್ಲಿ ಉಲ್ಲೇಖಗೊಂಡ ವಿದ್ಯಾನಗರಪೀಠ= ಹಂಪಿ ವಿರೂಪಾಕ್ಷ ದೇವಾಲಯದ ಆವರಣದಲ್ಲಿ ಇರುವ ವಿದ್ಯಾರಣ್ಯಮಠ ಇಂದು ಅಸ್ತಿತ್ವದಲ್ಲಿ ಇದ್ದು ಸ್ವಾಮಿಗಳು ಇದ್ದಾರೆ. ಅಮರಗಿರಿಮಠದ ಬಗ್ಗೆ ಹೆಚ್ಚಿನ ವಿವರ ಗೊತ್ತಿಲ್ಲ. ಶಿವಗಂಗಾ ಶ್ರೀಮಠ ಇಂದಿಗೂ ತನ್ನ ಕಾರ್ಯ ನಿರ್ವಹಿಸುತ್ತಿದೆ. ಇತ್ತೀಚೆಗೆ ಆ ಪೀಠದ ಸ್ವಾಮಿಗಳು ಬ್ರಹ್ಮೈಕ್ಯರಾದರು.

ದಳವಾಯಿ ದೇವರಾಜಯ್ಯರಸನವರ ಕಾಲದಲ್ಲಿ ಹುಟ್ಟಿದ ಜಯರೇಖೆ ನಕಲು

ನಳಸಂವತ್ಸರದ ಅಧಿಕ ಜೇಷ್ಠ ಶುದ್ಧ ೧೩ಯಲ್ಲಿ ಶ್ರೀಮತು ದಳವಾಯಿ ದೇವರಾಜಯ್ಯನವರು ಅರಮನೆ ಶೀಮೆ ಗಡಿಗಳ ಗುರಿಕಾರ್ರು ಪಾರುಪತ್ತೆಗಾರ್ರು ಅಟ್ಠವಣಿ ಕಂದಾಚಾರದ ಹೋಬಳಿ ಸುಂಕ ಪ್ರೋಮ್ಮು ದೇವಸ್ಥಾನದ ಜಿಡಿ ಮಣೆಹ ಶಾಸುಭೋಗರು ಮಣೇಗಾರ್ರಿಗೆ ಸಹಾ ಸ್ವಸ್ನೇಹಾನು ಸಂಪ್ರೀತಿಯಿಂ ಕಾರ್ಯಕ್ಕೆ ಕಳುಹಿಸಿದ ವಿನಯಾರ್ಥ. ಅದಾಗಿ ಶ್ರೀಮಠಕ್ಕೆ ಪ್ರಾಗಾರಭ್ಯ ನಿಮ್ಮ ಗಡಿಗಳಲ್ಲಿ ಗ್ರಾಮಗಳಲ್ಲಿ ಸಹಾ ಆಚಾರ ವ್ಯವಹಾರ ಪ್ರಾಯಶ್ಚಿತ್ತ ಶಿಷ್ಟಾಚಾರ ಶ್ರೀಚರಣ ಕಾಣಿಕೆ ಗ್ರಾಮ ಭೂಮಿ ತೋಟಮನಿಕೆ ವರ್ತನೆ ವೃತ್ತಾರ ಗ್ರಾಮಗಳು ಭಟಮಾನ್ಯಗಳು ಸಹಾ ವಿರುಪಾಧಿಕ ಸರ್ವಮಾನ್ಯವಾಗಿ ನಡುದು ಬರುತ್ತಾಯಿರುವುದು ಸರಿಯಷ್ಟೆ ಶೃಂಗೇರಿಯವರ ಬಗೆ ಪಲ್ಲಕ್ಕಿ ವೆಂಕಟೇಶಶಾಸ್ತ್ರಿಯು ಈ ಸಂಸ್ಥಾನದಲ್ಲಿ ಆಚಾರ ವಿಚಾರಗಳು ತಾವು ವಿಚಾರಿಸಬೇಕೆಂದು ಶ್ರೀಮುಖವನ್ನು ತೆಗೆದುಕೊಂಡು ಬಂದು ವ್ಯವಹರಿಸಿದ್ದರಿಂದ ಪ್ರಾಗಾರಭ್ಯ ಯಾವ ಮಠಕ್ಕೆ ನಡದು ಬರುತ್ತಾಯಿಧೆ ಯಂಬುದಾಗಿ ವಿಚಾರಿಸಿದಲ್ಲಿ ನಮ್ಮ ದಳವಾಯಿ ಕುಮಾರಪ್ಪಾಜೀಯವರು ದುರ್ಮುಖಿ ಸಂವತ್ಸರದಲ್ಲಿ ಮಧುರೆ ದಂಡಿಗೆ ಚಿತ್ತೈಸಿದಾಗ ಶಿವಗಂಗೆ ವಿದ್ಯಾಶಂಕರ ಭಾರತೀ ಸ್ವಾಮಿಗಳವರು ಕಣಿವೆ ಕೆಳಗಣ ಗಡಿಗಳಲ್ಲಿ ತಮ್ಮ ಶಿಷ್ಯಾರ್ಜನೇ ನಿಮಿತ್ತವಾಗಿ ಚಿತ್ತೈಸಿ ದರ್ಶನವನ್ನು ಕೊಟ್ಟು ತೆರಳಿಬರುವ ಸಮಯದಲ್ಲಿ ಶೃಂಗೇರಿ ಮಠದ ಬ್ರಾಂಹ್ಮರು ಕಾಗದ ಪತ್ರಗಳನ್ನು ತೆಗೆದುಕೊಂಡು ಈ ಸಂಸ್ಥಾನದ ಗಡೀ ಗ್ರಾಮಾಂತರಗಳಲ್ಲಿ ದೀಪಾರಾಧನೆ ಕಾಣಿಕೆ ಶಿಷ್ಟಾಚಾರಗಳು ತಮ್ಮ ಮಠಕ್ಕೆ ಸಲ್ಲತಕ್ಕದ್ದೆಂದು ಬಂದು ಇದ್ದ ಪೂರ್ವದ ಗುರುಸ್ವಾಮಿಗಳವರು ಈ ದೇಶದ ಆಚಾರ ವಿಚಾರಗಳು ಶಿವಗಂಗಾಮಠಕ್ಕೆ ಸಲ್ಲತಕ್ಕದ್ದೆಂಬ ದೇಶವಿಭಾಗಪತ್ರ ಶ್ರೀ ವಿದ್ಯಾಶಂಕರ ಭಾರತೀ ಸ್ವಾಮಿಗಳವರ ಸನ್ನಿಧಿಯಲ್ಲಿ ಇದ್ದದ್ದರಿಂದ ಈ ಸೌಮ್ಯ ಸಂವತ್ಸರದಲ್ಲಿ ಕೊಡ್ಲಿ ನರಸಿಂಹ ಭಾರತೀಗಳಿಗೆ ಮಠದ ಪಾರುಪತ್ತೆಗಾರ್ ಲಕ್ಷ್ಮಣಭಟ್ಟ, ಶಂಕರಭಟ್ಟ, ಶಿವಗಂಗಾಮಠದ ವೀರರಾಘವಭಟ್ಟ ವೆಂಕಟೇಶಶಾಸ್ತ್ರಿ ಶೃಂಗೇರಿಯವರ ಬಗೆ ಪಾಣ್ಯದ ವೆಂಕಟಶಾಸ್ತ್ರಿ, ವಿದ್ಯಾರಣ್ಯಪುರದ ಮಹಾಜನಗಳು ಸಹಾ ತಮತಮಗೆ ಇರುವ ಸಾಧಕಗಳನ್ನು ತೆಗೆದುಕೊಂಡು ಜಿದಲೂರಿಗೆ ಹೋಗಿ ನಿರ್ವಾಣಯ್ಯನವರ ಬಳೀಲಿ ದೇಶಸಂಚಾರ ವ್ಯವಹಾರ ಪ್ರಾಯಶ್ಚಿತ್ತ ಮುಂತಾದವುಗಳು ನಮ್ಮ ಮಠಕ್ಕೆ ಸಲ್ಲಬೇಕೆಂದು ವ್ಯವಹಾರ ಹೇಳಿಕೊಂಡಲ್ಲಿ ಅಲ್ಲಿ ಸಭೆಯವರು ಶೆಟ್ಟಿ ವರ್ತಕರು ಮುಂತಾಗಿ ಇವರ ಕೈಯ್ಯಲ್ಲಿ ಕೈವಾಶಿ ಕಟ್ಟಡಗಳನ್ನು ತೆಗೆದುಕೊಂಡು ವಿಚಾರಿಸಿದಲ್ಲಿ ಮೊದಲು ಸೋಮಶೇಖರೂಪಕರ ದಿವಸದಲ್ಲಿ ವೆಂಗನ್ನ ಸೋಮಯಾಜಿ ಮುಂತಾದ ಸಭೇಯವರು ಸಂಚಾರ ಆಚಾರ ವಿಚಾರ ಮುಂತಾದವುಗಳು ಲಿಖಿತ ಭಕ್ತಿ ಸಾಕ್ಷಿಗಳಿಂದ ಕೊಡ್ಲಿ ನರಸಿಂಹಭಾರತೀ ಸ್ವಾಮಿಗಳು, ಶಿವಗಂಗಾ ಮಠದ ಸ್ವಾಮಿಗಳು ಮುಂತಾದ ಮಠಗಳಿಗೆ ಅನುಭವ ಇದ್ದ ಕಾರಣ ಶೃಂಗೇರಿ ಮಠದವರಿಗೆ ಪುಸ್ತಕಕೋಶ ದೇವತಾರ್ಚನೆ ಮಾತ್ರ ಇಟ್ಟುಕೊಂಡು ಇರುವದೇ ಹೊರತಾಗಿ ದೇಶಸಂಚಾರ ಆಚಾರ ವಿಚಾರಗಳಿಗೆ ಕೆಲಸವಿಲ್ಲ. ಪುಸ್ತಕ ದೇವತಾರ್ಚನೆ ಕೋಶಕ್ಕೆ

ಕೊಡ್ಲಿ ಶಿವಗಂಗೆಯವರು ಅಪೇಕ್ಷಿಸುವ ಕೆಲಸವಿಲ್ಲ ಎಂದು ನಿರ್ವೈಶಿ ಯಿದ್ದಾರಾದ ಕಾರಣ ಶೃಂಗೇರಿ ಬಳಿಯಲ್ಲಿ ಇರುವ ವಿದ್ಯಾರಣ್ಯಪುರದಲ್ಲಿ ಪ್ರಾಯಶ್ಚಿತ್ತಗಳನ್ನು ಕೊಡ್ಲಿ ನರಸಿಂಹ ಭಾರತೀ ಸ್ವಾಮಿಗಳ ಬಳಿಯಲ್ಲಿಯೆ ತೀರಿಶಿ ಇರುವದ್ದರಿಂದ ಶೃಂಗೇರಿ ನರಸಿಂಹ ಭಾರತೀಗಳು ತಾವು ಮಾಡಿಸಬೇಕೆಂದು ವಹಿಸದೆ ಕೊಡ್ಲೀ ಸ್ವಾಮಿಗಳಿಗೆ ಒಪ್ಪಿಶಿದರಾದ ಕಾರಣ ಮೇಲೆ ಕಂಡ ಕೊಡ್ಲಿ ಶಿವಗಂಗೆ ಮಠಗಳಿಗೆ ಸಲ್ಲುವದೆಂದು ನಿರ್ವಾಣೈಯ್ಯನವರ ಹೆಸರಿನಲ್ಲಿಯೂ ಬಿದಲೂ ಶೆಟ್ಟಿ ವರ್ತಕರ ಮುಂತಾದವರ ಹೆಸರಿನಲ್ಲೂ ಮಠದ ಪಾರಪತ್ತೇಗಾರು ಕಾಗದ ಪತ್ರಗಳನ್ನು ತೆಗೆದುಕೊಂಡುಬಂದು ಯಿದ್ದದ್ದರಿಂದಾ ಶಿವಗಂಗೆ ಮಠಕ್ಕೆ ಆಚಾರ ವಿಚಾರಗಳು ಸಲ್ಲುವದೆಂದು ನಿಶ್ಚೈಶಿ ಇಧೆ ಪ್ರಾಕು ಅಮರಗಿರಿ ತಿರುಪತಿಯಲ್ಲಿ ನರಸಿಂಹ ಭಾರತೀಗಳ ಶಿಷ್ಯರು ನರಹರಿ ಭಾರತೀಗಳು ಮುಕ್ತರಾದಲ್ಲಿ ಅವರಿಗೆ ಶಿಷ್ಯ ಪರಂಪರೆ ಇಲ್ಲದ್ದರಿಂದ ಆ ಮಠಕ್ಕೆ ಸಲ್ಲತಕ್ಕ ದೇಶಕೋಶ ಪಾಲಕಿ ಪುಸ್ತಕ ದೇವತಾರ್ಚನೆ ಕೋಶ ಮುಂತಾದಕ್ಕೆ ಶೃಂಗೇರಿ, ಕೊಡ್ಲಿ, ಶಿವಗಂಗೆ ಸ್ವಾಮಿಗಳಿಗೆ ಬ್ರಾಂಹ್ಮರು ತಮ್ಮ ತಮ್ಮ ಕಡೆ ಮಠಗಳಿಗೆ ಸಲ್ಲಬೇಕೆಂದು ಅಂನ್ಯೋನ್ಯವಾಗಿ ಕಲಹಿಶಿಕೊಂಡು ಆಳಿದ ಮಹಾಸ್ವಾಮಿ ಗಳವರ ಸನ್ನಿಧಾನಕ್ಕೆ ಬಂದು ತಮ್ಮ ತಮ್ಮ ವಾಜ್ಮೂಲಗಳನ್ನು ಅರಿಕೆ ಮಾಡಲು ಆಳಿದ ಮಹಾಸ್ವಾಮಿಯವರು ಕಟ್ಟು ಮಾಡಿದ ವಿವರಾ ಅಮರಗಿರಿ ತಿರುಪತಿಯು ನಮ್ಮ ಸಂಸ್ಥಾನವನ್ನು ಹೊಂದಿದ್ದು ಶಿವಗಂಗೆಯವರ ಮಠವು ಈ ಸಂಸ್ಥಾನವನ್ನು ಕೂಡಿದ್ದರಿಂದ ಪರ ಸಂಸ್ಥಾನದವರಿಗೆ ನಾವು ಕೊಡುವುದಿಲ್ಲ ಯಿಲ್ಲಿನ ಶ್ರೇಯೋಲಾಭಕ್ಕೆ ತಗುಲಾಗಿ ಯಿರುವ ಶಿವಗಂಗೆ ಮಠಕ್ಕೆ ಸಲ್ಲತಕ್ಕದ್ದೆಂದು ಈ ಮಠಕ್ಕೆ ಒಪ್ಪಿಸು ಯಂಬದಾಗಿ ಚಲವಪ್ಪಾಜಿಯವರಿಗೆ ಅಪ್ಪಣೆಯಾದ್ದರಿಂದ ಶೂಲಿಗಿರಿದುರ್ಗದ ದಾಸರಾಜೈಯನವರ ಮುಖಾಂತರ ಪಲ್ಲಕ್ಕಿ ದೇವತಾರ್ಚನೆಯು ಶಿವಗಂಗೆ ಮಠಕ್ಕೆ ಸಂತೆಯ ವಿವರಗಳು ಸಹಾ ವಿಚಾರಿಶಿ ಶಿವಗಂಗೆ ಸ್ವಾಮಿಗಳವರು ಬಿದಲೂರು ಪ್ರಾಂತ್ಯಕ್ಕೆ ಸಂಚಾರರ್ಥವಾಗಿ ತೆರಳಿಹೋಗಿ ಯಿದ್ದಲ್ಲಿ ಆ ಮಠದವರು ಛದ್ಮತಿಯಿಂದ ಕೆಲವು ಪದಾರ್ಥಗಳನ್ನು ಅಪಹರಿಸಿಕೊಂಡ ಸಮಾಚಾರ ಕೇಳಲ್ಪಟ್ಟದ್ದರಿಂದ ಪಲ್ಲಕ್ಕಿ ವೆಂಕಟೇಶ ಶಾಸ್ತ್ರಿಗಳನ್ನು ಭದ್ರಪಡಿಸಲು ಅಂಬಾಭಟ್ಟನ ಮುಖಾಂತರ ನಮ್ಮ ವಶಕ್ಕೆ ರಾಮಾಯಣ ಪುಸ್ತಕ ಸ್ಫಟಿಕಲಿಂಗ ಮುಂತಾದ ಕೆಲವು ಪದಾರ್ಥಗಳು ತರಿಶಿ ಕೊಟ್ಟಿದ್ದರಿಂದ ಈ ಬಗೆ ಪದಾರ್ಥಗಳನ್ನು ಶಿವಗಂಗೆ ಮಠಕ್ಕೆ ಒಪ್ಪಿಶಿ ಇಧೆವೆ ಯಾದ ಕಾರಣ ಅರಮನೆ ಶಿಷ್ಟಾಚಾರ ಶ್ರೀಚರಣ ಕಾಣಿಕೆ ಭಟಮಾನ್ಯಗಳು ಸಹ ಶಿವಗಂಗೆ ಮಠಕ್ಕೆ ನಿರುಪಾಧಿಕವಾಗಿ ನಡಶಿಕೊಂಡು ಬರುವದು. ಈ ವುತ್ತರವನ್ನು ನೀವು ನೋಡಿಕೊಂಡು ಇವರಿಗೆ ಜಯರೇಖೆಯಾಗಿ ಇರುವಂತೆ ಪುನಹ ಹಿಂದಕ್ಕೆ ಕೊಡುವದು.

ಮೇಲೆ ದೊಡ್ಡ ಮೊಹರು

ಕೆಳಗೆ ಸಂಣ ಮೊಹರು ಸಹ ಇದೆ.

ಐತಿಹಾಸಿಕ ಮಹತ್ತ್ವವಾದ ಈ ಪತ್ರ ಹಲವು ವಿಷಯವನ್ನು ಸ್ಪಷ್ಟಪಡಿಸುತ್ತದೆ. ದಳವಾಯಿ ದೇವರಾಜಯ್ಯನವರ ಕಾಲ (೧೭೨೪-೫೮) ಅವರ ಆಡಳಿತದ ನಳಸಂವತ್ಸರದ ಅಧಿಕ ಜೇಷ್ಠ ಶುದ್ಧ ೧೩ರಲ್ಲು ಹುಟ್ಟಿದ ಈ ಜಯರೇಖೆ. ಶೃಂಗೇರಿಯವರ ಬಗೆ ಪಲ್ಲಕ್ಕಿ ವೆಂಕಟೇಶಶಾಸ್ತ್ರಿ ಶೃಂಗೇರಿ ಮಠದ ಶ್ರೀಮುಖ ಅರ್ಥಾತ್ ಸ್ವಾಮಿಗಳ ಅಧಿಕೃತ ಪತ್ರ ತೆಗೆದುಕೊಂಡು ಬಂದು ಕಾಣಿಕೆಯನ್ನು ಸಂಗ್ರಹಿಸಲು ಪ್ರಯತ್ನಿಸಿದಾಗ ಸ್ಥಳೀಯ ಆಡಳಿತದವರು ದಳವಾಯಿ ದೇವರಾಜಯ್ಯನವರ ಗಮನಕ್ಕೆ ತಂದಾಗ, ಅರಮನೆ ದಾಖಲೆ ಭಂಡಾರವನ್ನು ಪರಿಶೀಲಿಸಿದಾಗ ದಳವಾಯಿ ಕುಮಾರಪ್ಪಾಜೀಯವರು (೧೬೬೭-೮೨) ದುರ್ಮುಖಿ ಸಂವತ್ಸರದಲ್ಲಿ ಮಧುರೆದಂಡಿಗೆ ಚಿತ್ತೈಶಿದಾಗ ಶಿವಗಂಗೆ ವಿದ್ಯಾಶಂಕರ ಭಾರತೀ ಸ್ವಾಮಿಗಳವರು ಕಣಿವೇ ಕೆಳಗಣ ಗಡಿಗಳಲ್ಲಿ ತಮ್ಮ ಶಿಷ್ಯಾರ್ಜನೇ ನಿಮಿತ್ತವಾಗಿ ಚಿತ್ತೈಶಿ ದರ್ಶನವನ್ನು ಕೊಟ್ಟು ತೆರಳಿಬರುವ ಸಮಯದಲ್ಲಿ, ಶೃಂಗೇರಿ ಮಠದ ಬ್ರಾಹ್ಮಣರು ಕಾಗದ ಪತ್ರಗಳನ್ನು ತೆಗೆದುಕೊಂಡು ಬಂದು ಈ ಎಲ್ಲಾ ಕಾಣಿಕೆ ನಮಗೆ ಸಲ್ಲಬೇಕೆಂದು ತಗಾದೆ ತೆಗೆದುದರಿಂದ, ಈ ಹಿಂದೆ ಆದ 'ದೇಶ ವಿಭಾಗ ಪತ್ರ' ಶ್ರೀ ವಿದ್ಯಾಶಂಕರ ಭಾರತೀ ಸ್ವಾಮಿಗಳವರ ಹತ್ತಿರ ಇದ್ದುದರಿಂದ. ಈ ವ್ಯಾಜ್ಯವನ್ನು ಪರಿಹರಿಸಲು ಶೃಂಗೇರಿಮಠ ಇದ್ದದ್ದು 'ಕೆಳದಿ ಸಂಸ್ಥಾನದಲ್ಲಿ' ಆದಕಾರಣ ಕೊಡ್ಲಿ ನರಸಿಂಹ ಭಾರತೀಗಳ ಬಗೆ ಮಠದ ಪಾರುಪತ್ತೆಗಾರ್ ಲಕ್ಷ್ಮಣಭಟ್ಟ, ಶಂಕರಭಟ್ಟ, ಶಿವಗಂಗಾ ಮಠದ ವೀರರಾಘವಭಟ್ಟ, ವೆಂಕಟೇಶಶಾಸ್ತ್ರಿ, ಶೃಂಗೇರಿಯವರ ಬಗೆ ಪಾಣ್ಯದ ವೆಂಕಟಶಾಸ್ತ್ರಿ ಮತ್ತು ವಿದ್ಯಾರಣ್ಯಪುರದ ಮಹಾಜನಗಳು ಸಹ ತಮತಮಗೆ ಇರುವ ಸಾಧಕಗಳನ್ನು ತೆಗೆದುಕೊಂಡು ಬಿದಲೂರಿಗೆ ಹೋಗಿ ಅಲ್ಲಿ ನಿರ್ವಾಣೈಯ್ಯನವರ ನಿರ್ವಾಣ ಮೃತ್ರಿಯಲ್ಲಿ ತಮ್ಮ ಬಿನ್ನಹವನ್ನು ಹೇಳಿಕೊಂಡಾಗ. ನಿರ್ವಾಣ ಮಂತ್ರಿಯು ಸಭೆಯಲ್ಲಿ ಇದ್ದ ಶೆಟ್ಟಿ ವರ್ತಕರು ಈ ಎಲ್ಲಾ ಮಠದ ಬ್ರಾಹ್ಮಣರು ತಂದಿದ್ದ 'ಕೈವಾಲೆ ಕಟ್ಟಡಗಳನ್ನು' (ಮೂಲ ದಾಖಲೆಯ ಓಲೆಗರಿ ಕಟ್ಟುಗಳು ಎಂದು ಇಲ್ಲಿ ಅರ್ಥೈಸಬೇಕಾಗುತ್ತದೆ)

ಕೆಳದಿ ಮೊದಲ ಸೋಮಶೇಖರನಾಯಕರ (೧೬೬೩-೧೬೭೨) ಕಾಲದಲ್ಲಿ 'ವೆಂಗನ್ನ ಸೋಮಯಾಜಿ' ಮುಂತಾದ ಸಭೆಯವರು 'ಸಂಚಾರ ಆಚಾರ-ವಿಚಾರ ಮುಂತಾದವು ಲಿಖಿತ ಭಕ್ತಿ ಸಾಕ್ಷಿಗಳಿಂದ ಕೂಡ್ಲಿ ನರಸಿಂಹ

ಭಾರತೀ ಸ್ವಾಮಿಗಳು, ಶಿವಗಂಗಾ ಮಠದ ಸ್ವಾಮಿಗಳು ಮುಂತಾದ ಮಠಗಳಿಗೆ ಅನುಭವ ಇದ್ದ ಕಾರಣ ಶೃಂಗೇರಿ ಮಠದವರಿಗೆ 'ಪುಸ್ತಕ ಕೋಶ, ದೇವತಾರ್ಚನೆ' ಇಟ್ಟುಕೊಂಡು ಇರುವುದೇ ಹೊರತಾಗಿ ದೇಶಸಂಚಾರ ಆಚಾರಗಳಿಗೆ ಕೆಲಸವಿಲ್ಲ ಎಂದು ನಿರ್ಣಯಿಸಿದ್ದಾರೆ. ಅದೇ ರೀತಿ 'ಪುಸ್ತಕ ದೇವತಾರ್ಚನೆ ಕೋಶಕ್ಕೆ' ಕೂಡ್ಲಿ, ಶಿವಗಂಗೆಯವರು ಅಪೇಕ್ಷಿಸಬಾರದು ಅರ್ಥಾತ್ ಆಸೆ ಪಡಬಾರದು.

ಶೃಂಗೇರಿ ಬಳಿಯಲ್ಲಿ ಇರುವ ವಿದ್ಯಾರಣ್ಯಪುರದಲ್ಲಿ ಪ್ರಾಯಶ್ಚಿತ್ತಗಳನ್ನು ಕೂಡ್ಲಿ ನರಸಿಂಹ ಭಾರತೀ ಸ್ವಾಮಿಗಳ ಬಳಿಯಲ್ಲಿಯೆ ತೀರಿಸಿ ಇರುವುದರಿಂದ ಶೃಂಗೇರಿ ನರಸಿಂಹ ಭಾರತೀಗಳು ತಾವು ಮಾಡಬೇಕೆಂದು ವಹಿಸದೆ ಕೂಡ್ಲಿ ಸ್ವಾಮಿಗಳಿಗೆ ಒಪ್ಪಿಸಿದರಾದ ಕಾರಣ ಈ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ ಕಾಣಿಕೆ ಸಂಗ್ರಹಿಸುವ ಹಕ್ಕು ಕೂಡ್ಲೀ, ಶಿವಗಂಗೆ ಮಠಗಳಿಗೆ ಸಲ್ಲುವದೆಂದು ನಿವಾಣೈಯ್ಯನವರ ಹೆಸರಿ ನಲ್ಲಿಯೂ ಬಿದಲೂರು ಶೆಟ್ಟಿ ವರ್ತಕರ ಹೆಸರಿನಲ್ಲಿ ಹೊರಟ ನಿರೂಪದ ಕಾಗದವನ್ನು ಮಠದ ಪಾರುಪತ್ತೇಗಾರು ತಂದದ್ದರಿಂದ ಶಿವಗಂಗೆ ಮಠಕ್ಕೆ ಆಚಾರ ವಿಚಾರದ ಕಾಣಿಕೆ ಸಲ್ಲುವದೆಂದು ನಿಶ್ಚಯಿಸಲಾಯಿತು.

ಅಮರಗಿರಿ ತಿರುಪತಿಯಲ್ಲಿ ನರಸಿಂಹ ಭಾರತೀಗಳ ಶಿಷ್ಯರು ನರಹರಿ ಭಾರತೀಗಳು ಮುಕ್ತರಾಗಿ ಅವರು ಇದ್ದಾಗಲೇ ಶಿಷ್ಯಸ್ವೀಕಾರ ಮಾಡದೆ ಇದ್ದುದರಿಂದ ಆ ಮಠದ ದೇಶ-ಕೋಶ-ಪಾಲಕಿ-ಪುಸ್ತಕ-ದೇವತಾರ್ಚನೆ ಕೋಶ ಮುಂತಾದವನ್ನು ಶೃಂಗೇರಿ, ಕೂಡ್ಲೀ, ಶಿವಗಂಗೆ ಸ್ವಾಮಿಗಳ ಬಗೆ ಬ್ರಾಹ್ಮಣರು ನಮ್ಮ ಮಠಕ್ಕೆ ಸಲ್ಲಬೇಕು ಎಂದು ಪರಸ್ಪರ ಸೌಮ್ಯವಾಗಿ ಕಲಹವನ್ನು ಮಾಡಿಕೊಂಡಿದ್ದನ್ನು ಕಂಡು ಆಳಿದ ಮಹಾಸ್ವಾಮಿಗಳವರ ಸನ್ನಿಧಾನಕ್ಕೆ ಅರ್ಥಾತ್ ಮೈಸೂರು ದೊರೆಗಳ ಹತ್ತಿರ ಬಂದ ಈ ಎಲ್ಲಾ ಮಠದ ಬ್ರಾಹ್ಮಣರು ಅರಿಕೆ ಮಾಡಿಕೊಂಡರು. ಈ ಎಲ್ಲಾ ವಿಷಯವನ್ನು ಪರಾಂಪರಿಸಿದ ಆಳಿದ ಮಹಾಸ್ವಾಮಿಗಳು ಈ ರೀತಿ ಅಪ್ಪಣೆ ಮಾಡಿದರು. 'ಅಮರಗಿರಿ ತಿರುಪತಿಯು ನಮ್ಮ ಸಂಸ್ಥಾನವನ್ನು ಕೂಡಿದ್ದರಿಂದ ಪರಸಂಸ್ಥಾನದವರಿಗೆ ನಾವು ಕೊಡುವುದಿಲ್ಲ ಯಿಲ್ಲಿನ ಶ್ರೇಯೋಲಾಭಕ್ಕೆ ತಗುಲಾಗಿ ಯಿರುವ ಶಿವಗಂಗೆ ಮಠಕ್ಕೆ ಸಲತಕ್ಕದೆಂದು ಈ ಮಠಕ್ಕ ಒಪ್ಪಿತು ಯಂಬುದಾಗಿ ಚಲುವಪ್ಪಾಜಿಯವರಿಗೆ ಅಪ್ಪಣೆಯಾದ್ದರಿಂದ ಶೂಲಗಿರಿ ದುರ್ಗದ ದಾಸರಾಜೈಯವರ ಮುಖಾಂತರ ಪಲ್ಲಕ್ಕಿ ದೇವತಾರ್ಚನೆಯು ಶಿವಗಂಗೆ ಮಠಕ್ಕೆ ಸಂತೆಂಬ ವಿವರಗಳು ಸಹಾ '....'

ಅಮರಗಿರಿ ತಿರುಪತಿ ಮಠದ ಸಮಸ್ಥ ಅಸ್ತಿ ಶಿವಗಂಗೆ ಮಠವನ್ನು ಸೇರಿತು ಚಲುವಪ್ಪಾಜಿ, ಮೈಸೂರು ದೊರೆಗಳ ಸರ್ಕಾರಿ ಅಧಿಕಾರಿ ಆತನ ಬಗ್ಗೆ ಹೆಚ್ಚಿನ ಮಾಹಿತಿ ತಿಳಿದಿಲ್ಲ. ಶೂಲಗಿರಿದುರ್ಗ ಅಂದರೆ ಶಿವಗಂಗೆ ಸನಿಹ ಇರುವ ನಿಜಗಲ್ಲಿನ ಇನ್ನೊಂದು ಹೆಸರು, ಈ ಹಿಂದೆ ಪ್ರಮುಖ ಆಡಳಿತ ಕೇಂದ್ರವಾಗಿತ್ತು ಇಲ್ಲಿ ಇದ್ದ ಸರ್ಕಾರಿ ಅಧಿಕಾರಿ ದಾಸರಾಜೈಯ್ಯ.

ಶಿವಗಂಗೆ ಸ್ವಾಮಿಗಳ ಬಿದಲೂರು ಪ್ರಾಂತ್ಯಕ್ಕೆ ಸಂಚಾರಾರ್ಥವಾಗಿ ಹೋದಾಗ 'ಆ ಮಠದವರು ಛದ್ಮನೆಯಿಂದ ಕೆಲವು ಪದಾರ್ಥಗಳನ್ನು ಅಪಹರಿಸಿಕೊಂಡ ಸಮಾಚಾರ ಕೇಳಲ್ಪಟ್ಟದ್ದರಿಂದ ಪಲ್ಲಕ್ಕಿ ವೆಂಕಟೇಶಾಸ್ತ್ರಿಗಳನ್ನು ಭದ್ರಪಡಿಸಲು' ಈ ಮೇಲಿನ ಸಾಲುಗಳಿಂದ ಅರ್ಥವಾಗುವುದು ದೇನೆಂದರೆ ಶೃಂಗೇರಿ ಮಠಕ್ಕೆ ಸಂಬಂಧಪಟ್ಟ ಪಲ್ಲಕ್ಕಿ ವೆಂಕಟೇಶಶಾಸ್ತ್ರಿ ಶಿವಗಂಗೆ ಸ್ವಾಮಿಗಳಿಗೆ ಸಂಬಂಧಪಟ್ಟ ಬಹಳ ಬೆಲೆ ಬಾಳುವ ವಸ್ತುಗಳನ್ನು ಅಪಹರಿಸಿದನು. ತಿಳಿದು ಆತನನ್ನು ಹಿಡಿದು ವಿಚಾರಣೆ ಮಾಡಿಸಲು ಅಂಬಾಭಟ್ಟನ ಮೂಲಕ ರಾಮಾಯಣ ಪುಸ್ತಕ ಸ್ಫಟಿಕಲಿಂಗ ಮುಂತಾದ ಕೆಲವು ಪದಾರ್ಥಗಳನ್ನು ತರಸಿ ಕೊಟ್ಟಿದ್ದರಿಂದ ಅದು ಎಲ್ಲವನ್ನು ಶಿವಗಂಗೆ ಮಠಕ್ಕೆ ಒಪ್ಪಿಸಿದ್ದೇನೆ ಎಂದು ದಳವಾಯಿ ದೇವರಾಜಯ್ಯನವರು ಈ ಪತ್ರದಲ್ಲಿ ಸ್ಪಷ್ಟವಾಗಿ ತಿಳಿಸಿದ್ದಾರೆ. ಅಲ್ಲದೆ ತಮ್ಮ ಅಧಿಕಾರದಿಂದ ಜಯರೇಖೆಯನ್ನು ಬರಸಿ ಶ್ರೀ ಶಿವಗಂಗಾ ಮಠಕ್ಕೆ ಕೊಟ್ಟಿದ್ದಾರೆ. ಅದರಲ್ಲಿ ಸ್ಪಷ್ಟವಾಗಿ 'ಅರಮನೆ ಶೀಮೆಯಲ್ಲಿ ನಡೆಯುವ ಗ್ರಾಮ ಭೂಮಿ ತೋಟ ತುಡಿಕೆ ಶಿಷ್ಟಾಚಾರ ಶ್ರೀ ಚರಣ ಕಾಣಿಕೆ ಭಟಮಾನ್ಯಗಳು ಸಹ ಶಿವಗಂಗೆ ಮಠಕ್ಕೆ ನಿರುಪಾಧಿಕವಾಗಿ ನಡಶಿಕೊಂಡು ಬರುವುದು ಈ ಪುಸ್ತಕವನ್ನು ನೀವು ನೋಡಿಕೊಂಡು ಇವರಿಗೆ ಜಯರೇಖೆಯಾಗಿ ಇರುವಂತೆ ಸ್ವತಹ ಹಿಂದಕ್ಕೆ ಕೊಡುವುದು' ಎಂದಿದೆ ಜಯರೇಖೆ ಪ್ರಾರಂಭದಲ್ಲಿ ದೊಡ್ಡ ಮೊಹರು ಕೆಳಗೆ ಸಣ್ಣಮೊಹರು ಇದೆ.

ಪತ್ರ ೪

ದೊಡ್ಡ ನವಾಬರ ವಟ್ಟು ರಹದಾರಿ ನಕಲು

ವಿಷು ಸಂವತ್ಸರದ ಫಾಲ್ಗುಣ ಶುದ್ದ ೧೫ ಲ್ಲು

ಶ್ರೀಮತು ಸಕಲಗುಣ ಸಂಪನ್ನರಾದಂತ್ಥ ಅರಮನೆ ಶೀಮೆ ಗಡಿಗಳು ಗುರಿಕಾರ್ರು ಪಾರುಪತ್ತೇಗಾರ್ರಿಗೆ ಸಹ ಸಲ್ಲಾಂ ಅದಾಗಿ

ಶಿವಗಂಗೆ ಗಂಗಾಧರಭಾರತೀ ಸ್ವಾಮಿಗಳವರ ಮಠಕ್ಕೆ ಅರಮನೆ ಹವಾಲಿ ಗಡಿಗಳಲ್ಲಿ ನಡದು ಬರುವಂತ ಗ್ರಾಮ ಭೂಮಿಗಳು ತೋಟ ಸ್ವಾಸ್ಥ್ಯ ಅಟ್ಟುವಳಿ ಕಂದಾಚಾರ ವರ್ತನೆ ಈ ವುತ್ತಾರ ಗ್ರಾಮಗಳು ಷಣಕಟ್ಟಿನಲ್ಲಿ ನಡಿಯುವ ಮರಿಯೊದೆಗಳು ಸಹ ನಿರುಪಾಧಿಕವಾಗಿ ನಡಸಿಕ್ಕೊಂಡು ಬರುವದು.

ಶಿಷ್ಟಾಚಾರ ಶ್ರೀಚರಣಕಾಣಿಕೆ ಮುಂತಾದ ಮರಿಯಾದೆ ಗಳು ಅರಮನೆ ಶೀಮೆಯಲ್ಲಿ ಶಿವಗಂಗಾಮಠಕ್ಕೆ ನಡಿಯತಕ್ಕ ದ್ದಾದ್ದರಿಂದ ಶೃಂಗೇರಿ ಮಠದವರಿಗೆ ಆಪ್ರದ ಕೊಡದೆ ಮಠದ ಹವಾಲಿಗೆ ವುಂಟಾದ್ದನ್ನೆಲ್ಲಾ ಅಡ್ಡಿ ವಿದ್ದೂರ ಮಾಡದೆ ಮರ್‍ಯಾದೆ ಗೊಡಿ ನಡಸಿಕ್ಕೊಂಡು ಬರುವುದು ಪುನಹ ಯಿಜೌ ಬಾರ ದಂತೆ ನಡೆಸಿಕ್ಕೊಂಡು ಬರುವದು

ಈ ಬಿಳಿ ಶಾಯಿ ಮೋಹರಾಗಿ ಇದೆ.

ದೊಡ್ಡ ನವಾಬರು ಅಂದರೆ ಹೈದರಾಲಿ (೧೭೬೧–೧೭೮೨), ವಿಷು ಸಂವತ್ಸರ ಫಾಲ್ಗುಣ ಶುದ್ಧ ೧೫ಲ್ಲು ಹೊರಡಿಸಿದ ರಹದಾರಿ ಪತ್ರದಲ್ಲಿ ಸ್ಪಷ್ಟವಾಗಿ ಶಿವಗಂಗೆ ಶ್ರೀಮಠದ ಗಂಗಾಧರಭಾರತೀ ಸ್ವಾಮಿಗಳ ಸಂಚಾರದ ಸಮಯದಲ್ಲಿ ಎಲ್ಲಾ ವಿಧವಾದ ಶಿಷ್ಟಾಚಾರ ಶ್ರೀಚರಣಕಾಣಿಕೆ ಮುಂತಾದ ಮರ್‍ಯಾದೆಗಳು ನಮ್ಮ ಅರಮನೆ ಸೀಮೆಯಲ್ಲಿ ಶಿವಗಂಗಾ ಮಠಕ್ಕೆ ನಡೆಯಬೇಕು ಯಾವ ಕಾರಣಕ್ಕೂ ಶೃಂಗೇರಿ ಮಠದವರಿಗೆ ಕಾಣಿಕೆ ಸಂಗ್ರಹಕ್ಕೆ ಅವರಕಾಶ ಕೊಡಬಾರದು ಎಂದು ಅಪ್ಪಣೆ ಮಾಡಿ ರಹದಾರಿ ಪತ್ರವನ್ನು ನೀಡಿದ್ದಾರೆ.

ಪತ್ರ ೭

ದಿವಾರ್ಣ ಪೂರ್ಣಯ್ಯನವರು ಕೊಡ್ಲಿ ಶಂಕರಭಾರತೀ ಸ್ವಾಮಿಗಳಿಗೆ ಬರದ ವಿಜ್ಞಾಪನಾ ಪತ್ರಿಕೆ ನಕಲು

ಶ್ರೀಮತ್ಸರ ಮಹಂಪೇತ್ಯಾದಿ ಸಮಸ್ತ ಬಿರುದಾಂಕಿತ ಕೊಡ್ಲಿ ಶಂಕರಭಾರತೀ ಸ್ವಾಮಿಗಳವರ ಚರಣ ಸನ್ನಿಧಾನಂ ಗಳಿಗೆ

ಕ್ರೋಧನ ಸಂವತ್ಸರದ ಫಾಲ್ಗುಣ ಬಹುಳ ೮ಯಲ್ಲು ದಿವಾರ್ಣ ಪೂರ್ಣಯ್ಯನು ಮಾಡುವ ವಿಜ್ಞಾಪನಾ ಅಪ್ಪಣೆ ಕೊಟ್ಟು ಕಳುಹಿಸಿದ ಫಲ ಮಂತ್ರಾಕ್ಷತೆ ರಾಯಸ ಮುಟ್ಟಿ ಸಕಲ ವಿವರವು ತಿಳಿಯಾಯಿತು. ಬೆಂಗಳೂರಿಗೆ ಬಂದಿರು ವಂತಾವರು ಶೃಂಗೇರಿಯಲ್ಲಿ ಇದ್ದುಕೊಂಡು ಶ್ರೀ ಶಾರದಾ ಪೂಜೆ ಮಾಡಿಕೊಂಡು ಇರಬೇಕು ನೀವುಗಳು ಯಾವತ್ತು ಸಕಲ ದೇಶಗಳಲ್ಲು ಸಂಚಾರ ಮಾಡಬೇಕೆಂದು ನೇಮಕವಾಗಿ ಇದೆ ಯಂಬದಾಗಿ ಶ್ರೀಮುಖ ಅಪ್ಪಣೆ ಕೊಟ್ಟು ಕಳುಹಿಸಿದ ಬಗ್ಯೆ ಈಗ ಪೂರ್ವದ ಮೇರೆಗೆ ಶೃಂಗೇರಿಯಲ್ಲಿ ದೇವತಾ ರಾಧನೆ ಮಾಡಿಕೊಂಡು, ಯಿರುವ ಬಗ್ಯು ದೇಶಗಳ ಮೇಲೆ ನೂತನ ಪ್ರಸಕ್ತಿಗಳು ಮಾಡಲಿಕ್ಕೆ ಕೆಲಸವಿಲ್ಲವೆಂಬದಾಗಿ ಶೃಂಗೇರಿ ಸ್ವಾಮಿಗಳಿಗೆ ಬರಶಿ ಕಳುಹಿಸಿ ಇದ್ದೀತು ತಾವುಗಳು ಸಕಲ ದೇಶಗಳಲ್ಲಿಯು ಸಂಚಾರ ಮಾಡಿಕೊಂಡು ತಮ್ಮ ಶಿಷ್ಯರ ಮೇಲೆ ಅಬಿಡ ವಿಚಾರ ಪ್ರಾಯಶ್ಚಿತ್ತಗಳು ಮಾಡತಕ್ಕದ್ದು ಯುಕ್ತವೇ ಸರಿ ಇಂತಿ ವಿಜ್ಞಾಪನೆ

ಈ ಪತ್ರ ನೇರವಾಗಿ ಶಿವಗಂಗಾ ಶ್ರೀ ಮಠಕ್ಕೆ ಸಂಬಂಧ ಪಟ್ಟದ್ದು ಅಲ್ಲ. ಕೊಡ್ಲಿ ಶಂಕರಭಾರತೀ ಸ್ವಾಮಿಗಳವರಿಗೆ ದಿವಾನ್ ಪೂರ್ಣಯ್ಯನವರು (೧೭೪೯–೧೮೧೧) ಬರೆದದ್ದು ಶಿವಗಂಗಾಶ್ರೀಮಠ ಕೊಡ್ಲೀ ಶೃಂಗೇರಿ ಮಠದ ಶಾಖಾ ಮಠವಾಗಿ ಅಥವಾ ಸಮಾನ ಮನಸ್ಯ ಮಠವಾಗಿ ಸೇವೆ ಸಲ್ಲಿಸುತ್ತಾ ಇತ್ತು. ಈ ಪತ್ರದ ಮುಖ್ಯ ವಿಷಯ ಶೃಂಗೇರಿ ಮಠದವರು ಬೆಂಗಳೂರಿಗೆ ಪಾದಕಾಣಿಕೆ ಸಂಗ್ರಹಕ್ಕೆ ಬಂದಿರುವುದನ್ನು ಕೊಡ್ಲೀ ಶಂಕರಭಾರತೀ ಸ್ವಾಮಿಗಳು ದಿವಾನರ ಗಮನಕ್ಕೆ ತಂದಿದ್ದಾರೆ. ಈ ರಾಯಸವನ್ನು ಕಂಡ ಪೂರ್ಣಯ್ಯನವರು ಶೃಂಗೇರಿಯಲ್ಲಿ ದೇವತಾರಾಧನೆ ಮಾಡಿಕೊಂಡು ಇರಬೇಕು ದೇಶಗಳ ಮೇಲೆ ನೂತನ ಪ್ರಸಕ್ತಿ ಮಾಡಬಾರದು ಎಂದು ಶೃಂಗೇರಿ ಸ್ವಾಮಿಗಳಿಗೆ ಬರೆದು ತಿಳಿಸಿರುವುದನ್ನು ಈ ಪತ್ರ ತಿಳಿಸುತ್ತದೆ.

ಪತ್ರ ೧೨

ದೊಡ್ಡ ಮೊಹರು ಇಥೆ

ಶ್ರೀಮತ್ಸರಮಹಂತ ಪರಿವ್ರಾಜಕಾಚಾರ್ಯ ಪದವಾಕ್ಯ ಪ್ರಮಾಣ ಪಾರಾವಾರ ಪಾರೀಣ ಯಮ ನಿಯಮಾಸವ ಪ್ರಾಣಾಯಾಮ ಪ್ರತ್ಯಾಹಾರ ಧ್ಯಾನ ಧಾರಣ ಸಮಾಧ್ಯಷ್ಟಾಂಗಯೋಗಾನುಷ್ಠಾನ ನಿಷ್ಠ ತಪಶ್ಚಕ್ರವರ್ತ್ಯನಾದ್ಯವಿಛಿನ್ನ ಗುರುಪರಂಪರಾ ಪ್ರಾಪ್ತ ಷಡ್ದರ್ಶನ ಸ್ಥಾಪನಾಚಾರ್ಯ ವ್ಯಾಖ್ಯಾನ ಸಿಂಹಾಸನಾಧೀಶ್ವರ ಸಕಲವೇದಾರ್ಥ ಪ್ರಕಾಶಕ ಸಾಂಖ್ಯತ್ರಯಿಾ ಪ್ರತಿಪಾಲಕ ಸಕಲನಿಗಮಾಗಮ ಸಾರಹೃದಯ ವೈದಿಕಮಾರ್ಗ ಪ್ರವರ್ತಕ ಸರ್ವತಂತ್ರ ಸ್ವತಂತ್ರಾದಿ ರಾಜಧಾನೀ ವಿದ್ಯಾನಗರ ಮಹಾರಾಜಧಾನೀ ಕರ್ನಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯ ಶ್ರೀಮದ್ರಾಜಾಧಿರಾಜ ಗುರುಭೂಮಂಡಲಾಚಾರ್ಯ ತುಂಗಭದ್ರಾತೀರವಾಸ ಋಶ್ಯಶೃಂಗ ಪುರವರಾಧೀಶ್ವರ ಶೃಂಗೇರಿ ವಿದ್ಯಾಶಂಕರ ದೇವದಿವ್ಯ ಶ್ರೀಪಾದಪದ್ಮಾರಾಧಕ ಶೃಂಗೇರಿ ಶ್ರೀನರಸಿಂಹಭಾರತೀ ಸ್ವಾಮಿನಾಂ ಕರಕಮಲ ಸಂಜಾತ ಶೃಂಗೇರಿ ಶ್ರೀ ಜಗದ್ಗುರು ಶ್ರೀಶಂಕರ ಭಾರತೀ ಸ್ವಾಮಿಭಿಃ

ಅಸ್ಮದತ್ಯಂತ ಪ್ರಿಯಶಿಷ್ಯರಾದ ಬೆಂಗಳೂರು ಮಠಮುದ್ರೆ ಕೈಪ್ರ ಚಂದ್ರಶೇಖರ ಶಾಸ್ತ್ರಿ ಮುಂತಾದ ಸಭೆಯವರಿಗೆ ತ್ರಿಸಂಧ್ಯಾ ಕಾಲದಲ್ಲಿ ಆಶೀರ್ವಾದ ಪೂರ್ವಕವಾಗಿ ಮಾಡುವ ನಾರಾಯಣ ಸ್ಮರಣ ಶ್ರೀಮುಖ ಸಂವತ್ಸರದ ಜೇಷ್ಠ ಶುದ್ಧ ೫ ನಿರುಥಕ್ಕೆ ತುಂಗಭದ್ರಾ ತೀರ ಕೂಡಲೀ ಸ್ಥಳದಲ್ಲಿ ಇಥವ ಯಾದ ಕಾರಣ ಶ್ರೇಯೋಭಿ ವೃಧ್ಯರ್ಥವಾಗಿ ಶೃಂಗೇರೀ ಶ್ರೀಧರಲಕ್ಷ್ಮೀ ನರಸಿಹ್ಮಶಾಸ್ತ್ರಿ ಸಂಗಡ ಫಲಮಂತ್ರಾಕ್ಷತೆ ಅಪ್ಪಣೆ ಕೊಟ್ಟು ಕಳುಹಿಸಿದವ ತೆಗೆದುಕೊಂಬುವದು ಸಾಂಪ್ರತ.

ನೀವುಗಳು ಕಳೆದ ವೈಶಾಖ ಶುದ್ಧ ೩ಯಲ್ಲು ಬರಕೊಂಡ ವಿಜ್ಞಾಪನಾ ಪತ್ರ ಸನ್ನಿಧಾನಕ್ಕೆ ತಲಪಿ ಅಭಿಪ್ರಾಯ ಶೃತವಾಯ್ತು. ಶ್ರೀಶಿವಗಂಗಾ ಮಠದ ವಿಷಯದಲ್ಲಿ ಶೃಂಗೇರಿಯಲ್ಲಿರುವ ಮಠದವರು ಪ್ರವೇಶ ಮಾಡುವದಕ್ಕೆ ಯೆಷ್ಟು ಮಾತ್ರವೂ ಕಾರಣ ಯಿರುವುದಿಲ್ಲ. ಶೃಂಗೇರಿಯಲ್ಲಿ ಯಿರುವ ಮಠದವರು ಸ್ಥಳದಲ್ಲಿಯೆ ಯಿದ್ದುಕೊಂಡು ಶ್ರೀಶಾರದಾಮ್ಮನವರ ಪೂಜೆ ಮಾಡಿಕೊಂಡು ಯಿರಬೇಕೆಂತಲೂ ನಮ್ಮ ಸಂಸ್ಥಾನ ಮುಂತಾದವರೆಲ್ಲ ದೇಶಸಂಚಾರ ಮಾಡಿಕೊಂಡು ಶಿಷ್ಯರಿಗೆ ಜ್ಞಾನೋಪದೇಶ ಮಾಡಬೇಕೆಂದು ನಮ್ಮ ಪೂರ್ವಾಚಾರ್ಯರವರು ನಿಬಂಧನೆ ಮಾಡಿಯಿರುವುದಲ್ಲದೆ ಪ್ರಭುತ್ವ ಮಾಡೂವದು ಕೂಡಾ ಹುಕ್ಕುಂಗಳು ಕೊಟ್ಟು ಯಿರುತ್ತಾರೆ ಅಂಥಾ ಹುಕ್ಕುಂ ನಕಲುಗಳು ಸದ್ಯ ಯಿಾ ಲಕ್ಷ್ಮೀನರಸಿಂಹಶಾಸ್ತ್ರಿ ಬಳೀಗೆ ಅಪ್ಪಣೆ ಕೊಟ್ಟು ಕಳುಹಿಸುತ್ತಾ ಯಿಧೆ ಅದರಿಂದ ಕ್ಷುದ್ರ ಜನರಿಗೆ ಅವಕಾಶ ಕೊಡದೆ ಪೂರ್ವ ಪದ್ಧತೀ ಪ್ರಕಾರ ನೀವುಗಳು ನಡೆಕೊಳ್ಳುತ್ತಾ ಬಂದಲ್ಲಿ ಶ್ರೇಯಸ್ಸಿಗೆ ಕಾರಣವಾಗಿಯಿರುತ್ತದೆ. ಪೂರ್ವಾರಭ್ಯ ಸಂಸ್ಥಾನಕ್ಕೆ ಮುಖ್ಯ ಸಾಭಿಮಾನಿಗಳಾಗಿ ಯಿರುವಲ್ಲಿ ವಿಶೇಷ ನಿರೂಪಿಸ ತಕ್ಕದ್ದೇನು ಯಿಧೆ.

ಇತಿ ನಾರಾಯಣ ಸ್ಮರಣೆಯೆಂದು ದಸ್ಕತ್ತು
ಶಿಖಾ ಸಣ್ಣ ಮೊಹರು ಅಗಿ ಇದೆ.

ಈ ಪತ್ರ ಕೊಡಲೀ ನರಸಿಂಹಭಾರತೀ ಸ್ವಾಮಿಗಳ ಕರಕಮಲ ಸಂಜಾತರಾದ [ಕೊಡ್ಲೀ] ಶೃಂಗೇರಿ ಶ್ರೀ ಜಗದ್ಗುರು ಶ್ರೀ ಶಂಕರ ಭಾರತೀಸ್ವಾಮಿಗಳು ಬೆಂಗಳೂರು ಮಠ ಮುದ್ರೆ ಕೈಪು ಚಂದ್ರಶೇಖರಶಾಸ್ತ್ರೀ ಮುಂತದ ಸಭೆಯವರಿಗೆ ಬರೆದ ಆಶೀರ್ವಾದ ಪತ್ರ. ಈ ಪತ್ರವನ್ನು ಶ್ರೀಮುಖಸಂವತ್ಸರದ ಜೇಷ್ಠ ಶುದ್ಧ ೫ ರಂದು ಕೊಡಲೀಯಿಂದ ಬರೆದ ಈ ಆಶೀರ್ವಾದ ಪತ್ರವನ್ನು ಶೃಂಗೇರಿ ಶ್ರೀಧರ ಲಕ್ಷ್ಮೀನರಸಿಮ್ಹಶಾಸ್ತ್ರಿ ಮುಖಾಂತರ ಫಲಮಂತಾಕ್ಷತೆ ಸಮೇತ ಕಳುಹಿಸಲಾಗಿದೆ.

ಈ ಹಿಂದೆ ಬೆಂಗಳೂರು ಮಠಮುದ್ರೆಯವರು ಮತ್ತು ಭಕ್ತಾದಿಗಳು ವೈಶಾಖ ಶುದ್ಧ ಇಲ್ಲು ಬರೆದುಕೊಂಡ ವಿಜ್ಞಾಪನಾ ಪತ್ರಕ್ಕೆ ಸನ್ನಿಧಾನದಿಂದ ಪತ್ರದಲ್ಲಿ ಶೃಂಗೇರಿ ಮಠದವರು ಶೃಂಗೇರಿಯಲ್ಲಿಯೆ ಇದ್ದುಕೊಂಡು ಶ್ರೀಶಾರದಮ್ಮನವರ ಪೂಜೆ ಮಾಡಿಕೊಂಡು ಇರಬೇಕೆಂದು ನಮ್ಮ ಸಂಸ್ಥಾನ ಮುಂತಾದವರೆಲ್ಲ ದೇಶಸಂಚಾರ ಮಾಡಿಕೊಂಡು ಶಿಷ್ಯರಿಗೆ ಜ್ಞಾನೋಪದೇಶ ಮಾಡಬೇಕೆಂದು ನಮ್ಮ ಪೂರ್ವಾಚಾರ್ಯರವರು ನಿಬಂಧನೆ ಮಾಡಿ ಇರುವುದಲ್ಲದೆ ಪ್ರಭುತ್ವ ಮಾಡುವರು ಕೂಡ ನೀಡಿದ ಹುಕ್ಕುಗಳು ಇರುತ್ತವೆ. ಅಂಥಾ ಹುಕ್ಕುಗಳನ ನಕಲುಗಳನ್ನು ಈ ಲಕ್ಷ್ಮೀನರಸಿಂಹಶಾಸ್ತ್ರಿ ಹತ್ತಿರ ಕಳುಹಿಸಿ ಕೊಟ್ಟಿದ್ದೇವೆ ಅದರಂತೆ ನಡೆದುಕೊಳ್ಳಿ ಎಂದು ಬೆಂಗಳೂರು ಭಕ್ತಾದಿಗಳಿಗೆ ನಿರೂಪವನ್ನು ನೀಡಲಾಗಿದೆ.

ಪತ್ರ ೧೫

ಶಾಯಿ ಮೊಹರು

ಮೈಸೂರು ಧೊರೆಗಳ ಶೀಮೆ ರಾಜ್ಯಭಾರದ ಚೀಫ್ ಕಮೀಷನ್ನರವರು ಬ್ರಾಂಹ್ಮಣ ಗುರುಗಳಾದ ಶಿವಗಂಗೆ ಯಲ್ಲಿರುವ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮಿಗಳವರಿಗು ಜಂಗಮ ಗುರುವಾದ ಶಿವಗಂಗೆಯಲ್ಲಿರುವ ರಾಚೋಟ್ಟೆ ಯ್ಯಗು ಯಿದ್ದ ವ್ಯಾಜ್ಯದ ವಿಷಯದಲ್ಲಿ ಸದರಿ ರಾಚೋಟ್ಟ ಯ್ಯನು ಶಿವಗಂಗೆ ರಾಜಬೀದೀಲಿ ಪಾಲಕ್ಕೀಲಿ ಕೂತುಕೊಂಡು ಹೋಗಬೇಕೆಂಬದಾಗಿ ಮಾಡಿದಂಥಾ ಫಿರ್ಯಾದಿಯನ್ನು ಕುರಿತು ನಡದಂಥಾ ವಿಚಾರಣೇಯನ್ನು ಕಮಿಷರ್ ಸಾಹೇಬರು ಪರಿಶೋಧಿಶಿ ನೋಡಿ ಈ ವಿವಾದವನ್ನು ಕುರಿತು ಸರ್ ೧೮೧೪ ನೇ ಇಸವಿ ಜೂನ್ ತಾರೀಖು ೧೪ರಲ್ಲು ಮಹಾರಾಜ ರಾಜಾ ಸಾಹೇಬ್ಬಹದ್ದರವರು ಬರದ ನಿರೂಪ ಪತ್ರಕಾರ ನಡಿಯತಕ್ಕದ್ದೆಂದು ಹುಕುಂ ಮಾಡಿಯಿಧಾರೆ ಮತ್ತು ಆ ನಿರೂಪದ ನಕಲು ಯಿದರ ಸಂಗಡ ಕೊಡಲ್ಪಟ್ಟಿಧೆ.

ಸರ್ ೧೮೩೮ ನೇ ಸೆಪಟಂಬರು ತಾ॥ ೨೬ರಲ್ಲಿ ಪೊ॥ ನರಸಯ್ಯ ತುಮಕೂರು ಮ॥ ಹೆಡ್ಡು ಮುನಿಷಿ ಹುಜೂರು ಇಂಗಲೀಷು ದೈವಾಗಿಧೆ.

ಈ ನಿರೂಪ ಶಿವಗಂಗೆ ಪೇಟೆ ಬೀದಿ ವ್ಯಾಜದ ಬಗ್ಗೆ ವಿವರವನ್ನು ನೀಡುತ್ತದೆ. ಶಿವಗಂಗೆಯಲ್ಲಿ ಶಿವಗಂಗಾ ಶ್ರೀಮಠ ಬರುವ ಮುಂಚೆ ಇದ್ದ ಮೇಲಣಗವಿಮಠ ಪರಂಪರೆ ಸ್ವಾಮಿಗಳು ಷ॥ಬ್ರ॥ ರಾಚೋತಿ ಶಿವಾಚಾರ್ಯರು. ಇವರು ತಮ್ಮ ದೇಶಸಂಚಾರಕ್ಕೆ ಹೊರಡಲು ಇರುವ ಏಕೈಕ ರಸ್ತೆ ಶಿವಗಂಗೆ ಗಂಗಾಧರೇಶ್ವರನ ರಥಬೀದಿ. ಆ ರಥಬೀದಿಯಲ್ಲಿ 'ಜಂಗಮ ಮಠದ ರಾಚೋಟ್ಟೆಯ್ಯನವರು ಅಡ್ಡಪಾಲಕಿಯಲ್ಲಿ' ಹೋಗಬಾರದು ಎಂದು ಸರ್ಕಾರಕ್ಕೆ ಫಿರ್ಯಾದಿ ಮಾಡಿದನ್ನು ಪರಿಹರಿಸಲು ಧರ್ಮಪ್ರಭು ಮುಮ್ಮಡಿ ಕೃಷ್ಣರಾಜ ಒಡೆಯರ್ ರವರು ನೀಡಿದ ಸರ್ ೧೮೧೪ನೇ ಇಸವಿ ಜೂನ್ ತಾರೀಖು ೧೪ರ ನಿರೂಪದಂತೆ ನಡಿಯತಕ್ಕದ್ದು ಹುಕುಂ ಮಾಡಿ ಇದ್ದಾರೆ. ಆದರೆ ಅಂದಿನ ದಿನ ಮಾನದಲ್ಲಿ ಈ ಸರ್ಕಾರದ ಆಜ್ಞೆಯನ್ನು ಉಲ್ಲಂಘನೆ ಮಾಡಿ ಮೇಲಣಗವಿ ಮಠದ ಶ್ರೀಗಳು ಪೇಟೆಬೀದಿ ಉತ್ಸವವನ್ನು ನಡೆಸಿದ್ದಾರೆ. ಮುಂದೆ ಈ ಗಲಾಟೆ ಶ್ರೀಮನ್ ಮಹಾರಾಜ ನಿರಂಜ ಜಗದ್ಗುರು ಶ್ರೀ ಶ್ರೀ ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳ ಕಾಲದಲ್ಲಿ ಮತ್ತೆ ವಿವಾದವನ್ನು ಉಂಟು ಮಾಡಿತು ಶಿವಗಂಗೆ ಸಾಹುಕಾರ್ ರೇವಣ್ಣನವರು ಮತ್ತು ಊರಿನ ಗಣ್ಯಮಾನ್ಯರು ಈ ವಿವಾದವನ್ನು ಸುಲಭವಾಗಿ ಪರಿಹರಿಸಿದರು.

ಪತ್ರ ೩೧

ಶ್ರೀಮತ್ಸರಮಹಂಸಾದಿ ಯಥೋಕ್ತ ಬಿರುದಾಂಕಿತರಾದ ಶ್ರೀ ಶಿವಗಂಗಾ ಶ್ರೀ ಸಚ್ಚಿದಾನಂದ ಭಾರತೀಸ್ವಾಮಿಗಳವರ ಚರಣ ಸನ್ನಿಧಾನಕ್ಕೆ

ಮಧ್ವರಾಯನು ಸಾಷ್ಟಾಂಗವಾಗಿ ನಮಸ್ಕರಿಸಿ ಮಾಡುವ ವಿಜ್ಞಾಪನಾ ಅದಾಗಿ ಅಪ್ಪಣೆ ಕೊಡಿಸಿ ಕಳುಹಿಸಿದ ಶ್ರೀಮುಖ ಫಲಮಂತಾಕ್ಷತೆಗಳು ಸಂಕ್ರಮಣದಲ್ಲಿ ಗಿರಿಮೇಲೆ ಬಂದ ಭಾಗೀರಥೀ ತೀರ್ಥ ಸಹ ದಯಮಾಡಿಸಿದ್ದು ಬಂದು ಮುಟ್ಟಿದ್ದರಿಂದ ಸಕಲವೂ ಶಿರಸಾ ವಹಿಸಿದೆನು. ಈ ಪರಿಯಂತ ಶರೀರಸ್ಥಿತಿ ವಿದ್ಯಾಮಾನವು ಒಂದು ಪ್ರಕಾರವಾಗಿತ್ತು. ತೀರ್ಥ ಫಲ ಮಂತ್ರಾಕ್ಷತೆಗಳನ್ನು ತೆಗೆದುಕೊಂಡದ್ದರಿಂದ ಈಚಿಗೆ ಗುಣವಾಗಿದೆ. ಮುಂದೆ ಮತ್ತು ಶರೀರದಲ್ಲಿ ಆರೋಗ್ಯ ದೃಢಗಾತ್ರವಾಗಿರುವ ಮೇರಿಗೆ ಚರಣಕಟಾಕ್ಷ ಪರಿಪೂರ್ಣವಾಗಿರ ಬೇಕು. ಶೃಂಗೇರಿ ಸ್ವಾಮಿಗಳವರು ಪುನಃ ಬೆಂಗಳೂರಿಗೆ ಬಂದು ಇಧಾರೆ. ಸ್ವಕಾರ್ಯವಾಗಿ ಕೆಲವರು ಬ್ರಾಹ್ಮಣರು ಪ್ರಾಕುಮೇರಿಗೆ ಕೆಲವು ನಡತೆಗಳು ನಡಿಯತಕ್ಕದ್ದಾಗಿ ಯತ್ನ ಮಾಡಿಧಾರೆ. ಆ ಜನಗಳಿಗೆ ಆಸ್ಪದಗಳು ಹುಟ್ಟಿದಂತೆ ಅರಮನೆ ಬಂದೊಬಸ್ತು ಮೊದಲು ಮಾಡಿಸಿ ಇರುವ ಮೇರಿಗೆ ಈಗಲೂ ವಿಚಾರಿಸಿಕೊಳ್ಳತಕ್ಕ ಬಗ್ಯಾಗಿ ಶ್ರೀಮುಖ ಅಪ್ಪಣೆ ಕೊಡಿಸಿದ್ದು ಸರಿಯಷ್ಟೆ. ಇದಕ್ಕೆ ಮಠದ ವಿದ್ಯಮಾನವಾಗಿ ಹೆಚ್ಚು ಕಡಮೆ ನಡದವರಿಗೆ ತಕ್ಕಹಾಗೆ ಮಾಡಿಸಿ ಇದೆ. ಮುಂದೆ ಹಾಗೆ ಬರುವದಿಲ್ಲ. ಅಥವಾ ಯಾರಿಂದಲಾದರೂ ಬಂದದ್ದೆ ವುಂಟಾದರೆ ಅದರ ಅನುಭವ ಅವರಿಗೆ ಆಗತಕ್ಕದ್ದರಲ್ಲಿ ಅಂತರವಿಲ್ಲ. ಶ್ರೀ ಶ್ರೀ ಕೂಡ್ಲಿ ಸ್ವಾಮಿಗಳವರು ಬೆಂಗಳೂರಿಗೆ ಬರಬೇಕೆಂದು ಅಪ್ಪಣೆ ಕೊಟ್ಟು ಕಳುಹಿಸಿ ಇದ್ದರು. ಅವರು ದಯಮಾಡಿಸಿದಲ್ಲಿ ಫಲ ಮಂತ್ರಾಕ್ಷತೆಗಳನ್ನು ತೆಗೆದುಕೊಂಡು ಅವರು ಈ ಸ್ಥಳದಿಂದ ಮುಂದಕ್ಕೆ ದಯಮಾಡಿಸಿದ ಬಗ್ಯೆ ವಿಜ್ಞಾಪನ ಪತ್ರಿಕೆಯನ್ನು ಸನ್ನಿಧಾನಕ್ಕೆ ಬರೆಸಿ ಕಳುಹಿಸುತ್ತಾ ಇದ್ದೇವೆ. ಶೃಂಗೇರಿ ಸ್ವಾಮಿಗಳವರು ಈ ದಿನ ಇಲ್ಲಿಂದ ಪ್ರಯಾಣ ಮಾಡಿ ದಯಮಾಡಿಸಿ ಇದಾರೆ. ಈ ವಿವರಗಳನ್ನೆಲ್ಲಾ ಪರಾಂಪರಿಸಿ ನನ್ನ ಶರೀರದಲ್ಲಿ ಆರೋಗ್ಯ ದೃಢಗಾತ್ರವಾಗುವ ಮೇರಿಗೆ ಇತ್ತೋಪ್ಯಧಿಕವಾಗಿ ಆಶೀರ್ವಾದ ಅನುಗ್ರಹವಿರತಕ್ಕದ್ದು. ಕಡಮೆ ವಿವರವೆಲ್ಲಾ ಮಠದ ನೃಸಿಂಹಭಟ್ಟರು, ತಮ್ಮಣ್ಣಭಟ್ಟರ ಮುಖವಚನದಿಂದ ದಿವ್ಯ ಚಿತ್ತಕ್ಕೆ ಶ್ರುತವಾಗುತ್ತಾ ಇದೆ.

ಇಂತಿ ವಿಜ್ಞಾಪನಾ

ಹಿಂದಿ ೨ ಅಕ್ಷರದಲ್ಲಿ ಇದೆ.

ಈ ವಿಜ್ಞಾಪನಾ ಪತ್ರ ಬೆಂಗಳೂರು ನಗರದಲ್ಲಿ ನೆಲೆಸಿದ್ದ ಸರ್ಕಾರಿ ಅಧಿಕಾರಿ ಮಧ್ವರಾಯರ ಶ್ರೀ ಮತ್ಪರಮಹಂಸಾದಿ ಯಥೋಕ್ತ ಬಿರುದಾಂಕಿತರಾದ ಶ್ರೀ ಶಿವಗಂಗಾ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮಿಗಳವರ ಚರಣ ಸನ್ನಿಧಾನಕ್ಕೆ ಬರೆದದ್ದು. ಮಹಾಸ್ವಾಮಿಗಳವರಿಗೆ ಈ ಅಧಿಕಾರಿಯ ನಿಕಟವಾದ ಪರಿಚಯ ಇದ್ದಿರಬೇಕು. ಶಿವಗಂಗಾಶ್ರೀಗಳು ಶ್ರೀಮುಖ ಫಲಮಂತ್ರಾಕ್ಷತೆ ಜೊತೆಗೆ 'ಸಂಕ್ರಮಣದಲ್ಲಿ ಗಿರಿ ಮೇಲೆ ಬಂದ ಭಾಗೀರಥೀ ತೀರ್ಥ ಸಹ ದಯಮಾಡಿಸಿದ್ದು ಬಂದು ಮುಟ್ಟಿದ್ದರಿಂದ ಸಕಲವೂ ಶಿರಸಾ ವಹಿಸಿದೆನು' ಎಂದಿದೆ. ಈ ಸಾಲು ಶಿವಗಂಗೆಯ ಕ್ಷೇತ್ರ ಪರಿಚಯ ಇಲ್ಲದವರಿಗೆ ಏನೋ ಗೊತ್ತಾಗುವುದಿಲ್ಲ. ಪ್ರತಿ ವರ್ಷ ಶಿವಗಂಗಾ ಗಿರಿಯ ತುಟ್ಟ ತುದಿಯಲ್ಲಿ ಇರುವ ತೀರ್ಥಕುಲ ದಲ್ಲಿ ಗಂಗಾಧರೇಶ್ವರನ ಗಿರಿಜಾಕಲ್ಯಾಣ ಮಹೋತ್ಸವಕ್ಕೆ ಒಂದು ಸಾಪಿನಷ್ಟು ತೀರ್ಥೋದ್ಭವವಾಗುತ್ತದೆ. ಅದನ್ನು ಸರ್ಕಾರದವರು ಬಹಳ ಭಕ್ತಿ ಗೌರವದಿಂದ ಪೂಜಾ ವಿಧಿಗಳನ್ನು ನೆರವೇರಿಸಿ ಕಳಶದಲ್ಲಿ ಸಂಗ್ರಹಿಸುತ್ತಾರೆ ಮಕರ ಸಂಕ್ರಾಂತಿಯ ದಿನ ನಡೆಯುವ ಶಿವಗಂಗೆ ಗಂಗಾಧರೇಶ್ವರನ ಗಿರಿಜಾ ಕಲ್ಯಾಣದ ಧಾರೆಗೆ ಈ ತೀರ್ಥವನ್ನು ಬಳಸುತ್ತಾರೆ ಸ್ವಲ್ಪ ಭಾಗವನ್ನು ಗಂಗಾಧರೇಶ್ವರನ ಶಿವಲಿಂಗದ ಅಭಿಷೇಕಕ್ಕೆ ಬಳಸುತ್ತಾರೆ. ಸ್ವಲ್ಪ ಭಾಗವನ್ನು ಮೈಸೂರು ಅರಮನೆಗೆ ಮಹಾರಾಜರಿಗೆ ಪ್ರಸಾದ ರೂಪದಲ್ಲಿ ಕಳುಹಿಸಿ ಕೊಡುವ ಪದ್ಧತಿ ಇತ್ತು. ಇಂತಹ ಮಹತ್ವವಾದ ಸಾಮಾನ್ಯರಿಗೆ ದುರ್ಲಬವಾದ ಗಿರಿ ಮೇಲೆ ಬಂದ ಭಾಗೀರಥೀ ತೀರ್ಥವನ್ನು ಮಧ್ವರಾಮನಿಗೆ ಶಿವಗಂಗಾ ಶ್ರೀ ಸಚ್ಚಿದಾನಂದ ಸ್ವಾಮಿಗಳು ಅನುಗ್ರಹಿಸಿದ್ದಾರೆ.

ಇಲ್ಲಿಯವರೆಗೆ ನನ್ನ ದೇಹ ಸ್ಥಿತಿ ಒಂದು ತರಹ ಇತ್ತು, ತೀರ್ಥ ಫಲ-ಮಂತ್ರಾಕ್ಷತೆಗಳನ್ನು ತೆಗೆದು ಕೊಂಡದ್ದರಿಂದ ನನ್ನ ಆರೋಗ್ಯ ಸುಧಾರಿಸಿದೆ. ಇನ್ನು ಮುಂದೆ ನನ್ನ ಶರೀರದಲ್ಲಿ ಆರೋಗ್ಯ ದೃಢಗಾತ್ರವಾಗಿರುವವರಗೆ ತಮ್ಮ ಪಾದದ ಅರ್ಥಾತ್ ಶ್ರೀ ಶಿವಗಂಗಾ ಶ್ರೀಸಚ್ಚಿದಾನಂದ ಭಾರತೀ ಸ್ವಾಮಿಗಳ ಚರಣಸೇವೆಯನ್ನು ನನ್ನ ಅಜೀವ ಪರ್ಯಂತ ಮಾಡುತ್ತೇನೆ ಎಂದು ಭಕ್ತಿಯಿಂದ ಪ್ರಾರ್ಥಿಸಿದ್ದಾನೆ. ಇದರ ಜೊತೆಗೆ ಸ್ಥಳೀಯ ವಿದ್ಯಾಮಾನಗಳ ಬಗ್ಗೆಯೂ ಮಾಹಿತಿ ನೀಡಿದ್ದಾರೆ. ಅಂದಿನ ದಿನ ಮಾನದ ಸರ್ಕಾರಿ ನೌಕರನ ಮನಸ್ಸು ಜೀವನ ಸ್ಥಿತಿ ಬಗೆಯು ಈ ಪತ್ರ ಮಾಹಿತಿ ನೀಡುತ್ತದೆ.

ಶೃಂಗೇರಿ ಸ್ವಾಮಿಗಳು ಪುನಃ ಬೆಂಗಳೂರಿಗೆ ಬಂದು ಇದ್ದಾರೆ. ಸ್ವಕಾರ್ಯವಾಗಿ ಕೆಲವು ಬ್ರಾಹ್ಮಣರು ಪ್ರಾಕು ಮೇರಿಗೆ ಕೆಲವು ನಡತೆಗಳು ನಡಿಯತಕ್ಕುದ್ದಾಗಿ ಯತ್ನ ಮಾಡಿದ್ದಾರೆ ಆ ಜನಗಳಿಗೆ ಆಸ್ಪದಗಳು ಹುಟ್ಟದಂತೆ ಅರಮನೆ ಬಂದೊಬಸ್ತು ಮೊದಲು ಮಾಡಿಸಿ ಇಲ್ಲಿ ಮಧ್ವರಾಯ ಬೆಂಗಳೂರಿನಲ್ಲಿ

ಶ್ರೀ ಶೃಂಗೇರಿ ಮಠದವರು ಪಾದಕಾಣಿಕೆ ಸಂಗ್ರಹಿಸಲು ಬರುವುದಿಲ್ಲ ಈ ಬಗ್ಗೆ ಶ್ರೀಶಿವಗಂಗಾ ಮಠದ ಮೂಲಕ ಅರಮನೆಗೆ ಪಿರ್ಯಾದು ಮಾಡಿಸಿ ಅರಮನೆಯಿಂದ ನಿರೂಪವನ್ನು ಹೊರಡಿಸಿ ಶ್ರೀ ಶಿವಗಂಗಾ ಮಠದ ವಿದ್ಯಾಮಾನವಾಗಿ ಹೆಚ್ಚು ಕಡಿಮೆ ನಡೆದವರಿಗೆ ತಕ್ಕಹಾಗೆ ಮಾಡಿಸೋದ್, ಮುಂದೆ ಹಾಗೆ ಬರುವುದಿಲ್ಲ, ಅಥವಾ ಯಾರಿಂದಲಾದರೂ ಬಂದದ್ದೆ ವುಂಟಾದರೆ ಅದರ ಅನುಭವ ಅವರಿಗೆ ಆಗತಕ್ಕದ್ದರಲ್ಲಿ ಅಂತರವಿಲ್ಲ ಎಂದಿದ್ದಾರೆ.

ಶ್ರೀ ಶ್ರೀ ಕೊಡ್ಲಿಸ್ವಾಮಿಗಳವರು ಬೆಂಗಳೂರಿಗೆ ಬರಬೇಕೆಂದು ಅಪ್ಪಣೆ ಕೊಟ್ಟು ಕಳುಹಿಸಿದ್ದರು. ಅವರು ದಯಮಾಡಿಸಿದಲ್ಲಿ ಫಲ ಮಂತ್ರಾಕ್ಷತೆಗಳನ್ನು ತೆಗೆದುಕೊಂಡು ಅವರು ಈ ಸ್ಥಳದಿಂದ ಮುಂದಕ್ಕೆ ದಯಮಾಡಿಸಿದ ಬಗ್ಗೆ ವಿಜ್ಞಾಪನ ಪತ್ರಿಕೆಯನ್ನು ಸನ್ನಿಧಾನಕ್ಕೆ ಬರೆಸಿ ಕಳುಹಿಸುತ್ತಾ ಇದ್ದೇನೆ. ಶೃಂಗೇರಿ ಸ್ವಾಮಿಗಳವರು ಈ ದಿನ ಇಲ್ಲಿಂದ ಪ್ರಯಾಣ ಮಾಡಿ ದಯಮಾಡಿಸಿ ಇದ್ದಾರೆ. ಈ ವಿವರಗಳನ್ನೆಲ್ಲಾ ಪರಾಂಪರಿಸಿ ನನ್ನ ಶರೀರದಲ್ಲಿ ಆರೋಗ್ಯ ದೃಢಗಾತ್ರವಾಗುವ ಮೇರಿಗೆ ಇತ್ತೋಪ್ಯಧಿಕವಾಗಿ ಆಶೀರ್ವಾದ- ಅನುಗ್ರಹವಿರತಕ್ಕದ್ದು. ಕಡಿಮೆ ವಿವರವೆಲ್ಲಾ ಮಠದ ನೃಸಿಂಹಭಟ್ಟರು ತಮ್ಮಣ್ಣಭಟ್ಟರ ಮುಖವಚನದಿಂದ ದಿವ್ಯಚಿತ್ತಕ್ಕೆ ಶ್ರುತವಾಗುತ್ತಾ ಇದೆ ಎಂದು ಬರೆದಿದ್ದಾರೆ.

೧೮೮೮ರಲ್ಲಿ ಪ್ರಕಟಿತವಾದ ಸನ್ನದ್ದುಗಳಲ್ಲಿ ಕೆಲವು ಕಾಗದ ಪತ್ರಗಳಲ್ಲಿ ೭ ನಿರೂಪಗಳ ಮೂಲಪಾಠ ಅವುಗಳ ಐತಿಹಾಸಿಕ ಮಹತ್ತ್ವದ ಬಗ್ಗೆ ಚರ್ಚಿಸಲಾಯಿತು. ಮೂರನೇ ಪತ್ರ ನೇರವಾಗಿ ದಳವಾಯಿ ದೇವರಾಜ್ಯೆಯ್ಯನವರು ಶಿವಗಂಗಾಶ್ರೀಮಠದ ಸ್ವಾಮಿಗಳಿಗೆ ಬರೆದ ಪತ್ರ ಇಲ್ಲಿ ಸ್ವಾಮಿಗಳ ಹೆಸರು ಉಲ್ಲೇಖವಾಗಿಲ್ಲ. ದಳವಾಯಿ ದೇವರಾಜೈಯ್ಯನವರು ಸ್ವಾಮಿಗಳಿಗೆ ದೊರೆಗಳು ಮಠದ ವಿಷಯದಲ್ಲಿ ಸಕಲದಲ್ಲಿಯು ಸರಾಗಗೂಡಿ ನಡಿಸಿಕ್ಕೊಂಡು ಬರುತ್ತಾರೆ, ಎಂಬ ಆಶ್ವಾಸನೆ ನೀಡಿದ್ದಾರೆ. ದಿವಾನ್ ಪೂರ್ಣಯ್ಯರವರ ರಹದಾರಿ ಪತ್ರದ ನಕಲು ಪತ್ರ ಐದರಲ್ಲಿ ಅಚ್ಚಾಗಿತ್ತು ಈ ಪತ್ರದ ಕಾಲ ೨೩.೧೨.೧೮೦೭.

ವಿಭವ ಸಂವತ್ಸರ ಭಾದ್ರಪದ ಶುದ್ಧ ೮ಯಲ್ಲು ದಿವಾ‍ಿ ಪೂರ್ಣಯ್ಯನವರು ಶ್ರೀಶಿವಗಂಗಾ ಮಠದ ಗುರುಗಳಾದ ಸಚ್ಚಿದಾನಂದಭಾರತೀ ಸ್ವಾಮಿಗಳವರಿಗೆ ಬರೆದುಕೊಂಡ ವಿಜ್ಞಾಪನಾ ಪತ್ರ ಪತ್ರ ಆರರಲ್ಲಿ ಮುದ್ರಣವಾಗಿದೆ. ದಿವಾ‍ಿ ಪೂರ್ಣಯ್ಯನವರ ವಿಭವ ಸಂವತ್ಸರ ಮಾಘಶುದ್ಧ ೬ರ ಪತ್ರ ಹೊಸದಾಗಿ ಶ್ರೀ ಶಿವಗಂಗಾ ಮಠದ ಅಧಿಕಾರವನ್ನು ಸ್ವೀಕರಿಸಿದಕ್ಕೆ ತಮ್ಮ ಭಕ್ತಿಯನ್ನು ಜ್ಞಾಪ ಪತ್ರದಲ್ಲಿ ತಿಳಿಸಿದ್ದಾರೆ ಈ ಪತ್ರ ಪ್ರಕಟಿತ ಪುಸ್ತಕದಲ್ಲಿ ೮ನೆಯದು

ಮುಮ್ಮಡಿ ಕೃಷ್ಣರಾಜ ಒಡೆಯರವರು ಭಾವಸಂತ್ಸರದ ವೈಶಾಖ ಶುದ್ಧ ೭ಯಲ್ಲು ಶಿವಗಂಗೆ ಸ್ವಾಮಿಗಳು ಪೆನಗೊಂಡೆ ಸೀಮೆಯಲ್ಲಿ ಕದರಿ ನರಸಿಂಹ ಕ್ಷೇತ್ರದಲ್ಲಿ ಕಟ್ಟಿಸಿರುವ ದೇವಸ್ಥಾನದ ವಿಚಾರ ಬಗ್ಗೆ ಪೆನಗೊಂಡೆ, ಬಳ್ಳಾರಿ ಪ್ರಾಂತ್ಯಕ್ಕೆ ಸಂಚಾರಾರ್ಥವಾಗಿ ದಿಗ್ವಿಜಯ ಮಾಡಿಕೊಂಡು ಬರಲು ಹೋಗಿಬರವುದಕ್ಕೆ ಕಳುಹಿಸಿದ ನಿರೂಪ. ಈ ನಿರೂಪದ ಇಂಗ್ಲೀಷ್ ತೇದಿ ೨೬।೪।೧೮೧೪ ಈ ಪತ್ರದ ಸಂಖ್ಯೆ ೯.

ಮುಮ್ಮಡಿ ಕೃಷ್ಣರಾಜ ಮಹೀಪತಿಗಳು ಶ್ರೀ ಶೃಂಗೇರಿ ಶ್ರೀ ಶಿವಗಂಗಾ ಶ್ರೀಗಂಗಾಧರ ಭಾರತೀ ಸ್ವಾಮಿಗಳ ಕರಸಂಜಾತ ಶ್ರೀ ಶ್ರಿಂಗೇರಿ ಶ್ರೀ ಶಿವಗಂಗಾ ಶ್ರೀಮದಭಿನವ ಗಂಗಾಧರ ಭಾರತೀ ಸ್ವಾಮಿಗಳ ಕರಕಮಲ ಸಂಜಾತ ಶ್ರೀ ಶೃಂಗೇರಿ ಶ್ರೀಶಿವಗಂಗಾ ಶ್ರೀಮದಭಿನವೋದ್ದಂತ ಗಂಗಾಧರ ಭಾರತೀಸ್ವಾಮಿಗಳಿಗೆ ಸೌಮ್ಯ ಸಂವತ್ಸರದ ಅಶ್ವೀಜ ಶುದ್ಧ ೨ ಮಂಗಳವಾರ ಬರೆದ ಪತ್ರದಲ್ಲಿ ಶ್ರೀ ಶಿವಗಂಗಾ ಶ್ರೀಗಳು ಕಪಿಲಾನದಿ ಸ್ನಾನ ನಂಜನಗೂಡು ಶ್ರೀಕಂಠೇಶ್ವರ ಸ್ವಾಮಿ ದರ್ಶನ ಮಾಡಿಕೊಂಡು, ಮೈಸೂರಿಗೆ ದಯಮಾಡಬಿಡು ಎಂಬ ಪತ್ರವನ್ನು ಮುಮ್ಮಡಿಯವರು ಪತ್ರ ಬರೆದಿದ್ದಾರೆ. ಮೈಸೂರಿಗೆ ಬರುವುದು ಎಂದರೆ ಅವರಮನೆಗೆ ದಯಮಾಡಿ ಸುವುದು ಎಂದು ಅರ್ಥೈಸಿಕೊಳ್ಳಬೇಕು. ಪತ್ರದ ಕಡೆಯಲ್ಲಿ ಸೌಮ್ಯ ಸಂವತ್ಸರದ ಅಶ್ವೀಜ ಬಹುಳ ೧೩ ಭಾನುವಾರ ಮಧ್ಯಾನದಲ್ಲಿ ಬೆಂಗಳೂರು ಪ್ಯಾಟೆಯಲ್ಲಿ ಶ್ರೀಗಳ ಉತ್ಸವ ನಡೆದದ್ದು ಈ ಪತ್ರದ ಕತೆಯಲ್ಲಿ ದಾಖಲಿಸಲಾಗಿದೆ. ಈ ಪತ್ರದ ಸಂಖ್ಯೆ ಹತ್ತು.

ಐತಿಹಾಸಿಕ ಮಹತ್ತ್ವವುಳ್ಳ ಈ ನಿರೂಪಗಳ ಲಘು ಸಂಪುಟ ಯಥಾವತ್ತಾಗಿ ಸಂಪೂರ್ಣವಾದ ವಿವರಣೆ ಯೊಂದಿಗೆ ಪ್ರಕಟಿಸಬೇಕು. ಅಲ್ಲಲ್ಲಿ ಅಳಿದು ಉಳಿದಿರುವ ಇಂತಹ ಮಹತ್ತ್ವದ ದಾಖಲೆಗಳ ಸೂಕ್ಷ್ಮವಾದ ಅಧ್ಯಯನ ವನ್ನು ಕಿರಿಯ ವಿದ್ವಾಂಸರು ಮಾಡಬೇಕು.

ಆಧಾರಸೂಚಿ

೧. ಶ್ರೀಮಜ್ಜಗದ್ಗುರು ಶ್ರೀ ಕೊಡಲೀ ಶೃಂಗೇರಿ ಶಾರದಾ ಮಹಾಪೀಠದ ಸಂಕ್ಷಿಪ್ತ ಇತಿಹಾಸ, ಲೇಖಕ ಪಿ. ವಿಷ್ಣುತೀರ್ಥ. ಪ್ರಕಾಶಕರು ಶ್ರೀಮಜ್ಜಗದ್ಗುರು ಶ್ರೀ ಕೊಡಲೀ ಶೃಂಗೇರಿ ಶ್ರೀ ಶಾರದಾ ಮಹಾಪೀಠಂ ಕೊಡಲೀ, ಶಿವಮೊಗ್ಗ ಜಿಲ್ಲೆ, ೧೯೮೬.

೨. ಶಿವಗಂಗಾ ಕ್ಷೇತ್ರ ಹಾಗೂ ವೀರಶೈವ ಮಠಗಳು, ಲೇಖಕ ಡಾ. ಜಿ. ನಂಜುಂಡಸ್ವಾಮಿ, ಪ್ರಕಾಶಕರು ಶ್ರೀ ಸಿದ್ಧಗಂಗಾ ಪ್ರಕಾಶನ, ಶ್ರೀ ಸಿದ್ಧಗಂಗಾ ಮಠ, ತುಮಕೂರು, ೨೦೦೮.

೩. ಶ್ರೀಮಜ್ಜಗದ್ಗುರು ಶ್ರೀ ಕೊಡ್ಲೀ-ಶೃಂಗೇರಿ ಸಂಸ್ಥಾನದ ಪ್ರಾಚೀನ ಶಾಸನ ಲೇಖನ ಸಂಗ್ರಹ, ೧೯೬೫.

೧೬

ಕರ್ನಾಟಕದ ಶಾಸನಗಳಲ್ಲಿನ ಕಾಲಗಣನೆ

ಎಂ.ವಿ. ವಿಶ್ವೇಶ್ವರ* ಎಸ್. ಕಾರ್ತಿಕ್**

ಕರ್ನಾಟಕದ ಶಾಸನಗಳಲ್ಲಿ ಬಳಕೆಯಾಗಿರುವ ಕಾಲಗಣನೆ ವೈವಿಧ್ಯಮಯವಾಗಿದೆ. ಇದರ ಪೂರ್ಣ ಪ್ರಮಾಣದ ಅಧ್ಯಯನ ಇದುವರೆಗೂ ನಡೆದಿಲ್ಲ. ಕರ್ನಾಟಕದ ಶಾಸನಗಳಲ್ಲಿ ಕಂಡುಬರುವ ನಕ್ಷತ್ರಗಳ, ವಾರಗಳ ಹೆಸರುಗಳು, ಮಾಸಗಳ ಹೆಸರುಗಳು, ಸಂಖ್ಯಾಶಬ್ದಗಳು, ಕಟಪಯಾದಿ ಪದ್ಧತಿಯ ಕಾಲಗಣನೆ, ಕಾಲಗಣನೆಗೆ ಸಂಬಂಧಿಸಿದಂತೆ ಪ್ರಕಟವಾಗಿರುವ ಬರಹಗಳ ಸೂಚಿ ಇವನ್ನು ಪ್ರಕೃತ ಲೇಖನದಲ್ಲಿ ಕಿರಿದಾಗಿ ನೀಡಲಾಗಿದೆ. ಕೆಲವು ಸಂಖ್ಯಾಶಬ್ದಗಳ ಸಂಖ್ಯಾ ವಾಚಕಗಳನ್ನು ನಿಖರವಾಗಿ ಹೇಳಲು ಸಾಧ್ಯವಿದ್ದರೂ ಆ ಶಬ್ದವನ್ನು ವಿವರಿಸಲು ಸಾಧ್ಯವಾಗುವುದಿಲ್ಲ. ಉದಾ: ಖರ. ಕೆಲವು ಸಂಖ್ಯಾ ಶಬ್ದಗಳನ್ನು ಎರಡು ಮೂರು ರೀತಿಯಲ್ಲಿ ಅರ್ಥೈಸಬಹುದು. ಉದಾ: ಕರ್ಮ–ತ್ರಿಕರ್ಮ, ಚತುಷ್ಕರ್ಮ, ಷಟ್ಕರ್ಮ. ಇಂತಹ ಶಬ್ದಗಳು ಬಂದಾಗ ಆಯಾ ಕಾಲದ ಸಂದರ್ಭ, ಐತಿಹಾಸಿಕ ಅಂಶಗಳು ಮುಂತಾದ ಸಂಗತಿಗಳನ್ನು ಗಮನಿಸಿಕೊಂಡು ನಿರ್ಧರಿಸಬೇಕು. ಇದು ವ್ಯಾಪಕವಾದ ಅಧ್ಯಯನದ ವಿಷಯವಾಗಿದ್ದು ಇಲ್ಲಿ ಪೂರ್ಣ ಪ್ರಮಾಣದ ಪ್ರಕಟಣೆಯೂ ಸಾಧ್ಯವಿಲ್ಲದ ಕಾರಣ; ಕೇವಲ ಪ್ರಮುಖವೆನಿಸುವ ಕೆಲವು ಸೂಚಿಗಳನ್ನು ಕಿರಿದಾಗಿ ನೀಡಲಾಗಿದೆ. ಅಪಲಿಖಿತಗಳು, ಲಿಪಿ ಮತ್ತು ಕಾಲಗಣನೆ, ಸಮಸ್ಯೆಗಳು ಮುಂತಾದವುಗಳ ಬಗೆಗೆ ವ್ಯಾಪಕ ಅಧ್ಯಯನ ನಡೆಯಬೇಕಾದ ಅಗತ್ಯವಿದೆ. ಇದಕ್ಕೆ ಮೊದಲು ಸೂಚಿಗಳನ್ನು ಸಿದ್ಧಪಡಿಸಿಕೊಳ್ಳಬೇಕು. ರಾಜರ ಹೆಸರಿನಲ್ಲಿ ಬಳಕೆಗೊಂಡಿರುವ ಶಕೆಗಳ ಪೂರ್ಣ ವಿವರವೂ ಸರಿಯಾಗಿ ದೊರಕದು. ಅಪಲಿಖಿತಗಳನ್ನು ತಿದ್ದಿಕೊಳ್ಳದೆ ತಪ್ಪಾದ ಶಬ್ದಗಳನ್ನೇ ಅವಲಂಬಿಸಿ ಕಾಲನಿರ್ಣಯ ಮಾಡಲು ಹೊರಟರೆ ಗೊಂದಲಗಳೇ ವಿಶೇಷವಾಗಿ ಸೃಷ್ಟಿಯಾಗುತ್ತವೆ. ಕಟಪಯಾದಿ ಸಂಖ್ಯಾ ಪದ್ಧತಿ ಮತ್ತು ಸಂಖ್ಯಾಶಬ್ದಗಳ ಬಳಕೆಯಲ್ಲಿ ಇವುಗಳನ್ನು ಗಮನಿಸಬಹುದು. ಇಂತಹ ಹಲವಾರು ವಿವರಗಳ ಮೇಲೆ ವಿಸ್ತಾರವಾದ ವಿವೇಚನೆಗೆ ಅವಕಾಶವಿದ್ದು ಸಂಶೋಧಕರು ಇದರತ್ತ ಗಮನ ಹರಿಸಬೇಕಾದ್ದು ಅಗತ್ಯ ಎಂದು ಒತ್ತಿ ಹೇಳಬೇಕಾಗಿದೆ.

ನಕ್ಷತ್ರಗಳು ಮತ್ತು ನಕ್ಷತ್ರಗಳ ಅಧಿದೇವತೆಗಳು

ಕ್ರ.ಸಂ.	ನಕ್ಷತ್ರಗಳ ಹೆಸರುಗಳು	ನಕ್ಷತ್ರದ ಅಧಿದೇವತೆಗಳು [=ನಕ್ಷತ್ರಗಳ ಹೆಸರುಗಳು]
೧.	ಅಶ್ವಿನೀ	ಅಶ್ವಿನೀ ದೇವತೆಗಳು
೨.	ಭರಣೀ	ಯಮ
೩.	ಕೃತ್ತಿಕಾ	ಅಗ್ನಿ
೪.	ರೋಹಿಣೀ	ಪ್ರಜಾಪತಿ (ಬ್ರಹ್ಮ)
೫.	ಮೃಗಶಿರ	ಸೋಮ (ಚಂದ್ರ)
೬.	ಆರ್ದ್ರಾ	ರುದ್ರ
೭.	ಪುನರ್ವಸು	ಅದಿತಿ
೮.	ಪುಷ್ಯ	ಬೃಹಸ್ಪತಿ
೯.	ಆಶ್ಲೇಷ	ಸರ್ಪ
೧೦.	ಮಖ	ಪಿತೃ
೧೧.	ಪೂರ್ವ ಫಲ್ಗುಣೀ	ಭಗ
೧೨.	ಉತ್ತರ ಫಲ್ಗುಣೀ	ಅರ್ಯಮಾ
೧೩.	ಹಸ್ತ	ಸೂರ್ಯ
೧೪.	ಚಿತ್ರಾ (ಚಿತ್ತ)	ತ್ವಷ್ಟ (ವಿಶ್ವಕರ್ಮ)
೧೫.	ಸ್ವಾತಿ	ವಾಯು
೧೬.	ವಿಶಾಖ	ಇಂದ್ರ, ಅಗ್ನಿ
೧೭.	ಅನೂರಾಧ	ಮಿತ್ರ
೧೮.	ಜೇಷ್ಠ	ಇಂದ್ರ
೧೯.	ಮೂಲ	ನಿರ್ಋತಿ
೨೦.	ಪೂರ್ವಾಷಾಢ	ಆಪಃ
೨೧.	ಉತ್ತರಾಷಾಢ	ವಿಶ್ವೇದೇವ
೨೨.	ಶ್ರವಣ	ವಿಷ್ಣು
೨೩.	ಧನಿಷ್ಠ	ಅಷ್ಟವಸುಗಳು
೨೪.	ಶತಭಿಷಾ	ವರುಣ
೨೫.	ಪೂರ್ವಾಭಾದ್ರ	ಅಜೈಕಪಾದ
೨೬.	ಉತ್ತರಾಭಾದ್ರ	ಅಹಿರ್ ಬುಧ್ಯಯನ
೨೭.	ರೇವತಿ	ಪೂಷ
೨೮.	ಅಭಿಜಿತ್	

* ಉಪಅಧೀಕ್ಷಕಪುರಾತತ್ತ್ವವಿದರು, (ನಿ). # ೩೮, ಶಾಂಕರೀ, ೨ನೆಯ ಮುಖ್ಯರಸ್ತೆ, ಇಟ್ಟುಮಡು ಬಡಾವಣೆ, ಬನಶಂಕರಿ ೩ನೆಯ ಹಂತ, ೩ನೆಯ ಫೇಸ್, ಬೆಂಗಳೂರು–೫೬೦೦೮೫.

** # ೬೫, (೧ನೆಯ ಮಹಡಿ), ೩ನೆಯ ಅಡ್ಡರಸ್ತೆ, ಶಿಕ್ಷಕರ ಬಡಾವಣೆ, ೧ನೆಯ ಹಂತ, ಜೆ.ಪಿ. ನಗರ ಅಂಚೆ, ಬೆಂಗಳೂರು–೫೬೦೦೭೮.

ವಾರಗಳ ಹೆಸರುಗಳು

ಬಳಕೆಯ ಹೆಸರುಗಳು	ಬಳಕೆಯ ಇತರ ಹೆಸರುಗಳು	ಶಾಸನಸ್ಥ ಹೆಸರುಗಳು
ಭಾನುವಾರ	ರವಿ	(ಅ) ಆದಿವಾರ [ಎಪಿಗ್ರಾಫಿಯ ಕರ್ನಾಟಕ-೧೫ (ಪರಿಷ್ಕೃತ), ಹೊಸನಗರ ೨೦, ಸಾಲು ೨ ಪುಟ ೧೫] (ಆ) ರವಿವಾರ [ಎಪಿಗ್ರಾಫಿಯ ಕರ್ನಾಟಕ-೧೫ (ಪರಿಷ್ಕೃತ), ಹೊಸನಗರ-೪೩, ಸಾಲು-೧ ಪುಟ ೪೪] (ಇ) ಆದಿತ್ಯವಾರ [ಎಪಿಗ್ರಾಫಿಯ ಕರ್ನಾಟಕ-೧೫ (ಪರಿಷ್ಕೃತ), ಹೊಸನಗರ-೭೦, ಸಾಲು-೩ ಪುಟ ೧೦೧] (ಈ) ಭಾನುವಾರ [ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್ ೧೮, ಬೆನಕೊನಕೊಂಡ, ಸಂಖ್ಯೆ ೩೭೫, ಸಾಲು ೧, ಪುಟ ೪೫೦] (ಉ) ಭಾಸ್ಕರವಾರ [ಎಪಿಗ್ರಾಫಿಯ ಕರ್ನಾಟಕ-೧೧ ರೈಸ್, ದಾವಣಗೆರೆ-೩೪] (ಊ) ಅರ್ಕವಾಸರ [ಎಪಿಗ್ರಾಫಿಯ ಕರ್ನಾಟಕ-೧೦, ಭಾಗ-೨, ರೈಸ್, ಗೌರೀಬಿದನೂರು-೭೭, ಸಾಲು-೫೦, ಪುಟ ೨೬೧] (ಋ) ಅರ್ಕವಾರ [ಎಪಿಗ್ರಾಫಿಯ ಕರ್ನಾಟಕ-೮ ರೈಸ್, ಸೊರಬ-೩೭೫] (ಎ) ಅರುಣವಾರೇ [ಎಪಿಗ್ರಾಫಿಯಾ ಕರ್ನಾಟಿಕಾ-೯ (ಬೆಂಗಳೂರು ಜಿಲ್ಲೆ), ದೇವನಹಳ್ಳಿ-೮೧, ಸಾಲು-೫೬, ಕನ್ನಡ ಅಖಿ ಪುಟ ೧೯೨]
ಸೋಮವಾರ	ಚಂದ್ರ, ಇಂದು	(ಅ) ಚಂದ್ರವಾರ [ಎಪಿಗ್ರಾಫಿಯ ಕರ್ನಾಟಕ ೧೫ (ಪರಿಷ್ಕೃತ), ಸಾಗರ-೭೯, ಸಾಲು-೪, ಪುಟ ೨೮೩] (ಆ) ಶಶಾಂಕವಾರ [ಹುಳಿಯಾರ್ ಶಾಸನದ ಪರಿಷ್ಕೃತ ಪಾಠ, ಪ್ರಕೃತ ಲೇಖಕರ ಅಪ್ರಕಟಿತ ಲೇಖನ] (ಶಶಾಂಕವಾರ) (ಇ) ಭಗರುಕ್ಷೇಂದುವಾರ [ಎಪಿಗ್ರಾಫಿಯ ಕರ್ನಾಟಕ-೧೩ (ಪರಿಷ್ಕೃತ), ಶಿವಮೊಗ್ಗ-೧೦೩, ಸಾಲು-೧೩, ಪುಟ ೧೭೪] (ಈ) ಇಂದುವಾರ [ಎಪಿಗ್ರಾಫಿಯ ಕರ್ನಾಟಕ-೯ (ಪರಿಷ್ಕೃತ), ಬೇಲೂರು-೧೭೨] (ಉ) ವಿಧುವಾರ [ಎಪಿಗ್ರಾಫಿಯಾ ಕರ್ನಾಟಿಕಾ-೩ (ರೈಸ್ ಆವೃತ್ತಿ), ಕೊಳ್ಳ-೨೫]
ಮಂಗಳವಾರ	ಕುಜ	(ಅ) ಕುಜವಾರ [ಎಪಿಗ್ರಾಫಿಯ ಕರ್ನಾಟಕ-೧೫ (ಪರಿಷ್ಕೃತ), ಹೊಸನಗರ-೮೭, ಸಾಲು-೧೦, ಪುಟ ೧೪೧] (ಆ) ಮಹೀಸುತ ದಿನ [ಎಪಿಗ್ರಾಫಿಯಾ ಕರ್ನಾಟಿಕಾ (ಬೆಂಗಳೂರು ಜಿಲ್ಲೆಯ ಅಪ್ರಕಟಿತ ಪುರವಣಿ), ಬೆಂಗಳೂರು-೧೪೫, ಸಾಲು-೨೩ (ಇ) ಭೌಮವಾಸರ [ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್-೭, ಸಂಖ್ಯೆ-೩೨೧] (ಈ) ಭೂಮಿಸುತವಾರ [ಎಪಿಗ್ರಾಫಿಯ ಕರ್ನಾಟಕ-೧೧ ರೈಸ್, ದಾವಣಗೆರೆ-೨೪] (ಉ) ಭೂಮಿಸುತವಾರ [ಎಪಿಗ್ರಾಫಿಯ ಕರ್ನಾಟಕ-೧೧ ರೈಸ್, ಹೊಳಲ್ಕೆರೆ-೧೨೩] (ಊ) ಭೌಮವಾರ [ಎಪಿಗ್ರಾಫಿಯ ಕರ್ನಾಟಕ-೧೧ ರೈಸ್, ದಾವಣಗೆರೆ-೧೦೮] (ಋ) ಅಂಗಾರಕವಾರ [ಎಪಿಗ್ರಾಫಿಯ ಕರ್ನಾಟಕ (ಪರಿಷ್ಕೃತ)-೧೦, ಚನ್ನರಾಯಪಟ್ಟಣ-೧೭ ಪುಟ ೪೨೧, ಸಾಲು ೫]
ಬುಧವಾರ	ಸೌಮ್ಯ	(ಅ) ಸೌಮ್ಯವಾರ [ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್-೨೦, ಕೊಂಡಗುಳ, ಸಂಖ್ಯೆ-೬೮, ಸಾಲು ೪, ಪುಟ ೮೧] [ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್-೧೫, ಅರಸೀಬೀಡಿ, ಸಂಖ್ಯೆ-೫, ಸಾಲು-೧೧, ಪುಟ ೫] [ಎಪಿಗ್ರಾಫಿಯ ಕರ್ನಾಟಕ-೧೧ ರೈಸ್, ದಾವಣಗೆರೆ-೩೧] (ಆ) ಸೌಮ್ಯದಿವಸೇ [ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್-೨೦, ಬನವಾಸಿ, ಸಂಖ್ಯೆ-೨೫೪, ಸಾಲು ೧, ಪುಟ ೩೧೫] (ಇ) ಸೌಮ್ಯವಾಸರ [A R I E 1978-79, No A-12]
ಗುರುವಾರ	ಬೃಹಸ್ಪತಿ	(ಅ) ಬ್ರಿಹಸ್ಪತಿವಾರ [ಎಪಿಗ್ರಾಫಿಯ ಕರ್ನಾಟಕ-೧೫ (ಪರಿಷ್ಕೃತ), ಹೊಸನಗರ-೯, ಸಾಲು-೧೧, ಪುಟ ೯] (ಆ) ಬೃಹಸ್ಪತಿವಾರ [ಎಪಿಗ್ರಾಫಿಯ ಕರ್ನಾಟಕ-೧೫ (ಪರಿಷ್ಕೃತ), ಹೊಸನಗರ-೩೩, ಸಾಲು-೪, ಪುಟ ೬೧] (ಇ) ಬ್ರಿಹವಾರ [ಎಪಿಗ್ರಾಫಿಯ ಕರ್ನಾಟಕ-೧೫ (ಪರಿಷ್ಕೃತ), ಸಾಗರ-೮೩, ಸಾಲು-೮, ಪುಟ ೨೮೮] (ಈ) ಬ್ರಿಹವಾರ [ಎಪಿಗ್ರಾಫಿಯ ಕರ್ನಾಟಕ-೧೫ (ಪರಿಷ್ಕೃತ), ಸಾಗರ-೧೩೭, ಸಾಲು-೫, ಪುಟ ೩೪೧] (ಉ) ಜೀವವಾರ [ಎಪಿಗ್ರಾಫಿಯ ಕರ್ನಾಟಕ-೧೫ (ಪರಿಷ್ಕೃತ), ಸಾಗರ-೨೦.೨, ಸಾಲು-೩.೨.೩೩, ಪುಟ ೪೧೯] (ಋ) ಆಂಗೀರಸವಾರ [ಎಪಿಗ್ರಾಫಿಯ ಕರ್ನಾಟಕ-೭ (ಪರಿಷ್ಕೃತ), ಮಳವಳ್ಳಿ -೧೩೯] (ಎ) ಜೀವವಾರ [ಎಪಿಗ್ರಾಫಿಯಾ ಕರ್ನಾಟಿಕಾ-೧೨ (ರೈಸ್ ಆವೃತ್ತಿ), ಸಿರಾ-೯೫]
		ಸಾಗರಾಜರಾವ್, ರಚನಾ ಪ್ರಕಾಶನ, ಮೈಸೂರು-೨೦೦೮, ಪುಟ ೧೨೧, ಸಾಲು-೩೩] (ಆ) ಭೃಗುವಾಸರ [ಮೈಸೂರು ಪುರಾತತ್ತ್ವ ಇಲಾಖೆಯ ವಾರ್ಷಿಕ ವರದಿ-೧೯೩೨, ಶಾಸನ ಸಂಖ್ಯೆ-೨] (ಇ) ಭೃಗುವಾರ [ಮೈಸೂರು ಪುರಾತತ್ತ್ವ ಇಲಾಖೆಯ ವಾರ್ಷಿಕ ವರದಿ-೧೯೨೫, ಶಾಸನ ಸಂಖ್ಯೆ-೨೩] (ಈ) ಸಕಿಲ್ಲವ್ಯವಾರೇ [=ಕಾವ್ಯವಾರ] [ಎಪಿಗ್ರಾಫಿಯಾ ಕರ್ನಾಟಿಕಾ -೪ (ಪರಿಷ್ಕೃತ), ಚಾಮರಾಜನಗರ ೩೫೮]
ಶನಿವಾರ	ಮಂದವಾರ	(ಅ) ವಕ್ರವಾರ [ಎಪಿಗ್ರಾಫಿಯ ಕರ್ನಾಟಕ-೧೫ (ಪರಿಷ್ಕೃತ), ಹೊಸನಗರ-೩೩, ಸಾಲು- ೨ ಪುಟ ೩೪] [ಎಪಿಗ್ರಾಫಿಯ ಕರ್ನಾಟಕ-೧೫ (ಪರಿಷ್ಕೃತ), ಹೊಸನಗರ-೭೮, ಸಾಲು-೭ ಪುಟ ೧೦೮] (ಆ) ದಿನೇಶ(ಜ)ದಿನೇ [ಎಪಿಗ್ರಾಫಿಯ ಕರ್ನಾಟಕ -೫ (ಪರಿಷ್ಕೃತ), ತಿ ನರಸೀಪುರ-೧೯೯, ಪುಟ ೫೮೩. ಶಾಸನದಲ್ಲಿ ದಿನೇಶಪದಿನೇ ಎಂದಿದೆ. ಇದು ದಿನೇಶಜದಿನೇ ಎಂಬುದರ ಅಪಲೇಖನ] (ಇ) ಸ್ಥಿರವಾರ [ಎಪಿಗ್ರಾಫಿಯ ಕರ್ನಾಟಕ-೧೫ (ಪರಿಷ್ಕೃತ), ಹೊಸನಗರ-೪೪, ಸಾಲು-೨, ೩, ಪುಟ ೪೨] [ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್-೧೮, ಮಾಲೂರು, ಸಂಖ್ಯೆ-೪೩೩, ಸಾಲು-೩, ಪುಟ ೪೯೧] (ಈ) ಮಂದವಾಸರ [ಎಪಿಗ್ರಾಫಿಯ ಕರ್ನಾಟಕ-೧೫ (ಪರಿಷ್ಕೃತ), ಹೊಸನಗರ-೫೩, ಸಾಲು-೪೩, ಪುಟ ೭೪] ಮಂದವರಾ [=ಮಂದವಾರ] [ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್-೨೦, ಸಾತುಲಗಾವ್, ಸಂಖ್ಯೆ-೩೮೩, ಸಾಲು ೨, ಪುಟ ೩೭೮] (ಈ) ಬ್ರಿಹವಾರ [ಎಪಿಗ್ರಾಫಿಯ ಕರ್ನಾಟಕ-೧೫ (ಪರಿಷ್ಕೃತ), ಸಾಗರ-೫೦, ಸಾಲು-೫, ಪುಟ ೨೩.೨] [ಎಪಿಗ್ರಾಫಿಯ ಕರ್ನಾಟಕ-೧೫ (ಪರಿಷ್ಕೃತ), ಸಾಗರ-೧೩೫, ಸಾಲು-೧೩, ಪುಟ ೩೩೯] [ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್-೨೦, ಹಿರೇಬೇವಿನೂರು, ಸಂಖ್ಯೆ-೮೫, ಸಾಲು ೨೧, ಪುಟ ೧೦೯] (ಉ) ಬ್ರಿಹಸ್ಪತಿವಾರ [ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್-೨೦, ಮೊಲಗಾಸ್, ಸಂಖ್ಯೆ-೧೧೯, ಸಾಲು ೨೪, ಪುಟ ೧೫೭] (ಊ) ಅರ್ಕಜವಾರ [ಎಪಿಗ್ರಾಫಿಯ ಕರ್ನಾಟಕ-೧೫ (ಪರಿಷ್ಕೃತ), ಹೊಸನಗರ-೮೭, ಸಾಲು-೫, ಪುಟ ೧೪೧. ಶಾಸನ ಸಂಪುಟದಲ್ಲಿ ಅರ್ಕಜವಾರವನ್ನು ಅರ್ಕವಾರವೆಂದು ತಪ್ಪಾಗಿ ಓದಿಕೊಂಡು ಭಾನುವಾರವೆಂದು ಹೇಳಿರುವುದು ಸರಿಯಲ್ಲ.] (ಊ) ಶೌರಿವಾರ [ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್-೭, ಸಂಖ್ಯೆ-೧೮೪] (ಋ) ಶೌರಿವಾರ [ಎಪಿಗ್ರಾಫಿಯ ಕರ್ನಾಟಕ-೩ (ಪರಿಷ್ಕೃತ), ಪುಟ ೧೭೯]

ವಾರಗಳ ಹೆಸರಿನ ಸಂಕ್ಷೇಪಗಳು

ಶಾಸನೋಕ್ತ ವಾರಗಳ ಸಂಕೇತಗಳು	ಆಕರಗಳು
ಆ=ಆದಿವಾರ (=ಭಾನುವಾರ)	(ಅ) ಎಪಿಗ್ರಾಫಿಯ ಕರ್ನಾಟಕ-೧೫ [ಪರಿಷ್ಕೃತ], ಹೊಸನಗರ-೨೯, ಸಾಲು-೩, ಪುಟ ೩೦ (ಆ) ಎಪಿಗ್ರಾಫಿಯ ಕರ್ನಾಟಕ-೧೫ [ಪರಿಷ್ಕೃತ], ಸಾಗರ-೬೩, ಸಾಲು-೨, ಪುಟ ೨೭೧
ಭಾ=ಭಾನುವಾರ	(ಅ) ಎಪಿಗ್ರಾಫಿಯ ಕರ್ನಾಟಕ-೧೫ [ಪರಿಷ್ಕೃತ], ಸಾಗರ-೧೮೫, ಸಾಲು-೨, ಪುಟ ೩೭೯ (ಆ) ಎಪಿಗ್ರಾಫಿಯ ಕರ್ನಾಟಕ-೧೫ [ಪರಿಷ್ಕೃತ], ಸಾಗರ-೨೩೭, ಸಾಲು-೬, ಪುಟ ೪೨೫
ಸೋ=ಸೋಮವಾರ	(ಅ) ಎಪಿಗ್ರಾಫಿಯ ಕರ್ನಾಟಕ-೧೫ [ಪರಿಷ್ಕೃತ], ಹೊಸನಗರ-೧೨, ಸಾಲು-೧೩, ಪುಟ ೧೨ (ಆ) ಸೌತ್ ಇಂಡಿಯನ್ ಇನ್ಸ್ಕ್ರಿಪ್ಷನ್ಸ್-೧೮, ಹೂಲಿಆನವೇರಿ, ಸಂಖ್ಯೆ-೩೭೮, ಸಾಲು-೨, ಪುಟ ೪೫೯ (ಇ) ಎಪಿಗ್ರಾಫಿಯ ಕರ್ನಾಟಕ-೧೨ [ಪರಿಷ್ಕೃತ], ಕಡೂರು-೧೩೫, ಸಾಲು-೩, ಪುಟ ೧೪೬
ಸೋಮ=ಸೋಮವಾರ	(ಅ) ಎಪಿಗ್ರಾಫಿಯ ಕರ್ನಾಟಕ-೧೨ [ಪರಿಷ್ಕೃತ], ಕಡೂರು-೨೮, ಸಾಲು-೫೬, ಪುಟ ೪೮
ಮಂ=ಮಂಗಳವಾರ	(ಅ) ಎಪಿಗ್ರಾಫಿಯ ಕರ್ನಾಟಕ-೧೫ [ಪರಿಷ್ಕೃತ], ಹೊಸನಗರ-೫೦, ಸಾಲು-೬, ಪುಟ ೪೭ (ಆ) ಸೌತ್ ಇಂಡಿಯನ್ ಇನ್ಸ್ಕ್ರಿಪ್ಷನ್ಸ್ -೨೦, ಸಿಧೇನೂರು, ಸಂಖ್ಯೆ-೩೮೫, ಸಾಲು-೨, ಪುಟ ೩೮೦
ಮ= ಮಂಗಳವಾರ	(ಅ) ಸೌತ್ ಇಂಡಿಯನ್ ಇನ್ಸ್ಕ್ರಿಪ್ಷನ್ಸ್-೧೮, ಕಲ್ಲಹಾಳ, ಸಂಖ್ಯೆ-೨೧೯, ಸಾಲು-೩, ಪುಟ ೨೯೫
ಗು= ಗುರುವಾರ	(ಅ) ಎಪಿಗ್ರಾಫಿಯ ಕರ್ನಾಟಕ-೧೫ [ಪರಿಷ್ಕೃತ], ಸಾಗರ-೧೨೦, ಸಾಲು-೫, ಪುಟ ೩೨೭ (ಆ) ಎಪಿಗ್ರಾಫಿಯ ಕರ್ನಾಟಕ-೧೫ [ಪರಿಷ್ಕೃತ], ಸಾಗರ-೨೦೯, ಸಾಲು-೭, ಪುಟ ೪೦೦ (ಇ) ಸೌತ್ ಇಂಡಿಯನ್ ಇನ್ಸ್ಕ್ರಿಪ್ಷನ್ಸ್-೨೦, ಲಕ್ಷ್ಮೇಶ್ವರ, ಸಂಖ್ಯೆ-೩೬೬, ಸಾಲು-೨, ಪುಟ ೩೭೧
ಬ್ರ=ಬೃಹವಾರ (ಗುರುವಾರ)	(ಅ) ಎಪಿಗ್ರಾಫಿಯ ಕರ್ನಾಟಕ-೧೫ [ಪರಿಷ್ಕೃತ], ಸಾಗರ-೧೨೩, ಸಾಲು-೧೯, ಪುಟ ೩೩೦
ಬ್ರಿ=ಬ್ರಿಹವಾರ (ಗುರುವಾರ)	(ಅ) ಸೌತ್ ಇಂಡಿಯನ್ ಇನ್ಸ್ಕ್ರಿಪ್ಷನ್ಸ್-೧೮, ಆಸುಂಡಿ, ಸಂಖ್ಯೆ-೧೪೭, ಸಾಲು-೨೦, ಪುಟ ೧೯೦
ಸು=ಶುಕ್ರವಾರ	(ಅ) ಎಪಿಗ್ರಾಫಿಯ ಕರ್ನಾಟಕ-೧೫ [ಪರಿಷ್ಕೃತ], ಹೊಸನಗರ-೩೧, ಸಾಲು-೫, ಪುಟ ೩೩
ಶು=ಶುಕ್ರವಾರ	(ಅ) ಸೌತ್ ಇಂಡಿಯನ್ ಇನ್ಸ್ಕ್ರಿಪ್ಷನ್ಸ್-೯, ಭಾಗ-೨, ಸಂಖ್ಯೆ-೫೫೩
ಶ=ಶನಿವಾರ	(ಅ) ಎಪಿಗ್ರಾಫಿಯ ಕರ್ನಾಟಕ-೧೫ [ಪರಿಷ್ಕೃತ], ಹೊಸನಗರ-೧೨೧, ಸಾಲು-೧೧, ಪುಟ ೧೯೬ (ಆ) ಸೌತ್ ಇಂಡಿಯನ್ ಇನ್ಸ್ಕ್ರಿಪ್ಷನ್ಸ್-೨೦, ಕಲ್ಕೇರಿ, ಸಂಖ್ಯೆ-೩೫೫, ಸಾಲು-೧, ಪುಟ ೩೬೫
ಸನಿ=ಶನಿವಾರ	(ಅ) ಎಪಿಗ್ರಾಫಿಯ ಕರ್ನಾಟಕ-೧೫ [ಪರಿಷ್ಕೃತ], ಸಾಗರ-೨೩೮, ಸಾಲು-೩, ಪುಟ ೪೨೬
ಸೌ=ಸೌರಿವಾರ (ಶನಿವಾರ)	(ಅ) ಸೌತ್ ಇಂಡಿಯನ್ ಇನ್ಸ್ಕ್ರಿಪ್ಷನ್ಸ್-೧೮, ಬನ್ನಿಕೊಪ್ಪ, ಸಂಖ್ಯೆ-೧೩೫, ಸಾಲು-೯, ಪುಟ ೧೭೧
ಬ್ರಿ=ಬ್ರಿಹವಾರ (=ಶನಿವಾರ)	(ಅ) ಎಪಿಗ್ರಾಫಿಯ ಕರ್ನಾಟಕ-೧೫ [ಪರಿಷ್ಕೃತ], ಸಾಗರ-೨೪೧, ಸಾಲು-೧, ಪುಟ ೪೨೮

ತಿಥಿಗಳು

ತಿಥಿಗಳ ಹೆಸರು	ವಿವರಗಳು	ಆಕರಗಳು
ಭೂತದಿನೇ	ಪಂಚಮಿಗೆ ಸಂಖ್ಯಾವಾಚಕವನ್ನು ಹೇಳಲಾಗಿದೆ	ಎಪಿಗ್ರಾಫಿಯ ಕರ್ನಾಟಕ-೧೫ [ಪರಿಷ್ಕೃತ], ಹೊಸನಗರ-೫೬, ಸಾಲು-೩೨, ಪುಟ ೬೩
ಚೌದಿಗೆಯಮಾವಾಸೆ	ವಿನಾಯಕ ಚೌತಿಗಿಂತ ಮುಂಚೆ ಬರುವ ಶ್ರಾವಣ ಬಹುಳ ಅಮಾವಾಸ್ಯೆಯನ್ನು ಚೌದಿಗೆ ಯಮಾವಾಸ್ಯೆ ಎನ್ನುವರು ಎಂದು ಈ ಶಾಸನವನ್ನು ಸಂಪಾದಿಸಿರುವ ಪಿ.ಬಿ. ದೇಸಾಯಿ ಅವರ ಮತ.	ಸೌತ್ ಇಂಡಿಯನ್ ಇನ್ಸ್ಕ್ರಿಪ್ಷನ್ಸ್-೧೫, ಸಂಖ್ಯೆ-೬, ಸಾಲು-೧೨,೧೩, ಪುಟ ೬
ಮದನ ತಿಥೌ	ಪಂಚಮಿಗೆ ಸಂಖ್ಯಾವಾಚಕವನ್ನು ಹೇಳಲಾಗಿದೆ. ಮದನ=ಪಂಚಬಾಣ	ಎಪಿಗ್ರಾಫಿಯಾ ಇಂಡಿಕಾ-೧, ಪುಟ ೪೦೨
ಮಥನ ದ್ವಾದಶಿ	ಕಾರ್ತಿಕ ಶುದ್ಧ ದ್ವಾದಶೀ. ಉತ್ಥಾನ ದ್ವಾದಶೀ. ಈ ದಿನ ವಿಷ್ಣು ನಿದ್ದೆಯಿಂದ ಏಳುವ ದಿನ	ಎಪಿಗ್ರಾಫಿಯಾ ಕರ್ನಾಟಿಕಾ-೧೨ [ರೈಸ್ ಆವೃತ್ತಿ], ಮಧುಗಿರಿ-೬೪, ಸಾಲು-೨, ಪುಟ ೩೨೮, ಕನ್ನಡ ಲಿಪಿ ಪಾಠ
ತಳರಮಾವಾಸ್ಯೆ	ಇದರ ವಿವರ ತಿಳಿದು ಬರುತ್ತಿಲ್ಲ. ಫಾಲ್ಗುಣ ಬಹುಳ ಅಮಾವಾಸ್ಯೆ ಇರಬಹುದೇ ?	ಸೌ ಇಂ ಇ. ೯-೧, ಸಂಖ್ಯೆ-೨೦೧

ಸಿಂಹ ಸಂಕ್ರಾಂತಿ	ಇದು ಮಧ್ಯ ಆಗಸ್ಟ್‌ನಿಂದ ಮಧ್ಯ ಸೆಪ್ಟೆಂಬರ್ ಒಳಗೆ ಬರುವ ಸಿಂಹಮಾಸದ ಸಂಕ್ರಾಂತಿ [=ಸಂಕ್ರಮಣ]	ಸೌ ಇಂ ಇ. ೯-೧. ಸಂಖ್ಯೆ-೧೨೪
ಗೋವತ್ಸ ದ್ವಾದಶಿ	ಮಾರ್ಗಶಿರ ಬಹುಳ ದ್ವಾದಶೀ	ಎಪಿಗ್ರಾಫಿಯ ಕರ್ನಾಟಕ -೧೩ [ಪರಿಷ್ಕೃತ], ಕೊಪ್ಪ-೧೮, ಸಾಲು-೪೦, ಪುಟ ೨೯೮
ಸಂಪುಟ ಸಪ್ತಮಿ	ಪಾಲ್ಗುಣ ಶುದ್ಧ ಸಪ್ತಮಿ. ಇದನ್ನು ಅರ್ಕ ಸಪ್ತಮಿ ಎಂದು ಕೂಡ ಹೇಳುವರು. ಈ ದಿನ ಸೂರ್ಯ ಪೂಜೆ ಮಾಡುವುದು ಶ್ರೇಯಕರವೆಂದು ಮತ. ಸಂಪತಿ ಸಪ್ತಮಿ ಇದು ಅಪಲಕ್ಷಿತ ರೂಪ	A R I E-1956-57, B 222
ಆಷಾಢ ಬಹುಳ ಕೃಷ್ಣಾಂಗಾರ ಚತುರ್ದಶಿ ಮಹಾ ತಿಥಿಯಂದು	ಬಹುಶಃ ಆಷಾಢ ಬಹುಳ ಚತುರ್ದಶಿ ಮಂಗಳವಾರ ಬಂದರೆ ಅದನ್ನು ಈ ಹೆಸರಿನಿಂದ ಕರೆಯಲಾಗುತ್ತದೆ ಎಂದು ತೋರುತ್ತದೆ.	ಸೌ ಇಂ ಇ. ೯-೧, ಸಂಖ್ಯೆ-೨೯೭
ಶಿವರಾತ್ರ ಕೃಷ್ಣಾಂಗಾರಕ ಚತುರ್ದಶಿ	ಇದು ಮಾಘಮಾಸದ ಅಂಗಾರಕ ಚತುರ್ದಶಿ. ಅಂದರೆ ಶಿವರಾತ್ರಿ ಮಂಗಳವಾರ ಚತುರ್ದಶಿ ಬರುವುದು	ಎಪಿಗ್ರಾಫಿಯ ಕರ್ನಾಟಕ -೧೫ [ಪರಿಷ್ಕೃತ], ತೀರ್ಥಹಳ್ಳಿ-೧೯೦, ಸಾಲು-೪೩-೪೫, ಪುಟ ೫೧೩
ಕಪಿಲಷಷ್ಠಿ	ಭಾದ್ರಪದ ಬಹುಳ, ಷಷ್ಠಿ, ರೋಹಿಣೀ ನಕ್ಷತ್ರ, ವ್ಯತೀಪಾತ, ಮಂಗಳವಾರ ಕೂಡಿದರೆ ಕಪಿಲಷಷ್ಠಿ	ಎಪಿಗ್ರಾಫಿಯ ಕರ್ನಾಟಕ -೧೫ [ಪರಿಷ್ಕೃತ], ತೀರ್ಥಹಳ್ಳಿ-೧೯೦, ಸಾಲು-೫೪, ಪುಟ ೫೧೫ ಎಪಿಗ್ರಾಫಿಯಾ ಕರ್ನಾಟಿಕಾ-೯ [ಅಪ್ರಕಟಿತ ಪುರವಣಿ], ಬೆಂಗಳೂರು-೧೪೭, ಸಾಲು-೨೪, ಪುಟ ೨೭ [ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್-೭, ಸಂಖ್ಯೆ-೫೪೫]
ಕಪಿಲಾಯೋಗ [=ಕಪಿಲಷಷ್ಠಿ]	ಭಾದ್ರಪದ ಬಹುಳ, ಷಷ್ಠಿ, ರೋಹಿಣೀ ನಕ್ಷತ್ರ, ವ್ಯತೀಪಾತ, ಮಂಗಳವಾರ ಕೂಡಿದರೆ ಕಪಿಲಷಷ್ಠಿ	ಎಪಿಗ್ರಾಫಿಯಾ ಕರ್ನಾಟಿಕಾ-೧೧ [ರೈಸ್ ಆವೃತ್ತಿ], ದಾವಣಗೆರೆ-೧೦೮, ಸಾಲು-೭, ಪುಟ ೧೭೫, ಕನ್ನಡ ಲಿಪಿ ಪಾಠ
ಶುಚಿಶುದ್ಧ ದ್ವಾದಶೀ	ಆಷಾಢ ಶುದ್ಧ ದ್ವಾದಶೀ, ಇದನ್ನೇ ಅಖಂಡ ದ್ವಾದಶೀ, ಶಯನ ದ್ವಾದಶೀ ಎಂದು ಕರೆಯುತ್ತಾರೆ. ವಿಷ್ಣು ಈ ದಿನ ದೀರ್ಘನಿದ್ರೆಗೆ ಜಾರುವ ಕಾರಣ ಈ ಹೆಸರು ಬಂದಿದೆ.	ಎಪಿಗ್ರಾಫಿಯ ಕರ್ನಾಟಕ -೧೧ [ಪರಿಷ್ಕೃತ], ಶೃಂಗೇರಿ-೫೪, ಸಾಲು-೫೫-೫೪, ಪುಟ ೨೭೪
ಮಹಾತಿಥಿ ಯುಗಾದಿ	ಭಾದ್ರಪದ ಬಹುಳ ತ್ರಯೋದಶಿಯನ್ನು ಮಹಾತಿಥಿ ಯುಗಾದಿ ಎಂದು ಕರೆಯಲಾಗಿದೆ. ಕಾರಣ ತಿಳಿಯದು	ಎಪಿಗ್ರಾಫಿಯಾ ಇಂಡಿಕಾ-೧೫, ಸಾಲು ೧೦೯

ಮಾರ್ಗಶಿರ **ಗೋ ದ್ವಾದಶಿ**-[ಎಪಿಗ್ರಾಫಿಯ ಕರ್ನಾಟಕ (ಪರಿಷ್ಕೃತ)-೧೦, ಚನ್ನರಾಯಪಟ್ಟಣ-೨೧ ಪುಟ ೪೨೯, ಸಾಲು ೫೭]
ಗೋ ದ್ವಾದಶಿ [ಎಪಿಗ್ರಾಫಿಯಾ ಕರ್ನಾಟಿಕಾ-೧೨ (ರೈಸ್ ಆವೃತ್ತಿ) , ಪಾವಗಡ-೫೮]

ಸಂಪತಿ ಸಪ್ತಮಿ [ಎಪಿಗ್ರಾಫಿಯಾ ಕರ್ನಾಟಿಕಾ-೧೭ ಮಾಲೂರು-೧೭೨]

ಮನ್ಮಥ ದಿನ ಎಪಿಗ್ರಾಫಿಯಾ ಕರ್ನಾಟಿಕಾ-೧೦ (ಕೋಲಾರ, ರೈಸ್ ಆವೃತ್ತಿ), ಮುಳಬಾಗಿಲು-೧೧

ಪ್ರಥಮ ಏಕಾದಶಿ [ಎಪಿಗ್ರಾಫಿಯ ಕರ್ನಾಟಕ-೫ [ಪರಿಷ್ಕೃತ], ನಂಜನಗೂಡು-೫೯೮]
[ಎಪಿಗ್ರಾಫಿಯ ಇಂಡಿಕಾ-೧೪, ಸಂಖ್ಯೆ-೨೫]

ಕಪಿಲಷಷ್ಠಿ [ಎಪಿಗ್ರಾಫಿಯ ಕರ್ನಾಟಕ [ಪರಿಷ್ಕೃತ]-೮, ಹಾಸನ-೧೫೦ ಪುಟ ೫೯೧ , ಸಾಲು-೨೫]

ಚೈತ್ರಮಾಸದ ಪೆರ್ಚಿತಲೆದೆವಸ(ಮಾಗೆ] [ಎಪಿಗ್ರಾಫಿಯ ಕರ್ನಾಟಕ [ಪರಿಷ್ಕೃತ]-೮, ಆಲೂರು-೮ ಪುಟ ೪೫೮ , ಸಾಲು-೨]

ಮಾಸಗಳ ವಿವಿಧ ಹೆಸರುಗಳು

ಚಾಂದ್ರಮಾನ ಮಾಸಗಳ ಹೆಸರುಗಳು	ಚಾಂದ್ರಮಾನ ಮಾಸಗಳ ಪರ್ಯಾಯ ಹೆಸರುಗಳು	ಸೌರಮಾನ ಮಾಸಗಳ ಹೆಸರುಗಳು	ಸೌರಮಾನ ಮಾಸಗಳ ತಮಿಳು ಹೆಸರುಗಳು	ಗ್ರೆಗೋರಿಯನ್ ಕ್ಯಾಲೆಂಡರ್‌ಗೆ ಸಮನಾದ ವಿವರಗಳು (ಸ್ಥೂಲವಾಗಿ)
ಚೈತ್ರ	ಮಧು	ಮೇಷ	ಚಿತ್ತಿರೈ	ಮಧ್ಯ ಏಪ್ರಿಲ್‌ನಿಂದ ಮಧ್ಯ ಮೇ
ವೈಶಾಖ	ಮಾಧವ (ರಾಧಾ)	ವೃಷಭ	ವೈಯಾಶಿ (ವೈಕಾಸಿ)	ಮಧ್ಯ ಮೇ ಇಂದ ಮಧ್ಯ ಜೂನ್
ಜೇಷ್ಠ	ಶುಕ್ರ	ಮಿಥುನ	ಆಣಿ	ಮಧ್ಯ ಜೂನ್‌ನಿಂದ ಮಧ್ಯ ಜುಲೈ
ಆಷಾಢ	ಶುಚಿ	ಕರ್ಕಾಟಕ	ಆಡಿ	ಮಧ್ಯ ಜುಲೈನಿಂದ ಮಧ್ಯ ಆಗಸ್ಟ್
ಶ್ರಾವಣ	ನಭ	ಸಿಂಹ	ಆವನಿ (ಆವಣಿ)	ಮಧ್ಯ ಆಗಸ್ಟ್‌ನಿಂದ ಮಧ್ಯ ಸೆಪ್ಟೆಂಬರ್
ಭಾದ್ರಪದ	ನಭಸ್ಯ	ಕನ್ಯಾ	ಪುರಟ್ಟಾಸಿ (ಪುರತ್ತಾಸಿ, ಪೆರಟ್ಟಾಸಿ ಪೆರತ್ತಾಸಿ, ಪೆರಟಾಸಿ)	ಮಧ್ಯ ಸೆಪ್ಟೆಂಬರ್‌ನಿಂದ ಮಧ್ಯ ಅಕ್ಟೋಬರ್
ಆಶ್ವಯುಜ	ಇಷ	ತುಲಾ	ಐಪ್ಪಶಿ (ಐಪ್ಪಸಿ)	ಮಧ್ಯ ಅಕ್ಟೋಬರ್‌ನಿಂದ ಮಧ್ಯ ನವಂಬರ್
ಕಾರ್ತಿಕ	ಊರ್ಜ್ಜ	ವೃಶ್ಚಿಕ	ಕಾರ್ತ್ತಿಕೈ	ಮಧ್ಯ ನವಂಬರ್‌ನಿಂದ ಮಧ್ಯ ಡಿಸೆಂಬರ್
ಮಾರ್ಗಶಿರ	ಸಹಸ್ಸು	ಧನುಸ್ಸು	ಮಾರ್ಗಳಿ (ಮಾರ್ಗಜೀ್)	ಮಧ್ಯ ಡಿಸೆಂಬರ್‌ನಿಂದ ಮಧ್ಯ ಜನವರಿ
ಪುಷ್ಯ	ಸಹಸ್ಯ	ಮಕರ	ತೈ	ಮಧ್ಯ ಜನವರಿಯಿಂದ ಮಧ್ಯ ಫೆಬ್ರವರಿ
ಮಾಘ	ತಪಸ್ಸು	ಕುಂಭ	ಮಾಶಿ (ಮಾಸಿ)	ಮಧ್ಯ ಫೆಬ್ರವರಿಯಿಂದ ಮಧ್ಯ ಮಾರ್ಚ್
ಫಾಲ್ಗುಣ	ತಪಸ್ಯ	ಮೀನ	ಪಂಗುನಿ	ಮಧ್ಯ ಮಾರ್ಚ್‌ನಿಂದ ಮಧ್ಯ ಏಪ್ರಿಲ್

ಮಾಸಗಳ ವಿವಿಧ ಬಗೆಯ ಉಲ್ಲೇಖಗಳು

[ದ್ವಿತೀಯ ಎಂಬ ಪದವು ನಿಜಮಾಸವನ್ನು ಸೂಚಿಸುತ್ತದೆ. ಪ್ರಥಮಾ ಪದವು ಅಧಿಕಮಾಸವನ್ನು ಸೂಚಿಸುತ್ತದೆ]

ದ್ವಿತೀಯ ಚೈತ್ರ [ಎಪಿಗ್ರಾಫಿಯ ಕರ್ನಾಟಕ-೯ ರೈಸ್, ಮಾಗಡಿ-೩೨]
ದ್ವಿತೀಯ ವೈಶಾಖ [ಎಪಿಗ್ರಾಫಿಯ ಕರ್ನಾಟಕ-೯ [ಪರಿಷ್ಕೃತ], ಬೇಲೂರು-೩]
ದ್ವಿತೀಯ ವೈಶಾಖ [ಎಪಿಗ್ರಾಫಿಯ ಕರ್ನಾಟಕ-೭ [ಪರಿಷ್ಕೃತ], ಮಳವಳ್ಳಿ -೮೭, ರೈಸ್-೨೧]
ದ್ವಿತೀಯ ಜೇಷ್ಠ [ಸೌತ್ ಇಂಡಿಯನ್ ಇನ್ಸ್ಕ್ರಿಪ್ಷನ್ಸ್-೭, ಸಂಖ್ಯೆ-೩೧೬]
ದ್ವಿತೀಯ ಆಷಾಢ [ಎಪಿಗ್ರಾಫಿಯ ಕರ್ನಾಟಕ-೧೧ ರೈಸ್, ಹೊಳಲ್ಕೆರೆ-೧೧೦]
ದ್ವಿತೀಯ ಆಷಾಢ [ಸೌತ್ ಇಂಡಿಯನ್ ಇನ್ಸ್ಕ್ರಿಪ್ಷನ್ಸ್-೭, ಸಂಖ್ಯೆ-೩೮೯]
ದ್ವಿತೀಯ ಆಷಾಢ [ಎಪಿಗ್ರಾಫಿಯ ಕರ್ನಾಟಕ-೯ ರ ಅನುಬಂಧ ಬೆಂಗಳೂರು-೧೪೭]
ದ್ವಿತೀಯ ಶ್ರಾವಣ [ಸೌತ್ ಇಂಡಿಯನ್ ಇನ್ಸ್ಕ್ರಿಪ್ಷನ್ಸ್-೯, ಸಂಖ್ಯೆ-೬೦೭]

ಪ್ರಥಮ ಭಾದ್ರಪದ [ಸೌತ್ ಇಂಡಿಯನ್ ಇನ್ಸ್ಕ್ರಿಪ್ಷನ್ಸ್-೯, ಸಂಖ್ಯೆ-೪೬೧]
ಪ್ರಥಮ ಭಾದ್ರಪದ [ಸೌತ್ ಇಂಡಿಯನ್ ಇನ್ಸ್ಕ್ರಿಪ್ಷನ್ಸ್-೯, ಸಂಖ್ಯೆ-೪೧೪]
ಪ್ರಥಮ ಭಾದ್ರಪದ [ಎಪಿಗ್ರಾಫಿಯ ಕರ್ನಾಟಕ-೧೦ ರೈಸ್, ಚಿಂತಾಮಣಿ-೬೦]
ಪ್ರಥಮ ಭಾದ್ರಪದ [ಕಂದಾವರದ ಕಾರ್ತಿಕೇಯ (ಒಂದು ಅಧ್ಯಯನ)-ಪಿ.ಎನ್. ನರಸಿಂಹಮೂರ್ತಿ, ಉಳ್ಳೂರು ಶ್ರೀ ಸ್ವಾಮಿ ಕಾರ್ತಿಕೇಯ ಸುಬ್ರಹ್ಮಣ್ಯ ಸ್ವಾಮಿ ದೇವಾಲಯ, ಕಂದಾವರ, ಕುಂದಾಪುರ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ-೧೯೯೬, ಶಾಸನ ಸಂಖ್ಯೆ-೫, ಪುಟ ೧೦೯]
ದ್ವಿತೀಯ ಭಾದ್ರಪದ [ಎಪಿಗ್ರಾಫಿಯ ಕರ್ನಾಟಕ-೯ ರೈಸ್, ಆನೇಕಲ್-೧]
ದ್ವಿತೀಯ ಭಾದ್ರಪದ [ಎಪಿಗ್ರಾಫಿಯ ಕರ್ನಾಟಕ-೪ [ಪರಿಷ್ಕೃತ], ಚಾಮರಾಜನಗರ -೨೯೩]
ದ್ವಿತೀಯ ಭಾದ್ರಪದ [ಎಪಿಗ್ರಾಫಿಯ ಕರ್ನಾಟಕ [illegible] ಹೊಳೆನರಸೀಪುರ-೧೧೯, [illegible]]
ದ್ವಿತೀಯ ಆಶ್ವೀಜ [ಎಪಿಗ್ರಾಫಿಯ ಕರ್ನಾಟಕ-೧೧ ರೈಸ್, ಹೊಳಲ್ಕೆರೆ-೬೨]
ದ್ವಿತೀಯ ಆಶ್ವೀಜ [ಎಪಿಗ್ರಾಫಿಯ ಕರ್ನಾಟಕ-೧೧ ರೈಸ್, ಹೊಳಲ್ಕೆರೆ-೧೧೧]

ಬೇಸಗೆಯ ತಿಂಗಳು [ಸೌತ್ ಇಂಡಿಯನ್ ಇನ್ಸ್ಕ್ರಿಪ್ಷನ್ಸ್-೭, ಸಂಖ್ಯೆ-೩೧೧]

ಬೇಸಗೆಯ ತಿಂಗಳು [ಸೌತ್ ಇಂಡಿಯನ್ ಇನ್ಸ್ಕ್ರಿಪ್ಷನ್ಸ್-೭, ಸಂಖ್ಯೆ-೩೫೫]

ಕಾರ ತಿಂಗಳು =ಪೌಷಮಾಸ [ಎ ಆರ್ ಐ ಇ-೧೯೭೦-೭೧, ಸಂಖ್ಯೆ-೨೩೨]

ಕ್ರಮ ಸಂಖ್ಯೆ	ಸಂಖ್ಯಾವಾಚಕ ಶಬ್ದಗಳು, ಸಂಖ್ಯಾವಾಚಕ ಸಂಖ್ಯೆಗಳು ಮತ್ತು ಅರ್ಥಗಳು				ಶಕವರ್ಷ	ಆಕರಗಳು
೧	**ಲೋಕ**	**ನೇತ್ರ**	**ಕಳಂಬ**	**ಇಂದು**	೧೫೨೩	ಎಪಿಗ್ರಾಫಿಯಾ ಕರ್ಣಾಟಕಾ, ಮುರವಣಿ.ಆನೇಕಲ್-೬೬
	೩ (ತ್ರಿಲೋಕ)	೨ (ಕಣ್ಣು)	೫ (ಬಾಣ)	೧ (ಚಂದ್ರ)		
೨	**ಅಶ್ವ**	**ಅನೇಕಪ**	**ವೇದ**	**ಇಂದು**	೧೪೮೭	ಎಂ.ಎ.ಆರ್-೧೯೩೨, ಸಂಖ್ಯೆ-೨
	೭ (ಕುದುರೆ)	೮ (ಆನೆ)	೪ (ನಾಲ್ಕು ವೇದಗಳು)			
೩	**ಗುಣ**	**ನಿಧಿ**	**ವೇದ**	**ಇಂದು**	೧೪೯೩	ಎಂ.ಎ.ಆರ್-೧೯೪೫, ಸಂಖ್ಯೆ-೧
	೩ (ಮೂರು ಗುಣಗಳು)	೯ (ಒಂಬತ್ತು ನಿಧಿಗಳು)	೪ (ನಾಲ್ಕು ವೇದಗಳು)	೧ (ಚಂದ್ರ)		
೪	**ಅವತಾರ**	**ಹಯ**	**ಅಬ್ಧಿ**	**ಇಂದು**	೧೪೮೦	ಎಪಿಗ್ರಾಫಿಯಾ ಕರ್ಣಾಟಕಾ-೧೦, ಚನ್ನಪಟ್ಟಣ-೧೮೬ [ದಶಕಸ್ಥಾನದಲ್ಲಿರುವ ೭ರ ಜೊತೆಗೆ (=ಏಪ್ಪತ್ತರ ಜೊತೆಗೆ) ೧೦ನ್ನು ಸೇರಿಸಿಕೊಂಡರೆ ಮಾತ್ರ ಅರ್ಥ ಸರಿಹೊಂದುತ್ತದೆ]
	೧೦ (ದಶಾವತಾರಗಳು)	೭ (ಕುದುರೆ)	೪ (ಸಮುದ್ರಗಳು)	೧ (ಚಂದ್ರ)		
೫	**ಅಂಗ**	**ಅಂಬರ**	**ಬಾಣ**	**ಇಂದು**	೧೫೦೬	ಎಪಿಗ್ರಾಫಿಯಾ ಕರ್ಣಾಟಕಾ, ಮುರವಣಿ, ದೇವನಹಳ್ಳಿ-೮೨
	೬ (ಆರು ಅಂಗಗಳು)	೦ (ಆಕಾಶ)	೫ (ಮನ್ಮಥನ ಐದು ಬಾಣಗಳು)	೧ (ಚಂದ್ರ)		
೬	ಮುನಿ	ಯುಗ	**ಲೋಕ**	ಧರಿತ್ರೀ	೧೩೪೭	ಎಪಿಗ್ರಾಫಿಯಾ ಕರ್ಣಾಟಕಾ-೧೦, ದೇವನಹಳ್ಳಿ-೮೧
	೭ (ಏಳು ಜನ ಮುನಿಗಳು)	೪ (ನಾಲ್ಕು ಯುಗಗಳು)	೩ (ಮೂರು ಲೋಕಗಳು)	೧ (ಭೂಮಿ)		
೭	**ಗುಣ**	**ಗಿರಿ**	**ವೇದ**	**ಇಂದು**	೧೪೭೩	ಎಪಿಗ್ರಾಫಿಯಾ ಕರ್ಣಾಟಕಾ-೧೦, ನೆಲಮಂಗಲ-೪೨
	೩ (ಮೂರು ಗುಣಗಳು)	೭ (ಏಳು ಪರ್ವತಗಳು)	೪ (ನಾಲ್ಕು ವೇದಗಳು)	೧ (ಚಂದ್ರ)		
೮	**ಬಾಣ**	**ಪ್ರಾಣ**	**ಪಯೋಧಿ**	**ಶೀತಕರ**	೧೪೫೫	ಸೌತ್ ಇಂಡಿಯನ್ ಇನ್ಸ್‌ಕ್ರಿಪ್‌ಷನ್ಸ್-೯, ಭಾಗ-೨, ಸಂಖ್ಯೆ-೫೫೭ : ಸೌತ್ ಇಂಡಿಯನ್ ಇನ್ಸ್‌ಕ್ರಿಪ್‌ಷನ್ಸ್-೧೭, ಸಂಖ್ಯೆ-೧೦
	೫ (ಮನ್ಮಥನ ಐದು ಬಾಣಗಳು)	೫ (ಪಂಚಪ್ರಾಣಗಳು)	೪ (ಸಮುದ್ರಗಳು)	೧ (ಚಂದ್ರ)		
೯	**ಚಂದ್ರ**	ರಸ	**ಅಮರ**	**ಇಂದ್ರ**	೧೪೬೧	ಸೌತ್ ಇಂಡಿಯನ್ ಇನ್ಸ್‌ಕ್ರಿಪ್‌ಷನ್ಸ್-೧೬, ಸಂಖ್ಯೆ-೧೧೮
	೧ (ಚಂದ್ರ)	೬ (ಆರು ರಸಗಳು) ಋತುಗಳು)	೪ (?) ವೇದಗಳು)	೧ (ಇಂದ್ರ)		
೧೧	**ವಸು**	**ಬಾಣ**	**ಕಲಂಬ**	**ಇಂದು**	೧೫೫೮	A R I E 1972-73. No-A 5
	೮ (ಎಂಟು ಜನ ವಸುಗಳು)	೫ (ಬಾಣ)	೫ (ಬಾಣ)	೧ (ಚಂದ್ರ)		
೧೨	**ಚಂದ್ರ**	ರಸ	**ಅಮರ**	**ಇಂದ್ರ**	೧೪೬೧	ಸೌತ್ ಇಂಡಿಯನ್ ಇನ್ಸ್‌ಕ್ರಿಪ್‌ಷನ್ಸ್-೧೬, ಸಂಖ್ಯೆ-೧೨೦ : ಸೌತ್ ಇಂಡಿಯನ್ ಇನ್ಸ್‌ಕ್ರಿಪ್‌ಷನ್ಸ್-೧೭, ಸಂಖ್ಯೆ-೨೧
	೧ (ಚಂದ್ರ)	೬ (ಆರು ರಸಗಳು)	೪ (?)	೧ (ಇಂದ್ರ)		
೧೩	**ಅವನಿ**	**ಕಾರ್ತಿಕೇಯವದನ**	**ಅಂಬುಧಿ**	ಇಂದು	೧೪೬೧	ಸೌತ್ ಇಂಡಿಯನ್ ಇನ್ಸ್‌ಕ್ರಿಪ್‌ಷನ್ಸ್-೯, ಭಾಗ-೨, ಸಂಖ್ಯೆ-೫೯೩
	೧ (ಭೂಮಿ)	೬ (ಕುಮಾರಸ್ವಾಮಿಯ ಆರು ಮುಖಗಳು)	೪ (ನಾಲ್ಕು ಸಮುದ್ರಗಳು)	೧ (ಚಂದ್ರ)		
೧೪	ಗಮನ	**ಋತು**	ಕಲಂಬ	ಇಂದು	೧೫೬೨	A R I E 1964-65. No-A 39
	೨ (ದೃಷ್ಟಿ)	೬ (ಆರು ಋತುಗಳು)	೫ (ಬಾಣಗಳು)	೧ (ಚಂದ್ರ)		

ಕಟಪಯಾದಿ ಕಾಲಗಣನೆಯು ಪ್ರಧಾನವಾಗಿ ದಕ್ಷಿಣಭಾರತದಲ್ಲಿ ಹೆಚ್ಚಾಗಿ ಬಳಕೆಯಲ್ಲಿದೆ. ಈ ಪದ್ಧತಿಯು ಪ್ರಾಚೀನ ಭಾರತೀಯ ಗಣಿತಶಾಸ್ತ್ರ ಗ್ರಂಥಗಳಲ್ಲಿಯೇ ಕಂಡುಬರುತ್ತದೆ. ಇದರಲ್ಲಿ ಅಕ್ಷರಗಳನ್ನು ಒಂದು ವರ್ಗವಾಗಿ ವಿಂಗಡಿಸಿಕೊಂಡು ಅವುಗಳಿಗೆ ಸಂಖ್ಯೆಗಳನ್ನು ಸಂಕೇತಗಳಾಗಿ ಬಳಸಲಾಗಿದೆ. ಇದರ ವಿವರವನ್ನು ಕೆಳಗೆ ಕೋಷ್ಟಕದ ಮೂಲಕ ನೀಡಲಾಗಿದೆ. ನಂತರ ಉದಾಹರಣೆಗಳನ್ನು ನೀಡಲಾಗಿದೆ.

ಕಟಪಯಾದಿ (ಅಕ್ಷರಸಂಖ್ಯೆ) ಸೂತ್ರದ ನಕ್ಷೆ

ಕಟಪಯಾದಿ ಸಂಖ್ಯೆ		೧	೨	೩	೪	೫	೬	೭	೮	೯	೦
ವರ್ಗೀಯ ವ್ಯಂಜನಗಳು	ಕಾ ದಿ ನವ	ಕ	ಖ	ಗ	ಘ	ಙ	ಚ	ಛ	ಜ	ಝ	ಞ
ವರ್ಗೀಯ ವ್ಯಂಜನಗಳು	ಟಾ ದಿ ನವ	ಟ	ಠ	ಡ	ಢ	ಣ	ತ	ಥ	ದ	ಧ	ನ
ವರ್ಗೀಯ ವ್ಯಂಜನಗಳು	ಪಾ ದಿ ಪಂಚ	ಪ	ಫ	ಬ	ಭ	ಮ					
ಅವರ್ಗೀಯ ವ್ಯಂಜನಗಳು	ಯಾ ದಿ ಅಷ್ಟ	ಯ	ರ	ಲ	ವ	ಶ	ಷ	ಸ	ಹ		
ಅವರ್ಗೀಯ ವ್ಯಂಜನಗಳು (ಮಂಗರಾಜ ನಿಘಂಟಿನಂತೆ. ಕ್ರಿ.ಶ. ೧೩೯೮-೯೯)	ಯಾ ದಿ ನವ	ಯ	ರ	ಲ	ವ	ಶ	ಷ	ಸ	ಹ	ಳ	

ಶಾಸನೋಕ್ತ ಕಟಪಯಾದಿ ಕಾಲಗಣನೆಯ ಕೆಲವು ಉದಾಹರಣೆಗಳು

ಕ್ರಮ ಸಂಖ್ಯೆ	ಕಟಪಯಾದಿ ಕಾಲಗಣನಾ ಶಬ್ದಗಳ ಪ್ರಯೋಗ	ಶಕವರ್ಷ	ಪ್ರಕಟಿತ ಆಕರ	ಹೆಚ್ಚಿನ ವಿವರಗಳು
೧	ಶಕಾಬ್ದೇ ರಂಗಲೋಕಾಬ್ದೇ	ಶಕ ೧೩೩೨	ಎಪಿಗ್ರಾಫಿಯಾ ಕರ್ನಾಟಿಕಾ-೯ (ಬೆಂಗಳೂರು, ರೈಸ್ ಆವೃತ್ತಿ). ಹೊಸಕೋಟೆ-೩೪, ಸಾಲು-೩೪	ಶಾಸನದಲ್ಲಿ ಶಕಾಬ್ದೇ ರಂಗಲೋಕಬ್ದೇ ಎಂದಿದೆ. ಇದು ಅಶುದ್ಧಪಾಠವಾದ ಕಾರಣ ಶುದ್ಧಪಾಠವನ್ನು ದಾಖಲಿಸಿದ್ದೇವೆ
೨	ಭಾವಾಭಯಾ ಸಾಂಖ್ಯಕೇ	ಶಕ ೧೪೪೪	ಎಪಿಗ್ರಾಫಿಯಾ ಕರ್ನಾಟಿಕಾ (ಬೆಂಗಳೂರು ಜಿಲ್ಲೆಯ ಆಧ್ಯತನ ಪುರವಣಿ), ಬೆಂಗಳೂರು-೧೪೫, ಸಾಲು-೨೩	ಕಡತದಲ್ಲಿ ದಾಖಲಾಗಿರುವ ಮೂಲಶಾಸನದ ನಕಲು ಪ್ರತಿ ಇದಾಗಿದೆ
೩	ಕಟಕಮುಕ್ತಲತಂ ಚಯಿತ್ರ ಮಾಸ	ಶಕ ೧೧೧೫	ಎಪಿಗ್ರಾಫಿಯಾ ಕರ್ನಾಟಿಕಾ-೭, ಭಾಗ-೧ (ಶಿವಮೊಗ್ಗ, ರೈಸ್ ಆವೃತ್ತಿ). ಶಿಕಾರಿಪುರ-೧೨, ಸಾಲು-೯	ಒಂದು ಮೂಲ ಶಾಸನದ ನಕಲು ಪ್ರತಿಯಾದ ಕಾರಣ ಶಾಸನ ಸಂಪುಟದಲ್ಲಿ ಸಾಲುಗಳ ಸಂಖ್ಯೆ ದಾಖಲಿಸಿಲ್ಲ
೪	ಕಟಕಮುಕ್ತಲಿತ ಚೈತ್ರಮಾಸೇ	ಶಕ ೧೧೧೫	ಎಪಿಗ್ರಾಫಿಯಾ ಕರ್ನಾಟಿಕಾ-೭, ಭಾಗ-೧ (ಶಿವಮೊಗ್ಗ, ರೈಸ್ ಆವೃತ್ತಿ). ಶಿಕಾರಿಪುರ-೪೫, ಸಾಲು-೧೨	
೫	ಕಟಕಮುಕ್ತಲಿತಾ ವೈತ್ರಮಾಸೇ	ಶಕ ೧೧೧೫	ಎಪಿಗ್ರಾಫಿಯಾ ಕರ್ನಾಟಿಕಾ-೭, ಭಾಗ-೧ (ಶಿವಮೊಗ್ಗ, ರೈಸ್ ಆವೃತ್ತಿ). ಶಿಕಾರಿಪುರ-೮೩, ಸಾಲು-೧೮	ಶಾಸನದಲ್ಲಿ ಕಟ್ಟಕ ಎಂದಿದೆ. ಇದನ್ನು ನಾವು ಇತರ ಶಾಸನಗಳ ಪಾಠದ ಆಧಾರದ ಮೇಲೆ ಕಟಕ ಎಂದು ದಾಖಲಿಸಿದ್ದೇವೆ.
೬	ಶಕಾಬ್ದೇ ರಾಮಲೋಕೇಯುತೇ ಸಾಧಾರಣಾಖ್ಯಯೇ	ಶಕ ೧೩೫೨	ಎಪಿಗ್ರಾಫಿಯಾ ಕರ್ನಾಟಿಕಾ-೬ (ಮಂಡ್ಯ, ಪರಿಷ್ಕೃತ). ಶ್ರೀರಂಗಪಟ್ಟಣ-೨೫, ಸಾಲು-೨೩	
೭	ಶಕವರ್ಷ ಮಧ್ಯ ಹಸಿನಯ ಇಶ್ವರ ಸಂವತ್ಸರದ	ಶಕ ೧೦೭೮	ಎಪಿಗ್ರಾಫಿಯಾ ಕರ್ನಾಟಿಕಾ-೩ (ಮೈಸೂರು, ಪರಿಷ್ಕೃತ). ನಂಜನಗೂಡು-೨೪೩, ಸಾಲು-೧, ೨	
೮	ಸೇತುಬಂಧ್ಯೇ ಶಕಾಬ್ದೇ	ಶಕ ೧೪೩೭	ಎಪಿಗ್ರಾಫಿಯಾ ಇಂಡಿಕಾ-೨೯, ಶಾಸನ ಸಂಖ್ಯೆ-೯, ಪುಟ ೭೧-೭೮, ಸಾಲು-೧	ಇದು ತಮಿಳು ಭಾಷೆಯ ಶಾಸನವಾಗಿದ್ದು ಕಾಲ ಮತ್ತು ಕೆಲವು ಹೆಸರುಗಳು ಮಾತ್ರ ಸಂಸ್ಕೃತ ಭಾಷೆಯಲ್ಲಿವೆ.
೯	ಶುಭಮಸ್ತು ಭೌಮೇಘೂಪೇ ಶಕಾಬ್ದೇ ಸಕಲ ಸುಖರೇ ನಂದನಾಖ್ಯಯೇ	ಶಕ ೧೪೫೪	ಕನ್ನಡ ವಿಶ್ವವಿದ್ಯಾಲಯದ ಶಾಸನ ಸಂಪುಟ-೩ (ಹಂಪಿ, ಬಳ್ಳಾರಿ ಜಿಲ್ಲೆ) ಸಂಖ್ಯೆ-೨೧೩, ಸಾಲು-೧	
೧೦	ತಪಭಟ ಗಣಿತೇ	ಶಕ ೧೪೪೩	ಸೌತ್ ಇಂಡಿಯನ್ ಇನ್ಸ್ಕ್ರಿಪ್ಷನ್ಸ್-೨೭, ಸಂಖ್ಯೆ-೧೭೧, ಸಾಲು-೩	ಈ ಶಿಲಾಶಾಸನದಲ್ಲಿ ಶಕವರ್ಷ ೧೪೪೫, ಚಿತ್ರಭಾನು, ಮಾಘ ಶುದ್ಧ ೫ ಎಂದು ಕೂಡ ಕಾಲವನ್ನು ಹೇಳಲಾಗಿದೆ. ಆದರೆ ಕಟಪಯಾದಿ ಪದ್ಧತಿಯಲ್ಲಿ ಶಕ ೧೪೪೩ ಸ್ವಭಾನು ಸಂವತ್ಸರ ಎಂದು ಹೇಳಲಾಗಿದ್ದು ಸರಿಯಾಗಿ ಹೊಂದುವುದಿಲ್ಲ. ಶಕ ೧೪೪೩ ರಲ್ಲಿ ತಾರಣ ಸಂವತ್ಸರ ಬರುತ್ತದೆ.
೧೧	ಶ್ರೀಗಂಗಾಖ್ಯೇ ೧೩೩೨ ಶಕಾಬ್ದೇ	ಶಕ ೧೩೩೨	ಎಪಿಗ್ರಾಫಿಯಾ ಕರ್ನಾಟಿಕಾ, ಸಂಪುಟ-೧೫ (ಹಾಸನ ಜಿಲ್ಲೆಯ ಪುರವಣಿ ಸಂಪುಟ) ಹೊಳೆನರಸೀಪುರ-೧೨೩, ಪುಟ ೧೪೯-೧೫೧	ಈ ಶಾಸನವು ಮೂಲ ತಾಮ್ರಶಾಸನದ ನಕಲು ಪ್ರತಿಯಾಗಿದ್ದು ಕೂಟಶಾಸನವಾಗಿದೆ. ಇದರಲ್ಲಿ ಕಾಲವನ್ನು ಕಟಪಯಾದಿ ಸಂಖ್ಯಾವಾಚಕ ಮತ್ತು ಸಂಖ್ಯೆಗಳೆರಡರಲ್ಲೂ ಹೇಳಲಾಗಿದೆ
೧೨	ಸ್ಥಿರಭಾಗ್ಯೇ ಶಕಸಖ್ಯಬ್ದೇ	ಶಕ ೧೪೨೭	ಎಪಿಗ್ರಾಫಿಯಾ ಕರ್ನಾಟಿಕಾ-೧೦ (ಕೋಲಾರ, ರೈಸ್ ಆವೃತ್ತಿ). ಗೌರಿಬಿದನೂರು-೭೭, ಸಾಲು-೪೯, ಪುಟ ೨೩೧	
೧೩	ಭಾಗ್ಯಭಾಗ್ಯೇ	ಶಕ ೧೪೧೪	[ಎಪಿಗ್ರಾಫಿಯಾ ಕರ್ನಾಟಿಕಾ-೩ (ಪರಿಷ್ಕೃತ). ಹೆಗ್ಗಡದೇವನಕೋಟೆ-೮೯]	
೧೪	ಶ್ರೋಧಿಇವಸೇ ಸನ್ಯಭೂಣ್ ೧೪೦೭ ಗಣಿತೇ	ಶಕ ೧೪೦೭	Jaina Bronzes in the Kannada Research Institute Museum-S.Rajashekhara, K.P. Iranna, K.R.I., K.U., Dharwad, 1985,page 25, line-25	ಇದರಲ್ಲಿ ಕಾಲವನ್ನು ಕಟಪಯಾದಿ ಸಂಖ್ಯಾವಾಚಕ ಮತ್ತು ಸಂಖ್ಯೆಗಳೆರಡರಲ್ಲೂ ಹೇಳಲಾಗಿದೆ.
೧೫	ತತ್ತ್ವಲೋಕೇ ಶಕಾಬ್ದೇ	ಶಕ ೧೩೩೩	ಎಪಿಗ್ರಾಫಿಯಾ ಇಂಡಿಕಾ-೩, ಶಾಸನ ಸಂಖ್ಯೆ-೫, ಪುಟ ೩೫, ಸಾಲು ೪೦-೪೧	

ಆಧಾರಸೂಚಿ

1. A New system of the sixty year cycle of the jupiter- J.F.Fleet, *Indian Antiquary*, volume- 18, 1889, page 221-224.
2. A Note on the epoch and reckoing of the saka era-J.F.Fleet, *Indian Antiquary*, volume-17, 1888, page 205-210.
3. A Table for the Adapa tithi-Shuddi and Tithi Kendra-Shankar Balkrishna Dikshit, *Indian Antiquary*, volume-17, 1888, page 268-272.
4. *Andra Chronology*, V. Ramesam, published by K.Mahadevan, Mylapore, Madras-1946.
5. A Table of Intercalary and expanged months of Hindu Calendar-J.F.Fleet, *Indian Antiquary*, Volume-23, 1894, page 104-108.
6. *Ancient Indian Chronology*, Prabodh Chandra Sengupta, University of Calcutta-1947.
7. *Calcualations of Hindu dates*, J.F. Fleet., *Indian Antiquary*, **volume-16,** page 42-45., 45-46., 74.,74 -75.,109-110.,197-198. **volume-17,** page 23-24.,141.,141-142.,142-143., 210-211., 211-213.,239-241., 241.,264-265. 265-266., 266-267., 297-299., 299-300., 300-301. **volume-18,** 1889, page 30-31., 55-56., 56., 90., 90-91., 91.,127-128.,128., 285-287., 316-317., 41-43., 70-72, 102-103., 129-130.,155-157., **volume-19,** 1890, page 187-188.,317-318., 440-442., 35., **volume-20,** 1891, page 191.
8. Examination of Questions connected with the Vikrama Era-F.Kielhorn, Indian Antiquary, Volume-19, 1890, Page 20-40, 166-187, 354-374; *Indian Antiquary*, volume-20, 1891, p. 124-142, 397-414.
9. Festal days of the Hindu Lunar Calendar-F.Kielhorn, *Indian Antiquary*, Volume-26, 1897, page 177-187
10. Miscellaneous dates of Inscriptions- F. Kielhorn, *Indian Antiquary*, Vol.25, 1896, p. 345-346.
11. Methods and tables for verifying Hindu Dates, Tithis, Eclipses, Nakashtras & Co –H.Jakobi *Indian Antiquary*, volume-17, 1888, page 145-181.
12. On the dates of the saka era in Inscriptions-F. Kielhorn., *Indian Antiquary*, **Volume-23,** 1894, Page 113-134., **Volume-24,** 1895 Page 1-17.,181-211., **Volume-25,** 1896 Page 266-272., 289-294. **Volume-26,** 1897 Page 146-153.
13. Romaka Sidantas-J.Burgess, *Indian Antiquary*, Volume-19, 1890, Page 284-285.
14. Selected Dates from the Epigraphia Carnatica, F.Kielhorn, *Indian Antiquary*, Volume-26, 1897, page 329-333.
15. Some saka dates in Inscriptions-A, Venkatasubbiah, N.Subramaniam & Co, Chamraja Mohalla, Mysore-1918.
16. The Original Surya Siddhanta-Shankar Balkrishna Dikshit, *Indian Antiquary*, Volume-19, 1890, Page 45-54.
17. The Romaka Sidantas- Shankar Balkrishna Dikshit, *Indian Antiquary*, Volume-19, 1890, Page 133-142.
18. The Pancha Sidantika-Shankar Balkrishna Dikshit, *Indian Antiquary*, Vol.19, 1890, P. 439-440.
19. The Malava Era-F.Kielhorn, *Indian Antiquary*, Volume-19, 1890, Page 316.
20. The Sayana panchanga for the Saka year 1811- F.Kielhorn, *Indian Antiquary*, Volume- 19, 1890, Page 256-260.
21. The Pulisa Siddanta-J.Burgess, *Indian Antiquary*, Volume-19, 1890, Page 316.
22. The Indian Calendar-Robert Sehram, *Indian Antiquary*, Volume-25, 1896, page 287-288.
23. The Twelve year cycle of Jupiter-Shankar Balkrishna Dikshit, *Indian Antiquary*, Volume-17, 1888, page 1-7, 312-317.
24. The Sixty Year cycle of Jupiter- F.Kielhorn, *Indian Antiquary*, Vol.18, 1889, p. 193-209, 380-386.
25. Tables for the approximate conversion of hindu dates-robert schram, *Indian Antiquary*, Volume-18, 1889, page 290-300.

26. The method of calculating the week days of Hindu Thitis and corresponding English Dates-Shankar Balkrishna Dikshit, Indian Antiquary Volume-16,1887, page 113-122.
27. The computation of Hindu dates in Inscriptions & co,H.Jakobi,Epigraphia Indica,Volume- 1, Archaeological Survey of India,1892, page 403-460.
28. Table for calculating Hindu dates in true local time-H.Jakobi, Epigraphia Indica,Volume-2, Archeological Survey of India,1894,page 487-498.
29. The Chronology of Modern India-[1494 A.D to 1894 A.D]-James Burgess,Edinburgh , John garnt,31 Jeorge 4,Bridge-1913.
30. The Indian Calendar-Robert Sewell,Shankar Balakrishna Dikshit, Robert Schram, Swan, Sonnenschein and Co Ltd,London-1896.
31. Warrens rules for finding Jupiter place- F.Kielhorn,*Indian Antiquary,* Volume- 25,1896,page 233-237.
32. A Note on the epoch and reckoing of the Saka Era- J.F.Fleet, *Indian Antiquary,* volume-17 1888,page 205-210.
33. Festal days of the Hindu Lunar Calendar- F. Kielhorn,*Indian Antiquary*, Volume-26, 1897, page 177-187.
34. Methods and tables for verifying Hindu Dates, Tithis, Eclipses, Nakashtras & Co –H. Jakobi *Indian Antiquary*, volume-17, 1888, page 145-181.

Elements of South Indian palaeography-ಎ.ಸಿ. ಬರ್ನೆಲ್. London,Trubner & co.-1878 Second,Improved Edition.

Some Saka Dates in Inscriptions- A.Venkatasubbiah, N.Subramaniam & Co,Chamraja Mohalla, Mysore-1918.

Indian Epigraphy-D. C. Sirkar , Motilal Banarasidas, New Delhi-1965 ,1996.

Shalivahana And Saka Era- G. S. Gai, Studies In Indian History And Culture, Shri Hari Prakashana, Dharawad-1992.Page.56-59 .

ಪುರಾತತ್ತ್ವ ಶೋಧನೆ–ಡಾ॥ ಎಸ್. ಶ್ರೀಕಂಠಶಾಸ್ತ್ರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–೧೯೬೦, ೧೯೭೫.

Salivahana Era And Earliest Date- ಡಾ॥ ಎಸ್. ಶ್ರೀಕಂಠಶಾಸ್ತ್ರಿ, Q.J.M.S 17-4,1927,Page.334-337.

Salivahana Saka- ಡಾ॥ ಎಸ್. ಶ್ರೀಕಂಠಶಾಸ್ತ್ರಿ, Q.J.M.S 18-3, 1928, Page.230-231.

Who is the founder of the Saka Era- M. Govind Pai, Indiana, Rashtrakavi Govind Pai Samshodhana Kendra, Udupi-1997,Page.75-134.

Indian Ephimeries- Swamikannu Pillai , Agam Kala Prakashan, Delhi-1982 (Volumes 1 To 6 Reprint)., Volume-1 ,Part-1 [General Principles And Tables].

Volume-1,Part-2 [Method Of The Ephemeris ,Illvstrations From South Indian Chronology, Ephemeris 700 A.D. 799 A.D], **Volume-2** [800 A.D.-999 A.D], **Volume-3** [1000 A.D-1199 A.D],**Volume-4** [1200 A.D-1399 A.D], **Volume-5** [1400 A.D-1599 A.D],**Volume-6** [1600 A.D-1799 A.D], **Volume-7** [1800 A.D-2000 A.D]–ಪ್ರಥಮ ಮುದ್ರಣ –೧೯೧೫.

ಗ್ರಂಥ ರಚನಾ ಕಾಲನಿರ್ಣಯ–ಗರ್ಗೇಶ್ವರಿ ವೆಂಕಟಸುಬ್ಬಯ್ಯ, ಶಾಸ್ತ್ರ ಕುತೂಹಲ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು–೨೦೦೩, ಪುಟ. ೧೧೬–೧೨೮.

ವಡ್ಡವಾರ–ಡಿ.ಎಲ್. ನರಸಿಂಹಾಚಾರ್, ಪೀಠಿಕೆಗಳು, ಲೇಖನಗಳು, ಡಿ.ವಿ.ಕೆ. ಮೂರ್ತಿ, ಮೈಸೂರು–೧೯೭೧, ೨೦೦೫.

History of Dharmashastra- p. v. kane, Volume-5, Part-1 (Vratas, Utsavas & Kala etc), Bhandarkar Oriental Research Institute, Poona-1994.

ಸಂಖ್ಯಾರತ್ನಕೋಶ (ಸಂ) ಎಸ್. ಜಗನ್ನಾಥ, ಪ್ರಕಾಶಕರು :– parimal publications, Delhi-2007.

ಶ್ರೀ ವತ್ಸ ನಿಘಂಟು–ಟಿ.ವಿ. ವೆಂಕಟಾಚಲ ಶಾಸ್ತ್ರೀ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು–೨೦೦೯ ಪರಿಷ್ಕೃತ ತೃತೀಯ ಮುದ್ರಣ.

ಗೋವಿಂದ ಪೈ ಸಂಶೋಧನ ಸಂಪುಟ [(ಸಂ) ಹೆರಂಜೆ ಕೃಷ್ಣಭಟ್ಟ, ಮುರಳೀಧರ ಉಪಾಧ್ಯ ಹಿರಿಯಡಕ], ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ–೧೯೯೫.

Indian epigraphy (Volume-1),K. V. Ramesh, Sundeep Prakashan, Delhi-1984.

ಹೈದರಾಲಿಯ ಬಹು ಅಪರೂಪದ ಬಹಾದೂರಿ ಪಗೋಡಾ

ಮಂದರ್ಕೆ ನಿತ್ಯಾನಂದ ಪೈ*

ಪ್ರಸ್ತಾವನೆ

ಹೈದರಾಲಿಯು ಕ್ರಿ.ಶ. ೧೭೬೧ರಲ್ಲಿ ರಾಜ್ಯವಾಳಲು ಪ್ರಾರಂಭಿಸಿದರೂ, ಕ್ರಿ.ಶ. ೧೭೬೩ರಲ್ಲಿ ಬಿದನೂರನ್ನು (ಈಗಿನ ಶಿವಮೊಗ್ಗಾ ಜಿಲ್ಲೆಯ ನಗರ) ವಶಪಡಿಸಿಕೊಂಡು ಕ್ರಿ.ಶ. ೧೭೬೩ರಲ್ಲಿ ಅಲ್ಲಿ ಟಂಕಸಾಲೆಯನ್ನು ಸ್ಥಾಪಿಸಿದನು. ಆ ಸಮಯದಲ್ಲಿ ಕೆಳದಿ ನಾಯಕರ ಇಕ್ಕೇರಿ ವರಹ ಚಲಾವಣೆಯಲ್ಲಿದ್ದ ಜನಪ್ರಿಯ ಚಿನ್ನದ ನಾಣ್ಯವಾಗಿತ್ತು. ಈ ಇಕ್ಕೇರಿ ವರಹದ ಮುಂಭಾಗದಲ್ಲಿ ಕುಳಿತಿರುವ ಶಿವಪಾರ್ವತಿಯರ ಚಿತ್ರವಿದ್ದು, ಹಿಂಬದಿಯಲ್ಲಿ ಶ್ರೀ ಸದಾಶಿವ ಎಂಬ ನಾಗರಿ ಲಿಪಿ ಇದೆ.


ಇಕ್ಕೇರಿ ವರಹ



ಮುಂಭಾಗ ಹಿಂಭಾಗ

ಹೈದರಾಲಿಯು ತನ್ನ ನಾಣ್ಯದ ಮುಂಭಾಗದಲ್ಲಿ ಇಕ್ಕೇರಿ ವರಹದಲ್ಲಿರುವಂತೆ ಶಿವಪಾರ್ವತಿಯ ಚಿತ್ರವನ್ನು ಅಳವಡಿಸಿ. ಹಿಂಬದಿಯಲ್ಲಿ ನಾಗರಿ ಲಿಪಿಯ ಬದಲಾಗಿ ಚುಕ್ಕೆಗಳ ನಡುವೆ ತನ್ನ ಹೆಸರಿನ ಸಂಕೇತಾಕ್ಷರವಾದ (ϱ) ಯನ್ನು ಪರ್ಷಿಯನ್ ಲಿಪಿಯಲ್ಲಿ ಟಂಕಿಸಿದ.

ಬಹಾದೂರಿ ಪಗೋಡಾ



ಮುಂಭಾಗ ಹಿಂಭಾಗ

ಹೈದರಾಲಿಯ ಈ ನಾಣ್ಯವನ್ನು ಹೈದಾರಿಹುನ್ (ಹೈದಾರಿ ಪಗೋಡಾ) ಅಥವಾ ಬಹಾದೂರಿಹುನ್ (ಬಹಾದೂರಿ ಪಗೋಡಾ) ಎನ್ನುತ್ತಾರೆ. ಇದಿಷ್ಟು ಹೈದರಾಲಿಯ ಶಿವಪಾರ್ವತಿ ಮಾದರಿಯ ನಾಣ್ಯದ ಬಗ್ಗೆ ತಿಳಿದ ವಿಷಯವೇ ಆಗಿದೆ. ಈ ನಾಣ್ಯದ ಹಿಂಭಾಗದಲ್ಲಿರುವ ಪರ್ಷಿಯನ್ 'ಹೆ' (ϱ) ಸಂಕೇತಾಕ್ಷರವು ಅರ್ಧಚಂದ್ರನನ್ನು ಹೋಲುವುದರಿಂದ ಈ ನಾಣ್ಯಗಳನ್ನು 'ಚಂದ್ರಪಡಿ' ಎಂದು ಸಾಗರ, ನಗರದ ಆಸುಪಾಸಿನ ಹಳೆ ತಲೆ[illegible]ವರು ಈಗಲೂ ಹೆಸರಿಸುತ್ತಾರೆ. ಇದುವರೆಗೆ ಹೈದರನು ಈ ಮಾದರಿಯ ಶಿವಪಾರ್ವತಿಯ ನಾಣ್ಯಗಳನ್ನು ಮಾತ್ರ ಟಂಕಿಸಿದ್ದನೆಂದು ನಂಬಲಾಗಿತ್ತು. ಇಂತಹ ನಾಣ್ಯಗಳು ಸಾವಿರಾರು ಸಂಖ್ಯೆಯಲ್ಲಿ ಈಗಲೂ ದೊರಕುತ್ತವೆ.

ಆದರೆ ಹೈದರನು ಇನ್ನೊಂದು ಮಾದರಿಯ ನಾಣ್ಯಗಳನ್ನು ಟಂಕಿಸಿದ್ದನೆಂದು ಈ ಕೆಳಗಿನ ಮಾಹಿತಿಯಿಂದ ತಿಳಿದುಬರುತ್ತದೆ.

1. The coins of Haider Ali and Tipu Sulthan ಪುಸ್ತಕದಲ್ಲಿ ಲೇಖಕ J. R. Hender Son ಹೈದರಾಲಿಯ ಇನ್ನೊಂದು ಮಾದರಿಯ ನಾಣ್ಯದ ಬಗ್ಗೆ ಪ್ರಸ್ತಾಪಿಸಿ, ಇಂತಹ ನಾಣ್ಯಗಳು ಇದುವರೆಗೂ ಲಭ್ಯವಾಗಿಲ್ಲ ಎಂದಿದ್ದಾನೆ.

2. The Story of Indian Coinage (with special reference to the coinage in Mysore)ನ ಲೇಖಕ P. B. Ramachandra ಇಕ್ಕೇರಿ ಪಾಳೇಗಾರರನ್ನು ಹೈದರಾಲಿಯು ಸೋಲಿಸಿ ಸ್ವಭಾನು ಸಂವತ್ಸರ ಕ್ರಿ.ಶ. ೧೭೬೩ರಲ್ಲಿ ಬಿದನೂರಿನಲ್ಲಿ ಟಂಕಸಾಲೆಯನ್ನು ಸ್ಥಾಪಿಸಿದ. ನಗರ (ಬಿದನೂರು)ವನ್ನು ಕೈವಶ ಮಾಡಿಕೊಂಡಾಗ ಅಲ್ಲಿ ವಶಪಡಿಸಿಕೊಂಡ ಅಪಾರವಾದ ಬಂಗಾರ, ಬೆಳ್ಳಿಯನ್ನು ಉಪಯೋಗಿಸಿ ಹೈದಾರಿಹುನ್, ಫನಂ ಮತ್ತು ಬೆಳ್ಳಿಯ ರೂಪಾಯಿಗಳನ್ನು ಟಂಕಿಸಿದ. ಇಂತಹ ನಾಣ್ಯಗಳ ಮೇಲೆ 'ನಗರ' ಟಂಕಸಾಲೆಯ ಹೆಸರಿತ್ತು ಎಂದು ಹೇಳಿದ್ದಾರೆ. ಕಾಲಕ್ರಮೇಣ ನಾಣ್ಯಗಳನ್ನು ಟಂಕಿಸುವ ಅಚ್ಚು ಮತ್ತು ಇತರ ಪರಿಕರಗಳು ಹಳೆಯದಾದ ಮೇಲೆ, ಹೊಸ ಅಚ್ಚುಗಳನ್ನು ತಯಾರಿಸಿ ಹೊಸ ಮಾದರಿಯ ಬಹಾದೂರಿ ಪಗೋಡಾಗಳನ್ನು ಟಂಕಿಸಿದ ಎಂದು ಉಲ್ಲೇಖಿಸಿದ್ದಾರೆ.

ಈ ಮೇಲಿನ ಎರಡು ಉದಾಹರಣೆಗಳಿಂದ ಹೈದರನು ಇನ್ನೊಂದು ಮಾದರಿಯ ಬಹಾದೂರಿ ಪಗೋಡಾಗಳನ್ನು ಟಂಕಿಸಿದ್ದ ಮಾತ್ರವಲ್ಲದೇ ಆ ನಾಣ್ಯಗಳ ಮೇಲೆ ಟಂಕಸಾಲೆಯ ಹೆಸರಿತ್ತು ಎಂಬ ವಿಷಯ ತಿಳಿದು ಬರುತ್ತದೆ. ಹೈದರನು

* ಗಣೇಶ್ ಎಂಟರ್‌ಪ್ರೈಸಸ್, ಹಳೇ ಬಸ್ ನಿಲ್ದಾಣ, ಮೂಡುಬಿದಿರೆ-೫೭೪೨೨೭

ಹೊಸ ಅಚ್ಚುಗಳಿಂದ ತಯಾರಿಸಿದ ಹೊಸ ಮಾದರಿಯ ಬಹಾದೂರಿ ಪಗೋಡಾಗಳು, ನಮಗೆ ಈಗ ಹೇರಳವಾಗಿ ಸಿಗುವ ಅಂದರೆ ಮುಂಭಾಗದಲ್ಲಿ ಶಿವಪಾರ್ವತಿಯ ಚಿತ್ರವಿರುವ ಮತ್ತು ಹಿಂಬದಿಯಲ್ಲಿ ಚುಕ್ಕಿಗಳ ನಡುವೆ 'ಹೆ' ಸಂಕೇತಾಕ್ಷರವಿರುವ ಬಹಾದೂರಿ ಪಗೋಡಾವಾಗಿದೆ. ಆದರೆ ನಾಣ್ಯಗಳ ಹಿಂಭಾಗದಲ್ಲಿ 'ನಗರ' ಟಂಕಸಾಲೆಯ ಹೆಸರಿರುವ ಬಹಾದೂರಿ ಪಗೋಡಾಗಳು ನಮಗೆ ಇದುವರೆಗೂ ದೊರಕದೆ ಇರುವುದರಿಂದ ಆ ನಾಣ್ಯವು ಯಾವುದೆಂಬುದು ಪ್ರಶ್ನೆಯಾಗಿಯೇ ಉಳಿದಿತ್ತು.

ಆದರೆ ಸುಮಾರು ೧೨೦ ವರ್ಷಗಳ ಹಿಂದೆ ಶಿವಮೊಗ್ಗಾ ಜಿಲ್ಲೆಯ 'ನಗರ' ಪ್ರದೇಶದಿಂದ ವಲಸೆ ಬಂದು ದಕ್ಷಿಣಕನ್ನಡ ಜಿಲ್ಲೆಯಲ್ಲಿ ನೆಲಸಿರುವ ಕಂಶ ಗೋತ್ರದ ಬ್ರಾಹ್ಮಣ ಕುಟುಂಬವೊಂದರ ಮನೆಯಲ್ಲಿರುವ ಪೂಜಾ ಕರಂಡದಲ್ಲಿ ಕೆಲವು ಚಿನ್ನದ ನಾಣ್ಯಗಳಿರುವ ವಿಷಯ ಇತ್ತೀಚೆಗೆ ನನಗೆ ತಿಳಿದು ಬಂತು. ನನ್ನ ನಾಣ್ಯ ಸಂಗ್ರಹವನ್ನು ನೋಡಿದ ಮೇಲೆ ಆ ಕುಟುಂಬದ ಹಿರಿಯರು ಅವರಲ್ಲಿ ಪೂಜೆ ಸಲ್ಲುತ್ತಿರುವ ನಾಣ್ಯಗಳನ್ನು ತೋರಿಸಿದರು. ಆ ನಾಣ್ಯಗಳನ್ನು ಪರಿಶೀಲಿಸಿದಾಗ ಅದರಲ್ಲಿ ವಿಜಯನಗರದ ದೊರೆ ಕೃಷ್ಣದೇವರಾಯನ ಬಾಲಕೃಷ್ಣನ ಚಿತ್ರವಿರುವ ೨ ವರಹಗಳು ಮತ್ತು ಹೈದರಾಲಿಯ ೧ ಬಹಾದೂರಿ ಪಗೋಡಾಗಳಿದ್ದವು. ಆದರೆ ಆ ನಾಣ್ಯಕ್ಕೆ ಮೆತ್ತಿರುವ ಕುಂಕುಮವನ್ನು ತೆಗೆದು ಶುಚಿಗೊಳಿಸಿದಾಗ ನನ್ನ ಕಣ್ಣನ್ನೇ ನಂಬದಾದೆ. ನನ್ನ ಕೈಯಲ್ಲಿರುವ ಈ ಚಿನ್ನದ ನಾಣ್ಯವು ಇದುವರೆಗೂ ಅಲಭ್ಯವಾಗಿದ್ದ ಹೈದರಾಲಿಯ ಇನ್ನೊಂದು ಮಾದರಿಯ ಅಪರೂಪದ ಬಹಾದೂರು ಪಗೋಡಾ ಆಗಿತ್ತು.

ನಾಣ್ಯದ ವಿವರ

ತೂಕ:ಸುಮಾರು ೩.೪೫ ಗ್ರಾಂ.ಲೋಹ: ಚಿನ್ನ, ವ್ಯಾಸ : ೧.೨ ಸೆ.ಮೀ.


ಮುಂಭಾಗ


ಹಿಂಭಾಗ

ಮುಂಬದಿ: ಶಿವ ಪಾರ್ವತಿ ಚಿತ್ರವಿದ್ದು, ಶಿವನ ಎಡಭಾಗದಲ್ಲಿ ಪಾರ್ವತಿ, ಮೇಲ್ಗಡೆ ಚಂದ್ರ ಸೂರ್ಯ ರಿದ್ದಾರೆ. ಶಿವನ ಬಲಕೈಯಲ್ಲಿ ತ್ರಿಶೂಲವಿದ್ದು, ಮಣಿಗಳ ಸೊಂಟ ಪಟ್ಟಿಯನ್ನು ಧರಿಸಿದ್ದಾನೆ. ಆದರೆ ಶಿವಪಾರ್ವತಿಯ ಚಿತ್ರವು ಹೈದರನ ಇನ್ನೊಂದು ಮಾದರಿಯ ಪಗೋಡಾ ಮತ್ತು ಇಕ್ಕೇರಿ ವರಹದಲ್ಲಿರುವಂತೆ ಕಲಾತ್ಮಕವಾಗಿಲ್ಲ.

ಹಿಂಬದಿ : ಚುಕ್ಕೆಗಳ ಮಧ್ಯೆ 'ಹೆ' ನಡುವೆ ಅಂಕೆ ೪, ಬಲಬದಿಯಲ್ಲಿ 'ನಗರ' ಟಂಕಸಾಲೆಯ ಹೆಸರು ಎಲ್ಲವೂ ಪರ್ಷಿಯನ್ ಲಿಪಿಯಲ್ಲಿದೆ.

ಹೈದರನು ಕ್ರಿ.ಶ. ೧೭೬೧ರಲ್ಲಿ ರಾಜ್ಯಭಾರ ಆರಂಭಿಸಿ ಕ್ರಿ.ಶ. ೧೭೬೫ರಲ್ಲಿ ಬಿದನೂರಿ (ನಗರ)ನಲ್ಲಿ ಟಂಕಸಾಲೆಯನ್ನು ಪ್ರಾರಂಭಿಸಿದ್ದು ಈಗಾಗಲೇ ತಿಳಿದ ವಿಷಯವಾಗಿದೆ. ನಾಣ್ಯದ ಮೇಲಿರುವ ಪರ್ಷಿಯನ್ ಅಂಕೆ '೪' ಹೈದರನ ಆಳ್ವಿಕೆಯ ನಾಲ್ಕನೇ ವರ್ಷವನ್ನು ಸೂಚಿಸುತ್ತದೆ. ಆದ್ದರಿಂದ ಪ್ರಸ್ತುತ ಈ ಚಿನ್ನದ ನಾಣ್ಯವು 'ನಗರ' ಟಂಕಸಾಲೆಯಲ್ಲಿ ಪ್ರಥಮತಃ ಟಂಕಿಸಲ್ಪಟ್ಟ ಹೈದಾರಿಹುನ್ ಅಥವಾ ಬಹಾದೂರಿಹುನ್ ಆಗಿದ್ದು ಇದರ ಮುಂಭಾಗದ ಶಿವಪಾರ್ವತಿಯ ಚಿತ್ರವು ಆ ಸಮಯದಲ್ಲಿ ಚಲಾವಣೆಯಲ್ಲಿದ್ದ ಇಕ್ಕೇರಿ ವರಹಕ್ಕಿಂತ ಭಿನ್ನವಾಗಿರುವುದರಿಂದ ಪ್ರಜೆಗಳಿಂದ ಸ್ವೀಕೃತವಾಗದೇ ಇದ್ದಿರಬಹುದು. ಆದ್ದರಿಂದ ಹೈದರಾಲಿಯು ಈ ಬಹಾದೂರಿ ಪಗೋಡಾವನ್ನು ಚಲಾವಣೆಯಿಂದ ಹಿಂತೆಗೆದು ಕರಗಿಸಿ ಹೊಸ ವಿನ್ಯಾಸದ ಅಂದರೆ ಇಕ್ಕೇರಿ ವರಹದ ಮುಂಭಾಗ ದಲ್ಲಿರುವ ಶಿವಪಾರ್ವತಿ ಮಾದರಿಯ ನಾಣ್ಯಗಳನ್ನು ಟಂಕಿಸಿರ ಬಹುದು. ಇದುವೇ ಈಗ ಬಹುಸಂಖ್ಯೆಯಲ್ಲಿ ಲಬ್ಧವಾಗಿರುವ ಹೈದರನ ಹೊಸ ಬಹಾದೂರಿ ಪಗೋಡಾವಾಗಿದೆ.

ಟಿಪ್ಪು ನಾಣ್ಯ


ಹಿಂಬದಿ

ಪ್ರಸ್ತುತ ಪ್ರಕಟಿಸಿರುವ ಹೈದರನ ಈ ಅಪರೂಪದ ಬಹಾದೂರಿ ಪಗೋಡಾದಲ್ಲಿರುವ ಹಿಂಬದಿ ವಿನ್ಯಾಸ ವನ್ನು ಸ್ವಲ್ಪ ಮಟ್ಟಿನ ಮಾರ್ಪಾಡಿ ನೊಂದಿಗೆ, ಅವನ ಮಗನಾದ ಟಿಪ್ಪು ಸುಲ್ತಾನನು ತನ್ನ 'ನಗರ' ಟಂಕಸಾಲೆಯ ಚಿನ್ನದ ನಾಣ್ಯಗಳ ಹಿಂಬದಿಗೆ ಅಳವಡಿಸಿ ಕೊಂಡದ್ದು ವಿಶೇಷವಾಗಿದೆ.

ಹೈದರಾಲಿಯ ಈ ಅಪರೂಪದ ಚಿನ್ನದ ನಾಣ್ಯದ ಲಭ್ಯತೆಯಿಂದ ಹೈದರನ ನಾಣ್ಯಶೃಂಖಲೆಗೆ ಹೊಸತೊಂದು ಕೊಂಡಿ ಸೇರ್ಪಡೆಗೊಂಡಂತಾಗಿದೆ.

[ಕೃತಜ್ಞತೆಗಳು : ಈ ನಾಣ್ಯವನ್ನು ಪ್ರಕಟಿಸಲು ಅನುಮತಿ ಕೊಟ್ಟ ಶ್ರೀ ನಗರ ವೇದಾಂತ ಭಟ್ ಮತ್ತು ಕುಟುಂಬಸ್ಥರಿಗೆ ಹಾಗೂ ಈ ಪ್ರಬಂಧ ಮಂಡಿಸಲು ಅಮೂಲ್ಯವಾದ ಮಾಹಿತಿಕೊಟ್ಟ ಶ್ರೀಮತಿ ಜೋತ್ಸ್ನಾ ಕೆ. ಕಾಮತ್ ಇವರಿಗೂ ಕೃತಜ್ಞತೆಗಳು.]

ಆಧಾರಸೂಚಿ

೧. J.R. Henderson, *The Coins of Haider Ali and Tipu Sulthan.*

೨. P.B. Ramachandra Rao, *the Story of the Indian Coinage* (with special references to the Coinage in Mysore).

೩. Dr. A.V. Narasimha Murthy, *coins and currency system in India.*

೨೮

ಹವ್ಯಾಸಿ ನಾಣ್ಯ ಸಂಗ್ರಹಕಾರರಲ್ಲಿ ದೊರೆತ ಇಂಡೋ-ಗ್ರೀಕ್, (ಬ್ಯಾಕ್ಟ್ರಿಯನ್ ದೊರೆ) ಮತ್ತು ಟೀಪು ಸುಲ್ತಾನ್ ಕಾಲದ ತಾಮ್ರದ ನಾಣ್ಯಗಳು

ಬಿ.ಎಸ್. ಗುರುಪ್ರಸಾದ್*

ಇತ್ತೀಚೆಗೆ ನಾನು ಒಬ್ಬ ಹವ್ಯಾಸಿ ನಾಣ್ಯ ಸಂಗ್ರಹಕಾರರಾದ ಶ್ರೀ ಬಿ.ಎಸ್. ನಟರಾಜ್, ಬೆಂಗಳೂರು ಅವರನ್ನು ಭೇಟಿ ಮಾಡಿದ ಸಂದರ್ಭದಲ್ಲಿ, ಅವರು ಕೆಲವು ಅಪರೂಪದ ನಾಣ್ಯಗಳು ತಮ್ಮ ಬಳಿ ಇವೆಯೆಂದೂ ಮತ್ತು ಅವುಗಳ ಬಗ್ಗೆ ತಮಗೆ ಯಾವ ಮಾಹಿತಿಯಾಗಲೀ/ವಿವರಗಳಾಗಲೀ ದೊರೆಯುತ್ತಿಲ್ಲವೆಂದು ತಿಳಿಸಿದರು. ಅವರು ಈಗಷ್ಟೆ ನಾಣ್ಯ ಸಂಗ್ರಹದ ಹವ್ಯಾಸದಲ್ಲಿ ತಮ್ಮನ್ನು ತೊಡಗಿಸಿಕೊಂಡವರು. ಅವರ ಸಂಗ್ರಹದಲ್ಲಿರುವ ನಾಣ್ಯಗಳೆಲ್ಲಾ, ಅವರ ಪೂರ್ವಿಕರು ಸಂಗ್ರಹಿಸಿರುವ ನಾಣ್ಯಗಳಾಗಿವೆ. ಈಸ್ಟ್ ಇಂಡಿಯಾ ಕಂಪೆನಿಯ ನಾಣ್ಯಗಳು ಬಹು ಸಂಖ್ಯೆಯಲ್ಲಿವೆ. ಅವರ ಬಳಿ ಆಲ್ಬಂ ಇಲ್ಲದ ಕಾರಣ, ಒಂದು ಆಲ್ಬಂನ್ನು ಖರೀದಿಸಿ, ನಾಣ್ಯಗಳನ್ನು ವ್ಯವಸ್ಥಿತ ರೀತಿಯಲ್ಲಿ ಪ್ರದರ್ಶನ ಮಾಡುವ ವಿಧಾನವನ್ನು ಅವರಿಗೆ ತಿಳಿಸಲಾಯಿತು. ಆ ಕಾರ್ಯದಲ್ಲಿ ಅವರು ಈಗ ನಿರತರಾಗಿದ್ದಾರೆ. ನನ್ನ ಗಮನ ಸೆಳೆದ, ಅವರ ಬಳಿಯಿರುವ "ಅಪರೂಪದ ನಾಣ್ಯಗಳು" ಯಾವುದೆಂದು ಪರಿಶೀಲಿಸಲಾಗಿ, ಅವುಗಳು ಈ ಕೆಳಕಂಡಂತೆ ಇವೆ. ಅವುಗಳನ್ನು ಈ ಸಂಪ್ರಬಂಧದ ಮೂಲಕ ಇತಿಹಾಸಕ್ತರ ಗಮನಕ್ಕೆ ತರುತ್ತಿದ್ದೇನೆ.

೧. ಇಂಡೋ-ಗ್ರೀಕ್ ನಾಣ್ಯ

ಈ ನಾಣ್ಯ ದ್ವಿಮುಖ ಮುದ್ರಾ ವಿಧಾನದ ತಾಂತ್ರಿಕತೆಯಲ್ಲಿ ತಯಾರಿಸಿದ ನಾಣ್ಯ (Die Struck Coin)


ಲೋಹ : ತಾಮ್ರ ತೂಕ : 10.4 gms ಅಗಲ : 2.5 cms

ವ್ಯಾಸ : 8 cms ಆಕಾರ : ವೃತ್ತಾಕಾರ

ಮುಮ್ಮುಖ

ಶಿರಸ್ತ್ರಾಣ ಧರಿಸಿ (Diadem)- ಬಲಕ್ಕೆ ತಿರುಗಿರುವ "ಹಿಪ್ಪೋ ಸ್ಟ್ರಾಟಸ್"ನ ಮುಖ ನಾಣ್ಯದ ಮಧ್ಯದಲ್ಲಿದೆ.

ಇಂಡೋ-ಗ್ರೀಕ್ ನಾಣ್ಯ



ಹಿಮ್ಮುಖ

ಹಿಂಗಾಲಿನಿಂದ ಚಿಮ್ಮುತ್ತಿರುವ ಭಂಗಿಯ ಕುದುರೆಯ ಮೇಲೆ ಕುಳಿತಿರುವ ಸವಾರ. ಕುದುರೆ ಬಲಕ್ಕೆ ಚಲಿಸುತ್ತಿದೆ.

ಮುಮ್ಮುಖದಲ್ಲಿರುವ ಬರಹ : ನಾಣ್ಯದ ಸುತ್ತಲೂ ವೃತ್ತಾಕಾರದಲ್ಲಿ ಗ್ರೀಕ್ ಭಾಷೆಯಲ್ಲಿ ಗ್ರೀಕ್ ಲಿಪಿಯಲ್ಲಿ "ಬ್ಯಾಸಿಲಿಯೋಸ್ ಸೋಟೆರೋಸ್ ಇಪ್ಪೊಸ್ಟ್ರಾಟಸ್" ಎಂದು ಅಚ್ಚಾಗಿದೆ.

ಹಿಮ್ಮುಖದಲ್ಲಿರುವ ಬರಹ

ನಾಣ್ಯದ ಸುತ್ತಲೂ ಪ್ರಾಕೃತ ಭಾಷೆ ಮತ್ತು ಖರೋಷ್ಠಿ ಲಿಪಿಯಲ್ಲಿ "ಮಹಾರಾಜಸ ತ್ರಾತಾರಸ ಜಯತಸ ಹಿಪ್ಪೋಸ್ಟ್ರಾಟಸ" ಎಂದಿದೆ.

ಈ ನಾಣ್ಯದ ಮೇಲೆ ಯಾವ ಬದಿಯಲ್ಲಾಗಲೀ ಕಾಲವನ್ನು ನಮೂದಿಸಿಲ್ಲ.

ಹಿಪ್ಪೋಸ್ಟ್ರಾಟಸ್

ಪಶ್ಚಿಮ ಗಾಂಧಾರದ ಅಧಿಪತಿಯಾಗಿದ್ದ (ರಾಜನಾಗಿದ್ದ) ನಿಕಿಯಾಸ್ ಕ್ರಿ.ಪೂ. ಒಂದನೇ ಶತಮಾನದಲ್ಲಿ ರಾಜ್ಯವಾಳುತ್ತಿದ್ದ. ಇವನ ಮಗನೇ ಹಿಪ್ಪೋಸ್ಟ್ರಾಟಸ್ ಹಾಗೂ

* # ೮-೩೧, ೩೩ನೇ 'ಎ' ಅಡ್ಡರಸ್ತೆ, ೮ನೇ 'ಬಿ' ಬಡಾವಣೆ, ಜಯನಗರ, ಬೆಂಗಳೂರು-೫೬೦೦೮೧.

ಕೊನೆಯ ಇಂಡೋ-ಗ್ರೀಕ್ ರಾಜ. ಇವನು ತನ್ನ ರಾಜ್ಯವನ್ನು ಪಶ್ಚಿಮ ಪಂಜಾಬ್, ತಕ್ಷಶಿಲಾ ಮತ್ತು ಪುಷ್ಕಲಾವತಿಯವರೆಗೂ ವಿಸ್ತರಿಸಿದ್ದನು. ಇವನ ಆಳ್ವಿಕೆಯಲ್ಲಿ ಬೆಳ್ಳಿ ಮತ್ತು ತಾಮ್ರದ ನಾಣ್ಯಗಳನ್ನು ಭಾರತೀಯ ಪದ್ಧತಿಯಂತೆ ಚಲಾವಣೆಗೆ ತಂದಿದ್ದನು. ಆ ನಾಣ್ಯಗಳೆಲ್ಲವೂ ಮುದ್ರಾಂಕಿತ ನಾಣ್ಯಗಳಾಗಿದ್ದವು.

ಇಂಡೋ-ಗ್ರೀಕ್ ಅರಸರ ನಾಣ್ಯಗಳ ವೈಶಿಷ್ಟ್ಯತೆ

ಭಾರತದಲ್ಲಿ ಮೊಟ್ಟ ಮೊದಲಿಗೆ ನಾಣ್ಯಗಳ ಎರಡೂ ಕಡೆಯಲ್ಲಿ ಅಂಕಣದ (Legends) ಬಳಕೆಯನ್ನು ತಂದವರಲ್ಲಿ ಇಂಡೋ-ಗ್ರೀಕ್ ಅರಸರೇ ಮೊದಲಿಗರು. ದ್ವಿಭಾಷೆ ಮತ್ತು ಬರಹಗಳನ್ನು ಇಂಡೋ-ಗ್ರೀಕ್ ರಾಜರ ಕಾಲದಲ್ಲಿ ಕಾಣಬಹುದು. ಗ್ರೀಕ್ ಅರಸರ ನಾಣ್ಯಗಳಲ್ಲಿಯ ಅಂಕಣಗಳು ಮುಂಬದಿಯಲ್ಲಿ ಗ್ರೀಕ್ ಭಾಷೆ ಮತ್ತು ಗ್ರೀಕ್ ಬರಹದಲ್ಲೂ ಸಾಮಾನ್ಯವಾಗಿ ಕಂಡುಬರುತ್ತದೆ. ಹಿಂಗಡೆಯಲ್ಲಿ ಪ್ರಾಕೃತ ಭಾಷೆಯಲ್ಲೂ, ಮತ್ತು ಖರೋಷ್ಠಿ ಬರಹದಲ್ಲೂ ಕಂಡುಬರುತ್ತದೆ. ಎರಡೂ ಕಡೆಯ ಅಂಕಣಗಳು ಷಷ್ಠಿ ವಿಭಕ್ತಿ ಏಕವನಚದಲ್ಲಿವೆ. Gasileos ಎಂಬ ಶಬ್ಧ, Basileus ಎಂಬ ಗ್ರೀಕ್ ಶಬ್ಧದ ಷಷ್ಟಿ ವಿಭಕ್ತಿಯ ಏಕವನಚ. ಅಂದರೆ ರಾಜರ ರಾಜ ಮಹಾರಾಜ ಎಂದು ಭಾಷಾಂತರಿಸಿದೆ. Soteros ಎಂಬುದು, Soter ತ್ರಾತಾರ (ರಕ್ಷಕ) ಎಂಬ ಪ್ರಾಕೃತ ಭಾಷೆಯ ಷಷ್ಠಿ ವಿಭಕ್ತಿಯ ಏಕವಚನ.

ಗ್ರೀಕ್ ಅರಸರ ಆಳ್ವಿಕೆ ಮುಗಿದ ನಂತರವೂ. ಅವರ ತರುವಾಯ ಆಳಿದ ಗ್ರೀಕೇತರ ಅರಸರೂ, ಬ್ಯಾಕ್ಟ್ರಿಯನ್ ಅರಸರೂ, ವಿಮಕತ್ಪೀಷರು ಮತ್ತು ಕುಶಾನರ ಅರಸನಾದ ಕಾನಿಷ್ಕನೂ, ರಾಜರ ರಾಜ-ಮಹಾರಾಜ-ರಾಜಾಧಿರಾಜ, ಅಪರಜಿತಸ (ಸೋಲಿಸಲ್ಪಡದವನು) ಎಂದು ದೆಮೆತ್ರಿಯಸ್, ದಿಯೋದೋತಿ, ಜಯಧರಸ, ಅಂತಿಮುಖಿಸ, ಮುಂತಾದವರು ಇದೇ ರೀತಿಯಲ್ಲಿ ನಾಣ್ಯಗಳನ್ನು ಅಚ್ಚು ಹಾಕಿಸಿರುವುದು ಕಂಡುಬರುತ್ತದೆ.

ತಲೆ ದಿರಿಸು : (Diadem)

ಛಾಯಾಚಿತ್ರವನ್ನು ಗಮನಿಸಿದರೆ, ರಾಜನು ತಲೆಗೆ ಕಿರೀಟವನ್ನು ಧರಿಸಿಲ್ಲ. ಕೇವಲ ರಾಜಲಾಂಛನವಿರುವ ತಲೆ ದಿರಿಸು ಅಥವಾ ಪಟ್ಟಿಯನ್ನು ತಲೆಯ ಕೆಳಗೆ, ಸುತ್ತಲೂ ಧರಿಸಿ, ತಲೆಯ ಹಿಂಭಾಗದಲ್ಲಿ ಕಟ್ಟಿದೆ. ದಿರಿಸಿನ/ಪಟ್ಟಿಯ ಎರಡೂ ತುದಿಗಳು ಹಿಂದೆ ಎದ್ದು ಕಾಣುತ್ತದೆ. ಬಹುತೇಕ ಇಂಡೋ-ಗ್ರೀಕ್ ನಾಣ್ಯಗಳಲ್ಲಿ ಇದೇ ರೀತಿಯ ತಲೆದಿರಿಸನ್ನು ನಾವು ಗಮನಿಸಬಹುದು. ಸಾಮ್ರಾಟ್ ಅಲೆಗ್ಸಾಂಡರನು ಇದೇ ರೀತಿಯ ತಲೆದಿರಿಸನ್ನು ಧರಿಸಿರುವ ಚಿತ್ರಗಳನ್ನು ನಾವು ಇತಿಹಾಸದ ಗ್ರಂಥಗಳಲ್ಲಿ ಕಾಣುತ್ತೇವೆ. ಬಹುಶಃ ಪರ್ಷಿಯನ್ ದೊರೆಗಳ ಶೈಲಿಯನ್ನು ಇವರೆಲ್ಲರೂ ಅನುಕರಿಸಿರಬಹುದೆಂದು ವಿದ್ವಾಂಸರ ಅಭಿಪ್ರಾಯ.

ನಾಣ್ಯದ ಬೆಲೆ

ಈ ನಾಣ್ಯದ ಬೆಲೆ/ಕಿಮ್ಮತ್ತು ಎಲ್ಲಿಯೂ ನಮೂದಿಸಿಲ್ಲ.

೨. ಇವರ ನಾಣ್ಯಸಂಗ್ರಹದಲ್ಲಿನ ಇನ್ನೊಂದು ನಾಣ್ಯವೆಂದರೆ, ಟೀಪುಸುಲ್ತಾನನ ತಾಮ್ರದ ನಾಣ್ಯ.

ಟೀಪುಸುಲ್ತಾನನ ನಾಣ್ಯ

ಈ ನಾಣ್ಯವೂ ಸಹ ದ್ವಿಮುಖ ಮುದ್ರಾ ವಿಧಾನ ತಾಂತ್ರಿಕತೆಯಲ್ಲಿ ತಯಾರಿಸಿದ ನಾಣ್ಯ. (die-struck coin)

ಲೋಹ : ತಾಮ್ರ ತೂಕ : 11.11 gms ಅಗಲ : 2.2 cms

ವ್ಯಾಸ : 7.4 cms ಆಕಾರ : ವೃತ್ತಾಕಾರ

ಮುಮ್ಮುಖ

ಒಂದು ಸಾಲಂಕೃತವಾದ ಆನೆ ಬಲದಿಂದ ಎಡಕ್ಕೆ ಚಲಿಸುತ್ತಿರುವಂತೆ ಚಿತ್ರಿಸಲಾಗಿದೆ. ಬಾಲವು ಮೇಲೆತ್ತಿಕೊಂಡು ಬೆನ್ನಿಗೆ ಸಮಾನಾಂತರವಾಗಿದೆ. ಸೊಂಡಿಲನ್ನು ಕೆಳಗೆ ಬಿಟ್ಟಿದೆ. ಬೆನ್ನ ಮೇಲೆ ಅಲಂಕಾರಿಕ/ಕಸೂತಿಯುಕ್ತ ಬಟ್ಟೆ ಹೊದಿಸಲಾಗಿದೆ. ಆನೆಯ ಬೆನ್ನಿನ ಮೇಲ್ಭಾಗದಲ್ಲಿ ಓಜಿರಾ ಶಕೆಯಲ್ಲಿ ೧೨೨೦ ಎಂದು ಮುದ್ರಿಸಿದೆ.

ಹಿಮ್ಮುಖ

ನಾಣ್ಯದ ಹಿಂಬದಿಯಲ್ಲಿ ಪರ್ಶಿಯನ್ ಭಾಷೆಯಲ್ಲಿ "ಜರ್ಬ-ಇ-ಪಟನ್" ಎಂದು ಮುದ್ರಿಸಲಾಗಿದೆ. ನಾಣ್ಯದ ಸುತ್ತಲೂ ಎರಡು ವೃತ್ತಗಳಿವೆ. ಒಂದು ಗೆರೆಯಿಂದ ಮಾಡಿದ ವೃತ್ತ, ಅದರ ಆಚೆಗೆ ಚುಕ್ಕೆಯಿಂದ ಕೂಡಿದ ವೃತ್ತ. ಮಧ್ಯದಲ್ಲಿ ಅಲಂಕಾರಿಕ ಚುಕ್ಕೆಗಳಿವೆ.

ಟಿಪ್ಪು ನಾಣ್ಯ



ಮೌಲ್ಯ

ನಾಣ್ಯದ ಮೌಲ್ಯವನ್ನು ಎಲ್ಲೂ ನಮೂದಿಸಿಲ್ಲ. ಇದರ ಬೆಲೆ ಅರ್ಧ ಪೈಸೆ ಮತ್ತು ಈ ನಾಣ್ಯವನ್ನು "ಬಪ್ರಂ"





ಎಂದು ಕರೆಯಲ್ಪಡುತ್ತಿತ್ತು. ಅದರ ಮಾಹಿತಿ ಈ ರೀತಿ ಇದೆ. ಟೀಪು ಸುಲ್ತಾನನು ಐದು ನಮೂನೆಯ ತಾಮ್ರದ ನಾಣ್ಯಗಳನ್ನು ಚಲಾವಣೆಗೆ ತಂದಿದ್ದನು.

೧) ೨ ಪೈಸೆಯ ಓತ್ಮನಿ/ಮುಷ್ಕರಿ

೨) ೧ ಪೈಸೆಯ ಜೋಹ್ರಾ

೩) ೧/೨ ಪೈಸೆಯ ಬಹ್ರಾಂ–ಒಂದು ಬಹ್ರಾಂಗೆ ೨ ಅಖ್ತರ್‌ಗಳು. ಬಹ್ರಾಂ ಎಂದರೆ ಪರ್ಶಿಯನ್ ಭಾಷೆಯಲ್ಲಿ "ಮಂಗಳ" ಗ್ರಹ ಎಂದರ್ಥ.

೪) ೧/೪ ಪೈಸೆಯ ಅಖ್ತರ್

೫) ೧/೮ ಪೈಸೆಯ ಕುತ್ಬ್

ಅರ್ಧ ಪೈಸೆಯ ನಾಣ್ಯಗಳು ಟೀಪು ಸುಲ್ತಾನನು ಸ್ಥಾಪಿಸಿದ ೧೭ ಟಂಕಸಾಲೆಗಳಿಂದಲೂ ಮುದ್ರಿತವಾಗುತ್ತಿದ್ದವು. (ಕೇರಳದ ಕ್ಯಾಲಿಕಟ್ ಟಂಕಸಾಲೆಯನ್ನು ಹೊರತುಪಡಿಸಿ) ಅವನ ಪ್ರತಿಯೊಂದು ಟಂಕಸಾಲೆಗೂ ಒಂದು ಕಲ್ಪಾನಮಯ ಹೆಸರನ್ನು ಕೊಟ್ಟಿದ್ದನು.

ನಾಣ್ಯದ ಕಾಲಗಣನೆ

ಟೀಪುವಿನ ಮೊದಲ ನಾಲ್ಕು ವರ್ಷದ ರಾಜ್ಯಭಾರದಲ್ಲಿ, ಅವನು ಹಿಜಿರಾ ಶಕೆ ಗಣನೆ ಪ್ರಾರಂಭಿಸಿ (೧೧೯೭ ರಿಂದ ೧೨೦೦ ರವರೆಗೆ), ೧೨೦೧ ರಿಂದ ಮೌಲೂದಿ ಶಕೆಯನ್ನು ಆರಂಭಿಸಿದನು.

ಇಂಡೋ ಗ್ರೀಕ್, ಬ್ಯಾಕ್ಟ್ರಿಯನ್, ಕುಶಾನರು ಮೊದಲಾದ ರಾಜಮನೆತನಗಳ ಇತಿಹಾಸ ತಿಳಿಯಲು ನಾಣ್ಯಗಳು ಆಕರ ಸಾಮಗ್ರಿಗಳಾಗುತ್ತವೆ. ಆ ಕಾಲದ ನಾಣ್ಯಗಳ ಅಧ್ಯಯನಕ್ಕೆ ನಾವು ವಸ್ತು ಸಂಗ್ರಹಾಲಯದಲ್ಲೂ ಮತ್ತು ಖಾಸಗಿ ನಾಣ್ಯ ಸಂಗ್ರಹಕಾರರಲ್ಲೂ ಸಹಾಯ ಪಡೆಯಬಹುದು. ಅನೇಕ ರಾಜಮನೆತನಗಳ ನಾಣ್ಯಗಳು ಬೆಳಕಿಗೆ ಬಾರದೇ, ನಾಣ್ಯ ಇತಿಹಾಸದಲ್ಲಿ ಕೊರತೆಯಾಗಿದೆ. ವಸ್ತು ಸಂಗ್ರಹಾಲಯಗಳು ನಾಣ್ಯಗಳ ಸಂರಕ್ಷಣೆಗೆ ತೊಡಗಿರುವುದು ಮಾತ್ರವಲ್ಲದೆ, ಖಾಸಗಿಯಾಗಿಯೂ ಸಾಕಷ್ಟು ಸಂಗ್ರಹಕಾರರಿದ್ದಾರೆ.

[ಬ್ಯಾಕ್ಟ್ರಿಯನ್ ನಾಣ್ಯದ ಬಗ್ಗೆ ನನಗೆ ಅಗತ್ಯವಾದ ಸಲಹೆ ಮತ್ತು ಸೂಚನೆ ಕೊಟ್ಟು, ಅದರ ಮೂಲವನ್ನು ಪತ್ತೆ ಹಚ್ಚುವ ಕಾರ್ಯದಲ್ಲಿ ತೊಡಗಿಸಿಕೊಳ್ಳುವಂತೆ ಪ್ರೇರೇಪಿಸಿದ ಡಾ. ದೇವರಕೊಂಡಾರೆಡ್ಡಿ, ಅಧ್ಯಕ್ಷರು, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, ಇವರಿಗೆ ನನ್ನ ಧನ್ಯವಾದಗಳು.]

ಆಧಾರಸೂಚಿ

೧. **ಕರ್ನಾಟಕ ನಾಣ್ಯ ಪರಂಪರೆ,** ಎ.ವಿ. ನರಸಿಂಹಮೂರ್ತಿ, ಅಧ್ಯಾಯ ೮ರಿಂದ ಆಯ್ದ ಕೆಲವು ಮಾಹಿತಿಗಳು.

೨. *The coins of Haider Ali and Tippu Sultan*, 1987, edition by J.R. Henderson.

೩. *Art Motifs on Ancient Indian Coins* by Prashanth Srivatsava-Edition 2001.

೪. *Numismatic Art of India*-An Album of the Master pieces of Indian Coins (Chapter : Coins of Indo-Greeks) -by B.N. Mukharjee.

೫. *Coins* -by Parameshwari Lal Gupta.

ಶ್ರೀ ಆದಿಶಂಕರರ ಕಾಲಘಟ್ಟ : ಒಂದು ಚರ್ಚೆ

ಡಾ. ಎಸ್.ಕೆ. ಜೋಶಿ*

ಅತ್ಯಂತ ಪ್ರಾಚೀನ ಭಾರತದ ಚಿಂತಕರಲ್ಲಿ, ಮನು, ವಾಲ್ಮೀಕಿ, ವ್ಯಾಸ ಯಾಜ್ಞವಲ್ಕ್ಯರು ಖ್ಯಾತನಾಮರು. ಪ್ರಥುಲೋರು ಪ್ರೆಂಕದಲಿ ಜಗವು ಎಚ್ಚರಗೊಳ್ಳುತ್ತಿರುವಾಗ, ಅದಾಗಲೇ ಈ ಪ್ರಭುಗಳು ಜ್ಞಾನ ಅರುಣೋದಯವನ್ನು ಪ್ರಕಾಶಿಸಿದವರು.

ವೇದಗಳು ನಮ್ಮೀ ವರ್ತಮಾನ ಕಾಲದ ಹಿಂದೆ ಎಂಟು ಸಾವಿರ ವರುಷಗಳ ಸುತ್ತಿನಲ್ಲಿ ಜ್ಞಾನದ ಹರವನ್ನು ಹರಡಿವೆ. (ಡಾ. ಆರ್.ಜಿ. ಭಾಂಡಾರಕರ್, '**ವಿದ್**' ಎಂಬ ಮೂಲ ಧಾತುವಿನಿಂದ **ವೇದ** ಶಬ್ದೋತ್ಪತ್ತಿ. ವೇದ ಅಂದರೆ ಸಂಕ್ಷಿಪ್ತತೆಯಲ್ಲಿ ಜ್ಞಾನ, ಅರಿವು, ತಿಳಿವಳಿಕೆ ಎಂತಾಗಿ ಅರ್ಥೈಸುತ್ತವೆ.

ಈ ವೇದಗಳು ಚತುರ್ವೇದಗಳ ದಾಂಗುಡಿ ಬಿಟ್ಟು, ಋಗ್ವೇದ, ಯಜುರ್ವೇದ, ಅಥರ್ವಣವೇದ ಹಾಗೂ ಸಾಮವೇದ ಅದು. ಸರ್ವ ಜೀವಾತ್ಮಗಳನ್ನು ಪ್ರೀತಿಸುವ ಪ್ರಕ್ರಿಯೆ. ಯಜ್ಞ, ಯಾಗ, ಪಶುಬಲಿಗಳಂಥ ನಿಖರ ಕೆಲವು ಆಚರಣೆಗಳು ದೂರೀಕರಿಸಲ್ಪಡಲು ಹತ್ತಿದವು. ಆಗ್ಗೆ ಬಂದ ಬುದ್ಧನಿಂದ.

ಬುದ್ಧ ಪೂರ್ವ ಕಾಲದಲ್ಲಿ ವೇದಕಾಲೀನ ಕಟಿಬದ್ಧ ಧರ್ಮಾಚರಣೆಯು ಕೆಲ ಆಚರಣೆಗಳಲ್ಲಿ ಅಸಹನೀಯ ಅನುಷ್ಠಾನಗಳನ್ನು ತಂದುದರಿಂದ, ಬಹ್ವಂಶ ಜನಮಾನಸಕ್ಕೆ ಧಾರ್ಮಿಕ ಕ್ರಿಯೆಗಳಲ್ಲಿ ಕಾಠಿಣ್ಯತೆ ತೋರಿತು. ಯಜ್ಞ ಯಾಗಾದಿಗಳು ಸಾಕಾದವು. ಅವುಗಳಲ್ಲಿ ಹಿಂಸೆಯಡಗಿತ್ತು. ಸರಳ ಸೌಮ್ಯ ಶಾಂತ ಪ್ರಶಾಂತ ಅಹಿಂಸೆಯ ಧರ್ಮದ ದಾರಿ ಬೇಕಾಗಿತ್ತು. ಅದಾಗಿ, ಬುದ್ಧನು ಧರ್ಮವನ್ನು 'ಸಂಯೋಗ್ಯ ದಾರಿ' (Path of rightesness) ಎಂದು ವ್ಯಾಖ್ಯಾನಿಸಿದನು.

ಬುದ್ಧನ 'ಅಹಿಂಸಾ' ಸಮಾಜ ನಿರ್ಮಾಣವಾಯಿತು. ಎಲ್ಲೆಡೆಯೂ ಸೌಮ್ಯ ಸರಳ ಶಾಂತ ಸಮಾಜದ ಅಡಿಗಲ್ಲಿನ ಮೇಲೆ ಇಡೀ ಜನಸಮುದಾಯದ ಬೌದ್ಧ ನಿಲಯ ನಿರ್ಮಾಣವಾಯಿತು.

ಆದರೆ, ಈ ತರಹದ 'ಅಹಿಂಸಾ ಪರಮೋಧರ್ಮಃ' ಬುದ್ಧಂ ಶರಣಂ ಗಚ್ಛಾಮಿ, ಧಮ್ಮಂ ಶರಣಂ ಗಚ್ಛಾಮಿ ಸಂಘಂ ಶರಣಂ ಗಚ್ಛಾಮಿ' ಎಂಬ ಘೋಷಣಾಚಾರಣೆಗಳು ಸುತ್ತಲೂ ಹರಡಿ, ಸಮಾಜವನ್ನು ಅಬಲವಾಗಿ, ಅಶಕ್ತವಾಗಿ ನಿಷ್ಕ್ರಿಯೆಯಾಗಿ ಮಾಡಿತ್ತು. ಇದೂ ಕೂಡಾ ಕೆಲ ಶತಕದ ನಂತರ (ಕ್ರಿ.ಪೂ. ಶತಕ ೫ರಿಂದ ಕ್ರಿ.ಶ. ೬-೭ ಶತಮಾನದ ವರೆಗೆ) ನಿಶ್ಶಕ್ತ ರಾಷ್ಟ್ರವನ್ನಾಗಿ ಪರಿವರ್ತಿಸಿತು.

ಆಗ ೬-೭ ಶತಕಗಳ ಕಾಲ ಸಂಧಿಯಲ್ಲಿ ಪ್ರವೇಶ ವಾಯಿತು. ಆದಿಶಂಕರರ 'ಅಹಂ ಬ್ರಹ್ಮಾಸಿ' ಎಂಬ ಆತ್ಮದ ಗುಡುಗು. ಶ್ರೀ ಆದಿಶಂಕರರ ವಿಚಾರಗಳು ಆಧ್ಯಾತ್ಮ ಶಕ್ತಿಯಿಂದ ಬೆಳೆದು, ಮುಪ್ಪರಿಗೊಂಡ ದೇಹ-ದೇಶ-ಆತ್ಮಗಳ ಹಿಂದಿನಿಂದ ಬಂದ ನಿಶ್ಶಕ್ತ ಸಮಾಜವನ್ನು ಹುರಿದುಂಬಿಸಿತು. ಅದು ಶ್ರೀ ಶಂಕರಾಚಾರ್ಯರ ಐತಿಹಾಸಿಕ ಕೊಡುಗೆ ಭಾರತವನ್ನು ಪುನರಪಿ ಕಟ್ಟುವಲ್ಲಿ.

ಶ್ರೀ ಶಂಕರರ ಮಾರ್ಗದರ್ಶನ ಇದು "ಸರಿದು ಹೋದ ಸಿದ್ಧಾಂತಗಳನ್ನು ಆಚರಣೆಗಳನ್ನು ಇಂದಿನ ವರ್ತಮಾನದಲ್ಲಿ ನೋಡುವ ಹಾಗೂ ಅದರ ಪರಿಣಾಮವನ್ನು ವಿನಿಯೋಗಿ ಸುವ ನವ್ಯ ಚಿಂತನವನ್ನು ಶ್ರೀ ಶಂಕರರು ದೇಶಕ್ಕೆ ನೀಡಿದರು. 'ಸ್ವಪ್ನಗಳನ್ನು, ದಂತ ಕಥೆಗಳನ್ನು, ಪುರಾಣಗಳನ್ನು ಹಾಗೂ ಇತಿಹಾಸವನ್ನು ವರ್ತಮಾನದ ದೃಷ್ಟಿಯಿಂದ ನೋಡಿರಿ' ಆಗ ಮಾತ್ರ ಅವುಗಳ ಅರ್ಥವಾಗುತ್ತದೆ. ಮೌಲ್ಯ ತಿಳಿಯುತ್ತದೆ ಹಾಗೂ ಉಪಯೋಗ-ಉಪಕರಣವಾಗುತ್ತದೆ. ಅರ್ಥ ಹಾಗೂ ಅನು ಅರ್ಥವಾಗಿ, ಸಮಾಜಕ್ಕೆ ನೈಜ ಮಾರ್ಗದರ್ಶನ ದೊರೆಯುತ್ತದೆ ಎಂದರು ಶ್ರೀ ಶಂಕರರು. ಇದು ಕರ್ಮ ಪ್ರಧಾನ ನೀತಿ, ಬರಿ ಶಬ್ದ ನೀತಿಯಲ್ಲ. ಸದೃಢ ರಾಷ್ಟ್ರ ಕಟ್ಟುವ ನೀತಿ-ಶಕ್ತಿ ಎಂದು ಹೇಳಬಹುದು".

ಇನ್ನು 'ಆದಿಶಂಕರರ ಸಮಯವಾವುದು ?' ಎಂಬುದು ಇನ್ನೂ ನಿರ್ದಿಷ್ಟಗೊಳ್ಳಬೇಕಾಗಿದೆ. ಇಲ್ಲಿ ಅದರ ಬಗ್ಗೆ ಇನ್ನೂ ಕೆಲವೊಂದು ಚಿಂತನಪರ ಅಂಶಗಳನ್ನು ತೋರಿಸಲಾಗಿದೆ. ನಿಷ್ಕರ್ಷೆ ಇನ್ನು ವಿದ್ವಾಂಸರಿಗೆ ಬಿಟ್ಟುಕೊಟ್ಟದ್ದು. ಈ ಶೋಧನೆ,

* ಸಿಲ್ವರ್ ಆರ್ಚರ್ಡ್, ಧಾರವಾಡ-೫೮೦೦೦೧.

ಭಗವತ್‌ಪಾದರ ಸಾಹಿತ್ಯ ಹಾಗೂ ಅವರ ಸಮಕಾಲೀನ ವಿದ್ವಾಂಸರ ಪ್ರಸಂಗಗಳನ್ನು ಆಧರಿಸಿದೆ.

ಕೆಲವು ಸಾಂಗತ್ಯಗಳು ಶ್ರೀ ಆದಿಶಂಕರರ ಕಾಲ ಕ್ರಿ.ಶ. ೬೩೨ ರಿಂದ ೬೬೪ರ ವರೆಗೆಂದೂ, ಅಥವಾ ಕ್ರಿ.ಶ. ೬೮೦ ರಿಂದ ೭೧೨ರ ವರೆಗೆಂದೂ ಹೇಳುತ್ತಿವೆ. ಇನ್ನು ಕೆಲ ಸಿದ್ಧಾಂತಗಳು ಕ್ರಿ.ಶ. ೬೫೦ ರಿಂದ ೬೮೨ ರವರೆಗೂ ಉಸಿರುತ್ತೇನೆ.

ಶ್ರೀ ಶಂಕರರ ಸಮಕಾಲೀನ ಕೆಲವು ವಿದ್ವಾಂಸರ ಹೆಸರುಗಳು, ಕೇಳಿಬರುತ್ತಿವೆ. ಆ ಮಹನೀಯರ ಕಾಲ ಕೃತಿಗಳಿಂದ ತಿಳಿದುಬರುತ್ತವೆ. ಮಂಡನ ಮಿಶ್ರಾ ಪಂಡಿತನು ಮಿಥಿಲಾ ಪ್ರದೇಶದಲ್ಲಿ ಪ್ರಸಿದ್ಧಿ ಪಡೆದುದು ಕ್ರಿ.ಶ. ೬೫೦ರ ಸುತ್ತಮುತ್ತ. ಶ್ರೀ ಶಂಕರಿಗೂ ಅವನಿಗೂ ಧಾರ್ಮಿಕ ಚರ್ಚೆಗಳಾದುದು ಅದೇ ಕಾಲದಲ್ಲಿ. ಹೀಗಾಗಿ ಇವರಿಬ್ಬರೂ ಸಮಕಾಲೀನರು.

ವಿದ್ಯಾವಾಚಸ್ಪತಿ ಕುಮಾರಿಲ ಭಟ್ಟರು ಕ್ರಿ.ಶ. ೬೫೦ ರ ಸುತ್ತಮುತ್ತ ಇದ್ದು, ಇವರು ಶ್ರೀ ಶಂಕರರ ಬ್ರಹ್ಮಸೂತ್ರಕ್ಕೆ ವ್ಯಾಖ್ಯಾನ ಬರೆದರು, ಹಾಗೂ ಅದಕ್ಕೆ, ಅರ್ಥಪೂರ್ಣತೆಯಿಂದ, ತನ್ನ ಪತ್ನಿಯ ಹೆಸರನ್ನೇ ಇಟ್ಟದು–'ಭಾಮಿನೀ' ಎಂದು. ಏಕೆಂದರೆ ಇದರಲ್ಲಿ ವಿಶೇಷತೆ ಇದೆ. ಯುವಕನಾದ ಕುಮಾರಿಲ ಭಟ್ಟನು ಭಾಮಾ ಯುವತಿಯನ್ನು ಮದುವೆಯಾಗಿ ಸಾಂಸಾರಿಕನಾದನು. ಆದರೆ ಆತನು ತನ್ನ ಕೃತಿ ರಚನೆಯಲ್ಲಿ ಇಷ್ಟೊಂದು ಮಗ್ನನಾಗಿದ್ದನು. ದಿನಂಪ್ರತಿ ಕ್ಷಣ ಕ್ಷಣಕ್ಕೂ ಸೇವೆ ಮಾಡುತ್ತ ಭಾಮಾ ಮುದುಕಿಯಾದಳು, ಜೊತೆಗೆ ಪತಿ ಕುಮಾರಿಲಭಟ್ಟ ಕೂಡ. ಒಬ್ಬರನ್ನೊಬ್ಬರು ನೋಡಿದುದು ಆ ಕಾವ್ಯರಚನೆ ಮುಗಿದ ಮೇಲೆಯೇ. ಇಬ್ಬರೂ ಹಣ್ಣಾದ ವೃದ್ಧರಾಗಿರುತ್ತಾರೆ. ಗಂಡ ಹೆಂಡತಿಯನ್ನು ಗುರುತಿಸಿ "ಭಾಮಾ ಎಷ್ಟು ಮುದುಕಿಯಾಗಿರುವೆ ?" ಎಂದಾಗ, ಆಕೆಯೂ ಕೂಡ ತಾವೂ ಕೂಡ ಈಗ ಮುದುಕರು ಎಂದಳು. ಇಡೀ ಆಯುಷ್ಯವನ್ನೇ ಈ ಬ್ರಹ್ಮಸೂತ್ರಕ್ಕೆ ವ್ಯಾಖ್ಯಾನ ಬರೆಯುವಲ್ಲಿ ಕಳೆಯಿತು. ಒಬ್ಬರಿಗೊಬ್ಬರು ಅಪರಿಚಿತರಂತೆ ಬದುಕಿದೆವು. ಈಗ ಈ ಮಹಾನ್ ಕಾವ್ಯ ನಿರ್ಮಾಣವಾಯ್ತು. ನಿನ್ನ ತ್ಯಾಗದ ಸೇವೆಯಿಂದ ಇದಕ್ಕೆ ನಿನ್ನ ಹೆಸರನ್ನೇ ಇಡುವೆ. 'ಭಾಮಿನಿ' ಎಂದು. ಹೃದಯಸ್ಪರ್ಶಿ ದೃಶ್ಯ. ಅಂದಿನಿಂದ ಕುಮಾರಿಲ ಭಟ್ಟರ ಕಾವ್ಯಗ್ರಂಥ 'ಭಾಮಿನಿ' ಆಗಿ, ಅಮರ ವಾಯಿತು. ಹೀಗಾಗಿ, ಕುಮಾರಿಲಭಟ್ಟರು ಶ್ರೀ ಶಂಕರರ ಅನತಿ ದೂರದ ಕಾಲದಲ್ಲಿ ವಾಸಿಸಿದರೆಂದು ಇಲ್ಲಿ ಅರ್ಥೈಸಬಹುದು.

ಶ್ರೀ ಶಂಕರರ ವೈಶೇಷಿತಗಳು (ಮಠಗಳ ಸ್ಥಾಪನೆ) ಶ್ರೀ ಶಂಕರರ ಪೀಠಗಳ ಸ್ಥಾಪನೆಯ ರೀತಿಯು ವಿಶಿಷ್ಟವಾಗಿತ್ತು. ಶಾಸ್ತ್ರ ಬೋಧೆ ಮತ್ತು ಧಾರ್ಮಿಕ ಮಾರ್ಗದರ್ಶನಕ್ಕಾಗಿ, ಆಚಾರ್ಯರು ಮಠಗಳನ್ನು ಸ್ಥಾಪಿಸಿದರು. ಶ್ರೀ ಕಾರ್ಯಕ್ಕಾಗಿ ಅವರು ನಿರ್ದಿಷ್ಟ ಸ್ಥಳಗಳನ್ನು ನಿರ್ಧರಿಸಿದರು.

ಅದರಂತೆ ಜಗನಾಥ (ಪುರಿ), ದ್ವಾರಕಾ (ಗುಜರಾಥ) ಹಾಗೂ ಬದ್ರಿ (ಉತ್ತರ ಪ್ರದೇಶ)ಗಳಲ್ಲಿ ಪೀಠಗಳನ್ನು ಸ್ಥಾಪಿಸಿ, ನಾಲ್ಕನೆಯ ಪೀಠವನ್ನು ರಾಮೇಶ್ವರದಲ್ಲಿ ಸ್ಥಾಪಿಸಲು ದಕ್ಷಿಣದ ಕಡೆಗೆ ಹೊರಟರು.

ಆದರೆ, ಶೃಂಗೇರಿಯ ತುಂಗಾ ನದಿಯ ದಡದಲ್ಲಿ ಶ್ರೀ ಸರಸ್ವತಿಯು ತಮ್ಮನ್ನು ಹಿಂಬಾಲಿಸಿ ಬರುತ್ತಿದ್ದಾಳೆಯೇ ಎಂಬುದನ್ನು ದೃಢಪಡಿಸಲು ಹಿಂದಿರುಗಿ ನೋಡಲು ಅದರ ನೆಪವಾಗಿ ದೇವಿಯು ಅಲ್ಲಿಯೇ ನಿಂತುಬಿಟ್ಟಳಂತೆ. ದೇವಿಯ ಇಂಗಿತ ತಿಳಿದ ಆಚಾರ್ಯರು ಅಲ್ಲಿಯೇ ಪೀಠವನ್ನು ಸ್ಥಾಪಿಸಿದರು.

ಹೀಗೆ ಜಗನ್ನಾಥ ಪುರಿ, ಶ್ರೀಕೃಷ್ಣನ ದ್ವಾರಕಾ ಹಾಗೂ ಬದರಿ (ನಾರಾಯಣ) ಹೀಗೆ ಮೂರು ತಮ್ಮ ಸಂಕಲ್ಪದಂತೆ ಮಾಡಿದ್ದು. ಆದರೆ ಶೃಂಗೇರಿಯದು ದೇವೀ ಸಂಕಲ್ಪಕ್ಕೆ ಅನುಸಾರವಾಗಿ ಸ್ಥಾಪಿತವಾಯಿತು. ಶಂಕರರು ಭಾರತದ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಪೀಠಗಳನ್ನು ಸ್ಥಾಪಿಸುವ ಮೂಲಕ ತಮ್ಮ ಲೋಕ ಸಂಗ್ರಹ ಕಾರ್ಯವನ್ನು ನೆರವೇರಿಸಿದರು. ಈ ಪೀಠಗಳು ನಾಲ್ಕು ವೇದಗಳನ್ನು ಪ್ರತಿನಿಧಿಸುತ್ತಿವೆ. ಅವುಗಳ ಪೀಠಾಧೀಶರು ಆಯಾ ದಿಕ್ಕುಗಳಿಗೆ ಸೇರಿದವರು. ಶಾಸ್ತ್ರಜ್ಞರು, ಲೋಕಜ್ಞರು ಬ್ರಹ್ಮಜ್ಞರು ಪರಿವ್ರಾಜಕ ಸನ್ಯಾಸಿಗಳಾಗಿದ್ದರು. ೧) ಶ್ರೀ ಶಂಕರಾಚಾರ್ಯರ ಪ್ರಥಮ ಶಿಷ್ಯರಾದ ಪದ್ಮಪಾದರು. ೨) ಶ್ರೀ ಸುರೇಶಾಚಾರ್ಯರು, ೩) ಶ್ರೀ ಹಸ್ತಮಲಕರು ಮತ್ತು ೪) ತೋಟಕಾಚಾರ್ಯರು ಈ ಅಧ್ವರ್ಯುಗಳಿಂದ ವೈದಿಕ ಧರ್ಮ ಪೋಷಣೆಗೆ ಶಾಶ್ವತ ಏರ್ಪಾಡು ಮಾಡಿದರು.

ಖಗೋಲ ಶಾಸ್ತ್ರಜ್ಞ ಭಾಸ್ಕರಾಚಾರ್ಯರು ಹಾಗೂ ಶ್ರೀ ಶಂಕರರೂ ವೈಚಾರಿಕವಾಗಿ ಸ್ಪಂದಿಸಿದವರು. ಸ್ವಲ್ಪ ಸಮಯದ ಪೂರ್ವದಲ್ಲಿ ಖಗೋಲ ಸಂಶೋಧನೆಗೈದ ಭಾಸ್ಕರಾಚಾರ್ಯರನ್ನು ಆದಿಶಂಕರರು ಸ್ಮರಿಸುತ್ತಾರೆ. ಆ ಕೃತಿಗಳು ಶ್ರೀ ಶಂಕರಾಚಾರ್ಯರ 'ಬ್ರಹ್ಮಸೂತ್ರ' ಹಾಗೂ '**ಧರ್ಮಕೀರ್ತಿ**'ಗಳಾಗಿವೆ.

'ಸೌಂದರ್ಯ ಲಹರಿ' ಕೃತಿ ಕೂಡ ಆದಿಶಂಕರರ ಯುವ ಬದುಕಿನ ಸೌಂದರ್ಯದ ಚಿತ್ರಣವಾಗಿದ್ದು, ಅದು ಅವರ ಯುವ ಜೀವನದ ಕಾಲಿಕವಾಗಿರಲು (ಸಾಕು ೬೫೭–೫೮) ಅವರು ಭರ್ಜರಿ ಯುವಕರಾಗಿದ್ದಾಗ ಇಪ್ಪತ್ತೈದರ ಯುವಕರಾಗಿದ್ದಾಗ (೬೩೨+೨೫=೬೫೭) ಮೃತ್ಯು (೬೬೪) ಮುಂದೆ ೭ ವರ್ಷಗಳ ಅಂತ್ಯದಲ್ಲಿ ಅವರು ಅಸ್ತಂಗತರಾದುದು (ಜನನ ೬೩೨–ಯುವ ೨೫+೭=ಅಂತ್ಯ ಕ್ರಿ.ಶ. ೬೬೪) ಜನನ ಅಂತ್ಯ ಮೂವತ್ತೆರಡು ವರ್ಷ.

ನಮ್ಮ ಸಮಕಾಲೀನ ಕಲಾ ಇತಿಹಾಸಕಾರ (Art historian) ಶ್ರೀ ಎಸ್.ಕೆ. ರಾಮಚಂದ್ರರಾಯರು ತಮ್ಮ ಕೃತಿಯಾದ **'ಶಂಕರವಾಣಿ'**ಯಲ್ಲಿ, ಬಹಳಷ್ಟು ಆಕರಗಳನ್ನು ಹುಡುಕಿ, ಆದಿಶಂಕರರ ಕಾಲ ಕ್ರಿ.ಶ. ೬೩೨ರಿಂದ ಕ್ರಿ.ಶ. ೬೬೪ ಎಂದು ಸ್ಪಷ್ಟವಾಗಿ ಹೇಳುತ್ತಾರೆ. ಶ್ರೀ ಶಂಕರರು ಬದುಕಿದುದು ಕೇವಲ ೩೨ ವರುಷಗಳು ಎಂದು ಹೇಳುತ್ತದೆ.

ಸುಬ್ಬರಾಯರು, ಯಳ್ಳೂರ ಬಳ್ಳಿ, ಮೈಸೂರು ಸಂಸ್ಥಾನ, ಇವರು ತಮ್ಮ ಬದುಕಿನ ಉತ್ತರಾರ್ಧದಲ್ಲಿ ಶ್ರೀ ಸಾತಿಕಾನಂದ ಸ್ವಾಮಿಗಳಾದರು, ಹಾಗೂ ಸುಮಾರು ೨೦೦ ಇಂಗ್ಲಿಷ್, ಕನ್ನಡ ಲೇಖನಗಳನ್ನು ಆಧ್ಯಾತ್ಮಿಕ ಸಂಶೋಧನ ಪಾರ್ಶ್ವದಲ್ಲಿ ಕರೆದರು. ಅವರು ಶ್ರೀ ಆದಿಶಂಕರರನ್ನು ಕ್ರಿ.ಶ. ೬೮೦ ರಿಂದ ೭೧೨ರವರೆಗೆ ಮೂವತ್ತೆರಡು ವರುಷ ವ್ಯಾಪಿಸುತ್ತದೆ.

ಇನ್ನೊರ್ವ ನಮ್ಮ ಸಮಕಾಲೀನ ಆಧ್ಯಾತ್ಮ ಚಿಂತಕರು, ವೇದ-ಶಾಸ್ತ್ರ-ಪುರಾಣ, ಭಾಷ್ಯ ಭಾಷೆಗಳ ಪರಿಣಿತರು ಆದ ಪಾವಗಡದ ಡಾ. ಪ್ರಕಾಶ್‌ರಾವ್ ಅವರು ಆದಿಶಂಕರರನ್ನು ಕ್ರಿ.ಶ. ೬೩೨ ರಿಂದ ೬೬೪ರ ಕಾಲಘಟ್ಟಕ್ಕೆ ನಿಶ್ಚಿತವಾಗಿ ಜೋಡಿಸುತ್ತಾರೆ (ದೂ.ದ. ವ್ಯಾಖ್ಯಾನದಲ್ಲಿ) ಅವರ ಕಾಲದ ಬಗ್ಗೆ ಅತ್ತಿಂದಿತ್ತ ಇತ್ತಿಂದತ್ತ ತೂರಾಡುವುದು ಬೇಡ.

ತಾತ್ಪರ್ಯ

ಶ್ರೀ ಶಂಕರರು ತತ್ವದರ್ಶಿಗಳು, ಜ್ಞಾನಿಗಳು ಕೇವಲ ಶಾಸ್ತ್ರವಿದರಷ್ಟೇ ಆಗಿರದೆ, ಆತ್ಮವಿದರೂ ಆದ ಗುರುಗಳಾಗಿದ್ದರು. ಜ್ಞಾನಾರ್ಜನೆಯಲ್ಲಿ ಮತ್ತು ಜ್ಞಾನೋಪದೇಶದಲ್ಲಿ ಸಂಪೂರ್ಣವಾಗಿ ಮುಳುಗಿ ಹೋಗದೆ, "ಲೋಕ ಸಂಗ್ರಹ ಕಾರ್ಯದಲ್ಲೂ" ತೊಡಗಿಸಿಕೊಂಡ ಲೋಕ ಹಿತೈಷಿಗಳಾಗಿದ್ದಾರೆ. ತಾತ್ವಿಕ ಸಿದ್ಧಾಂತವೊಂದರ ಪ್ರತಿಪಾದನೆಯ ಜೊತೆಗೆ ಸದಾಚಾರದ ಅನುಷ್ಠಾನಕ್ಕೂ ಯೋಗ್ಯ ಮಾರ್ಗದರ್ಶನ ನೀಡಿದರು. (ಪ್ರೊ. ನಂಜನಗೂಡು ಬಾಲ ಸುಬ್ರಹ್ಮಣ್ಯ).

ವೈಯಕ್ತಿಕ ಸಿದ್ಧಿಯಿಂದ ತೃಪ್ತರಾಗದೆ, ಸಾಮಾಜಿಕ ಸಜ್ಜೀವನದ ಮೇಲ್ವಿಚಾರಣೆಗೆ ಸೂಕ್ತವಾದ ವ್ಯವಸ್ಥೆಯನ್ನು ಕಲ್ಪಿಸಿದರು. ತಮ್ಮ ಸ್ವಂತ ಆಚಾರ ವಿಚಾರಗಳ ನಡೆ-ನುಡಿಗಳ ಮೂಲಕ ಭಾರತದ ಆಧ್ಯಾತ್ಮಿಕ ಸಂಸ್ಕೃತಿಯ ಆದರ್ಶಮೂರ್ತಿಗಳಾಗಿ ಆಚಾರ್ಯ ಪುರುಷರೆನಿಸಿದರು ಶ್ರೀ ಶಂಕರರು.

ಆಧಾರಸೂಚಿ

೧. ಡಾ. ಎಂ.ಎನ್. ಜೋಶಿ, ಕ.ವಿ.ವಿ., ಧಾರವಾಡ, **'ಅದ್ವೈತಚಿಂತನ'**, ಆಗಸ್ಟ್ ೨೦೧೨.

೨. ಡಾ. ಆರ್.ಜಿ. ಭಂಡಾರಕರ್, **ಧರ್ಮಶಾಸ್ತ್ರ.**

೩. ಡಾ. ಎಸ್. ರಾಧಾಕೃಷ್ಣನ್, *The hindu way of life.*

೪. ಡಾ. ಶಂ.ಬಾ. ಜೋಶಿ, **ಋಗ್ವೇದ ರಹಸ್ಯ.**

೫. ವಿದ್ವಾನ್ ಆರ್.ಎಸ್. ಪಂಚಮುಖಿ, **ವೇದೋಪನಿಷತ್ತುಗಳ ಅಧ್ಯಯನ**, ಕ.ಇ. ಮಂಡಳ, ಧಾರವಾಡ.

೬. ಪ್ರೊ. ನೀಲಕಂಠಶಾಸ್ತ್ರಿ, *An advanced History of India.*

೭. ಕೆ.ಎಂ. ಮುನ್ಷಿ, *Hinduism*, Bharatiya Vidya Bhavan, Bombay.

೮. ಲೇಖಕನ ಸ್ಥಳ ಸಮೀಕ್ಷೆ, ಶೃಂಗೇರಿ, ಸೋಮನಾಥಪುರಿ (ಕೇದಾರನಾಥ ಇಲ್ಲ).

೯. ಪ್ರೊ. ನಂಜನಗೂಡು ಬಾಲ ಸುಬ್ರಹ್ಮಣ್ಯ, **ಲೋಕ ಹಿತೈಷಿ ಶ್ರೀ ಶಂಕರರು**, ಕೆ.ಆರ್. ಸಾಗರ, ಮೈಸೂರು.

೧೦. ಬ್ರಹ್ಮಶ್ರೀ ರಾಮಚಂದ್ರ ಶಾಸ್ತ್ರಿ, ಸೂರಿ, ಕರ್ಕಿ, **ಅದ್ವೈತ ತತ್ವಪ್ರಕಾಶಿಕಾ**, ಧಾರವಾಡ.

೧೧. ಡಾ. ಎ.ಕೆ. ಶಾಸ್ತ್ರಿ, **ಶೃಂಗೇರಿ ಕಡತಗಳು-ಅಧ್ಯಯನ.**

ಕರಸ್ಥಲ ಲಿಂಗಪೂಜೆಯ ವೈದಿಕ ರೂಪ : ಪಾರ್ಥಿವೇಶ್ವರ ಪೂಜೆ

ಡಾ. ಎಸ್.ಎಲ್. ಶ್ರೀನಿವಾಸಮೂರ್ತಿ*

ಕರಸ್ಥಲ ಲಿಂಗಪೂಜೆಯು ವೀರಶೈವ ಮತಕ್ಕೆ ಮಾತ್ರ ಸೀಮಿತವಾದ ಪೂಜಾ ವಿಧಾನವೆನ್ನುವುದು ಸದ್ಯಕ್ಕೆ ರೂಢಿಯಲ್ಲಿರುವ ನಂಬಿಕೆ. ಆದರೆ ಬ್ರಾಹ್ಮಣರಲ್ಲಿಯೂ ಬಹು ಅಪರೂಪವಾಗಿ ಈ ಪದ್ಧತಿಯು ಚಾಲ್ತಿಯಲ್ಲಿದೆ ಎಂಬುದನ್ನು ನಿರೂಪಿಸುವುದು ಪ್ರಸ್ತುತ ಸಂಪ್ರಬಂಧದ ಉದ್ದೇಶ.

ವೀರಶೈವ ಮತದ ಉಗಮದ ಬಗ್ಗೆ ಅನೇಕ ಮಂದಿ ವಿದ್ವಾಂಸರು ಸಾಕಷ್ಟು ಚಿಂತನ-ಮಂಥನಗಳನ್ನು ನಡೆಸಿದ್ದಾರೆ. ಬಹುಮಟ್ಟಿಗೆ ಎಲ್ಲರೂ ಒಪ್ಪಿಕೊಂಡಿರುವ ಅಂಶವೆಂದರೆ "ವೀರಶೈವ ಪಂಥವು ಇತರ ಶೈವ ಪಂಥಗಳಾದ ಕಾಶ್ಮೀರ ಶೈವ ಮತ, ಕಾಳಾಮುಖಿ, ಪಾಶುಪತ, ಶೈವಸಿದ್ಧಾಂತ ಮತ್ತು ಶ್ರೀಕಂಠನ ಶಕ್ತಿ ವಿಶಿಷ್ಟಾದ್ವೈತಗಳಿಂದ ಆಚಾರ ವಿಚಾರಗಳಲ್ಲಿ ಪ್ರಭಾವಿತವಾಗಿದೆ."[೧] ಇಷ್ಟಲಿಂಗ ಧಾರಣೆ ಮತ್ತು ಕರಸ್ಥಲ ಲಿಂಗಪೂಜೆಯು ವೀರಶೈವದ ಕೇಂದ್ರತತ್ವ. "ಲಿಂಗಧಾರಣ ಪದ್ಧತಿಯು ಲಿಂಗಾರ್ಚನೆಯಷ್ಟು ಪ್ರಾಚೀನವಲ್ಲದಿದ್ದರೂ ಬಸವಣ್ಣನವರಿಗಿಂತ ಹಿಂದೆಯೇ ಇದ್ದಂತೆ ತೋರುತ್ತದೆ. ಇದು ವೀರಶೈವರಿಗೆ ವಿಶಿಷ್ಟವಾದ ಕುರುಹು. ಆದ್ದರಿಂದ ಈ ಪದ್ಧತಿಯ ಆದಿಯು ಗೊತ್ತಾದರೆ ವೀರಶೈವ ಮತೇತಿಹಾಸಕ್ಕೆ ಅನುಕೂಲವಾಗುವುದು" ಎಂಬ ಉದ್ದೇಶದಿಂದ ಡಿ.ಎಲ್. ನರಸಿಂಹಾಚಾರ್‌ರವರು ತಮ್ಮ ಒಂದು ಲೇಖನದಲ್ಲಿ[೨] ಲಿಂಗಧಾರಣೆಯ ಮೂಲಚೂಲಗಳನ್ನು ವಿಸ್ತೃತವಾಗಿ ಚರ್ಚಿಸಿದ್ದಾರೆ. ವೈದಿಕ ಪರಂಪರೆಯ ಮೂಲದವರಾದ ಪಾಶುಪತರು ಮತ್ತು ಅವರ ಶಾಖೆಗಳಾದ ಮಾಹೇಶ್ವರರು, ಲಕುಲೀಶರು ಮತ್ತು ಕಾಳಾಮುಖರು ಶರೀರದ ಮೇಲೆ ಲಿಂಗಗಳನ್ನು ಧರಿಸುತ್ತಿದ್ದರೆಂಬುದನ್ನು ಶ್ರೀಪತಿ ಪಂಡಿತರ 'ಶ್ರೀಕರಭಾಷ್ಯ' (ಕಾಲ ಸು. ಕ್ರಿ.ಶ. ೧೧೬೦), ಸಾಯಣ ಮಾಧವರ 'ಸರ್ವದರ್ಶನ ಸಂಗ್ರಹ' ಮುಂತಾದವುಗಳ ಮೂಲಕ ಅವರು ಖಚಿತಪಡಿಸಿದ್ದಾರೆ. ಹಾಗಾಗಿ 'ಶರೀರದ ವಿವಿಧ ಭಾಗಗಳ ಮೇಲೆ ಲಿಂಗವನ್ನು ಧರಿಸುವುದು ವೇದ ಸಮ್ಮತವಾದ ವಿಧಾನವಾಗಿದ್ದು ಅದನ್ನು ಎಲ್ಲ ಶೈವಪಂಥದವರೂ ನಡೆಸಿಕೊಂಡು ಬಂದಿದ್ದರು. ವೀರಶೈವವು ಈ ಪದ್ಧತಿಯನ್ನು ಮುಂದೆ ತನ್ನದಾಗಿಸಿಕೊಂಡಾಗ ಇಷ್ಟಲಿಂಗವೆಂಬ ತತ್ವವು ಮೂಡಿರಬೇಕು" ಎಂದು ಊಹಿಸಬಹುದು.[೨]



ಕರಸ್ಥಲ ಲಿಂಗಪೂಜೆಯಲ್ಲಿ ನಿರತರಾದ
ಶಂಕರನಾರಾಯಣ ಜೋಯಿಸರು (ಗಳಿಲ)

"ತಮ್ಮ ಗ್ರಾಮಗಳಲ್ಲಿ ಸಾರ್ವಜನಿಕವಾಗಿ ಪೂಜೆಗೊಳ್ಳುತ್ತಿದ್ದ ದೇವಾಲಯಗಳ ಸ್ಥಾವರಲಿಂಗಗಳ ಹೆಸರುಗಳನ್ನೇ ಶಿವಶರಣರು ತಮ್ಮ ದೇಹದ ಮೇಲೆ ಧರಿಸುತ್ತಿದ್ದ ಇಷ್ಟಲಿಂಗಕ್ಕೂ ಹೊಂದಿರುತ್ತಿದ್ದರು. ಅಂತಹ ಸ್ಥಾವರಲಿಂಗದ ಕುರುಹನ್ನು (ಇಷ್ಟಲಿಂಗವನ್ನು) ಮನೆಯ ಜಗುಲಿಯ ಮೇಲೆ ಇಟ್ಟು ಪೂಜಿಸುವ ಸಂಪ್ರದಾಯವೂ ಇತ್ತು. ಶೈವರ ಸ್ಥಾವರಲಿಂಗವು ಶರಣರ ಇಷ್ಟಲಿಂಗವೆನಿಸುವಲ್ಲಿ ಶೈವರು ಪ್ರವಾಸದ ಅನುಕೂಲಕ್ಕಾಗಿ ಮಾಡಿಕೊಂಡ ಉರಸ್ಥಲದ ಧಾರಣಕ್ರಮವೂ, ಪೂಜಾ ಅನುಕೂಲಕ್ಕಾಗಿ ಮಾಡಿಕೊಂಡ ಕರಸ್ಥಲದ ಅರ್ಚನಕ್ರಮವೂ ಶರಣರ ಇಷ್ಟಲಿಂಗದ ಸಾಮಾನ್ಯ ಬಾಹ್ಯ

* ಮುಖ್ಯಸ್ಥ, ಕನ್ನಡ ವಿಭಾಗ, ವಿಜಯ ಪದವಿ ಪೂರ್ವ ಕಾಲೇಜು, ಆರ್ ವಿ ರಸ್ತೆ, ಬಸವನಗುಡಿ, ಬೆಂಗಳೂರು-೫೬೦೦೦೪

ಲಕ್ಷಣಗಳಾದವು' ಎಂಬ ಅಭಿಪ್ರಾಯವನ್ನು ಎಂ.ಎಂ. ಕಲಬುರ್ಗಿಯವರು ತಮ್ಮ ಒಂದು ಸಂಪ್ರಬಂಧದಲ್ಲಿ ವ್ಯಕ್ತಪಡಿಸಿದ್ದಾರೆ.[೪] "ಇಷ್ಟಲಿಂಗವನ್ನು ಶಿರಸ್ಸು, ಕೊರಳು, ರೆಟ್ಟೆ, ಎದೆ, ಕರಸ್ಥಳ ಇವುಗಳಲ್ಲಿ ಯಾವುದಾದರೂ ಒಂದು ಸ್ಥಳದಲ್ಲಿ ಧರಿಸಬೇಕು" ಎನ್ನುವುದು ಶಾಸ್ತ್ರನಿಯಮ.[೫] ಲಿಂಗವನ್ನು ದೇಹದ ಯಾವುದೇ ಭಾಗದಲ್ಲಿ ಧರಿಸಿದರೂ ಅದನ್ನು ಅಂಗೈಯಲ್ಲಿಟ್ಟುಕೊಂಡು ಪೂಜಿಸುವುದು ಪದ್ಧತಿ. ಇದೇ ಕರಸ್ಥಲ ಲಿಂಗಪೂಜೆ.

ಬಸವಪೂರ್ವಯುಗದಲ್ಲಿ ಹೀಗೆ ಲಾಕುಲೀಶ ಮತ್ತು ಪಾಶುಪತ ಪಂಥದವರಲ್ಲಿದ್ದ ಕರಸ್ಥಲ ಲಿಂಗ ಪೂಜೆಯು ಮುಂದೆ ವೈದಿಕ ಪರಂಪರೆಯಲ್ಲಿ ಮುಂದುವರೆದದ್ದು ಕೇವಲ ಆರಾಧ್ಯ ಬ್ರಾಹ್ಮಣರಲ್ಲಿ ಮಾತ್ರ ಎಂದು ಕೆಲವು ವಿದ್ವಾಂಸರ ಅಭಿಪ್ರಾಯ.[೬] ಆದರೆ ಲಿಂಗವನ್ನು ದೇಹದ ಮೇಲೆ ಧರಿಸದೇ ಇದ್ದರೂ ಪ್ರತಿನಿತ್ಯವೂ ಮಣ್ಣಿನಿಂದ ಹೊಚ್ಚಹೊಸ ಲಿಂಗವೊಂದನ್ನು ರಚಿಸಿ ಕರಸ್ಥಲದಲ್ಲಿರಿಸಿಕೊಂಡು ಪೂಜಿಸುವ ವಿಧಾನವು ಅತ್ಯಂತ ಅಪರೂಪವಾಗಿಯಾದರೂ ಬ್ರಾಹ್ಮಣರಲ್ಲಿ ಉಳಿದುಬಂದಿರುವುದಕ್ಕೆ ಎರಡು ಪುರಾವೆಗಳು ಇಲ್ಲಿವೆ.

೧. ಡಿ.ವಿ. ಗುಂಡಪ್ಪನವರು ತಮ್ಮ 'ಜ್ಞಾಪಕ ಚಿತ್ರಶಾಲೆ'ಯ ಎಂಟನೇ ಸಂಪುಟದಲ್ಲಿ 'ಶಿವಪೂಜೆ ನಾರಣಪ್ಪನವರು' ಎಂಬುವರನ್ನು ಕುರಿತು ನೀಡುವ ಚಿತ್ರಣ ಹೀಗಿದೆ :

ಪಾರ್ಥೀವ ಪೂಜೆ

ನಾರಣಪ್ಪನವರು ಬೆಳಗ್ಗೆ ೫ ಗಂಟೆಗೆ ಎದ್ದು ತಣ್ಣೀರು ಸ್ನಾನ ಮಾಡಿ ವಿಭೂತಿ ಧರಿಸಿ ಮೂರು ನಾಲ್ಕು ರುದ್ರಾಕ್ಷಿ ಸರಗಳನ್ನು ಹಾಕಿಕೊಂಡು ಮೊದಲು ಪಾರ್ಥೀವ ಪೂಜೆ ಮಾಡುವರು. ಈ ಪಾರ್ಥೀವ ಲಿಂಗಪೂಜೆಯ ಪದ್ಧತಿ ಈಗ ನನಗೆ ತಿಳಿದಿರುವಂತೆ ಎಲ್ಲೂ ಇಲ್ಲ. ನನಗೆ ತೋರುತ್ತದೆ ಅದು ಸರ್ವೋತ್ಕೃಷ್ಟವಾದ ಏಕಾಂತ ಭಕ್ತಿಯೆಂದು ಭಕ್ತನು ಹುತ್ತದ ಮಣ್ಣನ್ನು ತಂದಿರಿಸಿಕೊಂಡಿರುತ್ತಾನೆ. ಅದು ಒದ್ದೆಯಾಗಿರುತ್ತದೆ. ಮಾರನೆಯ ದಿನ ಬೆಳಗ್ಗೆ ಸ್ನಾನ ಸಂಧ್ಯಾದಿಗಳು ಮುಗಿದ ತರುವಾಯ ಆತನು ತನ್ನ ಎಡಗೈಯಲ್ಲಿ ಆ ಮಣ್ಣಿನಿಂದ ಒಂದು ಶಿವಲಿಂಗದ ಪ್ರತೀಕವನ್ನು ಮಾಡಿ ಇರಿಸಿಕೊಳ್ಳುತ್ತಾನೆ. ಮಾಡಿ ಅದನ್ನು ಬಲಗೈಯಿಂದ ಪೂಜಿಸುತ್ತಾನೆ. ಆಗ ಹೇಳುವ ಮಂತ್ರಗಳೇ 'ನಿಧನಪತಯೇ ನಮಃ' ಇತ್ಯಾದಿಗಳು. ಅದೇ 'ಅಂಗೈಯಲಿಂಗ'. ಈ ಅರ್ಚನೆಗೆ ಬೇಕಾದ್ದು ತುಂಬೆಹೂವು ಮತ್ತು ಬಿಲ್ವ. ಒಂದೊಂದು ಸಾರಿ ನಮ್ಮ ನಾರಣಪ್ಪನವರು ನೈವೇದ್ಯಕ್ಕೆ ಬೇರೆ ಏನೂ ಗತಿಯಿಲ್ಲದೆ ಕುದುರೆಗಾಗಿ ಇರಿಸಿಕೊಂಡಿದ್ದ ಹುರಿದ ಹುರುಳಿಯನ್ನು ನೈವೇದ್ಯ ಮಾಡಿದ್ದುಂಟಂತೆ. ನಾರಣಪ್ಪನವರನ್ನು ಜನ ಶಿವಪೂಜಾ ಧುರಂಧರ ಎಂದು ಕರೆಯುತ್ತಿದ್ದರು.[೭]"

೨. ಶೃಂಗೇರಿಯ ಶ್ರೀ ಸದ್ವಿದ್ಯಾ ಸಂಜೀವಿನೀ ಪಾಠಶಾಲೆಯಲ್ಲಿ ಅಧ್ಯಾಪಕರಾಗಿದ್ದು ನಂತರ ಅಧ್ಯಕ್ಷರಾಗಿದ್ದ ಆಸ್ಥಾನ ಜ್ಯೋತಿಷ್ಯ ವಿದ್ವಾನ್ ವೇ.ಬ್ರ.ಶ್ರೀ. ಶಂಕರ ನಾರಾಯಣ ಜೋಯಿಸರು (೧೯೦೩-೧೯೯೮) "ನಿಜ ಜೀವನದಲ್ಲಿ ಶಿವಶಕ್ತಿಯ ಉಪಾಸಕರು. ಅವರು ಅನೇಕ ವರ್ಷಗಳ ಕಾಲ ಪ್ರತಿದಿನ ಮೃಣ್ಮಯ ಪಾರ್ಥಿವೇಶ್ವರನ ಪೂಜೆಯನ್ನು ಮಾಡುತ್ತಿದ್ದರು"[೮] ಶ್ರೀ ಜೋಯಿಸರು ಕರಸ್ಥಲದಲ್ಲಿ ಮಣ್ಣಿನ ಲಿಂಗವನ್ನು ಇರಿಸಿಕೊಂಡು ಪೂಜಿಸುತ್ತಿರುವ, ೧೯೫೮ರಲ್ಲಿ ತೆಗೆಯಲಾದ ಛಾಯಾಚಿತ್ರವನ್ನು ಗಮನಿಸಿ.

ಪ್ರಸ್ತುತದಲ್ಲಿ ಪಾರ್ಥಿವ ಪೂಜೆಯನ್ನು ಆಚರಣೆಯಲ್ಲಿ ಇರಿಸಿಕೊಂಡಿರುವವರು ಯಾರಾದರೂ ಇದ್ದಾರೆಯೇ ಎಂಬ ಮಾಹಿತಿಯನ್ನು ಪಡೆಯುವಲ್ಲಿ ನಡೆಸಿದ ಪ್ರಯತ್ನ ಫಲ ನೀಡಿಲ್ಲ. ಹಾಗಾಗಿ ಈ ಆಚರಣೆಯ ವಿಧಿ ವಿಧಾನಗಳನ್ನು ಅರಿಯಲು ಮೇಲ್ಕಂಡ ಉಲ್ಲೇಖಗಳನ್ನು ಮಾತ್ರವೇ ಆಧರಿಸದೆ ವಿಧಿಯಿಲ್ಲ. ಆದರೆ ಶಿವ (ಮಹಾ) ಪುರಾಣದ ವಿದ್ಯೇಶ್ವರ ಸಂಹಿತೆಯ ೧೯, ೨೦ ಮತ್ತು ೨೧ನೇ ಅಧ್ಯಾಯಗಳು ಸಂಪೂರ್ಣವಾಗಿ ಪಾರ್ಥಿವೇಶ್ವರ ಪೂಜೆಯ ವಿವರಣೆಗೆ ಮೀಸಲಾಗಿದ್ದು ಇದರ ಬಗ್ಗೆ ಹೆಚ್ಚಿನ ಬೆಳಕನ್ನು ಚೆಲ್ಲುತ್ತವೆ.[೯] ಸುಮಾರು ೧೩೦ಕ್ಕೂ ಹೆಚ್ಚು ಅನುಷ್ಟುಪ್ ಶ್ಲೋಕಗಳಲ್ಲಿ ಹರಡಿರುವ ಇಲ್ಲಿಯ ವಿವರಗಳನ್ನು ಹೀಗೆ ಸಂಗ್ರಹಿಸಬಹುದು:

"ಇರುವ ಎಲ್ಲ ಬಗೆಯ ಲಿಂಗಗಳಲ್ಲಿಯೂ* ಪಾರ್ಥಿವ ಲಿಂಗವೇ ಅತ್ಯುತ್ತಮ. ಅದನ್ನು ಪೂಜಿಸಿ ಅನೇಕರು ಸಿದ್ಧಿಯನ್ನು ಪಡೆದಿರುವರು.[೧೦] ದೇವತೆಗಳಲ್ಲಿ ಮಹೇಶ್ವರ, ನದಿಗಳಲ್ಲಿ ಗಂಗೆ, ಮಂತ್ರಗಳಲ್ಲಿ ಪ್ರಣವ, ಪಟ್ಟಣಗಳಲ್ಲಿ ಕಾಶಿ, ವರ್ಣಗಳಲ್ಲಿ ಬ್ರಾಹ್ಮಣ ಹಾಗೂ ವ್ರತಗಳಲ್ಲಿ ಶಿವರಾತ್ರಿ ಹೇಗೆ ಶ್ರೇಷ್ಠವೋ ಹಾಗೆಯೇ ಲಿಂಗಗಳಲ್ಲೆಲ್ಲಾ ಪಾರ್ಥಿವ ಲಿಂಗವು.[೧೧] ಕೈಯಲ್ಲಿ ಇರಿಸಿಕೊಳ್ಳುವ ಚರಲಿಂಗವನ್ನು ಅಖಂಡವಾಗಿ ಮತ್ತು ವೇದಿಕೆಯ ಮೇಲೆ ಇರಿಸಿ ಪೂಜಿಸುವಂತಹುದನ್ನು ಪೀಠ ಮತ್ತು ಲಿಂಗವೆಂದು ಎರಡು ಭಾಗಗಳಾಗಿ ಮಾಡಬೇಕು.[೧೨] ವೈದಿಕರಾದ ಬ್ರಾಹ್ಮಣರು ತಮ್ಮ ಗೃಹ್ಯಸೂತ್ರದಲ್ಲಿ ಹೇಳಿರುವ ವಿಧಿಯಂತೆ ಸ್ನಾನ ಮಾಡಿ ಸಂಧ್ಯಾವಂದನೆಯನ್ನು ಆಚರಿಸಿ ಮೊದು ಬ್ರಹ್ಮಯಜ್ಞವನ್ನು ಆಚರಿಸಿ ಬಳಿಕ ತರ್ಪಣ ನೀಡಬೇಕು. ನಂತರ ಶುದ್ಧವಾದ ಪ್ರದೇಶದಿಂದ ಮಣ್ಣನ್ನು ಹುಡುಕಿ ತಂದು ಅದನ್ನು ನೀರಿನಲ್ಲಿ ಶೋಧಿಸಿ ವೇದೋಕ್ತ ವಿಧಿಯಂತೆ ನಿಧಾನವಾಗಿ ಉಂಡೆಕಟ್ಟಿ ಲಿಂಗವನ್ನು ರಚಿಸಬೇಕು.[೧೩] ಅನಂತರ 'ನಮಸ್ತೇ ರುದ್ರ', 'ನಮಃ

ಶಂಭವಾಯ' ಮುಂತಾದ ತೈತ್ತರೀಯ ಸಂಹಿತೆಯ ಮಂತ್ರಗಳಿಂದ ಮತ್ತು 'ಯಾತೇ ರುದ್ರ' ಮೊದಲಾದ ರುದ್ರಾಧ್ಯಾಯದ ಮಂತ್ರಗಳಿಂದ[೧೪] ಅಥವಾ ಗುರುವು ಉಪದೇಶಿಸಿರುವಂತಹ ಶಿವ ಪಂಚಾಕ್ಷರೀ ಮಂತ್ರದಿಂದ[೧೫] ಷೋಡಶೋಪಚಾರಗಳನ್ನು ಅರ್ಪಿಸಿ ವಿಧಿವತ್ತಾಗಿ ಪೂಜಿಸಬೇಕು. ಗೃಹಸ್ಥರಾದವರು ಈ ಲಿಂಗವನ್ನು ಪೀಠದ ಮೇಲಿಟ್ಟು[೧೬] ವಿರಕ್ತರು (ಸನ್ಯಾಸಿಗಳು) ತಮ್ಮ ಕರತಲದಲ್ಲಿ ಇರಿಸಿಕೊಂಡೂ ಪೂಜಿಸಬೇಕು."[೧೭]

ಶಿವಪೂಜೆ ನಾರಣಪ್ಪನವರು ಹಾಗೂ ಶಂಕರ ನಾರಾಯಣ ಜೋಯಿಸರಿಬ್ಬರ ಪೂಜಾವಿಧಾನವೂ ಶಿವಪುರಾಣದ ಈ ಎಲ್ಲ ವಿಧಿಗಳಿಗೆ ಅನುಗುಣವಾಗಿರುವುದರಿಂದ ನಿಸ್ಸಂದೇಹವಾಗಿ ಇದು ವೈದಿಕ ಸ್ವರೂಪದ ಕರಸ್ಥಲ ಲಿಂಗಪೂಜೆಯೇ ಆಗಿದೆ. ಹಾಗಾಗಿ ಒಂದು ಕಾಲದಲ್ಲಿ ಲಾಕುಲೀಶ, ಪಾಶುಪಾತ ಮುಂತಾದವರಲ್ಲಿ ರೂಢಿಯಲ್ಲಿದ್ದ ಅಪರೂಪದ ಈ ವೈದಿಕ ಪೂಜಾ ವಿಧಾನವು ೨೦ನೆಯ ಶತಮಾನದಲ್ಲಿಯೂ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿತ್ತೆಂಬುದು ಖಚಿತವಾಗುತ್ತದೆ.

[ಈ ಸಂಪ್ರಬಂಧವನ್ನು ಸಿದ್ಧಪಡಿಸುವಲ್ಲಿ ನೆರವಾದ ಶ್ರೀಮತಿ ಕೆ.ಎಸ್. ಶೈಲಜಾ ಹಾಗೂ ಡಾ. ಎಸ್.ವಿ. ಶ್ರೀಧರಮೂರ್ತಿ ದಂಪತಿಗಳಿಗೆ, ಅಪರೂಪದ ಛಾಯಾಚಿತ್ರವನ್ನು ಒದಗಿಸಿದ ಹೈದರಾಬಾದಿನ ಶ್ರೀ ಸೀತಾರಾಮ್‌ರವರಿಗೆ ಹಾಗೂ ಆರಾಧ್ಯ ಬ್ರಾಹ್ಮಣರನ್ನು ಕುರಿತು ವಿವರಿಸಿದ ತುಮಕೂರಿನ ಡಾ. ಬಿ. ನಂಜುಂಡಸ್ವಾಮಿಯವರಿಗೆ ಧನ್ಯವಾದಗಳು.)

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ರುದ್ರಪ್ಪ ಜೆ., 'ವೀರಶೈವ ಧರ್ಮ', **ಕರ್ನಾಟಕದ ಪರಂಪರೆ**, ಭಾಗ ೧, ಪುಟ ೫೨೯, ೧೯೭೦.

೨. ನರಸಿಂಹಾಚಾರ್, ಡಿ.ಎಲ್. 'ಲಿಂಗಾರ್ಚನೆ, ಲಿಂಗಧಾರಣೆ' **ಪೀಠಿಕೆಗಳು, ಲೇಖನಗಳು**, ಪುಟ ೯೮೬, ೧೯೭೧.

೩. ಪಾರಮೇಶ್ವರಾಗಮದ ಪ್ರಕಾರ ಚತುರ್ವರ್ಣಗಳಲ್ಲಿ ಯಾರೇ ಆದರೂ ಲಿಂಗಧಾರಣ ಮಾತ್ರದಿಂದ ಅವರು ಶಿವರೇ ಆಗುವರು. (ನೋಡಿ: ನಂದಿಕೋಲಮಠ, ಜ.ಐ., **ಕರಸ್ಥಲ ಪರಂಪರೆ**, ಪುಟ ೩೫, ೨೦೦೯.

೪. ಕಲಬುರ್ಗಿ ಎಂ.ಎಂ., 'ಇಷ್ಟಲಿಂಗ', **ಮಾರ್ಗ** ಸಂ. ೧, ಪುಟ ೧೮೭, ೧೯೮೮.

೫. ಉತ್ತಮಾಂಗೇ ಗಲೇಕಕ್ಷೇ ತಥಾ ವಕ್ಷಃ ಸ್ಥಲೇಪಿ ವಾ ।
ಕರಸ್ಥಲೇಪಿವಾ ನಿತ್ಯಂ ಸಾವಧಾನೇನ ಧಾರಯ ॥ –ಸೂಕ್ಷ್ಮಾಗಮ.

೬. "ಲಿಂಗಯಜ್ಞೋಪವೀತಧಾರೀ ಪಾಶುಪತ ಮಹೇಶ್ವರ..ಧರ್ಮವನ್ನು ಬಸವೇಶ್ವರನು ಸಂಸ್ಕರಿಸಲು, ಪಾಶುಪತರು ಪಥವನ್ನರಿಯದೆ, ಕಾಳಾಮುಖರು ಕಂಗೆಟ್ಟು ಸುಧಾರಿತ ಧರ್ಮವನ್ನು ಬಹುಸಂಖ್ಯೆಯಲ್ಲಿ ಅಪ್ಪಿಕೊಂಡರಾದರೂ ಲಿಂಗ ಬ್ರಾಹ್ಮಣ ಧರ್ಮವು ಆರಾಧ್ಯ ಬ್ರಾಹ್ಮಣರಲ್ಲಿ ಮುಂದುವರೆಯಿತು" –ಮಲ್ಲಪ್ಪ ಟಿಎನ್., 'ಬಸವಯುಗದ ಹಿನ್ನೆಲೆ', **ಬಸವೇಶ್ವರ ಸಮಕಾಲೀನರು**, ಪುಟ ೬೮೦, ೨೦೦೭.

೭. ಗುಂಡಪ್ಪ. ಡಿ.ವಿ. **'ಡಿವಿಜಿ ಕೃತಿ ಶ್ರೇಣಿ'**, ಸಂ. ೮, ಪುಟ ೨೪೯, ೧೯೯೮.

೮. **'ಸಾರ್ಥಕಜೀವಿ ಶೃಂಗೇರಿ ಕುಲಪತಿ ಶಂಕರನಾರಾಯಣ ಜೋಯಿಸರು'**, ಪುಟ ೮, ಶ್ರೀ ಕಲ್ಲೇಶ್ವರ ಮಲ್ಲೇಶ್ವರ ಸ್ವಾಮಿ ಸೇವಾ ಟ್ರಸ್ಟ್, ಶಿವಮೊಗ್ಗ, ೨೦೦೯.

೯. ವೆಂಕಟರಾವ್ (ಸಂ) **ಶಿವಮಹಾಪುರಾಣ**, ಭಾಗ ೧, ಜಯಚಾಮರಾಜೇಂದ್ರ ಗ್ರಂಥಮಾಲಾ, ಕ್ರ.ಸಂ. ೨೧, ೧೯೪೫.

* ದ್ರವ್ಯಗಳ ಭೇದದಿಂದ ಲಿಂಗಗಳಲ್ಲಿ ಶೈಲಜ, ರತ್ನಜ, ಧಾತುಜ, ದಾರುಜ, ಮೃಣ್ಮಯ ಮತ್ತು ಕ್ಷಣಿಕವೆಂಬ ಆರುಬಗೆಗಳಿವೆ. –ಲಿಂಗ ಮಹಾಪುರಾಣ, ಪೂರ್ವಭಾಗ, ಅಧ್ಯಾಯ ೭೪, ಶ್ಲೋಕ : ೧೭.

೧೦. **ಶಿವಮಹಾಪುರಾಣ**, ಅಧ್ಯಾಯ ೧೮, ಶ್ಲೋಕ–೪.

೧೧. ಅಲ್ಲೇ., ಶ್ಲೋಕಗಳು ೯–೧೫.

೧೨. ಅಲ್ಲೇ., ಶ್ಲೋಕಗಳು ೩೧–೩೫.

೧೩. ಅಲ್ಲೇ., ಅಧ್ಯಾಯ ೧೯, ಶ್ಲೋಕಗಳು ೬–೯.

೧೪. ಅಲ್ಲೇ., ಶ್ಲೋಕಗಳು ೧೧–೪೧.

೧೫. ಅಲ್ಲೇ., ಶ್ಲೋಕಗಳು ೪೨–೪೪.

೧೬. ಅಲ್ಲೇ., ಅಧ್ಯಾಯ ೨೦, ಶ್ಲೋಕ ೩೩.

೧೭. ಅಲ್ಲೇ., ಶ್ಲೋಕ ೩೫.

ಶೃಂಗೇರಿ ವಿದ್ಯಾರಣ್ಯಪುರ ಶಾಸನಗಳಲ್ಲಿ ದಾಖಲಿಸಿದ ದೇವಾಲಯಗಳ ಕುರಿತು ಅಧ್ಯಯನ

ಜಿ.ಎಸ್. ರಾಮಚಂದ್ರ*

ಶೃಂಗೇರಿ ಮಠದ ದಾಖಲೆಗಳಿಗೆ ಅನುಸಾರವಾಗಿ ಈ ಪರಿಸರದಲ್ಲಿ ೧೫೦ಕ್ಕೂ ಹೆಚ್ಚು ದೇವಾಲಯಗಳನ್ನು ಕಾಣಬಹುದು. ಆದರೆ ಇವೆಲ್ಲವನ್ನೂ ಶಾಸನಗಳಲ್ಲಿ ದಾಖಲಿಸಿದ ಹಾಗೆ ಕಾಣುವುದಿಲ್ಲ.

ಚಾರಿತ್ರಿಕವಾಗಿ ಈ ಪರಿಸರದ ಶಾಸನಗಳಲ್ಲಿ ದಾಖಲಿಸಿದ ದೇವಾಲಯಗಳನ್ನು ಸ್ಥೂಲವಾಗಿ ಕೆಳಕಂಡಂತೆ ವಿವರಿಸಬಹುದು.

೧. ಕ್ರಿಸ್ತಶಕ ೬–೭ನೇ ಶತಮಾನದ ಹಿಂದಿನ ದೇವಾಲಯಗಳು.
೨. ೯–೧೦ನೇ ಶತಮಾನಕ್ಕೆ ಸೇರಿದ ದೇವಾಲಯಗಳು.
೩. ಕ್ರಿ.ಶ. ೧೧–೧೨ನೇ ಶತಮಾನಕ್ಕೆ ಸೇರಿದ ದೇವಾಲಯಗಳು.
೪. ಕ್ರಿ.ಶ. ೧೪–೧೫ನೇ ಶತಮಾನಕ್ಕೆ ಸೇರಿದ ದೇವಾಲಯಗಳು

ಅಂದರೆ ಈ ಪ್ರದೇಶದಲ್ಲಿ ಕ್ರಿ.ಶ. ೬–೭ನೇ ಶತಮಾನದಿಂದ ಪ್ರಾರಂಭವಾಗಿ ೧೬–೧೭ನೇ ಶತಮಾನದ ವರೆಗೆ ದೇವಾಲಯಗಳು ನಿರ್ಮಾಣಗೊಂಡವು. ಸುಮಾರು ೧೨೦೦ ವರ್ಷಗಳ ನಿರ್ಮಾಣ ಪರಂಪರೆಯನ್ನು ಸೃಷ್ಟಿಸಿದವು.

ಇದುವರೆಗೆ ಶಾಸನಗಳಲ್ಲಿ ದಾಖಲಿಸಿದ ದೇವಾಲಯಗಳನ್ನು ಎರಡು ರೀತಿಯಲ್ಲಿ ವರ್ಗೀಕರಿಸಬಹುದು. ಹಿಂದೂ ಮತ್ತು ಜೈನ. ೬–೭ನೇ ಶತಮಾನಕ್ಕೆ ಸರಿಹೊಂದುವ 'ಕಿಗ್ಗ'ದ 'ಋಷ್ಯಶೃಂಗ' ದೇವಾಲಯ ಅತ್ಯಂತ ಪುರಾತನವಾದದ್ದು. ಕಿಗ್ಗದ ಪ್ರಾಚೀನತೆಯನ್ನು ಅಲ್ಲಿ ದೊರೆತ ಶಾಸನಗಳು ದೃಢಿಕರಿಸುತ್ತವೆ. ಈ ದೇವರನ್ನು 'ಕಿಲ್ಗಾನ ದೇವ' ಅಥವಾ 'ಕಿಲ್ಗಾನೇಶ್ವರ' ಎಂದು ಶಾಸನಗಳಲ್ಲಿ ಸಂಭೋಧಿಸುತ್ತಾರೆ. ಇದು ಲಿಂಗರೂಪದಲ್ಲಿ ಕಾಣುತ್ತದೆ. ಈ ದೇವರ ತಲೆಯ ಎಡಭಾಗದಲ್ಲಿರುವ ಕೊಂಬು ಶಾಂತಳನ್ನು ಅಂದರೆ ಋಷ್ಯಶೃಂಗನ ಹೆಂಡತಿಯನ್ನು ಪ್ರತಿನಿಧಿಸುತ್ತದೆ ಎಂಬುದು ಐತಿಹ್ಯ. ಈ ದೇವಾಲಯದ ನವರಂಗ ಚಾಲುಕ್ಯ ಶೈಲಿಯನ್ನು ಹೋಲುತ್ತದೆ. ಇಲ್ಲಿರುವ ಕಂಬವೊಂದರ ಮೇಲೆ ಋಷ್ಯಶೃಂಗನನ್ನು ರೋಮಪಾದನ ಆಸ್ಥಾನಕ್ಕೆ ಕರೆದೊಯ್ಯುವ ದೃಶ್ಯವೊಂದಿದೆ. ಅಳೂಪರಾಜ ಚಿತ್ರವರ್ಮ (ಗುಣಶೇಖರನ ಮಗ)ನು ಹುಂಚದಿಂದ ಆಳುತ್ತಿದ್ದ ಹಾಗೆ ಕಾಣುತ್ತದೆ. ಮುಂದೆ 'ಪೃಥ್ವಿವಲ್ಲಭ'ನೆಂಬ ಇನ್ನೊಬ್ಬ (೧೦೫೦ ಎಡಿ) ಹುಂಚದಿಂದ ಆಳುತ್ತಾ ಈ ಭಾಗಕ್ಕೆ ರಾಜನಾಗಿ ಇದ್ದಿರಬೇಕೆಂಬ ಊಹೆ ಮಾಡುತ್ತಾರೆ. ಈಗಲೂ ಋಷ್ಯಶೃಂಗ ದೇವರನ್ನು ಶ್ರದ್ಧಾಭಕ್ತಿಯಿಂದ ಪೂಜಿಸುವುದನ್ನು ನಾವು ನೋಡುತ್ತೇವೆ. ಇದೊಂದು ಆಗಮ ಸಿದ್ಧಾಂತ ದೇವಾಲಯ.

ಜನಾರ್ದನ ದೇವಾಲಯ : ಈ ದೇವಾಲಯವು ಶ್ರೀ ಮಠದ ಆವರಣದಲ್ಲಿದೆ. ಹಾಗೂ ಚಾಲುಕ್ಯ ಶೈಲಿಯಲ್ಲಿ ಕಟ್ಟಲ್ಪಟ್ಟಿದೆ. ಈ ದೇವಾಲಯವು ಕ್ರಿ.ಶ. ೯–೧೦ನೇ ಶತಮಾನಕ್ಕೆ ಸೇರಿದ್ದಿರಬೇಕು. ಸಂಸ್ಥಾನದ ಹತ್ತನೇ ಯತಿಗಳಾದ ಜಗನ್ನಾಥಾಚಾರ್ಯರು ಕಟ್ಟಿಸಿದರೆಂಬ ಖ್ಯಾತಿ ಇದೆ.

ಕ್ರಿ.ಶ. ೧೩೮೬ರ ತಾಮ್ರ ಶಾಸನವು ವಿಜಯನಗರದ ಎರಡನೇ ಹರಿಹರ ಮಹಾರಾಜರು ಈ ದೇವಾಲಯಕ್ಕೆ ಉಂಬಳಿಯನ್ನು ಕೊಟ್ಟಿರುವ ಬಗ್ಗೆ ದಾಖಲೆಗಳಿವೆ. ಪ್ರಾಯಃ ಈ ಪರಿಸರದಲ್ಲಿರುವ ಏಕೈಕ ಜನಾರ್ದನ ದೇವಾಲಯ ಇದಾಗಿದೆ.

ಹಳೇ ಶೃಂಗೇರಿ ದೇವಾಲಯ: ಇಲ್ಲಿ ವಿದ್ಯಾಶಂಕರ ದೇವಾಲಯವೊಂದಿದೆ. ಇದನ್ನು ಚತುರ್ಮುಖ ವಿದ್ಯೇಶ್ವರ ಎಂದು ಕರೆಯುತ್ತಾರೆ. ಇದಕ್ಕೆ ೪ ಮುಖಗಳಿವೆ. ಇದೊಂದು ಏಕಶಿಲಾಮೂರ್ತಿ. ಈ ದೇವಾಲಯಕ್ಕೆ ಶಾಸನಗಳಲ್ಲಿ ಉಲ್ಲೇಖವಿದೆ. ಈ ದೇವಾಲಯವು ಎತ್ತರದಲ್ಲಿರುವ ಕಾರಣ ಬಹಳ ದೂರದಿಂದಲೂ ಕಾಣುತ್ತದೆ. ಸುಮಾರು ಕ್ರಿ.ಶ. ೧೩೩೮ರಲ್ಲಿ ಸ್ಥಾಪನೆಯಾಗಿರಬೇಕು. ಈ ದೇವಾಲಯದ ಗರ್ಭಗುಡಿಗೆ ಮೂರು ಕಡೆಯಿಂದ ಕಿಟಕಿಗಳಿವೆ. ಇದರ ಮೂಲಕ ಬ್ರಹ್ಮ, ವಿಷ್ಣು, ಮಹೇಶ್ವರರ ದರ್ಶನವಾಗುತ್ತದೆ.

ಪಶ್ಚಿಮವಾಹಿನಿಯ ಗೋಪಿನಾಥ ದೇವಾಲಯ: ಈ ದೇವಾಲಯವು ಕ್ರಿ.ಶ. ೧೩೮೬ಕ್ಕೂ ಮುಂಚೆ ಇದ್ದಿರಬಹುದೆಂದು ಊಹಿಸಲಾಗಿದೆ. ಈ ದೇವಾಲಯದಲ್ಲಿ ದೊರೆತ ಶಾಸನಗಳೆರಡು ವಿದ್ಯಾರಣ್ಯರ ಕುರಿತು ಮಾಹಿತಿ ನೀಡುತ್ತವೆ. ಇತ್ತೀಚೆಗಷ್ಟೆ ಈ ದೇವಾಲಯವು ಜೀರ್ಣೋದ್ಧಾರವಾಗಿದೆ.

* #೧೭೨, ಎ-೧, 'ಅಮೃತವರ್ಷಿಣಿ', ೭ನೇ ಕ್ರಾ, ವಿ.ಎಂ. ನಗರ, ದೊಡ್ಡಣ್ಣಗುಡ್ಡೆ, ಉಡುಪಿ-೫೭೬೧೦೨.

ಜೈನ ದೇವಾಲಯಗಳು: ಶೃಂಗೇರಿ ಪಟ್ಟಣದ ಮಧ್ಯದಲ್ಲಿರುವ ಜೈನ ದೇವಾಲಯಗಳು ಸಾಕಷ್ಟು ಪ್ರಸಿದ್ಧಿಯನ್ನು ಪಡೆದಿವೆ. ಇಲ್ಲಿನ ಶಾಸನವು ಕ್ರಿ.ಶ. ೧೧೫೧ಕ್ಕೆ ಸರಿಹೊಂದುತ್ತದೆ. ಇಲ್ಲಿ ಮೂರು ಜೈನ ವಿಗ್ರಹಗಳಿವೆ. ಇದರಲ್ಲಿ ಅತ್ಯಂತ ಪ್ರಾಚೀನವಾದದ್ದು ಪಾರ್ಶ್ವನಾಥ ನಂತರ ಅನಂತನಾಥ ಮತ್ತು ಚಂದ್ರನಾಥ ಪಾರ್ಶ್ವನಾಥನ ವಿಗ್ರಹವನ್ನು ಮಾರಿಶೆಟ್ಟಿ ಮತ್ತು ಹೆಮ್ಮಾರಿಶೆಟ್ಟಿ ಎಂಬ ವ್ಯಕ್ತಿಗಳು ಸ್ಥಾಪಿಸಿದರು. ಹಾಗೆ ಅನಂತನಾಥ ಮತ್ತು ಚಂದ್ರನಾಥನ ವಿಗ್ರಹಗಳನ್ನು ದೇವಣ್ಣಶೆಟ್ಟಿ ಮತ್ತು ಬೊಮ್ಮಾರಶೆಟ್ಟಿ ಎಂಬುವರು ಕ್ರಿ.ಶ. ೧೫೮೩ರಲ್ಲಿ ಸ್ಥಾಪಿಸಿದರೆಂದು ಶಾಸನವೊಂದು ತಿಳಿಸುತ್ತದೆ. ಈ ಬಸದಿಯು ಹಲವಾರು ಬಾರಿ ಜೀರ್ಣೋದ್ಧಾರಕ್ಕೆ ಒಳಗಾಗಿರಬಹುದೆಂದು ಹೇಳಲಾಗಿದೆ.

ಶೃಂಗೇರಿ ವಿದ್ಯಾಶಂಕರ ದೇವಾಲಯ: ಹೊಯ್ಸಳ ವಿಜಯನಗರ ಶೈಲಿಯ ಈ ದೇವಾಲಯವು ಶೃಂಗೇರಿಯ ಒಂದು ಅಪೂರ್ವ ಕಲಾಸಂಪತ್ತು. ಪ್ರಾಯಃ ೧೩೩೮ರಲ್ಲಿ ಪ್ರಾರಂಭಿಸಿ ಕ್ರಿ.ಶ. ೧೩೫೬–೫೭ ಮುಕ್ತಾಯಗೊಳಿಸಿದರು.

ಮಲಹಾನಿಕೇಶ್ವರ ದೇವಾಲಯ: ಇದು ಶೃಂಗೇರಿ ಪೇಟೆಯ ಮಧ್ಯದಲ್ಲಿದೆ. ಹಲವಾರು ಶಾಸನಗಳು ಈ ದೇವಾಲಯದ ಕುರಿತು ಉಲ್ಲೇಖಿಸುತ್ತವೆ. ಇಲ್ಲಿರುವ ಲಿಂಗರೂಪಿ ಮಲ್ಲಿಕಾರ್ಜುನ ದೇವರನ್ನು 'ವಿಭಾಂಡಕ ಲಿಂಗ' ವೆಂದು ಸಂಬೋಧಿಸುತ್ತಾರೆ. ವಾಸ್ತುಶಿಲ್ಪವನ್ನು ಗಮನಿಸಿದಾಗ ಇದು ವಿಜಯನಗರ ಪೂರ್ವ ಕಾಲದ್ದೆಂದು ತಿಳಿಯುತ್ತದೆ. ಮಲಹಾನಿಕೇಶ್ವರ ಎಂದರೆ ಕಲ್ಮಶವನ್ನು ಹೋಗಲಾಡಿಸುವವನು ಎಂಬ ಅರ್ಥವಿದೆ. ಈ ದೇವಾಲಯವು ೧೬೮೫ರಲ್ಲಿ ಕೆಳದಿಯ ರೇವಣ್ಣನಾಯಕನ ಮಗಳಾದ ಸೀತಮ್ಮಾಜಿಯು ಜೀರ್ಣೋದ್ಧಾರ ಮಾಡಿದ ಕುರಿತು ದಾಖಲೆಗಳಿವೆ.

ಶಾರದಾ ದೇವಾಲಯ : ಶಾರದಾ ದೇವಾಲಯವು ಶಂಕರಾಚಾರ್ಯರಿಂದ ಸ್ಥಾಪಿಸಲ್ಪಟ್ಟು ವಿದ್ಯಾರಣ್ಯರ ಕಾಲಕ್ಕೆ ಪ್ರಸಿದ್ಧಿ ಪಡೆಯಿತು. ಈಗಿರುವ ದೇವಾಲಯವು ದ್ರಾವಿಡ ಶೈಲಿಯಲ್ಲಿದ್ದು ಶಾಸನಗಳು ಈ ದೇವಾಲಯದ ಕುರಿತು ಉಲ್ಲೇಖಿಸುತ್ತವೆ.

ಹೊನ್ನೆ ದೇವಸ್ಥಾನ : ಮಲ್ಲಿಕಾರ್ಜುನ ದೇವಾಲಯದ ಪೂರ್ವಕ್ಕೆ ಈ ದೇವಾಲಯವಿದೆ. ಕ್ರಿ.ಶ. ೧೬೧೨ರಲ್ಲಿ ಹೊನ್ನಣ್ಣ ಶೆಟ್ಟಿ ಎಂಬ ವ್ಯಕ್ತಿ ಈ ದೇವಾಲಯವನ್ನು ಸ್ಥಾಪಿಸಿದನೆಂದು ಶಾಸನವೊಂದು ತಿಳಿಸುತ್ತದೆ. ಇಲ್ಲಿರುವುದೇ ವಿಶ್ವೇಶ್ವರಲಿಂಗ, ಭೈರವ ಮತ್ತು ವೀರಭದ್ರ ಉಪದೇವತೆಗಳಾಗಿ ಇಲ್ಲಿ ಪೂಜಿಸಲ್ಪಡುತ್ತವೆ.

ನೀಲಕಂಠ ದೇವಸ್ಥಾನ : ಅದೇ ರಸ್ತೆಯಲ್ಲಿ ಮುಂದುವರಿದರೆ ಸಿಗುವುದೇ ನೀಲಕಂಠ ದೇವಾಲಯ. ಈ ದೇವಾಲಯವನ್ನು ಅವಧಾನ ರಾಜಗೋಪಾಲಭಟ್ಟರು ೧೬೯೫ರಲ್ಲಿ ಕಟ್ಟಿಸಿದನೆಂದು ಶಾಸನವೊಂದು ತಿಳಿಸುತ್ತದೆ.

ವಿದ್ಯಾರಣ್ಯಪುರದ ವಿನಾಯಕ ದೇವಸ್ಥಾನ: ೧೫೪೭ರ ಶಾಸನವೊಂದು ವಿದ್ಯಾರಣ್ಯಪುರದಲ್ಲಿ ನರಸಿಂಹಭಟ್ಟನೆಂಬ ವ್ಯಕ್ತಿಯೊಬ್ಬ ಈ ದೇವಾಲಯವನ್ನು ಸ್ಥಾಪಿಸಿದರ ಕುರಿತು ತಿಳಿಸುತ್ತದೆ.

ಹರಾವರಿ ಮಲ್ಲಿಕಾರ್ಜುನ: ಈ ದೇವಾಲಯವು ದುರ್ಗಾ ದೇವಸ್ಥಾನದಲ್ಲಿದೆ. ಶಾಸನಗಳು ಈ ದೇವಾಲಯದ ಕುರಿತು ತಿಳಿಸುತ್ತದೆ.

ಆನೆಗುಂದ ಗೋಪಾಲಕೃಷ್ಣ ದೇವಾಲಯ: ೧೬೯೯ರ ಶಾಸನವೊಂದು ಸಚ್ಚಿದಾನಂದ ಭಾರತಿ ಸ್ವಾಮಿಗಳು ೫೦ ಶಿವಳ್ಳಿ ಬ್ರಾಹ್ಮಣರ ಅಗ್ರಹಾರವನ್ನು ಸ್ಥಾಪಿಸಿ ಗೋಪಾಲಕೃಷ್ಣ ದೇವಾಲಯವನ್ನು ಸ್ಥಾಪಿಸಿದರ ಕುರಿತು ಮಾಹಿತಿ ನೀಡುತ್ತದೆ.

ತಟ್ಟೋಡಿ ಮಲ್ಲಿಕಾರ್ಜುನ ದೇವಾಲಯ: ಶೃಂಗೇರಿ ಪೇಟೆಯಿಂದ ಸುಮಾರು ೨ ಕಿ.ಮೀ. ದೂರವಿರುವ (ಮಸೀದಿ ಹತ್ತಿರ) ತಟ್ಟೋಡಿ ಮಲ್ಲಿಕಾರ್ಜುನ ದೇವಾಲಯ ಕುರಿತು ೧೪೫೮–೯೯ರ ಶಾಸನವೊಂದು ತಿಳಿಸುತ್ತದೆ.

ಚಿದ್‌ರೊಳ್ಳಿ ಸೋಮೇಶ್ವರ ದೇವಾಲಯ : ಕ್ರಿ.ಶ. ೧೪೧೮ಕ್ಕೆ ಸೇರುವ ಶಾಸನವೊಂದು ಈ ದೇವಾಲಯದ ಕುರಿತು ಉಲ್ಲೇಖಿಸುತ್ತದೆ.

ನರಸಿಂಹಪುರದ ನರಸಿಂಹ ದೇವಾಲಯ: ವಿದ್ಯಾರಣ್ಯಪುರದ ಒಂದು ಭಾಗವೇ ಈ ನರಸಿಂಹಪುರ. ಶೃಂಗೇರಿ ಪೀಠಾಧಿಪತಿಗಳಾದ ಅಭಿನವ ನರಸಿಂಹ ಭಾರತಿ ಸ್ವಾಮಿಗಳು ಈ ದೇವಾಲಯವನ್ನು ಸ್ಥಾಪಿಸಿದರೆಂದು ೧೬೦೩ರ ತಾಮ್ರ ಶಾಸನವೊಂದು ತಿಳಿಸುತ್ತದೆ.

ರುದ್ರಪಾದದ ರಾಮಲಿಂಗೇಶ್ವರ ದೇವಸ್ಥಾನ: ವಿದ್ಯಾರಣ್ಯಪುರಕ್ಕೆ ಹೊಂದಿಕೊಂಡಂತೆ ಇರುವ ಈ ದೇವಾಲಯವು ಪೀಠದ ಯತಿಗಳಾದ ಅಭಿನವ ನರಸಿಂಹಭಾರತಿ ಸ್ವಾಮಿಗಳು ಸ್ಥಾಪಿಸಿದ ಕುರಿತು ಇಲ್ಲಿರುವ ಬಂಡೆಗಲ್ಲು ಶಾಸನ ತಿಳಿಸುತ್ತದೆ. (೧೬೦೩)

ವಿದ್ಯಾರಣ್ಯಪುರದ ಸದಾಶಿವ ದೇವಾಲಯ: ೧೬೫೨ರ ತಾಮ್ರ ಶಾಸನವೊಂದು ಕೆಳದಿಯ ಶಿವಪ್ಪನಾಯಕ ತನ್ನ ಅಜ್ಜ ಸದಾಶಿವನಾಯಕನ ಹೆಸರಿನಲ್ಲಿ ಕಟ್ಟಿಸಿದನೆಂದು ತಿಳಿಸುತ್ತದೆ. ಇದು ಸಂಪೂರ್ಣವಾಗಿ ಶಿಲೆಯಿಂದ ನಿರ್ಮಿತವಾದ್ದರಿಂದ ಇದನ್ನು ಕಲ್ಲು ದೇವಸ್ಥಾನವೆಂದು ಕರೆಯುತ್ತಾರೆ.

ತನಿಕೋಡಿನ ಶಂಕರನಾರಾಯಣ ದೇವಾಲಯ: ೧೬೫೨ರ ಶಾಸನವೊಂದು ವಿದ್ಯಾರಣ್ಯಪುರದಿಂದ ಸುಮಾರು ೧.೫ ಕಿ.ಮೀ. ದೂರದಲ್ಲಿರುವ ತನಿಕೋಡಿನಲ್ಲಿ ಶಿವಪ್ಪನಾಯಕನ ಆದೇಶದ ಮೇರೆಗೆ ಈ ದೇವಸ್ಥಾನ ಕಟ್ಟಲ್ಪಟ್ಟಿತೆಂದು ತಿಳಿಸುತ್ತದೆ.

೩೨

ಶೃಂಗೇರಿ ಮಠದ ಚಾರಿತ್ರಿಕ ದಾಖಲೆಗಳ ಸಂಕ್ಷಿಪ್ತ ಪರಿಚಯ

ಡಾ. ಎ.ಕೆ. ಶಾಸ್ತ್ರಿ*

ಕಾಲ ಸರಿದಂತೆ, ಚರಿತ್ರೆಯ ಮೇಲೆ ಬೆಳಕು ಚೆಲ್ಲುವ ಆಕರ ಸಾಮಗ್ರಿಗಳು ಗಣನೀಯ ಪ್ರಮಾಣದಲ್ಲಿ ನಶಿಸುತ್ತ ಬಂದಿದ್ದರೂ, ಕೆಲವು ಧಾರ್ಮಿಕ ಸಂಸ್ಥೆಗಳಲ್ಲಿ, ರಾಜ್ಯ ಪತ್ರಾಗಾರಗಳಲ್ಲಿ, ವಿಶ್ವವಿದ್ಯಾಲಯಗಳಲ್ಲಿ, ಪುರಾತತ್ತ್ವ ಇಲಾಖೆಗಳಲ್ಲಿ ಮತ್ತು ಕೆಲವೇ ವ್ಯಕ್ತಿಗಳ ಸಂಗ್ರಹಗಳಲ್ಲಿ ಇನ್ನೂ ಉಳಿದುಕೊಂಡು ಬಂದಿರುವುದು ನಮ್ಮ ಸುದೈವ. ಇಂದಿಗೂ ಗಣನೀಯ ಪ್ರಮಾಣದಲ್ಲಿ ಆಕರಗಳನ್ನು ಉಳಿಸಿಕೊಂಡು ಬಂದಿರುವ, 'ದಕ್ಷಿಣದ ವಾರಣಾಸಿ' ಎಂದೇ ಪ್ರಸಿದ್ಧವಾಗಿರುವ ಶೃಂಗೇರಿ ಮಠ ಬಹು ದೊಡ್ಡ ಧಾರ್ಮಿಕ ಕೇಂದ್ರ.[೧] ಸುಮಾರು ಹನ್ನೆರಡುನೂರು ವರ್ಷಗಳ ಹಿಂದೆ ಆದಿಶಂಕರಾಚಾರ್ಯರಿಂದ ಸ್ಥಾಪಿಸಲ್ಪಟ್ಟ ಶೃಂಗೇರಿ ಮಠದ ಜಗದ್ಗುರು ಪರಂಪರೆ ಇಂದಿಗೂ ಅವಿಚ್ಛಿನ್ನವಾಗಿ ಸಾಗಿಬಂದಿದೆ. ಶೃಂಗೇರಿ ಧರ್ಮಸಂಸ್ಥಾನದ ಚರಿತ್ರೆಯ ಮೇಲೆ ಬೆಳಕು ಬೀರುವ ಆಕರ ಸಾಮಗ್ರಿಗಳು ಸಾಕಷ್ಟು ಲಭಿಸಿವೆ. ಶಿಲಾ ಮತ್ತು ತಾಮ್ರಶಾಸನಗಳು ಭೂದಾನಕ್ಕೆ ಸಂಬಂಧಿಸಿದವುಗಳಾಗಿದ್ದು, ಸಾಹಿತ್ಯಕ ಕೃತಿಗಳು ಧರ್ಮ, ತತ್ತ್ವಜ್ಞಾನ, ಸಾಹಿತ್ಯ, ಇತಿಹಾಸ ಮುಂತಾದ ವಿಷಯಗಳ ಮೇಲೆ ಬೆಳಕು ಬೀರುತ್ತವೆ. ಶೃಂಗೇರಿಯ ಶ್ರೀ ವಿದ್ಯಾಶಂಕರ, ಶ್ರೀ ಶಾರದಾಂಬಾ, ಬೆಟ್ಟದ ಶ್ರೀ ಮಲ್ಲಿಕಾರ್ಜುನ, ಮುಂತಾದ ದೇವಾಲಯಗಳು ವಾಸ್ತುಶಿಲ್ಪ ಮತ್ತು ಕಲೆಗಳ ಆಗರಗಳಾಗಿವೆ. ಐತಿಹಾಸಿಕ ಮಹತ್ತ್ವವುಳ್ಳ ಕಡತಗಳು[೨], ತಾಡೋಲೆಗಳು ಮತ್ತು ಕಾಗದ ಪತ್ರಗಳನ್ನು ಶ್ರೀಮಠದಲ್ಲಿ ರಕ್ಷಿಸಿಡಲಾಗಿದೆ. ಪ್ರಸ್ತುತ ಲೇಖನದ ಉದ್ದೇಶ, ಶೃಂಗೇರಿ ಮಠದ ಚಾರಿತ್ರಿಕ ದಾಖಲೆಗಳ ಸಂಕ್ಷಿಪ್ತ ಪರಿಚಯ ಮಾಡಿಕೊಡುವುದಾಗಿದ್ದರಿಂದ, ಮುಖ್ಯವಾಗಿ, ಕಾಗದ ಪತ್ರಗಳಲ್ಲಿಯ ಅಂಶಗಳನ್ನು ಮಾತ್ರ ಗಮನಕ್ಕೆ ತರಲಾಗಿದೆ. ಶೃಂಗೇರಿ ಮಠದೊಂದಿಗೆ ವಿಜಯನಗರದ ಸಾಮ್ರಾಟರು, ಕೆಳದಿಯ ನಾಯಕರು, ಮೈಸೂರಿನ ಒಡೆಯರು, ಹೈದರಾಲಿ ಮತ್ತು ಟೀಪುಸುಲ್ತಾನ, ಮರಾಠಾ ಪೇಶ್ವೆ ಮತ್ತು ರಾಜಮನೆತನಸ್ಥರು, ಆಂಗ್ಲರು ಮತ್ತು ದೇಶದ ನಾನಾ ಭಾಗಗಳಲ್ಲಿಯ ಪ್ರಜೆಗಳು ಇತಿಹಾಸದುದ್ದಕ್ಕೂ ಇರಿಸಿಕೊಂಡ ಸಂಬಂಧವನ್ನರಿಯಲು ಈ ಕಾಗದ ಪತ್ರಗಳು ಉಪಯುಕ್ತ. ಅದೇ ರೀತಿ ಧಾರ್ಮಿಕ, ಸಾಮಾಜಿಕ ಮತ್ತು ಆರ್ಥಿಕ ಚಟುವಟಿಕೆಗಳ ಮೇಲೂ ಬೆಳಕು ಬೀರುತ್ತವೆ. ಕಾಗದ ಪತ್ರಗಳಿಂದ ಲಭ್ಯವಾದ ಶೃಂಗೇರಿ ಧರ್ಮಸಂಸ್ಥಾನದ ಸಂಕ್ಷಿಪ್ತ ಐತಿಹಾಸಿಕ ಚಿತ್ರಣ ಇಂತಿದೆ.[೩]

ವಿಜಯನಗರ ಸಾಮ್ರಾಟರ ಉತ್ತರಾಧಿಕಾರಿಗಳು

ವಿಜಯನಗರ ಸ್ಥಾಪನೆಯಾದಾಗಿನಿಂದ ಭಾರತಕ್ಕೆ ಸ್ವಾತಂತ್ರ್ಯ ದೊರಕುವವರೆಗೂ ಅನೇಕ ಅರಸು ಮನೆತನಗಳು ಶೃಂಗೇರಿ ಮಠದೊಂದಿಗೆ ನಿಕಟ ಸಂಬಂಧವನ್ನಿರಿಸಿಕೊಂಡು ದಾಖಲೆಗಳಿಂದ ವಿಧಿತವಾಗುತ್ತದೆ.[೪] ವಿಜಯನಗರ ಸಾಮ್ರಾಟರು ಶೃಂಗೇರಿ ಮಠಕ್ಕೆ ಭೂದಾನಗಳನ್ನು ಮಾಡಿ, ರಾಜಾಶ್ರಯ ನೀಡಿದ್ದರಿಂದ ಅದೊಂದು ಧರ್ಮಸಂಸ್ಥಾನವಾಗಿ ರೂಪುಗೊಂಡಿತು. ವಿಜಯನಗರ ಕಾಲದ ದಾನಶಾಸನಗಳೆಲ್ಲ ಹೆಚ್ಚಾಗಿ ಶಿಲಾ ಮತ್ತು ತಾಮ್ರ ಶಾಸನಗಳಾಗಿದ್ದು, ಅವು ಈಗಾಗಲೇ ಪ್ರಕಟಗೊಂಡಿದ್ದರಿಂದ, ಅಂಥವುಗಳನ್ನು ಕುರಿತು ಪ್ರಸ್ತುತದಲ್ಲಿ ವಿಶ್ಲೇಷಿಸಲಾಗಿಲ್ಲ. ಕ್ರಿ.ಶ. ೧೫೬೫ರಲ್ಲಿ ವಿಜಯನಗರ ಪತನಾನಂತರ, ಅರವೀಡು ಮನೆತನದ ದೊರೆಗಳು ಪೆನುಕೊಂಡ, ನಂತರ ಚಂದ್ರಗಿರಿಯಿಂದ ರಾಜ್ಯಭಾರ ನಡೆಸಿದರು.

ಆನೆಗೊಂದಿ ಪಂಚಗ್ರಾಮ ಮತ್ತು ಸಂಗಮೇಶ್ವರ ಹಾಗೂ ತೊರಗಲ್ಲು, ಒಟ್ಟೂ ಏಳು ಗ್ರಾಮಗಳನ್ನು ಶೃಂಗೇರಿ ಮಠಕ್ಕೆ ದಾನವಾಗಿತ್ತ ಸಮಾಚಾರ, ಶ್ರೀ ವೀರ ತಿರುಮಲದೇವ ಮಹಾರಾಯರು ಶೃಂಗೇರಿಯ ಶ್ರೀ ಸರಸಿಂಹಭಾರತೀ[೬] ಸ್ವಾಮಿಗಳಿಗೆ ಶಾಸನ ಸಂಖ್ಯೆ ೧೪೬೪ (ಕ್ರಿ.ಶ. ೧೫೪೨)ರಲ್ಲಿ ಬರೆದ ಪತ್ರದಿಂದ ತಿಳಿದುಬರುತ್ತದೆ.[೫] ಅದೇ ದಿನದಂದು ಅಂದರೆ, ಶಾಸನ ಸಂಖ್ಯೆ ೧೪೬೪, ಶುಭಕೃತು ಸಂವತ್ಸರ, ಪುಷ್ಯ ಶು. ೧೦ ಯಂದು, ತಿರುಮಲದೇವ ಮಹಾರಾಯರು ತೋರಗಲ್ಲಿನ ಜಮೀನುದಾರ, ದೇಸಾಯಿ, ದೇಶಪಾಂಡೆ, ಗೌಡ, ಶಾನಭೋಗ, ಮುಂತಾದವರಿಗೆ ನಿರೂಪ

* 'ಭವಾನಿ', ಟಿ.ಎಸ್.ಎಸ್. ರೈಸ್ ಮಿಲ್ ಕೆಳಗೆ, ಶಿರಸಿ, ಉತ್ತರ ಕನ್ನಡ–೫೮೧೪೦೨.

ಹೊರಡಿಸಿದರು. ಶೃಂಗೇರಿ ಸ್ವಾಮಿಗಳ ಮಠಕ್ಕೆ ನಂದಾದೀಪ ಮತ್ತು ನಿತ್ಯ ನೈವೇದ್ಯಕ್ಕಾಗಿ ಭೂದಾನ ಮಾಡಿದ್ದರಿಂದ, ಮಠದಿಂದ ಯಾವ ವಸೂಲಿ ಮಾಡದೆ, ಸ್ವಾಮಿಗಳ ಆಜ್ಞಾನುಸಾರವಾಗಿ ನಡೆದುಕೊಳ್ಳುತ್ತ ಇರಬೇಕೆಂದು ತಿರುಮಲದೇವ ಮಹಾರಾಯರು ಆಜ್ಞಾಪಿಸಿದರು[೭]. ತನ್ನ ವಂಶಕ್ಕೆ ಅಭ್ಯುದಯ ಮತ್ತು ಸಂಸ್ಥಾನಕ್ಕೆ ಕಲ್ಯಾಣವಾಗಲೆಂದು ವೀರ ತಿರುಮಲದೇವ ಮಹಾರಾಯರು ಶ್ರೀ ಶಾರದಾ, ಚಂದ್ರಮೌಳೀಶ್ವರ ದೇವರ, ದೀಪಾರಾಧನೆ ಮತ್ತು ನೈವೇದ್ಯಕ್ಕಾಗಿ ಮುನ್ನೂರು ವರಹದ ತೋರಗಲ್ಲು ಗ್ರಾಮವನ್ನು ಶೃಂಗೇರಿ ಮಠಕ್ಕೆ ನೀಡಿದರೆಂದು, ರಾಯರು ಶ್ರೀ ನರಸಿಂಹ ಭಾರತೀಗಳಿಗೆ ಬರೆದ ಶಾಸನ ಸಂಖ್ಯೆ ೧೭೬೪ರ ಜಹಗೀರಿ ದಾನ ಪತ್ರದಿಂದ ತಿಳಿದು ಬರುತ್ತದೆ.[೮]

ಒಟ್ಟಿನಲ್ಲಿ, ವಿಜಯನಗರ ಪತನಾನಂತರವೂ ಆ ಮನೆತನದವರು ಶೃಂಗೇರಿ ಜಗದ್ಗುರುಗಳನ್ನು ಮತ್ತು ಅವರ ಮಠವನ್ನು ಗೌರವಿಸಿ, ಪೋಷಿಸಿದರೆಂದು, ಲಭ್ಯವಾದ ಈ ಕಾಗದ ಪತ್ರಗಳಿಂದ ಖಚಿತವಾಗುತ್ತದೆ.

ಕೆಳದಿಯ ನಾಯಕರು

ವಿಜಯನಗರ ಸಾಮ್ರಾಟರ ಸಾಮಂತರಲ್ಲಿ ಸಮರ್ಥರೆನಿಸಿದ ಕೆಳದಿಯ ನಾಯಕರು ಸಾಮ್ರಾಜ್ಯದ ಪತನಾನಂತರ ಕರ್ನಾಟಕದ ಚಾರಿತ್ರಿಕ ಬೆಳವಣಿಗೆಯಲ್ಲಿ ಮಹತ್ತ್ವದ ಪಾತ್ರ ನಿರ್ವಹಿಸಿದರು. ಕೆಳದಿ ನೃಪರು ಸುಮಾರು ಎರಡೂವರೆ ಶತಮಾನಗಳ ಕಾಲ (ಕ್ರಿ.ಶ. ೧೪೯೯–೧೭೬೩) ಕರ್ನಾಟಕದ ಮಧ್ಯ ಪಶ್ಚಿಮ ಭಾಗದ ಒಡೆಯರಾಗಿದ್ದರು. ವೀರಶೈವ ಮಠಗಳಿಗೆ, ಅದ್ವೈತ ಮತ್ತು ವಿಶಿಷ್ಟಾದ್ವೈತ ಸಿದ್ಧಾಂತಗಳನ್ನು ಪ್ರತಿಪಾದಿಸುವ ಮಠಗಳಿಗೆ, ಜೈನರ ಬಸದಿಗಳಿಗೆ ಮತ್ತು ಮುಸಲ್ಮಾನರ ಮಸೀದಿಗಳಿಗೆ ದತ್ತಿ ನೀಡಿ, ತಮ್ಮ ಧಾರ್ಮಿಕ ವಿಶಾಲ ಮನೋಭಾವನೆ ತೋರಿದ್ದು ದಾಖಲೆಗಳಿಂದ ಸ್ಪಷ್ಟವಾಗುತ್ತದೆ.[೯] ಹಿರಿಯ ವೆಂಕಟಪ್ಪನಾಯಕ, ಶಿವಪ್ಪನಾಯಕ, ಮೊದಲನೇ ಸೋಮಶೇಖರನಾಯಕ, ಚೆನ್ನಮ್ಮಾಜಿ, ಮೊದಲನೇ ಬಸವಪ್ಪನಾಯಕ, ಇಮ್ಮಡಿ ಸೋಮಶೇಖರ ನಾಯಕ ಮೊದಲಾದವರು ಕೆಳದಿ ನಾಯಕರಲ್ಲಿ ಪ್ರಮುಖರು. ಕೆಳದಿಯ ನಾಯಕರು ವೀರಶೈವರಾಗಿದ್ದರೂ, ಶೃಂಗೇರಿಯ ಅದ್ವೈತ ಮಠದ ಜಗದ್ಗುರುಗಳನ್ನು ತಮ್ಮ ಆಸ್ಥಾನಕ್ಕೆ ಬರಮಾಡಿಕೊಂಡು ಗೌರವಿಸಿದರು. ಶೃಂಗೇರಿ ಮಠಕ್ಕೆ ಭೇಟಿ ಕೊಟ್ಟು ಭೂಮಿ ಮತ್ತು ವಸ್ತು–ಒಡವೆಗಳನ್ನು ದಾನ ಮಾಡಿದರು. ಮಠವು ಆಂತರಿಕ, ಇಲ್ಲವೆ, ಬಾಹ್ಯ ತೊಂದರೆಗಳಲ್ಲಿ ಸಿಲುಕಿದಾಗ, ಮಠಕ್ಕೆ ಸಹಾಯ ನೀಡಿ, ರಕ್ಷಿಸಿದರು. ಜಗದ್ಗುರುಗಳ ತೀರ್ಥಯಾತ್ರಾ ಕಾಲದಲ್ಲಿ, ಅವರ ಪರಿವಾರಕ್ಕೆ ಬೇಕಾದ ಸಕಲ ಅನುಕೂಲತೆಗಳನ್ನು ಒದಗಿಸಿಕೊಟ್ಟರು. ದೃಷ್ಟಾಂತಕ್ಕಾಗಿ, ಕೆಲವು ದಾಖಲೆಗಳ ಮುಖ್ಯಾಂಶಗಳನ್ನು ಗಮನಿಸಬಹು ದಾಗಿದೆ.

ಪ್ರಥಮ ಶ್ರೀ ಸಚ್ಚಿದಾನಂದ ಭಾರತೀಗಳು (ಕ್ರಿ.ಶ. ೧೬೨೩–೬೩), ಶಿವಪ್ಪನಾಯಕ (ಕ್ರಿ.ಶ. ೧೬೪೫–೧೬೬೦)ನ ಸಮಕಾಲೀನರು. ಶೃಂಗೇರಿ ಸಂಸ್ಥಾನದ ಕೆಲವು ಗೇಣಿದಾರರು ಮಠಕ್ಕೆ ಕಾಲ ಕಾಲಕ್ಕೆ ಗುತ್ತಿಗೆಯನ್ನು ಸರಿಯಾಗಿ ಸಲ್ಲಿಸದ್ದರಿಂದ, ಶ್ರೀಗಳವರು ಶಿವಪ್ಪನಿಗೆ ವಿಷಯ ತಿಳಿಸಲಾಗಿ, ನಾಯಕನು ವಿಚಾರಣೆ ಮಾಡಿ, ಇಂಥ ಅಕಾರ್ಯಗಳನ್ನು ನಿಲ್ಲಿಸಿದ್ದಲ್ಲದೆ, ಮಠಕ್ಕೆ ನ್ಯಾಯವಾಗಿ ದೊರೆಯಬೇಕಾದ ಭೂಮಿಯನ್ನು ದೊರಕಿಸಿಕೊಟ್ಟನು.[೧೦]

ದುರ್ಮತಿ ಸಂವತ್ಸರದ ನಿಜ ಆಶ್ವಿಜ ಶು. ೧೦ ಯಂದು (ಬುಧವಾರ, ಅಕ್ಟೋಬರ್ ೧೨, ೧೬೮೩) ಭದ್ರಯಗೆ ಬರೆಸಿ ಕಳುಹಿದ ನಿರೂಪದಲ್ಲಿ, ಲಿಂಗವಾಪುರ ಗ್ರಾಮವನ್ನು ಶೃಂಗೇರಿ ಮಠದ ಧರ್ಮಕ್ಕೆ ಬಿಡುವಂತೆ ರಾಣಿ ಚೆನ್ನಮ್ಮಾಜಿಯು ಆಜ್ಞಾಪಿಸಿದಳೆಂದು ತಿಳಿದುಬರುತ್ತದೆ.[೧೧] ಅದೇ ರೀತಿ, ಶೃಂಗೇರಿ ಮಠಕ್ಕೆ ಮುಕ್ಕರನಾಡ ಸೀಮೆಯೊಳಗಿನ ಗ್ರಾಮಗಳನ್ನು ಸರ್ವಮಾನ್ಯವಾಗಿ ಬಿಟ್ಟಿದ್ದರಿಂದ, ಆ ಗ್ರಾಮಗಳಿಗೆ ಸಂಬಂಧಿಸಿ, ಹಣಕಾಸನ್ನು ಮಣಿಯಗಾರನು ಶೃಂಗೇರಿ ಮಠದಿಂದ ಒಟ್ಟು ಮಾಡದಂತೆ ನೋಡಿಕೊಳ್ಳಬೇಕಾಗಿ, ಚೆನ್ನಮ್ಮಾಜಿಯು ಪ್ರಜೋತ್ಪತ್ತಿ ಸಂವತ್ಸರದ ಕಾರ್ತಿಕ ಬ. ೧೪ (ರವಿವಾರ, ನವೆಂಬರ್ ೮, ೧೬೯೧) ಯಂದು ಅಉಭಲ [ಅಹೋಬಲ] ರಾಯನಿಗೆ ಬರೆಸಿ ಕಳುಹಿದ ಕಾರ್ಯ, ದಾಖಲೆಗಳ ಸಂಗ್ರಹದಲ್ಲಿ ದೊರಕಿದೆ.[೧೨]

ಶೃಂಗೇರಿ ಮಠದವರು ಕಟ್ಟು ಮಾಡಿಸಿದ ರೀತಿ, ಶಿಷ್ಯರಾದವರು ತಮ್ಮ ಆಚಾರ ವಿಚಾರ ಇರಿಸಿಕೊಳ್ಳುವಂತೆ ಮಾಡುವಲ್ಲಿ, ಮೊದಲನೇ ಬಸವಪ್ಪ ನಾಯಕನು (ಕ್ರಿ.ಶ. ೧೬೯೭–೧೭೧೪) ಸಂಬಂಧಿಸಿದ ಅಧಿಕಾರಿಗಳಿಗೆ ನಿರೂಪಗಳನ್ನು ಹೊರಡಿಸಿದನು.[೧೩]

ಹೈದರಾಲಿ

ಪೇಶ್ವೆ ಮಾಧವರಾವ್ ಅವರ ಕಕ್ಕ, ರಘುನಾಥರಾವ್ ಅವರ ಆಮಂತ್ರಣದ ಮೇರೆಗೆ ಪ್ರಥಮ ಶ್ರೀ ಅಭಿನವ ಸಚ್ಚಿದಾನಂದ ಭಾರತೀ ಸ್ವಾಮಿಗಳು (ಕ್ರಿ.ಶ. ೧೭೪೧–೧೭೬೭) ಪುಣೆಗೆ ಸಂದರ್ಶನವಿತ್ತಾಗ, ಹೈದರಾಲಿಯು ಜಗದ್ಗುರುಗಳಿಗೆ, "...ತಾಉ ದೊಡ್ಡವರು ಬುಧೀರಿ, ಸಕಲರಿಗೂ ತಂಮ್ಮ ದರ್ಶನಾ ತೆಗೆದುಕೊಳ್ಳಬೇಕೆಂಬ ಅಪೇಕ್ಷೆ ಯಿರತಕ್ಕದು ಸಹಜವೇ ಸರಿ . . . . . ತಂಮ ಪ್ರೌಢ ಬಗ್ಗೆ ಆನೆ ೧ ಕುದುರೆ ೫ ಪಾಲಖಿ ೧ ವಂಟೆ ೫ ಸಹಾ ರಾಮಾಜೀ ಸಂಗಡ ಕಳುಹ್ಸಿಯಿಧೀತು । ದೆವರಿಗೆ ನಿರಾಜಿ

ಶೀರೆ ೧ ನಿಶಾನಿ ಬಗ್ಯೆ ತಾಪ್ತಾ ೫ ತಮಗೆ ಶಾಲು ೨ ವೆಚ್ಚಕ್ಕೆ ಹತ್ತೂವರೆ ಸಾವಿರ ರೂಪಾಯಿ ಸಹಾ ಕಳುಹಿಸಿ ಯಿರುವದರ್ರಿಂದಾ ಪರಾಂಮತ್ರಿಸಿಕೊಂಬ ಹಾಗೆ ಮಾಡಿಸಬೆಕು। ಧೊತ್ರದ ಜೋಡುಗಳು ೨ನ್ನು ಕಳುಹಿ ಯಿಧೀತ್ತು ।..."[೧೪]

ಶೃಂಗೇರಿ ಮಠಕ್ಕೆ ನಡದು ಬರುವ ಶ್ರೀ ಚರಣಕಾಣಿಕೆ, ಅಗ್ರತಾಂಬೂಲ, ಆಚಾರ ವ್ಯವಹಾರ, ಮುಂತಾದ್ದನ್ನು ಪೂರ್ವಾರಭ್ಯ ನಡದು ಬಂದ ಮೇರೆಗೆ ಶೃಂಗೇರಿ ಮಠದವರು ಬಂದು ಬರಮಾಡಿಕೊಂಬಲ್ಲಿ ಅಡ್ಡಿ ಮಾಡದ ಹಾಗೆ ಸುರಚಿಗೂಡಿ ನಡಸಿಕೊಂಡು ಬರುವಂತೆ ಹೈದರಲಿಯು ವಿಕಾರಿ ಸಂವತ್ಸರದ ಮಾಘ ಶು. ೩ (ಮಂಗಳವಾರ, ಫೆಬ್ರುವರಿ ೮, ೧೭೮೦)ದಂದು, ಅರಮನೆ ಸೀಮೆ ಗಡಿಗಳ ಕಿಲ್ಲೆದಾರರು ಮತ್ತು ಪಾರುಪತ್ಯಗಾರರಿಗೆ ನಿರೂಪ ಬರೆಸಿ ಕಳುಹಿಸಿದನು.[೧೫] ಗೆದ್ದ ಸ್ಥಳಗಳಲ್ಲಿ ಪೂರ್ವ ಮರ್ಯಾದೆ ಯಿಂದ ಧರ್ಮ ಮತ್ತು ವರ್ಣಾಶ್ರಮಗಳನ್ನು ನಡೆಸಿಕೊಂಡು ಬರುವಂತೆ, ಶ್ರೀ ಸಚ್ಚಿದಾನಂದ ಭಾರತಿಗಳು ಹೈದರಲಿಗೆ, ತಾವು ತಂಗಿದ್ದ ಗೋದಾವರಿ ತೀರದ ಪಂಚವಟಿಯಿಂದ ಆಶೀರ್ವಾದ ಪತ್ರಿಕೆಯನ್ನು ಕಳಿಸಿದರೆಂಬುದು ಕಡತದಲ್ಲಿಯ ದಾಖಲೆಯಿಂದ ತಿಳಿದುಬರುತ್ತದೆ.[೧೬]

ಟೀಪುಸುಲ್ತಾನ

ಸುಲ್ತಾನ ಮತ್ತು ಮಠದ ಸಂಬಂಧವನ್ನು ತಿಳಿಸುವ ೪೭ ದಾಖಲೆಗಳಿದ್ದು, ಅವುಗಳಲ್ಲಿ ಹೆಚ್ಚಿನವು ಸುಲ್ತಾನನಿಂದ ಗುರುಗಳಿಗೆ ಬಂದ ಪತ್ರಗಳಾಗಿದ್ದು, ಇನ್ನು ಕೆಲವು, ಕಿಲ್ಲೆದಾರ, ಅಮಲ್ದಾರ ಮತ್ತು ಪಾರುಪತ್ಯಗಾರರಿಗೆ ಹೊರಡಿಸಿದ ನಿರೂಪಗಳಾಗಿವೆ.[೧೭] ಈ ಕಾಗದ ಪತ್ರಗಳ ಹೊರತಾಗಿ, ಶೃಂಗೇರಿ ಮಠದ ಕಡತಗಳಲ್ಲಿಯೂ ಅನೇಕ ದಾಖಲೆಗಳ ಪ್ರತಿಗಳನ್ನು ಕಾಣಬಹುದು.[೧೮]

ಮೂರನೇ ಆಂಗ್ಲ-ಮೈಸೂರು ಕದನವು (ಕ್ರಿ.ಶ. ೧೭೯೦-೧೭೯೨) ನಡೆಯುತ್ತಿದ್ದಾಗ, ಮರಾಠ ದಂಡನಾಯಕ ಪರಶುರಾಮ ಬಾಹು ಬಿದನೂರಿನ ಮೇಲೆ ಆಕ್ರಮಣ ನಡೆಸಿದನು. ಆ ಸಂದರ್ಭದಲ್ಲಿ, ರಘುನಾಥರಾವ್ ಪಟವರ್ಧನನ ನಾಯಕತ್ವದಲ್ಲಿ ಪಿಂಡಾರಿ ಮತ್ತಿನ್ನಿತರ ಪುಂಡರಿಂದ ಕೂಡಿದ ಮರಾಠ ಸೈನ್ಯದ ತುಕಡಿಯೊಂದು ಕ್ರಿ.ಶ. ೧೭೯೧ರಲ್ಲಿ, ಶೃಂಗೇರಿ ಮತ್ತು ಅಲ್ಲಿಯ ಮಠವನ್ನು ಕೊಳ್ಳೆ ಹೊಡೆದು, ಪವಿತ್ರ ಶಾರದಾಂಬೆಯ ವಿಗ್ರಹವನ್ನು ಅಪವಿತ್ರಗೊಳಿಸಿತು. ಸಮಾಚಾರ ತಿಳಿದ ಸುಲ್ತಾನನು, ಶ್ರೀ ಶಾರದಾಂಬೆಯ ಪ್ರತಿಷ್ಠಾಪನೆಗಾಗಿ, ನಗದು ೨೦೦ ರಹತಿ ಗಳನ್ನು ಮತ್ತು ೨೦೦ ರಹತಿಗಳ ದವಸವನ್ನು ನೀಡಿದ್ದು, ಆತನು ಗುರುಗಳಿಗೆ ಬರೆದ ಪತ್ರದಿಂದ ತಿಳಿದುಬರುತ್ತದೆ.[೧೯]

ಸರ್ಕಾರಕ್ಕೆ ದಿನೆ ದಿನೆ ದಿಗ್ವಿಜಯವಾಗುವ ಹಾಗೆ ಗುರುಗಳು ತಪಸ್ಸು ಮಾಡುವುದು, ಮಠದ ಅರವತ್ತು ಲಕ್ಷ ರೂಪಾಯಿಗಳ ಸಾಮಾನು ಲೂಟಿ ಆಗಿದ್ದಕ್ಕೆ ಸಂಬಂಧಿಸಿ, ಮರಾಠಾ ಪರಶುರಾಮನಿಗೆ ತಾಕೀತಿ ಪತ್ರ ತೋರಿಸಿ, ಸಾಮಾನು ಕೊಡು, ಎಂಬುದಾಗಿ ಕೇಳುವುದು, ಗುರುದ್ರೋಹ ಮಾಡಿದವರು ಕ್ಷಿಪ್ರ, ನಾಶ ಹೊಂದುವ ಹಾಗೆ ತ್ರಿಕಾಲದಲ್ಲಿ ಆಶೀರ್ವಾದ ಮಾಡುತ್ತಾ ಬರುವುದು, ಸಹಸ್ರ ಚಂಡೀ ಜಪವನ್ನು ಮಂಡಲ ಪರ್ಯಂತ ವಿದ್ಯುಕ್ತವಾಗಿ, ಸಾಂಗವಾಗಿ ಆಗುಮಾಡಿಸುವುದು, ಗುರುಗಳ ಸವಾರಿ ಬಗ್ಗೆ ಒಳ್ಳೇ ಪಾಲಕ್ಕಿ ಹಜೂರರಿಂದ ಕಳಿಸಿರುವ ಸಮಾಚಾರ, ಇತ್ಯಾದಿ ವಿಷಯಗಳು, ಟೀಪು ಗುರುಗಳಿಗೆ ವಿರೋಧಿಕೃತು ಸಂವತ್ಸರ ಕಾರ್ತಿಕ ಬ. ೧೧ (ಮಂಗಳವಾರ, ನವೆಂಬರ್ ೨೨, ೧೭೯೧) ಯಂದು ಬರೆದ ಪತ್ರದಿಂದ ವಿದಿತವಾಗುತ್ತದೆ.[೨೦]

". . . . ನಂಮ ಮನಸ್ಸಿನಲ್ಲಿ ಮೂರು ಬಲದ ಮೇಲೆ ಅಹಂಕಾರ ಯಿದೆ ಅದು ಯೆನು ಅಂದರೆ ಮೊದಲು ಯಿಶ್ವರ ದಯಾಪೂರ್ಣವಾಗಿ ಯಿರುವದು ವಂದು ಯರಡನೆಯ ನಿಂಮ್ಮಂಥಾ ಗುರುಗಳ ಆಶಿರ್ವಾದ ಯಿರುವದು ವಂದು ಮೂರನೆದು ಆಯುಧಗಳು ಯಿರುವದು ವಂದು ಯಿ ಮೂರರಲ್ಲಿ ಯಿಶ್ವರ ಜಯ ಕೊಡಬೆಕಾದರ್ರೆ ನಿಂವ್ಮಂಥಾ ದೊಡ್ಡವರ ಆಶಿರ್ವಾದದಿಂದಲೆ ಜಯವಾಗಬೆಕು...." ಎಂಬುದಾಗಿ ಸುಲ್ತಾನನು ೧೭೯೫ರ ಜೂನ್ ೨೪ರಂದು, ಬುಧವಾರ, ಗುರುಗಳಿಗೆ ಬರೆದ ಪತ್ರವನ್ನು ಗಮನಿಸಿದಲ್ಲಿ, ಆತನಿಗೆ ಈಶ್ವರ ಕೃಪೆ, ಗುರುಗಳ ಆಶೀರ್ವಾದ ಮತ್ತು ಆಯುಧ ಬಲ, ಇವುಗಳ ಮೇಲೆ ಅಚಲ ವಿಶ್ವಾಸವಿತ್ತೆಂಬುದು ಸ್ಪಷ್ಟವಾಗುತ್ತದೆ. ಗುರುಗಳು ತಮ್ಮ ಸಮಿಪದಲ್ಲಿರಿಸಿಕೊಂಡು ಪೂಜೆ ಮಾಡಲೆಂದು, ಸ್ಫಟಿಕಲಿಂಗ ಮತ್ತು ಮಟಕತದ ಶಿವಲಿಂಗ ಕಳುಹಿದನೆಂಬ ಸಂಗತಿಯೂ ಅದೇ ಪತ್ರದಲ್ಲಿ ಉಲ್ಲೇಖವಾಗಿದೆ.[೨೧]

ಒಟ್ಟಿನಲ್ಲಿ, ಟೀಪು ಸುಲ್ತಾನನ ರಾಜಕೀಯ ಮತ್ತು ಧಾರ್ಮಿಕ ನೀತಿ ಕುರಿತು ವಿದ್ವಾಂಸರಲ್ಲಿ ಸಾಕಷ್ಟು ಭಿನ್ನಾಭಿಪ್ರಾಯಗಳಿದ್ದರೂ, ಆತನು ಶೃಂಗೇರಿ ಜಗದ್ಗುರು ಗಳನ್ನು ಮತ್ತು ಅವರ ಮಠವನ್ನು ಗೌರವಿಸಿದ್ದು ಐತಿಹಾಸಿಕ ಸತ್ಯ.

ಮೈಸೂರಿನ ಒಡೆಯರು

ಶೃಂಗೇರಿ ಮಠಕ್ಕೆ ಸಂಬಂಧಿಸಿ ಮೈಸೂರಿನ ಒಡೆಯರ ದಾಖಲೆಗಳು ಹೇರಳವಾಗಿವೆ.[೨೨] ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಿಂದ ದಾಖಲೆಗಳು ಹೆಚ್ಚಿನ ಸಂಖ್ಯೆಯಲ್ಲಿ ಲಭ್ಯವಿದ್ದರೂ, ಅವರಿಗಿಂತಲೂ ಮುಂಚಿನ, ಕ್ರಮವಾಗಿ,

ಕಂಠೀರವ ನರಸರಾಜು ಒಡೆಯರ (ಇಮ್ಮಡಿ ಕಂಠೀರವ ನರಸರಾಜ; ಕ್ರಿ.ಶ. ೧೭೦೪–೧೭೧೪) ಮತ್ತು ಇಮ್ಮಡಿ ಕೃಷ್ಣರಾಜ ಒಡೆಯರ (ಕ್ರಿ.ಶ. ೧೭೩೪–೧೭೬೬) ಕಾಲದ ಕೆಲವು ದಾಖಲೆಗಳೂ ಲಭ್ಯವಾಗಿವೆ.

ರಂಗಸಮುದ್ರದ ಹಿಟ್ಟುವಳಿ ಗ್ರಾಮವು ಪ್ರಾಕಾರಭ್ಯ ಶೃಂಗೇರಿ ಮಠದ ಸರ್ವಮಾನ್ಯ ಗ್ರಾಮವಾಗಿದ್ದರಿಂದ, ಹಿಟ್ಟುವಳಿ ಗ್ರಾಮವನ್ನು ವಿಂಗಡಿಸಿಕೊಟ್ಟು, ವಾಮನ ಮುದ್ರೆ ಕಲ್ಲುಗಳು ಇದ್ದ ಭೂಮಿಗೆ ೩ ವರಹ ಕಂದಾಯ ವಸೂಲು ಮಾಡದಂತೆ ಕಟ್ಟು ಮಾಡಿಸಿ, ಆ ಭೂಮಿಯನ್ನು ಮಠದ ಬ್ರಾಹ್ಮರ ಹವಾಲಿಗೆ ವಿಂಗಡಿಸಿ ಕೊಡುವಂತೆ, ಕಂಠೀರವ ನರಸರಾಜು ಒಡೆಯರು ಮೈಸೂರು ನಗರದ ಹೋಬಳಿ ವಿಚಾರದ ಚೆಲುವೈಯಗೆ ಬರೆಸಿ ಕಳುಹಿಸಿದ ನಿರೂಪದಿಂದ ತಿಳಿದುಬರುತ್ತದೆ.[೨೩]

ಶ್ರೀ ಶಾರದಾಂಬೆಯ ಗಂಧ, ಪ್ರಸಾದ ಮತ್ತು ಮಂತ್ರಾಕ್ಷತೆ [illegible]ರುವುದಾಗಿ ಮತ್ತು ಪ್ರಥಮ ಶ್ರೀ ಅಭಿನವ ಸಚ್ಚಿದಾನಂದ ಗುರುಗಳು ರಾಮೇಶ್ವರಕ್ಕೆ ಯಾತ್ರೆ ಮಾಡುವಾಗ, ಮಾರ್ಗದಲ್ಲಿ ಮೈಸೂರಿನಲ್ಲಿ ತನಗೆ ದರ್ಶನ ಕೊಡುವಂತೆ, ಇಮ್ಮಡಿ ಕೃಷ್ಣರಾಜ ಒಡೆಯರು ಪ್ರಾರ್ಥಿಸಿಕೊಂಡರು.[೨೪] ಗುರುಗಳು ಮೈಸೂರಿಗೆ ಚಿತ್ತೈಸುವಾಗ, ಅವರ ಪರಿವಾರಕ್ಕೆ ಬೇಕಾದ ಸಾಮಾನುಗಳನ್ನು ಒದಗಿಸುವಂತೆ ಒಡೆಯರು ಅಧಿಕಾರಿಗಳಿಗೆ ಆಜ್ಞಾಪಿಸಿದರು.[೨೫] ಶ್ರೀ ಶಾರದಾಂಬಾ ಮತ್ತು ಶ್ರೀ ಚಂದ್ರಮೌಳೀಶ್ವರ ದೇವರ ನಿತ್ಯ ನೈವೇದ್ಯ, ದೀಪಾರಾಧನೆ ಮತ್ತು ಉತ್ಸವಗಳಿಗೆಂದು ಇಮ್ಮಡಿ ಕೃಷ್ಣರಾಜ ಒಡೆಯರು ೧೨,೦೦೦ ವರಹಗಳ ಬೇಲೂರು ಸ್ಥಳದ ಬೆಳವಾಡಿ ಗ್ರಾಮದ ಉಪಗ್ರಾಮಗಳನ್ನು ದಾನವಾಗಿ ನೀಡಿದರು.[೨೬] ಅರಕಲಗೂಡಿನ [illegible] ಮಠ ಗ್ರಾಮ, ಹೊಂನವಳ್ಳಿ ಸ್ಥಳದ ಮೆಳೆವನಹಳ್ಳಿ [illegible], ಚಿಕ್ಕದೇವರಾಯದುರ್ಗ, ಮುಂತಾದ ಸ್ಥಳಗಳನ್ನು ಶೃಂಗೇರಿ ಮಠದ ಸರ್ವಮಾನ್ಯ ಗ್ರಾಮಗಳೆಂದು ನಡೆಸಿಕೊಳ್ಳಬೇಕಾಗಿ ಒಡೆಯರು ಅಧಿಕಾರಿಗಳಿಗೆ ನಿರೂಪ ಬರೆಸಿದರು.[೨೭]

ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲಕ್ಕೆ ಸೇರಿದ ದಾಖಲೆಗಳು ಹೆಚ್ಚಿನ ಸಂಖ್ಯೆಯಲ್ಲಿವೆ.[೨೮] ಮೈಸೂರಿಗೆ ಗುರುಗಳ ಸವಾರಿ, ಸರ್ವಮಾನ್ಯ ಗ್ರಾಮಗಳು, ಶ್ರೀ ಶಾರದಾಂಬೆಗೆ ರಥ, ಚರಣ ಕಾಣಿಕೆ, ಆಚಾರ–ವಿಚಾರ, ಶೃಂಗೇರಿ ಮಠದ ಘನತೆ, ಯಾತ್ರೆ, ಪಟ್ಟಾಭಿಷೇಕ, ಇತ್ಯಾದಿ ವಿಷಯಗಳನ್ನು ದಾಖಲೆಗಳಲ್ಲಿ ನಮೂದಿಸಲಾಗಿದೆ.

ಶೃಂಗೇರಿ ಮಠದ ಸ್ವಾಮಿಗಳ ಆಜ್ಞಾನುಸಾರವಾಗಿ ನಡೆಸಿಕೊಳ್ಳತಕ್ಕ ರಾಮಚಂದ್ರಾಪುರ, ಹೊಂನೆಹಳ್ಳಿ, [illegible]ಹಳ್ಳಿ, ಹರಿಹರಪುರ, ಮುಳಬಾಗಿಲು ಮುಂತಾದ ತುಂಡು ಮಠದವರು ಹೆಚ್ಚು ಕಟವೆ ಮತ್ತು ಹವ್ಯಾಸಗಳನ್ನು ಮಾಡಿಕೊಂಡು ತಿರುಗಬಾರದು. ರಾಮಚಂದ್ರಾಪುರದ ಬಿರುದು ಬಾವಲಿಗಳನ್ನು ಶೃಂಗೇರಿ ಮಠ ತೆಗೆದು ಕೊಂಡಿರುವುದು ಸರಿ. ತುಂಡು ಮಠಗಳಿಗೆ ಹೆಚ್ಚಿನ ಬಿರುದು ಬಾವಲಿಗಳು ಸಲ್ಲತಕ್ಕದ್ದಲ್ಲ. ತುಂಡು ಮಠದ ಸನ್ಯಾಸಿಗಳು ಆಶ್ರಮ ಧರ್ಮದಲ್ಲಿ ವಿಹಿತವಾಗಿರದೆ, ಇಲ್ಲದ ಹವ್ಯಾಸ, ಬಿರುದು ಬಾವಲಿ ಮಾಡಿಕೊಂಡು ನಡೆದರೆ, ಅಂಥವರನ್ನು ವಿಚಾರಿಸಿ, ಅದಕ್ಕೆ ತಕ್ಕ ಬಂದೋಬಸ್ತ ಮಾಡುವ ಅಧಿಕಾರ ಶೃಂಗೇರಿ ಮಠಕ್ಕಿರುವುದಾಗಿ, ಮುಮ್ಮಡಿ ಕೃಷ್ಣರಾಜ ಒಡೆಯರು ಸರ್ವಧಾರಿ ಸಂವತ್ಸರದ ಜ್ಯೇಷ್ಠ ಬ. ೮, ಗುರುವಾರದಂದು ಅರಮನೆ ಸೀಮೆ ಗಡಿಗಳ ಆಮಿಲ ಮತ್ತು ಕಿಲ್ಲೆದಾರರಿಗೆ ನಿರೂಪ ಹೊರಡಿಸಿದರು.[೨೯]

ದಿವಾನ ಪೂರ್ಣಯ್ಯ[೩೦] ಮತ್ತು ಶೇಷಾದ್ರಿ ಅಯ್ಯರ್[೩೧] ಶೃಂಗೇರಿ ಮಠದೊಂದಿಗೆ ನಿಕಟ ಸಂಬಂಧ ಇರಿಸಿಕೊಂಡಿದ್ದು ದಾಖಲೆಗಳಿಂದ ತಿಳಿದುಬರುತ್ತದೆ.

ಕಮಿಷನರರು

ಮೈಸೂರು ರಾಜ್ಯದ ಕಮಿಷನರ್ ಆಗಿ ಮಾರ್ಕ್ ಕಬ್ಬನ್‌ರು ೧೮೩೪–೧೮೬೧ರ ವರೆಗೆ ಆಡಳಿತ ನಡೆಸಿದರು. ಶೃಂಗೇರಿ ಮಠದ ಪರಂಪರೆಯವರಲ್ಲಿ ೩೨ನೆಯವರಾದ ಅಷ್ಟಮ ಶ್ರೀ ನರಸಿಂಹ ಭಾರತಿಗಳು (೧೮೧೭–೧೮೭೯) ಕಬ್ಬನ್‌ರ ಸಮಕಾಲೀನರು. ಸ್ವಾಮಿಗಳು ಯಾತ್ರಾರ್ಥವಾಗಿ ರಾಮೇಶ್ವರಕ್ಕೆ ತೆರಳುವಾಗ ಆಮಲ್ದಾರ, ಕಿಲ್ಲೇದಾರ, ಮುಂತಾದವರು ಸ್ವಾಮಿಗಳಿಗೆ ಭವ್ಯ ಸ್ವಾಗತ ನೀಡಿ, ಅವರ ಪರಿವಾರದವರಿಗೆ ಉಳಿಯಲು ಒಳ್ಳೇ ಸ್ಥಳ ಅನುಕೂಲ ಮಾಡಿಕೊಟ್ಟು, ಸಾಮಾನು ಸರಂಜಾಮುಗಳ ವ್ಯವಸ್ಥೆ ಮಾಡಿಕೊಟ್ಟು, ಸರಕಾರದ ರಹದಾರಿ ಮೇರೆಗೆ ನಡೆದು ಕೊಳ್ಳುವಂತೆ ಕಮೀಷನರ್‌ರು ಮೈಸೂರು ಸೀಮೆ ಗಡಿಗಳ ಅಮಲ್ದಾರ, ಕಿಲ್ಲೆದಾರ, ಠಾಣೆದಾರ, ಜಹಗೀರದಾರ, ಜಮಾದಾರ, ಚೌಕಿದಾರ ಮತ್ತು ಸಾಯರ ಇಲಾಖೆಯವರಿಗೆ ದುರ್ಮುಖಿ ಸಂವತ್ಸರದ ಮಾಘ ಬ. ೫ರಂದು (ಫೆಬ್ರುವರಿ ೨೫, ೧೮೩೭) ನಿರೂಪ ಬರೆಸಿ ಕಳುಹಿಸಿದರು.[೩೨] ವರ್ಣಾಶ್ರಮ, ಹಳ್ಳಿಗಳಲ್ಲಿ ಭೂಮಿ ಕೃಷಿ, ಕಾಣಿಕೆ ಸಂಗ್ರಹಣೆ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿ, ಶ್ರೀಮಠದಿಂದ ಬಹಿಷ್ಕೃತರಾದ ಶಿಷ್ಯರು ಸಲ್ಲಿಸುವ ತಕರಾರಿ ಅರ್ಜಿಗಳನ್ನು ತನಿಖೆ ಮಾಡಬಾರದಾಗಿ, ನಗರ ತುಕಡಿ ಆಕ್ಟಿಂಗ್ ಸುಪರಿಂಟೆಂಡೆಂಟ್, ಮೆಕ್ಲಾಡ್‌ರು ಫೆಬ್ರುವರಿ ೨೫, ೧೮೩೭ರಂದು ತಾಲ್ಲೂಕುಗಳ ಅಮಲ್ದಾರ, ಶಿರಸ್ತೇದಾರ ಮತ್ತು ಪೇಷ್ಕಾರರಿಗೆ ಆಜ್ಞಾಪಿಸಿದರು.[೩೩]

ಮಾರ್ಕ್ ಕಬ್ಬನ್‌ರ ನಂತರ ಲೂಯಿ ಬೆನ್ಥಾಮ್ ಬೌರಿಂಗ್‌ರು ಕಮೀಷನರ್ ಆಗಿ ೧೮೬೧–೧೮೭೦ರ

ಅವಧಿಯಲ್ಲಿ ಆಡಳಿತ ನಿರ್ವಹಿಸಿದರು. ಸ್ಮಾರ್ತ ಮಠದ ಸ್ವಾಮಿಗಳಲ್ಲಿಯೇ ಶೃಂಗೇರಿ ಗುರುಗಳಿಗಿದ್ದಷ್ಟು ಗೌರವ ಇನ್ನಾವ ಸ್ವಾಮಿಗಳಿಗೂ ಇಲ್ಲ ಎಂಬುದಾಗಿ ಬೌರಿಂಗ್‌ರು ಉಲ್ಲೇಖಿಸಿದ್ದಾರೆ.[೩೪]

ಒಟ್ಟಿನಲ್ಲಿ, ಮೈಸೂರು ರಾಜ್ಯಕ್ಕೆ ಹೊಸ ಮಾದರಿಯ ಸುವ್ಯವಸ್ಥಿತ ಆಡಳಿತ ನೀಡಿದ ಕಬ್ಬನ್ ಮತ್ತು ಬೌರಿಂಗ್‌ರು ಶೃಂಗೇರಿ ಮಠದ ಜಗದ್ಗುರುಗಳ ಮತ್ತು ಅವರ ಮಠದ ಪೂರ್ವ ಮರ್ಯಾದೆಗಳನ್ನು ಗೌರವಿಸಿದರೆಂಬುದು, ಶ್ರೀಮಠದ ದಾಖಲೆಗಳಿಂದ ಸ್ಪಷ್ಟವಾಗುತ್ತದೆ.[೩೫]

ಬೇರೆ ಬೇರೆ ಕಾಲದಲ್ಲಿ ರಾಜಕೀಯ ಶಕ್ತಿಗಳು ಶೃಂಗೇರಿ ಮಠದೊಂದಿಗೆ ಇರಿಸಿಕೊಂಡ ಸಂಬಂಧವನ್ನರಿಯಲು ಅಲ್ಲಿಯ ದಾಖಲೆಗಳು ಎಷ್ಟು ಪ್ರಯೋಜನಕಾರಿಯಾಗಿವೆಯೋ, ಅಷ್ಟೇ ಶೃಂಗೇರಿ ಧರ್ಮಸಂಸ್ಥಾನದ ಆಡಳಿತ ಪದ್ಧತಿ, ಧಾರ್ಮಿಕ ಪರಿಸ್ಥಿತಿ, ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗಳನ್ನರಿಯಲೂ ಉಪಯುಕ್ತವಾಗಿವೆ.

ಆಡಳಿತ

ಆಡಳಿತಕ್ಕೆ ಸಂಬಂಧಿಸಿ, ಗುರುಗಳ ಆಯ್ಕೆ, ಗುರುಪರಂಪರೆ, ಧರ್ಮಸಂಸ್ಥಾನದ ವಿಸ್ತಾರ, ಸರ್ವಾಧಿಕಾರಿ, ಪಾರುಪತ್ಯಗಾರ, ಸುಬೇದಾರ, ಕಿಲ್ಲೆದಾರ, ಅಮಲ್ದಾರ, ಮಣಿಯಗಾರ, ಸೇನುಬೊವ, ಬೊಕ್ಕಸ, ಕರಣಿಕ, ಸೇಕದಾರ, ಗೌಡ, ರಾಯಸದವ ಮುಂತಾದ ಪದಗಳ ಬಳಕೆ ದಾಖಲಾಗಿವೆ.

ಧರ್ಮ

ಶ್ರೀ ಚಂದ್ರಮೌಳೀಶ್ವರ, ಶ್ರೀ ಶಾರದಾಂಬಾ, ಶ್ರೀ ವಿದ್ಯಾಶಂಕರ, ಶ್ರೀ ಮಲ್ಲಿಕಾರ್ಜುನ ಮೊದಲಾದ ದೇವಾಲಯಗಳು ಮತ್ತು ಅವುಗಳಲ್ಲಿ ನಡೆಯುವ ಉತ್ಸವಗಳು ಮತ್ತು ವಿವಿಧ ಸೇವೆಗಳಿಗಾಗಿ ಕಾಲಕಾಲಕ್ಕೆ ಭೂದಾನ ಮಾಡಿದ್ದು ಕಂಡುಬರುತ್ತದೆ. ಜಗದ್ಗುರುಗಳ ತೀರ್ಥಯಾತ್ರೆಗಳು ಮತ್ತು ಇನ್ನುಳಿದ ಮಠಗಳೊಂದಿಗೆ ಸಂಬಂಧ, ಮುಂತಾದ ಧಾರ್ಮಿಕ ವಿಷಯಗಳ ಮೇಲೂ ದಾಖಲೆಗಳು ಬೆಳಕು ಚೆಲ್ಲುತ್ತವೆ.

ಅರ್ಥ

ಧರ್ಮಸಂಸ್ಥಾನದ ಆದಾಯಕ್ಕೆ ಸಂಬಂಧಿಸಿ, ಭತ್ತ, ಅಡಿಕೆ, ಏಲಕ್ಕಿ, ತೆಂಗು, ಮೆಣಸು, ಎಲೆ, ಹೊಗೆಸೊಪ್ಪು, ಇತ್ಯಾದಿ ಕೃಷಿ ಉತ್ಪನ್ನ, ಶ್ರೀಗಂಧ, ಜೇನು ಗುತ್ತಿಗೆ, ಕಟ್ಟಿಗೆ, ಇತ್ಯಾದಿ ಅರಣ್ಯ ಸಂಪತ್ತು, ಗಣಿಗಳ ಒಡೆತನ, ಮತ್ತು ಚರಣಕಾಣಿಕೆ, ಮೂಲಾನಕ್ಷತ್ರ ಕಾಣಿಕೆ, ದೀಪಾರಾಧನೆ ಕಾಣಿಕೆ, ಪ್ರಾಯಶ್ಚಿತ್ತ ಕಾಣಿಕೆ, ದಂಡ, ಸುಂಕ, ಗುತ್ತಿಗೆ, ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದ ದಾಖಲೆಗಳಿವೆ. ಅದೇ ರೀತಿ, ದೇವಾಲಯಗಳಲ್ಲಿ ದಿನಂಪ್ರತಿ ಪೂಜೆಗಳು, ಉತ್ಸವಗಳು, ದಾನಧರ್ಮಗಳು, ನೌಕರರು, ಅತಿಥಿಗಳು, ಶಿಕ್ಷಣ, ಸಂತರ್ಪಣೆ, ಕಟ್ಟಡಗಳು, ಮುಂತಾದವುಗಳಿಗೆ ಸಂಬಂಧಿಸಿ ಖರ್ಚು ವೆಚ್ಚವೂ ಆಗುತ್ತಿತ್ತು. ಭೂಮಿ ಕ್ರಯ ವಿಕ್ರಯ, ಭೂವಿನಿಮಯ, ಉಂಬಳಿ ಭೂಮಿ, ಉತ್ತಾರಭೂಮಿ, ವೃತ್ತಿಗಳು, ಬಾಡಿಗೆ ಮನೆಗಳು, ಉದ್ಯೋಗ, ನಾಣ್ಯಪದ್ಧತಿ, ಬೆಲೆಗಳು, ತೂಕ ಮತ್ತು ಅಳತೆ ಇತ್ಯಾದಿ ಆರ್ಥಿಕ ವಿಷಯಗಳನ್ನು ಕುರಿತು ದಾಖಲೆಗಳು ಮಾಹಿತಿ ನೀಡುತ್ತವೆ.

ಸಮಾಜ

ಸಮಾಜದಲ್ಲಿ ಜಾತಿ ಪದ್ಧತಿಯ ಅಸ್ತಿತ್ವ ಮತ್ತು ಅದರ ಬಿಗಿಯಾದ ಚೌಕಟ್ಟಿನ ಅರಿವಾಗುತ್ತದೆ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಇತರೆ ಜಾತಿಯವರ ಆಚಾರ ವಿಚಾರ, ವ್ಯವಹಾರಗಳಿಗೆ ಸಂಬಂಧಿಸಿದ ವಿಷಯಗಳನ್ನು ಪ್ರಸ್ತಾಪಿಸಲಾಗಿದೆ. ಮಹಿಳೆಯರ, ಮಠ ಮತ್ತು ಶಿಷ್ಯರು, ಸಮಾಜ ಘಾತಕರು, ಬಹಿಷ್ಕಾರ, ಆಚಾರ, ವಿಚಾರ ಇತ್ಯಾದಿ ದಾಖಲೆಗಳಲ್ಲಿ ಉಲ್ಲೇಖಿಸಲಾದ ವಿಷಯಗಳು ಸಾಮಾಜಿಕ ಸ್ಥಿತಿಯನ್ನು ತಿಳಿಸುತ್ತದೆ.

ಉಪಸಂಹಾರ

ಒಟ್ಟಿನಲ್ಲಿ ವಿಜಯನಗರ ಕಾಲದಿಂದ ಕಾಲಕಾಲಕ್ಕೆ ರಾಜಕೀಯ ಶಕ್ತಿಗಳು ಶೃಂಗೇರಿ ಧರ್ಮಸಂಸ್ಥಾನದೊಂದಿಗೆ ಇರಿಸಿಕೊಂಡ ಪರಸ್ಪರ ಸಂಬಂಧ, ಧರ್ಮಸಂಸ್ಥಾನದ ಆಡಳಿತ, ಧಾರ್ಮಿಕ, ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿ ಇವುಗಳ ಮೇಲೆ ದಾಖಲೆಗಳು ಬೆಳಕು ಚೆಲ್ಲುತ್ತವೆ. ಸಹಸ್ರಾರು ಕಾಗದ ಪತ್ರಗಳು, ಕಡತಗಳು ಮತ್ತು ತಾಡೋಲೆಗಳು ಕಾಲನ ದವಡೆಯಲ್ಲಿ ಸಿಲುಕಿ ನಾಶವಾಗಿದ್ದರೂ, ಇನ್ನೂ ಸಾಕಷ್ಟು ಉಳಿದಿದ್ದರಿಂದ, ಧರ್ಮಸಂಸ್ಥಾನದ ವಸ್ತುನಿಷ್ಠವಾದ ಚರಿತ್ರೆಯನ್ನು ಗ್ರಂಥರೂಪದಲ್ಲಿ ಪ್ರಕಟಿಸಲು ಸಾಧ್ಯವಾಗಿದೆ. ಇಲ್ಲಿಯ ದಾಖಲೆಗಳು ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಹತ್ತ್ವ ಪಡೆದಿವೆ. ಶೃಂಗೇರಿಯ ಶ್ರೀ ಶಂಕರ ಅದ್ವೈತ ಸಂಶೋಧನಾ ಕೇಂದ್ರದಲ್ಲಿ ಸುಸಜ್ಜಿತವಾದ ಗ್ರಂಥಾಲಯವಿದ್ದು, ದಾಖಲೆಗಳನ್ನು ವ್ಯವಸ್ಥಿತವಾಗಿ ರಕ್ಷಿಸಲಾಗಿದೆ. ಸಂಶೋಧನ ಕಾರ್ಯ ತ್ವರಿತಗತಿಯಿಂದ ಇನ್ನೂ ಮುಂದುವರಿಸಿಯುವುದು ಅಗತ್ಯ. ಬೆಳವಾಡಿ ಗ್ರಾಮ, ಶೃಂಗೇರಿ ಜಹಗೀರ, ಬೇಲೂರು, ಶಿವಮೊಗ್ಗ, ಸೊರಬ, ನಗರ, ತೀರ್ಥಹಳ್ಳಿ, ಮಂಜಿರಾಬಾದ, ಶಿಕಾರಿಪುರ, ಮಂಡ್ಯ, ಹರಪನಹಳ್ಳಿ, ಅನಂತಪುರ, ನಂಜನಗೂಡು, ಕೊಯಿಮತ್ತೂರು, ಕುಂಭಕೋಣ, ಸೇಲಮ್

[illegible] ಬಂಕಾಪುರ, ಕೊಪ್ಪ, ಕೋಲಾರ, ಬರೋಡಾ, [illegible]ಮೂರು, ಜಮಖಂಡಿ, ರಾಮನಾಡು, ಪುದುಕೋಟೆ, ಅನಂತಶಯನ, ಧಾರವಾಡ, ಮದುರೆ ಜಿಲ್ಲೆ, ಸಂತೆಬೆನ್ನೂರು, [illegible]ರಾಷ್ಟ್ರ ಮುಂತಾದ ಸ್ಥಳಗಳಿಗೆ ಸಂಬಂಧಿಸಿದ ದಾಖಲೆಗಳ ಅಧ್ಯಯನ ಆಗಬೇಕಾಗಿದೆ. ರಾಘವೇಂದ್ರ, [illegible]ಪುರ, ಶಿವಗಂಗಾ, ಕೂಡಲಿ, ಪುಷ್ಪಗಿರಿ, ಮುರಗಿ, ಅಹೋಬಲ, ಮುಳಬಾಗಿಲು, ರಾಮಚಂದ್ರಾಪುರ, ಸ್ವರ್ಣವಲ್ಲಿ, ಕುಂಭಕೋಣ, ನಾಸಿಕ, ಬಾಳೆಹೊನ್ನೂರು, ಕಾಶಿ, ತೀರ್ಥಮತ್ತೂರು ಮುಂತಾದ ಮಠಗಳಿಗೆ ಸಂಬಂಧಿಸಿದ ದಾಖಲೆಗಳೂ ಶೃಂಗೇರಿಯಲ್ಲಿವೆ. ಕನ್ನಡ ಮೋಡಿ ಲಿಪಿಯ ದಾಖಲೆಗಳ ಅಧ್ಯಯನ ಮಾತ್ರ ಈಗ ಸ್ವಲ್ಪ ಮಟ್ಟಿಗೆ ಆದಂತಾಗಿದೆ. ಅನೇಕ ದಾಖಲೆಗಳು ತಮಿಳು, ತೆಲುಗು, ಮರಾಠಿ, ಪಾರ್ಸಿ, ಸಂಸ್ಕೃತ ಮುಂತಾದ ಭಾಷೆಗಳಲ್ಲಿರುವು ದರಿಂದ, ಅಂಥ ದಾಖಲೆಗಳ ಅಧ್ಯಯನವೂ ಆದಲ್ಲಿ, ಶೃಂಗೇರಿ ಧರ್ಮಸಂಸ್ಥಾನದ ಮತ್ತು ಇನ್ನುಳಿದ ಪ್ರದೇಸಗಳ ಚರಿತ್ರೆಯು ಈಗಿರುವುದಕ್ಕಿಂತಲೂ ಸ್ಫುಟವಾಗಿ ಮೂಡಿಬರಲು ಸಾಧ್ಯವಾಗುತ್ತದೆ.[೩೬]

ಆಧಾರಸೂಚಿ ಮತ್ತು ಟಿಪ್ಪಣಿಗಳು

ಶೃಂಗೇರಿ ಮಠದ ಚರಿತ್ರೆಗಾಗಿ, ಲೇಖಕರ *'A History of Sringeri'* ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೨ ಮತ್ತು ೧೯೯೯ ಮತ್ತು **'ಶೃಂಗೇರಿ ಧರ್ಮ ಸಂಸ್ಥಾನ'**, ಶೃಂಗೇರಿ ಮಠ, ೧೯೮೩, ನೋಡಿರಿ.

ಅಕ್ಕಿ ಅಥವಾ ಗೋದಿ ಗಂಜಿಯ ಅಂಟು ಸಿದ್ಧಪಡಿಸಿ, ಇದ್ದಲಿ ಪುಡಿ ಇಲ್ಲವೆ ಸುಟ್ಟ ಕಬ್ಬಿನ ಸಿಪ್ಪೆಯ ಕರಿಯನ್ನು ಸೇರಿಸಿ, ಉದ್ದ ಬಟ್ಟೆಗೆ ಲೇಪಿಸಿ, ಗಾರೆಕಲ್ಲಿನಿಂದ ಇಲ್ಲವೆ, ಗಣಪೆ ಕಾಯಿಯಿಂದ ತಿಕ್ಕಿ, ಒಣಗಿಸಿ, ನಂತರ ಹೊಲಿಗೆ ಇಲ್ಲದೆ ಪುಸ್ತಕ ರೂಪದಲ್ಲಿ ಮಡಿಚಿ, ಸೀಸದಂಥ ಬಳಪದ ಕಲ್ಲಿನಿಂದ ಕಡತಗಳ ಹಾಳೆಗಳ ಮೇಲೆ ಬರೆಯಲಾಗುತ್ತಿತ್ತು.

ಕಡತಗಳ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಲೇಖಕರ ಈ ಕೆಳಗಿನ ಗ್ರಂಥಗಳನ್ನು ಓದಿರಿ.

i. **'ಶೃಂಗೇರಿ ಮಠದ ಕಡತಗಳಲ್ಲಿಯ ಆಯ್ದ ಚಾರಿತ್ರಿಕ ದಾಖಲೆಗಳು'**, ಶೃ.ಕ.ದಾ. ಸಂ. ೧, ಕರ್ನಾಟಕ ರಾಜ್ಯ ಪತ್ರಾಗಾರ, ಬೆಂಗಳೂರು, ೨೦೦೩.

ii. ಅದೇ, ಸಂ. ೨, ೨೦೦೬.

iii. **'ಶೃಂಗೇರಿ, ಮಠದ ಕಡತಗಳ ವಿಷಯ ಸೂಚಿ'**, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಬೆಂಗಳೂರು, ೨೦೦೯.

i. *'The Records of the Sringeri Dharmasamsthana'* (ಶೃ.ದಾ.), ಶೃಂಗೇರಿ ಮಠ, ೨೦೦೯. ಲೇಖಕರ ಈ ಗ್ರಂಥದಲ್ಲಿ, ಕನ್ನಡ ಮೋಡಿ ಲಿಪಿಯಲ್ಲಿರುವ ಆಯ್ದ ದಾಖಲೆಗಳನ್ನು ಮಾತ್ರ ಉಲ್ಲೇಖಿಸಲಾಗಿದೆ.

ii. *'A Catalogue of the Records in the Sringeri Mutt'*, ಸಂ. ೧ ಮತ್ತು ೨, (೧೯೯೬ ಮತ್ತು ೧೯೯೫, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಬೆಂಗಳೂರು, ಪ್ರಸ್ತುತ ಲೇಖನದ ಲೇಖಕರು ಒಟ್ಟು ಸುಮಾರು ೬೩೭ ದಾಖಲೆಗಳ ಯಾದಿಯನ್ನು ಇವೆರಡು ಸಂಪುಟಗಳಲ್ಲಿ ದಾಖಲಿಸಿದ್ದಾರೆ.

ಲೇಖಕರ ಪೂರ್ವೋಲ್ಲೇಖಿತ ಶೃ.ದಾ. ನೋಡಿ.

ಅಂದು ಪೀಠದಲ್ಲಿದ್ದ ಅಷ್ಟಮ ಶ್ರೀ ನರಸಿಂಹ ಭಾರತಿಗಳು ಜಗದ್ಗುರು ಪೀಠದಲ್ಲಿ ೩೨ನೆಯವರು.

ಶೃ.ದಾ. ೧೭., ೭. ಅದೇ, ೧೮., ೮. ಅದೇ, ೨೦.

ಅದೇ, ೨೧-೮೦., ೧೦. ಅದೇ, ೩೩., ೧೧. ಶೃ.ದಾ. ೪೨.

" ೪೩, ಅಂದು ಪೀಠದಲ್ಲಿದ್ದ ಆರನೇ ಶ್ರೀ ನರಸಿಂಹ ಭಾರತಿಗಳು (ಕ್ರಿ.ಶ. ೧೬೬೩-೧೭೦೫) ಶೃಂಗೇರಿ ಜಗದ್ಗುರು ಪರಂಪರೆಯಲ್ಲಿ ೨೬ನೆಯವರು.

೧೩. " ೪೫-೪೯., ೧೪. " ೮೧.,

೧೫. " ೮೪. ಜಗದ್ಗುರು ಪರಂಪರೆಯಲ್ಲಿ ೩೦ನೆಯವರಾದ ತೃತೀಯ ಶ್ರೀ ಸಚ್ಚಿದಾನಂದ ಭಾರತಿಗಳು ಅಂದಿನ ಜಗದ್ಗುರುಗಳು.

೧೬. ಪೂರ್ವೋಲ್ಲೇಖಿತ ಶೃ.ಕ.ದಾ. ಸಂ. ೧, ದಾ. ೮೯.

೧೭. ಶೃ.ದಾ. ೮೫-೧೩೧.

೧೮. ಶೃ.ಕ.ದಾ., ಸಂ. ೧, ದಾ. ೧೦೧-೧೨೩.

೧೯. ಶೃ.ದಾ. ೮೮. ಜಗದ್ಗುರು ಪೀಠದಲ್ಲಿ ೩೦ನೆಯವರಾದ ತೃತೀಯ ಶ್ರೀ ಸಚ್ಚಿದಾನಂದ ಭಾರತಿಗಳು (ಕ್ರಿ.ಶ. ೧೭೭೦-೧೮೧೪) ಟೀಪುನ ಸಮಕಾಲೀನರು.

೨೦. ಅದೇ, ೧೦೨., ೨೧. " ೧೨೬., ೨೨. " ೧೩೨-೨೧೯.

೨೩. " ೧೩೨. ದಾಖಲೆಯಲ್ಲಿ ನಮೂದಿಸಿದ ಸರ್ವಜಿತು ಸಂವತ್ಸರ, ಕ್ರಿ.ಶ. ೧೭೦೮ಕ್ಕೆ ಸರಿಹೊಂದುತ್ತದೆ. ಅಂದಿನ ಜಗದ್ಗುರುಗಳು ದ್ವಿತೀಯ ಶ್ರೀ ಸಚ್ಚಿದಾನಂದ ಭಾರತಿಗಳು (ಕ್ರಿ.ಶ. ೧೭೦೫-೧೭೪೧).

೨೪. " ೧೩೩., ೨೫. " ೧೩೪., ೨೬. " ೧೩೫., ೨೭. " ೧೪೧.

೨೮. " ೧೪೫-೨೧೭. ಮುಮ್ಮಡಿ ಕೃಷ್ಣರಾಜ ಒಡೆಯರು (ಕ್ರಿ.ಶ. ೧೭೯೯-೧೮೩೧).

೨೯. " ೧೭೯., ೩೦. " ೨೨೦-೨೫೬., ೩೧. " ೨೫೭-೨೬೩.

೩೨. " ೨೭೫., ೩೩. " ೨೭೬., ೩೪. " ೨೯೪.

೩೫. " ೨೬೪-೩೦೨.

೩೬. ಶೃಂಗೇರಿ ಧರ್ಮಸಂಸ್ಥಾನದ ಚರಿತ್ರೆ ಕುರಿತು, ಲೇಖಕರ ಪೂರ್ವೋಲ್ಲೇಖಿತ ಗ್ರಂಥಗಳನ್ನು ಓದುವುದರ ಜೊತೆಗೆ, ಈ ಕೆಳಗಿನ ಗ್ರಂಥಗಳನ್ನೂ ಓದಿರಿ.

i. Annul Reports of the Mysore Archaeological Department.

ii. Epigraphia Carnatica.

iii. *Selections from the records of the Sringeri Mutt*, Mysore, 1927.

iv. Venkataraman K.R., *The Throne of Transcedental Wisdom*, Madras, 1967.

v. 'Sringeri', Dr. A.V. Narasimhamurthy, Abhijnana, 2005.

vi. ಡಾ॥ ನರಸಿಂಹಮೂರ್ತಿ ಎ.ವಿ., **'ಶೃಂಗೇರಿ'**, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ೨೦೦೭, ಮೈಸೂರು.

೩೩

ಶೃಂಗೇರಿಯ ಶ್ರೀಮಠ ಮತ್ತು ಮೈಸೂರು ಒಡೆಯರ ಸಂಬಂಧ : ಒಂದು ಅವಲೋಕನ

ಡಾ. ಬಿ.ವಿ. ಸುಧಾಮಣಿ*

ಪ್ರಸ್ತುತ ಲೇಖನದಲ್ಲಿ ಶ್ರೀಮಠ ಮತ್ತು ಮೈಸೂರಿನ ಒಡೆಯರ ಸಂಬಂಧ ಕುರಿತು ಚರ್ಚಿಸಲಾಗಿದೆ. ಲೇಖನಕ್ಕೆ ಡಾ. ಎ.ಕೆ. ಶಾಸ್ತ್ರಿರವರು ರಚಿಸಿರುವ "ದಿ ರೆಕಾರ್ಡ್ಸ್ ಆಫ್ ದಿ ಶೃಂಗೇರಿ ಧರ್ಮಸಂಸ್ಥಾನ" ಕೃತಿಯ ಮೂಲ ದಾಖಲೆಗಳನ್ನು ಬಳಸಿಕೊಳ್ಳಲಾಗಿದೆ. ಮೈಸೂರಿನ ಒಡೆಯರು ಹಾಗೂ ಶ್ರೀಮಠದ ನಡುವೆ ನಡೆದಿರುವ ಪತ್ರವ್ಯವಹಾರಗಳುಳ್ಳ ೮೭ ದಾಖಲೆಗಳು ಈ ಲೇಖನ ರಚನೆಗೆ ಸಹಕಾರಿಯಾಗಿವೆ[1] ಇವು ಮಹಾರಾಜ ಇಮ್ಮಡಿ ಕಂಠೀರವ ನರಸರಾಜ ಒಡೆಯರ ಕಾಲದಿಂದ ಹತ್ತನೇ ಚಾಮರಾಜ ಒಡೆಯರ ಕಾಲದವರೆಗೆ ಹರಡಿಕೊಂಡಿವೆ[2].

ಇವುಗಳಲ್ಲಿ ಮಠಕ್ಕೆ ನೀಡಿರುವ ಸರ್ವಮಾನ್ಯ ಗ್ರಾಮಗಳ ವಿವರ, ಮಠದ ದೇವರುಗಳಿಗೆ ನೀಡಿರುವ ವಸ್ತ್ರಾಭರಣಗಳು ಹಾಗೂ ಇತರ ಕೊಡುಗೆಗಳು, ಸರ್ವಮಾನ್ಯ ಗ್ರಾಮಗಳಲ್ಲಿ ಸಂತಾನವಿಲ್ಲದೆ ಮರಣವಪ್ಪಿದ ವ್ಯಕ್ತಿಗಳ ಆಸ್ತಿಯ ಹಕ್ಕಿನ ವಿಚಾರ, ಮಠದ ಕಾಣಿಕೆ ವಸೂಲಿ, ಶ್ರೀಮಠದ ಘನತೆ ಗೌರವಗಳನ್ನು ಕಾಪಾಡಲು ಮೈಸೂರಿನ ಒಡೆಯರು ವಹಿಸಿದ ಕಾಳಜಿ, ಶ್ರೀಗಳ ಸೇತುಯಾತ್ರೆಯನ್ನೂ ಒಳಗೊಂಡಂತೆ ಇತರ ಪ್ರಯಾಣದ ಸಂದರ್ಭಗಳಲ್ಲಿ ಸೀಮೆಯ ಗಡಿಗಳಲ್ಲಿ ಒದಗಿಸುತ್ತಿದ್ದ ಸವಲತ್ತುಗಳು, ಶ್ರೀಮಠದಿಂದ ಮಹಾರಾಜರಿಗೆ ಬರುತ್ತಿದ್ದ ಶ್ರೀಮುಖ, ಪ್ರಸಾದ, ಮಂತ್ರಾಕ್ಷತೆ, ಮಹಾರಾಜರು ಶ್ರೀಗಳಿಗೆ ಕಳುಹಿಸುತ್ತಿದ್ದ ಭಿನ್ನವತ್ತಳೆ, ಇತ್ಯಾದಿ ವಿಷಯಗಳ ಕುರಿತು ಮಾಹಿತಿಗಳಿವೆ.

ಶ್ರೀಮಠವಿರುವ ಶೃಂಗೇರಿಯು ಮಹಾರಾಜರ ನೇರ ಆಳ್ವಿಕೆಗೆ ಒಳಪಡುವುದಕ್ಕೂ ಮೊದಲೇ ಶ್ರೀಮಠದೊಂದಿಗೆ ಮೈಸೂರಿನ ಒಡೆಯರು ಸಂಬಂಧ ಹೊಂದಿದ್ದರೆಂಬುದು ದಾಖಲೆಗಳಿಂದ ಸ್ಪಷ್ಟವಾಗುತ್ತದೆ. ಶ್ರೀಮಠಕ್ಕೆ ಮೈಸೂರಿನ ಮಹಾರಾಜರುಗಳಿಂದ ಕೊಡಮಾಡಲ್ಪಟ್ಟಿರುವ ಅಥವಾ ವಿಜಯನಗರದ ಅರಸರ ಕಾಲದಲ್ಲಿ ನೀಡಿರುವ ಗ್ರಾಮಗಳನ್ನು ಸರ್ವಮಾನ್ಯವಾಗಿ ಮುಂದುವರಿಸಿರುವ ಗ್ರಾಮಗಳ ಹಿತರಕ್ಷಣೆ ಮಾಡಿರುವ ಕುರಿತಾಗಿ ದಾಖಲೆಗಳು ಮಾಹಿತಿ ನೀಡುತ್ತವೆ.

ಇಮ್ಮಡಿ ಕಂಠೀರವ ನರಸರಾಜ ಒಡೆಯರ ಕಾಲಕ್ಕೆ ಸೇರಿದ ೧೭೦೮ರ ದಾಖಲೆಯೊಂದು ಈ ಹಿಂದೆಯೇ ಮಠಕ್ಕೆ ಸರ್ವಮಾನ್ಯವಾಗಿ ನೀಡಿದ್ದ ರಂಗಸಮುದ್ರ ಸ್ಥಳದ ಕಾಮನ ಮಠದ ಹಿಟ್ಟುವಳಿ ಗ್ರಾಮಕ್ಕೆ ಸಂಬಂಧಿಸಿದುದಾಗಿದೆ[3] ಈ ಗ್ರಾಮವನ್ನು ಮಠಕ್ಕೆ ಸರ್ವಮಾನ್ಯವಾಗಿ ನೀಡಿದ್ದು ಅದರ ಫಲವನ್ನು ಮಠವು ಬಹಳ ಕಾಲದಿಂದ ಅನುಭವಿಸುತ್ತಾ ಬಂದಿತ್ತು. ಆದರೆ ಇತ್ತೀಚೆಗೆ ಆ ಸರ್ವಮಾನ್ಯ ಗ್ರಾಮಕ್ಕೆ ಹೊಸದಾಗಿ ಕಾಲುವೆ ಬಂದಿದ್ದರಿಂದ ಸರ್ಕಾರದ ಅಧಿಕಾರಿಗಳು ಮೂರು ವರಾಹ ಕಂದಾಯವನ್ನು ವಸೂಲು ಮಾಡತೊಡಗಿದರು. ಈ ಸಂಬಂಧ ಮಠದ ಬ್ರಾಹ್ಮಣರು ಮಹಾರಾಜರಿಗೆ "ಆ ಗ್ರಾಮವನ್ನು ಮೊದಲಿನಂತೆಯೇ ಸರ್ವಮಾನ್ಯವಾಗಿ ಪರಿಗಣಿಸಬೇಕೆಂದು" ಮನವಿ ಸಲ್ಲಿಸಿದ್ದರಿಂದ ಮೈಸೂರು ನಗರ ಹೋಬಳಿ ವಿಚಾರದ ಚೆಲುವಯ್ಯನಿಗೆ ನಿರೂಪ ಕಳುಹಿಸಿ ಮಠದವರ ಕೋರಿಕೆಯನ್ನು ಪರಿಗಣಿಸಲು ಆದೇಶಿಸಿದರು.

ಇಮ್ಮಡಿ ಕೃಷ್ಣರಾಜ ಒಡೆಯರ ಕಾಲಕ್ಕೆ ಸೇರಿದ ಮೂರು ದಾಖಲೆಗಳು ಮಠಕ್ಕೆ ಸೇರಿದ ಸರ್ವಮಾನ್ಯ ಗ್ರಾಮಗಳ ಕುರಿತು ವಿವರಣೆ ನೀಡುತ್ತವೆ. ೧೭೬೦ಕ್ಕೆ ಸೇರಿದ ದಾಖಲೆಯೊಂದು ಶೃಂಗೇರಿಯ ಶ್ರೀಗಳು ಸೇತುಯಾತ್ರೆಗೆ ತೆರಳುವಾಗ ಶ್ರೀರಂಗಪಟ್ಟಣಕ್ಕೆ ಭೇಟಿ ಇತ್ತ ಸಂದರ್ಭದಲ್ಲಿ ಮಹಾರಾಜರು ೧೨೦೦ ಕಂಠೀರಾಯ ಗುಳಿಗೆ ಸುಂಕದ ಹುಟ್ಟುವಳಿಯ ಹದಿನಾಲ್ಕು ಗ್ರಾಮಗಳನ್ನು ಮಠಕ್ಕೆ ಸರ್ವಮಾನ್ಯವಾಗಿ ದಾನ ಮಾಡಿದರು. ಮಠದಲ್ಲಿರುವ ಈ ದಾಖಲೆಯು ದಾನಶಾಸನದ ಪ್ರತಿಯಾಗಿದೆ[4]. ಆ ಪ್ರಕಾರ ಬೇಲೂರು ತಾಲ್ಲೂಕು ಬೆಳವಾಡಿ ಹೋಬಳಿಯಲ್ಲಿ ಅಸಲಿ ಗ್ರಾಮ ಹನ್ನೆರಡು, ಕೊಪ್ಪ ತಾಲ್ಲೂಕು ಶಿರಕರಡಿ ಗ್ರಾಮ ಒಂದು, ಚಂದ್ರಗುತ್ತಿ ತಾಲ್ಲೂಕು ಅಂದವಳ್ಳಿ ಗ್ರಾಮ ಒಂದು-ಒಟ್ಟು ಹದಿನಾಲ್ಕು ಗ್ರಾಮಗಳನ್ನು ನೀಡಿ ಅವುಗಳಲ್ಲಿರುವ ಕೆರೆ ಕುಂಟೆ, ಆದಾಯದ ಮೂಲಗಳು, ಶಿಲಾಪ್ರತಿಷ್ಠೆ ಮಾಡಿರುವುದು ಇತ್ಯಾದಿ ದೀರ್ಘವಿವರಣೆ ಇದೆ. ಇದೇ

* # ೨೯೯, ೧೨ನೇ ಅಡ್ಡರಸ್ತೆ, ವಿಜಯನಗರ ರೈಲ್ವೆ ಬಡಾವಣೆ, ಮೈಸೂರು-೫೭೦೦೧೭.

ಅರಸರ ಮತ್ತೊಂದು ದಾಖಲೆ ಮೇಲೆ ತಿಳಿಸಿರುವ ಗ್ರಾಮಗಳನ್ನು ಮಠಕ್ಕೆ ಸರ್ವಮಾನ್ಯವಾಗಿ ನೀಡಿರುವುದರಿಂದ ಆ ಸಂವತ್ಸರದಲ್ಲಿ ವಸೂಲಿ ಮಾಡಿರುವ ಆ ಗ್ರಾಮಗಳ ಕಂದಾಯದ ಹಣವನ್ನು ಮಠಕ್ಕೇ ನೀಡಬೇಕಾಗಿ ಆದೇಶಿಸಿದೆ[೫]. ಇದೇ ಅರಸರ ಮತ್ತೊಂದು ದಾಖಲೆ ವಿಜಯನಗರದ ಅರಸರ ಕಾಲದಲ್ಲಿ ಶ್ರೀಮಠಕ್ಕೆ ನೀಡಿದ್ದ ಸರ್ವಮಾನ್ಯ ಕೂಡಲಿಮಠ ಗ್ರಾಮಕ್ಕೆ ಸಂಬಂಧಿಸಿದ್ದಾಗಿದೆ. ಅರಕಲುಗೂಡು ಸ್ಥಳದ ಕೂಡಲಿಮಠ ಗ್ರಾಮವನ್ನು ವಿಜಯನಗರದ ಅರಸರ ಕಾಲದಲ್ಲಿ ಶ್ರೀಮಠಕ್ಕೆ ಸರ್ವಮಾನ್ಯವಾಗಿ ನೀಡಲಾಗಿತ್ತು[೬]. ಆ ಸ್ಥಳವು ಮೈಸೂರು ರಾಜ್ಯಕ್ಕೆ ಸೇರಿದ ನಂತರ ಆ ಗ್ರಾಮವು ಮಠದ ಕೈಬಿಟ್ಟು ಹೋಗಿತ್ತು. ನಡುವೆ ಆ ಗ್ರಾಮದ ಅರ್ಧಭಾಗ ಕೊಡಗರ ವಶವಾಗಿತ್ತು. ಉಳಿದರ್ಧ ಗ್ರಾಮವನ್ನು ಪುನಃ ಶ್ರೀಮಠಕ್ಕೆ ಸರ್ವಮಾನ್ಯವಾಗಿ ನೀಡಲು ಮಹಾರಾಜರು ಮೈಸೂರು ನಗರ ಹೋಬಳಿ ಸೀಮೆ ವಿಚಾರದ ಲಕ್ಷ್ಮೀ ಕಾಂತಯ್ಯನಿಗೆ ನಿರೂಪ ಹೊರಡಿಸಿದರು.

ಮುಮ್ಮಡಿ ಕೃಷ್ಣರಾಜ ಒಡೆಯರ ಆಳ್ವಿಕೆಯಲ್ಲಿ ಶ್ರೀಮಠಕ್ಕೆ ಹೆಚ್ಚು ದಾನ ದತ್ತಿಗಳು ಲಭಿಸಿರುವುದು ಕಂಡುಬರುತ್ತದೆ. ೧೮೨೮ರ ದಾಖಲೆಯೊಂದು ಮಹಾರಾಜರು ಮಠಕ್ಕೆ ನೀಡಿರುವ ಸರ್ವಮಾನ್ಯ ಗ್ರಾಮಗಳ ದಾನಶಾಸನದ ಪ್ರತಿಯಾಗಿದೆ[೭]. ಕೊಪ್ಪ ತಾಲ್ಲೂಕಿನ ಶಿರಕರಡಿ ಅಸಲಿಗ್ರಾಮ ಹಾಗೂ ನಾಲ್ಕು ದಾಖಲೆ ಗ್ರಾಮಗಳನ್ನು ಶ್ರೀಮಠಕ್ಕೆ ಸರ್ವಮಾನ್ಯವೆಂದು ಪರಿಗಣಿಸಲು ಕೌಲೇದುರ್ಗದ ಮಾಮಲೇದಾರ ಅಪ್ಪಣ್ಣಯ್ಯನಿಗೆ ನಿರೂಪ ಕಳುಹಿಸಲಾಗಿದೆ. ಈ ಗ್ರಾಮಗಳಿಗೆ ಸೇರಿರುವ ಸಾಯಿರುಬಾಬು, ಅಡಕೆ, ಮೆಣಸು, ಏಲಕ್ಕಿ, ಚರಾದಾಯ ಇತ್ಯಾದಿ ಬಾಬತ್ತುಗಳನ್ನು ಮಠಕ್ಕೆ ಸರ್ವಮಾನ್ಯವಾಗಿ ನೀಡಿರುವುದರಿಂದ ಸರ್ಕಾರವು ಆ ಸಂವತ್ಸರದಲ್ಲಿ ವಸೂಲಿ ಮಾಡಿರುವ ಆ ಗ್ರಾಮಗಳ ಕಂದಾಯದ ಹಣವನ್ನು ಮಠಕ್ಕೇ ನೀಡಿ ರಸೀದಿ ಪಡೆಯಬೇಕಾಗಿ ನಿರೂಪದಲ್ಲಿ ತಿಳಿಸಲಾಗಿದೆ.

ಹೀಗೆ ನೀಡಿದ ಸರ್ವಮಾನ್ಯ ಗ್ರಾಮಗಳ ರಕ್ಷಣೆಯ ಹೊಣೆಗಾರಿಕೆಯನ್ನೂ ಸರ್ಕಾರವೇ ಹೊತ್ತಿತ್ತು. ೧೭೬೩ರ ದಾಖಲೆಯಲ್ಲಿ ಶ್ರೀಮಠಕ್ಕೆ ಸರ್ವಮಾನ್ಯವಾಗಿ ನೀಡಿದ್ದ ಚಿಕ್ಕದೇವರಾಯ ಸ್ಥಳದ ಗೂಳೂರ ಹೋಬಳಿ ಗೂಳೀಹರವಿ ಗ್ರಾಮದವರಿಗೆ ದ್ಯಾವಯ್ಯ ಎಂಬ ಅಧಿಕಾರಿಯಿಂದ ಆಗುತ್ತಿದ್ದ ತೊಂದರೆಯನ್ನು ಮಹಾರಾಜರ ಸರ್ಕಾರ ಪರಿಹರಿಸಿದ್ದನ್ನು ವಿವರಿಸಿದೆ[೮]. ದ್ಯಾವಯ್ಯ ಅಲ್ಲಿಯ ಜನರಿಂದ ಹಣವಸೂಲಿ ಮಾಡುತ್ತಿದ್ದನಲ್ಲದೆ ಮಠದ ಬ್ರಾಹ್ಮಣರನ್ನು ಕೊಲ್ಲಿಸುತ್ತಿದ್ದು ಹಲವಾರು ರೀತಿಯ ತೊಂದರೆ ನೀಡುತ್ತಿದ್ದನು. ಈ ಬಗ್ಗೆ ಒಡೆಯರಿಗೆ ದೂರು ಬಂದ ಹಿನ್ನೆಲೆಯಲ್ಲಿ ಅವರು ದ್ಯಾವಯ್ಯನಿಗೆ ಈ ಸರ್ವಮಾನ್ಯ ಗ್ರಾಮದ ವಿಚಾರದಲ್ಲಿ ಇನ್ನು ಮುಂದೆ ಹಸ್ತಕ್ಷೇಪ ಮಾಡದಂತೆ ಎಚ್ಚರಿಕೆ ನೀಡಿ ಆತ ಈವರೆವಿಗೆ ವಸೂಲಿ ಮಾಡಿರುವ ಹಣವನ್ನು ಮಠಕ್ಕೆ ನೀಡಬೇಕಾಗಿ ಆದೇಶಿಸಿದರು.

ಇದೇ ಅವಧಿಯ ಮತ್ತೊಂದು ದಾಖಲೆಯು ಇಮ್ಮಡಿ ಕೃಷ್ಣರಾಜ ಒಡೆಯರು ಹೈದರ್ ಅಲಿಖಾನನಿಗೆ ಕೊಟ್ಟ ನಿರೂಪವಾಗಿದೆ[೯]. ಆ ಪ್ರಕಾರ ಮಠಕ್ಕೆ ಸೇರಿದ್ದ ಬೇಲೂರು ಸ್ಥಳದ ಬೆಳವಾಡಿ ಸರ್ವಮಾನ್ಯ ಗ್ರಾಮದಲ್ಲಿ ಕೃಷ್ಣ ಎಂಬ ಅಧಿಕಾರಿಯು ಆ ಗ್ರಾಮವನ್ನು ತನ್ನ ವಶಮಾಡಿಕೊಂಡು ಬಲವಂತವಾಗಿ ಜನರಿಂದ ಹಣವಸೂಲಿ ಮಾಡುತ್ತಿದ್ದುದರ ವಿರುದ್ಧ ಕ್ರಮ ಕೈಗೊಳ್ಳಲು ತಿಳಿಸಿದರು. ಅಲ್ಲದೆ ಆತ ಇನ್ನು ಮುಂದೆ ಈ ರೀತಿ ವರ್ತಿಸದಂತೆ ಬುದ್ಧಿ ಕಲಿಸಿ ಆತ ವಸೂಲು ಮಾಡಿರುವ ಹಣವನ್ನು ಮಠಕ್ಕೆ ಕೊಡಿಸುವಂತೆ ತಾಕೀತು ಮಾಡಿದರು.

೧೮೧೨ನೇ ಇಸವಿಗೆ ಸೇರಿರುವ ದಾಖಲೆಯೊಂದರ ಪ್ರಕಾರ ಶಿವಮೊಗ್ಗ ತಾಲ್ಲೂಕಿನ ಹರಕೆರೆ ಮತ್ತು ಮಾಗಣಿ ಗ್ರಾಮಗಳಲ್ಲಿ ಅಲ್ಲಿಯ ಮಣೆಗಾರ ರೈತರು ದನ ಮಾರಿದ್ದಕ್ಕು ಹಾಗೂ ನೇಯ್ಗೆ ವೃತ್ತಿಯವರಿಂದ ಮಗ್ಗದ ಸುಂಕವನ್ನು ಬಲವಂತವಾಗಿ ತೆಗೆದುಕೊಳ್ಳುತ್ತಿದ್ದ[೧೦], ಬಗ್ಗೆ ದೂರು ಬಂದ ಹಿನ್ನೆಲೆಯಲ್ಲಿ ಮಹಾರಾಜರು ಕವಲೇದುರ್ಗದ ಅಮಲ್ದಾರ ಶಂಕ್ರಯ್ಯನಿಗೆ ನಿರೂಪ ಕಳುಹಿಸಿ ಮಣೆಗಾರನಿಗೆ ಎಚ್ಚರಿಕೆ ನೀಡಿ, ವಸೂಲಿ ಮಾಡಿರುವ ಹಣವನ್ನು ಮಠಕ್ಕೆ ಕೊಡಿಸಿ, ಮುಂದೆ ಹೀಗಾಗದಂತೆ ನೋಡಿಕೊಳ್ಳುವ ಜವಾಬ್ದಾರಿಯನ್ನು ಅಮಲ್ದಾರನಿಗೆ ವಹಿಸಿದರು.

ಇದೇ ಅರಸರ ಮತ್ತೊಂದು ದಾಖಲೆಯು ಕೌಲೇದುರ್ಗ ತಾಲೂಕಿನ ಸರ್ವಮಾನ್ಯ ಗ್ರಾಮ ಮಜಕೂರಿನ ವುತ್ತಾರ ಭೂಮಿಗೆ ಸೇರಿದ್ದಾಗಿದೆ[೧೧]. ಕೌಲೇದುರ್ಗದ ಆಮೀಲ ವೆಂಕಟರಾಮಯ್ಯ ಮೇಲೆ ತಿಳಿಸಿರುವ ಮಠದ ಸರ್ವಮಾನ್ಯ ಗ್ರಾಮದ ಭೂಮಿಯನ್ನು ಜಫ್ತು ಮಾಡಲು ಅಪ್ಪಣೆ ನೀಡಿದ್ದನು. ಆತನ ವರ್ತನೆಯನ್ನು ಪ್ರಶ್ನಿಸಿ ನಿರೂಪ ಹೊರಡಿಸಿದ ಮುಮ್ಮಡಿಯವರು ಆ ವುತ್ತಾರ ಭೂಮಿಯನ್ನು ಪುನಃ ಮಠಕ್ಕೇ ನೀಡಿ ನಿರೂಪವನ್ನು ತಾಲ್ಲೂಕು ಶಿರಸ್ತೇದಾರನ ದಫ್ತರಕ್ಕೆ ಬರೆಸಿ ಅಸಲು ನಿರೂಪವನ್ನು ವಾಪಸ್ಸು ಕಳುಹಿಸಲು ಆದೇಶಿಸಿದರು. ಅದೇ ರೀತಿ ರಂಗಸಮುದ್ರ ಹೋಬಳಿಯಲ್ಲಿ ಕಾಮನಮಠದ ಹಿಟ್ಟುವಳಿ ಗ್ರಾಮ, ಶ್ರೀಕೃಷ್ಣರಾಜ ಸ್ಥಳದ ಸಿಗೆಕುಪ್ಪಗ್ರಾಮ, ಮಹಾರಾಜನದುರ್ಗ ಸ್ಥಳದ ಕಿರುವಾಲೆ ಗ್ರಾಮ, ಕಂದಿಕೆರೆ ಸ್ಥಳದ ಯೆರೆಹಳ್ಳಿಗ್ರಾಮ, ಬೇಲೂರು ಸ್ಥಳದ ರಣಗಟ್ಟೆ ಸುರಾಪುರ ಗ್ರಾಮಗಳನ್ನು ಶ್ರೀಮಠದ ದೇವತಾ ಸೇವೆಗಾಗಿ ಸರ್ವಮಾನ್ಯವಾಗಿ ಬಿಡಲಾಗಿತ್ತು[೧೨]. ಆದರೆ ಆ

ಗ್ರಾಮಗಳಲ್ಲಿ ತಂಬಾಕು ಸುಂಕ ಕರ ಇತ್ಯಾದಿ ಸಂಗ್ರಹಿಸುತ್ತಿದ್ದುದಾಗಿ ಮಹಾರಾಜರಿಗೆ ಸುದ್ದಿ ತಲುಪಿತು. ಕೂಡಲೇ ಮೈಸೂರು ರಾಜ್ಯದ ಗುರಿಕಾರರು, ಅಠವಣೆ ಪಾರುಪತ್ಯಗಾರರಿಗೆ ನಿರೂಪ ಕಳುಹಿಸಿ ಮೇಲೆ ತಿಳಿಸಿರುವ ವಿಚಾರದ ಬಗ್ಗೆ ಜಾಗೃತೆ ವಹಿಸಿ ಆ ಗ್ರಾಮಗಳನ್ನು ಶಾಶ್ವತವಾಗಿ ಹಿಂದಿನಂತೆಯೇ ಸರ್ವಮಾನ್ಯವಾಗಿ ಬಿಟ್ಟು ಅವುಗಳ ಉತ್ಪತ್ತಿಯಿಂದ ದೇವರಸೇವೆ ನಿರಾತಂಕವಾಗಿ ನಡೆಯುವಂತೆ ಮಾಡಲು ಆದೇಶಿಸಿದರು.

ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದ ೧೮೨೮ರ ದಾಖಲೆಯೊಂದು ವಿಶೇಷವಾಗಿದೆ[೧೩]. ಮಠಕ್ಕೆ ಬಹಳ ಹಿಂದಿನಿಂದ ಸರ್ವಮಾನ್ಯವಾಗಿದ್ದ ಗ್ರಾಮಗಳ ದಾಖಲೆಗಳನ್ನು ಕೊಪ್ಪ ಬೇಲೂರು, ನಗರ ಹಾಗೂ ಮಹಾರಾಜನ ದುರ್ಗದ ತಾಲೂಕುಗಳ ಮಾಮಲೆದಾರ್ರು ಕೇಳಿರುವುದನ್ನು ಪ್ರಶ್ನಿಸಲಾಗಿದೆ. ಶ್ರೀಮಠಕ್ಕೆ ಸರ್ವಮಾನ್ಯವಾಗಿ ನೀಡಿದ್ದ ರಣಘಟ್ಟ, ಸುರಾಪುರ, ಗವಡೂರ್ರು, ಕಿರವಾಲೆ ಗ್ರಾಮಗಳ ಸನ್ನದು ಪತ್ರಗಳ ದಾಖಲೆಗಳನ್ನು ಮಾಮಲೆದಾರ್ರು ಕೇಳಿದ ಸಂದರ್ಭದಲ್ಲಿ ಮಠದಲ್ಲಿ ದಾಖಲೆಗಳು ಇರಲಿಲ್ಲವಾದ್ದರಿಂದ ಆ ಗ್ರಾಮಗಳನ್ನು ಮಠವು ಕಳೆದುಕೊಳ್ಳುವ ಸಾಧ್ಯತೆಗಳಿತ್ತು. ಮಹಾರಾಜರು ಆ ತಾಲ್ಲೂಕುಗಳ ಮಾಮಲೆದಾರ್ರಿಗೆ ನಿರೂಪ ಕಳುಹಿಸಿ, ಅನಾದಿಯಾಗಿ ಮೇಲೆ ತಿಳಿಸಿರುವ ಗ್ರಾಮಗಳು ಶ್ರೀಮಠಕ್ಕೆ ಸರ್ವಮಾನ್ಯವಾಗಿ ನಡೆದುಬರುತ್ತಿದ್ದು ಈಗ ದಾಖಲೆಗಳು ದೊರಕದೇ ಇದ್ದುದರಿಂದ ಆಗುವ ತೊಂದರೆ ಏನು? ಎಂದು ಪ್ರಶ್ನಿಸಿ ಶ್ರೀಮಠದ ದೇವರ ಸೇವೆಗಾಗಿ ಇರುವ ಆ ಗ್ರಾಮಗಳ ವಿಷಯದಲ್ಲಿ ತಲೆ ಹಾಕದೆ ಮಠದ ಕಾರ್ಯಗಳಿಗೆ ಅಡ್ಡಿ ಉಂಟಾಗದಂತೆ ನೋಡಿಕೊಳ್ಳಬೇಕಾಗಿ ಆದೇಶಿಸಿ ಸಮಸ್ಯೆಯನ್ನು ಪರಿಹರಿಸಿದರು. ಹೀಗೆ ಶ್ರೀಮಠದ ಸರ್ವಮಾನ್ಯ ಭೂಮಿ ಹಾಗೂ ಗ್ರಾಮಗಳಲ್ಲಿ ಉಂಟಾಗುತ್ತಿದ್ದ ತೊಂದರೆಗಳನ್ನು ನಿವಾರಿಸುವಲ್ಲಿ ಮೈಸೂರಿನ ಅರಸರು ಕಾಳಜಿವಹಿಸಿರುವುದು ದಾಖಲೆಗಳಿಂದ ಸ್ಪಷ್ಟವಾಗುತ್ತದೆ.

ಶ್ರೀಮಠದ ದೇವರುಗಳಿಗೆ ಗ್ರಾಮ-ಭೂಮಿ ಮಾತ್ರವಲ್ಲದೆ ಶ್ರೀಶಾರದಾಂಬ ಹಾಗೂ ಚಂದ್ರಮೌಳೀಶ್ವರ ದೇವರುಗಳಿಗೆ ನಗ-ನಾಣ್ಯ, ವಸ್ತ್ರಾಭರಣ, ರಥ, ಆನೆ, ರುದ್ರಾಕ್ಷಿಮಂಟಪ, ಇತ್ಯಾದಿ ಕೊಡುಗೆಗಳನ್ನೂ, ಶ್ರೀಗಳಿಗೆ ಶಾಲು ಧೋತಿ ಮುಂತಾದವುಗಳನ್ನು ನೀಡಿರುತ್ತಾರೆ. ಶ್ರೀಗಳು ಮಹಾರಾಜರಿಗೆ ಶ್ರೀಮುಖ, ಪ್ರಸಾದ ಹಾಗೂ ಮಂತ್ರಾಕ್ಷತೆ ಕಳುಹಿಸಿದ ಎಲ್ಲ ಸಂದರ್ಭಗಳಲ್ಲೂ ಅವುಗಳನ್ನು ತರುತ್ತಿದ್ದ ಮಠದ ಬ್ರಾಹ್ಮಣರ ಕೈಯ್ಯಲ್ಲೇ ದೇವರಿಗೆ ಉಡುಗೊರೆಗಳನ್ನು ಕಳುಹಿಸುತ್ತಿದ್ದುದು ಸರ್ವೇಸಾಮಾನ್ಯವಾಗಿತ್ತು[೧೪].

ಶ್ರೀಮಠದ ದಾಖಲೆಗಳಲ್ಲಿ ಇಮ್ಮಡಿ ಕೃಷ್ಣರಾಜ ಒಡೆಯರ ಕಾಲಕ್ಕೆ ಸೇರಿದ ೧೭೬೧ರ ದಾಖಲೆಯು ಸರ್ವಮಾನ್ಯ ಗ್ರಾಮಕ್ಕೆ ಸಂಬಂಧಪಟ್ಟಂತೆ ವಿಶೇಷವಾಗಿದೆ [೧೫]. ಹೊನ್ನವಳ್ಳಿ ಸ್ಥಳದ ಮೆಳೆನಹಳ್ಳಿ ಗ್ರಾಮವನ್ನು ಗಿರಿವಾಸದ ರಂಗಶೆಟ್ಟಿ ಹಾಗೂ ಇತರ ಕೋಮಟಿಗರು ಸರ್ಕಾರದಿಂದ ಕ್ರಯಕ್ಕೆ ಪಡೆದು ನಗರೇಶ್ವರ ದೇಗುಲಕ್ಕೆ ದಾನ ಮಾಡಿದ್ದರು. ಕೆಲವು ಕಾಲಾನಂತರ ರಂಗಶೆಟ್ಟಿ ಒಬ್ಬನೇ ಆ ಗ್ರಾಮವನ್ನು ನಗರೇಶ್ವರ ದೇವಾಲಯದಿಂದ ಪುನಃ ಕ್ರಯಮಾಡಿ ಶೃಂಗೇರಿಯ ಮಠಕ್ಕೆ ದಾನ ಮಾಡಿದ್ದಾನೆ. ರಂಗಶೆಟ್ಟಿಯ ಈ ರೀತಿಯ ವರ್ತನೆ ಕುರಿತು ದಾಖಲೆ ಏನೂ ಹೇಳುವುದಿಲ್ಲ. ಬಹುಶಃ ನಗರೇಶ್ವರ ದೇಗುಲದಲ್ಲಿ ಇವರು ದಾನಮಾಡಿದ ನಿಶ್ಚಿತವಾದ ಉದ್ದೇಶ ಈಡೇರಿಲ್ಲದಿದ್ದಿರಬೇಕು. ಪರಿಣಾಮವಾಗಿ ಆ ಗ್ರಾಮವನ್ನು ರಂಗಶೆಟ್ಟಿ ತನಗೆ ನಂಬಿಕೆ ಹಾಗೂ ಗೌರವ ಇದ್ದ ಶ್ರೀಮಠಕ್ಕೆ ನೀಡಿರಬಹುದು. ವಿಶೇಷವೆಂದರೆ ಈ ಗ್ರಾಮವನ್ನು ಮಹಾರಾಜರು ಸರ್ವಮಾನ್ಯವೆಂದು ಘೋಷಿಸಿದರು.

೧೮೨೩ರ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದ ದಾಖಲೆಯೊಂದು ಮಠಕ್ಕೆ ನೀಡಿರುವ ಸರ್ವಮಾನ್ಯ ಗ್ರಾಮಗಳಲ್ಲಿ ಬೇವಾರಸು ಜನ ಮರಣವಪ್ಪಿದರೆ ಅಂತಹವರ ಆಸ್ತಿ ಹಕ್ಕಿನ ವಿಚಾರವನ್ನು ಕುರಿತು ಮಾಹಿತಿ ನೀಡುತ್ತದೆ[೧೬]. ಆ ಪ್ರಕಾರ ಒಂದು ಸಾವಿರ ರೂ ಮೌಲ್ಯದೊಳಗಿನ ಆಸ್ತಿಯಾದಲ್ಲಿ ಅದನ್ನು ಶ್ರೀಮಠಕ್ಕೆ ನೀಡಿ ರಸೀದಿಯನ್ನು ಪಡೆಯಬೇಕು, ಅದಕ್ಕಿಂತ ಹೆಚ್ಚಿನ ಮೌಲ್ಯವುಳ್ಳ ಆಸ್ತಿಯಾದಲ್ಲಿ ಹುಜೂರಿಗೆ ಬರೆದು ಅಲ್ಲಿಂದ ಆದೇಶ ಬಂದ ಪ್ರಕಾರ ನಡೆಯಬೇಕು ಎಂಬುದಾಗಿ ನಿರೂಪದಲ್ಲಿ ತಿಳಿಸಲಾಯಿತು. ಈ ನಿರೂಪದಿಂದ ಸರ್ವಮಾನ್ಯ ಗ್ರಾಮಗಳಲ್ಲಿ ಸಂತಾನವಿಲ್ಲದೇ ಮರಣವಪ್ಪಿದವರ ಆಸ್ತಿಯು ಶ್ರೀಮಠದ ಆದಾಯವನ್ನು ಹೆಚ್ಚಿಸುವಲ್ಲಿ ಸಹಕಾರಿಯಾಯಿತು.

ಇಲ್ಲಿರುವ ಎರಡು ದಾಖಲೆಗಳು ಶ್ರೀಮಠದ ಸರ್ವಮಾನ್ಯ ಗ್ರಾಮಗಳಲ್ಲಿ ಬೆಳೆದಿರುವ ಗಂಧದ ಮರದ ಸಾಗಾಣಿಕೆ ಸುಂಕಕ್ಕೆ ಸಂಬಂಧಿಸಿದಂತೆ ಮಹಾರಾಜರ ಸರ್ಕಾರದ ನಿಲುವು ಕುರಿತು ಮಾಹಿತಿ ನೀಡುತ್ತದೆ[೧೭]. ಗಂಧದ ಮರವನ್ನು ಕಡಿದು ಸಾಗಿಸುವಾಗಿನ ಸುಂಕದಿಂದ ಸರ್ಕಾರಕ್ಕೆ ಗಣನೀಯ ಪ್ರಮಾಣದಲ್ಲಿ ಆದಾಯ ದೊರಕುತ್ತಿತ್ತು. ಆದರೆ ಶ್ರೀಮಠದ ಸರ್ವಮಾನ್ಯ ಗ್ರಾಮಗಳಲ್ಲಿ ಬೆಳೆದಿರುವ ಗಂಧದ ಮರದ ಸಾಗಾಣಿಕೆ ವಿಷಯದಲ್ಲಿ ಮಹಾರಾಜರು ಉದಾರ ನೀತಿ ಅನುಸರಿಸಿದ್ದರು. ೧೮೧೯ರಲ್ಲಿ ಅರಮನೆ ಸೀಮೆಗಡಿಗಳ ಆಮಿಲ ಕಿಲ್ಲೇದಾರ ಸಾಯಿರ ಮಣೆಗಾರರಿಗೆ ಕಳುಹಿಸಿದ ನಿರೂಪದಲ್ಲಿ ಶ್ರೀಮಠದ ಸರ್ವಮಾನ್ಯ ಗ್ರಾಮಗಳಲ್ಲಿ ಬೆಳೆದಿರುವ ಶ್ರೀಗಂಧದ ಮರಗಳನ್ನು ಮಠದವರೇ ಕಡಿಸಿ ಸಲಾಕೆ ಮಾಡಿ ಕೊಂಡೊಯ್ಯುವಾಗ ಅವುಗಳ ಮೇಲೆ ಯಾವುದೇ ರೀತಿಯ ಸಾಗಾಣಿಕೆ ಸುಂಕವನ್ನು ವಸೂಲಿ

ಮಾಡದಂತೆ ತಿಳಿಸಲಾಯಿತು. ೧೮೨೮ರ ಮತ್ತೊಂದು ದಾಖಲೆ ಇದೇ ವಿಚಾರವಾಗಿ ಜಿಲ್ಲಾ ಕಚೇರಿ ಬಕ್ಷಿ ಬಸವರಾಜಯ್ಯನಿಗೆ ನಿರೂಪ ಕಳುಹಿಸಿ ಶ್ರೀಮಠದ ಸರ್ವಮಾನ್ಯ ಗ್ರಾಮಗಳಾದ ಬೇಲೂರು ತಾಲೂಕು ಬೆಳವಾಡಿ ಹೋಬಳಿಯ ಅಸಲಿ ಗ್ರಾಮ ಹನ್ನೆರಡು, ಕೊಪ್ಪ ತಾಲೂಕು ಶಿರಕರಡಿ ಗ್ರಾಮ ಒಂದು, ಚಂದ್ರಗುತ್ತಿ ತಾಲೂಕು ಅಂದವಳ್ಳಿ ಗ್ರಾಮ ಒಂದು ಹಾಗೂ ನಾಲ್ಕು ದಾಖಲೆ ಗ್ರಾಮಗಳಲ್ಲಿ ಬೆಳೆದಿರುವ ಶ್ರೀಗಂಧದ ಮರಗಳನ್ನು ಕೊಂಡೊಯ್ಯುವಾಗ ಅವುಗಳ ಮೇಲೆ ಯಾವುದೇ ರೀತಿಯ ಸಾಗಾಣಿಕೆ ಸುಂಕ ವನ್ನು ಹಾಕುವುದಾಗಲೀ ಅಥವಾ ಅಡ್ಡಿಯನ್ನುಂಟು ಮಾಡುವುದಾಗಲೀ ಮಾಡಬಾರದೆಂದು ಆದೇಶಿಸಲಾಯಿತು.

ಅದೇ ರೀತಿ ಮಠಕ್ಕೆ ಕೊಂಡೊಯ್ಯುವ ಸಾಮಾನು ಸರಂಜಾಮುಗಳ ಮೇಲೂ ಸುಂಕ ವಸೂಲಿ ಮಾಡದಂತೆ ಆದೇಶ ಹೊರಡಿಸಲಾಗಿತ್ತು. ನಗರದಂಗೆ ಉಲ್ಬಣಗೊಳ್ಳುವ ಕೆಲವೇ ತಿಂಗಳ ಹಿಂದೆ ನಗರದ ಫೌಜುದಾರ ವೀರರಾಜಯ್ಯ ರಸನಿಗೆ ಕಳುಹಿಸಿದ ನಿರೂಪದಲ್ಲಿ ಆತನ ವ್ಯಾಪ್ತಿಯಲ್ಲಿ ಬರುವ ತಾಲ್ಲೂಕು ಅಮಲ್ದಾರರು ಕಿಲ್ಲೇದಾರರು ಸುಂಕದ ಇಲಾಖೆ ಯವರಿಗೆ ನವರಾತ್ರಿ ಹಬ್ಬದ ಪ್ರಯುಕ್ತ ಶ್ರೀಮಠಕ್ಕೆ ಕೊಂಡೊಯ್ಯುವ ಜವಳಿ ಜಿನಿಸು ಇತ್ಯಾದಿ ಪದಾರ್ಥಗಳ ಮೇಲೆ ಸಾಗಾಣಿಕೆ ಸುಂಕವನ್ನು ಹಾಕುವುದಾಗಲೀ ಅಥವಾ ಸಾಗಾಣಿಕೆಗೆ ಅಡ್ಡಿಯನ್ನುಂಟುಮಾಡುವುದಾಗಲೀ ಮಾಡಬಾರದೆಂದು ಆದೇಶಿಸಲಾಯಿತು[೧೯]. ಈ ಆದೇಶಗಳು ಶ್ರೀಮಠದ ಬಗ್ಗೆ ಮಹಾರಾಜರಿಗಿದ್ದ ಕಾಳಜಿಗೆ ದೃಷ್ಟಾಂತ ಗಳಾಗಿವೆ.

ಮೈಸೂರಿನ ಅರಸರಿಗೆ ಶ್ರೀಮಠದ ಘನತೆ ಗೌರವ ಗಳನ್ನು ಎತ್ತಿ ಹಿಡಿಯುವ, ಅಲ್ಲಿಯ ಸಂಪ್ರದಾಯಗಳು-ಆಚಾರ ವಿಚಾರಗಳು ಯಾವುದೇ ಅಡೆತಡೆಗಳಿಲ್ಲದಂತೆ ಮುನ್ನಡೆದುಕೊಂಡು ಹೋಗುವಂತೆ ಮಾಡುವ, ಹಾಗೂ ಮಠದ ಆಡಳಿತ ಸುಸೂತ್ರವಾಗಿ ನಡೆಯಬೇಕೆಂಬ ಆಕಾಂಕ್ಷೆ ಹಾಗೂ ಕಾಳಜಿ ಇತ್ತು. ಮೇಲಿನ ಅಂಶಗಳ ಕುರಿತು ಮಠದ ದಾಖಲೆಗಳಲ್ಲಿ ಮಾಹಿತಿ ಲಭ್ಯವಿದೆ. ೧೮೨೮ರ ದಾಖಲೆ ಯೊಂದು ಶ್ರೀಮಠದ ಸ್ವಾಮೀಜಿಯವರು ಮಾತ್ರವೇ ಧರಿಸಬಹುದಾದ ಬಿರುದು ಬಾವಲಿಗಳನ್ನು ಅದರ ಶಾಖಾ ಮಠಗಳಾದ ರಾಮಚಂದ್ರಾಪುರ, ಹೊನ್ನೇಹಳ್ಳಿ, ತೀರ್ಥಹಳ್ಳಿ ಹರಿಹರಪುರ ಮತ್ತು ಮುಳಬಾಗಿಲಿನ ಸ್ವಾಮೀಜಿಗಳೂ ಧರಿಸಿದ್ದುದರ ಬಗ್ಗೆ ಮಾಹಿತಿ ನೀಡಿದೆ[೨೦]. ಬಹುಶಃ ಈ ವಿಚಾರದಲ್ಲಿ ಮಠದಿಂದ ಸಹಾಯ ಕೋರಿ ಅರ್ಜಿ ಬಂದಿರ ಬೇಕು. ಮಹಾರಾಜರ ಸರ್ಕಾರ ಈ ವಿಷಯದಲ್ಲಿ ಮಠದ ಆಡಳಿತದಲ್ಲಿ ನೇರವಾಗಿ ಹಸ್ತಕ್ಷೇಪ ಮಾಡಲಿಲ್ಲ. ಶ್ರೀಮಠದ ಶಾಖಾಮಠದವರು ಹದ್ದುಮೀರಿ ವರ್ತಿಸದಂತೆ ಮತ್ತು ಶ್ರೀಮಠದ ರೀತಿ ರಿವಾಜುಗಳನ್ನು ಮೀರದಂತೆ ಶ್ರೀಮಠವೇ ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರಲ್ಲದೆ, ಮಠದವರು ಈ ವಿಷಯದಲ್ಲಿ ಸಹಾಯ ಕೋರಿದರೆ ಸಹಕರಿಸಬೇಕೆಂದು ಅರಮನೆ ಸೀಮೆಗಡಿಗಳ ಆಮೀಲ ಕಿಲ್ಲೇದಾರರುಗಳಿಗೆ ನಿರೂಪ ಕಳುಹಿಸಿದರು. ಹಾಗೂ ಶಾಖಾಮಠಗಳ ಸ್ವಾಮೀಜಿಗಳು ಶ್ರೀಮಠದ ಕಟ್ಟಲೆ ಪ್ರಕಾರವೇ ನಡೆಯುವಂತೆ ಮನವರಿಕೆ ಮಾಡುವ ಜವಾಬ್ದಾರಿಯನ್ನು ಸರ್ಕಾರಿ ಅಧಿಕಾರಿಗಳಿಗೇ ವಹಿಸಲಾಯಿತು.

೧೮೬೩ರ ದಾಖಲೆಯೊಂದು ಇಂತಹದ್ದೇ ವಿಷಯಕ್ಕೆ ಸಂಬಂಧ ಪಟ್ಟಿದ್ದಾಗಿದೆ[೨೧]. ಮುಮ್ಮಡಿಯವರು ಆ ವೇಳೆಗೆ ಆಡಳಿತಾಧಿಕಾರಗಳನ್ನು ಕಳೆದುಕೊಡಿದ್ದರಿಂದ ಅವರೇ ನಿರೂಪ ಕಳುಹಿಸಲು ಅವಕಾಶವಿರಲಿಲ್ಲ. ಆದರೆ ಕಮೀಷನರ್ ಬೌರಿಂಗನ ಸರ್ಕಾರಕ್ಕೆ ಬರೆದು ಮಠದ ಘನತೆಗೆ ಕುಂದುಂಟಾಗದಂತೆ ನೋಡಿಕೊಳ್ಳುವ ಪ್ರಯತ್ನ ಮಾಡಿರು ವುದು ಗಮನಾರ್ಹ. ಮಹಾರಾಜರು ಅರಮನೆಯ ಆಡಳಿತದ ಇನ್‌ಛಾರ್ಜ ಆಗಿದ್ದ ಕ್ಯಾಪ್ಟನ್ ಪಿಯರ್ಸ್‌ನಿಗೆ ಪತ್ರ ಬರೆದು ಶ್ರೀಮಠದ ಶ್ರೀಗಳ ಬಿರುದು ಹಾಗೂ ಲಾಂಛನಗಳನ್ನು ಬಲ್ಲಾಹುಲ್ಲಿ ಸ್ವಾಮಿಗಳು ಧರಿಸಿರುವುದು ಶ್ರೀಮಠಕ್ಕೆ ಅಗೌರವ ತೋರಿಸಿದಂತೆ. ದಯವಿಟ್ಟು ಈ ವಿಷಯದಲ್ಲಿ ಕಮೀಷನರ್ ಸರ್ಕಾರ ಅಗತ್ಯ ಕ್ರಮ ಕೈಗೊಂಡು ಮಠದ ಘನತೆ ಉಳಿಸಬೇಕೆಂದು ಕೋರಿದರು. ಸರ್ಕಾರ ಕೈಗೊಂಡ ಕ್ರಮದ ಬಗ್ಗೆ ದಾಖಲೆ ಲಭ್ಯವಿಲ್ಲವಾದರೂ ಮಹಾರಾಜರಿಗೆ ಮಠದ ಬಗ್ಗೆ ಇದ್ದ ಕಾಳಜಿಗೆ ಇದೊಂದು ದೃಷ್ಟಾಂತವೆನಿಸಿದೆ.

ಶ್ರೀಮಠವು ತನ್ನ ಶಿಷ್ಯರಿಂದ ಅಗ್ರತಾಂಬೂಲ, ಚರಣ ಕಾಣಿಕೆ, ದೀಪಾರಾಧನೆ ಕಾಣಿಕೆ ಹಾಗೂ ಪ್ರಾಯಶ್ಚಿತ್ತ ಕಾಣಿಕೆ ಗಳನ್ನು ಸಂಗ್ರಹಿಸುತ್ತಿತ್ತು. ಈ ಕಾಣಿಕೆಗಳನ್ನು ಸಂಗ್ರಹಿಸುವುದು ಶ್ರೀಮಠದ ಕಟ್ಟಳೆಗಳಲ್ಲಿ ಒಂದಾಗಿತ್ತು ಹಾಗೂ ಈ ವಿಷಯದಲ್ಲಿ ಸರ್ಕಾರ ಹಸ್ತಕ್ಷೇಪ ಮಾಡುತ್ತಿರಲಿಲ್ಲ. ಆದರೆ ಮಠದ ಶಿಷ್ಯರಲ್ಲಿ ಕೆಲವರು ಈ ಕಾಣಿಕೆಗಳನ್ನು ನೀಡಲು ತಗಾದೆ ಮಾಡಿದಾಗ ಶ್ರೀಮಠದವರೇ ಸರ್ಕಾರದ ಸಹಾಯ ಕೋರಿದ್ದುದರ ಹಿನ್ನೆಲೆಯಲ್ಲಿ ಮಹಾರಾಜರು ತೆಗೆದುಕೊಂಡ ನಿಲುವನ್ನು ಮಠದ ದಾಖಲೆಯಲ್ಲಿ ಕಾಣಬಹುದು[೨೨]. ಆ ಪ್ರಕಾರ ಮಠದವರೇ ತಗಾದೆ ಮಾಡುವ ಶಿಷ್ಯರ ಮೇಲೆ ಕ್ರಮ ಜರುಗಿಸಬೇಕೆಂದು ತಿಳಿಸಿದರು. ಹಾಗೆಯೇ ಸರ್ಕಾರದ ಅಧಿಕಾರಿಗಳಿಗೆ ನಿರೂಪ ಕಳುಹಿಸಿ ಕಾಣಿಕೆ ವಸೂಲಿಗೆ ಮಠದ ಕಡೆಯವರು ಬಂದಾಗ ಡಂಗುರ ಸಾರಿಸಿ ಕಾಣಿಕೆ ನೀಡುವಂತೆ ತಿಳಿಸಬೇಕು. ಕಾಣಿಕೆ ಕೊಡಲು ತಗಾದೆ ಮಾಡುವ ಶಿಷ್ಯರಿಗೆ ಸರ್ಕಾರದ ಅಧಿಕಾರಿಗಳು ಯಾವುದೇ ರೀತಿಯ ಸಹಕಾರ

ನೀಡಬಾರದು ಎಂಬುದಾಗಿ ಆದೇಶ ನೀಡಿದರು. ಹೀಗೆ ಮಠದ ಕಟ್ಟಳೆಯನ್ನು ಕಾಪಾಡಲು ಸರ್ಕಾರ ಪರೋಕ್ಷವಾಗಿ ಸಹಕರಿಸಿದ್ದನ್ನು ಕಾಣಬಹುದು.

ಶ್ರೀಮಠಕ್ಕೆ ಭದ್ರತೆ ಒದಗಿಸುವಲ್ಲೂ ಮಹಾರಾಜರ ಸರ್ಕಾರ ಅಗತ್ಯ ಕ್ರಮ ಕೈಗೊಂಡಿರುವುದು ಗಮನಾರ್ಹ. ಮಠದ ಶ್ರೀಗಳು ತುಂಟ ಜನರಿಂದ ಮಠಕ್ಕೆ ಉಪಟಳ ಉಂಟಾಗುತ್ತಿರುವುದನ್ನು ವಿವರಿಸಿ ಸರ್ಕಾರದ ರಕ್ಷಣೆ ಕೋರಿದ್ದರು[೨೩]. ಅದೇ ಸಂದರ್ಭದಲ್ಲಿ ರೈತರ ದಂಗೆಗಳಿಂದಾಗಿ ಮೈಸೂರು ರಾಜ್ಯದ ಬಹುಭಾಗ ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿತ್ತು. ಅಂತಹ ಕ್ಲಿಷ್ಟ ಪರಿಸ್ಥಿತಿಯಲ್ಲೂ ಮಹಾರಾಜರು ಸ್ಪಂದಿಸಿ ದಿವಾನ್ ವೆಂಕಟರಾಜಯ್ಯನವರಿಗೆ ಮಠದ ಭದ್ರತೆಗೆ ಸೂಕ್ತ ಕ್ರಮ ಕೈಗೊಳ್ಳಲು ಆದೇಶ ನೀಡಿದರು. ಉತ್ತಮ ಕುದುರೆಗಳು ಹಾಗೂ ಜನಗಳನ್ನು ಮಠದ ಸಮೀಪ ನಿಲ್ಲಿಸಲು ವ್ಯವಸ್ಥೆ ಮಾಡಿ ಸ್ವಾಮೀಜಿಯವರು ಆತಂಕಕ್ಕೀಡಾಗದೆ ಸಮಾಧಾನ ಚಿತ್ತದಿಂದ ಸಂಸ್ಥಾನದ ಶ್ರೇಯಸ್ಸಿಗೆ ಪ್ರಾರ್ಥಿಸಬೇಕೆಂದು ಕೋರಿದರು.

ಶ್ರೀಮಠದ ಆಡಳಿತ ಹಾಗೂ ಅಧಿಕಾರಿಗಳ ನೇಮಕಾತಿ ವಿಷಯಗಳಲ್ಲೂ ಮಹಾರಾಜರು ಆಸ್ಥೆವಹಿಸಿದ್ದು ಕಂಡು ಬರುತ್ತದೆ. ಶ್ರೀಮಠದ ಆಡಳಿತ ಹಾಗೂ ಅಧಿಕಾರಿಗಳ ನೇಮಕಾತಿ ವಿಷಯಗಳಲ್ಲಿ ಅದು ಸ್ವತಂತ್ರವಾಗಿತ್ತು. ಆದರೂ ಮಠದ ಆಸ್ತಿಪಾಸ್ತಿ ಪರರ ಪಾಲಾಗುವುದು ಕಂಡುಬಂದಲ್ಲಿ, ಅದರ ಆಡಳಿತದ ಬಿಗಿ ತಪ್ಪುವಂತಹ ಸಂದರ್ಭ ಉಂಟಾದಲ್ಲಿ ಮಹಾರಾಜರು ತಮ್ಮ ಅನಿಸಿಕೆಗಳನ್ನು ಶ್ರೀಗಳಿಗೆ ಭಿನ್ನವತ್ತಳೆ ಕಳಿಸುವ ಮೂಲಕ ವ್ಯಕ್ತಪಡಿಸಿರುವ ದಾಖಲೆಗಳಿವೆ[೨೪]. ಶ್ರೀಮಠದ ಯಜಮಾನಿಕೆಯನ್ನು ಶ್ರೀಮದಾಚಾರ್ಯ ಸ್ವಾಮಿಗಳು ವೆಂಕಟಾಚಲ ಭಟ್ಟರಿಗೆ ವಹಿಸಿಕೊಟ್ಟಿದ್ದರು. ಈ ವಿಷಯವನ್ನು ಅರಮನೆ ಮಠಮುದ್ರೆ ಬ್ರಾಹ್ಮಣ ಲಿಂಗಾಭಟ್ಟರ ಮೂಲಕ ಮಹಾರಾಜರ ಅವಗಾಹನೆಗೆ ತರಲಾಯಿತು. ಮಹಾರಾಜರು ವೆಂಕಟಾಚಲಭಟ್ಟರಿಗೇ ಪತ್ರ ಬರೆದು ಮಠದ ಶ್ರೀಗಳು ಹೊಸಬರಾಗಿದ್ದು, ಮಠದ ಆಸ್ತಿ, ನಗನಾಣ್ಯ ಅಪಾರವಾಗಿರುವ ಕಾರಣ ಅವುಗಳು ನಾಶವಾಗದಂತೆ ಕಾಪಾಡುವ ಗುರುತರವಾದ ಹೊಣೆಗಾರಿಕೆ ಅವರ ಮೇಲಿದೆ ಯೆಂದೂ, ವೆಂಕಟಾಚಲಭಟ್ಟರು ತುಂಬಾ ಜಾಗರೂಕತೆ ಯಿಂದ ನಡೆದುಕೊಳ್ಳಬೇಕೆಂದೂ ತಿಳಿಸಿದರು.

ಶ್ರೀಮಠ ಹಾಗೂ ಅರಮನೆಯ ನಡುವಿನ ವ್ಯವಹಾರ ಗಳಿಗಾಗಿ ಮಠದ ಕಡೆಯಿಂದ ಮಠಮುದ್ರೆ ಬ್ರಾಹ್ಮಣನನ್ನು ಅರಮನೆಗೆ ಕಳುಹಿಸಲಾಗುತ್ತಿತ್ತು. ಲಿಂಗಾಭಟ್ಟ ಅಥವಾ ಲಿಂಗಾಶಾಸ್ತ್ರಿ ಬಹಳ ಕಾಲ ಆ ಸ್ಥಾನವನ್ನಲಂಕರಿಸಿದ್ದ. ೧೮೨೪ರ ದಾಖಲೆಯೊಂದರ ಪ್ರಕಾರ ಲಿಂಗಾಶಾಸ್ತ್ರಿ ಮರಣ ವಪ್ಪಿದ್ದರಿಂದ ಆ ಸ್ಥಾನಕ್ಕೆ ಮಠದಿಂದ ನಂಜುಂಡಶಾಸ್ತ್ರಿ ಎಂಬಾತನನ್ನು ನೇಮಿಸಲಾಯಿತು. ಆದರೆ ಮಹಾರಾಜರಿಗೆ ಸುಂದರಕಾಂಡ ಸುಬ್ಬಾಶಾಸ್ತ್ರಿ ಎಂಬಾತ ಆ ಸ್ಥಾನಕ್ಕೆ ಸೂಕ್ತ ವ್ಯಕ್ತಿಯೆಂದೆನಿಸಿದ್ದರಿಂದ ಸ್ವಾಮೀಜಿಯವರಿಗೆ ಭಿನ್ನವತ್ತಳೆ ಕಳುಹಿಸಿ ಶ್ರೀಮಠಕ್ಕೆ ಅರಮನೆ ಕೆಲಸಗಳು ಸರಾಗವಾಗಿ ಆಗಬೇಕಾದರೆ ಸರಿಯಾದ ವ್ಯಕ್ತಿ ನೇಮಕವಾಗಬೇಕೆಂದು ಅದಕ್ಕೆ ಸುಂದರಕಾಂಡ ಸುಬ್ಬಾಶಾಸ್ತ್ರಿ ಸೂಕ್ತ ವ್ಯಕ್ತಿ ಎಂಬುದಾಗಿ ಭಿನ್ನವಿಸಿಕೊಂಡರು[೨೫]. ಆದರೆ ಅಂತಿಮ ತೀರ್ಮಾನ ಸ್ವಾಮೀಜಿಯವರದ್ದೇ ಆಗಿದ್ದು ಅವರ ತೀರ್ಮಾನ ತಮಗೂ ಸಮ್ಮತ ಎಂಬುದಾಗಿಯೂ ತಿಳಿಸಿದರು.

ಅಂತೆಯೇ ಶ್ರೀಮಠದ ದೇಶಾಧಿಕಾರಿ ಶೇಷಾ ಜೋಯಿಸನು ಮರಣವಪ್ಪಿದಾಗ ಆತನ ಸ್ಥಾನಕ್ಕೆ ಅವನ ಮಗ ಮಲ್ಲಿಕಾರ್ಜುನಶಾಸ್ತ್ರಿ ಮತ್ತು ಅಳಿಯನನ್ನು ಕಳುಹಿಸಿ ಇವರಿಬ್ಬರೂ ಬುದ್ಧಿವಂತರಾಗಿದ್ದು ಮಠದ ಕೆಲಸವನ್ನು ಸಮರ್ಥ ವಾಗಿ ನಿಭಾಯಿಸುತ್ತಾರೆ. ಸ್ವಾಮೀಜಿಯವರು ಇವರನ್ನು ಒಪ್ಪಿಕೊಂಡು ಶ್ರೀಮಠದಿಂದ ರಕ್ಷಿಸಬೇಕೆಂದು ಭಿನ್ನವತ್ತಳೆ ಕಳುಹಿಸಿದರು[೨೬]. ೧೮೬೧ರ ದಾಖಲೆಯೊಂದರ ಪ್ರಕಾರ ಶ್ರೀಗಳಾದ ಶ್ರೀನರಸಿಂಹಭಾರತೀರವರು ತಮ್ಮ ಉತ್ತರಾಧಿ ಕಾರಿಯ ನೇಮಕದ ವಿಚಾರವನ್ನು ಶ್ರೀಧರ ಮಲ್ಲಿಕಾರ್ಜುನ ಸ್ವಾಮಿಗಳ ಮುಖಾಂತರ ಮಹಾರಾಜರಿಗೆ ಮುಟ್ಟಿಸಿದರು. ಪ್ರತಿಯಾಗಿ ಭಿನ್ನವತ್ತಳೆ ಕಳುಹಿಸಿದ ಮಹಾರಾಜರು ತಾವೇ ಖುದ್ದು ಸ್ವಾಮೀಜಿಯವರ ದರುಶನಕ್ಕಾಗಿ ಶೃಂಗೇರಿಗೆ ಬರುವು ದಾಗಿಯೂ ಆಗ ಉತ್ತರಾಧಿಕಾರಿಯ ನೇಮಕದ ವಿಚಾರವನ್ನು ಚರ್ಚಿಸುವುದಾಗಿಯೂ ತಿಳಿಸಿ ಸ್ವಾಮೀಜಿಯವರ ತೀರ್ಮಾನವೇ ಅಂತಿಮ ಎಂಬುದಾಗಿ ತಿಳಿಸಿದರು[೨೭]. ಮಠದ ಆಡಳಿತ ಏರುಪೇರಾದ ವಿಚಾರ ಮಹಾರಾಜರ ಗಮನಕ್ಕೆ ಬಂದ ಸಂದರ್ಭಗಳಲ್ಲಿ ಅವರು ವ್ಯಕ್ತಪಡಿಸಿರುವ ಆತಂಕ ದಾಖಲೆ ಗಳಲ್ಲಿ ಕಂಡುಬರುತ್ತದೆ. ಶ್ರೀಗಳು ಯಾತ್ರೆ ಕೈಗೊಂಡ ಸಂದರ್ಭ ಗಳಲ್ಲಿ ಬಹಳಕಾಲ ಮಠದಿಂದ ದೂರವಿರುತ್ತಿದ್ದರು. ಅಂತಹ ಕೆಲವು ಸಂದರ್ಭಗಳಲ್ಲಿ ಮಠದ ಆಡಳಿತದಲ್ಲಿ ನಿಯಂತ್ರಣ ತಪ್ಪಿ ಸಾಲಸೋಲಗಳಾದುವು. ಜೊತೆಗೆ ಮತಾಂತರದವರ ಭಯವೂ ಇತ್ತು. ಈ ವಿಷಯಗಳ ಕುರಿತು ಮಹಾರಾಜರು ಶ್ರೀಗಳಿಗೆ ವಿವರ ನೀಡಿ ಮಠಕ್ಕೆ ಆದಷ್ಟು ಬೇಗ ಹಿಂತಿರುಗಿ ಬಂದು ಮಠದ ಆಡಳಿತವನ್ನು ಸರಿಪಡಿಸಲು ಭಿನ್ನವತ್ತಳೆ ಕಳುಹಿಸಿದರು[೨೮].

ಒಮ್ಮೆ ಮಠದ ವ್ಯವಹಾರ ಒಂದು ಸೂಪರಿಂಟೆಂಡೆಂಟ್ ಕೋರ್ಟ್‌ಗೆ ಹೋದ ವಿಷಯ ದಾಖಲೆಯೊಂದರಲ್ಲಿದೆ. ಜವಳಿ ಸುಬ್ಬಯ್ಯ ಎಂಬಾತನಿಗೂ ಶ್ರೀಮಠಕ್ಕೂ ಇದ್ದ ಲೇವಾದೇವಿ ವಿಚಾರ ನ್ಯಾಯಾಲಯದ ಮೆಟ್ಟಿಲೇರಿತು[೨೯].

ಈ ವಿಷಯ ಅಂತ್ಯಗೊಳಿಸಲು ಮಠದವರು ನ್ಯಾಯಾಲಯದಲ್ಲಿ ವಾಯಿದೆ ಕೋರಿದ್ದರು. ಮಹಾರಾಜರು ಈ ವ್ಯವಹಾರವನ್ನು ಸಮರ್ಥವಾಗಿ ನಿರ್ವಹಿಸುವ ಮಠಕ್ಕೆ ಆಪ್ತರಾದವರನ್ನು ನೇಮಿಸಲು ಸ್ವಾಮೀಜಿಯವರಿಗೆ

ಭಿನ್ನವತ್ತಳೆ ಕಳುಹಿಸಿದರು. ಅದೇ ರೀತಿ ಮಠದ ಸುಪರ್ದಿನಲ್ಲಿ ತಮ್ಮ ಪೂರ್ವಿಕರ ಕಾಲದಿಂದಲೂ ನೀಡಿರುವ ನಗ–ನಾಣ್ಯ, ಕಿರೀಟ, ಆಭರಣಗಳು, ವಿಗ್ರಹಗಳು, ಪಾದುಕೆ ಇತ್ಯಾದಿ ಬೆಲೆಬಾಳುವ ವಸ್ತುಗಳಿದ್ದು ಅವು ಶಾಶ್ವತವಾಗಿ ಉಳಿಯುವಂತೆ ನೋಡಿಕೊಳ್ಳಲು ಸಮರ್ಥನಾದ ವ್ಯಕ್ತಿಯೊಬ್ಬನನ್ನು ನೇಮಿಸಬೇಕೆಂದು ಭಿನ್ನವತ್ತಳೆ ಕಳುಹಿಸಿದರು[೩೦].

೧೮೬೬ರ ದಾಖಲೆಯೊಂದರಲ್ಲಿ ಮಠದ ಆಡಳಿತದಲ್ಲಿ ಬಿಗಿ ತಪ್ಪಿರುವ ಕುರಿತು ಮಹಾರಾಜರು ಆತಂಕ ವ್ಯಕ್ತಪಡಿಸಿರುವುದು ಕಂಡುಬರುತ್ತದೆ[೩೧]. ಶ್ರೀಮಠದಿಂದ ಮಹಾರಾಜರಿಗೆ ಶ್ರೀಮುಖ ಕಳುಹಿಸುವಾಗ ಮಠದ ಮೊಹರಿನೊಂದಿಗೆ ಸ್ವಾಮೀಜಿಯವರ ಹಸ್ತಾಕ್ಷರ ಹಾಕುವುದು ಅವಶ್ಯಕತೆ ಇತ್ತು. ಆದರೆ ೧೮೬೬ರಲ್ಲಿ ಮಹಾರಾಜರಿಗೆ ಕಳುಹಿಸಿದ ಶ್ರೀಮುಖದಲ್ಲಿ ಮಠದ ಮೊಹರು ಮಾತ್ರ ಇದ್ದು ಸ್ವಾಮೀಜಿಯವರ ಹಸ್ತಾಕ್ಷರ ಇರಲಿಲ್ಲ. ಇದರಿಂದ ಆತಂಕಗೊಂಡ ಮಹಾರಾಜರು ಸ್ವಾಮೀಜಿಯವರಿಗೆ ಕಳುಹಿಸಿದ ಭಿನ್ನವತ್ತಳೆಯಲ್ಲಿ "ಸ್ವಾಮೀಜಿಯವರ ಹಸ್ತಾಕ್ಷರವಿಲ್ಲದ ಶ್ರೀಮುಖವನ್ನು ನಂಬಲು ಕಷ್ಟವಾಗಿದೆ" ಎಂಬುದಾಗಿ ತಿಳಿಸಿದ್ದಾರೆ. ಹೀಗೆ ಮಹಾರಾಜರು ಮಠದ ಆಡಳಿತದಲ್ಲಿ ಬಿಗಿ ತಪ್ಪಿರುವುದನ್ನು ಸೂಕ್ಷ್ಮವಾಗಿ ಸ್ವಾಮೀಜಿಯವರಿಗೆ ಅರುಹಿದರಲ್ಲದೆ ಈ ವಿಷಯಗಳನ್ನು ಮುಖತಃ ಮಾತನಾಡಲು ಇಚ್ಛಿಸಿ ಸ್ವಾಮೀಜಿಯವರನ್ನು ಶ್ರೀರಂಗಪಟ್ಟಣಕ್ಕೆ ಆಹ್ವಾನಿಸಿದರು.

ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದ ಶ್ರೀಮಠದ ದಾಖಲೆಯೊಂದು ಒಡೆಯರ ಸಾಮಾಜಿಕ ಸುಧಾರಣಾ ಮನೋಭಾವವನ್ನು ವ್ಯಕ್ತಪಡಿಸಿದೆ. ಮಠದ ಶಿಷ್ಯರಲ್ಲೊಬ್ಬನಾದ ದೇವರಾಜಭಟ್ಟ ಎಂಬಾತ ಅಪರಾಧವೆಸಗಿದ ಕಾರಣ ಆತನನ್ನು ಮಠದಿಂದ ಬಹಿಷ್ಕಾರಗೊಳಿಸಲಾಯಿತು (ಅಪರಾಧ ಏನೆಂಬುದು ದಾಖಲೆಯಲ್ಲಿಲ್ಲ). ಈ ಸಂಬಂಧ ಮಠದ ಅಧಿಕಾರಿ ಶೇಷಭಟ್ಟನಿಗೆ ಖಜಾನೆ ದುಯಂಬಕ್ಷಿ ನರಸಪ್ಪ ದೇವರಾಜನ ಅಪರಾಧ ಆತನನ್ನು ಬಹಿಷ್ಕಾರ ಮಾಡುವಷ್ಟು ದೊಡ್ಡದಲ್ಲವೆಂದು ಮನವಿ ಮಾಡಿದರೂ ಪ್ರಯೋಜನವಾಗಲಿಲ್ಲ. ವಿಷಯವನ್ನು ಮಹಾರಾಜರ ಗಮನಕ್ಕೆ ತರಲಾಯಿತು. ಮಹಾರಾಜರು ಸ್ವಾಮೀಜಿಯವರಿಗೆ ಭಿನ್ನವತ್ತಳೆ ಕಳುಹಿಸಿ 'ಕಾಲಧರ್ಮವನ್ನು ಯೋಚಿಸಿ ಯಥೋಚಿತವಾಗಿ ಶೇಷಭಟ್ಟನಿಗೆ ಅಪ್ಪಣೆ ಮಾಡಬೇಕೆಂದು' ತಿಳಿಸಿದರು. ಈ ವಿಷಯದಲ್ಲಿ ಮಹಾರಾಜರು ಮಠದ ಕಟ್ಟಳೆಗೆ ಅಪಚಾರವೂ ಆಗದಂತೆ ತಮ್ಮ ಸಲಹೆ ನೀಡಿದರು. ಒಂದು ವೇಳೆ ದೇವರಾಜಭಟ್ಟ ಅಪರಾಧ ಎಸಗಿದ್ದಲ್ಲಿ ಅವನಿಗೆ ಪ್ರಾಯಶ್ಚಿತ್ತ ಮಾಡಿಸಿ ಆತನನ್ನು ಶುದ್ಧನೆಂದು ಪರಿಗಣಿಸಿ ತನ್ನ ಕೆಲಸ ಮಾಡಿಕೊಂಡು ಹೋಗುವಂತೆ ಅನುಗ್ರಹಿಸಬೇಕಾಗಿ ವಿನಂತಿಸಿದರು[೩೨]. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಆ ವೇಳೆಗಾಗಲೇ ಮೈಸೂರು ರಾಜ್ಯದಲ್ಲಿ ನ್ಯಾಯಾಲಯಗಳು ಅಸ್ತಿತ್ವಕ್ಕೆ ಬಂದಿದ್ದವು. ಇಂತಹ ಬಹಿಷ್ಕಾರದ ವಿರುದ್ಧ ಆತ ನ್ಯಾಯಾಲಯದ ಮೊರೆ ಹೋಗುವ ಅವಕಾಶವೂ ಇತ್ತು. ಸಾಮಾಜಿಕ ಬಹಿಷ್ಕಾರದಂತಹ ಘಟನೆ ಆರೋಗ್ಯಕರ ಸಮಾಜದ ಬೆಳವಣಿಗೆಗೆ ತೊಡಕೆಂಬುದು ಮಹಾರಾಜರ ಗಮನಕ್ಕೆ ಬಂದಿತ್ತೆಂಬುದು ಸುತ್ತ್ಯಾರ್ಹ. ಅಲ್ಲದೆ. ತಮ್ಮ ಅಭಿಪ್ರಾಯವನ್ನು ಸ್ವಾಮೀಜಿಗೆ ತಿಳಿಸುವುದರ ಮೂಲಕ ಮಠಕ್ಕಾಗಬಹುದಾದ ಮುಜುಗರವನ್ನು ತಪ್ಪಿಸಿದರು.

ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದ ಶ್ರೀಮಠದ ದಾಖಲೆಯೊಂದು ಇಬ್ಬರು ಸ್ವಾಮೀಜಿಗಳ ವಿಚಾರದಲ್ಲಿ ಮಹಾರಾಜರಿಗೆ ಉಂಟಾದ ಧರ್ಮಸಂಕಟವನ್ನು ಹಾಗೂ ಅವರು ಅದನ್ನು ನಿವಾರಿಸಿದ ಬಗ್ಗೆ ಮಾಹಿತಿ ನೀಡುತ್ತದೆ. ಶೃಂಗೇರಿಯ ಶ್ರೀಗಳು ನಂಜನಗೂಡಿನ ಯಾತ್ರೆ ಕೈಗೊಂಡು ದೇವರ ಸೇವೆ ಮಾಡುವ ಕುರಿತು ಇಚ್ಛೆ ವ್ಯಕ್ತಪಡಿಸಿದರು. ಆ ಸಂದರ್ಭದಲ್ಲಿ ಶ್ರೀ ಸುಮತೀಂದ್ರ ಸ್ವಾಮಿಗಳು ನಂಜನಗೂಡಿನ ಅನ್ನಸತ್ರದಲ್ಲಿ ಉಳಿದುಕೊಂಡಿದ್ದರು. ಶೃಂಗೇರಿಯ ಶ್ರೀಗಳು ಬರುವ ವಿಷಯ ತಿಳಿದ ಸುಮತೀಂದ್ರರು ತಾವಿರುವ ಸತ್ರದ ಮುಂದೆ ಶೃಂಗೇರಿಯ ಶ್ರೀಗಳ ಸವಾರಿ ಹೋಗಬಾರದೆಂದು ಷರತ್ತು ಹಾಕಿದರು. ನಂಜನಗೂಡಿನ ತಹಸೀಲ್ದಾರ್ ಶ್ರೀನಿವಾಸಯ್ಯ ಈ ವಿಷಯದ ಬಗ್ಗೆ ಅಲ್ಲಿಯ ಜನರನ್ನು ವಿಚಾರಿಸಿದಾಗ ಈ ಇಬ್ಬರೂ ಸ್ವಾಮಿಗಳು ಹಿಂದೆಂದೂ ಒಂದೇ ಸಮಯದಲ್ಲಿ ಅಲ್ಲಿಗೆ ಬಂದಿಲ್ಲವೆಂದು ತಿಳಿಸಿದರು. ಕೂಡಲೆ ತಹಸೀಲ್ದಾರ್ ಶ್ರೀನಿವಾಸಯ್ಯ ತಮಗೆ ಅಪ್ಪಣೆ ಬಂದ ಪ್ರಕಾರ ನಡೆಯುವುದಾಗಿ ಮಹಾರಾಜರಿಗೆ ಪತ್ರ ಬರೆದ. ಈ ಧರ್ಮಸಂಕಟವನ್ನು ಮಹಾರಾಜರು ಜಾಣ್ಮೆಯಿಂದ ಪರಿಹರಿಸಿದರು. ತಹಸೀಲ್ದಾರ್ ಶ್ರೀನಿವಾಸಯ್ಯನಿಗೆ ನಿರೂಪ ಕಳುಹಿಸಿ ಶೃಂಗೇರಿಯ ಶ್ರೀಗಳ ಸವಾರಿ ನಂಜನಗೂಡಿನ ಕಡೆ ಹೊರಡುವ ಮುನ್ನ ಶ್ರೀ ಸುಮತೀಂದ್ರ ಸ್ವಾಮಿಗಳನ್ನು ಮೈಸೂರಿಗೆ ಕರೆತರಬೇಕು, ಹಾಗೂ ಶೃಂಗೇರಿಯ ಶ್ರೀಗಳು ನಂಜನಗೂಡಿನ ಯಾತ್ರೆ ಮುಗಿಸಿದ ನಂತರ ಪುನಃ ಶ್ರೀ ಸುಮತೀಂದ್ರ ಸ್ವಾಮಿಗಳನ್ನು ನಂಜನಗೂಡಿನ ಅನ್ನಸತ್ರಕ್ಕೆ ಕರೆತರಬೇಕು. ಇಬ್ಬರೂ ಸ್ವಾಮೀಜಿಗಳಿಗೂ ಎಳ್ಳಷ್ಟೂ ಕಿಂಚಿತ್ತೂ

ಅಗೌರವ ಉಂಟಾಗದಂತೆ ನೋಡಿಕೊಳ್ಳಬೇಕು ಎಂಬುದಾಗಿ ಆದೇಶ ನೀಡಿ ಸಮಸ್ಯೆಯನ್ನು ಉಪಾಯವಾಗಿ ಪರಿಹರಿಸಿದರು[೩೩].

ಶ್ರೀಗಳ ಸೇತುಯಾತ್ರೆ ಹಾಗೂ ಇತರ ಯಾತ್ರೆಗಳ ಕುರಿತು ಶ್ರೀಮಠದ ಹಲವಾರು ದಾಖಲೆಗಳು ಮಾಹಿತಿ ನೀಡುತ್ತವೆ[೩೪]. ಇವರ ಯಾತ್ರೆ ಸಂದರ್ಭದಲ್ಲಿ ಸರ್ಕಾರದಿಂದ ಮೈಸೂರು ಸೀಮೆ ಗಡಿಗಳಲ್ಲಿ ಸೂಕ್ತ ರೀತಿಯ ವ್ಯವಸ್ತೆ ಮಾಡಲಾಗುತ್ತಿತ್ತು. ಶ್ರೀಗಳು ಹೊರಡುವ ದಿನ, ಸಮಯ, ಯಾತ್ರಾಮಾರ್ಗ, ಉಳಿದುಕೊಳ್ಳುವ ಗ್ರಾಮ, ಅವರೊಂದಿಗೆ ಬರುವ ಮಠದ ಬ್ರಾಹ್ಮಣರು, ಇತರೆ ಜನ, ಪ್ರಾಣಿಗಳು – ಇತ್ಯಾದಿ ವಿವರಗಳನ್ನು ಮುಂಚಿತವಾಗಿ ಸರ್ಕಾರಕ್ಕೆ ಮಠದವರು ತಿಳಿಸಿರುತ್ತಿದ್ದರು. ಅದಕ್ಕನುಗುಣವಾಗಿ ಮಹಾರಾಜರ ಸರ್ಕಾರ ಮೈಸೂರು ಸೀಮೆ ಗಡಿಗಳ ಅಮಲ್ದಾರರು ಮತ್ತು ಕಿಲ್ಲೇದಾರರು ಗಳಿಗೆ ನಿರೂಪ ಕಳುಹಿಸಿ ಸ್ವಾಮೀಜಿಯವರು ಅವರ ಗಡಿಗಳಿಗೆ ಬರುವ ದಿನ, ಸಮಯ, ಮಂದಿ, ಪ್ರಾಣಿಗಳು ಇತ್ಯಾದಿ ವಿವರ ನೀಡಿ, ಅವರು ತಮ್ಮ ಗ್ರಾಮದ ಗಡಿಗೆ ಬಂದಾಗ ಎದಿರುಗೊಳ್ಳಬೇಕಾದ ರೀತಿ, ಉಳಿದುಕೊಳ್ಳಲು ಸೂಕ್ತ ವ್ಯವಸ್ಥೆ, ಊಟೋಪಚಾರಗಳಿಗೆ ಅವರಿಗೆ ನೀಡಬೇಕಾದ ದಿನಸಿ, ಹಣ್ಣು ತರಕಾರಿ, ಕಾಳುಗಳು ಇತ್ಯಾದಿ, ಅವರೊಂದಿಗೆ ತಂದಿರುವ ಪ್ರಾಣಿಗಳಿಗೆ ಹುಲ್ಲು-ಹುರುಳಿ, ಪ್ರತಿಯೊಂದು ಅಂಶವನ್ನೂ ವಿವರಿಸಿ ನಿರೂಪ ಕಳುಹಿಸುತ್ತಿತ್ತು. ಗಮನ ಸೆಳೆಯುವ ಅಂಶವೆಂದರೆ ಊಟೋಪಚಾರಗಳಿಗೆ ನೀಡುವ ವ್ಯವಸ್ಥೆ "ಬಂದ ದಿವಸ ಮಾತ್ರ" ಎಂಬ ಸ್ಪಷ್ಟ ಸೂಚನೆ ಇರುವುದು. ಹೆಚ್ಚುದಿನ ಉಳಿದರೆ ಮಠದಿಂದಲೇ ವ್ಯವಸ್ಥೆ ಮಾಡಿಕೊಳ್ಳುತ್ತಾರೆ ಎಂಬುದಾಗಿ ನಿರೂಪ ತಿಳಿಸುತ್ತದೆ. ಕೆಲವುಬಾರಿ ಪ್ರಾಣಿಗಳಿಗೆ ಮಾತ್ರ ಉಳಿದಷ್ಟೂ ದಿವಸವೂ ಹುಲ್ಲು ಹುರಳಿ ಒದಗಿಸಲು ಸೂಚಿಸಲಾಗಿದೆ. ಬಹುಶಃ ಮೈಸೂರು ರಾಜ್ಯದಲ್ಲಿ ಇದ್ದಂತಹ ಎಲ್ಲ ಮಠಮಾನ್ಯಗಳಿಗೂ ಮಹಾರಾಜರ ಸರ್ಕಾರ ಇಂತಹದೇ ಸೌಲಭ್ಯಗಳನ್ನು ಒದಗಿಸಬೇಕಾಗಿದ್ದುದರ ಹಿನ್ನೆಲೆಯಲ್ಲಿ ಒಂದು ಮಿತಿಯಲ್ಲಿ ಆ ಸೌಲಭ್ಯಗಳನ್ನು ನೀಡಲಾಗುತ್ತಿತ್ತೆಂದು ತೋರುತ್ತದೆ. ಹಾಗೆಯೇ ಮಹಾರಾಜರು ಶ್ರೀಗಳನ್ನು ಚಾತುರ್ಮಾಸ್ಯ ಸಂಕಲ್ಪವನ್ನು ಮೈಸೂರಿನಲ್ಲೇ ಕೈಗೊಳ್ಳಲು ಅಹ್ವಾನಿಸಿ ಕಳುಹಿಸಿರುವ ಹಲವಾರು ಭಿನ್ನವತ್ತಳೆಗಳು ಇವೆ. ಶ್ರೀಗಳು ಎಲ್ಲೇ ಈ ವ್ರತ ಕೈಗೊಂಡರೂ ಸರ್ಕಾರವೇ ಬೇಕಾದ ವ್ಯವಸ್ಥೆಯನ್ನು ಮಾಡುತ್ತಿತ್ತು.

ಶ್ರೀಮಠ ಮತ್ತು ಮೈಸೂರಿನ ಒಡೆಯರ ಸಂಬಂಧ ಕೇವಲ ದಾನ ದತ್ತಿಗಳಿಗೆ ಮಾತ್ರ ಮೀಸಲಾಗಿರಲಿಲ್ಲ. ಮುಮ್ಮಡಿ ಕೃಷ್ಣರಾಜ ಒಡೆಯರು ತಮಗೆ ಪರಾಮರ್ಶಿಸಲು ಬೇಕಾದ ಜ್ಯೋತಿಶಾಸ್ತ್ರ ಕೃತಿಗಳನ್ನು ಕೋರಿ ಶ್ರೀಗಳಿಗೆ ಭಿನ್ನವತ್ತಳೆ ಕಳುಹಿಸಿದ್ದಾರೆ[೩೫]. ಅದೇ ರೀತಿ ಮಹಾರಾಜರು ತಾವೇ ರಚಿಸಿದ್ದ 'ದೇವತಾ ಕುಸುಮ ಮಂಜರಿ' ಕೃತಿಯನ್ನು ಶ್ರೀಗಳಿಗೆ ಕಳುಹಿಸಿ ಅದನ್ನು ಪರಾಂಬರಿಸಿದಲ್ಲಿ ತಮ್ಮ ಶ್ರಮ ಸಾರ್ಥಕವೆಂದು ತಿಳಿಸಿದ್ದಾರೆ[೩೬].

ಮಹಾರಾಜರು ಅಧಿಕಾರದಲ್ಲಿದ್ದಾಗ ಸ್ವಾಮೀಜಿಗಳು ಅವರ ಆಹ್ವಾನ ಸ್ವೀಕರಿಸಿ ಬರುತ್ತಿದ್ದಷ್ಟು ಆನಂತರದ ವರ್ಷಗಳಲ್ಲಿ ಬಂದಂತೆ ತೋರುವುದಿಲ್ಲ. ಇದಕ್ಕೆ ಹಲವಾರು ಕಾರಣಗಳಿರಬಹುದು. ಮಹಾರಾಜರ ನೇರ ಆಳ್ವಿಕೆಯಲ್ಲಿ ಶ್ರೀಗಳ ಪ್ರಯಾಣ ಸಂದರ್ಭಗಳಲ್ಲಿ ಒದಗಿಸುತ್ತಿದ್ದ ಸೌಲಭ್ಯಗಳು ಕಮೀಶನರುಗಳ ಆಳ್ವಿಕೆಯಲ್ಲಿ ನಿಂತುಹೋಯಿತು. ಈ ಅಂಶ ಬಹುಶಃ ಸ್ವಾಮೀಜಿಗಳ ಮೈಸೂರು ಆಗಮನ ಕಡಿಮೆಯಾಗಲು ಒಂದು ಪ್ರಧಾನವಾದ ಕಾರಣವಾಗಿರಬೇಕು. ೧೮೫೦-೬೦ರ ದಶಕದಲ್ಲಿ ಶ್ರೀಗಳಿಗೆ ಹಲವಾರು ಬಾರಿ ಭಿನ್ನವತ್ತಳೆ ಕಳುಹಿಸಿ ಆಹ್ವಾನಿಸಿರುವುದು ದಾಖಲೆಗಳಲ್ಲಿ ಸ್ಪಷ್ಟವಾಗಿದೆ. ಮಹಾರಾಜರು ತಮ್ಮ ಉಗ್ರರಥ ಶಾಂತಿ, ೬೦ನೇ ವರ್ಧಂತಿ, ಮೊಮ್ಮಗ ದೇವವ್ರತನ ಉಪನಯನ ಇತ್ಯಾದಿ ಅರಮನೆಯ ಕಾರ್ಯಕ್ರಮಗಳಿಗೂ ಭಿನ್ನವತ್ತಳೆ ಕಳುಹಿಸಿರುತ್ತಾರೆ. ಒಂದು ಭಿನ್ನವತ್ತಳೆಯಲ್ಲಿ ಮುಮ್ಮಡಿಯವರು ನಾಲ್ಕೈದು ವರ್ಷಗಳಿಂದ ತಮಗೆ ಸ್ವಾಮೀಜಿಯವರ ಚರಣ ದರ್ಶನ ಆಗಲಿಲ್ಲವೆಂದು ಅತ್ಯಂತ ನೋವಿನಿಂದ ತಿಳಿಸಿರುವುದು ಕಂಡುಬರುತ್ತದೆ. ಸ್ವಾಮೀಜಿಯವರು ತುಂಬಾ ಕಾಲದಿಂದ ಬಾರದಿರುವುದಕ್ಕೆ ಜನ ಕುಹಕದ ಮಾತುಗಳನ್ನಾಡುತ್ತಿದ್ದಾರೆಂದು ಒಮ್ಮೆ ಬಂದು ತಮ್ಮ ಮನಸ್ಸಂತೋಷಪಡಿಸಬೇಕಾಗಿ ಬಹುವಾಗಿ ಕೋರಿದ್ದಾರೆ. ಸ್ವಾಮೀಜಿಯವರು ಬೆಂಗಳೂರಿಗೆ ಬರುವ ವಿವರ ತಿಳಿಸಿದಲ್ಲಿ ಕಮೀಶನರ್ ಮಿ. ಸ್ಯಾಂಡರ್ಸ್‌ನಿಗೆ ಶ್ರೀಗಳು ನಗರದ ಸಮೀಪ ಬಂದಾಗ ಸ್ವಾಮಿಗಳನ್ನು ಎದುರುಗೊಳ್ಳುವ ವ್ಯವಸ್ಥೆ ಮಾಡಿಸುವುದಾಗಿಯೂ ಅದೇ ಭಿನ್ನವತ್ತಳೆಯಲ್ಲಿ ತಿಳಿಸಿರುವುದು ಗಮನಾರ್ಹ[೩೭]. ಆ ಸಂದರ್ಭದಲ್ಲಿ ಮಹಾರಾಜರು ಮಾನಸಿಕ ತುಮುಲಗಳಿಗೆ ಸಿಲುಕಿದ್ದರು. ತಮ್ಮ ದತ್ತು ಸ್ವೀಕಾರಕ್ಕೆ ಬ್ರಿಟಿಷರ ಅನುಮತಿ ದೊರಕಬೇಕಿತ್ತು, ಹಾಗೂ ಅತನಿಗೆ ರಾಜ್ಯಾಧಿಕಾರಗಳನ್ನು ವಹಿಸಿಕೊಡಬೇಕಾಗಿತ್ತು. ಇಂತಹ ಸಂದರ್ಭದಲ್ಲಿ ಮಹಾರಾಜರಿಗೆ ಅವಶ್ಯವಾಗಿ ಗುರುಗಳ ಚರಣ ದರ್ಶನ ಹಾಗೂ ಆಶೀರ್ವಚನ ನೆಮ್ಮದಿ ನೀಡುತ್ತಿತ್ತು.

ಒಟ್ಟಾರೆ ಈ ೮೭ ದಾಖಲೆಗಳ ಅಧ್ಯಯನದಿಂದ ಮೂಡಿರುವ ತೀರ್ಮಾನಗಳೆಂದರೆ ಶ್ರೀಮಠ ಹಾಗೂ ಮೈಸೂರಿನ ಒಡೆಯರ ಸಂಬಂಧ ಬಹಳ ಹಿಂದಿನಿಂದಲೂ ಇತ್ತು ಹಾಗೂ ನಿರಂತರವಾಗಿ ಮುಂದುವರಿಯಿತು. ಮೈಸೂರಿನ ಒಡೆಯರು ಶ್ರೀಮಠದ ಆಡಳಿತ, ಆಚಾರ-

ವಿಚಾರ, ಘನತೆ ಗೌರವ, ಭದ್ರತೆ-ಇತ್ಯಾದಿಗಳ ಬಗ್ಗೆ ಕಾಳಜಿ ಹೊಂದಿದ್ದರು. ಅದೇ ರೀತಿ ಸ್ವಾಮೀಜಿಗಳು ಸಂಸ್ಥಾನದ ಶ್ರೇಯಸ್ಸಿಗೆ ಪೂಜೆ ಪ್ರಾರ್ಥನೆ ಸಲ್ಲಿಸುತ್ತಿದ್ದರು. ಇವರಿಬ್ಬರ ಸಂಬಂಧದ ಪೂರ್ಣ ಪರಿಚಯವಾಗಲು ಸಮಕಾಲೀನ ಶಾಸನ ಹಾಗೂ ಇನ್ನಿತರ ದಾಖಲೆಗಳ ಅಧ್ಯಯನದ ಅಗತ್ಯವಿದೆ. ಇದರ ಜೊತೆಗೆ ಒಡೆಯರುಗಳು ರಾಜ್ಯದ ಬೇರೆ ಬೇರೆ ಮಠಗಳೊಂದಿಗೂ ಹೊಂದಿದ್ದ ಸಂಬಂಧ ಕುರಿತು ಸಂಶೋಧನೆ ನಡೆಸಲು ಅವಕಾಶವಿದೆ.

ಆಧಾರಸೂಚಿ ಮತ್ತು ಅಡಿಟಿಪ್ಪಣಿಗಳು

೧. ೧. ಒಟ್ಟು ೮೮ ದಾಖಲೆಗಳಿದ್ದು ಅದರಲ್ಲಿ ಸಂಖ್ಯೆ ೧೪೩, ೧೭೬೩, ಇಮ್ಮಡಿ ಕೃಷ್ಣರಾಜ ಒಡೆಯರು, ಪುಟಸಂಖ್ಯೆ ೨೩೫–೩೭, ಈ ದಾಖಲೆ ಶ್ರೀಮಠಕ್ಕೆ ಸಂಬಂಧಪಟ್ಟಿಲ್ಲ. ಕಾಶಿಯಲ್ಲಿ ವಾಸವಾಗಿದ್ದ ಚಯನಿ ರಾಮಭಟ್ಟ ಎಂಬಾತನಿಗೆ ಮಹಾರಾಜರು ಯಾದವಗಿರಿ, ನಂಜನಗೂಡು, ಎಡತೊರೆ ಸೋಮನಾಥಪುರಗಳಲ್ಲಿ ನೀಡಿರುವ ವೃತ್ತಿಗಳ ವಿವರ ನೀಡಿದೆ. ಚಯನಿ ರಾಮಭಟ್ಟನಿಗೂ–ಶ್ರೀಮಠಕ್ಕೂ–ವೃತ್ತಿಗಳನ್ನು ನೀಡಿರುವುದಕ್ಕೂ ಯಾವುದೇ ರೀತಿಯ ಸಂಬಂಧ ಕಂಡುಬರುವುದಿಲ್ಲ.

೨. ಇಲ್ಲಿರುವ ೮೭ ದಾಖಲೆಗಳಲ್ಲಿ ೦೧ ಇಮ್ಮಡಿ ಕಂಠೀರವ ನರಸರಾಜ ಒಡೆಯರ್ ಕಾಲಕ್ಕೂ, ಒಂದು ಬೆಟ್ಟದ ಚಾಮರಾಜ ಒಡೆಯರ್ ಕಾಲಕ್ಕೂ, ೧೧ ಇಮ್ಮಡಿ ಕೃಷ್ಣರಾಜ ಒಡೆಯರ್ ಕಾಲಕ್ಕೂ, ೬೨ ಮುಮ್ಮಡಿ ಕೃಷ್ಣರಾಜ ಒಡೆಯರ್ ಕಾಲಕ್ಕೂ, ೦೨ ಹತ್ತನೇ ಚಾಮರಾಜೇಂದ್ರ ಒಡೆಯರ್ ಕಾಲಕ್ಕೂ ಸೇರಿವೆ. ಇವುಗಳಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್ ಕಾಲದ ೧೮೨ನೇ ಸಂಖ್ಯೆಯ ದಾಖಲೆಯು ಅತ್ಯಂತ ಬೃಹತ್ತಾಗಿದ್ದು ಶ್ರೀಮಠಕ್ಕೆ ನೀಡಿರುವ ಸರ್ವಮಾನ್ಯ ಗ್ರಾಮಗಳ ದಾನಶಾಸನದ ಪ್ರತಿಯಾಗಿದೆ. ಇದೇ ಅರಸರ ಕಾಲದ ೨೧೨ನೇ ಸಂಖ್ಯೆಯ ದಾಖಲೆಯು ಆಂಗ್ಲ ಭಾಷೆಯಲ್ಲಿದೆ.

೩. ಸಂ. ೧೩೨, ೧೭೦೮, ಇಮ್ಮಡಿ ಕಂಠೀರವ ನರಸರಾಜ ಒಡೆಯರು, ಪುಟ ೨೨೧.

೪. ಸಂ. ೧೩೫, ೧೭೬೦, ಇಮ್ಮಡಿ ಕೃಷ್ಣರಾಜ ಒಡೆಯರು.

೫. ಸಂ. ೧೩೬, ೧೭೬೧, ಪುಟ ೨೨೯.

೬ ಸಂ.೧೩೮, ಇಮ್ಮಡಿ ಕೃಷ್ಣರಾಜ ಒಡೆಯರು, ೧೭೬೧, ಪು. ೨೩೦.

೭. ಸಂ. ೧೮೨, ಮುಮ್ಮಡಿ ಕೃಷ್ಣರಾಜ ಒಡೆಯರು, ೧೮೨೮, ಪುಟ ೨೮೪–೩೦೬.

೮. ಸಂ. ೧೪೧, ಇಮ್ಮಡಿ ಕೃಷ್ಣರಾಜ ಒಡೆಯರು, ೧೭೬೩, ಪುಟ ೨೩೩–೩೪.

೯. ಸಂ. ೧೪೨, ಇಮ್ಮಡಿ ಕೃಷ್ಣರಾಜ ಒಡೆಯರು, ೧೭೬೩, ಪುಟ ೨೩೪–೩೫.

೧೦. ಸಂ. ೧೮೨, ಮುಮ್ಮಡಿ ಕೃಷ್ಣರಾಜ ಒಡೆಯರು, ೧೮೨೮, ಪುಟ ೨೮೪–೩೦೬

೧೧. ಸಂ. ೧೬೨, ೧೮೧೭, ಪುಟ ೨೬೦–೬೧.

೧೨. ಸಂ. ೧೬೫, ಮುಮ್ಮಡಿ ಕೃಷ್ಣರಾಜ ಒಡೆಯರು, ವಿಕ್ರಮನಾಮ ಸಂವತ್ಸರ, ಪುಟ ೨೬೨–೬೩.

೧೩. ಸಂ. ೧೮೧, ೧೮೨೮, ಪುಟ ೨೮೨–೮೪.

೧೪. ಸಂ. ೧೩೩, ಇಮ್ಮಡಿ ಕೃಷ್ಣರಾಜ ಒಡೆಯರು, ೧೭೬೩, ಪುಟ ೨೨೪; ಸಂ. ೧೪೪, ಬೆಟ್ಟದ ಚಾಮರಾಜ ಒಡೆಯರು, ಪುಟ ೨೩೮; ಸಂ. ೧೪೯, ಮುಮ್ಮಡಿ ಕೃಷ್ಣರಾಜ ಒಡೆಯರು, ಪ್ರಜೋತ್ಪತ್ತಿನಾಮ ಸಂವತ್ಸರ, ಪುಟ ೨೪೪–೪೫. ಸಂ. ೧೫೫, ಶ್ರೀಮುಖ ಸಂವತ್ಸರ, ಪುಟ ೨೫೧–೫೩. ಇನ್ನೂ ಅನೇಕ ದಾಖಲೆಗಳು ಮಾಹಿತಿ ನೀಡುತ್ತವೆ.

೧೫. ಸಂ.೧೩೯, ಇಮ್ಮಡಿ ಕೃಷ್ಣರಾಜ ಒಡೆಯರು, ೧೭೬೧. ಪು. ೨೩೧.

೧೬. ಸಂ. ೧೭೦, ೧೮೨೩, ಪುಟ ೨೬೬–೬೭, ನಿರೂಪವನ್ನು ನಗರ, ಅನಂತಪುರ, ಕುಮಶಿ, ಬಿದರ್ರಿ, ಹೊನ್ನಾಳಿ, ಶಿಕಾರಿಪುರ, ಹರಿಪುರ, ಲಕ್ಕವಳ್ಳಿ, ವುಡಗಣಿ, ಆನವಟ್ಟಿ, ಚಂದ್ರಗುತ್ತಿ, ಶಿವಮೊಗ್ಗ, ಹೊಳೆಹೊನ್ನೂರು, ಸೊರಬ, ವಸುಧಾರೆ, ಚನ್ನಗಿರಿ, ಬಸವಾಪಟ್ಣ, ಇಕ್ಕೇರಿ, ಸಾಗರ ಮಂಡಗದ್ದೆ, ಕವಲೇದುರ್ಗ, ಕೊಪ್ಪ ತಾಲ್ಲೂಕುಗಳ ಅಮಲ್ದಾರರು ಹಾಗೂ ಕಿಲ್ಲೇದಾರರಿಗೆ ಕಳುಹಿಸಲಾಗಿತ್ತು.

೧೭. ಸಂ. ೧೬೪, ೧೮೧೯, ಪುಟ ೨೬೧–೬೨, ಸಂ. ೧೮೪, ೧೮೨೮, ಪುಟ ೩೦೭–೦೮.

೧೮. ಸಂ. ೧೭೨, ಪುಟ ೨೭೦; ಸಂ. ೧೮೮, ೧೮೩೧, ಪುಟ ೩೧೩–೧೪.

೧೯. ಸಂ. ೧೮೬, ೧೮೩೦, ಪುಟ ೩೧೦–೧೧.

೨೦. ಸಂ. ೧೭೯, ೧೮೨೮, ಪುಟ ೨೭೮–೭೯.

೨೧. ೨೧೨, ೧೮೬೩, ಪುಟ ೩೪೯–೫೦; ಪತ್ರ ಆಂಗ್ಲ ಭಾಷೆಯಲ್ಲಿದೆ.

೨೨. ಸಂ. ೧೭೧, ೧೮೨೬, ಪುಟ ೨೭೧.

೨೩. ಸಂ. ೧೮೭, ೧೮೩೧, ಪುಟ ೩೧೧–೧೩.

೨೪. ಸಂ. ೧೫೮, ೧೮೧೪, ಪುಟ ೨೫೫.

೨೫. ೧೭೧, ೧೮೨೪, ಪುಟ ೨೬೮–೭೦.

೨೬ ಸಂ. ೧೯೭, ಪ್ರಮಾದೀಚ ಸಂವತ್ಸರ, ಮುಮ್ಮಡಿ ಕೃಷ್ಣರಾಜ ಒಡೆಯರು, ಪುಟ ೩೨೯–೩೦.

೨೭. ಸಂ. ೨೦೮, ೧೮೬೧, ರುದ್ರಿ ಸಂವತ್ಸರ, ಪುಟ ೩೪೪–೪೫.

೨೮. ಸಂ. ೧೯೪, ವಿರೋಧಿಕೃತ ಸಂವತ್ಸರ, ಮುಮ್ಮಡಿ ಕೃಷ್ಣರಾಜ ಒಡೆಯರು, ಪುಟ ೩೨೪–೨೫.

೨೯. ಸಂ. ೨೧೬, ಅಕ್ಷಯ ಸಂವತ್ಸರ, ಮುಮ್ಮಡಿ ಕೃಷ್ಣರಾಜ ಒಡೆಯರು, ಪುಟ ೩೫೪–೫೬.

೩೦. ಅದೇ, ಸಂ. ೨೧೬.

೩೧. ಸಂ. ೨೧೫, ೧೮೬೬, ಕ್ರೋಧನಾಮ ಸಂವತ್ಸರ, ಮುಮ್ಮಡಿ ಕೃಷ್ಣರಾಜ ಒಡೆಯರು, ಪುಟ ೩೫೩–೫೪

೩೨. ಸಂ. ೨೧೩, ರಕ್ತಾಕ್ಷಿ ಸಂವತ್ಸರ, ಮುಮ್ಮಡಿ ಕೃಷ್ಣರಾಜ ಒಡೆಯರು, ಪುಟ ೩೫೦–೫೧.

೩೩. ಸಂ. ೧೫೩, ೧೮೧೨, ಪುಟ ೨೪೯–೫೦.

೩೪. ಸಂ. ೧೫೪, ೧೮೧೩, ಪುಟ ೨೫೦–೫೧; ಸಂ. ೧೭೬, ೧೮೨೮, ಪುಟ ೨೭೫–೭೬, ಇತ್ಯಾದಿ ಹಲವಾರು ದಾಖಲೆಗಳಿವೆ.

೩೫. ಸಂ. ೧೫೯, ಯುವಸಂವತ್ಸರ, ಪುಟ ೨೫೬–೫೮; ಸಂ. ೨೦೭, ೧೮೬೧, ರೌದ್ರಿಸಂವತ್ಸರ, ಪುಟ ೩೪೩–೪೪.

೩೬ ಸಂ.೨೦೯, ದುರ್ಮತಿ ಸಂವತ್ಸರ, ಪುಟ ೩೪೫–೪೬

೩೭. ಸಮ. ೧೯೮, ೧೯೯, ಪುಟ ೩೩೧–೩೫.

೩೪

ಶೃಂಗೇರಿ ಮಠದ ಐತಿಹಾಸಿಕ ಗ್ರಂಥಾಲಯ ಪರಿಚಯ

ಕೆ.ಜಿ. ವಸಂತಮಾಧವ*

ಗ್ರಂಥಗಳ ಪ್ರಕರಣಗಳು ಮಠದ ಗ್ರಂಥಾಲಯದಲ್ಲಿ ಆಗಿಂದಾಗ್ಗೆ ಸೇರುತ್ತಿರುವ ಇಂತಹ ಗ್ರಂಥಗಳಲ್ಲಿ ವಿದ್ಯಾರಣ್ಯ ಕಾಲಜ್ಞಾನ, ಕಾಲಮಾಧವ (ಇದು ಖಗೋಳ ಶಾಸ್ತ್ರದ ಗ್ರಂಥ) ಗುರುವಂಶ ಕಾವ್ಯಗಳು ಮತ್ತು ಮಠದ ದೈನಂದಿನ ಆಗುಹೋಗುಗಳನ್ನು ತಿಳಿಸುವ ವಿಲಕ್ಷಣವಾದ ದಾಖಲೆ ಪತ್ರಗಳು (ಕಡತ) ಗಮನಾರ್ಹ. ಈ ಗ್ರಂಥಗಳೆಲ್ಲಾ ಆಗಿಂದಾಗ್ಗೆ ಅಧ್ಯಯನಕ್ಕೆ ಉಪಯೋಗವಾಗುತ್ತಿದ್ದವು. ಇದಕ್ಕೆ ಮುಖ್ಯ ಉದಾಹರಣೆ ದಿವಾನ್ ಪೂರ್ಣಯ್ಯನವರು ಈ ಮಠದಲ್ಲಿರುವ ಋಗ್‌ಭಾಷ್ಯ ಗ್ರಂಥದ ಹಸ್ತಪ್ರತಿಯನ್ನು ತರಿಸಿಕೊಂಡು ಅದನ್ನು ಪ್ರತಿ ಮಾಡಿಕೊಂಡು ಮೂಲ ಪ್ರತಿಯನ್ನು ಮಠಕ್ಕೆ ಹಿಂತಿರುಗಿಸಿದ್ದರೆಂದು ತಿಳಿಸುವ ಒಂದು ದಾಖಲೆ ಪತ್ರ ಮಠದಲ್ಲಿ ಸಿಕ್ಕಿದೆ. ಇದರ ಕಾಲ ೧೮೧೩.

ಕ್ರಿ.ಶ. ೧೮೧೩ರ ದಾಖಲೆಯ ಪತ್ರದ ಮಹತ್ವ

ಶೃಂಗೇರಿ ಮಠದ ಗ್ರಂಥಾಲಯ ಐತಿಹಾಸಿಕ ಅಧ್ಯಯನ ದೃಷ್ಟಿಯಿಂದ ಗಮನಾರ್ಹವಾದುದು. ಕ್ರಿ.ಶ. ೧೮೧೩ರ ಇನ್ನೊಂದು ದಾಖಲೆ ಮುಖ್ಯವಾಗಿ ಈ ಗ್ರಂಥಾಲಯಗಳಲ್ಲಿ ಯಾವ ಗ್ರಂಥಗಳು ಇದ್ದಿತು ಎಂದು ತಿಳಿಸುತ್ತದೆ. ಇದರಂತೆ ಮಠದ ಗ್ರಂಥಾಲಯದಲ್ಲಿರುವ ಪುಸ್ತಕಗಳಾವುದೆಂದರೆ ಜೋತಿಷ್ಯಶಾಸ್ತ್ರದ ಗ್ರಂಥಗಳು ಮತ್ತು ಅವುಗಳ ವ್ಯಾಖ್ಯಾನಗಳು, ವೈದ್ಯಶಾಸ್ತ್ರ ಗ್ರಂಥಗಳಾದ ಕಾಶ್ಯಪ ಸಂಹಿತೆ, ಪರಾಷರ ಸಂಹಿತೆ, ವರಹಾ ಸಂಹಿತೆ ನಾಡಿಗ್ರಂಥವಾದ ಬ್ರಹಸ್ಮತಿ ನಾಡಿ ಗ್ರಂಥ ಜೈಮಿನಿಸೂತ್ರ, ಭಾರ್ಗವಸೂತ್ರ ಪರಹರತ್ನ ಮತ್ತು ಗ್ರಂಥಗಳ ಮೇಲೆ ಬರೆದ ವ್ಯಾಖ್ಯಾನ ಗ್ರಂಥಗಳು. ಎರಡನೆಯದಾಗಿ ಈ ಗ್ರಂಥಗಳನ್ನು ಅಧ್ಯಯನ ವಶೀಕರಿಸಿ ಪರಾಮರ್ಶಿಸಲು ಮಠವು ನೀಡುವ ಪದ್ಧತಿ ನಡೆಯುತ್ತಿದ್ದದ್ದು.

ಉಪಸಂಹಾರ

ಶೃಂಗೇರಿ ಮಠದ ಸರಸ್ವತಿ ಭಂಡಾರ (ಗ್ರಂಥಾಲಯವು ವಿದ್ಯಾರಣ್ಯರ ಕಾಲದಲ್ಲಿ ಸ್ಥಾಪಿತವಾಗಿ ೧೩೦೬ರಿಂದು ಈ ಗ್ರಂಥಾಲಯವನ್ನು ನೋಡಿಕೊಳ್ಳುವ ವ್ಯವಸ್ಥೆಯಾಯಿತು ಗ್ರಂಥಪಾಲಕನಿಗೆ ಕಥಾ ಕಾವ್ಯ ನೋಡಿಕೊಂಡು ಬರಲು ವೇತನ ನೀಡುವುದು ಜಾರಿಗೆ ಬಂತು. ಇದನ್ನು ಸ್ಥಳೀಯ ಮಹಾಜನ (ಶಿವಪುರ)ರು ದೇವರ ಸನ್ಮತಿಯಲ್ಲಿ ನಿರ್ಧರಿಸುತ್ತಿದ್ದರು.

ಈ ಗ್ರಂಥಾಲಯವು ಪರಾಮರ್ಶಿತವಾಗಿದ್ದಂತೆ ತೋರಿಬರುತ್ತದೆ. ಇದಕ್ಕೆ ಕಾರಣ ಈ ಮಠದಲ್ಲಿರುವ ದಾಖಲೆಗಳು ಗ್ರಂಥಾಲಯದ ಪುಸ್ತಕಗಳನ್ನು ಪ್ರಮುಖ ವ್ಯಕ್ತಿಗಳು ಎರವು ಪಡೆಯುತ್ತಿದ್ದನ್ನು ಉಲ್ಲೇಖಿಸುತ್ತದೆ. ಈ ಪರ ಪಡೆಯುತ್ತಿದ್ದನ್ನು ಗಮನಿಸಿದ ಶೃಂಗೇರಿ ಮಠದ ಗ್ರಂಥಾಲಯ ರಾಜ್ಯದಲ್ಲೇ ಉನ್ನತ ಮಟ್ಟದ ಗ್ರಂಥಾಲಯವಾಗಿತ್ತು.

ಈ ಗ್ರಂಥಾಲಯದ ಮುಖ್ಯ ಸಂಗತಿ ಏನೆಂದರೆ ಇಲ್ಲಿ ಹಲವಾರು ಧಾರ್ಮಿಕ ಮತ್ತು ಲೌಕಿಕ ಗ್ರಂಥಗಳು ಇದ್ದವು. ಲೌಕಿಕ ಗ್ರಂಥಗಳಲ್ಲಿ ವೈದ್ಯಕೀಯ ಶಾಸ್ತ್ರಗ್ರಂಥಗಳು ಗಮನಾರ್ಹ. ಇವುಗಳಲ್ಲಿ ಮುಖ್ಯವಾದುದು ಕಾಶ್ಯಪ ಸಂಹಿತಿ ಮತ್ತು ನಾಡಿಶಾಸ್ತ್ರದ ಗ್ರಂಥಗಳು. ಕಾಶ್ಯಪ ಸಂಹಿತಿಯನ್ನು ಕಂಡು ಹಿಡಿದು ವ್ಯಾಖ್ಯಾನ ಬರೆದ ವಿದ್ವಾಂಸರಿಗೆ ಸಿಕ್ಕಿದ್ದು ಅಪೂರ್ಣ ಮತ್ತು ಅಜೀರ್ಣವಾದ್ದು. ಆದರೆ ಶೃಂಗೇರಿ ಮಠದಲ್ಲಿರುವ ಕಾಶ್ಯಪ ಸಂಹಿತಿ ನೋಡಿದಂತಿಲ್ಲ. ಇದನ್ನು ನೋಡಿ ಅಧ್ಯಯನಿಸಿದರೆ ನವಜಾತ ಶಿಶುಗಳು ರೋಗಗಳ ವಿಚಾರ ಹೆಚ್ಚಿನ ಮಾಹಿತಿ ಸಿಗುವ ಸಾಧ್ಯತೆ ಇದೆ. ಇದು ಅಗತ್ಯ ನಡೆಯಬೇಕು. ಶೃಂಗೇರಿ ಪರಿಸರದಲ್ಲಿ ನಾಡಿ ಪರೀಕ್ಷಿಸಿ ರೋಗಗಳ ಪತ್ತೆ ಮಾಡಿ ಅವುಗಳ ಪರಿಹಾರಕ್ಕೆ ಔಷಧಿಗಳನ್ನು ನೀಡುವ ವೈದ್ಯಕೀಯ ಕ್ರಮ ರೂಢಿಯಲ್ಲಿದ್ದಂತೆ ಇಲ್ಲಿನ ದಾಖಲೆಗಳ ಅಧ್ಯಯನವು ಸೂಚಿಸುತ್ತದೆ. ಇದಲ್ಲದೆ ಬೃಹಸ್ಪತಿ ನಾಡಿಗ್ರಂಥದಲ್ಲಿ ಏನು ಇದೆ ಎಂದು ಸಂಶೋಧಿಸುವ ಅಗತ್ಯವಿದೆ.

ಇವೆಲ್ಲಾ ಮಾಹಿತಿಗಳು ಸಿಕ್ಕಿದರೂ ಆಧಾರಗಳನ್ನು ವೀಕ್ಷಿಸಿದಾಗ ಎರಡು ಪ್ರಶ್ನೆಗಳು ಉದ್ಭವಿಸುತ್ತವೆ. ಒಂದನೆಯದಾಗಿ ಶಾಸನ ಸಿಕ್ಕಿದ ಸ್ಥಳದಲ್ಲಿ ಶೃಂಗೇರಿ ಮಠ ಗ್ರಂಥಾಲಯವು

* ಆರಾಧನಾ, ಪಾವಂಜೆ, ಹಳೆಯಂಗಡಿ, ದಕ್ಷಿಣ ಕನ್ನಡ-೫೭೪೧೪೬.

ಶಾಲೆಯ ಗ್ರಂಥ ಭಂಡಾರವೋ ? ಎರಡನೆಯದು ಗ್ರಂಥ ಪಾಲಕನಿಗೆ ಸಂಬಳ ನೀಡುವಲ್ಲಿ ಶಿವಪುರದ ಮಹಾಜನರ ಮತ್ತು ಅಲ್ಲಿನ ಗ್ರಾಮದೇವತೆಯ ಅನುಮತಿ ಪಡೆಯುವುದನ್ನು ವೀಕ್ಷಿಸುವಾಗ ಇವರಿಗೆ ಗ್ರಂಥಾಲಯದ ಮೇಲೆ ಹಿಡಿತವೋ?

[ಈ ಲೇಖನ ಬರೆಯುವಲ್ಲಿ ಡಾ. [illegible] ಮತ್ತು ಡಾ. ಎ.ಕೆ. ಶಾಸ್ತ್ರಿಯವರು ಸಹಕರಿಸಿದ್ದಾರೆ ಇವರಿಗೆ ಕೃತಜ್ಞತೆಗಳು.]

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಜೈನ್ ಕೊಠಡಿ, *Jain Knowldge Warehouse*, John corte *'Traditional Libraries in India'* American aritcal society, Jan-March 1995. ಪುಟ ೭೯.

೨. **ಜ್ಯೋತ್ಸ್ನಾ ಕಾಮತ್, ಕರ್ನಾಟಕ ಶಿಕ್ಷಣ ಪರಂಪರೆ,** (ಮುಂಬೈ ೧೯೮೮), ಪುಟ ೩೩.

೩. ವಿದ್ಯಾರಣ್ಯರು ಶೃಂಗೇರಿ ಮಠವನ್ನು ಯಾವ ರೀತಿಯಲ್ಲಿ ಪ್ರಗತಿ ಪಥಕ್ಕೆ ತಂದರು ಎಂಬ ವಿಚಾರ ಡಾ. ಎ.ಕೆ. ಶಾಸ್ತ್ರಿಯವರು ವಿವರಿಸಿದ್ದಾರೆ. ನೋಡಿ ಇವರ ಗ್ರಂಥ ಶೃಂಗೇರಿ ಮಠದ ಇತಿಹಾಸ (ಶೃಂಗೇರಿ ೧೯೮೩), ಪುಟ ೩೧-೩೨.

೪. ದಕ್ಷಿಣ ಭಾರತದ ಶಾಸನ ಸಂಪುಟ XXVII, ನಂ. ೮೨.

೫. ಎ.ಕೆ. ಶಾಸ್ತ್ರಿ, *The Records of Sringeri Drama Samsthana*, (Sringeri Matha 2009), ನಂ. ೧೫೯, ಪುಟ ೨೫೬-೨೫೭.

೬. ಅದೇ., **ಶೃಂಗೇರಿ ಧರ್ಮ ಸಂಸ್ಥಾನ,** ಪುಟ ೨೧೧.

೭. *Mysore Archaelogical Department*, 1916, ಪುಟ ೭೭.

೮. ಇದು ಮಕ್ಕಳಿಗೆ ಸಂಬಂಧಿಸಿದ ಕಾಯಿಲೆಗಳು ಮತ್ತು ಅವುಗಳ ನಿವಾರಣೆ ಕುರಿತಾಗಿ ತಿಳಿಸುವ ಆಯುರ್ವೈದ್ಯ ಗ್ರಂಥ ನೋಡಿ ಎನ್.ವಿ.ಕೆ. ವಾರಿಯರ್, History of wide (Kolkata 2005).

೯. ಕಾಶ್ಯಪ ಸಂಹಿತೆ ಗ್ರಂಥ ಪ್ರಥಮವಾಗಿ ಸಿಕ್ಕಿದ್ದು ೧೯೨೧ರಲ್ಲಿ. ಇದನ್ನು ನೇಪಾಳ ರಾಜ್ಯದ ಗ್ರಂಥಾಲಯದಲ್ಲಿ ಮಹಾ ಮಹೋಪಾಧ್ಯಾಯ ಹರಿಪ್ರಸಾದ ಶಾಸ್ತ್ರಿ ಇದನ್ನು ಬೆಳಕಿಗೆ ತಂದರು. ಆದರೆ ಈ ಗ್ರಂಥ ಅಪೂರ್ಣ ಎಂದು ಹೊರ್ನಾಲಿ ಅಭಿಪ್ರಾಯಪಟ್ಟಿದ್ದಾರೆ. ನೋಡಿ *The Royal Asiatic Society*, Londan, 1909, ಪುಟ ೧೭೮-೯.

ಶೃಂಗೇರಿ ಶಾರದಾಪೀಠ ಮತ್ತು ಮೈಸೂರು ಸಂಸ್ಥಾನ ಒಂದು ಅಧ್ಯಯನ

ಕೆ.ಜಿ. ಪ್ರಶಾಂತ್* ಡಾ. ಮಹಾದೇವಿ**

೧೨೦೦ ವರ್ಷಗಳಷ್ಟು ಪುರಾತನವಾದ ದಕ್ಷಿಣ ಭಾರತದ ಪ್ರಮುಖ ಯಾತ್ರಾಸ್ಥಳವಾದ ಶೃಂಗೇರಿ ಶಾರದಾ ಪೀಠವು ತನ್ನದೇ ಆದ ಐತಿಹಾಸಿಕ ಮಹತ್ವವನ್ನು ಪಡೆದಿದೆ.

ಕ್ರಿ.ಶ. ೧೩೩೬ರಲ್ಲಿ ವಿಜಯನಗರವೆಂಬ ಮಹಾ ಸಾಮ್ರಾಜ್ಯದ ಉದಯವು ಶೃಂಗೇರಿ ಶಾರದಾ ಪೀಠ ಮತ್ತು ಕರ್ನಾಟಕದ ಇತಿಹಾಸದಲ್ಲಿ ಮಹತ್ವಪೂರ್ಣವಾದ ಸುವರ್ಣಾಧ್ಯಾಯವನ್ನು ತೆರೆಯಿತು. ಶೃಂಗೇರಿ ಜಗದ್ಗುರು ಪರಂಪರೆಯ ೧೦ನೇ ಗುರುಗಳಾಗಿದ್ದ ಶ್ರೀ ವಿದ್ಯಾತೀರ್ಥರು ಅವರ ಶಿಷ್ಯರಾದ ಶ್ರೀ ಭಾರತೀ ತೀರ್ಥರು ಮತ್ತು ವಿದ್ಯಾರಣ್ಯರು ವಿಜಯನಗರದ ಸಂಸ್ಥಾಪಕ ದೊರೆಗಳಾದ ಹರಿಹರ ಬುಕ್ಕರಾಯರಿಗೆ ನೀಡಿದ ಮಾರ್ಗದರ್ಶನ ಮತ್ತು ಅಂತಃಸ್ಫೂರ್ತಿಯ ಶೃಂಗೇರಿ ಶಾರದಾಪೀಠಕ್ಕೆ ರಾಜಾಶ್ರಯ ದೊರಕುವಂತೆ ಮಾಡಿತು.

ವಿಜಯನಗರದ ಅರಸರ ನಂತರ ಕೆಳದಿ ಸಂಸ್ಥಾನದ ಅರಸರಲ್ಲಿ ಸದಾಶಿವನಾಯಕನಿಂದ ಹಿಡಿದು ಮುಮ್ಮಡಿ ಸೋಮಶೇಖರನ ಆಳ್ವಿಕೆಯವರೆಗೂ ಶೃಂಗೇರಿ ಶಾರದಾ ಪೀಠಕ್ಕೆ ರಾಜಾಶ್ರಯವನ್ನು ಕೊಟ್ಟು, ಮಠಕ್ಕೆ ಹೇರಳವಾಗಿ ಭೂಮಿ, ವಸ್ತು, ಒಡವೆಗಳನ್ನು ದಾನ ಮಾಡಿ ಜಗದ್ಗುರು ಗಳೊಂದಿಗೆ ನಿಕಟ ಸಂಪರ್ಕವನ್ನಿರಿಸಿಕೊಂಡಿದ್ದರೆಂದು 'ಗುರುವಂಶಕಾವ್ಯ', 'ಕೆಳದಿ ನೃಪವಿಜಯಂ', 'ಶಿವತತ್ತ್ವ ರತ್ನಾಕರ' ಮುಂತಾದ ಗ್ರಂಥಗಳಿಂದ ತಿಳಿಯಬಹುದಾಗಿದೆ.

೧೮ ಮತ್ತು ೧೯ನೇ ಶತಮಾನದಲ್ಲಿ ಪೇಶ್ವೆ, ಘೋರ್ಪಡೆ, ಶಿಂಧೆ, ಭೋಸಲೆ ಮುಂತಾದ ಮರಾಠರು ಶೃಂಗೇರಿ ಜಗದ್ಗುರುಗಳೊಂದಿಗೆ ಇಟ್ಟುಕೊಂಡಿದ್ದ ನಿಕಟ ಸಂಬಂಧವನ್ನು 'ಜಗದ್ಗುರು ಶೃಂಗೇರಿ ಶ್ರೀಮಠೀಯ ಪ್ರಾಕ್ತನ ಲೇಖನಮಾಲಾ ಸಂಗ್ರಹ'ವು ದಾಖಲಿಸಿದೆ.

ಹೀಗೆ ವಿಜಯನಗರದ ದೊರೆಗಳು, ಕೆಳದಿ ಸಂಸ್ಥಾನದ ನಾಯಕರು, ಮರಾಠರು ಶೃಂಗೇರಿ ಶಾರದಾಪೀಠದ ಅಭ್ಯುದಯಕ್ಕೆ ಕಾರಣರಾದರೋ ಅದೇ ರೀತಿ ಮುಸ್ಲಿಂ ದೊರೆಗಳಾದ ಹೈದರಾಬಾದಿನ ನಿಜಾಮರು, ವಿಜಾಪುರದ ಆದಿಲ್‌ಶಾಹಿಗಳು, ಮೊಘಲ್ ಅಧಿಕಾರಿಗಳು ಹೈದರ್‌ಆಲಿ, ಟಿಪ್ಪುಸುಲ್ತಾನ್ ಮುಂತಾದವರು ಶೃಂಗೇರಿ ಮಠದ ಶ್ರೇಷ್ಠತೆಯನ್ನು ಎತ್ತಿಹಿಡಿದು ಸಮಕಾಲೀನ ಜಗದ್ಗುರುಗಳನ್ನು ಗೌರವಿಸಿದ ವಿಷಯಕ್ಕೆ ಶ್ರೀಮಠದಲ್ಲಿನ ಪರ್ಷಿಯನ್, ಸಂಸ್ಕೃತ ಮತ್ತು ಕನ್ನಡ ಭಾಷೆಯ ಅನೇಕ ದಾಖಲೆಗಳು, ಪತ್ರಗಳು, ಕೆ.ಆರ್. ವೆಂಕಟರಾಮನ್‌ರವರ 'ಶೃಂಗೇರಿ ಗುರುರಾಜ್ ಅಂಡ್ ಮುಸ್ಲಿಂ ರೂಲರ್ಸ್' ಮುಂತಾದ ಆಕರಗಳು ಬೆಳಕು ಚೆಲ್ಲುತ್ತದೆ.

ಶೃಂಗೇರಿ ಶಾರದಾಪೀಠ ಮತ್ತು ಮೈಸೂರು ಸಂಸ್ಥಾನ: ವಿಜಯನಗರದ ಪತನಾನಂತರ ವಿಜಯನಗರದ ಪರಂಪರೆಯನ್ನು ಉತ್ತರಾಧಿಕಾರದ ರೂಪದಲ್ಲಿ ಮುನ್ನಡೆಸಿಕೊಂಡು ಬಂದ ಮೈಸೂರು ಒಡೆಯರು ಶೃಂಗೇರಿ ಮಠದೊಂದಿಗೆ ಬಹುಶಃ ಇನ್ನಾವ ರಾಜಮನೆತನಗಳೂ ಇರಿಸಿಕೊಂಡಿರದಷ್ಟು ಅನ್ಯೋನ್ಯವಾಗಿ ಇಟ್ಟುಕೊಂಡಿದ ಬಾಂಧವ್ಯಕ್ಕೆ ರಾಜ ಮಹಾರಾಜರ ಪತ್ರಗಳು, ಪಲ್ಲಕ್ಕಿ, ಸಿಂಹಾಸನ, ಆಭರಣಗಳು, ಪೂಜಾ ಸಾಮಗ್ರಿಗಳು, ಶೃಂಗೇರಿ ಶಾರದಾ ಪೀಠದಲ್ಲಿ ಮತ್ತು ಮೈಸೂರು ಅರಮನೆಯಲ್ಲಿ ಇಂದಿಗೂ ಆಚರಿಸಲ್ಪಡುತ್ತಿರುವ ಹಲವಾರು ಸಂಪ್ರದಾಯಗಳು ಪ್ರತ್ಯಕ್ಷ ಪ್ರಮಾಣಗಳಾಗಿದೆ.

ಕರ್ನಾಟಕ ರಾಜ್ಯ ಪತ್ರಾಗಾರ, ಮೈಸೂರು ಅರಮನೆ ಪತ್ರಾಗಾರ, ಮದ್ರಾಸ್ ಓರಿಯಂಟಲ್ ಲೈಬ್ರರಿ, ಶೃಂಗೇರಿ ಮಠದ ಪತ್ರಾಗಾರಗಳ ದಾಖಲೆಗಳು, ಕಡತಗಳು, 'ಜಗದ್ಗುರು ಶೃಂಗೇರಿ ಶ್ರೀ ಮಠೀಯ ಪ್ರಾಕ್ತನ ಲೇಖನ ಮಾಲಾ ಸಂಗ್ರಹ', 'ಆನ್ಯುವಲ್ ರಿಪೋರ್ಟ್ ಆಫ್ ದಿ ಮೈಸೂರು ಆರ್ಕಿಯಾಲಾಜಿಕಲ್ ಡಿಪಾರ್ಟ್‌ಮೆಂಟ್', ಕೆ.ಆರ್. ವೆಂಕಟರಾಮನ್ ರವರ 'The throne of transcedental wisdom', ಪ್ರೊ. ಎ.ಕೆ. ಶಾಸ್ತ್ರಿಗಳವರ 'ಶೃಂಗೇರಿ ಧರ್ಮ ಸಂಸ್ಥಾನ'

* # ೩೭೮, ೨೭ನೇ ಮುಖ್ಯರಸ್ತೆ, ೨ನೇ ಹಂತ, ಜೆ.ಪಿ. ನಗರ, ಮೈಸೂರು-೫೭೦೦೦೮.
** ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಕೆಎಸ್‌ಓಯು, ಮೈಸೂರು-೫೭೦೦೦೬.

ಸಂಶೋಧನಾ ಪ್ರಬಂಧ ಮುಂತಾದ ಆಕರಗಳು ಶೃಂಗೇರಿ-ಮೈಸೂರು ಸಂಬಂಧಗಳ ಮೇಲೆ ಬೆಳಕನ್ನು ಚೆಲ್ಲುತ್ತದೆ.

ಎಪಿಗ್ರಾಫಿಯಾ ಕರ್ನಾಟಿಕಾ (ಮೈಸೂರು ವಿಶ್ವವಿದ್ಯಾಲಯದ ೧೯೮೮ರ ಪ್ರಕಟಣೆ) ೧೧ನೇ ಸಂಪುಟದಲ್ಲಿ ಮೈಸೂರು ಮಹಾರಾಜರುಗಳು ಶೃಂಗೇರಿ ಮಠಕ್ಕೆ ದಾನ ಮಾಡಿದ ಪೂಜಾ ಸಾಮಗ್ರಿಗಳು, ಸಿಂಹಾಸನ, ಪಲ್ಲಕ್ಕಿ, ದೇವರ ವಿಗ್ರಹ ಮುಂತಾದ ಕೊಡುಗೆಗಳನ್ನು ಮತ್ತು ಅಲ್ಲಿನ ಶಾಸನಗಳನ್ನು ದಾಖಲಿಸಲಾಗಿದ್ದು ಮೈಸೂರು ಮಹಾರಾಜರುಗಳು ಶೃಂಗೇರಿ ಮಠದ, ಅಲ್ಲಿನ ಗುರುಗಳ ವಿಚಾರದಲ್ಲಿ ಎಷ್ಟೊಂದು ಆಸಕ್ತಿ ವಹಿಸಿದ್ದರೆಂದು ತಿಳಿಯಲು ಸಹಕಾರಿಯಾಗಿದೆ.

ಮೈಸೂರಿನ ರಾಜ ವಂಶಸ್ಥರು ವಿಜಯನಗರದ ಶೈಲಿಯಲ್ಲಿ ರಾಜ ದರ್ಬಾರನ್ನು ಪರಂಪರಾನುಗತವಾಗಿ ಇಂದಿನವರೆಗೂ ಆಚರಿಸಿಕೊಂಡು ಬಂದಿರುತ್ತಾರೆ. ಮೈಸೂರಿನ ದರ್ಬಾರಿನ ಶೈಲಿಯಲ್ಲೇ ಶೃಂಗೇರಿಯ ಶರನ್ನವರಾತ್ರಿ ಉತ್ಸವದಲ್ಲಿ ಶೃಂಗೇರಿ ಜಗದ್ಗುರುಗಳವರು ಇಂದಿಗೂ ದರ್ಬಾರನ್ನು ಆಚರಿಸುತ್ತಾರೆ. ಹೀಗೆ ಶೃಂಗೇರಿ ಮತ್ತು ಮೈಸೂರು ಸಂಸ್ಥಾನದ ದರ್ಬಾರ್ ಆಚರಣೆಯು ಕರ್ನಾಟಕದ ಸಾಂಸ್ಕೃತಿಕ ವೈಭವವನ್ನು ಸಾರುತ್ತ ಶೃಂಗೇರಿ-ಮೈಸೂರಿನ ಚಾರಿತ್ರಿಕ ಸಂಬಂಧವನ್ನು ಬೆಸೆಯುತ್ತಿವೆ.

ಇಮ್ಮಡಿ ಕೃಷ್ಣರಾಜ ಒಡೆಯರು ಮತ್ತು ಶಾರದಾಪೀಠ: ಮೈಸೂರು ಮಹಾರಾಜ ಇಮ್ಮಡಿ ಕೃಷ್ಣರಾಜ ಒಡೆಯರು (೧೭೩೪-೬೬) ಶೃಂಗೇರಿ ಜಗದ್ಗುರು ಶ್ರೀ ಸಚ್ಚಿದಾನಂದ ಭಾರತೀ (೧೭೦೫-೧೭೪೧) ಸ್ವಾಮಿಗಳು ಸಮಕಾಲೀನರಾಗಿದ್ದು ಇವರ ಕಾಲವು ಶೃಂಗೇರಿ ಮಠ ಮತ್ತು ಮೈಸೂರು ಸಂಸ್ಥಾನದ ನಿಕಟ ಸಂಬಂಧದ ಪ್ರಾರಂಭವಾಗಿ ಸುವರ್ಣಾಧ್ಯಾಯವನ್ನು ತೆರೆಯಿತು.

ಕ್ರಿ.ಶ. ೧೭೬೦ರಲ್ಲಿ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮಿಗಳನ್ನು ಪಾದಾರ್ಪಣೆಯಿಂದ ರಾಜ್ಯಕ್ಕೆ ಅಗತ್ಯವಾದ ಮಳೆ ಬಂದು ಸರ್ವ ಸಮೃದ್ಧಿ ಹೊಂದುವುದೆಂದು ಮಹಾರಾಜ (೧೭೬೦ರ ತಾಮ್ರಶಾಸನ ಶೃಂಗೇರಿ)ರು ಗುರುಗಳನ್ನು ಮೈಸೂರಿಗೆ ಆಮಂತ್ರಿಸಿ ವೈಭವದ ಸ್ವಾಗತ ನೀಡಿ ಗುರು ಕಾಣಿಕೆ ಸಮರ್ಪಿಸಿದ್ದನ್ನು ನಾವು ಸ್ಮರಿಸಬಹುದಾಗಿದೆ. ಮಹಾರಾಜರು ಆ ಸಂದರ್ಭದಲ್ಲಿ ೧೨೦೦ ವರಹಗಳ ಬೆಳವಾಡಿ ಮತ್ತು ಅದಕ್ಕೆ ಸಂಬಂಧಿಸಿದ ಕೊಪ್ಪಲುಗಳನ್ನು ಗುರುಗಳಿಗೆ ದಾನವಾಗಿ ಕೊಟ್ಟರು. (ಎ.ಆರ್.ಎಂ.ಡಿ.-೧೯೩೩. 'ಶೃಂಗೇರಿ ಧರ್ಮಸಂಸ್ಥಾನ')

ಇಮ್ಮಡಿ ಕೃಷ್ಣರಾಜ ಒಡೆಯರು ಶೃಂಗೇರಿ ಮಠಕ್ಕೆ ಆನೆಯೊಂದನ್ನು ದಾನ ಮಾಡಿದರು. ಗುರುಗಳಿಗೆ ಬೆಳ್ಳಿ ಕುಸುರಿಗಳಿಂದ ಅಲಂಕೃತವಾದ ವಸ್ತ್ರವನ್ನು ದಾನ ಮಾಡಿದುದಲ್ಲದೇ ಜಗದ್ಗುರುಗಳನ್ನು 'ಅಲಂಕೃತ ಶೃಂಗಪುರದ ಸಿಂಹಾಸನದಲ್ಲಿ ಆಸೀನರಾದ ಯೋಗ ಸಾಮ್ರಾಜ್ಯದ ಅಧಿಪತಿ' (Ruler of yoga Empire) ಎಂದು ವರ್ಣಿಸಿದ್ದಾರೆ.

ಶೃಂಗೇರಿ ಮಠದಲ್ಲಿನ ಕ್ರಿ.ಶ. ೧೭೩೭ರ ಕಾಲದ ತಾಮ್ರಶಾಸನವು ಮೈಸೂರಿನ ಇಮ್ಮಡಿ ಕೃಷ್ಣರಾಜ ಒಡೆಯರು ಮಠದಲ್ಲಿ ಜರುಗುವ ವ್ಯಾಸಪೂಜೆಗಾಗಿ ಮಾಡಿದ ಭೂದಾನವನ್ನು ತಿಳಿಸುತ್ತದೆ. ಶ್ರೀ ಸಚ್ಚಿದಾನಂದ ಭಾರತೀ ಸ್ವಾಮಿಗಳನ್ನು ಕುರಿತಾಗಿ ಬರೆಸಿದ ಈ ತಾಮ್ರಶಾಸನದಲ್ಲಿ 'ಶ್ರೀ ಮಹಾರಾಜಾಧಿರಾಜ ರಾಜಪರಮೇಶ್ವರ ಪ್ರೌಢಪ್ರತಾಪ ಅಪ್ರತಿಮ ವೀರನರಪತಿ ಮಹಿಶೂರ ಇಮ್ಮಡಿ ಶ್ರೀ ಕೃಷ್ಣರಾಜ ಒಡೆಯರ್‌ರವರ್ರು ಉಭಯ ಕಾವೇರಿ ಮಧ್ಯ ಶ್ರೀರಂಗ ಪಟ್ಟದಲ್ಲೂ ರತ್ನಸಿಂಹಾಸನಾರೂಢರಾಗಿ ಪೃಥ್ವಿ ಸಾಮ್ರಾಜ್ಯಂಗೈ ಉರತಿರಲಾಗಿ' ಎಂದು ಉಲ್ಲೇಖಿಸಲ್ಪಟ್ಟಿದೆ

ಶೃಂಗೇರಿ ಶಾರದಾಪೀಠ ಮತ್ತು ದಿವಾನ್ ಪೂರ್ಣಯ್ಯ: (ಕ್ರಿ.ಶ. ೧೭೯೯-೧೮೧೧ ಈ ಅವಧಿಯಲ್ಲಿ) ಮೈಸೂರು ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರು ಅಪ್ರಾಪ್ತರಾದುದರಿಂದ ಪೂರ್ಣಯ್ಯನವರು ರಾಜಪ್ರತಿನಿಧಿಯಾಗಿ ರಾಜ್ಯದ ಚುಕ್ಕಾಣಿಯನ್ನು ಹಿಡಿದರು. ಪೂರ್ಣಯ್ಯನವರು ದ್ವೈತ ಮತಾವಲಂಬಿಯಾದರೂ ಶೃಂಗೇರಿಯ ೩೦ನೇ ಜಗದ್ಗುರುಗಳಾದ ತೃತೀಯ ಸಚ್ಚಿದಾನಂದ ಭಾರತೀ ಸ್ವಾಮಿಗಳು ತಪೋಮಹಿಮೆ ಮತ್ತು ವಿದ್ವತ್ತನ್ನು ಕಣ್ಣಾರೆ ಕಂಡು ಶೃಂಗೇರಿಯ ಅದ್ವೈತ ಮಠಕ್ಕೆ ಗೌರವದಿಂದ ನಡೆದುಕೊಂಡರು.

'ಮದುವೆ, ಮುಂಜಿ, ಶುಭ-ಶೋಭನಗಳಲ್ಲಿ ಅಗ್ರ ತಾಂಬೂಲವನ್ನು ಮುಂಚಿತವಾಗಿ ಶೃಂಗೇರಿ ಮಠಕ್ಕೂ ತರುವಾಯ ಶಿವಗಂಗೆ ಮಠಕ್ಕೂ ಕೊಡುವಂತೆ' ಪೂರ್ಣಯ್ಯನವರು ಆಜ್ಞಾಪಿಸಿದ್ದನ್ನು ಅವರು ಬೆಂಗಳೂರು ಸುಬೇದಾರ ಮದ್ದುರಾಯರಿಗೆ ಬರೆದ ಪತ್ರದಲ್ಲಿ (ಕ್ರಿ.ಶ. ೧೮೦೭-೦೮) ಉಲ್ಲೇಖಿತವಾಗಿದೆ.

ಶೃಂಗೇರಿ ಮಠದಲ್ಲಿ ಸಂರಕ್ಷಿಸಲ್ಪಟ್ಟಿರುವ ದಿವಾನ್ ಪೂರ್ಣಯ್ಯನವರು ಗುರುಗಳಿಗೆ ಬರೆದ ಸುಮಾರು ೩೮ ಐತಿಹಾಸಿಕ ಪತ್ರಗಳು ಇವರೀರ್ವರ ಸಂಬಂಧಗಳ ಅಧ್ಯಯನಕ್ಕೆ ಉಪಕಾರಿಯಾಗಿದೆ (The Throne of Transcendental visdom -K.R. Venkataraman).

ಮುಮ್ಮಡಿ ಕೃಷ್ಣರಾಜ ಒಡೆಯರು ಮತ್ತು ಶಾರದಾ ಪೀಠ: ಪೂರ್ಣಯ್ಯನವರ ರಾಜಪ್ರತಿನಿಧಿತ್ವ ಕೊನೆಗೊಂಡ ಮೇಲೆ ಕ್ರಿ.ಶ. ೧೮೧೧ರಲ್ಲಿ ಮುಮ್ಮಡಿಕೃಷ್ಣ ರಾಜ ಒಡೆಯರು ರಾಜ್ಯದ ಅಧಿಕಾರ ವಹಿಸಿಕೊಂಡರು. ಅಧಿಕಾರದ ಚುಕ್ಕಾಣಿ ಹಿಡಿದ

ಕೂಡಲೇ ತೃತೀಯ ಸಚ್ಚಿದಾನಂದ ಭಾರತೀ ಸ್ವಾಮಿಗಳನ್ನು ಅರಮನೆಗೆ ಆಮಂತ್ರಿಸಿ ಭವ್ಯಸ್ವಾಗತ ನೀಡಿದರು.

ಶೃಂಗೇರಿ ಜಗದ್ಗುರುಗಳಾದ ತೃತೀಯ ಸಚ್ಚಿದಾನಂದ ಭಾರತೀ, ದ್ವಿತೀಯ ಅಭಿನವ ಸಚ್ಚಿದಾನಂದ ಭಾರತೀ ಮತ್ತು ಅಷ್ಟಮ ನೃಸಿಂಹಭಾರತೀ ಸ್ವಾಮಿಗಳು ಮುಮ್ಮಡಿ ಕೃಷ್ಣರಾಜ ಒಡೆಯರ ಸಮಕಾಲೀನರಾಗಿದ್ದರು.

ದ್ವಿತೀಯ ಅಭಿನವ ಸಚ್ಚಿದಾನಂದ ಭಾರತೀ ಸ್ವಾಮಿಗಳ ಪಟ್ಟಾಭಿಷೇಕಕ್ಕೆ ಗುರುಗಳಿಗೆ ಒಂದು ಸಾವಿರ ವರಹಗಳು, ಬೆಳ್ಳಿಯ ಪೀಠ ಮತ್ತು ಪಾದುಕೆಗಳನ್ನು ಸಮರ್ಪಿಸುವಂತೆ ಆಜ್ಞಾಪಿಸಿದ್ದು ಮಹಾರಾಜರು ನಗರ ಫೌಜುದಾರ ಸರ್ವೋತ್ತಮ ರಾಯನಿಗೆ ಬರೆದ ನಿರೂಪದಿಂದ ತಿಳಿದು ಬರುತ್ತದೆ.

ನೃಸಿಂಹಭಾರತೀ ಸ್ವಾಮಿಗಳು ೧೮೬೮ರಲ್ಲಿ ಮೈಸೂರಿಗೆ ಆಗಮಿಸಿದ್ದಾಗ ಶಾರದಾಂಬಾ ಮತ್ತು ಚಂದ್ರಮೌಳೀಶ್ವರ ಪೂಜೆ ಮತ್ತು ದೀಪೋತ್ಸವಗಳಿಗಾಗಿ ಮುಮ್ಮಡಿ ಕೃಷ್ಣರಾಜರು ಬೆಳವಾಡಿ, ಲಿಂದವಳ್ಳಿ ಮತ್ತು ಶಿರಕರಡಿ ಗ್ರಾಮಗಳನ್ನು ಮಠಕ್ಕೆ ದಾನ ಮಾಡಿದ ವಿಷಯವು ಮಠದ ಕಡತದಲ್ಲಿ ದಾಖಲಾಗಿರುವುದನ್ನು MAR-1916 ನೇ ಸಂಪುಟದಲ್ಲಿ ಕಾಣಬಹುದು.

ಮುಮ್ಮಡಿ ಕೃಷ್ಣರಾಜ ಒಡೆಯರು ಬೇರೆ ಬೇರೆ ಮಠಗಳು ಶೃಂಗೇರಿ ಪೀಠಕ್ಕೆ ಅಧೀನವಾಗಿರುವಂತೆ ಆಜ್ಞೆ ಮಾಡಿ ಪ್ರಾಚೀನ ವಾದ ಶೃಂಗೇರಿ ಮಠದ ಸರ್ವಶ್ರೇಷ್ಠತೆಯನ್ನು ಮಾನ್ಯ ಮಾಡಿದರು. ಶ್ರೀಮ್ಮಹಾರಾಜ ಮುಮ್ಮಡಿ ಕೃಷ್ಣರಾಜರು ಶೃಂಗೇರಿಯ ಅಷ್ಟಮ ನರಸಿಂಹ ಭಾರತೀ ಗುರುಗಳಿಗೆ ಬಹದಾಕಾರದ, ಸುಂದರವಾದ ಬಂಗಾರದ ಪಲ್ಲಕ್ಕಿ (ಸುವರ್ಣಾಂದೋಳಿಕ) ಯನ್ನು ಗುರುಗಳು ಉತ್ಸವದಲ್ಲಿ ಉಪಯೋಗಿಸಲೆಂದು ಗುರುಕಾಣಿಕೆಯಾಗಿ ಸಮರ್ಪಿಸಿದುದು ೧೮೫೪-ಜುಲೈ ೨೬ರಂದು ಪಲ್ಲಕ್ಕಿಯ ಒಳಭಾಗದಲ್ಲಿ ಬರೆಸಲ್ಪಟ್ಟ ಶಾಸನದಿಂದ ವೇದ್ಯವಾಗುತ್ತದೆ. (ಎಪಿಗ್ರಾಫಿಯಾ ಕರ್ನಾಟಿಕಾ-೧೧ನೇ ಸಂಪುಟ) ಈ ಪಲ್ಲಕ್ಕಿಯನ್ನು ಇಂದಿಗೂ ಶಾರದಾ ಶರನ್ನವರಾತ್ರಿ ಉತ್ಸವ ಹಾಗೂ ವಿಶೇಷ ಸಂದರ್ಭಗಳಲ್ಲಿ ಶೃಂಗೇರಿ ಜಗದ್ಗುರುಗಳು ಅಲಂಕರಿಸುತ್ತಾರೆ.

ಸ್ವತಃ ಕವಿಗಳೂ, ಘನ ವಿದ್ವಾಂಸರು ಆಗಿದ್ದ ಮುಮ್ಮಡಿ ಕೃಷ್ಣರಾಜ ಪ್ರಭುಗಳು ತಾವು ರಚಿಸಿದ ಶ್ರೀ ನರಸಿಂಹ ಭಾರತೀ ಅಷ್ಟೋತ್ತರ ಶತನಾಮಾವಳಿಯಲ್ಲಿ 'ಪ್ರತಿಜ್ಞಾರ್ಥ ಸಾಧಕಃ' ಎಂಬ ಅನ್ವರ್ಥ ವಿಶೇಷಣವನ್ನು ಅಲಂಕಾರ ಪ್ರಾಯವಾಗಿ ಹೇಳಿರುವರು.

ಶೃಂಗೇರಿಯ ಇನ್ನೊಂದು ತಾಮ್ರಶಾಸನವು 'ವಿದ್ಯಾನಗರ ಮಹಾರಾಜಧಾನಿ', 'ಕರ್ನಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯ' ಎಂಬ ಶೃಂಗೇರಿ ಜಗದ್ಗುರುಗಳ ಬಿರುದಾವಳಿಗಳಿಂದ ಪ್ರಾರಂಭವಾಗಿದ್ದು ಅಭಿನವ ಸಚ್ಚಿದಾನಂದ ಭಾರತೀ ಗುರುಗಳಿಗೆ ಮುಮ್ಮಡಿ ಕೃಷ್ಣರಾಜ ಒಡೆಯರು ಬರೆಸಿದ ದಾನಶಾಸನವಾಗಿದೆ. ಇದರಲ್ಲಿ 'ಮಹಿಶೂರ ಕಂಠೀರವ ನರಸಿಂಹ ರಾಜ ಒಡೆಯ ರೈಯ್ಯನವರ ಪೌತ್ರರಾದ, ಕೃಷ್ಣರಾಜ ಒಡೆಯರೈಯ್ಯನವರ ಪುತ್ರರಾದ ಕೃಷ್ಣರಾಜ ಒಡೆಯರೈಯ್ಯನವರು ಬರಿಸಿಕೊಟ್ಟ ಭೂದಾನದ ತಾಮ್ರಶಾಸನ ಎಂಬುದಾಗಿ ಬರೆಯಲಾಗಿದ್ದು, ಮುಮ್ಮಡಿ ಕೃಷ್ಣರಾಜದ ಸಹಿಯಿಂದ ಕೊನೆಗೊಳ್ಳುತ್ತದೆ.

ಇದೇ ರೀತಿ ಶೃಂಗೇರಿ ಮಠಕ್ಕೆ ಮುಮ್ಮಡಿ ಕೃಷ್ಣರಾಜ ಒಡೆಯರ ಮಹಾರಾಣಿ ಚಂದ್ರವಿಲಾಸ ಸನ್ನಿಧಾನರವರು ಚಿನ್ನದ ಪಾನ್‌ದಾನ್‌ನ್ನು ಅರ್ಪಿಸಿರುತ್ತಾರೆ.

ಮಹಾರಾಣಿ ಸುಮುಖ ತೊಟ್ಟಿ ಸನ್ನಿಧಾನವು ಬೆಲೆಬಾಳುವ ಕೆಂಪುಗಳನ್ನೊಳಗೊಂಡ ಬಂಗಾರದ ಬಟ್ಟಲನ್ನೂ, ಮದನವಿಲಾಸ ಸನ್ನಿಧಾನವು ವಜ್ರದ ಹರಳುಗಳಿಂದ ಅಲಂಕೃತವಾದ ಬಂಗಾರದ ಬಟ್ಟಲನ್ನು ಕೃಷ್ಣವಿಲಾಸ ಸನ್ನಿಧಾನವು ಬೆಳ್ಳಿಯ ಬಟ್ಟಲನ್ನೂ ಜಗದ್ಗುರುಗಳವರಿಗೆ ಅರ್ಪಿಸಿರುತ್ತಾರೆಂದು ಎಫಿಗ್ರಾಪಿಯಾ ಕರ್ನಾಟಿಕಾ ೧೧ನೇ ಸಂಪುಟದಲ್ಲಿ ದಾಖಲಾಗಿದೆ.

ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಶೃಂಗೇರಿಗೆ ಗುರುಕಾಣಿಕೆಯಾಗಿ ಅರ್ಪಿಸಲ್ಪಟ್ಟ (Epigraphia Carnatica-11 volume. This record on a golden crown states that thsi jewelled crown was the gift of krishnaraja vodeya of mysore to the matha at sringeri) ಮೈಸೂರು ಸಂಸ್ಥಾನದ ರಾಜಲಾಂಛನ ಗಂಡಭೇರುಂಡ ಮತ್ತು ಶೃಂಗೇರಿ ಮಠದ ಲಾಂಛನವೂ ಜ್ಞಾನದ ಪ್ರತೀಕವೂ ಆದ ಹಂಸಪಕ್ಷಿಯ ಚಿನ್ಹೆಯನ್ನೊಳಗೊಂಡಿರುವ ಸುಂದರ ವಾದ ವಜ್ರಖಚಿತ ಸ್ವರ್ಣಕಿರೀಟವು ಶೃಂಗೇರಿಯ ದಸರಾ ದರ್ಬಾರ್ ಸಮಯದಲ್ಲಿ ಅಂದಿನಿಂದ ಇಂದಿನವರೆಗೂ ಇಲ್ಲಿನ ಗುರುಗಳಿಂದ ಧರಿಸಲ್ಪಡುತ್ತಿದ್ದು ಇತಿಹಾಸವನ್ನು ಸಾರುತ್ತಿದೆ.

ಮುಮ್ಮಡಿ ಕೃಷ್ಣರಾಜ ಒಡೆಯರ ಆಸ್ಥಾನ ವಿದ್ವಾಂಸ ಕುಣಿಗಲ್ ರಾಮಾಶಾಸ್ತ್ರಿಗಳ ಪುತ್ರ ಶಿವಸ್ವಾಮಿ ಶೃಂಗೇರಿಯ ೩೩ನೇ ಜಗದ್ಗುರುಗಳಾದ ಘಟನೆ ಶೃಂಗೇರಿ ಮಠ ಮತ್ತು ಮೈಸೂರು ಸಂಸ್ಥಾನದ ನಿಕಟಪೂರ್ವ ಬಾಂಧವ್ಯ, ಅನ್ಯೋನ್ಯತೆಗೆ ಸಾಕ್ಷೀಭೂತವಾಗಿ ಪರಿಣಮಿಸಿತು. (ಲ.ನ. ಶಾಸ್ತ್ರಿ-'ಅಭಿನವ ಶಂಕರಾಲಯ')

ಕುಣಿಗಲ್ ರಾಮಾಶಾಸ್ತ್ರಿಗಳು ತಮ್ಮ ವಿದ್ವತ್ಪೂರ್ಣ ಪಾಂಡಿತ್ಯದಿಂದ ಮುಮ್ಮಡಿ ಕೃಷ್ಣರಾಜ ಒಡೆಯರ

ರಾಜಸಭೆಯಲ್ಲಿ ಅಗ್ರಗಣ್ಯರೆನಿಸಿದ್ದರು. ರಾಮಾಶಾಸ್ತ್ರಿಗಳ ಪುತ್ರ ಶಿವಸ್ವಾಮಿಯ ಸನ್ಯಾಸ ಸ್ವೀಕಾರದ ಹಿಂದಿನ ದಿನ ಮಹಾರಾಜರು ಶೃಂಗೇರಿ ಪೀಠವನ್ನುಲಂಕರಿಸಲಿರುವ ಈ ಪುಟ್ಟ ಬಾಲಕನನ್ನು ತನ್ನ ತೊಡೆಯ ಮೇಲೆ ಕೂರಿಸಿಕೊಂಡು 'ಇಂದು ಈ ಬಾಲಕ ನಮ್ಮ ತೊಡೆಯ ಮೇಲೆ ಪವಡಿಸಿದ್ದಾನೆ. ನಾವೆಲ್ಲರೂ ಅವರಿಗೆ ನಮಸ್ಕರಿಸಬೇಕಾಗುತ್ತದೆ' ಎಂದು ಉದ್ಗರಿಸಿದ್ದರು. ೧೮೬೬ರಲ್ಲಿ ಮುಮ್ಮಡಿ ಕೃಷ್ಣರಾಜರ ಉಪಸ್ಥಿತಿಯಲ್ಲಿ ಮೈಸೂರು ಅರಮನೆಯ ಲಕ್ಷ್ಮೀರಮಣಸ್ವಾಮಿ ದೇವಾಲಯದಲ್ಲಿ ವೈಭವೋಪೇತವಾಗಿ ಗುರುಗಳು ಸನ್ಯಾಸಾಶ್ರಮ ಸ್ವೀಕಾರ ನೆರವೇರಿತು.

ಮುಮ್ಮಡಿಕೃಷ್ಣ ರಾಜ ಒಡೆಯರು ಅಷ್ಟಮ ನರಸಿಂಹ ಭಾರತೀ ಗುರುಗಳವರಿಗೆ ನೀಡಿದ ಭಿನ್ನವತ್ತಳೆಯಲ್ಲಿ ತಮ್ಮನ್ನು ಗುರುಗಳ 'ಚರಣ ಸೇವಕ' ಎಂದು ಹೇಳಿಕೊಂಡಿರುವುದು ಗುರು-ಶಿಷ್ಯ ಅನ್ಯೋನ್ಯತೆಗೆ ಹಿಡಿದ ಕನ್ನಡಿಯಾಗಿದೆ.

ಪ್ರಸ್ತುತ ಮೈಸೂರು ಅರಮನೆಯಲ್ಲಿರುವ ಮೈಸೂರು ಶೈಲಿಯ ಕಲಾಕೃತಿಯು ಉಗ್ರನರಸಿಂಹ ಭಾರತೀ ಸ್ವಾಮಿಗಳಿಂದ ಮುಮ್ಮಡಿ ಕೃಷ್ಣರಾಜ ಒಡೆಯರು ಶಿವಗೀತೆಯ ರಹಸ್ಯವನ್ನು ಬೋಧಿಸಲ್ಪಡುತ್ತಿರುವ ಘಟನೆಯನ್ನು ತಿಳಿಸುತ್ತದೆ.

Ref ಮೈಸೂರು ಮಹಾರಾಜ ಜಯಚಾಮರಾಜ ಒಡೆಯರು ನವದೆಹಲಿಯ ಶಂಕರ ಮಠದ ಶಂಕುಸ್ಥಾಪನಾ ಸಮಾರಂಭದಲ್ಲಿ (೧೯೬೭) ಮಾಡಿದ ಭಾಷಣ ಶೃಂಗೇರಿ ಮಠದ ಸವನೀರ್- "There has been from a long time close and cordial relationship between the royal dynasty of Mysore and swamins of Sringeri. Successive kings of Mysore were privileged to be the disciples of the Sringeri Seat of religion and learning. Nearly a century ago his highness Sri Mummadi Krishnaraja Wadiyar Bahaddur accorded a grand receiption to Sri Narasimha Bharati Swamiji of Sringeri matha and presented to him a valuable crown. He also dedicated a precious ornament. 'Naga bharana' to God Chandramoulishwara of Sringeri. He had the good fortune of learning 'Shivageetha' at the hands of the swami who, on account of his spiritual powers was known as 'Ugraswami'.

ಚಾಮರಾಜ ಒಡೆಯರು ಮತ್ತು ಶೃಂಗೇರಿ ಮಠ: ೧೮೮೫ನೇ ಪಾರ್ಥಿವ ಸಂವತ್ಸರದಲ್ಲಿ ಮೈಸೂರು ಮಹಾರಾಜ ಜಯಚಾಮರಾಜೇಂದ್ರ ಒಡೆಯರ್‌ರವರು ತಮ್ಮ ದಿವಾನರಾಗಿದ್ದ ಶೇಷಾದ್ರಿ ಅಯ್ಯರ್, ಬ್ರಿಟಿಷ್ ರೆಸಿಡೆಂಟ್ ಮಿಸ್ಟರ್ ಗರ್ಲಿಸ್ಟನ್ ಸಾಹೇಬರು ಮೊದಲಾದ ಪರಿವಾರದೊಡನೆ ಶೃಂಗೇರಿಗೆ ದಯಮಾಡಿಸಿದರು. ಆಗ ಶೃಂಗೇರಿ ಪೀಠದಲ್ಲಿ ರಾರಾಜಿಸುತ್ತಿದ್ದ (೩೩ನೇ ಗುರುಗಳು) ಸಚ್ಚಿದಾನಂದ ಶಿವಾಭಿನವ ನರಸಿಂಹ ಭಾರತೀ ಸ್ವಾಮಿಗಳು ಶೃಂಗೇರಿ ವಿದ್ಯಾರಣ್ಯಸ್ವಾಮಿಗಳಿಂದ ಸ್ಥಾಪಿಸಲ್ಪಟ್ಟ ಪವಿತ್ರವಾದ ಕರ್ನಾಟಕ ಸಿಂಹಾಸನಾಧಿಪತ್ಯವನ್ನು ಅನುಭವಿಸುತ್ತಲಿರುವ ಮೈಸೂರು ಮಹಾರಾಜರಿಗೆ 'ರತ್ನಕಿರೀಟಾಧಿಪತ್ಯ'ವನ್ನೂ ಅನುಭವಿಸುವಂತೆ ಅನುಗ್ರಹಿಸುವುದು ಉಚಿತವೆಂದು ಭಾವಿಸಿ ಶಾರದಾಂಬಾ ಸನ್ನಿಧಿಯಲ್ಲಿ ಬೊಕ್ಕಸದಲ್ಲಿದ್ದ ಅಪೂರ್ವ ಕಿರೀಟವನ್ನು ತರಿಸಿ ಅಮೃತಮಯವಾದ ತಮ್ಮ ಹಸ್ತಗಳಿಂದ ಮಹಾರಾಜರ ಶಿರಸ್ಸಿನಲ್ಲಿ ಧಾರಣ ಮಾಡಿಸಿ, ಪ್ರಸ್ತುತ ಮೈಸೂರು ಅರಮನೆಯಲ್ಲಿರುವ ಹಿಂದೆ ವಿದ್ಯಾರಣ್ಯರಿಂದ ವಿಜಯನಗರದಲ್ಲಿ ಸ್ಥಾಪಿಸಲ್ಪಟ್ಟಿದ್ದ ಪುರಾತನ ಸಿಂಹಾಸನವನ್ನು ಪ್ರಭುಗಳು ಆರೋಹಣ ಮಾಡತಕ್ಕ ಕಾಲದಲ್ಲಿ ಶ್ರೀರಾಮ ಚಂದ್ರನಂತೆ ಈ ಕಿರೀಟ ಧರಿಸಿ ಅಲಂಕೃತವಾಗಿ ಸಿಂಹಾಸನಾ ರೂಢರಾಗುವುದು ಅವಶ್ಯಕವೆಂದ, ದಯಮಾಡಿಸಿದ್ದ ಮಹಾರಾಜರಿಗೆ ತಿಳಿಸಿ ಅನುಗ್ರಹಿಸಿದರು. (ಲ.ನ. ಶಾಸ್ತ್ರಿಗಳವರ ಶೃಂಗೇರಿ ಇತಿಹಾಸ ಕುರಿತ ಗ್ರಂಥ.)

ಇಂದಿಗೂ ಮೈಸೂರು ಅರಮನೆಯಲ್ಲಿ ಈ ಕಿರೀಟವು 'ಶೃಂಗೇರಿ ಕಿರೀಟ' ಎಂಬ ಹೆಸರಿನಲ್ಲಿ ಪ್ರತಿ ವರ್ಷದ ದಸರಾ ದರ್ಬಾರ್ ಸಮಯದಲ್ಲಿ ಮೈಸೂರು ರಾಜವಂಶಸ್ಥರಿಂದ ಪೂಜಿಸಲ್ಪಡುತ್ತಿದೆ (ಶೃಂಗೇರಿ ಶಾರದಾಪೀಠ ಮತ್ತು ಮೈಸೂರು ಸಂಸ್ಥಾನ ಗ್ರಂಥ ಪ್ರಶಾಂತ್ ಶೃಂಗೇರಿ)

೧೮೯೧ರಲ್ಲಿ ನೃಸಿಂಹಭಾರತಿ ಜಗದ್ಗುರುಗಳು ಚಾಮರಾಜ ಒಡೆಯರ ಅಪೇಕ್ಷೆಯಂತೆ ಮೈಸೂರು ಅರಮನೆ ಸಮೀಪದ ಶ್ರೀ ಚಾಮರಾಜೇಂದ್ರ ಸರಸ್ವತಿ ಪ್ರಸಾದ ಪಾಠಶಾಲೆಯ ಅಭಿವೃದ್ಧಿಗಾಗಿ ಒಂದು ಶುಭಲಗ್ನದಲ್ಲಿ ವೇದೋಕ್ತ ವಿಧಾನದಿಂದ ವಿದ್ಯಾಗಣಪತಿಯನ್ನು ಪ್ರತಿಷ್ಠಾಪಿಸಿ, ಪೂಜಿಸಿ ಅನುಗ್ರಹಿಸಿದರೆಂದು ನರಸಿಂಹಭಾರತೀ ಜೀವನ ಚರಿತ್ರೆ (ಲೇಖಕರು: ನಂಜನಗೂಡು ಶ್ರೀಕಂಠಶಾಸ್ತ್ರಿ) ಯಿಂದ ತಿಳಿಯಬಹುದಾಗಿದೆ.

ನಾಲ್ವಡಿ ಕೃಷ್ಣರಾಜ ಒಡೆಯರು ಮತ್ತು ಶೃಂಗೇರಿಮಠ: ನಾಲ್ವಡಿ ಕೃಷ್ಣರಾಜ ಒಡೆಯರು ಶೃಂಗೇರಿಯ ೩೩ ಮತ್ತು ೩೪ನೇ ಜಗದ್ಗುರುಗಳ ಸಮಕಾಲೀನರಾಗಿದ್ದರು.

ಸಚ್ಚಿದಾನಂದ ಶಿವಾಭಿನವ ನರಸಿಂಹಭಾರತೀ ಸ್ವಾಮಿಗಳು ಕೇರಳ ರಾಜ್ಯದ ಕಾಲಟಿಯ ಪೂರ್ಣಾನದಿ ತೀರದಲ್ಲಿ ಆದಿಶಂಕರಾಚಾರ್ಯರ ಹುಟ್ಟಿದ ಪುಣ್ಯಸ್ಥಳವನ್ನು ಪತ್ತೆ ಮಾಡಿ ಅಲ್ಲಿ ಶಾರದಾ ಶಂಕರರ ಭವ್ಯ ಮಂದಿರಗಳನ್ನು ನಿರ್ಮಿಸುವ ಕೈಂಕರ್ಯದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ ಮತ್ತು ಮೈಸೂರು ಸಂಸ್ಥಾನದ ದಿವಾನರಾದ ವಿ.ಪಿ.

ಮಾಧವರಾವ್ ಮತ್ತು ಶೇಷಾದ್ರಿ ಅಯ್ಯರ್‌ರವರ ಪಾತ್ರ ಮಹತ್ತರವಾದುದು.

೧೯೧೦ರಂದು ಕೇರಳದ ಕಾಲಟಿಯಲ್ಲಿ ಆದಿಶಂಕರ ಮತ್ತು ಶಾರದಾಂಬಾ ದೇವಾಲಯದ ಕುಂಬಾಭಿಷೇಕವು ಜರುಗಿತು. ಈ ಶುಭಸಂದರ್ಭದಲ್ಲಿ ನರಸಿಂಹಭಾರತೀ ಜಗದ್ಗುರುಗಳು ನಾಲ್ವಡಿ ಕೃಷ್ಣರಾಜ ಒಡೆಯರಿಗೆ 'ಧರ್ಮಮೂಲ' ಎಂಬ ಬಿರುದನ್ನು ಅನುಗ್ರಹಿಸಿದರೆಂದು ಗುರುಗಳು ಜೀವನಚರಿತ್ರೆಯು ಗ್ರಂಥ (ಲೇಖಕ: ನಂಜನಗೂಡು ಶ್ರೀಕಂಠಶಾಸ್ತ್ರಿ) ದಿಂದ ತಿಳಿದುಬರುತ್ತದೆ.

೧೯೧೨ರಲ್ಲಿ ಚಂದ್ರಶೇಖರಭಾರತೀ ಸ್ವಾಮಿಗಳು ಶೃಂಗೇರಿ ಪೀಠದ ೩೪ನೇ ಗುರುಗಳಾಗಿ ಪಟ್ಟಾಭಿಷಕ್ತರಾದರು. ಈ ಗುರುವರ್ಯರು ೧೯೧೬ರಲ್ಲಿ ತಮ್ಮ ಗುರುಗಳಾದ ನರಸಿಂಹಭಾರತೀ ಗುರುಗಳ ಸಮಾಧಿ ಆಲಯದ ಕುಂಬಾಭಿಷೇಕವನ್ನು ಶೃಂಗೇರಿಯಲ್ಲಿ ನೆರವೇರಿಸಿದ ಸಂದರ್ಭದಲ್ಲಿ ನಾಲ್ವಡಿ ಕೃಷ್ಣರಾಜರು ಹಾಜರಿದ್ದರು.

ಮಹಾರಾಜರ ಮತ್ತು ಶಿಷ್ಯರ ವಿಶೇಷ ಆಮಂತ್ರಣವನ್ನು ಮನ್ನಿಸಿ ೧೯೨೪ರಲ್ಲಿ ಚಂದ್ರಶೇಖರಭಾರತೀ ಸ್ವಾಮಿಗಳು ಮೈಸೂರಿಗೆ ಭೇಟಿ ಕೊಟ್ಟು ನಾಲ್ವಡಿ ಕೃಷ್ಣರಾಜ ಒಡೆಯರ ಸಹಾಯದಿಂದ ನರಸಿಂಹ ಭಾರತೀ ಗುರುಗಳ ಹುಟ್ಟಿದ ಸ್ಥಳವಾದ ಈಗಿನ ಅಭಿನವಶಂಕರಾಲಯದಲ್ಲಿ ಭವ್ಯವಾದ ಗುರುಗಳ ಶಿಲಾಮೂರ್ತಿಯನ್ನು ಪ್ರತಿಷ್ಠಾಪಿಸಿದರು. (Sringeri -By prof. A.V. Narasimhamurthy)

ಜಯರಾಮರಾಜೇಂದ್ರ ಒಡೆಯರು ಮತ್ತು ಶೃಂಗೇರಿ ಮಠ: "During the reign of Jagadguru Sri.Sri. Abhinava Vidyateertha Swamji, who was the 35th Acharya of the sringeri sharadapeetam and who shone as a great yogi and a great scholar, there were innumerable occasions when the Maharaja of Mysore Sri. Jayachamarajendra Wadiyar sought the blessings of His Holiness"-Article by Sri. Ramaswamy IAS published in Mysore Shankaramath 'Guruvandana-2002')

ಮೈಸೂರು ಸಂಸ್ಥಾನದ ಕಟ್ಟಕಡೆಯ ರಾಜರಾದ ಜಯಚಾಮರಾಜೇಂದ್ರ ಒಡೆಯರು ತಮ್ಮ ಪೂರ್ವಿಕರು ಹಾಕಿಕೊಟ್ಟ ಸತ್‌ಸಂಪ್ರದಾಯವನ್ನು ಅನುಸರಿಸಿ ಶೃಂಗೇರಿ ಮಠದ ಮೇಲೆ ಅಪಾರ ಗೌರವಾದರಗಳಿಂದ ನಡೆದುಕೊಂಡರು. ಶೃಂಗೇರಿಯ ಸಮಕಾಲೀನ ಗುರುಗಳಾಗಿದ್ದ ಅಭಿನವ ವಿದ್ಯಾತೀರ್ಥ ಸ್ವಾಮಿಗಳ ಅಂತರಂಗದ ಶಿಷ್ಯರಾಗಿದ್ದು ಆಗಾಗ ಶ್ರೀಗಳನ್ನು ಮೈಸೂರಿನ ಅರಮನೆಗೆ ಆಮಂತ್ರಿಸಿ ಸತ್ಕರಿಸಿರುವುದು ದಾಖಲೆಗಳಿಂದ ತಿಳಿದುಬರುತ್ತದೆ.

೧೯೬೧ರಲ್ಲಿ ದಕ್ಷಿಣ ಭಾರತ ವಿಜಯಯಾತ್ರೆಯನ್ನು ಮುಗಿಸಿ ಬೆಂಗಳೂರಿಗೆ ಚಿತ್ತೈಸಿದ ಚಂದ್ರಶೇಖರ ಭಾರತೀ ಗುರುಗಳನ್ನು ಮಹಾರಾಜರು ಭವ್ಯವಾಗಿ ಆಮಂತ್ರಿಸಿದರು. ೧೯೬೮ರಲ್ಲಿ ಮಹಾರಾಜರ ಆಮಂತ್ರಣದ ಮೇಲೆ ಶ್ರೀಗಳು ಮೈಸೂರಿಗೆ ಯಾತ್ರೆ ಕೈಗೊಂಡಾಗ ಬಂಗಾರದ ಪಲ್ಲಕ್ಕಿಯ ಮೆರವಣಿಗೆಯೊಂದಿಗೆ ವೈಭವೋಪೇತವಾಗಿ ಪೂರ್ಣಕುಂಭ ಸ್ವಾಗತವನ್ನು ಮಹಾರಾಜರು ಗುರುಗಳಿಗೆ ನೀಡಿ ಅರಮನೆಯಲ್ಲಿ ಪಾದಪೂಜೆಯನ್ನು ನೆರವೇರಿಸಿ ಈ ಸಂದರ್ಭದಲ್ಲಿ 'ಊರ್ಮಿಳಾ' ಎಂಬ ಮರಿ ಆನೆಯೊಂದನ್ನು ಶೃಂಗೇರಿ ಮಠಕ್ಕೆ ದಾನ ಮಾಡಿದುದನ್ನು ಸ್ಮರಿಸಬಹುದಾಗಿದೆ.

ಶ್ರೀಕಂಠದತ್ತ ನರಸಿಂಹರಾಜ ಒಡೆಯರು: ಜಯಚಾಮ ರಾಜೇಂದ್ರ ಒಡೆಯರ ಸುಪುತ್ರರಾದ ಶ್ರೀಕಂಠದತ್ತ ನರಸಿಂಹ ರಾಜ ಒಡೆಯರು ಪ್ರಸ್ತುತ ಶೃಂಗೇರಿ ಪೀಠದಲ್ಲಿ ರಾರಾಜಿಸುತ್ತಿರುವ ಶ್ರೀ ಭಾರತೀ ತೀರ್ಥ ಸ್ವಾಮಿಗಳೊಂದಿಗೆ ಹೊಂದಿರುವ ಬಾಂಧವ್ಯವು ಸುಮಾರು ಎರಡು ಶತಮಾನಕ್ಕಿಂತಲೂ ಮಿಗಿಲಾದ ಶೃಂಗೇರಿ ಮತ್ತು ಮೈಸೂರಿನ ಚಾರಿತ್ರಿಕ ಸಂಬಂಧವನ್ನು ಬೆಸೆದು, ಪ್ರತ್ಯಕ್ಷ ಪ್ರಮಾಣಕ್ಕೆ ಸಾಕ್ಷೀಕರಿಸುತ್ತದೆ.

೨೦೦೨ ಮತ್ತು ೨೦೦೫ರಲ್ಲಿ ಶ್ರೀ ಭಾರತೀತೀರ್ಥ ಸ್ವಾಮಿಗಳವರು ಮೈಸೂರು ಮಹಾರಾಜರ ಆಮಂತ್ರಣದ ಮೇರೆಗೆ ಮೈಸೂರಿಗೆ ಭೇಟಿ ಇತ್ತಾಗ ಅನೂಚಾನವಾಗಿ ನಡೆದು ಬಂದ ಅರಮನೆಯ ಸಂಪ್ರದಾಯದಂತ ಮಹಾರಾಜರು ಮತ್ತು ರಾಜಪರಿವಾರವು ಗುರುಗಳನ್ನು ಒಂಟೆ, ಆನೆ, ಅಶ್ವಗಳಿಂದೊಡಗೂಡಿದ ಮೆರವಣಿಗೆಯಲ್ಲಿ, ರಾಜೋಚಿತ ಗೌರವದೊಂದಿಗೆ ಅತ್ಯಂತ ನಾಜೂಕಿನ ಕುಸುರಿ ನೈಪುಣ್ಯತೆಯಿಂದ ಅಲಂಕೃತವಾದ ರಜತ ರಥದಲ್ಲಿ ಸಕಲ ಮರ್ಯಾದೆಯಿಂದ ಕುಳ್ಳಿರಿಸಿ ಪೂರ್ಣಕುಂಭ ಸ್ವಾಗತದಿಂದ ಬರಮಾಡಿಕೊಂಡು, ಮಹಾರಾಣಿಯವರೊಡಗೂಡಿ ಗುರುಗಳಿಗೆ ಪಾದಪೂಜೆ ನೆರವೇರಿಸಿ ಹಲವಾರು ಕಾಣಿಕೆಗಳಿಂದ ಸತ್ಕರಿಸಿದರು. ಪ್ರತಿ ವರ್ಷ ಶೃಂಗೇರಿ ಗುರುಗಳ ವರ್ಧಂತಿ ಮತ್ತು ಶರನ್ನವರಾತ್ರಿಯ ಸಂದರ್ಭದಲ್ಲಿ ಇಂದಿಗೂ ಮೈಸೂರು ಸಂಸ್ಥಾನದಿಂದ ಗುರುಕಾಣಿಕೆ ಸಮರ್ಪಿಸಲ್ಪಡುತ್ತದೆ. ಮೈಸೂರಿನ ದಸರಾ ದರ್ಬಾರ್ ಸಂದರ್ಭದಲ್ಲಿ ಶೃಂಗೇರಿಯ ಮಠದ ಪ್ರಸಾದವನ್ನು ಇಂದಿಗೂ ಮಹಾರಾಜರಿಗೆ ಕೊಡಲಾಗುತ್ತದೆ.

ಶೃಂಗೇರಿ ಮಠದ ಪ್ರಸಾದವನ್ನು ದರ್ಬಾರಿನಲ್ಲಿ ಮಹಾರಾಜರಿಗೆ ಅರ್ಪಿಸುವ ಸಮಯದಲ್ಲಿ 'ಚಿರಂ ಅಭಿವರ್ಧಿತಂ ಯದು ಸಂತಾನಶ್ರೀ' ಎಂದು ಹೇಳಲಾಗುತ್ತದೆ.

ಹೀಗೆ ಸುಮಾರು ಎರಡು ಶತಮಾನಕ್ಕಿಂತಲೂ ಮಿಗಿಲಾಗಿ ಶೃಂಗೇರಿ ಶಾರದಾ ಪೀಠಕ್ಕೂ ಮೈಸೂರು



ಜಗದ್ಗುರು ಶ್ರೀ ಭಾರತೀತೀರ್ಥರು ರಾಜೋಚಿತ ಮೆರವಣಿಗೆಯಲ್ಲಿ ಮೈಸೂರು ಅರಮನೆಗೆ ಚಿತ್ತೈಸುತ್ತಿರುವುದು. (೨೦೦೨)



ಮೈಸೂರು ಮಹಾರಾಜ ಶ್ರೀಕಂಠದತ್ತ ನರಸಿಂಹರಾಜರು, ಮಹಾರಾಣಿಯೊಂದಿಗೆ ಜಗದ್ಗುರುಗಳ ಪಾದಪೂಜೆಯಲ್ಲಿ. (೨೦೦೨)



ಜಗದ್ಗುರು ಶ್ರೀ ಭಾರತೀತೀರ್ಥರು ರಾಜೋಚಿತ ಮೆರವಣಿಗೆಯಲ್ಲಿ ಮೈಸೂರು ಅರಮನೆಗೆ ಚಿತ್ತೈಸುತ್ತಿರುವುದು. (೨೦೦೨)



ಶೃಂಗೇರಿ ಮಠದ ಪ್ರಸಾದ ಸ್ವೀಕರಿಸುತ್ತಿರುವ ಶ್ರೀಕಂಠದತ್ತ ನರಸಿಂಹರಾಜರು.



ಶ್ರೀಶ್ರೀಗಳವರೊಂದಿಗೆ ಮೈಸೂರು ಅರಮನೆ ದರ್ಬಾರ್ ಹಾಲಿನಲ್ಲಿ ಮಹಾರಾಜರು. (೨೦೦೨)



ಶ್ರೀಮದಭಿನವ ವಿದ್ಯಾತೀರ್ಥರೊಂದಿಗೆ ಶ್ರೀ ಜಯಚಾಮರಾಜೇಂದ್ರ ಮಹಾರಾಜರು.



ಅರಮನೆ ವಿದ್ವಾಂಸರೂ ಶ್ರೀ ನರಸಿಂಹಭಾರತಿ ಗುರುಗಳ ಪೂರ್ವಾಶ್ರಮದ ಪಿತೃವರ್ಯರು ಆಗಿದ್ದ ಕುಣಿಗಲ್ ರಾಮಾಶಾಸ್ತ್ರಿಗಳು




ಶ್ರೀ ನರಸಿಂಹಭಾರತಿ ಗುರುವರ್ಯರ ಪೂರ್ವಾಶ್ರಮದ ಸಹೋದರ ಶ್ರೀ ಲಕ್ಷ್ಮೀ ನರಸಿಂಹಶಾಸ್ತ್ರಿಗಳು.



ಮೈಸೂರು ಮಹಾರಾಣಿ ಮದನ ವಿಲಾಸ ಸನ್ನಿಧಾನವು ಶೃಂಗೇರಿಗೆ ಅರ್ಪಿಸಿದ ವಜ್ರದ ಪಂಚಪಾತ್ರೆ



ಶ್ರೀ ನರಸಿಂಹಭಾರತಿ ಸ್ವಾಮಿಗಳೊಂದಿಗೆ ಯುವ ಚಾಮರಾಜರು.



ಶ್ರೀ ಜಯಚಾಮರಾಜ ಪ್ರಭುಗಳು ಶ್ರೀ ಸಚ್ಚಿದಾನಂದ ಭಾರತಿ ಗುರುಗಳಿಗೆ ಬರೆದ ಪತ್ರ

ಸಂಸ್ಥಾನಕ್ಕೂ ಇರುವ ಚಾರಿತ್ರಿಕ ಸಂಬಂಧದ ಕೊಂಡಿಯಾಗಿ ಪ್ರಸ್ತುತ ಮೈಸೂರು ರಾಜ ವಂಶಸ್ಥರ ಮತ್ತು ಈಗಿನ ಶೃಂಗೇರಿ ಶ್ರೀಗಳು ಬಾಂದವ್ಯವು ಪರಿಣಮಿಸಿದೆ.

ಈ ಲೇಖನದೊಂದಿಗೆ ಲಗತ್ತಿಸಲಾದ ಹಲವಾರು ಛಾಯಾಚಿತ್ರಗಳು ಮೈಸೂರು ಸಂಸ್ಥಾನ ಮತ್ತು ಶೃಂಗೇರಿ ಮಠದ ಐತಿಹಾಸಿಕ ಮಧುರ ಬಾಂಧವ್ಯಕ್ಕೆ ಮಹತ್ತರವಾದ ಬೆಳಕನ್ನು ಚೆಲ್ಲುತ್ತದೆ.

೨೭

ಗುಜರಾತಿನಲ್ಲೊಂದು ವಿಜಯನಗರಕಾಲೀನ ಐತಿಹಾಸಿಕ ನಾಟಕ ಗಂಗಾಧರ ಕವಿಯ ಗಂಗದಾಸ ಪ್ರತಾಪ ವಿಲಾಸಮ್

ಡಾ. ಜ್ಯೋತ್ಸ್ನಾ ಕಾಮತ್*

ವಿಜಯನಗರ ಸಾಮ್ರಾಜ್ಯ ಕಾಲದಲ್ಲಿ ಸಂಸ್ಕೃತ, ಕನ್ನಡ, ತೆಲುಗು ಭಾಷೆಗಳಲ್ಲಿ ಕಾವ್ಯ, ಪ್ರಬಂಧ, ಶಾಸ್ತ್ರಾದಿಗಳ ವೇದ ಸಾಹಿತ್ಯ ಪುರಾಣಾದಿಗಳ ಟೀಕು-ಟಿಪ್ಪಣಿಗಳ ಸಾಹಿತ್ಯ ಸಾಕಷ್ಟು ಬೆಳೆದಿದ್ದರೂ ಈಗ ಲಭ್ಯವಾಗಿರುವ ನಾಟಕ ಪ್ರಕಾರವು ಕಡಿಮೆ. ಅದರಲ್ಲೂ ಸಮಕಾಲೀನ ಇತಿಹಾಸವನ್ನು ಕೆಲಮಟ್ಟಿಗೆ ಬಿಂಬಿಸುವ ಕೃತಿಗಳು ವಿರಳ. ಇಂಥಲ್ಲಿ ವಿಜಯನಗರದ ಎರಡನೆಯ ದೇವರಾಯನ ಕಾಲದಲ್ಲಿ (೧೪೨೪-೧೪೪೬) ಆತನ ಆಸ್ಥಾನದಲ್ಲಿ ಒಳ್ಳೆಯ ಹೆಸರು ಮಾಡಿ, ತೀರ್ಥಯಾತ್ರೆಯ ಜೊತೆಗೆ ಸಾಹಿತ್ಯಯಾತ್ರೆಯನ್ನು ಕೈಕೊಂಡು ಗುಜರಾತ್ ತಲುಪಿ ಅಲ್ಲಿಯ ಚಂಪಾನೇರ ಸಂಸ್ಥಾನದ ಅರಸನ ರಾಜಾಶ್ರಯವನ್ನು ಗಂಗಾಧರ ಕವಿ ಪಡೆಯುತ್ತಾನೆ. ಸಂಸ್ಕೃತದಲ್ಲಿ ಮೀರಿದ ಪಾಂಡಿತ್ಯ ಪಡೆದ ಈತನಿಗೆ ಅಲ್ಲಿಯ ಅರಸು ಗಂಗದಾಸನು, ತಾನು ಅಹ್ಮದಾಬಾದ್‌ನ ಸುಲ್ತಾನನನ್ನು ಸೋಲಿಸಿದ ಸಂದರ್ಭವನ್ನು ನಾಟಕರೂಪದಲ್ಲಿ ಬರೆಯುವಂತೆ ಹೇಳುತ್ತಾನೆ. ಆಗ ರೂಪಗೊಂಡಿದ್ದ ನಾಟಕವೇ ಗಂಗಾಧರನ ಗಂಗದಾಸ ಪ್ರತಾಪ ವಿಲಾಸಮ್ (ಕ್ರಿ.ಶ.ಸು. ೧೪೪೯ರಲ್ಲಿ ರಚಿತವಾಯಿತು.)

ಕ್ರಿ.ಶ. ೧೪೪೯ರಲ್ಲಿ ರೂಪ ತಾಳಿರಬಹುದಾದ ಈ ನಾಟಕದ ಒಂದೇ ಪ್ರತಿ, ಲಂಡನ್‌ನ ಇಂಡಿಯಾ ಆಫೀಸ್ ಲೈಬ್ರರಿಯಲ್ಲಿ ಇತ್ತು (ನಂ. ೨೩೮೮) ಬಡೋದಾ ವಿಶ್ವವಿದ್ಯಾಲಯವು, ಬ್ರಿಟಿಶ್ ಕೌನ್ಸಿಲ್ ಮೂಲಕ ಅದನ್ನು ತರಿಸಿ, ಆ ವಿಶ್ವವಿದ್ಯಾಲಯದ ಗುಜರಾತ್ ಭಾಷೆಯ ಪ್ರಾಧ್ಯಾಪಕರೂ, ಓರಿಯಂಟಲ್ ಸಂಸ್ಥೆಯ ನಿರ್ದೇಶಕರೂ ಆಗಿದ್ದ B.J. Sandesara ಅವರು ಸಂಪಾದಿಸುವಂತೆ ಏರ್ಪಾಡು ಮಾಡಿ ೧೯೭೩ರಲ್ಲಿ ಪ್ರಕಟಿಸಿದೆ. ಈ ಅಪರೂಪದ ಸಂಸ್ಕೃತ ನಾಟಕದ ಪ್ರತಿಯನ್ನು ನನ್ನ ವಿನಂತಿಯಂತೆ ಡಾ. ಲೀಲಾ ಅವರು ಮುಂಬೈ ವಿಶ್ವವಿದ್ಯಾಲಯದ ಲೈಬ್ರರಿಯಲ್ಲಿ ಹುಡುಕಿ, xerox ಮಾಡಿಸಿ ನನಗೆ ಕಳಿಸಿದರು. ಆ ಬಗ್ಗೆ ಡಾ. ಲೀಲಾಗೆ ಋಣಿ.

ನಾಟಕದ ಸಂಪಾದಕರ ಪ್ರಕಾರ, ನಾಟಕ ಕರ್ತೃ ಗಂಗಾಧರನು ಉಲ್ಲೇಖಿಸಿದ ಸಮಕಾಲೀನ ಘಟನೆಗಳು, ಅದರಲ್ಲಿ ಬರುವ ವ್ಯಕ್ತಿಗಳೆಲ್ಲ ಐತಿಹಾಸಿಕವಾಗಿ ಸಮರ್ಪಕವಾಗಿವೆ. ಆಗ ಗುಜರಾತಿನಲ್ಲಿ ಮುಸ್ಲಿಂರ ಮೇಲೆ ಆಡಳಿತ (ಆಕ್ರಮಣ) ಆಗಿತ್ತು. ಅಹಮ್ಮದಾಬಾದ್ ರೂಪಗೊಂಡು ಸುಲ್ತಾನ ಮಹಮ್ಮದ್ ಶಹನು ಆಳುತ್ತಿದ್ದ. ಆದರೆ ಆ ಪ್ರದೇಶದ ಚಿಕ್ಕ ದೊಡ್ಡ ಸಂಸ್ಥಾನಗಳು ಅಸ್ತಿತ್ವಕ್ಕಾಗಿ ಹೋರಾಡುತ್ತಾ ಇದ್ದವು. ಕೆಲ ಬಾರಿ ಸುಲ್ತಾನನ ಆಕ್ರಮಣಗಳನ್ನು ಹಿಮ್ಮೆಟ್ಟಿಸುವಲ್ಲಿ ಯಶಸ್ವಿಯೂ ಆಗಿವೆ. ಸ್ಥಳೀಯ ಇತಿಹಾಸದ ಜೊತೆಗೆ ಭೂಗೋಳ, ಪ್ರಾಕೃತಿಕ ಸ್ವರೂಪ, ಸಾಮಾಜಿಕ, ಆಚರಣೆಗಳ ಮೇಲೂ 'ಗಂಗದಾಸ ಪ್ರತಾಪ ವಿಲಾಸ' ಬೆಳಕು ಚೆಲ್ಲುತ್ತದೆ. ಕರ್ನಾಟಕಕ್ಕೆ ಸಂಬಂಧಪಟ್ಟ ಅಂಶಗಳನ್ನು ಮಾತ್ರ ಇಲ್ಲಿ ಎತ್ತಿಕೊಂಡಿದೆ.

ಒಂಬತ್ತು ಅಂಕಗಳ ಗಂಗದಾಸ ಪ್ರತಾಪ ವಿಲಾಸ ನಾಟಕದಲ್ಲಿ ನಡು ನಡುವೆ ಪುಷ್ಪಗಳು ನಷ್ಟವಾಗಿವೆ. ತಾಡೆಯೋಲೆಯ ಲಿಪಿ, ೧೬ನೇ ಶತಮಾನದಲ್ಲಿ ಗುಜರಾತ್‌ನಲ್ಲಿ ಪ್ರಚಲಿತವಿದ್ದ ದೇವನಾಗರಿ ಸಂಸ್ಕೃತ ನಾಟಕ ರಚನೆಯ ಯಾವತ್ತೂ ಲಕ್ಷಣಗಳನ್ನು ಹೊಂದಿದ್ದು ಭಾಷೆ ಸರಳವಾಗಿದೆ. ಸೂತ್ರಧಾರನ ಪ್ರವೇಶದ ಬಳಿಕ ನಾಟಕಕರ್ತೃ ಗಂಗಾಧರನು ಟೀಂ ಜೊತೆಗೆ ತನ್ನನ್ನು ಪರಿಚಯಿಸುವುದರ ಜೊತೆಗೆ ರಂಗದ ಮೇಲೂ ಬರುವಂತೆ ನೋಡಿಕೊಳ್ಳುತ್ತಾನೆ. ಅವನ ಹೇಳಿಕೆಯ ಪ್ರಕಾರ ಪ್ರತಾಪದೇವರಾಯನು (ಇಮ್ಮಡಿದೇವರಾಯ) ಗತಿಸಿದ ಬಳಿಕ ಅವನ ಮಗ ಮಲ್ಲಿಕಾರ್ಜುನನು (೧೪೪೬-೬೫) ಪಟ್ಟಕ್ಕೆ ಬರುತ್ತಾನೆ. ಆತನು ಬಿದರದ (ದಕ್ಷಿಣ ಸುರತ್ರಾಣ) ಸುಲ್ತಾನ ಮತ್ತು ಓರಿಸ್ಸಾದ ಗಜಪತಿಯನ್ನು ಸೋಲಿಸುತ್ತಾನೆ. ಒಮ್ಮೆ ಓಲಗದಲ್ಲಿ ಮಲ್ಲಿಕಾರ್ಜುನನು 'ತನ್ನ ತಂದೆಯ ಕಾಲದಲ್ಲಿ ಪ್ರಸಿದ್ಧನಾಗಿದ್ದ ಕವಿಗಂಗಾಧರನು ಎಲ್ಲಿದ್ದಾನೆ ?' ಎಂದು ಕೇಳಿದಾಗ, ಇಲ್ಲಿಯ ಓಲಗದಲ್ಲಿ ಬಿರುದು, ಬಾವಲಿ, ಧನಕನಕಾದಿಗಳ ಮನ್ನಣೆ

* ೧೧೦, 'ಶಶಿಕಿರಣ', ೧೮ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-೫೬೦೦೫೫.

ಪಡೆದು, ಇತರೆ ಕವಿಗಳನ್ನು ಸೋಲಿಸುವ ಉದ್ದೇಶದಿಂದ ದೇವರಾಯನ ಅನುಮತಿ ಪಡೆದೇ ಹೊರಟ ಸಾಹಿತ್ಯ ದಿಗ್ವಿಜಯಕ್ಕೆ.

ದಿವ್ಯರತ್ನರಚಿತ ಕುಂಡಲ ಕಟಕ ಹಾರ ಕನಕದಂಡ ಗಂಡಭೇರುಂಡ ಬಿರದಾಂಕಿತ ಅರಸನ ಅಂಕಿತವಿದ್ದ ತೊಡರಿನಿಂದ ಭೂಷಿತನಾಗಿದ್ದ. ಅದರಲ್ಲಿ ತೋಡರದಲ್ಲಿ 'ರಾಜಕವಿ ಪುತ್ತಲಾಂಕಿತ' ಬಿರುದು ಬೇರೆ ಇತ್ತಂತೆ ! ಇದನ್ನು ಕೊಡಮಾಡಿದ ಸನ್ಮಾನವನ್ನು ಪಡೆದೇ ವಿದ್ಯಾಬಲದ ದಿಗ್ವಿಜಯಕ್ಕಾಗಿ ಹೊರಟನೆಂದು ಕೇಳಿದ್ದೆ. ಈಗ ಆತ ಎಲ್ಲಿದ್ದಾನೆ? ಎಂದು ಅರಸು ಕುತೂಹಲದಿಂದ ವಿಚಾರಿಸಿ ಕೊಂಡಾಗುತ್ತರದ ಕಡೆಯಿಂದ ಬಂದು ಆ ಸಭೆಯಲ್ಲಿದ್ದ ವೈತಾಲಿಕನೋರ್ವನು ಗಂಗಾಧರನ ಆ ಮುಂದಿನ ಸಾಹಸ ನಿವೇದಿಸುತ್ತಾನೆ.

ದ್ವಾರಕಾನಗರಿಗೆ ಹೋಗಿ ಅಹಮ್ಮದಾಬಾದನಗರದಲ್ಲಿ ಗುರ್ಜರ ಸುರತ್ರಾಣನ ಮಹಾದ್ವಾರದಲ್ಲಿ ಬಿರುದು ತೊಡರೂ ಇದ್ದ ಎಡಗಾಲನ್ನು ಮುಂದಿಟ್ಟು ಹೋಗಿ ಸಭಾಕೋವಿದರನ್ನೆಲ್ಲ ತನ್ನ ವಿದ್ವತ್ತೆಯಿಂದ ಮೂಕರನ್ನಾಗಿ ಅಲ್ಲಿ ಆರು ತಿಂಗಳು ಇದ್ದು ಪಾವಾಚಲದ ಚಂಪಕನಗರದ ಗಂಗದಾಸ ಭೂಪತಿಯನ್ನು ಕಾಣಲು ಬಂದೆ ಎಂದು ಹೇಳಿಕೊಳ್ಳುತ್ತಾನೆ. ಆತನ ಪಾಂಡಿತ್ಯದಿಂದ ಪ್ರಭಾವತಿನಾಗಿ ಅರಸನು ಅವನನ್ನು ಬಗೆಬಗೆಯಲ್ಲಿ ಸತ್ಕರಿಸುತ್ತಾನೆ. ಬಳಿಕ ತಾನು (ಸೋಲಿಸಿದ ಸುಲ್ತಾನನ ದುಷ್ಕೃತ್ರವನ್ನು) ಹಿಮ್ಮೆಟ್ಟಿಸಿದ ಸುಲ್ತಾನನ ಬಗ್ಗೆ ಆ ವಿಜಯೋತ್ಸವದ ಬಗ್ಗೆ ಒಂದು ನಾಟಕ ಬರೆ ! ಎಂದು ಕವಿ ಗಂಗಾಧರನಿಗೆ ಹೇಳುತ್ತಾನೆ. ಆ ಪ್ರಕಾರ ಗಂಗಾಧರನು 'ಗಂಗದಾಸ ಪ್ರತಾಪ ವಿಳಾಸವೆಂಬ' ನಾಟಕವನ್ನೂ ಬರೆಯುತ್ತಾನೆ. ಆದರೆ ಆ ನಾಟಕದ ಅಭಿನಯವನ್ನು ಏರ್ಪಡಿಸುವುದು ಹೇಗೆ ? ಎಂದು ಅರಸನಿಗೆ ಸಮಸ್ಯೆ ! ತಿರುಗಿ ಕವಿ ಗಂಗಾಧರನೇ ಸಹಾಯಕ್ಕೆ ಬರುತ್ತಾನೆ. ತನ್ನ ತಾಯ್ನಾಡು ಕರ್ಣಾಟಕದಿಂದ ತರಿಸಿದ/ತಂಡ ಟೀಮ್ ಜೊತೆಗೆ ಈ ನಾಟಕವನ್ನು ರಂಗದ ಮೇಲೆ ತರುತ್ತಾನೆ. ತನ್ನ ಹೆಚ್ಚಿನ ಸುದೈವದಿಂದ ದಸರಾ ಮಹೋತ್ಸವ ('ಮಹಾಕಾಲೀ ಮಹಾ ಮಹೋತ್ಸವ') ಸಂದರ್ಭದಲ್ಲಿ ಈ ನಾಟಕವ ಪ್ರದರ್ಶನವಾಗುತ್ತದೆ ಎಂದು ಹೇಳಿ ರಂಗದಿಂದ ನೇಪಥ್ಯಕ್ಕೆ ಹೊರಡುವ ದೃಶ್ಯವನ್ನು ಸಂಯೋಜಿಸಿದ್ದಾನೆ. ತನ್ನ ಯಶಸ್ಸಿನ ಬಗ್ಗೆ ಮಲ್ಲಿಕಾರ್ಜುನ ದೊರೆಗೆ ಅರುಹಿದ ವೈತಾಲಿಕನ ವಿವರಣೆಯಿಂದ ಆ ಅರಸನು ಸಂತುಷ್ಟನಾಗಿ ಯೋಗ್ಯ ರೀತಿಯಿಂದ ಆತನನ್ನು ಸನ್ಮಾನಿಸಿದ ವಿಚಾರವನ್ನು ಉಲ್ಲೇಖಿಸಲು ಗಂಗಾಧರನು ಮರೆತಿಲ್ಲ 'ಸಾಧು ಕಥಿತಂ ! ಅಸ್ಮತ್ ಚಿಂತಾ ದೂರೀಕೃತಾ' ಎಂದು ಮಲ್ಲಿಕಾರ್ಜುನ ಹೇಳಿದನಂತೆ. ಒಳ್ಳೇ ಮಾತು ಹೇಳಿದ್ದೆ. ನಮ್ಮ ಚಿಂತೆ ದೂರ ಆಯಿತು.

ಈ ನಾಟಕಕ್ಕೆ ಗಂಗದಾಸ ಪ್ರತಾಪ ವಿಲಾಸವೆಂದು ಕರೆಯಲು ಕಾರಣ ಕವಿಯ ಆಶ್ರಯದಾತ ಈ ಅರಸನ ಗಂಗದಾಸನ, ರಾಜಮಹಿಷಿಯ ಹೆಸರು ಪ್ರತಾಪದೇವಿ. ನಾಟಕದಲ್ಲಿ ಅರಸ–ಅರಸಿಯರ ಪ್ರಣಯ ಕಲಹ, ವಿದೂಷಕನ ಹಾಸ್ಯ, ಅರಸನ ಶೌರ್ಯ, ಸೋತವರ ಕರುಣ ಇತ್ಯಾದಿ ನವರಸಗಳನ್ನು ತರಲು ಕವಿಯು ಶ್ರಮಿಸಿದ್ದಾನೆ.

ಸುಲ್ತಾನನೊಂದಿಗೆ ಯುದ್ಧ ಸಂಭವಿಸಲು ಕಾರಣ ಗುಜರಾತನ್ನು ಆಳುತ್ತಿರುವ ಈ ಅಹಮ್ಮದನ ಮಗ ಮುಹಮ್ಮದನು ಗಂಗದಾಸನಿಗೆ 'ಮಗಳನ್ನು ಕೊಟ್ಟು ಮದುವೆ ಮಾಡು' ಎಂದು ಈಗಾಗಲೇ ಆ ರೀತಿ ಮಗಳಂದಿರನ್ನು ಕೊಟ್ಟು ತಮ್ಮ ತಲೆ ಮತ್ತು ರಾಜ್ಯ ಉಳಿಸಿಕೊಂಡ ನಾನು ಮತ್ತು ವೀರಮ ಎಂಬ ತುಂಡರಸರ ಮುಖಾಂತರ ಸಂದೇಶ ಕಳಿಸುತ್ತಾನೆ. ಇದರಿಂದ ಕೋಪಾವಿಷ್ಟನಾದ ಗಂಗದಾಸನು ಮ್ಲೇಚ್ಛರಿಗೆ ಹುಟ್ಟಿಯ ಮಕ್ಕಳನ್ನು ಕೊಡಮಾಡಿದವರ ಜೊತೆ ಏನು ಮಾತುಕತೆ ? ಎಂಬ ಸಂದೇಶವನ್ನು ಕಳಿಸುತ್ತಾನೆ. ಇದನ್ನು ಅವಮಾನವೆಂದು ಆ ಅರಸರು ಸುಲ್ತಾನನ ಬಳಿ ಹೇಳುತ್ತಾರೆ. ಸರಿ ಸುಲ್ತಾನನು ಗಡ್ಡ ನೀವಿಕೊಳ್ಳುತ್ತ, ಶುದ್ಧ ಸಂಸ್ಕೃತದಲ್ಲಿ ಗಂಗದಾಸನಿಗೆ ಬುದ್ಧಿ ಕಲಿಸುವುದಾಗಿ ಪ್ರತಿಜ್ಞೆ ಮಾಡುತ್ತಾನೆ. ಚಂಪಾ ನೇರ ಅರಸನಾದ ಗಂಗದಾಸನ ವಿರುದ್ಧ ಸೈನ್ಯ ಕಳಿಸುತ್ತಾನೆ.

ಯುದ್ಧಕ್ಕೆ ಗಂಗದಾಸನು ಸಿದ್ಧನಾಗಿಯೇ ಇರುತ್ತಾನೆ. ಇದಕ್ಕೆ ಕಾರಣ ಮಾಳವದ ಸುಲ್ತಾನನು ಅಂದೆ ಮುಹಮ್ಮದ ಖಿಲ್‌ಜಿಯು, ಅಹಮ್ಮದಾಬಾದ ಸುಲ್ತಾನನ ಕಡುವೈರಿ ! ಹೀಗಾಗಿ ಗಂಗದಾಸನಿಗೆ ಬೇಕಾದ ಎಲ್ಲ ಬೆಂಬಲ, ಸೈನ್ಯಸಹಿತ ಕೊಡಮಾಡಿರುತ್ತಾನೆ. ಕೊನೆಗೆ ಅಹಮ್ಮಬಾದದ ಸುಲ್ತಾನನ್ನು ಹಿಮ್ಮೆಟ್ಟಿಸುವಲ್ಲಿ ಗಂಗದಾಸನು ಯಶಸ್ವಿ ಆಗುತ್ತಾನೆ.

ಮೊದಲಲ್ಲಿ ಹೇಳಿದಂತೆ ಗುಜರಾತ್‌ನಲ್ಲಿ ಮುಸ್ಲಿಂ ಆಕ್ರಮಣವಾಗಿ ಅವರ ರಾಜ್ಯ ನೆಲೆಗೊಂಡ ಕಾಲದ ಈ ಘಟನೆಯನ್ನು ರೂಪಿಸಿದ ನಾಟಕ ವಿಶ್ವಸನೀಯ ಐತಿಹಾಸಿಕ ವಿವರಗಳನ್ನು ಒಳಗೊಂಡಿದೆ. ಕರ್ನಾಟಕದ ಮಟ್ಟಿಗೆ ವಿಜಯನಗರ ಕಾಲದ ನಾಟಕಕಾರ, ತನ್ನ ಹಿನ್ನೆಲೆಯ ಬಗ್ಗೆ ಅಭಿಮಾನದಿಂದ ಹೇಳಿಕೊಂಡದ್ದು, ತನ್ನ ತಾಯ್ನಾಡಿನ ಇಬ್ಬರು ಅರಸರನ್ನು ಸ್ಮರಿಸಿದ್ದೇ ಅಲ್ಲದೆ ಸಂಸ್ಕೃತದಲ್ಲಿ ಚೆನ್ನಾಗಿ ಅಭಿನಯಿಸಬಲ್ಲ ನಟ ನಟಿಯರ ತಂಡವನ್ನೂ ಕರ್ನಾಟಕ ದಿಂದ ಕರೆದೊಯ್ದು ಅಲ್ಲಿ ಮಹಾನವಮಿ ಹೊತ್ತಿಗೆ ಆ ನಾಟಕ ಮಾಡಿಸಿದ್ದು ವಿಶೇಷ. ಕರ್ನಾಟಕ–ಗುಜರಾತ್‌ನ ಸಾಂಸ್ಕೃತಿಕ ಸಂಬಂಧದ ಮೇಲೆ ಬೆಳಕು ಚೆಲ್ಲುವ ಈ ನಾಟಕ.

ರಾಷ್ಟ್ರಕೂಟರ ಕಾಲದ ತ್ರಿವಿಕ್ರಮ ಭಟ್ಟನ ನಳಚಂಪು ಮತ್ತು ಚಾಳುಕ್ಯ ಮುಮ್ಮಡಿ ಸೋಮೇಶ್ವರನ 'ಮಾನಸೋಲ್ಲಾಸ'ದಲ್ಲಿ ಬರುವ ಹಲವಾರು ಸಾಮಾಜಿಕ ಜೀವನದ ನೋಟಗಳನ್ನು ಪ್ರತಿಬಿಂಬಿಸುತ್ತದೆ ಎನ್ನುವುದು ಕುತೂಹಲಕಾರಿಯಾಗಿದೆ.

ನಾಟಕದ ಕೆಲವು ವೈಶಿಷ್ಟ್ಯಗಳು

೧) ಸುಲ್ತಾನ ಮಹಮ್ಮದನು ಅವನ ಬಂಟರೆಲ್ಲ ಸಂಸ್ಕೃತದಲ್ಲಿ ಮಾತನಾಡುತ್ತಾರೆ. ಪದ್ಯ ಹಾಡುತ್ತಾರೆ.

೨) ರಂಗಸಜ್ಜಿಕೆ ಅಪರೂಪವು. ಅದು ಕರ್ನಾಟಕದಿಂದ ಎರವಲು ಪಡೆದದ್ದೇ ಆದೆ ಗಂಗಾಧರ ಕವಿಯೇ ಅದರ ರಚನೆಯನ್ನು ಸೂಚಿಸಿದ್ದಾದರೆ, ಎರಡು ಸ್ತರಗಳಲ್ಲಿ ಅಭಿನಯ, ಸೀನು ಸಾಗಿದಂತೆ ತೋರುತ್ತದೆ. ಮೆರವಣಿಗೆ, ದೇವಸ್ಥಾನದಲ್ಲಿ ಪೂಜೆ ಒಂದೆಡೆ ಯುದ್ಧ ದೃಶ್ಯ-ಸೇನೆಗಳ ಸಾಗಾಟ ಅರಸರ ಒಡ್ಡೋಲಗ ಇನ್ನೊಂದೆಡೆ. ಎರಡು ಜೊತೆಗೆ ನಡೆದಿರುವಂತೆ ಅಟ್ಟಾಲಕ ಅಟ್ಟಣಿಗೆ ಅಥವಾ ರಂಗದ ಪಾರ್ಶ್ವದಲ್ಲಿ ದೇವಿಯ ಪೂಜೆ ವಿದೂಷಕ ಸರದಾರರ ಸಂಭಾಷಣೆ ಇತ್ಯಾದಿಗಳು ನಾಟಕದಲ್ಲಿ ಬರುತ್ತವೆ.

೩) ೧೫ನೇ ಶತಮಾನದಲ್ಲಿ ಕರ್ನಾಟಕದಲ್ಲಿ ಸಂಸ್ಕೃತ ನಾಟಕವಾಡುವ ತಂಡಗಳು ಇದ್ದವು. ಬೇರೆ ರಾಜ್ಯಗಳ ಅರಸರ ಆಮಂತ್ರಣ ಬಂದರೆ ಅಲ್ಲಿ ಹೋಗಿ ಅಭಿನಯಿಸುವ ಪರಿಣತರು ಇದ್ದರು. ಸಂಸ್ಕೃತವು ಅಖಿಲ ಭಾರತ ಸಂಪರ್ಕ ಭಾಷೆಯಾಗಿದ್ದರಿಂದ ದೂರದ ನಾಡುಗಳಲ್ಲೂ ಅವರಿಗೆ ತೊಂದರೆ ಇರಲಿಲ್ಲ. ಎರಡನೆಯ ದೇವರಾಯನ ಕೃತಿಯೆಂದೇ ಖ್ಯಾತವಾದ ಸಂಸ್ಕೃತಗ್ರಂಥ ಮಹಾನಾಟಕ ಸುಧಾನಿಧಿ ರಂಗಸಜ್ಜಿಕೆ ಪರಿಕರಗಳ ಕುರಿತ ಕೃತಿಯಾಗಿದೆ. ನಾಟಕ ಪ್ರಕಾರವು ಸಂಸ್ಕೃತದಲ್ಲಿ ಉತ್ತಮ ಕಲಾ ಮಾಧ್ಯಮವಾಗಿ ಆ ಕಾಲದ ವಿಜಯನಗರದಲ್ಲಿ ಬೆಳೆದರೆ ಸಾಕು.

೪) ಕೊನೆಯಲ್ಲಿ ಕೀರ್ತಿ, ಅಪಕೀರ್ತಿಯರೆಂಬ ಇಬ್ಬರು ಬಂದು ಗಂಗದಾ ಮಹಮ್ಮದ ಸುಲ್ತಾನರ ಒಡನಾಡಿಗಳು ತಾವಿದ್ದು ಪರಸ್ಪರ ಪರಿಚಯ ವಿಚಾರ ವಿನಿಮಯ ಮಾಡಿಕೊಳ್ಳುತ್ತಾರೆ.

೫) ಕರ್ನಾಟಕದ ವಿಶಿಷ್ಟ ವೇಷಭೂಷಣದಲ್ಲಿದ್ದ ನಾಟಕಕಾರನನ್ನು ಶ್ರೋತೃಗಳಿಗೆ ಪರಿಚಯಿಸಲಾಗಿದೆ. ಮುತ್ತಿನ ಹಾರ, ಬಳೆ, ಕಂಠಾಭರಣಗಳು, ಮಲ್ಲಿಗೆ ದಂಡೆಯಿಂದ ಅಲಂಕೃತ ಕೂಲದು ಕಸ್ತೂರಿ ತಿಲಕ ತಾಂಬೂಲರಂಜಿತ ಕೆಂದುಟಿ ಇವೆಲ್ಲ ಗುಜರಾಥಿಗಳಿಗೆ ಅಪರಿಚಿತವಿದ್ದವು.

ಆಧಾರಸೂಚಿ

೧. ಗಂಗದಾಸ – **ಪ್ರತಾಪವಿಲಾಸ ನಾಟಕಮ್**, (ಸಂಸ್ಕೃತ ನಾಟಕ).
A Historical play by Gangadhara, (Ed) Bhogilal Jayahand bhai sandesara Baroda Oriental series, 1973.

೨. ಬಿತ್ತೀಯ ಭಾರತೀಯ ಭಾಷೆ – ಕೃತಿಗಳಲ್ಲಿ ಕರ್ನಾಟಕ ಸಂಸ್ಕೃತಿಯ ಕೆಲವು ಉಲ್ಲೇಖಗಳು : ಡಾ ಪಿ. ಶಿವಾನಂದ, **ಸಂಶೋಧನ** (ಡಾ॥ ಎಂ. ಚಿದಾನಂದ ಮೂರ್ತಿ ಗೌರವ ಸಂಪುಟ, (ಸಂ. ಲಕ್ಷ್ಮಣ ತೆಲಗಾವಿ) ಬೆಂಗಳೂರು ೧೯೯೧.

೩. *A Concise History of Karnataka*, Dr. Suryanath. V. Kamath, Bangalore, ೪ನೇ ಮುದ್ರಣ, ೨೦೦೮.

೪. **ಕನ್ನಡ ವಿಶ್ವಕೋಶ**, ಸಂಪುಟ ೬, ಮೈಸೂರು, ೧೯೭೩.

೨೭

ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಮಹಾಸತಿ ಕಲ್ಲುಗಳು

ಡಾ. ಸಿ.ಎನ್. ಕೋಳಗುಡ್ಡ* ಎಮ್.ಎನ್. ಕೋಳಗುಡ್ಡ**

ಭೌಗೋಳಿಕ ಪರಿಸರ

ಭೌಗೋಳಿಕವಾಗಿ ಚಿಕ್ಕೋಡಿ ತಾಲ್ಲೂಕು ೧೬°-೨೧'ರಿಂದ ೧೬°-೫೯' ಅಕ್ಷಾಂಶ ಮತ್ತು ೭೪°-೨೨' ರಿಂದ ೭೪°-೪೯' ರವರೆಗೆ ರೇಖಾಂಶದಿಂದ ವ್ಯಾಪ್ತಿಸಿದೆ. ಈ ತಾಲೂಕಿನ ಪಶ್ಚಿಮಕ್ಕೆ ಮಹಾರಾಷ್ಟ್ರ, ಪೂರ್ವಕ್ಕೆ ಅಥಣಿ ರಾಯಭಾಗ ಮತ್ತು ದಕ್ಷಿಣಕ್ಕೆ ಹುಕ್ಕೇರಿ ಗೋಕಾಕ್ ತಾಲೂಕಗಳಿಂದ ಉತ್ತರಕ್ಕೆ ಅಥಣಿ ಮಹಾರಾಷ್ಟ್ರ ಗಡಿಗಳಿಂದ ಅವರಿಸಿದೆ. ೧೯೯೯.೫ ಚದರ ಕಿ.ಮೀ.ಗಳ ವಿಸ್ತೀರ್ಣವನ್ನು ಹೊಂದಿದ ಚಿಕ್ಕೋಡಿ ತಾಲೂಕಿನಲ್ಲಿ ೧೦೨ ಹಳ್ಳಿಗಳು ಮತ್ತು ಚಿಕ್ಕೋಡಿ, ಸದಲಗಾ, ನಿಪ್ಪಾಣಿ, ನಾಗರಮುನ್ನೋಳ್ಳಿ, ಎಂಬ ನಾಲ್ಕು ಹೋಬಳಿ ಪ್ರದೇಶಗಳನ್ನು ಹೊಂದಿದೆ. ವೇದಗಂಗಾ ಮತ್ತು ಕೃಷ್ಣಾ ನದಿಗಳು ಈ ತಾಲೂಕಿನಲ್ಲಿ ಹರಿದಿದ್ದರಿಂದ ಬಹಳಷ್ಟು ನೀರಾವರಿ ಸೌಲಭ್ಯ ಹೊಂದಿರುತ್ತದೆ. ಚಿಕ್ಕೋಡಿ ತಾಲ್ಲೂಕಿನ ಪ್ರದೇಶ ಇತಿಹಾಸ ಶಿಲಾ ಸಂಸ್ಕೃತಿಯಿಂದ ಪ್ರಾರಂಭಗೊಳ್ಳುತ್ತಿದ್ದು, ಸದಲಗಾ, ಯಕ್ಸಂಬಾ, ಕಲ್ಲೋಳ್ಳಿ, ಶಿಲಾ ತಾಮ್ರಯುಗದ ನೆಲೆಗಳಾಗಿವೆ. ಕೃಷ್ಣಾ ಕಿತ್ತೂರಿನಲ್ಲಿ ಬೂದಿದಿಬ್ಬ ದೊರೆತಿದ್ದು ಚಂದೂರು ಮಧ್ಯ ಹಳೆಯ ಶಿಲಾಯುಗದ ನೆಲೆಯನ್ನು ಹೊಂದಿದೆ. ಹಾಗೆಯೇ ಮಂಜರಿಯ ನೆಲೆಯು ಮಧ್ಯ ಹಳೆಯ ಶಿಲಾಯುಗ ಮತ್ತು ಸೂಕ್ಷ್ಮ ಶಿಲಾಯುಗಕ್ಕೆ ಸಂಬಂಧಿಸಿದ್ದಾಗಿದೆ. ಇಲ್ಲಿಯ ಕಡೋಳಿ ನೆಲೆ ಇತಿಹಾಸ ಆರಂಭಯುಗಕ್ಕೆ ಸೇರಿದ ಬಗ್ಗೆ ಪುರಾತತ್ವ ಅಧ್ಯಯನದಿಂದ ತಿಳಿದುಬರುವುದು.

ಆದರೆ ಪ್ರಸ್ತುತ ಈ ಪ್ರದೇಶದ ಅನ್ವೇಷಣೆಯಲ್ಲಿ ಕೆಲವು ಮಹಾಸತಿ ಶಿಲ್ಪಗಳು ಕಂಡುಬಂದಿದ್ದು ಅವುಗಳನ್ನು ಇಲ್ಲಿ ಅಧ್ಯಯನ ಮಾಡಲಾಗಿದೆ.

* ಸದಲಗಾ ಗ್ರಾಮದ ಹೊರಗೆ ಇರುವ ಒಂದು ಮಹಾಶಿಲ್ಪದಲ್ಲಿ ಬಲತೋಳುಗ್ಯೆಯನ್ನು ಉದ್ದವಾದ ಕಂಬದ ಮಧ್ಯ ಜೋಡಿಸಲಾಗಿದೆ. ಮೇಲ್ಭಾಗದಲ್ಲಿ ಕೈ ಮತ್ತು ಕಂಬದ ತುದಿ ಮಧ್ಯ ಶಿವಲಿಂಗವಿದ್ದು, ಅದನ್ನು ಯತಿ ಮತ್ತು ದಂಪತಿಗಳು ಕೈ ಮುಗಿದು ಪೂಜಿಸುತ್ತಿರುವ ರೀತಿಯಲ್ಲಿ ಕೆತ್ತಲಾಗಿದೆ.(?) ಈ ರೀತಿಯ ಸ್ವಲ್ಪ ಭಿನ್ನವಾದ ಒಂದು ಶಿಲ್ಪ ಮಂಗೋರಿಯಲ್ಲಿದೆ. (ಇದು ಏಕ ಕಂಬಕ್ಕೆ ಜೋಡಿಸಿದ ಬಲತೋಳುಗ್ಯೆ ಶಿಲ್ಪಗಳ ಉದಾಹರಣೆ)
* ಚಿಂಚಣಿ. ಗ್ರಾಮದ ಮುಖ್ಯ ರಸ್ತೆಯ ಬದಿಯಲ್ಲಿಯ ಒಂದು ಶಿಲ್ಪದಲ್ಲಿ ಕೇವಲ ಕಂಬಕ್ಕೆ ಜೋಡಿಸಿದ ಬಲತೋಳುಗ್ಯೆ ಚಿತ್ರವಿದೆ. ತೋಳಿನ ಕೆಳಗಡೆ ದಂಪತಿಗಳು ಕೈ ಮುಗಿದು ಕುಳಿತಿರುವರು. ಈ ನಮೂನೆಯ ಶಿಲ್ಪಗಳು ಮಂಗೂರು ಮತ್ತು ಗಳತಗಾ ಗ್ರಾಮಗಳಲ್ಲಿವೆ. ಈ ಶಿಲ್ಪದಲ್ಲಿ ಸೂರ್ಯ ಚಂದ್ರ, ಶಿವಲಿಂಗ ಮತ್ತು ದಂಪತಿಗಳು ಎದ್ದು ಕಾಣುವಂತೆ ಚಿತ್ರಿಸಲಾಗಿದೆ. (ಇದು ಏಕ ಕಂಬಕ್ಕೆ ಜೋಡಿಸಿದ ತೋಳುಗ್ಯೆ ಜೊತೆ ದೃಶ್ಯಗಳುಳ್ಳ ಶಿಲ್ಪಗಳ ಉದಾಹರಣೆ)
* ಬೆಡಕಿಹಾಳ. ಗ್ರಾಮದ ಸಿದ್ದೇಶ್ವರ ದೇವಾಲಯದ ಒಳಗೋಡೆಯಲ್ಲಿರುವ ಮಹಾಸತಿ ಶಿಲ್ಪದಲ್ಲಿ ಎಡ ಅಂಚಿನ ಗುಂಟು ತೋರಿಸಿದ ಕಂಬ, ಅದರ ಮಧ್ಯಭಾಗಕ್ಕೆ ಬಲತೋಳುಗ್ಯೆಯನ್ನು ಜೋಡಿಸಲಾಗಿದೆ ಈ ಕಂಬಕ್ಕೆ ಎರಡು ಚೌಕ ಪಟ್ಟಿಕೆಗಳು ಮೇಲೆ ಕಳಸ ಅಲಂಕಾರವುಳ್ಳ ಗುಮ್ಮಟವಿದೆ. ಶಿಲ್ಪದಲ್ಲಿ ತೋಳುಗ್ಯೆಯೊಂದಿಗೆ ನಾಲ್ಕು ಬೇರೆ ಬೇರೆ ಚಿತ್ರಗಳಿವೆ. ಕೆಳಗಿನ ಚಿತ್ರದಲ್ಲಿ ವೀರ ತನ್ನ ಎರಡು ಕೈಗಳನ್ನು ಮೇಲಕ್ಕೆತ್ತಿಕೊಂಡು ಕುದುರೆ ಮೇಲೆ ಕುಳಿತ್ತಿದ್ದಾನೆ. ತೋಳುಗ್ಯೆಯ ಮೇಲೆ ದಂಪತಿಗಳು ಕೈಮುಗಿದು ವಿಮಾನದಲ್ಲಿ ಕುಳಿತಿದ್ದಾರೆ. ಅದರ ಮತ್ತು ಕಂಬದ ಮೇಲ್ಭಾಗದಲ್ಲಿ ಮಂಟಪವಿದ್ದು ಅಲ್ಲಿ ಶಿವಲಿಂಗಕ್ಕೆ ಪೂಜಿಸುತ್ತಿರುವ ಯತಿ ಇದ್ದಾನೆ. ಅದರ ಮೇಲೆ ಬಲಗಡೆಗೆ ಒಂದು

* ಸಹ ಪ್ರಾಧ್ಯಾಪಕರು, ಆರ್.ಸಿ.ಯು. ಪಿ.ಜಿ. ಸೆಂಟರ್, (ತೊರವಿ) ಬಿಜಾಪುರ.
** ಸಂಶೋಧನಾ ವಿದ್ಯಾರ್ಥಿ, ಆರ್.ಸಿ.ಯು. ಪಿ.ಜಿ. ಸೆಂಟರ್, (ತೊರವಿ) ಬಿಜಾಪುರ.



ಬಲತೋಳುಗೈ ಶಿಲ್ಪ



ಪಟ್ಟಿಕೆಯುಳ್ಳ ಮಹಾಸತಿ ಶಿಲ್ಪ



ಜೋಡು ತೋಳುಗೈಯುಳ್ಳ ಶಿಲ್ಪ



ತೋಳುಗೈ ಜೊತೆ ದೃಶ್ಯಗಳುಳ್ಳ ಶಿಲ್ಪ

ಚೌಕದಡಿಯಲ್ಲಿ ದಂಪತಿಗಳು ಕೈಮುಗಿದು ಕುಳಿತಿದ್ದಾನೆ. ಈ ಶಿಲ್ಪದಲ್ಲಿ ಕಂಬ, ಕುದುರೆ ಸವಾರ, ಶಿವಲಿಂಗ ದಂಪತಿಗಳನ್ನು ವಿಮಾನ ಮತ್ತು ಗೂಡಿನಲ್ಲಿ ಚಿತ್ರಿಸಿರುವ ಶೈಲಿಯು ವಿಶೇಷವೆನಿಸಿದೆ. (ಇದು ಏಕ ಕಂಬಕ್ಕೆ ಜೋಡಿಸಿದ ತೋಳುಗೈ ಜೊತೆ ದೃಶ್ಯಗಳುಳ್ಳ ಶಿಲ್ಪಗಳ ಉದಾಹರಣೆ)

* ಚಿಂಚಣಿ. ಗ್ರಾಮ ರಾಮಲಿಂಗೇಶ್ವರ ದೇವಾಲಯದ ಒಳಗೋಡೆಯ ಮಹಾಸತಿ ಶಿಲ್ಪದಲ್ಲಿ ಜೋಡು ತೋಳುಗೈಗಳು ಇರುವುದು ವಿಶೇಷ. ಅದರಲ್ಲಿ ಎಡಕ್ಕೆ ಬಲತೋಳುಗೈ, ಬಲಕ್ಕೆ ಎಡತೋಳುಗೈಗಳನ್ನು ಒಂದಕ್ಕೊಂದು ಸಮಾನಂತರವಾಗಿ ಚಿತ್ರಿಸಿರು ವುದು ಗಮನೀಯ. ಈ ತೋಳುಗೈಗಳ ಕೆಳಗೆ ಕುದುರೆ ಸವಾರ, ತಲೆ ಮೇಲೆ ವಸ್ತುಗಳನ್ನು ಹೊತ್ತ ವ್ಯಕ್ತಿ ಮತ್ತು ಎರಡು ಕೈಗಳನ್ನು ಮೇಲಕ್ಕೆತ್ತಿದ ಸತಿ ಮುಂತಾದವರ ದೃಶ್ಯವು ವಿಶೇಷವೆನಿಸಿದೆ.(ಜೋಡು ತೋಳುಗೈಯುಳ್ಳ ಶಿಲ್ಪಗಳ ಉದಾಹರಣೆ)

* ಸದಲಗಾ ಗ್ರಾಮದ ಮಹಾದೇವ ದೇವಾಲಯದ ಶಿಲ್ಪದಲ್ಲಿ ಮೂರು ಪಟ್ಟಿಕೆಗಳಿವೆ. ಕೆಳಗಿನ ಪಟ್ಟಿಕೆಯಲ್ಲಿ ದಂಪತಿಗಳು ಕೈಮುಗಿದು ಕುಳಿತಿದ್ದು, ಅವರ ಮಧ್ಯ ಬಾಳೆಯ ಗಿಡವಿದೆ. ಈ ಪಟ್ಟಿಕೆಯ ಎಡಕ್ಕೆ ಮೇಲ್ಭಾಗದಲ್ಲಿ ಅಂಚಿನಗುಂಟ ಅಲಂಕೃತ ಕಂಬವಿದೆ. ಈ ಕಂಬಕ್ಕೆ ಎರಡು ಚೌಕಗಳಿದ್ದು ಮೇಲಿನ ಚೌಕಪಟ್ಟಿಯಲ್ಲಿ ಉದ್ದ ಕಳಸ(?)ವುಳ್ಳ ಗುಮ್ಮಟವಿದೆ. ಈ ಕಂಬದ ಎರಡನೇಯ ಚೌಕಪಟ್ಟಿಕೆಗೆ ಬಲತೋಳುಗೈ ತುದಿಯನ್ನು ಜೋಡಿಸಲಾಗಿದೆ. ಈ ತೋಳಿನ ಮತ್ತು ಕೆಳಗಿನ ಪಟ್ಟಿಕೆಯ ಮಧ್ಯದಲ್ಲಿ ಅರ್ಧವೃತ್ತಾಕಾರದ ಪಟ್ಟಿಕೆ ಇದೆ. ಅದರ ಮಧ್ಯದಲ್ಲಿ ಶಿವಲಿಂಗವಿದೆ. ಬಲಕ್ಕೆ ಮತ್ತು ಕಂಬದ ಕಳಸದ ಮೇಲ್ಭಾಗದಲ್ಲಿ ಅಸ್ಪಷ್ಟ ಚಿತ್ರಗಳ ಅಲಂಕರಣವಿದೆ. ಈ ಶಿಲ್ಪದಲ್ಲಿ ಬಾಳೆಗಿಡ, ಶಿವಲಿಂಗ ಮತ್ತು ಬಲತೋಳುಗೈ ಕಂಬಗಳು ವಿಶಿಷ್ಟವೆನಿಸಿವೆ. (ಪಟ್ಟಿಕೆಯುಳ್ಳ ಮಹಾಸತಿ ಶಿಲ್ಪಗಳ ಉದಾಹರಣೆ)

ಪಂಗೇರಿಯ ಅಡ್ಡ ರಸ್ತೆ ಹತ್ತಿರ ದೊರೆತಿರುವ ಮಹಾಸತಿ ಶಿಲ್ಪದಲ್ಲಿ ಅನೇಕ ಶಿಲ್ಪಗಳನ್ನು ಮೂರು ಭಾಗದಲ್ಲಿ ತೋರಿಸಲಾಗಿದೆ. ಕೆಳಗಿನ ಭಾಗದಲ್ಲಿ ನಾಲ್ವರು ವೀರರು ಕೈಮುಗಿದು ನಿಂತಿದ್ದಾರೆ. ಬಲಗಡೆ ತೋಳಿನ ಮೇಲೆ ಗಿಂಡಿಯಿದೆ. ಮೇಲಿನ ಭಾಗದಲ್ಲಿ ಶಿವಲಿಂಗ, ನಿಂತ ನಂದಿ, ಕೈಮುಗಿದು ಕುಳಿತ ವೀರರ ಚಿತ್ರಗಳಿವೆ. ಈ ಶಿಲ್ಪದಲ್ಲಿ ತೋರಿಸಿದ ಗಿಂಡಿ ಚಿತ್ರ ವಿಶೇಷ ಗಮನವನ್ನು ಸೆಳೆಯುತ್ತದೆ.

ಈ ಮಹಾಸತಿ ಶಿಲ್ಪಗಳು ಶೈಲಿಯ ದೃಷ್ಟಿಯಿಂದ ಕ್ರಿ.ಶ. ೧೬ ಮತ್ತು ೧೭ ನೇ ಶತಮಾನಕ್ಕೆ ಸೇರಿರುವಂತೆ ತೋರುತ್ತವೆ. ಇವು ಈ ಪ್ರದೇಶದ ಆ ಕಾಲದ ಮೂಲ ಆಕರಗಳೆನಿಸಿಕೊಳ್ಳುವವು. ಈ ಪ್ರದೇಶದಲ್ಲಿ ಆಳೆತ್ತರದ ಮನುಷ್ಯಾಕೃತಿಯುಳ್ಳ ಮಹಾಸತಿ ಶಿಲ್ಪಗಳು ಒಂದೂ ಕಂಡುಬರುವುದಿಲ್ಲ ಹಾಗೂ ಕಂಡುಬಂದಿರುವ ಮಹಾಸತಿ ಶಿಲ್ಪಗಳಲ್ಲಿ ಕೆಲವು ವಿಶಿಷ್ಟ ಲಕ್ಷಣಗಳಿರುವುದು ಗಮನೀಯ. ಬಾಳೆಗಿಡ, ಚಿತೆಯ ಚಿತ್ರ, ಎತ್ತಿದ ಎಡ ತೋಳುಗೈ, ಕಂಬಗಳಲ್ಲಿ (ಅರ್ಧಗಂಬ) ಅಲಂಕರಣ, ಒಂದು ಕಂಬದ ಕಳಸ ಭಾಗ ವನ್ನು ಮಹಿಳೆಯ ಮುಖದ ರೂಪದಲ್ಲಿ ಕಂಡರಿಸಿರುವುದು, ಕುದುರೆ ಮೇಲೆ ಸತಿ ನಿಂತಿರುವುದು. ದೇವಲೋಕಕ್ಕೆ ಅಪ್ಸರೆಯರನ್ನು ಒಯ್ಯುತ್ತಿರುವುದು ಈ ಪ್ರದೇಶದ ಕೆಲವು ವಿಶೇಷ ಅಂಶಗಳಾಗಿವೆ. ಚಿಯೆಯನ್ನು ತೋರಿಸಿದ ಶಿಲ್ಪಗಳು ಕರ್ನಾಟಕದಲ್ಲಿ ಅನೇಕ ಕಡೆಗಳಲ್ಲಿ ಕಂಡುಬಂದಿವೆ.

ಆಧಾರಸೂಚಿ

೧. **ಇಂಡಿಯನ್ ಆ್ಯಂಟಿಕ್ವೆರಿ** ವ್ಯಾಲ್ಯೂಮ್ ೧೨, ಪುಟ ೯೫.

೨. ಸೂರ್ಯನಾಥ ಕಾಮತ್ (ಪ್ರ.ಸಂ.), **ಬೆಳಗಾವಿ ಜಿಲ್ಲಾ ಗ್ಯಾಸೆಟಿಯರ್**, ೧೯೮೬. ಬೆಂಗಳೂರು. ಪುಟ ೧೦೦.

೩. **ಎನ್ಯುಯಲ್ ರಿಪೋರ್ಟ್ ಆಫ್ ಸೌತ್ ಇಂಡಿಯನ್ ಎಫಿಗ್ರಾಫಿ**, (೧೯೪೨). ನಂ. ೬.

೪. ಸೂರ್ಯನಾಥ ಕಾಮತ್, (ಪ್ರ.ಸಂ.) **ಬೆಳಗಾವಿ ಡಿಸ್ಟ್ರಿಕ್ಟ್ ಗ್ಯಾಸೆಟಿಯರ್**, ೧೯೮೬. ಬೆಂಗಳೂರು. ಪುಟ ೧೦೧ ರಿಂದ ೧೦೬.

೫. ಶೇಷಾಶಾಸ್ತ್ರಿ, **ಕರ್ನಾಟಕದಲ್ಲಿ ವೀರಗಲ್ಲು**, ೧೯೮೨, ಬೆಂಗಳೂರು.

೬. Dr. C.N. Koligudde, *Archacology of Chikkodi & Gokak Taluk*, unpublished thesis, Karnataka University, Dharwad, 2005.

ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೂಕಿನ ಮಾಸ್ತಿಕಲ್ಲುಗಳು: ಒಂದು ಅಧ್ಯಯನ

ಡಾ. ಹನುಮ ನಾಯಕ* ಶ್ರೀ ಪ್ರವೀಣ್ ಬೆಳ್ತಂಗಡಿ**

ಹಾಸನ ಜಿಲ್ಲೆಯ ಅರಸೀಕೆರೆ ತಾಲೂಕಿನಲ್ಲಿ ಕಂಡು ಬಂದಿರುವ ಮಾಸ್ತಿಕಲ್ಲುಗಳು ಸಾಕಷ್ಟು ವಿಶೇಷತೆಯನ್ನು ಹೊಂದಿವೆ ಎನ್ನಬಹುದು. ಈ ತಾಲೂಕಿನ ಐದು ಹೋಬಳಿಗಳಲ್ಲಿ ಯೋಜನಾ ಕಾರ್ಯದ ಕ್ಷೇತ್ರಕಾರ್ಯವನ್ನು ಕೈಗೊಂಡಾಗ ಸುಮಾರು ೩೪ ಮಾಸ್ತಿಕಲ್ಲುಗಳು ಹೊಸದಾಗಿ ಗೋಚರಿಸಿವೆ. ಇಲ್ಲಿಯವರೆಗೆ ನಡೆಸಿರುವ ಅಧ್ಯಯನದಲ್ಲಿ ಕೇವಲ ಎರಡೇ ಸ್ಥಳಗಳಲ್ಲಿರುವ ಮಾಸ್ತಿಕಲ್ಲುಗಳ ಮಾಹಿತಿಗಳು ಪ್ರಕಟಗೊಂಡಿವೆ.[1] ಕಸಬಾ ಹೋಬಳಿಯಲ್ಲಿರುವ ಅರಸೀಕೆರೆಯಲ್ಲಿ ಕ್ರಿ.ಶ.೧೩ನೇ ಶತಮಾನದ ಹೊಯ್ಸಳ ನರಸಿಂಹನ ಆಳ್ವಿಕೆಯ ಕಾಲದ ಒಂದು ಮಾಸ್ತಿಕಲ್ಲಿನ ಶಾಸನವು ದೇವನೂರ ಬೀಡಕಟ್ಟ ಇದ್ದಲ್ಲಿ ಬೀರೋಜನ ಸೊಸೆ ಮಹಾದೇವಿ ತನ್ನ ಗಂಡನ ಜೊತೆ ಸುರಲೋಕ ಪ್ರಾಪ್ತೆಯಾದಳು ಎಂಬುದು ಉಲ್ಲೇಖಗೊಂಡಿದೆ.[2] ಬೀರೋಜ ಎನ್ನುವುದು ಇಲ್ಲಿ ವಿಶೇಷವಾಗಿದೆ. ಏಕೆಂದರೆ ಓಜ ಶಬ್ಧವು ಶಿಲ್ಪಿಯನ್ನು ಸೂಚಿಸುತ್ತದೆ. ಹಾಗೂ ಬೀರ ಎಂಬ ಪದವು ವೀರನನ್ನು ಸೂಚಿಸುತ್ತದೆ. ಈ ಶಾಸನದಿಂದ ಶಿಲ್ಪಿಗಳು ಸಹ ನಾಡಿನ ರಕ್ಷಣೆಗೋಸ್ಕರ ಹೋರಾಡುತ್ತಿದ್ದರೆಂದು ತಿಳಿಯಬಹುದು. ಕರಕುಶಲಗಾರರೂ ಸಹ ನಾಡಿನ ಕೃತ್ಯದಲ್ಲಿದ್ದುದನ್ನು ಕೆಲವು ವಿದ್ವಾಂಸರು ಬೆಳಕಿಗೆ ತಂದಿದ್ದಾರೆ.[3]

ಜಾವಗಲ್ ಹೋಬಳಿ ಉಂಡಿಗನಾಳುವಿನ ಚೌಡೇಶ್ವರಿ ದೇವಾಲಯದ ಮುಂಭಾಗದಲ್ಲಿರುವ ಕ್ರಿ.ಶ. ೧೬ನೇ ಶತಮಾನಕ್ಕೆ ಸಂಬಂಧಿಸಿರುವ ಮಾಸ್ತಿಕಲ್ಲಿನಲ್ಲಿ ಇರುವ ಮಾಹಿತಿ ಅಸ್ಪಷ್ಟವಾಗಿವೆ. ಇದರಲ್ಲಿ ತಿಳಿಸಿರುವಂತೆ ಬೊಮ್ಮಜೆಟ್ಟಿಗಳ ಅಣ್ಣನು ಹುಲಿಬಾಯಿರ.....ರಾಮಜೀಯ ಮಗಳು ನೂಕಹಿಹುಲಿ...ಕಾದಿ ಚಪಾಯಿದಳು ಆತನ... ಯ.ಸ.ಜನ ಮಾಗನು ಮಯಿಜನು ಎಂಬ ಬರಹಗಳಿವೆ.[4] ಇಲ್ಲಿಯೂ ಸಹ ಜೆಟ್ಟಿ ಮತ್ತು ಹುಲಿ ಶಬ್ಧಗಳು ಸ್ಪಷ್ಟವಾಗಿ ಹುಲಿಕಾಟವನ್ನು ತಿಳಿಯುವಲ್ಲಿ ಕಾದಾಡಿದಾಗ ಸತ್ತಂತಹವನ ಹೆಂಡತಿಯು



ಸತಿಯಾಗಿರುವುದು ಕಂಡುಬರುತ್ತದೆ. ಇವೆರಡು ಮಾಸ್ತಿಕಲ್ಲುಗಳ ಉಲ್ಲೇಖಗಳನ್ನು ಬಿಟ್ಟರೆ ಅರಸೀಕೆರೆ ತಾಲೂಕಿನ ಬೇರೆ ಯಾವುದೇ ಮಾಸ್ತಿಕಲ್ಲುಗಳಲ್ಲಿ ಬರವಣಿಗೆ ಕಾಣಸಿಗುವುದಿಲ್ಲ.

ಅರಸೀಕೆರೆ ತಾಲ್ಲೂಕಿನ ಐದು ಹೋಬಳಿಗಳಲ್ಲಿ ಕಂಡುಬಂದ ೩೪ ಮಾಸ್ತಿಕಲ್ಲುಗಳ ಪೈಕಿ ಕಸಬಾ ಹೋಬಳಿಯಲ್ಲಿ ೧೨, ಜಾವಗಲ್ ಹೋಬಳಿಯಲ್ಲಿ ೧೦, ಕಣಕಟ್ಟೆ ಹೋಬಳಿಯಲ್ಲಿ ೬, ಬಾಣಾವರ ಹೋಬಳಿಯಲ್ಲಿ ೪ ಹಾಗೂ ಗಂಡಸಿ ಹೋಬಳಿಯಲ್ಲಿ ೨ ಮಾಸ್ತಿಕಲ್ಲುಗಳು ಹೊಸದಾಗಿ ಕಂಡುಬಂದಿವೆ.

ಕಸಬಾ ಹೋಬಳಿಯ ಹೊಸಕಲ್ಲನಾಯಕನ ಹಳ್ಳಿಯಲ್ಲಿರುವ ಮಾಸ್ತಿಕಲ್ಲು ಗ್ರಾಮದೇವಾಲಯದ ಮುಂಭಾಗದಲ್ಲಿದೆ. ಈ ಮಾಸ್ತಿಕಲ್ಲಿನಲ್ಲಿ ವೀರ ಮತ್ತು ಆತನ ಸತಿಯ ಶಿಲ್ಪವಿದ್ದು, ಆಭರಣಗಳಿಂದ ಅಲಂಕಾರಗೊಂಡಿರುವ ಭಂಗಿಯಲ್ಲಿವೆ. ವೀರನ ಶಿಲ್ಪ ಸತಿಯ ಶಿಲ್ಪದ ಬಲಭಾಗದಲ್ಲಿ ಕೈಮುಗಿದಿರುವ ರೀತಿಯಲ್ಲಿದೆ. ಮುರುಂಡಿಯಲ್ಲಿರುವ ಮಾಸ್ತಿಕಲ್ಲು ಗುಡಿಯ ಒಳಭಾಗದಲ್ಲಿ ಗೋಚರಿಸುತ್ತದೆ. ಇದರಲ್ಲಿ ಸತಿಯ ಶಿಲ್ಪ ಮಾತ್ರವಿದ್ದು ಆಭರಣಗಳಿಂದ ಅಲಂಕಾರಗೊಂಡಿರುವ ರೀತಿಯಲ್ಲಿ ಗ್ರಾಮದೇವಾಲಯದ ಬಲಭಾಗದಲ್ಲಿ ಕಾಣಸಿಗುತ್ತದೆ. ಈ ಶಿಲ್ಪಕ್ಕೆ ಬಿಳಿಯ ಬಣ್ಣವನ್ನು

* ಇತಿಹಾಸ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ, ಮಂಗಳೂರು-೫೭೪೧೯೯.
** ಇತಿಹಾಸ ಉಪನ್ಯಾಸಕರು ಶ್ರೀ ಗೋಕರ್ಣನಾಥೇಶ್ವರ ಪದವಿ ಪೂರ್ವ ಕಾಲೇಜು ಗಾಂಧಿನಗರ, ಮಂಗಳೂರು ದಕ್ಷಿಣ ಕನ್ನಡ-೫೭೫೦೦೩.

ಹಚ್ಚಲಾಗಿದೆ. ಟಿ. ಕೋಡಿಹಳ್ಳಿಯಲ್ಲಿರುವ ಮಾಸ್ತಿಕಲ್ಲು ಕೂಡಾ ಗುಡಿಯೊಳಗೆ ಕಾಣಸಿಗುತ್ತದೆ. ಇದರಲ್ಲಿ ವೀರ ಹಾಗೂ ಆತನ ಸತಿಯ ಶಿಲ್ಪಗಳನ್ನು ಕೆತ್ತಲಾಗಿದೆ. ಸಾಮಾನ್ಯ ಮಾಸ್ತಿಕಲ್ಲಿನ ಸ್ವರೂಪವನ್ನು ಹೊಂದಿರುವ ಈ ಶಿಲ್ಪಕ್ಕೆ ಇಲ್ಲಿಯ ಜನತೆ ಇಂದಿಗೂ ಕೂಡಾ ಎಣ್ಣೆ ಮತ್ತು ಬಣ್ಣ ಹಚ್ಚಿ ಪೂಜಿಸುತ್ತಿರುವುದು ವಿಶೇಷವಾಗಿದೆ.

ದುಮ್ಮೇನಹಳ್ಳಿಯಲ್ಲಿರುವ ಎರಡು ಮಾಸ್ತಿಕಲ್ಲು ಪ್ರಸ್ತುತ ಊರಿನ ಕೆರೆಯೊಳಗೆ ಕಾಣಸಿಗುತ್ತವೆ. ಮೊದಲನೆಯ ಮಾಸ್ತಿಕಲ್ಲಿನ ಶಿಲ್ಪದಲ್ಲಿ ಸತಿಯ ಮೇಲಕ್ಕೆತ್ತಿದ ಬಲಗೈಯ ಮೇಲ್ಗಡೆ ವೀರನ ಶಿಲ್ಪವನ್ನು ಚಿಕ್ಕದಾಗಿ ಕೆತ್ತಲಾಗಿದೆ. ಈ ಮಾಸ್ತಿಕಲ್ಲಿನ ಸನಿಹದಲ್ಲಿಯೇ ಎರಡನೆಯ ಮಾಸ್ತಿಕಲ್ಲು ಕಾಣಸಿಗುತ್ತದೆ. ಇದಕ್ಕೆ ಅಲ್ಪ ಪ್ರಮಾಣದಲ್ಲಿ ಹಾನಿಯುಂಟಾಗಿದ್ದು ಸಾಮಾನ್ಯ ಸ್ವರೂಪವನ್ನು ಹೊಂದಿದ್ದು, ಕೇವಲ ಸತಿಯ ಶಿಲ್ಪ ಮಾತ್ರ ಗೋಚರಿಸುತ್ತದೆ. ಕೆರೆಯ ನೀರಿನಲ್ಲಿ ಇವುಗಳಿರುವುದರಿಂದಾಗಿ ಶಿಲ್ಪಗಳಿಗೆ ಹಾನಿಯುಂಟಾಗಿದೆ ಎನ್ನಬಹುದು. ಕೆಲ್ಲಂಗೆರೆಯ ಗ್ರಾಮದ ಕೃಷಿ ಜಮೀನಲ್ಲಿರುವ ಮಾಸ್ತಿಕಲ್ಲೊಂದರಲ್ಲಿ ವೀರ ಮತ್ತು ಆತನ ಸತಿಯ ಶಿಲ್ಪಗಳು ಜೊತೆಯಾಗಿ ಕಾಣಸಿಗುತ್ತವೆ. ವೀರನ ಕೈಯಲ್ಲಿ ಆಯುಧ, ಸತಿಯ ಬಲಗೈಯ ಅಂಗೈಯಲ್ಲಿ ನಿಂಬೆಹಣ್ಣನ್ನು ಹಿಡಿದುಕೊಂಡಿರುವ ಚಿತ್ರಣ ಗೋಚರಿಸುತ್ತದೆ. ಕೆಲ್ಲಂಗೆರೆ ಇನ್ನೊಂದು ಮಾಸ್ತಿಕಲ್ಲು ಕೂಡಾ ಕೃಷಿ ಜಮೀನಿನಲ್ಲಿ ಕಂಡು ಬಂದಿದ್ದು ಇದರಲ್ಲಿ ವೀರ ಮತ್ತು ಆತನ ಸತಿಯ ಶಿಲ್ಪಗಳು ಕೆತ್ತಲ್ಪಟ್ಟಿವೆ. ಸತಿಯು ತನ್ನ ಬಲಗೈಯನ್ನು ಮೇಲಕ್ಕೆತ್ತಿದ್ದರೆ ವೀರ ತನ್ನ ಎಡಗೈಯನ್ನು ಸತಿಯ ಹೆಗಲಿನ ಮೇಲೆ ಹಾಕಿರುವ ಶಿಲ್ಪ ವಿಶೇಷವಾಗಿ ಗೋಚರಿಸುತ್ತದೆ. ಹೊನ್ನಶೆಟ್ಟಿಹಳ್ಳಿಯ ಮಾಸ್ತಿಕಲ್ಲು ಅಲ್ಪಪ್ರಮಾಣದ ಆಭರಣಗಳಿಂದ ಅಲಂಕೃತಗೊಂಡಿರುವ ರೀತಿಯಲ್ಲಿದ್ದು ಹಾನಿಗೀಡಾಗಿದೆ.

ಕೆಂಚೇನಹಳ್ಳಿಯಲ್ಲಿರುವ ಮಾಸ್ತಿಕಲ್ಲು ಗ್ರಾಮದ ಕೃಷಿ ಜಮೀನಿನಲ್ಲಿ ಕಂಡುಬಂದಿದೆ. ಹಾನಿಗೀಡಾದ ಗುಡಿಯೊಳಗೆ ಇರುವ ಮಾಸ್ತಿಕಲ್ಲಿನ ಮೇಲ್ಭಾಗವು ತುಂಡಿತಗೊಂಡಿದೆ. ಮಾಸ್ತಿಕಲ್ಲು ಸಾಕಷ್ಟು ಆಭರಣಗಳನ್ನು ಸತಿಯು ಧರಿಸಿರುವುದನ್ನು ಪ್ರತಿಬಿಂಬಿಸುವುದಲ್ಲದೇ, ಎತ್ತಿರುವ ಬಲಗೈಯಲ್ಲಿ ನಿಂಬೆಹಣ್ಣು ಹಿಡಿದುಕೊಂಡಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಈ ಮಾಸ್ತಿಕಲ್ಲಿಗೆ ಸ್ಥಳೀಯರು ಇಂದಿಗೂ ಪೂಜೆ ಸಲ್ಲಿಸುತ್ತಿರುವುದು ಕಂಡು ಬಂದಿದೆ. ನಾಗಪುರಿ ಬೆಟ್ಟ ಶ್ರೇಣಿಯ ತಳಭಾಗದಲ್ಲಿರುವ ಬಂಡೆಯ ಮೇಲೆ ಎರಡು ಶಿಲ್ಪಗಳನ್ನು ಕೆತ್ತಲಾಗಿದೆ. ಎಡಭಾಗದಲ್ಲಿರುವ ಶಿಲ್ಪವು ನಂದಿಯಾಗಿದ್ದು, ಬಲಭಾಗದಲ್ಲಿ ಕೈಮುಗಿದು ನಿಂತಿರುವ ವೀರ ಮತ್ತು ಆತನ ಸತಿಯ ಶಿಲ್ಪವನ್ನು ಕೆತ್ತಲಾಗಿದೆ.

ಬೊಮ್ಮೇನಹಳ್ಳಿಯಲ್ಲಿರುವ ಮಾಸ್ತಿಕಲ್ಲು ಗ್ರಾಮದ ಆಂಜನೇಯ ದೇವಾಲಯದ ಪ್ರಾಂಗಣದಲ್ಲಿ ಗೋಚರಿಸುತ್ತದೆ. ಇದು



ಸಾಕಷ್ಟು ಹಾನಿಗೀಡಾಗಿದ್ದು ಕೇವಲ ಸತಿಯ ಶಿಲ್ಪ ಮಾತ್ರ ಕಂಡುಬಂದಿದೆ.

ಕಣಕಟ್ಟೆ ಹೋಬಳಿಯ ಕಾಮಸಮುದ್ರದಲ್ಲಿರುವ ಮಾಸ್ತಿಕಲ್ಲು ಗ್ರಾಮದ ಕೆರೆ ಏರಿಯ ಸಮೀಪದ ಬಯಲಿನಲ್ಲಿ ಕಾಣಸಿಗುತ್ತದೆ. ಇಲ್ಲಿನ ಮಾಸ್ತಿಕಲ್ಲು ಸತಿಯ ಶಿಲ್ಪವನ್ನು ಹೊಂದಿಲ್ಲವಾದರೂ ಕೇವಲ ಕೈಯ ಚಿತ್ರವನ್ನು ಮಾತ್ರ ಹೊಂದಿದೆ. ಜನ್ನಾವರದಲ್ಲಿರುವ ಮಾಸ್ತಿಕಲ್ಲು ಗ್ರಾಮದ ದೇವಾಲಯವೊಂದರ ಪ್ರಾಂಗಣದಲ್ಲಿದೆ. ಕೇವಲ ಸತಿಯ ಶಿಲ್ಪವನ್ನು ಮಾತ್ರ ಹೊಂದಿರುವ ಈ ಮಾಸ್ತಿಕಲ್ಲಿಗೆ ಊರಿನ ಜನತೆ ಇಂದಿಗೂ ಪೂಜೆ ಸಲ್ಲಿಸುತ್ತಿರುವುದು ಗೋಚರಿಸುತ್ತದೆ. ನಾಗವೇದಿಯಲ್ಲಿರುವ ಮಾಸ್ತಿಕಲ್ಲೊಂದನ್ನು ದೇವಾಲಯವೊಂದರ ಗೋಡೆಗೆ ನಿಲ್ಲಿಸಲಾಗಿದ್ದು ಬಹುತೇಕ ಶಿಥಿಲಗೊಂಡ ರೀತಿಯಲ್ಲಿದೆ. ಇದರಲ್ಲಿ ಕೇವಲ ಸತಿಯ ಶಿಲ್ಪ ಮಾತ್ರ ಗೋಚರಿಸುತ್ತದೆ. ಸಾತಂಗೆರೆಯಲ್ಲಿರುವ ಮಾಸ್ತಿಕಲ್ಲನ್ನು ಕಲ್ಲುಚಪ್ಪಡಿಗಳ ಮಧ್ಯದಲ್ಲಿ ನಿಲ್ಲಿಸಲಾಗಿದ್ದು ಕೇವಲ ಸತಿಯ



ಶಿಲ್ಪವನ್ನು ಮಾತ್ರ ಕಾಣಬಹುದಾಗಿದೆ. ಕರಡಿಹಳ್ಳಿಯಲ್ಲಿರುವ ಮಾಸ್ತಿಕಲ್ಲು ತೀರಾ ಹಾನಿಗೀಡಾಗಿದ್ದು ಕೇವಲ ಸತಿಯ ಅಸ್ಪಷ್ಟ ಶಿಲ್ಪ ಗೋಚರಿಸುತ್ತದೆ.

ಬಾಣಾವರ ಹೋಬಳಿಯ ಚಿಕ್ಕಾರೆಹಳ್ಳಿಯಲ್ಲಿರುವ ಮಾಸ್ತಿಕಲ್ಲು ಗ್ರಾಮದ ತೆಂಗಿನ ತೋಪಿನ ಗುಡಿಯೊಳಗೆ ಕಾಣ ಬರುತ್ತದೆ. ಇದರಲ್ಲಿ ಸತಿಯ ಸಾಮಾನ್ಯ ಶಿಲ್ಪ ಮಾತ್ರ ಗೋಚರಿಸುತ್ತದೆ. ಇದೇ ರೀತಿಯ ಮಾಸ್ತಿಕಲ್ಲು ಬೈರಾಂಬುದಿಯಲ್ಲಿರುವ ದೇವಾಲಯದ ವಠಾರದಲ್ಲಿ ಗುಡಿಯೊಳಗೆ ಕಾಣಸಿಗುತ್ತದೆ. ಇದರಲ್ಲಿಯೂ ಕೇವಲ ಸತಿಯ ಸಾಮಾನ್ಯ ಶಿಲ್ಪವನ್ನು ಗಮನಿಸಬಹುದಾಗಿದೆ. ಮನಕತ್ತೂರು ಗ್ರಾಮದ ರಸ್ತೆಯ ಬದಿಯಲ್ಲಿ ಮಾಸ್ತಿಕಲ್ಲು ಗುಡಿಯೊಳಗೆ ಗೋಚರಿಸುತ್ತದೆ. ಇಂದಿಗೂ ಕೂಡಾ ಗ್ರಾಮಸ್ಥರು ಇದಕ್ಕೆ ಪೂಜೆ ಸಲ್ಲಿಸುತ್ತಿದ್ದಾರೆ.

ಗಂಡಸಿ ಹೋಬಳಿಯ ಹೊನ್ನಕುಮಾರನಹಳ್ಳಿಯಲ್ಲಿರುವ ಮಾಸ್ತಿಕಲ್ಲು ವಿಶೇಷತೆಯನ್ನು ಹೊಂದಿದ್ದು, ಇದರಲ್ಲಿ ವೀರ ಹಾಗೂ ಆತನ ಸತಿಯ ಶಿಲ್ಪವು ಬಹಳ ಸುಂದರವಾಗಿ ಮೂಡಿ ಬಂದಿದೆ. ವೀರನು ತನ್ನ ಬಲಗೈಯಲ್ಲಿ ಖಡ್ಗವನ್ನು



ಹಾಗೂ ಎಡಗೈಯಲ್ಲಿ ಗುರಾಣಿಯನ್ನು ಹಿಡಿದಿರುವುದಲ್ಲದೇ, ಸತಿಯಂತೆ ತಾನು ಕೂಡಾ ಮೈಮೇಲೆ ಆಭರಣಗಳನ್ನು ಧರಿಸಿರುವುದನ್ನು ಚಿತ್ರಿಸಲಾಗಿದೆ. ನಾಗರಹಳ್ಳಿಯಲ್ಲಿರುವ ಮಾಸ್ತಿಕಲ್ಲು ಕೂಡಾ ಸಾಮಾನ್ಯ ಲಕ್ಷಣಗಳನ್ನು ಹೊಂದಿದ್ದು ಇಂದಿಗೂ ಇವನ್ನು ಜನ ಪೂಜೆ ಮಾಡುತ್ತಿರುವ ಅಂಶ ಬೆಳಕಿಗೆ ಬಂದಿದೆ.

ಜಾವಗಲ್ ಹೋಬಳಿಯ ಬೆಳುವಳ್ಳಿ ಗ್ರಾಮದ ದೇವಾಲಯವೊಂದರ ಸಮೀಪದ ಪಾಳು ಸ್ಥಳದಲ್ಲಿ ಎರಡು ಮಾಸ್ತಿಕಲ್ಲುಗಳು ಗೋಚರಿಸುತ್ತವೆ. ಮೊದಲನೆಯ ಮಾಸ್ತಿಕಲ್ಲು ನೆಲಕ್ಕೆ ವಾಲಿಕೊಂಡಿದೆ. ಇದರಲ್ಲಿ ಬಲಗೈ ಮೇಲಕ್ಕೆತ್ತಿರುವ ಮಾಸ್ತಿ ಶಿಲ್ಪದೊಂದಿಗೆ ವೀರನ ಶಿಲ್ಪವೂ ಕೂಡಾ ಸಣ್ಣದಾಗಿ ಚಿತ್ರಿತಗೊಂಡಿದೆ. ಈ ಮಾಸ್ತಿಕಲ್ಲಿನ ಎಡಭಾಗದಲ್ಲಿ ಇನ್ನೊಂದು ಮಾಸ್ತಿಕಲ್ಲು ಗುಡಿಯೊಳಗೆ ಕಂಡು ಬಂದಿದೆ. ಇದರಲ್ಲಿಯೂ ವೀರನ ಹಾಗೂ ಸತಿಯ ಶಿಲ್ಪವು ಗೋಚರಿಸುತ್ತದೆ. ಮಾವುತನಹಳ್ಳಿಯಲ್ಲಿರುವ ದೇವಾಲಯದ ಒಳಭಾಗದ ಗೋಡೆಯಲ್ಲಿ ಮಾಸ್ತಿಕಲ್ಲೊಂದು ಕಂಡುಬಂದಿದೆ. ಸ್ಥಳೀಯ ಶೈಲಿಯಲ್ಲಿರುವ ಈ ಮಾಸ್ತಿಕಲ್ಲಿಗೆ ಜನತೆ ಎಣ್ಣೆ, ಬಣ್ಣಹಚ್ಚಿ ಇಂದಿಗೂ ಪೂಜೆ ಮಾಡುತ್ತಿರುವುದನ್ನು ಗಮನಿಸಬಹುದಾಗಿದೆ. ಇದರಲ್ಲಿ ವೀರನ ಶಿಲ್ಪವನ್ನು ಸತಿಯ ಬಲಭಾಗದಲ್ಲಿ ಕೆತ್ತಲಾಗಿದೆ.

ಉಂಡಿಗನಾಳುವಿನ ಚೌಡೇಶ್ವರಿ ದೇವಾಲಯದ ಮುಂಭಾಗದಲ್ಲಿ ಮಾಸ್ತಿಕಲ್ಲುಗಳ ಸಮೂಹವೊಂದು ಗೋಚರಿಸುತ್ತದೆ. ಇಲ್ಲಿ ಸುಮಾರು ೮ ಮಾಸ್ತಿಕಲ್ಲುಗಳನ್ನು ಒಂದೇ ಸಾಲಿನಲ್ಲಿ ದೇವಾಲಯಕ್ಕೆ ಅಭಿಮುಖವಾಗಿ ನಿಲ್ಲಿಸಲಾಗಿದೆ. ಇಲ್ಲಿರುವ ಒಂದು ಮಾಸ್ತಿಕಲ್ಲಿನಲ್ಲಿ ಬರಹವು ಕಂಡುಬಂದಿದೆ. ಉಳಿದಂತೆ ೩ ಮಾಸ್ತಿಕಲ್ಲುಗಳಲ್ಲಿ ಸತಿಯ ಶಿಲ್ಪವು ಕಂಡುಬಂದರೆ, ೫ ಮಾಸ್ತಿಕಲ್ಲುಗಳಲ್ಲಿ ಸತಿಯ ಶಿಲ್ಪವಿಲ್ಲದೆ ಒಕ್ಕೈ ಮಾಸ್ತಿಶಿಲ್ಪ ಮಾತ್ರ ಕಂಡುಬಂದಿದೆ. ಬಂದೂರಿನಲ್ಲಿರುವ ಮಾಸ್ತಿಕಲ್ಲು ಶಿಥಿಲಗೊಂಡಿದ್ದು, ಶಿಲ್ಪವಾಗಿ ಕೆತ್ತನೆಯೂ ಅಪೂರ್ಣವಾಗಿದೆ.

ಈ ಮೇಲಿನ ವಿವರಗಳನ್ನು ಗಮನಿಸಿದಾಗ ಅರಸೀಕೆರೆ ತಾಲೂಕು ಐತಿಹಾಸಿಕ ದೃಷ್ಟಿಯಿಂದ ಸಾಕಷ್ಟು ಕಲಹಗಳಿಗೆ ಅಥವಾ ಹೋರಾಟಗಳಿಗೆ ಸಾಕ್ಷಿಯಾಗಿರುವುದು ದೃಢವಾಗುತ್ತದೆ. ಈ ತಾಲೂಕಿನಾದ್ಯಂತ ನಮಗೆ ಅಧ್ಯಯನದ ವೇಳೆಯಲ್ಲಿ ದೊರೆತಿರುವ ಶಾಸನ, ವೀರಗಲ್ಲು ಹಾಗೂ ಮಾಸ್ತಿಕಲ್ಲುಗಳಲ್ಲಿರುವ ಮಾಹಿತಿಗಳಿಂದ ಇದು ಸ್ಪಷ್ಟಗೊಳ್ಳುತ್ತದೆ. ಭೌಗೋಳಿಕವಾಗಿ ಅರೆಮಲೆನಾಡು-ಬಯಲುಸೀಮೆಯ ಪರಿಸರವನ್ನು ಹೊಂದಿರುವ ಈ ಪ್ರದೇಶದ ಐದು ಹೋಬಳಿಗಳು ಅನ್ಯ ತಾಲ್ಲೂಕುಗಳೊಂದಿಗೆ ಗಡಿಪ್ರದೇಶವನ್ನು ಹಂಚಿಕೊಂಡಿವೆ.

ಈ ಪ್ರದೇಶದಲ್ಲಿ ದೊರೆತಿರುವ ಮಾಸ್ತಿಕಲ್ಲು ಹಾಗೂ ವೀರಗಲ್ಲುಗಳ ಸಂಖ್ಯೆಯನ್ನು ಗಮನಿಸಿದಾಗ ಸಾಕಷ್ಟು ಹೋರಾಟಗಳು ಹಿಂದೆ ನಡೆದಿರುವುದಲ್ಲದೇ, ಸಾಕಷ್ಟು ಸಂಖ್ಯೆಯಲ್ಲಿ ಯುವಜನತೆ ತಮ್ಮ ಒಡೆಯನಿಗಾಗಿ, ರಾಜ್ಯದ ಹಿತಕ್ಕಾಗಿ, ನಾಡಿನ ಮತ್ತು ತಮ್ಮ ಗ್ರಾಮದ ಹಿತಕ್ಕಾಗಿ ಪ್ರಾಣವನ್ನು ಅರ್ಪಣೆ ಮಾಡಿಕೊಂಡಿದ್ದಾರೆಂಬುದನ್ನು ತಿಳಿಯಬಹುದಾಗಿದೆ. ವಿಶೇಷವಾಗಿ ಮಾಸ್ತಿಕಲ್ಲುಗಳ ಬಗೆಗೆ

ಗಮನಹರಿಸಿದಾಗ ತಮ್ಮ ಪತಿಯ ಮರಣದಲ್ಲಿ ವೀರರ ಸತಿಯರು ಕೂಡಾ ಭಾಗಿಗಳಾಗಿ ತಮ್ಮ ಪಾತಿವ್ರತ್ಯವನ್ನು ಮೆರೆದಿದ್ದಾರೆ ಎನ್ನಬಹುದು. ಕಸಬಾ ಮತ್ತು ಜಾವಗಲ್ ಹೋಬಳಿಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಾಸ್ತಿಕಲ್ಲುಗಳು ಕಂಡುಬಂದಿವೆ. ಕಸಬಾ ಹೋಬಳಿಯಲ್ಲಿ ಹತ್ತು ಸ್ಥಳಗಳಲ್ಲಿ ಹನ್ನೆರಡು ಮಾಸ್ತಿಕಲ್ಲುಗಳು ಕಂಡುಬಂದರೆ, ಜಾವಗಲ್ ಹೋಬಳಿಯಲ್ಲಿ ನಾಲ್ಕು ಸ್ಥಳಗಳಲ್ಲಿ ಸುಮಾರು ಹದಿನಾಲ್ಕು ಮಾಸ್ತಿಕಲ್ಲುಗಳು ಕಂಡುಬಂದಿರುವುದಲ್ಲದೇ, ಕೇವಲ ಉಂಡಿಗನಾಳುವಿನಲ್ಲಿ ಒಂದೇ ಸ್ಥಳದಲ್ಲಿ ಎಂಟು ಮಾಸ್ತಿಕಲ್ಲುಗಳು ಕಂಡುಬಂದಿವೆ. ಇವೆರಡು ಹೋಬಳಿಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕದನಗಳು ನಡೆದಿರುವುದು ಕಂಡುಬರುತ್ತದೆ. ಉಳಿದಂತೆ ತಾಲೂಕಿನ ಕಣಕಟ್ಟೆ ಹೋಬಳಿಯ ಆರು ಸ್ಥಳಗಳಲ್ಲಿ ಆರು ಮಾಸ್ತಿಕಲ್ಲುಗಳು, ಬಾಣಾವರ ಹೋಬಳಿಯ ನಾಲ್ಕು ಸ್ಥಳಗಳಲ್ಲಿ ನಾಲ್ಕು ಮಾಸ್ತಿಕಲ್ಲುಗಳು ಕಂಡುಬಂದಿದ್ದು, ಈ ವಲಯಗಳಲ್ಲಿ ಸತಿಸಹಗಮನ ಪದ್ಧತಿ ಹೆಚ್ಚಿನ ಪ್ರಾಮುಖ್ಯತೆ ಪಡೆದು ಕೊಂಡಿಲ್ಲದೆ ಇರಬಹುದು ಎಂಬುದಾಗಿ ಊಹಿಸಬಹು ದಾಗಿದೆ. ಹಾಗೆಯೇ ಗಂಡಸಿ ಹೋಬಳಿಯಲ್ಲಿ ಕೇವಲ ಎರಡು ಸ್ಥಳಗಳಲ್ಲಿ ಎರಡು ಮಾಸ್ತಿಕಲ್ಲುಗಳು ಕಂಡು ಬಂದಿದ್ದು, ಈ ಪ್ರದೇಶದಲ್ಲಿ ಹೋರಾಟಗಳು ಹಾಗೂ ಸತಿಪದ್ಧತಿ ಹೆಚ್ಚಿನ ಪ್ರಾಮುಖ್ಯತೆ ಪಡೆಯದೇ ಇರಬಹುದು.

ಅರಸೀಕೆರೆ ತಾಲೂಕಿನಾದ್ಯಂತ ದೊರೆತಿರುವ ಬಹುತೇಕ ಮಾಸ್ತಿಕಲ್ಲುಗಳು ಕಪ್ಪು ಬಳಪದ ಕಲ್ಲಿನಿಂದ ರಚಿತಗೊಂಡಿವೆ. ಇಲ್ಲಿನ ಮಾಸ್ತಿಕಲ್ಲುಗಳಲ್ಲಿರುವ ಸತಿಯ ಹಾಗೂ ವೀರರ ಶಿಲ್ಪಗಳ ಸ್ವರೂಪವನ್ನು ಗಮನಿಸಿದಾಗ, ಸತಿಯು ಚಿತ್ರವು ಬಲಗೈಯನ್ನು ಮೇಲಕ್ಕೆತ್ತಿರುವ ಭಂಗಿಯಲ್ಲಿದ್ದರೆ, ವೀರನ ಚಿತ್ರವು ಕೈಯಲ್ಲಿ ಆಯುಧಗಳನ್ನು ಹಿಡಿದಿರುವುದಲ್ಲದೇ, ಕೆಲವು ಕಡೆಗಳಲ್ಲಿ ಸತಿಯ ಬಲಭಾಗದಲ್ಲಿ ಸಮವಾಗಿ ಇಲ್ಲವೇ ಚಿಕ್ಕದಾಗಿ ಕಂಡುಬರುತ್ತವೆ. ಆದರೆ ಸತಿಯರ ಶಿಲ್ಪಗಳು ಬಹುತೇಕವಾಗಿ ಆಭರಣಗಳನ್ನು ಧರಿಸಿ ಅಲಂಕಾರಗೊಂಡಿರುವ ರೀತಿಯಲ್ಲಿ ಕಂಡುಬಂದಿವೆ. ಹಾಗಾಗಿ ಇವು ಸಾಮಾನ್ಯವಾಗಿ ಹೊಯ್ಸಳರು ಹಾಗೂ ಆ ನಂತರದ ಕಾಲಾವಧಿಗಳಲ್ಲಿ ಈ ಪ್ರದೇಶವನ್ನಾಳಿರುವ ರಾಜವಂಶಗಳ ಆಳ್ವಿಕೆಗಳ ಅವಧಿಗಳಲ್ಲಿ ನಿರ್ಮಾಣಗೊಂಡಿರಬಹುದು.

ಮಾಸ್ತಿಕಲ್ಲುಗಳು ನಿರ್ಮಾಣಗೊಂಡಿರುವ ಕಾಲಾವಧಿಯಲ್ಲಿ ಈ ಪ್ರದೇಶವು ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಸಮೃದ್ಧಿಯಿಂದ ಕೂಡಿದ್ದಿರಬಹುದು. ಏಕೆಂದರೆ ಈ ಪ್ರದೇಶವು ಅರೆಮಲೆನಾಡಿನಿಂದ ಕೂಡಿದ್ದು ಕೃಷಿ ಮತ್ತು ಪಶು ಸಂಗೋಪನೆ ಪ್ರಸಿದ್ಧಿಯಾದಂತೆ ಇಲ್ಲಿಯ ಕೆಲವು ವೀರಗಲ್ಲುಗಳು ತುರುಗಾಳಗಳಿಗೆ ಸಂಬಂಧಿಸಿದವುಗಳಾಗಿವೆ. ವೀರರು ತಮ್ಮ ಒಡೆಯರುಗಳಿಗಾಗಿ ಇಲ್ಲವೇ ದೊರೆಗಳಿಗೆ ಶೌರ್ಯ, ಸಾಹಸ ಮೆರೆದು ಅಮರಗೊಂಡಿರುವುದಲ್ಲದೇ, ಇದೇ ಹಾದಿಯಲ್ಲಿ ಸತಿಸಹಗಮನ ಪದ್ಧತಿ ಕೂಡಾ ಚಾಲ್ತಿಯಲ್ಲಿದ್ದಿರಬಹುದು. ಇಲ್ಲಿ ದೊರೆತಿರುವ ಮಾಸ್ತಿಕಲ್ಲುಗಳ ಸ್ವರೂಪವು ಶ್ರೀಮಂತಿಕೆಯನ್ನು ಪ್ರತಿಬಿಂಬಿಸುತ್ತದೆ. ಆ ಕಾಲದ ಸ್ತ್ರೀಯರು ಸಾಮಾಜಿಕವಾಗಿ ಸಹಗಮನ ಪ್ರಕ್ರಿಯೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದರ ಮೂಲಕ ಹಿರಿಮೆಯನ್ನು ಮೆರೆದಿರಬಹುದು. ಆ ಬಳಿಕ ಅವರ ಸ್ಮರಣೆಗಾಗಿ ಆಯಾಯ ಕುಟುಂಬಗಳ ಹಿರಿಯರು ಇಲ್ಲವೇ ಬಂಧುಗಳು ಈ ಮಾಸ್ತಿಕಲ್ಲುಗಳನ್ನು ನಿರ್ಮಿಸಿರಬಹುದು. ಸಾಮಾನ್ಯವಾಗಿ ಇವುಗಳ ನಿರ್ಮಾಣಕ್ಕೆ ಆರ್ಥಿಕವಾಗಿ ಸದೃಢರಾಗಿರುವವರು ಮಾತ್ರ ಮುಂದಾಗಿರಬಹುದು.

ಒಟ್ಟಾರೆಯಾಗಿ ಹೇಳಬೇಕಾದರೆ ಹಾಸನ ಜಿಲ್ಲೆಯ ಅರಸೀಕೆರೆ ತಾಲೂಕು ಪ್ರಾಗೈತಿಹಾಸಿಕ ಕಾಲದಿಂದ ಹಿಡಿದು ಆಧುನಿಕ ಕಾಲದವರೆಗೆ ತನ್ನದೇ ಆದ ಇತಿಹಾಸವನ್ನು ಹೊಂದಿರುವುದು ಈ ಪ್ರದೇಶದ ಅಧ್ಯಯನದ ವೇಳೆಯಲ್ಲಿ ಕಂಡುಬಂದಿರುವ ಆಕರಗಳಿಂದ ಸ್ಪಷ್ಟವಾಗುತ್ತದೆ. ಇತಿಹಾಸವನ್ನು ರಚಿಸುವಾಗ ಕೇವಲ ಶಾಸನಗಳು ಮತ್ತು ವೀರಗಲ್ಲುಗಳನ್ನು ಅವಲಂಬಿಸದೇ ಮಾಸ್ತಿಕಲ್ಲುಗಳನ್ನು ಸಹ ಸರಿಯಾಗಿ ಅಧ್ಯಯನ ಮಾಡಿ ಅವುಗಳನ್ನು ಸಹ ಆಯಾ ಕಾಲದ ಸಾಮಾಜಿಕ, ಆರ್ಥಿಕ ಸಂದರ್ಭಕ್ಕನುಗುಣವಾಗಿ ಅರ್ಥೈಸಿದರೆ ಬಹುಶಃ ಪೂರ್ಣ ಪ್ರಮಾಣದ ಸ್ಥಳೀಯ ಚರಿತ್ರೆ ಕಟ್ಟುವಲ್ಲಿ ಪ್ರಮುಖ ನಿರ್ಣಾಯಕ ಪಾತ್ರವಹಿಸುತ್ತವೆ ಎಂದು ಹೇಳಬಹುದು.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. **ಎಪಿಗ್ರಾಫಿಯಾ ಕರ್ನಾಟಿಕ.**, ಸಂಪುಟ ೧೦, (ಹೊಸತು) ಅರಸೀಕೆರೆ, ೩೫ ಮತ್ತು ಉಂಡಿಗನಾಳು, ೨೫೦.

೨. **ಎ.ಕ.**, **ಪೂರ್ವೋಕ್ತಿ**, ಅರಸೀಕೆರೆ, ೩೫.

೩. ಹೆಚ್ಚಿನ ವಿವರಣೆಗಾಳಿಗಾಗಿ ನೋಡಿ; **ಡಾ. ಹನುಮ ನಾಯಕ.**, **'ಫೈಟಿಂಗ್ ಆರ್ಟಿಸಾನ್ಸ್ ಇನ್ ಮಿಡಿವಲ್ ಕರ್ನಾಟಕ'** ಇನ್ ಪ್ರೊಸಿಡಿಂಗ್ಸ್ ಆಫ್ ದಿ ಇಂಡಿಯನ್ ಹಿಸ್ಟರಿ ಕಾಂಗ್ರೆಸ್, (ಅಮೃತ್‌ಸರ್, ೨೦೦೪), ಪುಟಗಳು ೨೩೮–೨೪೬.

೪. **ಎ.ಕ.**, **ಪೂರ್ವೋಕ್ತಿ**, ಉಂಡಿಗನಾಳು. ೨೫೦.
ಸಮ್ಮೇಳನದಲ್ಲಿ ಪ್ರಬಂಧ ಮಂಡಿಸಿದ ಮೇಲೆ ಕೆಲವು ಸ್ಪಷ್ಟೀಕರಣ ಕೊಡುವ ಸಮಯದಲ್ಲಿ ಡಾ. ತಿಪ್ಪೇಸ್ವಾಮಿಯವರು ಗ್ರಾಮವೊಂದರ ಶಾಲೆಯ ಹಿಂಭಾಗದಲ್ಲಿ ಮಾಸ್ತಿಕಲ್ಲುಗಳು ಸಾಲು ಸಾಲಾಗಿ ನಿಲ್ಲಿಸಿರುವುದನ್ನು ತಿಳಿಸಿರುತ್ತಾರೆ. ಅವುಗಳನ್ನು ಸಹ ನಮ್ಮ ಪಟ್ಟಿಗೆ ಸೇರಿಸಿಕೊಳ್ಳಬಹುದು.

೩೮

ಭೀಮನಹಳ್ಳಿಯಲ್ಲಿ ದೊರೆತ ಅಪ್ರಕಟಿತ ವೀರಗಲ್ಲುಗಳು

ಡಾ. ಜಿ. ಕರಿಯಪ್ಪ* ಡಾ. ಹೆಚ್.ಎನ್. ಕಾಳಸ್ವಾಮಿ**

ಮಂಡ್ಯ ಜಿಲ್ಲೆಯ ನಾಗಮಂಗಲ ತಾಲೂಕಿನಲ್ಲಿ ಕಂಡು ಬರುವ ಭೀಮನಹಳ್ಳಿಯು ಚಾರಿತ್ರಿಕವಾಗಿ ಪ್ರಮುಖ ಸ್ಥಳವಾಗಿದೆ. ಈ ಭಾಗದಲ್ಲಿ ಗಂಗರು, ಚೋಳರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರು ಒಡೆಯರು ಮತ್ತು ನಾಗಮಂಗಲದ ಪ್ರಭುಗಳು ಆಳ್ವಿಕೆ ಮಾಡಿದ್ದಾರೆ. ಹೀಗಾಗಿ ಈ ಭಾಗದಲ್ಲಿ ಅನೇಕ ವೀರಗಲ್ಲುಗಳು ದೊರಕಿವೆ.

ವೀರಗಲ್ಲು-೧: ಇದು ಭೀಮನಹಳ್ಳಿಯ ಪೂರ್ವಕ್ಕೆ ಈಶ್ವರ ದೇವಸ್ಥಾನದ ಬಲಭಾಗದಲ್ಲಿ ಕಂಡು ಬರುತ್ತದೆ. ಇದು ಗ್ರಾನೈಟ್ ಕಲ್ಲಿನದಾಗಿದ್ದು ಸುಮಾರು ೪ ಅಡಿ ಎತ್ತರ, ೨ ಅಡಿ ಅಗಲ ಮತ್ತು ೪ ಇಂಚು ದಪ್ಪನಾಗಿದೆ. ಇದು ಮೂರು ಪಟ್ಟಿಕೆಗಳಿಂದ ಕೂಡಿದ್ದು ಮೊದಲನೆ ಪಟ್ಟಿಕೆಯಲ್ಲಿ ಶಿಲ್ಪಗಳನ್ನು ಗಮನಿಸಿದರೆ ಯಾರೋ ಬೇರೆ ವ್ಯಕ್ತಿಗಳು ಯುದ್ಧದಲ್ಲಿ ಹೋರಾಡಿ ಮರಣವನ್ನು ಹೊಂದಿದ್ದು ಅವರಿಗೋಸ್ಕರ ದೇವರಲ್ಲಿ ಭಕ್ತಿಪೂರ್ವಕವಾಗಿ ದೇವರನ್ನು ಬೇಡುವುದು ಕಂಡುಬರುತ್ತದೆ. ಎರಡನೇ ಪಟ್ಟಿಕೆಯಲ್ಲಿ ಮೂರು ಜನ ವ್ಯಕ್ತಿಗಳ ಉಬ್ಬು ಶಿಲ್ಪಗಳಿದ್ದು ಒಬ್ಬ ಹೆಂಗಸು, ಒಬ್ಬ ಪ್ರಮುಖ ವ್ಯಕ್ತಿ ಮತ್ತೊಬ್ಬರು ಕೈಮುಗಿದು ಧ್ಯಾನಿಸು ತ್ತಿರುವ ದೃಶ್ಯ ಕಾಣಬರುತ್ತದೆ. ಮೂರನೇ ಪಟ್ಟಿಕೆಯಲ್ಲಿ ಶಿವ ಲಿಂಗಕ್ಕೆ ಒಬ್ಬ ಸ್ತ್ರೀಯು ಪೂಜೆ ಸಲ್ಲಿಸುತ್ತಿದ್ದು ಪಕ್ಕದಲ್ಲಿ ರಾಜನು ಕೈಮುಗಿದು ನಿಂತಿರುವುದು ಮತ್ತು ನಂದಿ ಶಿಲ್ಪ ಮೇಲ್ಭಾಗದಲ್ಲಿ ಸೂರ್ಯ ಚಂದ್ರರನ್ನು ಕೆತ್ತಲಾಗಿದೆ. ಒಟ್ಟಾರೆ ಈ ಶಿಲ್ಪದಲ್ಲಿ ಮೂಡಿ ಬಂದಿರುವ ದೇವ-ದೇವತೆಗಳನ್ನು ಪೂಜಿಸುವುದು ಆ ಪ್ರಾಂತದಲ್ಲಿ ಶೈವ ಪರಂಪರೆಯು ಪ್ರಚಲಿತದಲ್ಲಿತ್ತು ಎಂಬುದನ್ನು ತೋರಿಸುತ್ತದೆ.

ವೀರಗಲ್ಲು-೨: ಈ ವೀರಗಲ್ಲು ಮೂರು ಪಟ್ಟಿಕೆಗಳಿಂದ ಕೂಡಿದ್ದು ೩ ಅಡಿ ಎತ್ತರ, ೨ ಅಡಿ ಅಗಲ, ೪ ಇಂಚು ದಪ್ಪ ನಾಗಿದ್ದು ಗ್ರಾನೈಟ್ ಕಲ್ಲಿನದ್ದಾಗಿದೆ. ಮೊದಲನೆ ಪಟ್ಟಿಕೆಯಲ್ಲಿ ವೀರರು ಯಾವುದೋ ಒಂದು ಯುದ್ಧದಲ್ಲಿ ಆಯುಧ ಗಳನ್ನಿಡಿದು ವೀರಾವೇಶದಿಂದ ಪರಸ್ಪರ ಹೋರಾಟ ಮಾಡು ತ್ತಿರುವ ದೃಶ್ಯ. ಎರಡನೆ ಪಟ್ಟಿಕೆಯಲ್ಲಿ ವೀರ ಯುದ್ಧದಲ್ಲಿ ಮರಣಹೊಂದಿದ ವ್ಯಕ್ತಿಯನ್ನು ಮಂಟಪದಲ್ಲಿ ಇರಿಸಿ ಇಬ್ಬರು ದೇವಶೂರರು ಸ್ವರ್ಗಕ್ಕೆ ಕರೆದುಕೊಂಡು ಹೋಗುತ್ತಿರುವ ದೃಶ್ಯ. ಮೂರನೇ ಪಟ್ಟಿಕೆಯಲ್ಲಿ ಸ್ವರ್ಗಕ್ಕೆ ಹೋಗಬೇಕಾದರೆ ಧಾರ್ಮಿಕ ವಿಧಿ ಅನ್ವಯ ಭಕ್ತಿಪೂರ್ವಕವಾಗಿ ಪೂಜೆ ಮಾಡು ತ್ತಿರುವುದು ಅಲ್ಲದೆ ಋಷಿ ಮುನಿ ಶಿವಲಿಂಗಕ್ಕೆ ಪೂಜೆ ಸಲ್ಲಿಸುತ್ತಿರುವುದು ಕಂಡು ಬಂದಿದ್ದು ಜೊತೆಗೆ ಸೂರ್ಯ ಚಂದ್ರರ ಸಾಕ್ಷಿಯಾಗಿ ಈ ವೀರಗಲ್ಲುಗಳನ್ನು ನಿಲ್ಲಿಸಿರುವುದನ್ನು ಕಾಣಬಹುದಾಗಿದೆ.

ವೀರಗಲ್ಲು-೩: ಅದೇ ಸ್ಥಳದಲ್ಲಿರುವ ಮತ್ತೊಂದು ವೀರಗಲ್ಲು ಇದು ೪ ಅಡಿ ಎತ್ತರ, ೨ ಅಡಿ ಅಗಲ ಮತ್ತು ೪ ಇಂಚು ದಪ್ಪನಾಗಿದ್ದು ಮೂರು ಪಟ್ಟಿಕೆಗಳಿಂದ ಕೂಡಿದೆ. ಮೊದಲನೆ ಪಟ್ಟಿಕೆಯಲ್ಲಿ ಇಬ್ಬರು ವೀರಯೋಧರು ಯುದ್ಧದಲ್ಲಿ ಹೋರಾಡಿ ಹಾರವಾಗಿರುವ ದೃಶ್ಯ. ಎರಡನೆ ಪಟ್ಟಿಕೆಯಲ್ಲಿ ಯುದ್ಧದಲ್ಲಿ ಮಡಿದ ಯೋಧನನ್ನು ಮಂಟಪದಲ್ಲಿ ಕುಳ್ಳಿರಿಸಿ ಸ್ವರ್ಗಕ್ಕೆ ಕರೆದುಕೊಂಡು ಹೋಗುತ್ತಿರುವ ದೃಶ್ಯ ಮೂರನೇ ಪಟ್ಟಿಕೆಯಲ್ಲಿ ಶಿವಲಿಂಗಕ್ಕೆ ಒಬ್ಬ ಮುನಿ ಮತ್ತು ನಂದಿ ಶಿಲ್ಪ ಲಿಂಗಕ್ಕೆ ತಲೆ ಎತ್ತಿ ಕೈಮುಗಿಯುತ್ತಿರುವ ಸನ್ನಿವೇಶವನ್ನು ಕಾಣಬಹುದಾಗಿದೆ.

ವೀರಗಲ್ಲು-೪: ಅದೇ ಸ್ಥಳದಲ್ಲಿ ಕಂಡು ಬರುವ ಮತ್ತೊಂದು ವೀರಗಲ್ಲು. ಇದು ಸುಮಾರು ೩ ಅಡಿ ಎತ್ತರ, ಒಂದುವರೆ ಅಡಿ ಅಗಲ ಮತ್ತು ೪ ಇಂಚು ದಪ್ಪನಾಗಿದ್ದು ಇದರಲ್ಲಿ ಇಬ್ಬರು ವೀರರು ಬಲವಂತವಾಗಿ ಕುಸ್ತಿಯಲ್ಲಿ ತಲ್ಲೀನರಾಗಿರುವುದನ್ನು ಕಾಣಬಹುದು. ಇವರು ಜಟ್ಟಿಯ ರೀತಿಯಲ್ಲಿ ಪಂಚೆ (ವಸ್ತ್ರ)ಯನ್ನು ಕಟ್ಟಿರುವುದು ಸುಂದರವಾಗಿ ಮೂಡಿಬಂದಿದ್ದು ಕೈಗಳಿಗೆ ತೋಳುಬಂದಿಯನ್ನು ಧರಿಸಿದ್ದಾರೆ ಮತ್ತು ತುಂಬಿದ ಅಗಲವಾದ ದಪ್ಪನೆಯ ಮುಖ, ಕಾಲುಗಳಿಗೆ ಕಾಲುಕಡಗ, ಆಕರ್ಷಕ ಕಣ್ಣುಗಳು ಸುಂದರವಾಗಿ ಶಿಲ್ಪಕಲೆ

* ಸಹಾಯಕ ಪ್ರಾಧ್ಯಾಪಕರು, ಪ್ರಾಚೀನ ಮತ್ತು ಪುರಾತತ್ತ್ವ ಅಧ್ಯಯನ ವಿಭಾಗ, ಮಾನಸ ಗಂಗೋತ್ರಿ, ಮೈಸೂರು-೫೭೦೦೦೬

** ಉಪನ್ಯಾಸಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಲ್ಲಹಳ್ಳಿ, ನಂಜನಗೂಡು ತಾಲ್ಲೂಕು-೫೭೧೩೧೪



ವೀರಗಲ್ಲು ಸಂಖ್ಯೆ – ೧



ವೀರಗಲ್ಲು ಸಂಖ್ಯೆ – ೨



ವೀರಗಲ್ಲು ಸಂಖ್ಯೆ – ೩



ವೀರಗಲ್ಲು ಸಂಖ್ಯೆ – ೪



ವೀರಗಲ್ಲು ಸಂಖ್ಯೆ – ೫



ವೀರಗಲ್ಲು ಸಂಖ್ಯೆ – ೬



ವೀರಗಲ್ಲು ಸಂಖ್ಯೆ – ೭



ವೀರಗಲ್ಲು ಸಂಖ್ಯೆ – ೮



ವೀರಗಲ್ಲು ಸಂಖ್ಯೆ – ೯

ಯಲ್ಲಿ ಮೂಡಿಬಂದಿದೆ. ಒಟ್ಟಾರೆ ಇಲ್ಲಿ ಕಾಣುವ ದೃಶ್ಯವನ್ನು ಗಮನಿಸಿದರೆ ವೀರಯೋಧರ ಶಿಲ್ಪವೆಂದು ಪರಿಗಣಿಸ ಬಹುದಾಗಿದೆ.

ವೀರಗಲ್ಲು–೫: ಇದು ಸುಮಾರು ೩ ಅಡಿ ಎತ್ತರವಾದ, ಮೇಲೆ ಹೋದಂತೆ ಕಿರಿದಾಗಿದ್ದು ೨.೫ ಅಡಿ ಅಗಲ ೪ ಇಂಚು ದಪ್ಪನಾಗಿದೆ ಇದು ಮೂರು ಪಟ್ಟಿಕೆಗಳಿಂದ ಕೂಡಿದ್ದು ಮೊದಲನೆ ಪಟ್ಟಿಕೆಯಲ್ಲಿ ಇಬ್ಬರು ವೀರರು ವೀರಾವೇಶದಿಂದ ಹೋರಾಡುತ್ತಿರುವ ದೃಶ್ಯ ಕಂಡುಬಂದಿದ್ದು ಆ ಭಾಗ ಅಸ್ಪಷ್ಟ ವಾಗಿದೆ ಎರಡನೇ ಪಟ್ಟಿಕೆಯಲ್ಲಿ ಇಬ್ಬರು ದೇವಲೋಕದ ಕನ್ಯೆಯರು ಯುದ್ಧದಲ್ಲಿ ಮಡಿದ ವೀರನನ್ನು ವಿಮಾನದಲ್ಲಿ ಕೂರಿಸಿಕೊಂಡು ಚಾಮರಧಾರಣಿಯರಾಗಿ ಸ್ವರ್ಗಕ್ಕೆ ಕರೆದೊಯ್ಯುತ್ತಿರುವ ದೃಶ್ಯ ಮೂರನೇ ಪಟ್ಟಿಕೆಯಲ್ಲಿ ಶಿವಲಿಂಗಕ್ಕೆ ಯತಿಯು ಪೂಜೆ ಸಲ್ಲಿಸುತ್ತಿದ್ದು ಬಲಭಾಗದಲ್ಲಿ ವೀರನ ಪತ್ನಿಯು ಕೈಮುಗಿದು ಕುಳಿತಿರುವ ದೃಶ್ಯ ಹಾಗೂ ನಂದಿ ಶಿಲ್ಪವಿರುವುದು ಜೊತೆಗೆ ಮೇಲ್ಭಾಗದಲ್ಲಿ ಸೂರ್ಯ ಚಂದ್ರ ಕೆತ್ತನೆಯನ್ನು ಕಾಣಬಹುದು.

ವೀರಗಲ್ಲು–೬: ಇದು ಎರಡು ಅಡಿ ಎತ್ತರ ೧.೫ ಅಡಿ ಅಗಲ ೩ ಇಂಚು ದಪ್ಪನಾಗಿದ್ದು ಗ್ರಾನೈಟ್ ಕಲ್ಲಿನದ್ದಾಗಿದೆ. ಇದು ಮೂರು ಪಟ್ಟಿಕೆಗಳಿಂದ ಕೂಡಿದ ಮೊದಲನೆ ಪಟ್ಟಿಕೆಯಲ್ಲಿ ನಾಲ್ಕು ಜನರಿದ್ದು ಇದರಲ್ಲಿ ಇಬ್ಬರು ವೀರರು ತಮ್ಮ ಕೈಯಲ್ಲಿ ಖಡ್ಗವನ್ನು ಹಿಡಿದು ನಿಂತಿರುವುದು ಇವರ ಪಕ್ಕದಲ್ಲಿ ಇವರ ಮಡದಿಯರಿಬ್ಬರು ಸೊಂಟದ ಮೇಲೆ ಕೈಗಳನ್ನು ಇಟ್ಟು ನಿಂತಿರುವುದನ್ನು ಕಾಣಬಹುದು. ಎರಡನೆ ಪಟ್ಟಿಕೆಯಲ್ಲಿ ಯುದ್ಧದಲ್ಲಿ ಮಡಿದ ವೀರನನ್ನು ವಿಮಾನದಲ್ಲಿ ಕುಳ್ಳಿರಿಸಿ ಇಬ್ಬರು ದೇವಕನ್ಯೆಯರು ಸ್ವರ್ಗಕ್ಕೆ ಕರೆದ್ಯೊಯ್ಯುತ್ತಿರುವ ದೃಶ್ಯ ಮೂರನೆ ಹಂತದಲ್ಲಿ ಶಿವಲಿಂಗವಿದ್ದು ಇದಕ್ಕೆ ಯತಿಯು ಪೂಜೆ ಸಲ್ಲಿಸುತ್ತಿರುವುದು ಮತ್ತು ಪಕ್ಕದಲ್ಲಿ ನಂದಿಯ

ಶಿಲ್ಪವಿರುವುದು ಹಾಗೂ ಸೂರ್ಯ ಚಂದ್ರರಿರುವುದನ್ನು ಕಾಣಬಹುದು.

ವೀರಗಲ್ಲು-೭: ಇದು ಸಹ ೩ ಅಡಿ ಎತ್ತರ, ೧.೫ ಅಡಿ ಅಗಲ, ೩ ಇಂಚು ದಪ್ಪನಾಗಿದ್ದು ನಾಲ್ಕು ಪಟ್ಟಿಕೆಗಳಿಂದ ಕೂಡಿದೆ. ಮೊದಲನೇ ಪಟ್ಟಿಕೆಯಲ್ಲಿ ೩ ಜನ ವೀರರು ಖಡ್ಗವನ್ನು ಹಿಡಿದು ನಿಂತಿರುವುದು ಎರಡನೆ ಪಟ್ಟಿಕೆಯಲ್ಲಿ ಯುದ್ಧದಲ್ಲಿ ಮಡಿದ ವೀರನನ್ನು ದೇವಕನ್ಯೆಯರು ದೇವಲೋಕಕ್ಕೆ ಕರೆದೊಯ್ಯುತ್ತಿರುವ ದೃಶ್ಯ ಮೂರನೇ ಪಟ್ಟಿಕೆಯಲ್ಲಿ ಶಿವಲಿಂಗಕ್ಕೆ ಯತಿಯು ಪೂಜೆ ಸಲ್ಲಿಸುತ್ತಿದ್ದು ಪಕ್ಕದಲ್ಲಿ ನಂದಿಯ ಶಿಲ್ಪವನ್ನು ಕಾಣಬಹುದು ನಾಲ್ಕನೆ ಪಟ್ಟಿಕೆಯಲ್ಲಿ ಸೂರ್ಯ ಚಂದ್ರರು ಮತ್ತು ತ್ರಿಶೂಲವಿರುವುದನ್ನು ಕಾಣಬಹುದು ಇದರಿಂದ ಶೈವಧರ್ಮವು ಈ ಪ್ರಾಂತ್ಯದಲ್ಲಿ ಇದ್ದಿತ್ತೆಂದು ತಿಳಿದುಬರುತ್ತದೆ.

ವೀರಮಾಸ್ತಿಕಲ್ಲು-೮: ಇದು ಸುಮಾರು ೩ ಅಡಿ ಎತ್ತರ ವಾಗಿದ್ದು ಮೇಲೆ ಹೊಂದಂತೆ ಕಿರಿದಾಗಿದ್ದು ೨ ಅಡಿ ಅಗಲ, ೪ ಇಂಚು ದಪ್ಪನಾದ ಕಪ್ಪು ಗ್ರಾನೈಟ್ ಕಲ್ಲಿನದಾಗಿದೆ, ಇದು ಮೂರು ಪಟ್ಟಿಕೆಯಿಂದ ಕೂಡಿದು ದುರಾದೃಷ್ಟವಶಾತ್ ಮೊದಲನೆ ಪಟ್ಟಿಕೆಯು ಭೂಮಿಯಲ್ಲಿ ಹೂತು ಹೋಗಿದೆ ಎರಡನೆ ಪಟ್ಟಿಕೆಯಲ್ಲಿ ಇಬ್ಬರು ದೇವಕನ್ಯೆಯರು ಚಾಮರ ಧಾರಿಣಿಯರಾಗಿ ಯುದ್ಧದಲ್ಲಿ ಮಡಿದ ಇಬ್ಬರು ಮಹಾಸತಿ ಯರನ್ನು ಕಲಾತ್ಮಕ ಮತ್ತು ಅಲಂಕೃತವಾದ ಮಂಟಪದಲ್ಲಿ ಕೂರಿಸಿಕೊಂಡು ದೇವಲೋಕಕ್ಕೆ ಕರೆದೊಯ್ಯುತ್ತಿರುವ ದೃಶ್ಯ ಕಂಡುಬಂದಿದ್ದು ಇದರ ಮೇಲೆ ಎಡ ಮತ್ತು ಬಲ ಭಾಗದಲ್ಲಿ ಇಬ್ಬರು ದೇವಕನ್ಯೆಯರು ಅಂಜಲಿಬದ್ಧರಾಗಿ ಕುಳಿತಿರುವ ದೃಶ್ಯ ಬಹಳ ಮನೋಹರವಾಗಿ ಮೂಡಿ ಬಂದಿದ್ದು ಮೂರನೇ ಪಟ್ಟಿಕೆಯಲ್ಲಿ ಅಲಂಕೃತನಾದ ಶಿವಲಿಂಗವಿದ್ದು ಇದಕ್ಕೆ ಯತಿಯು ಕೈಮುಗಿದು ಪೂಜೆ ಸಲ್ಲಿಸುತ್ತಿರುವುದು ಬಲಭಾಗದಲ್ಲಿ ಇಬ್ಬರು ದೇವಸೂರರು ಅಂಜಲಿ ಬದ್ಧರಾಗಿ ಕೈಮುಗಿದು ಕುಳಿತಿರು ವುದು, ಎಡಭಾಗದಲ್ಲಿ ನಂದಿಯ ಶಿಲ್ಪವಿರುವುದು, ಮೇಲ್ಭಾಗ ದಲ್ಲಿ ಸೂರ್ಯ ಚಂದ್ರರು ಇದಕ್ಕೆ ಸಾಕ್ಷಿಯಾಗಿರುವಂತೆ ಮೂಡಿಬಂದಿರುವುದನ್ನು ಕಾಣಬಹುದು.

ಭೈರವ ಶಿಲ್ಪ-೯: ಭೈರವ ಸಂಸ್ಕೃತಿ ಶೈವ ಪರಂಪರೆಯಲ್ಲಿ ಕಂಡುಬರುವ ಸಂಸ್ಕೃತಿಯಾಗಿದೆ ಅಂದರೆ ಶೈವ ಪರಂಪರೆ ಯಲ್ಲಿ ಶಿವನು ಆರಾಧನೆ ಪೂಜೆ ಮಾಡುವುದು ಕರ್ನಾಟಕದಾ ದ್ಯಂತ ಕಂಡುಬರುತ್ತದೆ. ಇದು ಗ್ರಾನೈಟ್ ಕಲ್ಲಿನದಾಗಿದ್ದು, ಮುಖವು ಸಂಪೂರ್ಣ ದುಸ್ಥಿತಿ ಹೊಂದಿದ್ದು ಚತುರ್ಭುಜಾ ಧಾರಿಯಾಗಿದ್ದಾನೆ. ಕೈಗಳಲ್ಲಿ ತ್ರಿಶೂಲ, ಢಮರುಗ, ಖಡ್ಗ ಮತ್ತು ಒಂದು ಕೈಯಲ್ಲಿ ತಲೆಯ ಬುರುಡೆಯನ್ನು ಹಿಡಿದಿರುವುದು ಕಂಡುಬರುತ್ತದೆ. ಕೊರಳಲ್ಲಿ ರುಂಡ ಮಾಲೆಯನ್ನು ಧರಿಸಿರುವುದು ಕಂಡು ಬರುತ್ತದೆ ಜೊತೆಗೆ ಈ ಶಿಲ್ಪವು ನಗ್ನಾವಸ್ಥೆಯಲ್ಲಿದೆ.

ಒಟ್ಟಾರೆ ಮೇಲಿನ ಎಲ್ಲಾ ವೀರಗಲ್ಲುಗಳನ್ನು ಗಮನಿಸಿ ದಾಗ ಈ ಪ್ರಾಂತದಲ್ಲಿ ಶೈವ ಧರ್ಮದ ಆಚರಣೆ ಹೆಚ್ಚಾಗಿ ಕಂಡುಬಂದಿದ್ದು ಚಾರಿತ್ರಿಕವಾಗಿ ಮತ್ತು ಐತಿಹಾಸಿಕವಾಗಿ ಹೆಚ್ಚಿನ ಮಹತ್ವವನ್ನು ಹೊಂದಿದೆ ಎಂದು ಹೇಳಬಹುದು. ಜೊತೆಗೆ ಸಂಶೋಧನಾತ್ಮಕವಾಗಿ ಹೆಚ್ಚಿನ ಅಧ್ಯಯನದ ಅಗತ್ಯವಿದೆ ಎಂಬ ಅಂಶವನ್ನು ತಿಳಿಯಪಡಿಸುತ್ತೇನೆ.

ಆಧಾರಸೂಚಿ

೧. ಪಾರ್ಥಸಾರಥಿ. ಟಿ.ಎ. (ಪ್ರ.ಸಂ.) ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಮಂಡ್ಯ ಜಿಲ್ಲೆ, ಕರ್ನಾಟಕ ಸರ್ಕಾರ, ಬೆಂಗಳೂರು, ೨೦೦೩.

೨. ಶೇಷಶಾಸ್ತ್ರಿ. ಆರ್., ಕರ್ನಾಟಕದ ವೀರಗಲ್ಲುಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೪.

೩. ತಿಪ್ಪೇರುದ್ರಸ್ವಾಮಿ, ಹೆಚ್., ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಮೈಸೂರು, ೨೦೧೦.

೪. ಪರಮಶಿವಮೂರ್ತಿ. ಡಿ.ವಿ., ಕನ್ನಡ ಶಾಸನ ಶಿಲ್ಪ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.

೫. ಚಿದಾನಂದಮೂರ್ತಿ. ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಬೆಂಗಳೂರು, ೨೦೦೨.

೬ ಫೋಟೋದಲ್ಲಿನ ಚಿತ್ರವನ್ನು ಗಮನಿಸಿ, ಚಿತ್ರ ಸಂಖ್ಯೆ ೧. ೨. ೩. ೪. ೫. ೬. ೭. ೮. ೯.

ಚಿತ್ರದುರ್ಗ ತಾಲ್ಲೂಕು ಹೆಗ್ಗೆರೆ ಗ್ರಾಮದ ನವಶೋಧಿತ ವೀರಗಲ್ಲು ಹಾಗೂ ಮಾಸ್ತಿಗಲ್ಲುಗಳು

ಡಾ. ಹೆಚ್. ಗುಡ್ಡದೇಶ್ವರಪ್ಪ*

ಚಿತ್ರದುರ್ಗ ತಾಲ್ಲೂಕಿನ ಭರಮಸಾಗರ ಹೋಬಳಿ ಕೇಂದ್ರದ ದಕ್ಷಿಣ ಹಾಗೂ ಸಿರಿಗೆರೆ ಮಾರ್ಗದ ಉತ್ತರಕ್ಕೆ ಒಂದೂವರೆ ಕಿ.ಮೀ. ದೂರದಲ್ಲಿರುವ ಹೆಗ್ಗೆರೆ ಗ್ರಾಮದಲ್ಲಿ ಇತ್ತೀಚೆಗೆ ಕ್ಷೇತ್ರ ಕಾರ್ಯದ ಸಮಯದಲ್ಲಿ ಒಂದು ವೀರಗಲ್ಲು ಎರಡು ಮಹಾಸತಿ ಕಲ್ಲುಗಳು ಪತ್ತೆಯಾಗಿದ್ದು ಅವುಗಳನ್ನು ಅಧ್ಯಯನಕ್ಕೊಳಪಡಿಸಲಾಗಿದೆ.

ಸ್ಥಳೀಯ ಚರಿತ್ರೆ

ಚಿತ್ರದುರ್ಗ ಪಾಳೆಯಗಾರರ ಕಾಲದಲ್ಲಿ ಪ್ರಮುಖ ಪ್ರದೇಶಗಳಲ್ಲೊಂದಾದ ಹೆಗ್ಗೆರೆ ಗ್ರಾಮ ಪಾಳೆಯಗಾರರ ಕಾಲದ ಪರಂಪರೆ, ಸಂಪ್ರದಾಯ ಸಂಸ್ಕೃತಿಯ ನೆನಪನ್ನು ತನ್ನ ಒಡಲಲ್ಲಿ ಇರಿಸಿಕೊಂಡಿದ್ದು, ಈ ಗ್ರಾಮದ ಮೂಲ ಹೆಸರು ಗುರುಪ್ಪನಹಳ್ಳಿ, ಇಲ್ಲಿ ಮೊದಲು ನಾಯಕ ಮತ್ತು ಆದಿಕರ್ನಾಟಕ ಜನಾಂಗದವರು ವಾಸಿಸುತ್ತಿದ್ದರು. ಕಾಲಾಂತರದಲ್ಲಿ ಲಿಂಗಾಯತ, ಆದಿದ್ರಾವಿಡ ಜನಾಂಗದವರು ಬಂದು ನೆಲೆಸಿದರು. ಇಂದಿಗೂ ಇಲ್ಲಿ ನಾಯಕ ಜನಾಂಗ ದವರು ಬಹುಸಂಖ್ಯಾತರು.

ಈ ಗ್ರಾಮದ ಪಕ್ಕದಲ್ಲಿರುವ ಹಿರಿದಾದ ಕೆರೆಯಿಂದಾಗಿ ಹೆಗ್ಗೆರೆ ಎನ್ನುವ ಹೆಸರು ಬಂದಿರಬಹುದು. ಜನಪದರ ಪ್ರಕಾರ ಭರಮಸಾಗರದ ದೊಡ್ಡಕೆರೆಯ ಅಂಗಳದಲ್ಲಿ ಬೀಡುಬಿಟ್ಟಿದ್ದ ಬ್ರಿಟೀಷರ ದಂಡು ಗುರಪ್ಪನಹಳ್ಳಿಯ ಮೇಲೆ ದಾಳಿ ನಡೆಸಲು ಯತ್ನಿಸುತ್ತದೆ. ಆಗ ಇಲ್ಲಿಯ ಯೋಧರು ಗ್ರಾಮದ ಹೊರಗೆ ಗೆರೆ ಹಾಕಿ ಅದನ್ನು ದಾಟದಂತೆ ಸೂಚಿಸುತ್ತಾರೆ. ಆ ಸಂದರ್ಭದಲ್ಲಿ ಸ್ಥಳೀಯ ಯೋಧರು ಹಾಗೂ ಬ್ರಿಟೀಷ್ ದಂಡಿನ ಮಧ್ಯ ಕಾಳಗವಾಗಿ ಬ್ರಿಟೀಷರನ್ನು ಹೊಡೆದೊಡಿಸಿದ ಕಾರಣ ಈ ಸ್ಥಳಕ್ಕೆ ಗೆದ್ದಗೆರೆ ಎನ್ನುವ ಹೆಸರು ಬಂದು ಕಾಲಕ್ರಮೇಣವಾಗಿ ಹೆಗ್ಗೆರೆ ಎಂದಾಯಿತು. ಈ ಗ್ರಾಮದಲ್ಲಿ ವೀರಗಲ್ಲು ಹಾಗೂ ಮಾಸ್ತಿಕಲ್ಲುಗಳನ್ನು ಕಾಣಬಹುದಾಗಿದೆ.



ಊರಿನ ಹಿತಕ್ಕಾಗಿ, ದುಷ್ಟಸಂಹಾರಕ್ಕಾಗಿ, ಸ್ವಾಮಿ ನಿಷ್ಠೆಯಿಂದಲೂ ಹೋರಾಡಿ ಮಡಿದ ವೀರ ಪುರುಷರ ನೆನಪಿನ ಕುರುಹಾಗಿ ವೀರಗಲ್ಲುಗಳನ್ನು ನಿಲ್ಲಿಸುತ್ತಿದ್ದರು. ಮಹಾಸತಿಗಲ್ಲುಗಳು ಅಂದಿನ ಜನ, ಸಮಾಜದ – ನಾಡಿನ

* ಮುಖ್ಯಸ್ಥರು, ಸ್ನಾತಕೋತ್ತರ ಇತಿಹಾಸ ವಿಭಾಗ, ಸರ್ಕಾರಿ ಕಲಾ ಕಾಲೇಜು, ಚಿತ್ರದುರ್ಗ-೫೭೭೫೦೧.



ಸಂರಕ್ಷಣೆಗಾಗಿ ಹೋರಾಡಿ ಮಡಿದ ವೀರನ ಜೊತೆಯಲ್ಲಿ ಆತನ ಮಡದಿ ಸಹಗಮನ ಮಾಡಿದ ನೆನಪಿನ ಕುರುಹಾಗಿ ನಿಲ್ಲಿಸುತ್ತಿದ್ದರು. ವೀರನು ಯುದ್ಧ ಮತ್ತಿತರ ಹೋರಾಟದಲ್ಲಿ ಮಡಿದಾಗ ಅವನು ವೀರಗಲ್ಲಿನ ನಾಯಕನಾಗುತ್ತಾನೆ. ಆತನೊಂದಿಗೆ ಮಡಿದ ಆತನ ಹೆಂಡತಿ ನಾಯಕಿಯಾಗುತ್ತಾಳೆ. ಮಹಾಸತಿಯಾಗುತ್ತಾಳೆ. ಇವುಗಳ ಅಧ್ಯಯನದಿಂದ ಅಂದಿನ ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಸ್ವರೂಪವನ್ನು ಅರ್ಥೈಸಿಕೊಳ್ಳಲು ಸಹಾಯಕವಾಗುತ್ತದೆ. ಹೆಗ್ಗೆರೆಯಲ್ಲಿ ಸಿಕ್ಕಿರುವ ವೀರಗಲ್ಲು ಹಾಗೂ ಮಹಾಸತಿಕಲ್ಲುಗಳು ಬರವಣಿಗೆ ರಹಿತ ಶಿಲ್ಪಗಳಾಗಿರುವುದರಿಂದ ಹೋರಾಡಿದ ವೀರನ ಹೆಸರಾಗಲಿ, ಸಹಗಮನ ಮಾಡಿದ ಸತಿಯ ಹೆಸರಾಗಲಿ, ಕಾಲ, ಯಾರೊಂದಿಗೆ ಹೋರಾಡಿದನೆಂಬ ಬಗ್ಗೆ ತಿಳಿಯುವುದಿಲ್ಲ. ಹಾಗಾಗಿ ನಾವು ವೀರಗಲ್ಲು–ಮಹಾಸತಿ ಕಲ್ಲಿನಲ್ಲಿರುವ ಶಿಲ್ಪಗಳ ಸ್ವರೂಪದ ಮೇಲೆ ಅದರ ಕಾಲ ಮತ್ತು ಉದ್ದೇಶವನ್ನು ತಿಳಿಯಬಹುದಾಗಿದೆ.

ವೀರಗಲ್ಲು

ಇದು ಹೆಗ್ಗೆರೆ ಗ್ರಾಮದ ಕರುವಿನಕಲ್ಲಿನ ಹತ್ತಿರವಿರುವ ಈಶ್ವರ ದೇವಸ್ಥಾನದ ಮುಂಭಾಗದಲ್ಲಿದೆ. ಇದಕ್ಕೆ ಬಳಪದ ಕಲ್ಲನ್ನು ಬಳಸಿದ್ದು, ಸುಮಾರು ೩ ಅಡಿ ಎತ್ತರ ೧.೨೫ ಅಡಿ ಅಗಲ, ಅರ್ಧ ಅಡಿ ದಪ್ಪವಿದೆ. ಇದರಲ್ಲಿ ವೀರಯೋಧನು ಎಡಗೈಯಲ್ಲಿ ಕತ್ತಿ ಹಿಡಿದು, ಬಲಗೈಯಲ್ಲಿ ಖಡ್ಗ ಹಿಡಿದು ನಿಂತಿದ್ದಾನೆ. ಕಂಠಾಭರಣ, ತೋಳ್ಬಂದಿ, ಕಾಲ್ಕಡಗ, ಕಿವಿಯೋಲೆ ಧರಿಸಿದ್ದಾನೆ. ತಲೆಯ ಕೂದಲನ್ನು ಎಡಕ್ಕೆ ತುರುಬು ಕಟ್ಟಲಾಗಿದೆ. ಸೊಂಟದಲ್ಲಿ ಚಾಕುವಿದೆ. ಪ್ರಭಾವಳಿಯಿದೆ. ಪ್ರಭಾವಳಿಯ ಮೇಲ್ಭಾಗದಲ್ಲಿ ಕೀರ್ತಿಮುಖವಿದೆ. ಅದರ ಮೇಲೆ ಕಮಲ ಪುಷ್ಪವಿದ್ದು, ಎಡಬಲ ಭಾಗದಲ್ಲಿ ಹೆಡೆ ಎತ್ತಿರುವ ಸರ್ಪಗಳಿವೆ. ಪ್ರಭಾವಳಿಯ ತಳಭಾಗದಲ್ಲಿ ಪೂರ್ಣ ಕುಂಭಗಳಿವೆ. ಮೇಲ್ಭಾಗದಲ್ಲಿ ಸೂರ್ಯ–ಚಂದ್ರರಿದ್ದಾರೆ. ಇವನೊಬ್ಬ ವೀರಯೋಧನಾಗಿದ್ದು, ಯಾವುದೋ ಹೋರಾಟದಲ್ಲಿ ಮಡಿದಿದ್ದ ನೆನಪಿಗಾಗಿ ಈ ಸ್ಮಾರಕ ಶಿಲ್ಪ ಹಾಕಿಸಲಾಗಿದೆ. ಈ ಶಿಲ್ಪದ ಸ್ವರೂಪವನ್ನು ಗಮನಿಸಿದಾಗ, ಅದು ೧೭ನೇ ಶತಮಾನಕ್ಕೆ ಸೇರಿದ್ದೆಂದು ಪರಿಗಣಿಸಬಹುದಾಗಿದೆ.

ಮಹಾಸತಿಕಲ್ಲು

ಹೆಗ್ಗೆರೆ ಗ್ರಾಮದ ಈಶ್ವರ ದೇವಾಲಯದ ಮುಂಭಾಗದಲ್ಲಿದ್ದು, ಬಳಪದ ಕಲ್ಲನ್ನು ಬಳಸಲಾಗಿದೆ. ಸುಮಾರು ೩ ಅಡಿ ಎತ್ತರ ೧ ¼ ಅಡಿ ಅಗಲ, ಅರ್ಧ ಅಡಿ ದಪ್ಪವಿದೆ. ಈ ಸ್ಮಾರಕ ಶಿಲ್ಪದ ವಿಶೇಷವೆಂದರೆ ವೀರಯೋಧನು ಎಡಗಾಲನ್ನು ಮುಂದೆ ಇಟ್ಟು ಎಡಗೈಯಲ್ಲಿ ಬಿಲ್ಲನ್ನು ಹಿಡಿದು ಬಲಗೈಯಿಂದ ಬಾಣವನ್ನು ಬಿಡುತ್ತಿದ್ದಾನೆ. ತಲೆಯ ಮೇಲ್ಭಾಗದಲ್ಲಿ ಕೂದಲಿನ ತುರುಬು ಬಲಭಾಗಕ್ಕಿದೆ.



ಕಿವಿಯೋಲೆ, ಕಂಠಾಭರಣ, ಕಾಲ್ಕಡಗ ಧರಿಸಿ ಸೊಂಟಕ್ಕೆ ಚಾಕುವನ್ನು ಕಟ್ಟಿದ್ದಾನೆ. ಬಲಭಾಗದಲ್ಲಿ ಸುಂದರ ಸ್ತ್ರೀಯು

ನಿಂತಿದ್ದಾಳೆ. ಸ್ತ್ರೀಯ ತಲೆಯ ಮೇಲ್ಭಾಗದಲ್ಲಿ ಮೊಗ್ಗು ಮತ್ತು ಕೇದಿಗೆ ಮಾದರಿಯ ಆಭರಣಗಳಿಂದ ಅಲಂಕೃತ ಗೊಂಡಿದ್ದಾಳೆ. ಕೂದಲಿನ ತುರುಬು ಬಲಭಾಗಕ್ಕಿದೆ. ಕಿವಿಯೋಲೆ, ಕಂಠಾಭರಣ, ತೋಳ್ಬಂದಿ, ಕಾಲ್ಕಡಗ ಧರಿಸಿ ನೆರಿಗೆಯುಳ್ಳ ಸೀರೆಯನ್ನುಟ್ಟಿದ್ದು ಅದರ ಮೇಲೆ ಪಟ್ಟಿಯಿದೆ. ಎಡಗೈಯಲ್ಲಿ ಫಲವನ್ನಿಡಿದು ಬಲಗೈಯಲ್ಲಿ ಕುಂಬವನ್ನಿಡಿದಿದ್ದಾಳೆ. ಇವರಿಬ್ಬರೂ ಪೀಠದ ಮೇಲೆ ನಿಂತಿದ್ದು, ಪೀಠದ ಮಧ್ಯಭಾಗದಲ್ಲಿ ಪದ್ಮದ ಅಲಂಕಾರವಿದೆ. ಕೀರ್ತಿಮುಖವಿದೆ. ಕೀರ್ತಿಮುಖದ ಕೆಳಭಾಗದ ಎರಡೂ ಕಡೆ ಪದ್ಮದ ಅಲಂಕಾರವಿದೆ. ಈ ಶಿಲ್ಪದ ನಿರೂಪಣೆಯಿಂದ ತಿಳಿದುಬರುವ ಅಂಶವೆಂದರೆ ಯಾವುದೋ ಹೋರಾಟದಲ್ಲಿ ವೀರನು ವೀರಮರಣ ಹೊಂದಿದ್ದು ಮಡದಿಯು ಸಹಗಮನ ಆಚರಿಸಿದ್ದರ ನೆನಪಿಗಾಗಿ ಈ ಶಿಲ್ಪವನ್ನು ನಿರ್ಮಿಸಲಾಗಿದೆ.

ಮಹಾಸತಿಕಲ್ಲು ಕಾಲ ೧೭ನೇ ಶತಮಾನ

ಹೆಗ್ಗೆರೆ ಗ್ರಾಮದ ದಕ್ಷಿಣಕ್ಕೆ ಮಟ್ಟಿಮೇಗಳ ಹೊನ್ನಪ್ಪನವರ ಖಣದ ವಾಯವ್ಯ ಮೂಲೆಯಲ್ಲಿ ನಿಲ್ಲಿಸಿದ್ದು, ಬಳಪದ ಕಲ್ಲನ್ನು ಬಳಸಲಾಗಿದೆ. ಸುಮಾರು ೪ ಅಡಿ ಎತ್ತರ ೩ ಅಡಿ ಅಗಲ, ೧ ಅಡಿ ದಪ್ಪವಿದ್ದು, ೫ ಅಡಿ ಎತ್ತರದ ಕಟ್ಟೆಯ ಮೇಲೆ ನಿಲ್ಲಿಸಲಾಗಿದೆ. ಈ ಕಲ್ಲಿನಲ್ಲಿ ಅಲಂಕೃತವಾದ ಮಂಟಪವನ್ನು ಕೊರೆಯಲಾಗಿದೆ. ಮೇಲ್ಭಾಗದಲ್ಲಿ ಸೂರ್ಯ-ಚಂದ್ರರಿದ್ದು, ಒಂದೇ ಒಂದು ದೊಡ್ಡ ಪಟ್ಟಿಕೆಯಿದೆ. ವೀರಯೋಧನು ಕುದುರೆಯ ಪಕ್ಕದಲ್ಲಿ ನಿಂತು ಎಡಗೈಯಿಂದ ಕುದುರೆಯ ಲಗಾಮನ್ನು, ಬಲಗೈಯಲ್ಲಿ ಖಡ್ಗವನ್ನು ಹಿಡಿದಿದ್ದಾನೆ. ವೀರಯೋಧನು ತೋಳುಗಳಿಗೆ ತೋಳ್ಬಂದಿ, ಕಾಲಿಗೆ ಕಡಗ, ಕಿವಿಯೋಲೆ, ಕಂಠಾಭರಣ ಧರಿಸಿ ಕಟಿವಸ್ತ್ರಧಾರಿಯಾಗಿದ್ದಾನೆ. ಇವನ ತಲೆಯ ಮೇಲ್ಭಾಗದಲ್ಲಿ ಕೂದಲಿನ ತುರುಬು ಎಡಕ್ಕೆ ಬಾಗಿದೆ. ಯೋಧನ ಬಲಭಾಗಕ್ಕೆ ಸುಂದರವಾದ ಸ್ತ್ರೀಯ ಶಿಲ್ಪವಿದೆ. ಸ್ತ್ರೀಯ ತಲೆಯ ಮೇಲ್ಭಾಗವನ್ನು ಮೊಗ್ಗು ಹಾಗೂ ಕೇದಿಗೆ ಮಾದರಿಯ ಆಭರಣಗಳು ಅಲಂಕರಿಸಿವೆ. ಬಲಗೈಯನ್ನು ಮೇಲೆತ್ತಿಕೊಂಡು ನಿಂಬೆಹಣ್ಣನ್ನು ಹಿಡಿದಿದ್ದು, ಎಡಗೈಯಲ್ಲಿ ಫಲವನ್ನು ಹಿಡಿದಿದ್ದಾಳೆ. ಕೈಬಳೆ, ಕಾಲ್ಕಡಗ, ನೆರಿಗೆಯುಳ್ಳ ಸೀರೆಯನ್ನುಟ್ಟು ಸೊಂಟದ ಪಟ್ಟಿ, ಕಿವಿಯೋಲೆ ಧರಿಸಿ ಅಲಂಕೃತಳಾಗಿದ್ದಾಳೆ. ಈ ಶಿಲ್ಪವು ಪ್ರಭಾವಳಿಯನ್ನು ಹೊಂದಿದೆ. ಕೀರ್ತಿಮುಖವಿದೆ. ಹೂಬಳ್ಳಿಗಳ ಅಲಂಕಾರವಿದೆ. ಈ ಶಿಲ್ಪದ ನಿರೂಪಣೆಯನ್ನು ಗಮನಿಸಿದರೆ, ವೀರಯೋಧ ಮರಣ ಹೊಂದಿದ ನಂತರ ಸತಿಯು ಅದನ್ನು ಕೇಳಿ ಮರಣ ಹೊಂದಿದ್ದಾಳೆ. ಇದರ ನೆನಪಿಗಾಗಿ ಸ್ಮಾರಕ ಶಿಲ್ಪವನ್ನು ನಿಲ್ಲಿಸಲಾಗಿದೆ.

ಈ ಮೂರು ಸ್ಮಾರಕ ಶಿಲ್ಪಗಳನ್ನು ಅಧ್ಯಯನ ಮಾಡಿದಾಗ ಈ ಭಾಗದಲ್ಲಿನ ಯೋಧರು-ಜನ, ಶೌರ್ಯ, ಪರಾಕ್ರಮಕ್ಕೆ ಹೆಸರಾಗಿದ್ದು, ಗ್ರಾಮದ ರಕ್ಷಣೆ, ತುರುಗಳ ರಕ್ಷಣೆ, ಸ್ತ್ರೀಯರ ರಕ್ಷಣೆಗಾಗಿ ಹೋರಾಡಿ ವೀರ ಮರಣ ಹೊಂದಿದ್ದಾರೆ. ಇಂತಹ ಹೋರಾಟದಲ್ಲಿ ಹೆಚ್ಚಾಗಿ ಬೇಡರು (ನಾಯಕ) ಭಾಗವಹಿಸುತ್ತಿದ್ದರು. ಇದನ್ನು ಇಲ್ಲಿಯ ಸ್ಥಳನಾಮದ ಅಧ್ಯಯನ ಹಾಗೂ ವೀರಗಲ್ಲು ಮತ್ತು ಮಹಾಸತಿಕಲ್ಲುಗಳ ಅಧ್ಯಯನದಿಂದ ದೃಢೀಕರಿಸುತ್ತವೆ. ಹೆಗ್ಗೆರೆ ಗ್ರಾಮದ ಜನಸಂಖ್ಯೆಯನ್ನು ಗಮನಿಸಿದರೆ ನಾಯಕ ಜನಾಂಗದವರೇ ಬಹುಸಂಖ್ಯಾತರಾಗಿರುವುದು ಕಂಡುಬರುತ್ತದೆ. ಹಾಗಾಗಿ ಅನಾದಿ ಕಾಲದಿಂದಲೂ ಬೇಡರು ಗ್ರಾಮರಕ್ಷಣೆ ಹಾಗೂ ಸ್ವಾಮಿನಿಷ್ಠೆಯ ವಿಷಯದಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದುದನ್ನು ದೃಢೀಕರಿಸುತ್ತದೆ. ಹೆಗ್ಗೆರೆ ಗ್ರಾಮದ ಸುತ್ತಮುತ್ತಲ ಪ್ರದೇಶದಲ್ಲಿ ಕ್ಷೇತ್ರ ಕಾರ್ಯ ನಡೆಸಿದರೆ ಇನ್ನೂ ಪೂರಕ ಪುರಾವೆಗಳು ಲಭ್ಯವಾಗಬಹುದು.

ಕಬ್ಬಹಳ್ಳಿಯಲ್ಲಿ ದೊರೆತ ಅಪ್ರಕಟಿತ ವೀರಗಲ್ಲು ಮತ್ತು ಮೂರ್ತಿಶಿಲ್ಪಗಳು

ಡಾ. ಹೆಚ್.ಎನ್. ಕಾಳಸ್ವಾಮಿ*

ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನ ಪೂರ್ವಕ್ಕೆ ಸುಮಾರು ೧೬ ಕಿ.ಮೀ. ದೂರದಲ್ಲಿ ಕಂಡು ಬರುವ ಕಬ್ಬಹಳ್ಳಿ ಗ್ರಾಮವು ಐತಿಹಾಸಿಕ ಹಿನ್ನೆಲೆಯುಳ್ಳ ಸ್ಥಳವಾಗಿದ್ದು ಈ ಪ್ರಾಂತದಲ್ಲಿ ಗಂಗರು, ಚೋಳರು, ಹೊಯ್ಸಳರು, ವಿಜಯನಗರ ಅರಸರು, ಉಮ್ಮತ್ತೂರು ಪಾಳೆಯಗಾರರು, ತೆರಕಣಾಂಬಿ ಪಾಳೆಯಗಾರರು ಮತ್ತು ಮೈಸೂರು ಒಡೆಯರು ಆಳ್ವಿಕೆ ಮಾಡಿರುವುದು ಶಾಸನಾಧಾರಗಳಿಂದ ತಿಳಿದುಬರುತ್ತದೆ.

ಐತಿಹಾಸಿಕ ದೃಷ್ಟಿಯಿಂದ ತಿಳಿಯುವುದಾದರೆ 'ಕಬ್ಬಿಗರಹಳ್ಳಿ' ಎಂಬುದು ಕಬ್ಬಹಳ್ಳಿಯಾಗಿದೆ. ಅಂದರೆ ವರದ ಎನ್ನುವ ಕವಿ ಇಲ್ಲಿ ವಾಸವಾಗಿದ್ದನೆಂಬುದು ಇತಿಹಾಸದ ಪುರಾವೆಯಿಂದ ತಿಳಿಯುತ್ತದೆ. ಇಲ್ಲಿ ಕೆಲವು ವೀರಗಲ್ಲು ಮತ್ತು ಮೂರ್ತಿಶಿಲ್ಪಗಳು ದೊರೆಕಿವೆ, ಅವುಗಳನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.

ಕನ್ನಡ ನಾಡಿನ ಶಾಸನಗಳ ಒಂದು ವೈಶಿಷ್ಟ್ಯವೆಂದರೆ ಮಾನವನ ಜೀವನದ ಏಳುಬೀಳಿನ ಮೌಲ್ಯಗಳನ್ನು ಪ್ರತಿಬಿಂಬಿಸುವುದು ಹಾಗೂ ಅವುಗಳ ಇತಿಹಾಸವನ್ನು ಅರಿಯುವುದು ಸೇರಿದಂತೆ ವೀರಗಲ್ಲುಗಳ ಪಾತ್ರ ಬಹಳ ಮುಖ್ಯವಾದದ್ದು ಅಂದರೆ ಊರಿನ ಹಿತಕ್ಕಾಗಿಯೋ, ದುಷ್ಟಶಕ್ತಿಯ ಸಂಹಾರಕ್ಕಾಗಿಯೋ, ಸ್ವಾಮಿ ನಿಷ್ಠೆಯಿಂದಲೋ ಹೋರಾಡಿ ಮಡಿದ ವೀರಪುರುಷರ ಸ್ಮಾರಕಕ್ಕಾಗಿ ರಚಿತವಾದವುಗಳನ್ನು ವೀರಗಲ್ಲುಗಳು ಎಂದು ಕರೆಯುತ್ತೇವೆ.

ವೀರಗಲ್ಲು-೧

ಇದು ಗ್ರಾಮದ ಊರ ಹೊರಗಿನಕೆರೆಯ ಅಂಗಳದಲ್ಲಿ ಕಾಣಬರುತ್ತದೆ. ಸುಮಾರು ಐದು ಅಡಿ ಎತ್ತರ ೩ ಅಡಿ ಅಗಲ ಮತ್ತು ನಾಲ್ಕು ಇಂಚು ದಪ್ಪನಾಗಿದ್ದು ಗ್ರಾನೈಟ್ ಕಲ್ಲಿನದ್ದಾಗಿದೆ ಇದು ಮೂರು ಹಂತಗಳಿಂದ ಕೂಡಿದ್ದಾಗಿದೆ. ಮೊದಲನೆ ಹಂತದಲ್ಲಿ ಮೂರು ಜನ ವೀರರು ಸಾಲಾಗಿ ನಿಂತು ತಮ್ಮ ಕೈಗಳನ್ನು ಮೇಲಕ್ಕೆ ಎತ್ತಿಕೊಂಡು ಹಾರವಾಗಿ



ವೀರಗಲ್ಲು-೧

ನಿಂತಿರುವುದು, ಎರಡನೇ ಹಂತದಲ್ಲಿ ಮೂರು ಜನರ ಉಬ್ಬು ಶಿಲ್ಪಗಳಿದ್ದು ಅದರಲ್ಲಿ ಇಬ್ಬರು ದೇವಲೋಕದ ಸುಂದರಿಯರು, ಚಾಮರಧಾರಿಣಿಯರಾಗಿದ್ದು ಯೋಧನ ಎರಡು ಕೈಗಳನ್ನು ಮೇಲಕ್ಕೆ ಎತ್ತಿ ಹಿಡಿದುಕೊಂಡು ಸ್ವರ್ಗಕ್ಕೆ ಹೋಗುತ್ತಿರುವಂತೆ ಕಡೆಯಲಾಗಿದೆ. ತಲೆಯ ಮೇಲೆ ತುರುಬನ್ನು ಹಾಕಿರುತ್ತಾರೆ. ಮೂರನೇ ಹಂತದಲ್ಲಿ ಶಿವಲಿಂಗ ಮತ್ತು ನಂದಿಯಿದ್ದು ಇದನ್ನು ಸೂರ್ಯಚಂದ್ರರ ಸಾಕ್ಷಿಯಾಗಿ ನಿಲ್ಲಿಸಿರುವಂತೆ ಚಿತ್ರದಲ್ಲಿ ಕಾಣಬಹುದಾಗಿದೆ. ಒಟ್ಟಾರೆ ಯಾವುದೋ ಒಂದು ಯುದ್ಧದಲ್ಲಿ ಹೋರಾಡಿ ಹಾರವಾಗಿರುವುದು ಈ ವೀರಗಲ್ಲಿನಲ್ಲಿ ಮೂಡಿಬಂದಿದೆ.

* ಉಪನ್ಯಾಸಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಲ್ಲಹಳ್ಳಿ, ನಂಜನಗೂಡು ತಾಲ್ಲೂಕು-೫೭೧೩೧೪



ವೀರಗಲ್ಲು-೨

ವೀರಗಲ್ಲು-೨

ಇದು ಸುಮಾರು ೩ ಅಡಿ ಎತ್ತರ, ೫ ಅಡಿ ಅಗಲ ವಾಗಿದ್ದು ಸುಮಾರು ೫ ಇಂಚು ದಪ್ಪನಾಗಿದೆ.ಈ ಚಿತ್ರದಲ್ಲಿ ೪ ಜನರ ಉಬ್ಬುಶಿಲ್ಪಗಳು ಮೂಡಿಬಂದಿದ್ದುಒಂದುಕಡೆ ವೀರಯೋಧಕುದುರೆಯ ಮೇಲೆ ಕುಳಿತು ಖಡ್ಗವನ್ನು ಹಿಡಿದು ಹೋರಾಟ ಮಾಡುವ ದೃಶ್ಯ ಮತ್ತುಎದುರುಗಡೆ ವೀರಯೋಧ ಕುಟುಂಬ ಸಮೇತರಾಗಿ ಹೋರಾಟದಲ್ಲಿ ತಲ್ಲೀನರಾಗಿರುವುದು ಇದರ ಜೊತೆಗೆ ವೀರನ ಹೆಂಡತಿ ಮತ್ತು ಮಗು ಸಹ ಭಾಗಿಯಾಗಿರುವುದನ್ನು ಚಿತ್ರದಲ್ಲಿ ಕಾಣಬಹುದಾಗಿದೆ. ಒಟ್ಟಾರೆ ಯಾವುದೋ ಒಂದು ಯುದ್ಧದಲ್ಲಿ ಕುಟುಂಬ ಸಮೇತರಾಗಿ ಹೋರಾಡಿ ಹಾರವಾಗಿರುವ ದೃಶ್ಯವು ಮನಮೋಹಕವಾಗಿ ಚಿತ್ರದಲ್ಲಿ ಮೂಡಿ ಬಂದಿದೆ.

ವೀರಗಲ್ಲು-೩

ಈ ವೀರಗಲ್ಲು ಹರಿಜನ ಬೀದಿಯಲ್ಲಿನ ಪ್ರಾಥಮಿಕ ಶಾಲೆಯ ಆವರಣದ ಹಿಂಭಾಗದಲ್ಲಿ ಕಾಣಬರುತ್ತದೆ.ಇದು ಸುಮಾರು ೫ ಅಡಿ ಎತ್ತರ ೪ ಅಡಿ ಅಗಲ ಮತ್ತು ೪



ವೀರಗಲ್ಲು-೩

ಇಂಚು ದಪ್ಪನಾಗಿದ್ದು, ಮೂರು ಹಂತಸ್ತುಗಳಿಂದ ಕೂಡಿದೆ. ಇವರಲ್ಲಿ ಮೂಡಿ ಬಂದಿರುವುದು ಮಹಿಳೆಯರ ಚಿತ್ರವಾಗಿದ್ದು ಅವರೂ ಯುದ್ಧದಲ್ಲಿ ಹೋರಾಡಿದ ಸನ್ನಿವೇಶವನ್ನು ಗಮನಿಸಿದರೆ ಇವರನ್ನು ವೀರವನಿತೆಯರೆಂದು ಕರೆಯ ಬಹುದು. ಅಂದರೆ ಪುರುಷರಿಗೆ ಸಮನಾಗಿ ತಾವು ಕಡಿಮೆಯಿಲ್ಲ ಎಂಬಂತೆ ಯುದ್ಧದಲ್ಲಿ ಭಾಗಿಯಾಗಿರುವುದನ್ನು ಕಾಣಬಹು ದಾಗಿದೆ. ಮೊದಲನೆ ಹಂತದಲ್ಲಿ ನಾಲ್ಕು ಜನ ವ್ಯಕ್ತಿಗಳ ಉಬ್ಬು ಶಿಲ್ಪಗಳಿದ್ದು ಅದರಲ್ಲಿ ಇಬ್ಬರು ಸ್ತ್ರೀಯರು ಮತ್ತು ಇಬ್ಬರು ಪುರಷರಿದ್ದು, ಯಾವುದೋ ಒಂದು ಯುದ್ದದಲ್ಲಿ ಹೋರಾಡಿದ ವೀರರಿಗೆ ಕುಡಿಯುವುದಕ್ಕೆ ನೀರನ್ನು ತೆಗೆದು ಕೊಂಡು ಹೋಗುತ್ತಿರುವ ಚಿತ್ರಾ ಶಿಲ್ಪದಲ್ಲಿ ಕಾಣಬಹುದಾಗಿದೆ. ಎರಡನೆಯ ಹಂತದಲ್ಲಿ ೫ ಜನರ ಉಬ್ಬು ಶಿಲ್ಪಗಳಿದ್ದು ಅವುಗಳಲ್ಲಿ ಇಬ್ಬರು ಸ್ತ್ರೀಯರು ಮತ್ತು ಮೂರುಜನ ಪುರುಷರಿದ್ದು ಬಹುಶಃ ಅಂದಿನ ಕಾಲದಲ್ಲಿ ರಾಜನ ಜೊತೆಯಲ್ಲಿಯೇ ರಾಣಿಯರು ಯುದ್ಧದಲ್ಲಿ ಭಾಗಿಯಾಗಿ ದ್ದುದು ಕಂಡು ಬರುತ್ತದೆ. ಮೂರನೇ ಹಂತದಲ್ಲಿ ಪದ್ಮಾಸನದಲ್ಲಿ ಕೈ ಮುಗಿದು ಕುಳಿತಿರುವ ಶಿಲ್ಪವನ್ನು ಕಡೆಯಾಗಿದ್ದು ಜೊತೆಗೆ ಶಿವಲಿಂಗ. ಅದಕ್ಕೆ ಪೂಜೆ ಸಲ್ಲಿಸುತ್ತಿರುವ ಸ್ತ್ರೀಶಿಲ್ಪ ಹಾಗೂ ನಂದಿಯನ್ನು ಕಡೆಯಲಾಗಿದೆ, ಅಂದರೆ ಯಾವುದೋ ಒಂದು ಯುದ್ಧದಲ್ಲಿ ವೀರಮರಣ ಹೊಂದಿದ್ದು ಆತ ಸ್ವರ್ಗಕ್ಕೆ ಹೋಗಲೆಂದು ದೇವರಲ್ಲಿ ಮೊರೆ ಹೋಗಿ ಆತನ ಪತ್ನಿ ಪೂಜೆಯಲ್ಲಿ ತಲ್ಲೀನ ರಾಗಿರುವುದನ್ನು ಕಾಣಬಹುದಾಗಿದೆ. ಒಟ್ಟಾರೆ ಹೇಳುವು ದಾದರೆ ಇವರೆಲ್ಲರು ರಾಜನ ಮಡದಿಯರೆ ಹೊರತು ಬೇರೆ ಅಲ್ಲ ಎಂದು ಶಿಲ್ಪಕಲೆಯಿಂದ ಗುರುತಿಸಬಹುದಾಗಿದೆ.

ಒಟ್ಟಾರೆ ಈ ವೀರಗಲ್ಲಿನಲ್ಲಿ ಸ್ತ್ರೀ ಮತ್ತು ಪುರುಷರ ಉಬ್ಬು ಶಿಲ್ಪಗಳು ಒಂದೇ ತರನಾಗಿದ್ದು ಇವರೆಲ್ಲರೂ ರಾಜನ ಮಡದಿಯರಾಗಿದ್ದು ಇವರನ್ನು ರಾಣಿಯರು ಎಂದು ಪರಿಗಣಿಸಬಹುದಾಗಿದೆ. ಏಕೆಂದರೆ ಕಿವಿಯಲ್ಲಿ ಕರ್ಣಕುಂಡಲ. ತೋಳಿನಲ್ಲಿ ಕೈಕಡಗ, ಸೊಂಟದಲ್ಲಿ ಡಾಬನ್ನು ಧರಿಸಿರುವುದು ಕಾಣಬರುತ್ತದೆ.

ಮೂರ್ತಿಶಿಲ್ಪಗಳು

ರಾವಳೇಶ್ವರ ಶಿಲ್ಪ ೧: ಈ ಶಿಲ್ಪವು ಶೈವ ಪರಂಪರೆಗೆ ಪೂರಕವಾಗಿದ್ದು ಈ ರೀತಿಯ ಶಿಲ್ಪಗಳು ಮಹಿಷ ಮಂಡಲ ಪ್ರಾಂತ್ಯದಲ್ಲಿ ಕಂಡು ಬರುತ್ತದೆ. ಇದನ್ನು ಕೆಲವರು ರಾವಣಶಿಲ್ಪ, ರಾವಳೇಶ್ವರ ಶಿಲ್ಪ ಎಂದು ಕರೆಯುವ ವಾಡಿಕೆ ಇದೆ. ಈ ಶಿಲ್ಪವು ಪ್ರಸ್ತುತ ಕಬ್ಬಹಳ್ಳಿ ಗ್ರಾಮದ ಹರಿಜನ ಬೀದಿಯಲ್ಲಿ ರುವ ಪ್ರಾಥಮಿಕ ಶಾಲೆಯ ಆವರಣದ ಹಿಂಭಾಗದಲ್ಲಿ ಕಂಡು ಬಂದಿದ್ದು ಈ ಶಿಲ್ಪವು ಕಪ್ಪು ಗ್ರಾನೈಟ್ ಕಲ್ಲಿನಿಂದ ಕೂಡಿದ್ದು,



ರಾವಳೇಶ್ವರ ಶಿಲ್ಪ –೧

೨ ಅಡಿ ಎತ್ತರ, ೨ ಅಡಿ ಅಗಲ ಮತ್ತು ೩ ಇಂಚು ದಪ್ಪನಾಗಿದ್ದು ಮೂರು ತಲೆಯನ್ನು ಹೊಂದಿದ್ದು, ಚತುರ್ಭುಜಾಕೃತಿಯನ್ನು ಹೊಂದಿದೆ ಮೂರು ಕೈಗಳಲ್ಲಿ ಆಯುಧಗಳನ್ನು ಹಿಡಿದಿದ್ದು ಅವುಗಳಲ್ಲಿ ತ್ರಿಶೂಲ, ಖಡ್ಗ ಮತ್ತು ಬಿಲ್ಲು ಬಾಣಗಳನ್ನು ಹಿಡಿದಿರುವುದು ಮತ್ತು ಮತ್ತೊಂದು ಕೈಯನ್ನು ಕೆಳಕ್ಕೆ ಇಳಿಬಿಟ್ಟಿರುವುದು ಕಂಡು ಬರುತ್ತದೆ. ಕೊರಳಲ್ಲಿ (ಕಂಠ) ರುದ್ರಮಾಲೆ (ರುದ್ರಾಕ್ಷಿಮಣಿ) ಹಾಕಿಕೊಂಡಿರುವುದು ಸ್ಪಷ್ಟವಾಗಿ ಕಾಣುತ್ತಿದ್ದು ಸೊಂಟದ ಕೆಳಗೆ ವಸ್ತ್ರವನ್ನು ಧರಿಸಿದ್ದು ಸುಂದರವಾದ ನೆರಿಗೆಗಳಿಂದ ವಸ್ತ್ರವು ಕೂಡಿದ್ದು ಎರಡೂ ಕಾಲುಗಳಲ್ಲಿ ಕಾಲು ಬಂದಿಯನ್ನು ಧರಿಸಿದ್ದಾನೆ. ಈ ಎಲ್ಲಾ ಲಕ್ಷಣಗಳನ್ನು ಗಮನಿಸಿದಾಗ ಈ ಶಿಲ್ಪವು ರಾಜನ ಎಲ್ಲಾ ಲಕ್ಷಣಗಳನ್ನು ಹೊಂದಿರುವುದರಿಂದ ರಾವಳೇಶ್ವರ ಪ್ರತ್ಯಕ್ಷದೇವ (ರಾಜ) ಎಂದು ಈ ಭಾಗದಲ್ಲಿ ಕರೆಯುವ ಪ್ರತೀತಿಯಿದ್ದು ಇದನ್ನು ದೇವರೆಂದು ಇಂದಿಗೂ ಪೂಜಿಸುತ್ತಿದ್ದಾರೆ.

ರಾವಳೇಶ್ವರ ಶಿಲ್ಪ ೨: ಅದೇ ಸ್ಥಳದಲ್ಲಿ ಕಂಡು ಬರುವ ಮತ್ತೊಂದು ಶಿಲ್ಪವು ಗ್ರಾನೈಟ್ ಕಲ್ಲಿನಿಂದ ಕೂಡಿದ್ದು ೨ ಅಡಿ ಎತ್ತರ ಒಂದೂವರೆ ಅಡಿ ಅಗಲವಾಗಿದ್ದು ಚತುರ್ಭುಜಾಕೃತಿಯಿಂದ ಕೂಡಿದ್ದು ಮೂರು ತಲೆಯನ್ನು ಹೊಂದಿದೆ. ಬಲ ಭಾಗದ ಎರಡು ಕೈಗಳಲ್ಲಿ ಡಮರುಗವನ್ನು ಹಿಡಿದಿದ್ದು ಎಡಭಾಗದ ಒಂದು ಕೈಯಲ್ಲಿ ತ್ರಿಶೂಲ, ಮತ್ತೊಂದು ಕೈಯನ್ನು ಕೆಳಕ್ಕೆ ಇಳಿಬಿಟ್ಟಿರು



ರಾವಳೇಶ್ವರ ಶಿಲ್ಪ –೨

ವ್ವವನ್ನು ಕಾಣುತ್ತೇವೆ ಜೊತೆಗೆ ಒಂದು ಕಾಲನ್ನು ಸಡಲಗೊಳಿಸಿರುವುದು ಮತ್ತೊಂದು ಕಾಲನ್ನು ಮಡಚಿರುವಂತಿದೆ ಇದರಿಂದ ಇದೊಂದು ದೇವತೆಯ ಶಿಲ್ಪ ಹೇಳಬಹುದಾಗಿದೆ

ಸ್ಮಾರಕ ಶಿಲ್ಪ ೩: ಈ ಶಿಲ್ಪವು ಗ್ರಾನೈಟ್ ಕಲ್ಲಿನ ದಾಗಿದ್ದು ೫ ಅಡಿ ಎತ್ತರ ಒಂದೂವರೆ ಅಡಿ ಅಗಲ ಮತ್ತು ೩ ಇಂಚು ದಪ್ಪ ನಾಗಿದ್ದು ಇದರಲ್ಲಿ ಯೋಧ ನನ್ನು ಸುಂದರವಾಗಿ ಕರೆಯು ಲಾಗಿದೆ. ಇದರಿಂದ ಯೋಧ ಸ್ಥಳೀಯ ಪ್ರಾಂತ್ಯದವನೇ ಇರಬಹುದು. ಈತ ಒಬ್ಬ ಜಟ್ಟಿಯ ರೀತಿಯಲ್ಲಿ ಪಂಚೆ (ವಸ್ತ್ರ)ಯನ್ನು ಕಚ್ಚೆಯಂತೆ ಕಟ್ಟಿಸಿರುವುದು ಸುಂದರವಾಗಿ ಮೂಡಿ ಬಂದಿದ್ದು ಈತನು ಕಂಠದಲ್ಲಿ ಸರಮಾಲೆಯನ್ನು ಧರಿಸಿದ್ದು ಮತ್ತು ಕೈಗಳಿಗೆ ತೋಳ್ಬಂದಿ ಯನ್ನು ಧರಿಸಿದ್ದು ತುಂಜಿದ ಅಗಲವಾದ ದಪ್ಪನೆಯ ಮೀಸೆ ಸುಂದರ ಆಕರ್ಷಕ ಕಣ್ಣುಗಳು ಶಿಲ್ಪ ಕಲೆಯಲ್ಲಿ ಸುಂದರವಾಗಿ ಮೂಡಿ ಬಂದಿದೆ. ಈತನು ಕೈಗಳಲ್ಲೂ ಆಯುಧವನ್ನು ಹಿಡಿದಿದ್ದು ಯಾವುದೋ ಒಂದು ಯುದ್ಧದಲ್ಲಿ ಹೋರಾಟದ ದೃಶ್ಯದಂತೆ ಚಿತ್ರದಲ್ಲಿ ಮೂಡಿಬಂದಿದೆ.ಈ ಹಿನ್ನೆಲೆಯಲ್ಲಿ ಇದನ್ನು ಒಂದು ವೀರಯೋಧನ ಶಿಲ್ಪವೆಂದು ಪರಿಗಣಿಸಬಹುದಾಗಿದೆ.



ಸ್ಮಾರಕ ಶಿಲ್ಪ–೩

ಆಧಾರಸೂಚಿ

೧. ಸೂರ್ಯನಾಥ ಕಾಮತ್. ಯು. (ಸಂ) **ಕರ್ನಾಟಕ ರಾಜ್ಯ ಗ್ಯಾಸೆಟಿಯರ್** ಭಾಗ–೧, ಕರ್ನಾಟಕ ಸರ್ಕಾರ, ಬೆಂಗಳೂರು, ೧೯೮೪.

೨. ಶೇಷಶಾಸ್ತ್ರಿ ಆರ್., **ಕರ್ನಾಟಕದ ವೀರಗಲ್ಲುಗಳು**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೪.

೩. ತಿಪ್ಪೇರುದ್ರಸ್ವಾಮಿ ಹೆಚ್., **ಕರ್ನಾಟಕ ಸಂಸ್ಕೃತಿ ಸಮೀಕ್ಷೆ**, ಮೈಸೂರು. ೨೦೧೦.

೪. ಪರಮಶಿವಮೂರ್ತಿ. ಡಿ.ವಿ., **ಕನ್ನಡ ಶಾಸನ ಶಿಲ್ಪ**, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ೧೯೯೯.

೫. ಚಿದಾನಂದ ಮೂರ್ತಿ ಎಂ., **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ**, ಬೆಂಗಳೂರು, ೨೦೦೨.

೬. **ಕರ್ನಾಟಕ ವಿಷಯ ವಿಶ್ವಕೋಶ**, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೨೦೦೫.

೩೨

ಸಾಂಚಿ-ಸನ್ನತಿಯ ಅಶೋಕ ಶಿಲ್ಪಗಳು ಕೆಲವು ಸಂಗತಿಗಳು

ಡಾ. ಬಿ. ರಾಜಶೇಖರಪ್ಪ*

ಜಗತ್ತು ಕಂಡ ಅಪರೂಪದ ದೊರೆಗಳಲ್ಲಿ ಭಾರತದ ಮೌರ್ಯವಂಶದ ಅಶೋಕನೂ (ಕ್ರಿ.ಪೂ. ೨೭೩-೨೩೬) ಒಬ್ಬ. ಈಗಾಗಲೇ ನಮಗೆ ತಿಳಿದುಬಂದಿರುವಂತೆ ಅಶೋಕ ತನ್ನ ತಾತ ಮತ್ತು ತಂದೆಯವರಿಗೆ ಗೆಲ್ಲಲು ಸಾಧ್ಯವಾಗದೆ ಸವಾಲಾಗಿ ಉಳಿದಿದ್ದ ಕಳಿಂಗ ರಾಜ್ಯವನ್ನು ಗೆದ್ದ. ಆ ಯುದ್ಧದಲ್ಲಿ ಆದ ಸಾವು ನೋವು ಹಾನಿ ಹಿಂಸೆಗಳು ಅವನ ಮನಸ್ಸನ್ನು ತಟ್ಟಿ ಅವನು ಶಾಂತಿಮಾರ್ಗವನ್ನೂ ಧರ್ಮಮಾರ್ಗವನ್ನೂ ಹಿಡಿಯುವಂತೆ ಮಾಡಿದವು. ಅಷ್ಟು ಹೊತ್ತಿಗಾಗಲೇ ಬೌದ್ಧಧರ್ಮದ ಸಂಪರ್ಕಕ್ಕೆ ಬಂದಿದ್ದ ಅವನು ಅದರ ಉಪಾಸಕನಾಗಿ, ಸಂಘಸೇರಿ, ಕ್ರಿಯಾಶೀಲನಾದದ್ದಲ್ಲದೆ ತನ್ನ-ಪೂರ್ವದ ವಂಗ(ಬಂಗಾಳ)ದಿಂದ ಪಶ್ಚಿಮದ ಆಫ್ಘಾನಿಸ್ಥಾನದವರೆಗೆ, ಉತ್ತರದ ಕಾಶ್ಮೀರ ನೇಪಾಳದಿಂದ ದಕ್ಷಿಣದ ಆಂಧ್ರಪ್ರದೇಶ ಮತ್ತು ಕರ್ನಾಟಕದ ಮಧ್ಯಭಾಗದ ವರೆಗೆ ಹರಡಿದ್ದ-ವಿಶಾಲ ಸಾಮ್ರಾಜ್ಯದಲ್ಲಿ ಶಾಂತಿ ಧರ್ಮಗಳ ಸಂದೇಶ ಹರಡುವ ಸಲುವಾಗಿ ಧರ್ಮಪರ್ಯಟನೆ ಕೈಕೊಂಡ. ಅನೇಕ ಪ್ರಾಂತಗಳಲ್ಲಿ ಬಂಡೆಗಳ ಮೇಲೆ, ಶಿಲಾಭಿತ್ತಿಗಳ ಮೇಲೆ, ಸ್ತಂಭಗಳ ಮೇಲೆ, 'ಧರ್ಮಲಿಪಿ' ಎಂಬ ಶಿಲಾಲೇಖಗಳು ಕಾಣಿಸಿಕೊಂಡವು; ಬುದ್ಧನ (ಕ್ರಿ.ಪೂ. ೫೬೩-೪೮೩) ಮತ್ತು ಅವನ ಪ್ರಿಯಶಿಷ್ಯರ ನಿಧನಾ ನಂತರದಲ್ಲಿ-ಬೌದ್ಧರಿಗೆ ಪವಿತ್ರವೆನಿಸಿದ-ಅವರ ಹಲ್ಲು, ಉಗುರು, ಕೂದಲು, ಚಿತಾಭಸ್ಮ ಮತ್ತು ಅಸ್ಥಿಶೇಷಗಳನ್ನು ಒಂದೊಂದು ಕರಂಡಕದಲ್ಲಿಟ್ಟು ಅವರಿಗೆ ಸಂಬಂಧಿಸಿದ ಪಿಂಡಪಾತ್ರೆ ಮುಂತಾದ ಕೆಲವು ವಸ್ತುಗಳನ್ನು, ಎತ್ತರವಾದ ದಿಬ್ಬದ ಮೇಲೆ ನಡುವೆ ನಿಕ್ಷೇಪಿಸಿದ ಸ್ತೂಪಗಳೂ ಅಲ್ಲಲ್ಲಿ ಎದ್ದು ನಿಂತವು. ಹೀಗೆ ಅಶೋಕನ ಧರ್ಮ ಮತ್ತು ಶಾಂತಿ ಸಂದೇಶದ ಪ್ರಚಾರ ಸಾಮ್ರಾಜ್ಯದಾದ್ಯಂತ ಸತತವಾಗಿ ಬಿರುಸಿನಿಂದ ನಡೆಯಿತು. ಅನೇಕರು ಅದರಿಂದ ಆಕರ್ಷಿತರಾಗಿ ಬೌದ್ಧಧರ್ಮದ ಮಾರ್ಗವನ್ನು ಒಪ್ಪಿಕೊಂಡು ಅದರ ಅನುಯಾಯಿಗಳಾದರು. ಪ್ರಚಾರ ಕಾರ್ಯದಲ್ಲಿ ಅಶೋಕನಷ್ಟೆ



ಅಲ್ಲದೆ ಅವನ ರಾಣಿಯರು, ಮಕ್ಕಳು, ಬಂಧುವರ್ಗದವರು, ಅಧಿಕಾರಿವರ್ಗದವರು, ಪ್ರಜೆಗಳು ಹೀಗೆ ಎಲ್ಲರೂ ಉತ್ಸಾಹದಿಂದ ಪಾಲ್ಗೊಂಡರು.

ಬುದ್ಧ ಸಿದ್ಧಾರ್ಥನಾಗಿ ಹುಟ್ಟುವ ಮುನ್ನ ತಾಯಿ ಮಾಯಾದೇವಿಯ ಗರ್ಭದಲ್ಲಿದ್ದಾಗ ಅವಳಿಗೆ ಬಿದ್ದ ಕನಸು, ಅವಳಿಗೆ ಲುಂಬಿನೀವನದಲ್ಲಿ ಆದ ಮಗುವಿನ ಜನನ, ಅವನು ಜ್ಞಾನೋದಯ ಪಡೆದ ಜಾಗದಲ್ಲಿದ್ದ ಬೋಧಿವೃಕ್ಷ ಇವೆಲ್ಲವೂ ದೇಶಾದ್ಯಂತ ಸಾಮಾನ್ಯ ಪ್ರಜೆಗಳಿಗೂ ಸುಪರಿಚಿತವಾಗುವಂತೆ ಸ್ತೂಪದ ನಾಲ್ಕೂ ದಿಕ್ಕಿನ ಶಿಲಾದ್ವಾರಗಳ ಸ್ತಂಭಗಳಲ್ಲಿ ತೋರಣಗಳಲ್ಲಿ ಚಿತ್ರಣಗೊಂಡವು. ಹಾಗೆ ವಿಶೇಷ ರೀತಿಯಲ್ಲಿ

* ಕನ್ನಡ ಪ್ರಾಧ್ಯಾಪಕರು, ಪ್ರಾಂಶುಪಾಲರು (ನಿ), ೨ನೇ ಅಡ್ಡರಸ್ತೆ, (ಪಶ್ಚಿಮ), ಜೆ.ಸಿ.ಆರ್. ಬಡಾವಣೆ, ಚಿತ್ರದುರ್ಗ-೫೭೭೫೦೧.



ಸಾಂಚಿ

ರಚನೆಗೊಂಡ ಬಹುದೊಡ್ಡ ಹಾಗೂ ಪ್ರಾಚೀನ ಸ್ತೂಪಗಳಲ್ಲೊಂದು ಮತ್ತು ಅತ್ಯಂತ ಕಲಾತ್ಮಕವಾದದ್ದು ಈಗಿನ ಮಧ್ಯಪ್ರದೇಶ ರಾಜ್ಯದ ರಾಯಸೇನ ಜಿಲ್ಲೆಯ ಸಾಂಚಿಯ ಬೆಟ್ಟದ ಮೇಲಿರುವ ಸ್ತೂಪ. ಪ್ರಾಯಃ ಅದನ್ನು ಹೋಲುವಂತೆ ಕಲಾತ್ಮಕವಾಗಿ ರಚಿತವಾಗಿದ್ದ ಅಂಥದೆ ಇನ್ನೊಂದು ಸ್ತೂಪ ಎಂದರೆ ಕರ್ನಾಟಕದ ಗುಲ್ಬರ್ಗಾ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಸನ್ನತಿಯಲ್ಲಿದ್ದ ಸ್ತೂಪ ಎಂದು ಕಾಣುತ್ತದೆ. ಸನ್ನತಿಯ ಬೇಚರಕ್ ಗ್ರಾಮ ನಿವೇಶನದಲ್ಲಿ ಕೆಲವು ವರ್ಷಗಳ ಹಿಂದೆ ಮಣ್ಣಿನ ದಿಬ್ಬವೊಂದರಲ್ಲಿ ಸ್ತೂಪವೊಂದರ ಅವಶೇಷಗಳು ಮುಚ್ಚಿಹೋಗಿದ್ದುದು ಪತ್ತೆಯಾಯಿತು. ಶಹಾಬಾದಿ ಕಲ್ಲಿನ ಅದರ ತುಂಡುಗಳನ್ನು ಮಣ್ಣಿನಿಂದ ಬೇರ್ಪಡಿಸಿ ರಾಶಿ ಹಾಕಿ, ಅವನ್ನೆಲ್ಲ ಪರಿಶೀಲಿಸಿ ಉಬ್ಬು ಚಿತ್ರಗಳ ಕಲಾತ್ಮಕ ಕೆತ್ತನೆ ಇರುವ ಒಂದೊಂದು ಪ್ರತ್ಯೇಕ ಕಲ್ಲಿನ ಘಟಕವನ್ನು ಗುರುತಿಸಿ, ಅಂಟಿಸಿ, ಅಲ್ಲಿ ಒಂದು ಕಾಲಕ್ಕೆ ಇದ್ದ ಸ್ತೂಪವನ್ನು ಭಾರತ ಪುರಾತತ್ವ ಸರ್ವೇಕ್ಷಣ ಇಲಾಖೆ ಪುನಾರೂಪಿಸುತ್ತಿದೆ. ಈ ಕಲ್ಲುತುಂಡುಗಳ ರಾಶಿಗಳೊಳಗೆ ದೊಡ್ಡ ತುಂಡುಗಳಿಂದ ಹಿಡಿದು ಅತ್ಯಂತ ಚಿಕ್ಕ ತುಣುಕುಗಳ ವರೆಗೆ ಒಂದೊಂದು ಶಿಲ್ಪಘಟಕವನ್ನು ರೂಪಿಸುವುದು ಅಸಾಧಾರಣವಾದ ಕೆಲಸವೇ ಸರಿ. ಇಂಥ ಕಲ್ಲುತುಂಡುಗಳಲ್ಲಿ ಕೆಲವುಗಳ ಮೇಲೆ ಬ್ರಾಹ್ಮೀ ಲಿಪಿಯ ಒಂದೊಂದು ಎರಡೆರಡು ಪುಟ್ಟ ಸಾಲುಗಳ ಬರಹಗಳಿದ್ದು, ಅವೆಲ್ಲ ಲಿಪಿ ಲಕ್ಷಣದಿಂದ ಶಾತವಾಹನ ಕಾಲಕ್ಕೆ ಸೇರಿದವೆಂಬಂತೆ ಕಾಣುವುದರಿಂದ ಆ ಸ್ತೂಪವೂ ಅದೇ ಕಾಲಕ್ಕೆ ಸೇರಿದ್ದೆಂದು ತಿಳಿಯಲಾಗಿದೆ. ಅವುಗಳಲ್ಲಿ ಮನುಷ್ಯರು, ಮಹಲುಗಳು, ವಿವಿಧ ಪ್ರಾಣಿ ಪಕ್ಷಿ ಗಿಡ ಮರ ಹೂವು,



ಸನ್ನತಿ

ವಸ್ತು ಪರಿಕರಗಳು, ವಿವಿಧ ಘಟನೆಗಳು, ಬುದ್ಧನ ಕೆಲವು ಜಾತಕ ಕಥಾಪ್ರಸಂಗಗಳು, ಬುದ್ಧನ ಜೀವನದ ಕೆಲವು ಸಂದರ್ಭಗಳು ಇವೇ ಮುಂತಾದವುಗಳ ಉಬ್ಬುಶಿಲ್ಪಗಳ ಕೆತ್ತನೆ ಇರುವುದನ್ನು ಕಾಣಬಹುದು. ಇವುಗಳನ್ನು ನೋಡಿದರೆ ಆ ಸ್ತೂಪ ತುಂಬ ಕಲಾತ್ಮಕ ಕೆತ್ತನೆಯ ಉಬ್ಬುಚಿತ್ರಗಳನ್ನು ಹೊಂದಿ, ಸಾಂಚಿಯ ದೊಡ್ಡ ಸ್ತೂಪದಂತೆ ಮನಸೆಳೆಯುವ ಒಂದು ಸುಂದರ ಸ್ತೂಪವಾಗಿತ್ತು ಎಂಬುದು ಗ್ರಹಿಕೆಗೆ ಬರುತ್ತದೆ. ಈಗ ತಿಳಿದಿರುವಂತೆ ಸಾಂಚಿಯ ದೊಡ್ಡಸ್ತೂಪದ ವ್ಯಾಸ ೧೨೦ ಅಡಿ, ಎತ್ತರ ೫೪ ಅಡಿ. ಆದರೆ ಸನ್ನತಿಯ ಸ್ತೂಪದ ಅಳತೆಯ ವಿವರಗಳು ಸದ್ಯಕ್ಕೆ ಅಲಭ್ಯ. ಆದರೂ ಪುನಾರಚನೆಯ ತರುವಾಯ ಸನ್ನತಿಯ ಸ್ತೂಪಗಳು ಭಾರತದಲ್ಲಿ ಪುನಾರಚನೆಗೊಂಡ ಅತಿದೊಡ್ಡ ಹಾಗೂ ಅತಿಕಲಾತ್ಮಕ ಸ್ತೂಪಗಳಾಗುತ್ತವೆ ಎಂದು ಸನ್ನತಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಎಸ್.ಎಂ. ಜಾಮದಾರ್ ಅವರು ಅಭಿಪ್ರಾಯಿಸಿರುತ್ತಾರೆ.

ಆ ಕಲ್ಲಿನ ತುಂಡುಗಳಲ್ಲಿ ದೊಡ್ಡ ಗಾತ್ರದ ಉಬ್ಬು ಕೆತ್ತನೆ ಇರುವ ಒಂದು ಕಲ್ಲು ಚಪ್ಪಡಿಯಲ್ಲಿಯ ಒಂದು ಚಿತ್ರ ನಮ್ಮ ಗಮನವನ್ನು ವಿಶೇಷವಾಗಿ ಸೆಳೆಯುತ್ತದೆ. ಅದು ಸುಂದರ ಪುರುಷನೊಬ್ಬ ಸುಂದರಿಯರ ನಡುವೆ ಇರುವ

ಒಂದು ಶಿಲ್ಪ. ಅಲ್ಲಿರುವ 'ರಾಯಾ ಅಸೋಕೋ' ಎಂಬ ಬ್ರಾಹ್ಮೀ ಬರಹದಿಂದ ಆ ಸುಂದರ ಪುರುಷ ಬೇರೆ ಯಾರೂ ಅಲ್ಲ, ಮೌರ್ಯ ಸಮ್ರಾಟ ಅಶೋಕ ಎಂದೂ ಅವನೊಂದಿ ಗಿರುವ ಸುಂದರಿಯರು ಪ್ರಾಯಶಃ ಅವನ ರಾಣಿಯರಿರ ಬೇಕೆಂದೂ ತಿಳಿಯಲಾಗಿದೆ. ಇದರಲ್ಲಿ ಅಶೋಕನು ಅಗಲ ವಾದ ದುಂಡು ಪ್ರಸನ್ನ ಮುಖ, ತಲೆಯ ಮೇಲೆ ಅಲಂಕೃತ ರುಮಾಲನ್ನು ಹೋಲುವ ಸುಂದರ ಶಿರೋಭೂಷಣ, ಹರಹಾದ ಎದೆ, ಕೊರಳಲ್ಲಿ ದೊಡ್ಡಗಾತ್ರದ ಒಂದು ತೊಡವು, ರಟ್ಟೆಯಲ್ಲಿ ಎರಡೆರಡು ಸುತ್ತಿನ ವಳಯಕೇಯೂರಗಳು, ಮುಂಗೈಯಲ್ಲಿ ಕಟಕಗಳು, ಕಿವಿಯಲ್ಲಿ ದಪ್ಪವಾದ ಎರಡೆರಡು ಸುತ್ತಿನ ವಳಯಕುಂಡಲಗಳು, ಸೊಂಟದಲ್ಲಿ ಬಂಧಕ ಕಟಿವಸ್ತ್ರ ಮುಂತಾದವುಗಳಿಂದ ಕೂಡಿರುವಂತೆ ಚಿತ್ರಿತನಾಗಿದ್ದಾನೆ. ಅವನ ಇಕ್ಕೆಲಗಳಲ್ಲಿ ಇರುವ ರಾಣಿಯರಾದರೂ ಅಗಲವಾದ ದುಂಡು ಮುಖ, ಸರಳವಾದ ಪೈತಲೆಯ ಕೇಶವಿನ್ಯಾಸ, ಕಿವಿಯಲ್ಲಿ ಅಗಲವಾದ ದುಂಡನೆಯ ಪದಕ ಹೋಲುವ ಕುಂಡಲ, ಕೊರಳು-ರಟ್ಟೆ-ಮುಂಗೈಗಳಲ್ಲಿ ಕೆಲವು ತೊಡವುಗಳು, ತೆಳುಬಟ್ಟೆ ಮರೆಮಾಡಲಾಗದೆ ಎದ್ದು ಕಾಣುವಂತಿರುವ ದುಂಡನೆಯ ಸ್ತನಗಳ ವಕ್ಷಸ್ಥಲ, ಹಾಗೆಯೇ ಪಾದಭಾಗದಿಂದ ಸುಮಾರು ಮೀನಖಂಡದವರೆಗೆ ಹಾಕಿಕೊಂಡಿರುವ ಬಹುಸಂಖ್ಯೆಯ ಸುತ್ತಿನ ಕಡಗಗಳು, ನಾಭಿಯ ಕೆಳಗೆ ಸೂಕ್ಷ್ಮಚಿತ್ರವಿನ್ಯಾಸವಿರುವ ತೆಳುವಾದ ಬಟ್ಟೆಯನ್ನೂ, ತೆಳುವಾದ ಸೊಂಟವನ್ನು ಬಂಧಿಸಿರುವ ಸೊಂಟಪಟ್ಟಿ, ಬಟ್ಟೆ ಧರಿಸಿದ್ದರೂ ಅದು ಇಲ್ಲವೇ ಇಲ್ಲವೇನೋ ಎಂಬಂತೆ ಕಾಣುತ್ತಿರುವ ಯೋನಿಭಾಗ, ಒಟ್ಟಾರೆ ಅವರ ಎಲ್ಲ ಅಂಗಾಂಗ ಸೌಷ್ಠವದೊಂದಿಗೆ ಎದ್ದು ಕಾಣುವಂತೆ ಚಿತ್ರಿತವಾಗಿರುವ ಅವರ ಸ್ತ್ರೀತ್ವ, ಈ ಇಬ್ಬರು ರಾಣಿಯರ ಜೊತೆಗೆ ರಾಜ ಅಶೋಕನಿಗೆ ತಲೆಯ ಮೇಲೆ ಛತ್ರಿ ಹಿಡಿದಿರುವ ಇನ್ನೊಬ್ಬ ಸುಂದರ ಸ್ತ್ರೀ, ಹಿಂದೆ ಚೌರಿ ಹಿಡಿದಿರುವ ಯಾರೋ ಒಬ್ಬರು-ಈ ಎಲ್ಲ ಚಿತ್ರಣವು ಆಕರ್ಷಕವಾಗಿದೆ. ಅಶೋಕ, ರಾಣಿಯರು, ಎಲ್ಲರೂ ಬರಿಗಾಲಲ್ಲಿ ಎಲ್ಲಿಗೋ ಹೊರಟಿರುವ ರೀತಿಯ ಒಂದು ಚಿತ್ರ ಇಲ್ಲಿದೆ. ಇದನ್ನೆಲ್ಲ ನೋಡಿದರೆ, ಅಶೋಕ ಪರಿವಾರ ಸಮೇತನಾಗಿ, ಯಾವುದೋ ಧರ್ಮಸಭೆಗೋ ಬುದ್ಧಪಾದ ದರ್ಶನಕ್ಕೋ ಇಲ್ಲವೇ ಬೋಧಿವೃಕ್ಷ ದರ್ಶನಕ್ಕೋ ಪೂಜೆಗೋ ಧಾವಿಸುತ್ತಿರುವಂತೆ ಕಾಣುತ್ತದೆ. ಅಶೋಕ ದೊರೆ ಹೇಗಿದ್ದ? ಅದರಲ್ಲೂ ಯೌವನ ಕಾಲದ ಅಶೋಕ ಹೇಗಿದ್ದ? ಅವನ ರಾಣಿಯರು ಹೇಗಿದ್ದಿರಬಹುದು? ಎಂದು ನಮ್ಮ ಮನಸ್ಸಿನಲ್ಲಿ ಉದ್ಭವಿಸುವ ಅನೇಕ ಪ್ರಶ್ನೆಗಳಿಗೆ ಉತ್ತರ ರೂಪದ ಒಂದು ಚಿತ್ರ(ಣ) ಇಲ್ಲಿ ಸಿಕ್ಕುತ್ತದೆ.

ಭಾರತಾದ್ಯಂತ ಅಷ್ಟೇ ಏಕೆ ವಿಶ್ವಾದ್ಯಂತ ಸುಪರಿಚಿತ ನಾಗಿರುವ ಸಮ್ರಾಟ್ ಅಶೋಕನ ಒಂದು ಶಿಲ್ಪ-ಅದು ಶಾಸನದೊಂದಿಗೆ ದೃಢೀಕೃತವಾಗಿರುವ ಶಿಲ್ಪ- ಇದುವರೆಗೆ ಕಂಡು ಬಂದಿರುವುದು ಅವನ ಸಾಮ್ರಾಜ್ಯದ ದಕ್ಷಿಣದ ತುದಿಯ ಈ ಸನ್ನತಿಯಲ್ಲಿ ಮಾತ್ರ. ಇದು ಕರ್ನಾಟಕದ ಪಾಲಿಗೆ ಇದೊಂದು ಹೆಮ್ಮೆಯ ವಿಷಯವೂ ಹೌದು. ಅಶೋಕನ ಹಾಗೂ ರಾಣಿಯರ ಉಬ್ಬುಶಿಲ್ಪ ಇರುವುದು ಇದೊಂದೇಯೆ? ಇಂಥ ಬೇರಾವುದೂ ಶಿಲ್ಪ ಇಲ್ಲವೆ? ಈ ಪ್ರಶ್ನೆಗಳು ಬರುತ್ತವೆ. ಮೇಲೆ ಹೇಳಿದ ಸಾಂಚಿಯ ಬೆಟ್ಟದ ಮೇಲಿನ ಪ್ರಸಿದ್ಧವಾದ ಸ್ತೂಪವನ್ನು ಸಂದರ್ಶಿಸಿ ನಾಲ್ಕೂ ದಿಕ್ಕುಗಳಲ್ಲಿರುವ ಅದರ ದ್ವಾರಸ್ತಂಭಗಳ ಶಿಲ್ಪಚಿತ್ರಗಳನ್ನು ನೋಡುತ್ತಾ ಹೋದಾಗ, ಪೂರ್ವ ದಿಕ್ಕಿನ ದ್ವಾರಸ್ತಂಭವೊಂದರಲ್ಲಿ ಸನ್ನತಿಯಲ್ಲಿ ದೊರೆತ ರೀತಿಯದೇ ರಾಣಿಯರ ಜೊತೆಗಿನ ಅಶೋಕನ ಒಂದು ಉಬ್ಬುಶಿಲ್ಪ ಗೋಚರಿಸುತ್ತದೆ. ಆದರೆ ಸನ್ನತಿಯ ಶಿಲ್ಪದಲ್ಲಿ ಅಶೋಕನ ಹೆಸರಿನ ಶಾಸನ ಇರುವಂತೆ ಇಲ್ಲಿ ಯಾವುದೆ ಬರಹವಿಲ್ಲ. ಆದರೂ ಅದು ಅಶೋಕನದೆಂದು ಎರಡೂ ಶಿಲ್ಪಗಳ ಪರಸ್ಪರ ಹೋಲಿಕೆಯಿಂದ ಸ್ಫುಟವಾಗುತ್ತದೆ. ಇಲ್ಲಿ ನಡುವೆ ನಿಂತುಕೊಂಡಿರುವ ಒಬ್ಬ ಸುಂದರ ಪುರುಷ. ಅವನ ಎಡಬಲಕ್ಕೆ ಇಬ್ಬರು ಸುಂದರ ಸ್ತ್ರೀಯರು, ಆ ಸುಂದರ ಪುರುಷನ ತಲೆಯ ಮೇಲೆ ಛತ್ರಿ ಹಿಡಿದಿರುವ ಇನ್ನೊಬ್ಬ ಸುಂದರಿ, ಬಲಗೈಯಲ್ಲಿ ಮುಚ್ಚಳವಿರುವ ಜಲಪಾತ್ರೆ ಎಡಗೈಯಲ್ಲಿ ಬಟ್ಟಲೊಂದನ್ನು ಹಿಡಿದಿರುವ ಇನ್ನೊಬ್ಬ ಸುಂದರಿ, ಇವರ ಆಚೆಈಚೆ ಬೇರೆಬೇರೆಯ ಕಲಾಪಗಳಲ್ಲಿ ತೊಡಗಿರುವ ಇನ್ನು ಕೆಲವು ಸುಂದರಿಯರು, ಇಲ್ಲಿಯ ಶಿಲ್ಪದಲ್ಲಿ ಇದ್ದಾರೆ. ಅವರ ಉಡುಗೆತೊಡುಗೆಗಳು ಬಹುಮಟ್ಟಿಗೆ ಮೇಲೆ ಹೇಳಿದ ಸನ್ನತಿ ಶಿಲ್ಪದ ರೀತಿಯವೇ ಇವೆ. ಅಶೋಕ ಸಪರಿವಾರನಾಗಿ ಸಂಭ್ರಮದಿಂದ ಎಲ್ಲಿಗೋ ಹೊರಟ ರೀತಿಯ ಒಂದು ಚಿತ್ರಣ ಇಲ್ಲಿದೆ. ಅವರ ಮುಖಭಾವ ಮೈಕಟ್ಟುಗಳು ಹಾಗೇ ಕಾಣಿಸುತ್ತವೆ. ಒಟ್ಟಾರೆ ಸನ್ನತಿ ಶಿಲ್ಪದ ಪ್ರತಿ ಇದು ಎನ್ನುವಷ್ಟರ ಮಟ್ಟಿಗೆ ಸಾದೃಶ್ಯ ಕಾಣಿಸುತ್ತದೆ.

ಈ ಶಿಲ್ಪ ಅಶೋಕನದೆಂದು ಈಹಿಂದೆ ಯಾರಾದರೂ ಗುರುತಿಸಿದ್ದಾರೋ ಹೇಗೋ ತಿಳಿಯದು. ಭಾರತ ಪುರಾತತ್ವ ಸರ್ವೇಕ್ಷಣ ಇಲಾಖೆಯವರು ಹಿಂದಿ ಭಾಷೆಯಲ್ಲಿ 'ಸಾಂಚೀ ಕೇ ಬೌದ್ಧ ಸ್ಮಾರಕ್' ಎಂಬ ಹೆಸರಿನಲ್ಲಿ ೨೦೦೬ರಲ್ಲಿ ಪ್ರಕಟಿಸಿರುವ ಸಾಂಚಿಯ ಪ್ರಾಚ್ಯಾವಶೇಷಗಳ ವಿವರಣಿಕೆ (Brochure)ಯಲ್ಲಿ ಅಶೋಕ ತನ್ನ ರಾಣಿಯರ ಜೊತೆಗಿರುವ ಉಬ್ಬುಶಿಲ್ಪದ ಚಿತ್ರವೊಂದನ್ನು ಕೊಟ್ಟಿದ್ದಾರೆ. ಆದರೆ ಆಶ್ಚರ್ಯದ ಸಂಗತಿ ಎಂದರೆ ಅದು ಸಾಂಚಿಯಲ್ಲಿರುವ ಉಬ್ಬುಶಿಲ್ಪವಲ್ಲ,



ಸಾಂಚಿ ಸ್ತೂಪ

ಸನ್ನತಿಯಲ್ಲಿರುವ ಉಬ್ಬುಶಿಲ್ಪದ ಚಿತ್ರ. ಈ ಸಂಗತಿ ಆ ಚಿತ್ರದ ಕೆಳಗೆ 'ಸಮ್ರಾಟ್ ಅಶೋಕ್ ಕೀ ಸರ್ವ ಪ್ರಥಮ್ ಉತ್ಕೀರ್ಣ್ ಪ್ರತಿಮಾ, ಅಭಿಲೇಖ್ ಕೇ ಸಾಥ್, ಸಂನ್ನತಿ(ಕರ್ನಾಟಕ್)' ಎಂಬ ಶೀರ್ಷಿಕೆಯಿಂದ ದೃಢಪಡುತ್ತದೆ. ಮೇಲೆ ಹೇಳಿದಂತೆ ಇಲ್ಲಿ ಒಂದು ವ್ಯತ್ಯಾಸವೆಂದರೆ ಸನ್ನತಿಯ ಶಿಲ್ಪದಲ್ಲಿಯಂತೆ ಇವರು ಯಾರು ಎಂಬ ಬರಹ ಇಲ್ಲದೇ ಇರುವುದು. ಈ ಸ್ತಂಭಗಳು ತೋರಣಗಳು ಶಾತವಾಹನರ ಕಾಲದಲ್ಲಿ ಆದವು ಎಂದು ಈಗಾಗಲೇ ವಿದ್ವಾಂಸರು ಅಭಿಪ್ರಾಯಿಸಿರುವುದಕ್ಕೆ ಇಲ್ಲಿಯ ದ್ವಾರಸ್ತಂಭಗಳಲ್ಲಿ ಅವರ ಕಾಲದ ಬ್ರಾಹ್ಮೀ ಲಿಪಿಯ ಚಿಕ್ಕಚಿಕ್ಕ ಶಾಸನಗಳಿರುವುದು ಸಾಕ್ಷಿಯಾಗಿದೆ. ಇದನ್ನು ಮನದಂದರೆ ಈ ಶಿಲ್ಪ ಕೂಡ ಅವರ ಕಾಲದ್ದೆ ಎಂದು ತೋರುತ್ತದೆ.

ಈ ಶಿಲ್ಪದಲ್ಲಿರುವ ಅಶೋಕನ ರಾಣಿಯರಲ್ಲಿ ಒಬ್ಬಳು ಸಾಂಚಿಯ ಪಕ್ಕದಲ್ಲಿ ಇರುವ ಪ್ರಾಚೀನ ಕಾಲದ ವಿದಿಶಾ ನಗರ ಮೂಲದ ದೇವಿ ಅಥವಾ ವಿದಿಶಾದೇವಿ ಇದ್ದಿರ ಬಹುದೇ ಎಂಬ ಸಂದೇಹ ಮೂಡುತ್ತದೆ. ಏಕೆಂದರೆ ಅಸಂಧಿಮಿತ್ರಾ, ವಿದಿಶಾದೇವಿ, ಕಾರುವಾಕೀ, ಪದ್ಮಾವತೀ ಮತ್ತು ತಿಷ್ಯರಕ್ಷಿತಾ ಎಂಬ ಅಶೋಕನ ಹಲವು ರಾಣಿಯರಲ್ಲಿ ಅವನ ಲೌಕಿಕ ಹಾಗೂ ಧಾರ್ಮಿಕ ಜೀವನದಲ್ಲಿ ಮಹತ್ತರ ಪಾತ್ರವಹಿಸಿದವಳು ವಿದಿಶಾದೇವಿ. ಅಶೋಕ ಚಕ್ರವರ್ತಿ ಯಾಗುವ ಪೂರ್ವದಲ್ಲಿ ಒಮ್ಮೆ ಪೂರ್ವ ಭಾರತದ ಪಾಟಲೀಪುತ್ರದಿಂದ ಪಶ್ಚಿಮ ಭಾರತದ ಉಜ್ಜಯಿನಿಗೆ ಹೋಗಬೇಕಾಗಿ ಬಂದಾಗ, ಪ್ರಯಾಣಮಧ್ಯೆ ಸ್ವಲ್ಪ ಕಾಲ ಸಾಂಚಿಗೆ ಅತಿಸಮೀಪದಲ್ಲಿರುವ ವಿದಿಶಾ ನಗರದಲ್ಲಿ ಸ್ವಲ್ಪ ಕಾಲ ವರ್ತಕನೊಬ್ಬನ ಮನೆಯಲ್ಲಿ ತಂಗಿದ್ದನೆಂದೂ ಶಾಕ್ಯವಂಶ ಮೂಲದ ಆ ವರ್ತಕನ ಮಗಳು ವಿದಿಶಾ ದೇವಿಯನ್ನು ಅಶೋಕ ಆಮೇಲೆ ಮದುವೆಯಾದನೆಂದೂ ತಿಳಿದುಬರುತ್ತದೆ. ಹಾಗೇ ಅಶೋಕ ಕೆಲಕಾಲ ವಿದಿಶಾ ನಗರದಲ್ಲಿ ಪ್ರಾಂತಪಾಲಕನಾಗಿದ್ದು ಕಾರ್ಯನಿರ್ವಹಿಸಿ ಮುಂದೆ ಚಕ್ರವರ್ತಿಯಾಗಲು ಪಾಟಲೀಪುತ್ರಕ್ಕೆ ತೆರಳಿದನು. ಆದರೆ ವಿದಿಶಾದೇವಿ ಅಶೋಕನ ಸಂಗಡ ಹೋಗದೇ ವಿದಿಶಾ ನಗರದಲ್ಲಿಯೇ ಉಳಿದು ಬೌದ್ಧಧರ್ಮದ ಕಾರ್ಯಕಲಾಪ

ಗಳಲ್ಲಿ ನಿರತಳಾಗಿದ್ದಳು. ಮುಂದೆ ಅಶೋಕ ಸಾಂಚಿಯ ಸ್ತೂಪವನ್ನು ನಿರ್ಮಿಸಲು ಪ್ರೇರಣೆ ಕೊಟ್ಟವಳೂ ಅವಳೇ. ಸಿಂಹಳದಲ್ಲಿ ಬೌದ್ಧಧರ್ಮ ಪ್ರಸಾರಕ್ಕೆ ತೆರಳಿದ ಮಹಿಂದ (ಮಹೇಂದ್ರ) ಎಂಬ ಮಗ ಮತ್ತು ಸಂಘಮಿತ್ತ (ಸಂಘಮಿತ್ರಾ) ಎಂಬ ಮಗಳು ಅವಳಲ್ಲಿ ಜನಿಸಿದವರು. ಮಹಿಂದ ಸಿಂಹಳಕ್ಕೆ ತೆರಳುವ ಮುನ್ನ ತಾಯಿಯನ್ನು ನೋಡಿಕೊಂಡು ಹೋಗಬೇಕೆಂದು ವಿದಿಶಾ ನಗರಕ್ಕೆ ಬಂದು, ಆಕೆಯ ಸಂಗಡ ಆರು ತಿಂಗಳ ಕಾಲ ಅಲ್ಲೇ ಇದ್ದನು. ಸಾಂಚಿಯ ಸ್ಮಾರಕಗಳ ರಚನೆಯಲ್ಲಿ ವಿದಿಶಾ ನಗರದ ಹಲವು ನಾಗರಿಕರ ಪಾತ್ರವೂ ಇತ್ತು. ಈ ಎಲ್ಲ ಸಂಗತಿಯನ್ನು ಗಮನಿಸಿದರೆ ಸಾಂಚಿಯ ಶಿಲ್ಪದಲ್ಲಿ ಅಶೋಕನ ಸಂಗಡ ಇರುವ ರಾಣಿಯರಲ್ಲೊಬ್ಬಳು ವಿದಿಶಾದೇವಿ ಇರುವ ಸಾಧ್ಯತೆ ಇದೆ.

ಸಾಂಚಿಯ ಸ್ತೂಪವನ್ನು ರಚಿಸಿದ್ದ ಅಥವಾ ಕಂಡರಿಸಿದ್ದ ಶಿಲ್ಪಿಗಳೇ ಸನ್ನತಿಯ ಸ್ತೂಪವನ್ನೂ ರಚಿಸಿರಬಹುದೇ? ಅಥವಾ ಸನ್ನತಿಯ ಸ್ತೂಪ ರಚಿಸಿದ್ದ ಅಥವಾ ಕಂಡರಿಸಿದ್ದ ಶಿಲ್ಪಿಗಳೇ ಸಾಂಚಿಯ ಸ್ತೂಪ ನಿರ್ಮಾಣದಲ್ಲಿ ಪಾಲ್ಗೊಂಡಿರಬಹುದೇ? ಎಂಬ ಸಂದೇಹ ಮನಸ್ಸನ್ನು ಕಾಡುತ್ತದೆ. ಏಕೆಂದರೆ, ಸಾಂಚಿಯ ಮತ್ತು ಸನ್ನತಿಯ ಶಿಲ್ಪ ಚಿತ್ರಣದಲ್ಲಿ ಇರುವ ಸಾದೃಶ್ಯ, ಪರಸ್ಪರ ಪ್ರಭಾವದ ಸಾಧ್ಯತೆಯನ್ನು ಸೂಚಿಸುವಂತಿದೆ. ಸಾಂಚಿಯ ಶಿಲ್ಪದಲ್ಲಿ ಯಾವುದೇ ಬರಹ ಇಲ್ಲದಿರಲು, ಅದರಲ್ಲಿ ಚಿತ್ರಿತವಾಗಿರುವ ವ್ಯಕ್ತಿಗಳೆಲ್ಲರೂ ಆ ಪರಿಸರಕ್ಕೆ ಅತ್ಯಂತ ಸುಪರಿಚಿತರಾಗಿರುವುದರಿಂದ, ಅದರಲ್ಲಿ ಇರುವವರು ಯಾರು ಎಂದು ಬರೆದು ತಿಳಿಸಿಕೊಡಬೇಕಾದ ಅಗತ್ಯ ಅದನ್ನು ರಚಿಸಿದ ಕಾಲಕ್ಕೆ ಪ್ರಾಯಶಃ ಯಾರಿಗೂ ಕಾಣಿಸಿರಲಿಕ್ಕಿಲ್ಲ. ಆದರೆ ಸನ್ನತಿಯಲ್ಲಿ ಅವರು ಯಾರು, ಎಂತಹ ಪ್ರಸಿದ್ಧ ವ್ಯಕ್ತಿಗಳು ಎಂದು ಬರಹದ ಮೂಲಕ ಸ್ಥಳೀಯರಿಗೆ ತಿಳಿಸಿಕೊಡಬೇಕಾದ್ದು ಅಗತ್ಯ ಎಂದು ಇಲ್ಲಿಯ ಸ್ತೂಪ ನಿರ್ಮಾಪಕರಿಗೆ ಅನ್ನಿಸಿ ಹಾಗೆ ಹೆಸರಿನ ಶಾಸನ ಕೆತ್ತಿಸಿರಬೇಕು. ಹಾಗೆಂದೇ ಇಲ್ಲಿಯದು ಶಾಸನ ಬರಹ ಸಹಿತವಾದ ಶಿಲ್ಪವಾಗಿದೆ; ಅಲ್ಲಿಯದು ಶಾಸನರಹಿತವಾದ ಶಿಲ್ಪವಾಗಿದೆ ಎನಿಸುತ್ತದೆ.

ಅಶೋಕ, ಅವನ ರಾಣಿಯರು ಹಾಗೂ ಪರಿವಾರದವರು ಮೇಲೆ ಹೇಳಿದ ರೀತಿಯ ವೇಷಭೂಷಣಗಳನ್ನು ಧರಿಸುತ್ತಿದ್ದಿರಬಹುದು. ಆದರೆ ಮೈಕಟ್ಟು ಮುಖ ಚಹರೆಗಳೆಲ್ಲ ಹೀಗೇ ಇದ್ದುವೆ? ಅಥವಾ ಹೇಗಿದ್ದುವು? ಈ ಚಿತ್ರಣವು ಅಶೋಕನ ತರುವಾಯದ ಎಷ್ಟೋ ವರ್ಷಗಳ ಅನಂತರದ ಕಲಾವಿದರ ಕಲ್ಪನೆ ಎಂದೂ ಹೇಳಬಹುದಲ್ಲವೆ? ಇಂಥ ಚಿತ್ರಣದಲ್ಲಿ ಹಿಂದಿನ ಶಿಲ್ಪಿಗಳು ಒಂದು ಬಗೆಯ ಸರ್ವತ್ರ ಏಕ ರೂಪದ ಕೆತ್ತನೆ (Stereotyped Carving) ಯನ್ನು ಅಥವಾ ಯಥಾಪ್ರಕಾರದ ಒಂದು ಅಭಿವ್ಯಕ್ತಿಯನ್ನು ಕೊಡುತ್ತಿದ್ದರು. ಇದಕ್ಕೆ ನಮ್ಮಲ್ಲಿ ಎಷ್ಟೋ ವೀರಗಲ್ಲು ಶಿಲ್ಪಗಳಲ್ಲಿ, ಭಕ್ತ ವಿಗ್ರಹ ಶಿಲ್ಪಗಳಲ್ಲಿ, ರಾಜ ರಾಣಿಯರವೆಂದು ಹೇಳುವ ಶಿಲ್ಪಗಳಲ್ಲಿ, ಬೇರೆ ಬೇರೆ ವ್ಯಕ್ತಿಗಳ ಮುಖಗಳನ್ನೆಲ್ಲ ಹೆಚ್ಚು ಕಡಿಮೆ ವ್ಯಕ್ತಿಗತ ವ್ಯತ್ಯಾಸಗಳಿಲ್ಲದೆ ಒಂದೇ ರೀತಿ ಇರುವಂತೆ ಕೆತ್ತಿರುವ ಉದಾಹರಣೆಗಳಿಲ್ಲವೆ? ಹೀಗಾಗಿ ಅದೇ ಬಗೆಯ ಯಥಾಪ್ರಕಾರತೆ ಅಶೋಕ ಮತ್ತು ರಾಣಿಯರ ಮುಖಗಳ ಕೆತ್ತನೆಯಲ್ಲಿಯೂ ಆಗಿರಬಹುದಲ್ಲವೆ? ಒಂದು ವೇಳೆ ಹಾಗೆ ಆಗಿರಬಹುದಾದರೂ ಚಿತ್ರದಲ್ಲಿಯ ಅವರ ಮುಖ ಚಹರೆ ಮೈಕಟ್ಟು ಎಲ್ಲವೂ ಆಯಾ ವ್ಯಕ್ತಿಗಳ ಪ್ರತಿಕೃತಿಗಳೆನ್ನಲಾಗದಿದ್ದರೂ, ಅವರು ಎಂತಹ ಉಡುಗೆತೊಡಿಗೆಗಳಲ್ಲಿರುತ್ತಿದ್ದರು ಮತ್ತು ಎಂಥ ಸಾಂಘಿಕ ಅಥವಾ ಕೌಟುಂಬಿಕ ಕಲಾಪಗಳಲ್ಲಿರುತ್ತಿದ್ದರು ಎಂಬ ಒಂದು ಗ್ರಹಿಕೆಗೆ ಆ ಕೆತ್ತನೆ ಸಹಾಯ ಮಾಡುತ್ತವೆ ಎನಿಸುತ್ತದೆ.

[ದಿನಾಂಕ: ೦೮-೧೧-೨೦೧೧ರಂದು ನಾವು ಸಾಂಚಿಯನ್ನು ಸಂದರ್ಶಿಸಲು ಸಹಕರಿಸಿದ ಡಾ. ಜಿ.ಆರ್. ಚಿನ್ಮಯ, ಜಿ.ಆರ್. ಅಕ್ಷಯ, ಡಾ. ಬಿ.ವಿ. ಸ್ಮಿತಾ (ಚೇತನಾ), ಶ್ರೀಮತಿ ಪಿ. ಯಶೋದಾ ಅವರಿಗೆ ಮತ್ತು ವಿದಿಶಾ ನಗರನ್ನು ಸಂದರ್ಶಿಸಲು ಸೂಚಿಸಿ ಪ್ರೇರಣೆ ನೀಡಿದ ಪ್ರಿಯಮಿತ್ರರಾದ ಡಾ. ಪಿ. ಗಣಪಯ್ಯ ಭಟ್ ಮೂಡುಬಿದರೆ ಅವರಿಗೆ ನನ್ನ ನೆನಕೆಗಳು ಸಲ್ಲುತ್ತವೆ.]

ಆಧಾರಸೂಚಿ

೧. *Asoka* - Vincent A. Smith., ೨.*Asoka* - D.R. Bhandarkar., ೩. *Early History of India* - Vincent A. Smith.

೪. Madhya Pradesh, The Heart of Nation (A Tourist Guide) - Prof. A.K. Kandya, Scientific Publishers, Bhopal, First Edition.

೫. **ಸಾಂಚೀ ಕೇ ಬೌದ್ಧ್ ಸ್ಮಾರಕ್** – A Brochure in Hindi, Archaeological Survey of India, 2006.

೬ **ಅಶೋಕ ಮೌರ್ಯ** – ಜಿ.ಪಿ. ರಾಜರತ್ನಂ, ಬೆಂಗಳೂರು, ೧೯೩೫.

೭. **ಅಶೋಕ** – ನಾ. ಕಸ್ತೂರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೫೨.

೮. **ಜ್ಞಾನ ಗಂಗೋತ್ರಿ,** ಸಂಪುಟ ೫ – ಪ್ರಧಾನ ಸಂಪಾದಕರು : ನಿರಂಜನ, ಬೆಂಗಳೂರು, ೧೯೭೩.

೯. **ಮೂರ್ತಿಶಿಲ್ಪ : ನೆಲೆ ಹಿನ್ನೆಲೆ** – ಎಸ್.ಕೆ. ರಾಮಚಂದ್ರರಾವ್, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೭೫.

೧೦. **ಕರ್ನಾಟಕದಲ್ಲಿ ಅಶೋಕನ ಶಾಸನಗಳು** – ಡಾ. ಎಂ.ಪಿ. ಮಂಜಪ್ಪ ಶೆಟ್ಟಿ, ಮೈಸೂರು, ೧೯೯೧.

೪೩

ರೋಣ ತಾಲ್ಲೂಕಿನ ಶಾಸನ ಕವಿಗಳು ಹಾಗೂ ಶಾಸನ ಶಿಲ್ಪಿಗಳು

ಡಾ. ಮಲ್ಲಿಕಾರ್ಜುನ ಕುಂಬಾರ*

"ಸರ್ವ ಧರ್ಮಧೇನುನಿಹವಕ್ಕೆ ಆಡಂಬೊಲಂ ಬೆಳ್ವೊಲಂ"[೧] ಎಂಬ ಗಮನಾರ್ಹವಾದ ಮಾತೊಂದು ಶಾಸನದಲ್ಲಿ ಬರುತ್ತದೆ. ಬೆಳ್ವೊಲ ನಾಡಿನ ಭಾಗವೂ ಆಗಿದ್ದ ರೋಣ ತಾಲ್ಲೂಕು ಸರ್ವ ಧರ್ಮಗಳ ನೆಲೆ ಬೀಡು. ರೋಣ ತಾಲ್ಲೂಕಿನ ಕೆಲವು ಪ್ರದೇಶಗಳು ನೆರೆಯ ಕಿಸುಕಾಡು-೭೦ಕ್ಕೆ ಸೇರಿತ್ತು. ಈ ತಾಲ್ಲೂಕಿನ ಬಗ್ಗೆ ಭೂವಿಜ್ಞಾನಿ ಬ್ರೂಸ್ ಫುಟ್ (೧೮೬೪)ರವರು ಹೇಳುವಂತೆ, ಇದು ಆದಿಶಿಲಾ ಯುಗದಿಂದಲೂ ಅಸ್ತಿತ್ವದಲ್ಲಿದೆ.[೨] ಈ ತಾಲ್ಲೂಕು ೧೨೯೧ ಚ. ಕಿ.ಮೀ. ಭೌಗೋಳಿಕ ವಿಸ್ತೀರ್ಣವನ್ನು ಹೊಂದಿದ್ದು ಸುಮಾರು ೧೦೩ ಹಳ್ಳಿಗಳಲ್ಲಿ ಹರಡಿಕೊಂಡಿದೆ. ತಾಲ್ಲೂಕಿನ ತುಂಬೆಲ್ಲಾ ಶಾಸನಗಳು ಅಲ್ಲಲ್ಲಿ ಚದುರಿಬಿದ್ದಿವೆ. ಸದ್ಯಕ್ಕೆ ೩೦ ಊರುಗಳಲ್ಲಿ ೧೧೦ಕ್ಕೂ ಹೆಚ್ಚು ಶಾಸನಗಳು ದೊರಕಿವೆ ಅವುಗಳಲ್ಲಿ ದತ್ತಿ, ದಾನ ಶಾಸನಗಳೇ ಹೆಚ್ಚಾಗಿವೆ. ರಾಷ್ಟ್ರಕೂಟರು, ದೇವಗಿರಿಯ ಯಾದವರು, ಕಲಚೂರಿಗಳು, ಕಲ್ಯಾಣದ ಚಾಲುಕ್ಯರು, ಹೊಯ್ಸಳರು ಮತ್ತು ವಿಜಯ ನಗರದ ಅರಸರುಗಳ ಶಾಸನಗಳು ಇಲ್ಲಿವೆ. ಈ ಶಾಸನಗಳಲ್ಲಿ ರಾಜರುಗಳ, ದತ್ತಿ, ದಾನಗಳ ವರ್ಣನೆಗಳಿವೆ. ರಾಜನ ಆಸ್ಥಾನದಿಂದ ಅಥವಾ ರಾಜರಿಂದ ಮಾನ್ಯರಾಗಿ ನೇಮಿಸಲ್ಪಟ್ಟ ಕವಿಗಳು ಶಾಸನಗಳನ್ನು ರಚಿಸಿದಾಗ ಅವುಗಳನ್ನು ಶಾಸನ ಕವಿಗಳಿಂದ ಇಲ್ಲವೆ ಸುಂದರ ಅಕ್ಷರಗಳನ್ನು ಬರೆಯುವ ಬರಹಗಾರರಿಂದ ಕಲ್ಲಿನಲ್ಲಿ ಸುಂದರವಾಗಿ ಮಸಿಯಿಂದ ಬರೆಯಿಸಿ, ಆಮೇಲೆ ಅದನ್ನು ಅಂದವಾಗಿ ಕೆತ್ತುತ್ತಿದ್ದರು. ಹೀಗೆ ಬರೆದ ಹಲವಾರು ಶಾಸನಗಳಲ್ಲಿ ಶಿಲ್ಪಿಗಳು, ಶಾಸನ ಕಾರರು, ಮತ್ತು ಕವಿಗಳು, ಉಲ್ಲೇಖಿತರಾಗಿದ್ದಾರೆ. ಆದರೆ ಕೈಬೆರಳು ಎಣಿಸುವಷ್ಟು ಮಾತ್ರರಿದ್ದಾರೆ. ಈ ಶಾಸನಕಾರರು ತಮ್ಮ ಹೆಸರಿನಿಂದ ಅನಾಮಧೇಯರಾಗಿ ಉಳಿಯಲು ಬಯಸಿದ್ದಾರೆ. ಇದು ರೋಣ ತಾಲ್ಲೂಕಿನ ಶಾಸನಗಳ ವಿಷಯದಲ್ಲಿ ಕೂಡಾ ಹೊರತಲ್ಲ.

ಪಂಚತಂತ್ರದ ಕೃತಿಕಾರ ದುರ್ಗಸಿಂಹ, ಕರ್ನಾಟಕ ಕಾದಂಬರಿ ಕರ್ತೃ ನಾಗವರ್ಮನ ಜನ್ಮ ಭೂಮಿ ಸವಡಿ ಗ್ರಾಮದಲ್ಲಿ ರಾಷ್ಟ್ರಕೂಟ ಅರಸನಾದ "ಖೊಟ್ಟಿಗ"ನ ಕಾಲದ (೯೬೬-೭೧) ಅತಿ ಪುರಾತನ ಶಾಸನವೊಂದು ದೊರಕಿದೆ. ಚಾವಡಿ ಪಕ್ಕದಲ್ಲಿರುವ ಈ ಶಾಸನದ ಕಾಲ ಕ್ರಿ.ಶ.೯೭೦. ರಾಷ್ಟ್ರಕೂಟ ಖೊಟ್ಟಿಗನು ಕಿಸುಕಾಡು-೭೦ನ್ನು ಆಳುತ್ತಿರುವಾಗ ಅವನ ಸಾಮಂತ ಅರಸನಾದ ಮಾರಸಿಂಘ ಪೆರ್ಮಾಡಿಯನ್ನು ಉಲ್ಲೇಖಿಸುವ ಈ ಶಾಸನವು ಗಂಗರ ವತ್ಸಯ್ಯನೆಂಬಾತನು ಒಂದು ದೇಗುಲವನ್ನು ಮತ್ತು ಮಂಟಪವನ್ನು ನಿರ್ಮಿಸಿ ಅಲ್ಲಿ ಲಿಂಗ ಮತ್ತು ಭಗವತಿಯ ಪ್ರತಿಷ್ಠೆಯನ್ನು ಮಾಡಿಸಿದನು. ಈ ಸಂದರ್ಭದಲ್ಲಿ ಬಲವರ್ಮ ಎಂಬ ಹೆಸರಿನ ಬಲ್ಲಯ್ಯನು ಈ ದೇವಾಲಯಕ್ಕೆ ಭೂಮಿ ದಾನ ಮಾಡುತ್ತಾನೆ. ಬಲ್ಲಯ್ಯನ ಮಗನಾದ "ಜಂಗಿಗಳ್ಗು ಗರಯ್ಯ"ನ ಚಾರಿತ್ರ್ಯವನ್ನು ಈ ಶಾಸನ ಹೊಗಳುತ್ತದೆ.[೩] ಈ ಶಾಸನದ ಕೊನೆಯಲ್ಲಿ

> "ವೇದ ವೇದಾಂಗ (ಮನೋದ)ದೆ ಸಾಸ್ತ್ರಮ
> ನಾದಿ ಮದ್ಯಂತ ಮರಿಯದೇ ನಾರಣಂ
> ಗಾದಂದು ಕವಿತೆ ಸಹಜಮೆ ।
> ನಾಗನಾರ್ಯ್ಯನ ಶೀಘ್ರ ಲಿಖಿತಂ"[೪]

ಎಂದಿರುವ ಇದು ತ್ರಿಪದಿ ಶಾಸನವಾಗಿದೆ. ಇಲ್ಲಿನ ಕವಿ "ನಾರಣ" ನೆಂದು, ಇವನು ಬರೆದ ಕವಿತೆಯನ್ನು ಕಲ್ಲಿನಲ್ಲಿ ನಾಗನಾರ್ಯ್ಯನು ಕೆತ್ತಿದನು. ಕವಿ ತನಗೆ ಶಾಸ್ತ್ರದ ಲವಲೇಶವೂ ಗೊತ್ತಿಲ್ಲವೆಂದು ಪ್ರಾಮಾಣಿಕವಾಗಿ ಹೇಳಿಕೊಂಡಿದ್ದರೂ ಈತನು ತಕ್ಕ ಮಟ್ಟಿಗೆ ವಿದ್ಯಾಪುರುಷನೆ ಆಗಿದ್ದಾನೆ. ಶಾಸನ ಬರೆಯುವ ಪದ್ಧತಿ ಇವನಿಗೆ ತಿಳಿದಿದೆ.[೫] ಈ ನಾರಣನು ಬೇರೆ ಯಾವ ಕೃತಿ ರಚಿಸಿದನೋ ತಿಳಿಯದು.

ಇದೇ (ಸವಡಿ) ಗ್ರಾಮದ ಚಾವಡಿ ಹತ್ತಿರದಲ್ಲಿ ಕಲ್ಯಾಣ ಚಾಲುಕ್ಯ ಆರನೆಯ ವಿಕ್ರಮಾದಿತ್ಯನ ಕಾಲದ (೧೦೮೩ರಲ್ಲಿ) ಶಾಸನವಿದೆ. ಮಹಾಮಂಡಳೇಶ್ವರ ಭೂಲೋಕಮಲ್ಲ ಪೆರ್ಮಾಡಿ ಕಿಸುಕಾಡು-೭೦, ಬಾಗಡಿಗೆ-೭೦ ಮತ್ತು ನರೆಯಂಗಲ್ಲ-೧೨ನ್ನು ಆಳುತ್ತಿರುವಾಗ, ಮೂಲಸ್ಥಾನ ದೇವರಿಗೆ ಅಲ್ಲಿಯ ಗಂಗರ ಬಾಚಿಮಯ್ಯ ಎಂಬವನು ಚಂದ್ರಭೂಷಣ ಪಂಡಿತರ ಸಮ್ಮುಖದಲ್ಲಿ ದತ್ತಿ ನೀಡುತ್ತಾನೆ. ೪೫ ಸಾಲಿನ ಈ ಶಾಸನದ ಕೊನೆಗೆ

* 'ವಚನ', ರಾಜೂರ, ರೋಣ ತಾಲ್ಲೂಕು, ಗದಗ ಜಿಲ್ಲೆ-೫೮೨ ೨೩೦.

"ನಾಗೋಜ ಬೆ (ಸಗೆಯ್ದಿ)"[೬]

ಎಂದಿದ್ದು ಅದು ಪೂರ್ತಿಯಾಗಿ ಸ್ಪಷ್ಟವಿಲ್ಲದ ಕಾರಣ ಈತನು ಕವಿಯೋ, ಶಿಲ್ಪಿಯೋ ಅಥವಾ ದತ್ತಿಗೆ ಆಜ್ಞೆ ಮಾಡಿದ ಅಧಿಕಾರಿಯೋ ಸರಿಯಾಗಿ ಅರ್ಥವಾಗುವದಿಲ್ಲ.

ಒಂದು ಕಾಲಕ್ಕೆ ಸರ್ವಧರ್ಮದಧೇನು ಎನಿಸಿಕೊಂಡ, ಚಾಲುಕ್ಯರಾಣಿ ಅಕ್ಕಾದೇವಿಯ ರಾಜಧಾನಿಯಾಗಿದ್ದ ಸೂಡಿ ಗ್ರಾಮದಲ್ಲಿ (ರೋಣ ತಾಲ್ಲೂಕಿನಲ್ಲಿಯೇ) ಅತಿ ಹೆಚ್ಚು ಶಾಸನಗಳು ದೊರಕಿವೆ. ಇಲ್ಲಿಂದ ಈಗ ೨೧ ಶಾಸನಗಳು ಪ್ರಕಟಗೊಂಡಿವೆ. ಊರ ಹೊರಗಿರುವ ಜೋಡು ಕಳಸದ ಗುಡಿ ಹತ್ತಿರದಲ್ಲಿ ಶಾಸನವಿದ್ದು ಅದು ಕ್ರಿ.ಶ. ೧೦೬೦ ಕ್ಕೆ ಸೇರಿದ್ದಾಗಿದೆ. ೬೩ ಸಾಲಿನ ಈ ಶಾಸನದಲ್ಲಿ ಕಲ್ಯಾಣ ಚಾಲುಕ್ಯ ಅರಸು ಸೋಮೇಶ್ವರನ ಕಾಲದ ಆಳ್ವಿಕೆಯಲ್ಲಿ ಮಹಾ ಸಾಮಂತಾಧಿಪತಿ ಮನೆವೆರ್ಗಡೆ, ದಂಡನಾಯಕನಾದ ನಾಗಿದೇವನು ನಾಗೇಶ್ವರ ದೇವಾಲಯದ ನಿರ್ಮಾಣ ಹಾಗೂ ಆ ಗುಡಿಗೆ ದಾನಮಾಡಿದ ಬಗ್ಗೆ ಈ ಶಾಸನದಲ್ಲಿ ವರ್ಣಿಸಲಾಗಿದೆ. ಶಾಸನದ ಕೊನೆಯಲ್ಲಿ "ಬರೆದಂ ಸೂಂಡಿಯ ಕುಲಕರ್ಣಿ ರಾವಪಯ್ಯನ ಈಶ್ವರ ಪಾದಪಂಕಜ ಭ್ರಮರ"[೭] ಎಂಬ ಬರಹವಿದೆ. ಇದರಿಂದ ಈ ಶಾಸನವನ್ನು ಈಶ್ವರ ಭಕ್ತನಾದ ಸೂಡಿಯ "ಕುಲಕರ್ಣಿ ರಾವಪಯ್ಯ" ಎಂಬವನು ಬರೆದನೆಂದು ಸ್ಪಷ್ಟವಾಗುತ್ತದೆ. ಈತನ ಬಗ್ಗೆ ಹೆಚ್ಚಿನ ವಿವರಗಳು ತಿಳಿದು ಬರುತ್ತಿಲ್ಲ.

ಪ್ರಭುಲಿಂಗಲೀಲೆ ಕೃತಿ ವಿರಚಿತ ಚಾಮರಸನ ಜನ್ಮಸ್ಥಳ ನಾರಾಯಣಪುರ, ಅದರ ಸನಿಹದ ಕೊಟುಮಚಗಿ ಗ್ರಾಮದ ಕೆರೆದಂಡೆಯ ಮೇಲೆ ಪ್ರಾಚೀನ ಸೋಮೇಶ್ವರ ದೇವಾಲಯದ ಎದುರುಗಡೆ ಶಾಸನವೊಂದಿದೆ. ಈ ಶಾಸನವು ಬಹಳಷ್ಟು ಹಾಳಾಗಿವೆ. ಈಗ ಉಳಿದ ಬರಹದಲ್ಲಿ "ಚಾಲುಕ್ಯ ವಿಕ್ರಮ ಕಾಲದ ೨ ಪೌಷ್ಯ ಶುದ್ಧ (೧) ಆದಿತ್ಯವಾರ"[೮] ಎಂದಿರುವ ದರಿಂದ ಶಾಸನದ ಕಾಲ ಕ್ರಿ.ಶ. ೧೦೭೭ ಎಂದು ಶಾಸನ ಸಂಪಾದಕರು ನಿರ್ಧರಿಸಿದ್ದಾರೆ. ಅಪೂರ್ಣವಾಗಿರುವ ಕಂದ ಪದ್ಯದ ಈ ಬರಹವು ಆರನೆಯ ವಿಕ್ರಮಾದಿತ್ಯನ ಆಳ್ವಿಕೆಯಲ್ಲಿ ಬೆಳ್ವಲ, ಪುಲಿಗೇರಿಗಳನ್ನಾಳುತ್ತಿದ್ದ ಸಾಮಂತ ಅರಸ ಅನಂತಪಾಲರಸನ ಔದಾರ್ಯವನ್ನು ವರ್ಣಿಸಲಾಗಿದೆ. ಗದ್ಯದ ಜೊತೆಗೆ ಹಲವು ವೃತ್ತ ಕಂದಗಳಿವೆ. ೪೭ ಕಂಡರಗೆ ಸಾಲುಗಳುಳ್ಳ ಈ ಶಾಸನದ ಪದ್ಯಸಂಖ್ಯೆ ಇಷ್ಟೇ ಎಂದು ಗುರುತಿಸಲಾಗದು. ಅಳಿದುಳಿದ

"ಚತುರಧಿಕ ಶತಧರಾಮರ
(ತತಿಶಯ ದಿಂ) ಚಂದ್ರಭಟ್ಟ ಕವಿ
ವಿರಚಿಸದಂ ॥"[೯]

೧ ಮತ್ತು ೪ನೇ ಸಾಲಿನಲ್ಲಿ ಎಂದು ಬರೆಯಲ್ಪಟ್ಟಿದೆ. ಇದರಿಂದ ಈ ಶಾಸನ ಲಿಪಿಕಾರನು ಚಂದ್ರಭಟ್ಟನೆಂಬವ ನಾಗಿದ್ದಾನೆ. ಕ್ರಿ.ಶ. ೧೦೬೭ ರಲ್ಲಿನ ಹೊಟ್ಟೂರ ಶಾಸನವನ್ನು ಬರೆದ ರಾಜವಲ್ಲಭನ ಕವಿತೆಯನ್ನು ವಿಸ್ತರಿಸಿ ತಿದ್ದಿದ್ದ "ವಾಕ್ಪತಿ ಬಿರುದಿನ ಚಂದ್ರಭಟ್ಟನೇ" ಇವನೆಂದು ಕವಿಚರಿತ್ರೆಕಾರರು ಅಭಿಪ್ರಾಯ ಪಡುತ್ತಾರೆ.[೧೦]

ಇದು ಚಾಲುಕ್ಯ ಒಂದನೆಯ ಸೊಮೇಶ್ವರನ ಕಾಲಕ್ಕೆ (೧೦೬೭) ಸೇರಿದ, ಮಾರಗಾವುಂಡನ ಮಗ ಕೇಶಿಗಾವುಂಡನ ಪ್ರಶಸ್ತಿಪರ ಶಾಸನವಾಗಿದೆ. ಕದಂಬ ರಾಜ ಹರಿಗನನ್ನು ಚಾಲುಕ್ಯ ವಿಕ್ರಮಾದಿತ್ಯನು "ಮಗನೆನಗೀತನೆ" ಎಂದು ಮೆಚ್ಚಿ, ನಚ್ಚಿ ಚಾಳುಕ್ಯ ಗಂಗ ಪೆರ್ಮಾಡಿ ಎಂಬ ಹೆಸರನ್ನು, ಗಂಗ ಮತ್ತು ಚಾಳುಕ್ಯರ ರಾಜ ಚಿನ್ಹೆಗಳನ್ನು ಕೊಟ್ಟು ಈತನನ್ನು ಮನ್ನಿಸಿದ್ದಾನೆ[೧೧] ಈ ಶಾಸನದ ಅಕ್ಷರಗಳು ನಷ್ಟವಾದರೂ ಚಂಪಕಮಾಲಾ ವೃತ್ತದಲ್ಲಿದೆ.

"ಸ್ಫುರಿತವ ಚೋ ವಿಭಾಸಿ ಚ(ಟು)ವಾ(ಣಿ)
ಯ ಸತ್ಕವಿ ರಾಜವಲ್ಲಭನು ವಿರಚಿಸಿದನೆಂದು
ವಿವೇಕ ನಿಧಿ.....(ಅವನೋ)"

ಎಂದಿದೆ. ವಾಕ್ಪತಿ ಚಂದ್ರಭಟ್ಟರು ಮತ್ತು ಗುರು ಬಡಭದ್ರ ದೇವರು ತಿದ್ದಿದರೆಂದು ಹೇಳಿದೆ.[೧೨] ಕ್ರಿ.ಶ. ೧೦೦೦ ರಲ್ಲಿದ್ದ ಚಂದ್ರಭಟ್ಟ ಕವಿಯೇ ಬೇರೆ; ಈ ಶಾಸನ ಕವಿಯೇ ಬೇರೆ ಎಂದು ಕಾಣುತ್ತದೆ. ರುದ್ರಭಟ್ಟ, ಕೇಶಿರಾಜ ಮತ್ತು ರಟ್ಟಕವಿಗಳು ಹೊಗಳಿರುವ ಚಂದ್ರಭಟ್ಟನು ಹಾಗೂ ಈತನು ಅಭಿನ್ನರಾಗಿರ ಬಹುದು.[೧೩] ಹಾನಗಲ್ಲ ತಾಲ್ಲೂಕಿನ ಬಾಳೂರ ಗ್ರಾಮದ ಶಾಸನ ಕವಿಯಾದ ಚಂದ್ರಭಟ್ಟ (೧೧೨೫) ಮತ್ತು ಇವನು ಒಂದೇ ಆಗಿರಬಹುದೆ?[೧೪] ಈ ಬಗ್ಗೆ ಶೋಧನೆ ನಡೆಯ ಬೇಕಾಗಿದೆ. ಈ ಶಾಸನಗಳಲ್ಲದೇ ಈತನು ಯಾವ ಗ್ರಂಥಗಳನ್ನು ಬರೆದನೋ? ಎಂಬುದರ ಬಗ್ಗೆ ಉಲ್ಲೇಖಗಳು ದೊರಕುತ್ತಿಲ್ಲ. ಕೊಟುಮಚಗಿಯಲ್ಲಿನ ಶಾಸನದ ಪೂರ್ತಿ ಪಾಠ ಲಭಿಸಿದ್ದರೆ ಇನ್ನಷ್ಟು ವಿಷಯಗಳು ಬೆಳಕಿಗೆ ಬರುತ್ತಿದ್ದವು.

ರೋಣ ಸಮೀಪದ ಬೆಳವಣಿಕಿ ಗ್ರಾಮದ ಕಲ್ಮೇಶ್ವರ ದೇವಾಲಯದ ಎದುರಿಗಿರುವ ಬಹಳಷ್ಟು ಒಡೆದ ೩೫ ಸಾಲಿನ ಶಾಸನವೊಂದಿದೆ. ಈ ಶಾಸನದ ಕಾಲ ಕ್ರಿ.ಶ. ೧೧೦೨ ಇದು ಕಲ್ಯಾಣ ಚಾಲುಕ್ಯ ತ್ರಿಭುವನಮಲ್ಲ ಆರನೆಯ ವಿಕ್ರಮಾದಿತ್ಯನ ಕಾಲದ್ದು. ಈ ಶಾಸನದಲ್ಲಿ ಬೆಳವಣಿಕಿ ಗ್ರಾಮದ ಪಲಗೆಯ ಚಾವುಂಡಯ್ಯ ಮತ್ತು ಆತನ ಧರ್ಮಪತ್ನಿ ಸಾನ್ತಿಕಬ್ಬೆ ಸೇರಿ ಬೆಳವಣಿಕೆಯ ಅಗ್ರಹಾರದಲ್ಲಿ ಊರೊಡೆಯ ವಿಷ್ಣುಭಟ್ಟೋಪಾಧ್ಯಾಯ ಮತ್ತು ಪ್ರಮುಖರಾದ ೮೪ ಮಹಾಜನರಿಗೆ ಸಭಾಮಂಟಪಕ್ಕೆ ಮುತ್ತಲಗೇರಿ-೧೨ನ್ನು

ದಾನವಾಗಿ ನೀಡಿದ ಬಗ್ಗೆ ವಿವರಣೆ ಇದೆ. ಈ ಶಾಸನದ ಕೊನೆಗೆ "ಮರೆಯೊಸೆದೊಳ್ ಕಲ್ವೆಸೆದೊಳ್ ವರಪತ್ರಚ್ಛೇದ .....ರ್ಮ್ಮಂಗಳೊಳ್ಂ ದೊರೆ ವಿಶ್ವಕರ್ಮ್ಮ ನೂಳಿದ .....ಶ್ರೀಸೂತ್ರಧಾರಿ ಬರ್ಮ್ಮನೊಳನ್ತು ॥ ಆತನ ಮಗನ ಮಗವಿಖ್ಯಾ.... ಶ್ರೀ ರಿಜಾತಾ ವಲ್ಲಭಪದೆ ಸರೋಜ ಭೃಂಜ್ಗ ತ್ರೈಲ ॥ ಸ್ವಸ್ತಿ ಶ್ರೀಮದಗ್ರ...ಜನ ಮರ್ಮ್ಮನೊಳ್ವಂಗಾ ರ್ಮ್ಮ ಸರಸ್ವತಿ ಗಣಮಿತ್ರ ಪರನಾರಿ ಪುತ್ರ ।...ಭಾಸ್ವಸ್ತ ನೇತ್ರ ನಾಲ್ವರ ವಿದ್ಯಾವನ್ತ ಶ್ರೀ ಮತ್ಸೂತ್ರಧಾರಿ....."[೧೫] ಎಂದಿದೆ. ಶಾಸನ ಬರೆದ ತೈಲನು, ಬಮ್ಮೋಜಬರ್ಮನ ಮೊಮ್ಮಗ ಅಯ್ಯನ ಅಥವಾ ಮಾಚೋಜನ ಮಗನಾಗಿರಬೇಕು. ಈತನು ಈ ಶಾಸನವನ್ನು ಕೆತ್ತಿದನು. ತನ್ನ ಅಜ್ಜನನ್ನು "ಸೂತ್ರಧಾರಿ ಬೊಮ್ಮ" ಎಂದು ಹೃದಯ ತುಂಬಿ ವರ್ಣಿಸುತ್ತಾನೆ. ಇದರಲ್ಲಿ ಆತನು ಹೇಳುವಂತೆ ಮರಕೆಲಸ, ಕಲ್ಲುಕೆಲಸ, ಪತ್ರಭೇದ ಮೊದಲಾದ ಕಲಾಕರ್ಮಗಳಲ್ಲಿ ದೇವಶಿಲ್ಪಿ ವಿಶ್ವಕರ್ಮನನ್ನು ಬಿಟ್ಟರೆ ತನ್ನ ಅಜ್ಜ ಬಮ್ಮೋಜನೇ ಖ್ಯಾತನೆಂದು ಹೇಳಿಕೊಳ್ಳು ತ್ತಾನೆ. ಅಂತಹ ಅಜ್ಜನ ಮಗನ ಮಗನು ತಾನೆಂದು ಹೆಮ್ಮೆ ಯಿಂದ ಹೇಳಿಕೊಳ್ಳುತ್ತಾನೆ. ಇಲ್ಲಿ "ಶ್ರೀ......ರಿ ಜಾತವಲ್ಲಭ ಪದ ಸರೋಜಬೃಂಗ, ಸರಸ್ವತಿಗಣ ಮಿತ್ರ, ಪರನಾರಿ ಪುತ್ರ, ವಿದ್ಯಾವಂತ" ಎಂದು ಹೊಗಳಲಾಗಿದೆ. ಈತನು ಸರಸ್ವತಿ ಗಣವೆಂಬ ಇತರ ವೃತ್ತಿಸಂಘದ ೮೪ ಜನರಲ್ಲಿ ತಾನು ಒಬ್ಬನೆಂದು ಹೇಳಿಕೊಳ್ಳುತ್ತಾನೆ.[೧೬]

ಶಾಸನಗಳಲ್ಲಿ "ಅಬ್ಬಿಯಗೆರೆ" ಎಂದು ಕರೆಯಿಸಿಕೊಂಡ ಅಬ್ಬಿಗೇರಿ ಗ್ರಾಮವು ಬೆಳ್ವಲ-೩೦೦ ರ ಒಳಗಣ ನರೆಯಂಗಲ್ಲ -೧೨ಕ್ಕೆ ಸೇರಿತ್ತು ಈ ಊರಿನಲ್ಲಿ ೧೧ ಶಾಸನಗಳು ದೊರೆತಿವೆ. ಇದರಲ್ಲೊಂದು ಶಾಸನವು ಕ್ರಿ.ಶ. ೧೧೧೩ಕ್ಕೆ ಸೇರಿದ್ದು. ಇದು ಈ ಗ್ರಾಮದ ಚಾವಡಿ ಹತ್ತಿರವಿದೆ. ಇದರಲ್ಲಿ ಮಹಾಮಂಡಳೇಶ್ವರ ಆರನೆಯ ವಿಕ್ರಮಾದಿತ್ಯನ ಸಾಮಂತ ಅರಸನಾದ ಸಿಂಧ ವಂಶದ ಆಚರಸನ ಬಳಿಗೆ ಈ ಊರಿನ ಪೆರ್ಗಡೆ, ೮ ಜನ ಗಾವುಂಡರು, ಹನ್ನೆರಡು ಸಿಕಿರುಪಿಟ್ಟು ಮತ್ತು ಅರವತ್ತೊಕ್ಕಲುಗಳು ಬಂದು, ದೇವಿಂಗೇರಿಗೆ ಪೂರ್ವದಿಂದಲೂ ಬಂದ ತಳವೃತ್ತಿ ಪರಂಪರೆಗಳು ನಿಂತು ಹೋದದ್ದನ್ನು ಅರಸನಿಗೆ ನಿವೇದಿಸಿ, ಅವುಗಳನ್ನು ಪುನಃ ಆರಂಭಿಸಬೇಕೆಂದು ಕೇಳಿದರು. ಆ ಪ್ರಕಾರ ಆಚರಸನು ದೇವಿಂಗೇರಿಗೆ ೨೪ ಮತ್ತರ ಕರಿನೆಲದ ಭೂದಾನವನ್ನು ನೀಡಿದನು. ಅವನ ರಾಣಿ ದೇವುಲ ದೇವಿಯೂ ಅದೇ ಸಂದರ್ಭದಲ್ಲಿ ಚನ್ನಕೇಶವ ದೇವರಿಗೆ ದಾನ ಬಿಟ್ಟ ಬಗೆಗಿನ ವಿವರಗಳು ಈ ಶಾಸನದಲ್ಲಿದೆ.[೧೭] ಇದು ೨೨ ಸಾಲಿನ ಚಂಪೂ ಕಾವ್ಯ ರೂಪದಲ್ಲಿದ್ದು ಬಹಳಷ್ಟು ನಷ್ಟವಾಗಿದೆ. ಕೆಲವು ಅಕ್ಷರಗಳು ಗುರುತಿಸಲಾರದಷ್ಟು ಸವೆದಿವೆ. ಶಾಸನದ ಕೊನೆಯಲ್ಲಿ

"ಶಾಸನ ಮಾಚಂದ್ರಾ ರ್ಕಂ
ಶಾಸನ ಮೆನಲಾಚನೃಪನ ವಿಶದ ಯಶಶ್ರೀ
ಶಾಸನ ಮನರ್ಥಿಯಿಂದೀ
ಶಾಸನಮಂ ಬರೆದ ನಯ್ಚರಾಜಂ
ಮುದದಿಂ"[೧೮]

ಎಂದಿದ್ದು ಇದನ್ನು ಆಯ್ಚರಾಜ ಎಂಬವನು ಬರೆದನೆಂದು ಸ್ಪಷ್ಟವಾಗುತ್ತದೆ. ಈತನು ಜೈನನಾಗಿದ್ದು ಬರ್ಮದೇವನ ಮಗನು. ಅಬ್ಬಿಗೇರಿಯ ಹೆಗ್ಗಡೆ ಆಯ್ಚರಾಜನು ಈ ಕವಿಯ ಅಕ್ಕನ ಗಂಡನಾಗಿದ್ದು ಇರ್ವರ ಹೆಸರು ಒಂದೇ ಆಗಿವೆ.[೧೯] ಈ ಶಾಸನದಲ್ಲಿ ಉಲ್ಲೇಖಿತವಾದ ಕಲ್ಯಾಣ ಚಾಲುಕ್ಯ ವಿಕ್ರಮಾದಿತ್ಯನು ಸಾಮಂತ ಅರಸ ಆಚರಸ. ಈ ಶಾಸನದ ಕವಿಯ ಭಾವ ಹೆಗ್ಗಡೆ ಆಯ್ಚರಾಜ ಹಾಗೂ ಶಾಸನಕಾರ ಆಯ್ಚರಾಜ ಇವರು ಒಂದೇ (ಆಚ) ಹೆಸರಿನ ಮೂರು ವ್ಯಕ್ತಿಗಳನ್ನು ಬೇರೆ ಬೇರೆಯಾಗಿ ಗುರುತಿಸುವುದಕ್ಕಾಗಿ ರೂಢಿಗೆ ಬಂದು ನಿಜವಾದ ಹೆಸರಿನ ಮೂರು ರೂಪಗಳೆಂದು ತೋರುತ್ತದೆ.[೨೦] ಇಲ್ಲಿನ ಶಾಸನಕಾರ ಆಯ್ಚರಾಜನು ಧಾರವಾಡ ಜಿಲ್ಲೆಯ ಅಬ್ಬಲೂರಿನ ಶಾಸನ ಬರೆದ ಆಚರಾಜ ಈ ಇಬ್ಬರೂ ಒಂದೇ ಆಗಿರಬಹುದು. ಏಕೆಂದರೆ ಈ ಶಾಸನದ ಕಾಲ ಕ್ರಿ.ಶ. ೧೧೦೪. ಈ ಅಬ್ಬಲೂರ ಶಾಸನದ ಕೊನೆಯಲ್ಲಿ "ಸುಕರ ಕವಿಯಪ್ಪಚರಾಜನಂ ಸಹಜಕವಿ, ಮಲ್ಲಿನಾಥದೇವನುಂ ಬರೆದರ್"[೨೧] ಎಂದಿದೆ. ಇದು ಚಾಲುಕ್ಯ ಚಕ್ರವರ್ತಿ ಆರನೆಯ ವಿಕ್ರಮಾದಿತ್ಯನ ಆಳ್ವಿಕೆಯಲ್ಲಿ (೧೧೦೪) ರಚಿತವಾಗಿದೆ. ಶಾಸನದಲ್ಲಿ ಸಾಮಂತಾಧಿಪತಿ ಗೋವಿಂದರಸನು ಏಚಗಾವುಂಡನ ಪ್ರಾರ್ಥನೆಯ ಮೇರೆಗೆ ಅಬ್ಬಲೂರಿನ ಬ್ರಹ್ಮೇಶ್ವರ ದೇವಸ್ಥಾನಕ್ಕೆ ನಾಗರಖಂಡ-೭೦ಕ್ಕೆ ಸೇರಿದ ಮುರಿಗಾನಹಳ್ಳಿಯನ್ನು ಶೈವಾಚಾರ್ಯರಾದ ಸೋಮೇಶ್ವರ ಪಂಡಿತರ ಕಾಲಂ ಕರ್ಚಿ ಬಿಟ್ಟರು[೨೨] ಎಂದು ವಿವರಿಸುತ್ತದೆ. ಈ ಶಾಸನವು ಇಬ್ಬರು ಕರ್ತೃತ್ವವನ್ನು, ಇಬ್ಬರೂ ಪ್ರಾಸಾದಿಕ ಕವಿಗಳೆಂದು (ಆಚರಾಜ, ಮಲ್ಲಿನಾಥದೇವ) ಕವಿಗಳೆಂದು ಸೂಚಿಸುತ್ತದೆ.[೨೩] ಈ ಎರಡು ಶಾಸನಗಳ ಕಾಲ ಹೊಂದಾಣಿಕೆ ಯಾಗುವುದರಿಂದ ಹಾಗೂ ಒಂದೇ ಅರಸರ ಕಾಲದ್ದಾದ್ದ ರಿಂದ ಇಬ್ಬರೂ ಒಬ್ಬರೇ ಆಗಿರಬಹುದು. ಅಬ್ಬಿಗೇರಿಯ ಶಾಸನವನ್ನು ಈತನೊಬ್ಬನೇ ಬರೆದರೆ, ಅಬ್ಬಲೂರಿನ ಶಾಸನವನ್ನು ಮಾತ್ರ ಈತನು ಮಲ್ಲಿದೇವರ ಜೊತೆಗೂಡಿ ಬರೆದಿರಬಹುದು.

ಅಬ್ಬಿಗೇರಿಯ ಸುಟ್ಟಬಸಪ್ಪನ ಗುಡಿ ಎದುರಿಗಿರುವ ಶಾಸನವು ಕಲ್ಯಾಣ ಚಾಲುಕ್ಯ ಚಕ್ರವರ್ತಿ ಆರನೆಯ ವಿಕ್ರಮಾದಿತ್ಯನ ಕಾಲದ್ದು. ಇದರ ಕಾಲ ಕ್ರಿ.ಶ. ೧೧೨೫. ಇದು ಬಹಳಷ್ಟು ತ್ರುಟಿತವಾಗಿದೆ. ೬೩ ಸಾಲಿನ ಈ ಶಾಸನದಲ್ಲಿ ಸಿಂಧ ಅರಸ ಆಚರಸನು ಕಿಸುಕಾಡು-೭೦ರಲ್ಲಿದ್ದ ನರೇಗಲ್ಲ-

೧೨ರಲ್ಲಿನ ಅಬ್ಬಿಗೇರಿಯ ಮಹಾಜನರಿಂದ ಸೋಮೇಶ್ವರ ದೇವರಿಗೆ ದಾನ ನೀಡಿದ ವಿಷಯವಿದೆ. ಶಾಸನದ ಕೊನೆಯಲ್ಲಿ "ಉಮ್ಮಚಿಗೆಯ ದೇವದಾಸಿ ಸೆಟ್ಟಿಯರ ಮಗಂ(ಜೋ)ಗಿ ಸೆಟ್ಟಿ ಬರೆದು, ಜಕ್ಕಿಲಿಯ ನಾಗಚಂದ್ರೋಜ ನಕ್ಕರವ ಹೊಯ್ದು"[೨೪] ಎಂದು ಬರೆಯಲಾಗಿದೆ. ಕೋಟುಮಚಗಿಯ ದೇವದಾಸಿ ಸೆಟ್ಟಿಯ ಮಗನಾದ ಜೋಗಿಶೆಟ್ಟಿಯು ಈ ಶಾಸನದ ಕವಿಯಾದರೆ, ಜಕ್ಕಲಿಯ ಶಿಲ್ಪಿ ನಾಗಚಂದ್ರೋಜನು ಈ ಶಾಸನವನ್ನು ಕೆತ್ತಿದನು.

ಒಂದು ಕಾಲದಲ್ಲಿ ಅಗ್ರಹಾರವಾಗಿದ್ದ ಜಕ್ಕಲಿ ಗ್ರಾಮದ ವೀರಭದ್ರದೇವರ ಗುಡಿ ಎದುರಿಗಿರುವ ಶಾಸನವು ಕಲ್ಯಾಣ ಚಾಲುಕ್ಯ ಅರಸ ಮೂರನೆಯ ಸೋಮೇಶ್ವರನ ಆಳ್ವಿಕೆಗೆ ಸೇರಿದೆ. ಕ್ರಿ.ಶ. ೧೧೪೯ ರಲ್ಲಿ ಈ ಅರಸನ ದಂಡನಾಯಕ ಮಹಾದೇವಯ್ಯನು ಜಕ್ಕಲಿಯ ಕೆರೆಯ ನಿರ್ಮಾಣಕ್ಕೆ ಭೂದಾನ ಮಾಡಿದ ೩೮ ಸಾಲಿನ ಶಾಸನವಿದೆ. ಈ ಶಾಸನದ ಕೊನೆಯಲ್ಲಿ "ಬರೆದನಿದೆ ತಿದ್ದಿ ಬೋಮಣ ಸು...."[೨೫] ಎಂದಿದೆ. ಇದರಿಂದ ಶಾಸನ ಬರೆದ ಅಜ್ಞಾತ ಕವಿಯ ಬರಹವನ್ನು "ಬೋಮಣ್ಣ"ನು ತಿದ್ದಿ ಬರೆದನು. ಆದರೆ ಈ ಬೋಮಣ್ಣ ಯಾರು? ಎಂದು ಗೊತ್ತಾಗುವುದಿಲ್ಲ ಶಾಸನದಲ್ಲಿ ಬಹಳಷ್ಟು ಅಕ್ಷರಗಳು ನಾಶವಾದ ಕಾರಣ ಹೆಚ್ಚಿಗೆ ಏನು ತಿಳಿಯಲಾಗದು.

ರೋಣ ನಗರದ ಸಮೀಪದ ಮಲ್ಲಾಪೂರ ಗ್ರಾಮದ ಹನುಮಂತದೇವರ ಗುಡಿಯ ಪಕ್ಕದಲ್ಲಿ ಶಾಸನವೊಂದಿದೆ. ಅದು ೩೧ ಸಾಲಿನದಾಗಿದೆ. ಕಲ್ಯಾಣಚಾಲುಕ್ಯ ಅರಸ ಮುಮ್ಮಡಿ ತೈಲನ ಕಾಲದ ಈ ಶಾಸನದ ಕಾಲ ೧೧೫೭, ಬೆಳ್ವಲ-೩೦೦ರಲ್ಲಿದ್ದ ಬೆಳವಣಿಗೆಯ (ಬೆಳವಣಿಕೆ) ಗ್ರಾಮಾಧಿಪತಿಗಳಾದ ಗಾವುಂಡರ ಬಗ್ಗೆ, ಅವರ ಧರ್ಮ ನಿಷ್ಠೆಯ ಬಗ್ಗೆ ಈ ಶಾಸನವು ಬೆಳಕು ಚಲ್ಲುತ್ತದೆ. ಬರ್ಮಗಾವುಂಡ ಅವನ ಹೆಂಡತಿ ಹೊಲ್ಲಗೌಡತಿ, ಇವರ ಮಗ ಕೇತಗಾವುಂಡ, ಈತನ ಹೆಂಡತಿ ಕಂಚಿ ಗಾವುಂಡಿ, ಇವರ ಮಗ ಜೋಗಗಾವುಂಡನ ಹೆಂಡತಿ ದೇವಿಗೌಡತಿಯರ ವಿವರವಿದೆ. ಇಲ್ಲಿ ಅವರ ದಾನ, ಪರಾಕ್ರಮಗಳ ವರ್ಣನೆಯೊಂದಿಗೆ, ಜೋಗಗಾವುಂಡನು ತನ್ನ ಹಿರಿಯರು ನಡೆದ ಹಾದಿಯಲ್ಲಿ ಸಾಗುತ್ತಾ, ಅಗ್ರಹಾರವಾಗಿದ್ದ "ನಾವಿದಿಗೆ"(?) ಕೆರೆಗೆ ಹೊಲವನ್ನು ದಾನ ನೀಡಿದ್ದಾಗಿ ಉಲ್ಲೇಖಿಸುತ್ತದೆ. ಶಾಸನದ ಕೊನೆಯಲ್ಲಿ

**"ಬರೆದಂ ಸೇನ ಬೋವಂ ಸಯ್ಯಡಿಯ
ಕಪ್ಪೆಯರ ಚಾವುಂಡಯ್ಯ ಸ್ವ
ಹಸ್ತೆ ಲಿಖಿತ ।
ಲೊ(ಕ್ಕಿ) ಗುಂಡಿಯ ಬಸವೋಜನ ಕಂಡರಣೆ"[೨೬]**

ಎಂದಿದೆ. ಸವಡಿಯ ಶಾನಭೋಗ ಕಪ್ಪೆಯರ ಚಾವುಂಡಯ್ಯನು ಇದನ್ನು ಬರೆದರೆ, ಈ ಬರಹವನ್ನು ಲಕ್ಕುಂಡಿಯ ಬಸವೋಜನು ಕೆತ್ತಿದನು. ಕಪ್ಪೆಯ ಅರಿಭಟ್ಟನನ್ನು ನೆನಪಿಗೆ ತರುವ ಮಲ್ಲಾಪೂರ ಶಾಸನದ ಕಪ್ಪೆಯರ ಚಾವುಂಡಯ್ಯನ ಹೆಸರಿನ ಬಗ್ಗೆ ವಿದ್ವಾಂಸರಾದ ಡಾ. ಎಂ.ಎಂ. ಕಲಬುರ್ಗಿಯವರು ಕಪ್ಪೆಯರು ಎಂಬುದು ಅಡ್ಡ ಹೆಸರೆಂದು ಅಭಿಪ್ರಾಯ ಪಡುತ್ತಾರೆ.[೨೭] ಇಲ್ಲಿರುವ ಚಾವುಂಡನು ಕೇವಲ ಮಲ್ಲಾಪೂರ ಶಾಸನ ಬರೆದನೋ ಅಥವಾ ಬೇರೆ ಕೃತಿಗಳ ಕತೃವೊ? ತಿಳಿಯುತ್ತಿಲ್ಲ.

ಈ ತಾಲ್ಲೂಕಿನ ಪಕ್ಕದಲ್ಲಿರುವ ಯಲಬುರ್ಗಿ ತಾಲ್ಲೂಕಿನ ಕುಕನೂರಿನಕಲ್ಲಕೋಳಿ ಚಾವಡಿಯ ಬಳಿಯ ಕಂಬದ ಮೇಲಿರುವ ೧೧ನೇ ಶತಮಾನಕ್ಕೆ ಸೇರಿದ ನಾಲ್ಕು ಸಾಲಿನ ಈ ಶಾಸನವು ಬಹಳಷ್ಟು ತ್ರುಟಿತವಾಗಿದೆ. ಅದರಲ್ಲಿ "ಮಾನ್ಯ ರೋಣದ ಚಾವು......ರಯ್ಯ ಬರೆದಂ ಚಾವೋಜಂ ಕಣ್ಡರಿಸಿದ"[೨೮] ಎಂದಿದೆ. ಇದರಿಂದ ಈ ಶಾಸನವನ್ನು ರೋಣದ ಕವಿ ಚಾವು.....ರಯ್ಯನು ಬರೆದನು. (ಇದೇ ತಾಲ್ಲೂಕಿನ (ರೋಣ) ಚಾವೋಜನು ಇದನ್ನು ಕಲ್ಲಿನಲ್ಲಿ ಕೆತ್ತಿದನು).

ಇದೆಲ್ಲವನ್ನು ಗಮನಿಸಿದಾಗ ರೋಣ ತಾಲ್ಲೂಕಿನ ಶಾಸನಗಳು ಬಹಳಷ್ಟು ಮಹತ್ವವನ್ನು ಪಡೆದಿವೆ. ಅವುಗಳಲ್ಲಿ ಬೆರಳೆಣಿಕೆಯಷ್ಟು ಶಾಸನಕವಿಗಳು, ಶಾಸನ ಶಿಲ್ಪಿಗಳು ಉಲ್ಲೇಖಿತರಾಗಿದ್ದಾರೆ. ಇವರಲ್ಲದೇ ಇನ್ನು ಅನೇಕರು ಅಲ್ಲಲ್ಲಿ ಉಲ್ಲೇಖಿತರಾಗಿರಬಹುದು. ಅವುಗಳನ್ನು ಶೋಧಿಸಬೇಕಿದೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. **ಕನ್ನಡ ನಾಡಿನ ಶಾಸನಗಳು,** ಡಾ. ಪಿ.ಬಿ. ದೇಸಾಯಿ, ಪುಟ ೪೦, ೧೯೮೭ ಕ.ವಿ.ವಿ.

೨. **ಕರ್ನಾಟಕ ಪುರಾತತ್ತ್ವ ನೆಲೆಗಳು,** ಡಾ. ಕೆ.ಬಿ. ಶಿವತಾರಕ್, ಹಂಪಿ ವಿ.ವಿ.

೩. **ಕರ್ನಾಟಕ ಕವಿ ಚರಿತ್ರೆ,** ೧. ಆರ್. ನರಸಿಂಹಾಚಾರ್ಯ, ಅನುಬಂಧ ೧, ಪುಟ ೧-೨.

೪. SII-XI-i, ೪೩, **ಸವಡಿ ಶಾಸನ.**

೫. **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ,** ಡಾ. ಎಂ. ಚಿದಾನಂದಮೂರ್ತಿ, ಪುಟ ೬೦.

೬. SII-XI-ii, ೧೨೯, ಸವಡಿ ಶಾಸನ.,

೭. EI-XV, ಪುಟ ೯೧, ಸೂಡಿ ಶಾಸನ.

೮. ಕನ್ನಡ ನಾಡಿನ ಶಾಸನ ಕವಿಗಳು, ಮೇವುಂಡಿ ಮಲ್ಲಾರಿ, ಪುಟ ೯೩, ೧೯೭೮.

೯. ಕನ್ನಡ ನಾಡಿನ ಶಾಸನಗಳು ಕವಿಗಳು, ಮೇವುಂಡಿ ಮಲ್ಲಾರಿ, ಪುಟ ೯೩, ೧೯೭೮.

೧೦. ಕರ್ನಾಟಕ ಕವಿ ಚರಿತೆ ೧, ಆರ್. ನರಸಿಂಹಾಚಾರ್ಯ, ಅನುಬಂಧ ೧, ಪುಟ ೧೨.

೧೧. ಶಾಸನ ಸಾಹಿತ್ಯ ಸಂಚಯ, ಎ.ಎಂ. ಅಣ್ಣಿಗೇರಿ, ಮೇವುಂಡಿ ಮಲ್ಲಾರಿ, ಪುಟ ೪೫, ಶಾಸನ ಸಂಖ್ಯೆ ೨೯, ೧೯೬೧.

೧೨. ಅದೇ.

೧೩. ಕರ್ನಾಟಕ ಕವಿ ಚರಿತೆ ೧, ಆರ್. ನರಸಿಂಹಾಚಾರ್ಯ, ಅನುಬಂಧ ೧ ಪುಟ ೧೨.

೧೪. ಕನ್ನಡ ನಾಡಿನ ಶಾಸನ ಕವಿಗಳು, ಮೇವುಂಡಿ ಮಲ್ಲಾರಿ, ಪುಟ ೧೧೧, ೧೯೭೮.

೧೫. SII-XI-ii-151, ಬೆಳವಣಿಕಿ ಶಾಸನ.

೧೬. ಪ್ರಾಚೀನ ಕರ್ನಾಟಕದಲ್ಲಿ ಶಿಲ್ಪಾಚಾರಿಯರು, ಡಾ. ಕೆ.ಎಸ್. ಕುಮಾರಸ್ವಾಮಿ, ಕ.ಸಾ.ಪ. ೧೯೯೬, ಪುಟ ೨೧.

೧೭. SII-XI-ii-163, ಅಬ್ಬಿಗೇರಿ ಶಾಸನ.

೧೮. ಅದೇ.

೧೯. ಕನ್ನಡ ನಾಡಿನ ಶಾಸನ ಕವಿಗಳು, ಮೇವುಂಡಿ ಮಾಲ್ಲಾರಿ, ಪುಟ ೧೧೨–೧೯೭೮.

೨೦. ಅದೇ, ಪುಟ ೧೦೩–೧೯೭೮.

೨೧. ಅದೇ, ಪುಟ ೯೭–೧೯೭೮.

೨೨. ಕರ್ನಾಟಕ ಕವಿ ಚರಿತೆ ೧, ಆರ್. ನರಸಿಂಹಾಚಾರ್ಯ, ಪುಟ ೧೪೮.

೨೩. ಅದೇ.

೨೪. SII-XV-ii-176, ಅಬ್ಬಿಗೇರಿ ಶಾಸನ.

೨೫. SII-XV-18, ಜಕ್ಕಲಿ ಶಾಸನ.

೨೬ SII-XV-53, ಮಲ್ಲಾಪೂರ ಶಾಸನ.

೨೭. ಐತಿಹಾಸಿಕ, ಡಾ. ಎಂ.ಎಂ. ಕಲಬುರ್ಗಿ, ಪುಟ ೬.

೨೮. ಕನ್ನಡ ವಿ.ವಿ. ಶಾಸನ ಸಂ. ೨, ಹಂಪಿ ವಿ.ವಿ. ೧೯೯೯, ಕೊಪ್ಪಳ ಜಿಲ್ಲೆ, ಯಲಬುರ್ಗಿ ತಾಲ್ಲೂಕು, ಕಲ್ಲಕೋಳಿ ಶಾಸನ, ೪೪.

ಹಂಪೆ ವಿಠ್ಠಲ ದೇವಾಲಯದ ಆವರಣದಲ್ಲಿರುವ ಅಪರೂಪದ ಅಷ್ಟದಿಕ್ಪಾಲಕರ ಶಿಲ್ಪಗಳು

ಶ್ರೀಮತಿ ಪದ್ಮಜಾ ದೇಸಾಯಿ*

ಪ್ರಸ್ತಾವನೆ

ದಕ್ಷಿಣ ಭಾರತದ ಮಧ್ಯಕಾಲೀನ ಇತಿಹಾಸದಲ್ಲಿ ವಿಜಯನಗರ ಸಾಮ್ರಾಜ್ಯವು ಪ್ರಸಿದ್ಧಿ ಪಡೆದ ಅರಸು ಮನೆತನಗಳಲ್ಲಿ ಒಂದು. ಮಧ್ಯಕಾಲೀನ ಐತಿಹಾಸಿಕ ಸ್ಮಾರಕಗಳಲ್ಲಿ ಮಹತ್ವಪೂರ್ಣ ವಾಸ್ತುಶಿಲ್ಪಗಳನ್ನು ಒಳಗೊಂಡಂತಹ ಅಪೂರ್ವ ಸ್ಮಾರಕಗಳು ಹಂಪೆಯಲ್ಲಿ ನಿರ್ಮಾಣವಾದವು. ಇದರಿಂದ ವಿಜಯನಗರ ಸಾಮ್ರಾಜ್ಯವು ತನ್ನದೇ ಆದ ವೈಶಿಷ್ಟ್ಯಗಳನ್ನು ಹೊಂದಿರುವುದು ಗಮನಾರ್ಹ. ಹಂಪೆಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದ ವಿಜಯನಗರದ ಅರಸರು ಇಡೀ ದಕ್ಷಿಣ ಭಾರತವನ್ನೇ ಸುಮಾರು ಮೂರು ಶತಮಾನಗಳ ಕಾಲಕ್ಕೂ ಅಧಿಕವಾಗಿ ತಮ್ಮ ಅಧೀನದಲ್ಲಿಟ್ಟಿಕೊಂಡಿದ್ದರು. ಪ್ರಸ್ತುತ ಈ ಲೇಖನದಲ್ಲಿ ವಿಠ್ಠಲ ದೇವಾಲಯದ ಆವರಣದಲ್ಲಿರುವ ಅಷ್ಟದಿಕ್ಪಾಲಕ ಪೀಠದ ಅಧಿಷ್ಠಾನ ಭಾಗದಲ್ಲಿರುವ ಅಷ್ಟದಿಕ್ಪಾಲಕರ ಶಿಲ್ಪ ಪಟ್ಟಿಕೆಯು ಆಗಮಗಳ ಹಿನ್ನೆಲೆಯಲ್ಲಿ ರಚನೆಯಾಗಿವೆಯೋ ಅಥವಾ ರೂವಾರಿ ತನ್ನ ಸ್ವತಂತ್ರ ಶೈಲಿಯನ್ನು ಬಳಸಿಕೊಂಡು ಈ ಶಿಲ್ಪಗಳನ್ನು ಕೆತ್ತಿದ್ದಾನೋ ಎಂಬುದನ್ನು ಕುರಿತು ಚರ್ಚಿಸಲಾಗಿದೆ.

ವಿಜಯನಗರ ಸಾಮ್ರಾಜ್ಯದ ಇತಿಹಾಸದೊಂದಿಗೆ ಕಲೆ ವಾಸ್ತುಶಿಲ್ಪ ಮತ್ತು ಸಾಂಸ್ಕೃತಿಕ ಮಜಲುಗಳನ್ನು ಅರಿಯುವ ಪ್ರಯತ್ನವನ್ನು ಅನೇಕ ವಿದ್ವಾಂಸರು ಮಾಡಿದ್ದಾರೆ.[೧]

ವಿಠ್ಠಲ ದೇವಾಲಯದ ಆವರಣದಲ್ಲಿರುವ ಅಷ್ಟ ದಿಕ್ಪಾಲಕರ ಪೀಠದ ಶಿಲ್ಪಗಳು ಗಮನಾರ್ಹವಾಗಿದೆ. ಈ ಅಷ್ಟದಿಕ್ಪಾಲಕರ ಪರಿಕಲ್ಪನೆಯು ವೇದಗಳ ಕಾಲದಿಂದಲೂ ಬೆಳೆದುಬಂದಿದೆ. ಬೌದ್ಧ ಮತ್ತು ಜೈನರ ಧಾರ್ಮಿಕ ಗ್ರಂಥಗಳು ಮತ್ತು ಆಚರಣೆಯಲ್ಲೂ ಈ ಪರಿಕಲ್ಪನೆಯನ್ನು ಅಳವಡಿಸ ಲಾಗಿದೆ. ಎಂಟು ದಿಕ್ಕುಗಳನ್ನು ಎಂಟು ದೇವತೆಗಳು ಸಂರಕ್ಷಿಸು ತ್ತಾರೆ ಎಂಬುದು ಈ ಪರಿಕಲ್ಪನೆಯ ಅಂಶ. ಆನಂತರದ ವೇದಗಳ ಕಾಲದಲ್ಲಿ ಇನ್ನೆರಡು ದಿಕ್ಕುಗಳನ್ನು ಇವುಗಳ ಜೊತೆಗೆ ಸೇರಿಸಲಾಯಿತು. ಇವೇ ಮೇಲಿನ ಮತ್ತು ಕೆಳಗಿನ ದಿಕ್ಕುಗಳು ನಾಲ್ಕು (ಪ್ರಮುಖ) 'ದಿಕ್'ಗಳು. ಇನ್ನುಳಿದವು 'ವಿದಿಕ್'ಗಳು ಪ್ರತಿಯೊಂದು ದಿಕ್ಕನ್ನು ನಿರ್ದಿಷ್ಟ ದೇವರು ರಕ್ಷಿಸುತ್ತಾನೆ. ವಿದಿಕ್ಕುಗಳ ಹೆಸರನ್ನು ಆಯಾ ದೇವರುಗಳ ಹೆಸರಿನಿಂದಲೇ ನಿಷ್ಪನ್ನ ಮಾಡಲಾಗಿದೆ. ದಿಕ್ಕುಗಳು ಮತ್ತು ಅವುಗಳ ರಕ್ಷಕ ದೇವರನ್ನು ಈ ಕೆಳಗೆ ಹೆಸರಿಸಲಾಗಿದೆ.

ಅಷ್ಟದಿಕ್ಪಾಲಕರ ಹೆಸರುಗಳು	ವಾಹನಗಳು
೧. ಇಂದ್ರ – ಪೂರ್ವ ದಿಕ್ಕಿನ ಅಧಿಪತಿ	ಐರಾವತ
೨. ಅಗ್ನಿ – ಆಗ್ನೇಯ ದಿಕ್ಕಿನ ಅಧಿಪತಿ	ಟಗರು
೩. ಯಮ – ದಕ್ಷಿಣ ದಿಕ್ಕಿನ ಅಧಿಪತಿ	ಕೋಣ
೪. ನಿರ್ಋತಿ – ನೈರುತ್ಯ ದಿಕ್ಕಿನ ಅಧಿಪತಿ	ನರವಾಹನ
೫. ವರುಣ– ಪಶ್ಚಿಮ ದಿಕ್ಕಿನ ಅಧಿಪತಿ	ಮೊಸಳೆ
೬. ವಾಯು – ವಾಯವ್ಯ ದಿಕ್ಕಿನ ಅಧಿಪತಿ	ಜಿಂಕೆ
೭. ಕುಬೇರ – ಉತ್ತರ ದಿಕ್ಕಿನ ಅಧಿಪತಿ	ಆನೆ
೮. ಈಶಾನ– ಈಶಾನ್ಯ ದಿಕ್ಕಿನ ಅಧಿಪತಿ	ನಂದಿ

ವಿಠ್ಠಲ ದೇವಾಲಯದಲ್ಲಿರುವ ಅಷ್ಟದಿಕ್ಪಾಲಕರನ್ನು ವಿಶಿಷ್ಟ ರೀತಿಯಲ್ಲಿ ಚಿತ್ರಿಸಲಾಗಿದೆ. ಶಿಲ್ಪಶಾಸ್ತ್ರ ಗ್ರಂಥಗಳಾದ ವಿಷ್ಣು ಧರ್ಮೋತ್ತರ ಪುರಾಣ, ಸಮರಾಂಗಣ ಸೂತ್ರಧಾರ, ರೂಪಮಂಡನ, ಹಯಶೀರ್ಷ ಸಂಹಿತೆ, ಪೌಷ್ಕರ ಸಂಹಿತೆ, ನಾರದೀಯ ಸಂಹಿತೆ, ಶ್ರೀ ಕಾಶ್ಯಪ ಶಿಲ್ಪಶಾಸ್ತ್ರಂ, ಅಪರಾಜಿತ ಪೃಚ್ಛ, ಸತ್ಕುಮಾರ ಸಂಹಿತೆ, ನಾರದೀಯ ಸಂಹಿತೆ, ಯಜ್ಞವಲ್ಕ ಸ್ಮೃತಿ, ಶೈವಾಗಮ, ಶಿಲ್ಪರತ್ನಂ, ಭಾಗವತ ಇವು ದಿಕ್ಪಾಲಕರ ಪ್ರತಿಮಾ ಲಕ್ಷಣಗಳನ್ನು ವಿವರಿಸುವ ಗ್ರಂಥ ಗಳಾಗಿವೆ. ಅಷ್ಟದಿಕ್ಪಾಲಕರ ಶಿಲ್ಪಗಳನ್ನು ರೂಪಿಸಿದ ಶಿಲ್ಪಿಗಳು ಶಿಲ್ಪಶಾಸ್ತ್ರ ಗ್ರಂಥಗಳ ಸಂಪೂರ್ಣವಾದ ನಿಯಮಗಳನ್ನು ಅನುಸರಿಸಿಲ್ಲಾ ಎಂಬುದು ತೋರಿಬರುತ್ತದೆ. ಎಲ್ಲಾ ದಿಕ್ಪಾಲಕರು ಎರಡು ಕೈಗಳನ್ನು ಹೊಂದಿದ್ದು, ಪತ್ನಿರಹಿತರಾಗಿ

* ಗುಮಗೇರ, ಕುಷ್ಟಗಿ ತಾಲ್ಲೂಕು, ಕೊಪ್ಪಳ ಜಿಲ್ಲೆ–೫೮೩೧೨೧.

ವಾಹನಗಳ ಮೇಲೆ ಕುಳಿತಿರುವುದು ಗಮನಾರ್ಹವಾದ ಸಂಗತಿಯಾಗಿದೆ. ಸಾಮಾನ್ಯವಾಗಿ ಪತ್ನಿ ಸಮೇತವಾಗಿರುವ ಅಷ್ಟದಿಕ್ಪಾಲಕರನ್ನು ಕಾಣುತ್ತೇವೆ. ಅದೇ ರೀತಿಯಾಗಿ ಅಷ್ಟ ದಿಕ್ಪಾಲಕರಿಗೆ ಎರಡು ಕೈಗಳಿರುವಂತೆ ನಿರೂಪಿಸಬೇಕೆಂಬುದು ಪ್ರಾಚೀನ ಪದ್ಧತಿಯಾಗಿದೆ. ಶಿಲ್ಪಶಾಸ್ತ್ರ ಗ್ರಂಥಗಳಾದ ಬೃಹತ್ ಸಂಹಿತೆ, ಮತ್ಸ್ಯಪುರಾಣ, ಅಗ್ನಿಪುರಾಣ, ಮಾನಸೋಲ್ಲಾಸ ಈ ಗ್ರಂಥಗಳು ದಿಕ್ಪಾಲಕರಿಗೆ ಎರಡು ಕೈಗಳಿರುವಂತೆ ನಿರೂಪಿಸಬೇಕೆಂದು ತಿಳಿಸುತ್ತವೆ. ಇಲ್ಲಿನ ರೂವಾರಿಗಳು ಕೆಲವೊಂದು ಶಾಸ್ತ್ರ ಗ್ರಂಥಗಳನ್ನು ಬಳಸಿ ಶಿಲ್ಪಗಳನ್ನು ನಿರೂಪಿಸಿದ್ದಾರೆ. ಕಾಲ ಸರಿದಂತೆ ವೈದಿಕ ದೇವ ದೇವತೆಗಳು ಪ್ರಾಮುಖ್ಯವನ್ನು ಗಳಿಸಿದರು. ಇವರ ಫಲವಾಗಿ ವೈದಿಕ ದೇವತೆಗಳ ಸ್ಥಾನ ಮಸುಕಾಯಿತು. ಕೊನೆಗೆ ಈ ಅಷ್ಟ ದಿಕ್ಪಾಲಕರ ಶಿಲ್ಪಗಳು ಮಾತ್ರ ಉಳಿದುಕೊಂಡವು.[2]

ವಿಠ್ಠಲ ದೇವಾಲಯದ ಅಷ್ಟದಿಕ್ಪಾಲಕರ ಶಿಲ್ಪಗಳು ಬಹುತೇಕ ಶಿಲ್ಪ ಗ್ರಂಥಗಳ ನಿಯಮಾವಳಿಗಳಿಂದ ಭಿನ್ನವಾಗಿವೆ. ಸ್ವತಂತ್ರವಾಗಿ ಶಿಲ್ಪಗಳನ್ನು ಕೆತ್ತನೆ ಮಾಡಿದ್ದಾರೆ ಎಂಬುದು ಇಲ್ಲಿ ಕಂಡುಬರುತ್ತದೆ. ಆದರೂ ಅವರು ಶಿಲ್ಪಗ್ರಂಥಗಳ ಸಾಮಾನ್ಯ ನಿಯಮಗಳ ಎಲ್ಲೆಯ ಒಳಗೆ ಕಾರ್ಯ ನಡೆದಿರುವುದನ್ನು ತಳ್ಳಿ ಹಾಕುವಂತಿಲ್ಲ ಎಂಬುದು ಸರ್ವವಿಧಿತ. ಈ ದಿಕ್ಪಾಲಕರ ಶಿಲ್ಪಗಳನ್ನು ಪೀಠದ ಸುತ್ತಲೂ ಎಂಟು ದಿಕ್ಕುಗಳಿಗೆ ಕೆತ್ತಲಾಗಿದೆ. ಎಂಟು ದೇವತೆಗಳಿಗೆ ಅಗತ್ಯವಾದ ಬದಲಾವಣೆಗಳನ್ನು ರೂಪಿಸಲಾಗಿದೆ. ಈ ಶಿಲ್ಪಗಳು ವೀಕ್ಷಣೆಯಲ್ಲಿ ನೈಜತೆಯ ಚಿತ್ರಣವನ್ನು ನಿರೂಪಿಸುತ್ತವೆ. ಇದು ಶಿಲ್ಪಿಯ ಅದ್ಭುತವಾದ ಚಾತುರ್ಯವಾಗಿದೆ.[3]

೧. **ಇಂದ್ರ :** ಪೂರ್ವ ದಿಕ್ಕಿನ ಅಧಿಪತಿ. ಇವನ ಆಯುಧ ವಜ್ರ, ವೇದಗಳ ಕಾಲದಿಂದ ಅತ್ಯಂತ ಪ್ರಮುಖವಾದ ದೇವತೆ ಯಾಗಿದ್ದಾನೆ. ಇವನನ್ನು ಸ್ವರ್ಗದ ಒಡೆಯ ಎಂದು ಕರೆಯ ಲಾಗಿದೆ. ಇಂದ್ರನನ್ನು ಅಷ್ಟದಿಕ್ಪಾಲಕರ ಪಟ್ಟಿಕೆಯ ಪೂರ್ವಭಾಗದಲ್ಲಿ ಐರಾವತದ ಮೇಲೇರಿ ಹೋಗುತ್ತಿರುವಂತೆ ಚಿತ್ರಿಸಲಾಗಿದೆ. ಇವನನ್ನು ಕರಂಡಮುಕುಟ, ಮಕರ ಕುಂಡಲಗಳು, ಹಾರ, ಯಜ್ಞೋಪವೀತ, ಕೇಯೂರ, ಕಂಕಣ, ಉತ್ತರೀಯಗಳಿಂದ ಅಲಂಕರಿಸಲಾಗಿದೆ. ಮೆತ್ತೆಯನ್ನು ಐರಾವತದ ಮೇಲೆ ಹಾಸಲಾಗಿದೆ. ಇಂದ್ರನ ಬಲಗೈ ಪತಾಕ ಹಸ್ತದಲ್ಲಿದೆ. ಎಡಗೈಯಲ್ಲಿ ದುಂಡಾದ ಥಾಲಿಯನ್ನು ಹಿಡಿದಿದ್ದಾನೆ. ಅಪರಾಜಿತಪೃಚ್ಛವು ಇಂದ್ರನ ಎಡಗೈಯಲ್ಲಿ ಥಾಲಿಯನ್ನು ಹಿಡಿದಿರಬೇಕೆಂದು ತಿಳಿಸುತ್ತದೆ. ಇಲ್ಲಿ ಕೆಲ ಮಟ್ಟಿಗೆ ಶಿಲ್ಪಿಯು ಶಾಸ್ತ್ರಗ್ರಂಥಗಳ ನಿಯಮಗಳನ್ನು ಅನುಸರಿಸಿದ್ದಾನೆ.

೨. **ಅಗ್ನಿ :** ಆಗ್ನೇಯ ದಿಕ್ಕಿನ ಅಧಿಪತಿ. ಇವನು ಇಂದ್ರ ಮತ್ತು ಸೂರ್ಯರಿಗೆ ಸಮನಾದ ಸ್ಥಾನವನ್ನು ಪಡೆದಿದ್ದ. ಈ ಮೂರು ದೇವತೆಗಳು ವೇದಗಳ ಕಾಲದ ತ್ರಿಮೂರ್ತಿಗಳಾಗಿದ್ದರು. ಆನಂತರ ಕಾಲದಲ್ಲಿ ಅಗ್ನಿಯನ್ನು ಕಿರಿಯ ಸ್ಥಾನಕ್ಕೆ ಇಳಿಸ ಲಾಯಿತು. ಇವನು ಎಲ್ಲವನ್ನು ಸ್ವಾಹ ಮಾಡುವ ಸಂಕೇತ ವಾಗಿದ್ದಾನೆ.

ಆಗ್ನೇಯ ದಿಕ್ಕಿನಲ್ಲಿ ಅಗ್ನಿಯನ್ನು ತನ್ನ ವಾಹನವಾದ ಟಗರಿನ ಮೇಲೆ ನಾಗಾಲೋಟದಲ್ಲಿ ಧಾವಿಸುತ್ತಿರುವಂತೆ ಕೆತ್ತಲಾಗಿದೆ. ಅಗ್ನಿಯು ಕರಂಡಮುಕುಟ, ಮಕರಕುಂಡಲ, ಸ್ಕಂದಮಾಲಾ, ಕೇಯೂರ, ಕಟಕ, ಉಂಗುರ, ಯಜ್ಞೋಪವೀತ, ಉದರಬಂಧ, ಮೇಖಲ ಬಿಗಿಯಾಗಿರುವ ಅರೆಚಲ್ಲಣ, ಪಾದವಲಯ, ಕಾಲುಂಗರ, ಧರಿಸಿದ್ದಾನೆ. ಅಗ್ನಿಯ ಎಡಗೈಯಲ್ಲಿ ಕಮಲದ ಪುಷ್ಪವನ್ನು ಹಿಡಿದಿರಬೇಕೆಂದು ಅಪರಾಜಿತಪೃಚ್ಛವು ತಿಳಿಸುತ್ತದೆ. ಅಗ್ನಿಯ ವಾಹನವಾದ ಟಗರಿಗೆ ಶಿರೋಬಂಧ ಮತ್ತು ಕಿಂಕಿಣಿಗಳಿರುವ ಹಾರವನ್ನು ಹಾಕಲಾಗಿದೆ. ಈ ಹಾರಕ್ಕೆ ದೊಡ್ಡ ಕಿಣಿಯನ್ನು ಸೇರಿಸಿದೆ.[4]

೩. **ಯಮ :** ಯಮ ದಕ್ಷಿಣ ವಲಯದ ದೇವತೆ. ನರಕ ನಗರವಾದ ಯಮಪುರದಲ್ಲಿ ಅವನ ವಾಸ. ದುಷ್ಟರನ್ನು ಶಿಕ್ಷಿಸುವುದು ಅವನ ಕರ್ತವ್ಯ. ಈ ಪಟ್ಟಿಕೆಯಲ್ಲಿ ಅವನ ವಾಹನವಾದ ಕೋಣನ ಮೇಲೆ ಆಸೀನವಾಗಿರುವಂತೆ ತೋರಿಸಲಾಗಿದೆ. ಯಮನನ್ನು ಯಥಾಪ್ರಕಾರ ಇತರ ದಿಕ್ಪಾಲಕರಂತೆ ಕರಂಡ ಮಕುಟ, ಮಕರಕುಂಡಲ ಮಣಿಗಳಿಂದ ರಚಿತವಾದ ಗ್ರೈವೇಯ, ಕೇಯೂರ ಮೂರು ಪಟ್ಟಿಗಳಿಂದ ಕೂಡಿದ ಕಂಕಣ, ಯಜ್ಞೋಪವೀತ, ಬಿಗಿಯಾದ ಅರೆಚಲ್ಲಣದ, ಪಾದವಲಯ, ಉಂಗುರ, ಕಾಲುಂಗುರಗಳಿಂದ ಅಲಂಕರಿಸಲಾಗಿದೆ. ಯಮನ ವಾಹನ ಕೋಣ. ರಾಜ ಗಾಂಭೀರ್ಯದಿಂದ ಭಯವನ್ನು ಹುಟ್ಟಿಸುವಂತೆ ನಾಗಾಲೋಟದಲ್ಲಿ ಧಾವಿಸುವಂತೆ ತೋರಿಸಲಾಗಿದೆ. ಅದರ ಬೆನ್ನ ಮೇಲೆ ಹಾಸಿರುವ ಮೆತ್ತೆಯನ್ನು ಅದರ ಉದರ ಮತ್ತು ಪೃಷ್ಠಕ್ಕೆ ಪಟ್ಟಿಗಳಿಂದ ಕಟ್ಟಲಾಗಿದೆ. ಕೋಣನ ಕೊರಳನ್ನು ಸುಂದರವಾದ ಗಂಟೆಯ ಹಾರಗಳಿಂದ ಅಲಂಕರಿಸಲಾಗಿದೆ.[5]

೪. **ನಿರ್ಋತಿ :** ನಿರ್ಋತಿ ಸಹ ವೈದಿಕ ದೇವತೆ. ನೈರುತ್ಯ ದಿಕ್ಕಿನ ಅಧಿಪತಿ. ಇವನು ಭೂತ ರಾಕ್ಷಸರ ಅಧಿಪತಿಯು ಆಗಿದ್ದಾನೆ. ಎಲ್ಲೆಲ್ಲಿ ನಿರ್ಋತಿಯನ್ನು ಕೆತ್ತಲಾಗಿದೆಯೋ ಅಲ್ಲೆಲ್ಲ ಅವನನ್ನು ಸ್ಥಿರರೂಪವಾಗಿ ಮಾನವನ ಮೇಲೆ ಆಸೀನವಾಗಿರುವಂತೆ ತೋರಿಸಲಾಗಿರುತ್ತದೆ. ಇದು ಸಾಮಾನ್ಯವಾಗಿ ಚಿತ್ರಿಸುವ ಸಂಪ್ರದಾಯವಾಗಿದೆ. ವಿಷ್ಣುಧರ್ಮೋತ್ತರ ಪುರಾಣವು ನಿರ್ಋತಿಯನ್ನು ಗಾದರ್ಭದ ಮೇಲೆ ಇರುವಂತೆ ಶಿಲ್ಪವನ್ನು ಕೆತ್ತಬಹುದು ಎಂದು ತಿಳಿಸುತ್ತವೆ. ಆದರೆ ಅಂತಹ ಶಿಲ್ಪಗಳ ವಿರಳ. ವಿಠ್ಠಲ ದೇವಾಲಯದಲ್ಲಿರುವ ನಿರ್ಋತಿ ಶಿಲ್ಪವು

ಮಾನವನನ್ನು ವಾಹನವನ್ನಾಗಿ ಅಂದರೆ (ನರವಾಹನ) ಮಾಡಿಕೊಂಡಿರು ವಂತೆ ಕೆತ್ತಲಾಗಿದೆ.[೬]

೫. ವರುಣ : ವರುಣ ಪಶ್ಚಿಮ ದಿಕ್ಕಿನ ಅಧಿಪತಿ. ವೇದಗಳ ಕಾಲದ ತ್ರಿಮೂರ್ತಿ ಎನಿಸಿದ ಇಂದ್ರ ಮತ್ತು ಅಗ್ನಿಯರ ಜೊತೆಯಲ್ಲಿ ಇವನು ಸೇರ್ಪಡೆ ಆಗಿದ್ದು ಇವನು ನದಿ ಅಥವಾ ಜಲದೇವತೆ ಆಗಿದ್ದ. ಅವನನ್ನು ಕರಂಡಮಕುಟ, ಮಕರಕುಂಡಲ, ಯಜ್ಞೋಪವೀತ, ಸರಳವಾಗಿರುವ ಕೇಯಾರ, ಉದರಬಂಧ, ಪಾದವಲಯ ಉಂಗುರ, ಮತ್ತು ಕಾಲುಂಗುರಗಳನ್ನು ತೊಡಿಸಿ ಅಲಂಕರಿಸಲಾಗಿದೆ. ಅವನ ಬಲಗೈ ಪತಾಕ ಹಸ್ತದಲ್ಲಿದೆ. ಎಡಗೈಯಲ್ಲಿ ಪದ್ಮ ಪುಷ್ಪವಿದೆ. ವಿಷ್ಣುಧರ್ಮೋತ್ತರ ಪುರಾಣವು ವರುಣನು ಕಮಲವನ್ನು ಹಿಡಿದಿರಬೇಕು ಎಂದು ತಿಳಿಸುತ್ತದೆ. ವರುಣನನ್ನು ವಾಹನವಾದ ಮೊಸಳೆಯ ಮೇಲೆ ಇರುವಂತೆ ಕೆತ್ತಲಾಗಿದೆ.

೬. ವಾಯು : ವಾಯವ್ಯ ವಲಯದ ಸಂರಕ್ಷಕ. ಇವನು ಗಾಳಿಯ ಪ್ರಾತಿನಿಧಿಕ ದೇವ. ಇವನೂ ವೈದಿಕ ದೇವ. ಇವನು ಭವಲೋಕದ ಅಧಿಪತಿ ಅಥವಾ ಭುವಸ್ಪತಿ. ಇಲ್ಲಿಯ ದಿಕ್ಪಾಲಕರ ಪಟ್ಟಿಯಲ್ಲಿ ವಾಯವ್ಯ ದಿಕ್ಕಿನಲ್ಲಿ ವಾಯು ತನ್ನ ವಾಹನವಾದ ಸಾರಂಗದ ಮೇಲೆ ಕುಳಿತಂತೆ ಕೆತ್ತನೆ ಮಾಡಲಾಗಿದೆ. ವಾಯು ಕರಂಡಮಕುಟ, ಮಕರಕುಂಡಲ, ಹಾರ, ರತ್ನ, ಖಚಿತ ಗ್ರೈವೇಯ ಸ್ಕಂದಮಾಲ, ಯಜ್ಞೋ ಪವೀತ, ಉದರಬಂಧ, ಮೇಖಲ ಬಿಗಿಯಾದ ಅರೆಚಲ್ಲಣ, ಪಾದವಲಯ, ತ್ರಿಕಟಕ ಉಂಗುರ ಮತ್ತು ಕಾಲುಂಗುರಗಳನ್ನು ಧರಿಸಿದ್ದಾನೆ. ಅವನ ಬಲಗೈ ಪತಾಕ ಹಸ್ತದಲ್ಲಿದೆ. ಎಡಗೈಯಲ್ಲಿ ಪದ್ಮಪುಷ್ಪವಿದೆ. ಇವನ ವಾಹನವಾದ ಸಾರಂಗವು ನಾಗಾಲೋಟದಿಂದ ಓಡುತ್ತಿದೆ. ವಿಶಿಷ್ಟವಾಗಿ ನೋಡುತ್ತಿರುವ ಈ ಪ್ರಾಣಿಯನ್ನು ನೈಜವಾಗಿ ಚಿತ್ರಿಸಲಾಗಿದೆ. ಸಾರಂಗವನ್ನು ಕೊರಳ ಹಾರ ಮತ್ತು ಗಂಟೆಗಳಿಂದ ಸಿಂಗರಿಸಿರುವಂತೆ ಕೆತ್ತಲಾಗಿದೆ.

೭. ಕುಬೇರ : ಕುಬೇರ ಉತ್ತರ ವಲಯದ ಅಧಿಪತಿ. ಇವನು ಸಂಪತ್ತಿನ ಒಡೆಯ ಮತ್ತು ಸಂಪತ್ತನ್ನು ನೀಡುವನು. ಯಕ್ಷರು ಮತ್ತು ಗುಹ್ಯಕರ ಅರಸ. ಇವನು ಟಗರಿನ ಮೇಲೆ ಆಸೀನನಾಗಿದ್ದಾನೆ. ಅಂಶುಮದ್‌ಭೇದಾಗಮವು ಕುಬೇರನು ಆನೆ ಅಥವಾ ಟಗರಿನ ಮೇಲೆ ಆಸೀನವಾಗಿರಬೇಕೆಂದು ತಿಳಿಸುತ್ತದೆ. ಕುಬೇರನನ್ನು ಇತರ ದಿಕ್ಪಾಲಕರಂತೆ ಅಲಂಕರಣೆಯುಳ್ಳ ಆಭರಣಗಳನ್ನು ಧರಿಸಿರುವಂತೆ ಅತ್ಯಂತ ಸುಂದರವಾಗಿ ಕೆತ್ತಲಾಗಿದೆ. ಉದರಬಂಧ, ಮೇಖಲ ಪಾದವಲಯ, ಉಂಗುರ ಮತ್ತು ಕಟಕಗಳನ್ನು ಧರಿಸಿದ್ದಾನೆ. ಟಗರಿನ ಮುಖವನ್ನು ಅತ್ಯಂತ ನೈಜವಾಗಿ ನಿರೂಪಿಸಲಾಗಿದೆ. ಅದರ ಕೊಂಬುಗಳನ್ನು ಕಲಾತ್ಮಕವಾಗಿ ಅರೆವೃತ್ತಾಕಾರವಾಗಿ ಕೆತ್ತಲಾಗಿದೆ. ಸಣ್ಣ ಗಂಟೆಗಳ ಹಾರ ಮತ್ತು ಕಿಂಕಿಣಿಯನ್ನು ಟಗರಿಗೆ ತೋಡಿಸಲಾಗಿದೆ.

೮. ಈಶಾನ್ಯ : ಈಶಾನ್ಯ ವಲಯದ ಅಧಿಪತಿ ಇವನನ್ನು ಶಿವನೊಂದಿಗೆ ಸಮೀಕರಿಸಲಾಗಿದೆ. ಚತುರ್ಮುಖ ಲಿಂಗದಲ್ಲಿ ಈಶಾನ ಎಂದು ಲಿಂಗದ ರುದ್ರ ಭಾಗವನ್ನು ತೋರಿಸಲಾಗುತ್ತದೆ. ಅವನ ವಾಹನ ನಂದಿಯ ಮೇಲೆ ಆಸಿಂಗನಾಗಿದ್ದಾನೆ. ಶಿವನು ಜಟಾಮುಕುಟ, ಚಕ್ರಕುಂಡಲ (ಬಲಕಿವಿ) ಮತ್ತು ಮಕರ ಕುಂಡಲ (ಎಡಕಿವಿ)ಯಲ್ಲಿ ಹಾರ, ಯಜ್ಞೋಪವೀತ, ಪಾದವಲಯ ಉಂಗುರಗಳನ್ನು ಧರಿಸಿದ್ದಾನೆ.[೭]

ಉಪಸಂಹಾರ : ವಿಠ್ಠಲ ದೇವಾಲಯದಲ್ಲಿರುವ ಅಷ್ಟ ದಿಕ್ಪಾಲಕರ ಶಿಲ್ಪಗಳ ಸಂಯೋಜನೆ ಮತ್ತು ರಚನೆ ಅಸಾಧಾರಣ ವಾದದ್ದು. ಈ ಶಿಲ್ಪಗಳನ್ನು ರಚಿಸುವಲ್ಲಿ ಶಿಲ್ಪಿಯು ತೋರಿಸಿದ ಪ್ರತಿಭೆಯು ಮೆಚ್ಚುಗೆಯನ್ನು ವ್ಯಕ್ತಪಡಿಸುವಂತಹದ್ದು ಆಗಿದೆ. ಪ್ರತಿಯೊಬ್ಬ ದಿಕ್ಪಾಲಕರನ್ನು ಅವರವರ ವಾಹನಗಳ ಮೇಲೆ ಸುಂದರವಾಗಿ ಕೆತ್ತಲ್ಪಟ್ಟಿದೆ. ಹಿತಮಿತವಾದ ಅಲಂಕರಣೆ ಇದ್ದು, ಇಲ್ಲಿ ಅವರ ಪತ್ನಿಯರನ್ನು ತೋರಿಸದೆ ದಿಕ್ಪಾಲಕರಿಗೆ ಪ್ರಾಶಸ್ತ್ಯವನ್ನು ಕೊಟ್ಟಿರುವುದು ಗಮನಾರ್ಹವಾದ ಸಂಗತಿ. ಶಿಲ್ಪಗಳಿಗೆ ಹಿತಮಿತವಾದ ಅಲಂಕರಣವಿರುವುದು ಒಂದು ಮಹತ್ವವಾದ ಅಂಶವಾಗಿದೆ. ಈ ಶಿಲ್ಪಗಳನ್ನು ರಚಿಸುವಲ್ಲಿ ರೂವಾರಿಯು ಕೆಲವು ನೂತನ ಅಂಶಗಳನ್ನು ಸೇರ್ಪಡೆ ಮಾಡಿದ್ದಾನೆ ಎಂಬುದನ್ನು ನಾವು ಆಗಮಗಳ ನಿಯಮಗಳನ್ನು ಈ ಶಿಲ್ಪಗಳ ಲಕ್ಷಣಗಳಿಗೆ ಹೋಲಿಕೆ ಮಾಡಿದಾಗ ಗೋಚರಿಸುತ್ತವೆ. ಸಾಮಾನ್ಯವಾಗಿ ಅಷ್ಟದಿಕ್ಪಾಲಕರ ಪಟ್ಟಿಕೆಯನ್ನು ದೇವಾಲಯದ ಒಳಭಾಗದಲ್ಲಿರುವ ಭುವನೇಶ್ವರಿ (ವಿತಾನ)ದಲ್ಲಿ ಕಾಣುತ್ತೇವೆ. ಆದರೆ ವಿಠ್ಠಲ ದೇವಾಲಯದ ಆವರಣದಲ್ಲಿರುವ ಅಷ್ಟದಿಕ್ಪಾಲಕರ ಪೀಠದ ಅಧಿಷ್ಠಾನ ಭಾಗದಲ್ಲಿ ರಚಿಸಿರುವುದು ವಿಶೇಷವಾಗಿದೆ.

ಆಧಾರಸೂಚಿ

೧. ವಸುಂದರಾ ಫಿಲಿಯೋಜಾ, **'ಅಳಿದುಳಿದ ಹಂಪೆ'**, ಪು. ೯೧–೯೫.

೨. ರಾಮಚಂದ್ರರಾವ್ ಎಸ್.ಕೆ., **ಮೂರ್ತಿಶಿಲ್ಪದ ನೆಲೆ–ಹಿನ್ನೆಲೆ**, ಪುಟ ೨೫೯–೨೬೭.

೩. ರಾಮಚಂದ್ರರಾವ್ ಎಸ್.ಕೆ., **ಪ್ರತಿಮಾಕೋಶ**, ಸಂ.೧, ಪುಟ ೮೪–೮೬.

೪. ಜ್ಞಾನಾನಂದ ಜಿ., **ಶ್ರೀ ಕಾಶ್ಯಪ ಶಿಲ್ಪ** (ಉತ್ತರಾರ್ಧ), ಪುಟ. ೫೫–೬೦.

೫. ಜ್ಞಾನಾನಂದ ಜಿ., **ಶ್ರೀ ಬ್ರಾಹ್ಮೀಯ ಚಿತ್ರಕರ್ಮಶಾಸ್ತ್ರ**, ಪು.೮೫–೮೭

೬ ಜ್ಞಾನಾನಂದ ಜಿ., **ಪೂರ್ವೋಕ್ತ**, ಪುಟ ೮೬೧–೮೬೩.

೭. ಗೋಪಿನಾಥರಾವ್ ಟಿ.ಎ., **ಎಲಿಮೆಂಟ್ಸ್ ಆಫ್ ಹಿಂದೂ ಐಕನೋಗ್ರಾಫಿ**, ಸಂ. ೨, ಪುಟ ೫೨೮–೫೩೦.

ಹಾಸನ ಜಿಲ್ಲೆಯ ಭೈರವನಪಾದ ಶಿಲ್ಪಫಲಕಗಳು

ಪದ್ಮ ಬಿ.ಎಸ್.*

ಕರ್ನಾಟಕದ ನೈರುತ್ಯದ ಮೈದಾನ ಪ್ರದೇಶದಲ್ಲಿರುವ ಜಿಲ್ಲೆ ಹಾಸನ. ಹಳೇ ಮೈಸೂರು ಭಾಗದಲ್ಲಿದ್ದ ಒಟ್ಟು ಒಂಬತ್ತು ಜಿಲ್ಲೆಗಳಲ್ಲಿ ಹಾಸನ ಜಿಲ್ಲೆ ಕೂಡ ಒಂದು. ಮಲೆನಾಡು ಮತ್ತು ಬಯಲು ಸೀಮೆಗಳನ್ನು ಒಳಗೊಂಡ ಹಾಸನ ಜಿಲ್ಲೆಯ ಉತ್ತರದಲ್ಲಿ ಚಿಕ್ಕಮಗಳೂರು, ಪೂರ್ವದಲ್ಲಿ ತುಮಕೂರು ಮತ್ತು ಮಂಡ್ಯ, ದಕ್ಷಿಣದಲ್ಲಿ ಕೊಡಗು ಮತ್ತು ಮೈಸೂರು, ಪಶ್ಚಿಮದಲ್ಲಿ ಚಿಕ್ಕಮಗಳೂರು ಜಿಲ್ಲೆಯ ಸ್ವಲ್ಪ ಭಾಗ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಿಂದ ಸುತ್ತುವರೆದಿದೆ. ಈ ಜಿಲ್ಲೆಯಲ್ಲಿ ಎಂಟು ತಾಲೂಕುಗಳಿದ್ದು, ಆಡಳಿತಾನುಕೂಲಕ್ಕಾಗಿ ಹಾಸನ ಮತ್ತು ಸಕಲೇಶಪುರ ಎಂಬ ಎರಡು ಉಪ ವಿಭಾಗಗಳಿವೆ. ಹಾಸನ ಉಪವಿಭಾಗಕ್ಕೆ ಅರಸೀಕೆರೆ, ಚನ್ನರಾಯಪಟ್ಟಣ, ಹಾಸನ, ಹೊಳೆನರಸೀಪುರ ಮತ್ತು ಅರಕಲಗೂಡು ತಾಲ್ಲೂಕುಗಳೂ, ಸಕಲೇಶಪುರ, ಉಪ ವಿಭಾಗಕ್ಕೆ ಬೇಲೂರು, ಸಕಲೇಶಪುರ ಮತ್ತು ಆಲೂರು ತಾಲ್ಲೂಕುಗಳು ಸೇರಿವೆ.[೧] ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರವಾಗಿ ಬೆಳೆದಿರುವ ಹಾಸನಕ್ಕೆ ಪೌರಾಣಿಕ ಹಿನ್ನೆಲೆಯ ಐತಿಹ್ಯ ಮತ್ತು ಇತಿಹಾಸವು ಇದೆ.

ಐತಿಹಾಸಿಕ ಪ್ರದೇಶವಾದ ಹಾಸನ ಜಿಲ್ಲೆಯಲ್ಲಿ ಹೆಚ್ಚು ಭೈರವನಪಾದ ಶಿಲ್ಪಫಲಕಗಳು ಕಂಡುಬಂದಿವೆ. ಭೈರವ ಪಾದದ ಸುತ್ತ ನಾಗಸರ್ಪವಿದ್ದು, ಅದರ ಮುಂಭಾಗದಲ್ಲಿ ನರಬಲಿಯಾದ ತಲೆಗಳ ಉಬ್ಬುಶಿಲ್ಪವಿದೆ. ಅದರ ಎಡ ಬಲಗಳಲ್ಲಿ ರುಂಡ ಕತ್ತರಿಸಿದ ವ್ಯಕ್ತಿಗಳಿಬ್ಬರು ಮಲಗಿರುವುದನ್ನು ತೋರಿಸಲಾಗಿದೆ. ಈ ಬಗೆಯ ಶಿಲ್ಪಗಳು ವಿದ್ವಾಂಸರು ಹಳೇಬೀಡಿನ ವಸ್ತು ಸಂಗ್ರಹಾಲಯದಲ್ಲಿರುವುದನ್ನು ಗುರುತಿಸಿದ್ದಾರೆ.[೨] ಈ ರೀತಿಯ ಶಿಲ್ಪಗಳನ್ನು, ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕು ಪರಿಸರದಲ್ಲಿ ನನ್ನ ಸಹಪಾಠಿಯಾದ ಮಹಾಂತೇಶ್‌ರವರು ಬೆಳಕಿಗೆ ತಂದಿದ್ದಾರೆ.

ನನ್ನ ಸಂಶೋಧನಾ ವಿಷಯಕ್ಕೆ ಸಂಬಂಧಿಸಿದಂತೆ ಹಾಸನ ಜಿಲ್ಲೆಯಲ್ಲಿ ಕ್ಷೇತ್ರಕಾರ್ಯ ಕೈಗೊಂಡಾಗ ಕೆಲವು ವಿಶಿಷ್ಟ ರೀತಿಯ ಭೈರವನಪಾದ ಶಿಲ್ಪಫಲಕಗಳು ಕಂಡು ಬಂದವು.

ಬಾಗವಾಳು

ಹಾಸನ ಜಿಲ್ಲೆಯ ಅರಿಸೀಕೆರೆ ತಾಲ್ಲೂಕಿನ ಗಂಡಸಿ ಹೋಬಳಿಯಲ್ಲಿರುವ ಬಾಗವಾಳು ಗ್ರಾಮದಲ್ಲಿ ಎರಡು ಅಪರೂಪದ ಭೈರವನಪಾದ ಶಿಲ್ಪ ಫಲಕಗಳಿವೆ. ಈ ಗ್ರಾಮವು ಅರಸೀಕೆರೆಯಿಂದ ೨೦ ಕಿ.ಮೀ. ಹಾಗೂ ಗಂಡಸಿಯಿಂದ ಐದು ಕಿ.ಮೀ. ದೂರದಲ್ಲಿದೆ. ಗ್ರಾಮದ ಉತ್ತರಕ್ಕೆ ಕೆರೆ ಇದೆ. ಕೆರೆಯ ಸಮೀಪ ಸೋಮೇಶ್ವರ ಮತ್ತು ಭೈರವೇಶ್ವರ ದೇವಾಲಯಗಳಿವೆ. ಈ ದೇವಾಲಯಗಳ ಮುಂಭಾಗದಲ್ಲಿ ೧ ೧/೨ ಅಡಿ ಉದ್ದ ಮತ್ತು ೧ ೧/೨ ಅಡಿ ಅಗಲದ ನೆಲಕ್ಕೆ ಹಾಸಿದ ಎರಡು ಚಪ್ಪಡಿ ಕಲ್ಲುಗಳಿದ್ದು, ಅವು ಭೈರವನಪಾದ ಶಿಲ್ಪಗಳನ್ನು ಹೊಂದಿವೆ.



ಸೋಮೇಶ್ವರ ಮತ್ತು ಭೈರವೇಶ್ವರ ದೇವಾಲಯದ ಮುಂಭಾಗದಲ್ಲಿರುವ ಭೈರವನಪಾದದ ಶಿಲ್ಪಫಲಕಗಳು, ಬಾಗವಾಳು (೧)

ಒಂದು ಶಿಲ್ಪ ಫಲಕದಲ್ಲಿ ಪಾದಗಳ ಸುತ್ತ ನಾಗಸರ್ಪವಿದ್ದು, ಅದರ ಬಲಭಾಗದಲ್ಲಿ ರುಂಡ ಕತ್ತರಿಸಿದ ಸ್ತ್ರೀಯೊಬ್ಬಳು ತನ್ನ ಎರಡು ಕೈಗಳನ್ನು ಮುಂಚಾಚಿ ಒಂದು ಕಾಲನ್ನು ಮಡಚಿ ಬೋರಲಾಗಿ ಮಲಗಿರುವಂತೆ ಚಿತ್ರಿಸಲಾಗಿದೆ. ಅದೇ ರೀತಿ ಎಡ ಭಾಗದಲ್ಲಿ ರುಂಡ ಕತ್ತರಿಸಿದ ಪುರುಷ ವ್ಯಕ್ತಿಯೊಬ್ಬನು ಬೋರಲಾಗಿ ಮಲಗಿರುವಂತೆ ತೋರಿಸಲಾಗಿದೆ. ಈ ಎರಡು ಮುಂಡಗಳ ಮುಂಭಾಗದಲ್ಲಿ ಎರಡು

* ಸಂಶೋಧಕಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ-೫೮೩ ೨೭೬



ಸೋಮೇಶ್ವರ ಮತ್ತು ಭೈರವೇಶ್ವರ ದೇವಾಲಯದ ಮುಂಭಾಗದಲ್ಲಿರುವ ಭೈರವನಪಾದದ ಶಿಲ್ಪಫಲಕಗಳು, ಬಾಗವಾಳು (೨)

ಕುರಿ ತಲೆಗಳಿದ್ದು, ಅವುಗಳ ಬಾಯಲ್ಲಿ ಕಾಲುಗಳನ್ನು ಇಟ್ಟಿರುವಂತೆ ಕಂಡರಿಸಲಾಗಿದೆ. ಪಾದಗಳ ಮುಂಭಾಗದಲ್ಲಿ ಮುಂಡದಿಂದ ಪ್ರತ್ಯೇಕಿಸಿದ ಸ್ತ್ರೀ ಪುರುಷರ ರುಂಡವನ್ನು ಇಡಲಾಗಿದೆ. ಈ ಶಿಲ್ಪಗಳ ದಷ್ಟಪುಷ್ಟ ಆಕಾರ ಮತ್ತು ರುಂಡಗಳ ಮುಖಛಾಯೆಯಿಂದ ಸ್ತ್ರೀ ಮತ್ತು ಪುರುಷ ಶಿಲ್ಪಗಳಂತೆ ಗೋಚರಿಸುತ್ತವೆ. ಮತ್ತೊಂದು ಶಿಲ್ಪಫಲಕದಲ್ಲಿ ಪಾದಗಳ ಸುತ್ತ ನಾಗಸರ್ಪ ಸುತ್ತಿದೆ. ಅದರ ಎಡಬಲಗಳಲ್ಲಿ ಬೋರಲಾಗಿ ಮಲಗಿರುವ ಮನುಷ್ಯರ ಶಿಲ್ಪಗಳಿದ್ದು, ರುಂಡಗಳನ್ನು ಕತ್ತರಿಸಿ ಪ್ರಾಣಿ ತಲೆಯನ್ನು ಜೋಡಿಸಿದಂತೆ ಕೆತ್ತಲಾಗಿದೆ. ಪಾದಗಳ ಮುಂಭಾಗದಲ್ಲಿ ಮುಂಡದಿಂದ ಪ್ರತ್ಯೇಕಿಸಿದ ರುಂಡವನ್ನು ಇಡಲಾಗಿದೆ. ಆದರೆ ಪ್ರಾಣಿ ಮುಂಡ ಈ ಶಿಲ್ಪ ಫಲಕದಲ್ಲಿ ಕಂಡುಬಂದಿಲ್ಲ.

ಚಿಕ್ಕ ಗಂಡಸಿ : ಹಾಸನ ಜಿಲ್ಲೆಯ ಅರಸೀಕೆರೆ ತಾಲ್ಲೂಕಿನಿಂದ ಸುಮಾರು ೧೬ ಕಿ.ಮೀ. ದೂರದ ಚಿಕ್ಕ ಗಂಡಸಿ ಗ್ರಾಮದ ಕೆರೆಯಂಗಳದಲ್ಲಿ ಮಲ್ಲೇಶ್ವರಸ್ವಾಮಿ ಅಥವಾ ಮಹಾಲಿಂಗೇಶ್ವರ ದೇವಸ್ಥಾನವಿದೆ. ಈ ದೇವಾಲಯದ ಮುಂಭಾಗದಲ್ಲಿರುವ ಸುಮಾರು ೧.೫ ಅಡಿ ಅಗಲ, ೧ ಅಡಿ ಉದ್ದದ ನೆಲಕ್ಕೆ ಹಾಸಿದ ಕಲ್ಲಿನ ಮೇಲೆ ಭೈರವನಪಾದ ಶಿಲ್ಪಫಲಕಗಳಿವೆ. ಗ್ರಾಮದ ಸ್ಥಳೀಯರೊಬ್ಬರು ಈ ಶಿಲ್ಪಫಲಕವು ಮೊದಲು ಗ್ರಾಮದ ಭೈರವ ದೇವಸ್ಥಾನದ ಮುಂಭಾಗದಲ್ಲಿತ್ತು ನಂತರ ದೇವಾಲಯವನ್ನು ಜೀರ್ಣೋದ್ಧಾರ ಮಾಡುವ ಸಂದರ್ಭದಲ್ಲಿ ಮಹಾಲಿಂಗೇಶ್ವರ ದೇವಸ್ಥಾನದ ಹತ್ತಿರ ತಂದು ಹಾಕಲಾಗಿದೆ ಎಂದು ತಿಳಿಸಿದ್ದಾರೆ.

ಈ ಶಿಲ್ಪಫಲಕದಲ್ಲಿಯೂ ಕೂಡ ಪಾದಗಳ ಸುತ್ತ ನಾಗಸರ್ಪ ಸುತ್ತಿದೆ. ಇದರ ಎರಡು ಬದಿಯಲ್ಲಿ ಬೋರಲಾಗಿ ಮಲಗಿದ ಭಂಗಿಯಲ್ಲಿರುವ, ಎರಡು ವ್ಯಕ್ತಿಗಳ ಕತ್ತರಿಸಿದ ಮುಂಡ ಮತ್ತು ರುಂಡಗಳು ಇದ್ದು, ಎಡ ಭಾಗದ ವ್ಯಕ್ತಿ




ಮಹಾಲಿಂಗೇಶ್ವರ ದೇವಸ್ಥಾನದ ಹತ್ತಿರ ಇರುವ ಭೈರವ ಪಾದ ಶಿಲ್ಪ ಫಲಕ, ಚಿಕ್ಕಗಂಡಸಿ.

ಮುಂಡದ ಕೆಳಗೆ ಪ್ರಾಣಿ ಮುಂಡ ಮತ್ತು ರುಂಡ ಇದೆ. ಆದರೆ ಈ ಶಿಲ್ಪ ಫಲಕದಲ್ಲಿ ಪ್ರತ್ಯೇಕಿಸಿದ ಮಾನವನ ರುಂಡವು ಸ್ಪಷ್ಟವಾಗಿ ಗೋಚರಿಸಿಲ್ಲ.


ಕುರುವಂಕ : ಅರಸೀಕೆರೆ ತಾಲೂಕಿನಿಂದ ಸುಮಾರು ಆರು ಕಿ.ಮೀ. ದೂರದ ಕುರುವಂಕ ಗ್ರಾಮದ ಈಶ್ವರ ಮತ್ತು ಕಾಲಭೈರವೇಶ್ವರ ದೇವಸ್ಥಾನದ ಮುಂಭಾಗದಲ್ಲಿ ಎರಡು ಅಡಿ ಉದ್ದ ಮತ್ತು ಎರಡು ಅಡಿ ಅಗಲದ ಹಾಸು ಕಲ್ಲಿನ ಮೇಲೆ ಭೈರವನಪಾದ ಶಿಲ್ಪಫಲಕಗಳಿವೆ.

ಇದರಲ್ಲಿ ನಡುವೆ ಪಾದಗಳಿದ್ದು, ಸುತ್ತ ಸರ್ಪ ಸುತ್ತಿದೆ. ಇದರ ಬಲ-ಎಡ ಭಾಗಗಳಲ್ಲಿ ರುಂಡ ಕತ್ತರಿಸಿದ ವ್ಯಕ್ತಿಗಳ ಮುಂಡಗಳಿವೆ. ಬಲಭಾಗದ ವ್ಯಕ್ತಿ ಮುಂಡದ ಕೆಳಗೆ ರುಂಡ ಕತ್ತರಿಸಿದ ಪ್ರಾಣಿ ಮುಂಡವನ್ನು ಕಂಡರಿಸಲಾಗಿದೆ. ವ್ಯಕ್ತಿಗಳ ಮುಂಡಗಳಿಂದ ಪ್ರತ್ಯೇಕಿಸಿದ ರುಂಡಗಳನ್ನು ಪಾದಗಳ ಮುಂಭಾಗದಲ್ಲಿ ಇಡಲಾಗಿದೆ. ಆದರೆ ಪ್ರಾಣಿ ಮುಂಡದಿಂದ ಪ್ರತ್ಯೇಕಿಸಿದ ರುಂಡವು ಶಿಲ್ಪಫಲಕದಲ್ಲಿ ಕಂಡುಬಂದಿಲ್ಲ.



ಕಾಲಭೈರವೇಶ್ವರ ದೇವಾಲಯದ ಮುಂಭಾಗದಲ್ಲಿರುವ ಭೈರವನ ಪಾದ ಶಿಲ್ಪಫಲಕ, ಕುರುವಂಕ

ದಿಡಗ : ಹಾಗೆಯೇ ಚನ್ನರಾಯಪಟ್ಟಣ ತಾಲ್ಲೂಕಿನಿಂದ ಸುಮಾರು ೨೫ ಕಿ.ಮೀ. ದೂರದ ದಿಡಗ ಗ್ರಾಮದ ದಕ್ಷಿಣಕ್ಕೆ ಕೆರೆ ಇದೆ. ಈ ಕೆರೆಯ ಆಂಜನೇಯ ದೇವಸ್ಥಾನದ ಪಕ್ಕದಲ್ಲಿ ಭೈರವನಪಾದ ಶಿಲ್ಪಫಲಕಗಳಿರುವ ೧ ೧/೨ ಅಡಿ ಉದ್ದ ಎರಡು ಅಡಿ ಅಗಲದ ಒಂದು ಕಲ್ಲು ಇದೆ. ಈ ಶಿಲ್ಪಫಲಕವು ಮೂಲತಃ ಈಶ್ವರ ದೇವಸ್ಥಾನದ ಮುಂದೆ ಇದ್ದು, ಅದನ್ನು ಜೀರ್ಣೋದ್ಧಾರ ಮಾಡುವ ಸಂದರ್ಭದಲ್ಲಿ ಇಲ್ಲಿ ತಂದು ಇಟ್ಟಿರುವುದಾಗಿ ಗ್ರಾಮದ ಸ್ಥಳೀಯರು ತಿಳಿಸಿದ್ದಾರೆ.



ಆಂಜನೇಯ ದೇವಾಲಯದ ಪಕ್ಕದಲ್ಲಿರುವ ಭೈರವನಪಾದ ಶಿಲ್ಪಫಲಕ, ದಿಡಗ

ಇದರಲ್ಲಿ ನಡುವೆ ಪಾದಗಳಿದ್ದು ಅದರ ಬಲಭಾಗದಲ್ಲಿ ರುಂಡ ಕತ್ತರಿಸಿದ ಪ್ರಾಣಿ ಶಿಲ್ಪವಿದೆ. ಎಡಭಾಗದಲ್ಲಿ ರುಂಡ ಕತ್ತರಿಸಿದ ವ್ಯಕ್ತಿಯು ಬೋರಲಾಗಿ ಮಲಗಿರುವ ಭಂಗಿಯಲ್ಲಿದೆ. ಈ ಎರಡು ಪ್ರತ್ಯೇಕಿಸಿದ ರುಂಡಗಳನ್ನು ವ್ಯಕ್ತಿ ಮುಂಡದ ಮೇಲೆ ಪ್ರಾಣಿರುಂಡ, ಪ್ರಾಣಿ ಮುಂಡದ ಮೇಲೆ ವ್ಯಕ್ತಿ ರುಂಡಗಳನ್ನು ಸ್ವಲ್ಪ ಅಂತರವಿರುವಂತೆ ಕಂಡರಿಸಲಾಗಿದೆ.

ಭೈರವನಪಾದ ಶಿಲ್ಪಫಲಕಗಳನ್ನು ನೋಡಿದಾಗ ಕಾಪಾಲಿಕರಂತೆ ಕಾಳಮುಖರು ಭೈರವನ ಆರಾಧಕರಾಗಿದ್ದರು. ಆದರೆ ಇವರಿಬ್ಬರಲ್ಲಿ ಸ್ಪಷ್ಟವಾದ ವ್ಯತ್ಯಾಸಗಳಿವೆ. ಕಾಪಾಲಿಕರು ಭೈರವನಿಗೆ ನರಬಲಿ ನೀಡುತ್ತಿದ್ದು, ಕಪಾಲ ಭೈರವ, ಸ್ಮಶಾನ ಭೈರವ, ಕಾಳಭೈರವ ಎಂಬ ಹೆಸರುಗಳ ಕೆಲವು ಗುಡಿಗಳು ಉಳಿದುಬಂದಿವೆ.[5] ಈ ಪರಿಸರದಲ್ಲಿ, ಭೈರವ ದೇವಾಲಯಗಳಿದ್ದು, ಬಹುಶಃ ಹಿಂದೆ ಭೈರವನಿಗೆ ನರಬಲಿ ನಡೆಯುತ್ತಿದ್ದಿರಬಹುದು ನಂತರ ನರಬಲಿ ನಿಂತು ಸಾಂಕೇತಿಕವಾಗಿ ಶಿಲ್ಪಗಳನ್ನು ಬಿಡಿಸಿರಬಹುದು. ಶಿಲ್ಪಫಲಕಗಳ ನಡುವೆ ಇರುವ ಪಾದಗಳನ್ನು ವಿದ್ವಾಂಸರು ಭೈರವನ ಪಾದಗಳೆಂದು ಗುರುತಿಸಿದ್ದಾರೆ. ಹಾಗೆಯೇ ಕೆಲವು ಶಿಲ್ಪ ಫಲಕಗಳಲ್ಲಿ ಪಾದಗಳಿಗೆ ಬದಲಾಗಿ ಪಾದುಕೆಗಳು ಇರುವುದನ್ನು ವಿದ್ವಾಂಸರು ತಿಳಿಸಿದ್ದಾರೆ. ಹಳೇಬೀಡಿನ ವಸ್ತು ಸಂಗ್ರಹಾಲಯದಲ್ಲಿ ಭೈರವನ ಎರಡು ಪಾದ ಶಿಲ್ಪಫಲಕಗಳಿವೆ.



ಹಳೆಬೀಡಿನ ವಸ್ತುಸಂಗ್ರಾಹಲಯದಲ್ಲಿರುವ ಭೈರವನಪಾದ, ಶಿಲ್ಪಫಲಕಗಳು (೧)

ಒಂದು ಶಿಲ್ಪಫಲಕದಲ್ಲಿ ಪಾದಗಳ ಬದಲಿಗೆ ಪಾದುಕೆ ಇದ್ದು, ಸುತ್ತ ನಾಗಸರ್ಪ ಸುತ್ತಿದೆ. ಅದರ ಬಲಭಾಗದಲ್ಲಿ ರುಂಡ ಕತ್ತರಿಸಿದ ವ್ಯಕ್ತಿಯೊಬ್ಬನು ತನ್ನ ಎರಡು ಕೈಗಳನ್ನು ಮುಂಚಾಚಿ ಅಂಗಾತ ಮಲಗಿರುವಂತೆ ಕಂಡುಬರುತ್ತದೆ. ಹಾಗೆಯೇ ಎಡಭಾಗದಲ್ಲಿ ರುಂಡ ಕತ್ತರಿಸಿದ ವ್ಯಕ್ತಿಯು ಒಂದು ಕೈಯನ್ನು ಮುಂಚಾಚಿ ಮತ್ತೊಂದು ಕೈಯನ್ನು ಭುಜದ ಮೇಲೆ ಇಟ್ಟಿರುವಂತಿದೆ. ಈ ಶಿಲ್ಪಗಳ ಮೇಲಿನ ವಸ್ತ್ರಾಲಂಕಾರ ಸ್ಪಷ್ಟವಾಗಿ ಗೋಚರಿಸುತ್ತದೆ. ಪಾದಗಳ ಕೆಳಭಾಗದಲ್ಲಿ ರುಂಡ ಕತ್ತರಿಸಿದ ಎರಡು ಪ್ರಾಣಿಗಳ ಮುಂಡವನ್ನು ಇಡಲಾಗಿದೆ.



ಹಳೆಬೀಡಿನ ವಸ್ತುಸಂಗ್ರಾಹಲಯದಲ್ಲಿರುವ ಭೈರವನಪಾದ, ಶಿಲ್ಪಫಲಕಗಳು (೨)

ಮತ್ತೊಂದು ಶಿಲ್ಪಫಲಕದಲ್ಲಿ ಪಾದಗಳ ಸುತ್ತ ನಾಗಸರ್ಪ ಸುತ್ತಿದೆ. ಅದರ ಬಲಭಾಗದಲ್ಲಿ ರುಂಡ ಕತ್ತರಿಸಿದ ಸ್ತ್ರೀಯೊಬ್ಬಳು ಒಂದು ಕೈಯನ್ನು ಮುಂಚಾಚಿ ಅಂಗಾತ ಮಲಗಿರುವಂತೆ ಇದೆ. ಅದೇ ರೀತಿ ಎಡಭಾಗದಲ್ಲಿ ಪುರುಷ ವ್ಯಕ್ತಿಯೊಬ್ಬನು ತನ್ನ ಎರಡು ಕೈಗಳನ್ನು ಮುಂಚಾಚಿ ಅಂಗಾತವಾಗಿ ಮಲಗಿರುವಂತೆ ಕಂಡರಿಸಲಾಗಿದೆ. ಶಿಲ್ಪಗಳ ಆಕಾರಗಳಿಂದ ಸ್ತ್ರೀ ಮತ್ತು ಪುರುಷ ಶಿಲ್ಪಗಳಂತೆ ಕಾಣುತ್ತವೆ. ಶಿಲ್ಪಫಲಕವು ಹಾಳಾಗಿರುವ ಕಾರಣ ಇಂತಹದ್ದೇ ಶಿಲ್ಪವೆಂದು ಸ್ಪಷ್ಟವಾಗಿ ಗುರುತಿಸುವುದು ಕಷ್ಟಸಾಧ್ಯ.

ನನ್ನ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಭೈರವನ ಪಾದಗಳಿರುವ ಶಿಲ್ಪ ಫಲಕಗಳು ಸಿಕ್ಕಿವೆ. ದಾವಣಗೆರೆ ಜಿಲ್ಲೆಯ ಹರಿಹರ ತಾಲೂಕಿನ ಮಲೆಬೆನ್ನೂರು ಹೋಬಳಿಯಲ್ಲಿ ಭೈರವನ ಪಾದ ಎಂಬ ಐತಿಹಾಸಿಕ ಸ್ಥಳವಿದೆ. ಭೈರವನ ಪಾದಗಳು ಈ ಸ್ಥಳದಲ್ಲಿ ಇರುವ ಹಿನ್ನೆಲೆಯಿಂದ ಈ ಸ್ಥಳವನ್ನು ಭೈರವನ ಪಾದ ಎಂದು ಹೆಸರಿಸುತ್ತಾರೆ. ಹಾಗೆಯೇ ಶ್ರೀರಂಗಪಟ್ಟಣದ ಗಂಗಾಧರೇಶ್ವರ ದೇವಾಲಯದಲ್ಲಿನ ಕಾಲಭೈರವೇಶ್ವರ ಶಿಲ್ಪದ ಪಕ್ಕದಲ್ಲಿರುವ ಪಾದಗಳನ್ನು ರುದ್ರಪಾದಗಳೆಂದು ಕರೆಯುತ್ತಾರೆ.

ಶಿವಮಹಾಪುರಾಣ ಮತ್ತು ಸ್ಕಂದ ಮಹಾಪುರಾಣದಲ್ಲಿ ಬ್ರಹ್ಮನ ಮಗನಾದ ದಕ್ಷಬ್ರಹ್ಮನು ಯಾಗ ನಡೆಸುತ್ತಿದ್ದನು. ಇದಕ್ಕೆ ತನ್ನ ಅಳಿಯಮಗಳಾದ ಶಿವ ಮತ್ತು ದ್ರಾಕ್ಷಾಣಿಯನ್ನು ಆಹ್ವಾನಿಸದೆ ಯಾಗವನ್ನು ಮಾಡುತ್ತಿದ್ದನು. ಈ ವಿಷಯ ದ್ರಾಕ್ಷಾಣಿಗೆ ತಿಳಿದು ದ್ರಾಕ್ಷಾಣಿಯು ಶಿವನ ಬಳಿಗೆ ಹೋಗಿ ನನ್ನ ತಂದೆ ಯಾಗ ಮಾಡುವ ವಿಷಯವನ್ನು ನಮಗೆ ಹೇಳುವುದನ್ನು ಮರೆತ್ತಿದ್ದಾರೆ. ನಾವೇ ಹೋಗೋಣ ಎಂದು ಹೇಳುತ್ತಾಳೆ. ಶಿವನು ಕರೆಯದೆ ಹೋದರೆ ನಮಗೆ ಗೌರವ ಸಿಗದು ಎಂದು ಹೇಳಿದರೂ ಕೇಳದೆ ಶಿವನಿಂದ ಅನುಮತಿ ಪಡೆದು ಹೋಗುತ್ತಾಳೆ. ದಕ್ಷಬ್ರಹ್ಮನು ದ್ರಾಕ್ಷಾಣಿಗೆ ಶಿವನಿಂದನೆ ಮಾಡಿದನು. ಇದನ್ನು ಕೇಳಲಾರದೆ ದ್ರಾಕ್ಷಾಣಿಯು ಅಗ್ನಿಪ್ರವೇಶ ಮಾಡುತ್ತಾಳೆ ಈ ವಿಷಯವನ್ನು ಕೇಳಿದ ಶಿವನು ದಕ್ಷಬ್ರಹ್ಮ ಸಂಹಾರಕ್ಕೆ ವೀರಭದ್ರನನ್ನು ಕಳುಹಿಸುತ್ತಾನೆ. ವೀರಭದ್ರನು ದಕ್ಷಬ್ರಹ್ಮನ ರುಂಡವನ್ನು ಕಡಿದಾಗ ರುಂಡವು ಅಗ್ನಿಗೆ ಬಿದ್ದು ಸುಟ್ಟುಹೋಗುತ್ತದೆ. ನಂತರ ಬ್ರಹ್ಮ ಮತ್ತು ದೇವಾನು ದೇವತೆಗಳು ದಕ್ಷಬ್ರಹ್ಮನಿಗೆ ಪುನರುಜ್ಜೀವನ ನೀಡುವಂತೆ ಶಿವನನ್ನು ಆರಾಧಿಸುತ್ತಾರೆ. ಶಿವನು ವೀರಭದ್ರನಿಗೆ ದಕ್ಷಬ್ರಹ್ಮ ರುಂಡವು ಸುಟ್ಟುಹೋದ ಕಾರಣ ಯಾಗದ ಬಳಿ ಇದ್ದ ಆಡಿನ ತಲೆ ತರುವಂತೆ ಹೇಳಿ ಆಡಿನ ತಲೆಯನ್ನು ದಕ್ಷಬ್ರಹ್ಮನ ರುಂಡಕ್ಕೆ ಜೋಡಿಸಿ ಪುನರುಜ್ಜೀವನಗೊಳಿಸುತ್ತಾನೆ.[4]

ದಕ್ಷಬ್ರಹ್ಮನ ಸಂಹಾರದ ಘಟನೆಗೂ ಈ ಶಿಲ್ಪಗಳ ಘಟನೆಗೂ ಏನಾದರೂ ಸಂಬಂಧವಿರಬಹುದೇ? ಎನ್ನುವುದನ್ನು ಪರಿಶೀಲಿಸಬೇಕು. ಈ ಹಿನ್ನೆಲೆಯಿಂದ ಭೈರವನಪಾದ ಶಿಲ್ಪಫಲಕಗಳನ್ನು ಗಮನಿಸಿದಾಗ ಮನುಷ್ಯನ ಜೊತೆಗೆ ಪ್ರಾಣಿಬಲಿಯನ್ನು ಕೊಟ್ಟು, ಮನುಷ್ಯನ ಮುಂಡದ ಮುಂದೆ ಪ್ರಾಣಿ ರುಂಡಗಳನ್ನು ಇರಿಸುವ ಒಂದು ರೀತಿಯ ವಿಶಿಷ್ಟವಾದ ಆಚರಣೆ ಬೆಳೆದು ಬಂದಿರುವುದು ಗಮನಾರ್ಹ ಸಂಗತಿ. ದಕ್ಷಬ್ರಹ್ಮನ ಸಂಹಾರದಲ್ಲಿ ದಕ್ಷನಿಗೆ ಆಡಿನ ತಲೆ ಜೋಡಿಸಿದರೆ ಈ ಶಿಲ್ಪಫಲಕಗಳಲ್ಲಿ ಕುರಿತಲೆಯನ್ನು ಜೋಡಿಸಿದಂತೆ ಇಟ್ಟಿರುವುದನ್ನು ನೋಡಬಹುದು. ಮನುಷ್ಯನ ಜೊತೆಗೆ ಪ್ರಾಣಿಬಲಿಯನ್ನು ನೀಡುತ್ತಿರುವುದನ್ನು ಶಿಲ್ಪಗಳಲ್ಲಿ ವಿಶಿಷ್ಟವಾಗಿ ಗಮನಿಸಬಹುದು. ಇವು ಭಕ್ತರ ಸ್ವಯಂ ಇಚ್ಛೆಯೂ ಕೂಡ ಇರಬಹುದು. ಅಲ್ಲದೆ ಶಿಲ್ಪಗಳ ದಷ್ಟಪುಷ್ಟ ಆಕಾರ, ಬೋರಲಾಗಿ ಒಂದು ಕಾಲನ್ನು ಮಡಚಿ ಮಲಗಿರುವ ಭಂಗಿ ಮತ್ತು ರುಂಡಗಳ ಮುಖಭಾಯೆಗಳಿಂದ ಸ್ತ್ರೀ ಶಿಲ್ಪವೆಂದು, ಹಾಗೂ ಸಪುರವಾದ ಶಿಲ್ಪವನ್ನು ಪುರುಷ ಶಿಲ್ಪವೆಂದು ಹೇಳಬಹುದು. ಈ ಶಿಲ್ಪಫಲಕಗಳಲ್ಲಿ ಬಟ್ಟೆಯ ಅಲಂಕಾರ ಸ್ಪಷ್ಟವಾಗಿ ಕಾಣುವುದಿಲ್ಲ. ಆದರೆ ಹಳೇಬೀಡಿನ ವಸ್ತು ಸಂಗ್ರಹಾಲಯದಲ್ಲಿರುವ ಒಂದು ಭೈರವನ ಪಾದುಕೆ ಶಿಲ್ಪ ಫಲಕದಲ್ಲಿ ವಸ್ತ್ರಾಲಂಕಾರ ಇರುವ ಶಿಲ್ಪಗಳಿವೆ. ಈ ಶಿಲ್ಪಗಳ ಯಥಾರ್ಥವನ್ನು ಗ್ರಹಿಸುವುದು ಕಷ್ಟಕರವಾಗಿದೆ. ಹಿಂದೆ ಉತ್ತರ ಕರ್ನಾಟಕದಲ್ಲಿ ಗ್ರಾಮ ದೇವತೆಗಳಿಗೆ ಕೋಣಗಳನ್ನು ಬಲಿ ಕೊಡುತ್ತಿದ್ದರು. ನಂತರ ಬಲಿ ನಿಂತು, ಸಾಂಕೇತಿಕವಾಗಿ ಈ ರೀತಿಯ ಶಿಲ್ಪಗಳನ್ನು ಬಿಡಿಸಿರುವಂತೆ ಹಾಸನ ಪರಿಸರದಲ್ಲಿಯೂ ಕೂಡ ಈ ಬಗೆಯ ಆಚರಣೆ ಬೆಳೆದು ಬಂದಿರಬಹುದು. ಪ್ರಸ್ತುತ ದಿನಗಳಲ್ಲಿ ಭೈರವನಪಾದ ಶಿಲ್ಪಫಲಕಗಳು ಗಾಳಿ, ಬಿಸಿಲು, ಮಳೆಗೆ ಸಿಕ್ಕಿ ತಮ್ಮ ಮೂಲಸ್ವರೂಪವನ್ನು ಕಳೆದುಕೊಂಡು ಗುರುತಿಸಲಾಗದಷ್ಟು ಸವೆದಿವೆ. ಇವು ಸಂಪೂರ್ಣವಾಗಿ ನಾಶವಾಗುವ ಮೊದಲು ಇತಿಹಾಸದಲ್ಲಿ ದಾಖಲಿಸಬೇಕು.

[ಡಾ. ಸಿ. ಮಹದೇವ, ಪ್ರಾಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಇವರು ಈ ಲೇಖನ ಸಿದ್ಧಪಡಿಸುವ ಸಂದರ್ಭದಲ್ಲಿ ಸೂಕ್ತ ಸಲಹೆ ಸೂಚನೆ ನೀಡಿ ಸಹಕರಿಸಿದ್ದಾರೆ.]

ಆಧಾರಸೂಚಿ

೧. ಅಂಬಳಿಕೆ ಹಿರಿಯಣ್ಣ (ಪ್ರಸಂ), ೨೦೦೯, **ಕನ್ನಡ ವಿಷಯ ವಿಶ್ವಕೋಶ**, ಭೂಗೋಳ ವಿಜ್ಞಾನ, ಪುಟ ಸಂಖ್ಯೆ ೧೧೬೦.

೨. ಗೋಪಾಲ್. ಆರ್., (ಸಂ) ೨೦೧೦, **ಹಾಸನ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ತ್ವ**, ಪುಟ ಸಂಖ್ಯೆ ೪೨೦.

೩. ಲಲಿತಾಂಬ. ಆರ್., ೨೦೦೭, **ಅರಸೀಕೆರೆ ತಾಲ್ಲೂಕಿನ ಶಾಸನಗಳ ಅಧ್ಯಯನ** (ಪಿಎಚ್.ಡಿ. ಮಹಾಪ್ರಬಂಧ), ಪುಟ ಸಂಖ್ಯೆ ೨೬೪.

೪. ಮಾಗಡಿ ರಂಗನರಸಿಂಹಯ್ಯ, ೨೦೦೮, **ಶಿವಮಹಾಶಿವಪುರಾಣ**, ಪುಟ ಸಂಖ್ಯೆ ೭೭.

೫. ಕ್ಷೇತ್ರಕಾರ್ಯ.

೪೭

ಶಿಡ್ಲಘಟ್ಟ ತಾಲ್ಲೂಕಿನ ಸಪ್ತಕನ್ನಿಕಾ ಶಿಲ್ಪಗಳು

ಮುನಿರತ್ನಮ್ಮ ಕೆ.ಹೆಚ್.*

ಶಿಡ್ಲಘಟ್ಟ, ಚಿಕ್ಕಬಳ್ಳಾಪುರ ಜಿಲ್ಲೆಯ ತಾಲ್ಲೂಕು ಪ್ರದೇಶ ಈ ತಾಲ್ಲೂಕಿನಲ್ಲಿ ಬರುವ ನಾಲ್ಕು ಹೋಬಳಿಗಳಲ್ಲಿ ಭಶೆಟ್ಟಿಹಳ್ಳಿ ಮತ್ತು ಜಂಗಮಕೋಟೆ ಪ್ರಮುಖವಾದವು. ತಾಲ್ಲೂಕಿನ ಉತ್ತರಕ್ಕೆ ಬಾಗೇಪಲ್ಲಿ, ಪಶ್ಚಿಮಕ್ಕೆ ಗುಡಿಬಂಡೆ ಮತ್ತು ಹೊಸಕೋಟೆ, ಆಗ್ನೇಯದಲ್ಲಿ ಕೋಲಾರ ಜಿಲ್ಲೆ ಸುತ್ತುವರಿದಿದೆ. ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ ಭಶೆಟ್ಟಿಹಳ್ಳಿ ಮತ್ತು ಜಂಗಮಕೋಟೆಯ ಪರಿಸರದಲ್ಲಿ ಈ ಸಪ್ತಕನ್ನಿಕಾ ಶಿಲ್ಪಗಳು ಕಂಡು ಬಂದಿವೆ. ಸ್ಥಳನಾಮದ ಪ್ರಕಾರ ಭಸವಶೆಟ್ಟಿ ಎನ್ನುವ ವರ್ತಕ ರಾಸುಗಳ ವ್ಯಾಪಾರ ಮಾಡುತ್ತಿದ್ದು ಈತನಿಂದ ನಿರ್ಮಾಣವಾದ ಈ ಊರಿಗೆ ಭಶೆಟ್ಟಿ ಹಳ್ಳಿ ಎಂದು ಹೆಸರಾಯಿತು. ಅದೇ ರೀತಿ ಶಿಡ್ಲಘಟ್ಟ ಪಾಳೆಯಗಾರರಿಂದ ನಿರ್ಮಾಣವಾದ ಕೋಟೆಯಲ್ಲಿ ಜಂಗಮರು ಸಾಧುಸಂತರು ಹೆಚ್ಚಿನ ಸಂಖ್ಯೆಯಲ್ಲಿ ವಾಸ ಮಾಡುತ್ತಿದ್ದರಿಂದ ಜಂಗಮ ಕೋಟೆ ಎಂದೂ ಸ್ಥಳಪುರಾಣದಿಂದ ತಿಳಿದು ಬರುತ್ತದೆ.

ಭಶೆಟ್ಟಿ ಹಳ್ಳಿಯಿಂದ ೩ ಕಿ.ಮೀ. ದೂರದಲ್ಲಿ ಕಂಬಾಲ ಹಳ್ಳಿಯೆಂಬ ಗ್ರಾಮವಿದೆ. ಈ ಗ್ರಾಮಕ್ಕೆ ಹೊಂದಿ ಕೊಂಡಂತೆ ವಿಶಾಲವಾದ ಒಡೆಯಕೆರೆಯಲ್ಲಿ ಅನಂತ ಪದ್ಮನಾಭಸ್ವಾಮಿ ದೇವಾಲಯವಿದೆ. ಈ ಕೆರೆಯು ಮೈಸೂರು ಒಡೆಯರಿಂದ ನಿರ್ಮಾಣವಾದ್ದರಿಂದ ಇದಕ್ಕೆ ಒಡೆಯಕೆರೆ ಎಂದು ಹೆಸರಾಗಿದೆ. ಕೆರೆಯ ಅಚ್ಚುಕಟ್ಟು ಪ್ರದೇಶ ೭೩.೦೦ ನೀರಿನ ಶೇಖರಣೆ ೬.೫೬ ಟಿ.ಎಂ.ಸಿ., ನದೀ ಕಣಿವೆ ಉತ್ತರ ಪೆನ್ನಾರ್ ಆಗಿದೆ.[1] ಕೆರೆಯ ಬಲಪಾರ್ಶ್ವದಲ್ಲಿ ದೊಡ್ಡದಾದ ಹುಟ್ಟು ಬಂಡೆಯನ್ನು ಕೊರೆದು ೪ ಅಡಿ, ಅಗಲ ೪ ಅಡಿ, ವಿಸ್ತೀರ್ಣವಿರುವಂತೆ ಅನಂತ ಪದ್ಮನಾಭ ಸ್ವಾಮಿ ಮೂರ್ತಿಯನ್ನು ಕಂಡರಿಸಲಾಗಿದೆ. ಇದು ವೈಷ್ಣವ ದೇವಾಲಯ. ಸರಳವಾದ ಗುಪ್ಪಗುಡಿಯಂತೆ ಕಂಡುಬಂದರೂ ಇಲ್ಲಿ ಕೆತ್ತಲಾಗಿರುವ ಉಬ್ಬು ಶಿಲ್ಪಗಳು ಕೌತುಕ ಮತ್ತು ಆಕರ್ಷಣೀಯವಾಗಿವೆ.

ಐತಿಹ್ಯ

ಈ ದೇವಾಲಯಕ್ಕೆ ಸಂಬಂಧಿಸಿದಂತೆ ಪೌರಾಣಿಕ ಹಿನ್ನೆಲೆಯಾಗಿ ಹಲವು ಕತೆಗಳು ಕಂಡುಬರುತ್ತವೆ. ಚಿಂತಾಮಣಿ ತಾಲ್ಲೂಕಿನಲ್ಲಿ ಬರುವ ಅಂಬಾಜಿದುರ್ಗದ ಗವಿಚೆನ್ನಕೇಶ್ವರ ದೇವಾಲಯದ ಅರ್ಚಕರಾಗಿದ್ದ ಬ್ರಾಹ್ಮಣರು ಸಂತಾನಕ್ಕಾಗಿ ಅಷ್ಟಾಕ್ಷರಿ ಹೋಮ ಮಾಡುವ ಮೂಲಕ ಸಂತಾನಾಪೇಕ್ಷೆಯಲ್ಲಿದ್ದರು. ಇದೇ ಸಂದರ್ಭದಲ್ಲಿ ಕ್ಷೀರಶಾಯಿಯಾಗಿದ್ದ ಮಹಾವಿಷ್ಣು ಸರ್ಪಕ್ಕೆ ಶಾಪಕೊಟ್ಟನು. ಶಾಪಗ್ರಸ್ತ ಸರ್ಪವು ಭೂಲೋಕದಲ್ಲಿ ಈ ಬ್ರಾಹ್ಮಣ ದಂಪತಿಗಳ ಗರ್ಭದಲ್ಲಿ ಸರ್ಪದ ರೂಪದಲ್ಲಿ ಜನಿಸುತ್ತದೆ. ಅದರ ಸಹೋದರಿಯರಾಗಿ ಏಳು ಜನ ಹೆಣ್ಣು ಮಕ್ಕಳು ಜನಿಸಿದರು ಈ ರೀತಿ ಜನಿಸಿದವರೇ ಇಲ್ಲಿ ಕಂಡರಿಸಲಾಗಿರುವ ಸಪ್ತಮಾತೃ ದೇವತೆಗಳು. ನಂತರ ಶಾಪವಿಮೋಚನೆಯಾದ ಬಳಿಕ ಸರ್ಪದ ಅಂತ್ಯ ಸಂಸ್ಕಾರ ಮಾಡಿದ ಸ್ಥಳದಲ್ಲಿ ಅದರ ಕುರುಹಾಗಿ ಅನಂತಪದ್ಮನಾಭ ಶ್ರೀದೇವಿ ಮತ್ತು ಭೂದೇವಿ ಹಾಗೂ ಏಳುಜನ ಕನ್ನಿಕೆಯರ ವಿಗ್ರಹಗಳನ್ನು ಇಲ್ಲಿ ಕೆತ್ತಲಾಗಿದೆ.



ಪುರಾಣದ ಪ್ರಕಾರ ಮಹಾಪ್ರಳಯ ಕಾಲದಲ್ಲಿ ವಿಷ್ಣು ಕ್ಷೀರಸಾಗರದ ನಡುವೆ ಭೂಮಿಗೆ ಆಧಾರ ಭೂತವಾಗಿರುವ ಆದಿಶೇಷನನ್ನು ಪರ್ಯಂಕವಾಗಿಸಿಕೊಂಡು ಅದರ ಮೇಲೆ ಪವಡಿಸುತ್ತಾನೆ. ಆದಿಶೇಷನನ್ನು ಅನಂತನೆಂದೂ ಕರೆಯುವರು. ಅನಂತನ ಮೇಲೆ ಶಯನಿಸಿದ ವಿಷ್ಣುವಿನ ರೂಪವು ಅನಂತಶಯನ ಶೇಷಶಾಯಿಯೆಂದೂ ಸಾಗರದ ನಡುವೆ ನೆಲೆಸುವನಾದ್ದರಿಂದ 'ಜಲಶಾಯಿ' ಎಂದು ಕರೆಯುವರು.[2]

* ಪಿ.ಹೆಚ್.ಡಿ ಸಂಶೋಧನಾ ವಿದ್ಯಾರ್ಥಿನಿ, ಪ್ರಾಚೀನ ಇತಿಹಾಸ & ಪುರಾತತ್ತ್ವ ಅಧ್ಯಯನ ವಿಭಾಗ, ಕನ್ನಡ ವಿ.ವಿ ಹಂಪಿ, ವಿದ್ಯಾರಣ್ಯ-೨೭





ಸಪ್ತಕನ್ನಿಕಾ ಶಿಲ್ಪಗಳು (ಒಡೆಯರ ಕೆರೆ)

ಐತಿಹಾಸಿಕವಾಗಿ ಈ ದೇವಾಲಯ ಗಂಗರು, ವಿಜಯ ನಗರ, ಒಡೆಯರು, ಹೊಯ್ಸಳರ ಆಳ್ವಿಕೆಯ ಕಾಲದಲ್ಲಿ ಪ್ರಬುದ್ಧತೆಯನ್ನು ಕಂಡಿದೆ ಎನ್ನುವುದಕ್ಕೆ ಸಾಕ್ಷ್ಯಾಧಾರಗಳು ದೊರೆಯುತ್ತವೆ. ದೇವಾಲಯದ ದ್ವಾರವು ದಕ್ಷಿಣಾಭಿ ಮುಖವಾಗಿದೆ. ಅನಂತಪದ್ಮನಾಭನು ಎರಡು ಸುತ್ತಿನ ಆವೃತ್ತಿಯುಳ್ಳ ಪರ್ಯಂಕದ ಆದಿಶೇಷನ ಮೇಲೆ ಬಲಭಾಗಕ್ಕೆ ಪವಡಿಸಿದ್ದು ಶಿರವನ್ನು ಮಾತ್ರ ಕೊಂಚ ಮೇಲೆತ್ತಿದ್ದಾನೆ. ಕಾಲಬಳಿ ಲಕ್ಷ್ಮೀ, ನಾಭಿಯ ಭಾಗದಲ್ಲಿ ನಾಭಿಬ್ರಹ್ಮನಿದ್ದಾನೆ. ಇದರ ಬಲ ಪಾರ್ಶ್ವದ ಗೋಡೆಯ ಮೇಲೆ ದಂಡ ಹಿಡಿದ ಶ್ರೀದೇವಿ ಮತ್ತು ಭೂದೇವಿಯರ ಶಿಲ್ಪ ಹಾಗೂ ಅವರಿಗೆ ಚಾಮರ ಬೀಸುವ ರೀತಿಯಲ್ಲಿ ನಿಂತಿರುವ ಮತ್ತೆರಡು ಶಿಲ್ಪಗಳನ್ನು ಚಿತ್ರಿಸಲಾಗಿದೆ. ಎಡಪಾರ್ಶ್ವದ ಗೋಡೆಯ ಮೇಲೆ ಸಪ್ತಕನ್ನಿಕೆಯರ ಶಿಲ್ಪಗಳಿವೆ. ಇವು ಒಂದೇ ರೀತಿಯಲ್ಲಿದ್ದು ತ್ರಿಭಂಗಿಯಲ್ಲಿ ಒಂದೇ ಪಟ್ಟಿಕೆಯಲ್ಲಿ ನಿಂತಿದ್ದು ೩ ೧/೨ ಅಡಿ ಎತ್ತರವಾಗಿವೆ. ತಮ್ಮ ಕೇಶರಾಶಿಯನ್ನು ತುರುಬಾಗಿ ಎಡಭಾಗದಲ್ಲಿ ಗಂಟುಹಾಕಿದೆ. ವೃತ್ತಕುಂಡಲ, ಕಂಕಣ, ಕೇಯೂರ, ಕತ್ತಿನಹಾರ ಇದರಲ್ಲಿ ನಾಲ್ಕು ಶಿಲ್ಪಗಳಿಗೆ ಕುಚಬಂಧವಿದ್ದು ಉಳಿದ ಮೂರುಶಿಲ್ಪಗಳಿಗೆ ಕುಚಬಂಧ ವಿರುವುದಿಲ್ಲ, ಬಲಗೈಯಲ್ಲಿ ಪದ್ಮದ ಮೊಗ್ಗೊಂದನ್ನು ಹಿಡಿದು, ಎಡಗೈ ಡೋಲ ಹಸ್ತವಾಗಿದೆ. ಆಕರ್ಷಕವಾದ ಕೆಳ ನಿಲುವಂಗಿಯನ್ನು ಧರಿಸಿದ್ದಾರೆ. ದೇವಾಲಯದ ಎಡಪಾರ್ಶ್ವದ ಹೊರಭಾಗದ ಗೋಡೆಯ ಮೇಲೆ ಸಿಂಹಲಾಂಛನವಿದೆ. ಶಿಖರಭಾಗದಲ್ಲಿ ಯೋಗಮುದ್ರೆಯಲ್ಲಿರುವ ನಾರಸಿಂಹ, ಮುಖ್ಯದ್ವಾರದ ಎರಡೂ ಪಕ್ಕಗಳಲ್ಲಿ ಜಯವಿಜಯರ ಉಬ್ಬು ಶಿಲ್ಪಗಳನ್ನು ಕಂಡರಿಸಿದ್ದಾರೆ.

ಭಾದ್ರಪದ ಮಾಸದ ಶುಕ್ಲ ಪಕ್ಷದ ಚತುರ್ದಶಿಯಂದು ಅಷ್ಟಾಕ್ಷರಿ ಹೋಮ, ಕಲ್ಯಾಣೋತ್ಸವ ಮಾಡುವ ಮೂಲಕ ಅನಂತಪದ್ಮನಾಭನನ್ನು ವಿಶೇಷವಾಗಿ ಪೂಜಿಸಲಾಗುತ್ತದೆ.[೬] ಇದು ಒಡೆಯಕೆರೆಯಲ್ಲಿ ದೊರೆತ ದೇವಾಲಯದ ಶಿಲ್ಪಗಳ ವಿವರಣೆಯಾಗಿದೆ.

ಇದೇ ರೀತಿಯ ಶಿಲ್ಪಗಳು ಜಂಗಮಕೋಟೆ ಹೋಬಳಿಯ ತೊಟ್ಲಬಾವಿ ಗ್ರಾಮದಲ್ಲಿಯೂ ದೊರೆತಿವೆ.



ಸಪ್ತಕನ್ನಿಕಾ ಶಿಲ್ಪ (ಒಡೆಯರ ಕೆರೆ ಬಳಿ)



ತೊಟ್ಲಬಾವಿಯ ಸಪ್ತಕನ್ನಿಕಾ ಶಿಲ್ಪ

ಇಲ್ಲಿ ಮುತ್ಯಾಲಮ್ಮ ಶಕ್ತಿದೇವತೆ ದೇವಾಲಯದ ಮುಖ್ಯದ್ವಾರ ಪಶ್ಚಿಮಾಭಿಮುಖವಾಗಿದೆ. ಅದರ ಬಲಪಾರ್ಶ್ವ ಭಾಗದಲ್ಲಿ ಚಿಕ್ಕ ಗುಡಿಯಿದ್ದು ಅದರಲ್ಲಿ ಅದೇ ರೀತಿಯ ಶಿಲ್ಪಗಳು ಕಂಡುಬರುತ್ತವೆ. ಅದರ ವಸ್ತ್ರಾಲಂಕಾರ ಕರಂಡಮುಕುಟ ವೃತ್ತಕುಂಡಲ, ಕತ್ತಿನಹಾರ, ಎಡಗೈಯಲ್ಲಿ ಪದ್ಮದ ಮೊಗ್ಗುಗಳನ್ನು ಹಿಡಿದು ಬಲಗೈ ಡೋಲ ಹಸ್ತದ ರೀತಿಯಲ್ಲಿದೆ. ಸುಂದರ ಕೆಳನಿಲುವಂಗಿಯನ್ನು ಧರಿಸಿ ಸಮಭಂಗಿಯಲ್ಲಿ ನಿಂತಿರುವುದನ್ನು ಕಾಣಬಹುದು.

ಆದರೆ ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಈ ಎರಡೂ ಪಟ್ಟಿಕೆ ಅಥವಾ ಫಲಕದಲ್ಲಿ ಕಂಡುಬರವ ಸಪ್ತಕನ್ನಿಕೆಯರು ಬಹುಪಾಲು ಒಂದೇ ರೀತಿಯಲ್ಲಿದ್ದಾರೆ. ಇವರು ಯಾರು? ಎನ್ನುವುದು ಪ್ರಸ್ತುತ ಲೇಖನದ ಚರ್ಚೆಯಾಗಿದೆ. ಸ್ಥಳೀಯರು ಇವರನ್ನು ಸಪ್ತಮಾತೃಕೆಯರೆಂದು ಕರೆಯುತ್ತಾರೆ. ಹಾಗಿದ್ದರೆ ಇಲ್ಲಿ ಮಾತೃಕೆಯರಿಗೆ ಸಂಬಂಧಿಸಿದ ಯಾವುದೇ ಆಯುಧವಾಗಲಿ ಅಥವಾ ವಾಹನವಾಗಲಿ ಕಂಡುಬರುವುದಿಲ್ಲ. ದೇವರ ಭಕ್ತರು ಅಥವಾ ಪರಿಚಾರಿಕೆಯರೆಂದು ತೀರ್ಮಾನಿಸುವುದಾದರೆ ಏಳು ಜನರನ್ನೇಕೆ ಒಂದೇ ಪಟ್ಟಿಕೆಯಲ್ಲಿ ಕಂಡರಿಸಿದ್ದಾರೆ ಎನ್ನುವ ಪ್ರಶ್ನೆ ತಲೆದೋರುತ್ತದೆ. ಹಾಗಾಗಿ ಇವುಗಳೆಲ್ಲದರ ಹಿನ್ನೆಲೆಯಲ್ಲಿ ಇವರನ್ನು ಸಪ್ತಕನ್ನಿಕೆಯರು ಎಂಬ ತೀರ್ಮಾನಕ್ಕೆ ಬರಲಾಯಿತು. ಕಾರಣ ದಷ್ಟಪುಷ್ಟವಾದ ಅಂಗಸೌಷ್ಟವವನ್ನು ಹೊಂದಿರುವುದು.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. **ಕೋಲಾರ ಜಿಲ್ಲೆ ಗ್ಯಾಸೆಟಿಯರ್,** ೨೦೦೪, ಎಚ್. ಚಿತ್ತರಂಜನ್ (ಸಂ.).

೨. **ಇತಿಹಾಸ ದರ್ಶನ.,** ಸಂಪುಟ ೨೭, ೨೦೧೨, ಪುಟ ೧೦೭, ಸಂ. ಪಿ.ವಿ. ಕೃಷ್ಣಮೂರ್ತಿ, ಜಿ.ಕೆ. ದೇವರಾಜಸ್ವಾಮಿ.

೩. **ಹರತಿ ಸಿರಿ,** ೧೯೮೭, (ಸಂ.) ಲಕ್ಷ್ಮಣ್ ತೆಲಗಾವಿ.

೪. **ಮೂರ್ತಿ ಶಿಲ್ಪ, ನೆಲೆ, ಹಿನ್ನೆಲೆ,** ೧೯೭೫, ಡಾ. ಎಸ್.ಕೆ. ರಾಮಚಂದ್ರರಾವ್.

೫. *I conographical study of the Saptamatrikas*, 1989, Dr.O.P. Misra.

ಮೊಸಳೆಯ ನಾಗೇಶ್ವರ ಮತ್ತು ಚೆನ್ನಕೇಶವ ದೇವಾಲಯಗಳ ಶಿಲ್ಪಗಳು : ಒಂದು ಅಧ್ಯಯನ

ಡಾ. ಕೆ.ಎನ್. ಮೋಹನ್* ಎಂ.ಪಿ. ಗೋಪಾಲ್**

ಮೊಸಳೆ ಗ್ರಾಮವು ಹಾಸನದಿಂದ ೧೩ ಕಿ.ಮೀ. ದೂರದಲ್ಲಿದೆ. ಉಲ್ಲೇಖಿತ ಗ್ರಾಮವು ಹಾಸನ ಮೈಸೂರು ಮುಖ್ಯ ರಸ್ತೆಯ ದಿಣ್ಣೆಯ ಮೇಲೆ ನಿರ್ಮಾಣವಾಗಿದೆ. ಗ್ರಾಮದ ಮಧ್ಯಭಾಗದಲ್ಲಿ ಎರಡು ದೇವಾಲಯಗಳಿದ್ದು ಇವೆರಡು ಪೂರ್ವಾಭಿಮುಖವಾಗಿದ್ದು ಪ್ರತ್ಯೇಕವಾಗಿದ್ದರೂ ಒಂದೇ ರೀತಿಯ ತಳ ವಿನ್ಯಾಸ, ಗರ್ಭಗುಡಿ, ಸುಖನಾಸಿ, ನವರಂಗ, ರಂಗಮಂಟಪ, ಶಿಖರಗಳನ್ನು ಒಳಗೊಂಡಿದ್ದು, ಬಳಪದ ಕಲ್ಲಿನಲ್ಲಿ ನಿರ್ಮಿಸಲಾಗಿದೆ.

ಈ ದೇವಾಲಯಕ್ಕೆ ಯಾವುದೇ ಶಾಸನಾಧಾರಗಳು ಲಭಿಸಿಲ್ಲವಾದರೂ, ವಿಗ್ರಹಗಳ ಕೆಳಗೆ ಹೆಸರುಗಳನ್ನು ಕಂಡರಿಸಿದ್ದು ಇವೆಲ್ಲವು ಶಿಲ್ಪಿ ಮತ್ತು ಶಿಲ್ಪದ ಹೆಸರುಗಳಾಗಿದ್ದು ಅವೂ ಸಹ ದೇವಾಲಯದ ಕಾಲಮಾನದ ಬಗ್ಗೆ ನಿರ್ಣಯ ಮಾಡಲು ಸಹಕಾರಿಯಾಗಿಲ್ಲ. ಆದರೆ ಈ ಆಲಯಕ್ಕೆ ನಂತರದ ಕಾಲದಲ್ಲಿ ಈ ಭಾಗದ ಆಡಳಿತಗಾರ ನಾದ ಎರೆಕೃಷ್ಣಪ್ಪನಾಯಕ ೧೫೭೮ರಲ್ಲಿ ನೀಡಿದ ಭೂಮಿ ಮತ್ತು ಇತರೆ ದಾನಗಳ ಬಗ್ಗೆ ಉಲ್ಲೇಖವಿದೆ. ಅಲ್ಲದೆ ಗ್ರಾಮದ ಇತರೆ ಸಣ್ಣ ದೇವಾಲಯಗಳಿಗೂ ದಾನದತ್ತಿ ನೀಡಿದ ವಿವರಗಳು ದೊರೆಯುತ್ತವೆ. ಆದರೆ ಉಲ್ಲೇಖಿತ ದೇವಾಲಯಗಳು ಹೊಂದಿರುವ ಭಿತ್ತಿಶಿಲ್ಪಗಳಲ್ಲಿನ ಹೆಸರು ಮತ್ತು ಭಿತ್ತಿಶಿಲ್ಪಗಳ ಕುಸರಿ ಕೆತ್ತನೆಯನ್ನು ಗಮನಿಸಿದರೆ ಹೊಸಹೊಳಲು ನುಗ್ಗಿಹಳ್ಳಿಯ ದೇವಾಲಯಗಳ ಸಮಕಾಲೀನವೆಂದು ಅಂದಾಜಿಸಬಹುದಾಗಿದೆ. ಈ ದೇವಾಲಯವನ್ನು ನಿರ್ಮಾಪಕನಾದ ನಾಗಣ್ಣದಣ್ಣಾಯಕ ಅಥವಾ ನಾಗನಾಯಕ ಎಂಬ ಹೊಯ್ಸಳ ಅಧಿಕಾರಿ ನಿರ್ಮಿಸಿರಬಹುದೆಂದು ನಿರ್ಧರಿಸಬಹುದು.

ನಾಗೇಶ್ವರ ದೇವಾಲಯ: ಈ ದೇವಾಲಯವು ಕಣಶಿಲೆಯ ಜಗತಿಯನ್ನು ಒಳಗೊಂಡಿದ್ದು, ಭಿತ್ತಿಯ ತಳಭಾಗದಲ್ಲಿ ನಿರಾಡಂಬರವಾದ ಐದು ಸಾಲಿನ ಅಧಿಷ್ಠಾನವನ್ನು



ಗಮನಿಸಬಹುದು. ಭಿತ್ತಿಯನ್ನು ಸಂಪೂರ್ಣವಾಗಿ ಶಿಲ್ಪ ಸಾಲುಗಳಿಂದ ಅಲಂಕರಿಸಲಾಗಿದೆ. ನವರಂಗದ ಗೋಡೆಯ ಮಧ್ಯದಲ್ಲಿ ಗೂಡುಗಳಿವೆ. ಈ ಗೂಡುಗಳು ಪ್ರಸ್ತುತ ಖಾಲಿ ಇದ್ದು ಭಿತ್ತಿಶಿಲ್ಪಗಳು ಸುಮಾರು ೨ ಅಡಿ ಎತ್ತರವಿದ್ದು ಇವುಗಳನ್ನು ವಿಧವಿಧವಾದ ತೋರಣ, ಶಿಖರಗಳ ಕೆಳಗೆ ಪ್ರತಿಷ್ಠಾಪಿಸಿರುವುದನ್ನ ಗಮನಿಸಬಹುದು. ನಾಗೇಶ್ವರ ದೇವಾಲಯದ ಶಿಲ್ಪಗಳ ತಳಭಾಗದಲ್ಲಿ ಶಿಲ್ಪಗಳ ಹೆಸರುಗಳನ್ನು ಕಂಡರಿಸಿರುವುದರಿಂದ ಶೈವ ಶಾಕ್ತ ಧರ್ಮದ ವಿಗ್ರಹ ಲಕ್ಷಣಗಳನ್ನು ಅರ್ಥೈಸಲು ಸಾಧ್ಯವಾಗುತ್ತದೆ. ಆದರೆ ಕೆಲವು ಸವೆದು ಹೋಗಿರುವುದು ಕಂಡುಬರುತ್ತದೆ.

* ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಶ್ರೀ ದೇವರಾಜ ಅರಸು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಣಸೂರು, ಮೈಸೂರು-೧೪.

** ಇತಿಹಾಸ ಸಹಾಯಕ ಪ್ರಾಧ್ಯಾಪಕ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮೊಸಳೆ ಹೊಸಹಳ್ಳಿ, ಹಾಸನ-೫೭೩೨೦೧.

ಪೂರ್ವಭಿತ್ತಿಯಲ್ಲಿರುವ ಆಸೀನ ದುರ್ಗೆಯು ಅಷ್ಟ ಭುಜಗಳನ್ನು ಹೊಂದಿದ್ದು ಸರ್ಪವನ್ನು ಹೊಂದಿದ್ದಾಳೆ. ಆನಂತರದಲ್ಲಿ ಮತ್ತೊಂದು ಸ್ಥಾನಕ ಭಂಗಿಯಲ್ಲಿನ ದುರ್ಗೆ ಮತ್ತು ಶಿವನ ಶಿಲ್ಪಗಳಿದ್ದು, ಶಿವನ ಕೈಯಲ್ಲಿ ಸರ್ಪ ಮತ್ತು ತ್ರಿಶೂಲಗಳೆರಡು ಮುರಿದಿದೆ. ವಿಗ್ರಹದ ಕೆಳಗೆ 'ಸಿವ' ಎಂದು ಉಲ್ಲೇಖಿತವಾಗಿದೆ. ದಕ್ಷಿಣ ಭಾಗದ ಭಿತ್ತಿಯಲ್ಲಿ ಭಗ್ನಗೊಂಡ ಶಿವನ ಶಿಲ್ಪವಿದ್ದು ಡಮರುಗ, ತ್ರಿಶೂಲ, ಅರ್ಧಚಂದ್ರ, ಹಸ್ತಗಳನ್ನು ಹೊಂದಿದ್ದು ಇದರ ಕೆಳಗೆ '**ದಕ್ಷಿಣ ದೇಶಪಾಳಕ**' ಎಂದು ಕಂಡರಿಸಲಾಗಿದೆ.

ನಂತರದಲ್ಲಿ ಅಷ್ಟಭುಜದ ಮಹಿಷಿಯ ವಿಗ್ರಹವಿದೆ. ಮುಂದುವರಿದು ದಕ್ಷಿಣದ ಗೂಡಿನ ಸಮೀಪ ಸಳನ ಶಿಲ್ಪವನ್ನು ಕಂಡರಿಸಲಾಗಿದ್ದು ಮುಂದೆ ಆನೆಯ ಮೇಲೆ ದೇವಿಯ ಶಿಲ್ಪವಿದ್ದು ಅದರ ಪೀಠದಲ್ಲಿ "ಶ್ರಿಯಾದೇವಿ" ಎಂದು ಉಲ್ಲೇಖಿಸಿದೆ. ಸಮೀಪದಲ್ಲಿನ ಶಿಲ್ಪವು ಗರುಡನ ಮೇಲೆ ಆಸೀನವಾಗಿರುವ ದೇವಿಯ ಶಿಲ್ಪವಿದೆ ಅದನ್ನು "ಲಕ್ಷ್ಮಿದೇವಿ" ಎಂದು ಕಂಡರಿಸಿದೆ. ಪಕ್ಕದಲ್ಲಿ ಸ್ತ್ರೀಪರಿಚಾರಿಕೆಯರ ಶಿಲ್ಪಗಳನ್ನು ಕಂಡರಿಸಲಾಗಿದೆ. ಮುಂದುವರಿದು ಸಪ್ತಮಾತೃಕೆಯರ ಶಿಲ್ಪಗಳಿವೆ. ಕೌಮಾರಿಯು ನವಿಲು ಮತ್ತು ಕಳಶವನ್ನು ಹೊಂದಿದ್ದಾಳೆ. ಸ್ಥಾನಕ ಗೌರಿಯು ಅಕ್ಷಮಾಲೆ ಪಾಶ, ಸರ್ಪ, ಪದ್ಮ ಹೊಂದಿದ್ದು ಶಾಸನದಲ್ಲಿ "**ಗೌರಿ**" ಎಂದು ಕಂಡರಿಸಿದೆ.




ಮಹೇಶ್ವರಿ ಇದರ ಕೆಳಭಾಗದಲ್ಲಿ "ಮಹೇಶ್ವರಿ" ಕುಳಿತ ದೇವಿಯು ಪೀಠದಲ್ಲಿ ಸರ್ಪವನ್ನು ಹೊಂದಿದ್ದು ಚಿನ್ಮುದ್ರಾ, ಪದ್ಮ, ಅಭಯ ಒಳಗೊಂಡಿದೆ. ಸ್ಥಾನಕ ಮನೋಹರಿ ಶಾಸನದಲ್ಲಿ "ಮನೋಹರಿ" ಕುಳಿತ ಚಾಮುಂಡಿಯು ಅಷ್ಟ ಭುಜಗಳನ್ನು ಹೊಂದಿದ್ದು ಬಲದಲ್ಲಿ ಕಳಶ ಎಡದಲ್ಲಿ ಸಿಂಹವನ್ನು ಹೊಂದಿದೆ. ಭಗ್ನ ಸ್ಥಿತಿಯಲ್ಲಿ ವೈಷ್ಣವಿ, ಮಧ್ಯದಲ್ಲಿ ಕೈಕಟ್ಟಿದ ಸ್ಥಿತಿಯ ಪರಿಚಾರಕಿಯರನ್ನು ಕಂಡರಿಸಲಾಗಿದೆ.

ಆನಂತರದಲ್ಲಿ ಶಿವನ ಶಿಲ್ಪವಿದ್ದು ಇದರ ಪೀಠದಲ್ಲಿ "ವಜ್ರಬೂತ" ಎಂದು ಉಲ್ಲೇಖಿಸಿದೆ. ಭಗ್ನಸ್ಥಿತಿಯ ಮೂರು ಮುಖದ ಬ್ರಹ್ಮನ ಶಿಲ್ಪವಿದೆ ಶಾಸನದಲ್ಲಿ "ಬ್ರಹ್ಮ" ಎಂದು ಉಲ್ಲೇಖಿಸಿದೆ. ಇದರ ಪಕ್ಕದಲ್ಲಿ ಸರಸ್ವತಿ ಮತ್ತು ನಿಂತ ಚಾಮರಧಾರಣಿಯರು ಸ್ಥಾನಕ ಶಾರದೆಯು ಚಿನ್ಮುದ್ರ, ತ್ರಿಶೂಲ, ಡಮರು, ಪುಸ್ತಕ ಹೊಂದಿದೆ. ಇದರ ಪಕ್ಕದಲ್ಲಿ ಭಗ್ನ ಸ್ಥಿತಿಯ ಚಿತ್ರಸೇನ ವಿಗ್ರಹವಿದೆ. ಇದರ ಪೀಠದಲ್ಲಿ "ಚಿತ್ರಸೇನ" ಎಂದು ಉಲ್ಲೇಖಿತವಾಗಿದೆ.

ಪಶ್ಚಿಮದ ಭಿತ್ತಿಯಲ್ಲಿ "ಮಹಾಕಂಠ" (ಕತ್ತಿ, ಡಮರು ೨ ಆಯುಧ ಭಗ್ನ) ಶಾಸನ ಹೊಂದಿದೆ. ಸ್ಥಾನಕ ಸ್ತ್ರೀ ದೇವತೆ, ಮಹಿಳಾ ಪರಿಚಾರಕಿ ಮತ್ತು ಕುಳಿತ ದುರ್ಗಾ ಶಿಲ್ಪಗಳಿವೆ. ಶಾಸನ ಹೊಂದಿರುವ "ಸದಾಶಿವಮೂರ್ತಿ"ಯು ಪದ್ಮಾಸೀನನಾಗಿದ್ದಾನೆ. ಈ ಶಿಲ್ಪವು ಮೂರು ತಲೆಯನ್ನು ಹೊಂದಿದ್ದು ಮಧ್ಯದ ತಲೆಯಲ್ಲಿ ಕಿರೀಟ ಮತ್ತು ಸರ್ಪವನ್ನು ಹೊಂದಿದೆ. ಪಕ್ಕದಲ್ಲಿ ಭಗ್ನವಾದ ಗಜ-ಲಕ್ಷ್ಮೀ, ಪರಿಚಾರಕಿಯರ ಶಿಲ್ಪಗಳು ನಂತರ ಸ್ಥಾನಕ ಸ್ಥಿತಿಯಲ್ಲಿ "ಗಂಭೀರ ಶಿವ"ನ ಶಿಲ್ಪ ಇದೆ ಕೈಯಲ್ಲಿ ಗದಾ, ಶೂಲ, ಡಮರು, ಅಭಯವನ್ನು ಹಿಡಿದಿದ್ದಾನೆ.

ಉತ್ತರ ಭಿತ್ತಿಯಲ್ಲಿ ಹರಿಹರ (ಡಮರು ಚಕ್ರ, ಉಳಿದೆರಡು ಕೈಗಳು ಭಗ್ನ) ಸುಖಾಸನದಲ್ಲಿರುವ ನಾರಾಯಣ ಜೊತೆಗೆ ಶ್ರೀದೇವಿ ಮತ್ತು ಭೂದೇವಿಯರನ್ನು ಚಾಮರಧಾರಣಿಯರೊಂದಿಗೆ ಕಂಡರಿಸಿದ್ದು, ಈ ಶಿಲ್ಪಗಳ ತಳಭಾಗದಲ್ಲಿಯೇ ಶಾಸನದ ರೂಪದಲ್ಲಿ "ನಾರಾಯಣ", "ಶ್ರೀಯಾದೇವಿ", "ಭೂಮಿದೇವಿ" ಎಂದು ಕಂಡರಿಸಿದೆ. ಸ್ಥಾನಕ ವೈಷ್ಣವಿ (ಪದ್ಮ, ಚಕ್ರ, ಶಂಖ, ಫಲ). ಸ್ಥಾನಕ ಶಿವನನ್ನು "ಚಿತ್ರಧರ" ಎಂದು ಉಲ್ಲೇಖಿಸಿದ್ದು (ತ್ರಿಶೂಲ, ಡಮರು, ಅಭಯ, ಭಗ್ನ ಕೈ). ಆಸೀನ ಪಾರ್ವತಿ (ಅಂಕುಶ, ಪಾಶ, ಫಲ, ಭಗ್ನ ದೇವಿ ಮತ್ತು ಅಂಜಲಿ ಹಸ್ತನಾಗಿ ಮೊಳಕಾಲೂರಿ ಕುಳಿತ ಗರುಡ ಶಿಲ್ಪಗಳನ್ನು ಕಂಡರಿಸಲಾಗಿದೆ). ಪಶ್ಚಿಮದ ಭಿತ್ತಿಯಲ್ಲಿ ಸ್ಥಾನಕ ದುರ್ಗೆ (ಪತ್ರ, ಘಂಟಾ, ಉಳಿದೆರಡು ಕೈ ಭಗ್ನ) ಚಕ್ರೇಶ್ವರಿ, ಸ್ಥಾನಕ ದುರ್ಗೆ, ಆಸೀನ ಶಿವ (ಅಕ್ಷಮಾಲ, ಡಮರುಗ, ತ್ರಿಶೂಲ, ಭಗ್ನ)ನ ಶಿಲ್ಪ ಪ್ರಮುಖವಾಗಿವೆ.



ಉತ್ತರ ಭಿತ್ತಿಯಲ್ಲಿ ತ್ರಿಮುಖವನ್ನು ಹೊಂದಿರುವ ಬ್ರಾಹ್ಮೀ, ವೈಷ್ಣವಿ, ಸ್ಥಾನಕ ಶಿವ, ಗದಾ ಹಸ್ತ, ಪುರುಷ ಪರಿಚಾರಕರು, ಚಾಮರಧಾರಣೆ, ಭಗ್ನ ವರಾಹ, ಪದ್ಮಾಸನ ದಲ್ಲಿರುವ ದೇವಿ, (ವಜ್ರ, ಅಂಕುಶ, ಪಾಶ, ಫಲವಿ) ಈ ರೀತಿಯಲ್ಲಿ ಸ್ಥಾನಕ ಮತ್ತು ಆಸೀನ ದೇವಿಯರ ಶಿಲ್ಪಗಳನ್ನು ಕಂಡರಿಸಲಾಗಿದೆ.

ಅದೇ ಪೂರ್ವಭಾಗದಲ್ಲಿರುವ ಸ್ಥಾನಕ ಶಿವನನ್ನು "ಮಹಾಕಲ" ಎಂದು ಕರೆಯಲಾಗಿದೆ. ದಕ್ಷಿಣದ ಭಿತ್ತಿಯಲ್ಲಿ ಶ್ರೀದೇವಿಯ ಮೇಲೆ ಲತಾಪಟ್ಟಿಕ, ವಜ್ರಭೂತ ಶಿಲ್ಪದ ಮೇಲೆ ಔತ್ತರೇಯ ಶೈಲಿಯ ಗೋಪುರ, ಸದಾಶಿವ ಮೂರ್ತಿಯ ಮೇಲೆ ದ್ರಾವಿಡ ಮಾದರಿಯ ಶಿಖರವನ್ನು ಕಂಡರಿಸಿದೆ. ಮೇಲ್ಛಾವಣಿಯ ಬೋದಿಗೆಯಲ್ಲಿ ವಿವಿಧ ಶಿಲ್ಪಗಳ ಸಮೂಹ ಗಳನ್ನು ಕಂಡರಿಸಿದ್ದು (ಕಪಿ, ಹಂಸ, ಸಳ, ಮಕರ, ಸಿಂಹ, ರತಿ ಬಂದ, ನರ್ತಕ) ಬಿತ್ತಿಯ ಮೇಲ್ಭಾಗದಲ್ಲಿ ವೈಷ್ಣವ ಶಾಕ್ತ ಶಿಲ್ಪಗಳಾದ ತಾಂಡವೇಶ್ವರ, ಗಜಾಸುರ ಮರ್ಧನ, ಗಣೇಶ, ಯೋಗನರಸಿಂಹ ಶಿಲ್ಪಗಳನ್ನು ಕಂಡರಿಸಿದೆ.

ನಾಗೇಶ್ವರ ದೇವಾಲಯದ ಶಿಖರವು ಚತುರಸ್ರವಾಗಿ ನಾಲ್ಕು ಪಟ್ಟಿಕೆಗಳನ್ನು ಹೊಂದಿದ್ದು, ಪಟ್ಟಿಕೆಯ ಮಧ್ಯಭಾಗದಲ್ಲಿ ಶೈವ ವಿಗ್ರಹಗಳ ಸಾಲುಗಳಿದ್ದು ಅದರ ಮೇಲೆ ಅಲಂಕೃತವಾದ ಕಳಶವನ್ನು ನಿರ್ಮಿಸಲಾಗಿದೆ. ಗರ್ಭಗೃಹದ ಮುಂಭಾಗಕ್ಕೆ ಚಾಚಿರುವ ಸುಖನಾಸಿ ಮೇಲೆ ಸಳನು ಹುಲಿಯೊಡನೆ ಹೋರಾಡುತ್ತಿರುವ ಶಿಲ್ಪವನ್ನು ಕಂಡರಿಸಲಾಗಿದೆ. ಪೂರ್ವದ ಫಲಕದ ಸ್ಥಳದಲ್ಲಿ 'ತಾಂಡವೇಶ್ವರನ' ವಿಗ್ರಹ ಕಂಡರಿಸಿದ್ದು, ಮುಂಭಾಗದ ಮುಖಮಂಟಪ ಸುಸ್ಥಿತಿಯಲ್ಲಿಲ್ಲ. ಮಂಟಪದ ಪೀಠ ಭಾಗದಲ್ಲಿ ಯೋಧರ ಸಾಲು, ರತಿಬಂಧ, ಕೀರ್ತಿ ಮುಖ, ಲತಾಬಳ್ಳಿ, ಮುಂದೆ ಬಾಗಿರುವ ಕಟಾಂಜನದ ಮೇಲೆ ಗಾಯಕ ನರ್ತಕರ ವಿಗ್ರಹಗಳು ಇದ್ದು ಮುಂಭಾಗದಲ್ಲಿ ಎರಡು ದುಂಡಾದ ಕಂಬಗಳನ್ನು ಕಂಡರಿಸಲಾಗಿದೆ. ಮುಖಮಂಟಪದ ಮೇಲ್ಛಾವಣಿಯಲ್ಲಿ ಅಷ್ಟದಿಕ್ಪಾಲಕರು, ನರ್ತಕರು, ತಾಂಡವೇಶ್ವರ ಮಧ್ಯದಲ್ಲಿದೆ. ಇದೆ ಭಾಗದಲ್ಲಿ ಕಕ್ಷಾಸನವನ್ನು ನಿರ್ಮಿಸಿರುವುದನ್ನು ಕಾಣಬಹುದು.

ನವರಂಗದಲ್ಲಿನ ಶಿಲ್ಪವೈಶಿಷ್ಠತೆಯನ್ನು ಚರ್ಚಿಸುವು ದಾದರೆ, ನವರಂಗದ ದ್ವಾರದಲ್ಲಿ ದ್ವಾರ ಪಾಲಕರು, ಚಾಮರ ಧಾರಣಿಯರು, ಲತಾಪಟ್ಟಿಕೆಗಳೊಂದಿಗೆ ಕಂಡರಿಸಿದೆ. ದ್ವಾರ ಬಂದದಲ್ಲಿ ಉಮಾಮಹೇಶ್ವರನ ವಿಗ್ರಹ ಕಂಡರಿಸಿದೆ. ನವರಂಗವು ಒಂಭತ್ತು ಅಂಕಣಗಳಲ್ಲಿಯು ರೇಖಾಚಿತ್ರಗಳಿದ್ದು ಮಧ್ಯದ ಭುವನೇಶ್ವರಿಯಲ್ಲಿ ಶೈವ ವಿಗ್ರಹ, ಗಾಯಕರು, ನರ್ತಕರು, ಕಮಲದ ಶಿಲ್ಪಗಳನ್ನು ಕಂಡರಿಸಿದ್ದು, ನವರಂಗದ ಪಶ್ಚಿಮ ಭಾಗದಲ್ಲಿ ಅಲಂಕೃತ ಆರು ಅಂಕಣದಲ್ಲಿ ಸುಂದರ ವಿಗ್ರಹಗಳನ್ನು ಹೆಸರಿಸುವಾಗ ಮೊದಲು ಸಪ್ತಮಾತೃಕೆಯರ ಶಿಲ್ಪಗಳಿದ್ದು ಸುಂದರ ಕೆತ್ತನೆಯನ್ನು ಮಾಡಿದ್ದು ಅವುಗಳ ಜೊತೆಗೆ ಅವರ ವಾಹನ ಮತ್ತು ತೋರಣ ಕಂಡರಿಸಿದ್ದು ಸುಂದರವಾಗಿವೆ. ವೀಣಾದಾರಿಯಾದ ವೀರಭದ್ರ, ಗಣೇಶ, ಅಷ್ಠ ಭುಜಗಳನ್ನು ಹೊಂದಿರುವ ಮಹಿಷಾಸುರಮರ್ಧಿನಿ (ಕೈಗಳಲ್ಲಿ ಕತ್ತಿ, ತ್ರಿಶೂಲ, ಚಕ್ರ, ಬಾಣ, ಶಂಖ, ಗುರಾಣಿ, ರಾಕ್ಷಸನ ಕೇಶ ಹಿಡಿದಿರುವುದು) ಆಸೀನ ಶಾರದೆಯ ಸುಂದರ ವಿಗ್ರಹವಿದೆ. (ಅಂಕುಶ, ಪಾಶ, ಅಕ್ಷಮಾಲೆ, ಪುಸ್ತಕ) ಲಿಂಗ ಅದರ ಹಿಂದೆ ಮೂಲತಃ ಸೂರ್ಯ ಇದ್ದಂತೆ ಕಂಡುಬರುತ್ತದೆ. ಸ್ಥಾನಕ ಕೇಶವನ ವಿಗ್ರಹವು ಆರನೆಯ ಅಂಕಣದಲ್ಲಿ ಸುಂದರವಾಗಿ ಕಂಡರಿಸಿದ್ದು ನವರಂಗದ ಮಧ್ಯದಲ್ಲಿ ನಂದಿ ವಿಗ್ರಹವಿದೆ.

ಸುಖನಾಸಿ ದ್ವಾರದಲ್ಲಿ ಜಾಲಂದ್ರಗಳಿದ್ದು ಮಧ್ಯಭಾಗ ದಲ್ಲಿ ಮನ್ಮಥ-ರತಿ, ಉಮಾ ಮಹೇಶ್ವರರ ಶಿಲ್ಪಗಳಿವೆ. ಸುಖನಾಸಿಯ ಮೇಲ್ಛಾವಣಿಯಲ್ಲಿ ಪದ್ಮದ ನಡುವೆ ತಾಂಡವ ಗಣೇಶ ಮೂರ್ತಿಯನ್ನು ಕಂಡರಿಸಲಾಗಿದೆ.

ಗರ್ಭಗುಡಿಯ ಲಲಾಟದಲ್ಲಿ ಗಜಲಕ್ಷ್ಮೀಯ ಶಿಲ್ಪವಿದ್ದು ಗರ್ಭಗೃಹದಲ್ಲಿ ಸುಮಾರು ಎರಡು ಅಡಿ ಎತ್ತರದ ಲಿಂಗವಿದೆ. ದೇವಾಲಯದ ಭಿತ್ತಿಯಲ್ಲಿ ಶಿಲ್ಪಗಳನ್ನು ಕಂಡರಿಸಲಾಗಿದೆ.





ಈ ದೇವಾಲಯವು ಹೊಸಹೊಳಲು ಮತ್ತು ನುಗ್ಗಿಹಳ್ಳಿಯ ದೇವಾಲಯಗಳ ಶೈಲಿಯನ್ನು ಹೋಲುತ್ತವೆ.

ಚನ್ನಕೇಶವ ದೇವಾಲಯ: ಈ ದೇವಾಲಯವು ನಾಗೇಶ್ವರ ದೇವಾಲಯವನ್ನೇ ಹೋಲುವಂತಿದೆ. ಕೆಲವೇ ಕೆಲವು ಶಿಲ್ಪ ಲಕ್ಷಣವನ್ನು ಪ್ರಸ್ತುತ ಭಾಗದಲ್ಲಿ ಚರ್ಚಿಸಲಾಗುತ್ತದೆ. ತಳ ವಿನ್ಯಾಸವು ವಿಶೇಷವಾಗಿಲ್ಲದೆ, ಯಥಾವತ್ತಾಗಿದೆ. ಭಿತ್ತಿ ಶಿಲ್ಪಗಳನ್ನು ಮಾತ್ರ ಪೂರ್ವಭಾಗದಲ್ಲಿ ಈಶಾನ್ಯ ಭಾಗದಿಂದ ಕಂಡರಿಸಿದ್ದು ರತಿ, ಮನ್ಮಥ, ಗರುಡ, ಕೇಶವ, ಸಂಕರ್ಷಣ, ಹೂಮಾಲೆ ಹಿಡಿದ ಸ್ತ್ರೀ (ರಾಧೆ) ವೇಣುಗೋಪಾಲ, ಚಾಮರ ಧಾರಣಿ, (ಖಾಲಿಗೂಡು) ಇದ್ದು ಎಡ ಮತ್ತು ಬಲಗಳಲ್ಲಿ ಗಜವನ್ನು ಸಂಹರಿಸುತ್ತಿರುವ ಸಿಂಹಗಳು, ಚಾಮರಧಾರಣಿ ಹೂವನ್ನ ಹಿಡಿದಿರುವ ಶಿಲ್ಪ, ಪ್ರಹ್ಲಾದ, ಉಗ್ರನರಸಿಂಹ, ಭಗ್ನಗೊಂಡ ಗರುಡ, ದಕ್ಷಿಣಾಮೂರ್ತಿ ಮತ್ತು ಮೋಹಿನಿಯ ನೃತ್ಯ ಶಿಲ್ಪ, ಸ್ಥಾನಕ ವಿಷ್ಣುವಿನ ಶಿಲ್ಪ ಇದರ ಎರಡು ಕೈಗಳು ಮುರಿದಿದೆ. ವಿಷ್ಣುವಿನ ಬಲ ಭಾಗದಲ್ಲಿ ಗರುಡ ಮತ್ತು ಎಡ ಭಾಗದಲ್ಲಿ ಲಕ್ಷ್ಮಿಯ ಶಿಲ್ಪವನ್ನ ಕಂಡರಿಸಲಾಗಿದೆ.

ಯೋಗನರಸಿಂಹ ಮತ್ತು ಪರಿಚಾರಕಿಯರ ಶಿಲ್ಪಗಳು, ಬಲಭಾಗದಲ್ಲಿ ಶ್ರೀದೇವಿ ಮತ್ತು ಎಡಭಾಗದಲ್ಲಿ ಭೂದೇವಿ ಸ್ಥಾನಕ ಅನಿರುದ್ಧ ಮತ್ತು ಮಾಧವ, ಗರುಡ, ಸ್ಥಾನಕ ವಿಷ್ಣು ವರದರಾಜ, ಮಾಧವ, ಶ್ರೀಧರ, ನಾರಾಯಣ ಪರಿಚಾರಕ ರೊಂದಿಗೆ ಕುಳಿತ ಶಿಲ್ಪ. ಸ್ಥಾನಕ ಮಾಧವ, ಆಸೀನ ಗೋವಿಂದ, ಸಂಕರ್ಷಣ ಪರಿಚಾರಕರೊಂದಿಗೆ ಇರುವ ಶಿಲ್ಪ, ಬಲಿ ಮತ್ತು ವಾಮನ, ಗರುಡ ಕುಳಿತ ಹರಿ, ದಕ್ಷಿಣಾಮೂರ್ತಿ ಮತ್ತು ಮೋಹಿನಿ, ಸ್ಥಾನಕ ಅಚ್ಯುತ ಪಾರ್ವತಿ, ಬ್ರಹ್ಮ, ಅಸೀನ ಲಕ್ಷ್ಮೀ ನಾರಾಯಣ, ಜನಾರ್ಧನ, ಲಕ್ಷ್ಮಿ, ಕಳಿಂಗ ಮರ್ಧನ, ವಾಮನ ಶಿಲ್ಪಗಳು ಭಗ್ನಗೊಂಡಿವೆ.

ಭಿತ್ತಿಯ ಬೋಧಿಗೆ ಮತ್ತು ಕೈಪಿಡಿ ಭಾಗವು ನಾಗೇಶ್ವರ ದೇವಾಲಯದ ಹೋಲಿಕೆಯಂತೆಯೇ ಇದ್ದು ಶಿಲ್ಪಗಳು ಮಾತ್ರ ವೈಷ್ಣವ ಪಂಥದವುಗಳಾಗಿರುತ್ತವೆ. ನಡುವೆ ಭೈರವ ಮತ್ತು ಶಿವನ ಶಿಲ್ಪಗಳನ್ನು ಶಿಲ್ಪಿ ಕಂಡರಿಸಿದ್ದಾನೆ. ಚನ್ನಕೇಶವ ದೇವಾಲಯದ ಶಿಖರವೂ ಸಹ ನಾಗೇಶ್ವರ ದೇವಾಲಯದ ಶಿಖರವನ್ನು ಹೋಲುತ್ತಿದ್ದು ವೈಷ್ಣವ ಶಿಲ್ಪಗಳನ್ನು ಹೊಂದಿದೆ. ಮುಖಮಂಟಪವು ಸಹ ಸಾಮ್ಯತೆ ಹೊಂದಿದ್ದು ಮುಂಭಾಗದ ಭಿತ್ತಿ ಶಿಲ್ಪಗಳು ವೈಷ್ಣವ ಪಂಥದವುಗಳಾಗಿದ್ದು, ಮುಖ ಮಂಟಪದ ಮೇಲ್ಚಾವಣಿಯಲ್ಲಿ ಅಷ್ಟಕೋನ ಮಾದರಿಯ ವೃತ್ತವಿದೆ.

ನವರಂಗದ ದ್ವಾರಬಂಧವು ಅಪೂರ್ಣಗೊಂಡಿದೆ, ನವರಂಗದ ಭಿತ್ತಿಯಲ್ಲಿನ ಗೂಡುಗಳು ವಿಭಿನ್ನವಾಗಿದ್ದು ಗೂಡುಗಳ ಮೇಲೆ ಐದು ಗೋಪುರಗಳಿವೆ. ಚನ್ನಕೇಶವ ದೇವಾಲಯದ ಶಿಖರವು ಸಹ ಚತುರಸ್ರವಾಗಿದ್ದು ಬೋದಿಗೆ ಮತ್ತು ಕೈಪಿಡಿಯಲ್ಲಿ ವೈಷ್ಣವ ಮತ್ತು ಶೈವ ವಿಗ್ರಹಗಳನ್ನ ಹೊಂದಿದೆ. ಈ ಗೂಡುಗಳಲ್ಲಿ ಲಕ್ಷ್ಮೀ ನಾರಾಯಣ, ಆಸೀನ ಅನಿರುದ್ಧ ಶಿಲ್ಪಗಳಿವೆ. ಈ ಎರಡು ದೇವಾಲಯಗಳು ವೈವಿಧ್ಯಮಯವಾದ ಶೈವ ಮತ್ತು ವೈಷ್ಣವ ಶಿಲ್ಪಗಳನ್ನು ಹೊಂದಿದ್ದು ಗಾತ್ರದ ದೃಷ್ಟಿಯಿಂದ ಲಘುವಾಗಿದ್ದರು. ವಾಸ್ತುಶಿಲ್ಪ ಸಂಪತ್ತಿನ ದೃಷ್ಟಿಯಿಂದ ಸಂಪದ್ಭರಿತವಾಗಿವೆ. ಅನಂತರದಲ್ಲಿ ಸರಸ್ವತಿ, ಗಣೇಶ, ಸ್ಥಾನಕ ಲಕ್ಷ್ಮೀ (ಪದ್ಮ, ಚಕ್ರ, ಶಂಖ, ಫಲ) ಆಸೀನ ಲಕ್ಷ್ಮಿ (ಪಾಶ, ಶಂಖ, ಚಕ್ರ, ಕಳಶ) ಯೋಗನರಸಿಂಹನ ಶಿಲ್ಪಗಳನ್ನು ಕಂಡರಿಸಲಾಗಿದೆ.

ನವರಂಗದ ಭುವನೇಶ್ವರಿಯಲ್ಲಿ ಲಾಳಾಕಾರದ ಕಮಾನು, ಪದ್ಮ ಮೊದಲಾದ ಮಾದರಿಯನ್ನು ಶಿಲ್ಪಿ ಕಂಡರಿಸಿದ್ದಾನೆ. ಸುಖನಾಸಿ ಮತ್ತು ನವರಂಗ ಭಾಗದಲ್ಲಿ ಈ ಆಲಯದಲ್ಲೂ ಸಹ ಜಾಲಂದ್ರ ಮಾಡಲಾಗಿದ್ದು, ದ್ವಾರದಲ್ಲಿ ದ್ವಾರಪಾಲಕರಿಗೆ ಬದಲು ಚಾಮರಧಾರಣಿಯರ ಶಿಲ್ಪ ಕಂಡರಿಸಲಾಗಿದೆ. ಸುಖನಾಸಿಯ ದ್ವಾರಬಂಧದಲ್ಲಿ ಆಸೀನ ತ್ರಿವಿಕ್ರಮನ ಶಿಲ್ಪ ಕಂಡಿರಿಸಿದ್ದಾನೆ. ಸುಖನಾಸಿಯ ಮೇಲ್ಚಾವಣಿಯಲ್ಲಿ ನೃತ್ಯಗಾರರ ಮಧ್ಯ ಉಗ್ರನರಸಿಂಹನ ಶಿಲ್ಪವಿದೆ. ಗರ್ಭಗುಡಿ ಯಲ್ಲಿ ಗರುಡ ಪೀಠದಲ್ಲಿ ಆರು ಅಡಿ ಎತ್ತರದ ಕೇಶವನ ಮೂರ್ತಿ ಇದ್ದು ಪಕ್ಕದಲ್ಲಿ ದೇವಿಯರನ್ನು ಸಹ ಕಂಡರಿಸ ಲಾಗಿದೆ. ಮಕರ ತೋರಣದಲ್ಲಿ ದಶಾವತಾರದ ಶಿಲ್ಪಗಳನ್ನು ಕಂಡರಿಸಿದ್ದು ಗರ್ಭಗುಡಿಯ ಭುವನೇಶ್ವರಿಯಲ್ಲಿ ಕಮಲದ ಚಿತ್ರಣ ಒಳಗೊಂಡಿದೆ. ಇಲ್ಲಿ ವಿಷ್ಣುವಿನ ದಶಾವತಾರದ ಶಿಲ್ಪಗಳನ್ನು ತೋರಿಸಲಾಗಿದೆ.

ಈ ಎರಡು ದೇವಾಲಯಗಳ ರಚನೆಯನ್ನು ಗಮನಿಸಿದರೆ ಹೊಯ್ಸಳರು ಎರಡು ಪಂಥಕ್ಕೆ ಸಮಾನ ಪ್ರಾಶಸ್ತ್ಯವನ್ನು ನೀಡಿರುವುದು ಕಂಡುಬರುತ್ತದೆ. ಈ ದೇವಾಲಯಕ್ಕೆ ಯಾವುದೇ ಶಾಸನ ಉಲ್ಲೇಖ ಇಲ್ಲದ್ದರಿಂದ ಮತ್ತು ಶಿಲ್ಪಗಳ ಪೀಠದಲ್ಲಿ ಇರುವ ಹೆಸರುಗಳ ಉಲ್ಲೇಖವನ್ನು

ಆಧಾರವಾಗಿಟ್ಟುಕೊಂಡು ಈ ದೇವಾಲಯದ ಕಾಲನಿರ್ಣಯವನ್ನು ಕ್ರಿ.ಶ. ೧೨೫೦ ಎಂದು ನಿರ್ಣಯಿಸಬಹುದಾಗಿದೆ. ಹೊಸಹೊಳಲು ಮತ್ತು ನುಗ್ಗಿಹಳ್ಳಿಗಳ ದೇವಾಲಯಗಳ ಸಮಕಾಲೀನದಲ್ಲಿ ಚರ್ಚಿತ ದೇವಾಲಯಗಳ ನಿರ್ಮಾಣ ಆಗಿದ್ದಿರಬೇಕೆಂದು ನಿರ್ಣಯಿಸಬಹುದು.

ಆಧಾರಸೂಚಿ

೧. **ಎಪಿಗ್ರಫಿಯಾ ಕರ್ನಾಟಕ** (ರೈಸ್ ಸಂಪುಟಗಳು).

೨. **ಇತಿಹಾಸ ದರ್ಶನ** ಸಂಪುಟಗಳು.

೩. ಷ. ಶೆಟ್ಟರ್., ಶ್ರವಣ ಬೆಳಗೊಳ-ಧಾರವಾಡ, ೧೯೮೧.

೪. ಡಾ. ಕೆ.ಎನ್. ಮೋಹನ್., **ನುಗ್ಗಿಹಳ್ಳಿ ಮತ್ತು ಹೊಸಹೊಳಲು-ಹೊಯ್ಸಳ ದೇವಾಲಯಗಳ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಧ್ಯಯನ,** ಪಿಹೆಚ್‌ಡಿ ಮಹಾಪ್ರಬಂಧ. (ಅಪ್ರಕಟಿತ).

೫. **ಕನ್ನಡ ವಿಷಯ ವಿಶ್ವಕೋಶ,** ಮೈಸೂರು ವಿ.ವಿ. ಮೈಸೂರು.

೬ ಡಾ. ಎಂ. ಚಿದಾನಂದಮೂರ್ತಿ., **'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ',** ಮೈಸೂರು.

೭. ಹಾಸನ ಜಿಲ್ಲೆಯ ಗ್ಯಾಸೆಟಿಯರ್., ಕರ್ನಾಟಕ ಸರ್ಕಾರ.

೮. **ಹಾಸನ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ತ್ವ,** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ. ೨೦೧೦ ಕರ್ನಾಟಕ ಸರ್ಕಾರ ಪುಟ ಸಂಖ್ಯೆ ೪೯೧, ೪೫೮, ೧೭೪.

೯. **ಹೊಯ್ಸಳ ಸಂಪದ,** ಡಾ. ಎಂ.ಎಸ್. ಕೇಬಿರ್, ೨೦೦೬.

೧೦. ಎಂ.ಎ.ಆರ್. ರಿಪೋರ್ಟ್, ಮೈಸೂರು ವಿಶ್ವವಿದ್ಯಾನಿಲಯ.

೧೧. ಕ್ಷೇತ್ರಕಾರ್ಯ.

೧೨. **ಕರ್ನಾಟಕ ರಾಜ್ಯ ಗ್ಯಾಸೆಟಿಯರ್,** ಸಂಪುಟ ೧, ೨, ೩, -ಸೂರ್ಯನಾಥ ಕಾಮತ್.

೧೩. Duncan J.M. Derrett, *The Hoysala A Medieval Indian Royal family,* London 1957.

೧೪. Dhakya M.A. , *The Indian Temple Forms in Karnataka Inscription and Architecture,* New Delhi, 1997.

೧೫. S. Setter., *Hoysala temples,* 1992.

೧೬. N.S.Rangaraju., *Recent Archaelogical Exploration in Karnataka Archaeology.*

೩೮

ಬೈಂದೂರಿನ ಸೇನೇಶ್ವರ ದೇವಾಲಯದ ಅಪರೂಪದ ಶಿಲ್ಪಗಳು

ಜಯಲಕ್ಷ್ಮಿ ಜಿ.*

ಬೈಂದೂರು ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಕರಾವಳಿಯ ತೀರದ ಬಹು ಚಟುವಟಿಕೆಯ ಕೇಂದ್ರವಾಗಿದೆ. ಬೈಂದೂರಿನ ಸೇನೇಶ್ವರ ದೇವಾಲ ಯವು ಹಲವು ಬಗೆಯಿಂದಾಗಿ ಈ ಭಾಗದಲ್ಲಿ ಪ್ರಮುಖ ವೆನಿಸುತ್ತದೆ. ಮೊದಲನೆಯದಾಗಿ, ಈ ದೇವಾಲಯದ ವಿನ್ಯಾಸವು ಕರಾವಳಿ ತೀರದ ದೇವಾಲಯಗಳಿಗೆ ಹೋಲಿಸಿ ದಾಗ ಸ್ವಲ್ಪ ವಿಭಿನ್ನವೂ ಮತ್ತು ಆಕರ್ಷಕವೂ ಆಗಿದೆ. ದೇವಾಲಯದ ವಾಸ್ತು ವಿನ್ಯಾಸವು ಬಹು ಸೊಗಸಾಗಿದ್ದು, ಈ ದೇವಾಲಯದ ಭಿತ್ತಿ ಮತ್ತು ನವರಂಗದಲ್ಲಿರುವ ಶಿಲ್ಪಗಳು ಬಹುವಾಗಿ ಗಮನ ಸೆಳೆಯುತ್ತವೆ.

ಸಾಮಾನ್ಯವಾಗಿ ಕರಾವಳಿಯ ದೇವಾಲಯಗಳು, ಇಲ್ಲಿನ ಪರಿಸರಕ್ಕನುಗುಣವಾಗಿ ಕಾಷ್ಠ ಹಾಗೂ ತಾಮ್ರದ ತಗಡಿನ ಹೊದಿಕೆ ಇರುವಂತಹ ಇಳಿಜಾರಾದ ಮಾಳಿಗೆಯನ್ನು ಹೊಂದಿರುವುದನ್ನು ಹಲವಾರು ಉದಾಹರಣೆಗಳಲ್ಲಿ ನೋಡ ಬಹುದು. ಬಹುಶಃ ಇಲ್ಲಿ ಮಳೆ ಪ್ರಮಾಣ ಅಧಿಕವಾಗಿರುವು ದರಿಂದ ಇಂತಹ ವಾಸ್ತು ವಿನ್ಯಾಸಕ್ಕೆ ಪ್ರೇರಣೆಯಾಯಿ ತೆನ್ನಬಹುದು. ಶಿಲೆಯಲ್ಲಿಯೂ ಕೂಡ ಇಳಿಜಾರಾದ ಮಾಳಿಗೆ ಗಳನ್ನು ರಚಿಸಿರುವಂತದ ದಾಖಲೆಗಳು ಈ ಭಾಗದಲ್ಲಿವೆ.


ಸೇನೇಶ್ವರ ದೇವಾಲಯವು ಏಕಕೂಟ ದೇವಾಲಯ ವಾಗಿದ್ದು, ಕದಂಬ ನಾಗರ ಶೈಲಿಯ ಅಥವಾ ಫಂಸಣ ಮಾದರಿಯ ವಿಮಾನವನ್ನು ಹೊಂದಿದ್ದು, ಗರ್ಭಗೃಹ, ಅಂತರಾಳ, ನವರಂಗ, ಮುಖಮಂಟಪ ಮತ್ತು ಪ್ರತ್ಯೇಕವಾದ ನಂದಿಮಂಟಪಗಳಿವೆ. ವಿಶೇಷವೆಂದರೆ, ನವರಂಗದ ದಕ್ಷಿಣ ಭಾಗದಲ್ಲಿ ಮತ್ತೊಂದು ಮಂಟಪವಿದ್ದು ತೆರೆದ ಬಾಗಿಲನ್ನು ಹೊಂದಿದೆ. ಉತ್ತರದ ಭಾಗದಲ್ಲಿ ನವರಂಗಕ್ಕೆ ಹೊಂದಿ ಕೊಂಡಂತಹ, ನಂತರದ ಕಾಲದಲ್ಲಿ ನಿರ್ಮಿಸಿದ ಕಿರಿದಾದ ದೇವಾಲಯವಿದೆ. ದೇವಾಲಯವನ್ನು ಸ್ಥಳೀಯವಾಗಿ ದೊರೆಯುವ ಶಿಲೆಯಲ್ಲಿಯೇ ನಿರ್ಮಿಸಲಾಗಿದೆ. ಆದರೇ ದೇವಾಲಯದಲ್ಲಿರುವ ಎಲ್ಲ ಶಿಲ್ಪಗಳನ್ನು ಮಾತ್ರ ಬಳಪದ ಶಿಲೆಯಲ್ಲಿ ನಿರ್ಮಿಸಲಾಗಿದೆ. ಬಹುಶಃ, ಶಿಲ್ಪಗಳನ್ನು ಕೆತ್ತಲು ಅನಕೂಲವಾಗಿಯೂ ಮತ್ತು ಸುಲಭವಾಗಿಯೂ ಇರು ವಂತಹ ಶಿಲೆಯಾದರಿಂದ ಶಿಲ್ಪಿಗಳು ಬಳಪದ ಶಿಲೆಯನ್ನು ಇಲ್ಲಿನ ಶಿಲ್ಪಗಳ ಕೆತ್ತನೆಗಾಗಿಯೇ ತರಿಸಿಕೊಂಡು ರಚಿಸಿ ದ್ದಾರೆಂದು ತೋರುತ್ತದೆ. ಸಾಮಾನ್ಯವಾಗಿ ಬಳಪದ ಶಿಲಾ ದೇವಾಲಯಗಳನ್ನು ಹೊಯ್ಸಳರ ಕಾಲದಲ್ಲಿ ಕಾಣುತ್ತೇವೆ.

ಈ ದೇವಾಲಯದ ನಿರ್ಮಾಣದ ಬಗ್ಗೆ ಯವುದೇ ದಾಖಲೆಗಳಿಲ್ಲ. ಸಾಮಾನ್ಯವಾಗಿ ಸೇನವರ ಎಂಬ ಸ್ಥಳೀಯ ರಾಜಮನೆತನದ ಕಾಲದಲ್ಲಿ ಈ ದೇವಾಲಯವು ನಿರ್ಮಾಣ ವಾಗಿರಬಹುದೆಂಬ ನಂಬಿಕೆ ಇದೆ. ಈ ದೇವಾಲಯವನ್ನು ಕುರಿತು ಬರೆದಿರುವಂತಹ ವಿದ್ವಾಂಸರಾರು ಈ ದೇವಾಲಯದ ವಾಸ್ತು ಶೈಲಿಯ ಕುರಿತಾಗಿ ವಿವರವಾಗಿ ಚರ್ಚಿಸಿರುವುದಿಲ್ಲ. ತುಳುನಾಡಿನ ದೇವಾಲಯ ವಾಸ್ತುವಿನ ಬಗ್ಗೆ ಅಧ್ಯಯನ ಮಾಡಿದ್ದ ಪಿ. ಗುರುರಾಜಭಟ್ಟರೂ ಕೂಡಾ ಅಂತಹ ಹೊಸ ವಿಷಯವನ್ನು ಈ ದೇವಾಲಯದ ಕುರಿತಾಗಿ ಹೇಳುವುದಿಲ್ಲ. ನಂತರದಲ್ಲಿ ಈ ದೇವಾಲಯವನ್ನು ಕಿರು ಅಧ್ಯಯನ ಮಾಡಿದಂತಹ ವಿದ್ವಾಂಸರೂ ಕೂಡ ಗುರುರಾಜಭಟ್ಟರ ಅಭಿಪ್ರಾಯಗಳನ್ನೇ ಮುಂದುವರೆಸಿಕೊಂಡು ಬಂದಿದ್ದಾರೆ. ಅಂದರೆ ಮುಖ್ಯವಾಗಿ ಪ್ರಸ್ತುತ ದೇವಾಲಯದ ಶೈಲಿ ಹಾಗೂ ಇಲ್ಲಿನ ಶಿಲ್ಪಗಳ ಬಗ್ಗೆ ಹೆಚ್ಚಿನ ವಿವರವಾದ ಅಧ್ಯಯನವು ಕೈಗೊಳ್ಳಬೇಕಾದ ಅವಶ್ಯಕತೆ ಇದ್ದು ಆದರ ಮೂಲಕ ಸೇನೇಶ್ವರ ದೇವಾಲಯದ ವಾಸ್ತವಿಕತೆಯ ಬಗ್ಗೆ ಹೇಳಬಹುದಾಗಿದೆ.

ದೇವಾಲಯದ ಚರ್ಚೆ

ಸೇನೇಶ್ವರ ದೇವಾಲಯವನ್ನು ಚತುರಸ್ರ ತಲ ವಿನ್ಯಾಸ ದಲ್ಲಿ ನಿರ್ಮಾಣವಾಗಿದೆ. ಗರ್ಭಗೃಹ, ಅಂತರಾಳ, ನವರಂಗ ಗಳು ಮತ್ತು ಮುಖಮಂಟಪಗಳನ್ನು ಗಮನಿಸಬಹುದು. ಗರ್ಭಗೃಹದ ಮೇಲ್ಭಾಗದಲ್ಲಿ ಅಂತರಾಳಕ್ಕೆ ಹೊಂದಿಕೊಂಡಂತೆ ಕದಂಬನಾಗರ ಶೈಲಿಯಲ್ಲಿನ ಶಿಖರವು ರಚನೆಯಾಗಿದೆ. ದೇವಾಲಯದ ಸಂಪೂರ್ಣವಾದ ವಿಮಾನದ ವಿನ್ಯಾಸವನ್ನು ನೋಡಿದಾಗ, ಅಧಿಷ್ಠಾನ, ಜಗತಿ, ಭಿತ್ತಿ ಮತ್ತು ಶಿಖರಗಳು ಕಂಡುಬರುತ್ತವೆ. ಅಧಿಷ್ಠಾನದಲ್ಲಿ ಉಪಾನ, ಪಟ್ಟಿಕಾ, ಮಕರ/

* ಉಪನ್ಯಾಸಕಿ, ಇತಿಹಾಸ ವಿಭಾಗ, ಶ್ರೀ ಮಹಾವೀರ ಕಾಲೇಜು, ಮೂಡಬಿದರೆ-೫೭೪೨೨೭

ದಂತಪಟ್ಟಿಕೆಗಳು ಹಾಗೂ ಮೇಲ್ಮುಖವಾಗಿ ಚಾಚಿದ ಜಗತಿಯ ರಚನೆಗಳಿವೆ. ಆ ನಂತರದಲ್ಲಿ ಗರ್ಭಗೃಹದ ಹೊರಗೋಡೆಗಳ ಮೂರು ಭಾಗಗಳಲ್ಲಿ ಆಳವಾದ ದೇವಕೋಷ್ಟಗಳಿವೆ. ಈ ಕೋಷ್ಟಗಳಲ್ಲಿ ಸುಂದರ ಶಿಲ್ಪಗಳಿದ್ದು, ಕೋಷ್ಟಗಳ ವಿನ್ಯಾಸವೂ ಕೂಡಾ ಆಕರ್ಷಕವಾಗಿವೆ. ಕೋಷ್ಟಗಳ ಅಲಂಕಾರ ದಲ್ಲಿ ಕಿರಿದಾದ ಶಿಖರಮಾದರಿಗಳನ್ನು ದುಡಿಸಿಕೊಳ್ಳಲಾಗಿದೆ. ಈ ಶಿಖರ ಮಾದರಿಗಳು ನಾಗರ ಶೈಲಿಯನ್ನು ಅನುಸರಿಸುತ್ತವೆ. ಇನ್ನು, ಮುಖಮಂಟಪಗಳ ಬಗ್ಗೆ ಗಮನ ಹರಿಸಿದಾಗ, ದೇವಾಲಯಕ್ಕೆ ಪೂರ್ವಭಾಗದಲ್ಲಿ ನಂದಿಮಂಟಪದ ಮುಂಭಾಗದಲ್ಲಿ ನವರಂಗಕ್ಕೆ ಹೊಂದಿಕೊಂಡಂತೆ ಒಂದು ಮುಖಮಂಟಪವಿದೆ. ಇದರ ಜೊತೆಗೆ ಇರುವಂತಹ ದಕ್ಷಿಣ ಭಾಗದ ಮುಖಮಂಟಪವು ಗಮನ ಸೆಳೆಯುತ್ತದೆ. ಈ ಮಂಟಪವೂ ಕೂಡಾ ನವರಂಗಕ್ಕೆ ಹೊಂದಿಕೊಂದಿದ್ದು, ನವರಂಗವನ್ನು ಪ್ರವೇಶಿಸಲು ಪೂರ್ವಭಾಗದ ದ್ವಾರದಂತೆ ಈ ಭಾಗದಲ್ಲಿಯೂ ಒಂದು ದ್ವಾರವಿದೆ. ಸಾಮಾನ್ಯವಾಗಿ ಮಧ್ಯಯುಗದಲ್ಲಿ ಕಾಳಮುಖ ಶೈವ ಸಿದ್ಧಾಂತದ ಪ್ರಭಾವ ದಿಂದಾಗಿ, ಹಲವಾರು ಶೈವ ದೇವಾಲಯಗಳಿಗೆ ದಕ್ಷಿಣ ದಿಶೆಯಲ್ಲಿ ಪ್ರತ್ಯೇಕ ದ್ವಾರವನ್ನು ಅಥವಾ ಮುಖಮಂಟಪವನ್ನು ರಚಿಸಲಾಗುತ್ತಿತ್ತು. ಇದಕ್ಕೆ ಮುಖ್ಯವಾದ ಕಾರಣವೆಂದರೆ, ಕಾಳಮುಖ ಸ್ಥಾನಪತಿಗಳ ಮಠವು ದಕ್ಷಿಣ ಭಾಗದಲ್ಲಿರುತ್ತಿತ್ತು. ಅದನ್ನೇ ಸರಸ್ವತಿ ಮಠ ಅಥವಾ ಪಾಠಶಾಲೆಯಾಗಿಯೂ ಉಪಯೋಗಿಸಲಾಗುತ್ತಿತ್ತು. ಇದಕ್ಕೆ ಉತ್ತಮ ಉದಹಾರಣೆಯಾಗಿ ಬಳ್ಳಿಗಾವೆಯ ಕೇದಾರೇಶ್ವರ, ಲಕ್ಕುಂಡಿಯ ಕಾಶಿವಿಶ್ವೇಶ್ವರ, ಡಂಬಳದ ದೊಡ್ಡಬಸವಣ್ಣ, ಇಟ್ಟಗಿಯ ಮಹಾದೇವ ದೇವಾಲಯಗಳು ಕಲ್ಯಾಣದ ಚಾಲುಕ್ಯರ ಮುಖ್ಯವಾದ ಉದಾಹರಣೆಗಳಾದರೆ, ಹೊಯ್ಸಳರ ಕಾಲದ ಅಮೃತಾಪುರದ ಅಮೃತೇಶ್ವರ ದೇವಾಲಯ ಉತ್ತಮ ದಾಖಲೆಗಳಾಗಿವೆ. ಬಹುಶಃ ಅದೇ ರೀತಿಯಲ್ಲಿ ಸೋಮೇಶ್ವರ ದೇವಾಲಯದ ದಕ್ಷಿಣ ದಿಶೆಯಲ್ಲಿ ಪ್ರಾಯಶಃ ಮೂಲತಃ ಸರಸ್ವತಿಯ ದೇವಾಲಯ ಅಥವಾ ಮಠವಿದ್ದಿರ ಬಹುದೆಂದು ತೋರುತ್ತದೆ. ಇದಕ್ಕೆ ಪುಷ್ಟಿ ನೀಡುವಂತೆ, ದೇವಾಲಯದ ನವರಂಗದಲ್ಲಿ ಸರಸ್ವತಿಯ ವಿಗ್ರಹವೊಂದನ್ನು ಸೂಕ್ತವಾದ ಸ್ಥಳವಿಲ್ಲದೇ ಹಾಗೇ ಇಡಲಾಗಿದೆ. ಅಂದರೆ ನವರಂಗದಲ್ಲಿನ ಬೇರೆ ಶಿಲ್ಪಗಳಿಗೆ ಕೋಷ್ಟಗಳಿದ್ದು ಅವುಗಳನ್ನು ಕೋಷ್ಟಗಳಲ್ಲಿರಿಸಲಾಗಿದೆ. ಆದರೆ ಸರಸ್ವತಿಯ ವಿಗ್ರಹವನ್ನು ಹಾಗೇ ಹೊರಭಾಗದಲ್ಲಿರಿಸಿರುವುದು ಈ ಚರ್ಚೆಗೆ ಅವಕಾಶ ನೀಡುತ್ತದೆ. ಪ್ರಸ್ತುತ ಅಲ್ಲಿ ಮಠವಿದ್ದಂತಹ ಯಾವುದೇ ಕುರುಹು ಅಥವಾ ಅವಶೇಷಗಳಿಲ್ಲ.

ಪ್ರಸ್ತುತ ದೇವಾಲಯದ ದೇವಕೋಷ್ಟಗಳ ಭಿತ್ತಿಯಲ್ಲಿನ ಶಿಲ್ಪಗಳು ಮತ್ತು ನವರಂಗದಲ್ಲಿರುವ ಹಲವಾರು ಶಿಲ್ಪಗಳು ವಿಶೇಷವಾಗಿ ಗಮನ ಸೆಳೆಯುತ್ತವೆ. ದೇವಕೋಷ್ಟದಲ್ಲಿನ ಮಹೇಶಮೂರ್ತಿ/ತ್ರಿಮೂರ್ತಿ, ಭೈರವಿ, ಭೈರವ, ಉಗ್ರ ನರಸಿಂಹ, ನವರಂಗದಲ್ಲಿರುವ ಶೈವ ದ್ವಾರಪಾಲಕರು, ಮಹಿಶಮರ್ದಿನಿ, ಮಯೂರರೂಢ ಕುಮಾರ, ಸ್ಥಾನಕ ವಿಷ್ಣು, ಶಿವ-ಪಾರ್ವತಿ, ಸೂರ್ಯ ಮತ್ತು ಸರಸ್ವತಿ ಹಾಗೂ ಸುಂದರವಾಗಿ ಕೆತ್ತಲಾಗಿರುವ ನವರಂಗದ ಒಳಮಾಳಿಗೆಯ

ಶಿಲ್ಪಗಳಾದ ಅಷ್ಟದಿಕ್ಪಾಲಕರು ಬಹುವಾಗಿ ಗಮನ ಸೆಳೆಯುತ್ತವೆ. ಈ ಶಿಲ್ಪಗಳ ಕೆತ್ತನೆ ಮತ್ತು ಶೈಲಿಗಳು ವಿಶೇಷವಾಗಿ ಹೊಯ್ಸಳ ಶೈಲಿಯಲ್ಲಿರುವುದು ಗಮನಾರ್ಹವಾಗಿದೆ.

ಪ್ರಸ್ತುತ ಶಿಲ್ಪಗಳ ಕುರಿತಾಗಿ ವಿವರವಾಗಿ ನೋಡಿದಾಗ ಹಲವಾರು ವೈವಿಧ್ಯಮಯವಾದ ಅಂಶಗಳು ಗಮನ ಸೆಳೆಯುತ್ತವೆ. ಮೊದಲನೆಯದಾಗಿ, ಹೊರಭಿತ್ತಿಯಲ್ಲಿರುವಂತಹ ದೇವ ಕೋಷ್ಟದಲ್ಲಿರುವ ಶಿಲ್ಪಗಳನ್ನು ನೋಡಬಹುದು. ಸಾಮಾನ್ಯ ವಾಗಿ ಸ್ಥಳೀಯವಾಗಿ ಚತುರ್ಮುಖಬ್ರಹ್ಮ ಎಂದು ಕರೆಯ ಲಾಗುವ ಹಾಗೂ ಪಿ. ಗುರುರಾಜ ಭಟ್ಟರು ಮತ್ತು ಇನ್ನಿತರರು ತ್ರಿಮೂರ್ತಿ ಎಂದು ಗುರುತಿಸಿರುವ ಶಿಲ್ಪವನ್ನು ಗಮನಿಸಬಹುದು. ಈ ಶಿಲ್ಪದ ಪ್ರತಿಮಾ ಲಕ್ಷಣಗಳನ್ನು ಗಮನಿಸಿದರೆ ಇದನ್ನು ತ್ರಿಮೂರ್ತಿ ಎಂದು ಗುರುತಿಸುವುದು ಸ್ವಲ್ಪ ಕಷ್ಟವೆನಿಸುತ್ತದೆ. ಏಕೆಂದರೆ, ಶಿಲ್ಪದಲ್ಲಿ ಮಧ್ಯದಲ್ಲಿ ಪದ್ಮಾಸನದಲ್ಲಿ ಶಿವನ ಶಿಲ್ಪವಿರುವುದು ದಿಟ. ಆದರೆ, ಇನ್ನುಳಿದ ಮುಖಗಳಲ್ಲಿ ಬ್ರಹ್ಮ ಮತ್ತು ವಿಷ್ಣುವಿನ ರಚನೆಗಳನ್ನು ಕಾಣಬೇಕಾಗುತ್ತದೆ. ಆದರೆ, ಬ್ರಹ್ಮ ಅಥವಾ ವಿಷ್ಣುವಿನ ಯಾವುದೇ ಲಕ್ಷಣಗಳು ಇಲ್ಲಿ ಕಾಣುವುದಿಲ್ಲ. ಅಂದರೆ, ತ್ರಿಮೂರ್ತಿಯ ಶಿಲ್ಪವೆಂದು ತಗೆದುಕೊಳ್ಳುವುದಾದರೆ, ಕಿರೀಟ ಭಾಗವನ್ನು ಮೊದಲನೆಯದಾಗಿ ಗಮನಿಸಬೇಕು. ತ್ರಿಮೂರ್ತಿಯ ಆಕೃತಿಯಲ್ಲಿ ಶಿವನ ಶಿಲ್ಪಕ್ಕೆ ಜಟಾಮುಕುಟ ಮತ್ತು ಬ್ರಹ್ಮ ಹಾಗೂ ವಿಷ್ಣುವಿನ ಶಿಲ್ಪಕ್ಕೆ ಕಿರೀಟ ಮುಕುಟ ವಿರಬೇಕಾಗಿತ್ತು. ಆದರೆ, ಇಲ್ಲಿ ಮೂರೂ ಆಕೃತಿಗಳಿಗೆ ಜಟಾ ಮುಕುಟವೇ ಇರುತ್ತದೆ. ಅಲ್ಲದೇ ಆಯುಧಗಳ ರಚನೆಯಲ್ಲಿಯಾದರೂ ವಿಷ್ಣುವಿನ ಚಕ್ರವಾಗಲೀ ಅಥವಾ ಶಂಖವಾಗಲೀ ಇರಬೇಕಾಗಿತ್ತು, ಅದರ ಬದಲಾಗಿ ಇಲ್ಲಿ ಎಲ್ಲವೂ ಶಿವನ ಆಯುಧಗಳೇ ಇರುವುದರಿಂದ ಈ ಶಿಲ್ಪವನ್ನು ಮಹೇಶಮೂರ್ತಿಯೆಂದು ಗುರುತಿಸುವುದು ಸಮಂಜಸವಾಗಿದೆ. (*ಟಿ.ಎ. ಗೋಪಿನಾಥರಾವ್‌ರವರು ತಮ್ಮ ಎಲಿಮೆಂಟ್ಸ್ ಆಫ್ ಹಿಂದು ಐಕನೋಗ್ರಾಫಿ ಪುಸ್ತಕದಲ್ಲಿ ಕಾವೇರಿಪಟ್ಟಣಮ್ ಎಂಬಲ್ಲಿಯ ಒಂದು ಶಿವ ಶಿಲ್ಪದ ಉದಾಹರಣೆ ಕೊಡುತ್ತ ಹೇಗೆ ತ್ರಿಮೂರ್ತಿಯೆಂಬ ಗುರುತಿಸುವಿಕೆ ತಪ್ಪಾಗುತ್ತದೆಂದು ತೋರಿಸಿದ್ದಾರೆ.*) ಹಾಗೆಯೇ ಪ್ರಸ್ತುತ ಶಿವನ ಶಿಲ್ಪವು ಪದ್ಮಾಸನದಲ್ಲಿ ದಶಹಸ್ತಗಳಿರುವ ಮಹೇಶಮೂರ್ತಿಯ ಶಿಲ್ಪವಾಗಿದೆ. ಆದುದರಿಂದ ತ್ರಿಮುಖಗಳು ಹೊರಭಾಗಕ್ಕೆ ಪ್ರಚೂರಗೊಂಡಿದ್ದು, ಇನ್ನುಳಿದ ಮುಖಗಳು ಹಿಂದೆ ಅಡಕವಾಗಿರಬಹುದಾಗಿದೆ. ಅಥವಾ ತ್ರಿಮುಖಗಳೂ ಕೂಡಾ ಮಹೇಶಮೂರ್ತಿ ಶಿವನಿಗೆ ಇರಬಹುದಾಗಿವೆ ಎಂದು ಟಿ.ಎ. ಗೋಪಿನಾಥರಾವ್‌ರವರು ಗುರುತಿಸುತ್ತಾರೆ. ಆದುದರಿಂದ ಸೇನೇಶ್ವರ ದೇವಾಲಯದ ಚತುರ್ಮುಖ ಬ್ರಹ್ಮ ವಾಸ್ತವಿಕವಾಗಿ ತ್ರಿಮೂರ್ತಿಯಾಗಿರದೇ ಮಹೇಶಮೂರ್ತಿ ಶಿವನದಾಗಿದೆ.

ದೇವಕೋಷ್ಟದಲ್ಲಿರುವ ಇನ್ನುಳಿದ ಶಿಲ್ಪಗಳಾದ ಭೈರವಿ ಮತ್ತು ಭೈರವರ ಶಿಲ್ಪಗಳು ಬಹುತೇಕ ಒಂದೇ ತಳಪದಿಯ ಮೇಲೆ ವೈವಿಧ್ಯತೆಯೊಡನೆ ರಚನೆಯಾಗಿವೆ. ನರ್ತನ ಭಂಗಿಯಲ್ಲಿರುವ ಭೈರವಿಯು ತನ್ನ ಸಹಚರರೊಡನೆ ನಿಂತಿದ್ದಾಳೆ. ಅಷ್ಟಭುಜಗಳನ್ನು ಹೊಂದಿದ್ದು, ಸರ್ಪ, ಕರಂಡ, ತ್ರಿಶೂಲ, ಡಮರು, ಕಿರಿದಾದ ಖಡ್ಗ, ಕೊಂಬು, ರಕ್ತಬಟ್ಟಲು (ಕಾಪಾಲ) ಮೊದಲಾದ ಆಯುಧಗಳನ್ನು ಹೊಂದಿದ್ದು, ರುಂಡಮಾಲೆಯನ್ನು ಧರಿಸಿದ್ದಾಳೆ. ಕೃಶ ಶರೀರೆಯಾದ ದೇವಿಯು ತನ್ನ ಎಂದಿನ ಸೊಬಗಿನೊಂದಿಗೆ ಪುರುಷಾಕೃತಿಯ ಮೇಲೆ ನರ್ತನ ಭಂಗಿಯಲ್ಲಿ ನಿಂತಿದ್ದಾಳೆ. ಇಂತಹವೇ ಸಮಕಾಲೀನ ಶಿಲ್ಪಗಳನ್ನು ಹೊಯ್ಸಳರ ಕಾಲದಲ್ಲೂ ನೋಡಬಹುದು. ಭೈರವನ ಶಿಲ್ಪದಲ್ಲೂ ಬಹುತೇಕವಾದ ಸಮನಾಂತರವಾದ ಲಕ್ಷಣಗಳನ್ನು ಕಾಣಬಹುದು. ಭೈರವನು ಅಷ್ಟಭುಜ ಹಸ್ತಗಳನ್ನು ಹೊಂದಿದ್ದು, ತ್ರಿಶೂಲ, ಡಮರು, ಖಡ್ಗ, ಖೇಟಕ, ರಕ್ತಬಟ್ಟಲು, ರುಂಡ, ಕಿರುಖಡ್ಗ (ಭೈರವಿ ಶಿಲ್ಪದಲ್ಲಿದ್ದಂತೆ), ರುಂಡಮಾಲೆಗಳನ್ನು ಹಾಗೂ ಎತ್ತರವಾದ ಪಾದರಕ್ಷೆಗಳನ್ನು ಧರಿಸಿ ತನ್ನ ಸಹಚರರ ಜೊತೆಯಲ್ಲಿ ನಿಂತಿದ್ದಾನೆ. ಶಿಲ್ಪಕ್ಕೆ ಆಕರ್ಷಕವಾದ ಪ್ರಭಾವಳಿ ಇದೆ. ಅದರಲ್ಲಿ ಆನೆ, ಸಿಂಹ ಮತ್ತು ಮಕರಗಳಿಂದ ಅಲಂಕೃತವಾದ ಭಾಗಗಳಿವೆ. ಒಟ್ಟಾಗಿ, ಭೈರವಿ ಮತ್ತು ಭೈರವರ ಶಿಲ್ಪಗಳನ್ನು ಪ್ರಾಯಶಃ ಒಬ್ಬನೇ ಶಿಲ್ಪಿಯು ರಚಿಸಿರಬಹುದೆಂದು ತೋರುತ್ತದೆ. ಇವುಗಳ ಸಮೀಪ ಇರುವ ಉಗ್ರನರಸಿಂಹ ಶಿಲ್ಪವನ್ನು ನವರಂಗದ ಹೊರ ಭಿತ್ತಿಯಲ್ಲಿ ರಚಿಸಲಾಗಿದ್ದು ಅದಕ್ಕೆ ನಂತರದಲ್ಲಿ ಪ್ರತ್ಯೇಕವಾದ ಕಿರಿದಾದ ಆಲಯವನ್ನು ರಚಿಸಲಾಗಿದೆ. ಸಮಕಾಲೀನ ಶಿಲ್ಪ ಶೈಲಿಯಲ್ಲಿರುವ ಈ ಶಿಲ್ಪದಲ್ಲಿ ಹಿರಣ್ಯಕಶ್ಯಪುವನ್ನು ನರಸಿಂಹನು ತನ್ನ ತೊಡೆಯ ಮೇಲೆ ಹಾಕಿಕೊಂಡು ಅವನ ಹೊಟ್ಟೆಯನ್ನು ಬಗೆಯುತ್ತಿರುವ ದೃಶ್ಯವನ್ನು ರಚಿಸಲಾಗಿದೆ. ಶಿಲ್ಪವು ಬಹು ನೈಜವಾಗಿ ರಚನೆಯಾಗಿದೆ.

ದೇವಾಲಯದ ನವರಂಗದಲ್ಲಿರುವ ಶಿಲ್ಪಗಳೆಲ್ಲವೂ ಹೊರಗಿನ ಶಿಲ್ಪಗಳಂತೆಯೇ ಬಹು ಸೊಗಸಾಗಿ ರಚನೆಯಾಗಿವೆ. ಕೃಷ್ಣ ಶಿಲೆಯಲ್ಲಿ ರಚನೆಯಾಗಿರುವ ಇವುಗಳಲ್ಲಿ ದ್ವಾರಪಾಲಕರು, ಮಹಿಶಮರ್ದಿನಿ, ಮಯೂರ ವಾಹನದ ಮೇಲೆ ಕುಳಿತಿರುವ ಸ್ಕಂದ, ಚತುರ್ಬಾಹು ವಿಷ್ಣು, ಶಿವ-ಪಾರ್ವತಿ, ಸೂರ್ಯ, ಹರಿಹರ ಮತ್ತು ಸರಸ್ವತಿ. ಅಲ್ಲದೇ ನವರಂಗದ ಒಳಮಾಳಿಗೆಯಲ್ಲಿರುವ ಅಷ್ಟ ದಿಕ್ಪಾಲಕರ ಶಿಲ್ಪವನ್ನು ಕೂಡ ಗಮನ ಸೆಳೆಯುತ್ತವೆ. ಇಲ್ಲಿನ ಪ್ರತಿಯೊಂದು

ಶಿಲ್ಪಗಳನ್ನು ಶಿಲ್ಪಕಲಾವಿದರೂ ಸಾಕಷ್ಟು ಶ್ರದ್ಧೆಯಿಂದ ಸೊಗಸಾಗಿ ರಚಿಸಿದ್ದಾರೆ. ಮಹಿಶಮರ್ದಿನಿಯ ಶಿಲ್ಪದಲ್ಲಿ ಬಿಲ್ಲು, ದೇವಿಯ ನಿಂತ ಭಂಗಿಗಳು ಬಹು ನೈಜವಾಗಿವೆ. ಅವಳ ಆಯುಧಗಳು ಮಹಿಶನನ್ನು ಕೊಲ್ಲುತ್ತಿರುವ ಸನ್ನಿವೇಶವು ಅರ್ಥಗರ್ಭಿತ ವಾಗಿದೆ. ಅದೇ ರೀತಿಯಾಗಿ ಸ್ಕಂದನ ಶಿಲ್ಪದಲ್ಲಿ ತನ್ನ ಆಕೃತಿಗೆ ತಕ್ಕುದಾದ ಮಯೂರ ವಾಹನವನ್ನು ಸವಾರಿ ಮಾಡುತ್ತಿರುವ ರಚನೆಯು ಬಹು ವಾಸ್ತವಿಕವಾಗಿದೆ. ಇಲ್ಲಿರುವ ಶಿವ ಪಾರ್ವತಿಯ ಶಿಲ್ಪವು ದಂಪತಿಯ ಶಿಲ್ಪವಾಗಿದೆ. ಪಾರ್ವತಿಯು ಶಿವನ ಎಡ ತೊಡೆಯಮೇಲೆ ಕುಳಿತಿದ್ದಾಳೆ. ವಿಶೇಷವೆಂದರೆ, ಪಾರ್ವತಿಯನ್ನೂ ಇಲ್ಲಿ ನಾಲ್ಕು ಕೈಗಳಿಂದ ಬಿಂಬಿಸಲಾಗಿದೆ. ಅವಳ ಒಂದು ಕೈಯಲ್ಲಿ ಕನ್ನಡಿಯನ್ನು ಬಿಂಬಿಸಲಾಗಿದೆ. ಸಾಮಾನ್ಯವಾಗಿ ಪಾರ್ವತಿಗೆ ಎರಡೇ ಕೈಗಳಿಂದ ಬಿಂಬಿಸಿರುವುದನ್ನು ಹಲವಾರು ಶಿಲ್ಪಗಳಲ್ಲಿ ಕಾಣಬಹುದು. ನಾಲ್ಕು ಕೈಗಳ ರಚನೆ ಇರುವುದು ವಿಶೇಷವೆಂದೇ ಹೇಳಬಹುದು. ಸಮಭಂಗದಲ್ಲಿರುವ ವಿಷ್ಣು ಮತ್ತು ಹರಿಹರರ ಶಿಲ್ಪಗಳು ನೋಡಲು ಒಂದೆ ರೀತಿಯಾಗಿ ಕಾಣುತ್ತವೆ. ವಿಷ್ಣು ಶಿಲ್ಪದಲ್ಲಿ ಶಂಖ, ಚಕ್ರ, ಮತ್ತು ಗದೆಗಳನ್ನು ಹಾಗೂ ಪದ್ಮವನ್ನು ರಚಿಸಲಾಗಿದೆ. ಶಿಲ್ಪದ ಎರಡೂ ಪಾರ್ಶ್ವದಲ್ಲಿ ಒಂದೆಡೆ ಗರುಡ ಮತ್ತೊಂದಡೆ ಭಕ್ತ ವಿಗ್ರಹಗಳು ಕಂಡುಬರುತ್ತವೆ. ಹರಿಹರನ ಶಿಲ್ಪದಲ್ಲಿ ಹರನ ಭಾಗದಲ್ಲಿ ತ್ರಿಶೂಲ ಮತ್ತು ಅಕ್ಷಮಾಲ, ಹರಿಯಭಾಗದಲ್ಲಿ ಅಲಂಕಾರಿಕವಾದ ಪದ್ಮ ಮತ್ತು ಗದೆಗಳನ್ನು ತೋರಿಸಲಾಗಿದೆ. ನಂದಿ ಮತ್ತು ಗರುಡರನ್ನು ಕ್ರಮವಾಗಿ ಹರ ಮತ್ತು ಹರಿಯಭಾಗದಲ್ಲಿ ರಚಿಸಲಾಗಿದೆ. ನಂದಿಯ ಹಿಂಭಾಗದಲ್ಲಿ ದಂಡವನ್ನು ಹಿಡಿದು ನಿಂತಿರುವ ಆಕೃತಿಯು ಬಹು ಸೊಗಸಾಗಿದ್ದು, ಗಮನ ಸೆಳೆಯುತ್ತದೆ. ಈ ಶಿಲ್ಪಗಳಲ್ಲಿ ಏಕರೂಪತೆಯು ಇದ್ದು ಬಹುತೇಕವಾಗಿ ಒಂದೇ ಶಿಲ್ಪಿಯ ನೇತೃತ್ವದಲ್ಲಿ ರಚನೆಯಾಗಿರಬಹುದಾಗಿವೆ.

ಸರಸ್ವತಿಯ ಶಿಲ್ಪವನ್ನು ಬಿಡಿಯಾಗಿ ಹಾಗೆಯೇ ಇರಿಸಲಾಗಿದೆ. ಪದ್ಮಾಸನದಲ್ಲಿ ಕುಳಿತಿದ್ದು, ಪುಸ್ತಕ, ಪಾಶ, ಅಂಕುಶ ಮತ್ತು ಅಕ್ಷಮಾಲೆಗಳನ್ನು ಹಿಡಿದು ಆಸೀನಳಾಗಿದ್ದಾಳೆ. ಆರಂಭದಲ್ಲಿ ಹೇಳಿದಂತೆ, ಮಧ್ಯಕಾಲೀನ ದೇವಾಲಯಗಳಲ್ಲಿ ಸರಸ್ವತಿಯ ಶಿಲ್ಪಗಳು ಬಹುತೇಕವಾಗಿ ಎಲ್ಲ ದೇವಾಲಯಗಳಲ್ಲಿ ಕಂಡುಬರುತ್ತವೆ. ದೇವಾಲಯದ ಭಿತ್ತಿಯಲ್ಲಿ ಮತ್ತು ಪ್ರತ್ಯೇಕವಾಗಿ ದೇವಾಲಯದಲ್ಲಿನ ನವರಂಗದಲ್ಲಿರುವಂತಹ ಉದಾಹರಣೆಗಳಿವೆ. ಹೊಯ್ಸಳರ ಅಮೃತಾಪುರ, ಅರಸಿಕೇರೆ ಮೊದಲಾದ ಕಡೆಗಳಲ್ಲಿ ಸರಸ್ವತಿ ವಿಗ್ರಹಗಳಿರುವುದು ಕಂಡುಬರುತ್ತವೆ. ಅಲ್ಲದೇ ಬಿಡಿಯಾದ ಸರಸ್ವತಿ ವಿಗ್ರಹಳು ಸ್ಪಷ್ಟವಾಗಿ ಪ್ರತ್ಯೇಕವಾದ ಆಲಯವನ್ನು ಅಥವಾ ಮಠಗಳಿದ್ದುದನ್ನು ಸೂಚಿಸುತ್ತವೆ. ಸಾಮಾನ್ಯವಾಗಿ ಮಠಗಳ ರಚನೆಗಳು ಪ್ರಾರಂಭವಾದದ್ದೇ ಕಾಳಮುಖ ಶೈವ ಯತಿಗಳ ಪ್ರಭಾವದಿಂದ ಎಂದು ಹೇಳಬಹುದಾಗಿದೆ.





ದೇವಾಲಯದ ನವರಂಗದ ಒಳಮಾಳಿಗೆಯ ಅಷ್ಟ ದಿಕ್ಪಾಲಕರ ಶಿಲ್ಪಗಳು, ಮತ್ತು ಅವುಗಳ ಮಧ್ಯದಲ್ಲಿರುವ ನಟರಾಜನ ಶಿಲ್ಪಗಳು ಉಬ್ಬು ಶಿಲ್ಪಗಳಾದರೂ ಬಹುತೇಕವಾಗಿ ಬಿಡಿ ಶಿಲ್ಪಗಳಂತೆಯೇ ರಚನೆಗೊಂಡಿವೆ. ಇಂದ್ರ, ವರುಣ ಅಗ್ನಿ, ಕುಬೇರ, ವಾಯು, ಈಶಾನ, ಯಮ ಹಾಗೂ ನೈರುತಿಯ ದಂಪತಿ ಶಿಲ್ಪಗಳೆಲ್ಲವೂ ತಮ್ಮ ವಾಹನಗಳ ಮೇಲೆ ಸವಾರಿ ಮಾಡುತ್ತಿರುವಂತೆ ರಚಿಸಲಾಗಿದೆ. ಈ ಶಿಲ್ಪಗಳಲ್ಲಿನ ನೈಜತೆ, ಅಲಂಕಾರಿಕ ಕೆತ್ತನೆಗಳು ಬಹು ಸೂಕ್ಷ್ಮವಾಗಿ ರಚನೆಗೊಂಡಿವೆ. ಮಧ್ಯದ ನಟರಾಜನ ಶಿಲ್ಪವೂ ಕೂಡ ಅಷ್ಟೇ ನೈಜವಾಗಿದೆ.

ಒಟ್ಟಾರೆಯಾಗಿ ಸೇನೇಶ್ವರ ದೇವಾಲಯದ ಒಟ್ಟಾರೆ ವಿನ್ಯಾಸವು ಕದಂಬ ನಾಗರ ಅಥವಾ ಫಂಸಣ ಮಾದರಿಯನ್ನು ಹೊಂದಿದ್ದು, ದೇವಾಲಯದ ಶಿಲ್ಪಗಳೆಲ್ಲವೂ ಸ್ಪಷ್ಟವಾಗಿ ಹೊಯ್ಸಳ ಮಾದರಿಯನ್ನು ಅನುಸರಿಸುತ್ತವೆ. ಎಲ್ಲ ಶಿಲ್ಪಗಳನ್ನು ಒಂದೇ ಗುಂಪಿನ ಕಲಾವಿದರು ರಚಿಸಿದ್ದು, ಎಲ್ಲ ಶಿಲ್ಪಗಳ ಕೆತ್ತನಾ ವಿಧ ಮತ್ತು ಅವುಗಳ ಶೈಲಿಗಳೂ ಒಂದೇ ತೆರನಾಗಿವೆ. ಹೀಗಾಗಿ ಸೇನೇಶ್ವರ ದೇವಾಲಯದ ಶಿಲ್ಪಗಳನ್ನು ಹೊಯ್ಸಳ ಶೈಲಿಯ ಮುಂದುವರಿಕೆ ಎಂದು ಹೇಳಬಹುದಾಗಿದೆ. ಕರಾವಳಿ ಪ್ರದೇಶದಲ್ಲಿ ಇಂತಹ ದೇವಾಲಯದ ರಚನೆಯು ಬಹು ಅಪರೂಪವೂ ಆಗಿದೆ. ಕರಾವಳಿ ವಾಸ್ತು ಶಿಲ್ಪದ ವೈವಿಧ್ಯತೆಗೆ ಈ ದೇವಾಲಯವು ಒಂದು ವಿಶಿಷ್ಟವಾದ ದಾಖಲೆಯೂ ಆಗಿದೆ.

೪೯

ಪುನ್ನಾಟದ ಪುರಾತನ ಬಂಡಿ

ಪ್ರೊ. ಟಿ. ಮುರುಗೇಶಿ* ಪ್ರೊ. ಉಷಾದೇವಿ. ಎ.**

'ಕೀರ್ತಿಪುರ' ಅಥವಾ ಈಗಿನ ಮೈಸೂರು ಜಿಲ್ಲೆ, ಹೆಚ್.ಡಿ. ಕೋಟೆ ತಾಲ್ಲೂಕಿನ 'ಕಿತ್ತೂರು' ಪ್ರಾಚೀನ ಪುನ್ನಾಟದ ರಾಜಧಾನಿ. ಕಾವೇರಿ ಮತ್ತು ಕಪಿನಿ ನದಿಗಳಿಂದ ಆಲಂಕೃತವಾದ ಪ್ರದೇಶ. ಪುಂರಾಷ್ಟ್ರವೆಂದು ಶಾಸನೋಕ್ತ ಉಲ್ಲೇಖವಿದೆ.[೧] ಪ್ರಸ್ತುತ ಕಬಿನಿ ಹಿನ್ನೀರಿನಲ್ಲಿ ಮುಳುಗಡೆಯಾಗಿರುವ ಕಿತ್ತೂರಿನ, ಉಳಿಕೆ ಪ್ರದೇಶದಲ್ಲಿ ರವಿರಾಮೇಶ್ವರ ದೇವಾಲಯ, ಶಾಸನ ಹಾಗೂ ಬಿಡಿ ಶಿಲ್ಪಗಳು ಅಲ್ಲಲ್ಲಿ ಕಂಡುಬರುತ್ತವೆ.

ಅಕ್ಟೋಬರ್ ೨೯, ೨೦೧೧ ರಂದು ಹೆಚ್.ಡಿ. ಕೋಟೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳೊಂದಿಗೆ ನಾವು ಕಿತ್ತೂರಿನಲ್ಲಿ ನಡೆಸಿದ ಕ್ಷೇತ್ರಾಧ್ಯಯನ ಸಂದರ್ಭದಲ್ಲಿ ಕಂಡು ಬಂದ ಒಂದು ಅಪರೂಪದ ಕಲ್ಲಿನ ಬಂಡಿಯ ಶಿಲ್ಪದ[೨] ವಿಶ್ಲೇಷಣಾತ್ಮಕ ಲೇಖನವೇ ಈ ಪ್ರಬಂಧ.



ಪುನ್ನಾಟ : ಪ್ರಾಚೀನ ಕರ್ನಾಟಕದ ದಕ್ಷಿಣ ಭಾಗದಲ್ಲಿದ್ದ ಒಂದು ಭೌಗೋಳಿಕ ಘಟಕ, ಇದರ ವಿಸ್ತೀರ್ಣ ಅಸ್ಪಷ್ಟ. ಪುನ್ನಾಟ ಪ್ರದೇಶಕ್ಕೆ ಬಹು ಪ್ರಾಚೀನ ಉಲ್ಲೇಖಗಳು ದೊರೆಯುತ್ತವೆ. ಈಜಿಪ್ಟಿನ ೧೮ನೆಯ ರಾಜವಂಶದ ಅರಸರುಗಳ, ಕ್ರಿ.ಪೂ. ೧೫-೧೪ ನೆಯ ಶತಮಾನದ ದಾಖಲೆಗಳಲ್ಲಿ ದೊರಕುವ ಪುಂಟ್ ಪುನ್ನಾಟವಿರಬಹುದೆಂದು ಕೆಲವು ವಿದ್ವಾಂಸರ ಅಭಿಪ್ರಾಯ.[೩] ಒಂದು ಪ್ರತೀತಿಯಂತೆ ಹರಿಷೇಣನ ಬೃಹತ್ಕಥಾ ಕೋಶದಲ್ಲಿ (೯೩೧) ಭದ್ರಬಾಹುವಿನ ಮಾತಿನಂತೆ ಜೈನ ಸಂಘ ದಕ್ಷಿಣದಲ್ಲಿದ್ದ ಪುನ್ನಾಟ ವಿಷಯಕ್ಕೆ ಹೋಯಿತು ಎಂದು ಹೇಳಿದೆ. ಇದರಂತೆ ಪುನ್ನಾಟ ರಾಜ್ಯ ಕ್ರಿ.ಪೂ. ೩ ನೇ ಶತಮಾನದಲ್ಲಿಯೇ ಅಸ್ತಿತ್ವದಲ್ಲಿತ್ತೆನ್ನಬಹುದು. ಪ್ರಸಕ್ತ ಶಕಾರಂಭದಲ್ಲಿ ರೋಮ್ ಚಕ್ರಾಧಿಪತ್ಯಕ್ಕೂ ಈ ರಾಜ್ಯಕ್ಕೂ ವ್ಯಾಪಾರ ಸಂಬಂಧ ಬೆಳೆದು ಬಂದಿದ್ದಿರಬೇಕು. ಪ್ಲೀನಿ ಭಾರತದ ಪಶ್ಚಿಮ ಹರಳುಗಳ ಮೇಲೆ ರೋಮನ್ ಕುಶಲ ಕಲೆಗಾರರು ಕೆತ್ತನೆ ಮಾಡಿರುವ ವಿಷಯ ತಿಳಿಸಿದ್ದಾನೆ.[೪] ಗ್ರೀಕ್ ಭೂಗೋಳ ಶಾಸ್ತ್ರಜ್ಞ ಟಾಲೆಮಿ (ಕ್ರಿ.ಶ. ೯೦-೧೬೮), ಪುನ್ನಾಟವನ್ನು 'ಪೌನ್ನಟ' ವೆಂದು ಕರೆದಿದ್ದಾನೆ.[೫]

ನಾಲ್ಕನೇ ಶತಮಾನದಲ್ಲಿ ಕದಂಬ ಮೂಲ ಪುರುಷ ಮಯೂರ ಶರ್ಮ ಇತರ ಅನೇಕ ರಾಜಮನೆತನಗಳ ಜೊತೆಗೆ ಪುನ್ನಾಟರನ್ನು ಸೋಲಿಸಿದನೆಂದು ಚಂದ್ರವಳ್ಳಿಯ ಶಾಸನದಿಂದ ವ್ಯಕ್ತವಾಗುತ್ತದೆಂದು ಈವರೆಗೆ ನಂಬಲಾಗಿತ್ತು. ಆದರೆ ಡಾ.

* ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ಶಾಸ್ತ್ರ ವಿಭಾಗ, ಎಂ.ಎಸ್.ಆರ್.ಎಸ್. ಕಾಲೇಜು, ಶಿರ್ವ, ಉಡುಪಿ-೫೭೪೧೧೬

** ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೆಚ್.ಡಿ. ಕೋಟೆ, ಮೈಸೂರು ಜಿಲ್ಲೆ-೫೭೧೧೧೪

ಬಿ. ರಾಜಶೇಖರಪ್ಪ ನವರು, ಶಾಸನದ ಪಾಠವನ್ನು ಸಂಪೂರ್ಣ ಪರಿಷ್ಕರಿಸಿ, ಚಂದ್ರವಳ್ಳಿ ಶಾಸನ ಕೇವಲ ಕೆರೆಯೊಂದರ ನಿರ್ಮಾಣದ ವಿಷಯವನ್ನು ತಿಳಿಸುತ್ತದೆ ಎಂದು ಸಾಧಿಸಿ ತೋರಿಸಿದ್ದಾರೆ.[೬] ಪುನ್ನಾಟ ರಾಜರೆಂದು ಪ್ರಸಿದ್ಧವಾಗಿರುವ ಕ್ರಿ.ಶ. ೫–೭ ನೇ ಶತಮಾನಗಳಲ್ಲಿ ಈ ಪ್ರದೇಶದಲ್ಲಿ ಆಳಿದ ವಂಶದವರ ಮೂರು ತಾಮ್ರ ಶಾಸನಗಳು ಇದುವರೆಗೆ ದೊರೆತಿವೆ. ಕೊಮರಲಿಂಗಂ ತಾಮ್ರ ಶಾಸನದಲ್ಲಿ ಪುನ್ನಾಟ ರಾಜ ರವಿದತ್ತ ರಾಜಧಾನಿ ಕಿತ್ಥಿಪುರದಲ್ಲಿದ್ದು ದಾನ ಮಾಡಿದುದಾಗಿ ತಿಳಿಸಿರುವುದರಿಂದ ಕಿತ್ಥಿಪುರ ಅಥವಾ ಕೀರ್ತಿಪುರ ಅವರ ರಾಜಧಾನಿ ಯಾಗಿತ್ತೆಂಬುದು ಸ್ಪಷ್ಟ.

ಕಬಿನಿ ನದಿಯ ದಡದಲ್ಲಿರುವ ಈಗಿನ ಕಿತ್ತೂರು ಹಿಂದಿನ ಕೀರ್ತಿಪುರವಾಗಿತ್ತೆಂದು ಅಲ್ಲಿ ಒಂದು ಶಾಸನದಿಂದ ಸಿದ್ಧವಾಗುತ್ತದೆ. ಈ ವಂಶದ ಮೂಲ ಪುರುಷ ತಾಮ್ರ ಕಶ್ಯಪ (ಇವನು ಮಿಕನೆಂಬುವನ ಮಗನೆಂದು ಒಂದು ಶಾಸನ ತಿಳಿಸುತ್ತದೆ). ಈ ತಾಮ್ರ ಕಾಶ್ಯಪನ ಮಗ ರಾಜಾದಿತ್ಯ. ಇವನ ವಂಶದಲ್ಲಿ ಮುಂದೆ ಕಾಣಿಸಿಕೊಳ್ಳುವವನು ವಿಷ್ಣುದಾಸ. ಈ ವಿಷ್ಣುದಾಸನ ಮಗ ರಾಷ್ಟ್ರವರ್ಮ (ಸು. ೪೭೫), ಕದಂಬ ವಂಶದ ಪ್ರಭಾವತಿ ಎಂಬುವಳನ್ನು ಮದುವೆಯಾಗಿದ್ದ. ಈತನಿಗೆ ಮೂವರು ಮಕ್ಕಳು. ಮಾಂಬಳ್ಳಿ ಶಾಸನವನ್ನು ಹಾಕಿಸಿದ ಪ್ರಥ್ವೀಪತಿ (ಸು. ೫೨೦), ಸ್ಕಂದವರ್ಮ (ಸು. ೫೩೦) ಮತ್ತು ಕೊಮರಲಿಂಗಂ ಶಾಸನದ ಕರ್ತೃ ರವಿದತ್ತನ ಮುತ್ತಾತನಾದ ನಾಗದತ್ತ (ಸು. ೫೩೦). ಕೊಮರಲಿಂಗಂ ಶಾಸನದಲ್ಲಿ, ಈ ವಂಶಾವಳಿ ಹೀಗೆ ಮುಂದುವರೆಯುತ್ತದೆ. ನಾಗದತ್ತನ ಮಗ ಭುಜಂಗಾಧಿರಾಜ (ಸು. ೫೭೫), ಅವನ ಮಗ ಸ್ಕಂದವರ್ಮ (ಸು. ೬೨೫). ಅವನ ಮಗ ಶಾಸನದ ಕರ್ತೃವಾದ ಪುನ್ನಾಟದ ರಾಜ ರವಿದತ್ತ (ಸು. ೬೫೦). ದುರ್ವಿನೀತನ ಶಾಸನಗಳಲ್ಲಿ ಅವನನ್ನು 'ಪೌನ್ನಾಟಾಧಿಪತಿನಾ' ಎಂದು ಕರೆಯಲಾಗಿದೆ.[೭]

ಬಂಡಿಯ ಪ್ರಾಚೀನತೆ

ಭಾರತ ಅನಾದಿ ಕಾಲದಿಂದಲೂ ಕೃಷಿ ಪ್ರಧಾನ ಆರ್ಥಿಕತೆಯ ದೇಶ. ಎತ್ತಿನ ಬಂಡಿ ಕೃಷಿಯಾಧಾರಿತ ಬದುಕಿನ ಬುನಾದಿ. ಸಿಂಧೂ–ಸರಸ್ವತಿ ನಾಗರೀಕತೆಯ ಕಾಲದಿಂದಲೂ ಬಂಡಿ ಭಾರತದ ಆರ್ಥಿಕತೆಯ ಭಾಗವಾಗಿದೆ. ಸಿಂಧೂ–ಸರಸ್ವತಿ ನಾಗರೀಕತೆಯ ವಿವಿಧ ನಿವೇಶನಗಳಲ್ಲಿ ಬಂಡಿಯ ಆಟಿಕೆ ಮಾದರಿಯ ಅವಶೇಷಗಳು ಪತ್ತೆಯಾಗಿವೆ.[೮] ಉತ್ತರ ದಖ್ಖನ್ನಿನ ಜೋರ್ವೆ ಸಂಸ್ಕೃತಿಯ ಇನಾಂಗಾವ್ ನೆಲೆಯಲ್ಲಿ ದೊರೆತ ಒಂದು ಮಡಕೆಯ ಅವಶೇಷದ ಮೇಲೆ ಎತ್ತಿನ ಬಂಡಿಯ ಆಕರ್ಷಕ ಚಿತ್ರವಿದೆ. ಬಹುಶಃ ಇದೇ ದಕ್ಷಿಣ ಭಾರತದ ಅತ್ಯಂತ ಪ್ರಾಚೀನ ಬಂಡಿಯ ಉದಾಹರಣೆಯೆನ್ನಬಹುದು.[೯] ಕರ್ನಾಟಕದಲ್ಲಿ ಬೃಹತ್ ಶಿಲಾಯುಗದ ಕಾಲದಲ್ಲಿಯೇ ಎತ್ತು ಅಥವಾ ಕೋಣಗಳಿಂದ ಎಳೆಯಲ್ಪಡುತ್ತಿದ್ದ ಬಂಡಿಗಳು ಅಸ್ತಿತ್ವದಲ್ಲಿದ್ದಿರಬಹುದೆಂಬ ಭಾಷಿಕ ಸೂಚನೆಗಳಿವೆ. ಮಲೆನಾಡಿನ ಹೆರಗಲ್, ಬೈಸೆ ಮತ್ತು ಮುರುಂಬದ ಬೃಹತ್ ಶಿಲಾಯುಗ ಕಾಲದ ನಿಲಿಸುಗಲ್ಲುಗಳ ಬಗ್ಗೆ ಚರ್ಚಿಸುತ್ತಾ ಡಾ. ಅ. ಸುಂದರ ಅವರು ಹೇರು ಎಂದರೆ ಭಾರ + ಕಲ್ = ಹೆರಗಲ್, ಎಂದರೆ ಕಲ್ಲುಗಳನ್ನು ಬಂಡಿಗಳಲ್ಲಿ ತುಂಬಿಸಿ ಸಾಗಿಸುತ್ತಿದ್ದ ಸ್ಥಳ ಎಂದು ಅರ್ಥೈಸಿದ್ದಾರೆ.[೧೦] ಇದರಿಂದ ಬೃಹತ್ ಶಿಲಾಯುಗ ಕಾಲದಲ್ಲೆ ಬಂಡಿಗಳ ಬಳಕೆ ಇಲ್ಲಿ ವ್ಯಾಪಕವಾಗಿತ್ತೆಂದು ತಿಳಿಯುತ್ತದೆ. ಸನ್ನತಿಯ ಉತ್ಖನನದಲ್ಲಿ ಪತ್ತೆಯಾದ ಶಿಲಾ ಫಲಕಗಳ ಮೇಲೆ ಬಂಡಿಯ ಉಬ್ಬು ಶಿಲ್ಪಗಳಿದ್ದು[೧೧] ಬಹುಶಃ ಅವುಗಳೇ ದಕ್ಷಿಣ ಭಾರತದ ಚಾರಿತ್ರಿಕ ಯುಗಕ್ಕೆ ಸೇರಿದ ಅತ್ಯಂತ ಪ್ರಾಚೀನ ಎತ್ತಿನ ಬಂಡಿಯ ಶಿಲ್ಪಗಳಾಗಿವೆ. ನಂತರ ದೇವಾಲಯಗಳ ಭಿತ್ತಿ ಶಿಲ್ಪಗಳಾಗಿ ಬಂಡಿಯ ಶಿಲ್ಪಗಳು ಕಂಡು ಬರುತ್ತವೆ.

ಪುನ್ನಾಟದ ಪುರಾತನ ಬಂಡಿ

ಪುನ್ನಾಟದ ಪುರಾತನ ಬಂಡಿ ಸುಮಾರು ಎರಡು ಅಡಿ ಎತ್ತರವಿದ್ದು ಹತ್ತು ಇಂಚು ಅಗಲವಿದೆ. ಇದನ್ನು ಕಂದು ಬಣ್ಣದ ಗ್ರಾನೈಟ್ ಶಿಲೆಯಲ್ಲಿ ರಚಿಸಲಾಗಿದೆ. ದೇವಾಲಯದ ಭಿತ್ತಿ ಶಿಲ್ಪವಾಗಿಯೋ ಅಥವಾ ಉಬ್ಬು ಶಿಲ್ಪವಾಗಿಯೋ ಇರದೆ, ಹಂಪಿಯ ರಥದ ಹಾಗೆ ಒಂದು ಸ್ವತಂತ್ರ ಶಿಲ್ಪವಾಗಿರುವುದು ಈ ಶಿಲ್ಪದ ವೈಶಿಷ್ಟ್ಯವಾಗಿದೆ. ಎತ್ತರವಾದ ಪೀಠದ ಮೇಲೆ ಎರಡು ದಷ್ಟ–ಪುಷ್ಟ ಎತ್ತುಗಳು ಗಾಡಿಯ ನೊಗವನ್ನು ಹೊತ್ತು ನಿಂತಿರುವಂತೆ ಚಿತ್ರಿಸಲಾಗಿದೆ. ಗಾಡಿಯ ಮುಂಭಾಗದಲ್ಲಿ ಗಾಡಿ ನಡೆಸುವ ವ್ಯಕ್ತಿ ಎಡಗೈಯಲ್ಲಿ ಸೂತ್ರಗಳನ್ನು ಹಿಡಿದು ಕುಳಿತುಕೊಂಡಿದ್ದಾನೆ ಬಲಗೈಯಲ್ಲಿ ಚಾವಟಿಯಿದೆ. ಬಂಡಿಯ ಎರಡೂ ಪಾರ್ಶ್ವಗಳಲ್ಲಿ ಎರಡು ಗಾಲಿಗಳಿವೆ. ಬಂಡಿಯ ಅರೆ ಸುತ್ತ ಮತ್ತೊಂದು ಗಾಲಿಯಂತಹ ರಚನೆ ಇದ್ದು, ಸರಳವಾದ ಗಾಲಿಗೆ ಸೌಂದರ್ಯವನ್ನು ಒದಗಿಸಿದೆ. ಗಾಡಿಯ ಹೊರಭಾಗದಲ್ಲಿ ಎರಡು ಅಡ್ಡ ಪಟ್ಟಿಕೆಗಳಿವೆ. ಗಾಡಿಗೆ ಕಮಾನಿನ ಮುಚ್ಚುಕೆ ಇದೆ. ಎತ್ತುಗಳ ಮುಖ ಮತ್ತು ಬಂಡಿ ಹೊಡೆವವನ ಮುಖಗಳು ಮುಕ್ಕಾಗಿವೆ ಯಾದರೂ ಅವುಗಳ ಸಹಜ ಸೌಂದರ್ಯಕ್ಕೆ ಗಾಂಭೀರ್ಯಕ್ಕೆ ಏನೂ ಧಕ್ಕೆಯಾಗಿಲ್ಲ.

ಪುನ್ನಾಟದ ಬಂಡಿಯ ಕಾಲಮಾನ

ಈ ಶಿಲ್ಪಚಿತ್ರವನ್ನು ಅವಲೋಕಿಸಿದ ಪ್ರಖ್ಯಾತ ಪುರಾತತ್ವ ವಿದ್ವಾಂಸ ಡಾ. ಅ. ಸುಂದರ ಅವರು ಇದೊಂದು ಸ್ಮಾರಕ

ಶಿಲ್ಪದಂತಿದ್ದು, ಕಾಲಮಾನದ ದೃಷ್ಟಿಯಿಂದ ವಿಜಯನಗರ ಕಾಲದ್ದಾಗಿರಬಹುದೆಂದು ಅಭಿಪ್ರಾಯ ಪಟ್ಟಿದ್ದಾರೆ. ಮತ್ತೋರ್ವ ವಿದ್ವಾಂಸರಾದ ಡಾ. ಬಿ. ರಾಜಶೇಖರಪ್ಪನವರು, ಸುಮಾರು ೧೦ನೇ ಶತಮಾನದ ಶಿಲ್ಪವೆಂದು ಅಭಿಪ್ರಾಯಪಟ್ಟಿದ್ದಾರೆ. ಆದರೆ ನನ್ನ ಪ್ರಕಾರ ಇದು ಸುಮಾರು ೭ನೇ ಶತಮಾನದ ಶಿಲ್ಪವಾಗಿದೆ. ಕಾಲದ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯವಿದ್ದರೂ ಖಂಡಿತ ಇದೊಂದು ಅಪರೂಪದ ಶಿಲ್ಪವೆನ್ನುವುದರಲ್ಲಿ ಎರಡು ಮಾತಿಲ್ಲ ಎನ್ನುವುದು ವಿದ್ವಾಂಸರ ಅಭಿಪ್ರಾಯವಾಗಿದೆ.

ಪುನ್ನಾಟದ ಬಂಡಿಯ ಮಹತ್ವ

ಸು. ಕ್ರಿ.ಶ. ೬ನೇ ಶತಮಾನದ ಮಾಂಬಳ್ಳಿ ತಾಮ್ರ ಶಾಸನವು ಈ ರಾಷ್ಟ್ರವನ್ನು ಹೀಗೆ ಬಣ್ಣಿಸಿದೆ. 'ಈ ದೇಶವು ಎಮ್ಮೆ, ಆಕಳು, ಕುದುರೆಗಳಿಂದಲೂ, ಉಣ್ಣೆಯ ಬಟ್ಟೆ, ರತ್ನ, ಬಂಗಾರ, ಬೆಳ್ಳಿ, ಮುತ್ತು, ಹವಳಗಳ ಸಂಪತ್ತುಳ್ಳ ಜನರಿಂದಲೂ ಬಹು ಶೋಭಾಯಮಾನವಾಗಿತ್ತು. ಭತ್ತ, ಗೋಧಿ, ಜವೆಗೋಧಿ, ರಾಡಾಕ(?) (ಇದು ರಾಗಿಯಾಗಿರಬಹುದೇ?) ಗಳು ಪ್ರತಿವರ್ಷವೂ ಹುಲುಸಾಗಿ ಬೆಳೆಯುತ್ತಿದ್ದವು. ಜನರು ತಮ್ಮ ನಿತ್ಯ ಜೀವನದಲ್ಲಿ ವಿವಾಹ, ಉತ್ಸವ, ನರ್ತನಾದಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಆನಂದಗೊಳ್ಳುತ್ತಿದ್ದರು. ಬಾಳೆ, ಅಡಕೆ, ತೆಂಗು, ಕಬ್ಬು, ಹಲಸು, ಸಂಪಿಗೆ, ಪೀಳ್ಯದೆಲೆ, ಬಕುಲ, ಅಶೋಕ, ಪುನ್ನಾಗ, ಮೊದಲಾದ ಗಿಡಬಳ್ಳಿಗಳುಳ್ಳ ತೋಟಗಳಿಂದ ಕಂಗೊಳಿಸುವ ತಟಗಳುಳ್ಳ ಕಾವೇರಿ, ಕಪಿನೀ ನದಿಗಳಿಂದ ಆಲಂಕೃತವಾಗಿತ್ತು ಮತ್ತು ವಿದೇಹ ದೇಶದಂತೆ ಸೊಬಗಿನ ಬೀಡಾಗಿ ಶೋಭಿಸುತ್ತಿತ್ತು ಎಂದು ತಿಳಿಸಿದೆ'.[೧೨] ಅದೇ ಶಾಸನದ ೧೯ನೇ ಸಾಲಿನಲ್ಲಿ, "ವ್ಯಾಪಾರೋರ್ಜಿತ ದಕ್ಷಿಣ ಭುಜಃ" ಎಂದೂ, ಮುಂದುವರೆದು "ವ್ಯಾಪಾರ ರತಾಪ ಘನ ಭುಜಃ ಅಪ್ರತಿಹತ" ನೆಂದು ವರ್ಣಿಸಲಾಗಿದೆ[೧೩] ಶಾಸನೋಕ್ತ ವಿವರಗಳಿಂದ ಪುನ್ನಾಟವು ಕೃಷಿ, ಪಶುಪಾಲನೆ, ಗಣಿಗಾರಿಕೆ ಮತ್ತು ವಾಣಿಜ್ಯಾಧಾರಿತ ಆರ್ಥಿಕತೆಯನ್ನು ಹೊಂದಿದ್ದ ಸಂಪದ್ಭರಿತ ದೇಶವಾಗಿತ್ತು ಎನ್ನುವುದು ಸ್ಪಷ್ಟವಾಗುತ್ತದೆ. ವಾಣಿಜ್ಯ ಮತ್ತು ಕೃಷಿಯಲ್ಲಿ ಮುಂಚೂಣಿಯಲ್ಲಿದ್ದ ದೇಶವೊಂದರ ಪ್ರಮುಖ ಸಾಧನವೆಂದರೆ ಬಂಡಿ, ಅಂತಹ ಬಂಡಿಯನ್ನು ಸ್ವತಂತ್ರ ಶಿಲ್ಪವೊಂದರಲ್ಲಿ ಅಭಿವ್ಯಕ್ತಗೊಳಿಸಿರುವುದು ಅಸಹಜ ಸಂಗತಿಯೇನಲ್ಲ. ಈ ಹಿನ್ನೆಲೆಯಲ್ಲಿ ಈ ಬಂಡಿ ಶಿಲ್ಪ ಸುಮಾರು ೬-೭ನೇ ಶತಮಾನದ್ದಾಗಿರಬೇಕೆನಿಸುತ್ತದೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. *Epigraphia Carnatica*, Vol, IV: No, 167(XIV yalm 175), Pp. 367-369, Institute of Kannada Studies, Mysore University. 1975.

೨. Prof. T. Murugeshi: Ancient Sculpture of A Bullock Cart Discovered: *The Hindu*, 08-11-2011.

೩. *Kannada vishaya vishvakosa:* itihasa mattu puratatva shastra: Kuvempu Kannada Adhyana Samsthe: Mysore University, PP. 599-600. 2009.

೪. Ibid. Pp. 599-600. 2009.

೫. Nagaraj Rao M.S.: Signi ficance of Pottery Head Rest from Neolithic Sites of Karnataka. Pp. 141-148. *Studies in Indian Archaeology*, Ed by S.B. Deo and M.K. Dhavalikar. Dr. H.D. Sankalia Felicitation Volume. Bomby, 1985

೬ *A.R. of Archaeological Department: 1989*, Pp. Xxii.

೭. Ibid. Pp. 599-600. 2009.

೮. Rao S.R.: *Further Excavations at Lothal*, Lalit Kala, No. 11, April, 1962: Pp. 14-30. Pl, XVI, Fig, 52.

೯. D.P. Agrawal: 1984: *The Archaeology of India*, Pp. 241, New Delhi.

೧೦. Dr. A. Sundara: *Menhirs in Mid – Western Karnataka :* Further Notices.

೧೧. Devaraj D.V. and Talwar H.T.: *Interim Report on the Excavations at Sannati*. 1993-95: Pp. 13 Directorate of Archaeology and Museums, Mysore. 1996.

೧೨. Usha Rani: Punnataru – Ondu Charitrika Vishleshane. Pp 35 *Itihasa Darpana* (quarterly) Book 11, October-December-2011.

೧೩. Ibid. Vol. IV: No, 167, Pp. 367-369, 1975.

೫೦

ಚಿತ್ರದುರ್ಗ ಜಿಲ್ಲೆಯಲ್ಲಿ ರಾಷ್ಟ್ರಕೂಟರ ಕಾಲದ ಸ್ಮಾರಕ ಶಿಲ್ಪಗಳು

ಡಾ. ಬಿ. ಜಯಮ್ಮ*

ಸ್ಮಾರಕ ಶಿಲ್ಪಗಳ ಇತಿಹಾಸದಲ್ಲಿ ರಾಷ್ಟ್ರಕೂಟರ ಕಾಲ ತುಂಬಾ ಪ್ರಮುಖವಾದ ಕಾಲಘಟ್ಟ. ಕಾರಣ ಈ ಕಾಲಾವಧಿಯಲ್ಲಿ ಸ್ಮಾರಕ ಶಿಲ್ಪಕಲೆ ತುಂಬಾ ವಿಶೇಷವಾಗಿ ಬೆಳೆದು ಬಂದಿದ್ದನ್ನು ನಾವು ಗಮನಿಸುತ್ತೇವೆ. ಇಲ್ಲಿ ಶಿಲ್ಪಗಳಿಗೆ ಹೆಚ್ಚಿನ ಒತ್ತು ನೀಡಿದ್ದು, ಶಿಲ್ಪಗಳ ರಚನೆ ಪ್ರಮಾಣಬದ್ಧವಾಗಿರುವುದನ್ನು ಕಾಣುತ್ತೇವೆ. ಅಲ್ಲದೆ ಇಲ್ಲಿ ಕಾಣುವ ದೃಶ್ಯಗಳು ಅರ್ಥಗರ್ಭಿತವಾಗಿರುತ್ತವೆ. ಉದಾಹರಣೆಗೆ ಶಿಲ್ಪದ ಮೊದಲ ಹಂತ ಗೋಗ್ರಹಣದ್ದಾಗಿದ್ದರೆ ಗೋವುಗಳನ್ನು ತೋರಿಸುವುದು ಸ್ತ್ರೀ ರಕ್ಷಣೆಗಾಗಿ ಆಗಿದ್ದರೆ ಸ್ತ್ರೀಯರನ್ನು ತೋರಿಸುವುದು. ಹುಲಿಬೇಟೆಯದ್ದಾಗಿದ್ದರೆ ಹುಲಿಯನ್ನು ತೋರಿಸುವುದು, ಇತ್ಯಾದಿ. ಅದೇ ರೀತಿ ಎರಡನೇ ಹಂತದಲ್ಲಿ ಸಾಕಷ್ಟು ಕಡೆ ವಾದ್ಯ ಮೇಳದವರನ್ನು ತೋರಿಸಿರುವರು. ಈ ರೀತಿಯಾಗಿ ದೃಶ್ಯ ತೋರ್ಪಡೆ ಅರ್ಥಪೂರ್ಣವಾಗಿರುತ್ತದೆ. ಮೂರನೇ ದೃಶ್ಯದಲ್ಲಿ ದೇವರುಗಳನ್ನು ತೋರಿಸುವ ಪರಿಪಾಠವಿಲ್ಲದೆ ವೀರನನ್ನು ಪೀಠದ ಮೇಲೆ ತೋರಿಸಿ ಬದಿಗಳಲ್ಲಿ ಚಾಮರ ಧಾರಿಯರನ್ನು ಚಿತ್ರಿಸಿರುತ್ತಾರೆ.

ಈ ರೀತಿಯ ಅಥವಾ ಈ ಕಾಲಘಟ್ಟಕ್ಕೆ ಸೇರಿದ ಸ್ಮಾರಕ ಶಿಲ್ಪಗಳನ್ನು ಪ್ರಸ್ತುತ ಚಿತ್ರದುರ್ಗ ಪ್ರದೇಶದಲ್ಲಿ ಅತೀ ಹೆಚ್ಚಾಗಿ ಗೋಚರಿಸಿರುವವು.

ಪ್ರಸ್ತುತ ಅಧ್ಯಯನ ಪ್ರದೇಶದ ಚಳ್ಳಕೆರೆ ತಾಲ್ಲೂಕಿನ ಚಿಕ್ಕಮಧುರೆ-೫, ದೊಡ್ಡಉಳ್ಳಾರ್ತಿ-೩, ಮಹದೇವಪುರ, ತಳಕು ಮುಂತಾದ ಕಡೆ ಈ ಕಾಲಘಟ್ಟದ ಸ್ಮಾರಕ ಶಿಲ್ಪಗಳು ಕಾಣಬರುತ್ತವೆ. (ಈಗಾಗಲೇ ಇವುಗಳನ್ನು ಪ್ರಸ್ತುತ ಲೇಖಕರು ಇತಿಹಾಸ ದರ್ಶನದ ವಿವಿಧ ಸಂಪುಟದಲ್ಲಿ ಪ್ರಕಟಿಸಿರುವರು) ಉಳಿದಂತೆ ಬೈರಾಪುರ (ಮೊಳಕಾಲ್ಮೂರು ತಾ.) ಗೊಡಬನಹಾಳ್-೪, ಕೂನಬೇವು-೨, ಜಾನಕೊಂಡ (ಚಿತ್ರದುರ್ಗ ತಾ.), ಧರ್ಮಪುರ-೩, ಹಿರಿಯೂರು ಅರಳೀಕೆರೆ, ತವಂದಿ (ಹಿರಿಯೂರು ತಾ.) ಮುಂತಾದ ಕಡೆ ಈ ಕಾಲದ ಸ್ಮಾರಕ ಶಿಲ್ಪಗಳನ್ನು ನೋಡಬಹುದು.

ಬೈರಾಪುರದಲ್ಲಿಯ ಶಿಲ್ಪ ಅಪರೂಪ ಹಾಗೂ



ಮಹತ್ವದ್ದಾಗಿದೆ. ಶಿಲ್ಪದ ಎಡಬದಿಯಲ್ಲಿ ವೀರ ತನ್ನ ಎರಡೂ ಕೈಗಳನ್ನು ಮೇಲಕ್ಕೆತ್ತಿ ಯಾವುದೋ ವಸ್ತು ಹಿಡಿದಿರುವನು ಪ್ರಾಯಶಃ ಹಗ್ಗ ಅಥವಾ ಕೋಲು ಇರಬಹುದು. ಎಡಬದಿಯ ದೃಶ್ಯದಲ್ಲಿ ಎರಡು ಉದ್ದನೆಯ ಸ್ಥಂಭಗಳ ಮಧ್ಯೆ ಬೆಂಕಿಯ ಜ್ವಾಲೆ ಉರಿಯುತ್ತಿದೆ. ಉರಿಯುತ್ತಿರುವ ಜ್ವಾಲೆಯ ಮೇಲೆ ವೀರನು ತೂಗುಯ್ಯಾಲೆಯಲ್ಲಿ ಕುಳಿತಿರುವನು. ಅಂದರೆ ವೀರ ಇಲ್ಲಿ ಬೆಂಕಿಯ ಕೆನ್ನಾಲಗೆಗೆ ತನ್ನನ್ನು ತಾನು ಅರ್ಪಿಸಿಕೊಳ್ಳುತ್ತಿರುವಂತೆ ಕಾಣುತ್ತಿದೆ.

ಮೇಲಿನ ದೃಶ್ಯದಲ್ಲಿ ವೀರ ಪೀಠದ ಮೇಲೆ ಕುಳಿತಿರುವನು. ಬದಿಗಳಲ್ಲಿ ಚಾಮರಧಾರಿಯರಿರುವರು. ಇದೊಂದು ಅತ್ಮಬಲಿಯಾಗಿದ್ದು, ವೀರನು ಬೆಂಕಿಗೆ ಆಹುತಿಯಾಗುತ್ತಿರುವುದನ್ನು ತೋರಿಸಲಾಗಿದೆ. ಈ ರೀತಿಯ ಶಿಲ್ಪ ಅಪರೂಪವೇ ಸರಿ. ಹಾಗಾಗಿ ಇದೊಂದು ಮಹತ್ವದ್ದಾಗಿದೆ. ಗೊಡಬನಹಾಳ್ ಗ್ರಾಮದಲ್ಲಿ ಕಾಣಿಸಿರುವ ಮೂರು

* ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಕಲಾ ಕಾಲೇಜು, ಚಿತ್ರದುರ್ಗ-೫೭೭೫೦೧.



ವೀರಗಲ್ಲುಗಳು ಗೋಗ್ರಹಕರದ್ದಾಗಿವೆ. ಪ್ರತಿಯೊಂದು ಮೂರು ಹಂತಗಳಲ್ಲಿವೆ. ಮೂರು ಶಿಲ್ಪಗಳ ಮೂರು ಹಂತಗಳೂ ಒಂದೇ ರೀತಿಯ ದೃಶ್ಯಗಳನ್ನು ಹೊಂದಿವೆ. ಮೊದಲ ಹಂತದಲ್ಲಿ ಕಾದಾಟದ ದೃಶ್ಯ, ಎರಡನೇ ಹಂತದಲ್ಲಿ ದೇವಲೋಕಕ್ಕೆ ಅಪ್ಸರೆಯರೊಂದಿಗೆ ಹೋಗುತ್ತಿರುವ ದೃಶ್ಯ, ಮೂರನೇ ಹಂತದಲ್ಲಿ ದೇವಲೋಕದ ಚಿತ್ರ. ಇಲ್ಲಿ ವೀರನು ಪೀಠದ ಮೇಲೆ ಕುಳಿತಿದ್ದು, ಬದಿಗಳಲ್ಲಿ ಅಪ್ಸರೆಯವರು ಇರುವರು.

ಕೂನಬೇವು ಗ್ರಾಮದ ನಾಲ್ಕು ವೀರಗಲ್ಲುಗಳು ಕೂಡ ಮೂರು ಹಂತಗಳಲ್ಲಿ ಒಂದೇ ಮಾದರಿಯ ದೃಶ್ಯಗಳನ್ನು ಹೊಂದಿವೆ. ಹೋರಾಟ, ಸ್ವರ್ಗಾರೋಹಣ, ಸ್ವರ್ಗದ ದೃಶ್ಯಗಳು. ಆದರೆ ಇಲ್ಲಿನ ಕೆಲವು ಶಿಲ್ಪಗಳು ಭಗ್ನಗೊಂಡಿವೆ.

ಜಾನುಕೊಂಡದ ಶಿಲ್ಪದಲ್ಲಿ ತೋರಿಸಲಾಗಿರುವ ವ್ಯಕ್ತಿ ಪ್ರಮುಖವಿರುವಂತೆ ಕಾಣುತ್ತದೆ. ಈತ ಉದ್ದನೆಯ ಈಟಿಯನ್ನು ಹಿಡಿದು ಕುದುರೆಯ ಮೇಲೆ ಕುಳಿತಿರುವನು. ತಲೆಯ ಮೇಲೆ ಛತ್ರಿಯನ್ನು ತೋರಿಸಲಾಗಿದೆ, ಪ್ರಾಯಶಃ ಈತ ಪ್ರಮುಖ ವ್ಯಕ್ತಿ. ಇಲ್ಲಿಯ ಒಬ್ಬ ವೀರನ ಹಿಂದೆ ನಾಯಿ ಯನ್ನು ತೋರಿಸಲಾಗಿದೆ. ಈ ಪಾತ್ರದಲ್ಲಿ ಒಡೆಯನ ಜೊತೆ ನಾಯಿಯೂ ಯುದ್ಧ ಅಥವಾ ಕಾದಾಟದಲ್ಲಿ ಸಹಾಯ ಮಾಡತ್ತಿತ್ತು ಎಂಬುದು ಇದರರ್ಥ. ಒಟ್ಟಾರೆ ಇದೊಂದು ಗೋಗ್ರಹಣವಾಗಿದ್ದು ರಾಷ್ಟ್ರಕೂಟರ ಕಾಲದ್ದಾಗಿದೆ.

ಧರ್ಮಪುರದ ಮೂರು ಸ್ಮಾರಕ ಶಿಲ್ಪಗಳು ಮೂರು ಹಂತಗಳಲ್ಲಿವೆ. ಹೆಚ್ಚೂ ಕಡಿಮೆ ಈ ಮೂರು ಶಿಲ್ಪಗಳ ದೃಶ್ಯಗಳೂ ಒಂದೇ ಮಾದರಿಯಲ್ಲಿವೆ. ಕೆಳಗಿನ ಹಂತ ಯುದ್ಧದ ದೃಶ್ಯ, ಮೇಲಿನ ಹಂತದಲ್ಲಿ ಸ್ವರ್ಗಕ್ಕೆ ಕರೆದೊಯ್ಯುತ್ತಿರುವುದು, ಮೂರನೇ ಹಂತದಲ್ಲಿ ದೇವಲೋಕದ ಚಿತ್ರಣ. ಈ ಶಿಲ್ಪಗಳು ಸು. ಕ್ರಿಶ. ೧೦-೧೧ನೇ ಶತಮಾನಕ್ಕೆ ಸೇರಿದವುಗಳಾಗಿವೆ.

ಹಿರಿಯೂರಿನ ವೀರಗಲ್ಲು ಹುಲಿಬೇಟೆಯದ್ದಾಗಿದೆ. ಶಿಲ್ಪದಲ್ಲಿ ವೀರ ಹಾಗೂ ಹುಲಿಯನ್ನು ಒಂದೇ ಎತ್ತರದಲ್ಲಿ ತೋರಿಸಲಾಗಿದೆ. ಹುಲಿ ತನ್ನ ಮುಂದಿನ ಎರಡೂ ಕಾಲುಗಳನ್ನು ಮೇಲಕ್ಕೆತ್ತಿ ವೀರನತ್ತ ಜಿಗಿಯುತ್ತಿರುವಂತಿದೆ. ಒಟ್ಟಾರೆ ವೀರ-ಹುಲಿ ಇಬ್ಬರು ವೀರಾವೇಶದಿಂದ ಹೋರಾಡುತ್ತಿರುವರು.



ಅರಳೀ ಕಟ್ಟೆಯ ವೀರಗಲ್ಲು ಸಹ ಹುಲಿಬೇಟೆಯದ್ದಾಗಿದೆ. ಹುಲಿಯು ತನ್ನ ಮುಂದಿನ ಎರಡೂ ಕಾಲುಗಳಿಂದ ವೀರನನ್ನು ಬೆದರಿಸುತ್ತಿರುವಂತಿದೆ. ವೀರ ಸಹ ತನ್ನ ಕೈಗಳಿಂದ ಹುಲಿಯನ್ನು ಹಿಂದಕ್ಕೆ ತಳ್ಳುತ್ತಿರುವನು. ಎರಡನೇ ಹಂತದಲ್ಲಿ ಅಪ್ಸರೆಯರು ವೀರನನ್ನು ದೇವಲೋಕಕ್ಕೆ ಕರೆದೊಯ್ಯುತ್ತಿರುವರು. ಮೂರನೇ ಹಂತದಲ್ಲಿ ವೀರ ಶಿವಲಿಂಗಕ್ಕೆ ಕೈ ಮುಗಿದು ನಿಂತಿರುವನು. ತವಂದಿಯ ಸ್ಮಾರಕ ಶಿಲ್ಪವು ಚಿತ್ರದುರ್ಗ ಜಿಲ್ಲೆಯ ಸ್ಮಾರಕಶಿಲ್ಪಗಳಲ್ಲಿಯೇ ಅತಿ ಪ್ರಮುಖವಾದದ್ದಾಗಿದೆ. ಈ ಶಿಲ್ಪವನ್ನು ಈಗಾಗಲೇ ಯಶೋಧ ರಾಜಶೇಖರಪ್ಪ ಅವರು ಇತಿಹಾಸ ದರ್ಶನ ಸಂಪುಟದಲ್ಲಿಯೇ ಪ್ರಕಟಿಸಿರುವರು. ಈ ರೀತಿಯಾಗಿ ಚಿತ್ರದುರ್ಗ ಜಿಲ್ಲೆಯಲ್ಲಿ ರಾಷ್ಟ್ರಕೂಟ ಕಾಲದ ವಿಭಿನ್ನ ಮಾದರಿಯ ಸ್ಮಾರಕ ಶಿಲ್ಪಗಳು ಈ ಕಾಲಾವಧಿಯಲ್ಲಿ ಗೋಚರಿಸಿವೆ.

ಆಧಾರಸೂಚಿ

೧. ಶೇಷಶಾಸ್ತ್ರಿ ಆರ್., ಕರ್ನಾಟಕ ವೀರಗಲ್ಲುಗಳು.
೨. ಚಿತ್ರದುರ್ಗ ಜಿಲ್ಲಾ ಗ್ಯಾಜೆಟಿಯರ್.
೩. ಇತಿಹಾಸ ದರ್ಶನ, ಸಂಪುಟ ೨೬.
೪. ಕ್ಷೇತ್ರಕಾರ್ಯ ಮಾಹಿತಿ.

೫೧

ಗುರುಪುರ (ಪುರಲೆ) ವೀರಸೋಮೇಶ್ವರ ದೇವಾಲಯ : ಒಂದು ಟಿಪ್ಪಣಿ

ಡಾ. ಬಾಲಕೃಷ್ಣ ಹೆಗಡೆ*

ಶಿವಮೊಗ್ಗ ಕರ್ನಾಟಕದಲ್ಲಿ ಪ್ರಾಚೀನ ದೇವಾಲಯಗಳ ಶ್ರೀಮಂತಿಕೆಯನ್ನು ಹೊಂದಿದ ಪ್ರಮುಖ ಪ್ರದೇಶಗಳಲ್ಲೊಂದು. ಈ ಪ್ರದೇಶವು ಚಾಲುಕ್ಯ ಕಾಲದಿಂದಲೂ ಬೇರೆ ಬೇರೆ ರಾಜ ಸಂತತಿಗಳ ಆಳ್ವಿಕೆಗಳ ವಿವಿಧ ವಾಸ್ತು ಶೈಲಿಗಳನ್ನೊಳಗೊಂಡ ಅನೇಕ ದೇವಾಲಯಗಳನ್ನು ಹೊಂದಿದ ಪ್ರದೇಶವಾಗಿದೆ. ಕೆಲ ದೇವಾಲಯಗಳು ಸ್ವತ: ಆಳರಸರಿಂದಲೇ ನಿರ್ಮಿತವಾಗಿದ್ದರೆ ಇನ್ನು ಕೆಲವು ಅವರ ಸಾಮಂತರ, ಮಾಂಡಲೀಕರ, ಅಂದಿನ ಕಾಲದ ವರ್ತಕರ ಮತ್ತು ವ್ಯಕ್ತಿಗತವಾಗಿ ಧರ್ಮದ ಬಗ್ಗೆ ಶ್ರದ್ಧಾ-ಭಕ್ತಿಯುಳ್ಳವರಿಂದ ನಿರ್ಮಿತ ದೇವಾಲಯಗಳು ಈ ಪ್ರದೇಶದಲ್ಲಿವೆ. ಇವುಗಳಲ್ಲಿ ಹೆಚ್ಚಿನವು ಜೈನ, ಶೈವ, ವೀರಶೈವ ಹಾಗೂ ಅಪರೂಪಕ್ಕೆ ಶಾಕ್ತ ದೇವಾಲಯಗಳು ಕಂಡುಬರುತ್ತವೆ.

ಬಹುತೇಕ ಜೈನ ಬಸದಿಗಳು, ವೈಷ್ಣವ ದೇವಾಲಯಗಳು ಕಾಲಾನಂತರದಲ್ಲಿ ಅಂದಿನ ಪ್ರಸಿದ್ಧ ಅರಸರು, ಅವರ ಅಧಿಕಾರಿಗಳ ಪ್ರಭಾವಗಳಿಂದ ಶೈವ ದೇವಾಲಯಗಳಾಗಿ ಮಾರ್ಪಟ್ಟಿದ್ದನ್ನೂ ಇಲ್ಲಿ ಕಾಣುತ್ತೇವೆ. ಇಂಥಹ ದೇವಾಲಯಗಳ ವಾಸ್ತು ಶೈಲಿಯನ್ನು, ಅಲ್ಲಿ ಕಂಡುಬರುವ ವಾಸ್ತು ಲಕ್ಷಣಗಳನ್ನು ಅತ್ಯಂತ ಸೂಕ್ಷ್ಮವಾಗಿ ಅವಲೋಕಿಸಿದಾಗ ಮಾತ್ರ ಆ ದೇವಾಲಯಗಳ ಮೂಲಗಳ ಕುರಿತು ಮಾಹಿತಿ ದೊರಕುತ್ತದೆ.



ವಾಸ್ತು ವಿನ್ಯಾಸದ ಪ್ರಕಾರ, ದೇವಾಲಯಗಳ ತಲವಿನ್ಯಾಸ, ಸಾಮಾನ್ಯವಾಗಿ ಎಲಿವೇಶನಲ್ ಸಂಗತಿಗಳು, ಬೇರೆ ಬೇರೆ ಪಂಥಗಳಿಗೆ ಸಂಬಂಧಿಸಿದ ದೇವಾಲಯಗಳು, ಬೇರೆ ಬೇರೆ ಕಾಲಘಟ್ಟಕ್ಕೆ ಸೇರಿದವುಗಳು ಹೆಚ್ಚು ಕಡಿಮೆ ಒಂದೇ ತರನಾಗಿ ಕಂಡುಬರುತ್ತವೆ. ಮಾರ್ಪಾಡುಗೊಂಡ ದೇವಾಲಯಗಳ ಭಿತ್ತಿಗಳ ಮೇಲಿರುವ ಕೇವಲ ಶಿಲ್ಪಗಳ ಅಭಿವ್ಯಕ್ತಿ, ದ್ವಾರಪಾಲಕರ ಕೆತ್ತನೆಗಳು, ಲಲಾಟಬಿಂಬಗಳಲ್ಲಿನ ಚಿಕಣಿ ಶಿಲ್ಪ ಮೊದಲಾದವು ಆ ದೇವಾಲಯ ಮೂಲತಃ ಯಾವ ಪಂಥಕ್ಕೆ ಅಥವಾ ಧರ್ಮಕ್ಕೆ ಸೇರಿದ್ದು ಎಂಬುದನ್ನು ತಿಳಿಸುವುದೂ ವಿಶೇಷವಾಗಿದೆ.

ಶಿವಮೊಗ್ಗ ಪ್ರದೇಶದಲ್ಲಿ ಅಂಥ ಲಕ್ಷಣಗಳನ್ನು ಹೊಂದಿದ ಕೆಲ ಜೈನ ಬಸದಿಗಳಿವೆ. ವಾಸ್ತು ಶೈಲಿಯ ಪ್ರಕಾರ ಅವು ತಮ್ಮದೇ ಆದ ಕೆಲ ವೈಶಿಷ್ಟ್ಯತೆಗಳನ್ನು ಹೊಂದಿವೆ. ಒಂದು ಕಾಲದಲ್ಲಿ ದೇವಾಲಯ ವಾಸ್ತು ಶೈಲಿಯ ಬೆಳವಣಿಗೆಗೆ ಈ ಜೈನ ದೇವಾಲಯಗಳು ಮಹತ್ತರ ಕೊಡುಗೆ ನೀಡಿದ್ದೂ ಕಂಡುಬರುತ್ತದೆ. ಅಂಥಹ ದೇವಾಲಯಗಳಲ್ಲಿ ಶಿವಮೊಗ್ಗ ಗುರುಪುರ (ಪುರಲೆ)ದಲ್ಲಿರುವ ಶ್ರೀ ವೀರಸೋಮೇಶ್ವರ ದೇವಾಲಯ ಒಂದು.

ಈ ದೇವಾಲಯದ ವಾಸ್ತು ಶೈಲಿ, ಅದರಲ್ಲಿನ ಮೂಲ ಕೆತ್ತನೆ ಇತ್ಯಾದಿಗಳನ್ನು ಅವಲೋಕಿಸಿದಾಗ ಮೂಲತ: ಇದೊಂದು ಜೈನ ಬಸದಿಯಾಗಿದ್ದು ಹೊಯ್ಸಳ ಕಾಲಕ್ಕೆ ಸೇರಿದ್ದಾಗಿರುವುದಾಗಿ ತಿಳಿದು ಬರುತ್ತದೆ. ದೇವಾಲಯದ ಗರ್ಭಗೃಹದಲ್ಲಿರುವ ಕಪ್ಪು ಶಿಲೆಯ ಉದ್ದನೆ ಪಾಣಿ ಪೀಠದ ಆಕಾರ ಬಹುಶಃ ಅದು ಜೈನ ವಿಗ್ರಹವನ್ನು ಪ್ರತಿಷ್ಠಾಪಿಸಲು ಮಾಡಿದ್ದಿರಬಹುದೆಂದು ತೋರುತ್ತದೆ. ಸಾಮಾನ್ಯವಾಗಿ ಇಂಥ ಪೀಠಗಳು ಶಿವಲಿಂಗ ಸ್ಥಾಪಿಸಲು ಬಳಸಲಾಗುವುದಿಲ್ಲ ಎಂಬ ಪ್ರತೀತಿ ಇದೆ. ಈ ಪೀಠದ ಮೇಲೆ ಹತ್ತು ಸಾಲಿನ ಶಾಸನವಿದ್ದು ಕ್ರಿ.ಶ. ೧೧-೧೨ನೇ ಶತಮಾನದ ಹಳೆಗನ್ನಡ ಭಾಷೆಯಲ್ಲಿದೆ.

* ಇತಿಹಾಸ ವಿಭಾಗ, ಕಮಲಾ ನೆಹರು ಸ್ಮಾರಕ ರಾಷ್ಟ್ರೀಯ ಮಹಿಳಾ ಕಾಲೇಜು, ಶಿವಮೊಗ್ಗ-೫೭೭ ೨೦೧.

ಈ ಶಾಸನದ ವೀರ ಬಲ್ಲಾಳ, ನೇಮಿಚಂದ್ರ ಭಟ್ಟಾರಕ ದೇವರು, ನಾಬು ಪ್ರಭು ಇತ್ಯಾದಿ ಶಬ್ದಗಳು ಗಮನ ಸೆಳೆಯುತ್ತವೆ. ಹೊಯ್ಸಳ ಅರಸು 'ತ್ರಿಭುವನಮಲ್ಲ' ಎಂಬ ಬಿರುದನ್ನು ಹೊಂದಿದ ವೀರ ಬಲ್ಲಾಳ ಜೈನ ದೇವಾಲಯ ಗಳಿಗೆ ಹೆಚ್ಚಿನ ದಾನ ನೀಡಿದ್ದನ್ನು ಉಲ್ಲೇಖಿಸಬಹುದು. ಈತ ಕೇವಲ ತನ್ನ ರಾಜಧಾನಿಯಲ್ಲಷ್ಟೇ ಅಲ್ಲ ರಾಜಧಾನಿಯ ಹೊರಗೂ ಅನೇಕ ಜೈನ ದೇವಾಲಯಗಳನ್ನು ನಿರ್ಮಿಸಿದ್ದ.

ಈ ದೇವಾಲಯದ ಇನ್ನೊಂದು ವೈಶಿಷ್ಟ್ಯವೆಂದರೆ ದೇವಾಲಯದ ಅಧಿಷ್ಠಾನದಲ್ಲಿ ಹೊಯ್ಸಳ ವಾಸ್ತು ಶೈಲಿಯಲ್ಲಿ ಕಂಡುಬರುವ 'ಭದ್ರ' 'ಕರಣ'ಗಳು ಕಂಡುಬರುತ್ತವೆ. ದೇವಾಲಯವು ಚೌಕಾಕಾರದ ಗರ್ಭಗೃಹ ಹೊಂದಿದ್ದು ಚೌಕಾಕರದ ಅಂತರಾಳವನ್ನೂ ಹೊಂದಿದೆ. ಮೊದಲು ದೇವಾಲಯಕ್ಕೆ ಮುಖ ಮಂಟಪವಿತ್ತು. ಆದರೆ ಈಗ ಅದು ಇಲ್ಲ. ಮುಖಮಂಟಪದ ಕಂಬ ಇತ್ಯಾದಿಗಳನ್ನು ಶಿವಮೊಗ್ಗ ಕೋಟೆ ಆಂಜನೇಯ ದೇವಸ್ಥಾನಕ್ಕೆ ಸ್ಥಳಾಂತರಿಸಿ ಅಲ್ಲಿ ಮುಖ ಮಂಟಪ ನಿರ್ಮಿಸಲಾಗಿದೆ ಎಂದು ಹೇಳಲಾಗುತ್ತಿದೆ.

ಅಲ್ಲಿನ ತಿರುಗುಣಿ ಸ್ಥಂಭವೊಂದರ ಪೀಠದಲ್ಲಿರುವ ಶಾಸನವನ್ನು ಡಾ. ಎಚ್.ಆರ್. ರಘುನಾಥ ಭಟ್ಟ ಅವರು ಓದಿದ್ದು ಅದು ಹೊಯ್ಸಳ ಕಾಲಕ್ಕೆ ಸೇರಿದ್ದೆಂದೂ ಜೈನ ಧರ್ಮದ ಬಗ್ಗೆ ಮಾಹಿತಿ ಇದೆ ಎಂದೂ ತಮ್ಮ ವರದಿಯಲ್ಲಿ ಪ್ರಕಟಿಸಿದ್ದಾರೆ. ಕೆಳದಿ ಅರಸರು ಶೈವ ಧರ್ಮಾವಲಂಬಿ ಗಳಾಗಿದ್ದು ಪುರಲೆಯಲ್ಲಿದ್ದ ಈ ತಿರುಗುಣಿ (Lathed) ಕಂಬ ಗಳನ್ನು ಕೋಟೆ ಆಂಜನೇಯ ದೇವಸ್ಥಾನದಲ್ಲಿ ತಂದಿರಿಸಿದ್ದಿರ ಬಹುದೆಂದು ನಂಬಲಾಗಿದೆ.

ಪುರಲೆ ದೇವಾಲಯದ ಈಗಿನ ಅಂತರಾಳದ ಲಲಾಟ ಬಿಂಬದಲ್ಲಿನ ಚಿತ್ರಗಳು ಜೈನದಿಂದ ಶೈವಕ್ಕೆ ಮಾರ್ಪಾಟು ಹೊಂದಿದ್ದನ್ನು ಕಾಣುತ್ತೇವೆ. ಕುಳಿತ ಭಂಗಿಯಲ್ಲಿನ ಜೈನ ತೀರ್ಥಂಕರ ವಿಗ್ರಹವನ್ನು ಪರಿವರ್ತಿಸಿ 'ನಾಗ ಲಿಂಗ' ಶಿಲ್ಪ ವನ್ನಾಗಿಸಿದ್ದಾರೆ. ಗರ್ಭಗೃಹದ ಪಾಣಿ ಪೀಠದಲ್ಲಿ ಶಿವ ಲಿಂಗ ಪ್ರತಿಷ್ಠಾಪಿಸಲಾಗಿದೆ. ಕೋಟೆ ಶ್ರೀ ಆಂಜನೇಯ ದೇವಾಲಯದ ಗರ್ಭಗೃಹದ ಲಲಾಟಬಿಂಬದಲ್ಲೂ ಜೈನ ತೀರ್ಥಂಕರ ವಿಗ್ರಹದ ಜಾಗದಲ್ಲಿ ಶಿವಲಿಂಗ ಕಾಣುತ್ತೇವೆ.

ವೀರ ಸೋಮೇಶ್ವರ ದೇವಾಲಯದ ಹಿಂಭಾಗದಲ್ಲಿ ನಿಂತ ಭಂಗಿಯಲ್ಲಿರುವ ಬಳಪದ ಶಿಲೆಯ ಮೂರು ಭಗ್ನ ಜೈನ ವಿಗ್ರಹಗಳಿದ್ದು, ಇವು ಹೊಯ್ಸಳ ಶಿಲ್ಪಕಾರರಿಂದ ಕೆತ್ತಲ್ಪ ಟ್ಟಿವೆ. ದೇವಾಲಯದ ಮುಂಭಾಗದಲ್ಲಿ ಕಪ್ಪು ಶಿಲೆಯ ಪಾರ್ಶ್ವನಾಥ ವಿಗ್ರಹವೊಂದಿದೆ. ಕಾಲ ಕಾಲದಲ್ಲಿ ಈ ದೇವಾಲಯ ನಿರ್ಮಾಣದಲ್ಲಿ ಬದಲಾವಣೆಯಾಗಿದ್ದನ್ನೂ ಕಾಣುತ್ತೇವೆ.



ಹೊಸ ಶಾಸನ ಶೋಧ : ಈ ದೇವಾಲಯಕ್ಕೆ ಸಂಬಂಧಿ ಸಿದ ಪ್ರಮುಖ ವಿಷಯವೆಂದೆ ನನ್ನ ಕ್ಷೇತ್ರ ಕಾರ್ಯದಲ್ಲಿ ಪತ್ತೆ ಮಾಡಿದ 'ಜಾಲಂದ್ರ' ಶಾಸನ. ದೇವಾಲಯದ ಅಂತರಾಳದ ಬಲ ಭಾಗದ ಕಿಟಕಿಯ ಮೇಲ್ಗಡೆ ಇರುವ ಮೂರು ಸಾಲಿನ, ಒಂದು ಅಡಿ ಉದ್ದದ ಚಿಕ್ಕ ಶಾಸನ ಇದು. ಅಂತರಾಳದ ಎಡ ಭಾಗದಲ್ಲೂ ಒಂದು ಶಾಸನವಿದ್ದು ಸಂಪೂರ್ಣ ತ್ರುಟಿತಗೊಂಡಿದೆ. ಬಲಭಾಗದಲ್ಲಿರುವ 'ಜಾಲಂದ್ರ' ದಲ್ಲಿರುವ ಶಾಸನದ ಪಾಠ ಇಂತಿದೆ:

೧ ...ರರಚ್ಚರಮಿಳಕಳತ ಪ್ರವೀಣ.ಕೆಗೆ..ನಾದ
೨ ರ್ವಸಳ.ಗ್ರ ವರ.ತ್ಯಾ ಸತ್ಯವಾದಿನ..ಪ್ರ
೩ ದೆ

ಇಲ್ಲಿ ಉದ್ಭವಿಸಿರುವ ಪ್ರಶ್ನೆಗಳು

೧. ಈ ದೇವಾಲಯ ಹೊಯ್ಸಳ ತ್ರಿಕೂಟಾಚಲ ದೇವಾಲಯವಾಗಿತ್ತೆ?

೨. ಈ ದೇವಾಲಯದ ಮುಂಭಾಗದಲ್ಲಿ ತೆರೆದ ಅಂಗಳದಲ್ಲಿರಿಸಲಾಗಿರುವ ಕಪ್ಪು ಶಿಲೆಯ ಏಳು ಹೆಡೆ ಸರ್ಪ ಹೊಂದಿರುವ ಸುಪಾರ್ಶ್ವನಾಥ? ವಿಗ್ರಹ ದೇವಾಲಯದ ಗರ್ಭಗೃಹದಲ್ಲಿರುವ ಕಪ್ಪು ಶಿಲಿಯ ಪಾಣಿಪೀಠದಲ್ಲಿ ಪ್ರತಿಷ್ಠಾಪಿ ಸಲಾಗಿತ್ತೆ?

೩. ಶಾಸನದಲ್ಲಿ ಉಕ್ತವಾಗಿರುವ 'ಪ್ರವೀಣ' ಎಂಬ ಪದ ಶಿಲ್ಪಿಯದೆ? ಅಥವಾ ದೇವಾಲಯದ ವಾಸ್ತು ಶಿಲ್ಪಕಾರನ ದ್ದಾಗಿರಬಹುದೆ? ಕೊನೆಯದಾಗಿ

೪. ಶಾಸನದ ಕೊನೆಯ ಪದ 'ನಾದ' ಪದ ಯಾವು ದಾದರೂ 'ಗಣ'ಗಳಾಗಿದ್ದಿರಬಹುದೆ? ಇತ್ಯಾದಿ.

[ಒಟ್ಟಿನಲ್ಲಿ ಈ ದೇವಾಲಯದ ಸಮಗ್ರ ಮಾಹಿತಿಯನ್ನು ಅರಿಯಲು ಇದಕ್ಕೆ ಸಂಬಂಧಿಸಿದಂತೆ ಇನ್ನಷ್ಟು ಹೆಚ್ಚಿನ ಅಧ್ಯಯನ ಆಗಬೇಕಿದೆ. ಈ ಶಾಸನವನ್ನು ಓದಲು ಸಹಕರಿಸಿದ ಕರ್ನಾಟಕ ಸರ್ಕಾರದ ಪರಂಪರೆ, ಪುರಾತತ್ವ ಇಲಾಖೆಯ ಇಂಜಿನೀಯರ್ ಡಾ. ಜಗದೀಶ ಅಗಸೆಬಾಗಿಲವರ ಅವರಿಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ.]

ಆಧಾರಸೂಚಿ

೧. ಡಾ. ಅ. ಸುಂದರ, **'ಸಮ್ ಜೈನ ಟೆಂಪಲ್ಸ್ ಇನ್ ನಾರ್ಥ್ ಕರ್ನಾಟಕ ಆ್ಯಂಡ್ ಇಟ್ಸ್ ಡಿಸ್ಟಿಂಕ್ಟಿವ್ ಫೀಚರ್ಸ್.**
೨. ಎಪಿಗ್ರಾಫಿಯಾ ಕರ್ನಾಟಿಕಾ, ಸಂ. ೧. ೩, ಮೈಸೂರು ಆರ್ಕಿಯಾಲಾಜಿಕಲ್ ಸೀರಿಸ್.
೩. ನನ್ನ ಕ್ಷೇತ್ರ ಕಾರ್ಯ ಹಾಗೂ ಡಾ. ಜಗದೀಶ್ ಅಗಸೆಬಾಗಿಲವರ ಅವರ ಜತೆ ಚರ್ಚೆ.

ವೈದ್ಯನಾಥಪುರದ ವೈದ್ಯನಾಥೇಶ್ವರ ದೇವಾಲಯದ ವಿಶೇಷತೆಗಳು

ಡಾ. ಬಿ.ಸಿ. ಸುರೇಶ*

ಈ ಗ್ರಾಮವು ಮದ್ದೂರಿನಿಂದ ಆಗ್ನೇಯಕ್ಕೆ ಸುಮಾರು ಮೂರು ಕಿ.ಮೀ. ದೂರದಲ್ಲಿದೆ. ಗ್ರಾಮದ ಪೂರ್ವಭಾಗದಲ್ಲಿ ಶಿಂಷಾ ನದಿಯು ಹರಿಯುತ್ತದೆ ಈ ನದಿಯ ಬಲದಂಡೆಯ ಮೇಲೆ ಶ್ರೀ ವೈದ್ಯನಾಥೇಶ್ವರ ದೇವಾಲಯವಿದೆ.[೧] ಇದನ್ನು ತೀರ್ಥಕ್ಷೇತ್ರ ಎಂದೂ ಸಹ ಕರೆಯುತ್ತಾರೆ. ಶಿಂಷಾ ನದಿಗೆ ಕದಂಬ ಎಂಬ ಹೆಸರೂ ಇದ್ದು, ಕದಂಬ ಋಷಿಗಳ ಆಶ್ರಮ ಇಲ್ಲಿ ಇದ್ದಿತ್ತೆಂಬ ಪೌರಾಣಿಕ ಹಿನ್ನೆಲೆಯಿದೆ. 'ನಾರಸಿಂಹ ಚತುರ್ವೇದಿ ಮಂಗಲ'ವಾದ ಮದ್ದೂರಿನ ಭಾಗವಾಗಿ ಇದು ದಾಖಲಿಸಲ್ಪಟ್ಟಿದೆ.[೨] ಇಲ್ಲಿನ ತಮಿಳು ಮತ್ತು ಕನ್ನಡ ಶಾಸನಗಳಲ್ಲಿ 'ವೈಜನಾಥ'ನೆಂದು ಉಲ್ಲೇಖಿತಗೊಂಡಿರುವ ವೈದ್ಯನಾಥೇಶ್ವರ ದೇವರೆ ಈ ಕ್ಷೇತ್ರದ ಆದಿದೈವವಾಗಿರುವುದರಿಂದ ಈ ಗ್ರಾಮಕ್ಕೆ 'ವೈದ್ಯನಾಥಪುರ' ಎಂಬ ಹೆಸರು ಬಂದಿದೆ.[೩] ಆದರೆ ಕೆಲವು ಶಾಸನಗಳಲ್ಲಿ ಇದನ್ನು 'ಶಿವಪುರ' ಎಂದು ಉಲ್ಲೇಖಿಸಲಾಗಿದೆ.[೪]

ಇಲ್ಲಿ ಒಟ್ಟು ಹನ್ನೊಂದು ಶಾಸನಗಳಿವೆ. ಅವುಗಳಲ್ಲಿ ಒಂಭತ್ತು ಕನ್ನಡ ಮತ್ತು ಎರಡು ತಮಿಳು ಭಾಷೆಯಲ್ಲಿವೆ. ಇವುಗಳಲ್ಲಿ ಗಂಗ, ಚೋಳ, ಹೊಯ್ಸಳ ಹಾಗೂ ವಿಜಯನಗರ ಕಾಲದಲ್ಲಿ ವೈದ್ಯನಾಥೇಶ್ವರ ಬಿಟ್ಟ ದತ್ತಿ ದಾಖಲೆಗಳಾಗಿವೆ. ಇಲ್ಲಿಯ ವೈಜ(ದ್ಯ)ನಾಥ ದೇವಾಲಯಕ್ಕೆ ಗಂಗ ಶಿವಮಾರಸಿಂಹನು (ಒಂದನೇ ಅಥವಾ ಎರಡನೇ ಶಿವಮಾರ ಕ್ರಿ.ಶ. ೭೯೧–೮೧೯) ಹಲಗೂರನ್ನು ಸುಮಾರು ಎಂಟನೆಯ ಶತಮಾನದಲ್ಲಿ ದತ್ತಿ ಬಿಟ್ಟು ತಾಮ್ರ ಶಾಸನವನ್ನು ನೀಡಿದ್ದಾನೆ. ಈ ವಿಷಯವನ್ನು ಒಳಗೊಂಡಂತೆ ಹೊಯ್ಸಳ ವಿಷ್ಣುವರ್ಧನನು ವೈಜನಾಥ ದೇವಾಲಯವನ್ನು ನವೀಕರಿಸಿದ್ದನ್ನು ಕ್ರಿ.ಶ. ೧೧೩೨ರ ಶಾಸನವು ಉಲ್ಲೇಖಿಸಿದೆ.[೫] ಮಳವಳ್ಳಿ ತಾಲ್ಲೂಕಿನ ಕೊನ್ನಾಪುರದ ಕ್ರಿ.ಶ. ೧೧೩೨ರ ಶಾಸನವು ಸಹ ಈ ವಿಷಯವನ್ನು ಉಲ್ಲೇಖಿಸುತ್ತದೆ.[೬] ಆದುದರಿಂದ ಶ್ರೀ ವೈದ್ಯನಾಥೇಶ್ವರ ದೇವಾಲಯವನ್ನು ಗಂಗರ ಕಾಲದಲ್ಲಿ ನಿರ್ಮಾಣ ಮಾಡಲಾಗಿದ್ದು[೭] ಅನಂತರ ಹೊಯ್ಸಳರ ರಾಜ ವಿಷ್ಣುವರ್ಧನನ ಕಾಲದಲ್ಲಿ ಇದನ್ನು ಜೀರ್ಣೋದ್ಧಾರ ಮಾಡಿದ್ದಾರೆ.[೮] ಪ್ರಸ್ತುತವಾಗಿ ಮೂಲ ದೇವಾಲಯದ ಕೆಲವು ಭಾಗಗಳು ಭಗ್ನವಾಗಿದ್ದು ಸ್ಥಳೀಯರು ಅದನ್ನು ಜೀರ್ಣೋದ್ಧಾರ ಮಾಡಿದ್ದಾರೆ.



ವೈದ್ಯನಾಥೇಶ್ವರ ದೇವಾಲಯದ ಮುಂಭಾಗ

ಗ್ರಾಮದ ಪೂರ್ವಭಾಗದಲ್ಲಿ ಉತ್ತರ–ದಕ್ಷಿಣಾಭಿಮುಖವಾಗಿ ಹರಿಯುತ್ತಿರುವ ಶಿಂಷಾ ಬಲದಂಡೆಯ ಮೇಲೆ ಶ್ರೀ ವೈದ್ಯನಾಥೇಶ್ವರ ದೇವಾಲಯವಿದೆ. ಇದು ಪೂರ್ವಾಭಿಮುಖವಾಗಿದ್ದು ಗ್ರಾನೈಟ್ ಶಿಲೆಯಿಂದ ನಿರ್ಮಿತವಾಗಿದೆ. ದೇವಾಲಯದ ಅಧಿಷ್ಠಾನವು ಪಾದಬಂಧ, ತ್ರಿಪಟ್ಟಕುಮುದ, ಗಳ, ಊರ್ಧ್ವ ಕಂಠ, ಪ್ರತಿಮುಖ, ವ್ಯಾಳಪಟ್ಟಿಕೆಯನ್ನು



ವೈದ್ಯನಾಥೇಶ್ವರ ದೇವಾಲಯದ ನವರಂಗ (ಕಂಬಗಳು)

* ಇತಿಹಾಸ ಸಹಾಯಕ ಪ್ರಾಧ್ಯಾಪಕರು, ಶ್ರೀ ಮದ್ದಾನೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಬ್ಬಹಳ್ಳಿ, ಗುಂಡ್ಲುಪೇಟೆ ತಾ. ೫೭೧೩೧೯.

ಹೊಂದಿದ್ದು ಅನಂತರದಲ್ಲಿ ಪ್ರತಿಯನ್ನು ಹೊಂದಿದೆ. ಈ ದೇವಾಲಯದ ಅಧಿಷ್ಠಾನವು ತಲಕಾಡಿನ ಮರಳೇಶ್ವರ ದೇವಾಲಯದ ಅಧಿಷ್ಠಾನದ ಲಕ್ಷಣವನ್ನು ಹೊಂದಿದೆ.[5] ಈ ದೇವಾಲಯವು ಗರ್ಭಗೃಹ, ನವರಂಗ, ಸಭಾಮಂಟಪ ಹಾಗೂ ದಕ್ಷಿಣ ಮುಖಮಂಟಪವನ್ನುಳ್ಳ ಪ್ರಾಕಾರವನ್ನು ಹೊಂದಿದೆ.

ಗರ್ಭಗೃಹದಲ್ಲಿ ಯಾವುದೇ ಪೀಠವಿಲ್ಲದೆ ಸುಮಾರು ಎರಡು ಅಡಿ ಎತ್ತರದ ಶಿವಲಿಂಗವಿದೆ. ಇದನ್ನು ಉದ್ಭವ ಲಿಂಗವೆಂದು ಕರೆಯುತ್ತಾರೆ, ಶಿವಲಿಂಗದ ಹಿಂಬದಿಯಲ್ಲಿರುವ ಹುತ್ತದ ಮಣ್ಣನ್ನು ಚರ್ಮವ್ಯಾಧಿಗೆ ದಿವ್ಯ ಔಷಧವಾಗಿ ಬಳಸಲಾಗುತ್ತಿದ್ದು, ಇಂದಿಗೂ ಭಕ್ತರು ದೂರದ ಊರುಗಳಿಂದ ರೋಗ ಪರಿಹಾರಕ್ಕೆಂದು ಇಲ್ಲಿಗೆ ಬರುತ್ತಾರೆ. ಇದರ ಬಾಗಿಲವಾಡವು ಪಂಚಶಾಖೆಯನ್ನು ಹೊಂದಿದ್ದು ಲತಾಸುರುಳಿ ಬಳ್ಳಿಗಳಿಂದ ಅಲಂಕರಣೆಗೊಂಡು ಕುಡ್ಯ ಸ್ತಂಭಗಳಿಂದ ಕೂಡಿದೆ. ಇಲ್ಲಿಯ ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಚಿತ್ರವಿದೆ. ಅನಂತರದಲ್ಲಿ ಗರ್ಭಗೃಹದಷ್ಟೆ ಅಗಲ ಹಾಗೂ ವಿಸ್ತೀರ್ಣವನ್ನು ಹೊಂದಿರುವ ಸುಕನಾಸಿಯಿದೆ. ಇದರ ಬಾಗಿಲವಾಡವು ಚತುರ್ ಶಾಖಾಲಂಕೃತವಾಗಿದ್ದು ಲಲಾಟದಲ್ಲಿ ಗಜಲಕ್ಷ್ಮಿ ಇದೆ. ಇಲ್ಲಿನ ಮಕರತೋರಣದಲ್ಲಿ ಉಮಾ-ಮಹೇಶ್ವರನ ಚಿತ್ರವಿದೆ ಇದರ ಅಕ್ಕಪಕ್ಕದಲ್ಲಿ ಕೂಡುಗಳಿದ್ದು ಇವುಗಳ ಬದಿಗಳಲ್ಲಿ ಲತಾಸುರುಳಿಗಳಿಂದ ಅಲಂಕೃತವಾಗಿವೆ, ದ್ವಾರದ ಇಕ್ಕೆಲಗಳಲ್ಲಿ ಶೈವದ್ವಾರಪಾಲಕರಾದ ನಂದಿ ಹಾಗೂ ಭೃಂಗಿಯ ಶಿಲ್ಪಗಳಿವೆ.

ಅನಂತರದಲ್ಲಿ ಇಪ್ಪತ್ತು ಅಂಕಣದ ನವರಂಗವಿದೆ. ನವರಂಗದಲ್ಲಿ ಹದಿನಾರು ಸ್ವತಂತ್ರ ಕಂಬಗಳಿವೆ. ಇಲ್ಲಿನ ಮಧ್ಯಭಾಗದಲ್ಲಿರುವ ಆರು ಕಂಬಗಳು ದಪ್ಪನಾಗಿವೆ. ಇವುಗಳ ಎಡ ಮತ್ತು ಬಲಭಾಗದಲ್ಲಿರುವ ಉಳಿದ ಕಂಬಗಳು ಗಾತ್ರದಲ್ಲಿ ಸಣ್ಣದಾಗಿವೆ. ಮಧ್ಯದ ಕಂಬಗಳ ಕೆಳಭಾಗವು ಚೌಕಕಾರವಾಗಿದ್ದು ಅನಂತರದಲ್ಲಿ ಅಷ್ಟಮುಖದ ಪಟ್ಟಿಕೆಯನ್ನು ಹೊಂದಿವೆ. ಮೇಲ್ಭಾಗವು ದುಂಡಗಿದ್ದು ಬೋದಿಗೆಯಾಕಾರದಲ್ಲಿದೆ. ಮೇಲ್ಭಾಗದಲ್ಲಿ ಮುಗುಚಿದ ಮುಚ್ಚಳಾಕಾರದ ದುಂಡನೆಯ ಬೋಧಿಗೆಯಿದೆ. ಕೆಲವು ಕಂಬಗಳಲ್ಲಿ ಅಲಂಕರಣೆಗಾಗಿ ಲತಾಸುರುಳಿ ಬಳ್ಳಿಗಳನ್ನು ಕೆತ್ತಲಾಗಿದೆ. ಎಡ ಮತ್ತು ಬಲಭಾಗದಲ್ಲಿರುವ ಕಂಬಗಳು ಮಧ್ಯಭಾಗದಲ್ಲಿರುವ ಕಂಬಗಳಂತೆ ಲಕ್ಷಣಗಳನ್ನು ಹೊಂದಿದ್ದರೂ ಸಹ ಗಾತ್ರದಲ್ಲಿ ಸ್ವಲ್ಪ ಸಣ್ಣದಾಗಿವೆ. ಎತ್ತರದಲ್ಲಿ ಮಾತ್ರ ಅವುಗಳಷ್ಟೇ ಎತ್ತರವನ್ನು ಹೊಂದಿವೆ. ಮಧ್ಯದಂಕಣದ ಭುವನೇಶ್ವರಿಯು ಉಬ್ಬುಶಿಲ್ಪಗಳಿಂದ ಅಲಂಕರಣವಾಗಿದೆ. ಇದರ ಮಧ್ಯಭಾಗದಲ್ಲಿ ನೃತ್ಯ ತಾಂಡವ ಶಿವನನ್ನು ಕೆತ್ತಲಾಗಿದೆ. ಅನಂತರದಲ್ಲಿ ಆಯಾ



ನವರಂಗದಲ್ಲಿರುವ ಭುವನೇಶ್ವರಿ (ಅಷ್ಟದಿಕ್ಪಾಲಕರ ಉಬ್ಬು ಶಿಲ್ಪಗಳು)

ದಿಕ್ಕಿಗೆ ಅನುಗುಣವಾಗಿ ಅಷ್ಟದಿಕ್ಪಾಲಕರು ಪತ್ನಿಯರ ಸಮೇತವಾಗಿ ತಮ್ಮ ತಮ್ಮ ವಾಹನಗಳ ಮೇಲೆ ಕುಳಿತಿರುವ ಶಿಲ್ಪಗಳು ಬಹಳ ಸುಂದರವಾಗಿವೆ. ಇವುಗಳು ಉಬ್ಬುಶಿಲ್ಪಗಳಾಗಿರುವುದರಿಂದ ಬಹಳ ಚೆನ್ನಾಗಿ ಕಾಣುತ್ತವೆ. ಪೂರ್ವದಿಕ್ಕಿನಲ್ಲಿ ಇಂದ್ರನು ಐರಾವತದ (ಆನೆ) ಮೇಲೆ ಪತ್ನಿಯಾದ ಶಚಿ/ಇಂದ್ರಾಣಿಯೊಡನೆ ಕುಳಿತಿದ್ದಾನೆ. ಇವನು ಚತುರ್ಭುಜವನ್ನು ಹೊಂದಿದ್ದು ಅಭಯ, ವರದಾ ಹಸ್ತಗಳೊಂದಿಗೆ ಕೈಯಲ್ಲಿ ಅಂಕುಶ ಮತ್ತು ಶಕ್ತಿಯನ್ನು ಹಿಡಿದಿದ್ದಾನೆ. ಆಗ್ನೇಯ ದಿಕ್ಕಿನಲ್ಲಿ ಅಗ್ನಿಯು ಮೇಷದ (ಟಗರು) ಮೇಲೆ ಆತನ ಪತ್ನಿಯರಾದ



ಹರಿಹರ



ಕಾಳಭೈರವ



ವೀರಗಲ್ಲು (ಎಡಗೈ ಯೋಧ)

ಸ್ವಧಾಳೊಡನೆ ಇರುವನು. ಈತ ಬೆಂಕಿಯ ನಿರ್ಮಾತೃ ಎಂದು ಹೇಳಲಾಗುತ್ತದೆ. ದಕ್ಷಿಣ ದಿಕ್ಕಿನಲ್ಲಿ ಯಮನು ಮಹಿಷದ (ಕೋಣ) ಮೇಲೆ ಆತನ ಪತ್ನಿ ದರ್ಮಾ ಜೊತೆ ಕುಳಿತ್ತಿದ್ದಾನೆ. ಈತ ದ್ವಿಭುಜವನ್ನು ಹೊಂದಿದ್ದು ಕೈಯಲ್ಲಿ ದಂಡ ಮತ್ತು ಪಾಶವನ್ನು ಹಿಡಿದಿರುತ್ತಾನೆ. ನೈರುತ್ಯ ದಿಕ್ಕಿನಲ್ಲಿ ನಿರುತಿ ಮನುಷ್ಯನ (ನರವಾಹನ) ಮೇಲೆ ಪತ್ನಿ ಕಾಳಿಕಳ ಜೊತೆ ಕುಳಿತಿದ್ದಾನೆ. ಈತ ದ್ವಿಭುಜವನ್ನು ಹೊಂದಿದ್ದು ಒಂದು ಕೈಯಲ್ಲಿ ಗದೆಯನ್ನು ಹಿಡಿದಿದ್ದಾನೆ. ಪಶ್ಚಿಮ ದಿಕ್ಕಿನಲ್ಲಿ ವರುಣನು ಮಕರದ (ಮೊಸಳೆ) ಮೇಲೆ ಪತ್ನಿಯಾದ ಯುಮನೆಯೊಡನೆ ಇದ್ದಾನೆ. ಇವನು ಸಮುದ್ರ ದೇವತೆ ಹಾಗೂ ಮಳೆ ದೇವತೆಯೂ ಹೌದು. ವಾಯವ್ಯ ದಿಕ್ಕಿನಲ್ಲಿ ವಾಯು ದೇವತೆಯು ಸಾರಂಗದ (ಜಿಂಕೆ) ಮೇಲೆ ಪತ್ನಿ ಅಂಜನಾ ಜೊತೆ ಕುಳಿತಿದ್ದಾನೆ. ಉತ್ತರ ದಿಕ್ಕಿನಲ್ಲಿ ಕುಬೇರನು ಅಶ್ವದ (ಕುದುರೆ) ಮೇಲೆ ಪತ್ನಿಯಾದ ರಿದ್ಧಿಯೊಡನೆ ಕುಳಿತಿದ್ದಾನೆ. ಕೈಯಲ್ಲಿ ದಂಡವನ್ನು ಹಿಡಿದಿದ್ದಾನೆ ಮತ್ತೊಂದು ಕೈ ಅಭಯ ಹಸ್ತವನ್ನು ಹೊಂದಿದ್ದಾನೆ. ಈಶಾನ್ಯ ದಿಕ್ಕಿನಲ್ಲಿ ಈಶಾನು (ಶಿವ) ವೃಷಭದ (ನಂದಿ) ಮೇಲೆ ಪತ್ನಿ ಪಾರ್ವತಿಯೊಡನೆ ಕುಳಿತಿದ್ದಾನೆ. ಈ ರೀತಿಯ ಭುವನೇಶ್ವರಿಯು ಆಲೂರಿನ (ಹಳೆ) ಅರ್ಕೇಶ್ವರ ಹಾಗೂ ಜೇಗೂರಿನ ನಾಗರೇಶ್ವರ ದೇವಾಲಯದಲ್ಲಿರುವ ಭುವನೇಶ್ವರಿಯ ಲಕ್ಷಣವನ್ನು ಹೊಂದಿದೆ. ಇದು ಚಾಲುಕ್ಯ ಮತ್ತು ನೊಳಂಬರ ಶೈಲಿ ಯಲ್ಲಿಯೂ ಸಹ ಬಳಕೆಯಾಗಿರುವುದನ್ನು ಕಾಣಬಹುದು.

ನವರಂಗದ ಬಲಭಾಗದಲ್ಲಿ ಸುಮಾರು ಮೂರು ಅಡಿ ಎತ್ತರದ ಸರಸ್ವತಿಯ ಶಿಲ್ಪವಿದೆ. ಚತುರ್ಭುಜವನ್ನು ಹೊಂದಿರುವ ಈಕೆಯ ಕೈಗಳಲ್ಲಿ ಅಕ್ಷರಮಾಲೆ, ಪುಸ್ತಕ, ಪಾಶ, ಅಂಕುಶವನ್ನು ಹಿಡಿದಿದ್ದಾಳೆ. ಇದರ ಪಕ್ಕದಲ್ಲಿ ಸುಮಾರು ಮೂರು ಅಡಿ ಎತ್ತರದ ಮಹಿಷಮರ್ಧಿನಿಯ ಶಿಲ್ಪವಿದೆ. ಮಹಿಷಳು ಎಡಕಾಲನ್ನು ಮಹಿಷನ ಮೇಲೆ ಇಟ್ಟಿದ್ದು ಅದರ ನಾಲಗೆಯನ್ನು ಬಲಭಾಗದ ಮುಂಭಾಗದ ಕೈಯಲ್ಲಿ ಹಿಡಿದಿದ್ದು ಈಟಿಯಿಂದ ಮಹಿಷನನ್ನು ತಿವಿಯುತ್ತಿರುವಂತೆ ಚಿತ್ರಿಸಲಾಗಿದೆ. ಇವಳು ಎಂಟು ಕೈಗಳನ್ನು ಹೊಂದಿದ್ದು ಪ್ರತಿಯೊಂದು ಕೈಗಳಲ್ಲು ಒಂದೊಂದು ಆಯುಧಗಳನ್ನು ಹಿಡಿದಿದ್ದಾಳೆ. ಎಡಭಾಗದಲ್ಲಿ ನವಿಲಿನ ಮೇಲೆ ಕುಳಿತಿರುವ ಸುಮಾರು ಮೂರು ಅಡಿ ಎತ್ತರದ ಷಣ್ಮುಖನ ಶಿಲ್ಪವಿದೆ. ನವರಂಗದ ಉತ್ತರಭಾಗದಲ್ಲಿ ಭಿತ್ತಿಗೆ ಹೊಂದಿಕೊಂಡಂತೆ ಸುಮಾರು ಐದು ಅಡಿ ಎತ್ತರದ ಹರಹರನ ಉಬ್ಬುಶಿಲ್ಪವಿದೆ. ಪೀಠದ ಮೇಲೆ ಕುಳಿತಿರುವ ಹರಿಹರನು ನಾಲ್ಕು ಕೈಗಳನ್ನು ಹೊಂದಿದ್ದು ಮುಂಭಾಗದ ಎರಡು ಕೈಗಳು ಧ್ಯಾನಹಸ್ತ ಹಾಗೂ ವರದಹಸ್ತವನ್ನು ಹೊಂದಿದೆ. ಹಿಂಭಾಗದ ಎರಡು ಕೈಗಳಲ್ಲಿ ಒಂದರಲ್ಲಿ ಪರಶುವನ್ನು ಹಿಡಿದಿದ್ದು ಮತ್ತೊಂದರಲ್ಲಿ ಶಂಖ, ಚಕ್ರವನ್ನು ಹಿಡಿದಿದ್ದಾನೆ. ಪೀಠದ ಮೇಲೆ ಕುಳಿತಿರುವ ಹರಿಹರ ಶಿಲ್ಪವು ಬಹಳ ಸುಂದರವಾಗಿದೆ. ಶಾಸ್ತ್ರಗಂಥದಲ್ಲಿ ಪರಶು ಬಗ್ಗೆ ಹೀಗೆ ಹೇಳಲಾಗಿದೆ. 'ಇದನ್ನು ಗಂಡುಗೊಡಲಿ' ಎಂದು ಕರೆಯುತ್ತಾರೆ. ಇದರ ಉದ್ದ ಹನ್ನೆರಡು ಅಂಗುಲವಿದ್ದು, ಮರದ ಹಿಡಿಗೆ ಗುಂಡಾದ ಅಥವಾ ಕೋಳಿ ಮೊಟ್ಟೆಯ ಆಕಾರದಲ್ಲಿರುವ ಶಿರೋಭಾಗದ ಮಧ್ಯೆ ಕೊಡಲಿ ಸಿಲುಕಿದಂತೆ ನಿರ್ಮಿಸಬೇಕು. ಇದರ ತಲೆಯ ಮೇಲೂ ತೊಟ್ಟಿನಲ್ಲೂ ಅಲಂಕರಿಸಬೇಕು. ಇದು ಬೆಳಕಿನ ಆಯುಧಗಳಲ್ಲಿ ಒಂದು, ಇದನ್ನು ಕರ್ತರಿ ಹಸ್ತದಲ್ಲಿ ಹಿಡಿದಿರಬೇಕು. ಕೊಡಲಿಯ ಸದಾ ಹೊರಮುಖವಾಗಿರಬೇಕು ಎಂಬ ವಿವರಣೆಗಳಿವೆ. ಈ ರೀತಿಯ ಲಕ್ಷಣಗಳನ್ನು ಈ ಶಿಲ್ಪದಲ್ಲಿರುವ ಕೊಡಲಿಯನ್ನು ಹೊಂದಿದೆ. ಈ ಭಾಗದಲ್ಲಿ ದೊರೆಯುವ ಹರಿಹರನ ಶಿಲ್ಪಗಳು ಸಾಮನ್ಯವಾದ ಲಕ್ಷಣಗಳನ್ನು ಆಯುಧಗಳನ್ನು ಹೊಂದಿರು ತ್ತವೆ ಆದರೆ ಈ ಶಿಲ್ಪವು ಸುಖಾಸಿನದಲ್ಲಿ ಕುಳಿತು ಕೊಡಲಿಯನ್ನು ಹಿಡಿದಿರುವಂತೆ ಚಿತ್ರಿಸಿರುವುದು ಒಂದು ವಿಶೇಷ. ಈ ಶಿಲ್ಪದ ಮೇಲ್ಭಾಗದಲ್ಲಿ ಪರಶುರಾಮ ಎಂದು ಇತ್ತೀಚೆಗೆ (ನೀಲಿ ಬಣ್ಣದಲ್ಲಿ) ಬರೆಯಲಾಗಿದೆ. ಪ್ರಸ್ತುತವಾಗಿ ಇಲ್ಲಿಯ ಜನರು ಇದನ್ನು ಪರಶುರಾಮ ಎಂದು ಪೂಜಿಸುತ್ತಿದ್ದಾರೆ.

ಈ ಶಿಲ್ಪದ ಪಕ್ಕದಲ್ಲಿ ಎರಡು ಎಡಹರಿ ಶಿವಲಿಂಗ ಗಳಿದ್ದು ಇದರ ಪಕ್ಕದಲ್ಲಿ ಮತ್ತೆರಡು ಬಲಹರಿ ಶಿವಲಿಂಗಗಳಿವೆ. ನವರಂಗದ ಬಲಭಾಗದಲ್ಲಿ ಸುಮಾರು ಐದು ಅಡಿ ಎತ್ತರದ ಕಾಳಭೈರವನ ಶಿಲ್ಪವಿದೆ. ನಗ್ನವಾಗಿರುವ ಭೈರವನು ನಾಲ್ಕು ಕೈಗಳನ್ನು ಹೊಂದಿದೆ. ಕೈಯಲ್ಲಿ ಖಡ್ಗ, ಡಮರು, ತ್ರಿಶೂಲವನ್ನು



ವೈಷ್ಣವಿ

ಹಿಡಿದಿದ್ದು ಬಲಮುಂಭಾಗದ ಕೈಯನ್ನು ಸೊಂಟದ ಮೇಲೆ ಇಟ್ಟಿದ್ದಾನೆ. ತಲೆಯ ಕೂದಲು ಕೆದರಿರುವಂತೆ ಕೆತ್ತಲಾಗಿದೆ. ಸೊಂಟದ ಸುತ್ತಲು ಸಹ ಗಂಟೆಯನ್ನು ಕೆತ್ತಲಾಗಿದೆ. ಕೈಗಳಿಗೆ ತೋಳುಬಂದಿಯನ್ನು ಕೆತ್ತಲಾಗಿದೆ. ನವರಂಗದ ಮಧ್ಯಭಾಗ ದಲ್ಲಿ ಸುಮಾರು ನಾಲ್ಕು ಅಡಿ ಎತ್ತರದ ನಂದಿವಿಗ್ರಹವಿದೆ.

ನವರಂಗದ ದಕ್ಷಿಣಭಾಗದ ಒಳಭಿತ್ತಿಯಲ್ಲಿ ದೇವಾಲಯಕ್ಕೆ ಸಂಬಂಧಿಸಿದಂತೆ ಎರಡು ಪ್ರಕಟಿತ ಶಾಸನವಿದೆ.[೧೨] ದೇವಾಲಯದ ಆವರಣದ ಪಶ್ಚಿಮ ಭಾಗದಲ್ಲಿ ಸೂರ್ಯನಾರಾಯಣನ ಗುಡಿಯಿದೆ. ಇಲ್ಲಿ ಸಪ್ತಾಶ್ವಗಳ ಪೀಠದ ಮೇಲೆ ಸುಮಾರು ಆರು ಅಡಿ ಎತ್ತರದ ಸೂರ್ಯನ ಶಿಲ್ಪವಿದೆ. ಇದು ಪ್ರಭಾವಳಿಯನ್ನು ಹೊಂದಿದ್ದು ಪ್ರಭಾವಳಿಯಲ್ಲಿ ದಶಾವತಾರವನ್ನು ಚಿತ್ರಿಸಲಾಗಿದೆ. ಸೂರ್ಯನು ನಾಲ್ಕು ಕೈಗಳನ್ನು ಹೊಂದಿದ್ದು ಎರಡು ಕೈಗಳಲ್ಲಿ ಪದ್ಮದ ಮೊಗ್ಗುಗಳನ್ನು ಮತ್ತೆರಡು ಕೈಗಳಲ್ಲಿ ಬಿಲ್ಲು ಬಾಣವನ್ನು ಹಿಡಿದಿದ್ದಾನೆ. ಇಕ್ಕೆಲಗಳಲ್ಲಿ ಉಷೆ ಹಾಗೂ ಪ್ರತ್ಯುಷೆಯರಿದ್ದು ಇವರಿಬ್ಬರೂ ಸಹ ಒಂದೊಂದು ಕೈಗಳಲ್ಲಿ ಪದ್ಮದ ಮೊಗ್ಗನ್ನು ಹಿಡಿದಿದ್ದು ಮತ್ತೊಂದು ಕೈಯನ್ನು ಸೊಂಟದ ಮೇಲೆ ಇಳಿ ಬಿಟ್ಟಿದ್ದಾರೆ. ಸಾಮಾನ್ಯವಾಗಿ ಇಕ್ಕೆಲಗಳಲ್ಲಿ ಇರುವ ಶಿಲ್ಪಗಳು ಬಿಲ್ಲು ಬಾಣವನ್ನು ಹಿಡಿದಿರುವುದು ಸಾಮಾನ್ಯವಾಗಿರುತ್ತದೆ. ಆದರೆ ಇಲ್ಲಿ ಪದ್ಮದ ಮೊಗ್ಗನ್ನು ಹಿಡಿದಿರುವುದು ಒಂದು ವಿಶೇಷವೆನ್ನಬಹುದು. ಇದರ ಪಕ್ಕದಲ್ಲಿ ಪಾರ್ವತಿಯ ಗುಡಿಯಿದೆ. ಇಲ್ಲಿ ನಂದಿ ಪೀಠದ ಮೇಲೆ ಸುಮಾರು ನಾಲ್ಕು ಅಡಿ ಎತ್ತರದ ಪಾರ್ವತಿಯ ಶಿಲ್ಪವಿದೆ. ಇದು ಸಿಂತಭಂಗಿಯಲ್ಲಿದ್ದು ಚತುರ್ಭುಜವನ್ನು ಹೊಂದಿದ್ದು ಹಿಂಬದಿಯ ಎರಡು ಕೈಗಳಲ್ಲಿ ಪದ್ಮದ ಮೊಗ್ಗುಗಳನ್ನು ಹಿಡಿದಿದ್ದು ಮುಂಬದಿಯ ಕೈಗಳು ಅಭಯ ಹಾಗೂ ವರದ ಹಸ್ತವನ್ನು ಹೊಂದಿದೆ.

ದೇವಾಲಯದ ಭಿತ್ತಿಯು ನಿರಾಡಂಬರವಾಗಿದ್ದು, ಅಲಂಕಾರಿಕ ಕಂಬಗಳಷ್ಟೇ ಇದ್ದು, ಗಂಗ–ಚೋಳ–ಹೊಯ್ಸಳ–ವಿಜಯನಗರದ ಅರಸರ ಕಾಲದಲ್ಲಿ ಜೀರ್ಣೋದ್ಧಾರದ ಜೊತೆಗೆ ವಿಸ್ತರಣೆಯನ್ನು ಮಾಡಲಾಗಿದೆ. ಈ ದೇವಾಲಯವು



ವೀರಗಲ್ಲು ಮತ್ತು ಭೈರವ, ಲಜ್ಜಾಗೌರಿ

ಇತ್ತೀಚೆಗೆ ಪೂರ್ಣವಾಗಿ ಜೀರ್ಣೋದ್ಧಾರಗೊಂಡಿದ್ದರೂ ಅಲ್ಲಲ್ಲಿ ತನ್ನ ಮೂಲರೂಪವನ್ನು ಉಳಿಸಿಕೊಂಡಿದೆ. ಗಣಪತಿ ಷಣ್ಮುಖ, ಭೈರವ, ಪರಶುರಾಮ ಮುಂತಾದ ಶಿಲ್ಪಗಳಲ್ಲಿ ಕೆಲವು ಗಂಗರ ಕಾಲದ ಶಿಲ್ಪಲಕ್ಷಣಗಳನ್ನು ಹೊಂದಿವೆ. ಇಲ್ಲಿ ಸುಮಾರು ಮೂರು ಅಡಿ ಎತ್ತರದ ಸರಸ್ವತಿಯ ಶಿಲ್ಪವಿದೆ. ಇದು ಚತುರ್ಭುಜವನ್ನು ಹೊಂದಿದ್ದು ಕೈಯಲ್ಲಿ ಅಕ್ಷಮಾಲಾ, ಪುಸ್ತಕ, ಪೂರ್ಣಕುಂಭ ಮತ್ತು ಅಭಯಹಸ್ತವನ್ನು ಹೊಂದಿದೆ. ಇದು ಗಂಗರ ಕಾಲದ ಶಿಲ್ಪವಾಗಿದೆ. ಎಂಟು ಕೈಗಳನ್ನು ಹೊಂದಿರುವ ಮಹಿಷಮರ್ದಿನಿಯು ಬಹಳ ಸುಂದರವಾಗಿದೆ. ಇದು ಚಾಲುಕ್ಯ ಶಿಲ್ಪ ಲಕ್ಷಣವನ್ನು ಹೊಂದಿದೆ.[೧೩] ಸೂರ್ಯ ಮುಂತಾದ ಶಿಲ್ಪಗಳು ಹೊಯ್ಸಳರ ಕಾಲದ ಲಕ್ಷಣಗಳನ್ನು ಹೊಂದಿವೆ. ಈ ದೇವಾಲಯದ ಆವರಣದಲ್ಲಿ ಗಂಗರ ಕಾಲದ (ಸಿಂಹಗಳು ಹೊತ್ತಿರುವ) ಕಂಬಗಳು, ಇನ್ನಿತರ ಭಗ್ನಾವಶೇಷಗಳು ಸುತ್ತಲೂ ಬಿದ್ದಿವೆ.

ದೇವಾಲಯದ ಮುಂಭಾಗದಲ್ಲಿ ಅಂದರೆ ನದಿಯ ತೀರದಲ್ಲಿ ಕಲ್ಲಿನ ಸೋಪಾನವನ್ನು ಕಟ್ಟಿದ್ದು ಇಲ್ಲಿಯೂ ಸಹ ಭಗ್ನವಾಗಿರುವ ಸಪ್ತಮಾತೃಕೆಯರ ಶಿಲ್ಪಗಳಿವೆ. ಸೋಪಾನದ ಮೇಲ್ಭಾಗದಲ್ಲಿ ವಿನಾಯಕ ಮತ್ತು ಮಲ್ಲಿಕಾರ್ಜುನಸ್ವಾಮಿಯ ಗುಡಿಯಿದೆ. ಈ ಗುಡಿಗಳನ್ನು ಇತ್ತೀಚೆಗೆ ಕಟ್ಟಲಾಗಿದೆ. ಆದರೆ ಗುಡಿಯಲ್ಲಿರುವ ವಿನಾಯಕನ ಶಿಲ್ಪ ಮತ್ತು ಮಲ್ಲಿಕಾರ್ಜುನ ಸ್ವಾಮಿಯ ಲಿಂಗವು ಗಂಗರ ಕಾಲದ್ದಾಗಿದೆ. ಒಟ್ಟಾರೆ ಇಲ್ಲಿಯ ವಾಸ್ತುಲಕ್ಷಣಗಳು ಹಾಗೂ ಶಿಲ್ಪಗಳನ್ನು ಗಮನಿಸಿದಾಗ ಗಂಗ, ಚೋಳ, ಹೊಯ್ಸಳ ಮತ್ತು ವಿಜಯನಗರ ಕಾಲದ ಹಲವು ಕುರುಹುಗಳು ಇಲ್ಲಿ ದೊರೆಯುತ್ತವೆ. ದೇವಾಲಯದ ಮುಂಭಾಗದಲ್ಲಿ ಸುಮಾರು ಮೂರು ಅಡಿ ಎತ್ತರದ ಲಕುಲೀಶನ ಶಿಲ್ಪವಿದೆ. ದ್ವಿಭುಜವನ್ನು ಹೊಂದಿದ್ದು ಕೈಯಲ್ಲಿ ದಂಡವನ್ನು ಹಿಡಿದಿದ್ದಾನೆ. ಬಹುಶಃ ಈ ಭಾಗದಲ್ಲಿ ಪಾಶುಪತ ಮತ್ತು ಕಾಳಾಮುಖ ಪಂಥದ ಆರಾಧಕರಿದ್ದಿರಬಹುದು. ಇದರ ಪಕ್ಕದಲ್ಲಿ ದ್ವಿಭಂಗಿಯಲ್ಲಿ ನಿಂತಿರುವ ಸ್ವರ್ಣಾಕರ್ಷನ ಭೈರವನ ಶಿಲ್ಪವಿದೆ. ನಡುವಿನ ಭಾಗದಲ್ಲಿ ಗಂಟೆಯನ್ನು ಜೋತು ಬೀಳುತ್ತಿರುವಂತೆ ಕೆತ್ತಲಾಗಿದೆ. ಚತುರ್ಭುಜಾವನ್ನು ಹೊಂದಿರುವ ಭೈರವನು ನಗ್ನನಾಗಿದ್ದು ಕೈಯಲ್ಲಿ ಡಮರು, ಖಡ್ಗ, ಕಪಾಲ ಮತ್ತು ಸರ್ಪವನ್ನು ಹಿಡಿದಿದ್ದಾನೆ. ತಲೆಯ ಮೇಲೆ ಸರ್ಪದ ಕೀರಿಟವನ್ನು ಧರಿಸಿದ್ದಾನೆ. ಕಿವಿಗೆ ಸರ್ಪ ಕುಂಡಲವನ್ನು ಧರಿಸಿದ್ದಾನೆ. ಈ ಶಿಲ್ಪದ ಪಕ್ಕದಲ್ಲಿ ಸುಮಾರು ನಾಲ್ಕು ಅಡಿ ಎತ್ತರದ ವೈಷ್ಣವಿಯ ಬಿಡಿಶಿಲ್ಪವಿದೆ. ಈ ಶಿಲ್ಪವು ಗಂಗರ ಕಾಲದ್ದಾಗಿದೆ. ಬಹುಶಃ ಇಲ್ಲಿದ್ದಂತಹ ಸಪ್ತಮಾತೃಕೆಯರ ಶಿಲ್ಪಗಳನ್ನು ಬೇರೆ ಕಡೆಗೆ ಕೊಂಡ್ಯೊದ್ದಿರಬಹುದು.

ಮಲ್ಲಿಕಾರ್ಜುನಸ್ವಾಮಿಯ ಗುಡಿಯ ಮುಂಭಾಗದಲ್ಲಿ ಹಲವು ವೀರಗಲ್ಲುಗಳು ಹಾಗೂ ನಾಗ-ನಾಗಿಣಿಯ ಕಲ್ಲುಗಳು ಇವೆ. ವೀರಗಲ್ಲುಗಳಲ್ಲಿ ಎಡಗೈಯೋಧನನ್ನೇ ಪ್ರಧಾನವಾಗಿ ಕೆತ್ತಿರುವ ಸುಮಾರು ೧೩-೧೪ನೆಯ ಶತಮಾನದ ಶಾಸನರಹಿತ ಅಪರೂಪದ ವೀರಗಲ್ಲು ಇದೆ. ಈ ವೀರಗಲ್ಲಿನಲ್ಲಿ ವೀರನು ಕೈಯಲ್ಲಿ ಬಿಲ್ಲುಬಾಣವನ್ನು ಹಿಡಿದಿದ್ದು ಬಿಲ್ಲನ್ನು ಎಡಗೈಯಲ್ಲಿ ಬಿಡುತ್ತಿರುವುದನ್ನು ಕಾಣಬಹುದು. ಇವನ ವಿರೋಧಿ ಪಡೆಯವರು ಹಲವು ಬಾಣಗಳನ್ನು ಬಿಟ್ಟಿದ್ದು ಅವುಗಳು ಇವನ ದೇಹಕ್ಕೆ ಚುಚ್ಚಿರುವುದನ್ನು ಇಲ್ಲಿ ಕಾಣಬಹುದು. ಇದು ಗೋವುಗಳ್ಳರೊಡನೆ ಹೋರಾಡುತ್ತಿರುವ ವೀರನೆಂದು ಹೇಳಬಹುದು, ಅದಕ್ಕೆ ಪೂರಕವಾಗಿ ವೀರನ ಹಿಂಭಾಗದಲ್ಲಿ ಗೋವುಗಳನ್ನು ಚಿತ್ರಿಸಲಾಗಿದೆ. ಸ್ಥಳ ಅಭಾವ ದಿಂದಲೋ, ಶಿಲ್ಪಿಯ ಅಚಾತುರ್ಯದಿಂದಲೋ ಇಲ್ಲವೇ ಉದ್ದೇಶಪೂರ್ವಕವಾಗಿಯೋ ಕೆತ್ತಲ್ಪಟ್ಟಿರುವ ಇದು ತುರು ಗೋಳದಲ್ಲಿ ಹೋರಾಡುತ್ತಾ ಮಡಿದ ಎಡಗೈ ಯೋಧನ ಅಪರೂಪದ ಸ್ಮಾರಕವಾಗಿದೆ.[೧೪]

ಇದರ ಪಕ್ಕದಲ್ಲಿ ಮತ್ತೊಂದು ವೀರಗಲ್ಲಿನ ಶಿಲ್ಪವಿದೆ. ಇದರ ಕೆಳಭಾಗದಲ್ಲಿ ನಗ್ನನಾಗಿರುವ ಭೈರವನನ್ನು ಕೆತ್ತಲಾಗಿದೆ. ಭೈರವನ ಎರಡು ಕಾಲಿನ ಮಧ್ಯದಲ್ಲಿ ನಾಯಿಯನ್ನು ಚಿತ್ರಿಸ ಲಾಗಿದೆ. ಕೆಳಭಾಗದ ಎಡಬದಿಯಲ್ಲಿ ಲಜ್ಜಾಗೌರಿಯ ಶಿಲ್ಪವಿದೆ. ಆದರೆ ಭೈರವನ ತಲೆಯನ್ನು ಮಾತ್ರ ಕೆತ್ತಲಾಗಿಲ್ಲ ಬಹುಶಃ ಇದು ಸ್ಥಳಾವಕಾಶದಿಂದ ಆಗಿರಬಹುದು. ಭೈರವನು ಚತುರ್ಭುಜವನ್ನು ಹೊಂದಿದ್ದು ಕೈಯಲ್ಲಿ ಬಿಲ್ಲು ಬಾಣವನ್ನು ಹಿಡಿದಿದ್ದಾನೆ. ಇದರ ಕೆಳಭಾಗದಲ್ಲಿ ಒಂದು ವೀರಭದ್ರನ ಶಿಲ್ಪವಿದೆ. ಇದರ ತಲಭಾಗ ಭಗ್ನವಾಗಿದೆ. ಕೈಯಲ್ಲಿ ಬಿಲ್ಲು ಬಾಣವನ್ನು ಹಿಡಿದಿದ್ದಾನೆ. ನಗ್ನನಾಗಿರುವ ಭೈರವನ ಕಾಲಿನ ಹತ್ತಿರ ನಾಯಿಯನ್ನು ಕೆತ್ತಲಾಗಿದೆ. ಭೈರವನ ಬಲಕಾಲಿನ ಹತ್ತಿರ ಲಜ್ಜಾಗೌರಿಯನ್ನು ಚಿತ್ರಿಸಲಾಗಿದೆ. ಭೈರವನ ಶಿಲ್ಪದಲ್ಲಿ ಲಜ್ಜಾಗೌರಿಯನ್ನು ತೋರಿಸಿರುವುದು ಸಹ ವಿಶೇಷವೆಂದು ಹೇಳಬಹುದು.

ಇದರ ಬಲಭಾಗದಲ್ಲಿ ಕುಳಿತಿರುವ ಮಹಾಸತಿಯ ಶಿಲ್ಪವಿದೆ. ಇದು ಬಿಡಿಶಿಲ್ಪವಾಗಿದ್ದು ಪೀಠದ ಮೇಲೆ ಇಡಲಾಗು ತ್ತಿದ್ದ ಶಿಲ್ಪವಾಗಿದೆ. ಈಕೆಯ ಬಲಕೈಯಲ್ಲಿ ನಿಂಬೆಹಣ್ಣನ್ನು ಹಿಡಿದಿದ್ದಾಳೆ. ಈ ಭಾಗದಲ್ಲಿ ಮಹಾಸತಿಯ ಪೂಜೆಯು ನಡೆಯುತ್ತಿದ್ದುದಕ್ಕೆ ಇದು ಸಾಕ್ಷಿಯಾಗಿದೆ. ಜೊತೆಗೆ ಈ ಪ್ರಾಂತ್ಯದಲ್ಲಿ ಈ ರೀತಿಯ ಮಹಾಸತಿಯ ಬಿಡಿಶಿಲ್ಪಗಳು (ಪೂಜೆಗೆ ಅರ್ಹವಾಗಿರುವಂತಹ) ದೊರೆಯುವುದು ವಿರಳ.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಐ.ಕೆ. ಶರ್ಮ, **ಟೆಂಪಲ್ಸ್ ಆಫ್ ದಿ ಗಂಗಾಸ್ ಆಫ್ ಕರ್ನಾಟಕ**, ಪುಟ ೬೭.

೨. ಎ.ಕ. ಸಂ. ೭, ಮದ್ದೂರು, ೬೫, ೬೮.

೩. ಐ.ಕೆ. ಶರ್ಮ, **ಟೆಂಪಲ್ಸ್ ಆಫ್ ದಿ ಗಂಗಾಸ್ ಆಫ್ ಕರ್ನಾಟಕ**, ಪುಟ ೬೭.

೪. ಎ.ಕ. ಸಂ. ೭, ಮದ್ದೂರು, ೭೧.

೫. ಎ.ಕ. ಸಂ. ೭, ಮದ್ದೂರು, ೬೮.

೬ ಎ.ಕ. ಸಂ. ೭, ಮಳವಳ್ಳಿ, ೪೧.

೭. **ತಲಕಾಡಿನ ಗಂಗರ ಕಾಲದ ದೇವಾಲಯಗಳು-ಒಂದು ಅಧ್ಯಯನ**, ದೇವರಕೊಂಡಾರೆಡ್ಡಿ, ಪುಟ ೧೯೪-೧೯೫.

೮. ಐ.ಕೆ. ಶರ್ಮ, **ಟೆಂಪಲ್ಸ್ ಆಫ್ ದಿ ಗಂಗಾಸ್ ಆಫ್ ಕರ್ನಾಟಕ**, ಪುಟ ೬೭.

೯. ಅದೇ, ಪುಟ ೬೭.

೧೦. ಅದೇ., ಪುಟ ೬೭.

೧೧. ಜಿ. ಜ್ಞಾನಾನಂದ., **ಶ್ರೀ ಬ್ರಾಹ್ಮಿಯ ಚಿತ್ರಕರ್ಮ ಶಾಸ್ತ್ರಂ**, ಪುಟ ೭೧೦.

೧೨. ಎ.ಕ. ಸಂ. ೭, ಮದ್ದೂರು, ೬೮, ೬೯.

೧೩. ಐ.ಕೆ. ಶರ್ಮ, **ಪೂರ್ವೋಕ್ತ**, ಪುಟ ೬೭.

೧೪. **ಮಂಡ್ಯ ಜಿಲ್ಲಾ ಗ್ಯಾಸೆಟಿಯರ್**, ಬೆಂಗಳೂರು, ೨೦೦೩.

೫೩

ಆದಿಕದಂಬರ ಕಾಲದ ನಾಟ್ಯ ಶಾಲೆಗಳ ತಲವಿನ್ಯಾಸ

ಡಾ. ಜಗದೀಶ*

ನಮ್ಮ ಪ್ರಾಚೀನ ಪರಂಪರೆಯನ್ನು ಅರಿಯುವ ಒಂದು ಸಾಧನ ಉತ್ಖನನ. ಭಾರತೀಯ ಪುರಾತತ್ವ ಸರ್ವೇಕ್ಷಣೆ ಇಲಾಖೆಯವರು ಆಕರಗಳನ್ನು ಆಧರಿಸಿ ಉತ್ಖನನ ಕೈಗೊಳ್ಳುವ ಯೋಜನೆಯೊಂದನ್ನು ರೂಪಿಸಿದರು. ಈ ಯೋಜನೆಯಲ್ಲಿ ಫತೆಪುರ ಸಿರ್ಕಿ, ಗುಡ್ನಾಪುರ ಮತ್ತು ಹಂಪಿ ಪ್ರದೇಶಗಳನ್ನು ಉತ್ಖನನಕ್ಕೆ ಆಯ್ಕೆ ಮಾಡಲಾಯಿತು. ಇಂತಹ ಮಹತ್ವದ ಯೋಜನೆಯಲ್ಲಿ ಕರ್ನಾಟಕದ ಎರಡು ಪ್ರದೇಶಗಳು ಆಯ್ಕೆ ಆಗಿರುವುದು ವಿಶೇಷ. ಹಂಪಿ ಅನ್ವೇಷಣೆ ಮತ್ತು ಉತ್ಖನನ ಇಂದಿಗೂ ಅಲ್ಪ ಪ್ರಮಾಣದಲ್ಲಿ ಮುಂದುವರಿದಿದೆ. ರಾಜ್ಯ ಸರ್ಕಾರದ ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಉತ್ಖನನ ಕಾರ್ಯವೂ ಮುಂದುವರಿದಿದೆ.


ಕರ್ನಾಟಕದ ಪ್ರಾಚೀನ ಅರಸು ಮನೆತನ ಕದಂಬ ಅರಸರದು. ಇವರ ಆಳ್ವಿಕೆಯ ಕಾಲ ಸುಮಾರ ಕ್ರಿ.ಶ. ೩೨೫ ರಿಂದ ೫೨೫. ಆಳಿದ ಕೆಲವು ಅರಸು ಮನೆತನಗಳು ಕ್ರಿ.ಶ. ೯ ರಿಂದ ೧೧ನೆಯ ಶತಮಾನದಲ್ಲಿ ತಮ್ಮನ್ನು ಕೂಡಾ ಕದಂಬ ಅರಸು ಮನೆತನಕ್ಕೆ ಸೇರಿಸಿಕೊಳ್ಳುವುದರಿಂದ ಇವರನ್ನು ಆದಿಕದಂಬರೆಂದು ಗುರ್ತಿಸಲಾಗಿದೆ. ಆದಿ ಕದಂಬರ ಸುಮಾರು ೫೩ ಶಾಸನಗಳು ಮಾತ್ರ ಇಂದು ದೊರಕಿವೆ.

ಬನವಾಸಿಯಿಂದ ಸುಮಾರು ಐದು ಕಿಲೋಮಿಟರು ದೂರದಲ್ಲಿ ಗುಡ್ನಾಪುರ ಇದೆ. ಇಲ್ಲಿ ಕದಂಬರ ಸ್ತಂಭ ಶಿಲಾ ಶಾಸನ ದೊರಕಿದೆ. ಸುಮಾರು ೨೦ ಅಡಿ ಉದ್ದದ ಕಲ್ಲಿನ ಕಂಬವಿದೆ. ಕಂಬದ ತಳಭಾಗವು ಚೌಕಾಕಾರವಾಗಿದ್ದ, ಮುಂದೆ ಅಷ್ಟಕೋನಾಕಾರದಲ್ಲಿದೆ. ಒಟ್ಟು ೨೭ ಸಾಲುಗಳಲ್ಲಿ ಶಾಸನವು ಶಿರಪೇಟಿಕಾ ಲಿಪಿಯಲ್ಲಿದೆ. ಶಾಸನದ ಭಾಷೆ ಸಂಸ್ಕೃತ. ಶಾಸನವು ಕದಂಬರ ವಂಶಾವಳಿಯನ್ನು ನೀಡುತ್ತದೆ. ಮಯೂರಶರ್ಮ ಮತ್ತು ಆತನ ತಂದೆಯಾದ ಬಂಧುಶೇಣನನ್ನು ಶಾಸನವು ಉಲ್ಲೇಖಿಸುತ್ತದೆ. ಅರಸು ರವಿವರ್ಮನನ್ನು (ಕ್ರಿ.ಶ ೪೮೫-೫೧೯) ಕೇಕೆಯ ವಂಶದ ಪುತ್ರಿಗೆ ಜನಿಸಿದವನೆಂದು, ವಿಷ್ಣುದಾಸನೆಂಬುವನನ್ನು ಕೊಂದನೆಂದು ಹಾಗೂ ಪುನ್ನಾಟ, ಕೊಂಗಳ, ಪಾಂಡ್ಯ ಅಲುಪರನ್ನು ಸೋಲಿಸಿದವನೂ ಅಲ್ಲದೇ ಗುಡ್ಡ ತಟಾಕವನ್ನು ತೋಡಿದ ವಿಷಯ ಮತ್ತು ಅರಮನೆಯ ಸಮೀಪದಲ್ಲಿ ಮನ್ಮಥನಿಗೆ ಕಾಮಜಿನಾಲಯವನ್ನು ಕಟ್ಟಿಸಿ, ಅಲ್ಲಿ ಪೂಜೆಗಾಗಿ ಹಲವಾರು ಗ್ರಾಮಗಳಲ್ಲಿನ ಭೂಮಿಯನ್ನು ದಾನ ಮಾಡಿದನು. ಮಧುಮಾಸದಲ್ಲಿ ಹಾಗಿಲ್ಲದಿದ್ದರೆ ಮತ್ತಾವಗಲಾದರೂ ಅನುಕೂಲವಾದಾಗ ಉತ್ಸವವನ್ನು ಮಾಡಬೇಕೆಂದು ನಿಯಮಿಸಿದನು. ಶಾಸನದಲ್ಲಿ ಒಂದರಿಂದ ಒಂಭತ್ತರವರೆಗೆ ಅಂಕಗಳನ್ನು ಬಳಸಿರುವುದು ವಿಶೇಷವಾಗಿದೆ. (ಬಾ.ರಾ. ಗೋಪಾಲ್, ೧೯೮೩, ಬನವಾಸಿ ಕದಂಬರು, ಇತಿಹಾಸ ಮಾಲೆ-೧, ಕದಂಬ ಸಾಂಸ್ಕೃತಿಕ ಅಧ್ಯಯನ ಸಂಸ್ಥೆ, ಶಿರಸಿ, ಉತ್ತರ ಕನ್ನಡ ಜಿಲ್ಲೆ)

ಶಾಸನದಲ್ಲಿ ಉಲ್ಲೇಖವಾಗಿರುವ ಹಲವು ಕಟ್ಟಡಗಳ ಕುರುಹುಗಳನ್ನು ಪತ್ತೆ ಹಚ್ಚಲು ಭಾರತೀಯ ಪುರಾತತ್ವ ಸರ್ವೇಕಣೆ ಇಲಾಖೆಯು ೧೯೮೮ ರಿಂದ ಕೆಲವು ವರ್ಷಗಳ ಕಾಲ ಉತ್ಖನನ ಕೈಗೊಂಡಿತು. ಉತ್ಖನನದ ಪ್ರಮುಖ ಉದ್ದೇಶವು (ಅ) ಹುದುಗಿ ಹೋಗಿರಬಹುದಾದ ಕಟ್ಟಡಗಳ ಅವಶೇಷಗಳನ್ನು ಬೆಳಕಿಗೆ ತರುವುದು (ಆ) ವಿವಿಧ ಕಟ್ಟಡಗಳ ತಳ ವಿನ್ಯಾಸ, ನಿರ್ಮಾಣ ವಿಧಾನ ಮತ್ತು ಉಪಯೋಗ ಹಾಗೂ (ಇ) ಉತ್ಖನನದಿಂದ ಬೆಳಕಿಗೆ ಬರಬಹುದಾದ ಕಟ್ಟಡಗಳನ್ನು ಶಾಸನದಲ್ಲಿ ಉಲ್ಲೇಖವಾಗಿರುವ ಅಂಶಗಳೊಂದಿಗೆ ತಾಳೊನೋಡುವುದು ಸೇರಿತ್ತು. (೧೯೯೦-೯೧, ಇಂಡಿಯನ್ ಆರ್ಕಿಯಾಲಜಿ, ಎ ರಿವಿವ್ಯೂ) ಉತ್ಖನನದಲ್ಲಿ ದೊರೆತಿರುವ ನಾಟ್ಯ ಶಾಲೆಗಳ ಕಟ್ಟಡಗಳ ತಲ ವಿನ್ಯಾಸವನ್ನು ಈ ಪ್ರಬಂಧದಲ್ಲಿ ಚರ್ಚಿಸಲು ಉದ್ದೇಶಿಸಲಾಗಿದೆ.

ಉತ್ಖನನದಲ್ಲಿ ಎರಡು ಹಂತಗಳ ನಿರ್ಮಾಣ ಕಂಡು ಬಂದಿದೆ. ಮೊದಲ ಹಂತದಲ್ಲಿ ಆದಿ ಕದಂಬರ ಕಾಲದ ಇಟ್ಟಿಗೆ ಕಟ್ಟಡ ಮತ್ತು ಎರಡನೆಯ ಹಂತದಲ್ಲಿ ಕಲ್ಯಾಣ ಚಾಲುಕ್ಯರ ಕಾಲದ ಜಂಬಿಟ್ಟಿಗೆ (ಲ್ಯಾಟರೈಟ್ ಇಟ್ಟಿಗೆ) ಕಟ್ಟಡ. ಉತ್ಖನನವನ್ನು ಎ, ಬಿ ಮತ್ತು ಸಿ ಎಂಬ ಮೂರು ಬ್ಲಾಕ್‌ಗಳಲ್ಲಿ


* #೭೭, ಮೊದಲ ಅಡ್ಡರಸ್ತೆ, ಹೊಸಮನೆ ಬಡಾವಣೆ, ಶಿವಮೊಗ್ಗ-೫೭೭೨೦೧.







ಆದಿ ಕದಂಬರ ಶಾಸನಗಳು–ಈಚಿನ ಶೋಧಗಳು



ನಾಟ್ಯ ಮಂಟಪ



ಅಧಿಷ್ಠಾನ



ಮರದ ಕಂಭದ ಸ್ಥಳ

ಪರಿಗಣಿಸಲಾಗಿದೆ. ಉತ್ಖನನದಲ್ಲಿ ದೊರೆತ ತಳ ವಿನ್ಯಾಸದ ನಕ್ಷೆಯನ್ನು ೧೯೯೪-೯೫ರ ವರದಿಯಲ್ಲಿ ನೀಡಲಾಗಿದೆ. ಎ ಬ್ಲಾಕ್ ನಲ್ಲಿ ಮನ್ಮಥ ದೇವಾಲಯ (ಕಟ್ಟಡ ೧) ಮತ್ತು ತೆರೆದ ಅಂಕಣ (ಕಟ್ಟಡ ೫) ಕಂಡುಬಂದಿವೆ. ಬಿ ಬ್ಲಾಕ್ ನಲ್ಲಿ ನಾಟ್ಯ ಮಂಟಪ ೧ (ಕಟ್ಟಡ ೩) ಮತ್ತು ನಾಟ್ಯ ಮಂಟಪ ೨ (ಕಟ್ಟಡ ೪) ಕಂಡುಬಂದಿವೆ. ಸಿ ಬ್ಲಾಕ್ ನಲ್ಲಿ ರಾಜರ ಅಂತಃಪುರ, ಪ್ರಾಕಾರ ಮತ್ತು ಇನ್ನಿತರ ಕಟ್ಟಡಗಳು (ಕಟ್ಟಡ ೬, ೭, ೮, ೯ ಮತ್ತು ೧೦) ಕಂಡುಬಂದಿವೆ.

ಡಾ. ಬಾ.ರಾ. ಗೋಪಾಲ್ ಅವರು ಗುಡ್ನಾಪುರ ಶಾಸನದಲ್ಲಿ ಉಲ್ಲೇಖವಾಗಿರುವ ಮನ್ಮಥವೇಶ್ಮವು ಗೊಮ್ಮಟ ಅಥವಾ ಬಾಹುಬಲಿ ದೇವಾಲಯ ಇರಬೇಕೆಂದು ತರ್ಕಿಸಿದ್ದರು. ಡಾ. ಎಸ್.ಜಿ. ಸಾಮಕ್ ಅವರು ಗೊಮ್ಮಟ ಸಂಸ್ಕೃತ ಪದ ಮತ್ತು ಮನ್ಮಥ ಎನ್ನುವುದ ಅದರ ತದ್ಭವ. ಶಾಸನದಲ್ಲಿ ಉಲ್ಲೇಖವಾಗಿರುವ ಈ ದೇವಾಲಯದ ಪಕ್ಕದಲ್ಲಿ ಅರಮನೆ, ಅಂತಃಪುರ, ನೃತ್ಯ ಶಾಲೆಗಳು ಮತ್ತು ವರ್ಷಕ್ಕೊಮ್ಮೆ ಆಚರಿಸಲಾಗುತ್ತಿದ್ದ ವಸಂತೋತ್ಸವ ಮತ್ತು ಶಾಸನದಲ್ಲಿ ಉಲ್ಲೇಖವಾಗುವ ಮನ್ಮಥನ ಪಂಚ ಪರ್ವಗಳು (ದಕ್ಷಿಣಾನಿಲಯ, ದುಂಬಿ, ಕೋಗಿಲೆ, ಮಧು ಮತ್ತು ಪುಷ್ಪ) ಈ ದೇವಾಲಯದ ಬಾಹುಬಲಿಗಾಗಿ ಎಂದು ಪರಿಗಣಿಸುವ ಬದಲಿಗೆ ಮನ್ಮಥನಿಗಾಗಿ ಕಟ್ಟಿರಬಹುದೆಂದು ಊಹಿಸಿದ್ದಾರೆ. ವಸಂತೋತ್ಸವದ ಸಂದರ್ಭದಲ್ಲಿ ಕದಂಬರ ರಾಜಪರಿವಾರವು ಬನವಾಸಿಯಿಂದ ಗುಡ್ನಾಪುರಕ್ಕೆ ಬಂದು ನೃತ್ಯ ವಿನೋದ ಗಳಿಂದ ಮನ್ಮಥನನ್ನು ಆರಾಧಿಸುತ್ತಿರಬೇಕು ಎಂದು ಹೇಳುತ್ತಾರೆ. (ಡಾ. ಎಸ್.ಜಿ. ಸಾಮಕ, ೧೯೯೭, ಕದಂಬ ಅಧ್ಯಯನ, ಗುಡ್ನಾಪುರ – ಒಂದು ಪರಿಚಯ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆ, ಮೈಸೂರು).

ನೃತ್ಯ ಶಾಲೆಗಳನ್ನು ಉಲ್ಲೇಖಿಸುವ ಶಾಸನದ ಪ್ರಮುಖ ಸಾಲುಗಳಿ ಹೀಗಿವೆ: "**. . . . ತೇನ ವೇಶ್ಮ ಮನ್ಮಥಸ್ಯೇದಮ್ ರವಿಣಾ ಕಿಪತಿನ್ದ್ರೇಣ ಕಾರಿತ್ರಮ್ ॥ ದಕ್ಷಣೇಸ್ಯ ರಾಜವಾಸ ರ್ಗರಹಮ್[ವಾ]ಮೇ ತಥಿಸ್ಯಃ ಪುರೋಲಲಸ[ತ್]ನೃತ್ತ ಶಾಲೇ ದ್ವೇ ಪ್ರಾಗ್ಭಾಗಮಾತ್ರಿತ್ಯ ವಿಷ್ಟತೇ ಕುಸುಮ ಗಂಧಮಾಭಿಃ ....**"

ದಕ್ಷಿಣದಲ್ಲಿ ರಾಜವಾಸ ಗೃಹ ಮತ್ತು ಎಡ ಭಾಗದಲ್ಲಿ ನೃತ್ಯ ಗೃಹಗಳಿವೆ ಎಂಬುದು ಈ ಸಾಲುಗಳ ಸಾರಾಂಶ. ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯವರು ಹಾಲಿ ಇರುವ ವೀರಭದ್ರ ದೇವಾಲಯದ ಮುಂಬಾಗದಲ್ಲಿ ಉತ್ತರಕ್ಕೆ ಮುಖ ಮಾಡಿ ನಿಂತಾಗ ಎಡಗಡೆ ದೊರೆತಿರುವ ಕಟ್ಟಡ ೧ ನ್ನು ಮನ್ಮಥ ದೇವಾಲಯ ಎಂದು ಪರಿಗಣಿಸಿ ಕಟ್ಟಡ ೨ ಮತ್ತು ೪ನ್ನು ನಾಟ್ಯ ಮಂಟಪಗಳೆಂದು ಗುರ್ತಿಸಿದ್ದಾರೆ. ವೀರಭದ್ರ ದೇವಾಲಯದ ದಕ್ಷಿಣಕ್ಕೆ ಇರುವ ಕಟ್ಟಡಗಳನ್ನು ರಾಜನ ಅಂತಃಪುರಕ್ಕೆ ಸೇರಿದ ಕಟ್ಟಡಗಳಾಗಿರಬೇಕು ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಮನ್ಮಥ ದೇವಾಲಯದ (ಕಟ್ಟಡ ೧) ಗರ್ಭಗೃಹ ೩.೪೦ ಮೀ ಅಗಲ ಮತ್ತು ೩.೦೦ ಮೀ ಉದ್ದ ಇದ್ದು ಇದರ ಮುಂಬಾಗದಲ್ಲಿ ೩.೪೦ ಮೀ ಅಗಲ ಮತ್ತು ೫.೭೦ ಮೀ ಉದ್ದದ ಹತ್ತು ಕಂಬಗಳನ್ನೊಳಗೊಂಡ ತೆರೆದ ಮಂಡಪ ಹಾಗೂ ೨.೦ ಮೀ. ಅಗಲ ಮತ್ತು ೧.೪೦ ಮೀ. ಉದ್ದದ ತೆರೆದ ಮುಖಮಂಡಪ ಹೊಂದಿದ ವಿವರ ವರದಿಯಲ್ಲಿದೆ. ಕಟ್ಟಡ ೩ ಮತ್ತು ೪ ಸರಿ ಸುಮಾರು ಚೌಕಾಕಾರವಾಗಿದ್ದು ೫.೯೦ ಮೀ ಅಗಲ ಮತ್ತು ೬.೪೦ ಮೀ. ಉದ್ದ ಇವೆ ಹಾಗೂ ಇವೇ ಎರಡು ನಾಟ್ಯ ಮಂಟಪಗಳಾಗಿರಬಹುದು ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಭರತನ ನಾಟ್ಯಶಾಸ್ತ್ರದಲ್ಲಿ ಉಲ್ಲೇಖವಾಗಿರುವ ನಾಟ್ಯ ಮಂಟಪಗಳ ವಿನ್ಯಾಸವನ್ನು ಗಮನಿಸೋಣ. ಮೂರು ಬಗೆಯ ತಳ ವಿನ್ಯಾಸಗಳಿವೆ. ಅವು ವಿಕೃಷ್ಟ (ದೀರ್ಘ), ಚತುರಶ್ರ (ಚೌಕಾಕಾರ) ಮತ್ತು ತ್ರಶ್ರ (ತ್ರಿಕೋಣಾಕಾರ). ಸಾಮಾನ್ಯವಾಗಿ ನಾಲ್ಕು ಅಂಗಗಳಿರುತ್ತವೆ. ನೇಪಥ್ಯ ಗೃಹ, ರಂಗ ಶೀರ್ಷ, ರಂಗ ಪೀಠ ಮತ್ತು ಪ್ರೇಕ್ಷಕರು. ೩೨ ಹಸ್ತ ಅಗಲ ಮತ್ತು ೬೪ ಹಸ್ತ ಉದ್ದದ ಎರಡು ಬಗೆಯ ದೀರ್ಘ ರಚನೆಯ ನಾಟ್ಯ ಮಂಟಪಗಳಿರಬಹುದು. ೬೪ ಹಸ್ತ ಅಗಲ ಮತ್ತು ಉದ್ದವಿರುವ ಚೌಕಾಕಾರ ಅಳತೆಯ ನಾಟ್ಯ ಮಂಟಪವಿರಬಹುದು. ೬೪ ಹಸ್ತ ಅಗಲ ಮತ್ತು ೬೪ ಹಸ್ತ ಎತ್ತರವಿರುವ ತ್ರಿಕೋಣಾಕಾರದ ನಾಟ್ಯ ಮಂಟಪವಿರಬಹುದು. ಮೂರು ಮಾದರಿಯ ತಳ ವಿನ್ಯಾಸಗಳಿಗಾಗಿ ನಕ್ಷೆಯನ್ನು ನೋಡಿ. (ಶ್ರೀರಂಗ, ೧೯೮೨, ನಾಟ್ಯಶಾಸ್ತ್ರದಲ್ಲಿ ನಾಟ್ಯಮಂಟಪ, ನೀನಾಸಮ್ ರಂಗ ಶಿಕ್ಷಣ ಕೇಂದ್ರ, ಅಕ್ಷರ ಪ್ರಕಾಶನ, ಸಾಗರ)

ಗುಡ್ನಾಪುರ ಉತ್ಖನನದಲ್ಲಿ ದೊರೆತಿರುವ ಕಟ್ಟಡಗಳ ತಳ ವಿನ್ಯಾಸ ಮತ್ತು ಭರತನ ನಾಟ್ಯಶಾಸ್ತ್ರದಲ್ಲಿ ಉಲ್ಲೇಖವಾಗಿರುವ ನಾಟ್ಯ ಮಂಡಪಗಳ ತಳ ವಿನ್ಯಾಸಗಳನ್ನು ಸಮೀಕರಿಸಿ ಪರಿಶೀಲಿಸಬಹುದು. ಮನ್ಮಥ ದೇವಾಲಯ ಎಂದು ಗುರ್ತಿಸಿರುವ ಎ ಬ್ಲಾಕ್ ನಲ್ಲಿರವ ಕಟ್ಟಡ ೧ ದೀರ್ಘ ಅಳತೆಯ ನಾಟ್ಯ ಮಂಟಪ ಆಗಿರಬೇಕು. ನಾಟ್ಯ ಮಂಟಪದ ಸುತ್ತಲೂ ಸ್ವಲ್ಪ ತೆರೆದ ಜಾಗದ ನಂತರ ದಪ್ಪ ಗೋಡೆ ಇದೆ. ಪ್ರೇಕ್ಷಕರ ಸ್ಥಳವು ರಂಗಳವು ರಂಗಪೀಠಕ್ಕಿಂತ ತಗ್ಗಾಗಿದೆ. ಪ್ರೇಕ್ಷಕರ ಸ್ಥಳದಲ್ಲಿನ ಗೋಡೆಯಲ್ಲಿ ಅಲ್ಲಲ್ಲಿ ಕಂಬ ನೆಟ್ಟ ಕುರುಹುಗಳನ್ನು ಇಂದೂ ಕಾಣಬಹುದು. ರಾಜನು ಪ್ರಾಯಶಃ ಈ ಕಟ್ಟಡದ ದಕ್ಷಿಣ ಭಾಗದಲ್ಲಿದ್ದ ಅಂತಃಪುರದಿಂದ ಹೊರ ಬಂದು ಈ ಮಂಟಪದಲ್ಲಿ ನಡೆಯುತ್ತಿದ್ದ ಪ್ರದರ್ಶನವನ್ನು ವೀಕ್ಷಿಸುತ್ತಿರಬಹುದು. ಅಂತಃಪುರದ ಕಡೆ (ದಕ್ಷಿಣ





(೧೯೯೪-೯೫) ವರದಿ ಆಧಾರಿತ ಚಿತ್ರ
೧) ಮನ್ಮಥ ದೇವಾಲಯ, ೩ ಮತ್ತು ೪) ಮನ್ಮಥ ದೇವಾಲಯ
೫) ತೆರೆದ ಅಂಕಣ ೬, ೭) ಸೇವಕರ ವಸತಿಗೃಹಗಳು
೮) ಅಂತಃಪುರ ೯) ರಾಜರ ವಸತಿಗೃಹ ೧೦) ಪ್ರಾಕಾರ



ನಿಜ ಚಿತ್ರಣ

೧) ವೀರಭದ್ರ ದೇವಾಲಯ ೨) ರಾಜರ ವಸತಿಗೃಹ ೩) ನಾಟ್ಯ ಮಂಟಪ (ದೀರ್ಘಾಕಾರ) ೪) ನಾಟ್ಯ ಮಂಡಪ (ಚೌಕಾಕಾರ)





ಭಾಗದಲ್ಲಿ) ನಾಟ್ಯಮಂಟಪಕ್ಕೆ ಬರಲು ಮೆಟ್ಟಿಲುಗಳಿವೆ. ಪ್ರಾಯಶಃ ಇದು ಕೇವಲ ರಾಜ ಮನೆತನದವರಿಗಾಗಿ ಇದ್ದಿರಬೇಕು. ಪ್ರೇಕ್ಷಾಗೃಹದ ಉತ್ತರದಲ್ಲೂ ಮೆಟ್ಟಿಲುಗಳಿವೆ. ಈ ನಾಟ್ಯ ಮಂಟಪದ ಉತ್ತರಕ್ಕಿರುವ ಚೌಕಾಕಾರವಾಗಿರುವ ತಳ ವಿನ್ಯಾಸವು (ಕಟ್ಟಡ ೩) ಎರಡನೆಯ ನಾಟ್ಯ ಮಂಟಪ ಆಗಿರುವ ಸಾಧ್ಯತೆ ಇದೆ. ಪ್ರಾಯಶಃ ಇಲ್ಲಿ ಮಂತ್ರಿ ಮಂಡಲದ ಸದಸ್ಯರು ಮತ್ತು ಆಪ್ತರು ಪ್ರದರ್ಶನವನ್ನು ವೀಕ್ಷಿಸುತ್ತಿರಬಹುದು. ಭಾರತೀಯ ಪುರಾತತ್ತ್ವ ಸರ್ವೇಕ್ಷಣೆ ಇಲಾಖೆಯ ವರದಿಯಂತೆ ಕಟ್ಟಡ ೩ ಮತ್ತು ೪. ಎರಡು ನಾಟ್ಯ ಮಂಟಪಗಳಾಗಿರುವ ಸಾಧ್ಯತೆ ಕಡಿಮೆ. ಪ್ರಾಯಶಃ ಭಾರತದಲ್ಲೇ ದೊರೆತ ಏಕೈಕ ಶಾಸನಾಧಾರಿತ ನಾಟ್ಯ ಮಂಟಪಗಳ ತಳವಿನ್ಯಾಸ ಮತ್ತು ಅವಶೇಷ ಇದಾಗಿದೆ. ಕರ್ನಾಟಕದ ಹೆಮ್ಮೆಯ ಉತ್ಖನನ ಇದಾಗಿದೆ. ಈ ಅವಶೇಷವನ್ನು ಪ್ರಾಕೃತಿಕ ವಿಕೋಪಗಳಿಂದ ರಕ್ಷಿಸಿ ಮತ್ತು ಅದೇ ಸ್ಥಳದಲ್ಲಿ ಮೇಲಿನ ಪದರದಲ್ಲಿ ತಳವಿನ್ಯಾಸಗಳ ಪ್ರತಿರೂಪನ್ನು ಸಾರ್ವಜನಿಕರ ಅನುಕೂಲಕ್ಕೆ ಪ್ರದರ್ಶಿಸಬಹುದಾಗಿದೆ.

೫೪


ಕೋಲಾರದ ಪ್ರಾಚೀನ ಕೋಟೆಗಳು


ಡಾ. ಪಿ.ವಿ. ಕೃಷ್ಣಮೂರ್ತಿ*

ಕರ್ನಾಟಕದಲ್ಲಿ ಜನರು ಊರುಗಳನ್ನು ಕಟ್ಟಿಕೊಂಡು ನೆಲಸತೊಡಗಿದಾರಭ್ಯದಿಂದ ೧೯ನೆಯ ಶತಮಾನದವರೆಗೂ ಊರುಗಳ ಸುತ್ತಲೂ ರಕ್ಷಣೆಯ ಆವರಣಗಳನ್ನು ನಿರ್ಮಿಸಿಕೊಳ್ಳುತ್ತಿದ್ದುದ್ದು ಸಾಮಾನ್ಯ. ಹಿಂದಿನ ಕಾಲದಲ್ಲಿ ಮುಖ್ಯವಾಗಿ ರಾಜರ ರಾಜಧಾನಿ ಮತ್ತು ನೆಲೆವೀಡುಗಳಿಗೆ ಹಾಗೂ ಆಯಾ ರಾಜ್ಯದ ಗಡಿಯ ಪ್ರದೇಶಗಳಿಗೆ ಇಂತಹ ಕೋಟೆಗಳ ನಿರ್ಮಾಣ ಅವಶ್ಯವಾಗಿತ್ತು. ಪ್ರಾಚೀನ ರಾಜಮನೆತನಗಳು ತಮ್ಮ ರಾಜಧಾನಿಗಳಿಗಾಗಿ ಸ್ವಾಭಾವಿಕ ರಕ್ಷಣಾ ಪರಿಸರವುಳ್ಳ ಸ್ಥಳಗಳನ್ನು ಹಾರಿಸಿಕೊಂಡು ಜೊತೆಗೆ ಕೋಟೆಗಳನ್ನೂ ಕಟ್ಟಿಕೊಳ್ಳುತ್ತಿದ್ದರು. ಕನ್ನಡ ನಾಡಿನ ರಾಜಮನೆತಗಳ ಆಗುಹೋಗುಗಳಲ್ಲಿ ಮಹತ್ತರ ಪಾತ್ರವನ್ನು ವಹಿಸಿದ ಈ ಕೋಟೆಗಳು ಇಂದಿನ ಶಕ್ತಿ-ಸಾಧನೆಗಳ ಸಂಕೇತಗಳಾಗಿ ನಾನಾ ಕಡೆ ಚದುರಿ ನಿಂತಿವೆ.

ದಕ್ಷಿಣ ಕರ್ನಾಟಕದ ಇತಿಹಾಸದಲ್ಲಿ ಕೋಲಾರ ಸ್ಥಳವು ಕುವಳಾಲ, ಕುವಳಾಲಪುರ, ಕೊವಳಾಲ, ಕೋಳಾಲ ಎಂದು ಮುಂತಾಗಿ ಪ್ರಸಿದ್ಧವಾಗಿದ್ದು ಗಮನಾರ್ಹ ವಾದುದಾಗಿದೆ. ಅದು ನಂದಗಿರಿನಾಥರೆನಿಸಿಕೊಂಡಿದ್ದ ಕೊವಳಾಲ ಪುರವರೇಶ್ವರರೂ ಆಗಿದ್ದ ಗಂಗರಸ ಕೊಂಗುಣಿ ವರ್ಮನ ಸಂತತಿಯವರ ರಾಜಧಾನಿ ಎಂದು ಪ್ರಸಿದ್ಧಿ ಪಡೆದಿದ್ದಿತು. ಗಂಗರಸರ ಪ್ರಾಚೀನತಮ ಶಾಸನಗಳೆಲ್ಲಾ ಇಂದಿನ ಕೋಲಾರ ಜಿಲ್ಲಾ ಪ್ರದೇಶದ ಪರಿಸರದಲ್ಲೇ ಲಭ್ಯವಾಗಿರುವುದು ಹಾಗೂ ಆ ಪರಿಸರದ ಸ್ಥಳಗಳೇ ಉಲ್ಲೇಖಗೊಂಡಿರುವುದು ಕೂಡ ಗಮನ ಸೆಳೆಯುತ್ತದೆ. ಆದರೆ ಕೋಲಾರದಲ್ಲಿ ಪ್ರಾಚೀನ ಗಂಗರಸರಿಗೆ ಸಂಬಂಧಿಸಿದಂತೆ ಶಾಸನಗಳಾಗಲೀ, ಪ್ರಾಚ್ಯಾವಶೇಷಗಳಾಗಲೀ ಅಷ್ಟಾಗಿ ಲಭ್ಯವಾಗದಿರುವುದು ಇತಿಹಾಸಕಾರರ ಚರ್ಚೆಯ ವಿಷಯವಾಗಿದೆಯಾದರೂ ಈ ನಿಟ್ಟಿನಲ್ಲಿ ತಲಸ್ಪರ್ಶಿಯಾದ ಉತ್ಖನನ ಮತ್ತು ಕ್ಷೇತ್ರಕಾರ್ಯವನ್ನು ಆಧರಿಸಿದ ಅಧ್ಯಯನ ಗಳ್ಯಾವು ಸಾಕಷ್ಟು ಪ್ರಮಾಣದಲ್ಲಿ ವ್ಯವಸ್ಥಿತವಾಗಿ ನಡೆದಂತೆ ತೋರುತ್ತಿಲ್ಲ.

ಕೋಲಾರ ಜಿಲ್ಲಾ ಪ್ರದೇಶದ ಭೌಗೋಳಿಕ ಸ್ಥಿತಿಗತಿಗಳ ಬಗ್ಗೆ ಸ್ವಲ್ಪ ಯೋಚಿಸುವುದು ಉಚಿತವೆನಿಸುತ್ತದೆ. ಇದು ವಾಸ್ತವವಾಗಿ ಮಳೆ ನೆರಳಿನ ಪ್ರದೇಶ. ಹಾಗಾಗಿ ಇಲ್ಲಿ ಕನಿಷ್ಠ ಪ್ರಮಾಣದ ಮಳೆಯಷ್ಟೇ ಆಗುವುದು. ಅಲ್ಲದೆ ಯಾವುದೇ ಗಮನಾರ್ಹ ಜೀವನದಿಗಳು ಇಲ್ಲ. ಉತ್ತರ ಪಿನಾಕಿನಿ, ಪಾಲಾರ್‌ಗಳು ಕೇವಲ ಮಳೆಗಾಲದ ನದಿಗಳಷ್ಟೆ. ಆ ಕಾರಣದಿಂದಲೇ ಇರಬೇಕು ಕರ್ನಾಟಕದಾದ್ಯಂತ ಕಂಡುಬರುವ ತೀರ ಪ್ರಾಚೀನ ಕಾಲದ ಪ್ರಾಗೈತಿಹಾಸಿಕ ನೆಲೆಗಳು ಈ ಜಿಲ್ಲೆಯಲ್ಲಿಲ್ಲ. ದೊರೆತಿರುವ ಬಹುಮಟ್ಟಿನ ವೆಲ್ಲವೂ ನೂತನ ಶಿಲಾಯುಗದ ವಿವಿಧ ಕಾಲಘಟ್ಟಗಳಿಗೆ ಸೇರಿದವು ಮಾತ್ರವಾಗಿವೆ. ಅಂದರೆ ಮಾನವ ಪಶುಪಾಲನೆ, ಕೃಷಿಗಳನ್ನು ಆಶ್ರಯಿಸಿ ಜೀವನ ನಡೆಸಲು ಆರಂಭಿಸಿದ





* # ೩೭, 'ಶ್ರೀಕೃಷ್ಣಕೃಪೆ' ೩ನೇ ಅಡ್ಡರಸ್ತೆ, ಸುಬ್ಬಣ್ಣ ಲೇಔಟ್, ಹರಿನಗರ ಕ್ರಾಸ್, ಬೆಂಗಳೂರು-೫೬೦೦೬೨.

ಶಿಲಾಯುಗೀನ ನೆಲೆಗಳೇ ಅಧಿಕವಾಗಿದೆ. ದಕ್ಷಿಣ ಭಾರತದ ಮಧ್ಯಭಾಗದಲ್ಲಿರುವ ಈ ಕೋಲಾರ ಬೆಂಗಳೂರಿನಂತೆ ವಾಣಿಜ್ಯ ಮಾರ್ಗಗಳು ಸಂಧಿಸುವ ಎಡೆಯಾಗಿದ್ದಿತೆಂದು ತೋರುತ್ತದೆ. ಹಾಗಾಗಿ ಕೃಷಿಯ ಜೊತೆಗೆ ವಾಣಿಜ್ಯ ಚಟುವಟಿಕೆ ಕ್ಷೇತ್ರವಾಗಿ ಕೋಲಾರ ಪರಿವರ್ತಿತವಾಗಿತ್ತೆಂದು ಹೇಳಬಹುದಾಗಿದೆ. ಈ ಪ್ರದೇಶದಲ್ಲಿ ಪ್ರಾಚೀನ ಕಾಲದಲ್ಲೇ ಅತ್ಯುತ್ತಮವಾದ ವಾಸ್ತುಶಿಲ್ಪ ರಚನೆಗಳು ನಂದಿ, ಅವನಿ, ಕೋಲಾರ, ಕುರುಡುಮಲೆ, ಜೀತಮಂಗಲ, ಮಡಿವಾಳ ಮುಂತಾದ ಸ್ಥಳಗಳಲ್ಲಿ ತಲೆಯೆತ್ತಿರುವುದು ಗಮನ ಸೆಳೆಯುತ್ತವೆ. ಬರಗಾಲದ ಪ್ರದೇಶವಾದರೂ ಉತ್ತಮ ಮಟ್ಟದ ವಾಸ್ತು ರಚನೆಗಳು ತಲೆಯೆತ್ತಿರುವುದಕ್ಕೆ ಈ ವರ್ತಕರೇ ಮೊದಲಾದವರ ವಾಣಿಜ್ಯ ಚಟುವಟಿಕೆಗಳೇ ಕಾರಣವೆನ್ನಬಹುದು. ಇಲ್ಲಿನ ಹವಾಮಾನ ಈ ಪ್ರದೇಶದ ಜನರನ್ನು ಕಷ್ಟ ಸಹಿಷ್ಣುಗಳನ್ನಾಗಿಸಿ ಯಾವುದೇ ಕೆಲಸವನ್ನು ಹಟ ಹಿಡಿದು ಸಾಧಿಸುವಂತಹ ಗುಣವನ್ನು ಉಂಟು ಮಾಡಿದೆ ಎಂದರೆ ತಪ್ಪಾಗಲಾರದು. ಅಷ್ಟೇ ಅಲ್ಲ ಈ ಜಿಲ್ಲೆಯ ಬಂಗಾರುಪೇಟೆ ಪ್ರದೇಶ ಬಹು ಪ್ರಾಚೀನ ಕಾಲದಲ್ಲೇ ಪೊನ್ನುಗ್ಗಂದ ಎಂಬ ಪ್ರದೇಶವನ್ನು ಒಳಗೊಂಡಿದ್ದು, ಚಿನ್ನ ದೊರೆಯುವ ಸ್ಥಳವಾಗಿ ರೂಪಿತಗೊಂಡಿತ್ತು. ಹಾಗಾಗಿ ಈ ಪ್ರದೇಶದ ಮೇಲೆ ಪ್ರತಿಯೊಬ್ಬ ಸಮಕಾಲೀನ ಶಕ್ತ ಅರಸನು ಆಕ್ರಮಣ ನಡೆಸಿರುವುದು ಕಂಡುಬರುತ್ತದೆ. ಹಾಗಾಗಿ ಈ ಪ್ರದೇಶದ ಮೇಲೆ ಹೋರಾಟಗಳು ಸಾಮಾನ್ಯವಾಗಿ ನಡೆಯುತ್ತಲೇ ಇದ್ದವೆಂದು ತೋರುತ್ತದೆ. ಇದಕ್ಕೆ ಸಾಕ್ಷಿಗಳಾಗಿ ಈ ಪ್ರದೇಶದಾದ್ಯಂತ ವಿಪುಲ ಸಂಖ್ಯೆಯ ವೀರಗಲ್ಲು ಸ್ಮಾರಕಗಳು ಹುಟ್ಟಿಕೊಂಡಿರುವುದೇ ಆಗಿದೆ. ಅವಾದರೂ ವೈವಿಧ್ಯಮಯವಾಗಿರುವುದನ್ನು ಕಾಣಬಹುದಾಗಿದೆ. ಒಂದು ದೃಷ್ಟಿಯಲ್ಲಿ ವೀರರಿಗೆ ಸ್ಮಾರಕಗಳನ್ನು ಹಾಕುವ ಪದ್ಧತಿ ಈ ಪ್ರದೇಶದಲ್ಲೇ ಆರಂಭವಾಗಿದ್ದಿರಬಹುದೆಂದು ತೋರುತ್ತದೆ. ಈ ಪ್ರದೇಶಕ್ಕೆ ಹೊಂದಿಕೊಂಡಿರುವ ಇಂದಿನ ತಮಿಳುನಾಡಿನ ಕೃಷ್ಣಗಿರಿ, ಧರ್ಮಪುರಿ, ವೆಲ್ಲೂರು ಹಾಗೂ ಆಂಧ್ರದ ಚಿತ್ತೂರು, ಅನಂತಪುರ ಜಿಲ್ಲಾ ಪ್ರದೇಶಗಳಲ್ಲೂ ಕೋಲಾರ ಪ್ರದೇಶದಂತೆ ಅಧಿಕ ಸಂಖ್ಯೆಯ ವೀರಗಲ್ಲು ಸ್ಮಾರಕಗಳಿರುವುದನ್ನು ವಿದ್ವಾಂಸರು ಗಮನಿಸಿದ್ದಾರೆ.

ಗಂಗರಸರು ಈ ಕೋಳಾಲದ ಮೇಲೆ ತಮ್ಮ ಪ್ರಭುತ್ವವನ್ನು ಸ್ಥಾಪಿಸುವುದಕ್ಕೆ ಮೊದಲು ಇದು ಯಾರ? ಆಳ್ವಿಕೆಗೆ ಒಳಪಟ್ಟಿದ್ದಿತೆಂಬ ಪ್ರಶ್ನೆಯೂ ಇದೆ. ಈ ಹಿನ್ನೆಲೆಯಲ್ಲಿ ಈ ಪ್ರದೇಶವನ್ನು ಗಂಗರಿಗೂ ಮೊದಲು ಬಾಣರಸರು ಆಳುತ್ತಿದ್ದರೆಂದು ಹೇಳಬಹುದಾಗಿದೆ. ಈ ಬಾಣರಸರಾದರೂ ಬೃಹತ್ ಬಾಣರೆಂದು ಕದಂಬರ ತಾಳಗುಂದ ಶಾಸನದಲ್ಲಿ ಉಕ್ತವಾಗಿರುವವರೇ ಆಗಿದ್ದಾರೆ. ಕದಂಬ ಕಾಕುಸ್ಥವರ್ಮ ಕಾಲದಲ್ಲಿ ಈ ಬಾಣರಸರ ಸಮಕ್ಷಮದಲ್ಲೇ ಹಲ್ಮಿಡಿ ಶಾಸನದ ವೀರನಾದ ವಿಜರಸನೆಂಬ ವೀರನಿಗೆ ಬಾಳಗಚ್ಚುದತ್ತಿ ಬಿಟ್ಟಿರುವುದು. ಮೊದಲಿಗೆ ಬಾಣರಸರು ಹಾಗೂ ಗಂಗರಸರಿಬ್ಬರೂ ಪಲ್ಲವರ ಸಾಮಂತರಾಗಿದ್ದರು. ಪಲ್ಲವರ ನೆಚ್ಚಿನ ಸಾಮಂತರಾಗಿದ್ದ ಬಾಣರಸರು ಕದಂಬರ ಪಕ್ಷ ವಹಿಸಿದ್ದರಿಂದ ಪಲ್ಲವರು ಅವರನ್ನು ನಿಗ್ರಹಿಸಲೆಂದೇ ಕೊಂಗುನಾಡಿನ ಅಧಿಪತಿಗಳಾಗಿದ್ದ ಕೊಂಗುಣಿ ಅರಸರನ್ನು ನೇಮಿಸಿದನೆಂದು ಹೇಳಬಹುದು. ಆಗ ಅಂದರೆ ಕ್ರಿ.ಶ. ೩೫೦–೪೦೦ರ ಸುಮಾರಿಗೆ ಗಂಗರಸರಾದ ಕೊಂಗುಣಿವರ್ಮನು ನಂದಿಗಿರಿಯನ್ನು ಗೆದ್ದು ಆಗ್ಗೆ ನಂದಿಗಿರಿನಾಥರೆಂದೂ, ಪರವಿಪುರವರೇಶ್ವರರೆಂದೂ ಖ್ಯಾತರಾಗಿದ್ದ ಬಾಣರಸರನ್ನು ಈ ಪ್ರದೇಶದಿಂದ ಅಟ್ಟಿದರು. ಆಗ ಬಾಣರಸರು ಉತ್ತರಕ್ಕೆ ಸಾಗಿ ಅನಂತಪುರ ಜಿಲ್ಲೆ ಪೆದ್ದವಡಗೂರು, ಜೇತಪಲ್ಲಿ, ಕಡಪ, ಕರ್ನೂಲ್ ಪ್ರದೇಶಗಳಿಗೆ ಹೋಗಿ ನೆಲೆಸಿರುವುದಕ್ಕೆ ಸಾಕ್ಷಿ ಅವರ ಪ್ರಾಚೀನತಮ ಶಾಸನಗಳು ಆ ಪ್ರದೇಶದಲ್ಲಿ ಅದರಲ್ಲೂ ಕನ್ನಡ ಭಾಷೆಯಲ್ಲೇ ಲಭ್ಯವಾಗಿರುವುದು ಗಮನಾರ್ಹ ಅಂಶವಾಗಿದೆ. ಇದಕ್ಕೆ ಪೂರಕವಾಗಿ ದೊಡ್ಡಬಳ್ಳಾಪುರದ ಶಾಸನ ಕೊಂಗುಣಿವರ್ಮನನ್ನು 'ಬಾಣಕುಲವಿಗ್ರಹ' ವರ್ಣಿಸಿದೆ. 'ಕೊಂಗಣಿ ನಾಮಧೇಯೋ ಯೋ ಬಾಣಮಂಡಲ ಜಯಾಯ ಕೃತಾಭಿಷೇಕಃ' ಎಂದು ಶಾಸನವೊಂದು ಉಲ್ಲೇಖಿಸುತ್ತದೆ. (೩೫೦–೪೨೫) IA xiii pp. 187.

ಪೆನುಗೊಂಡ ತಾಮ್ರಶಾಸನದಲ್ಲಿ ಪಲ್ಲವ ಸಿಂಹವರ್ಮನಿಂದ ಕೊಂಗಣಿವರ್ಮನ ಮೊಮ್ಮಗ ಆಯ್ಯವರ್ಮ ಮತ್ತು ಪಲ್ಲವಸ್ಕಂದವರ್ಮನಿಂದ ಗಂಗ ಇಮ್ಮಡಿ ಮಾಧವರು ಪಟ್ಟಾಭಿಷಿಕ್ತರಾದ ವಿವರವಿದೆ. 'ಬಾಣಾತಿಗಹನ ಕಕ್ಷ ಪ್ರಾಹಿದಾವಾಗ್ನೇಹ' (ಬಾಣವಂಶ ಮೂಲೋತ್ಪಾಟನ ಕಾಡು ಕಿಚ್ಚು) ಎಂಬುದಾಗಿ ಮಲ್ಲೊಹಳ್ಳಿ ತಾಮ್ರಪಟದಲ್ಲಿ ಹೊಗಳಿದೆ. ಹೀಗೆ ಗಂಗರು ಆರಂಭದಲ್ಲಿ ಪಲ್ಲವ ಮಾಂಡಲಿಕರಾಗಿ ಬಾಣರ ಮೇಲೆ ಆಕ್ರಮಣ ಮಾಡಿ ವಿಜಯ ಸಾಧಿಸಿ ಬಾಣರು ಆಳುತ್ತಿದ್ದ 'ಕುವಳಾಲಪುರ', 'ಪರವಿ' ಪ್ರದೇಶಗಳನ್ನು ಆಕ್ರಮಿಸಿ ಪ್ರಭುಗಳಾದರು. ಆಗ ನಂದಗಿರಿ, ಪರುವಿ ಪ್ರದೇಶಗಳು ನೇರವಾಗಿ ಗಂಗರ ವಶದಲ್ಲಿದ್ದುದಕ್ಕೆ ಆಧಾರವಾಗಿ ಗಂಗರ ಹಲವು ಪ್ರಾಚೀನ ಶಾಸನಗಳಲ್ಲಿರುವುದು ಗಮನ ಸೆಳೆಯುತ್ತದೆ. ಆದ್ದರಿಂದ ಗಂಗರು ಬಾಣರನ್ನು ಅವರ ಮೂಲಸ್ಥಾನದಿಂದ ಉಚ್ಚಾಟನೆಗೊಳಿಸಿದರು ಎಂಬುದು ಖಚಿತವಾಗುತ್ತದೆ. ಅಲ್ಲದೆ ದೇವರಹಳ್ಳಿ ತಾಮ್ರಪಟಗಳು ನಿರ್ಗುಣದ ಯುವರಾಜ ದುಂಡು ಎಂಬುವನಿಂದ ಬಾಣಕುಲವು ನಿಗ್ರಹಗೊಳಿಸಲ್ಪಟ್ಟಿತೆಂದು ತಿಳಿಸುತ್ತದೆ. ಹೀಗೆ ಗಂಗಪೂರ್ವ ಕಾಲದಲ್ಲೇ





















ಪ್ರಸಿದ್ಧಿಯನ್ನು ಪಡೆದಿದ್ದ ಕೋಳಾಲವು ಒಂದು ಆಯಕಟ್ಟಿನ ಸ್ಥಾನದಲ್ಲಿದ್ದಿತ್ತೆಂದು ಹೇಳಬಹುದು. ಹಾಗಾಗಿ ಬಾಣರ ನಂತರ ಗಂಗರು ಇಲ್ಲಿ ನೆಲೆಗೊಂಡರು. ಹಾಗೆ ನೆಲೆಗೊಳ್ಳಲು ಇಲ್ಲಿನ ಬೆಟ್ಟಗಳು ಅವರಿಗೆ ಆಶ್ರಯವನ್ನು ಒದಗಿಸಿರಬೇಕು.

ಬೆಟ್ಟದ ಪೂರ್ವ ತಪ್ಪಲು ಪ್ರದೇಶವನ್ನು 'ಕೀಲುಕೋಟೆ' ಎಂದು ಕರೆಯುತ್ತಾರೆ. ಅಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಗೆ ಸಂಬಂಧಿಸಿದ ಘೋರಿ ನೆಲೆಯಿದ್ದು, ಶಿಲಾವೃತ್ತಗಳು ಕಂಡುಬಂದಿವೆ. ಹಾಗೆಯೇ ಬೆಟ್ಟದ ಮೆಲಿನ ತೇರಹಳ್ಳಿಯಲ್ಲೂ ಬೃಹತ್ ಶಿಲಾಯುಗದ ಸಂಸ್ಕೃತಿಯ ನೆಲೆಗಳು ಕಂಡುಬಂದಿವೆ. ಅಲ್ಲದೆ ಕೋಲಾರದ ಸ್ಥಳದಲ್ಲೂ ಅದೇ ಸಂಸ್ಕೃತಿಯ ನೆಲೆಗಳಿದ್ದು, ತಿಳಿಕಂದು, ಕಪ್ಪು-ಕೆಂಪು, ತಿಳಿಗೆಂಪು, ಪೂರ್ಣ ಕಪ್ಪು ವರ್ಣದ ಮಡಕೆ ಭಾಗಗಳು, ಶಿಲಾವೃತ್ತಗಳು ಹಾಗೂ ಕಲ್ಗುಪ್ಪೆ ಘೋರಿಗಳು ಕಂಡುಬಂದಿವೆ. ನೆರೆಯ ಕೊಂಡರಾಜನಹಳ್ಳಿ, ಕೊಂಗರಾಜನಹಳ್ಳಿ, ಗರುಡನಹಳ್ಳಿಯಲ್ಲೂ ಇದೇ ಸಂಸ್ಕೃತಿಗೆ ಸೇರಿದ ಖಂಡಿಕೋಣೆ ಮತ್ತು ಶವಕುಣಿ ಮಾದರಿಗಳು ಹಾಗೂ ನಿಲಸುಗಲ್ಲು ದೊರೆತಿವೆ. ಬೆಟ್ಟದ ಮೇಲಿನ ತೇರಹಳ್ಳಿಯಲ್ಲಿ ಘೋರಿ ನೆಲೆಯಿದ್ದು, ಶಿಲಾವೃತ್ತಗಳು ಕಂಡುಬಂದಿವೆ. ಕೋಲಾರದ ಬೆಟ್ಟವು ಬಹು ಪ್ರಾಚೀನ ಕಾಲದಲ್ಲೇ ಜನವಸತಿಯ ನೆಲೆಯಾಗಿ ಅನೇಕ ಗ್ರಾಮಗಳ ತಾಣವಾಗಿ ಪರಿವರ್ತಿತವಾಗಿತ್ತು. ಈ ಗ್ರಾಮಗಳಾದರೂ ಸ್ವರಕ್ಷಣೆಯ ದೃಷ್ಟಿಯಿಂದ ಕೋಟೆ-ಕೊತ್ತಲುಗಳನ್ನು ಹೊಂದಿದ್ದವು. ಬಾಣರಸರು-ಗಂಗರಸರು ತಮ್ಮ ಆಳ್ವಿಕೆಯ ಕಾಲದಲ್ಲಿ ಅವರು ಇಲ್ಲೇ ತಮ್ಮ ರಕ್ಷಣಾ ಗಿರಿದುರ್ಗಗಳನ್ನು ರಚಿಸಿಕೊಂಡಿದ್ದರೆಂದು ಹೇಳಬಹುದು. ಈ ಬೆಟ್ಟದ ಮೇಲೆ ಕ್ಷೇತ್ರಕಾರ್ಯ ಮಾಡಿದಾಗ ಅನೇಕ ಕಡೆಗಳಲ್ಲಿ ಕೋಟೆಯ ಗೋಡೆಗಳು ಅಳಿದುಳಿದಿರುವುದು ಕಂಡುಬರುತ್ತದೆ. ಇಲ್ಲಿನ ಬಹುತೇಕ ಕೋಟೆಯ ಗೋಡೆಗಳು ಇತ್ತೀಚೆಗೆ ಬೆಟ್ಟದ ಮೇಲಕ್ಕೆ ರಸ್ತೆ ಮಾಡಲು ಉಪಕ್ರಮಿಸಿದ ನಂತರವೇ ನಾಶವಾದವೆಂದು ಸ್ಥಳೀಯರ ಹೇಳಿಕೆ. ಈಗ ಬೆಟ್ಟದ ಮೇಲೆ ಕಂಡುಬರುವ ಸ್ಥಳಗಳೆಂದರೆ : ತೇರುಹಳ್ಳಿ, ಶಿವಗಂಗೆ, ಪಾಪರಾಜನಹಳ್ಳಿ, ಕೋಟೆಗೌಡನಹಳ್ಳಿ, ಹೊಸಹಳ್ಳಿ, ಕುಪ್ಪಹಳ್ಳಿ. ಈ ಸ್ಥಳಗಳಿಗೆ ಹೋಗುವ ರಸ್ತೆ ಕಾಲುದಾರಿಯಲ್ಲಿ ಅಲ್ಲಲ್ಲೇ ಪ್ರಾಚೀನ ವಾಸ್ತು ರಚನೆಗಳಾದ ಮಂಟಪಗಳು ಕಂಡುಬರುತ್ತವೆ.









ಈ ಬೆಟ್ಟದ ಪೂರ್ವಕ್ಕೆ ಕೋಲಾರ ಸ್ಥಳವಿದೆ. ಕೋಲಾರದ ಸ್ಥಳದಲ್ಲೂ ವಿಸ್ತಾರವಾದ ಕೋಟೆಯೊಂದು ಇದ್ದುದರ ಕುರುಹುಗಳಿವೆ. ಸುಮಾರು ೪೦ ಮೀಟರ್ ಉದ್ದ, ೧೦೦ ಮೀಟರ್ ಅಗಲ ವ್ಯಾಪ್ತಿಯುಳ್ಳದ್ದಾಗಿದ್ದು ಪ್ರಸ್ತುತ ಇಂದಿನ ಗೌರಿಪೇಟೆ, ಕೋಟೆ ಪ್ರದೇಶ, ಕುರುಬರ ಪೇಟೆಯ ಭಾಗಗಳು, ಕೋಟೆ ಆಂಜನೇಯ ದೇವಾಲಯದ ಹಿಂಭಾಗಗಳು, ಸರ್ಕಾರಿ ಸಾರ್ವಜನಿಕ ಬಾಲಕರ ವಿದ್ಯಾರ್ಥಿ ನಿಲಯ, ಹಳೇಬಸ್‌ಸ್ಟ್ಯಾಂಡ್ ಪ್ರದೇಶಗಳು ಅಂತರ್ಗತವಾಗಿದ್ದವು.

ಬೆಟ್ಟ ಮತ್ತು ಊರಿಗೆ ಮಧ್ಯದ ಸ್ಥಳವನ್ನು ಈಗ 'ಕೀಲುಕೋಟೆ' ಪ್ರದೇಶವೆಂದು ಗುರುತಿಸುತ್ತಾರೆ. ಇದು 'ಕೀಳ್‌ಕೋಟೆ' ಅಂದರೆ ಕೆಳಗಿನ ಕೋಟೆ ಎಂಬುದರ ಸವೆದ ರೂಪ. ಈ ಪ್ರದೇಶದಲ್ಲಿ ಒಂದು ಕೆರೆ ಇದ್ದಿತು. ಈಗ ಅಲ್ಲಿ ಹೊಸ ಬಸ್ ನಿಲ್ದಾಣವಿದೆ. ಒಟ್ಟಾರೆ ಕೋಲಾರ ಪ್ರದೇಶದಲ್ಲಿ ಬೆಟ್ಟದ ಮೇಲಿನ ಮೇಲುಕೋಟೆ, ಬೆಟ್ಟದ ಬುಡದಲ್ಲಿದ್ದ ಕೀಳ್‌ಕೋಟೆ ಮತ್ತು ಊರನ್ನೊಳಗೊಂಡ ಊರ ಕೋಟೆಗಳೆಂಬ ಮೂರು ತೆರನಾದ ಕೋಟೆಗಳಿದ್ದವೆಂದು ಹೇಳಬಹುದಾಗಿದೆ.

ಕ್ರಿ.ಶ. ೧೮೦೧ ಏಪ್ರಿಲ್-ಜುಲೈಗಳಲ್ಲಿ ಕೋಲಾರವನ್ನು ಸಂದರ್ಶಿಸಿದ ಡಾ. ಫ್ರಾನ್ಸಿಸ್‌ಬುಕಾನನ್‌ನು ಈ ಸ್ಥಳವನ್ನು ಕುರಿತು ಈ ರೀತಿ ವರ್ಣಿಸಿದ್ದಾನೆ : 'ಕೋಲಾರದಲ್ಲಿ ಒಂದು ದೊಡ್ಡ ಮಣ್ಣಿನ ಕೋಟೆ ಇದೆ. ಅದನ್ನು ಈಗ ದುರಸ್ಥಿಗೊಳಿಸಲಾಗುತ್ತಿದೆ. ಪಟ್ಟಣದಲ್ಲಿ ೭೦೦ ಮನೆಗಳಿವೆ. ಅವುಗಳಲ್ಲಿ ಅನೇಕ ನೇಯ್ಗೆಯವರು ವಾಸಿಸುತ್ತಿದ್ದಾರೆ. ಇದು ಹೈದರಾಲಿಯ ಹುಟ್ಟೂರು. ಅವನ ತಂದೆ ಬದುಕಿ ಬಾಳಿದ್ದು ಇಲ್ಲೇ....ಪಟ್ಟಣದ ಉತ್ತರದಲ್ಲಿ ಹಿಂದೆ ದುರ್ಗ ಅಥವಾ ಗಿರಿದುರ್ಗದಲ್ಲಿ ಟಿರಂಗಜೇಬನ ಸೇನಾಪತಿ ಖಾಸಿಂಖಾನನು ವಾಸಿಸುತ್ತಿದ್ದನು. ಅವನೇ ಕೃಷ್ಣಾನದಿಯ ದಕ್ಷಿಣಕ್ಕೆ ಮುಸ್ಲಿಂರ ಆಕ್ರಮಣೆಯನ್ನು ೧೭ನೇ ಶತಮಾನದ ಕೊನೆಯಲ್ಲಿ ಆರಂಭಿಸಿದವನು. ಆಗ ಕೋಲಾರವು ಏಳು ಪರಗಣಗಳ ರಾಜಧಾನಿಯಾಗಿತ್ತು. ಹಿಂದೆ ಇದು ಬಿಜಾಪುರದ ಮುಸ್ಲಿಂ ರಾಜನಿಂದ ಆಕ್ರಮಿಸಲ್ಪಟ್ಟಿದ್ದು, ಮರಾಠರಿಗೆ ನೀಡಲಾಗಿತ್ತು. ಆ ಪರಗಣಗಳೆಂದರೆ ಶಿರಾ, ಬೂದಿಹಾಳು, ಬಸವಾಪಟ್ಟಣ, ಪೆನುಗೊಂಡ, ಹೊಸಕೋಟೆ ಮತ್ತು ಬುಡ್ಡಬಳ್ಳಾಪುರ. ಇವನ್ನು ಮುಸ್ಲಿಂರು 'ಶಿರಾ ಸುಭಾ' ಅಥವಾ ಕರ್ನಾಟಕ್ ಬಿಜಾಪುರಿ









[illegible] ಎಂದು ಕರೆದಿದ್ದರು. ಇತ್ತೀಚಿನ ಈ ಸಂಗತಿ [illegible] ಇಲ್ಲಿನವರಿಗೆ ತಿಳಿದಿಲ್ಲ. ಸಂಪೂರ್ಣವಾಗಿ ಮರೆತೇ ಬಿಟ್ಟಿದ್ದಾರೆ. ಹದಿನೆಂಟನೇ ಶತಮಾನದಲ್ಲಿ ಮರಾಠರು ಈ ಸ್ಥಳವನ್ನು ವಶಪಡಿಸಿಕೊಳ್ಳಲು ಹಲವು ಪ್ರಯತ್ನಗಳನ್ನು ಮಾಡಿದರು. ಆ ಪ್ರಯತ್ನಗಳ ಫಲವಾಗಿ ಕೋಟೆ ನಾಶವಾಯಿತು. ನಂತರದಲ್ಲಿ ಗಿರಿದುರ್ಗ ಪುನರ್‌ನಿರ್ಮಾಣವಾಗಲಿಲ್ಲ. ಬೆಟ್ಟದ ಮೇಲೆ ಹೊಲ, ತೋಟ, ಕೆರೆಗಳನ್ನು ಒಳಗೊಂಡ ನಾಲ್ಕು ಗ್ರಾಮಗಳಿವೆ. ಆ ಊರುಗಳ ಎಲ್ಲೆಗಳು ದೊಡ್ಡ ಕಲ್ಲುಬಂಡೆಗಳು, ದಟ್ಟ ಕಾಡುಮರಗಳಿಂದ ರಕ್ಷಿಸಲ್ಪಟ್ಟಿವೆ. ನೆಲ ಫಲವತ್ತಾಗಿದೆ. ತೋಟಗಳಿಗೆ ಅನುಕೂಲವಾಗುವಂತೆ ನೀರಿನ ವ್ಯವಸ್ಥೆ ಸನಿಹದಲ್ಲೇ ಲಭ್ಯವಾಗಿದೆ. ಸಾಮಾನ್ಯವಾಗಿ ಗಿರಿದುರ್ಗಗಳು ಅನಾರೋಗ್ಯಕರವೆಂದು ಭಾವಿಸಲಾಗಿದೆ. ಆದರೆ ಈ ಗಿರಿದುರ್ಗ ಅಂತಹದ್ದಾಗಿಲ್ಲ. ಇಲ್ಲಿನ ನಿವಾಸಿಗಳು ತುಂಬ ಆರೋಗ್ಯದಿಂದಿದ್ದಾರೆ.... ಮಟ್ಟವಾದ ಭೂಪ್ರದೇಶಕ್ಕಿಂತ ಹೆಚ್ಚಿನ ತೇವಾಂಶವನ್ನು ಬೆಟ್ಟವು ಆಕರ್ಷಿಸುವುದರಿಂದ ಗ್ರಾಮವು ಮಳೆಯ ಅನುಕೂಲವನ್ನು ಪಡೆದಿದೆ. ಯಾವುದೇ ಕೃತಕ ನೀರಾವರಿ ವ್ಯವಸ್ಥೆಯಿಲ್ಲದೆ ಕೆಲವು ಹೊಲಗಳಲ್ಲಿ ವಾರ್ಷಿಕವಾಗಿ ಭತ್ತ ಬೆಳೆಯುತ್ತಾರೆ. ಇಂತಹ ವಿಶಿಷ್ಟ ಹವಾಮಾನದಲ್ಲಿ ಇದು ಆಶ್ಚರ್ಯಕರ ಸಂಗತಿ. ಅಪರೂಪದ ಸಂಗತಿಯಾದರೂ ಬೆಟ್ಟದಲ್ಲಿ ಒಂದು ಕಡೆ ನೀರಿನ ಚಿಲುಮೆ ಇದೆ. ಅಲ್ಲಿ ಹಸುವಿನ ಮುಖದಿಂದ ನೀರು ಹರಿಯುವಂತೆ ಮಾಡಲಾಗಿದೆ. ಈ ಸ್ಥಳ ಪವಿತ್ರವೆಂದು ಜನ ಭಾವಿಸಿದ್ದಾರೆ. ನೆರೆಯಲ್ಲೇ ದುಃಸ್ಥಿತಿಯಲ್ಲಿರುವ ದೇವಾಲಯವೊಂದಿದೆ. ಇಲ್ಲಿ ವಾರ್ಷಿಕ ಜಾತ್ರೆಯೂ ನಡೆಯುತ್ತದೆ. ಜಾತ್ರೆಗೆ ೧೦ ಸಾವಿರಕ್ಕೂ ಹೆಚ್ಚಿನ ಜನರು ಬರುತ್ತಾರೆ (ಅಂತರಗಂಗೆ).

ಇಂತಹ ದುರ್ಗಮ ಸ್ಥಳಕ್ಕೆ ಹೋಗಿಬರಲು ಕಡಿದಾದ ಹಾಗೂ ಕಠಿಣ ಪರಿಸ್ಥಿತಿ ಇದ್ದರೂ ಅಲ್ಲಿ ಜನವಸತಿ ಇದೆ. ಅಲ್ಲದೆ ಬಡತನವು ಇದೆ. ಆದರೆ ಪ್ರತಿ ಗ್ರಾಮವೂ ರಕ್ಷಣಾ ಕೋಟೆಗಳನ್ನು ಪಡೆದಿವೆ. ಆಗಾಗ್ಗೆ ಬೇಡರಿಂದ ರಾತ್ರಿಯ ವೇಳೆ ಇದ್ದಕ್ಕಿದ್ದ ಹಾಗೆ ತುರುಗಳ ಕಳುವಾಗುವುದು ಸಾಮಾನ್ಯ. ಅಂತಹ ಸಂದರ್ಭಗಳಲ್ಲಿ ಆ ರಕ್ಷಣಾ ಗೋಪುರಗಳ ಬಳಿ ಒಬ್ಬಿಬ್ಬರು ಕಾವಲುಗಾರರನ್ನು ನೇಮಿಸುತ್ತಿದ್ದರು. ಕಳ್ಳ ಕಾಕರ ಹಾವಳಿ ಬಗ್ಗೆ ಸೂಚನೆಯು ದೊರೆತ ಕೂಡಲೇ ಗ್ರಾಮದ ಎಲ್ಲಾ ನಿವಾಸಿಗಳು ಆಯುಧಗಳೊಂದಿಗೆ ಕಾವಲು









ಗೋಪುರದ ಬಳಿ ಸೇರಿ ತುರುಗಳ್ಳರಾದ ಕಳ್ಳರನ್ನು ಎದುರಿಸುತ್ತಿದ್ದರು.' ಎಂಬ ವಿವರ ನೀಡಿದ್ದಾನೆ. ಹಾಗಾಗಿ ಈ ಮೇಲಿನ ಬುಖಾನನ್‌ನ ವಿವರಗಳಿಂದಲೇ ಕೋಲಾರದ ಬೆಟ್ಟಗಳ ಮೇಲೆ ಕೋಟೆಗಳಿದ್ದವು ಎಂಬುದು ಖಚಿತ ವಾಗುತ್ತದೆ.

ಈ ಬೆಟ್ಟದ ಮೇಲಿನ ತೇರಹಳ್ಳಿ ಗ್ರಾಮವು ಪಾಪರಾಜನಹಳ್ಳಿಯ ಉಪಗ್ರಾಮವಾಗಿದ್ದು, ಐತಿಹಾಸಿಕ ಮಹತ್ವವುಳ್ಳ ಸ್ಥಳವಾಗಿದೆ. ಇಲ್ಲಿ ಹೊಯ್ಸಳರ ಮಾಂಡಲೀಕ ವೀರ ಗಂಗರಸನ ಶಾಸನಗಳಲ್ಲಿ ಈ ಸ್ಥಳವನ್ನು ಕುವಳಾಲಂನ ಮುಚಕುಂದ ಗಿರಿಯ ಮೇಲಿರುವ 'ವೀರಗಂಗಪುರ' ಅಥವಾ 'ವೀರಗಂಗನಲ್ಲೂರು' ಎಂದು ಕರೆದಿದೆ. ಈ ಸ್ಥಳದಲ್ಲಿ ಗಂಗಾಧರೇಶ್ವರ ದೇವಾಲಯುವಿದೆ. ವಿಶಾಲವಾದ ಪುಷ್ಕರಣಿಯೂ ಇದೆ. ಶಿಥಿಲಾವಸ್ಥೆಯಲ್ಲಿರುವ ಇಲ್ಲಿನ ದೇವಾಲಯ ಹಾಗೂ ಮಹಾದ್ವಾರವು ಕೋಲಾರಮ್ಮನ ದೇವಾಲಯದ ಶೈಲಿಯನ್ನೇ ಹೋಲುತ್ತದೆ. ಮುಖ್ಯ ದೇವಾಲಯದ ಎಡಭಾಗದಲ್ಲಿ ಅಮ್ಮನವರ ದೇವಾಲಯವೂ ಇದೆ. ದೇವಾಲಯದಲ್ಲಿ ಸಪ್ತಮಾತೃಕೆ, ಭೈರವ, ಗಣಪತಿ ಮೊದಲಾದ ಗಂಗರ ಶೈಲಿಯ ಶಿಲ್ಪಗಳು ಕಂಡುಬರುತ್ತವೆ. ಇಲ್ಲಿ ಕ್ರಿ.ಶ. ೧೨೧೮ರಿಂದ ೧೩೨೧ರ ಅವಧಿಗೆ ಸೇರಿದ ಸುಮಾರು ಏಳೆಂಟು ಶಾಸನಗಳಿವೆ. ಅವು ಹೊಯ್ಸಳರ ಮಾಂಡಲೀಕರಾದ ವೀರಗಂಗ ಅಥವಾ ಉತ್ತಮ ಚೋಳಗಂಗ, ಪೊಳಲ್ ದಣ್ಣಾಯಕ ವಳ್ಳಾಲದೇವ, ವೆಟ್ಟುಮಾರಬಾಣ, ಕರಿಯ ಇರಮಯ್ಯನಾಯಕರ ಆಡಳಿತಕ್ಕೆ ಒಳಪಟ್ಟಿದ್ದುದನ್ನು ಉಲ್ಲೇಖಿಸುತ್ತವೆ. ವೀರಗಂಗನ ಮಗಳಾದ ಸೋಮಳಾದೇವಿಯ ಶಾಸನ ಪಾರ್ವತಿಯಮ್ಮನವರ ದೇವಾಲಯದ ತಳಪಾದಿಯಲ್ಲಿದೆ.

ಬೆಟ್ಟದ ಮೇಲಿನ ಅಂತರಗಂಗೆಯ ಸಮೀಪದಲ್ಲಿರುವ ಪಾಪರಾಜನಹಳ್ಳಿಯು ರಮಣೀಯ, ನೈಸರ್ಗಿಕ ದೃಶ್ಯಗಳನ್ನು ಹೊಂದಿರುವ ತಾಣವಾಗಿದೆ. ಇಲ್ಲಿನ ಶಿವದೇವಾಲಯವು ವಿಜಯನಗರೋತ್ತರ ಕಾಲದ್ದಾಗಿದೆ. ಶಿವಾಲಯದಲ್ಲಿ ಸುಂದರವಾದ ನರಸಿಂಹ ವಿಗ್ರಹವಿದೆ. ಇದರ ಎದುರಿಗೆ ಸುಮಾರು ೬' ಎತ್ತರ ೫' ವ್ಯಾಸವುಳ್ಳ ಸುಂದರ ಶಿಲಾಛತ್ರಿ ಇದೆ. ಇಲ್ಲಿಗೆ ಸಮೀಪದಲ್ಲೇ ಕೋತಿಕಲ್ಲು ಎಂದು ಕರೆಯುವ ಬಂಡೆಗಳ ನಡುವೆ ಭೂತಗೌಡನಗವಿ ಕಂಡುಬರುತ್ತದೆ. ಈ







ಗವಿಯಿಂದ ಪೂರ್ವಕ್ಕೆ ಭದ್ರವಾದ ಕೋಟೆಯನ್ನು ಮೊಗಲ್ ಸುಭೇದಾರನಾದ ಖಾಸಿಂಖಾನನು ನಿರ್ಮಿಸಿದನೆಂದು ಹೇಳುತ್ತಾರೆ. ಇದರ ಬಳಿಯ ಪೀರ್‌ಉಸ್ಮಾನಿ ಅಲಿ ಎಂಬುವರ ದರ್ಗಾ ಇದ್ದು, ವಾರ್ಷಿಕ ಉರುಸು ನಡೆಯುತ್ತದೆ.

ಗಂಗರಸರು ತಮ್ಮ ರಾಜಧಾನಿಯನ್ನು ಕೋಲಾರದಿಂದ ತಲಕಾಡಿಗೆ ಬದಲಿಸಿದ ಮೇಲೂ ಕೋಲಾರ ಒಂದು ಉಪರಾಜಧಾನಿಯಾಗಿ ಮುಂದುವರೆದಿತ್ತು. ಗಂಗ ರಾಜಕುಮಾರರು ಇಲ್ಲಿಂದ ರಾಜ್ಯಾಡಳಿತದ ಅನುಭವವನ್ನು [illegible] ಪಡೆದುಕೊಳ್ಳುತ್ತಿದ್ದರು. ಗಂಗರಾಜ್ಯ ಚೋಳರ ವಶವಾದಾಗಲೂ ಅದು ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಳ್ಳಲಿಲ್ಲ. ಇಲ್ಲಿನ ಕೋಲಾರಮ್ಮ ದೇವಾಲಯಕ್ಕೆ ಚೋಳರಸರ ಸೇವೆ ಸಂದಿದೆ. ಮುಂದೆ ಒಂದು ಶತಮಾನದ ನಂತರ ಹೊಯ್ಸಳ ವಿಷ್ಣುವರ್ಧನನು ಚೋಳರನ್ನು ಗಂಗಮಂಡಲ ಪ್ರದೇಶದಿಂದ ಹೊರಗಟ್ಟಿದ ಕೂಡಲೇ ತಲಕಾಡು ಮತ್ತು ಕೋಳಾಲಗಳನ್ನು ತನ್ನ ಪ್ರಧಾನ ನೆಲೆವೀಡುಗಳನ್ನಾಗಿ ಮಾಡಿಕೊಂಡು ಆಡಳಿತ ನಡೆಸಿದನೆಂಬುದಕ್ಕೆ ಕ್ರಿ.ಶ. ೧೧೧೬ರ ಚಾಮರಾಜನಗರದ ಶಾಸನ [illegible] ವೀರಗಂಗ ವಿಷ್ಣುವರ್ಧನ ಬಿಟ್ಟಿಗ ಹೊಯ್ಸಳ ದೇವರು ಗಂಗವಾಡಿ ತೊಂಭತ್ತಱುಸಾಸಿರ

ಕೊಂಗೊಳಗಾಗಿ ಯೇಕ ಛತ್ರಛಾಯೇಯಿಂ ತಲೆಕಾಡಲುಂ ಕೋಳಾಲಪುರದಲುಂ ಸುಖ ಸಂಕಥಾ ವಿನೋದಿಂದ ರಾಜ್ಯಗೆಯ್ಯುತ್ತಮಿರೆ' (ಎ.ಕ. ೪, ಚಾಮ-೨). ಎಂಬ ಉಲ್ಲೇಖ, ಆಧಾರ ಒದಗಿಸುತ್ತದೆ. ರಾಜ್ಯ ರಕ್ಷಣೆಯ ದೃಷ್ಟಿಯಿಂದ ಕೋಳಾಲ ಒಂದು ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿತ್ತೆಂಬುದು ಇದರಿಂದ ದೃಢವಾಗುತ್ತದೆ. ಅನೇಕ ಹೊಯ್ಸಳರ ಶಾಸನಗಳಲ್ಲಿ ತಾವು ಆಕ್ರಮಿಸಿಕೊಂಡ ಸ್ಥಳಗಳಲ್ಲಿ ಕೋಳಾಲವು ಪ್ರಧಾನವಾಗಿ ಉಲ್ಲೇಖಗೊಂಡಿರುವುದನ್ನು ಗಮನಿಸಬಹುದು. ಉದಾ: "ಉರರೀಕೃತ ಕೋಳಾಲಪುರನುಂ ಉನ್ಮೂಳಿತ ಕೊವತೂರಪುರನುಂ ಉತ್ತರಳಿತ ತೆರೆಯೂರನಂ.... (ಎ.ಕ. ೬, ಪಾಂ.ಪು. ೨೨೯, ಹೊಸಕೋಟೆ ಮತ್ತು ಎ.ಕ. ೮, ಹಾಸನ ೬೬, ಯೆಲಗುಂದ, ೧೧೩೫) ಕೋಳಾಲಮಕೊಂಗುನಂಗಲಿ......(ಎ.ಕ. ೮, ಹಾಸನ ೧೭೪, ಮರ್ಕುಲಿ, ೧೧೭೩ ಮತ್ತು ಆಲೂರು ೧೭, ಸೋಂಪುರ, ೧೧೯೧) '....ಕೋಳಾಲಮಕೊಂಗು ನಂಗಲಿಯುಚ್ಚಂಗಿ ವಿರಾಟನಗರಂ....' (ಆಲೂರು ೧೭, ೧೧೯೧, ಹಾಸನ ೧೭೪, ೧೧೭೩) ಇಂತಹ ಉಲ್ಲೇಖಗಳಲ್ಲದೆ ಹೊಯ್ಸಳರ ಶಾಸನಗಳು ಕೋಲಾರವನ್ನು ಗುರುತಿಸುವಲ್ಲಿ 'ತುಳುದೇಶಂ, ಚಕ್ರಗೊಟ್ಟಂ, ಸ್ಥಳವನಪುರ, ಉಚ್ಚಂಗಿ, 'ಕೋಳಾಲ ವೇಳುಂಮಲೆ, ಕಂಚಿ ಕೊಂಗುರ್ಬ್ಬಿಸುವ ಅಡಿಯಘಟ್ಟಂ, ಬಯಲುನಾಡು, ನೀಳಾಚಳದುರ್ಗಂ.... ಭ್ರೂಭಂಗದಿಂ ಕೊಂಡತುಳಭುಜಬಳ ಮೋಪನೀ ವಿಷ್ಣುಭೂಪಂ' ಎಂಬ ವರ್ಣನೆಗಳು ಅನೇಕ ಶಾಸನಗಳಲ್ಲಿ ಬಂದಿದೆ. (ನಾಗಮಂಗಲ ೬೧, ಲಾಲನಕೆರೆ, ೧೧೩೮; ನಾಗಮಂಗಲ ೭೨, ಅಳೀಸಂದ್ರ ೧೧೮೩; ಹಾಸನ ೯೫, ೧೧೪೯; ಎ.ಕ. ೨೪; ಗುಬ್ಬಿ ೬೯, ಯಿಡಗೂರು ೧೧೫೨; ಹುಣಸೂರು ೨೪; ಧರ್ಮಪುರ, ೧೧೬೨) ಈ ಶಾಸನಗಳಲ್ಲಿ ಕೋಲಾರವನ್ನು ಉಲ್ಲೇಖಿಸುವಾಗ ಕೋಳಾಲವೇಳುಂಮಲೆ, ಕೋಳಾಲ ಏಳುಮಲೆ, ಕೋಳಾಲಮೇಳುಮ್ಮಲೆ ಎಂದು ಕರೆದಿರುವುದು ಗಮನ ಸೆಳೆಯುತ್ತದೆ. ಇಲ್ಲಿ ಕೋಲಾರವನ್ನು ಏಳುಮಲೆಗಳೊಂದಿಗೆ ಅಂದರೆ ಏಳು ಬೆಟ್ಟಗಳೊಂದಿಗೆ ಗುರುತಿಸಿರುವುದೂ ಅದನ್ನು ಸಂಸ್ಕೃತೀಕರಿಸಿದರೆ 'ಸಪ್ತಶೃಂಗ'ವೆಂದಾಗುತ್ತದೆ. ಕಾಲಾಂತರದಲ್ಲಿ ಈ ಸಪ್ತಶೃಂಗವೇ 'ಶತಶೃಂಗ'ವೆಂದು ಪ್ರಸಿದ್ಧವಾಗಿರುವಂತೆ ತೋರುತ್ತದೆ. ಶತಶೃಂಗದ ಉಲ್ಲೇಖ ಅನೇಕ ಕಾವ್ಯಗಳಲ್ಲಿ ಮತ್ತು ಕ್ರಿ.ಶ. ೧೧೧೦ರ ಹೊಸಕೋಟೆ ೩೪, ಕೊಂಡರಹಳ್ಳಿ ಶಾಸನದಲ್ಲೂ ವೈಭವೀಕರಿಸಿಕೊಂಡಿರುವುದನ್ನು ಕಾಣಬಹುದು. ವಾಸ್ತವವಾಗಿ ಕೋಲಾರ ಬೆಟ್ಟಗಳು ಮುಖ್ಯವಾಗಿ ಏಳು ಶೃಂಗಗಳಿಂದ ಕೂಡಿದ ಬೆಟ್ಟಗಳಾಗಿರುವುದನ್ನು ಈ ಸ್ಥಳದ

ಭೂಪಟವನ್ನು ಗಮನಿಸಿದರೆ ಖಚಿತವಾಗುತ್ತದೆ. ಹಾಗಾಗಿ ಕೋಳಾಲವೆಂಬುದು ಬೆಟ್ಟವನ್ನೂ ಒಳಗೊಂಡಂತೆ ಕೋಲಾರಮ್ಮನ ಗುಡಿಯವರೆಗಿನ ವಿಶಾಲ ಪ್ರದೇಶವನ್ನು ಒಳಗೊಂಡಿದ್ದ ಪ್ರಾಚೀನ ರಾಜಧಾನಿ ಪಟ್ಟಣವಾಗಿದ್ದಿತ್ತೆಂಬುದರಲ್ಲಿ ಸಂದೇಹವಿಲ್ಲ. ಈ ಹಿನ್ನೆಲೆಯಲ್ಲಿ ವೈಜ್ಞಾನಿಕ ಉತ್ಖನನಗಳು ನಡೆಯಬೇಕಾದ ಅಗತ್ಯವಿದೆ.

ಹೊಯ್ಸಳರ ಕಾಲದಲ್ಲೇ ಕೋಳಾಲನಾಡಾಳ್ವಂ ಕೋಳಾಲದೇವಿ ಲಬ್ಧವರಪ್ರಸಾದಂ ಕಾಡದರ್ವರಗಾಳ ಚಲದಂಕರಾಮ ಚಲಕೆಮಲವ ಸಾಮಂತರ ತೊತ್ತಳದುಳಿವ ಸಮಸ್ತ ಪ್ರಶಸ್ತಿ ಸಹಿತರಪ್ಪ ಹಿರಿಯ ಬೆಂಡೆಯ ಬಿಲ್ಲಮೊತ್ತದ ಹೂವಿನಹಳ್ಳಿ ಬಮೆಯನಾಯಕಂ...' ಎಂಬುವನು ಊರಳಿವಿನಲ್ಲಿ ಮಡಿದ ವಿವರ ಹಾಸನ ಜಿಲ್ಲೆಯ ಶಾಸನವೊಂದರಲ್ಲಿ ಬಂದಿದೆ. (ಹೊ.ನ.ಪು. ೧೦೦, ಹೂವಿನಹಳ್ಳಿ ೧೧೭) ಹಾಗೇ ಅದೇ ಸ್ಥಳದ ಇನ್ನೊಂದು ಶಾಸನವು ಕ್ರಿ.ಶ. ೧೧೯೨ರಲ್ಲಿ ಲೊಕ್ಕಿಗುಂಡೆಯ ಕೋಟೆಯ ಕಾಳಗದಲ್ಲಿ ಹೋರಾಡಿ ಮಡಿದ ಕೋಳಾಲ ನಾಡಾಳ್ವ ಕಾಮೆಯನಾಯಕನೆಂಬುವನನ್ನು ಉಲ್ಲೇಖಿಸುತ್ತದೆ. ಈ ವಿವರಗಳನ್ನು ಗಮನಿಸಿದರೆ ಹೊಯ್ಸಳರು ತಾವು ಆಕ್ರಮಿಸಿದ ಪ್ರದೇಶದ ಸ್ಥಳೀಯ ವೀರರಾದ ಪ್ರಭುಗಳನ್ನು ತಮ್ಮ ಮಾಂಡಳಿಕರನ್ನಾಗಿ ಮಾಡಿಕೊಂಡು ಬೇರೊಂದು ಸ್ಥಳದಲ್ಲಿ ನೇಮಿಸಿ ಅವರ ಸೇವೆಯನ್ನು ಪಡೆದುಕೊಳ್ಳುವ ಮುತ್ಸದ್ಧಿತನವನ್ನು ತೋರಿರುವುದು ಗಮನಾರ್ಹ ಸಂಗತಿಯಾಗಿದೆ.

ವಿಜಯನಗರ ಆಳ್ವಿಕೆಯ ಕಾಲದಲ್ಲಿ ಸುಗಟೂರು ಚಿಕ್ಕರಾಯ ತಮ್ಮೇಗೌಡನು ಇಲ್ಲಿನ ಕೋಟೆಗಳನ್ನು ದುರಸ್ತಿ ಮಾಡುವ ಅಧಿಕಾರವನ್ನು ಪಡೆದುಕೊಂಡಿದ್ದನು. ಕೋಲಾರ ಸ್ಥಳದ ಕೋಟೆಯ ಉಲ್ಲೇಖ ವಿಜಯನಗರೋತ್ತರ ನಾಯಕರ ಕಾಲದಲ್ಲೂ ಉಲ್ಲೇಖಗೊಂಡಿದೆ. ಉದಾ: ಕೋಲಾರ ತಾಲ್ಲೂಕು ಯರ್ರಂಗಟ್ಟ ಗ್ರಾಮದ ಕೋಲಾರ ೨೩೭ನೇ ಶಾಸನದಲ್ಲಿ "ಕೋಳಾಲಕೋಟೆಯ ಶಾಂಬಯನಾಯಕರು...." ಎಂಬ ತ್ರುಟಿತ ಉಲ್ಲೇಖದಿಂದ ಮನಗಾಣಬಹುದಾಗಿದೆ. ಕೋಲಾರದಲ್ಲಿ ಕೋಟೆ ಪ್ರದೇಶ, ಪ್ರಾಚೀನ ಕೋಲಾರಮ್ಮನ ದೇವಾಲಯ, ಸೋಮೇಶ್ವರ ದೇವಾಲಯ, ಕೋಟೆ ಆಂಜನೇಯ ದೇಗುಲ, ಕಂಬಳಿಸ್ವಾಮಿ ಮಠ, ಕಲ್ಯಾಣಿ, ಹೈದರಾಲಿ ತಂದೆಯ ಸಮಾಧಿ ಮೊದಲಾದ ಪ್ರಾಚ್ಯಾವಶೇಷಗಳು ಕಂಡುಬರುತ್ತದೆ. ಅಂತರಗಂಗೆಯ ಬೆಟ್ಟದ ಬುಡದಲ್ಲಿ ಪ್ರಾಚೀನ ಜಲಕಂಠೇಶ್ವರ ದೇವಾಲಯವಿದೆ. ಬೆಟ್ಟದ ಮೇಲಿನ ತೇರಹಳ್ಳಿ, ಪಾಪರಾಜನಹಳ್ಳಿಗಳಲ್ಲಿ ಪ್ರಾಚೀನ ವಾಸ್ತುರಚನೆಗಳಿವೆ. ಅಲ್ಲದೆ ಅಂತರಗಂಗೆಯ ಉತ್ತರಕ್ಕಿರುವ ಉನ್ನತ ಬೆಟ್ಟದಲ್ಲಿ ಕಲ್ಲಿನ ಕೋಟೆಯ ಅವಶೇಷಗಳಿವೆ. ಅವು ಮೊಘಲರ ಕಾಲದ್ದೆಂದು ಹೇಳಲಾಗುತ್ತಿದೆ.

ಅನಂತರದಲ್ಲಿ ಅವರು ಬಿಜಾಪುರದ ಸುಲ್ತಾನರ ಆಳ್ವಿಕೆಗೆ ಒಳಪಟ್ಟಾಗ ೧೬೩೮ರಲ್ಲಿ ಶಿವಾಜಿಯ ತಂದೆ ಷಹಜೀಯ ಜಹಾಗೀರಾಗಿದ್ದಿತು. ಮುಂದೆ ಮೊಘಲರು ಆಕ್ರಮಿಸಿಕೊಂಡು ೧೭೨೦ರಲ್ಲಿ ಸಿರಾದ ಸುಬೇದಾರನ ಕೈ ಕೆಳಗಿದ್ದ ಹೈದರ್ ಅಲಿಯ ತಂದೆ ಪತೇ ಮಹಮದ್ ಕೋಲಾರದ ಫೌಜುದಾರನಾಗಿದ್ದ. ಕ್ರಿ.ಶ. ೧೭೬೧ರಲ್ಲಿ ಕೋಲಾರವು ಹೈದರ್ ಅಲಿಯ ವಶಕ್ಕೆ ಬಂದಿತ್ತು. ಕ್ರಿ.ಶ. ೧೭೬೮ರಲ್ಲಿ ಬ್ರಿಟಿಷರ ವಶವಾಯಿತು. ಅನಂತರ ೧೭೭೦ರಲ್ಲಿ ಮರಾಠರ ವಶವಾಯಿತು. ೧೭೯೧ರಲ್ಲಿ ಮತ್ತೆ ಬ್ರಿಟಿಷರ ವಶಕ್ಕೆ ಬಂದಿತು. ೧೭೯೨ರ ಒಪ್ಪಂದದ ಪ್ರಕಾರ ಇದು ಟಿಪ್ಪುವಿನ ವಶಕ್ಕೆ ಬಂದಿತು. ಆಗ ಇದು ಮೈಸೂರು ಸಂಸ್ಥಾನದ ಭಾಗವಾಯಿತು. ಅನಂತರದಲ್ಲಿ ಇಲ್ಲಿನ ಮಣ್ಣಿನ ಕೋಟೆಗಳನ್ನು ಕೆಡವಿ ಸುತ್ತಲಿನ ಕಂದಕಗಳನ್ನು ಮುಚ್ಚಲಾಯಿತು.

ದಕ್ಷಿಣ ಕರ್ನಾಟಕದ ಪ್ರಾಚೀನ ರಾಜಧಾನಿ ಪಟ್ಟಣವಾಗಿದ್ದ ಕುವಳಾಲ ಈಗಲೂ ಜಿಲ್ಲೆಯೊಂದರ ಕೇಂದ್ರ ಸ್ಥಳವಾಗಿಯೇ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದ್ದರೂ ತನ್ನ ಪ್ರಾಚೀನತೆಯನ್ನು ಬಿಂಬಿಸುವ ಸ್ಪಷ್ಟ ಕುರುಹುಗಳಿಗಾಗಿ ಇನ್ನಷ್ಟು ವ್ಯಾಪಕ ಸಂಶೋಧನೆಗಳು ನಡೆಯಬೇಕಾದ ಅಗತ್ಯವಿದೆ. ಇಂತಹ ಪ್ರಾಚೀನ ರಾಜಧಾನಿ ಸ್ಥಳಗಳ ಸೂಕ್ಷ್ಮ ಅಧ್ಯಯನ ಜರೂರು ನಡೆಯಬೇಕಾದ ಅಗತ್ಯವಿದೆ. ಆ ಮೂಲಕ ಅನೇಕ ಅಗೋಚರ, ಸಾಂಸ್ಕೃತಿಕ ಅಂಶಗಳನ್ನು ಬೆಳಕಿಗೆ ತರಬಹುದಾಗಿದೆ.

[ಕ್ಷೇತ್ರ ಕಾರ್ಯ ಸಂದರ್ಭದಲ್ಲಿ ನೆರವಿಗೆ ಬಂದ ಸನ್ಮಿತ್ರ ಬಿ. ತಾಯಪ್ಪನವರಿಗೆ ಹಾಗೂ ಹಲವು ಮಾಹಿತಿಗಳನ್ನು ನೀಡಿದ ಕೋಲಾರ ಪತ್ರಿಕೆಯ ಮಾನ್ಯ ಕೆ. ಪ್ರಹ್ಲಾದ್‌ರಾಯರಿಗೆ ಲೇಖಕ ಕೃತಜ್ಞ].

ಆಧಾರಸೂಚಿ

೧. ನಕ್ಷೆಗಳು, ಜಿಲ್ಲಾ ಗ್ಯಾಜೇಟಿಯರ್, ಬುಖಾನನ್‌ನ ವರದಿ, ಕ್ಷೇತ್ರ ಕಾರ್ಯ.

೨. ಎಪಿಗ್ರಾಫಿಯಾ ಕರ್ನಾಟಿಕ ಸಂಪುಟಗಳು.

ಕನಕಗಿರಿ ಪಾಳೆಯಗಾರರ ಕಾಲದ ಲೌಕಿಕ ಸ್ಮಾರಕಗಳು

ಡಾ. ಹೆಚ್.ಈ. ಬಸವರಾಜಪ್ಪ*

ಪ್ರಾಚೀನ ಕರ್ನಾಟಕದ ರಾಜಕೀಯ ಮತ್ತು ಸಾಂಸ್ಕೃತಿಕ ಹಿರಿಮೆಯನ್ನು ಹೊತ್ತು ನಿಂತಿದ್ದ ಪ್ರಮುಖ ಸಾಮ್ರಾಜ್ಯಗಳಲ್ಲಿ ವಿಜಯನಗರ ಒಂದಾಗಿತ್ತು. ವಿಶಾಲವಾದ ಈ ಸಾಮ್ರಾಜ್ಯದಲ್ಲಿ ಹಲವಾರು ಪಾಳೆಯಗಾರಿಕಾ ರಾಜ್ಯಗಳು ಅಸ್ತಿತ್ವದಲ್ಲಿದ್ದವು. ಇಂಥವುಗಳಲ್ಲಿ ಕನಕಗಿರಿಯೂ ಒಂದು ಪ್ರಮುಖ ರಾಜ್ಯವಾಗಿತ್ತು.

ಕನಕಗಿರಿ ಪ್ರಸ್ತುತ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನಲ್ಲಿದೆ. ಹಂಪಿಯಿಂದ ದಕ್ಷಿಣಕ್ಕೆ ಮೂವತ್ತೈದು ಕಿ. ಮೀ. ದೂರದಲ್ಲಿರವ ಕನಕಗಿರಿ ಚಾರಿತ್ರಿಕವಾಗಿ ನಾಯಕರ ಆಡಳಿತ ಕೇಂದ್ರವಾದಂತೆ ಧಾರ್ಮಿಕವಾಗಿ ಶ್ರೀ ಕನಕಚಲ ಲಕ್ಷ್ಮೀನರಸಿಂಹ ದೇವಾಲಯದಿಂದಾಗಿ ಪ್ರಸಿದ್ಧಿ ಹೊಂದಿದೆ. ಕ್ರಿ.ಶ. ೧೬ ನೇ ಶತಮಾನದಲ್ಲಿ ವಿಜಯನಗರದರಸರಿಗೆ ಮಾಂಡಲಿಕರಾಗಿ ಇಲ್ಲಿ ಗುಜ್ಜಲವಂಶದ ನಾಯಕನ ಮನೆತನದವರು ಆಡಳಿತ ಪ್ರಾರಂಭಿಸಿದರು. ಕನಕಗಿರಿ ಪಾಳೆಯುಗಾರರು ವಿಜಯುನಗರದ ರಾಜಸ್ಥಾನದಲ್ಲಿ ಬಲಪಾರ್ಶ್ವದ ಮರ್ಯಾದೆಗಳನ್ನು ಹೊಂದಿದ್ದರೆಂದು ಹೇಳುವ ಮಾತು ಅವರ ರಾಜಕೀಯ ಮಹತ್ವವನ್ನು ಬಿಂಬಿಸುತ್ತವೆ. ಸುಮಾರು ಐದು ಶತಮಾನಗಳ ಸುದೀರ್ಘಕಾಲ ಆಡಳಿತ ನಡೆಸಿದ ರಾಜಮನೆತನವೆನ್ನುವ ಹೆಗ್ಗಳಿಕೆ ಕನಕಗಿರಿ ಪಾಳೆಯಗಾರರದು.

ಕನಕಗಿರಿ ನಾಯಕರು ಕಲಾಪ್ರೇಮಿಗಳಾಗಿದ್ದರು. ವಿಜಯನಗರದ ಅರಸರಿಂದ ಪ್ರೇರಣೆಗೊಂಡ ನಾಯಕರು ರಾಜಧಾನಿ ಕನಕಗಿರಿ ಮತ್ತು ರಾಜ್ಯದ ಹನುಮಾನಳ, ಕರಡಿ ಗುಡ್ಡ, ಹಂಪಸದುರ್ಗ, ನವಲಿ, ಮುಸ್ಟೂರು, ಮುಂತಾದೆಡೆಗಳಲ್ಲಿ ದೇವಾಲಯ, ಮಂಟಪ, ಪ್ರತಿಮಾಂದಿರ, ಭಾವಿ, ಪುಷ್ಕರಣಿ, ಕೋಟೆ ಮುಂತಾದ ಕಟ್ಟಡಗಳನ್ನು ಅಪಾರ ಸಂಖೆಯಲ್ಲಿ ನಿರ್ಮಿಸಿದ್ದಾರೆ. ವಿಶೇಷವಾಗಿ ರಾಜಧಾನಿ ವೈವಿಧ್ಯಮಯವಾದ ಕಲಾಸ್ಮಾರಕಗಳನ್ನು ಅಪಾರ ಸಂಖ್ಯೆಯಲ್ಲಿ ನಿರ್ಮಿಸಿದಾರೆ. ಹಾಗಾಗಿಯೇ ಈ ಭಾಗದಲ್ಲಿ ಕಾಲಿದ್ದವರು ಹಂಪಿ ನೋಡಬೇಕು, ಕಣ್ಣಿದ್ದವರು ಕನಕಗಿರಿ ನೋಡಬೇಕು ಎನ್ನುವ ಜನವಾಣಿ ಹುಟ್ಟಿಕೊಂಡಿರುವುದು. ಪ್ರಸ್ತುತ ಲೇಖನದಲ್ಲಿ ಕನಕಗಿರಿ ಪಾಳೆಗಾರರ ಕಾಲದ ಲೌಕಿಕ ಸ್ಮಾರಕಗಳನ್ನು ಕುರಿತು ವಿವೇಚಿಸುವ ಪ್ರಯತ್ನ ಮಾಡಲಾಗಿದೆ.

ಕನಕಗಿರಿ ಗ್ರಾಮದ ಪ್ರತಿಮಾ (ಗೃಹ) ಮಂಟಪ ಕನಕಾಚಲ ದೇವಾಲಯದ ಮುಂದೆ ಇದೆ.

ಇಲ್ಲಿ ಪ್ರತ್ಯೇಕವಾದ ದೇವಾಲಯವಿರದಿದ್ದರೂ, ಕನಕಾಚಲಪತಿ ದೇವಾಲಯಕ್ಕೆ ಹೊಂದಿಕೊಂಡು ಹೊರ ಬದಿಯಲ್ಲಿದೆ. ಈ ಗೃಹದ ಒಳಗೆ, ನವಾಬ ಉಡಚನಾಯಕ, ಅವನ ನಂತರದ ಇತರ ಇಬ್ಬರು ಅರಸರು, ಒಬ್ಬಳು ರಾಣಿ ಹಾಗೂ ಒಬ್ಬ ರಾಜಮಾತೆಯ ಪ್ರತಿಮೆಗಳಿವೆ. ಈ ಗೃಹದ ಮೇಲೆ ಶಿಖರವಿದೆ.

ಸಭಾ ಮಂದಿರ (ವೆಂಕಟರಮಣ ದೇವಾಲಯ)

ಈ ಸಭಾ ಮಂದಿರವು ಅಪೂರ್ಣಗೊಂಡ ಗೋಡೆಗಳ ಕಲ್ಲುಗಳು ಕಿತ್ತು ಅಲ್ಲಲ್ಲಿ ಬಿದ್ದಿವೆ. ಕನಕಗಿರಿ ಗ್ರಾಮದ ಪಶ್ಚಿಮದ ಕೊನೆ ಗೊಲ್ಲರವಾಡಿಯಲ್ಲಿದೆ.

ಕನಕಗಿರಿ ಪ್ರದೇಶದ ವಿಶೇಷ ಕಟ್ಟಡವಾದ ಈ ಸಭಾ ಮಂದಿರವನ್ನು ಸ್ಥಳೀಕರು ವೆಂಕಟರಮಣ ದೇವಾಲಯವೆಂದು ಕರೆಯುತ್ತಾರೆ. ಆದರೆ ಅ. ಸುಂದರ ಅವರು (೧೯೭೩-೭೫) ಇದನ್ನು ಸಭಾ ಮಂದಿರವೆಂದು ಹೆಸರಿಸಿದ್ದಾರೆ. ಅಂತೆಯೇ ಇದು ದೇವಾಲಯ ವಾಸ್ತು ಶೈಲಿಯನ್ನು ಹೊಂದಿಲ್ಲ. ಬದಲಾಗಿ ಒಂದು ಸಭಾ ಮಂದಿರದ ಸ್ವರೂಪವನ್ನು ಹೊಂದಿದೆ.

ಈ ವಿಶಾಲವಾದ ಕಟ್ಟಡವು ೧.೪ ಮೀ. ಎತ್ತರವಾದ ಅಧಿಷ್ಠಾನವನ್ನು ಹೊಂದಿದೆ. ಅಧಿಷ್ಠಾನ ಮಂಚಬಂಧ ರೀತಿಯದಾಗಿದ್ದು, ಮಧ್ಯದ ಭಾಗದಲ್ಲಿ ಕಮಾನಾಕೃತಿಗಳ ಸಾಲು ಇದೆ. ಈ ಕಟ್ಟಡದ ಮುಂದಿನ ಎರಡೂ ಮೂಲೆಗಳಲ್ಲಿ ರಥದ ಶಿಲಾ ಮಾದರಿಗಳಿವೆ. ಇವು ಹಂಪೆಯ ಶಿಲಾರಥವನ್ನು ನೆನಪಿಗೆ ತರುತ್ತವೆ. ಇವುಗಳ ನಾಲ್ಕು ಗಾಲಿಗಳು ಹಾಗೂ ಅಚ್ಚಿನ ಭಾಗವನ್ನು ಗ್ರಾನೈಟ್ ಶಿಲೆಯಲ್ಲಿ ಕೆತ್ತಲಾಗಿದೆ. ಗಾಲಿಗಳ

* ಮುಖ್ಯಸ್ಥರು, ಇತಿಹಾಸ ವಿಭಾಗ, ಬಿ ಕೆ ಕಾಲೇಜು, ಚಿಕ್ಕೋಡಿ-೫೯೧೨೦೧

ತಿರುಗುವುದಿಲ್ಲ. ಮೇಲೆ ಕಪ್ಪು ಕಲ್ಲಿನ ಚಟ್ಟು(ಗಡ್ಡೆ) ಇದೆ. ಹಿಂದಿನ ಮೂಲೆಗಳಲ್ಲೂ ಈ ರೀತಿಯ ರಥಗಳಿದ್ದವೆಂದು ಸ್ಥಳೀಯ ಹೇಳಿಕೆ ಆದರೆ ಈಗ ಇಲ್ಲ.

ವೇದಿಕೆಯ ಮಧ್ಯದಲ್ಲಿ ವಿಸ್ತಾರವಾದ ಕಟ್ಟಡವಿದೆ (೧೭.೬೫) (೧೭.೭ ಮೀ) ಇದು ಮುಖ ಭಾಗ (ಪೂರ್ವ)ವನ್ನು ಹೊರತುಪಡಿಸಿ ಉಳಿದ ಮೂರು ಕಡೆ ಅಪೂರ್ಣವಾಗಿ ರಚನೆಗೊಂಡ ಗೋಡೆಯನ್ನು ಹೊಂದಿದೆ. ಈ ಗೋಡೆಯ ನಾಲ್ಕು ಮೂಲೆಗಳಲ್ಲಿ ನಾಲ್ಕು ದೊಡ್ಡ ಪ್ರಮಾಣದ ಹಾಗೂ ಮಧ್ಯದ ಪ್ರತಿ ಗೋಡೆಯಲ್ಲಿ ನಾಲ್ಕರಂತೆ ಒಟ್ಟು ೧೨ ಚಿಕ್ಕ ಕಂಬಗಳ ವಿನ್ಯಾಸದ ರಚನೆಗಳಿವೆ. ಈ ಕಂಬಗಳ ವಿನ್ಯಾಸ ಭಾಗವನ್ನು ಕಪ್ಪು ಶಿಲೆಯಲ್ಲೂ, ಗೋಡೆಯನ್ನು ಗ್ರಾನೈಟ್ ಶಿಲೆಯಲ್ಲೂ ನಿರ್ಮಿಸಲಾಗಿದೆ. ಹಿಂದಿನ ಗೋಡೆಯ ಮಧ್ಯದಲ್ಲಿ ಚಿಕ್ಕ ಅಂಕಣವಿದೆ. (ಗರ್ಭಗೃಹ) ಎರಡು ಬದಿಯ ಗೋಡೆಗಳಲ್ಲಿ ಮೊದಲ ಕಂಬದ ನಂತರ ಬಾಗಿಲು ಇದ್ದು, ಅಲ್ಲಿಂದ ಕಟ್ಟಡದ ಮೇಲಕ್ಕೆ ಹೋಗುತ್ತಿರ ಬಹುದಾದ ಮೆಟ್ಟಿಲುಗಳಿವೆ (ಗೋಡೆಯ ಮಧ್ಯ) ಆದರೆ, ಗೋಡೆ ಅಪೂರ್ಣವಾಗಿರುವದರಿಂದ ಅದರ ಜೊತೆಗೆ ಮೇಲಿರುತ್ತಿದ್ದ ಮೆಟ್ಟಿಲುಗಳೂ ಅಪೂರ್ಣವಾಗಿವೆ.

ಕನಕಗಿರಿಯ ಪ್ರತಿಮಾಗೃಹಗಳ ಹಿನ್ನೆಲೆಯಲ್ಲಿ ಈ ಕಟ್ಟಡದ ವಾಸ್ತು ರಚನೆಯನ್ನು ಗಮನಿಸಿದಾಗ ಇದು ಕೂಡ ಪ್ರತಿಮಾಗೃಹವೆಂಬ ಅನುಮಾನವುಂಟಾಗುತ್ತದೆ. ಈ ಅಪೂರ್ವ ಕಟ್ಟಡದ ರಚನೆ ಸಮಕಾಲಿನ ವಾಸ್ತು ಕೌಶಲ್ಯದ ಪ್ರತೀಕವಾಗಿದೆ. ಆಕರ್ಷಕವಾದ ಅಧಿಷ್ಠಾನ, ವಿಶಾಲವಾದ ವೇದಿಕೆ, ರಥ ಮಾದರಿಗಳ ಹಾಗೂ ಗೋಡೆಗಳ ಸಂಯೋಜನೆ ಈ ಕಟ್ಟಡದ ವಿಶೇಷ ಲಕ್ಷಣಗಳಾಗಿವೆ. ಆ ಕಾಲದಲ್ಲಿ ಪ್ರಚಲಿತದಲ್ಲಿದ್ದ ಅಷ್ಟೇನು ಆಕರ್ಷಕವಲ್ಲದ ಮಂಚಬಂಧ ಅಧಿಷ್ಠಾನ ಮಾದರಿಯನ್ನು ಇಲ್ಲಿ ಬಳಸುವುದು ಅನಿವಾರ್ಯವಾಗಿದ್ದರೂ ಯಾವುದೇ ಅಲಂಕರಣವಿಲ್ಲದೆ ಖಾಲಿ ಇರುತ್ತಿದ್ದ ಮಧ್ಯದ (ಅಗಲವಾದ) ಭಾಗವನ್ನು ಕಮಾನುಗಳ ಕೆತ್ತನೆಯಿಂದ ಅಲಂಕರಿಸಿ, ಸಮಕಾಲೀನ ವಾಸ್ತು ಸಂಪ್ರದಾಯವನ್ನೂ ಮೀರದೆ ಮೇಲಿನ ಭವ್ಯ ಕಟ್ಟಡಕ್ಕೆ ಲೋಪವಾಗದಂತೆ ಸೂಕ್ತವಾದ ಅಧಿಷ್ಠಾನವನ್ನು ಯೋಜಿಸಲಾಗಿದೆ. ಪೀಠ ಸಹಿತ ಲಂಬರೇಖೆ ಪ್ರಧಾನವಾದ ಕಂಬಗಳ ವಿನ್ಯಾಸದ ರಚನೆ ಆಕರ್ಷಣೀಯ ಭವ್ಯ ಕಟ್ಟಡದ ಅಂದಕ್ಕಾಗಿ ಈ ಸ್ತಂಭ ಭಾಗಗಳ ರಚನೆಗೆ ಕಪ್ಪು ಶಿಲೆಯನ್ನು ಬಳಸಿದ್ದು, ಶಿಲ್ಪಿಗಳ ಸೌಂದರ್ಯ ಪ್ರಜ್ಞೆಗೆ ನಿದರ್ಶನವಾಗಿದೆ. ಇಷ್ಟೊಂದು ವಿಶಾಲವಾದ ಕಟ್ಟಡಕ್ಕೆ ಮಧ್ಯದಲ್ಲಿ ಯಾವುದೇ ಕಂಬಗಳ ಆಸರೆ ಇಲ್ಲದೆ ಮೇಲಿನ ಛತ್ತನ್ನು, ಯಾವ ತಾಂತ್ರಿಕತೆಯಿಂದ ನಿಲ್ಲಿಸುತ್ತಿದ್ದರೋ? ದುರದೃಷ್ಟವಶಾತ್ ಇದು ಅಪೂರ್ಣವಾಗಿದ್ದು, ಕನಕಗಿರಿ ಪ್ರದೇಶದ ವಾಸ್ತು ಕ್ಷೇತ್ರದಲ್ಲಿ ತುಂಬದ ಹಾನಿ. ಒಟ್ಟಿನಲ್ಲಿ ಈ ಕಟ್ಟಡ ಅಪೂರ್ಣವಾದರೂ ಅಪೂರ್ವವೇ ಸರಿ.

ಕನಕಗಿರಿ ವೆಂಕಟಪತಿ (ಬಾವಿ) ಕೊಳ

ಕನಕಗಿರಿ ಗ್ರಾಮದ ಉತ್ತರ ಭಾಗದಲ್ಲಿದೆ. ನೆಲಮಟ್ಟದ ಮೂಲೆ ಭಾಗ ಹಾಳಾಗಿದೆ.

'ವೆಂಕಟಪತಿ ಭಾವಿ' ಎಂಬ ಈ ಸುಂದರ ಕೊಳವು ಕನಕಗಿರಿಯ ಒಂದು ವಿಶಿಷ್ಟ ಕಲಾ ಸ್ಮಾರಕವಾಗಿದೆ. ಈ ಸುಂದರವಾದ ಕಟ್ಟಡ ಸಹಿತ ಕೊಳವು ನೆಲ ಮಟ್ಟದಿಂದ ಒಳಗೆ ಇದೆ. ದೂರದಿಂದ ಈ ಕೊಳದ ಉಪ್ಪರಿಗೆ ಮಾತ್ರ ಗೋಚರಿಸುತ್ತದೆ.

ಇದು ಕೊಳ, ದೇವತಾಗೃಹಗಳು, ಕಂಬಗಳ ವರಾಂಡ ಮತ್ತು ಉಪ್ಪರಿಗೆಗಳನ್ನು ಒಳಗೊಂಡ ಒಂದು ಸಂಕೀರ್ಣ ಕಟ್ಟಡ. ಕಟ್ಟಡದ ಪೂರ್ವಾರ್ಧದಲ್ಲಿ ೮.೬೩) (೫.೧೦ ಮೀಟರ ಅಳತೆಯ ಒಂದು ಕೊಳವಿದೆ. ಇದಕ್ಕೆ ಪಶ್ಚಿಮ ಭಾಗ ಬಿಟ್ಟು ಉಳಿದ ಮೂರು ಕಡೆಗಳಲ್ಲಿ ಮೆಟ್ಟಿಲುಗಳಿವೆ. ಈ ಕೊಳದ ಸುತ್ತಲೂ ಕಂಬಗಳ ವರಾಂಡವಿದೆ. ಪೂರ್ವ ಬದಿಯ ವರಾಂಡದ ಮೇಲೆ ಉಪ್ಪರಿಗೆ ಇದೆ. ಉತ್ತರಾರ್ಧದಲ್ಲಿ ಕೊಳಕ್ಕೆ ದಾರಿ ಹಾಗೂ ತ್ರಿಮೂರ್ತಿಗಳ ದೇವತಾಗೃಹಗಳಿವೆ.

ಪ್ರವೇಶ: ಹೊರಬದಿಯ ನಾಲ್ಕು ಮೂಲೆಗಳಲ್ಲಿ ಕೊಳಕ್ಕೆ ಇಳಿಯಲು ಮೆಟ್ಟಿಲುಗಳಿವೆ. ಮುಖ್ಯ ಪ್ರವೇಶ ದಕ್ಷಿಣ ದಿಕ್ಕಿನಲ್ಲಿ ಇದ್ದು, ಅಗಲವಾದ ಮೆಟ್ಟಿಲುಗಳ ಹಾದಿ ಇದೆ. ಮೆಟ್ಟಿಲುಗಳ ಪಕ್ಕದ ಗೋಡೆಯಲ್ಲಿ ಗಜಾಸಂಹಾರ ಮೂರ್ತಿ ಶಿವ ಮತ್ತು ನಾಗಗಳ ಆಕರ್ಷವಾದ ಉಬ್ಬು ಶಿಲ್ಪಗಳಿವೆ. ಈ ಹಾದಿ ಕಟ್ಟಡದ ಮಧ್ಯಕ್ಕೆ ಬಂದು ಅಲ್ಲಿಂದ ಪೂರ್ವಕ್ಕೆ ಹೊರಳಿ ನೇರವಾಗಿ ಕೊಳಕ್ಕೆ ಸೇರುತ್ತದೆ. ಕೊಳಕ್ಕೆ ಸೇರುವ ಪೂರ್ವದಲ್ಲಿ ಕಮಾನುಳ್ಳ ದ್ವಾರಮಂಟಪವಿದೆ.

ದೇವತಾಗೃಹಗಳು

ಕೊಳದ ಮುಂದಿನ ಎರಡು ಬದಿಯ ವರಾಂಡದಲ್ಲಿ ಬ್ರಹ್ಮ, ಮಹೇಶ್ವರರ ಹಾಗೂ ಪಶ್ಚಿಮದ ಕೊನೆಯಲ್ಲಿ (ಕೊಳಕ್ಕೆ ನೇರವಾಗಿ) ವಿಷ್ಣು ಗೃಹಗಳಿವೆ.

ವಿಷ್ಣುಗೃಹ: ಇದು ಅಂತರಾಳ, ಗರ್ಭಗೃಹಗಳನ್ನು ಒಳಗೊಂಡಿದೆ. ಗರ್ಭಗೃಹದ ಬಾಗಿಲಿನ ಹೊಸ್ತಿಲಿನ ಮುಂದೆ ಚಂದ್ರ ಶಿಲೆ ಇದೆ. ದ್ವಾರಬಂಧದಲ್ಲಿ ಸ್ತಂಭ ಶಾಖವಿದ್ದು, ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಬಾಗಿಲಿನ ಬದಿಯಲ್ಲಿ ವೈಷ್ಣವ ದ್ವಾರಪಾಲರ ಶಿಲ್ಪಗಳಿವೆ. ಅಂತರಾಳದ ದ್ವಾರಬಂಧದಲ್ಲಿ ಸಹ ಸ್ತಂಭಶಾಖೆ ಇದ್ದು, ಲಲಾಟಬಿಂಬದಲ್ಲಿ ಕುಳಿತ

ಜಟಾಧಾರಿಯೊಬ್ಬನ ಶಿಲ್ಪವಿದೆ. ಬಾಗಿಲ ಬದಿಗಳಲ್ಲಿ ಪೂರ್ಣ ಕುಂಭಗಳಿವೆ. ಛತ್ತು, ಸರಳವಾಗಿದೆ. ಗರ್ಭಗೃಹದಲ್ಲಿದ್ದ ವಿಷ್ಣುವಿನ ವಿಗ್ರಹ ಭಗ್ನವಾಗಿದ್ದು ಈಗ ಕನಕಾಚಲಪತಿ ದೇವಾಲಯದ ಪ್ರಾಕಾರದಲ್ಲಿದೆ (ಛಾಯಾಚಿತ್ರ–೫೯).

ಮಹೇಶ್ವರ ಗೃಹ: ಇದು ಕೊಳದ ಎಡಬದಿಯ ವರಾಂಡದಲ್ಲಿದೆ. ಕೇವಲ ಗರ್ಭಗೃಹವನ್ನಷ್ಟೆ ಹೊಂದಿದ್ದು, ದ್ವಾರಬಂಧದಲ್ಲಿ ಸಿಂಹತೋರಣ, ಸ್ತಂಭ ಶಾಖೆಗಳಿವೆ. ಲಲಾಟಬಿಂಬದಲ್ಲಿ ಗಜಲಕ್ಷ್ಮೀ ಶಿಲ್ಪವಿದೆ. ಹಾಗೆ ಲಲಾಟ ಬಿಂಬದ ಇಕ್ಕೆಲಗಳಲ್ಲಿ ಕುಡ್ಮಲಗಳಿವೆ. ಬಾಗಿಲ ಬದಿಯಲ್ಲಿ ಶೈವ ದ್ವಾರಪಾಲರ ಶಿಲ್ಪಗಳಿವೆ. ಗರ್ಭಗೃಹದಲ್ಲಿ ಶಿವಲಿಂಗ, ನಂದಿಗಳಿದ್ದುವೆಂದು ಸ್ಥಳೀಯರ ಹೇಳಿಕೆ ಈಗ ಇಲ್ಲ.

ಬ್ರಹ್ಮನ (?) ಗೃಹ: ಇದು ಕೊಳದ ಬಲಬದಿಯ ವರಾಂಡದಲ್ಲಿದೆ. ಇದೂ ಕೂಡ ಕೇವಲ ಗರ್ಭಗೃಹವನ್ನಷ್ಟೆ ಹೊಂದಿದ್ದು, ದ್ವಾರಬಂಧದಲ್ಲಿ ಸ್ತಂಭ ಶಾಖೆ ಇದೆ. ಬಾಗಿಲ ಬದಿಯಲ್ಲಿ ವೈಷ್ಣವ ದ್ವಾರಪಾಲರ ಶಿಲ್ಪಗಳಿವೆ. ಲಲಾಟ ಬಿಂಬದಲ್ಲಿ ಯಾವುದೇ ಶೀಲ್ಪಗಳಿಲ್ಲ. ಅದರ ಬದಿಯಲ್ಲಿ ಕುಡ್ಮಲಗಳಿವೆ. ಗರ್ಭಗೃಹದಲ್ಲಿ ಈಗ ಮೂರ್ತಿ ಇಲ್ಲ.

ಕಂಬಗಳು: ಈ ಒಟ್ಟು ಕಟ್ಟಡ ಸಂಕೀರ್ಣದಲ್ಲಿ ೬೩ ಕಂಬಗಳು, ೩೭ ಅರ್ಧಗಂಬಗಳು, ೧೬ ಮೂಲೆಗಂಬಗಳು ಇವೆ. ಇವುಗಳೆಲ್ಲ ಒಂದೇ ರೀತಿಯಲ್ಲಿರದೆ, ವಿವಿಧ ರೀತಿಯಲ್ಲಿವೆ. ಕೆಲವು ಕನಕಗಿರಿಯ ಸಾಮಾನ್ಯ ವಿಧವಾದ ಕೆಳಗೆ, ಮಧ್ಯ, ಮೇಲೆ ಚೌಕ ಭಾಗಗಳನ್ನು ಒಳಗೊಂಡಿದ್ದು, ಇವು ಮೇಲಕ್ಕೇರಿದಂತೆಲ್ಲಾ ಸಪೂರವಾಗುತ್ತವೆ. ಇಲ್ಲಿ ಕೆಲವು ಕೆಳಗೆ ದೀರ್ಘ ಚೌಕಭಾಗ ಮೇಲೆ ಕುಂಭ, ತಾಡಿ ಭಾಗವನ್ನು ಹೊಂದಿವೆ. ಇನ್ನು ಕೆಲವು ಕಾಂಡ, ಕುಂಭ, ತಾಡಿ ಕಳಸ, ಚೌಕ ಭಾಗಗಳನ್ನು ಹೊಂದಿವೆ. ವಿಷ್ಣು ದೇಗುಲದ ಮುಂದಿನ ಎರಡು ಕಂಬಗಳು ವಿಶಿಷ್ಟವಾಗಿವೆ. ಇವು ಕನಕಾಚಲಪತಿ ದೇವಾಲಯದಲ್ಲಿರುವಂತೆ ಹಿರಿ ಮತ್ತು ಕಿರಿ ಕಾಂಡ ಎಂಬ ಭಾಗಗಳಲ್ಲಿವೆ. ಹಿರಿ ಕಾಂಡದಲ್ಲಿ ಕೆಳಗೆ, ಮೇಲೆ ಅಸಮವಾದ ಚೌಕಭಾಗಗಳಿದ್ದು, ಕಿರಿ ಕಾಂಡದಲ್ಲಿ ಕ್ರಮವಾಗಿ ಕಾಲೆತ್ತಿನಿಂತ ಸಿಂಹ ಮೇಲೆ ಕುಬ್ಜ, ಆನೆಯನ್ನು ಹಿಂಗಾಲಿನಿಂದ ತುಳಿಯುತ್ತಾ ಮುಂಗಾಲೆತ್ತಿ ನಿಂತಿರುವ ಸಿಂಹ ಮೇಲೆ ಸವಾರ, ಖಡ್ಗಧಾರಿಯೊಬ್ಬನನ್ನು ತುಳಿಯುತ್ತಿರುವ ಕುದುರೆ ಮೇಲೆ ಸವಾರ, ಹುಲಿಯನ್ನು ತುಳಿಯುತ್ತಿರುವ ಸಿಂಹ ಮೇಲೆ ಸವಾರ, ಗೊಲ್ಲಿತಿ ಹಾಗೂ ಸಿಂಹ, ಆಂಜನೇಯ ಮತ್ತು ಸಿಂಹ ಶಿಲ್ಪಗಳಿವೆ. ಕೊಳದ ಮುಂದಿನ ಎಂಟು ಕಂಬಗಳ (ಕಮಾನು ಮಂಟಪದ ಎಡಬದಿಯ ನಾಲ್ಕು ಬಲ ಬದಿಯ ನಾಲ್ಕು) ಕಿರಿ ಕಾಂಡದಲ್ಲಿ ಸಿಂಹ ಅಥವಾ ಅಶ್ವ ಸವಾರರ ಬದಲು ಚಿಕ್ಕದಾದ ಉಪ ಕಂಬಗಳಿವೆ. ಕೊಳದಲ್ಲಿ ಮುಂಚಾಚಿದ ಕಟ್ಟೆಯ ಮೇಲಿನ ಎರಡು ಕಂಬಗಳು ಸಿಂಹ ಸವಾರರನ್ನು ಒಳಗೊಂಡಿವೆ. ಸಿಂಹಗಳ ಬಾಯಲ್ಲಿ ಗುಂಡನ್ನು ತಿರುಗಿಸಲು ಬರುವಂತೆ ಕೆತ್ತಲಾಗಿತ್ತು ಈಗ ಬಾಯಿ ಭಗ್ನವಾಗಿರುವುದರಿಂದ ಗುಂಡುಗಳು ಇಲ್ಲ.

ಉಪ್ಪರಿಗೆ: ಕೊಳದ ಪೂರ್ವ ಭಾಗದ ವರಾಂಡದ ಮೇಲೆ ಉಪ್ಪರಿಗೆ ಇದೆ. ಇಲ್ಲಿ ಗೋಡೆಯ ಪ್ರಾಣಿ, ಪಕ್ಷಿಗಳ ಅಲಂಕರಣೆಯಿಂದ ಕೂಡಿದೆ. ಛತ್ತಿನ ತುಂಬೆಲ್ಲಾ ಅಲಂಕರಣೆ ಇದೆ. ಕೊಳದಲ್ಲಿ ಮುಂದಕ್ಕೆ ಚಾಚಿದ ಕಟಾಂಜನದ ಹೊರಗೋಡೆಯಲ್ಲಿ ಮಿಥುನ ಶಿಲ್ಪಗಳಿವೆ. ಈ ಉಪ್ಪರಿಗೆ ಮೇಲೆ ಏತ ವ್ಯವಸ್ಥೆಯ ಕಂಬಗಳು, ಗಾರೆ, ಕಾಲುವೆ ಇದೆ.

ಈ ಕೊಳದ ರಚನೆಗೆ ಹಂಪೆಯ ರಾಣಿಯರ ಸ್ನಾನ ಗೃಹ ಪ್ರೇರಣೆ ನೀಡಿರಬೇಕು. ಅದು ನೆಲದಲ್ಲಿಯ ಕೊಳದ ಸುತ್ತಲೂ ಕಟ್ಟಡವನ್ನು (ಮೇಲೆ) ನಿರ್ಮಿಸಲಾಗಿದೆ. ಆದರೆ ಇಲ್ಲಿ ಕೊಳ, ಕಟ್ಟಡ, ಎಲ್ಲವೂ ನೆಲದಲ್ಲಿ ಇದೆ. ಇದನ್ನು ವೆಂಕಟಪ್ಪನಾಯಕ ನಿರ್ಮಿಸಿದ್ದರಿಂದ ವೆಂಕಟಪತಿ ಭಾವಿ ಎಂದು ಹೆಸರು. ಆದರೆ ಇದು ಭಾವಿಯಲ್ಲ ಕೊಳ.

ವೈವಿಧ್ಯವಾದ ಕಂಬಗಳು, ದೇವತಾಗೃಹಗಳು, ಛತ್ತಿನಲ್ಲಿ ಅಮೂರ್ವವಾದ ಅಲಂಕರಣೆಗಳು ಈ ಕಟ್ಟಡದ ವೈಶಿಷ್ಟ್ಯಗಳಾಗಿವೆ. ವಿಷ್ಣು ದೇವಾಲಯ ಗರ್ಭಗೃಹದ ಬಾಗಿಲ ಮುಂದೆ ಚಂದ್ರ ಶಿಲೆ ಇರುವುದು, ವಿಶೇಷವಾಗಿದೆ. ಈ ರೀತಿ ಚಂದ್ರಶಿಲೆ ಕನಕಗಿರಿ ಪ್ರದೇಶದ ಇತರ ದೇವಾಯಗಳಲ್ಲಿ ಇಲ್ಲ. ಇನ್ನು ಇದೆ ಗೃಹದ ದ್ವಾರಬಂಧದ ಲಲಾಟಬಿಂಬದಲ್ಲಿ ಜಟಾಧಾರಿಯ ಶಿಲ್ಪವಿರುವುದು ಗಮನಾರ್ಹ.

ಈ) ಭಾವಿಗಳು

ಅಚ್ಚಮ್ಮ ಭಾವಿ

ಕನಕಗಿರಿಯಿಂದ ಅಗ್ನೇಯಕ್ಕೆ ಸುಮಾರು ಆರು ಕಿ.ಮೀ. ದೂರದಲ್ಲಿದೆ. ಇದರ ಅಗಲ–೧೩.೧೦ ಮೀಟರ್, ಉದ್ದ –೨೬.೫೫ ಮೀ ಅಲ್ಲಲ್ಲಿ ಶಿಥಿಲವಾಗಿದೆ. ಭಾವಿಯಲ್ಲಿ ನೀರಿಲ್ಲ, ಗೋಡೆಗಳಲ್ಲಿ ಗಿಡ ಬೆಳೆದಿವೆ. ಇಮ್ಮಡಿ ಉಡಚನಾಯಕನ ರಾಣಿ ಅಚ್ಚಮ್ಮ ಈ ಭಾವಿಯನ್ನು ನಿರ್ಮಿಸಿದ್ದರಿಂದ ಇದರ ಹೆಸರು ಅಚ್ಚಮ್ಮ ಭಾವಿ ಎಂದು' ಇದನ್ನು ಎರಡು ರೀತಿಯ ಉಪಯೋಗಕ್ಕಾಗಿ ನಿರ್ಮಿಸಲಾಗಿದೆ. ಒಂದು ಕೃಷಿ ನೀರಾವರಿಗಾಗಿ (ಏತ ವ್ಯವಸ್ಥೆಯಿಂದ) ಹಾಗೂ ಸಾರ್ವಜನಿಕರಿಗೆ ಉಪಯೋಗಕ್ಕಾಗಿ ಮೆಟ್ಟಿಲುಗಳಿಂದ ನೀರು ತರುವ ವ್ಯವಸ್ಥೆ ಇದೆ.

೧೦.೨ ಮೀ. ೯.೬ ಮೀಟರ್ ಅಳತೆಯ ಭಾವಿ ಇದ್ದು, ಅದಕ್ಕೆ ಒಳ ಭಾಗದಲ್ಲಿ ಸಮಗೊಳಿಸಿದ ಕಲ್ಲಿನಿಂದ ಕಟ್ಟಲಾಗಿದೆ. ಸುತ್ತಲೂ ೧.೭೫ ಮೀಟರ ಅಳತೆಯ ಕಟ್ಟೆ

ಇದೆ. ದಕ್ಷಿಣದಲ್ಲಿ ಪ್ರವೇಶದ ಮೆಟ್ಟಿಲುಗಳಿವೆ. ಈ ಭಾಗ ದೀರ್ಘವಾಗಿದ್ದು, ಅನೇಕ ಮೆಟ್ಟಿಲುಗಳಿವೆ. ಮೆಟ್ಟಿಲುಗಳ ಇಕ್ಕೆಲದ ಗೋಡೆಗಳಲ್ಲಿ ಪರಸ್ಪರ ಎದುರಾಗಿ ಅನಂತಶಯನ, ಶಿವ ದೇವತಾ ಗೃಹಗಳಿವೆ. ಬಲ ಭಾಗಗಳಲ್ಲಿ ಶಿವ ಗೃಹವಿದ್ದು, ಬಾಗಿಲ ಬದಿಯಲ್ಲಿ ಅಪೂರ್ಣಗೊಂಡ ಶೈವ ದ್ವಾರಪಾಲರ ಶಿಲ್ಪಗಳಿವೆ. ಒಳಗಿದ್ದ ಒಂದೇ ಕಲ್ಲಿನಲ್ಲಿ ಕೆತ್ತಿದ್ದ ಶಿವಲಿಂಗ ಹಾಗೂ ನಂದಿಯ ಶಿಲ್ಪವು ಈಗ ಭಾವಿಯಲ್ಲಿ ಬಿದ್ದಿದೆ. ಬಾಗಿಲ ಪಕ್ಕದಲ್ಲಿ (ಹೊರ ಗೋಡೆಯಲ್ಲಿ) ಗಜಲಕ್ಷ್ಮೀ, ಅರಳುಕಮಲ, ನಾಗಸರ್ಪಗಳ, ಉಬ್ಬು ಶಿಲ್ಪಗಳಿವೆ. ಎದುರಿನ ಗೋಡೆಯಲ್ಲಿ ಅನಂತಶಯನ ಗೃಹವಿದೆ. ಬಾಗಿಲ ಬದಿಯ ಗೋಡೆಯಲ್ಲಿ ಭಕ್ತ ಅಂಜನೇಯ, ಗರುಡ, ಗಜಾನನ, ಸಿಂಹದೇಹದಾರಿ ವ್ಯಕ್ತಿ, ಆಮೆ ಮೇಲೆ ಕುಳಿತು ಶಿವಲಿಂಗಕ್ಕೆ ಪೂಜಿಸುತ್ತಿರುವ ಭಕ್ತ, ಎದುರು ಮುಖ ಮಾಡಿದ ಎರಡು ಮೀನುಗಳು, ಮಜ್ಜಿಗೆ ಕಡಿಯುತ್ತಿರುವ ಗೊಲ್ಲತಿಯ ಉಬ್ಬು ಶಿಲ್ಪಗಳಿವೆ. ಗರ್ಭಗೃಹದಲ್ಲಿ (೧..೮)(೧.೮) ಛತ್ತಿನಲ್ಲಿ ಕಮಲಾಕೃತಿ ಇದೆ. ಮಧ್ಯದಲ್ಲಿ ಅನಂತಶಯನ ಶಿಲ್ಪವಿದೆ. ಭಾವಿಯ ಗೋಡೆಯಲ್ಲಿ ಹಂಸ, ಕಮಲಗಳು, ನಗ್ನವಾಗಿ ಕುಳಿತ ಸ್ತ್ರೀ, ಆನೆ, ಮೀನು, ಗಜ ಕಾಳಗ, ಸರ್ಪಗಳ ಉಬ್ಬು ಶಿಲ್ಪಗಳಿವೆ. ಎತ್ತರದ ಗೋಡೆಯ ಗೂಡೊಂದರಲ್ಲಿ ಗಜಾನನ ಶಿಲ್ಪವು ಗೂಡಿನ ಕೆಳಗೆ ಚಕ್ರ, ತ್ರಿನಾಮ, ಶಂಖಗಳ ಚಿಹ್ನೆಗಳು ಇವೆ.

ಕನಕಗಿರಿ ಬಾವಿ

ಪ್ರವೇಶ ಮೆಟ್ಟಿಲುಗಳ ಎಡ ಗೋಡೆಯಲ್ಲಿ ಒಂದು ಶಾಸನವಿದೆ. ಇಮ್ಮಡಿ ವುಡಸಿ ನಾಯಕನ ರಾಣಿ ಕನಕಮ್ಮ ಈ ಭಾವಿಯನ್ನು ಕ್ರಿ.ಶ. ೧೬೬೮ರಲ್ಲಿ (ಈ ಭಾವಿಯನ್ನು) ನಿರ್ಮಿಸಿದ ಬಗ್ಗೆ ಉಲ್ಲೇಖವಿದೆ. ಈ ಭಾವಿಯು ವಿಸ್ತಾರದಲ್ಲಿ ಅಚ್ಚಮ್ಮ ಭಾವಿಗಿಂತ ದೊಡ್ಡದಾಗಿದೆ. ಭಾವಿಗೆ ಸುತ್ತಲೂ ಸಮಗೊಳಿಸಿದ ದೊಡ್ಡ ಕಲ್ಲುಗಳಿಂದ ಕಟ್ಟಿದ್ದು ಭಾವಿಯಲ್ಲಿ ಇಳಿಯಲು ಪ್ರವೇಶ ಮೆಟ್ಟಿಲುಗಳು ಬಹಳಷ್ಟಿವೆ. ಬಲಭಾಗದ ಗೋಡೆಯ ಮೇಲೆ ಏತ ಪದ್ಧತಿಯ ಕಟ್ಟೆ ಇದೆ. ಭಾವಿಯ ಒಳ ಗೋಡೆಗಳಲ್ಲಿ ಮೀನೂ, ಆಮೆಯ ಉಬ್ಬು ಚಿತ್ರಗಳಿವೆ.

ಕನಕಗಿರಿ ಪ್ರವಾಸಿ ಮಂದಿರದ ಅವರಣದ ಬಾವಿ

ಈ ಭಾವಿಯು ವಿಶಾಲವಾಗಿದ್ದು, ಪೂರ್ವದಲ್ಲಿ ಪ್ರವೇಶದ ಮೆಟ್ಟಿಲುಗಳಿದ್ದು, ನಂತರ ಉತ್ತರಕ್ಕೆ ತಿರುಗಿ ನೇರವಾಗಿ ಭಾವಿಗೆ ಇಳಿಯುತ್ತದೆ. ಈ ಮೆಟ್ಟಿಲುಗಳ ಬದಿಯ ಗೋಡೆಗಳಲ್ಲಿ ದೇವತಾ ಗೃಹಗಳಿವೆ. (ಅಚ್ಚಮ್ಮ ಭಾವಿಯಲ್ಲಿದ್ದಂತೆ) ಒಳಗೆ ಈಗ ದೇವತಾ ಶಿಲ್ಪಗಳಿಲ್ಲ. ಭಾವಿಯ ಒಳಗಿನ ಗೋಡೆಗಳಲ್ಲಿ ನಗ್ನ ಸ್ತ್ರೀ ಹಾಗೂ ಮಿಥುನ ಶಿಲ್ಪಗಳಿವೆ. ಒಳ ಭಾವಿಯ ವಿಸ್ತಾರ ೬.೮೨) (೬.೩೫ ಮೀ. ಇದೆ. ಉತ್ತರಲ್ಲಿ ಇರುವ ೩.೭೦ ಮೀಟರ ಅಗಲವಾದ ಕಟ್ಟೆಯ ಕೆಳಭಾಗದಲ್ಲಿ ದೇವತಾ ಗೃಹಗಳಿವೆ. ನಂತರ ೨.೨೨ ಮೀಟರ್ ಅಳತೆಯ ಮೆಟ್ಟಿಲುಗಳ ಭಾಗ ನಂತರ ಪುನಃ ಕಟ್ಟೆ ಇದೆ. ಮೆಟ್ಟಿಲುಗಳ ಬದಿಯ ಗೋಡೆಗಳಲ್ಲಿ ಗಜಲಕ್ಷ್ಮಿ ಮತ್ತು ನಾಗಸರ್ಪದ ಉಬ್ಬು ಶಿಲ್ಪಗಳಿವೆ. ಈಗ ಭಾವಿಯಲ್ಲಿ ನೀರಿಲ್ಲ. ಭಾವಿಯ ಮೇಲಿನ ಭಾಗದಲ್ಲಿ ಗಾರೆ ಲೇಪನ ಇದೆ.ಈ ಭಾವಿಯು ಆಯತಾಕಾರದಲ್ಲಿದೆ. ಉತ್ತರದ ಕೊನೆಯಲ್ಲಿ ಭಾವಿ ಇದೆ. ಅದಕ್ಕೆ ಒಳ ಭಾಗದಲ್ಲಿ ಕಲ್ಲಿನಿಂದ ಕಟ್ಟಲಾಗಿದೆ. ಸತ್ತಲೂ ಕಟ್ಟೆ ಇದೆ. ಪಶ್ಚಿಮದ ಗೋಡೆಯ ಮೇಲೆ ಏತ ವ್ಯವಸ್ಥೆಯ ಕಟ್ಟೆ ಇದೆ. ಈ ಭಾವಿಗೆ ಇಳಿಯಲು ಪೂರ್ವ ಭಾಗದಿಂದ ಮೆಟ್ಟಿಲು ದಾರಿ ಇದೆ. ಅದು ನಂತರ ಉತ್ತರಕ್ಕೆ ತಿರುಗಿ ನೇರ ಭಾವಿಗೆ ಸೇರಿದೆ.

ಬಂಕಾಪುರದ ಬಾವಿ

ಈ ಬಾವಿ ಕಟ್ಟಡ ಆಯತಾಕಾರದಲ್ಲಿದೆ.

ಮಧ್ಯದಲ್ಲಿಯ ಭಾವಿಗೆ ಒಳಗೆ ಕಲ್ಲಿನಿಂದ ಕಟ್ಟಿಯಿದೆ. ಪೂರ್ವದಿಂದ ನೇರವಾಗಿ ಮೆಟ್ಟಿಲುಗಳಿವೆ. ಮೆಟ್ಟಿಲು ಬದಿಯ ಗೋಡೆಗಳಲ್ಲಿ ನಂದಿ, ಆಂಜನೇಯನ ಹಾಗೂ ಭಾವಿಯ ಗೋಡೆಯಲ್ಲಿ ದೊಡ್ಡ ನಾಗಸರ್ಪ, ಶಂಖ, ತ್ರಿನಾಮ, ಚಕ್ರದ ಚಿಹ್ನೆಗಳು ಇವೆ. ಪಶ್ಚಿಮದ ಗೋಡೆಯಲ್ಲಿ ಏತ ವ್ಯವಸ್ಥೆಯ ಕಟ್ಟೆ ಇದೆ.

ಕನಕಗಿರಿ ಗ್ರಾಮದಲ್ಲಿನ ಗಂಗಾವತಿ ರಸ್ತೆ, ಕರಣಯ್ಯ ಸ್ವಾಮಿ ಹೊಲದ ಬಾವಿ ಮಧ್ಯದಲ್ಲಿಯ ಭಾವಿಯ ಸುತ್ತಲೂ ಕಟ್ಟಲಾಗಿದ್ದು, ಮೇಲೆ ಕಟ್ಟೆ ಇದೆ. ಪ್ರವೇಶದ ಮೆಟ್ಟಿಲುಗಳ ಎರಡೂ ಬದಿಯ ಗೋಡೆಗಳಲ್ಲಿ ದೇವತಾ ಗೃಹಗಳಿವೆ. ಎಡ ಭಾಗದ ಗೃಹದಲ್ಲಿ ಮಾತ್ರ, ಆಂಜನೇಯ ಶಿಲ್ಪವಿದೆ. ಬಲ ಭಾಗದ ಗೃಹದಲ್ಲಿ ಈಗ ಯಾವ ಶಿಲ್ಪವಿಲ್ಲ. ಭಾವಿಯ ಹಿಂದಿನ ಗೋಡೆಯಲ್ಲಿ ಏತ ವ್ಯವಸ್ಥೆಯ ಕಟ್ಟೆ ಇದೆ.

ಕನಕಗಿರಿ ಗ್ರಾಮದಿಂದ ದಕ್ಷಿಣಕ್ಕೆ ಮೂರು ಕಿ.ಮೀ. ದೂರದಲ್ಲಿರುವ ಈಶ್ವರ ದೇವಾಲಯದ ಹಿಂದಿರುವ ಬಾವಿ

ಈ ಭಾವಿಯ ಸುತ್ತಲೂ ಸಮಗೊಳಿಸಿದ ಕಲ್ಲಿನಿಂದ ಕಟ್ಟಲಾಗಿದೆ. ಪೂರ್ವದಲ್ಲಿ ಭಾವಿಯಲ್ಲಿ ಇಳಿಯಲು ಮೆಟ್ಟಿಲುಗಳಿವೆ. ಮೆಟ್ಟಿಲುಗಳ ಬದಿಯ ಗೋಡೆಗಳಲ್ಲಿ ಪರಸ್ಪರ ಎದುರಾಗಿ ಗೂಡುಗಳಿದ್ದು, ಬಲ ಗೂಡಿನಲ್ಲಿ ಗಜಾನನ, ಎಡ ಗೂಡಿನಲ್ಲಿ ನಂದಿಯ ಶಿಲ್ಪಗಳಿವೆ. ಭಾವಿಯ ಬಲ ಗೋಡೆಯಲ್ಲಿ ಏತ ವ್ಯವಸ್ಥೆಯ ಕಟ್ಟೆ ಇದೆ.

ಕನಕಗಿರಿ ಬಾವಿ (ಗಂಗಾವತಿ ರಸ್ತೆಯ ಎಡಬದಿ ಗ್ರಾಮದಿಂದ ಮೂರು ಕಿ.ಮೀ. ದೂರದಲ್ಲಿದೆ)

ಮಧ್ಯದಲ್ಲಿರುವ ಭಾವಿಗೆ ಸುತ್ತಲೂ ಅಳತೆಯ ಕಲ್ಲಿನಿಂದ ಕಟ್ಟಲಾಗಿದ್ದು, ಇದಕ್ಕೆ ದಕ್ಷಿಣದಿಂದ ಇಳಿಯಲು ಮೆಟ್ಟಿಲುಗಳಿವೆ. ಭಾವಿಯ ಎಡದಂಡೆಯ ಮೇಲೆ ಒಂದು ಮಂಟಪವಿದೆ. ಈ ಮಂಟಪದ ಮೇಲೆ ಶಿಖರವಿದೆ.

ಉ) ಪುಷ್ಕರಣಿಗಳು

೧) ಚಿಕ್ಕ ಕನಕಪ್ಪನ ಗುಡಿಯ ಪುಷ್ಕರಣಿ (ಬಾವಿ)

ಇದಕ್ಕೆ ಭಾವಿ ಎಂದು ಹೆಸರಿದ್ದರೂ, ಸುತ್ತಲೂ ಮೆಟ್ಟಿಲುಗಳಿರುವುದರಿಂದ ಇದನ್ನು ಚಿಕ್ಕ ಪುಷ್ಕರಣಿ ಎನ್ನಬಹುದು. ಈ ಪುಷ್ಕರಣಿಗೆ ಮುಖ್ಯ ಪ್ರವೇಶ ಪೂರ್ವದ ಕಡೆಯಿಂದ ಇದೆ. ಈ ಮೆಟ್ಟಿಲು ಸಾಲಿನ ಎರಡೂ ಬದಿಯ ಗೋಡೆಯಲ್ಲಿ ಪುನಃ ಮೆಟ್ಟಿಲುಗಳ ಪ್ರವೇಶವಿದೆ. ಮೆಟ್ಟಿಲುಗಳ ಬದಿಯ ಗೋಡೆಗಳಲ್ಲಿ ಶಿವಲಿಂಗ, ನಂದಿಯ ಉಬ್ಬು ಶಿಲ್ಪವಿದೆ. ಪುಷ್ಕರಣಿಯ ದಕ್ಷಿಣದ ಕೊನೆಯಲ್ಲಿ ಮೆಟ್ಟಿಲುಗಳ ಮಧ್ಯ ಕಟ್ಟೆ ಇದ್ದು, ಅದರ ಮೇಲೆ ಎರಡು ಕಂಬಗಳಿವೆ. ಕಂಬಗಳಲ್ಲಿ ಪೀಠ ಕಾಂಡ, (ಕಾಂಡ ಭಾಗದಲ್ಲಿ ಕೆಳಗೆ, ಮೇಲೆ ಅಸಮವಾದ ಚೌಕಭಾಗಗಳಿದ್ದು, ಮಧ್ಯದಲ್ಲಿ ವೃತ್ತಾಕಾರದ ಭಾಗವಿದೆ.) ತಾಟಿ, ಕಳಸ, ಫಲಕಗಳಿವೆ. ಕಂಬಗಳ ಮೇಲೆ ಛತ್ರ ವ್ಯವಸ್ಥೆಯ ಭಾಗವಿದೆ. ಈ ದಂಡೆಯ ಅಂಚಿನುದ್ದಕ್ಕೂ ಗೋಡೆ ಇದೆ. ಗೋಡೆಯಲ್ಲಿ ಒಳಸರಿದ ಮಾಡುಗಳಲ್ಲಿ ಕ್ರಮವಾಗಿ ಗಣೇಶ, ಬಾಲ ಅಂಜನೇಯ, ಗಜಲಕ್ಷ್ಮೀ, ಶಿವಲಿಂಗ ಹಾಗೂ ನಂದಿಯ ಉಬ್ಬು ಶಿಲ್ಪಗಳಿವೆ. ಉಳಿದೆರಡು ಪುಷ್ಕರಣಿಗಳಿಗಿಂತ ಇದು ಆಕರ್ಷಕವಾಗಿದೆ.

ನರಸಿಂಹ ತೀರ್ಥ (ಪುಷ್ಕರಣಿ)

ಕನಕಗಿರಿಯ ಸೂರ್ಯ ದೇವಾಲಯದ ಮುಂದೆ ಇದೆ. ವಿಶಾಲವಾದ ಈ ಪುಷ್ಕರಣಿಯನ್ನು ಮುಖ್ಯವಾಗಿ ಯಾತ್ರಿಕರ ಕ್ಷೇತ್ರ ವಿಧಿ ಪೂರೈಕೆಗಾಗಿ ನಿರ್ಮಿಸಲಾಗಿದೆ. ಈ ತೀರ್ಥಕ್ಕೆ ಸುತ್ತಲೂ ಗ್ರಾನೈಟ ಶಿಲೆಯ ಮೆಟ್ಟಿಲುಗಳಿವೆ. ಸಮಗೊಳಿಸಿದ ಶಿಲೆಗಳಿಂದ ಮೆಟ್ಟಿಲುಗಳನ್ನು ವ್ಯವಸ್ಥಿತವಾಗಿ ಜೋಡಿಸಲಾಗಿದೆ. ನೆಲಮಟ್ಟದಲ್ಲಿ ಸುತ್ತಲೂ ೧.೧೦ ಮೀ. ಅಗಲದ ಕಟ್ಟೆ ಇದೆ. ಇದರ ನಂತರ ಪ್ರತಿ ೩೩ ಸೆಂ.ಮೀ. ಅಳತೆಯ ಒಟ್ಟು ಎಂಟು ಮೆಟ್ಟಿಲುಗಳಿವೆ. ಅತ್ಯಂತ ಕೆಳಗಿನ ಮೆಟ್ಟಿಲುಗಳ ಕೂಡ ೧.೧೦ ಮೀಟರ್ ಅಗಲವಾಗಿದೆ. ಈ ಮೆಟ್ಟಿಲುಗಳ ನಡುವೆ ಪೂರ್ವದಲ್ಲಿ ಮುಖ್ಯ ಪ್ರವೇಶದ ಮೆಟ್ಟಿಲುಗಳಿವೆ. ಇದರ ಅಗಲ ೯.೩ ಮೀಟರ.

ಪುಷ್ಕರಣಿಯ ಬಲ ಮೂಲೆಯಲ್ಲಿ ಸ್ತಂಭಗಳ ಮಂಟಪವಿದೆ. ಪುಷ್ಕರಣಿಯ ಮಧ್ಯದಲ್ಲಿ ಎತ್ತರವಾದ ಕಟ್ಟೆಯ ಮೇಲೆ ಮಂಟಪವಿದೆ. ಮಂಟಪಕ್ಕೆ ಮಂಚಬಂಧ ಅಧಿಷ್ಠಾನ ಪಿದ್ದು, ನಾಲ್ಕು ಮೂಲೆಗಳಲ್ಲಿ ಕಂಬ ಸುತ್ತಲೂ ಗೋಡೆ ಇದೆ. ಈ ನಾಲ್ಕು ಬದಿಯ ಗೋಡೆಗಳ ಮಧ್ಯದಲ್ಲಿ ಕಮಾನಾಕಾರದ ಬಾಗಿಲಿದೆ. ಮಂಟಪದ ಮೇಲೆ ಇಟ್ಟಿಗೆ ಗಾರೆಯಿಂದ ನಿರ್ಮಿಸಿದ ಶಿಖರವಿದೆ.

ಪುಷ್ಕರಣಿಯ ಸುತ್ತಲೂ ದೇವಾಲಯಗಳಿವೆ. ಪೂರ್ವದಲ್ಲಿ ಅನಂತಶಯನ ದೇವಾಲಯ ಪಶ್ಚಿಮದಲ್ಲಿ ಸೂರ್ಯ ದೇವಾಲಯ ಇದರ ಮಗ್ಗುಲು ವಿಷ್ಣು ದೇವಾಲಯ ಹಾಗೂ ದಕ್ಷಿಣದಲ್ಲಿ ಶಿವ ಮಂಟಪವಿದೆ.

ರಂಗನಾಥ ದೇವಾಲಯದ ಪುಷ್ಕರಣಿ

ಅಲ್ಲಲ್ಲಿ ಮೆಟ್ಟಿಲುಗಳು ಕಿತ್ತಿವೆ ಪುಷ್ಕರಣಿಯಲ್ಲಿ ನೀರಿಲ್ಲ.

ಈ ವಿಶಾಲವಾದ ಪುಷ್ಕರಣಿಗೂ ಸಮಗೊಳಿಸಿದ ಶಿಲೆಯಿಂದ ಸುತ್ತಲೂ ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ. ಸುತ್ತಲೂ ೮೦ ಸೆಂ.ಮೀ. ಅಗಲವಾದ ಕಟ್ಟೆಯಿಂದ. ದಕ್ಷಿಣ ದಿಂದ ಮುಖ್ಯ ಪ್ರವೇಶವಿದೆ. ಇಲ್ಲಿ ಮೆಟ್ಟಿಲುಗಳಿವೆ. ಈ ಭಾಗ ಹೊರಕಟ್ಟೆಯಿಂದ ಮೂರು ಮೀಟರ್ ಹೊರಗೆ ಇದೆ.

ಊ) ಬಝಾರ (ಬೀದಿ)

ಕನಕಗಿರಿ ನಾಯಕರ ನಗರ ಯೋಜನಾ ಕೌಶಲ್ಯದ ಕುರುಹಾಗಿ ಗ್ರಾಮದ ಮಧ್ಯದಲ್ಲಿ ಈ ಬಝಾರವಿದೆ. ಕನಕಾಚಲಪತಿ ದೇವಾಲಯದಿಂದ ಎದುರು ಹನುಮಪ್ಪ ದೇವಾಲಯದವರೆಗೆ ಸುಮಾರು ೧ ಕಿ.ಮೀ. ಉದ್ದವಾಗಿಯೂ ೧೦೦ ಅಡಿ ಅಗಲವಾಗಿಯೂ ಇದೆ. ಈ ವಿಶಾಲ ಬಝಾರದ ಎರಡೂ ಬದಿಗಳಲ್ಲಿ ಒಳಚರಂಡಿ ವ್ಯವಸ್ಥೆ ಮಾಡಲಾಗಿದ್ದಿತು. ಮತ್ತು ಇದರ ಇಕ್ಕೆಲಗಳಲ್ಲಿ ಸರ್ವಮತದವರಿಗಾಗಿ ದೇವಾಲಯಗಳನ್ನು ನಿರ್ಮಿಸ ಲಾಗಿದ್ದಿತು. ಪೂರ್ವದಲ್ಲಿ ಕನಕಾಚಲಪತಿ ದೇವಾಲಯವು, ಪಶ್ಚಿಮದಲ್ಲಿ ಎದುರು ಹನುಮಪ್ಪನ (ತೇರಿನ ಹನುಮಪ್ಪ) ದೇವಾಲಯಗಳಿದ್ದರೆ, ಮಧ್ಯದಲ್ಲಿ ಶಂಕರಲಿಂಗ, ಮಹಿಷ ಮರ್ಧಿನಿ, ನೀಲಕಂಠೇಶ್ವರ, ನಗರೇಶ್ವರ, ಪಂಪಾಪತಿ, ಮಲ್ಲಿಕಾರ್ಜುನ, ಗಜಲಕ್ಷ್ಮೀ ಹಾಗೂ ಯಲ್ಲಮ್ಮ ದೇವಾಲಯ ಗಳಿವೆ. ಈ ಮಧ್ಯದ ವಿಶಾಲ ಬೀದಿಯನ್ನು ರಥೋತ್ಸವಕ್ಕಾಗಿ ನಿರ್ಮಿಸಲಾಗಿದ್ದು, ಈಗಲೂ ಕನಕಾಚಲಪತಿ ದೇವಾಲಯದ ರಥೋತ್ಸವ ಇಲ್ಲಿಯೇ ಜರುಗುತ್ತದೆ.

ಋ) ಕಾವಲು ಗೋಪುರ

ಬಂಕಾಪೂರ ರಸ್ತೆಯಲ್ಲಿ ಲೋಕಪ್ಪನ ಮರಡಿ ಎಂಬ ಸ್ಥಳದಲ್ಲಿ ದೊಡ್ಡ ಬಂಡೆಗಲ್ಲೊಂದರ ಮೇಲೆ ಒಂದು ಚತುಷ್ಕ ವಿನ್ಯಾಸದ ಕಟ್ಟಡ ಇದೆ. ನಾಲ್ಕು ಬದಿಯ ಗೋಡೆಗಳಲ್ಲಿ

ಚಿಕ್ಕ ಬಾಗಿಲುಗಳಿವೆ. ಮಾಡಿನ ಅಂಚಿನಲ್ಲಿ ಸುತ್ತಲೂ ಕಂಗುರಾಕೃತಿಗಳಿವೆ. ಮಧ್ಯದಲ್ಲಿ ಇಸ್ಲಾಂ ಶೈಲಿಯ ಗುಮ್ಮಟವಿದೆ. ಬಹುಶಃ ಇಟ್ಟಿಗೆ ಗಾರೆಯಿಂದ ಕಟ್ಟಿರಬಹುದಾದ ಈ ಕಟ್ಟಡ ಕಾವಲು ಗೋಪುರವಾಗಿರಬಹುದು.

೫) ಕೋಟೆಗಳು

ಕನಕಗಿರಿ ಕೋಟೆ: ಕನಕಗಿರಿಯ ಸುತ್ತಲೂ ಕೋಟೆ ಇದ್ದು, ಈಗ ಬಹಳಷ್ಟು ನಾಶವಾಗಿದೆ. ಇದಕ್ಕೆ ಮೂರು ಕಡೆ ದ್ವಾರಬಾಗಿಲು (ಅಗಸಿ) ಗಳಿದ್ದ ಬಗ್ಗೆ ತಿಳಿಯುತ್ತದೆ. ಸಧ್ಯ ಕನಕಾಚಲಪತಿ ದೇವಾಲಯದ ಮುಂದಿನ ದ್ವಾರಬಾಗಿಲು ಸುಸ್ಥಿತಿಯಲ್ಲಿದೆ. ಎರಡು ಅರ್ಧ ವೃತ್ತಾಕಾರದ ಬುರುಜುಗಳ ಮಧ್ಯ ಬಾಗಿಲು ಇದೆ. ಇನ್ನೊಂದು ಗಂಗಾವತಿ ರಸ್ತೆಯ ಬದಿಯಲ್ಲಿದ್ದು, ಅದಕ್ಕೆ ಆನೆಗುಂದಿ ಅಗಸಿ ಎಂದು ಹೆಸರು. ಇದು ಸದ್ಯ ಶಿಥಿಲಾವಸ್ಥೆಯಲ್ಲಿದೆ. ಎದುರು ಹನುಮಪ್ಪ ದೇವಾಲಯದ ಹಿಂದಿದ್ದ ಅಗಸಿಯು ಈಗ ಸಂಪೂರ್ಣ ಬಿದ್ದು ಹೋಗಿದೆ. ಉತ್ತರದ ಭಾಗದಲ್ಲಿ ಕೋಟೆಯ ಕೆಲಭಾಗ ಉಳಿದಿದೆ.

ಕೋಟೆಯ ಒಳಗಡೆ ನಿರ್ಮಿಸಿದ್ದ ಅರಮನೆ ಈಗ ನೆಲಸಮವಾಗಿದೆ. ಅರಮನೆಗೆ ಸಂಬಂಧಿಸಿದ ಕೆಲವು ಭಾಗಗಳು ಈಗ ಉಳಿದಿವೆ. (ಕನಕಾಚಲಪತಿ ದೇವಾಲಯದ ಬಲಬದಿ) ಉಳಿದ ಒಂದು ಕೋಣೆಯಲ್ಲಿ ಗುಪ್ತ ಮಾರ್ಗವಿದೆ. ಒಬ್ಬ ಕುದುರೆ ಸವಾರ ಸರಳವಾಗಿ ಹೋಗಬಹುದಾದಷ್ಟು ಅಗಲ ಎತ್ತರವಾದ ಈ ಗುಪ್ತ ದ್ವಾರವನ್ನು ಸುತ್ತಲೂ (ಕೆಳಗೆ, ಮೇಲೆ) ಕಲ್ಲುಗಳಿಂದ ಕಟ್ಟಿ ನಿರ್ಮಿಸಲಾಗಿದೆ.

ಚಿಕ್ಕ ಮಾದಿನಾಳ ಕಿಲ್ಲೆ : ಕನಕಗಿರಿಯಿಂದ ನೈರುತ್ಯಕ್ಕೆ ಸು. ೮ ಕಿ.ಮೀ. ದೂರದಲ್ಲಿರುವ ಚಿಕ್ಕ ಮಾದಿನಾಳ ಹತ್ತಿರದ ಗುಡ್ಡದಲ್ಲಿ ಕನಕಗಿರಿ ನಾಯಕರು ಒಂದು ಕಿಲ್ಲೆಯನ್ನು ನಿರ್ಮಿಸಿದ್ದಾರೆ. ಇದು ಕೂಟ ಯುದ್ಧಗಳನ್ನು ನಡೆಸಲು ಗುಪ್ತ ಸೈನಿಕ ಚಟುವಟಿಕೆಗಳ ಸೂಕ್ತ ಅಡಗುದಾಣವಾಗಿದೆ. ನೈಸರ್ಗಿಕವಾಗಿ ಕಲ್ಲು ಬಂಡೆಗಳಿಂದ ಸುತ್ತುವರಿದ ಈ ಕಿಲ್ಲೆಯಲ್ಲಿ ಅಲ್ಲಲ್ಲಿ ಮಾತ್ರ ಗೋಡೆ ನಿರ್ಮಿಸಿ ಭದ್ರಪಡಿಸಲಾಗಿದೆ. ಕಿಲ್ಲೆಯನ್ನು ಪ್ರವೇಶ ಅತ್ಯಂತ ದುರ್ಗಮವಾಗಿವೆ. ದಕ್ಷಿಣದಿಂದ ಈ ಕಿಲ್ಲೆಯನ್ನು ಪ್ರವೇಶಿಸಬಹುದು. ಈ ದಾರಿಯಲ್ಲಿ ಎರಡು ದ್ವಾರಬಾಗಿಲುಗಳಿದ್ದು, ಈಗ ಮುಚ್ಚಲಾಗಿದೆ. ಕಿಲ್ಲೆಯ ಒಳಗೆ ಮೂರು ವೃತ್ತಾಕಾರದಲ್ಲಿ ಕಟ್ಟಿದ ಮದ್ದಿನ ಮನೆಗಳಿವೆ ಹಾಗೂ ಒಂದು ಅಂಜನೇಯನ ಉಬ್ಬು ಶಿಲ್ಪವಿದೆ.

ಅಲ್ಲಲ್ಲಿ, ಬಿದ್ದು ಹೋದ ಮನೆಗಳ ತಳಪಾಯಗಳು, ಗೋಡೆಗಳು ಇವೆ. ವೃತ್ತಾಕಾರದ ಮದ್ದಿನ ಮನೆಗಳ ಮಧ್ಯದಲ್ಲಿ ನಾಲ್ಕು ಕಂಬಗಳಿದ್ದು, ಮೇಲೆ ಗಾರೆಯಿಂದ ಲೇಪಿಸಲಾಗಿದೆ. ಮೇಲಿನ ಹಂತದಲ್ಲಿ ಬಾಗಿಲಿದ್ದು, ಅಲ್ಲಿಗೆ ಮೆಟ್ಟಿಲುಗಳಿವೆ. ಅಲ್ಲದೆ ಬಹುಶಃ ಧಾನ್ಯಗಳನ್ನು ಸಂಗ್ರಹಿಸಿ ಇಡುತ್ತಿದ್ದ ಹಲವಾರು ಹಗೆಗಳು, ಎರಡು ಅಳವಾದ ನೈಸರ್ಗಿಕ ಗುಹೆಗಳು ಈ ಕಿಲ್ಲೆಯಲ್ಲಿವೆ.

ಇಲ್ಲಿ ಯಾವುದೇ ಶಾಸನಗಳು ಲಭ್ಯವಿಲ್ಲ. ಆದರೆ ಒಂದು ಬಂಡೆಗಲ್ಲೊಂದರ ಮೇಲೆ ೭೩ ಸೆಂ.ಮೀ. ಎತ್ತರ ೮೬ ಸೆಂ.ಮೀ. ಅಗಲವಾದ ಅಶ್ವಸವಾರನ ಶಿಲ್ಪವಿದೆ. ಇದು ಕನಕಗಿರಿಯಲ್ಲಿಯ ಸ್ಮಾರಕ ಶಿಲ್ಪದಂತಿದೆ. ಕುದುರೆಯ ಮೇಲೆ ಖಡ್ಗಧಾರಿಯೊಬ್ಬ ಕುಳಿತಿದ್ದು (ರಾಜ) ಮುಂದೆ ಕುದುರೆ ಹಿಡಿದ ಮಾರ್ಗದರ್ಶಕ ವ್ಯಕ್ತಿ ಹಾಗೂ ಅಂಜನೇಯ ದೇವಾಲಯದ ಭಾಗಿಲಿನ ಅಡ್ಡ ಜಂತಿಯಲ್ಲರುವ ಶಂಖ, ತ್ರಿನಾಮ, ಚಕ್ರಗಳ ಚಿಹ್ನೆಗಳಿಂದ ಈ ಕಿಲ್ಲೆ ಕನಕಗಿರಿ ನಾಯಕರಿಗೆ ಸಂಬಂಧಿಸಿದ್ದೆಂದು ನಿಸ್ಸಂಶಯವಾಗಿ ಹೇಳಬಹುದು.

ಎಮ್ಮಿಗುಡ್ಡದ ಕೋಟೆ: ಗಂಗಾವತಿ–ಕೊಪ್ಪಳ ರಸ್ತೆಯಲ್ಲಿರುವ ಎಮ್ಮಿಗುಡ್ಡ ಎಂಬಲ್ಲಿಯೂ ಸಹ ನಾಯಕರು ಕೋಟೆಯನ್ನು, ದೇವಾಲಯವನ್ನು ನಿರ್ಮಿಸಿದ್ದಾರೆ. ನಾಯಕರ ಇತಿಹಾಸದಲ್ಲಿ ಈ ಕೋಟೆ ಮಹತ್ವದ ಪಾತ್ರ ವಹಿಸಿದೆ.

ಲೌಕಿಕ ಕಟ್ಟಡಗಳಲ್ಲಿ ವೆಂಕಟಪತಿಭಾವಿ, ಅಚ್ಚಮ್ಮಭಾವಿ, ವೆಂಕಟಪತಿಗುಡಿ (ಪ್ರತಿಮಾಮಂದಿರ), ಚಿಕ್ಕಕನಕಪ್ಪನ (ಪ್ರತಿಮಾ) ಗುಡಿ ವಾಸ್ತುದೃಷ್ಟಿಯಿಂದ ಗಮನಾರ್ಹವಾದ ನಿರ್ಮಿತಿಗಳಾಗಿವೆ. ನರಸಿಂಹ ತೀರ್ಥ, ರಂಗನಾಥ ತೀರ್ಥ (ಪುಷ್ಕರಣಿಗಳು) ಬೃಹತ್ ಪ್ರಮಾಣದಿಂದ ಗಮನ ಸೆಳೆಯುತ್ತದೆ. ಸಾಂಸ್ಕೃತಿಕವಾಗಿಯೂ ನಾಯಕರ ಪಾತ್ರ ಸ್ಮರಣೀಯವಾಗಿದೆ.

ಆಧಾರಸೂಚಿ

೧. ಶರಣ ಬಸಪ್ಪ ಕೋಲ್ಕಾರ, **ಕನಕಗಿರಿ ಸ್ಮಾರಕಗಳು ಮತ್ತು ಮೂರ್ತಿಶಿಲ್ಪಗಳು**, ಎಂ. ಫಿಲ್ ಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೧೯೯೪.

೨. ಜಯತೀರ್ಥ ರಾಜಪುರೋಹಿತರು, **ಕನಕಗಿರಿ**, ವೈ.ಬಿ.ಹೆಚ್. ಪ್ರಕಾಶನ, ಬೆಂಗಳೂರು, ೧೯೭೭.

೩. ಮಿಚೆಲ್ ಜಾರ್ಜ್, ಟೂ ಟೂಂಬ್ಸ್ ಎಟ್ ಹೊಸಪೇಟೆ, **ವಿಜಯನಗರ ಪ್ರೋಗ್ರೆಸ್ ಆಫ್ ರೀಸರ್ಚ್**, ೧೯೭೯–೮೩. ಪುಟ ೬೪–೬೫.

೪. ಸಿವೆಲ್ ರಾಬರ್ಟ್, **ಎ ಫರ್ಗಾಟನ್ ಎಂಪೈರ್**, ನವದೆಹಲಿ, ೧೯೮೨.

೫. ಹಯವದನರಾವ್. ಸಿ., **ಮೈಸೂರು ಗೆಜೆಟಿಯರ್**, ಸಂ.ನ.ಪು. ೫೮,೫೦.

೫೩

ಜಮಖಂಡಿಯ ಪಾರಂಪರಿಕ ಕಟ್ಟಡಗಳು

ಡಾ. ಎಸ್.ಜಿ. ಚಲವಾದಿ* ಕುಂ. ಸಾವಿತ್ರಿಬಾಯಿ ನಿಂ. ಓಲೇಕಾರ**

ಪೀಠಿಕೆ

ಸಾಂಸ್ಕೃತಿಕವಾಗಿ ಸಿರಿವಂತವಾಗಿರುವ ಜಮಖಂಡಿಯ ಪೌರಾಣಿಕ ಹಿನ್ನೆಲೆಯು ಕೂಡ ಅಷ್ಟೇ ಸಮೃದ್ಧವಾಗಿದೆ. ಈ ತಾಲ್ಲೂಕಿನ ಅನೇಕ ಹಳ್ಳಿಗಳು ಕೂಡ ರಾಮಾಯಣ, ಮಹಾಭಾರತಗಳ ಸಂಬಂಧ ಕಲ್ಪಿಸುವ ಐತಿಹ್ಯಗಳನ್ನು ಹೊಂದಿವೆ. ಉತ್ತರಕ್ಕೆ ಹರಿಯುವ ಕೃಷ್ಣಾ ನದಿಯು ಪೌರಾಣಿಕ ಮಹತ್ವವನ್ನು ಪಡೆದಿದೆ. ಸ್ಕಂದ, ವಾಯು, ಪದ್ಮ, ಮತ್ತು ಬ್ರಹ್ಮಪುರಾಣಗಳಲ್ಲಿ; ಮಹಾಭಾರತದ ಸಭಾಪರ್ವ ಹಾಗೂ ಭೀಷ್ಮ ಪರ್ವಗಳಲ್ಲಿ, ಮಂಗಲಾಷ್ಟಕ ಹಾಗೂ ಜಾತಕ ಕಥೆಗಳಲ್ಲಿಯೂ ಕೂಡ ಉಲ್ಲೇಖಗೊಂಡಿರುವ ಕೃಷ್ಣಾ ನದಿಯು ಸ್ವರ್ಗದಿಂದ ಇಳಿದುಬಂದ "ದಕ್ಷಿಣ ಗಂಗೆ" ಎಂದೇ ಪ್ರಸಿದ್ಧವಾಗಿದೆ. ಜಮಖಂಡಿ ನಗರದ ಪಶ್ಚಿಮ ಭಾಗದಲ್ಲಿ ಎರಡು ಕಿ.ಮೀ. ಅಂತರದಲ್ಲಿ ಪ್ರಾಚೀನ ರಾಮೇಶ್ವರ ದೇವಾಲಯವಿದೆ. ಅಲ್ಲಿಯ ಪ್ರಭುವಾದ ರಾಮಚಂದ್ರದೇವನು ತನ್ನ ೧೪ ವರ್ಷದ ವನವಾಸದಲ್ಲಿ ಲಂಕಾಧಿಪತಿಯಾದ ರಾವಣನನ್ನು ವಧೆ ಮಾಡಲು ಲಂಕೆಗೆ ಪ್ರಯಾಣಿಸುವ ಮಾರ್ಗ ಮಧ್ಯದಲ್ಲಿ ಈ ರಾಮೇಶ್ವರ ಲಿಂಗವನ್ನು ಪ್ರತಿಷ್ಠಾಪಿಸಿದನೆಂದು ಹೇಳಲಾಗಿದೆ. ಆ ಸ್ಥಳಕ್ಕೆ ರಾಮತೀರ್ಥ ವೆಂದು ಹೆಸರು. ಈ ದೇವಸ್ಥಾನದ ಪಕ್ಕದಲ್ಲಿ ಪಟವರ್ಧನ ಸಂಸ್ಥಾನಿಕರಾದ ರಾಮಚಂದ್ರರಾವ ಅಪ್ಪಾಸಾಹೇಬರು ತಮ್ಮ ವಾಸ್ತವ್ಯಕ್ಕಾಗಿ ಒಂದು ಸುಂದರವಾದ ಅರಮನೆಯನ್ನು ಕಟ್ಟಿಸಿದ್ದಾರೆ. ಅದಕ್ಕೆ ರಾಮತೀರ್ಥ ಅರಮನೆಯೆಂದು ಕರೆಯುತ್ತಾರೆ.

ಜಮಖಂಡಿಯಿಂದ ಉತ್ತರಕ್ಕೆ ಎಂಟು ಕಿ.ಮೀ. ಅಂತರದಲ್ಲಿ 'ಶೂರ್ಪಾಲಿ' ಎಂಬ ಗ್ರಾಮವು ಕೃಷ್ಣಾ ನದಿಯ ಉತ್ತರದ ತಟಕದಲ್ಲಿದೆ. ಅಲ್ಲಿಯ ನಿಸರ್ಗದ ರಮಣೀಯತೆಯನ್ನು ಕಂಡು ಜಮದಗ್ನಿ ಋಷಿ ಹಾಗೂ ರೇಣುಕಾದೇವಿಯ ಪುತ್ರನಾದ ಪರಶುರಾಮನು ಆನಂದಭರಿತನಾಗಿ ಆನಂದ ಭಾಷ್ಪಗಳನ್ನು ಉದುರಿಸಿದನಂತೆ. ಜಲಬಿಂದುವಿನಿಂದ ಚಿತ್ರ-ವಿಚಿತ್ರವಾದ ಎಲೆ-ಟೊಂಗೆಗಳಿಂದ ಕೂಡಿದ ಮತ್ತು ಆಶ್ಚರ್ಯಕರವಾದ ಅಶ್ವಥವೃಕ್ಷವು ಉತ್ಪತ್ನವಾಗಿದೆ ಎಂಬ ಹೇಳಿಕೆ ಇದೆ. ಈ ಕಲಿಯುಗದಲ್ಲಿ ಪರಶುರಾಮನೇ ಲಕ್ಷ್ಮಿನರಸಿಂಹ ರೂಪದಿಂದ ಶೂರ್ಪಾಲ್ಲಿ ಕ್ಷೇತ್ರಮೂರ್ತಿಯಾಗಿ ಇಲ್ಲಿಯ ಕೃಷ್ಣಾ ತೀರದಲ್ಲಿ ವಾಸವಾಗಿದ್ದಾನೆಂಬ ಪೌರಾಣಿಕ ಹಿನ್ನೆಲೆಯನ್ನು ಹೊಂದಿರುವುದೆಂದು ಸಂಸ್ಕೃತದಲ್ಲಿರುವ ತಾಡವಾಲೆ ಲಿಪಿಯು ಹೇಳುತ್ತದೆ. (ಅದರ ಸಾರಾಂಶವನ್ನು ನೋಡಲಾಗಿದೆ). ಹೇಳಿಕೆಯೂ ಕೂಡ ಇದೆ.

ತ್ರೇತಾಯುಗದಲ್ಲಿ ಶ್ರೀರಾಮನು ಸೀತಾ-ಲಕ್ಷ್ಮಣರೊಂದಿಗೆ ಈ ಶೂರ್ಪಾಲಿ ಕ್ಷೇತ್ರಕ್ಕೆ ಬಂದು, ಇಲ್ಲಿಯ ಮಹಿಮೆಯನ್ನು ಕಂಡು ಇಲ್ಲಿಯೇ ಸದಾ ವಾಸವಾಗಿದ್ದನೆಂಬ ಮತ್ತು ಬಲರಾಮನು ಸಹ ಯಾತ್ರಾರ್ಥಿಯಾಗಿ ಈ ಕ್ಷೇತ್ರಕ್ಕೆ ಬಂದು ಹೋಗಿದ್ದಾನೆಂಬ (ಆಖ್ಯಾಯಿಕೆ ಇದೆ) ಹೇಳಿಕೆ ಇದೆ.

ಈ ಮೇಲಿನ ಎಲ್ಲಾ ದೃಷ್ಟಾಂತಗಳಿಂದ ಜಮಖಂಡಿಯ (ಪ್ರದೇಶವು) ತಾಲೂಕು ಎಷ್ಟು ಸಮೃದ್ಧವಾಗಿದ್ದು, ಪೌರಾಣಿಕ ಹಿನ್ನಲೆಯನ್ನೂ ಹೊಂದಿದೆ ಎಂದು ನಮಗೆ ಗೊತ್ತಾಗುತ್ತದೆ.

ಜಮಖಂಡಿಯ ನಾಮವಿವೇಚನೆ ಮತ್ತು ಐತಿಹಾಸಿಕ ಹಿನ್ನೆಲೆ

ಜಮಖಂಡಿಯ ಇತಿಹಾಸವು ೧೦ನೇ ಶತಮಾನದ ಹಿಂದಿನದೆಂದು ತಿಳಿದು ಬರುತ್ತದೆ. ಇದರ ಪ್ರಥಮ ಉಲ್ಲೇಖವು ಕವಿಚಕ್ರವರ್ತಿ ರನ್ನನ ಅಜಿತನಾಥ ತೀರ್ಥಂಕರ ಪುರಾಣದ, ೧೨ನೆಯ ಅಶ್ವಾಸದಲ್ಲಿದೆ. ರನ್ನಕವಿಯು ಜಮಖಂಡಿಯ ಬಗೆಗೆ ಈ ರೀತಿಯಾಗಿ ವಿವರಿಸಿದ್ದಾನೆ.

"ಬೆಳುಗಲಿ ಐನೂರರೊಳ್
ಅಗ್ಗಳವೆನಿಸುವ ಜಂಬುಖಂಡಿ
ಎಪ್ಪತ್ತರ್ಕಳ್ ತಿಲಕಂನೆ
ನೆಗಳ್ದ.... ಮುದುಪೊಳಲೋಳ್ ಪುಟ್ಟಿ,
ಸುಪುತ್ರನೆನಿಸಿದಂ ಕವಿ ರನ್ನಂ."

ಜಮಖಂಡಿ ಎಪ್ಪತ್ತರ ನಾಡಾದ "ಮುದುಪೊಳಲ್" ತನ್ನ ಜನ್ಮಸ್ಥಾನವೆಂದು ರನ್ನ ಹೇಳಿಕೊಂಡಿದ್ದಾನೆ. ರನ್ನನ ಜನನ ಕ್ರಿ.ಶ. ೯೪೯ ರಿಂದ ೯೫೦ ರ ಆಸುಪಾಸಿನಲ್ಲಿಯದೆಂದು ಪಂಡಿತರ ಅಭಿಮತವಾಗಿದೆ. ಅವನ ಕಾಲಕ್ಕೆ ಜಮಖಂಡಿ

* ಸಹಾಯಕ ಪ್ರಾಧ್ಯಾಪಕರು, ಪ್ರಾಚೀನ ಭಾರತೀಯ ಇತಿಹಾಸ ಮತ್ತು ಶಾಸನ ವಿಭಾಗ, ಕ.ವಿ.ವಿ. ಧಾರವಾಡ-೫೮೦೦೦೩

ಒಂದು ಅಗ್ರಹಾರವೆನಿಸಿಕೊಂಡು, ಅದರ ಅಧೀನದಲ್ಲಿ ಎಪ್ಪತ್ತು ಹಳ್ಳಿಗಳಿರಬೇಕೆಂದು ಅದು ಸುಮಾರು. ೭ ಅಥವಾ ೮ನೇ ಶತಮಾನದಲ್ಲಿಯೇ ಪ್ರವರ್ಧಮಾನಕ್ಕೆ ಬಂದು, ಒಂದು ಪಟ್ಟಣ ವಾಗಿರಬೇಕು. ಈ ಹಿನ್ನೆಲೆಯಲ್ಲಿ ನಗರದ ಪ್ರಾಚೀನತೆ ಒಂದು ಸಹಸ್ರ ವರ್ಷಕ್ಕೂ ಕಾಲ ಮಿಕ್ಕಿದ್ದಾಗಿದೆ ಎಂದು ತಿಳಿದು ಬರುತ್ತದೆ.

ಜಮಖಂಡಿ ಹೆಸರಿನ ಉತ್ಪತ್ತಿಯ ಬಗೆಗೆ ಅನೇಕ ರೀತಿಯ ಊಹೆಗಳಿವೆ

೧. ಜಂಬು ವೃಕ್ಷಗಳ (ನೀಲಗಿರಿ ಗಿಡಗಳ) ವನವು ಈ ಊರಿನ ಸುತ್ತಲೂ ವಿಪುಲವಾಗಿ ಬೆಳೆಯುತ್ತಿದ್ದರಿಂದ ಅದಕ್ಕೆ ಈ ಹೆಸರು ಬಂದಿರುಬಹುದೆಂದು ಊಹಿಸ ಲಾಗಿದೆ.

೨. ಈ ಭಾಗದಲ್ಲಿ ಜಂಬುಕಗಳು (ನರಿಗಳು) ವಾಸಿಸುವ ಖಿಂಡಿಗಳು ಅಥವಾ ಪೊದರುಗಳು, ಬಹಳವಿದ್ದು ದರಿಂದ ಈ ಹೆಸರು ಬಂದಿರಬಹುದೆಂದು ಇನ್ನೊಂದು ಊಹೆಯಾಗಿದೆ.

೩. ಇಲ್ಲಿ "ಜಂಬುಕೇಶ್ವರ"ನೆಂಬ ಪ್ರಾಚೀನ ದೇವಾಲಯ ವಿದೆ. ಈ ಜಂಬುಕೇಶ್ವರನಿಂದ ಈ ಗ್ರಾಮಕ್ಕೆ ಜಂಬುಖಂಡಿ ಎಂಬ ಹೆಸರು ಬಂದಿರಬಹುದೆಂದು ಊಹಿಸಬಹುದು.

೪. ಜಂಬು ಎಂಬ ಮುನಿಯು ಇಲ್ಲಿ ವಾಸವಾಗಿದ್ದು ಅವನಿಂದ ಈ ಊರಿಗೆ ಜಂಬುಖಂಡಿ ಎಂದು ಹೆಸರು ಬಂದಿದೆ ಎಂಬುದು ಮತ್ತೊಂದು ಊಹೆಯಾಗಿದೆ.

ಜಮಖಂಡಿಯ ಸಮೀಪದಲ್ಲಿ ಮಧುರಖಂಡಿಯೆಂಬ ಗ್ರಾಮದಲ್ಲಿ ಮಧುರಖಂಡೇಶ್ವರನ ಪುರಾತನ ಈಶ್ವರ ದೇವಾಲಯವಿದೆ. ಆ ಊರಿಗೆ ಮಧುರಖಂಡೇಶ್ವರ ನಿಂದಲೇ ಮಧುರಖಂಡಿಯೆಂಬ ಹೆಸರು ಬಂದಿತ್ತೆಂದು ಹೇಳುತ್ತಾರೆ. ಅದರಂತೆ ಜಮಖಂಡಿ ನಗರಕ್ಕೆ ಗ್ರಾಮದೇವತೆ ಯಾದ ಜಂಬುಕೇಶ್ವರನಿಂದ ಜಮಖಂಡಿಯೆಂದು ಹೆಸರು ಬಂದಿರ ಬೇಕೆಂದು ಊಹಿಸುವುದು ಹೆಚ್ಚು ಸಮಂಜಸ ವೆನಿಸುತ್ತದೆ ಸುಮಾರು ೯ನೇ ಶತಮಾನದಿಂದ ೧೨ನೇ ಶತಮಾನದವರೆಗೆ ಜಮಖಂಡಿ ಭಾಗದಲ್ಲಿ ಜೈನ ಧರ್ಮದ ಪ್ರಭಾವವಿದ್ದದ್ದು, ಜಮಖಂಡಿಯಿಂದ ೨೯ ಕಿ.ಮೀ. ಅಂತರದಲ್ಲಿ ಇರುವ ತೇರದಾಳ ಗ್ರಾಮದ ನೇಮಿನಾಥ ತೀರ್ಥಂಕರನ ಬಸದಿಯಲ್ಲಿದ್ದ (ಶಕೆ ೧೧೧೯ರ) ಶಿಲಾಶಾಸನದಿಂದ ತಿಳಿದುಬರುತ್ತದೆ. ಅಲ್ಲದೆ ಜಮಖಂಡಿ ಮತ್ತು ೨೦ ಹಳ್ಳಿಗಳ ಮೇಲೆ ಜೈನ ಉಪಾಧ್ಯಾಯರನ್ನು ನೇಮಿಸಲಾಗಿತ್ತು. ಅವರು ಜೈನಧರ್ಮದ ಧಾರ್ಮಿಕ ಕಾರ್ಯಕಲಾಪಗಳನ್ನು ನೋಡಿಕೊಂಡು ಹೋಗುತ್ತಿದ್ದರು. ಅದಕ್ಕಾಗಿ ಅವರಿಗೆ ಭೂಮಿಯನ್ನು ಉಂಬಳಿ ಹಾಕಿ ಕೊಡಲಾಗಿತ್ತು. ಆದರೆ ಇಂದು ಮಧುರಖಂಡಿ ಮತ್ತು ಆದರ ನೆರೆಯ ಹಳ್ಳಿಯಾದ ಕಲ್ಲಳ್ಳಿಯಲ್ಲಿ ಸ್ವಲ್ಪ ಜೈನ ಧರ್ಮೀಯರಿದ್ದಾರೆ. ಸುತ್ತಲಿನ ಕೆಲವು ಗ್ರಾಮಗಳಲ್ಲಿ ದಿಗಂಬರ ಪಂಥದ ಜೈನರು ಮತ್ತು ಜಮಖಂಡಿ ನಗರದಲ್ಲಿ ಶ್ವೇತಾಂಬರ ಪಂಥದ ಜೈನ ಧರ್ಮೀಯರು ಕೂಡಾ ಇದ್ದಾರೆ. ನಂತರ ೧೨ನೇ ಶತಮಾನದಲ್ಲಿ ಬಸವಣ್ಣನವರ ವೀರಶೈವ ಕ್ರಾಂತಿಯ ಪರಿಣಾಮವಾಗಿ ವೀರಶೈವ ಧರ್ಮವು ಜಮಖಂಡಿ ಭಾಗದಲ್ಲಿ ಪ್ರಬಲಗೊಂಡಿತು. ಇಲ್ಲಿ ಇಂದಿಗೂ ಸಹ ಮುತ್ತಿನಕಂತಿಮಠ. ಕಲ್ಯಾಣಮಠ, ಓಲೆಯಮಠ ಮುಂತಾದ ವೀರಶೈವ ಮಠಗಳಿವೆ. ಅಲ್ಲದೆ ನಂದಿಗೆಪ್ಪನಗುಡಿ, ಕಾಡಸಿದ್ದೇಶ್ವರಗುಡಿ, ಜಂಬುಕೇಶ್ವರಗುಡಿ, ಕಲ್ಮೇಶ್ವರಗುಡಿ ಪ್ರಭದೇವರಗುಡಿ, ಪರ್ವತದೇವರಗುಡಿ ಮುಂತಾದ ಶೈವದೇವಾಲಯಗಳಿದ್ದು, ವೀರಶೈವ ಧರ್ಮದ ಬಗ್ಗೆ ಎತ್ತಿ ತೋರಿಸುತ್ತದೆ. ೧೪ನೇ ಶತಮಾನದಲ್ಲಿ ಮುಸ್ಲಿಮರ ಆಳ್ವಿಕೆ ಪ್ರಾರಂಭವಾದಾಗ ಜಮಖಂಡಿಯಲ್ಲಿ ಇಸ್ಲಾಂ ಧರ್ಮವು ಪ್ರಸಾರವಾಗಿ ಅಲ್ಲಿನ ಪ್ರಾಚೀನ ಕಾಲದ ಜುಮ್ಮಾ ಮಸೀದಿ ಮತ್ತು ಅಬುಬಕರ್ ದರ್ಗಾಗಳು ಜಮಖಂಡಿಯ ಪಾರಂಪರಿಕತೆಯನ್ನು ಎತ್ತಿ ತೋರಿಸುತ್ತದೆ.

ಮೂಲಧಾರಗಳು

ಜಮಖಂಡಿ ನಗರದ ಇತಿಹಾಸದ ಮೇಲೆ ಹೊಸ ಬೆಳಕನ್ನು ಬೀರುವ ಅನೇಕ ಪ್ರಾಚೀನ ಅವಶೇಷಗಳಿವೆ. ಅವುಗಳಲ್ಲಿ ಮುಖ್ಯವಾಗಿ ಕೋಟೆ-ಕೊತ್ತಲ, ದೇವಾಲಯ, ಜಲಾಶಯ, ಹುತಾತ್ಮರ ಸ್ಮಾರಕ, ಮಸೀದಿ, ದರ್ಗಾ ಮೊದಲಾದವು ಸ್ಥಳೀಯ ಚರಿತ್ರೆಯನ್ನು ಬಿತ್ತರಿಸುವ ಪ್ರಮುಖ ಆಕರಗಳಾಗಿವೆ.

ಸಾಹಿತ್ಯಕ ಮೂಲಧಾರಗಳು

ಧಾರ್ಮಿಕ ಸಾಹಿತ್ಯ ಮತ್ತು ಪಾರಂಪರಿಕ ಕೃತಿಗಳಾದ ರಾಮಾಯಣ, ಮಹಾಭಾರತ, ಪುರಾಣಗಳಾದ ಮತ್ಸ್ಯ, ವಾಯು, ಬ್ರಹ್ಮಾಂಡ, ಅದರಂತೆ ರನ್ನ ಮಹಾಕವಿಯು ರಚಿಸಿದ ಅಜಿತನಾಥ ತೀರ್ಥಂಕರ ಪುರಾಣ ಮೊದಲಾದವುಗಳು ಸಾಂದರ್ಭಿಕವಾಗಿ ಜಮಖಂಡಿಯ ಚರಿತ್ರೆಯ ರಚನೆಗೆ ಸಹಾಯಕಾರಿಯಾಗಿವೆ. ಅದೇ ರೀತಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಜಮಖಂಡಿಯ ಪಾತ್ರವನ್ನು ಗುರುತಿಸಲು ಹೋರಾಡಿದ ಸ್ವಾತಂತ್ರ್ಯ ವೀರರ ಸ್ಮೃತಿಗಳು, ಆಧುನಿಕ ಕಾದಂಬರಿ, ನಾಟಕ, ಪತ್ರಿಕೆಗಳು, ಜನಪದ ಲಾವಣಿಗಳು, ಸಂಸ್ಕೃತದಲ್ಲಿರುವ ತಾಡವಾಲೆ ಲಿಪಿ ಮುಂತಾದ ಆಕರಗಳಾಗಿದ್ದು, ಅವುಗಳ

ನೆರವಿನಿಂದ ಈ ನಗರದ ಪಾರಂಪರಿಕತೆಯ ಇತಿಹಾಸವನ್ನು ತಿಳಿದುಕೊಳ್ಳಬಹುದಾಗಿದೆ.

ಪಾರಂಪರಿಕ ಕಟ್ಟಡಗಳು ಮತ್ತು ಧಾರ್ಮಿಕ ಸ್ಥಳಗಳು

ದೇವಾಲಯಗಳು

ಜಮಖಂಡಿ ತಾಲ್ಲೂಕಿನ ಅನೇಕ ಗ್ರಾಮಗಳಲ್ಲಿ ಪ್ರಾಚೀನ ದೇವಾಲಯಗಳಿದ್ದು, ಅವು ಅಂದಿನ ಕಾಲದ ಜನರ ಧಾರ್ಮಿಕ ಮನೋಭಾವನೆಯನ್ನು ಮತ್ತು ಶಿಲ್ಪ ಕಲಾಕೃತಿಯ ವೈಶಿಷ್ಟತೆಯನ್ನು ತಿಳಿಸಿಕೊಡುತ್ತವೆ. ಜಮಖಂಡಿಯಲ್ಲಿ ಧಾರ್ಮಿಕ ಮಹತ್ವವನ್ನು ಪಡೆದ ಹಾಗೂ ಶ್ರೇಷ್ಠ ಕಲಾಕೃತಿಗಳಿಂದ ಕೂಡಿದ ಸುಂದರವಾದ ಪ್ರಾಚೀನ ದೇವಾಲಯಗಳೆಂದರೆ ಜಂಬುಕೇಶ್ವರ ದೇವಾಲಯ, ಕಲ್ಮೇಶ್ವರ ದೇವಾಲಯ, ಮೇಘಪ್ರಭು ದೇವಾಲಯ, ನಂದಿಕೇಶ್ವರ ದೇವಾಲಯ, ರಾಮೇಶ್ವರ ದೇವಾಲಯ, ಯೋಗ ನಾರಾಯಣ ಮೂರ್ತಿ ಶಿಲ್ಪ, ಮಾರುತಿ ಗುಡಿ ಮೊದಲಾದ ಹಿಂದೂ ದೇವಾಲಯಗಳಿದ್ದಂತೆ, ಜಮ್ಮಾಮಸೀದಿ, ಅಬುಬಕರ್ ದರ್ಗಾ, ಅಜಮ್ಮೀರ ಸಾಹೇಬರ ದರ್ಗಾ, ಮೊದಲಾದ ಇಸ್ಲಾಂ ಧರ್ಮದ ಸ್ಮಾರಕಗಳು ಕೂಡ ಇಲ್ಲಿವೆ. ಇವು ಅಂದಿನ ಕಾಲದ ಜನರಲ್ಲಿದ್ದ ಧರ್ಮ ಸಹಿಷ್ಣುತೆಯ ಸಂಕೇತಗಳಾಗಿವೆ.

೧. ಶೈವದೇವಾಲಯಗಳು

ಜಂಬುಕೇಶ್ವರ ದೇವಾಲಯ: ಇದು ಜಮಖಂಡಿ ನಗರದ ಅಧಿದೇವತೆಯ ದೇವಾಲಯವಾಗಿದೆ. ಇದರ ಪ್ರವೇಶದ್ವಾರವು ಪೂರ್ವಾಭಿಮುಖವಾಗಿದ್ದು, ಮುಂಭಾಗದ ಬಲಬದಿಗೆ ಐರಾವತ ಮತ್ತು ಎಡಬದಿಗೆ ನಂದಿಯ ಮೂರ್ತಿಗಳಿವೆ. ಅದರ ಮೇಲ್ಭಾಗದಲ್ಲಿ ಸಿಂಹಾಕೃತಿಯ ಪ್ರಭಾವಳಿಯಿದ್ದು, (ಕೀರ್ತಿಮುಖ) ಶಿವನ ಎಡಬದಿಗೆ ನವಿಲು ವಾಹನದ ಷಣ್ಮುಖ, ಬಲಬದಿಗೆ ಗಣಪತಿಯನ್ನು ಕೆತ್ತಲಾಗಿದೆ.

ಪ್ರವೇಶ ದ್ವಾರದಿಂದ ಹೋಗಲು ಪುನಃ ೧೦-೧೨ ಪಾವಟಿಗೆಗಳನ್ನು ಇಳಿದು ಬರಬೇಕಾಗುತ್ತದೆ. ಏಕೆಂದರೆ ಪ್ರಾಚೀನ ಕಾಲದಲ್ಲಿ ಈ ದೇವಾಲಯವು ನೆಲಕ್ಕೆ ಸಮಾಂತರವಾಗಿ ಇರುತ್ತಿತ್ತು. ಕಾಲಾಂತರದಲ್ಲಿ ಪಟ್ಟಣವು ಮೇಲಕ್ಕೇರಿ ದೇವಾಲಯವು ಕೆಳಗಿದೆ. ಇದು ಅದರ ಪ್ರಾಚೀನತೆಯನ್ನು ತೋರಿಸುತ್ತದೆ. ಈ ದೇವಾಲಯವನ್ನು ಅಷ್ಟಕೋನಾಕೃತಿಯ ಜಗಲಿಯ ಮೇಲೆ ಕಟ್ಟಲಾಗಿದೆ. ಇದು ಕಲ್ಯಾಣದ ಚಾಲುಕ್ಯರ ಕಾಲದ ಶಿಲ್ಪ ಕಲಾಶೈಲಿಯ ಕಟ್ಟಡವಾಗಿದೆ. ಇದು ತ್ರಿಕೂಟೇಶ್ವರ ದೇವಾಲಯವಾಗಿದ್ದು, ಮೂರು ಗರ್ಭಗೃಹಗಳನ್ನು ಹೊಂದಿದ್ದು, ಮುಂಭಾಗದಲ್ಲಿ ಅರ್ಧ ಮಂಟಪಗಳನ್ನು ಹೊಂದಿದೆ. ಮಧ್ಯಭಾಗದಲ್ಲಿ ವಿಶಾಲವಾದ ನವರಂಗವಿದೆ. ಅದರ ಮುಂದೆ ನಂದಿಯ ಏಕಶಿಲಾ ಮೂರ್ತಿಯಿದೆ. (ಮೂಲಗರ್ಭಗೃಹವು ಚೌಕಾಕಾರವಾಗಿದ್ದು, ಪ್ರಾಚೀನ ಪಾಣಿಪೀಠದ ಮೇಲೆ ಜಂಬುಕೇಶ್ವರ ಲಿಂಗವನ್ನು ಪ್ರತಿಸ್ಥಾಪಿಸಲಾಗಿದೆ). ಗರ್ಭಗೃಹದ ಛತ್ತಿನಲ್ಲಿರುವ ಭುವನೇಶ್ವರಿಯು ಅರ್ಧಗೋಳಾಕಾರದ ಅಲಂಕಾರವನ್ನು ಹೊಂದಿದೆ. ಲಲಾಟದಲ್ಲಿ ಗಜಲಕ್ಷ್ಮೀಯ ಬಿಂಬವಿದೆ. ಅರ್ಧಮಂಟಪದಲ್ಲಿ ದೇವಕೋಷ್ಠಗಳಿದ್ದು, ಒಂದರಲ್ಲಿ ದ್ವಿಬಾಹು ಗಣೇಶನ ಶಿಲಾಮೂರ್ತಿಯಿದೆ. ಬಲಭಾಗದ ಗರ್ಭಗೃಹದಲ್ಲಿ ರಾಮೇಶ್ವರಲಿಂಗವಿದ್ದು, ಎಡಭಾಗದ ಗರ್ಭಗೃಹದಲ್ಲಿ ವಿಶ್ವೇಶ್ವರಲಿಂಗವಿದೆ. ಇದರ ಮುಂಭಾಗದಲ್ಲಿಯೂ ಅರ್ಧಮಂಟಪವಿದ್ದು, ಇಕ್ಕೆಲಗಳಲ್ಲಿ ದೇವಕೋಷ್ಠಗಳಿವೆ. ನವರಂಗದ ಮುಂದೆ ಕಕ್ಷಾಸನವಿರುವ ಮುಖಮಂಟಪವಿದ್ದು. ಅದರಲ್ಲಿರುವ ಕಿರು(ಸಣ್ಣ) ಸ್ತಂಭಗಳು ಚಾಲುಕ್ಯ ಶೈಲಿಯನ್ನು ಹೋಲುತ್ತವೆ.

ಇದು ಜಾಗ್ರತಸ್ಥಾನವಾಗಿದ್ದು, ಸುತ್ತಮುತ್ತಲಿನ ಗ್ರಾಮದ ಜನರು ಭಕ್ತಿ ಭಾವದಿಂದ ನಡೆದುಕೊಳ್ಳುತ್ತಿದ್ದಾರೆ. ಈ ದೇವರ ಪೂಜಾ ವಿಧಿ ವಿಧಾನಗಳನ್ನು ಜಂಗಮ ಪೂಜಾರಿಗಳು ಹಾಗೂ ಬ್ರಾಹ್ಮಣ ಜೋಯಿಸರು ಮಾಡುತ್ತಾರೆ. ಜಂಗಮರು ಅರ್ಚನೆ ಪೂಜೆ ಪತ್ರಿ, ಪುಷ್ಪ, ಫಲಾರ್ಚನೆ ಮುಂತಾದವುಗಳನ್ನು ಮಾಡಿದರೆ, ಬ್ರಾಹ್ಮಣರ ಜೋಯಿಸರು ಅಲಂಕಾರ ಪೂಜೆ, ಅಭಿಷೇಕ, ಅವಾಹನೆ, ಕಲಾಕರ್ಷಣೆ, ಹೋಮ-ಹವನ, ಕೈಂಕರ್ಯ ಸೇವೆ ಮುಂತಾದ ಭಕ್ತಿ ಸೇವೆಯನ್ನು ಮಾಡುತ್ತಾರೆ. ಈ ದೇವಸ್ಥಾನದ ಉತ್ಸವವನ್ನು ಶ್ರಾವಣ ಮಾಸದಲ್ಲಿ ಅತ್ಯಂತ ವೈಭವದಿಂದ ಆಚರಿಸಲಾಗುತ್ತಿತ್ತೆಂದು ಹಿರಿಯರು ಹೇಳುತ್ತಾರೆ. ಉತ್ಸವದಲ್ಲಿ ಪುಣ್ಯ-ವಧುಗಳಿಂದ ನೃತ್ಯ, ಸಂಗಿತ ಸೇವೆ, ಬಾಜಿ-ಭಜಂತ್ರಿ ಕರಡಿ ವಾದನ, ಸಂಬಾಳವಾದನ, ಜಾಂಗಟೆ-ನಗಾರಿವಾದನ ಮುಂತಾದ ಕಾರ್ಯಕ್ರಮಗಳು ಅತೀ ವಿಜೃಂಭಣೆಯಿಂದ ನಡೆಯುತ್ತಿದ್ದವು. ಹೀಗೆ ಈ ದೇವರಿಗೆ ವಿವಿಧ ರೀತಿಯ ಭಕ್ತಿಸೇವೆಯನ್ನು ಸಲ್ಲಿಸುವವರಿಗೆ ಸುಮಾರು ಒಂದು ನೂರು ಎಕರೆ ಭೂಮಿಯನ್ನು ದತ್ತಿಯಾಗಿ ಕೊಡಲಾಗಿತ್ತೆಂದು ಹೇಳುತ್ತಾರೆ. ಜಮೀನುಗಳು ಇಂದಿಗೂ ಕೂಡ ಜಮಖಂಡಿಯ ಹದ್ದಿನಲ್ಲಿದ್ದು, ಇದಕ್ಕೆ ಸಾಕ್ಷಿಯಾಗಿದೆ.

೨. ಕಲ್ಮೇಶ್ವರ ದೇವಾಲಯ: ಇದು ಜಂಬುಕೇಶ್ವರ ದೇವಾಲಯದ ಸಮಕಾಲೀನ ಗುಡಿಯೆಂದು ತಿಳಿದುಬರುತ್ತದೆ. ವಾಸ್ತುಶಿಲ್ಪದ ದೃಷ್ಟಿಯಿಂದ ಈ ದೇವಾಲಯವು ವಿಶಿಷ್ಟವೆನಿಸುತ್ತದೆ. ಕಲ್ಯಾಣ ಚಾಲುಕ್ಯರ ಪ್ರಾರಂಭದ ಶೈಲಿಗಳನ್ನು ಹೋಲುತ್ತದೆ. ಇದು ತ್ರಿಕೂಟೇಶ್ವರ ದೇವಾಲಯವಾಗಿದ್ದು,

ಮೂರು ಗರ್ಭಗೃಹಗಳನ್ನು ಹೊಂದಿದೆ. ಮುಂಭಾಗದಲ್ಲಿ ಅರ್ಧ ಮಂಟಪವಿದೆ ಮಧ್ಯದಲ್ಲಿ ಕೇಂದ್ರಿಯ ವಿಶಾಲವಾದ ನವರಂಗವಿದೆ. ಮೂರು ಗರ್ಭಗೃಹಗಳಲ್ಲಿಯೂ ಶಿವಲಿಂಗ ಗಳಿವೆ. ಎದುರಿಗೆ ಕಲ್ಮೇಶ್ವರ, ಬಲಭಾಗದಲ್ಲಿ ಸಂಗಮೇಶ್ವರ, ಎಡಭಾಗ ದಲ್ಲಿ ಸೋಮೇಶ್ವರನೆಂಬ ಜಲಾರಿ ಶಿವಲಿಂಗಗಳಿವೆ. ಮಧ್ಯದಲ್ಲಿದ್ದ ಮೂಲ ಗರ್ಭಗೃಹದ ಮುಂದೆ ಅರ್ಧ ಮಂಟಪವು ಅಲಂಕೃತ ಬಾಗಿಲವಾಡವನ್ನು ಹೊಂದಿದೆ. ಇದರ ಇಕ್ಕೆಲಗಳಲ್ಲಿ ದೇವಕೋಷಕಗಳಿದ್ದು, ಒಂದರಲ್ಲಿ ಗಣೇಶನ ಶಿಲ್ಪವಿದೆ. ಬಲಭಾಗದ ದೇವಕೋಷ್ಠದ ಮೇಲ್ಭಾಗದಲ್ಲಿ ಅಜಂತಾ ಮಾದರಿಯಲ್ಲಿಯ ಕಿರು ಶಿಖರವಿದೆ. ನವರಂಗದ ಛತ್ತಿನಲ್ಲಿ ಆಳವಾದ ಭುವನೇಶ್ವರಿಯಿದ್ದು, ಮಧ್ಯದಲ್ಲಿ ಕಮಲದ ಹೂವಿನ ಅಲಂಕಾರವಿದೆ. ಮುಖ ಮಂಟಪದ ಪ್ರವೇಶದ್ವಾರದ ಇಕ್ಕೆಲಗಳಲ್ಲಿ ರಾಷ್ಟ್ರಕೂಟ ಶೈಲಿಯನ್ನು ಹೋಲುವ ಕಳಸಗಳ ಅಲಂಕಾರವಿದೆ. ಗರ್ಭಗೃಹದಲ್ಲಿ ಪ್ರಾಚೀನ ಲಕ್ಷಣವುಳ್ಳ ಶಿವಲಿಂಗವಿದೆ. ಈ ದೇವಸ್ಥಾನದ ಅರ್ಚಕರು (ಬ್ರಾಹ್ಮಣ) ಜೋಶಿಮನೆತನ ದವರಾಗಿದ್ದರಿಂದ ಇವರು ಕಳೆದ ೨-೩ ತಲೆಮಾರಿನಿಂದ ಅರ್ಚಕರಾಗಿ ಈ ದೇವಾಲಯದ ಪೂಜಾ ಕಾರ್ಯಗಳನ್ನು ನಡೆಸುತ್ತಾ ಬಂದಿದ್ದಾರೆ. ಈ ದೇವಾಲಯಕ್ಕೆ ಜಮಖಂಡಿ ಹದ್ದಿನಲ್ಲಿ ಸುಮಾರು ೪೪ ಎಕರೆ ಭೂಮಿಯು ದತ್ತಿಯಾಗಿ ಬಂದಿದ್ದು, ಇಂದು ಅವು ಟೆನೆನ್ಸಿ ಕಾಯ್ದೆಯ ಮೇರೆಗೆ ರೈತರ ಸ್ವಾಧೀನವಾಗಿದೆ. ಅರ್ಚಕರಿಗೆ ಈಗ ಸರಕಾರದಿಂದ ಪ್ರತಿವರ್ಷ ೧೨೦೦-೦೦ (ಹನ್ನೆರಡು ನೂರು) ರೂ. ವರ್ಷಾಸನ ಬರುತ್ತಿದೆ. ಆ ಬಂದ ಹಣದಿಂದ ದೇವಾಸ್ಥಾನದ ಪೂಜಾ-ವಿಧಿವಿಧಾನಗಳನ್ನು ಈಗಲೂ ಮುಂದುವರಿಸಿ ಕೊಂಡು ಬರುತ್ತಿದ್ದಾರೆ.

೩. ಮೇಘ ಪ್ರಭು ದೇವಾಲಯ: ಇದು ಪ್ರಾಚೀನ ಶೈವದೇವಾಲಯ ಕಲ್ಯಾಣ ಚಾಲುಕ್ಯರ ಹಾಗೂ ರಾಷ್ಟ್ರಕೂಟರ ವಾಸ್ತುಶಿಲ್ಪದ ಮಾದರಿಯನ್ನು ಹೋಲುತ್ತದೆ. ಕಳೆದ ೨-೩ ತಲೆಮಾರಿನಿಂದ ಮನಗೂಳಿ ಮನೆತನದ ಆಚಾರ್ಯರು ಈ ದೇವಸ್ಥಾನದ ಅರ್ಚಕರಾಗಿ ಪೂಜೆ-ಪುರಸ್ಕಾರಗಳನ್ನು ಮಾಡುತ್ತಾ, ಬಂದಿದ್ದಾರೆ. ಈ ದೇವಾಸ್ಥಾನಕ್ಕೆ ೧೦ ಎಕರೆ ಭೂಮಿಯನ್ನು ಉಂಬಳಿ ಹಾಕಿಕೊಡಲಾಗಿದೆ. ಈ ಭೂಮಿಯು ಈಗಲೂ ಜಮಖಂಡಿಯ ಹದ್ದಿನಲ್ಲಿದೆ. ಇದು ಹಾರೂನ ಪಟ್ಟಿಯೊಂದು (ಬ್ರಾಹ್ಮಣರ ಹೊಲ) ಎಂದು ಕರೆಯುತ್ತಾರೆ. ಎಲ್ಲ ಧರ್ಮೀಯರು ಈ ದೇವರನ್ನು ಆರಾಧಿಸುತ್ತಾರೆ. ಇದು ಜಾಗ್ರತ ದೇವಸ್ಥಾನವಾಗಿದ್ದರಿಂದ ಅನೇಕ ಭಕ್ತರು ದೇವಾಲಯಕ್ಕೆ ತಮ್ಮ ಭಕ್ತಿಯ ಕಾಣಿಕೆಗಳನ್ನು ಸಲ್ಲಿಸುತ್ತಿದ್ದರಿಂದ ದೇವಾಲಯದ ಜೀರ್ಣೋದ್ಧಾರದ ಕಾರ್ಯಗಳು ನಡೆಯುತ್ತಾ ಬಂದಿವೆಯೆಂದು ಹಿರಿಯ ಅರ್ಚಕರು ಹೇಳುತ್ತಾರೆ.

೪. ಗಣಪತಿ ಮಂದಿರ: ಇದು ಯೋಗನಾರಾಯಣನ ಗುಡಿಯಿಂದ (ಪೂರ್ವಕ್ಕೆ) ಸ್ವಲ್ಪ ಅಂತರದಲ್ಲಿದೆ. ಇದು ಉತ್ತರಾಭಿ ಮುಖವಾಗಿದೆ. ಇದರ ಪ್ರವೇಶದ್ವಾರವನ್ನು ಅತ್ಯಂತ ನುಣುಪಾಗಿ ಹೊಡೆದ ಕೆಂಪು ಕಲ್ಲುಗಳಿಂದ ಕಟ್ಟಲಾಗಿದೆ. ಮೇಲ್ಭಾಗದಲ್ಲಿ ರಂಗಮಂದಿರವಿದೆ. ಪೂಜಾಸಮಯದಲ್ಲಿ ಮಂಗಲ ವಾದ್ಯಗಳನ್ನು ನುಡಿಸುವದು ಮತ್ತು ಸಂಗೀತಸೇವೆ ಮಾಡುವುದು ಮುಂತಾದ ಕಾರ್ಯಕ್ರಮಗಳು ನಡೆಯುತ್ತವೆ.

ಸಮಗ್ರ ದೇವಾಲಯವು ಷಟ್‌ಕೋನಾಕೃತಿಯ ಕಲ್ಲಿನ ಜಗಲಿಯ ಮೇಲೆ ನಿರ್ಮಿಸಲಾಗಿದೆ. ಗರ್ಭಗುಡಿಯ ಮಧ್ಯದಲ್ಲಿ ಕಪ್ಪು ಶಿಲೆಯ ಪ್ರಭಾವಳಿ ಇದೆ. ಮಧ್ಯದಲ್ಲಿ ಸಂಗಮರಿ ಕಲ್ಲಿನ ಸುಂದರವಾದ ಗಣಪತಿಯ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಗರ್ಭಗುಡಿಯ ಒಳಭಾಗವನ್ನು ಚೌಕಾಕೃತಿಯ ಭಾವಣಿಗಲ್ಲಿನಿಂದ ಕಟ್ಟಲಾಗಿದೆ. ಅದರ ಮೇಲ್ಭಾಗವನ್ನು ಪಾವಟಿಗೆಯಾಕಾರದಂತೆ ಕಟ್ಟಿ ಮೇಲೆ ಗೋಲಾಕಾರದ ಶಿಖರವನ್ನು ನಿರ್ಮಿಸಲಾಗಿದೆ. ಗರ್ಭಗುಡಿಯ ಅಂತರಾಳದ ಕಂಬಗಳನ್ನು ಮತ್ತು ಅದರ ಮೇಲ್ಭಾಗವನ್ನು ಇತ್ತೀಚೆಗೆ ಜೀರ್ಣೋದ್ಧಾರ ಮಾಡಿದ್ದಾರೆ. ಇದನ್ನು ಸುಮಾರು ೧೮ನೇ ಶತಮಾನದಲ್ಲಿ ಕಟ್ಟಿರಬೇಕೆಂದು ಊಹಿಸಬಹುದು. ಕಳೆದ ೨-೩ ತಲೆಮಾರಿನಿಂದ ಬೀಳಗಿ ಮನೆತನದ ಆಚಾರ್ಯರೇ ಈ ದೇವಾಲಯದ ಅರ್ಚಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಈ ದೇವಾಲಯದಿಂದಾಗಿ ಈ ಓಣಿಗೆ ಗಣಪತಿ ಗಲ್ಲಿ ಎಂದು ಕರೆಯುತ್ತಾರೆ. ಗಣಪತಿಯು ಎಲ್ಲ ಧರ್ಮೀಯರ ಆರಾಧ್ಯ ದೇವತೆಯಾಗಿದ್ದರಿಂದ ಬಹು ಸಂಖ್ಯಾತ ಜನರು ಈ ದೇವರಿಗೆ ಭಕ್ತಿ-ಶ್ರದ್ಧೆಯಿಂದ ನಡೆದುಕೊಳ್ಳುತ್ತಾ ಬಂದಿದ್ದಾರೆ. ಇತ್ತೀಚೆಗೆ ದೇವಾಲಯದ ಹಿಂಬದಿಗೆ ಸಭಾಮಂಟಪವನ್ನು ನಿರ್ಮಿಸಿದ್ದಾರೆ. ಅಲ್ಲಿ ಅನೇಕ ಮಂಗಳ ಕಾರ್ಯ ಸಭೆ ಸಮಾರಂಭಗಳು ಹಾಗೂ ಸಂಗೀತ, ಮೇಳಗಳು ಈಗಲೂ ನಡೆಯುತ್ತಿರುತ್ತವೆ.

೫. ಹೊಸ ದೇವಾಲಯ: ಈ ದೇವಸ್ಥಾನದ ಮುಂದೆ ಸ್ವಲ್ಪ ಅಂತರದ ಮೇಲೆ ಬ್ರಹ್ಮದೇವರ ಚಿಕ್ಕ ಗುಡಿಯಿದ್ದು, ಅದರ ಮುಂದೆ ಎತ್ತರವಾದ ಕಲ್ಲಿನ ದೀಪಸ್ತಂಭವಿದೆ. ಅಲ್ಲದೆ ಪುರಾತನವಾದ ಅಶ್ವತ್ಥವೃಕ್ಷವಿದೆ. ಸುಮಾರು ೨-೩ ತಲೆಮಾರಿನಿಂದ ಈ ದೇವಾಲಯದ ಅರ್ಚಕರು ಗಣಾಚಾರಿ ಜಂಗಮ ಎಂಬ ಮನೆತನದವರಿದ್ದು, ಅವರೆ ಈ ದೇವಸ್ಥಾನದ ಪೂಜೆ-ಪುರಸ್ಕಾರಗಳನ್ನು ನೆರವೇರಿಸುತ್ತಾರೆ. ಸುಮಾರು ೧೯ನೇ ಶತಮಾನದಲ್ಲಿ ಶ್ರೀಶೈಲದ ಜಗದ್ಗುರುಗಳಿಂದಲೇ ಈ ದೇವಾಲಯವು ಸ್ಥಾಪನೆಯಾಗಿದೆ ಎಂದು ಹಿರಿಯರು

ಹೇಳುತ್ತಾರೆ. ಈ ದೇವಸ್ಥಾನವನ್ನು ಕಟ್ಟಿಸಿದವದರು (ಶಿವಸಿಂಪಿಗ ಜಾತಿಯ) ತುಂಗಳ ಸಾಹುಕಾರ ಮನೆತನದವರೊಂದು ಮತ್ತು ಹಳೆಯ (ಮಲ್ಲಿಕಾರ್ಜುನ) ದೇವಸ್ಥಾನವನ್ನು ಕಟ್ಟಿಸಿದವರು ಕೊಣ್ಣೂರ ದೇಸಾಯಿ ಮನೆತನದವರೆಂದೂ ಅರ್ಚಕರ ಪೂರ್ವಜರು ಹೇಳುತ್ತಿದ್ದರೆಂದು ಇಂದಿನ ಗಣಾಚಾರಿಯವರು ಹೇಳುತ್ತಾರೆ.

೬. ಮಲ್ಲಿಕಾರ್ಜುನ ಮಂಗಳ ಕಾರ್ಯಾಲಯ

ಇದು ಪುರಾತನ ಮಾದರಿಯ ಕಟ್ಟಡವಾಗಿದ್ದು, ಇದು ಕಟ್ಟಿಗೆಯಕಂಬ, ತೊಲೆ, ಜಂತಿಗಳನ್ನು ಜೋಡಿಸಿ ಕಟ್ಟಲಾಗಿದೆ (ನಿರ್ಮಿಸಲಾಗಿದೆ). ಇದರ ಒಳಭಾಗದಲ್ಲಿದ್ದ ರುದ್ರಾಕ್ಷಿ ಮಂಟಪದಲ್ಲಿ 'ಮಡಿವಾಳೇಶ್ವರರೆಂಬ' ಸತ್ಪುರುಷನ ಕರ್ತೃಗದ್ದುಗೆಯಿದೆ. ಬಲಬದಿಗೆ ಶಿವಲಿಂಗೇಶ್ವರರೆಂಬ ಇನ್ನೊರ್ವ ವಿರಕ್ತಸ್ವಾಮಿಗಳ ಸಮಾಧಿಯೂ ಇದೆ. ಇವರೀರ್ವರು ವೀರ ವಿರಕ್ತರು, ತಪೋನಿಷ್ಠರು, ಸಿದ್ಧಪುರುಷರೂ ಆಗಿದ್ದು, ಅನೇಕ ಭಕ್ತ ಜನರನ್ನು ಉದ್ಧರಿಸಿದ್ದರೆಂದು ಹೇಳುತ್ತಾರೆ. ಈ ಸತ್ಪುರುಷರ ಕರ್ತೃಗದ್ದುಗೆಗಳ ಪೂಜೆ-ಪುರಸ್ಕಾರಗಳನ್ನು ದಿನನಿತ್ಯ ಗಣಾಚಾರಿ ಮನೆತನದ ಜಂಗಮರು ಮಾಡುತ್ತಾರೆ. ಈ ಕಾರ್ಯಾಲಯದ ವಿಶೇಷವೆಂದರೆ ಸುಮಾರು ೫೦-೫೫ ವರುಷಗಳ ಹಿಂದೆ (೧೯೫೧-೫೨)ರಲ್ಲಿ ಇದು ಒಂದು (ಬಡವಿದ್ಯಾರ್ಥಿಗಳಿಗೆ ಸ್ಥಾಪಿಸಲ್ಪಟ್ಟ ಅನ್ನಛತ್ರ) ವಿದ್ಯಾರ್ಥಿನಿಲಯವಿತ್ತು. ಅದಕ್ಕೆ ಕಾಡಸಿದ್ಧೇಶ್ವರ ಫ್ರೀ ಬೋರ್ಡಿಂಗ್ ಎಂದು ಕರೆಯುತ್ತಿದ್ದರು. ಇಲ್ಲಿ ಮಾಧ್ಯಮಿಕ ಶಿಕ್ಷಣವನ್ನು ಪಡೆಯುವ ಸುಮಾರು ೨೦೦ ವಿದ್ಯಾರ್ಥಿಗಳು ವಾಸಿಸುತ್ತಿದ್ದರು. ಅವರಿಗೆ ದಿನಾಲು ಎರಡು ಹೊತ್ತು ಊಟದ ವ್ಯವಸ್ಥೆಯಿತ್ತು. ಜಮಖಂಡಿ, ಮುಧೋಳ, ಅಥಣಿ, ರಾಯಭಾಗ, ಬೀಳಗಿ, ತಾಲ್ಲೂಕಗಳ ಹಳ್ಳಿಗಳಿಂದ ಅನೇಕ ಬಡ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳು, ಪ್ರತಿಷ್ಠಿತ ಪಿ.ಬಿ. ಹೈಸ್ಕೂಲ್‌ನಲ್ಲಿ ಕಲಿಯುಲು ಬರುತ್ತಿದ್ದರು. ಅವರಿಗೆ ಊಟ ಮತ್ತು ವಸತಿಯ ಸೌಲಭ್ಯವನ್ನು ಈ ಬೋರ್ಡಿಂಗದಲ್ಲಿ ಒದಗಿಸಲಾಗಿತ್ತು. ಇಲ್ಲಿ ವಿದ್ಯಾರ್ಥಿಗಳು ಆದರ್ಶವಂತರಾಗಿ ಬೆಳೆಯುವ ವಾತಾವರಣವಿತ್ತು. ಈ ಬೋರ್ಡಿಂಗಿನ ಮೇಲ್ವಿಚಾರಣೆಯನ್ನು ವೀರ ವಿರಕ್ತರಾದ ಶ್ರೀ ಚಿಕ್ಕಯ್ಯಸ್ವಾಮಿ ಅಡವಿಮಠ ಸಾಕೀನ ಮರೆಗುದ್ದಿ ಇವರು ಮಾಡುತ್ತಿದ್ದರು. ಇವರು ತಪೋನಿಷ್ಠರು, ವಿದ್ಯಾಪ್ರೇಮಿಗಳು, ದಾಸೋಹ ಮೂರ್ತಿಗಳೂ ಆಗಿದ್ದು, ಗ್ರಾಮೀಣ, ಬಡ ವಿದ್ಯಾರ್ಥಿಗಳ ಶಿಕ್ಷಣದ ಏಳ್ಗೆಗಾಗಿ ಬಹಳ ಶ್ರಮಿಸುತ್ತಿದ್ದರು. "ಶಿರಿದುಕೊಂಡು ತಂದು, ಕರೆದುಕೊಂಡು ಉಣ್ಣಬೇಕೆಂಬ" ಶರಣರ ನುಡಿಯಂತೆ ಶ್ರೀ ಚಿಕ್ಕಯ್ಯ ಸ್ವಾಮಿಗಳು ಸುಗ್ಗಿಯ ಕಾಲದಲ್ಲಿ ತಾಲ್ಲೂಕಿನ ಅನೇಕ ಹಳ್ಳಿಗಳಿಗೆ ಹೋಗಿ ಗ್ರಾಮದ ಜನರಿಂದ ದವಸ-ಧಾನ್ಯಗಳನ್ನು ದಾನವಾಗಿ ಪಡೆದುಕೊಂಡು ತಂದು (ಬೋರ್ಡಿಂಗ್‌ನಲ್ಲಿದ್ದ) ಬಡ ವಿದ್ಯಾರ್ಥಿಗಳ ದಾಸೋಹಕ್ಕಾಗಿ ಉಪಯೋಗಿಸುತ್ತಿದ್ದರು. ಸ್ವಾಮಿಗಳ ಈ ನಿಸ್ವಾರ್ಥಸೇವೆಯನ್ನು ಮೆಚ್ಚಿದ ಅನೇಕ ಜನ ಸ್ಥಿತಿವಂತ ಒಕ್ಕಲಿಗರು ಉದಾರರಾಗಿ ಬೋರ್ಡಿಂಗಕ್ಕಾಗಿ ಚೀಲ ಮತ್ತು ಎರಡು ಚೀಲ ಧಾನ್ಯಗಳನ್ನು (ಜೋಳ-ಗೋಧಿ) ದಾನವಾಗಿ ಕೊಡುತ್ತಿದ್ದರು. ಹೀಗೆ ಪ್ರತಿವರ್ಷ ಸ್ವಾಮಿಗಳ ಭಿಕ್ಷಾಟನೆಯಿಂದ ಸುಮಾರು ೨೦೦-೩೦೦ ಚೀಲ ಧಾನ್ಯಗಳನ್ನು ಸಂಗ್ರಹಿಸಿ (ಕೂಡಿಸಿ) ಇಡೀ ವರ್ಷ ವಿದ್ಯಾರ್ಥಿಗಳ ಊಟಕ್ಕಾಗಿ ಬಳಸುತ್ತಿದ್ದರು. ಇಂತಹ ಪುಣ್ಯಮಯ ಕಾರ್ಯವು ಇಲ್ಲಿ ನಡೆಯುತ್ತಿತ್ತೆಂಬುದನ್ನು ನಾವು ಸ್ಮರಿಸಬಹುದು.

ಸ್ವಾಮಿಗಳು ಬೋರ್ಡಿಂಗದಲ್ಲಿದ್ದ ವಿದ್ಯಾರ್ಥಿಗಳನ್ನು ಬಹಳೇ ಅಕ್ಕರೆಯಿಂದ ನೋಡಿಕೊಳ್ಳುತ್ತಿದ್ದರು. ಇಲ್ಲಿದ್ದ ವಿದ್ಯಾರ್ಥಿಗಳು ಕೆಲವು ನೀತಿ-ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕಾಗುತ್ತಿತ್ತು. ಅವುಗಳೆಂದರೆ :

೧. ಎಲ್ಲರೂ ದಿನಾಲು ಎರಡು ಸಲ ಸಾಮೂಹಿಕ ಪ್ರಾರ್ಥನೆಯನ್ನು ಮಾಡಬೇಕು.

೨. ಊಟದ ಸಮಯದಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿ ಶರಣರ ವಚನಗಳನ್ನು ಸರಿದಿ ಪ್ರಕಾರ ಕಂಠಪಾಠ ಹೇಳಬೇಕು.

೩. ರಾತ್ರಿ ೯ ಗಂಟೆಯ ನಂತರ ಯಾರು ಹೊರಗೆ ಹೋಗಕೂಡದು.

೪. ದಿನಾಲು ೫-೬ ತಾಸುಗಳವರೆಗೆ ಕಡ್ಡಾಯವಾಗಿ ಅಭ್ಯಾಸ ಮಾಡಬೇಕು.

೫. ವಾರ್ಷಿಕ ಪರೀಕ್ಷೆಯಲ್ಲಿ ಉತ್ತೀರ್ಣನಾಗಲೇಬೇಕು. ಒಂದು ವೇಳೆ ಅನುತ್ತೀರ್ಣರಾದರೆ ಅವರಿಗೆ ಮರುವರ್ಷ ಬೋರ್ಡಿಂಗ್‌ನಲ್ಲಿ ಪ್ರವೇಶವಿರಲಿಲ್ಲ. ಇವೇ ಮೊದಲಾದ ಕಟಿಬದ್ಧ ನಿಯಮಗಳನ್ನು ಅನುಸರಿಸಿ ನಡೆಯುವ ರೂಢಿಯು ವಿದ್ಯಾರ್ಥಿಗಳಲ್ಲಿ ಬೆಳೆದು ಬಂದು, ಮುಂದೆ ಅವರು ಆದರ್ಶ ವ್ಯಕ್ತಿಗಳಾಗಿ ರೂಪಗೊಳ್ಳಲು ತರಬೇತಿಯು ಇಲ್ಲಿ ದೊರೆಯುತ್ತಿತ್ತೆಂದು ಹೇಳಬಹುದು. ನಿಜವಾಗಿಯೂ ಈ ಸಂಸ್ಥೆಯು ಪ್ರಾಚೀನ ಕಾಲದ (ವೇದಕಾಲದ) ಗುರುಕುಲ ಪದ್ಧತಿಯನ್ನು ಹೋಲುವಂತಹದಾಗಿತ್ತು. ಆ ಕಾಲದಲ್ಲಿ ಈ ಬೋರ್ಡಿಂಗ್‌ನಲ್ಲಿದ್ದು ಕಲಿತ ವಿದ್ಯಾರ್ಥಿಗಳು ಮುಂದೆ ಉಚ್ಚ ಶಿಕ್ಷಣವನ್ನು ಪಡೆದು ಕೊಂಡು ಉನ್ನತಾಧಿಕಾರಿಗಳಾಗಿ ಕೀರ್ತಿಪಡೆದ ಉದಾಹರಣೆಗಳುಂಟು. ಅಂತೆಯೇ ಅವ್ಯಾಹತವಾಗಿ

ಈ ಭಾಗದ ಗ್ರಾಮೀಣ ಬಡ ವಿದ್ಯಾರ್ಥಿಗಳಿಗೆ ಅನ್ನದಾನ, ಜ್ಞಾನದಾನವನ್ನಿತ್ತು ಮತ್ತು ಪೋಷಿಸಿದ ಒಂದು ಪುಣ್ಯಧಾಮವಾಗಿತ್ತೆಂದು ಹೇಳಬಹುದು.

ಈ ಸ್ಥಳವನ್ನು ಈಗ ಜಮಖಂಡಿಯ ವೀರಶೈವ ಸಮಾಜದವರು ತಮ್ಮ ಸ್ವಾಧೀನತೆಗೆ ತೆಗೆದುಕೊಂಡು ಅನೇಕ ಸಾರ್ವಜನಿಕ ಮಂಗಲಕಾರ್ಯಗಳಿಗೆ ಪುರಾಣ ಪುಣ್ಯಕಥೆಗಳನ್ನು ಹೇಳುವದಕ್ಕಾಗಿ ಉಪಯೋಗಿಸುತ್ತಾ ಬಂದಿದ್ದಾರೆ. ಅಲ್ಲಿದ್ದ ಸತ್ಪುರುಷರ ಕತೃಗದ್ದಿಗಳಿಗೆ, ಗಣಾಚಾರಿ ಮನೆತನದವರು ದಿನ ನಿತ್ಯ ತಪ್ಪದೇ ಪೂಜೆ-ಪುರಸ್ಕಾರಗಳನ್ನು ಮಾಡುತ್ತಿದ್ದಾರೆ.

ಮಹಾಲಿಂಗೇಶ್ವರ ದೇವಾಲಯ : ಇದು ಜಮಖಂಡಿ ನಗರದ ಬಲಬದಿಯ ಉನ್ನತ ಗುಡ್ಡದ ಮೇಲೆ ಕಟ್ಟಲ್ಪಟ್ಟ ಪುರಾತನ ದೇವಾಲಯುವಾಗಿದೆ. ಹಿಂದಕ್ಕೆ ಇಲ್ಲಿ ಮಹಾಲಿಂಗೇಶ್ವರಸ್ವಾಮಿಗಳು ಈ ಸ್ಥಳದಲ್ಲಿ ಅನುಷ್ಠಾನಕ್ಕೆ (ತಪಶ್ಚರ‍್ಯಕ್ಕೆ) ಕುಳಿತಿದ್ದರಂತೆ. ಮುಂದೆ ಅವರಿಗೆ ಯಾವದೋ ದೈವಿಪ್ರೇರಣೆಯಾಗಿ ಇಲ್ಲಿಂದ ಮಹಾಲಿಂಗಪುರಕ್ಕೆ ಹೋಗಿ ನೆಲಸಿದರೆಂದು ಪ್ರತೀತಿ ಇದೆ. ಮುಧೋಳ ಸಂಸ್ಥಾನಿಕರಾದ ಘೋರ್ಪಡೆ ಮಹಾರಾಜರು ಮಹಾಲಿಂಗೇಶ್ವರ ಪರಮ ಭಕ್ತರಾಗಿದ್ದರು. ಆದ್ದರಿಂದಲೇ ಇಂದಿಗೂ ಸಹ ಘೋರ್ಪಡೆಯವರು ನೈವೇದ್ಯವು ಮುಧೋಳದಿಂದ ಮಹಾಲಿಂಗಪೂರಕ್ಕೆ ಹೋದ ನಂತರವೇ ಮಹಾಲಿಂಗೇಶ್ವರ ರಥವು ಸಾಗುತ್ತದೆಯೆಂದು ಹೇಳುತ್ತಾರೆ. (ಪ್ರತಿವರ್ಷ ಭಾದ್ರಪದ ಚತುರ್ಥಿಯಲ್ಲಿ ಈ ರಥವು ಜರುಗುವುದು). ಮಹಾಲಿಂಗೇಶ್ವರರು ಜಮಖಂಡಿ ಗುಡ್ಡದ ಮೇಲೆ ಅನುಷ್ಠಾನ ಮಾಡಿದ ಸ್ಥಳದಲ್ಲಿ ಈ ದೇವಾಲಯವನ್ನು ನಿರ್ಮಿಸಿದ್ದಾರೆ.

ಈ ದೇವಾಲಯದ ಅರ್ಚಕರು ಗುಡ್ಲಿ ಮನೆತನವ ಜಂಗಮರಿದ್ದಾರೆ. ಇವರೇ ದಿನ ನಿತ್ಯ ತಪ್ಪದೇ ಈ ದೇವಾಲಯದ ಪೂಜೆ-ಪುರಸ್ಕಾರಗಳನ್ನು ಮಾಡುತ್ತಾ ಬಂದಿದ್ದಾರೆ.

ನಂದಿಕೇಶ್ವರ ದೇವಾಲಯ : ನಂದಿಕೇಶ್ವರರು ಸತ್ಪುರುಷ ಮೂಲತಃ ನಂದಗಾವಿಯವರು. ಇದು ಅಥಣಿ ತಾಲ್ಲೂಕಿನಲ್ಲಿ ಹಿರಿಹೊಳೆಯ ಉತ್ತರ ದಂಡೆಯ ಮೇಲಿದೆ. ಅಲ್ಲಿಂದ ಅವರು ಸಂಚಾರ ಮಾಡುತ್ತಾ ಜಮಖಂಡಿಗೆ ಬಂದರು. ಇವರ "ಪರುಕಾಳಿ" ಹೆಚ್ಚಾಯಿತು. ಇದರಿಂದ ಪ್ರೇರಿತರಾದ ನಂದಗಾವಿಯವರು ಮಹಾತ್ಮರನ್ನು ತಮ್ಮೂರಿಗೆ ಕರೆದುಕೊಂಡು ಹೋಗಬೇಕೆಂದು ಇಚ್ಛೆಪಟ್ಟರು. ಇಷ್ಟೇ ಅಲ್ಲ ಅವರ ಗದ್ದುಗೆಯು ತಮ್ಮಲ್ಲಿಯ ಅಗಬೇಕೆಂದು ಒಂದುಗುಡಿಯನ್ನು ಕಟ್ಟಿಸಿದ್ದರು. ಮತ್ತು ಊರಿನ ಜನರು ಕೂಡಿಕೊಂಡು ಅವರನ್ನು ಕರೆದು ತಂದರು. ಆದರೆ ನಂದಿಕೇಶ್ವರರು ಅಲ್ಲಿಗೆ ಹೋಗಲು ನಿರಾಕರಿಸಿದರು. ಮತ್ತು ಜಮಖಂಡಿಯಲ್ಲಿಯೇ ಉಳಿದುಕೊಂಡರು. ಇದರಿಂದಾಗಿ ನಂದಿಗಾವಿಯಲ್ಲಿ ಕಟ್ಟಿಸಿದ ಗುಡಿ ಹಾಗೇಯೆ ಉಳಿಯಿತು.

ನಂದಿಕೇಶ್ವರ ದೇವಾಲಯವು ಜಮಖಂಡಿ ನಗರದಲ್ಲಿದ್ದ ಪುರಾತನ ಶೈವ ದೇವಾಲಯ. ಇದು ಕಲ್ಯಾಣದ ಚಾಲುಕ್ಯ ಶೈಲಿಯ ತ್ರಿಕೂಟೇಶ್ವರ ದೇವಾಲಯವಾಗಿದೆ. ಇದು ಉತ್ತರಾಭಿಮುಖವಾಗಿದ್ದು, ಅಷ್ಟಕೋನಾ ಕೃತಿಯ ವಿಶಾಲವಾದ ಜಗಲಿಯ ಮೇಲೆ ಕಟ್ಟಲಾಗಿದೆ. ಇದರ ಒಳಾಂಗಣದಲ್ಲಿ ಪ್ರವೇಶದ್ವಾರ ಮುಂದೆ ಅಖಂಡ ಶಿಲೆಯಲ್ಲಿ ಕೆತ್ತಿದ ಬೃಹದಾಕಾರದ ಐರಾವತದ ಮೂರ್ತಿಯಿದೆ. ಇದರ ಪ್ರವೇಶ ದ್ವಾರವು ಉಬ್ಬು-ಶಿಲ್ಪಕಲೆಗಳಿಂದ ಅಲಂಕೃತವಾಗಿದೆ. ಮಧ್ಯದಲ್ಲಿರುವ ಗರ್ಭಗೃಹವು ಚೌಕಾಕಾರದ ಸ್ಥಳವಿನ್ಯಾಸವನ್ನು ಹೊಂದಿದ್ದು, ಅಲಂಕೃತವಾದ ಚಾಲುಕ್ಯ ಶೈಲಿಯ ಲಕ್ಷಣವುಳ್ಳ ಬಾಗಿಲುವಾಡವನ್ನು ಹೊಂದಿದೆ. ಗರ್ಭಗೃಹದ ಬಾಗಿಲುವಾಡದ ಲಲಾಟದಲ್ಲಿ ಯೋಗನರಸಿಂಹನ ಕಿರುಶಿಲ್ಪವಿದೆ. ಒಳಗೆ ಶಿವಲಿಂಗವಿದೆ. ಹಿಂಭಾಗದಲ್ಲಿ ಸಪ್ತಮಾತೃಕೆಯರ ಜೋಡು ಶಿಲ್ಪಗಳಿವೆ.

ಈ ಮುಖಮಂಟಪಗಳಲ್ಲಿ ಕಕ್ಷಾಸನಗಳಿದ್ದು, ಚಾಲುಕ್ಯ ಶೈಲಿಯ ಸ್ಥಂಭಗಳಿವೆ. ನವರಂಗ ದ್ವಾರದ ಇಕ್ಕೆಲಗಳಲ್ಲಿ ಜಾಲಂದ್ರಗಳಿವೆ. ಅಕ್ಕಪಕ್ಕದಲ್ಲಿ ಎರಡು ಕೊಠಡಿಗಳಿವೆ. ಬಲಭಾಗದ ಕೋಠಡಿಯ ಬಾಗಿಲುವಾಡದ ಲಲಾಟದಲ್ಲಿ ವಿಷ್ಣುವಿನ ಕಿರು ಶಿಲ್ಪವಿದೆ. ಹೊರಗೋಡೆಗಳಲ್ಲಿ ಜಾಲಂದ್ರಗಳಿವೆ. ನಂದಿ ಮಂಟಪದ ಹಿಂಭಾಗದಲ್ಲಿ ಪ್ರವೇಶದ್ವಾರವಿದ್ದು, ಇಕ್ಕೆಲಗಳಲ್ಲಿರುವ ಎರಡು ಕೊಠಡಿಗಳ ಪೈಕಿ ಒಂದರಲ್ಲಿ ಆಂಜನೇಯ ಹಾಗೂ ಇನ್ನೊಂದರಲ್ಲಿ ಗಣೇಶನ ಶಿಲಾಮೂರ್ತಿಗಳಿವೆ. ಈ ಎರಡು ಕೊಠಡಿಗಳ ಪ್ರವೇಶ ದ್ವಾರಗಳ ಇಕ್ಕೆಲಗಳಲ್ಲಿ ಜಾಲಂದ್ರಗಳಿವೆ. ತ್ರಿಶಾಖಾ ಅಲಂಕಾರವಿರುವ ಬಾಗಿಲುವಾಡವಿದ್ದು, ಮೇಲ್ಭಾಗದಲ್ಲಿ ಮಕರ ತೋರಣ ಹಾಗೂ ಲಲಾಟದಲ್ಲಿ ದೊಡ್ಡದಾದ್ದ ಗಜಲಕ್ಷ್ಮಿ ಬಿಂಬವನ್ನು ಹೊಂದಿದೆ. ದೇವಾಲಯದ ಹೊರ ಭಾಗದಲ್ಲಿ ವಿಶಾಲವಾದ ಪ್ರಾಕಾರವಿದ್ದು. ಮುಂಭಾಗದಲ್ಲಿ ವೀರಗಲ್ಲು, ನಾಗಶಿಲ್ಪ, ಶಿವಲಿಂಗ ಹಾಗೂ ನಂದಿಯ ಶಿಲಾಕೃತಿಗಳಿವೆ. ಈ ದೇವಾಸ್ಥಾನದ ಪ್ರಾಂಗಣದಲ್ಲಿ ಪುರಾತನ ಬಾವಿಯಿದೆ. ಅದರ ನೀರನ್ನು ಇಂದಿಗೂ ಕೂಡ ಬಳಸುತ್ತಾರೆ. ಗುಡಿಯ ಸುತ್ತಲು ವಿಶಾಲವಾದ ಪ್ರದಕ್ಷಿಣ ಪಥವಿದೆ. (ಪ್ರಾಚೀನ ಕಾಲದಿಂದಲೂ ಈ ದೇವಾಲಯದ ಅರ್ಚಕರು ಕಂಬಿ ಮನೆತನದ ಜಂಗಮರು.

ಸದಾನಂದ ದೇವಸ್ಥಾನ : ಸಂತ ಶ್ರೇಷ್ಠರು, ಮಹಾತಪಸ್ವಿಗಳು ಹಾಗೂ ದಾರ್ಶನಿಕರು ಆದ ಸ್ವಾಮಿ

ಸದಾನಂದರು ಕ್ರಿ.ಶ. ೧೭೭೦೩ ರಲ್ಲಿ ಶಿವದೇವ ಮತ್ತು ಭಾಗೀರಥಿಬಾಯಿ ಬ್ರಾಹ್ಮಣ ದಂಪತಿಗಳ ಉದರದಲ್ಲಿ ಜಮಖಂಡಿ ನಗರದಲ್ಲಿ ಜನಿಸಿದರು. ಬಾಲ್ಯದಿಂದಲೂ ಇವರಿಗೆ ಪಾರಮಾರ್ಥದ ಕಡೆಗೆ ಹೆಚ್ಚಿನ ಒಲವಿತ್ತು. ಮುಂದೆ ಇವರು ಅಶರೀರವಾಣಿಯ ಆದೇಶದಂತೆ ಪುರಾಣ ಪ್ರಸಿದ್ಧವಾದ ರಾಮತೀರ್ಥ (ಜಮಖಂಡಿಯಿಂದ ೪೦ ಕಿ.ಮೀ. ಅಂತರದಲ್ಲಿದರುವ ಅಥಣಿ ತಾಲ್ಲೂಕಿಗೆ ಸೇರಿದ ರಾಮತೀರ್ಥ) ಸುಕ್ಷೇತ್ರಕ್ಕೆ ಬಂದು ಅಲ್ಲಿ ಸ್ವಯಂಭೂ ರಾಮೇಶ್ವರನನ್ನು ಕುರಿತು ಘೋರ ತಪಸ್ಸನ್ನಾಚರಿಸಿದರು. ಇವರ ತಪ್ಪಸ್ಸಿಗೆ ಮೆಚ್ಚಿ ಸ್ವತಃ ರಾಮೇಶ್ವರನೇ ಗೋಚರ ವಾದನು. ಹೀಗೆ ಸದಾನಂದರು ಭಗವಂತನ ಸಾಕ್ಷಾತ್ಕಾರ ಮಾಡಿಕೊಂಡು ಅವನ ಅಪ್ಪಣೆಯ ಮೇರೆಗೆ ಜಮಖಂಡಿಗೆ ಬಂದು ಏಕಾಂತ ನಾಮಸ್ಮರಣೆಯನ್ನು ಕೈಕೊಳ್ಳಲು ನಿರ್ಧರಿಸಿ, ಜಮಖಂಡಿಯ ಪೂರ್ವದಿಕ್ಕಿಗೆ ತುಸು ಅಂತರದಲ್ಲಿ ಕುಂಚನೂರ ಗ್ರಾಮಕ್ಕೆ ಹೋಗುವ ಮಾರ್ಗದ ಬಲಬದಿಗಿದ್ದ "ಕಾಶಿಲಿಂಗ"ವೆಂಬ ಪ್ರಾಚೀನ ದೇವಾಲಯವನ್ನು ಧ್ಯಾನಕ್ಕಾಗಿ ಆರಿಸಿಕೊಂಡು ಅಲ್ಲಿ ಹೋಗಿ ದಿನನಿತ್ಯ ಅದೆಷ್ಟೋ ಘಂಟೆಗಳ ವರೆಗೆ ಗುಪ್ತ ರೀತಿಯಲ್ಲಿ ನಾಮಸ್ಮರಣೆ ಮಾಡುತ್ತಿದ್ದರು. ಹೀಗಾಗಿ ಈ ದೇವಾಲಯದೊಂದಿಗೆ ಅವರಿಗೆ ಬಂದ ಸಾಮೀಪ್ಯ, ಅವರ ಜೀವನದ ಕೊನೆ ಉಸಿರು ಇರುವವರೆಗೂ ಉಳಿದು ಬಂದಿತು. ಇದೇ ಸ್ಥಳದಲ್ಲಿ ಅದೇ "ಕಾಶಿಲಿಂಗ"ನ ದೇವಾಲಯದ ಎದುರಿಗೆ ಇರುವ ಅವರ ಸಮಾಧಿಯ ಮೇಲೆಯೇ ದೇವಾಲಯವೊಂದು ನಿರ್ಮಾಣಗೊಂಡಿತು. ಇಂದಿಗೂ ಜನರು ಆ ಸ್ಥಾನವನ್ನು ಸದಾನಂದರ ಗುಡಿಯೆಂದೇ ಗುರುತ್ತಿಸುತ್ತಾರೆ. ಈ ದೇವಾಲಯದ ಪ್ರಾಕಾರದ ಹೊರಗೆ ಉತ್ತರಕ್ಕೆ ರಸ್ತೆಗೆ ಹೊಂದಿಕೊಂಡು ಸದಾನಂದರ ಪೂರ್ವಜರ ಒಂದು ಭವ್ಯವಾದ ಬಾವಿಯಿದೆ. ಅದನ್ನೀಗ "ತುಳಜಪ್ಪನ ಬಾವಿ" ಎಂದೇ ಜನ ಕರೆಯುತ್ತಾರೆ. ಸದಾನಂದರ ಮೊದಲಿನ ಹೆಸರು ತುರಜ ಎಂಬುದೇ ಕನ್ನಡದಲ್ಲಿ 'ತುಳಜಪ್ಪ' ಆಗಿರಬಹುದು.

ಸದಾನಂದರ ದೇವಾಸ್ಥಾನದ ಪೂಜಾ ಕಾರ್ಯವನ್ನು ಸ್ಥಳೀಯ ನಿಂಬರಗಿ ಮನೆತನದ ಬ್ರಾಹ್ಮಣರು ನಡೆಸಿಕೊಂಡು ಬಂದಿದ್ದಾರೆ. ಅದಕ್ಕಾಗಿ ಕೊಣ್ಣೂರ ದೇಸಾಯಿಯವರು ಈ ದೇವಾಸ್ಥಾನದ ಬಳಿಯಿದ್ದ ತಮ್ಮ ಭೂಮಿಯನ್ನು ಇವರಿಗೆ ಇನಾಮು ಹಾಕಿ ಕೊಟ್ಟಿದ್ದಾರೆ. ಸದಾನಂದರ ಪುಣ್ಯತಿಥಿಯನ್ನು ಶ್ರಾವಣ ಶುದ್ಧ ಷಷ್ಠಿಯಿಂದ ಮೂರು ದಿವಸಗಳವರೆಗೆ ಆಚರಿಸುತ್ತಿದ್ದು, ಆಗ ಪಲ್ಲಕ್ಕಿ ಉತ್ಸವ, ಬ್ರಾಹ್ಮಣ ಪೂಜೆ, ಗೋಪಾಳ ಕಾವಲಿ ಹಾಗೂ ಅನ್ನ ಸಂತರ್ಪಣೆಗಳು ಜರುಗುತ್ತವೆ.

ಬೇಳೆಯ ಬಸಪ್ಪನ ಗುಡಿ: ಜಮಖಂಡಿ ನಗರದ ದೇಸಾಯಿ ವಾಡೆಯ ಹತ್ತಿರ ಒಂದು ವಿಶಾಲವಾದ ಕಟ್ಟೆಯಿದೆ. ಅದರ ಮಧ್ಯದಲ್ಲಿ ಒಂದು ಭವ್ಯವಾದ ಪುರಾತನ ಆಲದಮರವಿದೆ. ಆದ್ದರಿಂದ ಈ ಸ್ಥಳಕ್ಕೆ ಅರಳಿಕಟ್ಟೆಯೆಂದು ಕರೆಯುತ್ತಾರೆ. ಇದರ ಸಮೀಪ ದಲ್ಲಿಯೇ ಪೂರ್ವಾಭಿಮುಖ ವಾಗಿ ಒಂದು ಪುರಾತನ ಬಸವೇಶ್ವರ ಗುಡಿಯಿದೆ. ಇದಕ್ಕೆ "ಬೆಳೆಯ ಬಸಪ್ಪನ ಗುಡಿ" ಯೆಂದು ಕರೆಯುತ್ತಾರೆ. ಈ ಹೆಸರು ಬರಲು ಎರಡು ಕಾರಣಗಳನ್ನು ಹೇಳುತ್ತಾರೆ.

೧. ಹಿಂದಕ್ಕೆ ಗುರುವಾರ ಸಂತೆಯ ದಿವಸ ಬೇಳೆಯ ಕಾಳುಗಳನ್ನು (ತೊಗರೆ, ಕಡಲೆ, ಉದ್ದು ಹೆಸರು) ಈ ಗುಡಿಯ ಹತ್ತಿರ ಕುಳಿತು ಮಾರುತ್ತಿದ್ದರಂತೆ. ಹೀಗಾಗಿ ಈ ಸ್ಥಳಕ್ಕೆ ಬ್ಯಾಳಿ ಬಝಾರ ಎಂದು ಕರೆಯುತ್ತಿದ್ದರೆಂದು ಕೆಲವು ಹಿರಿಯರು ಹೇಳುತ್ತಾರೆ. ಈ ಬೇಳೆಯ ಬಝಾರು ಬಸವಣ್ಣನ ಗುಡಿಯ ಹತ್ತಿರವೇ ಇದ್ದುದರಿಂದ ಈ ದೇವಾಲಯಕ್ಕೆ "ಬ್ಯಾಳಿ ಬಸಪ್ಪನಗುಡಿ" ಎಂದು ಹೆಸರು ಬಂದಿದೆ. ಎಂದು ಹೇಳುತ್ತಾರೆ.

೨. ಅದರಂತೆ ಕೆಲವು ಭಾವುಕರು ಶ್ರೀಶೈಲದ ಮಲ್ಲಿಕಾರ್ಜುನ ದೇವಾಲಯದ (ಜ್ಯೋತಿರ್ಲಿಂಗದ) ಮುಂದಿದ್ದ ನಂದಿಯ ಪ್ರತಿರೂಪವೇ ಈ ಬಸವಣ್ಣ ಎಂದು ಭಾವಿಸಿ ಜನ ಇಲ್ಲಿ ಆರಾಧಿಸುತ್ತಾರೆ.

ಈ ಹೆಸರು ಬರಲು ಕಾರಣ ಏನೇ ಇದ್ದರೂ ಪರಂಪರಾಗತವಾಗಿ ಜನ ಈ ದೇವಾಲಯಕ್ಕೆ "ಬ್ಯಾಳಿ ಬಸಪ್ಪನ ಗುಡಿ" ಎಂದೇ ಕರೆಯುತ್ತಾರೆ. ಇದೊಂದು ಜಾಗ್ರತ ದೇವಸ್ಥಾನವಾಗಿದ್ದು, ಅರಳಿ ಕಟ್ಟೆಯ ಓಣಿಯ ಜನರು ಮತ್ತು ಗ್ರಾಮಗೌಡರ ಓಣಿಯ ಜನರು ಬಹಳ ಶ್ರದ್ಧೆ-ಭಕ್ತಿಯಿಂದ ಈ ದೇವರಿಗೆ ನಡೆದುಕೊಳ್ಳುತ್ತಾರೆ. ಪ್ರತಿ ಅಮಾವಾಸ್ಯೆಗೆ ಕಾಯಿ-ಕರ್ಪೂರ, ನೈವೇದ್ಯವನ್ನು ಅರ್ಪಿಸು ತ್ತಿರುವದು ವಿಶೇಷ. ಈ ದೇವಾಲಯಕ್ಕೆ ಪ್ರದಕ್ಷಿಣ ಪಥವಿದೆ. ಇದಕ್ಕೆ ವಿಶಾಲವಾದ ಸಭಾಮಂಟಪವಿದ್ದು, ಗಂಟಿ ಮನೆತನದ ಜಂಗಮರು ಈ ದೇವರ ಅರ್ಚಕರಾಗಿದ್ದಾರೆ.

ಈ ದೇವಾಲಯದ ವಿಶೇಷವೆಂದರೆ ಈ ಓಣಿಯ ಜನರಲ್ಲಿ ಯಾವುದೇ ರೀತಿಯ ತಂಟೆ-ತಕರಾರು (ನ್ಯಾಯ-ನಿರ್ಣಯಗಳು) ಗಳು ಉದ್ಭವಿಸಿದರೆ ಓಣಿಯ ನ್ಯಾಯವನ್ನು ನಿಷ್ಪಕ್ಷಪಾತದಿಂದ ಬಗೆಹರಿಸುತ್ತಾರೆ. ಈ ದೇವಸ್ಥಾನದ ಸಭಾಮಂಟಪದಲ್ಲಿ ನಿಂತು ಹೇಳುವ ಮಾತುಗಳೆಂದರೆ ಅವು ಪ್ರಮಾಣಬದ್ಧವಾಗಿ ಹೇಳಿದಂತೆಯೇ ಸರಿ. ಎಂಬ ಹೇಳಿಕೆಯು ಇದೆ. ಅಲ್ಲಿ ಸುಳ್ಳು ಕೊಟ್ಟಿ ನುಡಿದರೆ ಅವರಿಗೆ ಜಯವಾಗುವು

ದಿಲ್ಲವೆಂಬ ನಂಬಿಕೆ ಈ ಓಣಿಯ ಎಲ್ಲ ಜನರಲ್ಲಿ ಇಂದಿಗೂ ಇದೆ. ಆದ್ದರಿಂದ ಈ ದೇವಾಲಯವು ಈ ಓಣಿಯ ಜನರಿಗೆ ಒಂದು 'ನ್ಯಾಯದೇವನ ನೆಲೆ'ಯಾಗಿ (ಧರ್ಮದೇವನ ನೆಲೆ) ಪಾರಂಪರಿಕವಾಗಿ ಬೆಳೆದು ಬಂದಿದೆ.

ಅಮೋಘ ಸಿದ್ದೇಶ್ವರ ದೇವಾಲಯ: ಜಮಖಂಡಿ ನಗರದ ಉತ್ತರ ದಿಕ್ಕಿನಲ್ಲಿ "ಅಮೋಘ ಸಿದ್ದೇಶ್ವರ" ನೆಂಬ ಸಿದ್ಧಿಪುರುಷನ ಪುರಾತನ ದೇವಾಲಯವಿದೆ. ಮೂಲತಃ ವಿಜಾಪೂರ ತಾಲ್ಲೂಕಿನ ಅರಕೇರಿ ಗ್ರಾಮದವನಾದ ಇವನು ಆ ಗ್ರಾಮದ ಸಮೀಪದಲ್ಲಿದ್ದ "ಮುಮ್ಮಟ್ಟ" ಎಂಬ ಗುಡ್ಡದಲ್ಲಿ ಅದೆಷ್ಟೋ ವರ್ಷಗಳವರೆಗೆ ಘೋರ ತಪವನ್ನಾಚ್ಚರಿಸಿ ಸಿದ್ಧಿಯನ್ನು ಪಡೆದು ಕೊಂಡನು. ಇವರ ತಪೋಭೂಮಿಯಾದ ಈ ಗುಡ್ಡವು ಇಂದು ಭಕ್ತರಿಗೆ ಒಂದು ಯಾತ್ರಸ್ಥಳವಾಗಿದ್ದು, ಪ್ರತಿವರುಷ ಚಟ್ಟಿ ಅಮವಾಸ್ಯೆಗೆ ಈ ಸಿದ್ಧಿ ಪುರುಷನ ಜಾತ್ರಾಮಹೋತ್ಸವವು ಸಡಗರದಿಂದ ನಡೆಯುತ್ತದೆ. ಅಮೋಘಸಿದ್ದೇಶ್ವರರು ತಮ್ಮ ಸಿದ್ಧಾಟಿಕೆಯಿಂದ ಅನೇಕ ಜನ ಭಕ್ತರನ್ನು ಉದ್ದರಿಸಲು ನಾಡಿನ ನಾನಾ ಭಾಗ ಗಳನ್ನು ಸಂಚರಿಸುತ್ತಾ ಈ ನಗರಕ್ಕೆ ಬಂದು ನೆಲೆಸಿದರೆಂದು ಪ್ರತೀತಿಯಿದೆ. ಮುಂದೆ ಇವರ ಭಕ್ತ ಸಮೂಹವು ಇವರು ನೆಲೆನಿಂತ ಸ್ಥಳದಲ್ಲಿಯೇ ಈ ದೇವಾಲಯವನ್ನು ಕಟ್ಟಿಸಿದರೆಂದು ಹಿರಿಯರು ಹೇಳುತ್ತಾರೆ. ಅರಕೇರಿ ಮತ್ತು ಕತಾಟೆ ಎಂಬ ವೀರಶೈವ ಮನೆತನದವರ 'ಮನೆದೇವರು' ಈ ಅಮೋಘ ಸಿದ್ದೇಶ್ವರರು. ಆದ್ದರಿಂದ ಇಂದಿಗೂ ಸಹ ಅತಿ ಭಕ್ತಿ ಶ್ರದ್ದೆಯಿಂದ ಈ ದೇವರಿಗೆ ನಡೆದುಕೊಳ್ಳುತ್ತಾರೆ. ಇಂದಿಗೂ ಪ್ರತಿ ರವಿವಾರ ಈ ದೇವರಿಗೆ ವಿಶೇಷಪೂಜೆ ಸಲ್ಲಿಸಲಾಗುತ್ತದೆ. ಈ ದೇವಾಲಯವು ಪೂರ್ವಭಿಮುಖವಾಗಿದ್ದು, ಚೌರಸಾ ಕೃತಿಯ ಕಲ್ಲಿನ ಜಗಲಿಯ ಮೇಲೆ ಕಟ್ಟಲಾಗಿದೆ. ಗರ್ಭಗುಡಿಯ ಮಧ್ಯದಲ್ಲಿದ್ದ ಪ್ರಭಾವಳಿಯ ನಡುವೆ ಅಮೋಘಸಿದ್ದೇಶ್ವರ ಮೂರ್ತಿಯನ್ನು ಸ್ಥಾಪಿಸಲಾಗಿದೆ. ಎಡಬದಿಗೆ ಪದ್ಮಾವತಿಯ ಚಿಕ್ಕ ಗುಡಿಯಿದೆ. ಗುಡಿಯ ಮುಂದೆ ಒಂದು ಭಾವಣಿ ಕಲ್ಲಿನ ಆಲಗಂಬವಿದ್ದು, ಕೆಳಗೆ ಗೋಲಾಕಾರದ ಬ್ರಹ್ಮಮೂರ್ತಿ ಯಿದೆ. ಪೂರ್ವಕ್ಕೆ ನಾಗಮೂರ್ತಿಯಿದ್ದು, ಅದರ ಮುಂದೆ ಅಮೋಘಸಿದ್ದೇಶ್ವರರ ಪಾದುಕೆಗಳಿವೆ. ದೇವಸ್ಥಾನದಲ್ಲಿ ನಡೆಯುವ ಉತ್ಸವಗಳು ಪ್ರತಿವರ್ಷ ಗೌರಿ ಹುಣ್ಣಿಮೆ, ಸಂಕ್ರಾಂತಿ ಮತ್ತು ಯುಗಾದಿ. ಈ ದಿನಗಳಲ್ಲಿ ಪಲ್ಲಕ್ಕಿ ಉತ್ಸವ, ಅನ್ನ ಸಂತರ್ಪಣೆ, ಡೊಳ್ಳಿನ ವಾದ್ಯ ಮೇಳಗಳ ಸಮ್ಮೇಳ ಮತ್ತು ಡೊಳ್ಳಿನ ಪದಗಳ ಸ್ಪರ್ಧೆ ಮೊದಲಾದ ಕಾರ್ಯಕ್ರಮಗಳು ನಡೆಯುತ್ತವೆ.

ಕಾಡಸಿದ್ದೇಶ್ವರ ದೇವಾಲಯ: ಇದು ನಗರದ ಮಧ್ಯದಲ್ಲಿದ್ದ ಒಂದು ಪುರಾತನ ದೇವಾಲಯ. ಇಲ್ಲಿ ಸುಮಾರು ೧೪ನೇ ಶತಮಾನದಲ್ಲಿ ಆಗಿಹೋದ ಕಾಡಸಿದ್ದೇಶ್ವರನೆಂಬ ವೀರಶೈವ ಸಂತನ ಕರ್ತೃಗದ್ದಿಗೆಯಿದೆ. ಇವರು ಮಹಾತಪಸ್ವಿ ಗಳೂ ಸಿದ್ದಿಪುರುಷರು ಆಗಿದ್ದು, ತಮ್ಮ ಸಿದ್ದಾಟಿಕೆಯಿಂದ ಅನೇಕ ಭಕ್ತರನ್ನು ಉದ್ದರಿಸಿದ್ದರೆಂದು ಹೇಳುತ್ತಾರೆ. ಈ ದೇವಾಲಯದ ಪ್ರವೇಶ ದ್ವಾರವು ಪಶ್ಚಿಮಾಭಿಮುಖವಾಗಿದ್ದು, ಎಡ ಮತ್ತು ಬಲಭಾಗದಲ್ಲಿ ನಂದಿಯ ಮೂರ್ತಿಗಳಿವೆ. ಮಧ್ಯದಲ್ಲಿ ಮುಕ್ಕಾಲು ಭೃಂಗಿಯ ಮೂರ್ತಿಯನ್ನು ಕೆತ್ತಲಾಗಿದೆ. ಇದು ಬಹು ಜಾಗೃತ ದೇವಾಸ್ಥಾನವಾಗಿದ್ದು, ಬಹಸಂಖ್ಯಾತ ಭಕ್ತರು ಅತ್ಯಂತ ಶ್ರದ್ದೆಯಿಂದ ನಡೆದು ಕೊಳ್ಳುತ್ತಾರೆ.

ಮೇಲಗಿರಿ ನಿಂಗಪ್ಪನ ಗುಡಿ

ಇದು, ಜಮಖಂಡಿ ನಗರದ ಪಶ್ಚಿಮ ದಿಕ್ಕಿಗಿದ್ದ ಉನ್ನತ ಗುಡ್ಡದ ಮೇಲೆ ಕಟ್ಟಲ್ಪಟ್ಟ ಪುರಾತನ ಶೈವದೇವಾಲಯ. ಇದು ಸುಮಾರು ೧೨೬೦-೬೫ ಫೂಟ್ ಎತ್ತರದ ಮೇಲಿದೆ. ಈ ಗಿರಿಯ ಮೇಲೆ ನಿಂತು ನೊಡಿದರೆ ಸಮಗ್ರ ಜಮಖಂಡಿ ನಗರದ ಚಿತ್ರಣವು ಕಣ್ಣು ಮುಂದೆ ಕಟ್ಟುತ್ತದೆ. ಅಲ್ಲದೆ ತುಂಬಿ ಹರಿಯುವ ಕೃಷ್ಣಾನದಿಯ ದೃಶ್ಯವು ಅತ್ಯಂತ ರಮಣೀಯವಾಗಿ ಕಾಣಿಸುತ್ತದೆ. ಈ ದೇವಾಲಯದ ಪ್ರವೇಶದ್ವಾರವು ಪೂರ್ವಾಭಿಮುಖವಾಗಿದ್ದು, ಗರ್ಭಗುಡಿಯ ಮಧ್ಯದಲ್ಲಿ ಮೂರು ಜಲಾರಿ ಶಿವಲಿಂಗಗಳಿವೆ. ಮಧ್ಯದಲ್ಲಿ ಸುಂದರವಾದ ನಂದಿಯ ಮೂರ್ತಿಯಿದೆ. ಇದು ಬಹು ಜಾಗ್ರತವಾದ ದೇವಸ್ಥಾನವಾಗಿದ್ದು, ಮೊದಲಿನಿಂದಲೂ ಜಮಖಂಡಿಯ ಜನ ಬಹಳ ಶ್ರದ್ದೆ ಭಕ್ತಿಯಿಂದ ಆರಾಧಿಸುತ್ತಾ ಬಂದಿದ್ದಾರೆ. ಪ್ರತಿ ವರ್ಷ ಶ್ರಾವಣ ಮಾಸದ ಮೂರನೇ ಸೋಮವಾರದಿನ ಲಿಂಗಕ್ಕೆ ಅಭಿಷೇಕ, ಬುತ್ತಿಪೂಜೆ, ಅಂಬಲಿ ಜೋನವನ್ನು ಅರ್ಪಿಸುತ್ತಾರಲ್ಲದೆ, ಅನ್ನಸಂತರ್ಪಣೆ ಕಾರ್ಯವು ನಡೆಯುತ್ತದೆ. "ಶ್ರೀ ಶೈಲ ಮಲ್ಲಿಕಾರ್ಜುನ ದರ್ಶನದಿಂದ (ಪರವುತ ಮಲ್ಲಯ್ಯನ) ದೊರೆಯುವ ಪುಣ್ಯದ ಫಲವು ಈ ಮೇಲಗಿರಿ ನಿಂಗಪ್ಪನ ದರ್ಶನದಿಂದ ಲಭಿಸುತ್ತದೆಂಬ ಭಾವನೆಯು ಜಮಖಂಡಿಯ ಜನರಲ್ಲಿದೆ.

ಶಕ್ತಿ ದೇವಾಲಯಗಳು

ಕಾಳಿಕಾ ದೇವಸ್ಥಾನ: ಈ ಪ್ರಾಚೀನ ದೇವಾಲಯವು (ಜಮಖಂಡಿಯ ಆಗರ್ಭ ಶ್ರೀಮಂತರಾದ ಆನಿಖಂಡಿಯವರ ಮೊದಲಿನ ಮನೆಯ ಬಲಬದಿಗಿದೆ) ಪೂರ್ವಾಭಿಮುಖ ವಾಗಿದ್ದು, ಎಡ ಮತ್ತು ಬಲಕ್ಕೆ ಅಖಂಡ ಶಿಲೆಯಲ್ಲಿ ಕೆತ್ತಿದ ಐರಾವತದ ಮೂರ್ತಿಗಳಿವೆ. ದೇವಾಲಯದ ಮುಖ್ಯದ್ವಾರ ವನ್ನು ಸಾದಾ ಕಟ್ಟಿಗೆಯ ಚೌಕಟ್ಟಿನಿಂದ ಮಾಡಲಾಗಿದೆ. ಗುಡಿಯ ಎಡಗಡೆ ಒಂದು ಪುರಾತನ ಬಾವಿಯಿದೆ. ಅದರ

ನೀರನ್ನು ಇಂದಿಗೂ ಕೂಡ ಬಳಸುತ್ತಾರೆ. ಗರ್ಭಗುಡಿಯ ಕಲ್ಲಿನಿಂದ ಕಟ್ಟಲ್ಪಟ್ಟದ್ದು, ಅದರ ಒಳಭಾಗದ ಮೇಲೆ ಕಲ್ಲಿನ ಭಾವಣಿಗಳನ್ನು ಜೋಡಿಸಿ ನಕ್ಷತ್ರಾಕಾರವಾಗಿ ನಿರ್ಮಿಸಲಾಗದೆ. ಮಧ್ಯದಲ್ಲಿ ಸಾಲಿಗ್ರಾಮ ಶಿಲೆಯಲ್ಲಿ ಕೆತ್ತಿದ ಸುಂದರವಾದ ಕಾಳಿಕಾದೇವಿಯ ಮೂರ್ತಿಯಿದೆ. ದೇವಿಯ ಮೂರ್ತಿಗೆ ನಾಲ್ಕು ಕೈಗಳಿವೆ. ಮೇಲಿನ ಬಲಗೈಯಲ್ಲಿ ತ್ರಿಶೂಲ, ಎಡಗೈಯಲ್ಲಿ ಡಮರು, ಕೆಳಗಿನ ಬಲಗೈಯಲ್ಲಿ ಖಡ್ಗ ಎಡಗೈಯಲ್ಲಿ ಅಮೃತ ಕಲಶವನ್ನು ಹಿಡಿದಂತೆ ಅಲಂಕಾರ ಭೂಷಿತಳಾಗಿ ಅತ್ಯಂತ ಅಕರ್ಷಣೀಯವಾಗಿದೆ. ಈ ಕಾಳಿಕಾದೇವಿಯನ್ನು ಎಲ್ಲ ಧರ್ಮೀಯರು ಭಕ್ತಿ–ಭಾವದಿಂದ ಆರಾಧಿಸುತ್ತಾರೆ.

ಈ ದೇವಾಲಯ ಅರ್ಚಕರು ಕಡಲಾಸ್ಕರ ಎಂಬ ವಿಶ್ವಕರ್ಮ ಆಚಾರ್ಯ ಮನೆತನದವರಾಗಿದ್ದಾರೆ. ಪ್ರತಿವರ್ಷ ಯುಗಾದಿಯ ಅಮವಾಸ್ಯೆಯಿಂದ ಐದು ದಿನಗಳವರೆಗೆ ದೇವಿಯ ಉತ್ಸವವನ್ನು (ವಿಶ್ವಕರ್ಮ ಭಕ್ತ ಜನರಿಂದ) ಆಚರಿಸ ಲಾಗುತ್ತದೆ. ಆ ಸಮಯದಲ್ಲಿ ಹೊಸದಾಗಿ ಬೆಳೆದುಬಂದ ಧಾನ್ಯಗಳಿಂದ ಮಾಡಿದ ಪಾಯಸದ ನೈವೇದ್ಯವನ್ನು ದೇವಿಗೆ ಅರ್ಪಿಸಿ ನಂತರ ಭಕ್ತ ಜನರು ಸಾಮೂಹಿಕವಾಗಿ ಸ್ವೀಕರಿಸು ತ್ತಾರೆ. ಇದು ಮೊದಲಿನಿಂದ ಬೆಳೆದುಬಂದ ಪರಂಪರೆಯಾಗಿದೆ.

ಅಂಬಾಭವಾನಿ ದೇವಾಲಯ: ಈ ದೇವಾಲಯವು ಅರ್ಬನ್ ಬ್ಯಾಂಕಿನ ಭವ್ಯ ಕಟ್ಟಡದ ಎಡಬದಿಗಿದ್ದು, ರಸ್ತೆಗೆ ಹೊಂದಿಕೊಂಡಂತಿದೆ. ಇದರ ಪ್ರವೇಶ ದ್ವಾರವು ಪೂರ್ವಾಭಿಮುಖವಾಗಿದೆ. ಇದನ್ನು ಸಾದಾ ಕಲ್ಲುಗಳಿಂದ ಕಟ್ಟಲಾಗಿದೆ. ಇದರ ಮಧ್ಯದಲ್ಲಿದ್ದ ಮಂಟಪದ ನಡುವೆ ಸಂಗಮುರಿ ಕಲ್ಲಿನಿಂದ ಸುಂದರವಾದ ಅಂಬಾ ಭವಾನಿಯ ಮೂರ್ತಿಯನ್ನು ಸ್ಥಾಪಿಸಲಾಗಿದೆ. ದೇವಿಯ ಎಡಗೈಯಲ್ಲಿ ಶಂಖ, ಬಲಗೈಯಲ್ಲಿ ಚಕ್ರ ಕೆಳಗಿನ ಕೈಗಳಲ್ಲಿ ಕಮಲ ಪುಷ್ಪಗಳಿವೆ. ಎಡಬದಿಗೆ ಸರಸ್ವತಿಯ ಮೂರ್ತಿ (ವೀಣಾಪಾಣಿ ಯಾಗಿದ್ದಾಳೆ) ಬಲಬದಿಗೆ ಪಾರ್ವತಿ, ಆದಿಶಕ್ತಿ ಮಹಿಷಸುರ ಮರ್ದಿನಿ ಎಡಬದಿಗೆ ಗಣಪತಿ ಮತ್ತು ಮಾರುತಿ ಮೂರ್ತಿ ಗಳಿವೆ. ಪ್ರವೇಶದ್ವಾರದ ಮೇಲ್ಭಾಗದಲ್ಲಿ ಚೌಗಡ ನುಡಿಸುವ ಸ್ಥಳವಿದೆ. ಹಿಂದೆ ನವರಾತ್ರಿಯಲ್ಲಿ ದೇವಿಯ ಉತ್ಸವವು ಅತೀ ವಿಜೃಂಭಣೆಯಿಂದ ನಡೆಯುತ್ತಿತ್ತೆಂದು ಹೇಳುತ್ತಾರೆ. ಈ ದೇವಸ್ಥಾನವನ್ನು ಶ್ರೀಯುತ ವೈದ್ಯರೆಂಬು ವವರು ಕ್ರಿ.ಶ. ೧೮೭೩ರಲ್ಲಿ ಸ್ಥಾಪಿಸಿದ್ದಾರೆ. ಇವರು ಕೊಲ್ಹಾಪೂರ ಮಹಾಲಕ್ಷ್ಮೀ ಭಕ್ತರಾಗಿದ್ದು, ಆ ದೇವಿಯ ಪ್ರತಿರೂಪವೆಂದು ಭಾವಿಸಿ ಇಲ್ಲಿ ಅಂಬಾಭವಾನಿಯ ದೇವಾಲಯವನ್ನು ಕಟ್ಟಿಸಿದ್ದಾರೆಂದು ಹೇಳುತ್ತಾರೆ. ಈಗ ಜೋಷಿ ಮನೆತನದವರು ಪೂಜೆ–ಪುರಸ್ಕಾರಗಳನ್ನು ಮಾಡುತ್ತಿದ್ದಾರೆ. ಆದರೂ ಈ ದೇವಿತೆಗೆ ಎಲ್ಲ ಧರ್ಮೀಯರು ಭಕ್ತಿ ಭಾವದಿಂದ ನಡೆದು ಕೊಳ್ಳುತ್ತಾರೆ. ಪ್ರತಿ ವರುಷ ನವರಾತ್ರಿಯಲ್ಲಿ ಎಲ್ಲ ಭಕ್ತರು ದೇವಿಯ ಉತ್ಸವವನ್ನು ಆಚರಿಸುತ್ತಾರೆ. ಆಗ ಅಲ್ಲಿ ಅನೇಕ ಭಕ್ತಿ ಸಂಗೀತದ ಕಾರ್ಯಕ್ರಮಗಳು ಜರುಗುತ್ತವೆ. ಅಷ್ಟಮಿಯ ದಿವಸ ಮುತ್ತೈದೆಯರಿಂದ ಬಿಂದಿಗೆಯ ನಾದವನ್ನು ಮಾಡಲಾಗುತ್ತದೆ.

ಜಗದ ಯಲ್ಲಮ್ಮನ ಗುಡಿ: ಇದು ಜಮಖಂಡಿ ನಗರದಲ್ಲಿದ್ದ ಒಂದು ಪುರಾತನ ದೇವಾಲಯ. ಈ ದೇವಾಲಯದ ಸ್ಥಾಪನೆಯ ಬಗೆಗೆ ಒಂದು ಹೇಳಿಕೆಯಿದೆ. ಒಬ್ಬ ದೇವದಾಸಿ(ಅರ್ಥಾತ್ ಯಲ್ಲಮ್ಮ ದೇವಿಯ ಭಕ್ತಳು)ಯು ದೇವಿ ಯಲ್ಲಮ್ಮನ ಮೂರ್ತಿಯನ್ನು ಒಂದು ಗೋಲಾಕಾರದ ಬಿದರಿನ ತಟ್ಟೆಯಲ್ಲಿಟುಕೊಂಡು ತಲೆಯ ಮೇಲೆ ಹೊತ್ತುಕೊಂಡು (ಜೋಗುಳ ಹಾಡುತ್ತಾ ಏಕನಾಥ–ಜೋಗಿನಾಥರ ಸ್ತೋತ್ರ ಮಾಡುತ್ತಾ) ಮನೆ–ಮನೆಗೆ ಹೋಗಿ ಭಿಕ್ಷೆ ಬೇಡಿ ಜೀವನವನ್ನು ಸಾಗಿಸು ತ್ತಿದ್ದಳು. ಬೇವಿನ ಮರದ ಕಟ್ಟೆಯ ಮೇಲಿಟ್ಟು ಪೂಜಿಸುತ್ತಾ ಕಾಲಹರಣ ಮಾಡುತ್ತಿದ್ದಳು. ಕಾಲಾಂತರದ ಮೇಲೆ ಆ ಓಣಿಯಲ್ಲಿದ್ದ ಜನರೂ ಕೂಡ ಆ ದೇವಿಯಮೂರ್ತಿಗೆ ಭಕ್ತಿಯಿಂದ ನಡೆದುಕೊಳ್ಳಹತ್ತಿದ್ದರು. ಮುಂದೆ ಆ ದೇವದಾಸಿಯು ಮರಣ ಹೊಂದಿದ ನಂತರ ಹಲಕ್ಕಿ ಮನೆತನದವರು ದೇವಿಯ ಸೇವಕರಾಗಿ ಕಾರ್ಯ ಮಾಡಹತ್ತಿದ್ದರು. ಈ ದೇವಾಲಯವು ಉತ್ತರಾಭಿಮುಖ ವಾಗಿದ್ದು, ಪ್ರವೇಶ ದ್ವಾರವು ಕಮಾನಿನಾಕಾರವಾಗಿ ನುಣುಪಾದ ಕಲ್ಲುಗಳಿಂದ ಕಟ್ಟಲಾಗಿದೆ. (ದೇವಸ್ಥಾನದ ಆವರಣದಲ್ಲಿ ಒಂದು ಪುರಾತನ ಬಾವಿಯಿದ್ದು, ಅದರ ನೀರನ್ನು ಇಂದಿಗೂ ಉಪಯೋಗಿಸುತ್ತಾರೆ). ಪ್ರತಿ ಮಂಗಳವಾರ ಮತ್ತು ಶುಕ್ರವಾರದಂದು ವಿಶೇಷವಾಗಿ ಬಹುಸಂಖ್ಯಾತ ಭಕ್ತರು ದೇವಿಯ ದರ್ಶನಕ್ಕಾಗಿ ಬರುತ್ತಿರುತ್ತಾರೆ. ಇದು ಪಾರಂಪರಿಕ ವಾಗಿ ಮುಂದುವರೆಸಿಕೊಂಡು ಹೋಗುತ್ತಿದ್ದಾರೆ.

ದುರ್ಗವ್ವಾ ಮತ್ತು ದ್ಯಾಮವ್ವರ ಗುಡಿಗಳು: ಜಮಖಂಡಿಯ ನ್ಯಾಯಾಲಯದ ಹಿಂಬದಿಗಿದ್ದ ಪುರಾತನ ಕೋಟೆಯ ಗೋಡೆಗೆ ಹೊಂದಿಕೊಂಡಂತೆ ಬಲಬದಿಗೆ ಶಕ್ತಿ ದೇವತೆಗಳ ಚಿಕ್ಕ ಗುಡಿಗಳಿವೆ. ಹಿಂದಕ್ಕೆ ವೈರಿಗಳಿಂದಾಗುವ ದಾಳಿಗಳನ್ನು ತಡೆದು ದುರ್ಗವನ್ನು (ಕೋಟೆ) ಈ ಶಕ್ತಿ ದೇವತೆಗಳು ರಕ್ಷಿಸುತ್ತಾರೆಂಬ ಬಲವಾದ ನಂಬಿಕೆಯು ಜನರಲಿತ್ತು. ಆದ್ದರಿಂದ ಅಂದಿನ ಜನರು ಈ ದೇವತೆಗಳನ್ನು ಅತ್ಯಂತ ಭಕ್ತಿ ಶ್ರದ್ಧೆಯಿಂದ ಆರಾಧಿಸುತ್ತಿದ್ದ ರೆಂದು ತೋರುತ್ತದೆ. ಅಲ್ಲದೆ, ಈ ದೇವತೆಗಳು ಊರ ಜನರಿಗೆ, ಚಿಕ್ಕಮಕ್ಕಳಿಗೆ ದನಕರುಗಳಿಗೆ ಯಾವ ರೋಗ–ರುಜಿನಗಳು ಬಾರದಂತೆ ರಕ್ಷಿಸುತ್ತಾರೆಂಬ ಭಾವನೆಯು ಜನರಲ್ಲಿ ಇಂದಿಗೂ

ಪಾರಂಪರಿಕವಾಗಿ ಬೆಳೆದುಬಂದಿದೆ. ಜನರು ಈ ದೇವತೆಗಳನ್ನು ಅತ್ಯಂತ ಭಯ-ಭಕ್ತಿಯಿಂದ ಪೂಜಿಸುತ್ತಾರೆ. ಇವರಿಗೆ ಗ್ರಾಮದೇವತೆಗಳೆಂದು ಕೂಡ ಕರೆಯುತ್ತಾರೆ. ಅದರಲ್ಲಿ ಪ್ರತಿ ಮಂಗಳವಾರ ಮತ್ತು ಶುಕ್ರವಾರ ದಿವಸ ಈ ದೇವತೆಗಳಿಗೆ ವಿಶೇಷ ಪೂಜೆಯನ್ನು ಸಲ್ಲಿಸುತ್ತಾರೆ. ಪ್ರತಿ ವರ್ಷ ನ್ಯಾಮಗೌಡರ ಓಣಿಯ ಹಿರಿಯರು ಈ ದೇವತೆಗಳಿಗೆ ಐದು ವಾರಗಳನ್ನಾ ಚರಿಸುವ ವೃತ ಹಿಡಿದು, ಅಂದು ದೇವತೆಗಳಿಗೆ ಉದಕ, ಮಜ್ಜನಗೈದು, ಪೂಜೆ ಸಲ್ಲಿಸುತ್ತಾರೆ. ಮತ್ತು ಕೊನೆಯ ವಾರದ ದಿವಸ ಕಾಯಿ, ಕರ್ಪೂರ, ನೈವೇದ್ಯವನ್ನು ಅರ್ಪಿಸಿ ದೇವತೆ ಗಳಿಗೆ ಉಡಿತುಂಬುವ ಕಾರ್ಯಕ್ರಮವನ್ನು ನೆರವೇರಿಸುತ್ತಾರೆ. ಹೀಗೆ ಈ ಶಕ್ತಿ ದೇವತೆಗಳಿಗೆ ಹರಕೆಯನ್ನು ತೀರಿಸಿದ ನಂತರವೇ ಊರ ಮಾರುತಿದೇವರ ಓಕಳಿಯನ್ನು ಮಾಡುವ ಪರಂಪರೆ ಇಂದಿಗೂ ಮುಂದುವರಸಿಕೊಂಡು ಬಂದಿದ್ದಾರೆ.

ವೈಷ್ಣವ ದೇವಾಲಯಗಳು

ಯೋಗ ನಾರಾಯಣನ ದೇವಾಲಯ: ಈ ಯೋಗ ನಾರಾಯಣನ ಮೂರ್ತಿಯನ್ನು ಜಮಖಂಡಿಗೆ ತಂದು ಪ್ರತಿಷ್ಠಾಪಿಸಿದ ಬಗೆಗೆ ಒಂದು ಐತಿಹ್ಯವಿದೆ. ಅದೇನೆಂದರೆ, ವೆಂಕಟಕೃಷ್ಣಚಾರ್ಯ ಕಟ್ಟಿ ಎಂಬುವವರು ವೈದಿಕ ವೃತ್ತಿವುಳ್ಳವ ರಾಗಿದ್ದು, ಸದಾ ದೇವರ ಸ್ಮರಣೆ ಯಲ್ಲಿಯೇ ಕಾಲ ಕಳೆಯುತ್ತಿದ್ದರು. ಹೀಗಿರುವಾಗ ಒಂದು ದಿನ ಅವರ ಕನಸಿನಲ್ಲಿ ಒಂದು ವಿಷ್ಣುಮೂರ್ತಿಯು ಬಂದು ಮುಂದೆ ನಿಂತು "ನಾನು ಕೆರೂರ ಪಾಳ್ಯೆಯದ ಕಟಗೇರಿ ಗ್ರಾಮದ ಬಾವಿಯಲ್ಲಿ ಬಿದಿದ್ದೇನೆ. ನನ್ನನ್ನು ಮೇಲಕ್ಕೆತ್ತಿಕೋ" ಎಂಬ ಅಶರೀರವಾಣಿ ಯಾಯಿತಂತೆ. ಕೂಡಲೇ ವೆಂಕಟಕೃಷ್ಣಚಾರ್ಯರು ತಮ್ಮ ಸಂಗಡಿಗರೊಂದಿಗೆ ಕೆರೂರ ಪಾಳ್ಯವನ್ನು ಹುಡುಕುತ್ತಾ ನರಗುಂದದ ಸಂಸ್ಥಾನಿಕರಾದ ವೆಂಕಟರಾವ ಭಾವೆಯವರ ಅಧೀನದಲ್ಲಿದ್ದ ಬಾಗಲಕೋಟ, ಬಾದಾಮಿ, ನಡುವಿದ್ದ ಕಟಗೇರಿ ಗ್ರಾಮಕ್ಕೆ ಹೋದರು. ವೆಂಕಟರಾವ್ ಭಾವೆಯವರ ನೆರವಿನಿಂದ ಅಲ್ಲಿದ್ದ ಬಾವಿಯಲ್ಲಿನ ನೀರನ್ನು ಹೊರತೆಗೆಯ ಲಾಗಿ ಅಲ್ಲಿ ಐದು ವಿಷ್ಣುಮೂರ್ತಿಗಳು ದೊರೆತವು. ಅದರಲ್ಲಿ ಒಂದನ್ನು ವೆಂಕಟಕೃಷ್ಣಚಾರ್ಯ ಕಟ್ಟಿಯವರು ಜಮಖಂಡಿಗೆ ತಂದು ಶ್ರಾವಣ ಶುದ್ಧ ಪಂಚಮಿ ದಿನದಂದು ತಮ್ಮ ಮನೆಯಲ್ಲಿಟ್ಟು ಪೂಜಿಸಹತ್ತಿದ್ದರು.

ಈ ದೇವಾಲಯದ ಗರ್ಭಗುಡಿಯ ಮಧ್ಯದಲ್ಲಿ ಯೋಗನಾರಾಯಣನ ಸುಂದರವಾದ ಮೂರ್ತಿಯು ಬದ್ಧ ಪದ್ಮಾಸನದ ಭಂಗಿಯಲ್ಲಿದ್ದು, ಎಡಗೈಯಲ್ಲಿ ಚಕ್ರ, ಬಲಗೈಯಲ್ಲಿ ಶಂಖವನ್ನು ಹೊಂದಿದೆ. ಗರ್ಭಗುಡಿಯ ಮೇಲ್ಭಾಗವು ನಾಗರಶೈಲಿಯ ವಿಮಾನ ಗೋಪುರವನ್ನು ಹೊಂದಿದ್ದು, ಮೇಲೆ ಕುಂಭಾಕಾರದ ಶಿಖರವಿದೆ. ದೇವಾಲಯದ ಬಲಭಾಗದ ಗೋಡೆಯ ಮೇಲೆ ಮತ್ತು ಮೇಲ್ಭಾಗದಲ್ಲಿರುವ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ಅವುಗಳ ಸಂಕೇತಗಳು ಈ ರೀತಿಯಾಗಿವೆ. ಹೊರಗೋಡೆಯ ಮೇಲ್ಭಾಗದಲ್ಲಿ ವಿವಿಧ ಬಂಗಿಗಳಿಂದ ಕೂಡಿದ ಶಿಲಾಮೂರ್ತಿಗಳನ್ನು ಕೆತ್ತಲಾಗಿದೆ. (ರಾಮಾಯಣ, ಮಹಾಭಾರತ, ಭಾಗವತದಲ್ಲಿಯ ಅನೇಕ ಪ್ರಸಂಗದ ಚಿತ್ರಗಳನ್ನು ಕೆತ್ತಲಾಗಿದೆ).

ವೆಂಕಟೇಶ್ವರನ ವಿವಾಹದ ಪ್ರಸಂಗ. ದ್ರೌಪದಿಯ ಸ್ವಯಂವರದಲ್ಲಿ ಪಂಚ-ಪಾಂಡವರಲ್ಲಿ ಅರ್ಜುನನು ಮತ್ಸ್ಯಯಂತ್ರವನ್ನು ಭೇದಿಸುವ ಪ್ರಸಂಗ. ಶ್ರೀ ಕೃಷ್ಣನು ಗೋಪಿಕಾಸ್ತ್ರೀಯರೊಡನೆ ಆಡುವ ರಾಸಲೀಲೆಯ ಪ್ರಸಂಗ, ಮತ್ತು ಶ್ರೀಕೃಷ್ಣನು ಕಾಳಿಂಗ ಸರ್ಪವನ್ನು ಮರ್ಧನ ಮಾಡುವ ಹಾಗೂ ನಾಗ ಕನ್ನಿಕೆಯರಿಗೆ ಅಭಯ ನೀಡುವ ಪ್ರಸಂಗ. ಶ್ರೀರಾಮನು ರಾವಣನನ್ನು ಜಯಿಸಿ ಲಂಕೆಯಿಂದ ಪುಷ್ಪಕ ವಿಮಾನದಲ್ಲಿ ಸೀತಾಸಮೇತವಾಗಿ ಅಯೋಧ್ಯನಗರಿಗೆ ಬರುತ್ತಿರಲು ಭರತನು ಸ್ವಾಗತಿಸುವ ಪ್ರಸಂಗ. ದೇವಾಲಯದ ಎಡಭಾಗದ ಗೋಡೆಯ ಮೇಲೆ ಸೀತಾ ಸ್ವಯಂವರದ ಪ್ರಸಂಗದಲ್ಲಿ ರಾವಣನು ಶಿವಧನುಸ್ಸನ್ನು ಎತ್ತಲು ಪ್ರಯತ್ನಿಸಿ ಹತಾಶನಾಗಿದ್ದು ಮತ್ತು ಶ್ರೀರಾಮನು ತನ್ನ ಎಡಗಾಲಿನಿಂದ ಎತ್ತಿ ಜಯಸಿದ ಪ್ರಸಂಗ. ಗುಡಿಯ ಮುಂಭಾಗದ ಗೋಡೆಯ ಮೇಲೆ ಜಯ-ವಿಜಯರೆಂಬ ದ್ವಾರಪಾಲಕರ ಮೂರ್ತಿಗಳಿವೆ. ಇವು ಪಾರಂಪರಿತೆಯ ಮುಖ್ಯ ಲಕ್ಷಣಗಳನ್ನು ತೋರಿಸಿ ಕೊಡುತ್ತವೆ.

ಮಾರುತಿ ದೇವಾಲಯ (ನಗರ ಮಧ್ಯದಲ್ಲಿ): ಜಮಖಂಡಿ ನಗರದ ಮಧ್ಯದಲ್ಲಿದ್ದ ಮಾರುತಿ ದೇವಾಲಯವು ಪುರಾತನವಾಗಿದ್ದು, ದಾಸವರಣ್ಯರಾದ ವ್ಯಾಸರಾಯರಿಂದ ಸ್ಥಾಪಿಸಲ್ಪಟ್ಟಿದೆ ಎಂಬ ಪ್ರತೀತಿಯಿದೆ. ಇದು ಅತ್ಯಂತ ಕಲಾತ್ಮಕವಾಗಿದೆ. ಗರ್ಭಗುಡಿಯ ಮಾರುತಿಯ ಮೂರ್ತಿಯು ಬಹು ಆಕರ್ಷಕವಾಗಿದೆ. ಗುಡಿಯ ಮೇಲಿನ ಶಿಖರಥವು ಅನೇಕ ಸುಂದರವಾದ ನಕ್ಷೆಗಳಿಂದ ಶೋಭಿಸು ತ್ತದೆ. ಮೇಲೆ ಹೊಳಪುಳ್ಳ ಕಳಸವಿದೆ. ಇತ್ತೀಚೆಗೆ ಗುಡಿಯ ಮುಂಭಾಗದ ಮೇಲೆ ದಕ್ಷಿಣ ದಿಕ್ಕಿಗೆ "ಅಯೋಧ್ಯೆಯಲ್ಲಿ ಪಟ್ಟಾಭೀಷಕ್ತನಾದ ರಾಮ, ಲಕ್ಷ್ಮಣ, ಸೀತಾ, ಹನುಮಂತರ ಮೂರ್ತಿಗಳನ್ನು ನಿರ್ಮಿಸಿದ್ದು, ಬಹಳ ಸುಂದರವಾಗಿ ಕಾಣುತ್ತವೆ. (ಮೇಲ್ಭಾಗದ ಪಶ್ಚಿಮ ದಿಕ್ಕಿಗೆ ಭವ್ಯವಾದ ಶಿಲ್ಪಕಲೆಗಳಿಂದ ಕೂಡಿದ ಈ ದೇವಸ್ಥಾನವು ಸಕಲ ಧರ್ಮೀಯರಿಗೆ ಪೂಜನೀಯವಾಗಿದೆ. ಪ್ರತಿ ಶನಿವಾರ ದೇವತಾ ಉತ್ಸವವು ಅತಿ ಸಡಗರದಿಂದ ನಡೆಯುತ್ತದೆ. ಅಂದು ಅಸಂಖ್ಯಾತ ಭಕ್ತರು ದರ್ಶನಕ್ಕಾಗಿ ಬರುತ್ತಾರೆ. ಪ್ರತಿವರ್ಷ ಜೂನ್ ಅಥವಾ ಜುಲೈ ತಿಂಗಳಲ್ಲಿ ಈ ಮಾರುತಿ ದೇವರ ಓಕಳಿಯನ್ನು ಆಚರಿಸಲಾಗುತ್ತದೆ.

ಜಮಖಂಡಿಯ ಸಂಸ್ಥಾನಿಕರಾದ ಶ್ರೀಮಂತ ರಾಮಚಂದ್ರರಾವ್ ಅಪ್ಪಾ ಸಾಹೇಬರು ಈ ದೇವರಿಗೆ ಬಹಳ ನಿಷ್ಠೆಯಿಂದ ನಡೆದು ಕೊಳ್ಳುತ್ತಿದ್ದರು. ಅಂತೆಯೇ ಅವರು ಕ್ರಿ.ಶ. ೧೮೫೭ರ ಬಂಡಾಯದ ಆಪಾದನೆಯಿಂದ ಮುಕ್ತರಾಗಿ ಬಂದು ರಾಜ್ಯದ ಅಧಿಕಾರವನ್ನು ವಹಿಸಿಕೊಂಡರೆಂದು ಹೇಳುತ್ತಾರೆ. ಅದರಂತೆ ಮಹಾನ್ ತತ್ವಜ್ಞಾನಿ ಶ್ರೀ ಗುರುದೇವ ರಾಮಭಾವು ರಾನಡೆಯವರು ತಮ್ಮ ಬಾಲ್ಯದಲ್ಲಿ ಈ ಮಾರುತಿಗೆ ಭಕ್ತಿ-ಭಾವದಿಂದ ನಮಿಸಿ ಶಾಲೆಗೆ ಹೋಗು ತ್ತಿದ್ದರಂತೆ. ಆದ್ದರಿಂದಲೇ ರಾನಡೆಯವರಿಗೆ ಪರೀಕ್ಷೆಯಲ್ಲಿ ಪ್ರಥಮ (ರ್‍ಯಾಂಕ್) ಲಭಿಸಿತ್ತೆಂದು ಹೇಳುತ್ತಾರೆ.

ಉಪಸಂಹಾರ

ಕ್ರಿ.ಶ. ೧೭೯೯ರ ಪೂರ್ವದಲ್ಲಿ ಜಮಖಂಡಿಯನ್ನಾಳಿದ ಕೊಣ್ಣೂರ ದೇಸಾಯಿಯವರು ಶೈವ ಧರ್ಮದವರಾಗಿದ್ದರೂ, ಕೂಡ ಪರಧರ್ಮ ಸಹಿಷ್ಣುಗಳಾಗಿದ್ದರು. ಅದರಂತೆ ಮುಂದೆ ಜಮಖಂಡಿಯನ್ನಾಳಿದ ಪಟವರ್ಧನ ಸಂಸ್ಥಾನಿಕರು ಕೊಂಕಣಸ್ಥ ಬ್ರಾಹ್ಮಣರಾಗಿದ್ದರೂ ಉಳಿದ ಧಾರ್ಮಿಕ ಮಂದಿರ, ಮಸೀದಿ ಹಾಗೂ ದರ್ಗಾಗಳಿಗೆ ಉದಾರವಾಗಿ ದಾನ ಕೊಟ್ಟಿದ್ದರು. ಉದಾಹರಣೆಗೆ ನಗರದ ದಕ್ಷಿಣಕ್ಕಿದ್ದ ಶಹಾ-ಆಲಮ್ ದರ್ಗಾಕ್ಕೆ ಭೂಮಿಯನ್ನು ಉಂಬಳಿ ಹಾಕಿ ಕೊಟ್ಟಿದ್ದರಲ್ಲದೆ, ಪ್ರತಿ ವರ್ಷ ಧನಸಹಾಯವನ್ನೂ ನೀಡು ತ್ತಿದ್ದರು. ಅದರಂತೆ ಸಂಸ್ಥಾನಿಕರ ಸಂಬಂಧಿಕರಾದ ಏಲಾಜಿ ಪಟವರ್ಧನರು ಅಬುಬಕರ ದರ್ಗಾದ ಮುಂಭಾಗ ದಲ್ಲಿದ್ದ ಭವ್ಯ ಹಾಗೂ ಸುಂದರವಾದ ಕಟ್ಟಡವನ್ನು ಕಟ್ಟಿಸಿದ್ದು ಸ್ಮರಣೀಯವಾಗಿದೆ.

ಪಟವರ್ಧನ ಸಂಸ್ಥಾನಿಕರು ಉದಾತ್ತ ಧಾರ್ಮಿಕ ಮನೋಭಾವನೆಯುಳ್ಳವರಾಗಿದ್ದರು. ಇವರು ವೆಂಕಟೇಶ್ವರ ದೇವಾಲಯ ಕಲ್ಲಹಳ್ಳಿ, ನರಸಿಂಹ ದೇವಾಲಯ, ಶೂರ್ಪಾಲಿ ಬಸವೇಶ್ವರ ದೇವಾಲಯ, ಕಡಪಟ್ಟಿ ಗಣಪತಿ ದೇವಾಲಯ, ಜಮಖಂಡಿ ಲೋಕೇಶ್ವರ ದೇವಾಲಯ, ಮುಂತಾದ ದೇವಸ್ಥಾನಗಳಿಗೆ ಉದಾರವಾಗಿ ಧನಸಹಾಯ ನೀಡಿದ್ದರು. ಹೀಗೆ ಇಲ್ಲಿಯ ಸ್ಥಳೀಯ ಅರಸರು ತಾವು ಅನುಸರಿಸುವ ಧರ್ಮ ಒಂದಾದರೂ ಅನ್ಯ ಧರ್ಮೀಯರನ್ನು ಅತ್ಯಂತ ಗೌರವದಿಂದ ಕಾಣುವ ಉದಾತ್ ಧಾರ್ಮಿಕ ಮನೋಭಾವ ವುಳ್ಳವರಾಗಿದ್ದರು. ಅಂತೆಯೇ ಇಂದು ಜಮಖಂಡಿ ನಗರದಲ್ಲಿ ವಿವಿಧ ಧಾರ್ಮಿಕ ಮಂದಿರಗಳಿದ್ದು, ಅವು ಅಂದಿನ ಜನರ ಧಾರ್ಮಿಕ ಸ್ಥಿತಿ-ಗತಿ ಮತ್ತು ಪರಂಪರೆಗಳನ್ನು ನೆನಪಿಸಿ ಕೊಡಲು ತುಂಬಾ ಸಹಕಾರಿಯಾಗಿವೆ.

ಆಧಾರಸೂಚಿ

೧. ಪ್ರೊ. ಎಸ್.ಜಿ. ಮುಚ್ಚೋಳಿ, 'ಜಮಖಂಡಿಯ ಇತಿಹಾಸ ದರ್ಪಣ,' ಗೆಳೆಯರ ಬಳಗ ತುಂಗಳ, ೨೦೦೮.

೨. ಕೇಶವ ಉಮರ್ಜಿ, 'ಇತಿಹಾಸ ದರ್ಶನ,' (ಸಂ. ೧೮), ಜಮಖಂಡಿಯ ಯೋಗನಾರಾಯಣ ಮೂರ್ತಿ ಶಿಲ್ಪ, ಇತಿಹಾಸ ಅಕಾಡೆಮಿ (ರಿ), ಬೆಂಗಳೂರು, ೨೦೦೩.

೩. ಸೂರ್ಯನಾಥ ಕಾಮತ್., 'ಭಾರತದ ಗ್ಯಾಸೆಟಿಯರ್,' ಕರ್ನಾಟಕ (ಭಾಗ-೩), ೧೯೯೬.

೪. ವೆಂಕಟರಂಗೋ ಕಟ್ಟಿ, 'ಗ್ಯಾಜೆಟಿಯರ್'; (ಮುಂಬಯಿ ಇಲಾಖೆಗೆ ಸೇರಿದ), ಏಷಿಯನ್ ಎಜುಕೇಶನಲ್ ಸರ್ವಿಸಸ್ ನವದೆಹಲಿ, ೧೯೮೪.

೫. ಹಾ.ಮಾ. ನಾಯಕ, (ಪ್ರ.ಸಂ.), 'ಕನ್ನಡ ವಿಶ್ವಕೋಶ,' ಮೈ.ವಿ.ವಿ. ಮೈಸೂರು, ೧೯೬೬.

೬. ಕೇಶವ ಉಮರ್ಜಿ, ಇತಿಹಾಸ ದರ್ಶನ, 'ಶೂರ್ಪಾಲಿ ಗ್ರಾಮ : ಹಿನ್ನೆಲೆ ಮತ್ತು ಇತಿಹಾಸ,' (ಸಂಪುಟ ೨೪), ಕರ್ನಾಟಕ ಇತಿಹಾಸ ಅಕಾಡೆಮಿ (ರಿ) ಬೆಂಗಳೂರು, ೨೦೦೯.

ಜಮಖಂಡಿ ತಾಲ್ಲೂಕಿನ ಶಾಸನೋಕ್ತ ದೇವಾಲಯಗಳು ಮತ್ತು ಆಚರಣೆಗಳು

ಕೆ. ಚನ್ನಬಸಪ್ಪ*

ಪೀಠಿಕೆ: ಪೌರಾಣಿಕ ಹಿನ್ನಲೆ

ಜಮಖಂಡಿ ಬಾಗಲಕೋಟೆ ಜಿಲ್ಲೆಯ ಪ್ರಮುಖ ತಾಲೂಕು ಹಾಗೂ ಉಪವಿಭಾಗ ಕೇಂದ್ರ. ಇದು ರಾಜಕೀಯವಾಗಿ, ಸಾಂಸ್ಕೃತಿಕವಾಗಿ, ಧಾರ್ಮಿಕವಾಗಿ ಮಹತ್ವದ ನೆಲೆಯಾಗಿ ಬೆಳೆದು ಬಂದಿರುವ ಐತಿಹಾಸಿಕ ಪಟ್ಟಣ. ಜಮಖಂಡಿ ಹಾಗೂ ತಾಲೂಕಿನ ಅನೇಕ ಹಳ್ಳಿಗಳು ರಾಮಾಯಣ ಮಹಾಭಾರತ ಸಂಬಂಧ ಕಲ್ಪಿಸುವ ಐತಿಹ್ಯ ಹೊಂದಿವೆ. ಉತ್ತರಾಭಿಮುಖವಾಗಿ ಹರಿಯುವ ಕೃಷ್ಣಾ ನದಿ ಸ್ಕಂದ ವಾಯು, ಪದ್ಮ ಹಾಗೂ ಬ್ರಹ್ಮ ಪುರಾಣಗಳಲ್ಲಿ ಮಹಾಭಾರತದ ಸಭಾ ಪರ್ವ ಹಾಗೂ ಭೀಷ್ಮ ಪರ್ವಗಳಲ್ಲಿ, ಮಂಗಲಾಷ್ಟಕ ಹಾಗೂ ಜಾತಕ ಕಥೆಗಳಲ್ಲಿಯೂ ಉಲ್ಲೇಖಗೊಂಡಿರುವ ಕೃಷ್ಣಾ ನದಿ ಸ್ವರ್ಗದಿಂದ ಇಳಿದು ಬಂದ ದಕ್ಷಿಣ ಗಂಗೆ ಎಂದೇ ಪ್ರಸಿದ್ಧಿ ಹೊಂದಿದೆ. ಅಂತೆಯೇ ನದಿ ತೀರದಲ್ಲಿನ ತಾಲೂಕಿನ ಗ್ರಾಮಗಳಾದ ಹಿಪ್ಪರಗಿ, ಮುತ್ತೂರ, ಕಂಕಣವಾಡಿ, ಶೂರ್ಪಾಲಿ, ಮುಂತಾದ ಕಡೆ ಪುಣ್ಯಕ್ಷೇತ್ರಗಳಿವೆ.

ಜಮಖಂಡಿಯನ್ನು ರನ್ನನ ಅಜಿತನಾಥ ಪುರಾಣ ಕೃತಿಯಲ್ಲಿ "ಬೆಳುಗಲಿಯಯ್ನೂರರೊಳ
ಗ್ಗಳ ಮೆನಿಸುವ ಜಂಬುಖಂಡಿ"
ಎಂದು ವರ್ಣಿಸಲಾಗಿದೆ. ಇಂತಹ ಖ್ಯಾತಿವೆತ್ತ ಜಂಬೂಖಂಡಿ ಪ್ರಸಿದ್ಧ ಅಗ್ರಹಾರಗಳಲ್ಲಿ ಒಂದಾಗಿ ರಾಜರ ಔದಾರ್ಯದಿಂದ ಅಭಿವೃದ್ಧಿ ಹೊಂದುತ್ತಾ ಬಂದಿರುವುದನ್ನು ಕಾಣಬಹುದು.

ಜಮಖಂಡಿಯನ್ನು ಹೆಸರಿನ ನಿಷ್ಪತ್ತಿ ರೂಪಗಳಿಂದಲೂ ಗುರುತಿಸಬಹುದು.

೧) ಜಂಬೂ ವೃಕ್ಷಗಳ ವನ ಈ ಊರಿನ ಸುತ್ತಲೂ ಇದ್ದುದರಿಂದ ಈ ಹೆಸರು ಬಂದಿದೆ.

೨) ಈ ಭಾಗದಲ್ಲಿ ಜಂಬೂಕ(ನರಿ)ಗಳು ವಾಸ ಮಾಡುತ್ತಿದ್ದವು. ಆದ್ದರಿಂದ ಜಂಬೂಖಂಡಿ ಜಂಬೂಖಂಡಿ ಎಂದು ಹೆಸರು ಬಂದಿದೆ.



೩) ಇಲ್ಲಿ ಜಂಬುಕೇಶ್ವರ ಎಂಬ ಪ್ರಾಚೀನ ದೇವಾಲಯವಿದೆ. ಇದರಿಂದಾಗಿ ಜಂಬೂಖಂಡಿ ಎಂಬ ಹೆಸರು ಬಂದಿದೆ.

೪) ಜಂಬೂ ಎಂಬ ಋಷಿ ಮುನಿ ಇಲ್ಲಿ ವಾಸ ಮಾಡುತ್ತಿದ್ದನು. ಆದ್ದರಿಂದ ಜಂಬೂಖಂಡಿ ಎಂಬ ಹೆಸರು ಬಂದಿದೆ ಎಂಬ ಅಭಿಪ್ರಾಯಗಳಿವೆ.

ಇಲ್ಲಿ ಬಾದಾಮಿ ಚಲುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ಯಾದವರು, ಕಲ್ಯಾಣದ ಕಲಚೂರಿಗಳು, ಹೊಯ್ಸಳರು, ಬಿಜಾಪುರದ ಸುಲ್ತಾನರು, ವಿಜಯನಗರದ ಅರಸರು, ದೇಸಗತಿ ಮನೆತನದವರು ಆಳ್ವಿಕೆ ನಡೆಸಿದ ಉಲ್ಲೇಖಗಳಿವೆ.

ಈ ತಾಲೂಕಿನಲ್ಲಿರುವ ೭೧ ಗ್ರಾಮಗಳಲ್ಲಿ ೩೮ ಶಾಸನಗಳು ಪ್ರಕಟಗೊಂಡಿವೆ. ೨೦೦೬ ರಲ್ಲಿ ಈ ತಾಲೂಕಿನ ಶಿರಗುಪ್ಪಿ ಗ್ರಾಮದಲ್ಲಿ ಪೂರ್ವ ಚಾಲುಕ್ಯರ ಕಾಲದ ಒಂದು ತಾಮ್ರಪಟ, ಕಳೆದ ವರ್ಷ ೨೦೧೧ ರಲ್ಲಿ ಯಲ್ಲಟ್ಟಿ ಗ್ರಾಮದ ಬಳಿ ೧೭ನೇ ಶತಮಾನದ್ದೆಂದು ಗುರುತಿಸಲಾದ ಬಿಜಾಪೂರ ಸುಲ್ತಾನರ ಬೆಳ್ಳಿ ನಾಣ್ಯಗಳು ದೊರೆತಿವೆ. ೫-೯-೨೦೧೨ ರಂದು ಹಳಿಂಗಳಿ ಗ್ರಾಮದಲ್ಲಿ ೧೦ ಇಂಚು ಜೈನ ತೀರ್ಥಂಕರರ ವಿಗ್ರಹ ದೊರೆತಿದೆ. ಮತ್ತು ಬೃಹತ್ ಶಿಲಾಯುಗದ ಅವಶೇಷಗಳು ದೊರೆಕಿವೆ.

* ಮುಖ್ಯಸ್ಥರು, ಇತಿಹಾಸ ವಿಭಾಗ, ಬಿ.ಎಲ್.ಡಿ.ಇ.ಎ. ಪ್ರಥಮದರ್ಜೆ ಕಾಲೇಜು, ಜಮಖಂಡಿ-೫೮೭೩೦೧. ಬಾಗಲಕೋಟೆ ಜಿಲ್ಲೆ.

ಇಂತಹ ಮಹತ್ತರ ಐತಿಹಾಸಿಕ ಸಂಗತಿಗಳನ್ನೊಳಗೊಂಡ ಈ ತಾಲೂಕಿನಲ್ಲಿ ದೊರೆತ ಶಾಸನಗಳಲ್ಲಿ ಐತಿಹಾಸಿಕ ದೇವಾಲಯಗಳ ಉಲ್ಲೇಖವಿದ್ದು ಅವುಗಳಲ್ಲಿ ಕೆಲವೊಂದು ದೇವಾಲಯಗಳು ಹಿಂದಿನ ಅಗ್ಗಳಿಕೆಯನ್ನೇ ಉತ್ಸವಗಳ ಮೂಲಕ ಉಳಿಸಿಕೊಂಡು ಬಂದಿರುವುದು ಹೆಮ್ಮೆಯ ವಿಷಯವಾಗಿದೆ. ಕೆಲವೊಂದು ದೇವಾಲಯಗಳು ಪ್ರಾಚ್ಯವಸ್ತು ಇಲಾಖೆಯಿಂದ ಜೀರ್ಣೋದ್ಧಾರಗೊಂಡು ಹಿಂದಿನ ಹಿರಿಮೆಯನ್ನು, ಪರಂಪರೆಯನ್ನು ಉಳಿಸಿಕೊಂಡು ಬಂದಿವೆ. ಇನ್ನು ಕೆಲವು ದೇವಾಲಯಗಳು ಹಿಂದಿನಿಂದಲೂ ಕೊಡಮಾಡಿದ ಇನಾಮು(ದತ್ತ ಬಿಟ್ಟು) ಭೂಮಿಯ ಆಸ್ತಿಯ ಆದಾಯದಿಂದ ಉತ್ಸವಗಳನ್ನು ನೆಡೆಸಿಕೊಂಡು ಬಂದಿವೆ.

ಜಮಖಂಡಿ ಹಾಗೂ ತಾಲ್ಲೂಕಿನ ಅನೇಕ ಗ್ರಾಮಗಳಲ್ಲಿ ಪ್ರಾಚೀನ ದೇವಾಲಯಗಳಿದ್ದು ಅವು ಅಂದಿನ ಕಾಲದ ಜನರ ಧಾರ್ಮಿಕ ಮನೋಭಾವನೆಯನ್ನು ಮತ್ತು ಶಿಲ್ಪ ಕಲಾಕೃತಿಯ ವೈಶಿಷ್ಟತೆಯನ್ನು ತಿಳಿಸಿಕೊಡುತ್ತವೆ. ಅವುಗಳೆಂದರೆ, ಜಂಬುಕೇಶ್ವರ, ಕಲ್ಮೇಶ್ವರ, ನಂದಿಕೇಶ್ವರ, ರಾಮೇಶ್ವರ, ಮಹಾಪ್ರಭು, ಯೋಗನಾರಾಯಣ ದೇವಾಲಯಗಳು ಅದರಂತೆ ತಾಲೂಕಿನ ಗ್ರಾಮಗಳಾದ ಕಲ್ಹಳ್ಳಿಯ ವೆಂಕಟೇಶ್ವರ ದೇವಾಲಯ ಕಡಪಟ್ಟಿ ಬಸವೇಶ್ವರ(ಸುವರ್ಣಖಂಡಿ) ದೇವಾಲಯ ತೇರದಾಳದ ಗೊಂಕ ಜೀನಾಲಯ ಸಾವಳಗಿಯ ಶಿವಲಿಂಗೇಶ್ವರ ದೇವಾಲಯ ಕೊಣ್ಣೂರಿನ ಕರಿಸಿದ್ದೇಶ್ವರ ದೇವಾಲಯ ಮುಂತಾದವುಗಳು.

ಜಂಬುಕೇಶ್ವರ ದೇವಾಲಯ: ಜಮಖಂಡಿ ದೇವಾಲಯದ ನಿಷ್ಪತ್ತಿ ರೂಪವೇ ಜಮಖಂಡಿ ಎಂದಾಗಿದೆ. ಉತ್ತರಾಭಿಮುಖವಾಗಿರುವ ಈ ದೇವಾಲಯದ ಸುತ್ತಲೂ ವಿಶಾಲ ಪ್ರಾಂಗಣವಿದೆ. ದೇವಸ್ಥಾನ ಎತ್ತರವಾದ ಜಗಲಿಯ ಮೇಲೆ ನಿರ್ಮಿಸಲ್ಪಟ್ಟಿದೆ. ಪ್ರವೇಶ ದ್ವಾರದ ಎರಡೂ ಬದಿಗೆ ಗಜಾಕೃತಿಯ ಶಿಲ್ಪಗಳಿದ್ದು ದೇವಾಲಯವನ್ನು ಹೊತ್ತು ನಿಂತಿರುವಂತೆ ಭಾಸವಾಗುತ್ತದೆ. ಪ್ರವೇಶದ್ವಾರದಲ್ಲಿ ದೇಗುಲ ಮಾದರಿ ಛತ್ತು ಇದೆ. ಲತಾ ಪದ್ಮಲಹರಿಯ ಶಾಖೆಗಳಿವೆ. ದ್ವಾರಪಾಲಕರನ್ನು ಕೆತ್ತಲಾಗಿದೆ. ಕಂಬಗಳಲ್ಲಿ ಪೀಠ ಫಲಕ, ಕಲಶ, ಕುಂಭ ಕಾಂಡ ಎಂಬ ಭಾಗಗಳನ್ನು ಗುರುತಿಸಬಹುದು. ಇದರ ತಲವಿನ್ಯಾಸ ಮುಖಮಂಟಪ, ಸಭಾಮಂಟಪ, ಅಂತರಾಳವನ್ನು ಹೊಂದಿದೆ. ಮೂರು ಗರ್ಭಗೃಹಗಳಿರುವುದರಿಂದ ಇದನ್ನು ತ್ರಿಕೂಟೇಶ್ವರ ಎಂದು ಗುರುತಿಸಬಹುದು. ಒಂದು ಗರ್ಭಗೃಹ ವೃತ್ತಾಕಾರವಾಗಿದೆ. ಇದರಲ್ಲಿ ಶಿವಲಿಂಗ ಇದೆ. ಗರ್ಭಗೃಹದ ಮೇಲ್ಛಾವಣಿಯಲ್ಲಿ ಸಮತಲವಾದ ಭುವನೇಶ್ವರಿ ಅಲಂಕಾರವನ್ನು ಹೊಂದಿದೆ. ಉತ್ತರಾಭಿಮುಖವಾಗಿರುವ ಒಂದು ಗರ್ಭಗೃಹದ ಎಡಬಲಗಳಲ್ಲಿ ಚಿಕ್ಕ



ಗರ್ಭಗೃಹಗಳಿವೆ. ಗರ್ಭಗೃಹದ ಲಲಾಟ ಬಿಂಬಗಳಲ್ಲಿ ಶಿವಶಿಲ್ಪಗಳಿವೆ.

ದೇವಾಲಯದ ಸಭಾಮಂಟಪದಲ್ಲಿಯ ಮೇಲ್ಛಾವಣೆಯಲ್ಲಿ ಕೂಡಾ ವಿವಿಧ ಬಳೆಯಾಕಾರದ ಆಕೃತಿಗಳನ್ನು ಕೆತ್ತಲಾಗಿದೆ. ಸಭಾಮಂಟಪದಲ್ಲಿ ನಾಲ್ಕು ಕಂಬಗಳು ನೇರವಾಗಿದ್ದು ಎರಡು ಕಡೆ ಸಾಲಾಗಿ ನಿಂತಿವೆ. ಉಳಿದ ನಾಲ್ಕು ಕಂಬಗಳು ಗರ್ಭಗೃಹಕ್ಕೆ ಅಧೀನವಾಗಿದ್ದು ಎರಡು ದೇವಕೋಷ್ಠಕಗಳಿವೆ. ದೇವಾಲಯಕ್ಕೆ ಶಿಖರವಿಲ್ಲ. ಬೃಹದಾಕಾರದ ಸಮತಟ್ಟಾದ ಕಲ್ಲುಗಳಿಂದ ಕೂಡಿದ ಮೇಲ್ಛಾವಣಿ ಇದೆ. ದೇವಾಲಯದ ಆವರಣದಲ್ಲಿ ತ್ರುಟಿತ ಶಿಲ್ಪಗಳು, ಕಂಬಗಳ ಭಾಗಗಳು ಕಂಡು ಬರುತ್ತವೆ. ಈ ದೇವಾಲಯಕ್ಕೆ ದತ್ತಿಕೊಟ್ಟ ವಿಚಾರವನ್ನು ಜಮಖಂಡಿಯಲ್ಲಿ ದೊರೆತ ಶಾಸನ (ಸೌತ ಇಂಡಿಯನ್ ಇನ್ಸ್‌ಕ್ರಿಪ್ಸನ್ಸ್ ಸಂ 20 ನಂ. 287) ತ್ರುಟಿತವಾಗಿದೆ. ಮೊದಲಭಾಗ ಸಿಕ್ಕಿಲ್ಲ. 18 ಸಾಲುಗಳ ಈ ಶಾಸನ ದುಂದುಬಿ ನಾಮ ಸಂವತ್ಸರ ಚೈತ್ರ, ಭಾನುಶ್ರೀ, ಸೋಮವಾರ ವಿಭವ ಸಂಕ್ರಾಂತಿ ಅಂದರೆ ಕ್ರಿ.ಶ. 1082 ಸೋಮವಾರ ಮಾರ್ಚ 31ನೇ ದಿನಕ್ಕೆ ಸರಿ ಹೊಂದುವ ಕಾಲಮಾನ. 1082 ರಲ್ಲಿ ಕಲ್ಯಾಣಿ ಚಾಲುಕ್ಯ ಚರ್ಕವರ್ತಿ 6 ನೇ ವಿಕ್ರಮಾದಿತ್ಯ ಆಳುತ್ತಿದ್ದ ಕಾಲ ಈ ದೇವಾಲಯಕ್ಕೆ ಭೂದಾನ ದತ್ತಿ ಬಿಟ್ಟ ವಿಚಾರಗಳನ್ನು ತಿಳಿಸುತ್ತದೆ.

ಗೊಂಕ ದೇವಾಲಯ: ತೇರದಾಳ

ಜಮಖಂಡಿ ತಾಲ್ಲೂಕಿನ ಪ್ರಮುಖ ಪಟ್ಟಣ ಇಲ್ಲಿ ನೇಮಿನಾಥ (ಕರ್ನಾಟಕ ಇನ್ಸ್‌ಕ್ರಿಪ್ಸನ್ಸ್ ಸಂ ೫ ನಂ. ೨೧) ಬಸದಿಯ ಮಂಟಪದ ಹೊರಗೋಡೆಯಲ್ಲಿ ಶಾಸನವಿದೆ.

ಇದು ಕುಂತಳನಾಡಿನ ಭಾಗವಾದ ಕೊಂಡಿ–೩೦೦೦ ಉಪವಿಭಾಗವಾದ ತೇರದಾಳ–೧೨ ಗ್ರಾಮದ ಗುಣಗಾನ

ಮಾಡುತ್ತದೆ. ೬ನೇ ವಿಕ್ರಮಾದಿತ್ಯನ ಮಹಾಮಾಂಡಲಿಕ ರಟ್ಟ ವಂಶದ ಕಾರ್ತವೀರ್ಯನ ಮಾಂಡಲಿಕನಾದ ಗೊಂಕರಸ ತೇರದಾಳದಲ್ಲಿ ಗೊಂಕಜಿನಾಲಯವನ್ನು ನಿರ್ಮಿಸಿ ವಿಗ್ರಹ ಪ್ರತಿಷ್ಠಾಪನೆಯನ್ನು ತೇರದಾಳದ ಮುಖಂಡರ ಸಮ್ಮುಖದಲ್ಲಿ ಮಾಡಿ ಆ ಕಾಲದಲ್ಲಿಯೇ ಈ ದೇವಾಲಯಕ್ಕೆ ಅಷ್ಟ ವಿಧಾರ್ಚನೆ, ಪೂಜೆ ನಿರಂತರವಾಗಿ ನಡೆಯುವುದಕ್ಕಾಗಿ ತೆರಿಗೆಗಳಿಂದ ಎಣ್ಣೆ ಗಾಣಗಳಿಂದ ಮತ್ತಿತರ ಮೂಲಗಳಿಂದ ಬಂದ ಆದಾಯವನ್ನು ದಾನವಾಗಿ ಕೊಟ್ಟಿದ್ದನ್ನು ಇಲ್ಲಿರುವ ೫೬ ದೀರ್ಘ ಸಾಲುಗಳುಳ್ಳ ಶಾಸನ ತಿಳಿಸುತ್ತದೆ.

ಈ ಶಾಸನ ಶಕವರ್ಷ ೧೦೪೫ ಶುಭಕೃತ ಗುರುವಾರ ವೈಶಾಖ ಪೂರ್ಣಿಮೆ ಅಂದರೆ ಕ್ರಿ.ಶ. ೧೧೨೫ ಏಪ್ರಿಲ್ ೧೨ ಕ್ಕೆ ಸರಿಹೊಂದುವ ಕಾಲ. ಇಂದಿಗೂ ಚಾತುರ್ಮಾಸ ಮತ್ತು ನೋಂಪಿ ಆಚರಣೆಗಳೊಂದಿಗೆ ಇದು ಇಂದಿಗೂ ಪ್ರಸಿದ್ಧಿಯಾಗಿದೆ.

ಕದಂಬ ನಾಗರ ಶೈಲಿಯಲ್ಲಿರುವ ಈ ಬಸದಿ ಪ್ರದಕ್ಷಣಾ ಪಥವನ್ನು ಹೊಂದಿದೆ. ಗರ್ಭಗೃಹ ಸುಖನಾಸಿ ರಂಗಮಂಟಪ ಹಾಗೂ ಮುಖಮಂಟಪಗಳಿಂದ ಕೂಡಿದೆ. ಗರ್ಭಗೃಹದಲ್ಲಿ ಪೀಠದ ಮೇಲೆ ಪದ್ಮಾಸನದಲ್ಲಿ ಕುಳಿತ ನೇಮಿನಾಥನ ವಿಗ್ರಹವಿದೆ. ಗರ್ಭಗುಡಿಯ ಮೇಲೆ ಶಿಖರವಿದೆ. ದೇವಾಲಯದ ಎದುರಿಗೆ ಎತ್ತರದ ದೀಪಸ್ತಂಭವಿದೆ. ಹೊರ ಮಂಟಪದ ದ್ವಾರವು ಸುಂದರ ಕುಸುರಿ ಕೆತ್ತನೆಯಿಂದ ಕೂಡಿದೆ. ದ್ವಾರದ ಮೇಲ್ಭಾಗದಲ್ಲಿ ಪದ್ಮಾಸನ ಜಿನ ಮೂರ್ತಿ ಇದೆ.

ಕರಿಸಿದ್ಧ ದೇವಾಲಯ: ಕೊಣ್ಣೂರ

ಇತ್ತೀಚಿನ ದಿನಗಳಲ್ಲಿಯೂ ಬಹಳ ಪ್ರಸಿದ್ದಿ ಹೊಂದಿದ ದೇವಾಲಯ. ಶಾಸನಗಳಲ್ಲಿ (ಎಸ್.ಐ.ಐ. ಸಂ. ೨೦ ನಂ. ೫೪೨ ಕ್ರಿ.ಶ. ೧೧೪೯–೫೦) ಇದನ್ನು ಬೀರಣ ದೇವರು ಎಂದು ಉಲ್ಲೇಖಿಸಲಾಗಿದೆ. ಸ್ಥಳೀಯ ಐತಿಹ್ಯದ ಪ್ರಕಾರ ಒಂದು ಕಾಲದಲ್ಲಿ ದೇವಾನು ದೇವತೆಗಳೆಲ್ಲ ಸೇರಿಕೊಂಡು ಶಿವನಿಗೆ ಪಟ್ಟ ಕಟ್ಟುವ ಕಾಲಕ್ಕೆ ಗುಗ್ಗಳ ಹೋಮ ಮಾಡುತ್ತಿರಲು, ಹೋಮದಲ್ಲಿ ಉದ್ಭವವಾದ ಕೂಸೊಂದು ನದಿ ದಂಡೆಯ ಮೇಲೆ ಕುಳಿತುಕೊಂಡು ಸೃಷ್ಟಿಯಲ್ಲಿರುವ ಪ್ರಾಣಿಗಳಿಗೆಲ್ಲ ಆಹಾರವನ್ನು ಬೀರುತ್ತಿದ್ದನು. ಆದ್ದರಿಂದ ಅವನಿಗೆ ಬೀರಪ್ಪ, ಬೀರೇಶ್ವರ ಎಂಬ ಹೆಸರು ಬಂದಿತು. ಮುಂದೆ ಇದೇ ಬೀರೇಶ್ವರ ಕೋಣಾಸುರ ಎಂಬ ದೈತ್ಯನನ್ನು ನಾಶ ಮಾಡಿ ದೈತ್ಯನ ಹೆಸರಿನ ಮೇಲೆ ಕೋಣಾನೂರು ಎಂಬ ಗ್ರಾಮವನ್ನು ಸ್ಥಾಪಿಸಿ, ಕೋಣಾನೂರಿನ ನಿಜಸಿದ್ದ, ಕರೆಸಿದ್ದ ಎಂಬ ಹೆಸರಿನಿಂದ ಪ್ರಸಿದ್ದಿ ಹೊಂದಿದ ಈ ದೇವರು ಈಗ ಕರಿಸಿದ್ದ ಎಂದಾಗಿದೆ. ಈ ದೇವಾಲಯ ಊರಿನ ಪಶ್ಚಿಮದಲ್ಲಿ ಪೂರ್ವಾಭಿಮುಖವಾಗಿ ಕಟ್ಟಲ್ಪಟ್ಟಿದೆ. ಮುಖ್ಯದ್ವಾರದ ಮೇಲೆ ಮಹಡಿಗಳನ್ನು ನಿರ್ಮಿಸಿರುವುದರಿಂದ ಬಹುದೂರದಿಂದಲೇ ಕಾಣುತ್ತದೆ. ಮುಖ್ಯದ್ವಾರದ ಪ್ರಾಕಾರ ದಲ್ಲಿರುವ ಕೋಣೆಗಳು ನಂತರದ ದಿನಗಳಲ್ಲಿ ನಿರ್ಮಿಸಿದವು ಗಳಾಗಿವೆ. ಗರ್ಭಗುಡಿಯಲ್ಲಿ ಕುಳಿತ ಭಂಗಿಯಲ್ಲಿರುವ ಕರಿಸಿದ್ದದೇವರ ಕಲ್ಲಿನ ಮೂರ್ತಿ ಇದೆ. ಕಾಲಕ್ರಮೇಣ ಪಕ್ಕದಲ್ಲಿಯೇ ಮತ್ತೊಂದು ನಿಂತಿರುವ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ.

ಇವುಗಳಿಗೆ ಕುಂತಿರಪ್ಪ, ನಿಂತಿರಪ್ಪ ಎಂದು ಕರೆಯುತ್ತಾರೆ. ಗುಡಿಯ ಪ್ರಾಂಗಣದಲ್ಲಿ ಕೋಣಾಸುರನ ವಧೆಯ ಸಂಕೇತವಾಗಿ ಎರಡು ಮಾಲಗಂಬಗಳಿವೆ. ಗರ್ಭಗುಡಿಯ ಸಭಾ ಮಂಟಪದ ಎದುರು ಎಡಬಲಗಳಲ್ಲಿ ಶಾಸನಗಳಿವೆ. ಈ ಭಾಗದಲ್ಲಿ ಜಾಗೃತ ದೇವಾಲಯವೆಂದೇ ಪ್ರಸಿದ್ದಿ ಹೊಂದಿದ ಈ ದೇವಾಲಯಕ್ಕೆ ಯುಗಾದಿ, ಶ್ರಾವಣ ಮಾಸದಲ್ಲಿ ಸಾಕಷ್ಟು ಜನ ಬಂದು ಸೇರುತ್ತಾರೆ. ಪ್ರತಿ ವರ್ಷ ದೀಪಾವಳಿಯಲ್ಲಿ ನರಕಾಸುರನ ಬಲಿಪಾಡ್ಯಮಿ ಎನ್ನುವಂತೆ ಕೋಣಾಸುರನ ಸಂಹಾರದ ದಿನ ಎಂಬ ಸಂಪ್ರದಾಯದಂತೆ ಅನೇಕ ದೈವೀಕ ಆಚರಣೆಗಳನ್ನೊಳಗೊಂಡಂತೆ ಬೃಹತ್ ಪ್ರಮಾಣದಲ್ಲಿ ಜಾತ್ರೆ ನಡೆಯುತ್ತದೆ.

ಮಹಾಪ್ರಭು ದೇವಾಲಯ: ಜಮಖಂಡಿ

ಈ ದೇವಾಲಯವನ್ನು ಪ್ರವೇಶಿಸಬೇಕಾದರೆ ೮–೧೦ ಮೆಟ್ಟಿಲುಗಳನ್ನು ಇಳಿದು ಹೋಗಬೇಕಾಗುತ್ತದೆ. ಇದು ರಾಷ್ಟ್ರಕೂಟರ ಮತ್ತು ಕಲ್ಯಾಣ ಚಾಲುಕ್ಯರ ವಾಸ್ತು ಶಿಲ್ಪದ ಮಾದರಿಗಳೆರಡನ್ನೂ ಹೋಲುತ್ತದೆ. ತ್ರಿಕೂಟಾಚಲವಾಗಿದ್ದು ಮಧ್ಯದ ಗರ್ಭ ಗುಡಿಯಲ್ಲಿ ಪ್ರಭುದೇವರ ಜಲಾರಿ ಲಿಂಗವಿದೆ. ಅಂತರಾಳದ ಮಧ್ಯದಲ್ಲಿ ನಂದಿ ವಿಗ್ರಹವಿದೆ. ಎಡಬಲಗಳ ಗರ್ಭಗುಡಿಗಳಲ್ಲಿನ ಶಿವಲಿಂಗಗಳು ಕಾಣೆಯಾಗಿವೆ. ದೇವಾಲಯದ ಸುತ್ತಲೂ ಸ್ವಲ್ಪವೂ ಸ್ಥಳಾವಕಾಶ ಇಲ್ಲದಂತೆ ದೇವಸ್ಥಾನದ ಜಾಗವನ್ನು ಆಕ್ರಮಿಸಿ ಸ್ಥಳೀಕರು ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಆದ್ದರಿಂದ ದೇವಾಲಯದ ಮೂಲಸ್ವರೂಪ ವನ್ನು ಕಾಣುವುದಿಲ್ಲ. ಮೂರ್‍ನಾಲ್ಕು ತಲೆಮಾರುಗಳಿಂದ ಮನಗೂಳಿ ಮನೆತನದ ಆಚಾರ್ಯರು ಈ ದೇವಾಲಯದ ಅರ್ಚಕರಾಗಿ ವಿಧಿ ವಿಧಾನಗಳನ್ನು ನೆಡೆಸುತ್ತಾ ಬಂದಿದ್ದಾರೆ. ಈ ದೇವಸ್ಥಾನಕ್ಕೆ ೧೦ ಎಕರೆ ಭೂಮಿ ಉಂಬಳಿ ಹಾಕಿಕೊಡ ಲಾಗಿದೆ. ಇದನ್ನು ಹಾರುವರ ಹೊಲ ಎಂದು ಕರೆಯುತ್ತಾರೆ. ಎಲ್ಲ ಧರ್ಮೀಯರು ಇದಕ್ಕೆ ನಡೆದುಕೊಳ್ಳುತ್ತಾರೆ. ಜಾಗೃತ ದೇವಸ್ಥಾನ ಎಂದೇ ಭಕ್ತರು ನಂಬಿದ್ದಾರೆ. ಜಮಖಂಡಿ ನಗರವಾಸಿಗಳಲ್ಲದೇ ಸುತ್ತಮುತ್ತಲಿನ ಗ್ರಾಮದ ಜನರು

ನಡೆದುಕೊಳ್ಳುತ್ತಾರೆ. ಈ ದೇವಾಲಯದ ಪೂಜಾ ವಿಧಿ ವಿಧಾನಗಳನ್ನು ಜಂಗಮರು ಮತ್ತು ಬ್ರಾಹ್ಮಣರು ಇಬ್ಬರೂ ನೆರವೇರಿಸುತ್ತಾ ಬಂದಿರುವುದು ವಿಶೇಷ.

ಜಂಗಮ ಪೂಜಾರಿಗಳು ಪತ್ರಿ, ಪುಷ್ಪ, ಫಲಾರ್ಚನೆಗಳನ್ನು ಮಾಡಿದರೆ ಬ್ರಾಹ್ಮಣ ಜೋಯಿಸರು ಅಲಂಕಾರ ಪೂಜೆ, ಅಭಿಷೇಕ, ಹೋಮ, ಹವನ, ಸೇವೆಗಳನ್ನು ಮಾಡುತ್ತಾರೆ. ಪ್ರತಿ ಶ್ರಾವಣ ಮಾಸದಲ್ಲಿ ಅತ್ಯಂತ ವೈಭವದಿಂದ ನೃತ್ಯ, ಸಂಗೀತ ಸೇವೆ, ಬಾಜಾಬಜಂತ್ರಿ, ಕರಡಿವಾದನ, ಸಂಬಾಳವಾದನ, ಜಾಗಟೆ, ನಗಾರಿ ವಾದನ, ಮೊದಲಾದ ಕಾರ್ಯಕ್ರಮಗಳು ಅತೀ ವಿಬ್ರುಂಜಣೆಯಿಂದ ನೆಡೆಯುತ್ತಿದ್ದವು. ಈ ದೇವರಿಗೆ ಭಕ್ತಿಸೇವೆಗಾಗಿ ಭೂಮಿಯನ್ನು ದತ್ತಿ ಬಿಟ್ಟ ವಿವರಗಳು ಸಿಗುತ್ತವೆ.

ರಾಮೇಶ್ವರ ದೇವಾಲಯ: ರಾಮತೀರ್ಥ

ಜಮಖಂಡಿಯ ನೈರುತ್ಯಕ್ಕೆ ಗುಡ್ಡದ ಸಾಲಿನಲ್ಲಿ ೨ ಕಿ.ಮೀ. ದೂರದಲ್ಲಿರುವ ವೇಸರ ಮಾದರಿಯ ಹೊಯ್ಸಳರ ಕಾಲದ ದೇವಾಲಯ. ತೆರೆದ ಸಭಾಮಂಟಪ, ಅಂತರಾಳ ಮತ್ತು ಗರ್ಭಗೃಹವನ್ನು ಹೊಂದಿದೆ. ಸಭಾಮಂಟಪದಲ್ಲಿ ೪ ಕಂಬಗಳಿದ್ದು ಎತ್ತರಕ್ಕೆ ಕಟ್ಟೆಯನ್ನು ಕಟ್ಟಲಾಗಿದೆ. ಕಟ್ಟೆಯ ಮೇಲೆ ಅರ್ಧ ೫ ಕಂಬಗಳಿವೆ. ಈ ಕಂಬಗಳು ಛತ್ತಿಗೆ ಅಂಟಿಕೊಂಡು ಹೊರಗೆ ಹೋಗಲು ದಾರಿಗಳಾಗಿವೆ. ದೇವಸ್ಥಾನದ ಎಡಬಲಕ್ಕೆ ಹೋಗಲು ದಾರಿ ಇದೆ. ಅಲಂಕೃತವಾದ ಕೆತ್ತನೆಯ ಒಟ್ಟು ೧೦ ಕಂಬಗಳಿವೆ. ಗರ್ಭಗೃಹದಲ್ಲಿ ಬೃಹದಾಕಾರವಾಗಿರುವ ಶಿವಲಿಂಗವಿದೆ. ಗರ್ಭಗೃಹದ ಮುಂದೆ ಬೃಹತ್ ನಂದಿ ವಿಗ್ರಹವಿದೆ. ಮೇಲ್ಛಾವಣಿ ಕಲ್ಲಿನಿಂದ ನಿರ್ಮಿಸಲ್ಪಟ್ಟಿದೆ. ದೇವಾಲಯದ ದ್ವಾರಬಾಗಿಲಿನ ಲಲಾಟ ಬಿಂಬದಲ್ಲಿ ಓಂ ಅಕ್ಷರ ಹಾಗೂ ಹೂವಿನ ಚಿತ್ರವಿದೆ. ಇತ್ತೀಚಿಗೆ ದ್ವಾರಬಾಗಿಲಿನ ಮೇಲ್ಭಾಗದಲ್ಲಿ ಶಿವಪಾರ್ವತಿಯರ ಶಿಲ್ಪವನ್ನು ನಿರ್ಮಿಸಿದ್ದಾರೆ. ದೇವಾಲಯದ ಎಡಭಾಗದಲ್ಲಿ ಕಲ್ಲಿನಲ್ಲಿ ಕೆತ್ತಿದ ಸಳ ಹುಲಿಯೊಡನೆ ಸೆಣೆಸಾಡುತ್ತಿರುವ ಶಿಲ್ಪ ಚಿತ್ರವಿದೆ. ದೇವಾಲಯದ ಹೊರನೋಟ ನಕ್ಷತ್ರಾಕಾರದಂತೆ ಕಾಣಿಸುತ್ತದೆ.

೧೮೫೭ರ ಬಂಡಾಯದಲ್ಲಿ ಭಾಗವಹಿಸಿದ್ದನು ಎಂಬ ಆರೋಪದ ಮೇರೆಗೆ ಈ ಪ್ರಾಂತದ ಮುಖಂಡ ರಾಮಚಂದ್ರ ರಾವ್ ಪಟವರ್ಧನರನ್ನು ಬಂಧಿಸಿ, ನಂತರ ಬಿಡುಗಡೆ ಮಾಡಿದ ಬಳಿಕ ರಾಮಚಂದ್ರರಾವ್ ತಮ್ಮ ವಸತಿಯನ್ನು ಬದಲಿಸಿ ಊರ ಹೊರಗಿರುವ ರಾಮತೀರ್ಥದ ಈ ದೇವಾಲಯದ ಪಕ್ಕದಲ್ಲಿ (ವಸತಿ) ಅರಮನೆ ನಿರ್ಮಿಸಿಕೊಂಡು ಸುತ್ತಲೂ ಸಣ್ಣ ಸಣ್ಣ ದೇವಾಲಯಗಳನ್ನು ನಿರ್ಮಿಸಿಕೊಂಡು ಪ್ರತಿ ವರ್ಷ ಶ್ರಾವಣ ಮಾಸದಲ್ಲಿ ವಿಶೇಷ ಪೂಜೆ ಸಲ್ಲಿಸುತ್ತಾ ಬಂದಿದ್ದಾರೆ. ಇನ್ನೊಂದು ವಿಶೇಷವೆಂದರೆ ಪ್ರತಿ ವರ್ಷ ಶ್ರಾವಣ ಮಾಸದ ಪೂರ್ತಿ ತಿಂಗಳಲ್ಲಿ ಜಮಖಂಡಿ ಹಾಗೂ ಹತ್ತಿರಕ್ಕೆ ಹೊಂದಿಕೊಂಡಿರುವ ಪ್ರದೇಶಗಳ ಜನರು ಪ್ರತಿ ದಿನ ಬೆಳಗಿನ ಜಾವ ೪ ಗಂಟೆಯಿಂದ ೯ ಗಂಟೆಯವರೆಗೆ ದರ್ಶನ ಪಡೆದು ಹೋಗುತ್ತಾರೆ. ಪ್ರತಿ ಸೋಮವಾರ ವಿಶೇಷವಾಗಿ ಅನ್ನದಿಂದ ತಯಾರಿಸಿದ "ಬುತ್ತಿ" ಯಿಂದ ಶಿವಲಿಂಗವನ್ನು ವಿವಿಧ ಭಂಗಿಗಳಲ್ಲಿ ನಿರ್ಮಿಸಿ ಪೂಜಿಸುತ್ತಾರೆ. ಕೊನೆಯ ಶ್ರಾವಣ ಸೋಮವಾರ ವಿಶೇಷ ಪೂಜೆಯೊಂದಿಗೆ ರಾಮೇಶ್ವರ ರಥೋತ್ಸವ ಬಹು ವಿಜೃಂಬಣೆಯಿಂದ ದೇವಾಲಯದ ಆವರಣದಲ್ಲಿಯೇ ನಡೆಯುತ್ತದೆ. ಏಕೆಂದರೆ ಜಮಖಂಡಿ ಸಂಸ್ಥಾನದ ಪ್ರಥಮ ಅರಸ ರಾಮಚಂದ್ರ ಪಂತ್ ಅವರಿಗೆ ಮರಾಠಾ ಪೇಶ್ವೆಗಳು ಜಮಖಂಡಿಯನ್ನು ಜಹಗೀರಾಗಿ ಕೊಟ್ಟ ಸಂದರ್ಭದಲ್ಲಿ ಪಾಂಡು. ಬಾ. ತಾತ್ಯಾ ಸುಖದೇವ ಆಡಳಿತಾಧಿಕಾರಿಯಾಗಿದ್ದನು. ಇವನು ಜಮಖಂಡಿಯನ್ನು ಬಿಟ್ಟು ಕೊಡಲು ನಿರಾಕರಿಸಿದನು. ಇದರಿಂದ ಕೋಪಗೊಂಡ ರಾಮಚಂದ್ರ ಪಂತ್ ತಮ್ಮ ಸೇನಾ ಬಲದೊಂದಿಗೆ ಸುಖದೇವನನ್ನು ಸೋಲಿಸಿ ಜಮಖಂಡಿಯನ್ನು ವಶಪಡಿಸಿಕೊಂಡಿದ್ದು ಶ್ರಾವಣ ಸೋಮವಾರದಂದು. ಅಂದಿನಿಂದಲೂ ಈ ಆಚರಣೆ ನಡೆಯುತ್ತಾ ಬಂದಿದೆ. ಈಗ ಪೂನಾದಲ್ಲಿ ವಾಸ್ತವ್ಯ ಹೂಡಿರುವ ಪಟವರ್ಧನ ಮನೆತನದವರು ಈ ರಥೋತ್ಸವಕ್ಕೆ ತಪ್ಪದೇ ಬಂದು ಜಾತ್ರೆಯಲ್ಲಿ ಪಾಲ್ಗೊಳ್ಳುತ್ತಾ ಬಂದಿರುವುದು ಒಂದು ವಿಶೇಷವಾಗಿದೆ.

ಆಧಾರಸೂಚಿ

೧. ಪ್ರೊ. ಎಸ್.ಬಿ. ಮಟೋಳಿ, ಜಮಖಂಡಿ ಇತಿಹಾಸ ದರ್ಪಣ, ಪುಟ ೫.

೨. ಬಜಂತ್ರಿ ದೊಡ್ಡಣ್ಣ (ಸಂ) ತ್ರಿದಳ ಸೌರಭ ಸ್ಮರಣ ಸಂಚಿಕೆ, ಲೇಖನ ಪುಟ ೩.

೩. ಮಲ್ಲಿಕಾರ್ಜುನ ಎಂ. (ಸಂ) ಜೈ ಜಮಖಂಡಿ ಪಾಕ್ಷಿಕ ಸಂಚಿಕೆ ೭, ಪುಟ ೩.

೪. ಡಾ॥ ಕೆ.ಪಿ. ಈರಣ್ಣ, ತೇರದಾಳ ಗೊಂಕ ಜಿನಾಲಯ ಲೇಖನ, ಪುಟ ೧೫೨.

೫. ಕೆ. ಚನ್ನಬಸಪ್ಪ, ಜಮಖಂಡಿ ತಾಲ್ಲೂಕಿನ ಶಾಸನಗಳು ಒಂದು ಸಾಂಸ್ಕೃತಿಕ ಅಧ್ಯಯನ.

೫೮

ಕುಶಲ ಕೆಲಸಗಾರರ ತೌರೂರುಗಳು

ಡಾ. ಕೆ.ಎಸ್. ಕುಮಾರಸ್ವಾಮಿ*

ಕೆಲವು ಶಿಲಾಕರ್ಮಿಗಳು (ಶಿಲ್ಪಿಗಳು) ಶಾಸನಗಳಲ್ಲಿ ತಮ್ಮ ಜನ್ಮಸ್ಥಳಗಳನ್ನು ಉಲ್ಲೇಖಿಸಿದ್ದಾರೆ. ಹೀಗೆ ಹೆಸರಿಸಲಾದ ಶಿಲಾಕರ್ಮಿಗಳ ತೌರೂರುಗಳನ್ನು ಒಂದು ಕಡೆ ತಂದು ಆ ಮೂಲಕ ಪ್ರಾಚೀನ ಕರ್ನಾಟಕದ ಶಿಲ್ಪಿಗಳ ಜೀವನವನ್ನು ಅರ್ಥ ಮಾಡಿಕೊಳ್ಳುವ ಪ್ರಯತ್ನ ಮಾಡಲಾಗಿದೆ. ಈ ಒಂದು ಪರಿಶೀಲನೆಯು ಆಗಿನ ಕೆಲಸಗಾರರ ಬದುಕಿನ ಮೇಲೆ ಏನಾದರೂ ಬೆಳಕು ಚೆಲ್ಲೀತು ಎಂದು ನಿರೀಕ್ಷಿಸಲಾಗಿದೆ. ಈ ಸಂಪ್ರಬಂಧದಲ್ಲಿ ಶಿಲಾಕರ್ಮಿಗಳು ತಮ್ಮ ಊರು ಎಂದು ಹೇಳಿಕೊಂಡಿರುವ ಊರುಗಳನ್ನು ಮಾತ್ರ ಆಯ್ಕೆ ಮಾಡಿಕೊಂಡಿದೆ. ಸುಮಾರು ಊರುಗಳನ್ನು ಈ ರೀತಿ ಕಲ್ಲುಕುಟಿಗಳ ಜನ್ಮಸ್ಥಳಗಳೆಂದು ಗುರುತಿಸಬಹುದಾಗಿದೆ. ಇವುಗಳಲ್ಲಿ ಹತ್ತು ಊರುಗಳು ಮಾತ್ರ ಹೆಚ್ಚು ಗಮನಾರ್ಹ ವಾಗಿದೆ. ಆದ್ದರಿಂದ ಅವುಗಳನ್ನು ಸ್ವಲ್ಪ ವಿವರವಾಗಿ ನೋಡಲಾಗಿದೆ. ಉಳಿದ ಊರುಗಳನ್ನು ಕೇವಲ ಹೆಸರಿಸ ಲಾಗಿದೆ. ಇದೆಲ್ಲವನ್ನೂ ಕಾಲಾನುಕ್ರಮವಾಗಿಯೇ ಪರಿಶೀಲಿಸ ಲಾಗಿದೆ. ಆ ಊರುಗಳು ಬಹುಪಾಲು ಸಾಮಾನ್ಯ ಗ್ರಾಮಗಳೂ ಆಗಿರಬಹುದಾದ್ದರಿಂದ ಕೆಲವನ್ನು ಊರು ಎಂದು ಗುರುತಿಸುವುದು ಕಷ್ಟವಾಗುತ್ತದೆ. ಅಂಥ ಕಡೆಗಳಲ್ಲಿ ಪ್ರಶ್ನೆಚಿಹ್ನೆಯನ್ನು ಹಾಕಿರುತ್ತೇನೆ (?). ಮತ್ತೆ ಕೆಲವು ಊರುಗಳು ಈಗ ಯಾವ ತಾಲ್ಲೂಕು, ಹೋಬಳಿಗಳಲ್ಲಿ ಬರುತ್ತವೆ ಎಂದು ಗುರುತಿಸುವುದು ತ್ರಾಸದಾಯಕವಾಗಿದೆ.

ರೂವಾರಿಗಳ ಜನ್ಮಸ್ಥಳವನ್ನು ಗುರುತಿಸುವುದರಿಂದ ಕೆಲವು ರೂವಾರಿಗಳು ತಮ್ಮ ಊರಿನಲ್ಲೇ ಇದ್ದುಕೊಂಡು, ಅದೇ ಊರಿನಲ್ಲಿ ನಡೆಯುವ ಕೆಲಸವನ್ನು ಮಾಡಿಕೊಟ್ಟಿದ್ದಾರೆ. ಈ ರೀತಿಯಲ್ಲಿ ಸ್ತಂಭಗಳನ್ನು ನಿಲ್ಲಿಸಿದ ಕೆಲಸಗಾರರ ಜನ್ಮಸ್ಥಳ ಮತ್ತು ಕಾರ್ಯಕ್ಷೇತ್ರ ಎರಡೂ ಒಂದೇ ಆಗಿದೆ. ಬಹುಶಃ ಇದು ಹೆಚ್ಚು ಆದಾಯ ತರುವಂಥ ಕೆಲಸವಾಗಿರಲಿಲ್ಲವಾದ್ದ ರಿಂದ ಅವರು ದೂರದೂರುಗಳಿಗೆ ಪ್ರಯಾಣ ಹೋಗುವ ಶ್ರಮ ವಹಿಸಿರಲಿಕ್ಕಿಲ್ಲ. ಶಾಸನ ಕಂಡರಣೆಕಾರರು ಕೆಲವರು ತಮ್ಮ ತೌರೂರಿನ ಆಸುಪಾಸಿನಲ್ಲಿ ಸುಮಾರು ಮೂವತ್ತು ನಲವತ್ತು ಮೈಲಿಯೊಳಗೇ ಸಂಚರಿಸಿ ಕೆಲಸ ಮಾಡಿದ್ದಾರೆ. ಮತ್ತೆ ಕೆಲವರು ತಮ್ಮ ತೌರೂರಿನಿಂದ ನೂರಾರು ಮೈಲಿಗಳವರೆಗೆ ಕ್ರಮಿಸಿ ಕೆಲಸ ಮಾಡಿರುವುದೂ ಉಂಟು. ಅಂಥವರಲ್ಲಿ ಹೆಚ್ಚಾಗಿ ಮೂರ್ತಿಶಿಲ್ಪಿಗಳೇ ಜಾಸ್ತಿ. ಶಾಸನ ಕಂಡರಣೆಕಾರರೂ ಕೆಲವರು ಈ ರೀತಿ ದೂರದೂರಿಗೆ ವಲಸೆ ಹೋಗಿದ್ದಾರೆ.

ಈ ರೀತಿ ರೂವಾರಿಗಳ ಜನ್ಮಸ್ಥಳವನ್ನು ಕುರಿತು ಅಧ್ಯಯನ ಮಾಡುವುದರಿಂದ ಕರ್ನಾಟಕದ ಶಿಲ್ಪಕಲೆಗೆ ಹೆಚ್ಚು ಜನ ಶಿಲ್ಪಿಗಳನ್ನು ಕೊಟ್ಟ ಊರುಗಳು ಯಾವುವು ? ಅದರಲ್ಲಿ ಶಿಲ್ಪಿಗಳ ದೊಡ್ಡ ಅವಿಭಕ್ತ ಕುಟುಂಬಗಳು, ಕೆಲಸಗಾರರ ಸಂಘ ಸಂಸ್ಥೆಗಳು, ತರಬೇತಿ ಕೇಂದ್ರಗಳು, ಕಲಾಶಾಲೆಗಳು ಇದ್ದುವೆ ? ಎಂದು ಯೋಚಿಸಲು ಎಡೆಯಾಗುತ್ತದೆ. ಆ ಊರು ಎಷ್ಟು ವರ್ಷಗಳವರೆಗೆ ಈ ರೀತಿ ಉತ್ತಮ ಶಿಲ್ಪಿಗಳನ್ನು ಸೃಷ್ಟಿ ಮಾಡುವ ಚಟುವಟಿಕೆಯಲ್ಲಿ ತೊಡಗಿತ್ತು ? ಅವೇನು ನಗರಗಳೋ, ಕೇವಲ ಕುಗ್ರಾಮಗಳೋ ಇತ್ಯಾದಿ ಅನೇಕ ಪ್ರಶ್ನೆಗಳನ್ನು ತಣಿಸಲು ಪ್ರಯತ್ನಿಸಬಹುದು. ಈ ರೀತಿಯ ವಿಶ್ಲೇಷಣೆಯು ಮುಖ್ಯವಾಗಿ ಶಿಲ್ಪಿಗಳ ಬದುಕಿನ ಮೇಲೂ ಸ್ವಲ್ಪ ಬೆಳಕು ಬೀರುತ್ತದೆ. ಅಂದರೆ ಒಂದೇ ಊರಿನಿಂದ ಬಂದ ಬೇರೆ ಬೇರೆ ರೂವಾರಿಗಳು ಬಹುಶಃ ಒಂದೇ ಕುಟುಂಬದ ಸದಸ್ಯರಾಗಿರುವ ಸಾಧ್ಯತೆಯುಂಟು. ಅಥವಾ ಒಂದೇ ವಂಶಕ್ಕೆ ಸೇರಿದವರಾಗಿರಬಹುದು. ಈಗ ಈ ಕುಶಲ ಕಾರ್ಮಿಕರು ಹೆಸರಿಸುವ ಜನ್ಮಸ್ಥಳಗಳ ಕಾಲಾನುಕ್ರಮವಾದ ಪಟ್ಟಿಯನ್ನು ನೋಡೋಣ.

ದುಗ್ಗಣಿ[೧], ಪುರಿಗೆರೆ[೨], ಆನಂದೂರು[೩], ತಾಯಲೂರು[೪], ಕೊಯತೂರು[೫], ಬಿಜಯಿತಮಂಗಳ[೬], ನೀರ್ಗುಂದ[೭], ಇಳ್ವಿಡೆ[೮](?), ಸೂಣ್ಡೆ(?)[೯], ಪುತ್ರದೇವೊಳಲು[೧೦](?), ಕಾನವಬನ(?)[೧೧], ಚುಂಚ[೧೨], ಕೆರೆಯೂರು[೧೩], ಕುನ್ದರಣಿ[೧೪], ಕಿಕ್ಕೇರಿ[೧೫], ಒರಿಯಕೆರೆವೂರು[೧೬], ಜಕ್ಕುಲಿ[೧೭], ಮುದುಗೆರೆ[೧೮], ಹಾವರಹಳ್ಳಿ[೧೯], ಹೊಸವೂರು[೨೦], ಕಲುಕಣಿ[೨೧], ತಣದೂರ[೨೨], ಮಂದೂರು[೨೩], ಪೂಲಿ[೨೪], ಕಲ್ಲುಕೆರೆ[೨೫], ತೊಣ್ಣೆವಾಡಿ[೨೬],

* ಪ್ರೊಫೆಸರ್, 'ಕಾಳ ಕೀರ್ತಿ', ಚರ್ಚ್ ಮುಖ್ಯರಸ್ತೆ, ಕೇಶವಪುರ, ಭದ್ರಾವತಿ-೫೭೭೩೦೧.

ಲೊಕ್ಕಿಗುಂಡಿ[೨೭], ವಾಣಕ್ಯವೊಳಲು[೨೮], ಮುಸ್ತಿ[೨೯], ಕೊಂಗುಣಿ[೩೦], ನೆರೆಯಂಗಲ್ಲು[೩೧], ಹೊಡಲು[೩೨], ಆಸಂದಿ[೩೩], ಮಣಿಗವಳ್ಳಿ[೩೪], ಅರಸಿಕೆರೆ, ಮಚಗೌಡನಹಳ್ಳಿ[೩೫], ಕಲ್ಯಾಣ[೩೬], ನಂದಿ[೩೭], ಬೆಳ್ಗೊಳ[೩೮], ರೊದ್ದ[೩೯], ಕೆಂಕೆರೆ[೪೦], ನವಿಳೆ[೪೧], ಪೊಂಬುಜ[೪೨], ಪೂಕಂದ ಮತ್ತು ತಿತ್ತಿದರಿಪೂದ(?)[೪೩], ಬಯಲುನಾಡು[೪೪], ಆವೂರು[೪೫], ದಂಡನಾಪುರ[೪೬], ನಾಗಲಾಪುರ[೪೭], ಕಾಕತ್ತಿಅಗತಿ(?)[೪೮], ಬಾನಳ್ಳಿ[೪೯], ತಿಲ್ಲರ(?)[೫೦], ಗಾಜನೂರು[೫೧], ಕುಂದವೆರೆ[೫೨], ಮೂಡಕ್ಕೆರೆ[೫೩], ಬಂದಳಿಕೆ[೫೪], ಸೋಲೂರು[೫೫], ಕುರುವಂಗಿ[೫೬], ಕೆಂಚಗೊಂಡಗೆ ಸೊಂಡಕೆರೆ[೫೭], ಬಾಣೂರು[೫೮], ಮಜಾಲೂರು[೫೯], ಪಾಳಿಯು(?)[೬೦], ವೇವೂರು[೬೧], ಯಂಡಿಗೇರಿ[೬೨], ಸಿಂದ[೬೩], ಒತ್ತಗಿರಿ[೬೪], ಗದುಬಳ್ಳಿ[೬೫], ವಿದ್ಯಾನಗರ[೬೬], ನುಂಡೆಹಳ್ಳಿ[೬೭], ನಾಡು[೬೮], ಆವಿಕಲ್[೬೯], ಮಾನಾಪುರ[೭೦], ಕುಕ್ಕನೂರು[೭೧].

ಕುಶಲ ಕಾರ್ಮಿಕರು ತಮ್ಮ ಊರುಗಳು ಎಂದು ಹೇಳಿಕೊಂಡಿರುವ ಈ ಕೆಲವು ಊರುಗಳು ಸ್ವಲ್ಪ ಗಮನಾರ್ಹವಾಗಿವೆ. ಅವುಗಳನ್ನು ಈ ಕೆಳಕಂಡಂತೆ ಪರಿಚಯ ಮಾಡಿಕೊಳ್ಳಬಹುದು.

ಪುಲಿಗೆರೆ : ಧಾರವಾಡ ಜಿಲ್ಲೆಯಲ್ಲಿರುವ ಇಂದಿನ ಲಕ್ಷ್ಮೇಶ್ವರವನ್ನು ಹಿಂದೆ ಪುಲಿಗೆರೆ, ಪುರಿಕರನಗರ ಎಂದು ಕರೆಯಲಾಗಿತ್ತು. ಇದು ಒಂದು ಐತಿಹಾಸಿಕ ಕೇಂದ್ರ, ರಾಜಕೀಯ, ಸಾಹಿತ್ಯಕ ಮತ್ತು ಧಾರ್ಮಿಕ ಕೇಂದ್ರವಾಗಿತ್ತು ಎಂಬುದು ತಿಳಿದ ವಿಷಯವೇ ಆಗಿದೆ. ಈಗ ತಿಳಿದು ಬಂದ ಮತ್ತೊಂದು ಹೊಸ ವಿಷಯವೇನೆಂದರೆ ಇದು ಶಿಲ್ಪಕಲಾ ಕಾರ್ಯ ಚಟುವಟಿಕೆಯ ಕೇಂದ್ರವೂ ಆಗಿತ್ತು. ಪಂಚಾಳ ಕುಶಲ ಕಾರ್ಮಿಕರಿಂದ ಕೂಡಿದ್ದ ಕೈಗಾರಿಕಾ ಕೇಂದ್ರವೂ ಆಗಿತ್ತು. ಈ ನಗರದಲ್ಲಿ ಶಿಲ್ಪಿಗಳ ಕೆಲವಾರು ಮನೆತನಗಳಿದ್ದವು. ಈ ಕುಟುಂಬಗಳಲ್ಲಿ ಜನಿಸಿದ ಶಿಲ್ಪಿಗಳು ಕರ್ನಾಟಕದ ಬೇರೆ ಬೇರೆ ಭಾಗಗಳಿಗೆ ವಲಸೆ ಹೋಗಿ ತಮ್ಮ ಕಲಾ ಪ್ರೌಢಿಮೆಯನ್ನು ಮೆರೆದಿದ್ದಾರೆ.

೧) ಕ್ರಿ.ಶ. ೮೬೫ರಲ್ಲಿ ಪುಲಿಗೆರೆಯವನಾದ ಪೊಲೆಯಣ್ಣ ಎಂಬುವನು ಧಾರವಾಡ ತಾಲ್ಲೂಕಿನ ಮುಂಡರಗಿ ಎಂಬ ಗ್ರಾಮಕ್ಕೆ ಹೋಗಿ ಅಲ್ಲಿ ಒಂದು ಶಾಸನವನ್ನು ಮಾಡುತ್ತಾನೆ.[೭೨]

ಕ್ರಿ.ಶ. ೧೦೬೦ರಲ್ಲಿ ಪುಲಿಗೆರೆಯ ಕಲ್ಲೋಜನು ಮಹಾರಾಷ್ಟ್ರದ ಮುಂಬಯಿನಾ ಆರ್ಲಿಮ್ ಗ್ರಾಮದಲ್ಲಿ ಒಂದು ಶಿಲಾಶಾಸನ ಕೊರೆಯುತ್ತಾನೆ. ಶಾಸನ ಸಂಪುಟದ ಸಂಪಾದಕರು ಈತನನ್ನು ಪುಲಿಗೆರೆಯವನು ಎಂದು ಗುರುತಿಸಿರುತ್ತಾರೆ. ಪುಲಿಗೆರೆಯಿಂದ ಬಹುದೂರ ಹೋಗಿ ಶಾಸನ ನಿರ್ಮಾತೃವಾಗಿರುವುದು, ಅಷ್ಟು ದೂರು ಹೋಗಿಯೂ ತನ್ನ ತೌರೂರನ್ನು ಮರೆಯದಿರುವುದು ಮೆಚ್ಚುವಂತಾ ಸುದ್ದಿ. ಶಿಲ್ಪಿಗಳು ಕೆಲಸದ ಮೇಲೆ ಬಹಳ ದೂರದವರೆಗೆ ವಲಸೆ ಹೋಗುತ್ತಿದ್ದರೆಂಬುದಕ್ಕೆ ಇದು ಒಂದು ಒಳ್ಳೆ ಉದಾಹರಣೆ.

೨) ಕ್ರಿ.ಶ. ೧೦೬೦ ಮತ್ತು ೧೦೬೨ರಲ್ಲಿ ಇದೇ ಊರಿನವರಾದ ನಾಗವರ್ಮನೆಂಬ ಶಿಲ್ಪಿಯು ಹಿರೇಕೆರೂರು ಮತ್ತು ಮುಳಗುಂದಗಳಿಗೆ ಹೋಗಿ ಎರಡು ಶಾಸನಗಳನ್ನು ಮಾಡಿಕೊಡುತ್ತಾನೆ.[೭೩] ೩) ಕ್ರಿ.ಶ. ೧೦೮೨ರಲ್ಲಿ ಅಯ್ಯಣ ಬಿರುದಾಂಕಿತ ಗದಗ ತಾಲ್ಲೂಕಿನ ಶಿಲ್ಪಿಯು ಕುರ್ತಕೋಟಿಗೆ ಹೋಗಿ ಒಂದು ಶಾಸನವನ್ನು ರಚನೆ ಮಾಡುತ್ತಾನೆ. ತನ್ನನ್ನು ಹೆಮ್ಮೆಯಿಂದ 'ಪುರಿಕರಪಟ್ಟಣೋದ್ಭವಂ' ಎಂದು ಹೇಳಿಕೊಳ್ಳುತ್ತಾನೆ.[೭೪] ೪) ಕಾಲವನ್ನು ಹೇಳಿಲ್ಲದ ಒಂದು ಶಾಸನದ ಪ್ರಕಾರ 'ಪುಲಿಗೇರಿಯ ವೀರ ಬಲ್ಲಾಳೇಶ್ವರದ ಆಚಾರಿ ಭ್ರಮಪಂಡಿತ ಎನ್ನುವವನು ಚನ್ನರಾಯ ಪಟ್ಟಣ ತಾಲ್ಲೂಕು ಮೂಡಲಗೆರೆಗೆ ಬಂದು ಒಂದು ಶಾಸನವನ್ನು ಮಾಡುತ್ತಾನೆ.[೭೫] ಈತ ಕೇವಲ ಶಾಸನವನ್ನು ಕೊರೆಯುವುದಕ್ಕಾಗಿ ಇಷ್ಟು ದೂರ ಪ್ರಯಾಣ ಮಾಡಿ ಬಂದಿರಲಾರ. ಈತ ವಾಸ್ತುಶಿಲ್ಪಿಯೋ ಮೂರ್ತಿಶಿಲ್ಪಿಯೋ ಆಗಿದ್ದಿರಬೇಕು. ೫) ಕ್ರಿ.ಶ. ೧೦೯೦ರಲ್ಲಿ ಈ ಊರಿನಿಂದ ಹೊರಹೊರಟ ಕೇತೋಜ ಮತ್ತು ಏಜೋಜರು ಅರಸಿಕೆರೆಗೆ ಬಂದು 'ಅರಸಿಕೆರೆ' ಎಂಬ ಕೆರೆಯ ತೂಬನ್ನು ಮಾಡಿಕೊಡುತ್ತಾರೆ.[೭೬] ೬) ಕ್ರಿ.ಶ. ೧೧೦೧ರಲ್ಲಿ ಇದೇ ಊರಿನ ಬಮ್ಮೋಜನ ಮಗನೊಬ್ಬ ಗದಗಿಗೆ ಹೋಗಿ ಶಾಸನ ಮಾಡುತ್ತೇನೆ. ಈತ ಬಿರುದು ರೂವಾರಿ ಕಂಠೀರವ ಎಂದು ಬಿರುದಾಂಕಿತನಾಗಿದ್ದಾನೆ.[೭೭] ೭) ಕ್ರಿ.ಶ. ೧೧೮ರಲ್ಲಿ ಇದೇ ಹುಲಿಗೆರೆಯ ಬಮ್ಮೋಜನು ಹಾನಗಲ್ಲು ತಾಲ್ಲೂಕು ಬಾಲಂಬೀಡಿನಲ್ಲಿ ಒಂದು ಶಾಸನವನ್ನು ರಚನೆ ಮಾಡಿಕೊಡುತ್ತಾನೆ.[೭೮]

ಹೀಗೆ ಏಳು ಮಂದಿ ಕುಶಲಕರ್ಮಿಗಳ ಪುಲಿಗೆರೆಯಿಂದ ಕರ್ನಾಟಕದ ಬೇರೆ ಬೇರೆ ಊರುಗಳಿಗೆ ಹೋಗಿ ಕೆಲಸ ಮಾಡುತ್ತಾರೆ. ಈ ನಗರವು ಕ್ರಿ.ಶ. ೮೬೫ರಿಂದ ೧೧೧೮ರವರೆಗೆ ಸುಮಾರು ೨೫೩ ವರ್ಷ ದೀರ್ಘಾವಧಿಯವರೆಗೆ ಕರ್ನಾಟಕಕ್ಕೆ ಶಿಲ್ಪಿಗಳನ್ನು, ಶಿಲ್ಪಕಲೆಯನ್ನೂ ಕೊಟ್ಟಿದೆ ಎಂದು ಹೇಳಬಹುದು. ಅದರಲ್ಲೂ ೧೧ನೇ ಶತಮಾನದಲ್ಲಿ ಈ ನಗರವು ಶಿಲ್ಪ ತರಬೇತಿ ಕೇಂದ್ರವನ್ನು ಹೊಂದಿದ್ದಿರಬೇಕು. ಇಲ್ಲಿ ಉತ್ತಮವಾಗಿರುವ ನಾಗವರ್ಮ ಎಂಬುವನು ತಾನು ಶಿಲ್ಪಕರ್ಮವನ್ನು ಮಾಡಿದ್ದಲ್ಲದೆ ಸ್ವತಃ ಶಿಲ್ಪ ವಿದ್ಯಾಗುರುವೂ ಆಗಿದ್ದನೆಂದು ತಿಳಿದುಬರುತ್ತದೆ. ಬಮ್ಮೋಜ ಎಂಬ ಶಿಲ್ಪಿಯ ಪ್ರಸಿದ್ಧ ಮನೆತನವು ಈ ನಗರದಲ್ಲಿತ್ತು.[೭೯]

* ಕ.ವಿ.ಶಾ.ಸಂ. (ಮಹಾರಾಷ್ಟ್ರ) VI, ಮುಂಬಯಿ ತಾ., ಆರ್ಲಂ ಗ್ರಾಮ.

ಈ ಕೆಲಸಗಾರರು ಶಾಸನ ಕಂಡರಣೆಯ ಜೊತೆಗೆ ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪಗಳಲ್ಲಿಯೂ ಪರಿಣತರಾಗಿದ್ದಿರಬೇಕು. ಏಕೆಂದರೆ ಕೇವಲ ಕಂಡರಣೆಗಾಗಿ ಅರಸೀಕೆರೆ, ಚನ್ನರಾಯಪಟ್ಟಣ, ಗದಗುಗಳಷ್ಟು ದೂರದೂರುಗಳಿಗೆ ಪ್ರವಾಸ ಹೋಗಿದ್ದರೆಂದು ಹೇಳಲಾಗದು. ಈ ಊರಿನಲ್ಲಿದ್ದ ಕೈಗಾರಿಕೋದ್ಯೋಗಿಗಳ ಮನೆತನವು ಮರಗೆಲಸ, ಕಲ್ಲುಕೆಲಸ, ಪತ್ರಭೇದ ಮೊದಲಾದ ಕುಶಲ ಕೆಲಸಗಳಲ್ಲಿಯೂ ಪರಿಣತವಾಗಿತ್ತು. ಇವರು ವಿದ್ಯಾವಂತರಾಗಿದ್ದರು. ಬಹುಶಃ ಈ ಅವಿಭಕ್ತ ಕುಟುಂಬವು 'ಸರಸ್ವತಿಗಣ' ಎಂಬ ತಮ್ಮ ವೃತ್ತಿಸಂಘದೊಂದಿಗೆ ಸೌಹಾರ್ದಯುತ ಸಂಬಂಧವನ್ನು ಇಟ್ಟುಕೊಂಡಿತ್ತು.[೮೦] ಈ ಊರಿನಲ್ಲಿ ಕಂಚುಗಾರ ಕೈಗಾರಿಕೋದ್ಯೋಗಿಗಳ ಒಂದು ಸಂಘ ಕೂಡ ಇದ್ದಿತು ಎಂದು ತಿಳಿದು ಬರುತ್ತದೆ.[೮೧]

ಆದ್ದರಿಂದ ಪುಲಿಗೆರೆಯು ಶಿಲ್ಪಿಗಳ ಅನೇಕ ಮನೆತನಗಳ ಕೇಂದ್ರವಾಗಿತ್ತು. ಅದಕ್ಕೆ ರಾಜಾಶ್ರಯವೂ ಇದ್ದಿರಬೇಕು. ಶಿಲ್ಪಕಲಾ ಶಾಲೆಯೂ ಇದ್ದಿರಬೇಕು. ಸಂಘ ಸಂಸ್ಥೆಗಳಿದ್ದವು. ಹೀಗಾಗಿ ಈ ನಗರವು ಕ್ರಿ.ಶ. ೯ನೇ ಶತಮಾನದಿಂದ ೧೨ನೇ ಶತಮಾನದವರೆಗೆ ಸುಮಾರು ಎರಡೂವರೆ ಶತಕಗಳವರೆಗೆ ಕರ್ನಾಟಕದ ಶಿಲ್ಪಕಲೆಗೆ ಅತ್ಯುತ್ತಮವಾದ ಕುಶಲ ಕೆಲಸಗಾರರನ್ನು ಕಾಣಿಕೆಯಾಗಿ ಕೊಟ್ಟ ಕೇಂದ್ರವಾಗಿದೆ.

ನೀರ್ಗುಂದ

ತಮಿಳುನಾಡಿನಿಂದ ಮುಖ್ಯವಾಗಿ ಹಾಗೂ ಸ್ವಲ್ಪಮಟ್ಟಿಗೆ ತೆಲಗುನಾಡಿನಿಂದ ವಲಸೆ ಬಂದವರಿಗೆ, ಅದರಲ್ಲೂ ವಿಶೇಷವಾಗಿ ಪಂಚಾಳ (ಪಂಚಮ್ಮರು) ಕುಶಲ ಕಾರ್ಮಿಕರಿಗೆ ನೆಲೆ ನಿಲ್ಲಲು ಈ ನಿರ್ಗುಂದ ಎಂಬ ಗ್ರಾಮವನ್ನು ಅನುದಾನವಾಗಿ ಕೊಡಲಾಗಿತ್ತು ಎಂದು ತಿಳಿದುಬರುತ್ತದೆ.[೮೨] ನನ್ನ ಗಮನಕ್ಕೆ ಬಂದಂತೆ ಪಟ್ಟಾಚಾರಿ ಎಂಬ ಕ್ರಿ.ಶ. ೧೦ನೇ ಶತಮಾನದ ಕಂಡರಣೆಕಾರನು ಈ ಊರಿನಿಂದ ಹೊರಟು ಚಾಮರಾಜನಗರ ತಾಲ್ಲೂಕಿನ ಬಾನಳ್ಳಿ ಎಂಬ ಗ್ರಾಮಕ್ಕೆ ಹೋಗಿ ಒಂದು ಶಾಸನವನ್ನು ಕಂಡರಿಸುತ್ತಾನೆ.[೮೩] ಡಾ. ಕುಪ್ಪಸ್ವಾಮಿಯವರ ಮಾತನ್ನು ಒಪ್ಪುವುದಾದರೆ ಆಗ ಈ ನೀರ್ಗುಂದವು ತಮಿಳುನಾಡಿನಿಂದ ಬಂದ ಪಂಚಾಳ ಕೆಲಸಗಾರರ ಕೇಂದ್ರವಾಗಿತ್ತು ಎಂದು ತಿಳಿಯಬಹುದಾಗಿದೆ. ಆಗ ಈ ಪಟ್ಟಾಚಾರಿಯು ತಮಿಳುನಾಡಿನಿಂದ ಬಂದು ನೆಲಸಿದ ಕೆಲಸಗಾರರ ಕುಟುಂಬಕ್ಕೆ ಸೇರಿದವನು ಎಂದು ಹೇಳಬೇಕಾಗುತ್ತದೆ. ಕುಪ್ಪಸ್ವಾಮಿಯವರು ಈ ನೀರ್ಗುಂದ ಜೊತೆಗೆ ಸಿರಸಂಗಿ ಮತ್ತು ವೇಣುಗ್ರಾಮಗಳನ್ನು ವಿಶೇಷವಾಗಿ ನಮೂದಿಸಬೇಕು ಎಂದು ಹೇಳುತ್ತಾರೆ.[೮೪] ನೀರ್ಗುಂದವು ಬಳ್ಳಾರಿ ಜಿಲ್ಲೆಯಲ್ಲಿದೆ.

ಕೆರೆಯೂರು (ಹಿರೇಕೆರೂರು)

ಧಾರವಾಡ ಜಿಲ್ಲೆಯಲ್ಲಿ ಇಂದು ತಾಲ್ಲೂಕು ಕೇಂದ್ರವಾಗಿರುವ ಹಿರೇಕೆರೂರು ಕ್ರಿ.ಶ. ೧೦೭೯ರಲ್ಲಿ ಸಾತೋಜನೆಂಬ[೮೫] ಶಿಲಾಕರ್ಮಿಯ ಊರು. ಇಲ್ಲಿಂದ ಸುಮಾರು ಮೂವತ್ತು ಕಿ.ಮೀ. ದೂರದ ಬಾಳಂಬೀಡು ಎಂಬ ಗ್ರಾಮಕ್ಕೆ ಹೋಗಿ ಅಲ್ಲಿ ಒಂದು ಶಿಲಾ ಶಾಸನವನ್ನು ಮಾಡುತ್ತಾನೆ. ಇದಕ್ಕೆ ಹಿರೇಕೆರೆಯೂರಿನವನೆಂದು ಹೇಳಿಕೊಳ್ಳುವ ಮತ್ತೊಬ್ಬ ಶಿಲ್ಪಿ ಶಾವೋಜನೆಂಬುವನು[೮೬] ಕ್ರಿ.ಶ. ೧೧೨೨ರಲ್ಲಿ ಇಲ್ಲಿಂದ ಸ್ವಲ್ಪ ದೂರದಲ್ಲಿರುವ ಚಿಮುಲುಗುಂದ ಗ್ರಾಮದಲ್ಲಿ ಒಂದು ಶಿಲಾಶಾಸನವನ್ನು ಹಾಕಿ ಕೊಡುತ್ತಾನೆ. ಅಂದರೆ ಈ ಹಿರೇಕೆರೆಯೂರು ನಮಗೆ ಇಬ್ಬರು ಶಾಸನ ಶಿಲ್ಪಿಗಳನ್ನು ಕೊಟ್ಟಿದೆ. ಕ್ರಿ.ಶ. ೧೦೭೯ರಿಂದ ೧೧೨೨ರವರೆಗೆ ಅಂದರೆ ನಲವತ್ಮೂರು ವರ್ಷಗಳು ಇಲ್ಲಿ ಶಿಲ್ಪಿಕಾಕರ್ಮ ಮಾಡುವ ಕೆಲಸಗಾರರಿಂದ ಕೂಡಿತ್ತು ಎಂದು ಹೇಳಬಹುದು ಮತ್ತು ಈ ಇಬ್ಬರು ಶಿಲ್ಪಿಗಳು ಒಂದೇ ಊರಿನ ಒಂದೇ ಮನೆತನದ ಸದಸ್ಯರಾಗಿರಬಹುದು.

ಅರಸಿಕೆರೆ (ಹಾಸನ ಜಿಲ್ಲೆ)

ಅರಸಿಕೆರೆಯಲ್ಲಿ ಕ್ರಿ.ಶ. ೧೧೦೦ರಿಂದ ೧೧೯೫ರವರೆಗೆ ಶೈವಸ್ಥಾನ ಎಂಬ ಮಠ ಇತ್ತು. ಇದು ಕಾಳಾಮುಖ ಯತಿಗಳ ಕೇಂದ್ರವಾಗಿತ್ತು. ಇದಕ್ಕೆ ರಾಜಪೂರು ಮೊದಲಾದ ದತ್ತಿಗ್ರಾಮಗಳು ಸೇರಿದ್ದವು. ಇಲ್ಲಿ ಚಂದ್ರಭೂಷಣನೆಂಬ ಯತಿ ಇದ್ದನು. ಇವನನ್ನು 'ಕಾಳಾಮುಖ ಸ್ಥಾಪಕ್ಯೋತನು' ಎಂದು ಹೇಳಲಾಗಿದೆ. ಗಮನಾರ್ಹವಾದ ವಿಷಯವೇನೆಂದರೆ ಇವನನ್ನು 'ಪ್ರತಿಮಾಲಕ್ಷಣಯುಕ್ತನು, ವಿವಿಧ ಪ್ರಾಸಾದ ಸಲ್ಲಕ್ಷಣಾನ್ವಿತನು'[೮೭] ಎಂದು ಪ್ರಶಂಸಿಸಲಾಗಿದೆ. ಆದ್ದರಿಂದ ಅರಸಿಕೆರೆಯಲ್ಲಿದ್ದ ಕಾಳಾಮುಖಯತಿ ಪೀಠವಾದ ಶೈವಸ್ಥಾನ ಎಂಬ ಮಠದ ಆಚಾರ್ಯರು ಮೂರ್ತಿಶಿಲ್ಪ ಕೆಲಸವನ್ನೂ, ವಾಸ್ತುಶಾಸ್ತ್ರ ವಿದ್ಯೆಯನ್ನೂ ಬಲ್ಲವರಾಗಿದ್ದರು ಎಂದು ಹೇಳಲಡ್ಡಿಯಿಲ್ಲ.

ಸುಮಾರು ೧೧೦೦ರಿಂದ ೧೧೯೫ರ ತೊಂಬತ್ತೈದು ವರ್ಷ ಅವಧಿಯಲ್ಲಿ ಈ ಅರಸಿಕೆರೆಯ ಆಸುಪಾಸಿನಲ್ಲಿರುವ ಜಾವಗಲ್ಲು, ಹಾರನಹಳ್ಳಿ ಹೋಬಳಿಗಳಲ್ಲಿರುವ ಬೇರೆ ಬೇರೆ ಗ್ರಾಮಗಳಲ್ಲಿ, ಧರ್ಮರಾಶಿ, ಅನಂತಶಕ್ತಿ ಪಂಡಿತ, ಬ್ರಮ್ಹರಾಶಿ ಪಂಡಿತ, ಶಿವಶಕ್ತಿ ಪಂಡಿತ (ಮಹಾದೇವ ಜೀಯ) ಮತ್ತು ಇವರ ಮಗ ಕಲ್ಯಾಣಶಕ್ತಿ, ರುದ್ರಶಕ್ತಿ, ದೇವರಾಶಿ ಪಂಡಿತ ಎಂಬ ವ್ಯಕ್ತಿಗಳು ದೇವಾಲಯ ನಿರ್ಮಾಣಾದಿ ಶಿಲ್ಪಕಾರ್ಯವನ್ನು ಕೈಮುಟ್ಟಿ ಸ್ವತಃ ಮಾಡಿದರು ಎಂಬ ಸೂಚನೆಯು ಸಿಗುತ್ತದೆ.[೮೮]

ಅರಸಿಕೆರೆಯ ಆಸುಪಾಸಿನಲ್ಲಿ ಬರುವ ಗ್ರಾಮಗಳಲ್ಲಿ ಸುಮಾರು ಎರಡು ತಲೆಮಾರಿನ ಅವಧಿಯಲ್ಲಿ ಬರುವ ಈ ವ್ಯಕ್ತಿಗಳನ್ನು ಅರಸಿಕೆರೆಯಲ್ಲಿದ್ದ ಕಾಳಾಮುಖ ಯತಿಗಳ ಕೇಂದ್ರವಾಗಿದ್ದ ಶೈವಸ್ಥಾನ ಎಂಬ ಮಠಕ್ಕೆ ಸೇರಿದವರು ಎಂದು ಭಾವಿಸಬಹುದಾಗಿದೆ. ಹೀಗಾಗಿ ಈ ಕೇಂದ್ರವು ಶಿಲ್ಪಿಕಾಕರ್ಮದಲ್ಲಿ ಬಹುಮುಖ್ಯವಾದ ಪಾತ್ರವನ್ನು ವಹಿಸಿದೆ.

ಬಳ್ಳಿಗಾವೆ (ಶಿವಮೊಗ್ಗ ಜಿಲ್ಲೆ)

ಕರ್ನಾಟಕದ ಕದಂಬರ ಅರಸು ಮನೆತನದ ರಾಜಕೀಯ ಕೇಂದ್ರವೂ, ರಾಜಧಾನಿಯೂ, ಕಾಳಾಮುಖ ಯತಿಗಳ ಧಾರ್ಮಿಕ ಹಾಗೂ ಶೈಕ್ಷಣಿಕ ಕೇಂದ್ರವೂ ಆಗಿದ್ದ ಬಳ್ಳಿಗಾವೆಯು, ಕನ್ನಡದ ಮಹಾಕವಿ ಪಂಪನಿಗೆ ಸ್ಫೂರ್ತಿಯಾಗಿತ್ತು. ಅಲ್ಲಮಪ್ರಭುವಿನಂತಹ ಮೇಧಾವಿಯನ್ನಿತ್ತ ಬಳ್ಳಿಗಾವೆಯು ಶಿಲ್ಪಕಲಾಕುಶಲಿಯಾದ ಕನ್ನಡದ ಹೆಮ್ಮೆಯ ಅಪರೂಪದ ಶಿಲ್ಪಾಚಾರ್ಯವರ್ಯ ದಾಸೋಜನನ್ನೂ ಕೊಟ್ಟಿದೆ.[೮೯] ಇಂಥ ಮಹಾಪುರುಷನಿಗೆ ಜನ್ಮವಿತ್ತ ಕಂಡರಣೆಕಾರ ರಾಮೋಜನು ತನ್ನನ್ನು ಬಳ್ಳಿಗಾವೆಯವನು ಎಂದು ಹೇಳಿಕೊಂಡಿದ್ದಾನೆ. ಇವನ ಕಾಲ ಕ್ರಿ.ಶ. ೧೧೬೩. ಇವನು ಸೊರಬ ತಾಲ್ಲೂಕು ಕಲ್ಲೂರಿನಲ್ಲಿ ಒಂದು ವೀರಗಲ್ಲನ್ನು ಮಾಡುತ್ತಾನೆ. ಈ ಬಳ್ಳಿಗಾವೆಯಿಂದ ಬಹು ದೂರ ಪ್ರಯಾಣ ಮಾಡಿ ಬೇಲೂರಿಗೆ ಬಂದ ದಾಸೋಜನು ಕ್ರಿ.ಶ. ೧೧೧೭ರಲ್ಲಿ ಕೆಲಸ ಮಾಡುತ್ತಾನೆ. ಹಳೇಬೀಡಿನಲ್ಲೂ ಮಾಡಿರುವಂತಿದೆ. ಕಿಕ್ಕೇರಿಯಲ್ಲಿ ದುಡಿಯುತ್ತಾನೆ. ಶ್ರವಣಬೆಳಗೊಳದಲ್ಲೂ ಶ್ರಮವಹಿಸುತ್ತಾನೆ. ಇವನ ಹೆಮ್ಮೆಯ ಪುತ್ರ ಚಾವಣನೂ ಹೆಮ್ಮೆಯಿಂದ ಬಳ್ಳಿಗಾವೆಯನ್ನು ನೆನೆಯುತ್ತಾನೆ. ಇವನ ಅಣ್ಣ ಮಸಣನೂ ಎರಡು ಶಾಸನಗಳನ್ನು ಕಂಡರಿಸಿದ್ದಾನೆ. ಹೀಗಾಗಿ ಶ್ರೇಷ್ಠವಾದ ಶಿಲ್ಪಿಗಳ ಈ ಮನೆತನವೂ ಮೂಲತಃ ಬನವಾಸಿಯ ಬಳ್ಳಿಗಾವೆಯದು. ದಾಸೋಜ ಮತ್ತು ಮಕ್ಕಳು ಹೀಗೆ ತೌರೂರಿನಿಂದ ದೂರದೂರುಗಳಲ್ಲಿ ದುಡಿಯುತ್ತಿರುವಾಗ ಇವನ ತಂದೆ ರಾಮೋಜನು ಬಳ್ಳಿಗಾವೆಯ ಆಸುಪಾಸಿನಲ್ಲೇ (ಸೊರಬ ತಾಲ್ಲೂಕು) ಕೆಲಸ ಮಾಡಿಕೊಂಡಿದ್ದನು.

ಕ್ರಿ.ಶ. ೧೩೨೦ರ ಚೆಲೋಜ ೯೦ ಎಂಬ ಕಂಡರಣೆಕಾರನು ನಗರ ತಾಲ್ಲೂಕಿನ ಒಂದು ಶಾಸನವನ್ನು ಮಾಡಿದ್ದು ಅದರಲ್ಲಿ ತಾನು ಬನವಾಸಿಯವನು ಎಂದೆಂದಿದ್ದಾನೆ. ಹೀಗಾಗಿ ಸುಮಾರು ೧೧೧೭ರಿಂದ ೧೩೨೦ರವರೆಗೆ ಎರಡುನೂರು ವರ್ಷಗಳವರೆಗೆ ಇದು ಶಿಲ್ಪಿಗಳ ಮನೆತನವನ್ನು ಹೊಂದಿತ್ತು ಎಂದು ಹೇಳಬಹುದು.

ಹೊಂಬುಜ[೯೧] (ಶಿವಮೊಗ್ಗ ಜಿಲ್ಲೆ)

ಜೈನಧರ್ಮದ ಕೇಂದ್ರವಾದ ಹೊಂಬುಜವು ಕ್ರಿ.ಶ ೧೧೬೪ರಿಂದ ೧೨೮೨ರವರೆಗೆ ಆದಿತ್ಯಾಚಾರಿಯ ಮಗ ಪಾಂಡ್ಯಾಚಾರಿ ಮತ್ತು ಸಾಯೋಜನನ ಮಗ ಸಾಂತೋಜ ಎಂಬುವರು ಕ್ರಮವಾಗಿ ಸಾಗರ, ತೀರ್ಥಹಳ್ಳಿ, ನಗರ ಮತ್ತು ಸೊರಬ ತಾಲ್ಲೂಕುಗಳಲ್ಲಿ ಶಾಸನಗಳನ್ನು ಮಾಡುತ್ತಾರೆ. ಅಂದರೆ ಸುಮಾರು ಒಂದು ಶತಕದವರೆಗೆ ಈ ಗ್ರಾಮವು ಕಂಡರಣೆ ಮಾಡುವ ಕುಶಲಕರ್ಮಿಗಳ ಕೇಂದ್ರವಾಗಿತ್ತು. ರೂವಾರಿ ಪಾಂಡ್ಯಾಚಾರಿಯಂತೂ ತಾನು ಹೊಂಬುಜದಲ್ಲೇ ಹುಟ್ಟಿದವನು ಎಂದು ಹೇಳಿಕೊಳ್ಳುತ್ತಾನೆ. ಇವರಿಬ್ಬರು ಬಹುಶಃ ಹೊಂಬುಜದಲ್ಲಿದ್ದ ಒಂದೇ ಕುಟುಂಬಕ್ಕೆ ಸೇರಿದವರಾಗಿದ್ದಿರಬೇಕು. ಸುಂದರವಾದ ಶಿಲ್ಪಕೃತಿಗಳನ್ನು ಹೊಂದಿರುವ ಶಾಸನಗಳಿಂದ ಕೂಡಿರುವ, ಜೈನಧಾರ್ಮಿಕ ಕೇಂದ್ರವಾದ ಈ ಗ್ರಾಮದಲ್ಲಿ ಅಂದು ಶಿಲ್ಪಿಗಳ ಮನೆತನವು ವಾಸವಾಗಿತ್ತು ಎಂದು ಸಹಜವಾಗೇ ಹೇಳಬಹುದಾಗಿದೆ. ಸುಮಾರು ಒಂದು ಶತಕದವರೆಗೆ ಈ ಶಿಲ್ಪಿಗಳ ಕೇಂದ್ರವು ಶಿಲ್ಪದಲ್ಲಿ ತರಬೇತಿ ಹೊಂದಿದ ಶಿಲ್ಪಿಗಳನ್ನು ಕರ್ನಾಟಕಕ್ಕೆ ಕೊಟ್ಟಿದೆ.

ಲಕ್ಕುಂಡಿ (ಗದಗ ತಾಲ್ಲೂಕು)

ಲಕ್ಕುಂಡಿಯು ಹಿಂದೆ ಲೊಕ್ಕಿಗುಂಡಿ ಎಂಬ ಹೆಸರಿನಿಂದ ಪ್ರಸಿದ್ಧವಾದ ಐತಿಹಾಸಿಕ ಕೇಂದ್ರವಾಗಿತ್ತು.* ಈ ನಗರವು ಓಜರುಗಳ ಕೇಂದ್ರವೂ ಆಗಿತ್ತು. ನಾಣ್ಯವನ್ನು ಮುದ್ರಿಸುವ ಇಲ್ಲಿತ್ತು. ಈ ಟಂಕಸಾಲೆಯೂ ಕಮ್ಮಟದಲ್ಲಿ ಅನೇಕ ಓಜರುಗಳು ದುಡಿಯುತ್ತಿದ್ದರು. ವಿಶ್ವಕರ್ಮ ಓಜರುಗಳು ವಾಸ್ತು, ಪ್ರಾಸಾದ, ಮೊದಲಾದ ಶಿಲ್ಪಕರ್ಮದಲ್ಲಿಯೂ ನಿಷ್ಣಾತರಾದ; ಕೇಯೂರ, ಹಾರ ಮೊದಲಾದ ಆಭರಣ ತಯಾರಿಕೆಯಲ್ಲಿಯೂ ನಿಷ್ಣಾತರಾದ ಕೆಲಸಗಾರರು ಇಲ್ಲಿ ಬಹು ಸಂಖ್ಯೆಯಲ್ಲಿ ವಾಸವಾಗಿದ್ದರು. ಹಾಗೆಯೇ ಬಡಗಿಗಳು, ಕಮ್ಮಾರರು ಕೂಡ ಇಲ್ಲಿದ್ದರು. ಇವರೆಲ್ಲರಿಗೂ ಸಾಮಾನ್ಯವಾದ ಒಂದು ವೃತ್ತಿಸಂಘವಿದ್ದಿತು. ಶಿವಭಕ್ತರಾದ ಇವರು ಈ ಊರಿನಲ್ಲಿ ತಮ್ಮ ಧರ್ಮವನ್ನು ಪರಿಪಾಲಿಸಿಕೊಂಡು ಹೋಗುತ್ತಿದ್ದರು. ಇವರು ಯಂತ್ರ ತಯಾರಿಕೆಯಲ್ಲಿ ಪ್ರಸಿದ್ಧರಾಗಿದ್ದರು. (ಯಾವ ಯಂತ್ರಗಳು, ಅವುಗಳ ರಚನೆ ಇತ್ಯಾದಿ ವಿವರ ಉಲ್ಲೇಖಗೊಂಡಿಲ್ಲ) ಪತ್ರಚಿತ್ರ ವಿಚಿತ್ರ ಕುಶಲಿಗಳಾಗಿದ್ದರು. ಈ ಊರಿನಲ್ಲಿದ್ದ ಓಜ ಸಮಾಜದಲ್ಲಿ ಹಿರಿಯರಾದ ಕೇತೋಜ, ರುದ್ರೋಜ ಮತ್ತು ರಾಮೋಜರು ಕಮ್ಮಟದ ಅಧಿಕಾರಿಗಳಾಗಿದ್ದನು. ಇವರಲ್ಲಿ ಗಣಪೋಜ

* ಇದು ೧೨ನೇ ಶತಮಾನದಲ್ಲಿ 'ಶ್ರೀಮತ್ ಮಹಾ ಅಗ್ರಹಾರ'ವಾಗಿತ್ತು. ಕ.ಪಿ.ಶಾ.ಸಂ. (ಮಹಾರಾಷ್ಟ್ರ) VI, ನಂ. ೩೯೮.

ಎನ್ನುವವನು ರೂವಾರಿಯಾಗಿದ್ದರು. ಕ್ರಿ.ಶ. ೧೧೮೫ರಲ್ಲಿ ಹೀಗೆ ಲಕ್ಕುಂಡಿಯಲ್ಲಿ ಈ ಎಲ್ಲ ಕುಶಲ ಕಾರ್ಮಿಕರ ಓಜರ ಸಂಘವು ತುಂಬ ಪ್ರಕಾಶಮಾನವಾಗಿತ್ತು.[೨]

ಇಂಥ ಲಕ್ಕುಂಡಿಯಿಂದ ಬಂದ ಬಸವೋಜ ಎಂಬ ಕಂಡರಣಿಕಾರನು ಕ್ರಿ.ಶ. ೧೧೫೬ ರಲ್ಲಿ ರೋಣ ತಾಲ್ಲೂಕು ಮಲ್ಲಾಪುರದಲ್ಲಿ ಒಂದು ಶಿಲಾಶಾಸನವನ್ನು ಮಾಡುತ್ತಾನೆ.[೩] ಮತ್ತು ಲಕ್ಕುಂಡಿಯಿಂದ ಹೊರಟುಬಂದ ಬಲರದೇವ ಎಂಬ ಮೂರ್ತಿ ಶಿಲ್ಪಿಯು ಕ್ರಿ.ಶ. ೧೨೦೦ರಲ್ಲಿ ಬೇಲೂರಿಗೆ ಬಂದು ಚನ್ನಕೇಶವ ದೇವಸ್ಥಾನದಲ್ಲಿ ಕೆಲಸ ಮಾಡುತ್ತಾನೆ. ಇವನು ತನ್ನನ್ನು ವಿಶ್ವಕರ್ಮನೆಂದೂ, ತಾನು ಲೊಕ್ಕಿಗುಂಡಿಯವನೆಂದೂ ಹೇಳಿಕೊಂಡಿದ್ದಾನೆ.[೪]

ಮಣಿಗವಳ್ಳಿ[೫] (ಬಾಗೇವಾಡಿ ತಾಲ್ಲೂಕು)

ಇದು ಕ್ರಿ.ಶ. ೧೧೮೯ರಿಂದ ೧೨೬೫ರವರೆಗೆ ಶಿಲಾಶಾಸನಗಳನ್ನು ಮಾಡುವ ಕಂಡರಣಿಕಾರರ ಕೇಂದ್ರವಾಗಿತ್ತು. ಬಾಗೇವಾಡಿ ತಾಲ್ಲೂಕು ಇಂಗಳೇಶ್ವರದ ಕ್ರಿ.ಶ. ೧೧೮೯ ಮತ್ತು ೧೨೬೫ರ ಎರಡು ಶಾಸನಗಳನ್ನು ಕ್ರಮವಾಗಿ ಮಜ್ಜೋಜ, ಕರಲೋಜ, ರಾಮೋಜ ಎಂಬ ಮೂವರೂ, ಕಲ್ಲೋಜ, ವಾಮೋಜ, ಮಧುಕೋಜ ಎಂಬ ಮೂವರೂ ಮಾಡಿರುತ್ತಾರೆ. ಈ ಎರಡೂ ಗುಂಪಿನವರು ತಾವು ಮಣಿಗವಳ್ಳಿ ಗ್ರಾಮದವರು ಎಂದು ಹೇಳಿಕೊಂಡಿದ್ದಾರೆ. ಈ ಎರಡು ಶಾಸನಗಳಿಗೆ ಎಪ್ಪತ್ತೈದು ವರ್ಷಗಳ ಅಂತರವಿದೆ. ಹೀಗೆ ಎಪ್ಪತ್ತೈದು ವರ್ಷಗಳ ಅಂತರವಿದ್ದರೂ ತಮ್ಮನ್ನು ಮಣಿಗವಳ್ಳಿಗೆ ಸೇರಿದವರು ಎಂದು ಹೇಳಿಕೊಂಡಿರುವುದರಿಂದ, ಹಾಗೂ ಈ ಅವಧಿಯಲ್ಲಿ ಒಂದು ವಂಶವು ಸತತವಾಗಿ ಚಟುವಟಿಕೆಯಿಂದಿರಲು ಸಾಧ್ಯವಿರುವುದರಿಂದ ಮತ್ತು ಎರಡೂ ಗುಂಪಿನವರಲ್ಲಿ ಬರುವ ಕಲೋಜನು ಬಹುಶಃ ಒಬ್ಬನೇ ವ್ಯಕ್ತಿಯಾಗಿರಬಹುದಾದ್ದರಿಂದ ಈ ಎರಡು ಗುಂಪಿನ ಆರು ಮಂದಿ ಕೆಲಸಗಾರರು ಆ ಊರಿನಲ್ಲಿ ಒಂದೇ ಅವಿಭಕ್ತ ಕುಟುಂಬದ ಸದಸ್ಯರಾಗಿದ್ದಿರಬಹುದು.

ಕಲಿಸೆ[೬] (ಸಾಗರ ಹತ್ತಿರ)

ಈ ಊರಿನ ಮಧುಕೋಜ ಎಂಬ ಕಂಡರಣಿಕಾರನು ನರಸಿಂಹರಾಜಪುರ ಮತ್ತು ಸಾಗರ ತಾಲ್ಲೂಕಿನ ಬೇರೆ ಬೇರೆ ಗ್ರಾಮಗಳಲ್ಲಿ ನಾಲ್ಕು ವೀರಗಲ್ಲುಗಳನ್ನು ಮಾಡುತ್ತಾನೆ. ಇದೇ ಊರಿನ ಮತ್ತೊಬ. ಶಾಸನ ಶಿಲ್ಪಿ ವೀರೋಜನು ಸಾಗರ ತಾಲ್ಲೂಕಿನಲ್ಲಿ ಮತ್ತೊಂದು ವೀರಗಲ್ಲನ್ನು ಮಾಡುತ್ತಾನೆ. ಕಲಿಸೆಯ ಇನ್ನೊಬ್ಬ ಕೆಲಸಗಾರ ಸೋಮೋಜ. ಇವನು ಕೂಡ ಸಾಗರ ತಾಲ್ಲೂಕು ಹೆರಕೆರೆ ಎಂಬ ಒಂದು ಗ್ರಾಮದಲ್ಲಿ ಒಂದು ಮಾಸ್ತಿಗಲ್ಲನ್ನೂ ಎರಡು ವೀರಗಲ್ಲುಗಳನ್ನೂ ಮಾಡುತ್ತಾನೆ. ಇವರೆಲ್ಲರೂ ತಮ್ಮನ್ನು ಕಲಿಸೆಯವರು ಎಂದು ಹೇಳಿಕೊಂಡಿದ್ದಾರೆ. ಹೆಚ್ಚೆಂದರೆ ಇಪ್ಪತ್ತೊಂದು ಕಂತಿಗಳ ಮಾಸ್ತಿ ಅಥವಾ ವೀರಗಲ್ಲುಗಳು. ಆದ್ದರಿಂದ ಈ ಗ್ರಾಮದ ಬಗ್ಗೆ ಹೇಳಿಕೊಳ್ಳುವಂತಹ ಕೆಲಸಗಾರರ ಕೇಂದ್ರವಾಗಿತ್ತು ಎಂದು ಹೇಳಲು ಮನಸ್ಸು ಬರುವುದಿಲ್ಲ.

ಆದರೆ ಅದೇ ಸಾಗರ ತಾಲ್ಲೂಕಿನಲ್ಲಿ ಇವರಂತೆಯೇ ಒಂದು ಮಾಸ್ತಿಗಲ್ಲನ್ನು ಮಾಡುವ ದುಗ್ಗೆಯ ಎಂಬ ಕುಶಲ ಕಾರ್ಮಿಕನು ತನ್ನನ್ನು 'ರೂವಾರಿ ಸೋಮೋಜನ ಪುತ್ರ' ಎಂದು ಹೇಳಿಕೊಂಡಿದ್ದಾನೆ. 'ಕಲಿಸೆಯವನು ಎಂದು ಹೇಳಿಕೊಂಡಿಲ್ಲವಾದರೂ ಕೆಲಸದ ಗಾತ್ರ ಹಾಗೂ ಕಾರ್ಯಕ್ಷೇತ್ರವನ್ನು ನೋಡಿದರೆ ಇವನು ಕಲಿಸೆಯ ಸೋಮೋಜನ ಮಗನೇ ಆಗಿರಬೇಕೆಂದು ಹೇಳಬಹುದು. ಈ ಮಾತನ್ನು ಒಪ್ಪುವುದಾದರೆ ಕಲಿಸೆಯ ಬಗ್ಗೆ ಅಭಿಪ್ರಾಯ ಬೇರಾಗುತ್ತದೆ. ಅದೂ ಕೂಡ ಒಂದು ಉತ್ತಮ ದರ್ಜೆಯ ಶಿಲ್ಪಿಕರ ಕೇಂದ್ರವಾಗಿತ್ತು ಎಂದು ಹೇಳಬಹುದು. ಏಕೆಂದರೆ ಈ ದುಗ್ಗಯನು ತನ್ನನ್ನು ಸುಮತಿ ಪಂಡಿತರ ಶಿಷ್ಯನೆಂದೂ, 'ಸರಸ್ವತೀಗಣಪುತ್ರ'ನೆಂದೂ ಹೇಳಿಕೊಂಡಿದ್ದಾನೆ. ಬಹುಶಃ ಕಲಿಸೆಯಲ್ಲಿ ಸುಮತಿಪಂಡಿತರು ಶಿಲ್ಪ ವಿದ್ಯೆಯನ್ನು ಹೇಳಿಕೊಡುತ್ತಿದ್ದರೆಂದು ಕಾಣುತ್ತದೆ. ಈ ಊರಿನಲ್ಲಿ ಓಜರುಗಳ ಸಂಘವು ಅಸ್ತಿತ್ವದಲ್ಲಿತ್ತು ಎಂದು ಯೋಚಿಸಲು ಎಡೆಯುಂಟು. ರಾಮೋಜನ ಮಗ ಮಧುಕೋಜ, ವೀರೋಜ ಹಾಗೂ ಸೋಮೋಜ ಮತ್ತು ಸೋಮೋಜನ ಮಗ ದುಗ್ಗಯ್ಯ ಇವರೆಲ್ಲರೂ ಸುಮಾರು ೧೨೨೧ರಿಂದ ೧೩೦೦ವರೆಗೆ ಕಲಿಸೆಯಲ್ಲಿ ವಾಸವಿದ್ದರು ಎಂದು ತಿಳಿಯಬಹುದು. ಸುಮಾರು ೮೦ ವರ್ಷಗಳವರೆಗೆ ಈ ಗ್ರಾಮವು ಶಿಲಾಕರ್ಮದಲ್ಲಿ ಉತ್ತಮ ಕೆಲಸಗಾರರಿಂದ ಕೂಡಿ, ಚಟುವಟಿಕೆಯಿಂದಿದ್ದಿತು. ಈ ಊರಿನ ಕೆಲಸಗಾರರು ನಗರ ತಾಲ್ಲೂಕಿನ ಬೇರೆ ಬೇರೆ ಗ್ರಾಮಗಳಲ್ಲಿ ಶಾಸನಗಳನ್ನು ಮಾಡಿದರು. ಬಹುಶಃ ಇವರೆಲ್ಲರೂ ಆಗ ಕಲಿಸೆಯಲ್ಲಿದ್ದ ಒಂದು ಪ್ರಸಿದ್ಧವಾದ ಕುಶಲಕರ್ಮಿಗಳ ಅವಿಭಕ್ತ ಕುಟುಂಬಕ್ಕೆ ಸೇರಿದ ಸದಸ್ಯರಾಗಿದ್ದಿರಬೇಕು ಅಥವಾ ರಕ್ತಸಂಬಂಧಿಗಳಾಗಿದ್ದಿರಬಹುದು. ಕಲಿಸೆಯು ಬಹುಶಃ ಶಿವಮೊಗ್ಗ ಜಿಲ್ಲೆಯಲ್ಲಿರುವ ಗ್ರಾಮ.

ಅಬ್ಬಲೂರು (ಹಿರೇಕೆರೂರು ತಾಲ್ಲೂಕು)

ಈ ಊರಿನ ಕ್ರಿ.ಶ. ೧೨೮೨ರ ಶಾಸನದ ಬೀರೋಜ ಎಂಬುವನು ಸಾಗರ ತಾಲ್ಲೂಕಿನಲ್ಲಿ ಒಂದು ವೀರಗಲ್ಲನ್ನೂ, ಕ್ರಿ.ಶ. ೧೩೦೩ರ ಸಂಕೋಜ ಎನ್ನುವವನು ಅದೇ ಸಾಗರದಲ್ಲಿ ಮತ್ತೊಂದು ಮಾಡುತ್ತಾರೆ. ಸಂಕೋಜನು 'ರಾಯ ಬಿಂನಾಣ' ಎಂದು ಹೇಳಿಕೊಂಡಿದ್ದಾನೆ. ಬೀರೋಜನ ತಂದೆ ಮಾಬೋಜ ಇವರಿಬ್ಬರೂ ಒಂದೇ ಊರಿನವರಾಗಿದ್ದು ಒಂದೇ

ಪ್ರದೇಶದಲ್ಲಿ ಎರಡು ದಶಕಗಳ ಅಂತರದಲ್ಲಿ ಕೆಲಸ ಮಾಡಿದ್ದಾರೆ. ಬಹುಶಃ ಅಬ್ಬಲೂರಿನ ಒಂದೇ ಶಿಲ್ಪಿ ಮನೆತನದ ರಕ್ತಸಂಬಂಧಿಗಳಾಗಿರುವ ಸಾಧ್ಯತೆಯುಂಟು.

ಕ್ರಿ.ಶ. ೧೬೫೦ರಲ್ಲಿ ಅಂತರವಳ್ಳಿ ನಿವಾಸಿಯಾದ ಶಾಂತನಿರಂಜನ ಗುರು ಎಂಬ ಶಿಲ್ಪಿಯು 'ಅಬ್ಬಲೂರು ಚರಿತೆ ಎಂಬ ಸಾಂಗತ್ಯದ ಕಾವ್ಯವನ್ನು ರಚಿಸುತ್ತಾನೆ. ಇದರಲ್ಲಿ ವೀರಶೈವರಿಗೂ ಜೈನರಿಗೂ ಒಂದು ಬಸದಿ ಸಂಬಂಧವಾಗಿ ನಡೆದ ಭಿನ್ನಾಭಿಪ್ರಾಯವನ್ನು ಅಂತರವಳ್ಳಿ ರಾಜಗುರು ಪರಂಪರೆಗೆ ಸೇರಿದ ಆಗಿನ ಪಂಚಾಳ ಗುರುವರ್ಯ ಮೂರು ಜಾವದಯ್ಯನು ಪವಾಡ ಮಾಡಿ ಬಗೆಹರಿಸುವ ವಿಷಯವು ಈ ಕಾವ್ಯದ ಕಥಾವಸ್ತುವಾಗಿದೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಎ.ಕ. IV, ಚಾಮರಾಜನಗರ, ೧೨೬, ಕ್ರಿ.ಶ. ೮೦೧.
೨. ಬೊ.ಕ.ಇ. I, ಪುಟ ೭, ನಂ. ೧೧, ಕ್ರಿ.ಶ. ೮೬೫.
ಎ.ಕ. XV, ಅರಸಿಕೆರೆ ೮೭, ಕ್ರಿ.ಶ. ೧೦೭೦.
೩. ಎ.ಕ. X, ಶಿಡ್ಲಘಟ್ಟ ೩೨, ಕ್ರಿ.ಶ. ೮೭೦.
೪. ಎ.ಕ. X, ಬೌರಿಂಗ್‌ಪೇಟೆ ೧೩, ಕ್ರಿ.ಶ. ೭೫೦/೮೯೦.
೫. ಎ.ಕ. X, ಮುಳಬಾಗಿಲು, ೧೦೮, ೧೬೧–೧೬೩, ಕ್ರಿ.ಶ. ೯೫೦.
೬ ಎ.ಕ. X, ಚಿಂತಾಮಣಿ ೫೦, ಕ್ರಿ.ಶ. ೯೫೦.
೭. ಎ.ಕ. IV, ಚಾಮರಾಜನಗರ ೧೧೪, ಕ್ರಿ.ಶ. ೧೦ನೇ ಶತಮಾನ.
೮. ಎ.ಕ. V, ಪುಟ ೨೪, ನಂ. ೩೬, ಕ್ರಿ.ಶ. ೧೦ನೇ ಶತಮಾನ.
೯. ಬೊ.ಕ.ಇ. I, ಪುಟ ೭೭, ನಂ. ೮೪, ಕ್ರಿ.ಶ. ೧೦೪೯.
೧೦. ಎ.ಕ. VII, ಶಿಕಾರಿಪುರ, ೪೬, ಕ್ರಿ.ಶ. ೧೦೬೮.
೧೧. ಸೌ.ಇ.ಇ. XI, ಪುಟ ೭೪, ನಂ. ೮೧, ಕ್ರಿ.ಶ. ೧೦೭೧/೧೦೭೨.
೧೨. ಕ.ಇ. V, ಪುಟ ೩೩, ನಂ. ೧೧, ಕ್ರಿ.ಶ. ೧೦೭೮.
೧೩. ಕ.ಇ. IV, ಪುಟ ೭೩, ನಂ. ೩೩, ಕ್ರಿ.ಶ. ೧೦೭೯.
೧೪. ಬೊ.ಕ.ಇ. ೧೧, ಪುಟ ೧೭೮, ನಂ. ೧೪೭, ಕ್ರಿ.ಶ. ೧೦೯೯.
೧೫. ಎ.ಕ. VI, ಕೃ.ರಾ. ಪೇಟೆ ೪೨, ಕ್ರಿ.ಶ. ೧೧೧೭.
೧೬. ಕ.ಇ. VI, ಪುಟ ೪೬, ನಂ. ೨೦, ಕ್ರಿ.ಶ. ೧೧೨೨.
೧೭. ಬೊ.ಕ.ಇ. II, ಪುಟ ೨೩೦, ನಂ. ೧೭೬, ಕ್ರಿ.ಶ. ೧೧೨೫.
೧೮. ಎ.ಕ. V, ಅರಸಿಕೆರೆ ೧೪೫, ಕ್ರಿ.ಶ. ೧೧೩೦.
೧೯. ಎ.ಕ. VI, ಚಿಕ್ಕಮಗಳೂರು, ೭೧, ಕ್ರಿ.ಶ. ೧೧೩೭.
೨೦. ಬೊ.ಕ.ಇ. I, ಪುಟ ೩೬, ನಂ. ೫೦, ಕ್ರಿ.ಶ. ೧೧೩೮.
೨೧. ಎ.ಕ. XII, ಗುಬ್ಬಿ ೧೩, ಕ್ರಿ.ಶ. ೧೧೪೦.
೨೨. ಎ.ಕ. XV, ಬೇಲೂರು ೧೩೬, ಕ್ರಿ.ಶ. ೧೧೨೧/೧೧೪೦.
೨೩. ಸೌ.ಇ.ಇ. XV, ಪುಟ ೧೪, ನಂ. ೧೬, ಕ್ರಿ.ಶ. ೧೧೨೭/ ೧೧೪೭.
೨೪. ಕ.ಇ. V, ಪುಟ ೯೭, ನಂ. ೨೬, ಕ್ರಿ.ಶ. ೧೧೪೭.
೨೫. ಸೌ.ಇ.ಇ. XV, ಪುಟ ೪೩, ನಂ. ೩೬, ಕ್ರಿ.ಶ. ೧೧೪೮.
೨೬ ಎ.ಕ. III, ನಂಜನಗೂಡು ೩೨೨, ಕ್ರಿ.ಶ. ೧೧೪೮ (ಪರಿಷ್ಕೃತ).
೨೭. ಸೌ.ಇ.ಇ. XV, ಪುಟ ೬೯, ನಂ. ೫೩, ಕ್ರಿ.ಶ. ೧೧೫೬.
ಎ.ಕ. V, ಬೇಲೂರು ೬೯, ಕ್ರಿ.ಶ. ೧೨೦೦.
೨೮. ಎ.ಕ. VI, ಕೃ.ರಾ. ಪೇಟೆ ೧೦೬, ಕ್ರಿ.ಶ. ೧೧೬೫ (ಪರಿಷ್ಕೃತ).
೨೯. ಎ.ಕ. IV, ಚಾ.ರಾ. ನಗರ ೧೨೨, ಕ್ರಿ.ಶ. ೧೧೬೯ (ಪರಿಷ್ಕೃತ).
೩೦. ಎ.ಕ. IV, ಚಾ.ರಾ. ನಗರ ೧೨೨, ಕ್ರಿ.ಶ. ೧೧೬೯ (ಪರಿಷ್ಕೃತ).
೩೧. ಕ.ಇ. V, ಪುಟ ೧೫೨, ನಂ. ೩೮, ಕ್ರಿ.ಶ. ೧೧೭೪.
೩೨. ಸೌ.ಇ.ಇ. XV, ಪುಟ ೧೬೩, ನಂ. ೧೨೯, ಕ್ರಿ.ಶ. ೧೧೭೬
೩೩. ಎ.ಕ. V, ಚ.ರಾ. ಪಟ್ಟಣ ೧೬೧, ಕ್ರಿ.ಶ. ೧೧೮೧.
೩೪. ಎ.ಕ. VI, ಚಿಕ್ಕಮಗಳೂರು ೧೦೧, ಕ್ರಿ.ಶ. ೧೨೦೦.
೩೫. ಸೌ.ಇ.ಇ. XX, ಪುಟ ೨೫೦, ಸಂ. ೨೦೨, ಕ್ರಿ.ಶ. ೧೨೪೪.
೩೬. ಎ.ಕ. XV, ಚ.ರಾ. ಪಟ್ಟಣ ೨೭೮, ಕ್ರಿ.ಶ. ೧೨೪೯.
೩೭. ಎ.ಕ. VI, ಕೃ.ರಾ. ಪೇಟೆ ೨೨, ಕ್ರಿ.ಶ. ೧೨ನೇ ಶತಮಾನ (ಪರಿಷ್ಕೃತ).
೩೮. ಎ.ಕ. V, ಚ.ರಾ. ಪಟ್ಟಣ ೨೬೧, ಕ್ರಿ.ಶ. ೧೨೭೩.
೩೯. ಎ.ಕ. VII, ಚನ್ನಗಿರಿ ೫೫, ಕ್ರಿ.ಶ. ೧೨೭೯.
೪೦. ಎ.ಕ. XII, ತಿಪಟೂರು ೩೯, ಕ್ರಿ.ಶ. ೧೨೯೧.
೪೧. ಎ.ಕ. VIII, ತೀರ್ಥಹಳ್ಳಿ ೧೭೭, ನಗರ ೪೪, ಸೊರಬ ೨೧೬
೪೨. ಎ.ಕ. IX, ಕನಕಪುರ ೨೬, ೪೬ ಮತ್ತು ೧೦೭
೪೩. ಎ.ಕ. I, ಸೋಮವಾರಪೇಟೆ ೫೨, ಕ್ರಿ.ಶ. (?) (ಪರಿಷ್ಕೃತ).
೪೪. ಎ.ಕ. IV, ಚಾಮರಾಜನಗರ ೩೫೦, ಕ್ರಿ.ಶ. ೧೩ನೇ ಶತಮಾನ.
೪೫. ಮೇವುಂಡಿ ಮಲ್ಲಾರಿ : ಕನ್ನಡನಾಡಿನ ಕೆಲವು ಶಾಸನ ಕವಿಗಳು, ಪುಟ ೨೮೪.
೪೬ ಎ.ಕ. XII, ಗುಬ್ಬಿ ೩೦, ಕ್ರಿ.ಶ. ೧೩೩೧.
೪೭. ಎ.ಕ. X, ಚಿಂತಾಮಣಿ ೬೮, ಕ್ರಿ.ಶ. ೧೩೭೮.
೪೮. ಎ.ಕ. VI, ಕೃಷ್ಣರಾಜಪೇಟೆ ೧೮, ಕ್ರಿ.ಶ. ೧೩೭೯ (ಪರಿಷ್ಕೃತ).
೪೯. ಎ.ಕ. X, ಶ್ರೀನಿವಾಸಪುರ ೧೨, ಕ್ರಿ.ಶ. ೧೩೮೬.
೫೦. ಎ.ಕ. VII, ಶಿವಮೊಗ್ಗ ೧೧, ಕ್ರಿ.ಶ. ೧೪೦೦.
೫೧. ಎ.ಕ. VIII, ಪುಟ ೪೫೦, ಸಂ. ೨೪, ಕ್ರಿ.ಶ. ೧೪–೧೫ (ಪರಿಷ್ಕೃತ).
೫೨. ಕ.ಇ. I, ಭಟ್ಕಳ ತಾಲ್ಲೂಕು, ಕೈಕಿಣಿ, ಕ್ರಿ.ಶ. (?)
೫೩. ಎ.ಕ. VII, ಶಿಕಾರಿಪುರ ೨೩೪, ಕ್ರಿ.ಶ. ೧೫೧೦.
೫೪. ಎ.ಕ. IX, ಮಾಗಡಿ ೧೧, ಕ್ರಿ.ಶ. ೧೫೨೦.
೫೫. ಎ.ಕ. VI, ಚಿಕ್ಕಮಗಳೂರು ೪೮, ಕ್ರಿ.ಶ. ೧೫೪೯.

೫೬. ಎ.ಕ. XI, ಚಿತ್ರದುರ್ಗ ೪೧, ಕ್ರಿ.ಶ. ೧೫೯೧.
೫೭. ಎ.ಕ. VI, ಕಡೂರು ೯೧, ಕ್ರಿ.ಶ. ೧೫೯೧.
೫೮. ಎ.ಕ. IX, ಕನಕಪುರ ೨೯, ಕ್ರಿ.ಶ. ೧೬೪೮.
೫೯. ಎ.ಕ. IX, ಕನಕಪುರ ೯೬, ಕ್ರಿ.ಶ. ೧೬೫೩.
೬೦. ಎ.ಕ. V, ಮೈಸೂರು ೮೫, ಕ್ರಿ.ಶ. ೧೭೫೩ (ಪರಿಷ್ಕೃತ).
೬೧. ಸೌ.ಇ.ಇ. XV, ಪುಟ ೪೪೭, ಸಂ. ೭೨೮, ಕ್ರಿ.ಶ. ೧೮ನೇ ಶತಮಾನ.
೬೨. ಎ.ಕ. VI, ಕೃಷ್ಣರಾಜಪೇಟೆ ೯೩, ಕ್ರಿ.ಶ. (?)
೬೩. ಎ.ಕ. X, ಟೀ. ನರಸೀಪುರ ೨೧೭, ಕ್ರಿ.ಶ. (?)
೬೪. ಎ.ಕ. XV, ಬೇಲೂರು ೩೦೬, ಕ್ರಿ.ಶ. (?)
೬೫. ಎ.ಕ. XI, ಹೊಳಲ್ಕೆರೆ ೧೧೧, ಕ್ರಿ.ಶ. (?)
೬೬. ಎ.ಕ. XI, ಚಳ್ಳಕೆರೆ ೧೭, ಕ್ರಿ.ಶ. (?)
೬೭. ಎ.ಕ. IV, ಪುಟ ೪೭, ನಂ. ೧೬, ಕ್ರಿ.ಶ. (?)
೬೮. ಎ.ಕ. X, ಪುಟ ೧೫೪, ನಂ. ೩, ಕ್ರಿ.ಶ. (?)
೬೯. ಎ.ಕ. IX, ಮಾಗಡಿ ೫೩, ಕ್ರಿ.ಶ. (?)
೭೦. ಕಲಬುರ್ಗಿ ಎಂಎಂ (ಸಂ): ಧಾ ತಾ.ಶಾ, ಪುಟ ೪೨.
೭೧. ಬೊ.ಕ.ಇ. I, (೧), ಪುಟ ೭, ನಂ. ೧೧.
೭೨. ಕ.ಇ. IV, ಪುಟ ೬೨, ನಂ. ೩೦.
೭೩. ಬೊ.ಕ.ಇ. II, ಪುಟ ೧೪೬, ನಂ. ೧೨೭.
೭೪. ಎ.ಕ. V, ಚನ್ನರಾಯಪಟ್ಟಣ ೨೬೬.
೭೫. ಎ.ಕ. XV, ಅರಸಿಕೆರೆ ೮೭.
೭೬. ಸೌ.ಇ.ಇ. XVIII, ಪುಟ ೧೧೦, ನಂ. ೧೦೪.
೭೭. ಸೌ.ಇ.ಇ. XX, ಪುಟ ೯೨, ನಂ. ೭೬.
೭೮. ಇದೇ ನಿಬಂಧ : ಪುಟ ೨೩–೨೮.
೭೯. ಅದೇ ಪುಟ.
೮೦. ದೀಕ್ಷಿತ್ ಬಿ.ಎಸ್. : ಲೋಕಲ್ ಅಡ್ಮಿನಿಷ್ಟ್ರೇಷನ್ ಅಂಡ್ ಗಿಲ್ಡ್ಸ್ ಇನ್ ಅರ್ಲಿ ಚಾಲುಕ್ಯ ಪೀರಿಯಡ್, ನಾಗರಾಜರಾವ್, ಎಂ.ಎಸ್. (ಸಂ). ಚಾಲುಕ್ಯಾಸ್ ಆಫ್ ಬಾದಾಮಿ, ಪುಟ ೧೪೮.
೮೧. ಕುಪ್ಪಸ್ವಾಮಿ ಜಿ.ಆರ್., ಎಕನಾಮಿಕ್ ಕಂಡೀಷನ್ಸ್ ಇನ್ ಕರ್ನಾಟಕ, ಪುಟ ೯೮.
೮೨. ಎ.ಕ. IV, ಚಾಮರಾಜನಗರ, ೧೧೪.
೮೩. ಕುಪ್ಪಸ್ವಾಮಿ ಜಿ.ಆರ್., ಪೂರ್ವೋಕ್ತ.
೮೪. ಕ.ಇ. IV, ಪುಟ ೭೩, ನಂ. ೩೩.
೮೫. ಕ.ಇ. VI, ಪುಟ ೪೬, ನಂ. ೨೦.
೮೬. ಎ.ಕ. XV, ಅರಸಿಕೆರೆ ೨೧೬, ಕ್ರಿ.ಶ. ೧೧೯೫.
೮೭. ಇದೇ ನಿಬಂಧ, ಅಧ್ಯಾಯ: ಕಾಳಾಮುಖರೂ ಪಂಚಾಳ ಕೆಲಸಗಾರರೂ ಪುಟ ೩–೪–೧೦. ಎ.ಕ. V, (i, 11) ಅರಸಿಕೆರೆ ೧೫೭, ೫೩೫, ೫೬೪ ಮತ್ತು ೧೪೨.
೮೮. ಇದೇ ನಿಬಂಧ: ಅಧ್ಯಾಯ: ಮೂರ್ತಿ ಶಿಲ್ಪಿಗಳು, ಉಪ ಅಧ್ಯಾಯ: ದಾಸೋಜ ಮತ್ತು ಮಕ್ಕಳು, ಪುಟ ೩೨–೪೧.
೮೯. ಎ.ಕ. VIII, ನಗರ, ೧೯.
೯೦. ಎ.ಕ. VIII, ಸಾಗರ, ೮೩, ತೀರ್ಥಹಳ್ಳಿ, ೧೭೭, ನಗರ, ೪೪, ಸೊರಬ, ೨೧೮.
೯೧. ಸೌ.ಇ.ಇ. XV, ಪುಟ ೯೨, ನಂ. ೫೩.
೯೨. ಸೌ.ಇ.ಇ. XV, ಪುಟ ೬೯, ನಂ. ೫೩.
೯೩. ಎ.ಕ. V, ಬೇಲೂರು, ೬೯.
೯೪. ಸೌ.ಇ.ಇ. XV, ಪುಟ ೧೬೩, ನಂ. ೯೬.
ಇ.ನಾ.ಕ.ಕೊ.ಸ್ಪೆ, ಪುಟ ೯೧, ನಂ. ೨೦.
ಸೌ.ಇ.ಇ. XV, ಪುಟ ೨೪೩, ನಂ. ೧೯೫.
೯೫. ಎಕ.ಕ. VIII, ಸಾಗರ ೪೫, ೪೭, ೯೬, ೯೮, ೧೬೦, ೧೬೧ ಮತ್ತು ೧೬೨.
ಎ.ಕ. VIII, ನಗರ, ೮.
೯೬. ಎ.ಕ. VIII, ಸಾಗರ, ೮೪ ಮತ್ತು ೧೦೧.

ಗ್ರಾಮಗಳ ವಿವಿಧ ಪ್ರಕಾರಗಳು

ಡಾ. ಕೂ.ಸ. ಅಪರ್ಣ*

ಗ್ರಾಮಗಳ ಬಗ್ಗೆ ವಿವರಿಸುವಾಗ ಗ್ರಂಥಗಳು, ಗ್ರಾಮಗಳ ವಿವಿಧ ಪ್ರಕಾರಗಳನ್ನು ಹೇಳಿವೆ. ಮಾನಸಾರ ಮತ್ತು ಮಯಮತ ಗ್ರಂಥಗಳ ೯ನೇ ಅಧ್ಯಾಯದಲ್ಲಿ ಈ ಬಗ್ಗೆ ವಿವರಗಳಿವೆ. ಮಾನಸಾರವು ದಂಡಕ, ಸರ್ವತೋಭದ್ರ, ನಂದ್ಯಾವರ್ತ, ಪದ್ಮಕ, ಸ್ವಸ್ತಿಕ, ಪ್ರಸ್ತರ, ಕಾರ್ಮುಕ ಮತ್ತು ಚತುರ್ಮುಖ ಎಂಬ ೮ ಗ್ರಾಮ ಪ್ರಕಾರಗಳನ್ನು ಹೇಳಿದೆ (೯.೨೬). ಮಯಮತದಲ್ಲಿ ೮ ಗ್ರಾಮ ಪ್ರಕಾರಗಳ ಹೆಸರಿದ್ದು, ಅವುಗಳನ್ನು ದಂಡಕ, ಸ್ವಸ್ತಿಕ, ಪ್ರಸ್ತರ, ಪ್ರಕೀರ್ಣಕ, ನಂದ್ಯಾವರ್ತ, ಪರಗ, ಪದ್ಮ ಮತ್ತು ಶ್ರೀಪ್ರತಿಷ್ಠಿತ ಎಂದು ಹೆಸರಿಸಿದೆ (೯.೩೩–೩೪) (ಮತ್ತು ಈಶಾನಶಿವ–೨೫.೪೮–೯, ಶಿಲ್ಪರತ್ನಗಳಲ್ಲೂ ಇದೇ ರೀತಿಯಾಗಿದೆ – (ಉದ್ಧೃತ) Vastusastra-P.248); ಈ ಪಟ್ಟಿಯಲ್ಲಿ ಹೇಳಿಲ್ಲದಿದ್ದರೂ, ಕೊನೆಗೆ 'ಶ್ರೀವತ್ಸ' ಎಂಬ ಪ್ರಕಾರವನ್ನೂ ಸೇರಿಸಿದೆ (ಮಯ–೯.೫೪). ಮಾನಸಾರದ ಸರ್ವತೋಭದ್ರ, ಕಾರ್ಮುಕ ಮತ್ತು ಚತುರ್ಮುಖ ಪ್ರಕಾರಗಳನ್ನು ಮಯಮತದಲ್ಲಿ ಹೇಳಿಲ್ಲ; ಬದಲಿಗೆ, ಪ್ರಕೀರ್ಣಕ, ಪರಗ, ಶ್ರೀಪ್ರತಿಷ್ಠಿತ ಮತ್ತು ಶ್ರೀವತ್ಸವನ್ನು ಹೇಳಿದೆ. ಕಾಮಿಕಾಗಮದಲ್ಲೂ ೧೨ ರೀತಿಯ ಗ್ರಾಮಗಳನ್ನು ಹೇಳಿದೆ (ಒಂದೆಡೆ ಹೇಳಿರುವಂತೆ (Dutt-P.206), ೧೫ ಗ್ರಾಮ ಪ್ರಕಾರಗಳನ್ನು ಇದರಲ್ಲಿ ಹೇಳಿಲ್ಲ). ಮಯಮತದಲ್ಲಿರುವ ಎಲ್ಲ ೯ ಪ್ರಕಾರಗಳ ಹೆಸರೂ ಇದರಲ್ಲಿದ್ದು, ಜೊತೆಗೆ ವೈದಿಕ, ಸಂಪತ್ಕರ ಮತ್ತು ಕುಂಭಕ– ಈ ವಿಧಗಳನ್ನೂ ಹೇಳಿದೆ (೨೦/೨೪.೧–೨). ವಿಶ್ವಕರ್ಮ ವಾಸ್ತುಶಾಸ್ತ್ರದಲ್ಲೂ ೧೨ ಗ್ರಾಮ ಪ್ರಕಾರಗಳ ಹೆಸರಿದ್ದು, ಅವು ಸ್ವಲ್ಪ ಭಿನ್ನವಾಗಿವೆ. ಅವುಗಳೆಂದರೆ, ಮಂಡಕ, ಪ್ರಸ್ತರ, ಬಾಹುಲೀಕ, ಪರಾಕ, ಮಂಗಲ, ಚತುರ್ಮುಖ, ಪೂರ್ವಮುಖ, ವಿಶ್ವಕರ್ಮ, ದೇವರಾಟ್, ವಿಶ್ವೇಶ, ಕೈಲಾಸ ಮತ್ತು ನಿತ್ಯಮಂಗಲ ಈ ಪಟ್ಟಿಯಲ್ಲಿನ 'ಪ್ರಸ್ತರ' ಗ್ರಾಮವನ್ನು ಮಾನಸಾರ ಮತ್ತು ಮಯಮತಗಳು ಹೇಳಿದ್ದರೆ, ಚತುರ್ಮುಖ ಗ್ರಾಮವನ್ನು ಮಾನಸಾರವು ಮಾತ್ರ ಹೇಳಿದೆ. ಅಂತೇ, ಮಯಮತದ 'ಪರಗ' ಎಂಬ ಪ್ರಕಾರವನ್ನು ಹೆಸರಿನ ದೃಷ್ಟಿಯಿಂದ ವಿಶ್ವಕರ್ಮ–ವಾಸ್ತುಶಾಸ್ತ್ರದ 'ಪರಾಕ'ದೊಂದಿಗೆ ಹೋಲಿಸಬಹುದು.

ಮಾನಸಾರ ಮುಂತಾದ ಕೆಲವು ಗ್ರಂಥಗಳು, ಗ್ರಾಮದ ಆಕಾರ, ಬೀದಿಗಳ ರಚನಾಕ್ರಮ, ವಸತಿ ವ್ಯವಸ್ಥೆ, ದೇವಾಲಯಗಳ ಸ್ಥಾನ ಮುಂತಾದುವುಗಳಲ್ಲಿರುವ ವ್ಯತ್ಯಾಸದಿಂದ/ಆಧಾರದಿಂದ–ಬೇರೆ ಬೇರೆ ಗ್ರಾಮ ಪ್ರಕಾರಗಳನ್ನು ಹೇಳಿವೆ. ಮಯಮತವು ಮಾರ್ಗ/ಬೀದಿಗಳ ಸಂಖ್ಯೆ ಮತ್ತು ದಿಕ್ಕುಗಳಲ್ಲಿರುವ ಭೇದವನ್ನು ಹೇಳಿದೆಯೇ ಹೊರತು ಒಂದೊಂದು ಪ್ರಭೇದಕ್ಕೂ ಪ್ರತ್ಯೇಕ ಲಕ್ಷಣಗಳನ್ನು ಹೇಳಿಲ್ಲ. ಮಾನಸಾರ ಮತ್ತು ವಿಶ್ವಕರ್ಮ ವಾಸ್ತುಶಾಸ್ತ್ರದಲ್ಲಿ ಹೆಚ್ಚಿನ ವಿವರಗಳನ್ನು ಆಯಾ ಪ್ರಕಾರಗಳಿಗೆ ಅನ್ವಯವಾಗುವಂತೆ ಪ್ರತ್ಯೇಕವಾಗಿ ಹೇಳಿದೆ (ಮಾರ್ಗಗಳು ಮತ್ತು ಇತರ ವಿವರಗಳು ಮಾನಸಾರದಲ್ಲಿ ಹೆಚ್ಚಾಗಿವೆ). ಈ ಲೇಖನದಲ್ಲಿ, ಮಾನಸಾರದಲ್ಲಿರುವಂತೆ, ಗ್ರಾಮಗಳ ಆಕಾರ, ವಾಸ್ತುನಕ್ಷೆ, ವಿಸ್ತಾರ, ದೇವತೆಗತಳ ಸ್ಥಾನ, ವಸತಿ ಇತ್ಯಾದಿಗಳ ಸ್ಥಾನ–ಇವುಗಳನ್ನು ಮಾತ್ರ ಹೇಳಿ, ಮಾರ್ಗಗಳ ಸಂಖ್ಯೆ ಮತ್ತು ದಿಕ್ಕಿನ ವಿವರಗಳು, ದ್ವಾರ, ಪ್ರಾಕಾರ ಮುಂತಾದ ವಿವರಗಳನ್ನು ಕೈಬಿಡಲಾಗಿದೆ; ಮಾನಸಾರದ ೯ನೇ ಅಧ್ಯಾಯದಲ್ಲಿ ನೀಡಿರುವ ಈ ವಿವರಗಳ ಶ್ಲೋಕ ಸಂಖ್ಯೆಯನ್ನು ಅಲ್ಲಲ್ಲೇ ಆವರಣದಲ್ಲಿ ನೀಡಲಾಗಿದೆ.

ದಂಡಕ : ಮಾನಸಾರದಲ್ಲಿ ನೀಡಿರುವ ವಿವರದಂತೆ, 'ದಂಡಕ' ಪ್ರಕಾರದ ಗ್ರಾಮವು ಆಯತಾಕಾರವಾಗಿರುತ್ತದೆ (೯.೪೮). ಇದು 'ದಂಡ'ದಂತೆ ಇರುವುದೆಂದೂ ಹೇಳಲಾಗಿದೆ (Dutt-P.206). ಗ್ರಾಮದ ಸುತ್ತ ಅದೇ ಆಕಾರದ 'ವಪ್ರ'ವೂ (Rampart) ಇರುವುದು (೪೮). ವಿಸ್ತಾರದ ಆಧಾರದ ಮೇಲೆ ಇದನ್ನು ಕ್ಷುದ್ರ, ಮಧ್ಯಮ ಮತ್ತು ಉತ್ತಮ– ಎಂದು ೩ ರೀತಿಗಳಲ್ಲಿ ಗುರುತಿಸಲಾಗಿದೆ. 'ಕ್ಷುದ್ರ ದಂಡಕ' ಗ್ರಾಮದ ವಿಸ್ತಾರವು ೨೫ ದಂಡದಿಂದ ೧೦೧ ದಂಡದವರೆಗೆ ಇರುವುದು (೧ ದಂಡ=೪ ಹಸ್ತ=೯೬ ಅಂಗುಲ). ಅಂದರೆ, ಇವುಗಳ ನಡುವೆ ೨ ದಂಡ ಹೆಚ್ಚಿಸುತ್ತಾ ಹೋಗುವುದರಿಂದ ೩೯ ರೀತಿಯ ವಿಸ್ತಾರವು ದೊರೆಯುತ್ತದೆ. ಇದರ ಉದ್ದವು ಅಗಲಕ್ಕಿಂತ ಎರಡರಷ್ಟಿದ್ದು, ಎರಡೆರಡು ದಂಡಗಳನ್ನು ಹೆಚ್ಚಿಸುತ್ತಾ ಹೋಗಬಹುದು. ಶ್ರೇಷ್ಠ/ಸರಿಯಾದ ಅಳತೆಯನ್ನು

* ೧೬೭೭, ೫ನೇ 'ಎ' ಅಡ್ಡರಸ್ತೆ, ೧೦ನೇ ಮುಖ್ಯರಸ್ತೆ, ಬನಶಂಕರಿ ಮೊದಲನೇ ಹಂತ, ಬೆಂಗಳೂರು-೫೬೦೦೫೦

ಪಡೆಯುವ ಕಾರಣಕ್ಕಾಗಿ ಒಂದು 'ದಂಡ' ಹೆಚ್ಚು ಕಡಿಮೆ ಮಾಡಬಹುದು. ಈ ಚಿಕ್ಕ ದಂಡಕ ಗ್ರಾಮವು ವಾನಪ್ರಸ್ಥ ಜೀವನಕ್ಕೆ ಸೂಕ್ತವೆಂದೂ ಇದರಲ್ಲಿದೆ (೫–೮). 'ಮಧ್ಯಮ ದಂಡಕಗ್ರಾಮ'ದಲ್ಲಿ ೪೨ ಬಗೆಯ ವಿಸ್ತಾರಗಳಿದ್ದು, ಅದು ೩೧ ದಂಡದಿಂದ ೧೦೭ ದಂಡದವರೆಗಿರುತ್ತದೆ (ಇದರ ಉದ್ದವು ಮೇಲೆ ಹೇಳಿದಂತಿರುತ್ತದೆ). ಈ ಅಳತೆಯಲ್ಲಿ ಎರಡೆರಡು ದಂಡ ಹೆಚ್ಚಿಸುತ್ತಾ ಈ ವಿವಿಧ ವಿಸ್ತಾರಗಳನ್ನು ಪಡೆಯಬಹುದು (೮–೯). 'ಉತ್ತಮ ದಂಡಕ' ಗ್ರಾಮದ ವಿಸ್ತಾರವು ೪೫ ಬಗೆಯದಾಗಿದ್ದು, ಇದರಲ್ಲಿ ಕನಿಷ್ಠ ೩೭ ದಂಡವೂ, ಗರಿಷ್ಠ ೧೨೫ ದಂಡಗಳೂ ಇರುತ್ತವೆ. ಈ ವಿವಿಧ ವಿಸ್ತಾರಗಳನ್ನು ಹಿಂದಿನಂತೇ ಪಡೆಯಬಹುದಾಗಿದೆ (೧೦–೧೧). ಇಷ್ಟೇ ಅಲ್ಲದೆ, ೫೦ ದಂಡಗಳಿಂದ ಆರಂಭಿಸಿ ೨೦೦ ದಂಡದವರೆಗೆ, ೭೬ ಬಗೆಯ ವಿಸ್ತಾರಗಳನ್ನು ಪಡೆಯಬಹುದೆಂದೂ ಹೇಳಲಾಗಿದೆ (೧೨).

'ದಂಡಕ' ಗ್ರಾಮವು ಬ್ರಾಹ್ಮಣರಿಗೆ ಸೂಕ್ತವಾದುದು (೧೧, ೫೭). ಇದರಲ್ಲಿ, ೧೨, ೨೪, ೫೦, ೧೦೮ ಅಥವಾ ೩೦೦ ಬ್ರಾಹ್ಮಣರ ಮನೆಗಳಿರಬಹುದು (ಗ್ರಂಥದಲ್ಲಿ 'ವಿಪ್ರಸಂಘ'/ 'ದ್ವಿಜಸಂಘ' ಎಂದಿದೆ). ಇಲ್ಲವೇ, ಇದು ೧೨ ಮುನಿಗಳಿಗೂ ಆಶ್ರಯವಾಗಿರಬಹುದು. ಇದು, ಕಾಡಿನೊಳಗೆ ಅಥವಾ ಪರ್ವತದಲ್ಲಿದ್ದರೆ, ಅದು 'ಆಶ್ರಮ' ಎನಿಸುತ್ತದೆ (೫೭–೫೯). ಗ್ರಾಮಗಳ ವಿವಿಧ ರೂಪಗಳನ್ನೂ ಇದರಲ್ಲಿ ಹೇಳಿದೆ. ೨೪ ಯತಿಗಳ ಗುಂಪುಗಳಿದ್ದರೆ, ಅದು 'ಗ್ರಾಮ' ಎನಿಸುತ್ತದೆ (ಗ್ರಾಮ, ಮಂಗಲ ಇವುಗಳ ವಿವರಗಳಿಗೆ ನೋಡಿ ನನ್ನ ಲೇಖನ– ಇ.ದರ್ಶನ, ೨೭–ಪುಟ ೧೮೬–೯೧).

ದೇವತಾ ಸ್ಥಾನಗಳ ಬಗ್ಗೆ ಹೇಳುವುದಾದರೆ, ಗ್ರಾಮದ ಹೊರಭಾಗದಲ್ಲಿ 'ವರುಣ' ಅಥವಾ 'ಮಿತ್ರ' ಪದದಲ್ಲಿ (ಪಶ್ಚಿಮ) ವಿಷ್ಣುವಿನ ದೇವಾಲಯವಿರಬೇಕು; ಇಲ್ಲಿ ವಿಷ್ಣುವಿನ ಯಾವ ರೂಪವಾದರೂ ಇರಬಹುದು (ಶ್ರೀಧರ, ವಾಮನ, ವಾಸುದೇವ, ನಾರಾಯಣ, ಜನಾರ್ಧನ, ಕೇಶವ, ನಾರಾಯಣ). ಈಶಾನ್ಯ ದಿಕ್ಕಿನ 'ಪರ್ಜನ್ಯ' ಅಥವಾ 'ಉದಿತ' ಪದದಲ್ಲಿ ಶಿವನನ್ನು ಸ್ಥಾಪಿಸಬೇಕು. ಗ್ರಾಮದ ಒಳಗೆ ಅಥವಾ ಹೊರಗೆ ಶಿವನ ದೇವಾಲಯಗಳು ಎಷ್ಟಾದರೂ ಇರಬಹುದು. ಚಾಮುಂಡಾ ದೇವಾಲಯವನ್ನು ಉತ್ತರ ದ್ವಾರದ ಬಳಿ ನಿರ್ಮಿಸಬೇಕೆಂದು ಒಂದೆಡೆ ಉಲ್ಲೇಖವಿದೆ (Ramraz qtd. Dutt-P.208); ಆದರೆ ಈ ಬಗ್ಗೆ ಗ್ರಂಥದಲ್ಲಿ ವಿವರ ದೊರೆತಿಲ್ಲ.

'ದಂಡಕ' ಗ್ರಾಮವು ಬ್ರಾಹ್ಮಣರಿಗೆ ಸೂಕ್ತವಾದುದರಿಂದ, ಈ ಗ್ರಂಥದಲ್ಲಿ ಬೇರೆ ಬೇರೆ ಬಸತಿ ಸ್ಥಾನಗಳ ಬಗ್ಗೆ ವಿವರವಿಲ್ಲ; ವಸತಿ ನಿರ್ಮಾಣದ ಬಗ್ಗೆ ವಿವರವಿದೆ. ನಕ್ಷೆಯಲ್ಲೂ, ಬ್ರಾಹ್ಮಣರ ವಸತಿಯನ್ನು ಮಾತ್ರ ಸೂಚಿಸಿದ್ದು, ಅದು ಮುಖ್ಯ ಮಾರ್ಗದ ಬಲ ಭಾಗದಲ್ಲಿದೆ. ಕಾಮಿಕಾಗಮದ ಪ್ರಕಾರ, ಗ್ರಾಮದ ಅಧಿಕಾರಿಗಳು ಮತ್ತು ಗ್ರಾಮಪಂಚಾಯಿತಿಯ ಕಛೇರಿಗಳು ಪೂರ್ವ ಭಾಗದಲ್ಲಿರಬೇಕು (qtd. Dutt-P.209) ಬೀದಿಗಳ ಬಗ್ಗೆ ಮಾನಸಾರದಲ್ಲಿ ಕೆಲವು ವಿವರಗಳಿವೆ (೪೯–೫೫).

ಸರ್ವತೋಭದ್ರ : ಮಾನಸಾರವು ಹೇಳುವ ಎರಡನೇ ಪ್ರಕಾರದ ಗ್ರಾಮವೆಂದರೆ– 'ಸರ್ವತೋಭದ್ರ',. ಈ ಪ್ರಕಾರದ ಗ್ರಾಮವು ಚೌಕಾಕಾರವಾಗಿದ್ದು, ಇದರ ವಾಸ್ತು ನಕ್ಷೆಯು ೬೪ ಪದಗಳ 'ಮಂಡೂಕ' ಅಥವಾ ೪೯ ಪದಗಳ 'ಸ್ಥಂಡಿಲ' ರೀತಿಯದಾಗಿರಬೇಕು. ಈ ಪ್ರಕಾರದ ಗ್ರಾಮದ ವಿಸ್ತಾರವು ಸಮಸಂಖ್ಯೆ ಅಥವಾ ಬೆಸಸಂಖ್ಯೆಯ ದಂಡಗಳಿಂದ ಕೂಡಿರಬಹುದು. ಸಮಸಂಖ್ಯೆಯ ವಿಸ್ತಾರವು ೫೦ ದಂಡ ವಿಸ್ತಾರದಿಂದ ೨೦೦ ದಂಡದವರೆಗಿರಬಹುದಾಗಿದ್ದು, ವಿಷಮ ಸಂಖ್ಯೆಯದು ೬೧ ದಂಡದಿಂದ ೩೧೩ ದಂಡದವರೆ ಗಿರುವುದು. ೨ ದಂಡಗಳ ವ್ಯತ್ಯಾಸದಿಂದ ವಿಸ್ತಾರವನ್ನು ಹಿಗ್ಗಿಸಿ/ಕುಗ್ಗಿಸಿ ಮಾಡಗಬಹುದಾಗಿದ್ದು, ಇದರಲ್ಲಿ ಕ್ರಮವಾಗಿ ೭೬ ಮತ್ತು ೧೨೭ ಬಗೆಯ ವಿಸ್ತಾರವನ್ನು ಪಡೆಯ ಬಹುದಾಗಿದೆ. ಈ ರೀತಿ ಸಮಸಂಖ್ಯೆ ಮತ್ತು ಬೆಸಸಂಖ್ಯೆಗಳಲ್ಲಿ ಸರ್ವತೋಭದ್ರ ಗ್ರಾಮಗಳನ್ನು ಅಳೆಯಬಹುದು (೧೨–೧೩). ಈ ಪ್ರಕಾರದ ಗ್ರಾಮದಲ್ಲಿ ತಪಸ್ವಿಗಳು, ಯತಿಗಳು, ಬ್ರಹ್ಮಚಾರಿಗಳು, ಯೋಗಿಗಳು, ಪಾಷಂಡಾಶ್ರಮಿಗಳು (– ವೇದಬಾಹಿರರು) ಎಷ್ಟು ಸಂಖ್ಯೆಯಲ್ಲಾದರೂ ಇರಬಹುದು (೬೫–೬೬).

ಗ್ರಾಮದ ಮಧ್ಯೆ ವಿಷ್ಣು, ಬ್ರಹ್ಮ ಅಥವಾ ಶಿವನ ದೇವಾಲಯವಿರಬೇಕೆಂದು ಇದರಲ್ಲಿದ್ದು (೬೪–೬೫), ವೈಷ್ಣವೀ ಮತ್ತು ಚಾಮುಂಡಾ ದೇವಾಲಯವು ಊರಿಂದ ಹೊರಗೆ ದೂರದಲ್ಲಿ ಉತ್ತರದಲ್ಲಿ ಇರಬೇಕೆಂದಿದೆ (೭೮–೭೯). ಅಲ್ಲದೆ, ಮಹಾದಿಕ್ಪಾಲಕರನ್ನು, ಪೈಶಾಚ ಭಾಗದಿಂದ ಹೊರಗೆ ಈಶಾನ್ಯ ದಿಕ್ಕಿನಲ್ಲಿ ಸ್ಥಾಪಿಸಬೇಕೆಂದೂ ಹೇಳಲಾಗಿದೆ (೬೮). ಈಶಾನ್ಯಾದಿ ನಾಲ್ಕು ದಿಕ್ಕುಗಳಲ್ಲಿ ಮಠ, ಮಂಡಪ/ ದೇವಾಲಯ ಇರಬೇಕು; ಅಲ್ಲಿ (ಹೊರ ಮೂಲೆಗಳಲ್ಲಿ) 'ಸತ್ರ' ಇರಬಹುದು. ಆಗ್ನೇಯದಲ್ಲಿ ಪಾನೀಯ ಮಂಡಪ ವಿರಬೇಕು. 'ಅನ್ಯಧರ್ಮಾಲಯ'ಗಳು (Public buildings) ಯಾವುದೇ ದಿಕ್ಕಿನಲ್ಲೂ ಇರಬಹುದು. ನಾಲ್ಕು ಮೂಲೆಗಳಲ್ಲಿ, ಒಳ ರಸ್ತೆಗಳ (Internal carraige roads) ಅಂತ್ಯದಲ್ಲಿ, ಗುರುಮಠಗಳಿರಬೇಕು (೬೯–೭೧).

ವಸತಿಗಳ ಬಗ್ಗೆ ಮಾನಸಾರವು ನೀಡಿರುವ ವಿವರ ಗಳೆಂದರೆ, ದಕ್ಷಿಣ ದಿಕ್ಕಿನಲ್ಲಿ ವೈಶ್ಯ–ಶೂದ್ರರ ಮನೆಗಳಿರಬೇಕು: 'ಇಂದ್ರ' (ನೈಋತ್ಯ) ಮತ್ತು 'ಅಗ್ನಿ' (ಆಗ್ನೇಯ) ಮಧ್ಯೆ

ಗೋಪಾಲಕರ ಮನೆ ಇರಬೇಕು. ಅದರಿಂದ ಹೊರಗೆ (ಇರುವ) ಗೋಶಾಲೆಯ ರಕ್ಷಾರ್ಥವಾಗಿ 'ವಪ್ರ' ಇರಬೇಕು. 'ಪಿತೃ' (ನೈಋತ್ಯ) ಮತ್ತು 'ವರುಣ' (ಪಶ್ಚಿಮ) ಪದಗಳ ಮಧ್ಯೆ ನೇಯ್ಗೆಯವರೂ, ಅಲ್ಲಿಂದ ಹೊರಗೆ ದರ್ಜಿಗಳೂ, ಅಲ್ಲೇ ಚರ್ಮಕಾರರೂ ಇರಬೇಕು. 'ವರುಣ' (ಪಶ್ಚಿಮ) ಮತ್ತು ವಾಯು (ವಾಯುವ್ಯ) ಮಧ್ಯೆ ಅಕ್ಕಸಾಲಿಗರ ವಾಸಸ್ಥಾನವಿರುವುದು; ಅದರಿಂದ ಹೊರಗೆ ಮತ್ಸ್ಯ ಮಾಂಸ ವ್ಯವಹಾರಿಗಳೂ ಇರುವರು. ವಾಯು ಮತ್ತು ಸೌಮ್ಯ (–ಸೋಮ=ಉತ್ತರ)ದ ಮಧ್ಯೆ 'ಶ್ರೀಕರಣ'ರುಗಳ ವಸತಿಯೂ, ಅಲ್ಲೇ ವೈದ್ಯರುಗಳ ವಸತಿಯೂ ಅಂಬಷ್ಠಕಾಲಯವೂ (ಬ್ರಾಹ್ಮಣ ತಂದೆ ಹಾಗೂ ವೈಶ್ಯ ತಾಯಿಯ ಮಕ್ಕಳು–ಅಂಬಷ್ಠಕರು) ಇರಬೇಕು. ಅಲ್ಲಿ ಹೊರಪ್ರದೇಶದಲ್ಲಿ 'ವಲ್ಕಲ'ರಿಗೂ (ಮರಕಡಿಯುವವರು), ಅಲ್ಲೇ ತೈಲೋಪ ಜೀವಿಗಳಿಗೂ ವಸತಿ ವ್ಯವಸ್ಥೆಯನ್ನು ಮಾಡಬೇಕು. ಗ್ರಾಮದಿಂದ ಹೊರಗೆ ಚಾಮುಂಡಾ/ವೈಷ್ಣವೀ ದೇವಾಲಯ ದಿಂದ ಸ್ವಲ್ಪ ದೂರದಲ್ಲಿ ಚಾಂಡಾಲರಿಗೆ ವಸತಿ ವ್ಯವಸ್ಥೆ ಇರಬೇಕು (೭೩–೭೯). ಹೀಗೆ, ಜನವಾಸದ ಬಗ್ಗೆ ಹೇಳಿರುವ ಮಾನಸಾರವು, ಸ್ನಾನಪಾನಾದಿಗಳಿಗೆ ಯೋಗ್ಯವಾದ ತಟಾಕವನ್ನು ದಕ್ಷಿಣ, ಪಶ್ಚಿಮ ಮತ್ತು ನೈಋತ್ಯ ದಿಕ್ಕುಗಳಲ್ಲಿ ನಿರ್ಮಿಸಬೇಕೆಂದೂ, (ದತ್ ಅವರು ಹೇಳಿರುವಂತೆ ಆಗ್ನೇಯದಲ್ಲಿಲ್ಲ (P.211). ಉಳಿದದ್ದನ್ನು ಶಾಸ್ತ್ರಮಾರ್ಗದಂತೆ ಶಿಲ್ಪಿಯು ನಿರ್ಮಿಸಬೇಕೆಂದೂ ಹೇಳಿದೆ (೮೦–೮೧) (ಬೀದಿ ವಿವರ–೬೬–೬೯).

ಗ್ರಂಥದಲ್ಲಿ ನೀಡಿರುವ ನಕ್ಷೆಯನ್ನು ಗಮನಿಸಿದಲ್ಲಿ, ಚಾಮುಂಡಾ ದೇವಾಲಯವು (ಉತ್ತರದಲ್ಲಿರದೆ) ಈಶಾನ್ಯ ದಲ್ಲಿದೆ. ಕೃತಿಯಲ್ಲಿ ಹೇಳಿರುವಂತೆ, ವೈಷ್ಣವೀ ದೇವಾಲಯವಿಲ್ಲ. ಗ್ರಾಮದ 'ವಪ್ರ'ದ ಒಳಗೆ, ಗ್ರಾಮನಕ್ಷೆಯ ಪೈಶಾಚ ಭಾಗದಿಂದ ಹೊರಗೆ ಈಶಾನ್ಯದಲ್ಲಿ ಕ್ಷೇತ್ರಪಾಲನ ದೇವಾಲಯವೂ ಇದೆ. ವೈಶ್ಯರ ವಸತಿಯು (ದಕ್ಷಿಣ ಮಾತ್ರವಲ್ಲದೆ) ಉತ್ತರದಲ್ಲೂ ಇದ್ದು, ಅಲ್ಲೇ ಕ್ಷತ್ರಿಯರ ವಸತಿಯೂ ಇದೆ. ಗುರುಮಠಗಳ ಹತ್ತಿರವೇ ಬ್ರಾಹ್ಮಣರ ವಸತಿ ವ್ಯವಸ್ಥೆ ಇದೆ. ಅಲ್ಲದೆ, ಉತ್ತರ /ವಾಯುವ್ಯದಲ್ಲಿ ಗಾಣಿಗರ ಮನೆಯನ್ನೂ ಸೂಚಿಸಲಾಗಿದೆ.

ನಂದ್ಯಾವರ್ತಗ್ರಾಮ : ಈ ಪ್ರಕಾರದ ಗ್ರಾಮವು ಚೌಕ ಅಥವಾ ಆಯತಾಕಾರವಾಗಿರಬಹುದು. ಗ್ರಾಮವು ಚೌಕಾಕಾರ ವಾಗಿದ್ದಲ್ಲಿ, ೬೪ ಪದಗಳ 'ಚಂಡಿತ'/'ಮಂಡೂಕ' ನಕ್ಷೆಯನ್ನೂ, ಅಥವಾ ೪೯ ಪದಗಳ 'ಸ್ಥಂಡಿಲ' ನಕ್ಷೆಯನ್ನು ಬಳಸಬಹುದು. ಅಂತೇ, ಆಯತಾಕಾರವಾಗಿದ್ದಲ್ಲಿ ೮೧ ಪದಗಳ 'ಪರಮ ಶಾಯಿಕಾ' ಮಂಡಲವನ್ನೂ ಬಳಸಬಹುದು (೮೩–೮೫). (ಕಾಮಿಕಾಗಮದಲ್ಲಿರುವಮತೆ, ವೃತ್ತಾಕಾರದ ನಕ್ಷೆಯನ್ನೂ ಒಂದೆಡೆ ನೀಡಲಾಗಿದೆ (Dutt-P.219). ಈ ಮಂಡಲಗಳಿಗೆ ಹೊಂದುವಂತೆ, ಬ್ರಹ್ಮ, ದೈವಕ, ಮಾನುಷ ಮತ್ತು ಪೈಶಾಚ ಪದಗಳಲ್ಲಿನ ಸ್ಥಾನಗಳ ಸಂಖ್ಯೆಯೂ ಬದಲಾಗುತ್ತದೆ (೮೫–೯೦). ಈ ಪ್ರಕಾರದ ಗ್ರಾಮವು ೧೫೭ ದಂಡದಿಂದ ೫೬೫ ದಂಡದವರೆಗೆ ವಿಸ್ತಾರವಾಗಿರಬಹುದಾಗಿದ್ದು, ೨ ದಂಡಗಳ ವ್ಯತ್ಯಾಸದಿಂದ ೨೦೫ ಬಗೆಯ ವಿಸ್ತಾರವನ್ನು ಪಡೆಯ ಬಹುದಾಗಿದೆ (೧೫–೧೭).

ಈ ಪ್ರಕಾರದ ಗ್ರಾಮವು ಬ್ರಾಹ್ಮಣರಿಗೆ ಸೂಕ್ತವಾದುದು (೧೦೫). ಇದರಲ್ಲಿ ಬ್ರಾಹ್ಮಣರ ಮನೆಗಳ (ವಿಪ್ರ ಸಂಘ/ವಿಪ್ರ) ಸಂಖ್ಯೆಯು ೫೮, ೧೦೮, ೩೦೦, ೧೦೦೮, ೩೦೦೦ ಅಥವಾ ೪೦೦೦ ಇರಬಹುದು (೧೦೫–೧೦೬). ಇದರೊಂದಿಗೆ, ಬ್ರಾಹ್ಮಣರ ಮನೆಗಳು ಮಂಡಲದ 'ಮಾನುಷ' ಭಾಗದಲ್ಲೂ (ದೈವಭಾಗವೂ ಸೇರಿ), ವೈಶ್ಯ ಮತ್ತು ಶೂದ್ರರ ಮನೆಗಳು ಪೈಶಾಚ ಭಾಗದಲ್ಲೂ ಇರಬೇಕು. ಅರಮನೆಯು ಯಾವ ಭಾಗದಲ್ಲಾದರೂ ಇರಬಹುದು (೧೦೯–೧೧೦). ಇತರ ವೃತ್ತಿಯವರ ಮನೆಗಳು ವಾಸ್ತು ಮಂಡಲದ ಯಾವ 'ಪದ'ಗಳಲ್ಲಿರಬೇಕು ಎಂಬ ವಿವರಗಳೂ ಈ ಗ್ರಂಥದಲ್ಲಿವೆ (೧೧೨–೧೨೭). ಇನ್ನೊಂದು ವಿವರದಂತೆ ದೈವ, ಮಾನುಷ ಮತ್ತು–ಎಲ್ಲಾ ಭಾಗಗಳೂ ಬ್ರಾಹ್ಮಣರಿಂದ ಕೂಡಿದ್ದರೆ, ಅದಕ್ಕೆ 'ಮಂಗಲ' ಎಂದು ಹೆಸರು; [ಇನ್ನೊಂದೆಡೆ, ೫೮ ಬ್ರಾಹ್ಮಣರ ಮನೆಗಳಿದ್ದರೆ ಅದಕ್ಕೆ 'ಮಂಗಲ' ಎಂಬ ಹೆಸರೆಂದೂ ಹೇಳಿದೆ (೬೦–೬೩)]. ಅದೇ, ಕ್ಷತ್ರಿಯರು ಮತ್ತು ವೈಶ್ಯ ಮತ್ತು ಇತರ ಜಾತಿಯವರಿಂದ ಕೂಡಿದ್ದರೆ ಅದಕ್ಕೆ 'ಪುರ' ಎಂದು ಹೆಸರು; ಅಂತೇ, ಗ್ರಾಮವು ವೈಶ್ಯ ಮತ್ತು ಶೂದ್ರರಿಂದ ಕೂಡಿದ್ದರೆ–ಅದಕ್ಕೆ 'ಅಗ್ರಹಾರ' ಎಂದು ಹೆಸರು (೧೦೭–೮) (ಇಲ್ಲಿ, 'ಅಗ್ರಹಾರ' ಪದದ ವ್ಯಾಪ್ತಿಯು ಸಾಮಾನ್ಯ ವ್ಯಾಖ್ಯೆಗಿಂತ ಭಿನ್ನವಾಗಿರುವುದನ್ನು ಗಮನಿಸಬಹುದು).

ದೇವತಾಸ್ಥಾನಗಳ ಬಗ್ಗೆ, ಮಾನಸಾರವು ವಿಸ್ತಾರವಾದ ವಿವರಗಳನ್ನು ನೀಡಿದೆ. ಗ್ರಾಮದ 'ಆರ್ಯ' ಮುಂತಾದ ೪ ಭಾಗಗಳಲ್ಲಿ ೪ ದಿಕ್ಕುಗಳಿಗೆ ಅಭಿಮುಖವಾಗಿ ವಿಷ್ಣುವಿನ ದೇವಾಲಯವನ್ನು ನಿರ್ಮಿಸಬೇಕು; ಇಷ್ಟ ಬಂದಲ್ಲಿ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ದಿಕ್ಕುಗಳಿಗೆ ಅಭಿಮುಖ ವಾಗಿಯೂ ನಿರ್ಮಿಸಬಹುದು; ಇದನ್ನು 'ಇಂದ್ರ' ಅಥವಾ ರಾಕ್ಷಸ ಪದಗಳಲ್ಲೂ ನಿರ್ಮಿಸಬಹುದು (೧೨೮–೧೨೯). ವಿಷ್ಣುವಿನ ದೇವಾಲಯವು ಪೂರ್ವದಲ್ಲಿದ್ದರೆ, ಅಲ್ಲಿ ವಿಷ್ಣುವಿನ ಒಂದು ರೂಪವಾದ 'ಶ್ರೀಧರ'ನ ಬಿಂಬವಿರಬೇಕು; ಅದು ದಕ್ಷಿಣದಲ್ಲಿದ್ದರೆ, ವಾಮನ ರೂಪವೂ, ಪಶ್ಚಿಮದಲ್ಲಿದ್ದರೆ, ವಾಸುದೇವ, ಆದಿವಿಷ್ಣು ಅಥವಾ ಜನಾರ್ದನನ ಬಿಂಬವಿರ ಬೇಕು; ಅದೇ, ದೇವಾಲಯವು ಉತ್ತರದಲ್ಲಿದ್ದರೆ ಕೇಶವ

ಅಥವಾ ನಾರಾಯಣನ ಬಿಂಬವನ್ನು ಸ್ಥಾಪಿಸಬೇಕು; ಗ್ರಾಮದೊಳಗೆ ಈಶಾನ್ಯಕ್ಕಭಿಮುಖವಾಗಿರುವ ದೇವಾಲಯದಲ್ಲಿ ವಿಷ್ಣುವಿನ ಯಾವ ರೂಪವಾದರೂ ಇರಬಹುದು (೧೩೦–೧೩೧).

ವಿಷ್ಣು ದೇವಾಲಯವನ್ನು 'ಮಿತ್ರ' ಪದ (ಪಶ್ಚಿಮ)ದಲ್ಲಿ ನಿರ್ಮಿಸಿದಾಗ, ಅದು ೩ ಅಂತಸ್ತಿನಿಂದ ಕೂಡಿರಬೇಕು; ವಿಷ್ಣುವು ಮೊದಲ ತಲದಲ್ಲಿ ಸ್ಥಾನೀಕ ಭಂಗಿಯಲ್ಲೂ, ಎರಡನೇ ತಲದಲ್ಲಿ ಆಸೀನ ಭಂಗಿಯಲ್ಲೂ, ತೃತೀಯ ತಲದಲ್ಲಿ ಶಯನ ಭಂಗಿಯಲ್ಲೂ ಇರಬೇಕು; ಅಥವಾ ಕೊನೆಯ ತಲದಲ್ಲಿ ಸ್ಥಾನೀಕ ಭಂಗಿಯಲ್ಲೂ, ಮೊದಲ ತಲದಲ್ಲಿ ಶಯನ ಭಂಗಿಯಲ್ಲೂ ಇರಬಹುದು. ಈ ದೇವಾಲಯದ ಮುಖ್ಯ ದ್ವಾರವು ಯಾವ ದಿಕ್ಕಿನಲ್ಲಾದರೂ ಇರಬಹುದು ಹಾಗೂ ಗ್ರಾಮಕ್ಕೆ ಅಭಿಮುಖವಾಗಿರಬೇಕು (೧೩೩–೧೩೪). ಆಗ್ನೇಯದಲ್ಲಿ ರಾಮ ಅಥವಾ ಗೋಪಾಲ (ಕೃಷ್ಣ)ನ ಆಲಯವಿರಬೇಕು (೧೩೨). ಗ್ರಾಮದ ನೈಋತ್ಯ ಅಥವಾ ಈಶಾನ್ಯ ಮೂಲೆಯಲ್ಲಿ (ಪಿತೃ ಅಥವಾ ಈಶ ಪದದಲ್ಲಿ) ನರಸಿಂಹನ ದೇವಾಲಯವಿರಬೇಕಲ್ಲದೆ (೧೩೨), ಇದು ಗ್ರಾಮಕ್ಕೆ ಮುಖ ಮಾಡಿರಬಾರದು; ಆದರೆ, ನರಸಿಂಹನೊಂದಿಗೆ ಲಕ್ಷ್ಮಿಯೂ ಇದ್ದಲ್ಲಿ, ಈ ದೇವಾಲಯವು ಗ್ರಾಮದೆಡೆಗೆ ಮುಖ ಮಾಡಿರಬಹುದು (೧೩೪–೧೩೫).

ಶಿವನ ದೇವಾಲಯವನ್ನು ರುದ್ರ (ವಾಯವ್ಯ), ರುದ್ರಜಯ (ವಾಯವ್ಯ), ಇಂದ್ರ (ನೈಋತ್ಯ), ಇಂದ್ರಜಯ (ನೈಋತ್ಯ), ಅಪವತ್ಸ (ಈಶಾನ್ಯ) ಆಪವತ್ಸ್ಯ (ಈಶಾನ್ಯ), ಸವಿತೃ (ಆಗ್ನೇಯ), ಸಾವಿತ್ರ (ಆಗ್ನೇಯ), ಈಶ (ಈಶಾನ್ಯ), ಜಯಂತ (ಈಶಾನ್ಯ) ಅಥವಾ ಪರ್ಜನ್ಯ (ಈಶಾನ್ಯ) ಈ 'ಪದ'ಗಳಲ್ಲಿ ನಿರ್ಮಿಸಬಹುದು (ಇವೆಲ್ಲವೂ ಶಿವ ದೇವಾಲಯದ ಸ್ಥಾನವೆಂದು ಒಂದೆಡೆ ಗುರುತಿಸಿಲ್ಲ (Dutt-P.223). ಆದರೆ, ಇದನ್ನು ಪೂರ್ವ ಅಥವಾ ಪಶ್ಚಿಮದಲ್ಲಿ ನಿರ್ಮಿಸಿದಾಗ ಮಾತ್ರ ಗ್ರಾಮಕ್ಕೆ ಮುಖ ಮಾಡಿರಬಹುದೇ ಹೊರತು, ಉಳಿದಂತೆ ಮೇಲೆ ಹೇಳಿದ ಸಂದರ್ಭಗಳಲ್ಲಿ ಗ್ರಾಮಕ್ಕೆ ಬೆನ್ನುಮಾಡಿರಬೇಕು. ಇನ್ನಾವುದೇ ಪ್ರತಿಮೆ ದೇವಾಲಯದ ಮುಖ್ಯದ್ವಾರವು ಯಾವುದೇ ದಿಕ್ಕಿನಲ್ಲೂ ಇರಬಹುದು (?) (೧೩೬–೧೩೮). 'ದೌವಾರಿಕಾ' ಪದ ಅಥವಾ ಅದೇ ನೈಋತ್ಯ ಭಾಗದಲ್ಲಿ ಸುಬ್ರಹ್ಮಣ್ಯ, ಜೈನ ಅಥವಾ ಬುದ್ಧನ ದೇವಾಲಯಗಳಿರಬಹುದು. ವಿನಾಯಕನ ದೇವಾಲಯವು ೪ ಪ್ರಧಾನ ದಿಕ್ಕುಗಳ ಮಧ್ಯಭಾಗದಲ್ಲೂ ಅಥವಾ ೪ ವಿದಿಕ್ಕುಗಳಲ್ಲೂ ಇರಬಹುದು. ಗಂಧರ್ವ (ದಕ್ಷಿಣ) ಅಥವಾ ಭೃಂಗರಾಜ (ನೈಋತ್ಯ) ಭಾರ್ಗ(ಕಾರ)(=ಶಿವ)ನ ದೇವಾಲಯವಿರಬೇಕು (೧೩೯–೧೪೦). ಗ್ರಾಮದ್ವಾರದಿಂದ ಹೊರಗೆ, ರಕ್ಷಣಾರ್ಥವಾಗಿ ಭೈರವನ ದೇವಾಲಯವನ್ನು ನಿರ್ಮಿಸಬೇಕು (೧೪೨).

ದೇವೀ ದೇವಾಲಯಗಳ ಬಗ್ಗೆ ಗ್ರಂಥವು ಈ ಕೆಳಗಿನಂತೆ ವಿವರಿಸಿದೆ. ಮುಖ್ಯ (ಉತ್ತರ) ಅಥವಾ ಭಲ್ಲಾಟ (ಉತ್ತರ) ಭಾಗದಲ್ಲಿ ಸರಸ್ವತೀ ದೇವಾಲಯವೂ, ಅದಿತಿ (ಉತ್ತರ) ಅಥವಾ 'ಮೃಗ' (ಉತ್ತರ) ಪದದಲ್ಲಿ ಲಕ್ಷ್ಮೀ ದೇವಾಲಯವೂ, ಅಲ್ಲೇ ಭುವನೇಶ್ವರೀ ದೇವಾಲಯವೂ ಇರಬೇಕು ರಾಕ್ಷಸ (ದಕ್ಷಿಣ) ಅಥವಾ ಪುಷ್ಪದಂತ ಪದದಲ್ಲಿ (ಪಶ್ಚಿಮ) ದುರ್ಗಾ ದೇವಾಲಯವನ್ನು ನಿರ್ಮಿಸಬೇಕು [(ಒಂದೆಡೆ, ದುರ್ಗಾ ದೇವಾಲಯದ ಬದಲು, ಅಲ್ಲಿ ಭೈರವನ ದೇವಾಲಯವನ್ನು ಸ್ಥಾಪಿಸಬೇಕೆಂದು ತಪ್ಪಾಗಿ ಹೇಳಿದೆ–Dutt-P.223)] ಹಾಗೂ ಗ್ರಾಮದಿಂದ ಹೊರಗೆ 'ಸೌಮ್ಯ'ದಲ್ಲಿ (ಉತ್ತರದೆಡೆಯಲ್ಲಿ) ಕಾಳೀ ದೇವಾಲಯವನ್ನು ನಿರ್ಮಿಸಬೇಕು (ನಕ್ಷೆಯಲ್ಲಿ ತೋರಿಸಿಲ್ಲ). ಅದರಿಂದ ಮುಂದೆ ಉತ್ತರದಲ್ಲಿ ಭೂತ, ಪ್ರೇತ ಮುಂತಾದ ದುಷ್ಟಶಕ್ತಿಗಳಿರುತ್ತವೆ (೧೪೧–೧೪೫).

ದೇವಾಲಯಗಳು ಮಾತ್ರವಲ್ಲದೆ, ಬೇರೆ ಬೇರೆ ವೃತ್ತಿ ಸಂಬಂಧಿತ ಮನೆಗಳ ಸ್ಥಾನವನ್ನೂ ಗ್ರಂಥವು ಸೂಚಿಸಿದೆ. ನಕ್ಷೆಯ ಮೊದಲ ಸುತ್ತಿನಲ್ಲಿ, ನೈಋತ್ಯದಲ್ಲಿ 'ಶ್ರೀಕರ(ಣ)'ದವರ ಮನೆಗಳೂ (೧೧೩), ಪಶ್ಚಿಮದ ಸುಗ್ರೀವ ಮತ್ತು ಪುಷ್ಪದಂತ ಪದಗಳಲ್ಲಿ ಅರ್ಚಕರ ಮನೆಗಳೂ, ನೈಋತ್ಯ ದಿಕ್ಕಿನ ದೌವಾರಿಕಾ ಮತ್ತು ಸುಗ್ರೀವ ಭಾಗದಲ್ಲಿ 'ರಕ್ಷಕಾರ'ರ ಮನೆಗಳೂ ಇರಬೇಕು (೧೧೫) (ಒಂದೆಡೆ, ಆರಕ್ಷಕರ ವಸತಿಯನ್ನು, 'ಜಯಂತ'ದಲ್ಲಿ ಎಂದು ಹೇಳಿದೆ (Dutt-P.222). ವಾಯು ಅಥವಾ 'ನಾಗ' ಭಾಗದಲ್ಲಿ (ವಾಯವ್ಯ) ವಾಸ್ತುಶಾಸ್ತ್ರಜ್ಞರ (ಸ್ಥಪತಿ) ಮನೆಗಳೂ, ನಾಗ ಅಥವಾ ಮುಖ್ಯ ಭಾಗದಲ್ಲಿ ನೇತ್ರರತ್ನಕಾರರ ಮನೆಗಳೂ (೧೧೭) ಇರಬೇಕೆಂದು ಇದರಲ್ಲಿದೆ. ಈಶಾನ್ಯದ ಅದಿತಿ ಅಥವಾ ಉದಿತ ಪದದಲ್ಲಿ ವೈದ್ಯ ಮುಂತಾದವರ ವಸತಿ ವ್ಯವಸ್ಥೆ ಇದ್ದರೆ, ಈಶಾನ್ಯ ಅಥವಾ ಜಯಂತ ಪದದಲ್ಲಿ (ಈಶಾನ್ಯ) ಗ್ರಾಮದ ತಳವಾರರ ವಸತಿಗಳೂ, ಮಹೇಂದ್ರ (ಪೂರ್ವ) ಅಥವಾ ಸತ್ಯಕ (ಪೂರ್ವ) ಪದದಲ್ಲಿ ಕರ್ಣಿಕಾರರ ಮನೆಗಳೂ (೧೧೮–೧೧೯), ಭೃಶ (ಆಗ್ನೇಯ) ಅಥವಾ ಅಂತರಿಕ್ಷ (ಆಗ್ನೇಯ) ಭಾಗದಲ್ಲಿ ಅತಿಥಿಗೃಹಗಳೂ (?) ವ್ಯವಸ್ಥೆಗೊಂಡಿರುತ್ತವೆ. ಎರಡನೇ ಸುತ್ತಿನಲ್ಲಿ ಪೂರ್ವದ ಬೀದಿಯಲ್ಲಿ ಗಾಣಿಗರು, ಕುಂಬಾರರ ಮನೆಗಳೂ, ಮತ್ತಿತರ ಸೌಧಗಳೂ ಇರಬೇಕು (೧೨೧); ಮೀನುಗಾರರು ಮತ್ತು ಮಾಂಸದ ವ್ಯಾಪಾರಿಗಳು ಪಶ್ಚಿಮದಲ್ಲಿದ್ದರೆ, ಬೇಟೆಗಾರರು ದಕ್ಷಿಣದಲ್ಲಿರಬೇಕು (೧೨೨). ಆಗ್ನೇಯ ಅಥವಾ ವಾಯವ್ಯದಲ್ಲಿ ಅಗಸರ ಮನೆಗಳೂ, ಉತ್ತರ ಅಥವಾ ನೈಋತ್ಯದಲ್ಲಿ ದರ್ಜಿಗಳ ಮನೆಗಳೂ, ಇರಬೇಕು (೧೨೩–೧೨೪). ನಕ್ಷೆಯ ಮೂರನೇ ಸುತ್ತಿನಲ್ಲಿ ದಕ್ಷಿಣದಲ್ಲಿ ಅಕ್ಕಸಾಲಿಗರೂ, ಉತ್ತರ

ಅಥವಾ ಆಗ್ನೇಯದಲ್ಲಿ ಪೇಟಿಕಾರಾಲಯವೂ, ಉತ್ತರದಲ್ಲಿ ಚರ್ಮಕಾರರೂ ಇರಬೇಕು. ಉಳಿದ ಎಲ್ಲ ಸುತ್ತುಗಳಲ್ಲಿ ಇತರ ವೃತ್ತಿಗಳವರು ಇರಬೇಕು (೧೨೫-೧೨೭). ಗ್ರಾಮ ದಿಂದ ಸ್ವಲ್ಪ ದೂರದಲ್ಲಿ ಉತ್ತರ ಅಥವಾ ಪೂರ್ವದಲ್ಲಿ ಚಾಂಡಾಲರ ಮನೆಗಳಿರಬೇಕು (೧೪೪). ಗ್ರಂಥದ ವಿವರ ವನ್ನು ನಕ್ಷೆಯೊಂದಿಗೆ ಹೋಲಿಸಿದಲ್ಲಿ, ದಿಕ್ಕು ಸರಿಯಾಗಿದ್ದರೂ, ಪ್ರತೀ ಸುತ್ತುಗಳ ವಸತಿಗಳ ಬಗ್ಗೆ ಹೇಳುವಾಗ, ಅಲ್ಪ ವ್ಯತ್ಯಾಸ ಗಳಿರುವುದು ಕಂಡುಬರುತ್ತದೆ. ಅಲ್ಲದೆ, ವೈಶ್ಯರ ಮನೆಗಳು ದಕ್ಷಿಣದಲ್ಲಿರಬೇಕೆಂದು ಗ್ರಂಥದಲ್ಲಿದ್ದರೂ (೧೧೧) ನಕ್ಷೆಯಲ್ಲಿ ಉತ್ತರದಲ್ಲಿ ವೈಶ್ಯ ಮತ್ತು ಶೂದ್ರರ ಸ್ಥಾನವನ್ನು ಸೂಚಿಸಿದೆ [ರಕ್ಷಕಾರರ ವಸತಿ, ಸತ್ರ, ಅತಿಥಿಗೃಹ, ವಿದ್ಯಾಲಯ, ಮಠ, ಗಾಣಿಗರ ವಸತಿ ಮುಂತಾದೆಡೆಗಳಲ್ಲಿ ದತ್ ಅವರು ನೀಡಿರುವ 'ಪದ' ಅಥವಾ ದಿಕ್ಕು ಕೆಲಮಟ್ಟಿಗೆ ಭಿನ್ನವಾಗಿದೆ (P.222)]. ಒಟ್ಟಾರೆ, ವಸತಿ ಮತ್ತು ದೇವತಾಸ್ಥಾನಗಳ ವ್ಯವಸ್ಥೆಯನ್ನು ಮಾನಸಾರ ಗ್ರಂಥದಲ್ಲಿ ವಿವರವಾಗಿ ನೀಡಲಾಗಿದೆ (ಬೀದಿ ವಿವರ-೯೨-೧೦೪).

ಪದ್ಮಕಗ್ರಾಮ : ಈ ಗ್ರಾಮ ಪ್ರಕಾರದಲ್ಲಿ ಸುತ್ತಲಿನ ಗೋಡೆಯು ಚೌಕ, ವೃತ್ತ, ೬ ಮುಖ ಅಥವಾ ೮ ಮುಖ ಇರಬೇಕೆಂದು ಒಂದೆಡೆ ಹೇಳಿದೆ; ಇದರ ಉದ್ದ ಮತ್ತು ಅಗಲವು ಸಮನಾಗಿರಬೇಕೆಂದು ಹೇಳಿರುವುದು ಗ್ರಾಮದ ಚೌಕ ಆಕಾರವನ್ನೇ ಸೂಚಿಸುತ್ತಿದೆ (೧೫೯). ಈ ಪ್ರಕಾರದ ಗ್ರಾಮಕ್ಕೆ ಚಂಡಿತ (೬೪ ಪದ) ಅಥವಾ ಸ್ಥಂಡಿಲ (೪೯ ಪದ), ನಕ್ಷೆಯನ್ನು ಬಳಸಬಹುದು (೧೬೦). ಇದರ ಹೊರಸ್ವರೂಪವು ಪದ್ಮದಂತಿರುವುದನ್ನು ನಕ್ಷೆಯು ಸೂಚಿಸುತ್ತಿದೆ. ಇದರ ವಿಸ್ತಾರವು ೧೦೦ ದಂಡದಿಂದ ೧೦೦೦೦ ದಂಡದವರೆಗೂ ಇರಬಹುದು ಹಾಗೂ ೨ ದಂಡಗಳನ್ನು ಹೆಚ್ಚಿಸುತ್ತಾ ಇದರಲ್ಲಿ ೪೫೧ ಬಗೆಯ ಅಗಲವನ್ನು ಪಡೆಯಬಹುದು (೧೮-೨೦). ಈ ಗ್ರಾಮವು ಬ್ರಾಹ್ಮಣರಿಗೆ ಸೂಕ್ತವಾದುದು. ೪ ದಿಕ್ಕುಗಳಲ್ಲಿ ಒಂದು (ದೇವಾಲಯ) ಮಂಟಪ ಅಥವಾ ಸಭಾಗೃಹವನ್ನು ಕಟ್ಟಬೇಕು ಎಂದು ಮಾತ್ರ ಇದರಲ್ಲಿದ್ದು (೧೬೦-೬೧), ಉಳಿದದ್ದನ್ನು ಹಿಂದೆ ಹೇಳಿದಂತೆ ಮಾಡಿ ಎಂದಿದೆ (೧೬೩). ನಕ್ಷೆಯಲ್ಲಿರು ವಂತೆ, ಗ್ರಾಮದ ಮಧ್ಯೆ ಮಂಟಪವಿದ್ದು, ಅದರ ಸುತ್ತ ಪದ್ಮದಂತೆ ೮ ಮೂಲೆಗಳಲ್ಲಿ ಶಿವ ಮತ್ತು ವಿಷ್ಣು ದೇವಾಲಯ ಗಳು ಪಕ್ಕಪಕ್ಕ/ಎದುರು ಬದುರಾಗಿವೆ. ಪಶ್ಚಿಮ ದಿಕ್ಕಿನ ವಿಷ್ಣು-ಶಿವ ದೇವಾಲಯಗಳ ಮಧ್ಯೆ ಸ್ವಲ್ಪ ಪಕ್ಕದಲ್ಲಿ ಅರಮನೆ ಇದೆ. ಲಕ್ಷ್ಮೀ ಸರಸ್ವತೀ ದೇವಾಲಯಗಳು ಉತ್ತರದಲ್ಲಿರುವುವು. ವಸತಿ ಸ್ಥಾನಗಳು ಬಹುಪಾಲು ನಂದ್ಯಾವರ್ತದಂತೇ ಇರುವುದು ಕಂಡುಬರುತ್ತದೆ (ಬೀದಿ ವಿವರ ೧೬೧-೬೨).

ಸ್ವಸ್ತಿಕ ಗ್ರಾಮ : ಈ ಪ್ರಕಾರದ ಗ್ರಾಮವು ಚೌಕಾಕಾರ ವಾಗಿದ್ದು, ಇದಕ್ಕಾಗಿ 'ಪರಮಶಾಯಿಕಾ' (೮೧ ಪದ) ವಾಸ್ತುಮಂಡಲವನ್ನು ಬಳಸಬಹುದಾಗಿದೆ (೧೬೪). ಇದರ ಬೀದಿಗಳು ಸ್ವಸ್ತಿಕಾಕಾರದಲ್ಲಿರಬೇಕೆಂಬುದು ಮುಖ್ಯ (೧೬೫,೧೬೯). ಇದರ ವಿಸ್ತಾರವು ೨೦೧ ದಂಡದಿಂದ ೨೦೦೧ ದಂಡದವರೆಗೂ ಇರಬಹುದು ಹಾಗೂ ಇವುಗಳನ್ನು ೨೦ ದಂಡದಂತೆ ಹೆಚ್ಚಿಸುತ್ತಾ ವಿವಿಧ ವಿಸ್ತಾರಗಳನ್ನು ಪಡೆಯಬಹುದು (೨೧-೨೨). ಇದು ರಾಜರ ವಾಸಕ್ಕೆ ಯೋಗ್ಯವಾದುದು ಹಾಗೂ ಎಲ್ಲಾ ವರ್ಗದ ಜನರೂ ಇಲ್ಲಿರ ಬಹುದು (೧೮೨). ದೇವತಾಸ್ಥಾನಗಳ ಬಗ್ಗೆ ಹೇಳುವುದಾದರೆ, ಮಿತ್ರ (ಪಶ್ಚಿಮ, ವರುಣ (ಪಶ್ಚಿಮ), ವಿದಸ್ವತ್ (ದಕ್ಷಿಣ), ಇಂದ್ರ (ನೈಋತ್ಯ) ಮತ್ತು ಮಹೇಂದ್ರ (ಪೂರ್ವ) ಪದಗಳಲ್ಲಿ, ಸ್ಥಾನೀಯ ಮುಂತಾದ ೪ ಉಪ ಪ್ರಕಾರದ ಸ್ಥಾನಗಳಲ್ಲಿ ಸ್ಥಾಪಿಸಬೇಕು (೧೯೧). ಶಿವನ ದೇವಾಲಯವನ್ನು (ಬಹುಪಾಲು ನಂದ್ಯಾವರ್ತದಲ್ಲಿ ಹೇಳಿರುವಂತೆ) ಇಂದ್ರ (ನೈಋತ್ಯ), ಇಂದ್ರಜಯ (ನೈಋತ್ಯ), ರುದ್ರ (ವಾಯವ್ಯ), ರುದ್ರಜಯ (ವಾಯವ್ಯ), ಆಪವತ್ಸ್ಯ (ಈಶಾನ್ಯ), ಅಪವತ್ಸ (ಈಶಾನ್ಯ), ಜಯಂತ 'ಪದ'ಗಳಲ್ಲಿ (ಈಶಾನ್ಯ) ಎಲ್ಲಿಯಾದರೂ ಸ್ಥಾಪಿಸಬಹುದು ಹಾಗೂ ಗ್ರಾಮಕ್ಕೆ ಇದು ಬಹಿರ್ಮುಖವಾಗಿರಬೇಕು. (೧೯೨-೧೯೩). ದುರ್ಗಾ ಮತ್ತು ಗಣೇಶನ ದೇವಾಲಯಗಳು ೮ ದಿಕ್ಕುಗಳಲ್ಲೂ (೧೯೫), ಕಾರ್ತಿಕೇಯನ ದೇವಾಲಯವು ಸುಗ್ರೀವ (ನೈಋತ್ಯ) ಪದದಲ್ಲೂ (೧೯೫), ಜ್ವರದೇವನ ದೇವಾಲಯವು ಅಗ್ನಿ ಅಥವಾ ಪೂಷನ (ಆಗ್ನೇಯ) ಭಾಗದಲ್ಲೂ (೧೯೬) ಇರಬೇಕೆಂದು ಗ್ರಂಥವು ಹೇಳಿದೆ. ಭೈರವನ ದೇವಾಲಯವು ಊರ ಗೋಡೆಯಿಂದ ದೂರದಲ್ಲಿ ೪ ದಿಕ್ಕಿನ ದ್ವಾರಗಳಲ್ಲಿ ಯಾವುದಾದರೊಂದು ದ್ವಾರದ ಪಕ್ಕದಲ್ಲಿ ಇರಬೇಕು (೧೯೪). ಭಾಸ್ಕರ ದೇವನನ್ನು ಆದಿತ್ಯ (ಪೂರ್ವ) ಭಾಗದಲ್ಲಿ (೧೯೬), ಭುವನೇಶನ ದೇವಾಲಯವನ್ನು ಸೋಮ ಅಥವಾ ಮುಖ್ಯ ಪದದಲ್ಲೂ ಸ್ಥಾಪಿಸಬೇಕು (೧೯೭). ಭೃಂಗರಾಜ ಅಥವಾ ವಿತಥ ದಲ್ಲಿ ನಾಗ ದೇವಾಲಯವಿರಬೇಕು (೧೯೪). ಬೌದ್ಧರ ದೇವಾಲಯವು ವಾಯು ಪದದಲ್ಲೂ, ಜಿನಾಲಯವು ನೈಋತ್ಯದಲ್ಲೂ ಇರಬೇಕು (೧೯೩). ಈ ಎಲ್ಲಾ ಪದಗಳಲ್ಲಿ (?) ಅಥವಾ ಮಧ್ಯದಲ್ಲಿ ವಿಷ್ಣು ಅಥವಾ ರುದ್ರನ ದೇವಾಲಯ ವನ್ನು ನಿರ್ಮಿಸಬೇಕು (೧೯೭) (ಈ ದೇವಾಲಯಗಳ ಸುತ್ತ ಮನೆಯನ್ನು ಕಟ್ಟಬೇಕು (೧೯೮). ಹೀಗೆ, ಗ್ರಾಮದೊಳಗಿನ ದೇವಾಲಯಗಳ ಸ್ಥಾನಗಳ ಬಗ್ಗೆ ಹೇಳಿರುವ ಮಾನಸಾರವು, ಗ್ರಾಮದ ಹೊರಗಿನ ದೇವಾಲಯಗಳನ್ನು ಅವರವರ ಇಷ್ಟದಂತೆ ಮಾಡಬೇಕೆಂದು ಹೇಳಿದೆ (೧೯೯). ಪಾಶುಪತ

ಲಿಂಗವುಳ್ಳ ದೇವಾಲಯವನ್ನು ನಿರ್ಮಿಸಬೇಕೆಂದರೆ, ಅದನ್ನು ಮಾತ್ರ ಗ್ರಾಮದೊಳಗೆ ಮಾಡಿ, ಉಳಿದ ಶಿವ ದೇವಾಲಯ ಗಳನ್ನು ಊರ ಹೊರಗೆ ಮಾಡಬೇಕೆಂದೂ ಇದರಲ್ಲಿದೆ (೨೦೦–೨೦೧). ಅಲ್ಲದೆ, ವೈಖಾನಸ (ಬ್ರಹ್ಮ)ನ ದೇವಾಲಯ ವನ್ನು ಹಾಗೂ ವಿಷ್ಣುವಿನ ದೇವಾಲಯವನ್ನು ಗ್ರಾಮದೊಳಗೆ ಸ್ಥಾಪಿಸಿ, ಪಾಂಚರಾತ್ರ ವಿಷ್ಣು ದೇವಾಲಯವನ್ನು ಗ್ರಾಮದ ಹೊರಗೆ ಸ್ಥಾಪಿಸಬೇಕೆಂದು ಮಾನಸಾರವು ಹೇಳಿದೆ (೨೦೧–೨೦೨). ಒಂದೆಡೆ, ದುರ್ಗಾ, ಗಣಪತಿ, ಬುದ್ಧ, ಜಿನ, ಕಾರ್ತಿಕೇಯ ಮುಂತಾದ ದೇವಾಲಯಗಳು ಊರೊಳಗೆ ಇರಬೇಕೆಂದು ಹೇಳಿರುವ ಮಾನಸಾರವು (೧೯೩–೧೯೫), ಇನ್ನೊಂದೆಡೆ, ಅವುಗಳನ್ನು ಊರ ಹೊರಗೂ ಸ್ಥಾಪಿಸಬಹು ದೆಂದಿದೆ. ಇವುಗಳನ್ನು ಇಷ್ಟ ಬಂದಲ್ಲಿ ಗ್ರಾಮದ ಯಾವ ಭಾಗದಲ್ಲಾದರೂ ಸ್ಥಾಪಿಸಬಹುದೆಂದೂ ಸ್ಪಷ್ಟಪಡಿಸಿದೆ (೨೦೨–೨೦೪). ಗ್ರಾಮದಿಂದ ಹೊರಗೆ ಅಥವಾ ಬಹಳ ದೂರದಲ್ಲಿ (ಪೂರ್ವದಲ್ಲಿ/ಈಶಾನ್ಯದಲ್ಲಿ) ಚಾಮುಂಡಾಲಯ ವನ್ನು ಉತ್ತರಾಭಿಮುಖವಾಗಿ ನಿರ್ಮಿಸಬೇಕು (೨೦೪೧–೨೦೫). ಈ ದೇವಾಲಯದಿಂದ ಪೂರ್ವಕ್ಕೆ ಚಾಂಡಾಲರ ಕುಟೀರವಿರಬೇಕು (೨೦೫). (ದತ್ ಅವರು ಭಾರತೀ ದೇವಾಲಯುವು 'ಆದಿತ್ಯ' ಪದದಲ್ಲಿರಬೇಕೆಂದು ಹೇಳಿರುವರಾದರೂ (P-233), ಮಾನಸಾರದಲ್ಲಿ, ಅಲ್ಲಿ ಭಾಸ್ಕರನ ದೇವಾಲಯುವಿರಬೇಕೆಂದಿದೆ; ಭಾರತೀ ದೇವಾಲಯದ ಉಲ್ಲೇಖವಿಲ್ಲ). ದೇವಾಲಯಗಳ ಬಗ್ಗೆ ಸಾಕಷ್ಟು ವಿವರಗಳಿದ್ದರೂ, ಗ್ರಂಥದಲ್ಲಿ ಈ ಗ್ರಾಮವು ರಾಜರಿಗೇ ವಿಶೇಷವಾದುದರಿಂದಲೋ ಏನೋ, ವಸತಿ ಸ್ಥಾನಗಳ ಬಗ್ಗೆ ಹೆಚ್ಚಿನ ವಿವರ ನೀಡಿಲ್ಲ (ನಕ್ಷೆಯಲ್ಲೂ ತೋರಿಸಿಲ್ಲ).

ಪ್ರಸ್ತರಗ್ರಾಮ : ಮಾನಸಾರವು ಹೇಳುವ ೬ನೇ ಪ್ರಕಾರದ ಗ್ರಾಮ. ಇದರ ಆಕಾರವು ಚೌಕ ಅಥವಾ ಆಯತಾಕಾರ ವಾಗಿಬೇಕು ಹಾಗೂ ಪ್ರಸ್ತರಾಕೃತಿ (couch)ಯಲ್ಲಿರಬೇಕು (೨೦೮). ಈ ಪ್ರಕಾರದ ಗ್ರಾಮಕ್ಕೆ ಚಂಡಿತ (೬೪ ಪದ), ಸ್ಥಂಡಿಲ (೪೯ ಪದ) ಪರಮಶಾಯಿಕಾ (೮೧) ಅಥವಾ ಇನ್ನಾವುದೇ ಇಷ್ಟವಾದ ಮಂಡಲವನ್ನು ಬಳಸಬಹುದು (೨೦೯–೧೦). ಈ ಗ್ರಾಮವು ರಾಜ (ಕ್ಷತ್ರಿಯರಿಗೆ) ಮತ್ತು ವೈಶ್ಯರಿಗೆ ಸೂಕ್ತವಾದುದು (೨೦೯). ನಕ್ಷೆಯಲ್ಲಿರುವಂತೆ, ಗ್ರಾಮ ಮಧ್ಯದಲ್ಲಿ ಎದಿರು ಬದಿರಾಗಿ ಶಿವ, ವಿಷ್ಣು ದೇವಾಲಯಗಳು ಇರುವವು. ನೈಋತ್ಯ ಮತ್ತು ವಾಯವ್ಯದಲ್ಲಿ ಕ್ರಮವಾಗಿ ಜೈನ–ಬೌದ್ಧ ದೇವಾಲಯಗಳಿರುವುದು. 'ಪದ್ಮಕ' ಗ್ರಾಮದಲ್ಲಿರುವಂತೆ ಇದರಲ್ಲೂ, ಉತ್ತರದಲ್ಲಿ ಲಕ್ಷ್ಮೀ ಮತ್ತು ಸರಸ್ವತೀ ದೇವಾಲಯಗಳಿವೆ. ವಸತಿ ಸ್ಥಾನಗಳ ಬಗ್ಗೆ ಹೇಳುವುದಾದರೆ, ಶಿವನ ದೇವಾಲಯದ ಪಶ್ಚಿಮದಲ್ಲಿ ಅರ್ಚಕರ ವಸತಿಯೂ, ವಿಷ್ಣು ದೇವಾಲಯದ ದಕ್ಷಿಣದಲ್ಲಿ ಬ್ರಾಹ್ಮಣರ ವಸತಿಯೂ ಇದೆ. ದತ್ ಅವರು ಹೇಳಿದಂತೆ (P-237) ಉತ್ತರದಲ್ಲಿ ಮಾತ್ರವಲ್ಲದೆ, ಗ್ರಾಮದ ಬೇರೆ ಬೇರೆ ಭಾಗಗಳಲ್ಲೂ ವೈಶ್ಯರ ವಸತಿ ಇದೆ (೨೨೩). ಉತ್ತರದ ಒಂದು ಭಾಗದಲ್ಲಿ ಕ್ಷತ್ರಿಯರ ವಸತಿ ಸ್ಥಾನವಿದೆ. ಅಲ್ಲೇ ವೈದ್ಯರ ವಸತಿಯೂ ಇದೆ. ಗ್ರಂಥದಲ್ಲಿ ಹೇಳಿರುವಂತ (೨೨೩), ಕರ್ಮಚಾರಿಗಳ ಮನೆಯು ಪೈಶಾಚ ಸುತ್ತಿನಲ್ಲಿದೆ (ಬೀದಿ ವಿವರ ೨೧೦–೨೧).

ಕಾರ್ಮುಕಗ್ರಾಮ : ಇದು ಚೌಕಾಕಾರವಾಗಿರಬಹುದು ಅಥವಾ ಉದ್ದವು ಜಾಸ್ತಿಯಾಗಿರಬಹುದು. ಇದರ ವಿನ್ಯಾಸವು ಬಿಲ್ಲಿನಂತಿದ್ದು, ಇದು ಅರ್ಧವೃತ್ತಾಕಾರದಲ್ಲಿರುವುದೆಂದೂ ಹೇಳಲಾಗಿದೆ. ಇದನ್ನು ಸಮುದ್ರ ಅಥವಾ ನದೀ ದಂಡೆಯ ಮೇಲೆ ಕಟ್ಟಬೇಕು (೨೨೯). ಗ್ರಾಮದ ಹೊರ ಭಾಗದಲ್ಲಿ ಒಂದೊಂದು ಜೊತೆ ಬೀದಿಗಳು ಬಿಲ್ಲಿನಂತೆ ಕಾಣಬೇಕೆಂದೂ ಇದೆ (೨೩೧). ಗ್ರಾಮದ ಅಗಲವು ಕನಿಷ್ಠ ೬೫ ದಂಡದಿಂದ ಆರಂಭವಾಗಿ ಸಮ/ಬೆಸಸಂಖ್ಯೆಯ ೫೦೦ ದಂಡದವರೆಗೂ ಇರಬಹುದು. ಅದನ್ನು ೨ ದಂಡ ಹೆಚ್ಚಿಸುತ್ತಾ ವಿವಿಧ ಅಳತೆಗಳನ್ನು ಪಡೆಯಬಹುದು (೨೫–೨೭). ಇದರ ಉದ್ದವು ಅಗಲದಷ್ಟೇ ಇರಬಹುದು ಅಥವಾ ಎರಡರಷ್ಟಿರಬಹುದು. ಹೀಗೆ ಮಾಡುವಾಗ ೧೦೦ ದಂಡದಂತೆ ಹೆಚ್ಚಿಸುತ್ತಾ ಹೋಗಬೇಕು (೨೭). ಗ್ರಾಮದ ಪದ ವಿನ್ಯಾಸವನ್ನು ೪ ಮೂಲೆಗಳಲ್ಲಿ ಹಿಂದೆ ಹೇಳಿದಂತೆ ಮಾಡಬೇಕೆಂದೂ, ತಿಳಿದವರು ಅದನ್ನು ಗ್ರಾಮದ ಆಕಾರಕ್ಕೆ ಹೊಂದುವಂತೆ ಮಾಡಬೇಕೆಂದೂ ಗ್ರಂಥದಲ್ಲಿ ಹೇಳಿರುವುದು (೨೩೩) ಅಸ್ಪಷ್ಟವಾಗಿದೆ. ಈ ಪ್ರಕಾರದ ಗ್ರಾಮವು ವೈಶ್ಯರಿಗೆ ಸೂಕ್ತವಾದುದೆಂದೂ ಒಂದೆಡೆ ಹೇಳಿದೆ (೨೭). ಕಾರ್ಮುಕ ಗ್ರಾಮವನ್ನು ಪಟ್ಟಣ, ಖೇಟಕ, ಖರ್ವಟ ಎಂದು ೩ ರೀತಿಗಳಲ್ಲಿ ಮಾಡುತ್ತಾರೆ. ಅಲ್ಲಿ ವೈಶ್ಯ ಸಂಘದವರಿದ್ದರೆ, ಅದನ್ನು 'ಪಟ್ಟಣ' ಎಂದೂ, ಶೂದ್ರಸಂಘವಿದ್ದರೆ ಅದನ್ನು 'ಖೇಟಕ' ಎಂದೂ 'ಪ್ರಿಥುಲೋಮ ಸಂಘ' ಇದ್ದರೆ, ಅದನ್ನು 'ಖರ್ವಟ' ಎಂದೂ ಮಾನಸಾರವು ಗುರುತಿಸಿದೆ (೨೨೮–೨೨೯).

ದೇವಾಲಯಗಳಿಗೆ ಸಂಬಂಧಿಸಿದಂತೆ ಹೇಳುವು ದಾದರೆ, ಶಿವ ಮತ್ತು ವಿಷ್ಣು ದೇವಾಲಯಗಳನ್ನು ಹಿಂದೆಯೇ ಹೇಳಿದ 'ಪದ'ಗಳಲ್ಲಿ ಮಾಡಬೇಕು ಎಂದು ಗ್ರಂಥದಲ್ಲಿದೆ (೨೩೪). ಶಿವ ಮತ್ತು ವಿಷ್ಣು ದೇವಾಲಯವನ್ನು ಎರಡು ಬೀದಿಗಳು ಸಂಧಿಸುವ ಸ್ಥಳದಲ್ಲಿ ಮಾಡಬೇಕು ಅಥವಾ ಇವು, ಬೀದಿಗಳಿಲ್ಲದ ಸ್ಥಳದಲ್ಲೂ ಇರಬಹುದು (೨೩೫–

೨೩೬). ಗ್ರಾಮ ದ್ವಾರದಿಂದ ವಿಷ್ಣುವನ್ನು ನೋಡುವುದು ಒಳ್ಳೆಯದು. ಆದ್ದರಿಂದ ಅವನ ದೇವಾಲಯವು ಗ್ರಾಮಕ್ಕೆ ಬೆನ್ನು ಮಾಡಿರಬೇಕು (೨೩೬) ಎಂದೂ ಇದರಲ್ಲಿದೆ. ನಕ್ಷೆಯಂತೆ, ಎರಡೆರಡು ಶಿವ-ವಿಷ್ಣು ದೇವಾಲಯಗಳು ಗ್ರಾಮದ ಬೀದಿಗಳು ಕೂಡುವ ಸ್ಥಳದಲ್ಲಿವೆ. ಹಿಂದಿನಂತೇ ಶಿವನ ದೇವಾಲಯದ ಪಶ್ಚಿಮದಲ್ಲಿ ಅರ್ಚಕರ ವಸತಿಯೂ, ವಿಷ್ಣು ದೇವಾಲಯದ ಪೂರ್ವಕ್ಕೆ ಬ್ರಾಹ್ಮಣರ ವಸತಿಯೂ ಇದೆ. ವೈಶ್ಯರಿಗೆ ಸೂಕ್ತವಾದ ಗ್ರಾಮವಾದುದರಿಂದ ವೈಶ್ಯರ ವಸತಿಗೇ ಹೆಚ್ಚಿನ ಭಾಗವನ್ನು ನೀಡಲಾಗಿದೆ (ಶೂದ್ರರ ವಸತಿ ಸ್ಥಾನಗಳೂ ಇಲ್ಲಿವೆ). ಅಂಗಡಿ, ಉಗ್ರಾಣವನ್ನು ಉತ್ತರ ಭಾಗದಲ್ಲಿ ಸ್ಥಾಪಿಸುವ ಸೂಚನೆ ಇದರಲ್ಲಿದೆ. ಉಳಿದೆಲ್ಲ ಸ್ಥಳದಲ್ಲಿ ಬೇರೆ ವೃತ್ತಿಗಳವರ ವಸತಿ ಸ್ಥಾನವಿದೆ (ಬೀದಿ ವಿವರ ೨೩೦-೩೨).

ಚತುರ್ಮುಖ ಗ್ರಾಮ : ಮಾನಸಾರದಲ್ಲಿ ಕೊನೆಯದಾಗಿ ಹೇಳಿರುವ ಗ್ರಾಮ ಪ್ರಕಾರವೆಂದರೆ-ಚತುರ್ಮುಖ ಗ್ರಾಮ. ಇದು ಚೌಕ ಅಥವಾ ಆಯತಾಕಾರವಾಗಿರಬಹುದು; ಸುತ್ತಲ ಗೋಡೆಯೂ ಕೂಡಾ ಅದೇ ಆಕಾರದಲ್ಲಿರುತ್ತದೆ. ಇದರ ವಿಸ್ತಾರವು ಕನಿಷ್ಠ ೩೦ ದಂಡದಿಂದ ಗರಿಷ್ಠ ೧೦೦ ದಂಡದವರೆಗಿರುತ್ತದೆ. ಇದರ ನಡುವೆ ೨ ದಂಡ ಹೆಚ್ಚಿಸುತ್ತಾ ವಿವಿಧ ಅಳತೆಯನ್ನು ಪಡೆಯಬಹುದು (೨೭-೨೮). ಇದರ ಉದ್ದವು ಅಗಲದ ಎರಡರಷ್ಟಿರುತ್ತದೆ ಎಂದೂ ಒಂದೆಡೆ ಇದೆ (೨೯). ಈ ಗ್ರಾಮವು ಶೂದ್ರರಿಗೆ ಸೂಕ್ತವಾದುದು (೨೯). ವಿಷ್ಣು, ಶಿವ (ರುದ್ರ) ಮತ್ತು ಇತರ ದೇವರುಗಳ ಗುಡಿಯನ್ನು ಹಿಂದೆ ಹೇಳಿದ ಪದಗಳಲ್ಲಿ ಕಟ್ಟಬೇಕು ಮತ್ತು ಹೇಳದಿದ್ದನ್ನು ಹಿಂದಿನಂತೇ ಮಾಡಬೇಕು (೨೪೫-೨೪೬). ರುದ್ರ ಮತ್ತದರ ಪರಿವಾರ ದೇವತೆಗಳನ್ನು ಊರೊಳಗೆ ಸ್ಥಾಪಿಸಬೇಕು ಎಂದು ಒಂದೆಡೆ ಹೇಳಿದೆಯಾದರೂ (Dutt P-240), ಹಿಂದಿನದರಂತೇ, ಈ ಪ್ರಕಾರದ ಗ್ರಾಮದಲ್ಲಿ ಲಕ್ಷ್ಮೀ ಸರಸ್ವತೀ ದೇವಾಲಯಗಳಿರುವುದನ್ನು ನಕ್ಷೆಯಲ್ಲಿ ತೋರಿಸಲಾಗಿದೆ. ಈ ಕೃತಿಯಲ್ಲೇ ಹೇಳಿರುವಂತೆ, ಬ್ರಾಹ್ಮಣರ ಮನೆಗಳನ್ನು ಬ್ರಾಹ್ಮ, ದೈವ, ಮಾನುಷ, ಪೈಶಾಚ- ಈ ಭಾಗಗಳಲ್ಲಿ ನಿರ್ಮಿಸಬಹುದು. ಬ್ರಾಹ್ಮಣರ ಮನೆಯು ಆಗ್ನೇಯದಲ್ಲಿದ್ದರೆ, ಕ್ಷತ್ರಿಯ (ರಾಜ)ರ ಮನೆಯು ನೈಋತ್ಯದಲ್ಲೂ, ವೈಶ್ಯರ ವಸತಿಯು ವಾಯುವ್ಯದಲ್ಲೂ, ಶೂದ್ರರ ವಸತಿಯು ಈಶಾನ್ಯದಲ್ಲೂ ಇರಬೇಕು; 'ಪೈಶಾಚ' ಭಾಗದಲ್ಲಿ ಎಲ್ಲಾ ಕರ್ಮಚಾರಿಗಳ ಮನೆಯು ಇರಬೇಕು (೨೪೪-೨೪೫). ಈ ಪ್ರಕಾರದ ಗ್ರಾಮದಲ್ಲಿ ೩ ರೀತಿಗಳಿದ್ದು, ಶೂದ್ರರ ಗುಂಪು ಹೆಚ್ಚಾಗಿದ್ದರೆ, ಅದಕ್ಕಾಗಿ 'ಆಲಯ' ಎಂಬ ರೀತಿಯನ್ನೂ, ಬ್ರಾಹ್ಮಣರ ಗುಂಪು ಹೆಚ್ಚಾಗಿದ್ದರೆ ಅವರಿಗಾಗಿ 'ಪದ್ಮ' ಎಂಬ ರೀತಿಯನ್ನೂ, ವೈಶ್ಯರ ಗುಂಪು ಹೆಚ್ಚಾಗಿದ್ದರೆ, ಅದಕ್ಕೆ 'ಕೋಟಕ' ಎಂಬ ರೀತಿಯ ಗ್ರಾಮವನ್ನೂ ನಿರ್ಮಿಸಬೇಕೆಂದೂ ಇದರಲ್ಲಿದೆ (೨೪೨-೪೩).

ಹೀಗೆ, ೮ ರೀತಿಯ ಗ್ರಾಮಗಳ ಬಗ್ಗೆ ಪೂರ್ಣ ವಿವರಗಳನ್ನು ಗ್ರಂಥವು ನೀಡಿದೆ. ಈ ಎಲ್ಲಾ ಗ್ರಾಮ ವಿವರಗಳೊಂದಿಗೆ ಮಾನಸಾರ ಗ್ರಂಥವು ಕೆಲವು ಸೂಚನೆಗಳನ್ನು ನೀಡಿದೆ: ಈಗಾಗಲೇ ಹೇಳಿರುವ ಭಾಗಗಳಲ್ಲದೆ, ಬೀದಿಯ ಶೀರೋಭಾಗ, ಮಧ್ಯೆ ಹಾಗೂ ಅಂತ್ಯದಲ್ಲಿ ಅಥವಾ ಎರಡು ಬೀದಿಗಳು ಸೇರುವೆಡೆಯಲ್ಲಿ (interspace)ಯೂ ದೇವಾಲಯವನ್ನೂ, ಅದರ ಸುತ್ತ ಮನೆಗಳನ್ನೂ ನಿರ್ಮಿಸಬಹುದು (೨೫೬-೨೫೭). ಹೆಚ್ಚು ದಟ್ಟಣೆ ಇರುವ ಯಾನ (conveyance)ಕ್ಕಾಗಿ ಮಾಡಿರುವ ಬೀದಿಗಳು ಇಲ್ಲದ ಭಾಗಗಳಲ್ಲಿ ಮನೆಗಳನ್ನು ಕಟ್ಟಬೇಕು (೨೪೭-೮). ಅನುಮಾನವಿದ್ದರೆ, ಕಟ್ಟಡಗಳ ಸ್ಥಾನವನ್ನು ಪ್ರಾಚೀನ ಗ್ರಾಮಗಳಲ್ಲಿರುವ ಪದ್ಧತಿಗೆ ಅನುಗುಣವಾಗಿ ಆ ಸ್ಥಾನದಲ್ಲಿ ಮಾಡಬೇಕು; ಆದರೆ, ಗ್ರಾಮವು ಮುಂದೆ ವಿಸ್ತೃತವಾಗುವುದರ ಬಗ್ಗೆಯೂ ಗಮನವಿಟ್ಟಿರಬೇಕು. ಹಿಂದೆ, ದೇವರುಗಳನ್ನು ವಿಶೇಷ ಹಬ್ಬದ ಸಂದರ್ಭದಲ್ಲಿ ಮಾತ್ರ ಸ್ಥಾಪಿಸುತ್ತಿದ್ದು, ಅದಕ್ಕಾಗಿ ಪ್ರತ್ಯೇಕ ಸ್ಥಳವನ್ನು ಬಿಟ್ಟಿರುತ್ತಿದ್ದರು. ಆದರೆ ಈಗ ಮನೆಗಳನ್ನು ಸರಿಯಾದ ಸ್ಥಾನದಲ್ಲಿ ಕಟ್ಟಬೇಕಾಗಿದೆ. ಹಿಂದೆ, ಪ್ರಾಚೀನ ಗ್ರಾಮಗಳಲ್ಲಿ ದೇವರಿಗೆಂದು ಆಲಯಗಳನ್ನು ಕಟ್ಟುವುದು ಅನಿವಾರ್ಯವಾಗಿರಲಿಲ್ಲ (ಈಗ ಹಾಗಲ್ಲ). ಆದ್ದರಿಂದ, ಇವುಗಳನ್ನು ಗಮನದಲ್ಲಿಟ್ಟುಕೊಂಡೇ ಮನೆಗಳ ಸ್ಥಾನವನ್ನು ನಿರ್ಣಯಿಸಬೇಕಾಗಿದೆ (೨೪೮-೨೫೧). ಮನೆಗಳ ದ್ವಾರದ ಬಗ್ಗೆಯೂ ಗ್ರಂಥದಲ್ಲಿ ವಿವರಗಳಿವೆ.

ಹಳೆಯ ಕಟ್ಟಡ/ದೇವಾಲಯವನ್ನು ನಾಶ ಮಾಡಬಾರದು. ಹೇಗಿದೆಯೋ ಹಾಗೆಯೇ ಇಟ್ಟುಕೊಳ್ಳಬೇಕೆಂದು ಗ್ರಂಥವು ಸೂಚಿಸಿದೆ (೨೫೯). ಈ ಮೊದಲು, ಎಲ್ಲಾ ಗ್ರಾಮಕ್ಕೆ ಹೇಳಿರುವ ಮನೆಗಳ ವ್ಯವಸ್ಥೆಯನ್ನು, ಪ್ರಾಚೀನ ಗ್ರಾಮವನ್ನು ಪುನರ್ಯೋಜನೆ/ಪುನರ್ವ್ಯವಸ್ಥೀಕರಣ ಮಾಡುವಾಗಲೂ ಅನುಸರಿಸಬೇಕು. ವಿಸ್ತರಣೆಯು ಪೂರ್ವ ಅಥವಾ ಉತ್ತರ ದಿಕ್ಕಿಗೆ ಆದರೆ ಒಳ್ಳೆಯದು; ದಕ್ಷಿಣ ಅಥವಾ ಪಶ್ಚಿಮದ ಕಡೆಗಾದರೆ ಒಳ್ಳೆಯದಲ್ಲ. ಮೂಲಕ್ಷೇತ್ರವು ಕಡಿಮೆಯಾಗದಂತೆ ಮತ್ತು ಆ ಕಾಲ ಮತ್ತು ಸ್ಥಳದ ಪದ್ಧತಿಗೆ ಅನುಗುಣವಾಗುವಂತೆ ಇದ್ದರೆ, ಯಾವ ದಿಕ್ಕಿಗಾದರೂ ವಿಸ್ತರಣೆ ಆಗಬಹುದೆಂಬ ಸೂಚನೆಯೂ ಇದರಲ್ಲಿದೆ (೨೬೨-೪). ಈ ಎಲ್ಲಾ ನಿಯಮಗಳಂತೆ ಮಾಡಿದರೆ ಒಳ್ಳೆಯದು ಮತ್ತು ಅಭಿವೃದ್ಧಿಯಾಗುತ್ತದೆ (೨೬೭). ಹೊಸದಾಗಿ ಗೋಡೆಗಳನ್ನು ನಿರ್ಮಿಸುವುದರಿಂದ, ಹೆಚ್ಚು

ಪ್ರದೇಶಗಳನ್ನು ಗ್ರಾಮಕ್ಕೆ ಸೇರಿಸುತ್ತಾ, ಗ್ರಾಮವನ್ನು ವಿಸ್ತರಿಸಬಹುದೆಂದೂ, ಈ ರೀತಿ ೮–೧೨ ಗೋಡೆಗಳಿರಬಹುದೆಂದೂ ಒಂದೆಡೆ ಹೇಳಲಾಗಿದೆ (Dutt-P.237). ಆದರೆ ಗೋಡೆಗಳ ಆಕಾರವು ಮಾತ್ರ ಮೂಲಗ್ರಾಮದ ಆಕಾರದಲ್ಲೇ ಇರಬೇಕು (Ibid). ಗ್ರಾಮ ನಿರ್ಮಾಣದ ಸಂದರ್ಭದಲ್ಲಿ/ ಕಟ್ಟಡ ನಿರ್ಮಾಣದ ಬಗ್ಗೆ ಅನುಸರಿಸಬೇಕಾದ ಕೆಲವು ನಿಯಮಗಳಿದ್ದು, ಗ್ರಂಥಗಳು ನೀಡಿದ್ದು, ಆ ಬಗ್ಗೆ ದತ್ ಅವರು ವಿವರಿಸಿದ್ದಾರೆ (Ibid-P.246-60).

ಗ್ರಾಮಗಳ ವಿವಿಧ ಪ್ರಕಾರಗಳ ಬಗ್ಗೆ ಇರುವ ಈ ವಿವರಗಳನ್ನು ಗಮನಿಸಿದಾಗ ಕಂಡುಬರುವ ಅಂಶಗಳೆಂದರೆ, ವಿವಿಧ ಪ್ರಕಾರಗಳನ್ನು ಹೆಸರಿಸುವಲ್ಲಿ ಗ್ರಂಥಗಳಲ್ಲಿ ವ್ಯತ್ಯಾಸಗಳಿವೆ (ಮಯಮತವು ವಿವಿಧ ಪ್ರಕಾರಗಳನ್ನು ಪಟ್ಟಿಯಲ್ಲಿ ನೀಡಿದ್ದರೂ, ಅದಕ್ಕೆ ಸಂಬಂಧಿಸಿದಂತೆ ವಿವಿಧ ಲಕ್ಷಣಗಳನ್ನು ಹೇಳಿಲ್ಲ; ಒಟ್ಟಾರೆ ಗ್ರಾಮ ಸ್ವರೂಪವನ್ನು ಹೇಳಿದೆ). ಗ್ರಾಮದ ಆಕಾರ ಮತ್ತು ಅವಶ್ಯಕತೆಗೆ ಅನುಗುಣವಾಗಿ ಅದರದೇ ಆದ ನಕ್ಷೆ ಇರುತ್ತದೆ. ಗ್ರಾಮದ ವಿವಿಧ ವಿಸ್ತಾರವನ್ನು ಪಡೆಯುವಲ್ಲಿ ೨ ದಂಡ ಹೆಚ್ಚಿಸುತ್ತಾ ಹೋಗಬೇಕು. ಒಂದೊಂದು ಗ್ರಾಮ ಪ್ರಕಾರಕ್ಕೂ ಒಂದೊಂದು ಉದ್ದೇಶವಿದೆ. ಗ್ರಾಮದ ಮಧ್ಯೆ ದೇವಾಲಯವನ್ನು ಹೇಳಿದ್ದು, ಇದು ಶಿವ, ವಿಷ್ಣು, ಬ್ರಹ್ಮ–ಯಾವುದೂ ಆಗಿರಬಹುದು; ಎಲ್ಲದಕ್ಕೂ ಪ್ರತ್ಯೇಕ ವಿವರಗಳಿವೆ. ಅವರವರ ವೃತ್ತಿಗನುಗುಣವಾಗಿ ಬೇರೆ ಬೇರೆ ಭಾಗಗಳಲ್ಲಿ ವಸತಿ ವ್ಯವಸ್ಥೆಯನ್ನು ಮಾಡಿರುವುದು ಗಮನಾರ್ಹ ವಾಗಿದೆ. ಗ್ರಾಮ ವಿಸ್ತರಣೆಯ ಬಗ್ಗೆಯೂ ವಿವರ ನೀಡಿರುವುದೂ ಮುಖ್ಯವೆನಿಸುತ್ತದೆ. ಗ್ರಂಥಗಳಲ್ಲಿ ಗ್ರಾಮ ವಿನ್ಯಾಸದ ಬಗ್ಗೆ ಹೆಚ್ಚು ವಿವರವಿಲ್ಲ ಎಂದಿರುವ ಅಮಿತ ರೇ ಅವರು, ಮಾನಸಾರದಲ್ಲಿ ವಿವರಗಳಿದ್ದರೂ, ಅವು, 'Concern themselves more with abstract ideas than with actual concrete village planning' (P-31) ಎಂದಿದ್ದಾರೆ. ಆದರೆ ಒಂದೆಡೆ, ಗ್ರಾಮ ವಿಸ್ತರಣೆಯ ಬಗ್ಗೆ ಹೇಳುವಾಗ, ದತ್ ಅವರು, 'Even in modern times arrengements like the above are made in all important town extensions where there are assigned separate sites for houses, colleges & bungalows in certain prescribed dimensions for each class (P-237) ಎಂದಿದ್ದಾರೆ. ಅಲ್ಲದೆ, ಕೆಲವು ಗ್ರಾಮಗಳ ವಿಶ್ಲೇಷಣೆಯನ್ನೂ ಮಾಡಿದ್ದಾರೆ. ಪ್ರಾಚೀನ ಗ್ರಾಮಗಳ ಸ್ವರೂಪವು (Prototype) ಇನ್ನೂ ಉಳಿದು ಬಂದಿರುವುದಾಗಿ ಅಯ್ಯರ್ ಅವರು ಹೇಳಿದ್ದಾರೆ (Qtd-Dutt-P-246). ಇವುಗಳನ್ನು ಗಮನಿಸಿದರೆ, ಮಾನಸಾರದ ವಿವರಗಳು ಅನುಸರಣೀಯವಾಗಿದ್ದು, ಆ ಕಾಲಕ್ಕೆ ಇದ್ದ ಗ್ರಾಮ ರಚನೆಗಳನ್ನೂ ಗಮನಿಸಿದಂತಿದೆ. ಹೆಚ್ಚಿನ ತೌಲನಿಕ ಅಧ್ಯಯನದಿಂದ ಈ ಬಗ್ಗೆ ಇನ್ನೂ ಸ್ಪಷ್ಟವಾಗಿ ಹೇಳಬಹುದಾಗಿದೆ.

ಆಧಾರಸೂಚಿ

೧. Dutt, B.B -*Town Planning in Ancient India,* Isha Books, Delhi - 2009.

೨. P.K. Acharya (Ed) -*Manarara - On Architecture and Sculpture* - Manasara Series-Vol III, New Delhi - 1995.

೩. P.K. Acharya -*Architecture of Manasara* (Trsln) - Manasara Series Vol-IV, New Delhi - 1994.

೪. P.K. Acharya -*Architecture of Manasara* (Diagrams) - Manasara Series, Vol-V.

ಬೆಳಗಾವಿ ಜಿಲ್ಲಾ ಪ್ರದೇಶದ ದೇವಾಲಯ ವಾಸ್ತುಶಿಲ್ಪ ಒಂದು ವಿಶ್ಲೇಷಣೆ

ಡಾ. ಸ್ಮಿತಾ ಸುರೇಬಾನಕರ*

ಪೀಠಿಕೆ

ಮನಮೋಹಕ ಪ್ರಾಕೃತಿಕ ರಚನೆ, ಹಿತಕರವಾದ ಹವಾಗುಣ, ಸುಸಂಸ್ಕೃತ ಜನಸಮುದಾಯದ ಹೂರಣವಾದ ಬೆಳಗಾವಿ ಮಿಶ್ರ ಸಂಸ್ಕೃತಿಯ ಆಗರ. ಐತಿಹಾಸಿಕ, ಧಾರ್ಮಿಕ, ಸಾಮಾಜಿಕ ಶ್ರೀಮಂತಿಕೆಯಂತೆಯೇ ಸಾಂಸ್ಕೃತಿಕ ಶ್ರೀಮಂತಿಕೆಯ ಕರ್ನಾಟಕಂತರ್ಗತ ಬೆಳಗಾವಿ ಜಿಲ್ಲಾ ಪ್ರದೇಶ ವಾಸ್ತುಶಿಲ್ಪ ಪರಂಪರೆಯಲ್ಲಿಯೂ ಶ್ರೀಮಂತ, ಸಮೃದ್ಧ ನಾಡು. ಜಿಲ್ಲೆಯಾದ್ಯಂತ ಪಸರಿಸಿರುವ ಅಸಂಖ್ಯ ಸ್ಮಾರಕಗಳು ಬೆಳಗಾವಿಯ ಸಾಂಸ್ಕೃತಿಕ ನೆಲೆಗಟ್ಟನ್ನು ಸಾರಿ ಹೇಳುತ್ತವೆ.

ಇತಿಹಾಸದ ಹೆಜ್ಜೆಗುರುತುಗಳು, ಸಂಸ್ಕೃತಿಯ ಪಡಿಯಚ್ಚುಗಳು, ನಾಗರೀಕತೆಯ ಕುರುಹುಗಳು ಎನಿಸಿದ ನಾಡಿನ ಸ್ಮಾರಕಗಳು ಬೆಳಗಾವಿ ಜಿಲ್ಲಾ ಪ್ರದೇಶದಲ್ಲಿ ಗಾತ್ರ, ಸಂಖ್ಯೆ, ಗುಣವೈಶಿಷ್ಟ್ಯ, ವಾಸ್ತುಶಿಲ್ಪ ಶೈಲಿ, ವೈವಿಧ್ಯತೆ, ಸಾಂಸ್ಕೃತಿಕ ಮೌಲ್ಯ-ಈ ಎಲ್ಲ ದೃಷ್ಟಿಯಿಂದ ಕುತೂಹಲ ಮೂಡಿಸಿವೆ. ವಾಸ್ತುಶಿಲ್ಪ ಪರಂಪರೆಯ ಅಧ್ಯಯನವನ್ನು ಪ್ರಾದೇಶಿಕ ಮಟ್ಟದಲ್ಲಿ ಕೈಗೊಳ್ಳುವುದರಿಂದ ಪ್ರಾದೇಶಿಕ ಭಿನ್ನತೆ, ವೈವಿಧ್ಯತೆಯನ್ನು ಬಿಂಬಿಸುವುದರ ಜೊತೆಗೆ ಪ್ರಾದೇಶಿಕ ಸೊಗಡನ್ನು ಈ ಸ್ಮಾರಕಗಳು ಸೂಸುತ್ತವೆ. ಆದರೆ ಬೆಳಗಾವಿ ಜಿಲ್ಲಾ ಪ್ರಾದೇಶಿಕ ವಾಸ್ತುಶಿಲ್ಪದ ಅವಲೋಕನಾತ್ಮಕ ವಿಶ್ಲೇಷಣೆ ಮಾಡುವ ಸಂದರ್ಭದಲ್ಲಿ ಸಮುದ್ರವನ್ನು ಕಲಶದಲ್ಲಿ ಹಿಡಿದಂತೆನಿಸಿ ಅಧ್ಯಯನದ ಅನುಕೂಲತೆಗಾಗಿ ಪ್ರಸ್ತುತ ಪ್ರಬಂಧ ವನ್ನು ದೇವಾಲಯ ವಾಸ್ತುಶಿಲ್ಪಕ್ಕೆ ಸೀಮಿತಗೊಳಿಸಲಾಗಿದೆ.

ಬೆಳಗಾವಿ ಜಿಲ್ಲೆಯ ವಾಸ್ತುಶಿಲ್ಪ ಪರಂಪರೆಯನ್ನು ಕಾಲಕ್ರಮಣಿಕೆ ಆಧಾರವಾಗಿ ಅಭ್ಯಸಿಸಬಹುದು. ಪ್ರಾಗೈತಿಹಾಸ ಕಾಲ, ಪ್ರಾಚೀನ ಕಾಲ, ಮಧ್ಯಯುಗೀನ ಕಾಲ ಮತ್ತು ಆಧುನಿಕ ಕಾಲವೆಂದು ವರ್ಗೀಕರಿಸಬಹುದು. ಅದರಲ್ಲಿ ಪ್ರಾಗೈತಿಹಾಸ ಯುಗದ ಕಲ್ಗೋರಿಗಳು, ಇತಿಹಾಸ ಪ್ರಾರಂಭಯುಗದ ಶಾತವಾಹನ ಕಾಲದ ವಡಗಾವ್-ಮಾಧವಪುರದ ವಾಸ್ತುಶಿಲ್ಪ ಕುರುಹುಗಳು, ಜೈನಕ್ಷೇತ್ರವೆನಿಸಿದ ಹಲಸಿಯ ಆದಿ ಕದಂಬ ಕಾಲೀನ ದೇವಾಲಯ, ಬಸದಿಗಳು, ಚಾಲುಕ್ಯ ಕಾಲೀನ ಅಸಂಖ್ಯಾತ ಶೈವ ದೇವಾಲಯಗಳು. ಮಧ್ಯಯುಗೀನ ಮುಸ್ಲಿಂ ಸ್ಮಾರಕಗಳಾದ, ದರ್ಗಾ, ಗೋರಿ, ಬುರುಜು ಮತ್ತು ಮಸೀದಿಗಳು. ಯುರೋಪಿಯನ್ ವಸಾಹತು ವಾಸ್ತುಶಿಲ್ಪ ಪ್ರತಿಬಿಂಬಿಸುವ ಅನೇಕಾನೇಕ ಇಗರ್ಜಿ, ಚರ್ಚುಗಳು, ಗೋಥಿಕ್ ಶೈಲಿಯ ಆಡಳಿತ ಕಚೇರಿ ಕಟ್ಟಡಗಳು, ಕಾರ್ಯನಿರ್ವಾಹಕ ಸೌಧಗಳಾದ ಅಂಚೆ-ಕಚೇರಿ, ರೈಲು ನಿಲ್ದಾಣ, ನ್ಯಾಯಾಲಯಗಳು ಮತ್ತು ಮಿಲಿಟರಿ ಸೌಧಗಳು ಇದಲ್ಲದೆ ರಕ್ಷಣಾವಾಸ್ತುಶಿಲ್ಪದ ವೈವಿಧ್ಯ ಬಿಂಬಿಸುವ ಜಿಲ್ಲೆಯಾದ್ಯಂತ ಹರಡಿಸುವ ವೈವಿಧ್ಯಮಯವಾದ ಕೋಟೆ ಕೊತ್ತಲಗಳು, ರಕ್ಷಣಾ ಗೋಡೆ ಮತ್ತು ಬುರುಜುಗಳು ಒಂದೆಡೆಯಾದರೆ ಇನ್ನೊಂದೆಡೆ ಪ್ರದೇಶವನ್ನಾಳಿದ ದೇಶಗತಿಯ ದೇಸಾಯಿ, ದೇಶಪಾಂಡೆ, ಸರದೇಶಪಾಂಡೆ, ಕುಲಕರ್ಣಿ, ಇನಾಮದಾರ, ನಾಯಕ, ಶಿಂಧೆ, ಭೋಸಲೆ ಅಧಿನಾಯಕರ ಭವ್ಯ ವಾಡೆಗಳು, ಅಚ್ಚ ದೇಶಿ ಪರಂಪರೆ ಸೂಸುವ ಜಮೀನದಾರರ ಭವ್ಯಸೌಧಗಳು, ಶೈಕ್ಷಣಿಕ ಸೌಧಗಳು ಇವೇ ಎಂಬಿತ್ಯಾದಿಯಾಗಿ ಅಭ್ಯಸಿಸುವ ಅವಶ್ಯಕತೆ ಇದೆ.

ಪ್ರಸ್ತುತ ಸಂದರ್ಭದಲ್ಲಿ ಬೆಳಗಾವಿ ಪ್ರಾದೇಶಿಕ ವಾಸ್ತುಶಿಲ್ಪ ಪರಂಪರೆಗೆ ದೇವಾಲಯ ವಾಸ್ತುಶಿಲ್ಪ ೧೦-೧೧ನೆಯ ಶತಮಾನದ ಕಾಲಘಟ್ಟದಲ್ಲಿ ಕಲ್ಯಾಣ ಚಾಲುಕ್ಯರ ಮತ್ತು ಅವರ ಅಧೀನತ್ವದ ಸಾಮಂತ ರಾಜರಿಂದ ನಿರ್ಮಾಣವಾದ ಜೈನ, ಶೈವ ಮತ್ತು ವೈಷ್ಣವ ದೇವಾಲಯಗಳ ವಾಸ್ತುಶಿಲ್ಪಶೈಲಿ, ವೈವಿಧ್ಯತೆ, ವೈಶಿಷ್ಟ್ಯತೆಗಳ ವಿಭಿನ್ನ ನಿಲುವಿನಲ್ಲಿ ಸಮೀಕ್ಷಾ ಸ್ವರೂಪದಲ್ಲಿ ಚಿಂತಿಸುವ ಪ್ರಯತ್ನ ಮಾಡಲಾಗಿದೆ. ದೇವಾಲಯ ವಾಸ್ತುಶಿಲ್ಪಶೈಲಿ, ಪ್ರಭೇದ, ಪ್ರಯೋಗ, ಸಂವಿಧಾನ, ಬೆಳಗಾವಿ ಪ್ರಾದೇಶಿಕ ವಾಸ್ತುಶಿಲ್ಪದ ಹರವು ಗುರುತಿಸಲಾಗಿದೆ.

ಬೆಳಗಾವಿ ಜಿಲ್ಲಾ ಪ್ರದೇಶದಲ್ಲಿ ವಾಸ್ತುಶಿಲ್ಪ ಪರಂಪರೆ

ಕುಂತಲನಾಡು, ಕುಹುಂಡಿ ಮಂಡಲ, ಕುಂದರ ನಾಡೆಂದು ಹೆಸರಿಸಿಕೊಂಡ ಬೆಳಗಾವಿ ಪ್ರದೇಶದಲ್ಲಿ ಕಳಚಿದ

* ಮುಖ್ಯಸ್ಥರು, ಇತಿಹಾಸ ವಿಭಾಗ, ರಾಣಿ ಪಾರ್ವತಿದೇವಿ ಮಹಾವಿದ್ಯಾಲಯ, ಬೆಳಗಾವಿ-೫೯೦೦೦೬

ಇತಿಹಾಸದ ಕೊಂಡಿಯನ್ನು ಗುರುತಿಸಬಹುದು. ಪ್ರಾಗೈತಿಹಾಸ ಕಾಲದಲ್ಲಿ ಮಾನವ ನೆಲೆಯ ಕುರುಹುಗಳನ್ನು ಜಿಲ್ಲೆಯ ಗೋಕಾಕ, ಕೊಣ್ಣೂರು, ತೋರಗಲ್, ಬೂದಿಹಾಳ, ಎಕ್ಷಂಬಾ, ಸತ್ತಿ, ಮಂಗಸೂಳಿ, ಖಾನಾಪೂರ ಸಮೀಪದ ಹಲಸಿ, ಹುಕ್ಕೇರಿ, ರಾಯಬಾಗ ಮುಂತಾದೆಡೆ ಶೋಧಿಸಲಾಗಿದೆ. ಕ್ರಿ.ಪೂ. ೮೦೦ರ ಕಾಲದ ಬೃಹದಾಕಾರದ ಕಲ್ಲು ಚಪ್ಪಡಿಗಳನ್ನು ಬಳಸಿ ನಿರ್ಮಿಸಿದ ಬೃಹತ್ ಶಿಲಾಯುಗದ ಕಂಡಿಕೋಣಿ ಗೋರಿಗಳು ನಿರ್ವಾಣಹಟ್ಟಿ, ಕೊಣ್ಣೂರು, ಹಲಸಿ ಮುಂತಾದೆಡೆ ದೊರೆಯುತ್ತವೆ. ಇವು ಸಾಂಸ್ಕೃತಿಕವಾಗಷ್ಟೇ ಅಲ್ಲದೇ ನಿರ್ಮಾಣ ತಂತ್ರಗಾರಿಕೆಗೂ ಉತ್ತಮ ಉದಾಹರಣೆಗಳು. ಇದೇ ರೀತಿ ಬೆಳಗಾವಿ ನಗರದ ಕೇಂದ್ರಭಾಗದಲ್ಲಿರುವ ಶಾತವಾಹನರ ನೆಲೆಯಾದ ವಡಗಾಂವ್ ಮಾಧವಪುರದ ಉತ್ಖನನಗಳಲ್ಲಿ ಎರಡು ಕೊಠಡಿಗಳು ಹಾಗೂ ಅವುಗಳಿಗೆ ಹೊಂದಿಕೊಂಡಿರುವ ಮೊಗಸಾಲೆಯಿದ್ದ ಮನೆಯ ಅಡಿಪಾಯದ ಅವಶೇಷಗಳು ಮತ್ತು ಇದರ ಪಕ್ಕದಲ್ಲಿರುವ ವೃತ್ತಾಕಾರದ ಗುಳಿ, ವಿಸ್ತಾರವಾದ ಸಭಾಂಗಣ ಮತ್ತು ಅದಕ್ಕೆ ಹೊಂದಿಕೊಂಡಿರುವ ವಾಸದ ಕೊಠಡಿಗಳು, ಧಾನ್ಯ ಶೇಖರಣೆಯ ಉಗ್ರಾಣ, ವೃತ್ತಾಕಾರದ ಬಾವಿ, ವಿವಿಧ ಬಗೆಯ ಕಟ್ಟಡಗಳ ಅವಶೇಷಗಳು ಮುಂತಾದವುಗಳು ಕಂಡು ಬಂದಿವೆ. ಶಾತವಾಹನ ಕಾಲದ ಇಟ್ಟಿಗೆ ಕಟ್ಟಡಗಳಿದ್ದ ಒಂದು ಪ್ರಾಚೀನ ಜನವಸತಿ ನಗರ ೨೦೦೦ ವರ್ಷಗಳಷ್ಟು ಮೊದಲೇ ಇತ್ತೆಂಬುದನ್ನು ಸಂಶೋಧನೆಗಳು ದೃಢಪಡಿಸಿವೆ. ಕ್ರಿ.ಶ. ೨ನೆಯ ಶತಮಾನಕ್ಕೆ ಸೇರಿದ ಈ ಕಟ್ಟಡಗಳ ಅವಶೇಷಗಳು ಜೊತೆಗೆ ಜೇಡಿಮಣ್ಣಿನಿಂದ ನಿರ್ಮಿಸಿದ ಪ್ರಾಚೀನ ಬೀದಿಯನ್ನು ಗುರುತಿಸಲಾಗಿದೆ. ಇದು ವಾಸ್ತುನಿರ್ಮಿತಿಯ ಜೊತೆಗೆ ನಗರ ಯೋಜನೆಯ ಸಿರಿವಂತ ಸಂಸ್ಕೃತಿಯ ಮೇಲೆ ಬೆಳಕು ಬೀರುತ್ತದೆ. ಮುಂದೆ ಕ್ರಿ.ಶ. ೪–೬ನೆಯ ಶತಮಾನದವರೆಗೆ ಆಳ್ವಿಕೆ ನಡೆಸಿದ ಬನವಾಸಿ ಕದಂಬರ ಸಾಂಸ್ಕೃತಿಕ ಪ್ರತೀಕವಾದ ದೇವಾಲಯ, ಬಸದಿ ಮತ್ತು ಕೋಟೆಗಳು ಹಲಸಿ ಮತ್ತು ಬೆಳಗಾವಿಯಲ್ಲಿ ದೊರೆಯುತ್ತವೆ. ಕರ್ನಾಟಕದ ಪ್ರಾಚೀನ ಜೈನಬಸದಿ ಎನಿಸಿದ ಹಲಸಿಯ ಜೈನಬಸದಿ ಗರ್ಭಗೃಹ ಮತ್ತು ಸುಕನಾಸಿಗಳನ್ನೊಳಗೊಂಡಿದ್ದು ಸರಳ ವಾಸ್ತುಶಿಲ್ಪ ಹೊಂದಿದೆ. ಇದಲ್ಲದೆ ಆದಿಕದಂಬರ ಕಾಲದಲ್ಲಿ ನಿರ್ಮಾಣಗೊಂಡ ನರಸಿಂಹನ ಇಟ್ಟಿಗೆಯ ದೇವಾಲಯವಿದ್ದ ಪ್ರತೀಕವಾಗಿ ದ್ವಿಭುಜನರಿಸಂಹನ ಶಿಲ್ಪ ಹಲಸಿಯಲ್ಲಿದೆ. ಹೂಲಿಯ ಪಂಚಲಿಂಗೇಶ್ವರ ಹೂಲಿಯ ಪಂಚಲಿಂಗೇಶ್ವರ ದೇವಾಲಯ ಮೂಲತಃ ಬಾದಾಮಿ ಚಾಲುಕ್ಯರ ಕಾಲದಲ್ಲಿ ಜೈನಬಸದಿಯಿದ್ದ ಉಲ್ಲೇಖ ಮಂಗಳೇಶನಹೂಲಿ ಶಾಸನದಿಂದ ವಿದಿತವಾಗುತ್ತದೆ.

ಆದರೆ ಬೆಳಗಾವಿ ಪ್ರದೇಶದಲ್ಲಿ ಹೇರಳ ಪ್ರಮಾಣದಲ್ಲಿ ದೊರೆಯುವ ದೇವಾಲಯಗಳು ಅದರಲ್ಲೂ ಶೈವ ದೇವಾಲಯಗಳು ಕಲ್ಯಾಣ ಚಾಳುಕ್ಯರ ಮತ್ತು ಅವರ ಮಾಂಡಲಿಕರಾದ ಗೋವೆ ಕದಂಬರು, ಸವದತ್ತಿ ರಟ್ಟರು ಮತ್ತು ಕೊಲ್ಹಾಪುರದ ಶೀಲಾಹಾರರ ಕಾಲದಲ್ಲಿ ನಿರ್ಮಾಣಗೊಂಡದ್ದಾಗಿವೆ.

ಐತಿಹಾಸಿಕ ಹಿನ್ನೆಲೆ : ಇತಿಹಾಸ ಪೂರ್ವ ಕಾಲದ ಮಾನವನ ಚಟುವಟಿಕೆಯ ನೆಲೆವೀಡಾದ ಬೆಳಗಾವಿ ಪ್ರದೇಶ, ಕರ್ನಾಟಕದ ವಿವಿಧ ಅರಸುಮನೆತನಗಳ ಆಳ್ವಿಕೆಯಲ್ಲಿ ಅಭಿವೃದ್ಧಿ ಹೊಂದಿ, ಕರ್ನಾಟಕದ ಸಂಸ್ಕೃತಿ ಕುಸುಮವಾಗಿ ವಿಕಸನಗೊಂಡು, ಸಮೃದ್ಧಿ ಹೊಂದುವಲ್ಲಿ ಪ್ರಮುಖಪಾತ್ರ ವಹಿಸಿದೆ. ಶಾತವಾಹನ, ಆದಿ ಕದಂಬ, ಬಾದಾಮಿ ಚಲುಕ್ಯ, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ಗೋವೆ ಕದಂಬ, ಸುಗಂಧವರ್ತಿಯ ರಟ್ಟರು, ದೇವಗಿರಿಯ ಸೇವುಣರು ಮುಂತಾದ ಅರಸು ಮನೆತನಗಳ ಆಳ್ವಿಕೆಯ ಕುರುಹಾಗಿ ಅನೇಕ ಸ್ಮಾರಕಗಳು ಜಿಲ್ಲೆಯ ವಿವಿಧೆಡೆ ಲಭ್ಯವಾಗಿವೆ. ಈ ಅರಸು ಮನೆತನಗಳ ವಿವಿಧ ದೊರೆಗಳು ಸರ್ವಧರ್ಮ ಸಹಿಷ್ಣುತಾ ನೀತಿಯನ್ನು ಅನುಸರಿಸಿ ಶೈವ, ವೈಷ್ಣವ ಜೈನಮತಗಳಿಗೆ ರಾಜಾಶ್ರಯ ನೀಡಿದ್ದಲ್ಲದೆ, ಅವರಡಿಯ ಅಧಿಕಾರಿಗಳು, ಮಂತ್ರಿಗಳು, ಮಾಂಡಲಿಕರಾದಿಯಾಗಿ ದೇಗುಲ ನಿರ್ಮಾಣದ ಕೈಂಕರ್ಯಗೈದರು. ಇವರು ಹಲಸಿ, ದೇಗಾಂವೆ, ದೇಗುಲಹಳ್ಳಿ, ಕಿತ್ತೂರು, ಒಕ್ಕುಂದ, ದೊಡವಾಡ, ಕಾದರೊಳ್ಳಿ, ನೇಸರಗಿ, ಹಣ್ಣಿಕೇರಿ, ಹೂಲಿ, ಸವದತ್ತಿ, ಮುನವಳ್ಳಿ, ಮುರಗೋಡ, ಮಮದಾಪುರ, ಗೋಕಾಕ, ಕೋಣ್ಣೂರು, ಬೆಳಗಾವಿ, ರಾಮದುರ್ಗ, ತೋರಗಲ್ಲ, ಸೊಗಲ, ಸುರೇಬಾನ, ಕುಂದರಗಿ, ಶಿರಸಂಗಿ, ಗೊಡಚಿ, ನಂದಗಾಂವ, ಮಂಗಸೂಳಿ, ಅಥಣಿ, ರಾಯಬಾಗ ಮುಂತಾದೆಡೆ ನಿರ್ಮಾಣಗೊಂಡ ಅಸಂಖ್ಯ ದೇವಾಲಯಗಳು ತಲವಿನ್ಯಾಸ, ಬಾಹ್ಯರೂಪ, ಆಂತರಿಕ ಅಲಂಕಾರ, ವಿನ್ಯಾಸ, ಶೈಲಿ, ಪ್ರಭೇಧ, ರಚನಾ ತಂತ್ರಗಾರಿಕೆ ಇತ್ಯಾದಿ ದೃಷ್ಟಿಕೋನಗಳಿಂದ ಗಮನಾರ್ಹವಾಗಿದ್ದು ಪ್ರಾದೇಶಿಕ ವಾಸ್ತುಶಿಲ್ಪ ವೈವಿಧ್ಯವನ್ನು ಪ್ರತಿಬಿಂಬಿಸುತ್ತವೆ. ೧೦–೧೪ನೆಯ ಶತಮಾನಗಳ ಕಾಲಾವಧಿಯಲ್ಲಿ ನಿರ್ಮಾಣಗೊಂಡ ಮಹತ್ವದ ಕೆಲವು ದೇವಾಲಯಗಳನ್ನು ವಾಸ್ತುಶಿಲ್ಪ ಶೈಲಿಯ ದೃಷ್ಟಿಕೋನದಿಂದ ವರ್ಗೀಕರಿಸಿ, ವಿಶ್ಲೇಷಿಸಿ, ಪರಿಶೀಲಿಸುವ ಪ್ರಯತ್ನವನ್ನು ಪ್ರಸ್ತುತ ಪ್ರಬಂಧದಲ್ಲಿ ಮಾಡಲಾಗಿದೆ.

ಬೆಳಗಾವಿ ಪ್ರದೇಶದ ದೇವಾಲಯ ವಾಸ್ತುಶಿಲ್ಪದ ಪ್ರಕಾರಗಳು

ದೇವಾಲಯ ವಿಮಾನಗಳ ಶೈಲಿಯನ್ನವಲಂಬಿಸಿ ದೇವಾಲಯ ವಾಸ್ತುಶಿಲ್ಪಶೈಲಿ–ಪ್ರಭೇದಗಳನ್ನು ವಿಂಗಡಿಸ

ಲಾಗಿದೆ. ದೇವಾಲಯ ವಾಸ್ತುಶಿಲ್ಪದಲ್ಲಿ ಮುಖ್ಯವಾಗಿ ನಾಗರ, ಕಲಿಂಗ, ದ್ರಾವಿಡ, ವೇಸರ ಎಂಬ ಶೈಲಿಗಳಿದ್ದು ಇವು ಬಹುಮಟ್ಟಿಗೆ ಭೌಗೋಳಿಕ ಪ್ರದೇಶಗಳಿಗೆ ಸೀಮಿತವಾದಂತೆ ತೋರುತ್ತದೆ. ನಾಗರಶೈಲಿ ಉತ್ತರ ಭಾರತದಲ್ಲಿ, ವೇಸರ ವಿಂಧ್ಯಪರ್ವತಗಳಿಗೂ ಕೃಷ್ಣಾ ನದಿಗೂ ನಡುವಣ ಪ್ರದೇಶದಲ್ಲಿಯೂ ಹಾಗೂ ಕೃಷ್ಣೆಯ ದಕ್ಷಿಣದ ದಕ್ಷಿಣ ಭಾರತದಲ್ಲಿ ದ್ರಾವಿಡಶೈಲಿ ಪ್ರಚಲಿತವಾಗಿದ್ದ ಪ್ರಾದೇಶಿಕ ಶೈಲಿಗಳೆಂದು ಪರಿಗಣಿಸಲ್ಪಟ್ಟಿದೆ. ಈ ಶೈಲಿಗಳು ಮೂಲತಃ ಶಿಖರದ ಆಕಾರದ ಆಧಾರದ ಮೇಲೆ ವರ್ಗೀಕೃತಗೊಂಡಿವೆ. ಈ ಶೈಲಿಗಳು ಪ್ರಾದೇಶಿಕವೆಂದರೂ ಅನ್ಯ ಪ್ರದೇಶಗಳಲ್ಲಿ ನಿರ್ಮಾಣಗೊಂಡಿದೆ. ದ್ರಾವಿಡಶೈಲಿಯ ದೇವಾಲಯಗಳು ಮಹಾರಾಷ್ಟ್ರದಲ್ಲಿ ನಾಗರಶೈಲಿಯ ದೇವಾಲಯಗಳು ಆಂಧ್ರ-ಕರ್ನಾಟಕದಲ್ಲಿ, ಭೂಮಿಜ/ವೇಸರ ಶೈಲಿಯ ದೇವಾಲಯಗಳು ಯಾದವರು ಮುಂತಾದವರು ಅನುಸರಿಸಿದರು.

ದೇವಾಲಯಗಳನ್ನು ವಿವಿಧ ಅರಸು ಮನೆತನಗಳಿಗೆ ಸೇರಿದ ವಿವಿಧ ರಾಜರು, ಅವರ ಸಾಮಂತರು, ಅಧಿಕಾರ ವರ್ಗ, ವ್ಯಾಪಾರಸ್ಥರು, ಶ್ರೀಮಂತ ಪ್ರಜೆಗಳು ಆಯಾ ರಾಜ್ಯಗಳಲ್ಲಿ ಕಟ್ಟಿಸಿದ್ದರಾದ್ದರಿಂದ ಆಯಾ ಅರಸರ, ಮಾಂಡಲಿಕ ಮನೆತನದ ಹೆಸರನ್ನೇ ಆಯಾ ದೇವಾಲಯ ಶೈಲಿಗಳಿಗೂ ಇಡಲಾಗಿದೆ. ಉದಹರಣೆಗೆ ಚಾಲುಕ್ಯಶೈಲಿ, ಹೊಯ್ಸಳ ಶೈಲಿ, ನೊಳಂಬ-ಪಲ್ಲವಶೈಲಿ ಮುಂತಾದವುಗಳು. ಅನೇಕ ಸಲ ಈ ವಿವಿಧ ಶೈಲಿಗಳ ಪ್ರಭಾವ, ಪರಿಣಾಮ ಈ ದೇವಾಲಯ ವಾಸ್ತುಶಿಲ್ಪ ನಿರ್ಮಾಣದಲ್ಲಿ ಪ್ರತ್ಯೇಕ ಮತ್ತು ಪೂರಕವಾಗಿರುವುದು ಗಮನಾರ್ಹ.

ಆದರೆ ಕರ್ನಾಟಕ ವಾಸ್ತುಶಿಲ್ಪದ ಉಚ್ಛ್ರಾಯ ಕಾಲವೆನಿಸಿದ್ದ ೧೦-೧೩ನೆಯ ಶತಮಾನದವರೆಗಿನ ಕಾಲವನ್ನು ಬದಾಮಿ ಚಾಲುಕ್ಯರಿಂದ ವಿಕಸನಗೊಂಡ ಮುಂದಿನ ಹಂತದ ಶೈಲಿಯು ಬೆಳೆದು ಬಂದಿತು. ಬಳಸುವ ಕರಿಕಲ್ಲಿನಲ್ಲಿ ಎತ್ತರದ ಬದಲಿಗೆ ವಿಸ್ತಾರದಲ್ಲಿ, ವಿಸ್ತೀರ್ಣ ಹೆಚ್ಚಿಸಲು ಕಂಬಗಳ ಸಂಖ್ಯೆಯಲ್ಲಿ ಹೆಚ್ಚಳ, ಅಲಂಕರಣಕ್ಕೆ, ನಾಜೂಕತೆಯ ನಿರ್ಮಾಣಕ್ಕೆ ಕೊಟ್ಟ ಒತ್ತು ಇವೇ ಮುಂತಾದ ಬದಲಾವಣೆಗಳಾದವು. ಬಂಧನ ಸಾಮಗ್ರಿಗಳ ಬಳಕೆಯಿಲ್ಲದೆ ಚಪ್ಪಡಿ ಕಲ್ಲುಗಳನ್ನು ಒಂದರ ಮೇಲೊಂದರಂತೆ ಜೋಡಿಸಿ ತಂತ್ರಜ್ಞಾನದಲ್ಲೂ ಮಾರ್ಪಾಡುಗಳಾದದ್ದು ಗಮನಾರ್ಹ.

ಪ್ರಸ್ತುತ ಅಧ್ಯಯನದಲ್ಲಿ ಕಲ್ಯಾಣ ಚಾಲುಕ್ಯ, ಅವರ ಮಾಂಡಲಿಕರು, ಅಧಿಕಾರವರ್ಗ ಮತ್ತು ಶ್ರೀಮಂತ ಪ್ರಜೆಗಳಿಂದ ನಿರ್ಮಾಣಗೊಂಡ ಅನೇಕ ದೇವಾಲಯಗಳನ್ನು ಅಧ್ಯಯನ ಮಾಡಲಾಗಿದೆ. ಬೆಳಗಾವಿ ಪ್ರದೇಶದಲ್ಲಿ ಇಟಗಿಯ ಮಹಾದೇವ, ಡಂಬಳದ ಶಿವಾಲಯ, ಕುಕನೂರಿನ ಕಲ್ಲೇಶ್ವರ, ಕುರುವತ್ತಿಯ ಮಲ್ಲಿಕಾರ್ಜುನ ದೇವಾಲಯಗಳ ವಾಸ್ತುಶಿಲ್ಪ ವೈಭವ ಸೂಸುವಂತಹ ದೇವಾಲಯಗಳು ವಿರಳವೆಂದೇ ಹೇಳಬಹುದು.

ಕದಂಬನಾಗರ/ಸೋಪಾನ ಶೈಲಿಯ ದೇವಾಲಯಗಳು

ಬೆಳಗಾವಿ ಪ್ರದೇಶದಲ್ಲಿ ಸೋಪಾನ ಶೈಲಿಯ ದೇವಾಲಯ ಹೆಚ್ಚಿನ ಸಂಖ್ಯೆಯಲ್ಲಿವೆ. ಸರಳೀಕರಣ ಈ ಶೈಲಿಯ ದೇವಾಲಯಗಳ ವೈಶಿಷ್ಟ್ಯವಾಗಿದ್ದು ತೀರ ಸರಳವಾದ ಶಿಖರವನ್ನು ಹೊಂದಿರುತ್ತವೆ. ಮಡಿಕೆಗಳುಳ್ಳ ಅಧಿಷ್ಠಾನ, ಅಲಂಕಾರರಹಿತ ಭಿತ್ತಿ, ಒಂದರ ಮೇಲೊಂದರಂತೆ ಇರಿಸಿರುವ, ಮೇಲೆ ಹೋದಂತೆ ಪಿರಾಮಿಡ್ಡಿನ ಆಕಾರದಲ್ಲಿ ಕಿರಿದಾಗುತ್ತ ಸಾಗುವ ಕಪೋತ, ಗ್ರೀವಗಳ ಅಡ್ಡಪಟ್ಟಿಕೆಗಳು, ಆ ಪಟ್ಟಿಗಳ ಅಂಚಿನ ಗ್ರೀವದಲ್ಲಿ ಕಾಣುವ ಅಲಂಕರಣ, ಮೇಲ್ಗಡೆ ಗಂಟೆಯಾಕಾರದ ಶಿಖರ ಹಾಗೂ ಕಲಶ ಇವು ಕದಂಬಸಾಗರ ಶೈಲಿಯ ದೇವಾಲಯ ವಾಸ್ತುಶಿಲ್ಪದ ಮುಖ್ಯ ಲಕ್ಷಣಗಳು. ಕೆಲವು ದೇವಾಲಯಗಳು ಪರಿವಾರ ದೇವತೆಗಳಾಗಿ ನಿರ್ಮಿಸಿರುವ ದೇವಕೋಷ್ಠಗಳನ್ನು ಹೊಂದಿರುತ್ತವೆ. ಬಾಂಧನಾಪಟ್ಟಿಯಲ್ಲಿ ಶಿಲ್ಪಗಳ ಸಾಲುಗಳನ್ನು ಗುರುತಿಸಬಹುದು. ಅನೇಕ ವಿಶಿಷ್ಟ ವಿನ್ಯಾಸದ ಶುಕನಾಸಗಳನ್ನು ಹೊಂದಿರುತ್ತವೆ.

ಕಲ್ಯಾಣ ಚಾಲುಕ್ಯರ ಮಾಂಡಲೀಕರಾದ ಸುಗಂಧವರ್ತಿಯ ರಟ್ಟರು ಮತ್ತು ಗೋವೆಯ ಕದಂಬರು ಆಳಿದ ಪ್ರದೇಶಗಳಲ್ಲಿ ಸೋಪಾನ ಶೈಲಿಗೆ ಆದ್ಯತೆಯನ್ನು ನೀಡಲಾಯಿತು. ಬೆಳಗಾವಿ ಪ್ರದೇಶದಲ್ಲಿರುವ ಏಕಕೂಟ (ಒಂದೇ ಗರ್ಭಗೃಹ) ದೇವಾಲಯಗಳಲ್ಲಿ ಮಹತ್ವವಾದವುಗಳೆಂದರೆ ದೇಗುಲಹಳ್ಳಿಯ ರಾಮಲಿಂಗೇಶ್ವರ, ಹಲಸಿಯ ಕಲ್ಮೇಶ್ವರ, ಸುವರ್ಣೇಶ್ವರ ಮತ್ತು ರಾಮೇಶ್ವರ ದೇವಾಲಯಗಳು, ಬೆಳಗಾವಿ ನಗರದಲ್ಲಿರುವ ಕಮಲಬಸದಿ, ಗೋಕಾಕ ಜಲಪಾತದ ಬದಿಗಿರುವ ಮಹಾಲಿಂಗೇಶ್ವರ ದೇವಾಲಯ ಮುಂತಾದವುಗಳು. ಕೊಣ್ಣೂರಿನ ಚಿಕಲೇಶ್ವರ ಮತ್ತು ಪಾರ್ಶ್ವನಾಥ ಬಸದಿ, ತೋರಗಲ್ ಕೋಟೆಯಲ್ಲಿರುವ ಭೂತನಾಥದೇವಾಲಯ, ಮುನವಳ್ಳಿಯ ಮಲ್ಲಿಕಾರ್ಜುನ ಮತ್ತು ಪಂಚಲಿಂಗೇಶ್ವರ ನೇಸರಿಗೆಯ ವೀರಭದ್ರ ಗುಡಿ (ಮೂಲತಃ ಜೈನಬಸದಿ), ಹಲಸಿಯ ಭೂವರಾಹನರಸಿಂಹ ದೇಗುಲ ಮತ್ತು ಸುಪ್ರಸಿದ್ಧ ಜೋಡುಗುಡಿ ದ್ವಿಕೂಟ (ಎರಡು ಗರ್ಭಗೃಹ) ಮಾದರಿಗೆ ಉತ್ತಮ ಉದಾಹರಣೆಗಳಾದರೆ ಹತ್ತರಗಿಯ ಶಿಖರೇಶ್ವರ, ಸವದತ್ತಿಯ ಪುರದೇಶ್ವರ, ಗೋಕಾಕದ ಕಾಡಸಿದ್ದೇಶ್ವರ, ಮುರಗೋಡದ ಮಲ್ಲಿಕಾರ್ಜುನ ಮತ್ತು ನಾರಾಯಣ ಗುಡಿಗಳು, ದೇಗಾಂವದ ಕಲನಾರಾಯಣ ದೇವಾಲಯ ಮುಂತಾದವುಗಳು ತ್ರಿಕೂಟ (ಮೂರು

ಗರ್ಭಗೃಹ) ದೇವಾಲಯಗಳು. ಬೆಳಗಾವಿಯಲ್ಲಿ ಕದಂಬ ನಾಗರಶೈಲಿಯ ದೇವಾಲಯಗಳು ಅಪಾರವಾಗಿವೆ.

ತೋರಗಲ್ ಕೋಟೆಯ ಆವರಣದೊಳಗಿರುವ ಭೂತನಾಥ ದೇವಾಲಯ ಸಮೂಹ ಫಾಂಸನ ಶೈಲಿಯಲ್ಲಿದ್ದು ಶಿಖರವನ್ನು ರೂಪಿಸಿರುವ ಕಪೋತ ಪಟ್ಟಿಗಳ ಮಧ್ಯಭಾಗದಲ್ಲಿ ದೊಡ್ಡ 'ನಾಸಿ'ಗಳನ್ನು ರಚಿಸಿ ದೇವತೆಗಳ ಬಿಕಣಿಶಿಲ್ಪಗಳನ್ನು ಕೆತ್ತಲಾಗಿದೆ. ಸರಳ ಸುಂದರವಾದ ಈ ದೇವಾಲಯದ ಭಿತ್ತಿ ಅಲಂಕಾರರಹಿತವಾಗಿದ್ದು ದೇವಕೋಷ್ಠಗಳಿವೆ. ಮುಖ ಮಂಟಪದ ಕಕ್ಷಾಸನದ ಹೊರಭಾಗದಲ್ಲಿ ಮಿಥುನ ಶಿಲ್ಪಗಳಿದ್ದು ಶಿಥಿಲಗೊಂಡಿವೆ. ಇಡೀ ದೇವಾಲಯ ಸಮೂಹ ಹೆಚ್ಚು ಕಡಿಮೆ ಒಂದೇ ಮಾದರಿಯಲ್ಲಿದ್ದು ಪಡಿಯಚ್ಚಿನಿಂದ ತಯಾರಿಸಿದಂತೆ ಭಾಸವಾಗುತ್ತದೆ. ಇದು ಪುರಾತತ್ವ ಇಲಾಖೆಯ ರಕ್ಷಿತ ಸ್ಮಾರಕವಾಗಿದೆ. ಮುರಗೋಡದ ತ್ರಿಕೂಟ ಮಲ್ಲಿಕಾರ್ಜುನ ದೇಗುಲದ ಸಭಾಮಂಪಟದ ಮೂರು ಶಿಖರಗಳೂ ಫಾಂಸನಶೈಲಿಯಲ್ಲಿದ್ದು ವಿಮಾನದಲ್ಲಿ ಬಾಂಧನಾ ಪಟ್ಟಿ ಮತ್ತು ದೇವಕೋಷ್ಠಗಳಿವೆ. ಸಂವರಣ ರೀತಿಯ ಶಿಖರಗಳು ನಾರಾಯಣ ದೇವಾಲಯದ ಮಹಾಮಂಟಪದ ಮೇಲಿವೆ. ಈ ವಾಸ್ತುಶಿಲ್ಪಿ ವೈಶಿಷ್ಟ್ಯ ಮುರಗೋಡದಲ್ಲಿ ಮಾತ್ರ ಕಂಡುಬರುವುದು ಗಮನಾರ್ಹ. ವಿಮಾನದ ಗೋಡೆಗಳಲ್ಲಿ ಅಲಂಕಾರ ರಹಿತ ಶಿಖರವಿರುವ ದೇವಕೋಷ್ಠವಿದೆ. ಈ ದೇವಾಲಯದ ಶುಕನಾಸಿಯಲ್ಲಿರುವ ಹದಿನಾರು ಕೈಗಳ ನಟರಾಜಶಿಲ್ಪ ಮನಮೋಹಕವಾಗಿದ್ದು ಜಿಲ್ಲೆಯಲ್ಲಿಯೇ ವಿಶಿಷ್ಟವಾದುದಾಗಿದೆ. ದೇವಾಲಯದ ಹೊರಪ್ರಾಂಗಣ ದಲ್ಲಿರುವ ನಂದಿ ಶಿಲ್ಪ ಆಕರ್ಷಣೀಯವಾಗಿದೆ.

ಬೆಳಗಾವಿ ನಗರದ ಕೋಟೆ ಆವರಣದಲ್ಲಿರುವ ರಟ್ಟರ ಕಾಲೀನ ಉತ್ತರಾಭಿಮುಖವಾದ ಬಸದಿ ಶಾಸನೋಲ್ಲೇಖಿತ ವಾಗಿದ್ದು ಗರ್ಭಗೃಹ ಮತ್ತು ಮಹಾಮಂಟಪದ ಮೇಲೆ ಫಾಂಸನ ಮತ್ತು ಶೈಲಿಯ ಛಾವಣಿಯಿದೆ. ಗರ್ಭಗೃಹ, ಅಂತರಾಳ, ಗೂಢ ಮಂಟಪ, ಮುಖಮಂಟಪಗಳನ್ನು ಹೊಂದಿದ ಕಮಲಬಸದಿಯಲ್ಲಿ ದೇವಕೋಷ್ಠ, ನಾಜೂಕು ಕೆತ್ತನೆಯ ಸಪ್ತಶಾಖಾ ದ್ವಾರಬಂಧ ಜಿನಬಿಂಬವಿರುವ ಲಲಾಟ, ನೃತ್ಯಗಾರ್ತಿಯರು ಮತ್ತು ಸಂಗೀತವಾದ್ಯ ನುಡಿಸುವವರ ಕಿರು ಶಿಲ್ಪವನ್ನೊಳಗೊಂಡ ಮಹಾಮಂಟಪದ ಕಕ್ಷಾಸಸ, ಶುಕನಾಸದ ಮೇಲಿರುವ ಶಿಖರದ ಕೋಷ್ಠ ಇವು ಕಮಲಬಸದಿಯ ವಾಸ್ತುಶಿಲ್ಪ ಲಕ್ಷಣಗಳು. ಈ ಬಸದಿಯ ಮಹಾಮಂಟಪದ ಭುವನೇಶ್ವರ ದೇವಾರಿಯ ಕಲಾನೈಪುಣ್ಯತೆ ಎತ್ತಿ ತೋರಿಸುತ್ತದೆ. ಈ ಭುವನೇಶ್ವರಿಯಲ್ಲಿ ಏಕಕೇಂದ್ರ ಕಲದಿಂದಾಗಿ ಇದಕ್ಕೆ ಕಮಲಬಸದಿ ಎಂಬ ಹೆಸರು ಬಂದಿದೆ. ಭುವನೇಶ್ವರದಲ್ಲಿ ವಿವಿಧ ತೀರ್ಥಂಕರರ ಕಿರುಶಿಲ್ಪಗಳಿವೆ. ಈ ಬಸದಿಯ ಜಾಲಂದರಗಳು ಗಮನಾರ್ಹವಾಗಿವೆ. ಇಲ್ಲಿಯ ನವರಗಂದ ನಾಲ್ಕು ಕಂಬಗಳ ಮೇಲ್ಭಾಗದಲ್ಲಿ ಚಚ್ಚಾಕಾದಲ್ಲಿ ಲತಾ ಸುರುಳಿಗಳಿದ್ದು ಇವುಗಳಲ್ಲಿ ಹಂಸ, ಪದ್ಮ ಮುಂತಾದವುಗಳನ್ನು ಕಾಣಬಹುದು. ನುಣುಪು ಹೊಳಪಿನ ೧೪ ಕಂಬಗಳನ್ನು ಮಹಾಮಂಟಪದಲ್ಲಿ ಕಾಣಬಹುದು. ಗರ್ಭಗೃಹದ ಪೀಠದ ಮೇಲೆ ಹಿಂದೆ ಶಾಂತಿನಾಥ ತೀರ್ಥಂಕರ ಶಿಲ್ಪವಿತ್ತು. ಈಗ ೨೨ನೆಯ ತೀರ್ಥಂಕರ ನೇಮಿನಾಥರ ಶಿಲ್ಪವಿದೆ.

ನೇಸರಗಿಯ ವೀರಭದ್ರರ ದೇವಾಲಯ ಮೂಲತಃ ಜೈನಬಸದಿಯಾಗಿದ್ದು ಉಪಪೀಠವನ್ನು, ಲಲಾಟದಲ್ಲಿ ಜೈನಬಿಂಬವನ್ನು ಹೊಂದಿದೆ. ಪೀಡಾ ದೇಗುಲಗಳಿಗೆ ಹೋಲುವ ಅಲಂಕಾರಿತ ವಿವರ ಮತ್ತು ಗೋಡೆಯ ಮಡಿಕೆಗಳನ್ನು ಇಲ್ಲಿ ಕಾಣಬಹುದು. ನವರಂಗದ ಮೇಲ್ಛಾವಣಿಯ ಭುವನೇಶ್ವರದಲ್ಲಿ ತೀರ್ಥಂಕರ ಶಿಲ್ಪಗಳಿವೆ.

ಬೆಳಗಾವಿಯ ಸೈನಿಕಪಾಳ್ಯದಲ್ಲಿರುವ ಶಾಸನೋಲ್ಲೇಖಿತ ವಾದ ಯಾದವಕಾಲಿನ ಹಾಳು ಬಿದ್ದ ಶಿವಾಲಯದಲ್ಲಿಯ ಕಂಬಗಳು ಹದಿನಾರು ಮುಖಗಳ ಕಾಂಡಭಾಗದಲ್ಲಿ ಹೂ, ಲತೆ ಮತ್ತುಮುತ್ತಿನಾಕಾರದ ಅಲಂಕಾರ ಹೊಂದಿದೆ. ಹೊರಗೋಡೆಯ ಅರ್ಧಗಂಬದ ಮೇಲೆ ಮದನಿಕೆಯರ ಶಿಲ್ಪಗಳು ಮತ್ತು ನವರಂಗದಲ್ಲಿ ಮೇಲೆ ಶಿಖರವನ್ನು ಹೊಂದಿದ ಎಂಟು ದೇವಕೋಷ್ಠಗಳು ವಿಶಿಷ್ಟವಾಗಿವೆ. ಇದು ನಾಜೂಕು ಕೆತ್ತನೆಗೆ ಕಲಾ ಕುಸುರಿಗೆ ಮತ್ತು ಅಲಂಕರಣಕ್ಕೆ ಖ್ಯಾತವಾಗಿದೆ.

ಕ್ರಿ.ಶ. ೧೧೭೫ರಲ್ಲಿ ಗೋವೆ ಕದಂಬರಿಂದ ರಚಿತವಾದ ದೇಗಾಂವೆಯ ಕಮಲನಾರಾಯಣ ದೇವಾಲಯ ಬೆಳಗಾವಿ ಜಿಲ್ಲೆಯ ವಾಸ್ತುಶಿಲ್ಪಶೈಲಿಯ ದೃಷ್ಟಿಯಿಂದ ಕಳಶಪ್ರಾಯವಾದ ದೇಗುಲ. ಬೆಳಗಾವಿಯ ಕೆಲವೇ ವೈಷ್ಣವದೇಗುಲ ಗಳಲ್ಲೊಂದಾದ ಇದು ಸಮಾನಾಂತರವಾದ ಮೂರು ಗರ್ಭಗೃಹಗಳನ್ನು ಹೊಂದಿದ್ದು, ಅಂತರಾಳ ಸಹಿತವಾಗಿ ಸಭಾಮಂಟಪದೊಂದಿಗೆ ಜೋಡಿಸಲ್ಪಟ್ಟಿದೆ. ವಿನ್ಯಾಸ ಹೊಂದಿದ ಈ ರೀತಿಯ ತಲವಿನ್ಯಾಸ ಇನ್ನೊಂದೆಡೆ ಕಂಡುಬರುವದು ವಿರಳ. ಫಾಂಸನ ಮಾದರಿಯ ಇದರ ಶಿಖರ ಬರಿ ಮೂರು ಸ್ತರದಲ್ಲಿ ಮಾತ್ರ ಉಳಿದಿದ್ದು ವಿಮಾನದ ಮೇಲ್ಗಡೆ ಬಿದ್ದುಹೋಗಿದೆ. ಆದರೆ ಅಲ್ಲಲ್ಲಿ ಅಲಂಕರಣಕ್ಕಾಗಿ ಶಿಖರಗಳನ್ನು ಬಿಂಬಿಸಾಗಿದೆ. ಇದು ತ್ರಿಕೂಟ ಮಾದರಿಗೆ ಉತ್ತಮ ಉದಾಹರಣೆ. ಆಭರಣದ ವಿನ್ಯಾಸದ ಕುಸುರಿ ಕೆತ್ತನೆಯಿಂದ ಕೂಡಿದ ಎಂಟು ಕಂಬಗಳ ಸಾಲಿದ್ದು ಕಕ್ಷಾಸನದ ಹೊರಭಾಗದಲ್ಲಿ ಬೇರೆ ಬೇರೆ ಶಿಲ್ಪಾಕೃತಿಯ ಅಲಂಕರಣವಿದೆ. ತ್ರಿಮ್ಮೋಜ ಮುಂತಾದ ಶಿಲ್ಪಿಗಳ ಹೆಸರನ್ನೊಳಗೊಂಡ ಶಿಲಾಶಾಸನಗಳನ್ನು ಕಂಬದ ಮೇಲೆ ಕೆತ್ತಲಾಗಿದೆ. ಗರ್ಭಗೃಹದ

ಇಕ್ಕೆಲಗಳಲ್ಲಿರುವ ಜಯ-ವಿಜಯದ ಶಿಲ್ಪಗಳು ಸೂಕ್ಷ್ಮ ಕೆತ್ತನೆಯ ವಿನ್ಯಾಸದ ಜಾಲಂಧರಗಳು. ಹಳೆಬೀಡಿನ ಮಾದರಿಯ ಶಿಲ್ಪಗಳು, ವಿಭಿನ್ನ ಭಂಗಿಯ ನೃತ್ಯಗಾತಿಯರು, ಗಾಯಕಿಯರು ರಾಜ್ಯಚಿನ್ಹೆಯ ರೂಪದಲ್ಲಿರುವ ಸಾಲು ಸಿಂಹಗಳ ಶಿಲ್ಪಗಳು ಮಂತ್ರಮುಗ್ಧಗೊಳಿಸುವಂತಿವೆ. ಚಾಲುಕ್ಯ ಗೋವೆಕದಂಬರ ಕಾಲದ ಈ ದೇವಾಲಯದ ಮೇಲೆ ಚಾಲುಕ್ಯ-ಹೊಯ್ಸಳಶೈಲಿಯ ಪ್ರಭಾವ ಎದ್ದು ಕಾಣುತ್ತದೆ. ದೇವಾಲಯದ ಹೊರಾಂಗಣದಲ್ಲಿರುವ ಗೂಢಮಂಟಪ ದಲ್ಲಿರುವ ಚಿಕ್ಕ ಮಂಟಪಗಳು ಇಂದು ಶಿಲ್ಪರಹಿತವಾಗಿವೆ. ಆದರೆ ಎಡ ಪಾರ್ಶ್ವದಲ್ಲಿರುವ ಮಂಟಪದಲ್ಲಿ ಹಲವು ಹೆಡೆಗಳ ಆಕರ್ಷಕ ನಾಗಶಿಲ್ಪವಿದೆ. ಬನವಾಸಿಯ ಮಧುಕೇಶ್ವರ ದೇವಾಲಯದ ನಾಗಶಿಲ್ಪವನ್ನು ಹೋಲುತ್ತದೆ. ಪೌರಾಣಿಕ ಪ್ರಸಂಗಗಳನ್ನು ಬಿಂಬಿಸುವ ನಿರೂಪಣಾ ಶಿಲ್ಪಗಳಾದ ಗೋವರ್ಧನಗಿರಿಧಾರಿ, ರಾಮಲೀಲಾ ಪ್ರಸಂಗಗಳು, ಮಿಥುನ ಶಿಲ್ಪಗಳು, ಪ್ರಾಣಿಗಳ ಸಮಾಗಮ ಮುಂತಾದವುಗಳು ಮನಮೋಹಕವಾಗಿವೆ. ಇದು ಕೇಂದ್ರ ಪುರಾತತ್ತ್ವ ಸರ್ವೇಕ್ಷಣಾ ಇಲಾಖೆಯ ಸಂರಕ್ಷಿತ ಸ್ಮಾರಕವಾಗಿವೆ.

ನೇಸರಗಿಯ ಪ್ರಸಿದ್ಧ ಜೋಡುಗುಡಿ ರಟ್ಟರ ನಿರ್ಮಾಣ ವಾಗಿದ್ದು ಕದಂಬನಾಗರಶೈಲಿಯ ಉತ್ಕೃಷ್ಟ ಉದಾಹರಣೆ, ಗರ್ಭಗೃಹ, ಶುಕನಾಶಗಳನ್ನು ಮಾತ್ರ ಹೊಂದಿದ್ದು ನವರಂಗ ಮತ್ತು ಮುಖ ಮಂಪಟಗಳಿದ್ದ ದ್ಯೋತಕವಾಗಿ ಅವುಗಳ ಅಧಿಷ್ಠಾನದ ಅವಶೇಷಗಳಿವೆ. ಹನ್ನೊಂದು ಹಂತದ ಕದಂಬನಾಗರ ಶೈಲಿಯ ಶಿಖರ ಎರಡು ಗರ್ಭಗೃಹಗಳ ಮೇಲಿದ್ದು ಇದು ಶೈವ ದೇವಾಲಯವಾಗಿದೆ. ಹಲಸಿಯ ಭೂವರಾಹನರಸಿಂಹ ದೇವಾಲಯ ಕಲ್ಯಾಣ ಚಾಲುಕ್ಯ ಶೈಲಿಯ ಲಕ್ಷಣಗಳನ್ನೊಳಗೊಂಡ ಮುಕುಟಪ್ರಾಯವಾದ ನಯನ ಮನೋಹರ ದೇವಾಲಯ. ಬೆಣಚುಕಲ್ಲಿನಿಂದ ನಿರ್ಮಾಣ ಗೊಂಡ ದ್ವಿಕೂಟ ಮಾದರಿಯ ಶಾಸನೋಲ್ಲೇಖಿತ ಈ ದೇವಾಲಯ ಸಂಕೀರ್ಣ ಮಾದರಿಯ ದೇವಾಲಯ ವಾಗಿದೆ. ತಳವಿನ್ಯಾಸದಲ್ಲಿ ಎರಡು ಗರ್ಭಗೃಹಗಳು, ಎರಡು ಅಂತರಾಳಗಳು, ನವರಂಗ, ನಾಲ್ಕು ದ್ವಾರವುಳ್ಳ ಪ್ರಾಕಾರಕ್ಕೆ ಹೊಂದಿಕೊಂಡು ಒಳಗಡೆ ಶಂಕರನಾರಾಯಣ, ಲಕ್ಷ್ಮೀನಾರಾಯಣ, ಈಶ್ವರ ಮತ್ತು ಗರುಡ ದೇವಾಲಯಗಳಿವೆ. ಆರು ಶಾಖೆಗಳ ದ್ವಾರಬಂಧ ಗರ್ಭಗೃಹಕ್ಕಿದ್ದು, ಅಂತರಾಳ ದ್ವಾರದಲ್ಲಿ ಪುಷ್ಪಾಲಂಕೃತ ಜಾಲಂಧರಗಳಿವೆ. ನವರಂಗದಲ್ಲಿ ನಾಲ್ಕು ಚೌಕ ಕಂಬಗಳಿದ್ದು ಒಳಗೋಡೆಯಲ್ಲಿ ಆರು ಮತ್ತು ಹೊರಗೋಡೆಗಳಿಗೆ ಹತ್ತಿಕೊಂಡಂತೆ ಹದಿನಾರು ಕಂಬಗಳಿವೆ. ಪೂರ್ವಾಭಿಮುಖವಾದ ಗರ್ಭಗೃಹದ ಮೇಲೆ ಕದಂಬ ನಾಗರಶೈಲಿಯ ಹನ್ನೊಂದು ಹಂತಗಳಿರುವ ಗೋಪುರವಿದೆ.

ಹಲಸಿ ಗ್ರಾಮದ ಉತ್ತರಕ್ಕಿರುವ ಕಲ್ಮೇಶ್ವರ ದೇವಾಲಯ ಪೂರ್ವಾಭಿಮುಖವಾಗಿದ್ದು, ಏಕಕೂಟ ಮಾದರಿಯಲ್ಲಿರುವ ಶೈವಾಲಯದ ಅರ್ಧಮಂಟಪದಲ್ಲಿ ಎರಡು ಕೋಷ್ಠಗಳು ಹಾಗೂ ಎರಡು ಕಂಬಗಳಿವೆ. ನವರಂಗದಲ್ಲಿ ನಾಲ್ಕು ಕಂಬಗಳಿದ್ದು ಛತ್ತು ಬಿದ್ದುಹೋಗಿದೆ. ಇಲ್ಲಿರುವ ಕದಂಬ ನಾಗರ ಅಥವಾ ಫಾಂಸನಶೈಲಿಯ ಇನ್ನೊಂದು ಉತ್ತಮ ಉದಾಹರಣೆ ಎಂದರೆ ರಾಮತೀರ್ಥ ಬೆಟ್ಟದ ಮೇಲಿರುವ ರಾಮೇಶ್ವರ ದೇವಾಲಯ. ಕದಮಬನಾಗರಶೈಲಿಯ ವಿಮಾನವನ್ನು ಗರ್ಭಗೃಹದ ಮೇಲೆ ಹೊಂದಿರುವ ಇದು ಈ ಪ್ರದೇಶದ ದೇವಾಲಯ ವಾಸ್ತುಶಿಲ್ಪದ ವಿಕಸಿತ ಹಂತವನ್ನು ನಿರೂಪಿಸುತ್ತದೆ.

ಬೆಳಗಾವಿ ಪ್ರದೇಶದಲ್ಲಿ ಮುಕುಟಪ್ರಾಯವೆನಿಸಿದ ದೇವಾಲಯಗಳಲ್ಲಿ ನಂದಗಾಂವದ ಅತ್ಯದ್ಭುತ ಶೈವ ದೇವಾಲಯ ಉಲ್ಲೇಖಾರ್ಹವಾದುದು. ಕಲ್ಯಾಣ ಚಾಲುಕ್ಯ ಕಾಲ ಮತ್ತು ಶೈಲಿಯಲ್ಲಿರುವ ಕ್ರಿ.ಶ. ೧೧-೧೨ನೆಯ ಶತಮಾನದ ಡೆಕ್ಕನ್ ಟ್ರಾಪ್ ಶಿಲೆಯಿಂದ ನಿರ್ಮಿತವಾದ ಈ ದೇವಾಲಯ ರಾಜ್ಯ ಪುರಾತತ್ತ್ವ ಇಲಾಖೆಯಲ್ಲಿದ್ದರೂ ದುಸ್ಥಿತಿಯಲ್ಲಿದೆ. ಇದು ತ್ರಿಕೂಟಚಲವಾಗಿದ್ದು ಮೂರು ಗರ್ಭಗೃಹ, ಪ್ರತ್ಯೇಕ ಮೂರು ಅಂತರಾಳ, ಒಂದು ಸಭಾಮಂಟಪ ಮತ್ತು ಮುಖಮಂಟಪವನ್ನು ಹೊಂದಿದ್ದು, ಮುಖಮಂಟಪ ಮತ್ತು ಸಭಾಮಂಟಪವನ್ನು ಜೋಡಿಸುವ ಕಿರುಮಂಟಪವಿದೆ. ಗರ್ಭಗೃಹದ ದ್ವಾರಬಂಧದ ಲಲಾಟದಲ್ಲಿ ಕ್ರಮವಾಗಿ ಗಣೇಶ ಮತ್ತು ವಿಷ್ಣುವಿನ ಚಿಕಣಿ ಶಿಲ್ಪಗಳಿವೆ. ಗರ್ಭಗೃಹ ಪ್ರವೇಶದ್ವಾರದ ಮೇಲೆ ಅಷ್ಟದಿಕ್ಪಾಲಕರು, ಮಕರತೋರಣ ಮತ್ತು ಎಲ್ಲಕ್ಕೂ ಮುಖ್ಯವಾಗಿ ಸುಂದರವಾದ ನಟರಾಜನ ಶಿಲ್ಪವಿದೆ. ಅಂತರಾಳದಲ್ಲಿ ಜಾಲವಾತಾಯನವಿದೆ. ಮುಖಮಂಟಪದ ನಾಲ್ಕು ಗೋಡೆಗಳ ಮೇಲೆ ಜಾಲಂಧರ ಗಳನ್ನು ಹೋಲುವ ಹೂವಿನ ವಿನ್ಯಾಸದ ಕೆತ್ತನೆಯಿದೆ.

ತಿರುಳಗನ್ನಡ ನಾಡೆಂಬ ಖ್ಯಾತಿಯ ಒಕ್ಕುಂದದ ಮುಕ್ತೇಶ್ವರ ದೇವಾಲಯ ಮೂಲತಃ ಜೈನ ಬಸದಿ. ಶಿಥಿಲಾವಸ್ಥೆಯಲ್ಲಿರುವ ಪೂರ್ವಾಭಿಮುಖವಾದ ಕ್ರಿ.ಶ. ೧೨ನೆಯ ಶತಮಾನದ ಈ ದೇವಾಲಯ ಗರ್ಭಗೃಹ, ಅಂತರಾಳ ಮತ್ತು ನಾಶ ಹೊಂದಿರುವ ಸಭಾಮಂಟಪವಿದೆ. ಗರ್ಭಗೃಹದ್ವಾರದ ಲಲಾಟದಲ್ಲಿ ಜಿನಬಿಂಬವಿದ್ದು ಅಂತರಾಳದ ಮೇಲ್ಛಾವಣಿ ನಕ್ಷತ್ರಾಕಾರದಲ್ಲಿದೆ. ಒಕ್ಕುಂದದ ಇನ್ನೊಂದು ಮಲ್ಲಿಕಾರ್ಜುನ ದೇವಾಲಯ ಬೆಳಗಾವಿ ಪ್ರದೇಶದಲ್ಲಿ ವಿರಳವಾಗಿರುವ ಸಾಂಧಾರ ದೇವಾಲಯ ಉತ್ತರಾಭಿಮುಖವಾಗಿರುವ ಇದರ ಗರ್ಭಗೃಹ ಮತ್ತು ಅಂತರಾಳದ ದ್ವಾರದಲ್ಲಿ ಪಂಚಶಾಖೆಗಳಿವೆ. ಅಂತರಾಳದ

ಛಾವಣಿಯಲ್ಲಿ ಪದ್ಮವಿದೆ. ಗರ್ಭಗೃಹದ್ವಾರದ ಲಲಾಟದಲ್ಲಿ ಜಿನಬಿಂಬವಿದೆ. ಮುಖಮಂಟಪದ ಕಕ್ಷಾಸನ, ಸಭಾಮಂಟಪ ದಲ್ಲಿ ವಾತಾಯನಗಳು, ಬಿದ್ದುಹೋದ ಶಿಖರ ಈ ದೇವಾಲಯದ ಇತರ ಲಕ್ಷಣಗಳಾಗಿವೆ.

ಹನ್ನೆರಡನೆಯ ಶತಮಾನದ ನಿರ್ಮಿತವಾದ ಕಲ್ಯಾಣ ಚಾಲುಕ್ಯ ಶೈಲಿಯಲ್ಲಿರುವ ಬೆಳಗಾವಿ ಪ್ರದೇಶದ ಇನ್ನಿತರ ದೇವಾಲಯಗಳೆಂದರೆ: ಯಡೂರಿನ ವೀರಭದ್ರ ದೇವಾಲಯ, ಸಂಕೇಶ್ವರದ ಶಂಕರಲಿಂಗ ದೇವಾಲಯ, ಕಾಗವಾಡದ ಕಗ್ಗೋಡುರಾಯ ಅಥವಾ ಬ್ರಹ್ಮನಾಥದೇವಾಲಯ, ಅಥಣಿಯ ಅಮೃತೇಶ್ವರ ದೇವಾಲಯ ಮುಂತಾದವುಗಳು ಉಲ್ಲೇಖ ನೀಯ.

ಉತ್ತರದ ನಾಗರಶೈಲಿಯ ಮತ್ತು ಅದರ ಉಪಶೈಲಿಯ ದೇವಾಲಯಗಳು

ಉತ್ತರಭಾರತದ ದೇವಾಲಯ ವಾಸ್ತುಶೈಲಿ ಎನಿಸಿದ ರೇಖಾನಾಗರಶೈಲಿಯ ಪ್ರಾಸಾದಗಳು ಹೆಚಿನ ಸಂಖ್ಯೆಯಲ್ಲಿಲ್ಲ ದಿದ್ದರೂ ಪ್ರಚಲಿತವಿದ್ದವು. ಇದರ ಉಪಶೈಲಿಗಳೆಂದರೆ 'ಶೇಖರಿ' 'ಲತೀನ' ಮತ್ತು 'ಭೂಮಿಜ' ಮಾದರಿಗಳು. 'ರಥ' ವಿನ್ಯಾಸದ ಮೇಲೆ ರಚಿತವಾಗಿರುವ 'ಲತೀನ' ಶಿಖರವು ರೇಖಾರೀತಿಯಲ್ಲಿ ಅಂದರೆ ಮೇಲಕ್ಕೆ ಹೋದಂತೆ ಕ್ರಮೇಣ ಒಳಬಾಗುತ್ತ ಹೋಗುವಂತೆ ನಿರ್ಮಿತವಾಗಿದೆ. ಮಸ್ತಕದಲ್ಲಿ 'ಗಳ' 'ಆಮಲಕ' ಕಲಶವಿದೆ. ಶಿಖರದ ಕೋನಗಳಲ್ಲಿ ಹಂತ ಹಂತದಲ್ಲಿ 'ಕರ್ಣಾಮಲಕ'ಗಳಿವೆ. ಶಿಖರದ ಪ್ರತಿಯೊಂದು ಮಗ್ಗಲಿನ ಮಧ್ಯಭಾಗ ಮುಂಚಾಚಿದ್ದು ಬಳ್ಳಿಗಳ ಆಕಾರವಿದೆ.

ಗಮನಾರ್ಹವಾದ ಶಿಖರ ಶೈಲಿಯಿಂದಾಗಿ ಶಿಖರೇಶ್ವರ ಎಂದು ಹೆಸರು ಪಡೆದ ಹತ್ತರಗಿಯ ಶಿಖರೇಶ್ವರ ದೇವಾಲಯ, 'ಲತೀನ' ಶೈಲಿಗೆ ಉತ್ತಮ ಉದಾಹರಣೆ. ಆದರ ಶಿಖರದಲ್ಲಿ ಕರ್ಣಾಮಲಕಗಳಿಗೆ ಬದಲಾಗಿ ಹಲ್ಲಿನ ಆಕಾರದ ಕಚ್ಚುಗಳಿರುವುದು ವಿಶೇಷವಾಗಿದೆ. ಇದು ಸಮಕಾಲೀನ ದೇವಾಲಯಗಳಲ್ಲಿ ಗೋಕಾಕ, ದೇಗಾಂವ, ಹೂಲಿ ಮುಂತಾದೆಡೆ ಹೊರಗೋಡೆಯ ಮೇಲೆ ಅಲಂಕರಣಕ್ಕಾಗಿ ಮಾಡಿರುವ ಮಾದರಿಗಳನ್ನು ನೆನಪಿಸುತ್ತದೆ. ರೇಖಾನಾಗರ ಶೈಲಿಯ ಈ ಶಿಖರದಲ್ಲಿ ಚೈತ್ಯಗೂಡುಗಳಿಂದ ಕೆತ್ತಿದ ಉದ್ದ ಪಟ್ಟಿಕೆಗಳಿವೆ. ಮೂಲತಃ ತ್ರಿಕೂಟಾಚಲವಾದ ಈ ದೇಗುಲದ ದೊಡ್ಡ ದೊಡ್ಡ ಕಲ್ಲುಗಳನ್ನು ಜೋಡಿಸಿ ಎಬ್ಬಿಸಲಾದ ಗೋಡೆಗಳಲ್ಲಿರುವ ಗೂಡುಗಳು ನಿರಾಡಂಬರವಾಗಿವೆ. ನವರಂಗ ಮತ್ತು ಗರ್ಭಗೃಹದ ದ್ವಾರಗಳ ಮೇಲೆ ಅಲಂಕರಣ ಕ್ಕಾಗಿ ನಿರ್ಮಿಸಿದ ದ್ರಾವಿಡ ಮತ್ತು ಫಾಂಸನ ಮಾದರಿಯ ಸಾಲು (ಐದು) ಶಿಖರಗಳಿದ್ದುದನ್ನು ಗಮನಿಸಬಹುದು. ಬೆಳಗಾವಿ ಪ್ರದೇಶದ ಅನೇಕ ದೇವಾಲಯಗಳಲ್ಲಿರುವಂತೆ ಇದ ಕೂಡ ನಿರಂಧರ/ಹೊರ ಪ್ರದಕ್ಷಿಣಾ ಪಥವನ್ನು ಹೊಂದಿದೆ. ಬಂಧನ ಸಾಮಗ್ರಿಗಳನ್ನು ಬಳಸದೆ ಚಪ್ಪಡಿಗಳನ್ನು ಒಂದರ ಮೇಲೊಂದರಂತೆ ಜೋಡಿಸಿಕೊಡು ಹೋಗುವ ತಂತ್ರಜ್ಞಾನವನ್ನು ಬಳಸಲಾಗಿದೆ. ಶಿಖರೇಶ್ವರ ದೇವಾಲಯ ವಾಸ್ತುಶಿಲ್ಪಶೈಲಿಯ ದೃಷ್ಟಿಯಿಂದ ಇಡಿ ಬೆಳಗಾವಿ ಜಿಲ್ಲಾ ಪ್ರದೇಶದಲ್ಲೇ ಏಕಮೇವಾದ್ವಿತಿಯ ಎನಿಸಿದೆ.

ಕಪ್ಪುಮಿಶ್ರಿತ ಹಸಿರು ಛಾಯೆಯ ನುಣುಪು ಕಲ್ಲು (ಕ್ಲೋರೈಟಿಕ್ ಷಿಸ್ಟ) ಬೆಳಗಾವಿ ಪ್ರದೇಶದಲ್ಲಿ ಮಧ್ಯಯುಗದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬಳಸಿದ್ದನ್ನು ಕಾಣಬಹುದು. ಅಲಂಕರಣಕ್ಕೆ ಅನುಕೂಲಕರವಾದ ಈ ಶಿಲೆ ವಾಸ್ತುಶೈಲಿಯ ಕಲಾ ಪ್ರೌಢಿಮೆಗೆ ಸಹಾಯವಾಯಿತು. ಅಲ್ಲದೆ ಬಳಪದ ಕಲ್ಲಿನ ಹೊರತಾಗಿ ಅಪರೂಪಕ್ಕೆ ಬೆಣಚುಕಲ್ಲು, ಮರಳು ಶಿಲೆಗಳನ್ನೂ ಬಳಸಲಾಗಿದೆ. ಪರಿಸರದ ಸೌಲಭ್ಯ, ಸ್ಥಳೀಯ ಲಭ್ಯತೆ, ಸಾಗಾಣಿಕೆಯ ಅನುಕೂಲ, ಪೋಷಕರ ಆರ್ಥಿಕ ಸಾಮರ್ಥ್ಯ ಮುಂತಾದವುಗಳ ಮೇಲೆ ವಾಸ್ತುಶಿಲ್ಪದ ಗುಣವತ್ತೆ ಅವಲಂಬಿತವಾಗಿತ್ತು.

ರೇಖಾನಾಗರ ಪ್ರಾಸಾದದ ಉಪಶೈಲಿಯಾದ 'ಶೇಖರಿ' ಮಾದರಿಯಲ್ಲಿ (ಪ್ರಾಕಾರದಲ್ಲಿ) ಕೇಂದ್ರದಲ್ಲಿ ದೊಡ್ಡ ಶೈಲಿಯ ಶಿಖರದ ಸುತ್ತ ಅದೇ ಮಾದರಿಯ ಶಿಖರಗಳ ಸಮೂಹ ಸುತ್ತುವರಿದು ಪರ್ವತಾವಳಿಯಂತೆ ಕಾಣುತ್ತದೆ. (ಖಜುರಾಹೊ ಕಂಡರಾಯ ಮಹಾದೇವ ದೇವಾಲಯ ಮಾದರಿಯದು). ಹೂಲಿಯ ಬೆಟ್ಟದಡಿಯಿರುವ ದೇವಾಲಯ ಸಮೂಹಗಳಲ್ಲಿ ಮತ್ತು ದೇಗಾಂವೆಯ ಕಮಲನಾರಾಯಣ ದೇವಾಲಯದ ಪಾರ್ಶ್ವಗೋಡೆಯ ಹೊರಭಾಗದ ದೇವಕೋಷ್ಠದ ಮೇಲೆ 'ಶೇಖರಿ' ಮಾದರಿಯ ಶಿಖರ ಮತ್ತು ಇನ್ನುಳಿದ ಕೋಷ್ಠಗಳ ಮೇಲೆ ರೇಖಾನಾಗರ ಮಾದರಿಗಳನ್ನು ನಿರೂಪಿಸಲಾಗಿದೆ.

ರೇಖಾನಾಗರ ಪ್ರಾಸಾದದ ಉಪಶೈಲಿಯಾದ 'ಭೂಮಿಜ' ಶೈಲಿಯಲ್ಲಿ ಮಹಡಿಯೋಪಾದಿಯಲ್ಲಿ ಶಿಖರವು ಸಾಲಾಗಿ, ಸುವ್ಯವಸ್ಥಿತವಾಗಿ ಉಬ್ಬುಶಿಲ್ಪ ರೀತಿಯಲ್ಲಿ ಜೋಡಿಸ ಲಾಗಿರುತ್ತದೆ. ಬೆಳಗಾವಿ ಜಿಲ್ಲಾ ಪ್ರದೇಶದಲ್ಲಿ ಭೂಮಿಜ ಶೈಲಿಯ ಏಕಮೇವ ಉದಾಹರಣೆ ಎಂದರೆ ಗೋಕಾಕ ಸಮೀಪದ ಮಮದಾಪುರದಲ್ಲಿರುವ ೧೪ನೆಯ ಶತಮಾನಕ್ಕೆ ಸೇರಿದ ಅಂಬಾಬಾಯಿ ದೇವಾಲಯ ಎಂಬುದು ಇಲ್ಲಿ ಉಲ್ಲೇಖನೀಯ. ವಾಸ್ತುವಿಶಿಷ್ಟತೆಯಿಂದ ಕೂಡಿದ ಇನ್ನೊಂದು ಗಮನಾರ್ಹ ದೇವಾಲಯವೆಂದರೆ ರಾಮದುರ್ಗ ತಾಲ್ಲೂಕಿನ ಸುರೇಬಾನದಲ್ಲಿರುವ ಶಬರಿದೇವಾಲಯ. ವಾಸ್ತುಶಾಸ್ತ್ರ ಗ್ರಂಥಗಳಲ್ಲಿ ಉಲ್ಲೇಖಿತವಾದ ಬಂಡಿಯ ಛಾವಣಿಯ ಆಕಾರದ 'ಶಾಲಾಕಾರ' ದೇಗುಲಕ್ಕೆ ಉತ್ತಮ ನಿರ್ದೇಶನ

ಇದು. ದೇವಿಯ ದೇಗುಲಗಳಿಗೆ ಮಾತ್ರ ಈ ಆಕಾರದ ದೇಗುಲಗಳು ನಿರ್ಮಾಣವಾಗುತ್ತಿದ್ದದು ಇಲ್ಲಿ ಗಮನಿಸಬೇಕಾದ ಅಂಶ. ಆಯಾತಾಕಾರದ ವಿನ್ಯಾದಲ್ಲಿರುವ ಗರ್ಭಗೃಹ, ವಿಸ್ತಾರವಾದ ಮತ್ತು ಚೌಕಾಕಾರದ ಕಂಬಗಳಿಂದ ಕೂಡಿದ ನವರಂಗ, ತಲವಿನ್ಯಾಸ ಮತ್ತು ಬಾಹ್ಯನೋಟದ ವಿವರಗಳು ಈ ಶಬರಿ ದೇವಾಲಯವನ್ನು ಅಪರೂಪದ್ದಾಗಿಸಿವೆ.

ಬೆಳಗಾವಿ ಪ್ರದೇಶದಲ್ಲಿ ರೇಖಾನಗರ ವಿಮಾನವನ್ನು ಮೂಲಗರ್ಭಗೃಹದಲ್ಲಿ ಹೊಂದಿದ ಶಿಖರಗಳು (ಶಿಖರೇಶ್ವರ ದೇವಾಲಯ ಹೊರತುಪಡಿಸಿ) ಇಲ್ಲದೇ ಹೋದರು ಅಲಂಕರಣ ವಿನ್ಯಾಸವಾಗಿ ದೇವಾಲಯದ ವಿವಿಧ ಭಾಗದಲ್ಲಿ–ದೇವಕೋಷ್ಠದ ಮೇಲೆ, ದ್ವಾರಬಂಧಗಳಲ್ಲಿ, ಕಕ್ಷಾಸನದ ಹೊರಭಾಗದಲ್ಲಿ, ಅರೆಗಂಬಗಳ ಮೇಲೆ ಚಿಂಜಿತವಾಗಿದ್ದು ಉಲ್ಲೇಖನೀಯ. ಬಹುಶಃ ದೇವಾಲಯ ನಿರ್ಮಾಣದಲ್ಲಿ ಮುಖ್ಯಸ್ಥಪತಿ ಹಾಗೂ ಆತನ ಸಹಾಯಕರಿಗೆ ಪ್ರಚಲಿತವಿದ್ದ ಸಮಕಾಲೀನ ದೇವಾಲಯ ವಾಸ್ತುಶಿಲ್ಪಶೈಲಿಯ ಪೂರ್ಣ ನಿರ್ಮಿತಿಯ ಮುಖ್ಯ ಶೈಲಿಯ ಚೌಕಟ್ಟನ್ನು ಉಪಯೋಗಿಸಿ ಕೊಂಡೇ ಪ್ರಯೋಗಾತ್ಮಕವಾಗಿ ಸಾಂದರ್ಭಿಕವಾಗಿ ಬದಲಾವಣೆಗಳನ್ನು ಸ್ಥಪತಿಗಳು ಅಳವಡಿಸಿಕೊಂಡದ್ದು ಶ್ಲಾಘನೀಯ.

ಕರ್ನಾಟಕ ದ್ರಾವಿಡಶೈಲಿಯ ದೇವಾಲಯಗಳು

ದಾಕ್ಷಿಣಾತ್ಯ ಶೈಲಿ ಅಂತರ್ಗತ ಕರ್ನಾಟಕ ದ್ರಾವಿಡ ದೇವಾಲಯಗಳು ಮಡಿಕೆಗಳುಳ್ಳ ಅಧಿಷ್ಠಾನ, ಕುಡ್ಯಸ್ಥಂಬಗಳ ಅಲಂಕಾರವುಳ್ಳ ಗೋಡೆ/ಭಿತ್ತಿ ಕೂಟ, ಪಂಜರ, ಶಾಲ ಘಟಕಗಳುಳ್ಳ ಹಾರ ಪ್ರತಿಯೊಂದು ಮಹಡಿಯ ಮೇಲಂಚಿನ ಗುಂಟ ಹೊಂದಿರುವುದು ಈ ಶೈಲಿಯ ಕೆಲ ಮುಖ್ಯ ಲಕ್ಷಣಗಳು. ಮೆಟ್ಟಿಲುಗಳು ಮೇಲೇರಿದಂತೆ ಕಿರಿದಾಗುತ್ತ ಪಿರಾಮಿಡ್ಡಿನ ಆಕಾರದಲ್ಲಿರುವುದು, ಮೇಲ್ಗಡೆ ಕಲಶವನ್ನು ಹೊಂದಿರುವ ಘಟ ಆಕಾರದ ಶಿಖರ–ಇವೇ ಮೊದಲಾದ ಪ್ರಧಾನ ಅಂಶಗಳನ್ನು ಹೊಂದಿರುತ್ತವೆ. ಆದರೆ ದೇವಾಲಯ ಗಳೆಲ್ಲವೂ ಒಂದೇ ಮಾದರಿಯದಾಗಿರಲಿಲ್ಲ. ವಿನ್ಯಾಸದಲ್ಲಿ, ಜೋಡಣೆಯಲ್ಲಿ ಬದಲಾವಣೆಗಳನ್ನು ಮಾಡಿಕೊಳ್ಳುವ ಸ್ವಾತಂತ್ರ್ಯ ಸ್ಥಪತಿಗಳಿಗಿತ್ತು. ಶಿಲ್ಪಶಾಸ್ತ್ರದಷ್ಟು ಕಟ್ಟುನಿಟ್ಟಿನಿಂದ ವಾಸ್ತುಶಾಸ್ತ್ರದ ಆದೇಶಗಳನ್ನು ಅನುಸರಿಸಲೇಬೇಕೆಂದು ನಿಯಮಗಳಿಗೆ ಬದ್ಧರಾಗಿರಲಿಲ್ಲ. ಇದನ್ನು ಜಾಲಂಧರ, ದ್ವಾರಶಾಖೆ, ದೇವಕೋಷ್ಠ, ಗೋಡೆಗಳ ಅಲಂಕಾರ ಮುಂತಾದವುಗಳನ್ನು ಶಾಸ್ತ್ರಗಳ ಚೌಕಟ್ಟಿನಲ್ಲಿ ಸೇರಿಸದೇ ಸ್ಥಪತಿಯ ಕಲ್ಪನಾ ಚಾತುರ್ಯದ ರೂಪಕಗಳಾಗಿರುವುದನ್ನು ಕಾಣಬಹುದು. ಕಂಬಗಳು ತಿರುಗಣೆಯಿಂದ ಮಾಡಿದಂತಿವೆ.

ಕಂಬಗಳ ಬೋದುಗೆಗಳಿಗೆ ಅಥವಾ ಹೊರಗೋಡೆಯ ಅರ್ಧಗಂಬಗಳಿಗೆ ಅನಿಸಿ ಮದನಿಕೆಯರ ಶಿಲ್ಪಗಳನ್ನು ನಿಲ್ಲಿಸಿರುವ ಸಂಪ್ರದಾಯ ಚಾಲುಕ್ಯರ, ತದನಂತರ ಹೊಯ್ಸಳರ ಕಾಲದಲ್ಲಿ ಮುಂದುವರೆಯಿತು. ಇದನ್ನು ಬೆಳಗಾವಿಯ ಸೈನ್ಯ ಪಾಳ್ಯ ಮೈದಾನದ ಪಕ್ಕಕ್ಕಿರುವ ಶಾಸನೋಲ್ಲೇಖಿತ ದೇವಗಿರಿ ಯಾದವಕಾಲೀನ ದೇವಾಲಯದ ಅವಶೇಷಗಳಲ್ಲಿ ಕಾಣಬಹುದು. ಬರಿ ನವರಂಗ ಮಾತ್ರ ಉಳಿದುಕೊಂಡಿರುವ ಈ ದೇವಾಲಯದಲ್ಲಿ ಉತ್ತಮ ಶಿಲಾಬಾಲಿಕೆಯರ ಶಿಲ್ಪವನ್ನು ಅರ್ಧಗಂಬದಲ್ಲಿ ಕಾಣಬಹುದು.

ಮೂರ್ತಿಶಿಲ್ಪ, ಪೂರ್ಣಕುಂಭ ಮುಂತಾದ ಕೆತ್ತನೆಯ ಕಂಬಗಳನ್ನು ದೇವಾಲಯಗಳ ನವರಂಗದಲ್ಲಿ ಕಾಣಬಹುದು. ಉದಾಹರಣೆಗೆ ಹೂಲಿಯ ತಾರಕೇಶ್ವರ ಮತ್ತು ನಂದಗಾಂವದ ಈಶ್ವರದೇವಾಲಯ ಕೆಲಕಡೆ ಅರ್ಧಸ್ತಂಬಗಳ ಮೇಲೆ ಮಕರತೋರಣ ಕೆತ್ತಲಾಗಿದೆ. ಇದನ್ನು ಹೂಲಿಯ ಅಂಧಕಾಸುರ ದೇವಾಲಯದಲ್ಲಿ ಕಾಣಬಹುದು. ಫಾಂಸನ ಶೈಲಿಯ ದೇವಾಲಯಗಳಿಗೆ ಹೋಲಿಸಿದರೆ ಬೆಳಗಾವಿ ಪ್ರದೇಶದಲ್ಲಿ ದ್ರಾವಿಡಶೈಲಿಯ ದೇವಾಲಯಗಳ ಸಂಖ್ಯೆ ಕಡಿಮೆ ಎಂದೇ ಹೇಳಬಹುದು. ರಾಷ್ಟ್ರಕೂಟಾಂತ್ಯ ಹಾಗೂ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಇವು ನಿರ್ಮಾಣಗೊಂಡಿವೆ. ಗೋಕಾಕ ಜಲಪಾತದ ತೂಗುಸೇತುವೆಯಾಚೆ ಉತ್ತರಕ್ಕಿರುವ ದತ್ತಾತ್ರೇಯ ದೇವಾಲಯ ಕರ್ನಾಟಕ ದ್ರಾವಿಡ ಶೈಲಿಯ ದ್ವಿತಲ (ಎರಡು ಮಹಡಿಯ ಮೇಲ್ಕಟ್ಟಡವಿರುವ) ವಿಮಾನ ಹೊಂದಿದೆ. ಸುಮಾರು ಹತ್ತನೆಯ ಶತಮಾನದ ಕೊನೆಯ ಭಾಗದಲ್ಲಿ ನಿರ್ಮಾಣವಾದ ಈ ದೇಗುಲದ ಭದ್ರಗಳಲ್ಲಿ ಶಾಲಾ, ನಾಸಿಗಳಲ್ಲಿ ದೇವಿ, ವೈಶ್ರವಣ ಮುಂತಾದ ಚಿಕಣಿ ಶಿಲ್ಪಗಳಿವೆ. ಕಪೋತಬಂಧ ಮಾದರಿಯ ಅಧಿಷ್ಠಾನ, ಭದ್ರಕ ರೀತಿಯ ಕಂಬಗಳುಳ್ಳ ಅಂತರಾಳ, ಕಡಿಮೆ ಎತ್ತರವುಳ್ಳ ಶಿಖರ, ಅಂತರಾಳದ ಸಮತಲ ಭಾವಣೆಯಲ್ಲಿ ವರ್ತಿಸುತ್ತಿರುವ ಚಾಮುಂಡಿ, ಅದನ್ನು ಸುತ್ತುವರೆದ ಸಪ್ತಮಾತೃಕೆಯರ, ಗಣೇಶ ಮತ್ತು ವೀರಭದ್ರರ ಉಬ್ಬುಶಿಲ್ಪಗಳಿವೆ. ಆರುಶಾಖೆಗಳುಳ್ಳ ಗರ್ಭಗೃಹ ದ್ವಾರಬಂಧದಲ್ಲಿ ರತ್ನ, ವಲ್ಲಿ, ಸ್ತಂಭ ಮತ್ತು ಪದ್ಮಪತ್ರಗಳ ವಿನ್ಯಾಸವಿದೆ.

ಕ್ರಿ.ಶ. ೧೧೭೨ರಲ್ಲಿ ರಟ್ಟ ಮುಮ್ಮಡಿ ಕಾರ್ತವೀರ್ಯ ನಿಂದ ನಿರ್ಮಾಣಗೊಂಡ ಜಲಪಾತದ ಪಕ್ಕಕ್ಕಿರುವ ಮಹಾಲಿಂಗೇಶ್ವರ ದೇವಾಲಯ ತ್ರಿತಲ ವಿಮಾನವನ್ನು ಹೊಂದಿದೆ. ಗೋಪುರದ ಗೋಡೆಯಲ್ಲಿ ಭದ್ರ, ಉಪಭದ್ರ, ಕರ್ಣ ಪ್ರತಿರಥ ಮುಂತಾದ ಚಾಚುಗಳಿದ್ದು, ದೇವಕೋಷ್ಠದ ಮೇಲೆ ಲತೀನ ಶೈಲಿಯ ಶಿಖರವಿದೆ. ಸ್ತಂಭ ಪಂಜರ ದಲ್ಲಿಯೂ ಈ ರೀತಿಯ ಶಿಖರ ಮಾದರಿಗಳಿವೆ.

ಮೂಲತಃ ಜೈನಬಸದಿಯಾದ, ಸು. ೧೦–೧೧ನೆಯ ಶತಮಾನದ ನಿರ್ಮಿತಿಯಾದ ವಣ್ಣೂರಿನ ಪ್ರಭುದೇವರ ಗುಡಿ ದ್ರಾವಿಡಶೈಲಿಗೆ ಇನ್ನೊಂದು ನಿದರ್ಶನ. ಈ ದೇವಾಲಯದ ಹೊರಗೋಡೆಯ ಮೇಲೆ ಅಲಂಕಾರಿಕವಾಗಿ ಶೇಖರಿ, ದ್ರಾವಿಡ, ಲತೀನ ಮುಂತಾದ ಶೈಲಿಯ ಶಿಖರಗಳಿದ್ದದ್ದು ಗಮನಿಸಬೇಕಾದ ಅಂಶ. ಹೊರಭಿತ್ತಿಯಲ್ಲಿ ಅರೆಗಂಬಗಳ ಅಲಂಕರಣವಿದ್ದರೂ ಶಿಲ್ಪರಹಿತವಾಗಿವೆ. ಕೊಣ್ಣೂರಿನ ಜೈನಬಸದಿ (೧೧ನೆಯ ಶತಮಾನ) ಯ ಹೊರಗೋಡೆಯ ಅರ್ಧಕಂಬಗಳು ಮೇಲೆಯೂ ವಿವಿಧ ಶಿಖರ ಮಾದರಿಗಳನ್ನು ಕಾಣಬಹುದು. ದ್ರಾವಿಡಶೈಲಿಯ ದೇವಾಲಯಗಳಿಗೆ ಬೆಳಗಾವಿ ಪ್ರದೇಶದ ಕಲ್ಲೂರಿನ ಸಿದ್ದೇಶ್ವರ, ಅವರಾದಿಯ ಕಲ್ಮೇಶ್ವರ, ತೋರಗಲ್ ಭೂತನಾಥ ಮುಂತಾದವುಗಳು ಇನ್ನಿತರ ಉದಾಹರಣೆಗಳು.

ಬೆಳಗಾವಿ ಜಿಲ್ಲೆಯಲ್ಲಿ ಕರ್ಣಾಟ ದ್ರಾವಿಡ ವಿಮಾನಗಳುಳ್ಳ (ಐದು ಶಿಖರಗಳು) ಐದು ಗರ್ಭಗೃಹಗಳುಳ್ಳ ಪಂಚಕೂಟ ಮಾದರಿಯ ಉತ್ಕೃಷ್ಟ ದೇವಾಲಯವೆಂದರೆ ಹೂಲಿಯ ಪಂಚಲಿಂಗೇಶ್ವರ. ಆಯಾತಾಕಾರ ಸಭಾಮಂಟಪದ ಮೂರು ಪಾರ್ಶ್ವಗಳಲ್ಲಿ ಐದು ಗರ್ಭಗೃಹಗಳಿವೆ. ಪರಸ್ಪರ ಹೊಂದಿಕೊಂಡಿರುವ ಒಂದೇ ಸಾಲಿನಲ್ಲಿರುವ ಮೂರು ಗರ್ಭಗೃಹಗಳು ಮತ್ತು ಎರಡು ಪಾರ್ಶ್ವಗಳಲ್ಲಿ ಇನ್ನೆರಡು ಸಭಾಮಂಟಪಕ್ಕೆ ಹೊಂದಿಕೊಂಡಿರುವ ವಿಶಾಲ ಮಹಾ ಮಂಟಪವಿದ್ದು ಐದು ಗರ್ಭಗೃಹಗಳ ಮೇಲೆ ಐದು ದ್ರಾವಿಡಶೈಲಿಯ ವಿಮಾನಗಳಿವೆ. ಮುಖಮಂಟಪದ ಮೇಲ್ಛಾವಣಿ ಇಳಿಜಾರಾಗಿದೆ. ಐದು ಶಿಖರಗಳನ್ನು ಬೆಸೆದಿರುವ ರೀತಿ ಅಮೋಘವಾಗಿದ್ದು ಕಣ್ಮನ ಸೆಳೆಯುತ್ತದೆ. ಇದು ಬದಾಮಿ ಚಾಲುಕ್ಯರ ಕಾಲದ ಜೈನ ಬಸದಿಯಾಗಿದ್ದು ತದನಂತರ ಸುಮಾರು ೧೨ನೆಯ ಶತಮಾನದಲ್ಲಿ ಈಗಿದ್ದ ರೂಪ ತಳೆದಿದೆ.

ಬೆಳಗಾವಿ ಜಿಲ್ಲಾ ಪ್ರದೇಶದಲ್ಲಿ ದೇವಾಲಯ ವಾಸ್ತುಶಿಲ್ಪ ಪರಂಪರೆಯ ಪ್ರಮುಖ ಅಂಶಗಳು

ಬೆಳಗಾವಿ ಜಿಲ್ಲಾ ಪ್ರದೇಶದಲ್ಲಿ ದೇವಾಲಯ ವಾಸ್ತುಶಿಲ್ಪ ಪರಂಪರೆಯ ಕುರಿತಾದ ಮೇಲಿನ ವಿಶದವಾದ ವಿವರಣೆ ಮತ್ತು ವಿಶ್ಲೇಷಣೆಯಿಂದಾಗಿ ಗುರುತಿಸಬಹುದಾದ ಪ್ರಮುಖ ಅಂಶಗಳೆಂದರೆ:

೧) ದ್ರಾವಿಡ, ರೇಖಾನಾಗರ ಮತ್ತು ಫಾಂಸನ ಶೈಲಿಯ ದೇವಾಲಯಗಳು ಜಿಲ್ಲೆಯಲ್ಲಿವೆ.

೨) ಏಕಕೂಟ, ದ್ವಿಕೂಟ, ತ್ರಿಕೂಟ ಮತ್ತು ಅಪರೂಪವಾಗಿ ಪಂಚಕೂಟ ಮಾದರಿಯ ದೇವಾಲಯಗಳು ಇಲ್ಲಿ ಕಂಡುಬರುತ್ತವೆ.

೩) ಸಮಕೋನಗಳ ಬಳಕೆ ಗಮನಾರ್ಹವಾಗಿದೆ.

೪) ನೇರವಾದಂತಹ ಗೋಡೆಗಳನ್ನು ಹಿಂಚಾಚು–ಮುಂಚಾಚುಗಳಿಂದ ಒಡೆಯಲಾಗಿದೆ.

೫) ತಳವಿನ್ಯಾಸವಿರುವ ದೇವಾಲಯಗಳು ಅಧಿಕ ವಾಗಿದ್ದು, ನಕ್ಷತ್ರಾಕಾರದ ದೇವಾಲಯಗಳು ವಿರಳ.

೬) ಬಹುತೇಕ ದೇವಾಲಯಗಳು ಗರ್ಭಗೃಹ, ಅಂತರಾಳ, ನವರಂಗ ಮತ್ತು ಮುಖಮಂಟಪಗಳನ್ನು ಹೊಂದಿವೆ.

೭) ದೇವಾಲಯಗಳ ಅದರಲ್ಲೂ ಪ್ರವೇಶದ್ವಾರ ಮತ್ತು ಗರ್ಭಗೃಹದ ದ್ವಾರಬಂಧಗಳು ಬಹುಶಾಖೆಗಳನ್ನು ಹೊಂದಿದ್ದು ಸೂಕ್ಷ್ಮ ಕೆತ್ತನೆಯ ಅಲಂಕರಣವಿದೆ.

೮) ಹೊರಭಿತ್ತಿಯಲ್ಲಿ ಅರೆಗಂಬಗಳು, ಕೋಷ್ಠಗಳು, ಅರೆಕಂಬಗಳ ಮೇಲೆ ನಾಗರ, ಫಾಂಸನ ಮತ್ತು ದ್ರಾವಿಡಶೈಲಿಯ ಶಿಖರಗಳ ಅಲಂಕರಣವಿದೆ.

೯) ದ್ವಾರಬಂಧದ ಇಕ್ಕೆಲಗಳಲ್ಲಿ ವಿವಿಧ ಅಲಂಕರಣದ ಜಾಲಂಧರಗಳಿವೆ.

೧೦) ಬೆಳಗಾವಿ ಪ್ರದೇಶದ ಬಹುತೇಕ ದೇವಾಲಯಗಳು ಹೊರ ಪ್ರದಕ್ಷಿಣಾಪಥವನ್ನು ಹೊಂದಿದ್ದು ನಿರಂಧರ ದೇವಾಲಯಗಳಾಗಿವೆ.

೧೧) ತಿರುಗಣೆಯಿಂದ ಹೊಳಪು ಪಡೆದ ವಿವಿಧ ಆಕಾರ ಮತ್ತು ವಿನ್ಯಾಸದ ಕಂಬಗಳನ್ನು ಹೊಂದಿವೆ.

೧೨) ಮುಖಮಂಟಪ ಅಥವಾ ನವರಂಗದ ಭುವನೇಶ್ವರಿಯು ಸೂಕ್ಷ್ಮಕೆತ್ತನೆಯ ಅಲಂಕರಣ ಮತ್ತು ಚಿತ್ತಾಕರ್ಷಕ ಕುಸುರಿ ಕೆಲಸಕ್ಕೆ ನಿದರ್ಶನಗಳಾಗಿವೆ. ಆಳವಾದ ಗುಮ್ಮಟದಲ್ಲಿ ಕಮಲವಿದ್ದು ನಕ್ಷತ್ರಾಕಾರದ ಲೋಲಕ ಇಳಿಬಿದ್ದಿರುತ್ತದೆ.

೧೩) ನವರಂಗದ ಒಳಗೋಡೆಯಲ್ಲಿ ಅಳವಡಿಸಿರುವ ಎರಡು, ನಾಲ್ಕು, ಎಂಟು ದೇವಕೋಷ್ಠಗಳಿವೆ.

೧೪) ಬೆಳಗಾವಿ ಪ್ರದೇಶದ ಮಧ್ಯಕಾಲೀನ ದೇವಾಲಯಗಳಲ್ಲಿ ಉಳಿದ ಪ್ರದೇಶಗಳಿಗೆ ಹೋಲಿಸಿದರೆ ಶಿಲ್ಪ ಸಂಪತ್ತು ಕಡಿಮೆ ಎಂದು ಹೇಳಬಹುದು.

ಉಪಸಂಹಾರ

ಮೇಲಿನ ವಿಶ್ಲೇಷಣೆ ಬೆಳಗಾವಿ ಜಿಲ್ಲಾ ಪ್ರದೇಶದಲ್ಲಿ ಬೆಳೆದು ಬಂದ ದೇವಾಲಯ ವಾಸ್ತುಶಿಲ್ಪ ಪರಂಪರೆಯ ಉಗಮ, ಇತಿಹಾಸ, ಜಾಯಮಾನ, ಸಾಂದರ್ಭಿಕ ಅಂಶ, ವಸ್ತು, ಗುಣವೈಶಿಷ್ಟ್ಯಗಳ ಜೊತೆಗೆ ವಾಸ್ತುಶಿಲ್ಪ ಶೈಲಿಯ ಉಗಮ. ಬೆಳವಣಿಗೆ ಮತ್ತು ಮಧ್ಯಯುಗದಲ್ಲಿ ವಾಸ್ತುಶಿಲ್ಪ ಹೊಂದಿದ ಪರಾಕಾಷ್ಠತೆಯನ್ನು ಬಿಂಬಿಸುತ್ತದೆ. ದೇವಾಲಯ

ವಾಸ್ತುಶಿಲ್ಪ ನಿರ್ಮಾಣದ ಸಾಂಪ್ರದಾಯಿಕ ಚೌಕಟ್ಟು, ಸಾಂಸ್ಕೃತಿಕ ಪ್ರತಿಬಿಂಬ, ವಾಸ್ತುಶಿಲ್ಪ ಶೈಲಿಯ ಅಭಿವ್ಯಕ್ತಿ, ಕ್ರಿಯಾತ್ಮಕತೆ ಮತ್ತು ಸೃಜನಶೀಲತೆ, ಅಧ್ಯಾತ್ಮಿಕ ಚೌಕಟ್ಟು, ಕಲಾಪರಂಪರೆ ಮತ್ತು ಪೋಷಕರ ಅಭಿರುಚಿ ಗೋಚರಿಸುತ್ತವೆ. ಕರ್ನಾಟಕದ ವಿವಿದೆಡೆ ಬೆಳೆದು ಬಂದ ವಾಸ್ತುಶಿಲ್ಪ ಪರಂಪರೆ ವಿಭಿನ್ನವಾಗಿಲ್ಲ ಎಂದು ಮೇಲ್ನೋಟಕ್ಕೆ ಅನಿಸಿದರೂ ಸೂಕ್ಷ್ಮವಾದ ಪರಿಶೀಲನೆಯಿಂದ ಬೆಳಗಾವಿ ಜಿಲ್ಲೆಯಲ್ಲಿ ಪ್ರಾದೇಶಿಕ ಭಿನ್ನತೆ ಎದ್ದು ಕಾಣುತ್ತದೆ. ಈ ರೀತಿ ಕರ್ನಾಟಕಾಂತರ್ಗತ ವಿವಿಧ ಜಿಲ್ಲಾ ಪ್ರದೇಶಗಳ ವಾಸ್ತುಶಿಲ್ಪ ಪರಂಪರೆಯ ಅಧ್ಯಯನದ ಅವಶ್ಯಕತೆಯಿದೆ.

[ವಿಶ್ವವಿದ್ಯಾಲಯ ಅನುದಾನ ಆಯೋಗದ ಹಣಕಾಸಿನ ನೆರವಿನಿಂದ ಕೈಗೊಂಡ Architectural Heritage of Belgaum Region-An Analytical study ಎಂಬ ಪ್ರಾಜೆಕ್ಟಿನ ಒಂದು ಭಾಗವಾದ ಈ ಸಂಶೋಧನಾ ಪ್ರಬಂಧ ಬೆಳಗಾವಿ ಜಿಲ್ಲೆಯಾದ್ಯಂತ ಕೈಗೊಂಡ ಕ್ಷೇತ್ರ ಕಾರ್ಯಗಳ ಆಧಾರದಿಂದ ರಚಿಸಲಾಗಿದೆ.]

ಆಧಾರಸೂಚಿ

೧. ಡಾ. ಸಿಂದಿಗಿ ರಾಜಶೇಖರ, **ಕರ್ನಾಟಕದ ವಾಸ್ತುಶಿಲ್ಪ ಮತ್ತು ಚಿತ್ರಕಲೆ**, ಧಾರವಾಡ, ೧೯೮೮.
೨. ಡಾ. ಟಿ.ವಿ. ಮಹಾಲಿಂಗಮ್, South Indian Temple Complex, Dharwad.
೩. ಡಾ. ಕಾಮತ ಸೂರ್ಯನಾಥ, Belgaum District Gazetter, Bangalore, 1986.
೪. ಡಾ. ಎ. ಗುಂಜೆಟ್ಟಿ (ಸಂ.), **ಬೆಳಗಾವಿ ಬೆಳಕು**, ಬೆಳಗಾವಿ, ೨೦೦೩.
೫. ಡಾ. ಸ್ಮಿತಾ ಸುರೇಬಾನಕರ, *Halasi 12000*-A Study, unpublished. Ph.D. Thesis, KUD, 2001.
೬ ಡಾ. ಬಾ.ರಾ. ಗೋಪಾಲ, **ಕರ್ನಾಟಕದ ಕಲೆಗಳು–ವಾಸ್ತು**, (ಮೂರನೆಯ ಆವೃತ್ತಿ) ಬೆಂಗಳೂರು, ೨೦೧೦.
೭. ಡಾ. ಆರ್. ಗೋಪಾಲ (ಸಂ.) **ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ತ್ವ**, ಬೆಂಗಳೂರು, ೨೦೧೦.

ಗಂಡರಾಜಪುರದ ಈಶ್ವರ ದೇವಾಲಯ (ದೊಡ್ಡಬಳ್ಳಾಪುರ ತಾಲ್ಲೂಕು)

ಡಾ. ಜಯಮ್ಮ ಎಚ್. ಕರಿಯಣ್ಣ*

ದಿನಾಂಕ ೨೯-೦೫-೨೦೧೧ರಂದು ಊರಿನವರ ಕೋರಿಕೆಯಂತೆ ಗಂಡರಾಜಪುರದ ಈಶ್ವರ ದೇವಾಲಯಕ್ಕೆ ಗುರುಗಳಾದ ಡಾ. ದೇವರಕೊಂಡಾರೆಡ್ಡಿ ಭೇಟಿ ನೀಡಿದ್ದ.

ಈಶ್ವರ ದೇವಾಲಯವು ಗ್ರಾಮದ ವಾಯವ್ಯ ದಿಕ್ಕಿನಲ್ಲಿ ಸುಮಾರು ೬' ಎತ್ತರದ ದಿಣ್ಣೆಯ ಮೇಲಿದೆ. ದೇವಾಲಯದ ಪ್ರವೇಶದಲ್ಲಿ ದೇವಾಲಯದ ಅವಶೇಷಗಳನ್ನು ಚಲ್ಲಾಪಿಲ್ಲಿ ಯಾಗಿ ಜೋಡಿಸಲಾಗಿದೆ.

ಈಗಿನ ದೇವಾಲಯವು ಪೂರ್ವಾಭಿಮುಖವಾಗಿದ್ದು, ಗರ್ಭಗೃಹ, ನವರಂಗ ಮಂಟಪ ಮತ್ತು ಮುಖಮಂಟಪ ಗಳನ್ನು ಒಳಗೊಂಡಿದೆ. ದೇವಾಲಯದ ಮಧ್ಯಭಾಗ ಅಂದರೆ ನವರಂಗ ಭಾಗಕ್ಕೂ ಗರ್ಭಗೃಹಕ್ಕೂ ಮಧ್ಯೆ ಇದ್ದ ಭಾಗವು ಬಿದ್ದು ಹಾಳಾಗಿದ್ದು, ಅದನ್ನು ತಮಗೆ ತೋಚಿದಂತೆ ಸುಮಾರು ೫೦ ವರ್ಷಗಳ ಹಿಂದೆ ಜೋಡಿಸಿ ಗೋಡೆ ಕಟ್ಟಿದ್ದಾರೆ. ಮೊದಲು ಉತ್ತರ ದಿಕ್ಕಿಗೆ ಇದ್ದ ಬಾಗಿಲು ಈಗ ಬಿದ್ದು ಆ ಸ್ಥಳದಲ್ಲಿ ಕಿಟಕಿ ನಿರ್ಮಾಣ ಮಾಡಿದ್ದಾರೆ. ಮುಖಮಂಟಪವೂ ಸಹ ಮೂಲ ದೇವಾಲಯದ ನಂತರ ಕಾಲದ ರಚನೆ ಯಾಗಿದೆ.

ಬೀಳದಿರುವ ದೇವಾಲಯದ ಹೊರಗೋಡೆಗಳಲ್ಲಿ (ಮೂಲ ರಚನಾಕಾಲದ ಗೋಡೆಗಳಲ್ಲಿ) ಉಬ್ಬುಕಂಬಗಳಿದ್ದು, ಮೇಲಿನ ಕಪೋತ ಭಾಗದಲ್ಲಿ ಯಾವುದೇ ಅಲಂಕಾರಗಳಿಲ್ಲ. ಗರ್ಭಗೃಹ ಭಾಗವು ಯಾವುದೇ ರೀತಿಯಲ್ಲಿ ಶಿಥಿಲವಾಗದೆ ಭದ್ರವಾಗಿದೆ. ಉಬ್ಬು ಕಂಬಗಳು ಸಹ ಚೆನ್ನಾಗಿವೆ. ದೇವಾಲಯಕ್ಕೆ ಸಾಧಾರಣ ಅಧಿಷ್ಠಾನವಿದ್ದು, ಜಗತಿ, ತ್ರಿಪಟ್ಟ, ಕುಮುದ, ಪಟ್ಟಿಕಾ ಭಾಗಗಳನ್ನು ಹೊಂದಿವೆ.

ಭಿತ್ತಿ ಭಾಗದ ಮೇಲೆ ಬರುವ ಪ್ರಸ್ತರ ಭಾಗದಲ್ಲಿ ಉಬ್ಬು ಶಿಲ್ಪವನ್ನು ಕೆತ್ತಲಾಗಿದೆ. ಈ ದೇವಾಲಯವು ಏಕತಳ ದೇವಾಲಯವಾಗಿದ್ದು ದೇವನಹಳ್ಳಿ ತಾಲ್ಲೂಕಿನ ಗಂಗವಾರದ ದೇವಾಲಯ ಶಿಖರವನ್ನು ಹೋಲುತ್ತವೆ. ಈ ಗರ್ಭಗೃಹದ ಭಿತ್ತಿಯ ಮೂರು ಕಡೆಗಳಲ್ಲಿ ಶಿವಲೀಲೆಯ ಉಬ್ಬು ಶಿಲ್ಪಗಳನ್ನು ಬಿಡಿಸಲಾಗಿದೆ. ಈ ಬಗೆಯ ಲಕ್ಷಣಗಳು ಸುತ್ತಮುತ್ತಲ ಪ್ರದೇಶದಲ್ಲೆಲ್ಲಿಯೂ ಕಾಣಬರುವುದಿಲ್ಲ. ಇದೊಂದು ವಿಶೇಷವಾದ ಗಮನ ಸೆಳೆಯುವ ಅಂಶ.

ದೇವಾಲಯದ ಒಳಭಾಗದ ನವರಂಗದ ಪೂರ್ವ ಭಾಗವು ಜೀರ್ಣವಾಗದೆ ಉಳಿದಿದ್ದು ಇದರಲ್ಲಿ ನಾಲ್ಕು ಕಂಬಗಳು ಸುಮಾರು ೫-೧/೨ ಅಡಿ ಎತ್ತರವಾಗಿದ್ದು ಮೇಲೆ ಸರಳ ಬೋದಿಗೆ ಬಂದಿದೆ. ಸರಳ ಬೋದಿಗೆಯ ಮೇಲೆ ಮತ್ತೆ ಕಲ್ಲಿನ ಚೌಕಾಕಾರದ ದಿಂಡನ್ನು ಇರಿಸಿ ದೇವಾಲಯವನ್ನು ೬-೧/೨ ಅಡಿ ಎತ್ತರವಿರು ವಂತೆ ರಚಿಸಲಾಗಿದೆ. ಕಂಬಗಳು ಬೇರೆಡೆಯ ತಲಕಾಡಿನ ಗಂಗರ ದೇವಾಲಯಗಳಲ್ಲಿ ಕಾಣುವ ಕಂಬಗಳಂತೆ ಇವೆ. ತೊಲೆಗಳು ಅಡ್ಡವಾಗಿದ್ದು ಮೇಲೆ ಮುಚ್ಚಿಗೆಯಲ್ಲಿ ಕಮಲದ ಹೂವನ್ನು ಬಿಡಿಸಿದೆ.

ಉಳಿದ ಶಿಥಿಲ ಭಾಗದಲ್ಲಿ ಮೇಲ್ಚಾವಣಿ ಮತ್ತು ಗೋಡೆಗಳು ಹಾಳಾಗಿದ್ದು, ತೊಲೆಗಳನ್ನು ಉದ್ದುದ್ದ ಜೋಡಿಸಲಾಗಿದೆ. ದೇವಾಲಯದ ಒಳಗೆ ಮೂರು ಉಬ್ಬು ಶಿಲ್ಪಗಳಿದ್ದು ಅವುಗಳಲ್ಲಿ ಎರಡು ದ್ವಾರಪಾಲಕ ಶಿಲ್ಪಗಳು ಒಂದು ಗಣಪತಿ ಶಿಲ್ಪವಾಗಿದೆ.


ಹೊರಗೆ ದೇವಾಲಯದ ಶಿಥಿಲ ಭಾಗಗಳು, ಚಪ್ಪಡಿಗಳೂ ಬಿದ್ದಿವೆ. ದೇವಾಲಯದ ಮೂಲ ಪ್ರಕಾರವು ದೊಡ್ಡ ದೊಡ್ಡ ಚಪ್ಪಡಿಗಳಿಂದ ನಿರ್ಮಿತವಾಗಿದ್ದು ಉತ್ತರ ಮತ್ತು ದಕ್ಷಿಣ ಭಾಗದಲ್ಲಿ ಅರೆಬರೆಯಾಗಿ ಉಳಿದಿವೆ. ದೇವಾಲಯದ ಅಧಿಷ್ಠಾನದಲ್ಲಿ ತಮಿಳು ಶಾಸನವಿದ್ದು ಇದು ಕ್ರಿ.ಶ. ೧೩ನೆಯ ಶತಮಾನದ್ದಾಗಿರುತ್ತದೆ.

ದೇವಾಲಯದ ಗರ್ಭಗೃಹದ ರಚನಾ ರೀತಿ, ಕಂಬ ಗಳು, ಉಬ್ಬು ಕಂಬಗಳು, ಬೋದಿಗೆ, ಎತ್ತರ, ಶಿಲ್ಪಗಳು, ಪ್ರಾಕಾರ ಇವೆಲ್ಲವೂ ಇದು ತಲಕಾಡಿನ ಗಂಗರ ಕಾಲದ ದೇವಾಲಯ ಎಂಬುದನ್ನು ಸೂಚಿಸುತ್ತದೆ. ಇದರ ರಚನಾ ರೀತಿ ಮತ್ತು ಶೈಲಿಯನ್ನು ಗಮನಿಸಿ ಇದರ ಕಾಲವನ್ನು ಸುಮಾರು ಕ್ರಿ.ಶ. ೭೦೦ರಿಂದ ೮೦೦ರ ಸುಮಾರಿಗೆ ನಿಗದಿ ಪಡಿಸಬಹುದಾಗಿದೆ. ಅಂದರೆ ಇದು ಸುಮಾರು ೧೨೦೦ ವರ್ಷಗಳಷ್ಟು ಹಳೆಯ ದೇವಾಲಯವಾಗಿದೆ.

---

* 'ಆಶೀರ್ವಾದ', ನಂ. ೨೯೩೩, ೧೩ನೇ ಮುಖ್ಯರಸ್ತೆ, ವಿಜಯನಗರ ೭ನೇ ಹಂತ, ಬೆಂಗಳೂರು-೫೬೦೦೪೦.


ದೇವಾಲಯದ ತಳವಿನ್ಯಾಸ



ಗಂಡರಾಜಪುರದ ಈಶ್ವರ ದೇವಾಲಯದ ಪರಿಸರ



ಈಶ್ವರ ದೇವಾಲಯ–ಮೂಲದಲ್ಲಿದ್ದ ರೀತಿ



ದೇವಾಲಯವು ಈಗ ಇರುವ ರೀತಿ

೩೨

ಚಿಕ್ಕಹನಸೋಗೆಯ ತ್ರಿಕೂಟಾಚಲಬಸದಿ

ಟಿ. ರಾಜು*

ಕರ್ನಾಟಕದಲ್ಲಿ ಆಳ್ವಿಕೆ ನಡೆಸಿದ ಸಣ್ಣ ರಾಜಮನೆತನಗಳ ಪೈಕಿ ಚಂಗಾಳ್ವರ ಮನೆತನ ಪ್ರಸಿದ್ಧವಾಗಿದ್ದು, ಅವರ ಕಾಲದ ಸಾಂಸ್ಕೃತಿಕ ಪ್ರಗತಿಯ ಬಗ್ಗೆ ಹೆಚ್ಚಿನ ಅಧ್ಯಯನ ಅಗತ್ಯವಿದೆ. ಬಿ.ಎಲ್. ರೈಸ್. ಹಯವದನರಾವ್. ಸೂರ್ಯನಾಥ ಕಾಮತ್ ಮತ್ತು ಹೆಚ್.ಎಸ್. ಗೋಪಾಲರಾವ್ ಮುಂತಾದವರು ಚಂಗಾಳ್ವರ ಬಗ್ಗೆ ಅಧ್ಯಯನ ನಡೆಸಿದ್ದಾರೆ. ಮೇಲಿನ ಅಧ್ಯಯನದ ವಿವರ ಬಸದಿಯ ಖುದ್ದು ಅಧ್ಯಯನ ಹಾಗು ಬಸದಿಯ ಪ್ರಧಾನ ಅರ್ಚಕರು ಮತ್ತು ಚಂಗಾಳ್ವರ ಕಾಲದಿಂದಲೂ ರಾಜಾಶ್ರಯ ಪಡೆದಿದ್ದ ವಿದ್ವಾಂಸ ಮನೆತನದವರಾದ ಡಾ. ಡಿ. ಶರ್ಮ ಜೋಯಿಸ್‌ರವರಿಂದ ಪಡೆದ ಮಾಹಿತಿಯನ್ನು ಆಧರಿಸಿ ಈ ಲೇಖನವನ್ನು ಸಿದ್ಧಪಡಿಸಲಾಗಿದೆ.

ಚಿಕ್ಕಹನಸೋಗೆ ಗ್ರಾಮವು ಮೈಸೂರು ಜಿಲ್ಲೆಯ ಕೃಷ್ಣರಾಜನಗರ ತಾಲ್ಲೂಕಿನ ಅತ್ಯಂತ ಪ್ರಾಚೀನ ಹಾಗೂ ಐತಿಹಾಸಿಕ ನೆಲೆ. ಈ ಗ್ರಾಮವು ಚಂಗಾಳ್ವ ಮತ್ತು ಚೋಳರ ಕಾಲದಿಂದಲೂ ಜಿನ್ನಸೋಗೆ, ಪನಸೋಗೆ, ಪೊನ್ನಸೋಗೆ ಹಾಗು ಹನಸೋಗೆ ಎಂಬ ಹೆಸರುಗಳಿಂದ ಪ್ರಸಿದ್ಧಿ ಪಡೆದು ಚಂಗಾಳ್ವರ ಆಡಳಿತ ಕೇಂದ್ರವಾಗಿ. ಐತಿಹಾಸಿಕ ಹಾಗೂ ಧಾರ್ಮಿಕ ಜೀವನದ ಮೇಲೆ ಬೆಳಕು ಚೆಲ್ಲುತ್ತದೆ. ಹಲವಾರು ಶಾಸನಗಳು ಸಹ ಇಲ್ಲಿ ದೊರೆತಿವೆ. ಇಲ್ಲಿ ತ್ರಿಕೂಟಚಲ ಜೈನ ಬಸದಿ ಇದೆ. ಚೆಂಗಾಳ್ವರು ಗಂಗರ, ಚೋಳರ ನಂತರ ಹೊಯ್ಸಳರ ಸಾಮಂತರಾಗಿ ಈ ಭಾಗದಲ್ಲಿ ಆಳ್ವಿಕೆ ನಡೆಸಿರುವುದು ತಿಳಿದುಬರುತ್ತದೆ. ಕ್ರಿ.ಶ. ೧೧ನೇ ಶತಮಾನದಲ್ಲಿ ಹನಸೋಗೆ ಜೈನ ಧರ್ಮದ ಪ್ರಮುಖ ಕೇಂದ್ರವಾಗಿದ್ದು ಹಲವಾರು ಸಂಘಗಳು ಅಂದಿನ ಕಾಲಕ್ಕೆ ನೆಲೆಗೊಂಡಿದ್ದಕ್ಕೆ ಶಾಸನೋಕ್ತ ದಾಖಲೆಗಳಿವೆ. ಮೂಲಸಂಘ, ದೇಶಿಗಣ, ಪುಸ್ತಕಗಚ್ಚ ಮತ್ತು ಕುಂದಕುಂದಾನ್ವಯ ಸಾಲಿಗೆ ಸೇರಿದ ಜೈನ ಗುರುಗಳು ಚಿಕ್ಕ ಹನಸೋಗೆಯಲ್ಲಿ ನೆಲೆಸಿದ್ದಾಗಿ ತಿಳಿದುಬರುತ್ತದೆ.

೧೧-೧೨ನೇ ಶತಮಾನದಲ್ಲಿ ಸುಮಾರು ಅರವತ್ತಕ್ಕು ಹೆಚ್ಚು ಬಸದಿಗಳು ಚಿಕ್ಕ ಹನಸೋಗೆಯಲ್ಲಿ ಇದ್ದ ಬಗ್ಗೆ ಶಾಸನಗಳು ತಿಳಿಸುತ್ತವೆ. ಅಲ್ಲದೆ ಜೈನಗುರುಗಳು,



ತ್ರಿಕೂಟಾಚಲ ಬಸದಿಯ ಮುಖ್ಯ ದ್ವಾರ

* ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರ್ಕಾರಿ ಮಹಾವಿದ್ಯಾಲಯ (ಸ್ವಾಯತ್ತ), ಮಂಡ್ಯ-೫೭೧೪೦೧.



ಆಚಾರ್ಯರು ಹಲವಾರು ಕೈಂಕರ್ಯವನ್ನು ನಡೆಸಿದ ವಿವರಗಳು ದಾಖಲೆಯಲ್ಲಿದೆ. ಅದಕ್ಕೆ ಊರಿನ ಮಧ್ಯಭಾಗದಲ್ಲಿ ನಿರ್ಮಾಣವಾಗಿರುವ ತ್ರಿಕೂಟಾಚಲ ಜೈನ ಬಸದಿ ನಿದರ್ಶನವಾಗಿದ್ದು ಚಂಗಾಳ್ವರ ಕಾಲದ ಜೈನ ಧರ್ಮದ ಬಗ್ಗೆ ಸಾಕ್ಷಿಯಾಗಿದೆ.

ಚಂಗಾಳ್ವರ ದೊರೆಯಾದ ವೀರರಾಜೇಂದ್ರನು ಚೋಳರ ರಾಜರಾಜಚೋಳನ ಆಳ್ವಿಕೆಯಲ್ಲಿ ಮಾಂಡಲೀಕನಾಗಿದ್ದು ಚಿಕ್ಕಹನಸೋಗೆಯಲ್ಲಿ ಆದಿನಾಥ, ಚಂದ್ರನಾಥ ಮತ್ತು ನೇಮಿನಾಥ ಎಂಬ ತೀರ್ಥಂಕರರ ತ್ರಿಕೂಟಾಚಲ ಬಸದಿಯನ್ನು ನಿರ್ಮಿಸಿದನೆಂದು ತಿಳಿದುಬರುತ್ತದೆ. ಈ ಬಸದಿಯು ಸರಳವಾದ ಕಟ್ಟಡವಾಗಿದ್ದು ಮೂರು ಗರ್ಭಗುಡಿಗಳನ್ನು, ಅಂತರಾಳ ಮತ್ತು ನವರಂಗಗಳನ್ನು ಹೊಂದಿದೆ. ಮೂರೂ ನವರಂಗಗಳಿಗೆ ಮಧ್ಯದಲ್ಲಿ ಮಹಾ ಮಂಡಪ ಇದೆ. ಮಹಾ ಮಂಟಪದ ಪೂರ್ವ ಭಾಗಕ್ಕೆ ಎರಡು ಕಂಭಗಳು ಮುಂದೆ ಚಾಚಿರುವ ಮಂಟಪ ಇದೆ.

ಬಸದಿಯ ಅಧಿಷ್ಠಾನವು ಉಪಾನ ದುಂಡಾದ ಕುಮುದ ಕಂಠ ಮತ್ತು ಅಲ್ಲಲ್ಲಿ ಕೂಡುಗಳನ್ನು ಹೊಂದಿರುವ ಕಪೋತವನ್ನು ಹೊಂದಿದೆ. ಬಸದಿಯ ಭಿತ್ತಿ ಮೇಲೆ ಕೋಷ್ಠಕಗಳಿವೆ.

ಆದಿನಾಥ ಗರ್ಭಗುಡಿಯು ಮಧ್ಯಭಾಗದಲ್ಲಿದ್ದು ಪೂರ್ವಕ್ಕೆ ಮುಖ ಮಾಡಿಕೊಂಡಿದೆ. ಆದಿನಾಥ ಶಿಲ್ಪವು ಪದ್ಮಾಸನದಲ್ಲಿದ್ದು ಧ್ಯಾನಮುದ್ರೆಯಲ್ಲಿದೆ. ಆದಿನಾಥನಿಗೆ ಇಬ್ಬರು ಚಾಮರಧಾರಿಗಳು ಇದ್ದಾರೆ. ಈ ಚಾಮರಧಾರಿಗಳು ಪ್ರಭಾವಳಿಯಲ್ಲಿರುವುದು ಒಂದು ವಿಶೇಷತೆ. ಆದಿನಾಥನಿಗೆ ಹಿಂಭಾಗದಲ್ಲಿ ಸಿಂಹಾಸನದ ಕೆತ್ತನೆ ಕಂಡುಬರುವುದಿಲ್ಲ. ಇದರಿಂದ ಅದರ ಪ್ರಭಾವಳಿಯ ಮೇಲ್ಭಾಗದಲ್ಲಿ ಅಲಂಕೃತಗೊಂಡ ಮುಕ್ಕೊಡೆ ಕಂಡುಬರುತ್ತದೆ. ಸಿಂಹಗಳ ಕೆತ್ತನೆ ಇರುವ ಪೀಠದ ಮೇಲೆ ಆದಿನಾಥನ ವಿಗ್ರಹವಿದೆ. ಶಿಲ್ಪ ಸುಂದರವಾಗಿದ್ದು ಹೆಚ್ಚು ಅಲಂಕೃತವಾಗಿಲ್ಲ. ಈ ಗರ್ಭಗುಡಿಯ ದ್ವಾರ ಆಕರ್ಷಕವಾಗಿದ್ದು ದ್ವಾರದ ತೊಲೆಯ ಮೇಲೆ "ಶ್ರೀ ರಾಜರಾಜೇಂದ್ರ ಚೋಳ ಪುಸ್ತಕ ಗಚ್ಚಂ" ಎಂದು ಕನ್ನಡ ಮತ್ತು ತಮಿಳು ಭಾಷೆಯಲ್ಲಿ ಕೆತ್ತಲಾಗಿದೆ.

ಉತ್ತರ ದಿಕ್ಕಿಗೆ ಮುಖಮಾಡಿಕೊಂಡಿರುವ ಚಂದ್ರನಾಥ ಗರ್ಭಗುಡಿಯ ನವರಂಗ ದ್ವಾರವು ಐದು ಶಾಖೆಗಳಿಂದ ಅಲಂಕೃತಗೊಂಡ ದ್ವಾರವಾಗಿದೆ. ಇವುಗಳಲ್ಲಿ ಬಳ್ಳಿ ಸುರುಳಿ ಹಾಗೂ ಲತಾ ವಿನ್ಯಾಸಗಳ ಮಧ್ಯೆ ಯಕ್ಷರ ಕಿರು ಶಿಲ್ಪ ಅಲಂಕಾರಿಕ ಕಂಬ, ಸಿಂಹ ಹಾಗೂ ಬಳ್ಳಿಗಳು ಕ್ರಮವಾಗಿ ಕಂಡುಬರುತ್ತವೆ. ಲಲಾಟ ಬಿಂಬದಲ್ಲಿ ಸುಂದರವಾದ ಗಜಲಕ್ಷ್ಮಿಯ ಶಿಲ್ಪವಿದೆ. ದ್ವಾರಶಾಖೆಯಲ್ಲಿ ಕಂಡುಬರುವ ಕಂಭಗಳು ಹದಿನಾರು ಮುಖವುಳ್ಳ ದಿಂಡನ್ನು ಹೊಂದಿದೆ.

ದಕ್ಷಿಣಕ್ಕೆ ಮುಖ ಮಾಡಿರುವ ಗರ್ಭಗುಡಿಯಲ್ಲಿರುವ ಶಿಲ್ಪವು ಆಕರ್ಷಕವಾಗಿದ್ದು ಸರಳವಾದ ಕೆತ್ತನೆಯನ್ನು ಹೊಂದಿದೆ. ಈ ಶಿಲ್ಪವು ಕೂಡ ಆದಿನಾಥನಂತೆ ಪ್ರಭಾವಳಿ ಹಾಗೂ ಪರಿಚಾರಕಿ ಯಕ್ಷ-ಯಕ್ಷಿಯರನ್ನು ಪ್ರಭಾವಳಿಯ ಮೇಲೆ ಹೊಂದಿದೆ. ಈ ಶಿಲ್ಪವು ಕುಸುರಿಯಿಂದ ಕೂಡಿದ್ದು, ಆಕರ್ಷಕವಾದ ವಿನ್ಯಾಸವನ್ನು ಹೊಂದಿದೆ.

ಮೂರು ನವರಂಗಗಳನ್ನು ಜೋಡಿಸಿರುವ ಮಂಟಪದ ವಿನ್ಯಾಸ ಆಕರ್ಷಕವಾಗಿದ್ದು ನವರಂಗದ ಭಾಗಿಲುಗಳಿಗೆ ಹೊಂದಿಕೊಂಡಂತೆ ಎತ್ತರದ ಸೋಪಾನಗಳು ಇವೆ, ಈ



ಸೋಪಾನದ ಮೇಲೆ ಮಂಟಪದ ಸುತ್ತಲೂ ಕಂಭಗಳನ್ನು ಕೂರಿಸಲಾಗಿದೆ. ಈ ಸೋಪಾನಗಳನ್ನು ಒಂದೇ ತೆರನಾದ ಜಗಲಿ ಅಥವಾ ಶಾಸನಗಳಂತೆ ವಿನ್ಯಾಸಗೊಳಿಸಲಾಗಿದೆ ಮಧ್ಯದಲ್ಲಿ ಎತ್ತರದ ಕಂಭಗಳಿದ್ದು ವಿನ್ಯಾಸದಲ್ಲಿ ದ್ರಾವಿಡ ಶೈಲಿಯನ್ನು ಹೊಂದಿವೆ. ಚೌಕದ ಪೀಠ, ಚೌಕದ ತಳಭಾಗ ಅಷ್ಟಮುಖವುಳ್ಳ ಪಟ್ಟಿಕೆ, ಉಬ್ಬುಗಳುಳ್ಳ ದುಂಡಾದ ದಿಂಡು ಪಲಗೈ ಮತ್ತು ಚಾಚು ಪೀಠಗಳು ಕಂಭಗಳ ವಿನ್ಯಾಸಗಳಲ್ಲಿ ಕಂಡುಬರುತ್ತದೆ. ಈ ಕಂಭಗಳು ಹೊಯ್ಸಳ ಶೈಲಿಯ ಪ್ರೌಢಕಂಭಗಳ ಬೆಳವಣಿಗೆಯ ಪೂರ್ವ ಹಂತವನ್ನು ತೋರಿಸುತ್ತವೆ.

ಈ ಕಂಭಗಳ ಮೇಲ್ಭಾಗವು ಕುಂಭಗಳನ್ನು ಹೊಂದಿದ್ದು, ಇವುಗಳೊಳಗಿಂದ ಎಲೆಗಳು ಹೊರಚಾಚಿದಂತೆ ಕಾಣುತ್ತದೆ. ಇವು ಪೂರ್ಣ ಕಳಸದ ಸಂಕೇತವಾಗಿದೆ. ಈ ಕಂಭಗಳ ಮೇಲೆ ಉಬ್ಬು-ತಗ್ಗು, ಮೈಯುಳ್ಳ ಹೂದಾನಿ ಆಕೃತಿ ಕಂಠವಿದೆ. ಬೋದಿಗೆಗಳು ಕೂಡ ಉಬ್ಬು ಮೈಯನ್ನು ಹೊಂದಿವೆ. ಇವುಗಳಲ್ಲಿನ ದಿಂಬು ಆಮ್ಲಕದಂತೆ ಕಾಣುತ್ತದೆ. ಈ ಬೋದಿಗೆಯ ಮೇಲೆ ತರಂಗಪೋತಕವಿದ್ದು ದ್ವಾರಬಂಧದ ಮೇಲ್ಭಾಗದಲ್ಲಿ ಹೊರಚಾಚಿರುವಂತೆ ತೆಳುವಾದ ಕಪೋತವಿದ್ದು ಮೇಲೆ ಕೀರ್ತಿ ಮುಖವುಳ್ಳ ಅಲಂಕಾರವಾದಿ ಕೋಡುಗಳು ತೆಳು ಕೆತ್ತನೆಯನ್ನು ಹೊಂದಿವೆ.

ಚಿಕ್ಕಹನಸೋಗೆಯ ಆದಿನಾಥ ಬಸದಿ ದ್ರಾವಿಡ ಶೈಲಿಯಲ್ಲಿ ನಿರ್ಮಾಣವಾಗಿದೆ. ಜೈನ ಸಂಘವಾದ ಪುಸ್ತಕ ಗಚ್ಚಕ್ಕಾಗಿ ಚಂಗಾಳ್ವ ದೊರೆ ವೀರ ರಾಜೇಂದ್ರನು ನಿರ್ಮಿಸಿದನು. ರಾಜೇಂದ್ರ ಚೋಳನ ಬಸದಿ ಎಂದು ಇದನ್ನು ಶಾಸನಗಳು ತಿಳಿಸುತ್ತವೆ. ಈ ಸಂಗತಿ ಅವರು ಅನ್ಯ ಧರ್ಮಗಳೊಂದಿಗೆ ಹೊಂದಿದ್ದ ಒಲವು ತಿಳಿದುಬರುತ್ತದೆ.

ಹಿಂದೆ ಚಂಗಾಳ್ವರ ಕಾಲದಲ್ಲಿ ವೈಭವದಿಂದ ಮೆರೆದು ಆಡಳಿತ ಕೇಂದ್ರವಾಗಿದ್ದ ಚಿಕ್ಕಹನಸೋಗೆಯಲ್ಲಿ ಬ್ರಾಹ್ಮಣ ಮತ್ತು ಜೈನ ಧರ್ಮೀಯರಿದ್ದರು. ೬೫೦ ವರ್ಷಗಳ ಹಿಂದೆ ಪಿರಿಯಾಪಟ್ಟಣ-ಬೆಟ್ಟದಪುರದ ಲಿಂಗಾಯಿತ ಪಾಳೆಯ ಗಾರನಿಗೂ, ಪನ್ನಸೋಗೆಯ ಜೈನಪಾಳೆಗಾರನಿಗೂ ಕಾವೇರಿ ನದಿ ದಡದಲ್ಲಿ ನಡೆದ ಯುದ್ಧದಲ್ಲಿ ಜೈನ ಪಾಳೆಗಾರ ಸೋತುಹೋದಿ ಕಾಲಕ್ರಮದಲ್ಲಿ ಈ ಪಟ್ಟಣವು ಅವನತಿ ಗೊಂಡಿರುವಂತೆ ತೋರುತ್ತದೆ. ಹಿಂದೆ ಪ್ರಮುಖ ಆಡಳಿತ ಕೇಂದ್ರವಾಗಿದ್ದ ಪನ್ನಸೋಗೆ ಈಗ ದೊಡ್ಡ ಹನಸೋಗೆ ಮತ್ತು ಚಿಕ್ಕ ಹನಸೋಗೆ ಎಂಬ ಎರಡು ಗ್ರಾಮಗಳಾಗಿವೆ. ದೊಡ್ಡ ಹನಸೋಗೆಯಲ್ಲಿ ಬ್ರಾಹಣರು ಬಹು ಸಂಖ್ಯಾತ ರಾಗಿದ್ದಾರೆ. ಚಿಕ್ಕ ಹನಸೋಗೆಯಲ್ಲಿ ಒಕ್ಕಲಿಗರು ಬಹು ಸಂಖ್ಯಾತರಾಗಿದ್ದು ಈಗ ಜೈನರ ಒಂದೇ ಒಂದು ಕುಟುಂಬ ಮಾತ್ರ ಈ ಗ್ರಾಮದಲ್ಲಿರುವುದು ವಿಶೇಷವಾಗಿದೆ. ಹಿಂದೆ ಲಲಿತಕೀರ್ತಿಸ್ವಾಮಿ ಎಂಬ ಜೈನ ಗುರುವಿದ್ದು ಸುತ್ತಮುತ್ತಲ ಹದಿನಾರು ಗ್ರಾಮಗಳ ಜೈನಬಸದಿಗಳಿಗೆ ಗುರುವಾಗಿದ್ದರು. ಚಂಗಾಳ್ವರ ರಾಜಕುಮಾರಿಯರು ಹಿಂದೆ ಚಿಕ್ಕಹನಸೋಗೆ ಯಲ್ಲಿ ಎರಡು ಕೆರೆಗಳನ್ನು ನಿರ್ಮಿಸಿದ್ದು ಈಗ ಅಕ್ಕನ ಕೆರೆ ಮತ್ತು ತಂಗಿಯ ಕೆರೆ ಎಂದು ಪ್ರಸಿದ್ಧವಾಗಿದ್ದು ಸಾವಿರಾರು ಎಕರೆ ಜಮೀನಿಗೆ ನೀರಾವರಿಯನ್ನು ಒದಗಿಸುತ್ತಿವೆ ಎಂದು ಸ್ಥಳೀಯರು ಹೇಳುತ್ತಾರೆ. ಈ ಗ್ರಾಮಕ್ಕೆ ಸಮೀಪವಿರುವ ಸಾಲಿಗ್ರಾಮದಲ್ಲಿ ಜೈನರ ಕುಟುಂಬಗಳು ಸಾಕಷ್ಟಿವೆ. ಹೊಯ್ಸಳರ ಕಾಲದಲ್ಲಿ ಶ್ರೀ ರಾಮಾನುಜಚಾರ್ಯರು ಚಿಕ್ಕ ಹನಸೋಗೆ ಗ್ರಾಮಕ್ಕೆ ಬಂದಿದ್ದು ಅಲ್ಲಿ ಮತಾಂತರ ಕಾರ್ಯಕ್ರಮವನ್ನು ಹಮ್ಮಿಕೊಂಡರೆಂದು, ಅಲ್ಲಿದ್ದ ಜೈನರಿಗೆ ನಾಮ ಹಾಕಿಸಿ ಮತಾಂತರಗೊಳಿಸಿದ್ದರೆಂದು ಹೇಳಲಾಗುತ್ತದೆ. ಇಂದಿಗೂ ಈ ಭಾಗದಲ್ಲಿ ನಾಮಧಾರಿಗೌಡ ಎಂಬ ಜಾತಿಯ ಜನರಿದ್ದು ಶುದ್ಧ ಸಸ್ಯಹಾರಿಗಳಾಗಿದ್ದಾರೆ. ಇವರಿಗೂ ಮತ್ತು ಜೈನರಿಗೂ ವೈವಾಹಿಕ ಸಂಬಂಧಗಳು ನಡೆಯುತ್ತವೆ. ಈ ಮೇಲಿನ ವಿವರಣೆಯಿಂದ ಚಂಗಾಳ್ವರ ಕಾಲದಲ್ಲಿ ಪ್ರಸಿದ್ಧವಾಗಿದ್ದ ಜೈನ ಧರ್ಮ ಚಿಕ್ಕ ಹನಸೋಗೆ ಪ್ರಮುಖ ಜೈನ ಕೇಂದ್ರವಾಗಿದ್ದು ಜೈನ ಧರ್ಮದ ಪ್ರಚಾರ ಹಾಗೂ ಪ್ರಸಿದ್ಧಿಗೆ ಹೆಸರುವಾಸಿಯಾಗಿತ್ತು. ಹೊಯ್ಸಳರ ಆಳ್ವಿಕೆಯ ಕಾಲದಲ್ಲಿ ಈ ಭಾಗದಲ್ಲಿ ಜೈನ ಧರ್ಮ ತನ್ನ ಪ್ರಾಮುಖ್ಯತೆಯನ್ನು ಪಡೆದುಕೊಂಡಿದ್ದಕ್ಕೆ ಅಂದಿನ ಕಾಲದಲ್ಲಿ ಚಿಕ್ಕ ಹನಸೋಗೆಯಲ್ಲಿ ಜೈನ ಧರ್ಮ ಅತ್ಯಂತ ಸಾಕ್ಷಿಯಾಗಿ ಆದಿನಾಥ ತ್ರಿಕೂಟಾಚಲ ಬಸದಿ ಪ್ರಸ್ತುತ ಕಂಡು ಬರುತ್ತದೆ.

ಆಧಾರಸೂಚಿ

೧. **ಎಪಿಗ್ರಾಫಿಯ ಕರ್ನಾಟಕ**, ಸಂ. ೮, ಹಾಸನ.

೨. **ಎಪಿಗ್ರಾಫಿಯ ಕರ್ನಾಟಕ**, ಸಂ. ೪, ಪಿರಿಯಾಪಟ್ಟಣ, ಹುಣಸೂರು.

೩. **ಎಪಿಗ್ರಾಫಿಯ ಕರ್ನಾಟಕ**, ಸಂ. ೧, ಕೊಡಗು.

೪. **ಎಪಿಗ್ರಾಫಿಯ ಕರ್ನಾಟಕ**, ಸಂ. ೫, ಕೆ.ಆರ್. ನಗರ

೫. **ಎಪಿಗ್ರಾಫಿಯ ಕರ್ನಾಟಕ**, ಸಂ. ೫, ಮೈಸೂರು.

೬ **ಎಪಿಗ್ರಾಫಿಯ ಕರ್ನಾಟಕ**, ಸಂ. ೩, ಹೆಚ್.ಡಿ. ಕೋಟೆ.

೭. **ಮೈನರ್ ಡೈನಾಸ್ಟಿಸ್ ಆಫ್ ಸೌತ್ ಇಂಡಿಯಾ**, ಡಾ. ಬಿ.ಆರ್. ಗೋಪಾಲ್.

೮. **ಚೋಳರ ಕಾಲದ ವಾಸ್ತು ಮತ್ತು ಶಿಲ್ಪ**, ಡಾ. ಬಸವರಾಜು.

೯. ಡಾ. ಡಿ. ಶರ್ಮ ಜೋಯಿಸ್ ಸ್ಥಳೀಯರು ಇವರಿಂದ ಮಾಹಿತಿ.

೭೩

ಶಿವಮೊಗ್ಗ ಜಿಲ್ಲೆಯ ನಗರದಲ್ಲಿರುವ ಬಿದನೂರು ಅರಸರ ಕಾಲದ ಪ್ರಾಚೀನ ದೇವಾಲಯದ ಅಧ್ಯಯನ

ಡಾ. ಎಸ್. ಹನುಮಂತ ಜೋಯಿಸ್*

ಐತಿಹಾಸಿಕವಾಗಿ

ಕರ್ನಾಟಕ ರಾಜ್ಯದ ಇತಿಹಾಸದ ಪುಟಗಳನ್ನು ಅಧ್ಯಯನ ಮಾಡಿದಾಗ, ಈ ರಾಜ್ಯವನ್ನಾಳಿದ ಅರಸರಲ್ಲಿ ವಿಜಯನಗರದ ಅರಸರು ಸುಪ್ರಸಿದ್ಧರು. ಅದರಲ್ಲಿ ಅತ್ಯಂತ ಪ್ರಬಲನೂ, ಜನಪ್ರಿಯನೂ ಆದವನೇ ತುಳುವ ವಂಶದ ಕೃಷ್ಣದೇವರಾಯ. ಈತನ ರಾಜ್ಯಾಡಳಿತದಲ್ಲಿ ಏಕಕೇಂದ್ರೀಕರಣ ವ್ಯವಸ್ಥೆಯನ್ನು ಜಾರಿಗೆ ತಂದನು. ಅದರಲ್ಲೊಂದು 'ನಾಯಕ ಪದ್ಧತಿ' ಪ್ರಾಂತಾಡಳಿತದ ವ್ಯವಸ್ಥೆಯ ಭಾಗವೇ 'ನಾಯಕ ಪದ್ಧತಿ'. ಅದರಲ್ಲಿ ಪ್ರಾಮುಖ್ಯತೆಯನ್ನು ಪಡೆದದ್ದು ಕೆಳದಿ ನಾಯಕರ ಸಾಮ್ರಾಜ್ಯ. ಇವರ ಮೊದಲ ರಾಜಧಾನಿ ಕೆಳದಿ, ನಂತರ ಇಕ್ಕೇರಿ, ಕೊನೆಯದಾಗಿ ಬಿದನೂರು (ವೇಣುಪುರ)ವಾಗಿತ್ತು.

ಈ ರೀತಿ ಕೆಳದಿಯಿಂದ ಇಕ್ಕೇರಿ ರಾಜ್ಯವನ್ನಾಳಿದ ನಾಯಕ ಹೆದರೆ ಚೌಡಪ್ಪ ನಾಯಕ (ಕ್ರಿ.ಶ. ೧೪೯೯–೧೫೩೦), ಸದಾಶಿವನಾಯಕ (ಕ್ರಿ.ಶ. ೧೫೩೦–೧೫೬೬), ದೊಡ್ಡ ಸಂಕಣ್ಣನಾಯಕ (ಕ್ರಿ.ಶ. ೧೫೭೦–೧೫೮೦), ರಾಮರಾಜನಾಯಕ (ಕ್ರಿ.ಶ. ೧೫೮೦–೧೫೮೬), ಅನಂತರ ಹಿರಿಯ ವೆಂಕಟಪ್ಪ ನಾಯಕ (ಕ್ರಿ.ಶ. ೧೫೮೬–೧೬೨೯). ಈ ಪ್ರಬಂಧವು ಹಿರಿಯ ವೆಂಕಟಪ್ಪ ನಾಯಕನ ಆಳ್ವಿಕೆಯಿಂದ ಪ್ರಾರಂಭವಾಗುತ್ತದೆ. ಈತನು ಇಕ್ಕೇರಿ ರಾಜ್ಯವನ್ನು ೪೬ ವರ್ಷ, ೧೧ ತಿಂಗಳು ಮತ್ತು ೨೬ ದಿನಗಳವರೆಗೆ ರಾಜ್ಯಭಾರ ಮಾಡಿದನು. (ಕೆಳದಿ ನೃಪ ವಿಜಯದಲ್ಲಿ ಉಲ್ಲೇಖವಾಗಿದೆ) ಈತನು ಗಣೇಶ ದೀಕ್ಷಿತರ ಮಾರ್ಗದರ್ಶನದಲ್ಲಿ ವಾಜಪೇಯ ಯಾಗವನ್ನು ಮಾಡಿದ್ದನು. ಈತನ ಕಾಲದಲ್ಲಿ ರಾಜ್ಯವು ಬಹುವಾಗಿ ವಿಸ್ತರಿಸಲ್ಪಟ್ಟಿದ್ದು, ಆಗಿನ ಕಾಲದ ಪ್ರಬಲ ನಾಯಕನೆಂಬ ಹೆಗ್ಗಳಿಕೆಗೆ ಪಾತ್ರನಾಗಿದ್ದನು. ಈತನು ಬಿದನೂರು (ಈಗಿನ ನಗರ) ಕೋಟೆಯನ್ನು ಅಭಿವೃದ್ಧಿ ಪಡಿಸಿದನು. ಶಂಕರನಾರಾಯಣ ಭಟ್ಟರೆಂಬುವವರನ್ನು ಬಿದನೂರಿ (ವೇಣುಪುರ)ನ ಮಂತ್ರಿಯನ್ನಾಗಿ ನೇಮಕ ಮಾಡಿದನು. ಆದರೆ ಈ ಮಂತ್ರಿಯು ಅಕ್ಕ-ಪಕ್ಕದ ಹಲವು ಸೀಮೆಗಳನ್ನು ತನ್ನ ವಶಕ್ಕೆ ತೆಗೆದುಕೊಂಡು, ಬಿದನೂರನ್ನು ಕೇಂದ್ರವನ್ನಾಗಿ ಮಾಡಿಕೊಂಡು ಸ್ವತಂತ್ರ ಪಾಳೆಯಗಾರನಂತೆ ವರ್ತಿಸತೊಡಗಿದನು. ಈ ವಿಚಾರವು ಕರ್ಣಾಕರ್ಣಿಯಾಗಿ ತಿಳಿದ ಹಿರಿಯ ವೆಂಕಟಪ್ಪನಾಯಕನು ದಳವಾಯಿ ಲಿಂಗಣ್ಣ ನಾಯಕನೊಡನೆ ಕೂಡಿ, ಸೈನ್ಯ ಸಮೇತ ಬಂದು ಬಿದನೂರು ಕೋಟೆಗೆ ಮುತ್ತಿಗೆ ಹಾಕಿದನು. ತಾನು ನೇಮಿಸಿದ ಮಂತ್ರಿಯನ್ನು ಸೆರೆಹಿಡಿದನು. ಪುನಃ ಬಿದನೂರನ್ನು ವಶಪಡಿಸಕೊಂಡನು.

ಈ ಹಿರಿಯ ವೆಂಕಟಪ್ಪ ನಾಯಕನು ದಕ್ಷ ಆಡಳಿತಗಾರನಾಗಿದ್ದನು. ಸರ್ವಧರ್ಮಗಳ ರಕ್ಷಕನಾಗಿದ್ದನು. ಪ್ರಜಾರಂಜಕನಾಗಿದ್ದನು. ವಿದ್ವಜ್ಜನರಿಗೆ ಆಶ್ರಯದಾತನಾಗಿದ್ದನು. ಕಲಾಭಿಮಾನಿಯಾಗಿದ್ದನು. ಈತನ ಆಳ್ವಿಕೆಯಲ್ಲಿ ಸರ್ವಧರ್ಮದವರಿಗೂ ಆರಾಧಿಸಲು ಅನುಕೂಲವಾಗುವಂತೆ, ದೇವಾಲಯಗಳನ್ನು ನಿರ್ಮಾಣ ಮಾಡಿಸಿದನು. ಶಾಸ್ತ್ರೋಕ್ತವಾಗಿ ಆ ದೇವಾಲಯಗಳಲ್ಲಿ ದೇವರುಗಳನ್ನು ಪ್ರತಿಷ್ಠಾಪಿಸಿದನು. ನಿತ್ಯ ಪೂಜೆಯನ್ನು ಮಾಡಲು ಅರ್ಚಕರುಗಳನ್ನು ನೇಮಕ ಮಾಡಿದನು. ದೇವಾಲಯಗಳ ಕಾರ್ಯಕ್ರಮಗಳು ಸುವ್ಯವಸ್ಥೆಯಿಂದ ನಡೆಯುವಂತೆ ಆದಾಯ ಮೂಲಗಳನ್ನು ಏರ್ಪಾಡು ಮಾಡಿದನು. ಈತನ ಕಾಲದಲ್ಲಿ ಬಿದನೂರಿನಲ್ಲಿ ನಿರ್ಮಾಣ ಮಾಡಿದ ದೇವಾಲಯಗಳಲ್ಲಿ ಶ್ರೀಪಂಚಮುಖಿ ಆಂಜನೇಯನ ದೇವಾಲಯ ಪ್ರಸಿದ್ಧವಾಗಿದೆ.

ಈತನ ಕಾಲದಲ್ಲಿ ಶ್ರೀಕ್ಷೇತ್ರ ಕುಂಭಕೋಣ ಮಠದ ಶ್ರೀ ಶ್ರೀ ವಿಜಯೀಂದ್ರತೀರ್ಥರ ವರಕುಮಾರರಾದ ಶ್ರೀ ಶ್ರೀ ಸುಧೀಂದ್ರತೀರ್ಥರು (ಕ್ರಿ.ಶ. ೧೫೯೬–೧೬೧೪) ಈ ಪ್ರಾಂತ್ಯಕ್ಕೆ ಸಂಚಾರತ್ವೇನ ಬಂದಿದ್ದರು. ಆಗ ಈತನು ಶ್ರೀಪಾದಂಗಳವರನ್ನು ಇಕ್ಕೇರಿ ಹಾಗೂ ಬಿದನೂರಿಗೆ ಆಹ್ವಾನಿಸಿದ್ದನು. ಶ್ರೀಗಳವರಿಗೆ ಬಿದನೂರಿನ ಕೋಟೆಯ ಹೊರಗಡೆ ಹರಿಯುತ್ತಿರುವ ಕಲಾವತಿ ನದಿಯ ದಡದ

* # ೨೩೪, ವಾರ್ಡ್ ನಂ ೭, ಬಸವನಗುಡಿ, ೩ನೇ ತಿರುವು, ಶ್ರೀ ಸಾಯಿಬಾಬಾ ಮಂದಿರ ರಸ್ತೆ, ಶಿವಮೊಗ್ಗ-೫೭೭೨೦೧

ಮೇಲೆ ವಾಸ್ತವ್ಯವನ್ನು ಹೂಡಲು ಸಕಲ ವ್ಯವಸ್ಥೆಯನ್ನು ಮಾಡಿದನು. ಅದೇ ಸಮಯದಲ್ಲಿ ಶೃಂಗೇರಿ ಪೀಠದ ಶಾಖೆಯಿಂದ ಆಗಿನ ಶ್ರೀರಾಮಚಂದ್ರಾಪುರ ಮಠದ ಶ್ರೀಪಾದಂಗಳನ್ನೂ ಬಿದನೂರಿಗೆ ಆಹ್ವಾನಿಸಿ, ಅದೇ ಕಲಾವತಿ ನದಿಯ ದಡದ ಮೇಲೆ ವಾಸ್ತವ್ಯವನ್ನು ಹೂಡಲು ಸಕಲ ವ್ಯವಸ್ಥೆಯನ್ನು ಮಾಡಿದನು. ಈ ಎರಡು ಮಠಗಳು ಎದುರು-ಬದುರಾಗಿದ್ದು, ಅವುಗಳ ಅವಶೇಷಗಳನ್ನು ಕಲಾವತಿ ನದಿಯ ದಡದ ಮೇಲೆ ಬೇಸಿಗೆಯಲ್ಲಿ ನೋಡಬಹುದು. ಈ ಇಬ್ಬರು ಪೀಠಾಧಿಪತಿಗಳ ನೇತೃತ್ವದಲ್ಲಿ ಶ್ರೀಪಂಚಮುಖಿ ಆಂಜನೇಯ ದೇವರ ಪ್ರತಿಷ್ಠಾಪನೆಯನ್ನು ಕ್ರಿ.ಶ. ೧೬೦೦ರಲ್ಲಿ ನೆರವೇರಿಸಿದನು. ಈ ಸಮಾರಂಭಕ್ಕೆ ಆಸುಪಾಸಿನ ಪ್ರಮುಖರೆಲ್ಲರೂ ಬಂದಿದ್ದರೆಂದು ಈ ಪ್ರಾಂತ್ಯ ಹಿರಿಯರು ಹೇಳುತ್ತಾರೆ. ಅನಂತರ ಬಿದನೂರನ್ನು ಆಳಿದ ಶಿಸ್ತಿನ ಶಿವಪ್ಪನಾಯಕ (ಕ್ರಿ.ಶ. ೧೬೪೬-೧೬೬೦) ಹಾಗೂ ಚೆನ್ನಮ್ಮಾಜಿ (ಕ್ರಿ.ಶ. ೧೬೭೧-೧೬೯೭)ರ ಆಳ್ವಿಕೆಯಲ್ಲಿ ಈ ದೇವಾಲಯವು ಅಭಿವೃದ್ಧಿಯಾಯಿತೆಂದೂ ಹಾಗೂ ಹಿರಿಯ ಬಸವಪ್ಪ ನಾಯಕನು (ಕ್ರಿ.ಶ. ೧೬೯೭-೧೭೧೪) ಜನರ ಹಿತಕ್ಕಾಗಿ ಕಲಾವತಿ ನದಿಗೆ ಕಲ್ಲಿನ ಸೇತುವೆಯನ್ನು ಕಟ್ಟಿಸಿದನೆಂದು ಇತಿಹಾಸತಜ್ಞರು ಹೇಳುತ್ತಾರೆ.

ಪೌರಾಣಿಕವಾಗಿ

ಇದಕ್ಕೆ ತ್ರೇತಾಯುಗದಲ್ಲಿ ನಡೆದ ವಿಚಾರವು ಈ ರೀತಿಯಿರುತ್ತದೆ. ಶ್ರೀ ರಾಮಾಯಣ ಕಥಾಭಾಗದಲ್ಲಿ ರಾಮ-ರಾವಣರ ಯುದ್ಧವು ನಡೆಯುತ್ತಿದ್ದಾಗ, ರಾವಣನ ಕೋರಿಕೆಯಂತೆ ಪಾತಾಳ ಲೋಕದಲ್ಲಿ ನೆಲೆಸಿದ್ದ ಅಹಿ-ಮಹಿರಾವಣರು ರಾವಣನಿಗೆ ಸಹಾಯ ಮಾಡಲು ಒಪ್ಪಿಕೊಳ್ಳುತ್ತಾರೆ. ಅವರು ಬ್ರಹ್ಮದೇವರಿಂದ ಅವಧ್ಯತ್ವ ವರವನ್ನು ಪಡೆದಿರುತ್ತಾರೆ. ಇವರನ್ನು ಸಂಹರಿಸುವುದು ಸುಲಭದ ಕಾರ್ಯವಾಗಿರಲಿಲ್ಲ. ರಾವಣನ ಇಚ್ಛೆಯಂತೆ, ಇವರು ಶ್ರೀರಾಮ-ಲಕ್ಷ್ಮಣರನ್ನು ಪಾತಾಳಲೋಕಕ್ಕೆ ಹೊತ್ತೊಯ್ಯುತ್ತಾರೆ. ಅಲ್ಲಿ ತಾವು ಆರಾಧಿಸುವ ದೇವತೆಗೆ ಬಲಿ ಕೊಡುವುದು ಇವರ ಉದ್ದೇಶವಾಗಿರುತ್ತದೆ. ಈ ವಿಚಾರವು ಶ್ರೀ ಆಂಜನೇಯ ದೇವರಿಗೆ ತಿಳಿಯುತ್ತದೆ. ಅವರಿಗೂ ಈ ರಾಕ್ಷಸರನ್ನು ವಧಿಸುವುದು ಅಸಾಧ್ಯವೆಂಬ ವಿಷಯವು ತಿಳಿದಿರುತ್ತದೆ. ಈ ರಾಕ್ಷಸರನ್ನು ಸಂಹರಿಸಲು ವಿಶಿಷ್ಟವಾದ ಶಕ್ತಿಯೇ ಬೇಕೆಂದು ಮನಗಂಡು ಶ್ರೀಹರಿಯನ್ನು ಕುರಿತು ಪ್ರಾರ್ಥಿಸುತ್ತಾರೆ. ಶಂಖ-ಚಕ್ರಗಳು ಶ್ರೀಹರಿಯ ಮುಖ್ಯ ಚಿಹ್ನೆಗಳಾಗಿದ್ದು, ಅವು ಆತನ ಮುಖ್ಯ ಪ್ರತಿಬಿಂಬಗಳಾದ್ದರಿಂದ ಅವುಗಳನ್ನು ಧರಿಸಲು ಶ್ರೀ ಆಂಜನೇಯನಿಗೆ ಅನುಗ್ರಹಿಸುತ್ತಾರೆ. ಜತೆಯಲ್ಲಿ ಶ್ರೀಹರಿಯು ಶ್ರೀನೃಸಿಂಹ, ಶ್ರೀವರಾಹ, ಶ್ರೀಹಯಗ್ರೀವ ಹಾಗೂ ಶ್ರೀಗರುಡರ ಸರ್ವಶಕ್ತಿಯನ್ನು ಧಾರೆ ಎರೆದು ಆತನಿಗೆ ಇತರ ದಿವ್ಯಾಸ್ತ್ರಗಳನ್ನು ಅನುಗ್ರಹಿಸುತ್ತಾರೆ. ಈ ಎಲ್ಲಾ ಶಕ್ತಿಗಳನ್ನು ಪಡೆದು ಶ್ರೀ ಪಂಚಮುಖಿ ಆಂಜನೇಯನೆಂಬ ಹೆಸರಿನಿಂದ, ಶ್ರೀರಾಮ-ಲಕ್ಷ್ಮಣರನ್ನು ವಧೆ ಮಾಡುವ ಸ್ಥಳದಲ್ಲಿ ಈ ರಾಕ್ಷಸರನ್ನು ಕೊಂದು, ಅವರನ್ನು ರಕ್ಷಿಸಿ ಪಾತಾಳಲೋಕದಿಂದ ಯುದ್ಧರಂಗಕ್ಕೆ ಕರೆದುಕೊಂಡು ಬರುತ್ತಾರೆ. ಆ ಒಂದು ಕ್ಷಣದಲ್ಲಿ ಮಾತ್ರ ಇಲ್ಲಿ ಎಲ್ಲಾ ಶಕ್ತಿಗಳನ್ನು ಬಳಸಿ, ಆ ರಾಕ್ಷಸರ ಸಂಹಾರವಾದ ಮೇಲೆ ತಮ್ಮ ಮೂಲರೂಪಕ್ಕೆ ಪರಿವರ್ತಿತರಾಗುತ್ತಾರೆ (ಈ ವಿಷಯವು ಆನಂದ ರಾಮಾಯಣದಲ್ಲಿ ವರ್ಣಿತವಾಗಿದೆ)

ಆಧ್ಯಾತ್ಮಿಕವಾಗಿ

ಈ ಒಂದು ವಿಶಿಷ್ಟ ರೂಪವು ಪ್ರಾಚೀನ ಆಕರಗಳಲ್ಲೂ, ಸರ್ವಮೂಲ ಗ್ರಂಥಗಳಲ್ಲೂ ಪ್ರಸಿದ್ಧ. ಟೀಕಾ ಟಿಪ್ಪಣಿಗಳಲ್ಲಾಗಲೀ ಇದರ ಉಲ್ಲೇಖವು ಕಂಡುಬರುವುದಿಲ್ಲ. ಆದರೆ ಸುದರ್ಶನ ಸಂಹಿತೆಯಲ್ಲಿ ಮಾತ್ರ ಈ ದೇವರ ಸ್ತೋತ್ರವು ಕಂಡು ಬರುತ್ತದೆ. ಪ್ರಾಯಃ ಪ್ರಾಣ, ಅಪಾನ, ವ್ಯಾನ, ಉದಾನ ಮತ್ತು ಸಮಾನವೆಂಬ ಐದು ರೂಪಗಳ ಸಂಕೇತವಾಗಿ ಈ ಪಂಚಮುಖಿ ಆಂಜನೇಯನ ಪರಿಕಲ್ಪನೆ ರೂಪುಗೊಂಡಿರಬೇಕು ಎಂಬುದು ಆಧ್ಯಾತ್ಮಿಕರ ಅಭಿಪ್ರಾಯ.

ಶ್ರೀ ಪಂಚಮುಖಿ ಆಂಜನೇಯನ ದೇಗುಲ

'ನಗರ', ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕಿನಲ್ಲಿರುವ ಹೋಬಳಿ ಕೇಂದ್ರ. ಇದು ಶಿವಮೊಗ್ಗ ನಗರದಿಂದ ಸುಮಾರು ೮೦ ಕಿ.ಮೀ. ದೂರದಲ್ಲಿದೆ. ಇಲ್ಲಿ ಒಂದು ಲಕ್ಷ ಕುಟುಂಬಗಳು ವಾಸವಾಗಿದ್ದವೆಂದು ಇತಿಹಾಸ ಪುಟಗಳಲ್ಲಿ ದಾಖಲಾಗಿರುತ್ತದೆ. ಈ ದೇಗುಲದ ಹೊರ ಆವರಣದ ಉತ್ತರ ದಿಕ್ಕಿನ ೧೫ ಅಡಿ ಎತ್ತರದ ಮಹಾದ್ವಾರದ ಮೂಲಕ ಪ್ರವೇಶಿಸಿದರೆ ನಮಗೆ ಶಿಲೆಯಿಂದ ನಿರ್ಮಾಣ ಮಾಡಿದ ದೇಗುಲವು ಕಾಣಿಸುತ್ತದೆ. ಈ ದೇಗುಲದಲ್ಲಿ ತೆರೆದ ಮುಖಮಂಟಪ (ಸುಖನಾಸಿ) ಮತ್ತು ಒಂದು ಕಡೆ ಮಾತ್ರ ಪ್ರವೇಶ ದ್ವಾರವಿರುವ ಗರ್ಭಗುಡಿಯಿದೆ. ಗರ್ಭಗುಡಿಯ ಮೇಲೆ ನವನಿರ್ಮಿತ ಗೋಪುರವಿದೆ. ಸುಖನಾಸಿಯ ದ್ವಾರದ ಎರಡು ಬದಿಗಳಲ್ಲೂ ಕುಮುದ, ಕುಮುದಾಕ್ಷರ ಸುಂದರವಾದ ಉಬ್ಬು ಶಿಲ್ಪದ ಮೂರ್ತಿಗಳಿವೆ.

ಗರ್ಭಗುಡಿಯಲ್ಲಿರುವ ವಿಗ್ರಹ

ಗರ್ಭಗುಡಿಯಲ್ಲಿ ಶ್ರೀ ದೇವರ ವಿಗ್ರಹವು ಸುಮಾರು ಮೂರುವರೆ ಅಡಿ ಎತ್ತರದ ಅಖಂಡ ಕರಿಯ ಶಿಲೆಯಲ್ಲಿ ನಿರ್ಮಾಣ ಮಾಡಿದ, ನಿಂತ ನಿಲುವಿನ ಭವ್ಯ ಮೂರ್ತಿ



ಶ್ರೀ ಪಂಚಮುಖಿ ಆಂಜನೇಯ ದೇವರು



ದೇವಾಲಯದ ಹೊರನೋಟ



ಶ್ರೀ ಪಂಚಮುಖಿ ಆಂಜನೇಯ ದೇವರ ಹಿಂಭಾಗದಲ್ಲಿರುವ
ಶ್ರೀ ಗರುಡದೇವರ ಮುಖ



ಬಿದನೂರು ಕೋಟೆಯ ಪ್ರವೇಶದ್ವಾರ



ಬಿದನೂರು ಕೋಟೆಯಲ್ಲಿರುವ ಅರಮನೆ ಹಾಗೂ
ದರ್ಬಾರ್ ಹಾಲ್‌ನ ಅವಶೇಷಗಳು

ಯಾಗಿದೆ. ಉತ್ತರಾಭಿಮುಖವಾಗಿ ಶ್ರೀ ಪ್ರಾಣದೇವರು ಪೂರ್ವಾಭಿಮುಖವಾಗಿ ಶ್ರೀನೃಸಿಂಹ ದೇವರು, ಪಶ್ಚಿಮಾಭಿ ಮುಖವಾಗಿ ಶ್ರೀವರಾಹಾ, ಊರ್ಧ್ವ ಭಾಗದಲ್ಲಿ ಶ್ರೀ ಹಯಗ್ರೀವ, ವಿಗ್ರಹದ ಹಿಂಬದಿಯಲ್ಲಿ ಶ್ರೀ ಪ್ರಾಣದೇವರ ಮುಖದಷ್ಟೇ ಗಾತ್ರದ ಶ್ರೀ ಗರುಡನ ಮುಖವು ದಕ್ಷಿಣಾಭಿಮುಖವಾಗಿ ಕೆತ್ತಲ್ಪಟ್ಟಿದೆ. ಶ್ರೀ ಗರುಡನನ್ನು ದರ್ಶಿಸಲು ವಿಗ್ರಹದ ಹಿಂಬದಿಯಲ್ಲಿ ದೊಡ್ಡ ದರ್ಪಣವನ್ನು ಗೋಡೆಗೆ ತೂಗು ಹಾಕಿದ್ದಾರೆ. ಮುಂಭಾಗದ ಶ್ರೀ ಪ್ರಾಣದೇವರ ಬಲಪಾರ್ಶ್ವದಲ್ಲಿ ಶ್ರೀ ಹರಿಯ ಚಕ್ರವು, ಎಡ ಪಾರ್ಶ್ವದಲ್ಲಿ ಶಂಖಗಳನ್ನು ಕೆತ್ತಿರುತ್ತಾರೆ. ಶ್ರೀ ದೇವರಿಗೆ ಹತ್ತು ಹಸ್ತಗಳಿದ್ದು ಅವುಗಳಲ್ಲಿ ಶ್ರೀ ಹರಿಯು ಅನುಗ್ರಹಿಸಿದ ಎಲ್ಲಾ ಶಸ್ತ್ರಾಯುಧಗಳನ್ನು ಪ್ರತ್ಯೇಕವಾಗಿ ಕೆತ್ತಲಾಗಿದೆ. ಭವ್ಯವಾದ ಪಾಣಿಪೀಠದ ಮೇಲೆ ನಿಂತಿರುವ ಈ ಸುಂದರ ಮೂರ್ತಿಗೆ ಭವ್ಯವಾದ ಪ್ರಭಾವಳಿಯನ್ನು ಶಿಲ್ಪಿಯು ನಿರ್ಮಾಣ ಮಾಡಿರುತ್ತಾನೆ.

ಈ ದೇಗುಲದ ಜೀರ್ಣೋದ್ಧಾರ

ಭಾರತದಲ್ಲಿಯೇ ಶ್ರೀ ಪಂಚಮುಖಿ ಆಂಜನೇಯ ಶಿಲ್ಪವು ಇಲ್ಲಿರುವುದು ಎರಡನೆಯದೆಂದು ಖ್ಯಾತಿಗೆ ಪಾತ್ರವಾಗಿದೆ. ಲಿಂಗನಮಕ್ಕಿ ಜಲಾಶಯದ ಹಿನ್ನೀರಿನಿಂದ ಮುಳುಗಡೆಯಾಗಿ ನೇಪಥ್ಯಕ್ಕೆ ಸರಿಯುವ ಮುನ್ನ ಶ್ರೀ ಪಣಿಯಪ್ಪಯ್ಯ, ಶ್ರೀ ಗುಡ್ಡೆ ವೆಂಕಟರಮಣ ದೇವಸ್ಥಾನದ ಅರ್ಚಕರು, ಈ ದೇವಸ್ಥಾನದ ಪೂಜೆಯನ್ನು ಮಾಡುತ್ತಿದ್ದರು. ಈ ಶಿಲಾಮೂರ್ತಿಯ ಆಕಾರದ್ದೇ ಆದ ಪಂಚಲೋಹದ ಮೂರ್ತಿಯು ಈಗಲೂ ಶ್ರೀ ಗುಡ್ಡೆ ವೆಂಕಟರಮಣ ದೇವಾಲಯದಲ್ಲಿ ನಿತ್ಯವೂ ಪೂಜೆಗೊಳ್ಳುತ್ತಿದೆ. ಈ ದೇವಾಲಯ ಮುಜರಾಯಿ ಇಲಾಖೆಗೆ ಒಳಪಟ್ಟಿರಲಿಲ್ಲ. ಕ್ರಿ.ಶ. ೧೯೮೮ರ ಫೆಬ್ರವರಿ ಮಾಹೆಯಲ್ಲಿ ನಗರದ ಇತಿಹಾಸ ಸಂಶೋಧಕರಾಗಿದ್ದ ಕೀರ್ತಿಶೇಷ ಶಂಕರನಾರಾಯಣರಾವ್ ನೇತೃತ್ವದಲ್ಲಿ ಈ ನಗರದ ಉತ್ಸಾಹಿ ಯುವಕರ ತಂಡದ ಸಹಾಯದಿಂದ, ಈ ದೇವಾಲಯವು ಸುಸ್ಥಿತಿಗೆ ಬಂದಿತು. ಅಲ್ಲಿ ಶ್ರೀ ಸ್ವಾಮಿಯನ್ನು ಪುನರ್ ಪ್ರತಿಷ್ಠೆ ಮಾಡಿ, ಗತಕಾಲದ ಪೂಜೆಯ ವೈಭವವನ್ನು ನೋಡುವಂತೆ ಮಾಡಿದರು. ಇವರ ನಂತರ ಶ್ರೀ ಬಾಲಕೃಷ್ಣ ಭಟ್ ಕಾನಂಗದ್ದೆಯವರು ಸಮಿತಿಯ ಮುಖ್ಯವಾಹಿನಿಯಾಗಿ ಧಾರ್ಮಿಕ ಕಾರ್ಯಕ್ರಮಗಳನ್ನು ಮುಂದುವರೆಸಿಕೊಂಡು ಬಂದರು. ಆದರೆ ದೇವಸ್ಥಾನಕ್ಕೆ ಬರುತ್ತಿದ್ದ ಆದಾಯದ ಮೂಲದ ಜನರು ಮುಳುಗಡೆಯಿಂದ ಬೇರೆ ಬೇರೆ ನಗರಗಳಲ್ಲಿ ನೆಲೆಸಿದ್ದರಿಂದ ಸಹಜವಾಗಿ ಆರ್ಥಿಕ ದುಃಸ್ಥಿತಿಗೊಳಗಾಯಿತು. ತದನಂತರ ಶ್ರೀ ರಾಮಚಂದ್ರಾಪುರ ಮಠದ ಶ್ರೀಪಾದಂಗಳವರಿಂದ ಕ್ರಿಯಾಶೀಲವಾದ ಒಂದು ಹೊಸ ಸಮಿತಿಯು ಕ್ರಿ.ಶ. ೨೦೦೧ರಲ್ಲಿ ರಚಿತವಾಯಿತು. ದೇವಾಲಯದಲ್ಲಿ ಧಾರ್ಮಿಕ ಕಾರ್ಯಕ್ರಮಗಳು ನಡೆಯ ತೊಡಗಿದವು. ಪುನಃ ಕ್ರಿ.ಶ. ೨೦೦೬ರ ಮಾರ್ಚ್ ತಿಂಗಳು ದಿನಾಂಕ ೯, ೧೦ ಮತ್ತು ೧೧ರಂದು ಈ ದೇವಸ್ಥಾನದ ಗರ್ಭಗುಡಿ ಹಾಗೂ ಗೋಪುರದ ನವನಿರ್ಮಾಣ ಮತ್ತು ಶ್ರೀ ದೇವರ ಪುನರ್ ಪ್ರತಿಷ್ಠಾಪನೆಯು ಶ್ರೀ ಪಾದಂಗಳವರ ನೇತೃತ್ವದಲ್ಲಿ ನಡೆಯಿತು. ಅದೇ ಸಂದರ್ಭದಲ್ಲಿ ದೇವಾಲಯದ ಸಹಾಯಾರ್ಥವಾಗಿ ಶ್ರೀ ಪಂಚಮುಖಿ ಆಂಜನೇಯ ಹಾಗೂ ಬಿದನೂರು ನಗರ ದರ್ಶನವೆಂಬ ಕಿರು ಹೊತ್ತಿಗೆಯನ್ನು ಹೊರತರಲಾಯಿತು. ಈಗ ಇಲ್ಲಿ ದಿನನಿತ್ಯ ಪೂಜಾ ವ್ಯವಸ್ಥೆ ಯಿದ್ದು ಇಲ್ಲಿ ಶುಭ ಸಮಾರಂಭಗಳನ್ನು ಮಾಡಲು ಸುವ್ಯವಸ್ಥಿತ ವಾದ ಸಮುದಾಯ ಭವನವಿದೆ.

ಉಪಸಂಹಾರ

ಈ ನಗರದಲ್ಲಿ ಎಲ್ಲಾ ಸಮಾರಂಭಗಳನ್ನು ಎಲ್ಲಾ ಧರ್ಮದವರೂ ಸೇರಿ ಆಚರಿಸುತ್ತಾರೆ. ವಿಶೇಷವಾಗಿ ಈ ನಗರದಲ್ಲಿ ದ್ವೈತ-ಅದ್ವೈತ-ವಿಶಿಷ್ಟಾದ್ವೈತ ಪಂಗಡಗಳು ಸೇರಿ ಎಲ್ಲಾ ಸಮಾರಂಭಗಳನ್ನು ಆಚರಿಸುವುದು ವಿಶೇಷವಾಗಿದೆ. ಸುಮಾರು ೧೨೫ ವರ್ಷಗಳಲ್ಲಿ ೧೩ ಜನ ಕೆಳದಿ ಅರಸರು ಈ ಬಿದನೂರಿನಲ್ಲಿ ರಾಜ್ಯಭಾರವನ್ನು ಮಾಡಿದ್ದಾರೆ. ಅವರೆಲ್ಲರ ಸಮಾಧಿಗಳು ಇಲ್ಲಿದ್ದು ಅವು ರಕ್ಷಣೆಗಳಿಲ್ಲದೆ ಈಗ ಅವನತಿಯ ಸ್ಥಿತಿಯಲ್ಲಿದೆ. ಇವನ್ನು ರಕ್ಷಿಸುವುದು ನಮ್ಮ-ನಿಮ್ಮೆಲ್ಲರ ಕರ್ತವ್ಯವಾಗಿದೆ. ಈ ರೀತಿ ಬಿದನೂರಿನಲ್ಲಿ ಇನ್ನೂ ಅನೇಕ ಸ್ಮಾರಕಗಳೂ, ಚರಿತ್ರಾರ್ಹವಾದ ವಸ್ತುಗಳಿದ್ದು, ಆ ವಿಚಾರ ವಾಗಿ ನವ ಸಂಶೋಧಕರು ಇನ್ನು ಮುಂದೆ ಪ್ರಯತ್ನ ಪಟ್ಟರೆ ಈ ಬಿದನೂರು ಅರಸರ ಕಾಲದ ಅನೇಕ ವಿಚಾರಗಳು ಬೆಳಕಿಗೆ ಬರುವುದರಲ್ಲಿ ಯಾವ ಸಂಶಯವೂ ಇಲ್ಲ.

(ಈ ಪ್ರಬಂಧವನ್ನು ಸಿದ್ಧಪಡಿಸಲು ಸಹಾಯ ಮಾಡಿದವರಾದ ನಗರದಲ್ಲಿ ವಾಸವಾಗಿರುವ ನಿವೃತ್ತ ಪ್ರಾಚಾರ್ಯರಾದ ಶ್ರೀ ಹೆಚ್. ಸುಬ್ರಹ್ಮಣ್ಯರವರು, ಶ್ರೀ ಸಿ. ಪಾಂಡುರಂಗರಾವ್, ಶ್ರೀ ಎಸ್. ಪ್ರಕಾಶ್ ಶೇಟ್, ಶ್ರೀ ಎಂ. ಮುಕುಂದ ಕಾಮತ್, ಶ್ರೀ ಜಿ. ಶಿವಪ್ಪಗೌಡರು, ಶ್ರೀ ಹೆಚ್.ಎಸ್. ಅರುಣಾಚಲ, ಶ್ರೀ ಸುಬ್ರಹ್ಮಣ್ಯ ಕೆ. ಭಾಗವತ್ ಮತ್ತು ಹಿರಿಯ ಸಂಶೋಧಕರಾದ ಶ್ರೀ ಅಂಬ್ರಯ್ಯ ಮಠ, ನಗರ, ಇವರುಗಳಿಗೆ ಹೃನ್ಪೂರ್ವಕ ವಂದನೆಗಳು)

ಚಾಮರಾಜನಗರದ ಚಾಮರಾಜೇಶ್ವರ ದೇವಾಲಯದ ಸಮಗ್ರ ವಾಸ್ತುಶಿಲ್ಪ ರಚನಾ ನೋಟ

ಡಾ. ಬಿ. ಬಸವರಾಜು ತಗರಪುರ* ಎಂ.ಎಸ್. ನಿರ್ಮಲ**

ಚಾಮರಾಜನಗರದಲ್ಲಿ ಚಾಮರಾಜೇಶ್ವರ, ಶ್ರೀ ವೀರಭದ್ರ ಸ್ವಾಮಿ ದೇವಾಲಯ, ಶ್ರೀ ಭದ್ರಕಾಳಮ್ಮ ದೇವಾಲಯ, ವಿಜಯ ಪಾರ್ಶ್ವನಾಥ ಬಸದಿ, ಶ್ರೀ ಮಾರಮ್ಮತಾಯಿ ದೇವಾಲಯ, ಶ್ರೀ ಲಕ್ಷ್ಮೀಕಾಂತಸ್ವಾಮಿ ದೇವಾಲಯ, ಶ್ರೀ ಭುಜಲಿಂಗೇಶ್ವರ ಸ್ವಾಮಿ ದೇವಾಲಯ, ಸಿದ್ದೇಶ್ವರ ದೇವಾಲಯ ಮುಂತಾದವನ್ನು ಕಾಣಬಹುದಾಗಿದೆ.



ಚಾಮರಾಜೇಶ್ವರ ದೇವಾಲಯ: ದೇವಾಲಯವು ಸುಂದರವಾಗಿದ್ದು, ಶುದ್ಧ ದ್ರಾವಿಡಶೈಲಿಯ ದೇವಾಲಯ ವಾಗಿದೆ. ಈ ದೇವಾಲಯವನ್ನು ಮುಮ್ಮಡಿ ಕೃಷ್ಣರಾಜ ಒಡೆಯ (೧೭೯೧-೧೮೬೮)ರ ಆಳ್ವಿಕೆಯ ಸಂದರ್ಭದಲ್ಲಿ ಸ್ಥಾಪಿಸಿದರು. ಅಲ್ಲದೆ ಮುಮ್ಮಡಿ ಕೃಷ್ಣರಾಜ ಒಡೆಯರ್ ತಂದೆ ಚಾಮರಾಜೇಂದ್ರ ಒಡೆಯರು ಇಲ್ಲಿ ಜನಿಸಿರುವುದರಿಂದ ಚಾಮರಾಜ ನಗರವಾಯಿತು. ಇದಕ್ಕೂ ಮೊದಲು ಈ ಊರಿಗೆ ಅರಿಕುತಾರ ಎಂಬ ಹೆಸರು ಪೌರಾಣಿಕ ಕಾಲಕೆ,



ಮಣಿಪುರ ಎಂಬ ಹೆಸರು ಇದ್ದುದಾಗಿ ತಿಳಿದುಬರುತ್ತದೆ. ಈ ದೇವಾಲಯವು ಪೂರ್ವಾಭಿಮುಖವಾಗಿದ್ದು ೨೩೨ ಅಡಿ ಉದ್ದ ೧೯೫ ಅಡಿ ಅಗಲವನ್ನು ಹೊಂದಿದೆ. ಈ ದೇವಾಲಯದ ಒಳ ಪ್ರಾಕಾರದಲ್ಲಿ ಮೂರು ದೇವಾಲಯ ಗಳಿದ್ದು, ಮಧ್ಯದಲ್ಲಿ ಶ್ರೀ ಭುವನೇಶ್ವರಿ ದೇವಾಲಯ ಉತ್ತರ ದಿಕ್ಕಿಗೆ ಶ್ರೀ ಕೆಂಪನಂಜಾಬ ಅಮ್ಮನವರ ದೇವಾಲಯ, ದಕ್ಷಿಣ ದಿಕ್ಕಿಗೆ ಶ್ರೀ ಚಾಮುಂಡೇಶ್ವರಿ ಅಮ್ಮನವರ (ಮಹಿಷ) ದೇವಾಲಯಗಳಿವೆ.

ಈ ದೇವಾಲಯ ಪೂರ್ವಾಭಿಮುಖವಾಗಿದ್ದು ಗರ್ಭಗುಡಿ ಶುಕನಾಸ ಮತ್ತು ತೆರೆದ ಅಂತರಾಳವನ್ನು ಹೊಂದಿದೆ. ಈ ದೇವಾಲಯಕ್ಕೆ ಶ್ರೀ ಕೆಂಪನಂಜಾಂಭ ಅಮ್ಮನವರಿಂದ ಸ್ಥಾಪಿತವಾಗಿದೆ. ಮೂಲ ಗರ್ಭಗುಡಿಯಲ್ಲಿ ಶ್ರೀ ಚಾಮರಾಜೇಶ್ವರ ದೇವಿಯನ್ನು ಪ್ರತಿಷ್ಠಾಪಿಸಲಾಗಿದ್ದು, ಈ ತಾಯಿಗೆ ಭುವನೇಶ್ವರಿ ಎಂದು ಸಹ ಕರೆಯುವ ಪ್ರತೀತಿ ಇದೆ. ಈ ದೇವಾಲಯದ ಇಕ್ಕೆಲಗಳಲ್ಲಿ ಕೆಂಪನಂಜಾಂಬ

* ತಗರಪುರ ಗ್ರಾಮ, ಚಿಲಕವಾಡಿ ಅಂಚೆ, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ-೫೭೧೪೪೦
** # ೨೯೮, ಹೆಚ್ ಪಿ ಓ & ಆರ್.ಎಂ.ಎಸ್. ಲೇಔಟ್, ಸಾತಗಳ್ಳಿ ಬಡಾವಣೆ, ಮೈಸೂರು-೫೭೦೦೦



ಅಮ್ಮ ಮತ್ತು ಪಾರ್ವತಿ ಗುಡಿಗಳಿವೆ. ಈ ದೇವಾಲಯದ ಮುಂಭಾಗದಲ್ಲಿ ಎತ್ತರವಾದ ಆರು ಸಾಲು ಕಂಬಗಳಿವೆ. ಈ ಕಂಬಗಳ ಮೇಲೆ ವಿವಿಧ ರೀತಿಯ ಉಬ್ಬುಶಿಲ್ಪಗಳಿವೆ. ಅವುಗಳು ಗಣಪತಿ, ಗಿಳಿ, ನವಿಲು, ಬೇಟೆಗಾರ, ವ್ಯಾಳವಾರಿ, ಸ್ತ್ರೀ ದೇವತೆ, ರಾಜ ರಾಣಿಯರ ಉಬ್ಬು ಶಿಲ್ಪಗಳನ್ನು ಕಾಣಬಹುದು. ಪಾರ್ವತಿ ಗುಡಿಯಲ್ಲಿ ಈಗ ನಾರಾಯಣ ಸ್ವಾಮಿಯ ಕಂಚುಶಿಲ್ಪವಿದ್ದು ಇಕ್ಕೆಲಗಳಲ್ಲಿ ಶ್ರೀದೇವಿ ಭೂದೇವಿ ಯರ ಶಿಲ್ಪಗಳನ್ನು ಕಾಣಬಹುದು. ಚಾಮರಾಜೇಶ್ವರ ದೇವಾಲಯದ ಒಂದು ಪಾರ್ಶ್ವದಲ್ಲಿ ಆಂಜನೇಯ ಶಿಲ್ಪವಿದೆ. ಈ ಶಿಲ್ಪವು ಸುಂದರವಾಗಿ ಕೆತ್ತಲ್ಪಟ್ಟಿದ್ದು ಈತನು ಭಕ್ತಿಯಿಂದ ಕೈಮುಗಿಯುವ ರೀತಿಯಲ್ಲಿದ್ದು ಈತನು ಸುಂದರವಾದ ವಸ್ತ್ರವನ್ನು ಧರಿಸಿರುವುದು ಕಂಡುಬರುತ್ತದೆ. ತಲೆಯ ಮೇಲೆ ಕಿರೀಟವನ್ನು ಧರಿಸಿರುವುದು ಕೂಡ ಚೆನ್ನಾಗಿ ಮೂಡಿಬಂದಿದೆ. ಇಕ್ಕೆಲಗಳಲ್ಲಿ ಸುಂದರವಾಗಿ ಕಡೆದಿರುವ ಪ್ರಭಾವಳಿಯನ್ನು ಕಾಣಬಹುದು. ಒಟ್ಟಾರೆ ಹೇಳುವುದಾದರೆ ಚಾಮರಾಜೇಶ್ವರ ದೇವಾಲಯದ ನವರಂಗಕ್ಕೆ ಹೊಂದಿಕೊಂಡಂತೆ ಇರುವ ಮುಖ್ಯದ್ವಾರವು ಹಲವು ಪಟ್ಟಿಕೆಗಳಿಂದ ಅಲಂಕೃತಗೊಂಡಿದೆ. ಇದಕ್ಕೆ ಹಿತ್ತಾಳೆಯಿಂದ ಕವಚ ಮಾಡಲಾಗಿದೆ. ಇಕ್ಕೆಲಗಳಲ್ಲಿ ಶೈವ ಪುರಾಣಕ್ಕೆ ಪೂರಕವಾದ ಶೈವದ್ವಾರ ಪಾಲಕರ ಶಿಲ್ಪಗಳನ್ನು ಸಹ ಇಡಲಾಗಿದೆ. (ಚಿತ್ರ ಸಂಖ್ಯೆ ೫) ಚಾಮರಾಜೇಶ್ವರ ದೇವಾಲಯದ ನವರಂಗದ ಪ್ರವೇಶದ್ವಾರದ ಮೇಲೆ ಅಂದರೆ ಕಪೋತದಲ್ಲಿ ಶಿವಪಾರ್ವತಿಯ ಉಬ್ಬುಗಾರೆ ಶಿಲ್ಪವನ್ನು ಅಲ್ಲದೆ ಶೈವ ಭಕ್ತರನ್ನು ಕಾಣಬಹುದಾಗಿದೆ. ಇದು ಇಂದಿಗೂ ಪ್ರಸ್ತುತ ಶೈವ ಪರಂಪರೆ ದೇವಾಲಯಗಳಲ್ಲಿ ಕಂಡುಬರುವುದುಂಟು. ಚಾಮರಾಜೇಶ್ವರ ದೇವಾಲಯವು ಹೊರಭಾಗದಲ್ಲಿ ಸರಳವಾಗಿದ್ದು ಮೇಲ್ಭಾಗದಲ್ಲಿ ಶುದ್ಧ ದ್ರಾವಿಡ ಶೈಲಿಯ ವಿಮಾನವನ್ನು ಕಾಣಬಹುದು. ಇವು ಇಟ್ಟಿಗೆ ಗಾರೆಯಿಂದ ನಿರ್ಮಿಸಿದ್ದು ಈ ಪರಂಪರೆ ವಿಜಯನಗರದ ಅರಸರ ಕಾಲದಲ್ಲಿ ಪ್ರಾರಂಭವಾಯಿತು. ಆದರೂ ಸಹ ನಂತರ ದಕ್ಷಿಣ ಕರ್ನಾಟಕದಲ್ಲಿ ಆಳ್ವಿಕೆ ಮಾಡಿದ ಮೈಸೂರು ಒಡೆಯರು ಈ ಪರಂಪರೆಯನ್ನು ಮುಂದುವರೆಸಿ, ಚಾಮರಾಜನಗರದಲ್ಲಿ ಕಂಡುಬರುವ ಈ ದೇವಾಲಯದಲ್ಲೂ ಅದೇ ವಾಸ್ತು ಪರಂಪರೆಯನ್ನು ನೀಡಿರುವುದು ವಾಸ್ತುಶಿಲ್ಪಕಲಾ ಲಕ್ಷಣದಿಂದ ತಿಳಿದುಬರುತ್ತದೆ. ಚಾಮರಾಜೇಶ್ವರ ದೇವಾಲಯದ ಭಿತ್ತಿಯ ಮೇಲೆ ಅನೇಕ ಕೋಷ್ಠ ಗುಡಿಗಳನ್ನು ಕಾಣಬಹುದು. ಅಲ್ಲದೆ ಮುಂಭಾಗದಲ್ಲಿ ಒಂದು ಮಂಟಪದಲ್ಲಿ ಸುಂದರವಾದ ನಂದಿಯ ಶಿಲ್ಪವನ್ನು ಇರಿಸಲಾಗಿದೆ. ಈ ನಂದಿಯು ದೇವಾಲಯಕ್ಕೆ ಮುಖ ಮಾಡಿಕೊಂಡು ಕುಳಿತಿದೆ.

ಚಾಮುಂಡೇಶ್ವರಿ ದೇವಾಲಯ: ಚಾಮರಾಜನಗರದ ಚಾಮರಾಜೇಶ್ವರ ದೇವಾಲಯದ ಎಡಗಡೆಗೆ ಅಂದರೆ ದಕ್ಷಿಣ ದಿಕ್ಕಿಗೆ ಪೂರ್ವಾಭಿಮುಖವಾಗಿ ಶ್ರೀ ಚಾಮುಂಡೇಶ್ವರಿ ಅಮ್ಮನವರ ದೇವಾಲಯವಿದೆ. ಈ ದೇವಾಲಯವು ಸಹ ಚಾಮರಾಜೇಶ್ವರ ದೇವಾಲಯದ ಮಾದರಿಯಲ್ಲಿ ನಿರ್ಮಾಣ ಗೊಂಡಿದೆ. ಚಾಮುಂಡೇಶ್ವರಿ ದೇವಾಲಯ ಗರ್ಭಗೃಹ, ಶುಕನಾಸಿ ಮತ್ತು ತೆರೆದ ಅಂತರಾಳವನ್ನು ಹೊಂದಿದೆ. ಮೂಲ ಗರ್ಭಗುಡಿಯಲ್ಲಿ ತಾಯಿ ಶ್ರೀ ಚಾಮುಂಡೇಶ್ವರಿ ಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ. ತಾಯಿಯ ಶಿಲ್ಪವನ್ನು ಸೂಕ್ಷ್ಮವಾಗಿ ಗಮನಿಸಿದರೆ ಯುದ್ಧದಲ್ಲಿ ತಲ್ಲೀನವಾಗಿರುವ ದೃಶ್ಯ ಮೂಡಿಬಂದಿದೆ. ಅಂದರೆ ಮಹಿಷನನ್ನು ಸಂಹಾರ ಮಾಡುವ ರೀತಿಯಲ್ಲಿಯೇ ಶಿಲ್ಪವನ್ನು ಶಿಲ್ಪಿ ಕೆತ್ತಿದ್ದಾನೆ. ಮೈಸೂರು ಒಡೆಯರ ಕುಲದೇವತೆ ಚಾಮುಂಡಿ ಆದ ಕಾರಣ ಮೈಸೂರು ಒಡೆಯರ ಶೈವ ದೇವಾಲಯಗಳ ಜೊತೆ ಜೊತೆಯಲ್ಲಿ ಚಾಮುಂಡೇಶ್ವರಿ ದೇವಾಲಯವನ್ನು ನಿರ್ಮಿಸಿರುವುದು ಮಹಿಷ ಮಂಡಲ ಪ್ರಾಂತದಲ್ಲಿ ಕಂಡುಬರುತ್ತದೆ. ಚಾಮುಂಡೇಶ್ವರಿ ದೇವಾಲಯದ ಮುಂಭಾಗದಲ್ಲಿ ಎತ್ತರವಾದ ಕಂಬಸಾಲುಗಳಿವೆ. ಈ ಕಂಬಗಳು ಚಾಮರಾಜೇಶ್ವರ ದೇವಾಲಯದಲ್ಲಿರುವ ಕಂಬಗಳ ಮಾದರಿಯಲ್ಲಿಯೇ ಇವೆ. ಕೆಲವೊಂದು ಕಂಬಗಳಲ್ಲಿ ಉಬ್ಬುಶಿಲ್ಪಗಳ ಕೆತ್ತನೆ ಇದೆ. ದೇವಾಲಯದ ಮೇಲ್ಭಾಗದಲ್ಲಿ ಮುಂಭಾಗಕ್ಕೆ ಹೊಂದಿ ಕೊಂಡಂತೆ ಮೂರು ಕೋಷ್ಠ ಗುಡಿಗಳಿವೆ. ಮಧ್ಯದ ಕೋಷ್ಠದಲ್ಲಿ ತಾಯಿ ಚಾಮುಂಡೇಶ್ವರಿಯ ಶಿಲ್ಪವನ್ನು ಇಕ್ಕೆಲಗಳ ಕೋಷ್ಠಗಳಲ್ಲಿ ಶಕ್ತಿ ಪ್ರಧಾನವಾದ ಸ್ತ್ರೀ ದೇವತೆಯರ ಶಿಲ್ಪಗಳನ್ನು ಗಾರೆಯಿಂದ ಮಾಡಲಾಗಿದೆ. ಮಧ್ಯದಲ್ಲಿ ಎರಡು ಕುಂಬ ಕಂಬಗಳಿದ್ದು ಅವುಗಳ ಮೇಲೆ ಸಿಂಹಗಳನ್ನು ಸಹ ಕಡೆಯಲಾಗಿದೆ.

ಕೆಂಪನಂಜಾಂಬ ಅಮ್ಮ ದೇವಾಲಯ: ಚಾಮರಾಜೇಶ್ವರ ದೇವಾಲಯದ ಉತ್ತರ ದಿಕ್ಕಗೆ ಪೂರ್ವಾಭಿಮುಖವಾಗಿ ನಿರ್ಮಾಣಗೊಂಡಿರುವ ಕೆಂಪನಂಜಾಂಬ ಅಮ್ಮನವರ ದೇವಾಲಯವಿದೆ. ಇದು ಸ್ವಲ್ಪ ವೈವಿಧ್ಯತೆಯನ್ನೇ ಹೊಂದಿದೆ. ಇದು ಸಹ ಮೈಸೂರು ಅರಸರ ಕಾಲದ ದೇವಾಲಯವಾಗಿದ್ದರೂ ಕಂಬಗಳಲ್ಲಿ ಏಕತೆ ಇಲ್ಲ. ಮೂಲ ಗರ್ಭಗುಡಿಯಲ್ಲಿ ಭುವನೇಶ್ವರಿಯನ್ನು ಪ್ರತಿಷ್ಠಾಪಿಸ ಲಾಗಿದೆ. ಇದಕ್ಕೆ ಪ್ರತಿರೂಪವೇ ಭುವನೇಶ್ವರಿ. ಈ ರೀತಿಯ ದೇವಾಲಯವನ್ನು ಮೈಸೂರು ಅರಮನೆಯ ಆವರಣದಲ್ಲಿ ಕಾಣಬಹುದಾಗಿದೆ. ಈ ಹಿನ್ನೆಲೆಯಿಂದ ರಾಣಿ ಕೆಂಪ ನಂಜಾಂಬ ಅಮ್ಮನವರ ಹೆಸರಿನಲ್ಲಿ ಸ್ಥಾಪಿಸಲಾಗಿದೆ ಎಂದು ಹೇಳಬಹುದು. ಚಾಮರಾಜೇಶ್ವರ ದೇವಾಲಯಕ್ಕೆ ಸುತ್ತಲೂ ಪ್ರಾಕಾರವಿದ್ದು ಸುತ್ತಲೂ ಪ್ರಾಕಾರದ ಕೈಸಾಲೆಯ ಗುಡಿಗಳಲ್ಲಿ ವಿವಿಧ ರೀತಿಯ ಶಿಲ್ಪಗಳನ್ನು ಇಡಲಾಗಿದೆ.

ದೇವಾಲಯದ ಪ್ರಾಕಾರಕ್ಕೆ ಸಂಬಂಧಪಟ್ಟಂತೆ ಪಶ್ಚಿಮ ದಿಕ್ಕಿಗೆ ಮತ್ತು ಉತ್ತರ ದಿಕ್ಕಿಗೆ ಹಲವಾರು ಗುಡಿಗಳಿವೆ. ಈ ಗುಡಿಗಳಲ್ಲಿ ಹಲವು ಶಿಲ್ಪಗಳನ್ನು ಇಡಲಾಗಿದೆ. ಪಶ್ಚಿಮ ದಿಕ್ಕಿಗೆ ಹೊಂದಿಕೊಂಡಂತೆ ಮೂರು ಶಿಲ್ಪಗಳಿವೆ. ಉಳಿದವುಗಳು ಶಿವಲಿಂಗಗಳು.

ಶ್ರೀ ಚಂದ್ರಶೇಖರ ಮೂರ್ತಿ ಶಿಲ್ಪ: ಈ ಶಿಲ್ಪವು ಗ್ರಾನೈಟ್ ಕಲ್ಲಿನಿಂದ ಮಾಡಿದ್ದು ಸುಮಾರು ನಾಲ್ಕು ಅಡಿ ಎತ್ತರವಿದೆ. ಚಂದ್ರಶೇಖರ ಮೂರ್ತಿಯು ಎರಡು ಕಾಲು ನಾಲ್ಕು ಕೈಗಳನ್ನು ಹೊಂದಿದ್ದು ಒಂದು ಕೈಯಲ್ಲಿ ಡಮರು. ಒಂದು ಕೈಯಲ್ಲಿ ಜಿಂಕೆ. ಒಂದು ಕೈಯನ್ನು ಅಭಯ ನೀಡಿದ್ದು ಮತ್ತೊಂದು ಕೈಯನ್ನು ಇಳಿಬಿಟ್ಟಂತೆ ಕಂಡುಬರುತ್ತದೆ. ಕಿವಿಯಲ್ಲಿ ಕರ್ಣಕುಂಡಲ, ಕಂಠಹಾರ, ಸೊಂಟದಲ್ಲಿ ವಸ್ತ್ರ ಧರಿಸಿದ್ದು ಅಲಂಕಾರಿಕ ಆಭರಣಗಳನ್ನು ಧರಿಸಿದ್ದಾನೆ. ಕಾಲು ಕಡಗವನ್ನು ಧರಿಸಿರುವುದು ಸೂಕ್ಷ್ಮವಾಗಿ ಕಂಡುಬರುತ್ತದೆ. ಇಕ್ಕೆಲಗಳಲ್ಲಿ ಪ್ರಭಾವಳಿಯಿದ್ದು, ಪ್ರಭಾವಳಿಯು ಸೂಕ್ಷ್ಮ ಕೆತ್ತನೆಯಿಂದ ಲತೆ ಬಳ್ಳಿ ಸುರುಳಿಗಳಿಂದ ಕೂಡಿದ್ದು, ಸೊಗಸಾಗಿ ಮೂಡಿಬಂದಿದೆ. ಚಂದ್ರಶೇಖರ ಸ್ವಾಮಿಯ ಪಕ್ಕದಲ್ಲಿ ಮತ್ತೊಂದು ದೇವಿಯ ಶಿಲ್ಪ ಇದೆ. ದೇವಿಯು ಸಹ ವಿವಿಧ ವಸ್ತ್ರ ಆಭರಣಗಳನ್ನು, ಕಿರೀಟವನ್ನು ಧರಿಸಿದ್ದು ಕೈಗಳನ್ನು ಹೊಂದಿದ್ದು, ಒಂದು ಕೈಯಲ್ಲಿ ಕಮಲದ ಮೊಗ್ಗನ್ನು ಹಿಡಿದಿರುವುದು ಕಂಡು ಬರುತ್ತದೆ.

ಉಮಾಮಹೇಶ್ವರ : ಉಮಾಮಹೇಶ್ವರ ಶಿಲ್ಪವು ಒಂದು ಗುಡಿಯಲ್ಲಿದ್ದು ಮಹೇಶ್ವರನು ಉಮಾಳನ್ನು ತೊಡೆಯ ಮೇಲೆ ಕುಳ್ಳಿರಿಸಿಕೊಂಡಿರುವುದು ಕಂಡುಬರುತ್ತದೆ. ಮಹೇಶ್ವರನು ಚತುರ್ಭುಜಧಾರಿಯಾಗಿದ್ದು ಒಂದು ಕಾಲನ್ನು ಕೆಳಗೆ ಇಳಿಬಿಟ್ಟು ಮತ್ತೊಂದು ಕಾಲನ್ನು ಮಡಿಸಿ ತೊಡೆಯ ಮೇಲೆ ಉಮಾಳನ್ನು ಕುಳ್ಳಿರಿಸಿಕೊಂಡಿದ್ದಾನೆ. ಶಿವನು ಒಂದು ಕೈಯಲ್ಲಿ ಘಲವನ್ನು ಮತ್ತೊಂದು ಕೈಯಲ್ಲಿ ಕೊಡಲಿಯನ್ನು ಇನ್ನೆರಡು ಕೈಗಳಿಂದ ಉಮಾಳನ್ನು ಹಿಡಿದುಕೊಂಡಿರುವುದು ಕಂಡುಬರುತ್ತದೆ. ಮಹೇಶ್ವರನು ಆಭರಣಗಳನ್ನು ಧರಿಸಿದ್ದು ತಲೆಯ ಮೇಲೆ ಕಿರೀಟವನ್ನು ಸಹ ಧರಿಸಿರುತ್ತಾರೆ. ಪ್ರಭಾವಳಿಯು ಸುಂದರವಾಗಿ ಬಳ್ಳಿ ಸುರುಳಿ ಕೆತ್ತನೆಯಿಂದ ಕೂಡಿದೆ. ಪೀಠದಲ್ಲಿ ನಂದಿಯ ಶಿಲ್ಪವಿದೆ.

ವೃಷಭಾರೂಢ ಮೂರ್ತಿ : ಮತ್ತೊಂದು ಗುಡಿಯಲ್ಲಿ ವೃಷಭರೂಢ ಮೂರ್ತಿಯ ಶಿಲ್ಪವಿದ್ದು ಇದು ಸಹ ಉಮಾ ಮಹೇಶ್ವರ ಶಿಲ್ಪದ ಮಾದರಿಯಲ್ಲಿಯೇ ಕಂಡುಬರುತ್ತದೆ. (ಚಿತ್ರ ಸಂಖ್ಯೆ ೧೪) ಉತ್ತರದಿಕ್ಕಿನ ಪ್ರಾಕಾರದ ಕೈಸಾಲೆಯಲ್ಲಿ ಸುಮಾರು ೨೫ ಗುಡಿಗಳಿದ್ದು ೨೫ ಗುಡಿಗಳಲ್ಲಿಯೂ ಶಿಲ್ಪಗಳನ್ನು ಇಡಲಾಗಿದೆ.

ಗಿರಿಜಾ ಕಲ್ಯಾಣ : ಗಿರಿಜಾ ಕಲ್ಯಾಣ ಶಿಲ್ಪವು ಸುಮಾರು ನಾಲ್ಕು ಅಡಿ ಎತ್ತರವಿದ್ದು, ವಿವಾಹವಾಗುವ ಸನ್ನಿವೇಶವನ್ನು ವ್ಯಕ್ತಪಡಿಸುವ ಶಿಲ್ಪವಾಗಿದೆ. ಶಿವ ಮತ್ತು ಪಾರ್ವತಿ ಅಗ್ನಿ ಸಾಕ್ಷಿಯಾಗಿ ಮದುವೆಯಾಗುತ್ತಿರುವುದಕ್ಕೆ ಗಿರಿಜಾ ಕಲ್ಯಾಣ ಎಂದು ಕರೆಯಲಾಗಿದೆ. ಶಿವ ಪಾರ್ವತಿ ಎದುರು ನಂದಿಯು ಕುಳಿತಿರುವುದು ಸಹ ಕಂಡುಬರುತ್ತದೆ. ಮದುವೆ ಮಂಟಪದಲ್ಲಿ ಅಲಂಕಾರ ಮಾಡಿರುವಂತೆ ಇಲ್ಲಿಯ ಪ್ರಭಾವಳಿಯಲ್ಲಿಯೂ ಸುಂದರವಾದ ಅಲಂಕರಣೆಯಿಂದ ಕೂಡಿದ ಮಂಟಪದ ರೀತಿ ಮಾಡಿರುವುದು ಕಂಡುಬರುತ್ತದೆ.

ತಾಂಡವೇಶ್ವರ ಮೂರ್ತಿ : ತಾಂಡವೇಶ್ವರ ಮೂರ್ತಿ ಶಿಲ್ಪವು ಒಂದು ಗುಡಿಯಲ್ಲಿದ್ದು ಶಿವನು ನಾಲ್ಕು ಕೈಗಳನ್ನು ಹೊಂದಿದ್ದು, ಎರಡು ಕಾಲುಗಳು ಸಹ ಇದೆ. ನೃತ್ಯಕ್ಕೆ ತಕ್ಕಂತೆ ತನ್ನ ಭಂಗಿಯನ್ನು ತೋರುತ್ತಿರುವುದು ಶಿಲ್ಪಕಲೆಯಿಂದ ವ್ಯಕ್ತವಾಗುತ್ತದೆ. ಶಿವನು ತಲೆಯ ಕೂದಲು ಬಿಚ್ಚಿ ಕುಣಿಯುತ್ತಿರುವಂತೆ ಶಿಲ್ಪದಲ್ಲಿ ಕಂಡುಬಂದಿದೆ. ಲಯಕ್ಕೆ ತಕ್ಕಂತೆ ವಸ್ತ್ರವು ಸರಿದಿರುವುದು ಮೂಡಿಬಂದಿದೆ. ಪ್ರಭಾವಳಿಯಲ್ಲಿ ಜಿಂಕೆಗಳನ್ನು ಮತ್ತು ಬಳ್ಳಿ ಸುರುಳಿಗಳನ್ನು ಸುಂದರವಾಗಿ ಕಡೆದಿರುವುದು ಕಂಡುಬರುತ್ತದೆ. ಪೀಠದಲ್ಲಿ ನಂದಿಯಿದ್ದು, ಈ ಶಿಲ್ಪದ ಪಕ್ಕದಲ್ಲಿ ದೇವಿಶಿಲ್ಪವನ್ನು ಇಡಲಾಗಿದೆ.

ಭಿಕ್ಷಾಟತನ ಮೂರ್ತಿ : ಈ ಶಿಲ್ಪವು ಸಹ ಮತ್ತೊಂದು ಗುಡಿಯಲ್ಲಿದ್ದು ಕಲ್ಲು ಪೀಠದ ಮೇಲೆ ಮೂರ್ತಿಯನ್ನು ನಿಲ್ಲಿಸಲಾಗಿದೆ. ಶಿವನು ಚತುರ್ಭುಜಧಾರಿಯಾಗಿದ್ದು ಎರಡು ಕಾಲುಗಳನ್ನು ಹೊಂದಿದದ್ದು ಕಂಠದಲ್ಲಿ ಕಂಠಹಾರಗಳನ್ನು ಧರಿಸಿದ್ದಾನೆ. ಕೈಬಳೆ. ಸೊಂಟದಲ್ಲಿ ವಸ್ತ್ರಗಳನ್ನು ಧರಿಸಿದ್ದು ಕಾಲಿನಲ್ಲಿ ಕಡಗ ಒಂದು ಕೈಯಲ್ಲಿ ತ್ರಿಶೂಲವನ್ನು, ಒಂದು

ಕೈಯಲ್ಲಿ ಭಿಕ್ಷೆ ಪಾತ್ರೆಯನ್ನು, ಇನ್ನೊಂದು ಕೈಯನ್ನು ನಂದಿಯ ಮೇಲೆ ಮತ್ತೊಂದನ್ನು ಪ್ರಭಾವಳಿಗೆ ಸೇರಿದಂತೆ ಹಿಡಿದಿರುವುದು ಕಂಡುಬರುತ್ತದೆ. ಪ್ರಭಾವಳಿಯು ಸುಂದರವಾಗಿ ಮೂಡಿಬಂದಿದೆ.

ಕಾಮಸಂಹಾರ ಮೂರ್ತಿ : ಮತ್ತೊಂದು ಗುಡಿಯಲ್ಲಿ ಕಾಮಸಂಹಾರ ಮೂರ್ತಿಯನ್ನು ಇಡಲಾಗಿದೆ. ಕಲ್ಲುಪೀಠದ ಮೇಲೆ ಮತ್ತೊಂದು ಪೀಠವನ್ನು ಮಾಡಿ ಶಿವನನ್ನು ಕುಳ್ಳಿರಿಸಲಾಗಿದೆ. ಈತನು ಸುರಸುಂದರನಾಗಿದ್ದು ಚತುರ್ಭುಜವನ್ನು ಹೊಂದಿದ್ದು ಮೂರು ಕೈಗಳಲ್ಲಿ ಆಯುಧಗಳನ್ನು ಹಿಡಿದಿದ್ದಾರೆ. ಶಿವನ ಸೊಂಟಕ್ಕೆ ವಸ್ತ್ರವನ್ನು ಧರಿಸಿರುತ್ತಾನೆ. ಕಂಠದಲ್ಲಿ ಆಭರಣಗಳು, ಕಿವಿಯಲ್ಲಿ ಕರ್ಣಕುಂಡಲ, ಕಾಲುಕಡಗ, ತಲೆಯಲ್ಲಿ ಕಿರೀಟವನ್ನು ಧರಿಸಿರುತ್ತಾರೆ. ಪ್ರಭಾವಳಿಯು ಸಹ ಸುಂದರವಾಗಿ ಮೂಡಿಬಂದಿದೆ.

ಮಾರ್ಕಂಡೇಯ ಪ್ರಸನ್ನ ಶಿಲ್ಪ : ಈ ಶಿಲ್ಪವು ಸಹ ಇನ್ನೊಂದು ಗುಡಿಯಲ್ಲಿದೆ. ಕಲ್ಲುಪೀಠದ ಮೇಲೆ ಶಿವಲಿಂಗವನ್ನು ಸ್ಥಾಪಿಸಿ, ಅದರ ಮೇಲೆ ಶಿವನು ಚತುರ್ಭುಜಧಾರನಾಗಿ ನಿಂತಿರುವುದು ಕಾಣಬರುತ್ತದೆ. ಇದರಲ್ಲಿ ಶಿವನು ತ್ರಿಶೂಲ, ಬಿಲ್ಲುಬಾಣ ಖಡ್ಗವನ್ನು ಹಿಡಿದಿದ್ದು ಮತ್ತೊಂದು ಕೈಯನ್ನು ತನ್ನ ತೊಡೆಯ ಮೇಲೆ ಇರಿಸಿ ಕೊಂಡಂತೆ ಕಾಣಬರುತ್ತಾನೆ. ಇಕ್ಕೆಲಗಳಲ್ಲಿ ಇಬ್ಬರು ಸೇವಕರಿದ್ದಾರೆ. ಶಿವನು ಒಬ್ಬ ಸೇವಕನ ಭುಜದ ಮೇಲೆ ತನ್ನ ಕಾಲನ್ನು ಇಟ್ಟು ತ್ರಿಶೂಲದಿಂದ ತಿವಿಯುತ್ತಿರುವ ಮಾದರಿಯಲ್ಲಿ ಕಡೆಯಲಾಗಿದೆ. ಇದರ ಎದುರು ಒಂದು ನಂದಿಯ ಶಿಲ್ಪವನ್ನು ಸಹ ಇಡಲಾಗಿದೆ.

ತ್ರಿಪುರಸಂಹಾರ ಮೂರ್ತಿ : ಮತ್ತೊಂದು ಗುಡಿಯಲ್ಲಿ ತ್ರಿಪುರ ಸಂಹಾರ ಮೂರ್ತಿಯ ಶಿಲ್ಪವನ್ನು ಇಡಲಾಗಿದೆ. ಈತನು ಯುದ್ಧಕ್ಕೆ ಸಿದ್ಧನಾಗಿರುವಂತೆ ಕಾಣಬರುತ್ತದೆ. ಈತನು ಸುಂದರವಾಗಿದ್ದು ವಿವಿಧ ರೀತಿಯ ವಜ್ರ, ವಸ್ತ್ರಗಳನ್ನು ಧರಿಸಿದ್ದು, ಈತನು ಚತುರ್ಭುಜಧಾರನಾಗಿದ್ದು ಬಿಲ್ಲು, ಬಾಣ, ಗಧೆಯನ್ನು ಕೈಯಲ್ಲಿ ಹಿಡಿದಿದ್ದು ಸಂಹಾರ ಮಾಡುವುದಕ್ಕೆ ಸಿದ್ಧನಾಗಿರುವ ದೃಶ್ಯ ರೋಮಾಂಚನಕಾರಿಯಾಗಿದೆ. ಈತನು ಭುಜಕೀರ್ತಿ, ಕಿರೀಟ, ಕಾಲುಕಡಗ, ಕೈಬಳೆಯನ್ನು ಧರಿಸಿದ್ದಾನೆ. ಪ್ರಭಾವಳಿಯು ಸುಂದರವಾಗಿ ಮೂಡಿಬಂದಿದೆ.

ಜಲಂಧರಹರ ಮೂರ್ತಿ : ಈ ಶಿಲ್ಪವು ಮತ್ತೊಂದು ಗುಡಿಯಲ್ಲಿದೆ. ಈ ಶಿಲ್ಪವನ್ನು ಕಲ್ಲುಪೀಠದ ಮೇಲೆ ನಿಲ್ಲಿಸಲಾಗಿದೆ. ಜಲಂಧರಹರ ಮೂರ್ತಿಯು ಸಹ ಸುಂದರವಾಗಿದ್ದು ಕಂಠದಲ್ಲಿ ಮಣಿಸರ ಮಾಲೆಗಳು ಸೊಂಟಕ್ಕೆ ವಸ್ತ್ರಗಳನ್ನು ಧರಿಸಿದ್ದು, ಸುಂದರವಾದ ಮಣಿಸರಗಳನ್ನು ಹಾಕಲಾಗಿದೆ. ಒಂದು ಕೈಯಲ್ಲಿ ಛತ್ರಿ, ಮತ್ತೊಂದು ಕೈಯಲ್ಲಿ ತೀರ್ಥ ಪಾತ್ರೆಯನ್ನು ಹಿಡಿದಿರುತ್ತಾನೆ. ಪ್ರಭಾವಳಿಯು ಬಳ್ಳಿ ಸುರುಳಿ ಕೆತ್ತನೆ ಮತ್ತು ಸಿಂಹಮುಖವನ್ನು ಕಾಣಬಹುದು.

ಬ್ರಹ್ಮಶಿರಚ್ಛೇದನ ಮೂರ್ತಿ : ಈ ಶಿಲ್ಪವನ್ನು ಮತ್ತೊಂದು ಗುಡಿಯಲ್ಲಿ ಇರಿಸಲಾಗಿದೆ. ಈ ಶಿಲ್ಪಕ್ಕೆ ನಾಲ್ಕು ಕೈಗಳಿಗೆ ಈ ಸುಂದರವಾದ ನರಿಗೆಗಳನ್ನುಳ್ಳ ವಸ್ತ್ರಗಳನ್ನು ಧರಿಸಿರುತ್ತಾನೆ. ವಸ್ತ್ರಗಳನ್ನು ನೋಡಿದರೆ ಮೈಸೂರು ಒಡೆಯರ ನೆನಪಾಗುತ್ತದೆ. ಈತನು ಗಧೆ, ಖಡ್ಗ, ತ್ರಿಶೂಲ ಮತ್ತೊಂದು ಕೈಯನ್ನು ಇಳಿಬಿಟ್ಟಂತೆ ಕಂಡುಬರುತ್ತದೆ. ತಲೆಯ ಮೇಲೆ ಸುಂದರವಾದ ಕಿರೀಟವಿದೆ. ಈ ಕಿರೀಟವನ್ನು ನೋಡಿದರೆ ತಿರುಪತಿಯ ವೆಂಕಟರಮಣ ಸ್ವಾಮಿ ಶಿಲ್ಪದ ಮಾದರಿಯಲ್ಲಿ ಕಂಡುಬರುತ್ತದೆ.

ವೀರಭದ್ರ ಮೂರ್ತಿ : ಚಾಮರಾಜೇಶ್ವರ ದೇವಾಲಯದ ಒಂದು ಗುಡಿಯಲ್ಲಿ ವೀರಭದ್ರಸ್ವಾಮಿ ಶಿಲ್ಪವಿದೆ. ಈ ಶಿಲ್ಪವು ಸುಮಾರು ಕಲ್ಲುಪೀಠದ ಮೇಲೆ ಇದ್ದು ನಾಲ್ಕು ಅಡಿ ಎತ್ತರವಾಗಿದೆ. ಈ ಶಿಲ್ಪವು ಚುತರ್ಭುಜವನ್ನು ಹೊಂದಿದ್ದು ಕತ್ತಿ, ಗುರಾಣಿ, ಬಿಲ್ಲು, ಬಾಣಗಳನ್ನು ಹಿಡಿದಿರುವುದು ಕಂಡುಬರುತ್ತದೆ. ತಲೆಯ ಮೇಲೆ ಕಿರೀಟ, ಕಂಠದಲ್ಲಿ ಮಣಿಸರಗಳು, ಸೊಂಟದಲ್ಲಿಯೂ ವಸ್ತ್ರವನ್ನು ಧರಿಸಿರುವುದು ಕಂಡುಬರುತ್ತದೆ.

ಶ್ರೀ ಶಂಕರನಾರಾಯಣಸ್ವಾಮಿ ಮೂರ್ತಿ : ಈ ಶಿಲ್ಪವು ನಾಲ್ಕು ಅಡಿ ಎತ್ತರವಿದ್ದು ಚತುರ್ಭುಜಗಳನ್ನು ಹೊಂದಿದೆ. ತಲೆಯ ಮೇಲೆ ಲಿಂಗ ಮಾದರಿಯ ಕಿರೀಟವನ್ನು, ಕರ್ಣಕುಂಡಲವನ್ನು, ಭುಜಕೀರ್ತಿಯನ್ನು, ಕಂಠದಲ್ಲಿ ಆಭರಣಗಳನ್ನು ಧರಿಸಿರುವುದು ಕಾಣಬರುತ್ತದೆ. ಕೈಯಲ್ಲಿ ಶಂಖ ಮತ್ತೊಂದು ಕೈಯಲ್ಲಿ ಚಕ್ರ, ಅಭಯಹಸ್ತ, ಮತ್ತೊಂದು ಕೈಯನ್ನು ಕೆಳಗೆ ಬಿಟ್ಟಿರುವುದು ಕಾಣಬರುತ್ತದೆ. ಸೊಂಟದಲ್ಲಿಯೂ ವಸ್ತ್ರವನ್ನು ಧರಿಸಿದ್ದು ವಸ್ತ್ರವನ್ನು ಇಳಿಬಿಟ್ಟಂತೆ ಕಡೆಯಲಾಗಿದೆ. ಪ್ರಭಾವಳಿಯ ಇಕ್ಕೆಲಗಳಲ್ಲಿ ಚೋಳರ ಮಾದರಿಯ ಅರೆಕಂಬಗಳನ್ನು ಸೇರಿಸಲಾಗಿದೆ. ಪೀಠದಲ್ಲಿ ನಂದಿಯು ಮಲಗಿರುವಂತೆ ಕಾಣಬರುತ್ತದೆ.

ಶ್ರೀ ಅರ್ಧನಾರೀಶ್ವರ : ಈ ಶಿಲ್ಪವು ಕೂಡ ಚತುರ್ಭುಜಧಾರಿಯಾಗಿದ್ದು ಒಂದು ಕೈಯಲ್ಲಿ ಚಕ್ರ, ಒಂದು ಕೈಯಲ್ಲಿ ಕಮಲ, ಒಂದು ಕೈಯಲ್ಲಿ ಅಭಯಮುದ್ರೆ, ಮತ್ತೊಂದು ಕೈಯನ್ನು ಇಳಿಬಿಟ್ಟಂತೆ ಇದೆ. ಸರಳವಾದ ಕಿರೀಟ, ಕರ್ಣಕುಂಡಲ, ಕಂಠಾಹಾರಗಳು, ಸೊಂಟಕ್ಕೆ ವಿವಿಧ ರೀತಿಯ ಆಭರಣಗಳು ಹಾಗೂ ವಸ್ತ್ರವನ್ನು ಧರಿಸಿರುವುದು. ಕಲ್ಲುಪೀಠದಲ್ಲಿ ನಂದಿಯ ಶಿಲ್ಪವನ್ನು ಕಡೆಯಲಾಗಿದೆ. ಪ್ರಭಾವಳಿಯು ಲತೆ, ಬಳ್ಳಿ ಸುರುಳಿ ಕೆತ್ತನೆಯಿಂದ ಕೆತ್ತಲ್ಪಟ್ಟಿದೆ. ಮಧ್ಯದಲ್ಲಿ ಸಿಂಹಮುಖವನ್ನು ಕಾಣಬಹುದು. ಪ್ರಭಾವಳಿಯಲ್ಲಿ

ಅರೆಕಂಬವನ್ನು ಸಹ ಸುಂದರವಾಗಿ ಕಡೆಯಲಾಗಿದೆ. ಶಿಲ್ಪವನ್ನು ಸೂಕ್ಷ್ಮವಾಗಿ ಗಮನಿಸಿದರೆ ಒಂದು ಕಡೆ ಗಂಡಸಿನ ಮುಖ ಇನ್ನೊಂದು ಕಡೆ ಸ್ತ್ರೀ ಮುಖವನ್ನು ತೋರಿಸಲಾಗಿದೆ. ಅದೇ ರೀತಿ ಎದೆಯಲ್ಲಿಯೂ, ಕಟಿಯಲ್ಲಿಯೂ, ವ್ಯತ್ಯಾಸಗಳು ಕಂಡುಬಂದಿರುವುದರಿಂದ ಅರ್ಧನಾರೀಶ್ವರ ಎಂದು ಕಡೆಯಲಾಗಿದೆ.

ಶ್ರೀ ಕಿರಾತಾರ್ಜುನ ಮೂರ್ತಿ : ಇದೊಂದು ಸುಂದರವಾದ ಶಿಲ್ಪವಾಗಿದ್ದು ಕಲ್ಲುಪೀಠದ ಮೇಲೆ ಕಿರಾತಾರ್ಜುನ ಶಿಲ್ಪವನ್ನು ಕಡೆದು ನಿಲ್ಲಿಸಲಾಗಿದೆ. ಅರ್ಜುನನು ಅತ್ಯಂತ ಸುಂದರನಾಗಿದ್ದು ವೀರಯೋಧನಂತೆ ಶಿಲ್ಪಕಲೆಯಿಂದ ಮೂಡಿಬಂದಿದೆ. ಕಿರಾತಾರ್ಜುನನಿಗೆ ಚತುರ್ಭುಜವನ್ನು ತೋರಿಸಲಾಗಿದ್ದು ಬಿಲ್ಲು, ಬಾಣ, ಗಧೆಯನ್ನು ಹಿಡಿದು ಯುದ್ಧಕ್ಕೆ ಸಿದ್ಧನಾಗಿರುವಂತೆ ಕಾಣಬರುತ್ತದೆ. ಈತನಿಗೆ ತಲೆಯ ಮೇಲೆ ಕಿರೀಟವಿದೆ. ಕರ್ಣಕುಂಡಲ, ಸೊಂಟದಲ್ಲಿ ಇಳಿಬಿಟ್ಟ ವಸ್ತ್ರ, ಕಂಠಾಭರಣ, ನಡುಪಟ್ಟಿಗೆ ಆಭರಣಗಳನ್ನು ಹಾಕಿರುವಂತೆ ಕಂಡುಬರುತ್ತದೆ. ಬಲ ಪಾರ್ಶ್ವದಲ್ಲಿ ಕಿರಾತಾರ್ಜುನನ ಸೇವಕನನ್ನು ಸಹ ತೋರಿಸಲಾಗಿದೆ.

ಶ್ರೀಕಂಕಾಳ ಮೂರ್ತಿ : ಈ ಶಿಲ್ಪ ಒಂದು ಗುಡಿಯಲ್ಲಿದ್ದು ಕಲ್ಲುಪೀಠದ ಮೇಲೆ ನಾಲ್ಕು ಅಡಿ ಎತ್ತರವಿರುವ ಶ್ರೀ ಕಂಕಾಳ ಮೂರ್ತಿಯು ಚತುರ್ಭುಜವನ್ನು ಹೊಂದಿದೆ. ಒಂದು ಕೈಯಲ್ಲಿ ದಂಡ, ಒಂದು ಕೈಯಲ್ಲಿ ಡಮರು, ಒಂದು ಕೈಯಲ್ಲಿ ಜಿಂಕೆ ಮತ್ತೊಂದು ಕೈಯನ್ನು ಇಳಿಬಿಟ್ಟಂತೆ ಕಂಡುಬರುತ್ತದೆ. ತಲೆಯ ಮೇಲೆ ಲಿಂಗ ಮಾದರಿಯ ಕಿರೀಟ, ಕರ್ಣದಲ್ಲಿ ಅಗಲವಾದ ಕುಂಡಲಗಳು, ಕಂಠಕ್ಕೆ ಹಾರಗಳು, ಸೊಂಟಕ್ಕೆ ಕಟಿಬಂಧ ಮತ್ತು ಸೊಂಟ ಸರಗಳನ್ನು ಹಾಕಲಾಗಿದೆ. ಇಳಿಬಿಟ್ಟ ವಸ್ತ್ರವನ್ನು ಧರಿಸಿರುವುದು. ಕೈಬಳೆ, ಕಾಲ್ ಬಳೆ, ಕಾಲುಮುರಿಗಳನ್ನು ಧರಿಸಿರುವುದು ಕಂಡುಬರುತ್ತದೆ. ಪ್ರಭಾವಳಿಯಲ್ಲಿ ಲತೆ ಬಳ್ಳಿ ಸುರುಳಿ ಕೆತ್ತನೆಯಿಂದ ಕೂಡಿದೆ. ಮೇಲ್ಭಾಗದಲ್ಲಿ ಸಿಂಹ ಮುಖವಿದೆ. ಪ್ರಭಾವಳಿಯ ಇಕ್ಕೆಲಗಳಲ್ಲಿ ಸುಂದರವಾದ ಕಂಬಗಳನ್ನು ಕಡೆಯಲಾಗಿದೆ. ಪೀಠದಲ್ಲಿ ನಂದಿ ಉಬ್ಬುಶಿಲ್ಪವಿದೆ.

ಚಂಡಿಕೇಶ್ವರ ವರ ಪ್ರಸನ್ನ ಮೂರ್ತಿ : ಚಂಡಿಕೇಶ್ವರ ವರ ಪ್ರಸನ್ನ ಮೂರ್ತಿಯು ಒಂದು ಗುಡಿಯಲ್ಲಿದ್ದು, ಇದನ್ನು ಕಲ್ಲುಪೀಠದ ಮೇಲೆ ಮತ್ತೊಂದು ಪೀಠವನ್ನು ಮಾಡಿ ಅದರ ಮೇಲೆ ಚಂಡಿಕೇಶ್ವರ ವರ ಪ್ರಸನ್ನನ ಮೂರ್ತಿಯನ್ನು ಕುಳ್ಳಿರಿಸಲಾಗಿದೆ. ಇದು ಶಿವಪಾರ್ವತಿಯ ಮತ್ತೊಂದು ಅವತಾರ, ಶಿವನಿಗೆ ನಾಲ್ಕು ಕೈಗಳಿದ್ದು ಒಂದು ಕೈಯಲ್ಲಿ ಜಿಂಕೆಯನ್ನು, ಮತ್ತೊಂದು ಕೈಯನ್ನು ನೆಲಕ್ಕೆ ತೋರಿಸುವಂತೆ, ಇನ್ನೊಂದು ಕೈಯನ್ನು ಇಳಿಬಿಟ್ಟಂತೆ ಕಾಣಬರುತ್ತದೆ. ತಲೆಯ ಮೇಲೆ ಶಿಷ್ಯನ ಕಿರೀಟ ಮಾದರಿಯ ಕಿರೀಟವನ್ನು ಕರ್ಣಕುಂಡಲವನ್ನು, ಕೈಬಳೆ, ಕಾಲುಮುರಿ, ನಡುಪಟ್ಟಿ, ಸರಮಾಲೆ, ಭುಜಕೀರ್ತಿ ಹೊಂದಿದೆ ಮತ್ತು ಒಂದು ಕಾಲನ್ನು ಇಳಿಬಿಟ್ಟಿದ್ದು ಮತ್ತೊಂದು ಕಾಲನ್ನು ಮಡಿಚಿರುವಂತೆ ಇದೆ. ಅದೇ ಮಾದರಿಯಲ್ಲಿ ದೇವಿಯು ಸಹ ಕಾಣಬರುತ್ತಾಳೆ.

ಶ್ರೀ ವಿಷಕಂಠ ಮೂರ್ತಿ : ಒಂದು ಗುಡಿಯಲ್ಲಿ ವಿಷಕಂಠ ಮೂರ್ತಿ ಶಿಲ್ಪವಿದೆ. ಈ ಶಿಲ್ಪವನ್ನು ಕಲ್ಲುಪೀಠದ ಮೇಲೆ ನಿಲ್ಲಿಸಿದ್ದು ಸುಮಾರು ೪ ಅಡಿ ಎತ್ತರವಿರುವ ಈ ಶಿಲ್ಪವು ಸುಂದರವಾಗಿದೆ. ಶಿಲ್ಪವು ನಾಲ್ಕು ಕೈಗಳನ್ನು ಹೊಂದಿದ್ದು, ಒಂದು ಕೈಯಲ್ಲಿ ಗಧೆಯನ್ನು ಎರಡು ಕೈಗಳನ್ನು ಇಳಿಬಿಟ್ಟಿದ್ದು, ಕರ್ಣಕುಂಡಲವನ್ನು, ಕಂಠಹಾರ ಗಳನ್ನು, ಭುಜಕೀರ್ತಿಯನ್ನು, ಕೈಬಳೆಗಳನ್ನು, ವಸ್ತ್ರಗಳನ್ನು ಧರಿಸಿರುವುದು ಕಂಡುಬರುತ್ತದೆ. ಈತನಿಗೆ ವಿಷ ಕೂಡಿರುವುದ ರಿಂದ ಆತನ ಪತ್ನಿ ಕಂಠವನ್ನು ನೋಡುತ್ತಿರುವ ಸನ್ನಿವೇಶ ಶಿಲ್ಪದಲ್ಲಿ ವ್ಯಕ್ತವಾಗುತ್ತದೆ. ಆತನ ಪತ್ನಿಯು ಸಹ ಯೋಚನೆ ಯಲ್ಲಿ ಮಗ್ನಳಾಗಿರುವುದು ಶಿಲ್ಪಕಲೆಯಿಂದ ವ್ಯಕ್ತವಾಗುತ್ತದೆ.

ಶ್ರೀ ಚಕ್ರದಾನ ಮೂರ್ತಿ : ಶ್ರೀ ಚಕ್ರದಾನ ಮೂರ್ತಿಯನ್ನು ಒಂದು ಚಿಕ್ಕದಾದ ಕಲ್ಲುಪೀಠದ ಮೇಲೆ ನಿಲ್ಲಿಸಲಾಗಿದೆ. ಚಕ್ರದಾನ ಮೂರ್ತಿಯು ಸುಂದರವಾದ ಶಿಲ್ಪವಾಗಿದ್ದು ಚತುರ್ಭುಜದಾರನಾಗಿರುತ್ತಾನೆ. ಈತನ ತಲೆಯ ಮೇಲೆ ಕಿರೀಟವನ್ನು ಕಿವಿಗಳಿಗೆ ಕರ್ಣಕುಂಡಲವನ್ನು, ಕಂಠಕ್ಕೆ ಹಾರಗಳನ್ನು ಸೊಂಟಕ್ಕೆ ವಸ್ತ್ರ ಮತ್ತು ಮಣಿಸರಗಳನ್ನು ಹಾಕಲಾಗಿದೆ. ಕೈಗಳಲ್ಲಿ ಗಧೆಯನ್ನು, ಜಿಂಕೆಯನ್ನು ಇಳಿಬಿಟ್ಟಂತೆ ಮತ್ತೊಂದು ಕೈಯಲ್ಲಿ ವಸ್ತು ಒಂದನ್ನು ಹಿಡಿದಿರುವಂತೆ ಮಾಡಲಾಗಿದೆ. ಕಾಲು ಕಡಗ, ಕೈಬಳೆಗಳು ಸುಂದರವಾಗಿ ಮೂಡಿಬಂದಿದೆ. ಪ್ರಭಾವಳಿಯು ನವಿರಾದ ಕುಶಲ ಕಲೆಯಿಂದ ಕೂಡಿದೆ. ಈತನ ಪಕ್ಕದಲ್ಲಿ ಭಕ್ತನು ಕೈಮುಗಿದು ನಿಂತಿರುವುದು ಕಂಡುಬರುತ್ತದೆ.

ಶ್ರೀ ವಿಘ್ನೇಶ್ವರ ವರ ಪ್ರಸನ್ನ ಮೂರ್ತಿ : ಶ್ರೀ ವಿಘ್ನೇಶ್ವರ ವರ ಪ್ರಸನ್ನ ಮೂರ್ತಿಯ ಶಿಲ್ಪವನ್ನು ಒಂದು ಗುಡಿಯಲ್ಲಿ ಇರಿಸಲಾಗಿದೆ. ಎತ್ತರವಾದ ಕಲ್ಲುಪೀಠದ ಮೇಲೆ ಈ ಶಿಲ್ಪವನ್ನು ಇಡಲಾಗಿದೆ. ಈ ಶಿಲ್ಪವು ಶಿವಪಾರ್ವತಿಯ ಶಿಲ್ಪವಾಗಿದ್ದು ಶಿವ ಅವತಾರಗಳನ್ನು ವ್ಯಕ್ತಪಡಿಸುವ ಶಿಲ್ಪವಾಗಿದೆ ಎಂದು ಹೇಳಬಹುದು. ಶಿವನು ಚತುರ್ಭುಜಧಾರನಾಗಿದ್ದು ಗಧೆ, ಜಿಂಕೆ ಇಳಿಬಿಟ್ಟಂತೆ ಮತ್ತು ಕೆಳಗೆ ಹಸ್ತವನ್ನು ನೀಡಿರುವ ರೀತಿಯಲ್ಲಿ ಕೈಗಳನ್ನು ತೋರಿಸಲಾಗಿದೆ. ತಲೆಯ ಮೇಲೆ ಕಿರೀಟವಿದ್ದು, ಕರ್ಣದಲ್ಲಿ ಕರ್ಣಕುಂಡಲವಿದ್ದು, ಕಂಠದಲ್ಲಿ ಹಾರಗಳಿದ್ದು, ಸೊಂಟದಲ್ಲಿ ವಸ್ತ್ರಗಳನ್ನು ಮತ್ತು ಸೊಂಟ ಸರಗಳನ್ನು ಕಡೆಯಲಾಗಿದೆ. ಕೈಗಳಿಗೆ ಬಳೆಯನ್ನು

ಹಾಕಲಾಗಿದೆ. ಶಿವನ ಪಕ್ಕದಲ್ಲಿ ಸೇವಕನನ್ನು ತೋರಿಸಲಾಗಿದೆ. ಪೀಠದ ಕೆಳಗೆ ನಂದಿಯ ಶಿಲ್ಪವನ್ನು ಕೊರೆಯಲಾಗಿದೆ.

ಶ್ರೀ ಸೋಮಸ್ಕಂದ ಮೂರ್ತಿ : ಶ್ರೀ ಸೋಮಸ್ಕಂದ ಮೂರ್ತಿ ಒಂದು ಗುಡಿಯಲ್ಲಿ ಇಡಲಾಗಿದೆ. ಇದು ಸಹ ಶಿವಪಾರ್ವತಿಯ ಅವತಾರ. ಇದರಲ್ಲಿ ಶಿವನು ಚತುರ್ಭುಜದರ ನಾಗಿದ್ದು ಗಧೆ, ಜಿಂಕೆ, ಅಭಯಹಸ್ತ ಮತ್ತು ಇಳಿಬಿಟ್ಟಂತೆ ಕೈಗಳನ್ನು ತೋರಿಸಲಾಗಿದೆ. ಇವರನ್ನು ಕಲ್ಲುಪೀಠದ ಮೇಲೆ ಕುಳ್ಳಿರಿಸಿ, ಶಿವನು ಒಂದು ಕಾಲನ್ನು ಮಡಿಸಿರುವಂತೆ ಒಂದು ಕಾಲನ್ನು ಇಳಿಬಿಟ್ಟಂತೆ ಮಾಡಲಾಗಿದೆ. ಅದೇ ರೀತಿ ಪಾರ್ವತಿಯ ಶಿಲ್ಪವನ್ನು ಸಹ ಕಡೆಯಲಾಗಿದೆ. ಆದರೆ ಪಾರ್ವತಿಗೆ ಎರಡು ಕೈಗಳನ್ನು ತೋರಿಸಿದ್ದು ಒಂದು ಕೈಯಲ್ಲಿ ಕಲವನ್ನು, ಮತ್ತೊಂದು ಕೈಯನ್ನು ಇಳಿಬಿಟ್ಟಂತೆ ಕಾಣಬರುತ್ತದೆ. ಇಬ್ಬರು ಕಿರೀಟಧಾರಿಗಳಾಗಿದ್ದು ಒಡವೆ, ವಸ್ತ್ರಗಳಿಂದ ಅಲಂಕೃತಗೊಂಡಿರುತ್ತಾರೆ. ಪೀಠದ ಪ್ರಭಾವಳಿಯು ಲತೆ, ಬಳ್ಳಿ ಸುರುಳಿ ಕೆತ್ತನೆಗಳಿಂದ ಮತ್ತು ಮೇಲೆ ಸಿಂಹ ಮುಖದಿಂದ ಕೂಡಿರುವುದು ಕಂಡುಬರುತ್ತೆ.

ಶ್ರೀ ಏಕಪಾದ ಮೂರ್ತಿ (ಯೇಕಪಾದ) : ಶಿವನ ಮತ್ತೊಂದು ರೂಪ ಏಕಪಾದವನ್ನು ಕಾಣಬಹುದಾಗಿದೆ. ಈ ಏಕಪಾದ ಮೂರ್ತಿಯು ಒಂದು ಕಾಲನ್ನು ಹೊಂದಿರುವುದರಿಂದ ಈ ಹೆಸರು ಬಂದಿರಬೇಕೆಂದು ಹೇಳಬಹುದಾಗಿದೆ. ಈತನೂ ಸಹ ಚತುರ್ಭುಜಗಳನ್ನು ಹೊಂದಿರುವುದು ಕಾಣಬರುತ್ತದೆ. ಈತನು ಸಹ ಗಧೆ, ಜಿಂಕೆ, ಅಭಯಹಸ್ತ, ಇಳಿಬಿಟ್ಟಂತೆ ಇನ್ನೊಂದು ಕೈಯನ್ನು ತೋರಿಸಿರುವುದು ಕಂಡುಬರುತ್ತದೆ. ಸೊಂಟದ ಕೆಳಗೆ ತುಂಬಿದ ವಸ್ತ್ರಧಾರಿ ಯಾಗಿದ್ದು, ಸೊಂಟಹಾರಗಳನ್ನು ಹಾಕಿರುತ್ತಾನೆ. ಕಂಠದಲ್ಲಿ ಕಂಠಹಾರಗಳು, ಭುಜಕೀರ್ತಿ, ತಲೆಯ ಮೇಲೆ ಕಿರೀಟವನ್ನು ಧರಿಸಿರುವುದು ಸೊಗಸಾಗಿ ಮೂಡಿ ಬಂದಿದೆ. ಪ್ರಭಾವಳಿಯಲ್ಲಿ ಬಳ್ಳಿ ಸುರುಳಿ ಕೆತ್ತನೆಯಿಂದ ಆವೃತವಾಗಿದೆ.

ಶ್ರೀ ಸುಖಾಸೀನ ಮೂರ್ತಿ : ಸುಖಾಸೀನ ಮೂರ್ತಿಯನ್ನು ಕಿರು ಗುಡಿಯಲ್ಲಿ ಇರಿಸಲಾಗಿದ್ದು, ಶಿವನು ಒಂದು ಕಾಳನ್ನು ಕೆಳಗೆ ಬಿಟ್ಟಿದ್ದು ಮತ್ತೊಂದು ಕಾಲನ್ನು ಮಾಡಿಸಿರುವಂತೆ ಮಾಡಲಾಗಿದೆ. ಈ ಶಿಲ್ಪವು ಚತುರ್ಭುಜವನ್ನು ಹೊಂದಿದ್ದು, ಗದೆ, ಜಿಂಕೆ, ಮತ್ತೊಂದು ಕೈಯೊಳಗೆ ಫಲ ಹಿಡಿದಿರುವಂತೆ, ಇನ್ನೊಂದು ಕೈಯನ್ನು ಇಳಿಬಿಟ್ಟಂತೆ ಕಂಡುಬರುತ್ತದೆ. ತಲೆಯ ಮೇಲೆ ಸುಂದರವಾದ ಕಿರೀಟ, ಕಂಠಹಾರಗಳು, ತೋಳಬಂದಿ, ಕೈಬಳೆಗಳು, ಕಾಲುಮುರಿಗಳು ಕಂಡುಬರುತ್ತದೆ. ಪ್ರಭಾವಳಿಯು ಬಳ್ಳಿ ಸುರುಳಿಯ ಕುಸುರಿ ಕೆತ್ತನೆಯಿಂದ ಕೂಡಿದೆ.

ಶ್ರೀ ದಕ್ಷಿಣಾಮೂರ್ತಿ : ಶ್ರೀ ದಕ್ಷಿಣಾಮೂರ್ತಿ ಶಿಲ್ಪವೂ ಸುಂದರ ಶಿಲ್ಪವಾಗಿದ್ದು ಇದನ್ನು ಪ್ರಭಾವಳಿ ಇರುವ ಕಲ್ಲುಪೀಠದ ಮೇಲೆ ಕೂರಿಸಲಾಗಿದೆ. ಶಿಲ್ಪವನ್ನು ಪದ್ಮಾಸನದಲ್ಲಿ ಕುಳ್ಳಿರಿಸಿ ಕಾಲುಗಳಿಗೆ ಸೇರಿದಂತೆ ಪಟ್ಟಿಯನ್ನು ಹಾಕಲಾಗಿದೆ. ಮೂರ್ತಿಗೆ ಚತುರ್ಭುಜಗಳಿದ್ದು, ಒಂದು ಕೈಯಲ್ಲಿ ಸರ್ಪವನ್ನು ಇನ್ನೊಂದು ಕೈಯಲ್ಲಿ ತಂಬೂರಿಯನ್ನು ಹಿಡಿದಿರುವುದು ಇನ್ನೆರಡು ಕೈಗಳಲ್ಲಿ ಫಲವನ್ನು ಹಿಡಿದಿರುವುದು ಕಂಡು ಬರುತ್ತದೆ. ಪೀಠದಲ್ಲಿ ಐದು ಜನ ಭಕ್ತರನ್ನು ತೋರಿಸಲಾಗಿದ್ದು, ಪ್ರಭಾವಳಿಯ ಇಕ್ಕೆಲಗಳಲ್ಲಿ ಶೈವ ಭಕ್ತರು ಸಹ ಕೈಮುಗಿದು ನಿಂತಿರುವುದು ಭಕ್ತಿಯನ್ನು ವ್ಯಕ್ತಪಡಿಸುತ್ತದೆ. ಇನ್ನುಳಿದಂತೆ ಪ್ರಭಾವಳಿಯಲ್ಲಿ ಬಳ್ಳಿ ಸುರುಳಿ, ಲತೆಗಳಿಂದ ಆವೃತವಾಗಿರುವುದು ಕಂಡುಬರುತ್ತದೆ. ಮಧ್ಯದಲ್ಲಿ ಸಿಂಹ ಮುಖವನ್ನು ತೋರಿಸಲಾಗಿದೆ.

ಶ್ರೀ ಮಹಾಲಿಂಗೋದ್ಭವ ಮೂರ್ತಿ : ಇದೊಂದು ವಿಶೇಷವಾದ ಶಿಲ್ಪವಾಗಿದೆ. ಇದರ ವಿಶೇಷತೆ ಏನೆಂದರೆ ಪ್ರಭಾವಳಿ ಇರುವ ಕಲ್ಲುಪೀಠದ ಮೇಲೆ ವೃತ್ತಾಕಾರವಾದ ಪೀಠದ ಮೇಲೆ ಮಹಾಲಿಂಗೋದ್ಭವ ಶಿಲ್ಪವಿದೆ. ಇದು ಸಹ ಶಿವನ ರೂಪವನ್ನೇ ಮಹಾಲಿಂಗೋದ್ಭವ ಎಂದು ಕರೆಯಲಾಗಿದೆ. ಶೈವ ದೇವಾಲಯಗಳಲ್ಲಿ ಶಿವಲಿಂಗವನ್ನು ಉದ್ಭವ ಎಂದು ಕರೆಯುವ ವಾಡಿಕೆ ಇದೆ. ಆದರೆ ಇಲ್ಲಿ ಒಂದು ಕಲ್ಲಿನ ಒಳಗೆ ಶಿವನ ಮೂರ್ತಿಯನ್ನು ಕೆತ್ತಿದ್ದು, ಬೇರೆ ಶಿಲ್ಪಗಳ ಮಾದರಿಯಲ್ಲಿಯೇ ನಿರ್ಮಿಸಲಾಗಿದೆ. ಈ ಒಂದು ಮಹಾಲಿಂಗೋದ್ಭವನ ಮೂರ್ತಿಗೆ ಚತುರ್ಭುಜವನ್ನು ಮಾಡಲಾಗಿದ್ದು, ಕಿರೀಟಧಾರೆಯಿಂದ ವಿವಿಧ ರೀತಿಯ ವಸ್ತ್ರ ಆಭರಣಗಳಿಂದ ಶೃಂಗಾರಮಯವಾಗಿ ರೂಪುಗೊಂಡಿದೆ. ಪ್ರಭಾವಳಿಯು ಕೂಡ ಲತೆ, ಬಳ್ಳಿ ಸುರುಳಿ ಕೆತ್ತನೆಯಿಂದ ಆವೃತವಾಗಿದೆ.

ಈ ಮೇಲ್ಕಂಡ ಶಿಲ್ಪಗಳನ್ನು ಚಾಮರಾಜನಗರದ ಚಾಮರಾಜೇಶ್ವರ ದೇವಾಲಯದ ಉತ್ತರ ದಿಕ್ಕಿನ ಪ್ರಾಕಾರದಲ್ಲಿ ಕಂಡುಬರುವ ಗುಡಿಗಳಲ್ಲಿ ಇಡಲಾಗಿದೆ. ಈ ಶಿಲ್ಪಗಳ ಬಗ್ಗೆ ಕನ್ನಡ ಲಿಪಿಯನ್ನು ಹೊಂದಿರುವ ಶಾಸನಗಳನ್ನು ಆಯಾ ಗುಡಿಯ ಮೇಲೆ ಬರೆದಿರುವುದನ್ನು ಪ್ರಸ್ತುತ ಕಾಣಬಹುದಾಗಿದೆ. ಅದೇ ರೀತಿ ದಕ್ಷಿಣ ದಿಕ್ಕಿಗೆ ಕಂಡುಬರುವ ಪ್ರಾಕಾರದಲ್ಲೂ ಸುಮಾರು ೨೭ ಗುಡಿಗಳನ್ನು ಕಾಣಬಹುದು. ಈ ಗುಡಿಗಳಲ್ಲಿ ಶೈವ ಭಕ್ತರ ಶಿಲ್ಪಗಳನ್ನು ಇಡಲಾಗಿದೆ. ಉತ್ತರ ದಿಕ್ಕಿನ ಪ್ರಾಕಾರದ ಕೈಸಾಲೆಯಲ್ಲಿ ಗುಡಿಗಳ ಮೇಲ್ಭಾಗದಲ್ಲಿರುವ ಶಾಸನಗಳಂತೆ ದಕ್ಷಿಣ ಭಾಗದಲ್ಲೂ ಕಂಡುಬರುತ್ತದೆ. ಉತ್ತರ ದಿಕ್ಕಿನಲ್ಲಿರುವ ಶೈವ ಸಂಪ್ರದಾಯವನ್ನು ಹೊಂದಿರುವ ದೇವರುಗಳ ಹೆಸರುಗಳನ್ನು ಒಳಗೊಂಡಂತೆ

ಶಿಲ್ಪಗಳನ್ನು ಇಟ್ಟಿರುವುದನ್ನು ಈಗಾಗಲೇ ಮೇಲೆ ವಿವರಣೆ ಸಹಿತ ತಿಳಿಸಲಾಗಿದೆ. ಅದೇ ಮಾದರಿಯಲ್ಲಿ ದಕ್ಷಿಣ ದಿಕ್ಕಿನ ಗುಡಿಗಳಲ್ಲಿರುವ ಶೈವಭಕ್ತರ ಬಗ್ಗೆ ಅವರವರ ಹೆಸರುಗಳನ್ನು ಮಾತ್ರ ತಿಳಿಸಲಾಗುತ್ತದೆ ಆದರೆ ಶಿಲ್ಪಗಳ ವಾಸ್ತು ರಚನಾ ನೋಟದ ವಿವರಣೆಯನ್ನು ಮಾತ್ರ ತಿಳಿಸಲಾಗಿಲ್ಲ. ಆದರೂ ಸಹ ಆಯಾ ಗುಡಿಯ ಶಿಲ್ಪ ಚಿತ್ರವನ್ನು ಇಲ್ಲಿ ನೀಡಲಾಗಿರುತ್ತದೆ. ಈ ಹಿನ್ನೆಲೆಯಿಂದ ಶೈವ ಭಕ್ತರು ದೇವರಿಗೆ ಯಾವ ರೀತಿ ಆರಾಧನೆಯನ್ನು ಮಾಡುತ್ತಿದ್ದರು ಎಂಬುದು ವ್ಯಕ್ತವಾಗುತ್ತದೆ.

ಇವುಗಳಲ್ಲದೆ ದೇವಾಲಯದ ಪಶ್ಚಿಮ ದಿಕ್ಕಿನ ಪ್ರಾಕಾರದ ಕೈಸಾಲೆಯಲ್ಲಿ ಹಲವು ಕೋಷ್ಟಗಳಿದ್ದು, ಆ ಗುಡಿಗಳ ಹಲವು ಹೆಸರುಗಳನ್ನುಳ್ಳ ಶಿವಲಿಂಗಗಳನ್ನು ಇಡಲಾಗಿದೆ. ಪ್ರತಿಲಿಂಗಗಳ ಮುಂದೆ ಒಂದೊಂದು ನಂದಿಯ ಶಿಲ್ಪಗಳನ್ನು ಇಡಲಾಗಿದೆ. ಚಾಮರಾಜೇಶ್ವರ ದೇವಾಲಯದ ಮೇಲೆ ದೇವಾಲಯದ ಸುತ್ತಲೂ ಕೋಷ್ಠ ಗುಡಿಗಳಿದ್ದು, ಈ ಗುಡಿಗಳಲ್ಲಿ ವಿವಿಧ ರೀತಿಯ ಭಕ್ತಿ ಪ್ರಧಾನವಾದ ಅಮ್ಮನವರ ಗಾರೆ ಶಿಲ್ಪಗಳನ್ನು ಮಾಡಲಾಗಿದೆ. ಮುಂಭಾಗದಲ್ಲಿ ಪ್ರಮುಖವಾಗಿ ಚಾಮುಂಡಿ ಅಮ್ಮನವರು, ಕೆಂಪನಂಜಾಂಬ ಅಮ್ಮನವರು, ಸರಸ್ವತಿ ಅಮ್ಮನವರ ಗಾರೆ ಶಿಲ್ಪಗಳನ್ನು ಮಾಡಲಾಗಿದೆ. ಚಾಮರಾಜೇಶ್ವರ ದೇವಾಲಯ ವಿಮಾನ ಉತ್ತರ ಗಾರೆ ಶಿಲ್ಪಗಳು ಈ ರೀತಿ ಕಂಡುಬರುತ್ತದೆ. ಅರ್ಧನಾರೀಶ್ವರ ಮೂರ್ತಿ, ಶಂಕರನಾರಾಯಣಮೂರ್ತಿ, ಕಂಕಾಳಮೂರ್ತಿ, ಬ್ರಹ್ಮಶಿರಾಮೂರ್ತಿ, ವೀರಭದ್ರ ಮೂರ್ತಿಗಳಿವೆ. ಅದೇ ಸ್ಥಳದಲ್ಲಿ ಪೂರ್ವ ಕಡೆಗೆ ಮನೋನ್ಮಣಿ ಅಮ್ಮನವರು, ಕುಮಾರಸ್ವಾಮಿ, ಚಂದ್ರಶೇಖರಮೂರ್ತಿ, ತಾಂಡವಮೂರ್ತಿ, ಸಿದ್ಧಿಗಣಪತಿ ಮೂರ್ತಿ ಶಿಲ್ಪಗಳಿವೆ. ಅದೇ ಸ್ಥಳದಲ್ಲಿ ದಕ್ಷಿಣ ಕಡೆಗೆ ಚಂದ್ರಶೇಖರಮೂರ್ತಿ, ಉಮಾಮಹೇಶ್ವರ ಮೂರ್ತಿ, ವೃಷಭಾರೂಢ ಮೂರ್ತಿ, ಕಲ್ಯಾಣ ಸುಂದರಮೂರ್ತಿ ಮತ್ತು ಚಾಮುಂಡೇಶ್ವರಿ ಗುಡಿಯ ವಿಮಾನದ ಗಾರೆ ವಿಗ್ರಹಗಳ ಕೆಳಗೆ ಮಹೇಶ್ವರಿ ಅಮ್ಮನವರು, ಚಾಮುಂಡಿ ಅಮ್ಮನವರು, ಬ್ರಾಹ್ಮೀ ಅಮ್ಮನವರ ಗಾರೆ ಶಿಲ್ಪಗಳನ್ನು ಕಾಣಬಹುದಾಗಿದೆ. ದೇವಾಲಯದ ಮುಂದೆ ಬಲಿ ಪೀಠವಿದೆ. ಮುಖ್ಯದ್ವಾರದಲ್ಲಿ ಮಹಾಗೋಪುರವಿದೆ. ಈ ಮಹಾದ್ವಾರವು ಪೂರ್ವಾಭಿಮುಖ ವಾಗಿದ್ದು ದೊಡ್ಡದಾದ ಮತ್ತು ದಪ್ಪನಾದ ಬಾಗಿಲನ್ನು ಮಾಡಲಾಗಿದ್ದು, ಈ ಬಾಗಿಲಿಗೆ ಹಿತ್ತಾಳೆ ವಾಡ ಹಾಕಿದ್ದಾರೆ. ಮೇಲ್ಭಾಗದಲ್ಲಿ ಎತ್ತರವಾದ ದ್ರಾವಿಡ ಶೈಲಿಯ ಗೋಪುರವನ್ನು ನಿರ್ಮಿಸಲಾಗಿದೆ. ಈ ಗೋಪುರವು ಐದು ಅಂತಸ್ತಿನಿಂದ ಕೂಡಿದೆ. ಅದರ ಮೇಲೆ ಐದು ಕಳಶಗಳಿದ್ದು, ಇವುಗಳಿಗೆ ಚಿನ್ನದ ರಂಗಿನ ಲೇಪನ ಮಾಡಿದ್ದಾರೆ. ಮುಖ್ಯದ್ವಾರಕ್ಕೆ ಹೊಂದಿಕೊಂಡಂತೆ ಇರುವ ಕಂಬಗಳಲ್ಲಿ ಕೆಲವು ಉಬ್ಬು ಶಿಲ್ಪಗಳಿವೆ. ಅದರಲ್ಲಿ ಗಣಪತಿ ಶಿಲ್ಪ ಪ್ರಮುಖವಾದದ್ದು. ದೇವಾಲಯದ ಹೊರಭಾಗದ ಪ್ರಾಕಾರವನ್ನು ನೋಡಿದರೆ ಪೂರ್ವ ದಿಕ್ಕಿಗೆ ಗಾರೆಯ ಕೋಷ್ಟಗುಡಿಗಳಿದ್ದು, ಇವುಗಳಲ್ಲಿ ವಿವಿಧ ಸ್ತ್ರೀ ದೇವತೆಯ ಶಿಲ್ಪಗಳನ್ನು ಇಡಲಾಗಿದೆ. ದಕ್ಷಿಣ ದಿಕ್ಕಿಗೂ ದುಷ್ಕೃತಿಯಲ್ಲಿರುವ ಸ್ತ್ರೀಶಿಲ್ಪಗಳಿವೆ. ಪಶ್ಚಿಮ ದಿಕ್ಕಿಗೆ ಹಲವಾರು ಶಿಲ್ಪಗಳನ್ನು ಕಾಣಬಹುದು. ಇವುಗಳಲ್ಲಿ ಚಂದ್ರಶೇಖರಮೂರ್ತಿ, ಉಮಾಮಹೇಶ್ವರ, ವೃಷಭಾರೂಢ ಮೂರ್ತಿ, ತಾಂಡವೇಶ್ವರಮೂರ್ತಿ, ಗಿರಿಜಾಕಲ್ಯಾಣಮೂರ್ತಿ, ಭಿಕ್ಷಾಟನಾಮೂರ್ತಿ, ಕಾಮಸಂಹಾರಮೂರ್ತಿ, ಮಾರ್ಕಂಡೇಯ ಪ್ರಸನ್ನಮೂರ್ತಿ ಶಿಲ್ಪಗಳಿವೆ.

ಉತ್ತರ ದಿಕ್ಕಿಗೆ ಗೋಡೆಯ ಮೇಲೆ ಸುಮಾರು ೨೫ ಗಣಪತಿ ಶಿಲ್ಪಗಳನ್ನು ಕಾಣಬಹುದು. ದ್ವಿಭುಜ ಗಣಪತಿ, ದಂಡಗಣಪತಿ, ಯುವಾಗಣಪತಿ, ಸಿಂಹಗಣಪತಿ, ತ್ರಿಮುಖಗಣಪತಿ, ಚಿಂತಾಮಣಿ ಗಣಪತಿ, ವಿಘ್ನರಾಜಗಣಪತಿ, ಪ್ರಣವಗಣಪತಿ, ಚಂಡಿಗಣಪತಿ, ಹರಿದ್ರಗಣಪತಿ, ಅಭೀಷ್ಮಗಣಪತಿ, ಪಂಚಮುಖಗಣಪತಿ, ಸೃಷ್ಟಿಗಣಪತಿ, ಮಹಾಗಣಪತಿ, ಋಣವಿಮೋಚನಗಣಪತಿ, ವಿಜಯಗಣಪತಿ, ಲಕ್ಷ್ಮೀಗಣಪತಿ, ಶಕ್ತಿಗಣಪತಿ, ವೀರಗಣಪತಿ, ತಾಂಡವಗಣಪತಿ, ದುಂಡಿಗಣಪತಿ, ಬಲಗಣಪತಿ.

ಒಟ್ಟಾರೆ ಚಾಮರಾಜನಗರದ ಚಾಮರಾಜೇಶ್ವರ ದೇವಾಲಯವನ್ನು ಸೂಕ್ಷ್ಮವಾಗಿ ಗಮನಿಸಿದರೆ ಈ ದೇವಾಲಯವು ಉತ್ತಮವಾದ ದೇವಾಲಯವಾಗಿದ್ದು ದೇವಾಲಯದ ಸುತ್ತಲೂ ಗಾರೆಯಿಂದ ನಿರ್ಮಿಸಿದ ಗಾರೆ ಶಿಲ್ಪಗಳನ್ನು ಮತ್ತು ಕೋಷ್ಠಗುಡಿಗಳನ್ನು ಕಾಣಬಹುದಾಗಿದೆ. ದೇವಾಲಯದ ಮುಂದೆ ಒಂದು ಗರುಡಗಂಭವಿದೆ. ಈ ಕಂಬಕ್ಕೆ ಸೇರಿದಂತೆ ಒಂದು ನಂದಿಯನ್ನು ಕುಳ್ಳಿರಿಸಲಾಗಿದೆ. ದೇವಾಲಯದ ಹೊರಗೆ ಒಂದು ರಾವಳೇಶ್ವರ ಶಿಲ್ಪವಿದೆ. ಈ ಶಿಲ್ಪ ೫/೬ ಅಡಿ ಎತ್ತರವಿರುವ ಈ ಶಿಲ್ಪವು ಚತುರ್ಭುಜಧಾರಿಯಾಗಿದ್ದು ಬಿಲ್ಲುಬಾಣ ಇಳಿಬಿಟ್ಟ ಗಧೆ, ಕತ್ತಿ, ಪ್ರಯೋಗ ಚಕ್ರವನ್ನು ಹಿಡಿದಿರುವುದು ಕಂಡುಬರುತ್ತದೆ. ಯಜ್ಞೋಪವೀತ, ಎದೆಪಟ್ಟಿ, ಸೊಂಟದ ಮೇಲೆ ಇಳಿಬಿಟ್ಟ ರಾಜ ಮರ್ಯಾದೆಯ ವಸ್ತ್ರ, ಕಾಲಿನಲ್ಲಿ ಕಡಗ, ಕೈಕಡಗ, ಎದೆಕವಚ, ಭುಜಕೀರ್ತಿಗಳನ್ನು ಕಾಣಬಹುದು. ಈ ಶಿಲ್ಪವನ್ನು ನೋಡಿದರೆ ರಾಜಕುಮಾರನಂತೆ ಅಲಂಕಾರಯುಕ್ತವಾಗಿ ಶಿಲ್ಪಿ ಚಿತ್ರಿಸಿದ್ದಾನೆ.

೬೫

ಹೊಯ್ಸಳ ವಿಷ್ಣುವರ್ಧನನ ಕಾಲದ ಶಾಸನೋಕ್ತ ದೇವಾಲಯಗಳು

ಡಾ. ಕೆ.ಎನ್. ಮೋಹನ್*

ಹೊಯ್ಸಳ ವಿಷ್ಣುವರ್ಧನನ ಕಾಲದಲ್ಲಿ ಹಲವಾರು ಶಾಸನಗಳು ಹಾಕಿಸಲ್ಪಟ್ಟಿವೆ. ಇವುಗಳಲ್ಲಿ ಬಹುಪಾಲು ಶಾಸನಗಳು ದಾನಶಾಸನಗಳು, ಪ್ರಶಸ್ತಿಗಳು ಮತ್ತು ದೇವಾಲಯದ ನಿರ್ಮಾಣದ ಮೇಲೆ ಬೆಳಕು ಚೆಲ್ಲುತ್ತವೆ. ಈ ಶಾಸನಗಳು ಐತಿಹಾಸಿಕ ಮಹತ್ತ್ವವನ್ನು ಸಹ ಹೊಂದಿರುತ್ತವೆ. ಶಾಸನಗಳಲ್ಲಿ ರಾಜನ ಆಳ್ವಿಕೆಯ ಕಾಲ, ರಾಜನ ಹೆಸರು, ಕೆಲವೊಮ್ಮೆ ಅವನ ವಂಶಾವಳಿ, ಯುದ್ಧದಲ್ಲಿ ಗಳಿಸಿದ ವಿಜಯದ ವಿವರ, ದೇವಾಲಯದ ನಿರ್ಮಾಣಕ್ಕೆ ನೀಡಿದ ಸಹಾಯ ಅಥವಾ ದೇವಾಲಯಕ್ಕೆ ನೀಡಿದ ದಾನ ದತ್ತಿಗಳ ಬಗ್ಗೆ ವಿವರಗಳು ದೊರೆಯುತ್ತವೆ. ವಿಷ್ಣುವರ್ಧನನ ಕಾಲದಲ್ಲಿ ಸ್ವತಃ ವಿಷ್ಣುವರ್ಧನನಲ್ಲದೇ, ಅವನ ಮಂತ್ರಿಗಳು, ದಂಡನಾಯಕರು ಮತ್ತು ಕೆಲವೊಮ್ಮೆ ವಡ್ಡವ್ಯವಹಾರಿಗಳು (ಪ್ರಮುಖ ವ್ಯಾಪಾರಸ್ಥರು) ಸಹ ಶಾಸನಗಳನ್ನು ಹಾಕಿಸಿದ್ದಾರೆ. ಶಾಸನಗಳು ವೈಷ್ಣವ, ಶೈವ ಮತ್ತು ಜೈನ ಧರ್ಮದ ಕಟ್ಟಡಗಳ ನಿರ್ಮಾಣಕ್ಕೆ ಸಂಬಂಧವಾಗಿ ಹಾಕಿಸಿದಂತಹುವುಗಳು ದೊರೆಯುತ್ತವೆ.

ಪ್ರಸ್ತುತ ಅಧ್ಯಯನದ ಮುಖ್ಯ ಉದ್ದೇಶ ಕೇವಲ ಶಾಸನೋಕ್ತ ದೇವಾಲಯಗಳನ್ನು ಚರ್ಚಿಸುವುದಾಗಿದೆ. ಆದರೂ ಕೆಲವೊಮ್ಮೆ ದೇವಾಲಯಗಳು ಇದ್ದು, ಶಾಸನಗಳು ಇದ್ದು ಅಂತಹವುಗಳನ್ನು ಸಹ ಇಲ್ಲಿ ಸ್ಥೂಲವಾಗಿ ಗಮನಿಸಿದ್ದೇವೆ. "ಶಾಸನೋಕ್ತ ದೇವಾಲಯಗಳೆಂದರೆ ಕೇವಲ ಶಾಸನಗಳಲ್ಲಿ ಮಾತ್ರ ಉಲ್ಲೇಖವಾಗಿದ್ದು ದೇವಾಲಯಗಳು ಸಂಪೂರ್ಣವಾಗಿ ನಾಶಹೊಂದಿ ಅಥವಾ ಅದೇ ಸ್ಥಳದಲ್ಲಿ ಹೊಸದಾಗಿ ನಿರ್ಮಾಣವಾಗಿದ್ದು, ಆ ದೇವಾಲಯದ ವಿವರಗಳು ಶಾಸನಗಳಲ್ಲಿ ದೊರೆಯುತ್ತಿದ್ದು, ಅಂತಹವುಗಳನ್ನು ಇಲ್ಲಿ ಶಾಸನೋಕ್ತ ದೇವಾಲಯಗಳೆಂದು ಗುರುತಿಸಲಾಗಿದೆ".

ವಿಷ್ಣುವರ್ಧನನ ಕಾಲದಲ್ಲಿ ದೇವಾಲಯಗಳಿಗೆ ಸಂಬಂಧಿಸಿದ ಶಾಸನಗಳ ಸಂಖ್ಯೆ ಗಣನೀಯವಾಗಿದೆ. ವಿಷ್ಣುವರ್ಧನನು ರಾಮಾನುಜಚಾರ್ಯರ ಶಿಷ್ಯತ್ವವನ್ನು ಪಡೆದ ಮೇಲೆ, ಮತ್ತು ಶ್ರೀವೈಷ್ಣವ ಧರ್ಮವನ್ನು ಅಂಗೀಕರಿಸಿದ ಮೇಲೆ ಹಲವಾರು ದೇವಾಲಯಗಳನ್ನು ನಿರ್ಮಿಸಿದನು. ಇವುಗಳಲ್ಲಿ ಮುಖ್ಯವಾಗಿ ಬೇಲೂರಿನ ವಿಜಯನಾರಾಯಣ ಅಥವಾ ಚೆನ್ನಕೇಶವ,[೧] ಕಪ್ಪೆಚೆನ್ನಿಗರಾಯ,[೨] ತಲಕಾಡಿನ ಕೀರ್ತಿನಾರಾಯಣ ದೇವಾಲಯ[೩] ಮುಂತಾದ ದೇವಾಲಯಗಳನ್ನು ವಿಷ್ಣುವರ್ಧನನು ನಿರ್ಮಿಸಿ ಅವುಗಳಿಗೆ ಶಾಸನಗಳನ್ನು ಹಾಕಿಸಿದ್ದಾನೆ.

ಈ ಮೂರು ದೇವಾಲಯಗಳ ಶಾಸನಗಳು ವಿಜಯ ಶಾಸನಗಳೇ ಆಗಿವೆ. ಇವುಗಳಲ್ಲಿ ವಿಷ್ಣುವರ್ಧನನು ಚೋಳರ ಮೇಲೆ ಸಾಧಿಸಿದ ವಿಜಯದ ವಿವರಗಳು ದೊರೆಯುತ್ತವೆ. ವಿಷ್ಣುವರ್ಧನನ ಕಾಲದಲ್ಲಿಯೇ ತೊಣ್ಣೂರಿನ ಲಕ್ಷ್ಮೀದೇವಿ ದೇವಾಲಯದ ಓಲಗಶಾಲೆಯನ್ನು[೪] ನಿರ್ಮಿಸಿದ ವಿವರ ಮತ್ತು ಇದನ್ನು ನಿರ್ಮಿಸಿದ ಅವನ ಅಧಿಕಾರಿ ಸುರಿಗೆಯ ನಾಗಿದೇವನ ಬಗ್ಗೆ ವಿವರಗಳು ದೊರೆಯುತ್ತವೆ. ವಿಷ್ಣುವರ್ಧನ ತಮ್ಮ ಉದಯಾದಿತ್ಯನು ಚಾಮರಾಜನಗರ ಜಿಲ್ಲೆಯ ಕೆಲ್ಲವತ್ತಿಯಲ್ಲಿ ನಿರ್ಮಿಸಿದ ಜನಾರ್ಧನ ದೇವಾಲಯವು ಅವನ ಆಕಸ್ಮಿಕ ಮರಣದಿಂದ ಅಪೂರ್ಣ ವಾಗಲೂ ಅದನ್ನು ವಿಷ್ಣುವರ್ಧನನೇ ಕ್ರಿ.ಶ. ೧೧೨೩[೫]ರಲ್ಲಿ ಪೂರ್ತಿಗೊಳಿಸಿದನೆಂದು ಶಾಸನವು ತಿಳಿಸುತ್ತದೆ. ವಿಷ್ಣುವರ್ಧನನು ಹಲವಾರು ದೇವಾಲಯಗಳಿಗೆ ದಾನದತ್ತಿಗಳನ್ನು ನೀಡಿದ್ದಾನೆ. ಇವುಗಳಲ್ಲಿ ರಾಯಣದಂಡನಾಯಕ (ವಿಷ್ಣು ದಂಡಾಧಿಪ) ನಿರ್ಮಿಸಿದ ಮರಳೆಯ ಕೇಶವ ದೇವಾಲಯಕ್ಕೆ ಭೇಟಿ ನೀಡಿ ದೇವಾಲಯವನ್ನು ವರ್ಣಿಸಿ ಮತ್ತು ಅಲ್ಲಿ ಸ್ವಲ್ಪ ಹೊತ್ತು ವಿಶ್ರಮಿಸಿ ದೇವಾಲಯದ ದೈನಂದಿನ ಕೈಂಕರ್ಯ ಗಳಿಗೆ ದಾನ ನೀಡಿದ ವಿವರಗಳು ಇಲ್ಲಿನ ಶಾಸನ ದಲ್ಲಿ ದೊರೆಯುತ್ತವೆ. ಈ ಶಾಸನದ ಕಾಲ ಕ್ರಿ.ಶ. ೧೧೩೦[೬].

ವಿಷ್ಣುವರ್ಧನನು ಚೆನ್ನರಾಯಪಟ್ಟಣದ ಹತ್ತಿರದ ಅನಂತಿಯಲ್ಲಿಯ[೭] ನಾರಾಯಣ ದೇವಾಲಯಕ್ಕೆ ನೀಡಿದ ದಾನದ ವಿವರವು ಶಾಸನೋಕ್ತವಾಗಿದೆ. ವಿಷ್ಣುವರ್ಧನನು

* ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಶ್ರೀ ದೇವರಾಜ ಅರಸು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಣಸೂರು-೫೭೧೦೫.

ಮೊರೆಹಳ್ಳಿ[೯]ಯಲ್ಲಿ ಚೋಳರಿಂದ ನಿರ್ಮಿತವಾದ ಸಿಂಗಪೆರು ಮಾಳ್ ದೇವಸ್ಥಾನಕ್ಕೆ ಭೇಟಿ ನೀಡಿ ಅಲ್ಲಿಯೂ ಸಹ ದಾನ ನೀಡಿದ್ದು ಶಾಸನೋಕ್ತವಾಗಿದೆ.

ಹೊಳೆನರಸೀಪುರ ತಾಲ್ಲೂಕಿನ ತೇರಣ್ಯ ಗ್ರಾಮದಲ್ಲಿ ದೊರೆತ ಶಾಸನವು, ವಿಷ್ಣುವರ್ಧನನ (೧೧೨೩) ಆಳ್ವಿಕೆಯ ಕಾಲದಲ್ಲಿ ಹಾಕಿಸಲಾಗಿದೆ. ಈ ಶಾಸನದಲ್ಲಿ ನಾರಾಯಣದೇವ ಎಂಬುವನು ವಿಷ್ಣು ದೇವಾಲಯವನ್ನು ಸ್ಥಾಪಿಸಿದ ವಿವರವು ಇಲ್ಲಿ ದೊರೆಯುತ್ತದೆ. ಇದೇ ಶಾಸನದಲ್ಲಿ ಭಾಸ್ಕರ ಪಂಡಿತನೆಂಬ ಕವಿಯ ಹೆಸರು ಹಾಗೂ ನೇಮಹೆಗ್ಗಡೆ ಎಂಬ ಹೆಗ್ಗಡೆಯ ಹೆಸರು ಉಲ್ಲೇಖಿಸಲ್ಪಟ್ಟಿವೆ. ವಿಷ್ಣುವರ್ಧನನ ಕಾಲದ ಕೂಗಲೂರಿನ[೧೦] ಶಾಸನವೊಂದು ದೇವಾಲಯವೊಂದಕ್ಕೆ ದಾನಗಳನ್ನು ನೀಡಿದ ವಿವರವನ್ನು ತಿಳಿಸುತ್ತದೆ. ಕ್ರಿ.ಶ. ೧೧೧೩ರಲ್ಲಿ ದೊಡ್ಡಗದ್ದವಳ್ಳಿಯಲ್ಲಿ ಮಹಾಲಕ್ಷ್ಮೀ ದೇವಾಲಯವನ್ನು[೧೧] ವಿಷ್ಣುವರ್ಧನ ನಿರ್ಮಿಸದೇ ಹೋದರು, ಇದಕ್ಕೆ ದಾನ ನೀಡಿದ ವಿವರ ದೊರೆಯುತ್ತದೆ. ಶಾಂತಿ ಗ್ರಾಮದ ಧರ್ಮೇಶ್ವರ ದೇವಾಲಯಕ್ಕೆ[೧೨] ಕ್ರಿ.ಶ. ೧೧೨೨ ರಲ್ಲಿ ವಿಷ್ಣುವರ್ಧನನ ರಾಣಿ ದಾನದತ್ತಿಗಳನ್ನು ನೀಡಿದ ವಿವರ ಮತ್ತು ಅವಳ ತಂದೆ ಹೆಗ್ಗಡೆ ಮಾರಸಿಂಗಯ್ಯನು ಧರ್ಮೇಶ್ವರ ದೇವಸ್ಥಾನವನ್ನು ಪ್ರತಿಷ್ಠಾಪಿಸಿದ ವಿಷಯಗಳು ಅಲ್ಲಿನ ಶಾಸನದಲ್ಲಿ ತಿಳಿದುಬರುತ್ತದೆ. ಈ ಶಾಸನದಲ್ಲಿ ಶಿವಶಕ್ತಿ ಪಂಡಿತನೆಂಬ ಶೈವಗುರುವಿನ ಹೆಸರು ಸಹ ತಿಳಿದುಬರುತ್ತದೆ.

ವಿಷ್ಣುವರ್ಧನನ ಕಾಲದಲ್ಲಿ ಹಲವಾರು ದಾನಶಾಸನ ಗಳು ದೇವಾಲಯದ ನಿರ್ಮಾಣಕ್ಕೆ ಪೂರಕವಾಗಿ ಹಾಕಿಸಲ್ಪಟ್ಟಿವೆ. ಈ ಕಾಲದಲ್ಲಿ ಸುಮಾರು ೧೨೦[೧೩] ಶಾಸನಗಳು ಶೈವದೇವಾಲಯಗಳಿಗೆ ನೀಡಿದ ದಾನದತ್ತಿಗಳನ್ನು ವಿವರಿಸುತ್ತವೆ. ಅವನು ರಾಜಕುಮಾರನಾಗಿದ್ದಾಗಲೇ ಹಲವಾರು ದಾನದತ್ತಿಗಳನ್ನು ನೀಡಿದ ವಿವರಗಳು ತಿಳಿದು ಬರುತ್ತದೆ. ಕಿಕ್ಕೇರಿ[೧೪]ಯಲ್ಲಿ ದೊರೆತ ಒಂದು ಶಾಸನ (ಕ್ರಿ.ಶ. ೧೯೦೫-೯೬) ದಾನದ ವಿವರಗಳನ್ನು ಹೇಳುತ್ತದೆ. ಉಳ್ಳಿನಾಗೂರು[೧೫] ಎಂಬಲ್ಲಿ ದೊರೆತ ಕ್ರಿ.ಶ. ೧೧೦೦ರ ಶಾಸನ ಶಿವಾಲಯಕ್ಕೆ ದಾನ ನೀಡಿದ ವಿವರವನ್ನು ತಿಳಿಸುತ್ತದೆ. ಕ್ರಿ.ಶ. ೧೧೨೨ರಲ್ಲಿ ಈಶ್ವರಹಳ್ಳಿಯ[೧೬] ದೇವಾಲಯದಲ್ಲಿ ದೊರೆತ ಶಾಸನದಲ್ಲಿ ವಿಷ್ಣುವರ್ಧನನು ದೇವಾಲಯಕ್ಕೆ ದಾನ ನೀಡಿದ ವಿವರವು ತಿಳಿದುಬರುತ್ತದೆ.

ಈಶ್ವರಹಳ್ಳಿಯ ರಾಮೇಶ್ವರ ದೇವಾಲಯವನ್ನು ಶಾಂತಲೆಯೇ ನಿರ್ಮಿಸಿದಂತೆ ತೋರುತ್ತದೆ. ಇದಕ್ಕೆ ಪೂರಕವಾಗಿ ಒಂದು ಶಾಸನ ಜಯಗೊಂಡೀಶ್ವರ ಮತ್ತು ಚಂಡೀಶ್ವರ ದೇವಾಲಯಗಳಿಗೆ ಶಾಂತಲೆ ಮತ್ತು ವಿಷ್ಣುವರ್ಧನ ಪಂಚಪ್ರಧಾನರೊಂದಿಗೆ ಕೂಡಿ, ವಿರುಪಾಕ್ಷ ಪುರದಲ್ಲಿ ದಾನದತ್ತಿಗಳನ್ನು ಬಿಟ್ಟ ವಿಷಯ ಶಾಸನೋಕ್ತವಾಗಿದೆ.[೧೮]

ವಿಷ್ಣುವರ್ಧನನ ಇನ್ನುಳಿದ ಪತ್ನಿಯರಾದ ಚಿಕ್ಕಶಾಂತಲೆ, ಬೊಮ್ಮಲೆ ಮತ್ತು ರಾಜಲೆಯರು ಸಹ ಹಲವಾರು ದಾನದತ್ತಿ ನೀಡಿ ದೇವಾಲಯಗಳನ್ನು ನಿರ್ಮಿಸಿದ್ದಾರೆ. ವಿಷ್ಣುವರ್ಧನನ ಪತ್ನಿ ಚಿಕ್ಕಶಾಂತಲೆ ಕ್ರಿ.ಶ. ೧೧೩೫ರಲ್ಲಿ ಮರಣ ಹೊಂದಳು. ಚಿಕ್ಕಶಾಂತಲೆಯ ತಾಯಿ ಜಕ್ಕಿಯ ಬ್ಬೆಯೂ ವಿಷ್ಣುವರ್ಧನನ ಸಹಾಯದಿಂದ, ಶಾಂತಲೇಶ್ವರ ಮತ್ತು ಬೊಪ್ಪೇಶ್ವರ ಎಂಬ ಎರಡು ಶೈವ ದೇವಾಲಯಗಳನ್ನು ತನ್ನ ಮಗಳ ಸ್ಮರಣೆಗಾಗಿ ನಿರ್ಮಿಸಿದಳೆಂದು ಮತ್ತು ದೇವತೆಗೆ ಹಾಗೂ ಬ್ರಾಹ್ಮಣರಿಗೆ ರಾಜನಿಂದ ಹಲವಾರು ದಾನದತ್ತಿಗಳನ್ನು ಕೊಡಿಸಿದಳೆಂದು ತಿಳಿದುಬರುತ್ತದೆ. ಈ ಎರಡು ದೇವಾಲಯಗಳು ಹಳೇಬೀಡಿನ ಹತ್ತಿರ ಇರುವ ಎಲೆಗುಂದದಲ್ಲಿ ನಿರ್ಮಿಸಲಾಗಿದ್ದವು ಎಂದು ತಿಳಿದು ಬರುತ್ತದೆ[೧೯].

ವಿಷ್ಣುವರ್ಧನನ ಮತ್ತೊಬ್ಬ ರಾಣಿ ಬೊಮ್ಮಲೆಯೂ ಕ್ರಿ.ಶ. ೧೧೪೦[೨೦]ರಲ್ಲಿ ಬೆಂಚಿಗರೆಯಲ್ಲಿ ಬೊಮ್ಮಲೇಶ್ವರ ಎಂಬ ದೇವಾಲಯವನ್ನು ನಿರ್ಮಿಸಿದಳು. ಈ ದೇವಾಲಯಕ್ಕೆ ರಾಜನಿಂದ ದಾನದತ್ತಿಗಳನ್ನು ಸಹ ಕೊಡಿಸಿದಳು.

ವಿಷ್ಣುವರ್ಧನನ ದಂಡನಾಯಕರಾದ ಗಂಗರಾಜ ಮತ್ತು ಪುಣಿಸಮಯ್ಯರು ಮೂಲತಃ ಜೈನಧರ್ಮದ ಅನುಯಾಯಿ ಗಳಾದರೂ ವೈಷ್ಣವ ಮತ್ತು ಶೈವ ದೇವಾಲಯಗಳ ಜೀರ್ಣೋದ್ಧಾರಕ್ಕಾಗಿ, ದಾನದತ್ತಿಗಳನ್ನು ನೀಡಿದ್ದನ್ನು ಕ್ರಿ.ಶ. ೧೧೨೧ರ[೨೧] ವಿರುಪಾಕ್ಷಪುರದ ಒಂದು ಶಾಸನ ಉಲ್ಲೇಖಿಸುತ್ತಾ ರಾಜ ರಾಣಿಯರೊಂದಿಗೆ ಗಂಗರಾಜನು ಸಹ ಇದ್ದನೆಂದು ಹೇಳುತ್ತದೆ. ಗಂಗರಾಜನ ಕುಟುಂಬ ವರ್ಗದವರು ಹಲವಾರು ದಾನದತ್ತಿಗಳನ್ನು ನೀಡಿದ್ದಾರೆ. ಗಂಗರಾಜನ ಸ್ವಂತ ಊರಾದ ನಾಗರ ನವಿಲೆಯು, ಒಂದು ಪ್ರಮುಖ ಶೈವ ಕೇಂದ್ರವಾಗಿ ಬೆಳೆಯಿತು. ಗಂಗರಾಜನ ಹೆಸರಿನಲ್ಲಿ ಕ್ರಿ.ಶ. ೧೧೩೪ರಲ್ಲಿ[೨೨] ಮಹದೇವ ಶಕ್ತಿಯೆಂಬ ಶೈವಗುರುವಿನ ನೇತೃತ್ವದಲ್ಲಿ ಇಂದಿನ ಅಗ್ರಹಾರ ಬೆಳಗೊಲಿಯಲ್ಲಿ ಗಂಗೇಶ್ವರ ಎಂಬ ದೇವಾಲಯವನ್ನು ನಿರ್ಮಿಸಿದನು. ಗಂಗರಾಜನ ಮೊಮ್ಮಗ ಏಚಮಯ್ಯನು (ದ್ರೋಹಘರಟ್ಟ ಏಚ) ಕ್ರಿ.ಶ. ೧೧೩೮ರಲ್ಲಿ[೨೩] ನಾಲಣಾ ಕೆರೆಯಲ್ಲಿರುವ ಮಲ್ಲಿಕಾರ್ಜುನ ಮೂಲಸ್ಥಾನ ದೇವರಿಗೆ ವಿಷ್ಣುವರ್ಧನನಿಂದ ತನ್ನ ಗೌಡಿಕೆಯ ದತ್ತಿಯನ್ನು ಪಡೆದು ನೀಡಿದನೆಂದು ತಿಳಿದುಬರುತ್ತದೆ.

ವಿಷ್ಣುವರ್ಧನನು ವೈಷ್ಣವ ಮತ್ತು ಶೈವದೇವಾಲಯ ಗಳಿಗೆ ದಾನ ದತ್ತಿಗಳನ್ನು ನೀಡಿದ ಹಾಗೆ ಅವನ ಕಾಲದ ಮತ್ತೊಂದು ಪ್ರಮುಖ ಧರ್ಮವಾದ ಜೈನ ಬಸದಿಗಳಿಗೂ, ಹಲವಾರು ದಾನದತ್ತಿಗಳನ್ನು ನೀಡಿದ ವಿವರಗಳು ತಿಳಿದುಬರುತ್ತವೆ.

ಪಾರ್ಶ್ವನಾಥ ಬಸದಿಯ ಹತ್ತಿರ ಇರುವ ಕ್ರಿ.ಶ. ೧೧೧೮ರ[೨೯] ಹೊಸಹೊಳಲಿನ ಶಾಸನ. ಅದರಲ್ಲಿ ವಿಷ್ಣುವರ್ಧನನ ಆಳ್ವಿಕೆಯ ಕಾಲವನ್ನು ಹಾಗೂ ಇಲ್ಲಿ ತ್ರಿಕೂಟ ಜಿನಾಲಯವನ್ನು ನಿರ್ಮಿಸಿದ ವಿವರಗಳು ತಿಳಿದುಬರುತ್ತದೆ. ದೋರಸಮುದ್ರದ ನೊಳಂಬಶೆಟ್ಟಿಯ (ಚಾವುಂಡಾದಿ) ಹೆಂಡತಿ ದೇಮಿಶೆಟ್ಟಿಯು ಇಲ್ಲಿನ ಕತ್ತರಿ ಘಟ್ಟದಲ್ಲಿ ತ್ರಿಕೂಟ ಜಿನಾಲಯವನ್ನು ನಿರ್ಮಿಸಿದಳೆಂದು ತಿಳಿದುಬರುತ್ತದೆ.

ಈ ಶಾಸನದಲ್ಲಿ ಅವಳು ಹರ್ನಹಳ್ಳಿ ಹತ್ತಿರ ಇರುವ ಭೂಮಿ ಎರಡು ಎಣ್ಣೆಯಗಾಣ ಎರಡು ಹೂದೋಟ ಮತ್ತು ಎರಡು ಮನೆಗಳನ್ನು ಈ ತ್ರಿಕೂಟ ಬಸದಿಗಾಗಿ ನೀಡಿದಳೆಂದು ತಿಳಿದುಬರುತ್ತದೆ. ಇದರಲ್ಲಿ ಶುಭಚಂದ್ರ ಸಿದ್ಧಾಂತದೇವ, ಮೂಲಸಂಘ, ದೇಸಿಗಗಣ, ಪೋಸ್ತಕಗುಚ್ಛ ಮತ್ತು ಕುಂದಕುಂದಾನ್ವಯರ ಹಾಗೂ ಕುಕ್ಕುಟಾಸನ ಮೂಲಧಾರಿ ದೇವರ ಶಿಷ್ಯನಾದ ದಿವಾಕರ ನಂದಿದೇವನಿಗೆ ದೇಮಕಬ್ಬೆ ಮತ್ತು ನೊಳಂಬಶೆಟ್ಟಿಯರು ಈ ಮೇಲಿನ ದಾನಗಳನ್ನು ನೀಡಿದರೆಂದು ತಿಳಿದುಬರುತ್ತದೆ. ಅಲ್ಲದೇ ಬೆಟ್ಟನಾಯಕನ ಮಗನಾದ ಗಂಡ ನಾರಾಯಣ ಶೆಟ್ಟಿಯೂ ಎರಡು ಕೆರೆಗಳನ್ನು ಮತ್ತು ಅದರಿಂದ ನೀರಾಡುವ ಹಸಿ ಮತ್ತು ಒಣಭೂಮಿಗಳನ್ನು ಈ ಜಿನಾಲಯಕ್ಕೆ ದಾನ ನೀಡಿದನೆಂದು ತಿಳಿದುಬರುತ್ತದೆ. ಪ್ರಸ್ತುತ ಈ ಜಿನಾಲಯ ಸಂಪೂರ್ಣ ಜೀರ್ಣೋದ್ಧಾರ ಹೊಂದಿ ಪಾರ್ಶ್ವನಾಥ ಬಸದಿಯೆಂಬ ಹೆಸರಿನಿಂದ ಕರೆಯಲ್ಪಡುತ್ತದೆ.

ವಿಷ್ಣುವರ್ಧನನ ದಂಡನಾಯಕ ಗಂಗರಾಜನು ಶುಭಚಂದ್ರ ಸಿದ್ಧಾಂತ ದೇವರ ಸ್ಮರಣಾರ್ಥವಾಗಿ ಗೋವಿಂದವಾಡಿಯಲ್ಲಿ ಪಾರ್ಶ್ವನಾಥ ಬಸದಿಯನ್ನು ಕಟ್ಟಿಸಿ ಜೀರ್ಣೋದ್ಧಾರ ಕಾರ್ಯಗಳಿಗೆ ದಾನದತ್ತಿಗಳನ್ನು ನೀಡಿದನೆಂದು ಕ್ರಿ.ಶ. ೧೧೧೯ರ[೩೦] ಶ್ರವಣಬೆಳಗೋಳ ಶಾಸನ ತಿಳಿಸುತ್ತದೆ. ಈ ಜಿನಾಲಯ ಈಗ ಉಳಿದು ಬಂದಿಲ್ಲ. ಕ್ರಿ.ಶ. ೧೧೨೪ರ[೩೧] ಒಂದು ಶಾಸನ ಹುಣಸೂರು ತಾಲ್ಲೂಕಿನ ರಾಮಪಟ್ಟಣ ಎಂಬಲ್ಲಿ ಬೆಟ್ಟರಾಜ ಮತ್ತು ಅವನ ತಮ್ಮ ಚಾವಣನು ಕೂಡಿಕೊಂಡು ತಾಯಿಯಾದ ಕಮ್ಮವ್ವೆಯ ಜ್ಞಾಪಕಾರ್ಥವಾಗಿ ಎರಡು ಜೈನ ಬಸದಿಗಳನ್ನು ಕಟ್ಟಿಸಿದರೆಂದು ತಿಳಿಯಬರುತ್ತದೆ. ಆದರೆ ಆ ಎರಡು ಬಸದಿಗಳು ಈಗ ಉಳಿದು ಬಂದಿಲ್ಲ.

ವಿಷ್ಣುವರ್ಧನನ ದಂಡನಯಕ ಪುಣಿಸಮಯ್ಯನು ಕ್ರಿ.ಶ. ೧೧೧೬[೩೨] ರಲ್ಲಿ ಚಾಮರಾಜ ನಗರದಲ್ಲಿ ತ್ರಿಕೂಟ ಜಿನಾಲಯವನ್ನು ನಿರ್ಮಿಸಿದನೆಂದು ತಿಳಿದುಬರುತ್ತದೆ. ಪ್ರಸ್ತುತ ಈ ಜಿನಾಲಯ ಸಾಕಷ್ಟು ಬದಲಾವಣೆ ಹೊಂದಿದ್ದು, ಈಗ ಏಕಕೂಟ ಜಿನಾಲಯವಾಗಿದೆ. ಕ್ರಿ.ಶ. ೧೧೨೯[೩೩]ರಲ್ಲಿ ಪಾರ್ಶ್ವನಾಥ ಬಸದಿಯನ್ನು ಮಲ್ಲಿಸೇಣನೆಂಬುವನು ಶ್ರವಣಬೆಳಗೊಳದ ಚಿಕ್ಕಬೆಟ್ಟದಲ್ಲಿ ನಿರ್ಮಿಸಿದನೆಂದು ತಿಳಿದುಬರುತ್ತದೆ.

ಶ್ರವಣಬೆಳಗೊಳದ ದೊಡ್ಡ ಬೆಟ್ಟದಲ್ಲಿ ವಿಷ್ಣುವರ್ಧನನ ಮತ್ತೊಬ್ಬ ದಂಡನಾಯಕ ಭರತಿಮಯ್ಯನು ಬಾಗಿಲಿನ ಇಕ್ಕೆಲಗಳಲ್ಲಿ ಭರತ ಮತ್ತು ಬಾಹುಬಲಿಯ ಶಿಲ್ಪಗಳನ್ನು ನಿರ್ಮಿಸಿ ಮುಂದೆ ಮಂಟಪವನ್ನು ಕಟ್ಟಿಸಿದನೆಂದು, ಶ್ರವಣಬೆಳಗೊಳದ ಕ್ರಿ.ಶ. ೧೧೩೦ರ[೩೪] ಶಾಸನ ಹೇಳುತ್ತದೆ.

ದಂಡನಾಯಕ ಗಂಗರಾಜನ ಮಗನಾದ ಬೊಪ್ಪನು ಕಂಬದಹಳ್ಳಿಯಲ್ಲಿ ತನ್ನ ತಂದೆಯ ಬಿರುದುಗಳಲ್ಲೊಂದಾದ ದ್ರೋಹಘರಟ್ಟ ಎಂಬ ಹೆಸರಿನಲ್ಲಿ ಶಾಂತಿನಾಥ ಜಿನಾಲಯವನ್ನು ಕಟ್ಟಿಸಿದನೆಂದು ತಿಳಿದುಬರುತ್ತದೆ. ಈ ಬಸದಿಯನ್ನು ಕ್ರಿ.ಶ. ೧೧೩೧ರಲ್ಲಿ[೩೫] ನಿರ್ಮಿಸಿರುವ ವಿಷಯ ಶಾಸನೋಕ್ತವಾಗಿದೆ. ಪ್ರಸ್ತುತ ಬಸದಿಯು ತುಂಬಾ ಜೀರ್ಣಾವಸ್ಥೆಯಲ್ಲಿದ್ದು ಹಾಳಾಗುವ ಸಾಧ್ಯತೆಯಿದೆ.

ಬೊಪ್ಪನೇ ಕ್ರಿ.ಶ. ೧೧೩೩ರಲ್ಲಿ[೩೬] ದ್ವಾರಸಮುದ್ರದ ಬಸ್ತಿಹಳ್ಳಿಯಲ್ಲಿ ತನ್ನ ತಂದೆಯ ಸ್ಮರಣಾರ್ಥವಾಗಿ ಪಾರ್ಶ್ವನಾಥ ಬಸದಿಯನ್ನು ಕಟ್ಟಿಸಿದನು. ಇದನ್ನೇ ವಿಷ್ಣುವರ್ಧನನು ವಿಜಯಪಾರ್ಶ್ವನಾಥನೆಂದು ಕರೆದನು. ಶಿಕಾರಿಪುರ ತಾಲ್ಲೂಕಿನ ಬಂದಳಿಕೆಯಲ್ಲಿ ಬೊಪ್ಪನು ಕ್ರಿ.ಶ. ೧೧೩೩ರಲ್ಲಿ[೩೭] ಶಾಂತಿನಾಥ ಬಸದಿಯನ್ನು ಕಟ್ಟಿಸಿದನೆಂದು ವಿವರಿಸುತ್ತದೆ. ಈ ಬಸದಿಯು ಸಹ ಸಾಕಷ್ಟು ಜೀರ್ಣೋದ್ಧಾರವಾಗಿದೆ.

ವಿಷ್ಣುವರ್ಧನನ ಮಂತ್ರಿಯು ಮತ್ತು ವಿಷ್ಣುವರ್ಧನನ ಅಣ್ಣ ಬಲ್ಲಾಳನ ಮಾವನಾದ ಮರಿಯಾನೆ ದಂಡನಾಯಕನು ಚಿಕ್ಕಮಗಳೂರು ತಾಲ್ಲೂಕಿನ ಸಿಂಧಗೆರೆಯಲ್ಲಿ ಕ್ರಿ.ಶ. ೧೧೩೭ರಲ್ಲಿ[೩೮] ಪಾರ್ಶ್ವನಾಥ ಬಸದಿಯನ್ನು ನಿರ್ಮಿಸಿದನೆಂದು ತಿಳಿದುಬರುತ್ತದೆ. ಈ ಬಸದಿ ಸಂಪೂರ್ಣ ಜೀರ್ಣೋದ್ಧಾರವಾಗಿ ತನ್ನ ಮೂಲ ಸ್ವರೂಪವನ್ನು ಕಳೆದುಕೊಂಡಿದೆ. ವಿಷ್ಣುವರ್ಧನನ ದಂಡನಾಯಕ ಪುಣಿಸಮಯ ಕೃಷ್ಣರಾಜಪೇಟೆ ತಾಲ್ಲೂಕಿನ ಮಾವಿನಕೆರೆಯಲ್ಲಿ ಒಂದು ಜಿನಾಲಯವನ್ನು ನಿರ್ಮಿಸಿದನೆಂದು ಶಾಸನವು ಹೇಳುತ್ತದೆ. ಈ ಶಾಸನದ ಕಾಲ ಕ್ರಿ.ಶ. ೧೧೪೦[೩೯] ಪ್ರಸ್ತುತ ಈ ಜಿನಾಲಯ ಸಂಪೂರ್ಣ ನಾಶವಾಗಿದೆ.

ವಿಷ್ಣುವರ್ಧನನ ಮಗಳಾದ ಹರಿಯಲದೇವಿಯು (ಹರಿಯಬ್ಬರಸಿ) ಮೂಡಿಗೆರೆ ತಾಲ್ಲೂಕಿನ ಹಂತೆಯೂರಿನಲ್ಲಿ[೪೦] ಜಿನಾಲಯವನ್ನು ನಿರ್ಮಿಸಿದಳೆಂದು ಶಾಸನವು ಹೇಳುತ್ತದೆ. ಈ ಶಾಸನದ ಕಾಲ ಕ್ರಿ.ಶ. ೧೧೪೦[೪೧] ಪ್ರಸ್ತುತ ಈ ಜಿನಾಲಯ ಸಂಪೂರ್ಣ ನಾಶವಾಗಿದೆ.

ವಿಷ್ಣುವರ್ಧನನ ದಂಡನಾಯಕ ವಿನಯಾದಿತ್ಯನೆಂಬುವನು ಮುತ್ತತ್ತಿಯಲ್ಲಿ[೪೧] ಜಿನಾಲಯವನ್ನು ಕಟ್ಟಿಸಿದನೆಂದು ತಿಳಿದುಬರುವುದು. ಮರಿಯಾನೆ ದಂಡನಾಯಕನು ಸಾವಗನಹಳ್ಳಿಯಲ್ಲಿ[೪೨] (ಬೇಲೂರು ತಾಲ್ಲೂಕು) ಜಿನಾಲಯವನ್ನು ನಿರ್ಮಿಸಿದನೆಂದು ತಿಳಿದುಬರುತ್ತದೆ. ಶ್ರವಣನ ಹಳ್ಳಿಯಲ್ಲಿ[೪೩] ದುದ್ದಮಲ್ಲದೇವನು ವೀರಕೊಂಗಾಳ್ವ ಎಂಬ ಹೆಸರಿನ ಬಸದಿಯನ್ನು ಕಟ್ಟಿಸಿದನೆಂದು ಅಲ್ಲಿನ ಶಾಸನವೊಂದು ತಿಳಿಸುತ್ತದೆ. ಕೃಷ್ಣರಾಜನಗರ ತಾಲ್ಲೂಕಿನ ಶ್ರವಣನ ಹಳ್ಳಿಯಲ್ಲಿ[೪೪] ದೊರೆತವೊಂದು ಶಾಸನವು, ಶಾಂತಲಾದೇವಿಯ ಅಣ್ಣನಾದ ಮಲ್ಲಿದೇವನು ಬಸದಿಯೊಂದನ್ನು ನಿರ್ಮಿಸಿದನೆಂದು ಹೇಳುತ್ತದೆ. ಆ ಬಸದಿಯ ಹೆಸರು, ಕಾಲ ಶಾಸನದಲ್ಲಿ ಉಲ್ಲೇಖವಾಗಿಲ್ಲ.

ಈ ಮೇಲಿನ ಕೆಲವು ಶಾಸನಗಳಲ್ಲಿ ಶಾಸನದ ಕಾಲ ಮತ್ತು ಬಸದಿಯ ಹೆಸರುಗಳು ಕಂಡುಬರುವುದಿಲ್ಲ. ಆದರೆ ಬಸದಿಯ ನಿರ್ಮಾಣದ ಮೇಲೆ ಈ ಶಾಸನಗಳು ಬೆಳಕು ಚೆಲ್ಲುತ್ತವೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಎ.ಕ., ೯ (೧೯೯೦) ಬೇಲೂರು ೧೬೮, ೧೬, ೧೯೪.

೨. ಅದೇ, ೯೪.

೩. ಎ. ೫, (೧೯೭೬) ತಿ.ನ. ೧೫೧.

೪. ಎ.ಕ., ೬, (೧೯೭೭) ಪಾಂಡವಪುರ, ೫೮.

೫. ಎ.ಕ., ೫, ಹಾಸನ, ೭೬.

೬ ಎ.ಕ., ೬, (೧೯೦೧) ಚಿಕ್ಕಮಗಳೂರು, ೧೪೦, ೧೪೧.

೭. ಎ.ಕ., ೫, (೧೯೦೨) ಚನ್ನರಾಯಪಟ್ಟಣ, ೧೯೯.

೮. ಎ.ಕ., ೭, (೧೯೭೯) ಮಳವಳ್ಳಿ, ೬೨.

೯. ಎ.ಕ., ೮, ಹೊಳೆನರಸೀಪುರ, ೮೯.

೧೦. ಎ.ಕ., ೩, ನಂಜನಗೂಡು, ೩೭೦.

೧೧. ಎ.ಕ., ೫, ಹಾಸನ, ೧೪೯.

೧೨. ಎ.ಕ., ೮, ಹಾಸನ, ೧೬೭.

೧೩. ಶೆಟ್ಟರ್, ೧೯೯೨, The Hoysala Temples.

೧೪. ಎ.ಕ., ೬, (೧೯೯೭), ಕೆ.ಆರ್. ನಗರ, ೩೭.

೧೫. ಎ.ಕ. ೬, (೧೯೦೧), ಚಿಕ್ಕಮಗಳೂರು, ೧೫೧.

೧೬. ಎ.ಕ. ೬, (೧೯೭೭), ಕೆ.ಆರ್. ನಗರ, ೬೬.

೧೭. ಅದೇ.,

೧೮. ಎ.ಕ., ೫, (೧೯೦೨), ಚನ್ನರಾಯಪಟ್ಟಣ, ೨೬೦.

೧೯. ಎ.ಕ. ೮, (೧೯೮೪), ಹಾಸನ, ೬೬, ೬೭.

೨೦. ಎ.ಕ. ೧೨, (೧೯೦೪), ಗುಬ್ಬಿ, ೧೩.

೨೧. ಎ.ಕ. ೧೨, ಅದೇ, ೧೩, ೧೪.

೨೨. ಎ.ಕ. ೬, (೧೯೭೭), ಪಾಂಡವಪುರ, ೨೨೫, ೨೨೭, ೨೨೮.

೨೩. ಅದೇ, ೧೧.

೨೪. ಎ.ಕ., ೯, (೧೯೯೦), ಬೇಲೂರು, ೨೬೧.

೨೫. ಎ.ಕ. ೭, ಅದೇ, ೨೬೧.

೨೬ ಎ.ಕ. ೫, (೧೯೦೨), ಶಿಕಾರಿಪುರ, ೮೭.

೨೭. ಎ.ಕ. ೫, (೧೯೦೨), ಚನ್ನರಾಯನಪಟ್ಟಣ, ೨೪೮.

೨೮. ಎ.ಕ. ೭, (೧೯೭೯), ನಾಗಮಂಗಲ, ೬೧.

೨೯. ಎ.ಕ. ೬, (೧೯೭೭), ಕೆ.ಆರ್. ಪೇಟೆ, ೩.

೩೦. ಎ.ಕ. ೨, ಶ್ರವಣಬೆಳಗೊಳ, ೪೫೭.

೩೧. ಎ.ಕ. ೪, ಹುಣಸೂರು, ೧೬.

೩೨. ಎ.ಕ. ೪, ಚಾಮರಾಜನಗೆ, ೮೩.

೩೩. ಎ.ಕೆ. ೨, ಶ್ರವಣಬೆಗೊಳ, ೭೭.

೩೪. ಅದೇ., ೩೭೧.

೩೫. ಎ.ಕ. ೭, ನಾಗಮಂಗಲ, ೨೯, ೩೦.

೩೬ ಎ.ಕ. ೧೧, ಬೇಲೂರು, ೩೮೯.

೩೭. ಎ.ಕ. ಶಿಕಾರಿಪುರ, ೨೨೭.

೩೮. ಎ.ಕ. ಕಡೂರು, ೧೬೧.

೩೯. ಎ.ಕ. ೬, ಕೆ.ಆರ್. ಪೇಟೆ, ೧೦೭.

೪೦. ಎ.ಕ. ೬, (೧೯೦೧), ಮೂಡಿಗೆರೆ, ೧೬೦.

೪೧. ಎ.ಕ. ೫, (೧೯೦೨), ಚನ್ನರಾಯಪಟ್ಟಣ, ೧೧೨.

೪೨. ಎ.ಕ. ೯, (೧೯೯೦), ಬೇಲೂರು, ೧೦೬.

೪೩. ಎ.ಕ. ೬, (೧೯೭೭), ಕೆ.ಆರ್. ನಗರ, ೨೧.

೪೪. ಅದೇ.,

೩೩

ಹೊಯ್ಸಳ ವಂಶದ ಆರಂಭದ ವಿವರಗಳಲ್ಲಿ ಕೆಲವು ಮಿಥ್ಯಗಳು ಮತ್ತು ಸತ್ಯಗಳು

ಎಂ.ಎನ್. ಪ್ರಭಾಕರ್*

ಈ ಪ್ರಬಂಧದ ಮೂಲ ಉದ್ದೇಶ ಹೊಯ್ಸಳ ವಂಶದ ಯಾದಿಯಲ್ಲಿ ಈವರೆವಿಗೆ ಗುರುತಿಸಲಾದ ಆರಂಭದ ಸಾಮಂತರ ಮತ್ತು ಅರಸರ ಲಭ್ಯವಿರುವ ಮೂಲ ದಾಖಲೆಗಳನ್ನು ಪರಿಶೀಲಿಸಿ ಖಚಿತ ಮಾಹಿತಿಯನ್ನು ಒದಗಿಸುವುದು ಮತ್ತು ಈವರೆವಿಗೆ ನಂಬಿದ ಊಹಾಪೋಹಗಳ ಸಾಧ್ಯತೆಗಳನ್ನು ಪರಿಶೀಲಿಸುವುದು. ಇದು ಮುಂದಿನ ಅಧ್ಯಯನಕ್ಕೆ ಹಾಗೂ ಸಂಶೋಧನೆಗೆ ಹಾದಿಯನ್ನು ಸುಗಮಗೊಳಿಸುತ್ತದೆ ಎಂಬ ಆಶಯವನ್ನು ಹೊಂದಿದೆ. ಈ ಸಂದರ್ಭದಲ್ಲಿ ಲಭ್ಯವಿರುವ ದಾಖಲೆಗಳನ್ನು ಒಂದೆಡೆ ಒದಗಿಸುವ ಪ್ರಯತ್ನವನ್ನೂ ಮಾಡಲಾಗಿದೆ.

ಕರ್ನಾಟಕದಲ್ಲಿ ಗಂಗರ ರಾಜ್ಯಭಾರವನ್ನು ಹೊರತು ಪಡಿಸಿದರೆ, ತದನಂತರ ಸುಧೀರ್ಘ ಕಾಲ ಆಡಳಿತ ನಡೆಸಿದವರು ಹೊಯ್ಸಳರು. ಇವರ ಕಾಲವನ್ನು ಸುಮಾರು ಕ್ರಿ.ಶ. ೯೫೦ ರಿಂದ ಆರಂಭಿಸಿ ಕರ್ನಾಟಕ ಸಾಮ್ರಾಜ್ಯ ಉದಯದವರೆಗೆ ಅಂದರೆ ಕ್ರಿ.ಶ. ೧೩೩೬ರ ಆಸುಪಾಸಿನ ವರೆಗೆ ಗುರುತಿಸಬಹುದು. ಇವರ ಆಳ್ವಿಕೆಯ ಕಾಲದಲ್ಲಿ ಕ್ರಿ.ಶ. ೧೧೧೬ರಲ್ಲಿ ಹೊಯ್ಸಳ ವಿಷ್ಣುವರ್ಧನನು ಚೋಳರನ್ನು ಹಿಮ್ಮೆಟ್ಟಿಸಿ ತಲಕಾಡನ್ನು ಸಂಪೂರ್ಣ ಆಕ್ರಮಿಸಿ ಸಾಮ್ರಾಜ್ಯವನ್ನು ಭದ್ರಗೊಳಿಸಿದ್ದು ಒಂದು ಮೈಲಿಗಲ್ಲು. ಈ ಘಟನೆಯಿಂದ ಹೊಯ್ಸಳರನ್ನು ಕರ್ನಾಟಕದಲ್ಲಿ ಪ್ರಮುಖ ರಾಜವಂಶವೆಂದು ಗುರುತಿಸಲಾಯಿತು. ಹೊಯ್ಸಳ ವಿಷ್ಣುವರ್ಧನನ ನಂತರ ಈ ವಂಶದ ಯಾದಿಯಲ್ಲಿ ತೊಡಕಿಲ್ಲ. ಆದ್ದರಿಂದ ಈ ಪ್ರಬಂಧದಲ್ಲಿ ವಿಷ್ಣುವರ್ಧನನವರೆಗಿನ ಸಾಮಂತರ, ರಾಜರ ವಿವರಗಳಿಗೆ ಹೆಚ್ಚು ಗಮನಹರಿಸಲಾಗಿದೆ. ಈ ಕಾಲಘಟ್ಟ ತಲುಪಿದಾಗ ಸಾಮ್ರಾಜ್ಯದ ಗಡಿಸೀಮೆಯು ಪೂರ್ವದಲ್ಲಿ ನಂಗಲಿ, ಪಶ್ಚಿಮದಲ್ಲಿ ಬಾರಕೂರು, ಉತ್ತರದಲ್ಲಿ ಸಾವಿಮಲೆ, ದಕ್ಷಿಣದಲ್ಲಿ ಕೊಂಗುನಾಡು ಇವುಗಳವರೆಗೆ ಹಬ್ಬಿತ್ತು. ಇವುಗಳ ಮಧ್ಯೆ ಇದ್ದ ನಾಡನ್ನು ಹೊಯ್ಸಳರ ನಾಡೆಂದು ಗುರುತಿಸಲಾಗಿದೆ (EC: ೯. ಬೇಲೂರು : ೧೬. (ಕ್ರಿ.ಶ. ೧೧೧೭).

ಆರಂಭದಲ್ಲಿ ಹೊಯ್ಸಳರು ಶಶಕಪುರ ಅಂದರೆ ಚಿಕ್ಕಮಗಳೂರು ಜಿಲ್ಲೆಯ ಅಂಗಡಿಯ ಸಾಮಂತರು. ತಲಕಾಡನ್ನು ವಶಪಡಿಸಿಕೊಂಡು ಚೆನ್ನಕೇಶವನನ್ನು ಬೇಲೂರಿನಲ್ಲಿ ಪ್ರತಿಷ್ಠಾಪಿಸಿದ ಕಾಲದಲ್ಲಿ ಆಡಳಿತದಲ್ಲಿ ಸ್ಥಿರತೆ ಮೂಡಿತು. ಬೇಲೂರಿನ ಚನ್ನಕೇಶವ ದೇವಾಲಯದ ಪ್ರತಿಷ್ಠಾಪನೆಯ ವಿವರಗಳನ್ನೊಳಗೊಂಡ ಸುದೀರ್ಘ ಶಾಸನ ಹಾಗೂ ತಾಮ್ರಪಟವು ಕಾವ್ಯಮಯವಾಗಿದ್ದು, ಅಲ್ಲಿಯವರೆಗೆ ಲಭ್ಯವಿರುವುದು ಹೊಯ್ಸಳರ ಕೇವಲ ತುಂಡುಶಾಸನಗಳು. ಈ ತುಂಡು ಶಾಸಗಳನ್ನಿಟ್ಟುಕೊಂಡು ವಿದ್ವಾಂಸರು ಹೊಯ್ಸಳರ ಮೂಲ ಯಾದಿಯನ್ನು ರಚಿಸಿದ್ದಾರೆ. ಇವುಗಳನ್ನು ಇಲ್ಲಿ ಪರಿಶೀಲಿಸಲಾಗಿದೆ.

ತತೋ ದ್ವಾರಾವತೀನಾಥಾಃ ಪೊಯ್ಸಳಾದ್ವೀಪಿ ಲಾಂಛನಾಃ ಜಾತಾಶ್ಶಶಪುರೇತೇಷು ವಿನಯಾದಿತ್ಯಭೂಪತಿಃ" –ಬೇಲೂರಿನ ಚೆನ್ನಕೇಶವ ದೇವಾಲಯದ ಶಾಸನದಲ್ಲಿ ಹೊಯ್ಸಳ ವಂಶವು ವಿನಯಾದಿತ್ಯನಿಂದ ಆರಂಭಗೊಳ್ಳುತ್ತದೆ. ಹೊಯ್ಸಳರು ಪ್ರವರ್ಧಮಾನಕ್ಕೆ ಬರಲು ವಿನಯಾದಿತ್ಯ ಕಾರಣಪುರುಷನೆನಿಸಿದ. ವಿನಯಾದಿತ್ಯನ ಆಳ್ವಿಕೆ ಮತ್ತು ಜೀವಿತಾವಧಿ ಸುಧೀರ್ಘ ಕಾಲದ್ದು. ಇವನು ತನ್ನ ಮಗ ಎಱೆಯಂಗನೊಡಗೂಡಿ ರಾಜ್ಯವಾಳಿದ. ಎಱೆಯಂಗ ಸ್ವತಂತ್ರವಾಗಿ ರಾಜ್ಯಭಾರ ನಡೆಸಿದ್ದಕ್ಕಿಂತ ಹೆಚ್ಚು ಅವಧಿ ತಂದೆಯ ಬಲಗೈ ಭಂಟನಾಗಿ ಮೆರೆದ. ಆದ್ದರಿಂದ ಹೊಯ್ಸಳರ ಬಹುಪಾಲು ಶಾಸನಗಳು ವಿನಯಾದಿತ್ಯನಿಂದ ಆರಂಭಗೊಳ್ಳುತ್ತವೆ. ರಾಜರು ಬೆಳೆದಂತೆ ಅವರ ವಂಶದ ಪೂರ್ವಚರಿತ್ರೆಯೂ ಮರುಹುಟ್ಟು ಪಡೆಯುತ್ತವೆ ಹಾಗೂ ವಿಸ್ತಾರಗೊಳ್ಳುತ್ತವೆ. ಪೌರಾಣಿಕ ಹಿನ್ನೆಲೆಯನ್ನೂ ಒಪ್ಪಿಕೊಳ್ಳುತ್ತವೆ. ಅವರ ಪೂರ್ವಾಪರಗಳು ಸಂಸ್ಕೃತೀಕರಣಗೊಳ್ಳುತ್ತವೆ. ಹೊಯ್ಸಳರ ಕಥೆಯೂ ಇದೇ ಹಾದಿಯನ್ನು ತುಳಿದಿದೆ. ಶಶಕಪುರದಲ್ಲಿ ನೆಲಸಿದ್ದ ಹೊಯ್ಸಳರು ಮೂಲತಃ ಜೈನರು. ಆದರೆ ಶಾಸನಗಳಲ್ಲಿ ಇವರನ್ನು ಯದು ವಂಶದವರು

* ಪದ್ಮಪ್ರಭಾ, # ೮೨, ಬ್ಲಾಕ್ ೧೭, ಬ್ಯಾಂಕ್ ಕಾಲೋನಿ, ಶ್ರೀರಾಂಪುರ ೨ನೆಯ ಹಂತ, ಮೈಸೂರು-೫೭೦೦೨೩.

ಎನ್ನಲಾಗಿದೆ. ಕರ್ನಾಟಕ ಸಿಂಹಾಸನಾಧೀಶ್ವರರಾದ ವಿಜಯನಗರದವರೂ, ಮೈಸೂರು ಸಿಂಹಾಸನಾಧೀಶ್ವರರೂ ಯಾದವರನ್ನು ತಮ್ಮ ಮೂಲಕ ವಂಶದವರೆಂದು ಗುರುತಿಸಿ ಕೊಂಡಿದ್ದಾರೆ.

"ಜಳಜಾತೋದ್ಭವ ಪುತ್ರನತ್ರಿ ತದಪತ್ಯಂ ಸೋಮನಾ ಧಾರಿಣೀ
ತಿಳಕೋದ್ಭೂತ
ಪುರೂರವಂ ತದವನೀಪಾಲಾತ್ಮಜಾಯುರ್ಮಹೀ ತಳನಾಥ
ನ್ನಹುಷಂ
ಯಯಾತಿಯದು ತತ್ಖ್ಯಾತಾನ್ವಯೋರ್ವೀಶರೊಳ್ ಸಳನೆಂಬ
ನೃಪನುದ್ಭವಕರಂ
ಗಾಂಭೀರ್ಯ ರತ್ನಾಕರಂ...." (EC: ೯. ಅದೇ.,)

ಮೊದಲಿಗೆ ನಾಭಿಮೂಲದಲ್ಲಿ ಹುಟ್ಟಿದ ಬ್ರಹ್ಮ, ಬ್ರಹ್ಮನ ಪುತ್ರ ಅತ್ರಿ, ಅತ್ರಿಯಿಂದ ಸೋಮ ; ಸೋಮನ ಮಗ ಪುರೂರವ, ನಂತರ ಆಯು, ಆಯುವಿನಿಂದ ನಹುಷ, ನಹುಷನ ಮಗ ಯಯಾತಿ, ಯಯಾತಿಯಿಂದ ಯದು ಹಾಗೂ ಯದುವಂಶ ಈ ಯದುವಂಶದಲ್ಲಿ ಸಳ.

ಸಳನೆಂಬ ಅರಸ ಅಥವಾ ಸಾಮಂತ ಇಂದಿಗೂ ಪೌರಾಣಿಕ ವ್ಯಕ್ತಿಯಾಗಿ ಉಳಿದಿದ್ದಾನೆ.

"ಪೊಯಿಸಳನೆಂಬ ಬಿರುದ" ಎಂಬ ಒಕ್ಕಣಿಕೆಯೂ ಲಭ್ಯ. ಈ ಬಿರುದು ಮೂಡಲು ಮತ್ತೊಂದು ಕಥೆ, ಕಥಾನಕ ಹೆಚ್ಚು ಪ್ರಚಲಿತದಲ್ಲಿದೆ. ಈ ಕಥೆಯೂ ಹೊಯ್ಸಳರ ಸುದೀರ್ಘ ಶಾಸನಗಳಲ್ಲಿ ಕನ್ನಡದಲ್ಲಿ ಹಾಗೂ ಸಂಸ್ಕೃತದಲ್ಲಿ ಹಲವು ಬಾರಿ ಪ್ರಸ್ತಾಪನೆಗೊಂಡಿದೆ.

"ಸಳನೆಂಬ ಯಾದವಂ ಪೊಯ್ಸಳನಾದಂ ಶಶಕಪುರ
ವಾಸಂತಿಕೆಯುಜ್ವಳ
ಭವನದೊಳಗೆ ಪುಲಿಯಂ ಸೆಳೆಯಿಂ ಪೊಯ್ದುವನಿಂದಾಯ್ತು ಪೊಯ್ಸಳ
ವಂಶಂ.... (EC:X: ಅರಸೀಕೆರೆ: ೧೬೧, ಪುಟ ೨೧೯).
ಧ್ವಜಪಟದೊಳು ರಿಪ್ರಭೂಭೃತ್ ವ್ರಜಧುರದೊಳು ಹೊನ್ನಾಳಲ್ತೆ
ಪುಲಿಯಂ ಸೆಳೆಯುಂ ನಿಜಲಾಂಛನಮಾದವು"
[EC:V: ಚನ್ನರಾಯಪಟ್ಟಣ, ೨೧೦, ಪುಟ ೬೪೬]
ಸಳಶ್ಯೂರ ಚಕ್ರೇ ಶಶಕಪುರವೇ ವ್ಯಾಘ್ರನಿಹತಿಂ ಶಲಾಕಾವ್ಯಾಘಾತೈಃ
ಜನಮುನಿವರ ಪ್ರೇರಿತಮತಃ ತದಾದಿಸ್ತಜ್ಞಾಯದುಕುಲ ನೃಪಾ
ಹೊಯ್ಸಳ ಇತಿ ಪ್ರವರ್ತಂತೇ ನಾಮ್ನಾಪೃಥುತರ ಚಮೂರ
ಧ್ವಜಯುತಾಃ
[EC.X: ಅರಸೀಕೆರೆ, ೧೩೯, ಪುಟ ೧೭೯]
ಇದಿರೊಳದಿರ್ಚಿಮೇಲೆ ಪುಲಿ ಪಾಯ್ದೆಡೆ ವಿದ್ಯಾ ವಾಸಂತಿಕಾ ನಿವಾ
ಸದ ಜಿನಯೋಗಿರಾಜ ಮೊಲವಿಂದಭಿಮಂತ್ರಿಸಿ ನೀಡೆ, ಕೊಂಡು
ಕುಂ
ಚದಸೆಳೆಯಿಂದಂ ಪೊಡೆದು ಪೊಯಿಸಳನೆಂಬ ಭಿಧಾನಮಂ ನಿಜಾಂ
ಗದೊಳೆ ಮಾಡಿದಂ ಯದುಕುಲಾಗ್ರಣಿ ತುಂಗಭುಜಾಬಳಸಳಂ
[EC.X: ಅರಸೀಕೆರೆ, ೩೧೭, ಪುಟ ೩೮೮]

ಹೊಯ್ಸಳರು ಅಂಗಡಿ ಅಥವಾ ಶಶಕಪುರದಲ್ಲಿದ್ದ ಜೈನರು ಎನ್ನುವುದು ಸ್ಪಷ್ಟ. ಅವರ ಕುಲದೇವತೆ ವಾಸಂತಿಕಾ ದೇವಿ. ಇವರಿಗೆ ರಾಜಕೀಯವಾಗಿ ಮುಂದುವರೆಯಲು ಸ್ಥಳದಲ್ಲೇ ನೆಲಸಿದ್ದ ಜೈನಗುರುಗಳ ಕೃಪಾಶೀರ್ವಾದವಿತ್ತು.

ಅನವದ್ಯಂ ಮಂತ್ರವಿದ್ಯಂ ಪರಿಣತನಭಯಂ ದಿವ್ಯಯೋಗೀಂದ್ರ
ನೋರ್ವಂ
ತನಗಾತಂ ನಮ್ಮ ನಾಗಲ್ಸಳನೃಪನವನಂನೋಡಿ ಸಾಮ್ರಾಜ್ಯಮಂ
ಮಾ
ಳ್ಪನಿವಂಗೆನ್ನರ್ಕ್ಕಜೆಂದಂ ಶಶಕಪುರ ವಾಸಂತಿಕಾದೇವಿಯಂ ಪು
ರ್ವ್ಯಾನಿಧಾನಂಯುಕ್ತ ಪೂಜಾಪರಿಕರವಿಧಿಯಿಂ ಸಿಕ್ಷಳಂ ಸಾಧಿಪನ್ನಂ
[EC:X: ಅರಸೀಕೆರೆ, ೩೧೪, ಪುಟ ೩೭೯]

ಇವು ಹೊಯ್ಸಳ ಮೂಲವನ್ನು ವೈಭವೀಕರಿಸಿದ ಕೆಲವು ಶಾಸನೋಲ್ಲೇಖನಗಳು. ಹೊಯ್ಸಳರ ಮೊಟ್ಟಮೊದಲನೆಯ ಶಾಸನವೆಂದು ಪರಗಣಿಸಲ್ಪಟ್ಟ ಚಿಕ್ಕಮಗಳೂರು ಜಿಲ್ಲೆಯ ಮರಳೆ ಹೊಸಹಳ್ಳಿಯ ಶಾಸನವು ಎಂ.ಎ.ಆರ್. ಸಂಪುಟದಲ್ಲಿ ೧೯೩೨ರಲ್ಲಿ ಪ್ರಕಟವಾಗಿದ್ದು ಇದೊಂದು ವೀರಗಲ್ಲಾಗಿದೆ. ಈ ಶಾಸನವನ್ನು ಅರ್ಥೈಸುವಲ್ಲಿ ಕೊಂಚ ಅಸ್ಪಷ್ಟತೆಗಳು ಕಾಡುತ್ತವೆ. ಇದರ ಕಾಲವನ್ನು ವಿದ್ವಾಂಸರು ಕ್ರಿಶ. ೯೫೦ ಎಂದು ಪರಿಗಣಿಸಿದ್ದಾರೆ. ಈ ಶಾಸನದಲ್ಲಿ ಹೊಯ್ಸಳರ ಪೂರ್ವಜರ ಕೆಲವು ವಿವರಗಳಂತೂ ಲಭ್ಯ. 'ಪೊಯ್ಸಳ' ಎಂಬ ಮೊದಲ ಉಲ್ಲೇಖ ಇದರಲ್ಲಿದೆ. (EC:XI: ಚಿಕ್ಕಮಗಳೂರು, ೪೭.)

ಮಿಾನಜಗ್ಗಿರೆಯ ಕಲ್ನಟ್ಟುಮಜ್ಗಳ
ಸ್ವಸ್ತಿಶ್ರೀಸಾಮನ್ತ ರಾಮನ್ನಣ್ಣಿಕನ್ದ
ರ್ಪ್ಪಸಿರವುರದೆ ಅಣ್ಣಿಗನೊಳ್ಕಾದಿ
ಸತ್ತ ಅರಕೆಲ್ಲನ ಮಗ ಅವನ ಮ
ಮ ಪೊಯ್ಸಳ ಮಾರುಗಂ ಅವರಪಿಗೆಗೆ
ಅರಕೆಲ್ಲನ ಬೆಸದೊ ಮಹಾರಾಜನೊಳ್ಕಾದಿ
ಸತ್ತಕಲ್ಲ ಗಾವುಣ್ಡ ಚಾಮಾನ್ತಚೂಡಾಮ
ಣಿ ಚೆವಕೊಳ್ಗಣ್ಡ ಸಮರೈಕ ಪಾತ್ತ
ಮಾಬ್ರ್ಬಲರಾಮ ಶ್ರೀಮತ್ ಅ
ರಕೆಲ್ಲ ಕೊಟ್ಟ ಕೆಲ್ಲ ಗವುಣ್ಡ
ಜಗ್ಗಿ

ಇದು ಖಾನಂಗೆರೆಯ ವೀರಗಲ್ಲು. ಅನುನಾಸಿಕಗಳ ಬಳಕೆಯುಳ್ಳ ಹಳೆಗನ್ನಡದ ಪ್ರಭಾವವನ್ನು ಕಾಣುವ ಈ ಶಾಸನದಲ್ಲಿ ಗಂಗರ ಕಾಲದ ಶಾಸನಗಳ ಛಾಯೆ ಇದೆ. ಸಾಮಂತ ರಾಮನ್ನಣ್ಣಿ ಕಂದರ್ಪ, ಅಣ್ಣಿಗನೊಡನೆ ಕಾದು ಮರಣಿಸಿದ್ದಾನೆ. ಅರಕೆಲ್ಲನ ಮಗ, ಮೊಮ್ಮಗ (?) ಪೊಯ್ಸಳ ಮಾರುಗ, ಅರಕೆಲ್ಲನ ಅನುಜ್ಞೆಯಂತೆ ಕಾದು ಸತ್ತ (ವನು) ಕೆಲ್ಲಗಾವುಂಡ. ಸಾಮಂತ ಚೂಡಾಮಣಿ, ಚೆವಕೊಳ್ಗಂಡ,

ಸಮರೈಕಪಾತ್ರ, ಮಾರ್ಬಲರಾಮ (ಎಂಬ ಬಿರುದುಳ್ಳ) ಶ್ರೀಮತ್ ಅರಕೆಲ್ಲ ಕೆಲ್ಲಗಾವುಂಡಂಗೆ (ವೀರಗಲ್ಲು) ನೆಟ್ಟ (ದಾನವನ್ನು ನೀಡಿರಬಹುದು.) ಅರಕೆಲ್ಲ ಹೊಯ್ಸಳ ವಂಶದ ಮೂಲಪುರುಷನೆನಿಸಿದ್ದಾನೆ. ಇವನಿಗಿರುವ ಬಿರುದುಗಳನ್ನು ಗಮನಿಸಿದರೆ ಇವನು ಶೂರ ಸೇನಾನಿಯೂ ಹೌದು. ಸಾಮಂತ ಚೂಡಾಮಣಿ ಎನಿಸಿದ್ದ ಅರಕೆಲ್ಲ ಯಾರಿಗೆ ಸಾಮಂತನಾಗಿದ್ದೆ ಎಂದು ತಿಳಿಯದು. ಇವನ ಮಗನೆಂದು ಸಾಮಂತ ರಾಮನ್ನಣ್ಣಿ ಕಂದರ್ಪನನ್ನು ವಿದ್ವಾಂಸರು ಗುರುತಿಸುತ್ತಾರೆ. ಆದರೆ ಖಚಿತವಾಗದು. ಅದೇ ರೀತಿ ಪೊಯ್ಸಳ ಮಾರುಗನನ್ನು ಮೊಮ್ಮಗ (ಮಮ) ಎಂದಿದ್ದಾರೆ. ಇದೂ ಅಸ್ಪಷ್ಟ. ಅರಕೆಲ್ಲ, ರಾಮಣ್ಣಿ ಕಂದರ್ಪ, ಪೊಯ್ಸಳ ಮಾರುಗ ಇವರು ಹತ್ತಿರದ ಸಂಬಂಧಿಗಳು. ಸಧ್ಯಕ್ಕೆ ತಂದೆ, ಮಗ, ಮೊಮ್ಮಗ ಎಂದು ಪ್ರಶ್ನಾರ್ಥಕ ಚಿಹ್ನೆಯೊಂದಿಗೆ ಗುರುತಿಸಲಾಗಿದೆ. ಅಣ್ಣಿಗನನ್ನು ನೊಳಂಬರ ವಂಶದವನೆಂದು ಗುರುತಿಸಿದ್ದು ಅವನ ಕಾಲ (ಕ್ರಿ.ಶ. ೯೨೦–೯೪೦, ಕೃಷ್ಣಮೂರ್ತಿ. ಎಂ.ಎಸ್., ದಿ ನೊಳಂಬಾಸ್, ೧೯೮೦, ಮೈಸೂರು, ಪುಟ ೧೦೭) ಆದ್ದರಿಂದ ಈ ಶಾಸನದ ಕಾಲ ಕ್ರಿ.ಶ. ೯೪೦ ಎನ್ನಲಾಗಿದೆ. ಶಾಸನದ ಪ್ರಕಾರ ಕಲ್ಲಗಾವುಂಡ ಸತ್ತಿದ್ದಾನೆ. ಪೊಯ್ಸಳ ಮಾರುಗ ಮೃತನಾದನೇ ? ಖಚಿತವಾಗದು.

ಚಿಕ್ಕಮಗಳೂರಿನ ಮರಳೆಯಲ್ಲಿ ಮತ್ತೊಂದು ತುಂಡು ಶಾಸನವಿದೆ. ಅದರಲ್ಲಿ ಕೇವಲ

"ಸ್ವಸ್ತಿ ಶ್ರೀ ಅರಕೆಲ್ಲ...." ಎಂಬ ಒಕ್ಕಣೆ ಇದೆ. (EC.XI, ಚಿಕ್ಕಮಗಳೂರು, ೧೦೬) ಈ ಶಾಸನವೂ ಅರಕೆಲ್ಲನಿಗೆ ಸಂಬಂಧಿಸಿದ್ದು. 'ಅರಕೆಲ್ಲ'ನೆಂಬ ಹೆಸರು ಆ ಕಾಲದಲ್ಲಿ ಹೆಚ್ಚು ಬಳಕೆಯಲ್ಲಿತ್ತು. ಪ್ರೊ. ನೇಗೀಹಾಳ್‌ರವರು ಉದ್ಯಾವರದ ಶಾಸನಗಳಲ್ಲಿ ಅರಕೆಲ್ಲ ಎಂಬ ಹೆಸರನ್ನು ಗುರುತಿಸಿದ್ದಾರೆ. ಹಲ್ಮಿಡಿ ಶಾಸನದಲ್ಲಿರುವ 'ಸರಕಲ್ಲ' ಅರಕಲ್ಲ ಆಗಿರಲೂ ಸಾಧ್ಯ ಎಂಬ ವಾದವನ್ನು ಮಂಜುನಾಥ್ ಮಂಡಿಸಿದ್ದಾರೆ. ಇದರ ನಂತರ ಬೇಲೂರು ತಾಲ್ಲೂಕು ತೊಳಲುಪಿನ ಶಾಸನವನ್ನು ಗಮನಿಸಬೇಕು. [EC, IX, ಬೇಲೂರು, ೫೪೦/೫೪೦b, ಪುಟ ೪೭೪/೧೮೪೭.]

ಸ್ವಸ್ತಿ ಸಮಸ್ತ ಉತ್ತಮ ಬೆಸಗೆಯ
ಆರನೆಯ ಅಂಗೀರ ಸಂವತ್ಸರದ
ಸ್ವಸ್ತಿಶ್ರೀಮತು ಚೆಂಗನಡಗೋವಂ
ಹೊಶ್ಯಳ ಮಾರೆಯ ಸೊಸವೂರ ಆಳುತ್ತಿರೆ

ಶಾಸನದ ಲಿಪಿ ಸ್ವರೂಪವನ್ನಾಧರಿಸಿ ಇದನ್ನು ಹತ್ತನೆಯ ಶತಮಾನದ್ದು ಎಂದಿದ್ದಾರೆ. ಶಾಸನವು ಗುರುತಿಸುವ ಅಂಗೀರ(ಸ) ಸಂವತ್ಸರವು ಕ್ರಿ.ಶ. ೯೭೨ಕ್ಕೆ ಸರಿಯಾದುದೆಂದು ವಿದ್ವಾಂಸರು ತರ್ಕಿಸಿದ್ದಾರೆ. 'ಚಂಗನಾಡಗೋವ' ಎಂಬ ಉಲ್ಲೇಖ ಇವರು ಚೆಂಗಾಳ್ವರಿಗೆ ಅಧೀನರಾಗಿದ್ದು ಅವರನ್ನು ಉಳಿಸಿ ಬೆಳೆಸಿರುವ ಸಾಧ್ಯತೆಯನ್ನು ಸೂಚಿಸಿದೆ.

ವಿದ್ವಾಂಸ ಸೀತಾರಾಮ ಜಹಗೀರ್‌ದಾರ್ ಅವರ ಪ್ರಕಾರ ಈ ಶಾಸನದಲ್ಲಿ ಹೆಸರಿಸಲಾದ ಹೊಕ್ಕಳ ಮಾರೆಯ ಮತ್ತು ಪೊಯ್ಸಳ ಮಾರುಗನೂ ಭಿನ್ನ ವ್ಯಕ್ತಿಗಳಲ್ಲ. ಇವರೀರ್ವರೂ ಒಬ್ಬರೇ. ಮರಳೆ ಹೊಸಹಳ್ಳಿಯ ಶಾಸನದ ಪ್ರಕಾರ ಪೊಯ್ಸಳ ಮಾರುಗನೂ ಮೃತನಾಗಿದ್ದರೆ ಪುನಃ ಕ್ರಿ.ಶ. ೯೭೨ರ ಶಾಸನದಲ್ಲಿ ಪ್ರಸ್ತಾಪ ಅಸಾಧ್ಯ. ಹೊಯ್ಸಳ ಮಾರೆಯ ಸೊಸವೂರಿನಿಂದ ಆಳ್ವಿಕೆ ನಡೆಸುತ್ತಿದ್ದುದು ಶಾಸನದಲ್ಲಿ ಸ್ಪಷ್ಟ. ಸೊಸವೂರಿನ ನಂತರ ಹೊಯ್ಸಳರು ಬೇಲೂರಿನೆಡೆಗೆ ಧಾವಿಸಿದರು. ಆದ್ದರಿಂದ ಬೇಲೂರಿನ ಬಳಿ ಶಾಸನಗಳಲ್ಲಿ ವಿವರವಿದೆ. ಶಾಸನಗಳೇ ಅಲ್ಲದೆ ಕೆಲವೊಮ್ಮೆ ಕಾವ್ಯಗಳೂ ವಂಶಾವಳಿಯನ್ನು ಗುರುತಿಸುವಲ್ಲಿ ನೆರಗಾವುದುಂಟು. ಈ ರೀತಿ 'ಚಾವುಂಡರಾಯ ಪುರಾಣ' ಕಾವ್ಯವು ಹೊಯ್ಸಳ ವಂಶಾವಳಿ ಪ್ರಸ್ತಾಪದಲ್ಲಿ ಉಲ್ಲೇಖನೀಯ. ಈ ಕಾವ್ಯರಚನೆಯ ಕಾಲ ಕ್ರಿ.ಶ. ೯೭೮. ಈ ಕಾವ್ಯದಲ್ಲಿ ಬರುವ ಪ್ರಸ್ತಾವಗಳು ಕ್ರಿ.ಶ. ೯೭೪ರ ಹಿಂದಿನದು. ಗಂಗರ ಪ್ರಭಾವಿ ಸೇನಾನಿ ಮತ್ತು ಪ್ರಧಾನಿಯಾಗಿದ್ದ ಚಾವುಂಡರಾಯ ಹೊಯ್ಸಳರೊಂದಿಗೆ ಸೆಣಸಿದ ಚಿತ್ರಣ ಈ ಕಾವ್ಯದಲ್ಲಿದೆ. [ಸಂ. ಕಮಲಾ ಹಂಪನಾ/ಶೇಷಗಿರಿ ಕೆ.ಆರ್. (೧೯೮೩), ಬೆಂಗಳೂರು, ಪುಟ ೪೫೯].

"ವೈರಿಕುಳಕಾಳದಂಡಂ ನೃಪಕಾಮನ ಕೋಟೆಯೊಳ್ ರಾಜನೆಂಬದ
ಜನುಮಂ ಬಾಸನೆಂಬ
ಕಚೆಯನುಮಂ ಸಿವರನೆಂಬ ಜಟ್ಟಿಗನುಮಂ ಕೊಣಾಂಕನೆಂಬ
ಕಬ್ಬೊಗೊಂಡನು ಮಂ
ಪೊಯಿಸಳನೆಂಬ ಬಿರುದನುಮಂ ಪೃಥುವನೆಂಬ ಬಿರುದನುಮಂ
ಬಹನೆಂಬ ಪೂಣಿಗನುಮಂ
ಚಿಕ್ಕಗನುಮೆಂಬ ಪೂರ್ಗಾಯಿಗಳುಮಂ ಪೆರರುಂ ಕಲಿಗಳುಮಂ
ಬಲ್ಲಾಳ್ಗಳುಮಮೊಂದೆ
ಮೈಯೊಳ್‌ಪೆಣೆದಿರಿದು ಗೆಲ್ದಭುಜವಿಕ್ರಮನುಂ"

ಈ ಕಾವ್ಯದ ಗದ್ಯಭಾಗದಲ್ಲಿ ಬಿತ್ತರಗೊಂಡ 'ನೃಪಕಾಮನ ಕೋಟೆ' ಹಾಗೂ 'ಪೊಯಿಸಳನೆಂಬ ಬಿರುದ' ಎಂಬ ವಿವರಗಳು ಗಮನಾರ್ಹ. ನೃಪಕಾಮನೆಂಬ ಹೆಸರು ಪ್ರಮುಖವಾಗಿ ಕಂಡುಬರುವುದು ಹೊಯ್ಸಳರಲ್ಲಿ ಮಾತ್ರ. ಕ್ರಿ.ಶ. ೯೭೮ಕ್ಕೆ ಮುಂಚೆ ನೃಪಕಾಮನಿದ್ದ; ಅವನ ಅಧೀನದಲ್ಲಿ ಕೋಟೆಯೊಂದು ಇದ್ದು, ಅದು ನೃಪಕಾಮನ ಕೋಟೆ ಎನಿಸಿದೆ. ಚಾಮುಂಡರಾಯ ನುಗ್ಗಿದ ಕೋಟೆ ನೃಪಕಾಮನಕೋಟೆ. ಪೊಯ್ಸಳನೆಂಬ ಬಿರುದನೊಡನೆ ಸೆಣೆಸಿದ. ಕೋಟೆ ಎಲ್ಲಿದೆ ಎನ್ನುವುದು ಅಸ್ಪಷ್ಟ.

ಪೊಯ್ಸಳನೆಂಬ ಬಿರುದ ನೃಪಕಾಮ ನಾಗಿರಲು ಸಾಧ್ಯ, ಇವನು ಒಂದನೆಯ ನೃಪಕಾಮ. ಪೊಯ್ಸಳ ಮಾರುಗ, ಪೊಶಳಮಾರೆಯ, ಒಂದನೆಯ ನೃಪಕಾಮ. ಇವರನ್ನು ಒಂದು ಸಾಲಿನಲ್ಲಿ ಗುರುತಿಸಲು ಸಾಧ್ಯ. ಇವರ ಯಾದಿಯಲ್ಲಿ ಸಂಬಂಧಗಳ ಸುಳಿವಿಲ್ಲ.

ಕೆಲವೊಮ್ಮೆ ರಾಜವಂಶಗಳ ವಿವರಗಳನ್ನು ತಿಳಿಯ ಬೇಕಾದರೆ ಅವರೊಡನೆ ಸೆಣಸಿದ ಇತರ ರಾಜರುಗಳ, ಚಕ್ರವರ್ತಿಗಳ ಸಮಕಾಲೀನ ಶಾಸನಗಳನ್ನೂ ಪರಿಶೀಲಿಸಬೇಕು. ಅವರ ಜಯಾಪಜಯಗಳಲ್ಲಿ ಇತರರ ವಿವರಗಳೂ ಲಭ್ಯ. ಈ ರೀತಿ ಬೆಳಕಿಗೆ ಬಂದವನು ಮುಣ್ಡಪೊಯ್ಸಳ. ಶಾಸನಗಳನ್ನು ಸರಿಯಾಗಿ ಅರ್ಥೈಸದೆ ಕೆಲವರು ಇವನನ್ನು ವಿಕಲಾಂಗ ನೆಂದಿದ್ದಾರೆ. ಮುಣ್ಡಪೊಯ್ಸಳ ಎನ್ನುವುದು ಸಾಮಂತನ ಹೆಸರೆಂದು ಕ್ರಿ.ಶ. ೧೦೨೬ರ ಶಾಸನದಿಂದ ಖಚಿತವಾಗಿದೆ. ಇವನ ಕಾಲ ಕ್ರಿ.ಶ. ೧೦೦೬ರಿಂದ ೧೦೨೬.

ಮುಣ್ಡಪೊಯ್ಸಳ ಒಬ್ಬ ಪ್ರಸಿದ್ಧ ಸೇನಾನಿ. ಅವನ ಪರಾಕ್ರಮದ ಅರಿವಾಗುವುದು ಕಲಿಯೂರಿನ ಅಪ್ರಮೇಯನ ಶಾಸನದಿಂದ. ಹತ್ತನೆಯ ಶತಮಾನದ ಅಂತ್ಯದ ವೇಳೆಗೆ ಗಂಗರು ದುರ್ಬಲವಾಗಿ, ಚೋಳರು ಕಾವೇರಿಯನ್ನು ದಾಟಿ ಕರ್ನಾಟಕಕ್ಕೆ ಲಗ್ಗೆ ಇಡಲು ಪ್ರಯತ್ನಿಸುತ್ತಿದ್ದ ಕಾಲ. ಇಲ್ಲಿ ನೊಳಂಬರು, ಚೆಂಗಾಳ್ವರು, ಚಾಲುಕ್ಯರು ಹಾಗೂ ಇನ್ನಿತರ ತುಂಡು ಅರಸರು, ಸಾಮಂತರುಗಳು ಆಳ್ವಿಕೆ ನಡೆಸಿದ್ದರು.

ತಲಕಾಡಿನಲ್ಲಿ ಹರಿಯುವ ಕಾವೇರಿ ನದಿಯ ಆಚೆದಂಡೆಯಲ್ಲಿ ತಡಿಮಾಲಿಂಗಿ ಇದೆ. ಅದಕ್ಕೆ ಅನತಿ ದೂರದಲ್ಲಿ ಕಲಿಯೂರು ಎಂಬ ಊರಿದೆ. ಇದು ಹೆಸರಿಗೆ ತಕ್ಕಂತೆ ಒಂದು ಕಾಲಕ್ಕೆ ಕಲಿಗಳ ಊರು. (ಕ್ರಿ.ಶ. ೧೦೦೬ರಲ್ಲಿ ಇಲ್ಲಿ ಬೀಕರ ಯುದ್ಧ ನಡೆದಿತ್ತು. ಈ ಯುದ್ಧಲ್ಲಿ ಚೋಳರ ಸೇನಾನಿ ಅಪ್ರಮೇಯ ಜಯಶಾಲಿಯಾಗಿ ಜಯಸ್ತಂಭವನ್ನು ಕಡೆದು ನಿಲ್ಲಿಸಿದ. ಇದೊಂದು ವಿಸ್ತಾರವಾದ ಮಾಹಿತಿಯುಳ್ಳ ಶಾಸನ. ಕಲಿಯೂರಿನ ಗೋಪಾಲಕೃಷ್ಣ ದೇವಾಲಯದ ಬಳಿ ಇದೆ. ಯುದ್ಧದಲ್ಲಿ ಹಲವು ಸೇನಾನಿಗಳು ಮತ್ತು ಸಾಮಂತರು ಅಪ್ರಮೇಯನನ್ನು ಎದುರಿಸಿದ್ದಾರೆ. ಯುದ್ಧದ ಆಟಾಟೋಪ ಗಳನ್ನು ಬಣ್ಣಿಸುತ್ತಾ ಶಾಸನವು ಮುಣ್ಡಪೊಯ್ಸಳನನ್ನೂ ಗುರುತಿಸಿದೆ. ಮುಣ್ಡಪೊಯ್ಸಳನ ಅಸ್ತಿತ್ವ ಸಾಧಿತವಾದದ್ದು ಈ ಶಾಸನದ ವಿವರಗಳಿಂದ.

"ಬಲಯುತನಪ್ಪ ಪೊಯ್ಸಳನ ಅಹವದೊಳ್ ಅಟ್ಟಿ"– ಈ ಯುದ್ಧದಲ್ಲಿ ಹೊಯ್ಸಳರು ಕಾದಾಡಿದರು ಎನ್ನುವುದು ಸ್ಪಷ್ಟ "ಎಳಗಂ ಪೊಯ್ಸಳನೆಂಬ ಅನಂತ ಬಲರಂ ಜಿತ್ವಸ್ತದಿಂದ ಕಲಪೂರಲ್ ಪೊಣರ್ದು"–ಅಪ್ರಮೇಯನ ಮತ್ತೊಂದು ಹೆಸರು ಎಳಗ. ಇವನು ಹೊಯ್ಸಳಸೇನೆಯನ್ನು ಎದುರಿಸಿದ್ದಾನೆ.

ಗಂಡರಗಂಡ ಮುಣ್ಡ ಜಗಕಾರಿ ಬೀರುಗ ನಾಗವರ್ಮ ಮಾ
ಗುಂಡರ ಕಿಲ್ಲಮುತ್ತರ ನೊಂಬರ ಚನ್ನಿಗ ಪೊನ್ನ ನನ್ನಿಗ
ಮುಂಡರಿವರ್ಮರಾಜ ನರಗಂ ಸಿರಿಗಂ ಕಲಪೂರಮಾಳದೊಳ್
ಪೆಂಡಿರನಿಕ್ಕಿ ಓಡಿದವರ ಕುಲಮಾಣಿಕ್ಯ ಆಜಿರಂಗದೊಳ್
[EC:V: ತಿ. ನರಸಿಪುರ, ೨೨೦, ಪುಟ ೬೦೨–೬೦೩]

ಈ ಯುದ್ಧಲ್ಲಿ ಭಾಗಿಯಾದ ಹಲವು ಯೋಧರ, ಸಾಮಂತರ ಹೆಸರುಗಳಿವೆ. ಗಂಡರಗಂಡ ಮುಣ್ಡನೇ ಹೊಯ್ಸಳರ ಸಾಮಂತ. ಮುಣ್ಡಪೊಯ್ಸಳನೊಂದಿಗೆ, ಜಗಕಾರಿಗ ಬೀರುಗ, ನಾಗವರ್ಮ, ಮಾಗುಂಡರ ಕಿಲ್ಲ ಮುತ್ತರ, ನೊಂಬರ ಚನ್ನಿಗ, ಪೊನ್ನ, ನನ್ನಿಗರೂ ಜೊತೆಗೂಡಿ ಅಪ್ರಮೇಯನೊಡನೆ ಸೆಣಸಿದ್ದಾರೆ. ಬಹುಶಃ ಇವರೆಲ್ಲ ಸೋತು ಓಡಿಹೋಗಿದ್ದಾರೆ. ಹೊಯ್ಸಳರಲ್ಲಿ ಮುಣ್ಡನೆಂಬ ಸಾಮಂತನ ಅರಿವುಂಟಾಗುವುದು ಈ ಶಾಸನ ದಿಂದ. ಶಾಸನದ ಕಾಲ (ಕ್ರಿ.ಶ. ೧೦೦೭. ಚಾವುಂಡರಾಯನ ಪುರಾಣದ ನಂತರ ಕೆಲವೇ ವರ್ಷಗಳ ಅಂತರದಲ್ಲಿ ಕೇಳಿಬರುವ ಹೆಸರು ಮುಣ್ಡಪೊಯ್ಸಳ ಚಾವುಂಡರಾಯ ಪುರಾಣದಿಂದ ನೃಪಕಾಮನೆಂಬ ಹೊಯ್ಸಳ ಬಿರುದನಿದ್ದ ಎನ್ನುವುದು ಖಚಿತ. ನಂತರ ಬೆಳಕಿಗೆ ಬಂದವನು ಮುಣ್ಡಪೊಯ್ಸಳ.

ಹನ್ನೊಂದನೆಯ ಶತಮಾನದ ಆರಂಭದಿಂದ ಹೊಯ್ಸಳರ ಯಾದಿಯಲ್ಲಿ ಸಾಮಂತರನ್ನು ಮತ್ತು ಅರಸರನ್ನು ಖಚಿತವಾಗಿ ಗುರುತಿಸಲು ಸಾಧ್ಯ. ಮುಣ್ಡ ಪೊಯ್ಸಳನ ಆಳ್ವಿಕೆಯ ಅಂತ್ಯಭಾಗವನ್ನು ತಿಳಿಸಲು ಮತ್ತೊಂದು ಶಾಸನವಿದೆ. ಅದು ಅರಕಲಗೂಡು ತಾಲ್ಲೂಕು ಹೆಣ್ಣೂರು ಶಾಸನ. ಇದೊಂದು ವೀರಗಲ್ಲು. ಕಾಲಮಾನ (ಕ್ರಿ.ಶ. ೧೦೨೬).

"ಸ್ವಸ್ತಿ ಸಖವರ್ಷ ೯೪೭ನೆಯ ಕ್ರೋಧನ ಸಂವತ್ಸರದ
ಮಾಘಮಾಸದ
ಪುಣ್ಣಮೆಯಂದು ಶ್ರೀರಾಜೇಂದ್ರ ಚೋಳಕೊಂಗಾಳ್ವಂ ಮುಣ್ಡ
ಪೊಯ್ಸಳನ
ಮೇಲೆ ನಡೆದು ಮಣ್ಣೆಯ ಕಾಳಗಮುಂಗೆಲ್ದು ಇಗ್ಗ್ರಡಲಕೋಟೆಯಂ ಕೊಳ್ವನ್ದು ಪೆನ್ನೂರ ಕೊಂಗಳಾಚಾರಿಯ ಮಗಂ ಜಾಕವಸತ್ತ ಅವನ ತಾಯ್ವೆನ್ದಕಟ್ಟಿಕಲ್ಲ ನಿಱಿಸಿದಳ್" ಅರಕಲಗೂಡು, [EC, VIII ೧೪೩, ಪುಟ ೧೯೫].

ಹೆಣ್ಣೂರು ಶಾಸನ ಪ್ರಕಾರ ಕ್ರಿ.ಶ. ೧೦೨೬ರಲ್ಲಿ ರಾಜೇಂದ್ರ ಚೋಳ ಕೊಂಗಾಳ್ವನಿಗೂ ಮುಣ್ಡಪೊಯ್ಸಳನಿಗೂ ಮಣ್ಣೆಯಲ್ಲಿ ಯುದ್ಧ ನಡೆದಿದೆ. ಈ ಯುದ್ಧಲ್ಲಿ ಇಗ್ಗ್ರಡಲಕೋಟೆ ರಾಜೇಂದ್ರಚೋಳನ ವಶವಾಗಿದೆ. ಹೆಣ್ಣೂರ ಕೊಂಗಳಾಚಾರಿಯ ಮಗ ಜಾಕವ ಮರಣ ಹೊಂದಿದ್ದಾನೆ. ಅವನ ತಾಯಿ ವೆಂದಕಟ್ಟಿ ವೀರಗಲ್ಲು ನೆಡಿಸಿದ್ದಾಳೆ.

ಯುದ್ಧ ನಡೆದ ಸ್ಥಳ ಮಣ್ಣೆ ಯಾವುದು ? ಖಚಿತ ಉತ್ತರವಿಲ್ಲ. ಇಗ್ಗರಡಲ ಕೋಟೆ ಯಾವುದು ? ತಿಳಿಯದು. ಬೆಲೂರು ತಾಲ್ಲೂಕಿನಲ್ಲಿ ಅಗ್ಗಡಲು ಎಂಬ ಸ್ಥಳವಿದೆ. ಅಲ್ಲಿ ಹಲವಾರು ವೀರಗಲ್ಲುಗಳಿವೆ. ಇದು ಇರ್ಗ್ಗಡಲು ಆಗಿರಲು ಸಾಧ್ಯವೇ ? ಇದು ಕೇವಲ ಊಹೆಯಷ್ಟೆ ಇಲ್ಲಿಯ ಶಾನಸದಲ್ಲಿ ಈ ಪ್ರಾಚೀನ ದೊರೆಯದು. ಈ ವೀರಗಲ್ಲುಗಳಲ್ಲಿ 'ಬಳ್ಳುಗುಪ್ಪೆ, ಬಳಿಗುಪ್ಪೆ' ಎಂಬ ಉಲ್ಲೇಖವಿದೆ. ಕಲಿಯೂರು ಶಾಸನದಲ್ಲಿ 'ಬೆಳ್ಗುಪ್ಪನೀಚೋಜೆಗ' ಎಂಬ ಸೇನಾನಿಯ ಹೆಸರಿದೆ. ಚೋಜೆಗ ಶಾಸನದ ಬೆಳುಗುಪ್ಪದ ಸಾಮಂತನಿರಬಹುದು. ಹೆಣ್ಣೂರು ಶಾಸನದಿಂದ ಖಚಿತವಾಗುವ ಅಂಶ ಕ್ರಿ.ಶ. ೧೦೨೬ರವರೆಗೆ ಮುಣ್ಡಪೊಯ್ಸಳ ಇದ್ದ ಎಂದು. ಆದ್ದರಿಂದ ಮುಣ್ಡಪೊಯ್ಸಳನ ಕಾಲ ಕ್ರಿ.ಶ. ೧೦೦೬ರಿಂದ ೧೦೨೬ರವರೆಗೆ. ಯುದ್ಧಲ್ಲಿ ಸೋಲನ್ನು ಅನುಭವಿಸಿದ ಮಾಹಿತಿಗಳಿಂದಲೇ ಇವನನ್ನು ಗುರುತಿಸಲು ಸಾಧ್ಯವಾಗಿದೆ. ಸಕಲೇಶಪುರ ತಾಲ್ಲೂಕು ರಾಜೇಂದ್ರಪುರ ಶಾಸನವು ಕ್ರಿ.ಶ. ೧೦೨೨-೨೩ರಲ್ಲಿ ನೃಪಕಾಮ ಪೊಯ್ಸಳನಿಗೂ ರಾಜೇಂದ್ರ ಚೋಳನಿಗೂ ಯುದ್ಧ ನಡೆದದ್ದನ್ನು ಸೂಚಿಸಿದೆ. ಶಾಸನದ ವಿವರ ಇಂತಿದೆ. [EC:IX, ಸಕಲೇಶಪುರ, ೩೪].

ಓಂ ಸ್ವಸ್ತಿಸಕ ವರ್ಷ ೯೪೪ನೆಯ ದುಂದುಬಿ
ಸಂವತ್ಸರ.....ರ ಬಹುಳ ಪಾಡಿವ
ಶ್ರೀಮತು ರಾಜೇಂದ್ರ ಚೋಟಿ ಪೃಥುವೀಮಹಾರಾಜಂ
ನೃಪಕಾಮಪೊಯ್ಸಳನಲ್ಲಡಿಮಾದ ಕಲ್ಲಲ್...
ಪೊಯ್ಸಳನಾರನಂ.....ಕನ್ನಮ್ಮನವರಲ್ಕೂಡಿ
ಮಹಾರಾಜನ ಬೆಸದಲ್ ಕನ್ನಮ್ಮನ ಕುದುರೆಯಂ
ಪಣೆದಿಜೆದು ಪಡೆವಳ ಜೋಗಯ್ಯ ಸರ್ಗ್ಗಕೆ ಸಂದ....

ಈ ಶಾಸನದ ಅರ್ಥ ಕೊಂಚ ಅಸ್ಪಷ್ಟ. ಮುಣ್ಡಪೊಯ್ಸಳನ ನಂತರ ಗುರುತಿಸಲ್ಪಡುವವನು ನೃಪಕಾಮ ಮಹಾರಾಜ. ಈ ಶಾಸನದಲ್ಲಿ ಇವನನ್ನು ನೃಪಕಾಮ ಪೊಯ್ಸಳನೆಂದಿದೆ. ನೃಪಕಾಮ (ಕ್ರಿ.ಶ. ೧೦೨೨ರಲ್ಲಿದ್ದ. ಕ್ರಿ.ಸ. ೧೦೨೭ರಲ್ಲಿ ನೃಪಕಾಮ ಮಹಾರಾಜನೆನಿಸಿದ. ಈ ಅವಧಿಯಲ್ಲಿ ಮಣ್ಡಪೊಯ್ಸಳ ಇಬ್ಬರೂ ಇದ್ದರು ಎನ್ನುವುದು ಖಚಿತ. ಯುದ್ಧದಲ್ಲಿ ಕನ್ನಮನ ಕುದುರೆಯನ್ನು ಕೊಂದು ಜೋಗಯ್ಯ ಮಡಿದಿದ್ದಾನೆ. ಅವನಿಗೆ ವೀರಗಲ್ಲು ನಿಲ್ಲಿಸಲಾಗಿದೆ. ಕನ್ನಮ ಯಾರು ? ತಿಳಿದಿಲ್ಲ. ಶಾಸನದಲ್ಲಿರುವ ಎರಡನೆಯ 'ಮಹಾರಾಜ' ಉಲ್ಲೇಖ ಯಾರಿಗೆ ಸಂಬಂಧಿಸಿದ್ದು ? ಗುರುತಿಸಲಾಗದು. ರಾಜೇಂದ್ರಪುರದ ನೃಪಕಾಮ ಮಹಾರಾಜನ ಶಾಸನ ಇಂತಿದೆ. (ECIX: ಸಕಲೇಶಪುರ, ೩೫)

[ಶ]ಕನೃಪಕಾಳಾತೀತ ಸಂವತ್ಸರಂ
...ನೆಯ ಪ್ರಭಾವ ಸಂವತ್ಸರಂ ಪ್ರ
....ತ್ತಿರೆ ತದ್ವರಿಷಾಭ್ಯಂತರದ ಪೌಷ
ದಸುದ ಪಚ್ಚಮಿ ಬೃಹಸ್ಪತಿ
......ಬನವಾಸಿಯ ಮೇಲೆ ಬಿಳ್ದುಕಾದುತ್ತಿ
ರೆ ಶ್ರೀಮನ್ ನೃಪಕಾಮ ಮಹಾರಾಜನ ಬೆಸ
...ಳ್ಳಿಯ ಕೆಳೆಯಬ್ಬೆಯ ಮಗ ಮಾರಾಜ
....ಕೊಸ್ಸುಸತ್ತಡೆ....

ಇದೂ ವೀರಗಲ್ಲು ಶಾಸನವೇ. ಕಾಲ ಕ್ರಿ.ಶ. ೧೦೨೭. ನೃಪಕಾಮನನ್ನು ಮಹಾರಾಜನೆಂದು ಗುರುತಿಸಿದೆ. ಮುಣ್ಡಪೊಯ್ಸಳನ ನಂತರ ನೃಪಕಾಮ ಮಹಾರಾಜ. ಹೊಯ್ಸಳರು ಕ್ರಿ.ಶ. ೯೪೦ರಿಂದ ೧೦೨೬ರವರೆಗೆ ಸಾಮಂತರು. ನಂತರ ಮಹಾರಾಜ, ಮಹಾಮಂಡಲೇಶ್ವರ ಎಂದು ಗುರುತಿಸಿಕೊಂಡಿದ್ದಾರೆ. ನೃಪಕಾಮ ಪ್ರವರ್ಧಮಾನಕ್ಕೆ ಬಂದು ಒಂದೆರಡು ವರ್ಷ ಗತಿಸಿರಬಹುದು.

ನೃಪಕಾಮ ಮಹಾರಾಜನವರೆಗೆ ಹೊಯ್ಸಳ ಸಾಮಂತರುಗಳ ಪರಸ್ಪರ ಸಂಬಂದ ಅಸ್ಪಷ್ಟ. ಇವರನ್ನು ಕಾಲರೀತ್ಯಾ ಗುರುತಿಸಬಹುದೇ ವಿನಃ ಸಂಬಂಧಗಳನ್ನು ವಿವರಿಸಲು ಆಗದು. ನೃಪಕಾಮನ ನಂತರ ಆಳ್ವಿಕೆ ನಡೆಸಿದವನು ವಿನಯಾದಿತ್ಯ. ಇವನ ಆಳ್ವಿಕೆ ಕ್ರಿ.ಶ. ೧೦೪೮ರಿಂದ ಎಂದು ವಿದ್ವಾಂಸರು ಗುರುತಿಸಿದ್ದಾರೆ. ಇದಕ್ಕಾಗಿ ಕೃಷ್ಣರಾಜಪೇಟೆಯ ತೊಣಚಿಯ ಶಾಸನವನ್ನು ಆಧರಿಸುತ್ತಾರೆ. [EC.VI, ಕೆ.ಆರ್. ಪೇಟೆ, ೫೦, ಪುಟ ೩೭].

ಶ್ರೀಶ್ವಸ್ತಿಶ್ರೀಮತು ಸಖವರ್ಷ ತೊಂಬಯಿನೂಜಿನೀಳ
ಸರ್ವಜಿತು ಸಂವತ್ಸರದ ಆದಿವಾರಂ ಶ್ರೀಮನುಮಹಾಮಣ್ಡಳೇಶ್ವರ
ತ್ರಿಭುವನಮಲ್ಲ[ಪೊ]ಯ್ಸಳದೇವ ರಾಜ್ಯಂ ತಲಕಾಡು ಪಟ್ಟಣಮೆ
ಎಡದಜೆ ಸಾಯಿರಮಂ ಕಿಜುನಗರ[ಮುಂ]ಕಳ್ಬಪ್ಪುಸಾಯಿರಮಂ...

ಶಕವರ್ಷ ೯೫೪ಕ್ಕೆ ಸಮನಾದುದು ಕ್ರಿ.ಶ. ೧೦೩೨. ಸರ್ವಜಿತು ಸಂವತ್ಸರಕ್ಕೆ ಹೊಂದಲಾರದು. ಈ ಸಂವತ್ಸರಕ್ಕೆ ಸಮನಾದುದು ಕ್ರಿ.ಶ. ೧೦೪೮, ೪೯. ಆದ್ದರಿಂದ ಶಾಸನಕಾಲ ೧೦೪೮,೪೯ ಎಂದು ವಿದ್ವಾಂಸರು ನಿರ್ಣಯಿಸಿದ್ದಾರೆ. ಹೊಯ್ಸಳ ದೇವನೆಂದು ಶಾಸನಗಳಲ್ಲಿ ವಿನಯಾದಿತ್ಯನೂ ಅವನ ಮಗ ಎಜೆಯಂಗನೂ ಗುರುತಿಸಲ್ಪಡುತ್ತಾರೆ. ಮೊದಲು ಗುರುತಿಸಿದ್ದು ವಿನಯಾದಿತ್ಯನನ್ನು. ಆದ್ದರಿಂದ ಕ್ರಿ.ಶ. ೧೦೪೮, ೪೯ರ ಶಾಸನ ವಿನಯಾದಿತ್ಯನನ್ನು ಗುರುತಿಸುತ್ತದೆ. ನೃಪಕಾಮ ಮತ್ತು ವಿನಯಾದಿತ್ಯರ ತಂದೆ ಮಗನ ಸಂಬಂಧ ಹಳೇಬೀಡಿನ ಶಾಸನದಲ್ಲಿ ವ್ಯಕ್ತವಾಗಿದೆ. [EC:IX, ಬೇಲೂರು, ೩೩೮, ಕ್ರಿ.ಶ. ೧೦೭೨, ಪುಟ ೩೧೭).

ನೃಪಕಾಮ ಪೊಯ್ಸಳನಂದನಂ ವಿನಯಾದಿತ್ಯಂ ಪೊಯ್ಸಳನೆನಿಸಿ
ಚಿರಂಗಂಗವಾಡಿಯಂ ಪಾಳಿಸುತುಂ....
ರಕ್ಕಪವೊಯ್ಸಳನುಗ್ರಚಳಕ್ಕಂಯಾದವಕುಲಾಂಬುಜಾರ್ಕ....

ಈ ಶಾಸನ ಕಾಲ ಕ್ರಿ.ಶ. ೧೦೬೨–೬೩. ಗಂಗವಂಶದ ಕೊನೆಯ ಕುಡಿ ರಕ್ಕಸಗಂಗ. ಇವನ ಕಾಲ ಕ್ರಿ.ಶ. ೯೮೫–೧೦೨೪. (ಪ್ರಧಾನಿ ಚಾವುಂಡರಾಯನ ನಂತರ ಗಂಗರ ಶಕ್ತಿ ಪೂರ್ಣ ಕ್ಷೀಣಿಸಿದ್ದು ರಕ್ಕಸಗಂಗ ಹೆಸರಿಗಷ್ಟೇ ರಾಜನಾಗಿದ್ದ. ಗಂಗರಾಜ್ಯವನ್ನು ವಶಪಡಿಸಿಕೊಂಡವನು ವಿನಯಾದಿತ್ಯ. ಇವನು ಚಾಲುಕ್ಯರ ಅಧಿರಾಜತ್ವವನ್ನು ಒಪ್ಪಿಕೊಂಡು ಗಂಗವಾಡಿಯನ್ನು ಆಳಿದ.

ವಿನಯಾದಿತ್ಯ ಕೊಂಕಣವನ್ನೂ, ಮಲೆನಾಡಿನಗರನ್ನೂ ಮುತ್ತಿ ವಶ ಮಾಡಿಕೊಂಡಿದ್ದನ್ನು ಹೊಯ್ಸಳರ ಮುಂದಿನ ಶಾಸನಗಳು ಸಮರ್ಥವಾಗಿ ಚಿತ್ರಿಸಿವೆ. ವಿನಯಾದಿತ್ಯನ ಮಗ ಎಜೆಯಂಗ. ಇವನನ್ನು (ಕ್ರಿ.ಶ. ೧೦೬೩ರಲ್ಲಿ ಬೀರೂರು ಶಾಸನ ಹೆಸರಿಸಿದೆ. "(ಶ್ರೀಮನ್ಮಹಾಮಂಡಳೇಶ್ವರ ತ್ರಿಭುವನಮಲ್ಲ ಪೊಯ್ಸಳ ದೇವರುಂ ಕುಮಾರನೆಜೆಯಂಗ ದೇವರು ಮಲೆವಿಷಯ ಮೊದಲಾಗಿ ಗಂಗಮಂಡಳ ತೊಂಬತ್ತಾಱು ಸಾವಿರಮುಮನೇಕಚ್ಛತ್ರ ಛಾಯಿಯಿಂ ಪ್ರತಿಪಾಳಿಸುತ್ತ...." (EC:XII, ಕಡೂರು, ೧೪೦)

ಭೋಜನಧಾರಾನಗರಿಯನ್ನು ಮುತ್ತಿ ದಿಗ್ವಿಜಯ ಸಾಧಿಸಿದವನು ಎಜೆಯಂಗ. ಹೊಯ್ಸಳರಲ್ಲಿ ಅತಿ ಹೆಚ್ಚು ಕಾಲ ರಾಜ್ಯಭಾರ ನಡೆಸಿದವನು ವಿನಯಾದಿತ್ಯ. ಎಜೆಯಂಗ ಇವನಿಗೆ ಬೆಂಬಲವಾಗಿ ನಿಂತು ರಾಜ್ಯ ವಿಸ್ತರಣದಲ್ಲಿ ಪ್ರಮುಖ ಪಾತ್ರವಹಿಸಿದೆ. ಕ್ರಿ.ಶ. ೧೦೬೩ರ ಶಾಸನ ಕುಮಾರ ಎಜೆಯಂಗನೆಂದೂ, ಕ್ರಿ.ಶ. ೧೯೫ರ ಶಾಸನವು ಯುವರಾಜನೆಂದೂ ಹೆಸರಿಸಿದೆ. ಕ್ರಿ.ಶ. ೧೯೮ರ ಬೇಲೂರು ತಾಲ್ಲೂಕು ರನ್ನಘಟ್ಟದ ಶಾಸನವು ವಿನಯಾದಿತ್ಯ ಅಧಿಕಾರದಲ್ಲಿದ್ದುದನ್ನು ಸ್ಪಷ್ಟಪಡಿಸಿದೆ. ಆದರೆ ಕ್ರಿ.ಶ. ೧೯೪ರ ಶ್ರವಣಬೆಳಗೊಳದ ಹತ್ತಿರದ ಹಳೆಬೆಳಗೊಳ ಶಾಸನ ಎಜೆಯಂಗ ಸ್ವತಂತ್ರವಾಗಿ ನಿರ್ವಹಿಸುತ್ತಿದ್ದುದನ್ನು ಬಣ್ಣಿಸಿದೆ. ಶ್ರವಣಬೆಳಗೊಳ, (EC:II: ೫೬೮, ಪುಟ ೩೫೧) ಆದ್ದರಿಂದ ಎಜೆಯಂಗನನ್ನು ಕ್ರಿ.ಶ. ೧೯೪ರಿಂದಲೇ ಗುರುತಿಸಲು ಸಾಧ್ಯ. ವಿನಯಾದಿತ್ಯ ಕ್ರಿ.ಶ. ೧೦೪೮ರಿಂದ ೧೯೩ರ ವರೆಗೆ ರಾಜ್ಯಭಾರ ಮಾಡಿ, ತದನಂತರವೂ ಹಲವು ವರ್ಷಗಳು ಜೀವಿಸಿದ್ದ. ಇದೊಂದು ದಾಖಲೆಯೇ. ಎಜೆಯಂಗ ತಂದೆಯೊಡನೆ ೨೦ ವರ್ಷ ಕಾಲ ರಾಜ್ಯವನ್ನು ಮುನ್ನಡೆಸಿದ. ಇದೂ ದೀರ್ಘಕಾಲವೇ ಆಗಿದೆ. ಎಜೆಯಂಗನ ನಂತರ ಪಟ್ಟಕ್ಕೆ ಬಂದವನು ಬಲ್ಲಾಳ. ಕೃಷ್ಣರಾಜಪೇಟೆ ತಾಲ್ಲೂಕು ಮಾರುಕೋನಹಳ್ಳಿ ಕ್ರಿ.ಶ. ೧೧೦೫ರ ಶಾಸನ ಬಲ್ಲಾಳ ರಾಜ್ಯವಾಳಿದ್ದನ್ನು ತಿಳಿಸಿದೆ. ಬಲ್ಲಾಳನ ಆಳ್ವಿಕೆಯೂ ಕಡಿಮೆ ಅವಧಿಯದು. ಇವನ ನಂತರ ಆಳ್ವಿಕೆ ನಡೆಸಿದವನು ವಿಷ್ಣುವರ್ಧನ.

ವಿನಯಾದಿತ್ಯನ ಪಟ್ಟಮಹಿಷಿ ಕೆಳಯಬ್ಬರಸಿ. ಇವರ ಮಗ ಎಜೆಯಂಗ. ಎಜೆಯಂಗನ ಅರಸಿ ಏಚಲದೇವಿ. ಇವರಿಗೆ ಮೂವರು ಪುತ್ರರು; ಬಲ್ಲಾಳ, ವಿಷ್ಣುವರ್ಧನ, ಉದಯಾದಿತ್ಯ. ನೃಪಕಾಮ, ವಿನಯಾದಿತ್ಯ, ಎಜೆಯಂಗರ ಕಾಲದಲ್ಲಿ ಹೊಯ್ಸಳರ ಸಾಮ್ರಾಜ್ಯ ಸಾಕಷ್ಟು ವಿಸ್ತರಿಸಿತ್ತು. ಇವರ ಪರಿಶ್ರಮದಿಂದಾಗಿ ವಿಷ್ಣುವರ್ಧನನಿಗೆ ದಕ್ಕಿದ್ದು ಚಿನ್ನದ ಹರಿವಾಣ. ತಲಕಾಡಿನಲ್ಲಿ ಚೋಳರ ಉಪಟಳ ಮುಂದುವರೆದಿತ್ತು. ವಿಷ್ಣುವರ್ಧನ ಇವರನ್ನು ಶಾಶ್ವತವಾಗಿ ಕಾಂಚಿಯ ವರೆಗೆ ಹಿಂದಿಕ್ಕಿ ಕಾಂಚಿಗೊಂಡ, ತಲಕಾಡುಗೊಂಡ ಎಂಬ ಬಿರುದು ಧರಿಸಿದ. ತಲಕಾಡಿನಲ್ಲಿ ಕೀರ್ತಿನಾರಾಯಣನನ್ನೂ, ಬೇಲೂರಿನಲ್ಲಿ ವಿಜಯನಾರಾಯಣ ಹಾಗೂ ಚೆನ್ನಕೇಶವನನ್ನು ಪ್ರತಿಷ್ಠಾಪಿಸಿದ. ಇದು ಹೊಯ್ಸಳ ವಂಶದ ಬಗ್ಗೆ ಲಭ್ಯವಿರುವ ಮೂಲ ಮಾಹಿತಿಯಾಗಿದೆ. ಈ ದಿಸೆಯಲ್ಲಿ, ಈ ಹಿಂದೆ ಸಂಶೋಧನೆಯನ್ನು ಕೈಗೊಂಡ ಹಿರಿಯ ವಿದ್ವಾಂಸರಾದ ಡರೆಟ್, ವಿಲಿಯಂ ಕೊಲ್ಹೊ, ಹುಲ್ಲೂರು ಶ್ರೀನಿವಾಸ ಜೋಯಿಸ್, ಶೆಟ್ಟರ್, ಜಹಗೀರ್‌ದಾರ್ ಇವರ ಶ್ರಮವನ್ನು ನೆನೆಯಬೇಕು. ಇವರ ಅಧ್ಯಯನಗಳನ್ನೂ ಗಮನದಲ್ಲಿರಿಸಿ ಕೊಂಡು ಈ ಪ್ರಬಂಧವನ್ನು ರಚಿಸಲಾಗಿದೆ.

ಪೂರಕ ಟಿಪ್ಪಣಿಗಳು

ಹೊಯ್ಸಳ ವಂಶದ ಯಾದಿಯನ್ನು ಗುರುತಿಸುವಲ್ಲಿ ಶಾಸನಗಳು ಗಮನಾರ್ಹ ಪಾತ್ರವಹಿಸಿದ್ದು ಮೇಲ್ಕಾಣಿಸಿದ ಶಾಸನಗಳಲ್ಲದೆ ಇನ್ನಿತರ ಕೆಲವು ಶಾಸನಗಳು ನೀಡುವ ಮಾಹಿತಿಯಿಂದ ಯಾವ ಖಚಿತ ನಿರ್ಧಾರಕ್ಕೂ ಬರಲು ಸಾಧ್ಯವಾಗಿಲ್ಲ. ಅವುಗಳಲ್ಲೊಂದು ಹಳೇ ಉಪ್ಪಳ್ಳಿಯ (ಚಿಕ್ಕಮಗಳೂರು ಜಿಲ್ಲೆ) ೫೮ ಸಾಲುಗಳುಳ್ಳ ದೀರ್ಘ ಶಾಸನ. ಶಾಸನದಲ್ಲಿ ಎರಡು ತೇದಿಗಳಿವೆ. ಕ್ರಿ.ಶ. ೧೦೮೩ ಹಾಗೂ ೧೧೩೬. ವಿಷ್ಣುವರ್ಧನ ತನ್ನ ಮಕ್ಕಳಾದ ಬಲ್ಲಾಳ ಮತ್ತು ವೀರನರಸಿಂಹರೊಡಗೂಡಿ ರಾಜ್ಯಭಾರ ಮಾಡುತ್ತಿದ್ದ ಕಾಲದ್ದು. ಈ ಶಾಸನದಲ್ಲಿ ಆರಂಭದ ಹೊಯ್ಸಳರ ಯಾದಿಯ ವಿವರ ಇಂತಿದೆ : [ನಾಗರಾಜರಾವ್ ಎಚ್.ಎಂ (೨೦೦೮). ಶಿವಶೋಧ, ರಚನಾ ಪ್ರಕಾಶನ, ಮೈಸೂರು, ಪುಟ ೭೨–೭೬].

"ಮಲೆಪರೊಳುಗಂಡಾದ್ಯನೇಕ ನಾಮಾವಳೀ ವಿರಾಜಮಾನರಪ್ಪ
ಮಾರ ವೊಯ್ಸಳದೇವ
ನಾತನಿಂಬಳಿಕ ॥ ಎಪ್ಪಿಡಿವೊಯ್ಸಳ ಎಜೆಯಂಗ ವೊಯ್ಸಳ ತಲಕಾಡು
ವೊಯ್ಸಳ
ನುದಯಾದಿತ್ಯ ಕೊಂಟ ವಿನಯಾದಿತ್ಯ ನ್ರಿಪಕಾಮ ಹಿರಿಯ
ಹೊಯ್ಸಳದೇವನಿಂ ಬಳಿಕ ॥
ಸ್ವಸ್ತಿಸಮಸ್ತ ಭೂಮಿಪತಿ ವಿಕ್ರಮಗಂಗನ್ರಿಪಾಳನೇಕ ಭೋಗ್ಯಸ್ಥಿರಶಾಸನಂ
ಸಕಲಧಾರಣಿಯಂಪರಿಪಾಳಿಸಲುಕೆ....ದೇವಶ್ರೀ ವಿನಯಾರ್ಕ
ಪೊಯ್ಸಳ......

ಇಂತೊಳ್ಪಿಂ ನೆಜೆದಿರ್ದ ಹೊಯ್ಸಳನೃಪಂಗುತ್ಸಾಹದಿಂ ಪುಟ್ಟದಂ... ತಾನೆಱೆಯಂಗ ಭೂಪನೆವಲಂ ವಿಶ್ವಂಭರಾ ಭಾಗದೊಳ್ ॥ ಅನ್ತು ವಿನಯಾದಿತ್ಯ
ಹೊಯ್ಸಳದೇವನೆಜೆಯಂಗದೇವ ಬಲ್ಲಾಳದೇವ ವಿಷ್ಣುವರ್ಧನ ದೇವನುದಯಾದಿತ್ಯ
ದೇವನೊಳಗಾದ ಕುಮಾರರಿಂಲ್ಸಖದಿಂ ರಾಜ್ಯಂಗೈಯುತ್ತಿರೆ......"

ಶಾಸನ ಪಾಠದಲ್ಲಿ ಉಲ್ಲೇಖಿಸಿದ ವಂಶಾವಳಿ ಕೊನೆಯ ಭಾಗ ಸರಿ ಇದೆ. ವಿನಯಾದಿತ್ಯನಿಗಿಂತ ಪೂರ್ವದಲ್ಲಿದ್ದ ಹೊಯ್ಸಳ ಯಾದಿ ವಿಶ್ವಾಸಾರ್ಹವಲ್ಲ.

ಆರಂಭದಲ್ಲಿ ಗುರುತಿಸಿದ ತ್ರಿಭುವನಮಲ್ಲ ಹೊಯ್ಸಳ ಯಾರು ? ತ್ರಿಭುವನಮಲ್ಲ ಎನ್ನುವುದು ಚಾಲುಕ್ಯರ ಅಧಿರಾಜತ್ವವನ್ನು ಒಪ್ಪಿಕೊಂಡ ಬಳಿಕ ಹೊಯ್ಸಳರ ಪರಾಕುಗಳಲ್ಲಿ ಸೇರ್ಪಡೆಯಾಗಿದೆ. ಮಾರಪೊಯ್ಸಳ ನೃಪಕಾಮ ಮಹಾರಾಜನಾಗಲು ಸಾಧ್ಯವಿಲ್ಲ. ಇವನು ಹೊಶ್ಯಲ ಮಾರೆಯನೇ ? ಮಾರಪೊಯ್ಸಳನ ಬಳಿಕ ೧) ಎಪ್ಪಿಡಿ ಪೊಯ್ಸಳ ೨) ಎಜೆಯಂಗಪೊಯ್ಸ ೩) ತಳಕಾಡು ಹೊಯ್ಸಳ ೪) ಉದಯಾದಿತ್ಯ ೫) ಕುಂಟ ವಿನಯಾದಿತ್ಯ ೬) ನೃಪಕಾಮ ಹಿರಿಯ ಹೊಯ್ಸಳ ಎಂದು ಆರು ಜನರನ್ನು ಕ್ರಿ.ಶ. ೯೮೦ರಿಂದ ೧೦೪೮ರ ಸುಮಾರಿನಲ್ಲಿ ಗುರುತಿಸ ಬೇಕಾಗಿದೆ! ಇದು ಅಸಂಭವ. ಕೊಂಟ ವಿನಯಾದಿತ್ಯನೇ ಮುಣ್ಡ ಪೊಯ್ಸಳನೇ ? ಆಧಾರ ಸಾಲದು. ಈ ಶಾಸನವು ಹೆಸರಿಸುವ ಹೊಯ್ಸಳ ಪೂರ್ವಿಕರ ಯಾದಿಯನ್ನು ತಿರಸ್ಕರಿಸುವುದು ಮೇಲು.

ಮೂಡಗೆರೆ ತಾಲ್ಲೂಕಿನಲ್ಲಿ ತೇದಿ ಇಲ್ಲದ ಮೂರು ಶಾಸನಗಳಿವೆ. ಉಗ್ಗಿಹಳ್ಳಿ ಶಾಸನವು [EC:XI, ಮೂಡಗೆರೆ, ೧೬, ಪುಟ ೧೬೦) ರಾಚಮಲ್ಲಪೆರ್ಮ್ಮಡಿಯನ್ನು ಹೆಸರಿಸಿದೆ.

'ಬ್ರಾಹ್ಮರಾರ್ಗೆ ಚಕ್ರಮನಿಜೆಸಿದ ರಾಚಮಲ್ಲ ಪೆರ್ಮಾಡಿಯೆನಿಪ ಕಾಮ ಪೊಯ್ಸಳನ
ಪೃತುವೀರಾಜ್ಯ ಮೇಟನೆಯ ಸಂತತ್ಸರ ಕಾರ್ತಿಕ ಮಾಸದೊಳ್.."

ಲಿಪಿಯ ಆಧಾರದ ಮೇಲೆ ಶಾಸನವು ಹನ್ನೊಂದನೆಯ ಶತಮಾನವೆನ್ನುತ್ತಾರೆ. ನಾಲ್ಕನೆಯ ರಾಚಮಲ್ಲನ ಕಾಲ ಕ್ರಿ.ಶ. ೯೭೪-೯೮೫. ಇವನನ್ನೇ ಶಾಸನವು ರಾಚಮಲ್ಲ ಪೆರ್ಮಡಿ ಎಂದಿರಲು ಸಾಧ್ಯ. ಇವನೊಂದಿಗೆ ಕಾಮಪೊಯ್ಸಳನಿದ್ದಾನೆ. ಇವನು ಚಾವುಂಡರಾಯ ಪುರಾಣದ ನೃಪಕಾಮ ಪೊಯ್ಸಳನಾಗಿರುವ ಸಾಧ್ಯತೆ ಹೆಚ್ಚು. ಶಾಸನ ಪಾಠವನ್ನು ಮತ್ತೊಮ್ಮೆ ಪರಿಶೀಲಿಸಬೇಕಾದ ಅವಶ್ಯಕತೆ ಇದೆ. ಶಾಸನದ ರಾಚಮಲ್ಲ ಪೆರ್ಮಡಿಯೆ 'ನಿಪ'->'ನೃಪ'ಕಾಮ ಪೊಯ್ಸಳ ನಾಗಲು ಸಾಧ್ಯ ! ಶಾನದ ಕಾಲವನ್ನು ಹತ್ತನೆ ಶತಮಾನದ ಅಂತ್ಯಕ್ಕೆ ಸೇರಿಸಬಹುದು. ಅಂಗಡಿಯ ಶಾಸನ ಪಾಠ ಇಂತಿದೆ ಮೂಡಗೆರೆ, ೩೦, ಪು. ೧೬೯)

"ಎನಿಸಿಸೆಲೆಗಂಗವಾಡಿಯ ರಾಜಮಲ್ಲ ಭೂಪಾಳಕನೀ ಮನುನೀತಿ ಮಾರ್ಗನಭಯಂ
ಜನಪತಿ ಸಮ್ಯಯಕ್ಷ್ವ ಮಾರನೃತಪತಿಯ ಗುರುಗಳ್"

ರಾಜ(ಚ)ಮಲ್ಲ, ನಾಲ್ಕನೆಯ ರಾಚಮಲ್ಲನಿರಬಹುದು. ಮಾರನೃಪತಿ ಹೊಶ್ಯಳಮಾರೆಯನೇ ? ಹತ್ತನೆಯ ಶತಮಾನದಲ್ಲಿ ಹೊಯ್ಸಳರು ರಾಜ ಅಥವಾ ನೃಪತಿಗಳೆಂದು ಗುರುತಿಸಿಕೊಂಡಿಲ್ಲ. 'ಮಾರ' ಎಂದಾಕ್ಷಣ ಹೊಯ್ಸಳ ರೆನ್ನುವುದೂ ಸಾಧುವಲ್ಲ ಎನಿಸುತ್ತದೆ.

ಕೆಸವೊಳಲುವಿನ ನಿಷದಿ ಶಾಸನ ಇಂತಿದೆ [EC:XI, ಮೂಡಗೆರೆ, ೧೧೨, ಪುಟ ೨೩೮-೨೩೯]

"ಶ್ರೀಮ....ದ್ದಾಮನಂದಿದೇವರ ವರನಿಷಧ್ಯ....ದಂಗುಡ್ಡ
ಶ್ರೀಮತ್ ಪೊಯ್ಸಳ್ದೇನರಮಾತ್ಯಂ ಸಂಧಿವಿಗ್ರಹಿ ಶ್ರೀಮತ್ ಶೋಭನಯ್ಯಂ
ದಾಮನನ್ದಿವರ ಮುನಿಪಾದ ಪಟ್ಟದಂ...."

ಶಾಸನ ಕಾಲವನ್ನು ಹತ್ತನೆಯ ಶತಮಾನವೆಂದಿದ್ದಾರೆ. ಇಲ್ಲಿ ಹೆಸರಿಸಲಾದ ಪೊಯ್ಸಳದೇವರು ಸಂಧಿವಿಗ್ರಹಿ ಶೋಭನಯ್ಯ ಇವರನ್ನು ಗುರುತಿಸಲು ಸಾಧ್ಯವಾಗಿಲ್ಲ. ಈ ಶಾಸನಗಳನ್ನು ಇಲ್ಲಿ ಗುರುತಿಸಿದ ಉದ್ದೇಶ, ಮುಂದೆ ಎಂದಾದರೂ ಹೆಚ್ಚಿನ ಸಂಶೋಧನೆಗೆ ನೆರವಾಗಬಹುದು ಎಂಬ ಆಶಯವನ್ನು ಹೊಂದಿದೆ.

ಆರಂಭದ ಹೊಯ್ಸಳ ವಂಶಾವಳಿ

ಆಧಾರ ಶಾಸನಗಳು		ಕಾಲಮಾನ
	ಅರಕೆಲ್ಲ	
[ಚಿಕ್ಕಮಗಳೂರು ಜಿಲ್ಲೆ ಮರಳೆ ಹೊಸಹಳ್ಳಿ]	ರಾಮನ್ನಣ್ಣಿ ಕಂದರ್ಪ	[ಕ್ರಿ.ಶ. ೯೪೦]
	ಪೊಯ್ಸಳ ಮಾರುಗ	
[ಬೇಲೂರು ತಾ. ತೊಳಲು]	ಹೊಶ್ಶಳ ಮಾರೆಯ	[ಕ್ರಿ.ಶ. ೯೭೩]
[ಚಾವುಂಡರಾಯ ಪುರಾಣ]	ನೃಪಕಾಮ	[ಕ್ರಿ.ಶ. ೯೭೮]
[ತಿ. ನರಸೀಪುರ ತಾ. ಕಲಿಯೂರು ಅರಕಲಗೂಡು ತಾ. ಹೆಣ್ಣೂರು]	ಮುಣ್ಡಪೊಯ್ಸಳ	[ಕ್ರಿ.ಶ. ೧೦೦೬–೧೦೨೬]
[ಸಕಲೇಶಪುರ ತಾ. ರಾಜೇಂದ್ರಪುರ]	ನೃಪಕಾಮ ಮಹಾರಾಜ	[ಕ್ರಿ.ಶ. ೧೦೨೭–೧೦೪೭]
[ಕೃ.ರಾ.ಪೇಟೆ ತಾ॥ ತೊಣಚಿ]	ವಿನಯಾದಿತ್ಯ (ಪತ್ನಿ: ಕೆಳೆಯಬ್ಬರಸಿ)	[ಕ್ರಿ.ಶ. ೧೦೪೮–೧೦೯೨]
[ಬೇಲೂರು ತಾ. ಹಳೇಬೀಡು]	ಎಱೆಯಂಗ (ಪತ್ನಿ : ಏಚಲದೇವಿ)	[ಕ್ರಿ.ಶ. ೧೦೯೩–೧೧೦೨]

ಬಲ್ಲಾಳ   ವಿಷ್ಣುವರ್ಧನ   ಉದಯಾದಿತ್ಯ

೬೭

ಹೆಡತರಿಯ ಮನ್ನೆಯ ಅರಸರು

ಮಧುಗಣಪತಿರಾವ್ ಮಡೆನೂರು*

ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕಿನ ಹೆಡತರಿಯು ಓರ್ವ ಸ್ಥಾನಿಕ ಅಧಿಕಾರಿಯ ಆಡಳಿತ ಕೇಂದ್ರವಾಗಿದ್ದು, ಬಾಲಿಯರಸ ಮತ್ತು ಪೂರ್ವಿಕರನ್ನು ಕುರಿತು ಕ್ರಿ.ಶ.೧೧೬೦ ರ ಯುದ್ಧದ ಘಟನೆಯನ್ನು ಅಲ್ಲಿ ದೊರೆಯುವ ಮೂರು ಶಿಲಾಸ್ಮಾರಕಗಳು ಪ್ರಸ್ತಾಪಿಸುತ್ತವೆ.

ಹೆಡತರಿಯ ಬಾಲಿ ಅರಸನು ಕಲ್ಯಾಣ ಚಾಳುಕ್ಯ ತ್ರೈಲೋಕ್ಯಮಲ್ಲನ ಮಹಾಮಂಡಲೇಶ್ವರ, ಹುಂಬುಚದ ಸಾಂತರ ಜಗದೇವರಸನ ಗಂಧವಾರಣನಾಗಿದ್ದ ಈತನು ಪಡೆವಳರನ್ನು ಹೊಂದಿದ್ದು ಯುದ್ಧದ ಸಂದರ್ಭದಲ್ಲಿ ಸೈನ್ಯವನ್ನು ಒದಗಿಸುತ್ತಿದ್ದನು. ಹೆಡತರಿಯು ಸಾಗರ ತಾಲ್ಲೂಕಿನಲ್ಲಿ ಶರಾವತಿ ನದಿಯ ಬಲದಂಡೆಯಲ್ಲಿದ್ದು ಪ್ರಸ್ತುತ ಲಿಂಗನಮಕ್ಕಿ ಅಣೆಕಟ್ಟೆಯಲ್ಲಿ ಮುಳುಗಿದೆ. ಸಾಗರ-ಹೊಳೆಬಾಗಿಲ ಮುಖ್ಯರಸ್ತೆಯಲ್ಲಿ ಅರನಬೈಲಿನಿಂದ ಎರಡು ಕಿ.ಮೀ. ಪೂರ್ವಕ್ಕೆ ಚಲಿಸಿದರೆ ಹೆಡತರಿಯು ಸಿಗುತ್ತದೆ. ಸ್ಥಳೀಯರ ಬಾಯಲ್ಲಿ ಹೆಡತರಿ ಎಂದರೆ ಶತ್ರುಗಳ ಹೆಡೆತರಿವ ಪಡೆವಳರನ್ನು ಹೊಂದಿದ್ದರಿಂದ ಹೆಡತರಿ>ಹೆಡೆತರಿ ಎಂಬ ಪ್ರತೀತಿ ಇದೆ.

ಹೆಡತರಿಯ ಸ್ಥಾನಿಕ ಅಧಿಕಾರಿಗಳಾಗಿ ಮೂಲಪುರುಷ ಬಾಲಿ(ಸಾಲಿ)ಅರಸ, ಆತನ ಮಗ ನಾಗರಸ, ನಾಗರಸನ ಮಕ್ಕಳು ಹಿರಿಯವ ಬೇಳರಸ ಹಾಗೂ ಕಿರಿಯವ ಎರಡನೇ ಬಾಲಿಅರಸರ ವಂಶವೃಕ್ಷ ದೊರೆಯುತ್ತದೆ. ಇವರು ಚಕ್ರವರ್ತಿ ಕಲ್ಯಾಣ ಚಾಲುಕ್ಯರ ಆರನೇ ವಿಕ್ರಮಾದಿತ್ಯ ಹಾಗೂ ಈತನ ಮಹಾ ಮಂಡಲೇಶ್ವರ ಹುಂಬುಚದ ಜಗದೇವರಸನ ಅಧೀನರಾಗಿದ್ದವರು. ಎರಡನೇ ಬಾಲಿ ಅರಸನು ಹುಂಬುಚದ ಜಗದೇವರಸನ ಗಂಧವಾರಣನಾಗಿರುವುದನ್ನು ಈ ಶಾಸನವು ಉಲ್ಲೇಖಿಸುತ್ತದೆ. ಇದೇ ರೀತಿ ಸೈನಿಕ ಪಡೆವಳರನ್ನು ಕಟ್ಟಿಕೊಂಡವರಲ್ಲಿ ಬಿಲ್ಲೇಶ್ವರದ ಜಿಲಮೂನೂರ್ವರು[೧] ಮತ್ತು ಹೊನ್ನಾಳಿಯ ಕುರುವದ ಸಾವಂತರನ್ನೂ[೨] ಕಾಣುತ್ತೇವೆ.

ಯುದ್ಧ ಪ್ರಸಂಗ : ಇಲ್ಲಿ ದೊರೆಯುವ ಮೂರು ಶಾಸನಗಳು ಅವರಗುಪ್ಪೆಯ ಯುದ್ಧದ ಸನ್ನಿವೇಶದ ಜೊತೆಗೆ ಹೆಡತರಿಯ ಅರಸರ ವಿವರವನ್ನೂ ತಿಳಿಸುತ್ತವೆ. ಅಕ್ಟೋಬರ್ ೧೧, ೧೧೬೦ರಂದು ಜಗದೇವರಸನು ನಡೆಸಿದ ಅವರಗುಪ್ಪೆಯ ಕಾಳಗದಲ್ಲಿ ಎರಡನೇ ಬಾಲಿ ಅರಸನು ತನ್ನ ಪಡೆಯೊಂದಿಗೆ ಹೋರಾಡುತ್ತಾ[೩] ಮೃತನಾಗುವನು. ಮೃತ ಬಾಲಿ ಅರಸನಿಗೆ ಜಗದೇವರಸನು ನೆತ್ತರು ಕೊಡುಗೆಯಾಗಿ ಕೊಹುವೂರ ಮುಂದಿನ ಗುತ್ತಿಯ ಕೆಯಿಯನ್ನು ನೀಡುವನು. ಮೇಲಿನ ೧೧೬೦ರ ಯುದ್ಧಕ್ಕೆ ಸಂಬಂಧಿಸಿದಂತೆ ಎರಡನೇ ಕಲ್ಲಿನಲ್ಲಿ, ಜೊತೆಯಲ್ಲೇ ಹೋರಾಡಿದ ಬಾಲಿಅರಸನ ಸೈನ್ಯದ ಒಂದು ವಿಭಾಗದ ಮುಖ್ಯಸ್ಥನಾದ ದೀವರ ಹಡವ, ಆತನ ತಮ್ಮ ಹಡವ ಎರಹರತ[೪] ಮರಣವನ್ನಪ್ಪುವರು. ಇವರ ಭಂಟತನಕೆ ಮೆಚ್ಚಿ ಬೇಳರಸನು ನೆತ್ತರು ಕೊಡುಗೆ ನೀಡುವನು. ಮೂರನೇ ಕಲ್ಲೂ ಕೂಡ ಇದೇ ಬಾಲಿಅರಸನ ಇನ್ನೊಂದು ವಿಭಾಗದ ದೀವರ ಅಂಗವಿತ್ತದ ಬೊಪ್ಪಣ್ಣ, ಆತನ ಮಗ ಅಂಗವಿತ್ತದ ಗೊಗ್ಗ, ಯುದ್ಧದಲ್ಲಿ ಹೋರಾಡಿ ಮೃತರಾಗುವರು.[೫] ಇವರ ಭಂಟತನಕೆ ಮೆಚ್ಚಿ ಬೇಳರಸನು ನೆತ್ತರು ಕೊಡುಗೆ ನೀಡುವನು. ನಾಗರಸನ ಹಿರಿಯ ಮಗ ಬೇಳರಸನು ಜೀವಂತವಿದ್ದು ಮೃತ ಪಡೆವಳರಿಗೆ ನೆತ್ತರು ಕೊಡುಗೆ ನೀಡಿರುತ್ತಾನೆ. ಹೆಡತರಿಯು ಯುದ್ಧದ ಸಮಯದಲ್ಲಿ ಸೈನ್ಯವನ್ನು ಒದಗಿಸುತ್ತಿದ್ದ, ಹಾಗೂ ಆಯುಧೋಪಜೀವಿಗಳಾದ ದೀವರ ಪಡೆವಳರನ್ನು ಹೊಂದಿದ ಸ್ಥಾನಿಕ ಅಧಿಕಾರಿಯ ಕೇಂದ್ರವಾಗಿರುವುದನ್ನು ಗಮನಿಸಬಹುದಾಗಿದೆ.

ಆಧಾರಸೂಚಿ

೧. ಎ.ಕ. ೮, ಸೊರಬ ಶಾ.ಸಂ. ೧೯.

೨. ಎ.ಕ. ೭, ಹೊನ್ನಾಳಿ, ಶಾ.ಸಂ. ೮.

೩. ಎ.ಕ. ೮, ಸಾಗರ, ಶಾ.ಸಂ. ೯೩.

೪. ಎ.ಕ. ೮, ಸಾಗರ, ಶಾ.ಸಂ. ೯೧.

೫. ಎ.ಕ. ೮, ಸಾಗರ, ಶಾ.ಸಂ. ೯೨.

* ಶ್ರೀ ಮಡೆನೂರು ನಿಲಯ, ನಾಲ್ಕನೇ ಮುಖ್ಯರಸ್ತೆ, ಮೂರನೇ ತಿರುವು, 'ಬಿ' ಬ್ಲಾಕ್, ಶರಾವತಿ ನಗರ, ಶಿವಮೊಗ್ಗ-೫೭೭೨೦೧.

೩೮

ಉಡುಪಿಯ ಸಾಂಸ್ಕೃತಿಕ ಇತಿಹಾಸದಲ್ಲಿ ಶಾಸನೋಕ್ತ ಮಹಿಳೆಯರು

ಡಾ. ಜಯರಾಮಶೆಟ್ಟಿಗಾರ್*

ಒಂದು ಪ್ರದೇಶದ ಸಾಂಸ್ಕೃತಿಕ ಬೆಳವಣಿಗೆಗೆ ಅಲ್ಲಿ ಆಡಳಿತ ನಡೆಸಿದ ರಾಜವಂಶದವರು, ಅಧಿಕಾರಿ ವರ್ಗ, ಪುರೋಹಿತ ವರ್ಗ ಮಾತ್ರವಲ್ಲದೆ ಜನಸಾಮಾನ್ಯರು ಹಾಗೂ ಮಹಿಳೆಯರೂಕೂಡ ತಮ್ಮ ಕೊಡುಗೆಯನ್ನು ನೀಡಿರುತ್ತಾರೆ. ಆದರೆ ಉಡುಪಿಯ ಸಾಂಸ್ಕೃತಿಕ ಇತಿಹಾಸಕ್ಕೆ ಸಂಬಂಧಿಸಿದಂತೆ, ಅಧ್ಯಯನದ ಆಕರಗಳಾದ ಶಾಸನಗಳಲ್ಲಿ ಜನಸಾಮಾನ್ಯರ ಹಾಗೂ ತಳಸ್ತರದ ಜನರ ಹಾಗೂ ಮಹಿಳೆಯರ ಉಲ್ಲೇಖಗಳು ತೀರಾಕಡಿಮೆಯಂದೇ ಹೇಳಬಹುದು.

ಪ್ರಸ್ತುತ ಲೇಖನದಲ್ಲಿ ಉಡುಪಿ ಪ್ರದೇಶದಲ್ಲಿ ದೊರೆತ ಶಾಸನಗಳಲ್ಲಿ ಮಹಿಳೆಯರ ಉಲ್ಲೇಖಗಳ ಕುರಿತಂತೆ ಅಧ್ಯನವನ್ನು ನಡೆಸಲಾಗಿದೆ. ಉಡುಪಿಯನ್ನು ಈ ಹಿಂದೆ ಶಿವಳ್ಳಿಯಂದು ಕರೆಯಯಲಾಗುತಿತ್ತು. ಕ್ರಿಶ. ೭-೮ನೇ ಶತಮಾನದ ಶಾಸನಗಳಲ್ಲೇ ಶಿವಳ್ಳಿಯ ಉಲ್ಲೇಖ ಕಂಡುಬಂದಿದ್ದು, ಕ್ರಿಶ. ೮ನೆಯ ಶತಮಾನದ ಬೆಳ್ಮಣ್ಣು ತಾಮ್ರ ಶಾಸನದಲ್ಲಿ 'ಸಿವವಳ್ಳಿ', 'ಶಿವವಳ್ಳಿ'[೧] ಎಂದು ದಾಖಲಾಗಿದೆ. ಪ್ರಾಚೀನ ಜನವಸತಿ ಕೇಂದ್ರವಾದ ಶಿವಳ್ಳಿಯಲ್ಲಿ ಶಿವ ಪ್ರಧಾನ ದೇವರು. ಹಾಗಾಗಿ ಈ ಪ್ರದೇಶವನ್ನು ಶಿವಳ್ಳಿ ಎಂದು ಕರೆಯಲಾಯತು. ಕ್ರಿಶ. ೧೬೩೯ರಲ್ಲಿ ಕೆಳದಿ ವೀರಭದ್ರಪ್ಪ ನಾಯಕರು ಉಡುಪಿನ ಶ್ರೀಕೃಷ್ಣ ದೇವರಿಗೆ ಶಿವಳ್ಳಿ ಶೀಮೆಯೊಳಗೆ ಭೂಮಿಯನ್ನು ದಾನವಾಗಿ ನೀಡಿದ ಉಲ್ಲೇಖವಿದೆ. ಉಡುಪಿಯ ಪ್ರಥಮ ಉಲ್ಲೇಖ ಕ್ರಿ.ಶ. ೧೩೬೬ರ ಶಾಸನದಲ್ಲಿ ಕಂಡುಬರುತ್ತದೆ.[೨] ಅನಂತರ ಶಿವಳ್ಳಿಯ ಬದಲು ಉಡುಪಿಯ ಹೆಸರೇ ಪ್ರಮುಖ ಸ್ಥಾನ ಪಡೆಯಿತು. ಹಾಗಾಗಿ ಈ ಲೇಖನದಲ್ಲಿಶಾಸನೋಕ್ತ ಮಹಿಳೆಯರ ಕುರಿತಂತೆ ಅಧ್ಯನವನ್ನು ಪ್ರಾಚೀನ ಉಡುಪಿ ಅಥವಾ ಪ್ರಸ್ತುತ ಉಡುಪಿಗೆ ಸೀಮಿತಗೊಳಿಸಲಾಗಿದೆ.

ಉಡುಪಿಯಲ್ಲಿ ಮಹಿಳೆಯರ ರಾಜಕೀಯ ಮತ್ತು ಸಾಮಾಜಿಕ ಚಟುವಟಿಕೆಯ ಕುರಿತಂತೆ ಸ್ವಲ್ಪಮಟ್ಟಿನ ಉಲ್ಲೇಖ ಅಲ್ಲಿನ ಶಾಸನಗಳಲ್ಲಿ ಉಲ್ಲೇಖಗೊಂಡಿದೆ. ಉಡುಪಿಯ ರಾಜಕೀಯ ಇತಿಹಾಸದಲ್ಲಿ ಮಹಿಳೆಯರು ಸಕ್ರಿಯರಾಗಿದ್ದರೆಂದು ಇಲ್ಲಿನ ಶಾಸನಗಳಿಂದ ತಿಳಿದುಬರುತ್ತದೆ. ಉಡುಪಿಗೆ ಸಂಬಂಧಿಸಿದಂತೆ ಆಳುಪ ರಾಣಿ ಬಲ್ಲಮಹಾದೇವಿಯ ಉಲ್ಲೇಖ ಇಲ್ಲಿನ ಕೊಡವೂರು ಶಾಸನದಲ್ಲಿ[೩] ಅಲೆವೂರು ಶಾಸಾನದಲ್ಲಿ[೪] ಮತ್ತು ಬೈಲೂರು, ಶಾಸನದಲ್ಲಿ,[೫] ಹೊಯ್ಸಳ ವೀರಬಲ್ಲಾಳನ ಪಟ್ಟದ ಪಿರಿಯರಸಿ ಚಿಕ್ಕಾಯಿತಾಯಿಯ ಉಲ್ಲೇಖ ಕ್ರಿ.ಶ. ೧೩೩೩ರ ಬೈಲೂರಿನ ಶಾಸನದಲ್ಲಿ[೬] ಕಂಡುಬಂದಿದೆ. ಅಲೆವೂರಿನ ಬಲ್ಲಮಹಾದೇವಿಯ ಶಾಸನದಲ್ಲಿ[೭] ಆಕೆಯನ್ನು '... ಅನವರತ ಸಹಸ್ರ(ಫಳಭೋಗ)ಭಾಗಿನಿ ದ್ವಿತೀಯ ಲಕ್ಷ್ಮೀಸಮಾನೆ... ಗಮನೆಯರುಂ ... ಮದಗಜ... ನೆಯರುಂ... ಪ್ರತ್ಯಕ್ಷಪಾರ್ವತಿಯರುಂ ಪತಿಬ್ಬತಾ ಅರುಂಧತಿಯರುಂ ಸೋಮಕುಲೋದ್ಭವರುಂ.... ಬಂದುಜನ ಚಿಂತಾಮಣಿ ಯರುಂ ಆಶ್ರಿತ ಜನಕಲ್ಪ ವ್ರಿಕ್ಷರುಂ ದಾನ ವಿನೋದಿಗಳುಂ ಸುವರ್ನ ದಾನ ಸೂರೆಕಾರೆಯರು ಮರೆಯೊಕ್ಕರ ಕಾವರುಂ ಶರಣಾಗತ ವಜ್ರಪಂಜರರುಮಪ್ಪ ಶ್ರೀ ಮಂಜುನಾಥ ದೇವರ ದಿವ್ಯಶ್ರೀಪಾದ ಪದ್ಮಾರಾಧಕೆಯರು ಶ್ರೀ ಪರಬಲಸಾದಕೆಯ ರುಮಪ್ಪ ಸ್ವಸ್ತಿಶ್ರೀಮತು ಪಟ್ಟದಪಿರಿಯರಸಿ ಬಲ್ಲಮಹಾ ದೇವಿಯಂದು' ಎಂದು ಉಲ್ಲೇಖಿಸಲಾಗಿದೆ.

ಹೊಯ್ಸಳ ಚಕ್ರವರ್ತಿ ೩ನೆಯ ಬಲ್ಲಾಳನು ಈ ಪ್ರದೇಶದ ಮೇಲೆ ತನ್ನ ಹಿಡಿತವನ್ನು ಸ್ಥಾಪಿಸಿದ್ದು, ಕ್ರಿ.ಶ. ೧೩೩೩ರ ಹೊಯ್ಸಳ ವೀರಬಲ್ಲಾಳನ ಪಟ್ಟದ ಪಿರಿಯರಸಿ ಚಿಕ್ಕಾಯಿತಾಯಿಯ ಉಲ್ಲೇಖ ಉಡುಪಿ ಬೈಲೂರಿನ ಶಾಸನದಲ್ಲಿ ಕಂಡುಬಂದಿದೆ.[೮] ಆ ಶಾಸನದಲ್ಲಿ ಉಲ್ಲೇಖಿಸಿದಂತೆ 'ಚಕ್ರವರ್ತಿ ಹೊಯಿಸಣ ಶ್ರೀ ವೀರಬಲ್ಲಾಳ ದೇವರಸರ ಪಟ್ಟದ ಪಿರಿಯರಸಿ ಕಿಕ್ಕಾಯಿತಾಯಿಯರ ಶ್ರೀಪಾದ ಸಂನಿದಾನದಲು ಬಾರಕೂರ ನಖರದ.. ಶಿವಳಿಯ ಗ್ರಾಮದ.. ಆದಿವಾಸದೊಳಗೆ ಮೂಡಿಲ್ಲರ ನಾಲ್ಕೊರೊಳಗಣ ಬಯಲೂರಿಂಗೆ..... ಗ್ರಾಮ ಮರಿಯಾದೆಯಲು ಬಂದಂಥಾ ಸಮುದಾಯ ಬೆಡುಂಗೊಳು

* ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಮಿಲಾಗ್ರಿಸ್ ಕಾಲೇಜು, ಕಲ್ಯಾಣಪುರ, ಉಡುಪಿ ಜಿಲ್ಲೆ-೫೭೬೧೦೧

ವೊಸಗೆ ಅನಾಯ ಮೊದಲಾಗಿ ಕಿಕ್ಕಾಯಿ ತಾಯಿಯರು ವಾಸುದೇವ ಮೂಡಿಲವರಿಗೆ ಕೊಟರು..'ಎಂದಿದೆ.

ಸುಮಾರು ೨೫ ವರ್ಷಗಳಕಾಲ ರಾಜಕೀಯ ಪ್ರಭುತ್ವಕ್ಕಾಗಿ ಆಳುಪ ರಾಜ ಮನೆತನದೊಳಗೆ ೮ ಯುದ್ಧಗಳು ಸಂಭವಿಸಿದವು. ಮೊದಲು ಸಹೋದರರಾದ ೨ನೇ ಚಿತ್ರವಾಹನ ಹಾಗೂ ರಣಸಾಗರನ ನಡುವೆ ೫ ಯುದ್ಧಗಳು ಸಂಭವಿಸಿ, ೨ನೇ ಚಿತ್ರವಾಹನನು ಹತನಾದನು. ಅನಂತರ ರಣಸಾಗರ ಹಾಗೂ ಶ್ವೇತವಾಹನನ ನಡುವೆ ಎರಡು ಯುದ್ಧಗಳು ನಡೆದು ರಣಸಾಗರನು ಸಾವನ್ನಪ್ಪಿದನು. ಅನಂತರ ಸಹೋದರರ ಮಕ್ಕಳಾದ ಶ್ವೇತವಾಹನ ಹಾಗೂ ಪೃಥ್ವೀಸಾಗರರ ನಡುವೆ ಒಂದು ಯುದ್ಧ ಸಂಭವಿಸಿ ಪೃಥ್ವೀಸಾಗರನು ಜಯಗಳಿಸಿದನು. ಈ ಅಂತಃಕಲಹದ ಹೆಚ್ಚಿನ ಎಲ್ಲಾ ಯುದ್ಧಗಳು ಉಡುಪಿ ಪರಿಸರದಲ್ಲೇ ಸಂಭವಿಸಿದವು.

ಆಳುವರಸ ಶ್ವೇತವಾಹನನು ಉದ್ಯಪುರಕ್ಕೆ ಮುತ್ತಿಗೆ ಹಾಕಿ ಆ ನಗರವನ್ನು ಪ್ರವೇಶಿಸಲು ಪ್ರಯತ್ನಿಸಿದಾಗ ನಡೆದ ಕಾಳಗದಲ್ಲಿ ಅವನ ಮನೆಯಾಳು ಸಿಜ್ಗಪುಲಿಯು ಹೋರಾಡಿ ಮಡಿದನು. ಅವನ ಸ್ಮರಣಾರ್ಥವಾಗಿ..' ಅವನ ತಜ್ಗಿ(ತಂಗಿ) ಸರ್ವಪೋಡಿ ನಿಲ್ಲಿಸಿದ ಕಲ್ಲು' ಎಂದಿದೆ[೯] ಅಂತಹುದೇ ಸಂದರ್ಭದಲ್ಲಿ ಮಡಿದ ಇನ್ನೊಬ್ಬ ಯೋಧನ ನೆನಪಿಗಾಗಿ ಅವನ ತಂಗಿ ಜೋಗಿ ನಿಲ್ಲಿಸಿದ ಕಲ್ಲು ಎಂದಿದೆ.[೧೦] ಕ್ರಿ.ಶ. ೯ನೆಯ ಶತಮಾನದಲ್ಲಿ ಒಬ್ಬ ಯೋಧ ಯುದ್ಧದಲ್ಲಿ ಮಡಿದಾಗ ಆತನ ಸಹೋದರಿ ವೀರಗಲ್ಲೊಂದನ್ನು ಸ್ಥಾಪಿಸಿರುವುದು ಬಹಳ ಮಹತ್ವದ ವಿಷಯವಾಗಿದೆ. ಯುದ್ಧದಲ್ಲಿ ಮಡಿದ ಯೋಧನ ಸಹೋದರಿಯರಾದ ಸರ್ವಪೋಡಿ, ಜೋಗಿ ಉದ್ಯಾವರದಲ್ಲಿ ವೀರಗಲ್ಲುಗಳನ್ನು ಸ್ಥಾಪಿಸಿರುವುದು ಆ ಕಾಲದ ಕುಟುಂಬ ವ್ಯವಸ್ಥೆಯಲ್ಲಿ ಮಹಿಳೆಯರ ಮಹತ್ವವನ್ನು ಸೂಚಿಸುತ್ತದೆ.

ಕ್ರಿ.ಶ. ೧೧ನೆಯ ಶತಮಾನದ ಅಲೆವೂರಿನ ಶಾಸನದಲ್ಲಿ[೧೧] ಕೊಕ್ಕರಣೆಯ ಓಬಲ ಅಬ್ಬೆಯು ಅಲೆವೂರು ದುರ್ಗಾ ದೇವಸ್ಥಾನಕ್ಕೆ ಭೂ ದಾನ ನೀಡಿದ ಉಲ್ಲೇಖವಿದೆ. ಉಡುಪಿಯಲ್ಲಿ ಮಹಿಳೆಯರು ಭೂ ಒಡೆತನವನ್ನು ಹೊಂದಿದ್ದರೆಂಬುವುದು ಅನೇಕ ಶಾಸನಗಳಿಂದ ತಿಳಿದುಬರುತ್ತದೆ. ಕ್ರಿ.ಶ. ೧೧ನೆಯ ಶತಮಾನದ ಅಲೆವೂರು ಶಾಸನದಲ್ಲಿ ಓಬಲಿಅಬ್ಬೆ ಎನ್ನುವ ಮಹಿಳೆ ದೇವಿ ದೇವಾಲಯದ ನಂದಾದೀಪಕ್ಕೆ ನೀಡಿದ ಭೂಮಿ ದಾನದಲ್ಲಿ ಪಟ್ಟದ ಭೂಮಿಯು ಉಲ್ಲೇಖಗೊಂಡಿದ್ದು ರಾಜನು ಭೂಮಿಯ ಒಡೆಯನಾಗಿದ್ದನೆನ್ನುವ ವಿಚಾರ ತಿಳಿದುಬರುತ್ತದೆ. ಆದರೆ ರಾಜನು ತನ್ನ ರಾಜ್ಯದ ಎಲ್ಲಾ ಭೂಮಿಯ ಮಾಲಿಕ ಎನ್ನುವುದು ಕಲ್ಪನೆ ಮಾತ್ರ. ರಾಜ ಭೂದಾನ ಮಾಡುತ್ತಿದ್ದ ಹಾಗಾಗಿ ರಾಜನು ಭೂಮಾಲಿಕನಾಗಿದ್ದ ಎನ್ನುವುದು ತಿಳಿಯುತ್ತದೆ. ಅದು ಅವನ ಖಾಸಗಿ ಭೂಮಿಯಾಗಿರಬಹುದೆಂದು ಇತಿಹಾಸಕಾರರು ಅಭಿಪ್ರಾಯಪಟ್ಟಿದ್ದಾರೆ.[೧೨]

ಕ್ರಿ.ಶ. ೧೩೭೬ರ ಉಡುಪಿಯ ಶಾಸನದಲ್ಲಿ[೧೩] ಉಡುಪಿನ ದೇವರ ನೈವೇದ್ಯಕ್ಕೆ ದಾನ ನೀಡಲಾದ ಭೂಮಿ, 'ಸೋಮಲ ದೇವಿಯರ ಬಾಳನ್ನು' ವಿಠಪ ದಂಣಾಯಕರು ಮೂಲವಾಗಿ ಕೊಂಡ ಉಲ್ಲೇಖವಿದೆ. ಸೋಮಲ ದೇವಿಯ ಬಾಳು, ಚಂದಲ ದೇವಿಯ ಬಾಳು, ಕುಂಜಿಹೆಬ್ಬಾರತಿ ಮನೆಯ ಗದ್ದೆ[೧೪] ಗವುರಿಯ ಬಾಳು[೧೫] ಮುಂತಾದವುಗಳು ಮಹಿಳೆಯು ಭೂ ಒಡೆತನವನ್ನು ಹೊಂದಿದ್ದರೆಂಬುವುದನ್ನು ತಿಳಿಸುತ್ತವೆ. ಕ್ರಿ.ಶ. ೧೫೭೦ರ ಅಂಬಲಪಾಡಿ ಶಾಸನದಲ್ಲಿ[೧೬] ಶಂಕರ ಕೆಂಣಾರಮನ ಹೆಂಡತಿ ತೀರ್ಥಯಾತ್ರೆಗೆ ಹೋದ ಉಲ್ಲೇಖವಿದೆ. ಒಟ್ಟಿನಲ್ಲಿ ಉಡುಪಿಯಲ್ಲಿ ಮಹಿಳೆ ರಾಣಿಯಾಗಿ, ಭೂ ಮಾಲೀಕಳಾಗಿ, ದಾನಿಯಾಗಿ, ಶಾಸನಗಳ ಸ್ಥಾಪಕಳಾಗಿ, ಯಾತ್ರಾರ್ಥಿಯಾಗಿ, ಜೀವನದ ವಿವಿಧ ಸ್ಥರಗಳಲ್ಲಿ ಕಂಡುಬಂದಿದ್ದಾಳೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ರಮೇಶ್, ಕೆ.ವಿ., ಶರ್ಮ ಎಂ.ಜೆ., (ಸಂ) **'ತುಳುನಾಡಿನ ಶಾಸನಗಳು'** ಸಂ. ೧. ಉಡುಪಿ, ೧೯೭೮ ಪು. ೧೩-೧೪.

೨. SII., Vol. XXVII, No. 453.

೩. SII., Vol. XXVII. No. 218.

೪. SII., Vol. XXVII. No. 220.

೫. SII., Vol. XXVII. No. 221

೬ SII., Vol. XXVII. No. 39.

೭. SII., Vol. XXVII. No. 220.

೮. SII., Vol. XXVII. No. 39.

೯. **ತುಳುನಾಡಿನ ಶಾಸನಗಳು** ಸಂ. ೧, ಉಡುಪಿ, ೧೯೭೮. ಪು. ೩೦.

೧೦. ಅದೇ. ಪು. ೩೧.

೧೧. SII., Vol. XXVII. No. 295

12. B. Jagadish Shetty, *'The Agro-Economic Relations and Social Structure in Dakshina Kannada (AD 1000-1600)'* an unpublished Ph.D Thesis, Mangalore University, 1992. P. 97-98.

13. SII., Vol. XXVII. No. 295.

14. SII., Vol. XXVII. No. 200.

15. SII., Vol. XXVII. No. 400.

16. SII., Vol. XXVII. No. 200.

ಚಿಕ್ಕಮಗಳೂರು ಜಿಲ್ಲೆಯ ಶೈವ ಶಾಸನಗಳು

ಡಾ. ಡಿ.ಎಂ. ನಾಗರಾಜು*

ಈ ಜಿಲ್ಲೆಯ ಕೆಲವು ಪ್ರದೇಶ ೪-೬ನೆಯ ಶತಮಾನಗಳಲ್ಲಿ ಆದ್ಯ ಕದಂಬರ ಆಳ್ವಿಕೆಗೆ ಒಳಪಟ್ಟಿತ್ತು. ೫ನೇ ಶತಮಾನದಿಂದ ೧೧ನೇ ಶತಮಾನದವರೆಗೆ ಪಶ್ಚಿಮ ಗಂಗರು, ೮-೯ನೆಯ ಶತಮಾನದಲ್ಲಿ ರಾಷ್ಟ್ರಕೂಟರು, ೭ನೇ ಶತಮಾನದಿಂದ ೧೧ನೇ ಶತಮಾನದವರೆಗೆ ಶಿವಮೊಗ್ಗ ಜಿಲ್ಲೆಗೆ ಸೇರಿದ ಹುಂಚದ ಸಾಂತರರು, ೧೦ನೇ ಶತಮಾನದಲ್ಲಿ ನೊಳಂಬರು, ೭, ೮, ೯ನೆಯ ಶತಮಾನಗಳಲ್ಲಿ ಜಿಲ್ಲೆಯ ಪಶ್ಚಿಮದ ಕೆಲವು ಭಾಗಗಳು ದಕ್ಷಿಣ ಕನ್ನಡ ಜಿಲ್ಲೆಯ ಆಳುಪರಿಗೆ ಸೇರಿದ್ದವು. ೧೦ನೇ ಶತಮಾನದಲ್ಲಿ ಹೊಯ್ಸಳರ ಮೂಲಪುರುಷನಿಗೆ ಜನ್ಮ ನೀಡಿದ ಹೆಗ್ಗಳಿಕೆ ಈ ಜಿಲ್ಲೆಗೆ ಸೇರುತ್ತದೆ. ಕ್ರಿ.ಶ. ೧೧ ರಿಂದ ೧೪ನೆಯ ಶತಮಾನಗಳಲ್ಲಿ ಹೊಯ್ಸಳರ ಆಳ್ವಿಕೆಯಲ್ಲಿತ್ತು. ಹಾಗೆಯೇ ಸೇವುಣರು, ಕಳಸ ಕಾರ್ಕಳ ಪ್ರಭುಗಳು. ಶೃಂಗೇರಿಯ ವಿದ್ಯಾರಣ್ಯರು ವಿಜಯನಗರದ ಸ್ಥಾಪನೆಯಲ್ಲಿ ಪ್ರಮುಖ ಪಾತ್ರವಹಿಸಿದರೆಂದು ಹೇಳಲಾಗಿದೆ. ವಿಜಯನಗರ ಅರಸರ ಆಳ್ವಿಕೆಯಲ್ಲಿ ಪಶ್ಚಿಮ ಭಾಗ ಕಾರ್ಕಳದ ರಾಜರಿಗೂ, ದಕ್ಷಿಣ ಭಾಗ ಮಂಜರಾಬಾದ್ ಪ್ರದೇಶದ ಪಾಳೇಯಗಾರರಿಗೂ ಸೇರಿದ್ದವು. ಇವರೆಲ್ಲ ವಿಜಯನಗರ ಸಾಮಂತ ರಾಗಿದ್ದರು. ೧೭ನೆಯ ಶತಮಾನದ ಮಧ್ಯಭಾಗದಲ್ಲಿ ಈ ಜಿಲ್ಲೆಯ ಬಹುಭಾಗವನ್ನು ಶಿವಪ್ಪನಾಯಕ ವಶಪಡಿಸಿಕೊಂಡ. ವಿಜಯನಗರದ ಸಾಮ್ರಾಜ್ಯದ ಪ್ರತಿನಿಧಿಯಾಗಿದ್ದ ಶ್ರೀರಂಗರಾಯ ಸ್ವಲ್ಪ ಕಾಲ ಅವನ ಆಶ್ರಯದಲ್ಲಿದ್ದು ಸಕ್ಕರೆಪಟ್ಟಣ, ಬೇಲೂರು ಮತ್ತು ನೆರೆಯ ಪ್ರದೇಶಗಳನ್ನು ಆಳುತ್ತಿದ್ದ. ಕ್ರಿ.ಶ. ೧೬೯೦ ರಿಂದ ೧೬೯೪ರಲ್ಲಿ ಮೈಸೂರಿನ ಒಡೆಯರು ಈ ಜಿಲ್ಲೆಯ ದಕ್ಷಿಣ ಭಾಗವನ್ನು ಆಕ್ರಮಿಸಿಕೊಂಡರು. ಅದೇ ವರ್ಷ ಮೈಸೂರು ಮತ್ತು ಇಕ್ಕೇರಿಗಳ ನಡುವೆ ಒಪ್ಪಂದವಾಗಿ ಮೈಸೂರಿನ ಅರಸರು ಗೆದ್ದಿದ್ದ ಪ್ರದೇಶಗಳಲ್ಲಿ ಐಗೂರು ಮತ್ತು ದಸ್ತಾರೆ ಪಾಳೇಪಟ್ಟಣಗಳನ್ನು ಬಿಟ್ಟುಕೊಟ್ಟರು. ಈ ಮಧ್ಯದಲ್ಲಿ ಕೆಲವು ಕಾಲ ತರಿಕೇರಿ ಪಾಳೆಯಗಾರರು ಆ ಪಟ್ಟಣದ ಸುತ್ತಲ ಪ್ರದೇಶಗಳನ್ನು ಆಳುತ್ತಿದ್ದರು. ಕೆಳದಿ ನಾಯಕರು, ಸಂತೆಬೆನ್ನೂರು, ಬೇಲೂರು ನಾಯಕರು, ದಾನಿವಾಸ ವೊಡೆಯರೂ ಈ ಭಾಗದಲ್ಲಿ ಆಳಿದ್ದಾರೆ. ಕ್ರಿ.ಶ. ೧೭೬೩ರಲ್ಲಿ ಹೈದರ್ ಇಕ್ಕೇರಿಯನ್ನು ಆಕ್ರಮಿಸಿಕೊಂಡು ಅದರ ಅಧೀನದಲ್ಲಿದ್ದ ವಿವಿಧ ಪ್ರದೇಶಗಳನ್ನು ತನ್ನ ವಶಕ್ಕೆ ತೆಗೆದುಕೊಂಡು ಈ ಮೇಲಿನ ರಾಜಮನೆತನಗಳ ಶಾಸನಗಳನ್ನು ಅದರಲ್ಲಿಯೂ ಶೈವ ಶಾಸನಗಳನ್ನು ಪ್ರಧಾನವಾಗಿ ಚರ್ಚಿಸಲಾಗಿದೆ.

ಸಾಮಾನ್ಯವಾಗಿ ಹೆಚ್ಚಿನ ಅರಸರು ಶೈವ ಧರ್ಮೀಯ ರಾಗಿದ್ದರಿಂದ ಶೈವ ದೇವಸ್ಥಾನಗಳನ್ನು ಕಟ್ಟಿಸಿ ದಾನದತ್ತಿ ಬಿಟ್ಟಿದ್ದನ್ನು ಶಾಸನಗಳಲ್ಲಿ ಕಾಣಬಹುದು. ಕರ್ನಾಟಕದ ದೇವಸ್ಥಾನಗಳನ್ನು ಕಟ್ಟಿಸಲು ಹೆಚ್ಚಾಗಿ ಲಕುಲೀಶ ಪಾಶುಪತರು ಪ್ರಾರಂಭಿಸಿದರು.

ಕ್ರಿ.ಶ. ೭ನೇ ಶತಮಾನದ ಕಿಗ್ಗ ಶಾಸನದಲ್ಲಿ ಸಾಂತರ ಮನೆತನದ ಕಿಟ್ಗೌನೇಶ್ವರ ದೇವಾಲಯದ ಸಹವರ್ತಿಗಳಿಗೆ (ಪರವರಿಯ) ಪಾಲುಂ, ಭತ್ತ ಅನುಭವಿಸುವ ಹಕ್ಕುಗಳಿವೆ ಎಂಬುದನ್ನು ತಿಳಿಸುತ್ತದೆ.

ಕ್ರಿ.ಶ. ೯ನೇ ಶತಮಾನದ ಗಂಗರ ನೀತಿಮಾರ್ಗ ಪೆರ್ಮಾನಡಿ ಕಾಲದ ಗಂಜಿಗೆರೆ ಶಾಸನದಲ್ಲಿ ಕೋಳೂರ ನಾಡಿನಲ್ಲಿ ನಂದಿ ಮತ್ತು ಭಗವತಿ ವಿಗ್ರಹಗಳನ್ನು ನರಸಯ್ಯ ಮಾಡಿಸಿ ೧೦ ಮತ್ತರು ಭೂಮಿಯನ್ನು ವರ್ಧನ ಚಕ್ರವರ್ತಿ ಮತ್ತು ಎಜೆಯ ನಾಗಮ್ಮನಿಗೆ ದಾನ ನೀಡಿದ ದಾಖಲೆಯಿದೆ.

ಕ್ರಿ.ಶ. ೧೦೫೮ರ ಕೋಟೆವೂರು ಶಾಸನದಲ್ಲಿ ಆವಣೂರ ದೇವರ್ಗ್ಗೆ ಮತ್ತು ಕಾಡಲಹಳ್ಳಿಯಲ್ಲಿ ಪಂಚವೇಸ್ವರ ದೇವರಿಗೆ ಮಾರಸಿಂಹ (ಸೇನವಾರ ಮುಖ್ಯಸ್ಥ) ದಾನ ನೀಡಿದ ವಿವರವಿದೆ. ಕ್ರಿ.ಶ. ೧೦೬೫ರ ಹೊಯ್ಸಳ ರಾಜ ವಿನಯಾದಿತ್ಯನ ಕೈಕೇಶ್ವರ ಸ್ವಯಂಭೂ ದೇವರಿಗೋಸ್ಕರ ಮಾರಸಿಂಹನು ದಾನ ನೀಡಿದ ವಿವರವಿದೆ. ಕ್ರಿ.ಶ. ೧೦೯೭ರ ವಿನಯಾದಿತ್ಯನ ಕುಂಟನ ಮಡುಪು ಊರಿನ ಬಮ್ಮಗೌಡನು ತನ್ನ ಎರಕೌವೆಗೌಂಡಿಯ ಸ್ಮರಣಾರ್ಥ ಎರಕೇಶ್ವರ ದೇವಾಲಯವನ್ನು ಕಟ್ಟಿಸಿದ ವಿಷಯವನ್ನು ಉಲ್ಲೇಖಿಸುತ್ತದೆ.

---

* ಶಾಸನ ತಜ್ಞರು, ಭಾರತೀಯ ಪುರಾತತ್ತ್ವ ಸರ್ವೇಕ್ಷಣಾಲಯ, ಸಂಕ್ರಾಂತಿ ವೃತ್ತ, ಹೆಬ್ಬಾಳ ೨ನೇ ಹಂತ, ಮೈಸೂರು-೫೭೦೦೧೬

ಕ್ರಿ.ಶ. ೧೧೦೪ರ ಬಂಕನಕಟ್ಟೆಯ ಹೊಯ್ಸಳ ಒಂದನೇ ಬಲ್ಲಾಳನ ಶಾಸನದಲ್ಲಿ ಚಟ್ಟಿಗವುಂಡನು ತನ್ನ ಪತ್ನಿಯೊಡಗೂಡಿ ಬಂಕೇಶ್ವರ ದೇವಾಲಯವನ್ನು ಕಟ್ಟಿಸಿದ. ದೇವರ ಸೇವೆಗೆ ದಾನ ಸ್ವೀಕರಿಸಿದವನು ಶಿವಶಕ್ತಿ ಪಂಡಿತ, ಏಚೋಜನೆಂಬಾತ ದೇವಾಲಯ ಕಟ್ಟಿದ. ಕ್ರಿ.ಶ. ೧೧೦೮ರಲ್ಲಿ ಬಾಣೂರು ಅಗ್ರಹಾರ ಶಾಸನದಲ್ಲಿ ಆಲೂರಿನ ಶಿವಾಲಯದ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದ. ಕಾಳಾಮುಖ ಶೈವಾಚಾರ್ಯ ಗಿರ್ಬಾಣ ಶಕ್ತಿಪಂಡಿತ ಭೂದಾನ ಪಡೆದ ಸಾಮಂತ ಬರ್ಮಣ ಮತ್ತು ಪೆರ್ಗಡೆ ರಾಜಮಯ್ಯ ದಾನ ನೀಡಿದ್ದಾನೆ. ಕ್ರಿ.ಶ. ೧೧೨೪ರ ವಿಷ್ಣುವರ್ಧನ ಅಣಂಗೆರೆ ಶಾಸನದಲ್ಲಿ ಮಹಾಸಾಮಂತ ನನ್ನಯ್ಯ ಮಲ್ಲಿಕಾರ್ಜುನ ದೇವರಿಗೆ ದಾನ ನೀಡಿದ. ಕ್ರಿ.ಶ. ೧೧೨೯ರ ಕೆರೆಸಂತೆಯ ಶಾಸನದಲ್ಲಿ ರಾಮೆಯನಾಯಕ ಮತ್ತು ಆತನ ಕುಟುಂಬದವರನ್ನು ಒಳಗೊಂಡಂತೆ ಎಲ್ಲಾ ಒಡನಾಯಕರು ಅಲ್ಲಿನ ಒಡೇಶ್ವರ ದೇವರಿಗೆ ಭೂದಾನವಿತ್ತುದನ್ನು ಶಾಸನದಲ್ಲಿ ನಿರೂಪಿಸಿದೆ. ಕ್ರಿ.ಶ. ೧೧೩೬ರ ವಕ್ಕಲಗೇರೆಯಲ್ಲಿ ವದ್ದೇಶ್ವರ ದೇವಾಲಯವನ್ನು ಉದಯಾದಿತ್ಯ ಅಥವಾ ವಾದಿರಾಜನು ಕಟ್ಟಿಸಿದನು. ಕ್ರಿ.ಶ. ೧೧೩೮ರ ಲಿಂಗದಹಳ್ಳಿ ಶಾಸನ ಬ್ರಹ್ಮೇಶ್ವರ ದೇವರಿಗೆ ೫ ಸಲಿಗೆ ಮತ್ತು ೪ ಮತ್ತುರು ಹೆಗ್ಗಡೆದಾಸಿಮಯ್ಯನು ಭೂಮಿ ದಾನ ನೀಡಿದನ್ನು ದಾಖಲಿಸುತ್ತದೆ. ಕ್ರಿ.ಶ. ೧೧೩೯ರ ನಿಡಗಟ್ಟ ಶಾಸನದಲ್ಲಿ ನಿಡಗಟ್ಟದ ಈಶಾನ್ಯ ದಿಕ್ಕಿನ ಕೈಲಾಸ ಸ್ಥಾನದಲ್ಲಿ ಕಾಳಗೌಂಡನು ಕಾಳೇಶ್ವರ ದೇವಾಲಯವನ್ನು ನಿರ್ಮಿಸಿದ. ಈ ದಾನವನ್ನು ಸ್ವೀಕರಿಸಿ ದಾಸಶಿವಶಕ್ತಿ. ಇದೇ ತೇದಿಯ ಬೆಲಟಕೆರೆ ಶಾಸನದಲ್ಲಿ ಮಲೆಯನಾಯಕ ಕಾಳಾಮುಖಪಂಥಕ್ಕೆ ಸೇರಿದ ಮಾಣಿಕೇಶ್ವರ ದೇವರಿಗೆ ಭೂಮಿ ದಾನ ಮಾಡಲಾಯಿತು. ಕ್ರಿ.ಶ. ೧೧೪೧ರ ಕೆರೆಸಂತೆಯ ವಿಷ್ಣುಸಮುದ್ರದಲ್ಲಿ ಮಂಚೆಯರಸನು ಮಂಚೇಶ್ವರ ದೇವಾಲಯ ಕಟ್ಟಿಸಿದ. ಇದೇ ಕಾಲದ ಸೋಮನಹಳ್ಳಿ ಶಾಸನದಲ್ಲಿ ಸೋಪಿಸೆಟ್ಟಿಯು ಅಭಿನವ ಸೋಮೇಶ್ವರ ದೇವರ ಪ್ರತಿಷ್ಠೆ ಮಾಡಿಸಿ ದೇವರ ಸೇವೆಗೆ ಭೂಮಿದಾನ ಮಾಡಿದ ವಿಷಯವಿದೆ. ಕ್ರಿ.ಶ. ೧೧೪೦-೪೧ರ ಕರ್ರೆಗಾಲು ಶಾಸನದಲ್ಲಿ ತಳಿಗೆನಾಡುಸಾಯಿರದ ಹೆಗ್ಗಡೆ ಬೀಮಂಣನ ಪುತ್ರ ದುದ್ದೆಯ ಸಾಹಣಿ ಎಂಬುವನು ಒಂದಲಿಂಗ ಪ್ರತಿಷ್ಠೆ ಮಾಡಿ ದಾನ ನೀಡಿದ ದಾಖಲೆಯಿದೆ. ಕ್ರಿ.ಶ. ೧೧೪೭ರ ಒಂದನೇ ನರಸಿಂಹನ ಮರಲೆ ಶಾಸನದಲ್ಲಿ ದೇವಳಿಗೆ ನಾಡಿನಲ್ಲಿ ಮಾರಲೆ ಅಗ್ರಹಾರದ ವಿಷ್ಣುವರ್ಧನ ಕೇಶವಪುರ ಕಲಿದೇವರಪೂಜೆ, ನೈವೇದ್ಯ ಆಚರಣೆಗೋಸ್ಕರ ಮುಗುಳಿ ಕೆರೆಯನ್ನು ದಾನ ನೀಡಿದ ವಿವರವಿದೆ. ಕ್ರಿ.ಶ. ೧೨ನೇ ಶತಮಾನದ ತುರುವನಹಳ್ಳಿಯ ಶಾಸನದಲ್ಲಿ ಸಿಂಗೇಶ್ವರ ದೇವರಿಗೆ ದಾನ ನೀಡಿದ ವಿಷಯವನ್ನು ಉಲ್ಲೇಖಿಸುತ್ತದೆ. ರತ್ನಶಿವ ಪಂಡಿತನಿಗೆ ಭೂಮಿ ಗದ್ಯಾಣ, ಗಾಣ ಮತ್ತು ಗೃಹನಿವೇಶನಗಳನ್ನು ದಾನ ನೀಡಿದ ವಿವರವಿದೆ. ಕ್ರಿ.ಶ. ೧೧೪೮ರ ವಿಷ್ಣುವರ್ಧನನ ಮತ್ತೂರು ಶಾಸನದಲ್ಲಿ ಮತ್ತವೂರಿನ ಆಡಳಿತ ಕೇತಣನ ಕೈಯಲ್ಲಿತ್ತು. ತನ್ನ ಸೋದರರ ಜೊತೆಗೂಡಿ ಆತ ಗ್ರಾಮದಲ್ಲಿ ಕೆರೆಯೊಂದನ್ನು ಕಟ್ಟಿಸಿ ಬಿಕ್ಕೇಶ್ವರ ಮತ್ತು ಆಂಡೇಶ್ವರ ದೇವಾಲಯಗಳನ್ನು ತನ್ನ ತಂದೆ ತಾಯಿಗಳ ನೆನಪಿಗಾಗಿ ನಿರ್ಮಿಸಿದನು.

ಕ್ರಿ.ಶ. ೧೧೪೭ರ ಎಲೂಗೆರೆಯ ಶಾಸನದಲ್ಲಿ ಗಂಗೌಡ ಮತ್ತು ಮಲ್ಲೇಗೌಡರು ಎಲಿವಂಗೆರೆಯ ಗಂಗೇಶ್ವರ ಮತ್ತು ತುರುವದ ರಾಮೇಶ್ವರ ದೇವರಿಗೆ ಭೂದಾನ ನೀಡಿದರು. ಕ್ರಿ.ಶ. ೧೧೫೮ರ ಹಳೆಯೂರು ಶಾಸನದಲ್ಲಿ ಲಕ್ಕರಸ ಮತ್ತು ಇತರರು ಅಮೃತೇಶ್ವರ ದೇವರ ಪ್ರತಿಷ್ಠೆ ಮಾಡಿಸಿ ದೇವರಿಗೆ ಭೂಮಿ ಮತ್ತು ಉದ್ಯಾನಗಳನ್ನು ದಾನವಿತ್ತರು.

ಕ್ರಿ.ಶ. ೧೧೬೨ ಬಿದಿರೆ ಶಾಸನದಲ್ಲಿ ಬ್ರಹ್ಮೇಶ್ವರ ದೇವಾಲಯ ಕಟ್ಟಿಸಿ ಕೆಲವು ದತ್ತಿಗಳನ್ನು ನೀಡಿದರು. ಗಲ್ಲಿಗವುಡಂನ ಮಗನಾದ ಕೇಶವಗೌಡನು ವೈದ್ಯಚಿಕ್ಕಣನಿಂದ ಕೆಲವು ಭೂಮಿಗಳನ್ನು ಕೊಂಡು ದೇವರ ಸೇವೆಗೆ ನೀಡಿದನೆಂಬುದನ್ನು ತಿಳಿಸುತ್ತದೆ. ಕ್ರಿ.ಶ. ೧೧೬೫-೬೬ರ ಕಮರಗೋಡು ಶಾಸನದಲ್ಲಿ ಅಮೃತೇಶ್ವರದೇವರ ದೇವಾಲಯ ಕಟ್ಟಿಸಿ ನೈವೇದ್ಯಗೋಸ್ಕರ ಕಮಾಜಿಗೋಡದ ಬಿಟ್ಟಿಗೌಂಡನು ಭೂಮಿದಾನ ನೀಡಿದ ವಿವರವಿದೆ. ಕ್ರಿ.ಶ. ೧೧೬೭ರ ಆಸಂದಿಯ ಶಾಸನದಲ್ಲಿ ತನ್ನ ತಾಯಿ ಗಂಗಾಮಾದೇವಿಯ ಮರಣದ ನಂತರ ಬ್ರಹ್ಮೇಶ್ವರ ಮತ್ತು ಗಂಗೇಶ್ವರ ದೇವಾಲಯಗಳನ್ನು ಕಟ್ಟಿಸಿದ ವಿವರವಿದೆ. ಕ್ರಿ.ಶ. ೧೧೭೨ರ ಎರಡನೇ ಬಲ್ಲಾಳನ ಮದಿಗೆರೆ ಶಾಸನದಲ್ಲಿ ರಾಮೇಶ್ವರ ದೇವಾಲಯವನ್ನು ಆದಿಗೌಡ ಮತ್ತು ಆತನ ಮಕ್ಕಳು ಕಟ್ಟಿಸಿದರು. ದೇವರಸೇವೆಗೆ ಭೂಮಿ ದಾನವನ್ನು ಸ್ವೀಕರಿಸಿದವನು ಕಲ್ಯಾಣಶಕ್ತಿದೇವ. ಕ್ರಿ.ಶ. ೧೧೭೫ರ ಎರಡನೇ ಬಲ್ಲಾಳನ ಕುಪ್ಪೆಹಾಳು ಶಾಸನದಲ್ಲಿ ನಾಗದೇವನೆಂಬಾತ ಕೆರೆಯೊಂದನ್ನು ಕಟ್ಟಿಸಿ ನಂದಿಕೇಶ್ವರ ದೇವಾಲಯವನ್ನು ಕಟ್ಟಿಸಿದನು. ಕ್ರಿ.ಶ. ೧೧೭೫ರ ಕೊತ್ತಗೆರೆ ಶಾಸನದಲ್ಲಿ ಕೋತಕೆರೆಯಲ್ಲಿ ಬ್ರಹ್ಮೇಶ್ವರ ಲಿಂಗವನ್ನು ಪ್ರತಿಷ್ಠಾಪಿಸಿ ಗಂಗರ ಸಜೀಯನಿಗೆ ಭೂಮಿ ದಾನ ಮಾಡಿದ ವಿಷಯವನ್ನು ತಿಳಿಸುತ್ತದೆ. ಕ್ರಿ.ಶ. ೧೧೭೮ರ ಅಂಬಳೆ ಶಾಸನದಲ್ಲಿ ಅಮ್ಮೆಳೆಕೇಶವ ವೀರಬಲ್ಲಾಳದೇವರ ಪ್ರತಿಷ್ಠಾನ ಮಾಡಲು ಹಾಗೂ ದೀಪಾಲಂಕಾರಗಳು ಮತ್ತು ಪೂಜೆಗೋಸ್ಕರ ದೇವಳಗಿನಾಡಿನ ನಲ್ಲೂರನ್ನು ಹಾಗೂ ಭೂಮಿ ದಾನ ನೀಡಿದ್ದಾನೆ. ಹೊಯ್ಸಳರಾಜನು ಕ್ರಿ.ಶ. ೧೧೮೦ ಖಾಂಡ್ಯ

ಶಾಸನದಲ್ಲಿ ಮಾರ್ಕಂಡೇಶ್ವರ ದೇವರ ನಿತ್ಯ ಪೂಜೆಗೋಸ್ಕರ ೧೦ ಗದ್ಯಾಣ ನಿಗದಿಪಡಿಸಿ ಹೊಯ್ಸಳರಾಜನು ದಾನ ನೀಡಿದ ದಾಖಲೆಯಿದೆ. ಈ ಶಾಸನ ಹೊಯ್ಸಳ ವಂಶಾವಳಿಯನ್ನು ತಿಳಿಸುತ್ತದೆ.

ಕ್ರಿ.ಶ. ೧೧೮೭-೮೮ರ ವಕ್ಕಲಗೆರೆಯ ಶಾಸನದಲ್ಲಿ ನಿರ್ಗುಂದದ ಚಟ್ಟಿಯನಾಯಕನ ಪತ್ನಿ ಚಂದನನಾಯತಿಯ ಆಲೂರಿನಲ್ಲಿ ತನ್ನ ಮಗಳ ಕಾಚವ್ವೆ ಮತ್ತು ಆಳಿಯ ಮಲ್ಲಯ್ಯ ನಾಯಕರ ಅಭ್ಯುದಯಕ್ಕಾಗಿ ಶಿವಾಲಯವೊಂದನ್ನು ಕಟ್ಟಿಸಿದ ವಿಷಯವನ್ನು ತಿಳಿಸುತ್ತದೆ. ಕ್ರಿ.ಶ. ೧೧೯೧ರ ಮರಲೆ ಶಾಸನದಲ್ಲಿ ಮರಲೆ ರಾಯಕೇಶವ ದೇವರ ದೀಪೋತ್ಸವ ಕ್ಕೋಸ್ಕರ ಲೋಕನಾಥಯ್ಯನ ಮಗ ಮಹದೇವಣ್ಣನು ಮೂರು ಗದ್ಯಾಣಗಳನ್ನು ದಾನ ನೀಡಿದ ದಾಖಲೆಯಿದೆ. ಇದೇ ಕಾಲದ ಕಡಿದಾಳು ಶಾಸನದಲ್ಲಿ ಶ್ರೀ ಸೋಮನಾಥದೇವರಿಗೆ ಕಿಸುವೊಲಲು ಎರಡು ಮಣ್ಣು ಭೂಮಿಯನ್ನು ಕುಮಾರ ಲಖಯ್ಯ ದಾನ ನೀಡಿದ ವಿವರವಿದೆ. ಕ್ರಿ.ಶ. ೧೧೯೮ರ ಅಮೃತಾಪುರ ಶಾಸನದಲ್ಲಿ ಅಮೃತೇಶ್ವರ ದಣ್ಣಾಯಕನು ಅಮೃತಸಮುದ್ರದಲ್ಲಿ ಅಮೃತೇಶ್ವರ ದೇವಾಲಯವನ್ನು ಕಟ್ಟಿಸಿದ ವಿಷಯವನ್ನು ತಿಳಿಸುತ್ತದೆ. ಕ್ರಿ.ಶ. ೧೨೦೨ರ ಮುತ್ತಿನಪುರ ಶಾಸನದಲ್ಲಿ ಬ್ರಹ್ಮೇಶ್ವರ ದೇವಾಲಯ ಕಟ್ಟಿಸಿ ಜೀರ್ಣೋದ್ಧಾರ ಮಾಡಿಸಿ ಸೇವೆಗೋಸ್ಕರ ಲಕ್ಷ್ಮೀಪುರದ ಮಹಾಜನರು ಸತ್ತಿಯನ ಬಮ್ಮಿಸೆಟ್ಟಿ ಮತ್ತು ಸಾದರಹಳ್ಳಿ ಮೇದಯ್ಯಗುಂಡ ಭೂಮಿ ದಾನ ನೀಡಿದ ವಿವರವಿದೆ.

ಕ್ರಿ.ಶ. ೧೨೦೨ರ ಆಸಂದಿಯ ಗಂಗದೊರೆ ನರಸಿಂಹನ ಸೂರ್ಯದೇವರ ಸೇವೆಗಾಗಿ ಮಲ್ಲಿಕಾರ್ಜುನದೇವರಿಗೆ ಕೆಲವು ದಾನಗಳನ್ನು ನೀಡಿದನೆಂದು ತಿಳಿಸುತ್ತದೆ. ಕ್ರಿ.ಶ. ೧೨೦೯ರ ಆಸಂದಿಪುರದಲ್ಲಿ ಮಹಾಪ್ರಧಾನ ಹರಿಹಿಸಹಾನಿ ಬಲ್ಲೇಶ್ವರ ದೇವರನ್ನು ಪ್ರತಿಷ್ಠಾಪಿಸಿ ತಂಡಗೆರೆ ಗ್ರಾಮದ ಹೆಸರನ್ನು ಬಲ್ಲೇಶ್ವರಪುರಿ ಎಂದು ಪ್ರತಿ ಹೆಸರಿಸಿ ದೇವರ ಪೂಜೆ ನೈವೇದ್ಯ, ಹಬ್ಬ ನೃತ್ಯಕ್ಕೋಸ್ಕರ ಒಂದು ಹಳ್ಳಿಯನ್ನು ದಾನ ನೀಡಿದ ವಿಷಯವಿದೆ. ಕ್ರಿ.ಶ. ೧೨೧೮ರ ಮಹಾಪುರದಲ್ಲಿ ಎರಡನೆಯ ಬಲ್ಲಾಳನ ರಾಣಿ ಬೈಚಲಮಹಾದೇವಿಯನ್ನು ಉಲ್ಲೇಖಿಸುತ್ತದೆ. ಆಕೆ ಮಾದಿಯಕ್ಕನ ಮಗು ಕೇತಿಯಹಳ್ಳಿಮಲ್ಲಿ ಪ್ರಸನ್ನಮಾಧವ ದೇವಾಲಯವನ್ನು ಕಟ್ಟಿಸಿದಾಕೆ.

ಕ್ರಿ.ಶ. ೧೨೨೪ರಲ್ಲಿ ಎರಡನೇ ನರಸಿಂಹನ ಕಾಲದಲ್ಲಿ ಕೆರೆಸಂತೆಯಲ್ಲಿ ಚೌಡಿಸೆಟ್ಟಿ ಶಂಭುದೇವಾಲಯವನ್ನು ಕಟ್ಟಿಸಿ ವಿಷ್ಣುಸಮುದ್ರದ ಮಹಾಜನರ ಅನುಮತಿ ಪಡೆದು ಅದನ್ನು ಅಳಿಭಟ್ಟನಿಗೆ ಒಪ್ಪಿಸಿದ ಅಂಶವನ್ನು ತಿಳಿಸುತ್ತದೆ. ಕ್ರಿ.ಶ. ೧೨೪೫ರ ಮರಲೆ ಶಾಸನದಲ್ಲಿ ಶ್ರೀ ಕೇಶವದೇವರ ಮತ್ತು ಸಿದ್ಧೇಶ್ವರ ದೇವರ ನಂದಾದೀಪಿಗೆಗೆ ಸೊಡರೆಣ್ಣೆಗೋಸ್ಕರ ಸಿದ್ಧಾಯ ಮತ್ತು ಪ್ರವಕೆ ವಾರ್ಷಿಕ ಆದಾಯದಿಂದ ಕೊಡಗಲೂರು ರಾಜರಸನ ಮಗ ಮಹಾಮಂಡಳೇಶ್ವರ ಬಮ್ಮರಸದೇವ ೫ ಗದ್ಯಾಣಗಳನ್ನು ನೀಡಿದ ವಿವರವಿದೆ. ಕ್ರಿ.ಶ. ೧೨೪೭ರ ಕಳಸ ತಾಮ್ರ ಶಾಸನ ಜಾಕಲಮಹಾದೇವಿ ರಾಜ್ಯವಾಳುತ್ತಿರುವಾಗ ಕಳಸನಾಥ ದೇವರಿಗೆ ಅಮೃತಪಡಿಗೋಸ್ಕರ ಶಿವವೈದ್ಯನು ದಾನ ನೀಡಿದ ದಾಖಲೆಯಿದೆ.

ಕ್ರಿ.ಶ. ೧೨೫೭ರ ಮೂರನೇ ನರಸಿಂಹನ ಚಿಕ್ಕಮಗಳೂರು ಶಾಸನದಲ್ಲಿ ಸೋಮನಾಥ ಮತ್ತು ವೀರಭದ್ರ ದೇವರುಗಳನ್ನು ಪ್ರತಿಷ್ಠಾಪಿಸಿ ಪೂಜೆ ಮಾಡಲು ಚಿಕ್ಕಮುಗಳಿಯನಾಳಪ್ರಭು ಚೌಡೆಯನಾಯಕನು ಭೂಮಿ ದಾನ ನೀಡಿದ ವಿವರವಿದೆ. ಕ್ರಿ.ಶ. ೧೨೭೮ರ ಹಿರಿಕೆರೆಯ ರಾಮನಾಥ ಮತ್ತು ಕಲಿದೇವರ ಸೇವೆಗೆ ಗೊಟ್ಟಿಗಡಿಯಲ್ಲಿ ಹೆಜ್ಜುಂಕವನ್ನು ನೀಡಿದ ವಿಷಯ ನಿರೂಪಿಸಲಾಗಿದೆ. ಕ್ರಿ.ಶ. ೧೨೬೯ರ ಕಳಸ ತಾಮ್ರಶಾಸನದಲ್ಲಿ ಕಳಲ ಮಹಾದೇವಿ ರಾಜ್ಯವಾಳುತ್ತಿದ್ದಾಗ ಕಳಸನಾಥದೇವರ ಅಮೃತಪಡಿಗೆ ದಾನ ನೀಡಿದ ದಾಖಲೆಯಿದೆ. ಒಟ್ಟು ೧೪ ತಾಮ್ರಶಾಸನಗಳು ಕ್ರಿ.ಶ. ೧೨೯೬ ಬಗ್ಗವಳ್ಳಿ ಶಾಸನ ಮಹಾಪಸಾಯಿತ ಚವುರಸ ಮತ್ತು ಇತರರು ಅಲ್ಲಿನ ಪಂಚಿಕೇಶ್ವರದ ಬಿಜಹೊನ್ನಾಗಿ ಧನದಾನ ಮಾಡಿದುದನ್ನು ತಿಳಿಸುತ್ತದೆ. ಕ್ರಿ.ಶ. ೧೩೨೯ರ ಕೋಡವಳ್ಳಿ ಶಾಸನದಲ್ಲಿ ಕೋಡವಳ್ಳಿ ಮಲ್ಲಿಕಾರ್ಜುನ ದೇವರಿಗೋಸ್ಕರ ಸಿರಿಯುನಗವುಡನ ಹಳ್ಳಿಯ ಜಿಯಳಗೌಂಡನ ಮಗ ಸುಳಿಗೌಡನು ದಾನ ನೀಡಿದ ವಿವರವಿದೆ.

ಕ್ರಿ.ಶ. ೧೩೭೧ನೇ ಒಂದನೇ ಬುಕ್ಕನ ದೇವವೃಂದ ಶಾಸನದಲ್ಲಿ ರಾಮನಾಥದೇವರ ಧರ್ಮಕಾರ್ಯಕ್ಕೋಸ್ಕರ ನೃತ್ಯಗಾರ್ತಿಯರಿಗೆ ಸಹಾಯ ಮಾಡಲು ನಿಗದಿಪಡಿಸಿದ ಭೂಮಿ ದಾನ ನೀಡಿದ ಉಲ್ಲೇಖವಿದೆ.

ಕ್ರಿ.ಶ. ೧೩೭೮ರ ಎರಡನೇ ಹರಿಹರನ ಕಾಲದ ಭಂಡಿಗಡಿ ಶಾಸನದಲ್ಲಿ ಶಾಂತಳಿಗೆ ನಾಡಿನ ಕೇವಲ ಭಾಗೇಯ ಮುನಿವರ ತುಂಗಭದ್ರಾದೇವಿಯ ಪಶ್ಚಿಮದ ಪ್ರಸಂನ ವಿಶ್ವೇಶ್ವರ ದೇವರ ಅಮೃತಪಡಿಗೆ, ಪೂಜಾರಿಗೆ ನಂದಾದೀವಿಗೆಗೆ, ಮಾಲೆಯವರಿಗೆ, ಪರಿಚಾರಕರಿಗೆ ವಿದ್ಯಾರಣ್ಯ ಶ್ರೀಪಾದಗಳ ಆಜ್ಞೆಯಿಂದ ಧಾರಾಪೂರ್ವಕವಾಗಿ ಕೊಟ್ಟ ವಿವರವಿದೆ.

ಕ್ರಿ.ಶ. ೧೩೯೧ರಲ್ಲಿ ವಿದ್ಯಾಶಂಕರ ದೇವಾಲಯಕ್ಕಾಗಿ ಬೆಳ್ಳೂರು ಗ್ರಾಮವನ್ನು ಭೂದಾನ ಮಾಡಿದ ಸಂಗತಿ ತಿಳಿಸುತ್ತದೆ. ಮಂಜುಗಣೆ ಎಂಬ ಗ್ರಾಮವನ್ನು ಪುರುಷೋತ್ತಮ ಮಾರಣ್ಯರಿಗೆ ರಾಮಚಂದ್ರದೇವರ ಪೂಜಾ ಕೈಂಕರ್ಯ ಗಳಿಗಾಗಿ ದಾನವಾಗಿ ನೀಡಿದ ವಿಷಯ ತಿಳಿಸುತ್ತದೆ.

ಕ್ರಿ.ಶ. ೧೪೦೭ರ ಒಂದನೇ ದೇವರಾಯನ ಭಾನವಳ್ಳಿ ಶಾಸನ ಅಗ್ರಹಾರ ಭಾನುಪುರ ಅಗ್ರಹಾರ ವಿದ್ಯಾಶಂಕರ ದೇವರ ಮುಂದೆ ವಿದ್ಯಾಶಂಕರ ದೇವರಿಗೆ ಶಾಂತಳಿಗೆ ನಾಡಿನ ೫ ಗ್ರಾಮಗಳನ್ನು ವಿತಣ ಒಡೆಯ ದಾನ ನೀಡಿದ ದಾಖಲೆಯಿದೆ.

ಕ್ರಿ.ಶ. ೧೪೧೦ರ ಒಂದನೇ ದೇವರಾಯನ ತೊಟ್ಲು ಶಾಸನದಲ್ಲಿ ವೀರನಾರಾಯಣದೇವರ ಅಮೃತಪಡಿಗೋಸ್ಕರ ಕುಮಾರಿ ಐಯಗಳ ಕುಮಾರ ಕೇಶವದಾಸರು ಭೂಮಿ ದಾನ ನೀಡಿದ ದಾಖಲೆಯಿದೆ. ಇದೇ ಕಾಲದ ಕೊಡತಲೆ ಗ್ರಾಮುದ ತಾಮ್ರ ಶಾಸನದಲ್ಲಿ ಹೆಬ್ಬಾರ ಸೀಮೆಯ ಆರಂಗವೆಂನಿತೆಂಯುಲ್ಲಿ ವೊಟಿಗಾರ ಗ್ರಾಮುವನ್ನು ದೇವರಾಯಪುರ ಎಂದು ಪುನರ್ ನಾಮಕರಣ ಮಾಡಿ ವಿರೂಪಾಕ್ಷದೇವರ ಮುಂದೆ ತುಂಗಭದ್ರಾ ದಂಡೆಯಲ್ಲಿ ಅಪ್ಪಸ್ಥಂಭಸೊತ್ರದ ಮತ್ತು ಶ್ರೀವತ್ಸಗೋತ್ರದ ದೇವರಾಯ ಆಚಾರ್ಯನ ಮಗ ಮಾಯಣ ಆಚಾರ್ಯನಿಗೆ ದಾನ ಕೊಟ್ಟ ವಿವರವಿದೆ.

ಕ್ರಿ.ಶ. ೧೪೩೯ರ ಎರಡನೇ ದೇವರಾಯನ ಕಾಲದ ಕಳಸ ಶಾಸನದಲ್ಲಿ ಕಳಸನಾಥ ದೇವರ ದಿನಚರಿಯ ಅಮೃತಪಡಿಗೋಸ್ಕರ ಅರಸಹೆಗ್ಗಡೆಯ ಮೊಂಮಗ ಬೈರಪನು ಭೂಮಿ ದಾನ ನೀಡಿದ ವಿವರವಿದೆ.

ಕ್ರಿ.ಶ. ೧೫೦೧ರ ಶಾಸನ ಕಳಸ ಕಾರ್ಕಳ ಮನೆತನದ ಎರಡನೇ ಭೈರರಸ ಒಡೆಯ ರಾಜಧಾನಿ ಕಳಸ ಆಳುತ್ತಿರುವಾಗ ಭೈರರಸ ಒಡೆಯನ ಸಹೋದರಿ ಬಾಳವಾದೇವಿ ಕಳಸನಾಥದೇವರಿಗೆ ದಾನ ನೀಡಿದ ವಿವರವಿದೆ.

ಕೃಷ್ಣದೇವರಾಯನ ಕ್ರಿ.ಶ. ೧೫೧೬ರ ಕಳಸ ಶಾಸನದಲ್ಲಿ ಕಳಸನಾಥ ದೇವಾಲಯ ಜೀರ್ಣೋದ್ಧಾರ ಮಾಡಲು ಮೂವರು ಪ್ರಭುಗಳು, ಸಾವಿರ ಗ್ರಾಮದವರ ಮುಂದೆ ೩೦ ಗದ್ಯಾಣಗಳನ್ನು ಸೂರಪ್ಪಸೇನಭೂವ ಭೂಮಿ ದಾನ ನೀಡಿದ ವಿವರವಿದೆ. ಕ್ರಿ.ಶ. ೧೫೨೦ರ ದೇವೃಂದ ಶಾಸನದಲ್ಲಿ ನಾಡಿನ ದೇವವೃಂದ ಶ್ರೀರಾಮೇಶ್ವರ ದೇವರಿಗೆ ಮಂಚ್ಯಪ್ಪನಾಯಕರ ಮಕ್ಕಳು ಸಂಗಪ್ಪನಾಯಕರು ಕಳಿಚೂರ ಗ್ರಾಮವನ್ನು ದಾನ ನೀಡಿದ್ದ ವಿವರವಿದೆ.

ಕ್ರಿ.ಶ. ೧೫೨೪ರ ಕಳಸ ಶಾಸನದಲ್ಲಿ ಕಳಸನಾಥದೇವರ ಅಮೃತಪಡಿಗೋಸ್ಕರ ಮೇಗುಂದದ ಸಂತಪಸೇನಭೋಪರು ೧೦ ಗದ್ಯಾಣಗಳನ್ನು ದಾನ ನೀಡಿದ ದಾಖಲೆಯಿದೆ. ಕ್ರಿ.ಶ. ೧೫೨೬ರ ಕೃಷ್ಣದೇವರಾಯನಪುರ ಶಾಸನದಲ್ಲಿ ಚನ್ನಪನು ಕಾರೆಯಹಳ್ಳಿ ಗ್ರಾಮವನ್ನು ಪುರದ ಮಲ್ಲಿಕಾರ್ಜುನ ದೇವರಿಗೆ ದಾನವಿತ್ತ ವಿವರವಿದೆ. ಕ್ರಿ.ಶ. ೧೫೨೭ರ ಹಳೇಲಕ್ಯ ಶಾಸನದಲ್ಲಿ ಲೊಕ್ಕಿಯಶ್ರೀ ಚಂನಕೇಸವದೇವಿ ಕೇತಸೆಟ್ಟಿಯ ಬೀಡಿನ ಹೆಬ್ಬಾರುವ ಕೇಸವದೇವನ ಮಗ ದೇವಣ್ಣನು ಕೇತಸೆಟಿಯ ಬೀಡಿನ ೧೧/೨ ವಿತ್ತಿಯನ್ನು ದಾನ ನೀಡಿದ ದಾಖಲೆಯಿದೆ. ಕ್ರಿ.ಶ. ೧೫೨೯–೩೦ರ ತಾಳಕೋಡು ಶಾಸನ ಸವೆದಿದೆ. ಹರಾವರಿ ಮಲ್ಲಿಕಾರ್ಜುನ ದೇವರಿಗೋಸ್ಕರ ಬೊಮ್ಮಣಹೆಗ್ಗಡೆ ಭೂಮಿ ದಾನ ನೀಡಿದ ದಾಖಲೆಯಿದೆ.

ಕ್ರಿ.ಶ. ೧೫೩೯ರ ಖಾಂಡ್ಯ ಶಾಸನದಲ್ಲಿ ಹುಣಿಸೆಹಳ್ಳಿ ಮತ್ತು ಕತೆಗಾರ ಎಂಬ ಎರಡು ಹಳ್ಳಿಗಳನ್ನು ಬಿದಿರೆಯಲ್ಲಿರುವ ೨೪೦ ಖಂಡುಗ, ಹೇರಂಬಿಯಲ್ಲಿರುವ ೪೫೦ ಖಂಡುಗ ಗದ್ದೆಗಳನ್ನು ವಿನಿಮಯ ಮಾಡಿಕೊಂಡು ವಸುಧಾರೆ ಸೀಮೆಯ ಎಳವರೆಯನಾಡಿನ ಖಾಂಡ್ಯದಲ್ಲಿರುವ ಜನಾರ್ಧನ ಮತ್ತು ಮಾರ್ಕಂಡೇಶ್ವರ ದೇವರುಗಳಿಗೆ ಕೊಡಲಾಯಿತು ಎಂಬುದನ್ನು ತಿಳಿಸುತ್ತದೆ. ಕ್ರಿ.ಶ. ೧೫೪೨ರ ಕಳಸ ಶಾಸನದಲ್ಲಿ ವೀರಶ್ರೀ ವೀರಪಾಂಡ್ಯಪ್ಪ ವೊಡೆಯರು ಆಳುತ್ತಿರುವಾಗ ಕಳಸನಾಥ ದೇವರಿಗೆ ಅಮೃತಪಡಿಗೆ ವಿಂಕಲಭಟ್ಟರ ಮಗ ಸೂರಪ್ಪ ದಾನ ನೀಡಿದ್ದನ್ನು ದಾಖಲಿಸಿದೆ.

ಕ್ರಿ.ಶ. ೧೫೪೭ರ ಕಳಸ ಕಾರ್ಕಳ ವೀರಪಾಂಡ್ಯಪ್ಪ ಒಡೆಯನ ಕಾಲದ ವಿದ್ಯಾರಣ್ಯಪುರ ಶಾಸನದಲ್ಲಿ ವಿಘ್ನೇಶ್ವರ ದೇವರ ಅಮೃತಪಡಿ, ನಂದಾದೀಪ, ಛತ್ರಕ್ಕೆ ವಿದ್ಯಾರಣ್ಯಪುರ ಮಹಾಜನಗಳ ಮುಂದೆ ದಾನ ನೀಡಿದ ದಾಖಲೆಯಾಗಿದೆ.

ಕ್ರಿ.ಶ. ೧೫೪೭ರ ಕಳಸ ಶಾಸನದಲ್ಲಿ ಕಳಸನಾಥ ದೇವಾಲಯದಲ್ಲಿ ನಿಗದಿಪಡಿಸಿದ ಹಬ್ಬಗಳನ್ನು ಆಚರಿಸಲು ಆದಾಯದಿಂದ ೨೭ ವರಹಗಳೂ, ೧೬೦ ಖಂಡುಗದ ಭೂಮಿ ನೀಡವಳೆ ಗ್ರಾಮದಲ್ಲಿ ಮತ್ತು ೧೧೦ ಖಂಡುಗ ಕಲುಗೋಡ ಗ್ರಾಮದಿಂದ ಒಟ್ಟು ೨೭೦ ಖಂಡುಗ ದಾನ ನೀಡಿದ ವಿವರವಿದೆ. ಕ್ರಿ.ಶ. ೧೫೪೯ರ ಸದಾಶಿವರಾಯನ ಕುರುವಾಗಿ ಶಾಸನದಲ್ಲಿ ರಾಮೇಶ್ವರ ಲಿಂಗದೇವರ ಪೂಜೆ ಅಲಂಕಾರಗಳಿಗೆ ಶಿವರಾತ್ರಿ ಹಬ್ಬದಲ್ಲಿ ರಥೋತ್ಸವಕ್ಕೆ, ದೀಪೋತ್ಸವಕ್ಕೆ ಹಿರಿಯ ಬಸವಪ್ಪ ತೆರಿಗೆ ಮನ್ನಾ ಮಾಡಿದ ವಿವರವಿದೆ. ಕ್ರಿ.ಶ. ೧೫೫೦ರ ಕೆರೆಸಂತೆ ಶಾಸನದಲ್ಲಿ ಸಿದದೇವ ಮಹಾ ಅರಸನು ತನ್ನ ತಂದೆ ತಾಯಿಗಳಿಗಾಗಿ ವಿತಲ ದೇವರಿಗೆ ಭೂಮಿ ದಾನ ನೀಡಿದ ವಿಷಯ ನಿರೂಪಿಸಲಾಗಿದೆ. ಕ್ರಿ.ಶ. ೧೫೫೨ರ ಕಳಸ ಶಾಸನದಲ್ಲಿ ಕಳಸನಾಥ ದೇವರಿಗೆ ವಾಡಿದ ಸೋಮವಾರದ ಕಾರ್ಯಗಳಿಗೋಸ್ಕರ ಭೂಂಮರಾಜ ಅರಸರ ಮಕ್ಕಳು ಭಯಿರರ್ಸಂಣಾಜಿಯರೂ ಸಾವಿರ ಗ್ರಾಮದ ಮೂವರ ಪ್ರಭುಗಳು ದಾನ ನೀಡಿದ ವಿವರವಿದೆ. ಕ್ರಿ.ಶ. ೧೫೫೫ರ ಇದೇ ಗ್ರಾಮದ ಶಾಸನದಲ್ಲಿ ವೀರ ಇಮ್ಮಡಿ ಪಾಂಡ್ಯಪ್ಪ ಒಡೆಯನು ಇವನ ಕಾಲದಲ್ಲಿ

ಬೊಮ್ಮರಾಜರಸನ ಮಗ ಭಯರರಸಣ್ಣನು ಕಳಸಸೀಮೆಯ ಹಾರುವತ್ತಿ ನೋಡಿಕೊಂಡು ಕಳಸನಾಥ ಪಂಚಮೃತ ಅಭಿಷೇಕ ಮಾಡಿದ ವಿವರಗಳನ್ನು ನೋಡಿಕೊಳ್ಳುತ್ತಿದ್ದ.

ಕ್ರಿ.ಶ. ೧೫೮೭ರ ವೆಂಕಟಪತಿರಾಯನ ಖಾಂಡ್ಯ ಶಾಸನದಲ್ಲಿ ವಸ್ತಾರ ಸೀಮೆಯೊಳಗಣ ಯಡಮಲೆನಾಡೊಳಗೆ ಖಾಂಡಯದ ಜರ್ನಾನದೇವರ ಮಾರ್ಕಂಡೇಶ್ವರದೇವರ ನಾರಸಿಂಹ ದೇವರಿಗೆ ಸಲುವ ದೇವದಾನ ನಾಡೊಳಗೆ ದೇವತಾಸ್ವಾಮ್ಯಕ್ಕೆ ಸಲುವರೊಕ್ಕದೊಳಗೆ, ತಳವಾರಿಕೆಗೆ ತೆಕೊಂಡ ಗದ್ಯಾಣ ೨೦೦ ವರಹವರೆಗೂ ಎಖಕೃಷ್ಣಪ್ಪ ನಾಯಕನವರ ಮಕ್ಕಳು ವೆಂಕಟಪ್ಪನಾಯಕ ಅಯನವರ ಮಗ ಕೃಷ್ಣಪ್ಪನಾಯಕನು ದಾನ ನೀಡಿದ ದಾಖಲೆಯಿದೆ.

ಕ್ರಿಸ. ೧೫೯೭ರ ಬೇಲೂರು ಮುಖ್ಯಸ್ಥರ ಕೃಷ್ಣಪ್ಪ ನಾಯಕನ ಹೊರನಾಡು ಶಾಸನ ಕಳಸದ ಸೀಮೆಯ ಹೊರನಾಡಿನ ಅಂನಪೂರ್ಣೇಶ್ವರ ಅಂಮನವರ ದೇವರ ಅಮೃತಪಡಿಗೆ, ನಂದಾದೀಪ, ಪಂಚಕರ್ಮ ಕಾರ್ಯಗಳಿಗೆ ಮತ್ತು ಸತ್ರಕ್ಕೆ ಅತಿಥಿಗಳಿಗೋಸ್ಕರ, ಕೃಷ್ಣನಾಯಕನ ಮಗ ವೆಂಕಟಾದ್ರಿನಾಯಕ ನಿಗದಿಪಡಿಸಿದ ದಾನ ನೀಡಿದ್ದಾನೆ.

ಕ್ರಿ.ಶ. ೧೬೧೪ರ ಸಂತೆಬೆನ್ನೂರು ನಾಯಕರ ಸೀತಾರಾಮಪ್ಪನಾಯಕನು ಹುಲಿತಿಮ್ಮಾಪುರ ಗ್ರಾಮದ ಶಾಸನದಲ್ಲಿ ಕಾಮನದುರ್ಗದ ಚನಿರಾಯಸ್ವಾಮಿ ದೇವರಿಗೆ ತಿಮ್ಮಾಪುರ ಗ್ರಾಮವನ್ನು ದಾನ ನೀಡಿದ್ದಾನೆ.

ಕ್ರಿ.ಶ. ೧೬೧೫–೧೬ರ ವಿಜಯನಗರ ರಾಮಚಂದ್ರ ರಾಯನ ಮುತ್ತಿನಪುರ ಶಾಸನದಲ್ಲಿ ವಿರೂಪಾಕ್ಷ ದೇವಾಲಯ ಜೀರ್ಣೋದ್ಧಾರ ಮಾಡಿ ಪೂಜೆ, ಸೇವೆಗೋಸ್ಕರ ಸುರುಗುಪ್ಪೆ ಗ್ರಾಮಗಳು ಬೆಲದಾಳಹಳ್ಳಿ ದಾನ ನೀಡಿದ ದಾಖಲೆಯಿದೆ.

ಕ್ರಿ.ಶ. ೧೬೨೧ರ ಕೆಳದಿ ಮನೆತನದ ವೆಂಕಟಪ್ಪನಾಯಕ ಮಲ್ಲಿಕಾರ್ಜುನದೇವರ ಜೀರ್ಣೋದ್ಧಾರಕ್ಕೆ ಸೇವೆಗೋಸ್ಕರ ೩೦ ವರಹಗಳನ್ನು ದಾನ ನೀಡಿದ ದಾಖಲೆಯಾಗಿದೆ.

ಕ್ರಿ.ಶ. ೧೬೬೩ರ ವಿಜಯನಗರದ ಶ್ರೀರಂಗದೇವ ರಾಯರು ಕಳಸಾಪುರ ಗ್ರಾಮದ ಶಾಸನದಲ್ಲಿ ಕಳಸಾಪುರದ ಚಲವನಾರಾಯಣಸ್ವಾಮಿಯವರ ರಥೋತ್ಸವದ ಸರಣ ಆಯನವರ ಅಮೃತಪಡಿ, ದೀಪಾರಾಧನೆ ಸೇವೆಗೋಸ್ಕರ ಕಳಸಾಪುರದ ಕಳಸಹಳ್ಳಿ ಗ್ರಾಮವನ್ನು ರಮಣರಾಜಯದೇವ ಮಹಾರಾಜರವರು ರಾಜಸಿಂದ ಜಿನ್ನಪಿಸಿಕೊಂಡು ದಾನ ನೀಡಿದ ದಾಖಲೆಯಿದೆ.

ಕ್ರಿ.ಶ. ೧೬೭೫ರ ಬೇಲೂರು ಮುಖ್ಯಸ್ಥ ಕೃಷ್ಣಪ್ಪ ನಾಯಕನ ಹೊರನಾಡು ಶಾಸನದಲ್ಲಿ ಹೊರನಾಡಿನ ಅಂನಪೂರ್ನೇಶ್ವರ ದೇವತೆಗೆ ನೈವೇದ್ಯ ದೀಪಾರಾಧನೆ, ಅತಿಥಿಗಳಿಗೋಸ್ಕರ ೩೬ ವರಾಹಗಳನ್ನು ಹೊರನಾಡು ಜಟಂಣಹೆಗ್ಗಡೆಗೆ ಕೊಟ್ಟು ಈ ಕಾಣಿಕೆಯನ್ನು ಪಡೆದು ದೇವರಿಗೆ ವೆಂಕಟಾದ್ರಿನಾಯಕನು ದಾನ ನೀಡಿದ್ದಾನೆ. ಇದೇ ಕಾಲದ ಸಂಸೆ ಶಾಸನದಲ್ಲಿ ಸಲುಶೇ ಪದ್ಮಾವತಿಯಂಮನ ನೈವೇದ್ಯ, ದೀಪಾರಾಧನೆಗೋಸ್ಕರ ಕೃಷ್ಣಪ್ಪನಾಯಕನ ಮಗ ವೆಂಕಟಾದ್ರಿನಾಯಕ ಭೂಮಿ ದಾನ ನೀಡಿದ ದಾಖಲೆಯಿದೆ.

ಕ್ರಿ.ಶ. ೧೬೭೮ರ ಕೆಳದಿ ಮನೆತನದ ಕಿಗ್ಗ ಶಾಸನದಲ್ಲಿ ಚೆಂನ್ನಮ್ಮಾಜಿ ಸುಖ ಸಂತೋಷದಿಂದ ರಾಜ್ಯವಾಳುತ್ತಿದ್ದಾಗ ಕಿಗ್ಗದ ಶೃಂಗೇಶ್ವರಸ್ವಾಮಿಗೆ ಪ್ರಧಾನಿ ಗುರುಬಸವಪ್ಪ ದೇವರ ಉತ್ಸವ ವಿಗ್ರಹ ಮಾಡಿಸಿದ ದಾಖಲೆಯಿದೆ.

ಕ್ರಿ.ಶ. ೧೭೬೦ರ ಮೈಸೂರು ಒಡೆಯರ, ಇಮ್ಮಡಿ ಕೃಷ್ಣರಾಜ ಒಡೆಯರ ಶೃಂಗೇರಿ ತಾಮ್ರಶಾಸನದಲ್ಲಿ ಚಂದ್ರಮೌಳೇಶ್ವರ ಮತ್ತು ಶಾರದಾಂಬೆಯರ ನಂದಾದೀಪಕ್ಕಾಗಿ ಬೆಳವಾಡಿ, ಉಪಗ್ರಾಮಗಳೂ ಸೇರಿದಂತೆ ಆದಾಯ ಸಮೇತವಾಗಿ ದಾನ ನೀಡಿದ ಶಾಸನವಾಗಿದೆ.

ಕ್ರಿ.ಶ. ೧೮೯೭ರ ಚಾಮರಾಜವೊಡೆಯರ ಮಗ ಕೃಷ್ಣರಾಜವಡೆಯರು ಕಳಸ ಗರುಡಗಂಬದ ತಾಮ್ರದ ತಗಡಿನಲ್ಲಿ ಕಳಸದ ಕಲಶೇಶ್ವರಸ್ವಾಮಿಯ ವರ ದೇವಸ್ಥನದ ಧ್ವಜಸ್ತಂಭದ ಪ್ರತಿಷ್ಠಾನ ಮಾಡಿಸಲು ಕಳಸದ ಸೇನಭೋಗರ ನಿಲಪ್ಪಯನವರ ಮಗ ಮಂಜಪ್ಪೈಯನೂ ಮಾಡಿಸಿದ ದಾಖಲೆಯಿದೆ.

ಚಿಕ್ಕಮಗಳೂರು ಜಿಲ್ಲೆಯ ಶೈವಶಾಸನಗಳನ್ನು ಅಧ್ಯಯನ ಮಾಡಿದಾಗ ಶೈವ ಧಾರ್ಮಿಕ ಚಟುವಟಿಕೆಗಳನ್ನು ಗಮನಿಸಿದಾಗ ಸ್ಪಷ್ಟವಾಗಿ ಶೈವಧರ್ಮ ಪ್ರಥಮ ಆದ್ಯತೆಯ ಧರ್ಮವಾಗಿದಿತ್ತು ಎಂದು ಹೇಳಬಹುದು.

ಆಧಾರಸೂಚಿ

೧. **ಚಿಕ್ಕಮಗಳೂರು ಜಿಲ್ಲೆಯ ಗ್ಯಾಸೆಟಿಯರ್.**

೨. ಎ.ಆರ್.ಐ. ರಿಪೋರ್ಟುಗಳು.

೩. **ಎಪಿಗ್ರಾಫಿಯ ಕರ್ನಾಟಿಕ,** ಸಂಪುಟ ೧೧–೧೨.

೨೦

ಹೊಯ್ಸಳ ವಿಷ್ಣುವರ್ಧನನ ಕಾಲದ ಶಾಸನೋಕ್ತ ಮಂಡ್ಯ ಪ್ರದೇಶ

ಡಾ. ಎಸ್. ಶಿವರಾಮು*

ಮಂಡ್ಯ ಜಿಲ್ಲೆಯಲ್ಲಿ ಇದುವರೆಗೂ ಹೊಯ್ಸಳ ವಂಶಕ್ಕೆ ಸಂಬಂಧಿಸಿದಂತೆ ಸುಮಾರು ೨೪೬ ಶಾಸನಗಳು ವರದಿಯಾಗಿವೆ. ಈ ಶಾಸನಗಳ ಪೈಕಿ ಹೊಯ್ಸಳ ವಿಷ್ಣುವರ್ಧನನ ಕಾಲಕ್ಕೆ ಸಂಬಂಧಿಸಿದಂತೆ ಸುಮಾರು ೩೨ಕ್ಕೂ ಹೆಚ್ಚು ಶಾಸನಗಳು ಲಭ್ಯವಿದ್ದು, ರಾಜಕೀಯ ಮಹತ್ವದ ದೃಷ್ಟಿಯಿಂದ ಈತನ ಕಾಲದ ಶಾಸನಗಳು ಗಮನಾರ್ಹವಾಗಿವೆ.

ಒಂದನೆಯ ಬಲ್ಲಾಳನ ನಂತರ ಕ್ರಿ.ಶ. ೧೧೦೮ ರಲ್ಲಿ ವಿಷ್ಣುವರ್ಧನನು ಸಿಂಹಾಸನವನ್ನೇರಿ ೧೧೫೨ ರವರೆಗೂ ಪ್ರಬಲನಾಗಿ ಆಳ್ವಿಕೆ ಮಾಡಿದನು. ಹೊಯ್ಸಳ ಚಕ್ರವರ್ತಿಗಳ ಪೈಕಿ ಈತನನ್ನು ರಾಜಕೀಯವಾಗಿ ಹಾಗೂ ಆಡಳಿತಾತ್ಮಕವಾಗಿ ಅತ್ಯಂತ ಜನಪ್ರಿಯ ರಾಜನೆಂದು ಪರಿಗಣಿಸಲಾಗಿದೆ. ವಿಷ್ಣುವರ್ಧನನು ಗಂಗವಾಡಿ ಪ್ರಾಂತದ ಮೇಲೆ ಪ್ರಭುತ್ವ ಸಾಧಿಸುವ ಯತ್ನದಲ್ಲಿ ಚೋಳರನ್ನು ಮೂಲೋತ್ಪಾಟನೆ ಮಾಡಿ, ಆ ಪ್ರಾಂತವನ್ನು ವಶಪಡಿಸಿಕೊಂಡು ಚೋಳ ಸಾಮಂತ ಆದಿಯಮ ಹಾಗೂ ದಂಡನಾಯಕ ನರಸಿಂಹವರ್ಮರನ್ನು ಕಂಚಿವರೆವಿಗೂ ಬೆನ್ನಟ್ಟಿ ಹೋಗಿ ಚೋಳರ ಸೊಕ್ಕನ್ನು ಮುರಿಯುವಲ್ಲಿ ವಿಷ್ಣುವರ್ಧನನ ದಂಡನಾಯಕ ಗಂಗರಾಜನ ಪಾತ್ರ ಮಹತ್ತರವಾದದು. ಈ ಮಹತ್ತರವಾದ ಸಾಧನೆಯನ್ನು ಮದ್ದೂರು ತಾಲ್ಲೂಕಿನ ಕ್ರಿ.ಶ. ೧೧೧೭ಕ್ಕೆ ಸೇರಿದ ತಿಪ್ಪೂರಿನ ಶಾಸನವು ತಿಳಿಸುತ್ತದೆ. ಈ ಗ್ರಾಮವನ್ನು ಅರಸನಿಂದ ಕೊಡುಗೆಯಾಗಿ ಪಡೆದ ಗಂಗರಾಜನು ಅದನ್ನೇ ತನ್ನ ಗುರು ಮೂಲಸಂಘ ಕಾಣೂರ್ಗಣ ಮತ್ತು ತಿಂತ್ರಿಣಿಗಚ್ಛದ ಮೇಘಚಂದ್ರ ಸಿದ್ಧಾಂತ ದೇವರಿಗೆ ದಾನ ನೀಡಿದ್ದನ್ನು ತಿಳಿಸುತ್ತದೆ.[೧] ವಿಷ್ಣುವರ್ಧನನು ತಲಕಾಡನ್ನು ಗೆಲ್ಲಲು ಹಲವು ಸಾಮಂತರ ಸಹಾಯವನ್ನು ಪಡೆದುಕೊಂಡನು. ಆನಂತರ ಈ ಕಾರ್ಯವನ್ನು ಹೆಚ್ಚಿನ ಸಾಮರ್ಥ್ಯವನ್ನು ಹೊಂದಿದ್ದ ಮತ್ತು ಅಪಾರ ವಿಶ್ವಾಸವನ್ನಿಟ್ಟಿದ್ದ ದಂಡನಾಯಕ ಗಂಗರಾಜನಿಗೆ ವಹಿಸಿದ್ದನು. ಅವನಿಗೆ ತಿಪ್ಪೂರು ಗ್ರಾಮವಲ್ಲದೇ ನಾಗಮಂಗಲ ತಾಲ್ಲೂಕಿನ ಬಿಂಡಿಗನವಿಲೆ ಗ್ರಾಮವನ್ನೂ ದತ್ತಿಯನ್ನಾಗಿ ನೀಡಿ ಪ್ರೋತ್ಸಾಹಿಸಿದನು.[೨] ಕ್ರಿ.ಶ. ೧೧೧೪ರ ಶಾಸನಗಳು ಕೂಡ ವಿಷ್ಣುವರ್ಧನನು 'ತಲಕಾಡುಗೊಂಡ' ಎಂಬ ಬಿರುದನ್ನು ಧರಿಸಿದನೆಂದು ತಿಳಿಸುತ್ತವೆ.[೩] ಕ್ರಿ.ಶ. ೧೧೧೪ ರಿಂದ ಚೋಳರ ಶಾಸನಗಳು ತಲಕಾಡಿನಲ್ಲಿ ದೊರಕದೆ ಇರುವುದರಿಂದ ಕ್ರಿ.ಶ. ೧೧೧೪ರ ವೇಳೆಗೆ ಅವರ ಆಳ್ವಿಕೆ ಅಂತ್ಯಗೊಂಡು ಹೊಯ್ಸಳರು ತಮ್ಮ ಅಧಿಕಾರವನ್ನು ಸ್ಥಾಪಿಸಿದುದು ಮನದಟ್ಟಾಗುತ್ತದೆ.[೪] ಇದರ ಜೊತೆಗೆ ಅವನು 'ವೀರಗಂಗ' ಎಂಬ ಬಿರುದನ್ನು ಧರಿಸಿದನೆಂದು ವಿಷ್ಣುವರ್ಧನನು ಹೊರಡಿಸಿದ ಶಾಸನಗಳಿಂದ ಮೊಟ್ಟ ಮೊದಲನೆಯದಾಗಿ ತಿಳಿದು ಬರುತ್ತದೆ.[೫] ವಿಷ್ಣುವರ್ಧನನ ಸೋದರ ವಿನಯಾದಿತ್ಯನು ಕ್ರಿ.ಶ. ೧೧೨೦ರ ಸುಮಾರಿಗೆ ಶ್ರೀರಂಗಪಟ್ಟಣದಲ್ಲಿ ಅಧಿಕಾರಿಯಾಗಿದ್ದು, ನಂತರ ಬಹುಶಃ ಅವನು ಚೋಳರ ವಿರುದ್ಧ ಯುದ್ಧದಲ್ಲಿ ಹತನಾದನೆಂದು ತಿಳಿದುಬರುತ್ತದೆ. ಇದಲ್ಲದೇ ಮಂಡ್ಯ ಜಿಲ್ಲೆಯ ತೊಣ್ಣೂರು ಹೊಯ್ಸಳರ ಕಾಲದಲ್ಲಿ ಒಂದು ಪ್ರಮುಖ ಆಡಳಿತ ಕೇಂದ್ರವಾಗಿತ್ತು. ತೊಣ್ಣೂರು ವಿಷ್ಣುವರ್ಧನನ ದ್ವಿತೀಯ ರಾಜಧಾನಿಯಾಗಿತ್ತೆಂಬ ಅಭಿಪ್ರಾಯವೂ ಇದೆ. ನಾಗಮಂಗಲ ತಾಲ್ಲೂಕಿನ ಕಂಬದಹಳ್ಳಿಯ ಶಾಸನವು ಹೊಯ್ಸಳ ವಿಷ್ಣುವರ್ಧನನ ಪರವಾಗಿ ಪಿರಿಯ ದಂಡನಾಯಕ ಗಂಗರಾಜನು ಚೋಳರ ವಶದಲ್ಲಿದ್ದ ತಲಕಾಡನ್ನು ದಾಳಿ ಮಾಡಿ ವಶಪಡಿಸಿಕೊಂಡ ವಿಷಯವನ್ನು ಪ್ರಸ್ತಾಪಿಸುತ್ತವೆ. ಇದೇ ಶಾಸನವು ಬಿಂಡಿಗನವಿಲೆಯ ತೀರ್ಥಕ್ಕಾಗಿ ನೀಡಿದ ಭೂದಾನವನ್ನು ಉಲ್ಲೇಖಿಸುತ್ತದೆ.[೬]

ಕನ್ನಂಬಾಡಿಯ ಕ್ರಿ.ಶ. ೧೧೧೮ರ ಶಾಸನವು ವಿಷ್ಣುವರ್ಧನನು ತಲಕಾಡಿನಿಂದ ಆಳುತ್ತಿದ್ದ ಎಂದು ದಾಖಲಿಸಿದೆ.[೭] ವಿಷ್ಣುವರ್ಧನನು ಕ್ರಿ.ಶ. ೧೧೧೬ ರಲ್ಲಿ ಚೋಳರಿಂದ ತಲಕಾಡನ್ನು ಗೆದ್ದ ನಂತರ ಅಲ್ಲಿನ ಆಡಳಿತವನ್ನು ಸರಿಪಡಿಸಲು ಸ್ವಲ್ಪ ಕಾಲ ಅಲ್ಲಿಯೇ ನೆಲಸಿ, ಆಡಳಿತ ನಡೆಸಿರುವ ಸಾಧ್ಯತೆಗಳಿವೆ. ಈ ಶಾಸನದ ಪ್ರಕಾರವೇ

* ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪಿರಿಯಾಪಟ್ಟಣ, ಮೈಸೂರು ಜಿಲ್ಲೆ-೫೭೧೧೦೭.

ಕನ್ನಂಬಾಡಿಯಲ್ಲಿದ್ದುದು ಕನ್ನಗೊಂಡೇಶ್ವರ ದೇವಾಲಯ, ಅಂದರೆ ಕಣ್ಣನ್ನು ಕೊಂಡವರ ದೇವಾಲಯ ಕನ್ನಂಗೊಂಡೇಶ್ವರ ದೇವರಿಗೆ ವಿಷ್ಣುವರ್ಧನನ ಮಹಾಪ್ರಧಾನ ದಂಡನಾಯಕ ಲಿಂಗಪಯ್ಯ ನೀಡಿದ ದಾನವನ್ನು ದಾಖಲಿಸುವುದು ಶಾಸನದ ಮುಖ್ಯ ಉದ್ದೇಶವಾದರೂ, ಜೇಡರ ಕಣ್ಣಪ್ಪನ ಕಾರಣದಿಂದಾಗಿ ಕನ್ನಂಬಾಡಿ ಎಂದು ಹೆಸರು ಬಂದಿದೆ ಎಂದು ಮೊದಲ ಬಾರಿಗೆ ಅನಿಸಿದರೂ, ಕನ್ನಂಬಾಡಿಗೂ ಕನ್ನರ ದೇವ ಎಂಬ ವ್ಯಕ್ತಿಗೂ ಸಂಬಂಧ ಇರುವ ಸುಳಿಯನ್ನು ಶಾಸನ ನೀಡುತ್ತದೆ.

ವಿಷ್ಣುವರ್ಧನನ ಆಳ್ವಿಕೆಯ ಕಾಲದ, ಆದರೆ ಖಚಿತ ಕಾಲ ನಮೂದಾಗಿಲ್ಲದ ಶಂಭುನಹಳ್ಳಿಯ ಶಾಸನವು ವಿಷ್ಣುವರ್ಧನನು ತನ್ನ ತಾಯಿ ಮಾದಲಮಹಾದೇವಿ ಕಟ್ಟಿಸಿದ್ದ ತುವ್ವಲೇಶ್ವರ ದೇವರಿಗೆ ಗ್ರಾಮ ದಾನವನ್ನು ನೀಡಿದಾಗ, ಗ್ರಾಮಕ್ಕೆ ಮೊದಲಿದ್ದ ಯಾದವಪುರ ಎಂಬ ಹೆಸರನ್ನು ಶಂಕರನಹಳ್ಳಿ ಎಂದು ಮರುನಾಮಕರಣ ಮಾಡಿದ ಸೂಚನೆಯನ್ನು ಶಾಸನ ನೀಡುತ್ತದೆ. ಅಂದಿನ ಶಂಕರನಹಳ್ಳಿಯು ಈಗ ಶಂಭುವನಹಳ್ಳಿಯಾಗಿ ಪುನರ್ನಾಮಕರಣಗೊಂಡಿದೆ.[೮]

ಮದ್ದೂರು ತಾಲ್ಲೂಕಿನ ವೈದ್ಯನಾಥಪುರದ ಶಾಸನದಲ್ಲಿ ಕ್ರಿ.ಶ. ೧೧೩೨ರಲ್ಲಿ ಹೊಯ್ಸಳ ವಿಷ್ಣುವರ್ಧನನು ಗಂಗವಾಡಿ-೯೬೦೦೦, ನೊಳಂಬವಾಡಿ-೩೨೦೦೦, ಬನವಾಸಿ-೧೨೦೦೦ ಮತ್ತು ಹಾನುಂಗಲ್ ೫೦೦ ಮೊದಲಾದ ಆಡಳಿತ ವಿಭಾಗಗಳನ್ನು ತನ್ನ ರಾಜಧಾನಿಯಾದ ದೋರಸಮುದ್ರದಿಂದ ಆಳ್ವಿಕೆ ನಡೆಸುತ್ತಿದ್ದನೆಂದು ದಾಖಲಿಸಿದೆ.[೯] ಅಲ್ಲದೆ ಈ ಶಾಸನವು ಹೊಯ್ಸಳ ವಿಷ್ಣುವರ್ಧನನ ಬಹುಮುಖ್ಯವಾದ ಬಿರುದುಗಳಾದ 'ತಲಗಾಡುಗೊಂಡ, ಕೊಂಗು ನಂಗಲಿ ಬನವಾಸಿ, ಹಾನಗಲ್, ಉಚ್ಚಂಗಿಕೊಂಡ ಮುಂತಾದವುಗಳ ಬಗ್ಗೆಯೂ ತಿಳಿಸುತ್ತದೆ.[೧೦] ಕೃಷ್ಣರಾಜಪೇಟೆ ತಾಲ್ಲೂಕಿನ ಮಾಳಗೂರು ಕೆರೆಯ ಹಿಂದಿರುವ ಈಶ್ವರ ದೇವಾಲಯದಲ್ಲಿರುವ ಶಾಸನದಲ್ಲಿ ಕ್ರಿ.ಶ. ೧೧೧೭ರಲ್ಲಿ ತನ್ನ ವ್ಯಾಪ್ತಿಯಲ್ಲಿದ್ದ ಮಾಳಿಗೆಯೂರು ಎಂಬ ಆಡಳಿತ ವಿಭಾಗವನ್ನು ಪಟ್ಟಮಹಾದೇವಿ ಶಾಂತಲೆಯು ತನ್ನ ಮೈದುನ ಬಲ್ಲೆಯನಾಯಕನ ಅಧೀನದಲ್ಲಿ ಆಳ್ವಿಕೆ ಮಾಡುತ್ತಿದ್ದುದನ್ನು ಉಲ್ಲೇಖಿಸಿದೆ. ಮಾಳಿಗೆಯೂರು ಹೊಯ್ಸಳರ ಕಾಲದಲ್ಲಿ ತರುನಾಡಿನ ಭಾಗಕ್ಕೆ ಒಳಪಟ್ಟಿತ್ತು ಹಾಗೂ ಬಲ್ಲೆಯನಾಯಕ ಮತ್ತು ಈ ಸ್ಥಳದ ಗಾವುಂಡುಗಳು ಊರಿನ ಐವತ್ತು ಒಕ್ಕಲುಗಳ ಸಮ್ಮುಖದಲ್ಲಿ ಮಾಳಿಗೆಯ ಕರ್ಮಟೇಶ್ವರ ದೇವರಿಗೆ ನೀಡಿದ ಭೂದಾನದ ಬಗ್ಗೆ ದಾಖಲಿಸಿದೆ.[೧೧] ಕೃಷ್ಣರಾಜಪೇಟೆ ತಾಲ್ಲೂಕಿನ ಹೊಸಹೊಳಲು ಗ್ರಾಮದ ಪಾರ್ಶ್ವನಾಥ ಬಸದಿಯ ದಕ್ಷಿಣಕ್ಕಿರುವ ಶಾಸನವು ಕ್ರಿ.ಶ. ೧೧೧೮ ರಲ್ಲಿ ಗಂಗವಾಡಿ-೯೬೦೦೦ ಆಡಳಿತ ವಿಭಾಗದ ಮೇಲೆ ಹೊಯ್ಸಳರ ಆಳ್ವಿಕೆಯನ್ನು ದಾಖಲಿಸಿದೆ. ಅಲ್ಲದೆ ಕತ್ತಲೆಪಟ್ಟ ಎಂಬ ಸ್ಥಳದಲ್ಲಿ ನೊಳಂಬಸೆಟ್ಟಿ ಅಥವಾ ದೋರಸಮುದ್ರದ ಪಟ್ಟಣಸ್ವಾಮಿ ನೊಳಂಬಸೆಟ್ಟಿಯು ಪತ್ನಿ ದೇಮಿಕಬ್ಬೆಯು ತ್ರಿಕೂಟ ಜಿನಾಲಯವನ್ನು ನಿರ್ಮಿಸಿದ ಬಗ್ಗೆ ತಿಳಿಸುತ್ತದೆ.[೧೨] ವಿಷ್ಣುವರ್ಧನನು ಬೆಳಗೊಳ ವಿಭಾಗದ ಆಡಳಿತವನ್ನು ಮಾಡುತ್ತಿದ್ದಾಗ ಬೆಳಗೊಳಕ್ಕೆ ವಿಷ್ಣುವರ್ಧನ ಚತುರ್ವೇದಿ ಮಂಗಳಮ್ ಎಂದು ಕರೆದಿರುವುದು ಉಲ್ಲೇಖಾರ್ಹ.

ಹಿಂದಿನ ಅರಸರು ಕೊಟ್ಟಿದ ದಾನವನ್ನು ಊರ್ಜಿತಗೊಳಿಸಿ ಪುನರ್ದತ್ತಿ ನೀಡಿದ ಘಟನೆ ಆ ಕಾಲದ ಅರಸರ ಮನೋವೈಶಾಲ್ಯ ಹಾಗೂ ಜೀವನ ಮೌಲ್ಯಗಳನ್ನು ಬಿಂಬಿಸುತ್ತದೆ. ಪೂರ್ವದಲ್ಲಿ ಶಿವಮಾರಸಿಂಹನೆಂಬ ಗಂಗ ಅರಸ ನೀಡಿದ್ದ ದಾನಕ್ಕೆ ಸಂಬಂಧಿಸಿದ ತಾಮ್ರ ಶಾಸನವನ್ನು ನೋಡಿ, ಓದಿಸಿ ಕೇಳಿ ತಿಳಿಸಿದ ಅರಸ ವಿಷ್ಣುವರ್ಧನ ಶಿವಪುರದ ಸ್ವಯಂಭು ವೈಜನಾಥದೇವರಿಗೆ ಹಲಗೂರು ಗ್ರಾಮವನ್ನು ಒಪ್ಪಿಸಿದ ಇದು ದೇವಾಲಯದ ಪ್ರಾಚೀನತೆಯ ಬಗೆಗೂ ಬೆಳಕು ಬೀರುತ್ತದೆ.[೧೩]

ಪಾಂಡವಪುರ ತಾಲ್ಲೂಕಿನ ೧೨ನೆಯ ಶತಮಾನದ ಸುಂಕಾತೊಣ್ಣೂರು ಶಾಸನವು ಹೊಯ್ಸಳ ವಿಷ್ಣುವರ್ಧನನ ದಿಗ್ವಿಜಯದ ಬಗ್ಗೆ ಬೆಳಕನ್ನು ಚೆಲ್ಲುತ್ತದೆ. ಹೊಯ್ಸಳ ರಾಜ್ಯವನ್ನು ವಿಸ್ತರಿಸಿದ ಧೀರ ನಂಗಲಿ, ಕೊಂಗು, ಸಿಂಗಮಲೆ, ರಾಯಪುರ, ತಲಕಾಡು, ರೊದ್ದ, ಬೆಂಗಿರಿ, ಚಕ್ರಗೊಟ್ಟ, ಉಚ್ಚಂಗಿ, ವಿರಾಟನಪೊಳಲು ಅಥವಾ ಹಾನುಗಲ್ಲು, ಬಂಕಾಪುರ, ಬನವಸೆ, ಕೋಯತೂರು, ನೀಳಾದ್ರಿ, ಪಡಿಯಘಟ್ಟ, ಏಳುಮಲೆ ಅಥವಾ ತಿರುಪತಿ, ಕಂಚಿ, ತುಳುದೇಶ ರಾಜೇಂದ್ರಪುರ, ಕೋಳಾಲ, ಬಯಲ್ನಾಡು, ಹಲಸಿಗೆ, ಬೆಳುವಲ, ಹುಲಿಗೆರೆ, ಲೊಕ್ಕಿಗುಂಡಿ ಮತ್ತು ಕೃಷ್ಣಾನದಿಯ ವರೆಗಿನ ಪ್ರದೇಶಗಳನ್ನು ವಿಷ್ಣುವರ್ಧನ ಜಯಿಸಿದನೆಂದು ತಿಳಿಸುತ್ತದೆ.[೧೪] ಹಾಗೆಯೇ ಬಳ್ಳಾರಿ, ವಿರಾಟನಗರ, ವಲ್ಲೂರು, ಇರುಂಗೋಳನಕೊಟೆ, ಕಾರುಕನಕೊಳ್ಳ, ಕುಮ್ಮಟ, ಚಿಂಚಿಲೂರು, ರಾಚವೂರು ಮತ್ತು ಮುದಗನೂರು ಮೊದಲಾದ ದುರ್ಗಗಳು ಕೂಡ ವಿಷ್ಣುವರ್ಧನನ ವಶವಾಗಿದ್ದವೆಂದು ನಾಗಮಂಗಲ ತಾಲ್ಲೂಕಿನ ಹಟ್ಟಣದಲ್ಲಿ ದೊರೆತಿರುವ ಶಾಸನದಿಂದ ತಿಳಿದುಬರುತ್ತದೆ.[೧೫]

ಕೃಷ್ಣರಾಜಪೇಟೆ ತಾಲ್ಲೂಕು, ನಾಗರಘಟ್ಟ ಕೆರೆಯ ಬಳಿಯಿರುವ ಮಲ್ಲೇಶ್ವರ ದೇವಾಲಯದ ಶಾಸನವು ಭಗ್ನಗೊಂಡಿದ್ದು, ಹೊಯ್ಸಳ ವಿಷ್ಣುವರ್ಧನನು ಯಶಸ್ವಿಯಾಗಿ ಕೈಗೊಂಡ ತಲಕಾಡು, ವಿರಾಟಪುರ ಅಥವಾ ಹಾನಗಲ್ ಮೊದಲಾದ ದಿಗ್ವಿಜಯಗಳ ಬಗ್ಗೆ ದಾಖಲಿಸುತ್ತಾ ರಾಜನ ವಿವರಗಳನ್ನು ನೀಡುತ್ತದೆ. ಈ ಶಾಸನವು ಕೇರಳನಾಯಕ

ಹಾಗೂ ಮಲ್ಲಜೀಯನ ಮಗ ಮಹಾದೇವನೆಂಬ ಆಡಳಿತಾಧಿಕಾರಿಯು ನಾಗರಘಟ್ಟ ಗ್ರಾಮದಲ್ಲಿ ಮಹಾದೇವ ದೇವಾಲಯವನ್ನು ನಿರ್ಮಿಸಿ ದತ್ತಿಬಿಟ್ಟ ವಿಚಾರವನ್ನು ದಾಖಲಿಸಿದೆ.[೧೬] ನಾಗಮಂಗಲದಲ್ಲಿರುವ ಕ್ರಿ.ಶ. ೧೧೩೪ಕ್ಕೆ ಸೇರಿದ ಸವೆದು ಹೋದ ಶಾಸನ ಪಲ್ಲವವಂಶದ ಗೋವಿಂದರ ಮತ್ತು ಚಾವುಂಡಬ್ಬರಸಿಯ ಮಗಳಾದ ಹಾಗೂ ವಿಷ್ಣುವರ್ಧನನ ಪಟ್ಟದರಿಸಿಯಾದ ಬಮ್ಮಲದೇವಿಯನ್ನು ಉಲ್ಲೇಖಿಸುತ್ತದೆ. ವಿಷ್ಣುವರ್ಧನನ ಪಟ್ಟದರಸಿ ಶಾಂತಲೆಯು ಕ್ರಿ.ಶ. ೧೧೩೧ ರಲ್ಲಿ ಮರಣ ಹೊಂದಿದ್ದು, ಅವಳ ಸ್ಥಾನಮಾನ ಅವಳ ನಂತರ ಬಮ್ಮಲದೇವಿಗೆ ದೊರೆಯಿತು. ಈ ರಾಣಿ ಕಲ್ಕಣಿನಾಡಿಗೆ ಸೇರಿದ ನಾಗಮಂಗಲದ ಶಂಕರನಾರಾಯಣ ದೇವಾಲಯವನ್ನು ಜೀರ್ಣೋದ್ಧಾರಗೊಳಿಸಿ, ದೇವರ ಪೂಜೆ ನೈವೇದ್ಯಾಧಿಗಳಿಗೆ ಅಂಕನಕಟ್ಟ ಗ್ರಾಮವನ್ನು ದಾನವಾಗಿತ್ತಳು. ದಾನವನ್ನು ಸ್ವೀಕರಿಸಿದಾತ ಸೂರ್ಯಾಭರಣ ಪಂಡಿತ.[೧೭] ಕೃಷ್ಣರಾಜಪೇಟೆ ತಾಲ್ಲೂಕಿನ ಭದ್ರನಕೊಪ್ಪಲು ಶಾಸನದಲ್ಲಿ ವಿಷ್ಣುವರ್ಧನನು ನುಂಗಲಿ ಗ್ರಾಮದ ಮೇಲೆ ದಾಳಿ ಮಾಡುವ ಮುನ್ನ ತೊಳೊಂಚೆಯ ಕರಿದೇವರಿಗೆ ಪೂಜೆ ಸಲ್ಲಿಸಿ ಹಲವು ದಾನಗಳನ್ನು ಉತ್ತರಾಯಣ ಸಂಕ್ರಾಂತಿಯ ದಿನದಂದು ನೀಡಿದ ಬಗ್ಗೆ ದಾಖಲಿಸಿದೆ.[೧೮] ಪಾಂಡವಪುರ ತಾಲ್ಲೂಕಿನ ಸುಂಕಾ ತೊಂಡನೂರು ಗ್ರಾಮದಲ್ಲಿ ದೊರೆತ ವೀರಗಲ್ಲು ಪ್ರಮುಖವಾಗಿದ್ದು, ಇದರಲ್ಲಿ ಮಹಾಮಂಡಳೇಶ್ವರ ಹೊಯಿಸಳದೇವನು ದೋರಸಮುದ್ರದಲ್ಲಿ ರಾಜ್ಯವಾಳುತ್ತಿದ್ದನೆಂದಿದೆ. ಈ ವೀರಗಲ್ಲಿನ ಮೇಲಿರುವ ಶಾಸನ ಸವೆದಿದೆ. ಮಾರಗೌಂಡನೆಂಬುವವನು ಕೆಲವರನ್ನು ಕೊಂದು ತಾನು ಹೋರಾಟದಲ್ಲಿ ಮರಣ ಹೊಂದಿದ ವಿಚಾರ ತಿಳಿಸುವುದಲ್ಲದೇ ಆತನ ಮಡದಿ ಸೋಮವ್ವದೇವಿ ದತ್ತಿ ಸ್ವೀಕರಿಸಿದಳೆಂದು ತಿಳಿಸುತ್ತದೆ. ಈ ಶಾಸನ ವಿಷ್ಣುವರ್ಧನ ದೇವನದೆಂದು ನರಸಿಂಹಾಚಾರ್ಯರು ತಿಳಿಸಿದ್ದಾರೆ.[೧೯] ಕೃಷ್ಣರಾಜಪೇಟೆ ತಾಲ್ಲೂಕಿನ ಬಸ್ತಿ ಎಂಬ ಸ್ಥಳದಲ್ಲಿಯ ಶಾಸನದಲ್ಲಿ ವಿಷ್ಣುವರ್ಧನನು ಮಂತ್ರಿಯಾಗಿದ್ದ ಪುಣಿಸಮಯ್ಯನು ಬಸದಿಯನ್ನು ನಿರ್ಮಿಸಿದ ಬಗ್ಗೆ ಹಾಗೂ ಮಾಣಿಕ್ಯ ದೊಡಲೂರು ಮತ್ತು ಮಾವಿನಕೆರೆ ಗ್ರಾಮಗಳನ್ನು ಬಸದಿಗಾಗಿ ದತ್ತಿಬಿಟ್ಟ ವಿಚಾರವನ್ನು ತಿಳಿಸುತ್ತದೆ. ಶಾಸನದ ಬಹುಭಾಗ ಭಗ್ನ ಹಾಗೂ ಅಸ್ಪಷ್ಟವಾಗಿದೆ.[೨೦] ಇದೇ ತಾಲ್ಲೂಕಿನ ಹುಬ್ಬನಹಳ್ಳಿಯ ಶಾಸನವು ಕ್ರಿ.ಶ. ೧೧೪೦ ರಲ್ಲಿ ಹೊಯ್ಸಳ ವಿಷ್ಣುವರ್ಧನನು ಹಳ್ಳದಬೀಡು (ಹಳೇಬೀಡು) ಆಳ್ವಿಕೆ ಮಾಡುತ್ತಿದ್ದಾಗ ಮಹಾಸಾಮಂತ ಮಾಚಯ್ಯ ನಾಯಕನು ಮಾರ್ಕೇಶ್ವರ ದೇವಾಲಯವನ್ನು ಹಾಗೂ ಕೆರೆಯನ್ನು ನಿರ್ಮಿಸಿದ ಬಗ್ಗೆ ದಾಖಲಿಸುತ್ತದೆ. ಈ ಶಾಸನದಲ್ಲಿ ಮಾಚಯ್ಯನಾಯಕನ ವಂಶವೃಕ್ಷವನ್ನು ನೀಡಲಾಗಿದೆ.[೨೧]

ಕೃಷ್ಣರಾಜಪೇಟೆ ತಾಲ್ಲೂಕು, ಹಿರೀಕಳಲೆಯ ಬಸವ ದೇವಾಲಯದ ಮುಂದೆ ನಿಂತಿರುವ ಶಾಸನವು ತ್ರಿಭುವನಮಲ್ಲ ಹೊಯ್ಸಳ ವಿಷ್ಣುವರ್ಧನನು ಗಂಗವಾಡಿ ೯೬೦೦೦ದಲ್ಲಿ ತನ್ನ ಆಡಳಿತ ಹತೋಟಿಯನ್ನು ಪ್ರತಿಷ್ಠಾಪಿಸಿದ ತರುವಾಯ ಪಿರಿಯ ಕಳಿಲೆಯು ಕಿಕ್ಕೇರಿ-೧೨ ಆಡಳಿತ ವಿಭಾಗದ ವ್ಯಾಪ್ತಿಯಲ್ಲಿದ್ದು, ಅಲ್ಲಿನ ಚಿನ್ನಮ್ಮ ಎಂಬ ಅಧಿಕಾರಿಯು ಆಡಳಿತ ನಡೆಸುತ್ತಿದ್ದುದರ ಬಗ್ಗೆ ತಿಳಿಸುತ್ತದೆ.[೨೨] ಇದೇ ತಾಲ್ಲೂಕಿನ ಸಾಸಲು ಗ್ರಾಮದ ಶಾಸನ ಹೊಯ್ಸಳ ಬಿಟ್ಟಿದೇವನು ಕ್ರಿ.ಶ. ೧೧೨೧ ರಲ್ಲಿ ಭೋಗೇಶ್ವರ ದೇವರಿಗೆ ನೀಡಿದ ಭೂದಾನವನ್ನು ದಾಖಲಿಸಿದೆ.[೨೩]

ಪಾಂಡವಪುರ ತಾಲ್ಲೂಕಿನ ತೊಣ್ಣೂರಿನ ಲಕ್ಷ್ಮೀನಾರಾಯಣಸ್ವಾಮಿ ದೇವಾಲಯದಲ್ಲಿ ಅಮ್ಮನವರ ಗುಡಿಯ ನವರಂಗ ಮಂಟಪದ ಕಂಬದಲ್ಲಿರುವ ಶಾಸನದಲ್ಲಿ ವಿಷ್ಣುವರ್ಧನ ಪ್ರತಾಪ ಹೊಯ್ಸಳ ದೇವರನ್ನು ಪ್ರಸ್ತಾಪಿಸಿ ಮಹಾಪ್ರಧಾನ, ತಂತ್ರಾಧಿಷ್ಟಾಂಯಕ, ಮಹಾಪಸಾಯಿತ, ಹೆಗ್ಗಡೆ ಸುರಿಗೆಯ ನಾಗಯ್ಯನು ಓಲಗ ಶಾಲೆಯನ್ನು (ನವರಂಗ ಮಂಟಪ) ಮಾಡಿಸಿದನೆಂದು ಹೇಳಿದೆ.[೨೪] ಕೃಷ್ಣರಾಜಪೇಟೆ ತಾಲ್ಲೂಕಿನ ೨೧ನೆಯ ಶಾಸನದಲ್ಲಿ ವಿಷ್ಣುವರ್ಧನನ ಹಿರಿಯ ರಾಣಿಯಾದ ಚಂದಲದೇವಿಯು ತನ್ನ ತಮ್ಮನಾದ ದುದ್ದಮಲ್ಲ ದೇವನೊಡಗೂಡಿ ವೀರಕೊಂಗಾಳ್ವ ಜಿನಾಲಯಕ್ಕೆ ಮಾಡಿದ ದಾನದ ಪ್ರಸ್ತಾಪವಿದೆ. ದಾನ ಮಾಡಿದ ಕಾವನಹಳ್ಳಿ ಮಂದಗೆರೆಯ ಸಿಮೆಯೊಳಗಣ ಒಂದು ಗ್ರಾಮ. ಮಂದಗೆರೆಯನ್ನು ಅರಸಿಯು ತನ್ನ ಬಪ್ಪಪ್ರಿಥ್ವಿಯಕೊಂಗಾಳ್ವದೇವರಿಂದ ಬಳುವಳಿಯಾಗಿ ಪಡೆದುದಾಗಿ ಹೇಳಿದೆ. ಶಾಸನವನ್ನು ಪಡೆದ ಪ್ರಭಾಚಂದ್ರ ಸಿದ್ಧಾಂತ ದೇವರು ಮೇಘಚಂದ್ರ ತ್ರೈವಿದ್ಯದೇವರ ಶಿಷ್ಯನಾಗಿದ್ದು, ಮೂಲಸಂಘ ದೇಸಿಗಣ, ಪುಸ್ತಕ ಗಚ್ಛಕ್ಕೆ ಸೇರಿದ್ದರೆಂದು ಶಾಸನದಲ್ಲಿ ಹೇಳಿದೆ.[೨೫]

ನಾಗಮಂಗಲ ತಾಲ್ಲೂಕಿನ ಲಾಲನಕೆರೆಯ ವಿಷ್ಣುವರ್ಧನನ ಕಾಲದ ೬೧ನೆಯ ಶಾಸನದಲ್ಲಿ ದಂಡನಾಯಕ ಏಚಿರಾಜದಂಡಾಧೀಶ, ಅವನ ಮಡದಿ ಕಾಮಿಯಕ್ಕ ಮತ್ತು ಅವರ ಐವರು ಗಂಡು ಮಕ್ಕಳ ಬಗೆಗೆ ಉಲ್ಲೇಖವಿದೆ. ಈ ದಂಡನಾಯಕರು ನಾಲನಕೆರೆಯನ್ನು ಗೌಡಕೆಯ ಉಂಬಳಿಯಾಗಿ ಪಡೆದುದನ್ನು ಈ ಶಾಸನ ತಿಳಿಸಿರುವುದು ಕುತೂಹಲಕಾರಿಯಾಗಿದೆ. ಆದ್ದರಿಂದ ಇದು ದಂಡನಾಯಕತನಕ್ಕಾಗಿ ಆತನು ಪಡೆದ ಸಂಭಾವನೆಯಾಗಿದ್ದಿರಬಹುದು. ಕೇತಜೀಯನ ಮಗ ಜಕ್ಕಜೀಯನಿಗೆ ಈತನು ಆ ಗ್ರಾಮ ಭೂಮಿಯನ್ನು ದತ್ತಿ ಬಿಟ್ಟಿದ್ದಾನೆ. ಈ ಜಕ್ಕಜೀಯನು ಲಾಲನ ಕೆರೆಯ ಮಲ್ಲಿಕಾರ್ಜುನ ದೇವಾಲಯದ ಪೂಜಾರಿ ಯಾಗಿದ್ದನೆಂಬುದು ಸ್ಪಷ್ಟ. ಈ ಶಾಸನವನ್ನು ರಚಿಸಿದವನು ಸಾಂತಮಹಂತ.[೨೬]

ಇದೇ ತಾಲ್ಲೂಕಿನ ಯಲ್ಲಾದಹಳ್ಳಿಯ ಶಾಸನವು ವಿಷ್ಣುವರ್ಧನನ ಮಹಾಪ್ರಧಾನ, ಕೌಶಿಕಗೋತ್ರದ ದೇವರಾಜನನ್ನು ಉಲ್ಲೇಖಿಸುತ್ತದೆ. ದೊರೆಯು ಆತನಿಗೆ ತಂತ್ರವೆರ್ಗಡೆತನವನ್ನು ಕೊಟ್ಟುದಾಗಿ ಶಾಸನ ತಿಳಿಸುತ್ತದೆ. ಈ ಅಧಿಕಾರಿಯು ಸೂರನಹಳ್ಳಿಯಲ್ಲಿ ತ್ರಿಕೂಟ ಬಸದಿಯನ್ನು ಕಟ್ಟಿಸಿ ದೇವರ ಅಷ್ಟವಿಧಾರ್ಚನೆ ಮತ್ತು ಆಹಾರ ದಾನಕ್ಕಾಗಿ ತಾನು ರಾಜನಿಂದ ಪಡೆದ, ಬಹುಶಃ ೪೦ ಹೊನ್ನಿನ ವಾರ್ಷಿಕ ಉತ್ಪನ್ನವಿದ್ದ ಆ ಹಳ್ಳಿಯ ಮೊದಲ ಹತ್ತು ಹೊನ್ನಿನ ಹುಟ್ಟುವಳಿಯ ಭೂಮಿಯನ್ನು ಮುನಿಚಂದ್ರ ದೇವನಿಗೆ ಧಾರೆಯೆರೆದಿದ್ದಾನೆ. ದತ್ತಿಬಿಟ್ಟ ಗ್ರಾಮದ ಭಾಗಕ್ಕೆ ಪಾರ್ಶ್ವಪುರವೆಂಬ ಹೆಸರು ಕೊಟ್ಟಂತೆ ತೋರುತ್ತದೆ.[೨೭] ಹೊಯ್ಸಳ ಪ್ರಭು ಬಿಟ್ಟಿದೇವ (ವಿಷ್ಣುವರ್ಧನ)ನು ಕಿಕ್ಕೇರಿಯ ಬ್ರಹ್ಮೇಶ್ವರ ದೇವರಿಗೆ ೧೫ ಖಂಡುಗ ಗದ್ದೆ ಹಾಗೂ ಬೂವನಹಳ್ಳಿಯನ್ನು ಬ್ರಹ್ಮರಾಶಿ ಪಂಡಿತರಿಗೆ ದತ್ತಿ ನೀಡಿದನೆಂದು ತಿಳಿದು ಬರುತ್ತದೆ.[೨೮] ಮದ್ದೂರಿನ ಕೊಪ್ಪದ ಜೈನಬಸದಿಗೆ ಹೊಯ್ಸಳದೇವ ದಾನ ನೀಡಿದನು. ಮಳವಳ್ಳಿಯ ಪ್ರಭು ಮತ್ತು ಮಹಾಮಂಡಳೇಶ್ವರ ಕಲಿದೇವ ಎಂಬ ದೇವಸ್ಥಾನವನ್ನು ನಿರ್ಮಿಸಿದನು. ಇನ್ನೂ ಕೆಲವು ವ್ಯಕ್ತಿಗಳು ದೇವತೆ ಭಗವತಿಯ ವಿಗ್ರಹವನ್ನು ಪ್ರತಿಷ್ಠಾಪಿಸಿದರು. ಮಳವಳ್ಳಿಯ ಜನತೆಯು ಆ ದೇವಸ್ಥಾನದ ಪೂಜೆಗೋಸ್ಕರ ಪುರೋಹಿತ ಧರ್ಮೇಶ ಪಂಡಿತನಿಗೆ ಭೂಮಿಯನ್ನು ನೀಡಿದರು.

ವಿಷ್ಣುವರ್ಧನ ಮೊದಲು ಜೈನನಾಗಿದ್ದ ; ಬಿಟ್ಟಿಗ ಎಂಬ ಹೆಸರಿದ್ದ ವ್ಯಕ್ತಿ ; ರಾಮಾನುಜಾಚಾರ್ಯರ ಪ್ರಭಾವದಿಂದ ವೈಷ್ಣವ ಮತ ಸ್ವೀಕರಿಸಿ ವಿಷ್ಣುವರ್ಧನನಾಗಿ ಪರಿವರ್ತಿತನಾದ ಎಂಬ ಪ್ರತೀತಿ ಇದೆ. ಆದರೆ ಇದಕ್ಕೆ ಆಧಾರವಿಲ್ಲ.[೨೯] ವಿಷ್ಣುವರ್ಧನ ಎಂಬುದು ಅವನ ನಾಮಾಂಕಿತವಲ್ಲ, ಅದು ಬಿಟ್ಟ-ವಿಠಲ ವಿಷ್ಣು ಎಂಬ ರೂಪಾಂತರ ಮಾತ್ರ, ಅಲ್ಲದೆ ಅವನಿಗೆ ಬಾಲ್ಯದಿಂದಲೂ ಬಿಟ್ಟಿದೇವ ಮತ್ತು ವಿಷ್ಣುದೇವ ಎಂಬ ಎರಡು ಅಂಕಿತಗಳು ಇದ್ದವು. ರಾಜನ ಮತಾಂತರ ಕ್ರಿ.ಶ. ೧೧೧೦ ರ ಸುಮಾರಿನಲ್ಲಿ ನಡೆದಿರಬೇಕೆಂದು ಹೇಳಲಾಗಿದೆ. ಆದರೆ ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ದೊರೆತಿರುವ ಕ್ರಿ.ಶ. ೧೦೯೫ ರ ಶಾಸನವೊಂದರ ಪ್ರಕಾರ ಅವನು ತನ್ನ ತಾತನ ಆಳ್ವಿಕೆಯ ಕಾಲದಲ್ಲಿ ಬೆಳಗೊಳದ ಸೀತಾರಾಮ ದೇವಾಲಯಕ್ಕೆ ವಿಶೇಷ ದತ್ತಿಗಳನ್ನು ನೀಡಿ ಆ ಗ್ರಾಮವನ್ನು ಅಗ್ರಹಾರವನ್ನಾಗಿ ಪರಿವರ್ತಿಸಿದನು. ಮಿಗಿಲಾಗಿ ಆ ವೇಳೆಗಾಗಲೇ ವಿಷ್ಣುವರ್ಧನ ಎಂಬ ಹೆಸರಿನಿಂದಲೇ ಪ್ರಸಿದ್ಧನಾಗಿದ್ದನು. ಶ್ರೀವೈಷ್ಣವ ಧರ್ಮಕ್ಕೆ ವಿಷ್ಣುವರ್ಧನನು ನೀಡಿದ ಪ್ರೋತ್ಸಾಹ ತೋರಿಸಿದ ಅನುಕಂಪನಗಳು ಆತ ಮತಾಂತರ ಗೊಂಡನೆಂಬ ಪ್ರಚಲಿತ ಕಥೆಗೆ ಎಡೆ ಮಾಡಿಕೊಟ್ಟಂತಾಗಿದೆ ಎಂದು ಕೆ.ಟಿ. ರಾಮಸ್ವಾಮಿ ಅಭಿಪ್ರಾಯಪಟ್ಟಿದ್ದಾರೆ.[೩೦] ಸಾಲಿಗ್ರಾಮದಿಂದ ಶ್ರೀರಾಮಾನುಜಾಚಾರ್ಯರು ಪಾಂಡವಪುರ ತಾಲ್ಲೂಕಿನ ತೊಣ್ಣೂರಿಗೆ ತೆರಳಿದರು. ಇಂದಿನ ತೊಣ್ಣೂರು ಮೂಲತಃ ಯಾದವಪುರ ಎಂಬ ಹೆಸರನ್ನು ಹೊಂದಿದ್ದು, ಕ್ರಿ.ಶ. ೧೧೨೭ ರಲ್ಲಿ ವಿಷ್ಣುವರ್ಧನ ಉಪ ರಾಜಧಾನಿಯಾಗಿತ್ತೆಂದು ತಿಳಿದು ಬಂದಿದೆ.[೩೧] ಶ್ರೀ ರಾಮಾನುಜಾರ್ಯರು ತೊಣ್ಣೂರಿಗೆ ಬಂದಾಗ ಇದಕ್ಕೆ ಯಾದವಪುರ ಎಂಬ ಹೆಸರಿದ್ದಿತು. ತಮ್ಮ ಭಕ್ತರೂ, ದಾಸರೂ ಆದ ಅನೇಕ ಶಿಷ್ಯರೊಡನೆ ಅವರು ಇಲ್ಲಿಗೆ ಬಂದು ನೆಲೆಸಿದ ಬಳಿಕ ಇದಕ್ಕೆ ತೊಂಡನೂರು ಎಂಬ ಹೆಸರು ಬಂದಿತು ಎಂದು ಊಹಿಸಬಹುದಾಗಿದೆ. ತೊಣ್ಣೂರಿನಲ್ಲಿ ಯೋಗನರಸಿಂಹ, ಲಕ್ಷ್ಮೀನಾರಾಯಣ ಮತ್ತು ಕೃಷ್ಣ ಎಂಬ ಮೂರು ಶ್ರೀ ವೈಷ್ಣವ ದೇವಾಲಯಗಳಿವೆ.

ವಿಷ್ಣುವರ್ಧನನ ಅರಸಿಯಲ್ಲಿ ನಾಲ್ವರನ್ನು ಮಂಡ್ಯ ಜಿಲ್ಲೆಯ ಶಾಸನಗಳು ಉಲ್ಲೇಖಿಸುತ್ತವೆ. ಪಿರಿಯರಸಿ ಪಟ್ಟಮಹಾದೇವಿ ಶಾಂತಲದೇವಿ,[೩೨] ಪಟ್ಟಮಹಿಷಿ ಲಕ್ಷ್ಮಾದೇವಿ,[೩೩] ಪಲ್ಲವರಾಜಪುತ್ರಿ ಬಮ್ಮಲದೇವಿ[೩೪] ಹಾಗೂ ಕೊಂಗಾಳ್ವ ರಾಜಪುತ್ರಿ ಚಂದಲದೇವಿ[೩೫] ಇದೇ ಅಲ್ಲದೇ ಈತನ ಅನೇಕ ಬಿರುದುಗಳನ್ನು ಶಾಸನಗಳು ಉಲ್ಲೇಖಿಸುತ್ತವೆ.

ಹೊಯ್ಸಳ ವಿಷ್ಣುವರ್ಧನನ ಕಾಲದಲ್ಲಿ ಮಂಡ್ಯ ಪ್ರದೇಶದಲ್ಲಿ ಹಲವಾರು ದೇವಾಲಯಗಳು, ಬಸದಿಗಳು ಹಾಗೂ ಸ್ಮಾರಕಗಳು ನಿರ್ಮಿತಗೊಂಡಿವೆ. ಅವುಗಳಲ್ಲಿ ಮುಖ್ಯವಾದವು ನಾಗಮಂಗಲದ ಸೌಮ್ಯ ಕೇಶವ ದೇವಾಲಯ ಸುಮಾರು ನಾಲ್ಕು ಅಡಿ ಎತ್ತರದ ಜಗತಿಯ ಮೇಲೆ ನಿಂತಿದೆ. ಈ ತ್ರಿಕೂಟ ದೇವಾಲಯದ ನಿರ್ಮಾಣ ವಿಷ್ಣುವರ್ಧನನ ಕಾಲದಲ್ಲೇ ನಿರ್ಮಿಸಲ್ಪಟ್ಟಿತ್ತೆಂದು ತಿಳಿದುಬರುತ್ತದೆ.[೩೬] ಕೇಶವ ದೇವಾಲಯದ ನಕ್ಷತ್ರಾಕಾರದ ಜಗತಿ ಐದು ಅಂತಸ್ತುಗಳನ್ನು ಹೊಂದಿದೆ. ಮಧ್ಯ ಗರ್ಭಗುಡಿಯಲ್ಲಿ ಸೌಮ್ಯಕೇಶವ ಪಕ್ಕದವುಗಳಲ್ಲಿ ನರಸಿಂಹ ಮತ್ತು ವೇಣುಗೋಪಾಲ ವಿಗ್ರಹಗಳಿವೆ. ಭುವನೇಶ್ವರ ದೇವಾಲಯ ವಿಷ್ಣುವರ್ಧನನ ಕಾಲದಲ್ಲಿ ನಿರ್ಮಿಸಲ್ಪಟ್ಟಿತು. ಅದರ ನೈರುತ್ಯದಲ್ಲಿರುವ ಶಾಸನದಿಂದ ವಿಷ್ಣುವರ್ಧನನ ರಾಣಿಯಾದ ಬಮ್ಮಲಾದೇವಿ ೧೧೩೫ ರಲ್ಲಿ ಇಲ್ಲಿನ ಅಗ್ರಹಾರವನ್ನು ಜೀರ್ಣೋದ್ಧಾರ ಮಾಡಿಸಿದಳೆಂದು ತಿಳಿದುಬರುತ್ತೆ.[೩೭] ಗರ್ಭಗುಡಿಯಲ್ಲಿ ಲಿಂಗವಿದ್ದು, ಇದನ್ನು ಶಾಸನದಲ್ಲಿ ಶಂಕರನಾರಾಯಣ ಎಂದು ಕರೆಯಲಾಗಿದೆ. ನವರಂಗದಲ್ಲಿ ದುರ್ಗ, ಚಂಡಿಕೇಶ, ಅರ್ಧನಾರೀಶ್ವರ, ಗಣೇಶ, ನಂದಿ ಮುಂತಾದ ಮೂರ್ತಿಗಳಿವೆ.

ಹೊಯ್ಸಳ ವಿಷ್ಣುವರ್ಧನನ ಕಾಲದಲ್ಲಿ ರಾಜ ಪರಿವಾರದವರು ಮಾತ್ರವಲ್ಲದೇ ಸೇನಾಧಿಕಾರಿಗಳು ಸಹಾ ಹಲವಾರು ಜೈನ ಸ್ಮಾರಕಗಳನ್ನು ಮಂಡ್ಯ ಪ್ರದೇಶದಲ್ಲಿ

ನಿರ್ಮಿಸುವುದರ ಮೂಲಕ ಜೈನ ವಾಸ್ತುಶಿಲ್ಪಕ್ಕೆ ತಮ್ಮದೇ ಆದ ಕೊಡುಗೆಗಳನ್ನು ನೀಡಿದ್ದಾರೆ. ಕ್ರಿ.ಶ. ೧೧೩೧ರ ಶಾಸನದ ಪ್ರಕಾರ ವಿಷ್ಣುವರ್ಧನ ದಂಡನಾಯಕನಾದ ಗಂಗರಾಜನ ಮಗನಾದ ಬೊಪ್ಪನು ತನ್ನ ತಂದೆಯ ವಿಶಿಷ್ಟ ಬಿರುದುಗಳಲ್ಲೊಂದಾದ ದ್ರೋಹಘರಟ್ಟ ಎಂಬ ಹೆಸರಿನಲ್ಲಿ 'ದ್ರೋಹಘರಟ್ಟ ಬಸದಿ'ಯನ್ನು ನಿರ್ಮಿಸಿ ಅದರಲ್ಲಿ ಶಾಂತಿನಾಥನನ್ನು ಪ್ರತಿಷ್ಠಾಪಿಸಿದನೆಂದು ತಿಳಿದುಬರುತ್ತದೆ.[೩೮] ಈ ಬಸದಿಯು ನಾಗಮಂಗಲದಿಂದ ಪಶ್ಚಿಮಕ್ಕೆ ಶ್ರವಣ ಬೆಳಗೊಳ ಮಾರ್ಗದಲ್ಲಿ ೧೬ ಕಿ.ಮೀ. ದೂರದ ಕಂಬದಹಳ್ಳಿಯಲ್ಲಿದೆ. ಇದು ದಿಗಂಬರ ಜೈನ ಕ್ಷೇತ್ರವೆಂದೇ ಹೆಸರು ಪಡೆದಿದೆ. ತಳವಿನ್ಯಾಸದಲ್ಲಿ ಗರ್ಭಗೃಹ. ಸುಕನಾಸಿಗಳಿಂದ ಕೂಡಿದ ಒಂಭತ್ತು ಅಂಕಣಗಳನ್ನುಳ್ಳ ನವರಂಗವಿದೆ. ಗರ್ಭಗೃಹದಲ್ಲಿ ಅಷ್ಟದಿಕ್ಪಾಲಕರನ್ನು ಹೊಂದಿರುವ ಕಮಲಪೀಠದ ಮೇಲೆ ನಿಂತಿರುವ ಶಾಂತಿನಾಥನ ಮೂರ್ತಿ ಇದೆ.

ಹೊಯ್ಸಳರು ದ್ವಾರಸಮುದ್ರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳುತ್ತಿದ್ದಾಗ ಮಂಡ್ಯ ಜಿಲ್ಲೆಯು ಹಲವು ಸಂಸ್ಥಾನಗಳಾಗಿ, ಪಂಗಡವಾಗಿ ಹೊಯ್ಸಳ ಆಶ್ರಿತ ಸಾಮಂತರ ಆಡಳಿತಕ್ಕೆ ಒಳಪಟ್ಟಿದ್ದು ಕಂಡುಬರುತ್ತದೆ. ಇಂಥಹ ಸಂಸ್ಥಾನಗಳಲ್ಲಿ ಕಲ್ಕುಣಿ ಒಂದು, ಈಗ ಕಲ್ಕುಣಿ ಮಂಡ್ಯ ಜಿಲ್ಲೆಯ ಒಂದು ಚಿಕ್ಕ ಗ್ರಾಮ. ನಾಗಮಂಗಲ ತಾಲ್ಲೂಕಿನ ಕಸಲಗೆರೆಯಲ್ಲಿ ಕಲ್ಕುಣಿ ನಾಡಿನ ಸ್ಥಾನಿಕ ಪ್ರಭುಗಳಿಗೆ ಸಂಬಂಧಿಸಿದ ಮೂರು ಶಾಸನಗಳು ದೊರಕಿವೆ. ಕ್ರಿ.ಶ. ೧೧೪೨ರ ನಾಗಮಂಗಲ ತಾಲ್ಲೂಕಿನ ೧೯ ನೆಯ ಶಾಸನ ಕಲ್ಕುಣಿ ನಾಡನ್ನಾಳುತ್ತಿದ್ದ ವಿಷ್ಣುವರ್ಧನನ ಸಾಮಂತರಾಗಿದ್ದ ಸೋಮನನ್ನು ಕುರಿತದ್ದಾಗಿದ್ದು ಈ ಶಾಸನದಲ್ಲಿ ಸೋಮನ ವಂಶಾವಳಿಯನ್ನು ನೀಡುತ್ತಾ, ಈ ವಂಶದ ಮೂಲಪುರುಷ ಅಯ್ಕಣನ ಬಗೆಗೆ ಒಂದು ಘಟನೆ ವರ್ಣಿತವಾಗಿದೆ. ವೀರಗಂಗ ಪೆರ್ಮಾಡಿಯು ಚೋಳರ ಮೇಲೆ ದಂಡೆತ್ತಿ ಹೋಗುತ್ತ ಹೃದುವನಕೆರೆಯಲ್ಲಿ ಬೀಡುಬಿಟ್ಟಿದ್ದಾಗ ಕಾಡಾನೆಯೊಂದು ಬೀಡಿನ ಮೇಲೆ ನುಗ್ಗಿತು, ಅದನ್ನು ಕಂಡ ಅಯ್ಯಣನು ಬಾಣದಿಂದ ಆನೆಯನ್ನು ಹೊಡೆದುರುಳಿಸಿದನು. ಅದರಿಂದ ಅವನಿಗೆ ಕರಿಯಯ್ಕಣನೆಂಬ ಹೆಸರೂ ಕಲುಕುಣಿ ನಾಡೊಡೆತನವೂ ಗಂಗ ಅರಸನಿಂದ ದೊರೆತವು. ಕಲ್ಕುಣೆನಾಡಿಗೆ ಸೇರಿದ ಹಬ್ಬದಿರುವಾಡಿಯಲ್ಲಿ ಹೊಸದಾಗಿ ಒಂದು ಬಸದಿಯನ್ನು ನಿರ್ಮಿಸಿ ಅಲ್ಲಿ ಪಾರ್ಶ್ವದೇವನ ಪ್ರತಿಮೆಯನ್ನು ಪ್ರತಿಷ್ಠಾಪಿಸಲಾಯಿತು. ಆ ಸಂದರ್ಭದಲ್ಲಿ ಸಾಮಂತ ಸೋಮನು ಪಾರ್ಶ್ವದೇವರ ಅಂಗಭೋಗ, ಆಹಾರದಾನ, ಬಸ್ತಿಯ ಜೀರ್ಣೋದ್ಧಾರ ಕಾರ್ಯಗಳಿಗೆಂದು ಅರುಹನಹಳ್ಳಿ ಗ್ರಾಮವನ್ನು ದತ್ತಿ ಬಿಟ್ಟನು. ಮೂಲಸಂಘ ಸೂರಸ್ತಗಣದ ಬ್ರಹ್ಮದೇವನು ದತ್ತಿ ಸ್ವೀಕರಿಸಿದನು.[೩೯] ಸುಮಾರು ೧೨ನೆಯ ಶತಮಾನಕ್ಕೆ ಸೇರಿದ ಕಸಲಗೆರೆಯ ೧೭೧ನೆಯ ಶಾಸನ ಮುಖ್ಯವಾಗಿ ಮಾರದೇವನ ಹೆಂಡತಿ ಮಹಾದೇವಿ ಸತಿಹೋದ ಸಂಗತಿಯನ್ನು ತಿಳಿಸುತ್ತದೆ.

ಕಿಕ್ಕೇರಿ ಪನ್ನೆರಡು ಆಡಳಿತ ವಿಭಾಗವು ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ ಅಸ್ತಿತ್ವದಲ್ಲಿದ್ದು, ಇದು ಪ್ರಾಯಶಃ ಕಬ್ಬಾಹು ಸಾಸಿರ ಪ್ರಾಂತದ ಉಪ ಪ್ರಾಂತವಾಗಿರಬಹುದು. ಹೊಯ್ಸಳ ದೊರೆ ವಿಷ್ಣುವರ್ಧನನ ಹಿರೀಕಳಲೆಯ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ ಈ ಪ್ರಾಂತದ ಉಲ್ಲೇಖವಿದೆ. ಈ ಪ್ರಾಂತದಲ್ಲಿ ವಿಷ್ಣುವರ್ಧನನ ಮಹಾಸಾಮಂತ ಚೆಣ್ಣಮನು ಆಳ್ವಿಕೆ ನಡೆಸಿದ್ದಾನೆ. ಇಂದಿನ ಕಿಕ್ಕೇರಿ ಈ ಪ್ರಾಂತದ ಮುಖ್ಯ ಪಟ್ಟಣ ಮತ್ತು ರಾಜಧಾನಿಯಾಗಿತ್ತು. ಕಿಕ್ಕೇರಿಯನ್ನೊಳಗೊಂಡಂತೆ ಇದರ ಸುತ್ತಮುತ್ತಲಿನ ಹನ್ನೆರಡು ಗ್ರಾಮಗಳು ಈ ಪ್ರಾಂತದಲ್ಲಿ ಸೇರಿಕೊಂಡಿದ್ದವು.[೪೦]

ನಾಗಮಂಗಲ ತಾಲ್ಲೂಕಿನ ಸುಖದರೆಯ ಕ್ರಿ.ಶ. ೧೧೨೦ರ ಶಾಸನದಲ್ಲಿ ವಿಷ್ಣುವರ್ಧನನ ಆಳ್ವಿಕೆಯಲ್ಲಿ ಜಕಶೆಟ್ಟಿ ಎಂಬುವನು ಸುಖದರೆಯಲ್ಲಿ ಬಸದಿ ಹಾಗೂ ಕೆರೆಯನ್ನು ನಿರ್ಮಿಸಿ ಭೂದಾನ ನೀಡಿ ತೆಪ್ಪಸುಂಕದೊಂದಿಗೆ ಸಣ್ಣಕೆರೆಯನ್ನು ದಾನವಾಗಿ ನೀಡಿದ್ದನ್ನು ದಾಖಲಿಸಿದೆ.[೪೧] ಮೆಳ್ಳಹಳ್ಳಿಯ ಈಶ್ವರ ದೇವಾಲಯ ಕ್ರಿ.ಶ. ೧೧೧೪ ರ ವೀರಗಲ್ಲು ಶಾಸನವು ಹೊಯ್ಸಳ ಮನೆತನದ ವಿಷ್ಣುವರ್ಧನನ ಆಳ್ವಿಕೆಯನ್ನು ಪರಿಚಯಿಸುತ್ತದೆ. ಆಯ ಸಂವತ್ಸರದಂದು ಬಿಟ್ಟಿಯಮಾರಯ್ಯ ಸೆಟ್ಟಿಯಣ್ಣನು ಮಳೆಯೂರ ಕಾಳಗದಲ್ಲಿ ತುರುಗಳನ್ನು ರಕ್ಷಿಸಿ ಹಲವರನ್ನು ಕೊಂದು ಮರಣವನ್ನಪ್ಪಿದನು. ಸೆಟ್ಟಿಗಾವುಂಡ, ಜಕ್ಕಯ ನಾಯಕ, ಕೇತಣ್ಣ ಇವರುಗಳು ಮೈಯುದನಹಳ್ಳಿಯ ಶಿವಾಲಯಕ್ಕೆ ಭೂಮಿಯನ್ನು ದಾನ ಮಾಡಿದರು.[೪೨]

ಕೆ.ಆರ್. ಪೇಟೆ ತಾಲ್ಲೂಕಿನ ಕುಂದನಹಳ್ಳಿಯಲ್ಲಿ ಹೊಸ ಶಾಸನವನ್ನು ಡಾ. ರಂಗಸ್ವಾಮಿ ಸಂಶೋಧಿಸಿದ್ದು ಅದು ವಿಷ್ಣುವರ್ಧನನ ಬಗ್ಗೆ ಹೊಸ ಬೆಳಕನ್ನು ಚೆಲ್ಲುತ್ತದೆ. ಈ ಶಾಸನದಲ್ಲಿ ಹೊಯ್ಸಳ ಮನೆತನದ (ವಿಷ್ಣುವರ್ಧನು) ಬಿಟ್ಟಿಗನು ರಾಜ್ಯವಾಳುತ್ತಿದ್ದ ಪ್ರಸ್ತಾಪವಿದೆ. ಸೆಟ್ಟಿಯಮಗ ಧರ್ಮಸೆಟ್ಟಿಯು ಧರ್ಮಪಟ್ಟಣವೆಂದು ಊರಿಗೆ ಹೆಸರಿಟ್ಟು, ಅಲ್ಲಿ ಕೆರೆಯನ್ನು ಕಟ್ಟಿಸಿ ಅದಕ್ಕೆ ಮಲ್ಲಸಮುದ್ರವೆಂದು ಹೆಸರಿಟ್ಟು, ಅದರ ಕೀಳೇರಿಯಲ್ಲಿ ಮಹಾದೇವರನ್ನು ಪ್ರತಿಷ್ಠೆ ಮಾಡಿ ಗುಡಿಯನ್ನು ಕಟ್ಟಿಸಿ, ಅದರ ಪೂರ್ವಕ್ಕಿದ್ದ ಗದ್ದೆ ಮತ್ತು ಬೆದ್ದಲೆ ಭೂಮಿಯನ್ನು ದೇವರಿಗೆ ಕೊಟ್ಟ ವಿವರವಿದೆ. ಈ ಶಾಸನದ ಕಾಲ ಕ್ರಿ.ಶ. ೧೧೧೩ ನಂದನ ಸಂವತ್ಸರ-ಅಶ್ವಿಜ ಶುದ್ಧ ೫. ಅದೇ ತಾಲ್ಲೂಕಿನ ಹೊಸಹೊಳಲುವಿನಲ್ಲಿ ದೊರೆತಿರುವ ಶಾಸನದಲ್ಲಿ

ಕುಕ್ಕುಟಾಸನ ಮಲಧಾರಿದೇವ ಮುನಿಯ ಶಿಷ್ಯ. ಶುಭಚಂದ್ರ ಸಿದ್ಧಾಂತ ಮುನಿಯ ಶಿಷ್ಯ ನೊಳಂಬಸೆಟ್ಟಿ ಶಿಲ್ಪವನ್ನು ಪ್ರತಿಷ್ಠಾಪಿಸಿದ ವಿಚಾರವಿದೆ. ಕಾಲ ಕ್ರಿ.ಶ.ಸುಮಾರು ೧೨ನೆಯ ಶತಮಾನ. ಲಿಪಿ ಕನ್ನಡ, ಜೈನ ಪೀಠ ಶಾಸನ ಗ್ರಾಮದ ಭೈರವೇಶ್ವರ ದೇವಾಲಯದ ಆವರಣದಲ್ಲಿದೆ.

ಹೀಗೆ ಹೊಯ್ಸಳ ವಿಷ್ಣುವರ್ಧನನ ಆಳ್ವಿಕೆಯಲ್ಲಿ ಮಂಡ್ಯ ಪ್ರದೇಶವು ರಾಜಕೀಯ. ಆಡಳಿತ ಹಾಗೂ ಸಾಂಸ್ಕೃತಿಕವಾಗಿ ಪ್ರಗತಿಗೊಂಡಿತು. ವಿಷ್ಣುವರ್ಧನನು ಮಂಡ್ಯ ಪ್ರದೇಶದ ಹಲವಾರು ಹಳ್ಳಿಗಳಲ್ಲಿ ದೇವಾಲಯಗಳ ನಿರ್ಮಾಣ, ಅವುಗಳ ನಿರ್ವಹಣೆಗೆ ದಾನದತ್ತಿಗಳನ್ನು ನೀಡಿದ್ದುದಲ್ಲದೆ, ಆತನ ದಂಡನಾಯಕರು ಸಹಾ ಮಂಡ್ಯ ಪ್ರದೇಶದ ಅಭಿವೃದ್ಧಿಗೆ ತಮ್ಮದೇ ಆದ ಕೊಡುಗೆಗಳನ್ನು ನೀಡಿದ್ದಾರೆ.

ಆಧಾರಸೂಚಿ

೧. E.C VII. Md.54, 1117 A.D.P. 282.

೨. E.C.VII.Ng.33, 1118 A.D.P. 20.

೩. E.C.IV.Ng. 91.

೪. ರಂಗಸ್ವಾಮಯ್ಯ ಜಿ.ಆರ್., ಮಂಡ್ಯ ಜಿಲ್ಲೆಯ ಸಂಕ್ಷಿಪ್ತ ಇತಿಹಾಸ, ಇಕ್ಷುಕಾವೇರಿ (೪೭ನೇ ಕನ್ನಡ ಸಾಹಿತ್ಯ ಸಮ್ಮೇಳನ ನೆನಪಿನ ಸಂಚಿಕೆ), ಮಂಡ್ಯ, ಪುಟ ೮೧.

೫. Ibid, Ng. 91.

೬. E.C.VII.Ng.33, 1118-1119 A.D. PP 19-20.

೭. E.C.VI.PP.41. 1118 A.D. P.130.

೮. E.C.VII.PP.11,12th Century PP-110-11.

೯. E.C.VIII.Md. 68, 1132-A.D.P.293.

೧೦. ಡಾ. ಎಸ್.ಎಸ್. ರಂಗರಾಜು, ಮಂಡ್ಯ ಮತ್ತು ತುಮಕೂರು ಜಿಲ್ಲೆಯ ಹೊಯ್ಸಳ ದೇವಾಲಯಗಳು, ಪುಟ ೬.

೧೧. E.C.VI.Kr..66., 1117 A.D.P.48

೧೨. E.C.VI.Kr.3.1118 A.D.P.4

೧೩. E.C.VIII. Md. 68, 1132.A.D.P.293

೧೪. E.C.VI. P.P.236, 12th Century PP 315-316

೧೫. E.C.VII. Ng. 118, 1178 A.D.P.117-118

೧೬. E.C.VI.Kr. 60 P.42

೧೭. E.C.VII.Ng.7 1134 A.D.P.67

೧೮. E.C.VI. KP 56P.40

೧೯. MAR 1912 P.41

೨೦. E.C.VI Kr.107 P.96

೨೧. E.C.VI. Kr.62, 1140 A.D.P.44

೨೨. E.C.VI, Kr. 73,P.59

೨೩. E.C.VI, Kr. 59, 1121 A.D.P. 41

೨೪. E.C.VI, PP 73, P.148

೨೫. E.C.VI, Kr. 21 P. 15

೨೬. E.C.VII. Ng. 61, 1138 A.D.P.33

೨೭. E.C.VII. Ng. 64, 1145 A.D.P. 45

೨೮. E.C.VI. Kr.37 1095-96 A.D.P.21

೨೯. ಡಾ. ಎಸ್. ಶ್ರೀಕಂಠಶಾಸ್ತ್ರಿ, ಭಾರತೀಯ ಸಂಸ್ಕೃತಿ–ಪುಟ ೧೦೯ & ೧೪೧–೧೪೨.

೩೦. Dr.B.Sheik Ali- (Ed) The Hoysala Dynasty-P. 304

೩೧. Gopal B.R.(Ed) E.C.Vol.V.My.135

೩೨. E.C.VI Kr.66, 1117 A.D.P. 48

೩೩. E.C.VII. Ng. 63 1165 A.D.P. 41-42

೩೪. E.C.VII Ng. 7 1134-P.6-7

೩೫. E.C.VI.Kr. 21, 12th Century-P.15

೩೬. ASMAR (1939) P.31

೩೭. E.C.VII Ng. 7 P.6-7

೩೮. E.C.VII Ng. 29-30, 1131 A.D.

೩೯. E.C.VII Ng. 169, 1142 A.D.P.167

೪೦. ಗೋಪಾಲ್ ಆರ್.(ಸಂ.), ಮಂಡ್ಯ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪುಟ ೫೨.

೪೧. E.C.VII Ng.1120 A.D.

೪೨. ಗೋಪಾಲ್ ಆರ್. (ಸಂ.), ಪೂರ್ವೋಕ್ತ, ಪುಟ ೩೫೪.

ಚಿಕ್ಕಮಗಳೂರು ಜಿಲ್ಲೆಯ ಶಾಸನೋಕ್ತ ಅಗ್ರಹಾರಗಳು

ಡಾ. ಕೆ. ವಸಂತಲಕ್ಷ್ಮಿ*

'ಅಗ್ರಹಾರ'ಗಳು, ವೇದಸಂಪನ್ನರಾದ ಬ್ರಾಹ್ಮಣರಿಗೆ ಅವರ ಷಟ್ಕರ್ಮಗಳನ್ನು ಸಾಂಗವಾಗಿ ನಡೆಸಿಕೊಂಡು ಬಾಳಲೆಂದು ರಾಜರು ನೀಡುತ್ತಿದ್ದ 'ಅಕರಗ್ರಾಮಗಳಾಗಿದ್ದವು' ಪ್ರಾಚೀನ ಶಾಸ್ತ್ರಗ್ರಂಥಗಳು ರಾಜನಾದವನು ರಾಜ್ಯದಲ್ಲಿ ಶಾಂತಿ ನೆಲೆಸಿದ್ದು ಸುಭಿಕ್ಷವಾಗಿರಲು ರಾಜಧನದಿಂದ ವೇದೋಕ್ತ ಸಂಪನ್ನರಿಗೆ ಭೂದಾನ ನೀಡಬೇಕೆಂದು ತಿಳಿಸುತ್ತವೆ. ನಾಡಿನಲ್ಲಿ ಭೂಸುರರು ನೆಲೆಸಿದ್ದು, ಅವರು ನಡೆಸುತ್ತಿದ್ದ ಯಾಗಯಜ್ಞ ಗಳಿಂದ ನಾಡು ಧರ್ಮದ ಬೀಡಾಗುತ್ತದೆ. ಅವರು ಮಾಡುವ ಅಧ್ಯಯನ, ಅಧ್ಯಾಪನಗಳಿಂದ ಜನರು ಸುಶಿಕ್ಷಿತರು, ಸಜ್ಜನರು, ಸುಶೀಲರೂ ಆಗುತ್ತಾರೆ. ರಾಜನು ದಾನ ನೀಡಿ ಸತ್ಕರ್ಮಿ ಯಾಗಿ, ಶಾಂತಿ ಪ್ರಿಯನಾಗುವನೆಂದು ತಿಳಿಸಿದೆ. ಹೀಗೆ ದಾನ ನೀಡುವುದರಿಂದ ರಾಜನಿಗೆ ಪುಣ್ಯಪ್ರಾಪ್ತಿಯೂ ಆಗುತಿತ್ತು. ಡಾ॥ ಡಿ.ಸಿ. ಸರ್ಕಾರ್‌ರವರು ವಾಚಸ್ಪತ್ಯ ಗ್ರಂಥವನ್ನಾಧರಿಸಿ- ವಿದ್ಯಾಭ್ಯಾಸವನ್ನು ಮುಗಿಸಿ ಬಂದ ಬ್ರಾಹ್ಮಣ ವಟುಗಳಿಗೆ ನೆಮ್ಮದಿಯಿಂದ ನೆಲೆಸಲು ಅನುವಾಗುವಂತೆ ರಾಜರು ಅಗ್ರಹಾರ ದಾನ ಕೊಡುತ್ತಿದ್ದರೆಂದು ತಿಳಿಸಿದ್ದಾರೆ. ಒಟ್ಟಿನಲ್ಲಿ ಅಗ್ರಹಾರವೆಂದರೇ- ಶ್ರೇಷ್ಠವಾದ ಭೂಮಿಯನ್ನು ಬ್ರಾಹ್ಮಣರಿಗೆ ಅಕರವಾಗಿ ಕೊಟ್ಟ ಭೂಭಾಗವಾಗಿರುತ್ತದೆ. ಈ ಭೂಭಾಗದ ಎಲ್ಲಾ ಆದಾಯಗಳೂ ದಾನ ಪಡೆದ ಬ್ರಾಹ್ಮಣರಿಗೆ ಸೇರುತ್ತಿದ್ದು, ಅವರನ್ನು ಶಾಸನಗಳಲ್ಲಿ 'ಮಹಾಜನ'ರೆಂದು ಕರೆಯಲಾಗಿದೆ. ಡಾ. ಚಿದಾನಂದ ಮೂರ್ತಿಯವರು- ಶಾಸನಗಳಲ್ಲಿ ಬರುವ ಮಹಾಜನರ ವಿಶೇಷಣಗಳು ಬ್ರಾಹ್ಮಣರದ್ದಾಗಿದೆ. ಇವು ಬೇರೆಯಾರಿಗೂ ಹೊಂದುವುದಿಲ್ಲ ಎಂದು ಸ್ಪಷ್ಟಪಡಿಸುತ್ತಾರೆ. ಆದರೆ ಡಾ॥ ಅಲ್ಟೇಕರರು- ಮಹಾಜನರೆಂದರೇ ಬ್ರಾಹ್ಮಣರೇ ಆಗಬೇಕಿಲ್ಲ, ಬ್ರಾಹ್ಮಣೇತರರು ಕಡಿಮೆ ಸಂಖ್ಯೆಯಲ್ಲಿ ಸೇರಿರು ತ್ತಾರೆ ಎಂದೂ ಅರ್ಥೈಸುತ್ತಾರೆ. ಇದರಂತೆ ಶಾಸನಗಳಲ್ಲಿ ಅಗ್ರಹಾರಗಳಲ್ಲಿ ನೆಲೆಸಿದ್ದ ಇತರ ಜನರ ಬಗೆಗೂ ಕೆಲವು ಉಲ್ಲೇಖಗಳೂ ಲಭ್ಯವಿವೆ.

ಶಾಸನಗಳಲ್ಲಿನ 'ಅಗ್ರಹಾರ'ಗಳ ಬಗೆಗಿನ ವಿವರಗಳನ್ನು ಗಮನಿಸಿದರೆ ಅಕರವಾಗಿ ನೀಡಿದ ಗ್ರಾಮಗಳನ್ನು 'ಅಗ್ರಹಾರ', 'ಬ್ರಹ್ಮಪುರಿ', 'ಸರ್ವಜ್ಞಪುರಿ' ಎಂದೂ ಕರೆಯಲಾಗಿದೆ. ಇದರಂತೆ ದಾನ ನೀಡುವ ಸಂದರ್ಭದಲ್ಲಿ ದಾನ ನೀಡುವವರು ಆ ಭಾಗಕ್ಕೆ ಹೊಸ ಹೆಸರೊಂದನ್ನು ಇಟ್ಟು ದಾನ ನೀಡುತ್ತಿದ್ದರು. ಹೀಗೆ ಹೆಸರಿಸುವಲ್ಲಿ, ಆ ಪ್ರದೇಶದಲ್ಲಿನ ದೇವರ ಹೆಸರು ಅಥವಾ ದಾನ ನೀಡಿದ ರಾಜನ ಹೆಸರನ್ನು ಸೇರಿಸಿ ಪುರವಾಗಿ ಮಾಡಿ ದಾನ ನೀಡಿರುವುದನ್ನು ಗಮನಿಸಬಹುದು. ಚಿಕ್ಕಮಂಗಳೂರು ಜಿಲ್ಲೆಯ ಶಾಸನಗಳಲ್ಲಿ ಸುಮಾರು ನಲವತ್ತಕ್ಕೂ ಹೆಚ್ಚು ಅಗ್ರಹಾರಗಳು ಲಭ್ಯವಿದ್ದು, ಕೆಲವು ಪ್ರಮುಖ ಅಗ್ರಹಾರಗಳನ್ನು ಮಾತ್ರ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಜಿಲ್ಲೆಯ ಕೆಲವು ಶಾಸನಗಳನ್ನು ಗಮನಿಸಿದಾಗ ಆ ಕಾಲದಲ್ಲಿ ಅಗ್ರಹಾರಗಳ ಆಡಳಿತ, ನಿರ್ವಹಣೆ ಮತ್ತು ಅಲ್ಲಿನ ಚಟುವಟಿಕೆಗಳ ಬಗೆಗೂ ತಿಳಿದುಬರುತ್ತಿದೆ.

ಕಡೂರು ತಾಲೂಕಿನ ಆಸಂದಿ ಗ್ರಾಮದ ತಾಮ್ರ ಶಾಸನವೊಂದು (ಕಡೂರು-೨೪) ಕ್ರಿ.ಶ. ೭೫೦ರಲ್ಲಿ ಗಂಗರ ದೊರೆ ೨ನೇ ಶಿವಮಾರನು ಆಸಂದಿ ವಿಷಯದ ತೋರಗಲ್ಲು ಗ್ರಾಮವನ್ನು ನಾನಾವೃತ್ತಿಗಳಾಗಿ ವಿಂಗಡಿಸಿ, ವಿವಿಧಗೋತ್ರದ ವೇದಭ್ಯಾಸಿಗಳಾದ ಬ್ರಾಹ್ಮಣರಿಗೆ ಸರ್ವಬಾಧ ಪರಿಹಾರವಾಗಿ ಬಿಟ್ಟಿದ್ದನ್ನು ತಿಳಿಸುತ್ತಿದೆ. ಈ ಜಿಲ್ಲೆಯ ಶಾಸನಗಳಲ್ಲಿ ಅಗ್ರಹಾರದ ಹಿನ್ನೆಲೆಯಲ್ಲಿ ಗಮನಿಸಿದಾಗ ಸಿಗುವ ಪ್ರಾಚೀನ ಅಕರ ಗ್ರಾಮದಾನದ ಶಾಸನವಿದು. ಆದರೆ ಇದರಲ್ಲಿ 'ಗ್ರಾಮ'ವನ್ನು 'ಅಗ್ರಹಾರ'ವೆಂದು ಕರೆದಿಲ್ಲ. ಬಹುಶಃ ಈ ಪರಿಸರದಲ್ಲಿ ೮ನೇ ಶತಮಾನದಲ್ಲಿ 'ಅಗ್ರಹಾರ' ಪದದ ಬಳಕೆ ಇದ್ದಂತಿಲ್ಲ. ಆದರೆ ೯ನೇ ಶತಮಾನದ ಚಿಕ್ಕನಾಯಕನಹಳ್ಳಿಯ ಶಾಸನವು (ಕ.೯೪) ಅಗ್ರಹಾರ ಎಳಮ್ಬುಣುಸೆಯ ಬ್ರಹ್ಮದೇಯವನ್ನು ಮಾಸಾಮಿ ಎಂಬುವನಿಗೆ ಕೊಡಲಾಗದೇ, ಅವನೊಂದಿಗೆ ಹೋರಾಡಿ ಮಣದಿಯ, ಸಿರಿವಚ್ಚ ಮೊದಲಾದವರು ಸತ್ತದ್ದನ್ನು ತಿಳಿಸುವ ವೀರಗಲ್ಲು ಶಾಸನವಾಗಿದೆ. ಇದರಿಂದ ೯ನೇ ಶತಮಾನದಲ್ಲಿ ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲೂಕಿನ ಎಳ್‌ಪುಣಸೆ ಗ್ರಾಮ ಅಗ್ರಹಾರವಾಗಿತ್ತೆಂದು ತಿಳಿಯುತ್ತದೆ. ಈ ಜಿಲ್ಲೆಯ ಅತ್ಯಂತ ಪ್ರಾಚೀನ ಅಗ್ರಹಾರ ಇದಾಗಿದೆ.

* # ೧೬೬೬, ೫ನೇ 'ಎ' ಕ್ರಾಸ್, ೧೦ನೇ ಮುಖ್ಯರಸ್ತೆ, ಬನಶಂಕರಿ ೧ನೇ ಹಂತ, ಬೆಂಗಳೂರು-೫೬೦೦೫೦.

ಚಿಕ್ಕಮಗಳೂರು ಜಿಲ್ಲೆಯು ಹೊಯ್ಸಳ ನಾಡಿನ ಪ್ರಮುಖ ಭಾಗಗಳಲ್ಲಿ ಒಂದಾಗಿದ್ದು, ಈ ಜಿಲ್ಲೆಯಲ್ಲಿ ಹೊಯ್ಸಳರ ಶಾಸನಗಳು ಹೆಚ್ಚಿನ ಸಂಖ್ಯೆಯಲ್ಲಿ ಲಭಿಸಿವೆ. ಅಗ್ರಹಾರದ ಉಲ್ಲೇಖವಿರುವ ಸು. ೪೦ ಶಾಸನಗಳು ದೊರೆಯುತ್ತವೆ. ಇವುಗಳಿಂದ ಹೊಯ್ಸಳರ ಕಾಲದಲ್ಲಿ ಈ ಜಿಲ್ಲೆಯಲ್ಲಿ ಅನೇಕ ಅಗ್ರಹಾರಗಳು ನಿರ್ಮಾಣವಾಗಿತ್ತೆಂದು ತಿಳಿಯುತ್ತಿದೆ. ಈ ಜಿಲ್ಲೆಯಲ್ಲಿ ಸು. ೧೨ನೇ ಶತಮಾನದಿಂದ ಅಗ್ರಹಾರಗಳ ರಚನೆಯು ಆರಂಭವಾಗಿದ್ದು, ಸು. ೧೭ನೇ ಶತಮಾನದವರೆಗೆ ಅಗ್ರಹಾರಗಳ ನಿರ್ಮಾಣವಾಗಿವೆ. ಈ ಜಿಲ್ಲೆಯ ಶಾಸನಗಳಿಂದ ಅಗ್ರಹಾರಗಳ ಸ್ಥಾಪನೆಯಾದ ಬಗೆ, ಅಗ್ರಹಾರಗಳಲ್ಲಿ ನಡೆಯುತ್ತಿದ್ದ ಕಾರಯ ಕಲಾಪಗಳು ಅಗ್ರಹಾರಗಳ ನಿರ್ವಹಣೆ, ಜೀರ್ಣೋದ್ಧಾರ ಮತ್ತು ಅಗ್ರಹಾರಗಳ ಸಂರಕ್ಷಣೆ ಬಗೆಗೆ ಶಾಸನಗಳು ಬೆಳಕು ಚೆಲ್ಲಿವೆ.

ಕ್ರಿ.ಶ. ೧೧೩೦ರ ಮರಲೆ ಗ್ರಾಮದ ಶಾಸನವು (ಚಿ.ಮಾ.೧೦೮) ರಾಯಣದಂಡನಾಥನು ಧರ್ಮವೇ ದೃಷ್ಟಾದೃಷ್ಟ ಸುಖದಾಯಿಯೆಂದು ತಿಳಿದು, ದೇವಳಿಗೆ ನಾಡ ಮೊರಲೆಯನ್ನು ಅಗ್ರಹಾರವಾಗಿ ಮಾಡಿ, ಶ್ರೀ ಕೇಧಶವ ದೇವರ ಪ್ರತಿಷ್ಠೆ ಮಾಡಿಸಿದ್ದನ್ನು ಶಾಸನವು ತಿಳಿಸುತ್ತಿದೆ. ಆ ದೇವರಿಗೆ ನಮಸ್ಕರಿಸಲು ಬಂದ ದೊರೆ ವಿಷ್ಣುವರ್ಧನನು ದೇವರ ಅಂಗಭೋಗ, ಗೀತವಾದ್ಯ ನೃತ್ಯಕ್ಕೆಂದು, ಜೀರ್ಣೋದ್ಧಾರಕ್ಕೆಂದು ಗಂಜಿಗೆರೆ ಗ್ರಾಮವನ್ನು ಕೊಟ್ಟನಲ್ಲದೇ ಓರಿಮುಗಳಿ, ಮಾಗುಂಡಿಗಳಲ್ಲಿ ಗದ್ದೆಯನ್ನು ಬಿಟ್ಟನು. ರಾಯಣನು ಮೊರಲೆಯಲ್ಲಿ ಬಂಧುಗಳಿಗೆ, ಬ್ರಾಹ್ಮಣರ್ಗೆ ವೃತ್ತಿ ವಿಭಾಗ ಮಾಡಿ ಸರ್ವನಮಸ್ಯವಾಗಿ ಕೊಟ್ಟಿದ್ದನ್ನು ತಿಳಿಸಿದೆ. ಈ ದೇವರನ್ನು ನಂತರದ ಶಾಸನಗಳಲ್ಲಿ ರಾಯಕೇಶವ ದೇವರೆಂದು, ಅಗ್ರಹಾರವನ್ನು 'ಶ್ರೀರಾಯಕೇಶವಾಪುರ', 'ವಿಷ್ಣುವರ್ಧನ ಕೇಶವಾಪುರು'ವೆಂದು ಕರೆಯಲಾಗಿದೆ.

ಕಡೂರು ತಾಲೂಕಿನ ಬ್ರಹ್ಮಸಮುದ್ರದ ಶಾಸನವು (ಕ.೧೫೦) ಹೊಯ್ಸಳ ನಾರಸಿಂಹದೇವನಲ್ಲಿ ಶ್ರೀಕರಣದ ಹೆಗ್ಗಡೆಯಾಗಿದ್ದ ನಾಕಿಮಯ್ಯನು 'ಯಶಸ್ಸು ಮತ್ತು ಧರ್ಮಗಳೇ ಶಾಶ್ವತಧನ'ವೆಂದು ತಿಳಿದು ರಾಜನಿಂದ ಬ್ರಹ್ಮಸಮುದ್ರ ಗ್ರಾಮವನ್ನು ಪಡೆದುಕೊಂಡನು. ನಾಕಿಮಯ್ಯನ ಕಾಲಗುಣ ದಿಂದ ಆ ಕಾಲ ಈ ಕಾಲವೆನ್ನದೇ ಸಮಸ್ತ ಧಾನ್ಯ, ಫಳ ವಾಪೀಗಳು ಸಂಪನ್ನವಾಗಿ 'ಬಲಿರಾಜ್ಯದಂತೆ' ಸಂಪದ್ಭರಿತ ವಾಯಿತು. ಈಶ ಭವನವೂ, ವೇದಧ್ವನಿ ಘೋಶ ಮಾಡುತ್ತಿದ್ದ ವಿಪ್ರರೂ, ವ್ಯಾಪಾರಿಗಳೂ, ನೆಲೆಸಿದ್ದ ಈ ಗ್ರಾಮಕ್ಕೆ 'ಬ್ರಹ್ಮ ಸಮುದ್ರ'ವೆಂಬ ಹೆಸರು ಅನ್ವರ್ಥನಾಮವಾಗಿತ್ತು. (ಕ್ರಿ.ಶ. ೧೧೯೬ರಲ್ಲಿ) ನಾಕಿಮಯ್ಯನು ನಾಕೇಶ್ವರ ದೇವಾಲಯವನ್ನು ಕಟ್ಟಿಸಿ ದೇವರ ಅಂಗಭೋಗ, ನೈವೇದ್ಯ, ಪೂಜಕರಿಗೆ, ಪರಿಚಾರಿಕ ಜೀವಿತಕ್ಕೆಂದೂ, ವೇದಖಂಡಿಕ, ಶಾಸ್ತ್ರಖಂಡಿಕ, ತರ್ಕವಕ್ಷರ ಖಂಡಿಕರಿಗಳಿಗೆ ಅಗ್ರಾಸನ ನಡೆಸಲೆಂದು ದಾನ ನೀಡಿದ್ದಾನೆ. ಈ ಸ್ಥಾನವನ್ನು 'ನೈಷ್ಠಿಕಸ್ಥಾನ'ವೆಂದೂ ತಿಳಿಸಿದ್ದು ಶುದ್ಧ ಶೈವರಾದ ಊರ್ಧ್ವಶ್ರೋತ್ರಿಯರಾದ, ಶಂಭುಮಠಕ್ಕೆ ಸೇರಿದ ಶ್ರೀಮತ್ ತ್ರಿಲೋಚನಾಚಾರ್ಯರಿಗೆ ನೀಡಲಾಗಿದೆ. ನಂತರದ ಕಾಲದ ಶಾಸನಗಳಲ್ಲಿ ಬ್ರಹ್ಮಸಮುದ್ರವನ್ನು 'ಶ್ರೀಮದನಾದಿ ಅಗ್ರಹಾರ'ವೆಂದೂ ಉಲ್ಲೇಖಿಸಿದೆ. ಕ್ರಿ.ಶ. ೧೨೯೯ರ ವೀರನಾರಾಯಣನ ದೇವಾಲಯದ ಶಾಸನವು (ಕ.೧೫೭). 'ಶ್ರೀಮದನಾದಿಯಗ್ರಹಾರ, ಶ್ರೀಲಕ್ಷ್ಮೀನಾರಾಯಣಪುರ'ವಾದ ಬ್ರಹ್ಮಸಮುದ್ರವೆಂದು ತಿಳಿಸಿದೆ. ಬ್ರಹ್ಮಸಮುದ್ರದ ಲಕ್ಷ್ಮಿನಾರಾಯಣದೇವ ಶಾಸನವು (ಕ.೧೯೬) ಕ್ರಿ.ಶ. ೧೧೭೨ರಲ್ಲಿ ಹೊಯ್ಸಳ ದೊರೆ ನರಸಿಂಹದೇವನ ಶ್ರೀಕರಣಾಧಿಕಾರಿಯೂ, ಸರ್ವಾಧಿಕಾರಿಯಾದ ಅಜಿಮಯ್ಯನು ಲಕ್ಷ್ಮಿನಾರಾಯಣ ದೇವಾಲಯವನ್ನು ನಿರ್ಮಿಸಿದ್ದನ್ನು ತಿಳಿಸಿದೆ. ಈ ದೇವರ ಶ್ರೀ ಕಾರ್ಯಕ್ಕೆಂದು ದೊರೆ ನಾರಸಿಂಹದೇವನ ಕೈಯಿಂದ ಭೂದಾನವನ್ನು ಕೊಡಿಸಿದ್ದಾನೆ. ಹೀಗೆ ಬ್ರಹ್ಮ ಸಮುದ್ರವು ಶೈವ, ವೈಷ್ಣವ ಜನರೆಲ್ಲ ಒಟ್ಟಾಗಿ ನೆಲೆಸಿದ್ದ ಅಗ್ರಹಾರವಾಗಿತ್ತು.

ಚಿಕ್ಕಮಗಳೂರು ತಾಲೂಕಿನ ಖಾಂಡ್ಯದ ಶಾಸನವು (ಚಿ.ಮ.೧೭೬) ಕ್ರಿ.ಶ. ೧೧೮೦ರಲ್ಲಿ ಹೊಯ್ಸಳ ದೊರೆ ವೀರಬಲ್ಲಾಳದೇವನು ಖಾಂಡೆಯದ ಮಾರ್ಕಂಡೇಶ್ವರ ದೇವರ ಶ್ರೀ ಕಾರ್ಯಕ್ಕೆಂದು ಖಾಂಡೆಯದಗ್ರಹಾರದ ಸಿದ್ದಾಯದಲ್ಲಿನ ೫೦ ಗದ್ಯಾಣವನ್ನು, ಬನವಸೆ ನಾಡಗ್ರಹಾರದ ಶಿವಯೋಗಿ ಮಾಧವದೇವರಿಗೆ ಧಾರಾಪೂರ್ವಕವಾಗಿ ಕೊಟ್ಟನು. ಈ ಶಾಸನ ದಾನಕ್ಕೆ ಸೇರಿದ್ದ ಊರುಗಳನ್ನು ತಿಳಿಸುತ್ತಾ, ಕರಿಗಣಲೆ, ದೇಗುರವಳ್ಳಿಗಳನ್ನು ಹೆಸರಿಸಿದೆ. ಈ ದೇವರ ಭಂಢಾರಕ್ಕೆ, ಖಾಣಿಹೆಗ್ಗಡೆಯಾದ ಬಸವಣ್ಣನು ಅಗ್ಗಿಷ್ಟಿಗೆಗೆಂದು ದಾನ ಬಿಟ್ಟಿದ್ದನ್ನು ತಿಳಿಸಿದೆ. ಈ ಊರಿನ ಮತ್ತೊಂದು ಶಾಸನವು (ಚಿ.ಮ.೧೮೦) ಕ್ರಿ.ಶ.೧೧೮೩ರಲ್ಲಿ ದೇವಣನು ವೀರಬಲ್ಲಾಳ ದೇವರ ಕೈಯಲ್ಲಿ ಅಗ್ನಿಷ್ಟಿಗೆಯ ಮಠಕ್ಕೆಂದು ಪಡೆದ ದಾನವನ್ನು ಉಲ್ಲೇಖಿಸಿದೆ. ಈ ಅಗ್ರಹಾರದ ಮಹಾಜನಗಳೆಂದು ದಾಮೆಯಹೆಬ್ಬಾರುವ, ಕೇಶವಹೆಬ್ಬಾರುವ, ಹೆಬ್ಬಾರುವ ಶಂಕರಯ್ಯ ಮೊದಲಾದವ ರನ್ನು ಹೆಸರಿಸಿದೆ. ಕಡೂರು ತಾಲೂಕಿನ ಕರೆಸಂತೆ ಗ್ರಾಮದ ಶಾಸನ ವೊಂದು (ಕ.೬೬) ವೀರಬಲ್ಲಾಳದೇವನ ಕಾಲದ್ದಾಗಿದ್ದು (ಕ್ರಿ.ಶ. ೧೧೮೧) ಈ ಗ್ರಾಮವನ್ನು ಪಿರಿಯಗ್ರಹಾರ ಶ್ರೀವಿಷ್ಣುಸಮುದ್ರವೆಂದು ಕರೆದಿದೆ. ಶಾಸನವು ವಿಷ್ಣು ಸಮುದ್ರದ ಮಹತ್ವವನ್ನು– ಇದು ಅಗಸ್ತ್ಯನು ಸಮುದ್ರವನ್ನು ಕುಡಿದು ಬರಿದು ಮಾಡಿದಾಗ ಬ್ರಹ್ಮನು ಅದನ್ನು ಮತ್ತೆ ತುಂಬಿ

ದಂತಿರುವ ಸಮುದ್ರದಂತೆ ಇತ್ತು ಎನ್ನುತ್ತಾ ಆ ಕೆರೆಯ ವಿಶಾಲತೆಯನ್ನು ಬಣ್ಣಿಸಿದೆ. ಈ ಭೂಭಾಗದಲ್ಲಿ ದೊರೆ ವಿಷ್ಣುವರ್ಧನನು ಋಗ್‌ಯಜುಸ್ಸಾಮಥರ್ವಣವೇದ ಪಾರಂಗತ ನಾನೂರು ಜನ ಬ್ರಾಹ್ಮಣರಿಗೆ ಪ್ರೀತ್ಯಾದರಗಳಿಂದ ಅಗ್ರಹಾರವಾಗಿ ಕೊಟ್ಟನೆಂದು ಶಾಸನ ತಿಳಿಸಿದೆ. ಹೀಗೆ ನಾನೂರು ಜನ ಚತುರ್ವೇದ ಪಾರಂಗತರಿದ್ದುದರಿಂದ ಇದನ್ನು 'ಪಿರಿಯ ಗ್ರಹಾರ'ವೆಂದು ಕರೆದಿದೆ. ಈ ಮಹಾಜನಗಳು ಸಿದ್ದೇಶ್ವರ ದೇವಸ್ಥಾನವನ್ನು ಶೈವಾಗಮ ವಿಶಾರದರಾಗಿದ್ದ ಶಿವಬ್ರಾಹ್ಮಣ ಲಾಳವಂದಿಭಟ್ಟರಿಗೆ ವಹಿಸಿಕೊಟ್ಟದನ್ನು ತಿಳಿಸಿದೆ.

ಇದೇ ಗ್ರಾಮದ ಕ್ರಿ.ಶ.೧೨೨೪ರ ಮತ್ತೊಂದು ಶಾಸನವು (ಕ.೬೪) ಹೊಯ್ಸಳ ದೊರೆ ವೀರನರಸಿಂಹದೇವರ ಕಾಲದಲ್ಲಿ ಚೌಂಡಿಸೆಟ್ಟಿಯು ಶಂಭುದೇವರ ದೇವಾಲಯವನ್ನು ಕಟ್ಟಿಸಿ, ದೇವರ ಪ್ರತಿಷ್ಠಾಪನೆ ಮಾಡಿಸಿದಾಗ, ವಿಷ್ಣುಸಮುದ್ರದ ಅಶೇಷ ಮಹಾಜನಂಗಳ ಅನುಮತಿ ಪಡೆದು ಶೈವಾಗಮ ವಿಶಾರದರಾಗಿದ್ದ ಶಿವಬ್ರಾಹ್ಮಣ ಬಮ್ಮೆಯದ ಅಳಿಭಟ್ಟರಿಗೆ ಆ ಸ್ಥಾನವನ್ನು ದಾನ ನೀಡುತ್ತಾನೆ. ಮಹಾಜನರು ದೇವರಂಗಭೋಗಕ್ಕೆಂದು ಭೂಮಿದಾನ ನೀಡಿದ್ದನ್ನು ತಿಳಿಸಿದೆ. ಇಲ್ಲಿಯ ಇನ್ನೊಂದು ಶಾಸನವು (ಕ.೬೧) ಕ್ರಿ.ಶ.೧೨೫೯ರಲ್ಲಿ ಮಹಾವಡ್ಡಬೆವಹಾರಿ ಸೋವಾಸಿ ಮಾಧವಭಟ್ಟಯ್ಯನ ಮಗ ಅಲ್ಲಾಳದೇವನು ಶ್ರೀಮದ ನಾದಿಯಗ್ರಹಾರವಾದ ವಿಷ್ಣುಸಮುದ್ರವೆಂಬ ಕೆರೆಸಂತೆಯ ಕೆರೆಯ ಧರ್ಮಕ್ಕೆಂದು ೨೦೦ ಗದ್ಯಾಣವನ್ನು ದಾನ ನೀಡಿದ್ದನ್ನು ತಿಳಿಸಿದೆ. ಈ ಹಣಕ್ಕೆ ಬಂದ ಬಡ್ಡಿಯಿಂದ ಪ್ರತಿ ವರ್ಷ ೩೦ ಗದ್ಯಾಣವನ್ನು ಆ ಕೆರೆಯ ತೂಬನ್ನು ಸರಿಪಡಿಸುತ್ತಾ, ಮಹಾಜನರು ಸಧರ್ಮವನ್ನು ನಡಸುವರೆಂದು ಶಾಸನ ತಿಳಿಸಿದೆ; ಈ ವಿಷ್ಣುಸಮುದ್ರದ ಕೆರೆಯ ತೂಬನ್ನು ಈ ಊರಿನ ಮತ್ತೊಂದು ಶಾಸನದಲ್ಲಿ 'ರಾಯರಾಯ ಪುರಂಗೊಣ್ಣ ತೂಬು' ಎಂದು ಕರೆದಿದೆ (ಕ.೬೭). ಕೆರೆಸಂತೆ ಗ್ರಾಮದ ಮತ್ತೊಂದು ಶಾಸನವು (ಕ.೭೧) ವಿಷ್ಣಸಮುದ್ರದ ನಖರೇಶ್ವರ ದೇವರಿಗೆ ಪ್ರತಿವರ್ಷವೂ ಸಿದ್ಧಾಯದ ೧೨೦೦ ಹೊನ್ನಿನೊಳಗೆ, ೧೦ ಗದ್ಯಾಣವನ್ನು ಅಮೃತಪಡಿಗೆಂದು ಭೂಮಿಯುನ್ನು ನಾನೂರ್ವರು ದಾನ ನೀಡಿದ್ದನ್ನು ತಿಳಿಸಿದೆ.

ಕಡೂರು ತಾಲೂಕಿನ ಮಾದಾಪುರ ಗ್ರಾಮದ ಕ್ರಿ.ಶ. ೧೨೧೮ರ ಶಾಸನವು (ಕ.೧೮೫) ಮಗರೆ ೨೦೦ರೊಳಗೆ ಚಳ್ಳಿ ವೃತ್ತಿಗೆ ಸೇರಿದ್ದ ಕೇಶಿಯಹಳ್ಳಿಯನ್ನು 'ಉತ್ತಮ ಅಗ್ರಹಾರ'ವೆಂದು ಉಲ್ಲೇಖಿಸುತ್ತಾ ಇದನ್ನು 'ಪ್ರಸನ್ನ ಮಾಧವಪುರ'ವೆಂದು ಹೆಸರಿಸಿದೆ. ಈ ಅಗ್ರಹಾರದಲ್ಲಿ ಕ್ಷೀರಸಾಗರದಂತಹ ತಟಾಕಗಳು, ಸುಂದರವಾದ ಉದ್ಯಾನವನಗಳೂ, ಮುನಿಗಳಂತೆ ತೇಜಸ್ಸುಳ್ಳ ವಿಪ್ರವ್ರಜವೂ, ಲಕ್ಷ್ಮಿಯನ್ನು ಹೋಲುವಂತಹ ಪುರಸ್ತ್ರೀಯರು ಇದ್ದು ಈ ನಾಡಿನಲ್ಲಿ ಯಾವಾಗಲೂ ವಸಂತಮಾಸವೇ ಇರುತ್ತಿತ್ತು ಎಂದು ಬಣ್ಣಿಸಿದೆ. ಮಾಧವಾಪುರದ ವಿಪ್ರರು– ಅಕಳಂಕಾಚಾರರಾರಾಧಿತರೂ, ಗುರು ಪಿತೃದೈವ ಅತಿಥಿ, ಬ್ರಾತರನ್ನು ಉನ್ನತಮಟ್ಟಕ್ಕೇರಿಸಲು ಅನೇಕ ಯಜ್ಞಗಳನ್ನು ಮಾಡುತ್ತ ಯಶಸ್ಸು ಗಳಿಸಿದವರೂ, ವೇದ ವೇದಾಂತಗಕೃತಾಭ್ಯಾಸರೂ, ವಿದ್ವಾಂಸರಾದ ಇವರು ಸದಾದಾನಮುದಿತರಾಗಿದ್ದರು, ಸತ್ಯರತ್ನಾಕರರಾಗಿದ್ದರು ಎಂಬ ಶಾಸನ ಬಣ್ಣಿಸಿದೆ. ಅಖಿಳ ನೀತಿನಿದಾನ ಸರ್ವಜ್ಞರೆನ್ನಿಸಿದ ೪೨ ಜನ ವಿಪ್ರರು ನೆಲೆಸಿದ್ದರು. ಈ ಅಗ್ರಹಾರದಲ್ಲಿ ವೀರಬಲ್ಲಾಳದೇವನ ರಾಣಿ ಬೈಚಲಾದೇವಿಯು ಪ್ರಸನ್ನಮಾಧವ ದೇವಾಲಯನ್ನು ನಿರ್ಮಿಸಿ ಬ್ರಾಹ್ಮಣರಿಗೆ ದಾನ ಬಿಟ್ಟಿದ್ದನ್ನು ಶಾಸನ ದಾಖಲಿಸಿದೆ.

ಅಗ್ರಹಾರದಲ್ಲಿ ಹೊಸದಾಗಿ ದೇವಾಲಯವನ್ನು ನಿರ್ಮಿಸಿದಾಗ ಮಹಾಜನರೇ ಮುಂದಾಗಿ ತಮ್ಮ ವೃತ್ತಿಭಾಗದ ಕೆಲ ಭೂಮಿಯನ್ನು, ದೇವರ ಶ್ರೀ ಕಾರ್ಯಕ್ಕೆಂದು ದಾನ ನೀಡುತ್ತಿದ್ದರು. ಕಡೂರು ತಾಲೂಕಿನ ದೇವನೂರು ಗ್ರಾಮದಲ್ಲಿ 'ಅಭಿನವರುದ್ರ' ನೆನಿಸಿದ್ದ ಕುಮಾರದೇವರು 'ಸಿದ್ಧೇಶ್ವರ ದೇವಾಲಯ'ವನ್ನು ಕಟ್ಟಿಸಿದರು (ಕ.೧೦೬). ಆಗ ವರಲಕ್ಷ್ಮಿ ನಾರಾಯಣಪುರವೆನ್ನಿಸಿದ್ದ ದೇವನೂರಿನ ಬ್ರಾಹ್ಮಣರು ಭೂದಾನ ನೀಡಿದರಲ್ಲದೇ, ಸಿದ್ಧನಾಥ ದೇವರ ಗದ್ದೆಗಳ ಸಿದ್ಧಾಯವನ್ನು ಎಂದೆಂದಿಗೂ ಸರ್ವನಮಸ್ಯವಾಗಿ ಸಲ್ಲಿಸಿದರು. ಹೀಗೆ ಅಗ್ರಹಾರದ ಮಹಾಜನರು ಆ ಗ್ರಾಮದ ಒಡೆಯರಂತಿದ್ದು, ಎಲ್ಲಾ ವ್ಯವಹಾರಗಳನ್ನು ನಿರ್ವಹಿಸುತ್ತಿದ್ದದನ್ನು ಶಾಸನಗಳು ತಿಳಿಸಿವೆ. ಇದರಂತೆ, ಬ್ರಹ್ಮಸಮುದ್ರದ ಶಾಸನವೊಂದು (ಕ.೧೫೩) ಕ್ರಿ.ಶ. ೧೨೩೨ರಲ್ಲಿ ಅನಾದಿ ಅಗ್ರಹಾರವಾದ ಬ್ರಹ್ಮಸಮುದ್ರದ ಅಶೇಷಮಹಾಜನರು ಕರೆಗಗೌಡ ಪೆರಮಾಳುಗೌಡರಿಗೆ ಕೀಳ್ಕೋಗಿನ ನೆತ್ತರು ಕೊಡಗಿಯ ಕೆಯಿಮತ್ತರು ಎರಡು, ಕಂಬ ೨೩೦ಕ್ಕೆ ಸರ್ವಬಾಧಾ ಪರಿಹಾರವಾಗಿ ಮಾಡಿದ್ದನ್ನು ಶಾಸನ ತಿಳಿಸಿದೆ.

ತರಿಕೆರೆ ತಾಲೂಕಿನ ಅಮೃತಾಪುರದ ಶಾಸನವು (ತ.೧೨) ಕ್ರಿ.ಶ.೧೧೯೮ರಲ್ಲಿ ಹೊಯ್ಸಳವೀರ ಬಲ್ಲಾಳದೇವರ ಬಲದೋಳಿನಂತಿದ್ದ ದಂಡನಾಯಕ ಅಮಿತಯ್ಯನು ಕಗ್ಗಿಯ ವೃತ್ತಿಗೆ ಸೇರಿದ ಅಮೃತಸಮುದ್ರದಲ್ಲಿ ಅಮೃತೇಶ್ವರ ದೇವಾಲಯವನ್ನು ನಿರ್ಮಿಸಿದನು. ಈ ದೇವರ ಅಂಗಭೋಗ, ರಂಗಭೋಗ, ಚೈತ್ರಪವಿತ್ರಗಳಿಗೆಂದು, ಆಸಂದಿ ನಾಡಿನ ಅಗ್ರಹಾರ ಹುಣಿಸೆಕಟ್ಟೆಯನ್ನು ಸರ್ವನಮಸ್ಯವಾಗಿ ಬಿಟ್ಟಿದ್ದನ್ನು ತಿಳಿಸಿದೆ. ಇದೇ ತಾಲೂಕಿನ ಕುಂಟನಮಡವು ಗ್ರಾಮದ ಶಾಸನವು (ತ.೩೪) ಕ್ರಿ.ಶ. ೧೨೩೦ರಲ್ಲಿ ಶ್ರೀಮದನಾದಿಯ

ಗ್ರಹಾರ ಯಮ್ರಿತಕೇಶವಪುರವಾದ ಕೂಟನಮಡುವಿನ ಅಶೇಷಮಹಾಜನರು ಸಭಾಸ್ಥಳಕ್ಕೆ ಬಂದು ಸೇರಿ ತಮ್ಮಲ್ಲಿ ಐಕಮತ್ಯದಿಂದ ಸುತ್ತಲ ಕೆಲವು ಹಳ್ಳಿಗಳನ್ನು ಧ್ರುವ ಉಂಡಿಗೆ ಯಾಗಿ ಹಂಚಿಕೊಂಡ ವಿಧಾನವನ್ನು ತಿಳಿಸಿದೆ. ಶಾಸನವು ಮಹಾಜನರು ವೊಕ್ಕುಂದ, ಮಾವಿನಕೆರೆಯ ೯೫ ವೃತ್ತಿ, ದೊಡ್ಡೇರಿ, ಬೀಚನಮಾನಿಯ ೯೮ ವೃತ್ತಿ, ವೊಳ್ಳೆಯಮಾಸ, ವೊರವನಕೆರೆಯ ೯೫ ವೃತ್ತಿ, ಸೀಗೆಯಕೋಟೆ, ತಟ್ಟೆಯಹಳ್ಳಿ, ಮಲ್ಲೆಯನಹಳ್ಳಿಯ ೫೭ ವೃತ್ತಿ. ಒಟ್ಟು ವೃತ್ತಿ ೩೦೦ ಕಂಬವನ್ನು ತಾವು ತೆಗೆದುಕೊಂಡು ತಮ್ಮ ಹಳ್ಳಿಗಳಲ್ಲಿ ಕೆರೆ ಕಾಲುವೆಗಳನ್ನು ಕಟ್ಟಿಸಿ, ತೋಟ ತುಡಿಕೆಯನ್ನು ನಡೆಸುವರು ತಮ್ಮ ತಮ್ಮ ಹಳ್ಳಿಗಳ ತಪ್ಪು, ಕಾತುಷ್ಟಿ, ಕಾಹು ಎಲ್ಲವೂ ಅವರವರೇ ನೋಡಿಕೊಳ್ಳುವರು ಎಂದು ಕಟ್ಟುಪಾಡನ್ನು ವಿಧಿಸಿದ್ದು ಇದನ್ನು ಮೀರಿದರೆ ಚಕ್ರವರ್ತಿ ವೀರನರಸಿಂಹದೇವರಸರಾಣಿ, ಸೋವಿಲಾದೇವಿಯರಾಣಿ ಎಂದಿದೆ– ಹೀಗೆ ಅಂದಿನ ಅಗ್ರಹಾರದ ಬ್ರಾಹ್ಮಣರು ಕೇವಲ ಧಾರ್ಮಿಕ ಆಚರಣೆಗಳಿಗೆ ಸೀಮಿತರಾಗದೇ, ಸುತ್ತಲ ಗ್ರಾಮಗಳ ಏಳಿಗೆಗೆ ಶ್ರಮಿಸುತ್ತಾ ಸಾಮಾಜಿಕ ಕಾರ್ಯಗಳನ್ನು ನಿರ್ವಹಿಸಿದ್ದನ್ನು ಶಾಸನವು ತಿಳಿಸುತ್ತಿದೆ.

ತರೀಕೆರೆಯ ಹಳೆಯೂರಿನ ಶಾಸನವು (ತ. ೯೭) ಕ್ರಿ.ಶ. ೧೧೮೦ರಲ್ಲಿ ವೀರಬಲ್ಲಾಳದೇವರು ಆಳುತ್ತಿದ್ದಾಗ, ಶ್ರೀಮದಗ್ರಹಾರ ಅಮರಾವತಿಪುರವೆನ್ನಿಸಿದ್ದ ತರಿಯಕೆರೆಯಲ್ಲಿ ಯಮನಿಯಮ ಸ್ವಾಧ್ಯಾಯಧ್ಯಾನಧಾರಣ ಮೋನಾನುಷ್ಠಾನ ಜಪಸಮಾಧಿಶೀಲಸಂಪನ್ನರಾದ, ಔಪಸನಾ ಅಗ್ನಿಹೋತ್ರ ಮಾಡುವ ಗುರುದೇವ ಪೂಜಾತತ್ಪರರಾದ, ಸೂರ್ಯನಂತೆ ತೇಜಪ್ರತಾಪಿಗಳಾದ ಭೂಸುರರು ನೆಲೆಸಿದ್ದರು. ಈ ಅಗ್ರಹಾರವನ್ನು ಹೆಗ್ಗಡೆ ವಿಜೆಯಾದಿತ್ಯದೇವನು, ಹೆಗ್ಗಡತಿ ದೇಕವ್ವೆಯವರು ಮಹಾಪ್ರಧಾನರಾದ ಲಕ್ಮರಸರು ಮಾಡಿದ ಅಗ್ರಹಾರವೆಂದು ಶಾಸನ ತಿಳಿಸಿದೆ. ಈ ಅಗ್ರಹಾರದಲ್ಲಿ ಕೇಶವದೇವರ ಪ್ರತಿಷ್ಠೆ ಮಾಡಿದಾಗ ನೂರೆರೆಡು ಮಹಾಜನರು ದಾನ ನೀಡಿದ್ದನ್ನು ಶಾಸನ ದಾಖಲಿಸಿದೆ.

ತರಿಕೆರೆ ತಾಲೂಕಿನ ಸಮತಳ ಗ್ರಾಮದ ಶಾಸನವೊಂದು (ತ.೮೮) ಹೆಗ್ಗಡೆ ಚಂದಿರಯ್ಯನು ಚೌಡವ್ವೆಯರು ಮುದ್ದೇಶ್ವರ ಲಿಂಗವ ಪ್ರತಿಷ್ಠೆ ಮಾಡಿದಾಗ ಚಂದಿರಯ್ಯನವರು 'ಸರಸ್ವತಿಪುರ'ವೆಂದು ೨೪ ಜನ ಬ್ರಾಹ್ಮಣರಿಗೆ ದಾನ ಬಿಟ್ಟದ್ದನ್ನು ದಾಖಲಿಸಿದೆ. ಶಾಸನವು ಈ ದೇವಾಲಯಕ್ಕೆ ನೀಡಿದ ದಾನವು ಸರಸ್ವತಿಪುರದ ಮಹಾಜನರೆದುರು ನಡೆಯಿತೆಂದು ತಿಳಿಸಿದೆ. ತರೀಕೆರೆಯ ತಾಮ್ರ ಶಾಸನವು (ತ.೫೧) ವೀರಬಲ್ಲಾಳ ದೇವರು, ಆಸನ್ದಿ ನಾಡಿಗೆ ಸೇರಿದ ಮೊಲ್ಲೇಶ್ವರ ಗ್ರಾಮವನ್ನು ಅಗ್ರಹಾರವಾಗಿ ಮಾಡಿದ್ದನ್ನು ತಿಳಿಸಿದೆ. ಈ ಅಗ್ರಹಾರದ ಕಟ್ಟುಗುತ್ತಿಗೆ ಪಿಂಡದಾನವಾಗಿ ಗದ್ಯಾಣ ೧೦೦ನ್ನು ತಿಳಿಸಿದ್ದು, ಸರ್ವಬಾಧಾ ಪರಿಹಾರವಾಗಿ ಬಿಟ್ಟಿದ್ದನ್ನು ತಿಳಿಸಿದೆ.

ಬ್ರಹ್ಮಸಮುದ್ರದ ವೀರನಾರಾಯಣ ದೇವಾಲಯದ ಶಾಸನವೊಂದು (ಕ.೧೫೮) ಕ್ರಿ.ಶ.೧೨೪೦ರಲ್ಲಿ ಅನಾದಿ ಅಗ್ರಹಾರವಾದ ಬ್ರಹ್ಮಸಮುದ್ರದ ಮಹಾಜನಂಗಳು ತಮ್ಮೊಳೇಕಸ್ಥರಾಗಿ ಪ್ರಭುಮಂಟಪದಲ್ಲಿ ಕುಳಿತಿದ್ದಾಗ ಅವರಿಗೆ ದಾಮೋಜನು ಪಾದಪೂಜೆ ಮಾಡಿದ್ದನ್ನು ತಿಳಿಸಿದೆ. ಮಹಾಜನರು ದಾಮೋಜನ ಕಂಬ ೧೦೦ ಭೂಮಿಯನ್ನು ಸರ್ವಬಾಧೆ ಪರಿಹಾರವಾಗಿ ಮಾಡಿಕೊಟ್ಟದ್ದನ್ನು ದಾಖಲಿಸಿದೆ. ಇದೇ ದೇವಾಲಯದ ಮತ್ತೊಂದು ಶಾಸನವು (ಕ.೧೬೧) ನಾರಣದೇವನಿಗೆ ೨೦೦ ಕಂಬ ಗದ್ದೆ ಬೆದ್ದಲನ್ನು ಕಾರುಣ್ಯದಿಂದ ಕೊಟ್ಟದ್ದನ್ನು ತಿಳಿಸಿದೆ. ಹೀಗೆ ತಮ್ಮ ಪರಿಸರದ ಜನರ ಕಷ್ಟನಷ್ಟಗಳಲ್ಲಿ ಭಾಗಿಯಾಗಿ ಮಹಾಜನರು ಊರಿನ ಜನರ ಆದರಕ್ಕೆ ಪಾತ್ರರಾಗಿದ್ದರು.

ತರೀಕೆರೆ ತಾಲೂಕಿನ ಬಗ್ಗವಳ್ಳಿಯ ಶಾಸನವೊಂದು (ತ.೭೦) ಶ್ರೀಮದನಾದಿಯಗ್ರಹಾರ ಲಕ್ಷ್ಮಿನರಸಿಂಹಪುರವಾದ ಬಗ್ಗ್ಗವಳ್ಳಿ ಮಹಾಜನರು ಮಾಡಿದ್ದ 'ಗ್ರಾಮಸಮಯ'ದ ಬಗೆಗೆ ತಿಳಿಸಿದೆ. ಇದರಂತೆ, ಅವರು ನಿರ್ಧರಿಸಿದ್ದ ವಿವರವೆಂದರೆ– ಪ್ರಥಮ ನಿವೇಸನಕ್ಕೆ ೧೧ ಕೆಯ್, ದ್ವಿತೀಯ ನಿವೇಸನಕ್ಕೆ ೧೦ ಕೆಯ್, ತೋಂಟವ್ರಿತ್ತಿಗೆ ಎಂಟು ಕಂಬ, ಕಳನು ವ್ರಿತ್ತಿಗೆ ೧೨ ಕೆಯ್ ಅಗಲ, ನಾಲ್ವತ್ತು ಕೆಯ್ ಅಗಲ ಈ ಮರಿಯಾದೆಯಲ್ಲಿ ಮಾಡಿದ ದ್ರುವ ಉಂಡಿಗೆ ೧೧ ಗ್ರಾಮದ ಒಟ್ಟು ೧೦೪ ವ್ರಿತ್ತಿಯಲ್ಲಿ ೬೬ ವ್ರಿತ್ತಿ, ೯೬ ಪ್ರಥಮ ಸ್ಥಳದಲ್ಲಿ ಶ್ರೀ ನರಸಿಂಹದೇವರದು, ಚೆನ್ನಕೇಶವದೇವರ ಶ್ರೀಕಾರ್ಯಕ್ಕೆ ೪ ವ್ರಿತ್ತಿ, ವೇದಖಂಡಿಕಕ್ಕೆ ೨ ವ್ರಿತ್ತಿ, ಸತ್ರಕ್ಕೆ ೧ ವ್ರಿತ್ತಿ ಪಂಚಿಕೇಸ್ವರದೇವರಿಗೆ ೧ ವ್ರಿತ್ತಿ ಎಂದು ಹಂಚಿದ್ದಾರೆ. ಇದಲ್ಲದೇ, ಪಂಚಿಕೇಸ್ವರದೇವರ ಧರ್ಮಕಾರ್ಯದ ಮೊದಲ ಹೊನ್ನು ಗದ್ಯಾಣ ೪೦ಕ್ಕೆ ಆ ಬಡ್ಡಿ ಹೊನ್ನಿನಲ್ಲಿ ಪ್ರತಿ ವರ್ಷ ೨ ಹಣವನ್ನು ತೆಗೆದುಕೊಂಡು ಧರ್ಮವನ್ನು ನಡೆಸಬೇಕೆಂದು ತಿಳಿಸಲಾಗಿದೆ. ಹೀಗೆ ಅಗ್ರಹಾರದ ಮಹಾಜನರೇ, ಆ ಗ್ರಾಮಗಳ ದೇವಾಲಯಗಳ ಚಟುವಟಿಕೆಗಳ ಹೊಣೆಹೊತ್ತು ನಿರ್ವಹಿಸಿದ್ದನ್ನು ಈ ಶಾಸನ ತಿಳಿಸುತ್ತಿದೆ. ಹೀಗೆ ಹೊಯ್ಸಳರ ಕಾಲದಲ್ಲಿ ಅಗ್ರಹಾರಗಳ ವ್ಯವಸ್ಥೆ ಸುಗಮವಾಗಿ ಸಾಗಿದ್ದನ್ನು ಕಾಣುತ್ತೇವೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ವಿಜಯನಗರದ ಅರಸರ ಕಾಲದ ಅಗ್ರಹಾರಗಳ ಬಗೆಗೆ ಗಮನಿಸಿದರೆ, ಶೃಂಗೇರಿ ಮಠದ ತಾಮ್ರ ಶಾಸನವೊಂದು (ಶೃ.೩೨) ಕ್ರಿ.ಶ.೧೩೪೬ರಲ್ಲಿ ವಿಜಯನಗರದ ದೊರೆ ವೀರಹರಿಹರರಾಯನು ವಿದ್ಯಾರಣ್ಯ ಶ್ರೀ ಪಾದಂಗಳವರು ಪರಿಪೂರ್ಣರಾದಾಗ, ಸಿಂಗೇರಿಯ

ಗ್ರಾಮಾಶ್ರಿತ ಮಹಾಜನಗಳಿಗೆ, ಕಿಕ್ಕುಂದ ನಾಡು ಮತ್ತು ಹಗಡೂರು ಗ್ರಾಮಗಳು ಸೇರಿದಂತೆ ೫೦೦ ವರಹ ಗದ್ಯಾಣದ ಹೊನ್ನಿನ ಸ್ಥಲವನ್ನು ನೂರು ವೃತ್ತಿಗಳಾಗಿ ಮಾಡಿ, 'ವಿದ್ಯಾರಣ್ಯಪುರ'ವೆಂದು ಹೆಸರಿಸಿ ಹಂಪೆಯ ಶ್ರೀ ವಿರೂಪಾಕ್ಷ ದೇವರ ಸನ್ನಿಧಿಯಲ್ಲಿ ದಾನ ಬಿಟ್ಟದ್ದನ್ನು ತಿಳಿಸಿದೆ. ಈ ನೂರು ವೃತ್ತಿಗಳಲ್ಲಿ ಸಿಂಗೇರಿಯ ಶ್ರೀ ವಿದ್ಯಾಶಂಕದೇವರಿಗೆ, ಭಾರತೀ ರಾಮನಾಥ ದೇವರಿಗೆ, ವಿದ್ಯಾವಿಶ್ವೇಶ್ವರದೇವರಿಗೆ ಮತ್ತು ಶ್ರೀ ಜನಾರ್ಧನದೇವರಿಗೆ ತಲಾ ೧ ವೃತ್ತಿಯನ್ನು ಬಿಟ್ಟಿದ್ದು, ದೇವಸ್ಥಾನಗಳಿಗೆ ೪ ವೃತ್ತಿ ಎಂದು ತಿಳಿಸಿದೆ. ಇದರಿಂದ ಅಗ್ರಹಾರದ ವೃತ್ತಿಗಳಲ್ಲಿ ದೇವದೇಯ, ಬ್ರಹ್ಮದೇಯ ಎರಡರ ಭಾಗವು ಇರುತಿತ್ತೆಂದು ತಿಳಿಯುತ್ತದೆ.

ಶೃಂಗೇರಿ ಮಠದ ತಾಮ್ರ ಶಾಸನವೊಂದು (ಶೃ.೩೩) ಕ್ರಿ.ಶ. ೧೩೯೩ರಲ್ಲಿ ವಿಜಯನಗರದ ರಾಜ ಇಮ್ಮಡಿ ಹರಿಹರ ರಾಯನ ದಾನದ ಮಹತ್ವವನ್ನು ತಿಳಿಸಿದ್ದು, ಇವನು ಆರಂಗ ರಾಜ್ಯದ ಕಾರಕಳ ಸೀಮೆಯಲ್ಲಿರುವ ಭಾನುವಳ್ಳಿ ಗ್ರಾಮವನ್ನು ಯಜುರ್ವೇದದ ಆ ಪಸ್ತಂಭ ಸೂತ್ರಕ್ಕೆ ಸೇರಿದ ಕೌಶಿಕಗೋತ್ರದ ವೇದಾಂತನಿಷ್ಠರಾದ ಮಾಧವೇಂದ್ರರಿಗೆ ದಾನ ನೀಡಿದ್ದನ್ನು ತಿಳಿಸಿದೆ. ಇವರು ಭಾನುವಳ್ಳಿ ಗ್ರಾಮವನ್ನು ನಾನಾವೃತ್ತಿಗಳಾಗಿ ಮಾಡಿ ವೇದ ಪಾರಂಗತರಾದ ಬ್ರಾಹ್ಮಣರಿಗೆ ಹಂಚಿದ್ದಾರೆ. ಈ ಅಗ್ರಹಾರವು ಇಪ್ಪತ್ತು ವೃತ್ತಿಗಳ ಅಗ್ರಹಾರವೆಂದು ಪ್ರಸಿದ್ಧವಾಗಿತ್ತೆಂದು ತಿಳಿಸಿದೆ.

ಇದರಂತೆ ಬೊಮ್ಮಲಾಪುರದ ಶಿಲಾಶಾಸನವು (ಕೊಪ್ಪ.೧೮) ೨ನೇ ಹರಿಹರರಾಯನ ಕಾಲದಲ್ಲಿ ವಿಠ್ಠಣ ಒಡೆಯರು ಅರಗದ ರಾಜ್ಯವನ್ನು ಆಳುತ್ತಿದ್ದಾಗ, ತಮಗೆ ಸೇರಿದ ಮೆಣಸೂರ ಭಾಗವನ್ನು ಅಗ್ರಹಾರವಾಗಿಸಿ 'ಬೊಮ್ಮಂಣ್ಣಪುರ'ವೆಂದು ಹೆಸರಿಸಿ ದಾನಬಿಟ್ಟರೆಂದು ದಾಖಲಿಸಿದೆ. ಈ ಅಗ್ರಹಾರದ ೫೪ ವೃತ್ತಿಗಳಲ್ಲಿ ೪ ವೃತ್ತಿಗಳನ್ನು ದೇವಾಲಯಗಳಿಗೆ ಬಿಡಲಾಗಿದೆ. ಹಾಲಮತ್ತೂರಿನ ತಾಮ್ರ ಶಾಸನವು (ಕೊಪ್ಪ.೩೮) ಕ್ರಿ.ಶ. ೧೪೦೪ರಲ್ಲಿ ಇಮ್ಮಡಿ ಬುಕ್ಕ ರಾಯನು ಕಾರಕಳ ಸೀಮೆಯ ಬೆಲ್ಲಾರ ಸ್ಥಳದಲ್ಲಿನ ತುಂಗಾ ನದಿ ತಟದಲ್ಲಿರುವ ಹಾಲಮತ್ತೂರು ಗ್ರಾಮವನ್ನು 'ಷಕರೀಪುರ' ವೆಂದು ಹೆಸರಿಸಿ, ೫೨ ವೃತ್ತಿಗಳ ಅಗ್ರಹಾರವನ್ನಾಗಿ ಮಾಡಿ ನಾನಾಗೋತ್ರದ ನಾನಾಶಾಖೆಯ ವೈದಿಕ ಬ್ರಾಹ್ಮಣರಿಗೆ ದಾನ ನೀಡಿದ್ದನ್ನು ದಾಖಲಿಸಿದೆ. ಈ ಅಗ್ರಹಾರದ ದಾನದಲ್ಲೂ ೪ ವೃತ್ತಿಗಳನ್ನು ದೇವಕಾರ್ಯಕ್ಕೆಂದು ಬಿಡಲಾಗಿದೆ. ಇದರಿಂದ ಅಗ್ರಹಾರ ರಚನೆಯಾದಾಗ, ಅಲ್ಲಿದ್ದ ದೇವಾಲಯಗಳಿಗೂ, ಬ್ರಾಹ್ಮಣರಿಗೆ ನೀಡಿದ ವೃತ್ತಿಗಳಲ್ಲಿ ಪಾಲಿರುತ್ತಿತ್ತೆಂದು ತಿಳಿಯುತ್ತದೆ.

ಕಡೂರು ತಾಲೂಕಿನ ಮಚ್ಚೇರಿ ಗ್ರಾಮದ ತಾಮ್ರ ಶಾಸನವು (ಕ.೧೭೫) ಕ್ರಿ.ಶ. ೧೪೮೯ರಲ್ಲಿ ಇಮ್ಮಡಿ ದೇವರಾಯನು ಸೂರ್ಯಗ್ರಹಣದಂದು ತುಲಾಭಾರ, ಬ್ರಹ್ಮಾಂಡ ಮಹಾದಾನಗಳ ಅಂಗವಾಗಿ ಬಾಸೂರು ಮತ್ತು ಚಿಕ್ಕ ಬಾಸೂರು ಗ್ರಾಮಗಳನ್ನು ಸೇರಿಸಿ. 'ಅಭಿನವ ಪ್ರತಾಪ ದೇವರಾಯಪುರ'ವೆಂಬ ೫೩ ವೃತ್ತಿಗಳುಳ್ಳ, ೩೩೦ ವರಾಹ ಗದ್ಯಾಣ ಆದಾಯವುಳ್ಳ 'ಅಗ್ರಹಾರ'ವನ್ನು ದಾನ ಮಾಡಿದ್ದನ್ನು ತಿಳಿಸಿದೆ. ಇದನ್ನು ದೇವರಾಯನು ಪಂಪಾಕ್ಷೇತ್ರದ ವಿರೂಪಾಕ್ಷ ದೇವರ ಸನ್ನಿಧಿಯಲ್ಲಿ 'ಸರ್ವನಮಸ್ಯ ಅಗ್ರಹಾರ'ವನ್ನಾಗಿಸಿ ದಾನ ನೀಡಿದ್ದನ್ನು ತಿಳಿಸಿದೆ. ಕ್ರಿ.ಶ.೧೪೧೦ರ ಶಾಸನವು (ಶೃ.೭೯) ೨ನೇ ದೇವರಾಯನು ವೇದಾಂತಾಚಾರ್ಯನೂ, ವಿಷ್ಣುಪೂಜಾ ಪರಾಯಣನೂ, ಆಪಸ್ತಂಭ ಸೂತ್ರದ ಶ್ರೀವತ್ಸ ಗೋತ್ರದ ಮಾಯಣಾಚಾರ್ಯನಿಗೆ ಆರಂಗವೇಟೆಯಲ್ಲಿನ ವೋಟಗಾರು ಗ್ರಾಮವನ್ನು 'ದೇವರಾಯನಪುರ'ವೆಂದು ಹೆಸರಿಟ್ಟು ಅಗ್ರಹಾರವಾಗಿ ಮಾಡಿ ದಾನ ನೀಡಿದ್ದನ್ನು ಕೊಡತಲೆಯೆ ತಾಮ್ರ ಶಾಸನ ತಿಳಿಸಿದೆ.

ಕ್ರಿ.ಶ. ೧೪೩೨ರಲ್ಲಿ ಇಮ್ಮಡಿ ದೇವರಾಯನು ಹೊಂನಾಪುರ ರಾಜ್ಯದ 'ಮಂಜುಗುಣಿ' ಗ್ರಾಮವನ್ನು ಶ್ರೀರಾಮಚಂದ್ರ ದೇವರ ನೈವೇದ್ಯಕ್ಕೆಂದು ಆನಂದವಾಲಾ ಪರಿಷತ್ತಿಗೆ ಸೇರಿದ ಶ್ರೀ ಪುರುಷೋತ್ತಮಾರಣ್ಯ ಯತಿಗಳಿಗೆ ದಾನ ನೀಡಿದ್ದು, ಇದು 'ದೇವ ಬೋಗ್ಯ'ವೆನ್ನಿಸಿದರೂ, ಈ ಪ್ರದೇಶದಲ್ಲಿ ಯತಿಗಳೂ, ಅವರ ವೇದಾಭ್ಯಾಸಿ ಶಿಷ್ಯರೂ ನೆಲೆಸಿದ್ದ ಅಗ್ರಹಾರವೇ ಆಗಿತ್ತು. ಈ ಅಗ್ರಹಾರಕ್ಕೆ ಹೊಸ ಹೆಸರನ್ನು ಸೂಚಿಸಿಲ್ಲವಾದರೂ ಶಾಸನಾಂತ್ಯದಲ್ಲಿ 'ಸೀಮಾ ನೋಸ್ಯ ಅಗ್ರಹಾರಸ್ಯ ಲಿಖ್ಯಂತೇ ದೇಶಭಾಷಾಯ' ಎಂದಿದ್ದು ಇದು ಅಗ್ರಹಾರವೇ ಎಂದು ಸ್ಪಷ್ಟಪಡಿಸಿದೆ (ಶೃ.೩೪).

ಶೃಂಗೇರಿಯ ಹರಾವರಿ ಗ್ರಾಮದ ಶಾಸನವು (ಶೃ.೪೮) ಕ್ರಯದಾನದ ಶ್ರೋತ್ರುಗುತ್ತಿಗೆಯ ಪತ್ರ ಶಾಸನವಾಗಿದ್ದು, ವಿಶೇಷವಾಗಿ ಗಮನ ಸೆಳೆಯುತ್ತಿದೆ. ಕ್ರಿ.ಶ. ೧೫೧೮ರ ಈ ಶಾಸನವು ಬ್ರಾಹ್ಮಣರು ಪಡೆದಿದ್ದ ವೃತ್ತಿ ಭೂಮಿಯನ್ನು ಮಲ್ಲಣ್ಣನವರಿಗೆ ಶ್ರೋತ್ರು ಗುತ್ತಿಗೆಯಾಗಿ ಕೊಟ್ಟಿದ್ದನ್ನು ತಿಳಿಸುತ್ತಿದ್ದು, ಅಗ್ರಹಾರದ ಬ್ರಾಹ್ಮಣರಿಗೆ ಸಂಕಟ ಒದಗಿದಾಗ ತಮ್ಮ ಪಾಲಿನ ಭೂಮಿಯನ್ನು ಗುತ್ತಿಗೆಗೆ ಕೊಡುತ್ತಿದ್ದುದನ್ನು, ಆ ಭೂಮಿಯ ಸಿದ್ಧಾಯವನ್ನು ಗುತ್ತಿಗೆದಾರನೇ ನೀಡುತ್ತಿದ್ದುದನ್ನು ತಿಳಿಸುತ್ತದೆ. ಇಂಥ ಕ್ರಯಪತ್ರ ಅಥವಾ ಗುತ್ತಿಗೆ ಪತ್ರ ಸಿದ್ಧವಾದಾಗ ಆ ಪತ್ರಕ್ಕೆ ಅಗ್ರಹಾರದ ಮಹಾಜನರ ಒಪ್ಪವೂ ಇರುತ್ತಿತ್ತೆಂದು ತಿಳಿದುಬರುತ್ತದೆ (ಶೃ.೪೯).

ಅಗ್ರಹಾರವೊಂದು ಅಪರೂಪಕ್ಕೆ 'ಗ್ರಾಮದಾನ'ವಾಗಿ ಪರಿಣಮಿಸಿದ ಸಂಗತಿಯು ಕೆಳಬೆಳ್ಳೂರು ಶಾಸನದಿಂದ (ಶೃ.೫೨) ತಿಳಿಯುತ್ತಿದೆ. ಕ್ರಿ.ಶ. ೧೫೨೪ರ ಈ ಶಾಸನವು ಯತಿಗಳಾದ ಶ್ರೀ ರಾಮಚಂದ್ರಭಾರತಿ ಒಡೆಯರು ಕೆಳಬೆಳ್ಳೂರಿನ ಮೂಲಿಗಳಾದ ಕಜ್ಜರಸ, ಸಂಜಯ,

ಮೊಂದಮ್ಮೆಯಿಂದಾಗಿ ಶ್ರೀ ಮಠಕ್ಕೆ ಸಲ್ಲಬೇಕಾದ ಸಿದ್ಧಾಯವು ಸಲ್ಲದೇ ಉಳಿದುಬಂದು ನಿಮಿತ್ತರಾಗಿ, ಆ ಗ್ರಾಮವನ್ನು, ಕಾರಕಳದ ಭಾರದ್ವಾಜಗೋತ್ರ, ಋಕ್‌ಶಾಖೆಯ ಸೂರಪ್ಪ ಸೇನಬೋವರಿಗೆ ವಹಿಸಿಕೊಡುತ್ತಾರೆ. ಆ ಗ್ರಾಮದ ಮೂಲಿಗಳು ಭೂಮಿಯ ಕೆಲಭಾಗವನ್ನು ಅಡವಿಟ್ಟು ಹಣವನ್ನು ಪಡೆದಿದ್ದು, ಆ ಹಣವನ್ನೆಲ್ಲ ಸೂರಪ್ಪನವರ ಕೈಯಿಂದ ಕೊಡಿಸಿ, ಮೂಲಿಗರಿಗೂ ಸೂರಪ್ಪನವರಿಂದ ಉಮ್ಮಗೆರೆಯನ್ನು ಕೊಡಿಸಿ ಮೂಲಿಗರಿಂದಲೇ ಸೂರಪ್ಪನವರಿಗೆ ಅಗ್ರಹಾರವನ್ನು ದಾನವಾಗಿ ಧಾರೆ ಎರೆದು ಕೊಡಿಸುತ್ತಾರೆ. ಈ ದಾನದಲ್ಲೂ 'ದೇವಸ್ವದ' ಭಾಗವನ್ನು ಸೂಚಿಸಿದೆ. ಈ ಶಾಸನಾಂತ್ಯದಲ್ಲಿ ರಾಮಚಂದ್ರ ಭಾರತಿಯತಿಗಳ ಒಪ್ಪ, ಶ್ರೀ ವಿದ್ಯಾಶಂಕರ ಎಂಬ ಒಪ್ಪವಿದೆ. ಈ ಶಾಸನವು ಹಿಂದೆ ನಶಿಸುತ್ತಿದ್ದ ಅಗ್ರಹಾರಗಳನ್ನು ಹೀಗೆ ಸರಿಪಡಿಸಿ ಮತ್ತೆ ಅಗ್ರಹಾರ ನಿರ್ವಹಣೆ ಮಾಡುತ್ತಿದ್ದರೆಂದು ತಿಳಿಸುವ ಶಾಸನವಾಗಿದೆ.

ವಿಜಯನಗರೋತ್ತರ ಕಾಲದ ಶಾಸನಗಳನ್ನು ಗಮನಿಸಿದರೆ ಶೃಂಗೇರಿಯ ಶಾಸನವೊಂದು (ಶೃ.೨) ಕ್ರಿ.ಶ. ೧೯೧೩ರಲ್ಲಿ ಶೃಂಗೇರಿಯ ಶ್ರೀ ನರಸಿಂಹ ಭಾರತಿ ಸ್ವಾಮಿಗಳು, ಅವರ ಗುರುಗಳು ಪೂಜಿಸುತ್ತಿದ್ದ ಶ್ರೀ ನೃಸಿಂಹೇಶ್ವರದೇವರ ಪ್ರೀತ್ಯರ್ಥವಾಗಿ ಶ್ರೀ ನರಸಿಂಹಪುರವೆಂಬ ಹೆಸರಿನ ಅಗ್ರಹಾರವನ್ನು, ಪಶ್ಚಿಮವಾಹಿನಿಯಾದ ತುಂಗಭದ್ರಾ ತೀರದ ವಸಿಷ್ಠಾಶ್ರಮದಲ್ಲಿ ನಿರ್ಮಿಸಿ, ನಾನಾಗೋತ್ರದ, ನಾನಾಸೂತ್ರದ ಅಶೇಷ ವಿದ್ವನ್ಮಹಾಜನರಿಗೆ ಸರ್ವಸಮಸ್ತವಾಗಿ ಕೊಟ್ಟ 'ಧರ್ಮಶಾಸನ'ವೆಂದು ಉಲ್ಲೇಖಿಸಿದೆ. ಈ ಶಾಸನದಲ್ಲಿ ಸು. ೨೦ ಜನರಿಗೆ ಬಿಟ್ಟು ದಾನವಿದ್ದು ಒಟ್ಟು ಭತ್ತ ಖಂಡುಗ ೨೦, ಅಡಕೆಮರ ೫೫೦೦ನ್ನು ಹಂಚಿಕೊಡಲಾಗಿದೆ. ಈ ದಾನದ ವಿವರವೂ ಆ ಅಗ್ರಹಾರದಲ್ಲಿ ನೆಲೆಸಿದ ವಿಪ್ರರ ಆರ್ಥಿಕ ಭದ್ರತೆಯನ್ನು ಸೂಚಿಸುತ್ತಿದೆ.

ಶೃಂಗೇರಿಯ ಮಠದ ತಾಮ್ರ ಶಾಸನವೊಂದು (ಶೃ.೩೬) ಕೆಳದಿಯ ವೀರಭದ್ರ ವೆಂಕಣ್ಣನು ಕಟ್ಟಿಸಿದ್ದ ಛತ್ರವನ್ನು ಶ್ರೀ ಸಚ್ಚಿದಾನಂದ ಭಾರತಿ ಸ್ವಾಮಿಗಳಿಗೆ ಒಪ್ಪಿಸಿ, ಮಠದ ದೇವಪೂಜೆ, ಅಮೃತಪಡಿ ನಂದಾದೀವಿಗೆಗೆಂದು ಬಿಡಿಸಿಟ್ಟ ಕೊಪ್ಪ ಗ್ರಾಮವನ್ನು ಬಿಟ್ಟದ್ದನ್ನು ತಿಳಿಸಿದೆ. ಈ ಶಾಸನವು ನಿತ್ಯಧರ್ಮ ಛತ್ರ ನಡೆಸಲು ವಿಶ್ವನಾಥಪುರ ಅಗ್ರಹಾರದ ವೃತ್ತಿಯ ಭಾಗವಾದ ಕುಂದನೂರಿನ ಕೆಲವು ವೃತ್ತಿಗಳನ್ನು ಬಿಟ್ಟಿದನ್ನು ತಿಳಿಸಿದೆ. ಭಲ್ಲಪ ಒಡೆಯರಿಗೆ ನಾರಸಿಂಹಭಟ್ಟರಿಗೆ ಕೊಟ್ಟ ವೃತಿಗಳನ್ನು ಮಾರಬಾರದೆಂದು ತಿಳಿಸಿದೆ. ನರಸಿಂಹ ದೀಕ್ಷಿತರಿಗೆ ಕೊಟ್ಟಿದ್ದ ವೃತ್ತಿಯು, ವೃತ್ತಿವಂತರು ನಷ್ಟವಾದರಿಂದ ಅದನ್ನು ಧರ್ಮಛತ್ರಕ್ಕೆ ಬಿಟ್ಟದ್ದನ್ನು ತಿಳಿಸಿದೆ. ಇದರಿಂದ ಅಗ್ರಹಾರದ ಮಹಾಜನರು ತಮ್ಮ ಪಾಲಿನ ವೃತ್ತಿಯನ್ನು ಅನುಭವಿಸಬಹುದು ಆದರೆ ಮಾರುವಂತಿರಲಿಲ್ಲ. ಅವರ ಸಂತಾನವು ಅಳಿದರೆ ಅದು ಮತ್ತೆ ದಾನಿಗೆ ಸೇರುತ್ತಿತ್ತೆಂದು ತಿಳಿಯುತ್ತದೆ.

ಶೃಂಗೇರಿ ಮಠದ ಮತ್ತೊಂದು ತಾಮ್ರ ಶಾಸನವು (ಶೃ.೩೮) ಕ್ರಿ.ಶ. ೧೭೯೯ರದ್ದಾಗಿದ್ದು ಕೆಳದಿಯ ಸೋಮಶೇಖರ ನಾಯಕರು ಭಾರಧ್ವಾಜ ಗೋತ್ರದ ರುಕ್‌ಶಾಖೆಯ ಚೆಂನಣ್ಣನಿಗೆ ಕೊಟ್ಟ ಭೂದಾನ ಧರ್ಮಶಾಸನವಾಗಿದೆ. ಈ ಶಾಸನವು ತೀರ್ಥರಾಜಪುರದ ನದೀ ಆಚೆಯ ದಡದಲ್ಲಿನ ಮುತ್ತೂರು ಸೀಮೆಗೆ ಸೇರಿದ ಹರಳಿಹಾಲ ಮಲೆಯಾಳಮಠದ ಗ್ರಾಮದಲ್ಲಿ ತನ್ನ ತಂದೆ ವೆಂಕಟಪ್ಪಯ್ಯನು ದೇವಸ್ಥಾನ ಕಟ್ಟಿಸಿದ್ದು, ಅಲ್ಲಿ ಅವಿಮುಕ್ತೇಶ್ವರ ದೇವರು, ಬಿಂದು ಮಾಧವದೇವರ ದೇವತಾವೆಚ್ಚಕ್ಕೆಂದು ದೇವಸ್ಥಾನದ ಬಳಿಯಲ್ಲೇ ಇದ್ದ ಚಂದ್ರಶೇಖರಪುರದ ಅಗ್ರಹಾರವನ್ನು ಬರೆಸಿಕೊಟ್ಟದ್ದನ್ನು ತಿಳಿಸಿದೆ. ಇದು ದೀರ್ಘ ಶಾಸನವಾಗಿದ್ದು ಈ ಅಗ್ರಹಾರದ ಒಟ್ಟು ಆದಾಯ ಗದ್ಯಾಣ ೧೯೫, ವರಾಹಗಳು ಆರು ಹಣವನ್ನು ಕೊಟ್ಟು ಸೀಮಗೆ ವಾಮನ ಮುದ್ರೆಕಲ್ಲನ್ನು ನೆಡಿಸಿದ್ದನ್ನು ತಿಳಿಸಿದೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಸು. ೧೯ನೇ ಶತಮಾನದಿಂದ ಆರಂಭವಾಗಿರುವ ಅಗ್ರಹಾರ ದಾನ ಪದ್ಧತಿಯು ಸು. ೧೮ನೇ ಶತಮಾನದವರೆಗೆ ನಡೆದುಬಂದಿರುವುದು ಈ ಜಿಲ್ಲೆಯ ಶಾಸನಗಳಿಂದ ತಿಳಿಯುತ್ತದೆ. ಅಗ್ರಹಾರಗಳನ್ನು ಶಾಸನಗಳು– 'ಶ್ರೀ ಮದನಾದಿಅಗ್ರಹಾರ', 'ಮಹಾಅಗ್ರಹಾರ', 'ಪಿರಿಯಗ್ರಹಾರ'ವೆಂದೂ ಕರೆದಿವೆ. ಅಗ್ರಹಾರಗಳಾಗಿ ಮಾಡುವಲ್ಲಿ, ರಾಜರ ಹೆಸರನ್ನು ಸೇರಿಸಿ– 'ವಿಷ್ಣುವರ್ಧನ ಕೇಶವಾಪುರ' (ಚಿ.ಮ.೧೦೮); 'ಪ್ರತಾಪದೇವರಾಯಪುರ (ಕ.೧೭೫)ಗಳೆಂಬ ಉಲ್ಲೇಖಗಳಿರುವಂತೆ, 'ಸರಸ್ವತಿಪುರ', 'ವರಲಕ್ಷ್ಮಿನಾರಾಯಣಪುರ' (ಕ.೧೦೬), 'ಲಕ್ಷ್ಮಿನರಸಿಂಹಪುರ' (ತ.೬೬), 'ಹರಿಹರಪುರ' (ಚಿ.ಮ.೧೫೩)ಗಳೆಂದು ಹೆಸರಿಸಲಾಗಿದೆ. ಶೃಂಗೇರಿಗೆ ಸಂಬಂಧಿಸಿದಂತೆ ರೂಪಿಸಿರುವ ಅಗ್ರಹಾರಗಳು, ಯತಿಗಳ ಹೆಸರಿನೊಂದಿಗೆ ಉಕ್ತವಾಗಿದ್ದು, 'ಶ್ರೀ ವಿದ್ಯಾರಣ್ಯಪುರ' (ಶೃ.೩೨), 'ಶ್ರೀ ನರಸಿಂಹಪುರ' (ಶೃ.೨), 'ಶ್ರೀ ಸ್ವಯಂಪ್ರಕಾಶಪುರ' (ಚಿ.ಮ.೮೧) ಮುಂತಾದವನ್ನು ಗಮನಿಸಬಹುದು.

ಹೀಗೆ ಒಂದು ಜಿಲ್ಲೆಯ ಅಗ್ರಹಾರಗಳ ವಿಸ್ತೃತ ಅಧ್ಯಯನದಿಂದ ಅಂದಿನ ಕಾಲದ ಸಾಮಾಜಿಕ ಇತಿಹಾಸದ ಮಗ್ಗಲೊಂದನ್ನು ಗುರುತಿಸಲು ಸಾಧ್ಯವಾಗುತ್ತದೆ. ಈ ಕಾರಣದಿಂದ ಕರ್ನಾಟಕದ ಸಾಮಾಜಿಕ ಇತಿಹಾಸ, ಧಾರ್ಮಿಕ ಇತಿಹಾಸವನ್ನರಿಯಲು ಅಗ್ರಹಾರಗಳ ತಲಸ್ಪರ್ಶಿ ಅಧ್ಯಯನ ವನ್ನು ನಡೆಯಬೇಕಾಗಿದೆ.

[ವಿ.ಸೂ. :– ಈ ಪ್ರಬಂಧದಲ್ಲಿ ಬಳಸಿರುವ ಶಾಸನಗಳನ್ನು ಪರಿಷ್ಕೃತ ಎಪಿಗ್ರಾಫಿಯ ಕರ್ನಾಟಿಕ ಸಂಪುಟ ೧೧ ಮತ್ತು ೧೨ರಿಂದ ತೆಗೆದುಕೊಳ್ಳಲಾಗಿದೆ.]

೭೧

ದಾವಣಗೆರೆ ಜಿಲ್ಲೆಯ ಶಾಸನೋಕ್ತ ಪ್ರಾಚೀನ ಅಗ್ರಹಾರಗಳು

ಸಂತೇಬೆನ್ನೂರು ಸುಮತೀಂದ್ರ ನಾಡಿಗ್*

ದಾವಣಗೆರೆ ಜಿಲ್ಲೆಯ ಬಾಗಳಿ, ಹರಿಹರ, ಬೆಳಗುತ್ತಿ, ಬೊಮ್ಮೇನಹಳ್ಳಿ ಮುಂತಾದ ೮೦ಕ್ಕೂ ಹೆಚ್ಚು ಶಾಸನಸ್ತ ಅಗ್ರಹಾರಗಳು ಇರುವುದನ್ನು ಈವರೆಗೆ ಗುರ್ತಿಸಲಾಗಿದ್ದು, ಅವುಗಳಿಂದ ಅಂದಿನ ಧಾರ್ಮಿಕ, ಸಾಮಾಜಿಕ, ಆರ್ಥಿಕ, ರಾಜಕೀಯ ಸ್ಥಿತ್ಯಂತರಗಳನ್ನು ಗುರುತಿಸಬಹುದಾಗಿದೆ.

ಪ್ರಾಚೀನ ಕರ್ನಾಟಕದಲ್ಲಿ ವಿದ್ಯಾಪ್ರಸಾರಕ್ಕೆ ಬ್ರಹ್ಮಪುರಿಗಳು, ಘಟಿಕಾಸ್ಥಾನಗಳು. ಅಗ್ರಹಾರಗಳು ತನ್ನದೇ ಆದ ಕೊಡುಗೆ ನೀಡಿವೆ. ಇವು ತಾಪಸಿಗಳು, ವಿದ್ವಾಂಸರು, ಜ್ಞಾನಾರ್ಥಿಗಳ ಆಶ್ರಯ ತಾಣಗಳಾಗಿದ್ದು, ಇಲ್ಲಿ ಚಿರತನ ಬದುಕಿನಲ್ಲಿದ್ದ ಶಿಕ್ಷಣಾರ್ಥಿಗಳು ಕಠಿಣ ಪರಿಶ್ರಮದಿಂದ ಅಧ್ಯಯನ ಮಾಡುತ್ತಿದ್ದರು. ವಿದ್ವಾಂಸರ ಅಭಿಪ್ರಾಯದಂತೆ ರಾಜರಿಂದ ಬ್ರಾಹ್ಮಣರಿಗೆ ದಾನ ನೀಡಲ್ಪಟ್ಟ ಕರ ವಿನಾಯಿತಿ ಪಡೆದ ಗ್ರಾಮಗಳೇ ಅಗ್ರಹಾರಗಳು. ಇದನ್ನು ಪರಿಗಣಿಸಿದರೆ ಈ ಜಿಲ್ಲೆಯ ೨೦೦ ಕ್ಕೂ ಹೆಚ್ಚು ಶಾಸನಗಳಲ್ಲಿ ಅನೇಕ ಗ್ರಾಮಗಳನ್ನು ಬ್ರಾಹ್ಮಣರಿಗೆ ನಮ್ಮ ರಾಜ್ಯವನ್ನು ಆಳುತ್ತಿದ್ದ ಕದಂಬರಿಂದ ಆರಂಭಿಸಿ ಚಲುಕ್ಯ, ರಾಷ್ಟ್ರಕೂಟ, ಚಾಳುಕ್ಯ, ಹೊಯ್ಸಳ, ಸೇವುಣ, ನೊಳಂಬ, ಕಲಾಚೂರ್ಯ, ಉಚ್ಚಂಗಿ ಪಾಂಡ್ಯ, ಆಸಂಧಿಗಂಗರು, ಬೆಳಗುತ್ತಿಸಿಂಧರು, ವಿಜಯನಗರದ ಅರಸರು ಮತ್ತು ಅನೇಕ ನಾಯಕ ವಂಶದವರು ದತ್ತಿದಾನ ನೀಡುತ್ತಾ ಬಂದಿದ್ದು ತಿಳಿದುಬರುತ್ತದೆ. ರಾಜಕೀಯ ಸ್ಥಿತ್ಯಂತರಗಳ ನಡುವೆಯೂ ಬಹಳಕಾಲ ಈ ಅಗ್ರಹಾರಗಳ ಅಸ್ಥಿತ್ವ ಉಳಿದುಕೊಂಡು ಬಂದಿರುವುದನ್ನು ನಾವು ಕಾಣಬಹುದಾಗಿದೆ. ಈ ಅಗ್ರಹಾರಗಳಿಂದ ಬ್ರಾಹ್ಮಣರು ತಮ್ಮ ಜೀವನವನ್ನು ಶಾಂತಿ, ನೆಮ್ಮದಿಯಿಂದ ಮುಂದುವರೆಸಿಕೊಡು ಬರುತ್ತಿದ್ದರು, ನಂತರ ರಾಜಾಶ್ರಯ ತಪ್ಪಿದಮೇಲೆ ಈ ದತ್ತಿ ದಾನಗಳು. ಇನಾಂಗಳು ಕೈತಪ್ಪಿದ ಪರಿಣಾಮ ಇವರೆಲ್ಲಾ ತಮ್ಮ ಮೊದಲಿನ ವೇದಶಾಸ್ತ್ರ ಪುರಾಣ. ಪ್ರವಚನ ಕೈಂಕರ್ಯ ಬಿಟ್ಟು ವ್ಯವಸಾಯ ಮತ್ತಿತರ ವೃತ್ತಿ ನಡೆಸುತ್ತಿರುವುದನ್ನು ಈಗ ನಾವು ಕಾಣಬಹುದಾಗಿದೆ.

ಅಗ್ರಹಾರಗಳನ್ನು ಪ್ರಾಚೀನತೆ ಆಧಾರದ ಮೇಲೆ ಅನಾದಿ ಅಗ್ರಹಾರ, ಜನಮೇಜಯದತ್ತಿ ಅಗ್ರಹಾರ, ಹರಿಶ್ಚಂದ್ರದತ್ತಿ ಅಗ್ರಹಾರ. ಪರಮೇಶ್ವರದತ್ತಿ ಅಗ್ರಹಾರ. ಬ್ರಹ್ಮದತ್ತಿ ಅಗ್ರಹಾರ ಮುಂತಾಗಿ ಗುರುತಿಸಿರುವುದನ್ನು ಕಾಣಬಹುದಾಗಿದೆ. ಇದಲ್ಲದೆ ಇವುಗಳನ್ನು ಬ್ರಹ್ಮಪುರಿ. ಶಿವಪುರಿ, ವಿಷ್ಣುಪುರಿ, ಧರ್ಮಪುರಿ ಮುಂತಾಗಿ ವಿಭಾಗಿಸಿರುವುದನ್ನು ಗುರುತಿಸಬಹುದಾಗಿದೆ.

ದಾವಣಗೆರೆಯ ಜಿಲ್ಲೆಯ ಅಗ್ರಹಾರ ಶಾಸನಗಳಲ್ಲಿ ಹರಪನಹಹಳ್ಳಿ ತಾಲೂಕು ಬಾಗಳಿಯಲ್ಲಿ ಇರುವ ಶಕ ೮೭೮ ನೇ ನಳ ಸಂವತ್ಸರದ ಉತ್ತರಾಯಣ ಸಂಕ್ರಾತಿಯಂದು (೧೪-೧-೯೫೭) ಹಾಕಿಸಿರುವ ಶಾಸನವೇ ಅತಿ ಪುರಾತನ ಶಾಸನವಾಗಿದೆ. ಇದನ್ನು ರಾಷ್ಟ್ರಕೂಟ ದೊರೆ ಕನ್ನರದೇವನ ಕಾಲದಲ್ಲಿ ಅವನ ಮಹಾಸಾಮಂತ ರೊಟ್ಟಯ್ಯ ಮಾಸವಾಡಿ-೧೪೦, ಕೋಗಳಿ-೫೦೦ ಮತ್ತು ಕುಕ್ಕನೂರು-೩೦ ಆಳುತ್ತಿದ್ದಾಗ ಹಾಕಿಸಿದ್ದು, ಇದರಿಂದ ಬಾಗಳಿ ಊರೊಡೆಯ ಪಶುಪತಿ ಭಟ್ಟರಿಗೆ ಎಲ್ಲಾ ತೆರಿಗೆಯನ್ನೂ ದಾನ ಮಾಡಿರು ವುದನ್ನು ತಿಳಿಸುತ್ತದೆ. ಇದರಿಂದ ಬಾಗಳಿಯೇ ಈಗ ಗುರುತಿ ಸಿರುವ ಜಿಲ್ಲೆಯ ಅತಿ ಪ್ರಾಚೀನ ಅಗ್ರಹಾರವಾಗಿದ್ದು, ಅಲ್ಲಿರುವ ೬೦ ಕ್ಕೂ ಹೆಚ್ಚು ಶಾಸನಗಳಲ್ಲಿ ಅದನ್ನು ಹರಿಶ್ಚಂದ್ರದತ್ತಿ ಅಗ್ರಹಾರವೆಂದು ಉಲ್ಲೇಖಿಸಲ್ಪಟ್ಟಿದೆಯಲ್ಲದೆ ಬಾಳ್ಗುಳಿ ಶೇಷಮಹಾಜನರಿಗೆ ಕೊಟ್ಟ ದತ್ತಿದಾನದ ವಿವರ ತಿಳಿಸುತ್ತವೆ. ಇಲ್ಲಿರುವ ಶಾಸನಗಳು ಕಲಿದೇವರಗಲ್ಲದೆ ಅಲ್ಲಿನ ಸೋಮನಾಥ. ಕೇಶವ. ಮಲ್ಲಿಕಾರ್ಜುನ, ನಿಲೇಶ್ವರ, ಸೂರ್ಯನಾರಾಯಣ, ನಾರಸಿಂಹ ದೇವರ ಹೆಸರಿನಲ್ಲಿ ಪ್ರಮುಖ ಮಹಾಜನರ ಸಮ್ಮುಖದಲ್ಲಿ ದತ್ತಿ ಬಿಟ್ಟಿರುವುದನ್ನು ತಿಳಿಸುತ್ತವೆ. ಇವುಗಳಲ್ಲಿ ಹೆಚ್ಚಿನವು ಉಚ್ಚಂಗಿಪಾಂಡ್ಯರ ಕಾಲದ್ದಾಗಿವೆ. ಇಲ್ಲಿ ಗಮನಿಸಬೇಕಾದ ಇನ್ನೊಂದು ಪ್ರಮುಖ ಅಂಶವೆಂದರೆ ಇಲ್ಲಿ ಹೆಚ್ಚು ದಾನ ಪಡೆದ ವ್ಯಕ್ತಿಗಳು ಕಾಳಾಮುಖ-ಪಾಶುಪಥ ಪಂಥಕ್ಕೆ ಸೇರಿದ ವ್ಯಕ್ತಿಗಳಾಗಿದ್ದಾರೆ. ಕಾಳಮುಖ ಪಾಶುಪತರು ತಮ್ಮ ವಿದ್ಯಾ ಅನುಷ್ಠಾನವನ್ನು ಹೆಚ್ಚಾಗಿ ಸ್ಮಶಾನದಲ್ಲಿ ಮಾಡುತ್ತಿದ್ದುದಾಗಿ ಹೇಳಲಾಗುತ್ತದೆ. ರಾಜಾ ಸತ್ಯಹರಿಶ್ಚಂದ್ರ ಕೆಲಕಾಲ ಸ್ಮಶಾನ ಕಾಯ್ದುದನ್ನು ಪುರಾಣಗಳು ಉಲ್ಲೇಖಿಸುತ್ತವೆ. ಅದಕ್ಕೂ ಇಲ್ಲಿನ ಶಾಸನದಲ್ಲಿ ಉಲ್ಲೇಖಿಸಿರುವ ಹರಿಶ್ಚಂದ್ರದತ್ತಿ ಎಂಬ ಉಲ್ಲೇಖಕ್ಕೂ ಏನಾದರೂ ಸಂಬಂಧವಿದೆಯೇ ಎಂಬುದು ತಿಳಿಯಬೇಕಿದೆ.

* ವಿಶ್ರಾಂತ ಪತ್ರಕರ್ತರು, ಸಂತೇಬೆನ್ನೂರು, ದಾವಣಗೆರ ಜಿಲ್ಲೆ-೫೭೭೫೫೨.

ಜಿಲ್ಲೆಯ ಬಹಳಷ್ಟು ಅಗ್ರಹಾರದ ದಾನಶಾಸನಗಳನ್ನು ಕ್ರಿಯಾಶಕ್ತಿ ಪಂಡಿತರು, ಜ್ಞಾನಶಕ್ತಿ ಪಂಡಿತರು, ಸಕಳೇಶ್ವರ ಪಂಡಿತರು, ಚಂದ್ರಾಭರಣ ಪಂಡಿತರು, ಲೋಕಾಭರಣ ಪಂಡಿತರು, ಸರ್ವೇಶ್ವರ ಪಂಡಿತರು, ರುದ್ರಶಕ್ತಿ ಪಂಡಿತರು, ವಾಮಶಕ್ತಿ ಪಂಡಿತರು, ತೇಜೋಸಿಧಿ ಪಂಡಿತರು, ಧ್ಯಾನಶಕ್ತಿ ಪಂಡಿತರು, ವಿಮಳಶಕ್ತಿಪಂಡಿತರು, ಶಿವಶಕ್ತಿಪಂಡಿತರು, ಕೇಶವ ಪಂಡಿತರು, ಸೋಮೇಶ್ವರ ಪಂಡಿತರು ಮುಂತಾದವರಿಗೆ ಕೊಡಲ್ಪಟ್ಟಿದೆ. ಈ ಎಲ್ಲ ಬ್ರಾಹ್ಮಣರೂ ಕಾಳಮುಖ, ಪಾಶುಪಥ ಪಂಥಕ್ಕೆ ಸೇರಿದವರಾಗಿದ್ದಾರೆ. ಈ ಶಾಸನಗಳಿಂದ ಇನ್ನೊಂದು ಮುಖ್ಯವಿಚಾರ ಗಮನಸೆಳೆಯುತ್ತದೆ. ಆದರೆ ಈಗ ಇವರು ಅಸ್ತಿತ್ವದಲ್ಲಿ ಕಾಣಬಾರದಿರುವುದಕ್ಕೆ ಕಾರಣವೇನು? ಅವರು ಮುಂದೆ ಬೇರೆ ಮತಕ್ಕೆ ಮತಾಂತರಗೊಂಡರೇ ಹೇಗೆ? ಅವರೇ ಮುಂದೆ ವೀರಶೈವರಾದರೆ ಹೇಗೆ ಎಂಬ ಪ್ರಶ್ನೆ ಉದ್ಭವಿಸುತ್ತದೆ.

ಈ ದಾನ ಶಾಸನಗಳಿಂದ ಆಗ್ರಾಮದ ಪ್ರಾಚೀನ ಹೆಸರು, ಅಲ್ಲಿ ದೇವಸ್ಥಾನ ನಿರ್ಮಾಣಮಾಡಿದ ಕಾಲ, ನಿರ್ಮಿಸಿದ ರಾಜಮನೆತನ ಮತ್ತು ಅವರ ವಂಶ, ದಾನ ಪಡೆದ ವಂಶ ಇತ್ಯಾದಿ ವಿವರಗಳೂ ತಿಳಿದುಬರುತ್ತವೆ, ಅಲ್ಲದೆ ದೇವಸ್ಥಾನದ ಹೆಸರು ಬದಲಾಗಿರುವ ವಿಚಾರ ಸಹ ತಿಳಿದು ಬರುತ್ತದೆ. ಉದಾಹರಣೆಗೆ ಸೋಮನಾಥ ದೇವರು, ಪಾಂಡ್ಯ ದೇವರು, ಸರ್ವೇಶ ದೇವರು, ಸಕಳೇಶ್ವರ ದೇವರು, ಕಲಿ ದೇವರು, ಬ್ರಹ್ಮೇಶ್ವರ ದೇವರು, ಮಿಂಡೇಶ್ವರ ದೇವರು, ಯೋಗೀಶ್ವರ ದೇವರು, ಭೀಮೇಶ್ವರ ದೇವರು ಇತ್ಯಾದಿಯೆಲ್ಲಾ ಈಗ ಕೇವಲ ಕಲ್ಲೇಶ್ವರ, ಈಶ್ವರ ದೇವಸ್ಥಾನವೆಂದು ಮಾತ್ರ ಕರೆಯಲ್ಪಡುತ್ತಿವೆ. ಕೆಲವೊಂದು ದೇವಾಲಯಗಳು ಜಿನಾಲಯ ಗಳಾಗಿಯೂ, ಜಿನಾಲಯಗಳು ದೇವಾಲಯಗಳಾಗಿಯೂ ಪರಿವರ್ತಿತವಾಗಿವೆ.

ದಾವಣಗೆರೆ ತಾಲ್ಲೂಕು ಬೇತೂರು ಒಂದು ಅಗ್ರಹಾರ ವಾಗಿತ್ತೆಂದು ಅಲ್ಲಿನ ಶಾಸನಗಳು ತಿಳಿಸುತ್ತವೆ. ಅಲ್ಲಿರುವ ಸಿದ್ದೇಶ್ವರ ದೇವಸ್ಥಾನ ಮೊದಲಿಗೆ ಪಾರ್ಶ್ವನಾಥ ಜಿನಾಲಯ ವಾಗಿತ್ತೆಂದು ಅಲ್ಲಿನ ಶಾಸನ ಸ್ಪಷ್ಟಪಡಿಸುತ್ತದೆ. ಸೇವುಣ ಯಾದವ ವೀರಮಹಾದೇವರಾಯನ ಪ್ರಶಸ್ತಹಸ್ತದಲ್ಲಿ ಬಾಡಮನಹಾರ ಮಾಗಿ ಬಿಡುವಲ್ಲಿ ಲಕ್ಷ್ಮೀ ಜಿನಾಲಯಕ್ಕೆ ಹುಣಸೆಯಹಳ್ಳಿಯನ್ನು ನೀಡಿ ಶ್ರೀಪಾರ್ಶ್ವನಾಥಜಿನಾಲಯಕ್ಕೆ ಪದ್ಮಸೇನಾಭಟ್ಟಾರಕರ ಪಾದಪ್ರಕ್ಷಾಳನ ಮಾಡಿ ದಾನ ಕೊಟ್ಟಿದ್ದನ್ನು ತಿಳಿಸುತ್ತದೆ. ಇದರಿಂದ ಜೈನಬ್ರಾಹ್ಮಣರಿಗೆ ದಾನವಾಗಿ ಕೊಟ್ಟ ಸ್ಥಳಗಳು ಅಗ್ರಹಾರಗಳೆಂದು ಕರೆಯಲ್ಪಟ್ಟಿರುವುದು ಕಂಡುಬರುತ್ತದೆ.

ಕೆಲವೊಂದು ದತ್ತಿಪಡೆದ ಬ್ರಹ್ಮಪುರಿ, ಅಗ್ರಹಾರಗಳ ಹೆಸರನ್ನೂ ಈಗ ಬದಲಾಯಿಸಲಾಗಿದೆ. ಉದಾಹರಣೆಗೆ ಹರಿಹರ ತಾಲೂಕಿನ ಭಾನುವಳ್ಳಿಯ ಹಿಂದಿನ ಹೆಸರು ಲಕ್ಮೀನಾರಾಯಣಪುರ, ನಿಟ್ಟೂರಿನ ಹೆಸರು ಬಸವಸಮುದ್ರ ಎಂದೂ, ದಾವಣಗೆರೆ ತಾಲೂಕಿನ ಚಿಕ್ಕಹದಡಿಗೆ ಮುದ್ದರಂಗ ನಾಯಕಪುರ ಎಂದೂ, ಹೊನ್ನಾಳಿ ತಾಲೂಕಿನ ಕುಳಗಟ್ಟೆ ಗ್ರಾಮಕ್ಕೆ ಚೋಳಮಹಾದೇವಪುರವೆಂದೂ, ಹೊಸಕೋಟೆಗೆ ಬುಕ್ಕಸಾಗರ ಎಂದೂ, ದಾವಣಗೆರೆ ತಾಲ್ಲೂಕು ಕುಂದವಾಡಕ್ಕೆ ಅಚ್ಚುತರಾಯೇಂದ್ರ ಮಲ್ಲಾಪುರ ಎಂದೂ, ಹೊನ್ನಾಳಿ ತಾಲ್ಲೂಕಿನ ಕೃಷ್ಣಪುರಕ್ಕೆ ಕೃಷ್ಣಸಮುದ್ರ ಎಂದೂ. ಚನ್ನಗಿರಿ ತಾಲ್ಲೂಕಿನ ಮೊರಡಿಗೆ ದೇವರಾಯನದುರ್ಗ ಎಂದು ಹೆಸರಿಸಿ ಅಗ್ರಹಾರಮಾಡಿ ದಾನಕೊಡಲಾಗಿದೆ. ಆದರೆ ಈಗ ಆ ಅಗ್ರಹಾರಗಳ ಹೆಸರು ಚಲಾವಣೆಯಲ್ಲಿ ಇರುವುದಿಲ್ಲ.

ಜಿಲ್ಲೆಯ ಹರಿಹರ ಅನಾದಿ ಅಗ್ರಹಾರವೆಂದೇ ಗುರುತಿಸಲ್ಪಟ್ಟಿದೆ. ಇಲ್ಲಿರುವ ಬಹಳಷ್ಟು ಶಾಸನಗಳು ಅಲ್ಲಿನ ಹರಿಹರ ದೇವಸ್ಥಾನದ ಪೂಜಾ ಕೈಂಕರ್ಯ, ಧೂಪ, ದೀಪ, ನೈವೇದ್ಯ, ಅನ್ನದಾನ, ವಿದ್ಯಾದಾನಕ್ಕಾಗಿ ಬ್ರಾಹ್ಮಣರಿಗೆ ಭೂಮಿ, ಗ್ರಾಮ ದತ್ತಿದಾನ ನೀಡಿರುವುದನ್ನು ಉಲ್ಲೇಖಿಸುತ್ತವೆ. ಅಲ್ಲಿ ದಾನಪಡೆದ ಅಗ್ರಹಾರದ ಬ್ರಾಹ್ಮಣರು ಕೇವಲ ಪೂಜೆ ಪುನಸ್ಕಾರ, ವೇದಾಧ್ಯಯನ, ಪುರಾಣ, ಪುಣ್ಯಕಥೆ ಹೇಳುವುದಕ್ಕೆ ಮಾತ್ರ ಸೀಮಿತವಾಗದೆ, ತಮಗೆ ದೊರೆತ ಭೂ ದಾನದ ಜಮೀನುಗಳಿಗೆ ನೀರಾವರಿ ವ್ಯವಸ್ಥೆ ಕಲ್ಪಿಸುವ ಕಾರ್ಯದಲ್ಲೂ ನಿರತರಾಗಿ, ರಾಜ್ಯದ, ದೇವಾಲಯದ ಹಾಗೂ ತಮ್ಮ ಆದಾಯ ಹೆಚ್ಚಿಸಿಕೊಂಡ ಬಗ್ಗೆ ತಿಳಿಸುತ್ತದೆ. ಶಕ ೧೩೩೦ನೇ ವಿಕೃತ ಸಂವತ್ಸರದ ಭಾದ್ರಪದ ಶುದ್ಧ ೧೨ರ ವಿಜಯನಗರದ ಅರಸು ವೀರಪ್ರತಾಪ ಮಹಾದೇವರಾಯರು ಶ್ರೀ ಹರಿಹರ ದೇವರಿಗೆ, ಕ್ಷೇತ್ರ ನಿವಾಸಿಗಳದ ಮಹಾಜನರಿಗೆ ಮಾಡಿಕೊಟ್ಟ ವ್ಯವಹಾರ ನಿರ್ಣಯ ತಿಳಿಸುತ್ತಿದ್ದು, ಅಲ್ಲಿನ ಮಹಾಜನರು ತಮ್ಮ ಕೈಹಣ ಖರ್ಚು ಮಾಡಿ ಶ್ರೀ ಹರಿಹರ ದೇವರ ಸೀಮೆಯೊಳಗೆ ಹರಿಯುತ್ತಿರುವ ಹರಿದ್ರೆ ಎಂಬ ನದಿಗೆ ಅಣೆಕಟ್ಟೆ ಕಟ್ಟಿ, ದತ್ತಿ ಪಡೆದ ಭೂಮಿಗೆ ಕಾಲುವೆ ಮೂಲಕ ನೀರುಹರಿಸಿ ಭೂಮಿಯೊಳಗೆ ೨ ಭಾಗ ಹರಿಹರದ ದೇವರಿಗೆ, ಧನವಿಕ್ಕಿ ಕಟ್ಟೆಯ ತಂದ ಮಹಾಜನರಿಗೆ ಒಂದು ಭಾಗ ಕೊಡುವಂತೆ ನಿರ್ಣಯ ಮಾಡಿ, ಅವರ ವೃತ್ತಿಗೆ ತಕ್ಕಂತೆ ಸರ್ವಮಾನ್ಯವಾಗಿ ಅನುಭವಿಸಿಕೊಂಡು ಬರುವಂತೆ ತಿಳಿಸಲಾಗಿದೆ.

ಹರಿಹರದ ಶಾಸನದಲ್ಲಿ ಉಲ್ಲೇಖಿಸಿರುವ ಬ್ರಾಹ್ಮಣರ ಹೆಸರು ಮತ್ತು ಗೋತ್ರಗಳು ಸಹ ನಮ್ಮ ಗಮನ ಸೆಳೆಯುತ್ತವೆ. ಕಾವಣ್ಣ ಭಟ್ಟ, ಕಲ್ಲಿಭಟ್ಟ, ಬಸವ ಭಟ್ಟ, ಆಚಿಭಟ್ಟ, ದಶಗ್ರಂಥಿ ಭಟ್ಟ, ಬಮ್ಮಣ್ಣಭಟ್ಟ, ಚೌಡಿಭಟ್ಟ, ಮಾಯಿ ಭಟ್ಟ, ಸಿಂಗಾರಿಭಟ್ಟ, ಮಂಗಣ್ಣಭಟ್ಟ, ಸೋಯಿಭಟ್ಟ, ಕೂಚಭಟ್ಟ ಇತ್ಯಾದಿ.ಮುಂದೆ ಕಾಲಾಂತರದಲ್ಲಿ ಕಟ್ಟೆ ಹಾಳಾದರೆ, ಅದರ ರಿಪೇರಿ ವೆಚ್ಚವನ್ನೂ ೨ಪಾಲು ಹರಿಹರ ದೇವರೂ, ಒಂದು ಪಾಲು ಮಹಾಜನರೂ ನೀಡುವಂತೆ ಶಾಸನದ ಮೂಲಕ ಸೂಚಿಸಿರುವುದು ವಿಶೇಷ. ಈ ಕಾಲುವೆ ಮತ್ತೊಮ್ಮೆ ಒಡೆದಾಗ ಅದನ್ನು ಪುನಃ ನಿರ್ಮಿಸಿದ

ವಿಜಯನಗರದ ಬುಳ್ಳಪ್ಪ ಮಂತ್ರಿಗೂ. ಈ ಶಾಸನ ಬರೆದ ಉಭಯ ಭಾಷಾವಿಶಾರದ ಚಾಯಣಾಚಾರ್ಯರಿಗೂ ಗದ್ದೆಯನ್ನು ಬ್ರಾಹ್ಮಣರು ಕೊಡಮಾಡಿದ್ದನ್ನು ಶಾಸನ ಉಲ್ಲೇಖಿಸಿದೆ. ಬ್ರಹ್ಮದತ್ತಿಯ ಹರಿಹರದ ಅಗ್ರಹಾರದ ಶಾಸನಗಳಿಂದ ಅಲ್ಲಿನ ಹರಿಹರೇಶ್ವರ ದೇವಸ್ಥಾನವನ್ನು ಹೊಯ್ಸಳ ವೀರನಾರಸಿಂಹನ ಮಂತ್ರಿ ಪೊಲಾಳ್ವ ಶಕ ೧೧೪೫ ನೇ ಸ್ವಭಾನು ಸಂವತ್ಸರದ ಮಾಘ ಶುದ್ಧ ೧೧ ಬೃಹಸ್ಪತಿವಾರ ಅಂದರೆ ೨೫-೧-೧೧೨೪ ರಂದು ಪ್ರತಿಷ್ಠಾಪಿಸಿದ್ದನ್ನು ತಿಳಿಸುತ್ತದೆ. ಅಲ್ಲದೆ ಹರಿಹರದಲ್ಲಿರವ ಒಂದು ಶಾಸನ ಅಲ್ಲಿಗೆ ಸಮೀಪದ ಭಾನವಳ್ಳಿಯನ್ನು ಲಕ್ಷ್ಮೀನಾರಾಯಣಪುರ ಎಂಬ ಅಗ್ರಹಾರಮಾಡಿ ಅಲ್ಲಿ ಲಕ್ಷ್ಮೀನಾರಾಯಣ ದೇವರನ್ನು ಪ್ರತಿಷ್ಠಾಪಿಸಿದ್ದನ್ನು ತಿಳಿಸುತ್ತದೆ. ಅಲ್ಲಿಯೇ ಇರುವ ಮತ್ತೊಂದು ಶಾಸನ, ಮೈಸೂರು ಜಿಲ್ಲೆಯ ಸೋಮನಾಥಪುರದಲ್ಲಿ ಸೋಮನಾಥ ದೇವಾಲಯವನ್ನು ಶಕ ೧೧೯೦ನೇ ವಿಭವ ಸಂವತ್ಸರದ ವೈಶಾಖ ಶುದ್ಧ ಪಂಚಮಿಯಲ್ಲಿ ಅದನ್ನು ಪ್ರಸನ್ನ ಸೋಮನಾಥಪುರವೆಂಬ ಅಗ್ರಹಾರ ಮಾಡಿ ಹೊಯ್ಸಳ ವೀರನಾರಸಿಂಹನ ಮಂತ್ರಿ ನಿರ್ಮಾಣ ಮಾಡಿ ನಂತರ ಹರಿಹರ ದೇವಾಲಯದ ಪೂರ್ವದ್ವಾರ ನಿರ್ಮಿಸಿದ್ದಾಗಿ ತಿಳುಹಿಸುತ್ತದೆ. ೧೩೩೯ರಲ್ಲಿ ವಿಜಯನಗರದ ಇಮ್ಮಡಿ ಹರಿಹರನ ಮಂತ್ರಿ ಮುದ್ದದಂಡಾಧೀಶ ಚಿಕ್ಕಹದಡಿಗೆ ಮುದ್ದದಂಡನಾಯಕಪುರ ವೆಂಬುದಾಗಿ ಹೆಸರಿಟ್ಟು ಅಗ್ರಹಾರ ಮಾಡಿ ಬ್ರಾಹ್ಮಣರಿಗೆ ದಾನ ಕೊಟ್ಟಿದ್ದನ್ನು ತಿಳಿಸುತ್ತದೆ.

ಇಲ್ಲಿರುವ ಶಾಸನಗಳನ್ನು ಅವಲೋಕಿಸಿದಾಗ ಬ್ರಾಹ್ಮಣರು ಕೇವಲ ವೇದ ಪುರಾಣ ಪಠಣ, ಪುರೋಹಿತ ವೃತ್ತಿ. ದೇವರಪೂಜೆ, ಜೋತಿಷ್ಯ ವೃತ್ತಿಗಳಲ್ಲದೆ, ರಾಜಕೀಯ ವಾಗಿಯೂ ಕಾರ್ಯನಿರ್ವಹಿಸಿದ್ದು ಕಂಡು ಬರುತ್ತದೆ. ಅಲ್ಲದೆ ಮಂತ್ರಿ ಮಹೋದಯರಾಗಿ, ದಂಡಾಧಿಕಾರಿಗಳಾಗಿ, ಸೈನಿಕ ರಾಗಿಯೂ ಕಾರ್ಯನಿರ್ವಹಿಸಿ ಹೋರಾಟಕ್ಕೂ ಸೈ, ಆಡಳಿತಕ್ಕೂ ಸೈ ಎಂದು ತೋರಿಸಿಕೊಟ್ಟಿದ್ದಾರೆ. ಅಗ್ರಹಾರದ ಬ್ರಾಹ್ಮಣರ ಹೆಸರಿನಲ್ಲಿ ವೀರಗಲ್ಲುಗಳಿರುವುದೂ ವಿಶೇಷ. ಹರಿಹರ ತಾಲ್ಲೂಕಿನಲ್ಲಿ ಹರಿಹರವಲ್ಲದೆ, ಭಾನುವಳ್ಳಿ, ನಿಟ್ಟೂರು, ಜಿಗಳಿ, ದೇವರಬೆಳಕೆರೆ ಗ್ರಾಮಗಳೂ ಅಗ್ರಹಾರಗಳಾಗಿವೆ.

ಹರಪನಹಳ್ಳಿ ತಾಲ್ಲೂಕು ನೀಲಗುಂದವೂ ಜಿಲ್ಲೆಯ ಅತಿ ಪ್ರಾಚೀನ ಅಗ್ರಹಾರಗಳಲ್ಲಿ ಒಂದಾಗಿದೆ. ಇದನ್ನು ಜನಮೇ ಜಯರಾಯ ದತ್ತಿ ಅಗ್ರಹಾರವೆಂದು ಉಲ್ಲೇಖಿಸಲಾಗಿದೆ. ನೀಲಗುಂದಕ್ಕೆ ಶಾಸನದಲ್ಲಿ ನೀರ್ಗುಂದ ಎಂದು ಕರೆಯಲ್ಪಟ್ಟಿದೆ. ಅನೇಕ ವಿದ್ಯಾಪಾರಂಗತರು ಇಲ್ಲಿ ಇದ್ದರೆಂದು ಶಾಸನಗಳು ಉಲ್ಲೇಖಿಸುತ್ತವೆ. ಇಲ್ಲಿರುವ ಭೀಮೇಶ್ವರ ದೇವಸ್ಥಾನ ಜಿಲ್ಲೆಯ ಅತ್ಯಂತ ಪ್ರಾಚೀನ, ಸುಂದರ ದೇವಾಲಯವಾಗಿದೆ. ಇಲ್ಲಿರುವ ದಾನಶಾಸನಗಳು ಅಲ್ಲಿದ್ದ ಬ್ರಾಹ್ಮಣರಿಗೆ, ಅನ್ನಸತ್ರಕ್ಕೆ, ಕೆರೆಯ ಜೀರ್ಣೋದ್ಧಾರಕ್ಕೆ ದತ್ತಿಕೊಟ್ಟಿದ್ದನ್ನು ತಿಳಿಸುತ್ತವೆ. ಇದೊಂದು ಘಟಿಕಾ ಸ್ಥಾನವಾಗಿ ತ್ತೆಂದು ಹೇಳಲಾಗುತ್ತದೆ. ಹರಪನಹಳ್ಳಿ ತಾಲೂಕಿನಲ್ಲಿ ಬಾಗಳಿ, ನೀಲಗುಂದ, ಮಾಕೆರೆ, ಚಟ್ನಿಹಳ್ಳಿ, ರಾಮಘಟ್ಟ, ಹಿರೇಮೇಗಳ ಗೇರಿ, ಮಾಡಲಗೇರಿ, ಬೆಂಡೆಹಳ್ಳಿ, ಹೊಸಕೋಟೆ ಮುಂತಾದ ಅಗ್ರಹಾರಗಳಲ್ಲದೆ, ನಂದಿ ಬೇವೂರು, ಕೆರೆಗುಡಿಹಳ್ಳಿ, ಶ್ರೀನಿವಾಸ ಪುರ, ತೆಲಗಿ, ದುಗ್ಗಾವತಿ, ನಂದಿಕಂಬ, ಅಣಜಿಗೆರೆ, ಉಚ್ಚಂಗಿ ದುರ್ಗ ಸಹ ಅಗ್ರಹಾರ ಗಳಾಗಿರುವ ಸಾಧ್ಯತೆಗಳಿವೆ.

ಹೊನ್ನಾಳಿ ತಾಲ್ಲೂಕಿನ ಬೆಳಗುತ್ತಿ ಜಿಲ್ಲೆಯ ಬ್ರಹ್ಮಪುರಿ ಗಳಲ್ಲಿ ಒಂದು. ಇದರ ಸಮೀಪ ಇರುವ ತೀರ್ಥರಾಮೇಶ್ವರ ಕ್ಷೇತ್ರದಲ್ಲಿ ಸುಂದರವಾದ, ಅಪರೂಪವಾದ ೫ ಅಡಿ ಎತ್ತರದ ಚತುರ್ಮುಖ ಬ್ರಹ್ಮನ ಶಿಲಾಮೂರ್ತಿ ಇದ್ದು ಇಂದಿಗೂ ನಿತ್ಯಪೂಜೆಗೊಳ್ಳುತ್ತಿದೆ. ಇಲ್ಲಿನ ಕುರುವ, ಕುಳಘಟ್ಟೆ, ಸೌಳಂಗ, ನ್ಯಾಮತಿ, ಈಸೂರು, ಚನ್ನಾಂಬಾಪುರ ಅಗ್ರಹಾರಗಳಾಗಿದ್ದ ವೆಂದು ಅಲ್ಲಿರುವ ಶಾಸನಗಳು ತಿಳಿಸುತ್ತವೆ. ಚನ್ನಗಿರಿ ತಾಲ್ಲೂಕಿನ ಬೊಮ್ಮೇನಹಳ್ಳಿ, ಕೋಗಲೂರು, ಮಂಟರಘಟ್ಟ, ಹೊಸಹಳ್ಳಿ, ಮರಡಿ ಅಗ್ರಹಾರಗಳಗಿದ್ದು, ಹಾಲಕಾಲನಹಳ್ಳಿ ಒಂದು ಬ್ರಹ್ಮಪುರಿಯಾಗಿತ್ತೆಂದು ಅಲ್ಲಿರುವ ಶಾಸನಗಳು ಹೇಳುತ್ತವೆ. ಈ ತಾಲ್ಲೂಕಿನ ನಲ್ಕುದುರೆ ಒಂದು ಘಟಿಕಾಸ್ಥಾನವಾಗಿತ್ತೆಂದು ಹಳೇಬೀಡಿನ ಜೈನಶಾಸನದಿಂದ ತಿಳಿದುಬರುತ್ತದೆ.ಇವುಗಳಲ್ಲದೆ ಮೆದಿಕೆರೆ, ಅಸ್ತಾಪನಹಳ್ಳಿ, ಕಲ್ಕೆರೆ, ಬಸವಾಪಟ್ಟಣ, ಕಾರಿಗನೂರು, ದೊಡ್ಡಬ್ಬಿಗೆರೆ ಮುಂತಾದವು ಗಳು ಅಗ್ರಹಾರಗಳಾಗಿರುವ ಸಾಧ್ಯತೆಗಳಿವೆ.

ಜಗಲೂರು ತಾಲ್ಲೂಕು ದ್ಯಾಮವ್ವನಹಳ್ಳಿ, ಚದುರು ಗೊಳ, ಮೆದಕೇರಿಪುರ, ಬೊಮ್ಮೇನಹಳ್ಳಿ, ಕಸವನಹಳ್ಳಿ ಮುಂತಾದವು ಅಗ್ರಹಾರಗಳಾಗಿದ್ದು ಇವುಗಳಲ್ಲಿ ಹೆಚ್ಚಿನವು ಚಿತ್ರದುರ್ಗ ನಾಯಕರು ಬ್ರಾಹ್ಮಣರಿಗೆ ದಾನಕೊಟ್ಟ ಅಗ್ರಹಾರ ಗಳಾಗಿವೆ. ದಾವಣಗೆರೆ ತಾಲೂಕಿನ ಬೇತೂರು, ಕೊಡಗ ನೂರು, ಚಿಕ್ಕಬೂದಿಹಾಳು, ಕಡ್ಲೆಬಾಳು, ಮುದಹದಡಿ, ಗಂಡಮುಕ್ತೇನ ಹಳ್ಳಿ, ಮಳಲಕೆರೆ, ಬಾಡ, ದ್ಯಾಮೇನಹಳ್ಳಿ, ಕಬ್ಬೂರು, ಮಲ್ಲೇನಹಳ್ಳಿ, ಅಣಜಿ, ಹೆಮ್ಮನಬೇತೂರು ಅಗ್ರಹಾರ ಗಳೆಂದು ಶಾಸನಗಳು ಗುರ್ತಿಸಿದರೆ, ಆಲೂರು, ದೊಡ್ಡ ಮಾಗಡಿ, ಆನೆ ಕೊಂಡಗಳೂ ಅಗ್ರಹಾರಗಳಾಗಿರುವ ಸಾಧ್ಯತೆ ಗಳಿವೆ. ಚಾಳುಕ್ಯ ಕಾಲದಲ್ಲಿ ನಿರ್ಮಿತವಾದ ತ್ರೈಪುರುಷ ದೇವಾಲಯಗಳಿರುವ ಸ್ಥಳಗಳೆಲ್ಲಾ ಆಗ್ರಹಾರಗಳಾಗಿದ್ದವೆಂಬ ಅಭಿಪ್ರಾಯವಿದೆ. [ಈ ಲೇಖನವನ್ನು ಸಿದ್ಧಪಡಿಸುವಲ್ಲಿ ಎಪಿಗ್ರಾಫಿಯಾ ಕರ್ನಾಟಿಕ, ಚಿತ್ರದುರ್ಗ, ಶಿವಮೊಗ್ಗ., ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೧. ಎಂ.ಎ.ಆರ್. ಹಾಗೂ ಇತಿಹಾಸ ದರ್ಶನ ಸಂಪುಟಗಳಲ್ಲಿನ ಬರಹಗಳನ್ನು ಗಮನಿಸಲಾಗಿದೆ.]

ಹೊಳೆನರಸೀಪುರ ತಾಲ್ಲೂಕಿನ ಹೊಯ್ಸಳ ಕಾಲದ ಶಾಸನೋಕ್ತ ತೆರಿಗೆಗಳು

ಶ್ರೀ ಮಧುರಾಜ್* ಡಾ. ಹನುಮನಾಯಕ**

ಶಾಸನೋಕ್ತ ತೆರಿಗೆ ಪದಗಳ ಮೂಲಕ ಹೊಯ್ಸಳರ ಕಂದಾಯದ ವಿವಿಧ ಆಯಾಮಗಳನ್ನು ಅಧ್ಯಯನ ಮಾಡುವ ಉದ್ದೇಶದಿಂದ ಹಾಸನ ಜಿಲ್ಲೆಯ ಹೊಳೇನರಸೀಪುರ ತಾಲ್ಲೂಕಿನಲ್ಲಿ ದೊರೆತ ಹೊಯ್ಸಳರ ಆಳ್ವಿಕೆಯ ಕಾಲಾವಧಿ ಗೊಳಪಟ್ಟ ಶಾಸನಗಳಲ್ಲಿ ಉಲ್ಲೇಖಿಸಿದ ತೆರಿಗೆ ಪದಗಳನ್ನಾ ಧರಿಸಿ, ಹೊಯ್ಸಳರ ಕಂದಾಯ ಪದ್ಧತಿಯನ್ನು ಸ್ಥೂಲವಾಗಿ ಪರಿಚಯಿಸುವ ಅಧ್ಯಯನ ಇದಾಗಿದೆ. ಶಾಸನಗಳಲ್ಲಿ ಉಲ್ಲೇಖಿಸಿದ ತೆರಿಗೆ (ಶುಲ್ಕ) ಪದಗಳ ಕಾಲಘಟ್ಟ ಮತ್ತು ಪುನರಾವರ್ತನೆಯನ್ನು ಗಮನಿಸಿ ಕಂದಾಯ ಪದ್ಧತಿಯನ್ನು ವಿಮರ್ಶಿಸಿದೆ.

ಹೊಳೆನರಸೀಪುರ ತಾಲ್ಲೂಕಿನಲ್ಲಿ ಲಭ್ಯವಿರುವ ಒಟ್ಟು ನೂರ ನಲವತ್ತೈದು (೧೪೫) ಶಾಸನಗಳಲ್ಲಿ ಇಪ್ಪತ್ತೈದು (೨೫) ಶಾಸನಗಳು ಹೊಯ್ಸಳರ ಕಾಲಕ್ಕೆ ಸಂಬಂಧಿಸಿವೆ. ಇವುಗಳಲ್ಲಿ ಒಂಬತ್ತು ಶಾಸನಗಳು ಮಾತ್ರ ಕಂದಾಯ ಪದಗಳನ್ನೊಳಗೊಂಡಿವೆ. ಈ ಶಾಸನಗಳು ಸಿದ್ಧಾಯ, ಸೆಸೆ, ಅಭಾಗ್ಯತೆ, ಹಾಣ, ಕಿರುಕುಳ, ಪಟ್ಟಬದ್ಧ, ಪುತ್ರೋತ್ಸಾಹ, ಆನೆಯ ಸೇಸೆ, ಕುದುರೆಯ ಸೇಸೆ, ಕಟ್ಟಡ ಸೇಸೆ, ಸೊಲ್ಲಗೆ, ಅಳಿವು, ಅನ್ಯಾಯ, ರಾಯಸ ನಿಬಂಧಿ, ದಳವಾರ ಭಂಡಿ, ತಳವಾರದ ಭಂಡಿ, ಬಿಟ್ಟಿ, ಅಪೂರ್ವಾಯ, ಪೂರ್ವಾಯ, ಕುದುರೆಯ ಹಡಿಕೆ, ಸುಂಕ, ಮಗ್ಗ, ಪಂಚಕಾರುಕ, ಹೊಗೆವರೆ, ಕಟ್ಟುಗೂಳು, ಬಾಲವಣದೆರೆ ಮುಂತಾದ ಸುಮಾರು ೭೦ (ಎಪ್ಪತ್ತು) ತೆರಿಗೆ ಪದಗಳನ್ನೊಳಗೊಂಡಿವೆ. ಈ ಪ್ರದೇಶದಲ್ಲಿ ಸಿಕ್ಕಿರುವ ಶಾಸನಗಳು ಕ್ರಿ.ಶ. ಹನ್ನೊಂದನೆಯ ಶತಮಾನದಿಂದ ಕ್ರಿ.ಶ. ೧೩೧೦ರ ವರೆಗಿನ ಕಾಲದ್ದಾಗಿದ್ದು, ಸುಮಾರು ನಲವತ್ತೆರಡು (೪೨) ಕಂದಾಯ ಪದಗಳು ಉಲ್ಲೇಖ ಗೊಂಡಿವೆ.[೧]

ಹೊಳೆನರಸೀಪುರ ತಾಲ್ಲೂಕಿನಲ್ಲಿ ಲಭ್ಯವಿರುವ ಶಾಸನಗಳನ್ನು ಕಾಲಾನುಕ್ರಮದಲ್ಲಿ ಅಧ್ಯಯನ ನಡೆಸಿದಾಗ ಕ್ರಿ.ಶ. ೧೧ನೇ ಶತಮಾನದ ಅಥವಾ ಕ್ರಿ.ಶ. ೧೦೦೦ ದಿಂದ ೧೧೦೦ರ ವರೆಗಿನ ಶಾಸನಗಳಲ್ಲಿ ಕೇವಲ ಒಂದು ಶಾಸನವು 'ಹೆಗ್ನೆಗಡಲು' ಎಂಬ ಹಳ್ಳಿಯನ್ನು ಸಂಪೂರ್ಣವಾಗಿ ಸುಂಕ ರಹಿತವನ್ನಾಗಿಸಿದ ಮಾಹಿತಿಯನ್ನು ನೀಡುತ್ತದೆ.[೨] ಹೊಯ್ಸಳರು ಇನ್ನಷ್ಟೇ ಪ್ರವರ್ಧಮಾನಕ್ಕೆ ಬರಬೇಕಾಗಿದ್ದು, ಹೆಚ್ಚಿನ ಪರಮಾಧಿಕಾರ ಹಾಗೂ ಸಾಮ್ರಾಜ್ಯದ ವಿಸ್ತರಣೆಯು ಆಗದೇ ಇರುವುದರಿಂದ ಈ ಅವಧಿಯಲ್ಲಿ ತೆರಿಗೆ ಪದಗಳು ಹೆಚ್ಚಾಗಿ ಉಲ್ಲೇಖವಾಗದಿರುವುದಕ್ಕೆ ಮುಖ್ಯ ಕಾರಣ ವಾಗಿರಬಹುದು.

ಕ್ರಿ.ಶ. ೧೨ನೇ ಶತಮಾನದ ಹೊಯ್ಸಳರ ಶಾಸನಗಳನ್ನು ಗಮನಿಸಿದರೆ ಯಾವುದೇ ತೆರಿಗೆ ಪದಗಳ ಉಲ್ಲೇಖಿತ ಶಾಸನಗಳು ಕಾಣಸಿಗುವುದಿಲ್ಲ. ಕ್ರಿ.ಶ. ೧೧೦೦ರಿಂದ ೧೧೫೦ರ ವರೆಗೆ ಬಹುಪಾಲು ರಾಜ್ಯಾಡಳಿತ ವನ್ನು ನಡೆಸಿದ್ದು, ಪ್ರಖ್ಯಾತ ದೊರೆಯಾದ ಹೊಯ್ಸಳ ವಿಷ್ಣುವರ್ಧನ ತನ್ನ ಆಳ್ವಿಕೆಯಲ್ಲಿ ಕಾವೇರಿ ನದಿ ತೀರದ ಪ್ರದೇಶಗಳನ್ನು ಗೆದ್ದುಕೊಂಡು ಆರ್ಥಿಕ ಸಾಮರ್ಥ್ಯವನ್ನು ಹೆಚ್ಚಿಸಿಕೊಂಡಿದ್ದ[೩]. ಆತನಿಗೆ ತನ್ನ ಪ್ರಜೆಗಳ ಮೇಲೆ ತೆರಿಗೆ ಹೊರೆಯನ್ನು ಹೊರಿಸಿ, ಸಂಪತ್ತನ್ನು ಕ್ರೋಢೀಕರಿಸುವ ಪ್ರಮೇಯ ಇಲ್ಲವಾದ್ದರಿಂದ ಈ ಅವಧಿಯ ಶಾಸನಗಳಲ್ಲಿ ತೆರಿಗೆ ಪದಗಳು ಕಾಣಸಿಗುವು ದಿಲ್ಲ. ಕ್ರಿ.ಶ. ೧೧೫೦ರಿಂದ ೧೨೦೦ರವರೆಗಿನ ಶಾಸನ ಗಳಲ್ಲೂ ತೆರಿಗೆ ಪದಗಳು ಗಮನಕ್ಕೆ ಬರುವುದಿಲ್ಲ. ಈ ಕಾಲಾವಧಿಯಲ್ಲಿ ಇಮ್ಮಡಿ ಬಲ್ಲಾಳನು ರಾಜ್ಯವನ್ನು ಸ್ವತಂತ್ರ ಗೊಳಿಸಿ, ಹೆಚ್ಚಿನ ಅಧಿಕಾರವನ್ನು ಪಡೆದು, ಸಂಪತ್ತನ್ನು ಗಳಿಸು ವಲ್ಲಿ ಯಶಸ್ವಿಯಾಗಿದ್ದನು. ಇದಕ್ಕೆ ಪೂರಕವೆಂಬಂತೆ ತುಂಗಭದ್ರಾ ನದಿಯ ಸಮೃದ್ಧ ಉತ್ತರದ ಭಾಗವನ್ನು ಸೇವುಣ ರಿಂದ ಗೆದ್ದುಕೊಂಡು ಆರ್ಥಿಕ ಸದೃಢತೆಯನ್ನು ಕಾಪಾಡಿ ಕೊಂಡಿದ್ದ[೪].

ಕ್ರಿ.ಶ. ೧೨೦೦ರಿಂದ ೧೨೫೦ರ ನಡುವೆ ದೊರೆತ ಶಾಸನಗಳಲ್ಲಿ ಕ್ರಿ.ಶ. ೧೨೩೮ರ ಯಳ್ಳೇಶಪುರದ ಎರಡು

* ಇತಿಹಾಸ ಉಪನ್ಯಾಸಕರು, ಪೂರ್ಣಪ್ರಜ್ಞ ಪದವಿ ಪೂರ್ವ ಕಾಲೇಜು, ಅದಮಾರು, ಉಡುಪಿ ಜಿಲ್ಲೆ

** ಇತಿಹಾಸ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳ ಗಂಗೋತ್ರಿ-೫೭೪೧೯೯.

ಶಾಸನಗಳು ಮತ್ತು ಕ್ರಿ.ಶ. ೧೨೯೯ರಲ್ಲಿ ಅಲ್ಲಿಯೇ ದೊರಕಿದ ಇನ್ನೊಂದು ಶಾಸನ ಹಾಗೂ ಕ್ರಿ.ಶ. ೧೨೪೨ರ ಆನೇಕನ್ನಂಬಾಡಿ ಶಾಸನಗಳಲ್ಲಿ ಒಟ್ಟು ಸುಮಾರು ಒಂಭತ್ತು (೯) ತೆರಿಗೆ ಪದಗಳ ಉಲ್ಲೇಖವನ್ನು ಮಾಡಲಾಗಿದೆ. ಈ ಭಾಗದಲ್ಲಿ ಇಮ್ಮಡಿ ನರಸಿಂಹ ಹಾಗೂ ಸೋಮೇಶ್ವರ ಆಡಳಿತ ನಡೆಸಿದರು. ಇಮ್ಮಡಿ ನರಸಿಂಹನ ರಾಜ್ಯವು ತುಂಗಭದ್ರಾ ನದಿಯ ದಕ್ಷಿಣದವರೆಗೆ ಹರಡಿಕೊಂಡಿದ್ದರೂ ಈ ಪ್ರದೇಶವನ್ನು ಉಳಿಸಿಕೊಳ್ಳಲು ತಡಕಾಡುವ ಪರಿಸ್ಥಿತಿ ಇದ್ದದ್ದನ್ನು ನಾವು ಗಮನಿಸುತ್ತೇವೆ[೫]. ಕ್ರಿ.ಶ. ೧೨೩೮ರ ನಂತರ ನಮಗೆ ಈ ನಾಲ್ಕು ಶಾಸನಗಳು ತೆರಿಗೆ ಪದಗಳನ್ನು ಹೊಂದಿರುವುದು ವಿಶೇಷ ಮಹತ್ವವನ್ನು ಪಡೆಯುತ್ತವೆ. ಏಕೆಂದರೆ ಸೋಮೇಶ್ವರನ ಆಳ್ವಿಕೆಯ ಕಾಲ ಇದಾಗಿದ್ದು, ತನ್ನ ಉತ್ತರದ ಪ್ರದೇಶಗಳನ್ನು ಕಳೆದುಕೊಂಡಂತಹ ಸಂದರ್ಭದಲ್ಲಿ ಈ ನಷ್ಟವನ್ನು ಭರಿಸಿಕೊಂಡ.[೬] ತನ್ನ ಗಡಿಯನ್ನು ರಕ್ಷಿಸಿಕೊಳ್ಳಲು ಹೆಚ್ಚಿನ ಆದಾಯದ ಅವಶ್ಯಕತೆಗನುಗುಣವಾಗಿ ಹೆಚ್ಚಿನ ತೆರಿಗೆ ವಿಧಿಸುವುದು ಅನಿವಾರ್ಯ ಎನ್ನುವುದನ್ನು ದೃಢಪಡಿಸುತ್ತದೆ.

ಕ್ರಿ.ಶ. ೧೨೫೦ರಿಂದ ೧೩೦೦ರ ಕಾಲಾವಧಿಯಲ್ಲಿ ಕ್ರಿ.ಶ. ಹೊಳೆನರಸೀಪುರ ಶಾಸನ ಮತ್ತು ೧೨೮೨ರ ಮಾವನೂರಿನ ಶಾಸನಗಳಲ್ಲಿ ತೆರಿಗೆ ಪದಗಳನ್ನು ಉಲ್ಲೇಖಿಸಲಾಗಿದೆ[೭]. ಸೋಮೇಶ್ವರನ ಮಕ್ಕಳಾದ ಮುಮ್ಮಡಿ ನರಸಿಂಹ ಮತ್ತು ರಾಮನಾಥನ ನಡುವಿನ ಅಂತಃಕಲಹಗಳಿಂದಾಗಿ ರಾಜ್ಯವಿಭಜನೆಗೊಂಡು ಮುಮ್ಮಡಿ ನರಸಿಂಹನು ದ್ವಾರಸಮುದ್ರವನ್ನು ರಾಜಧಾನಿಯನ್ನಾಗಿಸಿ, ಹೊಯ್ಸಳ ಸಾಮ್ರಾಜ್ಯದ ಉತ್ತರದ ಭಾಗವನ್ನು ತನ್ನ ಆಳ್ವಿಕೆಗೆ ಒಳಪಡಿಸಿಕೊಂಡಿದ್ದು, ಹಿರಿಯ ಮಗನಾದ ರಾಮನಾಥನು ಕಣ್ಣಾನೂರನ್ನು ರಾಜಧಾನಿಯನ್ನಾಗಿಸಿಕೊಂಡು ದಕ್ಷಿಣದ ಭಾಗವನ್ನು ಆಳ್ವಿಕೆ ನಡೆಸಿಕೊಂಡು ಬಂದಿದ್ದ. ದಾಯಾದಿ ಕಲಹ ಇನ್ನೂ ಮುಂದುವರೆದು ಸೋದರರ ಬಲವು ಕುಗ್ಗಿಹೋಗಿ ಹೆಚ್ಚು ಸಶಕ್ತರಾಗಿ ಆಳ್ವಿಕೆ ನಡೆಸಲು ಸಾಧ್ಯವಾಗದೆ ಸಾಮ್ರಾಜ್ಯದ ಗಡಿಗಳನ್ನು ಕಾಪಾಡುವುದು ಕಠಿಣವಾಗಿತ್ತು.[೮]

ಕ್ರಿ.ಶ. ೧೩೦೦ರಿಂದ ೧೩೫೦ರ ನಡುವೆ ದೊರೆತ ಕ್ರಿ.ಶ. ೧೩೧೦ರ ಜೋಡಿಹರದನಹಳ್ಳಿ ಮತ್ತು ಹೊಳೆನರಸೀಪುರ ಶಾಸನಗಳಲ್ಲಿ ಸುಮಾರು ಇಪ್ಪತ್ತೊಂಬತ್ತು[೨೮] ತೆರಿಗೆ ಪದಗಳು ಉಲ್ಲೇಖಗೊಂಡಿವೆ. ಈ ಎರಡೂ ಶಾಸನಗಳು ಮುಮ್ಮಡಿ ಬಲ್ಲಾಳನ ಆಳ್ವಿಕೆಯ ಅವಧಿಗೆ ಸೇರಿದ್ದು, ಸುಮಾರು ಐದು ದಶಕಗಳವರೆಗಿನ ಸುದೀರ್ಘ ಆಳ್ವಿಕೆಯಲ್ಲಿ ಸಾಕಷ್ಟು ರಾಜಕೀಯ ಏರುಪೇರುಗಳನ್ನೊಳಗೊಂಡ ಆಡಳಿತವನ್ನು ಆತ ನಡೆಸಿಕೊಂಡು ಬಂದದ್ದನ್ನು ನಾವು ಕಾಣಬಹುದು. ಆತ ತನ್ನ ರಾಜ್ಯದ ಆದಾಯವನ್ನು ಸಂಚಯಿಸಲು ಸಾಕಷ್ಟು ಪ್ರಯತ್ನಗಳನ್ನು ಮಾಡಿದರೂ ಸಾಮ್ರಾಜ್ಯದ ನೆರೆಯ ಉತ್ತರ ರಾಜ್ಯವಾದ ಸೇವುಣ ಯಾದವರೊಂದಿಗೆ ನಿರಂತರ ಹೋರಾಟ ಮಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು. ಇದರೊಂದಿಗೆ ಉತ್ತರ ಭಾರತದ ಸುಲ್ತಾನರ ಸಾಮ್ರಾಜ್ಯ ವಿಸ್ತರಣಾ ದಾಹವೂ ಮುಮ್ಮಡಿ ಬಲ್ಲಾಳನ ಆರ್ಥಿಕ ಸದೃಢತೆಗೆ ಮುಳುವಾಗಿ ಪರಿಣಮಿಸಿತ್ತು. ಅಲ್ಲಾವುದ್ದೀನ್ ಖಿಲ್ಜಿಯ ಸೇನಾನಿಯಾದ ಮಲ್ಲಿಕ್ ಕಾಫರನು ಹೊಯ್ಸಳರ ರಾಜಧಾನಿಗೆ ದಾಳಿ ಮಾಡಿದ ಕೆಲವು ವರ್ಷಗಳ ನಂತರ ಕ್ರಿ.ಶ. ೧೩೨೭ರಲ್ಲಿ ಇನ್ನೊಂದು ಬಾರಿ ಮೊಹ್ಮದ್ ಬಿನ್ ತುಘಲಕ್‌ನ ದಂಡಯಾತ್ರೆಯ ಫಲವಾಗಿ ಮುಮ್ಮಡಿ ಬಲ್ಲಾಳನು ಸಾಕಷ್ಟು ಆರ್ಥಿಕ ಅಸ್ಥಿರತೆಯನ್ನು ಎದುರಿಸಬೇಕಾದ ಪರಿಸ್ಥಿತಿ ಎದುರಾಗಿತ್ತು[೯]. ತನ್ನ ಆಳ್ವಿಕೆಯ ಉದ್ದಕ್ಕೂ ಪ್ರಬಲ ದಾಳಿಗಳನ್ನು ಎದುರಿಸಿದ ಈತ ತನ್ನ ಆರ್ಥಿಕ ಸ್ಥಿರತೆಯನ್ನು ಉಳಿಸಿಕೊಳ್ಳಲು ಹೆಚ್ಚಾಗಿ ತೆರಿಗೆಗಳನ್ನು ವಿಧಿಸುವುದು ಅನಿವಾರ್ಯವಾಗಿತ್ತು ಎಂದು ತಿಳಿಯುತ್ತದೆ.

ಈ ತಾಲ್ಲೂಕಿನಲ್ಲಿ ಅತ್ಯಂತ ಹೆಚ್ಚು ಬಾರಿ ಪ್ರಸ್ತಾಪಿತವಾದ ಶುಲ್ಕ ಪದಗಳು 'ಸಿದ್ಧಾಯ' ಮತ್ತು 'ಅಭ್ಯಾಗತೆ'. ಇವು ಪ್ರತಿಯೊಂದು ನಾಲ್ಕು ಬಾರಿ ವಿವಿಧ ಶಾಸನಗಳಲ್ಲಿ ಪುನರಾವರ್ತನೆಯಾದ ಪದಗಳಾಗಿದ್ದು ಕ್ರಿ.ಶ. ೧೧ರಿಂದ ೧೪ನೇ ಶತಮಾನದವರೆಗೆ ಬಳಕೆಯಾಗಿವೆ. ಈ ಹಿಂದೆ ನಡೆದ ಸಂಶೋಧನೆಗಳು ಈ ಬಗ್ಗೆ ಸಾಕಷ್ಟು ಬೆಳಕನ್ನು ಚೆಲ್ಲಿವೆ. 'ಸಿದ್ಧಾಯ' ಪದವು ಸಿದ್ಧ + ಆಯ ಪದಗಳಿಂದ ರಚನೆಯಾಗಿದ್ದು ಸ್ಥಿರವಾದ ಅಥವಾ ಖಚಿತವಾದ ಆದಾಯ ಎಂಬ ಅರ್ಥ ನೀಡುತ್ತದೆ. ಈ ತೆರಿಗೆಯನ್ನು ಸಾಮಾನ್ಯವಾಗಿ ಭೂಮಿಯ ಒಡೆತನದ ಮೇಲೆ ವಿಧಿಸುತ್ತಿದ್ದ ಕಂದಾಯವೆಂದು ಭಾವಿಸಲಾಗಿತ್ತು[೧೦]. ಆದರೆ ಮನೆ, ಅಂಗಡಿ, ಅಗ್ರಹಾರ, ಹಳ್ಳಿಗಳ ಮೇಲೂ ಈ ತೆರಿಗೆಯನ್ನು ವಿಧಿಸಿದ್ದರಿಂದ ಇದು ಕೇವಲ ಕೃಷಿಭೂಮಿಯ ಮೇಲಿನ ತೆರಿಗೆಯಾಗಿರದೆ ಇತರ ಮೂಲಗಳಿಂದ ಸಂಗ್ರಹಿಸಲ್ಪಡುತ್ತಿದ್ದ ತೆರಿಗೆಯೂ ಆಗಿದೆ. 'ಸಿದ್ದಾಯ' ಹೆಚ್ಚಾಗಿ ನಗದು ಅಥವಾ ಧಾನ್ಯದ ರೂಪದಲ್ಲಿ ವಾರ್ಷಿಕವಾಗಿ ರಾಜ್ಯಾಡಳಿತವು ಪಡೆದುಕೊಳ್ಳುತ್ತಿದ್ದು. ಈ ಶುಲ್ಕದ ಪ್ರಮಾಣವನ್ನು ಕಾಲಕಾಲಕ್ಕೆ ನಿಗದಿಪಡಿಸುವ ಮತ್ತು ಪರಿಷ್ಕರಣೆಗೊಳಿಸುವ ಅಧಿಕಾರವನ್ನು ಸಂಬಂಧಪಟ್ಟ ಆಡಳಿತ ಹೊಂದಿತ್ತು[೧೧]. ಇದಲ್ಲದೆ 'ಸಿದ್ಧಾಯ'ವು ರಾಜ್ಯದ ಪ್ರಧಾನ ಆದಾಯವಾಗಲು ಮುಖ್ಯ ಕಾರಣವೆಂದರೆ ಇದನ್ನು ಸಾರ್ವತ್ರಿಕ ತೆರಿಗೆಯಾಗಿ ವಿಧಿಸಲಾಗುತ್ತಿತ್ತು. ಧಾರ್ಮಿಕ ಸಂಸ್ಥೆಗಳಾದ ದೇವಲಯಗಳು, ಬಸದಿಗಳು, ಬ್ರಹ್ಮದೇವರು ಮತ್ತು ಹಳ್ಳಿಗಳೂ ಇದರಿಂದ ಹೊರತಾಗಿರಲಿಲ್ಲ[೧೨].

ಶ್ರೀಮಂತನಿರಬಹುದು ಅಥವಾ ಸಾಮಾನ್ಯನಿರಬಹುದು. ಯಾವುದೇ ವೃತ್ತಿತಾರತಮ್ಯವಿಲ್ಲದೆ ಸಾಮಾನ್ಯವಾಗಿ ನೀಡಲೇಬೇಕಾದ ಕಂದಾಯವೇ 'ಸಿದ್ಧಾಯ' ಎನ್ನುವುದರಲ್ಲಿ ಎರಡು ಮಾತಿಲ್ಲ. ಈ ತಾಲ್ಲೂಕಿನಲ್ಲಿ ದೊರೆತ ಒಂಬತ್ತು ಶುಲ್ಕ ಪದಗಳನ್ನೊಳಗೊಂಡ ಶಾಸನಗಳಲ್ಲಿ ನಾಲ್ಕು ಶಾಸನಗಳಲ್ಲಿ ಈ ತೆರಿಗೆ ಪದ ಬಳಸಲ್ಪಟ್ಟಿರುವುದು ಮೇಲಿನ ವಿಮರ್ಶೆಗೆ ಹೆಚ್ಚಿನ ಮಹತ್ವ ನೀಡುತ್ತದೆ.

ಇದರಂತೆ ಈ ತಾಲ್ಲೂಕಿನಲ್ಲಿ ದೊರೆತ ಶಾಸನಗಳಲ್ಲಿ 'ಸಿದ್ಧಾಯ' ಕ್ಕೆ ಸಮಾನಾಂತರವಾಗಿ ಅತ್ಯಂತ ಹೆಚ್ಚು ಬಾರಿ ಪ್ರಸ್ತಾಪಿಸಲಾದ ಮತ್ತೊಂದು ತೆರಿಗೆ ಪದವೆಂದರೆ 'ಅಭ್ಯಾಗತೆ'[೧೩] ರಾಜ ಗಣ್ಯ ಅತಿಥಿ ಹಾಗೂ ರಾಜಪ್ರತಿನಿಧಿಗಳ ಸತ್ಕಾರಕ್ಕಾಗಿ ತಗಲುವ ವಿಶೇಷ ಖರ್ಚು ವೆಚ್ಚವನ್ನು ಭರಿಸುವುದಕ್ಕಾಗಿ ವಿಧಿಸುವ ತೆರಿಗೆಯಾಗಿದ್ದಿರಬಹುದು[೧೪]. ಹೊಳೇನರಸೀಪುರದಲ್ಲಿ ಕ್ರಿ.ಶ. ೧೨೭೬ ಮತ್ತು ಕ್ರಿ.ಶ. ೧೩೧೦ರ ಎರಡು ಶಾಸನಗಳು ಮತ್ತು ಕ್ರಿ.ಶ. ೧೨೮೨ರ ಮಾವನೂರಿನ ಶಾಸನ ಹಾಗೂ ಕ್ರಿ.ಶ. ೧೩೧೦ರ ಜೋಡಿಹರದನಹಳ್ಳಿಯ ಶಾಸನಗಳಲ್ಲಿ ಈ ಪದ ಕಂಡುಬಂದಿದೆ[೧೫]. ಈ ಪ್ರದೇಶಗಳು ರಾಜಧಾನಿಗೆ ಬಹಳ ಸಮೀಪದ ಪ್ರದೇಶವಾಗಿದ್ದು, ಬಂದು ಹೋಗುವ ರಾಯಭಾರಿ ಅಥವಾ ಅತಿಥಿಗಳ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಇದ್ದುದರಿಂದ ಅದನ್ನು ರಾಜನ ಆದಾಯದಿಂದಲೇ ಭರಿಸಬೇಕಾಗಿತ್ತು. ಈ ಸಂದರ್ಭದಲ್ಲಿ ರಾಜ ತನ್ನ ಹೊರೆಯನ್ನು 'ಅಭ್ಯಾಗತೆ' ರೂಪದಲ್ಲಿ ಜನರಿಗೆ ವರ್ಗಾಯಿಸಿದ್ದಿರಬೇಕು.

ಹೊಯ್ಸಳರ ಕಾಲದ ಮತ್ತೊಂದು ಪ್ರಮುಖ ತೆರಿಗೆ ಪದವೆಂದರೆ 'ಖಾಣ'[೧೬]. ಇದು ಕ್ರಿ.ಶ. ೧೨೭೬ ಮತ್ತು ಕ್ರಿ.ಶ. ೧೩೧೦ರ ಹೊಳೆನರಸೀಪುರ ಶಾಸನ ಹಾಗೂ ಅದೇ ಕಾಲದ ಜೋಡಿ ಹರದನಹಳ್ಳಿಯ ಶಾಸನಗಳಲ್ಲಿದೆ. ಈ ಶುಲ್ಕ ಪದವು ಮೇವಿನ ಮೇಲೆ ವಿಧಿಸುತ್ತಿದ್ದ ತೆರಿಗೆಯನ್ನು ಪ್ರತಿನಿಧಿಸುತ್ತದೆ[೧೭]. ಈ ತೆರಿಗೆಯನ್ನು ಸಾಮಾನ್ಯವಾಗಿ ರಾಜನ ಕುದುರೆ ಮತ್ತು ಆನೆಗಳಿಗೆ ಬೇಕಾಗುವ ಮೇವಿನ ಪೂರೈಕೆಯ ವೆಚ್ಚವನ್ನು ಭರಿಸಿಕೊಳ್ಳುವುದಕ್ಕಾಗಿ ವಂತಿಗೆ ಅಥವಾ ಕಾಣಿಕೆ ಅಥವಾ ಸಹಾಯಧನ ರೂಪದಲ್ಲಿ ಪ್ರಜೆಗಳು ರಾಜನಿಗೆ ನೀಡಬೇಕಾಗಿತ್ತು.

'ಅಳಿವು' ತೆರಿಗೆ ಪದವು ಹೊಳೆನರಸೀಪುರದಲ್ಲಿ ಲಭ್ಯವಾದ ಕ್ರಿ.ಶ. ೧೨೭೬, ಕ್ರಿ.ಶ. ೧೩೧೦ ಹಾಗೂ ಕ್ರಿ.ಶ. ೧೨೮೨ರ ಮಾವನೂರು ಶಾಸನಗಳಲ್ಲಿ ಉಲ್ಲೇಖಿತವಾಗಿರುವುದು ಗಮನಾರ್ಹ. 'ಅಳಿವು' ವಿನಾಶದ ವೆಚ್ಚವನ್ನು ಭರಿಸುವುದಕ್ಕಾಗಿ ವಿಧಿಸಲಾಗುತ್ತಿತ್ತು. ಸಾಮಾನ್ಯವಾಗಿ ವಿನಾಶವು ಯುದ್ಧ ಹಾಗೂ ಪ್ರಾಕೃತಿಕ ವಿಕೋಪಗಳಿಂದ ಸಂಭವಿಸಿರಬಹುದು. ಇಂತಹ ಹೊರೆಯನ್ನು ಪ್ರಜೆಗಳ ಮೇಲೆ ತೆರಿಗೆ ರೂಪದಲ್ಲಿ ವರ್ಗಾಯಿಸುತ್ತಿದ್ದುದನ್ನು ಗಮನಿಸಿದರೆ, ಈ ಹಿಂದೆ ನಡೆದಿರಬಹುದಾದ ವಿನಾಶದ ಘಟನೆಗಳ ಅರಿವಾಗುತ್ತದೆ. ಈ ಮೇಲಿನ ಶಾಸನಗಳಲ್ಲಿ 'ಅನ್ಯಾಯ' ಎಂಬ ತೆರಿಗೆ ಪದ ಬಳಕೆಯನ್ನು ಗಮನಿಸಿದಾಗ ಅಪರಾಧಿಗಳಿಗೆ ದಂಡವನ್ನು ನ್ಯಾಯಾಂಗ ವ್ಯವಸ್ಥೆಯು ವಿಧಿಸುತ್ತಿತ್ತು ಎಂಬ ಅಂಶ ಸ್ಪಷ್ಟವಾಗಿದೆ. ರಾಜ್ಯದಲ್ಲಿ ಅಪರಾಧವನ್ನೆಸಗಿದ ವ್ಯಕ್ತಿ ಅಥವಾ ಸಂಘಟನೆಗಳ ಮೇಲೆ ವಿಧಿಸುತ್ತಿದ್ದ ತೆರಿಗೆಯು ರಾಜನ ಬೊಕ್ಕಸಕ್ಕೆ ಸಾಕಷ್ಟು ಆದಾಯವನ್ನು ತರುವಂತಹ ಆಕರವಾಗಿತ್ತು[೧೮].

ಕ್ರಿ.ಶ. ೧೨೮೨ರ ಮಾವನೂರು ಕ್ರಿ.ಶ. ೧೩೧೦ರ ಹೊಳೆನರಸೀಪುರ ಮತ್ತು ಜೋಡಿಹರದನಹಳ್ಳಿಯ ಶಾಸನಗಳು, 'ತುಪ್ಪದೆರೆ' ಪದವನ್ನು ಉಲ್ಲೇಖಿಸುತ್ತವೆ. ಹೊಯ್ಸಳ ವಿಷ್ಣುವರ್ಧನ ಮಹಾತ್ವಾಕಾಂಕ್ಷೆಯ ಪರಿಣಾಮವಾಗಿ ಕಾವೇರಿ ಮತ್ತು ಅದರ ಉಪನದಿಗಳ ತೀರ ಪ್ರದೇಶಗಳು ಹೊಯ್ಸಳ ಸಾಮ್ರಾಜ್ಯದ ವಶವಾಗಿದ್ದವು. ಹೊಳೆನರಸೀಪುರ ತಾಲ್ಲೂಕಿನಾದ್ಯಂತ ಕಾವೇರಿಯ ಉಪನದಿಯಾದ ಹೇಮಾವತಿಯು ಪ್ರವಹಿಸುವುದನ್ನು ನಾವು ಇಂದೂ ಕಾಣುತ್ತೇವೆ[೧೯]. ಈ ಜಲಾನಯನ ಪ್ರದೇಶವು ಕೃಷಿ ಚಟುವಟಿಕೆ ಮತ್ತು ಪಶುಸಂಗೋಪನೆಗೆ ಪೂರಕವಾದ್ದರಿಂದ ತುಪ್ಪದ ಮೇಲಿನ ತೆರಿಗೆಯು ರಾಜನ ಆದಾಯವನ್ನು ಹೆಚ್ಚಿಸುತ್ತಿತ್ತು. ಅದಲ್ಲದೇ ಹೊಳೆನರಸೀಪುರ ಶಾಸನಗಳಲ್ಲಿ ಕಂಡುಬರುವ 'ಕಟ್ಟುಗೂಳು' ತೆರಿಗೆ ಪದವು ಪಶುಸಾಕಣೆ ಜನರ ಮುಖ್ಯ ಉದ್ಯೋಗವೆಂಬುದಕ್ಕೆ ಆಧಾರವಾಗಿದೆ. ಏಕೆಂದರೆ ತಳಿ ಅಭಿವೃದ್ಧಿಯ ಸಲುವಾಗಿ ತಂದಂತಹ ಉತ್ತಮ ಜಾತಿಯ ಹೋರಿಗಳ ಮೇಲೆ ವಿಧಿಸುತ್ತಿದ್ದ ತೆರಿಗೆಯು ಇದಾಗಿದೆ[೨೦]. ಜನರು ಉತ್ತಮ ತಳಿಗೆ ಹೆಚ್ಚಿನ ಮಹತ್ವ ನೀಡುತ್ತಿದ್ದು, ರಾಜ್ಯಾಡಳಿತವು ಪಶುಸಂಗೋಪನೆಯ ಲಾಭವನ್ನು ತೆರಿಗೆಯ ರೂಪದಲ್ಲಿ ಪಡೆದು ಪಾಲುದಾರ ನಾಗಿತ್ತು. 'ಕಟ್ಟುಗುತ್ತಿಗೆ' ಒಂದು ಹೊಲವನ್ನು ಉತ್ತು ಬೆಳೆಯನ್ನು ತೆಗೆಯುವ ರೈತನು ಆ ಹೊಲದ ಯಜಮಾನನಿಗೆ ಕೊಡಬೇಕಾದ ನಿರ್ದಿಷ್ಟ ಧಾನ್ಯದ ಮೊತ್ತ ಅಥವಾ ಹಣವೇ 'ಕಟ್ಟುಗುತ್ತಿಗೆ'[೨೧] ಬೆಳೆ ಬೆಳೆಯಲಿ, ಬೆಳೆಯದಿರಲಿ ನಿಗಧಿಪಡಿಸಿದ ಧಾನ್ಯವನ್ನು ರೈತ ಕೊಡಲೇಬೇಕಾಗಿತ್ತು[೨೨].

ಕ್ರಿ.ಶ. ೧೨೭೬ರ ಹೊಳೆನರಸೀಪುರ ಶಾಸನ ಮತ್ತು ಕ್ರಿ.ಶ. ೧೨೮೨ರ ಮಾವನೂರು ಶಾಸನಗಳು 'ಕಿರುಕುಳ' ತೆರಿಗೆ ಪದವನ್ನು ಉಲ್ಲೇಖಿಸುತ್ತವೆ. ಇವು ಚಿಕ್ಕ ತೆರಿಗೆಗಳೆಂಬ ಅರ್ಥವನ್ನು ಕೊಡುತ್ತವೆ[೨೩]. ಸಾಮಾನ್ಯ ವಸ್ತುಗಳು ತೆರಿಗೆಯಿಂದ ವಿನಾಯಿತಿ ಪಡೆದಿರಲಿಲ್ಲವೆಂದು ತಿಳಿಯಬಹು

ದಾದರೂ ಇದರೊಂದಿಗೆ ಈ ಪದಕ್ಕೆ ತೊಂದರೆ ಅಥವಾ ಹಿಂಸೆ ಎನ್ನುವ ಅರ್ಥ ಬಂದಿದ್ದನ್ನು ಗುರುತಿಸಬಹುದು. ಅಂದು ತೆರಿಗೆ ಭಾರವನ್ನು ಹೊರಲಾರದೆ ಜನರು ಕಾಡಿನಲ್ಲಾದರೂ ಸುಖವಾಗಿರಬಹುದು ಎಂದು ಊರುಬಿಟ್ಟ ಪ್ರಸಂಗಗಳಿವೆ[೨೪]. ಜನರು ಹೊಲ ಮನೆಗಳ ಮೇಲಿನ ತೆರಿಗೆಗಳಿಂದ ರಿಯಾಯಿತಿ ಪಡೆಯಲು ಉತ್ಸುಕರಾಗಿದ್ದರು. ಆದುದರಿಂದ ಹಲವು ಶಾಸನಗಳ ಕೊನೆಯಲ್ಲಿ ಈ ಹೊಲದ ತೆರಿಗೆಯನ್ನು ತೆಗೆಯಲಾಗಿದೆ. ಇಂತಹ ತೆರಿಗೆಗಳನ್ನು ಕೇಳಿದವರು 'ಚಂಡಾಲರು' ಎಂದು ಕಳಕಳಿ ವ್ಯಕ್ತವಾಗಿದೆ. ತೆರಿಗೆಯು ಜನರ ಮೇಲಿನ ಹೊರೆಯಾಗಿತ್ತು ಎಂಬುದನ್ನು ಮಹಾಭಾರತವೂ ತಿಳಿಸುತ್ತದೆ[೨೫]. "ದೇಶವು ಹಸುವಿದ್ದಂತೆ. ಪ್ರಜೆಗಳು ಕರುಗಳಿದ್ದಂತೆ. ಎಲ್ಲಾ ಹಾಲನ್ನು ಸ್ವಂತಕ್ಕೆ ಕರೆದುಕೊಂಡರೆ ಕರುಗಳು ಬಡವಾಗಿ ಮುಂದೆ ಭಾರವನ್ನು ಹೊರಲು ಅಸಮರ್ಥವಾಗುತ್ತವೆ. ಬಳ್ಳಿಗೆ ನೋವಾಗದಂತೆ ದುಂಬಿಯು ಮಕರಂದವನ್ನು ಹೀರುವ ರೀತಿಯಲ್ಲಿ ಜನರಿಂದ ತೆರಿಗೆಗಳನ್ನು ಎತ್ತಬೇಕು. ಸರಿಯಾದ ದೇಶ, ಕಾಲ, ರೀತಿಗಳಲ್ಲಿ ತೆರಿಗೆಗಳನ್ನು ಪಡೆಯಬೇಕು. ಹಾಲನ್ನು ಕರೆಯಲಿ, ಆದರೆ ಕೆಚ್ಚಲಿಗೆ ನೋವಾಗದಿರಲಿ" ಎಂಬ ಮಾತು ಇಲ್ಲಿರುವುದು ಉಲ್ಲೇಖಾರ್ಹ[೨೬]. ಏಕೆಂದರೆ ರಾಜನು ತೆರಿಗೆ ವಿಧಿಸುವಾಗ ಪ್ರಜೆಗಳ ಹಿತವನ್ನು ಕಾಯಲೇಬೇಕಾಗಿತ್ತು ಎಂಬ ಅಂಶವನ್ನು ಈ ಮಾತುಗಳು ಖಚಿತಪಡಿಸುತ್ತವೆ[೨೭].

ಕ್ರಿ.ಶ. ೧೩೧೦ರ ಹೊಳೆನರಸೀಪುರದ ಶಾಸನದಲ್ಲಿ ಉಲ್ಲೇಖಿತ ಪದಗಳಾದ 'ಪೂರ್ಬ್ಬಾಯ' ಮತ್ತು 'ಅಪೂರ್ಬ್ಬಾಯ' ಇವು ಅನುಕ್ರಮವಾಗಿ ಹಳೆಯ ತೆರಿಗೆಗಳನ್ನು ಮತ್ತು ಹೊಸ ತೆರಿಗೆಗಳು ಎಂಬ ಅರ್ಥ ನೀಡುತ್ತವೆ[೨೮]. ಅಂದರೆ ಸರಕಾರ ಅಥವಾ ಆಡಳಿತ ಇಚ್ಛೆಪಟ್ಟಂತೆ ಪ್ರಜೆಗಳು ತೆರಿಗೆಯನ್ನು ನೀಡಬೇಕಾಗಿದ್ದು, ಕಾಲ ಮತ್ತು ಅಗತ್ಯತೆಗಳಿಗನುಗುಣವಾಗಿ ಈಗಾಗಲೇ ಇರುವ ಹಳೆಯ ತೆರಿಗೆಗಳ ಜೊತೆಗೆ ಹೊಸ ತೆರಿಗೆಗಳನ್ನು ನೀಡುವುದು ಜನರಿಗೆ ಅನಿವಾರ್ಯವಾಗಿದ್ದು, ತೆರಿಗೆ ವ್ಯವಸ್ಥೆ ಸದಾ ಬದಲಾವಣೆಗೊಳಗಾಗುತ್ತಿತ್ತೆಂಬ ಸಂದೇಶವನ್ನು ರವಾನಿಸುತ್ತವೆ. ತೆರಿಗೆಗಳು ಹೊರೆಯೆಂದು ಕಂಡುಬಂದರೂ ದೇವಸ್ಥಾನಗಳ ನಿರ್ಮಾಣ, ಶಿಕ್ಷಣ ಸಂಸ್ಥೆಗಳ ಸ್ಥಾಪನೆ, ನೀರಾವರಿ ವ್ಯವಸ್ಥೆಯನ್ನು ಕಲ್ಪಿಸುವುದು ಇತ್ಯಾದಿ ಲೋಕೋಪಯೋಗಿ ಕಾರ್ಯಗಳನ್ನು ಮಾಡುವಾಗ ಜನರಿಗೆ ಸೇವಾ ರೂಪದಲ್ಲಿ ಹಿಂಪಾವತಿಯಾಗುತ್ತದೆ ಎಂದು ವಾದಿಸಲಾಗಿದೆ[೨೯].

ಕ್ರಿ.ಶ. ೧೨೭೬ ಮತ್ತು ಕ್ರಿ.ಶ. ೧೩೧೦ರ ಹೊಳೆನರಸೀಪುರ ಶಾಸನಗಳಲ್ಲಿ 'ಸೆಸೆ' ಪದವು ಉಲ್ಲೇಖಗೊಂಡಿದ್ದು, ಇದನ್ನು ಅರ್ಥೈಸುವಲ್ಲಿ ಗೊಂದಲಗಳಿವೆ. ಈ ತೆರಿಗೆಯನ್ನು ರಾಜ ಅಥವಾ ಚಕ್ರವರ್ತಿಯ ವಿವಾಹ ಸಂದರ್ಭದಲ್ಲಿ ವಿಧಿಸುತ್ತಿದ್ದ ತೆರಿಗೆ ಅಥವಾ ಕೆಲವು ವಿಶೇಷ ಸಂದರ್ಭದಲ್ಲಿ ಧಾನ್ಯ ರೂಪದಲ್ಲಿ, ಕಾಣಿಕೆ ಅಥವಾ ವಂತಿಗೆ ರೂಪದಲ್ಲಿ ಪಡೆಯುತ್ತಿದ್ದ ತೆರಿಗೆ. ಇದಲ್ಲದೆ 'ಸೇಸೆ' ತಪ್ಪಾಗಿ ಶಾಸನಗಳಲ್ಲಿ 'ಸೆಸೆ' ಎಂದು ಕೊರೆಯಲಾಗಿದ್ದು, ರಾಜನಿಗೆ ನೀಡುತ್ತಿದ್ದ ಒಂದು ಬಗೆಯ ತೆರಿಗೆ ಅಥವಾ ಮೇವಿನ ಮೇಲೆ ವಿಧಿಸುವ ತೆರಿಗೆ ಎಂಬ ಅಭಿಪ್ರಾಯ ವ್ಯಕ್ತವಾಗಿದೆ[೩೦]. ಈ ತಾಲ್ಲೂಕಿನ ಶಾಸನಗಳಲ್ಲಿ ಆನೆಯ ಸೆಸೆ ಎರಡು ಬಾರಿ ಮತ್ತು ಕುದುರೆಯ ಸೆಸೆ ಒಂದು ಬಾರಿ ಉಲ್ಲೇಖಿಸಿದೆ. ಈ ಎರಡೂ ತೆರಿಗೆ ಪದಗಳನ್ನು ಅರ್ಥೈಸುವಲ್ಲಿ ಸಾಕಷ್ಟು ಭಿನ್ನಾಭಿಪ್ರಾಯಗಳನ್ನು ಕಾಣಬಹುದು. ರಾಜನು ತನ್ನ ಸೈನ್ಯದ ಆನೆ ಮತ್ತು ಕುದುರೆಗಳಿಗೆ ಮೇವನ್ನು ಪೂರೈಸಲು ತೆರಿಗೆಯನ್ನು ವಿಧಿಸಲಾಗುತ್ತಿದ್ದು, ಸಾಮಾನ್ಯವಾಗಿ 'ಖಾಣ' ಎಂಬ ತೆರಿಗೆಯೊಂದಿಗೆ ಸರಿಹೊಂದುವ ಅರ್ಥದಂತೆ ಕಂಡು ಬರುತ್ತದೆ. ಆದರೆ ರಾಜ ತನ್ನ ಪ್ರಜೆಗಳಿಗೆ ರಕ್ಷಣೆಯನ್ನು ಒದಗಿಸುವುದು ಆತನ ಆದ್ಯ ಕರ್ತವ್ಯವಾಗಿದ್ದು, ಈ ನಿಟ್ಟಿನಲ್ಲಿ ವಿಶಾಲವಾದ ಸೈನ್ಯವನ್ನು ಕಾಪಾಡುವುದು ಆರ್ಥಿಕವಾಗಿ ಲಾಭದಾಯಕವಲ್ಲದಿದ್ದರೂ ಅತ್ಯಾವಶ್ಯಕವಾಗಿದೆ. ತನ್ನ ಸೇನೆಯ ಆನೆ ಮತ್ತು ಕುದುರೆಗಳು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ರಕ್ಷಣೆಗಾಗಿ ಹೋಗುವ ಸಮಯದಲ್ಲಿ ಸ್ಥಳೀಯ ಜನರಿಂದ ತನ್ನ ಸೈನ್ಯದ ಮೇವಿಗಾಗಿ ತಗಲುವ ವೆಚ್ಚವನ್ನು ಸರಿತೂಗಿಸಲು ವಿಧಿಸುವ ತೆರಿಗೆ ಇದಾಗಿದ್ದು, ಖಜಾನೆಯ ಭಾರವನ್ನು ಇಳಿಸುತ್ತಿತ್ತು. ಹೊಳೇನರಸೀಪುರದ ಎರಡು ಶಾಸನಗಳಲ್ಲಿ ಉಲ್ಲೇಖಗೊಂಡ 'ಕಟಕಸೇಸೆ' ಸೇನಾ ಶುಲ್ಕವಾಗಿದ್ದು[೩೧], ಸಾಮಾನ್ಯವಾಗಿ ಎಲ್ಲಾ ಕಾಲಘಟ್ಟದಲ್ಲಿಯೂ ಕಂಡುಬರುವಂತೆ ಕಾಣುತ್ತದೆ. ರಾಜರುಗಳ ರಾಜ್ಯದಾಹ ಹೆಚ್ಚಾದಂತೆ ಸಾಮ್ರಾಜ್ಯದ ವಿಸ್ತರಣೆ ಹಾಗೂ ಶತ್ರುಭಯ ಸರ್ವೇಸಾಮಾನ್ಯವಾಗಿದ್ದು, ತನ್ನ ಪ್ರಜೆಗಳ ಜೀವ ಹಾಗೂ ಸಂಪತ್ತಿನ ರಕ್ಷಣೆಯ ಹೊಣೆ ಸದಾ ರಾಜನ ಮೇಲಿತ್ತು. ಆದ್ದರಿಂದ ಸೇನಾಪಡೆಯ ಕಾರ್ಯಾಚರಣೆಗಳ ವೆಚ್ಚವನ್ನು ಫಲಾನುಭವಿಗಳೇ ಹೊಂದಿಸಬೇಕಾಗಿತ್ತು. ಕ್ರಿ.ಶ. ೧೨೭೬ರಿಂದ ಕ್ರಿ.ಶ. ೧೩೧೦ರ ವರೆಗಿನ ಶಾಸನಗಳು ಕಟಕ ಸೆಸೆ, ಆನೆಯ ಸೆಸೆ, ಕುದುರೆಯ ಸೆಸೆ, ಖಾಣ ಮುಂತಾದ ತೆರಿಗೆ ಪದಗಳು ಹೆಚ್ಚಾಗಿ ಕಂಡುಬಂದಿರುವುದು ಕೆಲವು ಪ್ರಶ್ನೆಗಳಿಗೆ ದಾರಿ ಮಾಡಿಕೊಡುತ್ತದೆ. ಇದೇ ರೀತಿ 'ತಳವಾರದ ಭಂಡಿ[೩೨]'ಯೂ ನಗರದ ರಕ್ಷಕ ಅಥವಾ ಕಾವಲುಗಾರರಿಗೆ ಸಂಚಾರಕ್ಕೆ ನೀಡುತ್ತಿದ್ದ ವೆಚ್ಚಕ್ಕಾಗಿ ವಿಧಿಸಿದ ತೆರಿಗೆ ಇರಬಹುದು.

ಈ ತಾಲ್ಲೂಕಿನಲ್ಲಿ ಕಂಡುಬರುವ ಇನ್ನೊಂದು ತೆರಿಗೆ ಪದವೆಂದರೆ 'ಹೊಗೆದೆರೆ'. ಕಬ್ಬಿನ ಹಾಲನ್ನು ಕಾಯಿಸಿ

ತೆಗೆಯುತ್ತಿದ್ದ ಬೆಲ್ಲದ ಮೇಲಿನ ತೆರಿಗೆ ಎಂಬ ಅಭಿಪ್ರಾಯ ವ್ಯಕ್ತವಾಗಿದೆ[೨೩]. ಇನ್ನೊಂದೆಡೆ ಇಟ್ಟಿಗೆ ತಯಾರಿಕಾ ಘಟಕದ ಮೇಲೆ ವಿಧಿಸುವ ತೆರಿಗೆ ಎಂಬ ಸೂಚನೆಯಿದೆ[೨೪]. ಒಟ್ಟಾರೆಯಾಗಿ ಈ ಎರಡು ಅಭಿಪ್ರಾಯಗಳು ಈ ಪ್ರದೇಶದಲ್ಲಿನ ಗುಡಿಕೈಗಾರಿಕೆಗಳ ಬೆಳವಣಿಗೆಗೆ ಸಾಕ್ಷಿಯಾಗಿದೆ. ಇಲ್ಲಿ ಉಲ್ಲೇಖಿಗೊಂಡ ಮತ್ತೊಂದು ತೆರಿಗೆ ಪದ 'ಬಿಟ್ಟಿ' ಭಾರತದಾದ್ಯಂತ ಕಂಡುಬಂದಿದೆ. ಇದೊಂದು ದೈಹಿಕ ಶ್ರಮರೂಪದ ತೆರಿಗೆಯಾಗಿದ್ದು, ಇದನ್ನು ಮನು ಮತ್ತು ಇನ್ನಿತರ ಸ್ಮೃತಿಗಳಲ್ಲಿ 'ಕುಶಲ ಕರ್ಮಿಗಳು, ಶೂದ್ರರು, ಮಾಸಿಕವಾಗಿ ಒಂದೆರಡು ದಿನಗಳಾದರೂ ದೈಹಿಕ ಶ್ರಮವನ್ನು ರಾಜ್ಯಕ್ಕೆ ಕೊಡಬೇಕೆಂದಿದ್ದಾರೆ'. ಅದೇ ರೀತಿ ತನ್ನ ಯಜಮಾನನಿಗೂ ಕೂಡ ನೀಡಬೇಕಾಗಿತ್ತು. ಆದರೆ ದಕ್ಷಿಣ ಭಾರತದಲ್ಲಿ ಯಾವುದಾದರೂ ನೀರಾವರಿ ಯೋಜನೆಗಳು ಮತ್ತು ದೇವಾಲಯಗಳ ನಿರ್ಮಾಣಕ್ಕಾಗಿ ಜನರಿಂದ ಉಚಿತವಾಗಿ ಅಥವಾ ಬಿಟ್ಟಿಯಾಗಿ ದೈಹಿಕ ಶ್ರಮವನ್ನು ರಾಜ್ಯದ ಹಿತಕ್ಕೋಸ್ಕರ ನೀಡಬೇಕಾಗಿತ್ತು. ಇದಲ್ಲದೆ ಈ ಪ್ರದೇಶದ ಶಾಸನಗಳಲ್ಲಿ ಕಂಡುಬರುವ ಇನ್ನಿತರ ತೆರಿಗೆಗಳನ್ನು ಕೆಲವೊಂದು ಸಂದರ್ಭದಲ್ಲಿ ಮಾತ್ರ ನೋಡಬಹುದಾಗಿದೆ. 'ಪುತ್ರೋತ್ಸಾಹ'[೩೫] ಎಂಬ ತೆರಿಗೆ ಗಂಡು ಮಗುವಿನ ಜನನಕ್ಕೆ ವಿಧಿಸುವಂತ ತೆರಿಗೆಯಾಗಿದ್ದು, ಗಂಡು ಶಿಶು ಒಂದು ವಿಶೇಷ ಸೌಲಭ್ಯ ಅಥವಾ ಸಾಮಾಜಿಕ ಗೌರವದ ವಿಷಯವೆಂದು ಪರಿಗಣಿಸಲಾಗಿತ್ತು. ರಾಜನು ಪಟ್ಟಾಭಿಷೇಕ ಕಾರ್ಯಕ್ರಮಕ್ಕೆ ತೆರಳುವ ವೆಚ್ಚವನ್ನು ಸರಿದೂಗಿಸಲು ವಿಧಿಸುವ ತೆರಿಗೆಯೇ 'ಪಟ್ಟಬಂಧ'ವಾಗಿರಬೇಕು[೩೬]. ಈ ಪ್ರದೇಶ ರಾಜಧಾನಿಗೆ ಸಮೀಪವಾಗಿಲ್ಲದ್ದರಿಂದ ಇಂತಹ ತೆರಿಗೆಗೆ ಇಲ್ಲಿಯ ಜನರು ಅರ್ಹರಾಗಿದ್ದಿರುವ ಸಾಧ್ಯತೆಗಳಿವೆ.

'ನೂಲು[೩೭]' ಎಂಬ ಪದವು ನೂಲಿನ ಮೇಲಿನ ತೆರಿಗೆಯನ್ನು ಪ್ರತಿನಿಧಿಸುತ್ತದೆ. ಅಲ್ಲದೆ ನೂಲು ಎಂದರೆ ಎತ್ತರವನ್ನು ಅಳೆಯುವ ಪ್ರಮಾಣ ಎಂಬ ಅರ್ಥವೂ ಇದೆ. 'ನೂಲ ಕಳುಹು[೩೮]' ಎಂಬ ಪದ ಶಾಸನಗಳಲ್ಲಿ ಕಂಡಬಂದಿದ್ದು ಕಳುಹು ಎಂದರೆ ರವಾನಿಸು, ಅಥವಾ ಸಾಗಿಸು ಎಂದು ಅರ್ಥೈಸಬಹುದು. ನೂಲನ್ನು ಸಾಗಿಸುವಾಗ ತೆರುವ ಸುಂಕವೂ ಆಗಿರಬಹುದು. ಇದರೊಂದಿಗೆ 'ಮಗ್ಗ ಪಂಚಕಾರುಕ'[೩೯] ಮತ್ತು 'ಮಗ್ಗದೆರೆ'[೪೦] ತೆರಿಗೆಗಳು ವೃತ್ತಿ ತೆರಿಗೆಗಳಾಗಿವೆ. ತೆರಿಗೆಗಳನ್ನು ಬಟ್ಟೆ ತಯಾರಿಕಾ ಘಟಕಗಳಲ್ಲದೇ ಐದು ಕುಶಲ ಕರ್ಮಿಗಳ ಮೇಲೂ ವಿಧಿಸಲಾಗುತ್ತಿತ್ತೆಂಬ ಅಂಶವು ಬೆಳಕಿಗೆ ಬರುತ್ತದೆ.

'ಸೊಲ್ಲಗೆ' ಎಂಬ ಪದವು ಧಾನ್ಯ ಅಥವಾ ದ್ರವ ಪದಾರ್ಥಗಳನ್ನು ಅಳೆಯುವ ಪ್ರಮಾಣ ಎಂಬ ಅರ್ಥ ಇಲ್ಲಿ ವ್ಯಕ್ತವಾಗಿವೆ. ಕೆಲವು ಸಂದರ್ಭಗಳಲ್ಲಿ ಅಳತೆಗಳ ಮೇ ಆಡಳಿತ ನಿಯಂತ್ರಣ ಹೇರಲ್ಪಡಬೇಕು. ಏಕೆಂದರೆ ಸಾಕ ಬಾರಿ ಅಳತೆಯಲ್ಲಾದ ಮೋಸವನ್ನು, ವ್ಯಾಪಾರಿಗ ವಂಚನೆಯನ್ನು ಶಾಸನಗಳಲ್ಲಿ ನೋಡಬಹುದು. ಇದನ್ನು ತಿಳಿದ ರಾಜನು ಅಳತೆಯ ವಿಷಯದಲ್ಲಿ ಮೋ ನಡೆಯದಂತೆ ಸ್ವತಃ ಗದ್ದೆಯನ್ನು ಅಳೆದ ಉದಾಹರಣೆಗಳಿವೆ[..]. ಅಳತೆ ಮತ್ತು ತೂಕಗಳ ಮೇಲೆ ರಾಜಮುದ್ರೆಗಳನ್ನು ಹಾಕುತ್ತಿ ಸಂಪ್ರದಾಯ ಆತನ ನಿಯಂತ್ರಣಕ್ಕೆ ಸಾಕ್ಷಿ ಎಂಬುದು ಗಮನಾರ್ಹ. ಇಲ್ಲಿ ಬರುವ ಇನ್ನಿತರ ತೆರಿಗೆ ಪದಗಳೆಂದ 'ನಿಬಂಧಿ'[೪೨] ಸಾಂದರ್ಭಿಕವಾಗಿ ಇಂತಹ ಪದಗಳನ್ನು ಅರ್ಥೈಸುವ ಅಗತ್ಯವಿದೆ. ಸಾಮಾನ್ಯವಾಗಿ ಆಡಳಿತವು ನಿರ್ಧರಿಸಿದ ಒಂದಿಷ್ಟು ಭಾಗವನ್ನು ಪಾವತಿಸು ಎನ್ನುವಂತೆ ಕಂಡುಬರುತ್ತದಾದರೂ ವಿಶೇಷವಾಗಿ ನೂಲು, ಸೊಲ್ಲ. ನಿಬಂಧಿ ಪದಗಳನ್ನು ವಾಣಿಜ್ಯ ತೆರಿಗೆಗಳನ್ನು ವಿಧಿಸುವ ಪ್ರಮಾಣವನ್ನು ನಿರ್ಧರಿಸುವಾಗ ಬಳಸಲಾದ ಪದಗಳಂತೆ ಕಾಣುತ್ತವೆ. ಆದ್ದರಿಂದ ವಾಣಿಜ್ಯ ವ್ಯವಹಾರಗಳ ಮೇಲೆ ತೆರಿಗೆಗಳು ವಿಧಿಸುತ್ತಿದ್ದದ್ದನ್ನು ಇಲ್ಲಿ ಗಮನಿಸಬಹುದು.

ಕ್ರಿ.ಶ. ೧೨೩೮ರ ಎಳ್ಳೇಶಪುರ ಶಾಸನ 'ಬಾಲವಣದೆರೆ' ತೆರಿಗೆ ಪದವನ್ನು ಹೊಂದಿದೆ. ಕೇಶೀರಾಜನ 'ಶಬ್ದಮಣಿ ದರ್ಪಣ' ಕೃತಿ ಪಶುಗಳ ಮೇಲೆ ವಿಧಿಸುವ ತೆರಿಗೆಯೆಂದು ದೃಢಪಡಿಸುತ್ತದೆ. ಈತನ ಪ್ರಕಾರ 'ಹೈ ಹಯನು ಶಿವನ ಒಂದು ಎತ್ತಾದರೂ ಸರಿಯೆ ಬಾಲಪಣವನ್ನು ಕೇಳದೆ ಬಿಡುವವನಲ್ಲ' (ಬಾಲವಣಂ ಬೇಡುವವನೊಂದೆ ಗೊಂದೆ ಗಮನಂ ಗಾರತಿಯಂ ಹೈಹಯಂ) ಎನ್ನುತ್ತದೆ. ಒಂದು ಹಸುವಿಗೆ ತೆರಿಗೆ ಹಾಕುವ ಎನ್ನುವ ಬದಲು ಒಂದು ಬಾಲಕ್ಕೆ ಎಂದು ಹೇಳುವ ಸಂಪ್ರದಾಯ ಈಗಲೂ ಪ್ರತೀತಿಯಲ್ಲಿದೆ. ಆದರೆ ಕೆಲವೊಂದು ಶಾಸನಗಳಲ್ಲಿ ಹೊಲೆಯರ ಬಾಲಪಣ ಎಂದು ನಮೂದಿಸಿರುವುದರಿಂದ ಇಂತಹ ತೆರಿಗೆಯನ್ನು ಒಂದು ನಿರ್ದಿಷ್ಟ ಸಮುದಾಯದ ಮಕ್ಕಳ ಮೇಲೆ ವಿಧಿಸ ಅಥವಾ ಸಮುದಾಯದ ಮಕ್ಕಳ ಮೇಲೆ ವಿಧಿಸಬಹುದಾದ ತೆರಿಗೆಯಾಗಿದೆ[೪೩].

'ಹೊಲೆಯ' ಎಂಬ ಪದವು ಹೊಲ ಅಥವಾ ಗದ್ದೆ ಎಂಬ ಶಬ್ದದಿಂದ ರೂಪಗೊಂಡಿರುವುದರಿಂದ ಹೊಲೆಯ ಎಂದರೆ ಹೊಲದ ಒಡೆಯ ಅಥವಾ ಕೃಷಿ ಕಾರ್ಮಿಕರಾಗಿ ಬಹುದು. ಇವರು ಸಾಮಾನ್ಯವಾಗಿ ತಮ್ಮ ದನಕರುಗಳ ತಮ್ಮ ಕೃಷಿ ಚಟುವಟಿಕೆಗಳಿಗೆ ಅವಶ್ಯವಾದ್ದರಿಂದ ಪಾಲನೆ ಮಾಡುತ್ತಿದ್ದರು. ಆದ್ದರಿಂದ ಇತರ ಶಾಸನಗಳ ಉಲ್ಲೇಖಿಸಿರುವಂತೆ, ಹೊಲೆಯರ ಬಾಲಪಣವೆಂದರೆ ಪಶುವಿನ ಮೇಲೆ ವಿಧಿಸುವ ತೆರಿಗೆಯೆಂದು ಹೇಳಲಾದರೂ

ಹೊಲೆಯರು ಎಂಬುದೊಂದು ವೃತ್ತಿ. ಅವರು ವಧಿಸಿದ ಪ್ರಾಣಿಗಳ ಚರ್ಮದ ಮೇಲೆ ವಿಧಿಸುವ ತೆರಿಗೆ ಇದಾಗಿರಬಹುದು[೪೪].

'ಜಾತಾಯ' (ಜಾತ್ರಾಯ) ಎಂಬ ತೆರಿಗೆಯನ್ನು ಸಮೂಹ, ಮೆರವಣಿಗೆ, ಸಂತೆ, ಅಥವಾ ಇನ್ನಿತರ ಜನಸಮೂಹ ಸೇರಿದಾಗ ಸಂಘಟಕರ ಮೇಲೆ ವಿಧಿಸಿದ ತೆರಿಗೆಯಾಗಿದೆ. ಕೆಲವೊಂದು ಸಾಮಾಜಿಕ ಮತ್ತು ಮನೋರಂಜನಾ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ವ್ಯಕ್ತಿಗಳು ನೃತ್ಯ ಪ್ರದರ್ಶನ, ಸಂಗೀತ ಕಚೇರಿ ಇತ್ಯಾದಿಗಳ ಮೇಲೆ ತೆರಿಗೆಯನ್ನು ರಾಜರು ವಿಧಿಸುತ್ತಿದ್ದರು[೪೫].

ಅಂತೆಯೇ 'ದಳಮಿಳಿ'[೪೬] ಎಂಬ ತೆರಿಗೆ ಸೈನ್ಯ ಸಮೂಹ ಅಥವಾ ಗುಂಪಿನ ಮೇಲೆ ವಿಧಿಸಿದ್ದ ತೆರಿಗೆಯಾಗಿರಬೇಕು. 'ರಾಯಸ ನಿಬಂಧಿ' ಎಂಬ ಪದವು ರಾಜಪ್ರತಿನಿಧಿ ಅಥವಾ ರಾಜಗುರುಗಳು ನಡೆಸುವ ರಾಜತಾಂತ್ರಿಕ ವ್ಯವಹಾರಗಳಿಗೆ ಅಥವಾ ಪತ್ರವ್ಯವಹಾರಗಳ ವೆಚ್ಚವನ್ನು ತೆರಿಗೆ ರೂಪದಲ್ಲಿ ಸಂಗ್ರಹಿಸಿದ್ದಿರಬೇಕು.

ಈ ಅಧ್ಯಯನಕ್ಕೊಳಪಟ್ಟ ಕೆಲವು ಶಾಸನಗಳಲ್ಲಿ ನಾವು 'ಸುಂಕ' ಮತ್ತು 'ಹೆಜ್ಜುಂಕ' ಎನ್ನುವ ಪದಗಳನ್ನು ಗಮನಿಸಬಹುದು. ಸುಂಕ ಪದವು ಸಂಸ್ಕೃತದ ಶುಲ್ಕ ಎಂಬ ಪದದಿಂದ ರೂಪುಗೊಂಡಿದ್ದು, ಯಾವುದೇ ಒಂದು ವಸ್ತುವನ್ನು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಸಾಗಿಸುವಾಗ ವಿಧಿಸುವ ಸುಂಕವೇ ಶುಲ್ಕ. ಆದರೆ ಇದು ಕೆಲವೊಂದು ಸಂದರ್ಭದಲ್ಲಿ ಅಗಾಧವಾದ ಅರ್ಥವನ್ನು ಪಡೆದುಕೊಂಡ ನಿದರ್ಶನಗಳಿವೆ. ಅದರಲ್ಲೂ ಹೆಜ್ಜುಂಕ ಎಂದರೆ ಹೆಚ್ಚಿನ ಸುಂಕ. ಸಾಮಾನ್ಯವಾಗಿ ಇದನ್ನು ಅಡಕೆ ಮತ್ತು ವೀಳ್ಯದೆಲೆ ಮೇಲೆ ವಿಧಿಸುತ್ತಿದ್ದರು[೪೭]. ಏಕೆಂದರೆ ಇವು ಹೆಚ್ಚು ವ್ಯಾಪಕವಾಗಿ ಮತ್ತು ದಿನನಿತ್ಯದ ವಸ್ತುಗಳಾಗಿದ್ದರಿಂದ ಹೆಚ್ಚು ಆದಾಯ ತರುವ ಮೂಲವಾಗಿದೆ. ಹೊಯ್ಸಳರ ಸಮಕಾಲೀನ ಕೆಲವು ಗ್ರಂಥಗಳು ಸುಂಕಪದ್ಧತಿ ಮತ್ತು ಅದರ ಪ್ರಮಾಣವನ್ನು ನಿಗದಿಪಡಿಸಿರುವುದನ್ನು ನಾವು ನೋಡಬಹುದು. ಉದಾಹರಣೆಗೆ: ಸೋಮೇಶ್ವರನ ಪ್ರಕಾರ ಪ್ರಾಣಿಗಳು ಮತ್ತು ಚಿನ್ನದ ಮೇಲೆ ಶೇಕಡಾ ೫೦ರಷ್ಟು ಸುಂಕ ವಿಧಿಸಬೇಕು. ಇನ್ನಿತರ ವಸ್ತುಗಳಾದ ಸುಗಂಧ ದ್ರವ್ಯ, ಔಷಧಿ, ಹೂವು, ಹಣ್ಣು, ತರಕಾರಿ, ಮಣ್ಣಿನ ಮಡಿಕೆ, ಚರ್ಮದ ಸಾಮಗ್ರಿ ಇತ್ಯಾದಿಗಳ ಮೇಲೆ ಶೇಕಡಾ ೧೬ರಷ್ಟು ಸುಂಕವನ್ನು ವಿಧಿಸಬಹುದೆಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾನೆ[೪೮]. ಹೊಯ್ಸಳರ ವಾಣಿಜ್ಯ ವ್ಯವಹಾರವು ಸಮೃದ್ಧವಾಗಿದ್ದರಿಂದ ಸುಂಕದಿಂದ ಬಂದ ಆದಾಯವು ಆದಾಯದ ಪ್ರಮುಖ ಭಾಗವಾಗಿತ್ತು.

'ಹದಿಕೆ'[೪೯] ಮತ್ತು 'ಕುದುರೆಯ ಹದಿಕೆ'[೫೦] ಎಂಬ ತೆರಿಗೆ ಪದಗಳು ತಲಾ ಒಂದು ಬಾರಿ ಶಾಸನಗಳಲ್ಲಿ ಉಲ್ಲೇಖಗೊಂಡಿವೆ. ಕೃಷಿಕರ ಮುಖ್ಯ ಆಹಾರ ಅಕ್ಕಿಯಾಗಿದ್ದು, ಸಾಮಾನ್ಯವಾಗಿ ಅವರು ಹುಲ್ಲುಹೊದಿಕೆಯ ಮನೆಗಳಲ್ಲಿ ವಾಸಿಸುತ್ತಿದ್ದರು. ಇಂತಹ ಮನೆಗಳ ಮೇಲೆ ವಿಧಿಸುವ ತೆರಿಗೆಯೇ 'ಹದಿಕೆ'[೫೧]. ಅದಂತೆ ಕುದುರೆಯ ಹದಿಕೆಯೂ ಕೂಡ ಒಂದು ರೀತಿಯ ಕಪ್ಪದ ರೂಪದ ತೆರಿಗೆಯಾಗಿದ್ದು ಕೆಲವೊಂದು ಸಂದರ್ಭದಲ್ಲಿ ಮಾತ್ರ ರಾಜನು ಇದನ್ನು ನಿರೀಕ್ಷಿಸುತ್ತಿದ್ದಂತೆ ವ್ಯಕ್ತವಾಗುತ್ತದೆ. ಕ್ರಿ.ಶ. ೧೨೦೦ರಲ್ಲಿ ದೊರೆತ ಶಾಸನವನ್ನು 'ಕೋಟೆಯ ಹದಿಕೆ' ಎಂಬ ಶುಲ್ಕ ಪದವನ್ನು ಪ್ರಸ್ತಾಪಿಸಿರುವುದು 'ಹದಿಕೆ' ಎಂಬುದು ಒಂದು ರೂಪದ ತೆರಿಗೆಯಾಗಿತ್ತೆಂಬುದಕ್ಕೆ ಸಾಕ್ಷಿ ಒದಗಿಸುತ್ತದೆ[೫೨].

ಅದರಂತೆಯೇ 'ಕೊಟ್ಟಗೆದೆರೆ' ಮತ್ತು 'ಮನೆದೆರೆ' ಆಸ್ತಿ ತೆರಿಗೆಯಾಗಿದ್ದು, ಸಾಕುಪ್ರಾಣಿಗಳಾದ ದನ, ಕುರಿ, ಮೇಕೆ, ಎಮ್ಮೆ ಮುಂತಾದವುಗಳನ್ನು ಒಟ್ಟಿಗೆ ಸೇರಿಸಿ, ಒಂದೆಡೆ ಕೂಡಿ ಹಾಕುವ ಸ್ಥಳವೇ ಕೊಟ್ಟಿಗೆ. ಪ್ರಾಣಿಗಳನ್ನು ಕೂಡಿ ಹಾಕುವ ಸ್ಥಳ ಅಥವಾ ಹಟ್ಟಿ ಅಥವಾ ಕೊಟ್ಟಿಗೆ ಮೇಲೆ ಮತ್ತು ಮನೆಯ ಮಾಲಕತ್ವದ ಮೇಲೆ ಕಂದಾಯದ ರೂಪದಲ್ಲಿ ರಾಜ್ಯಾಡಳಿತವು ಇಂತಹ ತೆರಿಗೆಗಳನ್ನು ವಿಧಿಸುತ್ತಿತ್ತು.

ಈ ಲೇಖನದಲ್ಲಿ ಪ್ರಮುಖವಾಗಿ ಪ್ರಧಾನ ಆದಾಯದ ಮೂಲವಾದ ಸಿದ್ಧಾಯದಿಂದ ಎಲ್ಲಾ ವೆಚ್ಚಗಳನ್ನು ಭರಿಸಲು ಸಾಧ್ಯವಾಗದೆ ರಾಜ್ಯಾಡಳಿತವು ಆ ಪ್ರದೇಶದ ಆರ್ಥಿಕ ಸ್ಥಿತಿಗತಿಗಳನ್ನು ಗಮನಿಸಿ, ಇತರ ವೆಚ್ಚಗಳನ್ನು ಭರಿಸಲು 'ಅಭ್ಯಾಗತೆ'[೫೩] ಎಂಬ ಒಂದು ಬಗೆಯ ತೆರಿಗೆಯನ್ನು ವಿಧಿಸಿರುವುದು ನೋಡಿದಾಗ ಈ ಪ್ರದೇಶವು ರಾಜಧಾನಿಗೆ ಸಮೀಪದಲ್ಲಿರುವುದಲ್ಲದೆ ಕಾವೇರಿಯ ಉಪನಯದಿಯಾದ ಹೇಮಾವತಿಯ ಹರಿವಿನಿಂದ ಫಲವತ್ತಾಗಿದ್ದು, ನೀರಾವರಿ ಸೌಲಭ್ಯವನ್ನು ಹೊಂದಿತ್ತು. ಆದ್ದರಿಂದ ಜನರ ಆದಾಯವೂ ಹೆಚ್ಚಾದ್ದರಿಂದ ಆಡಳಿತವು 'ಅಭ್ಯಾಗತೆ'ಯಂತಹ ವಿಶೇಷ ತೆರಿಗೆಯನ್ನು ಪ್ರಾದೇಶಿಕವಾಗಿ ಜನರ ಮೇಲೆ ವಿಧಿಸುತ್ತಿದ್ದರೆಂದು ವಿದಿತವಾಗುತ್ತದೆ. ಈ ಪ್ರದೇಶದಲ್ಲಿ ದೊರೆತ ಶಾಸನಗಳ ಕಾಲಘಟ್ಟವನ್ನು ಸರಿಯಾಗಿ ಗಮನಿಸಿದರೆ ಕ್ರಿ.ಶ. ೧೧ನೇ ಶತಮಾನದ ಕೇವಲ ಒಂದು ಶಾಸನವನ್ನು ಮಾತ್ರ ನಾವು ಕಾಣಬಹುದು. ಇದು ಯಾವುದೇ ಹೊಯ್ಸಳ ಅರಸರ ಹೆಸರನ್ನು ಪ್ರಸ್ತಾಪಿಸದೇ ಇದ್ದರೂ 'ಹೆಗ್ಗಡಲು' ಎಂಬ ಹಳ್ಳಿಯನ್ನು ಸಂಪೂರ್ಣವಾಗಿ ಸುಂಕರಹಿತವನ್ನಾಗಿಸಿದ ಬಗ್ಗೆ ತಿಳಿಸಲಾಗಿದೆ. ಹಾಗೆಯೇ ೧೨ನೇ ಶತಮಾನದಲ್ಲಿ ನಮಗೆ ಯಾವುದೇ ತೆರಿಗೆ ಪದಗಳನ್ನು ಹೊಂದಿರುವ ಶಾಸನಗಳು ದೊರಕುವುದಿಲ್ಲ. ಇದಕ್ಕೆ ಹೊಯ್ಸಳ ಅರಸರು ಸಾಮಂತರಾಗಿದ್ದುದು ಕಾರಣವಾಗಿರಬಹುದು. ಸಾಮ್ರಾಜ್ಯ ಬೆಳೆದಂತೆ ೧೩ನೇ ಶತಮಾನ ಮತ್ತು ೧೪ನೇ ಶತಮಾನದ ಮೊದಲ

ದಶಕದವರೆಗೆ ಸಾಕಷ್ಟು ತೆರಿಗೆ ಪದಗಳನ್ನು ಗಮನಿಸಲಾಗಿದೆ. ಈ ಶಾಸನಗಳ ತೆರಿಗೆ ಪದಗಳಲ್ಲಿ 'ಸಿದ್ಧಾಯ' ಸಾರ್ವತ್ರಿಕವಾದ, ಬಹಳ ಹೆಚ್ಚಾಗಿ ಭೂಮಿಗೆ ಸಂಬಂಧಿಸಿದ ತೆರಿಗೆಯಾಗಿದ್ದು, ಅಭ್ಯಾಗತೆ, ಅಳಿವು, ಅನ್ಯಾಯ ಮುಂತಾದ ತೆರಿಗೆ ಪದಗಳು ಸಂದರ್ಭಕ್ಕನುಗುಣವಾಗಿ ವಿಧಿಸಿದ್ದನ್ನು ಶಾಸನಗಳು ವ್ಯಕ್ತಪಡಿಸುತ್ತವೆ.

ಖಾಣ, ಕಟ್ಟುಗೂಳು, ಕಟ್ಟುಗುತ್ತಗೆ, ಕಿರುಕುಳ, ಹದಿಕೆ, ಕುದುರೆಯ ಹದಿಕೆ, ಕೊಟ್ಟಗೆದೆರೆ, ಮನೆದೆರೆ, ಮುಂತಾದ ತೆರಿಗೆ ಪದಗಳೆಲ್ಲ ಸಾಮಾನ್ಯ ಜನತೆಯ ಮೇಲೆ ವಿಧಿಸಿದ್ದು ವ್ಯಕ್ತವಾಗಿದೆ. ಆನೆಸೇಸೆ, ಕುದುರೆಸೇಸೆ, ಕಟಕಸೇಸೆ, ಪದಗಳು ಸೇನೆಯ ವೆಚ್ಚಕ್ಕಾಗಿ ಸಂದರ್ಭಕ್ಕನುಸಾರ ಪ್ರಾದೇಶಿಕವಾಗಿ ವಿಧಿಸಿರುವುದು ಉಲ್ಲೇಖಗೊಂಡಿದೆ.

ರಾಜನಿಗೆ ರಾಜ್ಯಾಡಳಿತಕ್ಕೆ ಸಂಬಂಧಿಸಿದಂತೆ ವೆಚ್ಚವನ್ನು ಈ ಮೇಲಿನ ತೆರಿಗೆಯ ಮೂಲಗಳಿಂದ ಹೊಂದಿಸಿಕೊಳ್ಳುತ್ತಿದ್ದನು. ಕೊರತೆ ಕಂಡಾಗ ಹೊಸ ತೆರಿಗೆಗಳನ್ನು ವಿಧಿಸುತ್ತಿದ್ದು, ಈ ಸಾಮ್ರಾಜ್ಯದ ಆಳ್ವಿಕೆಯ ೧೩ನೇ ಶತಮಾನದ ದ್ವಿತೀಯಾರ್ಧದಿಂದ ಕ್ರಿ.ಶ. ೧೩೧೦ರ ವರೆಗಿನ ಶಾಸನಗಳಲ್ಲಿ ಹೆಚ್ಚು ಹೆಚ್ಚು ತೆರಿಗೆಗಳನ್ನು ವಿಧಿಸಿರುವುದನ್ನು ನಾವು ಕಾಣುತ್ತೇವೆ.

ಈ ಮೇಲಿನ ವಿವರಗಳು ಹೊಯ್ಸಳರ ಆರಂಭ ಕಾಲದಲ್ಲಿ ತೆರಿಗೆ ಪದಗಳು ಬಹಳ ವಿರಳವಾಗಿದ್ದು, ನಂತರದ ಕಾಲದಲ್ಲಿ ಅವು ಕ್ರಮೇಣವಾಗಿ ಹೆಚ್ಚಾಗಿದ್ದನ್ನು ತಿಳಿಸುತ್ತದೆ. ಈ ರೀತಿಯ ಹೆಚ್ಚಳ ಕೆಲವು ಅನುಮಾನಗಳಿಗೆ ದಾರಿ ಮಾಡಿಕೊಡುತ್ತದೆ. ಅವುಗಳೆಂದರೆ : ೧) ರಾಜ್ಯ ವಿಸ್ತರಣೆಗಾಗಿ ಬೇಕಾದ ಸೌಲಭ್ಯಗಳನ್ನು ಒದಗಿಸಲು ಅಧಿಕ ಸಂಖ್ಯೆಯ ಹೊಸ ತೆರಿಗೆಗಳನ್ನು ವಿಧಿಸಲಾಗಿತ್ತೇ ? ೨) ಅಥವಾ ತಮ್ಮ ರಾಜ್ಯವನ್ನು ಶತ್ರುಗಳು ದಾಳಿ ಮಾಡಿದಾಗ ಅವರಿಗೆ ಕಪ್ಪ ಕಾಣಿಕೆ ಕೊಟ್ಟು ವಾಪಾಸು ಕಳುಹಿಸುವುದಕ್ಕಾಗಿಯೇ? ೩) ಅಥವಾ ಆಂತರಿಕ ಕಲಹಗಳು ಹೆಚ್ಚಾದಾಗ ಭದ್ರತೆ ಮತ್ತು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದಕ್ಕಾಗಿಯೇ ? ಎಂಬುದು. ಇವುಗಳಲ್ಲಿ ಎರಡನೆಯ ಮತ್ತು ಮೂರನೆಯದು ಹೆಚ್ಚು ಸಮಂಜಸವಾದುದು ಎಂಬುದು ಸ್ಪಷ್ಟವಾಗಿ ವ್ಯಕ್ತವಾಗುತ್ತದೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. 'ಎಪಿಗ್ರಾಫಿಯಾ ಕರ್ನಾಟಿಕ, ಸಂ.೮, (ಮೈವಿವಿ), ಪು.೧–೧೦೧.
೨. ಅದೇ ಸಂಖ್ಯೆ ೮, ಹೊನ ೭.
೩. ವಿಲಿಯಂ ಕೊವೆಲ್ಲೊ, 'ದಿ ಹೊಯ್ಸಳ ವಂಶ' ಮುಂಬಯಿ–೧೯೫೦, ಪುಟ ೭೨–೭೩.
೪. ಜೆ.ಡಿ.ಎಂ. ಡಿರೆಟ್ 'ದಿ ಹೊಯ್ಸಳಾಸ್ ಎ ಮಿಡಿವಲ್ ಇಂಡಿಯನ್ ರಾಯಲ್ ಫ್ಯಾಮಿಲಿ' ಮದ್ರಾಸು ೧೯೫೭, ಪುಟ ೮೯–೯೪.
೫. ಅದೇ, ಸಂಖ್ಯೆ ೮, ಹೊನ ೯೩, ೯೪, ೯೫, ೧೧೯.
೬ ಜೆ.ಡಿ.ಎಂ. ಡಿರೆಟ್, ಪೂರ್ವೋಕ್ತ, ಪುಟ ೧೨೨–೧೨೩.
೭. ಅದೇ, ಸಂಖ್ಯೆ ೮, ಹೊನ ೧, ೯೫.
೮. ಜೆ.ಡಿ.ಎಂ. ಡಿರೆಟ್, ಪೂರ್ವೋಕ್ತ, ಪುಟ ೧೪೦–೧೪೨.
೯. ಜೆ.ಡಿ.ಎಂ. ಡಿರೆಡ್, ಪೂರ್ವೋಕ್ತ, ಪುಟ ೧೪೯, ೧೫೦, ೧೬೨.
೧೦. ಡಾ. ಎಸ್. ಗುರುರಾಜಾಚಾರ್, 'ಸಂ ಆಸ್ಪೆಕ್ಟ್ಸ್ ಆಫ್ ಇಕಾನಮಿಕ್ ಅಂಡ್ ಸೋಷಿಯಲ್ ಲೈಫ್ ಇನ್ ಕರ್ನಾಟಕ' ಮೈಸೂರು ವಿಶ್ವವಿದ್ಯಾನಿಲಯ, ೧೯೭೪, ಪುಟ ೧೪೨.
೧೧. ಡಾ. ಎಸ್. ಗುರುರಾಜಾಚಾರ್, ಪೂರ್ವೋಕ್ತ, ಪುಟ ೧೪೩.
೧೨. ಹೆಚ್.ಎಸ್. ಉಷರಾಣಿ, ಪೂರ್ವೋಕ್ತ, ಪುಟ ೭–೮.
೧೩. ಎ.ಕ. ಸಂಖ್ಯೆ ೮, ಪುಟಗಳು ೧–೧೦೧., ೧೫. ಅದೇ.
೧೪. ಅದೇ ಸಂಖ್ಯೆ ೮, ಹೊನ ೧,೪೨,೮೫,೯೫.
೧೫. ಎ.ಕ. ಸಂಖ್ಯೆ ೮, ಪುಟಗಳು ೧–೧೦೧.
೧೬. ಹೆಚ್.ಎಸ್. ಉಷಾರಾಣಿ, ಪೂರ್ವೋಕ್ತ, ಪುಟ ೩೦–೩೧.
೧೭. ಡಾ.ಎಸ್. ಗುರುರಾಜಾಚಾರ್, ಪೂರ್ವೋಕ್ತ, ಪುಟ ೧೬೬
೧೮. ಡಾ. ಸೂರ್ಯನಾಥ ಯು. ಕಾಮತ್, ಪೂರ್ವೋಕ್ತ, ಪುಟ ೩೩.
೧೯. ಹೆಚ್.ಎಸ್. ಉಷಾರಾಣಿ, ಪೂರ್ವೋಕ್ತ, ಪುಟ ೨೫.
೨೦. ಎ.ಕ. ಸಂಖ್ಯೆ ೮, ಹೊನ ೧೧೯.
೨೧. ಡಾ. ಎಂ. ಚಿದಾನಂದಮೂರ್ತಿ, 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಬೆಂಗಳೂರು–೧೯೭೯, ಪುಟ ೪೧೨.
೨೨. ಡಾ. ಎಸ್. ಗುರುರಾಜಾಚಾರ್, ಪೂರ್ವೋಕ್ತ, ಪುಟ ೧೪೬
೨೩. ಡಾ. ಎಂ. ಚಿದಾನಂದಮೂರ್ತಿ, ಪೂರ್ವೋಕ್ತ, ಪುಟ ೪೫೦.
೨೪. ಅದೇ., ೨೭. ಅದೇ., ೨೮. ಅದೇ.
೨೫. ಹೆಚ್.ಎಸ್. ಉಷಾರಾಣಿ, ಪೂರ್ವೋಕ್ತ, ಪುಟ ೩೩.
೨೬ ಡಾ. ಎಸ್. ಗುರುರಾಜಾಚಾರ್, ಪೂರ್ವೋಕ್ತ, ಪುಟ ೧೬೪., ೩೧. ಅದೇ.
೨೭. ಎ.ಕ. ಸಂಖ್ಯೆ ೮, ಹೊಸ ೧, ೪೨.
೨೮. ಅದೇ ಹೊನ ೯೫.
೨೯. ಡಾ. ಎಂ. ಚಿದಾನಂದಮೂರ್ತಿ, ಪೂರ್ವೋಕ್ತ, ಪುಟ ೪೪೮.
೩೦. ಹೆಚ್.ಎಸ್. ಉಷಾರಾಣಿ, ಪೂರ್ವೋಕ್ತ, ಪುಟ ೨೯.
೩೧. ಎ.ಕ. ಸಂಖ್ಯೆ ೮, ಹೊನ ೧., ೩೭. ಅದೇ.
೩೨. ಎ.ಕ. ಸಂಖ್ಯೆ ೮, ಹೊನ ೪೨.
೩೩. ಅದೇ, ಹೊನ ೯೫., ೪೦. ಅದೇ, ಹೊನ ೭೨., ೪೧. ಅದೇ, ಹೊನ ೯೫.
೩೪. ಡಾ. ಎಂ. ಚಿದಾನಂದಮೂರ್ತಿ, ಪೂರ್ವೋಕ್ತ, ಪುಟ ೪೩೯.
೩೫. ಎ.ಕ. ಸಂಖ್ಯೆ ೮, ಹೊನ ೭೨.
೩೬. ಡಾ. ಎಂ. ಚಿದಾನಂದಮೂರ್ತಿ, ಪೂರ್ವೋಕ್ತ, ಪುಟ ೪೪೫.
೩೭. ಹೆಚ್.ಎಸ್. ಉಷಾರಾಣಿ, ಪೂರ್ವೋಕ್ತ, ಪುಟ ೨೦೯.
೩೮. ಅದೇ ಪುಟ ೩೦., ೪೭ ಎ.ಕ. ಸಂಖ್ಯೆ ೮, ಹೊನ ೯೫.
೩೯. ಡಾ.ಎಸ್. ಗುರುರಾಜಾಚಾರ್, ಪೂರ್ವೋಕ್ತ, ಪು. ೧೫೬–೧೫೭
೪೦. ಅದೇ, ೫೦. ಎ.ಕ. ಸಂಖ್ಯೆ ೮, ಹೊನ ೮೩.
೪೧. ಎ.ಕ. ಸಂಖ್ಯೆ ೮, ಹೊನ ೪೨., ೫೨. ಎ.ಕ. ಸಂಖ್ಯೆ ೮, ಹೊನ ೮೩, ೫೩. ಡಾ.ಎಸ್. ಗುರುರಾಜಾಚಾರ್, ಪೂರ್ವೋಕ್ತ, ಪು. ೧೬೩.
೪೨. ಎ.ಕ. ಸಂಖ್ಯೆ ೮, ಹೊನ ೧,೪೨,೮೩,೯೫.

ಎಕ್ಕಟಿಗ ವೀರರು: ಮತ್ತಷ್ಟು ಶಾಸನ ಹಾಗೂ ಸಾಹಿತ್ಯಿಕ ಉಲ್ಲೇಖಗಳ ಬೆಳಕಿನಲ್ಲಿ

ಡಾ. ಎನ್.ಆರ್. ಲಲಿತಾಂಬ*

ಕರ್ನಾಟಕದ ಎಕ್ಕಟಿಗರ ಬಗೆಗೆ ಈ ಹಿಂದೆ ಸುಮಾರು ಹತ್ತನೆಯ ಶತಮಾನದಿಂದ ಹದಿಮೂರನೆಯ ಶತಮಾನದ ವರೆಗಿನ ಶಾಸನಗಳನ್ನು ಆಧರಿಸಿ, ಎಕ್ಕಟಿಗರ ಕಾರ್ಯ ವೈಖರಿ, ಬಿರುದುಗಳು, ರಾಜರೊಂದಿಗಿನ ಅವರ ಸಂಬಂಧ, ಅವರ ತ್ಯಾಗ, ಪರಾಕ್ರಮ, ಮರಣಗಳು ಕನ್ನಡನಾಡಿನ ಇತರ ಪತಿಭಕ್ತ ವೇಳೆವಾಳಿ, ಜೋಳವಾಳಿ, ಭೇರುಂಡದ ಮೊತ್ತದ ಕೂಸರು, ಲೆಂಕರು, ಪ್ರಿಯಪುತ್ರ ಗರುಡ ಮುಂತಾದ ವೃತ್ತಿವೀರರಿಗಿಂತ ಕಡಿಮೆಯಲ್ಲ ಎಂಬುದನ್ನು ಸ್ಪಷ್ಟವಾಗಿ ವಿವರಿಸಲಾಗಿತ್ತು. ಅಲ್ಲದೆ ಎಕ್ಕಟಿಗರು ವಿಶಿಷ್ಟವಾದ ವೀರಪಡೆ ಯಾಗಿದ್ದು, ಎಕ್ಕೋಟಿಗಳಿಗಿಂತ ಭಿನ್ನವೆಂಬುದನ್ನು ವಿವರಿಸ ಲಾಗಿತ್ತು.

ಇತ್ತೀಚೆಗೆ ದೊರೆತಿರುವ ಕೆಲವು ಶಾಸನಗಳು, ವಚನಗಳು ಹಾಗೂ ಮಧ್ಯಕಾಲೀನ ಕನ್ನಡ ಕಾವ್ಯಗಳಲ್ಲಿನ ಅನೇಕ ಉಲ್ಲೇಖಗಳು, 'ಎಕ್ಕಟಿಗರು ವಿಶಿಷ್ಟವೀರ ಪಡೆಗಳು' ಎಂಬ ನನ್ನ ಅಭಿಪ್ರಾಯಕ್ಕೆ ಮತ್ತಷ್ಟು ಸಾಕ್ಷ್ಯಾಧಾರ ಒದಗಿಸಿರು ವುದಲ್ಲದೆ, ಎಕ್ಕಟಿಗರ ಬಗೆಗೆ ಮತ್ತಷ್ಟು ಕುತೂಹಲಕಾರಿಯಾದ ಅಂಶಗಳನ್ನು ಹೊರಚೆಲ್ಲಿವೆ.

ಎಕ್ಕಟಿಗ ವೀರರ ಅಸ್ತಿತ್ವ ಮತ್ತು ಕಾರ್ಯಚಟುವಟಿಕೆ ಕುರಿತಂತೆ ೧೦ನೆಯ ಶತಮಾನದಿಂದ ೧೮ನೆಯ ಶತಮಾನದವರೆಗೆ ಅವರ ಕಾಲವ್ಯಾಪ್ತಿ ವಿಸ್ತರಿಸಿರುವುದನ್ನು, ಭೌಗೋಳಿಕ ಪರಿಧಿಯು ಹೊಯ್ಸಳ ನಾಡಿನ ಆಚೆಗೂ ಹರಡಿರುವುದನ್ನು ಮತ್ತಷ್ಟು ಹೊಸ ಉಲ್ಲೇಖಗಳ ಬೆಳಕಿನಲ್ಲಿ ಈ ಪ್ರಬಂಧದಲ್ಲಿ ವಿವರಿಸಲಾಗುವುದು. ಬದಲಾದ ಕಾಲಮಾನದ ಒತ್ತಡಗಳಲ್ಲಿ ಆಶಯ-ಆಕೃತಿಗಳು ಬದಲಾದಂತೆ ವೀರಮೌಲ್ಯಗಳು ಹಾಗೂ ಭಕ್ತಿ ಮೌಲ್ಯಗಳ ನಡುವಿನ ಸಂಘರ್ಷದ ಹಿನ್ನೆಲೆಯಲ್ಲಿ ಎಕ್ಕಟಿಗರನ್ನು ಕುರಿತಂತೆ ಅಭಿವ್ಯಕ್ತಗೊಂಡಿರುವ ಭಾವನೆಗಳೇನು? ಎಂಬುದನ್ನು ಕುರಿತು ವಿವೇಚಿಸಲಾಗುವುದು.



ವೀರಮಾಸ್ತಿಗಲ್ಲು, ಬೆನಕನಕೊಂಡ

ಒಟ್ಟು ೪೦ಕ್ಕೂ ಹೆಚ್ಚು ಉಲ್ಲೇಖಗಳು ದೊರಕಿವೆ. ಅದರಲ್ಲಿ ೧೬ ಶಾಸನೋಲ್ಲೇಖಗಳು. ಉಳಿದವು ಮಧ್ಯಕಾಲೀನ ಕನ್ನಡ, ತೆಲುಗು ಕಾವ್ಯಗಳಲ್ಲಿ ಕಂಡು ಬಂದಿರುವ ಉಲ್ಲೇಖಗಳು.

೧೦೫೦ರ ಚನ್ನಗಿರಿ ಶಾಸನ ಸದ್ಯಕ್ಕೆ ದೊರೆತಿರುವ ಪ್ರಾಚೀನ ಉಲ್ಲೇಖವಾಗಿದೆ. ೧೭೮೪ರ ರಾಣೇಬೆನ್ನೂರು ತಾಲ್ಲೂಕು ಬೆನಕನಕೊಂಡದ ವೀರಮಾಸ್ತಿ ಶಾಸನ ಹಾಗೂ ೧೩ನೇ ಶತಮಾನದ ನಂಜನಗೂಡಿನ ಸುತ್ತೂರಿನ ಎಕ್ಕಟಿಗ ಚಿಕ್ಕಣ್ಣನ ವೀರಗಲ್ಲಿನವರೆಗೆ ಎಕ್ಕಟಿಗರ ಉಲ್ಲೇಕ ಶಾಸನಗಳಲ್ಲಿ ಕಂಡು ಬಂದಿದ್ದರೆ, ಕಾವ್ಯ ಉಲ್ಲೇಖಗಳಲ್ಲಿ ೧೨ನೇ ಶತಮಾನದ ವಚನಗಳಿಂದ ಆರಂಭವಾಗಿ ಸು. ಕ್ರಿ.ಶ. ೧೭೨೪ರ ರುಕ್ಮಾಂಗದ ಚರಿತ್ರೆ[೧] ಯವರೆಗೆ ಎಕ್ಕಟಿಗರ ಉಲ್ಲೇಖಗಳು ದೊರಕಿದೆ.

* # ೩೩೫, ವಸಿಷ್ಟ, ೧೪ನೆಯ ಅಡ್ಡರಸ್ತೆ, ಸರಸ್ವತಿನಗರ, ವಿಜಯನಗರ, ಬೆಂಗಳೂರು-೫೬೦೦೪೦.

ಭೌಗೋಳಿಕ ವ್ಯಾಪ್ತಿಯನ್ನು ಗಮನಿಸಿದರೆ ಹಾಸನ, ಶಿವಮೊಗ್ಗ, ಧಾರವಾಡ, ಬಳ್ಳಾರಿ, ಆಂಧ್ರದ ಕರ್ನೂಲು ಜಿಲ್ಲೆಯ ಕೊಯಿಲಕುಂಟ್ಲ ತಾಲ್ಲೂಕಿನವರೆಗೆ ಶಾಸನಗಳಲ್ಲಿ ಹಾಗೂ ಕಾಗದದ ದಾಖಲೆಗಳಲ್ಲಿ ರೆಡ್ಡಿ ರಾಜ್ಯಭಾರವಿದ್ದ ಬೆಳ್ಳುಟ್ಟಿ, ಬಾಗೆಡ, ಮೊರೆಪಲ್ಲಿ ಮುಂತಾದ ಪ್ರದೇಶಗಳ ಭೌಗೋಳಿಕ ವ್ಯಾಪ್ತಿಯನ್ನು ಹೊಂದಿರುವುದು ಸದ್ಯದ ಅಧ್ಯಯನದಲ್ಲಿ ತಿಳಿದುಬಂದಿದೆ.

ಎಕ್ಕಟಿಗರ ವೀರಪಡೆಯಲ್ಲಿನ ಎಕ್ಕಟಿಗರ ಸಂಖ್ಯೆ ಮತ್ತು ಕಾರ್ಯವೈಖರಿ

ವೀರ ಎಕ್ಕಟಿಗರ ಅನೇಕ ಹೆಸರುಗಳು ಕ್ರಿ.ಶ.೧೦೫೦ರ ಶಾಸನದಲ್ಲಿದೆ.[೨] ಬಲ್ಲಯ್ಯ, ಅಂಮಯ್ಯ, ರಾಚಯ್ಯ, ಕೇಸವ ಸಾಹಣಿ, ಸಿರಿಯಣ್ಣ, ರಾಣಯ್ಯ, ಬಮ್ಮೆಯ ಸಾಹಣಿಯ ಅಳಿಯ ಕೇಸಿಯಣ, ಗೊಂದಯ್ಯ ಪೆರುಮಾಳೆ, ಕೇಚಯ್ಯ ಸಾಹಣಿಯ ಮಾರಯ್ಯ ಮುಖ್ಯವಾದ ಸಮಸ್ತ ಸಾಹಣಿ ಯೆಕ್ಕಟಿಗರು ಶ್ರೀ ವೀರಸೋಮನಾಥ ದೇವರ್ಗೆ ಬಿಟ್ಟದತ್ತಿ..."ಯ ವಿವರವಿದೆ. ಅವರೆಲ್ಲರೂ ಸೇರಿ ಗಂಗನ ಗಳೆಯಲ್ಲಿ ಅಳೆದು ಸೋಮನಾಥದೇವರಿಗೆ ಭೂದಾನ ನೀಡಿದ್ದಾರೆ. ಕ್ರಿ.ಶ. ೧೧೩೪ ರ ಕೊಯಿಲಕುಂಟ ಶಾಸನದಲ್ಲಿ[೩] 'ಎಕ್ಕಟಿಗರ್ನಾಲ್ವತ್ತು ಮಾನಸರುಮಿರ್ದು' ಉಲ್ಲೇಖವಿದ್ದು, ಅದರಲ್ಲಿ ಉಲ್ಲೇಖಿಸಿರುವ ದಾನಕ್ಕೆ ಅವರು ಸಾಕ್ಷಿ ಎನ್ನುತ್ತದೆ. ೧೦೬೪ರ ಮತ್ತೊಂದು ಶಾಸನ[೪] ಉಚ್ಚಂಗಿ ದುರ್ಗದ ಕೋಟೆಯ ಅರವತ್ತು ಎಕ್ಕಟಿಗರು ದಾನಕ್ಕೆ ಸಾಕ್ಷಿಯಾದುದನ್ನು ಹೇಳುತ್ತದೆ. ೧೦೭೦ರ ಮತ್ತೊಂದು ಶಾಸನವು[೫] ಉಚ್ಚಂಗಿ ದುರ್ಗದ ಎಕ್ಕಟಿಗರರುವದಿಂಬರ ಉಲ್ಲೇಖವನ್ನು ಮಾಡುತ್ತದೆ. ೧೧೯೫ ರ ದುದ್ದರಸನ ಶಾಸನವು[೬] ೨೫೦ ಎಕ್ಕಟಿಗರ ವೀರಪಡೆಯನ್ನು ಹೇಳುತ್ತದೆ. ೧೧೮೭ರ ಕುರುವಂಕ ಶಾಸನ[೭] 'ಯೆಕ್ಕಟಿಗರಂಗರಕ್ಷಕರ್ನಾಲ್ವತ್ತಿಂಬರ' ಅಂಗರಕ್ಷಕ ಪಡೆಯನ್ನು ಕುರಿತು ಹೇಳಿದೆ. ೧೧೯೮ರ ಕಣಕಟ್ಟೆ ಶಾಸನ[೮] ಅರವತ್ತು ಮಾನಸ ಎಕ್ಕಟಿಗರ ಪಡೆಯನ್ನು ಹೇಳುತ್ತದೆ. ಕ್ರಿ ಶ. ೧೨೨೦ರ ಬೇಲೂರಿನ ಶಾಸನ[೯] ಆನೆಯ ಕಲ್ಯಾಣದ ದಳವನ್ನು ಹೇಳುತ್ತದೆ. ಈ ಎಲ್ಲಾ ಉಲ್ಲೇಖಗಳನ್ನೂ ಗಮನಿಸಿದರೆ ಎಕ್ಕಟಿಗರ ಸಂಖ್ಯೆ ನಿರ್ದಿಷ್ಟವಾಗಿ ೪೨, ೬೦, ೬೨ ಹೆಚ್ಚಾಗಿ ಕಾಣಿಸಿಕೊಂಡಿವೆ. ದುದ್ದರಸನ ಸೈನ್ಯದಲ್ಲಿ ಮಾತ್ರ ಆ ಸಂಖ್ಯೆ ೨೫೦ ಇದ್ದದ್ದು ವಿಶೇಷವಾಗಿದೆ.

ಎಕ್ಕಟಿಗರ ಪ್ರಭೇದ

ಸಾಹಣಿ ಎಕ್ಕಟಿಗರು, ಪದಾತಿ ಎಕ್ಕಟಿಗರು, ಕೋಟೆ ಕಾಳಗದ ಎಕ್ಕಟಿಗರು, ಆನೆಯ ಕಾಲ್ಗಾಪಿನ ಎಕ್ಕಟಿಗರು, ಅಂಗರಕ್ಷಕ ಎಕ್ಕಟಿಗಪಡೆ. ಹೀಗೆ ಎಕ್ಕಟಿಗರು ಹೀಗೆ ನಾನಾ ಪ್ರಭೇದಗಳಲ್ಲಿ ಎಕ್ಕಟಿಗವೀರರು ಕರ್ತವ್ಯ ನಿರ್ವಹಿಸುವುದನ್ನು ಕಾಣುತ್ತೇವೆ. ಇವರೆಲ್ಲರೂ ಅವಶ್ಯಕತೆಗೆ ತಕ್ಕಂತೆ ಅಗತ್ಯವಾದ ತರಬೇತಿಯನ್ನು ಹೊಂದಿದವರಾಗಿರುತ್ತಿದ್ದರು. ಚೆನ್ನಗಿರಿಯ ಶಾಸನದ[೧೦] ಎಕ್ಕಟಿಗರ ಗುಂಪನ್ನು **ಸಾಹಣಿಎಕ್ಕಟಿಗರ** ಎಂದಿರುವುದು ವಿಶೇಷ. ಸಾಹಣಿಗಳು ವಿಶೇಷವಾಗಿ ಕುದುರೆಯ ಮೇಲೆ ಕುಳಿತು ಹೋರಾಡುವವರು. ಸಮಸ್ತ ಸಾಹಣಿ ಎಕ್ಕಟಿಗರು ಸೇರಿ ಸ್ಥಳೀಯ ಸೋಮೇಶ್ವರ ದೇವರಿಗೆ ದತ್ತಿ ಬಿಟ್ಟಿದ್ದಾರೆ. ಕಲ್ಕೇರಿಯ ೧೩ನೇ ಶತಮಾನದ ಶಾಸನವೊಂದು[೧೧] ಮಹಾಪಸಾಯ್ತ ಪರಮವಿಶ್ವಾಸಿ ವಾಸಿಯಣ್ಣನೂ ಸೇರಿದಂತೆ ಸಮಸ್ತ ಎಕ್ಕಟಿಗನಾಯಕರು ಕಲ್ಕೆರೆಯ ಸ್ವಯಂಭುದೇವರಿಗೆ ಹಾಗೂ ಮೂರುಜಾವಿ ದೇವರಿಗೆ ಶಿವರಾತ್ರೆಯಂದು ಭೂಮಿದಾನಮಾಡಿರುವ ವಿಚಾರವನ್ನು ದಾಖಲಿಸಿದೆ. ಈ ಶಾಸನದ ಮಹತ್ವವೆಂದರೆ ಶಾಸನವು ವಾಸಿಯಣ್ಣನೊಳಗಾದ ಸಮಸ್ತ ಎಕ್ಕಟಿಗ ನಾಯಕರನ್ನು **"ಹುಲಿಯ ಜಂಗುಳಿಯ ಮೊತ್ತದ ಕಳ್ಪ ಮುದ್ರೆಯನ್ನು** ಹೊಂದಿದವರೆಂದು ವಿಶಿಷ್ಟವಾಗಿ ಕರೆದಿರುವುದು. ಈ ಮೊದಲು ಭೇರುಂಡದ ಮೊತ್ತವೆಂದು ಕರೆಯಲಾಗುತ್ತಿದ್ದ ಹಿರಿಯ ಭೇರುಂಡರ ಕೈ ಕೆಳಗೆ ಕಾರ್ಯ ನಿರ್ವಹಿಸುತ್ತಿದ್ದ ಕೂಸರವೀರಪಡೆಯನ್ನು ಪರಿಚಯಿಸಲಾಗಿದೆ.[೧೨] ಅದನ್ನು ಸಂಸ್ಕೃತ ಶಾಸನದಲ್ಲಿ ಭೇರುಂಡವರ್ಗ ಎಂದು, ಕನ್ನಡ ಶಾಸನದಲ್ಲಿ ಭೇರುಂಡದ ಮೊತ್ತವೆಂದು ಕರೆಯಲಾಗಿದೆ. ಈ ವೀರಪಡೆಗೆ ಭೇರುಂಡ ಎಂಬ ವಿಶೇಷಣವು ಬರಲು ಕಾರಣವೇನೆಂಬುದನ್ನು ಅಲ್ಲಿ ಚರ್ಚಿಸಲಾಗಿದೆ. ಪ್ರಸ್ತುತ ಹುಲಿಯ ಜಂಗುಳಿಯ ಮೊತ್ತ ಎಂಬುದೂ ಕೂಡ ಈ ಎಕ್ಕಟಿಗರ ವಿಶಿಷ್ಟ ವೀರಪಡೆಗೆ ಇದ್ದಿರಬಹುದಾದ ಬಿರುದಿನಂತೆ ತೋರುತ್ತದೆ. ಆವೀರ ಪಡೆಯನ್ನು ಹುಲಿಗಳ ಸಮೂಹವೆಂದು ಕರೆದಿರುವುದು ಅವರ ಶೌರ್ಯ, ಸಾಹಸಗಳನ್ನು ಎತ್ತಿತೋರುತ್ತದೆ.ಇಲ್ಲಿ ಇನ್ನೊಂದು ಗಮನಿಸಬೇಕಾದ ಅಂಶವೆಂದರೆ ಅವರ ಗುರುತಾಗಿ ಕಳ್ಪಮುದ್ರೆಯಿತ್ತು ಎಂಬುದು. ಕಳ್ಪಮುದ್ರೆ ಎಂದರೇನೆಂಬುದು ತಿಳಿದುಬಂದಿಲ್ಲ. ಅನೇಕ ಎಕ್ಕಟಿಗ ನಾಯಕರಿಗೆ 'ಕಳುವ' ಎಂಬುದು ಉಪನಾಮದಂತೆ ಬಳಕೆಯಾಗಿದ್ದಕ್ಕೆ ಶಾಸನಗಳಲ್ಲಿ ಉದಾಹರಣೆಗಳಿವೆ.[೧೩] ಆದರೆ 'ಕಳುವ'ಎಂಬುದರ ಅರ್ಥವೇನೆಂಬುದು ಸ್ಪಷ್ಟವಾಗುವುದಿಲ್ಲ. ಪ್ರಸುತ ಶಾಸನದ ಕಳ್ಪು>ಕರ್ಪ್ಪು>ಕಪ್ಪು ಎಂಬ ಪದ ಸ್ವರೂಪದ ಹಿನ್ನೆಲೆಯಲ್ಲಿ ಹುಲಿಯ ಜಂಗುಳಿಯ ಮೊತ್ತದ ಎಕ್ಕಟಿಗರು ಕಪ್ಪು ಬಣ್ಣದ ಗುರುತಿನ ಯಾವುದೋ ಮುದ್ರೆಯನ್ನು ಧರಿಸುತ್ತಿದ್ದಿರಬಹುದೆಂದು ಊಹಿಸಬಹುದು. ಅಥವಾ ಕಪ್ಪು ಸಮವಸ್ತ್ರ ಧರಿಸುತ್ತಿದ್ದಿರಬಹುದೇ? ಎಂಬ ಅನುಮಾನವೂ

ಬರುತ್ತದೆ. ಎಕ್ಕಟಿಗರ ವೇಷಭೂಷಣದ ವರ್ಣನೆಮಾಡುವಾಗ, 'ಉಡಿಯ ಬದ್ದುಗೆಕಠಾರ, ಹರಿಗೆಯನ್ನು ಹಿಡಿದು ಕಾಳ ಅಂದರೆ ಕಪ್ಪಾದ ಕಾಸೆಯನ್ನು ಯಕ್ಕತುಳ ತುಳುವರು ಧರಿಸಿದ್ದರೆಂದು ಮಂಗರಸ ವರ್ಣಿಸುತ್ತಾನೆ[೧೪] ಹಾಗಾಗಿ ಹುಲಿಯ ಜಂಗುಳಿಯ ಮೊತ್ತದ ಎಕ್ಕಟಿಗವೀರರು ಬಹುಶಃ ಇಂದಿನ 'ಬ್ಲಾಕ್ ಕಮ್ಯಾಂಡೋ'ಗಳಂತಹ (BlackCat Commandos are called so because of their black uniform including black headgear) ವಿಶೇಷ ಸೈನ್ಯ ತುಕಡಿ ಎಂದು ಊಹಿಸಬಹುದು. ವಿಶೇಷ ಸಂದರ್ಭಗಳಲ್ಲಿ ಅವರು ಸೇವೆ ಒದಗಿಸುತ್ತಿದ್ದಿರಬಹುದು.

ಆಳುವ ವರ್ಗದ ಆಪ್ತವಲಯವು ಎಕ್ಕಟಿಗರ ಕಾರ್ಯಕ್ಷೇತ್ರವಾಗಿದ್ದುದರಿಂದ ಅವರ ಆಯ್ಕೆಯನ್ನು ಅತಿ ಎಚ್ಚರಿಕೆಯಿಂದ ಮಾಡಿಕೊಳ್ಳಲಾಗುತ್ತಿತ್ತು. ಭೀಮಕವಿ ಕೋಟೆಯ ರಕ್ಷಣೆಗೆ ಈ ಎಕ್ಕಟಿಗರನ್ನು ಆಯ್ಕೆಮಾಡಿ ನೇಮಿಸಿಕೊಂಡಿರುವುದನ್ನು ಹೇಳಿದ್ದಾನೆ.[೧೫] ಯಾವುದೇ ಅರಸನ ಸೈನ್ಯದಲ್ಲಿ ಶ್ರೇಷ್ಠರಾದ ಬಲ್ನಾಯಕರು, ರಾವುತರುಗಳ ಜೊತೆ 'ಎಕ್ಕಟಿಗಮಕ್ಕಳೂ' ಇರುತ್ತಿದ್ದರು. ಕುಮಾರರಾಮನ ತಂದೆ ಕುಮ್ಮಟ ದುರ್ಗದ ಕಂಪಿಲರಾಯನ ಕೀರ್ತಿಪರಾಕ್ರಮದ ವರ್ಣನೆಯಲ್ಲಿ ಅವನ ಸೈನ್ಯದಲ್ಲಿದ್ದ ಸಿಡಿಲ ಕಡುಪಿನಂತೆ, ಸಿಂಘದೇಳಿಗೆಯಂತೆ, ವಡಬಾಗ್ನಿಯ ಕೋಪದಂತೆ, ಅಡವಿಯ ಕಿಚ್ಚಿನ ಆರ್ಭಟೆಯಂತೆ ಎಕ್ಕಟಿಗರು, ರಾವುತರು, ಬಲ್ನಾಯಕಮಕ್ಕಳು ಸುಭಟರಿದ್ದರಂತೆ.[೧೬] ರಣರಂಗದಲ್ಲಿ ಎಕ್ಕಟಿಗರ ಸಾಹಸವನ್ನು ಶಾಸನಗಳೂ ಕಾವ್ಯಗಳೆರಡೂ ಸಾರಿ ಹಿಡಿದಿವೆ. ಉಚ್ಚಂಗಿ ದುರ್ಗ ಒಂದು ಅತ್ಯಂತ ಭದ್ರಕೋಟೆಯಾಗಿದ್ದು, ಅದನ್ನು ಜಯಿಸುವುದು ಸಾಮಾನ್ಯ ವಿಚಾರವಾಗಿರಲಿಲ್ಲ. ಉಚ್ಚಂಗಿ ದುರ್ಗದ ಕೋಟೆಯ ವರ್ಣನೆ ಹಾಗೂ ಆ ಕೋಟೆಕಾಳಗದ ವರ್ಣನೆ ವೀರಬಲ್ಲಾಳನ ಶಾಸನಗಳಲ್ಲಿ ಕಂಡುಬಂದಿದೆ. ಇಂತಹ ಭದ್ರ ಕೋಟೆಯ ಸಂರಕ್ಷಣೆಗೆಂದೇ ಮೀಸಲಾಗಿದ್ದ ವೀರಎಕ್ಕಟಿಗಪಡೆಯನ್ನು ಉಚ್ಚಂಗಿ ದುರ್ಗದ ಶಾಸನ[೧೭] ಉಲ್ಲೇಖಿಸಿದೆ. ಇದೇರೀತಿ ಈ ಕೋಟೆಕಾಳಗದಲ್ಲಿ ನಿಷ್ಣಾತರಾದ ಆಕ್ರಮಣಕಾರಿ ಎಕ್ಕಟಿಗರು ಹಾಗೂ ರಕ್ಷಣಾತ್ಮಕಕಾರ್ಯದಲ್ಲಿ ನಿಪುಣರಾದ ಒಳಕೋಟೆಯ ಎಕ್ಕಟಿಗರ ಬಗೆಗೆ ಸಮ್ಯಕ್ತ್ವ ಕೌಮುದಿ ಕೃತಿಯಲ್ಲಿ ವರ್ಣಿಸಲಾಗಿದೆ.[೧೮] 'ಕಡುಛಲದಿ ಹತ್ತಿ ಕೋಂಟೆಯ ಮೇಲೆ ಕುದುರೆ ಕಾಲಿಡುವುದಂ ಕಂಡು' ಒಳಗಣಿಂ ಬಂದಕೋಟೆಯ ರಕ್ಷಣಾಪಡೆಯ ಎಕ್ಕಟಿಗರು ಶತ್ರು ಸೈನ್ಯದ ಎಕ್ಕಟಿಗ ವೀರರನ್ನು ಕಡೆವಂತೆ ಹುಯ್ದು, ಅವರು ಬೀಳುವಾಗ ಅವರ ಕಾಲ್ಗಳನ್ನು ಕೋಟೆಯ ತೆನೆಗಳಿಗೆ ಕಟ್ಟಿ ಜಿಗಿಯುತ್ತಿದ್ದರಂತೆ! ಹೀಗೆ ಕೋಟೆಯ ತೆನೆಗಳಲ್ಲಿ ತಲೆಕೆಳಗಾಗಿ ಜೋಲುತ್ತಿದ್ದರೂ ಬಿಡದೆ ಕೋಟೆಯ ಹೊರಗೆ ಕೆಳಗಿನಿಂದ ಕೋಟೆಯನ್ನು ಹತ್ತಲು ಪ್ರಯತ್ನಿಸುವ ತಮ್ಮ ಸೈನ್ಯದ ಎಕ್ಕಟಿಗ ವೀರರಿಗೆ 'ಅಂಜದೇ ಹತ್ತಿ' ಎನ್ನುತ್ತ, ತಮ್ಮ ಕೈಗೊಡುತ್ತ ಹತ್ತಿಸಿಕೊಂಬ ವೀರಭಟರ ವೀರಪರಾಕ್ರಮವನ್ನು ಏನೆಂದು ಬಣ್ಣಿಸುವುದು ಎನ್ನುತ್ತಾನೆ ಕವಿ. ಕೋಟೆಯನ್ನು ಹತ್ತಲಾಗದೇ ಅಗಳಿಗೆ ಬೀಳುವ ಮತ್ತೆ ಮತ್ತೆ ಹತ್ತಲು ಪ್ರಯತ್ನಿಸುವ ವೀರರನ್ನು ನೋಡಿ ಅರಸರೊಂದಿಗೆ ಸಂಘಟಿಕ್ಕ 'ನೋಡು ನಮ್ಮ ಪರಾಕ್ರಮವನು' ಎನ್ನುತ್ತ ಅಲ್ಲಿ ನೆಲಕಿಂಡಿಯನ್ನು ಕೊರೆದು 'ತೆಗೆತೆಗೆ' ಎಂದು ಆರ್ಭಟಿಸುತ್ತ ಯಾವ ಅಳುಕೂ ಇಲ್ಲದೆ ಪಾಯವನ್ನು ಕೆದರಿಸಿ ತೋಳುಗಳನ್ನು ತಟ್ಟಿ ಕಡುದೈರ್ಯದಿಂದ ಕೋಟೆಯ ಒಳಗೆ ನುಗ್ಗುವ ಎಕ್ಕಟಿಗರ ಸಮೂಹ ಕಣ್ಗೊಪ್ಪಿತ್ತೆಂದು ಕೋಟೆ ಕಾಳಗದಲ್ಲಿ ಎಕ್ಕಟಿಗರ ನಾನಾ ಬಗೆಯ ಸಾಹಸವನ್ನು ಕವಿ ವರ್ಣಿಸಿದ್ದಾನೆ. "ಅಣ್ತಿಯ ಬಾಯೊಳು ಕೋಳಹೊಯ್ದು ತಂದೊಪ್ಪಿಸುವ, ರಣರಸಿಕರೊಡ್ಡುವ ಪೊಡ್ಡಣವ ಕಂಡೊಲ್ಲಯಿಸುವ ವಣಿಯರಕೆ ಹಿಂದಾಗಿ ನಡೆದು ಬರ್ಪೆಕ್ಕಟಿಗರು"[೧೯] ರಣರಂಗದಲ್ಲಿ ಅಪ್ರತಿಮ ಹೋರಾಟಗಾರರಾಗಿದ್ದರು. ಅವರನ್ನು ಸಿಡಿಲ ಬಳಗವೆಂದು ಕರೆಯುತ್ತಿದ್ದರು. ಅನ್ನ ಕೊಟ್ಟ ಒಡೆಯನಿಗಾಗಿ ಯುದ್ಧಭೂಮಿಯಲ್ಲಿ ಅಂಜದೆ ಚಲಕ್ಕೆ ಬಲುದಲೆಗಳೆಂಬಂತೆ ವೈರಿಗಳ ಗಡಣವನ್ನು ಹೊಕ್ಕು ಅವರ ಒಡ್ಡವನ್ನು ಮುರಿದು ಮುನ್ನುಗ್ಗುವ ಜಾಣ್ಮೆಗೆ ಹೆಸರಾಗಿದ್ದರು. ಎಕ್ಕಟಿಗರು ಯುದ್ಧವಿಲ್ಲದಾಗ ಸೈನ್ಯ ಬೀಡು ಬಿಟ್ಟ ಸಂದರ್ಭದಲ್ಲಿ, ರಾತ್ರಿ ವೇಳೆಯಲ್ಲಿ ಇಡೀ ಸೈನ್ಯದ ರಕ್ಷಣೆಯ ಹೊಣೆ ಹೊರುತ್ತಿದ್ದುದು ತಿಳಿದುಬರುತ್ತದೆ. 'ಎಕ್ಕಟಿಗರ ಪಡಕಣದ(ರಕ್ಷಣೆಯ) ಸೇರುವೆಗಾಜಿರು ಉಕ್ಕಡದ ತಲೆಗಾವಲುಗಳ ತಕ್ಕಿನ ತಳವಾರರುಗಳ' ಜೊತೆಗೆ ಕಟಕದ ರಕ್ಷಣೆಯ ಕರ್ತವ್ಯವನ್ನು ನಿಭಾಯಿಸುತ್ತಿದ್ದರಂತೆ! ಎಲ್ಲರೂ ನಿದ್ರೆಗೆ ಜಾರಿ ವಿಶ್ರಾಂತಿ ಪಡೆಯುತ್ತಿದ್ದರೂ ಅವಿಶ್ರಾಂತವಾದ ರಕ್ಷಣಾಕರ್ತವ್ಯ ಎಕ್ಕಟಿಗರ ಮೇಲಿರುತ್ತಿತ್ತು.

ಅರಸರ ಅಂಗರಕ್ಷಣೆಗಾಗಿಯೇ **ಖಾಸಾ ಎಕ್ಕಟಿಗ,** ಹಾಗೂ ಎಕ್ಕಟಿಗಪಡೆ ಇರುತ್ತಿತ್ತು. ಅವರು ಅಂಗರಕ್ಷಣೆಯ ಕಾರ್ಯವನ್ನಷ್ಟೇ ಅಲ್ಲದೇ ಚಕ್ರವರ್ತಿಗಳ ಕರೆಯಮೇರೆಗೆ ಸೇವೆಯನ್ನು ಸಲ್ಲಿಸುತ್ತಿದ್ದ ಕಾಯ್ದಿಟ್ಟಪಡೆ ಎಂಬುದನ್ನು, ಅವರನ್ನು 'ಅಂಗರಕ್ಷರ' ಎಂದು 'ಅರಿಕೆಯಯೋಧ'ರೆಂದು ಕರೆದಿರುವುದನ್ನು ಕುರುವಂಕ, ಕಣಿಕಟ್ಟಿಯ ಶಾಸನ ಗಳಲ್ಲಿ ಈಗಾಗಲೇ ಗಮನಿಸಲಾಗಿದೆ.[೨೦] ಶ್ರೀಪಾಲರಾಜನಿಗೆ ಹತ್ತುಸಾಸಿರ **ಯಕ್ಕತುಳ ಅರಿಕೆಯಮಕ್ಕಳು** ಇದ್ದರೆಂದು ಕವಿ ಹೇಳಿದ್ದಾನೆ.[೨೧] ಇತರ ಶಾಸನಗಳಲ್ಲಿನ ಅರಿಕೆಯಯೋಧರೇ ಈ ಅರಿಕೆಯಮಕ್ಕಳಿರಬಹುದು. ಶ್ರೀಪಾಲ ಚರಿತೆಯಲ್ಲಿ[೨೨] ಶ್ರೀಪಾಲನ ದಿಗ್ವಿಜಯ ಯಾತ್ರೆಯಲ್ಲಿದ್ದ ವೀರರು, ಸಹಾಯಕ

ಕೆಲಸಗಾರರು, ಮುಂತಾದವರ ಚಿತ್ರವನ್ನು ನೀಡುವುದಲ್ಲದೆ ಕಡೆಯ ಪೆಂಡೆಯ, ವಡ್ಡಿವಾಣ, ಉತ್ತರಿಗೆ, ಉಳಿಹಿಡಿದ ಕಾಸೆಯ, ಹೊನ್ನ ಹರಿಗೆಯ ಜಡಿವ ಚಾಮರದೊಂದಿಗೆ ಮೆಯ್ಯಾವಲ ಎಕ್ಕಟಿಗರ ಗಡಣ ನಡೆದುಬರುವ ವೈಖರಿಯನ್ನು, ಯುದ್ಧದಲ್ಲಿ 'ಕಡಿತಲೆ ಚೂಡಾಯಿತರಾಗಿ ಕಾಳಿನಕಾಸೆ, ಉಡಿಯ ಬದ್ದುಗೆಯಕಠಾರ ಹಿಡಿದಹರಿಗೆಯ ಎಕ್ಕತುಳಪರಾಕ್ರಮಿಗಳು ನಡೆತರುವುದನ್ನು ಮಂಗರಸ ಕವಿ ವರ್ಣಿಸುತ್ತಾನೆ. ಎಕ್ಕಟಿಗರ ಕರ್ತವ್ಯಗಳಲ್ಲಿ ಅಂಗರಕ್ಷಣೆಯೇ ಪ್ರಧಾನವಾದುದೆಂಬುದು ಇದರಿಂದ ಅರ್ಥವಾಗುತ್ತದೆ.

ಈ ಸೈನ್ಯರಕ್ಷಣೆ ಅರಸರ ಅಂಗರಕ್ಷಣೆಯಷ್ಟೇ ಅಲ್ಲದೆ. ದೇವಾಲಯಗಳ ಗ್ರಾಮದ ದಾನ ದತ್ತಿಗಳನ್ನು ಕಾಪಾಡುವ ಕರ್ತವ್ಯವೂ ಇವರದಾಗಿತ್ತು. ಇವರು ಅನೇಕ ದಾನಗಳಿಗೆ ಸಾಕ್ಷಿಗಳೂ, ರಕ್ಷಕರೂ ಆಗಿರುವುದನ್ನು ಶಾಸನಗಳು ಹೇಳುತ್ತವೆ. ಕ್ರಿ.ಶ. ೧೧೩೪ರ ಭೂಲೋಕಮಲ್ಲದೇವ ಚಾಲುಕ್ಯದೊರೆಯ ಮಂಡಳೇಶ್ವರ, ನಂದ್ಯಾಲೆಯಿಂದ ವಂಕಣಚೋಳ ಮಹಾರಾಜ ಕೊಲ್ಲಗುಡಿಯ ಪ್ರಭು 'ಮುಪ್ಪಿರಟಿ' ಎಂಬುವವನು ಕೇಶವ ದೇವರಿಗೆ ದಾನವಾಗಿ ಎರಡು ಮತ್ತರು ಭೂಮಿ, ಒಂದು ಹೂದೋಟ, ಒಂದು ಗಾಣವನ್ನು ನೀಡಿದ್ದಾನೆ. ಈ ಶಾಸನವನ್ನು ಬರೆಸಿದವರು ಆ ಗ್ರಾಮದ ಎಕ್ಕಟಿಗರ್ನಾಲ್ವತ್ತು ಮಾನಸರು ಎಂದಿದೆ. ಅಂದರೆ ಆ ದಾನಕ್ಕೆ ಸಾಕ್ಷಿಗಳೂ ರಕ್ಷಕರೂ ಆಗಿ ಇಲ್ಲಿನ ನಲವತ್ತು ವೀರರ ವೀರಪಡೆ ಕಾಣಿಸಿಕೊಂಡಿದೆ[೨೪] ಕ್ರಿ.ಶ. ೧೧೬೪ಳ ಮತ್ತೊಂದು ಶಾಸನ[೨೫] ಚಾಳುಕ್ಯ ತ್ರೈಲೋಕ್ಯಮಲ್ಲದೇವನ ಮಗ ವಿಷ್ಣುವರ್ಧನ ಮಹಾರಾಜ ವಿಜಯಾದಿತ್ಯದೇವನು ನೊಳಂಬವಾಡಿ ೩೨೦೦೦ವನ್ನು ಆಳುತ್ತಿದ್ದಾಗ ಸೂಳೆವಾಳ ಮಾರಮಯ್ಯನು ಮಾರೇಶ್ವರ ದೇವರಿಗೆ ಕಾಳೇಶ್ವರ ಪಂಡಿತರ ಪಾದವನ್ನು ತೊಳೆದು ಗದ್ದೆ, ತೋಟವನ್ನು ಕೋಟೆಯ ಅಱುವತ್ತೆಕ್ಕಟಿಗರು, ನಖರರು, ಪಂಚಮಠಸ್ಥಾನವು ಅರಿಯುವಂತೆ ಅವರ ಸಾಕ್ಷಿಯಲ್ಲಿ ದಾನ ನೀಡಿದ ವಿವರವಿದೆ, ಗ್ರಾಮಗಳಲ್ಲಿ ಎಕ್ಕಟಿಗರ ಸ್ಥಾನಮಾನ, ಪ್ರಾಮುಖ್ಯತೆಯು ಅಲ್ಲಿನ ಸಿರಿವಂತ ನಖರರ, ಹಾಗೂ ಧಾರ್ಮಿಕ ಶ್ರೇಷ್ಠತೆಯುಳ್ಳ ಪಂಚ ಮಠಸ್ಥಾನಗಳಿಗೆ ಸಮನಾಗಿತ್ತೆಂಬುದು ಅರ್ಥವಾಗುತ್ತದೆ.

ಖಾಸಾ ಅಥವಾ ವೈಯಕ್ತಿಕ ಎಕ್ಕಟಿಗರ ಉಲ್ಲೇಖ

ಕ್ರಿ.ಶ. ಸು. ೧೧೧೦-೪೨ರ ನೇರ್ಲಿಗೆ ಶಾಸನವು[೨೬] ಹೊಯ್ಸಳ ವಿಷ್ಣುವರ್ಧನನ ಎಕ್ಕಟಿಗ ಮಸಣಯ್ಯನು ಯಾವುದೋ ಯುದ್ಧದಲ್ಲಿ ಮಡಿದಿರುವುದನ್ನು ದಾಖಲಿಸಿದೆ. ೧೧೬೦ರ ಬೂಚೇನಹಳ್ಳಿಯ ಶಾಸನ[೨೭] ಹೊಯ್ಸಳ ಒಂದನೇ ನರಸಿಂಹನ ಯೆಕ್ಕಟಿಗ ಮುದ್ದೆಯ್ಯನಾಯಕನು ತನ್ನ ಹೆಸರಿನಲ್ಲಿ ಮುದ್ದೇಶ್ವರ ದೇವಾಲಯುವನ್ನು ನಿರ್ಮಿಸಿ, ದಾನ ಬಿಟ್ಟಿರುವುದನ್ನು ಹೇಳಿದೆ. ಕ್ರಿಶ ೧೧೫೩-೫೪ರ ಕಣಕಟ್ಟೆ ಶಾಸನ[೨೮] ಜಟ್ಟಿ ಬೋವನೆಂಬ ಎಕ್ಕಟಿಗನೊಬ್ಬ ಕೆರೆಯನ್ನು ನೀಲೇಶ್ವರ ದೇವಾಲಯವನ್ನು ಕಟ್ಟಿಸಿದ ಉಲ್ಲೇಖವಿದೆ. ಕ್ರಿಶ ೧೨೦೬ರ ಕಲ್ಲಕೇರಿ ಶಾಸನವು[೨೯] ಶಿವರಾತ್ರಿಯ ಸಂದರ್ಭದಲ್ಲಿ ಸ್ವಯಂಭು ಸೋಮನಾಥದೇವರಿಗೆ ನಾಳ್ಗಳು ಹರಿಯನ್ನು ಸೆಟ್ಟಿಯೊಂದಿಗೆ ಎಕ್ಕಟಿಗರು ದಾನ ನೀಡಿರುದನ್ನು ತಿಳಿಸುತ್ತದೆ. ೧೨೮೪ರ ಬೆನಕನಕೊಂಡದ ಶಾಸನ ಅಪೂರ್ವವಾಗಿದೆ[೩೦] "ಸ್ವಸ್ತಿ ಶ್ರೀಮತು ಯಾದವನಾರಾಯಣಂ ಭುಜಬಳ ಪ್ರೌಢ ಪ್ರತಾಪ ಚಕ್ರವರ್ತ್ತಿ ಶ್ರೀ ವೀರರಾಯ ರಾಮಚಂದ್ರ ದೇವರಾಯ ರಾಜ್ಯೋದಯದ.......ಸ್ವಸ್ತಿ ಶ್ರೀಮತು ಮುಳುಗುಂದದ ನರಲೋಕವೀರ ಜಗದಾಳ ಬೊಮಿದೇವ ಜಂಗುಳಿ ಮಂನೆಯರಗಂಡಂಗೆ ಎಕ್ಕಟಿಗ ಚಟಯನಾಯಕನು ತಂನ ಹೆಂಡತಿ ಸಹಿತ ಯಿಬರುಂ ವೊಡೆಯಂಗೆ ಕೊಟ್ಟ ಭಾಸೆಗೆ ತಲೆಗೊಟ್ಟರು ಯದಕ್ಕೆ ಮೆಚ್ಚಿ ಬೆಳುಗಲಿಯ ಕಂಮತವನು (ಕಮ್ಮಟ) ಮಕ್ಕಳು ಮಕ್ಕಳುದಪದೆ ಕೊಟ್ಟರು ಭೂಮಿವು ಚಂದ್ರನು ವುಳ್ಳನಬರ...." ಈ ಶಾಸನ ಪಾಠವನ್ನು ಗಮನಿಸಿದರೆ, ಅರಸರಿಗೆ ವೇಳೆಗೊಂಡು ಭಾಷೆಕೊಟ್ಟು ಅವರಿಗಾಗಿ ಪ್ರಾಣ ತ್ಯಾಗ ಮಾಡುತ್ತಿದ್ದ. ಗರುಡರ, ವೇಳೆವಾಳಿಗಳ ನೆನಪಾಗುತ್ತದೆ. ಇವನ ಸ್ವಾಮಿ ಮುಳುಗುಂದದ ಜಗದಳ ಬೊಮ್ಮಿದೇವ ಅವನನ್ನು ನರಲೋಕ ವೀರನೆಂದೂ **ಜಂಗುಳಿ ಮಂನೆಯರಗಂಡನೆಂದು** ಕರೆದಿದೆ. ಇಲ್ಲಿ ಜಂಗುಳಿ ಎಂದರೆ ಮೊತ್ತ, ಹಿಂಡು, ಸಮೂಹ[೩೦]ಎಂಬ ಅರ್ಥವಿರುವುದರಿಂದ ಈ ಬೊಮ್ಮಿದೇವನು ವೀರಮನ್ನೆಯರ ಗುಂಪಿನ ನಾಯಕನಾಗಿರುವ ಸಾಧ್ಯತೆಯಿದೆ. ಅಂತಹ ನಾಯಕನಗೆ ಭಾಷೆಯ ಕೊಟ್ಟ ಬಂಟನಾಗಿ ಇಲ್ಲಿ ಎಕ್ಕಟಿಗ ಚಟ್ಟಯ್ಯ ಕಾಣಿಸಿಕೊಂಡಿದ್ದಾನೆ. ಇಲ್ಲಿನ ಮತ್ತೊಂದು ವಿಶೇಷವೆಂದರೆ ಎಕ್ಕಟಿಗ ಚಟ್ಟಯ್ಯನು ತನ್ನ ಹೆಂಡತಿ ಸಹಿತ ಒಡೆಯನಿಗೆ ಕೊಟ್ಟ ಭಾಷೆಗೆ ತಲೆಗೊಟ್ಟಿರುವುದು. ಈ ಸಂದರ್ಭದಲ್ಲಿ ಕುವರಲಕ್ಷ್ಮಣ ಮತ್ತು ಅವನ ಮಡದಿಯ ನೆನಪಾಗದೇ ಇರದು. ಖಾಸಾ ಎಕ್ಕಟಿಗರು ಯುದ್ಧದಲ್ಲಿ ತಲೆಗೊಟ್ಟಿರುವುದಕ್ಕೆ ಉದಾಹರಣೆಗಳಿದ್ದರೂ ಪತ್ನಿ ಸಮೇತನಾಗಿ ಪ್ರಾಣ ತ್ಯಾಗಮಾಡಿರುವ ಏಕೈಕ ಎಕ್ಕಟಿಗ ವೀರಮಾಸ್ತಿ ಸ್ಮಾರಕವಿದಾಗಿದೆ. (ಕಲ್ಲೇಶ್ವರ ದೇವಾಲಯದ ದಕ್ಷಿಣದ್ವಾರದ ಹತ್ತಿರವಿದ್ದ ಈ ಶಾಸನ ಈಗ ಸ್ಥಳಾಂತರವಾಗಿದೆ) ಇದರ ಶಾಸನಶಿಲ್ಪವೂ ಕೂಡ ವಿಶೇಷವಾಗಿದೆ. ಮೂರು ಚಿತ್ರಪಟ್ಟಿಕೆಯುಳ್ಳ ಈ ಶಾಸನದ ಕೆಳಭಾಗದ ಮೊದಲ ಪಟ್ಟಿಕೆಯಲ್ಲಿ ಎಕ್ಕಟಿಗವೀರ ಚಟ್ಟಯ್ಯನು ಒಂದು ಕೈಯಲ್ಲಿ ಕತ್ತರಿಸಿದ ತಲೆಯನ್ನೂ ಮತ್ತೊಂದರಲ್ಲಿ ಕಿರುಗತ್ತಿಯನ್ನೂ ಹಿಡಿದಿದ್ದಾನೆ. ಅವನ ಮುಂದೆ ಧ್ಯಾನಭಂಗಿಯಲ್ಲಿ ಕುಳಿತಿರುವ ಅವನ ಮಡದಿಯ ತಲೆಯಿಲ್ಲದ ದೇಹಭಾಗದ ಚಿತ್ರಣವಿದೆ.

ವೀರಾವೇಷದಲ್ಲಿರುವ ಚಟ್ಟಯ್ಯನನ್ನು ನಾಲ್ಕುಜನ ವೀರರು ದಪ್ಪನಾದ ಎಲೆಬಳ್ಳಿಯನ್ನು ಸೊಂಟಕ್ಕೆ ಕಟ್ಟಿ ನಾಲ್ಕೂ ದಿಕ್ಕಿನಿಂದ (ಹುಲಿವೇಷದವರನ್ನು ಹಗ್ಗದಲ್ಲಿ ಕಟ್ಟಿ ಹಿಡಿಯುವಂತೆ) ಜಗ್ಗಿ ಹಿಡಿದಿದ್ದಾರೆ. ಮಡದಿಯ ತಲೆಕತ್ತರಿಸಿದ ಮೇಲೆ ಚಟ್ಟಯ್ಯನ್ನೂ ತನ್ನ ತಲೆಯನ್ನು ಕೊಟ್ಟಿರಬೇಕು. **"ತಂನ ಹೆಂಡತಿ ಸಹಿತ ಯಿಬರು ವೊಡೆಯಂಗೆ ಕೊಟ್ಟ ಭಾಸೆಗೆ ತಲೆಗೊಟ್ಟರು"** ಎಂಬ ಮಾತು ಇದನ್ನು ಸ್ಪಷ್ಟಪಡಿಸುತ್ತದೆ. ಎರಡನೆಯ ಪಟ್ಟಿಕೆಯಲ್ಲಿ ಚಟ್ಟಂಯ್ಯ ದಂಪತಿಗಳ ಸ್ವರ್ಗಾರೋಹಣ ಹಾಗೂ ಮೂರನೆಯ ಪಟ್ಟಿಕೆಯಲ್ಲಿ ಶಿವಸಾನ್ನಿಧ್ಯದಲ್ಲಿರುವ ಚಿತ್ರಣವಿದೆ. ಈ ವೀರಗಲ್ಲಿನ ವಿಶೇಷವೆಂದರೆ, ಸ್ಮಾರಕ ಶಿಲಾಫಲಕದ ಬಲಪಕ್ಕದಲ್ಲಿ ಎತ್ತಿದ ತೋಳಿನ ಸುಂದರ ಉಬ್ಬುಶಿಲ್ಪವನ್ನೂ ಒಳಗೊಂಡಿರುವುದು. ಈ ಸ್ಮಾರಕ ಏಕಕಾಲಕ್ಕೆ ವೀರಗಲ್ಲೂ ಹೌದು ಮಾಸ್ತಿಗಲ್ಲೂ ಹೌದು. ಹಾಗಾಗಿ ಇದು ಅಪೂರ್ವವಾದ ಎಕ್ಕಟಿಗ ವೀರಮಾಸ್ತಿ ಸ್ಮಾರಕವೆಂದು ಹೇಳಬಹುದು. ಕೆಳಪಟ್ಟಿಕೆಯ ಚಿತ್ರಣ ವಿಶೇಷವಾಗಿದ್ದು, ಇದು ಹೋರಾಟದ ಚಿತ್ರಣವಲ್ಲ ವೆಂದು ಸ್ಪಷ್ಟವಾಗುತ್ತದೆ. ಇವರ ಸ್ವಾಮಿ ಭಕ್ತಿಯನ್ನು ಮೆಚ್ಚಿ ಇವರ ವಂಶಕ್ಕೆ ಬೆಳುಗಲಿಯ ಕಮ್ಮಟವನ್ನು ನೀಡಿ ರುವುದು ಗಮನಿಸಬೇಕಾದ ಅಂಶ. ಇಂತಹ ಸಂದರ್ಭಗಳಲ್ಲಿ ಭೂಮಿಯನ್ನು ನೀಡುವುದು ಸಾಮಾನ್ಯವಾಗಿ ಕಂಡುಬರುತ್ತದೆ.

ಎಕ್ಕಟಿಗರು ತಮ್ಮ ನಿಷ್ಠಾವಂತ ಸೇವೆಯಿಂದ ಅತ್ಯುತ್ತಮವಾದ ಸ್ಥಾನಮಾನ ಗೌರವಗಳನ್ನು ಪಡೆದಿದ್ದಾರೆ. ಹೊಯ್ಸಳ ಒಂದನೇ ವೀರನರಸಿಂಹನು ತನ್ನ ಅಂಗರಕ್ಷಕನಾಗಿದ್ದ ಬೆಳ್ಳಪ್ಪನಿಗೆ ಅಂಗರಕ್ಷೆಯೊಂದಿಗೆ ಬಂಡಾರದರಕ್ಷೆ, ಸಜ್ಜೆರಕ್ಷೆ ಯನ್ನೂ ವಹಿಸಿಕೊಟ್ಟು ಅಂತಃಪುರದ ಪಸಾಯತನನ್ನಾಗಿ ಮಾಡಿದ್ದನು. ಅವನ ಮಗಳು ಗೌರಿಯನ್ನು ಮದುವೆಯಾಗಿ ಅವಳಿಂದ ಎರೆಯಂಗನೆಂಬ ಒಬ್ಬ ಮಗನನ್ನು ಪಡೆದಿದ್ದು, ಆ ಕುಮಾರ ಎರೆಯಂಗದೇವನಗೆ ಕೆಂಬಾಳನ್ನು ಆಳ್ವಿಕೆಗೆ ನೀಡಿದ್ದನು.*[೩೨]

ಎಕ್ಕಟಿಗಪಡೆಯ ನಾಯಕರಿಗೆ **ಸಾಮಂತಾಧಿಪತಿ** ಎಂದು ಕರೆದಿರುವ ಉಲ್ಲೇಖ ಕ್ರಿ.ಶ. ೧೧೮೯ರ ಕಣಕಟ್ಟೆಯ ಶಾಸನವೊಂದರಲ್ಲಿದೆ.[೩೩] ಹೊಯ್ಸಳ ಇಮ್ಮಡಿ ವೀರಬಲ್ಲಾಳನ ಪಾದಪದ್ಮೋಪಜೀವಿಗಳಾದ ಸಿಡಿಲಬಳಗ, ಚಲಕ್ಕೆ ಬಲುದಲೆ ಗಳೆಂದು ಪ್ರಸಿದ್ಧವಾಗಿದ್ದ ಅರುವತ್ತು ಮಾನಸ ಎಕ್ಕಟಿಗರ ವೀರಪಡೆಯು **ಸಾಮಂತ ಸೋಮಯನಾಯಕ**ನ ಕೈಕೆಳಗಿತ್ತು. ದುಗ್ಗಬ್ಬೆಯ ಕೇತಣ್ಣ ಹಾಗೂ ಕಲ್ಲೆಯ ನಾಯಕರು ಈ ಪಡೆಯ ಮುಖ್ಯಸ್ಥರಾಗಿದ್ದರೆಂಬುದೂ ತಿಳಿದುಬರುತ್ತದೆ.

ಹೊಯ್ಸಳರ ಕೊನೆಯ ದೊರೆ ಮುಮ್ಮಡಿ ಬಲ್ಲಾಳನ ಕ್ರಿ.ಶ. ೧೩೪೨ರ ಶಾಸನವೊಂದರಲ್ಲಿ[೩೪] ಪ್ರತಾಪಚಕ್ರವರ್ತಿ ಉಣ್ಣಾಮಲೆಯಲ್ಲಿ ಆಳುತ್ತಿದ್ದಾಗ ಚಿಕ್ಕಬಯಿರೆಯ ನಾಯಕನೆಂಬ ಯೆಕ್ಕಟಿಗ ತನ್ನ ಮೈದುನನಾದ ತೊಳ್ಳೆಯ್ಯ ನಾಯಕನೊಂದಿಗೆ ಸೇರಿ ದಾನವನ್ನು ನೀಡಿದ್ದಾನೆ. ದೊರೆಯ ಹಾಗೂ ಎಲಹಕ್ಕನಾಡಪ್ರಭುಗಳು, ಶಾನುಭೋಗರ ಸಮಕ್ಷಮದಲ್ಲಿ, ಬೆಂಗಳೂರಿನ ನಾಗಾವರದ ಮಾರಗೊಂಡನ ಮಗ ಮಾರಪ್ಪನಿಗೆ ನಾಗಶೆಟ್ಟಿಹಳ್ಳಿಯನ್ನೂ ಗದ್ದೆಬೆದ್ದಲನ್ನೂ ದಾನನೀಡಿರುವ ಉಲ್ಲೇಖವಿದೆ. ಇಲ್ಲಿ ಚಿಕ್ಕಬಯಿರೆಯ ನಾಯಕನೆಂಬ ಯೆಕ್ಕಟಿಗ ವೀರನನ್ನು **ಬಲ್ಲಾಳದೇವರ ಮನೆಯ ಮಗ**ನೆಂದು ಕರೆದಿರುವುದು ಹಾಗೂ **ಶ್ರೀಮನು ಮಹಾಸಾಮನ್ತಾಧಿಪತಿ** ಎಂಬ ಅವನ ಸ್ಥಾನ ಹಾಗೂ **ಮೀಸೆಯರ ಗಂಡ** ಎಂದು ಆತನಿಗೆ ಸೇರಿಸಿರುವ ಬಿರುದನ್ನು ಈ ಶಾಸನದಲ್ಲಿ ಬಹಳ ಮುಖ್ಯವಾಗಿ ನಾವು ಗಮನಿಸಬೇಕು.

ಎಕ್ಕಟಿಗರನ್ನು **ಮನೆಮಕ್ಕಳು, ಅರಮನೆ ಮಕ್ಕಳು** ಎಂದು ಕರೆದಿರುವುದನ್ನು ಗಮನಿಸಿದರೆ ಅರಸರು, ಹಾಗೂ ಇತರ ಆಳುವ ವರ್ಗವು ಇವರ ಬಗೆಗೆ ಇಟ್ಟಿದ್ದ ನಂಬಿಕೆ ವಿಶ್ವಾಸಗಳು ಎಷ್ಟೆಂಬುದು ತಿಳಿದುಬರುತ್ತದೆ. ನಿಷ್ಠಾವಂತ ವೀರರಿಗೆ ಮಾತ್ರ ಇಂತಹ ಬಿರುದುಗಳಿರಲು ಸಾಧ್ಯ. ಅನೇಕ ಯೆಕ್ಕಟಿಗರು ತಾವು ತೋರಿದ ಸಾಹಸ ತ್ಯಾಗಗಳಿಗಾಗಿ ಅರಸರಿಂದ ಮೆಚ್ಚುಗೆಯಾಗಿ, ಆಡಳಿತದ ಕೆಲವು ಪ್ರದೇಶಗಳನ್ನು ಪಡೆಯುತ್ತಿದ್ದರೆನ್ನಬಹುದು.

ಕೇವಲ ರಾಜರಷ್ಟೇ ಅಲ್ಲ ಸಿರಿವಂತರೂ ಎಕ್ಕಟಿಗ ಅಂಗರಕ್ಷಕರನ್ನು ನೇಮಿಸಿಕೊಳ್ಳುತ್ತಿದ್ದರೆಂಬುದನ್ನು ಅಂತಹ ಅಂಗರಕ್ಷಕ ಭಂಟರನ್ನೂ **ಮನೆಮಗ**ನೆಂದು ಕರೆಯುವ ರೂಢಿ ಇದ್ದಿತೆಂಬುದನ್ನು ಕ್ರಿ.ಶ. ಸು. ೧೩ನೇ ಶತಮಾನದ ಸುತ್ತೂರಿನ ಶಾಸನದ ಮಲ್ಲಿಸೆಟ್ಟಿಯ ಮಗ ಎಕ್ಕಟಿಗ ಚಿಕ್ಕಣನ ಉದಾಹರಣೆಯಿಂದ ತಿಳಿಸಿಕೊಡಲಾಗಿದೆ.[೩೫]

ಎಕ್ಕಟಿಗರ ವೇಷಭೂಷಣ, ಬದುಕು

ಕಡಗ, ಪೆಂಡೆ, ಗೆಜ್ಜೆ, ಕಣಕಾಲು ಬಾಸಿಂಗ, ಮಡೆಯ ಹಾಗೂ ಬದ್ದುಗೆಯ ಕಿಗ್ಗಂಟುಗಳಿಂದ ಕೂಡಿದ ಕಟ್ಟುಮಸ್ತಾದ ಬಿಲ್ಲಾಳ್ಗಳ ಸೈನ್ಯದೊಂದಿಗೆ ದೊಡ್ಡಗುರಾಣಿ, ನಡಪಟ್ಟಿ, ಕೊಂಕಿದ ಕಠಾರಿ, ಕೈಯ ಹಲಗೆ, ದೊಡ್ಡ ಬಡಿಗೆ ಹಿಡಿದು ಸಾಗುವ ಧೀರ ಎಕ್ಕಟಿಗರ ಮೇಲೆ ಬೀಸುವ ಚಾಮರಗಳ ಲೆಕ್ಕವಿಡಲು ಸಾಧ್ಯವಾಗದೆಂದು ಕನಕದಾಸರು ವರ್ಣಿಸಿದ್ದಾರೆ[೩೬] ಕಂಡೆಯ ಪೆಂಡೆಯ, ವಡ್ಡಿವಾಣ, ಉತ್ತರಿಗೆ, ಲುಳಿ ಹಿಡಿದ ಕಾಸೆಯ, ಹೊನ್ನಹರಿಗೆ, ಜಡಿವ ಚಾಮರಗಳ ಮಧ್ಯೆ ನಡೆದುಬರುವ ಮೆಯ್ಗಾವಲೆಕ್ಕಟಿಗರ ಗಡಣವು, ಅಂಕದಕಳಕ್ಕೆ ನಡೆವ ಮಾಸಾಳ್ಗಳ, ಕಂಬಿಯವರ ಕರೆಯನ್ನು ಕೇಳಿ ಎಂದೂ ಕೂಡ ಅಳಿಮನವನ್ನು ಮಾಡದೆ, ತಡಮಾಡದೆ ಹೊರಗೆ ನುಗ್ಗಿಬರುತ್ತಿದ್ದರಂತೆ.[೩೭]

ಎಕ್ಕಟಿಗರು ಅರಸನೊಂದಿಗೆ ಬೇಟೆಯಲ್ಲೂ ಭಾಗಿಗಳಾಗುತ್ತಿದ್ದುದು ತಿಳಿದುಬರುತ್ತದೆ. ಮೂರು ದಿನದ ತಳುವೇಂಟೆಯೆಂದು ರಾಜನು ಸಾರಿಸಿದೊಡನೆ ಭೇರಿ, ತಂಬಟ, ಡೋಲು, ಪಟಹ ಡಿಂಡಿಮ, ಕೊಂಬು ಭೋರಿಡುತ್ತಿರಲು ಹಾಸಿನನಾಯಿ, ಬಲೆಯ ಹೊರೆ, ದೀಹದ ಭಾಷೆಯು ಬೇಡರ ಪಡೆ, ಮಾಸಾಳು ರಾವುತರೊಂದಿಗೆ ಎಕ್ಕಟಿಗರು ರಾಜನನ್ನು ಅನುಸರಿಸಿ ಬೇಟೆಗೆ ತೆರಳುತ್ತಿದ್ದುದನ್ನುಲಕ್ಷ್ಮಯ್ಯಕಪಿ ವರ್ಣಿಸುತ್ತಾನೆ[೩೮] ಎಕ್ಕಟಿಗರ ಮನರಂಜನೆಗೇನೂ ಕೊರತೆಯಿರುತ್ತಿರಲಿಲ್ಲ. ಅವರು ಸದಾಕಾಲ ಅರಸನೊಂದಿಗೆ ಇರುತ್ತಿದ್ದುದರಿಂದ ರಾಜನ ಒಡ್ಡೋಲಗದ ನೃತ್ಯ ಸಂಗೀತಾದಿ ಮನರಂಜನಾ ಕೂಟದಲ್ಲಿ ವಿಲಾಸ–ವೈಭವಗಳನ್ನು ನೋಡುವ ಅವಕಾಶವಿರುತ್ತಿತ್ತು.[೩೯] ಭುಜಬಲಿ ಚರಿತೆಯಲ್ಲಿ[೪೦] ಪುರವರ್ಣನೆಯನ್ನು ಮಾಡುವಾಗ ಕವಿ ನಾನಾ ಪಂದ್ಯಾವಳಿಯಲ್ಲಿ ತೊಡಗಿಕೊಂಡಿದ್ದ ಎಕ್ಕಟಿಗರ ಮೋಜನ್ನು ಕುರಿತು ಹೇಳಿದ್ದಾನೆ. ಕಬ್ಬಿನ ಪೊರೆಗಳ ಪೊಯ್ವು, ತಗರಕೋಳಿಯಬ್ಬರ ಮಿಗೆ ಕಾದಿಸುವ, ಕೊಬ್ಬಿ ಕಾಲ್ಮೆಟ್ಟಿ ಕಾದುವ ಎಕ್ಕಟಿಗರ ಹಬ್ಬ ಒಪ್ಪಿಹುದಂದಲ್ಲಿ" ಎಂಬ ಚಿತ್ರಣವು ಯುದ್ಧವಿಲ್ಲದ ಬಿಡುವಿನ ವೇಳೆಯಲ್ಲಿ ಇಂತಹ ಸಾಹಸಮಯ ಪಂದ್ಯಾಟಗಳಲ್ಲಿ ಎಕ್ಕಟಿಗರು ತೊಡಗಿಕೊಳ್ಳುತ್ತಿದ್ದರೆಂಬುದರ ಮೇಲೆ ಬೆಳಕು ಚೆಲ್ಲುತ್ತದೆ. ಟಗರು, ಕೋಳಿ ಅಂಕಗಳು ನಮ್ಮ ಗ್ರಾಮೀಣ ಪಂದ್ಯಾವಳಿಗಳಲ್ಲಿ ಪ್ರಮುಖವಾದವುಗಳು. ಅದರಲ್ಲೂ ವಿಶಿಷ್ಟವಾದ ಎಕ್ಕಟಿ ದ್ವಂದ್ವಕಾಳಗಗಳು ಜಟ್ಟಿಕಾಳಗಗಳಷ್ಟೇ ಸಾಹಸಮಯವಾಗಿದ್ದು, ಪ್ರೇಕ್ಷಕರಲ್ಲಿ ರೋಮಾಂಚನವನ್ನು ಉಂಟುಮಾಡುತ್ತಿತ್ತು.

ಈ ರೀತಿಯಾಗಿ ಎಕ್ಕಟಿಗರ ಸಮೂಹ ಅರಸನ ನೆರಳಿನಂತೆ ಸದಾ ಅವನ ಬೆಂಗಾವಲಿಗಿರುತ್ತಿದ್ದುದು, ವೈಭವ ಮನರಂಜನೆಗಳಿಗೆ ಸಾಕ್ಷಿಯಾಗುತ್ತಿದ್ದುದಷ್ಟೇ ಅಲ್ಲದೆ ರಾಜನ ತ್ಯಾಗ–ವೈರಾಗ್ಯದ ಸಂದರ್ಭಗಳಲ್ಲೂ ಅವನೊಂದಿಗೆ ದೀಕ್ಷೆ ಸ್ವೀಕರಿಸುತ್ತಿದ್ದುದೂ ಉಂಟು. ಶ್ರೀಪಾಲ ಮಹಾರಾಜ ವೈರಾಗ್ಯ ತಳೆದು ದೀಕ್ಷೆ ಕೈಕೊಳ್ಳುವಾಗ ಅವನ ಪರಿವಾರದೊಂದಿಗೆ ಯಕ್ಕತುಳ ಹತ್ತುಸಾಸಿರ ಅರಿಕೆಯಮಕ್ಕಳೂ(ಎಕ್ಕಟಿಗರು) ಅರಸನನ್ನೂ ದೀಕ್ಷೆಯಲ್ಲೂ ಅನುಸರಿಸಿದ ಉದಾಹರಣೆಗಳಿವೆ.[೪೧]

ಈ ರೀತಿ ಅವರ ವೇಷಭೂಷಣ ಸಾಹಸಮಯ ಬದುಕಿನ ಚಿತ್ರಣ ಹಾಗೂ ಧಾರ್ಮಿಕತೆಗಳು ಮಾತ್ರವೇ ಹೆಚ್ಚಾಗಿ ಶಾಸನಗಳಲ್ಲಿ ಕಾವ್ಯಗಳಲ್ಲಿ ಕಂಡುಬಂದಿವೆ. ಅವರ ವೈಯಕ್ತಿಕ ಕೌಟುಂಬಿಕ ಬದುಕಿನ ಚಿತ್ರಣಗಳು ನಮಗೆ ದೊರೆಯುವುದೇಯಿಲ್ಲ. ಅದೃಷ್ಟವಶದಿಂದ ಶ್ರೀಪಾಲ ಚರಿತೆಯಲ್ಲಿ ಕವಿ ದಿಗ್ವಿಜಯಕ್ಕೆ ಹೊರಟ ಅರಸನು ಯುದ್ಧದ ಕರೆಕೊಟ್ಟೊಡನೆ ಹೊರಡಲು ಸಿದ್ಧರಾದ ಎಕ್ಕಟಿಗ ವೀರರ ಹಾಗೂ ಸಹಾಯಕ ಕೆಲಸಗಾರರ ಕೌಟುಂಬಿಕ ಚಿತ್ರಣವನ್ನು ಮನ ಮಿಡಿಯುವಂತೆ ನೀಡಿದ್ದಾನೆ.[೪೨] ಯುದ್ಧಭೇರಿಗಳು ಮೊಳಗಿದವೆಂದರೆ ಸಾಕು ಹಿಂದೆಮುಂದೆ ನೋಡದೆ ಎಕ್ಕಟಿಗವೀರರು ಪ್ರಾಣ ಒತ್ತೆಯಿಟ್ಟು ಹೋರಾಟಕ್ಕೆ ಸಿದ್ಧವಾಗಿಬಿಡಬೇಕಾಗುತ್ತಿತ್ತು. ಬಿಟ್ಟದ್ದು ಬಿಟ್ಟಂತೆ ಹೊರಡಬೇಕಾದ್ದರಿಂದ ಕುಟುಂಬ ನಿರ್ವಹಣೆಯನ್ನು ಅಚ್ಚುಕಟ್ಟಾಗಿ ಮಾಡಲು ಮಡದಿಯರಿಗೆ ಅಗತ್ಯವಾದ ಎಲ್ಲ ಏರ್ಪಾಟನ್ನು ಮಾಡಬೇಕಾಗುತ್ತಿತ್ತು. ಹಿಂದೆಮುಂದಕೆ ಸಂದ ಹಣವನ್ನು ಲೆಕ್ಕಮಾಡಿ ಕೊಡಬೇಕಾದವರಿಗೆ ಕೊಟ್ಟು ಸಾಲಗಳನ್ನು ತೀರಿಸಿ, "ಮುಂದಣ ಕಾಲಾವಧಿಗೆ ಮನೆಯ ಬೀಯಕೆ ತಕ್ಕ ಹಣವ ಹೆಮ್ಮಕ್ಕಳ ಕೈಯೊಳಗಿತ್ತು, ಮಕ್ಕಳ ಮುದ್ದಾಡಿಸಿ ಪೊರಮಡುತಿರ್ದರೆಕ್ಕಟಿಗಳು ಮನೆಗಳನು" ಎಂಬ ಪದ್ಯವು ವೀರರ ಜೀವನದ ಅನಿವಾರ್ಯತೆಗಳನ್ನು, ಅವರ ಕರ್ತವ್ಯಪ್ರಜ್ಞೆಯನ್ನು, ಆ ಯೋಧರಿಗಿರುತ್ತಿದ್ದ ಒಡೆಯನ ಜೋಳದಪಾಳಿಯ ಹಂಗನ್ನು, ಅದಕ್ಕಾಗಿ ಆಡುವ ಕಂದಗಳನ್ನು ಮುದ್ದಾಡಿ ಬಿಡಲಾರದೇ ಬಿಟ್ಟುಹೋಗಬೇಕಾದ ಸಂಕಟವನ್ನು ಮನಮುಟ್ಟಿಸುತ್ತದೆ. ಈ ಹೊತ್ತಿಗೂ ಯೋಧರ ಬದುಕು ಹೀಗೆಯೇ ಇದೆ ಎಂಬುದು ನಮಗೆ ತಿಳಿದೇಯಿದೆ.

ಮತ್ತೊಂದು ಚಿತ್ರದಲ್ಲಿ ಅರಸನ ರಕ್ಷಣೆಯ ಹೊಣೆಹೊತ್ತ ಈ ವೀರನಿಗೆ ಮನೆಯ ರಕ್ಷಣೆಯದೇ ಚಿಂತೆ! ತಾನಿಲ್ಲದಾಗ ಮನೆಯನ್ನು ಜೋಪಾನವಾಗಿ ಕಾಪಾಡಿಕೊಳ್ಳುವುದಕ್ಕೆ ಮಡದಿಗೆ ಎಚ್ಚರಿಕೆಯನ್ನೂ ನೀಡುತ್ತಾರೆ. "ಮನೆಯ ಬಾಗಿಲ ಕಾವಲು ಬೀಗವನೊಂದಿನಿಸು ಮರೆಯುಬೇಡ ಎನುತ ಸಜ್ಜನೆಯರೊಳು ಉಸುರಿ" ದಂಡಿಗೆ ಹೋಗಲು ಸಿದ್ಧವಾಗುತ್ತಿದ್ದ ಎಕ್ಕಟಿಗರನ್ನು ಕಾಣುತ್ತೇವೆ. ತಮ್ಮ ನಾರಿಯರ ಕಣ್ಣೀರ ತೊಡೆದು ಕೆಲವರು ಅಲ್ಲಿ ನಿಲ್ಲಲಾರದೇ ಹೊರನಡೆಯುತ್ತಿದ್ದರಂತೆ. ಅಗಲುವ ಯುವ ದಂಪತಿಗಳ ಕಷ್ಟವಂತೂ ಹೇಳತೀರದು "ನೀನಲ್ಲದೆ ಅನ್ನಿಗರೆನ್ನ ತಾಯ ಸಮಾನವೆನುತ ಮಾನಿನಿಗೆ ಒಬ್ಬ ವೀರ ಭಾಷೆಯಮಾಡಿ (ಆಣೆಯಿಟ್ಟು) ಯುದ್ಧಕ್ಕೆ ಹೊರಟನಂತೆ! ಮತ್ತೊಬ್ಬ ರಸಿಕ ತನ್ನ ಮಡದಿಯನ್ನು ಚುಂಬಿ ಬಾಯೊಳು ರಸತಾಂಬುಲವಿತ್ತು, ಮುದ್ದಾಡಿ ಅವಳ ದುಂಬಿಗಳಂತಹ ಕುರುಳನ್ನು ತಿದ್ದುತ್ತಾ ತಾನು ಯುದ್ಧದಲ್ಲಿ ಹೋರಾಡಿ ನಿನಗಾಗಿ ಬಂದೇಬರುತ್ತೇನೆಂದು ನಂಬಿಕೆಯನ್ನುಹೇಳಿ ಹೊ ನಡೆದನಂತೆ! ಒಡನುಂಡು, ಒಡನೆ ತಂಬುಲವಿತ್ತು ಬಿಗಿದ ಮಡದಿಯ ಮೊಗವ ಮುದ್ದಾಡಿ ತುಂಬಿದ ಕಣ್ಗಳ ನೀರ ಒರೆಸುತ್ತಾ ವೀರನೊಬ್ಬ ಹೊರನಡೆಯುತ್ತಿರುವ ಚಿತ್ರ. ಯುದ್ಧದ ಸಾವು ನೋವುಗಳನ್ನೂ, ಅನಾಥವಾಗುತ್ತಿ ಕುಟುಂಬಗಳ ಅಸಹಾಯಕ ಸ್ಥಿತಿಯನ್ನು ನೆನಪಿಸುತ್ತ

ಇಂತಹ ವೀರರ ಕಣ್ಣಲ್ಲಿನ ನೀರುಕ್ಕುವ ಈ ಚಿತ್ರಗಳು, ಕಲ್ಲೆದೆಯನ್ನು ಮಾಡಿಕೊಂಡು ರಣರಂಗದಲ್ಲಿ ಶತ್ರುಗಳನ್ನು ಕೊಚ್ಚಿಹಾಕುವ ವೀರಜೀವನವನ್ನೇ ಬದುಕಿಗೆ ಆಸರೆಯಾಗಿ ಮಾಡಿಕೊಂಡಿದ್ದವರ ಪರಿಸ್ಥಿತಿಗೆ ಹಿಡಿದ ಕನ್ನಡಿಯಾಗಿದೆ.

ಮೌಲ್ಯ ಬದಲಾವಣೆ

ವೀರಮೌಲ್ಯಗಳು ಕ್ಷಾತ್ರಯುಗದಲ್ಲಿ ಅತ್ಯಂತ ಪ್ರಧಾನವಾದ ಮೌಲ್ಯವಾಗಿದ್ದವು. ಈ ಮೌಲ್ಯವು, ರಾಜ ಪ್ರತ್ಯಕ್ಷ ದೈವವೆಂಬ ನಂಬಿಕೆಯನ್ನು ಭಿತ್ತಿ "ಕ್ಷಣವಿಧ್ವಂಸಿನೀ ಕಾಯೆ ಕಾ ಚಿಂತೆ ಮರಣೇ ರಣೆ" ಎಂಬ ತತ್ವ ಸಾರುವ ಮೂಲಕ ರಾಜನಿಗಾಗಿ ಪ್ರಾಣ ನೀಡುವ ಬಂಟರನ್ನು, ಸೇವಕ ವರ್ಗದವರನ್ನು ಹುಟ್ಟುಹಾಕಿತ್ತು. ಅನೇಕ ವೀರಪಡೆಗಳು ಅರಸೊತ್ತಿಗೆಯ ಉಳಿವಿಗಾಗಿ ಊಳಿಗ ಮಾಡುತ್ತಿದ್ದುವು. ೧೨ನೇ ಶತಮಾನದ ಹೊತ್ತಿಗೆ ಕರ್ನಾಟಕದ ಸಾಂಸ್ಕೃತಿಕ ಜಗತ್ತಿನಲ್ಲಾದ ಪಲ್ಲಟವು ಹೊಸಮೌಲ್ಯಗಳ ಹುಟ್ಟುವಿಕೆಗೆ ಕಾರಣವಾಯಿತು. ಕ್ಷಾತ್ರಮೌಲ್ಯಗಳು ಮಂಕಾಗಿ ರಾಜಭಕ್ತಿ ದೈವಭಕ್ತಿಯಾಗಿ ಮಾರ್ಪಾಟಾಗತೊಡಗಿತು. ರಾಜ ಪ್ರಭುತ್ವದ ಪರಾಕಾಷ್ಟೆಯನ್ನು ಪ್ರಶ್ನಿಸಲು ಆರಂಭಿಸಿದ ಮೇಲೆ, ಅವರ ಊಳಿಗವನ್ನು ನಿರಾಕರಿಸಿದಮೇಲೆ, ವೀರನಿಗೆ ಪ್ರಾಮುಖ್ಯತೆ ಕಡಿಮೆಯಾಗತೊಡಗಿತು. ಹೀಗಾಗಿ ವಚನಗಳು ಮತ್ತು ಭಕ್ತಿ ಪ್ರಧಾನವಾದ ಕಾವ್ಯಗಳಲ್ಲಿ ಜೋಳವಾಳಿ, ಲೆಂಕವಾಳಿ, ಎಕ್ಕಟಿಗರ ಬಗ್ಗೆ ಒಂದು ರೀತಿಯ ತಿರಸ್ಕಾರ, ಅಸಡ್ಡೆ ಬೆಳದಿರುವುದು ಕಂಡುಬರುತ್ತದೆ. ಇಂತಹ ವೀರ ಪರಾಕ್ರಮಗಳು ಭಕ್ತರ ಸಾತ್ವಿಕ ಶಕ್ತಿಯಮುಂದೆ ಸೋತು ಸತ್ವಕಳೆದುಕೊಳ್ಳುವಂತೆ ಚಿತ್ರಿಸಲಾಗಿದೆ. ವೀರರಿಗೆ ವೀರಪಡೆಗಳಿಗೆ ವೈಷ್ಣವ, ಶೈವದೀಕ್ಷೆಗಳನ್ನು ನೀಡುವ, ಒಕ್ಕಲಾಗಿಸುವ ಪ್ರಕ್ರಿಯೆ ವಿಶೇಷವಾಗಿ ೧೨ನೆಯ ಶತಮಾನ ಹಾಗೂ ಆ ನಂತರ ನಡೆಯತೊಡಗಿದುದರಿಂದ ಈ ವೀರರ ಬದುಕಿನಲ್ಲಿ ಒಂದು ಬದಲಾವಣೆ ಕಾಣಿಸಿಕೊಂಡರೂ, ಈ ವೀರಹೋರಾಟಗಾರರು ಒಂದು ರೀತಿಯ ಇಬ್ಬಂದಿತನದಲ್ಲಿ ಸಿಕ್ಕಿರುವುದು ಕಂಡುಬರುತ್ತದೆ. ಈ ವಿಚಾರವನ್ನು ಪುಷ್ಟೀಕರಿಸಲು ಕೆಲವು ಉದಾಹರಣೆಗಳನ್ನು ನೋಡಬಹುದು.

ಮೋಳಿಗೆಯ ಮಾರಯ್ಯನ ವಚನವೊಂದರಲ್ಲಿ "ಎಕ್ಕಟಿಗನ ಮಕ್ಕಳೆಲ್ಲರೂ ನಷ್ಟಸಂತಾನವಾದರು"[೪೩] ಎಂದುಹೇಳುತ್ತಾನೆ. ಅಶಾಶ್ವತವಾದ ಅಧಿಕಾರವನ್ನು ಸಂಪತ್ತನ್ನು ನಂಬಿದ ಅರಸರ ಮನೆಮಕ್ಕಳಾಗಿ ಅನ್ನದ ಋಣಕ್ಕಾಗಿ ದುಡಿಯುತ್ತಿದ್ದ ಎಕ್ಕಟಿಗರ ಬದುಕನ್ನು ಕಂಡವನು ಈ ವಚನಕಾರ. ಅಂತಹ ವೀರರ ಬದುಕಿನ ಅಂತ್ಯ ಸಾವುನೋವುಗಳಿಂದ ಕೂಡಿರುತ್ತಿತ್ತು. ಆಳರಸರ ಅಹಂಮ್ಮಿಗೆ ಸಿಕ್ಕಿ ನಷ್ಟವಾಗಿಹೋಗುತ್ತಿದ್ದ ಎಕ್ಕಟಿಗರಂತಹವರ ಬಗೆಗೆ ಭಕ್ತನಾದ ಮೋಳಿಗೆಯ ಮಾರಯ್ಯ ಮರುಗುವುದು ಸಹಜವೇ ಆಗಿದೆ. ಬಸವಣ್ಣನವರು ವೇಳೆವಾಳಿಯವ ನಾನಲ್ಲ, ಜೋಳವಾಳಿಯವ ನಾನಲ್ಲ' ಎನ್ನುವ ಮಾತಿನಮೂಲಕ ಅರಸರ ಸೇವೆಗಿಂತ ಶಿವನ, ಶರಣರ ಸೇವೆಯಲ್ಲಿ ಬದುಕಿನ ಸಾರ್ಥಕತೆಯನ್ನು ಕಂಡುಕೊಳ್ಳುವುದರ ಬಗೆಗೆ ನಮ್ಮ ಗಮನ ಸೆಳೆಯುತ್ತಾರೆ.[೪೪] "ಲಿಂಗಮನರಸಿ ಪಿಡಿದೆಕ್ಕಟಿಗ ತುರುವರಿಗತನವನೆಂದೆಂದು ಬಿಟ್ಟಪೆ ಬಿಟ್ಟಪೆ....." ಎಂಬ ಮಹಾದೇವಿಯಕ್ಕನ ಪುರಾಣದಲ್ಲಿನ.[೪೫] ಮಾತುಗಳು ರಾಜಭಕ್ತಿಗೆ ಒಗ್ಗಿಹೋದ, ಆ ಮೂಲಕ ಹೋರಾಟ, ತುರುಗಳನ್ನು ಆಕ್ರಮಿಸಿ ಸೆರೆಹಿಡಿಯುವ 'ತುರುವರಿಗತನ'ಗಳಿಗೂ ಒಗ್ಗಿಹೋಗಿರುವ ಎಕ್ಕಟಿಗರನ್ನು ವಿಡಂಬಿಸುತ್ತಿದೆ. ಎಕ್ಕಟಿಗವೀರನು ಲಿಂಗದೀಕ್ಷೆಯನ್ನು ಪಡೆದು ಶರಣಜೀವನವನ್ನು ಅಳವಡಿಸಿಕೊಂಡು ಬದುಕುವುದು ಅಷ್ಟು ಸುಲಭವಾದುದಲ್ಲ. ಅನ್ಯರ ಸಂಪತ್ತನ್ನು ದೋಚುವ, ಆಕ್ರಮಣಕಾರಿ ಗುಣಗಳನ್ನು ಹೊಂದಿದ ಅರಸರ ಊಳಿಗದಲ್ಲಿ ಕಲಿತ ಯುದ್ಧ ಪ್ರೀತಿ, ತುರುವರಿಗತನವನ್ನು 'ಎಂದೆಂದು ಬಿಟ್ಟಪೆ, ಬಿಟ್ಟಪೆ' ಎಂದು ಹೇಳಿದಮಾತ್ರಕ್ಕೆ ಅವು ಬಿಟ್ಟುಹೋಗುವುದಿಲ್ಲ, ಲಿಂಗವನ್ನು ಅರಸಿ ನಂಬಿ ಹಿಡಿದ ಎಕ್ಕಟಿಗ ಅರಸನಿಗೆ ತೋರುತ್ತಿದ್ದ ನಿಷ್ಠೆಯನ್ನೇ, ಲಿಂಗಕ್ಕೆ ತೋರುವುದರ ಮೂಲಕ ತನ್ನ ಬದುಕಿನಲ್ಲಿ ಬದಲಾವಣೆಯನ್ನು ಮಾಡಿಕೊಳ್ಳಬೇಕಾಗುವುದೆಂಬುದನ್ನು ಹೇಳಿದೆ. ವೀರಯೋಧರ ಬದುಕಿನಲ್ಲಾಗುತ್ತಿದ್ದ ಇಂತಹ ಮೌಲ್ಯ ಬದಲಾವಣೆ, ಆಮೂಲಕ ಜೀವನಕ್ರಮದ ಬದಲಾವಣೆಯನ್ನು ಇದು ಸೂಚಿಸುತ್ತದೆ. ಬಾಣಾಸುರನ ಸೈನ್ಯದಲ್ಲಿದ್ದ ಎಕ್ಕಟಿಗರ ಪರಾಕ್ರಮವೆಲ್ಲ ಕೃಷ್ಣನ ದೈವೀಕತೆಯ ಮುಂದೆ ಸರ್ವನಾಶವಾಗುವುದನ್ನು ಕನಕದಾಸರು ತಮ್ಮ ಮೋಹನತರಂಗಿಣಿ ಕಾವ್ಯದಲ್ಲಿ ಚಿತ್ರಿಸಿದ್ದಾರೆ. ಈ ಮೌಲ್ಯ ಬದಲಾವಣೆಯನ್ನು ಸ್ವತಃ ತಮ್ಮ ಬದುಕಿನಲ್ಲೇ ಮಾಡಿಕೊಂಡವರು.

ಸಿಂಗಿರಾಜಪುರಾಣದಲ್ಲಿ[೪೬] ಬಿಜ್ಜಳನು ಭಕ್ತನಾದ ಲೆಕ್ಕದ ಬಾಚರಸರ ಕಣ್ಣುಗಳನ್ನು ಕೀಳುವಂತೆ ಆಜ್ಞೆಮಾಡುತ್ತಾನೆ. ತನ್ನನ್ನು ವಿರೋಧಿಸಿದ ಭಕ್ತರ ಮೇಲೆ ಸೈನ್ಯಸಮೇತ ನುಗ್ಗಿ ಬರುತ್ತಾನೆ. "ನಡೆತಂದ ರಾಯ ರಾವುತರ ಗೊಂದಣದೊಳಗೆ ಎಡಬಲದ ಎಕ್ಕಟಿಗರುಗಳ ಸಂದಣಿಯೊಳಗೆ ನಾನಾ ರೀತಿಯ ಆಯುಧಗಳನ್ನು ಹಿಡಿದು ಎಡೆಬಿಡದೆ 'ಇರಿ-ಕಡಿ' ಎಂಬ, ನಾಯಕರ ಬಲದೊಳಗೆ ಗಜತುರುಗ ಸೈನ್ಯ ಸಮೇತನಾಗಿ ನುಗ್ಗಿಬರುತ್ತಾನೆ! ಆದರೆ ಭಕ್ತನಾದ ಲೆಕ್ಕದ ಬಾಚರಸರ ಪಂಚಾಕ್ಷರೀ ಮಂತ್ರದಿಂದ ಜೀವ ತಳೆದ ಸ್ಮಶಾನದ "ಮುಂಡಗಳು ಎದ್ದು ಎಡಬಲದೆಕ್ಕಟಿಗರುಗಳ ಖಂಡೆಗಳ ಸೆಳದುಕೊಂಡು ಚಾರಿವರಿವುತ ಕಡಿಯೆ ಕೊಂಡೆಯರು

ಕೆದಜಿಬಿದ್ದೋಡುತಿರೆ ಬೆಂಬತ್ತಿ ಬರೆ ಹೆದರಿಸುತ್ತ ...ಗಂಡುಗಲಿಗಳ ಹೊಡೆಯೆ" ಬಿಜ್ಜಳನ ವೀರಪಡೆ ಸರ್ವನಾಶವಾಗುತ್ತದೆ, ಹೆದರಿ ಓಡುತ್ತದೆ. ಸೈನ್ಯದಲ್ಲಿದ್ದ ವೀರರು ಹಾಗೂ ಖಾಸ ಪಡಬಲದ ಎಕ್ಕಟಿಗ ಅಂಗರಕ್ಷಕರೆಲ್ಲರ ಕೊರಳನ್ನು ಕೊಯ್ಯುತ್ತ ಮುನ್ನುಗ್ಗುವ ಮುಂಡಗಳ ಮುಂದೆ ಬಿಜ್ಜಳ ಹೆದರಿ ನಿಲ್ಲುತ್ತಾನೆ. ಆದರೆ ಆ ಮುಂಡಗಳು ಬಸವನ ಮುಂದೆ ಮಣಿಯುತ್ತವೆ! ಇಷ್ಟೆಲ್ಲಾ ವೀರರ ಪರಾಕ್ರಮ ಅವರ ಆಯುಧಗಳು ಕೀರ್ತಿಯೆಲ್ಲವೂ ಈ ಕಾವ್ಯದಲ್ಲಿ ವಿಡಂಬನೆಗೆ ಒಳಗಾಗಿದೆ. ಸೊಡ್ಡಳ ಬಾಚಯ್ಯನ ಶಿವ ಪಂಚಾಕ್ಷರಿಯಿಂದ ಜೀವ ಪಡೆದ ಆ ಮುಂಡಗಳು ಕಾಳಿಮಯ್ಯ, ಕರಿಯಕೇಶವ, ಪೋಚರಸ, ದಾಮೋದರ, ಗಜಸಿಂಹನೆಂಬ ಬಿರುದಿನ ಕಾಮನು, ಅಂಕೆಕಾರ ಸುರಗಿಯಬೊಮ್ಮ, ಆಳುತನದಲ್ಲಿ ವ್ಯಾಘ್ರನೆಂಬ ಬಿರುದಿನ ಸೋಮ ಛಲದಂಕಮಲ್ಲ ಶಿರುಮ, ಸಾಳವನ ಬಿರುದಿನ ರಣಭೈರವ, ಮೀಸೆಮರಿಗಂಡು ತೊಲಗದಕಂಬ ಎಂಬ ಬಿರುದಿನ ವಿರುಪ, ಭೀಮ ಇಂಥ ಗಂಡುಗಲಿಗಳಾದ ಎಕ್ಕಟಿಗರು ದೈವಿಕ ಶಕ್ತಿಯಿಂದ ಮೇಲೆದ್ದ ಮುಂಡಗಳಿಗೆ ಬಲಿಯಾಗಿ ಹೆಣದ ಬಣಬೆಯಾದ ಚಿತ್ರಣ ರೂಪಕಾತ್ಮಕವಾಗಿ ವೀರಮೌಲ್ಯವು ಸತ್ವ ಕಳೆದುಕೊಂಡದ್ದನ್ನು ಧ್ವನಿಸುತ್ತಿದೆ. ಈ ಹಿನ್ನೆಲೆಯಲ್ಲಿ ಮೋಳಿಗೆ ಮಾರಯ್ಯನ 'ಎಕ್ಕಟಿಗನಮಕ್ಕಳು ನಷ್ಟಸಂತಾನವಾದರು' ಎಂಬ ಮಾತನ್ನು ಅರ್ಥೈಸಬೇಕಾಗುತ್ತದೆ.

ಇಂದಿನ ಆಂಧ್ರದ ಕೆಲವು ಶಾಸನಗಳಲ್ಲಿ ಎಕ್ಕಟಿಗರ ಉಲ್ಲೇಖವಿರುವಂತೆಯೇ ತೆಲುಗು ಕಾವ್ಯಗಳಲ್ಲಿ, ದಾಖಲೆಗಳಲ್ಲಿ ಅವರ ಉಲ್ಲೇಖಬಂದಿರುವುದನ್ನು ಶ್ರೀ ಮಲ್ಲಂಪಲ್ಲಿ ಸೋಮಶೇಖರ ಶರ್ಮರವರು ಗುರುತಿಸಿದ್ದಾರೆ.[೪೭] ಈ ಕೃತಿಯಲ್ಲಿ ಕಾಲುದಳದಲ್ಲಿ ೧. ಈಟಿಯದಳ, ೨. ಬಿಲ್ಲುಗಾರರು, ೩. ಸಂಬಳದವರು, ೪. ಎಕ್ಕಟಿಗಳು ಎಂದು ನಾಲ್ಕು ಬಗೆಯ ಸೈನಿಕರನ್ನು ಗುರುತಿಸುತ್ತಾರೆ. ಎಕ್ಕಟಿ ಎಂದರೆ ಒಬ್ಬಂಟಿಗ ಎಂದು ಅರ್ಥ ತಿಳಿಸಿ, ಯುದ್ಧವು ಹಾರಿಹೋಗುತ್ತಿದ್ದರೆ ಮುಖಾಮುಖಿ ಹೋರಾಟದಲ್ಲಿ ಎಕ್ಕಟಿಗನು ಬಂದು ಹೋರಾಡುವನು. ಎಕ್ಕಟಿಯುದ್ಧವೆಂದರೆ ದ್ವಂದ್ವ ಯುದ್ಧ. ಎಲ್ಲ ದಾರಿಗಳೂ ಮುಚ್ಚಿಹೋದಮೇಲೆ ನಡೆಯುವ ಹೋರಾಟ. ಎಕ್ಕಟಿ ಸೈನ್ಯವು ಬಹುಶಃ ಕಾದಿರಿಸಿದ ಸೈನ್ಯವಾಗಿ ಇದ್ದಿರುತ್ತದೆ. ಪ್ರತಿಯೊಬ್ಬ ಯೋಧನೂ ಮಲ್ಲಯೋಧನಾಗಿರುತ್ತಾನೆ. ಗದೆ ಮುಂತಾದ ಆಯುಧಗಳನ್ನು ಬಳಸುವವರಾಗಿರುತ್ತಾರೆ. ಪ್ರತಿಮುಖ್ಯ ಪಟ್ಟಣಗಳಲ್ಲಿ ಇಂತಹ ಎಕ್ಕಟಿಗರು ಇರುತ್ತಿದ್ದರು. ವೆಲ್ಲಂತೂರು (ಇಂದಿನ ವೆಲ್ಲಟೂರು) ತಂಗೆಡ, ಪೊತೆಪಲ್ಲಿ ಭಾಗಗಳಲ್ಲಿ ಎಕ್ಕಟಿರು ಹೆಚ್ಚಾಗಿದ್ದರು. ರೆಡ್ಡಿರಾಜರ ಪತ್ರಗಳಲ್ಲಿ ಒಕ್ಕಣಿಕೆ ಇದೆ. ಈ ಎಕ್ಕಟಿಗರು ಸ್ಥಾನೀಕ ದೇವತೆಗಳಿಗೆ ಕಾಣಿಕೆಗಳನ್ನು ಕೊಡುತ್ತಿದ್ದರು. ರಾಜರು ಅವರಿಗೆ ಭೂಮಿಯನ್ನು ಜೀವನೋಪಾಯವಾಗಿ ಕೊಡುತ್ತಿದ್ದರೆಂದು ತಿಳಿಯುತ್ತದೆ" ಎಂದು ಗುರುತಿಸಿದ್ದಾರೆ. ಇವರ ಮೇಲಿನ ಕೆಲವು ತೀರ್ಮಾನಗಳು ಕರ್ನಾಟಕದ ಶಾಸನಗಳನ್ನಾಧರಿಸಿ ಎಕ್ಕಟಿಗರ ಬಗೆಗೆ ನಾನು ತೆಗೆದುಕೊಂಡಿರುವ ತೀರ್ಮಾನಗಳಿಗೆ ಪುಷ್ಟಿ ನೀಡುತ್ತವೆ.

ಶ್ರೀನಾಥ ಕವಿ ವಿರಚಿತ **ಪಾಲ್ನಾಟಿ ವೀರ ಚರಿತ್ರೆ**ಯಲ್ಲಿ ವಿಪುಲವಾಗಿ ಎಕ್ಕಟಿಗರ ಬಗೆಗೆ ಬರೆದಿದೆ. ಆ ಕೃತಿಯಲ್ಲಿ ಎಕ್ಕಟಿಗರನ್ನು ಒಬ್ಬಂಟಿಗರು ಎಂದಿದ್ದಾರೆ. ಸಂಸ್ಕೃತದಲ್ಲಿ ಏಕಾಂಗವೀರ ಎಂಬುದನ್ನೇ ಎಕ್ಕಟಿಗ ಎಂದು ಕರೆದಿದ್ದಾರೆ. ರೆಡ್ಡಿ ರಾಜರ ಆಳ್ವಿಕೆಯಲ್ಲಿ ಇವರದೊಂದು ಪ್ರತ್ಯೇಕ ವಿಭಾಗವಿದ್ದಿತು. 'ಒಂಟರಿ ಯೆಕ್ಕಟಿ ದೊಂಟರಿ ದೊಂಟ್ರಂಪು ನಾನೇಕ ಭಟುನಕು ನಾಮಮನಿಗು....'ಎಂಬ ಉಲ್ಲೇಖವನ್ನು ಆಧರಿಸಿ ತೆಲುಗು ಸೀಮೆಯಲ್ಲಿ ಅವರನ್ನು **ಒಂಟರ್ಲು** ಎಂದು ಕರೆಯುತ್ತಿದ್ದರು. ಇವರೇ ಒಂಟರಿ, ತೆಲುಗ, ಕಾಪು ಎಂಬ ಮೂರು ಶಾಖೆಗಳಾಗಿದ್ದಾರೆ. ಎಂದು ಅವರು ಅಭಿಪ್ರಾಯ ಪಡುತ್ತಾರೆ. 'ತೆಲುಗ'ಎಂಬುದೂ ಒಂಟರಿ, ಕಾಪುಗಳಂತೆಯೇ ವೀರರ ಒಂದು ಸಮುದಾಯವಾಗಿತ್ತೆಂಬ ಈ ಲೇಖಕರ ಅಭಿಪ್ರಾಯಕ್ಕೆ ಪುಷ್ಟಿ ನೀಡುವ "ಮಂಡಲೀಕರು, ಮನ್ನೆಯರಾವುತರು, ಉದ್ದಂಡನಾಯಕರ **ತೆಲುಗರಹಿಂಡು**, ಮಾವುತರ,......ಕೇರಿಗಳೊಪ್ಪಿದವು." ಎಂಬ ಪದ್ಯವೊಂದನ್ನು[೪೮] ಗಮನಿಸಬಹುದು. ಇಲ್ಲಿ ಮನ್ನೆಯರು, ಮಾವುತರು ರಾವುತರೊಂದಿಗೆ ತೆಲುಗರ ಉಲ್ಲೇವಿದೆ. ತೆಲುಗರ ಹಿಂಡು ಎಂಬುದು ಅವರ ಪಡೆಯನ್ನು ಸೂಚಿಸುವುದರೊಂದಿಗೆ ತೆಲುಗು ಭಾಷಿಕರಾದ ಸಾಹಸಿಗ ವೀರರಗುಂಪನ್ನು ಕುರಿತಿದೆ ಎನ್ನಬಹುದು. ಕುದುರೆ ಸವಾರರು, ಮಾವಟಿಗರು, ದಂಡನಾಯಕರೊಂದಿಗೆ ಕಾಣಿಸಿಕೊಳ್ಳುತ್ತಿರುವುದರಿಂದ ಇವರದು ಪದಾತಿ ಸೈನ್ಯವೆಂಬುದು ಖಚಿತವಾಗುತ್ತದೆ. ಇದೇ ರೀತಿ ಎಕ್ಕಟಿಗವೀರರ ಪಡೆ ಇತರೆ ದಕ್ಷಿಣಭಾರತದ ರಾಜ್ಯಗಳಲ್ಲಿ ಬೇರೆಬೇರೆ ಹೆಸರುಗಳಿಂದ ಪ್ರಸಿದ್ಧವಾಗಿರಬಹುದು. ಆ ನಿಟ್ಟಿನಲ್ಲಿ ಸಂಶೋಧನೆಗಳು ನಡೆಯಬೇಕಾಗಿದೆ.

[ಬೆನಕನಕೊಂಡದ ಎಕ್ಕಟಿಗ ವೀರಮಾಸ್ತಿಕಲ್ಲಿನ ಛಾಯಾಚಿತ್ರವನ್ನು ಕಷ್ಟಪಟ್ಟು ಒದಗಿಸಿಕೊಟ್ಟ ಯುವ ಸಂಶೋಧಕಿ ಸಿದ್ಧಲಿಂಗಮ್ಮ ಹಾಗೂ ಎಕ್ಕಟಿಗರ ಉಲ್ಲೇಖಗಳಿಗೆ ಅಗತ್ಯವಾದ ಪಠ್ಯಗಳನ್ನು ಒದಗಿಸಿಕೊಟ್ಟು ಸಹಾಯಮಾಡಿದ ಯುವ ಸಂಶೋಧಕ ಎಸ್. ಕಾರ್ತಿಕ್ ಅವರ ಉಪಕಾರವನ್ನು ಸ್ಮರಿಸುತ್ತೇನೆ.]

ಆಧಾರಸೂಚಿ

೧. (ಸಂ) ಕೆ.ಆರ್. ಶೇಷಗಿರಿ. ಕ.ಅ.ಸಂಸ್ಥೆ ಮೈಸೂರು ೧೯೭೬.

೨. ಎ.ಕ.೭ (ರೈಸ್) ಚನ್ನಗಿರಿ, ಶಾ.ಸಂಖ್ಯೆ. ೩೨ ಕಗ್ಗತ್ತೂರು.

೩. ಎಸ್.ಐ.ಐ.೧೯,ಶಾ.ಸಂಖ್ಯೆ ೨೩೧, ಕ್ರಿ.ಶ೧೧೩೪.ಕೊಯಿಲಕುಂಟ (ತಾ) ಕರ್ನೂಲುಜಿಲ್ಲೆ.

೪. ಕ.ವಿ.ವಿ.ಶಾ.ಸಂಪುಟ.೧.ಉಚ್ಚಂಗಿ ದುರ್ಗ, ಶಾಸನಸಂಖ್ಯೆ.೯, ಹರಪನಹಳ್ಳಿ (ತಾ) ಬಳ್ಳಾರಿ. ಪುಟ ೪೬೭-೬೮

೫. ಅದೇ ಶಾಸನ ಸಂಖ್ಯೆ ೪, ಅರಸನಹಳ್ಳಿ .

೬ ಎ.ಕ.೧. (ಪರಿಷ್ಕೃತ) ಸೋಮವಾರಪೇಟೆ, ಶಾ.ಸಂಖ್ಯೆ.೬೨. ಎಡೂರು.

೭. ಎ.ಕ ೧೦ (ಪರಿಷ್ಕೃತ) ಅರಸೀಕೆರೆ ಶಾ.ಸಂಖ್ಯೆ .೫೯.ಕುರುವಂಕ,ಕ್ರಿ.ಶ.೧೧೮೬

೮. ಎ.ಕ ೧೦ (ಪರಿಷ್ಕೃತ) ಅರಸೀಕೆರೆ ಶಾ.ಸಂಖ್ಯೆ೮೮.ಕಣಕಟ್ಟೆ ಕ್ರಿ.ಶ. ೧೧೮೯

೯. ಎ.ಕ ೯ (ಪರಿಷ್ಕೃತ) ಬೇಲೂರು, ಶಾ.ಸಂಖ್ಯೆ .೩೩೨.ಕ್ರಿ.ಶ.೧೨೨೦

೧೦. ಎ.ಕ.೭ (ರೈಸ್) ಚನ್ನಗಿರಿ, ಶಾಸನ ಸಂಖ್ಯೆ ೩೨.ಕ್ರಿ ಶ. ೧೦೫೦.

೧೧. ಎಸ್.ಐ.ಐ. ಸಂ.೨೦-೧೯೮೮ ಶಾಸನ ಸಂಖ್ಯೆ೩೩೨ ಹಾನಗಲ್ ತಾಲ್ಲೂಕು, ಧಾರವಾಡಜಿಲ್ಲೆ.

೧೨. ಇತಿಹಾಸ ದರ್ಶನ ಸಂಪುಟ. ೨೨.ಕ್ರಿ.ಶ.೨೦೦೭

೧೩. ಎ.ಕ(ಪರಿಷ್ಕೃತ) ಅರಸೀಕೆರೆ ಶಾ.ಸಂ.೫೯; ಎ.ಕ.(ಪರಿಷ್ಕೃತ) ೯, ಬೇಲೂರು,ಶಾ.ಸಂ.೩೩೨,ಕ್ರಿ.ಶ.೧೨೨೦.

೧೪. ಶ್ರೀಪಾಲಚರಿತೆ ಪದ್ಯ ೭೪. ೩ನೆಯ ಮಂಗರಸ ಸಂಪುಟ. (ಸಂ). ಡಾ.ಬಿ.ವಿ ಶಿರೂರ ಪ್ರಸಾರಾಂಗ ಕನ್ನಡ.ವಿ.ವಿ.ಹಂಪಿ.೨೦೦೭

೧೫. ದೀಪದ ಕಲಿಯಾರನ ಕಥೆ, ಬಸವಪುರಾಣ. ಕ್ರಿ.ಶ. ೧೩೬೯

೧೬. ಕುಮಾರರಾಮನ ಸಾಂಗತ್ಯ (ಸಂ) ಎನ್ ಅನಂತರಂಗಾಚಾರ್, ಸ್ವಚ್ಛಂದಂ ಪ್ರಕಾಶನ ಸರಸ್ವತೀಪುರಂ ಮೈಸೂರು.

೧೭. ಕ.ವಿ.ವಿ.ಸಂಪುಟ ೧. ಶಾ.ಸಂಖ್ಯೆ ೯, ಹರಪನಹಳ್ಳಿ (ತಾ)ಬಳ್ಳಾರಿ.

೧೮. ೩ನೆಯ ಮಂಗರಸ ಸಂಪುಟ. (ಸಂ) ಡಾ.ಬಿ.ವಿ ಶಿರೂರ, ಪ್ರಸಾರಾಂಗ ಕನ್ನಡ.ವಿ.ವಿ.ಹಂಪಿ.೨೦೦೭ .

೧೯. ಸಮ್ಯಕ್ತ್ವ ಕೌಮುದಿ, ಪದ್ಯ ೮-೩೩, ೩೬, ೪೯. ೩ನೆಯ ಮಂಗರಸ ಸಂಪುಟ. ಅದೇ.

೨೦. ಶ್ರೀಪಾಲ ಚರಿತೆ. ಪದ್ಯ ೧೧೨. ೩ನೆಯ ಮಂಗರಸ ಸಂಪುಟ. ಅದೇ.

೨೧. ಎಕ್ಕಟಿಗವೀರಪಡೆ ಕಿರುಪರಿಚಯ ಇತಿಹಾಸ ದರ್ಶನ, ಸಂಪುಟ ೨೫. ಡಾ. ಎನ್.ಆರ್ ಲಲಿತಾಂಬ, ೨೦೧೦.

೨೨. ಶ್ರೀಪಾಲಚರಿತೆ, ೧೪ನೇ ಸಂಧಿ ಪದ್ಯ, ೫೪, ಪೂರ್ವೋಕ್ತ.

೨೩. ಅದೇ, ಪದ್ಯ ೭೩,೭೪.

೨೪. ಆಂಧ್ರ ಪ್ರದೇಶದ ಕನ್ನಡ ಶಾಸನಗಳು ಕ.ವಿ.ವಿ. ಶಾಸನ ಸಂಪುಟ ೧ ಶಾ.ಸಂಖ್ಯೆ ೩೬೨, ಕರ್ನೂಲು ಜಿಲ್ಲೆ.

೨೫. ಕ.ವಿ.ವಿ ಶಾಸನ ಸಂಪುಟ ಶಾ. ಸಂಖ್ಯೆ ೯, ಉಚ್ಚಂಗಿದುರ್ಗ, ಹರಪನಹಳ್ಳಿ ತಾಲ್ಲೂಕು, ಬಳ್ಳಾರಿ ಜಿಲ್ಲೆ.

೨೬. ಎ.ಕ.೧೦ (ಪರಿಷ್ಕೃತ) ಅರಸೀಕೆರೆ(ತಾ)ಶಾ.ಸಂಖ್ಯೆ.೨೮೨.

೨೭. ಎ.ಕ.೧೦ (ಪರಿಷ್ಕೃತ) ಅರಸೀಕೆರೆ(ತಾ)ಶಾ.ಸಂಖ್ಯೆ.೨೭೯.

೨೮. ಎ.ಕ.೧೦ (ಪರಿಷ್ಕೃತ) ಅರಸೀಕೆರೆ(ತಾ) ಶಾ. ಸಂಖ್ಯೆ. ೮೬.

೨೯. ಎಸ್. ಎಸ್. ಐ. ೨೦ ಶಾ. ಸಂ೨೨೮ ಹಾಗೂ ಶಾ.ಸಂಖ್ಯೆ ೩೩೨.

೩೦. ಎಸ್.ಐ.ಐ -೧೮ ಬೆನ್ಕನಕೊಂಡ, ರಾಣೇಬೆನ್ನೂರು (ತಾ)ಧಾರವಾಡ ಜಿಲ್ಲೆ.

೩೧. ಸಂ.ಕ. ನಿಘಂಟು, ಕನ್ನಡ ಸಹಿತ್ಯ ಪರಿಷತ್ತು ೧೯೭೭.

೩೨. ಎ.ಕ. ೧೦ (ಪರಿಷ್ಕೃತ) ಚನ್ನರಾಯಪಟ್ಟಣ, ಶಾ.ಸಂಖ್ಯೆ ೭೬, ಬಿದರೆ ಕ್ರಿ.ಶ. ೧೧೬೫.

೩೩. ಎ.ಕ. ೧೦ (ಪರಿಷ್ಕೃತ) ಅರಸೀಕೆರೆ (ತಾ), ಶಾ.ಸಂಖ್ಯೆ.೮೯.

೩೪. ಎ.ಕ. (ರೈಸ್ ಸಂಪುಟ). ೯. ಶಾ.ಸಂಖ್ಯೆ..೧೨೯. ನಾಗಶೆಟ್ಟಿಹಳ್ಳಿ, ಬೆಂಗಳೂರು ತಾಲ್ಲೂಕು.

೩೫. ಡಾ.ಎನ್.ಆರ್ ಲಲಿತಾಂಬ, ಪೂರ್ವೋಕ್ತ.

೩೬. ಮೋಹನ ತರಂಗಿಣಿ, ಗದ್ಯಾನುವಾದ ಡಾ.ಎಸ್.ಎಸ್.ಕೋತಿನ ಕನ್ನಡ ಸಾಹಿತ್ಯ ಪರಿಷತ್ತು.೧೯೮೪.

೩೭. ಜಯನೃಪಕಾವ್ಯ, ೩ನೆಯ ಮಂಗರಸ ಸಂಪುಟ. ಅದೇ.

೩೮. ಮದನಮೋಹಿನಿಯ ಕಥೆ, (ಸಂ) ಬಿ.ಎಸ್ ಸಣ್ಣಯ್ಯ.ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ.

೩೯. ಭರತೇಶವೈಭವ, (ಸಂ) ಉಗ್ರಾಣ ಮಂಗೇಶರಾಯರು, ಜೈನ ಯುವಕರ ಸಂಘ, ಮಂಗಳೂರು ೧೯೨೩.

೪೦. ಪಂಚಬಾಣವಿರಚಿತ ಭುಜಬಲಿ ಚರಿತೆ. (ಸಂ) ಡಾ ವೈ.ಸಿ. ಭಾನುಮತಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ೨೦೧೧.

೪೧. ಶ್ರೀಪಾಲಚರಿತೆ, ಪದ್ಯ ೧೪-೫೪, ಮೂರನೆಯ ಮಂಗರಸ ಸಂಪುಟ ಪೂರ್ವೋಕ್ತ

೪೨. ಶ್ರೀಪಾಲಚರಿತೆ, ಪದ್ಯ ೫೬-೬೨. ಅದೇ.

೪೩. ಮೋಳಿಗೆ ಮಾರಯ್ಯನ ವಚನಗಳು, ಸಂಕೀರ್ಣ ವಚನ ಸಂಪುಟ, ಕನ್ನಡ ಸಂಸ್ಕೃತಿ ನಿರ್ದೇಶನಾಲಯ,೧೯೯೩.

೪೪. ಬಸವಣ್ಣನವರ ವಚನಗಳು (ಸಂ) ಡಾ.ಎಂ.ಎಂ.ಕಲಬುರ್ಗಿ, ಕನ್ನಡ ಸಂಸ್ಕೃತಿ ನಿರ್ದೇಶನಾಲಯ, ೧೯೯೩.

೪೫. ಮಹಾದೇವಿಯಕ್ಕನ ಪುರಾಣ, ಚೆನ್ನಬಸವಾಂಕ ಕ್ರಿ.ಶ. ೧೫೫೦.

೪೬ ಅಮಲ ಬಸವರಾಜ ಚಾರಿತ್ರ ಕ್ರಿ.ಶ. ೧೫೦೦. (ಸಂ). ಎಚ್ ದೇವೀರಪ್ಪ, ಕನ್ನಡ ಅಧ್ಯಯನ ಸಂಸ್ಥೆ, ಮೈ.ವಿ.ವಿ ೧೯೭೦ ದ್ವಿತೀಯ ಮುದ್ರಣ.

೪೭. ದಿ ಹಿಸ್ಟರಿ ಆಫ್ ರೆಡ್ಡಿ ಕಿಂಗ್ಡಮ್ಸ್. ಕನ್ನಡ ಅನುವಾದ ಗುತ್ತಿ ಚಂದ್ರಶೇಖರ ರೆಡ್ಡಿ, ಪ್ರಕಾಶಕರು. ಕರ್ನಾಟಕ ರೆಡ್ಡಿ ಜನಸಂಘ, ೨೦೦೮.

೪೮. ಪಂಚಬಾಣ ವಿರಚಿತ ಭುಜಬಲಿಚರಿತೆ ಸಂಧಿ, ೨ ಪದ್ಯ ೩೩. ಪೂರ್ವೋಕ್ತ.

೭೪

ಶಾಸನಗಳ ಹಿನ್ನೆಲೆಯಲ್ಲಿ ಬಾಗೇಪಲ್ಲಿ ತಾಲ್ಲೂಕು

ಸಂಧ್ಯಾ ಎಸ್.*

ಚಿಕ್ಕಬಳ್ಳಾಪುರ ಜಿಲ್ಲೆಗೆ ಸೇರಿದ ಬಾಗೇಪಲ್ಲಿ ತಾಲ್ಲೂಕಿನಲ್ಲಿ ಸುಮಾರು ೮೦ಕ್ಕೂ ಹೆಚ್ಚು ಶಾಸನಗಳು ಕಂಡುಬರುತ್ತವೆ. ಇವುಗಳಲ್ಲಿ ಪ್ರಾಚೀನ ಶಾಸನಗಳು ಕನ್ನಡದಲ್ಲಿದ್ದು ೧೧ನೇ ಶತಮಾನದಲ್ಲಿ ಚೋಳರ ಆಕ್ರಮಣದ ನಂತರ ತಮಿಳು ಶಾಸನಗಳು ಕಂಡುಬಂದು ವಿಜಯನಗರದ ಕಾಲದಲ್ಲಿ ೧೫ನೇ ಶತಮಾನದ ನಂತರದ ಶಾಸನಗಳು ಹೆಚ್ಚಾಗಿ ತೆಲುಗು ಭಾಷೆಯಲ್ಲಿ ಕಾಣಿಸುತ್ತವೆ. ಪ್ರಸ್ತುತ ಲೇಖನದಲ್ಲಿ ಬಾಗೇಪಲ್ಲಿ ಪ್ರದೇಶದ ರಾಜಕೀಯ ಇತಿಹಾಸ ಹಾಗೂ ಸಾಂಸ್ಕೃತಿಕ ವಿಚಾರಗಳ ಕಿರುಸಮೀಕ್ಷೆ ಯನ್ನು ಈ ಪ್ರದೇಶದಲ್ಲಿ ದೊರಕಿರುವ ಶಾಸನಗಳ ಅಧ್ಯಯನದ ಹಿನ್ನೆಲೆಯಲ್ಲಿ ನಡೆಸಲಾಗಿದೆ, ಶಾಸನಗಳೊಂದಿಗೆ ಗೆಜ಼ೆಟಿಯರ್‌ನಲ್ಲಿನ ಮಾಹಿತಿಯನ್ನೂ ಬಳಸಿಕೊಳ್ಳಲಾಗಿದೆ.

ರಾಜಕೀಯ ಇತಿಹಾಸ: ಈ ಪ್ರದೇಶವನ್ನು ವೈದುಂಬರು, ನೊಳಂಬರು, ಚೋಳರು, ವಿಜಯನಗರದ ಅರಸರು ಹಾಗೂ ಇವರ ಅಧೀನದಲ್ಲಿ ಗುಮ್ಮನಾಯಕನ ಪಾಳ್ಯದವರು ಆಳ್ವಿಕೆ ನಡೆಸಿದರು. ಆನಂತರ ಇಲ್ಲಿನ ಪಾಳ್ಯವು ಹೈದರಾಲಿಯ ವಶವಾಗಿ, ಮೂರನೇ ಆಂಗ್ಲೋ ಮೈಸೂರು ಯುದ್ಧದ ನಂತರ ಬ್ರಿಟಿಷರ ಆಡಳಿತಕ್ಕೆ ಒಳಪಟ್ಟು, ಅವರ ಮುಖಾಂತರ ಮೈಸೂರರಸರ ಆಳ್ವಿಕೆಗೆ ಸೇರಿತು.

ಈ ಪ್ರದೇಶವು ಗುಡ್ಡಗಾಡು ಎನಿಸಿ, ಬಂಡೆಗಳ ನಡುವಿನ ಕುರುಚುಲು ಕಾಡಿನಿಂದ ಆವೃತ್ತವಾಗಿದ್ದಲ್ಲದೆ, ನದಿಯ ಫಲವತ್ತಾದ ಮಣ್ಣಿನ ಅಭಾವದಿಂದಾಗಿ ನಾಗರೀಕತೆ ನಿರ್ಮಾಣ, ನಗರ ಸ್ಥಾಪನೆ ಭರದಿಂದ ನಡೆಯದೆ, ವ್ಯವಸ್ಥಿತ ರಾಜ್ಯ ಸ್ಥಾಪನೆಯಾದದ್ದು ತಡವಾಗಿಯೇ ಎನ್ನಬಹುದು. ಬಲಿಯ ವಂಶಸ್ಥರೆನ್ನಲಾಗುವ ಮಹಾವಲಿ ಬಾಣರ ರಾಜವಂಶವು ಕ್ರಿ.ಶ. ೪ನೇ ಶತಮಾನದಿಂದ ಕೋಲಾರದ ಸುತ್ತಮುತ್ತಲಿನ ಭಾಗಗಳಲ್ಲಿ ಆಳ್ವಿಕೆ ನಡೆಸುತ್ತಿದ್ದು, ಈ ಭಾಗ ಅವರ ರಾಜ್ಯದೊಳಗಿನ ಪ್ರದೇಶವಾಗಿದ್ದು, ಕ್ರಮೇಣ ಗಂಗರು ಬಲಿಷ್ಠರಾಗಿ ಇವರ ಪ್ರಾಬಲ್ಯ ಕುಸಿಯುವಂತೆ ಮಾಡಿದರು.

ಗಂಗರು: ಗಂಗರು ಕೋಲಾರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದ ಮೊದಲ ಪ್ರಮುಖ ರಾಜವಂಶ. ತಮ್ಮ ರಾಜ್ಯ ವಿಸ್ತರಣೆ ಮಾಡಿ ನಂದೀದುರ್ಗದಲ್ಲಿ ಕೋಟೆಯನ್ನು ನಿರ್ಮಿಸಿ, ಈ ಸುತ್ತಮುತ್ತಲಿನ ಬಹುತೇಕ ಭಾಗಗಳನ್ನು ಆಳುತ್ತಿದ್ದರು. ಬಾಗೇಪಲ್ಲಿ ತಾಲ್ಲೂಕಿನ ಚೇಳೂರಿನಲ್ಲಿ ಗಂಗ ಇಮ್ಮಡಿ ರಾಚಮಲ್ಲನ ಕಾಲದ ವೀರಗಲ್ಲೊಂದು ದೊರೆತಿದೆ. ೯ನೆಯ ಶತಮಾನಕ್ಕೆ ಸೇರಿದೆ ಎನ್ನಲಾಗುವ ಈ ವೀರಗಲ್ಲು ತ್ರುಟಿತವಾಗಿರುವ ಕಾರಣ ಯುದ್ಧವಿವರಗಳು ತಿಳಿದುಬರುವುದಿಲ್ಲ.

ವೈದುಂಬರರು: ೮-೯ನೆಯ ಶತಮಾನದ ವೇಳೆಗೆ ವೈದುಂಬರು ಇಲ್ಲಿ ಆಳ್ವಿಕೆ ನಡೆಸುತ್ತಿದ್ದ ವಿಚಾರವನ್ನು ಶಾಸನಗಳು ಸ್ಪಷ್ಟಪಡಿಸುತ್ತವೆ. ಇವರು ೯ನೆಯ ಶತಮಾನದಲ್ಲಿ ನೊಳಂಬರೊಂದಿಗೆ ಕೆಲವು ಯುದ್ಧಗಳಲ್ಲಿ ಪಾಲ್ಗೊಂಡಿರುವುದನ್ನೂ ಶಾಸನಗಳು ತಿಳಿಸುತ್ತವೆ, ನೊಣಂಬಾಣಿ(ಧಿ) ಮಹಾರಾಜನೊಂದಿಗಿನ ಯುದ್ಧದಲ್ಲಿ ಮಡಿದವನಿಗೆ ದತ್ತಿ ನೀಡಿದ ವಿಚಾರ ತಿಳಿಸುತ್ತವೆ. ಬೇಚಿರಾಕ ಯೆರ್ರಗುಡಿ ಗ್ರಾಮದ ಬಳಿ ದೊರೆತಿರುವ ಶಾಸನವು ತ್ರಿಣೇತ್ರ, ಕಿಱುದೊಱ್ ಎಂಬ ಉಲ್ಲೇಖವಿದೆ. ಬಹಳ ತ್ರುಟಿತವಾಗಿರುವ ಈ ಶಾಸನದಿಂದ ರಾಜನ ಹೆಸರು ತಿಳಿದು ಬರುವುದಿಲ್ಲ. ಚೇಳೂರಿನ ಬಳಿಯ ಚಾಮನವಾರಪಲ್ಲಿಯ ಮತ್ತೊಂದು ವೀರಗಲ್ಲುಸಹ ವೈದುಂಬರ ಕಾಲದ್ದಾಗಿದೆ. ಇದು ರಣಾಂತಕ ಮೊದಲಾದ ಬಿರುದುಗಳನ್ನು ತಿಳಿಸುತ್ತದೆಯಾದರೂ ರಾಜನ ಹೆಸರು ಹಾಗೂ ಯುದ್ಧವಿವರದ ಭಾಗ ತ್ರುಟಿತವಾಗಿ ಹೆಚ್ಚಿನ ಮಾಹಿತಿ ತಿಳಿದುಬರುವುದಿಲ್ಲ.

ನೊಳಂಬರು: ಹಲವಾರು ಯುದ್ಧಗಳಲ್ಲಿ ಸೆಣೆಸಿ ಕಡೆಗೂ ವೈದುಂಬ ರಾಜಮನೆತನದ ವಿಕ್ರಮಾದಿತ್ಯ ತಿರುವಯ್ಯನನ್ನು ಪಲ್ಲವನೊಳಂಬ ದಿಲೀಪನು ಸೋಲಿಸುವಲ್ಲಿ ಯಶಸ್ವಿಯಾಗಿ ಈ ಪ್ರದೇಶವನ್ನು ವಶಪಡಿಸಿಕೊಳ್ಳುತ್ತಾನೆ. ಚೇಳೂರಿನ ವೆಂಕಟಾಪುರದ ಬಳಿಯ ವೀರಗಲ್ಲು (೭೭) ನೊಳಂಬರ ಆಳ್ವಿಕೆಯ ಕಾಲದ್ದು. ಈ ಶಾಸನವು ಕ್ರಿ.ಶ.೯೦೦ಕ್ಕೆ ಸೇರಿದುದೆಂದು ರೈಸರು ಅಭಿಪ್ರಾಯಪಟ್ಟಿದ್ದಾರೆ. ಸುತ್ತಮುತ್ತಲಿನ ಪ್ರದೇಶಗಳಲ್ಲಿ ಆಳ್ವಿಕೆ ನಡೆಸಿದ ನೊಳಂಬಪಲ್ಲವರು ಬಾಗೇಪಲ್ಲಿ ಪ್ರದೇಶವನ್ನೂ ಆಳುತ್ತಿದ್ದರು.

* # ೧೫೩, ೫ನೆಯ ಅಡ್ಡರಸ್ತೆ, ಮೊದಲನೆಯ ಹಂತ, ಆರ್.ಕೆ. ಬಡಾವಣೆ, ಪದ್ಮನಾಭನಗರ, ಬೆಂಗಳೂರು-೫೬೦೦೭೦

ಚೋಳರು: ಸುಮಾರು ೧೧ನೆಯ ಶತಮಾನದ ವೇಳೆಗೆ ನೊಳಂಬರನ್ನು ಸೋಲಿಸಿ ಚೋಳರು ಈ ಪ್ರದೇಶವನ್ನು ಆಕ್ರಮಿಸಿದರು. ಚೋಳರ ಆಳ್ವಿಕೆಯ ಕಾಲದಲ್ಲಿ ಈ ಪ್ರದೇಶಕ್ಕೆ ವಿಕ್ರಮ ಚೋಳಮಂಡಲ ಎಂಬ ಹೆಸರು ಬಂತು. ರಾಜೇಂದ್ರ ಚೋಳನ ಕಾಲದಲ್ಲಿ ಅದು 'ನಿಗರಿಲಿ ಚೋಳಮಂಡಲ' ಎಂಬ ಹೆಸರು ಪಡೆಯಿತು. ಬಾಗೇಪಲ್ಲಿಯ ಕಾರಕೂರು ಗ್ರಾಮ 'ನಿಗಿರಿಲಿ ಚೋಳಮಂಡಲ'ವನ್ನು ಉಲ್ಲೇಖಿಸುತ್ತದೆ. ನಿಗಿರಿಲಿ ಚೋಳಮಂಡಲದೊಳಗಿನ ನಾಗಸಮುದ್ರ ಎಂಬಲ್ಲಿನ ಭೂಮಿಯನ್ನು ಬ್ರಾಹ್ಮಣರಿಗೆ ದಾನವಾಗಿ ನೀಡಿರುವ ವಿವರವನ್ನು ಈ ಶಾಸನದಿಂದ ತಿಳಿಸುತ್ತದೆ. ಚೋಳರ ನೇರ ಆಳ್ವಿಕೆಯ ಶಾಸನಗಳು ಲಭ್ಯವಿಲ್ಲವಾದರೂ ಅವರ ವಂಶೀಯರಾದ ನಿಡಗಲ್ ಚೋಳರೇ ಮೊದಲಾದವರ ಆಳ್ವಿಕೆ ಹೊಯ್ಸಳರ ಕಾಲದಲ್ಲಿ ನಡೆದಿದೆ. ಚೇಳೂರಿನಲ್ಲಿ ಕಂಡುಬರುವ ಸುಮಾರು ಕ್ರಿ.ಶ.೧೨೫೦ರ ಕಾಲಕ್ಕೆ ಸೇರಿದ ಮೂರೂ ದಾನ ಶಾಸನಗಳಾಗಿದ್ದು, ಅವುಗಳಲ್ಲಿ ಚೇಳೂರಿನ ಗವಕುಂಟೇ ಬಳಿಯ ಶಾಸನ (೭೯) ದೇವದಾನ ಹಾಗೂ ಕೆರೆ ನಿರ್ಮಾಣ ಕುರಿತಾಗಿ ತಿಳಿಸುತ್ತದೆ. ಇದೇ ಜಾಗದಲ್ಲಿ ದೊರೆತಿರುವ ಮತ್ತೊಂದು ಶಾಸನ (೮೦) ಮಾರಸಿಂಗನ ಮಗ ಕಸವಪ್ಪಯ್ಯ ಎಂಬುವವನು ಸೋಮಯ್ಯ ಎಂಬುವವನಿಗೆ ದಾನವನ್ನು ನೀಡಿರುವ ವಿಚಾರ ತಿಳಿಸುತ್ತದೆ. ೮೧ನೇ ಸಂಖ್ಯೆಯ ಶಾಸನ ಸಾಕಷ್ಟು ತ್ರುಟಿತವಾಗಿದ್ದು ಕೇವಲ ಗಂಗದೇವನ್ ಎಂಬ ಹೆಸರಷ್ಟೇ ತಿಳಿದು ಬರುತ್ತದೆ. ಸುಮಾರು ೧೩ನೇ ಶತಮಾನದವರೆಗೂ ಈ ಭಾಗದಲ್ಲಿ ಆಳ್ವಿಕೆ ನಡೆಸಿದ ಚೋಳ ವಂಶೀಯರು ಇರುಂಗೋಳ ಚೋಳನ ಕಾಲದಲ್ಲಿ ತನ್ನ ರಾಜಧಾನಿಯನ್ನು ನಿಡುಗಲ್ಲಿಗೆ ಬದಲಾಯಿಸಿದ ಕಾರಣ ಈ ಭಾಗದ ಮೇಲಿನ ಇವರ ಅಧಿಪತ್ಯ ಕ್ರಮೇಣ ಕಡಿಮೆ ಯಾಯಿತು.

ಹೊಯ್ಸಳರು: ಹೊಯ್ಸಳ ವಿಷ್ಣುವರ್ಧನನು ಕೋಲಾರ ಪ್ರಾಂತ್ಯವನ್ನು ಗೆದ್ದು ವೆಲ್ಲೂರಿನವರೆಗೂ ತನ್ನ ರಾಜ್ಯ ವಿಸ್ತರಿಸಿದ್ದನು. ಕ್ರಿ.ಶ. ೧೩೦೦ರ ವೇಳೆಗೆ ಮುಮ್ಮಡಿ ವೀರಬಲ್ಲಾಳನ ಶಾಸನಗಳು ಕೋಲಾರ ಪ್ರದೇಶದಲ್ಲಿ ಹೆಚ್ಚಾಗಿ ಕಾಣಿಸುತ್ತವೆ. ಹೊಯ್ಸಳರ ಕಾಲದಲ್ಲಿ ಕೋಲಾರ ಪ್ರದೇಶದ ವಿಸ್ತಾರದಲ್ಲಿ ಅನೇಕ ನಾಡಪ್ರಭುಗಳು ಆಳ್ವಿಕೆ ನಡೆಸು ತ್ತಿದ್ದುದು ಕಂಡುಬರುತ್ತದೆ. ಬಾಗೇಪಲ್ಲಿ ಪ್ರದೇಶ ಹೊಯ್ಸಳರ ಆಳ್ವಿಕೆಗೆ ಒಳಪಟ್ಟಿತ್ತೆನ್ನುವ ವಿಷಯ ಇಲ್ಲಿನ ಇಟಕಲ್‌ದುರ್ಗದ ಬಳಿಯ ಶಾಸನವೊಂದು (೩೫) ಸ್ಪಷ್ಟಪಡಿಸುತ್ತದೆ. ಈ ಶಾಸನದ ಮೊದಲ ಒಂದು ಸಾಲು ಹಾಗೂ ಅಂತ್ಯದ ಕೆಲ ಸಾಲುಗಳು ಸಂಪೂರ್ಣ ನಾಶವಾಗಿದೆ. ಲಭ್ಯವಿರುವ ಸುಮಾರು ಹದಿನಾರು ಸಾಲುಗಳ ಶಾಸನವು ಸುಂದರವಾದ ಪದ್ಯದಿಂದ ಕೂಡಿ, ಈ ಭಾಗಗಳಲ್ಲಿ ಶಾಸನಗಳಲ್ಲಿ ಸಾಹಿತ್ಯಿಕ ಅಂಶ ಕಂಡು ಬರುವುದಿಲ್ಲ ಎಂಬ ಮಾತಿಗೆ ಅಪವಾದವೆನ್ನುವಂತಿದೆ. "ನಕ್ಷತ್ರ ಮಾಲೆಯಂ ಸಾಲೆಮುಡಿವರುಂ ಸಿಡಿಲಂ ಪೊಡೆಸೆಂಡು ತೊಡೆವರುಂ ಕುಳಪರ್ವತಂಗಳಂ ಮೀರುವರುಂ ಸಕಳ ಲೋಕೈಕ ಭೀಕರರುಂ ಶ್ರೀರುದ್ರ ಸಾಕಾರರುಂ..." ಎಂದು ಮೊದಲಾದ ಶೌರ್ಯಗುಣಗಳ ಪ್ರಶಂಸೆ ಇದೆ. "ವೀರಬ್ರತಿಗಳಾಗಿ.. ಸಿರಮನ್ ಅರಿದು ಪೂಜಿಪರುಂ ತೋಳಬೀಣೆಯಂ ಭಾಜಿಸುವರುಂ.." ಎಂಬ ಸ್ವಾಮಿ ನಿಷ್ಠೆಯನ್ನೂ "ಅಸಂಖ್ಯಾತ ಗಣಂಗಳ ಶ್ರೀಪಾದಪದ್ಮಾರಾಧಕನುಂ ಪುಣ್ಯನಿದಾನ ಸಾಧಕನುಂ.." ಎನ್ನುತ್ತಾ ಶಾಸನವು ಇಲ್ಲಿಯ ವ್ಯಕ್ತಿಯನ್ನು "ಶ್ರೀಮನ್ಮಹಾಪ್ರಧಾನಂ ಸರ್ವಾಧಿಕಾರಿ ಮಹಾಪಸಾಯಿತಂ ಪರಮ ವಿಶ್ವಾಸಿ ಶ್ರೀಲಂಕರ (ಲೆಂಕರ) ಓರಿಯಲಂಕ" ಎಂದು ಕರೆದಿದೆ. ಇವನನ್ನು "ಚೆಂನಸದಾಶಿವದೇವರ ದಿಬ್ಯ ಶ್ರೀ ಪಾದಪದ್ಮಾರಾಧಕ ಪರಬಳಸಾಧಕ.. ಆದಿತ್ಯಪೆಂಡೆಯಂ" ಎಂದು ಈತನೊಬ್ಬ ಗರುಡ ಎಂಬುದನ್ನು ಶಾಸನ ಸ್ಪಷ್ಟಪಡಿಸಿದೆ.

ಲೆಂಕರನ್ನು ಕುರಿತು ಚಿದಾನಂದಮೂರ್ತಿಯವರು "ಇವರು ಯುದ್ಧಶಿಕ್ಷಣವನ್ನು ಪಡೆದು, ತಮ್ಮ ತಮ್ಮ ಊರುಗಳಲ್ಲಿ ವಾಸ ಮಾಡಿಕೊಂಡಿದ್ದು ಯುದ್ಧದ ಸಮಯದಲ್ಲಿ ಸೇನೆಯನ್ನು ಸೇರಿಕೊಳ್ಳುತ್ತಿದ್ದರೆಂದು ಕಾಣುತ್ತದೆ. ಇವರಿಗೆ ಕೆಲವು ಊರುಗಳನ್ನೇ ಬಿಟ್ಟುಕೊಟ್ಟು, ಆ ಊರುಗಳ ಆದಾಯವನ್ನು ಅನುಭವಿಸುತ್ತಿರುವಂತೆ ರಾಜನೋ, ಸಾಮಂತನೋ ನಿಯಮಿಸುತ್ತಿದ್ದರು [ಎಂ. ಚಿದಾನಂದಮೂರ್ತಿ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ ೨೯೭] ಎಂದು ತಿಳಿಸಿದ್ದಾರೆ.

ವಿಜಯನಗರದ ಅರಸರು ಹಾಗೂ ಅವರ ಮಾಂಡಳೀಕರು: ಚೋಳರ ನಂತರ ಗುಮ್ಮನಾಯಕ ಪಾಳ್ಯದ ಪಾಳೆಯಗಾರರು ಈ ಭಾಗದಲ್ಲಿ ಆಳ್ವಿಕೆ ನಡೆಸಿದರೂ, ಇವರ ಆಡಳಿತ ಕೇವಲ ಬಾಗೇಪಲ್ಲಿಗೆ ಸೀಮಿತವಾಗಿರದೆ, ಇಂದಿನ ಬಾಗೇಪಲ್ಲಿ ತಾಲ್ಲೂಕಿನ ಹೊರಭಾಗಗಳಿಗೂ ವಿಸ್ತರಿಸಿತ್ತು. ಗುಡಿಬಂಡೆ, ಶಿಡ್ಲಘಟ್ಟ ಮೊದಲಾದ ತಾಲ್ಲೂಕುಗಳಲ್ಲಿಯೂ ಇವರ ಶಾಸನಗಳು ದೊರೆತಿವೆ. ಅಂತೆಯೇ ಬಾಗೇಪಲ್ಲಿಯ ಕೆಲವು ಭಾಗಗಳಲ್ಲಿ ವಿಜಯನಗರದ ಅರಸರಿಂದ ನೇಮಿಸಲ್ಪಟ್ಟ ಇತರ ಮಾಂಡಳೀಕರು ಆಡಳಿತ ನಡೆಸುತ್ತಿದ್ದ ವಿಚಾರವನ್ನೂ ಇಲ್ಲಿನ ಕೆಲವು ಶಾಸನಗಳು ತಿಳಿಸುತ್ತವೆ. ಇಮ್ಮಡಿ ಹರಿಹರನ ಕಾಲದಲ್ಲಿ ತೆಪ್ಪದ ನಾಗಣ್ಣ ಒಡೆಯನ ಮೊಮ್ಮಗ ತಿರುಮಲನಾಥ ತಾನು ಕಟ್ಟಿಸಿದ ದೇವಾಲಯದ ವಿಚಾರ ತಿಳಿಸುವ ಕ್ರಿ.ಶ. ೧೪೯೧ರ ಶಾಸನದಲ್ಲಿ (೧೬) "ಶ್ರೀ ವೀರಹರಿಹರ ಮಹಾರಾಯರ ಸಕಲ ಸಾಮ್ರಾಜ್ಯ ವೀರಸಿಂಹಾಸನ ಶ್ರೀಮನ್ಮಹಾಪ್ರಧಾನ ಮಂಗಪ್ಪ ದಣ್ಣಾಯಕರ ರಾಜ್ಯ ಪ್ರತಿಪಾಲನದಲ್ಲೂ ತೆಪ್ಪದ ನಾಗಣ್ಣಗಳ ರಾಜ್ಯ ಸ್ಥಾಪನದಲ್ಲಿ

ಗಡಿದದ ಪ್ರಸನ್ನ ಶ್ರೀನಿವಾಸದೇವರ ಪ್ರತಿಷ್ಠಾ ಕಾಲದಲ್ಲಿ.." ಎಂದು ತಿಳಿಸಿದೆ ಹಾಗೂ ಇದೇ ದೇವಾಲಯದ ಆವರಣದಲ್ಲಿನ ಕ್ರಿ.ಶ. ೧೪೯೨ರ ಕಾಲಕ್ಕೆ ಸೇರುವ ಮತ್ತೊಂದು ಶಾಸನ (೧೫) "ವೀರಹರಿಹರ ಮಹಾರಾಯರ ಸಾಮ್ರಾಜ್ಯದಲಿ ತೆಪ್ಪದ ನಾಗಣ್ಣೊಡೆಯರ ಪ್ರತಿಪಾಲನದಲಿ ತೆಪ್ಪದ ನಾಗಣ್ಣ ಒಡೆಯರ ಮೊಮ್ಮ ತಿರುಮಲನಾಥ ತಮಗೆ ಸಲ್ಲುವ ಗಡಿದದೊಳಗಣ..." ಎಂದು ಹೇಳಿಕೊಂಡಿದ್ದಾನೆ. ಈ ಶಾಸನಗಳ ಪ್ರಕಾರ ಮಂಗಪ್ಪ ದಣ್ಣಾಯಕರ ಅಧೀನದಲ್ಲಿ ತೆಪ್ಪದ ನಾಗಣ್ಣ ಒಡೆಯ ತಾನು ಸ್ಥಾಪಿಸಿದ ಗಡಿದ ಪ್ರದೇಶವನ್ನು ೧೪೯೧ರಲ್ಲಿ ಪ್ರತಿಪಾಲಿಸುತ್ತಿದ್ದು, ೧೪೯೨ರ ವೇಳೆಗೆ ಇದೇ ಗಡಿದ ಪ್ರದೇಶವನ್ನು ಈತನ ಮೊಮ್ಮಗ ತಿರುಮಲನಾಥ ಪ್ರತಿಪಾಲಿಸುತ್ತಿದ್ದ ಎನ್ನುವುದು ತಿಳಿದುಬರುತ್ತದೆ. ತಿರುಮಲನಾಥ ತನ್ನ ಪೂರ್ವಜರಂತೆ ವಿಜಯನಗರದ ಸಂಗಮ ದೊರೆಗಳ ಅಧೀನದಲ್ಲಿ ಆಡಳಿತಾಧಿಕಾರಿಯಾಗಿದ್ದವನು. ಈತನ ವಂಶದವರು ಕನ್ನಡ ನಾಡಿನ ದಕ್ಷಿಣ ಭಾಗಗಳಾದ ಬೇಲೂರು, ಸಕಲೇಶಪುರ, ಮೂಡಗೆರೆ, ಚಿಕ್ಕಮಂಗಳೂರು, ಹೊಸಕೋಟೆ ಆನೇಕಲ್, ವೇಮಗಲ್, ಕೋಲಾರ, ಚಿಂತಾಮಣಿ, ಚಿಕ್ಕಬಳ್ಳಾಪುರ ಮೊದಲಾದ ಪ್ರದೇಶಗಳಲ್ಲಿ ಆಡಳಿತದ ವಿವಿಧ ಹಂತಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದವರು. ಚಿಕ್ಕಬಳ್ಳಾಪುರದ ಶಾಸನವೊಂದರ ಪ್ರಕಾರ ಈ ವಂಶದ ನಾಗಣ್ಣ ಒಡೆಯನು ಕ್ರಿ.ಶ. ೧೩೭೧ರಲ್ಲಿ ಸಾದಲಿಯ ರಾಜ್ಯವನ್ನಾಳುತ್ತಿದ್ದ ವಿಚಾರ ತಿಳಿದುಬರುತ್ತದೆ. [ಎಸ್. ಗಂಗಾಂಬಿಕೆ ಗೋವರ್ಧನ್, ಸಂಗಮ ಸೇನಾನಿ ನಾಗಣ್ಣ ಒಡೆಯ ಮತ್ತು ಅವನ ವಂಶೀಯರು, ಇತಿಹಾಸ ದರ್ಶನ ಸಂಪುಟ ೨೮]

ಕ್ರಿ.ಶ. ೧೪೦೮ರಲ್ಲಿ ವಿಜಯನಗರ ಸಿಂಹಾಸನಾಧಿಪತಿಯಾದ ದೇವರಾಯ ೧೪೦೬ರಲ್ಲಿ ಸಿರಾಪ್ರಾಂತ್ಯವನ್ನು ಪಾಲಿಸುತ್ತಿದ್ದ ಹಾಗೂ ಇವನ ಅಧೀನದಲ್ಲಿ ಇಲ್ಲಿನ ಇಟಗಿ ದುರ್ಗವನ್ನು ಲಖುಮಣ್ಣ ಎಂಬುವ ನಾಯಕನು ಆಳುತ್ತಿದ್ದ ವಿಚಾರವನ್ನು ಇಟಕಿರಾಯನದುರ್ಗದಲ್ಲಿನ ಶಾಸನವೊಂದು (೩೩) ತಿಳಿಸುತ್ತದೆ.

ಶಿಡ್ಲಘಟ್ಟದ ಬಳಿ ರಾಜ್ಯಸ್ಥಾಪಿಸಿ ಆಳ್ವಿಕೆ ನಡೆಸಿದ ಸುಗುಟೂರಿನ ಅರಸು ಮನೆತನದ ಅರಸುಗಳು ವಿಜಯನಗರದ ದೊರೆಗಳಿಗೆ ನಿಷ್ಠರಾಗಿದ್ದರು [ಪಿ.ವಿ. ಕೃಷ್ಣಮೂರ್ತಿ, ಸುಗುಟೂರು ಅರಸು ಮನೆತನ, ಶಾಸನ, ಇತಿಹಾಸ ಮಂಥನ, ತುಮಕೂರು ವಿಶ್ವವಿದ್ಯಾನಿಲಯ ೨೦೧೧] ಅಚ್ಯುತರಾಯನ ಕಾಲದಲ್ಲಿ ನಡೆದ ಶತ್ರುಗಳ ಆಕ್ರಮಣವನ್ನು ಎದುರಿಸುವಲ್ಲಿ ಪರಾಕ್ರಮ ತೋರಿಸಿದ ಈ ಮನೆತನದ ತಮ್ಮೇಗೌಡನಿಗೆ ಅನೇಕ ಬಿರುದು ಗಳನ್ನೂ, ಹಲವಾರು ಪ್ರದೇಶಗಳನ್ನೂ ಮಾನ್ಯವಾಗಿ ಕೊಡ ಲಾಯಿತು. ಈ ಸಂದರ್ಭದಲ್ಲಿ ಬಾಗೇಪಲ್ಲಿಯ ಕೆಲಭಾಗಗಳೂ ಮಾನ್ಯವಾಗಿ ದೊರೆತಿರಬಹುದು. ಕ್ರಿ.ಶ. ೧೫೩೫ರಲ್ಲಿ ತಿಮ್ಮರಸಯ್ಯ ನಾಯಕನೆಂಬವವನು ತನಗೆ ವಿಜಯನಗರದ ಅರಸು ಅಚ್ಯುತರಾಯ ಮಹಾರಾಯ ಕೊಡುಗೆಯಾಗಿ ನೀಡಿದ ಹಳ್ಳಿಯನ್ನು ಮಿಟ್ಟೇಮರಿಯ ಕರಾಲಿ ನರಸಿಂಹ ದೇವರಿಗೆ ದಾನ ಮಾಡಿದ್ದಾನೆ. ಅಚ್ಯುತರಾಯನ ನಂತರ ವಿಜಯನಗರ ಸಿಂಹಾಸನ ವನ್ನೇರಿದ ಸದಾಶಿವನ ಕಾಲದ ಎರಡು ದಾನಶಾಸನಗಳು, ವಿರೂಪಾಕ್ಷ ಎಂಬ ಅಂಕಿತದೊಂದಿಗೆ ಲಭ್ಯವಾಗಿವೆ. ಅವುಗಳಲ್ಲಿ ಗೂಳೂರಿನ ಬಳಿಯ ಶಾಸನ (೩೦) ತಿಳಿಸುವಂತೆ ಸದಾಶಿವನ ನಿರೂಪದಿಂದ ಮಹಾಮಂಡಲೇಶ್ವರ ರಾಮ ರಾಜಯ್ಯ ಬಡಗಿಯೊಬ್ಬನಿಗೆ ಮಾಡಿರುವ ದಾನವನ್ನು ಕುರಿತು ತಿಳಿಸುತ್ತದೆ. ಮಿಟ್ಟೇಮರಿಯಲ್ಲಿ ದೊರೆತಿರುವ ಶಾಸನ (೮೨) ಪೂರ್ಣ ತ್ರುಟಿತವಾಗಿದ್ದು ಸದಾಶಿವರಾಯನ ಕಾಲದಲ್ಲಿ ಮಹಾಮಂಡಲೇಶ್ವರ ಮಾಡಿದ ದಾನ ಎಂಬುದಷ್ಟೇ ತಿಳಿದು ಬರುತ್ತದೆ.

ಆವತಿ ನಾಡಪ್ರಭುಗಳು: ನಂದಿದುರ್ಗದ ಸುತ್ತಮುತ್ತಲ ಪ್ರದೇಶಗಳನ್ನು ಆಳುತ್ತಿದ್ದ ಆವತಿ ನಾಡಪ್ರಭುಗಳ ಆಳ್ವಿಕೆಗೂ ಬಾಗೇಪಲ್ಲಿ ಪ್ರದೇಶದ ಕೆಲವು ಭಾಗ ಒಳಪಟ್ಟಿತ್ತೆಂಬುದು ತಿಳಿದುಬರುತ್ತದೆ. ಹವಲಿ ಭೈರಗೌಡನ ಕ್ರಿ.ಶ. ೧೬೧೪ ಕಾಲದ ಪೊಕ್ಕವಾರಪಲ್ಲಿಯ ಶಾಸನ (೩೯, ೪೦) ರಾಮಚಂದ್ರರಾಯದೇವ ಮಹಾರಾಯನ ಆಳ್ವಿಕೆಯಲ್ಲಿ ಶ್ರೀಮನ್ಮಹಾ ಆವತಿ ನಾಡಪ್ರಭು ಇಮ್ಮಡಿ ಹಾವಳಿ ಭೈರೇಗೌಡ ಮಾರಗಾನಿಕುಂಟೆಯ ಚಿನ್ನಪ್ಪರೆಡ್ಡಿಗೆ ಗೊಡುಗುಂಬಳಿ (ಗೊಡಗು ಉಂಬಳಿ)ಯಾಗಿ ಗೊಡುಗುಚಿಂತಪಲ್ಲೆ ಗ್ರಾಮ ಮಾನ್ಯಮಾಡಿದ ವಿಚಾರ ತಿಳಿಸುತ್ತದೆ. ಈ ಕುರಿತಾಗಿ 'ಆವತಿ ನಾಡಪ್ರಭು' ಲೇಖನದಲ್ಲಿ ಪಿ.ವಿ. ಕೃಷ್ಣಮೂರ್ತಿಯವರು ಇಮ್ಮಡಿ ಹವಳಿ ಭೈರೇಗೌಡ "ವಿಜಯನಗರದ ಅರಸು ವೆಂಕಟಪತಿರಾಯನ ಅಧೀನದಲ್ಲಿ ಗ್ರಾಮ ಪ್ರದೇಶಗಳನ್ನು ಕೃಷಿಯೋಗ್ಯ ಭೂಮಿಯನ್ನಾಗಿ ಪರಿವರ್ತಿಸಲು ಕ್ರಮ ಕೈಗೊಂಡತೆ ಕಂಡುಬರುತ್ತದೆ" ಎಂದು ತಿಳಿಸುತ್ತಾ ಈತನ ಆಳ್ವಿಕೆಯ ಇತರ ಭಾಗಗಳಲ್ಲಿನ ಶಾಸನ ಉಲ್ಲೇಖಗಳನ್ನು ನೀಡಿದ್ದಾರೆ. [ಪಿ.ವಿ. ಕೃಷ್ಣಮೂರ್ತಿ, ಆವತಿನಾಡ ಪ್ರಭುಗಳು, ದಕ್ಷಿಣ ಕರ್ನಾಟಕದ ಅರಸು ಮನೆತನಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ೩೨೭] ಇದೇ ವಂಶದ ಆವತಿನಾಡಪ್ರಭು ಚನ್ನಭೈರೇಗೌಡನ ಮೊಮ್ಮಗ ಮುದ್ದುನಾರಾಯಣ ಸ್ವಾಮಿಯ ಮಗ ರಂಗಪ್ಪಗೌಡ ಚಲಮಯ್ಯನಿಗೆ ಹಿರಣ್ಯೋದಕ ಧಾರಾಪೂರ್ವಕವಾಗಿ ಹೊನ್ನಂಪಲ್ಲೆಯಲ್ಲಿ ಭೂದಾನವನ್ನು ನೀಡಿರುವ ವಿಚಾರ ಕ್ರಿ.ಶ. ೧೭೫೩ರ ಕಾಲದ ತಾಮ್ರ ಶಾಸನ (೩೬) ತಿಳಿಸುತ್ತದೆ. ಈ ಶಾಸನದ ವೇಳೆಗೆ ಇವರ ಮೇಲೆ ಯಾವ ಅಧಿರಾಜರೂ ಕಂಡುಬರುವುದಿಲ್ಲ. ೧೮ನೆಯ

ಶತಮಾನದ ಕಡೆಯವರೆಗೂ ಈ ಮನೆತನದ ಕೆಲವು ದಾನಶಾಸನಗಳು ಬಾಗೇಪಲ್ಲಿಯ ಸುತ್ತಮುತ್ತಲ ಸಾದಲಿ, ಚಿಂತಾಮಣಿ, ಶಿಡ್ಲಘಟ್ಟ ಮೊದಲಾದ ಪ್ರದೇಶದಲ್ಲಿ ಕಂಡುಬರುತ್ತದೆ.

ಗುಮ್ಮನಾಯಕನ ಪಾಳ್ಯದ ಪಾಳೆಯಗಾರರು: ಗುಮ್ಮನಾಯಕನ ಪಾಳ್ಯದ ಪಾಳೆಯಗಾರರು ೧೩–೧೭ನೆಯ ಶತಮಾನಗಳಲ್ಲಿ ಬಾಗೇಪಲ್ಲಿ ಹಾಗೂ ಅದರ ಸುತ್ತಮುತ್ತಣ ಕೆಲವು ಪ್ರದೇಶಗಳನ್ನು ಆಳುತ್ತಿದ್ದರು. ಈ ಪಾಳ್ಯದ ನಾಯಕರು ೧೩ನೇ ಶತಮಾನದಿಂದಲೇ ಆಳ್ವಿಕೆ ನಡೆಸುತ್ತಿದ್ದುದು ತಿಳಿದು ಬರುವುದಾದರೂ, ಬಾಗೇಪಲ್ಲಿಯಲ್ಲಿ ಇವರ ಶಾಸನ ೧೫ನೇ ಶತಮಾನದಿಂದೀಚೆಗೆ ಹೆಚ್ಚಾಗಿ ದೊರೆತಿವೆ.

ಹಾಲುವ್ಯಾಕರ ಕ್ಷತ್ರಿಯ ಕುಲಕ್ಕೆ ಸೇರಿದ ಇವರನ್ನು ಕುರಿತಾಗಿ ಕೆಲವು ಶಾಸನಗಳು ಅಚ್ಯುತ ಗೋತ್ರ ನಾರಾಯಣ ಸೂತ್ರದ ಯಜುಶ್ಯಾಖಾನುವರ್ತಿಗಳು ಎಂದು ತಿಳಿಸುತ್ತವೆ. ಖಾದ್ರಿ ನರಸಿಂಹಸ್ವಾಮಿ ಇವರ ಮನೆದೇವರು. ಒಂದು ಮೂಲದ ಪ್ರಕಾರ ಚೋಳರ ಸಾಮಂತಿಕೆ ಪಡೆದಿದ್ದ ಮಂಬಾ ಎಂಬುವವನ ದಾಯಾದಿಯಾದ (ಖಾದ್ರಿ) ಪತಿನಾಯಕ ಈ ಮನೆತನದ ಮೂಲ ಪುರುಷ. ಈತ ವೈದುಂಬಾ ಮನೆತನದ ದಿಲೀಪನ ಸಾಮಂತನಾಗಿ ಭೈರವಕೊಂಡ ಮತ್ತು ದೊಂಗಲಕೊಂಡ ಪ್ರಾಂತ್ಯಗಳ ನಾಯಕನಾಗಿದ್ದನು. [ದಕ್ಷಿಣ ಕರ್ನಾಟಕದ ಅರಸು ಮನೆತನಗಳು, ಗುಮ್ಮನಾಯನಕ ಹಳ್ಳಿ ಪಾಳೆಯಗಾಗರು, ಎನ್. ಶೇಕ್ ಮಸ್ತಾನ್] ಮತ್ತೊಂದು ಮೂಲದ ಪ್ರಕಾರ ಇವರು ಆಂಧ್ರಪ್ರದೇಶದ ಮದನಪಲ್ಲಿ ಮೂಲದವರು ಗುರ್ರಂಕೊಂಡ ಪ್ರಾಂತ್ಯಗಳಲ್ಲಿ ಬೇಟೆಯಾಡು ತ್ತಿದ್ದ ಗುಡ್ಡಗಾಡು ಜನರಾಗಿದ್ದರೆಂದು ತಿಳಿದು ಬಂದರೆ, ಇವರು ನಂದ್ಯಾಲ ಪರ್ವತ ಪ್ರದೇಶದಿಂದ ಬಂದವರೆಂದೂ ತಿಳಿದುಬರುತ್ತದೆ.

ಕಡಪ ಜಿಲ್ಲೆಯ ದೊಡ್ಡಪಾಳ್ಯದವರಾದ ನರಸಿಂಹ ನಾಯಕ ಮತ್ತು ಅವನ ಸೋದರ ಖಾದ್ರಿಪತಿ ನಾಯಕರು ವಲಸೆ ಬಂದು ಮೊದಲು ಶಿಡ್ಲಘಟ್ಟದ ಬಳಿಯ ಯಗುವ ಕೋಟೆಯಲ್ಲಿ ನೆಲೆಸಿದ್ದರು. ಖಾದ್ರಿಪತಿ ನಾಯಕ ಸಮೀಪದ ಪಾತಪಾಳ್ಯದಲ್ಲಿದ್ದ ಶ್ರೀಮಂತ ಸೋದರರಾದ ಗುಮ್ಮರೆಡ್ಡಿ, ಲಕ್ಕರೆಡ್ಡಿಯವರ ನೆರವಿನಿಂದ ಅಲ್ಲಿ ಕೋಟೆಕಟ್ಟಿ, ಪಾತಪಾಳ್ಯ ಮತ್ತು ಭೈರವನ ಬೆಟ್ಟ ಪ್ರಾಂತ್ಯವನ್ನು ಆಳತೊಡಗಿದ. ಇವನ ನಂತರ ನಾಯಕನಾದ ಚಿನ್ನಮ್ಮನಾಯಕ ಭೂ ಅಭಿವೃದ್ಧಿಗೆ ಹೆಚ್ಚು ಗಮನ ನೀಡಿ ಕೆರೆಕಟ್ಟೆಗಳನ್ನು ನಿರ್ಮಿಸಿ, ಕಾಡುಗಳನ್ನು ಕಡಿದು ದೇವರಾಜಪಳ್ಳಿ ಮೊದಲಾದ ಅನೇಕ ಹೊಸ ಹಳ್ಳಿಗಳನ್ನು ನಿರ್ಮಿಸಿ ಸ್ಥಿರವಾದ ಅಧಿಪತ್ಯವನ್ನು ಸ್ಥಾಪಿಸಿದ. ಚಿನ್ನಮ್ಮನಾಯಕ ತಮಗೆ ನೆರವು ನೀಡಿದ ಗುಮ್ಮರೆಡ್ಡಿಯ ಹೆಸರನ್ನು ತನ್ನ ಪಾಳ್ಯಕ್ಕೆ ಇಟ್ಟಿದುದಲ್ಲದೆ ತನ್ನ ಮಗನಿಗೂ ಗುಮ್ಮನಾಯಕನೆಂದು ಹೆಸರಿಟ್ಟು ತನ್ನ ಕೃತಜ್ಞತೆ ತೋರಿದ. [ಕನ್ನಡ ವಿಷಯ ವಿಶ್ವಕೋಶ ಸಂಪುಟ–೧, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ] ಮುಂದೆ ಈ ಗುಮ್ಮನಾಯಕ ಕ್ರಿ.ಶ. ೧೩೭೮ರ ವರೆಗೂ ಆಳ್ವಿಕೆ ನಡೆಸಿದನು. ಇವನ ನಂತರ ಇವನ ಮಗ ಮುಸಲನಾಯಕನು ಅಧಿಕಾರ ವಹಿಸಿಕೊಂಡನು. ಇವನ ನಂತರ ಶಿಂಗಿರಪ್ಪ ನಾಯಕನೆಂಬುವನು ಅಧಿಕಾರವನ್ನು ವಹಿಸಿಕೊಂಡು ಗುಮ್ಮನಾಯಕನ ಪಾಳ್ಯದ ನಾಯಕನಾಗಿದ್ದ ವಿಚಾರ ವಿಜಯನಗರದ ಹರಿಹರನ ತಾಮ್ರಶಾಸನಗಳಲ್ಲಿ ತಿಳಿದುಬರುತ್ತದೆ. ಶಿಂಗೀರಪ್ಪನಾಯಕ ವಿಜಯನಗರದ ಸಾಮಂತಿಕೆಯನ್ನು ಪಡೆದುಕೊಂಡು, ಕಪ್ಪಕಾಣಿಕೆಯನ್ನು ಕೊಡುವ ಸಂಪ್ರದಾಯವನ್ನು ಪ್ರಾರಂಭಿಸಿದ [ಸಿ. ಹಯವದನ ರಾವ್ ಮೈಸೂರು ಗೆಜೆಟಿಯರ್, ಸಂ. ೫, ೧೯೩೦ ಪು. ૩೨೦–೨೨] ಇವನ ನಂತರ ಪಟ್ಟಕ್ಕೆ ಬಂದ ಕದಿರಪ್ಪನಾಯಕ ಬಹು ಜನಪ್ರಿಯ ನಾಯಕನಾಗಿದ್ದು, ಆಡಳಿತದಲ್ಲಿ ಅನೇಕ ಜನಪರ ಸುಧಾರಣೆಗಳನ್ನು ತಂದನು. ಇವನು ವಿಜಯನಗರದ ಆಡಳಿತದ ಆಧಾರದ ಮೇರೆಗೆ ಶೇಕುದಾರ, ತಲವಾರ, ಶ್ಯಾನುಭೋಗ ಮೊದಲಾದವರನ್ನು ನೇಮಕ ಮಾಡಿದುದಲ್ಲದೆ, ಬೊಕ್ಕಸದ ಚಾವಡಿ, ನಾಣ್ಯದ ಚಾವಡಿ, ಸುಂಕದ ಚಾವಡಿ ಮೊದಲಾದವನ್ನು ನಿರ್ಮಿಸಿದನು. ಟಂಕಸಾಲೆ ಪ್ರಾರಂಭಿಸಿ, ವಿಜಯನಗರದ ಟಂಕಗಳ ಜೊತೆ ನಂದಿ ಮತ್ತು ತ್ರಿಶೂಲ ಗಳನ್ನು ಹೊಂದಿದ ನಾಣ್ಯಗಳನ್ನು ಹೊರಡಿಸಲಾರಂಭಿಸಿದುದು ಇವನ ಕಾಲದ ಮುಖ್ಯವಾದ ಸುಧಾರಣೆಗಳಲ್ಲೊಂದು. ಎರಡನೆ ಹರಿಹರನ ಕಾಲದಲ್ಲಿ ಪಾಳೆಯಗಾರರ ಮೇಲೆ ಮತ್ತು ನಾಯಕರುಗಳ ಮೇಲೆ ನಿಗದಿ ಮಾಡಿದ್ದ ವಾರ್ಷಿಕ ಪೊಗದಿಯನ್ನು ವಸೂಲಿ ಮಾಡುವ ಹಿರಿಮೆಯನ್ನು ಪಡೆದಿದ್ದ ಕದಿರಪ್ಪನಾಯಕ ಪೊಗದಿ ಕೊಡಲು ನಿರಾಕರಿಸಿದ ಗುರ್ರಂಕೊಂಡ ಮತ್ತು ಪೆನುಗೊಂಡದ ಪಾಳೆಯಗಾರರ ವಿರುದ್ದ ಸೈನ್ಯತೆಗೆದುಕೊಂಡು ಹೋಗಿ ಅವರನ್ನು ಸೋಲಿಸಿ ಕಪ್ಪವನ್ನು ವಸೂಲಿಮಾಡಿ ಒಪ್ಪಿಸಿ, ಕೆಲವು ಜಹಗೀರುಗಳನ್ನು ಪಡೆದ ವಿಚಾರ [ಎಸ್ಐಐ ಸಂಪುಟ ೧೬, ಜಿ.ಕೆ. ೧೭] ತಿಳಿದುಬರುತ್ತದೆ. ಇವನ ನಂತರ ಅಧಿಕಾರಕ್ಕೆ ಬಂದವರಲ್ಲಿ ಇವನ ಮೂರನೆಯ ಮಗ ಎರಡನೇ ಮುಸಲನಾಯಕ ಪ್ರಖ್ಯಾತನಾಗಿದ್ದಾನೆ. ಇವನು ಪಾಪಾಗ್ನಿ ನದಿಗೆ ಅಡ್ಡಲಾಗಿ ಸೇತುವೆ ಕಟ್ಟಿ ಬ್ರಹ್ಮಸರೋವರವನ್ನು ನಿರ್ಮಿಸಿ ಈ ಪ್ರಾಂತ್ಯದ ನೀರಾವರಿ ವ್ಯವಸ್ಥೆಯನ್ನು ಉತ್ತಮಪಡಿಸಿದನು. ಮುಂದೆ ಕೆಲವ ವರ್ಷಗಳಲ್ಲಿ ಈ ಪಾಳಯಕ್ಕೆ ನಾಯಕನಾದ ವಸಂತನಾಯಕ ವಿಜಯನಗರ ಅರಸು ಮಲ್ಲಿಕಾರ್ಜುನನ ಪರವಾಗಿ ಗುಲ್ಬರ್ಗದ ಮೇಲೆ ದಾಳಿಯಿಟ್ಟು, ಗೆದ್ದುದಕ್ಕಾಗಿ ಅರಸನಿಂದ ಕೆಲವು ಪ್ರದೇಶಗಳನ್ನು ಬಹುಮಾನವಾಗಿ ಪಡೆದಿದ್ದಾನೆ. ಮೈಸೂರು ಗೆಜಟಿಯರ್‌ನ ಪ್ರಕಾರ ಕ್ರಿ.ಶ. ೧೫೩೭ರಲ್ಲಿ ವಸಂತನಾಯಕನ ಮಗನಾದ ಎರಡನೆಯ

ಲೊಕ್ಕನಾಯಕ ಅಧಿಕಾರಕ್ಕೆ ಬಂದನು. ಇವನು ಗುಮ್ಮನಾಯಕನ ಕೋಟೆಯ ಗೋಡೆಗಳನ್ನು ಬಿಗಿಗೊಳಿಸಿ, ಕಂಚಿನ ಬಾಗಿಲುಗಳನ್ನು ಇಡಿಸಿದನು ಜೊತೆಗೆ ಕೋಟೆಯ ಸುತ್ತಲೂ ಆಳವಾದ ಬುರ್ಜನ್ನು ತೋಡಿಸಿ ನೀರು ತುಂಬಿಸು ತ್ತಿದ್ದನು. ಕೋಟೆಯ ಪಶ್ಚಿಮ ಭಾಗದಲ್ಲಿ ದೊಡ್ಡದಾದ ಕೆರೆಯನ್ನು ನಿರ್ಮಿಸಿ ಅದನ್ನು ರಾಣಿಕೆರೆ ಅಥವಾ ಅಮ್ಮವಾರಿ ಕುಂಟ ಎಂದು ಕರೆಯಲಾಯಿತು. ಕೋಟೆಯ ಮಧ್ಯಭಾಗದಲ್ಲಿ ಬೆಟ್ಟದ ಮೇಲ್ಗಡೆ ಆಳವಾದ ಕಲ್ಯಾಣಿಯನ್ನು ತೋಡಿಸಿ ಅದನ್ನು ರಾಜರಬಾವಿ ಅಥವಾ ದೊರಲಬಾಯಿ ಎಂದು ಕರೆದನು. [ಎನ್. ಶೇಕ್. ಮಸ್ತಾನ್, ಗುಮ್ಮನಾಯಕನಹಳ್ಳಿ ಪಾಳೆಯಗಾರರು, ದಕ್ಷಿಣ ಕರ್ನಾಟಕದ ಅರಸು ಮನೆತನಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ] ಇವನ ನಂತರ ಅಧಿಕಾರಕ್ಕೆ ಬಂದ ವೀರದಾಸಪನಾಯಕನು ವಿಜಯನಗರದ ಅರಸರ ಪರವಾಗಿ ತಾಳಿಕೋಟೆ ಯುದ್ಧಕ್ಕೆ ಸೈನ್ಯಸಮೇತ ಹೋಗಿದ್ದ ನೆಂದು ತಿಳಿದುಬರುತ್ತದೆ. ಹಂಪಿಯ ಪತನಾನಂತರ ಪೆನುಗೊಂಡೆಯಿಂದ ಆಳಿದ ವಿಜಯನಗರದ ಅರಸರ ಸಾಮಂತನಾಗಿದ್ದು, ಎರಡನೇ ತಿರುಮಲರಾಯನ ಮಗನಾದ ಶ್ರೀರಂಗನಿಗೆ ಕಿರುಕುಳ ಕೊಡುತ್ತಿದ್ದ ದಿಲಾವರ್ ಖಾನನ ಜೊತೆ ಹೋರಾಡಿ ಅವನನ್ನು ಸೋಲಿಸಿದನೆಂದು [ಎ.ಕ.ಸಂ. ೩, ಹನ. ೧೯೨, ಕ್ರಿ.ಶ. ೧೫೬೭] ತಿಳಿದುಬರುತ್ತದೆ.

ವಿಜಯನಗರದ ಕಾಲದ ಅರಸರಿಗೆ ಆರಂಭದಿಂದಲೂ ನಿಷ್ಠೆಯನ್ನು ತೋರಿದ ಗುಮ್ಮನಾಯಕನ ಪಾಳ್ಯದವರು, ವಿಜಯನಗರದ ಪರವಾಗಿ ಅನೇಕ ಯುದ್ಧಗಳಲ್ಲಿ ಭಾಗವಹಿಸಿದ್ದರೂ, ಆ ಕುರಿತಾದ ಯಾವ ವಿಚಾರಗಳನ್ನೂ ಇಲ್ಲಿಯ ಶಾಸನಗಳು ತಿಳಿಸುವುದಿಲ್ಲ. ವಿಜಯನಗರದ ಅರಸು ಅಚ್ಯುತರಾಯನ ಆಳ್ವಿಕೆಯಲ್ಲಿ, ಅಚ್ಯುತರಾಯನಿಗೆ ಒಳಿತಾಗಲಿ ಎಂದು ಕೋರಿರುವ ಕೆಲವು ದಾನಶಾಸನಗಳು, ಅಗ್ರಹಾರ, ಕೆರೆ ನಿರ್ಮಾಣ, ದೇವದಾನಗಳನ್ನು ಕುರಿತು ಶಾಸನಗಳು ತಿಳಿಸುತ್ತದೆ. ರಾಜಕೀಯ ಕುರಿತಾದ ಹೆಚ್ಚಿನ ವಿಚಾರಗಳು ಈ ಶಾಸನಗಳಿಂದ ತಿಳಿದುಬರುವುದಿಲ್ಲ. ವಿಜಯನಗರದ ಪತನಾ ನಂತರ, ಪೆನುಗೊಂಡೆಯಿಂದ ಆಳ್ವಿಕೆ ನಡೆಸುತ್ತಿದ್ದ ಸಂದರ್ಭದಲ್ಲಿಯೂ ಶ್ರೀರಂಗರಾಯ, ರಾಮದೇವ ಮೊದಲಾದ ಅರಸರಿಗೆ ನಿಷ್ಠೆ ತೋರುತ್ತಿದ್ದ ಇಲ್ಲಿಯ ಪಾಳೆಯಗಾರರನ್ನು ಕುರಿತು ಕೆಲವು ದಾನಶಾಸನಗಳು ತಿಳಿಸುತ್ತವೆ.

ವಿಜಯನಗರದ ಪತನಾ ನಂತರ ಇಲ್ಲಿನ ಗುಮ್ಮನಾಯಕಪಾಳ್ಯದ ಪಾಳೆಯಗಾರರು ಮರಾಠರು ಹಾಗೂ ಮೊಗಲರಿಗೆ ಕಪ್ಪ ಒಪ್ಪಿಸುತ್ತಿದ್ದರು. ಈ ಪ್ರದೇಶದಲ್ಲಿ ಮೊಗಲರು ಹಾಗೂ ಮರಾಠರಿಗೆ ಸೇರಿದ ಶಾಸನಗಳೂ ಕಂಡುಬಂದು, ಇವರು ಅಧಿಕಾರ ನಡೆಸಿರುವ ವಿಚಾರ ತಿಳಿಸುತ್ತವೆ. ಶಿವಾಜಿಯ ತಂದೆ ಷಹಜಿಗೆ ಕೋಲಾರದ ಕೆಲವು ಪ್ರದೇಶಗಳನ್ನು ಜಹಗೀರಾಗಿ ಕೊಡಲಾಗಿತ್ತು. ಇವನ ನಂತರ ಸಾಂಬಾಜಿ ಈ ಪ್ರದೇಶಗಳ ಒಡೆತನ ಪಡೆದಿದ್ದ. ಇವನ ಮಡದಿ ಜಯಿತಬಾಯಿ ಕೆಲವು ದಾನಗಳನ್ನು ಮಾಡಿರುವ ಉಲ್ಲೇಖ ದೊರಕುತ್ತದೆ. ಪೋಕಮಾಕಲಪಲ್ಲಿ ಗ್ರಾಮದ ಶಾಸನವಲ್ಲಿ ([illegible]) ಮರಾಠರ ಮುಂಡ ಮುರಾರ್‌ಜಿ ಹಿಂದು ರಾವ್ ಘೋರ್ಪಡೆಯ ಅಪ್ಪಣೆಯ ಮೇರೆಗೆ ಕೊಟ್ಟ ದಾನದ ವಿಚಾರವಿದೆ. ೧೭೬೮ರ ಕಾಲದ ಶಾಸನದಲ್ಲಿ ಮೊಗಲರ ಮುಖಂಡ ಇಸ್ಮೈಲ್ ಸಾಹೇಬ್‌ನ ಉಲ್ಲೇಖವಿದೆ. ಗೂಳೂರಿನ ಮಾಡಪ್ಪಗಾರಪಲ್ಲಿಯ ಶಾಸನವು (೩೨) ಇಟಕಿದುರ್ಗ ತಾಲುಕಿನ ಜಹಗಿರ್‌ದಾರ್ ಇಸ್ಮೈಲ್‌ಸಾಬ್, ತಾಲುಮ್ಮ ಸಾಬರು ಮಾರಿಗಾನಿಕುಂಟೆಗೆ ಸೇರಿದ ಮಾದಪ್ಪಗಾರಿ ಪಲ್ಲಿಯ ಬಳಿ ನಿರ್ಮಿಸಿದ ಕಾಲುವೆ, ೧ ಕೆರೆ ಹಾಗೂ ೩ ಬಾವಿ ದುರಸ್ತಿಗೊಳಿಸಿದಕ್ಕಾಗಿ ವಡಿಗೆರೆಡ್ಡಿ ಚನ್ನಯ್ಯನಿಗೆ ಕೊಟ್ಟ ಕೊಡುಗೆಯನ್ನು ಕುರಿತು ತಿಳಿಸುತ್ತದೆ.

ಶಾಸನಗಳು ಉಲ್ಲೇಖಿಸುವ ಧಾರ್ಮಿಕ ವಿಚಾರಗಳು: ಈ ಪ್ರದೇಶದಲ್ಲಿ ಜೈನಧರ್ಮದ ಕುರಿತಾದ ಯಾವುದೇ ಕುರುಹು ಶಾಸನಗಳಲ್ಲಿ ಕಂಡುಬರುವುದಿಲ್ಲ. ಈ ಪ್ರದೇಶದ ಆರಂಭ ಕಾಲದ ಶಾಸನಗಳಿಂದಲೂ ಶೈವ ಹಾಗೂ ವೈಷ್ಣವ ಧರ್ಮಗಳ ಪ್ರಭಾವವೇ ಕಂಡುಬರುತ್ತದೆ.

ದೇವಸ್ಥಾನ ನಿರ್ಮಾಣ : ಕ್ರಿ.ಶ. ೧೪೯೧ರ ಕಾಲದ ಗಡಿದಿಂನ ಶಾಸನಗಳು (೧೫, ೧೬) ತಿಳಿಸುವಂತೆ ವಿಜಯನಗರದ ಇಮ್ಮಡಿ ಹರಿಹರನ ಆಳ್ವಿಕೆಯಲ್ಲಿ ಅವನ ಮಹಾಪ್ರಧಾನ ದಂಣಾಯಕ ತೆಪ್ಪದ ನಾಗಣ್ಣಒಡೆಯನ ಮೊಮ್ಮಗ ತಿರುಮಲನಾಥ ಗಡಿದಿಂನಲ್ಲಿ ಪ್ರಸನ್ನ ವೆಂಕಟೇಶ್ವರ ದೇವಾಲಯವನ್ನು ನಿರ್ಮಿಸಿದ್ದಾನೆ. ಜೊತೆಗೆ ಈ ಗಡಿದಿಂನಲ್ಲಿ ತಿರುಮಲಪುರ ಎಂಬ ಅಗ್ರಹಾರವನ್ನು ಕಟ್ಟಿಕೊಂಡು ಇದ್ದಂತಹ ಕೆಲವರಿಗೆ ವೃತ್ತಿಯನ್ನು ನೀಡಿ, ದೇವಾಲಯದ ನಿತ್ಯ ಕೈಂಕರ್ಯಕ್ಕೆ ಕೆಲವು ದತ್ತಿಗಳನ್ನೂ ನೀಡಿದ್ದಾನೆ.

ಗಡಿದಿಂನ ಬೆಟ್ಟದಲ್ಲಿ ಗವಿಯನ್ನು ನಿರ್ಮಿಸಿ, ಅಲ್ಲಿ ಈಶ್ವರನ ಪ್ರತಿಷ್ಠೆ ಮಾಡಿದ ವಿಚಾರವೊಂದನ್ನು ಕಂಟ್ಲೂರಪ್ಪನ ಗವಿಬಳಿಯ ಶಾಸನ (೨೩) ತಿಳಿಸುತ್ತದೆ. ಕ್ರಿ.ಶ. ೧೮೨೪ರಲ್ಲಿ ಈ ಜಾಗದ ರೆಡ್ಡಿ ಮತ್ತು ಕರಣಿಕರು ಬಾಗೇಪಲ್ಲಿಯ ಕಮ್ಮಾರ ಗಂಗಪ್ಪ ಮತ್ತು ಬಾಲಮ್ಮನ ಮಗ ಕುಂಟ್ಲೂರಪ್ಪನಿಗೆ ಈ ದೇವಾಲಯ ನಿರ್ಮಾಣ ಮಾಡಲು ಕೋರಿ, ಅದಕ್ಕಾಗಿ ಕೆಲವು ದಾನ ನೀಡಿದ್ದಾರೆ.

ಗುಮ್ಮನಾಯಕನಪಾಳ್ಯದಲ್ಲಿ ಪೆದ್ದವೆಂಕಟ ಜೋಯಿಸನು ಕ್ರಿ.ಶ. ೧೭೩೧ರಲ್ಲಿ ಆಂಜನೇಯಸ್ವಾಮಿ ದೇವಾಲಯವನ್ನು ನಿರ್ಮಿಸಿ, ಅಂಗರಂಗಭೋಗಾದಿಗಳಿಗೆ ಕೆಲವು ದತ್ತಿಗಳನ್ನು ಬಿಟ್ಟ ವಿಚಾರವನ್ನು ಗುಮ್ಮನಾಯಕನ ಪಾಳ್ಯದ ಗೌರಮ್ಮನ ಗುಡಿಯಲ್ಲಿನ ಶಾಸನ (೬೬) ತಿಳಿಸುತ್ತದೆ.

ಕ್ರಿ.ಶ. ೧೭೬೨ರಲ್ಲಿ ಮಹಾರಾಜ ಗುಮ್ಮಿನಾಯನಿ ನಾರಸಿಂಹನಾನಿ ಧರ್ಮಪತ್ನಿ ರಾಮಕ್ಕಳ ಮಗ ವಸಂತಪ್ಪ ನಾಯನಿ ಹಾಗೂ ಆತನ ಸತಿ ಕದಿರಮ್ಮಳ ಮಗ ದಳವಾಯಿ ಸುಬ್ಬಪ್ಪ ಕಲ್ಯಾಣಗಿರಿಯಲ್ಲಿ ಕಲ್ಲಿನಿಂದ ಒಂದು ಜಪಸಾಲೆ, ಸಾಲುಚತ್ರ, ಕೋಟೆ ನಿರ್ಮಿಸಿ, ಬುರುಜುಗಳನ್ನು ಕಟ್ಟಿಸಿದನೆಂಬ ವಿಚಾರ ಗುಮ್ಮನಾಯಕನಪಾಳ್ಯದ ಶಾಸನ ದಿಂದ (೬೮) ತಿಳಿದುಬರುತ್ತದೆ.

ದೇವ ದಾನ : ಯೆಲ್ಲಂಪಲ್ಲಿಯ ಈಶ್ವರ ದೇವಾಲಯದ ಮುಂದಿನ ಶಾಸನ (೨೦) ಕ್ರಿ.ಶ. ೧೪೯೨ ಕಾಲಕ್ಕೆ ಸೇರಿದು ದಾಗಿದೆ. ಬಹಳವಾಗಿ ತ್ರುಟಿದವಾದ ಈ ಶಾಸನ ವೆಂಕಟಪತಿ ರಾಯ ವೆಲ್ಲಂಪಲ್ಲಿಯಲ್ಲಿ ಕದಿರಪ್ಪನಾಯನಿಯ ಸಮ್ಮುಖದಲ್ಲಿ ಮಾಡಿದ ದಾನದ ವಿಚಾರ ತಿಳಿಸುತ್ತಿದೆ.

ಗೂಳೂರಿನ ನಲ್ಲಬಾಲಮ್ಮನ ಕುಂಟೆಯ ಶಾಸನ ವೊಂದು (೩೧) ಕ್ರಿ.ಶ. ೧೭೩೭ರಲ್ಲಿ ಪರುಷವೆಂಕಟೇಶ್ವರ ಸ್ವಾಮಿಯ ದೀಪಾರಾಧನ, ನಿತ್ಯೋತ್ಸವ, ಪಕ್ಷೋತ್ಸವ, ಮಾಸೋತ್ಸವ, ಅರ್ಚಕಸ್ಥಿತಿ ಮೊದಲಾದ ಕೈಂಕರ್ಯಕ್ಕೆಂದು ಕೃಷ್ಣಮ್ಮಾಚಾರ್ಯನಿಗೆ ಶ್ರೀಮನ್ಮಹಾನಾಯಕಾಚಾರ್ಯ ಗುಮ್ಮಿನಾಯನಿ ತಿಮ್ಮನಾಯನಿಯ ಮೊಮ್ಮಗ ಕದಿರಪ್ಪನಾಯನಿ ಮಗ ನಾರಸಿಂಹನಾಯನಿ ಗುಯಲೂರ ಸ್ಥಳದ ಪೋತುಲ ದೊಡ್ಡಿ ಎಂಬ ಗ್ರಾಮವನ್ನೂ ಅಲ್ಲದೆ ಮೋಟುಪಲ್ಲಿಯ ಕೆರೆಯ ಕೆಳಗಣ ಭೂಮಿಯನ್ನು ಸರ್ವಮಾನ್ಯವಾಗಿ ದಾನ ವಾಗಿ ಕೊಟ್ಟ ವಿಚಾರ ತಿಳಿಸುತ್ತದೆ. ಇದಕ್ಕೆ ಶ್ರೀ ನಾರಸಿಂಹ ಎಂಬ ಒಪ್ಪವಿದೆ.

ಕ್ರಿ.ಶ. ೧೬೨೫ರಲ್ಲಿ ಗುಮ್ಮಿನಾಯಿನಿ, ಕದಿರಪ್ಪನಾಯಿನಿ ಮತ್ತು ನರಸಿಂಹನಾಯಿನಿಯರ ತಾಯಿ ಕದಿರಮ್ಮ ನಂದೀಶ್ವರ ದೇವರಿಗೆ ಸರ್ವಬಾಧಾ ಪರಿಹಾರವಾಗಿ ಗ್ರಾಮ ಒಂದನ್ನೂ, ಬಲಿಜಪಲ್ಲೆ ಸ್ವಾಮಿಗೆ ತಳಿಗೆ ದಾನವನ್ನೂ ನೀಡಿದ ವಿಚಾರವನ್ನು ಪಾಟಕೋಟೆಯ ಶಾಸನ (೬೯) ತಿಳಿಸುತ್ತದೆ.

ಚೇಳೂರಿನ ಪಾಳ್ಯಕೆರೆಗ್ರಾಮದಲ್ಲಿನ ಶಾಸನವು (೭೪) ಕ್ರಿ.ಶ. ೧೬೮೭ರಲ್ಲಿ ಗುಮ್ಮಿನಾಯನಿ ಕದಿರಪ್ಪನಾಯಿನಿ ಪೆದ್ದವಸಂತನಾಯನಿಯರು ನಿತ್ಯ ಕೈಂಕರ್ಯಕ್ಕಾಗಿ ಸಮರ್ಪಿಸಿದ ಚೇಳೂರು ಚೆಂಚಲಿಪಟ್ಟು ಗ್ರಾಮದ ಭೂದಾನದ ವಿವರ ನೀಡುತ್ತದೆ. ಕ್ರಿ.ಶ. ೧೬೧೭ರಲ್ಲಿ ಮಹಾನಾಯಕಾಚಾರ್ಯ ಗುಮ್ಮಿನಾಯಿನಿ ಕದಿರಪ್ಪ ನಾಯಿನಿ ಕೃಷ್ಣಪ್ಪನಾಯಿನಿ ಚೇಳೂರಿನ ವೆಂಕಟರಮಣಸ್ವಾಮಿ ದೇವಾಲಯದ ನಿತ್ಯಪೂಜಾದಿಗಳಿಗೆ ದೇವರಿಗೆ ದಾನ ನೀಡಿರುವುದಲ್ಲದೆ, ಇಲ್ಲಿ ತಿರುಮಲಪುರಿ ಎಂಬ ಅಗ್ರಹಾರವನ್ನೂ ನಿರ್ಮಿಸಿದ್ದ ವಿಚಾರವನ್ನು ಚೇಳೂರಿನ ಬಳಿಯ ವೆಂಕಟರಮಣಸ್ವಾಮಿ ದೇವಾಲಯದ ಶಾಸನ (೭೫) ತಿಳಿಸುತ್ತದೆ. ಗುಮ್ಮನಾಯಿನಿ ಕದುರಪ್ಪನಾಯಿನಿ ನರಸಿಂಹ ನಾಯಿನಿಯು ಕುಂಟ್ಲೂರು ಭೈರವೇಶ್ವರ ದೇವರಿಗೆ ಮಾನ್ಯಮಾಡಿದ ಬಾಗೇಪಲ್ಲಿ ಸ್ಥಳದಲ್ಲಿ ಕೆಲವು ತೊಂದರೆಗಳುಂಟಾಗಿವೆ ಅವುಗಳನ್ನು ನಿವಾರಿಸಿ, ಭಾದೆ ಪರಿಹರಿಸಬೇಕೆಂದು ಕೋರಿ ಭೈರವೇಶ್ವರದೇವರ ಅರ್ಚಕ ಮುದ್ದಯ್ಯನಿಗೆ ಹಸ್ತದಾನ ನೀಡಿದ್ದಾನೆ. ಈ ಮಾನ್ಯವನ್ನು ಅಳಿಸಿದವರು ಈ ದೇವರ ತಳಿಗೆ ಪ್ರಸಾದದಲ್ಲಿ ವಿಷಹಾಕಿದ ಪಾಪಕ್ಕೆ ಹೋಗುವವರು ಎಂಬ ಶಾಪಾಶಯ ದೊಂದಿಗೆ ಹರಿಹರ ಸಾಕ್ಷಿ ತೋರಿದ್ದಾರೆ (೭೩). ಗುಮ್ಮ ನಾಯಕ ಪಾಳ್ಯದ ಪಾಳೆಯಗಾರರು ವಿಷ್ಣು ಹಾಗೂ ಶಿವ ದೇವಾಲಯಗಳೆರಡಕ್ಕೂ ದಾನಗಳನ್ನು ನೀಡಿರುವುದನ್ನು ಕಾಣುತ್ತೇವೆ.

ದಾನ ನೀಡುವುದು ಪುಣ್ಯಕಾರ್ಯವೆಂದು ಬಗೆಯುವುದು ಒಂದಾದರೆ, ಆ ಪುಣ್ಯ ತಮ್ಮ ಒಡೆಯನಿಗೆ, ರಾಜನಿಗೆ ಪ್ರಾಪ್ತವಾಗಲಿ ಎಂದು ಹಾರೈಸಿರುವ ವಿಶೇಷ ಶಾಸನಗಳು ಕಂಡುಬರುತ್ತವೆ. ಕ್ರಿ.ಶ. ೧೫೪೯ರಲ್ಲಿ, ವಿಜಯನಗರದ ಅರಸು ಅಚ್ಚ್ಯುತರಾಯನ ಆಳ್ವಿಕೆಯಲ್ಲಿ ಭಂಡಾರಂ ಅಪ್ಪರಸಯ್ಯನ ಮಗ ತಿರುಮಲರಸಯ್ಯ ಮತ್ತು ಕೊಂಡಪ್ಪಯ್ಯ ಮಾರಗಾನ ಕುಂಟೆ ವೆಂಕಟನಾಥನಿಗೆ ಗಯ್ಯಲು ಸೀಮೆಯ ಮಾರ್ಗಾನು ಕುಂಟೆಯನ್ನು ರಾಜನ ಪುಣ್ಯಪ್ರಾಪ್ತಿಯಾಗಲೆಂದು ದಾನ ನೀಡಿರುವ ವಿಚಾರವನ್ನು ಈ ದೇವಾಲಯದ ಬಳಿಯಿರುವ ಶಾಸನ (೩೭) ತಿಳಿಸುತ್ತದೆ. ಇಲ್ಲಿನ ಪೋತೇನಹಳ್ಳಿಯ ಶಾಸನ (೪೧) ಕ್ರಿ.ಶ. ೧೫೦೩ರಲ್ಲಿ ವಿಜಯನಗರದ ಅಚ್ಚುತರಾಯನ ಕಾಲದಲ್ಲಿ ಲಕ್ಕಿನಾಯಕ ಮತ್ತು ಕೃಷ್ಣಪ್ಪನಾಯಕರಿಗೆ ಪುಣ್ಯವಾಗಲೆಂದು ನಂಜಗವುನಿ ಎಂಬುವವನು ಲೇಪಾಕ್ಷಿ ವೀರೇಶ್ವರನಿಗೆ ಭೂದಾನ ಮಾಡಿದ್ದಾನೆ. ಕ್ರಿ.ಶ. ೧೫೪೨ರಲ್ಲಿ ವೇಂಕಟದೇವನು, ಮಂಡಿನಾಯನಿ ಮತ್ತು ವಸಂತ ನಾಯನಿಯರು ಮಹಾರಾಜ ಶ್ರೀರಂಗರಾಯನಿಗೆ ಪುಣ್ಯವಾಗ ಲೆಂದು ಮಾರಗಾನಿಕುಂಟೆ ಗ್ರಾಮವನ್ನು ಅಗ್ರಹಾರವನ್ನಾಗಿಸಿ ಪೆನುಗುಂಡೆ ತಿರುಮಲ ತಾತಾಚಾರ್ಯರಿಗೆ ದಾನ ನೀಡಿದ ವಿಚಾರವನ್ನು ಇದೇ ಗ್ರಾಮದಲ್ಲಿ ದೊರೆತಿರುವ ಶಾಸನ (೩೮) ತಿಳಿಸುತ್ತದೆ. ಕ್ರಿ.ಶ. ೧೫೩೩ರ ಕಾಲಕ್ಕೆ ಸೇರಿದ ಪೆದ್ದ ತುಮುಕೆಪಲ್ಲಿ ಗ್ರಾಮದ ಶಾಸನವು (೨೫) ಅಚ್ಯುತ ರಾಯನ ಆಳ್ವಿಕೆಯಲ್ಲಿ ಕೊಂಡಮರಸು ಅಚ್ಯುತರಾಯನಿಗೆ ಶುಭವಾಗಲೆಂದು ಗಡಿದಂ ಪ್ರದೇಶದ ಪ್ರತಿನಾಮ 'ಕೃಷ್ಣರಾಯ ಸಮುದ್ರ' ಅಗ್ರಹಾರವನ್ನು ವೆಂಕಟೇಶ್ವರ ದೇವರಿಗೆ ದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ.

ಗೂಳೂರಿನ ದೇವಿಕುಂಟೆ ಇಟಕೆರಾಯನ ದುರ್ಗದ ಮೇಲಿನ ಶಾಸನ ನಿಡುಗಲ್ಲು ಕರಣಿಕ ರೇಚಪ್ಪನ ತಮ್ಮ ಸೋವಪ್ಪನ ಮಗ ಮಲಪನು ಇಟಿಗೆ ಕೋಟೆಯಲ್ಲಿ ಕನ್ನರ ದೇವನ ಮಲಪಗಳ ಸೇನಬೋವನಾಗಿದ್ದು ವೀರಪರಿವಾರಕೆ ಧರ್ಮವೆಂದು ಮಹಾಲಕ್ಷ್ಮಿ ಗುಡಿ ದೀಪಮಾಲೆ ಕಂಭ ದಾನ

ಮಾಡಿದ ವಿಚಾರವನ್ನು ಇಟಿಕೆರಾಯನದುರ್ಗದ ಮೇಲಿನ ಕೋಟೆಯ ಬಳಿಯ ಶಾಸನ (೪೩) ತಿಳಿಸುತ್ತದೆ.

ಮಿಟ್ಟೇಮರಿಯ ಕಸಬಾದಲ್ಲಿನ ಶಾಸನ (೭೨) ತಿಳಿಸುವಂತೆ ಕ್ರಿ.ಶ. ೧೫೩೫ರಲ್ಲಿ ತಿಮ್ಮರಸಯ್ಯ ನಾಯಕನೆಂಬುವವನು ತನಗೆ ವಿಜಯನಗರದ ಅರಸು ಅಚ್ಚುತರಾಯ ಮಹಾರಾಯ ಕೊಡುಗೆಯಾಗಿ ನೀಡಿದ ಹಳ್ಳಿಯನ್ನು ಮಿಟ್ಟೇಮರಿಯ ಕರಾಲಿ ನರಸಿಂಹ ದೇವರಿಗೆ ದಾನ ಮಾಡಿದ್ದಾನೆ.

ದೇವಾಲಯಗಳಲ್ಲಿ ನಿತ್ಯ ಕೈಂಕರ್ಯಕ್ಕೆ, ವಿಶೇಷ ಸಂದರ್ಭಕ್ಕಾಗಿ ದಾನ ಮಾಡುವುದಷ್ಟೇ ಅಲ್ಲದೆ, ಯಾಗ ಯಜ್ಞಗಳನ್ನು ಮಾಡಿಸುವ ಧಾರ್ಮಿಕ ಕಾರ್ಯಗಳನ್ನೂ ಕೈಗೊಳ್ಳುತ್ತಿದ್ದರು. ಸೋಮನಾಥ ದೀಕ್ಷಿತ ಎಂಬುವವನು ಕ್ರಿ.ಶ. ೧೪೧೮ರಲ್ಲಿ ವಾಜಪೇಯ, ಸರ್ವತೋಮುಖ ಮತ್ತು ಪ್ರತಿವಸಂತವೆಂಬ ಯಾಗಗಳನ್ನು ಮಾಡಿದ ವಿಚಾರವನ್ನು ಮಂಗಸಂದ್ರದ ಶಾಸನ (೧೭) ತಿಳಿಸುತ್ತದೆ. ಈ ಕಾರ್ಯಕ್ಕಾಗಿ ಯೂಪಸ್ತಂಭವನ್ನು ಸ್ಥಾಪಿಸಿದುದನ್ನೂ ಶಾಸನ ತಿಳಿಸುತ್ತದೆ. ಇದೇ ಸೋಮನಾಥ ದೀಕ್ಷಿತ ಮಂಗಸಮುದ್ರ ಮತ್ತು ಒಡ್ಡಪಲ್ಲಿ ಎಂಬ ಗ್ರಾಮಗಳನ್ನು ಅಗ್ರಹಾರವನ್ನಾಗಿ ಪರಿವರ್ತಿಸಿ, ೧೨೦ ಭಾಗಗಳನ್ನು ದಾನಮಾಡಿದ ವಿವರವನ್ನು ಇದೇ ಜಾಗದ ಮತ್ತೊಂದು ಶಾಸನ (೧೮) ನೀಡುತ್ತದೆ. ಈ ಎರಡೂ ಶಾಸನಗಳಿಗೂ ತಿರುವೆಂಗಳನಾಥನೆಂಬ ಒಪ್ಪವನ್ನು ಹಾಕಲಾಗಿದೆ.

ಇಲ್ಲಿ ಮೇಲೆ ಉಲ್ಲೇಖಿಸಿರುವ ಗಡಿದಿಂನ ಶಾಸನ (೧೫) ದೇವಾಲಯವನ್ನು ನಿರ್ಮಿಸಿದ ಶಿಲ್ಪಿಗಳನ್ನು ಉಲ್ಲೇಖಿಸಿರುವ ಅಪರೂಪದ ಶಾಸನವಾಗಿದೆ. ದೇವಾಲಯಗಳ ನಿರ್ಮಾಣದಲ್ಲಿ ಹಾಗೂ ದಾನ ನೀಡುವ ಹಿನ್ನೆಲೆಯಲ್ಲಿನ ವಿಶೇಷ ಆಶಯವನ್ನು ಈ ಮೇಲಿನ ಕೆಲವು ಶಾಸನಗಳು ವ್ಯಕ್ತಪಡಿಸಿವೆ. ಸರ್ವಬಾಧಾ ಪರಿಹಾರಕ್ಕಾಗಿ ಕೆಲವು ದಾನಗಳನ್ನು ನೀಡಿದರೆ, ವಿಶೇಷ ರೀತಿಯ ಭಾದೆಗಳನ್ನು ಪರಿಹರಿಸುವಂತೆ ಕೋರಿದ ದಾನದ ವಿಚಾರಗಳೂ ತಿಳಿದು ಬರುತ್ತದೆ. ಇಲ್ಲಿನ ಕೆಲವು ಶಾಸನಗಳಲ್ಲಿ ದೇವರ ಹೆಸರಿನಲ್ಲಿ ಹಾಕಿಸಿರುವ ಒಪ್ಪ, ಸಾಕ್ಷಿಗಳು ಅಂದಿನ ಜನರ, ದೈವದ ಮೇಲಿನ ನಂಬಿಕೆ, ಧಾರ್ಮಿಕ ಮನೋಭಾವಗಳನ್ನು ಕುರಿತು ತಿಳಿಸುತ್ತದೆ.

ಅಗ್ರಹಾರ ನಿರ್ಮಾಣ ಕಾರಕೂರು ಗ್ರಾಮದ ಕ್ರಿ.ಶ. ೧೨೨೧ರ ಕಾಲಕ್ಕೆ ಸೇರಿದ ಶಾಸನ (೨೧) ನಿಗಿರಿಲಿ ಚೋಳ ಮಂಡಲದೊಳಗಿನ ನಾಗಸಮುದ್ರ ಎಂಬಲ್ಲಿನ ಭೂಮಿಯನ್ನು ಬ್ರಾಹ್ಮಣರಿಗೆ ದಾನವಾಗಿ ನೀಡಿರುವುದು ಈ ಪ್ರದೇಶದಲ್ಲಿ ಭೂದಾನ ಕುರಿತಾಗಿ ತಿಳಿದುಬಂದಿರುವ ಮೊದಲ ಶಾಸನವಾಗಿದೆ. ಶಾಸನಗಳು ಉಲ್ಲೇಖಿಸಿರುವ ಅಗ್ರಹಾಗರಳಲ್ಲಿ ಗುಮ್ಮಿನಾಯಿನಿ ಕ್ರಿ.ಶ. ೧೬೧೭ರಲ್ಲಿ ನಿರ್ಮಿಸಿರುವ ತಿರುಮಲಪುರಿ ಅಗ್ರಹಾರ, ಕ್ರಿ.ಶ. ೧೫೯೨ರಲ್ಲಿ ವೇಂಕಟದೇವನು ಮಾರಗಾನಿಕುಂಟೆ ಗ್ರಾಮವನ್ನು ಅಗ್ರಹಾರವನ್ನಾಗಿಸಿ ಪೆನುಗುಂಡೆ ತಿರುಮಲ ತಾತಾಚಾರ್ಯರಿಗೆ ದಾನ ನೀಡಿರುವುದು, ಕ್ರಿ.ಶ. ೧೫೩೩ರಲ್ಲಿ ಕೊಂಡಮರಸು ಗಡಿದಂ ಪ್ರದೇಶದ ಪ್ರತಿನಾಮ 'ಕೃಷ್ಣರಾಯ ಸಮುದ್ರ' ಅಗ್ರಹಾರವನ್ನು ವೆಂಕಟೇಶ್ವರ ದೇವರಿಗೆ ದಾನ ನೀಡಿರುವುದು, ಸೋಮನಾಥ ದೀಕ್ಷಿತನು ಕ್ರಿ.ಶ. ೧೪೧೮ರಲ್ಲಿ ಮಂಗಸಮುದ್ರ ಮತ್ತು ಒಡ್ಡಪಲ್ಲಿ ಎಂಬ ಗ್ರಾಮಗಳನ್ನು ಅಗ್ರಹಾರವನ್ನಾಗಿ ಪರಿವರ್ತಿಸಿ ದಾನ ಮಾಡಿರುವುದು ಕೆಲವು ಉದಾಹರಣೆ ಗಳಾಗಿವೆ.

ಕೆರೆ/ ಕಾಲುವೆ ನಿರ್ಮಾಣ ಹಾಗೂ ದುರಸ್ತಿ: ಈ ತಾಲ್ಲೂಕಿನಲ್ಲಿ ಅತೀ ಹೆಚ್ಚು ಬಿಸಿಲಿನ ತಾಪಮಾನವಿದ್ದು, ಇದು ಕಡಿಮೆ ಮಳೆಬೀಳುವ ಪ್ರದೇಶವೆನಿಸಿದೆ. ಮಳೆಯ ಪ್ರಮಾಣ ವಾರ್ಷಿಕ ಸರಾಸರಿ ೬೭೬ ಮಿಮೀ ಎಂದು ವರದಿ ತಿಳಿಸುತ್ತದೆ. ಇಲ್ಲಿ ರಾಜ್ಯವನ್ನು ಕಟ್ಟಿ ಆಳ್ವಿಕೆ ನಡೆಸಿದವರು, ಪ್ರಜೆಗಳ ಒಳಿತಿಗಾಗಿ ಕೆರೆ-ಕಾಲುವೆಗಳ ನಿರ್ಮಾಣಕಾರ್ಯವನ್ನು ಅಗತ್ಯವಾಗಿ ಕೈಗೊಳ್ಳುವ ಅವಶ್ಯಕತೆಯಿತ್ತು. ಗುಮ್ಮನಾಯಕನಪಾಳ್ಯದ ಪಾಳೆಯಗಾರರು ಇಲ್ಲಿನ ನೀರಾವರಿ ವ್ಯವಸ್ಥೆಗೆ ಸಾಕಷ್ಟು ಕೊಡುಗೆ ನೀಡಿರುವ ವಿಚಾರವನ್ನು ಶಾಸನಗಳು ಉಲ್ಲೇಖಿಸುತ್ತವೆ.

ಇಲ್ಲಿ ಹರಿಯುವ ನದಿಗಳಲ್ಲೊಂದಾದ ಚಿತ್ರಾವತಿ ನದಿಯು ನಂದಿಬೆಟ್ಟದ ಬಳಿಯ ಕಲಗನಪಾಳ್ಯದಲ್ಲಿ ಹುಟ್ಟಿ ಬಾಗೇಪಲ್ಲಿ ತಾಲ್ಲೂಕಿನ ಪಶ್ಚಿಮ ಭಾಗದಲ್ಲಿ ಹರಿದು ಆಂಧ್ರಪ್ರದೇಶವನ್ನು ಪ್ರವೇಶಿಸುತ್ತದೆ. ರಾಮಸಮುದ್ರ ಮತ್ತು ರೆಡ್ಡಿಹಳ್ಳಿಯ ಕೆರೆಗಳು ಮೊದಲಾದೆಡೆಗಳಲ್ಲಿ ಈ ನದಿಗೆ ಅಡ್ಡಗಟ್ಟೆಯನ್ನು ಕಟ್ಟಿ ಕಾಲುವೆಗಳ ಮೂಲಕ ಕೆರೆಗಳಿಗೆ ನೀರುಬರುವಂತೆ ಮಾಡಲಾಗಿದೆ. ಮತ್ತೊಂದು ನದಿ ಪಾಪಘ್ನಿಯು ಚಿಕ್ಕಬಳ್ಳಾಪುರದ ಕಳವರದುರ್ಗದಲ್ಲಿ ಹುಟ್ಟಿ ಬಾಗೇಪಲ್ಲಿಯಲ್ಲಿ ಹರಿದು ಆಂಧ್ರವನ್ನು ಪ್ರವೇಶಿಸುತ್ತದೆ. ಕೋಲಾರದ ಅಂಚಿನಲ್ಲಿ ಆಂಧ್ರಪ್ರದೇಶದ ಕಡೆ ಈ ನದಿಗೆ ಕಟ್ಟಲಾಗಿರುವ ವ್ಯಾಸಸಮುದ್ರ ಕೆರೆಯ ಹಿನ್ನೀರು ಬಾಗೇಪಲ್ಲಿಯ ಚೇಳೂರು ಮೊದಲಾದೆಡೆಗಳಲ್ಲಿ ಬಳಕೆಯಾಗುತ್ತದೆ.

ಎರಡನೇ ಮಸಲನಾಯಕನು ಪಾಪಾಗ್ನಿ ನದಿಗೆ ಅಡ್ಡಲಾಗಿ ಸೇತುವೆ ಕಟ್ಟಿ ಬ್ರಹ್ಮಸರೋವರವನ್ನು ನಿರ್ಮಿಸಿ ಈ ಪ್ರಾಂತ್ಯದ ನೀರಾವರಿ ವ್ಯವಸ್ಥೆಯನ್ನು ಉತ್ತಮಪಡಿಸಿದನು. ಚಿನ್ನಮ್ಮ ನಾಯಕನು ದೊಡ್ಡಮ್ಮನ ಕೆರೆಯನ್ನು ತನ್ನ ತಾಯಿಯ ಹೆಸರಿನಲ್ಲಿ ಕಟ್ಟಿಸಿದನು. ಎರಡನೆಯ ಲೊಕ್ಕನಾಯಕ ೧೬ನೆಯ ಶತಮಾನದಲ್ಲಿ ಕೋಟೆಯಲ್ಲಿ ಒಂದು ಕೆರೆ ಹಾಗೂ ಒಂದು ದೊಡ್ಡ ಕಲ್ಯಾಣಿಯನ್ನು ನಿರ್ಮಿಸಿದನು. ಕೋಟೆಯ ಪಶ್ಚಿಮ ಭಾಗದಲ್ಲಿ ಇವನು ನಿರ್ಮಿಸಿದ ಈ ದೊಡ್ಡದಾದ ಕೆರೆಯನ್ನು 'ರಾಣಿಕೆರೆ ಅಥವಾ ಅಮ್ಮವಾರಿ ಕುಂಟ' ಎಂದು ಕರೆಯಲಾಯಿತು. ಕೋಟೆಯ ಮಧ್ಯಭಾಗದಲ್ಲಿ ಬೆಟ್ಟದ ಮೇಲ್ಗಡೆ ಆಳವಾಗಿ ತೋಡಿಸಿದ ಕಲ್ಯಾಣಿ ರಾಜರಬಾವಿ ಅಥವಾ

ದೊರಲಬಾಯಿ ಎಂದು ಕರೆಯಲ್ಪಟ್ಟಿತು. ಕೋಟೆಯನ್ನು ಭದ್ರಪಡಿಸಿದ ಲೋಕ್ಕನಾಯಕನು ಅದರ ಸುತ್ತಲೂ ನೀರು ತುಂಬುವ ವ್ಯವಸ್ಥೆ ಮಾಡಿದ್ದನು.

ಕದಿರಪ್ಪ ನಾಯಿನಿಯು ಮಿಟ್ಟೇಮರಿಯಲ್ಲಿನ ಲಿಂಗನವಡ್ಡು ಕೆರೆ ದುರಸ್ತಿ ಹಾಗೂ ಅಗಲೀ ಕರಣಕ್ಕಾಗಿ ಮಿಕಲ ಬೊಮ್ಮನಿಗೆ ಮಿಟ್ಟೇಮರಿಯಲ್ಲಿ ತರಿಜಮೀನಿನ ೧/೪ ಭಾಗವನ್ನು ದಶವಂದ ನೀಡಿದ್ದನ್ನು ಕ್ರಿ.ಶ. ೧೬೩೬ರ ಕಾಲದ ಮಿಟ್ಟೇಮರಿ ಹೋಬಳಿಯ ಕಸಬಾದಲ್ಲಿನ ಶಾಸನ (೭೧) ತಿಳಿಸುತ್ತದೆ.

ಕ್ರಿ.ಶ. ೧೭೩೬ ಶ್ರೀಮನ್ಮಹಾನಾಯಕಾಚಾರ್ಯ ಗುರಂಮ್ಮನಾಯನಿ ಮತ್ತಿತರರು ಲಾಯಮಂಟಾಪನ ಮಗ ವೆಂಕಟಪತಿಗೆ ಪೆನುಮಲಸ್ಥಳದ ಬಾಲಿರೆಡ್ಡಿ ಪಲ್ಲಿಯಲ್ಲಿ ಕೆರೆಯ ಒಡ್ಡು ನಿರ್ಮಿಸಿದುದಕ್ಕಾಗಿ (ತಟಾಕನಿರ್ಮಾಣಕ್ಕಾಗಿ) ಕೆರೆ ಕೆಳಗಿನ ಭೂಮಿಯನ್ನು ದಾನ ನೀಡಲಾದ ವಿಚಾರವನ್ನು ಬಾಲಿರೆಡ್ಡಿಹಳ್ಳಿಯ ಶಾಸನ (೨೨) ತಿಳಿಸುತ್ತದೆ.

ಕ್ರಿ.ಶ. ೧೫೫೭ ಕಾಲಕ್ಕೆ ಸೇರಿದ ಗೂಳೂರು ವೀರಭದ್ರ ದೇವಾಲಯದ ಬಳಿಯ ತ್ರುಟಿತವಾದ ಶಾಸನವು (೨೭) ಮೆಲುಕವೊಡೆಯರು ಕಾಲುವೆ ನಿರ್ಮಾಣಕ್ಕಾಗಿ ಕೊಟ್ಟ ದಾನದ ವಿಚಾರ ತಿಳಿಸುತ್ತದೆ.

ಕ್ರಿ.ಶ. ೧೭೬೮ ಕಾಲದ ಶಾಸನ (೩೨) ಇಟಕಿದುರ್ಗ ತಾಲ್ಲೂಕಿನ ಜಹಗಿರ್‌ದಾರ್ ಇಸ್ಮೈಲ್‌ಸಾಬ್, ತಾಲುಮ್ಮ ಸಾಬರು ಮಾರಿಗಾನಿಕುಂಟೆಗೆ ಸೇರಿದ ಮಾದಪ್ಪಗಾರಿ ಪಲ್ಲಿಯ ಬಳಿ ನಿರ್ಮಿಸಿದ ಕಾಲುವೆ, ೧ ಕೆರೆ, ೩ ಬಾವಿ ದುರಸ್ತಿಗೊಳಿಸಿದಕ್ಕಾಗಿ ವಡಿಗೆರೆಡ್ಡಿ ಚನ್ನಯ್ಯನಿಗೆ ಕೊಟ್ಟ ದಶವಂದ ಎಂದು ಹೇಳುತ್ತಿದೆ. ಕೊಂಡಂವಾರಪಲ್ಲಿಯ ಕ್ರಿ.ಶ. ೧೪೧೮ ಕಾಲದ ಶಾಸನಗಳು (೪೬-೪೯) ಶ್ರೀಮನ್ಮಹಾನಾಯಕಾಚಾರ್ಯ ಬೊಮ್ಮಿನಾಯಕ ಸಿಂಗಮನಾಯಕ, ಪದ್ದಚೆನ್ನಮ್ಮನಾಯಕರು ಗಂಗಸಮುದ್ರ, ಅಚ್ಚುಕಟ್ಟು ನಿರ್ಮಾಣಕ್ಕಾಗಿ ಬಾಲಮದ್ದು ಕೊಡಮದ್ದುಗೆ ಕೊಟ್ಟ ಭಾಷಾಪತ್ರವನ್ನು ಕುರಿತು ತಿಳಿಸುತ್ತದೆ.

ಆರಂಭಕಾಲದಿಂದಲೂ ಇಲ್ಲಿ ಆಳ್ವಿಕೆ ನಡೆಸಿದ ರಾಜಮನೆತನ ಕೆರೆ ನಿರ್ಮಾಣಕ್ಕೆ ಪ್ರಾಮುಖ್ಯತೆ ಕೊಟ್ಟಿದ್ದಾರೆ. ಚೋಳರ ಕಾಲದಲ್ಲಿಯೂ ಚೇಳೂರಿನ ಗವಕುಂಟೇ ಬಳಿಯ ಶಾಸನ (೭೯) ಕೆರೆ ನಿರ್ಮಾಣ ಕುರಿತಾಗಿ ತಿಳಿಸುತ್ತದೆ.

ಕೋಟೆ: ಕ್ರಿ.ಶ. ೧೪೦೬ರಲ್ಲಿ ವಿಜಯನಗರದ ದೇವ ರಾಯವೊಡೆಯನ ಆಳ್ವಿಕೆಯ ಕಾಲದಲ್ಲಿ ಇಟಗಿದುರ್ಗವನ್ನು ಲಖುಮಣ್ಣ ಆಳುತ್ತಿರುವಾಗ, ಕನ್ನರಿದೇವನ ಮಗ ಮಲಪ ಇಟಗಿ ದುರ್ಗದ ಬಾಗಿಲು ಡೋಣೇ ಸೋಪಾನ ನಿರ್ಮಿಸಿದ ವಿಚಾರವನ್ನು ಇಟಕಿದುರ್ಗದ ಶಾಸನವೊಂದು (೩೩) ತಿಳಿಸುತ್ತದೆ.

ಕ್ರಿ.ಶ. ೧೭೭೨ಕ್ಕೆ ಸೇರಿದ ದೇವೀಕುಂಟೆ ಬಳಿಯ ಶಾಸನವೊಂದು (೪೨) ಉದಯಬಾನು ದುರ್ಗದ ಮೇರೆಯನ್ನು ನಿರ್ಣಯ ಮಾಡಿದ ವಿವರವನ್ನು ತಿಳಿಸುತ್ತದೆ. ಈ ಶಾಸನವು ಸುತ್ತಲಿನ ಪರಿಸರದ ಚಿಂತಲಕೆರೆ, ಕೋಲರಾತಿ ಗುಡ್ಡ, ಬಂಡೆ ಮೊದಲಾದ ಗುರುತುಗಳನ್ನು ಬಳಸಿಕೊಂಡು ದುರ್ಗದ ಮೇರೆಗಳನ್ನು ತಿಳಿಸುತ್ತದೆ.

ಗುಮ್ಮನಾಯಕನ ಪಾಳ್ಯದ ಬೆಟ್ಟವು ಏಳು ಸುತ್ತಿನ ಕೋಟೆಯಿಂದ ಕೂಡಿದ್ದು, ಕೋಟೆಯ ಮಧ್ಯಭಾಗದಲ್ಲಿ ರಾಣಿಯರ ಅಂತಃಪುರಗಳು, ಪಿರಂಗಿಗಳ ಬಾವಿ, ಮದ್ದುಗುಂಡುಗಳನ್ನು ತಯಾರಿಸುವ ಕೊಠಡಿ ಮತ್ತು ದೇವಾಲಯಗಳಿವೆ. ಬೆಟ್ಟದ ತಪ್ಪಲಿನಲ್ಲಿ ಗುಮ್ಮನಾಯಕನ ಪಾಳ್ಯಗ್ರಾಮವಿದ್ದು, ಪಾಳೆಯಗಾರರು ನಡೆಸುತ್ತಿದ್ದ ಅಠಾರ ಕಛೇರಿ (೧೮ ಇಲಾಖೆಗಳಿಗೆ ಸಂಬಂಧಿಸಿದ), ಇನ್ನೊಂದು ಬದಿಯಲ್ಲಿ ಸಿಹಿನೀರಿನ ಕೆರೆ, ಕೆರೆಯ ದಂಡೆಯಲ್ಲಿ ಸೇತುವೆ ನರಸಿಂಹಸ್ವಾಮಿ ದೇವಾಲಯವಿದೆ [ಗೋಪಾಲಗೌಡ ಕಲ್ಪಮಂಜಲಿ, ಸಿರಿಭೂಮಿ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಚಿಕ್ಕಬಳ್ಳಾಪುರ]. ಗುಮ್ಮನಾಯನಕ ಪಾಳ್ಯ ಸುಮಾರು ಕ್ರಿ.ಶ. ೧೮೮೨ರ ವರೆಗೂ ತಾಲ್ಲೂಕು ಕೇಂದ್ರವಾಗಿತ್ತು.

ನಾರಸಿಂಹನಾನಿ ಧರ್ಮಪತ್ನಿ ರಾಮಕ್ಕಳ ಮಗ ವಸಂತಪ್ಪ ನಾಯನಿ ಹಾಗೂ ಆತನ ಸತಿ ಕದಿರಮ್ಮಳ ಮಗ ದಳವಾಯಿ ಸುಬ್ಬಪ್ಪ ಕ್ರಿ.ಶ. ೧೭೬೨ರಲ್ಲಿ ಕಲ್ಯಾಣಗಿರಿ ಯಲ್ಲಿ ಕಲ್ಲಿನಿಂದ ಒಂದು ಜಪಸಾಲೆ, ಸಾಲುಚತ್ರ, ಕೋಟೆ ನಿರ್ಮಿಸಿ, ಬುರುಜುಗಳನ್ನು ಕಟ್ಟಿಸಿದನು

ನೆತ್ತರು ಕೊಡುಗೆ /ಉಂಬಳಿ: ಊರಳಿವಿನ ಸಂದರ್ಭ ದಲ್ಲಿ ಹೋರಾಡಿ ಮಡಿದ ವೀರನಿಗೆ ಕೊಡುಗೆಯನ್ನು ನೀಡುವ ಸಂಪ್ರದಾಯ ಕಂಡುಬರುತ್ತದೆ, ಈ ಕುರಿತಾಗಿ ಶಾಸನಗಳನ್ನೂ ಹಾಕಿಸುವುದಲ್ಲದೆ ಕೆಲವೊಮ್ಮೆ ಶಿಲ್ಪಗಳನ್ನೂ, ಸ್ಮಾರಕಗಳನ್ನೂ ಹಾಕಿಸುವುದುಂಟು. ಗಡಿದಂ ದೇವಾಲಯದ ಪ್ರಾಕಾರದಲ್ಲಿ ಶಾಸನವಿಲ್ಲದ ಕೇವಲ ವೀರಗಲ್ಲು ಶಿಲ್ಪ ಕಂಡು ಬರುತ್ತದೆ. ಯೆರ್ರಗುಡಿ ಗ್ರಾಮದ ಶಾಸನವು (೬೨) ನೊಳಂಬ ರೊಂದಿಗೆ ಹೋರಾಟದಲ್ಲಿ ಮಡಿದ ವೀರನ ಕುಟುಂಬಕ್ಕೆ ವೈದುಂಬರಾಜ ನೀಡಿದ ಕೊಡುಗೆಯನ್ನು ತಿಳಿಸುತ್ತದೆ. ಪ್ರಮಾದಿ ಸಂವತ್ಸರದಲ್ಲಿ ಪಾಲಸಮುದ್ರದ ತಿರುಮಲನೆಂಬು ವನು ತನ್ನ ಸೇವಾವೃತ್ತಿಯಲ್ಲಿದ್ದ ಯರ್ರಯ್ಯನ ಮರಣಾ ನಂತರ ಇವನಿಗೆ ಗಡಂಪಲ್ಲಿಯಲ್ಲಿ ನೆತ್ತರು ಕೊಡುಗೆಯಾಗಿ ಭೂಮಿ ದಾನವಾಗಿ ನೀಡಿದ್ದಾನೆ (೫೭). ೪೪ನೆಯ ಸಂಖ್ಯೆಯ ಶಾಸನ ಕ್ರಿ.ಶ. ೧೭೩೪ರಲ್ಲಿ ಉದಯಗಿರಿಯ ಉಮ್ಮರಿ ಸಾಹೇಬ, ಮಾರುಗಾನಿಕುಂಟೆಯ ಸುಬ್ಬಿರೆಡ್ಡಿ ವೆಂಕಟ ನರಸು ಪಚ್ಚಲರೆಡ್ಡಿಪಲ್ಲೆಗ್ರಾಮದ ಪಾಪಣ್ಣ ಕೊಲಕುಂಟ ತಿಮ್ಮಿರೆಡ್ಡಿಗೆ ಊರಳಿವಿನ ಸಂದರ್ಭದಲ್ಲಿ ಊರನ್ನು ಉಳಿಸಿ ದುದಕ್ಕಾಗಿ ಭೂದಾನ ನೀಡಿದ ವಿಚಾರ ತಿಳಿಸುತ್ತದೆ.

ಕ್ರಿ.ಶ. ೧೭೫೩ ಕಾಲದ ಈ ಶಾಸನ (೩೬) ಆವತಿನಾಡಪ್ರಭು ಚನ್ನಭೈರೇಗೌಡನ ಮೊಮ್ಮಗ ಮುದ್ದು

ನಾರಾಯಣ ಸ್ವಾಮಿಯ ಮಗ ರಂಗಪಗೌಡನ ಚಲಮಯ್ಯನಿಗೆ ಕೊಟ್ಟ ಭೂದಾನದ ವಿವರವನ್ನು ತಿಳಿಸುತ್ತದೆ. ಈ ಶಾಸನದಲ್ಲಿ ಆತನನ್ನು ಉದ್ದೇಶಿಸಿ ನೀನು ಬಹಳ ದಿನಗಳಿಂದ ನನ್ನ ಮೇಲೆ ಅವಲಂಬಿತನಾಗಿದ್ದೆ, ನಿನ್ನ ಜೀವನಾಧಾರಕ್ಕೇನೂ ಇರಲಿಲ್ಲವೆಂದು ಈ ದಾನವನ್ನು ನೀಡುತ್ತಿರುವುದಾಗಿ ತಿಳಿಸಿ, ತನ್ನ ಮಗನ ಜನ್ಮದಿನದ ಸಮಾರಂಭದಲ್ಲಿ ಮಾಡಿದ ೧೬ ದಾನಗಳಲ್ಲಿ ಮಾರುಗಾನಿಕುಂಟೆಯಬಳಿಯ ಇಟಿಕೆದುರ್ಗವೆಂದು ಹೆಸರಿಸುವ ಉದಯಭಾನು ಚಕ್ರವರ್ತಿದುರ್ಗದ ಹೊನ್ನಪಲ್ಲಿಯಲ್ಲಿ ಭೂದಾನ ಮಾಡಿದ್ದಾನೆ. ಈ ಶಾಸನಕ್ಕೆ ಶ್ರೀ ಲಕ್ಷ್ಮೀನಾರಾಯಣ ಎಂಬ ಅಂಕಿತವಿದೆ.

ಕ್ರಿ.ಶ. ೧೬೧೪ದಲ್ಲಿ ರಾಮಚಂದ್ರರಾಯದೇವ ಮಹಾರಾಯನ ಆಳ್ವಿಕೆಯಲ್ಲಿ ಆವತಿನಾಡಪ್ರಭು ಇಮ್ಮಡಿ ತವಳಿ ಭೈರೇಗೌಡನು ಮಾರಗಾನಿಕುಂಟೆಯ ಚಿನ್ನಪ್ಪರೆಡ್ಡಿಗೆ ಗೊಡುಗುಂಬಳಿ (ಗೊಡಗು ಉಂಬಳಿ)ಯಾಗಿ ಗೊಡುಗು ಚಿಂತಪಲ್ಲೆ ಗ್ರಾಮ ಮಾನ್ಯಮಾಡಿದ ವಿಚಾರವನ್ನು ಇಲ್ಲಿನ ಎರಡು ಶಾಸನಗಳು (೩೯,೪೦) ತಿಳಿಸುತ್ತವೆ.

ಕ್ರಿ.ಶ. ೧೭೭೫ರಲ್ಲಿ ಅಜವುಮ್ಮರ ಕಿಲ್ಲೇದಾರ ಕಿಲ್ಲೆ ಉದಯಭಾನುದುರ್ಗದ ಸಮಾನಖಾನ, ಸುಬೇದಾರ ಫೆಳನಸ, ಸೇನಾಪತಿ ಕಸಬ, ಶ್ರೀಮಂತ ರಾಜಶ್ರೀ ಮುರಾರಿಜಿ ಹಿಂದುರಾವು ಘೋರಪಡೆಯ ಆದೇಶದ ಮೇರೆಗೆ, ಮಾರಗಾನಿಕುಂಟೆ ತಾಲೂಕು ಕುಂಟೆಪಲ್ಲೆ ಸಾಸರಿಕೆ ಚಕ್ಕರಮರಿಯಪ್ಪನಿಗೆ ದಸವಂದವಾಗಿ ಕೊಡುಗೆ ನೀಡಿದ್ದಾರೆ (೪೫).

ಕ್ರಿ.ಶ. ೧೭೬೧ರಲ್ಲಿ ಮಹಾನಾಯಕಾಚಾರ್ಯ ಗುಮ್ಮಿನಾಯಿನಿ ಕದಿರಪ್ಪನಾಯಿನಿ ನರಸಿಂಹನಾಯಿನಿಯ ಸೇವಕ ಬೊರ್ರವಾಡು ಸೇವಾನಿರತನಾಗಿದ್ದಾಗ ಗಾಯಗೊಂಡು ಮರಣಿಸಲು, ಆತನ ಮಗನಗೆ ಭೂದಾನ ನೀಡಿದ್ದಾನೆ. ಈ ವಿಚಾರ ತಿಳಿಸುವ ಶಾಸನಗಳಲ್ಲಿ (೫೨, ೫೩) ಲಿಪಿಕಾರನ ಉಲ್ಲೇಖವಿರುವುದು ಗಮನಾರ್ಹ, ಇದನ್ನು ಬರೆದವನು ದಳವಾಯಿ ನರಸಿಂಹ. ಕ್ರಿ.ಶ. ೧೭೬೦ರಲ್ಲಿ ವಸಂತ ನಾಯಿನಿಯು ಬಾಲರೆಡ್ಡಿಯ ಸೇವೆಗಾಗಿ ಆತನ ಮರಣಾನಂತರ ಅವನ ಮಗ ಬುದ್ದುಲ ತಿಮ್ಮಯನಿಗೆ ಬುದ್ದುಲವಾರಿ ಪಲ್ಲೆಯಲ್ಲಿ ಹರಿಹರ ಸಾಕ್ಷಿಯಲ್ಲಿ ಭೂದಾನ ನೀಡಿದ್ದಾನೆ. (೫೪) ಇದೇ ಕಾಲದಲ್ಲಿ ವಸಂತನಾಯಿನಿಯು ಚೆನ್ನಪಾಪಯ್ಯ ಮರಣಿಸಲು ಅವನ ಮಗ ಪಿಚ್ಚಲಿಮುನಿಗೆ ಕೊಟ್ಟಂಪಲ್ಲೆಯಲ್ಲಿಯೂ (೫೬) ವೆಂಕಟಪ್ಪನಿಗೆ ಆತನ ತಂದೆ ಚೆನ್ನಣ್ಣಗುಮ್ಮಲ ಕೆಲಸದ ಸಂದರ್ಭದಲ್ಲಿ ಮೃತನಾದನೆಂದು ವೇಲಗ್ರಾಮದ ಚೆಲ್ಲಕೊಂಡಮಾರುಪಲ್ಲೆಯಲ್ಲಿಯೂ ಭೂದಾನ ಮಾಡಿದ್ದಾನೆ (೫೦).

ವ್ಯಕ್ತಿನಾಮ, ಸ್ಥಳನಾಮ: ಶಾಸನಗಳಲ್ಲಿ ಸ್ಥಳನಾಮಗಳನ್ನು ಕುರಿತಾಗಿ ಕಂಡುಬರುವ ಉಲ್ಲೇಖಗಳು ಅಂದಿನ ನಿಸರ್ಗವಾಚಿ, ಜನಾಂಗವಾಚಿ, ವ್ಯಕ್ತಿವಾಚಿ, ನಿರ್ಮಾಣವಾಚಿ, ಆದರ್ಶವಾಚಿ ಮೊದಲಾದವುಗಳನ್ನು ಕುರಿತು ತಿಳಿದುಕೊಳ್ಳಲು ಸಹಾಯ ಮಾಡುತ್ತದೆ. ವ್ಯಕ್ತಿನಾಮ, ಸ್ಥಳನಾಮಗಳ ಅಧ್ಯಯನದಿಂದ ಭಾಷೆ, ಸಂಸ್ಕೃತಿ ಕುರಿತಾದ ಹಲವಾರು ಮಾಹಿತಿ ದೊರಕುತ್ತದೆ. ಸ್ಥಳನಾಮಗಳು ಅನೇಕರ ಬಾಯಿಗೆ ಸಿಗುವಿಕೆಯಿಂದ ತೀವ್ರ ರೂಪಾಂತರಕ್ಕೆ ಕಾರಣವಾಗುತ್ತವೆ ಉದಾ: ಇಟಕಿದುರ್ಗ > ಇತಕಲ್‌ದುರ್ಗ.

ಕೆಲವೊಂದು ಪದಗಳು ವಿಭಿನ್ನ ಭಾಷೆಯಲ್ಲಿ ಭಿನ್ನ ರೂಪಗಳಲ್ಲಿ ಕಂಡುಬರುತ್ತವೆ. ಕನ್ನಡದ ನಾಯಕ ತೆಲುಗಿನ ನಾಯಿನಿಯಾದರೆ, ಗೌಡ ಗೌನಿ(ಗವುನಿ) ಆಗಿರುವುದನ್ನು ಕಾಣಬಹುದು. ಕದಿರಪ್ಪನಾಯಿನಿ, ವಸಂತನಾಯಿನಿ, ರಂಗಪ್ಪಗವುನಿ ಮೊದಲಾದವು. ಚೋಳರ ಕಾಲದ ಶಾಸನಗಳಲ್ಲಿ ಕಂಡುಬರುವ ತಮಿಳು ವ್ಯಕ್ತಿ ವಾಚಕಗಳಾದ ಮಾರಸಿಂಗನ್, ಗಂಗದೇವನ್ ಮೊದಲಾದ ಹೆಸರುಗಳಲ್ಲಿ ತಮಿಳಿನ ರೂಪವನ್ನು ಕಾಣುತ್ತೇವೆ.

ಸಾಧಾರಣವಾಗಿ ಕೆರೆಗಳನ್ನು ಸಮುದ್ರ ಎಂದು ಉಲ್ಲೇಖಿಸಿರುವುದು ಕಂಡುಬರುತ್ತದೆ. ಆದರೆ ಕೆಲವೊಂದು ಅಗ್ರಹಾರಗಳಿಗೆ ಸಮುದ್ರವೆಂದು ಕರೆದಿರುವ ಉಲ್ಲೇಖಗಳೂ ಸಿಗುತ್ತದೆ. ಮಂಗಸಮುದ್ರ, ಕೃಷ್ಣರಾಯಸಮುದ್ರ, ಪ್ರತಾಪರಾಯಸಮುದ್ರ, ಶ್ರೀರಂಗರಾಯ ಸಮುದ್ರ ಮೊದಲಾದವು ಅಂದಿನ ಕಾಲದಲ್ಲಿ ನೂತನವಾಗಿ ಸ್ಥಾಪಿಸಿದ ಅಗ್ರಹಾರದ ಹೆಸರುಗಳಾಗಿವೆ.

ಶಾಸನಗಳಲ್ಲಿ ಕಂಡುಬರುವಂತೆ ವ್ಯಕ್ತಿವಾಚಕ ಸ್ಥಳನಾಮಗಳಿಗೆ ಬಾಲಿರೆಡ್ಡಿಪಲ್ಲಿ, ಪ್ರತಾಪದೇವರಾಯ ಸಮುದ್ರ, ನಲ್ಲಿಬಾಲಮ್ಮಕುಂಟೆ, ಮೊದಲಾದ ಉದಾಹರಣೆ ದೊರಕುತ್ತದೆ. ಕಮ್ಮವಾರಹಳ್ಳಿಯು ಜನಾಂಗವಾಚಿಗೆ ಉದಾಹರಣೆಯಾಗಿದೆ. ರಾಜಮನೆತನವಾಚಿಗೆ ಚೇಳೂರು, ಚಕ್ರವರ್ತಿದುರ್ಗಗಳನ್ನು ಹೆಸರಿಸಬಹುದು. ವೆಲ್ಲಂ ಪಲ್ಲಿ, ಪೋತುಲ ದೊಡ್ಡಿ ಮೊದಲಾದವು ತೆಲುಗು ಭಾಷೆಯ ಸ್ಥಳವಾಚಕಗಳಾಗಿವೆ. ಅದೇ ಪ್ರಕಾರ ಗೋವಿಂದವಾಡಿ> ಗೊಂದವಾಡಿ > ಗೊಯ್ದುವಾಡಿಯಾದರೆ ಗಯ್ಯಲೂರು > ಗುಯಿಲೂರು > ಗೂಳೂರು ಆಗಿದೆ.

ಗುಮ್ಮನಾಯಕನ ಪಾಳ್ಯದ ಮೂಲ ಪುರುಷ ಖಾದ್ರಿಪತಿ ನಾಯಕನಿಗೆ ಮಾರ್ಗಾನುಕುಂಟೆಯ ಬಳಿ 'ದೊಡ್ಡಕಮ್ಮನ ಬೆಟ್ಟ'ದಲ್ಲಿ ಅಕ್ಕಮ್ಮದೇವಿಯ ಕೃಪಾಕಟಾಕ್ಷ ದಿಂದ ಗುಪ್ತನಿಧಿ ದೊರಕಿತು, ಈ ಮಾರ್ಗದಲ್ಲಿ ಇರುವ ಪ್ರದೇಶ ಮರಗ್ಗೆನಕುಂಟೆ (ಗುಪ್ತಸ್ಥಾನ)> ಮಾರ್ಗಾನುಕುಂಟೆ ಆಗಿದೆ. (ಜನಪದ ನಿಷ್ಪತ್ತಿ)

ವ್ಯಕ್ತಿಗಳು ಕೈಗೊಂಡ ಕಸುಬು ಅವರ ಹೆಸರಿನೊಂದಿಗೆ ಕಂಡುಬರುತ್ತದೆ ಉದಾಹರಣೆಗೆ ಕಮ್ಮಾರ ತಿಮ್ಮೋಜ, ಕಲ್ಲುಕುಟುಕ ಬಯಿರೋಜ, ಕೆರೆನಿರ್ಮಾಣದ ವಡಿಗರೆಡ್ಡಿ, ಕರಣಿಕ ರೇಚಪ್ಪ ಮೊದಲಾದವು. ವ್ಯಕ್ತಿನಾಮದೊಂದಿಗೆ ಆತನ

ಅಧಿಕಾರವನ್ನೂ ಸೂಚಿಸುವ ಪದಗಳಾದ ಸೇನಬೋವ, ಜಹಗೀರ್ದಾರ್ ಇದೇ ರೀತಿ ಸೇನಾಪತಿ, ಸುಬೇದಾರ ಮೊದಲಾದ ಅಧಿಕಾರಗಳನ್ನು ವ್ಯಕ್ತಿಯ ನಾಮದ ಮುಂದೆ ಕಾಣುತ್ತೇವೆ. ಆದಿತ್ಯಪೆಂಡೆಯ ಎಂಬ ಹೆಸರು ರಾಜನೊಬ್ಬನ ಗರುಡನಿರಬಹುದೆಂದು ಸೂಚಿಸುತ್ತದೆ.

ವ್ಯಕ್ತಿ ನಾಮದಂತೆ ದೇವರನಾಮವೂ ವಿಭಿನ್ನ ಕಾಲದಲ್ಲಿ ಬದಲಾಗಿರುವುದನ್ನು ಕಾಣಬಹುದು. ಗಡಿದಿಂ ದೇವಾಲಯದ ವೆಂಕಟೇಶ್ವರನನ್ನು ಅಲ್ಲಿನ ವಿಭಿನ್ನ ಕಾಲಕ್ಕೆ ಸೇರಿದ ೪-೫ ಶಾಸನಗಳು ತಿರುವೆಂಗಳನಾಥ ಎಂದು ಕರೆದರೆ, ದೇವಾಲಯ ನಿರ್ಮಾಣದ ವಿಚಾರ ತಿಳಿಸುವ ಶಾಸನವು ಪ್ರಸನ್ನ ವೇಂಕಟೇಶ್ವರನೆಂದು ಕರೆದಿದೆ. ಈ ದೇವಾಲಯದ ಕಾರಣ ದಿಂದ ಆಸ್ಥಳವನ್ನು ದೇವರಗುಡಿಪಲ್ಲಿ ಎಂದು ಕರೆಯ ಲಾಗಿದೆ.

ಕೆಲವೊಂದು ಹೆಸರುಗಳಲ್ಲಿ ದ್ರಾವಿಡ ವಾಚಕಗಳನ್ನು ಗುರುತಿಸಬಹುದು ಉದಾಹರಣೆಗೆ ಮಲಪ, ಕನ್ನರಿದೇವ, ಸಿಂಗಮನಾಯಕ, ಅಮ್ಮಲಮ್ಮ, ಚಲವೆಗಯ್ಯ, ಸರುಮ ಮೊದಲಾದವು. ಕಂಟ್ಲೂರಪ್ಪ, ಬುದ್ದುಲತಿಮ್ಮಯ್ಯ (ಬುದ್ದುಲ ವಾರಿಪಲ್ಲಿಯ) ಮೊದಲಾದವು ಸ್ಥಳವಾಚಕದೊಂದಿಗಿನ ವ್ಯಕ್ತಿನಾಮಗಳಾಗಿವೆ.

ಈ ಭಾಗದಲ್ಲಿ ಬಿಸಿಲು ಗಾಳಿಗೆ ತೆರೆದುಕೊಂಡಿರುವ ಯಾವ ಶಾಸನವೂ ಸಂಪೂರ್ಣವಾಗಿ ಓದಲು ಸಾಧ್ಯವಾಗ ದಷ್ಟು ತ್ರುಟಿತವಾಗಿರುವುದು, ಕಲ್ಲುಬಂಡೆಯನ್ನು ಕರಗಿಸುವಂತ ಇಲ್ಲಿನ ತಾಪಮಾನವನ್ನು ಕುರಿತು ತಿಳಿಸುತ್ತದೆ. ಈ ಪ್ರದೇಶದಲ್ಲಿ ನಾಗರೀಕತೆ ನಿರ್ಮಾಣ ತಡವಾಗಿ ಆರಂಭವಾದುದಕ್ಕೆ ಇದೇ ಮುಖ್ಯ ಕಾರಣವೆನ್ನಬಹುದು. ಬಾಗೇಪಲ್ಲಿಯ ಸುತ್ತಮುತ್ತಲಲ್ಲಿ ಮೂರನೆಯ ಶತಮಾನದಿಂದಲೇ ಪ್ರಸಿದ್ಧ ರಾಜಮನೆತನದ ಆಳ್ವಿಕೆ ನಡೆದ ದಾಖಲೆಗಳಿದ್ದರೂ, ಬಾಗೇಪಲ್ಲಿಯಲ್ಲಿ ರಾಜಕೀಯ ಇತಿಹಾಸ ತಿಳಿದು ಬರುವುದು ೮ನೆಯ ಶತಮಾನ ದಿಂದೀಚೆಗೆ. ಈ ಪ್ರದೇಶದಲ್ಲಿ ಶಾಸನಗಳು ಕಂಡುಬರುವುದು ೯ನೆಯ ಶತಮಾನದ ನಂತರವೇ.

ಈ ತಾಲ್ಲೂಕಿನಲ್ಲಿ ದೊರಕುವ ಶಾಸನಗಳಲ್ಲಿ ಬಹು ಪಾಲು ಕೆರೆ, ಕಾಲುವೆ ನಿರ್ಮಾಣದ ಕುರಿತಾಗಿ ತಿಳಿಸುತ್ತದೆ. ಆಂಧ್ರಪ್ರದೇಶದಿಂದ ರೈತರು ಹಾಗೂ ಇತರ ವೃತ್ತಿಯ ಜನರನ್ನು ಇಲ್ಲಿಗೆ ಕರೆತಂದು ಭೂಮಿಯನ್ನು ದಾನಮಾಡಿ, ಅನುಕೂಲಕ್ಕೆಂದು ಕೆರೆ ಕಾಲುವೆ ನಿರ್ಮಾಣ, ಮಾಡಿ ಕೊಟ್ಟಿರುವ ಸಂಗತಿಗಳು ಶಾಸನಗಳಿಂದ ತಿಳಿದು ಬರುತ್ತವೆ. ಅಗ್ರಹಾರಗಳ ಸ್ಥಾಪನೆ, ನಗರ ನಿರ್ಮಾಣಗಳ ಉಲ್ಲೇಖ ೧೫ನೆಯ ಶತಮಾನದ ವೇಳೆಗೆ ಹೆಚ್ಚಾಗುತ್ತಾ ಬಂದಿದೆ. ಗುಮ್ಮನಾಯಕನ ಪಾಳ್ಯದದವರು ಅಹೋಬಲ ನಾರಸಿಂಹ ನಿಗೆ ಭಕ್ತಿಯಿಂದ ನಡೆದುಕೊಂಡು ಬರುತ್ತಿದ್ದು, ಅದರ ಪ್ರಭಾವ ದಿಂದ ಈ ಪ್ರದೇಶದಲ್ಲಿ ನರಸಿಂಹ ದೇವಾಲಯಗಳು ಹೆಚ್ಚಾಗಿ ಕಂಡುಬರುತ್ತವೆ. ಜೊತೆಗೆ ಶ್ರೀವೈಷ್ಣವ ಪ್ರಭಾವದಿಂದ ವೆಂಕಟೇಶ್ವರ ದೇವಾಲಯಗಳನ್ನೂ ನಿರ್ಮಿತವಾಗಿವೆ. ಸಮಪ್ರಮಾಣದ ಶೈವ ಪ್ರಭಾವವೂ ಕಂಡುಬರುತ್ತದೆ. ಶ್ರೀಶೈಲ ನಿಡುಮಾಮಿಡಿ ಪೀಠದ ಆದ್ಯ ಚಂದ್ರಗುಂಡ ದೇಶಿಕೇಂದ್ರ ಶಿವಾಚಾರ್ಯರು ಶ್ರೀಶೈಲದಿಂದ ಬಂದು, ಸುಮಾರು ೧೧ನೆಯ ಶತಮಾನದಲ್ಲಿ ಗೂಳೂರಿನಲ್ಲಿ ಮಠವನ್ನು ಸ್ಥಾಪಿಸಿದರು ಎಂದು ತಿಳಿದುಬರುತ್ತದೆ. ಆಗ ಈ ಪ್ರದೇಶದಲ್ಲಿ ಆಳ್ವಿಕೆ ನಡೆಸುತ್ತಿದ್ದ ಚೋಳದೊರೆ ಇವರಿಂದ ಪ್ರಭಾವಿತನಾಗಿ, ಗುರುಸ್ಥಾನದಲ್ಲಿಟ್ಟು ಪೂಜಿಸಿದ ವಿಚಾರ ಪಲ್ಲಕವಿಯ 'ಶ್ರೀಶೈಲ ಪಂಡಿತಾರಾಧ್ಯ ಚರಿತಮು', ಹಾಗೂ 'ಶ್ರೀಶೈಲ ಪೀಠದರ್ಶನ' ದಲ್ಲಿ ಸೂಚಿತವಾಗಿದೆ. ವಿಜಯನಗರದ ಅರಸರ ಕಾಲದಲ್ಲಿ ಇಲ್ಲಿ ಅನೇಕ ದೇವಾಲಯಗಳು ನಿರ್ಮಾಣ ಗೊಂಡವು. ದೇವಾಲಯಗಳಿಗೆ ದಾನ, ದತ್ತಿಗಳು, ಅಲ್ಲಿನ ಅಗ್ರಹಾರ ದವರಿಗೆ ವೃತ್ತಿಗಳನ್ನು ಕೊಟ್ಟಿರುವ ಶಾಸನಗಳು ಹಲವಾರು ದೊರೆಯುತ್ತದೆ. ಧಾರ್ಮಿಕ, ಸಾಮಾಜಿಕ ಕಾರ್ಯಗಳ ಉಲ್ಲೇಖಿತ ಶಾಸನಗಳಲ್ಲದೆ ಪ್ರಾಚೀನಕಾಲದ ಕೆಲವು ವೀರಗಲ್ಲುಗಳು ಕಂಡುಬರುತ್ತವೆ. ಕ್ರಿ.ಶ. ೧೭೬೧ರಲ್ಲಿ ಸುಮಾರು ೯ (೫೦-೫೭,೫೯) ಶಾಸನಗಳು ಸೇವಾನಿರತ ವ್ಯಕ್ತಿಗಳು ಮರಣಿಸಿದರೆಂದು ಅವರ ಮಕ್ಕಳಿಗೆ ಕೊಟ್ಟ ಉಂಬಳಿಯ ವಿಚಾರ ತಿಳಿಸುತ್ತದೆ. ಇವುಗಳಲ್ಲಿ ೫೭ನೆಯ ಸಂಖ್ಯೆಯ ಶಾಸನ ನೇರವಾಗಿ ನೆತ್ತರು ಕೊಡುಗೆ ಎಂಬ ವಿಚಾರ ತಿಳಿಸಿದೆ. ಉಳಿದವು ಸೇವಾನಿರತರಾಗಿದ್ದಾಗ ಮರಣಿಸಲು ಅವರ ಮಕ್ಕಳಿಗೆ ಉಂಬಳಿಯಾಗಿ ಕೊಟ್ಟ ಕೊಡುಗೆಯನ್ನು ಕುರಿತು ತಿಳಿಸುತ್ತದೆ. ಇಷ್ಟೊಂದು ಸಂಖ್ಯೆಯಲ್ಲಿ ಉಂಬಳಿಯನ್ನು ಒಂದೇ ಕಾಲದಲ್ಲಿ ಕೊಟ್ಟಿರುವುದು, ಈ ಸಂದರ್ಭದಲ್ಲಿ ನಡೆದಿರುವ ಯಾವುದೋ ಅವಘಡವನ್ನು ಸೂಚಿಸುತ್ತದೆ. ಆದರೆ ಶಾಸನದಲ್ಲಿ ಅದರ ವಿವರ ದೊರಕುವುದಿಲ್ಲ.

ಈ ಭಾಗದಲ್ಲಿ ಆಳ್ವಿಕೆ ನಡೆಸಿದ ಪ್ರಾಚೀನ ರಾಜಮನೆತನ ವಾದ ವೈದುಂಬರ ಮೊದಲಾದ ದೊರೆಗಳ ಕುರಿತಾದ ಅಧ್ಯಯನ ಹಾಗೂ ವಿಭಿನ್ನ ಮೂಲಗಳಿಂದ ವಿಭಿನ್ನ ರೀತಿ ಯಲ್ಲಿ ತಿಳಿದು ಬರುವ ಗುಮ್ಮನಾಯಕನ ಪಾಳ್ಯದ ಪಾಳೆಯ ಗಾರರ ಇತಿಹಾಸವನ್ನು ಕುರಿತು ವಿವರವಾಗಿ ಅಧ್ಯಯನ ನಡೆಸುವ ಅಗತ್ಯವಿದೆ. ಕೆಲವು ತೆಲುಗು ಕಾವ್ಯಗಳಲ್ಲಿ ಹಾಗೂ ವಿಜಯನಗರದ ಅರಸರ ಕಾಲದ ಕೆಲವು ಕೈಫಿಯತ್ತು ಗಳಲ್ಲಿ ತಿಳಿದುಬರುವ ಗುಮ್ಮನಾಯಕನ ಪಾಳೆಯಗಾರರ ಹಾಗೂ ಈ ಪ್ರದೇಶದ ಇತಿಹಾಸವನ್ನು ಕುರಿತು ದೊರಕುವ ಮಾಹಿತಿ ಸಂಗ್ರಹಿಸುವ ಅಗತ್ಯವಿದೆ.

[ಈ ಲೇಖನದಲ್ಲಿ ನಮೂದಿಸಿರುವ ಶಾಸನಗಳ ಸಂಖ್ಯೆಯು ರೈಸ್ ಆವೃತ್ತಿಯ ಎಪಿಗ್ರಾಫಿಯಾ ಕರ್ನಾಟಿಕ, ಸಂಪುಟ ೧೦, ಬಾಗೇಪಲ್ಲಿ ತಾಲ್ಲೂಕಿನ ಶಾಸನಗಳಾಗಿವೆ.]

೭೬

ಹೊನ್ನಾಳಿ ತಾಲ್ಲೂಕಿನ ಐತಿಹಾಸಿಕ ಪರಿಶೀಲನೆ

ಡಾ. ಬಿ.ಸಿ. ರಾಕೇಶ*

ಪ್ರಸ್ತುತ ಲೇಖನವು ಹೊನ್ನಾಳಿ ತಾಲ್ಲೂಕಿನ ಐತಿಹಾಸಿಕ ವಿಶ್ಲೇಷಣೆಯನ್ನು ಕುರಿತು ವಿವರಿಸುವು ದಾಗಿದೆ. ಹೊನ್ನಾಳಿ ತಾಲ್ಲೂಕು ದಾವಣಗೆರೆ ಜಿಲ್ಲೆಯ ತಾಲ್ಲೂಕುಗಳಲ್ಲಿ ಒಂದಾಗಿದೆ. ಹೊನ್ನಾಳಿ ತಾಲ್ಲೂಕಿನ ಹಳ್ಳಿಗಳು ಸಾಕಷ್ಟು ಐತಿಹಾಸಿಕ ಮಹತ್ವವನ್ನು ಪಡೆದುಕೊಂಡಿವೆ.

ಹೊನ್ನಾಳಿಯ ಶಾಸನಗಳು ಆ ತಾಲ್ಲೂಕಿನ ಇತಿಹಾಸ ವನ್ನು ತಿಳಿಯಲು ಸಹಕಾರಿಯಾಗಿವೆ. ಚೋಳ ಕದಂಬರಿಂದ ಪ್ರಾರಂಭವಾಗಿ ಕೆಳದಿ ನಾಯಕರು ಮತ್ತು ಬೊಹಳೆ ಅರಸರ ಕಾಲದವರೆಗೂ ಶಾಸನಗಳು ನಮಗೆ ಸಿಗುತ್ತವೆ. ಈ ಶಾಸನ ಗಳಲ್ಲಿ ಕಮ್ಮಾರ ಗಟ್ಟೆಯಲ್ಲಿರುವ ಶಾಸನ ಚೋಳರ ಕಾಲಕ್ಕೆ ಸೇರಿದ್ದು, ಇದು ಪ್ರಾಚೀನ ಶಾಸನವಾಗಿದ್ದರೆ ಗಂಜೇನಹಳ್ಳಿ ಯಲ್ಲಿನ ಶಾಸನ ಹೊಸ್ತ ಶಾಸನವಾಗಿದೆ.

ಹೊನ್ನಾಳಿ ತಾಲ್ಲೂಕಿನಾದ್ಯಂತ ಅನೇಕ ಪ್ರಾಚೀನ ದೇವಾಲಯಗಳು ಕಂಡುಬರುತ್ತದೆ. ಅವುಗಳಲ್ಲಿ ಕಮ್ಮಾರಗಟ್ಟೆ, ತೀರ್ಥರಾಮೇಶ್ವರ, ಗಡ್ಡೆರಾಮೇಶ್ವರ, ಬಳ್ಳೇಶ್ವರ, ರಾಮೇಶ್ವರ ದೇವಸ್ಥಾನ, ಚಿಕ್ಕೇರಳ್ಳಿ ಹಳದಮ್ಮ ದೇವಸ್ಥಾನ ಮಾರಿಕೊಪ್ಪ, ದಾಸರಹಟ್ಟಿ ರಂಗನಾಥಸ್ವಾಮಿ ಕ್ಷೇತ್ರ, ತುಗ್ಗಲಹಳ್ಳಿ ಬಸವೇಶ್ವರ ದೇವಾಲಯ, ಕರಡಿಕಲ್ ಗವಿಸಿದ್ದೇಶ್ವರ ದೇವಾಲಯ, ಆಂಜನೇಯಸ್ವಾಮಿ ದೇವಾಲಯ ಕುಂದೂರು, ಮಲ್ಲಿಕಾರ್ಜುನ ದೇವಾಲಯ ಗೋಪಾನಹಳ್ಳಿ ಹಾಗೂ ಕಲ್ಲೇಶ್ವರ ದೇವಾಲಯ, ಚಿಕ್ಕಗೋಣಿಗೆರೆ ಇನ್ನು ಮುಂತಾದ ಮಹತ್ವ ಪಡೆದ ದೇವಾಲಯಗಳಿವೆ.

ಚಿಕ್ಕಗೋಣಿಗೆರೆ ಮತ್ತು ಬಳ್ಳೇಶ್ವರ ಜೈನ ಕೇಂದ್ರ ಗಳಾಗಿವೆ. ಇಲ್ಲಿ ಪಾರ್ಶ್ವನಾಥ ಬಸದಿಗಳು ಇವೆ. ಇಡೀ ತಾಲ್ಲೂಕಿನಲ್ಲಿ ಕಂಡುಬರುವ ವೀರಗಲ್ಲುಗಳು, ಉಡೇವುಗಳು, ಹೊನ್ನಾಳಿಯ ಕೋಟೆ, ಜೋಗದಲ್ಲಿರುವ ಕೋಟೆ, ಬೆಳಗುತ್ತಿಯ ಕೋಟೆ, ಸಾಸ್ವೆಹಳ್ಳಿಯ ಕೋಟೆ ಮತ್ತು ಬೋಹಳೆ ಅರಸರ ಅರಮನೆ, ಹೊನ್ನಾಳಿಯ ನವಾಬರ ಮನೆ. ಇನ್ನು ಮುಂತಾದ ಐತಿಹಾಸಿಕ ಮಹತ್ವವುಳ್ಳ ಕಟ್ಟಡಗಳು ಹಾಗು ದಾಖಲೆಗಳು ನಮಗೆ ಸಿಗುತ್ತವೆ. ಕೆಂಚಿಕೊಪ್ಪ ಮತ್ತು ಜೇನಹಳ್ಳಿಗಳಲ್ಲಿ ನೊಳಂಬ ಹೊನ್ನಾಳಿ ಸಮೀಪದ ಮಾರಿಕೊಪ್ಪ 'ಮಾರಿಕೊಪ್ಪದ ಹತ್ಯಕಾಂಡ' ಎಂಬ ಹೆಸರು ಪಡೆದಿದೆ. ನಗರದಂಗೆಯ ಕೊನೆಯ ಘಟ್ಟ ಕ್ರಾಂತಿಯ ಭೀಕರತೆಯನ್ನು ನಾವು ಇಲ್ಲಿ ಕಾಣಬಹುದು. ಈ ದಂಗೆಯಿಂದ ಗವರ್ನರ್ ಜನರಲ್ ಆಗಿದ್ದ ವಿಲಿಯಂ ಬೆಂಟಿಂಕನು ತನ್ನ ಆಜ್ಞೆಯಂತೆ ೧೮೩೧ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರನ್ನು ಅಧಿಕಾರದಿಂದ ಕೆಳಗಿಳಿಸಿ ಮೈಸೂರಿನ ಆಡಳಿತವನ್ನು ಕಂಪೆನಿಯ ನೇರ ಆಡಳಿತಕ್ಕೊಳಪಡಿಸಲು ಈ ನಗರ ದಂಗೆಯೇ ಕಾರಣವಾಗಿತ್ತು. ೧೮೩೧ ಮಾರ್ಚ್ ೧೫ ಇದು ಇತಿಹಾಸದ ನೆನಪುಗಳನ್ನು ಮೆಲಕು ಹಾಕುವ ದಿನ ಹೊನ್ನಾಳಿ ಪಟ್ಟಣದ ಸಮೀಪ ಮಾರಿಕೊಪ್ಪ ಹಳದಮ್ಮ ದೇವಾಲಯ ಹಾಗೂ ಹೊನ್ನಾಳಿ ಶಿಕಾರಿಪುರ ರಸ್ತೆಯಲ್ಲಿರುವ ಮರಗಳು ಇತಿಹಾಸಕ್ಕೆ ಸಾಕ್ಷಿಯಾಗಿದೆ. ಇದು ಬಿದನೂರು ನಗರ ಪ್ರಾಂತರೈತ ಹೋರಾಟ ಸಂದರ್ಭದಲ್ಲಿ ನಡೆದ ಪ್ರಮುಖ ಘಟನೆ ಕೆಳದಿ ಸಂಸ್ಥಾನದಲ್ಲಿ ತಾನೇ ಉತ್ತರಾಧಿಕಾರಿ ಯೆಂದು ಆಡಳಿತವನ್ನು ನಡೆಸುತ್ತಿದ್ದ ಬೂದಿ ಬಸಪ್ಪನಾಯಕ. ರೈತ ಹೋರಾಟದ ನೇತೃತ್ವ ವಹಿಸಿದ ನಂತರ ಈ ಹೋರಾಟ ಬಹುಬೇಗ ಮೈಸೂರು ಪ್ರಾಂತ್ಯದಾದ್ಯಂತ ಹಬ್ಬಿತ್ತು. ಈ ಹೋರಾಟವನ್ನು ಹತ್ತಿಕ್ಕಲು ಬ್ರಿಟೀಷರು ಮಾಡಿದ ಪ್ರಯತ್ನ ಹಲವಾರು. ಆದರೆ ಗೆರಿಲ್ಲಾ ಮಾದರಿ ಹೋರಾಟ ನಡೆಸುತ್ತಿದ್ದ ಬೂದಿ ಬಸಪ್ಪ ನಾಯಕನ ಸೈನಿಕರು ಹಿಡಿತಕ್ಕೆ ಸಿಗಲಿಲ್ಲ. ಈ ಸಂದರ್ಭದಲ್ಲಿ ಬ್ರಿಟಿಷರಿಗೆ ನಿಷ್ಠರಾಗಿದ್ದ ಶ್ರೀಮಂತರ ಮನೆಗಳನ್ನು ದರೋಡೆ ಮಾಡಿದ್ದ ಬೂದಿಬಸಪ್ಪ ನಾಯಕನ ಸೈನಿಕರು ಹೊನ್ನಾಳಿ ಸಮೀಪ ಮಾರಿಕೊಪ್ಪದ ಹಳದಮ್ಮ ದೇವಸ್ಥಾನದಲ್ಲಿ ಸೇರಿದ್ದಾಗ ಮೈಸೂರು ಪ್ರಾಂತ್ಯದ ಸೈನಿಕರು ಹೊನ್ನಾಳಿ, ಹೆಬ್ಬೂರು, ಕಾಮನದುರ್ಗ, ನಗರ ಮೊದಲಾದ ಕಡೆಯ ಕ್ರಾಂತಿಕಾರಿಗಳನ್ನು ಹತ್ತಿಕ್ಕುವುದು ಸ್ವಲ್ಪ ಕಠಿಣ ವಾಗಿದ್ದುದರಿಂದ ಅದಕ್ಕಾಗಿ ಕಂಪೆನಿಯ ನೆರವನ್ನು ಯಾಚಿಸಿತು. ೧೮೩೧ ಮೇ ೩೧ರಂದು ಸಶಸ್ತ್ರ ಪಡೆಯೊಡನೆ ಬಂದ ಕರ್ನಲ್ ಬ್ರಿಗ್ಸ್ ಮತ್ತು ಲೆಫ್ಟಿನೆಂಟ್ ರಾಜ್ ಪೋರ್ಟ್ ಕ್ರಾಂತಿಯನ್ನು ದಮನ ಮಾಡಿದರು. ಆಗ ನಡೆದ

* ಸಹಾಯಕ ಪ್ರಾಧ್ಯಾಪಕರು, (ಇತಿಹಾಸ), ಎ.ಆರ್.ಎಂ. ಪ್ರಥಮ ದರ್ಜೆ ಕಾಲೇಜ್, ಎಸ್. ನಿಜಲಿಂಗಪ್ಪ ಬಡಾವಣೆ, ದಾವಣಗೆರೆ-೫೭೭೦೦೪

ಘರ್ಷಣೆಯಲ್ಲಿ ೪೦ ಸೈನಿಕರು ದೇವಾಲಯದಲ್ಲಿ ಹತರಾಗುತ್ತಾರೆ. ಬಂಧಿತರನ್ನು ಹರಿಹರದಲ್ಲಿ ವಿಚಾರಣೆ ನಡೆಸಿ ೧೦೦ ಗಾಯಾಳುಗಳ ಬಿಡುಗಡೆ ಮಾಡಲಾಗುತ್ತದೆ. ಉಳಿದವರನ್ನು ಮತ್ತೆ ದೇವಸ್ಥಾನಕ್ಕೆ ಕರೆತಂದು ೯ ಸೈನಿಕರನ್ನು ಹತ್ಯೆ ಮಾಡಲಾಗುತ್ತವೆ. ೫೧ ಸೈನಿಕರನ್ನು ಹೊನ್ನಾಳಿ-ಶಿಕಾರಿಪುರ ರಸ್ತೆಯ ಸಾಲು ಮರಗಳಿಗೆ ಪೊಲೀಸರು ನೇಣು ಹಾಕುತ್ತಾರೆ ಬ್ರಿಟೀಷ್ ಅಧಿಕಾರಿಯೊಬ್ಬ ನೇಣು ಹಾಕುವುದನ್ನು ನೋಡಬೇಕಾಂದಾಗ ಇನ್ನಷ್ಟು ಸೈನಿಕರನ್ನು ನೇಣಿಗೇರಿಸ ಲಾಗುತ್ತದೆ. ಈ ಘಟನೆ ನಡೆದಿದ್ದು ೧೮೩೧ ಮಾರ್ಚ್ ೧೫ರಂದು ಈಗಲೂ ಮಾರಿಕೊಪ್ಪ ದೇವಸ್ಥಾನದ ಗೋಡೆ ಮೇಲೆ ಫಿರಂಗಿ ಗುಂಡು ಹಾದು ಹೋದ ಗುರುತು ಇದೆ. ದೇಗುಲದ ಗೋಡೆಗಳ ಮೇಲೆ ಗುಂಡೇಟಿನ ಗುರುತುಗಳಿವೆ. ದೇವಾಲಯದ ಒಳಗಡೆ ಹೋರಾಟದ ಶಿಲ್ಪಗಳಿವೆ.

ಹೊನ್ನಾಳಿ ತಾಲ್ಲೂಕಿನಲ್ಲಿ ಶಾಸನವಿರುವ ಗ್ರಾಮಗಳನ್ನು ನಾವು ಈ ಕೆಳಗಿನಂತೆ ನೋಡಬಹುದು. ಹೊನ್ನಾಳಿ, ದಿಡಗೂರು, ಕುರುವಗದ್ದೆ, ಬಳ್ಳೇಶ್ವರ, ಕುರವ, ಗೋವಿನ ಕೋವಿ, ಚೀಲೂರು, ಮಾದನಬಾವಿ, ಸೊರಟೂರು, ಚಿಕ್ಕಯರೆ ಹಳ್ಳಿ, ಕತ್ತಿಗೆ, ದಾಸರಹಟ್ಟಿ, ಬೆಳಗುತ್ತಿ, ತೀರ್ಥರಾಮೇಶ್ವರ, ಕುಳ್ಳಹಳ್ಳಿ, ಸೌಳಂಗ, ನ್ಯಾಮತಿ, ಯರಗನಹಳ್ಳಿ, ಸುರಹೊನ್ನೆ, ಕಂಚಿಗನಹಳ್ಳಿ, ಕುಂಕೋವಾ, ಗುಂಡೀಚಟ್ನಿಹಳ್ಳಿ, ಜೋಗ, ಚಿನ್ನಿಕಟ್ಟೆ, ವಡೇರಹತ್ತೂರು, ಇಸರಾಪುರ, ಸಾಸುವೆಹಳ್ಳಿ, ಮಾವಿನಕೋಟೆ, ಕುಣಿಗಲುಘಟ್ಟ, ಚಿಕ್ಕಹಾಲಿವಾಣ, ಸಿಂಗಟಗೆರೆ, ಬೇಲಿಮಲ್ಲೂರು, ಚಿಕ್ಕಗೋಣಿಗೆರೆ, ಕ್ಯಾಸನಕೆರೆ, ಚಿನ್ನಮಂಬಾಪುರ, ಕುಂದೂರು, ಮುಕ್ತೇನಹಳ್ಳಿ, ಅರಕೆರೆ, ಹೊಸಹಳ್ಳಿ, ಹನಗವಾಡಿ, ಮಾವಿನಕೋಟೆ, ನೇರಲಗುಂಡಿ, ಕೂಲಂಬಿ, ಗಂಜೇನಹಳ್ಳಿ, ಮಲ್ಲಿಗೇನಹಳ್ಳಿ, ಆರುಂಡೆ ಮುಂತಾದ ಕಡೆಗಳಲ್ಲಿ ಶಾಸನಗಳು ಕಂಡುಬರುತ್ತದೆ. ಇವುಗಳಲ್ಲಿ ಬೆಳಗುತ್ತಿಯಲ್ಲಿ ೧೯ ಶಾಸನಗಳು, ಚಿಕ್ಕಯರೆಹಳ್ಳಿಯಲ್ಲಿ ೮ ಶಾಸನಗಳು, ನ್ಯಾಮತಿ ಹಾಗು ಅರಕೆರೆಯಲ್ಲಿ ತಲಾ ೮ ಶಾಸನಗಳು, ಕುಳ್ಳಹಳ್ಳಿಯಲ್ಲಿ ೬ ಶಾಸನಗಳು ಮತ್ತು ಕುರುವಗದ್ದೆಯಲ್ಲಿ ೭ ಶಾಸನಗಳು, ಈ ರೀತಿಯಾಗಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಶಾಸನಗಳು ನಮಗೆ ಸಿಗುತ್ತವೆ.

ಹೊನ್ನಾಳಿ : ಹೊನ್ನಾಳಿಯಲ್ಲಿ ಕೆಳದಿ ಅರಸರು ಕಟ್ಟಿಸಿದ ಕೋಟೆ ಇತ್ತು ಎಂದು ಹೇಳಲಾಗುತ್ತದೆ. ನದಿಯ ದಡದ ಮೇಲೆ ದಡ್ಡಿ ಬಾಗಿಲು ಎಂದೂ ಕರೆಯಲಾಗುವ ಕೋಟೆಯ ಬಾಗಿಲು ಮತ್ತು ಕೋಟೆಯ ಅವಶೇಷಗಳನ್ನು, ಕೋಟೆ ಆಂಜನೇಯ ದೇವಾಲಯವನ್ನು ಕಾಣಬಹುದು. ಸೇತುವೆ ಆಗುವುದಕ್ಕಿಂತ ಮುಂಚೆ ಈ ಮಾರ್ಗದಲ್ಲಿ ನದಿಯನ್ನು ದಾಟಿಕೊಂಡು ಬರುತ್ತಿದ್ದರು. ತುಂಗಭದ್ರಾ ನದಿಯ ದಂಡೆಯ ಎರಡು ಕಡೆಗಳಲ್ಲಿ ಹೊನ್ನಾಳಿ ತಾಲ್ಲೂಕು ಎರಡು ಭಾಗವಾಗಿದೆ. ಸೇತುವೆಯನ್ನು ಮೈಸೂರು ಅರಸರ ಕಾಲದಲ್ಲಿ ಸರ್. ಎಂ. ವಿಶ್ವೇಶ್ವರಯ್ಯನವರ ಮಾರ್ಗದರ್ಶನದಲ್ಲಿ ಕ್ರಿ.ಶ. ೧೯೨೨ರಲ್ಲಿ ೩.೨೮ ಲಕ್ಷ ರೂ.ಗಳನ್ನು ವೆಚ್ಚ ಆಡಿ ಕಲ್ಲಿನ ಕಟ್ಟಡದ ೨೧ ಕಮಾನುಗಳುಳ್ಳ ಸೇತುವೆಯನ್ನು ನಿರ್ಮಿಸಲಾಗಿದೆ. ಅದರ ಅಳತೆ ೧೫ - ೮.೪೫ ಮೀ. ಅಗಲ, ೩೪೫ ಮೀ. ಉದ್ದ ಇದೆ. ಈ ಸೇತುವೆಯ ಪಕ್ಕದಲ್ಲಿ ನೂತನವಾದ ಇನ್ನೊಂದು ಸೇತುವೆ ಯನ್ನು ಕರ್ನಾಟಕ ಸರ್ಕಾರದ ಅಡಿಯಲ್ಲಿ ನಿರ್ಮಿಸಲಾಗುತ್ತಿದೆ. ಇನ್ನು ಹೊನ್ನಾಳಿಯ ಇತಿಹಾಸಕ್ಕೆ ನಾವು ಬರುವುದಾದರೆ ಹೊನ್ನಾಳಿಯಲ್ಲಿ ನವಾಬರು ಆಳ್ವಿಕೆ ನಡೆಸಿದ ಅರಮನೆಯನ್ನು ಬಸವೇಶ್ವರ ಚಿತ್ರಮಂದಿರದ ಎದುರಿಗಿರುವ ಮನೆಯಲ್ಲಿ ಈಗಲೂ ನವಾಬರ ವಂಶಸ್ಥರು ವಾಸವಾಗಿದ್ದಾರೆ. ಇವರು ಹುಮಾಯೂನ್‌ನ ಅಸ್ತಾನದಲ್ಲಿದ್ದರೆಂದು ಲಾಹೋರ ಮೂಲದವರೆಂದೂ ಹೇಳಲಾಗುವ ಈ ನವಾಬ ವಂಶದವರು ಹೈದರಾಲಿ ಮತ್ತು ಟಿಪ್ಪುಸುಲ್ತಾನರ ಒಡನಾಡಿಯಾಗಿ ಬ್ರಿಟಿಷರ ವಿರುದ್ಧ ಹೋರಾಡಿದ್ದಾಗಿ ತಿಳಿದುಬರುತ್ತದೆ. ಹೊನ್ನಾಳಿ ಯಲ್ಲಿರುವ ಕೋಟೆಯನ್ನು ಇವರು ಜೀರ್ಣೋದ್ಧಾರ ಮಾಡಿರಬಹುದು. ಅದಕ್ಕಿಂತಲೂ ಮುಂಚೆ ಕೆಳದಿ ನಾಯಕರು ಈ ಕೋಟೆಯನ್ನು ನಿರ್ಮಾಣ ಮಾಡಿರಬಹುದು ಎಂದು ಊಹಿಸಬಹುದು. ತಾಲ್ಲೂಕಿನ ಸ್ವಾತಂತ್ರ ಯೋಧರ ನೆನಪಿಗಾಗಿ ಸ್ಥಾಪಿಸಿದ ಸ್ವಾತಂತ್ರ ಸ್ಮಾರಕ ಸ್ಥಂಭ ಊರ ಮಧ್ಯದಲ್ಲಿದೆ. ತಾಲ್ಲೂಕು ಕಚೇರಿಯ ಪಕ್ಕದಲ್ಲಿರುವ ನೀಲಕಂಠೇಶ್ವರ ದೇವಾಲಯ ಐತಿಹಾಸಿಕ ಮಹತ್ವ ಪಡೆದ ದೇವಾಲಯವಾಗಿದೆ. ಐತಿಹಾಸಿಕ ಮಹತ್ವ ಪಡೆದ ಅನೇಕ ಕಟ್ಟಡಗಳು ಹೊನ್ನಾಳಿ ಪಟ್ಟಣದಲ್ಲಿ ನಾವು ಕಾಣಬಹುದು. ಅವುಗಳಲ್ಲಿ ನವಾಬರ ಅರಮನೆ, ೧೯೧೫ರಲ್ಲಿ ಕಟ್ಟಿದ ತಾಲ್ಲೂಕು ಕಚೇರಿ, ಪಶು ಆಸ್ಪತ್ರೆ ಹಾಗೂ ಅದೇ ರೀತಿಯಾಗಿ ದ್ವಿತೀಯ ಬೃಂದಾವನ ಎಂದು ಕರೆಯಲ್ಪಡುವ ರಾಘವೇಂದ್ರ ಸ್ವಾಮಿ ಮಠ, ತುಂಗಭದ್ರಾ ತೀರದಲ್ಲಿದ್ದು ಹೆಚ್ಚಿನ ಪ್ರಾಧಾನ್ಯತೆ ಯನ್ನು ಪಡೆದುಕೊಂಡಿದೆ. ತುಮ್ಮಿನಕಟ್ಟೆ ರಸ್ತೆಯಲ್ಲಿ ಎರಡು ವೀರಗಲ್ಲುಗಳನ್ನು ನಾವು ಕಾಣಬಹುದು. ಅಲ್ಲದೆ ಬಯಲು ಬಸವ ದೇವಾಲಯವು ಹೊನ್ನಾಳಿಯ ಇತಿಹಾಸದ ಮೇಲೆ ಬೆಳಕು ಚೆಲ್ಲುತ್ತದೆ. ಮಾರಿಕಾಂಬ ದೇಗುಲ ಮತ್ತು ದೇಗುಲದ ಮುಂದಿರುವ ಮಹಿಷಾಸುರ ಮೂರ್ತಿಯನ್ನು ನಾವು ಕಾಣಬಹುದಾಗಿದೆ.

ನ್ಯಾಮತಿ : ಹೊನ್ನಾಳಿಯಿಂದ ಶಿಕಾರಿಪುರ ಮಾರ್ಗದ ಶಿವಮೊಗ್ಗ ರಸ್ತೆಯಲ್ಲಿ ಸುಮಾರು ೧೬ ಕಿ.ಮೀ.

ದೂರದಲ್ಲಿರುವ ಒಂದು ಗ್ರಾಮ ಅಲ್ಲದೆ ನವಾಶಿಲಾಯುಗದ ನೆಲೆಯಾಗಿದೆ. ಇಲ್ಲಿ ನವಶಿಲಾಯುಗದಲ್ಲಿ ಜನವಸತಿ ಇದ್ದಂತಹ ಕುರುಹುಗಳು ನಮಗೆ ದೊರೆಯುತ್ತವೆ. ಈ ವಸ್ತುಗಳನ್ನು ಕರ್ನಾಟಕ ವಿಶ್ವವಿದ್ಯಾಲಯದಲ್ಲಿರುವ ಕನ್ನಡ ಅಧ್ಯಯನ ಸಂಸ್ಥೆಯ ವಸ್ತು ಸಂಗ್ರಹಾಲಯದಲ್ಲಿ ನಾವು ಕಾಣಬಹುದು. ಕ್ರಿ.ಶ. ೧೮೬೯ರಿಂದ ೧೮೮೨ರವರೆಗೆ ತಾಲ್ಲೂಕು ಕೇಂದ್ರವಾಗಿದ್ದ ಇಲ್ಲಿ ಎಲ್ಲಾ ಕಚೇರಿಗಳಿದ್ದವು. ಇಲ್ಲಿನ ಬೇಡರ ಕೇರಿಯುಲ್ಲಿರುವ ಗೋಶಾಸನಗಳು ಈ ಗ್ರಾಮದ ಪ್ರಾಚೀನತೆಯನ್ನು ಸಾರುತ್ತಿವೆ. ಈ ಗೋಶಾಸನಗಳ ಮೇಲೆ ಪೂರ್ಣ ಕುಂಭ, ಕ್ರಿ.ಶ. ೭೫೩–೯೨೭ರಲ್ಲಿ ಆಳಿದ ರಾಷ್ಟ್ರಕೂಟರ ಲಾಂಛನ ನೇಗಿಲು ಮುಂತಾದ ಕೆತ್ತನೆಗಳಿದ್ದು ಕನ್ನಡ ಲಿಪಿಯಲ್ಲಿ ಇರುವ ಶಾಸನಗಳಾಗಿವೆ. ಚಾಳುಕ್ಯ ವಿಕ್ರಮನ ಉಲ್ಲೇಖವಿರುವ ಶಾಸನವು ಈ ಗ್ರಾಮದ ವೀರಭದ್ರ ದೇಗುಲದ ಹತ್ತಿರವಿರುವ ಶಾಸನದಿಂದ ತಿಳಿಯಬಹುದಾಗಿದೆ. ಇದು ಅಗ್ರಹಾರವಾಗಿತ್ತೆಂದು ಅನೇಕ ಶಾಸನಗಳಿಂದ ತಿಳಿಯಬಹುದಾಗಿದೆ. ಇದು ಜೈನ ಕೇಂದ್ರವಾಗಿತ್ತೆಂದು ಇಲ್ಲಿನ ಬಸದಿ (ಇಂದಿನ ಕಲ್ಮಠ) ಯಿಂದ ತಿಳಿಯುತ್ತದೆ. ಈ ಗ್ರಾಮವು ವ್ಯಾಪಾರ ಉದ್ಯಮಗಳಿಗೆ ಮಾತ್ರವಲ್ಲದೆ ಸಾಹಿತ್ಯ, ಕಲೆ, ಸಂಗೀತ ವಿಜ್ಞಾನ ಕ್ಷೇತ್ರಗಳಲ್ಲಿ ಕೆಲಸ ಮಾಡಿದವರಿಗೆ, ಸ್ವಾತಂತ್ರಕ್ಕಾಗಿ ನೆಲ ಜಲಕ್ಕಾಗಿ ಹೋರಾಡಿದ ಧೀರರಿಗೂ ಹೆಸರಾಗಿದೆ. ಇದು ವ್ಯಾಪಾರ ಕೇಂದ್ರವಾಗಿರುವಂತೆಯೇ ವ್ಯವಸಾಯ, ಹೈನುಗಾರಿಕೆ, ಶಿಕ್ಷಣ ಕ್ಷೇತ್ರದಲ್ಲೂ ಹಿಂದೆ ಬಿದ್ದಿಲ್ಲ. ಇಲ್ಲಿನ ಕುಂಬಾರಿಕೆಯು ಬಹುಜನರ ಆರ್ಥಿಕ ಮೂಲವಾಗಿದೆ. ಈ ಗ್ರಾಮದಲ್ಲಿ ಶ್ರೀ ಆಂಜನೇಯ, ಶ್ರೀ ವೀರಭದ್ರೇಶ್ವರ, ಬನಶಂಕರಿ, ಪೇಟೆಬಸವಣ್ಣ, ಮಾತಂಗೆಮ್ಮ, ಬೇಡರ ಕಣ್ಣಪ್ಪ, ಕಾಳಿಕಾಂಬ, ವಿಠಲ ಹಾಗು ಪಾಂಡುರಂಗ ಮುಂತಾದ ದೇವಾಲಯಗಳೊಂದಿಗೆ ಒಂದು ಮಸೀದಿಯೂ ಇದೆ. ಈ ಮೇಲಿನ ಎಲ್ಲಾ ಅಂಶಗಳಿಂದ ಹೊನ್ನಾಳಿ ತಾಲ್ಲೂಕಿನಲ್ಲಿ ವಿಶೇಷವಾದ ಸ್ಥಾನವನ್ನು ಪಡೆದಿರುವ ನ್ಯಾಮತಿಯು ಶಿವಮೊಗ್ಗಕ್ಕೆ ಹತ್ತಿರ ಇರುವುದರಿಂದ, ದಾವಣಗೆರೆ ಜಿಲ್ಲೆ ರಚನೆಯಾದಾಗ ತುಂಬ ವಿರೋಧ ವ್ಯಕ್ತವಾಗಿತ್ತು. ನಂತರದಲ್ಲಿ ಇದನ್ನು ತಾಲ್ಲೂಕು ಕೇಂದ್ರವನ್ನಾಗಿ ಮಾಡಬೇಕೆಂದು ಅಲ್ಲಿನ ಜನರ ಅಭಿಪ್ರಾಯ ಮತ್ತು ಒತ್ತಡವಾಗಿದೆ.

ಹಿರೇಕಲ್ಮಠ : ಚನ್ನಪ್ಪಸ್ವಾಮಿ ಮಠ, ಹಿರೇಕಲ್ಮಠ ಎಂದು ಕರೆಯಲ್ಪಡುವ ಹಿರೇಕಲ್ಮಠ ಹೊನ್ನಾಳಿ–ಶಿಕಾರಿಪುರ ರಸ್ತೆಯಲ್ಲಿ ಹೊನ್ನಾಳಿಯಿಂದ ಒಂದು ಕಿ.ಮೀ. ದೂರದಲ್ಲಿದೆ. ಮಠದಲ್ಲಿ ಜಡೆಯುಶಂಕರಸ್ವಾಮಿ, ಶ್ರೀ ಚನ್ನಮಲ್ಲಿಕಾರ್ಜುನ ಸ್ವಾಮಿಯವರ ಕತ್ರಗದ್ದಿಗೆಗಳಿವೆ. ದೇವಾಲಯದ ಎಡಭಾಗದಲ್ಲಿ ಎದುರುಗಡೆ ತೂಗುಯ್ಯಾಲೆ, ದೀಪಸ್ತಂಭ, ಬಿಲ್ವ ವೃಕ್ಷಗಳು ಕಾಣಬರುತ್ತವೆ. ಒಳಹೊಕ್ಕರೆ ಬಲಭಾಗದಲ್ಲಿ ಬೃಹದಾಕಾರದ ಕರಿಯ ಕಲ್ಲುಗಳಿಂದ ಮಾಡಿದ ವಿಶಾಲವಾದ ಶಿಲಾಮಠ ಇದ್ದು, ಕಲ್ಲುಗಳನ್ನು ಕತ್ತಿಗೆಯ ಕರಿಕಲ್ ಗುಡ್ಡದಿಂದ ತಂದು ಕಲ್ಲಿನವನ್ನು ಕೆತ್ತಲಾಗಿದೆ. ಇದರ ಪಕ್ಕದಲ್ಲಿ ಹಲವಾರು ಗದ್ದುಗೆಗಳಿವೆ. ಒಳಗಡೆ ವೀರಭದ್ರ, ಚೌಡೇಶ್ವರಿ ದೇವಾಲಯಗಳು ಮತ್ತು ಬಾವಿಯನ್ನು ನಾವು ಕಾಣಬಹುದಾಗಿದೆ. ಇದೇ ಆವರಣದಲ್ಲಿ ಕಲ್ಯಾಣ ಮಂಟಪ ಹೀಗೆ ರಾಜಮಹಾರಾಜರು ಗಳಿಂದ ಗೌರವಾಧಿಕಾರ ಪಡೆದಿದ್ದ ಶ್ರೀಮಠದ ಗುರುಗಳು ಹಲವಾರು ಸಾಮಾಜಿಕ ಕಾರ್ಯಗಳಲ್ಲಿ ತಮ್ಮನ್ನು ತಾವು ತೊಡಗಿಸಿ ಕೊಂಡಿದ್ದಾರೆ.

ಬಳ್ಳೇಶ್ವರ : ಶ್ರೀ ಬಳ್ಳಲಿಂಗೇಶ್ವರಸ್ವಾಮಿ ದೇವಾಲಯ ಇರುವಂತಹ ಸ್ಥಳವಾಗಿದೆ. ಇಲ್ಲಿನ ಶಿವಲಿಂಗವನ್ನು ಹೊಯ್ಸಳರ ದೊರೆ ಎರಡನೆ ವೀರಬಲ್ಲಾಳನು ತನ್ನ ತಂದೆ ನರಸಿಂಹದೇವನ ಹೆಸರಿನಲ್ಲಿ ಸ್ಥಾಪಿಸಿದ್ದಾಗಿದೆ. ಆದ್ದರಿಂದಾಗಿ ಬಲ್ಲಾಳಲಿಂಗವಾಗಿದ್ದ ಇದು ಬಳ್ಳಲಿಂಗೇಶ್ವರವಾಗಿದೆ. ಈ ದೇವಾಲಯವನ್ನು ಕರಿಕಲ್ಲಿನಿಂದ ಕಟ್ಟಲಾಗಿದ್ದು, ನಕ್ಷತ್ರ ಆಕಾರದಲ್ಲಿವೆ. ಈ ದೇವಾಲಯವು ತ್ರಿಕೂಟ ದೇವಾಲಯ ವಾಗಿದೆ. ಮುಖ್ಯ ಗರ್ಭಗೃಹದಲ್ಲಿ ಬಳ್ಳಲಿಂಗೇಶ್ವರ ಸ್ವಾಮಿಯ ಶಿವಲಿಂಗವಿದ್ದು ಅದರ ಮುಂದಿನ ಅಂಕಣದಲ್ಲಿ ನಂದಿ ವಿಗ್ರಹವಿದೆ. ಬಲಭಾಗದ ಗರ್ಭಗುಡಿ ಯಲ್ಲಿ ಷಣ್ಮುಖಸ್ವಾಮಿ ಇದ್ದು ಅದರ ಮುಂದಿನ ಅಂಕಣ ಖಾಲಿ ಇದೆ. ಗಣಪತಿ, ತಿರುಪತಿ ವೆಂಕಟೇಶ್ವರ ದುರ್ಗಾದೇವಿ, ಚತುರ್ಮುಖ ಬ್ರಹ್ಮ ಹಾಗು ಅಷ್ಟದಿಕ್ಪಾಲಕರ ಮೂರ್ತಿಗಳಿವೆ. ಮೂರು ಮುಖಗಳನ್ನು ಹೊಂದಿರುವ ಶಿಲ್ಪ ಹಾಗೂ ಎಡಪಕ್ಕದಲ್ಲಿ ನಾಗದೇವತೆಗಳಿವೆ. ಸಭಾಂಗಣವು ನಾಲ್ಕು ದೊಡ್ಡ ಕೆತ್ತನೆಯ ಕಂಬಗಳಿಂದ ಕೂಡಿದೆ. ಮುಂದೆ ಮುಖಮಂಟಪ, ದೀಪದ ಸ್ತಂಭ, ಅದರ ಪಕ್ಕದಲ್ಲಿ ಶಾಸನದ ಕಲ್ಲನ್ನು ನೆಡಲಾಗಿದೆ. ಅದೇ ರೀತಿಯಾಗಿ ಶ್ರೀಪಾರ್ಶ್ವನಾಥ ಬಸದಿ ಇದು ಬಳ್ಳೇಶ್ವರಲ್ಲಿದೆ. ಆದರೆ ಜೈನರಿರುವ ಅಲ್ಲಿ ಬಸದಿ ಯಾಗಲಿ ಜಿನ ಮಂದಿರವಾಗಲೀ ಇರಲಿಲ್ಲ. ದಿಡಗೂರಿನ ಹೊಲವೊಂದ ರಲ್ಲಿ ದೊರೆತ ಜಿನಮೂರ್ತಿಯನ್ನು ಅಲ್ಲಿನ ಗ್ರಾಮಸ್ಥರು ಬಳ್ಳೇಶ್ವರದ ಜೈನ ಸಮುದಾಯಕ್ಕೆ ಒಪ್ಪಿಸಿದರು. ದಿನಾಂಕ : ೦೮.೧೨.೧೯೯೪ ರಂದು ಜಿನಮಂದಿರದ ಶಿಲಾನ್ಯಾಸವನ್ನು ನೆರವೇರಿಸಿದರು. ಅಂದಿನಿಂದ ೨೦೦೧ರಲ್ಲಿ ಭವ್ಯವಾಗಿ ಸುಂದರವಾಗಿರುವ ಜಿನ ಮಂದಿರವು ರೂಪಗೊಂಡು ಯಾತ್ರಿಕರ ಗಮನವನ್ನು ಸೆಳೆಯುತ್ತಿದೆ. ಅದೇ ರೀತಿಯಾಗಿ ಊರಿನಲ್ಲಿ ಅನೇಕ ವೀರಗಲ್ಲುಗಳಿವೆ. ಈ ದೇವಾಲಯದ ಆವರಣದಲ್ಲಿರುವ ಶಾಸನಗಳು, ಅನೇಕ ವೀರಗಲ್ಲುಗಳು ಇದರ ಪ್ರಾಚೀನತೆಯನ್ನು ಸಾರಿ ಹೇಳುತ್ತಿವೆ. ಇಂತಹ ಪ್ರಾಚೀನ

ಇತಿಹಾಸವುಳ್ಳ ಈ ಗ್ರಾಮವು ಹೊಯ್ಸಳ ಕಾಲದಲ್ಲಿ ಪ್ರಮುಖ ನೆಲೆ ಮತ್ತು ಸಾಂಸ್ಕೃತಿಕ ಕೇಂದ್ರವಾಗಿತ್ತು ಎಂಬುದು ಮೇಲಿನ ವಿಷಯ ಗಳಿಂದ ತಿಳಿದುಬರುತ್ತದೆ.

ಬೆಳಗುತ್ತಿ : ಹೊನ್ನಾಳಿಯಿಂದ ೧೬ ಕಿ.ಮೀ. ಕ್ರಮಿಸಿದರೆ ಬೆಳಗುತ್ತಿ ಗ್ರಾಮ ನಮಗೆ ಸಿಗುತ್ತದೆ. ಇದು ಹಿಂದೆ ಸಿಂಧವಾಡಿ ರಾಜ್ಯದ ಕೇಂದ್ರವಾಗಿತ್ತು. ೧೪-೧೬ನೇ ಶತಮಾನದಲ್ಲಿ ಒಂದು ಪಾಳೆಗಾರಿಕೆಯ ಕೇಂದ್ರವಾಗಿತ್ತೆಂದು ಕೆಳದಿ ಅರಸು ವಂಶದ ಮೂಲ ತವರಾಗಿತ್ತೆಂದೂ ಹೇಳಲಾಗುತ್ತದೆ. ಇದಕ್ಕೆ ಸಾಕ್ಷಿಯಾಗಿ ಗತಿಸಿಹೋದ ಕೋಟೆಯ ಅವಶೇಷ, ಅವನತಿಯ ಅಂಚಿನಲ್ಲಿ ತೊಳಲಾಡುತ್ತಿರುವ ಐತಿಹಾಸಿಕ ಮಂದಿರಗಳು, ಎಲ್ಲೆಂದರಲ್ಲಿ ಬಿದ್ದಿರುವ ಶಾಸನಗಳು ಕಂಡುಬರುತ್ತವೆ. ರಾಮ, ಲಕ್ಷ್ಮಣ, ಸೀತೆಯರು ಇಲ್ಲಿಗೆ ಬಂದು ಹತ್ತಿರದ ಗಿರಿಯಲ್ಲಿನ ಈಶ್ವರಲಿಂಗವನ್ನು ಪೂಜೆ ಮಾಡಿ ಸೀತೆಯ ಸೂತಕ ನಿವಾರಣೆ ಗಾಗಿ ಹೂಡಿ ತೀರ್ಥೋದ್ಭವಗೊಳಿಸಿದ ಪ್ರತೀತಿಯಿಂದ ತೀರ್ಥರಾಮೇಶ್ವರ ಎಂದು ಹೆಸರಾಗಿದೆ. ಈ ಕ್ಷೇತ್ರವು ಪ್ರಾಚೀನ ಇತಿಹಾಸದ ಕುರುಹಾಗಿದೆ.

ಕಲ್ಯಾಣದ ಚಾಲುಕ್ಯರಿಗೆ, ಹೊಯ್ಸಳರಿಗೆ, ಸೇವುಣರಿಗೆ, ರಾಷ್ಟ್ರಕೂಟರಿಗೆ, ಸಾಮಂತರಾಗಿ, ಮಾಂಡಲೀಕರಾಗಿ, ಸೇಂದ್ರಕ ವಂಶದ ಸಿಂಧರು ಬೆಳಗುತ್ತಿ ಸಿಂಧರಾಗಿ ಆಳುತ್ತಿದ್ದರೆಂಬುದು ಇಲ್ಲಿ ದೊರೆತ ಶಾಸನಗಳಿಂದ ತಿಳಿಯುವುದು, ಬೆಳಗುತ್ತಿಯಲ್ಲಿ ಒಟ್ಟು ೧೯ ಶಾಸನಗಳು ನಮಗೆ ಸಿಗುತ್ತವೆ. ಆ ನಂತರದಲ್ಲಿ ವಿಜಯನಗರದ ಅರಸರ ಅಡಿಯಲ್ಲಿ ಒಂದು ಅರಸು ಮನೆತನವು ಸ್ವತಂತ್ರವಾಗಿ ಆಳಿರುವುದಾಗಿ ಹಲವು ಕೈಫಿಯತ್ತುಗಳು ತಿಳಿಸುತ್ತವೆ. ಇಂತಹ ಆಳ್ವಿಕೆಯನ್ನು ಕಂಡ ಬೆಳಗುತ್ತಿ ತಾಲ್ಲೂಕಿನ ೪೯ ಹಳ್ಳಿಗಳಿಗೆ ಹೋಬಳಿ ಕೇಂದ್ರ ವಾಗಿದೆ. ಕಲ್ಯಾಣ ಚಾಲುಕ್ಯರ ಶೈಲಿಯ ದೇವಾಲಯಗಳು ಎಂದು ಹೇಳಲಾಗುವ ಹಿರಿಕೆರೆ ಏರಿಯಾ ಪಕ್ಕದಲ್ಲಿ ಉಮಾಮಹೇಶ್ವರ (ಚನ್ನಕೇಶವ) ಹಾಗೂ ಕೊಪ್ಪರಿಗೆ ಮರದ ದಾರಿಯಲ್ಲಿರುವ ಶ್ರೀ ಸಿದ್ದೇಶ್ವರ ದೇಗುಲಗಳು ಇಲ್ಲಿನ ಇತಿಹಾಸದ ನಿದರ್ಶನಗಳಾಗಿ ಉಳಿದುಕೊಂಡಿವೆ. ಬೆಳಗುತ್ತಿಯ ಸಮೀಪದಲ್ಲಿ ತೀರ್ಥರಾಮೇಶ್ವರ ದೇವಾಲಯ ಮತ್ತು ಕಲಬೀಗಿರಿ ರಂಗನ ಗುಡ್ಡಗಳು ಪವಿತ್ರ ಕ್ಷೇತ್ರಗಳಾಗಿವೆ. ಬೆಳಗುತ್ತಿಯನ್ನು ಆಳಿದ ಇನ್ನೊಂದು ಮನೆತನ ಬೊಹಳೆ ಅರಸರ ಮನೆತನ. ೧೪ ರಿಂದ ೧೬ನೇ ಶತಮಾನದವರೆಗೆ ವಿಜಯನಗರ ಸಾರಥ್ಯದಲ್ಲಿ ಈ ಬೊಹಳೆ ಅರಸರು ಆಳಿದುದಾಗಿ ತಿಳಿದುಬರುತ್ತದೆ. ಚಲುವ ರಂಗಪ್ಪ ನಾಯಕ ವಿಜಯನಗರದ ಅರಸರ ಸಂತತಿಗೆ ಸೇರಿದವನೆಂದು, ಬುಕ್ಕರಾಯನ ಮೊಮ್ಮಗ ಅಥವಾ ದೇವರಾಯನ ಮಗನೆಂದು ಹೇಳಲಾಗುತ್ತದೆ. ಬೊಹಳೆ ಅರಸರು ಕೆಳದಿಯ ನಾಯಕರಿಗೆ ನಂತರದಲ್ಲಿ ಮೈಸೂರು ಒಡೆಯರಿಗೆ, ಹೈದರಾಲಿ ಮತ್ತು ಟಿಪ್ಪುಸುಲ್ತಾನನಿಗೆ ಸೈನಿಕ ನೆರವನ್ನು ನೀಡಿದ ವಿವರಗಳು ತಿಳಿದುಬರುತ್ತವೆ. ಒಟ್ಟಾರೆಯಾಗಿ ಬೊಹಳೆ ಅರಸರು ರಾಜಕೀಯ ಮೇಲಾಟದಲ್ಲಿ ಅವನತಿಯತ್ತ ಸಾಗಿ ಬ್ರಿಟಿಷರಿಂದ ಪಿಂಚಣಿ ಪಡೆಯುವ ಸ್ಥಿತಿಗೆ ಬಂದು ಕೊನೆಗೆ ಅದು ನಿಂತ ಮೇಲೆ ಅತ್ಯಂತ ಕಷ್ಟದ ದಿನಗಳನ್ನು ನೂಕುತ್ತಾ ಇದ್ದಾರೆ. ಬೊಹಳೆ ಅರಸರು ಆಳ್ವಿಕೆ ಮಾಡಿದ ಅರಮನೆ ಮತ್ತು ಅರಮನೆಯ ಮಹಾದ್ವಾರ ಮತ್ತು ಅರಮನೆಯಲ್ಲಿ ಪೂಜೆಯನ್ನು ಈಗಲೂ ಪಡೆಯುತ್ತಿರುವ ರಂಗನಾಥ ದೇವರು, ಯುದ್ಧಾ ಅಯುಧಗಳನ್ನು, ಪಲ್ಲಕ್ಕಿಯನ್ನು ನಾವು ಕಾಣಬಹು ದಾಗಿದೆ.

ತೀರ್ಥರಾಮೇಶ್ವರ : ಈ ಪವಿತ್ರ ಕ್ಷೇತ್ರವು ಹೊನ್ನಾಳಿ ಯಿಂದ ೨೦ ಕಿ.ಮೀ. ಹಾಗೂ ಬೆಳಗುತ್ತಿಯಿಂದ ೪ ಕಿ.ಮೀ. ದೂರದಲ್ಲಿ ತೀರ್ಥರಾಮೇಶ್ವರ ಬೆಟ್ಟ ಸಾಲುಗಳಲ್ಲಿ ಈ ಕ್ಷೇತ್ರ ಬರುತ್ತದೆ. ಇದೇ ಬೆಟ್ಟ ಸಾಲುಗಳಲ್ಲಿ ತುಪ್ಪದಗಿರಿ, ಶ್ರೀ ರಂಗನಾಥಗಿರಿ, ಶ್ರೀ ಗವಿಸಿದ್ದೇಶ್ವರ ಬೆಟ್ಟ, ಬೇಟೆಮಲ್ಲಯ್ಯನ ಗಿರಿ, ಕಣಿವೆ ಈರಣ್ಣನ ಬೆಟ್ಟ ಮುಂತಾದ ತಾಣಗಳು ಕಾಣಸಿಗುತ್ತವೆ ಸುಮಾರು ೩೦೦ ಅಡಿಗಳಷ್ಟು ಎತ್ತರದಲ್ಲಿ ತೀರ್ಥ ಕ್ಷೇತ್ರ ಮತ್ತು ದೇವಾಲಯ ಇದೆ. ಇಲ್ಲಿನ ಪವಿತ್ರ ಗಂಗಾತೀರ್ಥ ದೊಂದಿಗೆ ಮೈಲಿಗೆಯನ್ನು ನೀಗಿಸಿಕೊಂಡು ದೇಗುಲವನ್ನು ಪ್ರವೇಶಿಸಬೇಕು. ಈ ದೇವಾಲಯ ಮುಖಮಂಟಪದಲ್ಲಿ ನಾಲ್ಕು ಕಂಬಗಳನ್ನು ಒಳಗೊಂಡಿದೆ. ಸಭಾಮಂಟಪ ನಾಲ್ಕು ಸುಂದರ ಕಂಬಗಳ ಕೆತ್ತನೆಯನ್ನು ಒಳಗೊಂಡು ಇದರಲ್ಲಿ ಅಂತರಾಳ ಸರಳವಾಗಿದ್ದು, ಗರ್ಭಗುಡಿಯಲ್ಲಿ ರಾಮೇಶ್ವರ ಲಿಂಗವಿದೆ. ದೇವಾಲಯದ ಭುವನೇಶ್ವರಿಯು ಅಷ್ಟಕೋನವನ್ನು ಹೊಂದಿದೆ. ಹೊರಗೋಡೆ ಮತ್ತು ಕಂಬಗಳಲ್ಲಿ ಸುಂದರವಾದ ಶಿಲ್ಪಗಳನ್ನು ಹೊಂದಿದೆ. ಎಡಪಕ್ಕದಲ್ಲಿ ಬ್ರಹ್ಮನ ಗುಡಿ. ಇನ್ನೊಂದು ಚಿಕ್ಕಶಿವನಗುಡಿ ಇದೆ. ಇನ್ನೊಂದು ಪಕ್ಕದಲ್ಲಿ ದುರ್ಗಮಾತೆಯ ಗುಡಿ ಇದೆ. ದೇವಾಲಯದ ಮುಂದೆ ದೀಪಕಂಬವನ್ನು ಕಾಣಬಹುದು. ಪವಿತ್ರ ತೀರ್ಥದ ಪಕ್ಕದಲ್ಲಿ ನಾಗರಶಿಲ್ಪವಿದೆ ಏಳು ಎಡೆಗಳನ್ನು ಹೊಂದಿದ ಶಿಲ್ಪದ ಕೆಳಭಾಗದಲ್ಲಿ ನಾಗರಿಲಿಪಿಯ ಶಾಸನವಿದೆ ತೀರ್ಥರಾಮೇಶ್ವರ ಇತಿಹಾಸದ ಮೇಲೆ ಈ ಶಾಸನ ಬೆಳಕು ಚಲ್ಲುತ್ತದೆ. ಅಲ್ಲದೆ ಈ ಕ್ಷೇತ್ರವು ಸರಳ ಮದುವೆಗೆ ಹೆಚ್ಚು ಹೆಸರುವಾಸಿಯಾಗಿದೆ.

ಗಡ್ಡೆ ರಾಮೇಶ್ವರ ತಾಣ : ಇದು ಹೊನ್ನಾಳಿಯಿಂದ ಸುಮಾರು ೨೧ ಕಿ.ಮೀ. ಇದೆ ಇಲ್ಲಿಗೆ ಗೋವಿನಕೋವಿ ಮೂಲಕವು ಬರಬಹುದು. ಈ ಸ್ಥಳಕ್ಕೆ ನದಿಯ ಎರಡು ಕಡೆಯಿಂದಲೂ ಬರಬಹುದು. ತುಂಗಭದ್ರಾ ನದಿಯು

ಕವಲೊಡೆದು ಸುಮಾರು ೨೦ ಎಕರೆಯಷ್ಟು ಗಡ್ಡೆ ಅಥವಾ ದೀಪ ನಿರ್ಮಾಣವಾಗಿದೆ. ಈ ವಿಶಾಲ ಮತ್ತು ರಕ್ಷಣೆಗೆ ಸೂಕ್ತ ಸ್ಥಳ ಎಂಬ ಕಾರಣದಿಂದ ಇದನ್ನು ಆಯ್ಕೆ ಮಾಡಿ ಇದನ್ನು ಬಳಸಿಕೊಂಡು, ರಾಮೇಶ್ವರ ದೇವಾಲಯ ವನ್ನು ಕಟ್ಟಿದ್ದಾರೆ. ಇಲ್ಲಿ ಲಿಂಗವನ್ನು ಪ್ರತಿಷ್ಠಾಪಿಸಿ ಪೂಜಿಸ ತೊಡಗಿರಬೇಕು. ಆದ್ದರಿಂದಾಗಿ ಈ ಕ್ಷೇತ್ರವು ಗಡ್ಡೆರಾಮೇಶ್ವರ ಎಂದು ಹೆಸರಾಗಿದೆ. ೧೯೯೫ರಲ್ಲಿ ಈ ದೇವಾಲಯವನ್ನು ನವೀಕರಣ ಮಾಡಲಾಗಿದೆ. ಈ ದೇವಾಲಯವು ಪೂರ್ವಾಭಿಮುಖವಾಗಿ ನಿರ್ಮಾಣಗೊಂಡಿದ್ದು ದಕ್ಷಿಣ ದ್ವಾರದಲ್ಲಿ ದೀಪಸ್ತಂಭ ಇದೆ. ಗರ್ಭಗುಡಿಯಲ್ಲಿ ರಾಮೇಶ್ವರ ಲಿಂಗವಿದ್ದು, ಸರಸ್ವತಿ, ಗಣಪತಿ, ಮೂವರು ಸನ್ಯಾಸಿಗಳ ವಿಗ್ರಹ, ಸೂರ್ಯನ ಮೂರ್ತಿ, ವೀರಭದ್ರಸ್ವಾಮಿ ವಿಗ್ರಹ, ಪೀಠಯುಕ್ತ ಲಿಂಗಗಳು ದುರ್ಗಾಪರಮೇಶ್ವರಿ ನಂದಿಯ ಶಿಲ್ಪಗಳು, ಪಶ್ಚಿಮದ ಭಾಗದಲ್ಲಿ ದೊಡ್ಡ ಬಂಡೆ ಇದ್ದು ಅಲ್ಲಿ ಲಿಂಗವನ್ನು ನಾವು ಕಾಣಬಹುದಾಗಿದೆ. ಕಾಲಭೈರವ, ಲಿಂಗು, ಕುರುಹು ಬಸವೇಶ್ವರ, ನಾಗರವಿಗಹ್ರಗಳು, ನಾಲ್ಕು ಶಿಲಾಶಾಸನಗಳು ಮತ್ತು ಗಡ್ಡೆಯ ಆಗ್ನೇಯದಲ್ಲಿ ಹಾಲ ಸಿದ್ದೇಶ್ವರ ಗವಿಮಠವಿದೆ. ರಾಮೇಶ್ವರ ದೇವಾಲಯವು ಮುಜರಾಯಿ ಇಲಾಖೆಗೆ ಸೇರಿದೆ. ತಹಶೀಲ್ದಾರ ಅಧ್ಯಕ್ಷತೆಯಲ್ಲಿ ೧೫ ಜನರ ಸಮಿತಿ ಇದರ ಉಸ್ತುವಾರಿಯಲ್ಲಿ ದೇವಾಲಯದ ನಿತ್ಯಕಾರ್ಯಗಳು ಮತ್ತು ಹಬ್ಬ ಹರಿದಿನಗಳಲ್ಲಿ ವಿಶೇಷ ಪೂಜೆಯನ್ನು ನೇರವೇರಿಸುತ್ತಾರೆ.

ಮಾರಿಕೊಪ್ಪ : ಹಳದಮ್ಮ ದೇವಸ್ಥಾನವಿರುವ ಮಾರಿಕೊಪ್ಪ ಮಾರಿಹಳ್ಳದ ಈ ದೇವಾಲಯವನ್ನು ಬೆಳಗುತ್ತಿ ಅರಸರು ಕಟ್ಟಿಸಿದರೆಂದು ಹೇಳಲಾಗುತ್ತದೆ. ಈ ದೇವಾಲಯ ವನ್ನು ಹಂತ ಹಂತವಾಗಿ ಅಭಿವೃದ್ಧಿಯನ್ನು ಮತ್ತು ಜೀರ್ಣೋದ್ಧಾರವನ್ನು ಮಾಡಲಾಗಿದೆ. ದಾಖಲೆಗಳಲ್ಲಿ ದುರ್ಗಮಾತೆ ಎಂದು ಹೆಸರಿದ್ದು, ಜನ ಭಾಷೆಯಲ್ಲಿ ಹಳದಮ್ಮ ಎಂದು ಪ್ರಚಲಿತವಿದೆ. ಈ ದೇವಾಲಯವು ಪೂರ್ವಾಭಿಮುಖವಾಗಿದ್ದು ಪೂರ್ವ ಮತ್ತು ದಕ್ಷಿಣದ ಬಾಗಿಲುಗಳನ್ನು ಹೊಂದಿದೆ. ಪೂರ್ವದ ಬಾಗಿಲು ಮುಖ್ಯ ಬಾಗಿಲು ಆಗಿದೆ. ಬಾಗಿಲನ್ನು ದಾಟಿದರೆ ವಿಶಾಲವಾದ ಭಾಗ, ಈ ಭಾಗದ ಸುತ್ತಲೂ ಕಲ್ಲು ಕಂಬಗಳಿಂದ ಕಟ್ಟಿದ ವಿಶಾಲವಾದ ವಿಶ್ರಾಂತಿಯ ಸ್ಥಳವನ್ನು ನಾವು ಕಾಣಬಹುದು. ಪೂರ್ವದ ಬಾಗಿಲ ಬಳಿ ಮೊನಚಾದ ಒಂದು ಕಲ್ಲು ಇದೆ. ಇದನ್ನು ಅಮ್ಮನ ಊರುಗೋಲು ಎಂದು ಕರೆಯುತ್ತಾರೆ. ಅಮ್ಮನ ಪಾದಗಳು, ಗುತ್ಯಮ್ಮ, ಪರಶುರಾಮ, ಏಳು ಹೆಡೆಯ ನಾಗರಶಿಲ್ಪ, ನಂದಿ, ಈಶ್ವರ, ಮಾತಂಗೆಮ್ಮ, ಜಟ್ಟೆಪ್ಪ, ಭೂತಪ್ಪ, ಕಾಲಭೈರವ, ದೀಪದ ಸ್ತಂಭ, ಅದರ ಹತ್ತಿರ ಸಿಡೆಭರ್ಮಪ್ಪ, ಹಾಲುಮರದ ಕೊಲ್ಲಾಪುರದಮ್ಮ, ಸಿಡೆಕಂಬಗಳು ಇವೆ. ಗುರುವಾರ ಅಮ್ಮನ ವಾರವಾಗಿದ್ದು, ಪ್ರತಿ ಗುರುವಾರ ವಿಶೇಷ ಪೂಜೆ, ಇಡೀ ದಿನ ಮುತ್ತು ಕಟ್ಟುವುದು, ಜವಳ, ರಾತ್ರಿ ೯ ಗಂಟೆಗೆ ಸಲಾಮು ಪೂಜೆ ನಡೆದು ನಂತರ ಚೌಡಮ್ಮಗೆ ಬಲಿ ಕೊಡಲಾಗುವುದು. ಶ್ರಾವಣ ಮಾಸದಲ್ಲಿ ಕಾಶಿಪೂಜೆ, ನವರಾತ್ರಿಯಲ್ಲಿ ಬನ್ನಿ ಮುಡಿಯುವುದು, ಶಿವರಾತ್ರಿಯಲ್ಲಿ ರಥೋತ್ಸವ ಕಾರ್ಯಗಳು ಇಲ್ಲಿನ ಪ್ರಮುಖ ಆಚರಣೆಗಳಾಗಿವೆ. ಈ ದೇವಾಲಯವು ಚಂದ್ರಗುತ್ತಿ, ಉಚ್ಚಂಗಿದುರ್ಗ, ದಂತೆಯ ಈ ಭಾಗದಲ್ಲಿ ವಿಶೇಷವಾದ ಸ್ಥಾನವನ್ನು ಪಡೆದುಕೊಂಡಿದೆ. ಈ ದೇವಾಲಯವು ೧೯೪೬ರಿಂದ ಮುಜರಾಯಿ ಇಲಾಖೆಗೆ ಸೇರಿಸಿ ತಾಲ್ಲೂಕಿನಲ್ಲಿ ಹೆಚ್ಚು ಆದಾಯ ಬರುವ ದೇವಾಲಯ ವಾಗಿದೆ. ವರ್ಷದಲ್ಲಿ ಎರಡು ಬಾರಿ ಜಾತ್ರಾ ಮಹೋತ್ಸವ ಜರುಗುತ್ತಿದೆ.

ಚಿಕ್ಕೇರಳ್ಳಿ : ರಾಮೇಶ್ವರ ದೇವಾಲಯದ ಪ್ರಖ್ಯಾತಿಯನ್ನು ಹೊಂದಿರುವ ದೇವಾಲಯ ಚಿಕ್ಕೆರೆಹಳ್ಳಿಯ ಹೊರಭಾಗದಲ್ಲಿದೆ. ಇಲ್ಲಿರುವ ಈಶ್ವರಲಿಂಗ ಮತ್ತು ನಂದಿಗಳಿಗೆ ವಿಶೇಷವಾದ ಪೂಜೆಯನ್ನು ಮಾಡಲಾಗುತ್ತದೆ. ಈ ದೇವಾಲಯವು ದಕ್ಷಿಣಾಭಿಮುಖವಾಗಿದೆ. ಅಷ್ಟ ಮಾತೃಕೆಯರು, ಬ್ರಹ್ಮ, ಆದಿಶಕ್ತಿ, ರಂಗಪ್ಪನ ಪಾದಗಳು, ನಂದಿ, ಸೂರ್ಯ ಹಾಗೂ ನಾಗದೇವತೆಗಳು ಇವೆ. ನಾಲ್ಕು ಕಂಬಗಳ ಸಭಾಮಂಟಪ ಹೆಚ್ಚು ಆಕರ್ಷಕವಾಗಿದೆ. ಹೊರಭಾಗದಲ್ಲಿ ನಾಲ್ಕು ಶಿಲಾಶಾಸನಗಳು, ಭರ್ಮಪ್ಪನಕಟ್ಟೆ, ಹಾಳಾಗಿರುವ ಶಿಲ್ಪಗಳು, ದೇವಾಲಯದ ಹಿಂದಿನ ಭಾಗದ ಮರದಬಳಿ ಇರುವ ಶಾಸನಗಳು, ಒಂದು ಜಿನನ ವಿಗ್ರಹ ಹಾಗೂ ಇನ್ನು ಮುಂತಾದ ಶಿಲ್ಪಗಳು ನಮಗೆ ಸಿಗುತ್ತವೆ. ಈ ದೇವಾಲಯವು ಮುಜರಾಯಿ ಇಲಾಖೆಯ ಅಧೀನದಲ್ಲಿದೆ.

ತುಗ್ಗಲಹಳ್ಳಿ : ಬಸವೇಶ್ವರ ದೇವಾಲಯ ಇರುವ ಈ ಊರು ಹೊನ್ನಾಳಿಯಿಂದ ತೀರ್ಥ ರಾಮೇಶ್ವರ ದಾರಿಯಲ್ಲಿ ೧೦ ಕಿ.ಮೀ. ದೂರದಲ್ಲಿದೆ. ದೇಗುಲದ ಗರ್ಭಗುಡಿಯಲ್ಲಿ ಕರ್ಣಕುಂಡಲಗಳಿರುವ ನಂದಿಮೂರ್ತಿ ಇದ್ದು ಎಡಪಕ್ಕದಲ್ಲಿ ಈಶ್ವರ ಲಿಂಗವಿರುವುದು ವಿಶೇಷವಾಗಿದೆ. ಅದೇ ರೀತಿಯಾಗಿ ತುಗ್ಗಲಹಳ್ಳಿಯ ಸಮೀಪವಿರುವ ಕರಡಿಕಲ್ಲು ಗವಿಸಿದ್ದೇಶ್ವರ ಕ್ಷೇತ್ರ, ವಿಶಾಲವಾದ ಕೆರೆಗೆ ಹೊಂದಿಕೊಂಡು ಕಾಣುವ ಎತ್ತರದ ಕಲ್ಲುಗುಡ್ಡವೇ ಕರಡಿಕಲ್ಲು ಗವಿ ಸಿದ್ದೇಶ್ವರ ತಾಣ. ಈ ಕಲ್ಲುಗುಡ್ಡದ ಮೇಲೆ ಕಲ್ಲುಗಳ ಮಧ್ಯದಲ್ಲಿದ್ದ ಕಲ್ಲು ಹಾಸುಬಂಡೆಯನ್ನೇ ಸಿದ್ದೇಶ್ವರನೆಂದು ಪೂಜಿಸುತ್ತಿದ್ದರು. ಸಿದ್ದೇಶ್ವರನ ಎಡಪಕ್ಕದಲ್ಲಿ ಧ್ಯಾನನಿರತ ಪರಮೇಶ್ವರಮೂರ್ತಿ, ಬಲ ಪಕ್ಕದಲ್ಲಿ ಎರಡು ದೇವತೆಗಳಿವೆ. ಈ ಮಂಟಪದಲ್ಲಿ ೧೦೧ ಲಿಂಗಗಳನ್ನು ಸ್ಥಾಪಿಸಲಿಕ್ಕಾಗಿ ಮಂದಿರ ಕಟ್ಟಿಸಲಾಗಿತ್ತು.

ಒಂದೊಂದು ಲಿಂಗದಲ್ಲಿ ಹತ್ತು ಲಿಂಗಗಳು ಇಲ್ಲಿ ಕೆತ್ತಲಾಗಿದೆ. ಒಟ್ಟು ೧೦೦೧ ಲಿಂಗಗಳನ್ನು ಪ್ರತಿಷ್ಠಾಪಿಸಲಾಗಿದೆ. ಹೊನ್ನಾಳಿ ತಾಲ್ಲೂಕಿನ ಕೋಟಿಲಿಂಗೇಶ್ವರ ದೇವಾಲಯ ಇದಾಗಿದೆ. ಈ ದೇವಾಲಯದ ಕೆಳಗಡೆ ಬಯಲು ಮಂಟಪ, ಗಣಪತಿ, ಮಹೇಶ್ವರ ದೇವಾಲಯಗಳಿವೆ. ಈ ಮಂಟಪದಲ್ಲಿ ಮದುವೆ ಕಾರ್ಯಗಳನ್ನು ಮಾಡಲಾಗುತ್ತಿದೆ. ಈ ದೇವಾಲಯದ ಸುತ್ತಲು ಸದಾ ಹಸಿರನ್ನು ಸೂಸುವ ಮರಗಳು ನೋಡುಗರ ಕಣ್ಮನ ಸೆಳೆಯುವುದು.

ಕಲಬಿಗಿರಿರಂಗನ ಬೆಟ್ಟ : ಹೊನ್ನಾಳಿಯಿಂದ ಸುಮಾರು ೨೫ ಕಿ.ಮೀ. ದೂರದಲ್ಲಿರುವ ಇದು ತೀರ್ಥಗಿರಿ ಶ್ರೇಣಿಯಲ್ಲಿ ಬರುವ ಒಂದು ಸುಂದರ ನಯನ ಮನೋಹರ ತಾಣ. ಕಲಿಬಿಗಿರಿ ರಂಗನಾಥ ಕ್ಷೇತ್ರ ಎಂದು ಕರೆಯ ಲಾಗುತ್ತದೆ. ಹಳ್ಳೂರು ರಂಗಪ್ಪನೇ ಕಲಿಬಿಗಿರಿ ರಂಗನಾಥನೂ ಆಗಿದ್ದು, ಹಿಂದೆ ಚನ್ನನಾಯಕನನ್ನು ಸಂಹಾರ ಮಾಡಿ ಬೆಳಗುತ್ತಿ ಕೇಂದ್ರವಾಗಿಟ್ಟುಕೊಂಡು ರಾಜ್ಯಭಾರ ಆರಂಭಿಸಿದ, ವಿಜಯನಗರದ ವಂಶದವನಾದ ಚಲುವರಂಗಪ್ಪನು ಹಳ್ಳೂರು ಸೀಮೆ, ಹರಿಹರ, ಆನವೇರಿ ಪ್ರಾಂತ್ಯದವರೆಗೆ ಆಳ್ವಿಕೆ ಮಾಡಿದನೆಂದು ತಿಳಿದುಬರುತ್ತದೆ. ಈಗಲೂ ಆ ಅರಸು ಮನೆತನದವರೇ ಇಲ್ಲಿನ ಎಲ್ಲಾ ಆಚರಣೆಗಳನ್ನು ನೆರವೇರಿಸು ತ್ತಿದ್ದಾರೆ. ರಂಗಪ್ಪಸ್ವಾಮಿ ದೇಗುಲ. ಶಿಲ್ಪಗಳು ಕಂಡುಬರುತ್ತವೆ. ಇದೇ ಗಿರಿ ಶ್ರೇಣಿಯಲ್ಲಿ ಹಲವಾರು ಕ್ಷೇತ್ರಗಳೂ ಇದ್ದು ಪವಿತ್ರಾತ್ಮರ ಸಂಗಮ ಕ್ಷೇತ್ರವು ಆಗಿದೆ. ಈ ಮನಮೋಹಕ ತಾಣಕ್ಕೆ ಚೊಕ್ಕದಾದ ದಾರಿ ಮಾಡಿದಲ್ಲಿ ಯಾತ್ರಾತ್ರಿಗಳ ಆಕರ್ಷಕ ತಾಣವಾಗುವುದರಲ್ಲಿ ಸಂಶಯವಿಲ್ಲ.

ಚಿಕ್ಕಗೋಣಿಗೆರೆ : ಈ ಗ್ರಾಮವು ಹೊನ್ನಾಳಿ ತಾಲ್ಲೂಕಿನಲ್ಲಿ ವಿಶೇಷ ಸ್ಥಾನವನ್ನು ಪಡೆದುಕೊಂಡಿದೆ. ಇದು ತುಂಗಭದ್ರಾ ನದಿಯ ಬಲ ದಂಡೆಯಲ್ಲಿ ಇದ್ದಂತಹ ಈ ಊರು ಹೊನ್ನಾಳಿಯಿಂದ ೧೦ ಕಿ.ಮೀ. ದೂರವಿದೆ. ಈ ಊರಿನಲ್ಲಿ ಇತಿಹಾಸ ಪ್ರಸಿದ್ಧ ಈಶ್ವರ ದೇವಾಲಯ ಅಥವಾ ಕಲ್ಲೇಶ್ವರ ದೇವಾಲಯ, ಜೈನಬಸದಿ, ಬದ್ರುದ್ದೀನ್-ಶಾ-ಖಾದ್ರಿ ವಲಿಯ ದರ್ಗಾಗಳನ್ನು ಕಾಣಬಹುದು. ವಿಶೇಷವಾಗಿ ಆಂಜನೇಯ ದೇವಾಲಯ, ಜೈನಬಸದಿ ಮತ್ತು ದರ್ಗಾ ಈ ಮೂರು ಪವಿತ್ರ ಸ್ಥಳಗಳು ಕೇವಲ ನೂರು ಮೀಟರ್ ಅಂತರದಲ್ಲಿ ಸಿಗುತ್ತವೆ. ಹಾಗಾಗಿ ಈ ಊರಿನಲ್ಲಿ ಜೈನ, ಹಿಂದೂ ಹಾಗೂ ಮುಸ್ಲಿಂ ಜನಾಂಗದ ಐಕ್ಯತೆಯನ್ನು ನಾವು ಕಾಣಬಹುದು. ಇಲ್ಲಿನ ಹಬ್ಬಗಳಲ್ಲಿ ಎಲ್ಲಾ ಜನಾಂಗದವರು ಸೇರಿಕೊಂಡು ಹಬ್ಬವನ್ನು ಆಚರಿಸುತ್ತಾರೆ. ಮತ್ತು ಹಳೆಯ ಊರು ಇದ್ದ ಜಾಗದಲ್ಲಿ ಕಲ್ಲೇಶ್ವರ ದೇವಾಲಯ ಇದೆ. ಅದಕ್ಕೆ ವಿಜಯನಗರದ ಅರಸರು ದಾನ ನೀಡಿದ ಶಾಸನವನ್ನು ಈ ದೇವಾಲಯದ ಅಂಗಳದಲ್ಲಿ ನಾವು ಕಾಣಬಹುದು. ಇತ್ತೀಚೆಗೆ ಈ ದೇವಾಲಯವನ್ನು ಜೀರ್ಣೋದ್ಧಾರ ಮಾಡಲಾಗುತ್ತಿದೆ.

ಚಿಕ್ಕ ಹಾಲಿವಾಣ : ಈ ಊರು ಹೊನ್ನಾಳಿಯಿಂದ ೨೨ ಕಿ.ಮೀ. ದೂರವಿದೆ. ಇಲ್ಲಿನ ಇತಿಹಾಸವನ್ನು ಸಾರುವ ನಾಲ್ಕು ಮಾಸ್ತಿಕಲ್ಲುಗಳು ಸಂಕ್ಲಿಪುರದ ಈರಮ್ಮನ ಗದ್ದೆಯಲ್ಲಿವೆ. ೧೨ನೇ ಶತಮಾನದಲ್ಲಿ ಕಲ್ಯಾಣದಿಂದ ಸಂಚರಿಸುತ್ತಾ ಬಂದ ಐದು ಜನ ಶರಣರಲ್ಲಿ ಒಬ್ಬರಾದ ಜಡೆಯ ರುದ್ರಸ್ವಾಮಿಗಳು ಇಲ್ಲಿ ನೆಲಸಿ ಇಲ್ಲಿಯೇ ಜೀವಂತ ಸಮಾಧಿಯಾಗಿದ್ದು, ಅವರ ಸಮಾಧಿಯ ಮೇಲೆ ಶ್ರೀ ವೀರಭದ್ರಸ್ವಾಮಿಯನ್ನು ಪ್ರತಿಷ್ಠಾಪಿಸ ಲಾಗಿದೆ. ಈ ದೇಗುಲದ ಮುಂಭಾಗದಲ್ಲಿ 'ಶಿರಸ್ ಪವಾಡ' ಕಲ್ಲುಗಳಿದ್ದು ಅವುಗಳ ಮಧ್ಯದಿಂದ ನುಸುಳಿದೆ ಮೈಕೈ ನೋವು ರೋಗಗಳು ಗುಣವಾಗುತ್ತದೆ ಎನ್ನುವ ನಂಬಿಕೆ ಇದೆ. ಹಾಗಾಗಿ ಚಿಕ್ಕ ಹಾಲಿವಾಣವು ಐತಿಹಾಸಿಕ ಮಹತ್ವವನ್ನು ಪಡೆದು ಕೊಂಡಿದೆ.

ಕುಂದೂರು : ಕುಂದೂರಿನಲ್ಲಿ ಆಂಜನೇಯಸ್ವಾಮಿ ದೇಗುಲ ೧೬ನೇ ಶತಮಾನದಲ್ಲಿ ಕೆಳದಿ ನಾಯಕರ ಕಾಲದಲ್ಲಿ ನಿರ್ಮಾಣ ವಾಗಿರುವುದಾಗಿ ತಿಳಿದುಬರುತ್ತದೆ. ಪ್ರವೇಶ ದ್ವಾರ ದಾಟುತ್ತಿದ್ದಂತೆಯೇ ನಾಲ್ಕು ಕಲ್ಲು ಕಂಬಗಳಿಂದ ಕೂಡಿದ ನವರಂಗ, ಮಹಲು, ಅಂತರಾಳ ಹಾಗೂ ಗರ್ಭಗುಡಿಗಳಿವೆ ಗರ್ಭಗುಡಿಯಲ್ಲಿ ಶ್ರೀ ಆಂಜನೇಯಸ್ವಾಮಿ ವಿಗ್ರಹವನ್ನು ಪ್ರತಿಷ್ಠಾಪಿಸಿದ್ದಾರೆ. ವಿನಾಯಕ, ಗೋಪುರದ ಮಹಾದ್ವಾರದಲ್ಲಿ ಆಂಜನೇಯನಮೂರ್ತಿ, ಏಕಶಿಲೆಯ ದೀಪಸ್ತಂಭವಿದೆ. ಪ್ರತಿ ಶನಿವಾರಸ್ವಾಮಿಯ ಉತ್ಸವಮೂರ್ತಿಯ ಪಲ್ಲಕ್ಕಿ ಉತ್ಸವ, ಆಂಜನೇಯಸ್ವಾಮಿಯ ಪಾದುಕೆಗಳು ಈಗ ಮೈಸೂರಿನ ಜಗನ್ಮೋಹನ ಅರಮನೆಯಲ್ಲಿಡಲಾಗಿದೆ.

ಕಮ್ಮಾರಗಟ್ಟೆ : ಹೊನ್ನಾಳಿಯಿಂದ ಪೂರ್ವ ೭ ಕಿ.ಮೀ. ದೂರದಲ್ಲಿರುವ ಇದು ಐತಿಹಾಸಿಕ ಪ್ರಾಮುಖ್ಯತೆ ಯನ್ನು ಪಡೆದಿರುವ ಗ್ರಾಮವಾಗಿದೆ. ಹಿಂದೆ ಇಲ್ಲಿ ಕೇವಲ ಕಮ್ಮಾರರು ವಾಸವಾಗಿದ್ದರೆಂದೂ ಅವರು ಈ ನಾಡಿನ ಪಾಳೆಗಾರರಿಗೆ ಯುದ್ಧ ಸಾಮಗ್ರಿಗಳನ್ನು ತಯಾರಿಸಿ ಕೊಡುತ್ತಿದ್ದುದಾಗಿ ತಿಳಿದುಬರುತ್ತದೆ. ಅದಕ್ಕೆ ಸಾಕ್ಷಿಯಾಗಿರುವ ಪುರಾತನ ಕುಲುಮೆಯ ಅವಶೇಷಗಳನ್ನು ಇಲ್ಲಿ ಕಾಣಬಹು ದಾಗಿದೆ. ಆದ್ದರಿಂದಾಗಿ ಕಮ್ಮಾರರ ಕೊಪ್ಪಲು. ಕಮ್ಮಾರಘಟ್ಟೆ, ಕಮ್ಮಾರಗಟ್ಟೆಯಾಗಿರುವುದಾಗಿ ತಿಳಿದುಬರುತ್ತದೆ. ಇಂತಹ ಪವಿತ್ರ ಕರ್ಮಹರಿದ ಕ್ಷೇತ್ರಗಳಲ್ಲಿ ಜೀವ ಸಮಾಧಿಯಾಗಲು ಇಚ್ಛಿಸಿದ ಹೆಳವನಕಟ್ಟೆ ಗಿರಿಯಮ್ಮನು ಇಲ್ಲಿ ಬಂದು ತುಂಗಾ ಭದ್ರಾ ನದಿಯಲ್ಲಿ ಜೀವಂತ ಸಮಾಧಿಯಾದಳು. ಈ ಸ್ಥಳಕ್ಕೆ ಬಂಡೆ ಹೊಳೆ ಎಂದು ಕರೆಯಲಾಗುತ್ತದೆ. ಇದೇ ಸ್ಥಳದಲ್ಲಿ

ಗಿರಿಯಮ್ಮನ ಚಿಕ್ಕದೊಂದು ಮೂರ್ತಿ ಮಾಡಿ ಗುಡಿಯನ್ನು ಕಟ್ಟಿದ್ದಾರೆ. ಶ್ರಾವಣ ಮಾಸದ ಮೊದಲ ಸೋಮವಾರದಂದು ಕಾರ್ತಿಕ ಸಮಾರಂಭ ಜರುಗುವುದು. ಆ ಸಮಯದಲ್ಲಿ ಸುತ್ತಮುತ್ತಲಿನ ಗ್ರಾಮಗಳ ಹಲವಾರು ದೇವರುಗಳು ತಂದು ಕಾರ್ತಿಕ ಕಾರ್ಯಕ್ರಮ ಮಾಡಲಾಗು ತ್ತದೆ.

ಶ್ರೀ ಸಿದ್ದೇಶ್ವರ ದೇವಾಲಯವು ಇಲ್ಲಿನ ಇನ್ನೊಂದು ಆಕರ್ಷಣೆ ಈ ದೇವಾಲಯವು ಕಲ್ಯಾಣದ ಚಾಲುಕ್ಯರ ಶೈಲಿಯಲ್ಲಿ ಕಂಡುಬರುತ್ತದೆ. ಆದರೆ ಅದಕ್ಕಿಂತಲೂ ಮುಂಚೆ ಚೋಳರ ಆಳ್ವಿಕೆಗೆ ಒಳಪಟ್ಟಿದ್ದರ ಕುರಿತು ದೇಗುಲದ ಹಿಂಬದಿಯಲ್ಲಿರುವ ಶಿಲಾಶಾಸನವು ಮಾಹಿತಿಯನ್ನು ನೀಡುತ್ತದೆ. ಅದರೊಂದಿಗೆ ಇಲ್ಲಿರುವ ಹುಣಸೆಮರ ವಿಶೇಷ ವಾಗಿದೆ. ಕಾರಣ ಇದು ಹಲವಾರು ಬೇರುಗಳನ್ನು ಹೊಂದಿ ಕಾಂಡವಾಗಿದೆ. ಆಲದ ಮರದ ರೀತಿಯಲ್ಲಿ ಈ ಹುಣಸೆ ಮರ ಕಂಡು ಬರುತ್ತದೆ. ಜೊತೆಗೆ ಶ್ರೀರಾಮನ ಬಾಣ, ಶ್ರೀ ಸಿದ್ದೇಶ್ವರ ದೇಗುಲದ ಮುಂಭಾಗದಲ್ಲಿರುವ ಗಣಪತಿ, ಶಾಸನ, ಕಲ್ಮಣೆ, ಲಟ್ಟಣಿಗೆ ಮತ್ತು ಉಡೆವುಗಳು ಕಾಣಸಿಗುತ್ತವೆ. ಇದು ತಾಲ್ಲೂಕಿನ ಪವಿತ್ರ ಕ್ಷೇತ್ರಗಳಲ್ಲಿ ಒಂದಾಗಿದೆ.

ದಾಸರಹಟ್ಟಿ ರಂಗನಾಥಸ್ವಾಮಿ ಕ್ಷೇತ್ರ ಅಥವಾ ಆದಿ ತುರುಮಲ ಕ್ಷೇತ್ರ : ಹೊನ್ನಾಳಿಯಿಂದ ೧೭ ಕಿ.ಮೀ. ದೂರದಲ್ಲಿರುವ ದಾಸರಹಟ್ಟಿಯ ಗಡಿಯಲ್ಲಿನ ಗುಡ್ಡದ ಮೇಲೆ ಇರುವ ತಾಣವೇ ಈ ಸುಕ್ಷೇತ್ರ ನವೀಕರಗೊಂಡಿರುವ ಶ್ರೀ ರಂಗನಾಥ ಸ್ವಾಮಿ ದೇಗುಲ ನಟರಾಜನಿರುವ ಶಿವಲಿಂಗ ತುಂಬಾ ವಿಶಿಷ್ಟವಾಗಿದೆ. ಪೀಠದಲ್ಲಿ ಲಿಂಗದ ಬಲದಾಗಿ ನಟರಾಜನನ್ನು ಕೆತ್ತಲಾಗಿದೆ.

ಕುದುರೆ ಕೊಂಡ : ಹೊನ್ನಾಳಿ ತಾಲ್ಲೂಕಿನಲ್ಲಿ ವಿಶೇಷ ವಾದ ಸ್ಥಾನವನ್ನು ಪಡೆದಿರುವ ಈ ಊರು ಸುಮಾರು ೧೨೫ ವರ್ಷಗಳ ಹಿಂದೆ ಯುರೋಪಿಯನ್ ಮೂಲ ದವರೆಂದು ಹೇಳಲಾಗುವ ಮೆಸರ್ಸ್ ಮತ್ತು ವಿಲ್ಸನ್ ಎಂಬ ಗಣಿ ಕೈಗಾರಿಕೋದ್ಯಮಿಗಳು ಕ್ರಿ.ಶ. ೧೮೮೫ರಲ್ಲಿ ಚಿನ್ನದ ಗಣಿ ಆರಂಭಿಸಿದರು. ಈ ಗಣಿಗಾರಿಕೆ ಲಾಭದಾಯಕವಾಗಿರ ದಿದ್ದುದರಿಂದ ೧೯೩೭-೩೮ರಲ್ಲಿ ಗಣಿಗಾರಿಕೆಯನ್ನು ನಿಲ್ಲಿಸಲಾಯಿತು. ಕುಲುಮೆಗಳ ಮೂಲಕ ಚಿನ್ನ ತಯಾರಿಸು ತ್ತಿದ್ದರಿಂದ ಎಲ್ಲೆಲ್ಲೂ ಬೆಂಕಿಯನ್ನು ಕಂಡ ಅಂದಿನವರು ಈ ಗ್ರಾಮವನ್ನು ಬೆಂಕಿಪಟ್ಟಣವೆಂದು ಕರೆಯುತ್ತಿದ್ದರು. ಯುರೋಪಿಯನ್ನರ ಅಡಿಯಲ್ಲಿ ಅನೇಕ ಚಿನ್ನದ ಭಟ್ಟಿಗಾರರು, ಅಧಿಕಾರಿಗಳು ಕೆಲಸ ಮಾಡುತ್ತಿದ್ದು ಅಲ್ಲಿನ ಗಣಿಗಳು ಮತ್ತು ಚಿನ್ನದ ಭಟ್ಟಿಗಳಿದ್ದವೆನ್ನುವುದಕ್ಕೆ ಸಾಕ್ಷಿಯಾಗಿ ಈಗಲೂ ಗಣಿಗಳ ಕುರುಹುಗಳನ್ನು ನಾವು ಕಾಣಬಹುದು. ಅದರ ಪಕ್ಕದಲ್ಲಿ ಬೃಹತ್ ಕೆರೆಯನ್ನು ನಾವು ಕಾಣಬಹುದು.

ಸೊರಗೊಂಡನಕೊಪ್ಪ : ಹೊನ್ನಾಳಿಯಿಂದ ಪಶ್ಚಿಮಕ್ಕೆ ಸುಮಾರು ೩೨ ಕಿ.ಮೀ. ದೂರದಲ್ಲಿರುವ ಈ ಊರನ್ನು ಮೊದಲು ಭೀಮಾನಾಯ್ಕನ ತಾಂಡ ಎಂದೂ ಗುತ್ತಿಬಳ್ಳಾರಿ ಎಂತಲೂ ಕರೆಯುತ್ತಿದ್ದದು ತಿಳಿದುಬರುತ್ತದೆ. ಕ್ರಿ.ಶ. ೧೭೫೦ರ ಪೂರ್ವದಲ್ಲಿ ಭೀಮಾನಾಯ್ಕ ಎನ್ನುವವರು ಬೇಚಿರ್ ಗ್ರಾಮದ ಅಸ್ತಿತ್ವಕ್ಕೆ ಕಾರಣನಾಗಿ ಅದರ ನಾಯ್ಕನಾಗಿದ್ದರಿಂದ ಭೀಮಾನಾಯ್ಕನು ನಾಯಕನಾಗಿದ್ದರಿಂದ ಅವನ ಹೆಸರಿನಿಂದ ಈ ತಾಂಡವನ್ನು ಕರೆಯಲಾಗುತ್ತಿತ್ತು. ದಿನಾಂಕ : ೧೫.೦೨.೧೭೩೯ರಂದು ಭೀಮನಾಯ್ಕ ಹಾಗೂ ಧರ್ಮಿಣಿ ದಂಪತಿಗಳಿಗೆ ಸೂರನಾದ ಶ್ರೀ ಸೇವಾಬಾಯರ ಜನನ ವಾಯಿತು. ಆ ಸೂರನಿಂದಾಗಿ ಈ ಸ್ಥಳವು ಸೂರನಕೊಪ್ಪ ಆಗಿ ನಂತರದಲ್ಲಿ ಸೊರಗೊಂಡನ ಕೊಪ್ಪವಾಗಿದೆ ಎನ್ನುವುದು ಇಲ್ಲಿನವರ ಅಭಿಪ್ರಾಯವಾಗಿದೆ. ಸೊರಗೊಂಡನ ಕೊಪ್ಪ ಲಂಬಾಣಿ ಜನರ ಪವಿತ್ರ ಕ್ಷೇತ್ರವಾಗಿದೆ. ಅಲ್ಲದೆ ಸೇವಾಲಾಲ್ ಅವರ ಆರಾಧ್ಯ ದೈವವಾಗಿದ್ದಾನೆ.

ಸೊರಟೂರು : ಹೊನ್ನಾಳಿಯಿಂದ ಸುಮಾರು ಏಳು ಕಿ.ಮೀ. ದೂರವಿರುವ ಈ ಊರಲ್ಲಿ ನಾಲ್ಕು ಶಾಸನಗಳು ಈ ಗ್ರಾಮದ ಇತಿಹಾಸವನ್ನು ಹೊತ್ತು ನಿಂತಿವೆ. ಒಂದು ಕೋಟೆ ಇದ್ದು ಕೆಳಭಾಗದಲ್ಲಿ ಜಾಡರು, ಮೇಲ್ಭಾಗವನ್ನು ವೀರಶೈವರು ಆಳಿದುದಾಗಿ ತಿಳಿದುಬರುತ್ತದೆ. ಇಲ್ಲಿನ ಕೋಟೆಗೌಡರ ಮನೆತನದವರಲ್ಲಿ ಕತ್ತಿ, ಗುರಾಣಿಗಳಿರುವುದನ್ನು ಕಾಣಬಹುದು. ಕೋಟೆಯ ಅವಶೇಷಗಳನ್ನು ಈಗಲೂ ನೋಡಬಹುದು. ಈಶ್ವರ ದೇವಾಲಯ ಹಾಗೂ ಊರಿನ ಬೇರೆ ಬೇರೆ ಭಾಗದಲ್ಲಿ ಮಹಾಸತಿ ಕಲ್ಲುಗಳಿವೆ. ಕೋಟೆಗೌಡ್ರ ಮನೆತನದ ಲಿಂಗಪ್ಪ ಪಾಟೀಲರು ಮೈಸೂರು ಸಂಸ್ಥಾನದ ಸದಸ್ಯರಾಗಿದ್ದುದು ಕೂಡ ಈ ಊರಿನ ಹೆಮ್ಮೆಯ ಗರಿಗಳಲ್ಲೊಂದಾಗಿದೆ. ಕೋಟೆ ಗೌಡ್ರು ಎಂದೇ ಹೆಸರಿರುವ ಇವರದು ಕೆಳದಿ ಅರಸರ ಕಾಲದಲ್ಲಿ ಐದು ಗ್ರಾಮಗಳ ಒಡೆತನ ಹೊಂದಿದ್ದ ಮನೆತನ ವಾಗಿದೆ. ಇವರ ಮನೆದೇವರು ಎಂದೂ ಹೇಳಲಾಗುವ ರಾಮೇಶ್ವರ ದೇಗುಲ ಚಿಕ್ಕೆರೆಹಳ್ಳಿ ಯಲ್ಲಿದೆ ಸೊರಟೂರು ಈ ಮೇಲಿನ ಅಂಶಗಳಿಂದ ಐತಿಹಾಸಿಕ ಮಹತ್ವವನ್ನು ಪಡೆದುಕೊಂಡಿದೆ.

ಸಾಸ್ವೇಹಳ್ಳಿ : ಈ ಹಳ್ಳಿಯ ಕೂಡ ಐತಿಹಾಸಿಕ ಮಹತ್ವ ಪಡೆದ ಗ್ರಾಮವಾಗಿದ್ದು ಈ ಊರಿನಲ್ಲಿ ಅನೇಕ ಶಾಸನಗಳನ್ನು ನೋಡಬಹುದಾಗಿದೆ. ಹಿಂದೆ ಇಲ್ಲಿ ಪಾಳೇಗಾರರ ಆಳ್ವಿಕೆ ಇದ್ದು ಅದರ ಅವಶೇಷವಾಗಿ ಹಳೆಯದಾದ ಕೋಟೆಯನ್ನು ಈಗಲೂ ನೋಡಬಹುದಾಗಿದೆ.

ಅರಕೆರೆ : ಹೊನ್ನಾಳಿಯಿಂದ ಹರಿಹರ ರಸ್ತೆಯಲ್ಲಿ ೬ ಕಿ.ಮೀ. ಸಾಗಿದೆ ಅರಕೆರೆ ಗ್ರಾಮ ನಮಗೆ ಸಿಗುತ್ತದೆ. ಇಲ್ಲಿನ

ಈಶ್ವರ ದೇಗುಲದ ಆವರಣದಲ್ಲಿ ಮೂರು ದಾನಶಾಸನಗಳು ಹಾಗು ಐದು ವೀರಗಲ್ಲುಗಳಿದ್ದು ಈ ಗ್ರಾಮದ ಇತಿಹಾಸವನ್ನು ಸಾರುತ್ತಿವೆ. ಈ ಶಾಸನಗಳಿಂದ ಈ ಗ್ರಾಮದಲ್ಲಿ ತುರು ಮಂದೆಗಳನ್ನು ರಕ್ಷಿಸಲು ಹೋರಾಡಿದ ವೀರರಿದ್ದುದಾಗಿಯೂ, ಮಡಿದ ವೀರರಿಗೆ ನೆತ್ತರಿಗೆ ಕೊಡುಗೆಯಾಗಿ ಭೂದಾನ ನೀಡುವ ಪದ್ಧತಿ ಬಳಕೆಯಲ್ಲಿದ್ದುದಾಗಿಯೂ ತಿಳಿದುಬರುತ್ತದೆ. ಮೂರರಿಂದ ಐದು ವರ್ಷಗಳಿಗೊಮ್ಮೆ ಯುಗಾದಿ ಹಬ್ಬದ ಪ್ರಯುಕ್ತ ಮಣೆ ಆಡುವುದು ಇಲ್ಲಿನ ವಿಶೇಷವಾಗಿದೆ. ನಾಗೇಶ್ವರ ದೇವಾಲಯದ ಪ್ರಕಾರದಲ್ಲಿರುವ ಶಾಸನ ಇದು ನೋಳಂಬ ಅರಸ ತ್ರೈಲೋಕ್ಯಮಲ್ಲ ದೇವನ ಆಳ್ವಿಕೆಯ ಕಾಲಕ್ಕೆ ಸಂಬಂಧಿಸಿದೆ ಇದರಲ್ಲಿ ತ್ರೈಲೋಕ್ಯ ಮಲ್ಲ ನನ್ನಿನೊಳಂಬ ಪಲ್ಲವ ಪೆರ್ಮಾಡಿ, ಕೊಗಳಿ, ಐನೂರು ಇದರ ಉಲ್ಲೇಖವಿದೆ. ಇದೇ ಪ್ರಾಂಗಣದಲ್ಲಿರುವ ಇನ್ನೊಂದು ಶಾಸನ ಇದು ಹೊಯ್ಸಳ ಚಕ್ರವರ್ತಿ ಎರಡನೆಯ ವೀರಬಲ್ಲಾಳನ ಕಾಲಕ್ಕೆ ಸಂಬಂಧಿಸಿದ್ದು, ಅದೇ ಪ್ರಕಾರದಲ್ಲಿರುವ ಮತ್ತೊಂದು ಕಲ್ಲು ಚಾಳುಕ್ಯ ತ್ರಿಭುವನ ಮಲ್ಲನ ಆಳ್ವಿಕೆಯ ಕಾಲಕ್ಕೆ ಸಂಬಂಧಿಸಿದ್ದಾಗಿದೆ. ಅದೇ ದೇವಾಲಯುದ ಪ್ರಕಾರದ್ಲಲರಿವು ಮೊದಲನೆಯ ವೀರಗಲ್ಲು ಮಾದೆಯ ನಾಯಕನು ಅರಕೆರೆಯ ದಾಳಿಯಲ್ಲಿ ಕಾದಾಡಿ ಸತ್ತಿದ್ದಕ್ಕಾಗಿ ಊರಿನ ದಾಖಲೆಯಾಗಿದೆ. ಅದೇ ಸ್ಥಳದಲ್ಲಿನ ಎರಡನೆಯ ವೀರಗಲ್ಲು ಹೊಯ್ಸಳ ವೀರಬಲ್ಲಾಳನ ಆಳ್ವಿಕೆಯ ಕಾಲಕ್ಕೆ ಸಂಬಂಧಿಸಿದ್ದಾಗಿದೆ. ಇದೇ ಸ್ಥಳದಲ್ಲಿರುವ ಮೂರನೆಯ ವೀರಗಲ್ಲು ಅರಕೆರೆಯ ಬೊಮ್ಮಯನಾಯಕನಾದ ಮಾದನಾಯಕನು ಬಿಟ್ಟುಕೊಟ್ಟ ದತ್ತಿಯ ದಾಖಲು ಇದಾಗಿದೆ ಅದೇ ಸ್ಥಳದಲ್ಲಿರುವ ನಾಲ್ಕನೆಯ ವೀರಗಲ್ಲು ಮಹಾಮಂಡಳೇಶ್ವರ, ಸೋಮೇಶ್ವರ ದೇವ ನರಸಿಂಹದೇವ ಮತ್ತು ಸೋಮಯ ದಣ್ಣಾಯಕರ ಕುರಿತ ದಾಖಲೆಯಾಗಿದೆ. ಅದೇ ಸ್ಥಳದಲ್ಲಿನ ಐದನೆಯ ವೀರಗಲ್ಲು ಮಂತ್ರಿ ಸೋಮೆಯ ನರಸಿಂಹದೇವ ಅರಕೆರೆಗಳ ಉಲ್ಲೇಖವಿದೆ. ಈ ರೀತಿಯಾಗಿ ಅರಕೆರೆ ಗ್ರಾಮ ಐತಿಹಾಸಿಕ ಮಹತ್ವವನ್ನು ಪಡೆದುಕೊಂಡಿದೆ.

ಗೋಪಗೊಂಡನಹಳ್ಳಿ (ಹೆಚ್): ಈ ಗ್ರಾಮವು ಹೊನ್ನಾಳಿಯಿಂದ ಆರು ಕಿ.ಮೀ. ದೂರದಲ್ಲಿದೆ ಈ ಸ್ಥಳದಲ್ಲಿ ಸಾವಿರಾರು ಗೋವುಗಳನ್ನು ಸಾಕಲಾಗಿತ್ತು. ಅವುಗಳ ಗಂಜಲು ಹರಿದು ಹೊಂಡವಾಗಿತ್ತು. ಅದು ಗೋಮೂತ್ರ ಹೊಂಡವಾಗಿ ಗೋವುಗಳ ಹೊಂಡವಾಗಿ ಗೋಪಗೊಂಡನಹಳ್ಳಿ ಆಗಿರುವುದಾಗಿ ಇಲ್ಲಿನ ಜನಪದರ ಬಾಯಲ್ಲಿ ಹರಿದಾಡುವ ದಂತಕಥೆ ಇದೆ. ಈ ಗ್ರಾಮದ ಹೊರಭಾಗದ ಪೂರ್ವದಲ್ಲಿ ಒಂದು ಸಾಧಾರಣ ಎರಡು ಬೃಹತ್ ಕರಿಕಲ್ಲಿನ ಕಂಬಗಳಿಂದ ಕಟ್ಟಿದ ದೇವಾಲಯಗಳಿದ್ದು, ಅವುಗಳ ಐತಿಹಾಸಿಕ ಮಹತ್ವವನ್ನು ಪಡೆದಿವೆ. ಅಲ್ಲದೆ ಗ್ರಾಮದಲ್ಲಿ ಶ್ರೀ ಮಲ್ಲಿಕಾರ್ಜುನ ಸ್ವಾಮಿ, ವರ್ತೆ ಮಲ್ಲೇಶ್ವರ ಹಳ್ಳಿಮಲ್ಲಪ್ಪ ಎಂದು ಬರೆಯುವ ದೇವಾಲಯವಿದೆ. ಪಾಳು ಜಾಗದಲ್ಲಿದ್ದ ಮಲ್ಲಿಕಾರ್ಜುನ ಸ್ವಾಮಿಯು ಒಂದು ಹಸುವಿನಿಂದಾಗಿ ಬೆಳಕಿಗೆ ಬಂದು ಅಲ್ಲಿ ದೇವಾಲಯ ಕಟ್ಟಿದ ಮೇಲೆ ವಲಸೆ ಬಂದ ನೊಳಂಬ ವೀರಶೈವ ಲಿಂಗಾಯತರು ಸ್ವಾಮಿ ಪೂಜೆಗಾಗಿ ಮತ್ತು ಮನೆದೇವರನ್ನಾಗಿ ಮಾಡಿಕೊಂಡು ಕಲ್ಯಾಣ ಮಂಟಪ, ದೇವಾಲಯದ ಜೀರ್ಣೋದ್ಧಾರ ಮಾಡಿದ್ದಾರೆ. ಹಾಗಾಗಿ ಈ ಊರು ಕೂಡ ಐತಿಹಾಸಿಕ ಪಡೆದುಕೊಂಡಿದೆ.

ಈ ರೀತಿಯಾಗಿ ಹೊನ್ನಾಳಿ ತಾಲ್ಲೂಕು ಇತಿಹಾಸ ದೃಷ್ಟಿಯಿಂದ ವಿಶೇಷವಾದ ಸ್ಥಾನವನ್ನು ಪಡೆದಿದ್ದು ಇನ್ನು ಹಲವಾರು ಊರುಗಳಲ್ಲಿ ದೇವಾಲಯಗಳನ್ನು ನಾವು ಕಾಣಬಹುದು. ಅದೇ ರೀತಿಯಾಗಿ ಕೆಂಚಿಕೊಪ್ಪ ಮತ್ತು ಜೀನಹಳ್ಳಿಗಳಲ್ಲಿ ಸಿಡಿ ಹಬ್ಬವನ್ನು ಆಚರಿಸುತ್ತಾರೆ. ಈ ರೀತಿಯಾಗಿ ತಾಲ್ಲೂಕಿನಲ್ಲಿ ಅನೇಕ ಐತಿಹಾಸಿಕ ಮಹತ್ವ ಪಡೆದ ದೇವಾಲಯಗಳು, ಶಾಸನಗಳು, ಸ್ಮಾರಕಗಳು ಮತ್ತು ವೀರಗಲ್ಲುಗಳು ಕಂಡುಬರುತ್ತವೆ. ಅದರ ಜೊತೆಗೆ ಹೊನ್ನಾಳಿ ತಾಲ್ಲೂಕಿನಲ್ಲಿ ಹೀರಕಲ್ಮಠ, ಮುರುಗಿ (ಗದ್ದುಗೆ) ಸ್ವಾಮಿದೇಗುಲ ಕೂಲಂಬಿ, ಶ್ರೀ ರಾಘವೇಂದ್ರಸ್ವಾಮಿ ಮಠ ಹೊನ್ನಾಳಿ, ಸಿದ್ಧಾರೂಡಮಠ ಕೋಣನತಲೆ, ಸಿದ್ಧಾರೂಢ ಆಶ್ರಮ ದಿಡಗೂರು, ಶ್ರೀ ಸೇವಾಭಾಯ ಹಾಗೂ ಅವರ ಜನ್ಮಸ್ಥಳ ಸೂರಗೊಂಡನ ಕೊಪ್ಪ, (ಸೇವಾಲಾಲ್) ಹಾಲಸ್ವಾಮಿಮಠ ಗೋವಿನಕೋವಿ, ಹಾಲಸ್ವಾಮಿ ಬೃಹನ್ಮಠ ರಾಂಪುರ, ಹಿರೇಮಠ–ಹೊಟ್ಯಾಪುರ ಇನ್ನು ಮುಂತಾದ ಮಠಗಳನ್ನು ನಾವು ಕಾಣಬಹುದು.

ಆಧಾರಸೂಚಿ

೧. ಕ್ಷೇತ್ರಕಾರ್ಯ.

೨. ದಾವಣಗೆರೆ–**ಇದು ನಮ್ಮ ಜಿಲ್ಲೆ**, ಟಿ. ಗಿರಿಜಾ, ನಿಹಾರಿಕ ಪ್ರಕಾಶನ, ದಾವಣಗೆರೆ, ೨೦೦೧.

೩. ಕಮ್ಮಾರಗಟ್ಟೆ, ಹೆಳವನಕಟ್ಟೆ ಗಿರಿಯಮ್ಮ, **'ಇತಿಹಾಸ ದರ್ಶನ'**, ಬಿ.ಎಸ್. ರಾಮಪ್ಪನವರು.

೪. **ದಾವಣಗೆರೆ ಜಿಲ್ಲಾ ದರ್ಶಿನಿ**, ಗುರು ಎಂ.ಪಿ., ಪಂಪ ಪ್ರಕಾಶನ, ದಾವಣಗೆರೆ, ೧೯೯೯.

೫. **ಎಪಿಗ್ರಪಿಯಾ ಕರ್ನಾಟಕ** ಶಿವಮೊಗ್ಗ ಜಿಲ್ಲೆಯ ಶಾಸನಗಳು ಭಾಗ–೧, ಲೂಯಿಸ್ ರೈಸ್, ೧೯೦೨.

೬ **ಶ್ರೀ ತೀರ್ಥರಾಮೇಶ್ವರ ಕ್ಷೇತ್ರ ಇತಿಹಾಸ**, ಬಸವರಾಜಪ್ಪ ಜೆ.ಎನ್. ಬಸವಪ್ಪಯ್ಯ ಪ್ರಕಾಶನ, ಬೆಳಗುತ್ತಿ, ೧೯೯೫.

೮. **'ಹೊನ್ನೆಲೆಗಳು'** ಹೊನ್ನಾಳಿ ತಾಲ್ಲೂಕಿನ ಸಾಂಸ್ಕೃತಿಕ ಅಧ್ಯಯನ, ಡಾ. ನಾ. ಕೊಟ್ರೇಶ್ ಉತ್ತಂಗಿ ಸಹನಾದ್ರಿ ಪ್ರಕಾಶನ, ಹೊನ್ನಾಳಿ, ೨೦೦೪.

೭೭

ಸಂಗಮ ಸೇನಾನಿ ನಾಗಣ್ಣ ಒಡೆಯ ಮತ್ತು ಅವನ ವಂಶೀಯರು

ಎಸ್. ಗಂಗಾಂಬಿಕೆ ಗೋವರ್ಧನ್ *

ನಾಗಣ್ಣ ಒಡೆಯ ಮತ್ತು ಅವನ ವಂಶೀಯರು ವಿಜಯನಗರ ಸಾಮ್ರಾಜ್ಯದ ಸಂಗಮ ದೊರೆಗಳ ಅಧೀನದಲ್ಲಿದ್ದ ಆಡಳಿತಾಧಿಕಾರಿಗಳು, ಇವರು ಮೊದಲನೆಯ ಬುಕ್ಕ, ಎರಡನೆಯ ಹರಿಹರ, ಎರಡನೆಯ ಬುಕ್ಕ, ಮೊದಲನೆಯ ದೇವರಾಯ ಮತ್ತು ಮೂರನೆಯ ಬುಕ್ಕನ ಆಳ್ವಿಕೆಯಲ್ಲಿ ರಾಜ್ಯಾಡಳಿತದಲ್ಲಿ ಮುಖ್ಯಪಾತ್ರವನ್ನು ವಹಿಸಿರುವರು. ಸುಮಾರು ಒಂದು ಶತಮಾನ ಕಾಲ ನಾಗಣ್ಣ ಒಡೆಯ ಮತ್ತು ಅವನ ವಂಶೀಯರು ಕನ್ನಡನಾಡಿನ ದಕ್ಷಿಣ ಭಾಗದ ಬೇಲೂರು, ಸಕಲೇಶಪುರ, ಮೂಡಗೆರೆ, ಚಿಕ್ಕಮಗಳೂರು, ಬೆಂಗಳೂರು, ಹೊಸಕೋಟೆ, ಆನೇಕಲ್, ವೇಮಗಲ್, ಕೋಲಾರ, ಮುಳಬಾಗಿಲು, ಚಿಂತಾಮಣಿ, ಬಾಗೇಪಲ್ಲಿ, ಚಿಕ್ಕಬಳ್ಳಾಪುರ ಪ್ರದೇಶಗಳಲ್ಲಿ ಆಡಳಿತದ ವಿವಿಧ ಹಂತಗಳಲ್ಲಿ ಕಾರ್ಯನಿರ್ವಹಿಸುತ್ತಾ ನಾಡಿನ ಸಾಂಸ್ಕೃತಿಕ ಚರಿತ್ರೆಗೆ ಗಣ್ಯ ಕೊಡುಗೆಗಳನ್ನು ನೀಡಿದ್ದಾರೆ.

ನಾಗಣ್ಣ ಒಡೆಯ

ನಾಗಣ್ಣ ಒಡೆಯನ ಪ್ರಥಮ ಉಲ್ಲೇಖವು ಕ್ರಿ.ಶ. ೨೨–೧೨–೧೩೫೫ರ ಬೇಲೂರಿನ (ಬೇಲೂರು ೫೧೯) ಶಾಸನದಲ್ಲಿ[1] ಕಂಡುಬರುತ್ತದೆ. ಈ ಶಾಸನದನ್ವಯ, ನಾಗಣ್ಣ ಒಡೆಯನು ತನಗೆ ಉಂಬಳಿಯಾಗಿ ಮೊದಲನೆಯ ಬುಕ್ಕನು ಕೊಟ್ಟ ತಗರೆನಾಡೊಳಗಣ ಚೇರಮನಹಳ್ಳಿಯನ್ನು ತನ್ನ ಸಹೋದರ ಚಂಪವೊಡೆಯನರ ಹೆಸರಿನಲ್ಲಿ ಚೆಂದಪುರ [illegible] ಮಾಡಿ ಬೇಲೂರಿನ ಕೊಡವೊಡೆಯ ಎಂಬಾತನಿಗೆ ದಾನ ನೀಡಿದನು. ಈ ಶಾಸನದ ಕಾಲಕ್ಕಾಗಲೇ ನಾಗಣ್ಣ ಒಡೆಯನು ತನ್ನ ಅಧಿರಾಜನಿಗೆ ಪ್ರೀತಿಪಾತ್ರನಾದ ಅಧಿಕಾರಿಯಾಗಿ ಉಂಬಳಿಯನ್ನು ಪಡೆಯುತ್ತಿದ್ದು, ಚಂದಪವೊಡೆಯನು ಅವನ ಸಹೋದರ ನಾಗಿದ್ದುದು ಇದರಿಂದ ತಿಳಿಯುತ್ತದೆ. ಆದರೆ ಈತ ಹಿರಿಯ ಅಥವಾ ಕಿರಿಯ ಸಹೋದರನೋ ಎಂಬುದಕ್ಕೆ ಬೇರೆ ಶಾಸನಾಧಾರ ಗಳು ಸದ್ಯಕ್ಕೆ ಲಭ್ಯವಿಲ್ಲ.

ಶಾಸನಗಳಲ್ಲಿ ನಾಗಣ್ಣ ಒಡೆಯನ ಹೆಸರು ನಾಗಂಣ್ಣ ಒಡೆಯ, ತೆಪ್ಪದ ನಾಗಣವೊಡೆಯ, ತೆಪ್ಪದ ನಾಗಣ್ಣ, ನಾಗಂಣ್ಣವೊಡೆಯ, ನಾಗಣ್ಣ ಉಡ್ಯೆಯರ್, ನಾಗಂಣವಡೆಯ, ನಾಕಣ ಉಡ್ಯೆಯರ್, ನಾಗಂಣೊಡೆರು ಎಂಬುದಾಗಿ ಉಲ್ಲೇಖಗೊಂಡಿದೆ. ತನ್ನ ಪ್ರವರ್ಧಮಾನದ ಆರಂಭಿಕ ಹಂತದಲ್ಲಿ ಈತ ಒಬ್ಬ ಸಾಮಾನ್ಯ ಸೇನಾಪತಿಯಾಗಿದ್ದನು.

ಕ್ರಿ.ಶ. ೧೩೬೦ರ ಶಾಸನವು (ಅಲೂರು ೪೧) ನಾಗಣ್ಣ ಒಡೆಯನು ಬುಕ್ಕರಾಯನ ಹಿರಿಯಕುಮಾರ ಎಂದು ಕರೆಸಿಕೊಳ್ಳುತ್ತಿದ್ದನೆಂಬುದನ್ನು ತಿಳಿಸುತ್ತದೆ.[2] ಈ ವೇಳೆಗಾಗಲೇ ನಾಗಣ್ಣ ಒಡೆಯನು 'ಕ್ರಾಂತಿಕಾರರಾಯರ ಗಂಡ' ಅಥವಾ 'ಖಂತಿಕಾಜಿರಾಯರಗಂಡ' ಎಂದು ಬಿರುದಾಂಕಿತನಾಗಿದ್ದನು. ಅಧಿರಾಜರ ವಿರುದ್ಧ ಬಂಡೆದ್ದವರನ್ನು ಅಡಗಿಸಿ ತನ್ನ ಸಾಮರ್ಥ್ಯವನ್ನೂ ಸ್ವಾಮಿಭಕ್ತಿಯನ್ನೂ ಆತ ನಿರೂಪಿಸಿದ್ದುದರಿಂದ ಅವನಿಗೆ ಈ ಬಿರುದು ಸಂದಿರಬಹುದು. ಈ ಬಗೆಯ ಸ್ವಾಮಿನಿಷ್ಠೆಯನ್ನು ಹೊಂದಿದ್ದರ ಫಲವಾಗಿ ಆತ ಬುಕ್ಕರಾಯನ ಹಿರಿಯಕುಮಾರನೆಂಬ ವಾತ್ಸಲ್ಯಕ್ಕೆ ಅರ್ಹನಾಗಿದ್ದನು ಎಂದೆನಿಸುತ್ತದೆ.

ಕ್ರಿ.ಶ. ೧೩೭೧ರ ಶಾಸನದ (ಮೂಡಗೆರೆ ೧೨)[3] ಪ್ರಕಾರ, ನಾಗಣ್ಣ ಒಡೆಯನು ರಾಜಕೀಯ ಪ್ರಾಬಲ್ಯ ಸಾಧಿಸಿದ್ದುದಕ್ಕೆ ಅವನ ಬಿರುದುಗಳು ಸಾಕ್ಷಿ ನೀಡುತ್ತವೆ. (ಬರಿದೆನುಡಿವರಾಯರಗಂಡಂ ತೆಪ್ಪದ ನಾಗಣ್ಣ', 'ಭೂವಿನುತಂ ತೆಪ್ಪದ ನಾಗಂ' ಎಂದು ಈತ ಕೀರ್ತಿತನಾಗಿದ್ದು, ತನ್ನ ಕಾರ್ಯನಿರ್ವಹಣೆಯ ದಕ್ಷತೆಯಿಂದ ಜನಪ್ರಿಯನಾಗಿದ್ದು ಅವನ ಕಾರ್ಯವ್ಯಾಪ್ತಿಯು ವಿಸ್ತಾರವಾಗುತ್ತಿದ್ದುದನ್ನು ಸೂಕ್ಷ್ಮವಾಗಿ ಗ್ರಹಿಸಬಹುದು.

ಕ್ರಿ.ಶ. ೧೩೭೧ರ ಮತ್ತೊಂದು ಶಾಸನದನ್ವಯ (ಚಿಕ್ಕಬಳ್ಳಾಪುರ ೬೩)[4] ನಾಗಣ್ಣ ಒಡೆಯನು ನಾವಲೆ ರಾಜ್ಯವನ್ನಾಳುತ್ತಿದ್ದನು. ಇದು ಬಹಳ ಲಕ್ಷ್ಯಾರ್ಹ ಸಂಗತಿ. ಈಗ ಕೇವಲ ಒಂದು ಸಾಧಾರಣ ಗ್ರಾಮವಾಗಿರುವ ಶಿಡ್ಲಘಟ್ಟ

* # ಕೆ ೨೭೨. ಅರ್ಯಾಬಿಕ್ ಕಾಲೇಜ್ ಪೋಸ್ಟ್. ವಿನೋಬನಗರ. ಕಾಡುಗೊಂಡನಹಳ್ಳಿ. ಬೆಂಗಳೂರು-೫೬೦೦೪೫

ತಾಲ್ಲೂಕಿನ ಸಾದಲಿಯು ಅಂದು ನಾಗಣ್ಣ ಒಡೆಯನ ಆಳ್ವಿಕೆಗೆ ಒಳಪಟ್ಟಿತು. ಸಾದಲಿಯ ರಾಜ್ಯ ಎಂದಾಕ್ಷಣ ಅದು ವಿಜಯನಗರ ಕಾಲದ ಮುಳಬಾಗಿಲು ರಾಜ್ಯ, ತೆರಕಣಾಂಬಿ ರಾಜ್ಯಗಳಂತೆ ವಿಸ್ತಾರವಾದ ಪ್ರದೇಶವೇನು ಆಗಿರಲಿಲ್ಲ. ಏಕೆಂದರೆ 'ಸಾದಲಿಯ ರಾಜ್ಯ', 'ಸಾದಲಿಯ ನಾಡು', 'ಸಾದಲಿಯ ವಳಿತ' ಎಂಬಿತ್ಯಾದಿ ಶಾಸನೋಲ್ಲೇಖಗಳನ್ವಯ ಸಾದಲಿಯು ಕೋಳಾಲನಾಡಿಗೆ ಒಳಪಟ್ಟಿತ್ತು. 'ಸಾದಲಿಯ ರಾಜ್ಯ' ಎಂದಿರುವ ಕಡೆಗಳಲ್ಲೆಲ್ಲ ಎಲ್ಲಿಯೂ ಅದರೊಳಗೆ ನಾಡು, ಸ್ಥಳ ಮುಂತಾದ ಯಾವುದೇ ಆಡಳಿತದ ಘಟಕಗಳು ಕಂಡುಬಂದಿಲ್ಲ. ಹಾಗಾಗಿ ನಾಗಣ್ಣ ಒಡೆಯನು ಸಾದಲಿಯ ರಾಜ್ಯವನ್ನು ಆಳುತ್ತಿದ್ದ ಎಂದಾಗ ಸಾದಲಿಯೂ ಸೇರಿದಂತೆ ಸುತ್ತಮುತ್ತಲಿನ ಕೆಲವು ಪ್ರದೇಶ ಗಳನ್ನೊಳಗೊಂಡ ಭಾಗದ ಅಧಿಕಾರಿಯಾಗಿದ್ದ ಎಂದು ತಿಳಿಯಬಹುದಷ್ಟೆ ಈ ಶಾಸನವು ನಾಗಣ್ಣ ಒಡೆಯನ ಅಧೀನ ಅಧಿಕಾರಿಯಾಗಿದ್ದ ಪೊಗರೂರಿನ ಪೋಚೆನಾಯ್ಕನ ಮಕ್ಕಳಾದ ಹಿರಿಯ ಚೇಲೇನಾಯಕ ಮತ್ತು ಚಿಕ್ಕಚೇಲೆನಾಯಕರು ತಮ್ಮ ತಾಯಿ ಪೆರಿಯವ ನಾಯಕಿತಿಯ ಹೆಸರಿನಲ್ಲಿ ಪೆರಿಯ ಸಮುದ್ರವನ್ನು ಕಟ್ಟಿ ಭೂದಾನ ನೀಡಿದುದನ್ನು ತಿಳಿಸುತ್ತದೆ. ಪೋಚೆನಾಯಕನು 'ಕಾವೇರಿವಲ್ಲಭ', 'ಪೆಕ್ಕಡ್ರುರಾಜುಲ ಒಕ್ಕಟ್ಟಂಗಂಡ', (ಇದು ಪೆರೇಸಂದ್ರ ಎಂಬ ಹೆಸರು ಪಡೆದಿದೆ.) 'ಚೋಳಕಟಕ ಚೇರೆಕಾರ' (=ಚೋಳಕಟಕ ಸೂರೆಕಾರ) ಎಂಬ ಬಿರುದುಗಳನ್ನು ಪಡೆದಿದ್ದನು.

ಕ್ರಿ.ಶ. ೧೩೭೯ರ ಶಾಸನಾನ್ವಯ (ಹೊಸಕೋಟೆ ೧೦೮, ೧೦೯)[೫] ನಾಗಣ್ಣ ಒಡೆಯನ ಮಂತ್ರಿ ಪೆಟ್ಟಿಯರಸನು ಪುಲ್ಲಿಯೂರು ನಾಡಿನ ಮಹಾಪ್ರಭು ಮಲ್ಯೆಮಂಡಲ ಪೆರುಮಾಳ್‌ರ ಜೊತೆಗೂಡಿ ನಂಬಿ-ಇರವಿ-ಪೆಟ್ಟಿಯಾರ್‌ರು ವರದಕ್ಷಿಣೆಯೆಂದು ಪಸಿಗ್ಯೆಪಳ್ಳಿಯನ್ನು (ಈಗಿನ ಹಸಿಗಾಳ) ತನ್ನ ಮಗಳ ಮಕ್ಕಳಾದ ಇರವಿಯಣ್ಣನ್ ಮತ್ತು ಕೇಶವ ಸೆಟ್ಟಿಯಾರರಿಗೆ ಉಡುಗೊರೆಯಾಗಿ ನೀಡಿದರು. ಕ್ರಿ.ಶ. ೧೩೮೦ರ ಶಾಸನವು (ತ್ರುಟಿತ) ತಿಳಿಸುವಂತೆ (ಆನೇಕಲ್, ೨೮)[೬] ನಾಗಣ್ಣ ಒಡೆಯನು ತನ್ನ ಅಧೀನ ಅಧಿಕಾರಿಗಳಾದ ಕಾಸರ್, ಸೇನಬೋವ ಕಂಬಯ್ಯರ್ ಜೊತೆಗೂಡಿ ಕೆಲವು ಭೂದಾನಗಳನ್ನು ನೀಡಿದರು. ಕ್ರಿ.ಶ. ೧೩೮೦ರ ಮತ್ತೊಂದು ಶಾಸನದಂತೆ (ತ್ರುಟಿತ) (ಚಿಕ್ಕಬಳ್ಳಾಪುರ ೪೩)[೭] ನಾಗಣ್ಣ ಒಡೆಯರು ರಾಜ್ಯಾಭ್ಯುದಯಗೆಯ್ಯುತ್ತಿರಲು ಚಿಂನಮ ಎಂಬಾತನು ದೀಪಮಾಲೆಕಂಬವನ್ನು ನಿರ್ಮಿಸುತ್ತಾನೆ. ಇದೇ ಶಾಸನದಲ್ಲಿ ನಾಗಣ್ಣಒಡೆಯನ ಅಧಿಕಾರಿ ರಾಚರಸರ ಉಲ್ಲೇಖವೂ ಇದೆ.

ಕ್ರಿ.ಶ. ೧೨೮೫ರ ಶಾಸನದ ಪ್ರಕಾರ (ಹೊಸಕೋಟೆ, ೯೩)[೮] ನಾಗಣ್ಣ ಒಡೆಯನಿಗೆ ಶುಭವಾಗಲೆಂದು, ವೀರಹರಿಹರನ ಬಾಳಿಗೂ ತೋಳಿಗೂ ಜಯವಾಗಲಿ ಎಂದು ಪುಲ್ಲಿಯೂರು ನಾಡಿನ ರಾಜರಾಜನು ನಂಬಿ ಇರವಿ ಸೆಟ್ಟಿಯಾರ್ ಮತ್ತು ಇತರೆ ಪುಲ್ಲಿಯೂರು ನಿವಾಸಿಗಳೊಡಗೂಡಿ ವರದರಾಜ ದೇವರಿಗೆ ಚೋಳಪ್ಪನಹಳ್ಳಿಯ ಕೆಲವು ಹೊಲಗದ್ದೆಗಳನ್ನು ಅಕರವಾಗಿ ದತ್ತಿಬಿಟ್ಟನು. ವೀರಹರಿಹರ (ಇಮ್ಮಡಿ ಹರಿಹರ)ನ ಬಾಳಿಗೂ ತೋಳಿಗೂ ಜಯವಾಗಲಿ, ನಾಗಣ್ಣ ಒಡೆಯನಿಗೆ ಶುಭವಾಗಲಿ ಎಂದು ಹಾರೈಸಿ ನೀಡಿರುವ ದಾನಶಾಸನವು ೧೩೮೫ರಲ್ಲಿ ಇಮ್ಮಡಿ ಹರಿಹರನು ನಡೆಸಿದ ಯಾವುದೋ ಯುದ್ಧದಲ್ಲಿ ನಾಗಣ್ಣ ಒಡೆಯನು ಭಾಗವಹಿಸಿದುದರ ಸೂಚನೆಯನ್ನು ನೀಡುತ್ತಿರುವ ಹಾಗಿದೆಯಲ್ಲವೇ ?

ಕ್ರಿ.ಶ. ೧೩೯೦ರ ಶಾಸನವು (ಕೋಲಾರ, ೧೦೫)[೯] ತಿಳಿಸುವಂತೆ ನಾಗಣ್ಣ ಒಡೆಯನು ನಿಗಿರಿಲಿ ಚೋಳಮಂಡಲದ ಪೂರ್ಣ ಅಧಿಪತ್ಯ ಸಾಧಿಸಿದ್ದನು. ಕ್ರಿ.ಶ. ೧೩೯೮ರ ಶಾಸನದಂತೆ (ಬೇಲೂರು, ೧೬೫)[೧೦] ನಾಗಣ್ಣ ಒಡೆಯನು ಬೇಲೂರು ಸುರೇಂದ್ರತೀರ್ಥ ಶ್ರೀಪಾದಂಗಳ ಮಠದ ಶ್ರೀರಾಮ ದೇವರಿಗೆ ಅಮೃತಪಡಿ, ದೀಪಾರಾಧನೆ ಮತ್ತು ಯತಿಭಿಕ್ಷೆಗಳಿಗೆಂದು ನೀಡಿದ ಭೂದಾನ ಗಳನ್ನು ಪಾಲಿಸಬೇಕೆಂದು ಇಮ್ಮಡಿ ಹರಿಹರನು ಗುಂಡಪ್ಪ ದಂಡನಾಯಕನಿಗೆ ನಿರೂಪ ನೀಡಿದನು. ಇಮ್ಮಡಿ ಹರಿಹರನಿಗೆ ನಾಗಣ್ಣ ಒಡೆಯ ಎಂತಹ ಆತ್ಮೀಯ, ನೆಚ್ಚಿನ ಅಧಿಕಾರಿಯಾಗಿದ್ದಿರಬೇಕಲ್ಲವೇ ? ಕ್ರಿ.ಶ. ೧೪೦೦ರ ತ್ರುಟಿತ ಶಾಸನದ ಪ್ರಕಾರ (ಬೇಲೂರು, ೧೮೮)[೧೧] ನಾಗಣ್ಣ ಒಡೆಯನು ಮಾರುತಣ ಎಂಬುವವನೊಡಗೂಡಿ ಚನ್ನಕೇಶವ ದೇವರಿಗೆ ಸೇವಾರ್ಥ ವಾಗಿ ಕೆಲವು ದಾನಗಳನ್ನು ನೀಡಿದನು.

ನಾಗಣ್ಣ ಒಡೆಯನ ಕೊನೆಯ ಉಲ್ಲೇಖ ಕೋಲಾರದ ಶಾಸನದಲ್ಲಿ ದೊರೆಯುತ್ತದೆ.[೧೨] ಈ ಶಾಸನದಲ್ಲಿ ನೇರವಾಗಿ ನಾಗಣ್ಣ ಒಡೆಯನನ್ನು ಪ್ರಸ್ತಾಪಿಸದೆ ಅವನ ಆಳ್ವಿಕೆಯ ಪ್ರದೇಶದ ಗಡಿಚಾವಡಿಗೆ ಸೇರಿದ್ದ ಕೋಳಾಲ ನಾಡಿನ ತಿಮ್ಮಸಮುದ್ರವನ್ನು ಉಲ್ಲೇಖಿಸುತ್ತದೆ. ಅಂದರೆ ಅಲ್ಲಿಯವರೆಗೂ ಅವನ ಅಧಿಕಾರದ ವ್ಯಾಪ್ತಿಯು ಇತ್ತು ಎಂಬುದು ತಿಳಿಯುತ್ತದೆ.

ಒಟ್ಟಾರೆಯಾಗಿ ಇವನ ಶಾಸನಗಳನ್ನು ಅವಲೋಕಿಸಿದಾಗ ಒಬ್ಬ ಸೇನಾಪತಿಯಾಗಿದ್ದವನು ತನ್ನ ದಕ್ಷತೆ, ಕಾರ್ಯತತ್ಪರತೆ, ರಾಜ್ಯನಿಷ್ಠೆಯ ಫಲವಾಗಿ ಮುಂದೆ ಸಾದಲಿಯ ಪ್ರಭುವಾಗಿ, ಇಡೀ ನಿಗಿರಿಲಿ ಚೋಳಮಂಡಲದ ಒಡೆಯನಾಗಿ ವಿಶೇಷ ಅಧಿಕಾರವನ್ನು ಗಳಿಸಿದ್ದನು. ಅಧಿಕಾರದಲ್ಲಿ ಇವನಿಗೆ ನೆರವಾಗಿ ಪೋಚೆನಾಯಕ, ನಂಬಿ-ಇರವಿ-ಸೆಟ್ಟಿ, ಕಾಶರ್, ಕಂಬಯ್ಯ, ರಾಚರಸರ್, ಪೆಟ್ಟಿಯರಸರ್, ರಾಜರಾಜನ್ ಎಂಬ ಅಧಿಕಾರಿ ವರ್ಗವಿದ್ದುದನ್ನು ಗಮನಿಸಬಹುದು.

ಇನ್ನೊಂದು ವಿಚಾರ : ಸುಗುಟೂರು ಪಾಳೆಯಗಾರನಾದ ದೇವಪ್ಪಗೌಡನ ತಂದೆ ನಾಗಣ್ಣೊಡೆಯನೇ ? ಎಂಬ

ಸಂಶಯಕ್ಕೆ ಇಲ್ಲಿ ಸುಸ್ಪಷ್ಟ ಉತ್ತರವೆಂದರೆ, ದೇವಪ್ಪಗೌಡನಿಗೂ ಈ ನಾಗಣ್ಣ ಒಡೆಯನಿಗೂ ಯಾವ ರೀತಿಯಲ್ಲಿಯೂ ಸಂಬಂಧವಿಲ್ಲ. ನಾಗಣ್ಣ ಒಡೆಯನಿಗೆ ದೇವಪ್ಪ ಒಡೆಯ ಮಗನಿರುವುದಾದರೂ ಈ ದೇವಪ್ಪ ಒಡೆಯನು ಸುಗಟೂರಿನ ದೇವಪ್ಪಗೌಡನಿಗಿಂತ ಭಿನ್ನನು.

ನಾಗಣ್ಣ ಒಡೆಯನ ವಂಶೀಯರು

ನಾಗಣ್ಣ ಒಡೆಯನ ವಂಶೀಯರಲ್ಲಿ ಅವನ ಪೂರ್ವಜರ ಬಗ್ಗೆ ಸದ್ಯಕ್ಕೆ ಮಾಹಿತಿ ದೊರೆತಿಲ್ಲವಾದರೂ ಅವನ ನಂತರದ ವಂಶೀಯರ ಬಗ್ಗೆ ಶಾಸನಾಧಾರಗಳಿವೆ. ಆ ವಿವರ ಈ ಮುಂದಿನಂತಿದೆ :

ಈಶ್ವರದೇವ

ಶಾಸನಗಳಲ್ಲಿ ಇವನ ಹೆಸರು ಈಶ್ವರಾಂಕ ಮತ್ತು ಈಶ್ವರದೇವ ಎಂದು ಉಲ್ಲೇಖಗೊಂಡಿದೆ. ಬ್ರಹ್ಮಕ್ಷತ್ರಿಯ ಕುಲಕ್ಕೆ ಸೇರಿದ ಈಶ್ವರದೇವನಿಗೆ ವೀರಾದೇವಿ ಎಂಬ ಮಡದಿಯೂ ತಿಪ್ಪಣ್ಣವೊಡೆಯನೆಂಬ ಮಗನೂ ಇದ್ದರು. ಇವನ ಶಾಸನಗಳ ಆದಿಯಲ್ಲಿ ತೆಪ್ಪದ ನಾಗಣ್ಣನನ್ನು ಸ್ಮರಿಸಲಾಗಿದೆಯಷ್ಟೆ.[೧೩] ಆದರೆ ನಾಗಣ್ಣ ಒಡೆಯನೊಡನೆ ಇವನಿಗಿದ್ದ ಸಂಬಂಧದ ವಿಚಾರದಲ್ಲಿ ಶಾಸನಗಳು ಮೌನ ವಹಿಸಿವೆ.

ತಿಪ್ಪನೃಪಾಲ

ಈತ ಈಶ್ವರದೇವ ವೀರಾದೇವಿಯರ ಮಗ. ತಿಪ್ಪಣ್ಣ ಒಡೆಯ ಎಂತಲೂ ಈತ ಕರೆಯಲ್ಪಟ್ಟಿದ್ದಾನೆ. 'ಸತ್ಕೀರ್ತಿ ಸಹಾಯಕರು, ಎಕ್ಕತುಳಭೀಮ, ಕಟಕಜಗದ್ದಳ ವೀರಾವತಾರ, ಶೃಂಗಾರಪುರೀ ಚಕ್ರವರ್ತಿ, ಮಂಡಲಗೋವ ವೈರಿಭಸಿಂಗ, ಕಳಕುಠಾರಚಕ್ರವರ್ತಿ, ಜಗಜೆಟ್ಟಿ, ಗೋಪಾಳ ದೇವನಗರಿ ಕೊಂಡವೀರ, ಹಂನೆರಡು ಮಂಡಳಿಕರಗಂಡ, ಪುಸಿಯರ ವೀರ, ಮಾಸದ ಸೊಬಗಹಾರ, ತೆಂಕಣರಾಯ ರಾವುತರ ಗಂಡ' ಎಂದು ಕೀರ್ತಿತನಾಗಿದ್ದಾನೆ. ಈ ಬಿರುದುಗಳು ತಿಪ್ಪಣ್ಣ ವೊಡೆಯನ ಅಸಾಮಾನ್ಯ ಪರಾಕ್ರಮವನ್ನು, ಶೌರ್ಯಾತಿಶಯವನ್ನು ಸೂಚಿಸುತ್ತದೆ. ಈತನು ಸೆಟ್ಟಿಗನ ಪಾಳೆಯದ ಶ್ರೀ ಜನಾರ್ಧನ ದೇವರ ಶ್ರೀಕಾರ್ಯಕ್ಕೆ ಆ ಪೂಜಾರಿ ದಾಮಂಣ್ನ ಚಿಕ್ಕಜಂಣ್ಣಕಲ್ಲಂ ಗಳಿಗೆ ಮಣಲಿಗೆನಾಡೊಳಗಣ ಚೆಂಡನಹಳ್ಳಿ ಮತ್ತು ಮೂಗನಾಡೊಗಣ ಹರದನೂರಪುರ ಈ ಉಭಯ ಗ್ರಾಮಗಳನ್ನು ದಾನ ನೀಡಿದನು. ಜೊತೆಗೆ ದೇವವೃಂದದಲ್ಲಿರುವ ರಾಮನಾಥದೇವರ ಸೇವೆಗೂ ಸಹ ಭೂದಾನಗಳನ್ನಿತ್ತಿದ್ದನು.[೧೪]

ದೇವಣ್ಣ ಒಡೆಯ

ಶಾಸನಗಳಲ್ಲಿ ಈತ ದೇಪಂಣವೊಡೆಯ, ದಿಪಂಣ ವೊಡೆಯ, ದೇವಪ್ಪ ಒಡೆಯ, ದೀಪಂಣ ಒಡೆಯ, ದೇಪಂಣ ಉಡೈಯರ್ ಎಂದು ಉಲ್ಲೇಖಗೊಂಡಿದ್ದಾನೆ. ಈತ ನಾಗಣ್ಣ ಒಡೆಯನ ಕುಮಾರ. ಕ್ರಿ.ಶ. ೧೩೭೬ರ (ತ್ರುಟಿತ) ಶಾಸನದ ಪ್ರಕಾರ ಈತನು ಪಾಲಸ್ಯ ಗೋತ್ರದ ಸದಾಶಿವಭಟ್ಟ ಮತ್ತು ಮೊದಲಾದವರಿಗೆ ಭೂದಾನವನ್ನಿತ್ತಿದ್ದನು.[೧೫] ಕ್ರಿ.ಶ. ೧೩೭೭ರ ಶಾಸನವು[೧೬] ಸ್ಪಷ್ಟವಾಗಿ ದೇವಣ್ಣ ಒಡೆಯನು ತೆಪ್ಪದ ನಾಗಣ್ಣ ಒಡೆಯನ ಮಗ ಎಂಬುದನ್ನು ತಿಳಿಸುತ್ತದೆ. ದೇವಣ್ಣ ಒಡೆಯನು ಆಳ್ವಿಕೆ ನಡೆಸುತ್ತಿದ್ದಾಗ ವೈಶ್ಯಕುಲದ ದಿಪಿಸೆಟ್ಟಿಯು ಜಾಣಸಂದಪುರದಲ್ಲಿನ ವರದರಾಜಸ್ವಾಮಿಯ ದೇಗುಲದ ಮುಂದೆ ದೀಪಸ್ತಂಭವನ್ನು ನೆಡಿಸಿದನು.

ಕ್ರಿ.ಶ. ೧೩೭೮ರ ಶಾಸನವು[೧೭] ತಿಳಿಸುವಂತೆ, ದೇವಣ ಒಡೆಯನು ಸಾದಲಿಯನ್ನಾಳುವ ಕಾಲದಲ್ಲಿ ಸಾದಲಿ, ರಾಮೇಶ್ವರ, ಸಾಲೂಮೂಲೆ, ಸೆರೆಯ ಸೆಟ್ಟಿಗಳು, ಹಲರು ಮತ್ತು ಸಮಸ್ತಗೌಡ ಪ್ರಜೆಗಳು ರಾಮೇಶ್ವರವೆಂಬ ಗ್ರಾಮದಲ್ಲಿ ಸಂತೆಯನ್ನು ನಿರ್ಮಿಸಿದರು.

ಕ್ರಿ.ಶ. ೧೩೭೯ ಶಾಸನವು[೧೮] ದೇವಣ್ಣ ಒಡೆಯರ ಆಳ್ವಿಕೆಯ ಕಾಲದಲ್ಲಿ ಕೋಳಾಲ ನಾಡಪ್ರಭುಗಳು, ವಿವಿಧ ಸೆಟ್ಟಿಯರು, ಪಟ್ಟಣ ಸ್ವಾಮಿಗಳು, ಸಮಸ್ತಗೌಡ ಪ್ರಜೆಗಳು ಸೇರಿ ಕೋಲಾರಮ್ಮ ದೇವಿಯ ದೇವಾಲಯದ ಸ್ಥಾನಿಕರಾದ ದೇವಪ್ಪಗಳಿಗೆ 'ಜೀಯ' ಪಟ್ಟವನ್ನು ಕಟ್ಟಿ ಅನೇಕ ಭೂದಾನಗಳನ್ನು ನೀಡಿದರು.

ಕ್ರಿ.ಶ. ೧೩೮೦ರ ಶಾಸನದ[೧೯] ಪ್ರಕಾರ ದೇವಪ್ಪ ಒಡೆಯನು ಎಚ್ಚರಸರು ಮೊದಲಾದರೊಡಗೂಡಿ ಹುಲ್ಲೂರು ನಾಡಿನ ರಾಚಸಮುದ್ರವೆಂಬ ಅಗ್ರಹಾರವನ್ನು ನಿರ್ಮಿಸಿ ಅಲ್ಲಿನ ಲಕ್ಕೊಂಡಹಳ್ಳಿಯನ್ನು ಮಹಾಜನರಿಗೆ ಮತ್ತು ಅಲ್ಲಿನ ವೆಂಕಟರಮಣಸ್ವಾಮಿ ದೇಗುಲಕ್ಕೆ ಅನೇಕ ದಾನಗಳ ಸಹಿತ ಉಡುಗೊರೆಯಾಗಿ ನೀಡಿದನು.

ಕ್ರಿ.ಶ. ೧೩೮೧ರ ಶಾಸನದನ್ವಯ[೨೦] ದೇಪಣ್ಣ ಒಡೆಯರು ಎರುಮುರೈ ನಾಡಿನ ವೆಪ್ಪೂರು ಸೆಂಜಿಶೀಯಾರ್, ಮಾವಿಶೀಯಾರ್, ತಂದಮದೇವರ್ ಮೊದಲಾದ ನಿವಾಸಿಗಳೊಡನೆ ಸೇರಿ ಅಮುದ ಸಮುದ್ರವನ್ನು ಅಕರವಾಗಿ ಅಣ್ಣರಾಜ ರಕ್ಕವಟ್ಟಿ ಅಯ್ಯನವರಿಗೆ ನೀಡಿದನು.

ಕ್ರಿ.ಶ. ೧೩೮೪ರ ಶಾಸನವು[೨೧] ತಿಳಿಸುವಂತೆ ನಾಗಣ್ಣ ಒಡೆಯರಿಗೆ ಆಯುರಾರೋಗ್ಯ ಐಶ್ವರ್ಯ ಸಿದ್ಧಿಯಾಗಬೇಕೆಂದು, ನಾಗಣ್ಣ ಒಡೆಯರ ಕುಮಾರ ದೇವಣ್ಣ ಒಡೆಯರಿಗೆ ಇಷ್ಟಕಾಮ್ಯಾರ್ಥ ಸಿದ್ಧಿಯಾಗಬೇಕೆಂದು ಕೋಳಾಲನಾಡಿನ ಮಹಾಪ್ರಭುಗಳು, ಸಾದಲಿಯ ಲಕ್ಕರಸ ಮತ್ತು ಮುಕ್ಕಣ್ಣರು, ಇರಿಸೆಟ್ಟಿ ಮೊದಲಾದ ಸೆಟ್ಟಿವರ್ತಕರು, ಸಮಸ್ತಗೌಡ ಪ್ರಜೆಗಳು ಕೊತ್ತನೂರು ಗ್ರಾಮವನ್ನು ದಾನ ನೀಡಿದರು.

ಕ್ರಿ.ಶ. ೧೩೮೪ರ ಶಾಸನವೆಂದರೆ[೨೨] ದೇಪಣ್ಣ ಒಡೆಯರಿಗೆ ಸಕಲೈಶ್ವರ್ಯ ಸಿದ್ಧಿಯಾಗಬೇಕೆಂದು 'ಸಕಲ ಸಾಮ್ರಾಜ್ಯ ಆಗಬೇಕೆಂದು' ಅವರ ಮನೆಯ ಅಧಿಕಾರಿ ಲಕ್ಕರಸ, ಕೋಳಾಲದ ನಾಡಪ್ರಭುಗಳು ಮೊದಲಾದವರು ಶ್ರೀ ಮೂಲಸ್ಥಾನದೇವರ ಅಂಗರಂಗಭೋಗಾದಿ ಸೇವೆಗಳಿಗೆಂದು ಚಿಕ್ಕಹಯ್ಯೂರಿನ ಕೆಲವು ಪ್ರದೇಶಗಳನ್ನು ದಾನ ಮಾಡಿದರು.

ಕ್ರಿ.ಶ. ೧೩೮೬ರ ಶಾಸನವು[೨೩] ತಿಳಿಸುವಂತೆ ದೇವಣ್ಣ ಒಡೆಯನು ಕಂದಾವರದ ವರದರಾಜದೇವರ ಪೂಜಾರ್ಥವಾಗಿ ಮುಟ್ಟೂರನ್ನು ದಾನ ನೀಡಿದನು.

ಕೆರೆಗಳ ನಿರ್ಮಾಣದ ಮೂಲಕ ದೇವಪ್ಪ ಒಡೆಯನು ತನ್ನ ಆಳ್ವಿಕೆಯ ಆನೇಕಲ್, ಚಿಕ್ಕಬಳ್ಳಾಪುರ, ಶಿಡ್ಲಘಟ್ಟ, ಕೋಲಾರ, ಹೊಸಕೋಟೆ, ವೇಮಗಲ್ ಪ್ರದೇಶ ಗಳಲ್ಲಿ ಆರ್ಥಿಕಾಭಿವೃದ್ಧಿಗೆ ಇಂಬು ನೀಡಿದುದು ನಿಚ್ಚಳವಾಗು ತ್ತದೆ. ಇವನ ಶಾಸನಗಳಲ್ಲಿ ಶೆಟ್ಟಿವರ್ತಕರ ಉಲ್ಲೇಖವು ಅವನ ಕಾಲಾವಧಿಯಲ್ಲಿ ಸೆಟ್ಟಿವರ್ತಕರ ಪ್ರಾಬಲ್ಯವನ್ನು ಬಿಂಬಿಸುತ್ತದೆ. ವಿಶಾಲ ನಿಗಿರಿಲಿ ಚೋಳಮಂಡಲದ ಅಧಿಪನಾಗಿದ್ದ ನಾಗಣ್ಣ ಒಡೆಯನ ಮಗ ದೇವಣ್ಣ ಒಡೆಯ ತನ್ನ ಕಾಲಕ್ಕೆ ಕೋಳಾಲ ನಾಡಿನಲ್ಲಿ ಮಾತ್ರ ಪ್ರಾಬಲ್ಯ ಸಾಧಿಸಿದುದು ವಿಪರ್ಯಾಸ.

ನಾಗಣ್ಣ ಒಡೆಯ II

ಈತ ತೆಪ್ಪದ ನಾಗಣ್ಣ ಒಡೆಯನ ಮೊಮ್ಮಗ. ಅಂದರೆ ದೇವಣ್ಣ ಒಡೆಯನ ಮಗ. ಇವನ ಪ್ರಥಮ ಉಲ್ಲೇಖ ಕ್ರಿ.ಶ. ೧೪೦೩ರ ಕೈವಾರದ ತ್ರುಟಿತ ಶಾಸನದಲ್ಲಿ[೨೪] ದೊರೆಯುತ್ತದೆ. 'ಕ್ರಾಂತಿಕಾರರಾಯರಗಂಡ ನಾಗಣ್ಣ ಒಡೆಯರ ಮಗ ದೇವಣ್ಣ ಒಡೆಯರ ಕುಮಾರ ನಾಗಣ್ಣ ಒಡೆಯ' ಎಂಬುದಾಗಿ ಉಲ್ಲೇಖಗೊಂಡಿರುವುದು ಈತ ತೆಪ್ಪದ ನಾಗಣ್ಣ ಒಡೆಯನ ಮೊಮ್ಮಗ ಎಂಬುದನ್ನು ದೃಢಪಡಿಸುತ್ತದೆ. ಇಮ್ಮಡಿ ನಾಗಣ್ಣ ಒಡೆಯನ ಪ್ರಧಾನಿಯೋರ್ವ ನೀಡಿದ ದಾನವನ್ನು ಈ ಶಾಸನ ಅಸ್ಪಷ್ಟವಾಗಿ ತಿಳಿಸುತ್ತದೆ.

ಕ್ರಿ.ಶ. ೧೪೦೩ರ ಮತ್ತೊಂದು[೨೫] ಶಾಸನವು ಇಮ್ಮಡಿ ನಾಗಣ್ಣ ಒಡೆಯನು ಆಳುತ್ತಿದ್ದಾಗ ಸೀತಿಯ ಭೈರವ ದೇವರ ತಿರುವಿಡೈಯಾಟಕ್ಕಾಗಿ ಪೆರಿಯ-ಪೆರುಮಾಳ-ಸೆಟ್ಟಿಯು ಕೆರೆಯೊಂದನ್ನು ನಿರ್ಮಿಸಿ ಕೆರೆಯ ದಕ್ಷಿಣಭಾಗದಲ್ಲಿ ಭೂ ಪ್ರದೇಶಗಳನ್ನು ದೇವರಿಗೆ ದಾನ ನೀಡಿದನು.

ಕ್ರಿ.ಶ. ೧೪೧೬ರ ಶಾಸನದ ಪ್ರಕಾರ ಇಮ್ಮಡಿ ನಾಗಣ್ಣ ಒಡೆಯನು ಆಳುವಾಗ ಅವನ ಅಧೀನನಾಗಿ ಅನ್ನದಾನಿ ಒಡೆಯನು ಮುಳುವಾಗಿಲ ರಾಜ್ಯವನ್ನು ನೋಡಿ ಕೊಳ್ಳುತ್ತಿದ್ದನು. ಈ ವೇಳೆಗಾಗಲೇ ಬೈಚೆಯು ದಂಡನಾಯಕನು ಪ್ರವರ್ಧಮಾನಕ್ಕೆ ಬರುತ್ತಿರಲಾಗಿ ಇಮ್ಮಡಿ ನಾಗಣ್ಣೊಡೆಯನ ಪ್ರಾಮುಖ್ಯತೆ ಪಕ್ಕಕ್ಕೆ ಸರಿದು ಈತ ಬೈಚೆಯ ದಂಡನಾಯಕನ ಅಧೀನವರ್ತಿಯಾಗುವಂತಾಯಿತು. ಇದನ್ನು ಕ್ರಿ.ಶ. ೧೪೨೩ರ[೨೬] ಶಾಸನವು ಸ್ಪಷ್ಟಗೊಳಿಸುತ್ತದೆ.

ತಿರುಮಲನಾಥ

ಈತ ತೆಪ್ಪದ ನಾಗಣ್ಣ ಒಡೆಯನ ಮೊಮ್ಮಗ. ಆದರೆ ಇವನ ಬಗ್ಗೆ ದೊರೆತಿರುವ ಶಾಸನಗಳಲ್ಲಿ[೨೭] ತಿರುಮಲನಾಥನ ತಂದೆಯ ಉಲ್ಲೇಖವಿರದೇ ತಾತನಾದ ತೆಪ್ಪದ ನಾಗಣ್ಣ ಒಡೆಯನ ಉಲ್ಲೇಖವಿದೆ. ತಿರುಮಲನಾಥನು ಗಡಿದಂನಲ್ಲಿ ತಿರುವೇಂಗಳನಾಥ ದೇವರನ್ನು ಪ್ರತಿಷ್ಠಾಪಿಸಿ ಕಲ್ಲಿನ ಆಲಯುವನ್ನು ಶ್ರೀಸ್ವಾಮಿಗೆ ನಿರ್ಮಿಸಿದನು. ಅಲ್ಲದೆ ತಿರುಮಲಪುರವನ್ನು ನಿರ್ಮಿಸಿದ ಅಲ್ಲಿನ ಬ್ರಾಹ್ಮಣರಿಗೆ ಮಲಪಗಲ ಕುಂಟ ಮತ್ತು ತಮ್ಮಡಿಕುಂಟಗಳೆಂಬ ಗ್ರಾಮಗಳನ್ನು ದಾನ ನೀಡಿದನು. ಜೊತೆಗೆ ಬೊಮ್ಮನಕೋಟೆ ಎಂಬ ಊರನ್ನು ಸಹ ದೇವರಿಗೆ ದತ್ತಿ ನೀಡಿದನು.

ಮಾದಂಣ

ಈತ ತೆಪ್ಪದ ಈಶ್ವರದೇವನ ಮಗ ಚಿಕ್ಕವಿಜೆಣ್ನ ಎಂಬಾತನ ತಮ್ಮ. ತಾಯಿ ಗೌರಾದೇವಿಯವರಿಗೆ ಪುಣ್ಯ ವುಂಟಾಗಬೇಕೆಂದು ಮಾದಣ್ಣನು ತಮ್ಮ ನಾಯಕತನಕೆ ಸಲ್ಲುವ ಗೋದುಮಲೆನಾಡಿನಲ್ಲಿನ ಚಿಕ್ಕನಹಳ್ಳಿಯನ್ನು ರಾಯಸಮುದ್ರದ ಮಾಳಿಗೆಯ ನಂಜನಾಥದೇವರಿಗೆ ಮಠಮಾನ್ಯ ಧರ್ಮವಾಗಿ ದತ್ತಿ ನೀಡಿದನು.[೨೮]

ಕೆಲವು ಒಳನೋಟಗಳು

ತೆಪ್ಪದ ನಾಗಣ್ಣ ಒಡೆಯ ಮತ್ತು ಅವನ ವಂಶೀಯರ ಈ ಎಲ್ಲ ಶಾಸನಗಳನ್ನು ಅವಲೋಕಿಸಿದಾಗ ಈ ಕೆಲವು ಒಳನೋಟಗಳು ಗ್ರಹಿಕೆಯಾಗುತ್ತವೆ.

'ತೆಪ್ಪದ' ಎಂಬ ವಿಶೇಷಣ ಈ ವಂಶೀಯರ ಹೆಸರುಗಳಲ್ಲಿ ಸೇರಿಕೊಂಡಿರುವುದು ಇವರ ಪೂರ್ವಜರು ತೆಪ್ಪದ ಒಡೆಯರಾಗಿದ್ದರೇ ?

ಈ ವಂಶೀಯರು ಶೈವ ಮತ್ತು ವೈಷ್ಣವ ದೇಗುಲಗಳಿಗೆ ನೀಡಿರುವ ದಾನಗಳು ಮತ್ತು ಸೇವಾಕಾರ್ಯಗಳು ಇವರ ಧಾರ್ಮಿಕ ಸಹಿಷ್ಣುತೆಯನ್ನು ಬಿಂಬಿಸುತ್ತದೆ.

ತೆಪ್ಪದ ನಾಗಣ್ಣ ಒಡೆಯ ಒಬ್ಬ ಸೇನಾಪತಿಯಾಗಿದ್ದವನು ಕಾಲಕ್ರಮದಲ್ಲಿ ತನ್ನ ದಕ್ಷತೆಯಿಂದ ನಿಗಿರಿಲಿ ಚೋಳ ಮಂಡಲ ವೆಂಬ ವಿಶಾಲ ಭೂಪ್ರದೇಶದ ಮಂಡಲಾಧಿಪತಿ ಯಾಗಿ ತನ್ನ ಆಳ್ವಿಕೆಯ ಉತ್ತುಂಗ ಸ್ಥಿತಿಯನ್ನು ತಲುಪುತ್ತಾನೆ. ಆದರೆ ಅವನ ನಂತರದ ವಂಶೀಯರಲ್ಲಿ ಕೊನೆಯವನಾದ (ಸದ್ಯದ

ಮಟ್ಟಿಗೆ) ಮಾದಣ್ಣನು ಗೋದುಮಲೆ ನಾಡಿನ ನಾಡಾಧಿಪತಿ ಯಾದರೆ, ಇಮ್ಮಡಿ ನಾಗಣ್ಣ ಒಡೆಯನು ಬೈಚೆಯ ದಂಡನಾಯಕನ ಅಧೀನವರ್ತಿಯಾಗಿರುತ್ತಾನೆ. ಈ ಅಂಶದಿಂದ ಈ ವಂಶೀಯರು ಮುಂದೆ ತಮ್ಮ ರಾಜಕೀಯ ಪ್ರಾಬಲ್ಯವನ್ನು ಕಳೆದುಕೊಳ್ಳುತ್ತಿದ್ದುದು ಒಂದೆಡೆಯಾದರೆ ಬೈಚೆಯ ದಂಡನಾಯಕ ಅವನ ವಂಶೀಯರು ಪ್ರಾಬಲ್ಯ ವೃದ್ಧಿಯಾಗುತ್ತಿದ್ದುದು ಮತ್ತೊಂದೆಡೆ ಸ್ಪಷ್ಟವಾಗುತ್ತದೆ.

ನಾಗಮಂಗಲದ ಶಾಸನವೊಂದು ತೆಪ್ಪದ ಮುದ್ದೆ ನಾಯ್ಕ[೩೦] ಎಂಬಾತನನ್ನು ಹಾಗೂ ಹಿರೇಮಂಗಳೂರಿನ ಶಾಸನವೊಂದು[೩೧] (ತ್ರುಟಿತ) ನಾ....ಯ ಎಂಬ ತೆಪ್ಪದ ನಾಗಣ್ಣ ಒಡೆಯನ ವಂಶೀಯರನ್ನು ಸೂಚಿಸುತ್ತದೆಯಾದರು ಇವರ ನಡುವಿನ ಸಂಬಂಧದ ಬಗ್ಗೆ ಶಾಸನಗಳಲ್ಲಿ ಸ್ಪಷ್ಟವಾದ ಮಾಹಿತಿಯಿಲ್ಲ.

ಕ್ರಿ.ಶ. ೧೧೬೦ರಲ್ಲಿ ಸಾದಲಿಯ ಬಗ್ಗೆ ಮೊದಲ ಉಲ್ಲೇಖ ಕಂಡುಬರುತ್ತದೆ. ಮುಂದೆ ೧೩೫೬ರಲ್ಲಿ 'ಸ್ಥಳ'ವಾಗಿದ್ದುದು ತೆಪ್ಪದ ನಾಗಣ್ಣ ಒಡೆಯನ ಪ್ರವರ್ಧಮಾನ ಕಾಲದಲ್ಲಿ 'ರಾಜ್ಯ' ವೆಂದು ಹೆಸರು ಪಡೆಯಿತು. ಆದರೆ ಮುಂದೆ ೧೫೩೩ರ ವೇಳೆಗೆ 'ವಳಿತ'ದ ಸ್ಥಾನವನ್ನು ತಲುಪಿ ೧೮೯೨ರ ವೇಳೆಗೆ ಶಾಸನಗಳಲ್ಲಿ 'ಗ್ರಾಮ'ವಾಗಿ ತನ್ನ ಅಸ್ತಿತ್ವವನ್ನು ಉಳಿಸಿ ಕೊಂಡಿದೆ.


ಇದುವರೆಗೂ ದೊರೆತಿರುವ ಈ ವಂಶೀಯರ ಸುಮಾರು ೩೦ ಶಾಸನಗಳು ಇವರ ರಾಜಕೀಯ ಸ್ಥಿತಿಗತಿಗಳ ಜೊತೆ ಜೊತೆಗೆ ಸ್ಥಳೀಯ ಸಾಂಸ್ಕೃತಿಕ ಚರಿತ್ರೆಯ ಅಧ್ಯಯನದಲ್ಲಿ ಗಣನೀಯ ಮಹತ್ತ್ವವನ್ನು ಪಡೆದಿವೆ.

* ಮೈಸೂರು ವಿ.ವಿ.ಯ ಪರಿಷ್ಕೃತ ಆವೃತ್ತಿಯ ಸಂಪುಟ ೫ರ ಕೃಷ್ಣರಾಜನಗರ ೯೪, ಸಂ. ೩ರ ಹೆಗ್ಗಡದೇವನಕೋಟೆ ೬೨, ೩೪, ನಂಜನಗೂಡು-೩೭೮, ೨೨೮, ಗುಂಡ್ಲುಪೇಟೆ ೧೬೮, ಸಂಪುಟ ೭ರ ಮಂಡ್ಯ ೬೦, ಮದ್ದೂರು ೮೯, ೧೧೦, ೪೬; ಸಂಪುಟ-೧೩ರ ಶಿವಮೊಗ್ಗ ೬೮, ತೀರ್ಥಹಳ್ಳಿ ೧೨೬; ಸಂಪುಟ-೧೧ರ ಚಿಕ್ಕಮಗಳೂರು ೨೧೦, ಶೃಂಗೇರಿ ೬೬, ೭೪; ಸಂಪುಟ-೧೦ರ ಚನ್ನರಾಯಪಟ್ಟಣ ೮೬, ೮೪, ೪೪, ಸಂಪುಟ-೯ರ ಬೇಲೂರು ೫೩೦, ಸಂಪುಟ-೬ರ ಪಾಂಡವಪುರ ೬೯, ಸಂಪುಟ-೪ರ ಕೊಳ್ಳೇಗಾಲ ೫೬; ರೈಸ್ ಆವೃತ್ತಿಯ EC IX, Dr. ೨೯, Bn ೧೬೨, Db. ೫೦; ARIE ೧೯೦೧ರ ಕ್ರಸಂ. ೨೫ರ, ೧೯೦೫ರ ಕ್ರಸಂ. ೨೫೫, ೩೪೮, ೧೫೯, ೮೨೪, ಈ ಶಾಸನೋಕ್ತ ನಾಗಣ್ಣ ಒಡೆಯರು ತೆಪ್ಪದ ನಾಗಣ್ಣ ಒಡೆಯನಿಗಿಂತ ಭಿನ್ನರು.

* ಮೈಸೂರು ವಿ.ವಿ.ಯ ಪರಿಷ್ಕೃತ ಆವೃತ್ತಿಯ ಸಂಪುಟ-೫ರ ತೀ. ನರಸೀಪುರ ೧೩೭; ಸಂ-೩ರ ಗುಂಡ್ಲುಪೇಟೆ ೨೬, ೭೭, ೧೭೮; ಸಂಪುಟ-೬ರ ಪಾಂಡವಪುರ ೭೪, ೫೮; ಸಂಪುಟ-೮ರ ಶಾಸನ ೫೨, ೧೨೫, ೭೧; ಸಂಪುಟ ೧೩ರ ಗಾಜನೂರು ೫೦, ಕವಲೇದುರ್ಗ ೪೪, ನಾಬಳತೀರ್ಥ ೧೭೭; ಸಂಪುಟ ೧೫ರ ಹುಂಚ ೯೩, ಹೊಸಗುಂದ ೨೩೬ ಈ ಶಾಸನೋಕ್ತ ದೇವಣ್ಣ ಒಡೆಯರು ನಾಗಣ್ಣ ಒಡೆಯನ ಮಗ ದೇವಣ್ಣ ಒಡೆಯನಿಗಿಂತ ಭಿನ್ನರು.

[ಈ ಲೇಖನಕ್ಕೆ ಮಾರ್ಗದರ್ಶನ ಹಾಗೂ ಸಲಹೆಗಳನ್ನು ನೀಡಿದ ಗುರುಗಳಾದ ಡಾ. ಪಿ.ವಿ. ಕೃಷ್ಣಮೂರ್ತಿ ಯವರಿಗೂ ಮತ್ತು ಪತಿ ಶ್ರೀ ಸುಂಕಂ ಗೋವರ್ಧನ ಅವರಿಗೂ ನಾನು ಕೃತಜ್ಞಳು.]

ತೆಪ್ಪದ ನಾಗಣ್ಣ ಒಡೆಯನ ವಂಶಾವಳಿ



ಆಧಾರಸೂಚಿ ಮತ್ತುಟಿಪ್ಪಣಿಗಳು

೧. **ಎಪಿಗ್ರಾಫಿಯ ಕರ್ನಾಟಿಕ,** ಸಂಪುಟ ೯ (ಮೈಸೂರು ವಿ.ವಿ), ಬೇಲೂರು ೫೧೯.
೨. ಅದೇ, ಸಂಪುಟ ೮, ಆಲೂರು ೪೧.
೩. ಅದೇ, ಸಂಪುಟ ೧೧, ಮೂಡಗೆರೆ ೧೨.
೪ ಎಪಿಗ್ರಾಫಿಯ ಕರ್ನಾಟಿಕ, ಸಂಪುಟ x(ರೈಸ್ ಆವೃತ್ತಿ), ಚಿಕ್ಕಬಳ್ಳಾಪುರ ೬೩.
೫. ಅದೇ, ಸಂಪುಟ ix, ಹೊಸಕೋಟೆ ೧೦೮, ೧೦೯.
೬ ಅದೇ, ಆನೇಕಲ್ ೨೮.
೭. ಅದೇ, ಸಂಪುಟ x, ಚಿಕ್ಕಬಳ್ಳಾಪುರ ೪೩.
೮. ಅದೇ, ಸಂಪುಟ ix, ಹೊಸಕೋಟೆ ೯೩.
೯. ಅದೇ, ಸಂಪುಟ x, ಕೋಲಾರ ೧೦೫.
೧೦. ಎಪಿಗ್ರಾಫಿಯ ಕರ್ನಾಟಿಕ, ಸಂಪುಟ ೯ (ಮೈಸೂರು ವಿ.ವಿ.), ಬೇಲೂರು ೧೬೫.
೧೧. ಅದೇ, ಬೇಲೂರು ೧೮೮.
೧೨. ಎಪಿಗ್ರಾಫಿಯ ಕರ್ನಾಟಿಕ, ಸಂಪುಟ x(ರೈಸ್ ಆವೃತ್ತಿ), ಕೋಲಾರ ೨೫೨.
೧೩. ಎ.ಕ., ಸಂಪುಟ ೮ (ಮೈಸೂರು ವಿವಿ) ಆಲೂರು ೪೧, ಸಂಪುಟ ೧೧, ಮೂಡಗೆರೆ ೧೨.
೧೪. ಅದೇ,
೧೫. ಎ.ಕ. ix(ರೈಸ್ ಆವೃತ್ತಿ), ಆನೇಕಲ್ ೨೯.
೧೬. Vijayanagara Inscriptions: Vol 3, KN 1273, B.R. Gopal, 1985.
೧೭. ಕ x(ರೈಸ್ ಆವೃತ್ತಿ), ಶಿಡ್ಲಘಟ್ಟ ೧೧೨.
೧೮. ಅದೇ, ಕೋಲಾರ ೧೧೩.
೧೯. ಅದೇ, ix, ಹೊಸಕೋಟೆ, ೧೧೩.
೨೦. ಎ.ಕ. xvii, Dr. M. Sheshadri, Kolar Sup, ಮಾಲೂರು ೧೭೨.
೨೧. ಎ.ಕ. x, ಕೋಲಾರ ೬೭.
೨೨. ಅದೇ, ೮೦.
೨೩. ಅದೇ, ಚಿಕ್ಕಬಳ್ಳಾಪುರ ೧೦.
೨೪. ಅದೇ, ಚಿಂತಾಮಣಿ ೧೧೪.
೨೫. ಅದೇ, ಕೋಲಾರ ೩೯.
೨೬. Vijayanagara Inscriptions Vol. 3, KN 1460, B.R. Gopal, 1985.
೨೭. ಅದೇ, KN 1760.
೨೮. ಎ.ಕ. x, ಬಾಗೇಪಲ್ಲಿ ೧೫, ೧೬.
೨೯. ಎಪಿಗ್ರಾಫಿಯ ಕರ್ನಾಟಿಕ, ಸಂಪುಟ ೯, (ಮೈಸೂರು ವಿವಿ), ಸಕಲೇಶಪುರ ೫೪.
೩೦. ಅದೇ, " ೭, ನಾಗಮಂಗಲ ೧೬೬.
೩೨. ಅದೇ, " ೧೧, ಚಿಕ್ಕಮಗಳೂರು ೭೪.

ಇರುಗಿ(ಇರಿಗಿ)ಶೆಟ್ಟಿ–ಶಾಸನಗಳ ಹಿನ್ನೆಲೆಯಲ್ಲಿ ಒಂದು ಪರಿಶೀಲನೆ

ಕುಸುಮ ಎನ್.*

ಕೋಲಾರ ಜಿಲ್ಲೆಯು ಹೊಯ್ಸಳ ಮತ್ತು ವಿಜಯನಗರ ರಾಜ್ಯಗಳೆರಡರ ಆಡಳಿತವನ್ನು ಕಂಡಿದಿತ್ತು. ತಲಕಾಡಿನಲ್ಲಿ ನಡೆದಂತಹ ಯುದ್ಧದಲ್ಲಿ ಹೊಯ್ಸಳರು ಚೋಳರನ್ನು ಸಂಪೂರ್ಣವಾಗಿ ಸೋಲಿಸಿ ಕೋಲಾರ ಜಿಲ್ಲೆಯನ್ನು ಪ್ರವೇಶಿಸಿದ್ದರು. ಹೊಯ್ಸಳರ ನಂತರ ವಿಜಯನಗರದರಸರು ಕೋಲಾರ ಪ್ರದೇಶದಲ್ಲಿ ಆಳ್ವಿಕೆ ನಡೆಸಿದ್ದರು. ಈ ಎರಡೂ ರಾಜ್ಯದವರು, ಕೋಲಾರ ಪ್ರದೇಶಗಳ ಆಳ್ವಿಕೆಗೆ ಮಹಾದಂಡ ನಾಯಕರನ್ನು ನಿಯೋಜಿಸುತ್ತಿದ್ದರು. ಇಂತಹ ಮಹಾ ದಂಡನಾಯಕರು ತಮ್ಮ ರಾಜರುಗಳಿಗೆ ನಿಷ್ಠಾವಂತರಾಗಿದ್ದರೆ, ಕೆಲವರು ಸ್ವತಂತ್ರವಾಗಿ ಸಾಮ್ರಾಜ್ಯವನ್ನು ಕಟ್ಟಲು ಪ್ರಯತ್ನ ಮಾಡಿದ್ದರು. ಇಳವಂಜಿರಾಯರು, ಬ್ರಹ್ಮಾಧಿರಾಯರು, ಮುಂತಾದವರು ಸಣ್ಣ ಪ್ರಾಂತ್ಯಕ್ಕಷ್ಟೇ ಸೀಮಿತ ರಾಗಿದ್ದರೂ ಕೆಲವರು ನಿಷ್ಠಾವಂತ ಅಧಿಕಾರಿಗಳಾಗಿದ್ದರು. ಅಂತಹವರಲ್ಲಿ ಹೊಯ್ಸಳ ರಾಜ್ಯ ಮತ್ತು ವಿಜಯನಗರ ಸಾಮ್ರಾಜ್ಯವೆರಡಕ್ಕೂ ಸಂಬಂಧಪಟ್ಟಂತೆ ಕಂಡುಬರು ವಂತಹವರು ಮಹಾಪ್ರಧಾನ ಬಲ್ಲಪ್ಪ ದಂಡನಾಯಕ ಮತ್ತು ಅವನ ವಂಶದವರು. ಈ ವಂಶದವರಿಗೆ ಸಂಬಂಧಪಟ್ಟಂತಹ ಶಾಸನಗಳು ಬೆಂಗಳೂರು, ಕೋಲಾರ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ದೊರೆಯುತ್ತಿದೆ. ಈ ಬಲ್ಲಪ್ಪ ದಂಡನಾಯಕನ ವಂಶದಲ್ಲಿ ಸೋಮೆಯ ದಂಡನಾಯಕ ಮತ್ತು ಸಿಂಗೆಯ ದಂಡನಾಯಕರು ಪ್ರಮುಖರಾಗಿದ್ದರು.

ಇರುಗಿಶೆಟ್ಟಿ : ಸಿಂಗೆಯ ದಂಡನಾಯಕನಿಗೆ ಇರುಗಿಸೆಟ್ಟಿ ಮತ್ತು ಪೆಮ್ಮಸೆಟ್ಟಿ ಎಂಬುವುದಾಗಿ ಇಬ್ಬರು ಪುತ್ರರು. ಕೋಲಾರ ಜಿಲ್ಲೆಯಲ್ಲಿ ಇರುಗಿ ಸೆಟ್ಟಿಯು ಉಲ್ಲೇಖ ಇರುವಂತಹ ಶಾಸನಗಳು ದೊರೆಯುತ್ತವೆ. ಆದರೆ ಈ ಇರುಗಿಸೆಟ್ಟಿಯು ಮಹಾ ದಂಡನಾಯಕನಾಗಿದ್ದನೋ ಇಲ್ಲವೋ ಎಂಬುವುದರ ಮಾಹಿತಿ ದೊರಕುವುದಿಲ್ಲ. ಕ್ರಿ.ಶ. ೧೩೦೬ ರಿಂದ ಕ್ರಿ.ಶ ೧೪೧೭ ರವರೆಗಿನ ಎಂಟು ಶಾಸನಗಳಲ್ಲಿ ಇರುಗಿಸೆಟ್ಟಿಯ ಉಲ್ಲೇಖ ವಿದ್ದು ಈತನು ಅನೇಕ ದಾನ ದತ್ತಿಗಳನ್ನು ನೀಡಿರುವ ನೆಂದು ಉಲ್ಲೇಖಿಸುತ್ತವೆ. ಆದರೆ ಈತನ ಹೆಸರಿನಲ್ಲಿ ಸೆಟ್ಟಿ ಪದವು ಸೇರಿರುವುದು ವಿಶೇಷವಾಗಿದ್ದು ಇದಕ್ಕೆ ಕಾರಣಗಳು ಸಿಗುತ್ತಿಲ್ಲ. ಆದರೆ ಇವರು ದಂಡನಾಯಕರಂತೆ ಉನ್ನತ ಸ್ಥಾನವನ್ನು ಹೊಂದಿದ್ದು ನಾಡಪ್ರಭುಗಳೆಂದು ಉಲ್ಲೇಖಿತ ರಾಗಿದ್ದಾರೆ. ಕಾಲವನ್ನು ಗಮನಿಸಿದಾಗ ೧೧೧ ವರ್ಷಗಳ ಅಂತರವು ಕಂಡುಬರುತ್ತಿದೆ. ಆದರೆ ಕ್ರಿ.ಶ. ೧೩೭೯ ರಲ್ಲಿ ಇರಿಗಿಶೆಟ್ಟಿಯು ಶಿವೈಕ್ಯವಾದನೆಂದು ತಿಳಿಸುತ್ತಿರುವುದರಿಂದ, ನಂತರದ ಶಾಸನಗಳಲ್ಲಿ ಉಲ್ಲೇಖವಾಗಿರುವಂತಹ ಇರಿಗಿಶೆಟ್ಟಿಯ ವಿಷಯವಾಗಿ ಗೊಂದಲಗಳಿವೆ. ಮುಂದಿನ ಶಾಸನಗಳಲ್ಲೂ ಇರಿಗಿಸೆಟ್ಟಿ ಎಂದೇ ಕಂಡುಬರುವುದರಿಂದ ಇರಿಗಿಸೆಟ್ಟಿಯ ಪುತ್ರನ ಹೆಸರೂ ಬೇರೆಯಾಗಿದ್ದರೂ ಜನರು ಇರಿಗಿಸೆಟ್ಟಿಯೆಂದೇ ಕರೆದಿರಬಹುದೆಂದು ಊಹಿಸಬಹುದಾಗಿದೆ. ಆದರೆ ಇದಕ್ಕೆ ಶಾಸನ ಆಧಾರಗಳು ದೊರೆಯುತ್ತಿಲ್ಲ.

ಕೋಲಾರ ಜಿಲ್ಲೆಯ ದಳಸನೂರು ಹೋಬಳಿಯ ಸುಕ್ಕನಹಳ್ಳಿಯ ಶಾಸನವು ಇರುಗಿ ಸೆಟ್ಟಿಯನ್ನು ಉಲ್ಲೇಖಿಸಿದೆ. ಕ್ರಿ.ಶ. ೧೩೦೬ರ ಈ ಶಾಸನವು ಇರಿಗಿ ಸೆಟ್ಟಿಯನ್ನು ಕೋಲಾರ ನಾಡಿನ ನಾಡಪ್ರಭು ಎಂದು ವರ್ಣಿಸಿದೆ. ವೀರ ಬುಕ್ಕರಾಯನು ರಾಜ್ಯವನ್ನಾಳುತ್ತಿರಲು ಆತನ ಪುತ್ರನಾದ ಹರಿಹರರಾಯನ ಅಪ್ಪಣೆಯ ಮೇರೆಗೆ ಪ್ರಧಾನಿ ಮಲ್ಲರಸನು ಇರಿಗಿ ಸೆಟ್ಟಿಗೆ ಸುಕ್ಕನಹಳ್ಳಿಯನ್ನು ದಾನವಾಗಿ ನೀಡಿರುವನು. ಸುಕ್ಕನಹಳ್ಳಿಯು ಈಗಲೂ ಕೋಲಾರ ಜಿಲ್ಲೆಯಲ್ಲಿದ್ದು ಇರಿಗಿಸೆಟ್ಟಿಗೆ ಕಾಣಿಕೆಯಾಗಿ ಬಂದುದಾಗಿದೆ. ಮುಂದೆ ಇದೇ ಸ್ಥಳದಲ್ಲಿ ಈತನು ಪ್ರಧಾನವಾಗಿ ನೆಲೆಸಿರಬಹುದು. ಮುಂದೆ ಈತನಿಗೆ ಸಂಬಂಧಿಸಿದ ಶಾಸನವು ಕೋಲಾರಮ್ಮ ದೇವಾಲಯದಲ್ಲಿ ದೊರಕಿದ್ದು, ಊರಿನ ಸಮಸ್ತ ಪ್ರಮುಖರು ಸೇರಿಕೊಂಡು ದೇವಪ್ಪಜೀಯ್ಯರಿಗೆ ಕೊಟ್ಟಂತಹ ದಾನದಲ್ಲಿ ಇರಿಗಿಸೆಟ್ಟಿಯು ಭಾಗಿಯಾಗಿರುವಂತೆ ತಿಳಿಸುತ್ತಿದೆ. ಈ ಶಾಸನವು ಇರಿಗಿ ಸೆಟ್ಟಿಯ ಕುರಿತಾಗಿ ಮಾಹಿತಿ ಯನ್ನು ಒದಗಿಸುತ್ತಿಲ್ಲವಾದರೂ ಕೋಲಾರ ಪ್ರದೇಶದಲ್ಲಿ ಪ್ರಮುಖ ಸ್ಥಾನವನ್ನು ಹೊಂದಿರು ವಂತೆ ತಿಳಿಯುತ್ತದೆ. ಶಾಸನ ಕಾಲವು ಕ್ರಿ.ಶ. ೧೩೭೯ ಆಗಿದೆ.

* ಏಲುಮಲೈ ಮನೆ. ಮೊದಲನೇ ಮಹಡಿ. # ೨೭. ೫ನೇ ಮೈನ್. ಒಬಳಪ್ಪ ಗಾರ್ಡನ್. ಟಾಟಾ ಸಿಲ್ಕ್ ಫಾರಂ. ಬೆಂಗಳೂರು-೫೬೦೦೮೨

ಕ್ರಿ.ಶ ೧೩೦೬ ರ ಕಾಲಕ್ಕೆ ಸಂಬಂಧಿಸಿದಂತಹ ಎರಡು ಶಾಸನಗಳು ಇದೇ ರೀತಿಯಾಗಿ ದಾನಗಳನ್ನು ಕೊಡುವಂತಹ ಸಂದರ್ಭದಲ್ಲಿ ಇರಿಗಿಸೆಟ್ಟಿಯು ಸಾಕ್ಷಿಯಾಗಿರುವಂತೆ ಉಲ್ಲೇಖಿಸುತ್ತಿದೆ. ವಕ್ಕಲೇರಿಹೋಬಳಿ ಶೆಟ್ಟಿಕೊತ್ತನೂರಿನ ಮೊದಲನೆಯ ಶಾಸನವು[೩] ಹರಿಹರರಾಯನು ರಾಜ್ಯವನ್ನಾಳುತ್ತಿರಲು ನಾಗಂಣವೊಡಿಯನೆಂಬುವವರಿಗೆ ಆಯುರಾರೋಗ್ಯಾಭಿವೃದ್ಧಿಯಾಗಬೇಕೆಂದು ಊರಿನ ಪ್ರಮುಖರು ಸೇರಿಕೊಂಡು ಕೊತ್ತನೂರು ಗ್ರಾಮದಲ್ಲಿ ಭೂದಾನದ ನೀಡಿದ ಉಲ್ಲೇಖವಿದೆ. ಶಾಸನವು ಇರಿಗಿಸೆಟ್ಟಿಯನ್ನು ಇರಿಸೆಟ್ಟಿಯೆಂದು ಕರೆದಿದೆ. ಇದೇ ರೀತಿಯಾದಂತಹ ಮಾಹಿತಿಯು ಮಡಿವಾಳ ಗ್ರಾಮದ ಶಾಸನವೂ[೪] ತಿಳಿಸುತ್ತಿದ್ದು ಹಿಂದೆ ತಿಳಿಸಿರುವಂತಹ ವ್ಯಕ್ತಿಗೆ ಆಯುರಾರೋಗ್ಯವು ಇನ್ನು ವೃದ್ಧಿಯಾಗಲಿ ಎಂದು ಕೆಂದಟ್ಟಿ (ಕೆಂದಟ್ಟೆ) ಕೈಲಾಸ ದೇವರಿಗೆ ಭೂದಾನವನ್ನು ನೀಡಿರುವಂತೆ ತಿಳಿಸುತ್ತಿದೆ. ಹರಿಹರರಾಯ ಮಹಾರಾಯನು ರಾಜ್ಯವನ್ನಾಳುತ್ತಿರುವಾಗ ನಡೆದಿರುವಂತಹ ಈ ಘಟನೆಯು ಮೊದಲನೆಯ ಶಾಸನದ ಕಾಲಕ್ಕಿಂತ ತಿಂಗಳ ನಂತರ ನಡೆದಿರುವುದಾಗಿದೆ. ಬಹುಶಃ ಇಲ್ಲಿ ಉಲ್ಲೇಖಿಸಿರುವಂತಹ ವ್ಯಕ್ತಿಗೆ ರೋಗವು ಕಡಿಮೆಯಾಗದಿರುವಾಗ ಎಲ್ಲರೂ ಸೇರಿಕೊಂಡು ಪುನಃ ದಾನವನ್ನು ನೀಡಿರುವಂತೆ ಉಲ್ಲೇಖವಾಗಿದೆ. ಇಲ್ಲಿಯೂ ಇರಿಗೆ ಸೆಟ್ಟಿಯು ಕೋಲಾರ ನಾಡಿನ ಪ್ರಭುವಾಗಿರುವಂತೆ ಕಂಡುಬರುತ್ತಿದೆ. ನರಸಾಪುರ ಗ್ರಾಮದಲ್ಲಿರುವಂತಹ ಕ್ರಿಶ ೧೪೫೦ರ ಶಾಸನವೂ ಇರಿಗಿಸೆಟ್ಟಿಯನ್ನು ಪಟ್ಟಣ ಸ್ವಾಮಿಯೆಂದು ಕರೆದಿದ್ದು[೫] ಈತನು ಭೂದಾನವನ್ನು ನೀಡಿರುವಂತೆ ಶಾಸನವು ಉಲ್ಲೇಖಿಸುತ್ತಿದೆ. ಕ್ರಿ.ಶ. ೧೪೫೩ರ ಶಾಸನವು[೬] ಇರಿಗಿಸೆಟ್ಟಿಯನ್ನು ಮಹಾವಡ್ಡ ವ್ಯವಹಾರಿ ಎಂದು ಉಲ್ಲೇಖಿಸಿದೆ. ಈ ಶಾಸನವು ಹರಿಹರರಾಯನ ಕಾಲಕ್ಕೆ ಸಂಬಂಧಿಸಿದುದಾಗಿದ್ದು, ಶಿವಾಲಯಕ್ಕೆ ಭೂದಾನವನ್ನು ನೀಡಿರುವಂತೆ ಉಲ್ಲೇಖಿಸುತ್ತಿದೆ. ಇರಿಗಿಸೆಟ್ಟಿ ಮತ್ತು ಆತನ ಮಕ್ಕಳು ಸೇರಿಕೊಂಡು ವೀರಭದ್ರದೇವರ ಶಿವಾಲಯುವನ್ನು (ದೇವಾಲಯ) ನಿರ್ಮಿಸಿ ಇದೇ ದೇವಾಲಯಕ್ಕೆ ಭೂದಾನವನ್ನು ನೀಡಿರುವಂತೆ ಶಾಸನವು ಉಲ್ಲೇಖಿಸಿದೆ. ಕ್ರಿ.ಶ. ೧೪೧೭ರ ಶಾಸನವು[೭] ಇರಿಗಿಸೆಟ್ಟಿ ಮತ್ತು ಆತನ ಪುತ್ರನಾದ ಬಯಿರಸೆಟ್ಟಿಯರನ್ನು ಹೆಸರಿಸಿದ್ದು ಇವರಿಬ್ಬರು ಮೂಲಸ್ಥಾನ ದೇವರಿಗೆ ಭೂದಾನವನ್ನು ನೀಡಿರುವಂತೆ ತಿಳಿಸುತದೆ. ಈ ಶಾಸನವು ಇರಿಗಿಸೆಟ್ಟಿಯನ್ನು ಮಹಾಪ್ರಭು ಎಂದು ಹೆಸರಿಸುತ್ತಿದೆ. ಈ ಎಲ್ಲಾ ಮಾಹಿತಿಗಳನ್ನು ಗಮನಿಸಿದರೆ ಇರಿಗಿಸೆಟ್ಟಿಯು ಕೋಲಾರದಲ್ಲಿ ವಿಶೇಷವಾದಂತಹ ಸ್ಥಾನವನ್ನು ಹೊಂದಿದ್ದನು. ಕೋಲಾರದ ನಾಡಪ್ರಭೂವೂ ಮಹಾವಡ್ಡ ವ್ಯವಹಾರಿಯೂ ಆಗಿದ್ದನು. ಆದರೆ ಈತನು ಯಾವ ವ್ಯವಹಾರದಲ್ಲಿ ಪ್ರಸಿದ್ಧನಾಗಿದ್ದನೆಂದು ಶಾಸನವು ತಿಳಿಸುತ್ತಿಲ್ಲ ವಾದರೂ ಧಾರ್ಮಿಕ ಪ್ರವೃತ್ತಿಯನ್ನು ಹೊಂದಿದ್ದನು.

ಇರಿಗಿಸಂದ್ರ : ಕೋಲಾರ ಜಿಲ್ಲೆಯ ವಕ್ಕಲೇರಿಯಲ್ಲಿ ಇರಿಗಿಸಂದ್ರ ಮತ್ತು ಇರಿಗೇಶ್ವರ ದೇವಾಲಯವಿತ್ತೆಂಬ ಮಾಹಿತಿಯ ಮೇರೆಗೆ ಆ ಪ್ರದೇಶಗಳಲ್ಲಿ ಕ್ಷೇತ್ರ ಕಾರ್ಯವನ್ನು ಕೈಗೊಳ್ಳ ಲಾಯಿತು. ಈ ಪ್ರದೇಶದಲ್ಲಿ ಇರಿಗೇಶ್ವರ ದೇವಾಲಯದ ಇರುವಿಕೆಯು ಕಂಡುಬರುವುದಿಲ್ಲ. ಆದರೆ ವಕ್ಕಲೇರಿಯ ಕಾರೇಹಳ್ಳಿಯ ಸಮೀಪ ಇರಿಗಿಸಂದ್ರ ಎಂಬ ಹಳ್ಳಿ ಇದೆ. ಆದರೆ ಇರಿಗಿಸೆಟ್ಟಿಯ ಕುರಿತಾಗಿ ಯಾವುದೇ ಮಾಹಿತಿಯು ಈ ಪ್ರದೇಶದಲ್ಲಿ ಲಭ್ಯವಾಗುವುದಿಲ್ಲ. ಈ ಪ್ರದೇಶದಲ್ಲಿ ಸೆಟ್ಟಿ ಕುಲದವರನ್ನು ಬಿಟ್ಟು ಇತರೆ ಜಾತಿಯವರ ಮನೆಗಳೇ ಹೆಚ್ಚಾಗಿದೆ. ಪ್ರಾಚೀನ ಕಾಲದಲ್ಲಿ ಈ ಪ್ರದೇಶದಲ್ಲಿ ಕೆರೆಯಿದ್ದಿರ ಬಹುದು. ಈ ಪ್ರದೇಶದ ನಂತರ ೧ ಕೀ.ಮೀ. ಮುಂದೆ ಪಾರೇಹೊಸಹಳ್ಳಿಯಲ್ಲಿ ಸುಮಾರು ೧೦೦ ವರ್ಷ ಪ್ರಾಚೀನವಾದ ವೇಣುಗೋಪಾಲಸ್ವಾಮಿ ದೇವಾಲಯ ಮತ್ತು ಕಲ್ಯಾಣಿಯಿದೆ. ಕಲ್ಯಾಣಿಯ ಹಿಂದೆ ದೊಡ್ಡದಾದ ಶಾಸನವಿದೆ ಈ ಶಿಲಾಶಾಸನವನ್ನು ಇಂದು ಜನರು ದೇವರೆಂದು ಭಾವಿಸಿ ಪೂಜಿಸುತ್ತಿದ್ದಾರೆ. ಶಾಸನ ಇರುವ ಸ್ಥಳದ ಸಮೀಪದಲ್ಲೇ ಸಣ್ಣ ಕೋಟೆಯ ಅವಶೇಷವಿದ್ದು ಸಮೀಪದಲ್ಲೇ ವೀರಗಲ್ಲು ಇದೆ.

ಗಂಗಾಂಬಿಕೆಯವರು ಹೊಯ್ಸಳ ಮಹಾಪ್ರಧಾನ ಬಲ್ಲಪ್ಪ ದಂಡನಾಯಕ ಮತ್ತು ಅವನ ವಂಶೀಯರು ಲೇಖನದಲ್ಲಿ ಇರುಗಿಸೆಟ್ಟಿಯ ಕುರಿತಾಗಿ ಚರ್ಚಿಸಿದ್ದಾರೆ. ಬಲ್ಲಪ್ಪದಂಡ ನಾಯಕನ ವಂಶಾವಳಿಯನ್ನು ತಿಳಿಸುತ್ತಾ ಸೋಮೆಯ ದಂಡನಾಯಕನು ಸಿಂಗೆಯ ದಂಡನಾಯಕ ಆತನ ಪುತ್ರ ಇರುಗಿಸೆಟ್ಟಿ, ಈ ಇರುಗಿಸೆಟ್ಟಿಯ ಮಗನ ಹೆಸರೂ ಕೂಡಾ ಇರುಗಿಸೆಟ್ಟಿ ಎಂದು ತಿಳಿಸಿದ್ದಾರೆ. ಆದರೆ ಸಿಂಗೆಯ ದಂಡನಾಯಕನ ಪುತ್ರ ಇರುಗಿಸೆಟ್ಟಿ ಎಂದು ಮಾಹಿತಿಯ ಶಾಸನಾಧಾರಗಳಿಂದ ತಿಳಿದುಬರುತ್ತಿಲ್ಲ. ಅದಲ್ಲದೆಯೇ ಕೋಲಾರದಲ್ಲಿ ದೊರಕಿರುವಂತಹ ಶಾಸನಗಳಲ್ಲಿ ಉಲ್ಲೇಖವಾಗಿರುವಂತಹ ಇರುಗಿಸೆಟ್ಟಿಯು ಬಲ್ಲಪ್ಪ ದಂಡನಾಯಕನ ವಂಶದಲ್ಲಿ ಬಂದಿರುವಂತಹ ಇರುಗಿಸೆಟ್ಟಿಗೂ ಅಂತರವಿದೆ ಎಂದು ತಿಳಿಸಿದ್ದಾರೆ[೮]. ಇರುಗುಸಂದ್ರವೆಂಬ ಎರಡು ಸ್ಥಳಗಳು ಕೋಲಾರ ತಾಲ್ಲೂಕಿನಲ್ಲಿವೆ. ಆದರೆ ಕೋಲಾರದ ವಕ್ಕಲೇರಿ ಹೊಬಳಿಯ ಅರಾಬಿಕೊತ್ತನೂರಿನಲ್ಲಿ ದೊರಕಿರುವ ತಮಿಳು ಶಾಸನವು[೯] ಇರುಗ ಸಮುತ್ತಿರಂ (ಇರುಗಸಮುದ್ರ) ಮತ್ತು ಇರುಗೇಶ್ವರ ದೇವಾಲಯದ ಉಲ್ಲೇಖವನ್ನು ಮಾಡುತ್ತಿದೆ. ಅರಾಬಿ ಕೊತ್ತನೂರು ಗ್ರಾಮದ ಸೋಮೇಶ್ವರ ದೇವಾಲಯದಲ್ಲಿ ಶಾಸನವು ದೊರಕಿರುವು ದರಿಂದ ಈ

ದೇವಾಲಯವನ್ನು ಇರಿಗಿಶೆಟ್ಟಿಯು ನೆನಪಿಗಾಗಿ ನಿರ್ಮಿಸಿರುವುದಾಗಿದೆ. ಪೆಮ್ಮಿಸೆಟ್ಟಿಯು ತನ್ನ ಸಹೋದರನಾದ ಇರುಗಿಶೆಟ್ಟಿಯು ಮರಣಹೊಂದಿದ ನಂತರ ಆತನ ನೆನಪಿಗಾಗಿ ಈ ದೇವಾಲಯವನ್ನು ನಿರ್ಮಿಸಿರುವನು. ಸಂಶೋಧಕರಾದ ಕೆ.ಆರ್. ನರಸಿಂಹನ್ ಅವರು ಕೂಡ ಈ ದೇವಾಲಯಕ್ಕೆ ೧೫೦೦ ವರ್ಷಗಳ ಇತಿಹಾಸವನ್ನು ತಿಳಿಸಿದ್ದಾರೆ[೧೦]. ಇದೇ ಗ್ರಾಮದಲ್ಲಿರುವಂತಹ ವೀರಭದ್ರ ದೇವಾಲ ಯಕ್ಕೂ ಇರಗಿಶೆಟ್ಟಿಗೂ ಸಂಬಂಧವಿದೆ. ಇರುಗಿಶೆಟ್ಟಿಯ ಮಕ್ಕಳು ವೀರಭದ್ರ ದೇವಾಲಯವನ್ನು ಕಟ್ಟಿಸಿ ಅ ದೇವಾಲಯಕ್ಕೆ ಭೂದಾನ ನೀಡಿರುವಂತೆಯು ವೀರಭದ್ರದೇವಾಲಯದ ಸಮೀಪದಲ್ಲಿರುವ ಶಾಸನವು ತಿಳಿಸುತ್ತದೆ[೧೧].

ಇರುಗಿಶೆಟ್ಟಿ – ಪೆಮ್ಮಿಶೆಟ್ಟಿ : ವೀರಬಲ್ಲಾಳದೇವನ ಮಂತ್ರಿಯಾದ ಸಿಂಗೆಯ ದಂಡ ನಾಯಕನ ಪುತ್ರರಾದ ಇರಿಗಿಶೆಟ್ಟಿಯು ಮತ್ತು ಪೆಮ್ಮಿಶೆಟ್ಟಿಯರು ಶಯಕೊತ್ತನೂರು, ಶೆಟ್ಟಿಹಳ್ಳಿ ಅರಾಜಿ ಕೊತ್ತನೂರು, ಪೆಮ್ಮಿಶೆಟ್ಟಿ ಹಳ್ಳಿ ಸೂಲೂರು ಮೊದಲಾದ ಗ್ರಾಮಗಳಿಗೆ ಹಲವಾರು ಯೋಗದಾನವನ್ನು ನೀಡಿರುವುದು ಅಲ್ಲದೆ ಇವರೀರ್ವರ ನಡುವೆ ಅನ್ಯೋನ್ಯತೆಯು ಇದ್ದಂತೆ ಕಂಡುಬರುತ್ತಿದೆ. ಪೆಮ್ಮಿಶೆಟ್ಟಿಯು ತನ್ನ ಸಹೋದರನಾದ ಇರುಗ ಶೆಟ್ಟಿಯ ಸ್ಮರಣಾರ್ಥ ಕೆರೆಯನ್ನು ದೇವಾಲಯವನ್ನು ನಿರ್ಮಿಸಿರುವುದು ಇದಕ್ಕೆ ಸಾಕ್ಷಿಯಾಗಿದೆ. ಪೆಮ್ಮಿಶೆಟ್ಟಿಯು ಕುವಳಲ ನಾಡಿನ ಪಟ್ಟವ್ಯಾಪಾರಿಯು ಮತ್ತು ಉಭಯ ನಾಡ ಪ್ರಮುಖನೆಂದು ಶಾಸನವು ತಿಳಿಸುತ್ತಿದೆ ಹಾಗಾಗಿ ಇರುಗಶೆಟ್ಟಿಯು ಕೂಡ ವ್ಯಾಪಾರ ವೃತ್ತಿಯನ್ನೇ ಆಶ್ರಯಿಸಿರಬಹುದು. ಕೋಲಾರ ತಾಲ್ಲೂಕಿನಲ್ಲಿ ಪೆಮ್ಮಿಶೆಟ್ಟಿ ಹಳ್ಳಿಯಂಬ ಗ್ರಾಮವೂ ಈಗಲೂ ಇರುವುದು ಆತನ ಪ್ರಸಿದ್ದಿಗೆ ಕೈಗನ್ನಡಿಯಂತಿದೆ. ಅದೇ ರೀತಿಯಾಗಿ ಪೆಮ್ಮಿಶೆಟ್ಟಿ ಹಳ್ಳಿಯಲ್ಲಿ ದೊರಕಿರುವಂತಹ ಎರಡು ಶಾಸನಗಳು[೧೨]. ಪೆಮ್ಮಿಶೆಟ್ಟಿ ಹಳ್ಳಿಯನ್ನು ದಾನವಾಗಿ ನೀಡಿರುವುದನ್ನು ಉಲ್ಲೇಖಿಸುತ್ತಿದೆ. ಈ ಗ್ರಾಮದವರು ಒಬ್ಬ ವ್ಯಕ್ತಿಯ ಹೆಸರನ್ನೇ ನೀಡಿವವಷ್ಟು ಪ್ರಸಿದ್ಧಿ ಇವರು ಹೊಂದಿದ್ದರು. ಅದಲ್ಲದೆ ಇವರ ಶಾಸನಗಳು ಹೊಯ್ಸಳ ಆಡಳಿತದಲ್ಲೂ ಮತ್ತು ವಿಜಯನಗರದರಸರ ಕಾಲದಲ್ಲಿ ದೊರಕಿರುವುದರಿಂದ ಈ ಎರಡು ರಾಜಮನೆತನದವರ ಮೇಲೆ ಇವರು ಪ್ರಭಾವವನ್ನು ಬೀರಿದ್ದರು. ಹೊಯ್ಸಳರ ರಾಜ್ಯದಲ್ಲಿ ಜೈನ, ಬೌದ್ಧ, ಶೈವ ಮತ್ತು ವೈಷ್ಣವ ಧರ್ಮಗಳಿದ್ದವು ಹೊಯ್ಸಳರ ಅನೇಕರು ಜೈನ ಧರ್ಮವನ್ನು ಸ್ವೀಕರಿಸಿದ್ದರು. ದಂಡನಾಯಕರೂ ಧಾರ್ಮಿಕ ಪ್ರವೃತ್ತಿಯಲ್ಲಿ ಆಸಕ್ತರಾಗಿದ್ದು ಅನೇಕ ದಾನದತ್ತಿಗಳನ್ನು ಶೈವ ದೇವಾಲಯಕ್ಕೂ, ವೈಷ್ಣವ ದೇವಾಲಯಕ್ಕೂ ನೀಡಿದ್ದಾರೆ. ಇರುಗಿಶೆಟ್ಟಿಯು ಶಿವಲೋಕ ಪ್ರಾಪ್ತನಾದನೆಂದು ಸ್ಪಷ್ಟವಾಗಿ ಶಾಸನದಲ್ಲಿ ಉಲ್ಲೇಖಗೊಂಡಿರುವುದರಿಂದ ಶೈವ ಮತಾನು ಯಾಯಿಯಾಗಿದ್ದನೆಂದು ತಿಳಿಯಬಹುದಾಗಿದೆ. ಹೊಯ್ಸಳರ ಆಡಳಿತಾವಧಿಯಲ್ಲಿ ದೆಹಲಿಯ ಸುಲ್ತಾನರು ದಕ್ಷಿಣ ಭಾರತದ ಮೇಲೆ ಧಾಳಿ ಮಾಡಿದ್ದರು. ಮೂರನೆಯ ಬಲ್ಲಾಳನ ಆಡಳಿತಾವಧಿಯಲ್ಲಿ ಅಲ್ಲಾವುದ್ದೀನ್ ಖಿಲ್ಜಿಯ ಸೈನ್ಯವು ದ್ವಾರಸಮುದ್ರದ ಮೇಲೆ ದಾಳಿ ಮಾಡಿತ್ತು. ಈ ಸಂದರ್ಭದಲ್ಲಿ ತಿರುವಣ್ಣಾಮಲೈಗೆ ಪಲಾಯನಗೈದ ಬಲ್ಲಾಳನ ಸೈನ್ಯವನ್ನು ಓಡಿಸಿಕೊಂಡು ಹೋದಂತಹ ಸಂದಂರ್ಭದಲ್ಲಿ ಕೋಲಾರ ಮಾರ್ಗವನ್ನು ಬಳಸಿರಬಹುದು. ಆದರೂ ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲೂ ಮಹಾದಂಡ ನಾಯಕರು ತಮ್ಮ ತಮ್ಮ ಪ್ರದೇಶವನ್ನು ರಕ್ಷಿಸುವಲ್ಲಿ ಸಮರ್ಥರಾಗಿದ್ದರು. ಅಂತಹ ಪ್ರಯತ್ನವನ್ನು ಇರುಗಿಶೆಟ್ಟಿಯೂ ಮಾಡಿರುತ್ತಾನೆ.

ಎಂ.ಜಿ. ನಾಗರಾಜ್‌ರವರು[೧೩] ಇರುಗಿಶೆಟ್ಟಿಗೆ ಅಮರ ನಾಯಕನ ಸ್ಥಾನವನ್ನು ನೀಡಿದ್ದು, ವೀರಶೈವ ಧರ್ಮದ ವಿಚಾರವಾಗಿ ಚರ್ಚಿಸಿದ್ದಾರೆ. ಇರುಗಿಸೆಟ್ಟಿಯು ಶೈವ ಧರ್ಮೀಯನಾಗಿದ್ದನೆಂದು ಹಿಂದೆ ಚರ್ಚಿಸಲಾಗಿದೆ. ಅದಲ್ಲದೆಯೇ ಇರುಗಿಸೆಟ್ಟಿ ಮತ್ತು ಆತನ ಮಕ್ಕಳು ವೀರಭದ್ರ ದೇವಾಲಯಕ್ಕೆ ದಾನವನ್ನು ನೀಡಿರುವಂತಹ ಮಾಹಿತಿಗಳು ದೊರೆಯುವುದರಿಂದ ಈ ವಿಚಾರವು ಸರಿಯೆಂದೆನಸುತ್ತಿದೆ. ಹೀಗಾಗಿ ಇರುಗಿಸೆಟ್ಟಿಯು ಮಹಾದಂಡನಾಯಕರ ಕುಲದಲ್ಲಿ ಹುಟ್ಟಿ, ವಡ್ಡ ವ್ಯಾಪಾರಿಯೂ ಆಗಿ ಧಾರ್ಮಿಕ ಕಾರ್ಯಗಳನ್ನೂ ಮಾಡಿ ಪ್ರಸಿದ್ಧನಾಗಿದ್ದನು.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. E.C. X, ಕೋಲಾರ, ೨೦೧.

೨. E.C. X, ಕೋಲಾರ, ೧೧೩.

೩. E.C. X, ಕೋಲಾರ, ೬೭.

೪. E.C. X, ಕೋಲಾರ, ೮೦.

೫. E.C. X, ಕೋಲಾರ, ೧೦೫.

೬ E.C. X, ಕೋಲಾರ, ೭೩.

೭. E.C. X, ಕೋಲಾರ, ೮೩.

೮. ಎಸ್. ಗಂಗಾಂಬಿಕೆ, ಹೊಯ್ಸಳ ಮಹಾಪ್ರಧಾನ ಬಲ್ಲಪ್ಪ ದಂಡನಾಯಕ ಮತ್ತು ಅವನ ವಂಶೀಯರು, **ಇತಿಹಾಸ ದರ್ಶನ**, ಸಂಪುಟ ೨೬.

೯. E.C. X, ಕೋಲಾರ, ೭೧.

೧೦. ಕುವಳಾಲ, ಕೆ.ಆರ್. ನರಸಿಂಹನ್, ಪುಟ ಸಂ. ೧೩೫

೧೧. E.C. X, ಕೋಲಾರ, ೭೩.

೧೨. E.C. X, ಕೋಲಾರ, ೮೫, ೮೬.

೧೩. ಎಂ.ಜಿ. ನಾಗರಾಜ್ ಅವರ ಲೇಖನ, **ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ತ್ವ**, ಪುಟ ೧೫೫.

೨೮

'ವೆಂಗಿ ವಿಷಯ, ವೆಂಗಿ ಮಂಡಳ, ವೆಂಗಿಪಳು' : ಒಂದು ವಿಚಾರ

ಶಾಶ್ವತಸ್ವಾಮಿ ಮುಕ್ಕುಂದಿಮಠ*

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಹಾಗೂ ಕರ್ನಾಟಕ ಇತಿಹಾಸದಲ್ಲಿ 'ವೆಂಗಿಲಮಂಡಲ'ದ ವಿಚಾರ ಹಲವಾರು ಬಾರಿ ಪ್ರಸ್ತಾಪವಾಗುತ್ತದೆ.[೧] ಹತ್ತನೆಯ ಶತಮಾನದ ಕೆಲವು ಕವಿಗಳ ಸ್ಥಳ ವೆಂಗಿಯಾಗಿತ್ತು. ಆದಿಕವಿ ಪಂಪ, ನಾಗವರ್ಮ, ದುರ್ಗಸಿಂಹ ಮೊದಲಾದ ಕವಿಗಳು ವೆಂಗಿಮಂಡಲದವರೆಂದು ಅದರ ಕಾವ್ಯದಿಂದ ತಿಳಿದುಬರುತ್ತದೆ. ಈ ವೆಂಗಿ ಮಂಡಳವು ೭ನೆಯ ಶತಮಾನದಿಂದ ೧೨ನೆಯ ಶತಮಾನದವರೆಗೆ ಆರು ಶತಮಾನಗಳ ಕಾಲ ಕನ್ನಡರಸರು ಆಳಿದ ಪ್ರದೇಶ. ಅಲ್ಲಿ ಕನ್ನಡ ರಾಜರು ನಿರಂತರವಾಗಿ ಸಾಮ್ರಾಜ್ಯವನ್ನು ಸ್ಥಾಪಿಸಿ, ಕನ್ನಡದ ಪ್ರಭುತ್ವವನ್ನು ಸಾಧಿಸಿದ್ದು ಇತಿಹಾಸದಿಂದ ಗೊತ್ತಾಗುತ್ತವೆ. ದಕ್ಷಿಣ ಭಾರತದ ಇತಿಹಾಸದಲ್ಲಿ ವೆಂಗಿಮಂಡಳ ಪ್ರಮುಖ ಆಡಳಿತ ಭಾಗವಾಗಿತ್ತು. ಇದರ ಮೇಲೆ ತಮ್ಮ ಸಾರ್ವಭೌಮತ್ವವನ್ನು ಸಾಧಿಸಲು ದಕ್ಷಿಣ ಭಾರತದಲ್ಲಿದ್ದ ಕಂಚಿಯ ಪಲ್ಲವರು ಮತ್ತು ತಂಜಾವೂರಿನ ಚೋಳರು ಚಾಳುಕ್ಯರ ಮೇಲೆ ಕೆಲವು ಸಲ ಯುದ್ಧ ಮಾಡಿದ ವಿಚಾರ ಇತಿಹಾಸದಲ್ಲಿ ಉಲ್ಲೇಖವಾಗಿದೆ.[೨] ಇಷ್ಟೊಂದು ಚಾರಿತ್ರಿಕ ಮಹತ್ತ್ವ ಹೊಂದಿದ ವೆಂಗಿವಿಷಯ ಮಂಡಲವು ಇದ್ದ ಪ್ರದೇಶದ ಮೇರೆ, ವಿಸ್ತಾರ ಇತ್ಯಾದಿ ವಿಚಾರಗಳ ಬಗೆಗೆ ಸ್ಪಷ್ಟವಾಗಿ ತಿಳಿದುಬರುವುದಿಲ್ಲ. ಇತಿಹಾಸಕಾರರಲ್ಲಿಯೂ ಒಮ್ಮತದ ಅಭಿಪ್ರಾಯ ಕಂಡುಬರುವುದಿಲ್ಲ. ಕನ್ನಡ ಕಾವ್ಯ, ಶಾಸನ ಹಾಗೂ ಇತಿಹಾಸಗಳು ನೀಡುವ ಆಧಾರದ ಮೇಲೆ ದಕ್ಷಿಣ ಭಾರತದಲ್ಲಿ ಕಳಿಂಗದಿಂದ ಪಶ್ಚಿಮಕ್ಕೆ ಮತ್ತು ಕನ್ನಡನಾಡಿನ ಪೂರ್ವಕ್ಕೆ ಹಬ್ಬಿಕೊಂಡ ವಿಶಾಲವಾದ ಪ್ರದೇಶ ವೆಂಗಿವಿಷಯವಾಗಿತ್ತು ಎಂದು ತಿಳಿದುಬರುತ್ತದೆ. ದಕ್ಷಿಣದ ಕೃಷ್ಣಾನದಿ ಉತ್ತರದ ಗೋದಾವರಿ ನದಿಗಳು ಇದರ ಪೂರ್ವೋತ್ತರ ಗಡಿಯಾಗಿದ್ದವು. ಆದರೆ ಈ ಸೀಮೆ ರಾಜಕೀಯ ಬದಲಾವಣೆಯೊಂದಿಗೆ ಬದಲಾಗುತ್ತ ಬಂದಿರುವುದು ತಿಳಿದುಬರುತ್ತದೆ.

ವೆಂಗಿ ಚರಿತ್ರೆ : ಶಾತವಾಹನರ (ಕ್ರಿ.ಶ. ೧–೩ ಶತಮಾನ) ಆಳ್ವಿಕೆಯ ಕಾಲದಲ್ಲಿ ವೆಂಗಿ ಮತ್ತು ಕಳಿಂಗ ದೇಶಗಳು ಅವರ ಪ್ರಭುತ್ವಕ್ಕೆ ಒಳಪಟ್ಟಿದ್ದವು. ಆ ಕಾಲದಲ್ಲಿ ವೆಂಗಿ ಮತ್ತು ಕಳಿಂಗದ ಭಾಷೆ ತೆಲುಗು ಭಾಷೆಯಾಗಿತ್ತಲ್ಲದೆ ವೆಂಗಿಮಂಡಳ ಕಳಿಂಗ ದೇಶದಲ್ಲಿ ಅಂತರ್ಗವಾಗಿತ್ತೆಂದು ಇತಿಹಾಸ ಹೇಳುತ್ತವೆ.[೩] 'ಆಂಧ್ರಭೃತ್ಯರು' ಎಂದು ಕರೆದುಕೊಂಡ ಚಟುಕಲಾವಾಂದ ಹೆಸರಿನ ಒಂದು ವಂಶ ಶಾತವಾಹನರ ಕೈಕೆಳಗಿನ ಪಂಗಡವರು ಆಂಧ್ರಭಾಷೆಯ ಮೂಲಪುರುಷರೆಂದು ಡಿ.ವಿ. ಕೃಷ್ಣರಾವ್ ಅಭಿಪ್ರಾಯಪಡುತ್ತಾರೆ.[೪] ನಂತರ ಮಧುರೆಯ ಪಾಂಡ್ಯರು (ಕ್ರಿ.ಶ. ೫–೬ನೆಯ ಶತಮಾನ) ದಕ್ಷಿಣಭಾರತದಲ್ಲಿ ತಮ್ಮ ರಾಜ್ಯವನ್ನು ವಿಸ್ತರಿಸಿ, ಬಲಾಢ್ಯ ರಾಜ್ಯವಾಗಿ ಆಳುತ್ತಿರುವ ಕಾಲದಲ್ಲಿ ವೆಂಗಿ ಪಲ್ಲವ ರಾಜ್ಯದ ಒಂದು ಮಂಡಲವಾಗಿತ್ತು. ತರುವಾಯ ಬಾದಾಮಿಯ ಚಾಳುಕ್ಯರು (ಕ್ರಿ.ಶ. ೪೫೦–೭೫೫) ಪಲ್ಲವರನ್ನು ಯುದ್ಧಲ್ಲಿ ಸೋಲಿಸಿ ದಕ್ಷಿಣ ಭಾರತದಲ್ಲಿ ರಾಜ್ಯ ಪ್ರಭುತ್ವವನ್ನು ಸ್ಥಾಪಿಸಿದರು. ಆಗ ವೆಂಗಿ ಬಾದಾಮಿ ಚಾಳುಕ್ಯರ ವಶವಾಯಿತು. ಅಂದಿನಿಂದ ಆರು ಶತಮಾನಗಳ ದೀರ್ಘಕಾಲ (ಕ್ರಿ.ಶ. ೬೩೦–೧೧೪೦) ವೆಂಗಿ ಕನ್ನಡ ಅರಸು ಮನೆತನಗಳ ನಿರಂತರ ಆಡಳಿತಕ್ಕೆ ಒಳಪಟ್ಟಿತ್ತು. ಬಾದಾಮಿ ಚಾಳುಕ್ಯರು, ಮಳಖೇಡದ ರಾಷ್ಟ್ರಕೂಟರು ಹಾಗೂ ಕಲ್ಯಾಣದ ಚಾಳುಕ್ಯ ಮನೆತನಗಳು ನಿರಂತರವಾಗಿ ವೆಂಗಿಯ ಮೇಲೆ ತಮ್ಮ ಪ್ರಭುತ್ವವನ್ನು ಸಾಧಿಸಿದವು. ಅಷ್ಟು ಸುದೀರ್ಘ ಕಾಲಾವಧಿಯಲ್ಲಿ ದಕ್ಷಿಣ ಭಾರತದಲ್ಲಿ ಆಳಿದ ಮತ್ತಾವ ರಾಜಮನೆತನಗಳು ಕನ್ನಡ ಅರಸುಮನೆತನಗಳ ವಶದಲ್ಲಿದ್ದ ವೆಂಗಿ ಮಂಡಲವನ್ನು ಸ್ವಾಧೀನಪಡಿಸಿಕೊಳ್ಳಲು ಸಾಧ್ಯವಾಗ ಲಿಲ್ಲವೆಂಬುದು ಮಹತ್ತ್ವದ ಸಂಗತಿ. ೧೦ನೆಯ ಶತಮಾನದ ಪ್ರಾರಂಭದಲ್ಲಿ ತಂಜಾವೂರಿನ ಚೋಳರು ವೆಂಗಿಯ ಮೇಲೆ ತಮ್ಮ ಪ್ರಭುತ್ವವನ್ನು ಸ್ಥಾಪಿಸಲು ಒಂದೆರಡು ಸಲ ಪ್ರಯತ್ನಪಟ್ಟದ್ದು ಗೊತ್ತಾಗುತ್ತದೆ.

ಒಂದನೆಯ ಪರಾಂತಕ ಚೋಳ (ಕ್ರಿ.ಶ. ೯೦೭–೯೫೩) ರಾಷ್ಟ್ರಕೂಟ ಮೂರನೆಯ ಕೃಷ್ಣ (ಕ್ರಿ.ಶ. ೯೩೯–೯೬೭) ನೊಂದಿಗೆ ಮಾಡಿದ 'ತಕ್ಕೊಲಂ' ಕಾಳಗದಲ್ಲಿ ಚೋಳಪರಾಂತಕನು ಸಂಪೂರ್ಣ ಸೋತುಹೋದನು. ಕೃಷ್ಣನ ಸಹೋದರಿಯ ಗಂಡನಾದ ಗಂಗರ ಬೂತುಗನು ಈ

* ವಿಶ್ರಾಂತ ಪ್ರಾಂಶುಪಾಲರು, ಪಟೇಲವಾಡಿ, ಸಿಂಧನೂರು–೫೮೪ ೧೨೮.

ಯುದ್ಧದಲ್ಲಿ ಪರಾಕ್ರಮವನ್ನು ಮೆರೆದು ರಾಷ್ಟ್ರಕೂಟರಿಗೆ ವಿಜಯವನ್ನು ಸಂಪಾದಿಸಿಕೊಟ್ಟನು. ಕನ್ನಡ ಅರಸರು ಚೋಳರನ್ನು ಸೋಲಿಸಿ ಹಿಮ್ಮೆಟ್ಟಿಸಿದ 'ತಕ್ಕೋಲಂ' ಕಾಳಗ ದಕ್ಷಿಣ ಭಾರತದ ಇತಿಹಾಸದಲ್ಲಿ ಪ್ರಸಿದ್ಧಿ ಪಡೆಯಿತು. ಕ್ರಿ.ಶ. ೧೧೧೮ರಲ್ಲಿ ಒಮ್ಮೆ ವೆಂಗಿ ಚೋಳರ ವಶವಾಗುತ್ತದೆ. ಕ್ರಿ.ಶ. ೧೧೨೬ರಲ್ಲಿ ವೆಂಗಿಯನ್ನು ಚೋಳರಿಂದ ಕಲ್ಯಾಣ ಚಾಳುಕ್ಯರು ತಮ್ಮ ಅಧೀನಕ್ಕೆ ತೆಗೆದುಕೊಂಡರು.[೫] ಅಲ್ಲಿಗೆ ವೆಂಗಿಯ ರೋಚಕ ಇತಿಹಾಸ ಮುಕ್ತಾಯವಾಗುತ್ತದೆ.

ವೆಂಗಿಯ ಪೂರ್ವ ಚಾಳುಕ್ಯ ಮನೆತನ : ವೆಂಗಿಯನ್ನು ವಿಷಯ ಮಂಡಲವೆಂದು ದಕ್ಷಿಣ ಭಾರತದಲ್ಲಿ ಮೊಟ್ಟ ಮೊದಲು ಗುರುತಿಸಿ ಕಾಣಿಸಿ ಅದಕ್ಕೆ ಸ್ಥಾನ-ಮಾನವನ್ನು ಗಳಿಸಿಕೊಟ್ಟವರು ಬಾದಾಮಿ ಚಾಲುಕ್ಯರು. ಬಾದಾಮಿ ಚಾಲುಕ್ಯರ ಮನೆತನವೊಂದು ವೆಂಗಿಮಂಡಲದಲ್ಲಿ 'ಪೂರ್ವ ಚಾಳುಕ್ಯ' ಹೆಸರಿನಿಂದ ರಾಜ್ಯಭಾರ ಮಾಡಿತು. ಇದೇ ಹೆಸರಿನ ಮನೆತನ ಆರು ಶತಮಾನಗಳ ಕಾಲ ವೆಂಗಿಯಲ್ಲಿ ನಿರಂತರ ಆಳ್ವಿಕೆ ಮಾಡಿ ಪ್ರಸಿದ್ಧವಾಯಿತು.[೬]

ಬಾದಾಮಿ ಚಾಲುಕ್ಯರ ಪ್ರಸಿದ್ಧ ಅರಸು ದಕ್ಷಿಣಪಥ್ಯೇಶ್ವರ, ಪರಮೇಶ್ವರ ಮುಂತಾದ ಬಿರುದುಗಳನ್ನು ಪಡೆದ ಪ್ರಸಿದ್ಧ ಇಮ್ಮಡಿ ಪುಲಕೇಶಿಯು (ಕ್ರಿ.ಶ. ೬೦೦೨-೬೪೨) ದಕ್ಷಿಣ ಭಾರತವನ್ನು ಗೆದ್ದು ತನ್ನ ಸಾಮ್ರಾಜ್ಯಕ್ಕೆ ಸೇರಿಸಿಕೊಂಡನು. ವೆಂಗಿ ಆತನ ಸ್ವಾಧೀನವಾಯಿತು. ದಕ್ಷಿಣ ಭಾರತದ ಮೇಲೆ ತನ್ನ ರಾಜ್ಯಪ್ರಭುತ್ವವನ್ನು ನಿಯಂತ್ರಿಸಲು ಪುಲಿಕೇಶಿಯು ಆಯಕಟ್ಟಿನ ಸ್ಥಳವಾದ ವೆಂಗಿಯನ್ನು ತನ್ನ ಸಾಮ್ರಾಜ್ಯದ ಉಪ ಆಡಳಿತ ವಿಭಾಗವಾಗಿ ಮಾಡಿ, ಅಲ್ಲಿ ತನ್ನ ತಮ್ಮ ಕುಬ್ಜ ವಿಷ್ಣುವರ್ಧನನನ್ನು ರಾಜಪ್ರತಿನಿಧಿಯಾಗಿ ನೇಮಿಸಿದನು. ಉತ್ತಮ ಆಡಳಿತಗಾರನಾಗಿದ್ದ ಆತನು ವೆಂಗಿಯಲ್ಲಿ 'ಪೂರ್ವಚಾಳುಕ್ಯ' ಮನೆತನಕ್ಕೆ ಆಸ್ತಿಭಾರ ಹಾಕಿದನು.[೭] ವೆಂಗಿ ಪೂರ್ವ ಚಾಳುಕ್ಯ ಮನೆತನವು ೧೨ನೆಯ ಶತಮಾನದವರೆಗೆ ನಿರಂತರ ರಾಜ್ಯಭಾರ ಮಾಡಿತು. ರಾಜಕೀಯ ಸ್ಥಿತ್ಯಂತರ ಗಳಿಂದ ರಾಜಮನೆತನಗಳ ಆಡಳಿತದ ಹಸ್ತಾಂತರವಾದರೂ ವೆಂಗಿಯಲ್ಲಿ ಚಾಳುಕ್ಯರ ಅಧಿಕಾರಕ್ಕೆ ಯಾವ ಬಾಧಕವಾಗಲಿಲ್ಲ. ಬಾದಾಮಿಯ ಚಾಲುಕ್ಯರ ನಂತರ ಆಳಿದ ಮಳೇಖೇಡದ ರಾಷ್ಟ್ರಕೂಟ ಮನೆತನದ ಅಧಿಕಾರದಲ್ಲಿ (ಕ್ರಿ.ಶ. ೭೫೩-೯೭೩) ವೆಂಗಿಯ ಚಾಳುಕ್ಯರು ರಾಷ್ಟ್ರಕೂಟರ ಸಾಮಂತರಾಗಿ ರಾಜ್ಯಭಾರ ಮಾಡುತ್ತಿದ್ದರು.

ಇದೇ ಕಾಲಾವಧಿಯಲ್ಲಿ ಪಂಪಕವಿಯ ಆಶ್ರಯ ದೊರೆ ಎರಡನೆಯ ಅರಿಕೇಸರಿ (ಕ್ರಿ.ಶ. ೯೨೮-೯೬೨) ರಾಷ್ಟ್ರಕೂಟರ ಸಾಮಂತ ಅರಸ ನಾಗಿದ್ದ. ಈತ ವೇಮುಲವಾಡ ಶಾಸನವನ್ನು (ಕ್ರಿ.ಶ. ೯೨೮) ಸಂಸ್ಕೃತದಲ್ಲಿ ಬರೆಯಿಸಿದನು. ಈತನ ಕಾಲದಲ್ಲಿ ಪಂಪಕವಿಯ ತಮ್ಮ ಜಿನವಲ್ಲಭನು ಬೊಮ್ಮಲಮ್ಮನ ಗುಡ್ಡದಲ್ಲಿ ಪಂಪನ ಹೆಸರಿನ ಕನ್ನಡ ಶಿಲಾಶಾಸನವೊಂದನ್ನು (ಕ್ರಿ.ಶ ೯೪೫) ಬರೆಯಿಸಿದನು. ಇದು ಗಂಗಾಧರಂ ಶಾಸನವೆಂದು ಹೆಸರು ಪಡೆಯಿತು. ಈತನ ನಂತರ ಮೂರನೆಯ ಅರಿಕೇಸರಿ (ಕ್ರಿ.ಶ. ೯೬೩-೯೮೬) ರಾಷ್ಟ್ರಕೂಟರ ಸಾಮಂತನಾಗಿ ಆಡಳಿತ ಮಾಡಿದನು. ಈತನನ್ನು ಕುರಿತ ಪರಭಣಿ ಸಂಸ್ಕೃತ ಶಾಸನ (ಕ್ರಿ.ಶ. ೯೬೬) ಉತ್ತೀರ್ಣಗೊಂಡಿತು. ಆಗಲೇ ಒಂದನೆಯ ಅರಿಕೇಸರಿಯು ಕೋಲಪಾಕ (ಕ್ರಿ.ಶ. ೮೯೦) ರಲ್ಲಿ ಸಂಸ್ಕೃತ ಶಾಸನವನ್ನು ಬರೆಯಿಸಿದನು. ರಾಷ್ಟ್ರಕೂಟರ ನಂತರ ಕಲ್ಯಾಣ ಚಾಳುಕ್ಯರು (ಕ್ರಿ.ಶ. ೯೩೩-೧೧೪೦) ನಾಡಿನ ರಾಜ್ಯಸೂತ್ರವನ್ನು ಹಿಡಿದರು. ಇವರ ಕಾಲದಲ್ಲಿ ವೆಂಗಿಯಲ್ಲಿ ಆಳುತ್ತಿದ್ದ ರಾಜಮನೆತನ ಸಾಮಂತ ಅರಸೊತ್ತಗಿಯನ್ನು ಕಿತ್ತೊಗೆದು ಸ್ವತಂತ್ರವಾಗಿ ಕಲ್ಯಾಣ ಚಾಳುಕ್ಯರ ರಾಜಪ್ರತಿನಿಧಿಗಳಾಗಿ ರಾಜ್ಯಭಾರ ಮಾಡಿದರು. ಕಲ್ಯಾಣದಲ್ಲಿ ತ್ರಿಭುವನಮಲ್ಲ ಜಯಸಿಂಹನು (ಕ್ರಿ.ಶ. ೧೦೦೪-೧೦೧೬) ಆಳುತ್ತಿದ್ದಾಗ ವೆಂಗಿಯಲ್ಲಿ ವಿನಯಾದಿತ್ಯ ಚಾಳುಕ್ಯನು ಚಾಳುಕ್ಯರ ರಾಜಪ್ರತಿನಿಧಿಯಾಗಿದ್ದನು. ಇದೇ ಸಮಯದಲ್ಲಿ ರಾಜರಾಜ ಚೋಳನು (ಕ್ರಿ.ಶ. ೯೮೫-೧೦೧೪) ಚಾಳುಕ್ಯರ ಮೇಲೆ ಯುದ್ಧ ಸಾರಿದನು. ಈ ಯುದ್ಧದಲ್ಲಿ ಜಯಸಿಂಹನಿಗೆ ಸೋಲಾಯಿತು. ಉಭಯರಲ್ಲಿ ಒಪ್ಪಂದ ಏರ್ಪಟ್ಟು ಎರಡು ರಾಜ್ಯಗಳ ಗಡಿ ತುಂಗಭದ್ರಾ ನದಿಯೆಂದು ನಿರ್ಣಯ ವಾಯಿತು.[೮] ರಾಜರಾಜ ಚೋಳನು ವೆಂಗಿಯನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಳ್ಳುವ ಸಂಬಂಧವಾಗಿ ಕಲ್ಯಾಣ ಚಾಳುಕ್ಯ ಜಯಸಿಂಹನಿಗೂ ಮತ್ತು ವೆಂಗಿಯ ವಿನಯಾದಿತ್ಯನಿಗೂ ನಡುವೆ ವೈಮನಸ್ಸು ಹುಟ್ಟಿಸಲು ರಾಜರಾಜ ಚೋಳನು ವೆಂಗಿಯ ವಿಜಯಾದಿತ್ಯನಿಗೆ ತನ್ನ ಮಗಳನ್ನು ಕೊಟ್ಟು ಮದುವೆ ಮಾಡಿದನು. ಇದರಿಂದ ವಿನಯಾದಿತ್ಯನು ಚೋಳರಿಗೆ ನಿಷ್ಠನಾಗಿ ನಡೆದುಕೊಂಡನು.[೯]

ರಾಜೇಂದ್ರ ಚೋಳನ ಮಗ ರಾಜರಾಜಚೋಳನಿಗೂ ಮತ್ತು ಚಾಳುಕ್ಯರ ಒಂದನೆಯ ಸೋಮೇಶ್ವರನಿಗೂ (ಕ್ರಿ.ಶ. ೧೦೪೦-೧೦೬೦) ನಡೆದ 'ಕುಪ್ಪಂ' ಯುದ್ಧದಲ್ಲಿ ರಾಜರಾಜ ಚೋಳನು ಸೋತು ಮರಣ ಹೊಂದಿದನು. ಕಲ್ಯಾಣ ಚಾಳುಕ್ಯರ ಬಗೆಗೆ ವೆಂಗಿ ಚಾಳುಕ್ಯರಲ್ಲಿ ಹೊಗೆಯಾಡು ತ್ತಿದ್ದ ಅಸಮಾಧಾನವನ್ನು ನಿವಾರಿಸಲು ಸೋಮೇಶ್ವರನು ವಿಜಯಾಧಿತ್ಯನ ಮಗ ಶಕ್ತಿವರ್ಮನಿಗೆ ವೆಂಗಿಯ ಪಟ್ಟ ಕಟ್ಟಿದನು.[೧೦] ಆದರೆ ಈ ಸಮಾಧಾನ ತಾತ್ಕಾಲಿಕವಾಗಿತ್ತು. ಶಕ್ತಿವರ್ಮನ ನಿಷ್ಠೆ ಚೋಳರ ಪರವಾಗಿದ್ದುದರಿಂದ ವೆಂಗಿ ಮತ್ತು ಕಲ್ಯಾಣ ಚಾಳುಕ್ಯ ನಡುವಿನ ಬಾಂಧವ್ಯ ಹಳಸಿ ಮುರಿದು ಬಿದ್ದಿತು. ಸ್ವಲ್ಪ ಕಾಲದಲ್ಲಿ ವೆಂಗಿ ಚೋಳರ

ವಶವಾಗಿತ್ತು. ಕಲ್ಯಾಣ ಚಾಳುಕ್ಯರ ೬ನೆಯ ವಿಕ್ರಮಾದಿತ್ಯನು (ಕ್ರಿ.ಶ. ೧೦೭೦-೧೧೨೬) ಚೋಳರ ಒಂದನೆಯ ಕುಲತ್ತುಂಗನೊಂದಿಗೆ ಯುದ್ಧ ಮಾಡಿದ. ಆ ಯುದ್ಧದಲ್ಲಿ ಕುಲತ್ತುಂಗ ಚೋಳನು ಸಂಪೂರ್ಣವಾಗಿ ಸೋತನು. ವಿಕ್ರಮಾದಿತ್ಯನು ವೆಂಗಿಮಂಡಲವನ್ನು ಮತ್ತೆ ಚೋಳರಿಂದ ಕಸಿದುಕೊಂಡು ಚಾಳುಕ್ಯರಾಜ್ಯಕ್ಕೆ ಸೇರಿಸಿ ದನು.[೧೧]

ಕ್ರಿ.ಶ. ೧೧೮೩ರಲ್ಲಿ ಕಲ್ಯಾಣ ಚಾಳುಕ್ಯ ಸಾಮ್ರಾಜ್ಯ ಪತನವಾಗುತ್ತಿದ್ದಂತೆ ವೆಂಗಿಮಂಡಲದಲ್ಲಿ ಕನ್ನಡ ಅರಸರ ಅದಿಪತ್ಯ ಮುಕ್ತಾಯವಾಯಿತು. ಕನ್ನಡ ಭಾಷೆಯ ಪ್ರಭಾವ ಕಡಿಮೆಯಾಗುತ್ತಾ ನಡೆಯಿತು. ಮುಂದೆ ವಾರಂಗಲ್ಲಿನ ಕಾಕತೀಯರಿಂದಾಗಿ ವೆಂಗಿಯಲ್ಲಿ ತೆಲುಗು ಭಾಷೆಯ ಪ್ರಭಾವ ಸಹಜವಾಗಿಯೇ ಹೆಚ್ಚಿತು. ಅದೇ ಕಾಲದಲ್ಲಿ ದಕ್ಷಿಣಭಾರತದ ಮೇಲೆ ಮುಸ್ಲಿಂರ ದಾಳಿಯ (ಕ್ರಿ.ಶ. ೧೩೧೦) ಪರಿಣಾಮ ವೆಂಗಿಯ ಸ್ವರೂಪ ಮತ್ತು ಅದರ ಗಡಿಗಳಲ್ಲಿ ಬದಲಾವಣೆಗಳಾದವು. ಕಾಲಕ್ರಮೇಣ ತೆಲುಗು ಭಾಷೆ ಅಲ್ಲಿ ತನ್ನ ಪ್ರಭಾವ ಬೀರಿತು. ವಿಜಯನಗರ ಸಾಮ್ರಾಜ್ಯ (ಕ್ರಿ.ಶ. ೧೩೩೬-೧೫೬೫) ದಕ್ಷಿಣ ಭಾರತದಲ್ಲಿ ವ್ಯಾಪಿಸಿಕೊಂಡಾಗ ವೆಂಗಿಮಂಡಳ ತನ್ನ ಅಸ್ತಿತ್ವವನ್ನು ಕಳೆದುಕೊಂಡು ಅದೃಶ್ಯವಾಯಿತು. ಇಲ್ಲಿಗೆ ಅದರ ಇತಿಹಾಸವೂ ಮುಗಿದಂತಾಯಿತು.

ವೆಂಗಿಮಂಡಳದ ಗಡಿಸೀಮೆ-ಪರಿಕಲ್ಪನೆ : ಅಂದಿನ ವೆಂಗಿಮಂಡಳದ ಗಡಿಸೀಮೆಯನ್ನು ಗುರುತಿಸುವುದು ಈಗ ಕಷ್ಟದ ಕೆಲಸ. ಅದರ ವಿಸ್ತಾರ, ವ್ಯಾಪ್ತಿ ಕಾಲಕಾಲಕ್ಕೆ ಬದಲಾಗುತ್ತ ಹೋಗುತ್ತಿರುದ್ದುದು ಇದಕ್ಕೆ ಕಾರಣ. ಈ ಹಿಂದೆ ವಿವರಿಸಿದ ಇತಿಹಾಸ ಹಾಗೂ ಕನ್ನಡ ಕಾವ್ಯಗಳಲ್ಲಿ ಉಲ್ಲೇಖವಾಗಿರುವ ವಿವರಗಳು ಹಾಗೂ ಶಾಸನಗಳ ಉಲ್ಲೇಖಗಳನ್ನು ಆಧಾರವಾಗಿಟ್ಟುಕೊಂಡು ಕನ್ನಡ ಅರಸರು ಆಳಿದ ವೆಂಗಿಯ ಗಡಿಸೀಮೆಯನ್ನು ಗುರುತಿಸಲು ಇಲ್ಲಿ ಪ್ರಯತ್ನಿಸಲಾಗಿದೆ.

ಆದಿಕವಿ ಪಂಪ ವಿಕ್ರಮಾರ್ಜುನ ವಿಜಯಕಾವ್ಯದಲ್ಲಿ ವೆಂಗಿಯನ್ನು ವರ್ಣಿಸಿದ ಪದ್ಯ ಹೀಗಿದೆ :

ಆಮಲಯಾಚಲ ಹಿಮಗಿರಿ
ಸೀಮಾವನಿತಳ (ಕೆ) ವೆಂಗಿಮಂಡಳದೊಳ್ ಚೆ ।
ಲ್ವಮಾಗೆಯೆ ತನಗೊಂದೂರು
ನಾಮದೊಳಂ ವೆಂಗಿಪಳು ಕರಂ ಸೊಗಯಿಸುಗಂ ॥[೧೨]

"ಮಲಯಾಚಲ ಮೊದಲುಗೊಂಡು ಹಿಮಗಿರಿ ಸೀಮೆಯ ಭೂಭಾಗದವರೆಗಿನ ವೆಂಗಿಮಂಡಳದೊಳಗೆ ತನಗೆ ಯಾವ ಪ್ರಾಂತದಲ್ಲಿಯೂ 'ಚಲ್ವು' ಪಸರಿಸುತ್ತಿರುವ ವೆಂಗಿಪಳು ಶೋಭಿಸುತ್ತದೆ' ಎಂಬುದು ಈ ಕಂದಪದ್ಯದ ಭಾವಾರ್ಥ. ದಕ್ಷಿಣದ ಮಲಯಪರ್ವತ ಮತ್ತು ಉತ್ತರದ ಹಿಮಾಲಯ ಪರ್ವತಗಳು ವೆಂಗಿಮಂಡಲದ ಗಡಿಗಳೆಂದೂ ಅದು ಅಲ್ಲಿಯವರೆಗೆ ವಿಸ್ತಾರವಾಗಿ ಹಬ್ಬಿದ ವಿಶಾಲವಾದ ಪ್ರದೇಶವಾಗಿತ್ತೆಂದೂ ಭಾವಿಸಬೇಕಾಗುತ್ತದೆ. ಕೇರಳದ ಕರಾವಳಿಯಿಂದ ಉತ್ತರದ ಹಿಮಾಲಯದವರೆಗೆ ವ್ಯಾಪಿಸಿದ ಈ ಪ್ರದೇಶ ಭರತಖಂಡದಲ್ಲಿ ಬಹುವಿಸ್ತಾರ ಪ್ರದೇಶವೆಂದೆನಿಸುತ್ತದೆ. ಆದರೆ ಇದು ಇತಿಹಾಸಕಾರರಿಗೆ, ವಿದ್ವಾಂಸರಿಗೆ ನಂಬಿಕೆಯುಂಟಾಗುವುದು ಕಷ್ಟವೆಂದು ಮುಳಿಯ ತಿಮ್ಮಪ್ಪಯನವರು ಪಡುವ ಸಂದೇಹ ಒಪ್ಪುವಂತಹದ್ದು.[೧೩]

ಪಂಪಕವಿಯು ವರ್ಣಿಸಿದ ಪದ್ಯದ ಅರ್ಥವನ್ನು ಕೊಡುವ ಅದೇ ಕಾಲದಲ್ಲಿ ಬರೆಯಿಸಿದ ಎರಡನೆಯ ಅರಿಕೇಸರಿಯ ವೇಮುಲವಾಡ ಶಾಸನ (ಕ್ರಿ.ಶ. ೯೨೭) ನಮ್ಮ ಗಮನ ಸೆಳೆಯುತ್ತದೆ.

ತಸ್ಯಾತ್ಮಜೋ ದಕ್ಷಿಣ ಬಾಹುದಂಡ
ಚಂಡಸಿಧಾರಹತ ವೈರಿಷಂಡಃ ।
ಒಳದೃಹಿತಾಖಿಳ ವೆಂಗಿದೇಶಃ
ಪಾತಿ ಸ್ಮಪೃಥ್ವೀಮರಿಕೇಸರೀಶಃ ॥[೧೪]

'ಒಳದ್ಧ್ರಹಿತಾಖಿಳ ವೆಂಗಿದೇಶಃ' ಎಂಬ ವಾಕ್ಯವು ಪಂಪಕವಿಯ 'ಅವನೀತಳಕೆ ವೆಂಗಿಮಂಡಳದೊಳ್ ಚೆಲ್ವಮಾಗೆ' ಎಂಬ ಪದ್ಯವಾಕ್ಯಕ್ಕೆ ಸಮನಾಂತರ ಅರ್ಥ ಸ್ಫುರಿಸುತ್ತದೆ. ಪಂಪಕವಿಯ ಆಶ್ರಯ ದೊರೆ ಅರಿಕೇಸರಿ ಬರೆಯಿಸಿದ ಈ ಸಂಸ್ಕೃತಶಾಸನ ಹಾಗೂ ಪಂಪಕವಿಯ ಮೇಲಿನ ಪದ್ಯಗಳಿಂದ ವೆಂಗಿಮಂಡಲದ ಸ್ಥಾನ ಹಾಗೂ ಅದರ ಮೇರೆಯ ಗುರುತನ್ನು ಅರಿಯಲು ಪ್ರಮುಖ ಸಾಧನವಾಗಿದೆ. ಅಂತಹದ್ದೇ ಮತ್ತೊಂದು ಅತಿ ಪ್ರಮುಖ ಶಾಸನ ಪಂಪನ ತಮ್ಮ ಜಿನವಲ್ಲಭನು ಕ್ರಿ.ಶ. ೯೪೫ ಬರೆಯಿಸಿದ ಶಾಸನ[೧೫]. ಪಂಪಕವಿಯ ಪ್ರಶಸ್ತಿಗಾಗಿ ಬರೆಯಿಸಿದ್ದು. ಪಂಪಕವಿ ನಿಧನನಾದ ಕೆಲವು ದಿನಗಳಲ್ಲಿ ಈ ಶಾಸನ ಬರೆಯಿಸಿದಂತೆ ಕಾಣುತ್ತದೆ. ಕವಿಯ ತಾಯಿ ಅಪ್ಪಣಬ್ಬೆ, ಆಕೆಯ ತಂದೆ ಜೋಯಿಸರ ಸಿಂಗ, ಊರು ಅಣ್ಣಿಗೆರೆ, ಕಮ್ಮೆಬ್ರಾಹ್ಮಣ, ವತ್ಸಗೋತ್ರ ಇತ್ಯಾದಿ ಪಂಪನ ವಿಚಾರಗಳು ಇಲ್ಲಿ ತಿಳಿಯುತ್ತದೆ. "ಸ್ವಸ್ತಿ ಸಕಳಕಳಾಪ ಪ್ರವೀಣಂ ಭವ್ಯರತ್ನಾಕರಂ ಗುಣಪಕ್ಷ ಪಾತಿ ವೆಂಗಿನಾಡ ಸಪ್ತಗ್ರಾಮಗಳೊಳಗಣ ವೆಂಗಿಪಳು ಕಮ್ಮೆ ಬ್ರಾಹ್ಮಣಂ ಜಮದಗ್ನಿ ಪಂಚಾರ್ಷೇಯಂ ಶ್ರೀಮದ್ವತ್ಸಗೋತ್ರ" ಎಂದು ಶಾಸನ ಉಲ್ಲೇಖಿಸುತ್ತದೆ.[೧೬] 'ಗಂಗಾಧಂ' ಶಾಸನವು ವೇಮುಲವಾಡು ವೆಂಬುಳಪಾಟ ಸಮೀಪದಲ್ಲಿಯ ಬೊಮ್ಮಲಮ್ಮನ ಗುಡ್ಡದ ಮೇಲಿದೆ. ಈ ವೇಮುಲವಾಡು ಮತ್ತು ಬೊಮ್ಮಲಮ್ಮನ ಗುಡ್ಡಗಳು ಈಗ ಆಂಧ್ರಪ್ರದೇಶದ ಕರಿಂನಗರ ಜಿಲ್ಲೆಯ ಬೋಧನಸ್ಥಳದಲ್ಲಿವೆ. ಅಂದು ಇವು ವೆಂಗಿಮಂಡಲದಲ್ಲಿದ್ದವು.

'ವೆಂಗಿ'ನಾಡ ಸಪ್ತಗ್ರಾಮಗಳೊಳಗಣ ವೆಂಗಿಪಳು ಎಂಬ ಶಾಸನೋಕ್ತ ಸಪ್ತಗ್ರಾಮಗಳಲ್ಲಿ ವೆಂಗಿಪಳು ಎಂಬುದು ಒಂದು

ಸ್ಥಳವಾಗಿತ್ತು. ಬಹುಶಃ ಇದು ವೆಂಗಿನಾಡಿನ ರಾಜಧಾನಿಯಾಗಿತ್ತೆಂದು ಕಾಣುತ್ತದೆ. ಈ ವೆಂಗಿಪಳು ಈಗ ಎಲ್ಲಿದೆಯೆಂದು ತಿಳಿಯುವುದು ಕಷ್ಟ. ಈಗಿನ ವಿಜಯವಾಡ ಕೃಷ್ಣಾ ಜಿಲ್ಲೆಯಲ್ಲಿ ಪರ್ರ' ಹೆಸರಿನ ಗ್ರಾಮವಿದೆ. ಇದೇ 'ವೆಂಗಿಪಳು' ಆಗಿತ್ತು ಎಂದು ಖ್ಯಾತ ಶಾಸನ ವಿಶಾರದ ಶ್ರೀ ಸೀತಾರಾಮ ಜಾಗೀರದಾರ್ ಅವರು ಅಭಿಪ್ರಾಯಪಡುತ್ತಾರೆ[೧೭]. ಕ್ರಿ.ಶ. ೯೫೦ರಲ್ಲಿ ಮೂರನೆಯ ಅರಿಕೇಸರಿ ಬರೆಯಿಸಿದ ಪರಭಣಿ ಶಾಸನವು[೧೮] ವೆಂಗಿಯ ಸ್ಥಳ ನಿರ್ದೇಶನ ಮಾಡುವ ಅತಿ ಮಹತ್ತ್ವದ ಶಾಸನವಾಗಿದೆ.

ಸ ಕಲಿಂಗತ್ರಯಾಂ ವೆಂಗಿಂ ಯೋಶವತಿ ಸ್ಮ ಪರಾಕ್ರಮಾತ್
ಪುತ್ರೋಜಯಶ್ರಿಯಃ ಪಾತ್ರಂ ತಸ್ಯಾಸೀದರಿಕೇಸರೀ

ಎಂಬ ಶಾಸನೋಕ್ತ 'ಸಕಲಿಂಗತ್ರಯ' ಪದ ಕಳಿಂಗದೇಶವನ್ನು ಸೂಚಿಸುತ್ತದೆ. ಈಗಾಗಲೇ ಕಳಿಂಗ ಮತ್ತು ವೆಂಗಿಗಳು ಪ್ರತ್ಯೇಕವಾಗಿ ವೆಂಗಿ ಸ್ವತಂತ್ರ ಆಡಳಿತಭಾಗವಾದುದು ವೇದ್ಯವಾಗಿದೆ. ಶಾತವಾಹನರ ಕಾಲದಲ್ಲಿ ವೆಂಗಿ ಮಂಡಳ ಕಳಿಂಗನಾಡಿನಲ್ಲಿ ವಿಲೀನವಾಗಿತ್ತು. ಅದು ೭ನೆಯ ಶತಮಾನದಲ್ಲಿ ಕಳಿಂಗದಿಂದ ಬೇರ್ಪಟ್ಟಿರುವುದು ಇಲ್ಲಿ ಸ್ಪಷ್ಟವಾಗುತ್ತದೆ. ಬಾದಾಮಿಯ ಚಾಲುಕ್ಯರು ವೆಂಗಿಮಂಡಲವನ್ನು ಸ್ವಾಧೀನಪಡಿಸಿಕೊಂಡು ಅದನ್ನು ತಮ್ಮ ಆಡಳಿತದ ಒಂದು ಭಾಗವಾಗಿ ಮಾರ್ಪಡಿಸಿದ್ದರೆಂದು ಇತಿಹಾಸದಿಂದ ತಿಳಿಯುತ್ತದೆ. ಇದರಿಂದ ವೆಂಗಿ ಮಂಡಲವು ಕಳಿಂಗದೇಶದ ಗಡಿಗೆ ಹೊಂದಿಕೊಂಡಿದ್ದುದು ಗೊತ್ತಾಗುತ್ತದೆ. ಕಳಿಂಗವು ದಕ್ಷಿಣಭಾರತದ ಪೂರ್ವ–ಉತ್ತರದಿಕ್ಕಿಗೆ ಹಬ್ಬಿಕೊಂಡ ದೇಶ. ಈಗಿನ ಓಡಿಸಾ (ಓಢ್ರಾದೇಶ) ಅಂದಿನ ಕಲಿಂಗದೇಶವೆಂದು ಭಾವಿಸಲಾಗುತ್ತದೆ. ಓಡಿಸಾ ರಾಜ್ಯದ ಪಶ್ಚಿಮದಿಕ್ಕಿನ ಗಡಿಗೆ ಹೊಂದಿಕೊಂಡು ವೆಂಗಿಮಂಡಲ ವಿಶಾಲವಾಗಿ ಹಬ್ಬಿತು. ಅದು ಇಂದಿನ ಆಂಧ್ರಪ್ರದೇಶವಾಗಿತ್ತೆಂದು ಗುರುತಿಸಲು ಸಾಧ್ಯತೆಗಳಿವೆ.

ವೆಂಗಿಮಂಡಳ ಮತ್ತು ಕನ್ನಡನಾಡು : ವೆಂಗಿಮಂಡಳ ಎಂದೂ ಕನ್ನಡನಾಡಿನ ಭಾಗವಾಗಿರಲಿಲ್ಲವೆಂಬುದು ಸ್ಪಷ್ಟ. ಕ್ರಿ.ಶ. ೯ನೆಯ ಶತಮಾನದ ಕವಿರಾಜಮಾರ್ಗಕಾರ ಹೇಳುವ

ಕಾವೇರಿಯಿಂದ ಮಾ ಹೋ ।
ದಾವರಿ ವರಟುರ್ದ ನಾಡದಾ ಕನ್ನಡದೊಳ್ ॥
ಭಾವಿಸಿದ ಜನಪದಂ ವಸು ।
ಧಾವಲತು ವಿಲೀನ ವಿಶದ ವಿಷಯ ವಿಶೇಷಂ ॥[೧೯]

ಕನ್ನಡನಾಡಿನ ವಿಸ್ತಾರ ಸೀಮೆಯ ವಿಷಯಗಳಲ್ಲಿ ವೆಂಗಿ ವಿಷಯವನ್ನು ಪ್ರಸ್ತಾಪಿಸದೆ ಇರುವುದರಿಂದ ವೆಂಗಿ ಕನ್ನಡ ನಾಡಿನ ವಿಲೀನ ಪ್ರದೇಶವಾಗಿರಲಿಲ್ಲವೆಂದು ಗೊತ್ತಾಗುತ್ತದೆ. ಆದರೆ ವೆಂಗಿ ಪ್ರತ್ಯೇಕವಾದ ಒಂದು ಪ್ರದೇಶವಾಗಿದ್ದರೂ ಕನ್ನಡ ಅರಸು ಮನೆತನಗಳು ಇಲ್ಲಿ ನಿರಂತರವಾಗಿ ಆರು ಶತಮಾನ ಗಳ ಕಾಲ ಆಳಿದ್ದರಿಂದ ವೆಂಗಿ ಕನ್ನಡದ ವಿಷಾಸಸ. ಪ್ರದೇಶ ವಾಗಿ ಮೆರೆಯಿತು. ಇದರಿಂದ ಇಲ್ಲಿ ಕನ್ನಡ ಭಾಷೆ ಸಾಹಿತ್ಯ ಸಂಸ್ಕೃತಿ ಕಲೆಗಳು ಗಾಢವಾಗಿ ಪರಿಣಾಮ ಬೀರಿದವು. ಇಲ್ಲಿ ತೆಲುಗು ಸಾಮಾನ್ಯ ಜನರಾಡುವ ಭಾಷೆಯಾದರೂ ಕನ್ನಡ ರಾಜಭಾಷೆಯಾಗಿ ಜನರ ಮೇಲೆ ವಿಜೃಂಭಿಸಿತು. ಅನೇಕ ಕನ್ನಡ ಕುಟುಂಬಗಳು ನೆಲೆಯೂರಿದವು. ಕನ್ನಡದ ವಾತಾವರಣ ನಿರ್ಮಾಣವಾಯಿತು. ಕನ್ನಡಿಗರ ವಾಸಸ್ಥಳಗಳು, ಅಗ್ರಹಾರಗಳು ನೆಲೆನಿಂತವು. ಎಲ್ಲಿ ನೋಡಿದರೂ ಕನ್ನಡದ ಪ್ರಭಾವ ಕಾಣುವಂತಾಯಿತು. ತೆಲುಗುಭಾಷೆಯ ವೆಂಗಿ ಮಂಡಳವು ಕನ್ನಡ ಭಾಷೆ–ಸಂಸ್ಕೃತಿಗಳ ಪ್ರಭಾವದಿಂದ ಕರ್ನಾಟಕ ಭೂಮಂಡಲದ ತಿಲಕದಂತೆ ಶೋಭಿಸುತ್ತಿತ್ತು ಎಂದು ಕನ್ನಡ ಕವಿಗಳು ಅಭಿಮಾನದಿಂದ ವರ್ಣಿಸಿದ್ದಾರೆ. ಕನ್ನಡ ಪ್ರಭಾವಕ್ಕೆ ವಶವಾದ ವೆಂಗಿಯು ಹಲವು ಕವಿಗಳಿಗೆ ಆಶ್ರಯವಾಯಿತು. ಪಂಪಕವಿ, ನಾಗವರ್ಮ ದುರ್ಗಸಿಂಹ ಮೊದಲಾದ ಕವಿಗಳು ವೆಂಗಿಪ್ರದೇಶದವರು. ಪೊನ್ನಕವಿ ತನ್ನನ್ನೂ ವೆಂಗಿ ವಿಷಯ ನಾಡಿನವನೆಂದು ಹೇಳಿಕೊಂಡಿದ್ದಾನೆ.[೨೦] ಇಲ್ಲಿಯ ಕಿಸುಕಾಡು, ಅಗ್ರಹಾರ, ಸೈವಡಿ ಪ್ರದೇಶಗಳು ಅಚ್ಚಗನ್ನಡದ ಪ್ರದೇಶಗಳಾಗಿದ್ದವು. ಅಂತೆಯೆ, ದುರ್ಗಸಿಂಹ ತನ್ನ 'ಕರ್ನಾಟಕ ಪಂಚತಂತ್ರಂ' ಕಾವ್ಯದಲ್ಲಿ ವೆಂಗಿಮಂಡಲವನ್ನು 'ಕರ್ಣಾಟಕ ಧಾತ್ರೀ ತಿಳಕಮಖಿಲ ಜನವಿಖ್ಯಾತಂ ಕಿಸುಕಾಡುನಾಡು ಆ ನಾಡೊಳ್ ಅಗ್ರಹಾರಂ ಸೈವಡಿ' ಎಂದು ವರ್ಣಿಸಿರುವುದು ವೆಂಗಿ ಕನ್ನಡಮಯವಾಗಿದ್ದ ಬಗೆಗೆ ನಮಗೆ ತಿಳಿಯುತ್ತದೆ. ಪಂಪಕವಿ ತನ್ನ 'ವಿಕ್ರಮಾರ್ಜುನ ವಿಜಯಂ' ಮಹಾಕಾವ್ಯವನ್ನು ವೆಂಗಿಯಲ್ಲಿಯೇ ರಚಿಸಿದ ವಿಷಯ ರೋಮಾಂಚನಗಳಿಸುತ್ತದೆ. ಆಂಧ್ರ ಸಾಹಿತ್ಯ ಚರಿತ್ರೆರಾದರೂ ಪಂಪನ ಕುಟುಂಬವನ್ನು ಆಂಧ್ರ ಬ್ರಾಹ್ಮಣರೆಂದು ಅಭಿಮಾನದಿಂದ ಹೇಳುತ್ತಾರೆ. ಆದರೆ ಪಂಪನ ಕುಟುಂಬ ಎಂದೂ ಆಂಧ್ರ ಬ್ರಾಹ್ಮಣರಾಗಿರಲಿಲ್ಲವೆಂಬುದು ಸತ್ಯ.[೨೧]

ವೆಂಗಿಮಂಡಳದ ಕನ್ನಡ ಕವಿಗಳಿಗೆ ಆಂಧ್ರಭಾಷೆ ಮತ್ತು ಸಂಸ್ಕೃತಿಯ ಪರಿಚಯವಿತ್ತೆಂದು ಕಾಣುತ್ತದೆ. ಅವರ ಕಾವ್ಯಗಳಲ್ಲಿ ಆಂಧ್ರಸಂಸ್ಕೃತಿಯ ಸೊಗಡು ವ್ಯಕ್ತವಾಗಿವೆ. ಆಂಧ್ರ ಪ್ರಮದೆಯರ ಶೃಂಗಾರ ವರ್ಣನೆಗಳನ್ನು ಅವರ ಕಾವ್ಯಗಳು ಬಹುಸ್ವಾರಸ್ಯಕರವಾಗಿ ವರ್ಣಿಸಿವೆ. ಪಂಪಕವಿ ತನ್ನ ಭಾರತದಲ್ಲಿ ಆಂಧ್ರ ಸ್ತ್ರೀಯರ ಯೌವನ ಶೃಂಗಾರವನ್ನು 'ಆಂಧ್ರ ನಿರೀಂದ್ರಿಯರ್' ಎಂದು ವರ್ಣಿಸಿದ್ದಾನೆ. ಆ ಕಾಲದ ತೆಲುಗು ಕವಿಗಳ ಮೇಲೆ ಕನ್ನಡ ಕವಿಗಳ ಪ್ರಭಾವವಾಯಿತೆಂದು ಕವಿಚರಿತ್ರೆಕಾರರು ಹೇಳುತ್ತಾರೆ. ತೆಲುಗು ಮಹಾಭಾರತಂ ಕಾವ್ಯ ರಚಿಸಿದ ನನ್ನಯ ಭಟ್ಟನ ಕಾವ್ಯದ ಮೇಲೆ ಪಂಪಕವಿಯ ಕಾವ್ಯ ಪ್ರಭಾವವಾಗಿದೆಯೆಂದು ಪರಿಭಾವಿಸುತ್ತಾರೆ. ವೆಂಗಿ

ಮಂಡಳದ ಕನ್ನಡದ ಪ್ರಭಾವ ಆಂಧ್ರ ಸಾಹಿತ್ಯದ ಮೇಲೆ ಎಷ್ಟು ಪರಿಣಾಮ ಬೀರಿದೆಯೆಂದರೆ 'ಆಂಧ್ರಸಾಹಿತ್ಯ ಚರಿತ್ರೆ'ಯ ವಿಭಾಗ ಕ್ರಮದಲ್ಲಿ ತೆಲುಗು ಸಾಹಿತ್ಯದ ಆರಂಭವು ಚಾಳುಕ್ಯ ರಾಜಯುಗದಿಂದ ಪ್ರಾರಂಭವಾಗುತ್ತದೆ[೨೨] ಚಾಳುಕ್ಯರ ಕಾಲ ಆಂಧ್ರಸಾಹಿತ್ಯ ಚರಿತ್ರೆಯಲ್ಲಿ ಬಹು ಪ್ರಮುಖ ಘಟ್ಟ.

ಇಂದಿನ ದಕ್ಷಿಣಭಾರತ ಭೂಪಟದಲ್ಲಿ ವೆಂಗಿಮಂಡಲದ ರೂಪರೇಷೆ : ಇಲ್ಲಿಯವರೆಗೂ ವೆಂಗಿವಿಷಯ ಮಂಡಲದ ಬಗೆಗೆ ವಿಶದವಾಗಿ ಚರ್ಚಿಸಿದ ಆಧಾರದ ಮೇಲೆ ಇಂದಿನ ಭಾರತದ ಭೂಪಟದಲ್ಲಿ ವೆಂಗಿಪ್ರದೇಶವನ್ನು ಗುರುತಿಸುವುದು ಈ ಲೇಖನದ ಮುಖ್ಯ ಉದ್ದೇಶ. ಕಳಿಂಗದ ಉತ್ತರಕ್ಕೆ ಮಹೇಂದ್ರಗಿರಿ, ದಕ್ಷಿಣಕ್ಕೆ ಗೋದಾವರಿನದಿ ನಾಡುಗಳ ನಡುವೆ ಹಬ್ಬಿದ ಕಳಿಂಗದ ಸೀಮೆಗೆ ಹೊಂದಿದ ವೆಂಗಿಮಂಡಳ, ದಕ್ಷಿಣಕ್ಕೆ ಕೃಷ್ಣಾನದಿ ಮತ್ತು ಉತ್ತರಕ್ಕೆ ಗೋದಾವರಿ ನದಿಗಳು ಗಡಿಯಾಗುತ್ತವೆ. ಇವೆರಡು ನದಿಗಳ ನಡುವಣ ಪ್ರದೇಶ ವೆಂಗಿವಿಷಯ, ಮಂಡಲ ಮತ್ತು ಪಳು ಎಂದು ಈಗಾಗಲೇ ಪರಿಭಾಷಿಸಲಾಗಿದೆ. ಬಾದಾಮಿಯ ಪಶ್ಚಿಮ ಚಾಳುಕ್ಯರ ಆಳ್ವಿಕೆಗೆ ಒಳಪಟ್ಟ ವೆಂಗಿಯಲ್ಲಿ ಅವರ ಶಾಸನಗಳು ಆಡಳಿತದ ಕುರುಹುಗಳು ವೆಂಗಿಪ್ರದೇಶದ ಗುರುತಿಸಲು ಸಾಧನವಾಗಿವೆ. ಒಂದನೆಯ ಅರಿಕೇಸರಿಯ ಪರಭಣಿ ಶಾಸನ, ಎರಡನೆಯ ಅರಿಕೇಸರಿಯ ವೇಮುಲವಾಡು (ವೆಂಬುಳಪಾಡು) ಶಾಸನ, ಮೂರನೆಯ ಅರಿಕೇಸರಿಯ ಕೋಲಿಪಾರ (ಕೊಲ್ಲಿಪಾಕ) ಶಾಸನ ಮತ್ತು ಜಿನವಲ್ಲಭನ ಗಂಗಾಧರಂ ಶಾಸನಗಳಿರುವ ಸ್ಥಳಗಳು ಇಂದಿನ ಆಂಧ್ರಪ್ರದೇಶದಲ್ಲಿವೆ ವೇಮುಲವಾಡು ಮತ್ತು ಗಂಗಾಧರಂ ಬೊಮ್ಮಲಮ್ಮನ ಕುರಿಕ್ಯಾಲ ಸ್ಥಳಗಳು ಈಗಿನ ಕರೀನಗರ ಜಿಲ್ಲೆಗಳಲ್ಲಿವೆ. ಕೋಲಪಾರ ಸ್ಥಳ ನಲಗೊಂಡ ಜಿಲ್ಲೆಯಲ್ಲಿದೆ. ವೆಂಗಿಪಳು ಇಂದಿನ ಕೃಷ್ಣಾ ಜಿಲ್ಲೆ ಎಂದು ಗುರುತಿಸಲಾಗಿದೆ. ಪರಭಣಿಕೆಯು ಇಂದು ಮಹಾರಾಷ್ಟ್ರಕ್ಕೆ ಸೇರಿದರೂ ಹತ್ತನೆಯ ಶತಮಾನದಲ್ಲಿ ಮಹಾರಾಷ್ಟ್ರದ ದಕ್ಷಿಣ ಪೂರ್ವ ಭಾಗಗಳ ವೆಂಗಿಮಂಡಲ ವಾಗಿತ್ತು. ಮರಾಠಿ ಭಾಷೆಯ ಪ್ರಭಾವವಿಲ್ಲದೆ ಈ ಪ್ರದೇಶ ಕನ್ನಡವೇ ಆಗಿತ್ತು. 'ಫರಭಣಿ'ಯನ್ನು ಯಾವ ಹೆಸರಿನಿಂದ ಕರೆಯುತ್ತಿದ್ದರೋ ತಿಳಿದುಬರುವುದಿಲ್ಲ. ಅಂದು ಫರಭಣಿ ಹೆಸರನ್ನು ಬೇರೆ ಹೆಸರಿನಿಂದ ಕರೆಯುತ್ತಿರಬೇಕು.

ಹೀಗೆ ದಕ್ಷಿಣದ ಕೃಷ್ಣಾನದಿಯಿಂದ ಉತ್ತರದ ಗೋದಾವರಿ ನದಿಯ ದಂಡೆಗೆ ದಕ್ಷಿಣೋತ್ತರ ದಿಕ್ಕಿನವರೆಗೆ ಹಾಗೂ ಪಶ್ಚಿಮದ ಕಡಪ ಕರ್ನೂಲ ಜಿಲ್ಲೆಗಳಿಂದ ಪೂರ್ವದ ನಲಗೊಂಡ ಕೋಲಪಾಕರದವರೆಗಿನ ಪಶ್ಚಿಮ-ಪೂರ್ವ ದಿಕ್ಕಿನವರೆಗೆ ವೆಂಗಿಮಂಡಲ ಹಬ್ಬಿತ್ತೆಂದು ಪರಿಭಾವಿಸಲಾಗಿದೆ. ಈ ವೆಂಗಿಮಂಡಳವನ್ನು 'ತೆಲುಗುದೇಶ' ಎಂದು ಕರೆಯಲಾಗುತ್ತಿತ್ತು. ಕೃಷ್ಣ ನದಿಯ ದಕ್ಷಿಣಕ್ಕೆ ಚಾಚಿದ ಪ್ರದೇಶ ಆಂಧ್ರನಾಡು ಎಂದೆನಿಸಿತ್ತು. ವೆಂಗಿಯ ಪಶ್ಚಿಮ ಗಡಿ ಇಂದಿನ ಕರ್ನಾಟಕ ರಾಜ್ಯವಾಗಿತ್ತು. ಇದರ ಪೂರ್ವದ ಗಡಿ ಇಂದಿನ ವಿಜಯವಾಡ ಗುಂಟೂರು ಜಿಲ್ಲೆಗಳು.

ಇಂದಿನ ಆಂಧ್ರಪ್ರದೇಶದಲ್ಲಿ ವೆಂಗಿಮಂಡಲದ ಜಿಲ್ಲಾ ಪ್ರದೇಶಗಳೂ ಇಂದಿಗೂ ಕನ್ನಡಮಯ. ಕನ್ನಡಿಗರು ವಾಸಿಸುವ ತಾಣ. ಇಲ್ಲಿ ಕನ್ನಡ ಸಾಹಿತ್ಯ ಸಂಸ್ಕೃತಿಗಳನ್ನು ಗಾಢವಾಗಿ ಪ್ರಭಾವ ಬಿಂಜಿಸುವ ಪ್ರದೇಶ. ಕರ್ನಾಟಕದ ಪೂರ್ವ ದಿಕ್ಕಿನಲ್ಲಿರುವ ಆಂಧ್ರಪ್ರದೇಶದ ಕಡಪ, ಕರ್ನೂಲ, ಅನಂತಪುರ, ಮೆಹಬೂಬ್‌ನಗರ, ಕರೀಂನಗರ, ಹೈದ್ರಾಬಾದ, ಆದಿಲಾಬಾದ್ ಜಿಲ್ಲೆಗಳಲ್ಲಿ ಕನ್ನಡ ಭಾಷಿಕರು ಗಣನೆಯ ಸಂಖ್ಯೆಯಲ್ಲಿದ್ದಾರೆ. ಅಲ್ಲಿ ಕನ್ನಡ ಭಾಷೆ ಸಾಕಷ್ಟು ಪ್ರಮಾಣದಲ್ಲಿ ಜನಬಳಕೆಯಲ್ಲಿದೆ. ಕನ್ನಡ ಸಾಹಿತ್ಯ ಸಂಸ್ಕೃತಿಗಳು ನಡೆಯುತ್ತವೆ. ಇಲ್ಲಿಯ ಕನ್ನಡಿಗರು ಕನ್ನಡ ಭಾಷೆಯನ್ನು ಮರೆತಿಲ್ಲ. ದಾಸಸಾಹಿತ್ಯದ ಬಯಲಾಟಗಳು ಪ್ರಭಾವ ಬೀರಿವೆ. ಇಲ್ಲಿ ವಿಶೇಷವಾಗಿ ದಾಸಸಾಹಿತ್ಯದ ರಚನೆಯಾಗಿರುವುದು ವಿಶೇಷ. ಮೆಹಬೂಬ್‌ನಗರ ಮತ್ತು ಕರ್ನೂಲ್ ಜಿಲ್ಲೆಗಳು ಕನ್ನಡದ ಪ್ರಭಾವಕ್ಕೆ ಒಳಗಾದ ಪ್ರದೇಶಗಳು. ಮೆಹಬೂಬ್‌ನಗರ ಜಿಲ್ಲೆಯಲ್ಲಿರುವ ಗದ್ವಾಲ ಮತ್ತು ಆಲಂಪೂರ ತಾಲ್ಲೂಕುಗಳಲ್ಲಿ ಇಂದಿಗೂ ಕನ್ನಡದ ಪ್ರಭಾವವನ್ನು ಕಾಣುತ್ತೇವೆ. ವಿಶೇಷವಾಗಿ ಗದ್ವಾಲ ತಾಲ್ಲೂಕಿನ ಐಜಿ, ವೇಣಿ ಸೋಮಪುರ, ಐಕೂರು, ಮೊದಲಕಲ್, ದರೂರು ಮುಂತಾದವು ಕನ್ನಡ ಸಾಹಿತ್ಯ ಸಂಸ್ಕೃತಿಗಳ ಆಗರಸ್ಥಳ. ಇಲ್ಲಿ ಮೂರನೆಯ ಹಂತದ ದಾಸಸಾಹಿತ್ಯ ಬಹು ಹುಲುಸಾಗಿ ರಚನೆಯಾಗಿದೆ. ಗೋಪಾಲದಾಸರು, ಮೊದಲಕಲ್ ಶೇಷದಾಸರು ಮೊದಲಾಗಿ ಶ್ರೇಷ್ಠ ಹರಿದಾಸರು ಇಲ್ಲಿ ಆಗಿಹೋದರು. ಕನ್ನಡದ ಬಯಲಾಟಗಳು ಇಂದಿಗೂ ಜನಪ್ರಿಯ ಮನರಂಜನೆಯ ಕಲೆಗಳಾಗಿವೆ. ಆಲಂಪೂರಿನಲ್ಲಿ ಬಾದಾಮಿ ಚಾಲುಕ್ಯರು ನಿರ್ಮಿಸಿದ ೮ನೆಯ ಶತಮಾನದ ದೇವಾಲಯಗಳಿವೆ.

ಹಾಗೆಯೆ, ಕಡಪ ಕರ್ನೂಲ ಜಿಲ್ಲೆಯ ಆದವಾನಿ, ಆಲೂರು ತಾಲ್ಲೂಕಿನಲ್ಲಿ ಕನ್ನಡಿಗರು ಅಧಿಕ ಸಂಖ್ಯೆಯಲ್ಲಿದ್ದಾರೆ. ಕನ್ನಡ ಶಾಲೆಗಳು ಗಣನೀಯ ಸಂಖ್ಯೆಯಲ್ಲಿವೆ. ಹೊಳಗುಂದಿ, ಗೂಳ್ಯಂ, ಹಾಲರವಿ (ಹಾಲವಿ) ಹರಿವಾಣ, ಕೌತಾಳಂ, ಬದನೆಹಾಳು ಮುಂತಾದ ಊರುಗಳಲ್ಲಿ ಕನ್ನಡ ಶಾಲೆಗಳಿದ್ದು, ಕನ್ನಡ ಭಾಷೆ ಸಂಸ್ಕೃತಿಗಳು ಇಂದಿಗೂ ಪ್ರಬುದ್ಧವಾಗಿದೆ. ಕನ್ನಡ ಉತ್ಸವಗಳು ಸಂಭ್ರಮದಿಂದ ನಡೆಯುತ್ತವೆ. ಇಲ್ಲಿ ಪ್ರಸಿದ್ಧ ಮತ್ತು ಯೋಗಿಗಳು ಅವರಿಸಿ ಈ ಭೂಮಿಯನ್ನು ಪವಿತ್ರಗೊಳಿಸಿದ್ದಾರೆ. ಶ್ರೀದೇವಿ ಪುರಾಣ, ಜ್ಞಾನಸಿಂಧು ಮುಂತಾದ ಹಲವು ಗದ್ಯ-ಕಾವ್ಯಗಳನ್ನು ರಚಿಸಿದ

ಯೋಗಿ ಚಿದಾನಂದ ಅವಧೂತರು ಹಿರಿಯ ಹರಿವಾಣ ದವರು. ಅದರಂತೆ, ಅನಂತಪುರ ಜಿಲ್ಲೆಯ ರಾಯದುರ್ಗ, ಗುತ್ತಿಗಳಲ್ಲಿ ಕನ್ನಡಪ್ರಭಾವವಿದೆ. ಪ್ರಸಿದ್ಧ ಸಾಯಿಬಾಬಾರ ಸುಕ್ಷೇತ್ರವಾದ ಪುಟಪರ್ತಿ ಕನ್ನಡ ಪ್ರಭಾವಿತ ಸ್ಥಳ.

ಜ್ಯೋತಿರ್ಲಿಂಗಗಳಲ್ಲಿ ಒಂದಾದ ಶ್ರೀಶೈಲಂ ಕ್ಷೇತ್ರ ವೆಂಗಿಮಂಡಲದಲ್ಲಿದ್ದ ದೊಡ್ಡ ಕ್ಷೇತ್ರ. ಮಂತ್ರಾಲಯಂ, ಹಾಲವಿಗಳಲ್ಲಿರುವ ಧಾರ್ಮಿಕ ಮಠಗಳು ಇದೇ ಪ್ರದೇಶಕ್ಕೆ ಸಂಬಂಧಿಸಿವೆ. ನಲಗೊಂಡ ಜಿಲ್ಲೆಯ (ಕೋಲಪಾರ) ಕೊಲ್ಲಿಪಾಕ ೧೧ನೆಯ ಶತಮಾನದಲ್ಲಿ ಚಾಳುಕ್ಯರ ಒಂದನೆಯ ಸೋಮೇಶ್ವರನ ರಾಜಧಾನಿಯಾಗಿತ್ತು. ವೆಂಗಿಮಂಡಳ ದಲ್ಲಿರುವ ಹಲವು ದೇವಾಲಯಗಳು, ಪುಣ್ಯಕ್ಷೇತ್ರಗಳು, ಯಾತ್ರಾಸ್ಥಳಗಳು ಆಂಧ್ರಪ್ರದೇಶದ ಕೊಡುಗೆಗಳು.

ಇಂದಿನ ಆಂಧ್ರಪ್ರದೇಶದಲ್ಲಿ ವೆಂಗಿಮಂಡಲವು ರಾಯಲಸೀಮಾ ಮತ್ತು ತೆಲಂಗಾಣದಲ್ಲಿ ಹಂಚಿಹೋಗಿದೆ. ವೆಂಗಿಪ್ರದೇಶದ ಬಹುಭಾಗ ತೆಲಂಗಾಣದಲ್ಲಿ ವಿಲೀನವಾಗಿದೆ. ಇಂದಿನ ಈಶಾನ್ಯ ಕರ್ನಾಟಕ (ಹೈದರಾಬಾದ ಕರ್ನಾಟಕ) ಜಿಲ್ಲೆಗಳು ವೆಂಗಿಮಂಡಲದ ಪ್ರದೇಶವಾಗಿದ್ದವು. ಈ ಲೇಖನದಲ್ಲಿ ಪರಿಭಾವಿಸಿದ ವೆಂಗಿವಿಷಯ, ವೆಂಗಿಮಂಡಳ, ವೆಂಗಿಪಳು ನನ್ನ ಪರಿಕಲ್ಪನೆಯ ರೂಪಸೂತ್ರ, ಈ ಪರಿಕಲ್ಪನೆ ಯಲ್ಲಿ ಕೆಲವು ಬಿಟ್ಟುಹೋಗಿರಬಹುದು ; ಕೆಲವು ಸೇರಿಸಲು ಆಗಿರಲಿಕ್ಕಿಲ್ಲ; ಮತ್ತೆ ಕೆಲವನ್ನು ತಪ್ಪಾಗಿ ಸೇರಿರಬಹುದು.

ಆಂಧ್ರಪ್ರದೇಶವನ್ನು ಬಹುಭಾಗ ವ್ಯಾಪಿಸಿಕೊಂಡಿದ್ದ, ಕನ್ನಡದ ವಸಾಹತುವಾಗಿದ್ದ ನನ್ನನ್ನು ಸದಾ ಕಾಡುತ್ತಿದ್ದ, ವಿದ್ವಾಂಸರ, ಚರಿತ್ರಕಾರರಿಗೆ ಜಿಜ್ಞಾಸೆಯ ವಿಷಯವಾಗಿದ್ದ, 'ವೆಂಗಿ' ಮಂಡಲದ ಒಂದು ಸ್ವರೂಪವನ್ನು ತಂದುಕೊಡುವುದು ನನ್ನ ಈ ಲೇಖನ ಮೊದಲ ಪ್ರಯತ್ನ.

[ಈ ಲೇಖನದಲ್ಲಿ ಪ್ರತಿಪಾದಿಸಲಾದ ಎಲ್ಲ ಅಂಶಗಳೂ ಈಗಾಗಲೇ ಜಿ.ಎಸ್. ಗಾಯಿ, ಎನ್. ಲಕ್ಷ್ಮೀನಾರಾಯಣರಾವ್, ಮುಳಿಯ ತಿಮ್ಮಪ್ಪಯ್ಯ, ಸೀತಾರಾಮ ಜಾಗೀರ್‌ದಾರ್ ಮುಂತಾದ ವಿದ್ವಾಂಸರ ಬರಹಗಳಲ್ಲಿ ಚರ್ಚಿತವಾಗಿದ್ದು ಈ ಲೇಖನದಲ್ಲಿನ ಹಲವಾರು ಮಾಹಿತಿಗಳು ದೋಷಗಳಿಂದ ಕೂಡಿವೆ. –ಸಂ.]

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. **ಕರ್ನಾಟಕ ಇತಿಹಾಸ,** ಆರ್.ಎಸ್. ಪಂಚಮುಖಿ, ಕರ್ನಾಟಕ ಇತಿಹಾಸ ಸಂಶೋಧನಾ ಮಂಡಳ, ಧಾರವಾಡ.
೨. ಅದೇ.,
೩. **ಪ್ರಾಚೀನ ಭಾರತದ ಇತಿಹಾಸ,** ಎಂ.ಎಚ್. ಕೃಷ್ಣ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.
೪. *Early History of Andhra Pradesh,* D.V. Krishnarao.
೫. **ಕರ್ನಾಟಕ ಇತಿಹಾಸ,** ಆರ್.ಎಸ್. ಪಂಚಮುಖಿ.
೬. ಅದೇ.,
೭. ಅದೇ.,
೮. ಅದೇ.,
೯. **ಪ್ರಾಚೀನ ಭಾರತದ ಇತಿಹಾಸ,** ಎಂ.ಎಚ್. ಕೃಷ್ಣ.
೧೦. ಅದೇ.,
೧೧. ಅದೇ.,
೧೨. **ಪಂಪನ ವಿಕ್ರಮಾರ್ಜುನ ವಿಜಯಂ,** ಮೈಸೂರು ವಿಶ್ವವಿದ್ಯಾಲಯ, ೧೪-೪೦.
೧೩. **ನಾಡೋಜ ಪಂಪ,** ಮುಳಿಯ ತಿಮ್ಮಪ್ಪಯ್ಯ, ಕನ್ನಡ ಮತ್ತು ಸಂಸ್ಕೃತ ಇಲಾಖೆ.
೧೪. *Journal of the Andhra Historical Research Society,* Vo 1, VI part 3-4 pp 11.
೧೫. **ಪ್ರಬುದ್ಧ ಕರ್ನಾಟಕ,** ಡಾ. ಜಿ.ಎಸ್. ಗಾಯಿ, ಸಂಪುಟ ೫೦, ಸಂಚಿಕೆ–೨, ಪುಟ ೮೦–೮೩.
೧೬. ಜಿನವಲ್ಲಭನ ಗಂಗಾಧರಂ ಶಾಸನ.
೧೭. ದೂರವಾಣಿಯ ಮೂಲಕ ನನಗೆ ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.
೧೮. *Journal of the Andhra Historical Research Society,* Vo 1, VI part 3-4 pp 11.
೧೯. **ಕವಿರಾಜಮಾರ್ಗಂ,** ಎಂ.ವಿ. ಸೀತಾರಾಮಯ್ಯ, ಕರ್ನಾಟಕ ಸಂಘ, ಸರಕಾರದ ಆರ್ಟ್ಸ್ ಮತ್ತು ಸೈನ್ಸ್ ಕಾಲೇಜು, ಬೆಂಗಳೂರು, ೧-೩೬.
೨೦. **ಶಾಂತಿಪುರಾಣಂ,** ಪೊನ್ನ.
೨೧. **ನಾಡೋಜ ಪಂಪ,** ಮುಳಿಯ ತಿಮ್ಮಪ್ಪಯ್ಯ.
೨೨. **ಆಂಧ್ರ ಸಾಹಿತ್ಯ ಚರಿತ್ರಮು,** ಕಂದೂರಿ ವೀರೇಶಲಿಂಗಂ ಪಂತಲು.

೮೦

ಐರಣಿ ಸಾಂಸ್ಕೃತಿಕ ಅವಲೋಕನ ಮತ್ತು ಇತಿಹಾಸ

ಐರಣಿ ಹನುಮಂತಪ್ಪ*

ಇದು ಹಾವೇರಿ ಜಿಲ್ಲೆಯ ರಾಣೆಬೆನ್ನೂರಿನಿಂದ ೨೨ ಕಿ.ಮೀ. ಹರಿಹರದಿಂದ ೧೫ ಕಿ.ಮೀ. ಅಂತರದಲ್ಲಿದೆ. 'ಐರಣಿ' ಪದಕ್ಕೆ ತೊರವೆ ರಾಮಾಯಣದಲ್ಲಿ 'ವಿವಾಹಗಳಲ್ಲಿ ಮಂಗಳ ಸೂಚಕವಾದ ಬಣ್ಣದಿಂದ ಬರೆದಿಡುವ ಕುಂಭ ಅಥವಾ ಗಡಿಗೆ ಎಂಬ ಅರ್ಥವಿದೆ. ಆದರೆ ಈ ಗ್ರಾಮಕ್ಕೆ ಆ ಹೆಸರು ಹೇಗೆ ಬಂತು ಎಂಬುದು ನಿಖರವಾಗಿ ತಿಳಿಯದು. ಆದರೆ ಕೌಟಿಲ್ಯನ ಅರ್ಥಶಾಸ್ತ್ರ ಕಾಮಂದಕನ ನೀತಿಶಾಸ್ತ್ರ ಮತ್ತು ಶುಕ್ರನ ನೀತಿಸಾರದಲ್ಲಿ 'ಐರಣಿ'ಯೆಂಬುದು ಒಂದು ರೀತಿಯ ತಾಂತ್ರಿಕತೆಯನ್ನು ಅಳವಡಿಸಿ ಕಟ್ಟುವ ಒಂದು ವಿಧವಾದ ಕೋಟೆಯಾಗಿದ್ದು ಈ ಸ್ಥಳದಲ್ಲಿ ನಿರ್ಮಿಸಿರುವುದರಿಂದ ಕೋಟೆಯೊಂದಿಗೆ ಗ್ರಾಮ ಸ್ಥಾಪನೆಯಾದ ಈ ಊರಿಗೆ ಐರಣಿಯೆಂಬ ನಿರ್ದಿಷ್ಟ ನಿರ್ಮಾಣ ವಾಚಿ ಬಂದಿದೆ. ಇದಕ್ಕೆ ಐರಾವತ ಕ್ಷೇತ್ರ ಎಂಬ ಹೆಸರಿದೆ.

ಪುರಾತನ ದೇವಾಲಯ : ಐರಾವತ ಕ್ಷೇತ್ರದಲ್ಲಿರುವ ಗುಹಾರಣ್ಯದಲ್ಲಿ ಪುರಾತನ ಹರಿಹರೇಶ್ವರ ಮತ್ತು ಅನಂತಶಯನ ದ್ವಿಕೂಟಾಚಲ ದೇವಾಲಯ ಬೇರೆ ಬೇರೆ ರೀತಿಯ ವಿಮಾನ ಗೋಪುರವುಳ್ಳ ದೇವಾಲಯ ನಾಲ್ಕು ಅಡಿ ಎತ್ತರವುಳ್ಳ ತಲ ನಲವತ್ತು ಅಡಿ ಉದ್ದ ಹನ್ನೆರಡು ಅಡಿ ಅಗಲವುಳ್ಳ ಸಾಮಾನ್ಯ ಸಭಾಮಂಟಪ, (ನವರಂಗವಿದ್ದು), ಗರ್ಭಗುಡಿಗಳು ಪ್ರತ್ಯೇಕವಾಗಿದ್ದು, ತೆರೆದ ಒಂದೇ ಸಭಾಮಂಟಪವಿದೆ. ಉತ್ತರ ದಿಕ್ಕಿನ ಗರ್ಭಗುಡಿಯಲ್ಲಿ ಒಂದೇ ಪೀಠ ಪ್ರಣಾಲದ ಮೇಲೆ ದ್ವಿಲಿಂಗವಿದೆ. ಗರ್ಭಗುಡಿ ಯಲ್ಲಿ ಗೂಢ ಮಂಟಪವಿದೆ. ಸಭಾಮಂಟಪದಲ್ಲಿ ಸುಂದರ ಕೆತ್ತನೆಯ ನಂದಿ ಇದ್ದು, ಮೇಲೆ ಕುಂಭಾಕಾರದ ವಿಮಾನ ಗೋಪುರವಿದೆ. ಬಾಗಿಲವಾಡದ ದ್ವಾರಬಂಧದ ಲಲಾಟ ಬಿಂಬದ ಮಧ್ಯದಲ್ಲಿ ಗಜಲಕ್ಷ್ಮಿ ಸಹಿತ ಎಡಬಲದಲ್ಲಿ ಕೆಳಮುಖ ವಾದ ಕಮಲದ ಮೊಗ್ಗು ಇದೆ. ದ್ವಾರಬಂಧದ ತೋಳುಗಳ ಎರಡು ಬದಿಗಳಲ್ಲಿ ಗಂಡಭೇರುಂಡ ಪಕ್ಷಿಗಳ ಮೇಲೆ ಋಷಿ ಚಿತ್ರವಿದ್ದು, ತೋಳುಗಳಲ್ಲಿ ಲತಾಬಳ್ಳಿ ತಳದಲ್ಲಿ ಶೈವ ಮತ್ತು ವೈಷ್ಣವ ದ್ವಾರಪಾಲಕ ಉಬ್ಬು ಚಿತ್ರಗಳು ಇವೆ.

ದಕ್ಷಿಣ ದಿಕ್ಕಿನ ಗರ್ಭಗೃಹದಲ್ಲಿ ಗೂಢಮಂಟಪ, ಗರ್ಭಗೃಹದ ಮಧ್ಯದಲ್ಲಿ ಪ್ರತ್ಯೇಕವಾದ ಚೌಕಾಕಾರದ ಶಿಲೆಯಲ್ಲಿ ಐದು ಹೆಡೆ ನಾಗನ ಮೇಲೆ ಪವಡಿಸಿದ ಅನಂತಶಯನ ಮೂರ್ತಿ ಹಾಗೂ ಲಕ್ಷ್ಮೀ ಸರಸ್ವತಿ ಸೇವೆ ಸಲ್ಲಿಸುತ್ತಿರುವ ಚಿತ್ರಗಳನ್ನು ಚಿತ್ರಿಸಿ ಅಧಿಷ್ಠಾನ ಮೇಲೆ ನಿಲ್ಲಿಸಲಾಗಿದೆ. ದ್ವಾರಬಂಧದ ಮೇಲೆ ಖಲ್ವ (ಹಿಂಚಾಚಿರುವ ಪಟ್ಟಿಯಲ್ಲಿ) ಚಿತ್ರಪಟವಿದ್ದು, ಅವುಗಳನ್ನು ಸರಿಯಾಗಿ ಗುರುತಿಸ ಲಾಗುವುದಿಲ್ಲ. ಬಾಗಿಲವಾಡದ ದ್ವಾರಬಂಧದ ತೋಳುಗಳಲ್ಲಿ ಮತ್ಸ್ಯ, ಕೂರ್ಮ, ವರಾಹ ನಾರಸಿಂಹ ಆಯುಧ ಹಿಡಿದ ವಾಹನ, ಪರಶುರಾಮ, ಬಲರಾಮ ಶ್ರೀರಾಮ, ಕೃಷ್ಣವತಾರ ಮೂರ್ತಿ, ಜೈನ ದಿಗಂಬರ ಮೂರ್ತಿ, ವಾಹನ ಏರಿ ಹೊರಟ ಕಲ್ಕಿ ಉಬ್ಬು ಚಿತ್ರಗಳಿವೆ. ತಳದಲ್ಲಿ ವೈಷ್ಣವ ದ್ವಾರಪಾಲಕರು ಬಾಗಿಲುವಾಡದ ಮತ್ತೊಂದು ತೋಳುಪಟ್ಟಿಯಲ್ಲಿ ಹೂವಿನ ಚಿತ್ರಗಳಿವೆ. ದೇವಾಲಯ ನವರಂಗ ಐದು ಅಂಕಣದಲ್ಲಿ ಸುಮಾರು ೪೦ ಅಡಿ ಉದ್ದ ೧೨ ಅಡಿ ಅಗಲದ ತಳದ ಮೇಲೆ ಎರಡು ಗರ್ಭಗುಡಿ ಬಾಗಿಲುಗಳು, ಮೂರು ದೇವ ಕೋಷ್ಠಕಗಳಲ್ಲಿ ಉತ್ತರದ ಕೋಷ್ಟದಲ್ಲಿ ಪಾರ್ವತಿ, ಮಧ್ಯದ ಕೋಷ್ಟದಲ್ಲಿ ಪಾಂಡುರಂಗನ ಮೂರ್ತಿ, ಅದು ಸ್ಥಳಾಂತರ ಮಾಡಿರಬಹುದಾಗಿದೆ. ದಕ್ಷಿಣ ಕೋಷ್ಟದಲ್ಲಿ ವಿನಾಯಕ ಮೂರ್ತಿಗಳಿವೆ. ಸುತ್ತಲೂ ಗಚ್ಚು ಗಾರೆಗಳಿಂದ ಲೇಪಿತವಾದ ದೇವಾಲಯ ಬಹಳ ಸುಂದರವಾಗಿದ್ದು, ದೇವಾಲಯದ ಪೂರ್ವದಿಕ್ಕಿನಲ್ಲಿ ಸುಮಾರು ೧೫೦ ಅಡಿ ಅಂತರದಲ್ಲಿ ತುಂಗಭದ್ರೆ ಉತ್ತರಾಭಿಮುಖವಾಗಿ ಹರಿಯುತ್ತಿದ್ದು, ಸಾಮಾನ್ಯ ನದಿ ಪಾತಳಿಯ ದಡದಲ್ಲಿ ಎರಡು ಕಲ್ಲು ಮಂಟಪಗಳು ಮೇಲೆ ಚಕ್ರ ವಿನ್ಯಾಸದ ಐದು ಸ್ಥಾವರದ ಮೆಟ್ಟಿಲು ಕಲ್ಲು ಮತ್ತು ಗಚ್ಚುಗಾರೆ ರಚನೆ ಮೇಲೆ ಕುಂಭ ಎರಡರಲ್ಲಿ ಒಂದು ಕಿರಿದಾದದ್ದು ಮತ್ತೊಂದು ಎತ್ತರವಾದದ್ದು ಭದ್ರಬುನಾದಿ ಕಲ್ಲು ಹಾಸುಗೆ ಕಂಬ ಬೋದಿಗೆಗಳು ಮಂಟಪ ಪ್ರವಾಹ ಹೆಚ್ಚಿದಾಗ ನದಿಯಲ್ಲಿ ಮುಳುಗುತ್ತವೆ. ದೇವಸ್ಥಾನದ ಪ್ರಾಂಗಣ ದಿಂದ ನದಿ ತಟದವರೆಗೂ ೧೨೦-೧೫೦ ಅಡಿ ಅಗಲವಾಗಿ ಪಾವಟಿಗಳು ಇದ್ದವು. ಇತ್ತಿತ್ತಲಾಗಿ ಅವು ನಿರ್ಲಕ್ಷತನದಿಂದಾಗಿ

* ವಕೀಲರು, ದೇವರಾಜ ಅರಸ್ ಬಡಾವಣೆ, 'ಬಿ' ಬ್ಲಾಕ್, ೧೦ನೇ ಕ್ರಾಸ್, ನಂ. ೩೦೦, ದಾವಣಗೆರೆ-೫೭೭೦೦೬.

ಕಾಣೆಯಾಗಿವೆ. ದ್ವಿಕೂಟಾಚಲ ದೇವಾಲಯದ ಅನತಿ ಸಮೀಪದಲ್ಲಿ ಬ್ರಾಹ್ಮಣರ ಅಗ್ರಹಾರವಿದ್ದು ಅದು ಸಹ ಈಗ ಉಳಿದಿಲ್ಲ. ಅದು ಕೃಷಿ ಭೂಮಿಯಾಗಿದೆ.

ರಕ್ಷಣಾ ಕೋಟೆ : ವಿಜಯನಗರ ಅರಸ ಒಂದನೇ ದೇವರಾಯನ ಕಾಲಕ್ಕೆ (ಕ್ರಿಶ. ೧೪೦೬–೧೪೨೨) ಬಂಕಾಪುರ ಯುದ್ಧದಲ್ಲಿ ಬಹಮನಿ ಅರಸರಿಂದ ಸೋಲುಂಡ ಕಹಿ ನೆನಪು ಅವನಿಗೆ ಬಾಧಿಸುತ್ತಿತ್ತು ಅದಕ್ಕೆ ಈ ಭಾಗದಲ್ಲಿ ರಕ್ಷಣಾ ಮತ್ತು ಶೇಖರಣಾ ಕೋಟೆ ಅವಶ್ಯಕವಾಗಿತ್ತು. ಅದಕ್ಕಾಗಿ ಈ ಸ್ಥಳ ಸೂಕ್ತವೆಂದು ಭಾವಿಸಿ ರಕ್ಷಣಾ ಕೋಟೆ ನಿರ್ಮಿಸಿರ ಬಹುದಾಗಿದೆ. ಹೊನ್ನಾವರ ಬನವಾಸಿ ಬಂಕಾಪುರ, ರಾಣೇಬೆನ್ನೂರು ಹರಪನಹಳ್ಳಿಗಳಿಂದ ವಿಜಯನಗರದವರೆಗೆ ರಾಜಮಾರ್ಗ ವಿದ್ದು ಇತಿಹಾಸದಿಂದ ತಿಳಿದುಬರುತ್ತದೆ. ಆ ಮಾರ್ಗ ಐರಾವತ ಕ್ಷೇತ್ರ ಗುಹಾರಣ್ಯ ಮೂಲಕ ತುಂಗಭದ್ರಾ ನದಿ ದಾಟಲು ಸೂಕ್ತವಾಗಿದ್ದು ಅಲ್ಲಿ ಕಡವು ಎಂಬ ಸ್ಥಳವಿದ್ದು, ನದಿ ದಾಟಲು ದೋಣಿ ಹರಿಗೋಲು ತೆಪ್ಪದಿಂದ ಸೈನಿಕರನ್ನು ಸಾಮಗ್ರಿಗಳನ್ನು ಸಾಗಿಸುತ್ತಿದ್ದುದು ತಿಳಿದುಬರುತ್ತದೆ. (ಬಳ್ಳಾರಿ ಜಿಲ್ಲಾ ಸಾಂಸ್ಕೃತಿಕ ಅಧ್ಯಯನ ಪುಟ ೫೧ ಕುಂಬಾಸ) ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕ ಬೇರ್ಪಡಿಸುವ ತುಂಗಭದ್ರೆ ದಡದಲ್ಲಿ ನಿರ್ಮಿಸಲಾಗಿದೆ. ಎತ್ತರವಾದ ಗುಡ್ಡಗಳುಳ್ಳ ದಟ್ಟ ಅಡವಿ, ತುಂಗಭದ್ರೆ ಅತಿ ವೇಗವಾಗಿ ಹರಿವ ಪ್ರವಾಹ ಕೋಟೆ ಸುತ್ತಲೂ ನಿಸರ್ಗದತ್ತವಾದಂತಹ ತಗ್ಗು ಪ್ರದೇಶ ನದಿಯಲ್ಲಿ ಪ್ರವಾಹ ಹೆಚ್ಚಾದಾಗ ಕೋಟೆ ದ್ವೀಪವಾಗಿ ಪರಿಣಮಿಸುವಂತಹ ಈ ಒಂದು ಸ್ಥಳ ಆಯ್ಕೆ ಮಾಡಿ ಇಂಡೋ ಇಸ್ಲಾಮಿಕ್ ಶೈಲಿಯಲ್ಲಿ ೧೫ರಿಂದ ೨೦ ಎಕರೆ ಪ್ರದೇಶಗಳಲ್ಲಿ ಕೋಟೆ ನಿರ್ಮಾಣವಾಗಿದೆ. ಆದರೆ ಯಾವಾಗ, ಎಂದು, ಯಾರಿಂದ ನಿರ್ಮಾಣವಾಯಿತೆಂಬುದಕ್ಕೆ ಆಧಾರಗಳಿಲ್ಲ.

ಕೋಟೆ ರಚನಾ ವಿವರ : ಪೂರ್ವದಲ್ಲಿ ಉತ್ತರ ವಾಹಿನಿಯಾಗಿ ತುಂಗಭದ್ರೆ ನದಿ ಹರಿವ ಎತ್ತರದ ದಿಣ್ಣೆ ಅಥವಾ ಸಣ್ಣಗುಡ್ಡ ಉತ್ತರ ಪಶ್ಚಿಮ ಮತ್ತು ದಕ್ಷಿಣದಲ್ಲಿ ಒತ್ತೊತ್ತಾಗೆ ಬೆಳೆದ ಗಿಡಗಂಟಿಗಳಿಂದ ಕೂಡಿದ ತಗ್ಗುಪ್ರದೇಶ ಮಳೆಗಾಲದಲ್ಲಿ ನದಿ ಪ್ರವಾಹ ಸುತ್ತುವರಿಯುವುದು. ಬೇಸಿಗೆಯಲ್ಲಿಯೂ ಕೆಸರುಯುಕ್ತ ಭೂಮಿ. ಹೀಗೆ ನೈಸರ್ಗಿಕ ರಕ್ಷಣೆ ಹೊಂದಿರುವ ಗುಡ್ಡ ಒಳಮಾಡಿಕೊಂಡು ೧೫.೨೦ ಎಕರೆ ಪ್ರದೇಶದಲ್ಲಿ ಮೂರು ಸುತ್ತಿನ ಕೋಟೆ ನಿರ್ಮಿಸಲಾಗಿದೆ. ಮೊದಲ ಹೊರಸುತ್ತು ಕೋಟೆ ನದಿತಟಕದಲ್ಲಿಯ ಒಂದು ಕೊತ್ತಳದಿಂದ ದಿಣೆ ಸುತ್ತುವರಿದು ಪುನಃ ನದಿ ತಟಾಕದಲ್ಲಿರುವ ಕೊತ್ತಳದವರೆಗೆ ಸ್ಥಳೀಯ ಕಲ್ಲು ಮಣ್ಣು ಮತ್ತು ಕಂದಕ ತೋಡಿ ಹೊರಹಾಕಿದ ಪರಿಕರಗಳಿಂದ ಸುಮಾರು ತಳದಲ್ಲಿ ೧೦–೧೨ ಅಗಲ ಮೇಲೆ ಹೋದಂತೆ ಅಗಲ ಕಿರಿದಾಗುವಂತೆ ಸುಮಾರು ೨೫೦೦ ಅಡಿ ಉದ್ದ ನಿರ್ಮಿಸಿದ್ದು ಅದು ಸ್ಥಳೀಯರಿಂದ ಇತ್ತಿತ್ತಲಾಗಿ ನಾಶವಾಗಿ ದಿಬ್ಬ ಉಳಿದಿದೆ. ಅದರ ಒಳಸುತ್ತು ಕಂದಕ ಸುಮಾರು ೬೦ ಅಡಿಗಿಂತ ಹೆಚ್ಚು ಅಗಲ ೨೫–೩೦ ಅಡಿ ಆಳ ಕಂದಕ ನದಿ ಪಾತಳಿಯಿಂದ ಪ್ರಾರಂಭವಾಗಿ ಪುನಃ ನದಿಯವರೆಗೆ ಸದಾ ನೀರು ಹರಿವಂತೆ ಕಂದಕವಿದ್ದು, ಕಂದಕಕ್ಕೆ ನೈಸರ್ಗಿಕವಾಗಿ ನೀರು ಹರಿಯುವಂತೆ ನದಿಯಲ್ಲಿ ಸುಮಾರು ೫೦ ಅಡಿ ಉದ್ದ ೧೦ ಅಡಿ ಅಗಲ ೨೫–೩೦ ಅಡಿ ಎತ್ತರದ ಅತೀ ಭಾರವಾದ ಶಿಲೆಗಾರೆಗಚ್ಚು ಉಪಯೋಗಿಸಿ ತಡೆಗೋಡೆ ನಿರ್ಮಿಸಲಾಗಿದ್ದು ಇಂದಿಗೂ ಭದ್ರವಾಗಿ ಉಳಿದಿದೆ. ಕಂದಕ ಅನುಸರಿಸಿ ಮತ್ತೊಂದು ಬದಿಗೆ ಮತ್ತೊಂದು ಮಧ್ಯದ ೩ನೇ ಕೋಟೆ ಗೋಡೆ ಸ್ಥಳೀಯ ಪರಿಕರಗಳಿಂದ ನಿರ್ಮಿಸ ಲಾಗಿದ್ದು, ಅದು ಹಾಳಾಗಿದೆ. ಆದರೆ ೨ನೇ ಒಳಸುತ್ತು ಕೋಟೆ ಗೋಡೆ ಅಳುವೇರಿ ಭಾರವಾದ ದೊಡ್ಡ ಗಾತ್ರದ ಕಲ್ಲುಗಚ್ಚು ಗಾರೆಯಿಂದ ಗುಡ್ಡಯ ದಿಣ್ಣೆ ಸುತ್ತಲೂ ನದಿದಂಡೆ ಸಹಿತ ಆಯಾತಾಕಾರದಲ್ಲಿ ನಿರ್ಮಿಸಲಾಗಿದೆ. ಸಾಮಾನ್ಯವಾಗಿ ಇತರೆ ಕೋಟೆ ದಿಡ್ಡಿ ಬಾಗಿಲುಗಳಿಗಿಂತ ಉತ್ತರ ದಿಶೆ ದಿಡ್ಡಿ ಬಾಗಿಲು ಎತ್ತರದಲ್ಲಿ ಅಗಲದಲ್ಲಿ ದೊಡ್ಡ ದಾಗಿದ್ದು, ಪುಲಿಯೋಗ ಎತ್ತರ, ಅಗಲದಲ್ಲಿ ದೊಡ್ಡದಾಗಿದ್ದು ದಕ್ಷಿಣ ಆಸೆ ಬಾಗಿಲು ಎಲ್ಲಾ ಕೋಟೆ ಬಾಗಿಲಿನಂತಿದೆ. ಈ ಸುತ್ತಾ ಕೋಟೆಗೆ ಆರು ಕೊತ್ತಲುಗಳು ಉಬ್ಬು ಅರ್ಧ ಚಂದ್ರಾಕೃತಿ ಯಲ್ಲಿವೆ. ಈ ಕೋಟೆಗೋಡೆಗಳ ಮೇಲೆ ಬಟ್ಟದೆನೆ ಅವುಗಳ ಮೇಲೆ ಅಂಬಗಂಡಿ ಬಟ್ಟದೆನೆಯಲ್ಲಿ ವಿವಿದೆಡೆ ಗುರಿಯಿಟ್ಟು ಶಸ್ತ್ರಾಸ್ತ್ರ ಮದ್ದುಗುಂಡು ಉಪಯೋಗಕ್ಕಾಗಿ ಕಿಂಡಿಗಳನ್ನು ನಿರ್ಮಿಸಲಾಗಿದೆ. ಕೋಟೆಯ ಮಧ್ಯದಲ್ಲಿ ತಲ ಅಂತಸ್ತು ಮತ್ತು ಮೇಲಂತಸ್ತಿನ ಅರಮನೆ ಕಟ್ಟಿಗೆ ಕಂಬ ತೊಲೆಗಳು ಕಲ್ಲು ಹಾಸಿಗೆ, ಗಾರೆ ಗಚ್ಚು ಲೇಪನ ಮಾಡಲಾಗಿವೆ. ಆದರೆ ಅವು ಸ್ಥಳೀಯರಿಂದ ಕಟ್ಟಡ ಸಾಮಗ್ರಿಗಳು ಸ್ಥಳಾಂತರಗೊಂಡು ಹಾಳಾಗಿದೆ. ಗೋಡೆಗಳು ಇನ್ನು ಉಳಿದಿವೆ ಆದರೂ ಸಹ ಮೇಲ್ಮಹಡಿಗೆ ಹೋಗಲು ಪ್ರತ್ಯೇಕ ವ್ಯವಸ್ಥೆಯಿದ್ದು ಮೆಟ್ಟಿಲುಗಳುಳ್ಳ ಅಂಕುಡೊಂಕಾದ ಗೂಡಿನಂತಹ ಪ್ರತ್ಯೇಕ ಮನೆ ಇದ್ದು ಅರಮನೆಗಿಂತ ಎತ್ತರವಾಗಿದೆ ಇದರಲ್ಲಿ ಮೇಲೆ ಹೋಗಿ ಸುತ್ತಲೂ ವೀಕ್ಷಿಸಿದಾಗ ೧೦–೧೫ ಕಿ.ಮೀ. ಸುತ್ತಣ ಪ್ರದೇಶ ಕಾಣಿಸುತ್ತದೆ. ಈಗಲೂ ನದಿ ಪ್ರವಾಹ ನೋಡಲು ಜನರು ಅದನ್ನು ಹತ್ತಿ ವೀಕ್ಷಿಸುತ್ತಾರೆ. ಅರಮನೆ ಪಕ್ಕದಲ್ಲಿ ಶಸ್ತ್ರಾಗಾರ, ಮದ್ದುಗುಂಡು ಅರೆವ ಒರಳು, ಕಲ್ಲುಗಳುಳ್ಳ ದೊಡ್ಡದಾರ ಮನೆ, ಕಾಳು ಕಣಜಗಳು ಇವೆ ಆದರೆ ಸೈನಿಕ ವಸತಿಗಾಗಿ ನಿವೇಶನಗಳಿಲ್ಲ

ನೀರಿಗಾಗಿ ಸೈನಿಕರಿಗೆ, ಆನೆ ಕುದುರೆಗಳಿಗೆ ನದಿ ತಟದಲ್ಲಿ ತಡೆಗೋಡೆ ಪಕ್ಕದಲ್ಲಿ ಒಂದು ಬಾಂಡ್ಲಿ ತರಹದ ಬಾವಿ ಇದ್ದು ಅಲ್ಲಿ ನೀರು ಕುಡಿದು ಬರಲು ಕೋಟೆಯಲ್ಲಿ ಪ್ರತ್ಯೇಕ ಬಾಗಿಲುಗಳಿವೆ. ಕಾವಲು ಸೈನಿಕರಿಗಾಗಿ ಬೇರೆ ಕಡೆಯಿಂದ ರಜಪೂತ ಆರೇರು (ಮರಾಠ) ಸೈನಿಕರನ್ನು ನೇಮಿಸಿದ್ದು, ಅವರಿಗೆ ಕೋಟೆ ಹೊರಗಡೆ ವಸತಿ ಕಲ್ಪಿಸಿದ್ದು, ಕೋಟೆ ಪಕ್ಕದಲ್ಲಿ ಹೊಸವೂರು (ಐರಣಿ) ಮತ್ತು ಅರೇಮಲ್ಲಾಪುರ ಗ್ರಾಮಗಳಾಗಿ ಪರಿವರ್ತಿತವಾಗಿವೆ.

ರಾಜಕೀಯ ಚರಿತ್ರೆ : ಕೋಟೆ ಕಟ್ಟುವವರೆಗೆ ಈ ಪ್ರದೇಶ ಅರಣ್ಯಮಯ ವಾಗಿದ್ದು ಗ್ರಾಮವಿರಲಿಲ್ಲ. ಕದಂಬರ ಬಂಧುಗಳು ಗುಪ್ತ ಸಾಮ್ರಾಟರ ವಂಶಜರು ಆದ ಗುತ್ತವೊಳಲಗುತ್ತರು ತಮ್ಮನ್ನು ಉಜ್ಜೈನಿ ಸಾಮ್ರಾಟ ಚಂದ್ರಗುಪ್ತನ ವಂಶಜರೆಂದು ಹೇಳಿಕೊಂಡಿದ್ದು ಬನವಾಸಿ ೧೨೦೦೦ದ ಉತ್ತರದಲ್ಲಿ ಹಾವೇರಿ ರಾಣೆಬೆನ್ನೂರು ತಾಲ್ಲೂಕುಗಳ ಕೆಲಭಾಗ ಸೇರಿಸಿ ತುಂಗಭದ್ರಾ ನದಿವರೆಗಿನ ಪ್ರದೇಶದಲ್ಲಿ ಪುಟ್ಟ ರಾಜ್ಯ ಕಟ್ಟಿಕೊಂಡು (ಕೆಲ ಕಾಲ ವ್ಯಾಪ್ತಿ ಮೀರಿ ಆಡಳಿತ ಮಾಡಿದ್ದಾರೆ) ಆಳಿದ್ದು ಅದಕ್ಕೆ ಗುತ್ತವೊಳಲು ರಾಜ್ಯವೆಂದು ಹೆಸರಿದ್ದು ಕ್ರಿ.ಶ. ೭ನೇ ಶತಮಾನದಿಂದ ೧೩ನೇ ಶತಮಾನದವರೆಗೆ ರಾಜ್ಯವಾಳಿದ್ದಾರೆ. ಈ ಪರಿಸರದ ಐರಾವತ ಕ್ಷೇತ್ರ ಗುತ್ತಳ ರಾಜ್ಯ ಮತ್ತು ಬನವಾಸಿ ೧೨೦೦೦ರ ಗಡಿಯಾಗಿ ಅರಣ್ಯವಿದ್ದಿತು. ಈ ಅರಣ್ಯ ಗುತ್ತವೊಳಲ ರಾಜ್ಯದಲ್ಲಿಯ ಪ್ರದೇಶವಾಗಿತ್ತು ಎಂಬುದು ಈ ಪ್ರದೇಶ ವ್ಯಾಪ್ತಿಯ ಗ್ರಾಮ ರಾಣೆಬೆನ್ನೂರು ತಾಲ್ಲೂಕು, ಹಿರೇಬಿದರಿಯ ೭ನೇ ಶತಮಾನದ ಬಾದಾಮಿ ಚಲುಕ್ಯರ ವಿನಯಾದಿತ್ಯ ಕಾಲದ ಶತಮಾನ, ರಾಷ್ಟ್ರಕೂಟ ಶುಂಭತುಂಗ (೨ನೇ ಕೃಷ್ಣ ಕಾಲದ ಕ್ರಿ.ಶ. ೮೭೮-೭೯ ಶಾಸನ ಮತ್ತು ಸೇವುಣ ರಾಮಚಂದ್ರನ ಕಾಲದ ಕ್ರಿ.ಶ. ೧೨೮೩ ಶಾಸನದಿಂದ ಗುತ್ತರ ಆಳ್ವಿಕೆ ಬಗ್ಗೆ ತಿಳಿದುಬರುತ್ತದೆ. ಗುತ್ತರು ಅಧೀನರಾಜರಾಗಿ ಕೆಲಕಾಲ ಸ್ವತಂತ್ರವಾಗಿ ಅಧಿಕಾರ ನಡೆಸಿದ್ದು ಮುಂದೆ ಕ್ರಿ.ಶ. ೧೨೯೬ರ ಅಲ್ಲಾವುದ್ದೀನ ಖಿಲ್ಜಿ ದಾಳಿಯಿಂದಾಗಿ ಆ ವಂಶದ ಆಳ್ವಿಕೆ ಕೊನೆಗೊಂಡು ಕುಮ್ಮಟದುರ್ಗದ ಸಿಂಗೇಯನಾಯಕನು ಆಳಿದ್ದು, ದೆಹಲಿ ಸುಲ್ತಾನರು ದಾಳಿಯಿಂದಾಗಿ ಆ ವಂಶ ನಾಶವಾಗಿ ಮುಂದೆ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾಗಿ ಬಂಕಾಪುರ ಉಪರಾಜಧಾನಿ ಅಧೀನದಲ್ಲಿ (ಹಾವನೂರು) ಭುಜಂಗನಗರ ಗುತ್ತಲ ನಾಡಿನಲ್ಲಿ ಗುತ್ತಳ ದೇಸಾಯಿ ಆಡಳಿತದಲ್ಲಿ ಮುಂದುವರೆದು ವಿಜಯನಗರ ಸಾಮ್ರಾಜ್ಯ ಪತನವಾದ ನಂತರ ವಿಜಾಪುರ ಆದಿಲ್‌ಶಾಹಿ ವಂಶಜರ ಆಡಳಿತದಲ್ಲಿ ವಿಜಾಪುರ ಸುಲ್ತಾನರು ಅವರ ವಂಶಜನಾದ ಸಿಕಂದರ ಸುಲ್ತಾನ ಕಾಲಕ್ಕೆ ಕ್ರಿ.ಶ. ೧೬೮೬ರಲ್ಲಿ ಔರಂಗಜೇಬ ವಿಜಾಪುರ ವಶಪಡಿಸಿಕೊಂಡು ಸುಲ್ತಾನರ ಸಮಸ್ತ ಅಧಿಕಾರವನ್ನು ವಿಜಾಪುರ ಸುಲ್ತಾನನ ಅಧಿಕಾರಿಯಾಗಿದ್ದ ಅಬ್ದುಲ್ ರವೂಫಾನನಿಗೆ ಕೊಟ್ಟು ಕರ್ನಾಟಕ ಸುಬಾ (ಪ್ರಾಂತ)ದ ಮುನಸುಬಾದರಿನನ್ನಾಗಿ ಮಾಡಿದೆ, ಕರ್ನಾಟಕ ಸುಭ (ಪ್ರಾಂತ) ಬಿಜಾಪುರ ಸುಲ್ತಾನ ಎರಡನೇ ಆದಿಲ್‌ಷಾನು ಆಡಳಿತ ಸುಧಾರಣೆಗಾಗಿ ಕರ್ನಾಟಕ ಸುಭಾ ಎಂದು ಮೂರು ಸರ್ಕಾರ ಹಾಗೂ ೨೨ ಮಹಲು ಮಹಲುಗಳನ್ನೊಳಗೊಂಡ ಸುಭಾ ರಚಿಸಿದ್ದ ಅದಕ್ಕೆ ಬಂಕಾಪುರ ಆಡಳಿತ ಕೇಂದ್ರವಾಗಿದ್ದು ಆ ೨೨ ಮಹಲುಗಳಲ್ಲಿ ೧ ದುವಮಾಳ + ೧೭ ಗ್ರಾಮ ಒಟ್ಟು ೧೮ ಗ್ರಾಮಗಳನ್ನೊಳಗೊಂಡ ಮಹಲು (ಚಿಕ್ಕ ಆಡಳಿತ ಕೇಂದ್ರ ದೇಹಾತ್ ಖಿಲಾ ಐರಣಿ ಒಂದಾಗಿತ್ತು. ಕ್ರಿ.ಶ. ೧೭೦೭ರಲ್ಲಿ ಔರಂಗಜೇಬ ತೀರಿಕೊಂಡ ನಂತರ ಮೊಗಲ್ ಸಾಮ್ರಾಜ್ಯ ಪತನವಾಗಿ ರವೂಫಖಾನ ಸ್ವತಂತ್ರನಾಗಿ ಅಲ್ಲಿಂದ ಸವಣೂರ ನವಾಬರ ಅಧೀನದಲ್ಲಿ ಉಳಿದು ಮರಾಠ ಪೇಶ್ವೆ ನವಾಬರ ಸಹ ಆಡಳಿತ ಸುಮಾರು ಕ್ರಿ.ಶ. ೧೮೦೦ರವರೆಗೆ ಮುಂದುವರೆಯಿತು. ದೋಂಡಿಯ ವಾಘನನ್ನು ಗಲ್ಲಿಗೇರಿಸಿದ ನಂತರ ಬ್ರಿಟಿಷರ ಆಡಳಿತ ಪ್ರಾರಂಭವಾಗಿ ಸ್ವಾತಂತ್ರದವರೆಗೆ ಬ್ರಿಟಿಷ್ ಮುಂಬೈ ಸರಕಾರದಲ್ಲಿ ಮುಂದುವರಿದು ೧೯೪೭ರಲ್ಲಿ ಸ್ವತಂತ್ರವಾದ ನಂತರ ಮುಂಬೈ ರಾಜ್ಯದಲ್ಲಿ ಸೇರ್ಪಡೆಯಾಗಿ ಭಾಷಾವಾರು ಪ್ರಾಂತ್ಯ ರಚನೆಯಾದ ನಂತರ ಕ್ರಿ.ಶ. ೧೯೫೬ ನವೆಂಬರ್ ೨ ರಿಂದ ಮೈಸೂರು/ಕರ್ನಾಟಕ ರಾಜ್ಯದಲ್ಲಿ ಹಳೇ ಧಾರವಾಡ ಜಿಲ್ಲೆ ಪುನರಚನೆ ನಂತರ ಹಾವೇರಿ ಜಿಲ್ಲಾ ರಾಣೆಬೆನ್ನೂರು ತಾಲ್ಲೂಕಿನಲ್ಲಿ ಒಂದು ಗ್ರಾಮ ಪಂಚಾಯ್ತಿ ಕೇಂದ್ರವಾಗಿ ಮುಂದುವರೆದಿದೆ.

೮೧

ಬಳ್ಳಾರಿ ಜಿಲ್ಲೆಯ ಕಾರ್ತಿಕ ಕ್ಷೇತ್ರಗಳು

ಡಾ. ಎಚ್. ಗುಜ್ಜಾರಪ್ಪ*

ಬಾದಾಮಿ ಚಾಲುಕ್ಯರ ಕಾಲದಿಂದ ಇಲ್ಲಿಯವರೆಗೂ ಬಳ್ಳಾರಿ ಜಿಲ್ಲೆಯ ಕಾರ್ತಿಕ ಕ್ಷೇತ್ರಗಳು ಪ್ರಸಿದ್ಧಿ ಪಡೆದಿವೆ. ಸೊಂಡೂರಿನ ಕುಮಾರಸ್ವಾಮಿ, ನವಿಲುಸ್ವಾಮಿ, ಕೊಳಗಲ್ಲು, ಕುಡಿತಿನಿ ಮತ್ತು ಹರಪನಹಳ್ಳಿಯ ಮುತ್ತಗಿಯಲ್ಲಿ ಕಾರ್ತಿಕಾರಾಧನೆಯ ಪ್ರಾಚೀನಕಾಲದಿಂದ ನಡೆಯುತ್ತಿದ್ದು, ಈಗ ಸೊಂಡೂರಿನ ಕುಮಾರಸ್ವಾಮಿ ಮತ್ತು ನವಿಲುಸ್ವಾಮಿ ಕ್ಷೇತ್ರಗಳಲ್ಲಿ ಮಾತ್ರ ಕಾರ್ತಿಕರಾಧನೆ ನಡೆಯುತ್ತಿದೆ. ಉಳಿದವುಗಳಲ್ಲಿ ಕೊಳಗಲ್ಲಿನ ಕಾರ್ತಿಕ ದೇವಾಲಯ ಸಂಪೂರ್ಣ ನಾಶವಾಗಿದೆ. ಕುಡಿತಿನಿ ಮತ್ತು ಮುತ್ತಗಿಯಲ್ಲಿ ಸ್ಕಂದ ವಿಗ್ರಹದ ಬದಲು ಲಿಂಗಗಳನ್ನು ಸ್ಥಾಪಿಸಿದ್ದಾರೆ.

ಸೊಂಡೂರಿನ ಕುಮಾರಸ್ವಾಮಿ ದೇವಾಲಯ

ಇದು, ಸೊಂಡೂರಿನಿಂದ ೧೨ ಕಿ.ಮೀ. ದೂರದಲ್ಲಿ ಸಮುದ್ರ ಮಟ್ಟದಿಂದ ಸುಮಾರು ೩೦೦೦ ಅಡಿ ಎತ್ತರದ ಬೆಟ್ಟದ ಮೇಲಿದ್ದು, ಸುತ್ತಲೂ ರಮ್ಯ ಅರಣ್ಯದಿಂದ ಕೂಡಿ ತಂಪಾದ ಪ್ರದೇಶವಾಗಿದೆ. ಪ್ರಾಚೀನ ಕಾಲದಲ್ಲಿ ಸೊಂಡೂರನ್ನು ಸ್ಕಂದಪುರಿ ಎನ್ನುತ್ತಿದ್ದರು ಕಾರ್ತಿಕೇಯನು ಅಗಸ್ತ್ಯ ಮುನಿಯೊಡಗೂಡಿ ಕೈಲಾಸದಿಂದ ದಕ್ಷಿಣಕ್ಕೆ ಹೋಗುವಾಗ ಈ ಜಾಗದಲ್ಲಿ ತಂಗಿದ್ದನೆಂದೂ ಇದೇ ಬೆಟ್ಟದಲ್ಲಿದ್ದ ತಾರಕಾಸುರನನ್ನು ಸಂಹರಿಸಿದನೆಂದೂ ಪ್ರತೀತಿ. ಮೂರು ವರ್ಷಕ್ಕೊಮ್ಮೆ ಕಾರ್ತಿಕಮಾಸದಲ್ಲಿ ಕುಮಾರಸ್ವಾಮಿಯ ಜಾತ್ರೆ ನಡೆಯುವುದು ಅಪಾರ ಸಂಖ್ಯೆಯಲ್ಲಿ ಜನ ನೆರೆಯುವರು. ಇದನ್ನು 'ಮಹಾಯಾತ್ರೆ' ಎನ್ನುವರು.

ಕುಮಾರಸ್ವಾಮಿ ದೇವಾಲಯವು ಕಲ್ಯಾಣ ಚಾಲುಕ್ಯರ ಕಾಲದ ರಚನೆ. ಸಂಪೂರ್ಣ ಕಲ್ಲಿನಿಂದ ಕಟ್ಟಿದ್ದು ಸುಮಾರು ಎರಡೂವರೆ ಅಡಿ ಅಗಲದ ಎತ್ತರದ ಕಂಬಗಳ ಮೇಲೆ ದಪ್ಪ ತೊಲೆಗಳನ್ನು ಕೂರಿಸಿದ್ದಾರೆ. ಗರ್ಭಗೃಹ ಮತ್ತು ನವರಂಗ ಮಾತ್ರವಿದೆ. ಗರ್ಭಗೃಹದ ಬಾಗಿಲವಾಡದಲ್ಲಿ ಚಿಕ್ಕಚಿಕ್ಕ ನವಿಲಿನ ಶಿಲ್ಪಗಳಿವೆ. ಲಲಾಟದಲ್ಲಿ ಗರಿಗೆದರಿ ನರ್ತಿಸುವ ನವಿಲಿನ ಶಿಲ್ಪವಿದೆ. ಕುಮಾರಸ್ವಾಮಿಯ ಶಿಲ್ಪವನ್ನು ಕಪ್ಪು ಕಲ್ಲಿನಿಂದ ನಿರ್ಮಿಸಿದ್ದಾರೆ. ಆಳೆತ್ತರದ ವಿಗ್ರಹದ ಬಲಗೈಲಿ ವೇಲು (ಶೂಲ) ಹಾಗೂ ಎಡಗೈಲಿ ಕ್ರೌಂಚಪಕ್ಷಿಗಳಿವೆ. ನಿಂತ ಭಂಗಿಯಲ್ಲಿರುವ ವಿಗ್ರಹದ ಬುಡದಲ್ಲಿ ನವಿಲನ್ನು ಕೆತ್ತಿದ್ದಾರೆ. ಮೂರ್ತಿ ತುಂಬಾ ಸುಂದರವಾಗಿದೆ. ದೇವಸ್ಥಾನದ ಒಳಭಾಗದಲ್ಲಿ ಹೆಚ್ಚಿನ ಕೆತ್ತನೆಗಳಿಲ್ಲ. ದ್ವಾರಪಾಲಕರಿದ್ದಾರೆ. ಹೊರಭಾಗದಲ್ಲಾಗಲೀ ದೇವಸ್ಥಾನದ ಗೋಡೆಗಳಲ್ಲಾಗಲೀ ಕೆತ್ತನೆಗಳಿಲ್ಲ ಹಾಗೂ ಇದಕ್ಕೆ ಗೋಪುರ ಸಹ ಇರುವುದಿಲ್ಲ. ೧೯೩೪ರಲ್ಲಿ ಘೋರ್ಪಡೆಯವರು ದೇವಸ್ಥಾನದ ಮೇಲೆ ಸುತ್ತಲೂ ಗಾರೆ ಶಿಲ್ಪವನ್ನು ಹಾಗೂ ದೇವಸ್ಥಾನದ ಪ್ರವೇಶದ್ವಾರದಲ್ಲಿ ಬಿಸಿಲು ಮತ್ತು ಮಳೆ ನೀರಿನ ರಕ್ಷಣೆಗೆ ಸಣ್ಣ ಮಂಟಪ ನಿರ್ಮಿಸಿದ್ದಾರೆ.

ಈ ದೇವಾಲಯ ಸಂಕೀರ್ಣ ಪ್ರವೇಶ ದ್ವಾರವು ವಿಜಯನಗರ ಕಾಲದ ರಚನೆ. ಸುಮಾರು ೧೫ ಅಡಿ ಎತ್ತರದವರೆಗೂ ಕಲ್ಲಿನ ಕಟ್ಟಡವಿದ್ದು, ನಂತರ ಗಾರೆ ಶಿಲ್ಪಗಳಿವೆ. ಕಲ್ಲಿನ ಮಂಟಪದಲ್ಲಿ ಸಣ್ಣ ಉಬ್ಬು ಶಿಲ್ಪಗಳಿವೆ. ಗೋಪುರದ ಶಿಖರದಲ್ಲಿ ಹಿತ್ತಾಳೆ ಕಲಶಗಳಿವೆ.

ಈ ದೇವಾಲಯವು ಬಾದಾಮಿ ಚಾಲುಕ್ಯರ ಕಾಲದಲ್ಲಿಯೇ ಕುಮಾರಸ್ವಾಮಿ ದೇವಾಲಯವಾಗಿದ್ದಿರಬಹುದಾಗಿದೆ. ಪೂರ್ವದಲ್ಲಿದ್ದ ದೇವಾಲಯು ಶಿಥಿಲವಾಗಿರಬಹುದು ಅಥವಾ ಚಿಕ್ಕದಿರಬಹುದು. ನಂತರ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಈಗ ಹಾಲಿ ಇರುವ ದೇವಾಲಯವನ್ನು ನಿರ್ಮಿಸಲಾಗಿದೆ. ಈ ದೇವಾಲಯದ ಪ್ರವೇಶ ದ್ವಾರದಲ್ಲಿರುವ (ಸೊಂಡೂರು) ಶಾಸನ ಸಂ. (೧) ರಲ್ಲಿ ಕ್ರಿ.ಶ. ೧೦೭೪ರಲ್ಲಿ ಶ್ರೀ ಸ್ವಾಮಿ (ಕುಮಾರಸ್ವಾಮಿ) ದೇವರ ತಪೋವನಾಧಿಪತಿಯಾದ ಗದಾಧರರಸನು. ದೇವಸ್ಥಾನದ ಕೆಲಸ ಮಾಡಿದ ಕಲ್ಕುಟಿಗ ಬೂಮವಳ, ಬಿಳಿಯಚಟ್ಟ, ಬೆನಗ ಬೋವ, ಕಮ್ಮಾರನಾಕರಿಗೆ ತಲಾ ಆರು ಮತ್ತರು ಭೂಮಿಯನ್ನು ದಾನ ಮಾಡಿದ ಮಾಹಿತಿಯಿದೆ. ಈ ದೇವಾಲಯದ ಪಕ್ಕದ ಪಾರ್ವತಿ ದೇವಸ್ಥಾನದಲ್ಲಿರುವ ಶಾಸನವು ಸೊಂಡೂರು (೭) ಕುಮಾರಸ್ವಾಮಿ ದೇವಸ್ಥಾನಕ್ಕೆ

* # ೩೪೭, ೧೮ನೇ ಕ್ರಾಸ್, ೭ನೇ ಮುಖ್ಯರಸ್ತೆ, ಬಿಇಎಂಎಲ್ ಬಡಾವಣೆ, ೧ನೇ ಹಂತ, ಬಸವೇಶ್ವರನಗರ, ಬೆಂಗಳೂರು-೫೬೦೦೭೯.

ರಾಷ್ಟ್ರಕೂಟ ಮೂರನೇ ಕೃಷ್ಣನು ಕೆರೆಯ ಪಳ್ಳಿ (ಈಗಿನ ಕೆರೆಯಾಗಿನಹಳ್ಳಿ) ಯನ್ನು ಹಿಂದೆ ದಾನ ನೀಡಿದ್ದು ಇದನ್ನು ಹೊಯ್ಸಳ ವೀರ ಬಲ್ಲಾಳನ ದಂಡನಾಯಕ ಮಹದೇವನು ಕ್ರಿ.ಶ. ೧೨೦೬ರಲ್ಲಿ ಪುನರ್ದತ್ತಿಯಾಗಿ ನೀಡಿದ್ದನ್ನು ವಿಷ್ಣುಕರ ಬ್ರಹ್ಮಚಾರಿ ಸ್ವೀಕರಿಸಿದ. ಆದ್ದರಿಂದ ಕುಮಾರಸ್ವಾಮಿ ದೇವಾಲಯವು ರಾಷ್ಟ್ರಕೂಟ ಅಥವಾ ಅದಕ್ಕೂ ಹಿಂದಿನ ಬಾದಾಮಿ ಚಾಲುಕ್ಯರ ಕಾಲದಲ್ಲೂ ಇದ್ದಿರಬಹು ದಾಗಿದೆ. ಸೊಂಡೂರು (೮) ಶಾಸನವು ಕ್ರಿ.ಶ. ೧೧೪೫ರಲ್ಲಿ ಅಕ್ಕಸಾಲಿ ಚನಯಾ ಚಾರಿ ಮಗ ಧರ್ಮಾಂಬುಧಿ ಎಂಬುವನು ನವಿಲನ್ನು ಪ್ರತಿಷ್ಠೆ ಮಾಡಿದ ದಾಖಲೆಯಿದ್ದು, ಕುಮಾರಸ್ವಾಮಿ ದೇವಾಲಯವು ಕ್ರಿ.ಶ. ೧೧೪೫ಕ್ಕಿಂತ ಹಿಂದೆ ಪ್ರಾರಂಭವಾಗಿ ೧೧೭೪ರಲ್ಲಿ ಕಟ್ಟಡ ಮುಕ್ತಾಯವಾಗಿದೆ.

ಪಾರ್ವತಿ ದೇವಾಲಯ

ಈ ದೇವಾಲಯವು ಕುಮಾರಸ್ವಾಮಿ ದೇವಾಲಯದ ಪಕ್ಕದ ದೇಗುಲವಾಗಿದೆ. ಇದು ಕುಮಾರಸ್ವಾಮಿ ದೇವಾಲಯ ಕ್ಕಿಂತ ಹಳೆಯದು. ತುಂಬಾ ಆಕರ್ಷಕವಾಗಿದ್ದು, ಸುಂದರ ವಾಗಿದೆ. ಇದರ ಮೇಲ್ಭಾವಣೆಯನ್ನು ಕಮಾನಿನಾಕಾರವಾಗಿ ನಿರ್ಮಿಸಿದ್ದಾರೆ. ಕಂಬಗಳು ಬಾದಾಮಿ ಚಾಲುಕ್ಯರ ಮಾದರಿ ಯಲ್ಲಿವೆ. ದೇವಾಲಯದ ಗರ್ಭಗೃಹದ ಗೋಪುರ ವನ್ನು ಕಲ್ಯಾಣ ಚಾಲುಕ್ಯರ ಕಾಲದಲ್ಲಿ ನಿರ್ಮಿಸಿದಂತಿದೆ. ದೇವಾಲಯದ ಪ್ರವೇಶದ್ವಾರದಲ್ಲಿ ಎತ್ತರದ ಗೋಪುರವಿದ್ದು, ಮುಂಭಾಗದ ಗೋಪುರದಲ್ಲಿ ರುಂಡಮಾಲೆ ಧರಿಸಿರುವ ಉಗ್ರ ಸ್ವರೂಪದ ಚಂಡಿ ವಿಗ್ರಹವಿದೆ. ದೇವಾಲಯದ ಒಳಭಾಗದಲ್ಲಿ ಸುಂದರವಾದ ಮಹಿಷಾಸುರ ಮರ್ಧಿನಿ. ಪ್ರಯೋಗ ಚಕ್ರಧಾರಿ ವಿಷ್ಣು, ಕೈಯಲ್ಲಿ ಒಂದೇ ಕಮಲ ಹಿಡಿದಿರುವ ಸೂರ್ಯ, ಗಣಪತಿ ಹಾಗೂ ಕೋಣನ ಮೇಲೆ ಕುಳಿತಿರುವ ಗದೆ ಮತ್ತು ಪಾಶಧಾರಿ ಯಮನ ಶಿಲ್ಪ ಅಪರೂಪದ್ದೂ ಸುಂದರವೂ ಆಗಿದೆ.

ದೇವಾಲಯದ ಪ್ರವೇಶದ್ವಾರದ ಇಕ್ಕೆಲಗಳಲ್ಲೂ ದ್ವಾರಪಾಲಕರಿದ್ದಾರೆ. ಬಲಬದಿಯ ದ್ವಾರಪಾಲನು ಕೈಯಲ್ಲಿ ಉದ್ದವಾದ ದಂಡ ಹಿಡಿದು ಸೊಂಟಕ್ಕೆ ಮೊಳಕಾಲಿನ ಮೇಲಕ್ಕಿರುವ ದಟ್ಟಿ ಸುತ್ತಿದ್ದಾನೆ. ಬಾಯಲ್ಲಿ, ಕೋರೆ ಹಲ್ಲುಗಳಿವೆ. ನಡುಪಟ್ಟಿಗೆ ಕಠಾರಿ ಸಿಕ್ಕಿಸಿಕೊಂಡಿದ್ದಾನೆ. ಬಲಭಾಗದ ದ್ವಾರಪಾಲಕರು ಶಿರಸ್ತ್ರಾಣ ಧರಿಸಿದ್ದು, ಕೈಯಲ್ಲಿ ಖಡ್ಗವಿದೆ. ನಡುಪಟ್ಟಿಯಲ್ಲಿ ಖಡ್ಗ ಕಠಾರಿಯಿದ್ದು ಈತನುಟ್ಟಿರುವ ದಟ್ಟಿ ಮೊಳಕಾಲಿನಿಂದ ಕೆಳಗಿನವರೆಗೂ ಇದೆ. ಬೆನ್ನ ಹಿಂದೆ ಒರೆಯಲ್ಲಿ ಖಡ್ಗವಿದೆ. ಈತನಿಗೂ ಕೋರೆಹಲ್ಲುಗಳಿವೆ. ಬಲಭಾಗದ ಪ್ರವೇಶದ್ವಾರದ ಗೋಡೆಯಲ್ಲಿನ ಕೋಷ್ಠದಲ್ಲಿ ವ್ಯಕ್ತಿಯೊಬ್ಬನ ಶಿಲ್ಪವಿದೆ. ಈತನೂ ನಡುಪಟ್ಟಿ ಧರಿಸಿ ಪಂಚೆಯುಟ್ಟಿದ್ದಾನೆ. ಕಂಠಾಭರಣ, ತೋಳಬಂದಿಗಳಿದ್ದು, ಶಿಖೆಯನ್ನು ಎತ್ತಿಕಟ್ಟಿದ್ದಾನೆ. ಈ ಪ್ರತಿಮೆಯ ಮೇಲೆ ಶ್ರೀ ಚಿಲಯನ್ ಎಂಬ ಶಾಸನವಿದೆ. ಈ ಶಿಲ್ಪದ ಕೆಳಗೆ ದ್ವಾರಪಾಲಕನ ಪಕ್ಕದಲ್ಲಿ 'ಶ್ರೀ ಜೀನಾಲಯನ್ ಆಗದೊ' ಸೊಂಡರೂರು (೪) ಹಾಗೂ 'ಶ್ರೀ' ಸೊಂಡೂರು (೫) ಎಂಬ ಶಾಸನಗಳಿವೆ. ಆದ್ದರಿಂದ ನಿಸ್ಸಂಶಯವಾಗಿ ಈ ದೇವಾಲಯವು ಮೇಲ್ಕಂಡ ಶಿಲ್ಪದಲ್ಲಿರುವ ಶ್ರೀ ಜಿನಾಲಯನ್ ಎಂಬುವನು ಕಟ್ಟಿಸಿದ್ದಾಗಿದೆ. ಈ ದೇವಾಲಯದ ದಕ್ಷಿಣ ಗೋಡೆಯಲ್ಲಿ ದಕ್ಷಿಣಾಮೂರ್ತಿ ವಿಗ್ರಹವಿದ್ದು, ಈ ಎಲ್ಲಾ ಶಿಲ್ಪಗಳೂ ತುಂಬಾ ಸುಂದರ. ಪರಿಪೂರ್ಣ ಹಾಗೂ ಆಕರ್ಷಕವಾಗಿದೆ. ಇಂತಹ ಶಿಲ್ಪಗಳನ್ನು ಬಾದಾಮಿ, ಐಹೊಳೆ, ಪಟ್ಟದಕಲ್ಲು, ಮಹಾಕೂಟ, ಮಹಾನಂದಿ ಮತ್ತು ಅಲಂಪುರಗಳಲ್ಲಿ ಕಾಣಬಹುದು. ಶಾಸನಗಳ ಲಿಪಿ ಸ್ವರೂಪ ಹಾಗೂ ಶಿಲ್ಪ ಸ್ವರೂಪಗಳಿಂದ ಇದು ಬಾದಾಮಿ ಚಾಲುಕ್ಯರ ರಚನೆಯೆನಿಸುತ್ತದೆ.

ಇವೆರಡೂ ದೇವಸ್ಥಾನಗಳ ಆವರಣದಲ್ಲಿ ಕೆಲವು ಪ್ರಾಚೀನ ಲಿಂಗಗಳು, ನಾಗರ ಶಿಲ್ಪ, ಸೂರ್ಯ ಶಿಲ್ಪಗಳಿವೆ. ಸುಮಾರು ಎರಡೂವರೆ ಅಡಿ ಮುದ್ದಾದ ವಿಷ್ಣು ಮೂರ್ತಿ ಯಿದ್ದು, ಪಾದದಿಂದ ತಲೆ ಮಟ್ಟದವರೆಗಿರುವ ಮೇಲ್ಮುಖನಾದ ತನ್ನ ಎರಡೂ ಕೈಗಳಿಗಿಂತಲೂ ದಪ್ಪನಾದ ಹಿಡಿಕೆಯುಳ್ಳ ಗದೆ ಹಿಡಿದಿದ್ದಾನೆ. ಶಂಖ, ಚಕ್ರಧಾರಿಯಾಗಿದ್ದು, ಅಭಯಹಸ್ತ ನೀಡುತ್ತಿದ್ದಾನೆ. ಕೆಲವು ವೀರಗಲ್ಲುಗಳೂ ಇಲ್ಲಿವೆ.

ಅಗಸ್ತ್ಯತೀರ್ಥ

ಈ ದೇವಸ್ಥಾನದ ಸಮುಚ್ಚಯದ ನೈರುತ್ಯಕ್ಕೆ ನಾಲ್ಕು ದಿಕ್ಕುಗಳಿಗೂ ಕಲ್ಲಿನ ಪಾವಟಿಗೆಗಳಿರುವ ಪುಷ್ಕರಣಿಯಿದೆ. ಸದಾ ಕಾಲ ನೀರಿದ್ದು, ದೇವಸ್ಥಾನಕ್ಕೆ ನೀರೊದಗಿಸಲು ಈ ಕೊಳವನ್ನು ನಿರ್ಮಿಸಿದ್ದಾರೆ. ಈಗಲೂ ಈ ನೀರನ್ನು ದೇವಾಲಯಕ್ಕೆ ಬಳಸಲಾಗುತ್ತಿದೆ.

ವಡ್ಡಾರಾದನೆಯಲ್ಲಿ ಬರುವ ಕಾರ್ತೀಕ ಋಷಿಯ ಕತೆ

ಲಾಳ ದೇಶದ ಅಗ್ನಿರಾಜನ ಪತ್ನಿ ವೀರಮತಿ ಈತನು ತನ್ನ ಆರನೇ ಮಗಳು ಕೃತ್ತಿಕೆಯನ್ನು ಮೋಹಿಸಿ ಲಗ್ನವಾದ. ಅವಳಿಂದ ಕಾರ್ತೀಕ ಮತ್ತು ವೀರಶ್ರೀ ಎಂಬ ಮಕ್ಕಳನ್ನು ಪಡೆದ. ವೀರಮತಿ ಸನ್ಯಾಸಿನಿಯಾದಳು. ವೀರಶ್ರೀಯನ್ನು ಕೋಗಳಿರಾಜ ಕ್ರೌಂಚನಿಗೆ ವಿವಾಹ ಮಾಡಿಕೊಡಲಾಯಿತು. ಪ್ರಾಪ್ತ ವಯಸ್ಕನಾದ ಕಾರ್ತಿಕನು ಇತರ ರಾಜಪುತ್ರರೊಡನೆ ಉದ್ಯಾನವನದಲ್ಲಿ ಒಂದು ದಿನ ವಿನೋದದಲ್ಲಿದ್ದ ನಂತರ ಕಾರ್ತೀಕನನ್ನುಳಿದೆಲ್ಲರಿಗೂ ಭಕ್ಷ್ಯ ಭೋಜ್ಯ ವಸ್ತ್ರಾದಿಗಳು ತಮ್ಮ ಅಜ್ಜಂದಿರಿಂದ ಬಂದವು. ಕಾರ್ತೀಕನಿಗೆ ಬಹಳ

ದುಃಖವಾಗಿ ಅರಮನೆಗೆ ತೆರಳಿ ತನ್ನ ತಾತ ಹಾಗೂ ನಿನ್ನ ತಂದೆ ಎಲ್ಲಿರುವನೆಂದು ತಾಯಿಯನ್ನು ಕೇಳಿದ ಆಕೆ 'ನಿನ್ನ ತಂದೆಯೇ ನನ್ನ ತಂದೆ' ಎಂದಳು. ವಿಷಯವರಿತ ಕಾರ್ತಿಕನು ವೈರಾಗ್ಯ ತಾಳಿ ದೀಕ್ಷೆ ಪಡೆದು ದೇಶಸಂಚಾರ ಮಾಡುತ್ತಿದ್ದ. ಒಂದು ದಿನ ಕೋಗಳಿಗೆ ಬಂದು ವೀರ ಶ್ರೀ ಅರಮನೆಗೆ ಭಿಕ್ಷೆಗೆ ಬಂದ. ಭಿಕ್ಷೆ ನೀಡುವಲ್ಲಿ ತಡವಾಯಿತು. ಆಗ ವೀರಶ್ರೀಯು ಗಂಡನ ತಲೆಯನ್ನು ತೊಡೆಯ ಮೇಲಿಟ್ಟು ಕೊಂಡು ಬಾಚುತ್ತಿದ್ದಳು. ಕಾರ್ತಿಕ ಋಷಿಯು ಮರಳು ತ್ತಿದ್ದದನ್ನು ತಿಳಿದ ವೀರಮತಿ ಓಡಿ ಹೋಗಿ ಸನ್ಯಾಸಿ ಕಾಲು ಹಿಡಿದು ದಯಮಾಡಿ ಭಿಕ್ಷೆ ಸ್ವೀಕರಿಸಬೇಕೆಂದು ಬೇಡುತ್ತಿದ್ದಳು. ಕ್ರೌಂಚನು ಇದನ್ನು ನೋಡಿ ತನ್ನ ಪತ್ನಿ ಸವಣನಲ್ಲಿ ಅನುರಕ್ತಳಾಗಿದ್ದಾಳೆಂದು ಭಾವಿಸಿ, ಸವಣನನ್ನು ಶಕ್ತ್ಯಾಯುಧ ದಿಂದ ಎದೆಗೆ ಹೊಡೆದ. ತುಂಬಾ ಬಿಸಿಲಿನಿಂದಲೂ ಮಾರಣಾಂತಿಕ ಪೆಟ್ಟಿನಿಂದಲೂ ಸವಣನು ಎಲ್ಲಾದರೂ ತಂಪಾದ ಜಾಗದಲ್ಲಿ ಪ್ರಾಣ ತ್ಯಜಿಸಲು ಯೋಚಿಸುತ್ತಿದ್ದ. ಆಗ ತನ್ನ ಅಜ್ಜಿಯಾದ ವೀರಮತಿ ಸನ್ಯಾಸನದಿಂದ ಮರಣಿಸಿ ವ್ಯಂತರ ದೇವತೆಯಾಗಿ ಹುಟ್ಟಿದ್ದು. ಅಲ್ಲಿಗೆ ಬಂದು ಭಟಾರಾ ಇವರನೆಲ್ಲ ಕೊಲ್ಲಲೇ ಎಂದು ಕೇಳಿದ್ದಕ್ಕೆ ಬೇಡವೆಂದ ಋಷಿಯು ತನ್ನನ್ನು ತಂಪಾದ ಜಾಗಕ್ಕೆ ಒಯ್ಯಲು ತಿಳಿಸಿದ. ಆಕೆ ನವಿಲು ರೂಪ ಧರಿಸಿ ಆತನನ್ನು ಹೊತ್ತು ಕೋಗಳಿಯ ಪೂರ್ವಕ್ಕಿದ್ದ ಪರ್ವತದ ಲತಾ ಮಂಟಪವಿದ್ದ ಕೊಳದ ಬಳಿ ಇಳಿಸಿದಳು. ಕಾರ್ತಿಕನು ಸತ್ತು ಮುವತ್ಮೂರು ಸಾವಿರ ಸಾಗರ ವರ್ಷ ಆಯುಷ್ಯವುಳ್ಳ ಅಹಮಿಂದ್ರನಾಗಿ ಹುಟ್ಟಿದ. ವೀರಶ್ರೀ ಅಲ್ಲಿ ಬಸದಿಯೊಂದನ್ನು ಕಟ್ಟಿಸಿದಳು. ಅಂದಿನಿಂದ ಬಾದಬ್ಬೆ ಮತ್ತು ಕಾರ್ತೀಕರ ಪರ್ವವನ್ನಾಚರಿಸುತ್ತಿದ್ದರು. ಆ ಕ್ಷೇತ್ರಕ್ಕೆ ಸ್ವಾಮಿ ಕ್ಷೇತ್ರವೆಂದು ಹೆಸರಾಯಿತು.

ವಡ್ಡಾರಾಧನೆಯ ಕರ್ತೃ ಶಿವಕೋಟ್ಯಾಚಾರ್ಯನು ಕ್ರಿ.ಶ. ೯೨೦ ರಲ್ಲಿ ಈ ಗದ್ಯ ಗ್ರಂಥ ರಚಿಸಿದ್ದು, ಇವನು ಕೋಗಳಿಯವನು. ಕೋಗಳಿ ೫೦೦ ಪ್ರಾಂತವೆಂದು ಕದಂಬ, ನೊಳಂಬ ಮತ್ತು ಉಚ್ಚಂಗಿ ಸಾಮಂತರಾಜರಿಂದ ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ ಮತ್ತು ಕಲ್ಯಾಣ ಚಾಲುಕ್ಯ ಚಕ್ರವರ್ತಿಗಳ ಆಳ್ವಿಕೆಗೊಳಪಟ್ಟಿತ್ತು. ಕ್ರೌಂಚನೆಂಬ ಯಾವ ರಾಜನೂ ಓಗಳಿಯನ್ನಾಳಿದ ದಾಖಲೆ ಇರುವುದಿಲ್ಲ. ತೋಗಳಿಯ ಪೂರ್ವಕ್ಕೆ ಸುಮಾರು ೪೫ ಕಿ.ಮೀ. ದೂರದಲ್ಲಿ ಸೊಂಡೂರು ಬೆಟ್ಟಗಳಿವೆ. ಇದು ತಂಪಾದ ಹಾಗೂ ನೀರಿನ ಆಸರೆಯಿರುವ ಕುಮಾರಸ್ವಾಮಿ ಕ್ಷೇತ್ರವಾಗಿದೆ. ಆದರೆ ಕುಮಾರಸ್ವಾಮಿ ಬೆಟ್ಟದಲ್ಲಿ ಎಲ್ಲಿಯೂ ಬಸದಿ ಇರುವುದು ಕಂಡುಬಂದಿಲ್ಲ. ವಡ್ಡಾರಾಧನೆಯ ಈ ಕತೆ ಅವಾಸ್ತವವಾದರೂ ಸಹ ಶಿವಕೋಟ್ಯಾಚಾರ್ಯನ ಹೊತ್ತಿಗಾಗಲೇ ಕುಮಾರಸ್ವಾಮಿ ಮತ್ತು ಬಾದಬ್ಬೆ (ಬಸದ+ಅಬ್ಬೆ) ಅಂದರೆ ಬಸದಿಂಕಿ ಅಥವಾ ಪಾರ್ವತಿ ಕ್ಷೇತ್ರಗಳು ಸಾಕಷ್ಟು ಪ್ರಸಿದ್ಧಿಯಾಗಿರಬೇಕು. ಕೋಗಳಿ ಈಗಿನ ಹಗರಿಬೊಮ್ಮನಹಳ್ಳಿ ತಾಲ್ಲೂಕಿನಲ್ಲಿದ್ದು, ಇಲ್ಲಿ ಗಂಗದುರ್ವಿನೀತನಿಂದ ನಿರ್ಮಿತವಾದ ಮಲ್ಲಿನಾಥ ಬಸದಿ (ಈಗ ವಿನಾಶದ ಅಂಚಿನಲ್ಲಿದೆ) ಹಾಗೂ ಪಾರ್ಶ್ವನಾಥ ತೀರ್ಥಂಕರ ವಿಗ್ರಹ ಮತ್ತು ಹಲವಾರು ಶಾಸನಗಳಿವೆ.

ಸೊಂಡೂರಿನ ನವಿಲು ಸ್ವಾಮಿ ಕ್ಷೇತ್ರ

ಕುಮಾರಸ್ವಾಮಿ ದೇವಾಲಯದ ಪಶ್ಚಿಮ ರಸ್ತೆಯಲ್ಲಿ ದಕ್ಷಿಣಕ್ಕೆ ಎರಡು ಕಿ.ಮೀ. ಸಾಗಿದರೆ ಸುಬ್ಬರಾಯನಹಳ್ಳಿ ಸಿಗುವುದು. ಸುತ್ತಲೂ ಅರಣ್ಯದಿಂದ ಕೂಡಿದೆ ಈ ಊರು. ಅಲ್ಲಿಂದ ದಟ್ಟ ಅರಣ್ಯದಲ್ಲಿ ಕಾಡುದಾರಿಯಲ್ಲಿ ಕಾಲ್ನಡಿಗೆಯಲ್ಲಿ ಪಶ್ಚಿಮಕ್ಕೆ ೫ ಕಿ.ಮೀ. ಸಾಗಿದರೆ ಕಣಿವೆಯ ಮಧ್ಯದಲ್ಲಿ ನವಿಲುಸ್ವಾಮಿ ದೇವಾಲಯ ಸಿಗುತ್ತದೆ. ಮುಂದೆ ಇನ್ನು ನಾಲ್ಕು ಕಿ.ಮೀ. ಸಾಗಿದರೆ ಜನವಸತಿಯುಳ್ಳ ಹಳ್ಳಿ ಸಿಗುತ್ತದೆ. ಈ ದೇವಾಲಯದ ಬಳಿಯ ಕಾಡಿನಲ್ಲಿ ಕಾಡುಹಂದಿ, ನವಿಲು, ಜಿಂಕೆಗಳು ಹೇರಳವಾಗಿವೆ. ಚಿರತೆಗಳೂ ಸಾಕಷ್ಟು ಸಂಖ್ಯೆಯಲ್ಲಿವೆ. ಇದು ನಿರ್ಜನ ಪ್ರದೇಶವಾಗಿದ್ದು, ಇಲ್ಲಿ ಒಬ್ಬ ಕಾವಲುಗಾರನನ್ನು ನೇಮಿಸ ಲಾಗಿದೆ. ಮಳೆಗಾಲದಲ್ಲಿ ಅಪರೂಪಕ್ಕೆ ಜನ ಬರುತ್ತಾರೆ. ಬೇಸಗೆಯಲ್ಲಿ ಕುಮಾರಸ್ವಾಮಿ ಜಾತ್ರೆ ವೇಳೆ ಜನರು ಬರುತ್ತಾರೆ.

ಈಗಿನ ನವಿಲುಸ್ವಾಮಿ ದೇವಸ್ಥಾನವು ವಿಜಯನಗರದ ರಚನೆ ೪೦ x ೪೦ ಚೌಕಾಕಾರದ ಮಾಳಿಗೆ ಮನೆಯಂತಿದೆ. ಸಂಪೂರ್ಣ ಕಲ್ಲಿನಿಂದ ಕಟ್ಟಿದ್ದು, ಬಾಗಿಲು ಅಥವಾ ಗೋಡೆ ಹೊರ ಮತ್ತು ದೇವಾಲಯದಲ್ಲಿ ಕೆತ್ತನೆ ಕೆಲಸಗಳು ಇರುವುದಿಲ್ಲ. ೧೯೩೪ರಲ್ಲಿ ಸೊಂಡೂರು ಘೋರ್ಪಡೆಯುವರು ದೇವಸ್ಥಾನದ ಮೇಲ್ಛಾವಣಿ ಮಧ್ಯದಲ್ಲಿ ಗಾರೆಯಿಂದ ಅತಿ ಚಿಕ್ಕ ಗೋಪುರ ನಿರ್ಮಿಸಿ ಕಳಸವಿಟ್ಟಿದ್ದಾರೆ. ದೇವಾಲಯದ ಎದುರು ೩೦ ಅಡಿ ಎತ್ತರದ ದೀಪ ಸ್ತಂಭವಿದೆ. ಪಕ್ಕದಲ್ಲಿ ನಾಲ್ಕೂ ಕಡೆ ಕಲ್ಲಿನ ಮೆಟ್ಟಲಿರುವ ಸಣ್ಣ ಕೊಳವಿದೆ.

ನವಿಲು ಸ್ವಾಮಿ ದೇವಸ್ಥಾನದ ಶಿಲ್ಪಗಳು ತುಂಬಾ ಪ್ರಾಚೀನವಾಗಿವೆ. ಮೊದಲು ಇಲ್ಲಿ ದೇವಸ್ಥಾನವಿದ್ದು, ಅದು ಶಿಲವಾದ್ದರಿಂದ ಮತ್ತೊಂದು ನಿರ್ಮಿಸಿರಬಹುದು. ಗರ್ಭಗೃಹದಲ್ಲಿರುವ ಕುಮಾರಸ್ವಾಮಿ ಕರಿಕಲ್ಲಿನಿಂದ ಮಾಡಿದ್ದು, ನವಿಲಿನ ಮೇಲೆ ಕುಳಿತಿದ್ದಾನೆ. ಕೈಯಲ್ಲಿ ವೇಲು ಹಿಡಿದಿದ್ದಾನೆ. ಗುಡಿಯ ಎದುರಿನ ದೀಪ ಸ್ಥಂಭದ ಕೆಳಗೆ ನರ್ತಿಸುತ್ತಿರುವ ಕಪ್ಪು ಕಲ್ಲಿನ ಕುಮಾರ ಸ್ವಾಮಿಯ ಮುದ್ದಾದ ವಿಗ್ರಹವಿದ್ದು, ಅದಕ್ಕೆ ಚಿಕ್ಕ ಕಲ್ಲಿನ ಮಂಟಪ ನಿರ್ಮಿಸಿದ್ದಾರೆ. ದೇವಸ್ಥಾನದ ಎದುರಿಗೆ ಭಗ್ನಗೊಂಡ ಕಪ್ಪುಕಲ್ಲಿನ ನವಿಲು ಶಿಲ್ಪ ಬಿದ್ದಿದೆ.

ಬುಕ್ಕರಾಯನು ಇಲ್ಲಿ ಕಲ್ಲು ಮಂಟಪ ಮತ್ತು ನೀರಿನ ಕೊಳ ನಿರ್ಮಿಸಿದನೆಂತಲೂ ಹಾಗೂ ದೇವಸ್ಥಾನಕ್ಕೆ ಏನೂ ಸೇವೆ ಮಾಡಿದ ತ್ರುಟಿತ ಶಾಸನ (೮) ಮತ್ತು (೯) ಗಳಿವೆ. ಈ ಸ್ಥಳವು ತುಂಬಾ ರಮಣೀಯವಾಗಿದೆ.

ಕೊಳಗಲ್ಲು ಕ್ಷೇತ್ರ : ಬಳ್ಳಾರಿ ತಾಲ್ಲೂಕು

ಇದು, ಬಳ್ಳಾರಿಯಿಂದ ೧೦ ಕಿ.ಮೀ. ದೂರದಲ್ಲಿದೆ. ಇಲ್ಲಿ ೧೧ನೇ ಶತಮಾನದಲ್ಲಿ ನಿರ್ಮಿಸಿದ್ದ ಕುಮಾರಸ್ವಾಮಿ ದೇವಾಲಯವು ಸಂಪೂರ್ಣ ನಾಶವಾಗಿದ್ದು, ಈಗ ಕೇವಲ ಅವಶೇಷ ಮಾತ್ರ ಉಳಿದಿವೆ. ರಾಷ್ಟ್ರಕೂಟ ಆಕಾಲವರ್ಷದೇವನ ಆಳ್ವಿಕೆಯಲ್ಲಿ ಚಂಗಗಾವುಂಡನು ೩೦ ಮತ್ತರುಗದ್ದೆ, ತೋಟ ಹಾಗೂ ಗಾಣವೊಂದನ್ನು ಕ್ರಿ.ಶ. ೯೬೪ರಲ್ಲಿ ವಿದ್ಯಾದಾನಕ್ಕಾಗಿ ಕೊಳ್ಗಲ ಅಧಿಪತಿಯೂ ಕಾರ್ತಿಕೇಯ ತಪೋವನದ ಅಧಿಪತಿಯೂ ಆದ ಗಜಾಧರಯ್ಯನ ಸಮ್ಮುಖದಲ್ಲಿ ದಾನ ಮಾಡಿದ ದಾಖಲೆಯಿದೆ. ಬಳ್ಳಾರಿ ಶಾಸನ ಸಂ (೫೨) ಕ್ರಿ.ಶ. ೯೬೭ರಲ್ಲಿ ಕೊಳಗಲ್ಲಿನಲ್ಲಿ ಬ್ರಹ್ಮಚಾರಿ ಗದಾಧರನು ಕಾರ್ತಿಕೇಯ ವಿಗ್ರಹ ಮತ್ತು ಅದ ಪೀಠವನ್ನು ಚಿನ್ನದಲ್ಲಿ ಮಾಡಿಸಿದ ಹಾಗೂ ಕಾರ್ತಿಕೇಯ ಸೂರ್ಯ, ಬ್ರಹ್ಮ, ವಿಷ್ಣು, ಶಿವ, ಪಾರ್ವತಿ ಮತ್ತು ವಿನಾಯಕ ದೇವರುಗಳನ್ನು ಪ್ರತಿಷ್ಠಾಪಿಸಿ ಕೆರೆ, ಬಾವಿ ಸತ್ರಗಳನ್ನು ಕಟ್ಟಿಸಿದ. ಇವನು ಕಟ್ಟಿಸಿದ ಭಾವಿ ಇನ್ನೂ ಇದೆ ಈತನು ಕಮ್ಮಾರ ಕುಲದೇವನೆಂದೂ ಗೌಡದೇದ 'ವರೇಂದ್ರಿ' ಪ್ರಾಂತದ 'ತಡಾ' ಎಂಬ ಗ್ರಾಮದವನೂ ಶಾಂಡಿಲ್ಯ ಗೋತ್ರದವನೂ ಎಂದು ಶಾಸನ ಸಂ. (೫೪) ತಿಳಿಸುತ್ತದೆ.

ಕುಡಿತಿನಿ ಕ್ಷೇತ್ರ : ಬಳ್ಳಾರಿ ತಾಲ್ಲೂಕು

ಇಲ್ಲಿನ ಕುಮಾರಸ್ವಾಮಿ ಗುಡಿಯಲ್ಲಿ ಶಿವಲಿಂಗವಿದೆ. ಇದೊಂದು ೯ ಅಂಕಣದ ದೇವಾಲಯವಾಗಿದ್ದು, ಗರ್ಭಗೃಹ ಮತ್ತು ನವರಂಗಗಳಿವೆ. ಇದನ್ನು ಸುಮಾರು ೧೦೦ ವರ್ಷಗಳ ಹಿಂದೆ ಜೀರ್ಣೋದ್ಧಾರ ಮಾಡಿದ್ದಾರೆ. ಅನೇಕ ಶಾಸನಗಳನ್ನು ದೇವಸ್ಥಾನದ ಮೆಟ್ಟಿಲಿಗೆ ಹಾಕಿದ್ದಾರೆ. ಪೂರ್ವ ಉತ್ತರ ಮತ್ತು ದಕ್ಷಿಣ ಗೋಡೆಗಳು ಹಾಗೂ ಕೆಲವು ಅಂಕಣ ದೇವಾಲಯವೂ ಬಿದ್ದುಹೋಗಿದೆ. ಇದರ ಸಮೀಪದಲ್ಲಿ ಶಾಸನೋಕ್ತ ಸಂಗನಭಾವಿ ಹಾಗೂ ಸ್ವಲ್ಪ ದೂರದಲ್ಲಿ ಜಕ್ಕಿನ ಭಾವಿಗಳಿದ್ದು, ಇವು ಕಲ್ಯಾಣ ಚಾಳುಕ್ಯರ ಕಾಲದವುಗಳಾಗಿವೆ. ಒಟ್ಟು ೧೪ ಶಾಸನಗಳು ಕಾರ್ತಿಕೇಯ ದೇವರ ಹಾಗೂ ಅದರ ತಪೋನಾಧಿಪತಿಗಳ ಮತ್ತು ಇದಕ್ಕೆ ದಾನ ನೀಡಿದ ವಿವರಗಳನ್ನು ನೀಡುತ್ತವೆ.

ಕುಡಿತಿನಿಯಲ್ಲಿ ದೊರೆತ ಅರ್ಧಕ್ಕಿಂತ ಹೆಚ್ಚು ಶಾಸನಗಳು ಕಾರ್ತಿಕ ದೇವರಿಗೆ ನೀಡಿದ ದಾನ, ಈ ಕ್ಷೇತ್ರದ ತಪೋವನಾಧಿಪತಿಗಳ ವಿವರ ನೀಡುತ್ತದೆ. ೩೫ನೇ ಶಾಸನದಲ್ಲಿ ಉಲ್ಲೇಖಿತವಾದ ಪಂಚಮಠಗಳಾವುವೆಂಬುದು ಸ್ಪಷ್ಟವಾಗಿಲ್ಲ. ಕಾರ್ತಿಕಾರಾಧನೆಯ ಈ ಊರಿನಲ್ಲಿ ಬೇರೆಲ್ಲಾ ಸ್ಥಳಗಳಿಗಿಂತ ಬಹಳ ಪ್ರಸಿದ್ಧವಾಗಿತ್ತು. ಕಾರ್ತಿಕ ತಪೋವನಾಧಿಪತಿಗಳು ಸ್ಥಳೀಯ ಆಡಳಿತ ನಡೆಸುತ್ತಿದ್ದುದು ಗಮನಾರ್ಹ.

ಮುತ್ತಗಿ ಕ್ಷೇತ್ರ–ಹರಪನಹಳ್ಳಿ ತಾಲ್ಲೂಕು

ಕುಮಾರಸ್ವಾಮಿ ಪೀಠದಲ್ಲಿನ ಶಾಸನ ಇದರ ಕಾಲ ನಿರ್ದೇಶನವಿಲ್ಲ. ಹೊಯ್ಸಳರ ಕಾಲಕ್ಕೆ ಸರಿಹೊಂದುತ್ತದೆ. ಈ ದೇವಸ್ಥಾನವು ಸಂಪೂರ್ಣ ಹಾಳಾಗಿದೆ. ಶಾಸನದ ವಿವರ ಮುತ್ತಿಗೆಯ ಗೌಡ ಯೆರಪಗೌಡನು ತನ್ನ ವಂಶಪರಂಪರೆಯಾಗಲೆಂದು ಕುಮಾರಸ್ವಾಮಿಯ ಪ್ರತಿಷ್ಠೆ ಮಾಡಿದ. ಸ್ವಾಮಿ ಕಾರ್ತಿಕ ದೇವರು ಮುತ್ತಿಗೆ ಎಲ್ಲೋಜನ ಮಕ್ಕಳು ಮಲ್ಲೋಜನ ಮಕ್ಕಳು ಪಾಚೋಜನ ಮಕ್ಕಳು ದೇಮೋಜ.

ದೇವರ ಜಿಲ್ಲೆಯಲ್ಲಿ ಕಾರ್ತಿಕಕಾರಾಧನೆಯ ಬಾದಾಮಿ ಚಾಲುಕ್ಯರಿಂದಾರಂಭಗೊಂಡು ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಅತ್ಯಂತ ಪ್ರಾಮುಖ್ಯತೆಗೇರಿ ಹೊಯ್ಸಳರ ಕಾಲದ ನಂತರ ವಿಜಯನಗರ ಹಾಗೂ ತದನಂತರದ ಕಾಲದಲ್ಲಿ ಇಳಿಮುಖವಾಗಿದ್ದುದು ಕಂಡುಬರುತ್ತದೆ. ಸೊಂಡೂರು ಕುಮಾರಸ್ವಾಮಿ ಹಾಗೂ ನವಿಲು ಸ್ವಾಮಿಗಳನ್ನುಳಿದ ಎಲ್ಲಾ ಕಾರ್ತಿಕ ಕ್ಷೇತ್ರಗಳಲ್ಲಿರುವ ದೇವಸ್ಥಾನಗಳು ನಾಶವಾಗಿವೆ. ಕೆಲವು ಶಿವಾಲಯಗಳಾಗಿವೆ.

೮೨

ಧಾರವಾಡ ತಾಲ್ಲೂಕಿನ ಶಾಸನೋಕ್ತ ಸ್ಥಳನಾಮಗಳು

ವಿರೂಪಾಕ್ಷಗೌಡ ಪಾಟೀಲ*

ಧಾರವಾಡ ತಾಲ್ಲೂಕು ಮಲೆನಾಡು, ಅರೆಮಲೆನಾಡು (ಗಡಿನಾಡು) ಮತ್ತು ಬಯಲುನಾಡು ಭೂ ಪ್ರದೇಶವನ್ನು ಹೊಂದಿದ ಸ್ಥಳೀಯ ಶಾಸನಗಳ ಆಧಾರದ ನೆಲೆಗಟ್ಟಿನ ಮೇಲೆ 'ಧಾರವಾಡ ತಾಲೂಕಿನ ಸ್ಥಳನಾಮಗಳ ಅಧ್ಯಯನ' ಮಾಡಲಾಗಿದೆ. ಸಾಮಾನ್ಯವಾಗಿ ಊರ ಹೆಸರುಗಳಿಗೆ ಮೂರು ಬಗೆಯ ನಿಷ್ಪತ್ತಿಗಳಿರುವುದು ಕಂಡುಬರುತ್ತದೆ. ೧) ಪಾಮರ ನಿಷ್ಪತ್ತಿ ೨) ಪಂಡಿತ ನಿಷ್ಪತ್ತಿ ೩) ನಿಜ ನಿಷ್ಪತ್ತಿ. ಉದಾಹರಣೆಗೆ ಧಾರವಾಡ ತಾಲೂಕಿನ ಅಮ್ಮಿನಭಾವಿ ಕುರಿತು 'ಅಮೀನ್' ಹೆಸರಿನ ಮುಸಲ್ಮಾನನೊಬ್ಬ ಬಾವಿ ಕಟ್ಟಿಸಿದ ಕಾರಣ 'ಅಮ್ಮಿನ್‌ಬಾವಿ' ಹೆಸರು ಬಂದಿತೆನ್ನುತ್ತಾರೆ. ಇನ್ನು ಕೆಲವರು ಅಮ್ಮನವರ ಹೆಸರಿನ ಜೈನ ಪದ್ಮಾವತಿ ಯಕ್ಷಿ ಹೆಸರಿನಿಂದಾಗಿ ಅಮ್ಮನವರಬಾವಿ>ಅಮ್ಮಿನಬಾವಿ ಆಗಿದೆಂದು ಹೇಳಲಾಗುತ್ತದೆ. ಇದು ಮುಸ್ಲಿಂ ಮತ್ತು ಜೈನ ಇವೆರಡು ಜಾತಿಯವರು ಆ ಊರಿನ ಮೇಲೆ ತಮ್ಮ ತಮ್ಮ ಹಕ್ಕು ಸಾಧಿಸಲು ಪ್ರಯತ್ನಿಸಿದ ಬಗೆಯನ್ನು ತಿಳಿಸುತ್ತದೆ. ಮೂಲತಃ ಇವೆರಡು ಪಾಮರ ನಿಷ್ಪತ್ತಿಗಳಾದರೂ 'ಅಮೀನ್' ಎಂಬ ಮುಸ್ಲಿಂರದು ಪಾಮರ ನಿಷ್ಪತ್ತಿ ಎಂದೂ, 'ಅಮ್ಮನವರದು' ಎಂಬ ಜೈನರ ಹೇಳಿಕೆಯು ಪಂಡಿತ ನಿಷ್ಪತ್ತಿ ಎನಿಸುತ್ತದೆ. ಇವೆರಡಕ್ಕಿಂತಲೂ ನಿಜ ನಿಷ್ಪತ್ತಿ ಬೇರೆನೇ ಆಗಿರುತ್ತದೆ. ಅಮ್ಮಯ್ಯನೆಂಬುವವನು ಭಾವಿಯನ್ನು ಕಟ್ಟಿಸಿದ್ದರ ನಿಮಿತ್ತ 'ಅಮಿನಭಾವಿ' ಹೆಸರು ಬಂದಿದೆಂದು ತಿಳಿದುಬರುತ್ತದೆ.[೧]

ಆದ್ದರಿಂದ ಶಾಸನದಲ್ಲಿ ಅಮ್ಮಯನಬಾವಿ[೨], ಅಂಮೆನ ಬಾವಿ[೩] ಎಂಬ ರೂಪಗಳು ದೊರೆಯುತ್ತವೆ. ಕಾಲಗರ್ಭದಲ್ಲಿ ಅನೇಕ ರೀತಿಯ ಬದಲಾವಣೆಗಳನ್ನು ಹೊಂದುತ್ತಾ ಸವಕಳಿರೂಪದಲ್ಲಿ ನಮ್ಮ ಮುಂದೆ ಚಲಾವಣೆಯ ರೂಪದಲ್ಲಿರುವ ಸ್ಥಳನಾಮಗಳನ್ನು ಶಾಸನದ ಹಿನ್ನೆಲೆಯಲ್ಲಿ ಗಮನಿಸಿ ಅಲ್ಲಿಯ ಮೂಲ ರೂಪವನ್ನು ಗುರುತಿಸಿ ಅದರಿಂದ ಅಲ್ಲಿಯು ಸಾಂಸ್ಕೃತಿಕ ಮತ್ತು ಭೌಗೋಳಿಕ ಸಂಗತಿಗಳನ್ನು ಅರಿಯಬಹುದು. ಈ ನಿಟ್ಟಿನಲ್ಲಿ ಧಾರವಾಡ ತಾಲೂಕಿನ ಶಾಸನಗಳಲ್ಲಿ ದಾಖಲೆಯಾದ ಸ್ಥಳನಾಮಗಳನ್ನು ನಿಸರ್ಗವಾಚಿ ಮತ್ತು ಸಾಂಸ್ಕೃತಿಕವಾಚಿ ಸ್ಥಳನಾಮಗಳೆಂದು ವಿಂಗಡಿಸಿಕೊಂಡು ವಿವೇಚಿಸಲಾಗಿದೆ.

೧. ನಿಸರ್ಗವಾಚಿ ಸ್ಥಳನಾಮಗಳು :

ಮಾನವ ನಿಸರ್ಗದಲ್ಲಿ ಸಹಜವಾಗಿ ಬದುಕುತ್ತಿರುವಾಗ ಅಲ್ಲಿಯ ನೈಸರ್ಗಿಕ ಸ್ಥಿತಿಯನ್ನೇ ಹೆಸರಿಸಿಕೊಂಡು ತನ್ನ ವಸತಿಸ್ಥಳಗಳಿಗೆ ಹೆಸರಿಟ್ಟುಕರೆದ. ಇದು ವಸತಿ ಸ್ಥಳಗಳಿಗೆ ಹೆಸರಿಡುವ ಮೊದಲ ಹಂತ. ಆಗ ನೈಸರ್ಗಿಕ ಅನ್ವರ್ಥಕ ನಾಮಗಳ ಬಳಕೆ ಸಹಜವಾಗಿತ್ತು. ಈ ನಿಟ್ಟಿನಲ್ಲಿ ಧಾರವಾಡ ತಾಲೂಕಿನ ಶಾಸನೋಕ್ತ ನಿಸರ್ಗವಾಚಿ ಸ್ಥಳನಾಮಗಳು ಇಂತಿವೆ.

'ನರೇಂದ್ರ'ದ ಮೂಲ ಹೆಸರು ಕುಂದೂರು'[೪]. ಕುಂದ+ಊರು=ಕುಂದೂರು ಅಂದರೆ ಬೆಟ್ಟದ ಮೇಲಿರುವ ಊರು. ಅದು ಪಲಸಿಗೆ ೧೨,೦೦೦ ನಾಡಿನ ೫೦೦ರ ವಿಷಯವಾಗಿತ್ತು (೫೦೦ ಇದೊಂದು ಆಡಳಿತ ಕೇಂದ್ರ). ೧೨ ಶತಮಾನದ ನಂತರದಲ್ಲಿ ಕುಂದೂರು ನರೇಂದ್ರವಾಗಿ ಪರಿವರ್ತನೆಗೊಂಡಿತು. ಪ್ರಾಯಶಃ ಆಡಳಿತದವರು, ಅರಸ ಸಂಬಂಧಿಗಳು ಅಲ್ಲಿ ವಾಸವಾಗಿರುವುದರಿಂದ ಆಡಳಿತಗಾರರು ಮತ್ತು ಅರಸರು ದೇವತೆಗಳೆಂಬ ಮಧ್ಯಯುಗದ ಇತಿಹಾಸ ಕಲ್ಪನೆಯಂತೆ ನರೇಂದ್ರ ಎಂಬ ಹೆಸರು ಬಂದಿದೆ. 'ಮುಗದ' ಗ್ರಾಮನಾಮದ ಮೂಲರೂಪ 'ಮುಗುಂದ'[೫]. ಮೂರು+ಗುಂದ = ಮೂರುಗುಂದ> ಮುಗುಂದ> ಮುಗದ ಸೌಲಭ್ಯಾಕಾಂಕ್ಷೆಯಿಂದ ಬಿಂದು ಲೋಪವಾಗಿದೆ. ಮುಗುದ ಮೂರು ಬೆಟ್ಟಗಳ ಮೇಲಿದ್ದ ಊರೆಂಬುದನ್ನು ಅದು ಸಾಬಿತುಪಡಿಸುತ್ತದೆ. 'ನಿಗದಿ' ಗ್ರಾಮದ ಮೂಲರೂಪ 'ನಿಗುಂದೆ'[೬] ನೀಳ+ಗುಂದೆ = ನೀಳ್‌ಗುಂದೆ> ನೀಗುಂದೆ> ನಿಗುಂದೆ> ನಿಗಂದೆ> ನಿಗದೆ> ನಿಗದಿ ಆಗಿದೆ. ಇಲ್ಲಿಯೂ ಸೌಲಭ್ಯಾಕಾಂಕ್ಷೆಯಿಂದ ಬಿಂದು ಲೋಪವಾಗಿದೆ. ಇದು ನೀಳ್ ಅಂದರೆ ನೀಡಿದಾದ ಬೆಟ್ಟವನ್ನು ಹೊಂದಿತ್ತೆಂದು ಹೇಳುತ್ತದೆ. ಮನಗುಂಡಿ ಗ್ರಾಮನಾಮದ ಮೂಲರೂಪ ಮಣಿಗುಂದ.[೭] ಮಣಿ+ಕುಂದ= ಮಣಿಕುಂದ> ಮಣಿಗುಂದ> ಮನಿಗುಂಡ

* ಕನ್ನಡ ಪ್ರಾಧ್ಯಾಪಕರು, ಅನುಗ್ರಹ, ನವೋದಯ ನಗರ, ಧಾರವಾಡ-೫೮೦೦೦೩.

> ಮನಿಗುಂಡಿ >ಮನಗುಂಡಿ ಆಗಿದೆ. 'ಮಣಿ' ಖನಿಜ ಲವಣಾಂಶಗಳನ್ನು ಉಳ್ಳ ಬೆಟ್ಟವನ್ನು ನೆನಪಿಸುತ್ತದೆ. ಅಥವಾ ಅದು ಮುತ್ತು, ರತ್ನ, ಮಣಿ–ಮಾಣಿಕ್ಯಗಳ ವ್ಯಾಪಾರದ ಕೇಂದ್ರ ನೆಲೆಯಾಗಿತ್ತೆಂದು ಅರ್ಥೈಸಲಿಕ್ಕೆ ಸಾಧ್ಯವಿದೆ.

'ಗರಗ' ಗ್ರಾಮದ ಮೂಲ ಹೆಸರು 'ಬೆಳೊಟ್ಟಿಗೆ'[೮], ಅದು ಬೆಳ್+ಒಟ್ಟೆ+ಕೆಯ್= ಬೆಳೊಟ್ಟಿಕೆಯ್> ಬೆಳೊಟ್ಟಿಗೆ> ಬೆಳ್ಳಿಟ್ಟಿಗೆ ಎಂದಾಗಿತ್ತು. ಒಟ್ಟೆ ಅಂದರೆ ಕಾಡತುತ್ತಿ ಗಿಡ ಎಂಬ ಸಸ್ಯಮೂಲದ ಹೆಸರಾಗಿದೆ. ಅದು ಬಿಳಿ ಕಾಡತುತ್ತಿ ಆಗಿರುವುದರಿಂದ ಬೆಳೊಟ್ಟಿಗೆ ಎಂಬ ಹೆಸರನ್ನು ಹೊಂದಿದೆ. ಅದು ನಂತರದಲ್ಲಿ ಗರಗ ಎಂಬ ಹೆಸರನ್ನು ಪಡೆದುಕೊಂಡಿದೆ. 'ಬಾವಿಹಾಳ' ಮೂಲತಃ ಹಲ್ಗುಂಡಿ.[೯] ಹುಲ್ಲು+ಗುಂಡಿ = ಹಲ್ಗುಂಡಿ. ನಂತರದಲ್ಲಿ ಬಾವಿಹಾಳ (ಬಾವಿ+ಪಾಳ್ಯ) ಎಂಬ ಪರಿವರ್ತನೆ ನಾಮವನ್ನು ಹೊಂದಿದೆ. ನುಗ್ಗಿಯಹಳ್ಳಿ[೧೦] ನುಗ್ಗಿ ಸಸ್ಯವನ್ನು ನೆನಪಿಸುತ್ತದೆ. ನುಗ್ಗಿಯ+ಹಳ್ಳಿ= ನುಗ್ಗಿಹಳ್ಳಿ ಈ ಗ್ರಾಮ ಕೆರೆಯನ್ನು ಹೊಂದಿದಾಗ ಉತ್ತರ ಪದ ಹಳ್ಳಿಯಿಂದ 'ಕೆರೆ' ಪದಕ್ಕೆ ಬದಲಾಗಿ ನುಗ್ಗಿಕೆರೆ[೧೧] ಎಂಬ ನಾಮವನ್ನು ಹೊಂದಿದೆ. ಮುಗಳಿ ನಾಮವು ಒಂದು ಜಾತಿಯ ಮುಳ್ಳು ಮರವನ್ನು ಸೂಚಿಸುತ್ತದೆ. ಇಂದಿನ ದೇವರ ಹುಬ್ಬಳ್ಳಿ ಮೂಲತಃ ಹುಪ್ಪವಳ್ಳಿ.[೧೨] ಅದು ಪುಷ್ಪಪಳ್ಳಿ> ಪುಪ್ಪವಳ್ಳಿ> ಹುಪ್ಪವಳ್ಳಿ ಆಗುವ ಸಾಧ್ಯತೆ ಇದೆ. ನಂತರದಲ್ಲಿ ಹುಬ್ಬವಳ್ಳಿ> ಹುಬ್ಬಳ್ಳಿ ಆಗಿದೆ. ಸಮೀಪದಲ್ಲಿ ಮೊತ್ತೊಂದು ಹುಬ್ಬಳ್ಳಿ ಇದ್ದುದರಿಂದ ದೇವರ ಎಂಬ ವಿಶೇಷಣವನ್ನು ಹೊಂದಿ ದೇವರಹುಬ್ಬಳ್ಳಿ ಆಯಿತು. 'ನವಲೂರು' ಮೂಲತಃ ನವಿಲೂರು.[೧೩] ನವಿಲುಗಳನ್ನು ಹೊಂದಿರುವ ಊರು. ನವಿಲೂರು> ನವಲೂರು ಆಗಿದೆ. ನೀರುಸಾಗರ[೧೪] (ನೀರು+ಸಾಗರ) ಬೃಹತ್ ನೀರನ್ನು ಹೊಂದಿರುವ ಸ್ಥಳವಾಗಿದೆ. ಹಳ್ಳವನ್ನು ಹೊಂದಿರು ಊರಿಗೆ ಹಳ್ಳಂಗೆರೆ[೧೫] >ಹಳ್ಳಿಗೇರಿ ಎಂದು ಕರೆಯಲಾಗಿದೆ. 'ಪೆಗ್ಗರೆ'[೧೬]ಯು> ಹೆರ್ಗ್ಗರೆ> ಹಿರಿಕೆರೆ ಆಗಿದೆ.

೨. ಸಾಂಸ್ಕೃತಿಕವಾಚಿ ಸ್ಥಳನಾಮಗಳು :

ವಸತಿ ಸ್ಥಳನಾಮಗಳು ನಮ್ಮ ಪೂರ್ವಿಕರ ಆಚಾರ–ವಿಚಾರ ಸಂಪ್ರದಾಯ, ನಂಬಿಕೆ, ವೃತ್ತಿ ಇತ್ಯಾದಿಯಾಗಿ ಅವರ ಜೀವನ ವಿಧಾನವನ್ನು ತಿಳಿಸುತ್ತವೆ. ಈ ನಿಟ್ಟಿನಲ್ಲಿ ಧಾರವಾಡ ತಾಲೂಕಿನ ಶಾಸನೋಕ್ತ ಸ್ಥಳನಾಮಗಳಲ್ಲಿ ವ್ಯಕ್ತಿವಾಚಿ, ಜನಾಂಗವಾಚಿ, ಐತಿಹಾಸಿಕವಾಚಿ ದೈವವಾಚಿ, ಮುಂತಾದ ಬಗೆಯ ಸ್ಥಳನಾಮಗಳಿರುವುದನ್ನು ಗುರುತಿಸಬಹುದಾಗಿದೆ.

'ಅಮ್ಮಿನಬಾವಿ' ಗ್ರಾಮದ ಮೂಲನಾಮ 'ಅಮ್ಮಿನ ಬಾವಿ'[೧೭] ಅದರ ನಿಷ್ಪತ್ತಿ ಅಮ್ಮಯ್ಯನಬಾವಿ (ಅಮ್ಮಯ್ಯನ+ಬಾವಿ)> ಅಮ್ಮಯನಬಾವಿ> ಅಂಮ್ಮೆನಬಾವಿ> ಅಮ್ಮಿನಬಾವಿ ಎಂದಾಗಿದೆ ಅಂದರೆ ಅಮ್ಮಯ್ಯ ಕಟ್ಟಿಸಿದ ಬಾವಿ ಅಮ್ಮಿನಬಾವಿ ಎಂದಾಗಿದೆ. ಶಿಂಗನಳ್ಳಿ 'ಸವಣನಪಳ್ಳಿ'[೧೮] ಆಗಿತ್ತು. ಸವಣನ+ಪಳ್ಳಿ= ಸವಣನಪಳ್ಳಿ> ಸವಣನಳ್ಳಿ > ಸಂಗವಳ್ಳಿ > ಶಿಂಗನಳ್ಳಿ. ಇದು ಇಂದು ಮೌಖಿಕರೂಪದಲ್ಲಿ ಶಿಗನಹಳ್ಳಿ ಆಗಿದೆ. ಇದು ಜೈನಯತಿಯಾದ ಸವಣನನ್ನು ನೆನಪಿಸುತ್ತದೆ. ಸಿದ್ಧಾಪುರದ ಮೂಲ ಹೆಸರು 'ಪೊಸವೊಳಲ',[೧೯] ಪೊಸ+ಪೊಳಲ್= ಪೊಸವೊಳಲ್ ಪ>ಹ ಕಾರವಾದ ಕಾಲಘಟ್ಟದ ಊರು. ಆಗ ಹೊಸ ಊರಾಗಿದ್ದ ಇದು ನಂತರದಲ್ಲಿ 'ಸಿದ್ಧಾಪುರ'ವಾಗಿ ಬದಲಾವಣೆಗೊಂಡಿದೆ. ಅದು ಸಿದ್ದಪ್ಪ+ಪುರ= ಸಿದ್ದಪ್ಪಪುರ> ಸಿದ್ದಾಪುರವೆಂದು ವ್ಯಕ್ತಿನಾಮವಾಗಿ ಬದಲಾವಣೆಗೊಂಡಿರಬಹುದು. ತೇಗೂರು ಮೂಲತಃ 'ಕೊಳನೂರು'[೨೦] ಎಂಬ ಹೆಸರನ್ನು ಹೊಂದಿತ್ತು. ಕೊಳನ+ಊರು = ಕೊಳನೂರು ಆಗಿದೆ. ಇದು ಕೊಳನ ಎಂಬ ವ್ಯಕ್ತಿನಾಮದ ಹಿನ್ನೆಲೆಯಲ್ಲಿ ಬಂದಿದೆ. ನಂತರದಲ್ಲಿ ತೇಗೂರು ಎಂಬ ಪರಿವರ್ತನ ನಾಮವನ್ನು ಹೊಂದಿದೆ. ತೇಗ+ಊರು= ತೇಗೂರು ತೇಗಿನ ಮರಗಳು ಯಥೇಚ್ಚವಾಗಿ ಬೆಳೆದಿದ್ದರಿಂದ ಈ ಹೆಸರು ಬಂದಿದೆ.

'ಧಾರವಾಡ'ದ ಮೂಲ ರೂಪ 'ದಾರವಾಡ'.[೨೧] ಬಹಳಷ್ಟು ಚರ್ಚಿತವಾಗಿರುವ ಧಾರವಾಡ ಗ್ರಾಮದ ನಿಷ್ಪತ್ತಿಯು ಸಹ ವ್ಯಕ್ತಿನಾಮದ್ದಾಗಿರುವ ಸಾಧ್ಯತೆ ಹೆಚ್ಚಿದೆ. ಧಾರವಾಡ ಜಿಲ್ಲಾ ಗೆಝೆಟಿಯರದಲ್ಲಿ ವಿಜಯನಗರದ ರಾಮರಾಜನ ಕಾಲದ ಧಾರರಾವ್ ಎಂಬುವನು ೧೪೦೩ ರಲ್ಲಿ ಕೋಟೆ ಕಟ್ಟಿಸಿದ್ದರ ನಿಮಿತ್ತ ಈ ಊರಿಗೆ ಧಾರವಾಡ ಎಂಬ ಹೆಸರು ಬಂದಿತೆಂದು ತಿಳಿಸುತ್ತದೆ. ಆದರೆ ಕ್ರಿ.ಶ. ೧೧೧೭ ಧಾರವಾಡ ಶಾಸನದಲ್ಲಿಯೇ 'ದಾರವಾಡ' ಎಂಬ ಹೆಸರು ಬಳಕೆಗೊಂಡಿದೆ. ಇದಕ್ಕೆ ಸಹಾಯಕವಾಗಿ ಕ್ರಿ.ಶ. ೧೧೨೫ ನರೇಂದ್ರ ಮತ್ತು ೧೧೪೮ ಧಾರವಾಡ ಶಾಸನಗಳಲ್ಲೂ ಕ್ರಮವಾಗಿ ದಾರವಾಡ ಮತ್ತು ಧಾರವಾಡ ಬಳಕೆಗೊಂಡಿವೆ. ಅಲ್ಲದೆ ೧೪೦೩ರಲ್ಲಿ ರಾಮರಾಯ ವಿಜಯನಗರವನ್ನು ಆಳುತ್ತಿರಲಿಲ್ಲ ಇವೆಲ್ಲ ಕಾರಣಗಳಿಂದ ಈ ವಾದವನ್ನು ಒಪ್ಪಲಿಕ್ಕಾಗದು.

ಡಾ. ಪಿ.ಬಿ. ದೇಸಾಯಿ ಧಾರವಾಡ ಪದವು ಸಂಸ್ಕೃತದ 'ದ್ವಾರ'ದಿಂದ 'ದಾರ' ಮತ್ತು 'ವಾಟ' ದಿಂದ 'ವಾಡ' ಬಂದಿದೆ ಎನ್ನುತ್ತಾರೆ. ಡಾ. ಎಂ.ಎಂ. ಕಲಬುರ್ಗಿ ಅವರು ವಾದವನ್ನು ಒಪ್ಪುವುದಿಲ್ಲ. ಸಾಮಾನ್ಯವಾಗಿ ಊರ ಹೆಸರನ್ನು ಇಷ್ಟರಮಟ್ಟಿಗೆ ಸಂಸ್ಕೃತ ಭೂಯಿಷ್ಠವಾಗಿ ಇಡುವುದು ಅಸಂಭವ. ಅಲ್ಲದೆ ಅಲ್ಲಿ ಸುಂಕವನ್ನು ಆಕರಿಸಲಾಗುತ್ತಿತ್ತು ಎಂಬ ಕಾರಣಕ್ಕೆ ಇದೊಂದೇ ಪ್ರದೇಶದ ಮೂಲಕ ಎರಡು ವಿಶಾಲ ಪ್ರದೇಶಗಳ ಸುಂಕವನ್ನು ಆಕರಿಸಲಾಗುತ್ತಿತ್ತೆಂದಲ್ಲ. ಸುಂಕ ಸಂಗ್ರಹ ಸಾಮಾನ್ಯ

ವಾಗಿ ಅಂದು ಎಲ್ಲಾ ಗ್ರಾಮಗಳಲ್ಲಿ ಕಂಡುಬರುವಂತಹದ್ದಾಗಿತ್ತು ಎಂಬ ಡಾ. ಕಲಬುರ್ಗಿ ಅವರ ವಿಚಾರಗಳನ್ನು ಒಪ್ಪುವಂತಹದ್ದೆ.

ಡಾ. ಎಂ.ಎಂ. ಕಲಬುರ್ಗಿ ಅವರು ಧಾರವಾಡ ಪದದ ಪೂರ್ವಪದದ ಅಂತ್ಯ 'ರ' ಕಾರವುಳ್ಳ ಈ ಪದವು ಜನಾಂಗಿ ಸೂಚಿಯಾಗಿದೆ ಎಂದು ತಿಳಿಸುತ್ತಾ ದಾಯರ, ದಾರರ, ದಾವರ ಇವುಗಳಲ್ಲಿ ಒಂದರ ಸವೆದ ರೂಪ 'ದಾರ' ಎಂದು ತಿಳಿಸುತ್ತಾರೆ. ಹೀಗಾಗಿ ದಾಯರು, ದಾರರು, ದಾವರು ಇವುಗಳಲ್ಲಿ ಒಂದು ಜನಾಂಗದ ನೆಲೆ ಆಗಿರಬಹುದೆನ್ನುತ್ತಾರೆ. ಇನ್ನು ಉತ್ತರ ಪದ 'ವಾಡ' ದ್ರಾವಿಡದ 'ಬಾಡ'ದಿಂದ ಬಂದಿರುವ ಸಾಧ್ಯತೆಯನ್ನು ತಿಳಿಸುತ್ತಾರೆ.

ಡಾ. ಎಂ.ಎಂ. ಕಲಬುರ್ಗಿ ಅವರು ತಿಳಿಸುವ ದಾಯರ, ದಾರರ, ದಾವರ ಎನ್ನುವ ಜನಾಂಗಗಳಿದ್ದವು ಎನ್ನುವದರ ಬಗ್ಗೆ ನಮಗೆ ಯಾವುದೇ ರೀತಿಯ ಕುರುಹುಗಳಿಲ್ಲ. ಹೀಗಾಗಿ ಧಾರವಾಡದ ಮೂಲ ತಿಳಿಸುವ ಅವರ ಜನಾಂಗ ನಿಷ್ಠೆ ಅಭಿಪ್ರಾಯ ಸರಿಯೆನಿಸುವುದಿಲ್ಲ. ಆದ್ದರಿಂದ ಧಾರವಾಡ ಗ್ರಾಮನಾಮದ ನಿಷ್ಪತ್ತಿಯನ್ನು ಜನಾಂಗವಾಚಿಗಿಂತ ವ್ಯಕ್ತಿವಾಚಿಯಲ್ಲಿ ಹುಡಕಲು ಆಧಾರ ಒಂದು ದೊರೆಯುತ್ತದೆ. 'ಸಾಮಾನ್ಯವಾಗಿ ಇಂದಿಗೂ ಜನಬಳಕೆಯಲ್ಲಿ ಮೇಲೆ, ಮ್ಯಾಲೆ ಎಂಬ ಪದಬಳಕೆಯುಂಟು. ಮೇಲೆ ಗ್ರಾಂಥಿಕವಾದರೆ, ಮ್ಯಾಲೆ ಮೌಖಿಕವಾದದು. ಅದರಂತೆ ದೇರಣ್ಣ> ದ್ಯಾವಣ್ಣ, ದೇಮಪ್ಪ> ದ್ಯಾಮಪ್ಪ ನಾಮಗಳ ಬಳಕೆಯುಂಟು, ಇಂಥ ಯಾವುದೋ ವ್ಯಕ್ತಿಯೋರ್ವನ ಹೆಸರೇ ಧಾರವಾಡ ಗ್ರಾಮಕ್ಕೆ ಆದಿಯಾಗಿರಬೇಕು. ಇದಕ್ಕೆ ಸಹಾಯಕವಾಗಿ ಸುಮಾರು ೯ನೇ ಶತಮಾನದ ಧಾರವಾಡದ ಒಂದು ವೀರಗಲ್ಲು ಶಾಸನದಲ್ಲಿ ದೇರಣ್ಣ ಎಂಬ ವ್ಯಕ್ತಿಯ ಉಲ್ಲೇಖ ಕಂಡುಬರುತ್ತದೆ. ಪ್ರಾಯಶಃ ಆತನೇ ವೀರಮರಣ ಹೊಂದಿದ ವ್ಯಕ್ತಿಯಾಗಿರಬೇಕು. ಶಾಸನ ಅಧಿಕ ತ್ರುಟಿತವಿದೆ. ಆ ದೇರಣ್ಣ ಹೆಸರು ಧಾರವಾಡದ ಮೂಲ ನಿಷ್ಪತ್ತಿಯಾಗಿರಬೇಕು. ಅಂದರೆ ಧಾರವಾಡ ಪದದ ನಿರ್ದಿಷ್ಟ ಪದವಾಗಿರಬೇಕು. ಇನ್ನು ವಾರ್ಗಿಕ ಡಾ. ಎಂ.ಎಂ. ಕಲಬುರ್ಗಿಯವರು ತಿಳಿಸುವಂತೆ ಬಾಡದಿಂದಲೇ ಬಂದಿರಬೇಕು. ದೇರಣ್ಣಬಾಡ> ದ್ಯಾರಣ್ಣಬಾಡ> ದಾರನಬಾಡ> ದಾರವಾಡ> ಧಾರವಾಡ ಆಗಿರುವ ಸಾಧ್ಯತೆ ಹೆಚ್ಚಾಗಿದೆ'.[೨೨] ಭಾಷಾ ಹಿನ್ನೆಲೆಯಲ್ಲಿ ಇದು ಸರಿಯಾದ ಕ್ರಮವಾಗಿದೆ. ಇನ್ನು ಧಾರವಾಡವನ್ನು ಸಂಸ್ಕೃತಿ ನೆಲೆಯಲ್ಲಿ ತುಂತುಪುರಿ, ಧಾರಾನಗರಿ ಎಂದು ಹೆಸರಿಸಿದ್ದುಂಟು. ಮುಸ್ಲಿಂ ಆಡಳಿತ ಕಾಲದಲ್ಲಿ 'ನಸ್ರತಾಬಾದ್', ಬ್ರಿಟಿಷರ ಆಡಳಿತದಲ್ಲಿ 'ಧಾರವಾರ' ಎಂದು ಕರೆಸಿಕೊಂಡಿತ್ತು ಈಗ ಮತ್ತೆ ಧಾರವಾಡ ಆಗಿದೆ.

ಡಾ. ಎಂ.ಎಂ. ಕಲಬುರ್ಗಿ ಅವರು ತಿಳಿಸುವಂತೆ ಗ್ರಾಮನಾಮದ ಪೂರ್ವಪದದ ಅಂತ್ಯದಲ್ಲಿ ಆ.ಈ.ಏಕ್ಕ ಇವು ಬಂದಿದ್ದರೆ ಅವು ಸ್ತ್ರೀವಾಚಿ ಸ್ಥಳನಾಮಗಳಾಗಿರುತ್ತವೆ. 'ಅಳ್ನಾವರ' ಮೂಲತಃ ಅಣಿಲಾಪುರ.[೨೩] ಅಣಿಲಾ+ಪುರ=ಅಣಿಲಾಪುರ> ಅಳಣಾಪೂರ> ಅಳ್ನಾವಾರ ಆಗಿದೆ. ಇಲ್ಲಿ ಪೂರ್ವ ಪದದ ಅಂತ್ಯಾಕ್ಷರ 'ಲಾ' ಇರುವುದರಿಂದ ಇದೊಂದು ಸ್ತ್ರೀವಾಚಿನಾಮವಾಗಿದೆ. 'ಕನಕೂರು' 'ಕನಕಾಪುರ'[೨೪]ವಾಗಿತ್ತು. ಕನಕಾ+ಪುರ= ಕನಕಾಪುರ > ಕನಕೂರ ಅಗಿದೆ. ಕನಕಾ ಸ್ತ್ರೀನಾಮವಾಗಿದ್ದು ಇದು ಊರಿನ ಗ್ರಾಮ ದೇವತೆ ಕನಕಮ್ಮ ಗ್ರಾಮದೇವತೆಯಿಂದ ಬಂದಿರುವಂತಹದ್ದಾಗಿರಬಹುದು. ಬೊಮ್ಮರಸಿಕೊಪ್ಪ 'ಬಮ್ಮರಸಿಕೊಪ್ಪ'[೨೫]ವಾಗಿತ್ತು. ಬಮ್ಮಅರಸಿ+ಕೊಪ್ಪ= ಬಮ್ಮರಸಿಕೊಪ್ಪ> ಬೊಮ್ಮರಸಿಕೊಪ್ಪ ಎಂದಾಗಿದೆ. ಇದು ಪಭುವರ್ಗದ ರಾಣಿಯನ್ನು ನೆನಪಿಸುವಂತಹದ್ದಾಗಿದೆ.

ಸತ್ತೂರು 'ಶ್ರೋತ್ರಿಯೂರು'[೨೬] ಆಗಿತ್ತೆಂದು ಶಾಸನ ತಿಳಿಸುತ್ತದೆ. ಶ್ರೋತ್ರಿಯ + ಊರು = ಶ್ರೋತ್ರಿಯೂರು > ಸೊತ್ತಿಯೂರು > ಸತ್ತಿವೂರು[೨೭] > ಸತ್ತೂರು ಆಗಿದೆ. ಪ್ರಾಯಶಃ ಬ್ರಾಹ್ಮಣರಿಗೆ ದಾನವಾಗಿ ಕೊಟ್ಟಾಗ ಈ ಹೆಸರಿನಿಂದ ಈ ಗ್ರಾಮವನ್ನು ಕರೆದಿರಲು ಸಾಕು. ಕನ್ನಡ ಮೂಲದ ಹೆಸರೊಂದು ಸಂಸ್ಕೃತ ರೂಪಕ್ಕೆ ತಿರುಗಿದ ಬಗೆ ಇದಾಗಿದ್ದರೂ ಇದರ ಮೂಲ ನಾಮ ತಿಳಿಯದು. ಹಂಗರಕಿ ಮೂಲರೂಪ 'ಹಗರಗೆ'[೨೮] ಎಂದು ಶಾಸನದಲ್ಲಿದ್ದರೂ ಪ್ರಾಯಶಃ ಅದರ ಮೂಲ ರೂಪ 'ಹಂಗರಗೆ' ಇದ್ದಿರಬಹುದಾಗಿದೆ. ಹಾಗಾಗಿ ಹಂಗರ+ಕೆಯ್= ಹಂಗರಕೆಯ್> ಹಂಗರಗೆ> ಹಗರಗೆ> ಹಂಗರಕಿ ಆಗಿದೆ. 'ಹಂಗರ' ಇದೊಂದು ಜನಾಂಗ ನಾಮವಾಗಿದೆ. ಅದರಂತೆ 'ಕುಂಬಾರಗೆರೆ' ಕುಂಬಾರ ಜನಾಂಗವನ್ನು ನೆನಪಿಸುತ್ತಿದೆ.

ಅರಸರು ಉದಾತ್ತ ಕಾರ್ಯಕ್ಕಾಗಿ ಯಾರಿಗೋ ಅನುಭೋಗಿಸಲು ಕೊಟ್ಟ ಊರು ಭೋಗೂರು[೨೯]> ಬೋಗೂರು ಆಗಿದೆ. ಮರೆವಾಡ ಗ್ರಾಮನಾಮ 'ಮರೆಯವಾಡ'[೩೦] ಆಗಿತ್ತು. ಮರೆಯ+ಬಾಡ= ಮರೆಯಬಾಡ> ಮರೆಯವಾಡ> ಮರೆವಾಡ ಆಗಿದೆ. ಈ ಹಳ್ಳಿ ಭೌಗೋಳಿಕವಾಗಿ ಮರೆಯಲ್ಲಿ (ಕಾಣದಹಾಗೆ) ಇರುವುದರಿಂದ ಆ ಹೆಸರು ಬಂದಿದೆ. 'ಬಾಡ' ವಾರ್ಗಿಕನಾಮವು ಗ್ರಾಮನಾಮವಾಗಿ ಬಳಕೆಗೊಂಡಿದೆ. ಹೆಬ್ಬಳ್ಳಿ ಮೂಲರೂಪ ಪೆರ್ಬೞ್ಳಿ[೩೧] ಪೆರ್+ಪಳ್ಳಿ= ಪೆರ್‌ಪಳ್ಳಿ> ಪೆರ್ಬಳ್ಳಿ> ಹೆಬ್ಬವಳ್ಳಿ> ಹೆಬ್ಬಳ್ಳಿ ಆಗಿದೆ. ಪೆರ್ ಅಂದರೆ ಹಿರಿಯ ಪ್ರಾಚೀನ ಕಾಲದಲ್ಲಿ ಇದು ದೊಡ್ಡಹಳ್ಳಿ ಆಗಿರಬಹುದಾಗಿದೆ.

‘ಕೌಲಗೇರಿ’[೩೨] ಗ್ರಾಮನಾಮವು ಕೌಲ>ಕವಲ+ಕೇರಿ= ಕೌವಲಗೇರಿ ಎಂದಾಗಿರ ಬಹುದು. ಇದು ‘ಕೌಲಗುಡ್ಡ, ಕೌಲಗಿ, ಕೌಲೂರುಗಳಂತೆ ಕೌಲಪಂಥದ ನೆಲೆಯಾಗಿರಬೇಕು (ಎಂ.ಎಂ. ಕಲಬುರ್ಗಿ, ಕನ್ನಡ ನಾಮ ವಿಜ್ಞಾನ-೮೬) ಅಥವಾ ಕವಲದಾರಿಯನ್ನು ನೆನಪಿಸುವ ನೆಲಗಟ್ಟಿನಲ್ಲಿ ಬಳಕೆಗೊಂಡ ಪದವಾಗಿರಬೇಕು.

ಧಾರವಾಡ ತಾಲೂಕಿನಲ್ಲಿರುವ ಅಮ್ಮಿನಬಾವಿ, ದೇವರಹುಬ್ಬಳ್ಳಿ, ನವಲೂರು, ಬಾಡ, ಕನಕೂರು, ಮನಗುಂಡಿ ಇವು ಪ್ರಾಚೀನ ಕಾಲದಲ್ಲಿ ಅಗ್ರಹಾರಗಳಾಗಿದ್ದವು. ಅದರಂತೆ ಕುಂದೂರ (ನರೇಂದ್ರ)-೫೦೦, ಮುಗದ-೩೦ ಇವು ಆಡಳಿತದ ಕೇಂದ್ರಗಳಾಗಿದ್ದವು. ಹೀಗೆ ಒಟ್ಟಾರೆ ಧಾರವಾಡ ತಾಲೂಕಿನ ಪೂರ್ವ ಇತಿಹಾಸವನ್ನು ತಿಳಿಯಲು ಅಲ್ಲಿಯ ಸ್ಥಳನಾಮಗಳು ಸಹಾಯಕವಾಗಿ ಬಂದಿರುವುದು ವಿಶೇಷ.

[ಈ ಲೇಖನದ ಲೇಖಕರು ಮತ್ತು ವಿಳಾಸ ಖಚಿತವಾಗಿ ತಿಳಿಯದು. ಲೇಕರು ತಮ್ಮ ಹೆಸರನ್ನು ಮತ್ತು ವಿಳಾಸವನ್ನು ನೀಡಿರುವುದೇ ಇಲ್ಲ. ಇ-ಮೇಲ್‌ನಲ್ಲಿ ವಿರೂಪಾಕ್ಷ ಎಂಬುವವರ ಕಡೆಯಿಂದ ಲೇಖನ ಬಂದಿರುತ್ತದೆ. ಆದ ಕಾರಣ ನಮ್ಮ ಗಮನಕ್ಕೆ ಬಂದ ಮಟ್ಟಿಗೂ ಸಸಂದೇಹವಾಗಿ ಲೇಖಕರ ಹೆಸರನ್ನು ಮತ್ತು ವಿಳಾಸವನ್ನು ಸೂಚಿಸಿದ್ದೇವೆ. -ಸಂ.]

ಆಧಾರಸೂಚಿ ಹಾಗೂ ಟಿಪ್ಪಣಿಗಳು

೧. ಡಾ.ಎಂ.ಎಂ. ಕಲಬುರ್ಗಿ, **ಕನ್ನಡ ನಾಮ ವಿಜ್ಞಾನ**, ಪುಟ ೫೪, ೫೫.
೨. ಡಾ. ಎಂ.ಎಂ. ಕಲಬುರ್ಗಿ, **ಧಾರವಾಡ ತಾಲ್ಲೂಕಿನ ಶಾಸನಗಳು**, ನಂ. ೨, ಅಮ್ಮಿನಬಾವಿ, ಕ್ರಿ.ಶ. ೧೦೭೧-೭೨.
೩. ಅದೇ, ನಂ. ೯, ಅಮ್ಮಿನಬಾವಿ, ಕ್ರಿ.ಶ. ೧೫೪೭.
೪. ಅದೇ, ನಂ. ೩೯ ನರೇಂದ್ರ, ಕ್ರಿ.ಶ. ೧೧೨೫.
೫. SII.XI-i-78, ಮುಗದ, ಕ್ರಿ.ಶ. ೧೦೪೫.
೬ ಡಾ. ಎಂ.ಎಂ. ಕಲಬುರ್ಗಿ, **ಧಾರವಾಡ ತಾಲ್ಲೂಕಿನ ಶಾಸನಗಳು**, ನಂ. ೪೪, ನಿಗದಿ, ಕ್ರಿ.ಶ. ೧೧೧೧.
೭. ಅದೇ, ನಂ. ೫೧, ಮನಗುಂಡಿ, ಕ್ರಿ.ಶ. ೧೨೦೩.
೮. ಅದೇ, ನಂ. ೨೦, ಗರಗ, ಕ್ರಿ.ಶ. ೧೨೮೭.
೯. SII.XV-9, ಭಾವಿಹಾಳ, ಕ್ರಿ.ಶ. ೧೧೨೫.
೧೦. ಡಾ. ಎಂ.ಎಂ. ಕಲಬುರ್ಗಿ, **ಧಾರವಾಡ ತಾಲ್ಲೂಕಿನ ಶಾಸನಗಳು**, ನಂ. ೫೧, ಮನಗುಂಡಿ, ಕ್ರಿ.ಶ. ೧೨೦೩.
೧೧. ಅದೇ, ನಂ. ೪೬, ನುಗ್ಗಿಕೇರಿ, ಸು, ೧೮ನೇ, ಶತಮಾನ.
೧೨. ಡಾ. ಎಂ.ಎಂ. ಕಲಬುರ್ಗಿ, **ಧಾರವಾಡ ತಾಲ್ಲೂಕಿನ ಶಾಸನಗಳು**, ನಂ. ೨೭, ದೇವರ ಹುಬ್ಬಳ್ಳಿ, ಕ್ರಿ.ಶ. ೧೨೦೬.
೧೩. ಡಾ.ಎಂ.ಎಂ. ಕಲಬುರ್ಗಿ, **ಧಾರವಾಡ ತಾಲ್ಲೂಕಿನ ಶಾಸನಗಳು**, ನಂ. ೨೯, ಧಾರವಾಡ, ಸುಮಾರು ೯ನೇ, ಶತಮಾನ.
೧೪. SII.XV-233, ಮನಗುಂಡಿ, ಕ್ರಿ.ಶ. ೧೨೦೩.
೧೫. ಡಾ. ಎಂ.ಎಂ. ಕಲಬುರ್ಗಿ, **ಧಾರವಾಡ ತಾಲ್ಲೂಕಿನ ಶಾಸನಗಳು**, ನಂ. ೫೩, ಮನಗುಂಡಿ, ಕ್ರಿ.ಶ. ೧೨೦೩.
೧೬. SII.XV-i-78, ಮುಗದ, ಕ್ರಿ.ಶ. ೧೦೪೫.
೧೭. SII.XI-ii-121, ಅಮ್ಮಿನಬಾವಿ, ಕ್ರಿ.ಶ. ೧೦೭೧-೭೨
೧೮. ಡಾ. ಎಂ.ಎಂ. ಕಲಬುರ್ಗಿ, **ಧಾರವಾಡ ತಾಲ್ಲೂಕಿನ ಶಾಸನಗಳು**, ನಂ. ೩೯ ನರೇಂದ್ರ, ಕ್ರಿ.ಶ. ೧೧೨೫.
೧೯. ಅದೇ, ನಂ. ೬೬, ಸಿದ್ದಾಪುರ, ಕ್ರಿ.ಶ. ೧೧೨೦.
೨೦. SII.XI-ii-128, ತೇಗೂರ, ಕ್ರಿ.ಶ. ೧೦೮೨.
೨೧. ಡಾ. ಎಂ.ಎಂ. ಕಲಬುರ್ಗಿ, **ಧಾರವಾಡ ತಾಲ್ಲೂಕಿನ ಶಾಸನಗಳು**, ನಂ. ೩೩, ಧಾರವಾಡ, ಕ್ರಿ.ಶ. ೧೧೧೭.
೨೨. ಡಾ. ವ್ಹಿ.ಎಲ್. ಪಾಟೀಲ, ದೇಶಿ ಅವಲೋಕನ, ಪುಟ ೭೭.
೨೩. ಡಾ. ಎಂ.ಎಂ. ಕಲಬುರ್ಗಿ, **ಧಾರವಾಡ ತಾಲ್ಲೂಕಿನ ಶಾಸನಗಳು**, ನಂ. ೧೧, ಅಳ್ನಾವರ, ಕ್ರಿ.ಶ. ೧೦೮೧.
೨೪. SII.XI-ii-154, ಕನಕೂರ, ಕ್ರಿ.ಶ. ೧೧೦೪.
೨೫. ಡಾ. ಎಂ.ಎಂ. ಕಲಬುರ್ಗಿ, **ಧಾರವಾಡ ತಾಲ್ಲೂಕಿನ ಶಾಸನಗಳು**, ನಂ. ೩೬, ಧಾರವಾಡ, ಕ್ರಿ.ಶ. ೧೪೪೮.
೨೬ ಡಾ. ಎಂ.ಎಂ. ಕಲಬುರ್ಗಿ, ನಾಮ ವಿಜ್ಞಾನ, ಪುಟ ೭೯.
೨೭. ಡಾ. ಎಂ.ಎಂ. ಕಲಬುರ್ಗಿ, **ಧಾರವಾಡ ತಾಲ್ಲೂಕಿನ ಶಾಸನಗಳು**, ನಂ. ೫೧, ಮನಗುಂಡಿ, ಕ್ರಿ.ಶ. ೧೨೦೩.
೨೮. SII.XV-230, ಬೋಕ್ಯಾಪುರ, ಕ್ರಿ.ಶ. ೧೧೬೩.
೨೯. ಡಾ. ಎಂ.ಎಂ. ಕಲಬುರ್ಗಿ, **ಧಾರವಾಡ ತಾಲ್ಲೂಕಿನ ಶಾಸನಗಳು**, ನಂ. ೫೦, ಮದನಭಾವಿ, ಕ್ರಿ.ಶ. ೧೧೨೭.
೩೦. ಅದೇ, ನಂ. ೩೮, ನರೇಂದ್ರ, ಕ್ರಿ.ಶ. ೧೧೨೩.
೩೧. ಅದೇ, ನಂ. ೩೮, ನರೇಂದ್ರ, ಕ್ರಿ.ಶ. ೧೧೨೩.
೩೨. ಡಾ. ಎಂ.ಎಂ. ಕಲಬುರ್ಗಿ, **ಧಾರವಾಡ ತಾಲ್ಲೂಕಿನ ಶಾಸನಗಳು**, ನಂ. ೩೯, ನರೇಂದ್ರ, ಕ್ರಿ.ಶ. ೧೧೨೫.

ಚನ್ನಪಟ್ಟಣ ತಾಲ್ಲೂಕಿನ ಐತಿಹಾಸಿಕ ಮಹತ್ವದ ನೆಲೆಗಳು

ಎ.ಎಸ್. ಮಹೇಂದ್ರಕುಮಾರ್ ಅಕ್ಕೂರು*

ಚನ್ನಪಟ್ಟಣ

ಚನ್ನಪಟ್ಟಣವೂ ಮೈಸೂರು-ಬೆಂಗಳೂರು ರಾಜ್ಯ ಹೆದ್ದಾರಿಯಲ್ಲಿ ಬರುವ ಪ್ರಮುಖ ಐತಿಹಾಸಿಕ ಮಹತ್ವ ಪಡೆದ ನಗರವಾಗಿದೆ. ೧೮೭೩' ರಲ್ಲಿ ಚನ್ನಪಟ್ಟಣವೂ ಕ್ಲೋಸ್ ಪೇಟೆ (ಇಂದಿನ ರಾಮನಗರ) ತಾಲ್ಲೂಕಿನ ಉಪತಾಲ್ಲೂಕು ಆಗಿತ್ತು. ನಂತರದ ಬೆಳವಣಿಗೆಯಲ್ಲಿ ಚನ್ನಪಟ್ಟಣವು ೧೮೯೨ರಲ್ಲಿ ಪೂರ್ಣ ತಾಲ್ಲೂಕು ಆಗಿ ರೂಪುಗೊಂಡಿದ್ದಲ್ಲದೆ ಇಂದಿನ ರಾಮನಗರ ತಾಲ್ಲೂಕು, ಚನ್ನಪಟ್ಟಣದ ಉಪ ತಾಲ್ಲೂಕು ಆಗಿ ಮಾಡಲಾಯಿತು. ಚನ್ನಪಟ್ಟಣಕ್ಕೆ ಮೊದಲಿದ್ದ ಹೆಸರು 'ಚಂದದ ಪಟ್ಟಣ', 'ಚಂದಾಪುರ' ಎಂದು ಕರೆಯುತ್ತಿದ್ದರು ಎಂದು ಇತಿಹಾಸದ ದಾಖಲೆಯಿಂದ ತಿಳಿದುಬರುತ್ತದೆ. ಈ ನಗರವನ್ನು ಕರ್ನಾಟಕದ ಪ್ರಸಿದ್ಧ ರಾಜ ವಂಶಗಳಾದ ಹೊಯ್ಸಳರು, ಗಂಗರಸರು, ಚೋಳರು, ವಿಜಯನಗರದ ಅರಸರು ಹಾಗೂ ಮೈಸೂರು ಅರಸರು, ಕೆಲವು ಸಮಯ ಮರಾಠರು, ಟಿಪ್ಪು ಮತ್ತು ಹೈದರಾಲಿಯ ಆಳ್ವಿಕೆಗೂ ಸೇರಿತು ಎಂದು ತಿಳಿದುಬರುತ್ತದೆ.

೧೫೩೪ರಲ್ಲಿ ತಿಮ್ಮಪ್ಪಯ್ಯ (೧೫೩೪–೧೬೨೦) ಇವರ ವಂಶಸ್ಥರ ಆಳ್ವಿಕೆಗೆ ಒಳಪಟ್ಟಿತ್ತು. ತದನಂತರ ೧೫೮೦ರಲ್ಲಿ ಈ ವಂಶದ ಶ್ರೀ ಜಗದೇವರಾಯರು ಈ ನಗರಕ್ಕೆ ಕೋಟೆಯನ್ನು ಕಟ್ಟಿಸಿದರು. ಇವರು ವಿಜಯನಗರ ಅರಸರ ಸಾಮಂತರಾಗಿದ್ದು, ೧೬೩೦ರಲ್ಲಿ ಮೈಸೂರು ಅರಸು ಶ್ರೀ ಚಾಮರಾಜ ಒಡೆಯರ್ ಆಳ್ವಿಕೆಗೆ ಒಳಪಟ್ಟಿತು. ತದ ನಂತರದ ಸಮಯದಲ್ಲಿ ಮರಾಠರ ಶ್ರೀ ಗೋಪಾಲಹರಿಯ ಆಕ್ರಮಣಕ್ಕೆ ಒಳಗಾಗಿತ್ತು ಎಂದು ಇತಿಹಾಸ ತಿಳಿಸುತ್ತದೆ. ಹೈದರಾಲಿಯ ಈ ಒಂದು ಆಕ್ರಮಣವನ್ನು ಮುಕ್ತಗೊಳಿಸಿದನೆಂದು ೧೯೨೦ರಲ್ಲಿ ಟಿಪ್ಪು ಈ ನಗರವನ್ನು ಆಳ್ವಿಕೆಯ ಸಮಯದಲ್ಲಿ ಮದ್ದುಗುಂಡು ಸಂಗ್ರಹಿಸುವ ಆಯುಧಗಾರವಾಗಿ ಈ ನಗರವನ್ನು ಆಯ್ಕೆ ಮಾಡಿಕೊಂಡಿದ್ದು, ಮುಂದೆ ಮೈಸೂರು ಅರಸರು ದಿವಾನ್ ಪೂರ್ಣಯ್ಯನವರ ಆಳ್ವಿಕೆಗೂ ಒಳಪಟ್ಟಿತು ಎಂದು ತಿಳಿದುಬರುತ್ತದೆ.

ತಿಮ್ಮಪ್ಪರಾಜೇ ಅರಸು ಅರಮನೆ ಎಂಬ ಒಂದು ಹಳೆಯ ಕಾಲದ ಅರಮನೆ ಇತ್ತು. ಈ ಕಟ್ಟಡವನ್ನು ತಾಲ್ಲೂಕಿನ ಕಚೇರಿ ಎಂದು ತಾಲ್ಲೂಕಿನ ಜನರು ಗುರುತಿಸುತ್ತಿದ್ದರು. ಈ ಕಟ್ಟಡಕ್ಕೆ ಸಂಬಂಧಿಸಿದ ಹಳೆಯ ಐತಿಹಾಸಿಕ ವಸ್ತುಗಳನ್ನು ಜನಪದ ವಸ್ತು ಸಂಗ್ರಹಾಲಯದಲ್ಲಿ ಸಂಗ್ರಹಿಸಿ ಇಡಲಾಗಿದೆ. ಹಿಂದೆ ಚನ್ನಪಟ್ಟಣ ವೀಣೆಯ ತಂತಿಯ ತಯಾರಿಕೆಯಲ್ಲಿ ಹಾಗೂ ಚಂದನದ ಗೊಂಬೆಯನ್ನು ತಯಾರಿಸುವ ಕೆಲಸದಲ್ಲಿ ಬಹಳ ಪ್ರಸಿದ್ಧಿ ಪಡೆದಿತ್ತು ಎಂದು 'ಚಂದನದ ಗೊಂಬೆ'ಯ ತಯಾರಿಕೆ ಮಾರುತ್ತಿದ್ದುದರಿಂದ ಚನ್ನಪಟ್ಟಣ ಎಂದು ಹೆಸರು ಬರಲು ಮತ್ತೊಂದು ಕಾರಣ ಎಂಬ ಇತಿಹಾಸವಿದೆ. ಇದು ಸಹ ಸಂಪ್ರಾದಾಯಿಕ ಗೊಂಬೆಯ ಬದಲಾಗಿ ಇತರೆ ಕರಕುಶಲ ಗೊಂಬೆ ತಯಾರಿಕೆಯಲ್ಲಿ ವಿಶ್ವ ಭೂಪಟದಲ್ಲಿ ಅಗ್ರಗಣ್ಯವಾದ ಸ್ಥಾನವನ್ನು ಪಡೆದಿದ್ದು ಇಂದಿಗೂ ತನ್ನ ಸ್ಥಾನವನ್ನು ಉಳಿಸಿಕೊಂಡು ಬರುತ್ತಿವೆ. ಚನ್ನಪಟ್ಟಣ ಶ್ರೀ ವರದರಾಜ ದೇವಾಲಯ, ಶ್ರೀ ಕೋಟೆಮಾರಮ್ಮನವರ ದೇವಸ್ಥಾನ, ಶ್ರೀ ಕಾಶಿವಿಶ್ವೇಶ್ವರ ದೇವಸ್ಥಾನಗಳು ಪ್ರಮುಖ ಸ್ಥಾನ ಪಡೆದಿರುತ್ತವೆ. ಶ್ರೀ ವರದರಾಜ ಸ್ವಾಮಿ ದೇವಾಲಯವು ವೈಷ್ಣವಮತ ಸ್ಥಾಪಕರಾದ ಶ್ರೀ ರಾಮಾನುಜಾಚಾರ್ಯರ ಕಾಲದಲ್ಲಿ ನಿರ್ಮಾಣವಾಗಿರ ಬಹುದೆಂದು ತಿಳಿದುಬರುತ್ತದೆ. ತದನಂತರದ ಸಮಯದಲ್ಲಿ ಕೆಲವು ಭಾಗಗಳನ್ನು ವಿಜಯನಗರ ಆಳ್ವಿಕೆಯ ಕಾಲದಲ್ಲಿ ನಿರ್ಮಾಣವಾಯಿತು ಎಂದು ತಿಳಿದುಬರುತ್ತದೆ. ಸುಂದರವಾದ ಮುಖಮಂಟಪ ಸುಖಾಸೀನ ಗರ್ಭಗೃಹವನ್ನು ಹೊಂದಿದ್ದು, ಇದು ದ್ರಾವಿಡನ್ ಶೈಲಿಯನ್ನು ಹೊಂದಿದೆ. ದೇವಸ್ಥನದ ಕಂಬದ ಮೇಲೆ ಸುಂದರ ದಶವತಾರ ಚಿತ್ರಗಳು, ವಿಷ್ಣು ಪುರಾಣದ ಚಿತ್ರಗಳನ್ನು ಬಹಳ ಸೂಕ್ಷ್ಮವಾಗಿ ಚಿತ್ರಿಸಲಾಗಿದೆ. ವಸಂತೋತ್ಸವ ಮಂಟಪ, ಕಲ್ಯಾಣ ಮಂಟಪ, ನಮ್ಮಳ್ವಾರ್ ಮಂಟಪಗಳು, ಶ್ರೀ ರಾಮಾನುಜಾಚಾರ್ಯರ ವಿಗ್ರಹ, ಎಡಕ್ಕೆ ಶ್ರೀ ಸೌಮ್ಯನಾಯಕಿ ಅಮ್ಮನವರ ಗುಡಿ ಸಹ ಇದೆ. ಈ ದೇವಾಲಯಕ್ಕೆ ಅನತಿ ದೂರದಲ್ಲಿ ಶ್ರೀ ಪ್ರಸನ್ನ ರಾಮ ದೇವಸ್ಥಾನವಿದೆ. ಈ ಮಂದಿರವು ಮೈಸೂರು ಅರಸರ ಶೈಲಿಯನ್ನು ಹೋಲುತ್ತವೆ.

* ಸಹಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಕೃಷ್ಣಾಪುರ, ಚನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ-೫೭೧೫೦೧.

ಸಮೀಪದಲ್ಲಿ ಇರುವ ಶ್ರೀ ವ್ಯಾಸರಾಜ ಮಠ, ಕುಂದಾಪುರ ಸಂಸ್ಥಾನಕ್ಕೆ ಒಳಪಟ್ಟಿದ್ದು, ಈ ಮಠವು ತನ್ನದೇ ಆದ ಇತಿಹಾಸವನ್ನು ಹೊಂದಿದೆ. ಈ ಮಠದಲ್ಲಿ ಶ್ರೀ ವ್ಯಾಸರಾಜರು ಶ್ರೀನಿವಾಸ ದೇವರನ್ನು ಪ್ರತಿಷ್ಠಾಪಿಸಿದ್ದಾರೆ. ಈ ಮಠದ ಒಳಭಾಗದಲ್ಲಿ ವಿಜಯನಗರ ಸಾಮ್ರಾಜ್ಯದ ಎರಡು ಧ್ರುವತಾರೆಗಳಾದ ಶ್ರೀ ವ್ಯಾಸರಾಯರಿಗಾಗಿ ಶ್ರೀ ಪುರಂದರದಾಸರು ತಮ್ಮ ನೆಚ್ಚಿನ ಗುರುಗಳಿಗಾಗಿ ಪೂಜಾ ಮಂಟಪ ಒಂದನ್ನು ತಮ್ಮ ಗೋಪಾಲ ವೃತ್ತಿಯಿಂದ ಅರ್ಜಿಸಿದ ಸಂಪತ್ತಿನಿಂದ ಒಂದು ಪೂಜಾ ಮಂಟಪ ಕಟ್ಟಿಸಿ ಕೊಟ್ಟಿದ್ದಾರೆ. ಇದನ್ನು ಪುರಂದರ ಮಂಟಪ ಎಂದು ಇಂದಿಗೂ ಸಹ ಕರೆಯುತ್ತಾರೆ. ಶ್ರೀ ವರದರಾಜಸ್ವಾಮಿ ದೇವಸ್ಥಾನದ ಸಮೀಪದಲ್ಲಿ ಇರುವ ಶ್ರೀ ಆಂಜನೇಯ ಗುಡಿ ಇದ್ದು, ೧೫೫೩ರಲ್ಲಿ ರಚನೆಯಾದಂತೆ ಕಂಡುಬರುತ್ತದೆ. ಇಲ್ಲಿನ ಒಂದು ಶಾಸನವು ಸದಾಶಿವರಾಯನ ಬಗ್ಗೆ ತಿಳಿಸುತ್ತದೆ. ಇದಲ್ಲದೆ ಗರುಡಗಂಬ ಬೀದಿಯಲ್ಲಿರುವ ಶ್ರೀ ಲಕ್ಷ್ಮೀನರಸಿಂಹ ದೇವಸ್ಥಾನ ಮತ್ತು ಶ್ರೀ ನೀಲಕಂಠೇಶ್ವರ ದೇವಾಲಯವು ಬಹಳ ಪ್ರಸಿದ್ಧಿ ಪಡೆದಿದೆ ಈ ದೇವಾಲಯವು ಜಗದೇವ ರಾಯನ ಕಾಲದಲ್ಲಿ ನಿರ್ಮಾಣವಾಯಿತು ಎಂದು ಐತಿಹ್ಯ ಹೇಳುತ್ತದೆ. ಶ್ರೀ ಸುಗ್ರೀವಸ್ವಾಮಿ ಮಂದಿರವು ಬಹಳ ಅಪರೂಪವಾದ ದೇವಾಲಯವಾಗಿದ್ದು ಈ ಹೆಸರಿನ ದೇವಾಲಯವು ಕಂಡುಬರುವುದು ವಿಶೇಷವಾಗಿದೆ. ಮತ್ತು ಶ್ರೀ ಕಾಳಿಕಾಂಬ ಮಂದಿರ ಹಾಗೂ ಶ್ರೀರಾಮ ಮಂದಿರಗಳು ಒಳಗೊಂಡಿವೆ. ಹಾಗೂ ಚನ್ನಪಟ್ಟಣ ನಗರ ಪ್ರದೇಶದಲ್ಲಿ ಮುಸಲ್ಮಾನರು ಹೆಚ್ಚಿನ ಸಂಖ್ಯೆಯಲ್ಲಿ ಹೈದರಾಲಿ ಕಾಲದಲ್ಲಿ ಬಂದು ನೆಲೆಸಿದ್ದಾರೆ ಎಂಬ ಅಂದಾಜಿದೆ. ನಗರದ ಪೂರ್ವ ಭಾಗದಲ್ಲಿ ದಾರೆಕೇರಿ, ಸೈಯದ್‌ವಾಡಿ, ಮಕಾನ್ ಮತ್ತು ಕೋಟೆಯ ಕೆಲವು ಪ್ರದೇಶದಲ್ಲಿ ಮಹಮದೀಯರು, ಶಿಯಾ, ಸುನ್ನಿ ಎಂಬ ಮಹಮದಿಯಾ ಪಂಗಡದವರು ನೆಲೆಸಿದ್ದಾರೆ.

ಮಸೀದಿ ಮತ್ತು ದರ್ಗಾಗಳು ಸೇರಿ ಸುಮಾರು ೨೦ ಪ್ರಾರ್ಥನೆಯ ಮಂದಿರಗಳು ಇರುತ್ತವೆ. ಟಿಪ್ಪುಸುಲ್ತಾನರ ಗುರುವಿನ ಸಮಾಧಿಯು ಬೆಂಗಳೂರು–ಮೈಸೂರು ರಸ್ತೆಯಲ್ಲಿ ಇದ್ದು, ಪ್ರತಿವರ್ಷ ಈ ಜಾಗದಲ್ಲಿ 'ಉರುಸ್' ನಡೆಯುತ್ತದೆ. ಸಾವಿರಾರು ಜನರು ಭಾಗವಹಿಸುತ್ತಾರೆ. ಈ ಒಂದು ನಗರದಲ್ಲಿ ಒಂದು ವೀರಶೈವ ಮಠ ಸಹ ಕುಡಿಯುವ ನೀರಿನ ಕಟ್ಟೆಯ ಹತ್ತಿರ ಇರುತ್ತದೆ. ಈ ಊರಿನ ಸಾಮೂಹಿಕ ಆಚರಣೆಯ ಹಬ್ಬವೆಂದರೆ 'ಕಾಮನ ಹುಣ್ಣಿಮೆ'. ಈ ತಾಲ್ಲೂಕಿನ ಪ್ರಮುಖ ಉತ್ಸವವಾಗಿದ್ದು, ನಗರದಲ್ಲಿ ೧೦ ದಿವಸಗಳ ಕಾಲ ಆಚರಿಸಲಾಗುತ್ತದೆ. ಈ ತಾಲ್ಲೂಕಿನ ಪ್ರಮುಖ ಉತ್ಸವವಾಗಿದ್ದು, ನಗರದಲ್ಲಿ ೧೦ ದಿವಸಗಳ ಕಾಲ ಆಚರಿಸಲಾಗುತ್ತದೆ. ಈ ತಾಲ್ಲೂಕಿನ ಇತರೆ ಐತಿಹಾಸಿಕ ನೆಲೆಗಳನ್ನು ಪರಿಶೀಲಿಸೋಣ.

ದೇವರ ಹೊಸಹಳ್ಳಿ

ದೇವರ ಹೊಸಹಳ್ಳಿ ತಾಲ್ಲೂಕಿನ ಪ್ರಮುಖ ಧಾರ್ಮಿಕ ವೈಷ್ಣವ ಕ್ಷೇತ್ರವಾಗಿದ್ದು, ವಿಜಯನಗರ ಕಾಲದಲ್ಲಿ ನಿರ್ಮಾಣವಾದ ದೇವಸ್ಥಾನವೆಂದು ತಿಳಿದುಬರುತ್ತದೆ. ಮೊದಲಿಗೆ ಈ ದೇವಸ್ಥಾನಕ್ಕೆ ಪ್ರಸನ್ನ ಆಂಜನೇಯ ದೇವಸ್ಥಾನವೆಂದು ಕರೆಯುತ್ತಿದ್ದು, ಶ್ರೀ ವ್ಯಾಸರಾಯರು ಸ್ಥಾಪಿಸಿದ ದೇವಸ್ಥಾನ ಎಂದು ಇತಿಹಾಸ ಹೇಳುತ್ತದೆ. ಇಲ್ಲಿ ಹನುಮಂತ ಮೂರ್ತಿಯು ತುಂಬಾ ಸುಂದರವಾಗಿದ್ದು, ಸುಮಾರು ೧.೫ ಮೀಟರ್ ಎತ್ತರವಿದ್ದು, ಬಾಲದಲ್ಲಿ ಘಂಟೆ ಇರುವುದರಿಂದ ಶ್ರೀ ವ್ಯಾಸರಾಯರ ಸ್ಥಾಪನೆ ಎಂದು ತಿಳಿಯುತ್ತದೆ. ವಿಜಯನಗರ ಕಾಲದ ಲಾಂಛನವನ್ನು ಇಲ್ಲಿನ ದೇವಾಲಯದ ಕಂಬದ ಮೇಲೆ ಇಂದು ಸಹ ನೋಡಬಹುದಾಗಿದೆ. ಈ ಕ್ಷೇತ್ರದಲ್ಲಿ ಧ್ಯಾನ ಫಲಪ್ರದ ಮತ್ತು ಮಾನಸಿಕ ರೋಗಿಗಳಿಗೆ ಉತ್ತಮವಾದ ಚಿಕಿತ್ಸೆ ರೂಪದಲ್ಲಿನ ತೀರ್ಥವು ಸಿದ್ಧೌಷಧಿಯಾಗಿದ್ದು, ಆದ್ದರಿಂದ ಈ ದೇವರಿಗೆ ಸಂಜೀವ ರಾಯಸ್ವಾಮಿ ಎಂದು ಹೆಸರು ಬಂದಿದೆ ಎಂದು ಇತಿಹಾಸ ಹೇಳುತ್ತದೆ. ಆಷಾಡ ಮಾಸದಲ್ಲಿ ನಡೆಯುವ ಜಾತ್ರೆಗೆ ಹೊಸದಾಗಿ ವಿವಾಹವಾದ ವಧು–ವರರು ಹೆಚ್ಚಾಗಿ ಬರುವುದು ಈ ಜಾತ್ರೆಯ ವಿಶೇಷವಾಗಿದೆ, ತಾಲ್ಲೂಕಿನ ಧಾರ್ಮಿಕ ಜಾಗೃತ ಕ್ಷೇತ್ರವಾಗಿದ್ದು ತನ್ನದೇ ಆದ ಬಹಳ ಪ್ರಸಿದ್ಧಿಯನ್ನು ಪಡೆದ ಕ್ಷೇತ್ರವಾಗಿದೆ ಹಾಗೂ ಈ ಮೂರ್ತಿಯನ್ನು ನೋಡಿದ ಪುರಂದರದಾಸರು ಈ ಕ್ಷೇತ್ರಕ್ಕೆ ಭೇಟಿ ನೀಡಿ ಈ ಕೆಳಗಿನ ಕೀರ್ತನೆಯನ್ನು ರಚಿಸಿದರೆಂಬ ಅಭಿಪ್ರಾಯವಿದೆ "ಅಂಜಿಕೆ ಇನ್ನು ಏತಕ್ಕಯ ಭಯವು ಇನ್ನು ಯಾತಕಯ್ಯ ಸಂಜೀವ ರಾಯನ ನೆನೆದ ಮೇಲೆ" ಎಂಬ ಕೀರ್ತನೆ ರಚಿಸಿ ದ್ದಾರೆಂಬ ಹಾಗೂ ದೊಡ್ಡಮಳೂರಿನ ಶ್ರೀ ರಾಮಾಪ್ರಮೇಯ ಮತ್ತು ಅಂಬೆಗಾಲು ಕೃಷ್ಣನ ದೇವಸ್ಥಾನಕ್ಕೆ ಭೇಟಿಕೊಟ್ಟ ಸಂದರ್ಭದಲ್ಲೇ ಇಲ್ಲಿಗೂ ಭೇಟಿಕೊಟ್ಟು ಮೇಲಿನ ಕೀರ್ತನೆಯನ್ನು ರಚಿಸಿದ್ದಾರೆಂಬ ಅಭಿಪ್ರಾಯವಿದೆ.

ದೊಡ್ಡ ಮಳೂರು

ದೊಡ್ಡ ಮಳೂರು ಮತ್ತೊಂದು ಪ್ರಸಿದ್ಧಿ ಪಡೆದಿರುವ ವೈಷ್ಣವ ಕ್ಷೇತ್ರವೂ ಹೌದು. ಮತ್ತು ಶೈವಕ್ಷೇತ್ರವು ಆಗಿ ಐತಿಹಾಸಿಕವಾಗಿ ಮಹತ್ವಪೂರ್ಣ ಚೋಳರ ಕಾಲದಲ್ಲಿ ಪೆರಿಯಾ ಮಾಳೂರು ಎಂದು ಮಾಲಲೂರು, ಮೂಲವೂರು, ಮಾಳೆತೂರು, ರಾಜೇಂದ್ರ ಸಿಂಹಪುರ, ಚತುರ್ವೇದ ಮಂಗಳಪುರ, ಜ್ಞಾನಮಂಟಪಕ್ಷೇತ್ರ, ತೆಂಕಣಯೋಧ್ಯ,

ಪಂಚಕೇಶನಗರ, ಭಕ್ತಿವೃದ್ಧಿ ವಿಮಾನಪುರ, ಧರ್ಮವೃದ್ಧಿ ಕ್ಷೇತ್ರ ಎಂಬ ಹೆಸರುಗಳಿಂದ ಕರೆಸಿಕೊಂಡಿರುವ ಕ್ಷೇತ್ರವಾಗಿದೆ. ಚೋಳರ ಕಾಲದಲ್ಲಿ ಶ್ರೀ ಅಪ್ರಮೇಯಸ್ವಾಮಿ ಮಂದಿರ ನಿರ್ಮಾಣವಾಯಿತೆಂದು ತದನಂತರ ಹೊಯ್ಸಳರ ಅರಸರು ವಿಜಯನಗರದ ಅರಸರು ಈ ದೇವಾಲಯಕ್ಕೆ ಹೆಚ್ಚಿನ ಉತ್ತೇಜನ ನೀಡಿ ದೇವಾಲಯವನ್ನು ಅಭಿವೃದ್ಧಿಪಡಿಸಿದರೆಂದು ತಿಳಿದುಬರುತ್ತದೆ. ಶ್ರೀ ರಾಮಾನುಜಾಚಾರ್ಯರು ಈ ದೇವಾಲಯದಲ್ಲಿ ಒಂದು ವಾರ ತಾತ್ಕಾಲಿಕ ವಾಸ್ತವ್ಯ ಇದ್ದಾರೆಂದು ಐತಿಹ್ಯ ಹೇಳುತ್ತದೆ. ಈ ದೇವಾಲಯದಲ್ಲಿ ಇರುವ ಸಾಲಿಗ್ರಾಮ ಶಿಲೆಯ ಅಂಬೆಗಾಲಿನ ಶ್ರೀ ಕೃಷ್ಣನ ಮೂರ್ತಿಯನ್ನು ಶ್ರೀ ವ್ಯಾಸರಾಯರು ಸ್ಥಾಪಿಸಿದರು ಎಂದು ಈ ಕೃಷ್ಣನ ಚೆಲುವನ್ನು ನೋಡಿ ಶ್ರೀ ಪುರಂದರದಾಸರು ಈ ದೇವಾಲಯಕ್ಕೆ ಭೇಟಿ ನೀಡಿ 'ಆಡಿಸಿದಳೇ ಯಶೋಧೆ ಜಗದೋದ್ಧಾರನ' ಎಂಬ ಕೀರ್ತನೆಯನ್ನು ರಚಿಸಿದರು ಎಂದು ತಿಳಿದುಬರುತ್ತದೆ. ಶ್ರೀ ರಾಮಾಪ್ರಮೇಯಸ್ವಾಮಿಯ ಸುಂದರ ಭವ್ಯ ದೇವಾಲಯದ ನೆಲೆಯಲ್ಲಿ ಯಾಜ್ಞವಲ್ಕ್ಯ ಸ್ಮೃತಿಗೆ ವಿಜ್ಞಾನೇಶ್ವರನೆಂಬ ಕವಿಯು ಸಾಹಿತ್ಯ ರಚನೆಯು ಕನ್ನಡ ನೆಲದಲ್ಲಿ ನಡೆಯಿತು ಎಂಬ ಅಭಿಪ್ರಾಯವಿದೆ. ಇದಲ್ಲದೆ ಸಾರಂಗಧರ, ಕಣ್ವಮಹರ್ಷಿಗಳು ಈ ನೆಲದಲ್ಲಿ ಕನಕಪುರಂದರ ರಾಮಾನುಜರು, ವ್ಯಾಸರು ತುಳಿದು ಪಾವನಗೊಳಿಸಿದ್ದು ವೈಷ್ಣವ ಆರಾಧನ ಪದ್ಧತಿಗೂ ತನ್ನದೇ ಆದಂತಹ ಒಂದು ಭದ್ರ ಬುನಾದಿ ನೀಡಿದ ಕ್ಷೇತ್ರವೆಂದು ಹೇಳಬಹುದು. ಈ ಊರು ಶೈವಕ್ಷೇತ್ರವೂ ಹೌದು, ವೈಷ್ಣವ ಕ್ಷೇತ್ರವೂ ಹೌದು ಎಂಬುದಕ್ಕೆ. ಈ ಊರಿನಲ್ಲಿ ಶೈವ ಮಂದಿರಗಳಾದ ಶ್ರೀ ಕೈಲಾಸೇಶ್ವರ ದೇವಸ್ಥಾನ ಕ್ರಿ.ಶ. ೧೦೦೦ ಚೋಳರ ಕಾಲದಲ್ಲಿ ನಿರ್ಮಾಣವಾಗಿದ್ದು, ಇದಲ್ಲದೆ ಕಲ್ಲಿನಾಥೇಶ್ವರ, ಶ್ರೀಮುಕ್ತೆನಾಥೇಶ್ವರ, ಶ್ರೀ ಜಲಕಂಠೇಶ್ವರ ದೇವಸ್ಥಾನಗಳೆಂದು ನಾಲ್ಕು ದಿಕ್ಕಿನಲ್ಲಿ ನಾಲ್ಕು ಸರೋವರ ಗಳನ್ನು ಹೊಂದಿದ್ದು, ಪುಣ್ಯಸ್ನಾನಕ್ಕೆ ಹೇಳಿ ಮಾಡಿಸಿದ ಕ್ಷೇತ್ರವಾಗಿದೆ.

ಮಂಕುಂದ

ಗಂಗರ ರಾಜಧಾನಿ ನಗರವಾಗಿದ್ದು, ಈ ನೆಲಕ್ಕೆ ಮಾನ್ಯಪುರ ಎಂದು ಕರೆಯುತ್ತಿದ್ದರು ಎಂದು ಐತಿಹ್ಯವಿದೆ. ಈ ಸ್ಥಳದಲ್ಲಿ ಗಂಗರ ಭೂವಿಕ್ರಮ ಮತ್ತು ಶಿವಮಾರ ಇವರ ಆಳ್ವಿಕೆ ಕಾಲದಲ್ಲಿ ಮುಖ್ಯ ಪಟ್ಟಣವಾಗಿದ್ದ ಸ್ಥಳವಾಗಿದೆ. ನಂತರ ಚೋಳರ ಆಳ್ವಿಕೆಯಲ್ಲಿ ಸರ್ವನಾಶವಾದ ಸ್ಥಳವಾಗಿದೆ.

ಈ ಸ್ಥಳದಲ್ಲಿ ಶ್ರೀ ವೀರಭದ್ರ ಸ್ವಾಮಿ, ಶ್ರೀ ಆಂಜನೇಯಸ್ವಾಮಿ ಶ್ರೀ ಸೋಮೇಶ್ವರ ದೇವರುಗಳ ಮಂದಿರಗಳಿವೆ. ಹಳೆಯ ಮೈಸೂರು ಮಾದರಿಯಲ್ಲಿ ವೀರಭದ್ರನ ದೇವಸ್ಥಾನವಿದ್ದು, ಇದೀಗ ನವೀಕರಿಸಲಾಗಿದೆ. ದೇವಸ್ಥಾನದ ಒಳಭಾಗದಲ್ಲಿ ಸೂರ್ಯನ ಮೂರ್ತಿಯಿದೆ. ದಂಡಮ್ಮನ ದೇವಸ್ಥಾನದ ಸಮೀಪ ಗಂಗರ ಕಾಲದ ಶಿಲಾಶಾಸನವಿದ್ದು, ಕ್ರಿ.ಶ. ೯೧೩ ಇದರಲ್ಲಿ ನೀತಿಮಾರ್ಗನ ಉಲ್ಲೇಖಿತವಾಗಿದೆ. ಇದಕ್ಕೆ ದೇಣಿಗೆಯಾಗಿ ೨ ಹಳ್ಳಿಗಳಾದ ಕೂಡ್ಲೂರು ಹಾಗೂ ಬೊಲರಿಯಾರು ಕಂದಾಯವನ್ನು ಇಲ್ಲಿಗೆ ನೀಡುವಂತೆ ತಿಳಿಸಿರುವಂತೆ ದಾಖಲೆ ಇದೆ. ಸೋಮೇಶ್ವರ ದೇವಾಲಯದಲ್ಲಿ ಗರ್ಭಗೃಹ ಮತ್ತು ಚಿಕ್ಕದಾದ ಆರಾಧನಾ ಮಂಟಪವಿದ್ದು, ಬಸವನ ವಿಗ್ರಹವಿದೆ. ಮೂರು ವೀರಗಲ್ಲು ಒಂದು ಮಾಸ್ತಿಕಲ್ಲು ಈ ಗ್ರಾಮದಲ್ಲಿ ಕಂಡುಬರುವ ಐತಿಹಾಸಿಕ ದಾಖಲೆ ಆಗಿದೆ.

ಮಳೂರು ಪಟ್ಟಣ

ಈ ಐತಿಹಾಸಿಕ ಸ್ಥಳವು ಕಣ್ವ ನದಿಯ ದಂಡೆಯ ಮೇಲೆ ಇದ್ದು, ಮುಖ್ಯವಾದ ಅಗ್ರಹಾರವಾಗಿತ್ತು. ಹಿಂದೆ ಚೋಳರ ಕಾಲದಲ್ಲಿ ಚತುರ್ವೇದಿ ಮಂಗಲಪುರ ಎಂಬ ಹೆಸರು ತಮಿಳು ಭಾಷೆಯ ದಾಖಲೆಯಲ್ಲಿ ಕ್ರಿ.ಶ. ೧೦೪೧ ಶ್ರೀ ನಾರಾಯಣಸ್ವಾಮಿ ದೇವಾಲಯದಲ್ಲಿ ಸಿಕ್ಕುತ್ತದೆ. ಇಲ್ಲಿ ಹಲವಾರು ವೀರಗಲ್ಲುಗಳು ದೇವಸ್ಥಾನಗಳಿವೆ. ವಿಜಯನಗರ ಕಾಲಕ್ಕೆ ಸೇರಿದ ಹಲವಾರು ಬರಹಗಳನ್ನು ಕಾಣಬಹುದಾಗಿದೆ. ೧೭೬೩ರಲ್ಲಿ ಹೈದರಾಲಿಯು ಮಳೂರು ಪಟ್ಟಣವನ್ನು ಕಾಣಿಕೆಯಾಗಿ ತನ್ನ ಗುರು 'ಫಕೀರಷಾಹಿ ಖಾದರ್'ಗೆ ನೀಡಿದ ದಾಖಲೆ ಸಿಗುತ್ತದೆ. ಈ ಸ್ಥಳದಲ್ಲಿ ಶ್ರೀ ನಾರಾಯಣಸ್ವಾಮಿ, ಶ್ರೀ ಅಮೃತೇಶ್ವರ, ಶ್ರೀ ವರದರಾಜ, ಶ್ರೀ ಚೌಡೇಶ್ವರಿ ಅಮ್ಮನವರ ಹಾಗೂ ಒಂದು ಶಿವ ದೇವಾಲಯವು ಇದ್ದು ಈ ದೇವಸ್ಥಾನಕ್ಕೆ ಶ್ರೀ ಅಮೃತೇಶ್ವರ ದೇವಸ್ಥಾನವೆಂದು ಕರೆಯುತ್ತಾರೆ ಈ ಮಂದಿರವನ್ನು ಗಂಗರ ಕಾಲದ ನಿರ್ಮಾಣದಂತೆ ಕಂಡು ಬರುತ್ತದೆ. ಚೋಳ ದಾಖಲೆಯ ಪ್ರಕಾರ 'ಆರು ಮಾಳೇದೇಶ್ವರಂ' ಎಂದು ಇರುತ್ತದೆ. 'ಆರು ಮಾಳಬರ ಉದಯನ್' ಎಂದು ನಂತರ ಸ್ಥಳೀಯರ ಬಾಯಿಂದ ಅಮೃತೇಶ್ವರ ಎಂದು ಕರೆಯಲು ಪ್ರಾರಂಭಿಸಿದರು. ಈ ದೇವಸ್ಥಾನದ ಮುಂದಿನ ಭಾಗವನ್ನು ಹೊಯ್ಸಳರ ನರಸಿಂಹ ನಿರ್ಮಾಣ ಮಾಡಿಸಿದನು. ಈ ದೇವಸ್ಥಾನದ ಬಳಿ ಕ್ರಿ.ಶ. ೯೦೦ರಲ್ಲಿ ಕನ್ನಡದ ಒಂದು ಶಾಸನವಿದೆ. ಶ್ರೀ ಅಮೃತೇಶ್ವರ ದೇವಸ್ಥಾನದ ಹತ್ತಿರ ಇರುವ ಶ್ರೀ ನಾರಾಯಣಸ್ವಾಮಿ ಮಂದಿರದ ಬಳಿ ತಮಿಳು ಶಾಸನ ಇದೆ. ಈ ಶಾಸನವು ಕ್ರಿ.ಶ. ೧೦೦೭ರಲ್ಲಿ ರಾಜ ರಾಜಚೋಳನು ದೇವಸ್ಥಾನದ ನಿರ್ವಹಣೆಗೆ ಬೇಕಾದ ಪೂಜೆಯ ವೆಚ್ಚಕ್ಕೆ ಬೇಕಾದ ಸವಲತ್ತಿನ ಬಗ್ಗೆ ತಿಳಿಸುತ್ತದೆ. ಶ್ರೀ ಚೌಡೇಶ್ವರಿ ದೇವಸ್ಥಾನದ ಹತ್ತಿರ ಮತ್ತೊಂದು ಶಾಸನವಿದ್ದು, ಹಲವು ವೀರಕಲ್ಲುಗಳಿವೆ. ಕ್ರಿ.ಶ. ೧೧೮೦ರಲ್ಲಿ ಹೊಯ್ಸಳರ ಎರಡನೇ ಬಲ್ಲಾಳನ ಕಾಲಕ್ಕೆ

ಸಂಬಂಧಿಸಿದ್ದು ಎಂದು ತಿಳಿಸುತ್ತದೆ. ಈ ಚೌಡೇಶ್ವರಿ ದೇವಸ್ಥಾನವು ವಿಜಯನಗರ ಕಾಲದ ಶೈಲಿಯನ್ನು ಹೊಂದಿರುತ್ತದೆ. ಈ ದೇವಸ್ಥಾನದಲ್ಲಿ ಭೈರವದುರ್ಗಾ ಮತ್ತು ದ್ವಾರಪಾಲಕರು ಇದ್ದಾರೆ. ಶ್ರೀ ಚಾಮುಂಡಿ ಮೂರ್ತಿ ಸಹ ಈ ದೇವಾಲಯದಲ್ಲಿ ನೋಡಬಹುದಾಗಿದೆ. ಕ್ರಿ.ಶ. ೧೪೩೦ರಲ್ಲಿ ದೇವರಾಯ ವಿಜಯನಗರ ಕಾಲದ ಆಳ್ವಿಕೆಗೆ ಸಂಬಂಧಿಸಿದ ವೀರಗಲ್ಲು ಮತ್ತು ಶಾಸನ ಇರುತ್ತದೆ.

ಕೆಂಗಲ್

ಚನ್ನಪಟ್ಟಣ ತಾಲ್ಲೂಕಿನ ಪ್ರಸಿದ್ಧ ವೈಷ್ಣವ ಕ್ಷೇತ್ರ ಬೆಂಗಳೂರು–ಮೈಸೂರು ರಸ್ತೆಯಲ್ಲಿ ಚನ್ನಪಟ್ಟಣದಿಂದ ಮೂರು ಕಿ.ಮೀ. ದೂರದಲ್ಲಿರುವ ಕ್ಷೇತ್ರವಾಗಿದೆ. ಕೆಂಗಲ್ ಆಂಜನೇಯ ಸ್ವಾಮಿಯ ಗುಡಿಯು ಈಗಿನದಾದರೂ ಆಂಜನೇಯಸ್ವಾಮಿ ಮತ್ತು ಈ ಜಾಗ ಪ್ರಾಚೀನವಾದುದೇ. ಕೆಂಪು ಕಲ್ಲಿನ ಬಂಡೆಯೊಂದರಲ್ಲಿ ಶ್ರೀ ವ್ಯಾಸರಾಜರು ಆಂಜನೇಯ ಚಿತ್ರ ಬರೆದು ಪೂಜಿಸಿದರಂತೆ. ವ್ಯಾಸರಾಜರ ಒಟ್ಟು ೭೩೨ ಆಂಜನೇಯ ಮೂರ್ತಿಗಳನ್ನು ಪ್ರತಿಷ್ಠಾಪನೆ ಮಾಡಿದ್ದು, ಈ ರೇಖಾ ಚಿತ್ರವು ಶ್ರೀಯವರ ಮೂರ್ತಿಯಾಗಿ ರೂಪ ಪಡೆಯಿತು ಎಂದು ಐತಿಹ್ಯವು ತಿಳಿಸುತ್ತದೆ. ವಿಧಾನಸೌಧ ದಂತಹ ಅದ್ಭುತ ಕಲಾ ನೈಪುಣ್ಯದ ಭವನದ ನಿರ್ಮಾಣ ಕರ್ತೃ ಶ್ರೀ ಕೆಂಗಲ್ ಹನುಮಂತಯ್ಯನವರು ಈ ದೇವರ ವರಪ್ರಸಾದದಿಂದ ಜನಿಸಿದರು ಎಂದು ತಿಳಿಯುತ್ತದೆ. ಈ ದೇವಸ್ಥಾನದ ನಿರ್ಮಾಣಕ್ಕೆ ವಿಧಾನಸೌಧ ಕಟ್ಟಿದ ನಂತರ ಉಳಿದ ಕಲ್ಲಿನಿಂದ ನಿರ್ಮಾಣವಾಗಿರುವುದು ವಿಶೇಷವಾಗಿದೆ. ಹಾಗೂ ರಾಷ್ಟ್ರ ರತ್ನ ಶ್ರೀ ಕೆ. ಹನುಮಂತಯ್ಯನವರು ನಿಧನ ಹೊಂದಿದ ನಂತರ ಭೌತಿಕ ಶರೀರವನ್ನು ಈ ಜಾಗದಲ್ಲಿಯೇ ಸಮಾಧಿ ಮಾಡಲಾಗಿದೆ. ಹೀಗೆ ಐತಿಹಾಸಿಕವಾಗಿ, ಧಾರ್ಮಿಕವಾಗಿ, ರಾಜಕೀಯವಾಗಿ ಈ ಕ್ಷೇತ್ರವು ಬಹಳ ಪ್ರಮುಖವಾದ ಕ್ಷೇತ್ರವಾಗಿ ರೂಪುಗೊಂಡಿದೆ ಹಾಗೂ ದಿವಾನ್ ಸರ್ ಮಿರ್ಜಾ ಇಸ್ಮಾಯಿಲ್‌ರವರು ಬೆಂಗಳೂರಿಗೆ ಹೋಗುವಾಗ ಈ ಸ್ಥಳಕ್ಕೆ ಭೇಟಿ ನೀಡುತ್ತಿದ್ದರು ಒಂದು ಬಾರಿ ಇಲ್ಲಿಯ ಹುಲ್ಲಿಮುತ್ತಿಗೆ ಅರಣ್ಯದಲ್ಲಿ ಹುಲಿಗಳ ಉಪಟಳ ಹೆಚ್ಚಾಗಿ ಅಕ್ಕಪಕ್ಕದ ಗ್ರಾಮದ ಜನರಿಗೆ ತುಂಬಾ ತೊಂದರೆಯಾಗಿ ಅದರ ನಿಯಂತ್ರಣಕ್ಕೆ ಪರಿಹಾರ ಮಾರ್ಗ ಕಾಣದೆ ಈ ದೇವಾಲಯಕ್ಕೆ ಭೇಟಿ ನೀಡಿ ಅನನ್ಯವಾಗಿ ಪ್ರಾರ್ಥನೆ ಮಾಡಿದರೆಂದು ತದನಂತರ ಈ ಉಪದ್ರವವು ಕಡಿಮೆಯಾಯಿತೆಂದು ಇದರಿಂದ ಸಂತೋಷಗೊಂಡು ಹರಿಕೆಯ ರೂಪದಲ್ಲಿ ಬೆಳ್ಳಿಯ ನೇತ್ರವನ್ನು ಸ್ವಾಮಿಗೆ ಅರ್ಪಿಸಿದರೆಂಬ ಮಾಹಿತಿ ಹಿಂದೆ.

ಕೂಡ್ಲೂರು

ಗಂಗ ಚೋಳ ಮತ್ತು ವಿಜಯನಗರ ಅರಸರ ಕಾಲದಲ್ಲಿ ಈ ಐತಿಹಾಸಿಕ ಸ್ಥಳವು ಅಗ್ರಹಾರವಾಗಿತ್ತು ಈ ಊರಿನಲ್ಲಿರುವ ಚೋಳರ ಕಾಲದ ಶಾಸನದ ಪ್ರಕಾರ ಈ ಗ್ರಾಮಕ್ಕೆ ಮೊದಲು ಇದ್ದ ಹೆಸರು 'ರಾಜರಾಜಚತುರ್ವೇದಿ ಮಂಗಲಂ ಅಗ್ರಹಾರ' ಈ ಗ್ರಾಮದಲ್ಲಿ ಇಂದು ಸುಮಾರು ೨೫ಕ್ಕಿಂತ ಹೆಚ್ಚು ದೇವಾಲಯಗಳಿವೆ. ಮುಖ್ಯವಾಗಿ ಶ್ರೀ ಮಂಗಳೇಶ್ವರ, ಶ್ರೀ ಪಾತಾಳೇಶ್ವರ, ಶ್ರೀ ಮಹಾಬಲೇಶ್ವರ, ಶ್ರೀ ವೈದ್ಯನಾಥೇಶ್ವರ, ಶ್ರೀ ಮರಳೇಶ್ವರ ಎಂಬ ಪಂಚಲಿಂಗ ದೇವಸ್ಥಾನವು ಚೋಳರ ಕಾಲದಲ್ಲಿ ನಿರ್ಮಾಣ ಎಂದು ದಾಖಲೆಗಳು ತಿಳಿಸುತ್ತದೆ. ಈ ದೇವಾಲಯದ ಸಮೀಪದಲ್ಲೇ ಒಂದು ಕೊಳ ಇರುತ್ತದೆ. ಈ ದೇವಸ್ಥಾನಕ್ಕೆ ನೀಡಿದ ದಾನದತ್ತಿಗಳ ಬಗ್ಗೆ ಕ್ರಿ.ಶ. ೧೨೦೦ರಲ್ಲಿ ಚೋಳರ ದಾಖಲೆಗಳು ತಿಳಿಸುತ್ತವೆ. ಕ್ರಿ.ಶ. ೧೩೦೫ರಲ್ಲಿ ಹೊಯ್ಸಳರು ಈ ಮಂದಿರಕ್ಕೆ ಹಲವು ದಾನದತ್ತಿ ನೀಡಿದ ಬಗ್ಗೆ ದಾಖಲೆಯನ್ನು ಕಾಣಬಹುದಾಗಿದೆ.

ಮತ್ತೊಂದು ಐತಿಹಾಸಿಕ ಮಹತ್ವಪೂರ್ಣವಾದ ಮಂದಿರವೆಂದರೆ ಶ್ರೀರಾಮ ದೇವಾಲಯ ಈ ಮಂದಿರವನ್ನು ಐತಿಹ್ಯದ ಪ್ರಕಾರ ಕ್ರಿ.ಶ. ೧೬೦೦ 'ಗಂಗರಾಜ ವಿಜಯಪಾಲ' ದೇವಸ್ಥಾನ ನಿರ್ಮಿಸಿದರು. ಎಂದು ತಿಳಿದುಬರುತ್ತದೆ. ಈ ಮಂದಿರದ ವಿಶೇಷ ಜಟಾಯು ಪಕ್ಷಿಗೆ ಮುಕ್ತಿ ನೀಡಿ ಶ್ರೀ ವಿಷ್ಣುಮೂರ್ತಿ ರೂಪದಲ್ಲಿ ಕಾಣಿಸಿಕೊಂಡ ಪ್ರತಿತಿ ಇದೆ ಇದ್ದು ಸಹ ವಿಷ್ಣು ಮತ್ತು ಶ್ರೀರಾಮನ ರೂಪದ ಸಂಗಮ ವಾಗಿದ್ದು. ಅಭಯಹಸ್ತ, ಶಂಖಚಕ್ರ, ಕಟಿಹಸ್ತದಿಂದ ಕೂಡಿದೆ. ವಿಜಯನಗರ ಅರಸರು ಈ ವರದಿಯನ್ನು ಜೀರ್ಣೋದ್ಧಾರ ಗೊಳಿಸಿದ್ದಾರೆ. ಮೂರು ತಮಿಳು ಶಿಲಾಲೇಖನಗಳು ಗೋಡೆ ಗಳ ಮೇಲೆ ಕಂಡುಬರುತ್ತವೆ. ಮೊದಲನೇ ದಾಖಲೆಯು ಕ್ರಿ.ಶ. ೧೨೩೨ ತಿರುಮಲ ಪಾಡಿಯ ರಾಜಸಿಂಗನು ಭೂಮಿಯನ್ನು ನೀಡಿದ ವಿಚಾರ ತಿಳಿಯುತ್ತದೆ. ಕ್ರಿ.ಶ. ೧೧೮೦ ರಲ್ಲಿ ಹೊಯ್ಸಳರ ಎರಡನೇ ಬಲ್ಲಾಳನು ಈ ದೇವಸ್ಥಾನಕ್ಕೆ ಕೆಲವು ಕಾಣಿಕೆ ನೀಡಿದ ವಿವರವನ್ನು ತಿಳಿಸುತ್ತದೆ. ಕ್ರಿ.ಶ. ೧೨೮೮ರಲ್ಲಿ ಕನ್ನಡ ಶಾಸನ ಕನಕಹಳ್ಳಿಯ ಮಹಿಳೆಯೊಬ್ಬರು ತೆಂಗಿನ ತೋಟವನ್ನು ಈ ದೇವಸ್ಥಾನಕ್ಕೆ ನೀಡಿದ ಬಗ್ಗೆ ಮಾಹಿತಿಯನ್ನು ನೀಡುತ್ತದೆ. ಶ್ರೀರಾಮ ನವಮಿಯಂದು ಇಲ್ಲಿ ಕಾರ್ಯಕ್ರಮಗಳು ನಡೆಯುತ್ತದೆ. ಇಂದು ಈ ದೇವಾಲಯವು ಮುಜರಾಯಿ ಇಲಾಖೆಯ ಆಳ್ವಿಕೆಗೆ ಒಳಪಡುತ್ತದೆ. ಈ ಸ್ಥಳದಲ್ಲಿ ಚೋಳರ ಕಾಲದ ಹಲವು ಗ್ರಾಮ ಶಾಸನಗಳು ನಟರಾಜ, ಶಿವ, ಪಾರ್ವತಿಯ ಪಂಚಲೋಹದ ವಿಗ್ರಹಗಳು ದೊರೆತಿದ್ದು, ಇವು ಪ್ರಾಚ್ಯವಸ್ತು ಮತ್ತು ಪುರಾತತ್ವ ಇಲಾಖೆ ವಶದಲ್ಲಿದೆ.

ಕೂರಣಗೆರೆಬೆಟ್ಟ (ನರಸಿಂಹಸ್ವಾಮಿ ಬೆಟ್ಟ)

ಚನ್ನಪಟ್ಟಣದಿಂದ ೮ ಕಿ.ಮೀ. ದೂರದಲ್ಲಿ ಯೋಗಾ ನರಸಿಂಹಸ್ವಾಮಿಯ ಬೆಟ್ಟವಿದೆ. ಈ ಬೆಟ್ಟವು ಐತಿಹಾಸಿಕ ಮಹತ್ವಕ್ಕಿಂತ ಪ್ರಕೃತಿ ಪ್ರಿಯರ ತಾಣವಾಗಿ ಬಹಳ ಪ್ರಸಿದ್ಧಿ ಪಡೆದಿದ್ದು, ವಿಜಯನಗರ ಶೈಲಿಯ ಕಂಬದಲ್ಲಿ ನರಸಿಂಹದೇವರು ಉದ್ಭವವಾಗಿರುವ ರೂಪ ಕಂಡುಬರುತ್ತದೆ. ವ್ಯಾಸರಾಯರು ಈ ಸ್ಥಳದಲ್ಲಿ ಈ ಸ್ವಾಮಿಯನ್ನು ಅಸದೃಶ್ಯ ರೂಪದಲ್ಲಿ ಕಾಣಿಸಿಕೊಂಡ ಸ್ಥಳವೆಂದು ತಿಳಿದುಬರುತ್ತದೆ.

ಭೂ ಮಟ್ಟದಿಂದ ೧೦೦೦ ಅಡಿಗಳ ಎತ್ತರದಲ್ಲಿ ಈ ದೇವಸ್ಥಾನವಿದ್ದು, ಈ ಸ್ಥಳದಿಂದ ಮಾರ್ಚನಹಳ್ಳಿ ಕೆರೆ, ತಿಪ್ಪೂರು ಕೆರೆ, ನೂಣ್ಣೂರು ಬೆಟ್ಟ, ಗರಕಹಳ್ಳಿ ಬೆಟ್ಟಗಳು ಬಹಳ ಸುಂದರವಾಗಿ ಕಂಡುಬರುತ್ತವೆ. ಈ ಬೆಟ್ಟದಲ್ಲಿ ನರಿಗಳು, ನವಿಲುಗಳು, ಜಿಂಕೆಗಳು ಕಂಡುಬರುತ್ತವೆ. ಪ್ರತಿ ಶ್ರಾವಣ ಶನಿವಾರದಂದು ಬಹುದೊಡ್ಡ ಜಾತ್ರೆಯಂತೆ ಜನರು ಸೇರುತ್ತಾರೆ.

ಸೋಗಾಲ

ಸೋಗಾಲ ಎಂಬ ಹೆಸರು ಬಂದಿರುವ ಬಗ್ಗೆ ಈ ಗ್ರಾಮದ ಐತಿಹ್ಯದ ಪ್ರಕಾರ ೫೦೦ ವರ್ಷಗಳ ಹಿಂದಿನ ಸೋಮೇಶ್ವರ ದೇವಸ್ಥಾನ ಈ ಊರಿನಲ್ಲಿದ್ದು, 'ಗಾಲ' ಎಂಬ ಋಷಿಯು ಈ ಜಾಗದಲ್ಲಿ ತಪಸ್ಸು ಮಾಡಿದ್ದರಿಂದ ಈ ಗ್ರಾಮದ ಹೆಸರು ಸೋಗಾಲ ಎಂದಾಯಿತು ಎಂದು ಐತಿಹ್ಯ ಕೇಳಿಬರುತ್ತದೆ.

ಸೋಮೇಶ್ವರ (ಈಶ್ವರ) ದೇವಸ್ಥಾನ, ಶ್ರೀ ಆಂಜನೇಯ ಸ್ವಾಮಿ, ಶ್ರೀ ಕಾಳಮ್ಮನವರ ದೇವಸ್ಥಾನ ಈ ಊರಿನಲ್ಲಿದೆ. ಈಶ್ವರನ ದೇವಾಲಯವು ವಿಜಯನಗರ ಕಾಲದ ಕೊಡುಗೆಯಾಗಿದೆ. ಗರ್ಭಗೃಹ, ಆರಾಧನಾ ಮಂಟಪ ಹೊಂದಿದ್ದು, ದ್ರಾವಿಡ ಶಿಖರವನ್ನು ಹೊಂದಿದೆ. ಈ ದೇವಾಲಯಕ್ಕೆ ಪೂರ್ವ ಮತ್ತು ದಕ್ಷಿಣ ದಿಕ್ಕಿಗೆ ಬಾಗಿಲು ಇದೆ. ಎರಡು ಕಡೆಯು ಚಿಕ್ಕ ಮುಖಮಂಟಪವಿದೆ. ಸೂರ್ಯ, ಗಣಪತಿ ಹಾಗೂ ಸಪ್ತಮಾತೃಕೆಯರ ಸುಂದರವಾದ ಶಿಲ್ಪಗಳನ್ನು ಒಳಗೊಂಡಿದೆ. ನವರಂಗದ ದಕ್ಷಿಣ ಪ್ರವೇಶ ದ್ವಾರದಲ್ಲಿ ವಿಜಯನಗರ ಅರಸರ ಕಾಲದ ಕಾಲಕ್ಕೆ ಬಳಕೆಗೆ ಬಾರದ ಕನ್ನಡ ಲಿಪಿಯ ಶಾಸನ ಇದೆ. ನವರಂಗದ ಪಶ್ಚಿಮದ ಬಾಗಿಲಲ್ಲಿ ದ್ವಾರಪಾಲಕರಿದ್ದಾರೆ. ದೇವಸ್ಥಾನದ ಬಳಿ ಒಂದು ವೀರಗಲ್ಲು ಹಾಗೂ ಎರಡು ಮಾಸ್ತಿಕಲ್ಲು ಇವೆ. ಈ ದೇವಸ್ಥಾನದ ಹಿಂದೆ ಕೆಲವು ವೀರಗಲ್ಲು ಇದ್ದು, ಒಬ್ಬ ರಾಜನು ಹುಲಿಯೊಂದಿಗೆ ಸೆಣಸುತ್ತಿರುವ ಚಿತ್ರಗಳನ್ನು ಕೆತ್ತಲಾಗಿದೆ. ದೇವಸ್ಥಾನಕ್ಕೆ ಅನತಿ ದೂರದಲ್ಲಿ ಇನ್ನು ಹಲವು ವೀರಗಲ್ಲು ಕಂಡುಬರುತ್ತದೆ.

ಸಿಂಗರಾಜಿಪುರ

ಸಿಂಗರಾಜಿಪುರವು ಚನ್ನಪಟ್ಟಣದಿಂದ ಸಾತನೂರಿಗೆ ಹೋಗುವ ಮಾರ್ಗದಲ್ಲಿ ಸಿಗುವ ಸ್ಥಳವಾಗಿದ್ದು, ಸುಮಾರು ೧೧೦ ಅಡಿ ಎತ್ತರದಲ್ಲಿ ಬೆಟ್ಟವಿದ್ದು, ಇದು ಶ್ರೀ ಗವಿರಂಗಸ್ವಾಮಿ ಬೆಟ್ಟವೆಂದು ಪ್ರಸಿದ್ಧಿ ಪಡೆದಿದೆ. 'ಸಿಂಗರಾಜನು' ಹೊಯ್ಸಳ ದೊರೆಯ ಆಳ್ವಿಕೆಗೆ ಸೇರಿದ್ದರೆಂದು ಈ ಗ್ರಾಮಕ್ಕೆ ಸಿಂಗರಾಜಪುರವೆಂದು ಬಂದಿರಬಹುದು ಎಂದು ಊಹಿಸಲಾಗಿದೆ. 'ಸಿಂಗರಾಜಪುರ' ಎನ್ನುವುದು ಶೃಂಗರಾಜಪುರ ಎನ್ನುವುದರಿಂದ ನಿಷ್ಪನ್ನವಾಗಿದೆ ಎಂದು ಹೇಳುತ್ತಾರೆ.

ಮತ್ತೊಂದು ಹೇಳಿಕೆಯ ಪ್ರಕಾರ ಋಷಿಶೃಂಗರು ಇಲ್ಲಿನ ಗವಿರಂಗಸ್ವಾಮಿ ಬೆಟ್ಟದ ಮೇಲೆ ಸ್ವಲ್ಪ ಸಮಯ ವಾಸ ಮಾಡಿದ್ದಕ್ಕಾಗಿ ಅವರ ಜ್ಞಾಪಕವಾಗಿ ಈ ಊರಿಗೆ 'ಋಷಿಶೃಂಗ' ಹೆಸರಿಗಾಗಿ ಸಿಂಗರಾಜಪುರವಾಗಿದೆ ಎಂದು ಐತಿಹ್ಯ ಇದೆ. ಈ ಗ್ರಾಮದಲ್ಲಿ ಗೋಪಾಲಕೃಷ್ಣ ದೇವಸ್ಥಾನವಿದ್ದು, ವಿಜಯನಗರ ಶೈಲಿಯನ್ನು ಹೋಲುವಂತೆ ಇದೆ. ವಿಜಯನಗರ ಶೈಲಿಯ ಬಾಗಿಲಿನ ದ್ವಾರಪಾಲಕರ ಚಿತ್ರ ಕಂಡುಬರುತ್ತದೆ. ಈ ಊರಿಗೆ ಹೊಂದಿಕೊಂಡಿರುವ ಶ್ರೀ ಗವಿರಂಗಸ್ವಾಮಿ ಬೆಟ್ಟದ ರಸ್ತೆಯಲ್ಲೇ ಭೈರವ ಗುಹೆಯು ಇದೆ. ಗವಿರಂಗಸ್ವಾಮಿ ಶ್ರೀ ಗುಹೆಯಲ್ಲಿ ಇದ್ದು, ಲಿಂಗಾಕೃತಿಯಲ್ಲಿದೆ. ಸೀತೆಯು ಸ್ನಾನಕ್ಕಾಗಿ ಲಕ್ಷ್ಮಣನು ಬಾಣಪ್ರಯೋಗ ಮಾಡಿದ ಬಿಲ್ಲು ಸೊಣೆ ಇಲ್ಲಿದೆ. ಈ ಸೊಣೆಗೂ ಮುತ್ತತ್ತಿಯ ನದಿಗೂ ಸಂಬಂಧವಿದೆ. ಅಲ್ಲಿ ಪ್ರವಾಹ ಬಂದಾಗ ಇಲ್ಲಿ ನೀರು ಉಕ್ಕುತ್ತದೆ ಎಂದು ಹೇಳುತ್ತಾರೆ ಸ್ಥಳದಲ್ಲಿ ಋಷ್ಯಶೃಂಗ ಮುನಿ, ಮತಂಗಋಷಿ, ವಿಬಾಂಡಕ ಋಷಿ ತಪಸ್ಸು ಮಾಡಿದ್ದಾರೆ ಎಂದು ವಿಚಾರ ತಿಳಿದುಬರುತ್ತದೆ.

ಹೊಂಗನೂರು

ಹೊಂಗನೂರು ಐತಿಹಾಸಿಕ ಮಹತ್ವದ ಸ್ಥಳವಾಗಿದ್ದು, ಹೊಂಗನೂರಿಗೆ ಹಿಂದೆ 'ಪುಂಗನೂರು', 'ಹುಂಗನೂರು' ಎಂದು ಶಾಸನಗಳು ತಿಳಿಸುತ್ತವೆ. ಚೋಳರ ಕಾಲದಲ್ಲಿ ಅಗ್ರಹಾರವಾಗಿದ್ದು, ಅವರ ಕಾಲದಲ್ಲಿ ಈ ಗ್ರಾಮಕ್ಕೆ ಇದ್ದ ಮತ್ತೊಂದು ಹೆಸರು 'ತ್ರಿಲೋಕ್ಯಮಾದೇವಿ-ಚತುರ್ವೇದಿ-ಮಂಗಳಂ' ಎಂದು ಅನಂತರ ಈ ಸ್ಥಳವು ಕ್ರಿ.ಶ. ೧೨೯೬ರ ಹೊಯ್ಸಳರ ದಾಖಲೆ ಪ್ರಕಾರ 'ಹೊಂಗನೂರು' ಎಂದು ಕಂಡುಬರುತ್ತದೆ.

ಗಂಗರ ಕಾಲದಲ್ಲಿ ಇದು 'ಚಿಕ್ಕ ಗಂಗವಾಡಿ' ಪ್ರಾಂತದ ಕೇಂದ್ರಸ್ಥಾನವೆಂತಲೂ, ಶಿಂಷಾ ನದಿಯ ಅಕ್ಕಪಕ್ಕದ ಊರುಗಳಿಗೆ ಕೇಂದ್ರ ಸ್ಥಾನವಾಗಿತ್ತು ಎಂದು ಮಳವಳ್ಳಿ ತಾಲ್ಲೂಕಿನ 'ನಿಟ್ಟೂರಿನ ಶಾಸನ'ವು ೧೨೬೫ರ ಹೊಯ್ಸಳರ

ದಾಖಲೆಯಲ್ಲಿ ಈ ಬಗ್ಗೆ ಪುರಾವೆ ಸಿಗುತ್ತದೆ. ಈ ಗ್ರಾಮದಲ್ಲಿ ಕೋಡಿಭೈರವ ಗುಡಿ, ಲಕ್ಷ್ಮಿ, ಗೋಪಾಲಕೃಷ್ಣ, ಮಾರಮ್ಮ, ಈಶ್ವರ (ಹೊನ್ನಲೇಶ್ವರ) ಮುಂತಾದ ದೇವಸ್ಥಾನಗಳು ಇವೆ.

ಹೊಯ್ಸಳರ ಕಾಲದ ಕೋಡಿಭೈರವನ ವಿಗ್ರಹವಿದೆ. ಗೋಪಾಲಕೃಷ್ಣ ದೇವಸ್ಥಾನವು ಹೊಯ್ಸಳ ಮತ್ತು ವಿಜಯ ನಗರ ಅರಸರ ಕಾಲದಲ್ಲಿ ಜೀರ್ಣೋದ್ಧಾರ ಆಗಿರುವಂತೆ ಕಂಡುಬರುತ್ತವೆ. ಗೋಪಾಲಕೃಷ್ಣನ ಮೂರ್ತಿ ಮನೋಹರ ವಾಗಿದ್ದು, ವಿಜಯನಗರ ಶೈಲಿಯಂತೆ ಕಂಡುಬರುತ್ತದೆ. ಈ ದೇವಾಲಯದ ಪ್ರಾಕಾರದಲ್ಲಿ ಚೋಳರ ಕಾಲದ ಲಕ್ಷ್ಮಿ ದೇವಾಲಯವಿದ್ದು, ೬ ಕಂಬಗಳ ಮಂಟಪವಿದ್ದು, ದೇವಿಯ ವಿಗ್ರಹ ವಿಜಯನಗರದ ಉತ್ತರ ಕಾಲಕ್ಕೆ ಸೇರಿದಂತೆ ಕಂಡುಬರುತ್ತದೆ. ರಾಜೇಂದ್ರ ಚೋಳ ಕ್ರಿ.ಶ. ೧೦೮೧ರಲ್ಲಿ ಇವರ ಶಾಸನವು ಉದ್ದೆಯ ವಾಕ್ಯದಂತೆ ಪುಂಗನೂರು ತ್ರೈಲೋಕ್ಯ ಮಾದೇವಿ ಚತುರ್ವೇದಿ ಮಂಗಳಂ ಕಳಲೈ ನಾಡುವಿನಲ್ಲಿ ಮುಡಿಗೊಂಡ ಚೋಳ ಮಂಡಲದಲ್ಲಿದೆ ಎಂದಿದೆ. ಈ ಶಾಸನದ ಮೊದಲರ್ಧದಲ್ಲಿ ದೇವ ಕುಂದೈ ವನ್ನಾಗರ ಆಳ್ವಾರ್‌ಗೆ ಕೊಟ್ಟ ದತ್ತಿ ಸೋಮ ಸಿಂಗಾರ್ಯನ ಬಗ್ಗೆ ತಿಳಿಸುತ್ತದೆ. ಶ್ರೀ ಹೊನ್ನಾಳೇಶ್ವರ ದೇವಾಲಯವು ಚೋಳರಸರ ಮತ್ತೊಂದು ಕೊಡುಗೆ ಎತ್ತರವಾದ ಶಿವಲಿಂಗ ವಿದೆ. ಸಪ್ತಮಾತೃಕೆಯರ ಮೂರ್ತಿಗಳಿವೆ. ಕ್ರಿ.ಶ. ೧೧೫೪ ಎರಡನೇ ನರಸಿಂಹನು ಕೆತ್ತಿಸಿರುವ ಒಂದು ಶಾಸನದ ಪ್ರಕಾರ ಮಲ್ಲಿದೇವನಾಯಕ ಯುದ್ಧದಲ್ಲಿ ವೀರಾವೇಶದಿಂದ ಹೋರಾಡಿ ಸತ್ತನೆಂದು ಅವನ 'ನಾಗವ್ವೆ' ಈ ವೀರಕಲ್ಲನ್ನು ನಿಲ್ಲಿಸಿದ್ದಾಳೆ.

ಹಾರೋಕೊಪ್ಪ

ಹಾರೋಕೊಪ್ಪವು ಸೋಗಾಲದಿಂದ ೩ ಕಿ.ಮೀ. ಅಂತರದಲ್ಲಿ ಇರುವ ಐತಿಹಾಸಿಕ ಪ್ರಸಿದ್ಧ ಸ್ಥಳವಾಗಿದೆ. ಈ ಗ್ರಾಮವು ಗುಡಿ-ಗೋಪುರಗಳಿಂದ ತುಂಬಿ ಹೋಗಿರುವ ಪ್ರದೇಶವಾಗಿದ್ದು, ಸುಮಾರು ೨೦ಕ್ಕಿಂತ ಹೆಚ್ಚು ಸಣ್ಣ-ಪುಟ್ಟ ದೇವಾಲಯಗಳು ಇದ್ದು, ಹಲವಾರು ವೀರಗಲ್ಲು ಮತ್ತು ಮಾಸ್ತಿಕಲ್ಲುಗಳನ್ನು ಪಡೆದುಕೊಂಡ ಗ್ರಾಮವಾಗಿದೆ. ಹಿಂದೆ ಈ ಗ್ರಾಮದಲ್ಲಿ ಅಗ್ರಹಾರದ ಒಂದು ಭಾಗವಾಗಿತ್ತು ಎಂದು ಹಾಗಾಗಿ ಈ ಊರಿಗೆ ಹಾರೋ ಎಂದರೆ ಹಾರೂರು 'ಬ್ರಾಹ್ಮಣ'ರು ವಾಸ ಮಾಡುತ್ತಿದ್ದ ಸ್ಥಳವಾಗಿತ್ತು ಎಂದು ಐತಿಹ್ಯ ತಿಳಿಸುತ್ತದೆ. ಶ್ರೀ ಭೈರವನ ದೇವಾಲಯ ಚಿಕ್ಕ ಕಲ್ಯಾಣಿ, ಶ್ರೀ ವೀರಭದ್ರ, ಶ್ರೀ ಹಟ್ಟಿ ಮಾರಮ್ಮ, ಶ್ರೀ ಚೌಡೇಶ್ವರಿ ಮುಂತಾದ ಗುಡಿಗಳಿವೆ.

ಅಬ್ಬೂರು

ಅಬ್ಬೂರಿಗೆ ಕರ್ನಾಟಕದ ಎರಡನೆಯ ಮಂತ್ರಾಲಯ ಎಂಬ ಹೆಗ್ಗಳಿಕೆ ಇದೆ. ಬ್ರಹ್ಮಣ್ಯ ತೀರ್ಥರ ಬೃಂದಾವನ ಇರುವ ಪ್ರದೇಶ ಅಬ್ಬೂರು ತಪಸ್ವಿಗಳು ತ್ರಿಕಾಲ ಜ್ಞಾನಿಗಳು ಆಗಿದ್ದ ಬ್ರಹ್ಮಣ ತೀರ್ಥರು ಸೂರ್ಯಂಶ ಸಂಭೂತರೆಂಬ ಪ್ರತೀತಿ ಇದೆ. ಈ ಯತಿಗಳು ಪವಾಡ ಪುರುಷರು ವಿಜಯನಗರದ ಶ್ರೀ ಕೃಷ್ಣ ದೇವರಾಯನ ಸಿಂಹಾಸನಕ್ಕೆ ಒದಗಿದ್ದ 'ದುರ್ಯೋಗ'ವನ್ನು ದೂರ ಮಾಡಿದ ತನ್ನ ತಪಶಕ್ತಿಯನ್ನು ಧಾರೆ ಎರೆದ ಯತಿ ವ್ಯಾಸರಾಯನು ಈ ಬ್ರಹ್ಮಣ್ಯ ತೀರ್ಥರ ಶಿಷ್ಯರು ಶ್ರೀವ್ಯಾಸರಾಯರಿಗೆ ಗುರುಕಾಣಿಕೆ ಯಾಗಿ ಶ್ರೀ ಕೃಷ್ಣದೇವರಾಯನು ಅಬ್ಬೂರು ಗ್ರಾಮವನ್ನು ೧೫೨೪ರಲ್ಲಿ ದಾನ ಮಾಡಿದ ಒಂದು ಶಾಸನವಿದೆ ಈ ಸ್ಥಳಕ್ಕೆ ಮೊದಲು ವಯಾರಾಜ ಮಠ ಎಂದು ಕರೆಯುತ್ತಿದ್ದರು. ಶ್ರೀರಾಮ ತೀರ್ಥರು ಇಲ್ಲಿ ವಾಸಕ್ಕೆ ಬಂದ ಮೇಲೆ ಈ ಭಾಗದ ಹೆಸರು 'ಅಪ್ಪಿಯಾರು' (ತಮಿಳು) ಚೋಳ (ಕ್ರಿ.ಶ. ೧೦೬೦) ಆಯಿತು ಎಂದು ತಿಳಿದುಬರುತ್ತದೆ. ಇಲ್ಲಿ ಇತರೆ ೮ ಸ್ವಾಮಿಗಳ ಬೃಂದಾವನವಿದೆ ಅವುಗಳೆಂದರೆ ಶ್ರೀ ಲಕ್ಷ್ಮಿಧರ ತೀರ್ಥ ಬೃಂದಾವನ, ಶ್ರೀ ರಘುನಾಥತೀರ್ಥ, ಶ್ರೀ ಲಕ್ಷ್ಮಿನಾರಾಯಣ ತೀರ್ಥ, ಶ್ರೀ ಲಕ್ಷ್ಮಿ ಮನೋಹರ ತೀರ್ಥ, ಶ್ರೀ ಲಕ್ಷ್ಮಿಧರ ತೀರ್ಥ ಇವುಗಳು ಸುಸಂಬಂಧಗೊಳಿಸಿದವರು ಶ್ರೀ ಪುರುಷೋತ್ತಮ ನಂದ ತೀರ್ಥ ಎಂದು ತಿಳಿದುಬರುತ್ತದೆ. ಶ್ರೀವ್ಯಾಸ ತೀರ್ಥರ ವಿದ್ಯಾಗುರುಗಳಾದ ಶ್ರೀ ಪಾದರಾಯರು ಕನ್ನಡದ ಮೊದಲ ವಾಗ್ಗೇಯಕಾರರು. ಅವರು ಸಹ ಬಾಲ್ಯವೂ ಈ ಅಬ್ಬೂರಿನಲ್ಲಿ ಕಳೆದರೆಂಬ ಪ್ರತೀತಿ ಇದೆ ಈಗಲೂ ಈ ಸುತ್ತಿನ ಪ್ರದೇಶವು ತಪೋವನದಂತೆ ಕಾಣಿಸುತ್ತದೆ. ಭಾವುಕ ಭಕ್ತರಿಗೆ ಪುಣ್ಯಕ್ಷೇತ್ರವಾಗಿದೆ.

ಬೇವೂರು

ಬೇವೂರು ಒಂದು ಸಮಯದಲ್ಲಿ ಬಹಳ ಪ್ರಮುಖ ಜೈನಕೇಂದ್ರವಾಗಿತ್ತು. ಕ್ರಿ.ಶ. ೯೦೦ರಲ್ಲಿ ಈ ಜಾಗವನ್ನು 'ನಿಂಬಗ್ರಾಮ' ಎಂತಲೂ ಜೈನರು ಕರೆದಿದ್ದು ಉಂಟು ಆದರೆ ನಂತರದ ದಾಖಲಾತಿಗಳ ಪ್ರಕಾರ ಇದೇ ಜಾಗವನ್ನು ಕ್ರಿ.ಶ. ೧೩೩೧ರಲ್ಲಿ ಹೊಯ್ಸಳರ ಬಲ್ಲಾಳರನ್ನು 'ಬೇವೂರು' ಎಂದು ಕರೆದನು ಮುಂದೆ ಇದೇ ಸ್ಥಳ ಮಣ್ಣಿನ ಮಡಿಕೆ ಮಾಡುವವರ ಸ್ಥಳವಾಗಿ ಹೆಸರು ಪಡೆಯಿತು. ನಂತರ ಸಣ್ಣ ಮಣ್ಣಿನ ಮಡಿಕೆ ಕಲಾಕೃತಿ ತಯಾರಿಕೆಗೆ ಕಾರಣವಾಗಿ 'ಕುಡಿಕೆ ಬೇವೂರು ಆಯಿತು'. ಶ್ರೀ ತಿಮ್ಮಪ್ಪನ ಬೆಟ್ಟವು ಒಂದು ಕಾಲದಲ್ಲಿ ಜೈನರ ಕೇಂದ್ರವಾಗಿದ್ದು ಅದನ್ನು 'ಕೆರುಗುಂಡ' ಎಂದು ಕರೆಯುತ್ತಿದ್ದರು ಎಂದು ಕ್ರಿ.ಶ. ೯೦೦ರ ಎರಡು ದಾಖಲೆಗಳು ಹೇಳುತ್ತವೆ

ದಾಖಲೆಗಳ ಪ್ರಕಾರ ಹಲವು ಜೈನ ಮುನಿಗಳು ಅಂದರೆ ಸಿದ್ಧಿ ಮತ್ತು ಚಂದ್ರಸೇನರು ಧರ್ಮಗುರುಗಳಾಗಿ ಆಳ್ವಿಕೆ ನಡೆಸಿದರು ಶಾಂತಿಸೇನ ಮತ್ತ ಅವನ ಗುರು ಶ್ರೀ ಸೇನರು ಸ್ನೇಹಿತರಾಗಿದ್ದರು ಎಂದು ಒಂದು ದಾಖಲೆ ಹೇಳುತ್ತದೆ. ನಂದಿ ಗ್ರಾಮದ ದಾಖಲೆ ತಿಳಿಸುತ್ತದೆ.

ಚಂದ್ರಸೇನನು ಈ 'ಕಿರುಕುಂಡ' ಬೆಟ್ಟದಲ್ಲಿ ಸಾಧು ರೂಪಕ್ಕೆ ತಂದನು ಎಂದು ತಿಳಿಸುತ್ತದೆ. ಆದರೆ ಒಂದು ಕಾಲದಲ್ಲಿ ಜೈನರ ಪವಿತ್ರ ಸ್ಥಳವಾಗಿದ್ದ ಯಾವುದೇ ಸ್ಮಾರಕವಾಗಲಿ ಕೀರ್ತಿ ಸ್ತಂಭಗಳಾಗಲಿ ಕಂಡುಬರುವುದಿಲ್ಲ ವೆಂಕಟ ಎಂಬುವನು ಕ್ರಿ.ಶ. ೧೫೭೮ರಲ್ಲಿ ದೇವಸ್ಥಾನವನ್ನು ತಿಮ್ಮಪ್ಪನ ಗುಡಿ ನಿರ್ಮಾಣದ ಬಗ್ಗೆ ದಾಖಲೆ ಮಾತ್ರ ಇದೆ.

ಇಗ್ಗಲೂರು

ಚನ್ನಪಟ್ಟಣ ತಾಲ್ಲೂಕು ಗಡಿ ಭಾಗದಲ್ಲಿ ಇರುವ ಈ ಸ್ಥಳವು ಐತಿಹಾಸಿಕವಾಗಿ ತನ್ನದೇ ಆದಂತಹ ಹಲವು ಅಮೂಲ್ಯವಾದ ದಾಖಲೆಯನ್ನು ಬಚ್ಚಿರಿಸಿಕೊಂಡಿದೆ. ಇಗ್ಗಲೋರು ಎಂಬ ಸ್ಥಳವನ್ನು ತಿಳಿಸುವ ಒಂದು ವೀರಗಲ್ಲು ೧೨ ಶತಮಾನದ್ದು ಈ ಸ್ಥಳದ ಬಗ್ಗೆ ತಿಳಿಸುತ್ತದೆ. ಹಲವಾರು ಮಾಸ್ತಿಕಲ್ಲು ಮತ್ತು ವೀರಗಲ್ಲು ಹಾಗೂ ದೇವಸ್ಥಾನಗಳು ಇದೆ ಚೋಳ ಕಾಲಕ್ಕೆ ಸಂಬಂಧಿಸಿದ ಬಸವೇಶ್ವರ ದೇವಸ್ಥಾನವಿದೆ ಹಾಗೆಯೇ ವಿಜಯನಗರದ ಕಾಲಕ್ಕೆ ಸಂಬಂಧಿಸಿದ ಶ್ರೀ ಸೋಮೇಶ್ವರ ದೇವಸ್ಥಾನ ಶ್ರೀ ಸಿದ್ಧೇಶ್ವರ ದೇವಸ್ಥಾನ ಶ್ರೀ ಶಂಭುಲಿಂಗೇಶ್ವರ ದೇವಸ್ಥಾನದ ಶ್ರೀ ಮಾರುತಿ ದೇವಸ್ಥಾನ ಬಳಿ ಇರುವ ಒಂದು ವೀರಗಲ್ಲು ಶಾಸನವು ಬುಕ್ಕರಾಯನ ಪ್ರಾರಂಭದ ಅವಧಿ ಮತ್ತು ಹರಿಯಪ್ಪ ಒಡೆಯರ್‌ರವರ ಆಳ್ವಿಕೆಯ ಬಗ್ಗೆ ಈ ಸ್ಥಳದ ಬಗ್ಗೆ ಹಲವು ಮಹತ್ವ ದಾಖಲೆಯನ್ನು ಒದಗಿಸುತ್ತದೆ. ಇಲ್ಲಿನ ಮತ್ತೊಂದು ಶಾಸನವು ಹೊಯ್ಸಳ ಕಾಲಕ್ಕೆ ಸೇರಿದ್ದಾಗಿದ್ದು ಕ್ರಿ.ಶ. ೧೧೭೬ ಪ್ರಕಾರ ಹಲವು ನಾಯಕರು ಯುದ್ಧದಲ್ಲಿ ಸತ್ತರೆಂಬ ವಿಚಾರವನ್ನು ತಿಳಿಸುತ್ತದೆ ಒಂದು ಕಾಲದಲ್ಲಿ ರಾಜಕೀಯವಾಗಿ ಮಹತ್ವ ಪಡೆದಿದ್ದ ಸ್ಥಳವಾಗಿದ್ದ ಬಗ್ಗೆ ಮಾಹಿತಿ ದೊರೆಯುತ್ತದೆ.

ಗರಕಹಳ್ಳಿ

ಗರಕಹಳ್ಳಿಗೆ ಒಂದು ಕಾಲದಲ್ಲಿ 'ದೇವರಾಯಪುರ'ವೆಂದು ಹೆಸರಿತ್ತು ಎಂದು ಕ್ರಿ.ಶ. ೧೬೬೬ ದೇವರಾಜ ಒಡೆಯರ್‌ರವರ ಮಗ 'ದೇವರಾಜ ಮಹಿಪಾಲರು' ಈ ಊರನ್ನು ಅಗ್ರಹಾರವಾಗಿ ಮಾಡಿದ್ದಾರೆಂದು ಒಂದು ಶಿಲಾಶಾಸನದ ಪ್ರಕಾರ ತಿಳಿಯುತ್ತದೆ. ಶ್ರೀ ಕಣ್ಣೇಶ್ವರ ದೇವಾಲಯವು ಈ ಗ್ರಾಮದಲ್ಲಿ ಇದ್ದು ಹಿಂದೆ ಇಲ್ಲಿ ನೇರಳೆ ಮರಗಳ ಗುಂಪು ಇದ್ದುದರಿಂದ 'ಜಂಬೂ ಕ್ಷೇತ್ರವೆಂದು' ಕರೆಯುತ್ತಿದ್ದರು ಎಂದು ತಿಳಿಯುತ್ತದೆ ಶ್ರೀ ಸಿದ್ಧೇಶ್ವರ ದೇವಾಲಯವು ಇದ್ದ ಚಿಕ್ಕ ಪುಟ್ಟ ಬೆಟ್ಟಗಳಿಂದ ಕೂಡಿದ ಇತಿಹಾಸ ಮಹತ್ವ ಪಡೆದ ಸ್ಥಳವಾಗಿತ್ತು ಎಂದು ತಿಳಿದು ಬರುತ್ತದೆ.

ನುಣ್ಣೂರು

ಈ ಊರಿನಲ್ಲಿ ವಿಜಯನಗರ ಅರಸರ ಕಾಲಕ್ಕೆ ಸಂಬಂಧಿಸಿದ ಶ್ರೀ ವೈದ್ಯೇಶ್ವರ ದೇವಾಲಯವು ಇದ್ದು ಈ ಮಂದಿರದ ಗೋಡೆಯ ಒಳಭಾಗದಲ್ಲಿ ಪ್ರಚಾರಕ್ಕೆ ಬಾರದ ಲಿಪಿಯೊಂದರ ಶಾಸನವು ಕಂಡುಬರುತ್ತದೆ ಈ ಸ್ಥಳದಲ್ಲಿ ಹಲವಾರು ವೀರಗಲ್ಲು ಮತ್ತು ಮಾಸ್ತಿಕಲ್ಲುಗಳು ಕಂಡುಬರುತ್ತವೆ. ಅನತಿ ದೂರದಲ್ಲೇ 'ಸವಣಪ್ಪನ ಗುಡ್ಡೆ' ಎಂಬ ಗುಡ್ಡದಲ್ಲಿ ಉತ್ತರಾಭಿಮುಖ ವಾಗಿ ನಿಂತಿರುವ ಶ್ರವಣನ ದಿಗಂಬರ ಮೂರ್ತಿಯನ್ನು ನೋಡಬಹುದಾಗಿದೆ. ಒಂದು ಕಾಲದಲ್ಲಿ ಮಲ್ಲಿಕಾಫರ್ ದಂಡೆಯಾತ್ರೆಯ ಸಮಯದಲ್ಲಿ ಸಂಪೂರ್ಣವಾಗಿ ನಾಶ ಹೊಂದಿದ್ದ ಈ ಜೈನ ಕೇಂದ್ರದ ಬಗ್ಗೆ ಇತಿಹಾಸದಲ್ಲಿ ಯಾವುದೇ ದಾಖಲೆಗಳು ಸಿಗುವುದಿಲ್ಲ ೧೫ನೇ ಶತಮಾನಕ್ಕಿಂತ ಹಿಂದೆ ನಡೆದ ಘಟನೆ ಆಗಿರಬಹುದೆಂದು ಊಹಿಸಲಾಗಿದೆ. ಇಂದಿಗೂ ಈ ಸ್ಥಳದಲ್ಲಿ ಮಕ್ಕಳ ಸಂತಾನ ಫಲ ಬಯಕೆ ಇರುವವರು ಭಕ್ತಿಯಿಂದ ಪ್ರಾರ್ಥನೆಯನ್ನು ಸಲ್ಲಿಸುವ ಪದ್ಧತಿಯು ಕಂಡುಬರುತ್ತದೆ.

ಹೀಗೆ ಚನ್ನಪಟ್ಟಣ ತಾಲ್ಲೂಕು ಹಲವಾರು ಐತಿಹಾಸಿಕ ವಿಚಾರಗಳನ್ನು ಐತಿಹ್ಯಗಳನ್ನು ತನ್ನ ಕಾಲಗರ್ಭದಲ್ಲಿ ಹುದುಗಿಸಿಕೊಂಡು ಮುಂದಿನ ಸಂಶೋಧಕರಿಗೆ ಸಂಶೋಧನೆ ಮಾಡಲು ಪ್ರೇರಣೆಯ ಕಣಜವಾಗಿದೆ ಎಂದೆನಿಸುತ್ತದೆ.

೮೩

ದಾವಣಗೆರೆ ಜಿಲ್ಲೆಯಲ್ಲಿ ವಿಜಯನಗರ ಮತ್ತು ನಾಯಕರ ಕಾಲದ ಕೆರೆ ನೀರಾವರಿ ವ್ಯವಸ್ಥೆ (ಕ್ರಿ.ಶ. ೧೩೩೬ ರಿಂದ ೧೮೦೦)

ಡಾ. ಎನ್.ಜಿ. ಸಂತೋಷ್* ಜೆ.ಬಿ. ನಾಗವೇಣಿ**

ವಿಜಯನಗರ ಆಡಳಿತವು ಕೃಷಿ ಪ್ರಧಾನ ಅರ್ಥ ವ್ಯವಸ್ಥೆಯನ್ನು ಹೊಂದಿದ್ದಿತು. ತಮ್ಮ ಆರ್ಥಿಕ ಸ್ಥಿತಿ ಬಲಗೊಳಿಸಲು ಕೃಷಿಯ ಅಭಿವೃದ್ಧಿಯ ಕಡೆಗೆ ಗಮನ ನೀಡುವುದು ಅವಶ್ಯವಾಗಿದ್ದಿತು. ಇದಕ್ಕಾಗಿ ರಾಜ್ಯವು ಕೃಷಿ ಕ್ಷೇತ್ರ ವಿಸ್ತರಣೆ ಮತ್ತು ಈಗಾಗಲೇ ಇರುವ ಕೃಷಿ ಕ್ಷೇತ್ರಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸುವ ಕಾರ್ಯಗಳನ್ನು ಮಾಡಲು ತಮ್ಮ ಅಧೀನ ಸಂಸ್ಥೆಗಳು, ಅಧಿಕಾರಿಗಳು ಹಾಗೂ ಸಮಾಜದ ವಿವಿಧ ವರ್ಗಗಳನ್ನು ಪ್ರೋತ್ಸಾಹಿಸುತ್ತಿತ್ತು. ಅಂತಹ ನೀರಾವರಿ ಕಾಮಗಾರಿಗಳನ್ನು ನಿರ್ಮಿಸುವುದು ಸಮಾಜದ ಶ್ರೇಷ್ಠ ಮೌಲ್ಯಗಳಲ್ಲಿ ಒಂದು, ಅದು ಪುಣ್ಯ ಕಾರ್ಯ ಎಂಬ ಭಾವನೆಯು ಸಮಾಜದಲ್ಲಿ ರೂಪಗೊಂಡಿತ್ತು. ಅದನ್ನು ಶಾಸನಗಳು ಹಾಗೂ ಹಲವು ಕೃತಿಗಳು ಪ್ರತಿಬಿಂಬಿಸುತ್ತವೆ. ಸ್ಥಳೀಯ ಸರಕಾರಗಳು ಈ ಕಾರ್ಯ ತಮ್ಮ ಸಾರ್ವಜನಿಕ ಕಾರ್ಯದ ಪ್ರಮುಖ ಭಾಗ ಎಂದು ತಿಳಿದುಕೊಂಡರೆ, ಸಮಾಜದ ವಿವಿಧ ವರ್ಗಗಳು ಸಮಾಜದಲ್ಲಿ ತಮ್ಮ ಸ್ಥಾನಮಾನ ಹೆಚ್ಚಿಸಿಕೊಳ್ಳಲು ಇಂತಹ ನೀರಾವರಿ ಕಾಮಗಾರಿಗಳನ್ನು ನಿರ್ಮಿಸುತ್ತಿದ್ದವು. ದೇವಾಲಯಗಳು ತಮ್ಮ ಸಾಮಾಜಿಕ, ಆರ್ಥಿಕ ಕಾರ್ಯವೆಂದು ಪರಿಗಣಿಸಿದ್ದವು. ವಿಜಯನಗರ ಅವಧಿಯ ಶಾಸನದಿಂದ ಜಲಾಶಯ, ಕೆರೆ, ಕಟ್ಟೆ, ಕಾಲುವೆಗಳ ನಿರ್ಮಾಣವು ಪುಣ್ಯದ ಕಾರ್ಯ ಎಂಬ ಧಾರ್ಮಿಕ ನಂಬಿಕೆಯಾಗಿದ್ದಿತು.[೧] ಎಂದು ಗ್ರಹಿಸಬಹುದಾಗಿದೆ.

ನದಿಗಳು ಹರಿಯದೆ ಇರುವ ಪ್ರದೇಶಗಳಲ್ಲಿನ ಕೃಷಿಕರು ಕೆರೆ ಬಾವಿಗಳನ್ನು ನೀರಾವರಿಗಾಗಿ ಅವಲಂಬಿಸಬೇಕಾಗಿತ್ತು. ಕೆರೆಗಳಲ್ಲಿ ಮಳೆಯ ನೀರನ್ನು ಸಂಗ್ರಹಿಸಲಾಗುತ್ತಿತ್ತು. ಕೆರೆಗಳನ್ನು ಅರಸರು ಹಾಗೂ ಖಾಸಗೀ ವ್ಯಕ್ತಿಗಳು ಸರಕಾರದೊಡನೆ ತಮ್ಮ ಖರ್ಚಿನಲ್ಲಿ ಕೆರೆಗಳ ನಿರ್ಮಾಣ ಕಾರ್ಯದಲ್ಲಿ ಪಾಲ್ಗೊಳ್ಳುತ್ತಿದ್ದರು. ಪ್ರತಿಯೊಂದು ಹಳ್ಳಿಯಲ್ಲಿಯೂ ಅಲ್ಲಿನ ಬೇಸಾಯ ಭೂಮಿಯ ವಿಸ್ತಾರ ಹಾಗೂ ಬೆಳೆಯುವ ಬೆಳೆ ಇವುಗಳನ್ನು ಅವಲಂಬಿಸಿಕೊಂಡು ಕೆರೆಗಳಿರುತ್ತಿದ್ದವು. ಪ್ರತಿಯೊಂದು ಕೆರೆಗಳಿಗೂ ಹೆಸರುಗಳಿರುತ್ತಿದ್ದವು. ಕೆರೆಗಳನ್ನು ಕಟ್ಟಿಸಿದವರ ಹೆಸರು ಅಥವಾ ಯಾರ ಗೌರವಾರ್ಥವಾಗಿ ಕಟ್ಟಲಾಗಿದೆಯೊ ಅವರ ಹೆಸರಿನ ಆಯಾ ಕೆರೆಗಳಿಗೆ ಇಡುವುದು ರೂಢಿಯಲ್ಲಿತ್ತು.

ಬುಕ್ಕರಾಯನು ವಿಜಯನಗರದಲ್ಲಿ ರಾಜ್ಯವಾಳುತ್ತಿದ್ದಾಗ ಕ್ರಿ.ಶ. ೧೩೫೪ ಹರಿಹರದೇವಪುರದಲ್ಲಿ ಮಿಟ್ಟಲಗೊಲ್ಲನು ಮಿಟ್ಟಲಿಂಗನ ಕಟ್ಟೆ ಎಂಬ ಕೆರೆಯನ್ನು ಉಚ್ಚಂಗಿ ಪ್ರದೇಶದ ಸಾಮಂತ ಅಧಿಕಾರಿಯ ಆಜ್ಞೆಯಂತೆ ನಿರ್ಮಿಸಿದನು.[೨] ವೀರಬುಕ್ಕಣ್ಣ ಒಡೆಯರು ರಾಜ್ಯವಾಳುತ್ತಿರುವಾಗ ಭುವಿ ನಾಯಕನ ಮಗ ಇಬ್ಬೆಯನಾಯಕನು ತಮ್ಮ ತಂದೆ ಕಾಲವಾದಾಗ ಅವರ ಹೆಸರಿನಲ್ಲಿ ಕ್ರಿ.ಶ. ೧೩೬೦ರಲ್ಲಿ ೧೫೦ ವರಹ ಖರ್ಚು ಮಾಡಿ ಭುವಸಮುದ್ರವೆಂಬ ಕೆರೆ ಕಟ್ಟಿಸಿದನು. ಅಲ್ಲಿನ ಹಳ್ಳಿಹಾಳು ಎಂಬ ಗ್ರಾಮದಲ್ಲಿ ಬುವೇಶ್ವರ ದೇವರನ್ನು ಪ್ರತಿಷ್ಠಾಪಿಸಿ ದೇವರ ಧೂಪ ನೈವೇದ್ಯಗಳಿಗಾಗಿ ಭುವ ಸಮುದ್ರದ ಕೆರೆಯ ಕೆಳಗಿನ ಗದ್ದೆ, ಹಳ್ಳಿಹಾಳಿನ ಬೆದ್ದಲು ಭೂಮಿ ಎತ್ತು ೩ ದಾನ ನೀಡಿದನು.[೩] ಕ್ರಿ.ಶ. ೧೩೭೯ರಲ್ಲಿ ಎರಡನೇ ಹರಿಹರನ ಅಧಿಕಾರಿ ಮುದ್ದದಂಡಾಧಿಪತಿಯು ಚಿಕ್ಕಹದಡಿ ಎಂಬ ಗ್ರಾಮಕ್ಕೆ ಮುದ್ದದಂಡ ನಾಯಕಪುರವೆಂದು ಹೆಸರಿಸಿ ಅಲ್ಲಿ ಕೆರೆಯೊಂದನ್ನು ನಿರ್ಮಿಸಿದನು.[೪] ಕ್ರಿ.ಶ. ೧೫೫೦ರಲ್ಲಿ ವೀರ ಪ್ರತಾಪ ಸದಾಶಿವರಾಯರು ಪಾಂಡ್ಯನಾಡ ಉಚ್ಚಂಗಿ ವೇಂಠೆಗೆ ಸಲ್ಲುವ ಬಿಳಿಚೋಡ ಸೀಮೆಯೊಳಗಿನ ಹೊಸ ಕೆರೆಯನ್ನು ಪ್ರತಿನಾಮವಾದ ಕೃಷ್ಣಸಮುದ್ರವೆಂದು ಹೆಸರಿಸಿದನು.[೫]

ಕೆರೆಗಳನ್ನು ಪುರುಷರಲ್ಲದೆ ಮಹಿಳೆಯರೂ ನಿರ್ಮಿಸಿದ್ದರು. ಕ್ರಿ.ಶ. ೧೪೯೦ರಲ್ಲಿ ಸಂತೆಬೆನ್ನೂರ ಹನುಮಪ್ಪನಾಯಕನ

* ಉಪನ್ಯಾಸಕರು, ಇತಿಹಾಸವ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
** ಇತಿಹಾಸ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ-೫೭೭೦೦೧.

ಹೆಂಡತಿ ಹಿರಿಯವ್ವನಾಗತಿ ಕಂಚುಗಾರನ ಹಳ್ಳಿಯಲ್ಲಿ ಕೆರೆ ಕಟ್ಟಿಸಿದಳೆಂದು ಸಾಸ್ವೆಹಳ್ಳಿ ಕೈಫಿಯತ್ ತಿಳಿಸುತ್ತದೆ.[೬] ಈ ಕೆರೆಗೆ ಹಿರಿಯವ್ವ ನಾಗತಿ ಕೆರೆಯೆಂದು ಇಂದಿಗೂ ಕರೆಯಲಾಗುತ್ತಿದೆ.

ಎರಡನೇ ಹರಿಹರನು ತನ್ನ ದಂಡಾಧಿಕಾರಿಗೆ ದಾನ ನೀಡುವಾಗ ನೀರಿನ ಕಾಲುವೆಯುಳ್ಳ ಶಾಘ್ಯವಾದ ಹೊರ ವಲಯವುಳ್ಳ ಸಮಸ್ತ ಭೂಮಿಗೆ ಮಳೆಗಾಗಿ ದೈವವನ್ನು ಅವಲಂಬಿಸದೆ ಇದೆ.[೭] ಇದರಿಂದ ಹಳೆಯ ಕೆರೆಗಳು ಈಗಾಗಲೇ ಇದ್ದು ವಿಜಯನಗರ ಮತ್ತು ವಿಜಯನಗರೋತ್ತರ ನಾಯಕ ಅರಸರ ಕಾಲದಲ್ಲಿಯೂ ನೀರಾವರಿಗೆ ಅನುಕೂಲವಾಗಿರುವುದು ಕಂಡುಬರುತ್ತದೆ. ಅರಸೀಯ ಕೆರೆ[೮], ಹೆಳವನಕಟ್ಟೆ[೯], ವಿತಿಕೊರಾಯಗೋಡನ ಕೆರೆ[೧೦], ಮಹಡಿಯ ಕೆರೆ[೧೧], ಸೂಳೆಕೆರೆ[೧೨], ದೋಸಲೂರ ಹಿರಿಯಕೆರೆ[೧೩], ಅಣಜಿ ಕೆರೆ[೧೪], ರಾಮನಕೆರೆ[೧೫], ದುಮ್ಮಿಯಕೆರೆ[೧೬], ಬಸವಸಮುದ್ರ[೧೭], ದೊಡ್ಡಹತ್ತಿನಹಳ್ಳಿಕೆರೆ[೧೮], ಕಂಕನಹಳ್ಳಿಕೆರೆ[೧೯], ಹಲವಾರು ಹಳೆಯ ಕೆರೆಗಳು ವಿಜಯನಗರ ಕಾಲದಲ್ಲಿಯೂ ನೀರನ್ನು ಒದಗಿಸುತ್ತಿದ್ದುದು ಕಂಡುಬರುತ್ತದೆ. ಇದರಿಂದ ಅಗ್ರಹಾರ ಮತ್ತು ದೇವಾಲಯಗಳು ಕೆರೆಗಳ ನಿರ್ಮಾಣದಂತ ಕಾರ್ಯಗಳನ್ನು ಧಾರ್ಮಿಕ ತಳಹದಿಯನ್ನೊಳಗೊಂಡಿ ತ್ತೆಂಬುದು ತಿಳಿದುಬರುತ್ತದೆ.

ವಿಜಯನಗರ ಪ್ರಾಂತೀಯ ಅರಸರುಗಳಾದ ಚಿತ್ರದುರ್ಗ ನಾಯಕರು, ಸಂತೆಬೆನ್ನೂರು ನಾಯಕರು, ಹರಪನಹಳ್ಳಿ ನಾಯಕರು ಕೃಷಿ ಚಟುವಟಿಕೆಗಳನ್ನು ಉತ್ತೇಜಿಸಲು ನೀರಾವರಿ ಕಾರ್ಯಗಳನ್ನು ಕೈಗೊಂಡರು. ಸಂತೆಬೆನ್ನೂರ ಹನುಮಪ್ಪನಾಯಕನ ಹೆಂಡತಿ ಹಿರಿಯವ್ವನಾಗತಿ ಕ್ರಿ.ಶ. ೧೪೯೦ರಲ್ಲಿ ಕಂಚುಗಾರನಹಳ್ಳಿಯಲ್ಲಿ ಒಂದು ಕೆರೆ ಕಟ್ಟಿಸಿದಾಗ ಸಾಸವೆಹಳ್ಳಿ ಕೈಫಿಯತ್ತಿನಲ್ಲಿ ತಿಳಿದು ಬರುತ್ತದೆ.[೨೦] ಸಂತೆಬೆನ್ನೂರ ಇಮ್ಮಡಿ ಕೆಂಗಪ್ಪನಾಯಕನು (ಕ್ರಿ.ಶ. ೧೫೬೭-೭೦) ಹಿರೇಕೋಗಲೂರು, ಸಂತೆಬೆನ್ನೂರು, ಮೆದಿಕೆರೆ, ತಣಿಗೆರೆ, ಸಿದ್ದನಮಠ ಗ್ರಾಮಗಳಲ್ಲಿ ಕೆರೆಗಳನ್ನು ಕಟ್ಟಿಸಿದನೆಂದು ಸಂತೆಬೆನ್ನೂರು ಕೈಫಿಯತ್ತಿನಲ್ಲಿ ತಿಳಿದು ಬರುತ್ತದೆ.[೨೧] ಇವುಗಳನ್ನಲ್ಲದೆ ಸಾಸವೆಹಳ್ಳಿಯಲ್ಲಿ ಉತ್ತರ ಭಾಗದಲ್ಲಿ ಕೆರೆಯನ್ನು ಕಟ್ಟಿಸಲು ಹವಾಲೆ ವೀರನಾಯಕನನ್ನು ನೇಮಿಸಿದನು.[೨೨] ಹೊಸಹಳ್ಳಿ (ಹೊದಿಗೆರೆ)ಯಲ್ಲಿ ಕೆರೆಯನ್ನು ಕಟ್ಟಿಸಲು ಹವಾಲೆ ಬಾಲನಾಯಕನನ್ನು ನೇಮಿಸಿದನು.[೨೩] ಎಂದಿಗೂ ಈ ಕೆರೆಗಳಿಗೆ ವೀರನಾಯಕನ ಕೆರೆ ಮತ್ತು ಬಾಲನಾಯಕನ ಕೆರೆ ಎಂದು ಕರೆಯಲಾಗುತ್ತಿದೆ.

ಚನ್ನಗಿರಿ ತಾಲ್ಲೂಕು ದಾಗಿನಕಟ್ಟೆ ಗ್ರಾಮಕ್ಕೆ ಹೊಂದಿಕೊಂಡಂತೆ ೩ ಕೆರೆಗಳಿವೆ. ಕೆರೆಯ ತೂಬಿನಲ್ಲಿರುವ ಮಂಟಪ ಮತ್ತು ಸಂತೆಬೆನ್ನೂರಿನ ಪುಷ್ಕರಣಿಯ ಮಂಟಪ ಒಂದೇ ರೀತಿಯಾಗಿವೆ. ಇದರಿಂದ ಸಂತೆಬೆನ್ನೂರು ನಾಯಕ ಕೆಂಗಪ್ಪನಾಯಕ ಕಟ್ಟಿಸಿದನೆಂಬ ವಾಡಿಕೆಯೂ ಇದೆ. ಜೊತೆಗೆ ಯಲ್ಲೋದಕಟ್ಟೆ ಕೆರೆ ಗೋಣಿಕಟ್ಟೆ ಕೆರೆಗಳನ್ನು ಇವನ ಕಾಲದಲ್ಲಿ ನಿರ್ಮಿತವಾದವೆಂದು ಜನರು ತಿಳಿಸುತ್ತಾರೆ. ಇಮ್ಮಡಿ ಕೆಂಗ ಹನುಮಪ್ಪನಾಯಕನ ಮಗ ನಿಚ್ಚ ಮದುವಣಿಗ ಕೆಂಗ ಹನುಮಪ್ಪನಾಯಕನು (ಕ್ರಿ.ಶ. ೧೫೭೦-೧೫೮೦) ಬೆಳ್ಳಿಗನೂಡು ಮತ್ತು ಕುಳೆನೂರು ಗ್ರಾಮಗಳಲ್ಲಿ ಕೆರೆಯನ್ನು ನಿರ್ಮಿಸಿದನು.[೨೪] ಹರಪನಹಳ್ಳಿ ನಾಯಕ ಅರಸ ರಂಗಪ್ಪನಾಯಕನು (ಕ್ರಿ.ಶ. ೧೪೯೩-೧೬೧೬ ಹರಪನಹಳ್ಳಿಯ ಸುತ್ತಮುತ್ತ ಹಿರೇಕೆರೆ ಮತ್ತು ನಾಯಕನ ಕೆರೆಯನ್ನು ನಿರ್ಮಿಸಿದನು. ಹಿರೇಕೆರೆಯನ್ನು ಕಟ್ಟಿಸಲು ದಣ್ಣಾಯಕ ಮುದ್ದನೆಂಬುವನನ್ನು ನೇಮಿಸಿದನು. ಈ ಕೆರೆಯನ್ನು ಏಳು ಕಲ್ಲುಗಳ ಸಾಲಿನಿಂದ ಕಟ್ಟಲಾಗಿದೆ.[೨೫] ಅರಸು ಕುಟುಂಬ ದವರಲ್ಲದೆ ಸಮಾಜದ ವಿವಿಧ ವರ್ಗದ ಜನರು ತೊಡಗಿದ್ದರೆಂದು ಚನ್ನಗಿರಿ ಶಾಸನ ತಿಳಿಸುತ್ತದೆ. ಕ್ರಿ.ಶ. ೧೬೫೩ರಲ್ಲಿ ಬಸವಾಪಟ್ಟಣ ನಾಡಿಗರು ಸೆಟ್ಟಿಜೇಗಳು ಮಲ್ಲಿಪುರವೆಂಬ ಗ್ರಾಮವನ್ನು ಕಟ್ಟಿಸಿ ಅಲ್ಲಿ ಸರೋವರದೆನಿಸುವಂತ ಕೆರೆಯನ್ನು ನಿರ್ಮಿಸಿದರು.[೨೬]

ಪ್ರವಾಸಿಗ ಫ್ರಾನ್ಸಿಸ್ ಬುಕಾನನ್ ಶಿವಮೊಗ್ಗ, ಸಾಸ್ವೆಹಳ್ಳಿ, ಹರಿಹರ, ದಾವಣಗೆರೆ ಮೂಲಕ ಚಿತ್ರದುರ್ಗಕ್ಕೆ ಹೋಗುತ್ತಾನೆ. ಈ ಭಾಗದ ಕೆರೆಗಳು ಮಳೆಗಾಲದಲ್ಲಿ ನೀರು ಸಂಗ್ರಹವಾಗಿದ್ದು, ಬೇಸಿಗೆ ಕಾಲದಲ್ಲಿ ಒಣಗಿರುತ್ತವೆ ಎಂದು ತಿಳಿಸುತ್ತಾನೆ.[೨೭]

ಕೆರೆಯ ಸಾಮರ್ಥ್ಯ ಬಹುಮಟ್ಟಿಗೆ ಅದರ ನೀರಿನ ಸಂಗ್ರಹದ ಮೇಲೆ ಅವಲಂಭಿಸಿರುತ್ತದೆ. ಈ ಬಗ್ಗೆ ಶಾಸನದಲ್ಲಿ ಯಾವುದೇ ಮಾಹಿತಿ ತಿಳಿದುಬರುವುದಿಲ್ಲ. ಅದರಂತೆ ಕೆರೆಯ ವಿಸ್ತೀರ್ಣವನ್ನು ಅವುಗಳ ಹೆಸರಿನಿಂದ ಅಂದಾಜು ಮಾಡಬಹುದಾಗಿದೆ. ಚಿಕ್ಕಕೆರೆ[೨೮] ಕಿರಿಯಕೆರೆ[೨೯]. ಕಿರುಗೆರೆ, ಹಿರಿಯಕೆರೆ[೩೦] ಪಿರಿಯಕೆರೆ[೩೧] ಮಹಾತಟಾಕ[೩೨] ಸರೋವರ[೩೩] ಸಮುದ್ರ[೩೪] ಎಂದು ಶಾಸನಗಳಲ್ಲಿ ಉಲ್ಲೇಖಿತವಾಗಿದೆ.

ವಿಜಯನಗರ ಅರಸರು, ಪ್ರಾಂತೀಯ ಅರಸರುಗಳು, ಅಧಿಕಾರಿಗಳು ದೇವಾಲಯ ಮತ್ತು ಗ್ರಾಮಾಡಳಿತಗಳು ಹೊಸಕೆರೆಗಳನ್ನು ನಿರ್ಮಿಸಿದ್ದಲ್ಲದೆ ಹಳೆಯ ಹಾಗೂ ಒಡೆದುಹೋದ ಕೆರೆಗಳ ದುರಸ್ತಿಯನ್ನು ಕೈಗೊಳ್ಳುತ್ತಿದ್ದರು.[೩೫] ಏಕೆಂದರೆ ಕುಡಿಯುವ ನೀರಿಗಾಗಿ, ಬಟ್ಟೆ ಒಗೆಯಲು, ಸ್ನಾನ ಮಾಡಲು ಹಾಗೂ ದನಕರುಗಳಿಗೆ ಅಲ್ಲದೆ ಧಾರ್ಮಿಕ ಕಾರ್ಯಗಳಿಗಾಗಿ ಪ್ರತಿಯೊಂದು ಹಳ್ಳಿಯಲ್ಲಿ ಕೆರೆ ಇರುತ್ತಿದ್ದವು.[೩೬] ನೀರಾವರಿ ಅನುಕೂಲಕ್ಕಾಗಿ ಇದ್ದ ಕೆರೆಗಳಿಗೆ

ತೂಬು, ಕೋಡಿ, ಕಾಲುವೆ, ಏರಿಗಳಿದ್ದವೆಂದು ಪರೋಕ್ಷವಾಗಿ ಶಾಸನಗಳಿಂದ ತಿಳಿಯಬಹುದು.

ನೀರಾವರಿ ಕಾಮಗಾರಿಗಳು ಹೆಚ್ಚು ಹೆಚ್ಚಾಗಿ ನಿರ್ಮಾಣಗೊಳ್ಳಬೇಕೆನ್ನುವ ಉದ್ದೇಶದಿಂದ ಕೆರೆಗಳನ್ನು ನಿರ್ಮಿಸುವವರಿಗೆ ಭೂದಾನಗಳು ಹಾಗೂ ತೆರಿಗೆಯಿಂದ ಪೂರ್ತಿ ಅಥವಾ ಭಾಗಶಃ ವಿನಾಯಿತಿ ನೀಡಲಾಗುತ್ತಿತ್ತು. ಕ್ರಿ.ಶ. ೧೪೧೦ರಲ್ಲಿ ದೇವರಾಯನು ಹರಿಹರ ದೇವರು ಮತ್ತು ಹರಿಹರ ಕ್ಷೇತ್ರದ ಮಹಾಜನರೊಂದಿಗೆ ಒಂದು ಒಪ್ಪಂದ ಮಾಡಿದನು. ಇದರ ಪ್ರಕಾರ ಹರಿದ್ರೆಗೆ ಕಟ್ಟೆಯನ್ನು ಕಟ್ಟಿ, ಅದರ ಕಾಲುವೆಯಿಂದ ನೀರು ಹರಿದ ಭೂಮಿಯಲ್ಲಿ ಹರಿಹರದ ದೇವರಿಗೆ ಎರಡು ಭಾಗ ಮತ್ತು ತಮ್ಮ ವೆಚ್ಚದಲ್ಲೇ ಸೇತುವೆ ಕಟ್ಟಿದ ಮಹಾಜನರಿಗೆ ತೆರಿಗೆ ಮಾಫಿ ಮಾಡಿ, ಇವರಿಗೆ ಮೂರನೆಯ ಒಂದು ಭಾಗ ಸಲ್ಲತಕ್ಕದೆಂದು ನಿಯಮ ಮಾಡಿದನು. ಮಹಾಜನರು ಈ ನಿರ್ಮಾಣವನ್ನು ಪೂರೈಸಿದ್ದಕ್ಕಾಗಿ ಬುಳ್ಳಪ್ಪನಿಗೆ ತಮ್ಮ ಪಾಲಿನಿಂದ ಮೂರು ಖಂಡುಗ ಬತ್ತ ಬೆಳೆಯುವ ಭೂಮಿಯನ್ನು ಕೊಟ್ಟರು.[೩೭] ಕ್ರಿ.ಶ. ೧೩೮೭ರಲ್ಲಿ ಐವತ್ತು ಮಹಾಜನರು ದೊಸಲೂರ ಹಿರಿಯ ಕೆರೆಯ ಕೆಳಗೆ ಬಿಟ್ಟ ಕೆಂಗಾಡು ಮತ್ತರು ಕೆಯನ್ನು ಬೀರಣ್ಣನಿಗೆ ಕೆರೆ ಮಾನ್ಯವಾಗಿ ಬಿಟ್ಟರು.[೩೮] ಇದರಿಂದ ಬೀರಣ್ಣನು ಕೆರೆಯ ಕೆಲಸದಲ್ಲಿ ತೊಡಗಿದ್ದನೆಂದು ತಿಳಿಯುತ್ತದೆ.

ಸಾಂಪ್ರದಾಯಿಕ ವ್ಯವಸ್ಥೆಯಲ್ಲಿ ಬೀಳುತ್ತಿದ್ದ ಮಳೆ ನೀರು ಇಳಿಜಾರು ಪ್ರದೇಶಗಳ ಕಡೆಗೆ ಹಳ್ಳಗಳ ರೂಪದಲ್ಲಿ ಹರಿಯುತ್ತಿತ್ತು. ಇವುಗಳಿಗೆ ಅಡ್ಡವಾಗಿ ಕಟ್ಟೆಯನ್ನು ಕಟ್ಟಿ, ನೀರನ್ನು ಸಂಗ್ರಹಿಸಲಾಗುತ್ತಿತ್ತು. ಒಂದೊಂದು ಕೆರೆಗೂ ಜಲಾಯನ ಪ್ರದೇಶ ಇರುತ್ತಿತ್ತು. ನೀರು ಒಳಹರಿಯುವುದಕ್ಕೂ ಹೆಚ್ಚುವರಿ ನೀರು ಹೊರ ಹೋಗುವುದಕ್ಕೆ ಬೇಕಾದಂತೆ ನಿಶ್ಚಿತ ಸ್ಥಳಗಳಲ್ಲಿ ತೂಬುಗಳು ಇರುವುದು ಕಂಡುಬರುತ್ತದೆ.[೩೯] ಕ್ರಿ.ಶ. ೧೫೨೭ರಲ್ಲಿ ಅರಸೀಕೆರೆ ಹಳ್ಳಿಯ ಕೆರೆ ಮತ್ತು ತೂಬಿನ ದುರಸ್ತಿ ಕಾರ್ಯದಲ್ಲಿ ಅನುಸರಿಸಲಾಗುತ್ತಿದ್ದ ವಿವರಗಳನ್ನು ಹರಪನಹಳ್ಳಿಯ ಗುಡಿಹಳ್ಳಿ ಶಾಸನ ತಿಳಿಸುತ್ತದೆ. ಕೆರೆಯ ತೂಬು, ಕಾಲುವೆಯ ಕಲ್ಲುಗಳು ಮುರಿದು ಬಿದ್ದುಹೋಗಿ ಕಾಲುವೆಯ ಪರಿಸ್ಥಿತಿ ಶೋಚನೀಯವಾಗಿತ್ತು. ಮೊದಲು ಕಟ್ಟುವಾಗ ಭದ್ರವಾದ ಕಲ್ಲುಗಳಿಂದ ಕಟ್ಟಿರಲಿಲ್ಲ. ಇದರಿಂದ ತೂಬಿಗೆ ಅಪಾಯವಾಗಿ ಅದು ಕೆಲಸಕ್ಕೆ ಬಾರದೆ ಹೋಗಿದ್ದಿತು. ನೊಣಬನ ಅರಸಿಕೆರೆ ಆಳುತ್ತಿದ್ದ ತಿಮ್ಮರಸ ಎಂಬಾತ ತನ್ನ ಮೇಲಾಧಿಕಾರಿ ನಾಗರಸಯ್ಯನ ಆಜ್ಞೆಯಂತೆ ಕೆರೆಯಲ್ಲಿದ್ದ ಕೊಳಚೆಯನ್ನು ತೆಗೆಸಿ ಹಾಕಿಸಿದನು. ಮುಂದೆ ತೂಬನ್ನು ಬಿಚ್ಚಿಸಿ ಅದರ ನಾನಾ ಭಾಗಗಳನ್ನು ತೆಗೆಸಿಹಾಕಿ ಭದ್ರವಾದ ಕಲ್ಲುಗಳಿಂದ ಗಾರೆ ಹಾಕಿಸಿ ಮತ್ತೆ ಕಟ್ಟಿಸಿದನು. ಆಗ ಜನರು ನೊಣಬೇಶ್ವರ ದೇವರಲ್ಲಿ, ತೂಬನ್ನು ರಕ್ಷಿಸಿದ ತಿಮ್ಮರಸನನ್ನು ಕಾಪಾಡು ಎಂದು ಶಾಸನದಲ್ಲಿದೆ.[೪೦]

ಶ್ರೀ ಹರಿಹರ ಮಹಾರಾಯರು ರಾಜ್ಯವನ್ನು ಸಾಧಿಸಿ, ಇವರ ಪ್ರಧಾನಿ ಬಸವಪ್ಪ ಡಣ್ಣಾಯಕರು ಕಷ್ಟಗಳನ್ನು ತಿಳಿಯಲು ಸೂಳೆಕೆರೆಗೆ ಬರಲು ಆಗ ಕೆರೆಯು ಶಿಥಿಲವಾಗಿದ್ದು, ಈ ಶಿಥಿಲತೆಗೆ ಕಾರಣವೇನು ಎಂದು ಶಾನುಬೋಗ ಬೊಮ್ಮರಸಯ್ಯನನ್ನು ವಿಚಾರಿಸಿದಾಗ 'ಯೀ ಹರಿದ್ರಾ ನದಿಯ ಪ್ರವಾಹವು ಕೋಡಿಯಲ್ಲಿ ಹಳ್ಳಹರಿದು ಕೆರೆಗೆ ನೀರು ಸಂಗ್ರಹವಾಗುತ್ತಿಲ್ಲ ಎಂದು ಮನವರಿಕೆ ಮಾಡಿಕೊಟ್ಟಿದ್ದರಿಂದ ಬಸವಪ್ಪ ಡಣ್ಣಾಯಕರು ಕೋಟೆಯ ಬಳಿಯ ಮಡುಕಟ್ಟೆಯಲ್ಲಿ ಹೊಸದಾಗಿ ಕೋಡಿ ಮಾಡಿಸಿ, ಅದಕ್ಕೆ ಬಸವನ ತೂಬು ಎಂದು ಹೆಸರಿಟ್ಟನು.[೪೧] ೧೭೪೨ನೇ ವಿಕ್ರಮ ಸಂವತ್ಸರ ವೈಶಾಕ ಬಾಹುಳ ೧೨ ಮಂಗಳವಾರ ಸಾಯಂಕಾಲ ಭಾರಿ ಮಳೆಯಿಂದಾಗಿ ಸೂಳೆಕೆರೆಯು ತುಂಬಿ, ಕೋಡಿ ಹರಿದು, ನೀರು ನಿಲ್ಲುವ ಗ್ರಾಮಗಳ ವಿವರಣೆಯನ್ನು ಸಂತೆಬೆನ್ನೂರು ಸುಮತೀಂದ್ರ ನಾಡಿಗರ ಹತ್ತಿರವಿರುವ ಅಪ್ರಕಟಿತ ಕೈಫಿಯತ್ ತಿಳಿಸುತ್ತದೆ.[೪೨] ಹಿರೆಉಡ, ಚಿಕ್ಕ ಜಕ್ಕಲಿ, ಜಕ್ಕಲಿ ಸೋಮಲಾಪುರ ಹಳ್ಳಿಗಳು, ಕೆರೆಗೆ ಸೇರಿಕೊಂಡಿದ್ದನೆಂದು ತಿಳಿಯುತ್ತದೆ.

ಈ ಸೂಳೆಕೆರೆಯು ಮಣ್ಣಿನ ಕಟ್ಟೆಯಾಗಿದ್ದು, ೨೦ ಅಡಿ ಉದ್ದದ ಕೋಡಿಯನ್ನು ಹೊಂದಿದೆ.[೪೩] ಕೆರೆಯ ನೀರು ಹತ್ತು ಚದುರ ಮೈಲು ಹಬ್ಬಿ[೪೪] ಇಂದಿಗೂ ಇದು ಅಪಾರ ಪ್ರವಾಹಗಳನ್ನು ತಡೆದುಕೊಂಡು ಉತ್ತಮ ಸ್ಥಿತಿಯಲ್ಲಿದೆ.

ಕೆರೆ ಕಾಲುವೆ ನಿರ್ಮಾಣದಷ್ಟೇ ಅಗತ್ಯವಾದುದು ಅದರ ನಿರ್ವಹಣೆ, ದುರಸ್ತಿ, ಸಂರಕ್ಷಣೆ ಮಾಡುವುದಾಗಿದ್ದಿತು. ಕೆರೆಯ ಪಾಲನೆಯ ಧರ್ಮವನ್ನು ಪಾಲಿಸದಿರುವುದು ಪಾಪವೆಂದು ಭಾವಿಸಲಾಗಿತ್ತು. ಕೆರೆಗಳನ್ನು ನಿರ್ಮಿಸಿ ಅದರ ನಿರ್ವಹಣೆಗೆ ಪಕ್ಕದಲ್ಲಿ ದೇವಾಲಯಗಳನ್ನು ನಿರ್ಮಿಸುತ್ತಿದ್ದರು. ಕ್ರಿ.ಶ. ೧೩೬೦ರಲ್ಲಿ ಇಬ್ಬೆ ನಾಯಕನು ತನ್ನ ತಂದೆಯ ಹೆಸರಿನಲ್ಲಿ ಭುವಸಮುದ್ರವೆಂಬ ಕೆರೆಯನ್ನು ನಿರ್ಮಿಸಿ, ಕೆರೆಯ ಪಕ್ಕದಲ್ಲಿ ಭುವೇಶ್ವರ ದೇವಾಲಯವನ್ನು ಪ್ರತಿಷ್ಠಾಪನೆ ಮಾಡಿಸಿ, ಆ ದೇವಾಲಯದ ನಿರ್ವಹಣೆಗಾಗಿ ಕೆರೆಯ ಕೆಳಗೆ ಗದ್ದೆ ಹತ್ತು, ಹಾಲಿವಾಳದ ಒತ್ತಲಲ್ಲಿ ಬೆದ್ದಲು ಹತ್ತು, ೩ ಎತ್ತುಗಳನ್ನು ನೀಡಿದನು.[೪೫] ಹರಿಹರದ ಹತ್ತಿರ ಹರಿದ್ರ ನದಿಗೆ ಅಡ್ಡವಾಗಿ ಕಟ್ಟೆ ಕಟ್ಟಿ ಅಗ್ರಹಾರ ಪ್ರಜೆಗಳಿಗೆ, ಅವರ ನೀರಾವರಿ ಜಮೀನುಗಳಿಗೆ ಕಂದಾಯದಲ್ಲಿ ರಿಯಾಯಿತಿ ನೀಡಿದನು.[೪೬] ಈ ಜಲಾಶಯ ದುರಸ್ತಿಗೆ ಹರಿಹರ ದೇವಾಲಯವು ಮೂರನೇ ಎರಡರಷ್ಟು ವೆಚ್ಚ ಮಾಡಲು, ಮಹಾಜನರು ಮೂರರಲ್ಲಿ ಒಂದರಷ್ಟು ವೆಚ್ಚ ಮಾಡಿ, ಅದೇ ಪ್ರಮಾಣದಲ್ಲಿ ನೀರನ್ನು ಹಂಚಿಕೊಳ್ಳಬೇಕೆಂದು ಒಪ್ಪಿಕೊಳ್ಳಲಾಗಿದ್ದಿತು. ಕ್ರಿ.ಶ.

೧೪೨೪ರಲ್ಲಿ ಕಟ್ಟೆ ಒಡೆದು ಹೋಗಿದ್ದರಿಂದ ೨ನೇ ದೇವರಾಯನ ಮಂತ್ರಿ ನಾಗಣ್ಣ ಒಡೆಯನು ಚಾಮನೃಪ ಪಾಲನಿಂದ ಹಣ ಪಡೆದು, ರಾಜ್ಯದ ಖರ್ಚಿನಿಂದ ಪುನರ್ ನಿರ್ಮಾಣ ಮಾಡಿದನು.[೪೭]

ಹೀಗೆ ವಿಜಯನಗರ ಮತ್ತು ನಾಯಕರ ಕಾಲದಲ್ಲಿ ಕೆರೆಗಳ ದುರಸ್ತಿ ಮತ್ತು ನಿರ್ವಹಣೆಯಲ್ಲಿ ಅರಸರು, ಅಧಿಕಾರಿಗಳು, ಸ್ಥಳೀಯ ಆಡಳಿತ, ದೇವಾಲಯ ಮತ್ತು ಸರಕಾರ ಈ ನಿರ್ವಹಣಾ ಕಾರ್ಯದಲ್ಲಿ ತೊಡಗಿದ್ದರೆಂದು ತಿಳಿಯಬಹುದಾಗಿದೆ.

ಬಿಜಾಪುರ ಮಹಮದ್ ಷಾನ ಅಧಿಕಾರಿಯಾಗಿದ್ದ ಮಲ್ಲಿಕ್ ಇಬ್ನೆ ಅರ್ಬನ್ ಎಂಬುವನು ಬಸವಾಪಟ್ಟಣದಲ್ಲಿ ಕೆರೆ ಕಟ್ಟಿಸಿ ಶಾಸನವನ್ನು ಬರೆಸುತ್ತಾನೆ. ಕೆರೆಯನ್ನು ಹಿಂದೂ ವಾಗಲಿ, ಮುಸಲ್ಮಾನನಾಗಲಿ ಚೆನ್ನಾಗಿ ನೋಡಿಕೊಂಡು ಬಂದರೆ ಆ ಚಂದ್ರಾರ್ಕವಾಗಿ ಧನ, ಕನಕ, ಕೀರ್ತಿ ಬರಲಿ ಎಂದು, ಈ ಮಾತಿಗೆ ತಪ್ಪಿ ನಡೆದರೆ ಹಿಂದೂವಾದರೆ ಕಾಶಿಯಲ್ಲಿ ಗೋವು ಕೊಂದ ಪಾಪ ಬರಲಿ, ಮುಸಲ್ಮಾನ ನಾದರೆ ಮಸೀದಿಯಲ್ಲಿ ಹಂದಿ ಕೊಂದ ಪಾಪ ಬರಲಿ ಎಂದು ಹೇಳಿ, ಹಿಂದುವು ನಡೆಸಲು ಕಾಶಿಗೆ ಹೋಗಿ ಬಂದ ಫಲ, ಪರಮಾಯುಷ್ಯವು ಲಭಿಸಲಿ ಎಂದು ಮತ್ತು ಮುಸಲ್ಮಾನ ನಾದರೆ ಮೆಕ್ಕಾಗೆ ಹೋದ ಫಲವು ಬರಲಿ ಎಂದು ಹಾರೈಸಲಾಗಿದೆ.[೪೭] ಈಗ ಕೆರೆ ಇಲ್ಲದಿದ್ದರೂ ಈ ಶಾಸನ ಇಂದಿಗೂ ಭಾವೈಕ್ಯತೆಯ ಸಂಕೇತವಾಗಿ ಉಳಿದಿದೆ ಎಂದು ಶಾಸನದಿಂದ ತಿಳಿದುಬರುತ್ತದೆ.

ದಾವಣಗೆರೆ ತಾಲ್ಲೂಕು, ಅಣಜಿಕೆರೆ ಪ್ರಾಚೀನ ಕೆರೆಯಾಗಿದೆ. ಈ ಕೆರೆಯ ಪಕ್ಕದಲ್ಲಿ ಕೆರೆ ಹೊನ್ನಮ್ಮ ದೇವಸ್ಥಾನವಿದೆ. ಈ ಕೆರೆಗೆ ಹೊಂದಿಕೊಂಡಿರುವ ಗ್ರಾಮಗಳ ಜನರು ದೀಪಾವಳಿ ಹಬ್ಬದ ಮೂರನೆಯ ದಿನದಂದು, ಕುಟುಂಬ ಸಮೇತ ಕೆರೆಗೆ ಆಗಮಿಸಿ ಗಂಗಾ ಪೂಜೆ ಮಾಡಿ, ಅನಂತರ ಕೆರೆ ಹೊನ್ನಮ್ಮಳಿಗೆ ಪೂಜೆ ಸಲ್ಲಿಸುತ್ತಾರೆ. ಇಂದಿಗೂ ಕೆರೆಯ ಹತ್ತಿರ ಜಾತ್ರೆ ನಡೆಯುತ್ತದೆ. ಈ ದಿನವನ್ನು ಹಾಲು ಬಿಡೋ ಹಬ್ಬ ಎಂದು ಕರೆಯುತ್ತಾರೆ. ಈ ರೀತಿಯ ಈ ಆಚರಣೆಗೆ ದಾವಣಗೆರೆ ಜಿಲ್ಲೆಯ ಯಾವ ಕೆರೆಯ ಹತ್ತಿರವಾಗಲೀ, ಹಳ್ಳಿಯಲ್ಲಿಯೂ ಕಂಡುಬರುವುದಿಲ್ಲ.

ಈ ನೀರಾವರಿ ಯೋಜನೆಗಳಿಂದಾಗಿ ಜನರ ಹಾಗೂ ದನಗಳ ಆಹಾರದ ವಿಷಯದಲ್ಲಿ ಹಳ್ಳಿಗಳನ್ನು ಸ್ವಾವಲಂಬಿ ಯನ್ನಾಗಿಸಿದವು. ಅಭಾವ ಹಾಗೂ ಪ್ರವಾಹಗಳ ವಿರುದ್ಧ ರಕ್ಷಣೆ ಒದಗಿಸಿದ್ದವು. ಕೆರೆ ಕಟ್ಟೆಗಳಲ್ಲಿ ನೀರಿನ ಸಂಗ್ರಹಣೆಯಿಂದ ಬಾವಿಗಳಲ್ಲಿ ಅಂತರ್‌ಜಲ ಮಟ್ಟವೂ ಹೆಚ್ಚಾಯಿತು. ಮಣ್ಣಿನ ಸವಕಳಿ ಕಡಿಮೆಯಾಗಿ ವಾತಾವರಣವೂ ತಂಪಾಯಿತು. ನೀರಾವರಿಯಿಂದ ಜನರು ಗದ್ದೆ, ತೋಟದ ಬೆಳೆಗಳು, ವಾಣಿಜ್ಯ ಬೆಳೆಗಳನ್ನು ಬೆಳೆಯುವಂತಾದರು. ಆಡಳಿತವು ನೀರಾವರಿ ಭೂಮಿಗೆ, ವಾಣಿಜ್ಯ ಬೆಳೆಗಳಿಗೆ ಹೆಚ್ಚಿನ ತೆರಿಗೆಯನ್ನು ವಿಧಿಸಿದ್ದರಿಂದ ಸರ್ಕಾರಕ್ಕೆ ಹೆಚ್ಚಿನ ಆದಾಯವು ಬರುವಂತಾಯಿತು. ಇದರಿಂದಾಗಿ ಕೆರೆಗಳನ್ನು ಸ್ಮಾರಕಗಳಂತೆ ಸುರಕ್ಷಿಸಿಕೊಂಡು ಅವುಗಳನ್ನು ಪುನರ್ಶ್ಚೇತನಗೊಳಿಸುತ್ತಿದ್ದರು. ಅಂದು ನಿರ್ಮಿಸಿದ ಎಷ್ಟೋ ನೀರಾವರಿ ನಿರ್ಮಾಣಗಳು ಇಂದಿಗೂ ಉಳಿದುಕೊಂಡು ನೂರಾರು ಎಕರೆ ಭೂಮಿಗೆ ನೀರುಣಿಸುತ್ತಿವೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. SII IX Pt 11 No. 528, SII Vol. VI, No. 267, ಪುಟ ೩೧೮, ಕ್ರಿ.ಶ. ೧೪೧೦.

೨. ದಾವಣಗೆರೆ ೬೭, ಕ್ರಿ.ಶ. ೧೩೫೪.

೩. ದಾವಣಗೆರೆ ೧೨೦, ಕ್ರಿ.ಶ. ೧೩೬೦.

೪. ದಾವಣಗೆರೆ ೩೪, ಕ್ರಿ.ಶ. ೧೩೭೯.

೫. ಜಗಳೂರು ೨೪, ಕ್ರಿ.ಶ. ೧೫೫೦.

೬ ಸಂ. ಎಂ.ಎಂ. ಕಲಬುರ್ಗಿ, ಪೂರ್ವೋಕ್ತ, ಪುಟ ೧೦೦.

೭. ದಾವಣಗೆರೆ ೩೪, ಕ್ರಿ.ಶ. ೧೩೭೯.

೮. SII IX pt (ii) No. 522, ಕ.ವಿ.ಶಾ.ಸಂ–೧, ಹರಪನಹಳ್ಳಿ ತಾಲ್ಲೂಕು, ಕೆರೆಗುಡಿಹಳ್ಳಿ ೧೦೬.

೯. 'ಹೆಳವನಕಟ್ಟೆ' ಎನ್ನುವುದು ಮಲೇಬೆನ್ನೂರು ಸಮೀಪದಲ್ಲಿ ಇರುವ ಕುಮಾರನಹಳ್ಳಿಯ ಒಂದು ಕೆರೆ. ಈ ಕೆರೆ ಶ್ರೀರಂಗನಾಥಸ್ವಾಮಿ ದೇವಸ್ಥಾನದ ಪಕ್ಕದಲ್ಲಿ ಈಗಲೂ ಇದೆ.

೧೦. ಕ.ವಿ.ಶಾ.ಸಂ–೧, ಹರಪನಹಳ್ಳಿ ತಾಲ್ಲೂಕು, ಬಾಗಳಿ ೧೭೮.

೧೧. ಚನ್ನಗಿರಿ ೨೮.

೧೨. ಸಂ. ಎಂ.ಎಂ. ಕಲಬುರ್ಗಿ, ಪೂರ್ವೋಕ್ತ, ಪುಟ ೧೦೦.

೧೩. ಕ.ವಿ.ಶಾ.ಸಂ-೧, ಹರಪನಹಳ್ಳಿ ತಾಲ್ಲೂಕು, ಬಾಗಳಿ ೧೧೩, ಕ್ರಿ.ಶ. ೧೩೮೭.

೧೪. ಸಂ. ಪಂಡಿತ ಎಸ್. ಬಸಪ್ಪ, ಪೂರ್ವೋಕ್ತ, ೩ನೇ ಸಂಧಿ, ಪದ್ಯ-೮೩, ಪುಟ ೫೨.

೧೫. ಹೊನ್ನಾಳಿ ೯೬, ಕ್ರಿ.ಶ. ೧೪೦೧.

೧೬. ಬಿ.ಆರ್. ಗೋಪಾಲ್, ವಿಜಯನಗರ ಶಾಸನ ಸಂಪುಟ ೨, ಸಂಖ್ಯೆ ೫೯೨, ಪ್ರಾಚ್ಯ ಸಂಶೋಧನಾ ಇಲಾಖೆ, ಮೈಸೂರು, ೧೯೭೦, ಪುಟ ೭೪.

೧೭. ದಾವಣಗೆರೆ ೭೨, ಕ್ರಿ.ಶ. ೧೪೫೦.

೧೮. ಹೊನ್ನಾಳಿ ೩೪.

೧೯. ಅದೇ

೨೦. ಸಂ. ಎಂ.ಎಂ. ಕಲಬುರ್ಗಿ, ಪೂರ್ವೋಕ್ತ, ಪುಟ ೧೦೨.

೨೧. ಅದೇ, ಪುಟ ೪೨೫.

೨೨. ಮೆಕಂಜಿ ಕೈಫಿಯತ್ತು ಸಂ. ಎಂ.ಎಂ. ಕಲಬುರ್ಗಿ ಪೂರ್ವೋಕ್ತ, ಪುಟ ೧೦೨.

೨೩. ಅದೇ, ಪುಟ ೧೦೨.

೨೪. ಅದೇ, ಪುಟ ೪೨೬.

೨೫. ಕುಂ.ಬಾ. ಸದಾಶಿವಪ್ಪ, ಹರಪನಹಳ್ಳಿ ಇತಿಹಾಸ ದರ್ಶನ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, ೨೦೦೬, ಪುಟ ೩೧.

೨೬. ಚನ್ನಗಿರಿ ೪೩, ಕ್ರಿ.ಶ. ೧೬೫೩.

೨೭. ಫ್ರಾನ್ಸಿ ಬುಕಾನನ್, ಸಂಪುಟ ೩, ಪೂರ್ವೋಕ್ತ, ಪುಟ ೩೪೨.

೨೮. ಚನ್ನಗಿರಿ ೭೪.

೨೯. ಹೊನ್ನಾಳಿ ೨೫.

೩೦ ಚನ್ನಗಿರಿ ೩೮.

೩೧. ಕ.ವಿ.ಶಾ. ಸಂ-೧, ಹರಪನಹಳ್ಳಿ ತಾಲ್ಲೂಕು, ಬಾಗಳಿ ೧೧೩, ಕ್ರಿ.ಶ. ೧೩೮೭.

೩೨. ದಾವಣಗೆರೆ ೩೪.

೩೩. ದಾವಣಗೆರೆ ೨೯, ಕ್ರಿ.ಶ. ೧೪೨೪, ಚನ್ನಗಿರಿ ೪೩.

೩೪. ದಾವಣಗೆರೆ ೧೨೦, ಕ್ರಿ.ಶ. ೧೩೬೦, ಜಗಳೂರು ೨೪.

೩೫. ಟಿ. ಗೋವಿಂದಯ್ಯ, ಕರ್ನಾಟಕ ನೀರಾವರಿ ಅರ್ಥಶಾಸ್ತ್ರ, ಸಮಾಜ ವಿಜ್ಞಾನ ಸಂಶೋಧನಾ ಸಂಸ್ಥೆ, ಬೆಂಗಳೂರು, ೧೯೯೪, ಪುಟ ೧೧-೧೩.

೩೬. ಸಿ.ಟಿ.ಎಂ. ಕೊಟ್ರಯ್ಯ (ಅನು), ಧ್ರುವನಾರಾಯಣ, ವಿಜಯನಗರ ಸಾಮ್ರಾಜ್ಯದ ನೀರಾವರಿ ವ್ಯವಸ್ಥೆ, ಪ್ರಸರಾಂಗ, ಕ.ವಿ.ವಿ. ಹಂಪಿ, ೨೦೦೧, ಪುಟ ೭೦.

೩೭. ದಾವಣಗೆರೆ ೨೯, ಕ್ರಿ.ಶ. ೧೪೨೪.

೩೮. ಕ.ವಿ.ವಿ.ಶಾ.ಸಂ-೧, ಹರಪನಹಳ್ಳಿ ತಾಲ್ಲೂಕು, ಬಾಗಳಿ ೧೧೩, ಕ್ರಿ.ಶ. ೧೩೮೭.

೩೯. ಕೆಳದಿ ಗುಂಡಾಜೋಯಿಸ್, ಕೆಳದಿ ನಾಯಕರ ನೀರಾವರಿ ವ್ಯವಸ್ಥೆ, ಸಂ. ರಾಜರಾಮ ಹೆಗಡೆ ಪೂರ್ವೋಕ್ತ, ಪುಟ ೭೯-೮೦.

೪೦. SII IX Pt (ii) No. 522, ಕ.ವಿ.ವಿ.ಶಾ.ಸಂ. ೧, ಹರಪನಹಳ್ಳಿ ತಾಲ್ಲೂಕು, ಕೆರೆಗುಡಿಹಳ್ಳಿ ೧೦೬.

೪೧. ಸಂ. ಎಂ.ಎಂ. ಕಲಬುರ್ಗಿ, ಕರ್ನಾಟಕದ ಕೈಫಿಯತ್ತುಗಳು, ಪೂರ್ವೋಕ್ತ, ಪುಟ ೧೦೦.

೪೨. ಕೆ. ವೆಂಕಟೇಶ್, ಅಪ್ರಕಟಿತ ಸಂತೆಬೆನ್ನೂರು ಕೈಫಿಯತ್ತಿನಲ್ಲಿ ಕಂಡುಬರುವ ವಿಜಯನಗರ ಇತಿಹಾಸ ಆಕರಗಳು, ವಿಜಯನಗರ ಅಧ್ಯಯನ ಸಂಪುಟ ೨, ೧೯೯೬ ಹಂಪಿ ಉತ್ಸವಕ್ಕೆ ಮಂಡಿಸಿದ ಪ್ರಬಂಧಗಳು, ೧೯೯೭, ಪುಟ ೧೧೬.

೪೩. ಜಿ.ಎಸ್. ದೀಕ್ಷಿತ್, ಜಿ.ಆರ್. ಕುಪ್ಪಸ್ವಾಮಿ, ಎಸ್.ಕೆ. ಮೋಹನ್, ಕರ್ನಾಟಕದಲ್ಲಿ ಕೆರೆ ನೀರಾವರಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦, ಪುಟ.

೪೪. ರಾಜರಾಮ ಹೆಗಡೆ, ಸಂ. ಪೂರ್ವೋಕ್ತ, ಪುಟ ೨.

೪೫. ದಾವಣಗೆರೆ ೧೨೦, ಕ್ರಿ.ಶ. ೧೩೬೦.

೪೬. ದಾವಣಗೆರೆ ೨೯, ಕ್ರಿ..ಶ. ೧೪೨೪.

೪೭. ದಾವಣಗೆರೆ ೨೯, ಕ್ರಿ.ಶ. ೧೪೨೪.

೪೮. ಚನ್ನಗಿರಿ ೪೩, ಕ್ರಿ.ಶ. ೧೬೫೩.

೮೫

ಮೋಹನ ತರಂಗಿಣಿ ಬಿಂಬಿಸುವ ವಿಜಯನಗರದ ವಾಣಿಜ್ಯ

ರಾಜೀವ ಬಾಬು*

ಕನಕದಾಸರ ರಚನೆಯಾದ ಮೋಹನ ತರಂಗಿಣಿಯು, ಮಹಾಕಾವ್ಯವಾಗಿದ್ದು ಇತಿಹಾಸ ಸಂಶೋಧಕರಿಗೆ ಪರಿಚಿತವಾಗಿದೆ. ಕೃಷ್ಣದೇವರಾಯನ ಆಳ್ವಿಕೆಯ ಸಂದರ್ಭದಲ್ಲಿ ಕನಕದಾಸರು ಜೀವಿಸಿದ್ದ ರೆಂಬುದು ತಿಳಿದ ಸಂಗತಿಯಾಗಿದೆ.

ಮೋಹನ ತರಂಗಿಣಿಯಲ್ಲಿ ಬರತಕ್ಕಂತಹ ವಾಣಿಜ್ಯ ಅಂಶಗಳನ್ನು ಗಮನಿಸಿ, ಅದನ್ನು ಕೆಲವು ವಿದೇಶಿ ಬರಹಗಳೊಂದಿಗೆ ತುಲನೆ ಮಾಡಿ ಎರಡರಲ್ಲೂ ದೊರಕುವ ಐತಿಹಾಸಿಕ ಮಾಹಿತಿಗಳ ವಿಶ್ವಸ್ಥತೆಯನ್ನು ಸರ್ಮರ್ಥಿಸಲಾಗಿದೆ.ಮೋಹನ ತರಂಗಿಣಿಯು ಶ್ರೀ ಕೃಷ್ಣನ ಲೀಲೆಗಳನ್ನು ವರ್ಣಿಸುವ ಒಂದು ಸಾಂಗತ್ಯ ಕಾವ್ಯ. ಇದರಲ್ಲಿ ಮೂರನೇ ಸಂಧಿಯ ೧೧ನೇ ಪದ್ಯದಿಂದ ೩೧ನೇ ಪದ್ಯದವರೆಗೂ ದ್ವಾರಕಾಪುರದಲ್ಲಿ ನೆಡೆಯುತ್ತಿದ್ದ ವಾಣಿಜ್ಯ ವ್ಯವಹಾರಗಳನ್ನು ವರ್ಣಿಸಲಾಗಿದೆ. ಇದು ನಿಸ್ಸಂದೇಹವಾಗಿ ಕನಕದಾಸರು ತಮ್ಮ ಕಾಲದಲ್ಲಿ ಕಂಡು ಅನುಭವಿಸಿದ ವರ್ತಕ ಚಟುವಟಿಕೆಗಳ ಪ್ರತಿಬಿಂಬ.

ಮೋಹನ ತರಂಗಿಣಿಯಲ್ಲಿ ದ್ವಾರಕಾಪುರದ ವಾಣಿಜ್ಯ ವಿವರಣೆ ಹೀಗಿದೆ. ದ್ವಾರಕಾಪುರದಲ್ಲಿ 'ಸೋಮ / ಸೂರ್ಯ' ಎಂಬ ಹೆಸರುಗಳಿಂದ ಕರೆಯಲ್ಪಡುತ್ತಿದ್ದ ಎರಡು ಬೀದಿಗಳಿದ್ದವು. ಈ ಬೀದಿಗಳ ಎರಡೂ ಬದಿಗಳಲ್ಲಿ ವಾಸದ ಮನೆಗಳೊಂದಿಗೆ ಸಾಲು ಸಾಲಾಗಿ ಅಂಗಡಿಗಳಿದ್ದವು. ಈ ಅಂಗಡಿಗಳಲ್ಲಿ ನಾನಾ ಪ್ರಕಾರದ ವಸ್ತುಗಳು ವಿಕ್ರಯಗೊಳ್ಳುತ್ತಿದ್ದವು. ಇಲ್ಲಿ ಒಂದು ಭಾಗದಲ್ಲಿ ತಾಂಬೂಲಕ್ಕೆ ಬಳಸಲಾಗುವ ವಿಳ್ಯದ ಎಲೆ, ಅಡಿಕೆ, ಅದಕ್ಕೆ ಬಳಸಲಾಗುವ ಪರಿಮಳ ದ್ರವ್ಯವಾದ ಜವಾಜಿ, ಇತ್ಯಾದಿಗಳು ಮಾರಲ್ಪಡುತ್ತಿದ್ದವು. ಮತ್ತೊಂದು ಕಡೆ ದೈನಂದಿನ ಬಳಕೆಯ ಕಂಚು, ಹಿತ್ತಾಳೆ ಪಾತ್ರೆಗಳನ್ನು ಮಾರಲಾಗುತ್ತಿತ್ತು. ಇನ್ನು ಅಕ್ಕಸಾಲಿಗರ ಅಂಗಡಿಗಳಲ್ಲಿ ನಾನಾ ರೀತಿಯ ಆಭರಣಗಳನ್ನು ಮಾಡಲಾಗುತ್ತಿತ್ತು. ಈ ಅಕ್ಕಸಾಲಿಗರು ಹೊಸ ಆಭರಣಗಳನ್ನು ಸಿದ್ಧಪಡಿಸುವುದೇ ಅಲ್ಲದೆ ಹಳೆಯ ಆಭರಣಗಳಿಗೆ ಮೆರಗು ನೀಡುತ್ತಿದ್ದರು. ಹೂವನ್ನು ಮಾರು ವಂತಹ ಹೂವಾಡಿಗರು ನಾನಾ ಬಗೆಯ ಹೂವುಗಳನ್ನು ಮಾರುತ್ತಿದ್ದರು. ಇದರಲ್ಲಿ ಹೆಸರಿಸಿರುವ ಹೂವುಗಳು, ಇಂದಿಗೂ ಪರಿಚಯವಿರುವ, ಮಲ್ಲಿಗೆ, ಸಂಪಿಗೆ, ಜಾಜಿ ಇತ್ಯಾದಿ. ಇವರೊಂದಿಗೆ ತರುಣಿಯ ರನ್ನು ಆಕರ್ಷಿಸುವಂತಹ ಬಳೆಗಳನ್ನು ಮಾರತಕ್ಕಂತಹ ಬಳೆಗಾರರಿದ್ದರು.

ಇಲ್ಲಿಯ ಅಂಗಡಿಗಳಲ್ಲಿ ಗಮನಾರ್ಹ ವಾದ ಅಂಗಡಿಗಳೆಂದರೆ ಚಿತ್ರಗಾರರ ಮತ್ತು ಶಿಲ್ಪಿಗಳ ಆಯುಧಗಳನ್ನು ಮಾರುತ್ತಿದ್ದ ಅಂಗಡಿಗಳು. ಪ್ರಾಯಶಃ ಬಗೆಬಗೆಯ ಕುಂಚ, ಬಣ್ಣದ ಸಾಧನ, ವಿವಿಧ ಪ್ರಕಾರದ ಉಳಿ, ಅಳತೆಗೋಳ, ಮೊದಲಾದ ವಸ್ತುಗಳನ್ನು ಈ ಅಂಗಡಿಗಳಲ್ಲಿ ಮಾರುತ್ತಿದ್ದಿರಬಹುದು.

ಮೇಲಿನ ಪದ್ಯಗಳ ಸಾರಾಂಶವನ್ನು ಗ್ರಹಿಸಿದಾಗ ಕೇವಲ ವಾಣಿಜ್ಯವೇ ಅಲ್ಲದೆ, ಕೆಲವು ಸಾಮಾಜಿಕ ಮತ್ತು ಆರ್ಥಿಕ ಅಂಶಗಳು ಗಮನಕ್ಕೆ ಬರುತ್ತವೆ. ಅವುಗಳನ್ನು ಈ ಕೆಳಗೆ ಚರ್ಚಿಸಲಾಗಿದೆ.

ಈ ಕಾವ್ಯದಲ್ಲಿ ಹೂವಿನ ವ್ಯಾಪಾರ ನಡೆಯುತ್ತಿದ್ದ ಬಗೆಗೆ ವಿವರಣೆಗಳಿವೆ. ಈ ರೀತಿ ಮಾರುಕಟ್ಟೆಯಲ್ಲಿ ಹೂವಿನ ವ್ಯಾಪಾರ ನಡೆಯುವುದು ವಿಜಯನಗರ ಕಾಲದಿಂದ ಪ್ರಾಯಶಃ ಆರಂಭವಾಯಿತು ಎಂದು ಚಿಂತಿಸುವಂತೆ ಮಾಡುತ್ತದೆ. ಏಕೆಂದರೆ ವಿಜಯನಗರ ಕಾಲದಲ್ಲಿ ದೇವಾಲಯಕ್ಕೆ ಹೂತೋಟಗಳನ್ನು ರೂಪಿಸಿ ದಾನವಾಗಿ ನೀಡುತ್ತಿದ್ದ ಉಲ್ಲೇಖ ದೊರೆಯುತ್ತದೆ. ಇನ್ನು ಸಾರ್ವಜನಿಕ ಬಳಕೆಗೆ ಕೈತೋಟಗಳು ಖಾಸಗಿಯಾಗಿ ಇದ್ದಿರಬೇಕು. ಆದರೆ ವಿಜಯನಗರವು ಅಂದಿನ ಕಾಲಕ್ಕೆ ಮಹಾನಗರವಾದ ಕಾರಣ ಪ್ರಾಯಶಃ ಸಾರ್ವಜನಿಕ ಬಳಕೆಗೂ ಹೂವನ್ನು ವಿಕ್ರಯಿಸಲು ತೊಡಗಿರಬಹುದು. ವಿಜಯನಗರ ಪೂರ್ವ ಕಾಲದಲ್ಲಿ ದೇವಾಲಯದ ಬಳಕೆಗೆ ಹೂತೋಟಗಳಿದಿದ್ದು, ಅದಕ್ಕಾಗಿ ನೇಮಕವಾದ ಹೂವಾಡಿಗರಿದ್ದದ್ದು ಬಾದಾಮಿಯ ೩ನೇ ಗುಹೆಯ ಶಾಸನ ಮತ್ತು ಹರಿಹರನ ಪುಷ್ಪರಗಳೆಗಳಿಂದ ತಿಳಿದು ಬರುತ್ತದೆ.

* # ೨೬. 'ನೇಸರ', ನಾಲ್ಕನೇ ಮುಖ್ಯರಸ್ತೆ, ನಾಲ್ಕನೇ ಅಡ್ಡರಸ್ತೆ, ಮುನಿಕೊಂಡಪ್ಪ ಬಡಾವಣೆ, ಬಾಗಲಗುಂಟೆ, ಬೆಂಗಳೂರು-೫೬೦೦೭೩

ಮತ್ತೊಂದು ಗಮನಾರ್ಹ ಅಂಶವೆಂದರೆ ವರ್ತಕರು ತಮ್ಮ ಅಂಗಡಿಗಳಲ್ಲಿ ಜನರ ಗಮನವನ್ನು ಸೆಳೆಯಲು ಆಕರ್ಷಕವಾದ ಹುಡುಗಿಯರನ್ನು ನೇಮಕ ಮಾಡಿಕೊಳ್ಳುತ್ತಿದ್ದದ್ದು. ಇದು ಇಂದಿನ ಕಾಲದ 'ಸೇಲ್ಸ್ ಗರ್ಲ್ಸ್'ಗಳ ಪರಿಕಲ್ಪನೆಯು ವಿಜಯನಗರ ಕಾಲದ ಹೊತ್ತಿಗೆ ಇದ್ದದ್ದು ತಿಳಿದುಬರುತ್ತದೆ. ಮತ್ತೊಂದು ಗಮನಾರ್ಹ ಅಂಶವೆಂದರೆ ವೇಶ್ಯೆಯರ ವಾಸಸ್ಥಾನ. ಅಂದಿನ ವೇಶ್ಯೆಯರು ಜನಸಾಮಾನ್ಯರ ವಸತಿಯಿಂದ ದೂರವಿರದೆ, ವ್ಯಾಪಾರ ಕೇಂದ್ರಗಳ ಸಮೀಪವಾಗಿಯೇ ತಮ್ಮ ವಾಟಿಕೆಗಳನ್ನು ನಿರ್ಮಿಸಿಕೊಂಡಿರುತ್ತಿದ್ದರು. ಇದು ದೇಶ ವಿದೇಶದಿಂದ ವ್ಯಾಪಾರಾರ್ಥವಾಗಿ ಬರುತ್ತಿದ್ದ ವರ್ತಕರಿಗೆ ಅಗತ್ಯವಾಗಿತ್ತು. ಇಲ್ಲಿಯ ವೇಶ್ಯೆಯರು ವರ್ತಕರಿಗೆ ಕೇವಲ ಒಡನಾಟ ಮಾತ್ರವಲ್ಲದೆ, ವಾಸಕ್ಕೂ ಅನುಕೂಲ ಒದಗಿಸುತ್ತಿದ್ದರು. ಜನಸಾಮಾನ್ಯರಿಗೂ ಯಾತ್ರಾರ್ಥಿಗಳಿಗೂ ಹಲವು ಛತ್ರ ಮತ್ತು ಚಾವಡಿಗಳು ನಿರ್ಮಾಣವಾಗುತ್ತಿದ್ದದ್ದು ತಿಳಿದ ಸಂಗತಿಯೆ. ಅಂದರೆ, ಅಮೂಲ್ಯವಾದ ವಸ್ತುಗಳನ್ನು ವ್ಯಾಪಾರಾರ್ಥವಾಗಿ ತರುತ್ತಿದ್ದ ವರ್ತಕರಿಗೆ ಹೆಚ್ಚು ಏಕಾಂತ ಮತ್ತು ಭದ್ರತೆಯೂ ಗಣಿಕಾಲಯಗಳಲ್ಲಿ ಪರೋಕ್ಷವಾಗಿ ದೊರಕುತ್ತಿದ್ದಿರಬಹುದು. ಈ ಕಾರಣದಿಂದ ವರ್ತಕ ಬೀದಿಗಳ ಸಮೀಪ ಗಳಲ್ಲಿಯೇ ವೇಶ್ಯವಾಸಗಳಿರುವುದು ತಿಳಿದುಬರುತ್ತದೆ. ಈ ಕಾರಣದಿಂದಲೇ ಆಡಳಿತಗಾರರು ವೇಶ್ಯೆಯರಿಂದಲೂ ಸಹ ತೆರಿಗೆಯನ್ನು ಕಟ್ಟಿಸಿಕೊಳ್ಳುತ್ತಿದ್ದರು. ಅಚ್ಯುತರಾಯ ದೇವಾಲಯದ ಮುಂದಿನ 'ಅಚ್ಯುತ ಬಜಾರ್' ಬೀದಿಯ ಮತ್ತೊಂದು ತುದಿಯನ್ನು 'ಸೂಳೆ ಬಜಾರ್' ಎಂದು ಇಂದಿಗೂ ಗುರುತಿಸುತ್ತಾರೆ.

ಈ ಕಾವ್ಯದಲ್ಲಿ ರತ್ನ ಮತ್ತು ಮುತ್ತುಗಳನ್ನು ಹೊಳಪು ಮಾಡುವ ಅಂಗಡಿಗಳಿದ್ದ ಬಗ್ಗೆ ಉಲ್ಲೇಖವಿದೆ. ಬಹುಶಃ ಇವು ಹಳೆಯ ಒಡವೆಗಳನ್ನು ಹೊಳಪು ಮಾಡುವ ಅಥವಾ ರೂಪಾಂತರ ಮಾಡುವ ಅಂಗಡಿಗಳಿದ್ದಿರಬಹುದು.

ಮೂರನೇ ಸಂಧಿಯ ೨೯ನೇ ಪದ್ಯದಲ್ಲಿ ಇಲ್ಲಿ ಕುಬೇರನಿಗೂ ಸಾಲ ಕೊಡುವಂತಹ ಶ್ರೀಮಂತರಿದ್ದರು ಎಂಬ ವರ್ಣನೆಯಿದ್ದು, ಪ್ರಾಯಶಃ ಅಂದಿನ ಕಾಲಕ್ಕೆ ಇವರು ಬ್ಯಾಂಕರ್‌ಗಳಾಗಿದ್ದಿರಬಹುದು. ವರ್ತಕರಿಗೂ ಮತ್ತು ಕೆಲವೊಮ್ಮೆ ಜನಸಾಮಾನ್ಯರಿಗೂ ದ್ರವ್ಯವನ್ನು ಸಾಲ ಕೊಡುತ್ತಿರಬಹುದು. ಇವರು ಐವತ್ತಾರು ರಾಜ್ಯಗಳ ನಾಣ್ಯಗಳನ್ನು ಕೊಪ್ಪರಿಗೆಗಳಲ್ಲಿ ಸುರಿದುಕೊಂಡು ವಿನಿಮಯ ಮಾಡುತ್ತಿದ್ದರೆಂದು ಹೇಳಲಾಗಿದೆ. ಇದು ಸಮಾಕಾಲಿನ ವಿದೇಶಿ ವಿನಿಮಯದ ಪೂರ್ವ ರೂಪವಿದ್ದಿರಬಹುದು. ಭರತ ವರ್ಷದಲ್ಲಿ ಅಂಗ, ವಂಗ, ಕಳಿಂಗ, ಕಾಮರೂಪ, ಇತ್ಯಾದಿ ೫೬ ರಾಜ್ಯಗಳು ಇದ್ದುವೆಂದು ಪುರಾಣಗಳಲ್ಲಿ ಹೇಳಲಾಗಿದೆ. ವಿಜಯನಗರ ಕಾಲದಲ್ಲಿ ಈ ೫೬ ದೇಶಗಳ ಪರಿಕಲ್ಪನೆಯಿದ್ದಿತೋ ಇಲ್ಲವೋ, ಆದರೆ ವಿಜಯನಗರ ಸಾಮ್ರಾಜ್ಯದ ವ್ಯಾಪಾರ ಚಟುವಟಿಕೆಯೊಂದಿಗೆ ನಾನಾ ದೇಶಗಳು ಸಂಪರ್ಕವನ್ನು ಹೊಂದಿದ್ದವು. ಸಮುದ್ರದ ಆಚೆಗೆ ಅಲ್ಲದೆ ಉತ್ತರ ಭಾರತದ ಹಲವು ಭಾಗ ಮತ್ತು ಅರಬ್ ದೇಶಗಳೊಂದಿಗೆ ಸಂಪರ್ಕವಿದ್ದಿತು. ಪ್ರಾಯಶಃ ವಿಜಯ ನಗರದ ಗದ್ಯಾಣ, ವರಹ, ಇತ್ಯಾದಿ ನಾಣ್ಯಗಳಂತೆ ಉತ್ತರ ಭಾರತ ಮತ್ತು ಇತರ ರಾಜ್ಯಗಳಲ್ಲಿ ಬೇರೆ ನಾಣ್ಯಗಳು ಚಲಾವಣೆಯಲ್ಲಿದ್ದಿರಬಹುದು ಮತ್ತು ಇವೆರಡರ ಮೌಲ್ಯ, ತೂಕ ಇತ್ಯಾದಿಗಳಲ್ಲೂ ವ್ಯತ್ಯಾಸವಿದ್ದಿರಬಹುದು. ಈ ಕಾರಣದಿಂದ ಹೊರದೇಶದ ವ್ಯಾಪಾರಿಗಳು ತಮ್ಮೊಂದಿಗೆ ತಂದ ದ್ರವ್ಯದ ಮೌಲ್ಯವನ್ನು ವಿಜಯನಗರದಲ್ಲಿ ಪ್ರಚಲಿತವಾಗಿದ್ದ ಮೌಲ್ಯಕ್ಕೆ ಮಾರ್ಪಡಿಸಿಕೊಂಡು ಬಳಸುತ್ತಿದ್ದಿರಬಹುದು.

ಮೋಹನ ತರಂಗಿಣಿಯ ಈ ಉಲ್ಲೇಖಗಳಿಗೆ ನಮಗೆ ಹಲವಾರು ವಿದೇಶಿಯ ಪ್ರವಾಸ ಕಥನಗಳು ಮತ್ತು ಪುರಾತತ್ತ್ವ ಉತ್ಖನನಗಳು ಪೋಷಕವಾಗಿ ದೊರೆತಿವೆ. ಕನಕದಾಸರು 'ಸೋಮ ಸೂರ್ಯ' ಬೀದಿಯೆಂದು ಹೆಸರುಗಳನ್ನು ಉಲ್ಲೇಖಿಸಿರುತ್ತಾರೆ. ಆ ಹೆಸರಿನ ಬೀದಿಗಳು ಇದ್ದವೆಂದು ಅಬ್ದುಲ್ ರಜಾಕನ ಬರವಣಿಗೆಯಲ್ಲಿ ಉಲ್ಲೇಖವಾಗಿದೆ. ಅಲ್ಲದೇ ಅಬ್ದುಲ್ ರಜಾಕನು ವ್ಯಾಪಾರ ಕೇಂದ್ರಗಳ ಬಳಿಯಿದ್ದ ವೇಶ್ಯಾ ವಾಟಿಕೆಗಳನ್ನು ಕುರಿತು ಬರೆಯುತ್ತಾನೆ.

ಕನಕದಾಸರು ಮತ್ತು ವಿದೇಶ ಪ್ರವಾಸಿಗಳು, ಬಹುತಳ ಅಂತಸ್ತಿನ ಭವನಗಳು, ಅಂದರೆ ಮಹಡಿ ಮನೆಗಳ ಬಗ್ಗೆ ವಿವರಗಳನ್ನು ಕೊಡುತ್ತಾರೆ. ಇತ್ತೀಚಿನ ಪುರಾತತ್ತ್ವ ಉತ್ಖನನಗಳಲ್ಲಿ ಎರಡು ಅಂತಸ್ತಿನ ಹಲವಾರು ಮಂಟಪಗಳ ಸಾಲು ವಿರೂಪಾಕ್ಷ ಬಜಾರ್, ವಿಠಲಾಪುರ ಬಜಾರ್ ಮತ್ತು ಅಚ್ಯುತರಾಯ ಬಜಾರಗಳಲ್ಲಿ ಬೆಳಕಿಗೆ ಬಂದಿದೆ.

ಒಟ್ಟಾರೆ ಪುರಾತತ್ತ್ವ ಸಂಶೋಧನೆ ಮತ್ತು ವಿದೇಶಿ ಪ್ರವಾಸ ಕಥನಗಳೊಂದಿಗೆ ಸ್ಥಳೀಯ ಸಾಹಿತ್ಯವು ಪೂರಕ ಮಾಹಿತಿಯನ್ನು ಒದಗಿಸಿರುವುದು ಇಲ್ಲಿ ಗಮನಾರ್ಹ.

[ಈ ಲೇಖನವನ್ನು ಸಿದ್ಧಪಡಿಸಲು ನನಗೆ ನೆರವಾಗಿ ಮಾರ್ಗದರ್ಶನವಿತ್ತ ನನ್ನ ಗುರುಗಳಾದ ಡಾ. ಜಿ. ಮನೋಜ್ ಮತ್ತು ಡಾ. ಟಿ.ವಿ. ನಾಗರಾಜ್‌ಗೆ ನಾನು ಆಭಾರಿಯಾಗಿದ್ದೇನೆ.]

ಆಧಾರಸೂಚಿ

೧. **ಮೋಹನ ತರಂಗಿಣಿ**, ಗದ್ಯಾನುವಾದ, ಡಾ. ಎಸ್.ಎಸ್. ಕೋತಿನ, ಕನ್ನಡ ಸಾಹಿತ್ಯ ಪರಿಷತ್.

೨. **ಇತಿಹಾಸ ದರ್ಶನ**, ಸಂಪುಟ ೧೬, 'ವಿಜಯನಗರ ಕಾಲದ ಸಂತೆಗಳು', ಎಂ.ಬಿ. ಪಾಟೀಲ್.

೩. **ಕರ್ನಾಟಕ ಜನಜೀವನ**, ಬೆಟಗೇರಿ ಕೃಷ್ಣಶರ್ಮ.

೪. **ಪ್ರವಾಸಿ ಕಂಡ ವಿಜಯನಗರ**, ಸಂಪಾದಕರು, ಡಾ. ಬಿ.ಎ. ವಿವೇಕ ರೈ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೮೬

ಬಳ್ಳಾರಿ ಜಿಲ್ಲೆಯ ರೇವಣಸಿದ್ಧೇಶ್ವರ ಮಠಗಳು

ಶ್ರೀಮತಿ ಹನುಮಂತಮ್ಮ ಎಂ.*

ಕರ್ನಾಟಕದ ಧಾರ್ಮಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಬಹುಮುಖ್ಯವಾದ ಹೆಸರು ರೇವಣಸಿದ್ಧನದು. ಕುರುಬ ಮತ್ತು ವೀರಶೈವ ಸಮಾಜಗಳೆರಡಕ್ಕೂ ಈತ ಅಗ್ರಗಣ್ಯ ನಾಗಿದ್ದಾನೆ. ಇದಕ್ಕೆ ಸಾಕ್ಷಿ ಎನ್ನುವಂತೆ ಕರ್ನಾಟಕ ದಾದ್ಯಂತ ಮಠಮಂದಿರಗಳಿವೆ. ಇವುಗಳಿಗೆ ಕುರುಬ ಒಡೆಯರು ಗುರುಗಳಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಬಳ್ಳಾರಿ ಜಿಲ್ಲೆಯ ಗಾದಿಗ ನೂರು, ವಿಠಲಾಪುರ, ದೇವಲಾಪುರ, ಓಬಲಾಪುರ, ಬಳ್ಳಾರಿ ಮುಂತಾದೆಡೆ ಈತನ ಹೆಸರಿನಲ್ಲಿರುವ ಮಠಗಳ ಸಾಂಸ್ಕೃತಿಕ ಮಹತ್ವವನ್ನು ಈ ಸಂಪ್ರಬಂಧದಲ್ಲಿ ಚರ್ಚಿಸಲಾಗಿದೆ.

ರೇವಣಸಿದ್ಧನನ್ನು ಕುರಿತು 'ರೇವಣ ಸಾಂಗತ್ಯ', 'ರೇವಣ ಸಿದ್ಧೇಶ್ವರ ರಗಳೆ' ಮುಂತಾದ ಕೃತಿಗಳಲ್ಲದೆ, 'ಜನಪದ ಹಾಲುಮತ ಪುರಾಣ' ಕೃತಿಗಳು ರಚನೆಯಾಗಿವೆ. ಇತ್ತೀಚೆಗೆ ರೇವಣಸಿದ್ಧ ಸಂಪ್ರದಾಯವನ್ನು ತಿಳಿಸುವ 'ಟಗರ ಪವಾಡ' ಕೃತಿಯು ಪ್ರಕಟವಾಗಿದೆ. ಈ ಎಲ್ಲಾ ಕೃತಿಗಳ ಹಿನ್ನೆಲೆಯಲ್ಲಿ ರೇವಣಸಿದ್ಧ ಕುರುಬ ಸಮಾಜದ ಶಿವಸಿದ್ಧ ಸಂಪ್ರದಾಯಕ್ಕೆ ಸೇರಿದವನು. ಈತನ ಕಾಲಾನಂತರದಲ್ಲಿ ಈ ಪರಂಪರೆಯ ಮಠಗಳು ಕಂಡುಬರುತ್ತವೆ.

ಹಾಲುಮತದ ಮುದ್ದುಗೊಂಡ ಮತ್ತು ಮುದ್ದವ್ವ ದಂಪತಿಗಳ ಏಳು ಜನ ಮಕ್ಕಳಲ್ಲಿ ಕೊನೆಯವನು ಉಂಡಾಡು ಪದ್ಮಗೊಂಡ. ಇವನು ಕುರುಬರ ಮೂಲ ಪುರುಷ. ಇವನ ಮೊದಲ ಹೆಂಡತಿ ಜಿಂಕಾದೇವಿಯಲ್ಲಿ ಜಗ್ಗಲಿ ಮುತ್ತಯ್ಯ ಸಹಾಯ ಮುತ್ತಯ್ಯ, ಸೋಹ ಮುತ್ತಯ್ಯ, ಶಾಂತಿಮಯ ಮುತ್ತಯ್ಯ ಮತ್ತು ದೇವರಾಜ ಎಂಬ ಐದು ಮಕ್ಕಳು ಜನಿಸುತ್ತಾರೆ. ಇವರಲ್ಲಿ ನಾಲ್ಕನೇ ಮಗನಾದ ಶಾಂತಿಮಯ ಮುತ್ತಯ್ಯನ ಮಗನೇ ರೇವಣಸಿದ್ಧ.[೧]

ಇವನು ಪ್ರಾಚೀನ ಕಾಲದಿಂದಲೂ ಕುರುಬ ಜನಾಂಗ ದಲ್ಲಿ ಬೆಳೆದು ಬಂದಿರುವುದರಿಂದ ಕೊಲ್ಲಿಪಾಕಿ ಕ್ರಿ.ಶ. ೧೧೧೦ರಲ್ಲಿ ಜನಿಸಿ ಕ್ರಿ.ಶ. ೧೨೧೭ರಲ್ಲಿ ನಿಧಾನನಾದರೆಂದು ತಿಳಿದುಬರುತ್ತದೆ.[೨] ಈತನನ್ನು ಕುರಿತು ಮೊಟ್ಟಮೊದಲ ಬಾರಿಗೆ ಕಾವ್ಯವನ್ನು ಬರೆದಂತವನು ಮಹಾಕವಿ ಹರಿಹರ. ಈತನು ತನ್ನ ರೇವಣಸಿದ್ಧೇಶ್ವರ ರಗಳೆಯಲ್ಲಿ ರೇವಣಸಿದ್ಧರ ಜನಪದ ಪ್ರಸಂಗವನ್ನು ಪೌರಾಣಿಕ ಹಿನ್ನೆಲೆಯಲ್ಲಿಟ್ಟುಕೊಂಡು ಅಭಿವ್ಯಕ್ತಪಡಿಸಿದ್ದಾನೆ. ರತ್ನಗಿರಿಯ ಶಿವನ ಸಭೆಯಲ್ಲಿ ನಂದೀಶ, ವೀರಭದ್ರ ನಾಯಕ, ರೇಣುಜ ಮುಂತಾದ ದೇವಾನು ದೇವತೆಗಳು ಕುಳಿತು ಕೊಂಡಿರುವಾಗ ರೇಣುಕನ ಮುಖವನ್ನು ನೋಡಿ ಶಿವನು ತಾಂಬೂಲವನ್ನು ತಂದುಕೊಡು ಎನ್ನುತ್ತಾನೆ. ರೇಣುಕನು ತಾಂಬೂಲವನ್ನು ತೆಗೆದುಕೊಂಡು ಬರುವಾಗ ದಾರುಕನೆಂಬುವವನನ್ನು ದಾಟಿದ ಪರಿಣಾಮದಿಂದ ನಿನಗೆ ನರಜನ್ಮ ಪ್ರಾಪ್ತವಾಗಲೆಂದು ಶಿವನು ಶಾಪವನ್ನು ಕೊಡುತ್ತಾನೆ. ಆಗ ರೇಣುಕನು ಭಯದಿಂದ ಕೈಮುಗಿದು, ತನ್ನ ತಪ್ಪನ್ನು ಮನ್ನಿಸಿ ವಿಶಾಪವನ್ನು ಕುರುಣಿಸೆಂದು ಬೇಡಿಕೊಳ್ಳುತ್ತಾನೆ. ಆಗ ಶಿವನು, ಕರುಣೆಗೊಂಡು ಭೂಲೋಕದಲ್ಲಿ ಸೋಮೇಶ್ವರ ಲಿಂಗದಲ್ಲಿ ಹುಟ್ಟಿ ಸುಖ, ದುಃಖಗಳನ್ನು ಅನುಭವಿಸಿ ಬರಬೇಕೆನ್ನುತ್ತಾನೆ. ಅದೇ ರೀತಿಯಾಗಿ ಕೊಲ್ಲಿಪಾಕಿ ಸೋಮೇಶ್ವರ ಲಿಂಗದಲ್ಲಿ ರೇಣುಕನು ಹುಟ್ಟುತ್ತಾನೆ.[೩] ಹೀಗೆ ಕೊಲ್ಲಿಪಾಕಿ ಸೋಮನಾಥ ಲಿಂಗದಲ್ಲಿ ರೇವಣ ಸಿದ್ಧರು ಹುಟ್ಟಿದರು ಎಂದು ಕವಿಗಳು ಮತ್ತು ಪುರಾಣಕರ್ತರ ಅಭಿಪ್ರಾಯ. ಹಾಗೆಯೇ ಇವನು ಮೂಲತಃ ಕುರುಬ ಮೂಲದಿಂದ ಬಂದವನೆಂದು ಜನಪದರ ಮಾತಾಗಿದೆ.

ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಸರೂರು ಗ್ರಾಮದಲ್ಲಿ ಶಾಂತಮಯ ಮುತ್ತಯ್ಯ ಶಿವಯೋಗಿ ಯಾಗಿ ಸಂಸಾರಿಯಾಗಿ ತನ್ನ ಪತ್ನಿ ಮಹಾದೇವಿ ಮತ್ತು ಗುರುಭಕ್ತರೊಡನೆ ಸಂಚಾರಿಯಾಗಿದ್ದ ಸಮಯದಲ್ಲಿ ಇಂದಿನ ಆಂಧ್ರಪ್ರದೇಶದ ನಲ್ಗೊಂಡ ಜಿಲ್ಲೆಯ ಭುವನಗಿರಿ ತಾಲ್ಲೂಕಿನ ಕೊಲ್ಲಿಪಾಕಿ ಗ್ರಾಮದಲ್ಲಿ ಕೆಲವು ಸಮಯ ವಾಸವಾಗಿದ್ದಾಗ ರೇವಣಸಿದ್ದರು ಜನಿಸಿದರು. ಯಾವುದೋ ಒಂದು ಸಂದರ್ಭ

* ೩ನೇ ವಾರ್ಡ್, ಮರಿಯಮ್ಮನಹಳ್ಳಿ, ಹೊಸಪೇಟೆ, ತಾಲ್ಲೂಕು, ಬಳ್ಳಾರಿ-೫೮೩ ೨೨೨. ಮೊಬೈಲ್ ೯೯೦೨೪ ೯೩೪೩೫

ದಲ್ಲಿ ಚಿಕ್ಕ ವಯಸ್ಸಿನಲ್ಲಿಯೇ ತಂದೆ ತಾಯಿಯನ್ನು ಕಳೆದು ಕೊಂಡಿದ್ದ ಇವನನ್ನು ನಾಥಪಂಥೀಯ ಸಾಧುಗಳು ಸಾಕಿದ ರೆಂದು ನವನಾಥದಿಂದ ತಿಳಿದುಬರುತ್ತದೆ. ಇವರ ಪಾಲನೆ ಯಲ್ಲಿ ಬೆಳೆದ ರೇವಣಸಿದ್ಧರು ಕೂಡ ನಾಥ ಸಿದ್ಧರಾದರು. ಉತ್ತರ ಭಾರತದಲ್ಲೆಲ್ಲಾ ಸಂಚರಿಸಿ ಗೂಢ ವಿದ್ಯೆಗಳನ್ನೆಲ್ಲಾ ಕಲಿತು ಕೊಂಡು ಶ್ರೇಷ್ಠನಾಥರೆಂದು ಕರೆಯಿಸಿಕೊಂಡರು. ಇಲ್ಲಿ ವ್ಯಕ್ತವಾಗಿರುವ ನಾಥ ಸಿದ್ಧರೆಂದರೆ:

೧. ಗೋರಕ್ಷ ನಾಥ, ೨. ಜಾಲಂಧರ ನಾಥ, ೩. ಕಾನಿಪನಾಥ, ೪. ಗಹನಿ ನಾಥ, ೫. ರೇವಣನಾಥ, ೬. ನಾಗನಾಥ, ೭. ಭರ್ತರಿನಾಥ, ೮. ಚರ್ಪಟಿ ನಾಥ, ೯. ಮತ್ಸ್ಯೇಂದ್ರನಾಥ

ಹೀಗೆ ರೇವಣನಾಥರು ನವನಾಥ ಸಿದ್ಧರ ಸಾಲಿನಲ್ಲಿ ಶೈವಮತ ಸ್ವೀಕರಿಸಿರುವುದರಿಂದ ಇವರು ಸೋಮನಾಥ ಲಿಂಗದಲ್ಲಿ ಜನಿಸಿದರು ಹಾಗೂ ರೇವಣಸಿದ್ಧರು 'ಬಂಧುಲ' ಗ್ರಾಮದಲ್ಲಿ ಅನ್ನಛತ್ರವನ್ನಿಟ್ಟು ನಡೆಸುತ್ತಿದ್ದರು ಎಂದು ಈ ಗ್ರಂಥದಿಂದ ತಿಳಿದುಬರುತ್ತದೆ.

ಡಾ. ಎಂ.ಎಂ. ಕಲಬುರ್ಗಿಯವರು ರೇವಣಸಿದ್ಧ ಕಲ್ಯಾಣ ಚಾಳುಕ್ಯ ವಿಕ್ರಮಾದಿತ್ಯ (೧೦೭೬-೧೧೨೬) ಮೂರನೆಯ ಸೋಮೇಶ್ವರ, ಕಲಚೂರಿ ತೈಲಪ ಬಿಜ್ಜಳನ ಕಾಲದವರೆಗೆ ಬಾಳಿದ ವಿವರಗಳನ್ನು ಶಾಸನ ಮತ್ತು ಪದ್ಯಗಳಿಂದ ಸ್ಪಷ್ಟಪಡಿಸಿದ್ದಾರೆ.[೪] ರೇವಣಸಿದ್ಧ ಜೀವಂತವಿರು ವಾಗಲೇ (೧೧೭೨ ಕುಕ್ಕೇರಿ ಶಾಸನ) ಅವನ ಸಿದ್ಧ ಸಂಪ್ರದಾಯವು ಲಾಕುಳ ಶೈವದಲ್ಲಿ ಆರಂಭಿಸಿದ್ದಿತೆಂದು ಹೇಳಬಹುದಾಗಿದೆ.[೫]

ಕಲಬುರ್ಗಿ ಅವರ 'ರೇವಣಸಿದ್ಧ ಚರಿತ್ರೆಯ ಎರಡು ಸಂಪ್ರದಾಯಗಳು' ಎಂಬ ಲೇಖನದಲ್ಲಿ ಹೀಗೆ ಅಭಿಪ್ರಾಯ ಪಟ್ಟಿದ್ದಾರೆ. "ರೇವಣಸಿದ್ದ ಮತ್ತು ಸಿದ್ಧರಾಮರು" ಮೂಲತಃ ಜಾತಿಯಿಂದ ಕುರುಬ ಪಂಥ ಸಿದ್ಧರು. ಸಿದ್ಧರಾಮನು ದೀಕ್ಷೆಯನ್ನು ಪಡೆದುಕೊಂಡು ಶರಣ ಧರ್ಮವನ್ನು ಸೇರಿದ. ಇಂತಹ ಸಮಯದಲ್ಲಿ ವಯೋವೃದ್ಧನಾಗಿದ್ದ ರೇವಣಸಿದ್ಧನನ್ನು ಅವನ ಸಿದ್ಧಿ ಪಂಥೀಯರು ಭಕ್ತಿ ಪ್ರಜ್ಞೆಯಿಂದ ಶುದ್ಧ ಶೈವರು ಆಚಾರ್ಯ ಪ್ರಜ್ಞೆಯಿಂದ ಚಿತ್ರಿಸುವ ಪ್ರಯತ್ನ ನಡೆಸಿದರು.

ಸಿದ್ಧ ಮತ್ತು ಆಚಾರ್ಯ ಸಂಪ್ರದಾಯದ ರೇವಣಸಿದ್ಧ ಭಕ್ತಿ ಪ್ರಜ್ಞೆಯಲ್ಲಿ ಮಲ್ಲಣ ಕವಿಯು ರೇವಣಸಿದ್ಧ ಕಾವ್ಯವನ್ನು ಚರ್ಚೆಗೆ ಒಳಪಡಿಸಿ ತೌಲನಿಕವಾಗಿ ಹರಿಹರ ಕವಿಯ ಕೊಲ್ಲಿಪಾಕಿಯ ಲಿಂಗೋದ್ಭವ, ಅಗಸ್ತ್ಯನ ದರ್ಶನ ಮೊದಲಾದ ಪ್ರಸಂಗಗಳನ್ನು ಮಲ್ಲಣ್ಣ ಕವಿ ಕಾಣದ ವಿಷಯಗಳನ್ನು ಚರ್ಚೆಗೆ ಒಳಪಡಿಸಿದ್ದಾರೆ.ಇವರ ಇನ್ನೊಂದು ಲೇಖನ ಸಿದ್ಧರಾಮನು ಶಿವಯೋಗಿ ಯಾಗಿರುವಂತಹ ರೇವಣಸಿದ್ಧರನ್ನು ಶಿವಾಚಾರ್ಯ ರನ್ನಾಗಿ ಮಾಡಿದ ಅನೇಕ ವಿಷಯಗಳನ್ನು ಹೊರಹಾಕುತ್ತದೆ.

ಸಿದ್ಧಮಂಕೆ ಚರಿತೆಗೆ ಸೊಲ್ಲಾಪುರ ಸಿದ್ಧರಾಮ ಚರಿತ್ರೆ ಯೆಂದು ಟಗರ ಪವಾಡ ಕೃತಿಗೆ ರೇವಣಸಿದ್ಧೇಶ್ವರ ಪುರಾಣವೆಂದು ಕರೆದುದು ಇವರಿಬ್ಬರ ಕುರುಬ ಜಾತಿಯನ್ನು ದೃಢಪಡಿಸುತ್ತದೆ. ಇದಲ್ಲದೆ ಚಿಕ್ಕನಾಯಕನಹಳ್ಳಿಯಲ್ಲಿರುವ ಸಿದ್ಧರಾಮನ ಶಿಷ್ಯನಾದ ಸಿದ್ಧಮಂಕನ ಮಠಕ್ಕೆ ಲಿಂಗಾಯಿತರು ಮತ್ತು ರೇವಣಸಿದ್ಧನ ಮಠಕ್ಕೆ ಕುರುಬರು ಪೂಜಾರಿಗಳಾಗಿ ದ್ದಾರೆ. ಹೀಗೆ ಸಿದ್ಧರಾಮನು ಕೊನೆಗೆ ನಾಥಪಂಥ ಮತ್ತು ಕುರುಬ ಜಾತಿಯನ್ನು ತ್ಯಜಿಸಿ ಲಿಂಗವಂತನಾದನು. ರೇವಣಸಿದ್ಧನು ಕೊನೆಯವರೆಗೂ ನಾಥಪಂಥೀಯ ಕುರುಬನಾಗಿಯೇ ಉಳಿದುದು ಕಾರಣವಾಗಿರಬಹುದೆಂದು ಊಹಿಸಿದ್ದಾರೆ. ರೇವಣಸಿದ್ಧನ ಇತಿವೃತ್ತ ವಿಚಾರ, ಭೌಗೋಳಿಕ ನೆಲೆ, ಅಲಿಖಿತ ಆಕರಗಳಲ್ಲಿ ಮೂಡಿಬಂದ ರೇವಣಸಿದ್ಧನ ಚಿತ್ರಣ ವಿಷಯವಾಗಿ ಕುರುಬರ ಕುಲಗುರು ರೇವಣಸಿದ್ಧನನ್ನೇ ೧೪-೧೫ನೆಯ ಶತಮಾನದ ಹೊತ್ತಿಗೆ ರೇಣುಕಾಚಾರ್ಯ ರನ್ನಾಗಿ ಮಾಡಿರುವುದನ್ನು ಎಂ.ಎಂ. ಕಲಬುರ್ಗಿ ಅವರು ಸಕಾರಣ ವಾಗಿ ಗುರುತಿಸಿದ್ದಾರೆ.

ಬಳ್ಳಾರಿ ಜಿಲ್ಲೆಯ ರೇವಣಸಿದ್ಧೇಶ್ವರ ಮಠಗಳು

೧. ಗಾದಿಗನೂರು : ಇದು ಹೊಸಪೇಟೆ ಬಳ್ಳಾರಿ ಮುಖ್ಯ ರಸ್ತೆಯಲ್ಲಿ ಹೊಸಪೇಟೆಯಿಂದ ಮೂವತ್ತು ಕಿ.ಮೀ. ದೂರದಲ್ಲಿದೆ. ಇಲ್ಲಿ ಸರೂರು ರೇವಣಸಿದ್ಧೇಶ್ವರ ಮಠದ ಶಾಖಾಮಠವಿದೆ. ಈ ಮಠಕ್ಕೆ ೧೮೭೨ರಲ್ಲಿ ಗುರುಗಳಾಗಿದ್ದ ವರು ಒಡೆಯ ಸಣ್ಣಸಿದ್ಧಯ್ಯನವರು. ಇವರು ಮೂಲತಃ ದೇವಲಾಪುರದವರು ನಂತರ ಶ್ರೀ ಸಿದ್ಧಯ್ಯಸ್ವಾಮಿ ಒಡೆಯರು ಎಂಬುವವರು ಈ ಮಠಕ್ಕೆ ಗುರುಗಳಾಗಿದ್ದರು. ಈಗ ರೆಡ್ಡಿ ಕುಲದವರನ್ನು (ಗೌಡಕಿ ಮನೆತನದವರನ್ನು) ಊರಿನ ಜನ ಮುಖಂಡರು ಸೇರಿ ಆರ್ಚಕರನ್ನಾಗಿ ಮಾಡಿದ್ದಾರೆ. ಮೂಲತಃ ದೇವಲಾಪುರದ ಮಠಾಧಿಪತಿಗಳು ಊರಿನಹಬ್ಬ, ಹರಿದಿನ, ಮದುವೆ, ಮುಂಜಿ ಇತ್ಯಾದಿ ಕಾರ್ಯಕ್ರಮಕ್ಕೆ ಬಂದು ಹೋಗುತ್ತಾರೆ. ಈ ಊರಲ್ಲಿ ಪುರಾತನ ಕಾಲದ ಹಾಳುಬಿದ್ದ ರೇವಣಸಿದ್ಧನ ಮಠವಿದೆ. "ಈ ಮಠದಲ್ಲಿ ಒಂದು ದೊಡ್ಡದಾದ ಹುತ್ತ ಬೆಳೆದು ಇದರಲ್ಲಿ ತುಂಬಾ ವರ್ಷಗಳಿಂದ ಹಾವೊಂದು ವಾಸವಾಗಿದೆ. ಇದಕ್ಕೆ ಉದ್ದವಾದ ಕೂದಲುಗಳು ಬೆಳೆದಿವೆ ಎಂದು ಈಗಿನ ಆರ್ಚಕರಾದ ಗಿರಿಜಮ್ಮಜ್ಜಿ ಹೇಳುತ್ತಾರೆ. ಈ ಮಠವನ್ನು ಕೆಡವಿ ನೂತನ ಮಠವನ್ನು ಕಟ್ಟಿದರಾಯಿತು ಎಂದು ಮಾತನಾಡಿಕೊಂಡರೆ, ಈ ಹಾವು ಒಬ್ಬ ಹೆಣ್ಣು ಮಗಳ ಕನಸಿನಲ್ಲಿ ಬಂದು ನೀವು ಕಟ್ಟುವುದಾದರೆ ಮೂರು ಗುಡ್ಡದಕಲ್ಲು ಮತ್ತು ಮೂರು ಹೊಳೆ ನೀರು ತಂದು ಒಂದೇ ದಿನದಲ್ಲಿ ಕಟ್ಟಬೇಕು ಎಂದು ಹೇಳಿತಂತೆ." ಒಂದೇ ದಿನದಲ್ಲಿ

ಮಠವನ್ನು ಕಟ್ಟಲು ಆಗದೆ ಮೂಲ ಮಠದ ಪಕ್ಕದಲ್ಲಿ ನೂತನವಾದ ರೇವಣಸಿದ್ಧನ ಮಠವನ್ನು ಕಟ್ಟದ್ದಾರೆ. ಇದು ಸುಮಾರು ೩೦-೩೫ ವರ್ಷ ಆಗಿರಬಹುದು. ಈ ನೂತನ ಮಠಕ್ಕೆ ಗೌಡಕಿ ಮನೆತನದವರು ದಿನಕ್ಕೆ ಒಂದು ಸಲ ಮಾತ್ರ ಪೂಜೆ ಮಾಡುತ್ತಾರೆ. ಸಂಜೆ ದೀಪ ಮಾತ್ರ ಹಚ್ಚುತ್ತಾರೆ. ವಾರದ ಪೂಜೆ ಸೋಮವಾರ. ಆ ದಿನ ಊರಿನ ಜನರೆಲ್ಲಾ ನಡೆದುಕೊಳ್ಳುತ್ತಾರೆ. ಶಿವರಾತ್ರಿಯ ದಿವಸ ಜನರೆಲ್ಲ ಕಾಳು ಗ್ಗುರಿ ನೈವೇದ್ಯ ಮಾಡಿ, ಡೊಳ್ಳು ವಾದ್ಯ ಭಜನೆಯೊಂದಿಗೆ ಜಾಗರಣೆ ಮಾಡುತ್ತಾರೆ. ಶಿವರಾತ್ರಿ ಆಗಿ ಐದು ದಿನಕ್ಕೆ ಪಂಚಮಿ ನಕ್ಷತ್ರವೆಂದು ಸಾಯಂಕಾಲ ಆರು ಗಂಟೆಗೆ ರಥ ಎಳೆಯುತ್ತಾರೆ. ನಂತರ ರೇವಣಸಿದ್ಧನ ಶಿಷ್ಯ ಗಾದಿಲಿಂಗನ ರಥ ಹಿಂದಾಗಿ ಎಳೆಯುತ್ತಾರೆ. ಈ ಮಠದಲ್ಲಿ ಮದುವೆಗಳು ನಡೆಯುತ್ತವೆ. ಮುಖ್ಯವಾಗಿ ಈ ಊರಿನಲ್ಲಿ ಅಧಿಕವಾಗಿ ಕುರುಬರೇ ಕಂಡುಬರುತ್ತಾರೆ. ಆದರೆ ಒಂದು ಮನೆಯೂ ಸಹ ಒಡೆಯರದಿಲ್ಲ. ಮೇಲಾಗಿ ಈ ಮೂಲ ಮಠವನ್ನೇ ಹಿಂದಕ್ಕೆ ತಳ್ಳಿದ್ದಾರೆಂದು ಹೇಳಬಹುದು. ಈ ಮಠಕ್ಕೆ ಮೂವತ್ತೂರು ಹಳ್ಳಿ ಭಕ್ತರಿದ್ದಾರೆ.

೨. ದೇವಲಾಪುರ : ಕಂಪ್ಲಿ ಬಳ್ಳಾರಿ ಮುಖ್ಯರಸ್ತೆಯಲ್ಲಿ ಕಂಪ್ಲಿಯಿಂದ ೧೫ ಕಿ.ಮೀ. ದೂರದಲ್ಲಿ ಈ ಗ್ರಾಮವಿದೆ. ಈ ಊರಿನಲ್ಲಿ ರೇವಣಸಿದ್ಧೇಶ್ವರ ಮಠ ೧೭-೬-೧೯೯೯ರಲ್ಲಿ ಸ್ಥಾಪನೆ ಆಗಿದೆ. ಈ ಮಠಕ್ಕೆ ಕುರುಬರ ಗುರು ಒಡೆಯರ ರೋಹಿತಸ್ವಾಮಿ ಪೂಜೆ ಮಾಡುತ್ತಾರೆ. ದಿನಕ್ಕೆ ಎರಡು ಸಲ ಪೂಜೆ. ವಾರದ ಪೂಜೆ ಸೋಮವಾರ. ಅಮವಾಸ್ಯೆ ಹುಣ್ಣಿಮೆಯ ದಿನಕ್ಕೆ ಭಕ್ತರು ಅಭಿಷೇಕ ಮಾಡಿಸುತ್ತಾರೆ. ಶಿವರಾತ್ರಿ ಆಗಿ ಐದು ದಿನಕ್ಕೆ ರೇವಣಸಿದ್ಧನ ಜಯಂತಿಯನ್ನು ಬಹಳ ವಿಜೃಂಭಣೆಯಿಂದ ಭಜನೆ, ಡೊಳ್ಳು, ನಂದಿಕೋಲು, ಕೋಲಾಟ ಇತ್ಯಾದಿ ವಾದ್ಯಗಳ ಮೂಲಕ ಮಾಡುತ್ತಾರೆ. ಬಸವಜಯಂತಿ ದಿವಸ ಪುರಾಣ, ೯ ಅಥವಾ ೧೧ ದಿವಸಗಳ ಕಾಲ ನಡೆಯುತ್ತದೆ. ಸಾಮೂಹಿಕ ವಿವಾಹಗಳು ನಡೆಯುತ್ತವೆ. ಈ ಗ್ರಾಮದಲ್ಲಿ ಕುರುಬರ ಸಂಖ್ಯೆ ಹನ್ನೊಂದು ಸಾವಿರ ಮತ್ತು ಒಡೆಯರ ಮನೆಗಳು ಇಪ್ಪತ್ತೈದು ಇರುವುದು ಕಂಡುಬರುತ್ತವೆ.

ಈ ಊರಿನಲ್ಲಿ 'ಶ್ರೀ ಸಿದ್ಧಯ್ಯಸ್ವಾಮಿ ಒಡೆಯ' ಎಂಬುವರ ಮನೆಯಲ್ಲಿ ಮೂರು ತಾಮ್ರಪತ್ರ ಹಾಗೂ ಎರಡು ತಾಮ್ರದ ಬಿಲ್ಲೆಗಳು ಇರುವುದು ಕಂಡುಬಂದಿದೆ. ಅವುಗಳನ್ನು ಸಮೀಕ್ಷೆ ಮಾಡಿದಾಗ ಕುರುಬರ ಗುರು ಪರಂಪರೆಗೆ ಒಡೆಯರು ಮತ್ತು ಕುರುಬರ ಮಧ್ಯೆ ನಡೆದ ವಾದವಿವಾದಗಳ ವಿವರ, ಒಡೆಯರಿಗೆ ದಾನ ನೀಡಿದ ಬಗ್ಗೆ ಇಂತಿಷ್ಟು ಕಾಣಿಕೆಯನ್ನು ಸಲ್ಲಿಸಬೇಕೆಂಬ ಕರಾರುಗಳನ್ನು ಹಾಗೂ ಇನ್ನಿತರ ಅನೇಕ ವಿಷಯಗಳನ್ನು ಈ ತಾಮ್ರ ಪತ್ರದಲ್ಲಿ ದಾಖಲಿಸಲಾಗದೆ.

೩. ವಿಠಲಾಪುರ : ಈ ಗ್ರಾಮವು ಹೊಸಪೇಟೆ ಬಳ್ಳಾರಿ ಮುಖ್ಯರಸ್ತೆಯಲ್ಲಿ ಬರುವ ಕುಡುತಿನಿಯಿಂದ ೨೩ ಕಿ.ಮೀ. ದೂರದಲ್ಲಿ ಸೊಂಡೂರು ತಾಲ್ಲೂಕಿನಲ್ಲಿದೆ. ಈ ಮಠ ಶ್ರೀ ಸಿದ್ಧಯ್ಯಸ್ವಾಮಿ ಒಡೆಯರು ಕಟ್ಟಿಸಿದ್ದು. ಸುಮಾರು ೫೦ ವರ್ಷ ಆಗಿರಬಹುದು. ಈ ಮಠದ ಪಕ್ಕದಲ್ಲಿ ಅವರ ಜೀವಂತ ಸಮಾಧಿ ಇರುವುದು ಕಂಡುಬರುತ್ತದೆ. ಈ ಮಠದ ಪೂಜೆ ಆಚಾರ, ವಿಚಾರವನ್ನು ಒಡೆಯರು ಮಾಡುತ್ತಿದ್ದರು. ಇವರು ಕಾಲವಾದ ಮೇಲೆ ನಂತರದಲ್ಲಿ ವಂಶಜರು ಪಟ್ಟಣವನ್ನು ಸೇರಿದ್ದಾರೆ. ಈಗ ಕೆಲವು ವರ್ಷಗಳಿಂದ ಶ್ರೀಶೈಲದಿಂದ ಬಂದ ಜಂಗಮ 'ಮಲ್ಲಿಕಾರ್ಜುನ ಸ್ವಾಮಿ' ಅವರನ್ನು ನೇಮಿಸಿದ್ದಾರೆ. ಅವರು ಈ ಮಠಕ್ಕೆ ದಿನಕ್ಕೆರಡು ಬಾರಿ ಪೂಜೆ ಮತ್ತು ಸೋಮವಾರ ವಾರದ ಪೂಜೆ ಮಾಡುತ್ತಾರೆ. ಅಮವಾಸೆ, ಹುಣ್ಣಿಮೆಗೆ ಅನ್ನದಾಸೋಹ ಊರಿನ ಜನರು ನಡೆಸುತ್ತಾರೆ. ಈ ಮಠದ ಜಾತ್ರೆ ಉತ್ಸವ ಯುಗಾದಿ ಅಮವಾಸೆ ಆಗಿ ಒಂಭತ್ತು ದಿನಕ್ಕೆ ರಾಮನವಮಿ ದಿವಸ ನಡೆಯುತ್ತದೆ. ವಿವಾಹ ಸಹ ನಡೆಯುತ್ತದೆ. ರೇವಣಸಿದ್ಧನ ಮೂರ್ತಿಯ ಮುಂದೆ ನೂತನವಾಗಿ ೨೦೧೨ರಲ್ಲಿ ಲಿಂಗವನ್ನು ಪ್ರತಿಷ್ಠಾಪನೆ ಮಾಡಿದ್ದಾರೆ. ಈ ಊರಿನಲ್ಲಿ ಕುರುಬರ ಜನಸಂಖ್ಯೆ ನಾಲ್ಕು ಸಾವಿರ ಇದ್ದರೆ, ಒಡೆಯರ ಮನೆಗಳು ಕೇವಲ ಮೂರಿವೆ.

೪. ಬಳ್ಳಾರಿ : ಈ ಊರಿನ ರೇವಣಸಿದ್ಧೇಶ್ವರ ಮಠ ಮಿಲ್ಲಾರ್‌ಪೇಟೆಯಲ್ಲಿದೆ. ೨೨.೫.೧೯೬೯ರಲ್ಲಿ ಸ್ಥಾಪನೆಯಾಗಿದೆ. ಈ ಮಠದ ಅಧಿಪತಿಯನ್ನು ಕುರುಬರ ಗುರು ಒಡೆಯರ ಶರಣಯ್ಯ ಸ್ವಾಮಿಗಳು ವಂಶಪರಂಪರೆಯಾಗಿ ನಡೆಯುತ್ತಾ ಬಂದಿದ್ದಾರೆ. ಈ ಮಠದಲ್ಲಿ ದಿನಕ್ಕೆ ಎರಡು ಸಲ ಪೂಜೆ, ವಾರದ ಪೂಜೆ ಸೋಮವಾರದಂದು ಭಜನೆ ನಡೆಯುತ್ತದೆ. ಪ್ರತಿ ಶ್ರಾವಣ ಮಾಸದಲ್ಲಿ ದಿನನಿತ್ಯ ಅಭಿಷೇಕ ಕೊನೆಗೆ ಅಖಂಡ ಭಜನೆ (ಬೆಳಿಗ್ಗೆ ಆರಂಭವಾದದ್ದು ಮರುದಿನ ಬೆಳಿಗ್ಗೆ ಮುಕ್ತಾಯವಾಗುತ್ತದೆ) ಯೊಂದಿಗೆ ಮುಗಿಯುತ್ತದೆ. ನಂತರ ಅನ್ನ ಗಣರಾಧನೆ ನಡೆಯುತ್ತವೆ. ವಿಜಯದಶಮಿಯಂದು ಪಲ್ಲಕಿ ಉತ್ಸವ, ಕಾರ್ತಿಕ ಮಾಸದಲ್ಲಿ ಸೋಮವಾರ ಕಾರ್ತಿಕೋತ್ಸವ ನಡೆಸುತ್ತಾರೆ.

ಫಾಲ್ಗುಣ ಶುದ್ಧ ಮಾಸ ತ್ರಯೋದಶಿ ರೇವಣಸಿದ್ಧರ ಹುಟ್ಟಿದ ದಿವಸ ಜಾತ್ರಾ ಉತ್ಸವ ಪುರ ಬೀದಿಗಳಲ್ಲಿ ಮೆರವಣಿಗೆ ನಡೆಯುತ್ತವೆ. ಸದ್ಭಕ್ತರೆಲ್ಲರೂ ತಮ್ಮ ತಮ್ಮ ಕಳಸಗಳ ಸಮೇತ ಉತ್ಸವದಲ್ಲಿ ಪಾಲ್ಗೊಂಡು ಶ್ರೀ ಸ್ವಾಮಿಯ ತೀರ್ಥ ಪ್ರಸಾದ ಸ್ವೀಕರಿಸಿ ಶ್ರೀಗುರು ರೇವಣಸಿದ್ಧನ ಕೃಪಾಶೀರ್ವಾದಕ್ಕೆ ಪಾತ್ರರಾಗುತ್ತಾರೆ.

೫. ಓಬಳಾಪುರ : ಈ ಗ್ರಾಮ ಬಳ್ಳಾರಿಯಿಂದ ಸುಮಾರು ೧೫ ಕಿ.ಮೀ. ಅಂತರದಲ್ಲಿದೆ. ಈ ಊರಿನಲ್ಲಿ ರೇವಣಸಿದ್ಧನ ಮೂರ್ತಿಯನ್ನು ವಂಶಪಾರಂಪರ್ಯವಾಗಿ ವಿರೂಪಾಕ್ಷಯ್ಯನವರ ಮನೆಯಲ್ಲಿಯೇ ಪೂಜಿಸುತ್ತಾ ಬಂದಿದ್ದರು. ಆದರೆ ಯಾವುದೋ ಕಾರಣದಿಂದ ತಮ್ಮ ತಮ್ಮಲ್ಲಿಯೇ ಕಲಹವುಂಟಾಗಿ ರೇವಣಸಿದ್ಧನಿಗೆ ಪ್ರತ್ಯೇಕ ವಾದ ಮಠವನ್ನು ೨೦೧೨ರ ಜನವರಿ ೨೬ರಂದು ಸ್ಥಾಪನೆ ಮಾಡಿದ್ದಾರೆ. ಈ ಮಠಕ್ಕೆ ಒಬ್ಬ ಜಂಗಮನನ್ನು ತಿಂಗಳಿಗೆ ಮೂರು ಸಾವಿರ ಸಂಬಳ ಮಾತನಾಡಿ ಒಂದು ಮನೆಯನ್ನು ಕೊಟ್ಟು ಇರಿಸಿದ್ದಾರೆ. ಇವರು ಈ ಮಠದ ಪೂಜೆ ದಿನಕ್ಕೆ ಎರಡು ಸಲ, ವಾರದ ಪೂಜೆ ಸೋಮವಾರ ಮತ್ತು ಶುಕ್ರವಾರದಂದು ನಡೆಯುತ್ತದೆ. ಸೋಮವಾರ, ಅಮವಾಸೆ, ಹುಣ್ಣಿಮೆಗೆ ಭಜನೆ ನಡೆಯುತ್ತದೆ. ಶ್ರಾವಣಮಾಸ ದಲ್ಲಿ ಎಷ್ಟು ಸೋಮವಾರ ಬರುತ್ತವೆ ಅಷ್ಟು ವಾರ ಅಭಿಷೇಕ, ಮಹಾಮಂಗಳಾರತಿ, ಅನ್ನದಾನ ನಡೆಯುತ್ತದೆ. ಕಾರ್ತಿಕ ಮಾಸದಲ್ಲಿ ಕಾರ್ತಿಕೋತ್ಸವ, ವಿಜಯದಶಮಿಯ ದಿವಸ ಪಲ್ಲಕ್ಕಿ ಉತ್ಸವವನ್ನು ಊರು ತುಂಬಾ ಮೆರವಣಿಗೆಯ ಸಮೇತ ಬನ್ನಿಗಿಡಕ್ಕೆ ಹೋಗಿ ಮಂಗಳಾರತಿ ಮಾಡಿ ಬರುತ್ತಾರೆ. ಈ ಊರಿನಲ್ಲಿರುವ ಕುರುಬರ ಮನೆಗಳು ೧೨೦. ಒಡೆಯರ ಮನೆಗಳು ೪೦. ಬಳ್ಳಾರಿ ಜಿಲ್ಲೆಯ ರೇವಣಸಿದ್ಧೇಶ್ವರ ಮಠಗಳನ್ನು ಸಮೀಕ್ಷೆ ಮಾಡಿದಾಗ ಕುರುಬರು ವಾಸಿಸುವಂತಹ ಗ್ರಾಮ ಗಳಲ್ಲಿ ಸಾಮಾನ್ಯವಾಗಿ ರೇವಣಸಿದ್ಧನ ಮಠಗಳು ಕಂಡು ಬರುತ್ತವೆ. ಇದಕ್ಕೆ ಪೂರಕವಾಗಿ ಈ ಕೆಳಗಿನ ಜನಪದ ಹಾಡು ಸ್ಪಷ್ಟಪಡಿಸುತ್ತದೆ.

ನಾಗುಳೊನ್ನೀಗೆ ಆದವು ಗುರುಮಠ । ನ್ಯಾಯಗಾರರು ಕುರುಬರು
ನ್ಯಾಯಗಾರರು ಕುರುಬರ ಕೇರ್ಯಾಗಿ । ಆದಾವು ರೇವಣ್ಣರ ಗುರುಮಠ

ಹೀಗೆ ಕುರುಬರ ಕೇರಿಗಳಲ್ಲಿ ಇರುವ ರೇವಣ ಸ್ವಾಮಿಯ ಮೇಲೆ ಕುರುಬರಿಗೂ ಮತ್ತು ಒಡೆಯರುಗಳಿಗೂ ಎಲ್ಲಿಲ್ಲದ ಭಕ್ತಿ ಭಾವ ಮತ್ತು ಶ್ರದ್ಧೆ. ಈ ದೈವದ ಮೇಲೆ ಅವರಿಗಿರುವ ಹಂಬಲ ವನ್ನು ಜನಪದರು ಈ ರೀತಿ ಹೇಳಿಕೊಂಡಿದ್ದಾರೆ.

ಈ ಮಠಗಳ ಒಡೆತನ ಕುರುಬರಿಗೆ ಸೇರಿದೆ. ಕುರುಬರ ಗುರುಗಳಾದ ಒಡೆಯರು ಈ ಮಠಗಳ ಅಧಿಪತಿಗಳಾಗಿ ಕಾರ್ಯನಿರ್ವಹಿಸಿದ್ದಾರೆ. ಕುರುಬರ ನಾಮಕರಣ, ದೀಕ್ಷೆ ಮದುವೆ, ಜಾತ್ರೆ, ಉತ್ಸವಗಳಂಥ ಸಾಮಾಜಿಕ ಹಾಗೂ ಧಾರ್ಮಿಕ ಕಾರ್ಯಗಳಲ್ಲಿ ಈ ಒಡೆಯರು ಪೌರೋಹಿತ್ಯವನ್ನು ವಹಿಸುವರು. ಒಡೆಯರು ನಿಧನರಾದ ನಂತರ ಆ ಒಡೆಯರ ಹೆಂಡಂದಿರಿಗೆ ಗುರುತನ ಬರುವುದು. ಅವಳಿಗೆ ಒಡೆಯರಮ್ಮ, ಅಮ್ಮನೋರು ಎಂದು ಕರೆಯುವರು. ಮುತ್ತೈದೆಯ ಸಂಕೇತಗಳಾದ ಕರಿಮಣಿಸರ, ಕುಂಕುಮ ತೆಗೆಯುವುದಿಲ್ಲ. ಕೊರಳಲ್ಲಿ ಲಿಂಗವನ್ನು ಧರಿಸುತ್ತಾರೆ. ಕುರುಬರ ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಗಳಲ್ಲಿ ಆಕೆ ಗುರುಸ್ಥಾನದಲ್ಲಿ ನಿಂತು ಮುನ್ನಡೆಸುವುದು ಕಂಡುಬಂದಿದೆ. ಇದು ರೇವಣಸಿದ್ಧ ಹಾಕಿಕೊಟ್ಟ ಆಚರಣೆಗಳು, ಸಂಪ್ರದಾಯ ಗಳು. ಎಷ್ಟೊಂದು ಔಚಿತ್ಯಪೂರ್ಣವಾಗಿದ್ದವು ಎಂಬುದನ್ನು ಗಮನಿಸಬಹುದು.

ಆದರೆ ಕೊಲ್ಲಿಪಾಕಿ ಶಿವಲಿಂಗದಲ್ಲಿ ಉದ್ಭವವಾದಂತೆ ವಿನ್ಯಾಸಗೊಂಡಿರುವ ರೇವಣಸಿದ್ಧನ ಪ್ರಾಚೀನ ಶಿಲ್ಪ ಒಂದೂ ಕಂಡುಬಂದಿಲ್ಲ. ಡಾ. ಎಂ.ಎಂ. ಕಲಬುರ್ಗಿ ಅವರು ಹೇಳುವಂತೆ ಬಹುಶಃ ೧೯ನೆಯ ಶತಮಾನದಲ್ಲಿ ಮುದ್ರಿತ ಪುಸ್ತಕಗಳ ಮೂಲಕ ಶಿವಲಿಂಗದಲ್ಲಿ ಉದ್ಭವವಾದಂಥ ಚಿತ್ರವನ್ನು ಪ್ರಚಾರಕ್ಕೆ ತಂದು ೨೦ನೆಯ ಶತಮಾನದಲ್ಲಿ ಪಂಚಾಚಾರ್ಯರ ಪವಾಡದಿಂದ ಹಳೆಯ ದೇವಾಲಯಗಳಲ್ಲಿ ಹೊಸ ಬಿಳಿಕಲ್ಲಿನ ಶಿಲ್ಪವನ್ನು ಸ್ಥಾಪಿಸುತ್ತ ನಡೆದಿದ್ದಾರೆ. ಹೀಗಾಗಿ ನಿಜ ರೇವಣಸಿದ್ಧನ ಶಿಲ್ಪ ೧೩ನೆಯ ಶತಮಾನದಷ್ಟು ಪ್ರಾಚೀನ. ೨೦ನೆಯ ಶತಮಾನದಷ್ಟು ಆಧುನಿಕ ಎಂದು ಹೇಳಬಹುದು. ಇದಕ್ಕಾಗಿ ಕೃತಕ ರೇವಣಸಿದ್ಧನ ಶಿಲ್ಪಗಳು ನಮಗೆ ಅಧಿಕ ಪ್ರಮಾಣದಲ್ಲಿ ಕಾಣಸಿಗುತ್ತವೆ.

ವೀರಶೈವ ಸಾಮ್ರಾಜ್ಯದ ಚಕ್ರವರ್ತಿ ಎನಿಸಿದಂತಹ ರೇಣುಕಾಚಾರ್ಯನು ಕೊಲ್ಲಿಪಾಕಿ ಸೋಮನಾಥ ಲಿಂಗದಲ್ಲಿ ಉದ್ಭವಿಸಿ, ಭೂಲೋಕದಲ್ಲಿ ೧೪೦೦ ವರ್ಷಗಳವರೆಗೆ ಇದ್ದು, ೭೦೦ ವರ್ಷ ಮನುಷ್ಯನ ರೂಪದಲ್ಲಿ ಮತ್ತು ೭೦೦ ವರ್ಷ ಮೂರ್ತಿ ದೇವರಾಗಿ ಲೀಲೆಗಳನ್ನು ಮಾಡಿದ್ದಾರೆ. ಕೈಲಾಸದ ರೇಣುಕನೇ ದ್ವಾಪರಯುಗದಲ್ಲಿ ರೇಣುಕಾಚಾರ್ಯ ರೆಂದು, ಕಲಿಯುಗದಲ್ಲಿ ಶ್ರೀ ರೇವಣಸಿದ್ಧನೆಂದು ಅವತರಿಸಿದ್ದರು ಎಂಬುದು ತಿಳಿದಿರುವ ಸಂಗತಿ.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. **ಕುರುಬರ ಗುರು ಒಡೆಯರು ಸಾಂಸ್ಕೃತಿಕ ಅಧ್ಯಯನ,** ಲೇ. ಡಾ. ಬಿ.ಜಿ. ಬಿರಾದಾರ, ಪುಟ ೧೯೩.

೨. ಅದೇ., ಪುಟ ೧೯೨.

೩. **ಹರಿಹರನ ರಗಳೆ ರೇವಣಸಿದ್ಧೇಶ್ವರ ರಗಳೆ,** (ಸಂ) ಎಂ.ಎಂ. ಕಲಬುರ್ಗಿ, ಪುಟ ೨೮೯.

೪. ಮಾರ್ಗ ಸಂಪುಟ ೪, (ಲೇ) ಎಂ.ಎಂ. ಕಲಬುರ್ಗಿ, ರೇವಣಸಿದ್ಧರ ಲೇಖನ, ೨೦೦೪, ಪುಟ ೩೫೬.

೫. ಅದೇ., ಪುಟ ೩೫೬.

೬ **ಸಿದ್ಧರಾಮ ಶಿವಯೋಗಿಯಾದಿ ರೇವಣಸಿದ್ಧನನ್ನು ಶಿವಾಚಾರ್ಯ ಮಾಡಿದುದು,** (ಲೇ) ಎಂ.ಎಂ. ಕಲಬುರ್ಗಿ, ಲಿಂಗಾಯ ಜೈಲೈ ೧, ೨೦೦೬,
ಪುಟ ೩–೫.

೮೭

ಹೊಯ್ಸಳರ ಶಿಲ್ಪಗಳಲ್ಲಿ ಸಂಗೀತ ವಾದ್ಯಗಳು ಒಂದು ಶಾಸ್ತ್ರೀಯ ಅಧ್ಯಯನ

ಡಾ. ವಿ. ಅನುರಾಧ*

ಈ ಲೇಖನದ ಉದ್ದೇಶ ಹೊಯ್ಸಳರ ಕಾಲದ ಸಂಗೀತ ವಾದ್ಯಗಳನ್ನು, ದೇವಾಲಯ ಸಮುಚ್ಚಯಗಳಲ್ಲಿ ಗುರುತಿಸಿ, ಅವುಗಳನ್ನು ಶಾಸ್ತ್ರೀಯವಾಗಿ ವಿಂಗಡಿಸುವುದು. ಹೊಯ್ಸಳರ ದೇವಾಲಯಗಳು ದಕ್ಷಿಣ ಭಾರತದ ಹಲವು ರಾಜ್ಯಗಳಲ್ಲಿ ಕಂಡು ಬಂದಿದ್ದು, ೧೨ ಮತ್ತು ೧೩ನೇ ಶತಮಾನಕ್ಕೆ ಸೇರಿವೆ. ಇವರ ಪ್ರಮುಖ ದೇವಾಲಯಗಳು ಹೊಯ್ಸಳ-ಸಾಮ್ರಾಜ್ಯದ ಹೃದಯ ಭಾಗದಲ್ಲಿದ್ದು, ಕರ್ನಾಟಕದಲ್ಲಿ ಬಹು ಸಂಖ್ಯೆಯಲ್ಲಿ ಕಂಡುಬಂದಿವೆ. ಈ ದೇವಾಲಯ ಗಳು ಕಲೆಯ ಬೀಡಾಗಿದ್ದು, ನೈಜವಾಗಿ, ಹೆಚ್ಚು ವಿವರಣೆ ಗಳೊಂದಿಗೆ ವಾದ್ಯಗಳ ಬಗ್ಗೆ ಸ್ಪಷ್ಟಮಾಹಿತಿ ನೀಡುತ್ತವೆ. ಈ ಲೇಖನವನ್ನು ಬರೆಯಲು ಹಲವು ಪ್ರಮುಖ ಹೊಯ್ಸಳ ದೇವಾಲಯದ ಶಿಲ್ಪಗಳನ್ನು ಆಧಾರಗಳನ್ನು ಬಳಸಲಾಗಿದೆ. ಮುಖ್ಯವಾಗಿ ಅಮೃತಾಪುರದ- ಅಮೃತೇಶ್ವರ ದೇವಾಲಯ (೧೧೯೬) ಅರಳಗುಪ್ಪೆಯ- ಚೆನ್ನಕೇಶವ ದೇವಾಲಯದ (೧೨೫೦) ಬಸರಾಳಿನ ಮಲ್ಲಿಕಾರ್ಜುನ ದೇವಾಲಯ (೧೨೩೪) ಬೆಳವಾಡಿಯ ವೀರನಾರಾಯಣ ದೇವಾಲಯ (೧೩೦೦) ಬೇಲೂರಿನ ಕೇಶವ ದೇವಾಲಯ (೧೧೧೭) ಹಳೇಬೀಡಿನ- ಹೊಯ್ಸಳೇಶ್ವರ ಕೇದಾರೇಶ್ವರ, ಹಾರಹಳ್ಳಿಯ- ಚನ್ನಕೇಶವ (೧೨೩೪) ಕೊರವಂಗಲದ- ಬುಕ್ಕೇಶ್ವರ ದೇವಾಲಯ, (೧೧೭೩) ಮರಳೆಯ-ಸಿದ್ಧೇಶ್ವರ ದೇವಾಲಯ (೧೧೩೦) ನಾಗಲಾಪುರದ- ಚೆನ್ನಕೇಶವ ದೇವಾಲಯ (೧೨೫೦) ಜಾವಗಲ್ಲಿನ - ಲಕ್ಷ್ಮೀ ನರಸಿಂಹ (೧೨೪೯) ಸೋಮನಾಥಪುರದ ಕೇಶವ ದೇವಾಲಯಗಳಲ್ಲಿ (೧೨೬೮) ಕ್ಷೇತ್ರಕಾರ್ಯ ನಡೆಸಿ ವಿವರಗಳನ್ನು ಸಂಗ್ರಹಿಸಲಾಗಿದೆ. ವಾದ್ಯಗಳನ್ನು ಶಾಸ್ತ್ರೀಯವಾಗಿ ವಿಂಗಡಿಸಿ, ಅವುಗಳ ನಿರ್ಮಾಣ ಅಥವಾ ಮಾಡುವ, ತಯಾರಿಸುವ ರೀತಿಯನ್ನು ಅಭ್ಯಸಿಸಿ, ಅವುಗಳ ಬಳಕೆಯ ವಿಧಾನವನ್ನು ಸಂಗೀತ ಗ್ರಂಥಗಳಿಂದ ಅರಿತು, ಈ ಲೇಖನವನ್ನು ಬರೆಯಲು ಪ್ರಯತ್ನಿಸಲಾಗಿದೆ. ಮೊದಲಿಗೆ ಸಂಗೀತದ ಬಗ್ಗೆ ನಮ್ಮ ಪ್ರಾಚೀನ ಸಂಸ್ಕೃತಿ ನೀಡುವ ಆಕರಗಳನ್ನು ಗಮನಿಸಬೇಕಾಗಿದೆ.

ಪ್ರಾಚೀನ ಕಾಲದಿಂದಲೂ ಭಾರತದಲ್ಲಿ ಸಂಗೀತ, ನೃತ್ಯ ಪರಂಪರೆ ಎಲ್ಲ ಸಾಂಸ್ಕೃತಿಕ ಚಟುವಟಿಕೆಗಳಲ್ಲೂ ದೈನಂದಿನ ಜೀವನದಲ್ಲೂ ಹಾಸುಹೊಕ್ಕಾಗಿದೆ ಎರಡನೆ ಸಹಸ್ರಮಾನವ ಪೂರ್ವಾರ್ಧದ ಸುಮಾರಿನಲ್ಲಿ ಸಿಂಧೂ ನಾಗರೀಕತೆಯ ಅವನತಿ ಉಂಟಾಗಿ ವೈದಿಕ ನಾಗರೀಕತೆಗೆ ದಾರಿ ಮಾಡಿ ಕೊಟ್ಟಿತು. ವೈದಿಕ ಪರಂಪರೆಯಲ್ಲಿ ಸಂಗೀತವು ಪ್ರಮುಖ ಪಾತ್ರವಹಿಸಿದ್ದು, ವೈದಿಕ ದೇವತೆಗಳನ್ನು ಕೊಂಡಾಡುವ ಪ್ರಾರ್ಥನಾ ಶ್ಲೋಕಗಳನ್ನು ರಾಗವಾಗಿ ಹಾಡುತ್ತಿದ್ದು, ನಂತರದ ಕಾಲದಲ್ಲಿ ಇದು ಸಂಹಿತ ಸ್ವರೂಪವನ್ನು ಪಡೆಯಿತು. ಹೀಗೆ ಶಾಸ್ತ್ರೀಯವಾಗಿ ಋಗ್ವೇದ ಸಂಹಿತೆ ರಚನೆಗೊಂಡು, ನಿಸರ್ಗ ದೇವತೆಗಳನ್ನು, ನೈಸರ್ಗಿಕ ಆಪತ್ತುಗಳಿಂದ ರಕ್ಷಿಸಿಕೊಳ್ಳಲು, ಸಂಪತ್ತು ಮತ್ತು ಆಧ್ಯಾತ್ಮಿಕ ಸಾಧನೆಗಾಗಿ ಪ್ರಾರ್ಥನೆಗಳಿಂದ ಒಲಿಸಿಕೊಳ್ಳುವ ಪ್ರಕ್ರಿಯೆ ಆರಂಭವಾಯಿತು[೧]. ನಂತರದ ಕಾಲದಲ್ಲಿ ಯಜುರ್ವೇದ ಮತ್ತು ಸಾಮವೇದಗಳ ರಚನೆ ಯಾಯಿತು. ಸಾಮವೇದವು ಸಂಗೀತದ ಮೊದಲ ನೆಲೆ ಯಾಗಿದ್ದು, ಸಂಗೀತದ ಆರಂಭಿಕ ಹಂತ, ಸಂಗೀತ ವಾದ್ಯಗಳ ಬಗ್ಗೆ ನಿಖರವಾದ ಮಾಹಿತಿಯನ್ನು ಒದಗಿಸುತ್ತದೆ. ಈ ಸಂಹಿತಗಳ ರಚನಕಾರರು ಹಲವು ಶ್ರೇಷ್ಠ ಋಷಿ ಮುನಿಗಳು, ಋಷಿ ಕನ್ಯೆಯರು ಆಗಿದ್ದು ಅವರಲ್ಲಿ ಸಪ್ತ ಋಷಿಗಳಿಗೆ ಪ್ರಮುಖ ಸ್ಥಾನವಿದ್ದು, ಅವರು ಸಂಗೀತ ಪರಂಪರೆಯನ್ನು ವೃದ್ಧಿಗೊಳಿಸುವಲ್ಲಿ ಸಫಲರಾಗಿದ್ದರು[೨].

ವೈದಿಕ ಕಾಲದಲ್ಲಿ ಯಜ್ಞಯಾಗಾದಿಗಳು-ದೇವತೆ ಗಳನ್ನು ಸಂತುಷ್ಟಿಗೊಳಿಸಲು ಆಚರಿಸಲಾಗುತ್ತಿತ್ತು. ಈ ಸಮಯ ದಲ್ಲಿ ಸಂಗೀತ ಮತ್ತು ನೃತ್ಯಗಳು ಮೇಳೈಸಿ, ಯಾಗ ಮಂಟಪ ದಲ್ಲಿ ದಿವ್ಯ ಸಾನ್ನಿಧ್ಯವನ್ನು ಸೃಷ್ಟಿಸುವುದಲ್ಲದೆ, ಅವು ದೇವತೆ ಗಳನ್ನು ಸುಪ್ರೀತ ಗೊಳಿಸಲು ಬಳಸಲಾಗುತ್ತಿತ್ತು. ಯಾವುದೇ ಧಾರ್ಮಿಕ ಕಾರ್ಯವು ಸಂಗೀತವಿಲ್ಲದೇ ಪೂರ್ಣಗೊಳ್ಳುತ್ತಿರಲಿಲ್ಲ. ಸಾಮವೇದವನ್ನು ಸಪ್ತ ಸ್ವರಗಳೊಡನೆ ಗಂಧರ್ವರು ಹಾಡಿ,

* ಸಹ ಪ್ರಾಧ್ಯಾಪಕರು, ಮಹಾರಾಣಿ ಮಹಿಳಾ ಕಲಾ ಕಾಲೇಜು, ಬೆಂಗಳೂರು-೫೬೦೦೦೧.

ಉತ್ತಮವಾದ ವಾದ್ಯಗಳಿಂದ ಗಾನ ಸುಧೆ ಹರಿಯುವಂತೆ ಮಾಡುತ್ತಿದ್ದರು. ಯಜ್ಞಯಾಗಾದಿಗಳಲ್ಲಿ ಸಾಮವೇದ ಗಾಯನ ಪ್ರಮುಖ ಪಾತ್ರ ವಹಿಸುತ್ತಿತ್ತು. 'ಸಾಮ' ಎಂಬ ಪದವೇ ಎರಡು ಪ್ರಮುಖ ಅಂಗಗಳನ್ನು ಹೊಂದಿದೆ. ಪದದ ಮೊದಲ ಅಕ್ಷರ 'ಸಾ' ಎಂಬುದು ಮಂತ್ರವಾಗಿದ್ದು, 'ರಿಚ' ವಾಗಿದೆ, ಎರಡನೆಯ ಅಕ್ಷರವೇ 'ಮ' ಇದು ಸಂಗೀತದ ಸ್ವರಗಳನ್ನು ನಿರೂಪಿಸುತ್ತದೆ. ವೈದಿಕ ಸಾಹಿತ್ಯ ಪ್ರಕಾರಗಳಲ್ಲಿ ಮೊದಲ ಭಾಗವೇ 'ಶಿಕ್ಷ'. ಇದು ಸರಿಯಾದ ಉಚ್ಛಾರಣೆಯನ್ನು ವೈಜ್ಞಾನಿಕ ರೀತಿಯಲ್ಲಿ ತಿಳಿಸಿಕೊಡುವ ಶಾಸ್ತ್ರೀಯ ವಿಜ್ಞಾನ[೩]. ಈ ಕ್ಷೇತ್ರದಲ್ಲಿ ಪಾಣಿಣಿ, ಯಾಜ್ಞವಲ್ಕ್ಯ, ವಾಸಿಷ್ಠ, ಕಾತ್ಯಾಯನಿ, ಮಾಂಡುಕಿ, ಮತ್ತು ನಾರದರು ಪ್ರಮುಖರು, ಸಂಗೀತ ವಿದ್ಯೆಯ ಸನಾತನವಾಗಿದ್ದು, ಗುರು-ಶಿಷ್ಯ ಪರಂಪರೆಯು, ಇದರ ಪ್ರಸರಣಕ್ಕೆ ಕಾರಣವಾಗಿತ್ತು. ಗುರುಕುಲ ವ್ಯವಸ್ಥೆಯಲ್ಲಿ ಶಿಷ್ಯನು ಗುರುಮುಖೇನ ದೀಕ್ಷೆಪಡೆದು ಸಂಗೀತ ವಿದ್ಯೆಯ ಪರಿಚಯ ಪಡೆಯುತ್ತಿದ್ದನು. ವೇದಗಳು ನಾಲ್ಕು ರೀತಿಯ ಗುರುಪರಂಪರೆಯನ್ನು ಗುರುತಿಸಿವೆ[೪] ಹಾಗೆಯೇ ಎರಡು ರೀತಿಯ ಶಿಷ್ಯರನ್ನೂ ಗುರುತಿಸಿವೆ[೫] ಅಂಗೀರಸ, ಗಾರ್ಗಿ, ಅತ್ರಿ, ಬೃಹಸ್ವತಿ ಮತ್ತು ವಸಿಷ್ಠರು ಪ್ರಮುಖ ಗುರು-ಪರಂಪರೆಯ ದೀವಿಗೆಯಂತಿದ್ದರು. ರಾಮಾಯಣ ಕಾಲದಲ್ಲಿ ಮಾರ್ಗ ಮತ್ತು ದೇಸೀ ಸಂಗೀತವು ಪರಿಚಿತವಾಗಿದ್ದು, ಶ್ರೀರಾಮ ಚಂದ್ರನು 'ಗಂಧರ್ವ' ಸಂಗೀತದಲ್ಲಿ ನಿಪುಣನಾಗಿದ್ದನು. ರಾಮಾಯಣ ಕಾಲದಲ್ಲಿ ವೀಣೆ, ವೇಣು, ವಂಶಿ, ಶಂಖ, ದುಂದುಬಿ, ಭೇರಿ, ಮೃದಂಗ, ಪನಯ್ ಮತ್ತು ಪತಹ್ ಪ್ರಸಿದ್ಧ ವಾದ್ಯಗಳಾಗಿದ್ದವು ರಾವಣನು ಸಂಗೀತದಲ್ಲಿ ಪಾರಂಗತನಾಗಿದ್ದನು. ರಾವಣನು ರುದ್ರ ವೀಣೆಯನ್ನು ನುಡಿಸುವಲ್ಲಿ ಪಾರಂಗತನಾಗಿದ್ದು, ಈ ಗಾಯನಕ್ಕೆ ಸಾಕ್ಷಾತ್ ಶಿವನು ಒಲಿದು, ಆತ್ಮಲಿಂಗವನ್ನು ನೀಡಿದ್ದನು. ಆಗಾಗ ನಡೆಯುತ್ತಿದ್ದ ಸಾಂಸ್ಕೃತಿಕ ಸಂಗೀತ ಕಾರ್ಯಕ್ರಮಗಳನ್ನು 'ಸಮಾಜ' ಎಂದು ರಾಮಾಯಣ ತಿಳಿಸುತ್ತದೆ. ವಂದಿ, ಸೂಕ, ಮಾಗಧರು ಸಂಗೀತ ಜ್ಞಾನ ಪಡೆದವರಾಗಿದ್ದು, ಶ್ರೇಷ್ಠ ನಾಯಕರ-ರಾಮ, ದಿಲೀಪ, ರಘು ಮುಂತಾದವರ ಕಥೆಗಳನ್ನು ಶ್ಲೋಕ ರೀತಿಯಲ್ಲಿ ಹಾಡುತ್ತಿದ್ದರು.

ಪಥ್ಯ ಸಂಗೀತ: ಪಥ್ಯ ಎಂಬುದು ಒಂದು ವಿಶೇಷ ರೀತಿಯ ಸಂಗೀತ ರಚನೆಯಾಗಿದೆ. ಭರತ ಮುನಿಯು ಪಥ್ಯ ಸಂಗೀತ ರಚನೆಯ ಆರು ಲಕ್ಷಣಗಳನ್ನು ವಿವರಿಸಿದ್ದಾರೆ.

೧. ಸಪ್ತಸ್ವರ-ಏಳು ಸ್ವರಗಳು
೨. ಸ್ಥಾನ-(ಸ್ವರ-ಸ್ಥಾನ) -ಮೂರು ಸ್ಥಾನಗಳು
೩. ಕಾಕು
೪. ನಾಲ್ಕು ವರ್ಣಗಳು
೫. ಆರು-ಅಲಂಕಾರಗಳು
೬. ಆರು-ಅಂಗಗಳು.

ಲವ-ಕುಶರು ರಾಮಾಯಣವನ್ನು ಪಥ್ಯ ಪ್ರಕಾರದಲ್ಲಿ ಏಕನಾದವನ್ನು ಬಳಸಿ ಸುಶ್ರಾವ್ಯವಾಗಿ ಹಾಡುತ್ತಿದ್ದರು. ರಾಮಾಯಣ ಗ್ರಂಥವು ಸಂಗೀತ ಶಸ್ತ್ರದ ಪ್ರಮಾಣ, ಲಯ, ಸಮ, ತಲ, ಕಾಲ, ಮಾತ್ರ ಮತ್ತು ಸಮಯವನ್ನು ಕುರಿತು ವರ್ಣಿಸಿದೆ.

ಮಹಾ ಭಾರತವು ಸಂಗೀತವನ್ನು ಗಂಧರ್ವ ಶಾಸ್ತ್ರ ಎಂದು ಉಲ್ಲೇಖಿಸುತ್ತದೆ. ಗಂಧರ್ವರು ಮತ್ತು ಅಪ್ಸರೆಯರು ಸಂಗೀತ ಶಾಸ್ತ್ರದಲ್ಲಿ ಪರಿಣಿತರಾಗಿದ್ದರು. ಏಳು ಸ್ವರಗಳುಷಡ್ಜ ಎಂದು ತಿಳಿಸಿದೆ.

ಬೌದ್ಧ ಸಾಹಿತ್ಯದಲ್ಲಿ ಸಂಗೀತದ ಬೆಳವಣಿಗೆಯನ್ನು ವರ್ಣಿಸಲಾಗಿದೆ. ಬೌದ್ಧ ಗ್ರಂಥಗಳಾದ ತೇರಗಾಥ ಮತ್ತು ತೇರೀಗಾಥದಲ್ಲಿ ಸಂಗೀತದ ವಿವಿಧ ಪ್ರಬೇಧಗಳನ್ನು ವಿವರಿಸ ಲಾಗಿದೆ. ಪಾಲಿ ಭಾಷೆಯಲ್ಲಿರುವ ಜಾತಕ ಕತೆಗಳಲ್ಲಿ ವೀಣೆ, ವೇಪಮೈ, ಧುನಕ್ ಮತ್ತು ಪನಕ್ ಎಂಬ ಸಂಗೀತ ವಾದ್ಯ ಗಳನ್ನು ಉಲ್ಲೇಖಿಸಿವೆ. ಸಾಂಚಿ ಮತ್ತು ಬಾರ್ ಹತ್‌ನಲ್ಲಿರುವ ಔದ್ಧ ಶಿಲ್ಪಗಳು ಸಂಗೀತ ಹಲವು ವಾದ್ಯಗಳ ಬಗ್ಗೆ ವಿವರ ಗಳನ್ನು ನೀಡುತ್ತದೆ. ಜೈನ ಸಾಹಿತದಲ್ಲಿ ಸಂಗೀತಗಾರ ವಿಶೇಷ ಗಳನ್ನು ಕುರಿತು ತಿಳಿಸಲಾಗಿದೆ[೬] ಭಂಭ, ಮುಕುಂದ, ಮಚಲ್ ಕದಂಬ್ ಇತ್ಯಾದಿ ವಾದ್ಯಗಳನ್ನು ಹೆಸರಿದ್ದಾರೆ.

ಭಾರತೀಯ ಪರಂಪರೆಯಲ್ಲಿ ನಾರದ ಮುನಿಯು ಸಂಗೀತ ಶಾಸ್ತ್ರದ ನಿಯಮಗಳಲ್ಲಿ ಪಾಂಡಿತ್ಯ ಪಡೆದವರಲ್ಲಿ ಮೊದಲಿಗರಾದರೆ, ತುಂಬುರು ಮುನಿಯನ್ನು ಮೊದಲ ಗಾಯಕರು ಎಂದು ಪರಿಗಣಿಸಿಲಾಗಿದೆ. ಭರತ ಮುನಿಯು ತನ್ನ ನಾಟ್ಯಶಾಸ್ತ್ರದಲ್ಲಿ ಸಂಗೀತ ವಾದ್ಯಗಳನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿದ್ದಾನೆ[೭] ಸರಸ್ವತಿಯು ಸಂಗೀತ ಮತ್ತು ನಾಟ್ಯಗಳ ಅಧಿದೇವತೆಯಾಗಿದ್ದಾಳೆ. ನಾಟ್ಯಶಾಸ್ತ್ರದಲ್ಲಿ ಹಲವು ವಿಚಾರಗಳ ಉತ್ತಮ ಸಮ್ಮಿಶ್ರಣದಿಂದ ರಸೋತ್ಪಾದನೆ ಉಂಟಾಗುತ್ತದೆ ಎಂದು ತಿಳಿಸುತ್ತಾ, ಅನುಭಾವ ಮತ್ತು ವ್ಯಭಿಚಾರಿಭಾವಗಳನ್ನು ವಿವರಿಸಲಾಗಿದೆ. ಅಭಿನವ ಗುಪ್ತನು ಸಂಗೀತ ಶಾಸ್ತ್ರಕ್ಕೆ ಹಲವು ಪ್ರಮುಖ ಕೊಡುಗೆಗಳನ್ನು ನೀಡಿದ್ದಾನೆ. ಕಾಳಿದಾಸನು ತನ್ನ ಪ್ರಮುಖ ಕೃತಿಗಳಲ್ಲಿ ಪರಿವಾದಿನಿ, ವೀಣಾ, ವಿಪಂಚಿ, ವೀಣಾ, ಪುಷ್ಕರ, ಮೃದಂಗ, ವಂಶೀ, ಶಂಖ ಮುಂತಾದ ವಾದ್ಯಗಳ ಬಗ್ಗೆ ವಿವರಣೆ ನೀಡುತ್ತಾನೆ.

ಭರತನು ತನ್ನ ನಾಟ್ಯಶಾಸ್ತ್ರದಲ್ಲಿ ಸಂಗೀತ ವಾದ್ಯಗಳನ್ನು ಘನವಾದ್ಯ, ಅವನದ್ದ ವಾದ್ಯ, ತಥವಾದ್ಯ, ಸುಶಿರವಾದ್ಯ ಎಂದು ನಾಲ್ಕು ಭಾಗಗಳಾಗಿ ವಿವರಿಸಿದ್ದಾನೆ. ಘನ

ವಾದ್ಯಗಳೆಂದರೆ (ಲೋಹ, ಮಣ್ಣು ಅಥವಾ ಮರದ ವಾದ್ಯಗಳು), ಅವನದ್ಧ ವಾದ್ಯಗಳೆಂದರೆ– ತಾಡನ ವಾದ್ಯಗಳು, ತತ ವಾದ್ಯಗಳೆಂದರೆ ತಂತೀ ವಾದ್ಯಗಳು, ಸುಶಿರ ವಾದ್ಯಗಳೆಂದರೆ– ಗಾಳೀ ವಾದ್ಯಗಳು, ಸಂಗೀತದ ಧ್ವನಿಯನ್ನು ಹೊರಡಿಸುವ ಉದ್ದೇಶದಿಂದ ಸಂಗೀತ ವಾದ್ಯವನ್ನು ತಯಾರಿಸಲಾಗಿದೆ. ಮೂಲ ತತ್ವದಲ್ಲಿ ಧ್ವನಿಯನ್ನು ಹೊರಡಿಸುವ ಯಾವುದೇ ವಸ್ತು ಸಂಗೀತ ವಾದ್ಯವಾಗುತ್ತದೆ. ಸಂಗೀತ ವಾದ್ಯಗಳ ಶೈಕ್ಷಣಿಕ ಅಧ್ಯಯನವನ್ನು ಅರ್ಗನಾಲಜಿ ಎನ್ನುತ್ತಾರೆ. ನೃತ್ಯದಂತಹ ಭಾವನಾತ್ಮಕ ಕಲೆಗಳಿಗೆ ಧ್ವನಿ ಒದಗಿಸುವ ಮಾನವರ ಪ್ರೇರಣೆಯ ಕಾರಣದಿಂದ ಇಂತಹ ವಾದ್ಯಗಳು ಕಾಣಿಸಿಕೊಂಡವು. ಕೆಲವು ಸಂಸ್ಕೃತಿಗಳು ಅವರ ಸಂಗೀತ ವಾದ್ಯಗಳಿಗೆ ಅನುಷ್ಠಾನ ಕಾರ್ಯಗಳನ್ನು ನಿಗದಿಪಡಿಸಿದವು. ಹೊಯ್ಸಳರ ಕಾಲಕ್ಕಾಗಲೇ ಬಿದರಿನಿಂದ ತಯಾರಾದ ರಿಬ್ಬನ್ನಿನಂತಹ ಪೀಪಿಗಳು, ಕೊಳಲುಗಳು, ಕಹಳೆಯಂತಹ ವಾದ್ಯಗಳು ಅಭಿವೃದ್ಧಿಗೊಂಡಿರುವುದು ಶಿಲ್ಪಗಳಿಂದ ತಿಳಿದು ಬರುತ್ತದೆ. ವಿವಿಧ ವಾದ್ಯಗಳಲ್ಲಿ ಸ್ಪಷ್ಟ ವ್ಯತ್ಯಾಸವಿಲ್ಲದ ಕಾರಣ ಈ ವಾದ್ಯಗಳಿಗೆ ಹೆಸರನ್ನು ಕೊಡುವ ಮತ್ತು ಅವುಗಳನ್ನು ವಿವರಿಸಲು, ಉತ್ಸವ ಹಬ್ಬಗಳ ಸಂಬಂಧಿ ವಾದ್ಯಗಳನ್ನು ಪುನರ್ನಿರ್ಮಿಸಲು ಕಲಾಕೃತಿಗಳ ಮೊರೆ ಹೋರ ಬೇಕಾಗಿದೆ. ದೊಡ್ಡ ತಾಳಗಳು, ಘಂಟೆಗಳು, ಹಲವು ರೀತಿಯ ತಂತೀ ವಾದ್ಯಗಳು ಹೊಯ್ಸಳರ ದೇವಾಲಯಗಳಲ್ಲಿವೆ. ನೆಟ್ಟಗಿನ ಕೊಳಲುಗಳು, ಬಾಗಿದ ಕೊಳಲುಗಳು, ತುತ್ತೂರಿ, ಕಹಳೆಗಳು ಹೆಚ್ಚಿನ ಸಂಖ್ಯೆಯಲ್ಲಿ ದೊರೆತಿವೆ. ಹಾವಾಡಿಗಳ ನಳಿಕೆಯ ಪುಂಗಿ, ಕಂಸಾಳೆಯಂತಹ ವಾದ್ಯ, ಸಿಲಿಂಡರಿನಾಕಾರದ ಡ್ರಮ್ ಗಳು, "ಸಂಪ್ರದಾಯ ಬದ್ಧ" ಆಕಾರವನ್ನು ಪಡೆದ ವಾದ್ಯಗಳು ಇವೆ. ಈ ರೀತಿ ವಾದ್ಯವಳಲ್ಲಿ ಹೊಯ್ಸಳ ಶಿಲ್ಪಗಳಲ್ಲಿ ಪ್ರಮುಖವಾಗಿ ಕಾಣುವ ಕೆಲವು ವಾದ್ಯಗಳನ್ನು ಇಲ್ಲಿ ವಿವರಿಸಲಾಗಿದೆ.

ವೀಣೆ : ಇದು ಒಂದು ಜನಪ್ರಿಯ ತಂತೀ ವಾದ್ಯ, ಸರಸ್ವತಿ ದೇವಿಯು ನುಡಿಸುತ್ತಿದ್ದ ವೀಣೆಯ ಹೆಸರು– ಸರಸ್ವತೀ ವೀಣೆ, ಇದರಲ್ಲಿ ಮೂರು ತಂತಿಗಳು, ಒಂದು ಮುಖ್ಯ ತಂತಿ ಇರುತ್ತದೆ. ಎಲ್ಲವೂ ಒತ್ತಾಳೆಯವು. ಸಪ್ತಸ್ವರದ ಮನೆಗಳು ಮೇಣ ಕಟ್ಟುವುದರ ಮೂಲಕ ಆಯಾ ಸ್ಥಾನಗಳಲ್ಲಿ ಕೂಡಿಸಲ್ಪಟ್ಟಿದೆ. ಹೊಯ್ಸಳ ದೇವಾಲಯಗಳಲ್ಲಿ ವೀಣೆಗಳು ಕಂಡು ಬಂದಿದ್ದು ಮೆಟ್ಟಲುಗಳುಳ್ಳದ್ದು, ಮತ್ತು ಮೆಟ್ಟಲುಗಳು ಇಲ್ಲದ್ದೂ ದೊರೆತಿದೆ. ವೀಣೆಯನ್ನು ಕುರಿತು ಋಗ್ವೇದ ಮತ್ತು ಯಜುರ್ವೇದಗಳು ಪ್ರಸ್ತಾಪಿಸಿವೆ. ವೀಣೆಯ ಉತ್ಪತ್ತಿಗೆ ನಾದ ಪ್ರಿಯನಾದ ಶಂಕರನು ಕಾರಣನಾದ್ದರಿಂದ, ಇದಕ್ಕೆ "ರುದ್ರವೀಣೆ" ಎಂಬ ಹೆಸರು ತುಂಬುರರು ನುಡಿಸುತ್ತಿದ್ದ ವೀಣೆಯ ಹೆಸರು "ಕಲಾವತೀ" ವಿಶ್ವಾವಸುವಿನ ವೀಣೆಯ ಹೆಸರು "ಬೃಹತೀ", ನಾರದರು ನುಡಿಸುತ್ತಿದ್ದ ವೀಣೆಯ ಹೆಸರು "ಮಹತೀ" ರಾವಣನು ವೀಣೆಯ ತಂತಿಯೊಂದು ಕಿತ್ತು ಹೋದಾಗ ತನ್ನ ದೇಹದ ನರವನ್ನೇ ಕಿತ್ತು ತಂತಿಯಾಗಿಸಿ, ವೀಣೆಯ ವಾದನವನ್ನು ಮಾಡಿ, ಶಿವನನ್ನು ಒಲಿಸಿಕೊಂಡನು. ಕಾಳಿದಾಸನು ತನ್ನ ಶ್ಯಾಮಲಾದಂಡಕದಲ್ಲಿ "ಮಾಣಿಕ್ಯವೀಣಾಂ" ಎಂಬ ಮಾಣಿಕ್ಯದಿಂದ ಅಲಂಕರಿಸಿರುವ ವೀಣೆಯನ್ನು ಶಾರದೆಯು ನುಡಿಸುತ್ತಾಳೆ ಎಂದು ವಿವರಿಸಿದ್ದಾನೆ.

ಪುರಾತತ್ವ ಶಾಸ್ತ್ರಜ್ಞರು, ಗುಪ್ತ ದೊರೆ– ಸಮುದ್ರಗುಪ್ತನು (೩೩೦–೩೭೫ ಕ್ರಿ.ಶ) ಒಂದು ರೀತಿಯ ವೀಣೆ ನುಡಿಸುತ್ತಿರುವ ನಾಣ್ಯವನ್ನು ಹೊರಡಿಸಿರುವುದನ್ನು ಕಂಡು ಹಿಡಿದಿದ್ದಾರೆ. ಮೆಟ್ಟಲುಗಳು ಇರುವ ವೀಣೆಯನ್ನು 'ಸಾರಿ' ವೀಣೆ[೧೧] ಎಂದು, ಮೆಟ್ಟಲುಗಳು ಇಲ್ಲದ ವೀಣೆಯನ್ನು 'ನಿಸಾರಿ' ವೀಣೆ[೧೧] ಎಂದೂ ಕರೆಯಲಾಗಿದೆ. ಒಂದೇ ಮರದ ತುಂಡಿನಲ್ಲಿ ನಿರ್ಮಾಣವಾಗಿದ್ದಲ್ಲಿ 'ಏಕಾಂತ' ವೀಣೆ, ಎಂದೂ ಮೂರು ಮರದ ತುಂಡುಗಳನ್ನು ಬಳಸಿದ್ದಲ್ಲಿ 'ಒಟ್ಟು' ವೀಣೆ ಎಂದೂ ಕರೆಯುತ್ತಾರೆ.

ಮಹಾನಾಟಕ ವೀಣೆ: ಇದನ್ನು ವೀಣೆಯ ಇನ್ನೊಂದು ಪ್ರಭೇದವೆನ್ನಬಹುದು. ಇದು ಆಕಾರ ಮತ್ತು ರಚನೆಗಳಲ್ಲಿ ವೀಣೆಯಂತಿದ್ದರೂ, ಇದರಲ್ಲಿ ಮೆಟ್ಟಿಲುಗಳು ಇರುವುದಿಲ್ಲ. ಸ್ವರಸ್ಥಾನದಲ್ಲಿ ತಂತಿಯನ್ನೊತ್ತಲು ಮರದ ಗೋಟನ್ನು (ಸಿಲಿಂಡರಿನ ಆಕಾರದ ಮರದ ಚೂರು) ಬಳಸುವುದರಿಂದ ಇದಕ್ಕೆ ಗೋಟುವಾದ್ಯ ಎಂಬ ಹೆಸರು ಬಂದಿದೆ. ಇದರ ಧ್ವನಿ ವೀಣೆಗಿಂತ ಗಾಢ. ಇದರಲ್ಲಿ ಒಟ್ಟು ೨೧ ತಂತಿಗಳಿರುತ್ತವೆ. ಯಾಜ್ಞಲ್ಕ್ಯನು ತನ್ನ ಸ್ಮೃತಿಯಲ್ಲಿ' ವೀಣಾ ವಾದನ ಕಥ ವಂಗ, ಶೃತಿ, ಜತಿ, ವಿಸರ್ಥ ತಲನ್‌ಜಾಪ್ರಯಾಸೇನ ಮೋಕ್ಷ ಮಾರ್ಗಂ ನಿಯಾಪತೀ ಎಂದು ಹೇಳಿದ್ದಾರೆ. ರಘುನಾಥ ವೀಣೆ ಎಂಬ ಹೆಸರು, ತಂಜಾವೂರಿನ ರಘುನಾಥನಾಯಕನ ಕಾಲದ ವೀಣೆಗೆ ಬಂದಿರಬಹುದು. ಶತತಂಕ್ರೀ ವೀಣೆಯು ಸಂತೂರಿನ ರೂಪದಲ್ಲಿದ್ದಿತು. ಸಪ್ತತಂತಿ ವೀಣೆಯು ಏಳು ತಂತಿಗಳನ್ನು ಹೊಂದಿತ್ತು. ಹೆಚ್ಚಾಗಿ ತಂತೀ ವಾದ್ಯಗಳ ಸಂಗೀತ ಮೇಳದ ಉನ್ನತಿಯಾದಂತೆ, ಗಾಳೀ ವಾದ್ಯಗಳಾದ ಕೊಳಲು, ಶಹನಾಯಿ, ಬಾನ್ಸುರಿ ಮುಂತಾದ ಸಂಗೀತ ಸಾಧನಗಳು ತಂತಿ ವಾದ್ಯಗಳ ಏಕ ತಾನಕೆಯ್ನನು ಹೋಗಲಾಗಿಸಲು ಸಹಾಯಕವಾದವು. ಈ ಕಾಲದ ವೀಣೆಗಳಲ್ಲೂ ಬಹು ಬಗೆಯವು ಕಂಡ ಬಂದಿವೆ.

ಅವನದ್ಧ ವಾದ್ಯ

ಘಟಂ: ಇದು ಕರ್ನಾಟಕ ಶಾಸ್ತ್ರಿಯ ಸಂಗೀತದಲ್ಲಿ ಬಳಸುವ ಒಂದು ತಾಳವಾದ್ಯ. ಅನಾದಿ ಕಾಲದಿಂದಲೂ

ಜಾನಪದ ವಾದ್ಯವಾಗಿ ಬಳಕೆಯಲ್ಲಿದೆ. ಇದನ್ನು ಈಗ ಕರ್ನಾಟಕದ ಸಂಗೀತದಲ್ಲಿ ವ್ಯಾಪಕವಾಗಿ ಬಳಸಿಕೊಳ್ಳುತ್ತಿದ್ದಾರೆ. ಇದನ್ನು ವಿಶೇಷ ಗುಣವುಳ್ಳ ಮಣ್ಣನ್ನು ಆಯ್ದು, ಹಲವು ತಿಂಗಳ ಕಾಲ ನೆನೆಸಿ, ನಂತರ ಕಬ್ಬಿಣದ ಪುಡಿಯೊಡನೆ ಕಲಸಿ, ಬೇಯಿಸಿ (ಬೆಂಕಿಯಲ್ಲಿ ಸುಟ್ಟು) ತಯಾರಿಸುತ್ತಾರೆ. ಎರಡು ಅಂಗೈ ಮತ್ತು ಬೆರಳುಗಳಿಂದ ಈ ವಾದ್ಯವನ್ನು ನುಡಿಸುತ್ತಾರೆ. ಇದು ಮೃದಂಗ ಹಾಗೂ ಖಂಜೀರದೊಂದಿಗೆ ನುಡಿಸಿದಾಗ ಸುಮಧುರನಾದ ಹೊರಹೊಮ್ಮಿಸುತ್ತದೆ.

ಮೃದಂಗ: ಇದು ಕರ್ನಾಟಕ ಸಂಗೀತದಲ್ಲಿ ಬಳಸುವ ಲಯ ವಾದ್ಯ. ಮೃದಂಗವನ್ನು ಮರ, ಚರ್ಮ ಮತ್ತು ಕರಣೆ ಕಲ್ಲು ಬಳಸಿ ತಯಾರಿಸುತ್ತಾರೆ. ಮೃದಂಗ ಎಂಬ ಹೆಸರು 'ಮೃತ್' ಮತ್ತು 'ಅಂಗ' ಎಂಬ ಎರಡು ಸಂಸ್ಕೃತ ಪದಗಳಿಂದ ಬಂದಿದೆ. ಮೃತ್ ಎಂದರೆ ಮಣ್ಣು, ಪ್ರಾಚೀನ ಕಾಲದಲ್ಲಿ ಕಳಸಿಗೆಯನ್ನು ಮಣ್ಣಿನಿಂದಲೇ ತಯಾರಿಸುತ್ತಿದ್ದರು. ಧೀರ್ಘ ಬಾಳಿಕೆಯ ದೃಷ್ಟಿಯಿಂದ ಹಲವು, ಹೆಬ್ಬಲಸು ಸಂಪಿಗೆ, ತೇಗ, ಬೇವು ಮುಂತಾದ ಮರಗಳಿಂದ ತಯಾರಿಸ ಲಾಗುತ್ತದೆ. ಬಳಗೆ ಟೊಳ್ಳಾಗಿರುವ ಭಾಗಕ್ಕೆ 'ಹೊಲವು' ಅಥವಾ 'ಕಳಸಿಗೆ' ಎಂದು ಹೆಸರು. ಇದರ ಮಧ್ಯಭಾಗ ಉಬ್ಬಿ ಕಡೆಯ ಭಾಗದಲ್ಲಿ ಚಿಕ್ಕದಾಗಿರುತ್ತದೆ. ಕಡೆಯ ಭಾಗಗಳನ್ನು ಎಡ ಮತ್ತು ಬಲ ಎಂದು ಕಡೆಯುತ್ತಾರೆ. ಬಲ ಭಾಗದ ವ್ಯಾಸವು ಎಡೆ ಭಾಗಕ್ಕಿಂತ ಕಡಿಮೆ ಇರುತ್ತದೆ ಉಬ್ಬಿದ ಭಾಗವನ್ನು 'ಹರಡ' ಅಥವಾ 'ಕಡಗ' ಎಂದು ಕರೆಯುತ್ತಾರೆ. ಹೊಳವಿನ ಉದ್ದ ಹಾಗೂ ಎರಡೂ ಮುಖಗಳ ವ್ಯಾಸ ನೇರವಾಗಿದ್ದು ಮೃದಂಗದ ಶೃತಿಗೆ ಸಂಬಂಧಿಸಿದೆ. ಉದ್ದ ಹಾಗೂ ಬಲದ ವ್ಯಾಸ ಹೆಚ್ಚಿದ್ದರೆ ತಗ್ಗು ಶೃತಿಗೆ ಹೊಂದಿಸಬಹುದು. ಕಡಿಮೆ ಇದ್ದರೆ ಹೆಚ್ಚು ಶೃತಿಗೆ ಹೊಂದಿಸಬಹುದು. ಬಲ ಮುಚ್ಚಿಗೆಗೆ ಮೇಕೆ ಹಾಗೂ ಹಸುವಿನ ಚರ್ಮ ಬೇಕಾಗುತ್ತದೆ. ಬಲ ಮುಚ್ಚಿಗೆಯಲ್ಲಿ ಮೂರು ಪದರಗಳು, ಎಡ ಮುಚ್ಚಿಗೆಯಲ್ಲಿ ಎರಡು ಪದರಗಳೂ ಇವೆ. ಇದಾದ ನಂತರ ಮುಚ್ಚಿಗೆಯ ಅಂಚಿನ ಸುತ್ತಲೂ ರಂಧ್ರಗಳನ್ನು ಮಾಡಿ, ಎಮ್ಮೆಯ ಚರ್ಮದಿಂದ ಹೆಣೆಯುತ್ತಾರೆ. ಇದನ್ನು 'ಇಂಡಿಗ' ಎಂದು ಕರೆಯುತ್ತಾರೆ. ನಂತರ ಇದನ್ನು ಬಿಸಿಲಿನಲ್ಲಿ ಬಣಗಿಸಿ, ಉಳಿದ ಭಾಗಗಳನ್ನು ಕತ್ತರಿಸುತ್ತಾರೆ. ಹಲವು ಬಗೆಯ ತಾಳವಾದ್ಯಗಳು ಈ ಶಿಲ್ಪಗಳಲ್ಲಿ ಕಂಡು ಬಂದಿವೆ.

ತಾಳವಾದ್ಯ

ಗೆಜ್ಜೆ: ಒಂದು ತಾಳವಾದ್ಯ ಹಾಗೂ ಆಭರಣ. ಕಂಚಿನ ಟೊಳ್ಳಾದ ದುಂಡು ಗುಳಿಗೆಯ ಅರ್ಧಭಾಗದವರೆಗೂ ಬಾಯಿ ಬಿಡಿಸಿ, ಒಳಗೆ ಕಲ್ಲಿನ ಸಣ್ಣ ಸಣ್ಣ ಚೂರುಗಳನ್ನು ಸೇರಿಸಿ, ಗುಳಿಗೆಯ ಇನ್ನೊಂದು ಬದಿಗೆ ಸಣ್ಣ ಉಂಗುರವನ್ನು ಅಳವಡಿಸಿರುತ್ತಾರೆ. ಇದನ್ನು ಭಾಗವತರು, ನಟರು, ನಾಟ್ಯ ಮಾಡುವ ನರ್ತಕರು ಕಾಲಿಗೆ ಕಟ್ಟಿಕೊಳ್ಳುತ್ತಾರೆ. ಹಾವಾಡಿ ಗರೂ, ದೊಂಬರು, ಭಜನೆಗೋಷ್ಠಿಯವರೂ ಇದನ್ನು ಬಳಸುತ್ತಾರೆ.

ತಬಲ: ಒಂದು ಜನಪ್ರಿಯ ತಾಳವಾದ್ಯ ಈ ವಾದ್ಯದಲ್ಲಿ ಎರಡು ಡೊಳ್ಳುಗಳಿದ್ದು ಅವುಗಳನ್ನು ಕೈ ಮತ್ತು ಬೆರಳುಗಳಿಂದ ನುಡಿಸಲಾಗುತ್ತದೆ.

ಡೋಲು: ಇದು ನಾದ ಸ್ವರದೊಡನೆ ಉಪಯೋಗಿಸುವ ತಾಳವಾದ್ಯ ಇದು ಆಕಾರದಲ್ಲಿ ಮೃದಂಗವನ್ನು ಹೋಲುತ್ತದೆ. ಇದರ ಆಕಾರ ದೊಡ್ಡದು. ಹಲಸು ಮರದ ಒಂದೇ ತುಂಡನ್ನು ಕೊರೆದು ಮಾಡಿರುತ್ತಾರೆ. ಎರಡೂ ಕಡೆಗಳಲ್ಲಿ ಹಾಕಿರುವ ವೃತ್ತಾಕಾರದ ಹದ ಮಾಡಿದ ಚರ್ಮಗಳನ್ನು ಚರ್ಮದ ಪಟ್ಟಿಗಳಿಂದ ಎಳೆದು ಕಟ್ಟಿರುತ್ತಾರೆ. ಇದನ್ನು ಬಿಗಿ ಅಥವಾ ಸಡಿಲ ಮಾಡುವುದರಿಂದ ಬೇಕಾದ ಶೃತಿಯನ್ನು ಪಡೆಯ ಬಹುದು. ಇದರ ಎಡಭಾಗವನ್ನು ಸಣ್ಣ ಕೋಲಿನಿಂದಲೂ, ಬಲ ಭಾಗವನ್ನು ಬೆರಳುಗಳಿಂದಲೂ ನುಡಿಸುತ್ತಾರೆ ಕೊರಳಿಗೆ ಬಟ್ಟೆಯಿಂದ ಇಳಿಬಿಟ್ಟು ನುಡಿಸುತ್ತಾರೆ.

ಗಾಳಿ ವಾದ್ಯ

ಭಾರತದ ಅತ್ಯಂತ ಪ್ರಾಚೀನ ಗಾಳಿ ವಾದ್ಯಗಳಲ್ಲಿ ಕೊಳಲು ಒಂದು. ಸಂಗೀತ ರತ್ನಾಕರದಲ್ಲಿ ೧೪ ಬಗೆಯ ಕೊಳಲನ್ನು ಹೇಳಿದೆ. ಅವುಗಳ ಉದ್ದ ಬಂದಂಗುಲದಿಂದ-ಹದಿನೆಂಟು ಅಂಗುಲದ ವರೆಗೆ ಇರುತ್ತದೆ. ಈ ಬಗೆಯ ಕೊಳಲುಗಳು ಹೊಯ್ಸಳ ಶಿಲ್ಪಗಳಲ್ಲಿ ದೊರೆತಿವೆ.

ಕೊಳಲು: ಬಿದಿರಿನ ಒಂಟಿ ವಿಸ್ತಾರದಿಂದ ತಯಾರಿಸ ಲಾಗುವ ಗಾಳಿ ವಾದ್ಯ. ಏಳು ತೆರೆದ ಬೆರಳ ರಂಧ್ರಗಳಿರುವ ವಾದ್ಯ. ಗೋವಳರು ಮತ್ತು ಗ್ರಾಮೀಣ ಪರಂಪರೆಯೊಂದಿಗೆ ಇರುವ ಪ್ರಾಚೀನವಾದ ಸಂಗೀತ ವಾದ್ಯ.

ನಾಗಸ್ವರ: ಇದು ಪ್ರಮುಖ ಮಂಗಳ ವಾದ್ಯ. ಅತ್ಯಂತ ಗಟ್ಟಿಯಾದ ಸ್ವರವುಳ್ಳ ಅಲೋಹ ವಾದ್ಯವಾಗಿದೆ. ಇದು ಮೇಲ್ಭಾಗದಲ್ಲಿ ಸಣ್ಣ ಆಕಾರವಿದ್ದು ಕೆಳಭಾಗಕ್ಕೆ ದೊಡ್ಡದಾಗಿರುವ ಮರದ ಕೊಳವೆಯಾಗಿದೆ. ಇದರ ಉದ್ದವು ಸುಮಾರು ಎರಡದಿಂದ ಎರಡೂವರೆ ಅಡಿಗಳಿರುತ್ತದೆ. ವಾದ್ಯದ ಮೇಲ್ಭಾಗದಲ್ಲಿ ಲೋಹದ ಮುಖವಿರುತ್ತದೆ. ಕೆಳಭಾಗದಲ್ಲಿ ಗಂಟೆಯ ಆಕಾರದ ಲೋಹದ ಭಾಗವನ್ನು ಸೇರಿಸಿರುತ್ತಾರೆ. ಇದರ ಮೇಲ್ಭಾಗದಲ್ಲಿ ಏಳು ರಂಧ್ರಗಳು ಕೆಳಭಾಗದಲ್ಲಿ ಐದು ರಂಧ್ರಗಳು ಇರುತ್ತದೆ.

ಕೊಂಬು, ಕಹಳೆ, ಶಂಖ, ಭಜಂತ್ರಿ ಮುಂತಾದ ವಾದ್ಯಗಳು ಹೊಯ್ಸಳ ಶಿಲ್ಪ ಗಳಲ್ಲಿ ಹೇರಳವಾಗಿವೆ. ರಚನೆಯ ದೃಷ್ಟಿಯಿಂದ ಬಹಳ ಸರಳವಾದ ಜನಪದ ವಾದ್ಯವಿದು. ಹೆಸರೇ ಸೂಚಿಸುವ ಕೋಣ ಇಲ್ಲವೇ ಎಮ್ಮೆಯ ವಕ್ರವಾಗಿ ಬಾಗಿರುವ ಕೊಂಬಿನ ಚೂಪಾದ ಭಾಗದಲ್ಲಿ ಒಂದು ರಂಧ್ರ ಮಾಡಿದರೆ ಕೊಂಬು ವಾದ್ಯ ಸಿದ್ದ ರಂಧ್ರಕ್ಕೆ ಬಾಯಿಟ್ಟು ಜೋರಾಗಿ ಊದಿದರೆ, ಕೊಂಬು ಡೊಳ್ಳಾಗಿರುವುದರಿಂದ ಅದರೊಳಗಿಂದ ಗಾಳಿ ಹಾದು ಬರುವಾಗ ಕಂಪನಗಳುಂಟಾಗಿ ಧ್ವನಿ ಹೊರಡುತ್ತದೆ. ಕೊಂಬು ವಾದ್ಯದ ಮುಂಭಾಗ ಅಗಲವಾಗಿರುವುದರಿಂದ ಧ್ವನಿ ವರ್ಧಿಸುತ್ತಾ ಬಹುದೂರದ ವರಗೆ ಅದು ಕೇಳುತ್ತದೆ.

ಕಹಳೆ: ಆಕಾರದಲ್ಲಿ ಕಹಳೆಯಂತೆಯೇ ಇದ್ದರೂ ಅದಕ್ಕಿಂತ ಹೆಚ್ಚು ಉದ್ದ ಮತ್ತು ವಕ್ರವಾಗಿರುತ್ತದೆ. ಇದನ್ನು ಹಿತ್ತಾಳೆಯ ಕೊಳವೆಗಳಿಂದ ರಚಿಸಿರುತ್ತಾರೆ. ಇದು ಇಂಗ್ಲೀಷ್‌ನ S. ಆಕಾರದಲ್ಲಿ ಇರುತ್ತದೆ. ಬಾಯಿಗೆ ತಗುಲಿಸಿ ಕೊಳವೆಯ ವ್ಯಾಸ ಕಡಿಮೆ ಇದ್ದು, ಕೊನೆಯ ಊದುವ ಕೊಳವೆಯ ಮುಂಭಾಗ ಹೆಚ್ಚು ಅಗಲವಾಗಿರುತ್ತದೆ. ಕೊಂಬುಗಳು ಕರೆದಾವ ಕಾಳೆಗಳು ಉದ್ಯಾವ ದಿಮ್ಮಿ ಕರಡೆಲ್ಲ ಕಣಕಣಿಸಿ ನಬ್ಬಂದ ಅಬ್ಬರ ಸಂಭ್ರಮ ಹೇಳಾವ ಎಂಬ ತ್ರಿಪದಿಯಿಂದ ಕೊಂಬು, ಕಹಳೆಗಳು ಸಾಂಸ್ಕೃತಿಕ ಸಂಧರ್ಭದಲ್ಲಿ ಬಳಸುತ್ತಿದ್ದ ವಾದ್ಯಗಳೆಂದು ತಿಳಿಯುತ್ತದೆ. ಹೆಗ್ಗಹಳೆ, ಚಿನಿಕಹಳೆ, ರಣಕಹಳೆ, ಜವಳಿಕಹಳೆ, ಇರುಗಹಳೆ ಇತ್ಯಾದಿ ಹಲವಾರು ಬೇರೆ ಬೇರೆ ಬಗೆಯ ಕಹಳೆಗಳ ಉಲ್ಲೇಖ ಶಾಸನಗಳಲ್ಲಿ ಕಂಡು ಬರುವುದು, ಹೊಯ್ಸಳ ಶಿಲ್ಪಗಳಲ್ಲಿ ಉಲ್ಲೇಖವಾಗಿವೆ.

ಶಂಖ: ಇದು ಬಹಳ ಪ್ರಾಚೀನ ವಾದ್ಯವಾಗಿದ್ದು, ಸಾಮವೇದದಲ್ಲಿ ಇದರ ಉಲ್ಲೇಖವಿದೆ. ಪ್ರಕೃತಿದತ್ತ ವಾದ್ಯವಿದು. ಇದರ ಒಳಭಾಗದಲ್ಲಿ ನೈಸರ್ಗಿಕ ಸುರುಳಿಯಾಕಾರದ ಟೊಳ್ಳು ಭಾಗವಿರುತ್ತದೆ. ಅದರ ಮುಚ್ಚಿದ ಭಾಗದಲ್ಲಿ ಒಂದು ರಂಧ್ರ ತೆಗೆದರೆ ಸಾಕು. ಉಸಿರುವಾದ್ಯವಾದ ಶಂಖ ಸಿದ್ದ. ರಂಧ್ರದ ಮೂಲಕ ಊದಿದ ಗಾಳಿಯು ಸುರುಳಿಗಳಲ್ಲಿ ಸುತ್ತುತ್ತ ಕಂಪನ ಪಡೆದು ಧ್ವನಿಯಾಗಿ ಹೊರಹೊಮುತ್ತದೆ. ದೇವಾಲಯಗಳಲ್ಲಿ ದೇವರ ಪೂಜಾ ಸಂದರ್ಭದಲ್ಲಿ ಶಂಖ ಊದುವುದು ರೂಢಿ. ವಿಷ್ಣು ಶಂಖಧಾರಿ. ಹಿಂದೂಗಳಲ್ಲಿ ಶಂಖಕ್ಕೆ ಒಂದು ಶಂಖಕ್ಕೆ ಒಂದು ಬಗೆಯ ಧಾರ್ಮಿಕ ಮಹತ್ವವಿದೆ. ಈ ಲೇಖನದೊಂದಿಗೆ ನೀಡಿರುವ ಶಿಲ್ಪಗಳ ಚಿತ್ರಗಳು ನೂರಾರು ರೀತಿಯ ವಾದ್ಯಗಳನ್ನು ನುಡಿಸುತ್ತಿರುವ ವಾದ್ಯಕಾರರನ್ನು ನಮಗೆ ಪರಿಚಯಿಸುತ್ತವೆ. ಅವು ಗಾಯನ ಮತ್ತು ನರ್ತನದಲ್ಲಿ ಸಂಪೂರ್ಣವಾಗಿ ಮೈಮರೆತು, ಆನಂದಿಸುತ್ತಿರುವ ಭಂಗಿಗಳು, ಹೊಯ್ಸಳರು ಸಂಗೀತ ಮತ್ತು ಶುದ್ಧ ಮನೋರಂಜನೆಯನ್ನು ನೀಡುವುದರಲ್ಲಿ ಅಗ್ರಗಣ್ಯರಾಗಿದ್ದರು ಎಂಬ ವಾಸ್ತವತೆಯನ್ನು ಸೂಚಿಸುತ್ತವೆ. ನಾನು ಕೆಲವು ವಾದ್ಯಗಳನ್ನು ಪ್ರಮುಖ ಸಂಗೀತಕಾರರನ್ನು ಕಂಡು ವಿಭಜಿಸಲು ಪ್ರಯತ್ನಿಸಿದ್ದೇನೆ. ಪಕ್ಕವನ್ನು ಇನ್ನೂ ಹೆಚ್ಚಿನ ಅಧ್ಯಯನಕ್ಕಾಗಿ ಮೀಸಲಿಡುತ್ತಿದ್ದೇನೆ.

೧. ಋಗ್ವೇದ ಸಂಹಿತ ಸುಮಾರು ಕ್ರಿಪೂ. ೧೫೦೦ ರಿಂದ ೫೦೦ರ ಒಳಗೆ ರಚನೆಗೊಂಡಿದೆ ಇಲ್ಲಿನ ಶ್ಲೋಕಗಳು ಕರ್ತೃಗಳ ಕುಲಗಳನ್ನು ಆಧರಿಸಿ ಜೋಡಿಸಲ್ಪಟ್ಟಿವೆ. ಈ ಜೋಡಣೆಯ ಒಟ್ಟು ಸ್ವರೂಪವೇ ಸಂಹಿತ.

೨.ಶತಪಥ ಬ್ರಾಹ್ಮಣವು ಸಪ್ತ ಋಷಿಗಳನ್ನು ಹೆಸರಿಸುತ್ತದೆ. ಅವರು. ೧. ಗೌತಮ, ೨. ಭಾರಧ್ವಾಜ, ೩. ವಿಶ್ವಾಮಿತ್ರ, ೪. ಜಮದಗ್ನಿ, ೫. ವಶಿಷ್ಠ, ೬. ಕಶ್ಯಪ, ೭. ಅತ್ರಿ

೩. ಸ್ವರ, ವ್ಯಂಜನ ಮತ್ತು ಅನುನಾಸಿಕಗಳನ್ನು ಸ್ಪಷ್ಟವಾಗಿ ಉಚ್ಛಾರಿಸುವುದಲ್ಲದೆ, ವರ್ಣ, ಸ್ವರ, ಮಾತ್ರ, ಬಲ, ಸಮ ಮತ್ತು ಸಂತನಗಳನ್ನು ವಿವರಿಸುತ್ತದೆ.

೪. ಆಚಾರ್ಯ, ಪ್ರವಕ್ತ, ಶ್ರೋತ್ರೀಯ ಮತ್ತು ಅಧ್ಯಾಪಕ.

೫. ಶಿಷ್ಯರಲ್ಲಿ ಎರಡು ವಿಧಗಳನ್ನು ಗುರುತಿಸಲಾಗಿದೆ. ಗುರು ದಕ್ಷಿಣೆಯ ಮುಖೇನ ಶಿಷ್ಯರಾದವರನ್ನು-ಆಚಾರ್ಯಭಾಗ ಎಂದೂ, ಗುರು-ಕುಲದ ಕೈಂಕರ್ಯವನ್ನು ಮಾಡುತ್ತಾ, ಶಿಷ್ಯರಾದವರನ್ನು ಧರ್ಮ-ಶಿಷ್ಯ ಎಂದು ಗುರುತಿಸಲಾಗಿದೆ.

೬. ಮಾರ್ಗ ಪದ್ಧತಿಯು ಬ್ರಹ್ಮ ಮತ್ತು ಇತರ ದೇವತೆಗಳಿಂದ ಪ್ರಚುರಪಡಿಸಲ್ಪಟ್ಟಿದ್ದು, ಇದನ್ನು ಮನೋರಂಜನೆಗೆ ಬಳಸಲ್ಪಡುತ್ತಿರಲಿಲ್ಲ, ಬದಲಾಗಿ ದೇವತೆಗಳನ್ನು ಸಂಪ್ರೀತಗೊಳಿಸಲು ಬಳಸುತ್ತಿದ್ದರು.


೭ ಸ್ಥಾನಂಗ ಸಲೂತ್ರ, ನಾರದೀಯ ಶಿಕ್ಷ, ರಾಯಪ್ಪ ಸೇನಜನ ಕೃತಿಗಳಲ್ಲಿ ವಾದ್ಯಗಳನ್ನು ೧೮ ವಿಭಾಗಳಾಗಿ ವಿಂಗಡಿಸಿದ್ದಾರೆ. ೬೩ ವಾದ್ಯಗಳನ್ನು ಹೆಸರಿಸಿದ್ದಾರೆ.

೮. ಸುಮಾರು ೨೦೦. ಬಿ.ಸಿ. ಯಿಂದ ೨೦೦, ಎ. ಡಿ. ಯ ನಡುವಿನ ಕಾಲದಲ್ಲಿ ಭರತನ ನಾಟ್ಯ ಶಾಸ್ತ್ರ ರಚನೆಯಾಗಿದೆ.

೯. ಕಾಳಿದಾಸರು ವಿಕ್ರಮಾದಿತ್ಯನ ಆಸ್ಥಾನಕವಿಯಾಗಿದ್ದು (೩೮೦-೪೧೩ ಎ.ಡಿ.) ಮಹಾಕಾವ್ಯಗಳನ್ನು ರಚಿಸಿದ್ದಾನೆ. ಆತನ ಮೇಘದೂತ, ರಘುವಂಶ, ಅಭಿಜ್ಞಾನ ಶಾಕುಂತಲಾ ಮೊದಲಾದ ಗ್ರಂಥಗಳು ಶಾಸ್ತ್ರೀಯ ಸಂಗೀತ ಮತ್ತು ವಾದ್ಯಗಳನ್ನು ವಿವರಿಸುತ್ತವೆ. ಹಲವು ಬಗ್ಗೆ ಹಾಡುಗಳ ವಿಧಗಳು ಅಲ್ಲಿ ಕಂಡು ಬರುತ್ತವೆ. ಕಾಕಳೀಗೀತ, ಸ್ತ್ರೀಗೀತ, ಅಪ್ಸರಗೀತ, ಮೂರ್ವನ, ಸ್ವರಸಪ್ತಕ, ತಾನ ಮತ್ತು ಧ್ವನಿಯನ್ನು ಕುರಿತು, ಕಿನ್ನರ ಕಂಠ ವಲ್ ಗುವಗಮ್ ಎಂಬ ವಿಧಾನಗಳನ್ನು ತಿಳಿಸಿದ್ದಾನೆ.



Hoysala sculptures at halebidu depicting musical instruments



Flute-Hoysaleshwara temple-Halebidu-NIDHI





Amrutapura-Amruteshwara temple

೧೦. ಸಾರಿ ವೀಣೆಗಳು ಬೇಲೂರು, ಹಳೇ ಬೀಡುಗಳ ಭಿತ್ತಿಗಳಲ್ಲಿ ಕಂಡುಬಂದಿವೆ. ಸಾರಿ ವೀಣೆಗಳು ೨೪ ಮೆಟ್ಟಿಲುಗಳನ್ನು ಹೊಂದಿವೆ. ಇದಕ್ಕೆ 'ಮೇರು' ಎಂದು ಕರೆಯುವರು.

Bibiliography

Day. C.R., *The musical instruments of southern India and the Deccan*, Delhi,1974.

Sambamurthy P., *Catalogue of the Musical instruments exhibited in the Government Museum*, Madras-1996.

Tarlekar.G., *Musical Instruments in Indian Sculpture*,Poona-1972.

Marcel-Dubois C., *Les instruments de musique de l Inde ancienne*, Paris,1943.

Krishnamurthy .K., *Archaeology on Indian instruments*, Delhi-1985.

Gift Siromany., *Kalyana Mantapas of the 16th cen-Madras Christian College Magazine*, Vol-46-1977.

Bonnie C Wade., *Music in India*, 2004-Manohar publications.

P.Sambamurthy., *History of Indian Music*, 2005-The Indian music publishing House.

Geetha Rajagopal., *Music Rituals in temples of South India*, Vol-1-D.k.Printworld.

R.E.Ries.,*The cultural settings of South Indian Music*, Asian Music-university of Texas Press.

Higgins J.B., *Performing arts in India*, Essays on Music,Dance and Drama.

೮೮

ಮೂರುಜಾವಿದೇವರ ಮಠ ಪರಂಪರೆ

ಮಂಜುಳಾ ಆಚಾರಿ*

೧. ಪ್ರಸ್ತಾವನೆ

ಆಚಾರಃ ಪರಮೋ ಧರ್ಮಃ ಆಚಾರ ಪರಮಂ ತಪಃ ।
ಆಚಾರಃ ಪರಮ ಜ್ಞಾನಾಮಾಚಾರಾತ್ ಕಿಂ ನ ಸಾಧ್ಯಾತೆ ॥

ಶ್ರೇಷ್ಠವಾದ ಧರ್ಮ, ತಪಸ್ಸು ಮತ್ತು ಜ್ಞಾನ ಆಚಾರದಿಂದ ಎಲ್ಲವೂ ಸಾಧ್ಯ, ನಂಬಿಕೆ-ಆಚಾರ ಮತ್ತು ಆಚರಣೆಗಳು ಧರ್ಮದ ಅಂತರ್ಗತ ಭಾಗಗಳು. ಇವು ಧರ್ಮದ ಎರಡು ಕಣ್ಣುಗಳಿದ್ದಂತೆ. ಪ್ರತಿಯೊಂದು ಧರ್ಮ ಅತಿಮಾನುಷ ಶಕ್ತಿಯ ಬಗ್ಗೆ ತಳೆದ ಮಾನಸಿಕ ಧೋರಣೆ ಸಾಮಾನ್ಯವಾಗಿ ನಂಬಿಕೆ ಮತ್ತು ಆಚರಣೆಗಳ ರೂಪದಲ್ಲಿ ಪ್ರಕಟವಾಗುತ್ತದೆ.

ಒಂದು ನಾಡಿನ ಜನತೆಯ ಸಮಗ್ರ ಜೀವನ ವಿಧಾನವನ್ನು ರೂಪಿಸಿ ನಿಯಂತ್ರಿಸುವಲ್ಲಿ, ಅದಕ್ಕೊಂದು ವ್ಯವಸ್ಥಿತವಾದ ರೂಪ ಕೊಡುವಲ್ಲಿ ಧರ್ಮ, ಧರ್ಮಪೀಠಗಳು ಹಾಗು ಧರ್ಮಗುರುಗಳ ಪಾತ್ರ ಪ್ರಮುಖವಾದುದು. ವಿಶಿಷ್ಟ ಸಂಸ್ಕೃತಿ ಹೊಂದಿದ ಭಾರತದಲ್ಲಿ ಮಠಗಳನ್ನು ಹೋಲುವ ಧರ್ಮಛತ್ರ, ವಿದ್ಯಾಕೇಂದ್ರಗ ಹಾಗೂ ಆಧ್ಯಾತ್ಮಿಕ ಕೇಂದ್ರ, ವಿಹಾರ, ದೇವಾಲಯಗಳು ಸಾಕಷ್ಟು ಕಂಡುಬರುತ್ತವೆ. ಕ್ರಿ.ಶ.ಸು. ೬ನೇ ಶತಮಾನದಿಂದ ಕರ್ನಾಟಕದಲ್ಲಿ ಅಸ್ತಿತ್ವಕ್ಕೆ ಬಂದ ಮಠ ಮಾನ್ಯಗಳು ಕಾಲಕಾಲಕ್ಕೆ ಆಯಾ ಧಾರ್ಮಿಕ ಹಾಗು ರಾಜಕೀಯ ಪ್ರಭಾವದಿಂದ ನಾಡಿನಾದ್ಯಂತ ಹುಟ್ಟಿಕೊಂಡವು. ಅವುಗಳ ಮುಖ್ಯಸ್ಥರಾಗಿ ಧರ್ಮಗುರುಗಳು ನೈಷ್ಟಿಕ ಜೀವನವನ್ನು ನಡೆಸುತ್ತಾ ಆಯಾ ಧರ್ಮದ ಅನುಯಾಯಿಗಳಿಗೆ ಪಾರಮಾರ್ಥಿಕ ಮಾರ್ಗದರ್ಶನ ನೀಡುತ್ತ ಬಂದಿದ್ದಾರೆ. ಇಂತವುಗಳಲ್ಲಿ ಕ್ರಿ.ಶ. ೧೨ನೇ ಶತಮಾನಕ್ಕೆ ಸೇರಿದ ಕಾಳಾಮುಖ ಗುರುಪರಂಪರೆಗೆ ಸೇರಿದ ಮೂರು ಜಾವಿ ಮಠವೂ ಒಂದಾಗಿದೆ. ಹಾವೇರಿ ಜಿಲ್ಲೆಯ ರಾಣೆ ಬೆನ್ನೂರಿನ ಅಂತರವಳ್ಳಿಯಲ್ಲಿ ಮೂಲಪೀಠವಿದ್ದು, ಸು. ೨೨ ಶಾಖಾಪೀಠಗಳು ಇಡೀ ಕರ್ನಾಟಕದಾದ್ಯಂತ ಕಂಡುಬರುತ್ತವೆ.

ಅ.ನಂ.	ಕಾಲ	ಸ್ಥಳ	ಉಲ್ಲೇಖ
೧)	ಕ್ರಿ.ಶ. ೧೦೫೯	ಹಿರೇಮಾಗಳಗೇರಿ-ಹರಪನಹಳ್ಳಿ.	ಸೌ.ಇ.ಇ. IX ನಂ.೧೨೪
೨)	ಕ್ರಿ.ಶ. ೧೧೭೪	ರಟ್ಟಿಹಳ್ಳಿ-ಹಿರೇಕೆರೂರ ತಾ.	ಕ.ಇ. VI ನಂ. ೩೭
೩)	ಕ್ರಿ.ಶ. ೧೧೮೬	ಮೇಡೂರ-ಹಿರೇಕೆರೂರ ತಾ.	ಕ.ಇ. VI ನಂ. ೪೩
೪)	ಕ್ರಿ.ಶ. ೧೧೮೯	ಹೊಂಬಳ ಶಾಸನ (ಗದಗ)	ಸೌ.ಇ.ಇ. XV ನಂ.೭೩
೫)	ಕ್ರಿ.ಶ. ೧೨೦೭	ಕಲಕೇರಿ ಶಾಸನ (ಹಾನಗಲ್ ತಾ.)	ಸೌ.ಇ.ಇ. XX ನಂ. ೨೨೮
೬)	ಕ್ರಿ.ಶ. ೧೨೧೫	ಲಕ್ಷ್ಮೇಶ್ವರ ಶಾಸನ-ಗದಗ ತಾ.	ಸೌ.ಇ.ಇ. xx ನಂ. ೯೧
೭)	ಕ್ರಿ.ಶ. ೧೨೨೭	ಲಕ್ಷ್ಮೇಶ್ವರ ಶಾಸನ (ಗದಗ ತಾ)	ಸೌ.ಇ.ಇ. xx ನಂ. ೯೮
೮)	ಕ್ರಿ.ಶ. ೧೨೨೭	ರಟ್ಟಿಹಳ್ಳಿ-ಹಿರೇಕೆರೂರ ತಾ.	ಧಾ.ಜಿ.ಶಾ.ಸೂ. ಹಿರೇಕೆರೂರ ನಂ. ೨೧೧ (ಎ.ಆರ್.ಆಯ್.ಇ. ೧೯೫೧-೫೨)

* ಪಿಎಚ್.ಡಿ. ಸಂಶೋಧನಾ ವಿದ್ಯಾರ್ಥಿ, ಪುರಾತತ್ತ್ವ ಅಧ್ಯಯನ ವಿಭಾಗ, ಕನ್ನಡ ವಿ.ವಿ. ಹಂಪಿ-೫೮೩೨೨೧.

೯)	ಕ್ರಿ.ಶ. ೧೨೩೭	ರಟ್ಟಿಹಳ್ಳಿ ಶಾಸನ–ಹಿರೇಕೆರೂರ ತಾ.	ಕ.ಇ. VI ನಂ. ೪೨
೧೦)	ಕ್ರಿ.ಶ. ೧೨೩೮	ರಟ್ಟಿಹಳ್ಳಿ ಶಾಸನ ಹಿರೇಕೆರೂರ ತಾ.	ಕ.ಇ. ನಂ. ೪೪
೧೧)	ಕ್ರಿ.ಶ. ೧೨೩೮	ರಟ್ಟಿಹಳ್ಳಿ–ಹಿರೇಕೆರೂರ ತಾ.	ಕ.ಇ. VI ನಂ. ೪೩
೧೨)	ಕ್ರಿ.ಶ. ೧೨೭೫	ಚಿಕ್ಕಮಾಗಡಿ–ಶಿಕಾರಿಪುರ ತಾ.	ಇ.ಸಿ. VII ನಂ. ೩೬೧ ಶಿಕಾರಿಪುರ ಅನುಬಂಧ)
೧೩)	ಕ್ರಿ.ಶ. ೧೨೮೮	ಕಡೂರ–ಹಿರೇಕೆರೂರ ತಾ. ಹಿರೆಕೇರೂರು ನಂ. ೨೧ ೧.	ಧಾ.ಜಿ.ಶಾ. ಸೂಚಿ (ಎ.ಆರ್.ಆಯ್.ಇ. ೧೯೬೦–೬೧)
೧೪)	೧೩ನೇ ಶತಮಾನ	ಕಲಕೇರಿ–ಹಾನಗಲ್ ತಾ.	ಸೌ.ಇ.ಇ. XX ನಂ.೩೩೨
೧೫)	೧೩ನೇ ಶತಮಾನ	ಹಿರೇಮೊರಬ–ಹಿರೇಕೆರೂರ ತಾ.	ಕ.ಇ. VI ನಂ. ೪೩ ಧಾ.ಜಿ.ಶಾ.ಸೂ ಹಿರೇಕೆರೂರ ೨೮೬
೧೬)	ಕಾಲದ ಉಲ್ಲೇಖವಿಲ್ಲ	ಸಾಲವಾಡಗಿ–ಬಿಜಾಪುರ ತಾ.	ಸೌ.ಇ.ಇ. XV ನಂ. ೪೬

೨. ಶಾಸನೋಕ್ತ ಮೂರುಜಾವಿದೇವರು

ಕರ್ನಾಟಕದಲ್ಲಿ ಮೂರುಜಾವಿದೇವನಿಗೆ ಸಂಬಂಧಿಸಿದಂತೆ ಸು. ೧೬ ಶಾಸನಗಳು ಕಂಡುಬರುತ್ತವೆ. ಅವುಗಳನ್ನು ಕಾಲಾನುಕ್ರಮದಲ್ಲಿ ನೋಡಿದರೆ, ಹಲವು ಜನ ಮೂರುಜಾವಿ ದೇವರುಗಳು ಉಲ್ಲೇಖಿತರಾಗಿದ್ದಾರೆ.

ಹೀಗೆ ಒಟ್ಟು ೧೬ ಶಾಸನಗಳು ಈವರೆಗೆ ಲಭ್ಯವಿದ್ದು ಅವುಗಳಲ್ಲಿ ಮೊಟ್ಟಮೊದಲನೇಯದು ಕ್ರಿ.ಶ. ೧೦೫೫ ರ ೧ನೇ ಸೋಮೇಶ್ವರನ ಕಾಲಕ್ಕೆ ಸೇರಿದೆ. ಕ್ರಿ.ಶ. ೧೨೮೮ ರ ಕಡವೂರು ಶಾಸನ ಕೊನೆಯದು. ಅದರಲ್ಲಿ ಸೇವುಣರ ಕಾಲಕ್ಕೆ ಹೆಚ್ಚು ಶಾಸನ, ಅಂದರೆ ೦೭, ಕಲ್ಯಾಣಚಾಲುಕ್ಯರದು ೦೨ ರಾಷ್ಟ್ರಕೂಟ ಕಳಚೂರಿ ಮತ್ತು ಹೊಯ್ಸಳರ ಕಾಲದ್ದು ತಲಾ ಒಂದೊಂದು, ಉಳಿದ ೦೪ ಉಲ್ಲೇಖವಿಲ್ಲ. ಇವು ಹಾವೇರಿ ಜಿಲ್ಲೆಯಲ್ಲಿ ಹೆಚ್ಚು ಅಂದರೆ ೧೦, ಗದಗ ಜಿಲ್ಲೆಯಲ್ಲಿ ೦೩, ದಾವಣಗೆರೆ, ಬಿಜಾಪುರ, ಶಿವಮೊಗ್ಗಾಗಳಲ್ಲಿ ಒಂದೊಂದರಂತೆ ಹಂಚಿಕೆಯಾಗಿವೆ.

ಮೊದಲನೇ ಮೂರುಜಾವಿದೇವ: ಕ್ರಿ.ಶ. ೧೦೫೫ ರ ಹಿರೇಮಾಗಳಗೇರಿ ಶಾಸನದಲ್ಲಿ ಉಲ್ಲೇಖಿಸಲ್ಪಟ್ಟ ಮೂರು ಜಾವಿ ಅತ್ಯಂತ ಪ್ರಾಚೀನ ಮತ್ತು ಮೊದಲನೇಯವನು. ಇವನು ಸ್ವಯಂಭು ಶ್ರೀಕೂಟೇಶ್ವರದೇವರ ಮಠದಾಚಾರ್ಯ ಮತ್ತು ಆರ್ಯ (ಅರಿಯ)ದೇವರ ಶಿಷ್ಯ[೧] ಎಂದು ತಿಳಿದು ಬರುತ್ತದೆ. ಈ ಶಾಸನವು ಕಲ್ಯಾಣ ಚಾಲುಕ್ಯ ತ್ರೈಲೋಕ್ಯ ಮಲ್ಲನ ಕಾಲಕ್ಕೆ ಸಂಬಂಧಿಸಿದ್ದು, ಉಚ್ಚಂಗಿ–೩೦ರ ಬಳಿಯ ಕಾಡವಾರ ಹಳ್ಳಿ ಉತ್ತರದಿಕ್ಕಿನ ಭೂಮಿಯನ್ನು ದಾನ ಪಡೆದಿದ್ದಾನೆ.

ಎರಡನೇ ಮೂರುಜಾವಿದೇವ: ಕ್ರಿ.ಶ. ೧೧೭೪ರ ರಟ್ಟಿಹಳ್ಳಿ ಶಾಸನ[೨], ಕ್ರಿ.ಶ. ೧೧೮೬ ರ ಮೇಡೂರ ಶಾಸನ[೩] ೧೨೩೮ರ ರಟ್ಟಿಹಳ್ಳಿ ಶಾಸನ ೧೧೭೪ರ ರಟ್ಟಿಹಳ್ಳಿ ಶಾಸನಗಳಲ್ಲಿ ೨ನೇ ಮೂರುಜಾವಿದೇವನ ಉಲ್ಲೇಖವಿದೆ. ಶೈವನಿಷ್ಠ ಏಕಾಂತರಾಮಯ್ಯನಿಗೆ ಸಹಾಯ ಮಾಡಿದ ಮೂರುಜಾವಿ ದೇವಿ ಈತನೇ ಆಗಿದ್ದು, ಇವನ ಮೂಲ ಹೆಸರು ಚಿಕ್ಕೇಶ ಎಂದು ಕ್ರಿ.ಶ. ೧೬೫೦ರಲ್ಲಿದ್ದ ಶಾಂತನಿರಂಜನನ ಅಬಲೂರು ಚರಿತ್ರೆ ಹಾಗು ಇತರೆ ಕೃತಿಗಳಿಂದ ತಿಳಿಯುತ್ತದೆ. ಈ ಚಿಕ್ಕೇಶನನ್ನು ಸ್ಥಾವರರೂಪದಲ್ಲಿ ಆರಾಧಿಸುತಿದ್ದರು. ಕ್ರಿ.ಶ. ೧೧೭೪ರ ರಟ್ಟಿಹಳ್ಳಿ ಶಾಸನ ಮತ್ತು ೧೨೩೮ರ ರಟ್ಟಿಹಳ್ಳಿ ಶಾಸನದಲ್ಲಿ ಕಾಳಾಮುಖ ಗುರು ಪರಂಪರೆಗೆ ಸೇರಿದ ವ್ಯಕ್ತಿಗಳ ವಿವರಗಳಿದ್ದು, ಅದರಲ್ಲಿ ಈ ಮೂರು ಜಾವಿದೇವನ ಹೆಸರಿದೆ. ಆದರೆ ಇದೆಲ್ಲಕ್ಕೂ ಭಿನ್ನವಾಗಿ ಹೊಂಬಳ ಶಾಸನದಲ್ಲಿ ಬೊಂತೆಯಮುನಿಯ ಶಿಷ್ಯ ಅವಧೂತ. ಈ ಅವಧೂತನ ಕಿರಿಯ ಸಹೋದ್ಯೋಗಿಗಳ ಸಾಲಿನಲ್ಲಿ ಮೂರುಜಾವಿದೇವನ ಉಲ್ಲೇಖವಿದೆ.

ಕ್ರಿ.ಶ. ೧೧೭೪ರ ಶಾಸನದ ಗುರುಪರಂಪರೆ: ವಾಮದೇವ, ವಾದಿರುದ್ರ, ಕ್ರಿಯಾಶಕ್ತಿ I, ಅಮೃತರಾಶಿ, ಶ್ರೀಕಂಠದೇವ, ಕ್ರಿಯಾಶಕ್ತಿ II, ಸರ್ವೇಶ್ವರ, ಕಲ್ಯಾಣಶಕ್ತಿ, ಮೂರುಜಾವಿದೇವ, ಲಕುಳೀಶ.

ಕ್ರಿ.ಶ. ೧೨೩೮ರ ಶಾಸನದ ಗುರುಪರಂಪರೆ: ವಾಮಶಕ್ತಿ, ವಾದಿರುದ್ರ, ಶ್ರೀಕಂಠದೇವ, ಕ್ರೀಯಾಶಕ್ತಿ, ಸರ್ವೇಶ್ವರ, ಕಲ್ಯಾಣಶಕ್ತಿ, ಮೂರುಜಾವಿದೇವ, ಲಕುಳೀಶ್ವರ ಮತ್ತು ಮೂರುಜಾವಿದೇವ ಈ ಶಾಸನದಲ್ಲಿ ಮೂರುಜಾವಿದೇವನು ಕಲ್ಯಾಣಶಕ್ತಿಯ ಶಿಷ್ಯನಾಗಿದ್ದು, ಲಕುಲೀಶನು ಇವರ ಶಿಷ್ಯರಾಗಿದ್ದಾನೆ.

ಶಾಸನದಲ್ಲಿ ಇವನ ಕುರಿತು "ತದಮ ಸಮುದ್ಭವ ಈಶ್ವರ ಪದ ಕಮಲ ಭ್ರಮರ ನಾಗಮಬುಜಾತ ಸಮಭ್ಸುದಿತ ದಶಶತ ಮಯೂಖಂ ಮದನೋಗ್ರಂ ಮೂರುಜಾವಿದೇವ ಬ್ರತಿಪಂ"ಎಂದು ಕೀರ್ತಿಸಿದೆ[೪] ಇವುಗಳಲ್ಲದೆ ಕ್ರಿ.ಶ. ೧೧೮೬ ರ ಹಿರೇಕೆರೂರಿನ ಮೇದೂರ ಶಾಸನ ಹಾಗು ೧೩ನೇ ಶತಮಾನದ ಹಿರೇಮೊರಬ ಶಾಸನಗಳಲ್ಲಿ[೫] "ರಾಜಗುರು" ಮೂರುಜಾವುದದೇವ ಎಂದು ಹೊಗಳಿವೆ.

ಕ್ರಿ.ಶ. ೧೨೦೭ರ ಕಲ್ಕೇರಿ ಶಾಸನದಲ್ಲಿ "ಭಿಕ್ಷೆಯ ಮೂರುಜಾವಿದೇವ" ಎಂದಿದೆ. ಕ್ರಿ.ಶ. ೧೦೫೯ರ ಹಿರೇಮಾಗಳಗೇರಿ ಶಾಸನದಲ್ಲಿ ಅರಿಯದೇವನ ಶಿಷ್ಯ ಎಂದು ಕರೆದಿರುವುದನ್ನು ಗಮನಿಸಿದರೆ ಈ ಮೂರುಜಾವಿದೇವನ ಗುರುಪರಂಪರೆ ಬೇರೆಯೇ ಇರಬಹುದು.

ಮೂರನೆಯ ಮೂರುಜಾವಿದೇವ: ಕ್ರಿ.ಶ. ೧೨೦೭ರ ಕಲ್ಕೇರಿ ಶಾಸನದಲ್ಲಿ ಸ್ವಯಂಭೂ ಸೋಮನಾಥ ದೇವರ ದೇವಾಲಯದ ನಿರ್ವಹಣೆಗಾಗಿ ಮೂರುಜಾವಿದೇವ ದಾನ ಪಡೆದ ಉಲ್ಲೇಖವಿದೆ.[೬] ರಟ್ಟಿಹಳ್ಳಿಯ ಒಂದು ವೀರಗಲ್ಲಿನಲ್ಲಿ[೭] ಮೂರುಜಾವಿದೇವನು ಪುಲಿಗೆರೆಗೆ ಹೋಗುವಾಗ ಬಿಸಿಲಹಳ್ಳಿಯ ಬಳಿ ಮೇದರಪಾಂಡ್ಯ ಎನ್ನುವವನು ಹೋರಾಡಿ ಸಾಯುತ್ತಾನೆಂಬ ವಿವರವಿದೆ. ಆದರೆ ಇದರ ಪೂರ್ಣ ಪಾಠ ದೊರೆಯದ ಕಾರಣ ಈ ಹೋರಾಟದ ಕಾರಣ? ಯಾರಿಗೆ ಹೋರಾಟವಾಯಿತು ಮತ್ತು ಬಿಸಿಲಹಳ್ಳಿಯು ಇಂದಿನ ಬ್ಯಾಡಗಿ ತಾಲ್ಲೂಕಿನ ಹಳ್ಳಿಯೇ ಎಂದು ಹೇಳುವುದು ಅಸಾಧ್ಯ[೮]. ಕ್ರಿ.ಶ. ೧೨೨೭ರ ಲಕ್ಷ್ಮೇಶ್ವರ ಶಾಸನದಲ್ಲಿ ಪುಲಿಗೆರೆಗೆ ಹೋದ ಮೂರುಜಾವಿದೇವ ಅಲ್ಲಿಯ ಗೊಗ್ಗಿಯಾಚಾರ್ಯನಿಂದ ಹಲವು ಸ್ಥಳಗಳನ್ನು ಕ್ರಯವಾಗಿಸಿ ಕೊಂಡು ಕೇದಾರೇಶ್ವರ, ಚಿಕ್ಕೇಶ್ವರ, ಹಾಗು ಸೋಮನಾಥ ದೇವರುಗಳಿಗೆ ದಾನ ನೀಡುತ್ತಾನೆ. ಈ ಶಾಸನದಲ್ಲಿ ಮೂರುಜಾವಿದೇವನನ್ನು ಪೂರ್ವ ಪ್ರಕತಿಥ ಮಹಿಮೋದಯ "ಕೇದಾರದೇವಯತಿಪತೀಪಾದಾಂಬುಜ" ಎಂದು ವರ್ಣಿಸಿದೆ[೯] ಇಲ್ಲಿ ಮೂರುಜಾವಿದೇವನೆ ಭೂಮಿಗಳನ್ನು ಕೊಂಡು ಅಲ್ಲಿನ ದೇವಾಲಯಗಳಿಗೆ ದಾನ ನೀಡುತ್ತಾನೆ.ಇದು ಅವನ ಅಪೂರ್ವ ಮತ್ತು ಪ್ರಭಾವಿ ಶಕ್ತಿಯ ಪ್ರತೀಕವಾಗಿದೆ.

ಕ್ರಿ.ಶ. ೧೨೩೭ರ ರಟ್ಟಿಹಳ್ಳಿ ಶಾಸನದಲ್ಲಿ[೧೦] ಬನವಾಸಿ ೧೨೦೦೦ದ ಮಹಾದೇವ ದಣ್ಣಾಯಕನಾದ ಕರಣದ ಕಲ್ಲರಸನು ಮೂರುಜಾವಿದೇವನ ಪಾದ ತೊಳೆದು ರಟ್ಟಿಹಳ್ಳಿ ಮಲ್ಲಿನಾಥದೇವರಿಗೆ ದಾನ ನೀಡಿದ್ದಾನೆ. ಇದೇ ಕರಣದ ಕಲ್ಲರಸನು ಹಿರೇಮೊರಬ (ಹಿರೇಕೆರೂರ) ಗ್ರಾಮದ ಬಂಟೇಶ್ವರ ದೇವರಿಗೂ ಹಾಗು ರಟ್ಟಿಹಳ್ಳಿ ಕದಂಬೇಶ್ವರ ದೇವರಿಗೂ ಮುರುಜಾವಿದೇವನ ಸನ್ನಿಧಿಯಲ್ಲಿ ದಾನ ನೀಡಿದ ವಿವರ ಶಾಸನದಲ್ಲಿದೆ.[೧೧] ಕ್ರಿ.ಶ. ೧೨೩೮ರ ಶಾಸನದ ಕೊನೆಯಲ್ಲಿ ಬರುವ ಮೂರುಜಾವಿದೇವ ಮೂರನೇ ಮೂರುಜಾವಿದೇವ. ಈತನು ಎರಡನೇ ಮೂರುಜಾವಿದೇವನ ವಂಶಪರಂಪರೆಯುವರೇ ಆಗಿದ್ದು, ಕಾಳಾಮುಖ ಸಂಪ್ರದಾಯಕ್ಕೆ ಸೇರಿದ್ದಾನೆ. ಆದರೆ ಇಲ್ಲಿ ಲಕುಲೀಶ ಗುರುಗಳಿಗೆ ಶಿಷ್ಯನಾಗಿದ್ದಾನೆ. "ತಚ್ಚಿಷ್ಯಂ ಮಾನಸ ವಾಚಕ ಕಾಯಕ ದೇವಸಮಂ ಪೊರ್ದಲೊಲ್ಲದಿಹ ಪರಸುಖದ ಜ್ಞಾನಮನೆ ಬಿಟ್ಟ ಶಿವನ ಧ್ಯಾನದಿ ನೆಲೆಗೊಂಡ ಮೂರುಜಾವಿ ಬ್ರತಿಪಂ" ಎಂದು ಹೊಗಳಿದೆ. ಈ ಮೂರನೇ ಮೂರುಜಾವಿದೇವ ರಟ್ಟಿಹಳ್ಳಿಯ ಕದಂಭೇಶ್ವರ ದೇವರ ಸ್ಥಾನಾಚಾರ್ಯ ಮತ್ತು ರಾಜಗುರುವಾಗಿದ್ದನು. ಹೊನ್ನಬೊಮ್ಮಿಶೆಟ್ಟಿಯು ಕದಂಭೇಶ್ವರ ದೇವರ ಸನ್ನಿಧಿಯಲ್ಲಿ ಮಲ್ಲೇಶ್ವರ ಹಾಗು ರಾಜೇಶ್ವರ ದೇವರ ಪ್ರತಿಷ್ಠಾಪನೆ ಮಾಡಿಸಲು "ಆಚಾರ್ಯ ವೀರ್ಯರೆನಿಪ ಮೂರುಜಾವಿದೇವರಿಂದ ವಕ್ಕುದೆಂದು ಮನದಂದರಾಯತೀಂದ್ರನ ಗುರುಕುಲದ ಮಹಿಮೋಂನತಿ ಯೆಂತೆಂದಡೆ ಸ್ವಸ್ತಿ ಯಮನಿಯಮ ಸ್ವಾಧ್ಯಾಯಧ್ಯಾನ ಧಾರಣಮೋನಾನುಷ್ಠಾನ ಜಪಸಮಾಧಿಶೀಲ ಗುಣ ಸಂಪನ್ನರುಂ ಗುರುಕುಳ ಸಮಯಸಮುಧರಣಂ ಸಪ್ತಾಹತ್ತರಿ ಸ್ಥಾನಾಚಾರ್ಯರುಮಪ್ಪ ಶ್ರೀಮದ್ರಾಜಗುರು ಮಹಾವಾದಿ ಮೂರುಜಾವಿದೇವರಿಗೆ ಸ್ಥಳವೃತ್ತಿಯನ್ನು ಮಾಡಿ ದಾನ ನೀಡುತ್ತಾರೆ ಎಂದು ಉಲ್ಲೇಖಿಸಿದೆ[೧೨].

ಕ್ರಿ.ಶ. ೧೨೭೫ರ ಚಿಕ್ಕಮಾಗಡಿ ಶಾಸನ[೧೩] ಮೂರುಜಾವಿದೇವನ ದರುಶನ ಮಾತ್ರದಿಂದ ಸಕಲ ಪುಣ್ಯ ಫಲವೂ, ಪಾದ ಸ್ಪರ್ಷದಿಂದ ಗಧನಿಘಾತವೂ ಉಂಟಾಗುತ್ತದೆ ಎಂದು ವಿವರಿಸಿದೆ. ಇಲ್ಲಿ ಮೂರುಜಾವಿದೇವನನ್ನು ಲಾಕುಳಾಗಮ ಸಮಯಸಮುದ್ಧರಣರು" ಎಂದು ಹೋಗಳಲಾಗಿದೆ. ಅಂದರೆ ಈತ ಕಾಳಾಮುಖ ಗುರು ಪರಂರೆಗೆ ಸೇರಿದ್ದು, ಲಾಕುಳಾಗಮದಲ್ಲಿ ಪರಿಣಿತನಾಗಿದ್ದಿರಬೇಕು.

ಕ್ರಿ.ಶ. ೧೨೮೮ರ ಕಡವೂರು ಶಾಸನದಲ್ಲಿ[೧೪] ಮೂರುಜಾವಿದೇವನಿಗೆ ಮೂಲಿಗ ಸೋಮಗೌಡನ ಮಗನಾದ ಬಾಚಿಗೌಡನು ಮೂರುಜಾವಿದೇವನ ಶಿಷ್ಯನಾಗಿದ್ದು, ೨೦ ಕಮ್ಮ ಭೂಮಿಯನ್ನು ಈ ಆಚಾರ್ಯನಿಗೆ

ದಾನ ಕೊಟ್ಟನೆಂದು, ಕಡವೂರು ಕಾಳಗದಲ್ಲಿ ಈತ ಮರಣ ಹೊಂದಿದನೆಂದು ಉಲ್ಲೇಖಿಸುತ್ತವೆ. ಆದರೆ ಇದಕ್ಕೆ ಸ್ಪಷ್ಟವಾದ ಆಧಾರಗಳು ದೊರೆಯುವುದಿಲ್ಲ.

ಕ್ರಿ.ಶ. ೧೨೦೭ ರ ಹೊಯ್ಸಳರ ಎರಡನೇ ಬಲ್ಲಾಳನ ಕಾಲಕ್ಕೆ ಸೇರಿದ ಹಾನಗಲ್ ತಾಲೂಕಿನ ಕಲ್ಕೇರಿ ಶಾಸನ ಇವನನ್ನು "ಭಿಕ್ಷೆಯ ಮೂರುಜಾವಿದೇವ "ಎಂದು ಸ್ತುತಿಸಿದೆ. ಈವನು ಕಲ್ಕೇರಿಯ ಸ್ವಯಂಭೂ ಸೋಮನಾಥ ದೇವಾಲಯದ ಸ್ಥಾನಾಚಾರ್ಯನಾಗಿದ್ದನು. ಕಲಕೇರಿಯ ನಾಳ್ಪಭು ಚಲದಂಕರಾಮ ಹರಿಯಮಶೆಟ್ಟಿ ಮತ್ತು ಅವನ ಮಕ್ಕಳಾದ ವೀರನಗೌಡ ಹಾಗು ಎಕ್ಕಮದೇವರುಗಳು ಸೇರಿ ಕೆಲವು ಭೂಮಿಯನ್ನು ದಾನ ಕೊಡುತ್ತಾರೆ. ಇವನು ಉಳಿದ ಮೂರುಜಾವಿದೇವರುಗಳಿಗಿಂತ ಪ್ರತ್ಯೇಕವಾಗಿ ಕಾಣುತ್ತಾರೆ. ಹಾಗಾಗಿ ಇವನು ನಾಲ್ಕನೇ ಮೂರುಜಾವಿದೇವನಿರಬೇಕು ಎಂಬುದು ಸಿ. ನಾಗಭೂಷರ ಅಭಿಪ್ರಾಯ.

೩. ಕಾವ್ಯೋಕ್ತ ಮೂರುಜಾವಿದೇವರು

ಕವಿ	ಕೃತಿಗಳು
೧. ಪಾಲ್ಕುರಿಕೆ ಸೋಮನಾಥ	ಗಣಸಹಸ ನಾಮಾವಳಿ
೨. ಕೆರೆಯ ಪದ್ಮರಸ	ಸಾನಂದ ಚರಿತೆ
೩. ಗುಬ್ಬಿ ಮಲ್ಲಣಾರ್ಯ	ಸಿದ್ಧೇಶ್ವರ ಪುರಾಣ
೪. ವಿರಕ್ತ ತೋಂಟದಾರ್ಯ	ಸಿದ್ಧೇಶ್ವರ ಪುರಾಣ
೫. ಶಾಂತ ನಿರಂಜನ	ಅಬಲೂರು ಚರಿತೆ

ಪಾಲ್ಕುರಿಕೆ ಸೋಮನಾಥ ಗಣಸಹಸ್ರ ನಾಮಾವಳಿಯಲ್ಲಿ ಅಥ ಅಮರಣ ಸಂಕೀರ್ತನನಲ್ಲಿಯ ೧೨೦ನೇ ಸಾಲಿನಲ್ಲಿ 'ಮೂರುಜಾವಿ' ಹೆಸರಿದೆ.[೧೫] ಸಾನಂದ ಚರಿತ್ರೆಯಲ್ಲಿ ಶಿವಶರಣರನ್ನು ಸ್ತುತಿಮಾಡುವಾಗ "ಹಿರಿಯಮೂರುಂ ಜಾವದೇವರು ಬರಗು ರಾಜ ನಿರಂತ ದೇವರ "[೧೬] ಎಂಬ ವಿವರಣೆ ಸಿಗುತ್ತದೆ. ಗುಬ್ಬಿ ಮಲ್ಲಣಾರ್ಯನ (ಕಾಲ ೧೫೩೦) ವೀರಶೈವಾಮ್ರುತ ಪುರಾಣದಲ್ಲಿ ಮೂರುಜಾವಿದೇವರ ಪವಾಡವನ್ನು ಹೀಗೆ ಹೇಳಿದೆ :

> **"ಉರಿಯೊಳಗೆ ಬೆಂದ ಕೈಕಾಲ್ಗಳಂ ಪಡೆದು**
> **ಜೈನರು ನೋಡೆ ಮೇಲಕಡರಿಪಿ ರವಿಯ ರಾಮಯನ**
> **ಶಿರವನೊಲಮಿಂ ಪಡೆದ ಮೂರುಜಾವುದದೇವರು"**

ಕ್ರಿ.ಶ. ೧೬೫೦ ರಲ್ಲಿದ್ದ **ಶಾಂತನಿರಂಜನ ಅಬಲೂರು ಚರಿತೆಯಲ್ಲಿ** ಚಿಕ್ಕೇಶ ಯತಿಗೆ ಮೂರುಜಾವುದ ಎಂಬ ಬಿರುದಿರುವುದಾಗಿ ತಿಳಿದುಬರುತ್ತದೆ. ಏಕಾಂತರಾಮಯ್ಯನ್ನು ಜೈನರೊಂದಿಗೆ ಒಡ್ಡಿದ ಪಣದಿಂದಾಗಿ ಏಳು ಶೈವ ಕ್ಷೇತ್ರ ಸುತ್ತಿ ಬರುವಾಗ, ಅಂತರವಳ್ಳಿಯಲ್ಲಿ ಚಿಕ್ಕೇಶ ಯತಿಯನ್ನು ಕಂಡಾಗ ೭ನೇ ದಿನದ ಸೂರ್ಯ ಮುಳುಗುವುದರಲ್ಲಿದ್ದ. ಆಗ ಚಿಕ್ಕೇಶ ಯತಿಗಳು ಸೂರ್ಯನನ್ನು ಮೂರು ಗಳಿಗೆ ನಿಲ್ಲಿಸಿ, ರಾಮಯ್ಯನಿಗೆ ಸಕಾಲದಲ್ಲಿ ಅಬ್ಬಲೂರಿಗೆ ತಲುಪಿ, ಜಯಶೀಲನಾಗಲು ಕಾರಣರಾಗುತ್ತಾರೆ. ಅಂದಿನಿಂದ ಚಿಕ್ಕೇಶಯತಿಗೆ ಮೂರುಜಾವುದದೇವ ಎಂಬ ಪರ್ಯಾಯ ಹೆಸರು ಲಭಿಸುತ್ತದೆ. **ವಿರಕ್ತ ತೋಂಟದಾರ್ಯನ ಸಿದ್ಧೇಶ್ವರ ಪುರಾಣದಲ್ಲಿ** "ಅಗ್ಗಳಿಯ ದೇವರಸರಿಗೆ ಮೂರುಜಾವುದದೇವ ಎಂಬ ಹೆಸರು ಬಂದಿತೆಂದು ತಿಳಿಯುತ್ತದೆ.[೧೭] ಇದರಿಂದ ಚಿಕ್ಕೇಶ ಯತಿಗೆ ಅಗ್ಗಳಿಯ ದೇವರಸ ಎಂಬ ಮತ್ತೊಂದು ಪರ್ಯಾಯ ನಾಮಪಿದ್ದಿರಬಹುದೆಂಬ ಊಹೆ ಮೂಡುತ್ತದೆ. ಆದರೆ **ಕೆರೆಯಪದ್ಮರಸನ ಸಾನಂದಚರಿತೆಯಲ್ಲಿ** ಇವರೀರ್ವರು ಬೇರೆ ಬೇರೆ ವ್ಯಕ್ತಿಗಳು ಎಂಬುದಕ್ಕೆ ಆಧಾರಗಳಿವೆ. ಇಲ್ಲಿ ಮೂರುಜಾವುದದೇವನನ್ನು ಮೊದಲು ಉಲ್ಲೇಖಿಸಿ ನಂತರ ಅಗ್ಗಳಿಯ ಹೊನ್ನಯ್ಯ, ನೇಮದ ಅಗ್ಗಳಿಯ ಹಂಪಯ್ಯ ಮುಂತಾದವರ ಜೊತೆ ಅಗ್ಗಳಿಯ ದೇವರಸನನ್ನು ಹೇಳಿದೆ[೧೮]

ಒಟ್ಪಾರೆ ಏಕಾಂತ ರಾಮಯ್ಯನಿಗೆ ಶೈವ ಮತ ಪ್ರಚಾರ ಕಾರ್ಯದಲ್ಲಿ ಸಹಾಯ ಮಾಡಿದ ಮೂರುಜಾವಿದೇವರು ಅಂತರವಳ್ಳಿಯವನು. ರೂಥಾಚಾರ್ಯ ಎಂಬ ಮತ್ತೊಂದು ಹೆಸರನ್ನು ಹೊಂದಿದವನೆಂದು ಅಬ್ಬಲೂರು ಚರಿತೆಯಿಂದ ತಿಳಿದುಬರುತ್ತದೆ.[೧೯] ಬಿಜ್ಜಳ ಅರಸನ ಆಳ್ವಿಕೆಗೆ ಸೇರಿದ ಗೌತಮಕ್ಷೇತ್ರ (ಈಗಿನ ಅಂತರವಳ್ಳಿ)ದಲ್ಲಿ ಶಂಕಪಾಲನು ಪಾಳೆಯಗಾರನಾಗಿದ್ದನು. ರಾಮಯ್ಯ ಮತ್ತು ಮೂರುಜಾವಿ ದೇವನ ಶೈವಧರ್ಮದ ರಕ್ಷಣೆಯ ಕಾರ್ಯದ ಸುದ್ದಿ ಕೇಳಿ ಬಿಜ್ಜಳನು ಗೌತಮ ಕ್ಷೇತ್ರಕ್ಕೆ ಭೂಮಿ ನೀಡಿದ್ದನ್ನು ಶಾಸನಗಳು ಮಾಹಿತಿ ನೀಡುತ್ತವೆ. ಈಗಲೂ ಗೌತಮಪುರದಲ್ಲಿ ಮೂರುಜಾವಿಪೀಠವಿದ್ದು, ಆ ಪರಂಪರೆಯನ್ನು ಇಂದಿಗೂ ಮುಂದುವರೆಸಿಕೊಂಡು ಬಂದಿರುವುದು ಗಮನಾರ್ಹ ವಾದುದು.

ಅಂತರವಳ್ಳಿಯ ಪರಂಪರೆಯ ಗುರುಗಳ ಹೆಸರುಗಳು ಹೀಗಿದೆ : ಮೂರು ಜಾವಾಧೀಶ್ವರರು, ಲಕುಲೀಶ್ವರ ಶಾಂತನಿರಂಜನ ಸ್ವಾಮಿಗಳು ರೂಥಾಚಾರಿಗಳು, ಕಾಳ ಹಸ್ತೇಂದ್ರ ಸ್ವಾಮಿಗಳು, ವೃಷಭೇಂದ್ರ ಸ್ವಾಮಿಗಳು, ಮೂರುಜಾವಾಧೀಶರು, ಈಶ್ವರ ಸ್ವಾಮಿಗಳು, ನಿರಂಜನ ಸ್ವಾಮಿಗಳು, ಸೋಮಶೇಖರ ಸ್ವಾಮಿಗಳು, ನಿರಂಜನ ಸ್ವಾಮಿಗಳು......[೨೦]

೪. ಉಪಸಂಹಾರ

ಕರ್ನಾಟಕ ಚರಿತ್ರೆಯ ಉದ್ದಕ್ಕೂ ಹಲವು ಧಾರ್ಮಿಕ ಮಹಾಪುರುಷರು ಉದಯಿಸಿದ್ದಾರೆ. ಈ ಅನುಭಾವಿ

ಧರ್ಮಗುರುಗಳು ನೋಡಲಿಕ್ಕೆ ಸಾಮಾನ್ಯರಂತೆ ಕಂಡರೂ ಅಸಾಮಾನ್ಯ ವ್ಯಕ್ತಿತ್ವದಿಂದ ಮಿಂಚಿದವರು. ಈ ರೀತಿಯ ವಿಶೇಷ ಗುಣಗಳಿಂದ ಪ್ರಸಿದ್ಧವಾಗಿದ್ದ ದೈವೀಪುರುಷರಲ್ಲಿ ಮೂರುಜಾವಿ ದೇವರು ಒಬ್ಬರು. ಜನಸಾಮಾನ್ಯರೊಂದಿಗೆ ಬೆರೆತು, ಆಧ್ಯಾತ್ಮಿಕ ಅನುಭಾವ ಹಂಚಿದರು. ಹೀಗೆ ೧೧ನೇ ೧೨ನೇ ಶತಮಾನದವರೆಗೆ ಸಪ್ತಹುತ್ತರೀಸ್ಥಾನಾಚಾರ್ಯರು ಮತ್ತು ರಾಜಗುರುಗಳಾಗಿ ಮೆರೆದ ಹಲವು ಮೂರುಜಾವಿ ದೇವರುಗಳು ಶಾಸನ ಮತ್ತು ಸಾಹಿತ್ಯದಲ್ಲಿ ಹೊಗಳಿಸಿ ಕೊಂಡಿದ್ದಾರೆ. ಮೂರುಜಾವಿದೇವರು ಕಾಳಾಮುಖ ಪರಂಪರೆಗೆ ಸೇರಿದವರೆಂದು ಶಾಸನಗಳು ಸ್ಪಷ್ಟಪಡಿಸುತ್ತವೆ. ರಟ್ಟೀಹಳ್ಳಿಗೆ ಸಮೀಪದಲ್ಲಿರುವ ಅಂತರವಳ್ಳಿಯಲ್ಲಿರುವ ಮಠದ ಪೀಠದಲ್ಲಿ ೩ ಅಡಿ ಎತ್ತರದ ಮೂರುಜಾವಿದೇವನ ಮೂರ್ತಿ ಇದೆ. ಇಂದಿಗೂ ಈ ಮೂರ್ತಿಯ ಆರಾಧನೆಯನ್ನೂ, ಆಚರಣೆಯನ್ನು ವಿಶ್ವಕರ್ಮ ಸಮಾಜದವರು ನಡೆಸಿಕೊಂಡು ಹೋಗುತ್ತಿದ್ದಾರೆ. ಒಟ್ಟಾರೆ ಮೂರುಜಾವಿದೇವನು ಏಕಾಂತರಾಮಯ್ಯನಿಗೆ ಸಹಾಯ ಮಾಡುವ ಮೂಲಕ ಶೈವ ಧರ್ಮದ ಅಭ್ಯುದಯಕ್ಕೆ ಕಾರಣನಾಗಿದ್ದಾನೆ.

ಆಕರಗ್ರಂಥ

೧. ಕಲ್ಬುರ್ಗಿ ಎಂ.ಎಂ., 'ಕನ್ನಡ ಶಾಸನ ಸಂಪದ' ಕ.ವಿ.ವಿ. ಧಾರವಾಡ, ೧೯೬೮.
೨. ಕಲ್ಬುರ್ಗಿ ಎಂ.ಎಂ., 'ಶಾಸನಗಳಲ್ಲಿ ಶಿವಶರಣರು', ಕ.ವಿ.ವಿ. ಧಾರವಾಡ, ೧೯೭೦.
೩. ಬಸವರಾಧ್ಯ ಎನ್, 'ಅಬಲೂರು ಚರಿತೆ' (ಶಾಂತನಿರಂಜನ ವಿರಚಿತ) ಕ.ಅ. ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೩.
೪. ಕಲ್ಬುರ್ಗಿ ಎಂ.ಎಂ. ಧಾರವಾಡ ಜಿಲ್ಲಾ ಶಾಸನ ಸೂಚಿ, ಕ.ವಿ.ವಿ. ಧಾರವಾಡ.
೫. ಕಲ್ಬುರ್ಗಿ ಎಂ.ಎಂ. 'ಸಾಹಿತ್ಯ ಮಾರ್ಗ ೧ ಅಬಲೂರು ಚರಿತೆ', ಕ.ವಿ.ವಿ. ಧಾರವಾಡ.
೬ ದೀಕ್ಷಿತ್ ವಿ.ಜಿ., ಮೂರುಜಾವಿದೇವರ ಚರಿತ್ರ, ಸಂಕೃತಿ ಸಾಹಿತ್ಯ ಪ್ರಸಾರ ಸಮಿತಿ, ಕೆ.ಜಿ.ಎಫ್., ೧೯೯೨.
೭. ಈರಣ್ಣ ಕೆ.ಪಿ., 'ಶಾಸನೋಕ್ತ ವಿಶ್ವಕರ್ಮರ ವೀರಜೀವನ' ಭುವನೇಶ್ವರಿ ಪ್ರಕಾಶನ, ಶಿರಹಟ್ಟಿ, ೧೯೯೩.
೮. ಪರಮಶಿವಮೂರ್ತಿ, ಶಾಸನ ಸಂಶೋಧನೆ, ಗುಣನಿಧಿ ಪ್ರಕಾಶನ, ಬೆಂ., ೧೯೯೪.
೯. 'ವಿಶ್ವಕರ್ಮಕಲಾ', ಮಾಸಪತ್ರಿಕೆ, ಬೆಂಗಳೂರು, ಜೂನ್ ೧೯೯೬.
೧೦. 'ವಿಶ್ವಕರ್ಮಕಲಾ', ಮಾಸಪತ್ರಿಕೆ, ಬೆಂಗಳೂರು, ಜೂನ್ ೧೯೯೬.
೧೧. ನಾಗಭೂಷಣ, ಸಿ., ಕನ್ನಡ ಸಾಹಿತ್ಯ ಸಂಸ್ಕೃತಿ ಶೋಧನೆ, ಅಮೃತವರ್ಷಿಣಿ ಪ್ರಕಾಶನ, ಸಂಡೂರು, ೧೯೯೯.
೧೨. ಮನೋಹರ ಡಿ., ಮೂರುಜಾವಿದೇವ, ಮಂಟಪಮಾಲೆ, ಕ.ವಿ.ವಿ. ಹಂಪಿ, ೨೦೧೧.

ಆಧಾರಸೂಚಿ

೧. ಸೌ.ಇ.ಇ. IX (i) ನಂ. ೧೨೪.
೨. ಕ.ಇ. VI, ರಟ್ಟಿಹಳ್ಳಿ ನಂ. ೩೭.
೩. ಕ.ಇ. VI, ಮೇಡೂರ ನಂ. ೪೩, ಹಿರೇಕೆರೂರ.
೪. ಕ.ಇ. VI, ನಂ. ೩೭, ರಟ್ಟಿಹಳ್ಳಿ.
೫. ಧಾ.ಜಿ.ಶಾ.ಸೂ. ನಂ. ೨೮೬.
೬ ಸೌ.ಇ.ಇ. XX, ನಂ. ೨೨೮.
೭. ಎ.ಆರ್.ಆಯ್.ಇ. ೧೯೫೧-೫೨.
೮. ಪರಮಶಿವಮೂರ್ತಿ, ಶಾಸನ ಸಂಶೋಧನೆ, ಪುಟ ೨೪.
೯. ಸೌ.ಇ.ಇ. XX, ನಂ. ೧೯೮ .
೧೦. ಕ.ಇ. VI, ನಂ. ೪೩.
೧೧. ಕ.ಇ. VI, ನಂ. ೪೩.
೧೨. ಕ.ಇ. VI, ನಂ. ೪೪.
೧೩. ಇ.ಸಿ. VII, ನಂ. ೩೬೧, ಶಿಕಾರಿಪುರ.
೧೪. ಧಾ.ಜಿ.ಶಾ.ಸೂ. ಹಿರೇಕೆರೂರ ನಂ. ೬೫, (ಎಆರ್.ಆಯ್.ಇ. ೧೯೬೦-೬೧ ನಂ. ೪೭)
೧೫. ಶಿವಮೂರ್ತಿ ಶಾಸ್ತ್ರಿಗಳು ಬಿ. (ಸಂ.), ಗಣಸಹಸ್ರನಾಮಾವಳಿ, ಪುಟ ೧೩.
೧೬. ಬಸಪ್ಪ ಎಸ್. (ಸಂ.), ಸಾನಂದ ಚರಿತೆ, ಪುಟ ೬೮.
೧೭. ನಾಗಭೂಷಣ ಸಿ., ಕನ್ನಡ ಸಾಹಿತ್ಯ ಶೋಧನ, ಪುಟ ೧೭೯.
೧೮. ಅದೇ.
೧೯. ದೀಕ್ಷೀತ ವಿ.ಜಿ. ಮೂರುಜಾವಿದೇವರಚರಿತ್ರ, ಪುಟ ೧೫೦.
೨೦. ಅಂತರವಳ್ಳಿ ಮಠದಲ್ಲಿ ಇಟ್ಟಿರುವ ಗುರುಪರಂಪರೆಯ ದಾಖಲೆ ಆಧರಿಸಿ.

ಜೈನಧರ್ಮಕ್ಕೆ ಮುದ್ದೇಬಿಹಾಳ ಪ್ರದೇಶ ಕೊಡುಗೆ

ಪ್ರಾ. ಬಸವರಾಜ ಎಸ್. ಮಠ*

ಮುದ್ದೇಬಿಹಾಳ ತರ್ದವಾಡಿ ೧೦೦೦ ಹಾಗೂ ಹಗರಟಗಿ ೩೦೦ ಮೊದಲಾದ ಭಾಗಗಳನ್ನೊಳಗೊಂಡ ರಾಷ್ಟ್ರಕೂಟರು, ಕಲ್ಯಾಣ ಚಾಳುಕ್ಯರು, ಯಾದವರು, ಕಲಚೂರಿಗಳು ಹಾಗೂ ಅಲ್ಲಾ ಉದ್ದಿನ ಖಿಲ್ಜಿಯ ಆಡಳಿತದ ಭಾಗವಾಗಿತ್ತೆಂದು ದಾಖಲೆಗಳು ಉಲ್ಲೇಖಿಸುತ್ತವೆ. ಆಳ್ವಿಕೆಯ ನಡೆಸಿದ ಅನೇಕ ರಾಜ ವಂಶಗಳು ಹಾಗೂ ಅವರ ಅಧಿಕಾರಿಗಳು ಜೈನ ಮುನಿಗಳಿಗೆ ಹಾಗೂ ಬಸದಿಗಳಿಗೆ ದಾನದತ್ತಿಗಳನ್ನು ನೀಡುವ ಮೂಲಕ ಧರ್ಮ ಸಮನ್ವಯತೆ ಯನ್ನು ಮೆರೆದಿದ್ದಾರೆ, ಜೈನ ಧರ್ಮಕ್ಕೆ ಸಂಬಂಧಿಸಿದ ಶಾಸನ, ಸ್ಮಾರಕ, ನಿಷಿಧಿ ಹಾಗೂ ವೀರಗಲ್ಲುಗಳು ಸಾಕ್ಷಿ.

ಈ ಪ್ರದೇಶದಲ್ಲಿ ಸಿಕ್ಕ ಆಕರಗಳ ವಿವರಗಳು ಕೆಳಗಿನಂತಿವೆ:

ಜೈನ ಅವಶೇಷಗಳನ್ನು ಹೊಂದಿದ ಗ್ರಾಮಗಳು–೧೪
ಜೈನ ಶಾಸನಗಳನ್ನು ಹೊಂದಿದ ಗ್ರಾಮಗಳು–೭
ಜೈನ ಮಂದಿರಗಳನ್ನು ಹೊಂದಿದ ಗ್ರಾಮಗಳು–೫

೧) ಹುಲ್ಲೂರು–ರಾಮಲಿಂಗೇಶ್ವರ ದೇವಾಲಯದ ಶಾಸನದಲ್ಲಿ ಜೈನ ಗುರುಗಳ ಪಟ್ಟಾವಳಿಯಲ್ಲಿ ಕಾಣೂರುಗಣದ ಹೆಸರಿದೆ. ಅಲ್ಲದೆ ಕಾಣೂರುಗಳ ಸ್ಥಳವಾಚಕವಾಗಿದೆ. ಈ ಗಣ ಜೈನ ಯತಿ ಸಂಘಗಳಲ್ಲಿ ಯಾಪನಿ ಸಂಘ ಸೇರಿದ್ದನ್ನು ಹುಲವಣಿಯ ೨೪ ಊರು ಒಡೆಯರು ಹಾಗೂ ಪಂಚಮಠ ಸ್ಥಾವರ ಆಡಳಿತದ ಸಮ್ಮುಖದಲ್ಲಿ ಕಾಣೂರುಗಣದ ಬಸದಿಗೆ ನೀಡಿದ ಭೂದಾನದ ಉಲ್ಲೇಖವಿದೆ.

೨) ಗುಂಡಕರಜಗಿ – ಈ ಗ್ರಾಮದ ಶಾಸನದಲ್ಲಿ ದೇಶಿಯ ಗಣದ ಪೂಜ್ಯ ಶ್ರೀ ಚಂದ್ರಕೀರ್ತಿ ಭಟಾರ್ಕ ಮುನಿಗಳು ಶಿಷ್ಯನ ತ್ರುಟಿತ ನಿಷಿಧಿ ಕಲ್ಲು ಈ ಮುನಿಗಳು ಸಲ್ಲೇಖನ ವಿಧಿಯಿಂದ ಮರಣಹೊಂದಿದ ಸಮಾಧಿ ಇದೆ. ಇದಕ್ಕೆ ಕಲ್ಲುಗುಡಿ ಎಂದು ಹೆಸರು. ಒಂದೇ ಶಿಲೆಯಲ್ಲಿ ಜೀನ ಬಿಂಬಗಳ ಪೀಠ, ಶಾಂತಿನಾಥ, ಆದಿನಾಥ, ಅನಂತನಾಥ, ಮಲ್ಲಿನಾಥ ಹಾಗೂ ಯಕ್ಷ ಯಕ್ಷಣಿಯರಾದ ಗರುಡ ಮಹಾಮಾನಸಿ ವೃಷವ, ಚಕ್ರೇಶ್ವರ, ಪಾತಾಳ, ಅನಂತಮತಿ, ಕುಬೇರ, ಅಪರಾಜಿತೆ ಎಂದು ಆಯಾ ಬಿಂಬಗಳ ಹೆಸರುಗಳನ್ನು ಕೆತ್ತಲಾಗಿದೆ. ಈಗ ಇದು ಕೆ.ಆರ್.ಐ. ಕ.ವಿ.ವಿ. ಧಾರವಾಡದಲ್ಲಿದೆ.

ಯಾದವ ಸಿಂಗಣನ ಆಳ್ವಿಕೆಯಲ್ಲಿ ಸೇವುಣರ ರಾಜ್ಯದ ಹಿರಿಮೆ ಉತ್ತಂಗಕ್ಕೇರಿತೆಂದು ಅಲ್ಲಿನ ಹಣಮಂತ ದೇವರ ಗುಡಿಯ ಬಲಭಾಗದ ಶಾಸನದಲ್ಲಿದೆ. ಕಲ್ಲುಗುಡಿಯ ಜೈನ ವಿಗ್ರಹ, ಪಾದಪೀಠ ಸಧ್ಯ ಇದು ಶೀತಲಾವಸ್ಥೆಯಲ್ಲಿದೆ.

೩) ತಮದಡ್ಡಿ – ಈ ಗ್ರಾಮದ ಚಾವಡಿಯಲ್ಲಿನ ಶಾಸನದಿಂದ ಮಹಾಮಂಡಳೇಶ್ವರ ನಾಲ್ವತ್ತುವಾಡದ ಕೊಂಡಿರುವ ಭೂಮರಸನ ಬಸದಿ ಇತ್ತೆಂದು ಉಲ್ಲೇಖ ಸಿಗುತ್ತದೆ. ಇಂಗಳೇಶ್ವರ ಬಸದಿ ತೀರ್ಥದ ಆಚಾರ್ಯ ದೇವಚಂದ್ರ ಭಟ್ಟಾರಕನ ಶಿಷ್ಯ ಬೊಮ್ಮಗಾವುಂಡನ ಮಗ ಭೋಗಗಾವುಂಡನ ಹೆಸರು ಉಲ್ಲೇಖವಿದೆ.

೪) ತುಂಬಗಿ – ಈ ಗ್ರಾಮವು ಜೈನ ಅಗ್ರಹಾರ ವಾಗಿತ್ತೆಂದು ಉಲ್ಲೇಖವಿದೆ. ಶೆಟ್ಟಿ ಬ್ರಹ್ಮಯ್ಯನ ಹೆಸರು ಹಾಗೂ ಯಾದವ ರಾಮಚಂದ್ರನ ಉಲ್ಲೇಖವಿದೆ. ತ್ರುಟಿತ್ ನಿಷಧಿ ಇದ್ದು, ಪಾರ್ಶ್ವನಾಥ ಬಸದಿಗೆ ಭೂದಾನದ ಉಲ್ಲೇಖವಿದೆ. ಹಗರಟಗಿ ನಾಡು ತುಂಬಿಗೆಯ ಪ್ರಭು ಬ್ರಹ್ಮರಸರ ಉಲ್ಲೇಖ ಗೊಂಡಿದೆ.

೫) ಹಂದಗಲ್ಲು – ಬಮ್ಮರಸ ಬಾಗಿ ಅಬ್ಬರಸಿ ಇವರು ತ್ರಿಕೂಟ ದೇವಾಲಯ ನಿರ್ಮಾಣ ಹಾಗೂ ಭೂದಾನ ನೀಡಿದ ಉಲ್ಲೇಖವಿದೆ. ಮತ್ತು ಅರ್ಚಕರ ಸ್ಥಾನಾಚಾರ್ಯ ಸರ್ವೇಶ್ವರ ಪಂಡಿತವೆಂದು ಕರೆಯುವ ಉಲ್ಲೇಖವಿದೆ.

ಜೈನರಲ್ಲಿ ಮೋಕ್ಷ ಸಂಪಾದನೆಗೆ ತೊಡಗಿದ ವ್ಯಕ್ತಿ ಸಮಾಜದಲ್ಲಿ ತಮ್ಮ ಸ್ಥಾನಮಾನ ಉಳಿಸಿಕೊಳ್ಳುವ ಸಲುವಾಗಿ ಹಲವು ಕಸರತ್ತುಗಳನ್ನು ಮಾಡುತ್ತಿದ್ದುದನ್ನು ನೋಡಬಹುದು. ಅದಕ್ಕಾಗಿಯೇ ಹಿಂದೂ ಧರ್ಮದ ಪದ್ಧತಿಯ ಕೆಲವು ಲಕ್ಷಣಗಳು ಸಮಾಧಿ, ಸಲ್ಲೇಖನ, ನಿಶಿಧಿಗೆ ಇತ್ಯಾದಿಗಳಲ್ಲಿ ಕಾಣಿಸಿಕೊಂಡಿದೆ. ಪವಿತ್ರವಾದ ಸ್ಥಳದಲ್ಲಿ ಮರಣ ಹೊಂದುವದು ಪುಣ್ಯಕಾರ್ಯವೆಂಬ ಭಾವನೆ ಅಂದಿನ ಜನರ

* ಸಹಾಯಕ ಪ್ರಾಧ್ಯಾಪಕರು, ಎಸ್.ವಿ.ಎಂ. ಮಹಾವಿದ್ಯಾಲಯ, ಇಳಕಲ್, ಬಾಗಲಕೋಟೆ ಜಿಲ್ಲೆ–೫೮೭೧೨೫.

ಮನದಲ್ಲಿತ್ತು. ಹೀಗೆ ಮರಣ ಹೊಂದುವದನ್ನು ಜೈನರು ಸಮಾಧಿ ಮರಣ, ಸಲ್ಲೇಖನ ಮರಣ ಎಂದು ಕರೆಯುತ್ತಾರೆ. ಸಲ್ಲೇಖನ ವ್ರತ ಮಾಡಿ ಇಲ್ಲವೇ ಸಹಜ ಮರಣ ಹೊಂದಿದ ಹಾಗೂ ಜೈನ ದೀಕ್ಷೆ ಪಡೆದವರಿಗೆ ಸಮಾಜದಲ್ಲಿ ಅಂಥವರಿಗೆ ಗೌರವ ಸೂಚಿಸಲು ಮತ್ತು ಅವರ ನೆನಪಿಗಾಗಿ ನಿಶಿದಿಗಳನ್ನು ನಿಲ್ಲಿಸುವ ಸಂಪ್ರದಾಯ ಬೆಳೆದು ಬಂದಿರಬೇಕು.

೬) ಆಲೂರು–ಆಂಜನೆಯ ದೇವಾಲಯದ ಪಕ್ಕದಲ್ಲಿದ್ದ ವೀರಗಲ್ಲು, ಕಲ್ಯಾಣ ಚಾಳುಕ್ಯರ ಸೋಮೇಶ್ವರನ ಕಾಲದ ಮನ್ನೆಯ ವಲ್ಲಭ ದೇವರಸ ಮತ್ತು ಗುಂಡದೇವ ಸಹಾನಿ ಹಾಗೂ ಮಲ್ಲೆಯ ಸಹಾನಿಗಳ ಉಲ್ಲೇಖವಿದೆ.

೭) ಶಿರೋಳ–ಈ ಗ್ರಾಮದ ಶಾಸನದಲ್ಲಿ ಪ್ರಭು ಹಾಗೂ ಪ್ರಜೆಗಳಿಂದ ಭೂದಾನ ಮಾಡಿದ ವಿವರವಿದೆ.

೮) ಹಿರೂರು–ಈ ಗ್ರಾಮದ ಪಶ್ಚಿಮದ ಭೋಗೇಶ್ವರ ದೇವಾಲಯದ ಶಾಸನದಲ್ಲಿ ಕಲ್ಯಾಣ ಚಾಲುಕ್ಯ, ತಿಲಕವನ ಆಡಳಿತದಲ್ಲಿ ಬಸದಿಯ ಉಲ್ಲೇಖವಿದೆ.

೯) ತಾಳಿಕೋಟಿ–ಪ್ರಾಚೀನ ಕಾಲದ ೧೨ನೇ ಶತಮಾನದ ಆದಿನಾಥ ದಿಗಂಬರ ಜೈನ ಮಂದಿರವಿದ್ದು, ಶಿಖರದಲ್ಲಿ ಭಗವಾನ ಮಹಾವೀರ ತೀರ್ಥಂಕರರಿದ್ದಾರೆ.

೧೦)ಕುಂಟೋಜಿ–ಮೂರನೇ ಬಲ್ಲಾಳನ ಕಾಲದಲ್ಲಿ ಈ ಗ್ರಾಮವು ಪೂರ್ಣ ಜೈನಕೇಂದ್ರವೆಂದು ಇಲ್ಲಿನ ಪಾರ್ಶ್ವನಾಥ ತೀರ್ಥಂಕರ ಬಸದಿಯಿಂದ ಗೊತ್ತಾಗುತ್ತದೆ. ಜೀರ್ಣೋದ್ಧಾರ ಗೊಳ್ಳುತ್ತಿರುವ ಈ ದೇವಾಲಯದಲ್ಲಿ ಸುಪಾರ್ಶ್ವನಾಥ ತೀರ್ಥಂಕರರ ಯಕ್ಷ, ವರನಂದಿ, ಯಕ್ಷಿಣಿ ಹಾಗೂ ಕಾಳಿಕಾ ಇವುಗಳ ಮೂರ್ತಿಗಳಿವೆ. ಹೊಯ್ಸಳರ ಕಾಲದ ವರನಂದಿ ದೇವಸ್ಥಾನವು ಗ್ರಾಮದಲ್ಲಿದ್ದು, ೨೪ ತೀರ್ಥಂಕರರ ಮೂರ್ತಿ ಹಾಗೂ ಕಾಳಿಕಾದೇವಿಯ ಮೂರ್ತಿಗಳು ಸಧ್ಯ ತಾಳಿಕೋಟಿ ಜೈನ ದೇವಾಲಯದಲ್ಲಿವೆ. ಜೈನ ಧರ್ಮಕ್ಕೆ ಸಂಬಂಧಿಸಿದ ಹಿತ್ತಾಳೆ ನಾಣ್ಯಗಳು ಕೂಡಾ ಸಿಕ್ಕಿವೆ (ಗುಂಡಪ್ಪ ಇಂಡಿ) ೧೬ನೇ ಶತಮಾನದ ಭಗ್ನ ಮೂರ್ತಿಗಳಿವೆ.

೧೧) ಹಳ್ಳೂರ–೧೦ನೇ ಶತಮಾನದ ಕಲ್ಯಾಣ ಚಾಳುಕ್ಯರ ಇಮ್ಮಡಿ ತೈಲಪನ ಕಾಲದ ಬಸವಣ್ಣ ದೇವಾಲಯದ ಮುಂಭಾಗದಲ್ಲಿದ್ದ ಮಹಾವೀರ ತೀರ್ಥಂಕರರ ಭಗ್ನಮೂರ್ತಿ ಇದೆ.

೧೨) ದೇವರಹುಲಗಬಾಳ–೧೭ನೇ ಶತಮಾನದ ತೀರ್ಥಂಕರರ ಮೂರ್ತಿಯನ್ನು ಆಂಜನೆಯ ದೇವಸ್ಥಾನದ ಗೋಡೆಯಲ್ಲಿ ಎಣ್ಣೆ ಮಜ್ಜನದಿಂದ ಮುಚ್ಚಿಹೋಗಿವೆ.

೧೩) ಬಳಗಾನೂರ–೨೨ನೇ ತೀರ್ಥಂಕರರಾದ ನೇಮಿನಾಥ ಭಗ್ನ ಶಿಲ್ಪವಿದೆ. ಇದಕ್ಕೆ ಬಾಣಂತಿ ಕಲ್ಲು ಎಂದು ಅಲ್ಲಿನ ಜನರು ನಂಬಿದ್ದಾರೆ. ಮೂಢ ನಂಬಿಕೆಯಿಂದ ಅದನ್ನು ಬೋರಲಾಗಿ ಹಾಕಿ ತೆಗೆಯುತ್ತಾರೆ.

೧೪)ಬಂಡೆಪ್ಪನ ಸಾಲವಾಡಗಿ–ರಾಷ್ಟ್ರಕೂಟರ ಕಾಲದ ೧೦ನೇ ಶತಮಾನ ಆದಿನಾಥನ ತೀರ್ಥಂಕರರ ಮೂರ್ತಿ ಇದೆ. ಇದನ್ನು ಸುರಪುರಕ್ಕೆ ಸಾಗಿಸಲಾಗಿದೆ. ಈ ಆದಿನಾಥನ ತೀರ್ಥಂಕರರಹಸಿರು ಗ್ರೈನೆಟ್‌ದಿಂದ ಕೆತ್ತಿದ ಮೂರ್ತಿ ಹೊಸದಾಗಿ ಸಿಕ್ಕಿದೆ.

ಮುದ್ದೇಬಿಹಾಳ ಪರಿಸರದ ಗುಂಡಕರಜಗಿ, ತಮದಡ್ಡಿ, ಶಿರೋಳ, ಹುಲ್ಲೂರ, ತುಂಬಗಿ, ಹಂಡರಗಲ್ ಹಾಗೂ ಭಂಟನೂರಗಳ ಜೈನರ ವಸತಿ ಕೇಂದ್ರಗಳೆಂದು ಗೊತ್ತಾಗುತ್ತದೆ. ಈ ಗ್ರಾಮಗಳು ಜೈನರ ಆಡಳಿತಕ್ಕೆ ಒಳಪಟ್ಟಿದ್ದ ಗ್ರಾಮ ಅವರ ಪ್ರಭಾವಿ ವ್ಯಕ್ತಿಗಳಾಗಿದ್ದರೆಂದು ತಿಳಿದು ಬರುತ್ತದೆ. ಮಹಾಮಂಡಳೇಶ್ವರ ನಾಲ್ವತ್ತುಂಬಾಡ ಬೋಮರಸ ಅಧಿಕಾರಿಯು ಆಚಾರ್ಯ ದೇವಚಂದ್ರ ಭಟ್ಟಾರಕ ಬಮ್ಮಗೊಂಡನ ಮಗ ಭೋಗಗೊಂಡನು ಶಿಷ್ಯರಿದ್ದು, ಅವರ ಧರ್ಮಾಚರಣೆ ಇವರು ಬಳಸಿಕೊಂಡಿದ್ದರು. ತಮದಡ್ಡಿ ಶಾಸನದಿಂದ ಗೊತ್ತಾಗುತ್ತದೆ.

ತುಂಬಗಿಯು ಜೈನರ ಅಗ್ರಹಾರವಿದ್ದು, ಶೆಟ್ಟಿ ಬ್ರಹ್ಮಯ್ಯನು ಜೀನಬಸದಿಗೆ ದಾನಮಾಡಿದ್ದರಿಂದ ಇಲ್ಲಿಯ ಜನರು ಕೂಡಾ ಬಸದಿ ಹಾಗೂ ಅವರ ಶಿಕ್ಷಣಕ್ಕೆ ದಾನ ಮಾಡುತ್ತಿದ್ದರು. ದೇವಾಲಯಗಳನ್ನು ನಿರ್ಮಿಸಿ ಆ ದೇವಾಲಯಗಳಿಗೆ ಅರ್ಚಕರನ್ನು ಕೂಡಾ ನೇಮಕ ಮಾಡುತ್ತಿದ್ದರು. ಹಂಡರಗಲ್ಲ ಶಾಸನದಿಂದ ಸ್ಥಾನಾಚಾರ್ಯ ಸರ್ವೇಶ್ವರ ಪಂಡಿತನು ತ್ರಿಕೂಟ ದೇವಾಲ(ಬಸದಿ)ಯದ ಅರ್ಚಕರಿಗೆ ಹಾಗೂ ಆ ದೇವಾಲಯಕ್ಕೆ ಮಹಾಮಂಡಳೇಶ್ವರ ನಾಲ್ವತ್ತುಂಬಾಡ ಬೊಮ್ಮರಸನು ಮೋಕ್ಷಕ್ಕೆ ಹೊಂದಬೇಕಾದರೆ ಸಲ್ಲೇಖನದ ಆಚರಣೆಯನ್ನು ಮಾಡಬೇಕು, ಅಂದಿನ ಗಣದ ಪೂಜ್ಯಶ್ರೀ ಚಂದ್ರಕೀರ್ತಿ ಭಟ್ಟಾರಕ ಮುನಿಗಳು ಶಿಷ್ಯಂದಿರಿಗೆ ವಿಧಿ ವಿಧಾನಗಳನ್ನು ಹೇಳಿದ್ದುದು ಇಲ್ಲಿ ಸ್ಮರಿಸಬಹುದು.

ಪುರುಷರಂತೆ ಅಂದು ಜೈನ ಮಹಿಳೆಯರೂ ಸಹ ಧರ್ಮದ ಬೆಳೆವಣಿಗೆಯಲ್ಲಿ ಸಾಕಷ್ಟು ಶ್ರಮವಹಿಸಿದ್ದರು. ಹುಲ್ಲೂರು ಶಾಸನವು ೨೪ ಊರೊಡೆಯರು ಪಂಚಮರಸ್ತರ ಸಮ್ಮುಖದಲ್ಲಿ ಜೈನ ಮೃಗಾವತಿದೇವಿ(ಯಬ್ಬೆ)ಯು ಕಾಣೂರ ಗಣದ ಜಿನ ಬಸದಿಗೆ ಮತ್ತರು ಭೂಮಿಯನ್ನು ದಾನಮಾಡಿ ಕೃತಾರ್ಥಳಾದುದನ್ನು ಹೇಳಿದೆ.

ಜೈನ ಧರ್ಮದ ದೇವರುಗಳೆಂದು ಪರಿಗಣಿಸಲ್ಪಟ್ಟ ಯಕ್ಷಿಯರಾದ ಅಪರಾಜಿತಾದೇವಿ, ಯಕ್ಷ, ವೃಷಭ, ಪಾತಾಳ ಯಕ್ಷ, ಕುಭೇರ ಯಕ್ಷ, ಮಹಾಮನಸಿಯಕ್ಷಿ, ಅನಂತಮತಿ, ಚಕ್ರೇಶ್ವರಿ, ಶಾಂತಿನಾಥಸ್ವಾಮಿ ಇಂತಹವುಗಳನ್ನು ಹೆಸರಿಸುತ್ತದೆ.

ಶಾಸನಗಳು ಯಕ್ಷ ಯಕ್ಷಿಣಿಯರನ್ನು ಹೆಸರಿಸುವ ಜೈನ ಸಮುದಾಯದವರು ಅಂದು ಆರಾಧಿಸುತ್ತಿದ್ದರು.

ಸಾಹಸ ಭೀಮ ವಿಜಯ, ಅಜೀತನಾಥ ಪುರಾಣ, ರನ್ನಕಂದಗಳನ್ನು ರಚಿಸಿದ ೧೦ನೇ ಶತಮಾನದ ಮುದುವೋಳಲಿನ (ಮುಧೋಳ) ರನ್ನ, ೧೨ನೇ ಶತಮಾನದಲ್ಲಿ ಚಂದ್ರಪ್ರಭ ಪುರಾಣ ರಚಿಸಿದ ಇಂಗಳೇಶ್ವರ ಅಗ್ಗಳ, ಅದೇ ಸಮಯದಲ್ಲಿ ಮಲ್ಲಿನಾಥ ಪುರಾಣ ಬರೆದ ಅಭಿನವ ಪಂಪ, ನಾಗಚಂದ್ರ ವಿಜಾಪೂರದವರು ಇಂತಹ ದಿಗ್ಗಜರನ್ನು ಹೊಂದಿದ ಈ ಜಿಲ್ಲೆಯ ಮುದ್ದೇಬಿಹಾಳ ತಾಳೂಕು ಕೂಡಾ ಜಿನಧರ್ಮಕ್ಕೆ ಹೆಸರಾಗಿದೆ.

ಇಂತಹ ಪುರಾತನ ಐತಿಹಾಸಿಕ ಮೂರ್ತಿಗಳ ಸ್ಮಾರಕಗಳಿಗೆ ಸೂಕ್ತ ರಕ್ಷಣೆ ನೀಡಬೇಕಾಗಿದೆ. ಇಲ್ಲಿನ ನಾಗರಿಕರು ಹಾಗೂ ಗ್ರಾಮ ಪಂಚಾಯತಿಯ ಸದಸ್ಯರುಗಳು ಇದಕ್ಕೆ ಕಾಯಕಲ್ಪ ಕೊಡಬೇಕಾಗಿದೆ. ಈ ಚಾರಿತ್ರಿಕ ಸ್ಮಾರಕಗಳನ್ನು ಮುಂದಿನ ಪೀಳಿಗೆಗಳಿಗೆ ಉಳಿಸ ಬೇಕಾಗಿದೆ. ಐತಿಹಾಸಿಕ ಹಿನ್ನೆಲೆ ಗೊತ್ತಿರದ ಜನಾಂಗಕ್ಕೆ ಐತಿಹಾಸಿಕ ಸಾರುವ ಕಥೆಗಳಿಂದ ಅವರನ್ನು ಎಚ್ಚರಿಸಬೇಕಾಗಿದೆ.

ಆಧಾರಸೂಚಿ

೧. ದೇಸಾಯಿ ಪಿ.ಬಿ. **ಕನ್ನಡ ನಾಡಿನ ಶಾಸನಗಳು,** ೧೯೬೧. ಕ್ರ.ಸಂ.ಸಂಸ್ಥೆ, ಕ.ವಿ.ವಿ. ಧಾರವಾಡ.

೨. ಶಾಂತಕುಮಾರ ಎಸ್.ಎಲ್.,**ಕರ್ನಾಟಕದ ಅಗ್ರಹಾರಗಳು** ೧೯೭೨, ಕರ್ನಾಟಕ ಭಾರತಿ ಸಂ.–೫,೭ ಕ.ವಿ.ವಿ. ಧಾರವಾಡ.

೩. ಶ್ರೀಧರ ಜಿ.ಎಚ್., **ಭಾರತೀಯ ಮೂರ್ತಿ ಶಿಲ್ಪ,** ೧೯೮೮, ಧಾರವಾಡ.

೪. ಮುಳಗುಂದ ಸಿ.ವಿ., **ಮುದ್ದೇಬಿಹಾಳ ತಾಲ್ಲೂಕು ದರ್ಶನ,** ೧೯೮೭, ಬೆಂಗಳೂರು.

೫. ಉಪಾಧ್ಯ ಅ.ಬ. **ಕೋಟೆ ಧ್ವನಿ** (ಸಂ. ೨೦೧೧) ಸ್ಮರಣ ಸಂಚಿಕೆ, ತಾಳಿಕೋಟೆ.

೬. ದೇಸಾಯಿ ದಿನಕರ, ಮುಂಬಯಿ, **ಅಂಡರ್ ದಿ ಚಾಲುಕ್ಯಾಸ್ ಆಫ್ ಕಲ್ಯಾಣ,** ದ. ಮಹಾಮಂಡಳೇಶ್ವರರು, ೧೯೫೧.

೭. **ಸೌಥ್ ಇಂಡಿಯನ್ ಇನ್‌ಸ್ಕ್ರಿಪ್ಶ್ಯನ್ಸ್.**

೮. **ಇಂಡಿಯನ್ ಆಂಟಿಕ್ವೆರಿ.**

೯. **ಎಪಿಗ್ರಾಫಿ ಇಂಡಿಕಾ.**

೧೦. **ವಿಜಾಪುರ ಜಿಲ್ಲೆಯ ಶಾಸನ ಸೂಚಿ.**

೬೦

ಕರ್ನಾಟಕದಲ್ಲಿ ಬ್ರಹ್ಮದೇವರ ಆರಾಧನೆ

ಎಸ್. ಪರಶಿವಮೂರ್ತಿ*

ಒಂದು ನಾಡಿನ ಸಾಂಸ್ಕೃತಿಕ ಇತಿಹಾಸದಲ್ಲಿ ಪರಂಪರೆಗಳ ಅಧ್ಯಯನಕ್ಕೆ ಹೆಚ್ಚಿನ ಮಹತ್ವವಿದೆ. ಪರಂಪರೆಗಳು ಇದ್ದಕ್ಕಿದ್ದ ಹಾಗೆ ಪ್ರಾರಂಭವಾಗುವುದಿಲ್ಲ ಮತ್ತು ಇದ್ದಕ್ಕಿದ್ದಂತೆ ಮಾಯವಾಗುವುದಿಲ್ಲ. ಹೊಸ ಸಂಪ್ರದಾಯಗಳು ಬಂದರೂ ಹಳೆಯ ಸಂಪ್ರದಾಯಗಳೊಡನೆ ಬೆರೆತು ಮುಂದುವರೆಯುತ್ತವೆ. ಇಂತಹ ಸಂಪ್ರದಾಯಗಳು ಪರಂಪರೆಯಲ್ಲಿ ಯಾವುದು ಪ್ರಾಚೀನ ಯಾವುದು ಆರ್ವಾಚೀನ ಎಂದು ಬೇರ್ಪಡಿಸುವುದು ಕಷ್ಟದ ಕೆಲಸ. ಆದರೂ ಸಾಹಿತ್ಯ ಮತ್ತು ಶಾಸನಾಧಾರಗಳಿಂದ ಸ್ವಲ್ಪ ಮಟ್ಟಿಗೆ ತಿಳಿಯಲು ಸಾಧ್ಯ. ಪರಂಪರೆಗಳು, ಸಂಪ್ರದಾಯಗಳು ಯಾವಾಗ ಹೇಗೆ ಪ್ರಾರಂಭವಾದವು ಮತ್ತು ಏಕೆ ಪ್ರಾರಂಭವಾದವು ಎಂಬ ಸಂಗತಿಯನ್ನು ಸೂಕ್ಷ್ಮವಾಗಿ ವಿಚಾರಿಸಬೇಕಾಗುತ್ತದೆ.

ಈ ಹಿನ್ನೆಲೆಯಲ್ಲಿ ಅರಸೀಕೆರೆಯ ಒಂದು ಶಾಸನ ಹೊಯ್ಸಳ ಎರಡನೇ ವೀರಬಲ್ಲಾಳನ ಕ್ರಿ.ಶ. ೧೧೮೪ರ ಕಾಲದಾಗಿದ್ದು[೧] ಆ ಪದ್ಯ ಪ್ರಾರಂಭವಾಗುವುದು ಬ್ರಹ್ಮನ ವರ್ಣನೆಯಿಂದ

> **"ಕತ್ತುರಿಯ ಕಂಪು ಕೈಸುರಿಗೆ ಹಟ್ಟಿಗೆ ಸಣ್ಣಗಗರಂ**
> **ಮುತ್ತಿನ ದಂಡೆ ತೋಳಮಣಿ ಬೈತಲೆ**
> **ಬೆತ್ತದ ಸೆಂಡುಕೋಲು ತೂಲಜನ್ನುರಂ ಮೊರೆವ ದಂತದಪಾವುಗೆ**
> **ಬೃಂಗದೋಲೆ ಮೈಯಿ**
> **ವೆತ್ತಿರೆ ರಾತ್ರಿಯೊಳು ಸುಳಿವ ಬ್ರಹ್ಮಯ್ಯನೀಗೆ ಯಮಗಿಷ್ಟ ಸಿದ್ಧಿಯಂ"**

ಎಂದು ಪ್ರಾರ್ಥಿಸಿ ಅನಂತರ ಹೊಯ್ಸಳ ರಾಜಮನೆತನದ ವಿವರಗಳನ್ನು ಎರಡನೇ ಬಲ್ಲಾಳನವರೆಗೆ ಕೊಟ್ಟು ಅವನ ರಾಜ್ಯಾಧ್ಯಕ್ಷ ಹೆಗ್ಗಡೆ ರೇವಣ, ಹೆಗ್ಗಡೆ ಕೇತಮಲ್ಲ ಮತ್ತು ಮಹಾಪ್ರಧಾನ ಹಿರಿಯ ಭಂಡಾರಿ ಕೇಶವದೇವ ಇವರ ಔಚಿತ್ಯವನ್ನು ಹೇಳುವನು ಶಾಸನ ಕವಿ. ಇವರಲ್ಲಿ ರಾಜ್ಯಾಧ್ಯಕ್ಷ ಹೆಗ್ಗಡೆ ರೇವಣನು "ನೆರೆದ ಬುಧಸಭೇಯೋ ಅಧಿಕಂ ಪರಮ ಗುಣಾಂಬುದಿ, ಸುಸತ್ಯ ನಿಧಿ' ' ಹೆಗ್ಗಡೆ ಕೇತಮಲ್ಲನು "ನುಡಿದುದೇ ರಾಮಾಜಾಣ ಎರಡು ಮಾತನಾಡನು, ಕೊಡುವಲ್ಲಿ ಕರ್ಣನೋಳ್ ಪಡಿ, ನಡೆವಲ್ಲಿ ಧರ್ಮದೋಳ್ ತಾನ್ ನಡೆವನು" ಎಂದು ಲೋಕವೇ ಹೇಳುತ್ತದೆ. ಶ್ರೀಮನು ಮಹಾಪ್ರಧಾನ ಹಿರಿಯ ಭಂಡಾರಿ ಕೇಶವ ದೇವನು ಅನೇಕ ದೇವಾಲಯಗಳನ್ನು ಕಟ್ಟಿಸಿ ಪೂಜೆಗೆ ವ್ಯವಸ್ಥೆ ಮಾಡಿದವನು. ಇವನು ರಾಜ್ಯಾಧ್ಯಕ್ಷ ರೇವಣ ಹೆಗ್ಗಡೆಯ ಸಹೋದರ ಮತ್ತು ಎರಡನೇ ವೀರಬಲ್ಲಾಳನ ಪಿರಿಯರಸಿ 'ಉಮಾದೇವಿಯ ತಂದೆ'

ಇದರಲ್ಲಿ ಹೆಗ್ಗಡೆ ಕೇತಮಲ್ಲನು ತಮ್ಮ ಹಿರಿಯಯ್ಯ (ತಾತ) ಬಿಟ್ಟಿಗಾವುಂಡ, ತಂದೆ ಬರ್ಮಗಾವುಂಡ, ತಾಯಿ 'ದಾರವ್ವೆ'ಯರ ಪರೋಕ್ಷ ವಿನಯಕ್ಕಾಗಿ ಬ್ರಹ್ಮದೇವರ ಮಂಟಪವನ್ನು ಕಲ್ಲು ಮತ್ತು ಇಟ್ಟಿಗೆಯಿಂದ ಗೆಯ್ಸಿ ಪ್ರತಿಮೆಯಂ ಮಾಡಿಸಿ ಸುಪ್ರತಿಷ್ಠೆಯಂ ಮಾಡಿಸಿದನು. ಮತ್ತು ದೇವರ ನೈವೇದ್ಯ, ನಂದಾದೀವಿಗೆಗೆ ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ ಬೂವಗೌಡನು ತಮ್ಮ ಕೊನೆಗಾರ (ವಂಶದ ಮುಖ್ಯಸ್ಥನಾದ) ಕೇತಮಲ್ಲನ ಕಾಲನ್ನು ತೊಳೆದು ಧಾರಾಪೂರ್ವಕವಾಗಿ ಭೂದತ್ತಿಗಳನ್ನು ಬಿಟ್ಟನು. ಅರಸೀಕೆರೆಯ ರಕ್ಷಾಪಾಳಕ (ತಳವಾರ) ಕಲ್ಲಯ್ಯನಾಯಕನು ತನ್ನ ಆಯವನ್ನು ದೇವರಿಗೆ ಬಿಟ್ಟ ಇದರೊಂದಿಗೆ ಕೇತಮಲ್ಲನ ಮನೆಗೆ ತೆರೆ ಮಾನ್ಯವಾಗಿದ್ದ ಬೊಮ್ಮೆಯನ ಹಳ್ಳಿಯ ಸೋವಗಾವುಂಡನು ತನ್ನ ಊರಲ್ಲಿ ಬೆದ್ದಲೆ ೧೦೦ನ್ನು ದೇವರಿಗೆ ಬಿಟ್ಟ ಮುಂತಾದ ವಿವರಗಳನ್ನು ಒಳಗೊಂಡಿದೆ. ಈ ವಿವರಗಳಲ್ಲಿ ಮುಖ್ಯವಾಗಿ ಕಾಣುವುದು ಬ್ರಹ್ಮದೇವರ ಪ್ರತಿಮೆಯ ವರ್ಣನೆ. ಈ ಬ್ರಹ್ಮನು ಚತುರ್ಮುಖ ಬ್ರಹ್ಮನಲ್ಲ. ಕತ್ತುರಿಯ ಕಂಪಿನಿಂದ ಕೂಡಿದ ಬೈತಲೆ ಬಾಚಿಕೊಂಡಿದ್ದಾನೆ. ಕೈಸುರಿಗೆಯನ್ನು ಹಿಡಿದಿದ್ದಾನೆ. ಕಿವಿಯಲ್ಲಿ ಓಲೆಯನ್ನು ಹಾಕಿಕೊಂಡಿದ್ದಾನೆ. ಕೈಸುರಿಗೆಯನ್ನು ಇಡಲು ಹೊನ್ನಿನ ಹೊರೆಯನ್ನು ಸೊಂಟಕ್ಕೆ ಕಟ್ಟಿಕೊಂಡಿದ್ದಾನೆ. ಈ ಹೊನ್ನಿನ ಹೊರಗೆ ಸಣ್ಣ ಗಗ್ಗರಗಳನ್ನು ಕಟ್ಟಿಕೊಂಡಿದ್ದಾನೆ. ಕೊರಳಲ್ಲಿ ಮುತ್ತಿನ ದಂಡೆಯನ್ನು ತೋಳಿನಲ್ಲಿ ತೋಳ ಮಣಿಯನ್ನು ಹಾಕಿಕೊಂಡಿದ್ದಾನೆ. ಅವನು ಹಾಕಿಕೊಂಡಿರುವ ಜನಿವಾರ ಹೆಗಲಿನಿಂದ ತೂಗಾಡುತ್ತಿದೆ. ಮತ್ತೊಂದು ಕೈಲಿ ಬೆತ್ತದ ಸಂಡುಕೋಲು ಹಿಡಿದಿದ್ದಾನೆ. ಮೊರ ಮೊರ ಶಬ್ದ ಮಾಡುವ ದಂತದ ಹಾವಿಗೆಯನ್ನು ಮೆಟ್ಟಿದ್ದಾನೆ ಮತ್ತು ರಾತ್ರಿಯ ವೇಳೆಯಲ್ಲಿ ಸಂಚರಿಸುತ್ತಾನೆ. ಈ ಎಲ್ಲಾ ಲಕ್ಷಣಗಳು


* ಮೇಲಿನ ಮಠ, ಅರಸೀಕೆರೆ-೫೭೩೧೦೩.



ಕ್ಷೇತ್ರಪಾಲ, ಸಾಲಿಗ್ರಾಮ



ಮಿಡಿಗೇಶಿ ಯಕ್ಷಬ್ರಹ್ಮ




ಕೂಗೆ ಬ್ರಹ್ಮದೇವರ ಸ್ಥಂಭ
ಶ್ರವಣಬೆಳಗೊಳ



ಬ್ರಹ್ಮದೇವರು, ಸಾಲಿಗ್ರಾಮ



ಕರಡಿ ಬ್ರಹ್ಮದೇವರು,
ಶಂಕರನಹಳ್ಳಿ, ಅರಸೀಕೆರೆ
ತಾಲ್ಲೂಕು



ಬ್ರಹ್ಮಲಿಂಗೇಶ್ವರ ಮತ್ತು ಕಾಳಮ್ಮ,
ದುಮ್ಮೇನಹಳ್ಳಿ, ಅರಸೀಕೆರೆ ತಾ.

ಚತುರ್ಮುಖ ಬ್ರಹ್ಮನಿಗೆ ಇಲ್ಲ ಹಾಗಾದರೆ ಈ ಬ್ರಹ್ಮ ಯಾರು?

ಪ್ರಾಚೀನ ಭಾರತೀಯ ಧರ್ಮಗಳಲ್ಲಿ ವೈದಿಕ ಧರ್ಮ, ಬೌದ್ಧ ಧರ್ಮ, ಜೈನ ಧರ್ಮ, ಪ್ರಮುಖವಾದವುಗಳು ವೈದಿಕ ಧರ್ಮದಲ್ಲಿ ಬ್ರಹ್ಮನಿಗೆ ಪೂಜೆ ಇಲ್ಲ ಬೌದ್ಧಧರ್ಮದಲ್ಲಿ ತ್ರಿಮೂರ್ತಿಗಳ ಪೂಜೆಯೇ ಇಲ್ಲ. ಜೈನ ಧರ್ಮದಲ್ಲಿ ಬ್ರಹ್ಮನೆಂಬ ಒಬ್ಬ ಯಕ್ಷನ ಪೂಜೆ ಇದೆ. ಯಕ್ಷ ಯಕ್ಷಿಯರು ಜೈನ ತೀರ್ಥಂಕರರ ಸಹಾಯಕರು ಯಕ್ಷನಾದ ಬ್ರಹ್ಮನು ಜೈನರ ಹತ್ತನೆಯ ತೀರ್ಥಂಕರನಾದ ಶೀತಲಾನಾಥನ ಯಕ್ಷನೆಂದು ಪೂಜೆಗೊಳ್ಳುತ್ತಿದ್ದಾನೆ. ಆದರೆ ಆತ ಶೀತಲನಾಥನೊಬ್ಬನಿಗೆ ಮೀಸಲಾಗಿರದೇ ಎಲ್ಲಾ ಜೈನ ಕ್ಷೇತ್ರಗಳನ್ನು ಮತ್ತು ಬಸದಿಗಳನ್ನು ಕಾಯುವ ಹೊಣೆ ಹೊತ್ತಿದ್ದಾನೆ. ಸಾಮಾನ್ಯವಾಗಿ ಎಲ್ಲಾ ಬಸದಿಗಳ ಮುಂಭಾಗದ ಪೌಳಿಗಳಲ್ಲಿ ತೀರ್ಥಂಕರರ ಎಡಭಾಗದಲ್ಲಿ ೫-೬ ಅಡಿ ಎತರದ ಕಂಬದ ಮೇಲೆ ಬ್ರಹ್ಮನ ವಿಗ್ರಹವಿರುತ್ತದೆ. ಈ ಕಾರಣದಿಂದ ಬ್ರಹ್ಮನಿಗೆ ಕ್ಷೇತ್ರಪಾಲ ಎಂಬ ಮತ್ತೊಂದು ಹೆಸರಿದೆ. ಜಟಿಂಗರಾಯ ಎಂಬ ಹೆಸರು ಕೂಡ ಇದೆ. ಜೈನಧರ್ಮದಲ್ಲಿ ಬ್ರಹ್ಮದೇವರು ಮೋಕ್ಷ, ಮುಕ್ತಿ ನೀಡುವ ದೇವರಲ್ಲ ಬರೀ ಕ್ಷೇತ್ರಪಾಲನಷ್ಟೇ[೨] ಈ ಬ್ರಹ್ಮನನ್ನು ಆಯಾ ಪ್ರದೇಶಗಳಲ್ಲಿ ಸಂದರ್ಭಗಳಿಗೆ ಅನುಸಾರವಾಗಿ ಹೆಸರಿನೊಂದಿಗೆ ಉಪನಾಮಗಳನ್ನು ಸೇರಿಸುತ್ತಾರೆ. ಉದಾ : ಕೂಗೆ ಬ್ರಹ್ಮ, ಬೆಂಕಿ ಬ್ರಹ್ಮ, ಚಾಗದ ಬ್ರಹ್ಮದೇವರು, ಕರಡಿ ಬ್ರಹ್ಮ, ಇರುವೇ ಬ್ರಹ್ಮ ಎಂದು ಕರೆಯುತ್ತಾರೆ. ಜೈನಧರ್ಮೀಯರನೇಕರಿಗೆ ಬ್ರಹ್ಮ ಮನೆ ದೇವರು ಕೂಡ ಆಗಿದ್ದಾನೆ. ಬ್ರಹ್ಮಪ್ಪ, ಬ್ರಹ್ಮದೇವಯ್ಯ, ಕ್ಷೇತ್ರಪಾಲಯ್ಯ ಮತ್ತು ಅಪರೂಪಕ್ಕೆ ಜಟಿಂಗರಾಯ ಎಂಬ ಹೆಸರು ಬಳಕೆಯಲ್ಲಿವೆ. ಇತಿಹಾಸದಲ್ಲಿ ಮತ್ತು ಶಾಸನಗಳಲ್ಲಿ ಬ್ರಹ್ಮರಾಯ ಬ್ರಹ್ಮದಂಡಾದೀಶ, ಬ್ರಹ್ಮಯ್ಯ ಕರಿಬ್ರಹ್ಮ ಮತ್ತು ಕೆಲವು ರಾಣಿಯರ ಹೆಸರುಗಳಲ್ಲಿ ಬೊಮ್ಮಲಾದೇವಿ, ಬೊಮ್ಮವ್ವೆ, ಬೊಮ್ಮಕ್ಕ ಮುಂತಾದ ಹೆಸರುಗಳು ಕಾಣಸಿಗುತ್ತವೆ. ಕರ್ನಾಟಕದಲ್ಲಿ ಒಂದು ಸಮೀಕ್ಷೆಯಂತೆ ಸುಮಾರು ೨೦೪ ಗ್ರಾಮಗಳ ಹೆಸರುಗಳು ಬ್ರಹ್ಮನ ಹೆಸರಿನಿಂದ ಪ್ರಾರಂಭವಾಗುತ್ತವೆ.[೩]

ಬ್ರಹ್ಮನ ಆರಾಧನೆ ಜೈನಕಾಶಿ ಎಂದು ಪರಿಗಣಿತವಾಗಿರುವ ಶ್ರವಣಬೆಳಗೊಳದಲ್ಲಿ ಪ್ರಾಚೀನ ಕಾಲದಿಂದ ನಡೆದುಬರುತ್ತದೆ. ಇಲ್ಲಿಯ ಚಂದ್ರಗಿರಿಯಲ್ಲಿ ಕ್ರಿ.ಶ. ೯೫೦ರಲ್ಲಿ ಗಂಗಮಂತ್ರಿಯಾದ ಚಾವುಂಡರಾಯ ಕಟ್ಟಿಸಿದನೆಂದು ಹೇಳಲಾದ ಕತ್ತಲೆ ಬಸದಿಗೆ ಹೊಂದಿಕೊಂಡಂತಿರುವ ಬ್ರಹ್ಮದೇವರ ಬಸದಿಯೇ ಬಹುಶಃ ಪ್ರಾಚೀನವಾದ ಬ್ರಹ್ಮದೇವಾಲಯವಾಗಿರಬೇಕು. ಮತ್ತೊಂದು ಬಸದಿಯನ್ನು ವಿಂದ್ಯಗಿರಿಯಲ್ಲಿ ಕ್ರಿ.ಶ. ೧೬೭೮ರಲ್ಲಿ ಹಿರೀಸಾವೆಯ ಗಿರಿಗೌಡ ತಮ್ಮ ರಂಗಯ್ಯನು ಕಟ್ಟಿಸಿದನು. ಇದು ಬಹುಶಃ ಇತ್ತೀಚಿನ ಬಸದಿಯಾಗಿರಬೇಕು.

ಬಸದಿಯಲ್ಲಿ ಮಾತ್ರವಲ್ಲದೇ ಮಾನಸ್ತಂಭಗಳ ಮೇಲೂ ಬ್ರಹ್ಮದೇವರ ವಿಗ್ರಹಗಳಿವೆ. ವಿಂದ್ಯಗಿರಿಯಲ್ಲಿ ಚಾವುಂಡ

F

ರಾಯನು ಕ್ರಿ.ಶ. ೯೮೫ರಲ್ಲಿ ಚಾಗದ ಸ್ತಂಭವನ್ನು ನಿರ್ಮಿಸಿ ಆ ಸ್ಥಳದಲ್ಲಿ ಕುಳಿತು ದಾನ ನೀಡುತ್ತಿದ್ದರಿಂದ ಅದಕ್ಕೆ ಚಾಗದ ಸ್ತಂಭ ಎಂದು ಹೆಸರು ಬಂದಿದೆ ಎಂದು ಪ್ರತೀತಿ. ಈ ಸ್ತಂಭದಲ್ಲಿ ೪ ಕಡೆ ಇದ್ದ ಶಾಸನಗಳಲ್ಲಿ ಒಂದನ್ನು ಕ್ರಿ.ಶ. ಸುಮಾರು ೧೨೦೦ರಲ್ಲಿ ಹೆಗ್ಗಡೆ 'ಕಣ್ಣ' ಎಂಬಾತನು ಅಳಿಸಿ ಬೇರೆ ಶಾಸನವನ್ನು ತನ್ನ ಹೆಸರಿನಲ್ಲಿ ಬರೆಸಿ ಒಂದು ಬ್ರಹ್ಮದೇವರ ವಿಗ್ರಹವನ್ನು ಸ್ಥಾಪಿಸಿದನೆಂದು ಅದುವರಿಂದ ಈ ಸ್ತಂಭಕ್ಕೆ ಚಾಗದ ಬ್ರಹ್ಮದೇವರ ಸ್ತಂಭ ಎಂದು ಹೆಸರಾಯಿತೆಂದು ತಿಳಿದು ಬರುತ್ತದೆ.

ಅದೇ ವಿಂಧ್ಯಗಿರಿಯಲ್ಲಿ ಬಾಹುಬಲಿ ಎದುರಿಗಿರುವ 'ಗುಳ್ಳೆಕಾಯಿ ಅಜ್ಜಿ'ಯ ಮಂಟಪದ ಹಿಂಭಾಗದಲ್ಲಿ ೨೨ ಅಡಿ ಎತ್ತರದ ಒಂದು ಮಾನಸ್ಥಂಭವಿದ್ದು ಅದರ ಮೇಲೂ ಬ್ರಹ್ಮ ದೇವರ ವಿಗ್ರಹವಿದೆ ಇದನ್ನು ಮಾಡಿಸಿದವನು ಬಲದೇವನೆಂಬುವವನು[೫] ಇದಲ್ಲದೇ ಚಂದ್ರಗಿರಿಯ ಮೇಲಿರುವ ಬೃಹತ್ ಮಾನಸ್ತಂಭವನ್ನು ಕ್ರಿ.ಶ. ೯೭೪ರಲ್ಲಿ ಗಂಗರಾಜನಾದ ಇಮ್ಮಡಿ ಮಾರಸಿಂಹನು ಬಂಕಾಪುರದಲ್ಲಿ ಅಜಿತ ಸೇನಾಚಾರ್ಯರಿಂದ ಸಲ್ಲೇಖನ ವ್ರತವನ್ನು ಕೈಗೊಂಡು ಮೂರು ದಿವಸಗಳು ಉಪವಾಸವಿದ್ದು ಸಮಾಧಿ ಮರಣವನ್ನು ಹೊಂದಿನು. ಅವನ ಪರೋಕ್ಷ ವಿನಯಕ್ಕಾಗಿ ನಿರ್ಮಿಸಲಾಗಿದೆ. ಈ ಸ್ತಂಭದ ಮೇಲೂ ಸುಂದರವಾದ ಬ್ರಹ್ಮನ ವಿಗ್ರಹವಿದೆ. ಶ್ರವಣಬೆಳಗೊಳಕ್ಕೆ ಶತ್ರು ಸೈನ್ಯ ಬರುವುದನ್ನು ಕಂಡ ತಕ್ಷಣ ಈ ಸ್ತಂಭದಿಂದ ಒಂದು ವಿಧವಾದ ಶಬ್ದ ಕೇಳಿಸುತ್ತಿತ್ತೆಂದು ಆಗ ಊರ ಜನರು ತಮ್ಮ ಮನೆಗಳ ಬಾಗಿಲುಗಳನ್ನು ಭದ್ರಪಡಿಸಿ ಶತ್ರು ಸೈನ್ಯಗಳನ್ನು ಎದುರಿಸಲು ಸಜ್ಜಾಗುತ್ತಿದ್ದರೆಂದು ಒಂದು ಐತಿಹ್ಯವಿದೆ. ಆದುದರಿಂದ ಈ ಬ್ರಹ್ಮನನ್ನು 'ಕೂಗೆ' ಬ್ರಹ್ಮನೆಂದು ಕರೆಯುತ್ತಾರೆ[೬] ಮತ್ತೊಂದು ಹೆಸರಿಸಬೇಕಾದ ಮಾನಸ್ತಂಭ ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಕಂಬದಹಳ್ಳಿಯಲ್ಲಿದೆ. ಕರ್ನಾಟಕದಲ್ಲಿರುವ ಮಾನಸ್ತಂಭಗಳಲ್ಲಿ ಅತೀ ಎತ್ತರದ ಮಾನಸ್ತಂಭ ಇದಾಗಿದೆ ಈ ಸ್ತಂಭದಿಂದಲೇ ಊರಿಗೆ ಕಂಬದ ಹಳ್ಳಿ ಎಂದು ಹೆಸರು ಬಂದಿದೆ. ಈ ಸ್ತಂಭದ ಮೇಲೂ ಬ್ರಹ್ಮನ ವಿಗ್ರಹವಿದೆ. ಇದನ್ನು ಹೊಯ್ಸಳ ವಿಷ್ಣುವರ್ಧನನ ಪ್ರಧಾನ ದಂಡನಾಯಕ ಗಂಗರಾಜನು ಕ್ರಿ.ಶ. ೧೧೧೮ರಲ್ಲಿ ತಲಕಾಡಿನಿಂದ ಚೋಳರನ್ನು ಸೋಲಿಸಿ ಓಡಿಸಿದ ವಿಜಯದ ನೆನಪಿಗಾಗಿ ಕಟ್ಟಿಸಿದನೆಂದು ತಿಳಿದು ಬರುತ್ತದೆ.

ಕೆಲವು ಕೆರೆ ಏರಿಗಳ ಮೇಲೆ ನಿರ್ಮಿಸಿದ ಬ್ರಹ್ಮ ದೇವಾಲಯಗಳಲ್ಲಿ ಬ್ರಹ್ಮ ವಿಗ್ರಹದ ಜೊತೆಯಲ್ಲಿ ಒಂದು ಹೆಣ್ಣು ವಿಗ್ರಹವಿರುವುದು ಕಂಡುಬರುತ್ತದೆ. ಇದನ್ನು ಕೆಲವು ಹಳ್ಳಿಗಳಲ್ಲಿ ಬ್ರಹ್ಮಲಿಂಗೇಶ್ವರ ಮತ್ತು ಕಾಳಮ್ಮ ಎಂದು ಕರೆಯುತ್ತಾರೆ. ಈ ವಿಗ್ರಹಗಳ ಅಸ್ತಿತ್ವ ಹೇಗೆ ಪ್ರಾರಂಭವಾಯಿತೆಂದು ಹೇಳಲು ಮಾಹಿತಿಗಳಿಲ್ಲ.[೭]

ಜೈನ ಧರ್ಮದಲ್ಲಿ ಯಕ್ಷ ಯಕ್ಷೀಯರನ್ನು ಯಾವ ಯಾವ ತೀರ್ಥಂಕರರಿಗೆ ಯಾವ ಯಕ್ಷ ಮತ್ತು ಯಕ್ಷಿಯರು ಮೀಸಲು ಎಂಬ ಪಟ್ಟಿಯನ್ನು ಡಾ. ಷ. ಶೆಟ್ಟರ್‌ರವರು ತಮ್ಮ ಕಿರು ಸಚಿತ್ರ ಪುಸ್ತಕದಲ್ಲಿ ಕೊಟ್ಟಿದ್ದಾರೆ ಮತ್ತು ೨೪ ತೀರ್ಥಂಕರರ ಹೆಸರು ಆ ಹೆಸರುಗಳ ಮುಂದೆ ಮೀಸಲಾದ ಯಕ್ಷ ಯಕ್ಷಿಯರ ಹೆಸರುಗಳುಳ್ಳ ಪಟ್ಟಿಯನ್ನು ಕೊಟ್ಟಿದ್ದಾರೆ. ಈ ಪಟ್ಟಿಯಲ್ಲಿ ೧೦ನೇ ತೀರ್ಥಂಕರನಾದ ಶೀತಲನಾಥನ ಯಕ್ಷ ಬ್ರಹ್ಮ, ಯಕ್ಷೀ ಮಾನವಿ, ೯ನೇ ತೀರ್ಥಂಕರನಾದ ಪುಷ್ಪದಂತನ ಯಕ್ಷ ಅಜಿತ, ಯಕ್ಷಿ ಮಹಾಕಾಳಿ ಮತ್ತು ೭ನೇ ತೀರ್ಥಂಕರನಾದ ಸುಪಾರ್ಶ್ವನಾಥನ ಯಕ್ಷ 'ಮಾತಂಗ' ಯಕ್ಷಿ ಕಾಳಿ, ಈ ಪಟ್ಟಿಯಲ್ಲಿ ಬರುವ ಹೆಸರಿನ ಕಾಳಿ ಮತ್ತು ಮಹಾಕಾಳಿ ಹೆಸರುಗಳು ಬ್ರಹ್ಮನ ಹೆಸರಿನ ಜೊತೆಗೆ ಅದಲುಬದಲಾಗಿರುವ ಸಾಧ್ಯತೆಗಳಿವೆ. ಇಲ್ಲಿ ಮತ್ತೊಂದು ಊಹೆಗೂ ಅವಕಾಶವಿದೆ ಕೆಲವು ಬಸದಿಗಳಲ್ಲಿ ಬ್ರಹ್ಮ ವಿಗ್ರಹ ಕುದರೆಯ ಮೇಲೆ ಕುಳಿತಂತೆ ನಿರ್ಮಿಸಲಾಗಿದೆ ಉದಾಹರಣೆಗೆ ಮೈಸೂರು ಜಿಲ್ಲೆಯ ಸಾಲಿಗ್ರಾಮದ ಕೋಟೆಯಲ್ಲಿರುವ ೧೪ನೇ ತೀರ್ಥಂಕರ ಅನಂತನಾಥನ ಬಸದಿಯ ಬ್ರಹ್ಮ ವಿಗ್ರಹ ಇದು. ಮೈಲಾರಲಿಂಗನು ಕುದುರೆಯ ಮೇಲೆ ಕುಳಿತು ಕೈಲಿ ಕತ್ತಿ ಹಿಡಿದಿರುವ ವಿಗ್ರಹವನ್ನು ಹೋಲುತ್ತದೆ. ಮೈಲಾರನ ಹೆಂಡತಿಯು ಹೆಸರು ಮಾಳಮ್ಮ ಬ್ರಹ್ಮ ಯಕ್ಷನ ಜೊತೆಗಿರುವ ಯಕ್ಷಿಯು ಹೆಸರು ಮಾನವಿ. ಮಾನವಿ ಎಂಬ ಹೆಸರು ಮಾಳವಿಯಾಗಿ ಅನಂತರ ಮಾಳಮ್ಮನಾಗಿ ಕಾಳಮ್ಮನಾಗಿರುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

ಕೆಲವು ಗ್ರಾಮಗಳಲ್ಲಿರುವ ಗಾದೆ ಮಾತು ಬ್ರಹ್ಮದೇವರಿಗೆ ವರ್ಷಕ್ಕೊಂದೆ ಎಡೆ ಸಾಮಾನ್ಯವಾಗಿ ಎಲ್ಲಾ ಹಳ್ಳಿಗಳಲ್ಲಿಯೂ 'ಕರವುಗಲ್ಲುಗಳು' ಎಂಬ ಪೂಜಾ ಸ್ಥಳ ಒಂದು ಇರುತ್ತದೆ[೮]. ಇದು ಎರಡು ಕಲ್ಲಿನ ಸ್ತಂಭಗಳನ್ನು ಅಥವಾ ಚಪ್ಪಡಿ ಕಲ್ಲುಗಳನ್ನು ೫-೬ ಅಡಿ ಅಂತರದಲ್ಲಿ ನೆಟ್ಟಿರುತ್ತಾರೆ. ಇವೆರಡರ ಮಧ್ಯದಲ್ಲಿ ಒಂದು ಒರಟು ಗುಂಡು ಕಲ್ಲಿನ ಆಕಾರದ ಕಲ್ಲಿರುತ್ತದೆ. ಈ ಸ್ಮಾರಕವನ್ನು ಗ್ರಾಮಗಳಲ್ಲಿ ಕಾರು ಹುಣ್ಣಿಮೆಯ ದಿನ ಅಥವಾ ಕಾರುಹುಣ್ಣಿಮೆಗೆ ಮುಂಚೆ ಒಂದು ಶುಭ ದಿನದಲ್ಲಿ ಪೂಜಿಸಿ ಅದಕ್ಕೆ ಎಡೆ ಮಾಡುವ ಪದ್ಧತಿ ಇದೆ. ಈ ಸಂದರ್ಭದಲ್ಲಿ ಹೊಂಬಾಳೆಯ ಕಟ್ಟು ಎಂಬ ಬಳ್ಳಿಯನ್ನು ಹಗ್ಗದಂತೆ ಹೊಸೆದು ಆ ಕಲ್ಲುಗಳಿಗೆ ಕಟ್ಟಿ ಯುವಕರ ಎರಡು ಗುಂಪುಗಳು ಒಂದೊಂದು ತುದಿಯಲ್ಲಿ ನಿಂತು ಜಗ್ಗಾಟ

ಮಾಡುತ್ತಾರೆ. ಯಾವ ಗುಂಪು ಹೆಚ್ಚು ಭಾಗವನ್ನು ಸೆಳೆದುಕೊಳ್ಳುವರೋ ಅವರು ಹೆಚ್ಚು ಬೆಳೆಯನ್ನು ಬೆಳೆಯುವರು ಎಂಬ ನಂಬಿಕೆಯಿದೆ. ಮಧ್ಯದಲ್ಲಿರುವ ಗುಂಡುಕಲ್ಲಿಗೆ ಪೂಜೆ ಮಾಡಿ ಎಡೆ ಮಾಡಲಾಗುತ್ತದೆ. ಅನಂತರ ಒಂದು ಮಣ್ಣಿನ ಕುಡಿಕೆಯಲ್ಲಿ ರೈತರು ಬೆಳೆಯುವ ದಾನ್ಯಗಳನ್ನು ಹಾಕಿ ಅದನ್ನು ಆ ಗುಂಡುಕುಲ್ಲಿಗೆ ಹೊಡೆಯುವರು. ಯಾವ ಧಾನ್ಯ ಮೊದಲು ಹೊರಕ್ಕೆ ಬೀಳುವುದೋ ಆ ಧಾನ್ಯದ ಬೆಳೆ ಹೆಚ್ಚು ಫಲಿಸುವುದೆಂಬ ನಂಬಿಕೆ ಗ್ರಾಮಗಳಲ್ಲಿದೆ. ಈ ಕರುವುಗಲ್ಲು ಅಥವಾ ಕುರುವುಗಲ್ಲಿನ ಪೂಜೆಯನ್ನು ಮಾಡುವ ಹಕ್ಕು ಊರಿನ ಗೌಡ ಅಥವಾ ಪಟೇಲರದು. ಆ ಕಲ್ಲಿಗೆ ಪೂಜೆ ಎಡೆ (ನೈವೇದ್ಯ) ಮಾಡುವುದು ಅವನ ಕೆಲಸ. ಆದರೆ ಆ ಎಡೆಯನ್ನು ಊಟ ಮಾಡುವುದು ಊರಿನ ತಳವಾರರ ಹಕ್ಕು.

ಈ ಎಲ್ಲಾ ಸಂಪ್ರದಾಯಗಳನ್ನು ಆಚರಣೆಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಜೈನಧರ್ಮದಲ್ಲಿ ಬಸದಿಗಳನ್ನು ಕಾಯುವ ಕಾಪಾಡುವ ಕೆಲಸವನ್ನು ಬ್ರಹ್ಮ ಯಕ್ಷನಿಗೆ ವಹಿಸಿದ ರೀತಿಯಲ್ಲಿಯೇ ಕೆರೆಗಳನ್ನು ಕಾಯುವ ಮತ್ತು ಕಾಪಾಡುವ ಕೆಲಸದೊಂದಿಗೆ ಊರಿನ ರಕ್ಷಣೆಗೆ ಕೂಡ ಬ್ರಹ್ಮನನ್ನು ಕರುವುಗಲ್ಲು ರೂಪದಲ್ಲಿ ಬಳಸಿಕೊಳ್ಳಲಾಗಿದೆ.

ಕರ್ನಾಟಕದಲ್ಲಿ ಪ್ರಾಚೀನ ಕಾಲದಿಂದಲೂ ಬೇಡ ಜನಾಂಗದ ಜನರನ್ನು ಊರಿನ ರಕ್ಷಾಪಾಲಕರನ್ನಾಗಿ ನೇಮಿಸುತ್ತಿದ್ದುದ್ದು ತಿಳಿದಿರುವ ವಿಷಯ. ಈ ರಕ್ಷಾಪಾಲಕರು ಇತ್ತೀಚಿನ ಗ್ರಾಮ ಆಡಳಿತದಲ್ಲಿ ತಳವಾರ ಎಂಬ ಹೆಸರಿನಿಂದ ಗುರುತಿಸಲಾಗಿದೆ. ತಳವಾರ ಎಂದರೇ ಬಹುಶಃ ಕತ್ತಿ ಹಿಡಿದು ಊರಿನ ರಕ್ಷಣೆ ಮಾಡುವವನು. ಊರಿನಲ್ಲಿ ಕಳ್ಳತನ ಮತ್ತು ಸಾಮಾಜಿಕ ವ್ಯವಸ್ಥೆಗೆ ಭಂಗ ತರುವ ವ್ಯಕ್ತಿಗಳನ್ನು ಗುರುತಿಸಿ ಶಿಕ್ಷಿಸಲು ನೆರವಾಗುವುದು ತಳವಾರನ ಕರ್ತವ್ಯ ಇತ್ತೀಚಿನ ಊರುಗಳ ಆಡಳಿತ ಪಟೇಲ, ಪೊಲೀಸ್ ಪಟೇಲ ಎಂಬ ಅಧಿಕಾರಿ ವರ್ಗ ಅಸ್ತಿತ್ವಕ್ಕೆ ಬಂದ ನಂತರ ತಳವಾರ ಪೊಲೀಸ್ ಪಟೇಲನಿಗೆ ಸಹಾಯಕನಾಗಿ ಗ್ರಾಮ ನೆಮ್ಮದಿಯನ್ನು ಕಾಪಾಡುವ ಕಾರ್ಯದಲ್ಲಿ ನೆರವಾಗುತ್ತಾನೆ. ಇಂದಿನ ಆಡಳಿತ ವ್ಯವಸ್ಥೆಯನ್ನು ಹಿಂದಿನ ಕಾಲಕ್ಕೆ ಅನ್ವಯಿಸಿದರೆ ರಾಜ್ಯಾಧ್ಯಕ್ಷ ಹೆಗ್ಗಡೆ ಒಂದು ತಾಲ್ಲೂಕಿನ ಮುಖ್ಯಸ್ಥನಾಗಿದ್ದು ತಹಶೀಲ್ದಾರನ ಕರ್ತವ್ಯವನ್ನು, ಹೆಗ್ಗಡೆ ಪೊಲೀಸ್ ಇನ್‌ಸ್ಪೆಕ್ಟರ್ ಕೆಲಸವನ್ನು ತಳವಾರ ದಫೇದಾರನ ಕೆಲಸವನ್ನು ನಿರ್ವಹಿಸುತ್ತಿದ್ದಿರಬಹುದೆಂದು ಊಹಿಸಬಹುದು. ಹಿಂದಿನ ಆಡಳಿತ ವ್ಯವಸ್ಥೆಯಲ್ಲಿ ಊರಿನ ರಕ್ಷಣೆ ಭಾರವನ್ನು ಹೊತ್ತಿದ್ದ ಹೆಗ್ಗಡೆ ಮತ್ತು ರಕ್ಷಾಪಾಲರಿಗೆ ಬ್ರಹ್ಮದೇವನು ಆರಾಧ್ಯದೈವ ಇಂದೂ ಕೂಡ ಪಟೇಲ, ಊರಗೌಡ, ತಳವಾರರು ಬ್ರಹ್ಮದೇವನನ್ನು ಪೂಜಿಸುವ, ಎಡೆ ಇಡುವ ಕಾರ್ಯವನ್ನು ವರ್ಷಕ್ಕೊಮ್ಮೆ ಮಾಡುತ್ತಾರೆ. ತಳವಾರನು ಬ್ರಹ್ಮದೇವರ ಸಂಪೂರ್ಣ ಜವಾಬ್ದಾರಿಯನ್ನು ನಿರ್ವಹಿಸುವುದಲ್ಲದೆ ಆ ಕಾರ್ಯಕ್ಕಾಗಿ ಸಿಕ್ಕುವ ಸೌಲಭ್ಯಗಳಾದ ತಳವಾರಿಕೆ ಆಯ ಮತ್ತು ತಳವಾರಿಕೆ ಹೊಲದ ಉತ್ಪನ್ನಗಳನ್ನು ಅನುಭವಿಸುತ್ತಾನೆ. ಈ ಹಿನ್ನೆಲೆಯಲ್ಲಿಯೇ ಅರಸೀಕೆರೆಯ ರಕ್ಷಾಪಾಲಕನಾದ ಕಲ್ಲಯ್ಯ ನಾಯಕರು ತನ್ನ ಆಯಾವನ್ನು ಬ್ರಹ್ಮದೇವರ ಪೂಜೆಗೆ ಕೊಡುಗೆಯಾಗಿ ಕೊಟ್ಟಿರುವುದು ಈ ಹಿಂದೆಯೇ ಉಲ್ಲೇಖಿಸಿರುವ ಶಾಸನದಿಂದ ತಿಳಿದುಬರುವುದು.

ಹೀಗೆ ಜೈನಧರ್ಮದಿಂದ ಪ್ರಾರಂಭವಾದ ಯಕ್ಷ ಬ್ರಹ್ಮನ ಪೂಜೆ ಪೌರಾಣಿಕ ಕಟ್ಟಲೆಗಳನ್ನು ಕಳಚಿಕೊಂಡು ಪ್ರತಿ ಗ್ರಾಮಗಳಲ್ಲಿಯೂ ಅಸ್ತಿತ್ವದಲ್ಲಿದೆ. ಶಿವಪುರಾಣದಲ್ಲಿ ಹೇಳಿರುವಂತೆ ಶಿವ ನೀಡಿದ ಶಾಪವನ್ನು ಶಿವನ ಪೂಜಕರು ಮುಂತಾಗಿ ಅಸ್ತಿತ್ವದಲ್ಲಿದೆ. ಶಿವಪುರಾಣದಲ್ಲಿ ಹೇಳಿರುವಂತೆ ಶಿವ ನೀಡಿದ ಶಾಪವನ್ನು ಶಿವನ ಪೂಜಕರು ಮುಂತಾಗಿ ಎಲ್ಲರೂ ಉಲ್ಲಂಘಿಸಿ, ಬ್ರಹ್ಮನ ಆರಾಧನೆಯನ್ನು ಇಂದು ಕೂಡ ನಡೆಸಿಕೊಂಡು ಬರುತ್ತಿರುವುದು ಪರಂಪರೆಗಳು, ಸಂಪ್ರದಾಯಗಳು ಜನರ ಜೀವನ ವಿಧಾನದಲ್ಲಿ ಸಾಂಸ್ಕೃತಿಕ ಕಟ್ಟುಪಾಡುಗಳನ್ನು ಮೀರಿ ಮುಂದುವರೆಯುತ್ತಿರುವುದು ಕಂಡುಬರುತ್ತದೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. **'ಎಪಿಗ್ರಾಫಿಯ ಕರ್ನಾಟಿಕ'**-೧೦ (ಪರಿ), ಅರಸೀಕೆರೆ ೩೯.

೨. ಪ್ರೊ. ಜಿ. ಬ್ರಹ್ಮಪ್ಪ ನಿವೃತ್ತ ಕನ್ನಡ ಪ್ರಾಧ್ಯಾಪಕರು ಮೈಸೂರು, ಇವರಿಂದ ತಿಳಿದುಬಂದದ್ದು.

೩. **ಕರ್ನಾಟಕ ಗ್ರಾಮ ಸೂಚಿ** ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಪ್ರಕಟಣೆ, ಬೆಂಗಳೂರು.

೪. ಶ್ರವಣಬೆಳಗೊಳ ಪರಿಸರದ ಜೈನ ವಾಸ್ತು ಕಲೆ, ಡಾ. ಅಪ್ಪಣ್ಣ ಎನ್. ಹಂಜೆ ಅವರ ಲೇಖನ, **ಹಾಸನ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ತ್ವ**

೫. ಹಾಸನ ಜಿಲ್ಲೆಯ ಸ್ಮಾರಕ ಕಲ್ಲುಗಳು, ಡಾ. ಆರ್.ಎಂ. ಷಡಕ್ಷರಯ್ಯ ಅವರ ಲೇಖನ **ಹಾಸನ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ತ್ವ**

೬. ಅರಸೀಕೆರೆ ತಾಲ್ಲೂಕಿನ ಕೋಳುಗುಂದ ಗ್ರಾಮ ಮತ್ತು ಅಕ್ಕಪಕ್ಕ ಗ್ರಾಮಗಳ ಕೆರೆ ಏರಿ ಮೇಲೆ ಇರುವ ಬ್ರಹ್ಮದೇವರ ದೇವಾಲಯದ ವಿಗ್ರಹಗಳ ಬಗ್ಗೆ ಮಾಹಿತಿ ನೀಡಿದವರು. ಶ್ರೀ ಕೆ.ಎನ್. ರುದ್ರಪ್ಪನವರು ನಿವೃತ್ತ ರೆವಿನ್ಯೂ ಅಧಿಕಾರಿಗಳು, ಅರಸೀಕೆರೆ.

೭. **ಶ್ರವಣಬೆಳಗೊಳ ಸಚಿತ್ರ ಸಂಪುಟ**, ಡಾ. ಷ. ಶೆಟ್ಟರ್.

೮. ಈ ಅಂಶವನ್ನು ನನ್ನ ಗಮನಕ್ಕೆ ತಂದು ವಿವರಿಸಿದವರು ಪ್ರೊ. ಹೆಚ್.ಡಿ. ತಿಮ್ಮಪ್ಪ ನಿವೃತ್ತ ಇತಿಹಾಸ ಪ್ರಾಧ್ಯಾಪಕರು, ಲಕ್ಷ್ಮೀಪುರ, ಅರಸೀಕೆರೆ.

೬೧

ಕೆರೆಗೆ ಹಾರವಾದ ಬಿಜ್ಜಮ್ಮ : ಚಾರಿತ್ರಿಕ ವಿಶ್ಲೇಷಣೆ

ಡಾ. ಅಮರೇಶ ಯತಗಲ್*

ರಾಯಚೂರು ಜಿಲ್ಲೆಯ ಲಿಂಗಸೂಗೂರು ತಾಲ್ಲೂಕಿನ ಕರಡಿಕಲ್ಲು 'ಎಡೆದೊರೆ[೧] ನಾಡು'-೨೦೦೦ ಪ್ರದೇಶದಲ್ಲಿ ಕರಡಿಕಲ್ಲು-೪೦೦ ಎಂದು ಹೆಸರಾಗಿತ್ತು. ಈ ಪ್ರದೇಶದಲ್ಲಿ ಕಲ್ಯಾಣ ಚಾಳುಕ್ಯರ ಮಾಂಡಳಿಕರಾಗಿ ಆಳ್ವಿಕೆ ಮಾಡಿದವರು ದೇವಗಿರಿಯ ಯಾದವರು (ಸೇವುಣರು). ನಂತರದಲ್ಲಿ ಸೇವುಣರು ಸ್ವತಂತ್ರವಾಗಿ ರಾಜ್ಯಭಾರ ಮಾಡಿದರು. ಈ ಮನೆತನದ ಮುಮ್ಮಡಿ ಭಿಲ್ಲಮ (ಕ್ರಿ.ಶ. ೧೦೨೫-೧೦೫೫) ನ ಅಧಿಕಾರಾವಧಿಯಲ್ಲಿ ಬಿಜ್ಜಮ್ಮ ಎಂಬ ದಲಿತ ಮಹಿಳೆಯನ್ನು ಕೆರೆಗೆ ಹಾರ ಕೊಡಲಾಯಿತು. ಆಕೆಯ ಕುರಿತಾಗಿ ಬೆಳಕು ಚೆಲ್ಲುವ ಸಂಶೋಧನ ಪ್ರಬಂಧ ಇದಾಗಿದೆ.

೧೯೯೯ ರ ಫೆಬ್ರುವರಿ ೭, ೮ ರಂದು ಲಿಂಗಸೂಗೂರಿನಲ್ಲಿ ನಡೆದ ರಾಯಚೂರು ಜಿಲ್ಲಾ ೫ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದ ಡಾ. ಬಸವಲಿಂಗ ಸೊಪ್ಪಿಮಠರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ "ಕರಡಿಕಲ್ಲಿನ ಕೆರೆಗೆ ಹಾರವಾದ ಬಿಜ್ಜಮ್ಮನ ಕುರಿತಾಗಿ ಹಾಡುವ ಮಹಿಳೆಯರಿದ್ದಾರೆ. ಆ ಹಾಡುಗಳನ್ನು ಸಂಗ್ರಹಿಸಿ ಬಿಜ್ಜಮ್ಮನ ಚರಿತ್ರೆಯನ್ನು ಕಟ್ಟಿಕೊಡುವ ಅವಶ್ಯಕತೆ ಇದೆ" ಎಂದು ಹೇಳಿದ್ದುದು ಈ ಸಂಶೋಧನೆಗೆ ಪ್ರೇರಣೆಯಾಯಿತು.


ಕರಡಿಕಲ್ಲಿನ ಕುರಿತಾದ ಕೆಲವು ಕೃತಿ ಹಾಗೂ ಬಿಡಿ ಲೇಖನಗಳು ಬಿಜ್ಜಮ್ಮ ಕೆರೆಗೆ ಹಾರವಾದ ಸಂಗತಿಯನ್ನು ಉಲ್ಲೇಖಿಸುತ್ತವೆ. ಅವುಗಳಲ್ಲಿ ಚಂದ್ರಶೇಖರ ಶಾಸ್ತ್ರಿಗಳು ಬರೆದ 'ಭಿಲ್ಲಮರಾಜನ ಪುರಾಣ'ವು (೧೯೫೯) ಕೆರೆಗೆ ಹಾರ ಕೊಡಲಿಲ್ಲ, ಕೆರೆಗೆ ಹಾರ ಕೊಡುವುದನ್ನು ಭಿಲ್ಲಮನ ಗುರು ಶಿವಜಾತ ಒಡೆಯರು ೧೦ ಸಾವಿರ ಜಂಗಮರಿಗೆ ಪ್ರಸಾದ ನೀಡಲು ಹೇಳಿ ಕೆರೆಗೆ ಹಾರವನ್ನು ತಪ್ಪಿಸಿದರು ಎಂಬ ಅಂಶವಿದೆ. 'ಕರಡಿಕಲ್ಲು ಭಿಲ್ಲಮರಾಯ-ಶಿವಜಾತ ಒಡೆಯರು', ಡಾ. ಬಸವಲಿಂಗ ಸೊಪ್ಪಿಮಠ[೨] ಅವರ ಲೇಖನದಲ್ಲಿ ಬಿಜ್ಜಮ್ಮ ಕೆರೆಗೆ ಹಾರವಾದ ಪ್ರಸ್ತಾಪ ಬರುತ್ತದೆ. ಶಿವಶರಣಯ್ಯ ಸೊಪ್ಪಿಮಠ ಅವರ 'ಗುರುಭಕ್ತ ಭಿಲ್ಲಮ'[೩] ಎಂಬ ಲೇಖನದಲ್ಲಿಯೂ ಈ ಕುರಿತಾದ ಪ್ರಸ್ತಾಪ ಇದೆ. ಈ ಎಲ್ಲಾ ಅಂಶಗಳನ್ನು ಗಮನಿಸಿ ಕರಡಿಕಲ್ಲು ಹಾಗೂ ಸುತ್ತಲಿನ ಕೆಲವು ಹಳ್ಳಿಗಳಿಗೆ ಕ್ಷೇತ್ರಕಾರ್ಯವನ್ನು ಕೈಗೊಂಡಾಗ ಮೌಖಿಕವಾದ ಮಾಹಿತಿಯು ಲಭ್ಯವಾಯಿತು. ಬಿಜ್ಜಮ್ಮನ ಕುರಿತಾದ ಹಾಡುಗಳನ್ನು ಹಾಡುವ ಹಡಪದ ಸಾವಂತ್ರಮ್ಮ[೪], ತಳವಾರ ದುರಗಮ್ಮ[೫], ತಳವಾರ ರುದ್ರಮ್ಮ[೬] ಹಾಗೂ ಎಂ.ಆರ್. ಪಾಟೀಲ್[೭] ಮತ್ತು ಈ ಹಾಡಿನಲ್ಲಿ ಬರುವ ಕಬ್ಬೇರ ಹನುಮಣ್ಣ, ತಳವಾರ ರುದ್ರಣ್ಣ, ದಂಡಿನ ಸಂಗಣ್ಣ, ಗೋಸಲೆ ಕೆಂಚಣ್ಣ, ಕಬ್ಬೇರ ಗ್ಯಾನಣ್ಣ ಇವರ ಮನೆತನದ ವಂಶಜರು ಇಂದಿಗೂ ಕರಡಿಕಲ್ಲಿನಲ್ಲಿ ವಾಸವಾಗಿದ್ದಾರೆ. ಕೆಲವು ಐತಿಹ್ಯಗಳು ಬಿಜ್ಜಮ್ಮ ಕರಡಿಕಲ್ಲು ಕೆರೆಗೆ ಹಾರವಾದದ್ದು ಸತ್ಯವೆಂಬುದನ್ನು ಸಾರಿ ಹೇಳುತ್ತವೆ.


ಕರಡಿಕಲ್ಲು ಕೆರೆ, ಕೆರೆಯಲ್ಲಿಯ ಬಿಜ್ಜಮ್ಮನ ಸಮಾಧಿ, ಬಿಜ್ಜಮ್ಮನ ಸೆರೆಮನೆ (ಬಿಜ್ಜಮ್ಮನನ್ನು ಕೆರೆಗೆ ಹಾರ ಕೊಡುವಾಗ ಒಳಗೆ ಕಳುಹಿಸಿದ ಬಾಗಿಲು) ನಾಗರಕಟ್ಟೆ (ಬಿಜ್ಜಮ್ಮನನ್ನು ಕೂಡಿಸಿ ಜನರು ಪೂಜೆಗೈದ ಸ್ಥಳ) ಗಚ್ಚಿನಮಠ (ಕರಡಿಕಲ್ಲಿನ ಗಚ್ಚಿನಮಠದ ಸ್ವಾಮಿಗಳ ಸಮ್ಮುಖದಲ್ಲಿ ಪೂಜೆ ನಡೆದಿತ್ತು) ಈ ಸ್ಮಾರಕಗಳು ಬಿಜ್ಜಮ್ಮ ಕೆರೆಗೆ ಹಾರವಾದುದಕ್ಕೆ ಪ್ರಮುಖ ಆಕರಗಳಾಗಿವೆ.

ಕರ್ನಾಟಕದಲ್ಲಿ ಕೆರೆಗೆ ಹಾರವಾದ ಘಟನೆಗಳು ಅಲ್ಲಲ್ಲಿ ಕಂಡುಬರುತ್ತವೆ. ಆದರೆ ಆ ಘಟನೆಗಳಲ್ಲಿ ವ್ಯತ್ಯಾಸಗಳನ್ನು ಗುರುತಿಸಬಹುದಾಗಿದೆ. ಕಲ್ಲನಕೇರಿ ಮಲ್ಲನಗೌಡರು ಕೆರೆಯೊಂದು ಕಟ್ಟಿಸಿದಾಗ, ಅದರಲ್ಲಿ ನೀರಿಲ್ಲದ್ದಕ್ಕಾಗಿ ಹಿರಿಸೊಸೆ ಮಲ್ಲಮ್ಮನ ಹಾರ ಕೊಡಬೇಕು ಎಂದು ಜೋಯಿಸರು ಹೇಳಿದರು. ಆದರೆ ಹಿರಿತನಕ್ಕೆ ಯಾರಿಲ್ಲ ಎಂದು ಕಿರಿಯ ಸೊಸೆ ಭಾಗೀರಥಿಯನ್ನು ಹಾರ ಕೊಟ್ಟರು.[೮]

ಕಲ್ಯಾಣದುರ್ಗ ಮಂಡಲಕ್ಕೆ ಸೇರಿ, ಕರ್ನಾಟಕ ಗಡಿರೇಖೆಗೆ ತಾಕಿರುವ 'ಎರಡು ಕೆರೆ' ಗ್ರಾಮದಲ್ಲಿ ಸುಮಾರು ೨೫೦ ವರ್ಷಗಳ ಹಿಂದೆ ನಡೆದ ಕೆರೆಗೆ ಹಾರದ ಘಟನೆಯನ್ನು ಚಿತ್ರದುರ್ಗದ ಎಸ್.ಆರ್. ಗುರುನಾಥ್ ಅವರು 'ಕೆರೆ ಏರಿಗೆ ಹಾರ' ಎಂಬ ಕೃತಿಯಲ್ಲಿ ಸೆರೆ ಹಿಡಿದ್ದಾರೆ. ಎರಡು ಕೆರೆ

* ಸಹಾಯಕ ಪ್ರಾಧ್ಯಾಪಕ, ಇತಿಹಾಸ ವಿಭಾಗ, ರಾಣಿ ಚೆನ್ನಮ್ಮ ಯೂನಿವರ್ಸಿಟಿ, ಪಿ.ಜಿ. ಸೆಂಟರ್, ತೊರವಿ, ಬಿಜಾಪುರ.











ಗ್ರಾಮದ ಮರಿಯಗೌಡರು ಕಟ್ಟಿಸಿದ ಹೊನ್ನಣಾಂಬೆ ಕೆರೆಯು ಆ ಕೆರೆ ಮರಿಯಗೌಡರ ಸೊಸೆಯನ್ನು ಹಾರವಾಗಿ ಕೇಳಿದಾಗ, ಮನೆಯ ಆಳು ದಾಸಪ್ಪನ ಸೊಸೆ ಬಂದಮ್ಮನನ್ನು ಕೆರೆಗೆ ಹಾರ ನೀಡಿದರು. ಆದರೆ ಕರಡಿಕಲ್ಲಿನ ಕೆರೆಗೆ ಹಾರವಾದ ಬಿಜ್ಜಮ್ಮನ ಚರಿತ್ರೆಯನ್ನು ಜನಪದ ಸಾಹಿತ್ಯ ಮೇಲಿನ ಈ ಎರಡೂ ಘಟನೆಗಳಿಗಿಂತ ವಿಭಿನ್ನ ರೀತಿಯಲ್ಲಿ ಕೆರೆಗೆ ಹಾರವಾದ ಸಂಗತಿಯನ್ನು ಅರಹುತ್ತದೆ.

ಬಿಜ್ಜಮ್ಮ ಕರಡಿಕಲ್ಲು ಕೆರೆಗೆ ಹಾರವಾದದ್ದು ಸತ್ಯವೆಂಬುದನ್ನು ಜನಪದ ಸಾಹಿತ್ಯ ಸಾರಿ ಹೇಳುತ್ತದೆ. ಆದರೆ ಭಿಲ್ಲಮರಾಜನ ಪುರಾಣವು ಅದನ್ನು ತಿರುಚಿ ಬಲಿ ತಪ್ಪಿಸಿದಂತೆ ಚಿತ್ರಿಸುತ್ತದೆ. ಆ ಮೂಲಕ ಭಿಲ್ಲಮನಿಗೂ ಆತನ ಗುರುಗಳಾದ ಶಿವಜಾತ ಒಡೆಯರಿಗೂ ಕುಂದುಂಟಾಗದಂತೆ ನೋಡಿಕೊಂಡಿದೆ. ಆದರೆ ಜನಪದ ಸಾಹಿತ್ಯ ಬೇರೆ ರೀತಿಯಾದ ವಿವರಣೆಯನ್ನು ನೀಡುತ್ತದೆ. 'ಕೇರಿ ನೋಡಿ ನಿನ್ನ ನೆನಪಾತ' ಎಂಬ ಸಾಲು ಜನಪದರ ಹಾಡಿನ ಪಲ್ಲವಿಯಲ್ಲಿ ಬರುವ ಒಂದು ಸಾಲು ಕೇರಿ ನೋಡಿ ನೆನಪಾಗ ಬೇಕಾದರೆ ಜನಪದ ಕವಿ ಬಿಜ್ಜಮ್ಮ ಕೆರೆಗೆ ಹಾರವಾದುದನ್ನು ಕಣ್ಣಾರೆ ಕಂಡವನೇ ಆಗಿರಬೇಕು. 'ಮುತ್ತಿನಂತಾಕಿ ನಿನ್ನ ಮರೆತಿಲ್ಲ ನಾವು ಯಾರ‍್ಯಾರ' ಎಂಬ ಸಾಲುಗಳು ಇದೇ ಧ್ವನಿಯನ್ನು ಹೊಂದಿವೆ.

'ಕೇರ‍್ಯಾಗ ಹುಟ್ಟಿದ್ದಿ ಬ್ಯಾಗರ ಮನಿಯಾಗ' ಎಂಬ ತ್ರಿಪದಿಯು ಬಿಜ್ಜಮ್ಮ ದಲಿತಳೆಂಬುದನ್ನು ಸ್ಪಷ್ಟಪಡಿಸುತ್ತದೆ. ಪುರಾಣದಲ್ಲಿ ಪುರಾಣಕರ್ತೃ ಕೂಡ ಇದನ್ನೇ ಹೇಳುತ್ತಾನೆ. ಬಿಜ್ಜಮ್ಮ ಅಂತ್ಯಜ ಪುತ್ರಿ ಎಂದು ಪುರಾಣದಲ್ಲಿ ಉಲ್ಲೇಖವಿದೆ. ಬಿಜ್ಜಮ್ಮ ಸಾಗರದಂತಹ ದೊಡ್ಡ ಹೆಸರನ್ನು ಪಡೆದು ಊರಿಗೂ ಹೆಸರು ತಂದಳೆಂದು ಜನಪದ ಕವಿ ವರ್ಣಿಸುವಲ್ಲಿಯೂ

ಲೋಕವಿದೆ. 'ಕಂಚನ ಮಗಳಿಗೆ ಸಂಚನ್ನು ಮಾಡ್ಯಾರ' ಎಂಬ ತ್ರಿಪದಿಯಲ್ಲಿ ಆಕೆಯ ತಂದೆಯ ಹೆಸರು. ಆಕೆ ಸಂಚಿಗೆ ಬಲಿಯಾದದ್ದು, ಅದನ್ನರಿಯದ ಅಮಾಯಕ ಬಿಜ್ಜಮ್ಮನ ಮುಗ್ಧತೆ ಚಿತ್ರಣಗೊಂಡಿವೆ. 'ಕಿಂಚಿತ್ತು ನಿನಮ್ಯಾಗ ದಯವಿಲ್ಲ' ಎನ್ನುವಲ್ಲಿ ಸಂಚು ರೂಪಿಸಿದವರ ನಿರ್ದಯೆಯನ್ನು ಮನಗಾಣುತ್ತೇವೆ. ಈ ಸಂಚನ್ನು ರೂಪಿಸುವಲ್ಲಿ ಸವತಿ ಮತ್ತು ಅತ್ತೆಯು (ಹೆಸರಿಲ್ಲ) ಕಾರಣರೆಂದು ಮುಂದಿನ ಪದ್ಯಗಳಿಂದ ತಿಳಿಯುತ್ತದೆ. ಅದಕ್ಕಿಂತ ಮುನ್ನ ಕರಡಿಕಲ್ಲು ಕೆರೆಯನ್ನು ಕಟ್ಟಿಸಿದ ಭಿಲ್ಲಮನ ಜನಪರ ಕಾರ್ಯ, ಅದು ವಿಫಲವಾದ ಬಗೆ, ಜನರ ಕಷ್ಟ, ದನಗಳ ಗೋಳು, ಚಿಂತಿತನಾದ ಭಿಲ್ಲಮನ ನಿದ್ರಾರಹಿತ ದಿನಗಳು ಮೊದಲಾದ ವಿಚಾರಗಳು ಹಾಡಿನ ರೂಪ ಪಡೆದಿವೆ. ಸಿಟ್ಟಿನ ಸ್ವಭಾವ (ಅಸೂಯೆ) ದ ಸವತಿಯು ಸೆಟಮುರ್ಗಿ ಮಾಡುವುದು, ಬಿಜ್ಜಮ್ಮನ ಕುರಿತಾಗಿ ಆಕೆಗಿದ್ದ ಅಸಹನೆಯನ್ನು ಆಕೆಯ ಸಾವಿನಲ್ಲಿ ಆನಂದ ಕಾಣುವ ವಿಕೃತ ಬಯಕೆಯನ್ನು ಕಾಣುತ್ತೇವೆ. ಏರಿ ನಿಲ್ಲದ ಕೆರೆಗೆ ಗರ್ಭಿಣಿ ಸ್ತ್ರೀಯನ್ನು ಬಲಿಕೊಡುವುದೇ ಪರಿಹಾರ ಎಂಬ ಗುಲ್ಲನ್ನು ಮನೆಯವರೇ (ಅತ್ತೆ, ಸವತಿ) ಹಬ್ಬಿಸಿದರೆಂದು ತೋರುತ್ತದೆ.

> **ಭಿಲ್ಲಮ ರಾಜಾಗ ಗುಲ್ಲೊಂದ ಕೇಳಲಿ**
> **ಸೊಲ್ಲಡಗಿ ಹೋಗಲಿ ಸದ್ದಿಲ್ದ । ಬಿಜ್ಜಮ್ಮ**
> **ಕಲ್ಲಾಗಿ ಕೂಡಲಿ ಕೆರಿಯಾಗ॥**

ಎಂಬ ಹಾಡಿನಲ್ಲಿ 'ಗುಲ್ಲು ಹಬ್ಬಿಸಿದವರು ಯಾರು?' ಎಂಬ ಪ್ರಶ್ನೆಗೆ ಉತ್ತರ 'ಬಿಜ್ಜಮ್ಮ ಕಲ್ಲಾಗಿ ಕೂಡಲಿ ಕೆರೆಯಾಗ' ಎಂದು ತೀವ್ರ ಆಶಿಸುವ ಆಕೆಯನ್ನು, ಕಂಡರಾಗದ ಸವತಿ, ಅತ್ತೆಯರದೇ ಆಗಿತ್ತು ಎಂದು ತೀರ್ಮಾನಿಸಿದರೆ ತಪ್ಪಾಗದು. ಸವತಿಯ ಒತ್ತಡಕ್ಕೆ ಬಿಜ್ಜಮ್ಮನನ್ನು ಬಲಿಕೊಡಬೇಕಾಯಿತೆಂಬುದನ್ನು ಪುರಾಣಗಳು ತಿರುಚಿದ್ದರೂ ಉಪ್ಪು, ಖಾರ, ಮಸಾಲೆ ಹಚ್ಚಿದ್ದರೂ ಸವತಿಯ ಸೇಡನ್ನು ಪರೋಕ್ಷವಾಗಿ ಒಪ್ಪಿಕೊಂಡಿವೆ. ಅಲ್ಲಿ ಆಕೆ ಬ್ರಹ್ಮಪಿಶಾಚಿಯಾಗಿ ಕೆರೆಯ ಏರಿಯನ್ನು ಒಡೆಯುತ್ತಾ ಹೋಗುತ್ತಾಳೆ. ಭಿಲ್ಲಮನ ಕನಸಲ್ಲಿ ಒಂಬತ್ತು ತಿಂಗಳ ಗರ್ಭಿಣಿ ಬಿಜ್ಜಮ್ಮನನ್ನು ಬಲಿಕೊಟ್ಟರೆ ಬಿಡುವೆನೆಂದು ಹೇಳುತ್ತಾಳೆ. ಸವತಿಯ ಸೇಡು ಜನಪದ ಮತ್ತು ಶಿಷ್ಟ ಸಾಹಿತ್ಯದಲ್ಲಿ ಉಲ್ಲೇಖಗೊಂಡಿರುವುದು ಗಮನಾರ್ಹ. ಶಾಸನಗಳಲ್ಲಿ ಉಲ್ಲೇಖಗೊಳ್ಳದಿರುವುದು ಆಶ್ಚರ್ಯವೇನಲ್ಲ. ಏಕೆಂದರೆ ಇಂಥ ಸಂಗತಿಗಳನ್ನು ಶಾಸನಗಳಲ್ಲಿ ಬರೆಸುವ ಪದ್ಧತಿ ರಾಜರದಾಗಿರಲಿಲ್ಲ.

ಭಿಲ್ಲಮನ ಮನಸ್ಸು ಬಿಜ್ಜಮ್ಮನನ್ನು ಬಲಿಕೊಡಲು ಒಪ್ಪಿರಲಿಲ್ಲವೇನೋ. ಆದರೆ ಗಟ್ಟಿ ಮನಸ್ಸು ಅಳುಕಿತು. ಜನಪದ ಕವಿ ಕೇಳುತ್ತಾನೆ:

> **ಗುಲ್ಲೋಗಿ ಬಡೆದಾಗ ಮೆಲ್ಲಗ ಎದ್ದಾನ**
> **ಕಲ್ಲಂಥ ಮನಸು ಜಲ್ಲಂತ। ಬಿಜ್ಜಮ್ಮ**
> **ಉಲ್ಲಾಸವಿಲ್ಲ ಮನಸಿಗೆ॥**

ಎಂಬಲ್ಲಿ ಭಿಲ್ಲಮನ ಮನಸ್ಸಿನ ಹೊಯ್ದಾಟ ಯಾರಿಗಾದರೂ ತಿಳಿಯುವಂತಿದೆ. ಆದರೆ ತಾನು ಕಟ್ಟಿಸಿದ ಬೃಹತ್ ಕೆರೆ ವ್ಯರ್ಥವಾಗಬಾರದು. ಊರ ಜನರಿಗೆ ದನಕರುಗಳಿಗೆ ಅದು ಸದಾ ಸದುಪಯೋಗವಾಗಲು ಸಿದ್ಧವಾಗಬೇಕಿದೆ. ಅದಕ್ಕೆ ಒಂದು ಜೀವ ಬಲಿಯಾದರೂ ಚಿಂತೆಯಿಲ್ಲ ಎಂಬ ತೀರ್ಮಾನಕ್ಕೆ ಬಂದನೇನೋ. ಭಿಲ್ಲಮ ಜನರ ಒತ್ತಡಕ್ಕೋ, ಮೂಢನಂಬಿಕೆಗೆ ಬೆಲೆ ಕೊಟ್ಟೋ ಬಿಜ್ಜಮ್ಮನನ್ನು ಕೆರೆಗೆ ಹಾರವಾಗಿಸಲು ಹಸಿರು ನಿಶಾನೆ ತೋರಿಸಿದನೆನಿಸುತ್ತದೆ. ಮುಂದಿನ ಪದ್ಯ ಹೀಗಿದೆ:

> **ಭಿಲ್ಲಮನ ಮನಸಂತು ನಿಲ್ಲದು ಎಳ್ಳಷ್ಟು**
> **ಕಲ್ಯಾಣದ ಕೆಲಸ ನಡೀಬೇಕು। ಬಿಜ್ಜಮ್ಮ**
> **ಕಲ್ಲು ಕತೆಯೊಂದು ಹೇಳಬೇಕು॥**

ಎನ್ನುವಲ್ಲಿ ಬಿಜ್ಜಮ್ಮನ ಬಲಿಕೊಡಲು ಭಿಲ್ಲಮನ ಮನಸ್ಸು ನಿಧಾನವಾಗಿ ಹೇಗೆ ವಾಲಿತು, ಏನು ಸಮರ್ಥನೆಕೊಟ್ಟು ಕೊಂಡಿತೆಂಬುದನ್ನು ಮನಗಾಣಬಹುದು. ಇಷ್ಟಾದರೂ ಭಿಲ್ಲಮನು ತಾನೊಬ್ಬನೇ ಈ ತೀರ್ಮಾನವನ್ನು ಮಾಡಲಿಲ್ಲ. ಇಲ್ಲಿಯೂ ರಾಜಕೀಯ ಮುತ್ಸದ್ಧಿತನವಿದೆ.

> **ಉತ್ತಮರೊಡಗೂಡಿ ಹೊತ್ತೀಗಿ ತೆಗಿಸ್ಯಾರ**
> **ಒಂಬತ್ತರ ಗರ್ಭಿಣಿ ಬೇಕಂತ। ಬಿಜ್ಜಮ್ಮ**
> **ತುಂಬ್ಯಾವ ನವಮಾಸ ಪಂಚಮಿಗೆ॥**

ಹೊತ್ತಿಗೆ ತೆಗೆಸುವುದು ಎಂದರೆ ಪಂಚಾಗವನ್ನು ನೋಡುವುದು ಎಂಬ ಅಂದರೆ ಜ್ಯೋತಿಷ್ಯದ ಮೊರೆ ಹೋದರೆಂಬ ಸಂಗತಿಯನ್ನು ನಮಗೆ ತಿಳಿಸುವ ಕವಿ 'ಒಂಬತ್ತು ತಿಂಗಳು ತುಂಬಿದ ಗರ್ಭಿಣಿ' ಬೇಕು ಎಂಬ ತಥಾ ಕಥಿತ ಪರಿಹಾರವೇ ಹೊರಟಿತು ಎಂಬುದನ್ನು ತಿಳಿಸುತ್ತಾನೆ. ಅದಕ್ಕೆ ಬಲಿಯಾಗಬೇಕಾದದ್ದು ಮಾತ್ರ ಸಂಚಿನ ಬಲೆಯಲ್ಲಿ ಬಿದ್ದ ಅಮಾಯಕ ಬಿಜ್ಜಮ್ಮ. ಅದನ್ನು ಆಗುಮಾಡುವಲ್ಲಿ ಅತ್ತೆ ಸವತಿಯರು ಹೇಗೆ ಉತ್ಸುಕರಾಗಿದ್ದರೆಂದರೆ 'ನಿನ್ನ ಕಳಿವಿ ಕಡಬ ಉಣಬೇಕು' ಎಂದು ಅವರು ಬಯಸಿರುವುದಾಗಿ ಕವಿ ಹೇಳುತ್ತಾನೆ.

ಭಿಲ್ಲಮ ಕರಡಿಕಲ್ಲು ಪಟ್ಟಣದಲ್ಲಿ ಡಂಗುರ ಸಾರಿದನು. ಬಂಗಾರ ಮೊದಲಾದ ಸಂಪತ್ತನ್ನು ಕೊಡಲು ಸಿದ್ಧನಾದನು.

> **ರಂಬೇರುಬಂದಾರ ಬಂಗಾರ ಕೊಡತಿನಿ**
> **ಡಂಗುರ ಸಾರ್‍ಯಾನ ಕೇರ್‍ಯಾಗ। ಬಿಜ್ಜಮ್ಮ**
> **ಅಂಗಳದ ಹೊರಗ ಬರಬ್ಯಾಡ**

ಇಲ್ಲಿ ಕೇರಿಯಲ್ಲಿ ಕೂಡ ಡಂಗುರ ಸಾರಿದ್ದು, ಬಿಜ್ಜಮ್ಮ ಅಂಗಳದ ಹೊರಗೆ ಬಂದು ಜನರಿಗೆ ಕಾಣದಿರಲು ಕವಿ ವಿನಂತಿಸಿಕೊಳ್ಳುತ್ತಾನೆ. ಅದು ಕವಿಮನದ ಕಳಕಳಿ ಅಷ್ಟೆ. ಬಹಳವೆಂದರೆ ಆಕೆಯ ಹಿತೈಶಿಗಳು ಹಾಗೆ ಹಾರೈಸಿದರೆಂದು ತಿಳಿಯಬಹುದು. ಕೆರೆಗೆ ಹಾರವಾಗಲು ತಾವಾಗಿಯೇ ಯಾರೂ ಮುಂದೆ ಬರಲಿಲ್ಲ. ಸಂಪತ್ತಿನ ಮೋಹ ಜೀವಕ್ಕಿಂತ ಹೆಚ್ಚಾಗಲು ಸಾಧ್ಯವಿಲ್ಲ. ಆಗ ಕಬ್ಬೇರ ಹನುಮಣ್ಣ, ತಳವಾರ ರುದ್ರಣ್ಣ, ದಂಡಿನ ಸಂಗಣ್ಣ, ಗೋಸಲೆ ಕೆಂಚಣ್ಣ ಮೊದಲಾದವರು ಗರ್ಭಿಣಿ ಸ್ತ್ರೀಯರ ಶೋಧಕ್ಕಾಗಿ ಊರು ತುಂಬಾ ಮನೆಮನೆಗೆ ಅಲೆಯುತ್ತಿದ್ದರು. 'ಬಿಜ್ಜಮ್ಮ ನಿನ ಕೂನ ಹಿಡದ ಬರತಾರ' ಎನ್ನುವ ಕವಿನುಡಿಯಲ್ಲಿ ಮತ್ತೇ ಅದೇ ಕಳಕಳಿ. ಕೂನ ಹಿಡಿಯುವುದೆಂದರೆ ತುಂಬು ಹೊಟ್ಟೆಯನ್ನು ನೋಡುವುದೆಂದೇ ಅರ್ಥ. ಬಿಜ್ಜಮ್ಮ ಅವರಿಗೆ ಪರಿಚಯವಿದ್ದಳೆಂದಲ್ಲ. ಅವರಿಗೆ ಮುಷ್ಟಿಕೊಡಲು ಸವತಿ ಮತ್ತು ಅತ್ತೆಯರು ಸಿದ್ಧರಾಗಿದ್ದರು. ಬಿಜ್ಜಮ್ಮನ ಅತ್ತೆಯ ಹತ್ತಿರ ಕಬ್ಬೇರ ಹನಮಣ್ಣ, ತಳವಾರ ರುದ್ರಣ್ಣ, ದಂಡಿನ ಸಂಗಣ್ಣ, ಗೋಸಲೆ ಕೆಂಚಣ್ಣ, ಬಂದರು. ಅವರೊಪ್ಪಿಗೆ ಸಿದ್ಧವಾಗಿತ್ತು. ಹಾಗೆ ಅತ್ತೆಯ ಒಪ್ಪಿಗೆ ಸಿಕ್ಕಾಗ ಬಿಜ್ಜಮ್ಮ ಅತ್ತೆ–ಮಾವರನ್ನು ಒಮ್ಮೆ ದಿಟ್ಟಿಸಿ ನೋಡಿದಳಂತೆ

ಅತ್ತೆ ಮಾವಗೆ ಸುತ್ತೊಮ್ಮೆ ನೋಡ್ಯಾಳ
ಕತ್ತು ತಳಗಾತ ನಿನನೋಡಿ। ಬಿಜ್ಜಮ್ಮ
ಕಾತರ್‍ಯಾತ ನಿನ ಸಾವು ಕೆರೆಯಾಗ॥

ಬಿಜ್ಜಮ್ಮನ ನೋಟಕ್ಕೆ ಅತ್ತೆ ಮಾವರ ಕತ್ತು ಕೆಳಗಾದದ್ದು ಅವರ ತಪ್ಪಿತಸ್ಥ ಭಾವನೆಯಿಂದ. ಆದರೆ ಊರ ಕಲ್ಯಾಣಕ್ಕಾಗಿ ಎಂಬ ಬಹುದೊಡ್ಡ ಸಮರ್ಥನೆ ಅವರ ಬೆನ್ನಿಗಿದ್ದಿತು. ಒಪ್ಪಿಗೆಯ ಮುದ್ರೆ ಸ್ಥಿರವಾಯಿತು.

ಬಿಜ್ಜಮ್ಮನ ಸಾವು ಕೆರೆಯಲ್ಲಿ ಎಂಬುದು ದೃಢವಾಯಿತು. ಇಲ್ಲಿ ಮಾವನ ಪ್ರಸ್ತಾಪ ಒಂದು ಬಾರಿ ಬಂದಿದೆ. ಆತನ ಪಾತ್ರವೇನು? ಅವನೂ ಬಿಜ್ಜಮ್ಮನನ್ನು ಕೆರೆಗೆ ಹಾರವಾಗಿಸಲು ಸಂಚು ರೂಪಿಸಿದ್ದನೆ? ಎಂದರೆ ಬಹುಶಃ ಇಲ್ಲವೆಂದು ತೋರುತ್ತದೆ. ಮತ್ತೇಕೆ ಇಲ್ಲಿ ಪ್ರಸ್ತಾಪ ಎಂದರೆ ಮನೆ ಹಿರಿಯನಾದ್ದರಿಂದ ಅವನ ಒಪ್ಪಿಗೆ ಪಡೆಯುವ ನಾಟಕ ಅತ್ತೆ, ಸವತಿಯರದಾಗಿರಬೇಕು. ಬಿಜ್ಜಮ್ಮನ ಮಾವ ಅಸಹಾಯಕನಾಗಿರುವ ಸಾಧ್ಯತೆ ಇಲ್ಲಿ ಹೆಚ್ಚಿದೆ.

ಅತ್ತೆ ಮನಸಿನ ಕುತ್ತೊಂದ ಹೋಗಲಿ
ಎತ್ತಲಾದರು ಒಬ್ಬ ಸಾಯಲಿ। ಬಿಜ್ಜಮ್ಮ
ನಿತ್ಯದ ನಿನ ಕದನ ನಿಲ್ಲಲಿ

ಎಂಬ ಹಾಡಿನಲ್ಲಿ ಬಿಜ್ಜಮ್ಮನ ಮನೆಯಲ್ಲಿ ನಡೆಯುತ್ತಿದ್ದ ನಿತ್ಯ ಕದನ ಅತ್ತೆಗೆ ಬಿಜ್ಜಮ್ಮ ಕುತ್ತಾಗಿ ಕಂಡಿರುವುದು, ಇಬ್ಬರಲ್ಲಿ ಒಬ್ಬರು ಸಾಯಲಿ ಎಂಬ ಭಾವನೆಯನ್ನು ಕವಿ ಹೊರಹಾಕಿರುವುದು ಇಲ್ಲಿ ಸ್ಪಷ್ಟವಿದೆ. ಈ ಕೆರೆಗೆಹಾರವಾಗುವುದನ್ನು ಧೈರ್ಯದಿಂದ ವಿರೋಧಿಸಬಹುದಾದ ಶಕ್ತಿ ಎಂದರೆ ಬಿಜ್ಜಮ್ಮನ ಗಂಡನೊಬ್ಬನೆ. ಅವನು ದಂಡಿನ ಕೆಲಸಕ್ಕೆ ಹೋದವನು ಮರಳಿ ಬಂದಿಲ್ಲ. ಅಂತಹ ಸಮಯದಲ್ಲಿ ಮನೆಯಲ್ಲಿ ಕೆಂಡ ಕಾರುತ್ತಿದ್ದಾರೆ. ಅವನಿಗೆ ಸುದ್ದಿ ಮುಟ್ಟಿಸಿರುವವರು ದಂಡಿನ ಸಂಗಣ್ಣ, ಗೋಸಲೆ ಕೆಂಚಣ್ಣ. ಅವರು ಇದ್ದ ಸುದ್ದಿ ಬಿಚ್ಚಿ ಹೇಳುವಾಗ ಗಂಡನ ಗುಂಡಿಗೆ ನೀರಾಯಿತಂತೆ. ಅವನಿಗಾದ ಆಘಾತ ಎಷ್ಟೆಂಬುದು ಈ ಕೆಳಗಿನ ಪದ್ಯದಿಂದ ತಿಳಿಯುತ್ತದೆ.

ಸುದ್ದಿಯ ತಿಳಿದಾಗ ಹೌಹಾರಿ ನಿಂತಾನ
ಮುದ್ದಿನ ಮಡದಿಯ ಕರಳು ಕತೆಯ ಬಿಜ್ಜಮ್ಮ
ಹ್ಯಾಂಗಾತ ನಿನ್ನ ಬಾಳ್ಯಾವ॥

ಹೌಹಾರಿ ದಿಕ್ಕು ತಪ್ಪಿದಂತಾಗುವ ಗಂಡ 'ಹ್ಯಾಂಗಾತ ನಿನ್ನ ಬಾಳ್ಯಾವ' ಎಂದು ಹಲುಬುತ್ತಾನೆ. ಇಲ್ಲಿ ಗಂಡ ತನ್ನ ಮುದ್ದಿನ ಮಡದಿಯ ಬಲಿಯನ್ನು ತಪ್ಪಿಸಲು ಸಾಧ್ಯವಿರಲಿಲ್ಲವೆ? ಎಂಬ ಪ್ರಶ್ನೆ ಹುಟ್ಟುತ್ತದೆ. ಅರಸೊತ್ತಿಗೆ ಮತ್ತು ಊರ ಪ್ರಮುಖರನ್ನು ಎದುರಿಸುವುದು ತೀರ ಸಾಮಾನ್ಯನಾದ ಆತನಿಗೆ ಸುಲಭವಾಗಿರಲಿಲ್ಲ. ಆದ್ದರಿಂದಲೇ 'ನಿದ್ದಿ ಬರತಿಲ್ಲ ನಿನ್ನ ಗಂಡಗ, ಬಿಜ್ಜಮ್ಮ ಒದ್ದಿಯಾಗ್ಯಾವ ಕಣ್ಣುಗಳು' ಎಂದು ಕವಿ ಆತನ ಅಸಹಾಯಕ ನೋವನ್ನು ಬಿಚ್ಚಿಡುತ್ತಾನೆ. ಗಂಡನ ಪ್ರಸ್ತಾಪ ಇಷ್ಟೇ ಜನಪದದಲ್ಲಿ ಬರುತ್ತದೆ. ಗಂಡನಿಗೆ ತನ್ನ ಹೆಂಡತಿಯ ಮೇಲೆ ಎಷ್ಟೇ ಪ್ರೀತಿ ಇದ್ದರೂ ಆಕೆಯ ಬಲಿಯಾಗುವುದನ್ನು ತಪ್ಪಿಸಲಾಗಲಿಲ್ಲ. ಅಳುವುದೊಂದೇ ಆತನಗೆ ಉಳಿದದ್ದು. ಮಾವನಂತೆ ಗಂಡನೂ ಅಸಹಾಯಕ.

ಇಲ್ಲಿಂದ ಮುಂದೆ ಬಿಜ್ಜಮ್ಮನನ್ನು ಕೆರೆಗೆ ಬಲಿ ಕೊಡುವ ಪ್ರಕ್ರಿಯೆ ಪ್ರಾರಂಭವಾಗುತ್ತದೆ.

ಪುರದ ಜನರೆಲ್ಲ ಒಗ್ಗೂಡಿ ಬಂದಾರು
ಕರಕೊಂಡು ಹೋಗತಾರ ಬಲಿಗೀಗ। ಬಿಜ್ಜಮ್ಮ
ಎರವಾತ ನನ್ನ ನಿನ್ನ ಗೆಳೆತಾನ

ಎನ್ನುವಲ್ಲಿ ಬಲಿಯಾಗುವ ಸಿದ್ಧತೆಯ ಸೂಚನೆಯಿದೆ. ಜೊತೆಗೆ ಈ ಜನಪದ ಹಾಡನ್ನು ಕಟ್ಟಿದ ಕವಿಮನಸ್ಸಿನ ವ್ಯಕ್ತಿ ಹೆಣ್ಣೆಂದು, ಆಕೆ ದೂರದವಳಾಗಿರದೆ ಆತ್ಮೀಯ ಗೆಳತಿಯಾಗಿದ್ದಳೆಂದು ಸ್ಪಷ್ಟವಾಗಿದೆ. ಬಿಜ್ಜಮ್ಮನಗೆ ಸ್ನಾನ ಮಾಡಿಸಿ, ಅರಿಶಿಣ, ಹೂ ಮುಡಿಸುತ್ತಾರೆ; ಕಳಸ ಬೆಳಗುತ್ತಾರೆ. ಕಬ್ಬೇರ ಗ್ಯಾನಣ್ಣನು ಛಿಲ್ಲಮ ದೊರೆಗೆ ಸಕಲವೂ ಸಿದ್ಧವಾದುದನ್ನು ಅರುಹಿದಾಗ ಸಜ್ಜಾಗಿ ಬರುವುದಾಗಿ ಹೇಳುತ್ತಾನೆ. ಬಿಜ್ಜಮ್ಮನ ಬಲಿದಾನಕ್ಕೆ ಎಗ್ಗಿಲ್ಲದೆ ಜನರು ನೆರೆದು ಕೂಡಿದರೆಂಬ ಮಾತಿನಲ್ಲಿ ಮೂಕಪ್ರೇಕ್ಷಕರಾಗಿ ಬಲಿಪ್ರಕ್ರಿಯೆಯಲ್ಲಿ ಭಾಗವಹಿಸಿದ ಅಪಾರ ಜನರ ಮೂಢನಂಬಿಕೆಯ ಬಗ್ಗೆ

ತಿರಸ್ಕಾರವಿದೆ. ಎಗ್ಗಿಲ್ಲದೆ ಜನರು ಕೂಡಿದರೆಂಬುದು ಬಹಳ ಜನ ಕೂಡಿದರು ಎಂದು ಮಾತ್ರ ಅರ್ಥವಾಗುವದಿಲ್ಲ. ಹಾಗೆ ಸಂಭ್ರಮಿಸಿ ಹೇಳುವ ಉದ್ದೇಶವೂ ಕವಿಮನಸ್ಸಿನ ಜನಪದ ಹೆಣ್ಣುಮಗಳಿಗಿಲ್ಲ. ಹಾಗಾಗಿ ಇಲ್ಲಿನ ತಿರಸ್ಕಾರವನ್ನು ಗಮನಿಸ ಬೇಕು. ನಂತರ ಸಕಲವಾದ ವೈಭವದ ಮೆರವಣಿಗೆಯಲ್ಲಿ ಬಿಜ್ಜಮ್ಮನನ್ನು ಕರೆದೊಯ್ಯುತ್ತಾರೆ.

ನಾಗಾರಿ ನೌಬತ್ತು ಇಂಬಿಲ್ದ ಮೊಳಗ್ಯಾವ
ಸಿಂಗಾರ ಮಾಡ್ಯಾರ ಗೌರಮ್ನ। ಬಿಜ್ಜಮ್ಮ
ಕರಕೊಂಡು ಅಗಸಿಗೆ ನಡದಾರ॥

ಅಗಸಿಗೆ ನಡೆಯುವುದು ಊರು ದಾಟುವ, ಕೆರೆಯ ಕಡೆಗೆ ಸಾಗುವ ಚಿತ್ರವನ್ನು ಕಣ್ಣಿಗೆ ಕಟ್ಟುತ್ತದೆ. ಹಾಗೆ ಸಾಗಿದ ಈ ಜನಸ್ತೋಮ ನೇರವಾಗಿ ಕೆರೆಯ ದಂಡೆಯಲ್ಲಿರುವ ನಾಗರಕಟ್ಟೆಗೆ ಬಂದಿತು.

ಜನ ಸಾಗರವೇ ಕೆರೆಯ ಬಳಿ ಸೇರಿತು. ಅದರಲ್ಲಿ ನಿಸ್ಸಹಾಯಕರಾಗಿ ಕಂಬನಿ ಮಿಡಿಯುವ ಗೆಳೆತಿಯರಿದ್ದಾರೆ. 'ಸಂಗಡಕ ನಾಳೆ ನೀನು ನಮಗಿಲ್ಲ' ಎಂದು ಅವರು ದುಃಖಿಸುತ್ತಾರೆ. ಅಲ್ಲಿ ಗಚ್ಚಿನಮಠದ ಅರಸ (ಸ್ವಾಮಿ) ಮಸ್ತಕದ ಮೇಲೆ ಕಾಲಿಟ್ಟು ನೀರೆರೆಯುತ್ತಾನೆ. ಒಂದು ಪ್ರಣತೆಯನ್ನು ಬಿಜ್ಜಮ್ಮನ ಕೈಗೆ ಕೊಟ್ಟು ಸೂರ್ಯದೇವನಿಗೆ ಬೆಳಗಿ, ಬಾಗಿ ನಮಸ್ಕರಿಸಲು ತಿಳಿಸುತ್ತಾನೆ. ಈ ಸ್ವಾಮಿ ಯಾರು? ತಿಳಿಯು ವದಿಲ್ಲ. ಈಗಲೂ ಈ ಗಚ್ಚಿನಮಠವನ್ನು ಅಲ್ಪಸ್ವಲ್ಪ ಶಿಥಿಲಾ ವಸ್ಥೆಯಲ್ಲಿ ಕರಡಕಲ್ಲ ಗ್ರಾಮದಲ್ಲಿ ಕಾಣಬಹುದಾಗಿದೆ. ಇದನ್ನು 'ಜನ ಗುಳ್ಳಮ್ಮನ ಗುಡಿ' ಎಂದು ತಪ್ಪಾಗಿ ಕರೆದಿದ್ದಾರೆ. ಈ ಮಠಕ್ಕೆ ಸಮೀಪದಲ್ಲಿ ಗುಳ್ಳಮ್ಮನ ಗುಡಿ ಇದ್ದು, ಇತ್ತೀಚಿಗೆ ಜನರಲ್ಲಿ ಈ ಎರಡು ಕಟ್ಟಡಗಳ ಮಧ್ಯೆ ಗುಡಿ ಯಾವುದು? ಮಠ ಯಾವುದು? ಎಂಬ ಗೊಂದಲವಾಗಿ ಗಚ್ಚಿನಮಠವನ್ನೇ ಗುಳ್ಳಮ್ಮನ ಗುಡಿ[೧೦] ಎನ್ನುವ ರೂಢಿ ಬೆಳೆದಿದೆ. ಈ ಗಚ್ಚಿನಮಠದ ಒಡೆಯರಾದ ಸ್ವಾಮೀಜಿ ಯಾರೆಂಬುದು ಯಕ್ಷ ಪ್ರಶ್ನೆಯಾಗಿ ಉಳಿಯುತ್ತದೆ. ಶಿವಜಾತ ಒಡೆಯರೇ, ಭಿಲ್ಲಮನ ಗುರುಗಳಾಗಿದ್ದು, ಅವರೇ ಗಚ್ಚಿನಮಠದರಸ ರಾಗಿರಬಹುದೇ? ಎಂದರೆ ಅವರ ಹೆಸರಿನಲ್ಲಿರುವ ಮಠವೊಂದು ಭಿಲ್ಲಮರಾಜನ ಗುಡ್ಡ ಎಂದು ಜನರಿಂದ ಕರೆಯಿಸಿಕೊಳ್ಳುವ ಗುಡ್ಡದ ಪಕ್ಕದಲ್ಲಿದೆ. ಬಹುಶಃ ಈ ಗಚ್ಚಿನಮಠಕ್ಕೆ ಸಾಮಾನ್ಯ ಸ್ವಾಮಿ ಯಾರಾದರೂ ಇರಬಹುದು ಎನಿಸುತ್ತದೆ. ಈ ಸ್ವಾಮೀಜಿ ಪ್ರಸಿದ್ಧನಾಗಿರದೇ ಇರಬಹುದು. ಈ ಕುರಿತಾದ ಸಂಶೋಧನೆಯ ಅವಶ್ಯಕತೆ ಇದೆ.

ಬಿಜ್ಜಮ್ಮನನ್ನು ಬಲಿಕೊಡಲು ಸಿದ್ಧವಾಗಿದ್ದ ಸೆರೆಮನೆ ಕೆರೆಯಲ್ಲಿ ಕಾಯುತ್ತಿತ್ತು. ಅದರ ಒಳಗೆ ಆಕೆಯನ್ನು ಕಳುಹಿಸಿ ಬಂಡೆ ಎಳೆದರೆಂದು ಜನಪದ ಮಹಿಳೆ ಹಾಡಿನಲ್ಲಿ ನುಡಿಯುತ್ತಾಳೆ. ಆದರೆ ಆ ಒಂದು ಭಾಗವನ್ನು ಗೋಡೆ ಕಟ್ಟಿಸುವ ಮೂಲಕ ಮುಚ್ಚಿದ್ದಾರೆ. ಇದನ್ನೇ ಬಂಡೆ ಎಳೆದರೆಂದು ಮಹಿಳೆ ಹೇಳಿರಬಹುದಾಗಿದೆ. ಊರ ಜನ ಕಣ್ಣೀರಿಟ್ಟರು. ಬಿಜ್ಜಮ್ಮನ ಧೈರ್ಯವನ್ನು ಮನಸಾರೆ ಹೊಗಳಿದರೆಂದು ಜನಪದ ಹಾಡಿನಲ್ಲಿ ಬರುತ್ತದೆ. ಬಿಜ್ಜಮ್ಮನಿಗೆ ಆ ಧೈರ್ಯ ಇದ್ದಿರಲೇಬೇಕು. ಏಕೆಂದರೆ ಎಲ್ಲೂ ಆಕೆ ಹೆದರಿದ್ದಾಗಲಿ, ಬಲಿಯಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುವುದಾಗಲಿ, ಮಾಡಿರುವದಿಲ್ಲ. ಸಂಸಾರದಲ್ಲಿದ್ದ ನಿತ್ಯ ಕದನವೇ ಆಕೆಯ ಈ ಧೈರ್ಯಕ್ಕೆ ಕಾರಣವಾಯಿತೇ? ಅಥವಾ ಊರಿಗೆ ಒಳ್ಳೆಯದಾಗುತ್ತದೆ ಎಂದರೆ ಜೀವ ಕೊಡಲು ನಾನು ಸಿದ್ಧ ಎಂಬ ಬಲವಾದ ತ್ಯಾಗದ ಮನೋಭಾವ ಇದಕ್ಕೆ ಕಾರಣವೇ? ಏನೇ ಇರಲಿ, ಬಿಜ್ಜಮ್ಮ ಅಧೈರ್ಯಳಾಗದೆ ಕ್ರೂರವಾದ ಸಾವಿಗೆ ತನ್ನನ್ನು ಒಡ್ಡಿಕೊಳ್ಳುವಲ್ಲಿ ದಿಟ್ಟತನ ತೋರಿದಳು. ಆದ್ದರಿಂದಲೇ 'ಗಂಡಂತ ನಿನ್ನ ಕೊಂಡಾಡ್ಯಾರು' ಎಂಬ ಮಾತು ಬಂದಿದೆ. ಹಾಡಿನ ಕೊನೆಯಲ್ಲಿ ಕೆರೆ ಏರಿ ಒಡೆಯದೆ ಭದ್ರವಾಗಿ ನಿಂತಿತೆಂದು ಅರಸನಿಗೆ ಸಂತೋಷ ವಾಯಿತೆಂದೂ ಹೇಳಲಾಗಿದೆ. ಅದನ್ನು ವಿವರಿಸುವ ಜನಪದ ನುಡಿ ಇಂತಿದೆ:

ಕೆರೆ ಕೋಡಿ ನಿಂತಾದ ದೊರೆ ಕಣ್ಣ ತಗದಾನು
ಬರದೂರ ಕಂಡ ನಲಿದಾನು। ಬಿಜ್ಜಮ್ಮ
ಸರಿಯಿಲ್ಲ ನಮ್ಮ ದೊರೆಗೀಗ॥

ಎನ್ನುವಲ್ಲಿಗೆ ಕೆರೆಗೆ ಹಾರವಾದ ಬಿಜ್ಜಮ್ಮನ ಚರಿತ್ರೆ ಅಂತ್ಯಗೊಳ್ಳುತ್ತದೆ.

ಈ ಸಂಗತಿಯು ಕರ್ನಾಟಕದ ಅನೇಕ ಕಡೆಗೆ ಕೆರೆಗೆ ಹಾರವಾದ ಘಟನೆಯಂತಿದ್ದರೂ ಕೆಲವು ಅಂಶಗಳಲ್ಲಿ ಭಿನ್ನತೆಯನ್ನು ಗುರುತಿಸಬಹುದಾಗಿದೆ. ಇಲ್ಲಿಯವರೆಗೆ ಚರಿತ್ರೆಯಲ್ಲಿ ದಾಖಲಾಗದ ಬಿಜ್ಜಮ್ಮಳು ಕೆರೆಗೆ ಹಾರವಾದುದು ಕರ್ನಾಟಕ ಚರಿತ್ರೆ ಹಾಗೂ ಸಂಸ್ಕೃತಿಗೆ ಹೊಸ ಸೇರ್ಪಡೆ ಯಾಗಿದೆ. ಇಂದಿಗೂ ಕರಡಿಕಲ್ಲಿನ ಜನ ಯುಗಾದಿ ಮತ್ತು ಮಹಾನವಮಿ ಮುಂತಾದ ಹಬ್ಬ-ಹರಿದಿನಗಳಲ್ಲಿ ಬಿಜ್ಜಮ್ಮನ ಸಮಾಧಿಗೆ ಪೂಜೆ ಮಾಡುತ್ತಾರೆ. ಇನ್ನೂ ಕರಡಿಕಲ್ಲಿನಲ್ಲಿ ಭಿಲ್ಲಮ ಹಾಗೂ ಶಿವಜಾತ ಒಡೆಯರ ಕುರಿತಾದ ಮೌಖಿಕ ವಾದ ಅನೇಕ ಮಾಹಿತಿಗಳಿವೆ. ಅವುಗಳನ್ನು ಸಂಗ್ರಹಿಸುವ; ವಸ್ತುನಿಷ್ಠವಾಗಿ ವಿಶ್ಲೇಷಿಸುವ ಕಾರ್ಯವಾಗಬೇಕಾಗಿದೆ.

[ಕ್ಷೇತ್ರಕಾರ್ಯದಲ್ಲಿ ನನ್ನೊಂದಿಗಿದ್ದು ಸಹಕರಿಸಿದ ಪ್ರೊ. ಶಿವಶರಣಯ್ಯ ಸೊಪ್ಪಿಮಠ, ಉಪನ್ಯಾಸಕರು, ಶ್ರೀ ಶಂಕರಗೌಡ ಉಪನ್ಯಾಸಕರು, ಶ್ರೀ ಮಹಾಂತೇಶ ಸುರಪುರ, ಮುಖ್ಯಗುರುಗಳು ಇವರಿಗೆ ಕೃತಜ್ಞತೆಗಳು.]

ಆಧಾರಸೂಚಿ

೧. **'ಎಡೆದೊರೆ'** ಅಂದರೆ ಎಡೆ+ತೊರೆ (ಎಡೆ=ಪ್ರದೇಶ, ಸ್ಥಳ, ತೊರೆ= ನದಿ) ನದಿಗಳೆರಡರ ನಡುವಣ ಪ್ರದೇಶವಾಗಿದೆ. ಉತ್ತರಕ್ಕೆ ಕೃಷ್ಣಾ ನದಿ, ದಕ್ಷಿಣಕ್ಕೆ ತುಂಗಭದ್ರಾ ನದಿಗಳ ನಡುವಣ ಪ್ರದೇಶವನ್ನು 'ಎಡೆದೊರೆ' ಎಂದು ಕರೆಯುತ್ತಾರೆ. ಆದರೆ ಡಾ. ಬಸವಲಿಂಗ ಸೊಪ್ಪಿಮಠರು ಇದರ ಅರ್ಥವನ್ನು ಹೇಳುವುದು ಹೀಗೆ: "ಪೆರ್ದೊರೆ ಎಂಬುದು ಎಡೆದೊರೆ ಪದದ ಮೂಲಪಿರಬಹುದು. ೧೨ನೇ ಶತಮಾನದ ಹೊತ್ತಿಗಾಗಲೇ ಕೃಷ್ಣಾ ನದಿ 'ಪೆರ್ದೊರೆ' ಎನಿಸಿಕೊಳ್ಳುತ್ತಿತ್ತು ಎಂಬುದಕ್ಕೆ ಹೊಯ್ಸಳರ ಶಾಸನಗಳನ್ನು (ಕ್ರಿ.ಶ. ೧೧೬೧ ರ ಬೇಲೂರು ಶಾಸನ ಇನ್ನೂ ಮುಂತಾದವು.) ನೋಡಬಹುದಾಗಿದೆ. ಪಿರಿದು+ತೊರೆ= ಪೆರ್ದೊರೆ ಎಂದು ಇದನ್ನು ಸುಲಭವಾಗಿ ಬಿಡಿಸಬಹುದು. ಎಡೆದೊರೆ ನಾಡಿನಲ್ಲಿ ಬರುವ ಕರಡಿಕಲ್ಲು ೪೦೦, ಮೊರಟ-೩೦೦, ಮೊಸಳಿಕಲ್-೩೦೦ ಮೊದಲಾದ ಉಪಪಿಭಾಗಗಳು ಈ ಪೆರ್ದೊರೆ ಎಂಬ ಕೃಷ್ಣಾ ನದಿಗೆ ಸಮೀಪ ಇವೆಯೇ ಹೊರತು ತುಂಗಭದ್ರೆಗೆ ಅಲ್ಲ. ಈ ನಾಡಿನ ವ್ಯಾಪ್ತಿ ತುಂಗಭದ್ರೆಯವರೆಗೆ ಆಮೇಲೆ ಚಾಚಿರಬಹುದು. ಅಷ್ಟು ಮಾತ್ರಕ್ಕೆ ಕೃಷ್ಣಾ- ತುಂಗಭದ್ರಾ ನಡುವಣ ಎಡೆ (ಸ್ಥಳ) ಎಂದು ಎಡೆದೊರೆಯನ್ನು ಗುರುತಿಸಬೇಕಾಗಿಲ್ಲ. ಪೆರ್ದೊರೆ> ಹೆರ್ದೊರೆ> ಎರ್ದೊರೆ> ಎರದೊರೆ> ಎಡದೊರೆ (ಎಡೆದೊರೆ) ಎಂದು ಬಿಡಿಸುವುದೇ ಸರಿ ಎಂದು ನನಗೆ ತೋರುತ್ತದೆ" ಎನ್ನುತ್ತಾರೆ.

೨. ಡಾ. ಬಸವಲಿಂಗ ಸೊಪ್ಪಿಮಠ, **'ಆಕರ'** (ಸಂಶೋಧನ ಲೇಖನಗಳ ಸಂಕಲನ), ಪ್ರ: ಕರ್ನಾಟಕ ಇತಿಹಾಸ ಅಕಾದೆಮಿ, ಬೆಂಗಳೂರು, ಜಿಲ್ಲಾ ಘಟಕ ರಾಯಚೂರು, ೧೯೯೫, ಪುಟ-೧೮.

೩. ಸಿ. ಶರಣಪ್ಪ (ಪ್ರಸಂ.) ಹಾಗೂ ಇತರರು, **'ಭಿಲ್ಲಮ'**, ಸ್ಮರಣ ಸಂಚಿಕೆ, ೩ನೇ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನ ಸಮಿತಿ, ಲಿಂಗಸೂಗೂರು-೨೦೦೪, ಪುಟ-೨೯-೩೯.

೪. **ಹಡಪದ ಸಾವಂತ್ರೆಮ್ಮ**, ಸಾ: ಕರಡಿಕಲ್ಲು, ವಯಸ್ಸು-೭೦, ಉದ್ಯೋಗ-ಕೂಲಿ.

೫. **ತಳವಾರ ದುರಗಮ್ಮ**, ಸಾ: ಕರಡಿಕಲ್ಲು, ವಯಸ್ಸು-೬೪, ಉದ್ಯೋಗ-ಕೂಲಿ.

೬. **ತಳವಾರ ರುದ್ರಮ್ಮ** ಸಾ: ಕರಡಿಕಲ್ಲು, ವಯಸು-೬೪, ಉದ್ಯೋಗ-ಕೂಲಿ.

೭. **ಎಂ.ಆರ್. ಪಾಟೀಲ್**, ಸಾ: ಕರಡಿಕಲ್ಲು, ವಯಸ್ಸು-೫೦, ಹಟ್ಟಿ ಚಿನ್ನದ ಗಣಿಯಲ್ಲಿ ಉದ್ಯೋಗಿಯಾಗಿದ್ದಾರೆ.

೮. ಬಿ.ಎಂ. ಶ್ರೀಕಂಠಯ್ಯ (ಸಂ.), **'ಕನ್ನಡ ಬಾವುಟ'**, ಕೆರೆಗೆ ಹಾರ (ಕೋಲಾಟದ ಪದ), ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು-೧೯೫, ಪುಟ-೮೧-೯೨.

೯. **೩೫ ನುಡಿಗಳು** ಈ ಜಾನಪದ ಹಾಡಿನಲ್ಲಿವೆ. ಬಿಜ್ಜಮ್ಮನನ್ನು ಕರಡಿಕಲ್ಲು ಕೆರೆಗೆ ಹಾರ ನೀಡಿದ ವಿವರಣೆಯನ್ನು ನೀಡುತ್ತವೆ.

೧೦. ಡಾ. ದೇವರಕೊಂಡಾರೆಡ್ಡಿ ಮತ್ತು ಇತರರು (ಸಂ), **ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೭**, (ರಾಯಚೂರು ಜಿಲ್ಲೆ), ೨೦೦೩, ಪುಟ-೧೩೫ ರಲ್ಲಿನ ಶಾಸನ ಸಂಖ್ಯೆ ೬, ಕರಡಿಕಲ್ಲು ಗ್ರಾಮದ ಗುಳ್ಳಮನ ಗುಡಿ ಗೋಡೆಗೆ ಸೇರಿರುವ ಕಂಬದಲ್ಲಿಯ ಶಾಸನಗಳು ಎಂದಿದೆ.

೬೨

ಕದಳಿ ಕಟ್ಟುವ ಸೇವೆ
(ಕುರುಬ ಜನಾಂಗದ ಬೀರೇದೇವರ ಒಂದು ಪ್ರಾಚೀನ ಆಚರಣೆ)

ಡಾ. ಲಿಂಗದಹಳ್ಳಿ ಹಾಲಪ್ಪ*

ಹಾಲುಮತಸ್ಥರಾದ ಕುರುಬ ಜನಾಂಗವು ಭಾರತದ ಮೂಲ ಜನಾಂಗಗಳಲ್ಲಿ ಒಂದಾಗಿದ್ದು, ಅದು ತನ್ನದೇ ಆದ ಪ್ರಾಚೀನ ಧಾರ್ಮಿಕ ಪರಂಪರೆಗಳನ್ನು ಹೊಂದಿದೆ. ಧಾರ್ಮಿಕವಾಗಿ ಕುರುಬರು ಶೈವ ಪರಂಪರೆಯವರೂ, ಸಾಮಾಜಿಕವಾಗಿ ವೀರಪರಂಪರೆಯವರೂ ಆಗಿದ್ದಾರೆ. ಇವರ ಕುಲದೈವ ಬೀರಪ್ಪನಾಗಿದ್ದರೂ, ಇವರು ಮೈಲಾರಲಿಂಗ, ಮಾಳಿಂಗರಾಯ, ಹುಲ್ಲಪ್ಪ-ಚಂದಪ್ಪ, ಸೋಮೇಶ್ವರ, ಚಿಂಚಲಿ ಮಾಯವ್ವ ಮೊದಲಾದ ದೈವಗಳನ್ನು ಮನೆ ದೇವರೆಂದು ತಿಳಿದು ಪೂಜಿಸುತ್ತಾರೆ. ಮಧ್ಯಕರ್ನಾಟಕದ ಕೆಲವು ಸೀಮಿತ ಪ್ರದೇಶಗಳಲ್ಲಿ ಪೂಜೆಗೊಳ್ಳುತ್ತಿರುವ ಸೋಮೇಶ್ವರ ಅಥವಾ ಸೋಮಲಿಂಗ ಅಥವಾ ಸೋಮಬೀರಪ್ಪನ ಆಚರಣೆಗಳಲ್ಲಿ ಭೃಂಗಿ ಸೇವೆಯೂ ಒಂದಾಗಿದೆ.

ಓಲಗ ಅಥವಾ ವಾಲಗ ಎಂಬ ಪದಗಳ ನಿಷ್ಪತ್ತಿ ಕುರಿತು ವಿಭಿನ್ನ ಅಭಿಪ್ರಾಯಗಳಿವೆ. 'ವಾಲಗ' ಎಂದರೆ ಬಾಯಿಯಿಂದ ಊದಿ ನಾದ ಹೊರಡಿಸುವ ಒಂದು ವಾದ್ಯವೆಂದೂ, ಅದನ್ನು ಊದುತ್ತ ಸೇವೆ ಸಲ್ಲಿಸುವುದು ವಾಲಗಸೇವೆಯೆನ್ನಿಸಿಕೊಳ್ಳುತ್ತದೆಯೆಂಬ ಅಭಿಪ್ರಾಯ ಒಂದು ವರ್ಗದ್ದು. ಆದರೆ ಬೀರಪ್ಪನ ಭಕ್ತ ಪರಿವಾರದಲ್ಲಿ ಈ ವಾದ್ಯ ಮತ್ತು ಅದನ್ನು ನುಡಿಸುವ ಮನೆತನಗಳು ಇದ್ದರೂ, ಓಲಗ ಸೇವೆಯಲ್ಲಿ ಇದು ಕಂಡುಬರುವುದಿಲ್ಲ.

ಓಲಗ ಎಂದರೆ ಆಸ್ಥಾನ, ರಾಜಸಭೆ ನಡೆಯುವ ಸ್ಥಳ ಎಂಬ ಅರ್ಥವೂ ಇದೆ. ಬೀರಪ್ಪನ ಓಲಗಸೇವೆ ಎಂದರೆ ಬೀರಪ್ಪನ ಸನ್ನಿಧಿ(ಆಸ್ಥಾನ)ಯಲ್ಲಿ ಸಲ್ಲುವ ಸೇವೆ ಎಂಬ ಅರ್ಥವು ಹೆಚ್ಚು ಸೂಕ್ತವಾದದ್ದಾಗಿದೆ. ಕುರುಬರ ಧಾರ್ಮಿಕ ಪರಂಪರೆಯಲ್ಲಿ ಬೀರಪ್ಪನು ಅನಭಿಷಕ್ತ ದೈವಸಾಮ್ರಾಟನಾಗಿದ್ದಾನೆ. ಈ ವಿಚಾರವು ಅವನ ಆಚರಣೆಗಳನ್ನು ಗಮನಿಸಿದಾಗ ತಿಳಿದುಬರುತ್ತದೆ. ಅವನ ಆಸ್ಥಾನದಲ್ಲಿ ಪೂಜಾರಿಗಳು, ಸತ್ತಿಗೆ ಛಂಟರು, ದೀವಟಿಗೆ ಸೇವೆಯವರು, ಈರಗಾರರು, ಕೋಲುಕಾರರು, ಒಂದೊತ್ತಿನವರು, ಸಾವಿರದವರು, ವಾಲಗದವರು, ಡೊಳ್ಳುಬಾರಿಸುವ ಭಟರು, ಚಾಮರ ಸೇವೆಯವರು ಮೊದಲಾದ ಭಕ್ತವೃಂದವಿರುತ್ತದೆ. ಅವರಿಗೆಲ್ಲ ಒಡೆಯನಾಗಿ ಬೀರಪ್ಪನ ಜೀವಂತರೂಪವಾದ ದಳವಾಯಿಯೂ ಇರುತ್ತಾನೆ. ಇದೊಂದು ಧಾರ್ಮಿಕ ಮಹಾಸಾಮ್ರಾಜ್ಯವಾಗಿದ್ದು ಅದರ ಚಕ್ರವರ್ತಿ ಬೀರದೇವರಾಗಿರುವುದು ಕುರುಬರ ಧಾರ್ಮಿಕ ಪರಂಪರೆಯ ವಿಶೇಷವೆನ್ನಬಹುದು. ಇಂತಹ ಸಾಮ್ರಾಜ್ಯವನ್ನು ಆಡಳಿತಾತ್ಮಕವಾಗಿ ಮುನ್ನಡೆಸಲು ಆ ಗುಡಿಕಟ್ಟಿಗೆ ಒಬ್ಬ ಹಟ್ಟಿಗೌಡರು, ಬುದ್ಧಿವಂತರು, ಕೋಲುಕಾರರು, ಲೆಕ್ಕಪತ್ರಾಧಿಕಾರಿ, ಅಮಾಸೆ ಮನೆಯವರು ಇತ್ಯಾದಿಯಾದ ಒಂದು ಆಡಳಿತ ಯಂತ್ರವು ಕಾರ್ಯನಿರ್ವಹಿಸುತ್ತದೆ.

ಓಲಗಸೇವೆಯು ಬೀರದೇವರ ಒಂದು ಸೇವಾಚರಣೆಯಾಗಿದೆ. ಕರ್ನಾಟಕದ ಹಲವಾರು ಬೀರದೇವರ ದೇವಾಲಯಗಳಲ್ಲಿ ಓಲಗಸೇವೆ ನಡೆಯುವುದು ಕಂಡುಬರುತ್ತದೆ. ಅತ್ಯಂತ ಶ್ರದ್ಧೆಯಿಂದ ಕೂಡಿದ, ವೈಶಿಷ್ಟ್ಯಪೂರ್ಣವಾದ ಆಚರಣೆಯೆಂಬ ಹೆಗ್ಗಳಿಕೆಗೆ ಪಾತ್ರವಾದ ಓಲಗ ಸೇವೆಯು ದಾವಣಗೆರೆ ಜಿಲ್ಲೆ, ದಾವಣಗೆರೆ ತಾಲೂಕಿನ ಹದಡಿ ಗ್ರಾಮದಲ್ಲಿ ನಡೆಯುತ್ತದೆ.

ಓಲಗದ ಸಿದ್ಧತೆ : ಬೀರದೇವರ ದೇವಸ್ಥಾನದ ಹೊರಾವರಣವನ್ನು ಓಲಗಶಾಲೆಯೆಂದು ಪರಿಗಣಿಸಿ, ಅದನ್ನು ವಿಧಿವಿಧಾನವಾಗಿ ಶೃಂಗರಿಸಲಾಗುತ್ತದೆ. ಆವರಣದ ತಾರಸಿಯ ಎಂಟೂ ದಿಕ್ಕುಗಳಿಗೆ ಹಾಗೂ ಮಧ್ಯದಲ್ಲಿ ಪೂಜಿಸಿದ ತೆಂಗಿನ ಕಾಯಿ(ಒಟ್ಟು ಒಂಬತ್ತು)ಗಳನ್ನು ಕಟ್ಟಿ, ಅಲ್ಲಲ್ಲಿ ತೆಂಗಿನ ಕಾಯಿಗಳ ಮತ್ತು ಬಾಳೆಹಣ್ಣುಗಳ ಗೊನೆಗಳನ್ನು ಆವರಣದ ತಾರಸಿಗೆ ನೇತುಹಾಕುತ್ತಾರೆ. ಎಲ್ಲ ಕಂಬಗಳಿಗೆ ತೆಂಗು, ಬಾಳೆ, ಅಡಿಕೆ ಗರಿಗಳಿಂದ ಮತ್ತು ಅಡಿಕೆ ಹೊಂಬಾಳೆಗಳಿಂದ ಅಲಂಕರಿಸಿರುತ್ತಾರೆ. ನೆಲಕ್ಕೆ ಗುಡಾರಗಳನ್ನು ಹಾಸಿ, ಮೇಲೆ ಮಾಡಿಗೆ ಅರಿಶಿಣದಿಂದ ರಂಗೋಲಿ ಹಾಕಿದ ಮಡಿವಸ್ತ್ರಗಳನ್ನು ಶಾಮಿಯಾನದ ಆಕಾರದಲ್ಲಿ ಕಟ್ಟಿ ಶೃಂಗರಿಸುತ್ತಾರೆ. ಗರ್ಭಗುಡಿಯಲ್ಲಿರುವ ಬೀರದೇವರ ಸ್ಥಾವರ ಮೂರ್ತಿಗೆ ಅಭಿಮುಖವಾಗಿ ಓಲಗದಲ್ಲಿ ಅವನ ಸತ್ತಿಗೆಯನ್ನು

* ಪಿ/೨೦, ಕೆ.ಪಿ.ಸಿ. ಕಾಲೋನಿ, ಕದ್ರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ-೫೮೧೩೬೩.

ನಿಲ್ಲಿಸಲಾಗುತ್ತದೆ. ಅದರ ಪಕ್ಕದಲ್ಲಿ ನಿರಂತರವಾಗಿ ಬೀರಪ್ಪನ ದೀವಟಿಗೆಯು ಉರಿಯುತ್ತಿರುತ್ತದೆ. ನಿಲ್ಲಿಸಿದ ಸತ್ತಿಗೆಗೆ ಚಾಮರ ಸೇವೆಯವರು ಚಾಮರ ಹಾಕುತ್ತ ಸೇವೆ ಸಲ್ಲಿಸುವುದು ಕಂಡುಬರುತ್ತದೆ. ಓಲಗಶಾಲೆಯಲ್ಲಿ ನಿಲ್ಲಿಸಿದ ಸತ್ತಿಗೆಯು ಸ್ಥಾವರ ಮೂರ್ತಿಯ ಪ್ರತಿನಿಧಿಯಾಗಿದ್ದು, ಭಕ್ತರಿಂದ ದೇವರಿಗೆ ಸಲ್ಲುವ ಭಕ್ತಿ, ಶ್ರದ್ಧೆಗಳು ಅದಕ್ಕೆ ಸಲ್ಲುತ್ತವೆ.

ಮೊದಲು ಬೀರಪ್ಪನ ಸ್ಥಾವರಮೂರ್ತಿಗೆ ವಿಧಿವಿಧಾನ ವಾಗಿ ಪೂಜೆ ಸಲ್ಲುತ್ತದೆ. ಸ್ಥಾವರ ಮೂರ್ತಿಯ ಎದುರಿಗೆ ಎರಡು ದೊಡ್ಡಗಾತ್ರದ ಡೊಳ್ಳು(ಇವುಗಳಿಗೆ ಚೌಡಿ ಡೊಳ್ಳುಗಳೆಂದು ಹೆಸರು)ಗಳನ್ನಿಟ್ಟು ಪೂಜೆ ಮಾಡಿ, ಅವುಗಳನ್ನು ಇಬ್ಬರು ಸೊಂಟಕ್ಕೆ ಕಟ್ಟಿಕೊಳ್ಳುತ್ತಾರೆ. ಅವರನ್ನು ಗರ್ಭಗುಡಿಯಿಂದ ಹೊರಗೆ ಪೂಜಾರಿಯು ಕರ್ಪೂರದಾರತಿ ಯೊಂದಿಗೆ ಕರೆತಂದು ಓಲಗ(ಶಾಲೆ)ಕ್ಕೆ ಬಿಟ್ಟು, ಸತ್ತಿಗೆಯನ್ನು ಪೂಜಿಸಿ ಹೋಗುತ್ತಾನೆ. ಇವೆರಡು ಡೊಳ್ಳುಗಳನ್ನು ಬಾರಿಸುವುದರೊಂದಿಗೆ ವಾದ್ಯಸೇವೆ ಆರಂಭಗೊಳ್ಳುತ್ತದೆ. ಇತರ ಚಿಕ್ಕದೊಡ್ಡ ಸುಮಾರು ಹತ್ತು ಡೊಳ್ಳುಗಳು ಇವುಗಳನ್ನು ಸೇರಿಕೊಳ್ಳುತ್ತವೆ. ಡೊಳ್ಳುಸೇವೆಯು ಒಂದು ಆವರ್ತ ನಿರಂತರವಾಗಿ ನಡೆಯುತ್ತಿದ್ದರೆ, ಒಳಗೆ ಬೀರಪ್ಪನ ಸನ್ನಿಧಿಯಲ್ಲಿ ಇಬ್ಬರು ಈರಗಾರರು ಈರಿಕೆಯ ಕಾಸೆಗಳನ್ನು ಧರಿಸಿ, ಪೂಜೆಗೊಂಡು ಪೂಜಾರಿಯೊಂದಿಗೆ ಓಲಗಕ್ಕೆ ಬರುತ್ತಾರೆ. ಓಲಗಶಾಲೆಯಲ್ಲಿ ಸ್ಥಾವರ ಮೂರ್ತಿಗೆ ಅಭಿಮುಖವಾಗಿ ನಿಂತುಕೊಂಡು ಕುಣಿಯುತ್ತಾ ಓಲಗಸೇವೆಯನ್ನು ಆರಂಭಿಸುತ್ತಾರೆ. ಇವರ ಸಂಖ್ಯೆ ಕ್ರಮೇಣ ಹೆಚ್ಚುತ್ತ ಹೋಗಿ ಎಲ್ಲ ಹನ್ನೆರಡು ಈರಗಾರರು ಸನ್ನಿಧಿಗೆ ಬರುತ್ತಾರೆ.

ಸೇವಾ ಕಾರ್ಯ : ಓಲಗಸೇವೆಯು ಮೂರು ಹಂತಗಳಲ್ಲಿ ನಡೆಯುತ್ತದೆ.

ಅ. ಮೊದಲಿಗೆ ಡೊಳ್ಳು ಬಾರಿಸುವಿಕೆ ಒಂದು ಆವರ್ತ ಕಾಲ ನಡೆಯುತ್ತದೆ. ಬೀರೇದೇವರ ಸ್ಥಾವರ ಮೂರ್ತಿಗೆ ಮುಖಾಮುಖಿಯಾಗಿ ಡೊಳ್ಳಿನ ತಂಡ ನಿಲ್ಲುತ್ತದೆ. ಮೊದಲಿಗೆ ಸಾಲಾಗಿ ಒಬ್ಬರ ಹಿಂದೆ ಒಬ್ಬರು ನಿಂತು ಭಾರಿಸುತ್ತಾರೆ. ಈ ಬಾರಿಸುವಿಕೆಯಲ್ಲಿ ಬೀರಪ್ಪನಿಗೆ 'ನೀನು ಕೇಳಲು ಹೆಚ್ಚೋ, ನಾನು ಭಾರಿಸಲು ಹೆಚ್ಚೋ?' ಎಂಬ ಆವೇಶಭರಿತವಾದ ಡೋಳ್ಳಿನ ರಣವಾದ್ಯದ ಸವಾಲು ಕೇಳಿಸುತ್ತದೆ. ನಂತರ ಡೊಳ್ಳುಗಳು ವೃತ್ತಾಕಾರವಾಗಿ ನಿಂತುಕೊಂಡು ಕೇಂದ್ರದಲ್ಲಿ ತಾಳವಾದ್ಯದವನು ನಿಲ್ಲುತ್ತಾನೆ. ನಾದ ಹಿಡಿದ ನಂತರ, ಕೋಟೆ ಗೋಡೆಗಳು, ಕಲ್ಲುಬಂಡೆಗಳು ಚೂರು ಚೂರಾಗುವಂತೆ ಚರ್ಮದ ಡೊಳ್ಳುಗಳ ನಾದ ವಾತಾವರಣವನ್ನು ತುಂಬಿ, ಬೀರಪ್ಪನನ್ನು ನಿದ್ರಾವಸ್ಥೆಯಿಂದಲೆ ಎಬ್ಬಿಸುವುದು ಕಂಡುಬರುತ್ತದೆ. ಪ್ರತಿಯೊಂದು ಹಂತದ ಸೇವೆ ನಡೆಯುವಾಗ, ಪೂಜಾರಿಯು ಮಂಡಲಕ್ಕೊಮ್ಮೆ ಬೀರಪ್ಪನಿಗೆ ಮಂಗಳಾರತಿಯನ್ನು ಮಾಡಿ, ಹೊರಗೆ ಬಂದು ಈರಗಾರ, ಡೊಳ್ಳು, ಸತ್ತಿಗೆ ಮತ್ತು ಉರಿಯುವ ದೀವಟಿಗೆಗೆ ಆರತಿ ಎತ್ತುವುದು ಕಂಡುಬರುತ್ತದೆ. ಹೀಗೆ ಬೀರದೇವರು ಇಡೀರಾತ್ರಿ ನೂರೊಂದು ಸಲ ಪೂಜೆಗೊಳ್ಳುವುದು ಮತ್ತು ಒಂದು ಬಾರಿಗೆ ಒಂದು ಕದಳಿ(ಬಾಳೆ)ಮರ ಕಡಿದು ದೇಗುಲದ ಕಂಬಗಳಿಗೆ ಕಟ್ಟುವುದು ಕಂಡು ಬರುವ ಆಚರಣೆಯಾಗಿದೆ. ಜೊತೆಗೆ ಚಾಮರಸೇವೆ ನಿರಂತರವಾಗಿ ನಡೆದಿರುತ್ತದೆ.

ಬ. ಎರಡನೆಯ ಘಟ್ಟದಲ್ಲಿ ಡೊಳ್ಳಿನ ನಾದಕ್ಕೆ ವೀರಗಾರರು ಬಂದು ಸೇರಿ ಕುಣಿತವನ್ನು ಆರಂಭಿಸುತ್ತಾರೆ. ದೇವರಿಗೆ ಎದುರಾಗಿ ಸಾಲಾಗಿ ನಿಂತ ವೀರಗಾರರು ಡೊಳ್ಳಿನ ನಾದಕ್ಕೆ ಎಡಗಾಲನ್ನು ಎತ್ತಿ ಎರಡೂ ಕೈಯಿಂದ ಈರಗಾರನ ಕಾಸೆಯನ್ನು ಚಿಮ್ಮಿ ಗತ್ತು ತೋರಿಸುತ್ತಾರೆ. ನಂತರ ಬಲಗಾಲೆತ್ತಿ ಅದೇ ರೀತಿ ಕಾಸೆಯನ್ನು ಕೊಡವಿ, ಬೀಸುತ್ತ ಗತ್ತು ಹಿಡಿಯುವುದು ಅದ್ಭುತ ಕಾವ್ಯದ ದೃಶ್ಯದಂತೆ ಕಾಣುತ್ತದೆ. ಇದೇ ರೀತಿ ಕಾಲೆತ್ತಿ ಕುಣಿಯುವ ಪ್ರಕಾರವು ಒಂದು ಅವರ್ತ ನಡೆಯುವುದು ಕಂಡುಬರುತ್ತದೆ. ಎರಡನೆಯ ಪ್ರಕಾರದಲ್ಲಿ ಡೊಳ್ಳುಗಳ ವೀರನಾದಕ್ಕೆ ತಕ್ಕಂತೆ ವೀರಗಾರರು ಎರಡೂ ಕೈಗಳಲ್ಲಿರುವ ಕಾಸೆಯನ್ನು ಕೊಡುವುತ್ತ, ಬೀಸುತ್ತ ಎರಡೂ ಕಾಲುಗಳನ್ನು ಎತ್ತಿ ಎತ್ತಿ ಹಾಕುತ್ತ ತಮ್ಮ ಸುತ್ತ ತಾವೇ ವರ್ತುಳಾಕಾರವಾಗಿ ತಿರುಗುತ್ತಾರೆ. ಅಂದರೆ ಚಾಮರಸೇವೆಯಂತೆಯೆ ಕಾಸೆಗಳನ್ನು ಬೀಸಿ ಬೀರಪ್ಪನ ಸೇವೆ ಮಾಡುವ ಪ್ರಕ್ರಿಯೆ ಇಲ್ಲಿ ಗಮನಾರ್ಹವಾದುದು. ವೀರಗಾರರು ಮತ್ತು ಡೊಳ್ಳಿನ ಭಂಟರ ಮಧ್ಯೆ 'ಯಾರು ಮೊದಲು ನಿಲ್ಲಿಸುತ್ತಾರೆ ನೋಡೋಣ' ಎಂಬ ಛಲ ಕಂಡುಬಂದು, ಈ ಕುಣಿತ, ಡೊಳ್ಳಿನ ಏಟು ಗಂಟೆಗಟ್ಟಲೇ ನಡೆದು ಕೊನೆಗೆ ಹಿರಿಯರು ಮಧ್ಯೆ ಪ್ರವೇಶಿಸುವ ಸನ್ನಿವೇಶಗಳು ಜರುಗುತ್ತವೆ. ಈರಗಾರರ ಈರಿಕೆಯ ಅಲಗನ್ನು ಒಬ್ಬ ಈರಗಾರನು ಸಾಂಕೇತಿಕವಾಗಿ ಹಿಡಿದುಕೊಂಡು ಅಲ್ಲಿ ನಿಂತಿರುವುದು ಕಂಡುಬರುತ್ತದೆ.

ಕ. ಮೂರನೆಯ ಘಟ್ಟದಲ್ಲಿ ಈ ಎರಡೂ ತಂಡಕ್ಕೆ ವಿಶ್ರಾಂತಿ ಎಂದೇ ಹೇಳಬೇಕು. ಈಗ ಹಿರಿಯ ಹಾಡುಗಾರರು ಬೀರಪ್ಪನ ಸ್ಥಾವರಮೂರ್ತಿಗೆ ಎದುರಾಗಿ ನಿಂತು, ಡೊಳ್ಳಿನ ಹಾಡುಗಳನ್ನು ಮತ್ತು ಬೀರಪ್ಪನ ಪವಾಡದ

ಹಾಡುಗಳನ್ನು ಸುಶ್ರಾವ್ಯವಾಗಿ ಹಾಡುತ್ತಾರೆ. ಇವರ ಹಾಡುಗಳಲ್ಲಿ ಬೀರದೇವರ ಸ್ತುತಿಯು ಸ್ಥಾಯಿಭಾವದೊಂದಿಗೆ ಲೀನವಾಗಿರುವುದು ಕಂಡುಬರುತ್ತದೆ. 'ಬಂಗಾರದ ಪದಕಾವು ಬೆಳ್ಳಿಯ ಪಲಕಾವು ತಂದೆವೋ ಕರಿಯಣ್ಣಗ. . .' ಎನ್ನುವಂತಹ ಸ್ತುತಿಯೊಂದಿಗೆ, 'ಮಂದಮತಿ ಕುರುಬರು ನಾವು ನಂದೇಶ್ವರರು ನೀವು, ನಮ್ಮ ಮೇಲೆ ಕೋಪ ಮಾಡುವ ಮನುಜಗೆ ಸದ್ಬುದ್ಧಿ ಕೊಡೊ ತಂದೆ. . . 'ಎಂಬ ಹಲವಾರು ಬೇಡಿಕೆ, ಹಾರೈಕೆಗಳು ಈ ಹಾಡುಗಳಲ್ಲಿ ಕಂಡುಬರುತ್ತವೆ.

ಈ ರೀತಿ ಬೀರಪ್ಪನ ಸನ್ನಿಧಿಯಲ್ಲಿ ಓಲಗ ಸೇವೆ ನಡೆಯುತ್ತಿದ್ದರೆ, ಊರಿನ ಭಕ್ತಾಧಿಗಳು ರಾತ್ರಿಯಿಡಿ ತಮ್ಮತಮ್ಮ ಮನೆಗಳಿಂದ ಹಬ್ಬದ ಅಡಿಗೆ, ಹಣ್ಣುಕಾಯಿ, ಕರ್ಪೂರಾದಿಗಳನ್ನು ತಂದು ದೇವರಿಗೆ ನೈವೇಧ್ಯ ಮಾಡಿಸಿಕೊಂಡು ಹೋಗುತ್ತಾರೆ. ಮದುವೆ ಮನೆಯವರು ಅತ್ತಿಗೆಮ್ಮ(ಅತ್ತಿಮರದ ರೆಂಬೆ) ಮತ್ತು ಆಲದಮ್ಮ(ಆಲದ ಮರದ ಕೊಂಬೆ) ದೇವರನ್ನು ಬೀರಪ್ಪನ ಸನ್ನಿಧಿಯಲ್ಲಿ ಪೂಜಿಸಿಕೊಂಡು ಆರತಿಯೊಂದಿಗೆ ತಮ್ಮ ಮನೆಗಳಿಗೆ ತೆಗೆದುಕೊಂಡು ಹೋಗುತ್ತಾರೆ. ಹೀಗೆ ಒಯ್ದರೆ ಅವರ ಮನೆಯಲ್ಲಿ ಶುಭಕಾರ್ಯ ಮತ್ತು ಶುಭಯೋಗಗಳು ಸಂಭವಿಸುವವೆಂಬ ನಂಬಿಕೆ ಇಲ್ಲಿಯ ಭಕ್ತರಲ್ಲಿದೆ. ಬೀರಪ್ಪನಿಗೆ ಪೂಜೆ ಮಾಡಿಸಲು ಮತ್ತು ಪ್ರಸಾದ ತೆಗೆದುಕೊಳ್ಳಲು ಗ್ರಾಮದ ಎಲ್ಲ ಜಾತಿಜನಾಂಗಗಳು ಜಾತಿ ಮತಭೇದವಿಲ್ಲದೆ ಭಾಗವಹಿಸುವುದು ಕಂಡುಬರುತ್ತದೆ. ಭಕ್ತಾದಿಗಳು ವೀರಗಾರರಿಗೆ, ಡೊಳ್ಳುವಾದ್ಯದವರಿಗೆ, ಹಾಡುಗಾರರಿಗೆ ತಮ್ಮ ಖುಷಿಯ ಸಂಕೇತವಾಗಿ ೫೦ ರೂಪಾಯಿ, ನೂರು ರೂಪಾಯಿಗಳ ನೋಟುಗಳನ್ನು ಹಾರಮಾಡಿ ಹಾಕುವುದೂ ಉಂಟು.

ಸುಮಾರು ನಡುರಾತ್ರಿ ಕಳೆದು, ಮೂರುಗಂಟೆಯ ಸಮಯಕ್ಕೆ ದೇವಸ್ಥಾನದ ಮುಖ್ಯ ಈರಗಾರರನು(ಇವನು ದೈವ ಆಹ್ವಾಹನೆ ಮಾಡಿಕೊಳ್ಳುವ ದೈವೀ ಪುರುಷನೆಂಬ ನಂಬಿಕೆ ಭಕ್ತರದ್ದು) ದೇವಾಲಯದಲ್ಲಿ ಕಾಸವೇಷ ಧರಿಸಿ, ದೇವರ ಸನ್ನಿಧಿಯಲ್ಲಿ ಪೂಜೆಗೊಂಡು ರಂಗಪ್ರವೇಶ ಮಾಡುತ್ತಾನೆ. ಈಗ ಒಟ್ಟು ಹನ್ನೆರಡು ಜನ ವೀರಗಾರರು ಈ ಸೇವೆಯಲ್ಲಿ ಭಾಗವಹಿಸುತ್ತಾರೆ. ಓಲಗಸೇವೆಗೆ ಈಗ ಪೂರ್ಣಾತಿ ರಂಗು ಬಂದು ಓಲಗಸೇವೆ ಕಳೆಕಟ್ಟುವುದು ವಿಶೇಷ. ಬೆಳಗಿನ ಎಂಟು ಅಥವಾ ಒಂಬತ್ತು ಗಂಟೆಗಳವರೆಗೆ ನಡೆಯುವ ಈ ಸೇವೆಯು ಅಂತಿಮ ಹಂತಕ್ಕೆ ಬಂದಾಗ, ಬೀರಪ್ಪನ ಸತ್ತಿಗೆಯೊಂದಿಗೆ ಎಲ್ಲ ಈರಗಾರರು, ವಾದ್ಯದವರು ಮತ್ತು ಹಾಡುಗಾರರು ಮೆರವಣಿಗೆಯಲ್ಲಿ ಊರಿನ ಎಲ್ಲ ದೇವಾಲಯಗಳಿಗೆ ತೆರಳುತ್ತಾರೆ. ಪ್ರತಿ ದೇವಾಲಯದ ಮುಂದೆ ಹಾಕಿದ ಉತ್ಸವದ ಚಪ್ಪರದಲ್ಲಿ, ದೇವರಿಗೆ ಎದುರಾಗಿ ನಿಂತು ಓಲಗಸೇವೆ ಸಲ್ಲಿಸುತ್ತಾರೆ. ನಂತರ ಮರಳಿ ಬೀರಪ್ಪನ ದೇವಸ್ಥಾನಕ್ಕೆ ಬಂದ ಓಲಗಸೇವೆಯು ಮುಖ್ಯ ಪೂಜಾರಿ, ಹಟ್ಟಿಗೌಡ, ಹಿರಿಯರ ಒಟ್ಟಿಗೆಯೊಂದಿಗೆ ಮುಕ್ತಾಯಗೊಳ್ಳುತ್ತದೆ. ಇಲ್ಲಿ ಗಮನಸಬೇಕಾದ ಅಂಶವೆಂದರೆ ಈ ಸೇವೆಯು ಜಾತಿ ಮತಭೇದವಿಲ್ಲದೇ ಊರಿನ ಎಲ್ಲ ದೇವರುಗಳ ಮುಂದೆ ಸಾಂಕೇತಿಕವಾಗಿ ನಡೆಯುತ್ತದೆ. ಅಂದರೆ ಹಾಲುಮತಸ್ಥ ಕುರುಬರು ಸರ್ವಜಾತಿ, ಮತಗಳೊಂದಿಗೆ ಧಾರ್ಮಿಕ ಸಹಬಾಳನ್ನು ಹೊಂದಿದವರು– ಧಾರ್ಮಿಕ ಸಹನಾಶೀಲರು ಎಂಬುದು ಇದರಿಂದ ವ್ಯಕ್ತವಾಗುತ್ತದೆ.

ವೀರಗಾರನ ವೇಷಭೂಷಣಗಳು

ಹದಡಿ ಗ್ರಾಮದ ಬೀರಪ್ಪನ ಸೇವಾಕಾರನಾದ ವೀರಗಾರನು ಕರ್ನಾಟಕದ ಉಳಿದ ಪ್ರದೇಶಗಳ ವೀರಗಾರರಿಗಿಂತ ಭಿನ್ನವ್ಯಕ್ತಿತ್ವವನ್ನು ಹೊಂದಿರುವುದು ಕಂಡು ಬರುತ್ತದೆ. ಇವನ ವೇಷವು ಸರಳವಾಗಿದ್ದು, ಅದು ಕೆಳಗೆ ಸೂಚಿಸಿದ ವಸ್ತ್ರ ಸಂಹಿತೆಯನ್ನು ಒಳಗೊಂಡಿದೆ. ಈ ಗುಡಿಕಟ್ಟಿನ ಆಚರಣೆಯಲ್ಲಿ ದಳವಾಯಿ ಪಟ್ಟವು ಕಂಡು ಬರುವುದಿಲ್ಲ. ಅವನ ಎಲ್ಲ ಧಾರ್ಮಿಕ ಕಾರ್ಯಗಳನ್ನು ದೇವಾಲಯದ ಮುಖ್ಯ ಈರಗಾರ(ದೈವೀ ವ್ಯಕ್ತಿ)ಯು ನಿರ್ವಹಿಸಿ ಕೊಡುವುದು ವಿಶೇಷವಾಗಿದೆ.

೧. ಈರಗಾರನು ಬಿಳಿ ಬಣ್ಣದ ಜರಿಪಂಚೆಯನ್ನು ಲುಂಗಿಯಾಕಾರವಾಗಿ ಉಟ್ಟಿರುತ್ತಾನೆ. ಮೇಲೆ ಬಿಳಿ ಶರ್ಟನ್ನು ತೊಟ್ಟಿರುವುದು ಕಂಡುಬರುತ್ತದೆ.

೨. ತಲೆಗೆ ಬಿಳಿ ರುಮಾಲು ಸುತ್ತಿ, ಬಗಲು ಕುತ್ತಿಗೆಗಳು ಸೇರಿದಂತೆ ಎರಡು ಕೇಸರಿ ಅಥವಾ ಹಸಿರು ಬಣ್ಣದ ಈರಗಾರನ ಕಾಸೆ ವಸ್ತ್ರಗಳನ್ನು ಕಟ್ಟಿಕೊಂಡಿರುತ್ತಾನೆ.

೩. ತೋಳಿಗೆ, ಮುಂಗೈಗೆ ಎರಡು ಕೆಂಪುವಸ್ತ್ರಗಳನ್ನು ಕಟ್ಟಿಕೊಂಡು ಕೈಯಲ್ಲಿ ದಳವಾಯಿ(ಬೀರಪ್ಪನ) ಕಾಸೆಗಳನ್ನು ಹಿಡಿದಿರುತ್ತಾನೆ. ಇವನ ಕೈಯಲ್ಲಿ ಈರಗಾರನ ಅಲಗು ಸಹ ಇರುತ್ತದೆ.

೪. ಕೊರಳಲ್ಲಿ ಹೂಮಾಲೆ, ಹಣೆಯಲ್ಲಿ ಭಂಡಾರ ಮತ್ತು ವಿಭೂತಿಯನ್ನು ಧರಿಸಿರುವುದು ಕಂಡುಬರುತ್ತದೆ. ಈರಗಾರರು ಓಲಗಕ್ಕೆ ಬರುವ ಮುನ್ನ ಬೀರಪ್ಪನ ಗರ್ಭಗುಡಿಯಲ್ಲಿ ಪೂಜೆಮುಗಿಸಿ, ಪೂಜಾರಿಯೊಂದಿಗೆ ಕರ್ಪೂರದಾರತಿ ಹಿಡಿದು ಬಂದು ಸೇವೆಗೆ ಸೇರುತ್ತಾರೆ.

ಈರಗಾರನ ಈ ವೇಷವನ್ನು ಸೂಕ್ಷ್ಮವಾಗಿ ಗಮನಿಸಿದರೆ, ಪ್ರಾಚೀನ ಕಾಲದ ಈರಗಾರರಿಗಿಂತ ವೇಷ, ಆವೇಶಗಳಿಂದ ದೂರ ನಿಲ್ಲವುದು ಕಂಡುಬರುತ್ತದೆ. ಈ ಪರಿಷ್ಕರ

ಣೆಯು ರೇವಣಸಿದ್ದೇಶ್ವರರ ಶಿಷ್ಯರೊಬ್ಬರಿಂದ ನಡೆದಿರ ಬಹುದಾದ ಸಾಧ್ಯತೆಗಳಿದ್ದು, ಇದು ಶರಣರ ಸಂಪ್ರದಾಯಿಕ ವೇಷಕ್ಕೆ ಹತ್ತಿರವಾಗಿರುವುದು ಕಂಡುಬರುತ್ತದೆ. ಈರಗಾರರ ಬದುಕು ಧಾರ್ಮಿಕವಾಗಿ ನೈಷ್ಠಿಕತೆಯಿಂದ ಕೂಡಿದ ಬದುಕಾಗಿರುತ್ತದೆ. ಈರಗಾರಿಕೆಯ ವೇಷ ಧರಿಸುವ ಮೊದಲು ಅವನು ಮೂರು ದಿನ ಉಪವಾಸವಿದ್ದು ಅಲ್ಪಾಹಾರವನ್ನು ಸೇವಿಸುವುದು ತಿಳಿದುಬರುತ್ತದೆ. ಇವನು ಎಷ್ಟು ಸಾತ್ವಿಕ, ಧರ್ಮನಿಷ್ಠನೆಂದರೆ ಉರಿಯುವ ಅರಳೆ ಬತ್ತಿಯ ಜ್ವಾಲೆಯನ್ನು ನುಂಗುವ, ಬೇವಿನ ಸೊಪ್ಪನ್ನು ಸಹ ಸೇವಿಸುವ ಕಠೋರ ಉಪಾಸನಾ ಕ್ರಮವನ್ನು ಹೊಂದಿರುವು ದನ್ನು ಭಕ್ತರು ಹೇಳುತ್ತಾರೆ.

ಬೀರದೇವರ ಜಲಪವಾಡ

ಮರುದಿನ, ಅಂದರೆ ಮಂಗಳವಾರ ಮಧ್ಯಾಹ್ನ ಸುಮಾರು ಮೂರು ಗಂಟೆಯ ಸಮಯಕ್ಕೆ ಬೀರದೇವರ ಸ್ಥಾವರಮೂರ್ತಿಗೆ ಶೃಂಗಾರ ಮಾಡಿ, ಬೀರಪ್ಪನ ದೊಡ್ಡ ಪಲ್ಲಕ್ಕಿಯಲ್ಲಿ ಕೂಡ್ರಿಸುತ್ತಾರೆ. ಪಲ್ಲಕ್ಕಿಯನ್ನು ವಿವಿಧ ಹೂವು, ಬಣ್ಣದ ಗೊಂಡೆ ಮತ್ತು ಅಡಿಕೆ ಹೂವುಗಳಿಂದ ಶೃಂಗರಿಸ ಲಾಗುತ್ತದೆ. ಬೀರದೇವರ ಉತ್ಸವ ಮೂರ್ತಿಯ ಪೀಠದಲ್ಲಿ ಒಟ್ಟು ಐದು ಬೀರದೇವರುಗಳು ಆಸೀನರಾಗಿರುವುದನ್ನು ನೋಡಬಹುದು. ದೇವರಿಗೆ ಹೂ ಮತ್ತು ರುದ್ರಾಕ್ಷಿ ಸರಗಳಿಂದ ಶೃಂಗರಿಸಿರುತ್ತಾರೆ. ಪೂಜೆಯ ನಂತರ ಪಲ್ಲಕ್ಕಿ ಏರಿದ ಬೀರದೇವರುಗಳ ಸವಾರಿಯು ತನ್ನ ಸತ್ತಿಗೆಯೊಂದಿಗೆ, ದೀವಟಿಗೆ ಸೇವೆ, ಚಾಮರಸೇವೆ ಮತ್ತು ಡೊಳ್ಳುಸೇವೆಯನ್ನು ಸ್ವೀಕರಿಸುತ್ತ ಮೆರವಣಿಗೆಯಲ್ಲಿ ಬಂದು, ಗ್ರಾಮದ ಇತರ ನಾಲ್ಕು ದೈವಗಳನ್ನು ಹೊರಡಿಸುತ್ತದೆ. ತಮ್ಮವೇ ಆದ ವಿಶಿಷ್ಟ ರಚನೆಯ ಪಲ್ಲಕ್ಕಿಗಳಲ್ಲಿ ಊರಿನ ಇತರ ದೈವಗಳಾದ ಶ್ರೀ ಆಂಜನೇಯಸ್ವಾಮಿ, ಮಸಿಯಮ್ಮ, ದಂಡಿನ ದುರುಗಮ್ಮ ಮತ್ತು ಹೊರಟ್ಟೆ ಅಮ್ಮ (ಹರಿಜನರ ಕೇರಿಯ ಶಕ್ತಿದೇವತೆ> ಮಾತೃದೇವತೆ) ನವರು ಮೆರವಣಿಗೆಯಲ್ಲಿ ಬೀರದೇವರನ್ನು ಅನುಸರಿಸುತ್ತಾರೆ. ತನ್ನ ಎಲ್ಲ ವೈಭವ, ವಾದ್ಯಸೇವೆ, ಭಕ್ತವೃಂದದೊಂದಿಗೆ ಬೀರಪ್ಪನು ಊರ ಹೊರಗಿನ ಬಾವಿ(ಇದಕ್ಕೆ ದೇವರ ಬಾವಿ ಎನ್ನೋಣ)ಯ ಹತ್ತಿರ ಬಂದು ಸಾಲಾಗಿ ತಮ್ಮ ತಮ್ಮ ಪೀಠದಲ್ಲಿ ಆಸೀನರಾಗುತ್ತಾರೆ.

ನಂತರ ಬೀರೇದೇವರ ಸತ್ತಿಗೆಯನ್ನು ಹೊರಡಿಸಿ ಕೊಂಡು, ಡೊಳ್ಳುವಾದ್ಯ ಮತ್ತು ಆರತಿಯೊಂದಿಗೆ ಐನೋರ (ಜಂಗಮ) ಮಠಕ್ಕೆ ಹೋಗಿ ವಿಧಿವಿಧಾನವಾಗಿ ಅವರನ್ನು ಸ್ವಾಗತಿಸಿ ಕೆರೆಯ ಹತ್ತಿರ ಕರೆದುಕೊಂಡು ಬರುತ್ತಾರೆ. ಜಂಗಮರು ಕೆರೆಯ ದಂಡೆಯ ಮೇಲಿರುವ ದೇವರ ಬಾವಿಯನ್ನು ಶಾಸ್ತ್ರೋಕ್ತವಾಗಿ ಪೂಜೆ ಮಾಡುತ್ತಾರೆ. ಬೀರದೇವರ ದೊಡ್ಡ ಪಲ್ಲಕ್ಕಿಯನ್ನು ಹೊತ್ತ ಭಕ್ತರು, ಡೊಳ್ಳು, ಆರತಿಗಳೊಂದಿಗೆ ಮುಖ್ಯ ಈರಗಾರ(ಇವರನ್ನು ದೈವೀಪುರುಷ ಎನ್ನೋಣ) ಮನೆಗೆ ಬರುತ್ತಾರೆ. ಇಡೀ ದಿನ ವ್ರತಾಧಾರಿಯಾಗಿದ್ದ ದೈವೀಪುರುಷನು ಪೂಜೆ ಮಾಡಿ, ಬೀರಪ್ಪನ ದೈವದಂಡವನ್ನು ಕೈಯಲ್ಲಿ ಧರಿಸಿದೊಡನೆ ಸ್ಥಾವರ ಮೂರ್ತಿಯಲ್ಲಿನ ದೈವದ ಆವಾಹನೆಯು ಅವನ ದೇಹದಲ್ಲಿ ಆಗುತ್ತದೆ. ಅವನು ಬೀರಪ್ಪನ ಆತ್ಮ ಮೈದುಂಬಿದ ದೈವೀಪುರುಷನಾಗುತ್ತಾನೆ. ಅವನನ್ನು ಕರೆದುಕೊಂಡು ಬೀರದೇವರು ದೇವರ ಬಾವಿಯತ್ತ ಬರುತ್ತದೆ. ಬಾವಿಯ ಹತ್ತಿರ ಬಂದ ದೈವೀಪುರುಷನು ಬಾವಿಯನ್ನು ಪೂಜಿಸಿ ವಂದಿಸುತ್ತಾನೆ. ಈಜು ಗೊತ್ತಿರದ ದೈವೀಪುರುಷನು ದೇವರ ದಂಡದೊಂದಿಗೆ ಬಾವಿಗೆ ಜಿಗಿಯುತ್ತಾನೆ. ನೀರಿನಲ್ಲಿ ಬಿದ್ದೊಡನೆ ಎರಡೂ ಪಾದಗಳನ್ನು ಜೋಡಿಸಿ, ಎರಡೂ ಕೈಗಳಿಂದ ದೇವರ ದಂಡದ ಎರಡು ತುದಿಗಳನ್ನು ಹಿಡಿದು, ನೀರಿನ ಪಾತಳಿಯ ಮೇಲೆ ಎದೆ ಮೇಲೆ ಮಾಡಿ ಮಲಗುತ್ತಾನೆ. ಬಾಳೆ ಎಲೆಯನ್ನು ನೀರಿನ ಪಾತಳಿಯ ಮೇಲೆ ಹಾಸಿದಂತೆ ಅವನ ದೇಹ ನೀರಿನ ಮೇಲೆ ತೇಲುವುದು ಕಂಡುಬರುತ್ತದೆ. ಸೇರಿದ ಭಕ್ತಸಮೂಹವೆಲ್ಲ ಭಕ್ತಿಭಾವದಿಂದ ಬೀರಪ್ಪದೇವರಿಗೆ ಜೈಕಾರ ಹಾಕುತ್ತಾರೆ.

ಇದೇ ಸ್ಥಿತಿಯಲ್ಲಿ ಹತ್ತು ನಿಮಿಷ, ಅರ್ಧಗಂಟೆ, ಒಂದು ತಾಸು ಮತ್ತು ಇಡೀದಿನ ನೀರಿನ ಮೇಲೆ ತೇಲಿದ ದಾಖಲೆ ಗಳನ್ನು ಸಮಾಜದ ಹಿರಿಯರು ಪವಾಡವೆಂದು ವಿವರಿಸುತ್ತಾರೆ. ನಂತರ ಈಜು ಗೊತ್ತಿರುವ ಒಬ್ಬ ಪೂಜಾರಿಯು ನೀರಿಗೆ ಹಾರಿ ದೈವೀಪುರುಷನ ಎರಡೂ ಪಾದಗಳನ್ನು ನೂಕುತ್ತ, ಇಡೀ ದೇಹವನ್ನು ದಂಡೆಗೆ ನೂಕಿಕೊಂಡು ಬರುತ್ತಾನೆ. ಉಳಿದವರು ಸ್ವಾಮಿಯನ್ನು ಎತ್ತಿ ಸಮಾಧಿ ಸ್ಥಿತಿಯಲ್ಲಿ ಕೂಡ್ರಿಸುತ್ತಾರೆ.

ಬೀರದೇವರು ಮುಳ್ಳುಗದ್ದುಗೆ ಏರುವುದು

ಬೀರದೇವರ ಜಲಪವಾಡದ ನಂತರ ಸಮಾಧಿ ಸ್ಥಿತಿ ಯಲ್ಲಿದ್ದ ದೈವೀಪುರುಷನು ಸಿದ್ಧಪಡಿಸಿದ ಮುಳ್ಳುಗದ್ದುಗೆಯ ಹತ್ತಿರ ಬರುತ್ತಾನೆ. ವೈಶಿಷ್ಟ್ಯವೆಂದರೆ ಇಲ್ಲಿರುವ ಮುಳ್ಳುಗದ್ದು ಗೆಯ ಪಲ್ಲಕ್ಕಿಯು ಉಳಿದ ಪ್ರದೇಶಗಳ ಮುಳ್ಳುಪಲ್ಲಕ್ಕಿಯನ್ನು ಹೋಲುವುದಿಲ್ಲ. ಇದೊಂದು ವಿಶಿಷ್ಟ ರಚನೆಯ ಪಲ್ಲಕ್ಕಿ ಯಾಗಿದೆ. ಇದು ಸಿಂಹಾಸನಾಕಾರದ ಪೀಠವಾಗಿದ್ದು, ನಾಲ್ಕು ಜನರು ಹೊರಲು ಅನುಕೂಲವಾಗುವಂತೆ ವಿನ್ಯಾಸ ಗೊಳಿಸಲಾಗಿರುತ್ತದೆ. ಪೀಠಸ್ಥವಾಗುವ ಭಾಗದಲ್ಲಿ ಜಾಲಿ ಮುಳ್ಳುಗಳು ಇರುವ ಟೊಂಗೆಗಳನ್ನು ನೀಟಾಗಿ ಕತ್ತರಿಸಿ

ಜೋಡಿಸಿ, ಮುಳ್ಳು ಸಿಂಹಾಸನವನ್ನು ಮಾಡಿರುತ್ತಾರೆ. ಮುಳ್ಳಿನ ದಪ್ಪ ಎರಡು ಅಡಿಯಷ್ಟು ಎತ್ತರವಿರುತ್ತದೆ. ಚೂಪಾದ ಮುಳ್ಳುಗಳು ಮೇಲ್ಭಾಗದಲ್ಲಿ ಚಾಚ್ಚರೆದು ನಿಂತಿರುವುದನ್ನು ಯಾರಾದರೂ ಗಮನಿಸಬಹುದು. ಹಿಂದೆ ಒರಗಿಕೊಳ್ಳಲು ಮೆತ್ತನೆಯ ದಿಂಬುಗಳನ್ನು ಇಡಲಾಗುತ್ತದೆ. ಪೀಠವನ್ನು ಪೂಜಿಸಿದ ನಂತರ, ಎರಡರಿಂದ ಮೂರು ಅಡಿ ಎತ್ತರವಿರುವ ಚೂಪಾದ ಮುಳ್ಳಿನ ಆಸನವನ್ನು ದೈವೀಪುರುಷನು ಲೀಲಾಜಾಲವಾಗಿ ಏರಿ ಕುಳಿತುಕೊಳ್ಳುತ್ತಾನೆ. ಜೈಕಾರದೊಂದಿಗೆ ಭಕ್ತರು ಹೂವಿನ ಮಳೆಗರೆಯುತ್ತಾರೆ. ವಾದ್ಯಗಳು ಮೊಳಗುತ್ತವೆ. ನಾಲ್ಕು ಜನರು ಹೊತ್ತಿರುವ ಮುಳ್ಳು ಪಲ್ಲಕ್ಕಿಯು ಮೆರವಣಿಗೆಯಲ್ಲಿ ಹೊರಡುತ್ತದೆ. ಮುಂದೆ ಜಂಗಮರು, ನಂತರ ಮುಳ್ಳುಗದ್ದುಗೆ, ಬೀರಪ್ಪನ ದೊಡ್ಡ ಪಲ್ಲಕ್ಕಿಯಲ್ಲಿ ಸ್ಥಾವರಮೂರ್ತಿ, ಗ್ರಾಮದ ಉಳಿದ ದೈವಗಳು ಹೀಗೆ ಮೆರವಣಿಗೆಯಲ್ಲಿ ಹೋಗುತ್ತಿದ್ದರೆ ಭಕ್ತರು ನಡೆಮಡಿ ಹಾಸಿ ಸ್ವಾಗತಿಸುತ್ತಾರೆ. ಭಕ್ತರ ಮನೆಗಳ ಹತ್ತಿರ ಬಂದಾಗ ಜಾತಿ ಮತ ಧರ್ಮಗಳ ಭೇದಭಾವವಿಲ್ಲದೆ ದೇವರಿಗೆ ಭಕ್ತಿಯಿಂದ ಪೂಜೆ ಸಲ್ಲಿಸಿ, ಹಣ್ಣುಕಾಯಿ ಮಾಡಿಸುವುದು ಕಂಡುಬರುತ್ತದೆ.

ಬೀರಪ್ಪನ ಅಗ್ನಿಸೇವೆ

ಗ್ರಾಮದ ಬೀದಿಗಳಲ್ಲಿ ಹೀಗೆ ಮೆರವಣಿಗೆಯಲ್ಲಿ ಬರುವ ದೇವಗಣವನ್ನು ಮುಳ್ಳುಗದ್ದುಗೆಯಲ್ಲಿ ಕುಳಿತು ದೈವೀಪುರುಷನು ಮುನ್ನಡೆಸುವುದು ಕಂಡುಬರುತ್ತದೆ. ಮೆರವಣಿಗೆಯು ಆಂಜನೇಯ ದೇವಸ್ಥಾನದ ಮುಂದಿರುವ ಬಯಲಿಗೆ ಬಂದು ಪಶ್ಚಿಮಾಭಿಮುಖವಾಗಿ ನಿಲ್ಲುತ್ತದೆ. ಆಂಜನೇಯ ದೇವಸ್ಥಾನದ ಎದುರಿನ ಬಯಲಿನಲ್ಲಿ ಹತ್ತಡಿ ಉದ್ದ ಮತ್ತು ಹತ್ತು ಅಡಿ ಅಗಲದ ಅಗ್ನಿಕುಂಡವನ್ನು ಅಗೆದು, ಅದರಲ್ಲಿ ನಗಿನಗಿ ಕೆಂಡವನ್ನು ಬೆಳಗಿನಿಂದಲೇ ಮಾಡಿರುತ್ತಾರೆ. ದೈವಗಳು ಅಗ್ನಿಕುಂಡವನ್ನು ಹತ್ತಿ ಇಳಿಯಲು ಅನುಕೂಲವಾಗುವಂತೆ ಅಗ್ನಿಕುಂಡದ ಪೂರ್ವ ಮತ್ತು ಪಶ್ಚಿಮ ಭಾಗದ ಅಂಚಿಗೆ ಮೆಟ್ಟಿಲುಗಳನ್ನು ಮಾಡಲಾಗಿರುತ್ತದೆ. ಹಟ್ಟಿಗೌಡರ ಮನೆಯಲ್ಲಿ ತಯಾರಿಸಿದ ಎಂಟು ತಟ್ಟೆಗಳಲ್ಲಿ ಅನ್ನದೆಡೆಯ ಪ್ರಸಾಧವನ್ನು ತಂದು ಎಂಟೂ ದಿಕ್ಕಿಗೆ ಇಟ್ಟು ಜಂಗಮರು ಅಗ್ನಿಯ ಪೂಜೆಯನ್ನು ಸಲ್ಲಿಸುತ್ತಾರೆ. ಪವಿತ್ರ ಜಲವನ್ನು ಅಗ್ನಿಕುಂಡದ ಸುತ್ತ ಸಿಂಪಡಿಸಲಾಗುತ್ತದೆ. ಮುಳ್ಳುಗದ್ದುಗೆಯನ್ನು ಇಳಿಸಿದ ನಂತರ ಮೈದುಂಬಿದ ದೈವೀಪುರುಷನು ಬಲಗೈಯಲ್ಲಿ ಬೀರದೇವರ ದೈವೀದಂಡವನ್ನು ಹಿಡಿದುಕೊಂಡು ಪೂರ್ವದಿಂದ ಪಶ್ಚಿಮಾಭಿಮುಖವಾಗಿ ಅಗ್ನಿಯನ್ನು ಪ್ರವೇಶಿಸುತ್ತಾನೆ. ಅಗ್ನಿಕುಂಡದ ಮಧ್ಯೆ ಬಂದಾಗೊಮ್ಮೆ ನಿಂತು ಎರಡೂ ಕೈಯಿಂದ ದಂಡವನ್ನು ಹಿಡಿದು ಮೇಲೆತ್ತಿ ಭಕ್ತರಿಗೆ ಅಭಯರೂಪದ ಆಶೀರ್ವಾದ ಮಾಡುತ್ತಾನೆ. ನಂತರ ಪಶ್ಚಿಮದ ಅಂಚನ್ನು ತಲುಪಿ, ತಿರುಗಿ ಅದೇ ಪಥದಲ್ಲಿ ಅಗ್ನಿಯನ್ನು ದಾಟಿ ಪೂರ್ವದ ಅಂಚಿಗೆ ಬರುತ್ತಾನೆ. ಈಗ ಎರಡನೆಯ ಹಂತದಲ್ಲಿ ದೈವೀಪುರುಷನು ಬೀರದೇವರ ಪಲ್ಲಕ್ಕಿಯನ್ನು ಹಿಡಿದುಕೊಂಡು ಪೂರ್ವ–ಪಶ್ಚಿಮವಾಗಿ ದಾಟಿದಾಗ ಉಳಿದ ಎಲ್ಲ ದೈವಗಳು ಅವನನ್ನು ಅನುಸರಿಸಿ ಅಗ್ನಿಯನ್ನು ದಾಟುತ್ತವೆ. ಒಂದು ಬಾರಿ ಅಗ್ನಿಯನ್ನು ದಾಟಿಬಂದ ಆಂಜನೇಯ ಸ್ವಾಮಿಯು ತನ್ನ ದೇವಸ್ಥಾನಕ್ಕೆ ಮರಳಿ ಹೋಗುತ್ತದೆ. ಹೊರಟ್ಟಮ್ಮನೂ ಸಹ ತನ್ನ ಸ್ವಸ್ಥಾನಕ್ಕೆ ಹಿಂದಿರುಗುವುದು ಕಂಡುಬರುತ್ತದೆ. ದೈವೀ ಪುರುಷನಾದ ಈರಗಾರನ ಜೊತೆ ಬೀರಪ್ಪ ಮತ್ತು ಮಸಿಯಮ್ಮ, ದಂಡಿನ ದುರುಗಮ್ಮ ದೇವರುಗಳು ಮತ್ತೆ ಎರಡು ಸಲ ಅಗ್ನಿಯನ್ನು ಹಾಯ್ದು ಬರುತ್ತವೆ. ನಂತರ ಈ ಮೂರೂ ದೈವಗಳು ಅಗ್ನಿ ಕುಂಡವನ್ನು ಪೂರ್ಣವಾಗಿ ಸುತ್ತಿ ಪ್ರದಕ್ಷಿಣೆ ಸಲ್ಲಿಸುವುದು ಕಂಡುಬರುತ್ತದೆ.

ಅಗ್ನಿಸೇವೆಯ ನಂತರ ಮೂರೂ ದೈವಗಳು ಗ್ರಾಮದ ಬೀದಿಗಳಲ್ಲಿ ಮೆರವಣಿಗೆ ಹೊರಡುತ್ತವೆ. ಮೆರವಣಿಗೆಯ ಸಂದರ್ಭದಲ್ಲಿ ಭಕ್ತರು ಸಾಲುಸಾಲಾಗಿ ಬೀದಿಯ ಮಧ್ಯೆ ಕುಳಿತು ತಮ್ಮ ಮೇಲೆ ದೇವರ ಪಲ್ಲಕ್ಕಿಗಳು ಹಾಯ್ದು ಹೋಗುವಂತೆ ಪ್ರಾರ್ಥಿಸಿ, ಆಶೀರ್ವಾದ ಪಡೆಯುತ್ತಾರೆ. ಪ್ರತಿಯೊಂದು ಮನೆಯ ಮುಂದೆ ನಿಂತು ಈ ದೈವಗಳು ಕಣ್ಣುಕಾಯಿಗಳ ಪೂಜೆ ಮಾಡಿಸಿಕೊಂಡು ಅಂತಿಮವಾಗಿ ಗುಡಿದುಂಬುತ್ತವೆ.

೬೩

ಆದಿಶಕ್ತಿ ಕೆಸ್ತೂರು ಮಾರಮ್ಮನ ಕೊಳಗದ ಹಿನ್ನೆಲೆ ಐತಿಹಾಸಿಕ ಕಲಾತ್ಮಕ ಸಂಸ್ಕೃತಿಯ ಶೋಧನೆ

ರಘು ಆರ್.*

ಕೆಸ್ತೂರು ಗ್ರಾಮವು ಯಳಂದೂರು ತಾಲ್ಲೂಕು, ಚಾಮರಾಜನಗರ ಜಿಲ್ಲೆಯಲ್ಲಿದೆ.

ಕೆಸ್ತೂರು ಮಾರಿಹಬ್ಬವು ಏಳು ಗ್ರಾಮಗಳು ಹಾಗೂ ಎಲ್ಲಾ ಜನಾಂಗದವರು ಸೇರಿ ತೀರ್ಮಾನಿಸಿ, ಕುಲದ-ವರಿ (ಹಣ) ಮತ್ತು ಸಹಕಾರದಿಂದ ಆಚರಿಸುತ್ತಾರೆ. ಕೆಸ್ತೂರು ಗ್ರಾಮದ ಎಲ್ಲಾ ಜನಾಂಗದವರಿಗೂ ತಮ್ಮ ತಮ್ಮ ಪಾತ್ರ ನಿಗಧಿಯಾದಂತೆ ನಡೆದುಕೊಳ್ಳುತ್ತಾರೆ. ಪ್ರಮುಖವಾಗಿ ಗಂಡು ಹೆಬ್ರಾ ಮತ್ತು ಹೆಣ್ಣು ಹೆಬ್ರಾಗಳಿಗೆ ಮದುವೆ ಮಾಡುವ ಸಂಪ್ರದಾಯ ದಲಿತರಾದ ಆದಿಕರ್ನಾಟಕದವರಲ್ಲಿ ಕಂಡು ಬರುತ್ತದೆ. ಈ ಸಂಪ್ರದಾಯದ ಉದ್ದೇಶವೇನೆಂದರೆ ಗ್ರಾಮದ ಎಲ್ಲಾ ಜನಾಂಗದಲ್ಲಿ, ಮದುವೆಯಾದ ಹೆಣ್ಣು ಮತ್ತು ಗಂಡು ಮಕ್ಕಳಿಗೆ ವಂಶ ಬೆಳೆಯಲಿ ಎಂದು ಯಾರಿಗೂ ನಪುಂಸಕ ಅಥವಾ ಮಾಳಿಯಾದ ಹೆಣ್ಣು ಮಕ್ಕಳು ಬೇಡವೆಂದು ಪ್ರಾರ್ಥಿಸಿ, ಊರೆಲ್ಲಾ ಗಂಡು ಹೆಪ್ರಾ ಮತ್ತು ಹೆಣ್ಣು ಹೆಬ್ರಾಗಳ ಶಬ್ಧ ಮಾಡುತ್ತಾರೆ. ಎಲ್ಲಾ ವರ್ಗದವರು ಗಂಡು ಹಾಗೂ ಹೆಣ್ಣು ಲಿಂಗಗಳಿರುವ ಹೆಬ್ರಾಕ್ಕೆ ಹರಳೆಣ್ಣೆಯನ್ನು ಹಾಕಿ ಪೂಜಿಸಿ ಗೌರವಿಸುತ್ತಾರೆ. ಗ್ರಾಮದ ಎಲ್ಲಾ ಜನತೆಯು ಗಂಡು ಹೆಣ್ಣುಗಳ ವಂಶಗಳು ಬೆಳೆಯಲಿ ಎಂಬುದೇ ಇದರ ಸಾಂಪ್ರದಾಯಿಕ, ಸಾಮಾಜಿಕ, ಕಲಾತ್ಮಕ, ಐತಿಹಾಸಿಕ ಸಂಸ್ಕೃತಿಯಾಗಿದೆ. ಬ್ರಹ್ಮನ ನಿಯಮದ ಮಾನಸಪುತ್ರರ ಮನುವಿನ ಮನ್ವಂತರ ಬೆಳೆದುಬಂದಿದೆ.

ಹಾಗೆಯೇ ಭಾರತೀಯ ಹಿಂದೂ ಸನಾತನ ಸಂಸ್ಕೃತಿಯಾದ ಮಾತೃ ಶಕ್ತಿಯು ಮಹಾಭಾರತದಲ್ಲಿ ದೇವತೆ ಗಂಗೆಯ ರೂಪದಲ್ಲಿ ಪ್ರಧಾನವಾಗಿ ಕಾಣಿಸಿಕೊಳ್ಳುತ್ತಾಳೆ. ಉದಾ: ಮಹಾಭಾರತ ಕಾವ್ಯದಲ್ಲಿ ಭೀಷ್ಮತನುಜ ಸಂತತಿಯಲ್ಲಿ ಪಾಂಡುರಾಜನಿಗೆ ಶಾಪವಿದ್ದ ಕಾರಣ ಆತನಿಗೆ ಮಕ್ಕಳು ಪಡೆಯಲಾಗಲಿಲ್ಲ. ಕುಂತಿಯು ದೂರ್ವಾಶ ಮುನಿಗೆ ಸೇವೆ ಮಾಡಿ ಐದು ವರಗಳನ್ನು ಪಡೆದಿದ್ದಳು. ಈ ಸಂದರ್ಭದಲ್ಲಿ ಕುಂತಿಯು ಪಾಂಡುರಾಜನ ಅನುಮತಿ ಮೇರೆಗೆ ಮೂರು ಮಕ್ಕಳನ್ನು ಇಂದ್ರ, ಯಮ, ವಾಯು ದೇವತೆಗಳಿಂದ ಪಡೆಯುತ್ತಾಳೆ. ಮಾದ್ರಿಗೂ ಮಕ್ಕಳಾಗದ ಕಾರಣ ಕುಂತಿಯಿಂದ ಒಂದು ವರವನ್ನು ಪಡೆದು, ಅಶ್ವಿನಿ ದೇವತೆಗಳಿಂದ ಎರಡು ಮಕ್ಕಳನ್ನು ಪಡೆದು ಧರ್ಮರಾಯ, ಅರ್ಜುನ, ಭೀಮ, ನಕುಲ, ಸಹದೇವ ಎಂಬ ಕಾರಣಿ ಪುರುಷರನ್ನು ಪಡೆದು, ಮಹಾರಾಜ ಶಂತನು ಚಕ್ರವರ್ತಿಯ ವಂಶ ಬೆಳೆಯುತ್ತದೆ. ಹೀಗೆ ಭೀಷ್ಮ ತನುಜ ಸಂತತಿಯು ಪರಾಶರಮುನಿಯ ಪುತ್ರ ವ್ಯಾಸ ಮಹರ್ಷಿಯಿಂದ (ಸನ್ಯಾಸಿಯಿಂದ) ಭೀಷ್ಮತನುಜ ಸಂತತಿಯು ಮೋಕ್ಷ ಪಡೆಯಲು ಮಾರ್ಗವಾಯಿತು. ಹೀಗೆ ರಾಮಾಯಣ-ಮಹಾಭಾರತದಲ್ಲಿ ಮೋಕ್ಷ ಮಾರ್ಗಕ್ಕೆ ಕುಟುಂಬದಲ್ಲಿ ಮಕ್ಕಳು ಜನಿಸುವುದೇ ಉದ್ದೇಶವಾಗಿದೆ. ಕೆಸ್ತೂರು ಗ್ರಾಮದಲ್ಲಿ ಗಂಡು ಹೆಬ್ರಾ, ಹೆಣ್ಣು ಹೆಬ್ರಾಗಳ ಲಿಂಗಗಳನ್ನು ಪೂಜಿಸಿ ಗೌರವಿಸುವುದು ಸಂಸ್ಕೃತಿಯ ಸಂಕೇತವಾಗಿದೆ. ಗ್ರಾಮದ ಜನತೆಯ ವಂಶ ಬೆಳೆದು, ಎಲ್ಲರಿಗೂ ಸಾಮಾಜಿಕವಾಗಿ ಮೋಕ್ಷ ಪ್ರಾಪ್ತಿಯಾಗಲಿ ಎಂಬುದೇ ಸಂಪ್ರದಾಯವಾಗಿದೆ.

ಸಾಮಾಜಿಕ ಸಂಸ್ಕೃತಿಯಂತೆ ಮೈಸೂರು ಜಿಲ್ಲೆ ಹೆಚ್.ಡಿ. ಕೋಟೆ, ಇಟ್ನಾ ಗ್ರಾಮದ ಮಾರಿಗುಡಿಯಲ್ಲಿ ಗಂಡು ಮತ್ತು ಹೆಣ್ಣುಗಳ ಸ್ವರೂಪ ಸ್ತ್ರೀಲಿಂಗ-ಪುಲ್ಲಿಂಗಗಳ ಸಂಕೇತ ರೂಪವನ್ನು ಕಲ್ಲಿನಲ್ಲಿ ಮಾಡಿರುವುದು ನೋಡಬಹುದು. ಸ್ಥಳೀಯ ಜಾನಪದ ಕಥೆಯಂತೆ ಮಾರಮ್ಮನ ಗಂಡ ತಳಪಟ್ಟರಾಯನೆಂದು (ಪತಿ) ಎಂದು ಕರೆಯುತ್ತಾರೆ. ಕೆಸ್ತೂರಿನಲ್ಲಿ ಮಾರಮ್ಮನ ಪತಿ ಬೊಮ್ಮಪ್ಪನೆಂದು, ಕೊಳ್ಳೇಗಾಲದಲ್ಲಿ ಮಾರಮ್ಮನ ಗಂಡ ಬೊಮ್ಮರಾಯನೆಂದು, ಜಾನಪದ, ಐತಿಹಾಸಿಕ ಸಂಸ್ಕೃತಿಯು ಹಲವು ಗ್ರಾಮಗಳ ಮಾರಿಹಬ್ಬದಲ್ಲಿ ಕಂಡುಬರುತ್ತದೆ. ಉದಾ: ಕೊಳ್ಳೇಗಾಲದ ಮುಡಿಗುಂಡದ ಮುಳ್ಳಾಚಮ್ಮ (ಆದಿಶಕ್ತಿ) ದೇವಾಲಯದ ಗರ್ಭಗುಡಿಯಲ್ಲಿ ಒಬ್ಬ ಪುರುಷ ಸ್ತ್ರೀ ವಿಗ್ರಹಗಳು ಕಂಡುಬರುತ್ತದೆ. ಈ ಶಿಲ್ಪಗಳ ಲಕ್ಷಣವು ಇತಿಹಾಸದ

* ಚಿತ್ರಕಲಾ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಕೆಸ್ತೂರು, ಯಳಂದೂರು ತಾಲ್ಲೂಕು-೫೭೧೪೪೧.

ಸಾಂದರ್ಭಿಕ ಅಥವಾ ಕಥಾನಕ ಶಿಲ್ಪವಾಗಿದೆ, ವೈದಿಕ ಸಂಸ್ಕೃತಿಯ ತಳಹದಿಯ ಮೇಲೆ ಕರ್ನಾಟಕ ಮತ್ತು ತಮಿಳುನಾಡಿನ ಆದಿಶಕ್ತಿ ದೇವಾಲಯಗಳಲ್ಲಿ ದೇವತೆಯ ಮೂರ್ತಿ ಮತ್ತು ಗಂಡನ ನೆನಪಿಗಾಗಿ ಒಂದು ಪುರುಷನ ಸಂಕೇತವಾಗಿ ದುಂಡುಕಲ್ಲನ್ನು ಗರ್ಭಗುಡಿಯಲ್ಲಿ ಪ್ರತಿಷ್ಠಾಪಿಸಿ ಪೂಜಿಸುತ್ತಾರೆ. ಪತಿ–ಪತ್ನಿಯರ ಬಾಂಧವ್ಯಕ್ಕೆ ಸಾಕ್ಷಿಯಾಗಿ ಜಾನಪದ, ಇತಿಹಾಸ, ಪುರಾಣದಲ್ಲಿ ಕಂಡುಬರುತ್ತದೆ.

ಕೆಸ್ತೂರು ಮತ್ತು ಹಲವು ಗ್ರಾಮಗಳಲ್ಲಿ ನಾಯಕ ಜನಾಂಗದವರು ಮಾರಮ್ಮನ ತಮ್ಮಡಿಗಳು ಬಲಿಬೀಳುವ ಪದ್ಧತಿಗಳು ಕಂಡುಬರುತ್ತವೆ. ಕೆಸ್ತೂರಿನಲ್ಲಿ ಸಂಪ್ರದಾಯದಂತೆ ಮಸಿಬಲಿ, ಹೊನ್ನೂರಿನಲ್ಲಿ ಗಂಧದ ಬಲಿ, ಕೊಳ್ಳೇಗಾಲ ತಾಲ್ಲೂಕಿನ ಪಾಳ್ಯ ಗ್ರಾಮದಲ್ಲಿ ಅರಿಶಿಣ ಬಲಿ ಗುಂಡೇಗಾಲದಲ್ಲಿ ಅರಿಶಿಣ ಬಲಿ (ಇಕ್ಕಡಹಳ್ಳಿ ತಮ್ಮಡಿಗಳು) ಹೀಗೆ ಗ್ರಾಮದೇವತೆಯ ಮಾರಿಹಬ್ಬಗಳಲ್ಲಿ ನಾಯಕ ಜನಾಂಗದ ತಮ್ಮಡಿಗಳು ಬಲಿಬೀಳುವ ಪದ್ಧತಿಯನ್ನು ಸಂಪ್ರದಾಯವಾಗಿ ಬೆಳೆಸಿಕೊಂಡು ಬಂದಿರುತ್ತಾರೆ. ಇವರಲ್ಲಿ ಗಂಡು ದೇವರು ಕಾಮರಾಯ (ಮಾನಸ ಪುತ್ರ) ಹೆಣ್ಣು ದೇವರು ಮಾನಸದೇವಿ ಎಂದು ಕರೆಯುತ್ತಾರೆ. (ಕೆಸ್ತೂರು ಮಾರಮ್ಮ) ತಮ್ಮಡಿಗಳು ಎಮ್ಮೆ ಕುಲದವರಾಗಿರುತ್ತಾರೆ. ಉದಾ: ಎರುಮೆನಾಯಕ ಎಂದು ಹೆಚ್.ಡಿ. ಕೋಟೆ ಶಾಸನದಲ್ಲಿ ಕಂಡುಬರುತ್ತದೆ ಹಾಗೂ ಡಾ॥ ಷ. ಶೆಟ್ಟರ್‌ರವರು ಎರುಮೆನಾಯಕನ ಬಗ್ಗೆ, ಮೂರನೇ ಶತಮಾನದಲ್ಲಿ ಕನ್ನಡ ಶಾಸನಗಳನ್ನು ತಮಿಳುನಾಡಿನ ಪಳನಿಯಲ್ಲಿ ಪತ್ತೆಹಚ್ಚಿದ್ದಾರೆ.

ಕೆಸ್ತೂರು ಮಾರಿಹಬ್ಬದಲ್ಲಿ ಲಿಂಗಾಯಿತರು ಗುಳಿಯಮ್ಮನ ಕೇಲು ಎಂದು ಮೊದಲು ತರುತ್ತಾರೆ. ಈ ಒಕ್ಕಲಿನವರು ಮುಳ್ಳೂರಿನಲ್ಲಿ ವಾಸವಿದ್ದು ಕೆಸ್ತೂರಿಗೆ ಬಂದು ಹಬ್ಬ ಆಚರಿಸುತ್ತಾರೆ. ಇವರು ಹೇಳುವಂತೆ ಐತಿಹಾಸಿಕವಾಗಿ ನಾವು ಮಂಡ್ಯ ಜಿಲ್ಲೆ ಖಾನ್ ಮದ್ದೂರ್ ಕೆಸ್ತೂರಿನ ಪಾಳ್ಯಗಾರ ನಾಯಕರ ಉಪಟಳದಿಂದ ಅಜ್ಜಿ ಎರಡು ಮೊಮ್ಮಕ್ಕಳು, ಹರಿಜನರು, ನಾಯಕರು ಇವರೆಲ್ಲರೂ ರಾತ್ರೋರಾತ್ರಿ ಈ ಕೆಸ್ತೂರಿಗೆ ತಪ್ಪಿಸಿಕೊಂಡು ಬಂದೆವು ನಾವು ಇರುವ ವಿಷಯ ದಂಡನಾಯಕರಿಗೆ ಗೊತ್ತಾಗಿ, ಈ ಊರಿಗೆ ಬರುತ್ತಾರೆ ಎಂಬುವ ವಿಷಯ ತಿಳಿದು, ಆಲೋಚಿಸಿ ನಾವು ಮದುವೆಗೆ ಮಾತು ತಪ್ಪಿದ್ದರಿಂದ ನಮ್ಮ ಉಳಿಗಾಲವಿಲ್ಲ ಅಥವಾ ನಮ್ಮ ಸಂಸ್ಕೃತಿ ಸಂಪ್ರದಾಯ ಹಾಳಾಗುತ್ತದೆ. ಎಂದು ಭಾವಿಸಿ, ಗುಳಿಯನ್ನು ತೋಡಿ, ಮಾರಮ್ಮನನ್ನು ಪ್ರಾರ್ಥಿಸಿ ಅಜ್ಜಿ ಮತ್ತು ಎರಡು ವಯಸ್ಕ ಹೆಣ್ಣು ಮಕ್ಕಳು ಗುಳಿಯಲ್ಲಿ ಬಿದ್ದು ಜನರ ಸಮ್ಮುಖದಲ್ಲಿ ಆತ್ಮಾರ್ಪಣೆ ಮಾಡಿಕೊಂಡರು ಎಂದು ಮುಳ್ಳೂರಿನ ಯಜಮಾನರು ತಿಳಿಸಿರುತ್ತಾರೆ. ಅಂದಿನಿಂದ ಅಜ್ಜಿ ಮತ್ತು ಹೆಣ್ಣುಮಕ್ಕಳ ನೆನಪಿಗೆ ಗುಳಿಯನ್ನು ಆತ್ಮಾರ್ಪಣಾ ದೇವಿ ಎಂದು ಪೂಜಿಸುತ್ತಾರೆ.

ಕೆಸ್ತೂರು ಮಾರಮ್ಮನ ತಮ್ಮಡಿಗಳು ಹಬ್ಬಗಳಲ್ಲಿ ಮಾರಿಕೇಲನ್ನು ತರುತ್ತಾರೆ. ಕಾಮರಾಯನ ಬಲಿದೇವರ ಮನೆಯಿಂದ ಮಾರಮ್ಮನ ಕೊಳಗವನ್ನು ಉತ್ಸವದಲ್ಲಿ ತರುತ್ತಾರೆ. ಪಟೇಲ್ ಮೊಟುಕ್ಕೆ ಹೊನ್ನನಾಯಕ, ಇವರ ವಂಶಸ್ಥರು ಮಾರಮ್ಮನ ಪಂಚಲೋಹದ ಮೂರ್ತಿ ಮತ್ತು ಕೊಳಗವನ್ನು ಸ್ವಂತಕ್ಕೆ ಮಾಡಿಸಿಕೊಂಡಿದ್ದಾರೆ. ಇವರು ಜ್ಯೋತಿಷ್ಯ, ಇತಿಹಾಸ, ಪುರಾಣ ಬಲ್ಲವರಾಗಿದ್ದರು ಎಂದು ತಿಳಿದುಬರುತ್ತದೆ. ಗ್ರಾಮಗಳಲ್ಲಿ ಹೊನ್ನೆಮರದ ಮಾರಮ್ಮನನ್ನು ಪೂಜಿಸುವ ಸಂಪ್ರದಾಯ ತೊರೆನಾಡಿನ ಪಾಳೆಗಾರರಲ್ಲಿ ತೊರೆಯರ ಮಾರನಾಯಕನು ಕ್ರಿ.ಶ. ೧೩೯೯ರ ಪೂರ್ವಕಾಲಘಟ್ಟದಲ್ಲಿ ಕಾರ್ಗಳ್ಳಿ ಸಂಸ್ಥಾನದಲ್ಲಿ, ಇವರ ಆಡಳಿತ ಕಾಲದಲ್ಲಿ ರೂಢಿಗೆ ತಂದಿರುತ್ತಾರೆ. ಬಲಗೈನವರಿಗೆ ಮತ್ತು ಎಡಗೈನವರಿಗೆ ಪ್ರಾಮುಖ್ಯತೆ ಕೊಟ್ಟು ಮಾರಿಹಬ್ಬಗಳಲ್ಲಿ ಅವಕಾಶ ನೀಡಿ, ಸಹಭಾಗಿತ್ವದಲ್ಲಿ ಹಲವು ಕಡೆ ಮಾರಿಹಬ್ಬಗಳನ್ನು ಆಚರಿಸುತ್ತಾರೆ.

ಉದಾ: ಕೆಸ್ತೂರು ಮಾರಿಹಬ್ಬದಲ್ಲಿ ದಲಿತರಾದ ಆದಿಕರ್ನಾಟಕದವರು ಮತ್ತು ನಾಯಕ ಜನಾಂಗದವರು ಸೇರಿ ಮಾರಮ್ಮನಿಗೆ ಉಯ್ಯಾಲೆ ಉತ್ಸವವನ್ನು ಬಲಿದೇವರ ಮನೆ ಮುಂಭಾಗದಲ್ಲಿ ಆಚರಿಸುತ್ತಾರೆ. ಹಾಗೂ ಪೂಜೆಗೆ ಅವಕಾಶ ಕಲ್ಪಿಸಿಕೊಟ್ಟಿರುತ್ತಾರೆ ಎಂದು ತಿಳಿದುಬರುತ್ತದೆ.

ಆದಿಶಕ್ತಿ ಕೆಸ್ತೂರು ಮಾರಮ್ಮನ ಕೊಳಗ ಪಂಚಲೋಹ ದಿಂದ ಮಾಡಿದ್ದು ಸುಂದರವಾದ ಮುಖವುಳ್ಳವಾಗಿದ್ದು ಜಾನಪದ ಶೈಲಿಯ ಲಕ್ಷಣಕ್ಕೆ ಪೂರಕವು ಆಗಿದೆ.

ಮಾರಿಹಬ್ಬದ ಉತ್ಸವದಲ್ಲಿ ತಮ್ಮಡಿಗಳು ಬಲಿದೇವರ ಮನೆ ಹಾಗೂ ಕಾಮರಾಯನ ಗುಡಿಯಿಂದ ಆದಿಶಕ್ತಿ ಕೊಳಗವನ್ನು ಮತ್ತು ಉತ್ಸವಮೂರ್ತಿ ಮಾರಮ್ಮನನ್ನು ತರುತ್ತಾರೆ. ಹೊನ್ನೆಮರದ ಮಾರಮ್ಮನಿಗೆ ಈ ಆದಿಶಕ್ತಿ ಕೊಳಗವನ್ನು ಧರಿಸುತ್ತಾರೆ, ನಂತರ ಬಲಿದೇವರ ಮನೆಯಿಂದ ಸಂಪ್ರದಾಯದಂತೆ ಬಲಿಯು ಬಿದ್ದುಹೋಗುತ್ತಾನೆ. ಬಲಿಬಿದ್ದ ವ್ಯಕ್ತಿಯನ್ನು ಜಾಗ್ರತೆಯಿಂದ ಉಪ್ಪಾರ ಜನಾಂಗದವರು ಸಂಪ್ರದಾಯದಂತೆ ಎತ್ತಿಕೊಂಡು ಉತ್ಸವದಲ್ಲಿ ಬರುತ್ತಾರೆ. ಮಾರಿಯಮ್ಮನ ಗುಡಿಯ ಮುಂದೆ ಬೊಮ್ಮಪ್ಪನ ಕಲ್ಲಿಗೆ ತಾಗಿಸಿ, ಗರ್ಭಗುಡಿಯ ಮುಂಭಾಗದ ರಂಗದಲ್ಲಿ ಮಲಗಿಸುತ್ತಾರೆ. ಆ ಕಡೆ ಮಡಿವಾಳರು ರಾಕ್ಷಸನ ಮುಖವಾಡ ಧರಿಸಿ ಬರುತ್ತಾರೆ. ಈ ಕಡೆ ವಿಶ್ವಕರ್ಮ ಸಮಾಜದ ಲಿಂಗವಂತ ಆಚಾರ್ಯರು ಆದಿಶಕ್ತಿ ಪಾರ್ವತಿಯ ಮುಖವಾಡವನ್ನು ಧರಿಸಿ ಬರುತ್ತಾರೆ. ನಂತರ ಬಿದ್ದ ಬಲಿಯ ಸುತ್ತ ಸುತ್ತುತ್ತಾ

ರಾಕ್ಷಸನು ಬಲಿಯನ್ನು ತಿನ್ನಲು ಹವಣಿಸುತ್ತಾನೆ. ಆಗ ಆದಿಶಕ್ತಿ ಪಾರ್ವತಿಯು ತಡೆಯುತ್ತಾಳೆ, ರಾಕ್ಷಸನು ಬಲಿಯನ್ನು ಕೊಡು ಎಂದು ಕೇಳುತ್ತದೆ. ತಾಯಿಯು ಆಗಲಿ ಎಂದು ಬುದ್ಧಿವಂತಿಕೆ ಯಿಂದ ಸಮಯವನ್ನು ದೂಡುತ್ತಾಳೆ. ಅಷ್ಟರಲ್ಲಿ ಸೂರ್ಯ ಉದಯವಾದ್ದರಿಂದ ರಾಕ್ಷಸನ ಆಸೆ ನೇರವೇರುವುದಿಲ್ಲ. ಬಿದ್ದ ಬಲಿಯು ಬೆಳಿಗ್ಗೆ ೬ ಗಂಟೆಯ ಸಮಯದಲ್ಲಿ ಎಚ್ಚರಗೊಳ್ಳುತ್ತಾನೆ. ಪಾರ್ವತಿಯು ಪ್ರಾಣದಾನ ಮಾಡಿರುತ್ತಾಳೆ. ಹೀಗೆ ಆದಿಶಕ್ತಿ ಮಾರಮ್ಮಳು ಬಲಿಯ ರಕ್ಷಣೆಯನ್ನು ಮಾಡುತ್ತಾಳೆ. ಎದ್ದ ಬಲಿಯ ಉತ್ಸವ ವಿಜೃಂಭಣೆಯಿಂದ ಆಚರಿಸುತ್ತಾರೆ. ಇಲ್ಲಿಗೆ ಮಾರಿಹಬ್ಬದ ಪ್ರಮುಖ ಘಟ್ಟ ಮುಕ್ತಾಯವಾಗುತ್ತದೆ. ಬಲಿ ಬೀಳುವ ಪದ್ಧತಿಯು ಸಾಮಾಜಿಕವಾಗಿ ತಮ್ಮಡಿಯ ವಂಶದಲ್ಲಿ ಉಳಿದು ಬಂದಿದೆ. ಈ ರೀತಿಯ ಬಲಿ ಬೀಳುವ ಸಂಪ್ರದಾಯ ನಾಯಕ ಜನಾಂಗದಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಕಾರಣ ವೇನಿರಬಹುದೆಂದು ಅವಲೋಕಿಸಿದಾಗ ಸಚ್ಚಾರಿತ್ರವುಳ್ಳ ವ್ಯಕ್ತಿಯ ವಂಶ (ಕ್ಷತ್ರಿಯ) ಉಳಿಯಬೇಕೆಂದು, ಸಾಮಾಜಿಕ ಸಂಕಲ್ಪವಾಗಿದೆ. ಅಥವಾ ದೈವಭಕ್ತನಾದ ತಮ್ಮಡಿ ವಂಶ ಉಳಿಯಬೇಕೆಂದು ಹೀಗೆ ಕ್ಷತ್ರಿಯವಂಶ, ರಾಜವಂಶ ಉಳಿಯಲಿ ಎಂಬ ಅಭಿಪ್ರಾಯವಾಗಿದೆ. ಕಾರಣ ಇತಿಹಾಸ ದುದ್ದಕ್ಕೂ ರಾಜನ ವಂಶವನ್ನು ಕಾಲಕಾಲಕ್ಕೆ ಬೆಳೆಯಲು ಬಿಡದೆ ನಿರ್ವಂಶ ಮಾಡಿದ್ದಾರೆ.

ಮಾರಮ್ಮನ ಕೊಳಗದ ಲಕ್ಷಣ : ಆದಿಶಕ್ತಿ ಮಾರಮ್ಮನ ಕೊಳಗ ಪಂಚಲೋಹದಿಂದ ಮಾಡಿರುತ್ತಾರೆ. ಅಪರೂಪದ ಸುಂದರವಾದ ಮುಖವುಳ್ಳ ಕೊಳಗವಾಗಿದೆ. ಇದರ ಮೇಲ್ಭಾಗದಲ್ಲಿ ಬೆಳ್ಳಿಯಿಂದ ಮಾಡಿದ ಅಲಂಕಾರಿಕ ನಕ್ಷೆವುಳ್ಳ ಚಿತ್ರಣ ಬೇರೆಯಾಗಿ ಕಾಣಬರುತ್ತದೆ. ಕಳಸ ಬೈತಲೆಬೊಟ್ಟು (ಸೂರ್ಯ–ಚಂದ್ರರನ್ನು ಸಾಕ್ಷಿಯಾಗಿ ಚಿತ್ರಿತವಾಗಿದೆ.) ಸೂರ್ಯ, ಚಂದ್ರ, ಹಣೆಯಲ್ಲಿ ವಿಭೂತಿಪಟ್ಟೆ, ಕುಂಕುಮಬೊಟ್ಟು ಅಗಲವಾದ ಮೀನಿನ ಕಣ್ಣು, ನೀಳವಾದ ಮೂಗುಹಾಗೂ ಮೂಗುತಿ ತುಟಿಗಳ ಮೇಲೆ ಸುಂದರವಾದ ಗತ್ತಿನ ಮೀಸೆ, ಕಿವಿಯಲ್ಲಿ ರಂಧ್ರ ಮತ್ತು ಕಿವಿಯ ಮೇಲ್ಭಾಗದಲ್ಲಿ ಬುಗಡಿ (ಕಶ್ಯಪ ಶಿಲ್ಪ ಶಾಸ್ತ್ರದಲ್ಲಿ ಮಧುರೆ ನಾಯಕರ ಕಾಲಘಟ್ಟದಲ್ಲಿ ಶಿಲ್ಪಸಂಸ್ಕೃತಿಯಲ್ಲಿ ಕಿವಿಗೆ ಬುಗುಡಿಯನ್ನು ಧರಿಸುವ ಸಂಪ್ರದಾಯ ಪದ್ಧತಿ ಬಂದಿರುತ್ತದೆ.) ಕತ್ತಿನಲ್ಲಿ ತಾಳಿ ಕೆಳಗಭಾಗದಲ್ಲಿ ಮೂರು ಗೆರೆಗಳು, ಬ್ರಹ್ಮಸೂತ್ರವೆಂದು ತಿಳಿಯಬಹುದು. ಹಿಂಬದಿಯಲ್ಲಿ ಜಡೆಜಿಲ್ಲೆ ಹಾಗೂ ಕುಚ್ಚು ಇದೆ. ಜಡೆ ಸುಂದರವಾಗಿ ಹೆಣೆದಂತಿದೆ. ಎರಕದಿಂದ ಮಾಡಿದ ಆದಿಶಕ್ತಿ ಮಾರಮ್ಮನ ಕೊಳಗವು ಕಂಚುಗಾರ ಕಲಾವಿದನ ನಿಪುಣತೆಯನ್ನು ತೋರಿಸುತ್ತದೆ. ಈ ಕಲಾವಿದನ ಭಾವನೆ ಯಂತೆ ಮಾರಮ್ಮ ತಾಯಿ ಅಪರೂಪದ ಸೌಂದರ್ಯ ವುಳ್ಳವಳು ಈಕೆ ರಾಜನ ಮಡದಿಯಾಗಿದ್ದು, ಸಾಮಾಜಿಕ ಜೀವನದ ರಾಜನ ಕಥೆಯನ್ನು ಮತ್ತು ಪೌರಾಣಿಕ ದೇವಿಪುರಾಣದ ಆದಿಶಕ್ತಿಯನ್ನು ಕೆಸ್ತೂರು ಮಾರಮ್ಮನ ಕೊಳಗದಲ್ಲಿ ಕಂಚುಗಾರ ಶಿಲ್ಪದ ಇತಿಹಾಸ, ಪುರಾಣಗಳನ್ನು ಹೇಳಲು ಹಾಗೂ ಸತ್ಯವು ಮುಂದೊಂದು ದಿನ ತಿಳಿಯಲಿ ಎಂದು ಶಿಲ್ಪಿ ಮಾಡಿದ್ದಾನೆ.

ಕೆಸ್ತೂರಿನ ಉಪ್ಪಾರ ಬೀದಿಯಲ್ಲಿರುವ ಚಿಕ್ಕಮ್ಮನ ದೇವಸ್ಥಾನದಲ್ಲಿ ಹಲವು ಪಂಚಲೋಹದ ಮೂರ್ತಿಗಳಿವೆ. ಎರಡು ಕಳಸದ ಮೂರ್ತಿಗಳಲ್ಲಿ ಆದಿಶಕ್ತಿಯ ಮಾರಮ್ಮನ ಮುಖದ ಲಕ್ಷಣದಲ್ಲಿ ಗತ್ತಿನ ಮೀಸೆ ಇರುವುದು ಸುಂದರವಾಗಿ ಕಾಣುತ್ತದೆ. ಈ ಮೂರ್ತಿ ಕಳಸವು ಮತ್ತು ಕೆಸ್ತೂರು ಮಾರಮ್ಮನ ಕೊಳಗವು ಸ್ವರೂಪ ಲಕ್ಷಣವು ಒಂದೇ ಭಾವನೆಯಾಗಿದೆ.

ದಕ್ಷಿಣ ಭಾರತೀಯ ಹಿಂದೂ ಸನಾತನ ಸಂಸ್ಕೃತಿಯಲ್ಲಿ ಶಕ್ತಿದೇವತೆಯು ಪ್ರಧಾನವಾಗಿ ಕಾಣುತ್ತಾಳೆ. ಆದರೆ ಪ್ರಕೃತಿ–ಪುರುಷ ಪ್ರಧಾನ ಸಮಾಜದಲ್ಲಿ ಗಂಡು ದೇವರ ಸಹಕಾರದಿಂದ ಅರ್ಧನಾರೀಶ್ವರನೆಂದು ಕರೆಯಿಸಿಕೊಂಡಿದ್ದಾನೆ. ಸತ್‌ಚಿತ್ ಆನಂದ ಸ್ವರೂಪನಾದ ಸ್ತ್ರೀ–ಪುರುಷ ಶಕ್ತಿಗಳ ಅರ್ಧನಾರೀಶ್ವ ರರ ಶಿಲ್ಪವು ತಮಿಳುನಾಡಿನ ಧಾರಸುರಂನಲ್ಲಿದೆ.

ಕಾಲಾನುತೀತವಾಗಿ ಸ್ತ್ರೀ ಶಕ್ತಿಯು ನವದುರ್ಗಿಯಾಗಿ ಕಾಣಿಸಿಕೊಳುತ್ತಾ ಬಂದಿದ್ದಾಳೆ. ರಾಜರುಗಳ ಕಾಲಧರ್ಮ ಗಳಲ್ಲಿ ಶಿಲ್ಪಕಲಾ ಸಂಸ್ಕೃತಿಯಲ್ಲಿ, ಸಪ್ತಮಾತೃಕೆಯ ಶಿಲ್ಪಗಳು ಹಾಗೂ ಉಬ್ಬು ಶಿಲ್ಪಗಳು ಕಾಲಕಾಲಕ್ಕೆ ದೇವಾಲಯ ಹಾಗೂ ಬಯಲಿನಲ್ಲಿ ಪೂಜಿಸಿಕೊಂಡ ಸಂಸ್ಕೃತಿ ಕಂಡುಬರುತ್ತದೆ.

ಮಾನವ ಮತ್ತು ಮಾನವಿಯರ ಸಾಮಾಜಿಕ ಸಂಸ್ಕೃತಿ ಯಲ್ಲಿ ಹಾಗೂ ಇತಿಹಾಸ ಕಾಲಘಟ್ಟದಲ್ಲಿ ನಾನಾ ದೇವತೆ–ದೇವರುಗಳ ಕಲ್ಪನೆ ಸಹಜ ಸ್ವರೂಪವನ್ನು ಪಡೆದುಕೊಂಡಿದೆ. ನಂತರ ಸ್ತ್ರೀ–ಪುರುಷರ ಸ್ವರೂಪಕ್ಕೆ ವಿಶೇಷ ಅರ್ಥ ಕಲ್ಪನೆ ಮಾಡಿ ಶಕ್ತಿಗಳನ್ನು ವೈಭವೀಕರಿಸಿ ಲೋಕಕಲ್ಯಾಣಾರ್ಥವಾಗಿ ಸಪ್ತಮಾತೃಕೆಯಲ್ಲಿ ಮೂರು ತಲೆಯ ಬ್ರಾಹ್ಮಣಿ (ಉದಾ: ವರದಹಸ್ತ) ಅಭಯಹಸ್ತ, ರುದ್ರಾಕ್ಷಿ ಕುಚಾಯಿ ಚೊಂಬು ಇವು ಶಿಲ್ಪ ಶಾಸ್ತ್ರದಂತೆ ಬ್ರಾಹ್ಮಿಣಿ ಎಂದು ಗುರ್ತಿಸಬಹುದು. ಹಾಗೆಯೇ ಮೂರು ತಲೆಯು ಮತ್ತು ಬಲಗೈಯಲ್ಲಿ ಕತ್ತಿ, ಒಂದುಗಡೆ ತ್ರಿಶೂಲ ಎಡಗಡೆ ಪಾನಬಟ್ಟಲು, ಢಮರುಗ ಆಯುಧಗಳನ್ನು ಹಿಡಿದು ಆದಿಶಕ್ತಿ ಮಾರಮ್ಮನ ಲಕ್ಷಣ ಹೊಂದಿರುತ್ತದೆ. ಈ ತಾಯಿಗೆ ಋಷಿಕೇಶದಲ್ಲಿ ಮೂರು ತಲೆಯುಳ್ಳ ಅಮೃತ ಶಿಲೆಯ ವಿಗ್ರಹವನ್ನು ಮಾನಸದೇವಿ ಎಂದು ತಮಿಳುನಾಡಿನಲ್ಲಿ ಕುಮ್ಮತಮ್ಮ ಎಂದು ಮೂರು

ತಲೆಯ ಪಂಚಲೋಹದ ಮೂರ್ತಿಯಿದೆ. ಮಾನಸದೇವಿ ಮನಸ್ಸಿನ ಭಾವನೆಯಲ್ಲಿ ದೇವ–ದೇವಿಯರ ಶಕ್ತಿ ಮೇಳೈಸುವ ಗುಣಸ್ವಭಾವ ಅನುಸಾರವಾಗಿ ಸ್ವರೂಪವನ್ನು, ಬಹುರುಂಡಗಳು ಮತ್ತು ಬಹುಕೈಗಳನ್ನು ಆಯುಧ ಹಿಡಿದಿರುವಂತೆ ಕಲ್ಪನೆ ಮಾಡಿ ಸ್ತ್ರೀ–ಪುರುಷರ ಸುಂದರ ದೇವತಾಮೂರ್ತಿಗಳನ್ನು ಶಿಲ್ಪದಲ್ಲಿ ಕೆತ್ತನೆ ಮಾಡಿದ್ದಾರೆ. ಉದಾ: ರಾವಳನ ಉಬ್ಬು ಶಿಲ್ಪದಲ್ಲಿ ಮೂ ತಲೆ ತಾಯಿ, ಸೈನಿಕನ ಭಾವ ಶಿಲ್ಪ ಹಾಗೂ ಮೂರು ತಲೆಯ ಸ್ತ್ರೀ ಮಗುವನ್ನು ಎತ್ತಿಕೊಂಡಿರುವ ಶಿಲ್ಪಗಳು ಕಂಡುಬರುತ್ತದೆ. ಈ ಶಿಲ್ಪಗಳನ್ನು ಮೌಖಿಕ ಶಾಸನವಾಗಿ ಅಭ್ಯಾಸಿಸಿದಾಗ ರಾಜನ ಮನಸ್ಸಿನ ಮಾನಸದೇವಿ ಮತ್ತು ದೇವರ ಶಿಲ್ಪಗಳ ವೈಯಕ್ತಿಕ ಕಥೆಯನ್ನು ತಿಳಿಯಬಹುದು.

ಭಾರತೀಯ ಸಂಸ್ಕೃತಿಯ ದೇವರುಗಳ ಮೂಲ ವಿಗ್ರಹ ಉದ್ಭವಮೂರ್ತಿಯಾಗಿಯೂ ಕಾಣಿಸಿಕೊಂಡಿದೆ. ಮತ್ತು ಶಿಲ್ಪಗಳನ್ನು ಒಂದು ರೂಪಕ್ಕೆ ಕೆತ್ತನೆ ಮಾಡಿ ಉಬ್ಬು ಶಿಲ್ಪ ಮತ್ತು ಪ್ರತಿಷ್ಠಾಪನೆ ಮಾಡಿರುವ ವೈದಿಕ ಧರ್ಮದ ಶಿಷ್ಟ ಸಂಸ್ಕೃತಿ ಮತ್ತು ಕಾಲಧರ್ಮದ ಸಂಸ್ಕೃತಿಯು (ಕಾಲಘಟ್ಟದ ಶಿಲ್ಪದಲ್ಲಿ) ಬೆಳೆದು ಬಂದಿರುವುದು ಹಾಗೂ ಸಂಪ್ರದಾಯವಾಗಿ ಬೆಳೆಸಿಕೊಂಡು ಬಂದಿದ್ದಾರೆ.

ಮಾರಮ್ಮನ ಕಥೆಯಲ್ಲಿ ಪತಿ–ಪತ್ನಿಯರು ಬೇರೆಯಾಗಿ ಮಾರಮ್ಮ ರೋಗರುಜಿನ ಬಂದಾಗ ದೊಡ್ಡಮ್ಮ, ಚಿಕ್ಕಮ್ಮ, ಧಡಾರದಮ್ಮ ಎಂದು ಪೂಜಿಸುವ ಮಾರಮ್ಮ, ಸೈನಿಕರ ದಂಡಿನ ಮಾರಮ್ಮ, ಮಹಾಸತಿ ಮಾರಮ್ಮ, ಪ್ರೀತಿಯ ಸುಗುಣ ಪತ್ನಿ ಮಾರಮ್ಮ, ವರ್ಣಸಂಕರಕ್ಕೆ ಆದ ಮಡದಿ, ವಲಸೆ ಮಾರಮ್ಮ, ಗ್ರಾಮರಕ್ಷಣೆಗೆ ಜಿಸಿಲ ಮಾರಮ್ಮ ಗುಣಸ್ವಭಾಗಳ ಗ್ರಾಮದೇವತೆ ಮಾರಮ್ಮನ ಬಹುವಿಧದ ಕಾರ್ಯಕಾರಣದ ಸಾಮಾಜಿಕ ಹಿನ್ನಲೆಯ ಮಾರಮ್ಮನ ಚಿತ್ರಣ ಕಂಡುಬರುತ್ತದೆ.

ದಕ್ಷಿಣ ಭಾರತದ ಸಂಸ್ಕೃತಿಯಲ್ಲಿ ತಮಿಳುನಾಡು, ಕರ್ನಾಟಕದಲ್ಲಿ ದೈವಿಶಕ್ತಿಯ ಪುರಾಣ ಸಂಸ್ಕೃತಿಯು ಉತ್ತಮವಾಗಿ ಬೆಳೆದಿದೆ. ಆದರೆ ತಮಿಳುನಾಡಿನಲ್ಲಿ ಶಕ್ತಿದೇವತೆಗೆ ಪುರುಷ ಶಕ್ತಿಗೆ ಪ್ರಧಾನವಾದ ಮೀಸೆಯನ್ನು ಅಲಂಕಾರಿಕವಾಗಿ ಧರಿಸುವ ಪದ್ಧತಿ (ಬೆಳ್ಳಿಯಲ್ಲಿ ಮಾಡಿದ ಕೋರ್ ಮೀಸೆ) ಸ್ತ್ರೀ ದೇವತೆಯಲ್ಲಿ ಕಂಡುಬರುವುದಿಲ್ಲ. ಉದಾ: ಆದಿಶಕ್ತಿ, ಪೆರಿಯನಾಯಕಿ, ಮಾಳಿಗೆಪುರುತಮ್ಮ, ಮಾಳಿಗ್ಗೆ ಅರಿಸಿಯಮ್ಮ, ಬಣ್ಣಾರಿ ಮಾರಮ್ಮನೆಂದು ಪೂಜಿಸುತ್ತಾರೆ.

ಕರ್ನಾಟಕದಲ್ಲಿ ಶಕ್ತಿದೇವತೆಯಾದ ಮಾರಮ್ಮಳ ಮೂಲ ವಿಗ್ರಹ ಉದ್ಭವ ಮೂರ್ತಿಯಾಗಿಯೂ ಅಥವಾ ಹೊನ್ನೆಮರದಿಂದ ರೂಪಿತವಾದದ್ದು ಮತ್ತು ಪುರಾಣ ಕಥಾರೂಪದ ಕೆತ್ತನೆಯು ಆಗಿರುತ್ತದೆ. ಹೀಗೆ ಮಾರಮ್ಮನಿಗೆ ಅಲಂಕಾರವಾಗಿ ಪುರಾಣ ಸಂಸ್ಕೃತಿಯು ತಿಳಿದು ಭಾಪಿಸಿ ಅಲಂಕರಿಸುತ್ತಾರೆ (ಚಾಮುಂಡಿ) ಹಾಗೂ ಕಲಾತ್ಮಕ ಸಂಸ್ಕೃತಿಯಂತೆ ಪಂಚಲೋಹದ ಕೊಳಗವನ್ನು ಮಾಡಿರುವುದು ಮತ್ತು ಬೆಳ್ಳಿಯ ಮುಖವಾಡ (ಮುಖಾಂಬರೆ) ಧರಿಸುವ ಪದ್ಧತಿಯು ಮಾರಮ್ಮನ ಸಂಸ್ಕೃತಿಯಲ್ಲಿ ಕಂಡುಬರುತ್ತದೆ. ಕಣ್ಣು, ವಿಭೂತಿ, ತಿಲಕ, ಕೋರೆಮೀಸೆ ಮುಂತಾದ ಅಲಂಕರಣ ಭಾಗಗಳಿಂದ ಅಲಂಕರಿಸುತ್ತಾರೆ.

ತಮಿಳುನಾಡಿನ ಸಂಸ್ಕೃತಿಯಲ್ಲಿ ಶಿವಲಿಂಗಕ್ಕೆ ಗಂಗಾಧರೇಶ್ವರ ಮುಖವಾಡ ಧರಿಸುವ ಹಾಗೂ ಕೊಳಗ ಧರಿಸುವ ಪದ್ಧತಿ ಇರುವುದಿಲ್ಲ. ಇತಿಹಾಸ ಸಂದರ್ಭ ಮತ್ತು ಸಂಸ್ಕೃತಿ ವಿಭಿನ್ನವಾಗಿದೆ. ಕರ್ನಾಟಕದಲ್ಲಿ ಶಿವ ದೇವಾಲಯದಲ್ಲಿ, ಕೊಳ್ಳೇಗಾಲದ ಸೋಮೇಶ್ವರ, ಕೋಲಾರದ ಮರಳೇಶ್ವರ, ಮುಡುಕುತೊರೆ ಮಲ್ಲಿಕಾರ್ಜುನ, ವಿಜಯನಗರದ ವಿರೂಪಾಕ್ಷ, ಮಲೈಮಹದೇಶ್ವರ, ಮುರುಡೇಶ್ವರ, ಗಂಗಾಧರೇಶ್ವರ, ಜಗದೀಶ್ವರ, ಮಂಜುನಾಥೇಶ್ವರ ಮುಂತಾದ ಶಿವಲಿಂಗಕ್ಕೆ ಕೊಳಗವನ್ನು ಧರಿಸುವ ಸಂಪ್ರದಾಯ ಕಂಡುಬರುತ್ತದೆ. ಕರ್ನಾಟಕದಲ್ಲಿ ಶಿವನ ಜಟೆಯಲ್ಲಿ ಗಂಗೆಯನ್ನು ಧರಿಸಿರುವಂತೆ ಪಂಚಲೋಹದ ಕೊಳಗ ಧರಿಸುವ ಸಂಸ್ಕೃತಿ ಪ್ರಮುಖವಾಗಿ ಕಂಡುಬರುತ್ತದೆ. ಆದರೆ ತಮಿಳುನಾಡಿನಲ್ಲಿ ಶಿವಲಿಂಗಕ್ಕೆ ಗಂಗಾಧರೇಶ್ವರನ ಕೊಳಗ ಧರಿಸುವ ಪದ್ಧತಿಯು ಕಂಡುಬರುವುದಿಲ್ಲ. ಕಾರಣ ದಕ್ಷಿಣ ಭಾರತದ ಕಾವೇರಿಯನ್ನು (ದಕ್ಷಿಣದ ಗಂಗೆಯನ್ನು) ಕರ್ನಾಟಕದವಳು ಎಂದು ಪರಿಗಣಿಸಿದ್ದಾರೆ. ಆದರೆ ಶಿವನ ಸ್ವರೂಪ ಶಿವಲಿಂಗಕ್ಕೆ ಸದಾ ಗಂಗೆಯನ್ನು ಹನಿಹನಿಯಾಗಿ ಧಾರೆಪಾತ್ರೆಯಿಂದ ಬೀಳುತಿರುವಂತೆ ಸದಾಶಿವನು ಉಗ್ರರೂಪ ತಾಳದೆ ಕಾಮಕಾಮೇಶ್ವರನಾಗಿ ಶಾಂತಚಿತ್ತದಿಂದಿರುವಂತೆ ಮಾಡಿ ಆಚಾರ–ವಿಚಾರ ಸಂಸ್ಕೃತಿಯನ್ನು ಪಾಲಿಸುತ್ತಾ ಬಂದಿದ್ದಾರೆ. ಈ ಪದ್ಧತಿಯು ತಮಿಳುನಾಡಿನ ಸಂಸ್ಕೃತಿಯಲ್ಲಿ ಪ್ರಚಲಿತದಲ್ಲಿ ಕಂಡುಬರುತ್ತದೆ.

ರಾಮಾಯಣದ ಕಥಾಭಾಗದಲ್ಲಿ ಪಾರ್ವತಿಯು ದೇವತೆಗಳಿಗೆ (ಮುವ್ವತ್ತೂರು ಕೋಟಿ ದೇವತೆಗಳು) ಮಕ್ಕಳು ಆಗಬಾರದೆಂದು ಶಾಪಕೊಡಲಾಗಿ ದೇವರುಗಳ ಪತ್ನಿಯರಿಗೆ ಮಕ್ಕಳಾಗುವುದಿಲ್ಲ. ವರದಂತೆ ರಾಕ್ಷಸನನ್ನು ಕೊಲ್ಲಲು ದೇವರ ಮಗನೆ ಆಗಬೇಕೆಂಬ ಸಂದರ್ಭವು ಬಂದಾಗ ಪಾರ್ವತಿ ಪರಮೇಶ್ವರ ಈರ್ವರ ತೇಜಸ್ಸನ್ನು ಅಗ್ನಿಯು ಸ್ವೀಕರಿಸಿ, ಹಿಮಪರ್ವತ ರಾಜನ ಮಗಳ ಉಮೆಯ ಅಕ್ಕ ಗಂಗಾದೇವಿಯಲ್ಲಿ ಗರ್ಭಸ್ಥಿತವಾಗಿ ಬೆಳೆಯುವಂತೆ ಅಗ್ನಿಯು ಒಪ್ಪಿಸುತ್ತಾನೆ. ಗಂಗೆಯು ಕಾಲೇಶ್ವರನ ಪಿಂಡಶಕ್ತಿಯನ್ನು

ತಡೆಯಲಾಗದೆ ಗರ್ಭಪಿಂಡವನ್ನು ಭೂಮಿಯ ಮೇಲೆ ಇಡುತ್ತಾಳೆ. ಈ ಗರ್ಭಪಿಂಡವು ಕಾರ್ತಿಕೇಯನಾಗಿ ಬೆಳೆದು ದೇವತೆಗಳ ಸೇನಾನಾಯಕನಾಗಿ (ದಂಡನಾಯಕ) ತಾರಕಾಸುರನನ್ನು ಕೊಂದು, ಕಾರ್ತಿಕೇಯನು ಶಿವ ಪಾರ್ವತಿಯ ಮಗನಾಗಿ ಸಾಂದರ್ಭಿಕವಾಗಿ ಉತ್ಪತ್ತಿಯಾಗಿದ್ದಾನೆ. ಗಂಗೆಯ ಪುತ್ರನೇ ಕಾರ್ತಿಕೇಯ ಎಂಬುದು ಸತ್ಯವಾಗುತ್ತದೆ. ಪಾರ್ವತಿ ಎಂದೂ ಗರ್ಭ ಧರಿಸುವ ಸಂದರ್ಭವೇ ಇಲ್ಲವೆಂದು ಪುರಾಣದಿಂದ ತಿಳಿದುಬರುತ್ತದೆ. ಭೂಲೋಕದಲ್ಲಿ ಭೂಮಿ ಪತಿಯು ರಾಜನಾಗಿ ಬಹುಪತ್ನಿ ಪಡೆದು ವಂಶಗಳನ್ನು ಉದ್ಧರಿಸಿದ್ದಾನೆ.

ತಮಿಳುನಾಡಿನ ಕುಂಬಕೋಣಂ ಚೋಳರ ಕಾಲದ ದೇವಾಲಯಗಳ ಸಾಂಸ್ಕೃತಿಕ ಕೇಂದ್ರವಾಗಿತ್ತು. ಮತ್ತು ಪಕ್ಕದಲ್ಲಿರುವ ಧಾರಾಸುರಂ ಗ್ರಾಮದಲ್ಲಿ ಐರಾವತೇಶ್ವರ ಮತ್ತು ಕರ್ನಾಟಕದ ಪೆರಿಯನಾಯಕಿ ಅಮ್ಮ ಎಂಬ ದೇವಾಲಯವಿದೆ. ಸುಂದರವಾದ ದೇವಾಲಯದ ಮುಂಭಾಗದ ಎರಡು ಕೈಯುಳ್ಳ ಗಜಲಕ್ಷ್ಮಿ ಮತ್ತು ದೇವಾಲಯದ ಮುಂಭಾಗದಲ್ಲಿ ಸಿಂಹ ತಲೆಗಳ ಸಾಲು, ಗಂಗರ ಮತ್ತು ಚೋಳರ ಕಾಲದ ಶೈಲಿಯಲ್ಲಿದೆ. (ಚೋಳ ಮನೆತನ ಮತ್ತು ಗಂಗ ಮನೆತನದ ಶೈಲಿ) ಮೂರು ಉಬ್ಬುಗಳಲ್ಲಿ ನರ್ತಕಿಯರ ಮತ್ತು ಸಂಗೀತಗಾರರು ಉಬ್ಬು ರಚನೆಯಾಗಿದೆ. ಎರಡು ಭಾಗದಲ್ಲಿ ಸ್ತ್ರೀಯರಂತೆ ಕಾಣುತ್ತದೆ. ಮಧ್ಯಭಾಗದಲ್ಲಿರುವ ನರ್ತಕಿಯ ಸ್ತ್ರೀಯಂತೆ ಕಂಡರು. ಸರ್ವಾಂಗ ಸುಂದರ ಅಲಂಕಾರಿಕ ಭೂಷಿತಳಾಗಿ ಮುಖಭಾವ ಮಾತ್ರ ಹೊರಟಾಗಿದೆ. ಮುಖದಲ್ಲಿ ಗತ್ತಿನ ಮೀಸೆಯು ಕೂಡ ಕಂಡುಬರುತ್ತದೆ. ಈ ಸ್ತ್ರೀಸರ್ವಾಂಗ ಸುಂದರಿಯಾಗಿ ಕಂಡರು. ಈ ಸ್ವರೂಪ ಮಾಳಿಯಂತೆ ತಿಳಿದುಬರುತ್ತದೆ. ಚೋಳರ ಮನೆತನ (ವಂಶ) ಇತಿಹಾಸದಲ್ಲಿ ಮುಡಿಕೊಂಡ ರಾಜನ ಹೆಂಡತಿ ಮಾಳಿಯಾಗಿದ್ದಳು ಅವಳು ಕರ್ನಾಟಕದ ಮುಳ್ಳೂರು ಗ್ರಾಮದವಳು ಎಂದು ತಿಳಿದುಬರುತ್ತದೆ.

ಈಗಿನ ಮುಳ್ಳೂರಿನಲ್ಲಿ (ಕೊಳ್ಳೇಗಾಲ ತಾಲ್ಲೂಕು) ಅಂದು ಮುಳ್ಳರ ಯಾಪನಿಯ ಸಂಘದಲ್ಲಿ ಜೈನ ಸನ್ಯಾಸಿಯರಿದ್ದರು. ಅವರಲ್ಲಿ ಸುಂದರಳಾದ ಕನ್ಯೆಯನ್ನು ಮುಡಿಕೊಂಡರಾಜ ಬಲವಂತದಿಂದ (ಸ್ವಗೋತ್ರದಲ್ಲಿ) ಮದುವೆಯಾಗಿದ್ದನು. ಅವಳು ವಯಸ್ಕಳಾಗಿದ್ದರು ಋತುಮತಿಯಾಗದ ಕನ್ಯೆಯಾಗಿ ಮಾಳಿಯಾಗಿದ್ದಳು ಅವಳಿಗೆ ಈ ವಿಷಯ ತಿಳಿದಿತ್ತು ರಾಜನಿಗೆ ಒಂದು ಷರತ್ತು ಹಾಕಿ ನಾನು ಇಚ್ಛೆಪಟ್ಟಾಗ ನೀನು ನನ್ನಲ್ಲಿ ರತಿ ಸುಖ ಪಡೆಯಬಹುದು. ಬಲತ್ಕಾರ ಸಲ್ಲದು ಎಂದು ತಿಳಿಸಿದ್ದಳು. ರಾಜನು ಅವಳ ಸೌಂದರ್ಯಕ್ಕೆ ವ್ಯಾಮೋಹಿತನಾಗಿ ತನ್ನ ಬುದ್ಧಿವಂತಿಕೆಯಲ್ಲಿ ಹತ್ತು ತರಹದ ನಾದ ಗುಣಗಳನ್ನು ರಸಭಾವದಲ್ಲಿ, ಅವಳ ಮನಸ್ಸನ್ನು ಒಲಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಆದರೂ ಆಕೆಯ ಮನಸ್ಸನ್ನು ಗೆಲ್ಲಲಾಗದೆ, ರಾಜ ಸೋತು ತನ್ನ ಪತ್ನಿ ಮಾಳಿ ಎಂದು ನಿಜವನ್ನು ತಿಳಿಯುತ್ತಾನೆ. ಸತ್ಯದ ಅರಿವು ಮುಡಿಕೊಂಡ ರಾಜನಿಗಾಗುತ್ತದೆ. ಆಗ ರಾಜ ಪಶ್ಚಾತ್ತಾಪಪಟ್ಟು ಅವಳ ಕನ್ಯತ್ವ ಪವಿತ್ರತೆಯಿಂದ ಕೂಡಿದೆ, ಅವಳ ಮೇಲಿನ ಹುಚ್ಚಾದ ಪ್ರೀತಿ ಗೌರವವನ್ನು ತೋರಿಸಿಕೊಳ್ಳಲು ಸ್ತ್ರೀ ಸಹಜ ಆಸೆಗಳನ್ನು ಪೂರೈಸಿಲ್ಲದ ಕಾರಣ ಸ್ತ್ರೀಶಕ್ತಿಯನ್ನು ಗುಣಸ್ವಭಾವ ಶಕ್ತಿಯಾಗಿ ಮಾರ್ಪಡಿಬೇಕೆಂದು (ಮೂರು ಗಂಡು + ಮೂರು ಹೆಣ್ಣು) ಪುರುಷ ಮತ್ತು ಸ್ತ್ರೀಯಲ್ಲಿರುವ ಬೌದ್ಧಿಕ ಗುಣಸ್ವಭಾವ, ರಜಸ್ಸು, ತಮಸ್ಸು, ಸಾತ್ವಿಕ ಗುಣಭಾವನೆಯಂತೆ ಬ್ರಹ್ಮ, ವಿಷ್ಣು, ಶಿವ ಮತ್ತು ಸರಸ್ವತಿ (ಜ್ಞಾನ) ಲಕ್ಷ್ಮಿ (ಧನ, ಧಾನ್ಯ) ಪಾರ್ವತಿ ಮಮತೆ, ಕರುಣೆ, ಗುಣಭಾವಗಳಂತೆ ನಾಮಾಕಿಂತವಿಟ್ಟು ಈ ಮೂವರಿಗೂ ಮದುವೆ ಮಾಡಿಸಿ ಸಂತೋಷಪಟ್ಟು ವಂಶ ಬೆಳೆಯಲಿ ಎಂಬ ಸಾಮಾಜಿಕ ಭಾವನೆಗೆ ಮುಡಿಕೊಂಡ ರಾಜ ಕಾರಣನಾಗಿದ್ದಾನೆ. ಪ್ರೀತಿಯ ಪತ್ನಿಯ ಸ್ತ್ರೀಶಕ್ತಿಗೆ ಬೆಲೆ ಕೊಟ್ಟು, ಬಹುತಲೆಗಳುಳ್ಳ ಗಂಡಿನ ಶಿಲ್ಪ (ಮಾನಸ ದೇವನ) ಶಿಲ್ಪಗಳನ್ನು ಶಿಲ್ಪ ಕಲಾವಿದರಿಂದ ರಾಜ ಕೆತ್ತಿಸಿದ್ದಾನೆ. ಈ ರೀತಿಯ ಶಿಲ್ಪಗಳನ್ನು ಮುಡಿಕೊಂಡ ಚೋಳಮಂಡಲದ ರಾವಳೇಶ್ವರನ ನೆಲೆಯಲ್ಲಿ ಕಂಡುಬರುತ್ತದೆ.

ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ಅಧ್ಯಕ್ಷರು ಡಾ॥ ಜ್ಞಾನಾನಂದರವರು ಈ ಶಿಲ್ಪಗಳು ಕಾಶ್ಯಪ ಶಿಲ್ಪಶಾಸ್ತ್ರದಂತೆ ಕೆತ್ತನೆಯಾಗಿಲ್ಲ. ಶಿಲ್ಪಕಲಾವಿದರು ಕಾಲಘಟ್ಟದ ಇತಿಹಾಸಕ್ಕೆ ಸಾಮಾಜಿಕ ಜೀವನದ ಜ್ಞಾನ ಸ್ವರೂಪಕ್ಕೆ ಚಿತ್ರಶಿಲ್ಪಗಳನ್ನು ಕಲಾವಿದನ ಭಾವನೆಯಂತೆ ಕೆತ್ತನೆ ಮಾಡಿದ್ದಾರೆ ಎಂದು ತಿಳಿಸಿರುತ್ತಾರೆ.

ಕರ್ನಾಟಕದಲ್ಲಿ ಆದಿಶಕ್ತಿ ಮಾರಮ್ಮನಿಗೆ ಗಂಗಮಾಳಮ್ಮ, ಭಂಡರಸಮ್ಮ, ತೋಟಗೇರಿ ಮಾರಮ್ಮ, ಉಕ್ಕಡದ ಮಾರಮ್ಮ, ಕಬ್ಬಾಳಮ್ಮ, ಕೆಸ್ತೂರು ಮಾರಮ್ಮ, ಹುಚ್ಚಾಲಮ್ಮ, ಶಿವನಸಮುದ್ರ ಮಾರಮ್ಮ ಮುಂತಾದ ಹೆಸರಿನಲ್ಲಿ ಕರೆಯುತ್ತಾರೆ. ಹೆಣ್ಣು ದೇವರಿಗೆ ಬೆಳ್ಳಿಯಲ್ಲಿ ಕವಚ ಆಭರಣಗಳಿಂದ ಅಲಂಕರಿಸಿದಾಗ ಮಾರಮ್ಮಳಿಗೆ ಮೀಸೆ ಧರಿಸಿ ತಾಯಿಯ ಸ್ವರೂಪವನ್ನು ಸತ್ಯವೆಂದು ಸೂರ್ಯ-ಚಂದ್ರರ ಸಾಕ್ಷಿಯಾಗಿ ಮನಗಂಡಿದ್ದಾರೆ.

ಉದಾ: ತಲಕಾಡಿನ ಗ್ರಾಮದೇವತೆ ಭಂಡರಸಮ್ಮ ತಾಯಿಯ ಶಿಲ್ಪದ ಎದುರುಗಡೆ ಗೋಡೆಯಲ್ಲಿ ಸೂರ್ಯ-ಚಂದ್ರರನ್ನು ಸಾಕ್ಷಿ ಮಾಡಿ ಉಬ್ಬು ಶಿಲ್ಪವನ್ನು ಕೆತ್ತಿದ್ದಾರೆ. ಈ ಭಂಡರಸಮಮ್ಮ ತಾಯಿಯು ಮಾಳಿಯಾಗಿದ್ದಳು ಎಂದು

ಸತ್ಯ ತಿಳಿದುಬರುತ್ತದೆ. (ಕೆಸ್ತೂರು ಮಾರಮ್ಮನ ಕೊಳಗದಲ್ಲಿಯು ಸೂರ್ಯ–ಚಂದ್ರ ಸಾಕ್ಷಿಯಾಗಿ ಅಲಂಕರಿಸಿದ್ದಾರೆ.

ಮುಡಿಕೊಂಡ ರಾಜನ ಹೆಂಡತಿ ಗಂಗಮಾಳಮ್ಮ ಪಾಳಿಯಾಗಿದ್ದಳು ಅವಳ ಸ್ತ್ರೀಶಕ್ತಿಯನ್ನು ರಾಜನು ಆದಿಶಕ್ತಿಯಾಗಿ ಪರಿವರ್ತಿಸಿ ಲೋಕ ಕಲ್ಯಾಣಕ್ಕಾಗಿ ವೈಯುಕ್ತಿಕ ಕಥೆಯ ಸ್ವರೂಪಗಳನ್ನು ಶಿಲ್ಪಗಳಿಂದ ಕೆತ್ತಿಸಿದ್ದಾನೆ. ಧಾರಾಸುರಂನಲ್ಲಿ ಪೆರಿಯನಾಯಕಿ ಅಮ್ಮ ದೇವಾಲಯ ಗರ್ಭಗುಡಿಯ ಮುಂಭಾಗದ ದ್ವಾರ ಬಾಗಿಲಿನಲ್ಲಿ, ಎಡಗಡೆ ಮತ್ತು ಬಗಡೆ ಕತ್ತಿಗುರಾಣಿ ಹಿಡಿದಿರುವ ಸ್ತ್ರೀಯು ದ್ವಾರಪಾಲಕಿಯಾಗಿ ಕ್ಷತ್ರಿಯಳೆಂದು ಹಾಗೂ ಪರಿಯನಾಯಕಿ ತಾಯಿ ಕ್ಷತ್ರಿಯ ಮನೋಧರ್ಮದವಳೆಂದು ಶಿಲ್ಪಿ ತೋರಿಸಿದ್ದಾನೆ. ತಿಹಾಸದಲ್ಲಿ ರಾಣಿಯು ಕ್ಷತ್ರಿಯಳೆಂದು ಹಾಗೂ ದೇವತೆಯ ಗುಣವುಳ್ಳವಳಾಗಿದ್ದಳು ಎಂದು ತಿಳಿದುಬರುತ್ತದೆ.

ಶಿಲ್ಪಗಳ ಲಕ್ಷಣ ಮೌಖಿಕ ಶಾಸನವಾಗಿ ಭಾವಿಸಿ ಶಿಲ್ಪಗಳು ಹೇಳಿದ ಕಥೆಯನ್ನು ಕರ್ನಾಟಕ ಮತ್ತು ತಮಿಳುನಾಡಿನ ಶಿಲ್ಪಗಳ ಭಾವನೆಯಲ್ಲಿ ಸಂಗ್ರಹಿಸಿದ್ದೇನೆ. ನೂರಾರು ಶಿಲ್ಪಗಳು ಕಾಶ್ಯಪ ಶಿಲ್ಪಶಾಸ್ತ್ರದಂತೆ ಕೆತ್ತನೆಯಾಗಿರುವುದಿಲ್ಲ. ರಾಜಮಹಾರಜರ ಕಪಿತ್ವ ಶಿಲ್ಪಕಲಾ ಪೋಷಣೆಗೆ ರಾಜನ ವೈಯುಕ್ತಿಕ ಜೀವನದ ಕಥೆಯನ್ನು ಆಧರಿಸಿ ದೇವತಾ ಶಿಲ್ಪಗಳನ್ನು ಮೂಡಿಸಿರುವುದೆಂದು ತಿಳಿದುಬರುತ್ತದೆ. ಜನಪದ ಸಂಸ್ಕೃತಿಯಲ್ಲಿ ಮಾರಮ್ಮನ ಕಥೆಗಳು ವಿಭಿನ್ನವಾಗಿ ತಿಳಿದುಬರುತ್ತದೆ.

ಶ್ವೇತಾಂಬರ ಜೈನರ ಸಂಸ್ಕೃತಿಯಲ್ಲಿ ಆದಿಶಕ್ತಿ ಮತ್ತು ಕಾಲ ಭೈರವನನ್ನು ಪೂಜಿಸುತ್ತಾರೆ. ಹಾಗೂ ಹತ್ತು ತಲೆಯ ರಾವಣನಿಗೆ ಜೈನ ಧರ್ಮದ ಸಂಸ್ಕಾರವಾಗಿದೆ. ಮುಂದೆ ಜಿನನಾಗಿ ಹುಟ್ಟುತ್ತಾನೆ ಎಂದು ಜೈನಧರ್ಮ ಶಾಸ್ತ್ರದಲ್ಲಿ ತಿಳಿದುಬರುತ್ತದೆ ಹಾಗೂ ದಿಗಂಬರ ಜೈನರಲ್ಲಿ ಎಚ್.ಡಿ. ಕೋಟೆ ಸರಗೂರಿನಲ್ಲಿ ಜ್ವಾಲಮಾಲಿನಿ ಮತ್ತು ಶ್ರವಣಬೆಳಗೊಳದಲ್ಲಿ ಅಮ್ಮ ಕೂಷ್ಮಾಂಡಿನಿ ದೇವಿಯನ್ನು ಗ್ರಾಮದೇವತೆಯಾಗಿ ಜೈನ ಸಂಸ್ಕೃತಿಯಲ್ಲಿ ಪೂಜಿಸುತ್ತಾರೆ.

ಗಂಗರ ಮತ್ತು ಚೋಳರ ವಂಶಗಳು ಕರ್ನಾಟಕದಲ್ಲಿ ರಾಜ್ಯಭಾರ ಮಾಡಿ ಕಾಲಘಟ್ಟದ ವೈದಿಕ ಆಯಾ ಸಂಸ್ಕೃತಿಯಲ್ಲಿ ಶಿಲ್ಪಕಲೆ, ಪುರಾಣ, ಸಾಹಿತ್ಯ, ಜನಪದ ಸಾಹಿತ್ಯದಲ್ಲಿ ಗಂಗಮಾಳಮ್ಮಳ ಸಂಸ್ಕೃತಿಯನ್ನು ವಿಶಾಲವಾಗಿ ಹಬ್ಬಿಸಿರುವುದು ತಿಳಿದುಬರುತ್ತದೆ. ಕರ್ನಾಟಕದ ಮೊದಲ ವಿಶ್ವವಿದ್ಯಾನಿಲಯವನ್ನು ಮಾನಸ ಗಂಗೋತ್ರಿಯೆಂದು (ಬ್ರಹ್ಮನ ಮನಸ್ಸಿನ ಭಾವನೆಗೆ ಮಾನಸಪುತ್ರರೆಂದು), ಮೈಸೂರು ರಾಜವಂಶವು ಮಾನಸಪುತ್ರರಾಗಿದ್ದರೆಂದು ನೆನಪಿಗೆ ತರುವಂತೆ ನಾಮಕರಣ ಮಾಡಿದ್ದಾರೆ ಮತ್ತು ವಿಶ್ವಕೋಶದಲ್ಲಿ ರಾವಳ ಎಂದರೆ ಸನ್ಯಾಸಿ ಎಂಬ ಅರ್ಥದಲ್ಲಿ ದಾಖಲಿಸಿದ್ದಾರೆ. ಮಹಾಭಾರತದಲ್ಲಿ ವ್ಯಾಸ ಮಹರ್ಷಿಯು ಸನ್ಯಾಸಿಯಾಗಿ, ಕೌರವ ಮತ್ತು ಪಾಂಡವರ ವಂಶ ಬೆಳೆಯಂತೆ ಆಶೀರ್ವಾದ ಮಾಡಿರುವುದು ಕಥಾ ಸಾಂದರ್ಭಿಕ ಸತ್ಯವಾಗಿದೆ.

ಭಾರತೀಯ ಹಿಂದೂ ಸಂಸ್ಕೃತಿಯ ಮೇಲೆ ಆದ ಪರಿಣಾಮದ ದಾಸ್ಯ ಸಂಸ್ಕೃತಿಯಲ್ಲಿ ಸ್ತ್ರೀಯರು ಹಲವು ವರ್ಣದ ದೇವರುಗಳನ್ನು ಮೊರೆಬಿದ್ದು ಮಕ್ಕಳ ಭಾಗ್ಯ ಪಡೆದು ಕುಲದೇವರಾಗಿ ಗಂಡು ದೇವರು ಮತ್ತು ಹೆಣ್ಣು ದೇವರು ಎಂದು ಗುರ್ತಿಸಿಕೊಂಡು ರಾವಳ ಪರಂಪರೆಯನ್ನು ರೂಢಿಯಲ್ಲಿ ತಂದಿರುವುದು ಇತಿಹಾಸಕ್ಕೆ ಪೂರಕವಾಗಿದೆ ಎಂದು ಸಂಶೋಧನೆಯಿಂದ ತಿಳಿದುಬರುತ್ತದೆ.

೯೪

ಮಹಾರಾಷ್ಟ್ರದ ಹತ್ತೂರು : ಅಮೋಘಸಿದ್ಧ ಪರಂಪರೆಯ ನೆಲೆ

ಡಾ. ಎಫ್.ಟಿ. ಹಳ್ಳಿಕೇರಿ*

ಕುರುಬರ ಗುರುಪರಂಪರೆಯಲ್ಲಿ ರೇವಣಸಿದ್ಧ, ಸಿದ್ಧರಾಮ ಮತ್ತು ಅಮೋಘಸಿದ್ಧ ಎಂಬ ಮೂರು ಸಂಪ್ರದಾಯಗಳಿವೆ. ಈ ಮೂರು ಸಂಪ್ರದಾಯಗಳು ಒಂದೊಂದು ಪರಂಪರೆಯಾಗಿ ಬೆಳೆದುಕೊಂಡು ಬಂದಿವೆ. ಈ ಪರಂಪರೆಯನ್ನು ಹೀಗೆ ಗುರುತಿಸಬಹುದು.

ಹಾಲುಮತ ಗುರುಪರಂಪರೆ

ರೇವಣಸಿದ್ಧ	ಸಿದ್ಧರಾಮ	ಅಮೋಘಸಿದ್ಧ
ಶಾಂತಮುತ್ತಯ್ಯ	ಸಿದ್ಧಮಂಕ	ಪುಣ್ಯದಮಕ್ಕಳು–ವರವಿನ(ಧರ್ಮರ) ಮಕ್ಕಳು
ಶಾಂತ ಒಡೆಯರು	ಮಂಕ ಒಡೆಯರು	ಇಪ್ಪತ್ತೊಂದು–ನೂರಾ ಒಂದು–ಸಾವಿರದಾ ಒಂದು ಧರ್ಮರು

ಹೀಗೆ ವಿಸ್ತಾರಗೊಂಡ ಈ ಗುರುಪರಂಪರೆಯು ಒಡೆಯರು ಎಂಬ ಹೆಸರಿನಿಂದ ಕುರುಬ ಸಮಾಜದಲ್ಲಿ ಇಂದಿಗೂ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿದೆ. ರೇವಣಸಿದ್ಧ–ಸಿದ್ಧರಾಮ–ಅಮೋಘಸಿದ್ಧ ಮತ್ತವರ ಶಿಷ್ಯರ ಹೆಸರಿನಲ್ಲಿರುವ ಮಠ–ದೇವಾಲಯ, ಶಿಲ್ಪಗಳು, ಆಚರಣೆ–ಉತ್ಸವಗಳು ಇದಕ್ಕೆ ಸಾಕ್ಷಿಯಾಗಿವೆ. ರೇವಣಸಿದ್ಧ–ಸಿದ್ಧರಾಮ ಪರಂಪರೆಯ ಕುರಿತು ಅಲ್ಲಲ್ಲಿ ಅಧ್ಯಯನಗಳು ನಡೆದಿವೆ. ಆದರೆ ಅಮೋಘಸಿದ್ಧ ಪರಂಪರೆಯ ಬಗೆಗೆ ಸಮಗ್ರವಾದ ಅಧ್ಯಯನ ನಡೆದಿರಲಿಲ್ಲ. ಈ ಕೊರತೆಯನ್ನು ಹೋಗಲಾಡಿಸುವಂತೆ ಇತ್ತೀಚೆಗೆ ಡಾ. ಚನ್ನಪ್ಪ ಕಟ್ಟಿ ಅವರು ಅಮೋಘಸಿದ್ಧ ಪರಂಪರೆ ಕುರಿತು ಸಂಶೋಧನೆ ಕೈಗೊಂಡು ಮಹಾಪ್ರಬಂಧವನ್ನು ಸಿದ್ಧಪಡಿಸಿ ಕನ್ನಡ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿಯನ್ನು ಪಡೆದಿದ್ದಾರೆ. ಇಷ್ಟಾಗಿಯೂ ಈ ಪರಂಪರೆಯ ಬಗೆಗೆ ಮಾಡಬೇಕಾದ ಕೆಲಸ ಸಾಕಷ್ಟಿದೆ. ಈ ಹಿನ್ನೆಲೆಯಲ್ಲಿ ಇಲ್ಲಿ ನಾನು ಅಮೋಘಸಿದ್ಧ ಪರಂಪರೆಯ ಬಹುಮುಖ್ಯ ನೆಲಗಳಲ್ಲಿ ಒಂದಾದ ಹತ್ತೂರು ಗ್ರಾಮದ ವಿಶಿಷ್ಟತೆಯನ್ನು ಕುರಿತು ಲಭ್ಯ ಆಕರಗಳ ಹಿನ್ನೆಲೆಯಲ್ಲಿ ಸಂಪ್ರಬಂಧವನ್ನು ಮಂಡಿಸುತ್ತಿದ್ದೇನೆ.

೧. ಅಮೋಘಸಿದ್ಧನ ಪರಿವಾರ

ಈಗಾಗಲೇ ಹೇಳಿದಂತೆ ಕುರುಬರ ಗುರುಪರಂಪರೆಯಲ್ಲಿ ಬಹುಮುಖ್ಯನಾದವನು, ಅಮೋಘಸಿದ್ಧ. ಬಿಜಾಪುರದಿಂದ ಉತ್ತರ ಭಾಗಕ್ಕೆ ಹದಿನೈದು ಕಿಲೋಮೀಟರು ಅಂತರದಲ್ಲಿ ಅರಕೇರಿ ಗ್ರಾಮವಿದೆ. ಇಲ್ಲಿಂದ ಮೂರು ಕಿ.ಮೀ. ದೂರದಲ್ಲಿ ದೊಡ್ಡದಾದ ಗುಡ್ಡವಿದೆ. ಇದನ್ನು ಮುಮ್ಮಟ್ಟಿಗುಡ್ಡ ಎಂದು ಕರೆಯಲಾಗುತ್ತಿದೆ. ಈ ಗುಡ್ಡದ ಮೇಲೆ ಅಮೋಘಸಿದ್ಧನ ಚಿಕ್ಕದಾದ ಗುಡಿಯಿದೆ. ಈ ಗುಡ್ಡದಿಂದ ಹತ್ತು ಕಿ.ಮೀ. ಅಂತರದಲ್ಲಿ ಮಕಣಾಪುರ ಗ್ರಾಮದಲ್ಲಿ ಅಮೋಘಸಿದ್ಧನ ಗುರು ಸೋಮಲಿಂಗನ ದೇವಸ್ಥಾನವಿದೆ. ಮುಮ್ಮಟಿಗುಡ್ಡದ ಮೇಲೆ ಸ್ಥಾಪನೆಗೊಂಡ ಅಮೋಘಸಿದ್ಧನು ತನ್ನ ಪರಿವಾರವನ್ನು ವಿಸ್ತರಿಸಿಕೊಂಡು ಒಂದು ದೊಡ್ಡ ಪರಂಪರೆಯಾಗಿ ರೂಪುಗೊಂಡಿದ್ದಾನೆ. ಈ ಅಮೋಘಸಿದ್ಧ ಪರಿವಾರದ ವಂಶಾವಳಿ ಹೀಗಿದೆ.

ಪುಣ್ಯದ ಮಕ್ಕಳು : ೧. ಮಾಸಿದ್ದಪ್ಪ ೨. ಕರಣಿ ಮಲಕಾರಿಸಿದ್ಧ ೩. ತೆರೆವಾಡ ಮಂಗರಾಯ

ವರವಿನ (ಧರ್ಮರ) ಮಕ್ಕಳು : ೧. ಅವತಾರಿ ಅವಧು ಸಿದ್ಧ ೨. ಬುದ್ಧುಳ್ಳ ಬಿಳಿಯಾನಿ ಸಿದ್ಧ, ೩. ಆಚಾರಗೌಡ ಸೋಮಣ್ಣ ಮುತ್ತ್ಯಾ ೪. ಕಡಿಹುಟ್ಟ ಕನ್ನಮುತ್ತ್ಯಾ

ಇಪ್ಪತ್ತೊಂದು ವರವಿನ(ಧರ್ಮರ)ಮಕ್ಕಳು :

ಅವತಾರಿ ಅವಸಿದ್ಧನ ಮಕ್ಕಳು–೧. ಸಾಲಸಿದ್ಧ ೨. ಮಳೆಗಾಲಸಿದ್ಧ ೩. ಓಗಪ್ಪೊಡೆಯ ೪. ನಾಗಪ್ಪೊಡೆಯ ೫. ಕೆಂಚಸೋಮಯ್ಯ

* ಪ್ರಾಧ್ಯಾಪಕ, ಹಸ್ತಪ್ರತಿಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ–೫೮೩೨೭೬. ಬಳ್ಳಾರಿ ಜಿಲ್ಲೆ.

ಬುದ್ದುಳ್ಳ ಬಿಳಿಯಾನಿ ಸಿದ್ಧನ ಮಕ್ಕಳು–೧. ಬುಳ್ಳೋಗಿಸಿದ್ಧ, ೨. ಒಗಸಿದ್ಧ ೩. ಪದ್ಯೋಗಿಸಿದ್ಧ, ಪಂಚಪ್ರಾಜಾದಗೌಡ, ೫. ಶೀಲಿಸಿದ್ಧ

ಆಚಾರಗೌಡ ಸೋಮಣ್ಣಮುತ್ತ್ಯಾನ ಮಕ್ಕಳು– ೧. ಹಿರಿಮಲ್ಲಪ್ಪೊಡೆಯ, ೨. ಚಿಕ್ಕಮಲ್ಲಪ್ಪೊಡೆಯ, ೩. ಮುತ್ತಪ್ಪೊಡೆಯ, ೪. ಮಲಕಾರಿಸಿದ್ಧ, ೫. ಓಗೆಣ್ಣಮುತ್ತ್ಯಾ

ಕಡಿಹುಟ್ಟ ಕನ್ನಮುತ್ತ್ಯಾನ ಮಕ್ಕಳು– ೧. ಕರಿಯೋಗಿಸಿದ್ಧ, ೨. ಮಲಕಾರಿಸಿದ್ಧ, ೩. ಕೆಂಚಮಾದಣ್ಣ, ೪. ವೀರಮಲಕಾರಿಸಿದ್ಧ ೫. ಜ್ಯೋತಿ ಲಕ್ಕಪ್ಪ, ೬. ಬ್ರಹ್ಮದೊಡೆಯ, ೭. ಗುಬ್ಬೆವ್ವ

ಹೀಗೆ ಅಮೋಘಸಿದ್ಧನು ಪುಣ್ಯದ ಮಕ್ಕಳು, ವರವಿನ(ಧರ್ಮರ)ಮಕ್ಕಳು ಹಾಗೂ ಇಪ್ಪತ್ತೊಂದು ವರವಿನ ಮೊಮ್ಮಕ್ಕಳು, ನೂರೊಂದು–ಸಾವಿರದೊಂದು–ಹದಿನೇಳು ನೂರು ಶಿಷ್ಯ–ಪ್ರಶಿಷ್ಯರನ್ನು ಹೊಂದಿದ್ದಾನೆ. ಈ ಶಿಷ್ಯ–ಪ್ರಶಿಷ್ಯರು ಕರ್ನಾಟಕದ ಉತ್ತರ ಜಿಲ್ಲೆಗಳಾದ ಬಿಜಾಪುರ ಬಾಗಲಕೋಟ ಗುಲಬರ್ಗಾ ಜಿಲ್ಲೆಗಳು ಹಾಗೂ ಮಹಾರಾಷ್ಟ್ರದ ದಕ್ಷಿಣ ಗಡಿಭಾಗವಾದ ಸೊಲ್ಲಾಪುರ ಪರಿಸರದಲ್ಲಿ ನೆಲೆಸಿದ್ದಾರೆ. ಇಂಥ ನೆಲೆಗಳಲ್ಲಿ ಕರ್ನಾಟಕ–ಮಹಾರಾಷ್ಟ್ರ ಗಡಿಭಾಗದಲ್ಲಿರುವ ಹತ್ತೂರು ಗ್ರಾಮವೂ ಒಂದು. ಮಹಾರಾಷ್ಟ್ರದ ಸೊಲ್ಲಾಪುರ ಜಿಲ್ಲೆಯ ದಕ್ಷಿಣ ಸೊಲ್ಲಾಪುರ ತಾಲ್ಲೂಕಿನ ಈ ಗ್ರಾಮ ಅಮೋಘಸಿದ್ಧನ ಧರ್ಮರ ಮಕ್ಕಳಲ್ಲಿ ಒಬ್ಬನಾದ ಆಚಾರ ಸೋಮಣ್ಣಮುತ್ತ್ಯಾನ ಐದು ಜನ ಮಕ್ಕಳಲ್ಲಿ ಕೊನೆಯವನಾದ ಓಗೆಣ್ಣಮುತ್ತ್ಯಾನ ನೆಲೆಯಾಗಿದೆ.

೨. ಓಗೆಣ್ಣಮುತ್ತ್ಯಾನ ಪರಿವಾರ

ಅಮೋಘಸಿದ್ಧನ ಧರ್ಮರ ಮಕ್ಕಳಲ್ಲಿ ಮೂರನೆಯ ಮಗ ಸೋಮಣ್ಣಮುತ್ತ್ಯಾ, ಗುರು ಸೋಮಲಿಂಗನ ನಿಧನದ ನಂತರ ಈತ ಹುಟ್ಟಿರುವ ಸಾಧ್ಯತೆಯಿದೆ. ಹೀಗಾಗಿ ಗುರುವಿನ ಸ್ಮರಣೆಗಾಗಿ ಅಮೋಘಸಿದ್ಧ ತನ್ನ ಮೂರನೆಯ ಮಗುವಿಗೆ ಸೋಮಣ್ಣಮುತ್ತ್ಯಾ ಎಂದು ಹೆಸರಿಟ್ಟಿದ್ದಾನೆ. ಸೋಮಣ್ಣ ಮುತ್ತ್ಯಾನು ಗಣಪತಿಯ ಅವತಾರವೆಂದು ಹೇಳಲಾಗುತ್ತಿದೆ. ತಮ್ಮ ಪಂಥದ ತತ್ತ್ವಸಿದ್ಧಾಂತಗಳನ್ನು ಆಚರಣೆಯಲ್ಲಿ ತರಲು ಸಮರ್ಥನಾಗಿದ್ದನು. ಹೀಗಾಗಿ ಈತನ ಹೆಸರಿನೊಂದಿಗೆ ಆಚಾರಗೌಡ ಎಂಬ ವಿಶೇಷಣಾ ಸೇರಿಕೊಂಡಿದೆ. ಈತನ ಚಟುವಟಿಕೆಗಳನ್ನು ಗಮನಿಸಿದರೆ ಈ ವಿಶೇಷಣದ ಮಹತ್ತ್ವ ಗೊತ್ತಾಗುತ್ತದೆ. ಭೀವರಗಿಯಲ್ಲಿ ತಂದೆಯ ಗುರುವಾಗಿದ್ದ ಸೋಮಲಿಂಗನ ನೆನಪಿಗಾಗಿ ಧರ್ಮರ ಮಕ್ಕಳು ಕಟ್ಟಿಸಿದ ದೇವಾಲಯಕ್ಕೆ ಕಳಸವಿಟ್ಟಿದ್ದು, ಅಲ್ಲಿಯೇ ಒಂದು ಧರ್ಮದ ಕಟ್ಟೆಯನ್ನು ಕಟ್ಟಿಸಿದ್ದು, ಆ ಕಟ್ಟೆಯನ್ನು ಏರಿ ಒಡೆತನವನ್ನು ಆರಂಭಿಸಿದ್ದು, ಗೌಡಕಿ ವಿಷಯದಲ್ಲಿ ಹಿರಿಯ ಅಣ್ಣಂದಿರಾದ ಅವಧೂತಸಿದ್ಧ ಮತ್ತು ಬಿಳಿಯಾನಿಸಿದ್ಧರ ಮಧ್ಯೆ ವೈಮನಸ್ಸು ಬಂದಾಗ ಅದಕ್ಕೆ ಪರಿಹಾರ ಸೂಚಿಸಿದ್ದು, ಈ ಪಂಥದ ಮೂರನೆಯ ತಲೆಮಾರಿನ ಇಪ್ಪತ್ತೊಂದು ಧರ್ಮರಲ್ಲಿ ಕನ್ನಮುತ್ತ್ಯಾನ ಮಕ್ಕಳಾದ ವೀರಮಾದಣ್ಣ, ಮಲಕಾರಿಸಿದ್ಧ ಹಾಗೂ ಸೋಮಣ್ಣನ ನಾಲ್ಕನೆಯ ಮಗ ಮಲಕಾರಿಸಿದ್ಧರು ಸನ್ಯಾಸಿಗಳಾಗಲು ಬಯಸಿದಾಗ, ಅವರಿಗೆ ದೀಕ್ಷೆ ನೀಡಿ ಸನ್ಯಾಸಪಟ್ಟಿದ್ದು ಸೋಮಣ್ಣಮುತ್ತ್ಯಾ.

ಮಹಾರಾಷ್ಟ್ರದ ಸೊಲ್ಲಾಪುರ ಜಿಲ್ಲೆಯ ಜತ್ತ ತಾಲ್ಲೂಕಿನ ತಿಕ್ಕೊಂಡಿಯ ರಾಮಗೊಂಡನ ಮಗಳಾದ ಸಾಂಬಾಯಿ ಯೊಂದಿಗೆ ಸೋಮಣ್ಣಮುತ್ತ್ಯಾನ ಮದುವೆಯನ್ನು ಅಮೋಘಸಿದ್ಧ ವಿಧಿಪೂರ್ವಕವಾಗಿ ಮದುವೆ ಮಾಡಿದ. ಸೋಮಣ್ಣನಿಗೆ ಹಿರಿಮಲ್ಲಪ್ಪೊಡೆಯ, ಚಿಕ್ಕಮಲ್ಲಪ್ಪೊಡೆಯ, ಮುತ್ತಪ್ಪೊಡೆಯ, ಮಲಕಾರಿಸಿದ್ಧ ಹಾಗೂ ಓಗೆಣ್ಣಮುತ್ತ್ಯಾ, ನಾಲ್ಕು ಮಕ್ಕಳಿದ್ದಾರೆ. ಮನೆತನದ ಕಾರಭಾರಕ್ಕೆ ಹಿರಿಮಲ್ಲಪ್ಪೊಡೆಯ ಹಾಗೂ ತಂದೆಯ ಸೇವೆಗೆ ಚಿಕ್ಕಮಲ್ಲಪ್ಪೊಡೆಯರು ಭೀವರಗಿಯಲ್ಲಿಯೇ ಉಳಿಯುತ್ತಾರೆ. ತಿಕ್ಕೊಂಡಿಗೆ ಮುತ್ತಪ್ಪೊಡೆಯ, ಬೆಳ್ಳುಂಡಿಗೆಗೆ ಮಲಕಾರಿಸಿದ್ಧ ಹಾಗೂ ಓಗೆಣ್ಣ ಮುತ್ತ್ಯಾನನ್ನು ಸೋಲಾಪುರದ ದಕ್ಷಿಣಕ್ಕಿರುವ ಹತ್ತೂರಿಗೆ ನಿಯಮಿಸಲ್ಪಡುತ್ತಾರೆ.

೩. ಹತ್ತೂರು : ಓಗೆಣ್ಣಮುತ್ತ್ಯಾ ಮತ್ತು ಬನಸಿದ್ಧರ ಕಾರ್ಯಕ್ಷೇತ್ರ

ಸೊಲ್ಲಾಪುರ ಜಿಲ್ಲೆಯ ದಕ್ಷಿಣ ಸೊಲ್ಲಾಪುರ ತಾಲ್ಲೂಕಿಗೆ ಸೇರಿದ ಈ ಗ್ರಾಮದಲ್ಲಿ ಶೇಕಡಾ ೯೫ರಷ್ಟು ಜನರ ಮಾತೃಭಾಷೆ ಹಾಗೂ ಮನೆಮಾತೂ ಕನ್ನಡವಾಗಿದೆ. ಕುರುಬರು ಮತ್ತು ಲಿಂಗಾಯತರು ಅಧಿಕ ಸಂಖ್ಯೆಯಲ್ಲಿದ್ದಾರೆ. ಇಲ್ಲಿನ ಕುರುಬರಿಗೆ ಧನಗಾರರು ಎಂದು ಕರೆಯಲಾಗುತ್ತಿದೆ.

ಭೀವರಗಿಯಲ್ಲಿ ಧರ್ಮರ ಮಕ್ಕಳು ಒಂದೊಂದು ಕಾರ್ಯವನ್ನು ಹಂಚಿಕೊಂಡು ಕಾಯಾವಾಚಾಮನಸಾ ಪೂರ್ವಕವಾಗಿ ಆ ಕೆಲಸವನ್ನು ಪೂರೈಸುತ್ತಿದ್ದರು. ಅವರಲ್ಲಿ ಓಗೆಣ್ಣಮುತ್ತ್ಯಾನು ಭೀವರಗಿಯಿಂದ ಪ್ರತಿದಿನವೂ ಮಧ್ಯರಾತ್ರಿ ಯಲ್ಲಿಯೇ ಎದ್ದು ಮಕಣಾಪುರಕ್ಕೆ ಹೋಗಿ ಭಯಭಕ್ತಿಯಿಂದ ಗುರುಸೋಮಲಿಂಗನ ಸೇವೆ ಮಾಡುವ ಕಾಯಕವಾಗಿತ್ತು. ಹೀಗಿರುವಾಗ ಒಮ್ಮೆ ಮಳೆರಾಯನಿಲ್ಲದೆ ಹಕ್ಕಿಪಕ್ಕಿಗಳು–ದನಕರುಗಳು ಕಾಳು–ಕೂಳಿಲ್ಲದೆ ಕೊರಗತೊಡಗಿದವು. ಇದರಿಂದ ಮನುಷ್ಯರು ಚಿಂತೆಗೀಡಾಗಿ ಬಳಲತೊಡಗಿ ಧರ್ಮರ ಕಡೆಗೆ ಹೋದರು. ಔದುಸಿದ್ಧನು ಧರ್ಮಕಟ್ಟೆ

ಯನ್ನೇರಿ 'ಈ ವರ್ಷ ಮಳೆ ಬರುವುದಿಲ್ಲ' ಎಂದು ನುಡಿದನು. ಇದರಿಂದ ಗಾಬರಿಗೊಂಡ ಜನರು ಒಂದು ದಿನ ಊರು ಬಿಟ್ಟು ಗುಳೇ ಹೊರಟರು. ಇದನ್ನು ಗಮನಿಸಿ ಓಗೆಣ್ಣ ಮುತ್ತ್ಯಾನು 'ಎಲ್ಲಿಗೆ ಹೊರಟಿರುವಿರಿ' ಎಂದು ವಿಚಾರಿಸಿದನು. ಮಳೆರಾಯನು ಬರಲಾದ್ದಕ್ಕೆ ಊರುಬಿಟ್ಟು ಹೊರಟಿದ್ದೇವೆ ಎಂದು ಆ ಜನರು ಉತ್ತರಿಸಿದರು. ಈ ಮಾತನ್ನು ಕೇಳಿ ಅವರನ್ನು ಹಿಂತಿರುಗಿಸಿ ಕರೆದುಕೊಂಡು ಬಂದು ಕಂಬಳಿ ಬೀಸಿ ಮಳೆಕರೆದನು. ಇದರಿಂದ ಜನರೆಲ್ಲ ಹರ್ಷಗೊಂಡರು. ಇದರಿಂದ ಔದುಸಿದ್ಧನು ಕೋಪಗೊಂಡು ಧರ್ಮರ ಕಟ್ಟೆಗೆ ಬಂದು ಓಗೆಣ್ಣಮುತ್ತ್ಯಾನನ್ನು ಕರೆಯಿಸಿ 'ನಾನು ಮಳೆ ಬರುವುದಿಲ್ಲವೆಂದು ಹೇಳಿದರೆ, ನೀನು ಮಳೆ ಕರೆದು ನನ್ನ ಅಪಮಾನ ಮಾಡಿರುವಿ. ನಡೆ ಇಲ್ಲಿಂದ ಮೊದಲು ನಿನ್ನ ಬೆನ್ನಿಗೆ ಬೇತಾಳ ಹುಣ್ಣಾಗಲಿ' ಎಂದು ಶಾಪವಿತ್ತರು. ಇದರಿಂದ ನೊಂದುಕೊಂಡು ಓಗೆಣ್ಣಮುತ್ತ್ಯಾನು ತನ್ನ ಕಿರಿಯಮಗ ಬನಸಿದ್ಧನೊಂದಿಗೆ ಭೀವರಗಿ ಗ್ರಾಮವನ್ನು ಬಿಟ್ಟು ಹತ್ತೂರು ಗ್ರಾಮದ ಮುಳುಗಳ್ಳಿಯ ನಡುವೆ ಬಂದು ಕುಳಿತನು. ಇದನ್ನು ನೋಡಿದ ಹತ್ತೂರಿನ ಜನರು ಊರಿಗೆ ಕರೆದುಕೊಂಡು ಬರುತ್ತಾರೆ. ಆ ರಿನ ದಕ್ಷಿಣ ದಿಕ್ಕಿಗೆ ಡೇರೆಹೊಡೆದು ಭಕ್ತರೋದ್ಧಾರಕ್ಕೆ ಓಗೆಣ್ಣಮುತ್ತ್ಯಾ ಮತ್ತು ಬನಸಿದ್ಧರು ನಿರತರಾಗುತ್ತಾರೆ. ಹೀಗಿರುವಾಗ ಹೆಣ್ಣು ರಾಕ್ಷಸಿಯೊಂದು ಸುತ್ತಮುತ್ತಲ ಊರಿನ ದನಕರು, ಕುರಿಮರಿ ಹಾಗೂ ಜನರಿಗೆ ತೊಂದರೆ ಕೊಡುತ್ತಿರುತ್ತದೆ. ಬನಸಿದ್ಧನು ಆ ರಾಕ್ಷಸಿಯನ್ನು ಸೋಲಿಸಿ ಆ ಊರಿನ ಜನರನ್ನು ದನಕರುಗಳನ್ನು ಸಂರಕ್ಷಿಸಿದರು. ಹೀಗೆ ಓಗೆಣ್ಣಮುತ್ತ್ಯಾ ಮತ್ತು ಮಗ ಬನಸಿದ್ಧರು ಹತ್ತೂರಿನಲ್ಲಿ ನೆಲೆನಿಂತರು. ಹೀಗಾಗಿ ಇವರಿಬ್ಬರು ನೆಲೆಸಿದ ಕಾರಣವಾಗಿ ಅಮೋಘಸಿದ್ಧ ಪರಂಪರೆಯ ಕಾರ್ಯಕ್ಷೇತ್ರಗಳಲ್ಲಿ ಒಂದಾಗಿ ಪ್ರಸಿದ್ಧಿ ಪಡೆದಿದೆ. ಇವರಿಬ್ಬರ ವಾರಸುದಾರರಾಗಿ ಈ ಊರಿನಲ್ಲಿ ಅಮೋಘಸಿದ್ಧ ಪರಂಪರೆಯ ಒಡೆಯರ ಮನೆತನಗಳಿವೆ. ಆ ಮನೆತನಗಳ ಸಂಖ್ಯೆ ಈಗ ನೂರನ್ನು ದಾಟಿದೆ. ಇಲ್ಲಿನ ಒಡೆಯರು ಈ ದೇವಾಲಯದ ಪೂಜಾರಿಕೆಯನ್ನು ಸರದಿಯಂತೆ ಮಾಡಿಕೊಂಡು ಬರುತ್ತಿದ್ದಾರೆ.

ಗುರುಸೋಮಲಿಂಗನನ್ನು ಮಕಣಾಪುರದಿಂದ ಹತ್ತೂರಿಗೆ ಕರೆತಂದು ಸ್ಥಾಪಿಸಲಾಗುತ್ತದೆ. ಈಗಲೂ ಸಹಿತ ಇಲ್ಲಿನ ಮುಖ್ಯದೇವಾಲಯವು ಗುರುಸೋಮಲಿಂಗನದ್ದಾಗಿದೆ. ಆ ದೇವಾಲಯದ ಎಡಕ್ಕೆ ಬನಸಿದ್ಧನ ದೇವಾಲಯವಿದೆ. ಅದರ ಪಕ್ಕಕ್ಕೆ ಓಗೆಣ್ಣಮುತ್ತ್ಯಾನ ದೇವಾಲಯವಿದೆ. ಇಲ್ಲಿ ಗುರುಸೋಮಲಿಂಗ ಮತ್ತು ಬನಸಿದ್ಧನಿಗೆ ವಿಶೇಷ ಪ್ರಾಶಸ್ತ್ಯ, ನಂತರದ್ದು ಓಗೆಣ್ಣಮುತ್ತ್ಯಾನ ಸ್ಥಾನ. ಏಕೆಂದರೆ ಬನಸಿದ್ಧನು ತನ್ನ ಸಾಮಾಜಿಕ ಕಾರ್ಯಗಳಿಂದಾಗಿ ಹತ್ತೂರು ಕಡಕಾನಹಳ್ಳಿ ಹಾಗೂ ಹೊನ್ನಳ್ಳಿಯ ಜನರ ಪ್ರೀತಿಗೆ ಪಾತ್ರನಾಗಿದ್ದನು. ಕೊನೆಗೆ ತಂದೆಯೊಂದಿಗೆ ಹತ್ತೂರಿಗೆ ಬಂದು ನೆಲೆಸಿದ್ದನು. ಈ ಪರಂಪರೆಯ ಕುರಿತು ವಿಸ್ತೃತ ಅಧ್ಯಯನ ಮತ್ತು ಮಾಹಿತಿಗಾಗಿ ಡಾ. ಚನ್ನಪ್ಪಶೆಟ್ಟಿ ಅವರ 'ಅಮೋಘಸಿದ್ಧ ಪರಂಪರೆ' ಕೃತಿಯನ್ನು ಗಮನಿಸಬಹುದು.



೪. ಹತ್ತೂರು : ಬನಸಿದ್ಧ-ಗುರುಸೋಮಲಿಂಗ-ಓಗೆಣ್ಣಮುತ್ತ್ಯಾ ದೇವಾಲಯಗಳ ಸಮುಚ್ಚಯ

ಗ್ರಾಮದ ದಕ್ಷಿಣ ದಿಕ್ಕಿಗೆ ಸ್ವಲ್ಪ ಎತ್ತರವಾದ ಪ್ರದೇಶದಲ್ಲಿ ವಿಶಾಲವಾದ ಪ್ರಾಂಗಣದೊಳಗೆ ಗುರುಸೋಮಲಿಂಗ ಬನಸಿದ್ಧ ಮತ್ತು ಓಗೆಣ್ಣಮುತ್ತ್ಯಾರ ದೇವಾಲಯಗಳಿವೆ. ಈ ದೇವಾಲಯಗಳ ಸಮೂಹವನ್ನು ಐದು ಹಂತಗಳಲ್ಲಿ ಗುರುತಿಸಬಹುದು.

ಹಂತ-೧

ಅಂದಾಜು ಮುನ್ನೂರು ಮೀಟರಿನಷ್ಟು ಉದ್ದ ಮತ್ತು ಅಗಲವಾದ ವಿಸ್ತೀರ್ಣವುಳ್ಳ ಅಂಗಳವನ್ನು ಕಾಣುತ್ತೇವೆ. ಭಕ್ತಾದಿಗಳು ದೇವಾಲಯಕ್ಕೆ ಹೋಗಲು ಹದಿನೈದು ಅಡಿಗಳಷ್ಟು ರಸ್ತೆ, ಎಡಭಾಗದಲ್ಲಿ ಕಾಯಿಹಣ್ಣು ಕರ್ಪೂರ ಇತ್ಯಾದಿಗಳಿಗಾಗಿ ಐದು ಮಳಿಗೆಗಳಿವೆ. ಬಲಭಾಗದಲ್ಲಿ ಮೂರು ಎಕರೆ ದೇವಾಲಯಕ್ಕೆ ಸಂಬಂಧಿಸಿದ ಜಮೀನಿದೆ.

ಹಂತ-೨

ಪ್ರಾಂಗಣದ ಮುಂಭಾಗದಲ್ಲಿ ಸೋಮಲಿಂಗನ ಅಭಿಮುಖವಾಗಿ ನಂದಿಯ ವಿಗ್ರಹವಿದೆ. ಇದರ ಎಡಭಾಗದಲ್ಲಿಯೇ ಒಂದು ತುಂಡಾದ ಶಾಸನ ಶಿಲ್ಪವನ್ನು ಕಾಣುತ್ತೇವೆ. ಅಲ್ಲಿಂದ ಮುಂದಕ್ಕೆ ದೊಡ್ಡದಾದ ಚೌಕಾಕಾರದಲ್ಲಿ ಐದು ಅಡಿಯಷ್ಟು ಎತ್ತರದ ಕಟ್ಟೆಯಿದೆ. ಇದಕ್ಕೆ ಹೋಮದ ಕಟ್ಟೆ ಎಂದು ಕರೆಯುತ್ತಾರೆ. ಜಾತ್ರೆ ಉತ್ಸವ ಮತ್ತು ವಿಶೇಷ ಸಂದರ್ಭಗಳಲ್ಲಿ ಅಗ್ನಿಷ್ಟಿಕೆಯನ್ನು ಹಾಕಲು ಈ ಕಟ್ಟೆಯನ್ನು ಬಳಸಿಕೊಳ್ಳಲಾಗುತ್ತಿದೆ. ನಂತರ ಹತ್ತು ಅಡಿಗಳಷ್ಟು ಎತ್ತರವಾದ

ಕಾಂಪೌಂಡ್ ಸುತ್ತುವರೆದಿದೆ. ಇದಕ್ಕೆ ಹತ್ತಿಕೊಂಡೆ ಮಹಾದ್ವಾರ. ಅದರ ಎಡಬಲದಲ್ಲಿ ಗಣೇಶ ಮತ್ತು ಆಂಜನೇಯನ ಚಿಕ್ಕದಾದ ಗದ್ದುಗೆ ರೂಪದ ದೇವಾಲಯಗಳಿವೆ. ಆ ಮಹಾದ್ವಾರದ ಒಳಭಾಗಕ್ಕೆ ಹೊಂದಿಕೊಂಡಂತೆ ದೊಡ್ಡದಾದ ಎರಡು ಮಾಲಗಂಬ (ದೀಪಸ್ಥಂಭ)ಗಳಿವೆ.

ಹಂತ-೩

ಇಲ್ಲಿ ದೇವಾಲಯಗಳು, ಸಮಾಧಿ ಗದ್ದುಗೆಗಳು ಹಾಗೂ ಶಿಲ್ಪಗಳ ಸಮುಚ್ಚಯವನ್ನು ಈ ಹಂತದಲ್ಲಿ ಕಾಣುತ್ತೇವೆ. ಮಹಾದ್ವಾರವನ್ನು ಪ್ರವೇಶಿಸುತ್ತಿದ್ದಂತೆ ಸೋಮಲಿಂಗ ದೇವಾಲಯಕ್ಕೆ ಅಭಿಮುಖವಾಗಿ ಕಟ್ಟೆಯ ಮೇಲೆ ದೊಡ್ಡದಾದ ಎರಡು ನಂದಿವಿಗ್ರಹಗಳಿವೆ. ಆ ವಿಗ್ರಹಗಳ ಮುಂಭಾಗದಲ್ಲಿ ಕರಿಕಲ್ಲಿನ ಈಶ್ವರ (ಪಾಣಿಪಟ್ಟಲು ಮತ್ತು ಲಿಂಗ)ನ ಶಿಲ್ಪವಿದೆ.

ಬಳಪದ ಕಲ್ಲಿನಿಂದ ನಿರ್ಮಿಸಿದ ಸೋಮಲಿಂಗನ ದೇವಾಲಯವು ಎತ್ತರದಲ್ಲಿದೆ. ಮೂರು ಅಂಕಣದಲ್ಲಿ ಚಿಕ್ಕದಾದ ಪ್ರಾಂಗಣ, ನಂತರದಲ್ಲಿ ಗರ್ಭಗುಡಿಯಿದೆ. ಗರ್ಭಗುಡಿಯ ಮುಂಭಾಗದ ಗೋಡೆಯಲ್ಲಿ ಎಡಬಲಗಳಲ್ಲಿ ದ್ವಾರಪಾಲಕರ ಮೂರ್ತಿಗಳಿವೆ. ಚಚ್ಚೌಕಾಕಾರದ ಕಟ್ಟೆಯ ಮೇಲೆ ಗುರು ಸೋಮಲಿಂಗನ ಮುಖಮಂಡಲವಿದೆ. ಆ ಮುಖಮಂಡಲ (ಕಣ್ಣು, ಕಿವಿ ಬಾಯಿ)ಕ್ಕೆ ಹಿತ್ತಾಳೆಯ ಲೇಪನವಿದೆ. ಅದರ ಹಿಂಭಾಗದಲ್ಲಿ ಏಕಶಿಲೆಯಲ್ಲಿ ತಯಾರಿಸಿದ ಶಿವಪಾರ್ವತಿಯ ಮೂರ್ತಿಶಿಲ್ಪಗಳಿವೆ. ಪ್ರತಿದಿನ ಮೂರು ಹೊತ್ತು ಪೂಜೆ ನೆರವೇರುತ್ತದೆ. ೨೦೦೩ರಲ್ಲಿ ಸೌ. ಸುಗಲಾಬಾಯಿ ಭೀಮರಾವ ಪಾಟೀಲ ಅವರು ಈ ದೇವಾಲಯವನ್ನು ಜೀರ್ಣೋದ್ಧಾರ ಮಾಡಿಸಿದ್ದಾರೆ.

ಇನ್ನು ಈ ದೇವಾಲಯದ ಮುಂಭಾಗದ ಎಡಭಾಗಕ್ಕೆ ಬನಸಿದ್ಧನ ದೇವಾಲಯವಿದೆ. ಸೋಮಲಿಂಗನ ದೇವಾಲಯಕ್ಕಿಂತ ಚಿಕ್ಕದಾದ ಈ ದೇವಾಲಯ ಮೂರು ಅಡಿ ಎತ್ತರದ ಪ್ರಾಂಗಣದ ಮೇಲೆ ನಿಂತಿದೆ. ಗರ್ಭಗುಡಿಯ ಒಳಗೆ ಬನಸಿದ್ಧನ ಕಲ್ಪಿತರೂಪದ ವರ್ಣಮಯ ಚಿತ್ರವಿದೆ. ಆ ದೇವಾಲಯದ ಪಕ್ಕಕ್ಕೆ ಓಗೆಣ್ಣಮುತ್ತ್ಯಾನ ದೇವಾಲಯವಿದ್ದು, ಅಲ್ಲಿಯೂ ಕಲ್ಪಿತರೂಪದ ವರ್ಣಮಯ ಚಿತ್ರವನ್ನು ಕಾಣಬಹುದು. ಆ ದೇವಾಲಯಕ್ಕೆ ಹೊಂದಿಕೊಂಡೆ ಪಡದಾನ ಸಿದ್ಧ(ಬನಸಿದ್ಧನ ಮಗ)-ಹಿರಿಮಲ್ಲಪ್ಪೊಡೆಯ-ಚಿಕ್ಕ ಮಲ್ಲಪ್ಪೊಡೆಯ-ಭುಜಂಗಪ್ಪೊಡೆಯ ಹಾಗೂ ಹುಲಿಬಂದಪ್ಪೊಡೆಯರ ಸಮಾಧಿರೂಪದ ಚಿಕ್ಕಚಿಕ್ಕ ದೇವಾಲಯಗಳಿವೆ. ಸೋಮಲಿಂಗ ದೇವಾಲಯದ ಹಿಂಭಾಗದಲ್ಲಿ ಭೂತಾಳಸಿದ್ಧನ ಕರಿಕಲ್ಲಿನಲ್ಲಿ ಕೆತ್ತಿದ ಏಳು ಅಡಿ ಎತ್ತರದ ನಿಂತ ನಿಲುವಿನ ಮೂರ್ತಿಶಿಲ್ಪವು ಬಯಲಲ್ಲಿದೆ. ಸಾಮಾನ್ಯವಾಗಿ ಭೂತಾಳಸಿದ್ಧನೆಂದರೆ ಬಯಲಲ್ಲಿರುವ ಚಂದ್ರಲೇಪಿತ ಒಂದು ಗುಂಡುಕಲ್ಲು. ಅದರ ಬದಿಯಲ್ಲಿ ಟೊಣಪೆ(ಒನಕೆಯಾಕಾರ)ಯಾಕಾರದ ಆಯುಧ ಇರುತ್ತದೆ. ಅಮೋಘಸಿದ್ಧನಿಗೆ ಕಾವಲುಗಾರನಾಗಿದ್ದರಿಂದ ಈತನ ಮೂರ್ತಿಯು ಬಟಾಬಯಲಿನಲ್ಲಿರುತ್ತದೆ ಎಂಬುದು ಭಕ್ತಾದಿಗಳ ಅಭಿಪ್ರಾಯವಾಗಿದೆ. ಆತನ ಹಿಂಭಾಗದಲ್ಲಿ ವಿಶಾಲವಾದ ಬಯಲು ಜಾಗೆಯಿದೆ. ಕಾಂಪೌಂಡಿಗೆ ಹೊಂದಿಕೊಂಡು ಒಳಭಾಗದಲ್ಲಿ ಸುತ್ತಲೂ ಮಂಟಪಗಳಿವೆ. ಜೊತೆಗೆ ಸಮುದಾಯ ಭವನ, ಪ್ರಸಾದನಿಲಯ, ಉಗ್ರಾಣಗಳಿವೆ. ಹೀಗೆ ಈ ದೇವಾಲಯವು ಅಮೋಘಸಿದ್ಧ ಪರಿವಾರದ ನೆಲೆಯಾಗಿ ಆ ಭಾಗದಲ್ಲಿ ಪ್ರಸಿದ್ಧಿಯನ್ನು ಹೊಂದಿದೆ. ವಿವಿಧೆಡೆಗಳಿಂದ ಭಕ್ತಾದಿಗಳು ಇಲ್ಲಿಗೆ ನಡೆದುಕೊಳ್ಳುತ್ತಾರೆ.

೫. ಜಾತ್ರೆ-ಉತ್ಸವ-ಆಚರಣೆಗಳು

ಗುರುಸೋಮಲಿಂಗ-ಬನಸಿದ್ಧ-ಓಗೆಣ್ಣಮುತ್ತ್ಯಾ ಮತ್ತವರ ಪರಿವಾರದವರ ಆರಾಧನೆಯ ಕೇಂದ್ರವಾದ ಹತ್ತೂರಲ್ಲಿ ಪ್ರತಿವರ್ಷ ಸಂಕ್ರಮಣ (ಜನೇವರಿ ೧೨ ರಿಂದ ೧೫ರವರೆಗೆ)ದಲ್ಲಿ ಜಾತ್ರೆ ನಡೆಯುತ್ತದೆ. ಜನೇವರಿ ೧೨ರಂದು ಬೆಳಿಗ್ಗೆ ಹತ್ತು ಘಂಟೆಯಿಂದ ಸಾಯಂಕಾಲ ನಾಲ್ಕು ಘಂಟೆಯವರೆಗೆ ಎಣ್ಣೆಮಜಲು ಕಾರ್ಯಕ್ರಮವಿರುತ್ತದೆ. ಊರ ಜನರು ಐದು ನಂದಿಕೋಲುಗಳೊಂದಿಗೆ ಮೆರವಣಿಗೆಯ ಮೂಲಕ ಗ್ರಾಮದ ಎಲ್ಲ ದೇವಾಲಯಕ್ಕೆ ಭೇಟಿ ನೀಡಿ ದೇವರುಗಳಿಗೆ ಎಣ್ಣೆ ಮಜ್ಜನ ಮಾಡಿಸಿಕೊಂಡು ಬರುತ್ತಾರೆ. ಜನೇವರಿ ೧೩ರಂದು ಐದು ನಂದಿಕೋಲುಗಳನ್ನು ದೇವಾಲಯದ ಆವರಣದ ಮುಂದೆ ಇರುವ ಪಾದಗಟ್ಟೆಯಲ್ಲಿ ನಿಲ್ಲಿಸುತ್ತಾರೆ. ಐದರಲ್ಲಿ ಎರಡು ನಂದಿಕೋಲುಗಳು ಡೊಳ್ಳೆ ಮನೆತನದವರಿಗೆ ಸೇರಿದವುಗಳು. ಈ ಎರಡರಲ್ಲಿ ಒಂದಕ್ಕೆ ಬಾಸಿಂಗ ಇನ್ನೊಂದಕ್ಕೆ ಸದರ ಬಾಸಿಂಗ ಎಂದು ಕರೆಯುತ್ತಾರೆ. ಅಕ್ಷತಾ ಹಾಕುವ ಸಂದರ್ಭದಲ್ಲಿ ಲಿಂಗಾಯತ ಸ್ವಾಮಿಗಳು ಮಂಗಳಾಷ್ಟಕ ಹೇಳಿದರೆ, ಒಡೆಯರು ಪೂಜಾಕಾರ್ಯವನ್ನು ಮಾಡುತ್ತಾರೆ. ಈ ಕಾರ್ಯ ಮುಗಿದ ನಂತರ ಐದೂ ನಂದಿಕೋಲುಗಳನ್ನು ಊರ ಅಗಸಿಯ ಬಾಗಿಲಲ್ಲಿ ಸ್ಥಾಪಿಸುತ್ತಾರೆ. ಇದಕ್ಕೆ ಭೋಗಿ ಅಕ್ಷತಾ ಕಾರ್ಯಕ್ರಮ ಎನ್ನುತ್ತಾರೆ.

ದೇವಸ್ಥಾನದೊಳಗಿನ ದೇವರಿಗೆ ಸಂಬಂಧಪಟ್ಟ ಕಾರ್ಯಕ್ರಮಗಳು ಜನೇವರಿ ೧೪ರಂದು ನಡೆಯುತ್ತವೆ. ಎರಡು ಪಲ್ಲಕ್ಕಿಗಳು ಹಾಗೂ ನಂದಿಕೋಲುಗಳು ಸೇರಿಕೊಂಡು ಊರಿಗೆ ಸಮೀಪದ ಸೀನಾ ನದಿಗೆ ಗಂಗಾಸ್ಥಳಕ್ಕೆ ಹೋಗುವ ಕಾರ್ಯಕ್ರಮವಿದು. ಒಂದು ಪಲ್ಲಕ್ಕಿಯಲ್ಲಿ ಗುರುಸೋಮಲಿಂಗನ ಮೂರ್ತಿ, ಇನ್ನೊಂದರಲ್ಲಿ ಬನಸಿದ್ಧನ ಮೂರ್ತಿ ಇರುತ್ತದೆ. ಆ ಎರಡೂ ದೇವರ ಮೂರ್ತಿಗಳಿಗೆ

ನದಿಯ ನೀರಿನಿಂದ ಸ್ನಾನ ಮಾಡಿಸಿಕೊಂಡು ಬರಲಾಗುತ್ತದೆ. ಇದಕ್ಕೆ ಗಂಗಾಸ್ನಾನ ಕಾರ್ಯಕ್ರಮವೆಂದು ಕರೆಯುತ್ತಾರೆ. ಅಂದು ಮಧ್ಯಾಹ್ನ ದೇವಾಲಯದ ಆವರಣದಲ್ಲಿ ಪ್ರಸಾದದ ವ್ಯವಸ್ಥೆಯಿರುತ್ತದೆ. ಒಡೆಯರು ಪ್ರಸಾದ ಸೇವಿಸಿದ ನಂತರ ಬಂದ ಭಕ್ತರು ಪ್ರಸಾದವನ್ನು ಸೇವಿಸುವುದು ರೂಢಿಯಲ್ಲಿದೆ. ಪ್ರಸಾದ ಸೇವಿಸಿದ ನಂತರ ಪಲ್ಲಕ್ಕಿಗಳು ಹಾಗೂ ನಂದಿ ಕೋಲುಗಳು ಚಾಜದವರ ಮನೆಗೆ ಹೋಗುತ್ತವೆ. ಕುರುಬ ಸಮಾಜದ ಬಟಗೇರಿ ಅವರ ಮನೆಗೆ ಸೋಮಲಿಂಗನ ಪಲ್ಲಕ್ಕಿ ಹಾಗೂ ಪಂಚಮಸಾಲಿ ಸಮಾಜದ ಡೊಳ್ಳಿ ಅವರ ಮನೆಗೆ ಬನಸಿದ್ಧನ ಪಲ್ಲಕ್ಕಿ ಕೂಡ್ರುತ್ತವೆ. ಇನ್ನು ಡೊಳ್ಳೆ-೨, ನಾಗಶೆಟ್ಟಿ ಪಾಟೀಲ-೧, ಕುಲಕರ್ಣಿ-೧ ಹಾಗೂ ಕೋಳಿ ಸಮಾಜದವರ ಮನೆಯಲ್ಲಿ ಒಂದು ಹೀಗೆ ಐದು ನಂದಿಕೋಲುಗಳು ಕೂಡ್ರುತ್ತವೆ. ಅಂದು ರಾತ್ರಿ ಹತ್ತು ಗಂಟೆಗೆ ಪಲ್ಲಕ್ಕಿ ಹಾಗೂ ನಂದಿಕೋಲುಗಳು ಚಾಜದವರ ಮನೆಯಿಂದ ಡೊಳ್ಳು, ಹಲಗೆ ಕೊಂಬು ತಾಳ ದೀವಟಿಗೆಯವರೊಂದಿಗೆ ಮೆರವಣಿಗೆಯ ಮೂಲಕ ದೇವಾಲಯದತ್ತ ಸಾಗಿಬರುತ್ತವೆ. ಬರುವಾಗ ದಾರಿಯಲ್ಲಿ ಪ್ರತಿಯೊಂದು ಮನೆಯವರು ಪಲ್ಲಕ್ಕಿ-ನಂದಿಕೋಲುಗಳನ್ನು ಸ್ವಾಗತಿಸಿ, ದೇವರನ್ನು ಪೂಜಿಸಿ ಹಾರ ಹಾಕಿ ಖಾರೀಕ ಬಾಳೆಹಣ್ಣುಗಳನ್ನು ಹಾರಿಸುತ್ತಾರೆ. ಹೀಗೆ ಮೆರವಣಿಗೆಯು ಬೆಳಗಿನ ಐದು ಗಂಟೆಯ ಹೊತ್ತಿಗೆ ದೇವಾಲಯವನ್ನು ತಲುಪುತ್ತವೆ. ಆಗ (ಅಂದರೆ ಜನೇವರಿ ೧೫) ಹೋಮ ಕಾರ್ಯಕ್ರಮ ಆರಂಭವಾಗುತ್ತದೆ. ಶ್ರೀಗಂಧದ ಕಟ್ಟಿಗೆಗಳಿಂದ ಸಿದ್ಧಪಡಿಸಿದ ಹೋಮದ ಮೇಲೆ ಕಟ್ಟಿಗೆ ಯೊಂದಕ್ಕೆ ಸೀರೆ ಉಡಿಸಿ, ಕೊರಳಿಗೆ ತಾಳಿ ಕಟ್ಟಿ, ಕಾಲಿಗೆ ಉಂಗುರ ತೊಡಿಸಿ, ಉಡಿ ತುಂಬಿ, ತೆಂಗಿನ ಕಾಯಿ ಒಡೆದು ಪೂಜೆ ಮಾಡುತ್ತಾರೆ. ಇವುಗಳನ್ನೆಲ್ಲ ಹೋಮದಲ್ಲಿರುವ ಚದರದಲ್ಲಿ ಹಾಕುತ್ತಾರೆ. ನಂತರ ಹೋಮವನ್ನು ಹೊತ್ತಿಸ ಲಾಗುತ್ತದೆ. ಈ ಹೋಮವನ್ನು ಹೊತ್ತಿಸುವ ಚಾಜ ಊರಿನ ಶಿವಗೊಂಡೆ ಮನೆತನಕ್ಕೆ ಇರುತ್ತದೆ. ಹೀಗೆ ನಾಲ್ಕು ದಿನಗಳ ಕಾಲ ನಡೆಯುವ ಈ ಜಾತ್ರಾ ಮಹೋತ್ಸವದಲ್ಲಿ ವಿವಿಧ ಭಾಗಗಳಿಂದ ನೂರಾರು ಒಡೆಯರು, ಸಾವಿರಾರು ಭಕ್ತಾದಿಗಳು ಶ್ರದ್ಧೆಯಿಂದ ಪಾಲ್ಗೊಂಡಿರುತ್ತಾರೆ.

೬. ಹತ್ತೂರಿನ ಅವಧುಸಿದ್ಧ ಹಿರಕೂರ : ಅಮೋಘಸಿದ್ಧ ಸಂಥನಕಾರ

ಈವರೆಗೆ ಅಮೋಗಸಿದ್ಧ ಪರಂಪರೆಯ ಬಗೆಗೆ ಲಿಖಿತ ಮತ್ತು ಮೌಖಿಕ ರೂಪದ ಕಾವ್ಯಗಳು ಪ್ರಕಟಗೊಂಡಿಲ್ಲ. ಆದರೆ ಈ ಪರಂಪರೆಯ ಸಂಕಥನವನ್ನು ಹತ್ತೂರಿನ ಅವಧುಸಿದ್ಧ ಹಿರಕೂರ ಅವರು ಸಮಗ್ರ ಹಾಗೂ ಸುದೀರ್ಘವಾಗಿ ಹಾಡಿನ ಮೂಲಕ ಮೌಖಿಕರೂಪದಲ್ಲಿ ಹಿಡಿದಿಟ್ಟುಕೊಂಡಿದ್ದಾರೆ. ಎಪ್ಪತ್ನಾಲ್ಕು ವಯಸ್ಸಿನ ಹಿರಿಯ ಜೀವ ಅವಧುಸಿದ್ಧ ಹಿರಕೂರು ಸುಶ್ರಾವ್ಯವಾಗಿ ಅಮೋಘಸಿದ್ಧ ಮತ್ತವನ ಪರಿವಾರದ ಸಂಕಥನವನ್ನು ಎಳೆಎಳೆಯಾಗಿ ಬಿಚ್ಚಿಡುತ್ತಾರೆ. ಸದಾ ಧೋತಿ, ನಿಲುವಂಗಿ ಹಾಗೂ ತಲೆಗೆ ರುಮಾಲನ್ನು ಸುತ್ತಿದ ಅವಧುಸಿದ್ಧ ಅಮೋಘಸಿದ್ಧನ



ಕಥೆಯನ್ನು ಹೇಳು ಎಂದು ಕೇಳಿದರೆ ಸಾಕು, ನಿರರ್ಗಳವಾಗಿ ಏರುಧ್ವನಿಯಲ್ಲಿ ಹಾಡುವುದನ್ನು ನಾವು ಕೇಳಿಯೇ ಆನಂದಿಸಬೇಕು. ಅಷ್ಟೊಂದು ಸುಶ್ರಾವ್ಯವಾಗಿ ಆ ಹಿರಿಯ ಮನುಷ್ಯ ಹಾಡುತ್ತಾನೆ. ಕ್ಷೇತ್ರಕಾರ್ಯಕ್ಕೆ ಹತ್ತೂರಿಗೆ ನಾವು ಹೋದಾಗ ಅವಧುಸಿದ್ಧರನ್ನು ಭೇಟಿಯಾಗಿ 'ಅಮೋಘಸಿದ್ಧನ ಯಾವುದಾದರೂ ಒಂದು ಸಂದನ್ನು ಹಾಡು ಅಜ್ಜಾ' ಎಂದು ಕೇಳಿಕೊಂಡೆವು. ಅದಕ್ಕೆ ಆ ಹಿರಿಯ ಜೀವ ಸಂತೋಷ ಗೊಂಡು ಎರಡು ಸಂದುಗಳನ್ನು ಹಾಡಿದ. ಒಂದು ಸಂದಿನಲ್ಲಿ ಅಮೋಘಸಿದ್ಧನ ಪರಿವಾರದ ಪರಿಚಯ ಮತ್ತು ಸ್ತುತಿ, ಮತ್ತೊಂದು ಸಂದಿನಲ್ಲಿ ಓಗೆಣ್ಣಮುತ್ತ್ಯಾ, ಬನಸಿದ್ಧರು ಹೋರಾಡಿ ಹತ್ತೂರು ಮತ್ತು ಸುತ್ತಮುತ್ತಲ ಗ್ರಾಮಗಳ ಜನರನ್ನು ಸಂರಕ್ಷಿಸಿದ್ದು, ಹತ್ತೂರಿಗೆ ಬಂದು ನೆಲೆಸಿದ್ದು ಇತ್ಯಾದಿ ಸಂಕಥನಗಳಿವೆ.

೬. ಅಪ್ರಕಟಿತ ಶಾಸನ ಶೋಧ

ಹತ್ತೂರು ದೇವಾಲಯದ ಮುಂಭಾಗದಲ್ಲಿ ಕರಿಕಲ್ಲಿನ ತುಂಡಾದ ಶಾಸನಶಿಲ್ಪವೊಂದು ದಿನಾಲು ಭಕ್ತರಿಂದ ಪೂಜೆಗೊಳ್ಳುತ್ತದೆ. ಕಳೆದ ಮೇ ತಿಂಗಳಲ್ಲಿ ಈ ದೇವಾಲಯಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಶೋಧಿಸಿದ್ದು ಇದರ ಅರ್ಧದಷ್ಟು ಭಾಗ ತುಂಡಾಗಿದ್ದು, ಮೊದಲರ್ಧಭಾಗ ಮಾತ್ರ ಲಭ್ಯವಿದೆ. ಕಲಚುರಿ ರಾಜರ ಕಾಲಕ್ಕೆ ಸೇರಿದ ಈ ತುಂಡಾದ ಶಾಸನಶಿಲ್ಪವು ಮೂರು ಅಡಿ ಎತ್ತರ ಹಾಗೂ ಎರಡೂವರೆ ಅಡಿಯಷ್ಟು ಅಗಲವಿದೆ. ಮೇಲ್ಭಾಗದಲ್ಲಿ ನಾಲ್ಕು ಪಟ್ಟಿಕೆಗಳಿವೆ. ಮೊದಲ ಪಟ್ಟಿಕೆಯ ಮಧ್ಯದಲ್ಲಿ ಗುಮ್ಮಟೆಯಾಕಾರದ ಕಳಸದ ಚಿತ್ರ, ಎರಡನೆಯ ಪಟ್ಟಿಕೆಯಲ್ಲಿ ಸೂರ್ಯಚಂದ್ರರ ಚಿತ್ರಗಳು, ಮೂರನೆಯ ಪಟ್ಟಿಕೆಯ ಎಡಭಾಗಕ್ಕೆ ಧೂಪಾರತಿ ಗಂಟೆಯೊಂದಿಗೆ ಪೂಜೆಯಲ್ಲಿ ನಿರತನಾದ ಮನುಷ್ಯ, ಮಧ್ಯದಲ್ಲಿ ಶಿವಲಿಂಗ ಹಾಗೂ ಬಲಭಾಗಕ್ಕೆ ಹಸು ಹಾಗೂ ಹಾಲು ಕುಡಿಯುತ್ತಿರುವ ಕರುವಿನ ಚಿತ್ರಗಳಿವೆ. ನಾಲ್ಕನೆಯ ಪಟ್ಟಿಕೆಯ ಮಧ್ಯಭಾಗದಲ್ಲಿ ಧೂಪಾರತಿಯ ಚಿತ್ರವಿದ್ದು, ಎಡಬಲಗಳಲ್ಲಿ ಶಾಪಾಶಯವನ್ನು ಹೇಳುವ ಶಾಸನಪಠ್ಯವಿದೆ. ಮೊದಲಿಗೆ ಶಾಪಾಶಯವನ್ನು ಹೇಳಿರುವುದು ಈ ಶಿಲ್ಪದ ವಿಶೇಷತೆಯಾಗಿದೆ. ನಂತರ ಸಮತಟ್ಟಾದ ಶಿಲ್ಪದಲ್ಲಿ ಶಾಸನದ ಪಠ್ಯಭಾಗವಿದೆ. 'ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರಚಾರವೇ ತ್ರೈಲೋಕ್ಯ ನಗರಾರಂಭ ಮೂಲಸ್ತಂಭಾಯ ಶಂಭವೇ' ಎಂಬ ಶೈವಸ್ತುತಿಯೊಂದಿಗೆ ಈ ಶಾಸನ ಆರಂಭವಾಗುತ್ತದೆ. ೧೫ ಸಾಲುಗಳಷ್ಟು ಮಾತ್ರ ಶಾಸನ ಪಠ್ಯಭಾಗವಿದೆ. ಕಲಚುರಿ ದೊರೆ ರಾಯಮುರಾರಿ ಸೋವಿದೇವ(೧೧೬೭-೧೧೬೮)ನ ಕಾಲದ ಶಾಸನ ಇದಾಗಿದೆ. ತುಂಡಾಗಿದ್ದರಿಂದ ಪೂರ್ಣಪ್ರಮಾಣದ ಮಾಹಿತಿ ಲಭ್ಯವಾಗುತ್ತಿಲ್ಲ.

ಶಾಸನದ ಪಠ್ಯಭಾಗ

೧ ಶ್ರೀ ನಮಸ್ತುಂಗ ಸಿರಸ್ತುಂಬಿ ಚಂದ್ರಚಾಮರವೇ ತ್ರೈಲೋಕ್ಯ

೨ ನಗರಾರಂಭ ಮೂಲಸ್ತಂಭಾಯ ಶಂಭವೆ ಸ್ವಸ್ತಿ ಸಮಸ್ತ ಭುವನಾ

೩ ಸ್ರಯ ಶ್ರೀ ಪ್ರಿಥ್ವಿವಲ್ಲಭ ಮಹಾ[ರಾ]ಜಾಧಿರಾಜ ರಾಜ ಪರಮೇಶ್ವರ ಪರಮ

೪ ಭಟ್ಟಾರಕಂ ಕಾಳಂಜರ ವಿರಾಜಿತ ಪುರವರಾಧೀಶ್ವರಂ ಸುವರ್ಣ್ನ ವೃಷಭಧ್ವಜ

೫ ಡಮರುಗಂ ತೂರ್ಯ್ಯ ನಿರ್ಗ್ಘೋಶಣ ಕಳಚೂರ್ಯ್ಯ ಕುಳಕಮಳ ಮಾತ್ತಾಣ್ಯಂ

೬ ಡಂ ಕದನಪ್ರಚಂಡ ಮಾನಕನಕಾಚಳಂ ಸುಭಟರಾದಿತ್ಯ ಕಲಿಗ

೭ ಳಂಕುಸಂ ಸರಣಾಗತ ವಜ್ರಪಂಜರಂ ಪರನಾರಿ ಸಹೋದರಂ ಗಿರಿ

೮ ದುರ್ಗಮಲ್ಲಂ ಪ್ರತಾಪಲಂಕೇಸ್ವರಂ ನಿಸ್ಸಂಕ ವೈರಿಭ ಕಂಠೀರವಂ

೯ ಮಲ್ಲಂ ಸನಿವಾರಸಸಿದ್ಧಿ ಬಪ್ಪನಂಕಕಾಱಂ

೧೦ ಕಂಟ್ಟರವ ನಾಮಾದಿ ಸಮಸ್ತ ಪ್ರಶಸ್ತಿ ಸಹಿತಂ ಶ್ರೀಮತು ರಾಯಮುರಾರಿ

೧೧ ಮಲ್ಲದಾರಿ ಸೋವಿದೇವನ ತತ್ಪಾದ ಪದ್ಮೋಪಜೀವಿ ರಾಯಗಳಪ್ಪ

೧೨ ....

(ಮುಂದಿನ ಸಾಲುಗಳನ್ನೊಳಗೊಂಡ ಶಾಸನಶಿಲ್ಪ ತುಂಡಾಗಿದೆ)

[ಕ್ಷೇತ್ರಕಾರ್ಯದಲ್ಲಿ ನನ್ನೊಂದಿಗೆ ಬಂದು ಶಾಸನವನ್ನು ಪ್ರತಿ ಮಾಡಿ ಓದುವಲ್ಲಿ ಸಹಕಾರ ನೀಡಿದ ಶಾಸನಶಾಸ್ತ್ರ ವಿಭಾಗದ ಸಹಪ್ರಾಧ್ಯಾಪಕರಾದ ಡಾ. ಕಲವೀರ ಮನ್ವಾಚಾರ್ ಮತ್ತು ಹಸ್ತಪ್ರತಿಶಾಸ್ತ್ರ ವಿಭಾಗದ ಸಂಶೋಧನ ವಿದ್ಯಾರ್ಥಿ ವಿರೂಪಾಕ್ಷಿ ಅವರಿಗೆ ಕೃತಜ್ಞತೆಗಳು. ಹಾಗೆಯೇ ಆ ದೇವಾಲಯದ ಪೂಜ್ಯಶ್ರೀ ಶೀಲಸಿದ್ಧ ಮಹಾರಾಜರು, ಚೇರ್ಮನ್ನರಾದ ಶ್ರೀ ಪಾಟೀಲ, ಸೋಮಲಿಂಗ ಭೂತಾಳಿ ಕನೋಡೆಯರ್, ಪ್ರಕಾಶ್ ಪೂಜಾರಿ, ಅವಧುಸಿದ್ಧ ಹಿರಕೂರ ಮೊದಲಾದ ಹತ್ತೂರು ಗ್ರಾಮಸ್ಥರ ಸಹಕಾರವನ್ನು ನೆನೆಯುತ್ತೇನೆ.]

೬೫

ಕೊಡಗಿನ ಕ್ರೀಡೆಗಳು, ಕುಣಿತಗಳು ಹಾಗೂ ಪೂರ್ವಾನ್ವಯಗಳು

ಡಾ. ಎಂ.ಜಿ. ನಾಗರಾಜ್*

ಕ್ರೀಡೆ ಮತ್ತು ಕುಣಿತಗಳು ಜೀವಿಯ ಚೈತನ್ಯದ ಸಂಕೇತ; ಸಮುದಾಯ ಪ್ರತಿಭೆಯ ಪರಿತೋದರ್ಶನ ಮಾಧ್ಯಮ. ರಂಜನೆ, ನೆಮ್ಮದಿ, ಆತ್ಮತೃಪ್ತಿ, ಸಮುದಾಯ ಮುದ ಈ ಕ್ರೀಡೆ, ಕುಣಿತಗಳಿಂದ ಕಲಿತವಾಗುತ್ತದೆ. ಇವು ಜನಪದದ ಸಹಜ ಮುಖಗಳೂ ಆಗಿವೆ. ಅವು, ಕೊಡಗಿನಲ್ಲಿ ಹಬ್ಬ, ದೇವಾಚಾರ, ಮದುವೆ, ದುಡಿಮೆ, ಕೃಷಿ ಇತ್ಯಾದಿ ಸಾಂಸ್ಕೃತಿಕ-ಸಾಮಾಜಿಕ ನೆಲೆಗಳಲ್ಲಿ ಉದಿಸಿಬಂದಿವೆ. ಅವುಗಳಲ್ಲಿ ಹೊರಗಿನಿಂದ ಪ್ರಭಾವಿತವಾದ, ಒಳಗಿನಿಂದ ಮೂಡಿದ ಕ್ರೀಡಾ ಬಗೆಗಳಿವೆ, ಕುಣಿತಗಳಿವೆ. ಅಂದರೆ ಅನುಕರಣೆ ವಿನಿಮಯ ಸ್ವಂತಿಕೆ, ಹೊಸತನ, ಅಸ್ಮಿತೆ, ಪರಂಪರೆಯ ಪ್ರಾಚೀನತೆ ಇತ್ಯಾದಿಗಳು ಈ ವೈಶಿಷ್ಟ್ಯಪೂರ್ಣ ಆವರಣದಲ್ಲಿ ಎದ್ದು ತೋರಿಕೊಳ್ಳುತ್ತವೆ. ವಸ್ತು, ಪ್ರಾಣಿ, ಮನುಷ್ಯರ ಸಂಬಂಧಗಳೂ ಇಲ್ಲಿ ನೇರ್ಪುಗೊಂಡಿವೆ. ಅವುಗಳೂ ಕ್ರೀಡೆ ಮತ್ತು ಕುಣಿತಗಳ ಮಾಧ್ಯಮಗಳಾಗಿ ಸ್ಫೂರ್ತಿಗೆ, ಹರುಷಕ್ಕೆ, ತೃಪ್ತಿಗೆ ಕಾರಣಗೊಂಡಿವೆ. ಆಧುನಿಕ ಜಗತ್ತಿನ ಕುಣಿತ-ಕ್ರೀಡೆಗಳಲ್ಲಿ 'ಮಾರ್ಗ'ದ ರೀತಿ ಕಾಣುತ್ತದೆ. ಪರಂಪರಾಗತ ಕ್ರೀಡೆ-ಕುಣಿಗಳಲ್ಲಿ 'ದೇಸಿ'ತನ ಕಾಣುತ್ತದೆ. ಕೊಡಗಿನಲ್ಲಿ ಉಭಯ ಬಗೆಗಳೂ ಜನಜೀವನದಲ್ಲಿ ಹಾಸುಹೊಕ್ಕಾಗಿವೆ. ವಿಶೇಷತಃ ಅಲ್ಲಿಯ ವಿವಿಧ ಹಬ್ಬಗಳಲ್ಲಿ, ದೇವ-ದೇವಿಯರ ಆರಾಧನಾ ಸಂದರ್ಭಗಳಲ್ಲಿ, ಹರಕೆಯಾಟಗಳಲ್ಲಿ ಹುತ್ತರಿ-ತುಲಾಸಂಕ್ರಮಣ-ಸುಗ್ಗಿಕಟ್ಟೆ ಹಬ್ಬಗಳ ಸಮಯದಲ್ಲಿ, ಹಿರಿಯರ ಸ್ಮಾರಕ ಕಟ್ಟಡ (ಕೈಮಡ)ಗಳ ವಾರ್ಷಿಕಾಚರಣೆಗಳಲ್ಲಿ ಇವೆಲ್ಲ ಕಾಣಬರುತ್ತವೆ. ಇಲ್ಲಿಯ ಕ್ರೀಡೆ ಮತ್ತು ಕುಣಿತಗಳು ಭೌಗೋಳಿಕ ಪರಿಸರಕ್ಕನುಗುಣವಾಗಿ ರೂಪುಗೊಂಡಿವೆ. ಪರಂಪರೆಯ ಬೆಂಬಲವನ್ನು ಪಡೆದಿವೆ. ಬದುಕಿನ ಸ್ತರಗಳನ್ನು, ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ಮಾನಸಿಕ ಚೌಕಟ್ಟಿನಲ್ಲಿ ಅಳವಡಿಸಿಕೊಂಡ ಕುಣಿತ, ಕ್ರೀಡೆಗಳು ಇಲ್ಲಿವೆ. ದೇಸೀ ಕ್ರೀಡೆಗಳಂತು, ಜನಪದ ಕುಣಿತಗಳಂತು, ಸಮಾಜದ ಸಂಸ್ಕೃತಿಯ, ಸಂಸ್ಕಾರದ ನಿರೂಪಣೆ ಮಾಡುತ್ತವೆ. ಈ ದೃಷ್ಟಿಯಿಂದ ಪಾರಂಪರಿಕ ಕುಣಿತ-ಕ್ರೀಡೆಗಳು, ಧಾರ್ಮಿಕ ಕ್ರೀಡೆಗಳು, ವೀರಗುಣಿತ ಕ್ರೀಡೆಗಳು, ಕೃಷಿ ಕ್ರೀಡೆಗಳು, ಆಧುನಿಕ ಕ್ರೀಡೆಗಳು ಇವನ್ನೆಲ್ಲ ಕಳಿ (ಕ್ರೀಡೆ), ಆಟ (ಕುಣಿತ)ಗಳಲ್ಲಿ ವಿಭಾಗಿಸಿಕೊಳ್ಳಬಹುದು. ಕೆಲವು ಕ್ರೀಡೆಗಳು ಕುಣಿತ ಸಹಿತವಾಗಿದ್ದರೆ, ಮತ್ತೆ ಕೆಲವು ಶುದ್ಧ ಕ್ರೀಡೆಗಳಾಗಿ ಕಂಡುಬರುತ್ತವೆ. ಕುಣಿತಗಳು, ಹೆಚ್ಚಾಗಿ ದೇವತಾ ಹಬ್ಬಗಳ ಸಂದರ್ಭಗಳಾಗಿ ಹುಟ್ಟಿಕೊಂಡಿವೆ. ಮಲೆಗಳ ನಾಡಾಗಿ, ಬೆಟ್ಟಗುಡ್ಡ, ನೀರು, ಕಾಡು, ಹಸಿರು ಪ್ರಾಣಿಗಳು-ಇವುಗಳ ಪರಿಸರದಲ್ಲಿ ಆರ್ಥಿಕ ಉಸಾಬರಿಯಿಲ್ಲದೆ ಸುಲಭವಾಗಿ ದಕ್ಕುವ ಮನರಂಜನೆಯ ಹಾಗೂ ಅಧ್ಯಾತ್ಮಿಕ ಸ್ಪರ್ಶದ ಸಾಧನಗಳಾಗಿ ಉಲ್ಲಾಸ ತರುವ ಕುಣಿತಗಳನ್ನು 'ಆಟ್' ಎಂದು ಕೊಡವ ಭಾಷೆಯಲ್ಲಿ ಕರೆಯುತ್ತಾರೆ; ಕ್ರೀಡೆಗಳನ್ನು 'ಕಳಿ'ಗಳು ಎಂದು ಚಾಲ್ತಿಗೊಳಿಸಿದ್ದಾರೆ. ಗೌಡ ಜನಾಂಗ, ಕೆಂಬಟ್ಟೆ, ಮಾಪಿಳ್ಳೆ, ವೀರಶೈವ, ಯರವ ಇತ್ಯಾದಿ ಜನಾಂಗಗಳಲ್ಲಿ ಇವೆಲ್ಲ ವಿವಿಧ ಬಗೆಗಳಲ್ಲಿ ಕಾಣಿಸಿಕೊಳ್ಳುತ್ತವೆ. ಕ್ರೀಡೆ ಮತ್ತು ಕುಣಿತಗಳು ವಾದ್ಯಗಳನ್ನು ಸಾಂದರ್ಭಿಕವಾಗಿ ಒಳಗೊಂಡಿವೆ. ಪ್ರಾಗೈತಿಹಾಸಿಕ ಸ್ಪರ್ಶಗಳನ್ನು ಇವು ಕೆಲ ವೇಳೆ ತೋರಿಕೊಂಡಿವೆ. ಕೆಲವು ಋತುಮಾನದ ಕ್ರೀಡೆ ಮತ್ತು ಕುಣಿತಗಳಾಗಿ ಕಂಗೊಳಿಸಿ, ಪೂರ್ವಾನ್ವಯ ಪಾರಂಪರಿಕ ಗೌರವವನ್ನು ಪಡೆದಿವೆ. ಹರುಷದ ಸ್ರೋತ್ರಗಳಾಗಿ ಮೂಡಿಬಂದಿವೆ.

ಪಾರಂಪರಿಕ ಕ್ರೀಡೆಗಳು

ಕೈಲ್ ಪೊಳ್ದು (ಕೈಧು ಪೊಳ್ಪು) – ಇದು ಕೊಡಗಿನ ಆಯುಧಪೂಜೆ ಸ್ವರೂಪದ ಹಬ್ಬವಾಗಿದೆ. ಬೇಟೆಯಂಥ ವೀರ ಕ್ರೀಡೆಯೂ ಸಹಗಾಮಿಯೂ ಆಗಿದೆ. 'ಕೈಲ್' ಎಂದರೆ 'ಆಯುಧ', ಪೊಳ್ದು-ಪೊಳದು ಎಂದರೆ ಹಬ್ಬ, ಎಂಬ ಅರ್ಥವು ಕೊಡವ ಭಾಷೆಯಲ್ಲಿದೆ. ವ್ಯವಸಾಯದ ಕೆಲಸವೆಲ್ಲ ಮುಗಿದ ಮೇಲೆ, ಕುಡುಗೊಲು, ವಡಿಕತ್ತಿ, ಕೊಡಲಿ, ಈಟಿ, ಕೋವಿ ಇತ್ಯಾದಿ ಆಯುಧಗಳನ್ನೆಲ್ಲ ಶುದ್ಧ ಮಾಡಿ ಪೂಜೆಗಿಡುವರು.

* 'ಅನರ್ಘ್ಯ', ಶ್ರೀ ಜಟನಿ ಕೃಪೆ, ೨೨೧, ೬೮ನೇ ಕ್ರಾಸ್, ೫ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-೫೬೦೦೧೦.

ಇದು ಚಿಂಜಾರ್ ಅಂದರೆ ಸಿಂಹ ಮಾಸದ ೧೮ಕ್ಕೆ (ಸೆಪ್ಟೆಂಬರ್ ಮೊದಲ ವಾರ) ಒದಗಿ ಕೈಧು ಪೊಳ್ದು ಅಥವಾ ಕೈಲ್ ಮುಹೂರ್ತ ಎನಿಸಿಕೊಳ್ಳುತ್ತದೆ. ಪಾಂಡವರು ಅಜ್ಞಾತವಾಸ ಮುಗಿಸಿ ರಹಸ್ಯವಾಗಿರಿಸಿದ್ದ ಶಸ್ತ್ರಾಸ್ತ್ರಗಳನ್ನು ತೆಗೆದು ಪೂಜಿಸಿ ಗೋಗ್ರಹಣಕ್ಕೆ ಹೋದ ಕತೆಯ ಹಿನ್ನೆಲೆಯನ್ನು ಕೈಲ್ ಪೊಳುವಿಗೆ ಅನ್ವಯಿಸಿಕೊಳ್ಳಲಾಗಿದೆ. ಮುಖ್ಯವಾಗಿ ಮಳೆ ಕಾನನದಲ್ಲಿ ಬೇಟೆಗೆ ಹೋಗಲು ಸಿದ್ಧವಾಗುವ, ಹಬ್ಬವಾಗಿದೆ; ಸಾಹಸ-ಶೌರ್ಯ ಪ್ರದರ್ಶನದ ಕ್ರೀಡಾಂಗಣವೂ ಆಗಿದೆ. ಜನಪದ ಗೀತೆಯಲ್ಲಿ :

ವಾರಾಂಡಕ ಡೋರಮ । ಆರಂಬ ಕಯಿಂ ಜಲ್ಲಿ
ಮೂಲೆಲ್ ಟ್ಟ ತಂಡದರಿ ನೇಲೆಲ್‌ಟ್ಟ ತೋಕ್‌ನ
ತೂಕ ಬೆಚ್ಚವಡಿಕತ್ತಿ । ಮುಂಬುಡಿಚವೋನಾನ

....

ಪಂಚಾರತಿ ಪುಡಿಚಿತೊ
ಆಯುಧ ಪೂಜೆ ಮಾಡ್ವಾಂ ಗೊ
ಕೈದು ಪೊಳ್ದಂದಣ್ಣುವುದೊ

-ಎಂದಿರುವಲ್ಲಿ ವರ್ಷಕ್ಕೊಮ್ಮೆ ಆರಂಭ (ವ್ಯವಸಾಯ)ದ ನಂತರ ಬರುವ ಈ ಹಬ್ಬದಲ್ಲಿ ಪೂಜೆಗಿಟ್ಟ ಆಯುಧಗಳ ವರ್ಣನೆ ಹಾಗೂ 'ಕೈಲ್ ಪೊಳ್ದು' ಹೆಸರಿನ ಮೂಲವನ್ನು ಹೇಳಲಾಗಿದೆ. ಹಬ್ಬದ ವಿಶೇಷ ಭೋಜನ ಮುಗಿಸಿ, ಸಂಜೆ ನಾಲ್ಕರ ವೇಳೆಗೆ ಹೊಸವಸ್ತ್ರ ಕುಪ್ಪಸ ದಟ್ಟಿ ಧರಿಸಿ ಕೋವಿ ಹಿಡಿದು ಬೇಟೆಗೆ ಹೊರಡುತ್ತಾರೆ. ಆ ಸಮಯದಲ್ಲಿ ಮನೆಯ ಹಿರಿಯ ಪೂಜಿಸಿದ ಆಯುಧವನ್ನು ಕೊಟ್ಟು ಹೇಳುತ್ತಿದ್ದ ಬುದ್ಧಿವಾದವಿದು :

ನರಿನೋ ಪಂದಿನೋ ಬಟ್ಟೆ ಬುಟ್ಟ್ ಎಣಂಗ್
ಶತ್ರುನ ಎಣಂಗತೆ ಎಣಂಗುವೇಂಗಿ ಬಟ್ಟೆ ಎಣಂಗ್
ಮಿತ್ರುರೂಕ್ ತೋಣೆಯಾಯಿತ್ ನಿಲ್ಲ್
ರಾಯಂಗೆ ವಿನಿಮತೆ ದೇವರ ಮರೆಯತೆ

ಹುಲಿ ಹಂದಿಗಳನ್ನು (ನರಿ=ಹುಲಿ) ದಾರಿ ಬಿಟ್ಟು ಎದುರಿಸು. ಶತ್ರುವನ್ನು ಕೆಣಕದಿರು, ಮಿತ್ರರಿಗೆ ಸಹಾಯಕನಾಗಿರು. ರಾಜನ ವಿರೋಧ ಕಟ್ಟಿಕೊಳ್ಳದಿರು, ಎನ್ನುವ ಅರ್ಥವಿಲ್ಲಿದೆ. ಈ ಮಾತಿನಲ್ಲಿ ಕಾದಾಟದ ತಂತ್ರ, ವ್ಯವಹಾರ ಕೌಶಲ್ಯ, ದೇವಕೃಪೆಯ ಆಶಯವಿದೆ. ಇದರ ಜೊತೆಗೆ,

ಕೈಬಲ್ಯನೇರಿ । ಮಂಡೆಬಲ್ಯ ಪಂದಿ । ಓಟಬಲ್ಯ ಕೇಮ ಚುಳ್ಯ ಬಲ್ಯಮಿಗ : ಕೊಂಬು ಬಲ್ಯ ಕಡಮೋ... ಕ್ವೂ ಕ್ವೂ ಕ್ವೂ

-ಹೀಗೆ ಮೂರು ಬಾರಿ ಕೂಗಿ ಬೇಟೆಗೆ ಸಾಗುತ್ತಾರೆ. ಹುಲಿಗೆ (ನರಿ) ಕೈಯಲ್ಲಿ ಬಲ, ಹಂದಿಗೆ ತಲೆಯಲ್ಲಿ ಬಲ ಕೇಮ ಮೃಗಕ್ಕೆ ಓಟದಲ್ಲಿ ಬಲ, ಚುಕ್ಕೆಯುಳ್ಳ, ಕೋಡಿನಲ್ಲಿ ಕಡವೆ ದೊಡ್ಡದು, ಎಂಬುದು ಬೇಟೆಗೆ ಹೋಗುವವರು ಗಮನಿಸಲು ಹಿರಿಯರ ಹೇಳಿಕೆ, ಎಚ್ಚರಗಳಿರುತ್ತಿದ್ದವು. ಇಂದು ಬೇಟೆಗೆ ಅವಕಾಶವಿಲ್ಲವಾಗಿ ಆಟೋಟ ಸ್ಪರ್ಧೆಗಳಲ್ಲಿ ಅದರ ಸಂಕೇತ ಕಾಣುತ್ತದೆ. ತೆಂಗಿನ ಈಡು ಸ್ಪರ್ಧೆ ಆ ಬಗೆಯಲ್ಲಿ ಒಂದು ಸಂಕೇತವಾಗಿದೆ.

ಜುಟ್ಟು ತೆಗೆದ ತೆಂಗಿನಕಾಯನ್ನು, ಮೇಲ್ತುದಿಯಲ್ಲಿ ಮೂರು ಭಾಗ ಸೀಳಿದ ಬಿದಿರ ಭಾಗದಲ್ಲಿ ಬಿಗಿಯಾಗಿಟ್ಟು ಅದನ್ನು ಮರದ ಮೇಲಿನ ರೆಂಬೆಗೆ ಕಟ್ಟುತ್ತಾರೆ. ಅದನ್ನು ಕೋವಿಯ ಗುಂಡಿನಿಂದ ಹೊಡೆದು ಬೀಳಿಸುವ ಸ್ಪರ್ಧೆಯಲ್ಲಿ ಗೆದ್ದವರಿಗೆ ವೀರಕ್ರೀಡೆಯ ಬಹುಮಾನವನ್ನು ನೀಡುತ್ತಾರೆ. ಹತ್ತು ತೆಂಗಿನಕಾಯಿಗಳನ್ನು ಸಾಲಾಗಿ ಜೋಡಿಸಿ, ಕೋವಿ ಇಲ್ಲದ ಸಂದರ್ಭದಲ್ಲಿ ಕಲ್ಲಿನಿಂದ ತೆಂಗಿಗೆ ಹೊಡೆಯುವ ಆಟವೂ ಈ ಸಂದರ್ಭದಲ್ಲಿ ಉಂಟು. ಮಾನವ ಬಯಕೆಗಳ ಶೌರ್ಯಸಾಹಸಗಳ ಕ್ರೀಡಾ ಸಂತೋಷವಾಗಿ ಬಳಕೆಗೊಂಡ ಪರ್ವಾನ್ವಯವೊಂದಾಗಿ ಕೈಲ್‌ಪೊಳ್ದು ನಡೆದು ಬಂದಿದೆ.

ಕಾವೇರಿ ತುಲಾಸಂಕ್ರಮಣ-ತೀರ್ಥೋದ್ಭವ ಸಮಯದಲ್ಲಿ ಕೆಲವೆಡೆ 'ಕುದುರೆ ಬೋಡುಕಳಿ' ನಡೆಯುತ್ತದೆ. ದಕ್ಷಿಣ ಕೊಡಗಿನ ಪೊನ್ನಂಪೇಟೆ ಕೈಕೇರಿ ಸಮೀಪದ ಕುಂದಬೆಟ್ಟದ ಮಹಾದೇವನಿಗೆ ಈ ತೀರ್ಥೋದ್ಭವದ ಮರುದಿನ (ಅಕ್ಟೋಬರ್ ತಿಂಗಳಲ್ಲಿ ೧೬, ೧೭, ೧೮ನೆಯ ತಾರೀಖು ಸುಮಾರಿನಲ್ಲಿ) ತುಲಾಸಂಕ್ರಮಣ ಜಾತ್ರೆ ನಡೆಯುತ್ತದೆ. ಆಗ ಕುದುರೆ ಬೋಡುಕುಳಿಯನ್ನು ಬಿದಿರು ಪಟ್ಟಿಗಳಿಂದ ಮಾಡಿದ ಕುದುರೆ ಆಕೃತಿಯನ್ನು ಹೊತ್ತು ಆಡುವ ಕ್ರೀಡಾ ಕುಣಿತ-ಕುದುರೆ ವೇಷದಲ್ಲಿ ಕುಣಿತ) ಕಟ್ಟಿದರೆ ದಲಿತ ಕೆಂಬಟ್ಟಿಗಳು ಬೆತ್ತಲೆಕಳಿ ಮಂಡಿಯಿಂದ ಮುಡಿಯವರೆಗೆ ಸೊಪ್ಪನ್ನು ಸುತ್ತಿ ಆ ಮುನ್ನ ಮಣ್ಣಿನಲ್ಲಿ ಹೊರಳಿ ಬರುವ ಹರಕೆ ವೇಷದ ಪ್ರದರ್ಶನ) ಕಟ್ಟಿ ಹರಕೆ ಒಪ್ಪಿಸುತ್ತಾರೆ. ಹರಕೆ ಇರುವ ಕೊಡವರೂ ಈ ಬೆತ್ತಲೆಕಳಿ ಆಡುವುದುಂಟು. ಕುಮಟೂರಿನಲ್ಲಿ ಒಂದು ಕಾಲಕ್ಕೆ ಹೆಂಗಸರು ಮೈಗೆಲ್ಲ ತುಂಬೆಸೊಪ್ಪು ಸುತ್ತಿಕೊಂಡು ಪ್ರತ್ಯೇಕವಾಗಿ ಹೊಲೆ ದೇವರ ಸುತ್ತ ಬೆತ್ತಲೆಕಳಿ ಆಡುತ್ತಿದ್ದರಂತೆ. ಇದೊಂದು ರೀತಿ ಭಕ್ತಿಯಿಂದ ಆಡುವ ವೇಷದ ಕ್ರೀಡೆ ಕುಣಿತ. ಇಲ್ಲಿ ಕಟ್ಟಿದ ಕುದುರೆ ಕಳಿ (ಅಕ್ಟೋಬರ್) ಮುಂದಿನ ಜೂನ್ ೧-೨ನೇ ಜೇಷ್ಠದ ದಿನಾಂಕದಲ್ಲಿ, ಕಡಂಗಲು ಬೆಟ್ಟಂಗಾಲ ಬಳಿಯ ಪಾರಣಮಾನಿ ಎಂಬಲ್ಲಿ ಕಡಿಯಲ್ಪಟ್ಟು ಮುಕ್ತಾಯವಾಗುತ್ತದೆ. ಈ ಸಂಬಂಧದ ನಾಣ್ಣುಡಿ.

'ಕುಂದತ್ ಬೊಟ್ಟಲ್ ನೇಂದ ಕುದುರೆ ಪಾರಣ ಮಾನಿಲ್ ಅಳಂಜ ಕುದುರೆ'

ಕುಂದಬೆಟ್ಟದಲ್ಲಿ ಎದ್ದ ಕುದುರೆ, ಪಾರಣಮಾನಿಯಲ್ಲಿ ಅಳಿದಿತು ಎಂಬುದು ಸಾಂಕೇತಿಕ ಅರ್ಥ. ಇದಕ್ಕೆ ಅಶ್ವಮೇಧ

ಯಾಗದ ನಂಟನ್ನು ಬೆಸೆಯಲಾಗಿದೆ. ಇಲ್ಲಿ ಕಟ್ಟಿದ ವೇಷದ ಕುದುರೆ ಕೊಡಗಿನಲ್ಲಿ ಎಲ್ಲೆಡೆಯ (ಮಳೆಗಾಲ ಕಳೆದು ಹವಾಮಾನ ಸೂಕ್ತವಾಗಿರುವ ಕಾಲದವರೆಗೆ) ಕುದುರೆ ಬೋಡು ಕಳಿಗಳಿಗೆ ಮುಂದಿನ ಎಂಟು ತಿಂಗಳ ಕಾಲ ಅವಕಾಶಕ್ಕೆ ನಾಂದಿಯಾಟವಾಡುತ್ತದೆ. ಈ ಬೆತ್ತದ ಕುದುರೆಯನ್ನು ಕಡಿದು ಮುರಿದು ಪಾರಣಮಾನಿಯಲ್ಲಿ ಮುಕ್ತಾಯ ಮಾಡುವ ಸಮಯದಲ್ಲಿ 'ಪಿಲ್ಲುಭೂತ' ವೇಷದಾಟವಿರುತ್ತದೆ. ಮೈಗೆಲ್ಲ ಹುಲ್ಲ ಸುತ್ತಿ ಪುರುಷ ಶಿಶ್ನವನ್ನು ನೇರವಾಗಿ (೧೮೦ ಡಿಗ್ರಿ ನೇರ) ಚಾಚಿ ನಗ್ನ ವೇಷದ ಸಂಕೇತವಾಗಿ ಊರಿನ ಸುತ್ತ ಕುಣಿದಾಡಿ ಬರುತ್ತಾರೆ. ಮಾನವ ಸಹಜ ಶೃಂಗಾರ ವೇಷದಾಟ ಎಂಬುದರ ಸಂಕೇತವಾಗಿ ಇದು ಭಾವಭಂಗಿಗಳೊಡನೆ ಪ್ರದರ್ಶಿತವಾಗುತ್ತದೆ. ಬಲ್ಲ ಮಾವಟಿಯ ಪೋನಿ ಕಾಡಿನ ಪೋಣೀಲಯ್ಯಪ್ಪನಿಗೆ ಗಂಡಸರು ಸೊಪ್ಪಿನುಡುಗೆಯುಟ್ಟು 'ಬೆತ್ತಲೆಕಳಿ' ಕುಣಿತ, ಆಚರಿಸುತ್ತಿದ್ದುದು ಈಗಿಲ್ಲ. 'ಕಳಿ' ಕುಣಿತಕ್ಕೂ, ಕೇವಲ ಕ್ರೀಡೆಗೂ ವ್ಯತ್ಯಾಸವಿದೆ.(ಆಟ್) 'ಕಳಿ' ಕುಣಿತ ದೇವಾರ್ಪಿತ. ಕ್ರೀಡೆ ಮನುಷ್ಯರ ಆಟ.

ಹುತ್ತರಿ ಕೋಲಾಟ : ಇದು ಹುತ್ತರಿ ಹಬ್ಬದ ಅಂಗವಾಗಿ ನಡೆಯುವ ಬಹು ಜನಪ್ರಿಯ ಕೋಲಾಟದ ಸಮೂಹ ನೃತ್ಯ. ಪುತ್ತರಿ=ಪುತ್+ಅರಿ=ಪುದಿ+ಅರಿ=ಹೊಸ ಅಕ್ಕಿ ಕಾಳಿರುವ ಭತ್ತದ ಕದಿರನ್ನು ವಾರ್ಷಿಕವಾಗಿ ಮನೆಗೆ ತರುವ, ಸ್ವಾಗತದ ಹಬ್ಬ. ಅರ್ಥಾತ್ ಹೊಸ ತೆನೆ ಭತ್ತದ ಕುಯಿಲನ್ನು ತುಂಬಿಕೊಳ್ಳುವ ಸಿದ್ಧತೆಯ ಹಬ್ಬ ಕುಯಿಲಿನ ಪೂರ್ವಭಾವಿ ಹಬ್ಬ. ಡಿಸೆಂಬರ್ ತಿಂಗಳಲ್ಲಿ ವೃಶ್ಚಿಕ (ಕಾರ್ತಿಕ) ಪೌರ್ಣಮಿಯಂದು ರೋಹಿಣಿ ಅಥವಾ ಕೃತ್ತಿಕಾ ನಕ್ಷತ್ರದಲ್ಲಿ ಸಾಮಾನ್ಯವಾಗಿ ಹುತ್ತರಿ ಹಬ್ಬ ಒದಗುತ್ತದೆ. ಕೊಡಗಿನಲ್ಲಿ ವ್ಯವಸಾಯದ ಅಧಿದೇವತೆ ಇಗ್ಗುತಪ್ಪ. ಕೃತ್ತಿಕಾ ನಕ್ಷತ್ರದಲ್ಲಿ ಈ ದೇವರಗದ್ದೆಯಲ್ಲಿ (ದೇವಪೊಳ್ಳು) ದೇವಕದಿರು ತೆಗೆದ ಮರುದಿನವೇ ಕೊಡಗಿನಲ್ಲಿ ಎಲ್ಲರಿಗೂ ಹುತ್ತರಿಹಬ್ಬ. ನವೆಂಬರ್ ತಿಂಗಳಲ್ಲಿ ನಕ್ಷತ್ರ ಸಮಯ ಕೆಲ ವೇಳೆ ಒದಗುತ್ತದೆ. ಆಗಿನ ಹುತ್ತರಿಯನ್ನು 'ಹಸಿ ಹುತ್ತರಿ' ಎನ್ನುತ್ತಾರೆ. ಕೇರಳದಿಂದ ಬಂದ ದೇವರು ಇಗ್ಗುತಪ್ಪನಾದ ಕಾರಣ ಇಗ್ಗುತಪ್ಪ ಮತ್ತು ಹುತ್ತರಿಗೆ ಅಂಟದಂತೆ ಜನಪರ ಕತೆಗಳಿವೆ. ಕೇರಳದಲ್ಲಿನ ಅಣ್ಣಬೊಂದ್ರು ಕೋಲಪ್ಪನ ಸೂಚನೆಯಂತೆ ಓಣಂ ಪದ್ಧತಿಯನ್ನು ಅನುಸರಿಸಿದನಂತೆ. ಅವನ ಸ್ನೇಹಿತ 'ಮಾಗೂಳಿ ಏಳು ಅಕ್ಕಿ ಕಾಳುಗಳನ್ನು (ಅಕ್ಕಿ ಕಾಳುಗಳು) ಕೇರಳದಿಂದ ತಂದ ಕಾರಣ 'ಏಳಕ್ಕಿ ಪುತ್ತರಿ' 'ಇಗ್ಗುತಪಗಪ ಕಲಾಡ್ಚ' (ಹಬ್ಬ) ಎಂದು ಹೆಸರಾಯಿತು. ಕೇರಳದ 'ಓಣಂ' ಹಬ್ಬ ಕಳೆದ ಮೂರು ತಿಂಗಳ ಒಳಗೆ ಕೊಡಗಿನಲ್ಲಿ ಹಬ್ಬದಾಚರಣೆ ಇದೆ. ಓಣಂ ಹಿಂದೆ ಹುತ್ತರಿ ಬರುತ್ತದೆ ಎಂಬ ಗಾದೆ ಕೊಡಗಿನಲ್ಲಿದೆ. ಹುತ್ತರಿಯ ಇತಿಹಾಸ, ಓಣಂನೊಡನೆ ಹೊಂದಿಕೊಂಡಿದೆ ಎಂಬ ಮಾತೇನೋ ಇದೆ. ಹಾಗೆ ನೋಡಿದರೆ ಓಣಂ ಮತ್ತು ಬಿಸುಹಬ್ಬದ ಉಗಮ ೯ನೇ ಶತಮಾನದ್ದು.[೧] ಎಂದಿರುವಲ್ಲಿ ಕೊಡಗಿನ ಹುತ್ತರಿ ಆ ನಂತರವೆ ರೂಪುಗೊಂಡಿರಬೇಕೆನ್ನುವುದಾಗುತ್ತದೆ, ಆದರೆ ಪಾಲೂರು ಶಾಸನವು[೨] ೧೪ನೇ ಶತಮಾನದಾಗಿದ್ದು ತಮಿಳು, ಗ್ರಂಥ, ಮಲೆಯಾಳಂ, ವಟ್ಟೆಳುತ್ತು ಲಿಪಿಗಳ ಕೂಟದಲ್ಲಿ ಬಿಂಬಿತವಾಗಿದೆ. ಭಾಷೆ ಸಹ ಹಾಗಿದೆ. ಅಂದರೆ ಕೇರಳದ 'ಓಣಂ' ಪ್ರಭಾವವು ಕೊಡಗಿನಲ್ಲಿ ೧೪ನೇ ಶತಮಾನದ ಹೊತ್ತಿಗೆ ಮೂಡಿರುವಂತಿದೆ. ಆದರೆ ಆ ಮೊದಲು ೧೧ನೇ ಶತಮಾನದ ಆದಿಯಲ್ಲಿಯೇ ತಲಕಾವೇರಿಯ ಉಲ್ಲೇಖ, ಗಂಗರ, ಚಂಗಾಳ್ವರ, ಕೊಂಗಾಳ್ವರ ಆಡಳಿತ ಕಾಲದಲ್ಲಿಯೆ ಗದ್ದೆಯ ವಿವಿಧ ಬಗೆಯ ಉಲ್ಲೇಖವಿದ್ದು ಕೃಷಿಯ ತಜ್ಞತೆ ಇದ್ದ ಸೂಚನೆಯನ್ನು ಅವು ಶಾಸನೋಕ್ತವಾಗಿ ಸೂಚಿಸಿವೆ. ಕ್ರಿ.ಶ. ೮೮೮ರ ಗಂಗರ ಕಾಲದ ಬಿಳಿಯೂರು ಶಾಸನದಲ್ಲಿ[೩] ಜಿನಾಲಯವಿದ್ದ 'ಪೆನ್ನಗಡಜ್ಗ'ದ ಆವರಣ ೯ನೇ ಶತಮಾನದ ಕೋತೂರು ಶಾಸನದಲ್ಲಿ[೪], ಬೆಟ್ಟಿಯ ಭತ್ತ (ಬಿಳಿ ಭತ್ತ), ನೂಱು ಭತ್ತ (ನೂರು ಭಟ್ಟಿ ಭತ್ತ ಪ್ರಮಾಣ) ಇತ್ಯಾದಿಗಳ ಉಲ್ಲೇಖ ಕೃಷಿಯ ಆದ್ಯತೆ ಹಾಗೂ ವೈಖರಿಯ ಸೂಚನೆಯನ್ನು ನೀಡುತ್ತದೆ. 'ಪೆನ್ನೆಕಡಂಗವು'–ಕಡಂಗದ ರಕ್ಷಣೆಯಿದ್ದ ವಿಶಾಲವಾದ ವನ್ಯಜಮಿನು, ಜಿನಾಲಯಕ್ಕಿತ್ತು. ವನ್ಯ ಜಮಿನುಗಳಲ್ಲಿ ನಾಟಿ ಹಾಕಿದ ನಂತರ ('ಒಯ್ಯಕಾಕುವ' ಎಂಬ ಜನಪದ ಹಾಡಿನೊಟ್ಟಿಗೆ) ಓಟನಾಟಿ–ನಾಟಿ ಓಟದ ಕ್ರೀಡಾ ಪರಂಪರೆ ಹರಿದುಬಂದಿದೆ. ಹೀಗಾಗಿ ಕೊಡಗಿನ ಹುತ್ತರಿಗೆ ೧೪ನೇ ಶತಮಾನಕ್ಕೆ ಪೂರ್ವದಲ್ಲಿಯೇ, ಅಷ್ಟೇಕೆ ೯ನೇ ಶತಮಾನದ ವೇಳೆಗೆ, ಆಚರಣಾ ಮೇಳಗಳಿದ್ದು, ಕೋಲಾಟ, ಪರೆಯಕಳಿ ಇತ್ಯಾದಿಗಳು ಸಂಯುಕ್ತಗೊಂಡಿದ್ದುವೆನ್ನಬೇಕು. ನಂತರದ ಶತಮಾನಗಳಲ್ಲಿ ಪ್ರಭಾವವು ಎಲ್ಲಿಂದಲೋ ಕೂಡಿರಬಹುದು.

ಹುತ್ತರಿ ಹಬ್ಬದ ಕೋಲಾಟದ ಕುಣಿತ ಪರೆಯ ಕಳಿ ಮತ್ತು ಪಡೆಯ ಕಳಿ ಹಾಡು ಇತ್ಯಾದಿಗಳ ಪೂರ್ವಭಾವಿ ಅಭ್ಯಾಸಕ್ಕಾಗಿ ಹಬ್ಬಕ್ಕೆ ಏಳು ದಿನ ಮೊದಲು, ಕೆಲವೆಡೆ ಎರಡು ದಿನ ಮೊದಲು ನಿಶ್ಚಯ ಮಾಡುತ್ತಾರೆ (ಕುರಿ ಮಾಡುವುದು) ಬಹುಶಃ ಕುರು ಓಡುವುದು. ಗುರಿ ಇಡುವುದು ಎನ್ನುವುದರ ಸಂಕ್ಷಿಪ್ತ ರೂಪ 'ಕುರಿ' ಇಡುವುದು ಆಗಿರಬೇಕು. ಇದನ್ನು 'ಈಡ್ ಎಡ್‌ಪ್' ಎನ್ನುತ್ತಾರೆ. ರಾತ್ರಿ ಊಟ ಮುಗಿಸಿ, ಹುತ್ತರಿ ಕೋಲಾಟ, ಅಣಕು ಕಾಳಗದಾಟ (ಮಂಡಿಯ ಕೆಳಗೆ ಮಾತ್ರ ಏಟು ಬೀಳಬೇಕಾದ ಪರೆಯ ಕಳಿ), ಇವುಗಳ ಪೂರ್ವಾಭ್ಯಾಸವನ್ನು ಬೆಳುದಿಂಗಳಿನಲ್ಲಿ ಪೊಮಾಂದ್ ಸಣ್ಣ (ಮೈದಾನ) ಮಾಡುತ್ತಾರೆ. ('ಪೂಮಂದ್ ಅಭ್ಯಾಸ). ಹುತ್ತರಿ

ಕದಿರು ತೆಗೆದ ಮರುದಿನ ಊರುಕೋಲು (ಊರ ಕೋಲಾಟ) ಊರು ಮಂದ್‌ನಲ್ಲಿ ನಡೆಯುತ್ತದೆ. ಕದಿರು ತೆಗೆದ ಎರಡನೇ ದಿನ ನಾಡಕೋಲು ನಾಡಿನವರೆಲ್ಲ ಸೇರಿ ಆಡುವ ಕೋಲಾಟ, ನಡೆಯುತ್ತದೆ. ಕೋಲಾಟವನ್ನು ವಿವಿಧ ಭಾವ ಭಂಗಿಗಳಲ್ಲಿ ವಿವಿಧ ಮಾದಿ ಹೊಡೆತಗಳಲ್ಲಿ, ಹಾಡು ಸಹಿತವಾಗಿ ಆಡುತ್ತಾರೆ. ಚಾಚಿದ ಕೈಯ ಕೋಲು, ಪಾರ್ಶ್ವದ ಬಳುಕಿನ ಕೋಟು ಹಿಂಬದಿ, ಮುಂಬದಿ ತಾಗಿಸುವ ಕೋಲು ಹಾಗೂ ಪುಟಿದು ಹೊಡೆಯುವ ಕೋಲು ಹೀಗೆ ನಾಲ್ಕಾರು ಸುತ್ತಿನಲ್ಲಿ, ಕ್ರೀಡಾ ಕುಣಿತವಾಗುತ್ತದೆ. ಹಿಮ್ಮೇಳದಲ್ಲಿ 'ಪೊಯಿಲೇ ಪೊಯಿಲೇ' ಎಂಬ ಹಾಡಿನ ಪಲ್ಲವಿ ಸೊಲ್ಲು ಕುಣಿತದ ಜೊತೆ ದನಿ ಕೊಡುತ್ತದೆ. ಆ ಹಾಡುಗಳಲ್ಲಿ ಹಾಲೇರಿ ಅರಸರು ನೀಡಿದ ಜನ್ಮಭೂಮಿ, ಉಂಡ ಪುಷ್ಕಲ ಭೋಜನ, ಹಾಸ್ಯ, ಸರಸಗಳಿಂದ ಶೃಂಗಾರಭರಿತ ಸಾಲುಗಳು ಹಾಡಿನಿಂದ ಕೋಲಾಟಕ್ಕೆ ವಿಶೇಷ ಕಳೆ ತರುತ್ತಾರೆ.

'ಮೆಪ್ಪಣಿ ಪೋಪೋಓ ಅಕ್ಕಂಡ ಒಡೆಯ, ಪೋರಿ ತೊಡೆಯ ಪಾರಿಪಾರಿ ಕ್‌ಪ್ಪಣಿ ಪೋಪೋ ಓ ತಂಗೇರ ಒಡೆಯ ಕೋಳೀಕಾಲ ಪೊಯಿಲೇ ಪೊಯಿಲೇ' ಎನ್ನುವ ಕೋಲಾಟದ ರಂಜನೀಯ ಕ್ರೀಡೆ ಕುಣಿತದಲ್ಲಿ, ಬದುಕಿನಲ್ಲಿ ತಿದ್ದಿಕೊಳ್ಳಬೇಕಾದ ಅಂಶಗಳ ಮಂಡನೆ ಇದೆ. ಗದ್ದೆಯ ಮೇಲಿನ ಏರಿ ಮೇಲೆ ಹೋಗುವ ಕೋಣನ ತೊಡೆಯ ಭಾವನೇ ಹಾರಿ ಹಾರಿ ಕೋಲುಹೊಡೆ, ಎನ್ನುವಲ್ಲಿ ಸ್ಥೂಲಕಾಯವನ್ನು ಕರಗಿಸಿಕೊಂಡು ಚಟುವಟಿಕೆಯಿಂದಿರು ಎಂಬ ಸೂಚನೆ ಇದೆ; ಕೆಳಗಿನ ಏರಿಯ ಮೇಲೆ ಹೋಗುವ ಕೋಳಿ ಕಾಲಿನ ಭಾವನೆ ಸರಿಯಾಗಿ ಕೋಲು ಹೊಡೆ, ಎನ್ನುವಲ್ಲಿ ಶಕ್ತಿಯನ್ನು ಮೈದುಂಬಿಸಿಕೊಂಡು ಕೋಲಾಟವಾಡು ಎಂಬ ಸೂಚನೆ ಇದೆ. ಕೋಲಾಟ ಆಡುವಲ್ಲಿ ವಯಸ್ಸಾದ ಹಿರಿಯರ ಸೊಂಟದ ಪಟ್ಟಿ ಜಾರಿಹೋಗದಂತೆ ಆಡಿ ಎಂದು ಹಾಸ್ಯಭರಿತವಾಗಿ ಹಾಡು ಹೇಳುತ್ತಾರೆ. ಹಾಗೆಯೇ ವಯೋಸಹಜವಾದ ತರುಣ ತರುಣಿಯರ ಶೃಂಗಾರದ ನೋಟಗಳನ್ನು ಮಾನಿಸಿ ಹಾಡುತ್ತಾರೆ.

ಬಾಲಂಡ ಕಣ್ಣೆಲ್ಲ ಪೊಂಗಡ ಮೇಲೆ; ಪೊಂಗಡ ಕಣ್ಣೆಲ್ಲ ಬಾಲಂಡ ಮೇಲೆ

–ತರುಣರ ಕಣ್ಣು ತರುಣಿಯರ ಮೇಲೆ, ತರುಣಿಯರ ಕಣ್ಣು ತರುಣರ ಮೇಲೆ ಎಂದರ್ಥ ಹೀಗೆಯೇ ಹುತ್ತರಿ ತಂಬಿಟ್ಟು ಹಾಗೂ ಅಡುಗೆ ರುಚಿಯನ್ನು, ತಂಬುಟ್ಟ್ ಪುತ್ತರಿ ಕೇಚಕ್ಕ ಮಾಂಗರಿಕೊಳ್ ಪೊಯಿಲೇ ಪೊಯಿಲೇ ಕೆಂಪಕ್ಕ ಮಳ್ಳಿ ಮಾನು ಸಾರು

ತಂಬುಟ್ಟ್ ಪುತ್ತರಿ ಕೇಚಕ್ಕಿ ಮಾಂಗಡಿ ಕೂಳ್ ಪೊಯಿಲೇ ಪೊಯಿಲೇ (ಹುತ್ತರಿ ತಂಬಿಟ್ಟು, ಕೆಂಪಕ್ಕಿ, ಮಳ್ಳಿ ಮೀನಿನ ಸಾರು ರುಚಿಕಟ್ಟು) .... ಬಪ್ಪಕ ಪುತ್ತರಿ ಬಣ್ಣತೇ ಚಾಶ್ ಪೊಯಿಲೇ ಪೊಯಿಲೇ ಪೋಪಕ ಪುತ್ತರಿ ಎಣ್ಣತೆ ಪೋಚಿ'

(ವರುಷಕ್ಕೆ ಒಂದೇ ಬಾರಿ ಸಡಗರದಿಂದ ಬರುವ ಹುತ್ತರಿ ಸದ್ದಿಲ್ಲದೆ ಹೋಗಿ ಬಿಡುತ್ತವೆ ದಮ್ಮಯ್ಯ ಹೋಗಬೇಡ ಎಂಬ ಕಳಕಳಿ ಧ್ವನಿ ಅಲ್ಲಿದೆ.)

ಕುರಿತು ಹಾಡುತ್ತಾರೆ. ಆಟದ ರಂಗಿನಲ್ಲಿ ಜೀವನದ ಸೊಬಗನ್ನು ಬಿತ್ತರಿಸುವ ಬಗೆ ಅದಾಗಿದೆ.

ಈ ಕೋಲಾಟ ಕುಣಿತದ ಹಾಡು ಕೇವಲ ಪೌರಾಣಿಕ ಕಾಲ್ಪನಿಕ ಸಂಗತಿಗಳಿಗೆ ಸೀಮಿತಗೊಳ್ಳುವುದಿಲ್ಲ. ತಿನ್ನುವ ಅನ್ನ, ಪೂಜಿಸುವ ದೈವ, ಉಳುವ ಭೂಮಿ, ತೊಡುವ ಬಟ್ಟೆ, ನೋಡುವ ಪರಿಸರ, ಕೂಡಿದ ಸಂಗಾತಿ ಇವರನ್ನೆಲ್ಲ ಬದುಕಿನಲ್ಲಿ ಕಂಡಂತೆ, ಜನಪರ ಸಂಸ್ಕೃತಿಯ ಶೀಲದಲ್ಲಿ ರೂಪುಗೊಂಡಿದೆ.

ಕೋಲಾಟದ ನಂತರ ಕ್ಷಾತ್ರ ಕ್ರೀಡೆಯಾದ ಅಣಕು ಕಾಳಗವೆನಿಸುವ ಪರೆಯ ಕಳೆ ಪತೆ ಕಳೆ ಆಡುತ್ತಾರೆ. ಈ ಆಟದ ಹಾಡಿನ ಸೊಲ್ಲು: ನಾನ್ ಬಾಳ್ ನೀನ್ ಬಾಳೆ... ಇಗ್ಗುತಪ್ಪ ಬಾಳ್, ಬೈತೂರ್‌ಪ್ಪ ಬಾಳ್' –ಎನ್ನುವಲ್ಲಿ, ತಾವಲ್ಲದೆ, ದೇವರೂ ಬಾಳಲಿ, ಎಲ್ಲರನ್ನು ಬಾಳಿಸಲಿ ಎಂಬರ್ಥವಿದೆ. ಪರೆಯ ಕಳಿಯಲ್ಲಿ ಬೆತ್ತದ ಕೋಲುಗಳ ಗೊಂಚಲನ್ನು ಎರಡೂ ಕೈಗಳಲ್ಲಿ ಹಿಡಿದು ಮೊಣಕಾಲಿನ ಕೆಳಗೆ ಮಾತ್ರ ಹೊಡೆಯುವ ಕಾಳಗ ಕ್ರೀಡೆಯೇ ಆಗಿದೆ. ಕಾಳಗಕ್ಕೆ ಪಡೆಯಾಳಾಗಿ ಹೋಗುತ್ತಿದ್ದವರ ನೆನಪನ್ನು ಈ ರೂಪದಲ್ಲಿ ಉಳಿಸಿಕೊಳ್ಳಲಾಗಿದೆ.

ಹುತ್ತರಿಯ ನಾಡುಕೋಲು, ಪರೆಕಳ ಆದ ಮೇಲೆ ಬೇಡು ಹಬ್ಬದ ಕಳಿ ವೇಷಗಳನ್ನು ಹಾಕಿಕೊಂಡು, 'ಮನೆ ಹಾಡುವ' (ತಾಲಿಪಾಟ್) ಹಾಡನ್ನು ಮೂರು ದಿನ ಆಡಿ ಆಟದ ವೇಷವನ್ನು ಬಿಚ್ಚುತ್ತಾರೆ. ವಿಶೇಷವಾಗಿ ದಕ್ಷಿಣ ಕೊಡಗಿನಲ್ಲಿ ಸೂಳೆ–ಕುಂದ, ಪಟ್ಟ (ಬ್ರಾಹ್ಮಣ) ಕಾಪಳ ಮಾಪಿಳ್ಳೆ, ವಡ್ಡ, ತಿಮ್ಮ, ಗಾಡಿಗರಿ ಸಿದ್ಧಿಕಳಿ, ಕೊಡಚಿ (ಸೂಳೆ) ಇತ್ಯಾದಿ ಬೇಡುಹಬ್ಬದ ವೇಷ ಪಲ್ಲಟಗಳನ್ನು fancy dress ಹಾಡಿ ಆಡುತ್ತಾರೆ.

ತಕ್ಕ ಮುಖ್ಯಸ್ಥರ ಮನೆಯ ಮುಂದೆ ಅಂಗಳದಲ್ಲಿ ಆಟಗಳ ಪ್ರದರ್ಶನ ನಡೆದ ಮೇಲೆ ಬಹುಮಾ–ತಿನಿಸುಗಳನ್ನು ಹಂಚುತ್ತಾರೆ. ಹುತ್ತರಿ ಕಳೆದ ಮೂರನೇ ದಿನಕ್ಕೆ ಆಟ ಬಿಚ್ಚಿದ ಮೇಲೆ 'ಊರೊಮ್ಮೆ' (ಊರೊಕ್ಕಟ್ಟಿನ ಊಟ–ಎಲ್ಲರೂ ಸೇರಿ ವನಭೋಜನವೂ ಆಗಬಹುದು) ಊಟ ನಡೆಯುತ್ತದೆ. ಕೊಡಗಿನ ಗೌಡ ಜನಾಂಗದಲ್ಲಿ ಅರೆಭಾಷೆಯಲ್ಲಿ 'ಹುತ್ತ

ಜೋಗಿ ಹಾಡ್' ಇದ್ದು ಭೈರಪ್ಪ ಜೋಗಿಗೆ ಸಂಬೋಧಿಸಿದುದಾಗಿದೆ.

ಕೊಡಗಿಗೆ ಅವನು ಬಂದ ಕಾರಣ ಕೇಳಿದಾಗ : ಗೌಡ ಜನಾಂಗದ ಅರೆಭಾಷೆಯಲ್ಲಿ 'ಹುತ್ತರಿ ಜೋಗಿ ಹಾಡ್' ಇದ್ದು, ಭೈರಪ್ಪ ಜೋಗಿಗೆ ಸಂಬೋಧಿಸಿದುದಾಗಿದೆ. ಕೊಡ್ಗ್‌ನಾ ಹುತ್ತೇರಿ ನೋಡೀಕೆ ಬಂದ..ತಾಲಿ...ತಾಲಿಯೋ ಲಲ್ಲೆಲಾ' ಎನ್ನುವ ಭೈರಪ್ಪ ಜೋಗಿಯೊಡನೆ ಕುಣಿಯುವ ಸಂಭ್ರಮ, ಆಬಾಲವೃದ್ಧರಾದಿಯಾಗಿ ಎಲ್ಲರಿಗೂ ಪಾಲ್ಗೊಳ್ಳುವ ಸಂಭ್ರಮವಾಗಿದೆ.

ಒಯ್ಯಕಾಕುವ ಓಟ್ ನಾಟಿ : ಇದು ನಾಟಿ ಹಾಕಿದ ಸಂದರ್ಭದಲ್ಲಿ ನಡೆಯುವ ಕೆಸರುಗದ್ದೆ ಓಟದಂತೆ ನಡೆಯವ ಕ್ರೀಡೆ. ಸಾಮಾನ್ಯವಾಗಿ ಯಾರಗದ್ದೆ (ಒಟ್ಟಲು=ಬೀಜ ಹಾಕಿ ಸಸಿ ತೆಗೆಯುವ ಕಿರು ಗದ್ದೆ) ಯಿಂದ ದೊಡ್ಡಗದ್ದೆಯಾದ ಆಕ ಗದ್ದೆಗೆ ಸಸಿಯನ್ನು ನಾಟಿ ಹಾಕಲು, ಒಟ್ಟಲು ಗದ್ದೆಯಿಂದ ಸಸಿ ಗೊಂಚಲು ತರುತ್ತಾರೆ. ಅದನ್ನು ಕೈಪುಡಿ (ಕೈ ಹಿಡಿಸುವಷ್ಟು ಸಸಿಗೊಂಚಲು) ಎನ್ನುತ್ತಾರೆ. ಅರಗದ್ದೆಯು ನೂರು ಭಟ್ಟಿಯಷ್ಟು (ಮೂರು ಎಕರೆ) ದೊಡ್ಡಗದ್ದೆ, ಗದ್ದೆಯ ನಡುವೆ ಪಶ್ಚಿಮದಿಂದ ಪೂರ್ವಕ್ಕೆ ಎರಡು ಸಾಲುಗಳಲ್ಲಿ ನೇರವಾಗಿ, ಯಾವ ಹಗ್ಗ, ದಾರದ ನೇರಪಿಟ್ಟುಕೊಳ್ಳದೆ ಕಣ್ಣೋಟ ಕರಕೌಶಲ್ಯದಿಂದ ಹಾಕುವ ನಾಟಿಯೇ ಕೊಡಿನಾಟಿ, ಸಾಲುಗಳ ಅಂತರ ಮೂರರಿಂದ ಆರು ಅಡಿ ಇರುತ್ತದೆ. ಈ ಕೆಸರು ಗದ್ದೆಯಲ್ಲಿ ಸುಮಾರು ಮೂರು ಅಂಗುಲ ಎತ್ತರ ನಿಂತ ನೀರಿನ ನಡುವೆ, ನಾಡಿ ಸಸಿಗಳನ್ನು ತುಳಿಯದೆ ತರುಣರು ಓಡಬೇಕು. ಇದರೊಳಗಿನ ಓಟ ಒಂದು ರೀತಿಯ 'ಕ್ರಾಸ್ ಪ್ಯಾಡಿ ಫೀಲ್ಡ್ ಅಥವಾ ಕ್ರಾಸ್ ಫಾರಮ್ ರೇಸ್' ಎನ್ನಬಹುದು. ಹೀಗೆ ಓಡಿ ಗದ್ದೆ ತೆವರಿ ಮಿಾಟಿ ಹಾರಿ ಮೇಲೆ ಬಂದ ಮೊದಲಿಗನಿಗೆ, ಎರಡನೆಯವನಿಗೆ, ಮೂರನೆಯವನಿಗೆ ಬಹುಮಾನ ನೀಡಲಾಗುತ್ತದೆ. ಅದು ಬಾಳೆಗೊನೆ, ತೆಂಗಿನಕಾಯಿ, ಕಾಫಿ ಅಥವಾ ಹಣ ಕೊಡುವುದರ ಮೂಲಕ ವಿತರಣೆ ಆಗುತ್ತದೆ. ಈ ನಾಟಿ ಓಟದ ಮುನ್ನ, ನಾಟಿ ಹಾಕಿದ್ದು ಮುಗಿದ ಸಂದರ್ಭದಲ್ಲಿ ನಾಟಿಕಾರನನ್ನು 'ಓ ವಯ್ಯ' ಎಂದು ಸಂಬೋಧಿಸಿ ನಾಟಿಕಾರರು ಹೇಳುವ 'ಒಯ್ಯ ಹಾಕುವ' ಹಾಡಿನ ಕೊನೆಯ ಸಾಲು ಪ್ರಾರ್ಥನಾ ಪೂರ್ವಕವಾದ ಆಶಯಗಳೊಡನೆ ಕೂಡಿರುತ್ತಾರೆ. ಹಾಡಿನ ಸಾಲು ಹೀಗಿದೆ :

> **ಕಳಿಕಳಿ ನಾಟಿಯೆ ಕಕ್ಕಡ ತಿಂಗತ್ ಕೆಳಿ ನಾಟಿಯೇ ।**
> **ಚಿಂಜೂರ ತಿಂಗ್‌ಲೆ ಚಿಯೂ ನಾಟಿಯೇ । ಕನ್ಯತ್ ಕಾಯಿ ನಾಟಿಯೇ**
> **ಪುಂಡಪೋಲೆ ಇಡಂಗೂಡಿ ಕಾಂಡಪೋಲೆ ಕದರಾಯಿ**
> **ಆಕಯಾಕ ಕುಂಡ್‌ನು ಕುರೋಟ್ । ಕೆಪ್ಪಣಿ ಮೆಪ್ಪಣಿ ಒಂದಾಗಿ ಬೊಳಂದ್ ಬಾ ನಾಟಿಯೆ । ಇಡಂಗೂಡಿ ಬಾ ನಾಟಿಯೇ**

–ನಾಟಿಯು ಕಳೆಕಳೆಯಾಗಿ ಬೆಳೆದು ಸಿಂಹಮಾಸದಲ್ಲಿ (ಆಗಸ್ಟ್–ಸೆಪ್ಟೆಂಬರ್) ತುಸು ಬೇರು ಕಚ್ಚಲು ಕೊರತೆಯಾದರೂ ಕನ್ಯಾಮಾಸದಲ್ಲಿ ಬಿಸಿಲು ಕಾಯ್ದು ಬಿದಿರಿನಂತೆ ಹೊರವಾಗಿ ಕಾಂಡದಂತೆ ಉದ್ದ ಕಡಿದಾಗಿ ಗದ್ದೆಯ ಎಲ್ಲ ಭಾಗಗಳಲ್ಲಿ ಏಕಪ್ರಕಾರ ಒತ್ತಾಗಿ ಬೆಳೆದು ಬಾ ಎಂಬ ಹಾರೈಕೆಯ ಅರ್ಥ ಇಲ್ಲಿದೆ : ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 'ಹೋ ವಯ್ಯ' ಹಾಡನ್ನು (ಒಯ್ಯಕಾಕುವ) 'ವಯ್ಯಲೆಪುನ' ಎನ್ನುತ್ತಾರೆ.

ಇಂಥ ಒಯ್ಯಕಾಕುವ ಓಟ್‌ನಾಟಿ ಕ್ರೀಡೆಯು ರಾಜರ ಕಾಲದ ಖಾಸಗಿ ಕೃಷಿ ಜಮೀನುಗಳಾದ ವಿಸ್ತಾರವಾದ ಅರಮನೆ ವನ್ಯ ಜಮೀನುಗಳಲ್ಲಿ ನಡೆಯುತ್ತಿತ್ತು. ಗಂಗರ ಕಾಲಕ್ಕೆ ಅಂದರೆ ೯ನೇ ಶತಮಾನದಲ್ಲಿಯೇ ಪೆಣ್ಣೆಕಡಂಗಗಳಿದ್ ವನ್ಯಜಮೀನುಗಳಿದ ಬಗ್ಗೆ ಕ್ರಿ.ಶ. ೮೮೮ರ ಬಿಳಿಯೂರು ಶಾಸನ (ಎ.ಕ.ಸಂ.–೧, ಕೊಡಗು–೯೬)ದಲ್ಲಿ ಸೂಚನೆ ಸಿಗುತ್ತದೆ. ಹಾಲೇರಿ ಅರಸರ ಕಾಲದಲ್ಲಿ ಇಂಥ ವನ್ಯಗದ್ದೆಗಳು ಕೊಡಗಿನ ದಕ್ಷಿಣ ತುದಿ ಕುರ್ಚಿ ವನ್ಯದಿಂದ ಹಿಡಿದು ಮಡಿಕೇರಿ ತಾ. ಅಪ್ಪಂಗಳ ವನ್ಯ ಗದ್ದೆಯವರೆಗೆ ಇದ್ದುವು. ಹಾಗೂ ಓಟ್‌ನಾಟಿಯು ವ್ಯವಸ್ಥಾಬದ್ಧವಾಗಿ ನಡೆದುಬಂದುವು. ಹಾಲೇರಿ ಅರಸರ ನಂತರ ಖಾಸಗಿ ಒಡೆತನಕ್ಕೆ ಕೆಲವಾರು ವನ್ಯಗದ್ದೆಗಳು ಸೇರಿದುವು. ಅಂತಾಗಿ ಇಂದಿಗೂ ವನ್ಯಗದ್ದೆಯ ಓಟವು ಚಾಲ್ತಿಯಲ್ಲಿದೆ. ನಾಪೋಕ್ಲು ಬಳಿಯ 'ಕುಟ್ಟಂಜೆಟ್ಟಿರ' ಮನೆತನದ ಗದ್ದೆಯಲ್ಲಿನ ನಾಟಿ ಓಟ ಪ್ರಸಿದ್ಧಿಯಾಗಿದೆ. ಇದನ್ನು ಕೃಷಿ ಕ್ರೀಡಾ ವರ್ಗಕ್ಕೆ ಸೇರಿಸಬಹುದು. ಗೌಡ ಜನಾಂಗದವರನ್ನು ಅರೆಭಾಷೆಯಲ್ಲಿ 'ನಾಟಿ ಕೂಡ್ಸ್‌ಕಾರನ ಹೇಳ್‌ವ ಹೊಯ್ಯ ಪದ' ಎಂದು ಹಾಡಿನ ಸಾಲುಗಳಿವೆ.

> **ಓ. ಹೊಯ್ಯಾ ಓ...ಹೋ ಹೊಯ್ಯಾ ॥**
> **ಕಳಿಕಳಿನಾಟಿ ಕಾವೇರಮ್ಮಂಗೆ । ಕಳಿಕಳಿನಾಟಿ ಇಗ್ಗುತಪ್ಪಂಗೆ**
> **ಕಾವೇರಮ್ಮನ ಮನ್ಸ್‌ನಂಗೆ । ಇಗ್ಗುತಪ್ಪನ ಬೆಟ್ಟದ ಹಂಗೆ।**
> **ವಾಡಿಗೂ ಬಾಡಿಗೂ ಮುಟ್ಟಿ ಕಂಡ್ ಬೆಳೆಯಲಿ ॥"**
> **('ಅಕ್ಷಯ', ಪುಟ ४೦)**

ಎಂಬ ದೇವ ಹರಕೆಯಲ್ಲಿ ಕಾವೇರಿ, ಇಗ್ಗುತಪ್ಪರನ್ನು ನೆನಸಿ ಅವರ ಸಂಬಂಧದ ಉಪಮೆಗಳನ್ನು ನೀಡಿ ಬೆಳೆಯ ಹುಲುಸಿಗೆ ಪ್ರಾರ್ಥಿಸಲಾಗಿದೆ.

ಧಾರ್ಮಿಕ ಕ್ರೀಡೆ ಕುಣಿತದ ವರ್ಗಕ್ಕೆ ತೂಡು ನಮ್ಮೆ, ಬೆತ್ತಲೆ ಕಳಿ, ಕುದುರೆ ಬೋಡು ಕಳಿಯನ್ನು ಸೇರಿಸಬಹುದು. 'ಪಾರಕುಂಞ'ಯನ್ನು ಇದೇ ಬಗೆಗೆ ಸೇರಿಸಬಹುದು.



'ಒಯ್ಯಕಾಕುವ' ಘೋಷದ ನಾಟಿಯ
ನಂತರ ಕೆಸರುಗದ್ದೆಯ ಓಟದ ತರುಣರು



ಕಂಡಂಗಾಲದ ಬಳಿಯ ಪಾರಣಮಾನಿ ಗದ್ದೆ ಬಳಿ ಅಳಿಯುವ
(ಅಳಂಜಕುಡುದ) ಕುದುರಕಳಿ



ಅರಮೇರಿಯಲ್ಲಿ ಉತ್ತರಿ ಕೋಲಾಟಕ್ಕೆ ಸಿದ್ಧವಾಗಿರುವ ಕೊಡವರು



ಅರಮೇರಿಯ ಕೋಲಾಟದ ಮಂದ್ (ಮೈದಾನ) ನಲ್ಲಿ ಹುತ್ತರಿ ಕೋಲಾಟ



ಅಮ್ಮತ್ತಿ ಬಿಳಗುಂದದಲ್ಲಿ ದಲಿತ ವರ್ಗ ಕೆಂಬಟ್ಟಿ ಜನಾಂಗದ ಪುರುಷರು
ಸ್ತ್ರೀವೇಷ ಧರಿಸಿ ಉಮ್ಮತ್ತಾಟ್ ಕುಣಿತವಾಡಲು ಸಿದ್ಧತಾ ಭಂಗಿ.



ಹುತ್ತರಿ ಹಬ್ಬದ ಸಮಯದಲ್ಲಿ 'ಮನೆ ಮನೆ' ಹಾಡುವಲ್ಲಿ ಧರಿಸುವ
ವೇಷಗಳು 'ಕಾಪಳಿಯಳಿ'ಯಲ್ಲಿ ತಲೆಗೆ ಕೋಡಂಗಿ ಟೋಪಿ, ಸೊಂಟಕ್ಕೆ
ಗಂಟೆ, ಮೈಗೆಲ್ಲ ಕಪ್ಪು ಮಸಿ



ಮೀನಿನ ಕುಕ್ಕೆ ಹೊತ್ತು ಬರುವ ಮಾಪಿಳ್ಳೆ ಕಳಿ



ವಡ್ಡಕಳಿಯ ಒಂದು ದೃಶ್ಯ



ಸಿದ್ದಿ ಜನರ ಕಳಿ

ಭಗವತಿ ಅಥವಾ ಭದ್ರಕಾಳಿ ದೇವರ ಕಾಡಿನ ಮುಂದೆ ಪಂಜು ನಿಲ್ಲಿಸಿ ದಲಿತ ಕೆಂಬಟ್ಟಿಗಳು ಉರಿವ ಕೊಳ್ಳಿಗಳ ಮೇಲೆ ಮೂರು ಬಾರಿ ಹಾರಿ ಕುಣಿಯುವುದಾಗಿದೆ. ಬಿದಿರಿನ ಹೊಂತೆಗಳನ್ನು ದಲಿತ ಕೆಂಬಟ್ಟಿಗಳು ದೇಗುಲದ ಮುಂದಿನ ಅಂಗಳ ಅಥವಾ ಗದ್ದೆಯಲ್ಲಿ ನೆಟ್ಟಗೆ ಚುಚ್ಚುತ್ತಾರೆ. ಹೀಗೆ ತೂಡು ಚುಚ್ಚಿ ಹಾಡನ್ನು ಹಾಡುತ್ತ ತಕ್ಕರ ಮನೆಗೆ ಹೋಗಿ ಕಂತೆ ಹುಲ್ಲು ಅಥವಾ ಕೋತ್ರಿ (ಕೋಲ್+ತಿರಿ) ತಂದು ಬಿದಿರು ಹೊರೆಯ ಬುಡಕ್ಕೆ ಬೆಂಕಿ ಕೊಡುತ್ತಾರೆ. ಬೆಂಕಿ ಹತ್ತಿದ 'ತೂಡು ಕುಂಞಿ' ಎನ್ನುವ ಬಿದಿರು ತುಂಡುಗಳ ಉರಿವ ಹೊರೆಯನ್ನು ತಳ್ಳಿ ಬೀಳಿಸುತ್ತಾರೆ. ನಂತರ ಉರಿಯುವ ಕೊಳ್ಳಿಗಳ ಮೇಲೆ ಮೂರು ಬಾರಿ ಹಾರಿ ಕುಣಿಯುತ್ತಾರೆ. ತೂಡು ಹಾಡನ್ನು ಹಾಡುತ್ತಾರೆ. ಇದು ಕೊಡಗಿನಲ್ಲಿ ಪ್ರಚಲಿತವಿರುವ ಮೇಲೇರಿ ಕೊಂಡ (ರಾಶಿ ಕೊಂಡ)ದ ಪರಂಪರೆಯಂತೆ ಕಾಣುತ್ತದೆ. ವೇಳವಾಳಿಗಳು ಇಂಥ ಮೇಲೇರಿ ಕೊಂಡಕ್ಕೆ ಹಾರಿ ಒಡೆಯನಿಗಾಗಿ ಪ್ರಾಣಾರ್ಪಣೆ ಮಾಡಿಕೊಳ್ಳುತ್ತಿದ್ದ ಬಗ್ಗೆ ಕ್ರಿ.ಶ. ೯೧೧ರ ಬೇಳೂರು ಬಸವನಹಳ್ಳಿ ಗುಡಗೂರಿನ ಹೊಸ ಶಾಸನ ಶಿಲ್ಪದ ರಾಶಿ ಕೊಂಡವು ಸೂಚನೆ ನೀಡುತ್ತದೆ.[೬] ಹರತಿಸಿರಿ, ಪುಟ ೭೩೦ ಮತ್ತು ಶಾಸನ ಶಿಲ್ಪಗಳು, ಪುಟ ೧೬). ಅಂತಾಗಿ ಈ ತೂಡುಕೊಂಡದ ತೂಡು ನಮ್ಮೆಯ ಜನಪದ ಪರಂಪರೆಯ ಇತಿಹಾಸ ಕೊಡಗಿನಲ್ಲಿ ಸಾವಿರ ವರ್ಷಗಳ ಪ್ರಾಚೀನತೆಗೆ ತೆರೆದುಕೊಂಡಿದೆ ಎನ್ನಬೇಕು.

ಕೊಂಡ ಹಾರಿ ಹಾಡಿ ಕುಣಿದು ಬಂದು ದೇಗುಲದಲ್ಲಿ ಹೂ–ಗಂಧ ಪ್ರಸಾದ ಪಡೆದು, ಹೊರಗೆ ಬಂದು ಕೆಂಬಟ್ಟಿಗಳು ಕೋಳಿಮರಿಗಳನ್ನು ಮೇಲಕ್ಕೆ ಹಾರಿಸುತ್ತಾರೆ. ಇದನ್ನು 'ಪಾರ್‌ಕುಂಞಿ' ಎನ್ನುತ್ತಾರೆ. ಮರಿಗಳು ಯಾರಿಗೆ ಸಿಕ್ಕಿದರೂ ಅದು ಪ್ರಸಾದವೆಂದು ಒಯ್ಯುತ್ತಾರೆ. ಹೀಗೆ ತೂಡು ಬಿದ್ದ ಮರುದಿನ ಆಟದ ವೇಷಗಳು ಕೆಲವೆಡೆ ನಡೆಯುತ್ತವೆ.

ಇನ್ನು ಕೆಲವೆಡೆ ಹರಕೆಯ ಸ್ವರೂಪದಲ್ಲಿ ಗ್ರಾಮ ದೇವತೆಯ ಹಬ್ಬದ ಮುಕ್ತಾಯದ ಸಮಯದಲ್ಲಿ 'ಪಾರಕುಂಞಿ' ಎಂದು ಕೋಳಿ ಮರಿಗಳನ್ನು ಹಾರಿಸುವುದು ಧಾರ್ಮಿಕ ಕ್ರೀಡೆಯ ಭಾಗವೇ ಎನ್ನುವಂತಿದೆ. ಭದ್ರಕಾಳಿ, ಭಗವತಿ ಸಂಬಂಧದ ತೂಡು ನಮ್ಮೆಯ ಕೊನೆಯಲ್ಲಿ ಕಾಣಬರುವ ಈ ಬಗೆ ಕೋತೂರಿನಲ್ಲಿ ಮಾರಮ್ಮನ ಹಬ್ಬದಲ್ಲಿ ಮುಕ್ತಾಯ ಸಂದರ್ಭದಲ್ಲಿ ಹರಕೆ ಇದ್ದ ಯಾರೇ ಆಗಲಿ 'ಪಾರಕುಂಞಿ' ಹಾರಿಸಬಹುದು ಬಟ್ಟಂಗಾಲ, ಅಮ್ಮತ್ತಿ ಬಳುಗುಂದ ಇತ್ಯಾದಿ ಕಡೆಯೂ ಇದು ವಿಶೇಷ ಜನಪ್ರಿಯವಾಗಿದೆ.

ಅಂಗಕಳಿ : ಮನೆಯಲ್ಲಿನ ಯಾವುದೇ ವ್ಯಕ್ತಿ ತೀರಿದಾಗ, 'ಕಾಶಿ ಮೊರಡುವ' ಅಂದರೆ ಸತ್ತವರ ಜೀವನ ಸಂಗತಿಗಳನ್ನು ಹೇಳಿಕೊಂಡು ಅಳುತ್ತಾ ಹಾಡುತ್ತಾರೆ. ಆಗ ಮೃತದೇಹದ ಮುಂದೆ 'ಅಂಗಮುರಿಯುವುದು' ಎಂದು ಅಂಗಕಳಿ ಕುಣಿತ ಮಾಡುತ್ತಾರೆ. ಮಣೆಯ ಮೇಲೆ ಹರಳೆಣ್ಣೆ ದೀಪ ಬಿಳಿ ಭತ್ತ ತುಂಬಿದ ಪುತ್ತರಿ ಪಚ್ಚಿ (ಹುತ್ತರಿ ಕುಕ್ಕೆ), ಸಣ್ಣಕುಕ್ಕೆಯ ತುಂಬ ಅಕ್ಕಿ ಇಟ್ಟು ತೆಂಗಿನಕಾಯನ್ನು ಅದರ ಮೇಲಿಟ್ಟು ಕಬ್ಬಿಣದ ಸಣ್ಣ ಬಾಣವನ್ನು ಚುಚ್ಚಿಡುತ್ತಾರೆ. ಆಗ 'ಕೆಟ್ಟರೋ ಅಯ್ಯನೆ' '(ಅದನೆ)' ಎಂದು ಮೃತದೇಹದತ್ತ ಕೈಚಾಚಿ ಡೋಲಿನ ಬಡಿತಕ್ಕೆ ಸರಿಯಾಗಿ ದೀಪದ ಸುತ್ತ ಸಾವುಕುಣಿತವನ್ನು ಬಲ್ಲವರು ಮಾಡುವುದೇ ಅಂಗಕಳಿ. ಅಂದರೆ ದೇಹ ಮಾತ್ರ ಎದುರಿದ್ದಾಗ ಈ ಅಂತಿಮ ಕುಣಿತ ನಡೆಯುವುದು. ಸಾವು ಸಂದರ್ಭದ ದುಃಖದ ಕುಣಿತವಾದ ಅಂಗಕಳಿಯನ್ನು ಕೆಲವೆಡೆ ವಯಸ್ಸಾದವರು ಮನೆ ಮುಖ್ಯಸ್ಥರು ತೀರಿದರೆ ಮಾತ್ರ ಮಾಡುವುದುಂಟು. ತಮ್ಮ ಸ್ಮರಣೆ ಕೇವಲ ಕಾಟಾಚಾರವಲ್ಲ, ಸತ್ತವರ ಆತ್ಮಕ್ಕೆ ಶಾಂತಿ ಇರಲಿ ಎಂಬ ಕಳಕಳಿ ಇಲ್ಲಿನದು ಎಂಬುದಾಗಿ ಪರಿಭಾವಿಸಬೇಕು.

ಹಾಡು–ಕಳಿ–ಕೋಲಾಟ

ಹುತ್ತರಿ ಕೋಲಾಟ, ಪರೆಯ ಕಳಿ (ಅಣಕು ಕಾಳಗ) ಹಾಡು ಇತ್ಯಾದಿ ಕ್ರೀಡಾರೂಪಗಳಿಗೆ ಪೂರ್ವಭಾವಿ ಅಭ್ಯಾಸಕ್ಕಾಗಿ ಹಬ್ಬಕ್ಕೆ ಏಳು ದಿನ ಮೊದಲು, ಕೆಲವೆಡೆ ಎರಡು ದಿನ ಮೊದಲು ನಿಶ್ಚಯ ಮಾಡುತ್ತಾರೆ (ಕುರಿ ಮಾಡುವುದು). ಇದನ್ನು 'ಈಡ್ ಎಡ್‌ಪ್' ಎನ್ನುತ್ತಾರೆ. ರಾತ್ರಿ ಊಟ ಮುಗಿಸಿ ಬೆಳುದಿಂಗಳನಲ್ಲಿ ಪೂ ಮಂದ್‌ನಲ್ಲಿ (ಸಣ್ಣ ಮೈದಾನ) ನಿಷ್ಠೆಯಿಂದ ಅಭ್ಯಾಸ ಮಾಡುತ್ತಾರೆ. ಅಮ್ಮತ್ತಿ ಬಿಳುಗುಂದ, ಕೈಕೇರಿ ಕೈ ಮುಡಿಕೆ (ಬೆಟ್ಟಿಯತ್ ನಾಡು) ಇತ್ಯಾದಿ ಕಡೆ ಪರೆಂಪು ಕಾಳಿ ಬಹಳ ಪ್ರಸಿದ್ಧವಾಗಿದ್ದುವು. ಇಂದು ಸಾಂಕೇತಿಕವಾಗಿ ನಡೆಯುತ್ತಿವೆ. ಹುತ್ತರಿ ಕದಿರು ತೆಗೆದ ಮರುದಿನ ಊರು ಕೋಲು (ಊರು ಮಂಡ್‌ನಲ್ಲಿ) ನಂತರ ನಾಡಕೋಲು (ನಾಡ ಮಂದ್‌ನಲ್ಲಿ) ಕೋಲಾಟಗಳು ನಡೆಯುತ್ತವೆ. ಮಂಡ್‌ಗಳಿಗೆ ಬರುವಲ್ಲಿ ಕೊಬು, ಓಲಗ, ಡೋಲು, ಪರೆ ಸಹಿತ ದುಡಿಪಾಟ್, ಹತ್ತರಿ ಹಾಡು ಹೇಳುತ್ತ ಬರುವ ಸಡಗರ, ಕೋಲಾಟಕ್ಕೂ ಸಡಗರ ತರುತ್ತದೆ. ನಾಡುಕೋಲು ಆದ ಮೇಲೆ ಬೇಡು ಹಬ್ಬದ ವೇಷ ಪಲ್ಲಟಗಳನ್ನು (ವಿವಿಧ ವೇಷ) ಹಾಕಿ ಹಾಡಿ ಆಡುತ್ತಾರೆ. ಈ ವೇಷಗಳು, ಸೂಳೆ–ಕುಂದ, ಪಟ್ಟ (ಬ್ರಾಹ್ಮಣ) ಕಾಪಳ, ಮಾಪಿಳ್ಳೆ, ವಡ್ಡ–ತಿಮ್ಮಿ, ಗಾಡಿಗರಿ, ಸಿದ್ದಿಕಳಿ, ಕೊಡಚಿ (ಸೂಳೆ) ಇತ್ಯಾದಿಗಳಾಗಿವೆ ಇವನೂ ತಕ್ಕರ ಮನೆಯ ಮುಂದೆ ಅಂಗಳದಲ್ಲಿ ಆಟದ ಮೂಲಕ ಪ್ರದರ್ಶನ ಮಾಡಿ ಬಹುಮಾನ ತಿನಿಸುಗಳನ್ನು ಪಡೆಯುತ್ತಾರೆ.

ವಡ್ಡ–ಗೋಣಿಚೀಲವನ್ನು ಪಂಚೆಯಂತೆ ಉಟ್ಟು, ಮೈ ಮುಖಕ್ಕೆಲ್ಲ ಮಸಿ ಬಳಿದುಕೊಂಡವ. ವಡ್ಡತಿ ಒರಟಾಗಿ ಸೀರೆಯುಟ್ಟು, ಗಂಟು ಕೂದಲ ಮೇಲೆ ಮಂಕರಿ ಹೊತ್ತವಳು. ಈರ್ವರೂ ಸಂಭಾಷಣೆ ಮಾಡಿ ಹಾವಭಾವ ಕುಣಿತದಾಟದೊಡನೆ ಕನ್ನಡ ಭಾಷೆಯ ಮೂಲಕ ರಂಜಿಸುತ್ತಾರೆ. 'ಸೂಳೆ–ಕುಂದ'. ಸೂಳೆ ವೇಷದವಳೊಡನೆ ಕುಪ್ಪಸದಟ್ಟಿ ಉಟ್ಟ ಹೆಡ್ಡಗಂಡ, ಈರ್ವರೂ ಕೊಡವ ಭಾಷೆಯ ಮೂಲಕ ಆಟದ ರಂಜನೆ ನೀಡುತ್ತಾರೆ; ಹಳೇ ಮಿಾನಿನ ಕುಕ್ಕೆ ಹೊತ್ತು, ಮಸಿ ಅಥವಾ ಬೂದಿ ಬಳಿದುಕೊಂಡಿರುವ, ಬೈನೆ ಮರದ ಕತ್ತಿ ಹಿಡಿದು ಬರುವ ಮಾಪಿಳ್ಳೆ ಕಳಿ ಆಟದಿಂದ ಹಾಸ್ಯವನ್ನು ಉಕ್ಕಿಸುತ್ತಾನೆ ; ಪಟ್ಟಕಳಿ ಎಂದರೆ ಹಳೆ ಬ್ರಾಹ್ಮಣ ವೇಷದೊಡನೆ ಬಂದರೂ. ಸೊಂಟದಲ್ಲಿ ಕತ್ತಿ ಇದ್ದು ಭಾರ ತಡೆಯಲಾರದೆ ಈರ್ವ ಬ್ರಾಹ್ಮಣರ ಓಲಾಟವಿರುತ್ತದೆ; ಗಾಡಿಗ ಅಥವಾ ಗಾಡಿಗರಿಯಲ್ಲಿ ಮಲೆಯಾಳ ಭಾಷೆ ಆಡುತ್ತ ಬರುವ ಚೇಷ್ಟೆಯ ದೊಂಬ. ಘಟವಾಣಿ ದೊಂಬತಿಯ ಆಟವಿರುತ್ತದೆ; ಸಿದ್ಧಿ ಕಳಿಯಲ್ಲಿ ಮಸಿ ಬಳಿದುಕೊಂಡು ಮುಖದ ಬಳಿ ಬಾಳತರಗಿ ಸಂಕುಳಿ, ಸೊಂಟಕ್ಕೆ ಹೂಪಿನ ಹಾರ ಹಾಕಿಕೊಂಡು ಮನಬಂದಂತೆ ಕುಣಿಯುತ್ತ ಹಾಡುಗಳನ್ನು ಕೊಡವ ಭಾಷೆ ಅಥವಾ ಮಿಶ್ರಭಾಷೆಯಲ್ಲಿ ಹಾಡಿ ರಂಜಿಸುವ ಆಟಗಾರರುದ್ದಾರೆ. ಆಫ್ರಿಕಾದಿಂದ ಬಂದ ಜನರ ವಂಶಿಕರು ಸಿದ್ಧಕಾಡಿನ ಜನರು, ಹಾಲೇರಿ ಅರಸರ ಕಾಲಕ್ಕೆ ಬಂದು ನಾಲ್ನಾಡು ಅರಮನೆ ಬಳಿ ವಾಸ್ತವ್ಯಗೊಂಡವರಿವರು, ಕಾಪಳ ಕಳಿಯಲ್ಲಿ, ಜಳಿ ಅಥವಾ ಕಪ್ಪು ತುಂಡು ಪಂಚೆ ಉಟ್ಟು, ಮೈಗೆಲ್ಲ ಕೈಯೆಣ್ಣೆ, ಕಪ್ಪು ಮಸಿ ಹಚ್ಚಿಕೊಂಡವ, ತಲೆಗೆ ಜಿಂಕೆ ತೊಗಲಿನ ಕೋಡಂಗಿ ಟೋಪಿ ಧರಿಸಿರುತ್ತಾನೆ. ಕಾಡು ಬೆಕ್ಕಿನ ಕೂದಲ ಮಿಾಸೆ, ಗಡ್ಡ, ಸೊಂಟಕ್ಕೆ ಗಂಟೆಮಣಿ, ಹುಲ್ಲಿನ ದೇವರ ಅಣೆಕಟ್ಟು, ಬಿದಿರಿನ ಬಿಲ್ಲು ಬಾಣ, ಬೈನೆಮರದ ಕತ್ತಿ, ಅಂಗರ ಕೋಲು (ಚುರುಮುರಿ ಸೊಪ್ಪಿನ ಕಡಿತ ಬರಿಸುವ ಕಡ್ಡಿ) ಅಡಕೆ ಹಾಳೆಯ ಕೋಡಂಗಿ ಟೋಪಿ ಧರಿಸಿ ಕೊಡವ ಭಾಷೆಯಲ್ಲಿ ಹಾವಭಾವದೊಡನೆ ಆಟದ ರಂಜನೆ ನೀಡುವುದಿದೆ; ದಲಿತ ಕೆಂಬಟ್ಟಿಗಳಲ್ಲಿ ಮೈಗೆ ಕೆಸರು ಹಚ್ಚಿಕೊಂಡು ಜನರ ಮೈಗೆ ಉಜ್ಜುವ ಆಟ 'ಬುಂಡೆಕಳಿ' ಕಳಿ ಇದೆ. ಇದು ಮಗ್ಗುಲ ಗ್ರಾಮದಲ್ಲಿ ರೂಢಿಗಿರುವ 'ಮಣ್ಣುಕಳಿ'ಯನ್ನು ಹೋಲುತ್ತದೆ. ಹೆಬ್ಬಾಲೆ ಭದ್ರಗೊಳ ದೇವರ ಕಾಡಿನಲ್ಲಿ ಜೇನು ಕುರುಬರ ಬುಂಡೆಹಬ್ಬಕ್ಕೆ ಕೆಂಬಟ್ಟಿಗಳಲ್ಲಿ ಕುಂಡೆಕಳಿ ಕೆಂಬಟ್ಟಿಗಳು ಬೆಟ್ಟಕುರು ಬರುತ್ತಾರೆ. ಈ ಸಂದರ್ಭದಲ್ಲಿ ತಾರಾಮಾರ ಎಲ್ಲರನ್ನೂ ಬೈಯುವುದುಂಟು. ಭದ್ರಕಾಳಿಯು 'ಭದ್ರನಿಗೆ ಬೆನ್ನು ತಿರುವಿ ಹೋದಳೆಂದು ಆಕೆಯನ್ನು ಬೈಯುತ್ತಾರೆ. ಒಂದು ರೀತಿಯಲ್ಲಿ ಇದು ಬೈಯ್ಯುವ ಆಟವಾಗಿ ರಂಜಿಸುತ್ತದೆ.

ಬೆತ್ತಲೆ ಕಳಿ–ಕುದುರೆ ಬೋಡುಕಳಿ : ಬೇಡಹಟ್ಟಿ, ತೀರ್ಥೋದ್ಭವ, ಪಾರಣಮಾನಿ ಹಬ್ಬದ ಸಂದರ್ಭದಲ್ಲಿ ಈ ಕಳಿಗಳು ನಡೆಯುತ್ತವೆ. ಬೆತ್ತಲೆ ಕಳಿಯಲ್ಲಿ ನಡುವಿನಿಂದ ಮುಡಿಯವರೆಗೆ ಸೊಪ್ಪಿನಿಂದ ಮೈ ಮುಚ್ಚಿಕೊಂಡಿರುತ್ತಾರೆ. ಅದಕ್ಕೆ ಮುನ್ನ ಮಣ್ಣು ಬದಿಯಲ್ಲಿ ಹೊರಳಿ ಮಣ್ಣುಮೈ ಮಾಡಿಕೊಂಡಿರುತ್ತಾರೆ. ಈ ವೇಷವನ್ನು ಅಂಬಲದ ಬಳಿ ಕುದುರೆ ಬೋಡುಕಳಿ ಇದ್ದಾಗ ಜೊತೆಯಲ್ಲಿ ಕಟ್ಟಿ ಕುಣಿತ ಆರಂಭಿಸಬೇಕು. ಇದೊಂದು ರೀತಿ ಹರಕೆ ಕುಣಿತದಾಟ. ಕುಂದ ಬೆಟ್ಟದಲ್ಲಿ ತುಲಾಸಂಕ್ರಮಣದ ಸಮಯದಲ್ಲಿ ಇದು ಕಾಣಬರುತ್ತದೆ. ಕುಮಟೂರು ಗ್ರಾಮದಲ್ಲಿ ತುಂಬೆಸೊಪ್ಪು ಸುತ್ತಿಕೊಂಡು. ಹೊಲೆದೇವರ ಸುತ್ತ ಸ್ತ್ರೀಯರು ಬೆತ್ತಲೆ ಕಳಿ ಆಡುತ್ತಿದ್ದರು.

ಕುದುರೆ ಬೋಡುಕಳಿಯು (ಬೆತ್ತದ) ಬಿದಿರು ಪಟ್ಟಿಗಳಿಂದ ಮಾಡಿದ ಕುದುರೆಯ ಅಸ್ಥಿ ಪಂಜರ ರೂಪಗೆ ಬಟ್ಟೆ ತೊಡಿಸಿ ಅಲಂಕಾರ ಮಾಡಿ, ಹೊತ್ತು ಕುಣಿಯುವಾಟ. ನಿರ್ದಿಷ್ಟ ಮನೆತನದವರು (ಕೊಡವರ ಪೈಕಿ) ವಾರ್ಷಿಕ

ಹಬ್ಬದಲ್ಲಿ (ತುಲಾಸಂಕ್ರಮಣ) ಪರ್ಯಾಯವಾಗಿ ಕಳಿ ಕಟ್ಟಿ ಕುಣಿಯಬೇಕು. ಇಲ್ಲಿ ಹಾಡು, ಕುಣಿತದೊಡನೆ ಕುದುರೆ ಓಡಿಸುವುದೂ ಇರುತ್ತದೆ.

ಸುಗ್ಗಿ ಕುಣಿತಗಳು, ಋತು ಪ್ರಮಾಣಿತವಾಗಿ ಉತ್ತರ ಕೊಡಗಿನ ಸುಗ್ಗಿ ಕಟ್ಟೆಗಳ ಹಬ್ಬದಲ್ಲಿ ಪ್ರಚಲಿತವಾಗಿವೆ. ಅಲ್ಲಿ ವೀರಶೈವ ಮತ್ತು ಗೌಡ ಜನಾಂಗಗಳ ಪ್ರಭಾವ ಹೆಚ್ಚು ಕಾಣುತ್ತದೆ. ಆದರೂ ದಲಿತ ವರ್ಗದ ಕೊಟವಳಿ ಕಣಿಯ (ಬಲಗೈ ವರ್ಗ)ರ ವೀರಭದ್ರ ಹಲಗೆ ಕುಣಿತ, ವಡಬುಗಳ ಘೋಷದೊಡನೆ ಮಿಳಿತವಾಗಿ ಧಾರ್ಮಿಕ ಕ್ರೀಡಾ ಪರಿಸರವನ್ನು ತುಂಬಿಕೊಡುತ್ತವೆ. ಹೀಗೆಯೇ ಕಿತ್ತೂರಿನ ಕತ್ತಿವರಸೆಯ ಕುಣಿತ ಹಾಲೇರಿ ಅರಸರ ಕಾಲದಿಂದಲೂ ಪ್ರಸಿದ್ಧಿಗೊಂಡು ಬಂದಿದೆ. ಯಡೂರಿನ ಸುಗ್ಗಿಕಟ್ಟೆ ಹಬ್ಬದಲ್ಲಿ ಒಡ್ಡ, ಸೂಳೆ ವೇಷಗುಣಿತ, ಚೌಡ್ಲುವಿನಲ್ಲಿ ಹರಿಸೇವೆಯ ಸಂದರ್ಭದಲ್ಲಿ, ಬಲಗೈ ದಲಿತರು ಕೆಂಚರಾಯನ ಮುಖವಾಡ ಹೊತ್ತು ಕುಣಿತವಾಡುವುದು; ಸುಗ್ಗಿಕಟ್ಟೆ ಹಬ್ಬದ ಸಮಯದಲ್ಲಿ ಬೇಟೆಗೆ ಸಾಗುವುದು, ಇಲ್ಲೆಲ್ಲ ಧಾರ್ಮಿಕ ಕ್ರೀಡೆ ಹಾಗೂ ಧಾರ್ಮಿಕ ಸಂದರ್ಭಕ್ಕೆ ಅನ್ವಯಗೊಂಡ ವೀರ ಕ್ರೀಡೆಗಳೂ ಜೊತೆಯಾಗಿರುವುದು ಕಾಣಬರುತ್ತದೆ.

ಧಾರ್ಮಿಕ ಸಂದರ್ಭದ ಕಿರುಕ್ರೀಡೆಗಳಾಗಿ 'ತೆಂಗೆ ಪೋರು', ಎಂದರೆ ತೆಂಗಿನಕಾಯನ್ನು ಹಿಡಿದೆಳೆಯುವ ಆಟ, ಭದ್ರಕಾಳಿ ಹಬ್ಬದ ಸಮಯದಲ್ಲಿ ಕಾಣಬರುತ್ತದೆ. ದೇಗುಲದ ಮುಖ್ಯಸ್ಥ ತೆಂಗನ್ನು ಹೆರೆದು ಎಣ್ಣೆ ಹಾಕಿ ನಯಗೊಳಿಸಿ ಹಿಡಿದು ನಿಲ್ಲುತ್ತಾನೆ. ಅವನು ಮೇಲೆಸೆದ ಆ ತೆಂಗಿನಕಾಯನ್ನು ಯಾರು ಹಿಡಿದು ದೇವರ ಕಲ್ಲಿಗೆ ಒಡೆಯುವರೋ ಅವರಿಗೆ ಆ ಪ್ರಸಾದದ ಬಹುಮಾನ; ಈ ಕಿತ್ತಾಟಕ್ಕೆ 'ಅಂಬುಗಾಯಿ' ಎಂದೂ ಹೇಳುವುದುಂಟು.

ದೇವರಕಲ್ಲು ಎತ್ತುವುದು : ಹೊಸೂರು ಬಟ್ಟೇರಿ ಮೂರ್ತಿ ಅಮ್ಮೆಯ ದೊಡ್ಡಹಬ್ಬದ ಮೂರನೇ ದಿನದಂದು ಈ ಕ್ರೀಡೆಯ ಸ್ಪರ್ಧೆ ಇರುತ್ತದೆ. ದೇವರ ಗುಂಡುಕಲ್ಲನ್ನು ಯಾರು ಎತ್ತುವರೋ ಅವರಿಗೆ ಬಹುಮಾನವನ್ನು ಕೊಡುವ ತಕ್ಕರು ಕೊಡುತ್ತಾರೆ. ಇದೊಂದು ಶಕ್ತಿ ಪರೀಕ್ಷೆ ಹಾಗೂ ಸೇವನಿಷ್ಠೆಯ ಸಂಕೇತದ ಸ್ಪರ್ಧೆಯೂ ಆಗಿದೆ, ನೀಲಿ ಆಟ ಅಥವಾ 'ಕೋಳಿಪೊ' ತಿನ್ನುವುದು–ನೀಲಮ್ಮ ದೇವರಿಗೆ ನಡೆದುಕೊಳ್ಳುವವರು, ಬಳಿಕ ಭಜನೆ ಮಾಡಿ ಕೋಳಿ ತಲೆಯನ್ನು ಯಾರು ಬೇಗ ಸುಟ್ಟು ತಿನ್ನುತ್ತಾರೆ ಎಂದು ತಿಳಿಯುವ ಆಟವಿದ್ದು, ಕಲಜ ಕರೆಯುವುದು. ಪನ್ನಂಗಾಲ ತಮ್ಮ ಹಬ್ಬದ ಸಮಯದಲ್ಲಿ ಯುವಕಪಾಡಿ ಹಾಗೂ ಕಂಜಿಲ ಗ್ರಾಮದಲ್ಲಿ ಕಂಡುಬರುವ ಅಚ್ಚರಿ ಮೂಡಿಸುವಾಟವಿದಾಗಿದೆ. ಕಳ್ಳು ಸಂಗ್ರಹಿಸಿ ಖಾಲಿ ಮಾಡಿದ ಮಡಕೆಗಳ ಮೇಲೆ ಉರಿವ ಬತ್ತಿಗಳನ್ನಿಟ್ಟು ನಿಂತ ನೀರಿನ ಮೇಲೆ ತಳ್ಳಿ ಮತ್ತೆ ಹಿಂದಕ್ಕೆ (ಧ್ವನಿ ಒತ್ತಡ ಹಾಕೀ) ಕರೆದುಕೊಳ್ಳುವ ದೇವ ಮಹಿಮೆಯ ಆಟ ಎಂಬ ನಂಬಿಕೆ ಕೆಂಬಟ್ಟಿ ಜನದಲ್ಲಿದೆ, ತೆಂಗಿಗೆ ಈಡು ಹೊಡೆಯುವುದು ಈ ಆಟದಲ್ಲಿ ಮೂರು ಭಾಗ ಸೀಳಿದ ಬಿದಿರನ ತುದಿಯ ಹಿಡಿಪುವಿನಲ್ಲಿ ತೆಂಗಿನಕಾಯಿಯನ್ನು ಇಡುತ್ತಾರೆ. ನಂತರ ಇಡಿಯಾಗಿ ಮರದ ತುದಿಯಲ್ಲಿ ಅಥವಾ ರೆಂಬೆಗೆ ಕಟ್ಟುತ್ತಾರೆ. ಅದನ್ನು ಕೋವಿಯ ಗುಂಡಿನಿಂದ ಹೊಡೆಯುತ್ತಾರೆ. ರೆಂಬೆಗೆ ಕಟ್ಟಿದ್ದರೆ ಕಲ್ಲಿನಿಂದ ಗುರಿ ಇಟ್ಟು ಹೊಡೆದು ಬೀಳಿಸುತ್ತಾರೆ. ತೆಂಗಿನಕಾಯಿಗಳನ್ನು ಸಾಲಾಗಿ ಜೋಡಿಸಿ ಕಲ್ಲಿನಿಂದ ತೆಂಗನ್ನು ಒಡೆಯುವ ಆಟವಿದಾಗಿದೆ. ಕೈಲ್ ಪೊಳ್ದು (ಕೊಡವರ ಆಯುಧಪೂಜೆ ಹಬ್ಬ) ಸಮಯದಲ್ಲಿ ಹೆಚ್ಚಾಗಿ ಈ ಆಟ ನಡೆಯುತ್ತದೆ.

ಸಾಂಪ್ರದಾಯಿಕ ಸಾಮಾಜಿಕ ಕ್ರೀಡೆಗಳೂ ಚಾಲ್ತಿಯಲ್ಲಿವೆ. 'ಕಾಳೆ ಎಳೆಯುವುದು' ಅಂದರೆ ತಾತೆಗಿಡದ ರೆಂಬೆ ಎಳೆದು, ಜಗಿದು ಆಡುವ ಆಟವಾಗಿದೆ; ಪಲ್ಲಿ ಆಟ–ಇದು ಕೈ ಕೈ ಹಿಡಿದು ಎಳೆಯುವ ಆಟ. ಈ ಎಳೆದಾಟವನ್ನು ಬಿಡಿಸಲು ಬಂದರೆ, ಆಟಗಾರರು ಅವರಿಗೇ ಏಟು ಕೊಡುತ್ತಾರೆ. ಆದರೂ, ಇಬ್ಬದಿಯಲ್ಲಿ 'ಎಳೆ–ಬಿಡು' ಆಟ ನಡೆಯುತ್ತಿರುತ್ತದೆ. ಮರಂದೋಡು ಪ್ರದೇಶದಲ್ಲಿ 'ಹಲ್ಯಾಟ' (ಹಲ್ಲೆಯ ಆಟ !) ಎಂದು ಕರೆಯುವುಂಟು, 'ಕೈಪೋರ್' ಆಟ ಎಂದೂ ಕರೆಯುವುದುಂಟು. ಅಂದರೆ ಸಣ್ಣ ಎಳೆದಾಟವೆಂಬರ್ಥ ವಿರುವಂತಿದೆ, ಪೋರ್ ಆಟ ತೆಂಗಿನಕಾಯಿ ಜುಟ್ಟು ತೆಗೆದು ಮೇಲಕ್ಕೆಸೆದು ಹಿಡಿಯುವ ಆಟವಾಗಿದೆ; ತಾರಾಟ–ಚಿನ್ನಿದಾಂಡು ಆಟವನ್ನು ಈ ಹೆಸರಿನಲ್ಲಿ ಕರೆಯುತ್ತಾರೆ, ಕೋಣನ ಸವಾರಿ, ಲಗ್ಗೆಚೆಂಡು, ಗೋಲಿ–ಗಜ್ಜುಗ ಬಿದಿರು ಬಾಣ–ಬಿಲ್ಲು ಇತ್ಯಾದಿ ಆಟಗಳು ಉಂಟು.

ಹೆಣ್ಣುಮಕ್ಕಳು ಆಡುವ ಆಟಗಳಲ್ಲಿ 'ಚಿಲಕಿ ಆಟ' ಅಂದರೆ ಕುಂಟೆಬಿಲ್ಲೆ, ಕೊತ್ತಿವಾರ, ಅಂದರೆ ಸಣ್ಣ ಕಲ್ಲುಗಳನ್ನು ಮೇಲಕ್ಕೆಸೆದುಕೊಂಡು ಆಡುವುದು. ಬಳೆ ಚೂರುಗಳನ್ನು ಬೆರಳಿನ ಮೇಲೆ ಜೀಳಿಸಿಕೊಂಡು ಆಡುವ ಬಳೆ ಆಟ. ಹಗ್ಗದಾಟ, ಚೌಕಿ ಕವಡೆ ಇತ್ಯಾದಿಗಳಿವೆ. ಆಧುನಿಕ ಕ್ರೀಡೆಗಳೂ ಚಾಲ್ತಿಯಲ್ಲಿವೆ.

[ಕೂಟಮಂದಡೆ–ಯರವರಂತೆ ವೇಷ ಧರಿಸಿ, ಯರವ ಭಾಷೆ ಬಳಸಿ ತಮಾಷೆ ಮಾಡುವ ಆಟವಿದಾಗಿದೆ. ಕೋತೂರುವಿನಲ್ಲಿ ಇದು ಕಂಡುಬರುತ್ತದೆ. ಹಾಸ್ಯದ ನುಡಿಗಳನ್ನು ಹೆಚ್ಚು ಬಳಸುತ್ತ ಆಡುವ ಈ ಆಟವನ್ನು 'ಕೂಟಕಳಿ' ಎಂದೂ ಕರೆಯುತ್ತಾರೆ.]

ಕೊಡಗಿನ ಜನಪದ ಕಲೆಗಳು ದೇಸಿ ನೃತ್ಯಗಳ ಆಡುಂಬೊಲವಾಗಿದೆ. ಉಮ್ಮತ್ತಾಟ್, ಕೈತಲೆ ಆಟ್,

ಕೊಂಬಾಟ್, ದಪ್ಪು ಆಟ್, ಬಿಲ್ಲಾಟ್, ಬೊಳಕಾಟ್, ವಾಲಗತ್ತಾಟ್, ಕೊಡಿಯಾಟ ಪೀಲಿಯಾಟ್, ಚೌರಿ ಆಟ ಕೊಡವ ಭಾಷೆಯಲ್ಲಿ 'ಆಟ್' ಎಂದರೆ ಕುಣಿತ ಅಥವಾ ನೃತ್ಯ ಎಂಬ ಅರ್ಥವಿರುವ ಕಾರಣ ಈ ಕಲೆಗಳು ನಿಖರವಾಗಿ ಹೇಳಬೇಕೆಂದರೆ ಕ್ರೀಡಾ ವಿಭಾಗಕ್ಕೆ ಸೇರದೆ ಕುಣಿತ ವಿಭಾಗಕ್ಕೆ ಸೇರುತ್ತವೆ.

ಕೊಡಗಿನ ಕುಣಿತಗಳು 'ನೃತ್ಯ' ಮತ್ತು 'ನೃತ್ತ'ಗಳ ನಡುವಣ ಪ್ರಕಾರವಾಗಿವೆ. ನೃತ್ತ, ನೃತ್ಯ ಮತ್ತು ನಾಟ್ಯ ಈ ಮೂರು ಶಬ್ದಗಳಿಗೆ ಸ್ಥೂಲವಾಗಿ 'ಕುಣಿತ' ಎಂಬ ಅರ್ಥವೇ ಕಾಣುತ್ತದೆ. ಸೂಕ್ಷ್ಮವಾಗಿ ನೋಡಿದರೆ 'ನೃತ್ತ'ವು ತಾಳಲಯ ಪ್ರಧಾನವಾದುದು ; ಒಬ್ಬರ ಅಥವಾ ಸಮೂಹದ ಕುಣಿತವನ್ನು ಹೊಂದಿರುವಂತಹದು. ಕೆಲವೇಳೆ ಹಾಡನ್ನು ಒಳಗೊಂಡಿರುತ್ತದೆ. 'ನೃತ್ತ'ದಿಂದ ಜನ್ಯವಾದುದು ನೃತ್ಯ. ಅದು ಸಂಗೀತ, ಅಭಿನವಯಗಳ ಸಮನ್ವಯದಿಂದ ರಸಭಾವ ಉದ್ದೀಪಿಕವಾದದ್ದು. 'ನಾಟ್ಯ'ವು 'ನೃತ್ಯ'ದ ವಿಶಾಲರೂಪ. ತನ್ನದೇ ಲಹರಿಗಳನ್ನು ಹಾಡಿನ ಹಂಗಿಲ್ಲದೆ ಪ್ರದರ್ಶಿಸುವ ಸ್ವತಂತ್ರ ನರ್ತನವೇ ನೃತ್ತ, ಈ ದೃಷ್ಟಿಯಿಂದ ಮೇಲ್ಸೂಚಿತ ಕುಣಿತಗಳು 'ನೃತ್ತ', 'ನೃತ್ಯ' ಪ್ರಕಾರಗಳಲ್ಲಿ ಶೋಭಿಸುವ ಜನಪದ ನರ್ತನಗಳಾಗಿವೆ. ಈ ಕುಣಿತಗಳಲ್ಲಿ ಹಿನ್ನೆಲೆವಾದ್ಯ, ಹಾಡು ಅಥವಾ ಲಯಬದ್ಧ ಘೋಷ ಭಾವಾಭಿನಯಗಳೂ ಕಾಣಬರುವುದುಂಟು. ಕೋಲಾಟಗಳಲ್ಲಿಯೂ ಈ ಬಗೆ ಕಾಣಬಹುದು. ಇರಲಿ.

ಉಮ್ಮತ್ತಾಟ್: ಸಮುದ್ರ ಮಥನ ಕಾಲದಲ್ಲಿ ಉದಿಸಿದ ಅಮೃತವನ್ನು ದೇವತೆಗಳಿಗೆ ಹಂಚಲು ವಿಷ್ಣುವು ಮೋಹಿನಿ ರೂಪ ಧರಿಸಿ ಉಮೆಯ ನೃತ್ಯ ವೈವಿಧ್ಯಗಳನ್ನು ತೋರಿಸಿ ದಾನವರನ್ನು ಬೆರಗುಗೊಳಿಸಿದ. ಉಪಾಯವಾಗಿ ಸುರರಿಗೆ ಒದಗಿಸಿದ. ಈ ಸಮಯದ ನೃತ್ಯವೇ 'ಉಮ್ಮತ್ತಾಟ್' ಎಂಬ ನಂಬಿಕೆ ಇದೆ. ಕೊಡಗಿನ ನಿಸರ್ಗದ ಚೆಲುವಿಗೆ ಮನಸೋತ ಸುರರು ಇಲ್ಲಿಗೆ ಬಂದು, ಹುಣ್ಣಿಮೆಯ ಮಧ್ಯರಾತ್ರಿಯಲ್ಲಿ ಜೊತೆಗೊಂಡು ಕುಣಿದು ನಲಿದರು. ಈ ನೃತ್ತವೆ ಕೊಡವ ನಾರಿಯರಿಂದಾಗಿ 'ಉಮ್ಮತ್ತಾಟ್' ಎನಿಸಿ ರೂಢಿಗೆ ನಿಂತಿತು ಎಂಬ ಐತಿಹ್ಯವಿದೆ. 'ಕೊಡವ ಸ್ತ್ರೀಯರು' ಕಂಚಿನ ತಾಳ ಹಿಡಿದುಕೊಂಡು,

ಕಾವೇರಮ್ಮ ದೇವಿ ತಾಯಿ ಕಾಪಾಡೆಂಗಳಾ
ಕಾವೇರಮ್ಮ ನಮ್ಮನ್ನು ಕಾಪಾಡು
ಬಾ ಬಟ್ಟೆ ಕಾಟಿ ತಂದ್ ಚಾಕ್‌ದೇವಿನೀ
ಬಾಳ್ವ ಹಾರಿ ತೋರಿ ಬಾಳಿಸು
ದತ್ತ್ ಮೋವಳಾಯಿತ್ ನೀ ಬ್ರಹ್ಮದೇವಂಗೆ
ಗೊತ್ತಿಲ್ಲತೆ ಅಗಸ್ತ್ಯ ಋಷಿ ಬುಟ್ ಪೊರಟಿಯಾ
ಬಹ್ಮದೇವರ ದತ್ತು ಮಗಳು ನೀನು
ವಂಚಿಸಿದಗಸ್ತ್ಯ ಮುನಿಗೆ ತಿಳಿಯದಂತೆ ನೀ ಹರಿದುಹೋದೆ

ಎಂಬ ಪ್ರಾರ್ಥನೆಯೊಡನೆ ಕುತ್ತುಂಬೊಳಿಚ (ನಿಲ್ಲು ದೀಪ)ದ ಸುತ್ತ ಕುಣಿಯುತ್ತ ಹಾಡು ಹೇಳುವರು. ಕಂಚಿನ ತಾಳಕ್ಕೆ ಕೊಡವ ಭಾಷೆಯಲ್ಲಿ 'ಉಮ್ಮತ್' ಎಂಬ ಹೆಸರಿದ್ದು, ದೇವಗುಣಿತವನ್ನು ಮಾಡುವ ಕಾರಣ ಉಮ್ಮಪ್ಪಾಟ್' ಎಂಬ ಹೆಸರಾಯಿತು ಎನ್ನುವುದೂ ಇದೆ. ಅಂದರೆ ಪ್ರಾಚೀನ ಕೊಡವರ ಜಾನಪದಿಕ ಇತಿಹಾಸದೊಡನೆ ಮೂಡಿ ಕಾಲಾಂತರದಲ್ಲಿ ಶಿಷ್ಟೀಕರಣಗೊಂಡಿದೆ. ಹೀಗಾಗಿ 'ಉಮ್ಮತ್ತಾಟ್' ಇತಿಹಾಸ ಕಾವೇರಿ–ಅಗಸ್ತ್ಯದ ಸಂಭರ್ಧದ ಕಾಲದಿಂದಲೂ ಪರಿಗಣಿಸಬೇಕಾಗುತ್ತದೆ. ಪುರಾಣ ಕಾಲದ ಮುನ್ನ ಅಂದರೆ ಕ್ರಿ.ಶ.ಕದ ಪೂರ್ವದಲ್ಲಿಯೇ ಜಾನಪದಿಕವಾಗಿ ಮುಕ್ತವಾಗಿ ಈ ಕುಣಿತವಿದ್ದು, 'ಉಮ್ಮತ್'ನಿಂದ ಈ ಕುಣಿತದ ಮೂಲವಿದೆ ಎಂದರೆ ಹೆಚ್ಚು ಗ್ರಾಹ್ಯವಾಗುತ್ತದೆ. 'ಪಿಂಜಿ ಕತ್ತಿ'ಗೆ ಸಿಗಿಸುವ ಬೆಳ್ಳಿಯ ಮಣಿಸರ ಎಂಬ ನಿಘಂಟು ಅರ್ಥವಿದ್ದರೂ, ಕಂಚಿನ ತಾಳದ ಹಿನ್ನೆಲೆಯ ಚಾಲ್ತಿಯಿದೆ. ಕಂಬಟ್ಟಿಗಳ 'ಉಮ್ಮತ್ತಾಟ್' ಹಾಡಿನಲ್ಲಿ ಕಾವೇರಿಯಮ್ಮ, ಪೊವದಮ್ಮೆದೇವಿ ಎಂದು ನೆನಸಿಯೇ ಆರಾಧನೆ ಇದೆ. ಅಂದರೆ ಕೊಡಗಿನ ಪ್ರಾಚೀನ ಮೂಲನಿವಾಸಿಗಳ ಸಾಲಿನಲ್ಲಿ ಅವರು ಇರುವಲ್ಲಿ 'ಉಮ್ಮತ್ತಾಟ್' ಇತಿಹಾಸಕ್ಕೆ ಪ್ರಾಚೀನ ಆಚರಣೆಯ ಮಗದೊಂದು ಬೆಂಬಲ ಸಿಕ್ಕಂತಾಗುತ್ತದೆ. ಕೊಡವರಲ್ಲಿಯಂತೆ, ಕೆಂಬಟ್ಟಿಗಳಲ್ಲಿ ಹೆಣ್ಣುಮಕ್ಕಳು ಉಮ್ಮತ್ತಾಟ್ ಕುಣಿತವಾಡುತ್ತಿದ್ದರಂತೆ. ಅವರಲ್ಲಿ ಈಗ ಗಂಡಸರೇ ಕೆಂಪುಸೀರೆಯುಟ್ಟು ಕೆಂಪುಪಟ್ಟೋಳಿ ಧರಿಸಿ, ನೃತ್ಯಾರಂಭಕ್ಕೆ ಕಾವೇರಿ ಪೊವ್ವದಿಯಮ್ಮೆಯ' ಸ್ತುತಿ ಮಾಡಿ ವೃತ್ತಾಕಾರದಲ್ಲಿ ನಿಂತು 'ಉಮ್ಮತ್ತಾಟ್' ತಾಳದೊಡನೆ ಕುಣಿತವನ್ನು ಸುಮಾರು ಐದು ಬಗೆಯಲ್ಲಿ ಮಾಡುತ್ತಾರೆ. ಅಮ್ಮತ್ತಿ ಬಿಳುಗುಂಡ, ಮಗ್ಗುಲ, ಚೆಂಬೆಬೆಳ್ಳೂರು, ಆರಮೇರಿ ಗ್ರಾಮಗಳಲ್ಲಿ ಹೆಣ್ಣು ವೇಷ ತೊಟ್ಟು ಆಡುತ್ತಾರೆ. ಆದರೆ ಬಟ್ಟಂಗಾಲದಲ್ಲಿ ಗಂಡುವೇಷದಲ್ಲಿಯೇ ಉಮ್ಮತ್ತಾಟ್ ಆಡುವುದಿದೆ. ಉಮ್ಮತ್ತಾಟ್ ಕುಣಿತದಲ್ಲಿ, ಕುಣಿತದ ಗತಿ ಬದಲಾಯಿಸಿದಾಗ ವಾದ್ಯದ ಗತಿಯೂ ಅನುಗುಣವಾಗಿ ಸಮನ್ವಯಗೊಳ್ಳುತ್ತದೆ. ಸುಗ್ಗಿ, ವಸಂತಋತುವಿನ ದೇವರ ಉತ್ಸವಗಳಲ್ಲಿಯೂ ಈ ಕುಣಿತವಿರುವುದುಂಟು.

ಕೈತಲೆ ಆಟ್‌ನಲ್ಲಿ ಕೈತಲೆದಾರರು ಕೆಂಪು ವಸ್ತ್ರದುಡಿಗೆಯುಟ್ಟು, ಒಂದು ಕೈಯಲ್ಲಿ ನವಿಲುಗರಿ ಹಿಡಿದು ಕುಣಿಯುತ್ತಿದ್ದರು. ಇಂದು ಮೂರು ಬಗೆಗೆ ಇಳಿದಿದೆ. ಮೊದಲು ಕೈತಲೆ ಆಟ್‌ನ ನೆಲೆಯು ಹಾಲೇರಿಯಲ್ಲಿ ಹಾಲೇರಿ ಅರಸರು ಕಟ್ಟಿಕೊಂಡ ಅರಮನೆಯ ಭಾಗದಲ್ಲಿತ್ತೆನ್ನಲಾಗಿದೆ.

ಹಾಲೇರಿಯಲ್ಲಿ ತಕ್ಕ ಮುಖ್ಯಸ್ಥರು, ಮೇದ ಹಾಗೂ ಮಡಿವಾಳರ ಪೈಕಿ ಒಬ್ಬೊಬ್ಬರ ಹೊರತಾಗಿ ಅನ್ಯರು ದೇವರಗದ್ದೆಯಲ್ಲಿನ ಈ ನೆಲೆಯಲ್ಲಿನ 'ಕೈತಲೆ ಆಟ್'ನ್ನು ನೋಡುವಂತಿಲ್ಲ. ಅದೇ ಗಾಳಿಬೀಡು, ಇಬ್ಬನಿವಳವಾಡೆ, ಅರಮೇರಿ (ಭದ್ರಕಾಳಿ ದೇಗುಲ)ಯಲ್ಲಿ ಮುಕ್ತನೋಟಕ್ಕೆ ಅವಕಾಶವಿದೆ. ಒಂದು ಕಾಲಕ್ಕೆ ಕೈತಲೆ ಆಟದ ನೆಲೆ 'ಆತ್ಮಬಲಿ' ಸಂದರ್ಭವಾಗಿತ್ತೆನ್ನುವುದೂ ಇದೆ. ಹಾಲೇರಿ ವಂಶದ ಮೊದಲರಸ ವೀರೊಡೆಯ ಹಾಲೇರಿಯಲ್ಲಿ ನಿಂತ ನೆಲೆಯಲ್ಲಿ ಈ ಪರಿಸರವಾಗಿತ್ತೆಂದು ಸ್ಥಳೀಯ ಹಿರಿಯರಲ್ಲಿ ಪಾರಂಪರಿಕ ವಾಡಿಕೆ ಇದೆ.

ಕೊಂಬಾಟ್ : ಭಸ್ಮಾಸುರನನ್ನು ಮರ್ದಿಸಲು ವಿಷ್ಣುವು ಒಂದು ನೃತ್ಯದಲ್ಲಿ ಕೊಂಬನ್ನು, ಇನ್ನೊಮ್ಮೆ ಪೀಲಿ (ನವಿಲುಗರಿ) ಹಿಡಿದು ಮಾಡಿದ ನೃತ್ಯಕ್ಕೆ ಈ ಹೆಸರಂತೆ. ಇವು ಮಹಾವಿಷ್ಣುವಿನ ಅವತಾರದ ಸಂಕೇತ (ಅಂಶಾವತಾರ) ವಂತೆ. ಜಿಂಕೆ ಅಥವಾ ಕಡವೆ ಅಥವಾ ಸಾರಂಗದ ಕೋಡನ್ನು ಎಡಗೈಯಲ್ಲಿ ಎದೆಯ ಮಟ್ಟದಲ್ಲಿ ಹಿಡಿದು, ಬಲಗೈಯಲ್ಲಿ ಚಮರೀಮೃಗದ ಚವುರಿಯನ್ನು ಹಿಡಿದು, ಸುಮಾರು ಹತ್ತು ಭಂಗಿಗಳಲ್ಲಿ ಬೆಂಕಿ ರಾಶಿಯ ಸುತ್ತ ಕುಣಿಯುತ್ತಾರೆ. ಮೊದಲಿಗೆ ಶಿವ ಬಗೆಯ ಆಟದ ಭಂಗಿಗಳಿದ್ದುವಂತೆ. ಬಿಳಿಯ ಕುಪ್ಪಸದಟ್ಟಿ, ರೇಷ್ಮೆಯ ಚೇಲೆ (ಸೊಂಟಕಟ್ಟಿ) ಧರಿಸಿ ಹಾಲೇರಿಯಲ್ಲಿ ಭದ್ರಕಾಳಿ ದೇವಿಗೆ ಐದು ದಿನಗಳ ಕಾಲ ಕೊಂಬಾಟ್ ನೃತ್ಯವನ್ನು ಅರ್ಪಿಸುತ್ತಾರೆ. ಪಾರಾಣೆ ಗ್ರಾಮದ ಭಗವತಿ ದೇಗುಲದ ಕೊಂಬಾಟ್ ನಮ್ಮೆಯು ಬಹಳ ಜನಪ್ರಿಯ ಹಬ್ಬವಾಗಿದೆ. ಕಾಕೋಟು ಪರಂಬುಪಿನಲ್ಲಿ 'ಕಾಕೋಟಚ್ಚಪ್ಪ (ಕಾಲಭೈರವ)ನಿಗೂ ಈಗುಣಿತದ ಮೂಲಕ ಆರಾಧನೆ ಇದೆ.

ದಪ್ಪು ಆಟ್ : ಇದು ಜಮ್ಮ ಮಾಪಿಳ್ಳೆಗಳಲ್ಲಿ (ಮತಾಂತರಗೊಂಡ ಕೊಡವ ಮುಸ್ಲಿಂ) ಹಾಲೇರಿ ಅರಸ ದೊಡ್ಡವೀರ ರಾಜೇಂದ್ರ ಒಡೆಯನ ಕಾಲದಿಂದ ಕೊಡಗಿನಲ್ಲಿ ಕ್ರಿ.ಶ. ಸು ೧೭೬೨ರ ಕಾಲದ್ಲಿ ರೂಢಿಗೆ ಬಂದ ಜನಪದ ಕಲೆಯಾಗಿ ಮಸೀದಿ, ಮಠಗಳ ಮುಂದೆ ಹಬ್ಬದ ಅಂಗವಾಗಿ ಇದನ್ನು ಪ್ರದರ್ಶಿಸುತ್ತಿದ್ದರು. ದಪ್ಪು ಎಂಬ ವಾದ್ಯದ ಓಸ್ನೆಲೆ ಇಲ್ಲಿ ಕುಣಿತಕ್ಕೆ ಸಹಗಾಮಿ ಆಗಿದೆ. ಕೊಂಡಗೇರಿ, ಎಮ್ಮೆ ಮಾಡು ಮತ್ತು ನೆರೆಯ ಪ್ರದೇಶಗಳಲ್ಲಿಯ ಜಮ್ಮ ಮಾಪಿಳ್ಳೆಗಳು ಇದರಲ್ಲಿ ಪಾಲ್ಗೊಳ್ಳುತ್ತಾರೆ. ಓಗೆಯೆ ಅರಮೇರಿ ಬಳಿಯ ಮೈತಾಡಿ ಚಾಮಿಯಲ್‌ನಲ್ಲಿರುವ ಜಮ್ಮ ಮಾಪಿಳ್ಳೆಗಳು ಅರಮೇರಿ ಮಠದ ಮುಂದೆ ಉತ್ಸವ ಸಮಾರಂಭದ ಸಮಯದಲ್ಲಿ ಪ್ರದರ್ಶಿಸುತ್ತ ಬಂದಿದ್ದಾರೆ. 'ದಪ್ಪು' ಭಜನೆ ಕಾಲದಲ್ಲಿ ಬಳಸುವ 'ದಮ್ಮಡಿ' ಗೀತೆ ದೊಡ್ಡದಾಗಿರುವ ಚರ್ಮ ವಾದ್ಯ ಆದರೆ ತಮ್ಮಟೆಯಷ್ಟು ದೊಡ್ಡದಲ್ಲ, ಕುಂಬಳ ಮರದಿಂದ ಮಾಡಿದ ಈ ಸಾಧನದ ಒಂದು ಬಾಯಿಗೆ ಆಡಿನ ಚರ್ಮವನ್ನು ಹದ ಮಾಡಿ ಜಿಗಿದುರತ್ತಾರೆ. ವೃತ್ತಾಕಾರದಲ್ಲಿ ಕುಣಿಯುತ್ತ ತಮ್ಮ ಭಾಷೆಯ ಹಾಡುಗಳನ್ನು ಕಲಾವಿದರು ಹಾಡುತ್ತಾರೆ.

ಜೋಯಿಪಾಟ್ : ಆಗಿಹೋದ ಹಿಂದಿನ ಸಂಗತಿ ಆಗಲಿರುವ ಮಂದಿಗೆ ಸಂಗತಿ ಹೇಳುವ ಈ ಹಾಡ್ಗುಗಿತದಲ್ಲಿ ದಕ್ಷ ಬ್ರಹ್ಮ ಮರ್ದನದ ಕತೆಯ ನಂಟಿದೆ. ದಕ್ಷಯಜ್ಞದ ಸಂದರ್ಭದಲ್ಲಿ ಆಹ್ವಾನವಿಲ್ಲದೆ ಬಂದ ಸತಿದೇವಿಯು ಅವಮಾನಿತಳಾಗಿ ಯಜ್ಞ ಕುಂಡಕ್ಕೆ ಬೀಳುತ್ತಾಳೆ; ಇದನ್ನು ತಿಳಿದ ಈಶ್ವರ ಜಟೆಯನ್ನು 'ಅಪ್ಪಳಿಸಿ ವೀರಭದ್ರನನ್ನು ಸೃಷ್ಟಿಸಿ ಗಣಗಳೊಡನೆ ಯಜ್ಞಧ್ವಂಸಕ್ಕೆ ಕಳುಹಿಸುತ್ತಾನೆ. ಆ ಸಂದರ್ಭದ ಅನಾಹುತಗಳನ್ನೆಲ್ಲ ಕುರಿತು ಹಾಡುವ 'ಜ್ಯೋತಿಷ್ಯಯಪಾಟ್' ಸಂವಾದಿ ರೂಪವೆ 'ಜೋಯಿಪಾಟ್' ಎನ್ನುತ್ತಾರೆ. 'ಜೋಯಿ' ಎಂದರೆ, ಯೋಗಿ, ಸನ್ಯಾಸಿ ಎಂಬ ಅರ್ಥ ಕೊಡವ ಭಾಷೆಯಲ್ಲಿದೆ ಅದಾಗಿ, ಈ ಜೋಯಿ, ದಕ್ಷನನ್ನು, ಶಿವರಹಿತ ಯಾಗ ಮಾಡುತ್ತಿದ್ದ ದಕ್ಷನನ್ನು ಆಗುವ ಅನಾಹುತದ ಬಗ್ಗೆ ಎಚ್ಚರಿಸಿದವನಾದ (ಆದರೂ ದಕ್ಷನು ಅದನ್ನು ಮಾನಿಸಲಿಲ್ಲ) ಕಾರಣ, 'ಜೋಯಿ' ಬಹುಶಃ ದಧೀಚಿಗೆ ಅನ್ವಯವಾಗಿರು ವಂತಿದೆ. ಹಾಗೂ ಅವನನ್ನು ಜನಪದೀಕರಣಗೊಳಿಸಿದಂತಿದೆ. ಹುತ್ತರಿಯ ಮರುದಿನ, 'ಮನೆಮನೆ ಹಾಡುವ' ಸಂದರ್ಭದಲ್ಲಿ ಕಲಾವಿದರು ಗ್ರಾಮದಲ್ಲಿ ಸುತ್ತುತ್ತಾ ಈ ಪ್ರದರ್ಶನ ನೀಡುತ್ತಾರೆ. ಸುಮಾರು ೧೦ ಜನ ಕಲಾವಿದರು ಭಾಗವಹಿಸುವ ಈ ಕಲಾಪ್ರದರ್ಶನದಲ್ಲಿ, ಹೆಣ್ಣುವೇಷ ಸಹಿತವಾಗಿ ವಿವಿಧ ಉಡುಗೆ ತೊಡಗುಗೆಗಳನ್ನು ತೊಟ್ಟಿರುತ್ತಾರೆ. ದುಡಿಯನ್ನು ಪಕ್ಕವಾದ್ಯ ವಾಗಿ ಮಾಡಿಕೊಂಡು ಕುಣಿಯುತ್ತಾರೆ. ಇದು ಕೊಡಗಿನ ಒಂದು ಪ್ರಾಚೀನ ಕಲಾಪ್ರದರ್ಶನವಾಗಿ, ಪುರಾಣದ ಸ್ಪರ್ಶಗಳನ್ನು ಹೊಂದಿದೆ.

ದೋಲುಪಾಟ್ : ಭಗವತಿ ಮತ್ತು ಭದ್ರಕಾಳಿ ಹಬ್ಬಗಳಲ್ಲಿ ಹಾಡುವ ದೋಲುಪಾಟ್ ಕೊಡಗಿಗೆ ಸೀಮಿತವಾಗಿದೆ. ದೋಲು ಎಂಬ ಚರ್ಮವಾದ್ಯ ಬಳಸಿ, ಜನರ ನಡೆ ನುಡಿಗಳನ್ನು ವಿವೇಚಿಸಿ ಹಾಗೂ ಕೆಲವೇಳೆ ಮನೆತನಗಳ ಇತಿಹಾಸವನ್ನು ಹೇಳುತ್ತ ಹೋಗುವ ಹಾವಭಾವದೊಡನಾದ ಹಾಡು ಇದು. ಕೊಡವರು ಹಾಗೂ ದಲಿತ ವರ್ಗದವರಿಂದ ಪ್ರತ್ಯೇಕವಾಗಿ ಈ ಕಲಾ ಪ್ರದರ್ಶನ ನಡೆಯುತ್ತದೆ. 'ಮನೆ ಮನೆ ಹಾಡುವ' ಪ್ರದರ್ಶನದಲ್ಲಿ ಇದು ಮೇಳಗೊಂಡಿದೆ.

ಬೊಳಕಾಟ್ : ಭಸ್ಮಾಸುರನನ್ನು ಶಿವನು ಸಂಹಾರ ಮಾಡುವಲ್ಲಿ ೩೨ ಭಂಗಿಗಳಲ್ಲಿ ತೋರಿದ ನೃತ್ಯದ ಸಂಕೇತವೆ 'ಬೊಳಕಾಟ್' ಎನ್ನುವುದಿದೆ. 'ಬೊಳಕ್' ಬೊಳಚ ಎಂದರೆ ಬೆಳಕು; ದೀಪ ಎಂಬ ಅರ್ಥವಿದೆ. ಕೊಡವರ ವೀರಗುಣಿತ

ಗಳಲ್ಲಿ ಇದೂ ಒಂದಾಗಿದೆ. ಈ ಹಾಡ್ಗುಣಿತದಲ್ಲಿ ಕೊಡಗಿನ ಮನೆತನದ ವೀರ ಇತಿಹಾಸ ಉಗ್ಗಡಣೆಗಳೂ ಇರುತ್ತವೆ. ದೇಗುಲದ ಮುಂದೆ ದೀಪಾಲೆ ಕಂಬವಿಟ್ಟು, ತಟ್ಟೆಯಲ್ಲಿ ಅಕ್ಕಿ, ಹಣ್ಣು, ತೆಂಗು ದುಡಿಕೊಟ್‌ಪಾಟ್ ಮೂಲಕ ಈ 'ಆಟ್'ಅನ್ನು ದೀಪವನ್ನು ಸುತ್ತುತ್ತಾ ಕುಣಿಯುತ್ತಾರೆ. ರಾತ್ರಿ ಹಾಗೂ ಹಗಲು ವೇಳೆ ಈ ಕುಣಿತವಿರುತ್ತದೆ. ಕಲಾವಿದರು ಒಂದು ಕೈಯಲ್ಲಿ (ಎಡಗೈ) ಚಾಮರ್, ಬಲಗೈಯಲ್ಲಿ ವಡಿಕತ್ತಿ (ಕೊಡಗಿನ ಅಗಲ ತುದಿಯ ವೀರಗತ್ತಿ) ಹಿಡಿದು ದೀಪದ ಸುತ್ತ ಕುಣಿಯುತ್ತಾರೆ. ಹಾಲೇರಿಯ ಭದ್ರಕಾಳಿ ದೇಗುಲದ ಮುಂದೆ ಹತ್ತು ದಿನ ರಾತ್ರಿ ಈ ಬೊಳಕಾಟ್ ನಿರಂತರವಾಗಿ ನಡೆಯುತ್ತದೆ. ಕುಂದಕಂಕೂರು ಭದ್ರಕಾಳಿಗೆ, ಗಾಳಿಬೀಡು ಭದ್ರಕಾಳಿಗೆ ಯವಕಪಾಡಿಯ ನೆಟ್ಟುಮಾಡು ಭಗವತಿ ದೇವತೆಗೆ 'ಬೊಳಕಾಟ್' ಆಚರಣೆ ಇದೆ.

ವಾಲಗತ್ತಾಟ್ : ಈ ಕುಣಿತವು ವಿಜಯೋತ್ಸವ, ಮದುವೆ ಸಂಭ್ರಮ, ಹಬ್ಬ, ಉತ್ಸವಗಳಲ್ಲಿ ಚಾಲ್ತಿಯಲ್ಲಿತ್ತು. ಸತ್ತವರ ಮನೆಯಲ್ಲಿ ದುಃಖಸೂಚಕ ವಾದ್ಯ 'ಕುಡ್ಪೆಪರೆ' ಬಾರಿಸುವಲ್ಲಿ ಈ ಆಟ್ ನಡೆಯುವುದುಂಟು. ರಾಜರುಗಳ ನಡುವೆ ಯುದ್ಧವಾದಾಗ ವಿಜಯಿಗಳು, ವಿಜಯದ ಸಂತೋಷದಲ್ಲಿ ಊಟೋಪಾರ ಮುಗಿಸಿ ವಾಲಗಗಳ ಧ್ವನಿಗೆ ಜೋಡಿ ಕುಣಿಯುತ್ತಿದ್ದರಂತೆ. ಅಂತಾಗಿ 'ವಾಲಗತ್ತಾಟ್' ಎಂಬ ಹೆಸರು ಬಂದಿತೆನ್ನಲಾದ ಬಗ್ಗೆ 'ಕರ್ನಾಟಕ ಜನಪದ ಕಲೆಗಳು'[೭] ತಿಳಿಸುತ್ತದೆ. ಓಲಗ, ಮೋರಿ, ಡೋಳು, ತಾಳ, ಪರೆ, ಕೊಂಬು ಇತ್ಯಾದಿಗಳು ಈ 'ಆಟ್'ಗೆ ಹಿನ್ನೆಲೆಯಾಗಿ ಬಳಕೆಯಾಗುತ್ತದೆ. ಇದು ಪುರುಷ ಪ್ರಧಾನ ಕಲೆ ಎಂದರೂ ಇತ್ತೀಚೆಗೆ ಕೆಲವೆಡೆ ಮಹಿಳೆಯರು ಈ 'ಆಟ್'ನಲ್ಲಿ ಪಾಲ್ಗೊಂಡಿರುವುದಿದೆ.

ಕೊಡಿ ಆಟ್ : ವಾಟೆ ಬಿದಿರಿನ ಕಡ್ಡಿಗಳನ್ನು ತ್ರಿಕೋನಾಕಾರದಲ್ಲಿಟ್ಟು ಕೆಂಪು ಬಟ್ಟೆಯನ್ನು ಹೊದಿಸಿ ಬಿದಿರಿನ ಕೋಲಿನ ತುದಿಗೆ ಬಾವುಟದಂತೆ ಕಟ್ಟುವುದೇ ಕೊಡಿಕಟ್ಟುವಿಕೆ. ಕೊಡವ ನಿಘಂಟಿನಲ್ಲಿ 'ಕೊಡಿ' ಎಂದರೆ 'ಮೇಲೆ', 'ತುದಿ' ಎಂಬರ್ಥಗಳಿವೆ. ಅಂತಾಗಿ 'ಕೊಡಿ'ಗೆ ಹೊಂದಿಸುವ ಕೆಂಪು ಬಟ್ಟೆ ಕೆಂಪು ಬಾವುಟ ಹೋಲಿಕೆಯಾಗುತ್ತದೆ. ಕೊಡಗಿನ ದೇಗುಲಗಳಲ್ಲಿ ಮುಂದೆ ವಾರ್ಷಿಕ ಹಬ್ಬ ಹಾಗೂ ಉತ್ಸವಾಚರಣೆಗಳಲ್ಲಿ 'ಕೊಡಿಮರ' ನಿಲ್ಲಿಸುವುದು ಎಂದರೆ 'ಧ್ವಜಸ್ತಂಭ'ದಂತೆ ನಿಲ್ಲಿಸುವುದು ಆಗಿದೆ. ಅಂದರೆ ಉತ್ಸವಾಚರಣೆಗಳಿಗೆ 'ನಾಂದಿ' ಆಚರಣೆ ಅದು. ಈ ಹಿನ್ನೆಲೆಯಲ್ಲಿ, ದೇವರ ಹಬ್ಬದ ಮುಕ್ತಾಯದ ದಿನದಲ್ಲಿ ಕೊಂಬಾಟ್, ಪೀಲಿಯಾಟ ಇತ್ಯಾದಿ ಕುಣಿಗಳಿಗೆ ಮೊದಲೇ 'ಕೊಡಿಆಟ್' ಕುಣಿತ ಆರಂಭದ ಕುಣಿತವಾಗಿ ನಡೆಯುತ್ತದೆ. ಭದ್ರಕಾಳಿಗೆ ಇದು ವಿಶೇಷ ಕುಣಿತ. ಮಕ್ಕಾಂದೂರು ಭದ್ರಕಾಳಿ (ಹಾಲೇರಿಗೆ ಮೂರು ಮೈಲಿ ದೂರದಲ್ಲಿನ ಗ್ರಾಮ) ಹಬ್ಬದಲ್ಲಿ ೮ ದಿನಗಳು ನಡೆಯುವಲ್ಲಿ ೨ನೇ ದಿನ 'ಕೊಡಿ ಆಟ್' ಇದೆ. ಆ 'ಕೊಡಿ' ಹಿಡಿದು ದೇಗುಲಕ್ಕೆ ಬಂದು ಅದರ ಸುತ್ತ ಊರಿನ ೧೦ ಗೌಡಕುಳಗಳು, ೫ ಕೊಡವ ಕುಳಗಳು, ೧ ಐರಿಕೆ, ೧ ಮಡಿವಾಳ, ೧ ಗೊಲ್ಲ ಕುಳ ಒಟ್ಟು ೧೬ ಕುಳಗಳು ಸೇರಿ ವಿವಿಧ ಭಂಗಿಗಳಲ್ಲಿ ಕೊಡಿ ತಿರುಗಿಸುತ್ತ ಆಡುವ ಕುಣಿತವೇ ಮಕ್ಕಂದೂರು ಭದ್ರಕಾಳಿ ದೇಗುಲದ ಮುಂದಿನ 'ಕೊಡಿ ಆಟ್' ಇದಕ್ಕೆ ಹಾಡು ಇಲ್ಲ. ಇಬ್ನಿವಳವಾಡಿ ಭದ್ರಕಾಳಿ ಹಬ್ಬದಲ್ಲಿ 'ತೆಂಗೆಪೋರು' ಹಾಗೂ 'ಕೊಡಿಆಟ್', ಕೊಂಬಾಟ್, ಚೌರಿಆಟ್, ಪೀಲಿಟ ಆಟಗಳು ನಡೆಯುತ್ತವೆ.

ಪೀಲಿಯಾಟ್ : ನವಿಲುಗರಿಯ ಗುಚ್ಛವನ್ನು ಬೀಸುತ್ತ ಕುಣಿಯುವ ಕೊಡಗಿನ ಕಲಾವಿದರ ಸುಂದರ ಕುಣಿತವಿದು. ಕೊಡವ ನಿಘಂಟಿನಲ್ಲಿ ಪೀಲಿನೆಡೆ ಎಂದರೆ ನವಿಲ್ಗರಿ ಎಂದರ್ಥವಿದೆ ಅರ್ಥಾತ್ 'ಪೀಲಿ' ಎಂದರೆ ಅದೇ ಅರ್ಥದಲ್ಲಿ ಬಳಕೆಗೊಂಡಿದೆ. ದೇವರ ಹಬ್ಬಗಳ ಸಂದರ್ಭಗಳಲ್ಲಿ ಶುದ್ಧಮುದ್ರಿಕೆಯಿಂದ, ಮೌನವ್ರತ ಸಂಯಮಾಚರಣೆಯಲ್ಲಿ ಹಬ್ಬದ ಅವಧಿ ಪೂರ್ತ ಇರುವ ಪುರುಷ ಕಲಾವಿದರು ಮಾತ್ರ ಮಾಡುವ ಈ ಕುಣಿತ ವರ್ತುಲಾಕಾರದಲ್ಲಿ ನಡೆಯುವ ಆಕರ್ಷಕ ಕುಣಿತವಾಗಿದೆ. ವೀರರಾಜೇಂದ್ರಪೇಟೆಗೆ ೪-೫ ಮೈಲಿ ದೂರದಲ್ಲಿರುವ ಕುಂದ-ಕುಕ್ಲೂರು ಭದ್ರಕಾಳಿ ಹಬ್ಬದಲ್ಲಿ ದೇವರ ಕಟ್ಟುಬಿದ್ದ ೨ನೇ ದಿವಸದಿಂದ ಮೂರು ದಿನ ರಾತ್ರಿ ವೇಳೆ ಪೀಲಿಯಾಟ್ ಆಡುತ್ತಾರೆ. ಇಬ್ನಿವಳವಾಡಿ ಭದ್ರಕಾಳಿ ಹಬ್ಬದಲ್ಲಿಯೂ ಪೀಲಿಯಾಟ ಉಂಟು. ಹೀಗಾಗಿ ದಕ್ಷಿಣ ಕೊಡಗು ಹಾಗೂ ಉತ್ತರ ಕೊಡಗಿನಲ್ಲಿ ಇದರ ಪ್ರಸಾರವಿದೆ.

ಬಿಲ್ಲಾಟ್ : ಕೈಗಳಲ್ಲಿ ಸಣ್ಣ ಚೌರಿ, ಕೊಂಬುಗಳನ್ನು ಹಿಡಿದು, ಮೇದರು ಬಡಿಯುವ ಪರೆಯ ನಾದಕ್ಕೆ, ಕೊಡವ ವೇಷದ ಕೊಡವ ಕಲಾವಿದರು ಕುಣಿಯುವ 'ಆಟ್' ಇದಾಗಿದೆ. ಈ ಕಲೆಗೆ ಜೊತೆಯಾಗಿ, ಕಂಚಿನಿಂದ ಮಾಡಿದ 'ಮಣಿ' ಎಂಬ ವಿಶೇಷ ವಾದ್ಯವನ್ನು ಬಳಸಲಾಗುತ್ತದೆ. ಭದ್ರಕಾಳಿಯ ಹಬ್ಬದಲ್ಲಿ ಈ ಕುಣಿತ ನಡೆಯುತ್ತದೆ. ಹಾಲೇರಿಯ ಭದ್ರಕಾಳಿ ಹಬ್ಬದಲ್ಲಿ ಈ ಕುಣಿತವು ನಡೆಯುತ್ತದೆ. ಆದರೆ ಸುಗ್ಗಿಕಟ್ಟೆ ಹಬ್ಬದಲ್ಲಿ ಸೋಮವಾರಪೇಟೆ ತಾ. ಯಡೂರಿನಲ್ಲಿ ಬಿಲ್ಲು ಹೊಡೆವ ಆಟವಾದ 'ಬಿಲ್ಲುಸುಗ್ಗಿ' ಬಗೆಯದಲ್ಲ.

ವೀರಭದ್ರ ಕುಣಿತ : ಕೊಡಗಿನ ಒಂದೆರಡು ಕಡೆ ಈ ಕಲೆ ಕಾಣಬರುವಲ್ಲಿ ಕುಣಿತಕ್ಕೂ 'ವೀರಗಾಸೆ'ಯಲ್ಲಿನ ಪೌರಾಣಿಕ ಪ್ರಸಂಗಕ್ಕೂ ಸಂಬಂಧ ಕಾಣದ, ಕೇವಲ ಮನರಂಜನೆಯ ಕಲೆ ಎಂಬ ಅಭಿಪ್ರಾಯವೇನೋ ಇದೆ. ಈ ಕುಣಿತದ ಕಲಾವಿದ ಎಂದಿನ ದೈನಂದಿನ ವೇಷದಲ್ಲಿದ್ದು ಬೆಸ್ಸಿಗೆ, ಎಣ್ಣೆಬಟ್ಟೆಯನ್ನು ಕಡ್ಡಿಯ ತುದಿಗೆ ಸುತ್ತಿಟ್ಟು ಮಾಡಿದ

ಕಿರಣಗಳಾಕಾರದ ರಚನೆಯನ್ನು ಹೊಂದಿರುತ್ತಾನೆ. ಕೈಯಲ್ಲಿ ಅಂಥದೇ ಎಣ್ಣೆಬಟ್ಟೆ ತುದಿಯ ಕೋಲು ಹಿಡಿದಿರುತ್ತಾನೆ ಕುಣಿತಕ್ಕೆ ಹಿನ್ನೆಲೆಯಾಗಿ ತಮಟೆ ಬಾರಿಸುವಲ್ಲಿ ರಾತ್ರಿ ವೇಳೆಯ ಈ ಕುಣಿತ ವೀರಾವೇಶದ ಕುಣಿತದಂತೆ ಭಾಗವಾಗುತ್ತದೆ. ಕೊಡಗಿನ ಸಂದರ್ಭದಲ್ಲಿ ಇದಕ್ಕೆಲ್ಲ ಪೋಷಕವಾಗುವ ಆಚರಣೆಗಳು (ಅಂದರೆ ಅಗ್ನಿಕೊಂಡ, ಮಂಗಳವಾರದ ಪ್ರಾಮುಖ್ಯ, ಭಗವತಿ ಹಬ್ಬದಲ್ಲಿ ಭದ್ರಕಾಳಿಗಿರುವ ಪ್ರಾಶಸ್ತ್ಯ 'ಮೈತಲಪ್ಪ'ನ ಅಸ್ತಿತ್ವ ಇತ್ಯಾದಿ) ಕರವಲೆ ಬಾಡಗ–ಹಬ್ಬೆಟ್ಟಗೇರಿ ಭಗವತಿ ಹಬ್ಬದಲ್ಲಿ ಕಾಣಬರುತ್ತದೆ. 'ಮೈತಲಪ್ಪ' ಎಂಬುದು 'ಮೈತಲೆಯಪ್ಪ' (ರುಂಢಮಾಲಾಧಾರಿ ವೀರಭದ್ರ) ಎಂಬುದರ ಅಪಭ್ರಂಶವಾಗಿದೆ. ವೀರಭದ್ರನ ಸತಿ ಭದ್ರಕಾಳಿ. ಈರ್ವ ದೇವತೆಗಳಿಗೂ ದೇವರ ಬನ (ದೇವರಕಾಡು) ಇದೆ ೫ ವರ್ಷಗಳಿಗೊಮ್ಮೆ ಕೆಂಡಕೊಂಡ (ಮೇಲೇರಿ, ತೆರೆ) ನಡೆಸುವಲ್ಲಿ ಗ್ರಾಮದ ಪ್ರತಿ ಮನೆಯವರು ತಮ್ಮ ಭೂಮಿಯ ಗಂಧದ ಮರದ ರೆಂಬೆಯನ್ನು ತಂದು ಮೇಲೇರಿ ಕೊಂಡ (ರಾಶಿ ಕೊಂಡ)ಕ್ಕೆ ಹಾಕಬೇಕು ಇದು ಬಯಲುಸೀಮೆಯಲ್ಲಿ ವೀರಭದ್ರನಿಗೆ ತರುವ ಎಳವಾರ (ಬಂಡಿಸೌದೆ)ದ ಪ್ರತೀಕವಾಗಿ ಕಾಣುತ್ತದೆ. ಜೊತೆಗೆ ಗಟ್ಟಸುರೆಗಳನ್ನ ಬಳಸಿ ಸುಮಾರು ೮ ಅಡಿ ಎತ್ತರವಾಗಿ ನಿಲ್ಲಿಸಬೇಕು. ಕೆಂಡವಾದ ಮೇಲೆ ರಾಶಿಕೊಂಡ ಮೂರು ಅಡಿ ಎತ್ತರ ಇರಬೇಕು. ಮಂಗಳವಾರವೇ (ವೀರಭದ್ರನ ವಾರ) ಈ ಮೇಲೇರಿಕೊಂಡ ನಡೆಯಬೇಕು. ವಿಷ್ಣುಮೂರ್ತಿ ತೆರೆ ಕಟ್ಟಿರುವ ತೆಂಗಿನಗರಿ, ಸೊಂಟಕ್ಕೆ ಬಾಳೆಪಟ್ಟೆ ಕಟ್ಟಿಕೊಂಡಿರುವ ತಲೆಗೆ ವಿಷ್ಣು ಚಕ್ರದಂತಿರುವ ತೆಂಗಿನ ಓಲೀ ರೂಪು ಹೊಂದಿರುವ ಮಲೆಯರು ೧೦೧ ಬಾರಿ ಮೇಲೇರಿ ರಾಶಿಕೊಂಡದ ಇದೆಲ್ಲ, ವೀರಭದ್ರ–ವಿಷ್ಣು ಸಂಬಂಧ ಹಾಗೂ ದಕ್ಷಯಜ್ಞ, ಧ್ವಂಗಡ ಸಂಕೇತವಾದ ಕೊಂಡದ ತುಳಿತ ಅಥವಾ ಆಕ್ರಮಣದ ಸಾಂಕೇತಿಕತೆಯನ್ನು ತೋರುವಂತಿದೆ. ಬಹುಶಃ ಕೊಡಗಿನಲ್ಲಿಯ ಕಿರಣಾಲಂಕಾರದೊಡನೆ ನಡೆಯುವ ವೀರಭದ್ರ ಕುಣಿತ (ಕೊಡಗಿನ ಯಾವ ಭಾಗದಿಂದಲೇ ಪ್ರೇರಣೆ ಗೊಂಡಿರಲಿ) ಮೇಲಿನ ಆಚರಣೆಗಳ ಸಾಂಕೇತಿಕ ಪರಿವರ್ತನೆ ಎನ್ನುವಂತಿದೆ.

ಯರವರ ಕುಣಿತ ಹಾಗೂ ಕೂಟ ಮಂದಡೆ

ಯರವರು ಕೃಷಿ ಕಾರ್ಮಿಕರಾಗಿ ಕೊಡಗಿನಲ್ಲಿ ಬದುಕು ಕಟ್ಟಿಕೊಂಡವರು. ಬೆಳಗಿನಿಂದ ದುಡಿದ ಈ ಜೀವಿಗಳಿಗೆ, ತಮ್ಮ ವಾಸದ ಗುಡಿಸಲ ಮುಂದೆ ಬೆಂಕಿ ಗುಡ್ಡೆ ಮಾಡಿ ಸುತ್ತ ಕುಣಿಯುವುದೇ ಅವರಿಗೊದಗುವ ರಂಜನೆ. ಊಟದ ನಂತರ, ರಾತ್ರಿ ಮಲಗಲು ಹೋಗವವರಿಗೂ ಒಟ್ಟು ಸೇರಿ ಕುಣಿಯುವ ರೂಢಿ ಅವರದು. ಆಬಾಲವೃದ್ಧರಾದಿಯಾಗಿ ಈ ಕೊಡು ಕುಣಿತದಲ್ಲಿ ಭಾಗಿಗಳು. ಹೆಣ್ಣು ಗಂಡು ಭೇದವಿಲ್ಲಿಲ್ಲ. ದುಡಿ ಮತ್ತು ಚೀನಿವಾದ್ಯವನ್ನು ತಮ್ಮ ಕುಣಿತಕ್ಕೆ ಬಳಸುತ್ತಾರೆ. ಇದೊಂದು ಸಾಮೂಹಿಕ ಕುಣಿತ, ಸ್ವಮುದದ ಕುಣಿತ.

ಯರವರಂತೆ ವೇಷ ಧರಿಸಿ ಯರವರ ಭಾಷೆ ಬಳಸಿ ದಲಿತ ಕೆಂಬಟ್ಟಿಗಳು ತಮಾಷೆ ಮಾಡುವುದುಂಟು. ಯರವರ ನೆಲೆಗೆ ಹೋಗಿ ಕಲಿತ ಕುಣಿತ ಹಾಗೂ ಸಂಗತಿಗಳನ್ನು ಹೆಚ್ಚು ಜನರಿಗೆ ತಿಳಿಸುವ ಪ್ರಯತ್ನವಿದಾಗಿದೆ. ಯರವರೂ ಇದನ್ನು ತಪ್ಪಾಗಿ ಭಾವಿಸುವುದಿಲ್ಲ. ಇದು ಕೋತೂರು ಗ್ರಾಮದಲ್ಲಿ ಕಂಡುಬರುತ್ತದೆ. ಇದನ್ನು 'ಕೂಟಕಳಿ' ಎಂದೂ ಕರೆಯುತ್ತಾರೆ. ಅಮ್ಮಕೊಡವರಾದ ಮನ್ನಕ್ಕ ಮನೆತನದವರು ಈ 'ಕೂಟಕಳಿ'ಯ ಸಂದರ್ಭವನ್ನು ನಿರ್ವಹಣೆ ಮಾಡುತ್ತಿರುವುದಾಗಿದೆ.

ಕಾಳೆ ಓಡಿಸುವುದು ಮತ್ತು ಬೋಡು ಆಟಗಳು

ಇವಲ್ಲದೆ ಗಾಳಿಬೀಡು ಭದ್ರಕಾಳಿ ಹಬ್ಬದಲ್ಲಿ ಹರಕೆಗೆ ಬಂದ ಅಡುಗಳನ್ನು (ಮೊದಲಿಗೆ ಕಾಡುಕೋಣ) ದೇವರ ಮಿಸಲು ಗದ್ದೆಯಾದ ನೀರುಗದ್ದೆಯಲ್ಲಿ ಓಡಿಸುವ ಕ್ರೀಡೆ ಇದೆ. ಇದನ್ನು 'ಕಾಳೆ ಓಡಿಸುವುದು', ಎನ್ನುತ್ತಾರೆ. 'ಬೋಡು' ಆಟಗಳಲ್ಲಿ (ವೇಷ ಪಲ್ಲಟ–ವೇಷ ಪರ್ಯಟನ ಎನ್ನುತ್ತಾರೆ) ಹಣೆಗೆ ಕರಿಯ ಬೊಟ್ಟು, ಮೈಗೆ ಕಪ್ಪಗದಟ್ಟ, ಮಣಿಯಂತೆ ಕಾಣುವ ಅರಳಿದ ಜಾತಿಯ ಹೂವಿನ ಮಾಲೆಯಾದ 'ಬೊಡ್ಡು ಮಾಲೆ' ಧರಿಸಿರುತ್ತಾರೆ. ಮುಳ್ಳು ಇರುವ ಟಾಕಿ ಸೊಪ್ಪನ್ನು ಕೈಗೆ ಬಳೆಯಂತೆ ಸುತ್ತಿಕೊಂಡು ಆಟ ಆಡುತ್ತಾರೆ.

ಸುಗ್ಗಿಕಟ್ಟೆ ಹಬ್ಬದ ಸಮಯದಲ್ಲಿ 'ಮಲ್ಲುಸುಗ್ಗಿ' ಬಾನಿಗೆಸೆದ ಉರಿದ ತರಗಿನ ಉಳಿದ ಭಾಗ ಬೆಂಕಿ ಉಂಡೆಗಳ ಚೆಲ್ಲಾಟದಂತೆ ರೋಚಕ ದೃಶ್ಯವಾಗಿದೆ. ಒಣಗಿದ್ದ ಬಾಳೆ ತೆರಗಿನ ಹೊರೆಯನ್ನು ಪೊರಕೆಯಂತೆ ಕಟ್ಟಿ ಶೃಂಗರಿಸಿ, ಸುಗ್ಗಿಕಟ್ಟೆ ಸುತ್ತ ಮೂರು ಸುತ್ತು ಕುಣಿದು ಬಂದು ಹತ್ತಿಸುತ್ತಾರೆ. ತರಗು ಉರಿದು ಮಿಕ್ಕ ಹಿಡಿಯನ್ನು ಸುಗ್ಗಿ ಸ್ತಂಭಗಳ ಮೇಲೆ ಹಾರಿ ಹೋಗುವಂತೆ ಎಡೆಯುವುದು ರಾತ್ರಿ ವೇಳೆಯ ಸುಗ್ಗಿ ಆಟದ ಬೆಳಕಿನ ಸ್ಪರ್ಧೆಯಂತೆ ಕಾಣುತ್ತದೆ, 'ಬಿಲ್ಲುಸುಗ್ಗಿ' ಕೊಂಡದ ಸುತ್ತ ನೆಲಕ್ಕೆ ಮತ್ತು ಮೇಲಕ್ಕೆ ಗರಗತ್ತಿ ಕಾಯಿಯನ್ನು ಚುಚ್ಚಿ ಮಾಡಿದ ಬಾಣವನ್ನು ಬಿಲ್ಲಿನಿಂದ ಹೊಡೆಯುವ ಆಟವಿದು. ಕೆಲವೆಡೆ ಡೊಂಕು ಡೊಂಕಾಗಿ ಕುಣಿದು ಬರುವ ನಾಯಕರ ತಂಡಗಳ ನಡುವೆ ಅಣಕು ಬಿಲ್ಲಾಳಗದ ಆಟವಾಗಿಯೂ ಕಾಣಬರುತ್ತದೆ. ಯಡೂರು, ಚೌಡ್ಲು ಸುಗ್ಗಿಕಟ್ಟೆ ಹಬ್ಬದ ಕೆಲವು ಆಚರಣೆಗಳು (ಅಜ್ಜಿಬನದಲ್ಲಿ ಪೂಜೆ, ವೃತ್ತಾಕಾರದಲ್ಲಿ ಜೋಡಿಸಿದ ಸಣ್ಣ ಕಲ್ಲುಗಳಿಗೆ ಪೂಜೆ, ಪ್ಯಾಕೇಜ್ ಚೇಂಬರ್ ರೂಪಗಳಿಗೆ ಪೂಜೆ ಹೆದ್ದೇವರ ಬನ ಪೂಜೆ

ಇತ್ಯಾದಿ) ಪ್ರಾಗೈತಿಹಾಸಿಕ ಆಚರಣೆಗಳ ಸಂಕೇತಗಳಾಗಿ ತೋರುತ್ತವೆ. ಹೀಗಾಗಿ ಸುಗ್ಗಿಕಟ್ಟೆ ಹಬ್ಬದ ಹಾಡು ಕುಣಿಯತ್ತ ಹೇಳುವ ಹೊನ್ನಾರು ಹಾಡು ಕುಣಿತಗಳು ಪ್ರಾಗೈತಿಹಾಸಿಕ ಪ್ರೇರಣೆಗಳಿಂದ ಮೂಡಿಬಂದಂತೆ ತೋರುತ್ತವೆ. 'ಹೆದ್ದೇವರ' (ಹುತ್ತಗಳ ನಾಗಬನದ ರೀತಿ) ಉಲ್ಲೇಖ ಕ್ರಿ.ಶ. ೧೯೫ರ ಯಡೂರು ಶಾಸನದ ಸಮಕಾಲೀನದ್ದಾದ ದೊಡ್ಡ ಮಳತೆಯ ಶಾಸನದಲ್ಲಿ ಕಾಣಬರುವಲ್ಲಿ ಸುಗ್ಗಿಕಟ್ಟೆ ಹಬ್ಬದ ಆಚರಣಾ ಸ್ವರೂಪಗಳ ಇತಿಹಾಸ ೧೧ನೇ ಶತಮಾನದಲ್ಲಿ ಪರೋಕ್ಷ ದಾಖಲೆಯಾಗಿ ಕಾಣಬರುವುದು ಗಮನಾರ್ಹ. ಹೊನ್ನಾರು ಹಾಡಿನಲ್ಲಿ ಹಾಲೇರಿ ಅರಸರ ಕಾಲದವರೆಗಿನ ವಿಷಯಗಳೂ ಕಾಣಬರುತ್ತವೆ.

ಉತ್ತರ ಕೊಡಗಿನ ತಲ್ತರೆ ಶೆಟ್ಟಹಳ್ಳಿ ಸುಗ್ಗಿಕಟ್ಟೆ ಹಬ್ಬದಲ್ಲಿ ರಾತ್ರಿ ಸುಗ್ಗಿ ನಂತರ ಬೆಳಗಿನ ಐದು ಗಂಟೆ ವೇಳೆಗೆ ಕಡವೆ ಕೊಂಬನ್ನು ತಲೆಗೆ ಕಟ್ಟಿಕೊಂಡು ಕೊಂಬಾಟವಾಡುತ್ತ ಕುಣಿದು ಸುಗ್ಗಿ ಕಟ್ಟೆ ಸುತ್ತ ಬರುತ್ತಾರೆ. ಹುಲುಕೋಡಯ್ಯ ಕಿತ್ತೂರಯ್ಯರ ಸಂಕ್ರಾಂತಿ ಜಾತ್ರೆಯ ಸಂದರ್ಭದಲ್ಲಿ, ಉತ್ಸವಮೂರ್ತಿಗಳನ್ನು ಅವರ ದಾಳುವಿನ ಜಾತ್ರೆಗೆ ತರುವಲ್ಲಿ ದುಡಿ, ಓಲಗ, ಒರೆಕತ್ತಿ ಹಿಡಿದು ಕತ್ತಿ ಕುಣಿತವಾಡಿ ಬರುತ್ತಾರೆ. ಕಿತ್ತೂರಿನ 'ಒರೆಕತ್ತಿ'ಯ ಕುಣಿತ ಬಹಳ ಪ್ರಸಿದ್ಧ ಜಾನಪದ ಕುಣಿತವಾಗಿದೆ. ಹಾಲೇರಿ ಅರಸರ ಕಾಲಕ್ಕೆ ಮಡಿಕೇರಿಯ ಹಾವೇರಿ ರಾಜರಲ್ಲಿಗೆ [illegible]ವಲ್ಲಿ ಕಿತ್ತೂರಿನ ಪ್ರಸಿದ್ಧ 'ಒರೆಕತ್ತಿ ಕುಣಿತ'ದೊಡನೆ ಸಾಗುತ್ತಿದ್ದರಂತೆ.

ಇಂದು ಹಾಕಿ ಕ್ರೀಡೆಯನ್ನು ವಿವಿಧ ಮನೆತನಗಳ ಕ್ರೀಡಾಳುಗಳ ನಡುವಣ ಆರೋಗ್ಯಕಾರ ಸ್ಪರ್ಧೆಗೆ ಎಡೆಮಾಡಿ ಕೊಟ್ಟಿದೆ. ರಾಷ್ಟ್ರೀಯ ಹಾಕಿ ಕ್ರೀಡಾ ಸ್ಪರ್ಧೆಯಲ್ಲಿಯೂ ಕೊಡಗಿನ ಪಾತ್ರ ಪಾರಂಪರಿಕ ವೈಶಿಷ್ಟ್ಯತೆಯನ್ನು ಹೊಂದಿದೆ. ಅಷ್ಟೇ ಅಲ್ಲ, ರಾಷ್ಟ್ರೀಯ ಓಟಗಾರ್ತಿಯರಲ್ಲಿ ಕೊಡಗಿನಿಂದ ಎದ್ದು ಬಂದವರೂ ಇದ್ದಾರೆ. ಇದು ಕರ್ನಾಟಕದ ಕೊಡಗಿಗೆ ಸಂದ ಹೆಮ್ಮೆಯ ವಿಷಯ.

ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನ ದೊಡ್ಡ ಗದ್ದೆಯ ಮಂಜಟಿಗದ್ದೆ, ದೇವರಗದ್ದೆಯಲ್ಲಿ ಓಡಲು ಕೊಡಗಿನಲ್ಲಿ ಮಂಜಟೀ ಕೋಣನನ್ನು ಸಾಕಿ ಸಲುಹುತ್ತಿದ್ದರು. ಅದನ್ನು ಉಳುಮೆಗೆ ಹೂಡುತ್ತಿರಲಿಲ್ಲ. ಕಂಬಟ್ಟಿಗಳ ಹಾಡಿನಲ್ಲಿ ಇದು ಹೀಗೆ ಬಿಂಬಿತವಾಗಿದೆ. (ಇದು ಬಯ್ಯಕಾಕುವ ಹಾಡಿನ ಅನುಭವವಾಗಿ ಬಂದಿದೆ.)

ಪುತ್ತೊರೊಳು ಉಂಟು ದೊಡ್ಡದುಗದ್ದೆ ದೇವರಗದ್ದೆ
ದೇವರಗದ್ದೆಯ ಓಡಲು ಈ ಕೋಣನ ಕಟ್ಟುವ ನಾವು
ಓ ಮಂಜಟೆ ಕೋಣವೆ ಈ ಮನೆಕೋಣ
ಮೊದಲಿಗೆ ಮನೆಯಮಲ್ಲೂರಿಗೆ ಕೋಣವು ನಡೆಯಲಿ ಬೇಕು
ಮನೆ ಮುಲ್ಲಾರಲಿ ನಮ್ಮೀ ಕೋಣವು ಗೆಲ್ಲಲಿ ಬೇಕು

ಕೆಂಬಟ್ಟಿಗಳು ತಮ್ಮ ಆತ್ಮೀಯ ಭಾಷೆಯಲ್ಲಿ ಮಂಜಟಿ ಕೋಣದ ಶಕ್ತಿ ಸಾಮರ್ಥ್ಯಗಳನ್ನು ಹೇಳುತ್ತಾರೆ. ತಮ್ಮ ಮನೆಯ ಈ ಕೋಣವು, ಕೇವಲ ಪ್ರಾಣಿಯಲ್ಲ. ಮನೆಯೊಳಗಿನ ಪ್ರಾಣಿ ಸದಸ್ಯ ಅಂತಾಗಿ ಈ ಕೋಣವೇ ಸ್ಪರ್ಧೆಯಲ್ಲಿ ಗೆಲ್ಲಬೇಕು ಎಂಬ ಆಶಯವಿಲ್ಲದೆ.

ಹೀಗೆ ಕೊಡಗಿನ ಕ್ರೀಡೆಯಾಗಲಿ, ಕುಣಿತವಾಗಲಿ, ದೇವರ ಆರಾಧನೆ, ನೈಸರ್ಗಿಕ ಬದುಕೂ ದೈನಂದಿನ ವ್ಯವಹಾರಗಳು, ಮಾನವಸಂಪರ್ಕ-ಸಂಬಂಧಗಳು ಹಾಗೂ ನಾಡಿನ ಬಾಳಿಕೆಯ ಬಗ್ಗೆ ಕಾಳಜಿಗಳನ್ನು ತೋರುವ ವಿಶಿಷ್ಟ ಆಯಾಮಗಳನ್ನು ಹೊಂದಿವೆ.

ಆಧಾರಸೂಚಿ

೧. Sreedhara Menon., 1979, *Social and cultural History of India, Kerala*, p. 50.
೨. ಎ.ಕ. ಸಂ. ೧. (ಹೊಸತು)., ೧೯೭೨, ಕೊಡಗು ಜಿಲ್ಲೆ, ಕೊಡಗು ೨೦, (ಪಾಲೂರು, ೧೪ನೇ ಶತಮಾನ).
೩. ಅದೇ, ಕೊಡಗು ೯೬, (ಬಳಿಯೂರು, ಕ್ರಿ.ಶ. ೮೮೮).
೪. ಅದೇ, ಕೊಡಗು ೯೭, (ಕೋತೂರು, ೯ನೇ ಶತಮಾನ).
೫. ಬೈತಡ್ಕ ಜಾನಕಿ ಬೆಳ್ಯಪ್ಪ, **ಅಕ್ಷಯ**, ಪುಟ ೪೦.
೬. ಎಂ.ಜಿ. ನಾಗರಾಜ್., ೧೯೮೭, 'ಕೊಡಗಿನಲ್ಲಿ ಕೋಳಿ ಕಲ್ಲುಗಳು', **ಹರತಿಸಿರಿ** (ಸಂ) ಲಕ್ಷ್ಮಣ್ ತೆಲಗಾವಿ, ಹರ್ತಿಕೋಟೆ, ಪುಟ ೭೩೦
೭. **ಕರ್ನಾಟಕ ಜನಪದ ಕಲೆಗಳು**, ೧೯೭೭, (ಸಂ) ಗೊ.ರು. ಚನ್ನಬಸಪ್ಪ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೬೩

ಚಿಕ್ಕಮಗಳೂರು ಜಿಲ್ಲೆಯ ಕೆಲವು ಪ್ರಮುಖ ಕುಲಗಳು

ಹೆಚ್.ಎಸ್. ಉಷಾರಾಣಿ*

ಹೊಯ್ಸಳ ವಂಶದ ರಾಜಕೀಯ ಸಾಂಸ್ಕೃತಿಕ ಚಟುವಟಿಕೆಗಳ ಪ್ರಮುಖ ತಾಣವಾಗಿದ್ದ ಚಿಕ್ಕಮಗಳೂರು ಜಿಲ್ಲೆ ಐತಿಹಾಸಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಸಮೃದ್ಧವಾಗಿದೆ. ಬೆಟ್ಟಗುಡ್ಡಗಳಿಂದ ಆವೃತವಾಗಿದ್ದು ಪ್ರಕೃತಿ ಸೌಂದರ್ಯಕ್ಕೆ ಹೆಸರು ವಾಸಿಯಾಗಿರುವ ಮಲೆನಾಡಿನ ಈ ಜಿಲ್ಲೆ ಸಾಹಸಿಗರನ್ನು ಆಕರ್ಷಿಸುತ್ತಿದೆ. ಇಲ್ಲಿ ನಿರಂತರ ಗಡಿ ಕಾಳಗಗಳು, ಘರ್ಷಣೆಗಳು ನಡೆಯುತ್ತಿದ್ದಾಗ್ಯೂ ಸಾಮಂತರು, ಖಾಸಗಿ ವ್ಯಕ್ತಿಗಳು, ಸ್ಥಳೀಯರು ಈ ನಾಡಿನ ಸರ್ವತೋಮುಖ ಬೆಳವಣಿಗೆಗೆ ಶ್ರಮಿಸಿದ್ದಾರೆ.

ಚಿಕ್ಕಮಗಳೂರು ಜಿಲ್ಲೆಯ ಶಾಸನಗಳನ್ನಾಧರಿಸಿ ಪ್ರಸ್ತುತ ಪ್ರಬಂಧ ಸಿದ್ಧಪಡಿಸಲಾಗಿದೆ. ಈ ಜಿಲ್ಲೆಯ ಶಾಸನಗಳನ್ನು ಅವಲೋಕಿಸಿದಾಗ, ಸಾಮಾನ್ಯವಾಗಿ ಕುಲವಧು, ಕುಲಾಭರಣ, ಕುಲಪದ್ಮ, ಕುಲತಿಲಕ, ಕುಲಪ್ರದೀಪ, ಕುಲಕಾಂತೆಯರು, ಕುಲ ಮಾರ್ತಾಂಡ ಎಂದು ತಮ್ಮ ಕುಟುಂಬದ ಖ್ಯಾತ ಸ್ತ್ರೀ ಪುರುಷರನ್ನು ಉಲ್ಲೇಖಿಸಲಾಗಿದೆ. ರಾಜವಂಶ ಹೊರತು ಪಡಿಸಿ ಕೆಲವೇ ಕುಲಗಳನ್ನು ತಮ್ಮ ನಿರ್ದಿಷ್ಟ ಮನೆತನಗಳ ಮೂಲಕ ತಮ್ಮನ್ನು ಗುರುತಿಸಿಕೊಂಡಿವೆ. ಅವುಗಳಲ್ಲಿ ತಮ್ಮ ಕುಲ, ವಾಜಿಕುಲ, ಪಂಚಮ ಮತ್ತು ನಂದಗೋಪ, ಸಲ್ಲಿವಾಳ, ಮಡಿಕುಲಗಳನ್ನು ಪ್ರಸ್ತುತ ಪ್ರಬಂಧದಲ್ಲಿ ಪರಿಶೀಲಿಸಲು ಯತ್ನಿಸಲಾಗಿದೆ.

ಪ್ರಸ್ತುತ ಈ ಜಿಲ್ಲೆ ಏಳು ತಾಲ್ಲೂಕುಗಳಿಂದ ಕೂಡಿದೆ. ಅವು ಯಾವುವೆಂದರೆ ಚಿಕ್ಕಮಗಳೂರು, ಕೊಪ್ಪ, ನರಸಿಂಹರಾಜಪುರ, ಕಡೂರು, ಬೀರೂರು, ಮೂಡಗೆರೆ ಮತ್ತು ತರೀಕೆರೆ. ಭೌಗೋಳಿಕವಾಗಿ ಅಧ್ಯಯನದ ಅಡಿಯಲ್ಲಿನ ಕುಲಗಳ ನೆಲೆಯನ್ನು ಪರಿಶೀಲಿಸಿದಾಗ ತರೀಕೆರೆ ಮತ್ತು ಕಡೂರು ತಾಲ್ಲೂಕುಗಳಲ್ಲಿ ವಾಜಿಕುಲ ಕಡೂರಿನಲ್ಲಿ ಪಂಚಮವಂಶ ಮತ್ತು ನಂದಗೋಪ ವಂಶಸ್ಥರು, ನರಸಿಂಹರಾಜಪುರ ತಾಲ್ಲೂಕಿನಲ್ಲಿ ಸಲ್ಲಿವಾಳರ ಕುಲ ಚಿಕ್ಕಮಗಳೂರು ತಾಲ್ಲೂಕಿನಲ್ಲಿ ಕಮ್ಮ ಕುಲದವರು ನೆಲೆಸಿದ್ದು ರಚನಾತ್ಮಕ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದರು.

ಕಮ್ಮ ಕುಲ : ಚಿಕ್ಕಮಗಳೂರು ತಾಲ್ಲೂಕಿನ ಮರಳೆ, ಮೊರಳೆ ಗ್ರಾಮದ ನಾಲ್ಕು ಶಾಸನಗಳು ಈ ಕುಲದವರು ೬೦ ವರ್ಷಗಳ ಕಾಲ ಇಲ್ಲಿ ವಾಸ್ತವ್ಯ ಹೂಡಿದ್ದನ್ನು ತಿಳಿಸುತ್ತದೆ. ಕ್ರಿ.ಶ. ೧೧೩೦ರಿಂದ ೧೧೯೧ ರವರೆಗೆ ಕೈಗೊಂಡ ಕಾರ್ಯಗಳು, ಅದರಲ್ಲೂ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರಗಳೆನಿಸಿದ್ದ ದೇವಾಲಯಗಳ ನಿರ್ಮಾಣ ಅವುಗಳ ನಿರ್ವಹಣೆಗಾಗಿ ಶ್ರಮಿಸುತ್ತಿದ್ದುದು ಶ್ಲಾಘನೀಯ. ಉದಾಹರಣೆಗೆ ಹೊಯ್ಸಳ ವಿಷ್ಣುವರ್ಧನನ ಮಂತ್ರಿ 'ಕಮ್ಮ ಕುಳ ತಿಳಕ'ನೆನಿಸಿದ್ದ ರಾಯಣ್ಣ ದಂಡನಾಥ, ದೇವಳಿಗೆ ನಾಡಿನ ಮೊರಲೆಯಲ್ಲಿ ಅಗ್ರಹಾರ ಸ್ಥಾಪಿಸಿ, ಶ್ರೀ ಕೇಶವ ದೇವರ ಪ್ರತಿಷ್ಠೆ ಮಾಡಿದ. ಈ ಹಿನ್ನೆಲೆಯಲ್ಲಿ ವಿಷ್ಣುವರ್ಧನ ದೇವನುಂ ದೇವರಂ ನಮಸ್ಕರಿಸಲು ಬಂದು ದೇವಾಲಯ ದೊಳು ಕುಳ್ಳಿರ್ದು ಸನ್ತೋಷದಿಂದ ದೇವರ್ಗೆ ಅಂಗಭೋಗಕ್ಕಂ ಗೀತಾವಾದ್ಯ ನೃತ್ಯಕ್ಕಂ. ಖಂಡಸ್ಫುಟಿಕ ಜೀರ್ಣೋದ್ಧಾರಕ್ಕಂ" ಗಂಜಿಗೆರೆ ಗ್ರಾಮ ದತ್ತಿ ಬಿಟ್ಟನೆಂದೂ, ಬ್ರಾಹ್ಮಣರಿಗೆ ಮೊರಳೆಯನ್ನು ಸರ್ವನಮಸ್ಯವಾಗಿ ದೇವರ ಸನ್ನಿಧಾನದಲ್ಲಿ ಧಾರಾಪೂರ್ವಕ ಮಾಡಿದನೆಂದು ಕ್ರಿ.ಶ. ೧೧೩೦ರ ಮರಲೆ ಶಾಸನದಲ್ಲಿ[1] ಉಲ್ಲೇಖಿಸಲಾಗಿದೆ. ಇದೇ ಶಾಸನದಲ್ಲಿ ಈ ದೇವಾಲಯದಲ್ಲಿ ಸೇವೆ ಸಲ್ಲಿಸುತ್ತಿದ್ದ ಪೂಜಾರಿ, ಶೃಂಗಾರಿ, ಪರಿಚಾರಕ, ಬಾಣಸಿಗ ವೃತ್ತಿಯವರನ್ನು ಉಲ್ಲೇಖಿಸಿ ಅವರ ಜೀವನೋಪಾಯಕ್ಕೆ ಬಿಟ್ಟ ಸೀಮಾಗತಿಯನ್ನು ತಿಳಿಸಲಾಗಿದೆ. ಕ್ರಿ.ಶ. ೧೧೪೭ರ ಮರಳೆ ಶಾಸನ[2] ದೇವಳಿಗೆ ನಾಡಿನ ಶ್ರೀ ವಿಷ್ಣುವರ್ಧನ ಕೇಶವ ಪುರವಾದ ಮೊರಲೆ ಅಗ್ರಹಾರದ ಕಲಿದೇವರಿಗೆ ಮುಗುಳಿ ಕೆರೆಯನ್ನು ದೇವರ ಪೂಜೆ ಪುರಸ್ಕಾರ ನೈವೇದ್ಯಕ್ಕೆ ಬಿಟ್ಟದ್ದನ್ನೂ ತಿಳಿಸುತ್ತದೆ. ಅಲ್ಲದೆ ರಾಯಣ್ಣ ದಂಡನಾಥ ಕಟ್ಟಿಸಿದ ಈ ದೇವಾಲಯಕ್ಕೆ ವಿಷ್ಣುವರ್ಧನ ನೀಡಿದ್ದ ಭೂಮಿಯನ್ನು ಅನ್ಯಾಯದಿಂದ ಕಸಿದುಕೊಳ್ಳಲಾಗಿ, ಅದನ್ನು ಕನಕವ್ವೆ ಎಂಬಾಕೆ ಮರಳಿ ಪಡೆದು ಮತ್ತೆ ಊರ್ಜಿತ ಗೊಳಿಸಬೇಕೆಂದು ಹೇಳಿದೆ. ಇದರಿಂದ ಮೊರಳೆಯಲ್ಲಿ ಮತ್ತೊಂದು ದೇವಾಲಯ ನಿರ್ಮಾಣಗೊಂಡು, ನಿರ್ವಹಣೆಯ ಜವಾಬ್ದಾರಿ ಹೆಚ್ಚಾದುದು ಕಂಡುಬರುತ್ತದೆ.

* # ೪೩೩, 'ಇ' ಬ್ಲಾಕ್, ಜೆ.ಪಿ. ನಗರ, ಮೈಸೂರು-೫೭೦೦೦೮.

ಒಂದೇ ಆವರಣದಲ್ಲಿರುವ ಈ ದೇವಾಲಯಗಳು ವಾಸ್ತುಶಿಲ್ಪದ ದೃಷ್ಟಿಯಿಂದಲೂ ಅಧ್ಯಯನ ಯೋಗ್ಯವಾಗಿವೆ. ಉಲ್ಲೇಖಿತ ಶಾಸನದಲ್ಲಿ ರಾಯಣ್ಣ ದಂಡನಾಥ ಜನಕ ಚವುಂಡಯ್ಯನೆಂದೂ ಜನನಿ ಚಂದ್ರಾಮತಿದೇವಿ ಎಂದೂ ಕಮ್ಮ ಕುಲದ ವಿವರವಿದೆ.

ಕ್ರಿ.ಶ. ೧೧೫೦ರ ಮರಳೆ ಶಾಸನ[೩]ದಲ್ಲಿ ಕಮ್ಮೆಕುಳ ಪದ್ಮ ನಭೋಮಣಿ ಲೋಕನಾಥಯ್ಯನ ಮಗ ಮಹದೇವಣ್ಣ ಸಿದ್ದೇಶ್ವರ ದೇವರ ನಂದಾದೀಪಕ್ಕೆ ನೈವೇದ್ಯಕ್ಕೆಂದು ನಗದು ದಾನ ಮಾಡಿದ್ದನ್ನು ಹೇಳಿದ. ಅಲ್ಲದೆ ದೇವರ ತೋಟಕ್ಕೆ ನಗದು ದಾನ ಮಾಡಿದನೆಂದು ಉಕ್ತವಾಗಿದೆ. ಅದೇ ಮಹದೇವಣ್ಣ ಮೊದಲೆಯ ಶ್ರೀರಾಯ ಕೇಶವ ದೇವ ನಂದಾದೀಪಕ್ಕೆ ನಗದು ದಾನ ಕೊಟ್ಟದ್ದನ್ನು ಕ್ರಿ.ಶ. ೧೯೧ರ ಅಲ್ಲಿಯ ಶಾಸನ[೪] ದಾಖಲಿಸಿದೆ. 'ಮಹಾಜನಂಗಳನುಗ್ರಹಿಂ ಮಾಡಿ ನಡಸುವರು' ಎಂದು ಮಹಾಜನರ ನಿರ್ವಹಣಾ ಜವಾಬ್ದಾರಿಯನ್ನು ಸ್ಪಷ್ಟಪಡಿಸಲಾಗಿದೆ.

ಹೀಗೆ ಕಮ್ಮಕುಲದ ರಾಯಣ್ಣ ದಂಡನಾಥ ನಿರ್ಮಿಸಿದ ದೇವಾಲಯ ಮಹಾಜನರ ಆಸ್ಥೆಯಿಂದ ದೀರ್ಘಕಾಲ ಸುಸ್ಥಿತಿಯಲ್ಲಿತ್ತೆಂದು ಅರಿಯಲು ಮತ್ತೊಂದು ಶಾಸನ ನೆರವಾಗುತ್ತದೆ. ಕ್ರಿ.ಶ. ೧೨೪೫ರ ಮರಲೆ ಶಾಸನ[೫]ವು ಮಹಾಮಂಡಳೇಶ್ವರ ಕುಡುಗಲೂರ ರಾಜರಸನ ಮಗ ಬಂಮರಸದೇವನು ಶ್ರೀರಾಯ ಕೇಶವಪುರವಾದ ಮೊರಲೆಯ ಸಿದ್ದಾಯ ಪೊದಕೆ ೫ ಗದ್ಯಾಣವನ್ನು ಶ್ರೀ ಕೇಶವದೇವ ಮತ್ತು ಶ್ರೀ ಸಿದ್ದೇಶ್ವರದೇವರ ನಂದಾದೀವಿಗೆ ಬಿಟ್ಟದ್ದನ್ನು ತಿಳಿಸುತ್ತದೆ.

ವಾಜಿಕುಲ : ಈ ಜಿಲ್ಲೆಯ ತರೀಕೆರೆ ಮತ್ತು ಕಡೂರು ತಾಲ್ಲೂಕಿನಲ್ಲಿ ನೆಲೆಸಿದ್ದ ವಾಜಿಕುಲ ಕ್ರಿ.ಶ. ೧೧೫೮ರಿಂದ ೧೨೨೩ರವರೆಗೆ ಸುಮಾರು ೬೫ ವರ್ಷಗಳ ಕಾಲ ಶಾಸನೋಕ್ತವಾಗಿ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ತಮ್ಮನ್ನು ಗುರುತಿಸಿಕೊಂಡಿದ್ದುದು ಗಮನಾರ್ಹ. ಇವರು ನಾಡಿನ ವಿವಿಧ ಜಿಲ್ಲೆಯಲ್ಲಿ ಒಂದನೇ ನರಸಿಂಹನ ಆಳ್ವಿಕೆಯಲ್ಲಿ ಹೆಗ್ಗಡೆ ಚಂದಿರಮ್ಮಯ್ಯ ಮಹಾಪ್ರಧಾನ ಹಾಗೂ ಸರ್ವಾಧಿಕಾರಿ ಸ್ಥಾನ ಗಳಿಸಿದ್ದ. ಆತನ ಪತ್ನಿ ಚೌಡವ್ವೆ ಸರಸ್ವತಿಪುರ ಸ್ಥಾಪಿಸಿ ೨೪ ಬ್ರಾಹ್ಮಣರಿಗೆ ದತ್ತಿ ಬಿಟ್ಟಳೆಂದು ಹೇಳಿದೆ.

ಚಂದಿರಮ್ಮಯ್ಯನ ಪತಿ ಚೌಡವ್ವೆ ಮಡಿಕುಲದ ಸುಗುಣಿಕವ್ವೆಯ ಮಗಳೆಂದು ಈಕೆಯ ತವರಿನ ಕುಲವನ್ನು ತಿಳಿಸಿದೆ.

ಮಡಿಕುಲದ ಸುಗುಣಿಕವ್ವೆ ಮುದ್ದೇಶ್ವರ ಲಿಂಗ ಪ್ರತಿಷ್ಠಾಪಿಸಿ ಮಾಡಿದಳೆಂದು ಅದೇ ಶಾಸನದಲ್ಲಿ ಉಕ್ತವಾಗಿದೆ.

ಆದರೆ ಆಕೆಯ ಕುಲದ ಬಗ್ಗೆ ಹೆಚ್ಚಿನ ವಿವರವಿಲ್ಲ. ಅದೇನೇ ಇದ್ದಾಗ್ಯೂ ವಾಜಿ ವಂಶಸ್ಥರು ಮಡಿಕುಲದೊಂದಿಗೆ ವೈವಾಹಿಕ ಸಂಬಂಧ ಬೆಳೆಸಿ, ಧಾರ್ಮಿಕ ಶ್ರದ್ಧೆ ಉಳಿಸಿಕೊಂಡದ್ದನ್ನು ಕಾಣಬಹುದು.

ಕಲಿಯುಗದಲ್ಲಿ ಅನ್ನದಾನವೇ ಶ್ರೇಷ್ಠ ಅನ್ನದಾನಕ್ಕಾಗಿ ಅನ್ನಛತ್ರ ಕಟ್ಟಿಸುವ ಪರಿಪಾಠವಿತ್ತು. ಈ ದಿಸೆಯಲ್ಲಿ ವಾಜಿಗಳು ಕಾರ್ಯಪ್ರವೃತ್ತರಾಗಿದ್ದರು. ಅದರಂತೆ ಕ್ರಿ.ಶ. ೧೧೭೭ರ ಬ್ರಹ್ಮಸಮುದ್ರ ಶಾಸನ[೬] ಪ್ರಕಾರ, ಹೊಯ್ಸಳ ನರಸಿಂಹನ ಸರ್ವಾಧಿಕಾರಿ, ಶ್ರೀಕರಣ ಹೆಗ್ಗಡೆ ಯಾಚಿರಾಜ, ಸ್ಥಾನದ ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ, ದೇವರ ಪೂಜೆಗೆ ರಂಗಭೋಗಕ್ಕೆ, ದೇವರ ಪರಿಚಾರಕರ ಜೀವನಕ್ಕೆ, ಬ್ರಾಹ್ಮಣ 'ಪರಿವ್ರಾಜಕ ದೇಶಾಂತರಾ ಕ್ಷೇತ್ರಾಹಾರದಾನ'ಕ್ಕೆ ವ್ಯವಸ್ಥೆ ಮಾಡಿದ್ದ. ಇದರಿಂದ ಯಾತ್ರಾರ್ಥಿಗಳು, ದೇಶಾಂತರಿಗಳಿಗೆ ದೇವಾಲಯಗಳಲ್ಲಿ ಊಟದ ವ್ಯವಸ್ಥೆ ಕಲ್ಪಿಸಲಾಗಿತ್ತೆಂದು ಗೊತ್ತಾಗುತ್ತದೆ.

ವಾಜಿವಂಶಸ್ಥರು ಶಾಸನ ಕವಿಗಳಾಗಿಯೂ ಗುರುತಿಸಲ್ಪಟ್ಟಿದ್ದರು. ಕಡೂರಿನ ಕ್ರಿ.ಶ. ೧೨೨೩ರ ಕೆರೆಸಂತೆ ಶಾಸನ[೭] ಪ್ರಕಾರ ಕಾಶ್ಯಪ ಗೋತ್ರದ ಹರಿಹರ ಮಾಯಿದೇವರ ಪುತ್ರ ನಾಗದೇವ ಶಾಸನ ಕವಿಯಾಗಿದ್ದು ೭೪ ಸಾಲುಗಳ ಶಾಸನ ರಚಿಸಿದ್ದ.

ವಾಜಿಗಳು ಈ ಜಿಲ್ಲೆ ಮಾತ್ರವಲ್ಲದೆ ಉಳಿದೆಡೆಗಳಲ್ಲೂ ತಮ್ಮ ಚಟುವಟಿಕೆ ವಿಸ್ತರಿಸಿ ಆಡಳಿತ ಧರ್ಮ ಹಾಗೂ ಸಾಂಸ್ಕೃತಿಕ ಕ್ಷೇತ್ರಕ್ಕೆ ವಿಶಿಷ್ಟ ಕೊಡುಗೆ ನೀಡಿದ್ದಾರೆ.

ಪಂಚಮ ಮತ್ತು ನಂದಗೋಪ ವಂಶ : ಕಡೂರು ತಾಲ್ಲೂಕಿನ ಹೇರಳಗಟ್ಟ ಕ್ರಿ.ಶ. ೧೨೭೭ರ ಶಾಸನಗಳಲ್ಲಿ ಹೊಯ್ಸಳ ಮೂರನೇ ನರಸಿಂಹನ ಸಾಮಂತನಾಗಿದ್ದ ನಂದಗೋಪ ವಂಶದ ಬೊಮ್ಮರಸ ನೊಣಬಿ ನಾಯಕನನ್ನು ಹೆಸರಿಸಲಾಗಿದೆ. ಈತ ಚಳುಕಿ ವೃತ್ತಿಯನ್ನಾಳುತ್ತಿದ್ದ. ಈತನ ತಂದೆ ಚಿಕ್ಕನೊಣಬೆ ನಾಯಕ ಮತ್ತು ತಾಯಿ ಬೊಂಮಲೆನಾಯಕತ್ತಿ. ಈ ವಂಶಸ್ಥರು ಭಗವತಿ ಭಯಿರವರ ಪ್ರಸಾದರೆಂದು ಚಳುಕೇಶ್ವರ ದೇವರ ದಿವ್ಯಶ್ರೀ ಪಾದಪದ್ಮಾರಾಧಕರೆಂದೂ ಹೇಳಿಕೊಂಡಿದ್ದಾರೆ.

ಬೊಮ್ಮರಸನ ಆಳ್ವಿಕೆಯಲ್ಲಿ ಸಾರ್ವಜನಿಕ ಕಾರ್ಯ ಕೈಗೊಳ್ಳುವಲ್ಲಿ ಪಂಚಮ ವಂಶದ ನೊಣಬಿ ಸೆಟ್ಟಿ ಅಗ್ರಗಣ್ಯ. ಇವನು ಬೊಮ್ಮರಸ ಮನೆಯ ಬಾಹತ್ತರ ನಿಯೋಗಾಧಿಪತಿಯಾಗಿದ್ದ.

ಪಂಚಮ ವಂಶದ ನೊಣಬಿಸೆಟ್ಟಿಯನ್ನು 'ಅನ್ನದಾನದ ವ್ರದಕ ಸುವರ್ಣದಾನ ವಿನೋದಿ'ಯೆಂದೂ ಕಂಚುಕಲ್ಲ

ಗರವ ಮಾಚಿಸೆಟ್ಟಿಯರ ಕುಲಕೆ ತಿಲಕನೆಂದೂ ವರ್ಣಿಸಲಾಗಿದೆ.

ನೊಣಬಿಸೆಟ್ಟಿಯ ವಂಶಾವಳಿ ಹೀಗಿದೆ : ಮಸಣಿಸೆಟ್ಟಿ ಬಾಗವಿಸೆಟ್ಟಿಗೆ ಜನಿಸಿದವ ನೊಣಂಬಿಸೆಟ್ಟಿ. ಆತನ ಕುಲವಧು ಸಂಬಗೌವುಡಿ, ಕಲಗವುಡಿ, ಕೇತಗವುಡಿ ಮತ್ತು ಭೂಮಗವುಡಿ ಅವರಿಗೆ ಕಲ್ಲಪ್ಪ, ಹರಿಯಣ್ಣ ವಿಜಯಣ್ಣ ಮಸಣಪ್ಪ ಮತ್ತು ಬಲಚಣ್ಣ ಎಂಬ ಐದು ಮಕ್ಕಳಿದ್ದರು. ಇವರು ನೊಣಬೆ ನಾಯಕನ ರಾಜ್ಯಕ್ಕೆ ಶಿರೋಮಣಿಗಳಂತಿದ್ದರು.

ನೊಣಬಿಸೆಟ್ಟಿ ತನ್ನ ತಂದೆ ಮಾಚಿಸೆಟ್ಟಿಯ ಹೆಸರಲ್ಲಿ ಶಿವಲಿಂಗ ಪ್ರತಿಷ್ಠೆ ಮಾಡಿದ್ದಲ್ಲದೆ ಚಳುಕಿಯ ವೃತ್ತಿಯೊಳಗಣ ಹೇರಳಗಟ್ಟದಲ್ಲಿ ಮಾಚೇಶ್ವರ ದೇವಾಲಯದ ಪ್ರತಿಷ್ಠೆ ಮಾಡಿದ್ದರಿಂದ ರಾಯನೊಣಬೆನಾಯಕ ಆತನ ತಮ್ಮಂದಿರು ಹಾಗೂ ಸಮಸ್ತ ಪ್ರಜೆಗವುಡುಗಳು ನೊಣಂಬಿಸೆಟ್ಟಿ ಹಾಗೂ ಆತನ ಮಕ್ಕಳಿಗೆ ನಮಸ್ಕರಿಸಿ ಆ ಮಾಚೇಶ್ವರ ದೇವರ ಅಂಗಭೋಗರಂಗಭೋಗ ನೈವೇದ್ಯ ಚೈತ್ರ ಪವಿತ್ರಕ್ಕೆ ವತ್ತಿ ಬಿಟ್ಟರು.

ಹೀಗೆ ಹಿರಿಯರ ಬಗ್ಗೆ ಗೌರವದಿಂದಿದ್ದು ಅವರ ಹೆಸರಿನಲ್ಲಿ ದೇವತಾ ಪ್ರತಿಷ್ಠೆ ದೇವಾಲಯ ನಿರ್ಮಾಣ ಹಾಗೂ ನಿರ್ವಹಣಾ ಪ್ರವೃತ್ತಿಯನ್ನು ಜನ ಆದರಿಸುತ್ತಿದ್ದರು.

ನೊಣಬಿಸೆಟ್ಟಿ ತನ್ನ ಆಶ್ರಯದಾತನ ಪತ್ನಿ ಬೊಮ್ಮಲೆ ನಾಯಕತ್ತಿಗೆ ಪುಣ್ಯವಾಗಬೇಕೆಂದು ಬ್ರಹ್ಮಲಾಪುರ ಅಗ್ರಹಾರ ನಿರ್ಮಿಸಿದ್ದಲ್ಲದೆ, ತಟಾಕ, ದೇವತಾ ಪ್ರತಿಷ್ಠೆ, ಅನ್ನದಾನ, ಉದಕದಾನ, ರನ್ನ, ಹೊನ್ನ, ವಸ್ತಭೂಮಿ ಮೊದಲಾದವುಗಳ ಸಮಸ್ತ ದಾನಿಯಾಗಿದ್ದು ಈ ಜಿಲ್ಲೆಯ ಸಾಮಾಜಿಕ ಸಾಂಸ್ಕೃತಿಕ ಕ್ಷೇತ್ರಕ್ಕೆ ತನ್ನದೇ ಆದ ಮಹತ್ವದ ಕೊಡುಗೆ ನೀಡಿ, ಕಡೂರು ವಲಯದಲ್ಲಿ ತನ್ನ ಸ್ಥಾನ ಭದ್ರಪಡಿಸಿಕೊಂಡಿದ್ದಾನೆ. ಈತನಿಗೆ ರಾಮನಾಯಕ ಬೊಂಮಣ್ಣ, ಬೈರೆಯನಾಯಕ ಮತ್ತು ಕೇಶವದೇವ ಎಂಬ ಸಹೋದರರಿದ್ದರು.

ಸಲ್ಲಿವಾಳರ ಕುಲ : ಕ್ರಿ.ಶ. ೧೧೫೭ರ ವೀರಶಾಸ್ತ್ರದೇವನ ಶಿಂಸೆ ಶಾಸನ ಆತನ ಪಟ್ಟದ ಮಹಾದೇವಿ ಹಾಗೂ ಪಿರಿಯರಸಿ ಬಾಚಲದೇವಿ ಸಲ್ಲಿವಾಳ ಕುಲದವಳಾಗಿದ್ದು ಈಕೆ ಶಿಂಸೆಯ ಮಹಾಜನರಿಗೆ ದಾನ ಕೊಟ್ಟದ್ದನ್ನು ತಿಳಿಸುತ್ತದೆ. ಆದರೆ ಸ್ಪಷ್ಟವಾಗಿಲ್ಲ. ಬಾಚಲದೇವಿಯ ತವರಿನ ಪ್ರಸ್ತಾಪ ಅಷ್ಟಾಗಿ ದಾಖಲಿಸಿಲ್ಲ. ಸಲ್ಲಿವಾಳ ಆಳರ ಅಥವಾ ಆಳ್ವರ ಇನ್ನೊಂದು ಶಾಖೆ ಎಂದು ಹೇಳುವುದು ಕಷ್ಟ ಎಂಬುದು ಬಿ.ಎಲ್. ರೈಸ್[೧೧] ಅವರ ಅಭಿಪ್ರಾಯ.

ಹೀಗೆ ಕೆಲವೇ ಪ್ರತಿಷ್ಠಿತ ಕುಲಗಳ ಪ್ರಸ್ತಾಪವಿದ್ದು ತಕ್ಕಮಟ್ಟಿಗೆ ಶಾಸನಗಳು ಅವುಗಳ ಕಾರ್ಯಕ್ಷೇತ್ರದ ಮೇಲೆ ಬೆಳಕು ಚೆಲ್ಲುತ್ತವೆ. ತಮ್ಮ ಸಮಕಾಲೀನ ಇತರ ಸಾಮಾನ್ಯ ಕುಲಗಳೊಂದಿಗೆ ಸಮಾಜದ ವಿವಿಧ ಹಂತಗಳ ಸಾಂಸ್ಕೃತಿಕ ಬೆಳವಣಿಗೆಯಲ್ಲಿ ಸ್ಪರ್ಧಿಸುತ್ತಿದ್ದುವೆಂದರೆ ತಪ್ಪಾಗಲಾರದು.

ಒಟ್ಟಿನಲ್ಲಿ ಈ ಜಿಲ್ಲೆಯ ಶಾಸನಗಳ ಸಮೀಕ್ಷೆಯಿಂದ ತಿಳಿದುಬರುವುದೇನೆಂದರೆ ಉಲ್ಲೇಖಿತ ಕುಲಗಳಲ್ಲದೆ, ಸೇನದಾರರು, ಕಳಸ–ಕಾರ್ಕಳದ ಪ್ರಭುಗಳನ್ನು ಹೊರತುಪಡಿಸಿ, ಸಾಂಪ್ರದಾಯಿಕ ವಾಂಶಿಕ ಪ್ರಶಸ್ತಿಯಲ್ಲಿ ಹೆಸರಿಸಿರುವ ಕುಲಗಳಾದ ಯದು, ಯಾದವ, ಹೈಹೇಯ, ಜಾಹ್ನವಿಯ, ದಾಯಣೀಯ, ರಘು, ರಾವೇಯ, ಉಗ್ರ, ನಹುಶ, ಪರುಶ, ತರ್ಮಲ್ಲ. ಪಲ್ಲವ, ಪಾಂಡ್ಯ ಇತ್ಯಾದಿ ವಂಶಸ್ಥರ ಪ್ರತಿನಿಧಿಗಳು ಈ ನಾಡಿನಲ್ಲಿದ್ದು ಜಿಲ್ಲೆಯ ವಿವಿಧ ಕ್ಷೇತ್ರಗಳಲ್ಲಿ ಕೃಷಿ ಮಾಡಿದ್ದರೆಂದು ಮನದಟ್ಟಾಗುತ್ತದೆ.

ಆಧಾರಸೂಚಿ

೧. **ಎಫಿಗ್ರಾಫಿಯಾ ಕರ್ನಾಟಿಕ** (ಪರಿಷ್ಕೃತ ಆವೃತ್ತಿ) ಸಂಪುಟ ೧೧, ಚಿಕ್ಕಮಗಳೂರು, ೧೦೪.
೨. ಅದೇ, ಚಿಕ್ಕಮಗಳೂರು, ೧೧೧.
೩. ಅದೇ, ಚಿಕ್ಕಮಗಳೂರು, ೧೧೨
೪. ಅದೇ, ಚಿಕ್ಕಮಗಳೂರು, ೧೦೯.
೫. ಅದೇ, ಚಿಕ್ಕಮಗಳೂರು, ೧೧೦.
೬. ಅದೇ, ಸಂಪುಟ ೧೨, ತರೀಕೆರೆ ೮೮.
೭. ಅದೇ, ಕಡೂರು ೧೬೯.
೮. ಅದೇ, ಕಡೂರು ೬೪.
೯. ಅದೇ, ಕಡೂರು ೨೪೭–೨೪೮.
೧೦. ಅದೇ, ನರಸಿಂಹರಾಜಪುರ, ೩೭.
೧೧. ಅದೇ, ಪುಟ xlix.

೬೭

ಚಿತ್ರದುರ್ಗ ಜಿಲ್ಲೆಯಲ್ಲಿ ಶ್ರೀ ವೈಷ್ಣವ ಆಳ್ವಾರರು

ಬಿ. ಸುರೇಶ*

ಪ್ರಾಚೀನ ಭಾರತದ ಇತಿಹಾಸವನ್ನು ಅವಲೋಕಿಸಿದರೆ, ಅನೇಕ ಧಾರ್ಮಿಕ ಮಹಾಪುರುಷರು, ಸಾಧು-ಸಂತರು, ಯೋಗಿಗಳು ಅವತರಿಸಿರುವುದು ಕಂಡುಬರುತ್ತದೆ. ಇವರು ತತ್ತ್ವೋಪದೇಶಗಳಿಂದ ಪ್ರಭಾವಿತಗೊಂಡ ಪ್ರಾಚೀನ ಭಾರತೀಯ ಸಮಾಜವು ಧಾರ್ಮಿಕ ಐಕ್ಯತೆಯ ನೆಲೆವೀಡಾಗಿದ್ದಿತು. ಈ ಹಿನ್ನೆಲೆಯಲ್ಲಿ ಕ್ರಿ.ಶ. ನಾಲ್ಕನೇ ಶತಮಾನದಿಂದ ಕ್ರಿ.ಶ. ೧೦-೧೧ನೇ ಶತಮಾನದ ಅವಧಿಯಲ್ಲಿ ಜೀವಿಸಿದ್ದ ಶ್ರೀ ವೈಷ್ಣವ ಆಳ್ವಾರರುಗಳನ್ನು ಹಾಗೂ ಚಿತ್ರದುರ್ಗ ಜಿಲ್ಲಾ ಪರಿಸರದಲ್ಲಿ ಕಂಡುಬರುವ ಅವರ ಶಿಲ್ಪಗಳನ್ನು ಕುರಿತು ಪ್ರಸ್ತುತ ಲೇಖನದಲ್ಲಿ ಚರ್ಚಿಸಲು ಪ್ರಯತ್ನಿಸಲಾಗಿದೆ.

ಸಾಂಪ್ರದಾಯಿಕವಾಗಿ ಹೇಳುವುದಾದರೆ ವೈಷ್ಣವ ಆಳ್ವಾರರು ಹನ್ನೆರಡು ಮಂದಿ. ವೇದ-ವೇದಾಂತಗಳಿಂದ ಪ್ರಭಾವಿತರಾದ ಇವರು ದಕ್ಷಿಣ ಭಾರತದಲ್ಲಿ ಮುಖ್ಯವಾಗಿ ಪಾಂಡ್ಯ, ಚೋಳ, ಪಲ್ಲವ ಸಾಮ್ರಾಜ್ಯಗಳಲ್ಲಿ ಸಂಚರಿಸಿ, ವೈಷ್ಣವ ಧರ್ಮವನ್ನು ಪ್ರಚುರಪಡಿಸಿದ ಭಗವದ್ಭಕ್ತರು. ಇವರ ಜೀವಿತದ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಅವರಲ್ಲಿ ಕೆಲವರು, ಇವರ ಕಾಲಾವಧಿಯು ಕ್ರಿ.ಶ. ನಾಲ್ಕನೇ ಶತಮಾನದಿಂದ ೮ನೇ ಶತಮಾನದವರೆಗೆ ಎಂದೂ ಮತ್ತೆ ಕೆಲವರು ಕ್ರಿ.ಶ. ೭ನೇ ಶತಮಾನದಿಂದ ೧೦-೧೧ನೇ ಶತಮಾನದ ಆದಿಭಾಗದವರೆಗೆ ಎಂದೂ ಅಭಿಪ್ರಾಯ ಪಡುತ್ತಾರೆ. ಈ ರೀತಿ ಭಿನ್ನಾಭಿಪ್ರಾಯಗಳಿಂದ ವ್ಯಕ್ತಪಡುವ ಹನ್ನೆರಡು ಮಂಡಿ ಆಳ್ವಾರರು ಏಕಕಾಲದಲ್ಲಿ ಜೀವಿಸಿರಲಿಲ್ಲ. ಹಾಗಾಗಿ ಇವರನ್ನು ಮೂರು ಪಂಗಡಗಳಾಗಿ ವಿಂಗಡಿಸಲಾಗಿದೆ. ಮೊದಲನೆಯ ಪಂಗಡದಲ್ಲಿ ಪೊಯ್‌ಗೈ ಪೂದಾತ್ತಾಳ್ವಾರ್, ಪೇಯಾಳ್ವಾರ್ ಮತ್ತು ತಿರುಮಳಿಸೈ ಆಳ್ವಾರ್‌ರವರನ್ನು ಎರಡನೇ ಪಂಗಡದಲ್ಲಿ ನಮ್ಮೊಳ್ವಾರ್, ಮಧುರಕವಿ ಆಳ್ವಾರ್, ಕುಲಶೇಖರ ಆಳ್ವಾರ್, ಪೆರಿಯಾಳ್ವಾರ್ ಮತ್ತು ಆಂಡಾಳ್‌ರವರು ಹಾಗೂ ಮೂರನೇ ಪಂಗಡದಲ್ಲಿ ತೊಂಡರಪೋಡಿ ಆಳ್ವಾರ್, ತಿರುಪ್ಪಾಣಾಳ್ವಾರ್ ಮತ್ತು ತಿರುಮಂಗೈ ಆಳ್ವಾರ್‌ರವರನ್ನು ನೋಡುತ್ತೇವೆ. ಇವರಲ್ಲಿ ನಿಮ್ನ ವರ್ಗದವರಾದ ತಿರುಪ್ಪಾಣಾಳ್ವಾರರು, ಕಳ್ಳರಜಾತಿಗೆ ಸೇರಿದ ತಿರುಮಂಗೈ ಆಳ್ವಾರರು, ಹೀನಕುಲದ ಶ್ರೀ ಆಂಡಾಳ್‌ರಿರುವುದನ್ನು ಗಮನಿಸಿದರೆ ಇವರುಗಳು ಯಾವುದೇ ಒಂದು ಜಾತಿ ಅಥವಾ ವರ್ಗಕ್ಕೆ ಸೇರಿರದೆ, ಭಿನ್ನಜಾತಿ ಹಾಗೂ ವರ್ಗದಿಂದ ಬಂದವರೆಂದು ಹೇಳಬಹುದು.

ಕ್ರಿ.ಶ. ೧೧ನೇ ಶತಮಾನದ ಆದಿ ಭಾಗದಲ್ಲಿ (ಕ್ರಿ. ಶ. ೧೦೧೭ ಜನನ, ೧೨೦ ವರ್ಷ ಜೀವಿತ) ಜೀವಿಸಿದ್ದ ರಾಮಾನುಜರು ಆಚಾರ್ಯ ಸಂಪ್ರದಾಯದಲ್ಲೇ ಪ್ರಮುಖರು. ಅವರು ಜಾತಿ ಮತ್ತು ಅಂತಸ್ತುಗಳ ಎಲ್ಲೆಯನ್ನು ಮೀರಿ ಬ್ರಾಹ್ಮಣೇತರರಾದವರನ್ನು (ಪಿಳ್ಳೈಉರುಂಗಾವಿಲ್ಲದಾಸ) ತಮ್ಮ ಶಿಷ್ಯರನ್ನಾಗಿ ಹೊಂದಿದಂತವರು. ಅವರಿಗೆ ನಾಮಧಾರಣೆ ಮಾಡುವುದಕ್ಕೂ ತಮ್ಮ ಆಚಾರ-ವ್ಯವಹಾರಗಳನ್ನು ಅನುಕರಣೆ ಮಾಡುವುದಕ್ಕೂ ಅವಕಾಶವನ್ನು ಕಲ್ಪಿಸಿ ವೈಷ್ಣವ ಪ್ರಪಂಚದಲ್ಲಿ ಅವರಿಗೆ ಒಂದು ಯೋಗ್ಯ ಸ್ಥಾನಾವಕಾಶ ಕಲ್ಪಿಸಿದವರು. ಇಂತಹ ಸಂದರ್ಭದಲ್ಲಿ ಚೋಳ ಚಕ್ರವರ್ತಿಯಾದ ೧ನೇ ಕುಲೋತ್ತುಂಗ ಚೋಳನು ವೈಷ್ಣವ ಮತಕ್ಕೆ ಕಿರುಕುಳ ಕೊಡಲು ಆರಂಭಿಸಿದಾಗ, ಮೈಸೂರು ಪ್ರಾಂತ್ಯಕ್ಕೆ ಬಂದು ಮೇಲುಕೋಟೆಯಲ್ಲಿ ನೆಲೆಸಬೇಕಾಯಿತು. ಹಳೇಬೀಡಿನಿಂದ ಆಳ್ವಿಕೆ ನಡೆಸುತ್ತಿದ್ದ ಜೈನ ಸಂಪ್ರದಾಯಸ್ಥ ಬಿಟ್ಟಿದೇವನು ಇವರ ತತ್ವಗಳಿಂದ ಪ್ರಭಾವಿತಗೊಂಡು ವಿಷ್ಣುವರ್ಧನವಾದುದು ಇತಿಹಾಸ ಪುಟಗಳಿಂದ ತಿಳಿದುಬರುತ್ತದೆ. ಆದರೆ ಇತ್ತೀಚೆಗೆ ವಿದ್ವಾಂಸರು ಇದನ್ನು ಪ್ರಶ್ನಿಸಿದ್ದು ಮತಾಂತರಗೊಂಡಿಲ್ಲವೆಂಬ ಅಭಿಪ್ರಾಯಕ್ಕೆ ಬಂದಿದ್ದಾರೆ (ಸಂ).

ಈ ಸಂದರ್ಭದಲ್ಲಿ ರಾಮಾನುಜರು ಕರ್ನಾಟಕದಾದ್ಯಂತ ಸಂಚರಿಸಿದರೆಂಬ ನಂಬಿಕೆಯೂ ಇದೆ. ಹಾಗಾಗಿ ಕರ್ನಾಟಕದ ಮೇಲುಕೋಟೆಯನ್ನು ಒಳಗೊಂಡಂತೆ ಶ್ರೀರಂಗಪಟ್ಟಣ, ಬೇಲೂರು, ಚಿಕ್ಕಬಳ್ಳಾಪುರ ಬಳಿಯ ರಂಗಸ್ಥಳ, ಮುಳಬಾಗಿಲಿನ ರಂಗನಾಥ, ದೇವರಾಯನ ದುರ್ಗದ ರಂಗನಾಥ, ಗದುಗಿನ ವೀರನಾರಾಯಣ ಹಾಗೂ ಇನ್ನಿತರ ದೇವಾಲಯಗಳಲ್ಲಿ ಶ್ರೀ ರಾಮಾನುಜರ ಮೂರ್ತಿಗಳು ಹಾಗೂ

* ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ಇತಿಹಾಸ ವಿಭಾಗ, ಸರ್ಕಾರಿ ಕಲಾ ಕಾಲೇಜು, ಚಿತ್ರದುರ್ಗ-೫೭೭೫೦೧

ಇತರೆ ಆಳ್ವಾರರ ಮೂರ್ತಿಗಳು ಸ್ಥಾಪನೆಗೊಂಡಂತೆ ಕಾಣುತ್ತದೆ.

ಹೀಗೆ ರಾಮಾನುಜಾಚಾರ್ಯರ ಪ್ರಭಾವದಿಂದ ಹಾಗೂ ಅವರು ಕರ್ನಾಟಕಕ್ಕೆ ಬಂದ ನಂತರದ ದಿನಗಳಲ್ಲಿ ನಿರ್ಮಾಣಗೊಂಡ ಬಹುತೇಕ ವೈಷ್ಣವ ದೇವಾಲಯಗಳಲ್ಲಿ ಆಳ್ವಾರರ ಶಿಲ್ಪಗಳು ಸೇರ್ಪಡೆಗೊಂಡವು. ಈ ಹಿನ್ನೆಲೆಯಲ್ಲಿ ಚಿತ್ರದುರ್ಗ ಪರಿಸರದಲ್ಲಿ ಹೊಸದುರ್ಗ ತಾಲ್ಲೂಕಿನ ಬಾಗೂರಿನ ಶ್ರೀ ಚನ್ನಕೇಶವ ದೇವಾಲಯ, ಗವಿರಂಗನಾಥ ಸ್ವಾಮಿ ದೇವಾಲಯ, ದಾವಣಗೆರೆ ತಾಲ್ಲೂಕಿನ ನೀರ್ಥಡಿ ರಂಗನಾಥಸ್ವಾಮಿ ದೇವಾಲಯ, ಚಿತ್ರದುರ್ಗ ನಗರದ ವೆಂಕಟರಮಣ ಹಾಗೂ ಬೆಟ್ಟದ ಮೇಲಿನ ಗೋಪಾಲಸ್ವಾಮಿ ದೇವಾಲಯಗಳಲ್ಲಿ ಆಳ್ವಾರರ ಶಿಲ್ಪಗಳಿರುವುದನ್ನು ನೋಡುತ್ತೇವೆ.

ಶ್ರೀ ವೈಷ್ಣವ ಆಳ್ವಾರರ ಶಿಲ್ಪಗಳು ಶೈವ, ವೈಷ್ಣವ ಹಾಗೂ ಇನ್ನಿತರೆ ಸಾಮಾನ್ಯ ಶಿಲ್ಪಗಳಿಗಿಂತಲೂ ತುಸು ಭಿನ್ನವೆನಿಸುತ್ತವೆ. ಶೈವ ಶಿಲ್ಪಗಳಲ್ಲಿ ಕಂಡುಬರುವಂತೆ ತ್ರಿಶೂಲ, ಢಮರು, ನಂದಿ ಅಥವಾ ಇನ್ನಿತರ ಯಾವುದೇ ಲಕ್ಷಣಗಳಾಗಲೀ, ವೈಷ್ಣವ ಶಿಲ್ಪಗಳಲ್ಲಿರುವಂತೆ ಶಂಕ, ಚಕ್ರ, ಗಧಾ, ಗರುಡಾ ಅಥವಾ ಇನ್ನಿತರ ಯಾವುದೇ ಚಿಹ್ನೆಗಳಾಗಲೀ ಶ್ರೀ ವೈಷ್ಣವ ಆಳ್ವಾರರ ಶಿಲ್ಪಗಳಲ್ಲಿ ಕಂಡುಬರುವುದಿಲ್ಲ. ಈ ಶಿಲ್ಪಗಳಲ್ಲಿ ಕಂಡುಬರುವ ಸಾಮಾನ್ಯ ಲಕ್ಷಣಗಳನ್ನು ಈ ಮುಂದಿನಂತೆ ನೋಡಬಹುದು.

* ಯಾವುದೇ ರೀತಿಯ ಆಯುಧಗಳನ್ನು ಹೊಂದಿರದೆ, ಸರಳ ಶಿಲ್ಪಗಳಾಗಿರುತ್ತವೆ.
* ಬಹುತೇಕ ಶಿಲ್ಪಗಳು ಆಸೀನ ಭಂಗಿಯಲ್ಲಿದ್ದು, ಅರ್ಧಪದ್ಮಾಸನದಲ್ಲಿರುತ್ತವೆ.
* ತಲೆಯ ಕೂದಲನ್ನು ಹಿಂಬದಿಯಲ್ಲಿ ತುರುಬಿನಂತೆ ಕಟ್ಟಲಾಗಿರುತ್ತದೆ.
* ಒಂದು ರೀತಿಯ ಬಟ್ಟೆಯಿಂದ ಅಥವಾ ಹತ್ತಿಯಿಂದ ತಯಾರಿಸಿದ ಸ್ವಲ್ಪ ದಪ್ಪನೆಯ ಕೊರಳಸರ, ಜನಿವಾರ, ಕರ್ಣಕುಂಡಲಗಳು ಇತ್ಯಾದಿ ಸರಳ ಅಲಂಕಾರಿಕ ಅಂಶಗಳು ಕಂಡುಬರುತ್ತವೆ.
* ಹಣೆಯ ಮೇಲ್ಭಾಗದಲ್ಲಿ ಇಂಗ್ಲೀಷಿನ U ಅಥವಾ V ಆಕಾರದ ಮೂರು ಗೆರೆಯ ನಾಮದ ಅಲಂಕಾರವಿರುತ್ತದೆ.
* ಬಹುತೇಕ ಶಿಲ್ಪಗಳು ಅಂಜಲಿ ಮುದ್ರೆಯಲ್ಲಿರುತ್ತವೆ.

ಪೋಯ್‌ಗೈ ಆಳ್ವಾರ್: ಆಳ್ವಾರ್ ಸಂಪ್ರದಾಯದಲ್ಲಿ ಕಂಡುಬರುವ ಮೊದಲ ಆಳ್ವಾರರಿವರು. ಇವರ ಹುಟ್ಟಿನ ಹಿನ್ನೆಲೆ ಹಾಗೂ ಕುಲಗೋತ್ರಗಳು ತಿಳಿದುಬರುವುದಿಲ್ಲ. ಚಿಕ್ಕಮಗುವೊಂದು ತಾವರೆಹೂವಿನ ಮೇಲೆ ಇದ್ದುದನ್ನು ಕಂಡ ದಂಪತಿಗಳು ಅದನ್ನು ತಂದು ಸಾಕಿರುತ್ತಾರೆ. ಹಾಗಾಗಿ ಇವರಿಗೆ ಪೋಯ್‌ಗೈ ಆಳ್ವಾರ್ ಎನ್ನುವ ಹೆಸರು ಬಂದಿದೆ. ಇವರ ಕಾಲಮಾನದ ಬಗ್ಗೆಯೂ ಗೊಂದಲಗಳಿದ್ದು, ಕೆಲವರು ನಾಲ್ಕನೇ ಶತಮಾನದ ಆದಿಭಾಗವೆಂದರೆ, ಮತ್ತೆ ಕೆಲವರು ಏಳನೇ ಶತಮಾನದ ಆದಿಭಾಗ ಎಂದು ಹೇಳುವರು. ಇವರು ದೇವಮತ್ತರೂ, ದೈವ ಮುಗ್ಧರೂ ಆಗಿ ವಿಷ್ಣುವನ್ನು ಕುರಿತು ಸ್ತೋತ್ರಗಳನ್ನು ಹಾಡುತ್ತಾ ತಮಿಳುನಾಡಿನಾದ್ಯಂತ ತಿರುಗಿದರು. ಹಾಗಾಗಿ ಇವರನ್ನು ಕೆಲವರು ಹುಚ್ಚರೆಂದು ಕರೆಯುವರು. ಇವರು ರಚಿಸಿದ ಪ್ರಬಂಧಕ್ಕೆ 'ತಿರುವಂದಾದಿ' ಎಂದು ಹೆಸರು. ಇದರಲ್ಲಿ ನೂರಾರು ಬಿಡಿ ಪದ್ಯಗಳಿವೆ.

ಪೂದತ್ತಾಳ್ವಾರ್: ಇವರು ಪೋಯ್‌ಗೈ ಆಳ್ವಾರ್ ಸಮಕಾಲೀನರು ಹಾಗೂ ಅದೇ ರೀತಿಯ ತತ್ವ ಸಿದ್ಧಾಂತಗಳನ್ನು ತಮ್ಮನ್ನು ತೊಡಗಿಸಿಕೊಂಡವರು. ಇವರ ತತ್ವಗಳುಳ್ಳ ಪ್ರಬಂಧಕ್ಕೆ 'ಎರಡನೆಯ ತಿರುವಂದಾದಿ' ಎಂದು ಕರೆಯಲಾಗುತ್ತದೆ. ಇದರಲ್ಲಿ ನೂರಾರು ಬಿಡಿ ಪದ್ಯಗಳಿವೆ. ಪೋಯ್‌ಗೈ ಆಳ್ವಾರ್ ಹಾಗೂ ಪೂದಾತ್ತಾಳ್ವಾರರಂತೆಯೇ **ಪೇಯಾಳ್ವಾರ್**ರ ಜನನದ ಕುರಿತು ಹೆಚ್ಚಿನ ಮಾಹಿತಿಗಳು ದೊರೆಯುವುದಿಲ್ಲ. ಇವರೂ ಸಹ ವಿಷ್ಣುವಿನ ಮಹಾನ್ ಭಕ್ತರಾಗಿದ್ದು, ವೈಷ್ಣವ ಧರ್ಮವನ್ನು ಪ್ರಚರಪಡಿಸಿದ ಅಗ್ರಗಣ್ಯರಲ್ಲೊಬ್ಬರು. ಇವರು ರಚಿಸಿದ ಪ್ರಬಂಧಕ್ಕೆ 'ಮೂರನೆಯ ತಿರುವಂದಾದಿ' ಎಂದು ಕರೆಯಲಾಗುತ್ತಿದ್ದು, ಅದರಲ್ಲಿ ನೂರಾರು ಬಿಡಿ ಪದ್ಯಗಳಿವೆ.

ತಿರುಮಳಿಶೈಆಳ್ವಾರ್: ತಿರುವಾಳನ್ ಮತ್ತು ಪಂಗಯ ಚಲ್ವಿಯಾರ್ ಎನ್ನುವ ಬೇಡ ಜನಾಂಗದ ಕುಟುಂಬದಲ್ಲಿ ಸಾಕುಮಗನಾಗಿ ಬೆಳೆದ ಈತನ ಹಿನ್ನೆಲೆಯ ಬಗ್ಗೆ ಹೆಚ್ಚಿನ ವಿವರಗಳು ತಿಳಿದು ಬರುವುದಿಲ್ಲ. ವೈಷ್ಣವ ಭಕ್ತರಲ್ಲೇ ಈತ ಏಕಾಂತಿ. ವಿಷ್ಣುವನ್ನಲ್ಲದೆ ಇನ್ನಾವುದೇ ದೇವರನ್ನೂ ಪೂಜಿಸದವರು. ಹಾಗಾಗಿ ಇವರಿಗೆ 'ಭಕ್ತಿಸಾರ' ಎನ್ನುವ ಬಿರುದಿನಿಂದಲೂ ಕರೆಯಲಾಗುತ್ತದೆ. ೧೨೦ ಬಿಡಿ ಪದ್ಯಗಳಿಂದ ಕೂಡಿದ 'ತಿರುಚ್ಚಂದವಿರುತ್ತಂ' ಹಾಗೂ ೯೬ ಪದ್ಯಗಳಿಂದ ಕೂಡಿದ 'ನಾನ್‌ಮುಹನ್' ಎನ್ನುವ ಎರಡು ಬೃಹತ್ ಪ್ರಬಂಧಗಳನ್ನು ಇವರು ರಚಿಸಿರುವರು.

ನಮ್ಮಾಳ್ವಾರ್: ವೈಷ್ಣವ ಸಂತರಲ್ಲೇ ಅಗ್ರಗಣ್ಯರು. ಇವರನ್ನು ಶಠಾರಿ, ಶಡಗೋಪನ್ ಇತ್ಯಾದಿ ಹೆಸರುಗಳಿಂದಲೂ ಕರೆಯಲಾಗುತ್ತದೆ. ವೆಲ್ಲಾಳಕುಲದ ಕಾರಿಯರ್ ಹಾಗೂ ಉಡೈಯ ನಂಗೈಯಾರ್ ದಂಪತಿಗಳಿಗೆ ತಿರುಕ್ಕುರುಹೂರ್‌ನಲ್ಲಿ ಜನಿಸಿದ ಇವರು ೬ನೇ ಶತಮಾನದ ಅಥವಾ ೮ನೇ ಶತಮಾನದ ಆದಿಭಾಗದಲ್ಲಿ ಜೀವಿಸಿದ್ದರೆಂದು

ಹೇಳಲಾಗುತ್ತದೆ. ಇವರು ಚಿಕ್ಕಮಗುವಾಗಿದ್ದಾಗಿನಿಂದಲೂ ಅಳುತ್ತಿರಲೂ ಇಲ್ಲ ಹಾಗೂ ಹೊಟ್ಟೆಗೆ ಏನನ್ನೂ ಸೇವಿಸುತ್ತಿರಲಿಲ್ಲವಂತೆ. ಹಾಗಾಗಿ ಇವರ ತಂದೆ-ತಾಯಿಗಳು ಚಿಂತಾಕ್ರಾಂತರಾಗಿ ಏನುಮಾಡಬೇಕೆಂದು ತೋಚದೆ ಕೊನೆಗೊಂದು ದಿನ ಊರಹತ್ತಿರವಿದ್ದ ಹೊಳೆಯ ದಂಡೆಯ ಮೇಲಿದ್ದ ಗುಡಿಯಲ್ಲಿ ತೊಟ್ಟಿಲು ಹಾಕಿ ಅದರಲ್ಲಿ ಈ ಕೂಸನ್ನು ಮಲಗಿಸಿ ಬಂದರು. ಹೀಗೆ ಅನಾಥವಾಗಿ ಬೆಳೆದ ಮಗು ತನ್ನ ಹದಿಮೂರನೇ ವಯಸ್ಸಿನಲ್ಲಿ ಮಧುರಕವಿಯ ಶಿಷ್ಯರಾದರು. ಮುಂದೆ ವೈಷ್ಣವ ಧರ್ಮ ಪ್ರಚಾರದಲ್ಲಿ ತೊಡಗಿದ ಇವರು ನಾಲ್ಕು ಕೃತಿಗಳನ್ನು ರಚಿಸಿದರು. ಅವುಗಳೆಂದರೆ, 'ತಿರುವಿರುತ್ತಂ' (೧೦೦ ಬಿಡಿ ಪದ್ಯಗಳು), 'ತಿರುವಾಶಿರಿಯಂ' (೭ ಪದ್ಯಗಳು), 'ಪೆರಿಯ ತಿರುವಂದಾದಿ' (೮೭ ಪದ್ಯಗಳು) ಹಾಗೂ 'ತಿರುವಾಯ್ ಮೊಳಿ' (೧೧೦೨ ಪದ್ಯಗಳು) ಶ್ರೀ ವೈಷ್ಣವ ಆಳ್ವಾರರು ಇವುಗಳನ್ನು ತಮಿಳಿನ ನಾಲ್ಕು ವೇದಗಳೆಂದೇ ಭಾವಿಸಿದ್ದಾರೆ. ವೇದಾಂತ ದೇಶಿಕರು ತಿರುವಾಯ್ ಮೊಳಿಯನ್ನು 'ದ್ರಮಿಡೋಪನಿಷತ್ತೆಂದು' ಕರೆದಿದ್ದಾರೆ. ಇವರ ಕೃತಿಗಳು ಸರಳವಾಗಿದ್ದು, ನೈತಿಕ ಹಾಗೂ ಆಧ್ಯಾತ್ಮಿಕ ಮೌಲ್ಯಗಳಿಂದ ಕೂಡಿವೆ.

ಮಧುರ ಕವಿ: ನಮ್ಮಾಳ್ವರರಿಗಿಂತ ವಯಸ್ಸಿನಲ್ಲಿ ಹಿರಿಯರಾಗಿದ್ದು, ಅವರ ಸಮಕಾಲೀನರು. ಇವರು ಬ್ರಾಹ್ಮಣ ಕುಲದಲ್ಲಿ ಜನಿಸಿದ್ದರೂ, ಕೀಳು ಜಾತಿಯ ಅನೇಕ ಶಿಷ್ಯರನ್ನು ಹೊಂದಿ, ಅವರಲ್ಲಿ ಶ್ರೀ ವೈಷ್ಣವನನ್ನು ಕಂಡವರು. ಒಮ್ಮೆ ಇವರು ಅಯೋಧ್ಯೆಯಲ್ಲಿ ಧಾರ್ಮಿಕ ಪ್ರವಾಸವಿದ್ದಾಗ ಬಾನಲ್ಲಿ ಜ್ಯೋತಿಯೊಂದನ್ನು ಕಂಡು ಅಶರೀರವಾಣಿಯಿಂದ ಸಂದೇಶ ಪಡೆದು ತಮಿಳುನಾಡಿಗೆ ಬಂದರು. ತಿರುಕುರುಹೋರ್‌ನಲ್ಲಿ ಅನಾಥವಾಗಿ ಬೆಳೆಯುತ್ತಿದ್ದ ಮಾರನ್ ಎಂಬ ಹೆಸರಿನ ಬಾಲಯೋಗಿಯನ್ನು ಕಂಡು ಅವರನ್ನು ಶಿಷ್ಯರನ್ನಾಗಿ ಪಡೆದು ಅವರಲ್ಲಿ ಜ್ಞಾನವನ್ನು ತುಂಬಿದರು.

ಕುಲಶೇಖರ ಆಳ್ವಾರ್: ಇವರು ಕೇರಳದ ಮಲಬಾರ್‌ನ ರಾಜಮನೆತನದಲ್ಲಿ ಜನಿಸಿದವರೂ, ಇವರಿಗೆ ಭೋಗದ ಆಸೆಯಿರಲಿಲ್ಲ. ಇವರಲ್ಲಿ ಅಧಿಕಾರದ ಆಸೆಗಿಂತ ಆಧ್ಯಾತ್ಮಕತೆ ಯೆಡೆಗೆ ಹೆಚ್ಚು ಒಲವಿತ್ತು. ತೀರ್ಥಯಾತ್ರೆಗಳಲ್ಲಿ ವಿಶೇಷವಾದ ಆಸಕ್ತಿಯಿತ್ತು. ಹಾಗಾಗಿ ರಾಜತ್ವವನ್ನು ತೊರೆದು ವೈಷ್ಣವ ದೀಕ್ಷೆಯನ್ನು ಪಡೆದು ಶ್ರೀವೈಷ್ಣವ ಸಂತರಾದರು. ಅಂತಿಮವಾಗಿ ೧೦೫ ಪದ್ಯಗಳಿಂದ ಕೂಡಿದ ತಿರುಮೊಳಿ ಎನ್ನುವ ಕೃತಿಯನ್ನು ರಚಿಸಿದರು.

ಪೆರಿಯಾಳ್ವಾರ್: ಮುಕುಂದಾಚಾರ್ಯರ್ ಹಾಗೂ ಪದುಮೈಯರ್ ಎನ್ನುವ ದಂಪತಿಗೆ ಜನಿಸಿದ ಇವರ ಮೂಲ ಹೆಸರು ವಿಷ್ಣು ಚಿತ್ತ. ಇವರು ಪಾಂಡ್ಯರಾಜನ ಆಸ್ಥಾನದಲ್ಲಿ ವಾಕ್ಯಾರ್ಥವಾದದಲ್ಲಿ ಪರವಾದಿಗಳನ್ನು ಗೆದ್ದು, ರಾಜನನ್ನೇ ವೈಷ್ಣವರನ್ನಾಗಿಸಿದರೆನ್ನಲಾಗಿದೆ. ಇವರು 'ತಿರುಪ್ಪಲ್ಲಾಂಡು' ಎಂಬ ಕೃತಿಯನ್ನು ರಚಿಸಿದ್ದು ಇದರಲ್ಲಿ ಶ್ರೀ ವೈಷ್ಣವರು ಪೂಜಾಧಿಕಾಲದಲ್ಲಿ ಅನುಸರಿಸಬೇಕಾದ ವಿವರಣೆಗಳನ್ನು ನೀಡುವ ೧೨ ಪದ್ಯಗಳಿವೆ.

ಅಂಡಾಳ್: ಶ್ರೀ ವೈಷ್ಣವ ಆಳ್ವಾರರುಗಳಲ್ಲಿ ಏಕಮಾತ್ರ ಸ್ತ್ರೀಯೂ, ಸುಪ್ರಸಿದ್ಧಳೂ ಆದ ಗೋದಾದೇವಿ ಅಥವಾ ಅಂಡಾಳ್ ಎನ್ನುವವಳು ಪೆರಿಯಾಳ್‌ರವರ ಸಾಕುಮಗಳು. ಪೆರಿಯಾಳ್ವಾರ್‌ರಿಗೆ ಒಂದು ದಿನ ತಮ್ಮ ತೋಟದ ತುಳಸಿ ವನದಲ್ಲಿ ಒಂದು ಅನಾಥ ಹೆಣ್ಣು ಶಿಸು ದೊರೆಯಿತು. ಅದಕ್ಕೆ ಅವರು ಗೋದಾದೇವಿ ಎಂದು ನಾಮಕರಣಮಾಡಿ ತಾವೇ ಸಾಕಿದರು. ಮುಂದೆ ಗೋದಾದೇವಿಯು ತನ್ನಲ್ಲಿದ್ದ ಭಕ್ತಿಯ ಮೂಲಕ ಶ್ರೀ ರಂಗನಾಥನನ್ನೇ ಪತಿಯಾಗಿ ವರಿಸಿ ಸ್ಥಳೀಯ ರಂಗನಾಥ ದೇವಾಲಯದಲ್ಲಿ ಭಗವಂತನ ಕೈಂಕರ್ಯ ದಲ್ಲಿಯೇ ಮಗ್ನಳಾದಳು. ಹೀಗೆ ಶ್ರೀರಂಗನಾಥನ ಸೇವೆ ಯಲ್ಲೇ ತನ್ನನ್ನು ತೊಡಗಿಸಿಕೊಂಡು ೧೨ ಪದ್ಯಗಳಿಂದ ಕೂಡಿದ 'ತಿರುಪ್ಪಾವೈ' ಹಾಗೂ ೧೪೨ ಪದ್ಯಗಳಿಂದ ಕೂಡಿದ 'ನಾಚ್ಚಿಯಾರ್ ತಿರುಮೊಳಿ' ಎನ್ನುವ ಎರಡು ಪ್ರಬಂಧಗಳನ್ನು ರಚಿಸಿದಳು. ಇವುಗಳು ಇಂದಿಗೂ ಸಹ ತಮಿಳು ಸಾಹಿತ್ಯದಲ್ಲಿ ಉಪನಿಷತ್ಸಾರಗಳೆಂದೇ ಖ್ಯಾತಿಗಳಿಸಿವೆ. ಸಾಮಾನ್ಯವಾಗಿ ವೈಷ್ಣವರು ಇಂದಿಗೂ ತಮ್ಮ ಪೂಜೆಯ ಸಂದರ್ಭದಲ್ಲಿ 'ತಿರುಪ್ಪಾವೈ'ಯ ಕೊನೆಯೆರಡು ಪದ್ಯಗಳನ್ನು ಹಾಡುವರು.

ತೊಂಡರಪ್ಪೊಡಿ ಆಳ್ವಾರ್: ಇವರ ಮೂಲ ಹೆಸರು ವಿಪ್ರನಾರಾಯಣ. ಇವರು ಸಂಪ್ರದಾಯಬದ್ಧ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದ್ದರೂ ವೇಶ್ಯೆಯ ಸಹವಾಸ ಮಾಡಿ ಜೀವನದಲ್ಲಿ ಜಿಗುಪ್ಸೆ ಹೊಂದಿದರು. ಕೊನೆಗೆ ದೈವಕೃಪೆಯಿಂದ ಜ್ಞಾನವನ್ನು ಪಡೆದು ಅಂತಿಮವಾಗಿ ಶ್ರೀರಂಗನಾಥನ ಆರಾಧಕರಾದರು. ಭಗವಂತನ ಕಾರುಣ್ಯದಿಂದ ಪರಮ ಪಾಪಿಯು ಪರಮೋತ್ತಮವಾದ ಮೋಕ್ಷಸಾಮ್ರಾಜ್ಯವನ್ನು ಪಡೆಯಲು ಸಾಧ್ಯ ಎನ್ನುವುದನ್ನು ಈತನ ಹಿನ್ನೆಲೆ ತಿಳಿಸುತ್ತದೆ. ೪೫ ಪದ್ಯಗಳಿಂದ ಕೂಡಿದ 'ತಿರುಮಾಲೈ' ಹಾಗೂ ೧೦ ಪದ್ಯಗಳಿಂದ ಕೂಡಿದ 'ತಿರುಪಳ್ಳಿಎಳಿಚ್ಚಿ' ಎಂಬ ಸುಪ್ರಭಾತ ಗೀತೆಯನ್ನು ರಚಿಸಿರುವರು. ಶ್ರೀ ವೈಷ್ಣವ ಮಹಿಳೆಯರು ಇಂದೂ ಸಹ ಪ್ರತಿನಿತ್ಯ ಬೆಳಗಿನ ಪೂಜಾ ಸಂದರ್ಭದಲ್ಲಿ ಇವರ ಗೀತೆಗಳನ್ನು ಹಾಡುವರು.

ತಿರುಪ್ಪಾಣಾಳ್ವಾರ್: ಪ್ರಾಚೀನ ಸಮಾಜದ ಅತ್ಯಂತ ಕಟ್ಟಕಡೆಯ ಜಾತಿಯಾದ ಪಂಚಮರಲ್ಲಿ ಜನಿಸಿದ ಇವರ ಹಿನ್ನೆಲೆಯ ಬಗ್ಗೆ ಹೆಚ್ಚಿನ ವಿವರಗಳು ತಿಳಿದುಬರುವುದಿಲ್ಲ. ಕಾವೇರಿ ತೀರದ ಉರೈಯೂರು ಇವರ ಜನ್ಮಸ್ಥಳ. ಇಲ್ಲಿನ

ಶ್ರೀರಂಗನಾಥ ದೇವಾಲಯದ ಎದುರಿಗೆ ಒಂದು ಗುಡಿಸಲಿನಲ್ಲಿ ಜೀವಿಸುತ್ತಿದ್ದರು. ಹೀಗಿರುವಾಗ, ಲೋಕಸಾರಂಗ ಮುನಿ ಎನ್ನುವವರಿಗೆ ಶ್ರೀರಂಗನಾಥನು ಸ್ವಪ್ನದಲ್ಲಿ ಬಂದು ಈ ಆಳ್ವಾರರನ್ನು ನಿನ್ನ ಹೆಗಲಿನ ಮೇಲೆ ಕೂಡಿಸಿಕೊಂಡು ಗರ್ಭಗುಡಿಯೊಳಗೆ ಬಾ ಎಂದು ಹೇಳಿದಂತೆ ಭಾಸವಾಗಲು ಅದರಂತೆ, ಮುನಿಯು ಇವರನ್ನು ಗರ್ಭಗುಡಿಯೊಳಗೆ ಎತ್ತುತಂದಾಗ ಶ್ರೀರಂಗನಾಥನಲ್ಲೇ ಲೀನವಾದರೆನ್ನುವ ಪ್ರತೀತಿಯಿದೆ. ಇವರು ೧೦ ಪದ್ಯಗಳುಳ್ಳ 'ಅಮಲ ನಾದಿಪಿರಾನ್' ಎನ್ನುವ ಕೃತಿಯನ್ನು ರಚಿಸಿರುವರು.

ತಿರುಮಂಗೈ ಆಳ್ವಾರ್: ಹನ್ನೆರಡು ಆಳ್ವಾರರುಗಳಲ್ಲಿ ಕೊನೆಯವರು. ಚೋಳರಾಜನ ದಂಡನಾಯಕ ನೀಲ ಎನ್ನುವ ವೆಳ್ಳಾಳ ಜಾತಿಯ ಕಳ್ಳರ್ ಕುಲದವರ ಮಗನಾಗಿ ಜನಿಸಿದರು. ಚಿಕ್ಕಂದಿನಿಂದಲೇ ತುಂಬ ಧೈರ್ಯಶಾಲಿಯಾದ ಇವರು ಮುಂದೆ ತಂದೆಯಂತೆ ದಂಡನಾಯಕನಾಗಿ 'ಪರಕಾಲನ್' ಎಂಬ ಬಿರುದನ್ನು ಪಡೆದರು. ಕುಮುದವಲ್ಲಿ ಎನ್ನುವ ವಿಷ್ಣುಭಕ್ತೆಯಾದ ತಮ್ಮ ಪತ್ನಿಯ ಪ್ರಭಾವದಿಂದ ತಾವು ವೈಷ್ಣವರಾಗಿ ನಾಗಪಟ್ಟಣದ ಬೌದ್ಧದೇವಾಲಯಗಳನ್ನು ಕೊಳ್ಳೇಹೊಡೆದು ಶ್ರೀರಂಗ ದೇವಾಲಯ ನಿರ್ಮಾಣದಲ್ಲಿ ತೊಡಗಿದರು. ಗುರಿ ಉತ್ತಮವಾದರೆ, ಮಾರ್ಗವು ದುಷ್ಟವಾದರೂ ಬಾಧಕವಿಲ್ಲವೆಂಬ ಅಂಶವನ್ನು ತಿರುಮಂಗೈ ಆಳ್ವಾರರ ಚರಿತ್ರೆಯ ತಿಳಿಸುತ್ತದೆ. ಪೆರಿಯಾ ತಿರುಮೊಲಿ (೧೦೮೪ ಪದ್ಯಗಳು), ತಿರುಕ್ಕುರುದ್ದಾಂಡಹಂ (೨೦ ಪದ್ಯಗಳು), ತಿರುನೆಡುನ್ತಾಂಡಹಂ (೨೦ ಪದ್ಯಗಳು), ಶಿರಿಯ ತಿರುಮಡಲ್ (೨೨ ಪದ್ಯಗಳು), ಪೆರಿಯ ತಿರುಮಡಲ್ (೧೪೮ ಪದ್ಯಗಳು), ತಿರುವಳುಕ್ಕೂತ್ತಿರಕ್ಕೈ (೦೨ ಪದ್ಯಗಳು), ಹೀಗೆ ತಿರುಮಂಗೈ ಆಳ್ವಾರ್‌ರವರು ೧೩೬೧ ಪದ್ಯಗಳಿಂದ ಕೂಡಿದ ೬ ಕೃತಿಗಳನ್ನು ರಚಿಸಿರುವರು. ಇವರ ಕೃತಿಗಳಲ್ಲಿ ಸಾಮಾನ್ಯವಾಗಿ ದೇವರು ಹಾಗೂ ಭಕ್ತರ ನಡುವಿನ ಸಂಬಂಧಗಳ ಕುರಿತು ವಿವರಣೆಗಳಿರುವುದನ್ನು ನೋಡುತ್ತೇವೆ.

ಕ್ರಿ.ಶ. ೩-೪ನೇ ಶತಮಾನದಿಂದ ಕ್ರಿ.ಶ. ೭-೮ನೇ ಶತಮಾನದ ಅವಧಿಯಲ್ಲಿ ಜೀವಿಸಿದ್ದ ಶ್ರೀ ವೈಷ್ಣವ ಆಳ್ವಾರರು ಯಾವುದೇ ಒಂದು ಜಾತಿ ಅಥವಾ ವರ್ಗಕ್ಕೆ ಸೇರಿರದೆ, ಎಲ್ಲಾ ಜಾತಿ ಹಾಗೂ ವರ್ಗಕ್ಕೆ ಸೇರಿದವರಾಗಿದ್ದಾರೆ. ಬಹುತೇಕ ಇವರು ಸಮಾಜದ ಕೆಳವರ್ಗದಿಂದಲೇ ಬಂದಿದ್ದಾರೆ ಎಂದರೆ ತಪ್ಪಾಗಲಾರದು. ಆಧ್ಯಾತ್ಮಿಕವಾಗಿರುವುದಕ್ಕಿಂತ ಅನುಭಾವಿಕವಾಗಿರುವುದು ಈ ಪರಂಪರೆಯ ಪ್ರಮುಖ ವೈಶಿಷ್ಟ್ಯ ಎಂದು ಹೇಳಬಹುದು. ಐಹಿಕ ಭೋಗಗಳ ಕ್ಷಣಿಕತ್ವವನ್ನು ಅರಿತು ಭಗವಂತನ ಇಚ್ಛೆಯಂತೆ ಸಂಸಾರದಿಂದ ಬಿಡುಗಡೆ ಪಡೆದ ವೈಷ್ಣವ ಭಕ್ತರಿವರು. ಇವರು ಭಗವಂತನನ್ನು ನಾರಾಯಣನೆಂದೂ, ಅವನೇ ಈ ಸೃಷ್ಟಿಯ ಕಾರಣ ಕರ್ತೃವೆಂದೂ ಹೇಳಿದರು. ಅವನು ಸರ್ವ ವ್ಯಾಪಿಯಾಗಿದ್ದು, ಜ್ಞಾನ ಪ್ರೇಮಗಳ ನಿಧಿ, ಅದೇ ಪ್ರೇಮದ ಫಲವಾಗಿಯೇ ಅವನು ಪ್ರತಿಯೊಂದು ಜೀವಿಗೂ ತಂದೆ-ತಾಯಿ, ಆತ್ಮ, ನಾನು, ನನ್ನದು ಎನ್ನುವ ಭಾವನೆ ಮೊದಲು ನಿವಾರಣೆಯಾಗಬೇಕು. ಭಗವಂತನಲ್ಲಿ ಸಂಪೂರ್ಣವಾಗಿ ತನ್ನನ್ನು ಲೀನಗೊಳಿಸಬೇಕೆಂದು, ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ ಭಗವಂತನಿಗಾಗಿ ಸೇವೆಸಲ್ಲಿಸಬೇಕು. ಈ ದೇಹವು ಅವನ ಕಾರುಣ್ಯದಿಂದಲೇ ಬಂದಿರುವುದರಿಂದ ಅವನಿಗಾಗಿ ಈ ದೇಹವನ್ನು ಅರ್ಪಿಸಬೇಕು ಎಂದು ಮುಂತಾಗಿ ಭಗವಂತನನ್ನು ಒಲಿಸಿಕೊಳ್ಳುವ ಬಗೆಯನ್ನು ಅದರ ಮಹತ್ವವನ್ನು ತಮ್ಮ ಕೃತಿಗಳ ಮೂಲಕ ತತ್ವಗಳ ಮೂಲಕ ತಿಳಿಸಿದ್ದಾರೆ.

ಆಧಾರಸೂಚಿ

೧. ಕ್ಷೇತ್ರ ಕಾರ್ಯಾಧಾರಿತ ಮಾಹಿತಿ.

೨. ನಂದಿಮಠ ಎಸ್.ಸಿ., ***ಕರ್ನಾಟಕದ ಧರ್ಮಗಳು:*** ಕನ್ನಡನಾಡಿನ ಚರಿತ್ರೆ, ಭಾಗ ೨, ಬೆಂಗಳೂರು, ೧೯೭೪.

೩. ಪುಟ್ಟಪ್ಪ ಕೆ.ವಿ., (ಪ್ರ, ಸಂ.)- ***ತತ್ವಶಾಸ್ತ್ರ: ಪ್ರಾಚ್ಯ ಮತ್ತು ಪಾಶ್ಚಾತ್ಯ,*** ಸಂ-೦೧, ಮೈಸೂರು, ೧೯೬೦.

೪. ಶೇಷನವರತ್ನ., ***ಜಾಗತಿಕ ಧರ್ಮಗಳು,*** ಸಮಾಜ ಪುಸ್ತಕಾಲಯ, ಧಾರವಾಡ-೧೯೯೮

೫. ಶ್ರೀಕಂಠಶಾಸ್ತ್ರಿ ಎಸ್. - ***ಭಾರತೀಯ ಸಂಸ್ಕೃತಿ,*** ಬೆಂಗಳೂರು-೧೯೭೫

೬. ಪರಿದಾಸ ಭಟ್ಟಾಚಾರ್ಯ (ಸಂ.), ***ಯುಗಯಾತ್ರೀ ಭಾರತೀಯ ಸಂಸ್ಕೃತಿ,*** ಸಂ-೦೪, ಮೈಸೂರು-೧೯೮೮.

೭. ***ವಿಷಯ ವಿಶ್ವಕೋಶ.***

೬೮

ನಾಥ ಸಂಪ್ರದಾಯ ಮತ್ತು ಅಲ್ಲಮಪ್ರಭು

ಡಾ. ಸಿದ್ದಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು*

ಗೋರಕ್ಷನ ದೇಶಕಾಲಗಳ ಕುರಿತು ವಿವಾದಗಳಿವೆ. ಗೋರಕ್ಷ ಹೆಸರಿನ ಅನೇಕರು ನಾಥ ಪರಂಪರೆಯಲ್ಲಿ ೮ರಿಂದ ೧೨ನೇ ಶತಮಾನದವರೆಗೂ ಕಂಡುಬರುತ್ತಾರೆ. ೧೨ನೇ ಶತಮಾನದಲ್ಲಿದ್ದ ೭೭೦ ಅಮರಗಣಂಗಳಲ್ಲಿ ಗೋರಕ್ಷನಾಥನೂ ಒಬ್ಬ. ಇವನನ್ನು ಪಟ್ಟದಕಲ್‌ನಲ್ಲಿ ವಾಸವಾಗಿದ್ದ ವಚನಕಾರ ಎಂದು ಡಾ. ಫ.ಗು. ಹಳಕಟ್ಟಿ ಅವರು ನಿರ್ಣಯಿಸಿದ್ದಾರೆ. ಈತ ಆ ಸೇತು ಹಿಮಾಚಲ ಸಂಚರಿಸಿ, ನಾಥಪಂಥದಲ್ಲಿ ಸುಧಾರಣೆ ತಂದು ಉದ್ಧರಿಸಿದನೆಂದು ಹೇಳಲಾಗಿದೆ. ಗೋರಕ್ಷನಾಥನ ಕುರುಹುಗಳು ಕಾಶ್ಮೀರ, ನೇಪಾಳ, ಬಂಗಾಳ, ಮಹಾರಾಷ್ಟ್ರ ಮತ್ತು ಕರ್ನಾಟಕದ ಕೆಲವು ಸ್ಥಳಗಳಲ್ಲಿ ಕಂಡುಬರುತ್ತವೆ. ಕಾರಣ ಗೋರಕ್ಷ ನಾಥನನ್ನು ಎಲ್ಲ ಪ್ರದೇಶದವರೂ ತಮ್ಮ ನಾಡಿನವನೆಂದು ಅಭಿಮಾನ ಪಡುವುದು ಸಹಜವಾಗಿದೆ. ಭಾರತದ ಎಲ್ಲ ಭಾಷೆಗಳಲ್ಲಿಯೂ ಗೋರಕ್ಷನ ಕುರಿತು ಅನೇಕ ಪವಾಡ ಕತೆಗಳು ಜನಜನಿತವಾಗಿವೆ.

ಅಮರನಾಥ, ಬದ್ರಿನಾಥ, ಕೇದಾರನಾಥ ಪಶುಪತಿನಾಥ, ನಾಥದ್ವಾರ ಶ್ರೀಶೈಲ, ರಾಮೇಶ್ವರ ಮುಂತಾ ಪುಣ್ಯಕ್ಷೇತ್ರಗಳು ನಾಥ ಸಂಪ್ರದಾಯದ ಕೇಂದ್ರಗಳಾಗಿವೆ. ಮಹಾರಾಷ್ಟ್ರದ ನಾಸಿಕದಿಂದ ೩೦ ಕಿ.ಮೀ. ದೂರದಲ್ಲಿರುವ ತ್ರ್ಯಂಬಕೇಶ್ವರ ಒಂದು ಪ್ರಸಿದ್ಧ ಶೈವಕ್ಷೇತ್ರ. ಇಲ್ಲಿಯೇ ಗೋದಾವರಿಯ ಉಗಮಸ್ಥಾನವಿದೆ. ಇಲ್ಲಿನ ಪರ್ವತದಲ್ಲಿ ಸಿದ್ಧರಗವಿ ಮತ್ತು ಮಠವಿದೆ. ಅಲ್ಲಿ ೧೫ ಅಂಗುಲ ಎತ್ತರದ ಗೋರಕ್ಷನಾಥನ ಶಿಲಾಮೂರ್ತಿ ಇದೆ ಎಂದು ಜಿ.ಡಬ್ಲ್ಯು ಬ್ರಿಗ್ಸ್ ಅವರು ದಾಖಲಿಸಿದ್ದಾರೆ. ರಾಷ್ಟ್ರಕೂಟರ ಕಾಲದಲ್ಲಿ ಕನ್ನಡನಾಡು 'ಕಾವೇರಿಯಿಂದ ಗೋದಾವರಿ ಮೂಲದವರಿಗೆ' ಇತ್ತೆಂದು ನೃಪತುಂಗನು ಕವಿರಾಜಮಾರ್ಗ ಕೃತಿಯಲ್ಲಿ ದಾಖಲಿಸಿದ್ದಾನೆ. ಅಂದಿನ ಉತ್ತರ ಕನ್ನಡ ಭಾಗಕ್ಕೆ ಬಡಗದೇಶವೆಂದು ಕರೆಯಲಾಗುತ್ತಿತ್ತು. ಗೋರಕ್ಷನಾಥನ ಜನ್ಮಭೂಮಿ ನಾಸಿಕದ ಹತ್ತಿರವಿದ್ದಿರಬಹುದೆಂದು ಕೆಲವರ ಅಭಿಪ್ರಾಯ. ಕರ್ನಾಟಕದಲ್ಲಿ ಅಲ್ಲಲ್ಲಿ ನಾಥಪರಂಪರೆಯ ಅನೇಕ ಸಿದ್ಧರಗವಿಗಳು ಮಠಗಳ ರೂಪದಲ್ಲಿ ಉಳಿದುಬಂದಿವೆ. ಬಾದಾಮಿ ಸಮೀಪದ ಮಹಾಕೂಟ ನಾಗನಾಥಕೊಳ್ಳ, ಸಿದ್ಧರಕೊಳ್ಳ ಮುಂತಾದವು ಪ್ರಕೃತಿ ಮಡಿಲಲ್ಲಿರುವ ಸುಂದರ ತಪೋವನಗಳಾಗಿವೆ.

ಗೋರಕ್ಷನಾಥನ ಕಾಲ ನಿರ್ಣಯದಲ್ಲಿ ಭಿನ್ನ ಭಿನ್ನ ಅಭಿಪ್ರಾಯಗಳಿವೆ ಇದಕ್ಕೆ ಕಾರಣ ಗೋರಕ್ಷ ಹೆಸರಿನ ಅನೇಕ ಯೋಗಿಗಳು ವಿವಿಧ ಕಾಲಘಟ್ಟಗಳಲ್ಲಿ ಕಂಡುಬರುತ್ತಿರುವುದು ಎನ್ನುತ್ತಾರೆ. ವಿದ್ವಾಂಸರಾದ ಗೌ.ಮ. ಉಮಾಪತಿ ಶಾಸ್ತ್ರಿ, ಸಿದ್ಧನಾಥ ಸಂಪ್ರದಾಯದ ಗೋರಕ್ಷನಾಥ (೧೨ನೇ ಶತಮಾನ) ಅಷ್ಟಸಿದ್ಧಿಗಳನ್ನು ಪಡೆದ ಮಹಾಯೋಗಿ. ಶ್ರೀ ಅಲ್ಲಮಪ್ರಭುಗಳಿಂದ ಶಿವಯೋಗದ ಮಹತ್ವವನ್ನು ಅರಿತು ಶೈವ ಸಿದ್ಧಾಂತವನ್ನು ಸಾಧಿಸಿ, ಮಹಾಶೈವಾಚಾರ್ಯನಾದದ್ದು ವಿಶೇಷ.

ಅಲ್ಲಮಪ್ರಭು : ಕರ್ನಾಟಕ ಸಂಸ್ಕೃತಿ ವಿಕಾಸದಲ್ಲಿ ಶರಣರ ಕೊಡುಗೆ ಅತ್ಯಂತ ಘನತೆವೆತ್ತ ಇತಿಹಾಸ, ಯುಗದ ಉತ್ಸಾಹವಾಗಿ ಮೂಡಿಬಂದವರು ವಿಶ್ವಗುರು ಬಸವೇಶ್ವರರು, ಅಲ್ಲಮಪ್ರಭು ದೇವರು, ಸಿದ್ಧರಾಮೇಶ್ವರರು, ಚನ್ನಬಸವಣ್ಣ, ಅಕ್ಕಮಹಾದೇವಿ ಮುಂತಾದವರು. ಅನುಭವ ಮಂಟಪದ ಪ್ರೇರಕಶಕ್ತಿಯಾಗಿದ್ದವರು ಅನುಪಮಚರಿತ ಅಲ್ಲಮಪ್ರಭು ದೇವರು, ಅನುಭವ ಮಂಟಪದ ಚರ್ಚಾ ಗೋಷ್ಠಿಗಳಲ್ಲಿ ಮೂಡಿ ಬಂದ ನವನೀತವೇ ವಚನಗಳಾಗಿ, ಲಿಂಗಾಯತ ನೀತಿ ಸಂಹಿತೆಗಳಾಗಿ ಮೂಡಿಬಂದಿವೆ. ವಚನಸಾಹಿತ್ಯ, ಕನ್ನಡನಾಡಿನ ವಿಶಿಷ್ಟ ಪ್ರಕಾರವಾಗಿ ಕನ್ನಡ ಭಾಷೆಯನ್ನು ಶ್ರೀಮಂತಗೊಳಿಸಿದ್ದು ಇತಿಹಾಸ. ಮಹಾನುಭಾವಿ ಅಲ್ಲಮ ಪ್ರಭುಗಳು ತಮ್ಮ ಜೀವನಾಮೃತಧಾರೆ ಎರೆದು ಬೋಧಿಸಿ, ಆಚರಿಸಿ ತೋರಿದ ಆಧ್ಯಾತ್ಮದ ಮಾರ್ಗ ಶಿವಯೋಗ, ಶಿವಯೋಗದಲ್ಲಿ ಮಂತ್ರ, ಲಯ, ಹಠ, ರಾಜಯೋಗಗಳು ಸಮನ್ವಯಗೊಂಡು ಜಗತ್ತಿನ ಅರಿವಿನ ಮಾರ್ಗಗಳಾಗಿವೆ. ಜೀವ-ಶಿವರ ಸಾಮರಸ್ಯಕ್ಕೆ ಈ ನಾಲ್ಕು ಯೋಗಗಳು ಸಾಧನಗಳಾಗಿವೆ ಎಂದಿದ್ದಾರೆ. ನಿಜಗುಣ ಶಿವಯೋಗಿ ಅವರು. ಈ ನಾಲ್ಕು ಯೋಗಗಳಿಗಿಂತ ಶಿವಯೋಗ

* ಕವಲೇದುರ್ಗ ಅಂಚೆ, ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ-೫೭೭೪೩೨.

ಪರಿಪೂರ್ಣ ಯೋಗ. ಆತ್ಮದ ಅರಿವಿನ ಸರಳ ಮಾರ್ಗ ಎಂದಿದ್ದಾರೆ. ಜ್ಞಾನ, ಭಕ್ತಿ, ಅರ್ಚನೆ, ಧ್ಯಾನ, ವ್ರತಗಳು ಶಿವಯೋಗದ ಐದು ಮುಖ್ಯ ಅಂಗಗಳಾಗಿವೆ. ಶರಣರು ಕಷ್ಟ ಸಾಧ್ಯವಾದ ಅಷ್ಟಾಂಗ ಯೋಗವನ್ನು ತಿರಸ್ಕರಿಸಿರುವುದನ್ನು ಇಲ್ಲಿ ಕಾಣಬಹುದು ಇವುಗಳಿಂದ ಶರೀರದ ಶೋಷಣೆಯೇ ಅಧಿಕ ಎಂದಿದ್ದಾರೆ. "ಅರುಹಿನ ಕುರುಹನರಿಯದೆ ತನುವ ಕರಗಿಸಿ ಮನವ ಬಳಲಿಸಿದರೇನು ಪ್ರಯೋಜನ....ಮನದ ಮಲಿನವು ಹಿಂಗದನ್ನಕ್ಕ," ಎಂದಿದ್ದಾರೆ ತೋಂಟದ ಸಿದ್ಧಲಿಂಗ ಶಿವಯೋಗಿಗಳು, ಅಲ್ಲಮ ಪ್ರಭುಗಳೂ ಶಿವಯೋಗವೇ ಎಲ್ಲ ಯೋಗಗಳಿಗಿಂತ ಶ್ರೇಷ್ಠ ಮತ್ತು ಸುಲಭದ ಮಾರ್ಗ ಎಂದಿದ್ದಾರೆ. ಹಠಯೋಗದ ಸಾಧಕರಾಗಿದ್ದರೂ ಅಲ್ಲಮರು ಶಿವಯೋಗದ ದೃಷ್ಟಿ ಸಾಧನೆಯಲ್ಲಿ, ಸಾಧಕನ ಲಕ್ಷ್ಯ ಮನದ ಕೊನೆಯ ಮೇಲಿರಬೇಕು ಎಂದಿದ್ದಾರೆ. ಅಂಗೈಯಲ್ಲಿರುವ ಇಷ್ಟಲಿಂಗವನ್ನು ದಿಟ್ಟಿಸುತ್ತಾ ಕಾಂತಿಯುಕ್ತ ಮಹಾ ಬೆಳಕಿನ ತುದಿಯನ್ನು ಎಲೆತಾಗದ ನೋಟದಲ್ಲಿ ಅನುಸಂಧಾನದ ತುರಿಯಾವಸ್ಥೆಯನ್ನು ತಲುಪುವ ಮಾರ್ಗ ತೋರಿಸಿದ್ದಾರೆ.

ಅನಿಮಿಷನಿಂದ ಪಡೆದ ಇಷ್ಟಲಿಂಗವನ್ನು ವೇಧಿಸಿ ಕೊಂಡು ಆ ಸರ್ವಾಂಗದಲ್ಲಿ ನಿರ್ವಾಣ ಸಮಾಧಿ ಸಾಧಿಸಿ ಕೊಂಡ (ಸರ್ವಾಂಗದಲ್ಲಿ) ಮಹಾಶರಣರಾಗಿ ಅಲ್ಲಮಪ್ರಭು ದೇವರು ಕಲ್ಯಾಣಕ್ಕೆ ಬರುತ್ತಾರೆ. ಅವರನ್ನು ವಿಶ್ವಗುರು ಬಸವೇಶ್ವರರು, ಹಡಪದ ಅಪ್ಪಣ್ಣ, ಮಡಿವಾಳ ಮಾಚಿತಂದೆ ಸಿದ್ಧರಾಮ ಮುಂತಾದ ಪ್ರಮಥರು, ಅಲ್ಲಮರನ್ನು ಮಹಾಗುರುವೆಂದು ಬರಮಾಡಿಕೊಳ್ಳುತ್ತಾರೆ. ಶಿವಪೂಜೆಯಲ್ಲಿ ನಿರತರಾಗಿದ್ದ ಬಸವಣ್ಣನವರಿಗೆ ಸತ್ಯದರ್ಶನ ಮಾಡಿಸುತ್ತಾರೆ. ಆರೋಗಣೆಯ ಪ್ರಸಂಗವನ್ನು ಹಠಯೋಗದಿಂದ ತೋರಿ ಬಸವಣ್ಣನವರ ಕ್ಷಣಿಕ ಹಮ್ಮನ್ನು ಕಳೆಯುತ್ತಾರೆ.

ನವನಾಥ ಪರಂಪರೆ : ನಾಥಪಂಥದ ಮೂಲದಲ್ಲಿ ಹಠಯೋಗ ಸಾಧನೆಯ ಮಾರ್ಗವಿದೆ. ಅಲ್ಲಮಪ್ರಭುದೇವರು ಸಹ ಹಠಯೋಗದಲ್ಲಿ ಸಿದ್ಧಿ ಪಡೆದ ಸಾಧಕರಾಗಿದ್ದರೆಂಬುದಕ್ಕೆ ಮೇಲಿನೆರಡು ಪ್ರಸಂಗಗಳು ಸಾಕ್ಷಿಯಾಗಿವೆ. ಇಡಾ ಪಿಂಗಳ ನಾಡಿಗಳನ್ನು ಸುಷುಮ್ನನಾಡಿಯಲ್ಲಿ ಕೂಡಿಸಿ ತ್ರಿಕೂಟದ ಲಕ್ಷ್ಯದಲ್ಲಿ ಮನದ ಸಂಚಲನೆಯನ್ನು ನಿಲ್ಲಿಸುವ ಸಾಧನೆಯೇ ಹಠಯೋಗವೆನಿಸಿದೆ. ನವನಾಥಪಂಥದಲ್ಲಿ ಷಡಂಗಗಳಿವೆ. ಒಂಭತ್ತು ಸಿದ್ಧರಲ್ಲಿ ಮತ್ಸೇಂದ್ರನಾಥನೇ ಮೂಲ ಗುರು. ಆದಿನಾಥ ಎಂದರೆ ಶಿವನ ಭೈರವರೂಪ. ನಂತರದ ಏಳು ಸಿದ್ಧರೂ ಸಾಮಾನ್ಯರಿಗೆ ಯೋಗದ ಮೂಲಕ ನಿಜದ ನಿಲವನ್ನು ಸದಾ ಸಂತುಷ್ಟರಾಗಿರುವ ದಾರಿಯನ್ನು ತೋರಿದ್ದಾರೆ. ಹಠಯೋಗ ನಿರಂತರವಾಗಿ ಹರಿಯುವಂತೆ ಸಾಧನೆ ಮಾಡಿದವರು ಸಿದ್ಧರು, ಮಾನವ ಶರೀರವನ್ನು ನಿರೋಗಿಯಾಗಿ ಶಕ್ತಿಶಾಲಿಯಾಗಿರಿಸಿಕೊಳ್ಳಬೇಕೆಂಬುದು ಎಲ್ಲ ಯೋಗಸಿದ್ಧರ ಪರಮುದ್ದೇಶ. ಈ ದೇಹ ದೇವರ ಕೊಡುಗೆ ಅದನ್ನು ನಿರ್ಮಲವಾಗಿರಿಸಿ ಮುಕ್ತಿ ಪಡೆಯಬೇಕು, ಅಜ್ಞಾನಿ ಅವಿವೇಕಿ ಮಾನವ ಅಶುದ್ಧ-ಅನಿಯಮಿತ ಆಹಾರ ವಿಹಾರ ಗಳಿಂದ ವಿಕೃತಗೊಳಿಸುವುದನ್ನು ಸಿದ್ಧರು ಒಪ್ಪುವುದಿಲ್ಲ. ಶರೀರ ವ್ಯಾಧಿಗಳ ತವರು ನಿಜವಾದರೂ, ಪ್ರಕೃತಿಯಲ್ಲಿರುವ ನಾರು-ಬೇರುಗಳ ರೂಪದಲ್ಲಿರುವ ವನಸ್ಪತಿಗಳ ಅನುಪಾನದಿಂದ ತಡೆದು, ರಸ ಮತ್ತು ಧಾತುಗಳ ಭಸ್ಮ ಸೇವನೆಯಿಂದ ಕಾಯಕಲ್ಪ ಮಾಡಿಕೊಂಡು ಶರೀರವನ್ನು ಸ್ವಸ್ಥವಾಗಿ ಬಹುಕಾಲ ಜೀವಿಸಬಹುದು ಎಂದರೆ ಸಾಧಿಸಿ ತೋರಿದ್ದಾರೆ. ನವನಾಥ ಪಂಥದ ಸಿದ್ಧಯೋಗಿಗಳು, ಗೋರಕ್ಷನಾಥ ಮುಂತಾದವರು ಕಾಯಸಿದ್ಧಿಗೆ ಹಠಯೋಗವನ್ನು ಆಸನ ಪ್ರಾಣಯಾಮದ ಸಾತ್ವಿಕ ವಿಧಾನದಿಂದ ಜನಪ್ರಿಯಗೊಳಿಸಿದರು. ಹಠಯೋಗ ಸಾಧನೆಯ ದುರುಪಯೋಗವನ್ನೂ ಅಲ್ಲಲ್ಲಿ ಕಾಣಬಹು ದಾಗಿದೆ.

ಕರ್ನಾಟಕದಲ್ಲಿ ನಾಥಪರಂಪರೆ : ಶುದ್ಧ ಹಠಯೋಗ ವನ್ನು ಸಾಧಿಸಿದ ಅಮರಸಿದ್ಧ ಪರಂಪರೆಯ ಪ್ರವರ್ತಕ ಗೋರಕ್ಷನಾಥ, ಈತನ ಪಂಥದ ೧೨ ಮಠಗಳು ಭಾರತಾದ್ಯಂತ ಜಾಗ್ರತವಾಗಿದ್ದವು. ಕರ್ನಾಟಕದಲ್ಲಿ ಈಗೂ ೧) ಬೆಳಗಾವಿ ಜಿಲ್ಲೆ ಲೋಂಡಾ ಹತ್ತಿರದ ದೇವರಾಯ ನಾಗರಾಳ ಹಂಡೆ ಬಡಗನಾಥ ಮಠ, ೨) ಮಂಗಳಾಶಕ್ತಿ ಪೀಠ ಮಂಗಳೂರಿನ ಕದ್ರಿ (ಕದಳಿ) ಯೋಗಿ ಮಠ, ೩) ಕುಂದಾಪುರ ತಾಲ್ಲೂಕಿನ ಹಿಲೋವರಿಮಠ, ೪) ಕಾರ್ಕಳ ತಾಲ್ಲೂಕಿನ ಸೂಡಾಮಠ, ೫) ಮಂಗಳೂರು (ತಾ) ಹಿಲೋವರಿಮಠ, ೬) ಪುತ್ತೂರು ತಾಲ್ಲೂಕಿನ ವಿಟ್ಲ ಜೋಗಿಮಠ, ೭) ಅನಂತಾಡಿಯೋಗಿ ಮಠ, ೮) ಚಿತ್ರದುರ್ಗ (ತಾ) ಲೊಂಕಿಮಲೆಸಿದ್ಧೇಶ್ವರ ಸ್ವಾಮಿ ಮಠ, ೯) ಮೊಣಕಾಲ್ಮೂರು (ತಾ) ಗಂಗಾಧರ ಸ್ವಾಮಿ ಸಿದ್ಧಪೀಠ ಮತ್ತು ಆದಿಚುಂಚನಗಿರಿಯ ಯೋಗಿಮಠ ಪ್ರಸಿದ್ಧವಾಗಿವೆ.

ನಾಥ ಸಂಪ್ರದಾಯದ ೧೨ ಪಂಥಗಳಲ್ಲಿ "ಕನ್ನಡ" ವೂ ಒಂದು. ಅದು ಮಂಗಳಾ ಶಕ್ತಿ ಪೀಠವಾದ ಮಂಗಳೂರಿನ ಕದ್ರಿ ಮಠದಲ್ಲಿದೆ. ಗುರು-ಶಿಷ್ಯರಾದ ಮತ್ಸೇಂದ್ರ-ಗೋರಕ್ಷನಾಥ ೮ ರಿಂದ ೧೨ನೇ ಶತಮಾನದವರೆಗೂ [ಪರಂಪರೆ] ಮುಂದುವರಿದು ಬಂದಿದೆ. ನಾಥ ಪಂಥೀಯರ ಯೋಗ ದಾರಿತಪ್ಪಿ ವಾಮಾಚಾರದಿಂದ ಪ್ರಭಾವಿತವಾದಾಗ ಅದನ್ನು ತೊಡೆದು ಹಠಯೋಗದ ಶುದ್ಧ ನಡೆಯನ್ನು ಉಳಿಸಿದ ಶ್ರೇಯಸ್ಸು ಗೋರಕ್ಷನಾಥನಿಗೆ ಸಲ್ಲುತ್ತದೆ. ಕುಟಿಲಸಿದ್ಧರು ಅನಾಚಾರಿಗಳಾಗಿ ವರ್ತಿಸುತ್ತಿದ್ದ ೧೧-೧೨ನೇ ಶತಮಾನದ ಚಿತ್ರಣವನ್ನು ಅಲ್ಲಮಪ್ರಭು ದೇವರ ಕೆಳಗಿನ ವಚನದಲ್ಲಿ ಕಾಣಬಹುದು.

"ರಾತ್ರಿಯೆಂಬ ಹುತ್ತಿನೊಳಗೆ ನಿದ್ರೆಯೆಂಬ ರಾಹು, ಹೆಡೆಯನೆತ್ತಿ ಕಚ್ಚಲೊಡನೆ ಅಚಿಜನಾಸಿದ್ಧರ ಅಂಜನವು ಹಾರಿತ್ತು ಘಟಿಕಾಸಿದ್ಧರ ಘಟಿಕೆಯುರುಳಿತ್ತು, ಯಂತ್ರಿಗಳ ಯಂತ್ರ ಹೋಯಿತ್ತು, ಮಂತ್ರಿಗಳ ಮಂತ್ರ ಮರೆತು ಹೋಯಿತ್ತು ಔಷಧಿಗಳ ಔಷದವನಾರಡಿಗೊಂಡಿತ್ತು, ಸರ್ವ ವಿದ್ಯಾ ಮುಖದ ಜ್ಯೋತಿ ನಂದಿತ್ತು. ಈ ವಿಷದ ಲಹರಿಯಲ್ಲಿ ಮೂರು ಲೋಕದವರೆಲ್ಲರೂ ಮೂರ್ಛಿತರಾದರು ಕಾಣಾ ಗುಹೇಶ್ವರಾ !"

ವಾಮಾಚರಣೆಯನ್ನು ಪ್ರತಿಭಟಿಸಿದ ಲಿಂಗಾಯತ ಜಂಗಮಮಠಗಳು ಸಾತ್ವಿಕ ಪೂಜೆ, ಸಾಧನೆಯ ಮಾರ್ಗ ತೋರಿದುವು. ಕುಟಿಲಸಿದ್ಧರ ನಡೆಯನ್ನು ನಿಜಗುಣ ಶಿವಯೋಗಿಗಳು, ಜಂಗಮಮಠಗಳು ಮತ್ತು ಅಲ್ಲಮಪ್ರಭು ದೇವರು ನಿರಾಕರಿಸಿರುವುದನ್ನು ಕಾಣಬಹುದು.

ಅಲ್ಲಮಪ್ರಭು ಮತ್ತು ಗೋರಕ್ಷನಾಥರ ಪ್ರಸಂಗ ಐತಿಹಾಸಿಕವಾಗಿದೆ. ಹನ್ನೆರಡನೆ ಶತಮಾನದಲ್ಲಿದ್ದ ರೇವಣಸಿದ್ಧ, ಮರುಳಸಿದ್ಧ, ಅಲ್ಲಮಪ್ರಭುದೇವರು, ನಾಥಸಿದ್ಧರನ್ನು ಸಂಧಿಸಿದ ಪ್ರಕರಣಗಳು ಪುರಾಣಗಳಲ್ಲಿ ವರ್ಣಿತವಾಗಿವೆ. ಇಲ್ಲಿ ಅಲ್ಲಮಪ್ರಭುದೇವರೊಂದಿಗೆ ಮುಖಾಮುಖಿಯಾದ ಗೋರಕ್ಷ ಯಾರು ? ಎಂಬ ಪ್ರಶ್ನೆ ಸಂಶೋಧಕರನ್ನು ಕಾಡಿದೆ. ಎಲ್ಲ ಕಾಲದೇಶಗಳಲ್ಲಿಯೂ ಗೋರಕ್ಷನೆಂಬ ನಾಥ ಪರಂಪರೆಯ ವ್ಯಕ್ತಿ ಕಂಡುಬರುತ್ತಾರೆ. ವಚನ ಪಿತಾಮಹ, ಸಂಶೋಧಕ ಶ್ರೀ. ಫ.ಗು. ಹಳಕಟ್ಟಿ ಅವರ ಪ್ರಕಾರ ಗೋರಕ್ಷ ಎಂಬುವನು ಪಟ್ಟದಕಲ್‌ನಲ್ಲಿ ಗೋವುಗಳ ಪಾಲಕನಾಗಿದ್ದ. ಅವನು ಸಿದ್ಧಿಗಳನ್ನು ಪಡೆಯಲು ಕೊಲ್ಲಾಪುರಕ್ಕೆ ಬಂದು ನಾಥಪಂಥದ ಪ್ರಭಾವದಿಂದ ರಸಸಿದ್ಧನಾದ. ಶ್ರೀ ಶೈಲಕ್ಕೆ ಬಂದು ಕಾಯಸಿದ್ಧಿ ಪಡೆದು ವಜ್ರದೇಹಿಯಾದ ೧೨ನೇ ಶತಮಾನದ ಅಲ್ಲಮ ಪ್ರಭುವಿನೊಂದಿಗೆ ಮುಖಾಮುಖಿಯಾಗಿ ಪರಾಜಯ ಗೊಂಡು ಯೋಗದೀಕ್ಷೆ ಪಡೆದು ಶರಣನಾದ ಎಂದಿದ್ದಾರೆ.

ಚಾಮರಸನ ಪ್ರಭುಲಿಂಗಲೀಲೆಯಲ್ಲಿ ವಜ್ರದೇಹಿಯಾದ ಗೋರಕ್ಷನ ಅಹಂನ್ನು ಅಲ್ಲಮಪ್ರಭು ನಿರಸನಗೊಳಿಸಿದ ಪ್ರಸಂಗದ ಉಲ್ಲೇಖವಿದೆ. ವಜ್ರದೇಹದಿಂದ ದೇಹಸಿದ್ಧಿ ಮಾತ್ರ ಅದು ಮುಕ್ತಿ ಮಾರ್ಗವಲ್ಲ ಎಂಬ ಸತ್ಯದ ಮಾರ್ಗ ತೋರುತ್ತಾರೆ. ಅಲ್ಲಮಪ್ರಭುವಿನ ಶರೀರದ ಮೇಲೆ ಪ್ರಯೋಗಿಸಿದ ಗೋರಕ್ಷನ ಕತ್ತಿ ಆತನ ದೇಹಕ್ಕೆ ತಾಗಲೇ ಇಲ್ಲ. ಬಯಲಿನಲ್ಲಿ ಖಡ್ಗ ಬೀಸಿದಂತಾಯಿತು. ಇದನ್ನು ಕಂಡು ಬೆರಗಾದ ಗೋರಕ್ಷನಿಗೆ ತನ್ನ ದೇಹದ ಮೇಲಿನ ಅಭಿಮಾನ ಇಲ್ಲವಾಗುತ್ತದೆ. ಅಲ್ಲಮನ ಸೂಚನೆಯಂತೆ ಲಿಂಗದೀಕ್ಷೆ ಪಡೆದು ಲಿಂಗದೇಹಿಯಾಗಿ ವಚನಗಳನ್ನು ರಚಿಸಿದ್ದಾನೆ. ಗೋರಕ್ಷನ ವಚನಗಳು ಸಮಗ್ರವಚನ ಸಂಪುಟದಲ್ಲಿ ಪ್ರಕಟವಾಗಿವೆ. ಆತನ ವಚನಾಂಕಿತ "ಗೋರಕ್ಷ ಪಾಲಕ ಮಹಾಪ್ರಭು ಸಿದ್ಧ ಸೋಮನಾಥ ಲಿಂಗ" ಎಂದು ದೀರ್ಘವಾಗಿರುವುದು ವಿಶೇಷ. ಗೋರಕ್ಷನಾಥರ ೧೧ ವಚನಗಳು ಸಮಗ್ರ ವಚನ ಸಂಪುಟದಲ್ಲಿ ಪ್ರಕಟವಾಗಿದೆ. ಏಕದೇವ ನಿಷ್ಠೆ, ಆತ್ಮಸಿದ್ಧಿ ಈತನ ವಚನಗಳ ಆಶಯ. ಗಹನವಾದ ಆಧ್ಯಾತ್ಮಿಕ ಅನುಭವಗಳಿಂದ ಕೂಡಿದ ಗೋರಕ್ಷನ ಬೆಡಗಿನ ವಚನಗಳನ್ನು ಅರಿಯುವುದು, ಅರ್ಥೈಸುವುದು ಸುಲಭ ಸಾಧ್ಯವಲ್ಲ.

"ಹಿಟ್ಟಿನಲೆಪ್ಪದಲ್ಲಿ ಚಿತ್ರದ ಕರ ಚರಣಾದಿಗಳ ಮಾಡಿ ತುಪ್ಪದ ಮಧುರದ ಸಾರವ ಕೂಡಿ, ಸುಟ್ಟು ಮೆದ್ದಲ್ಲಿ ಕಿಚ್ಚಿನಲ್ಲಿ ಮತ್ತೆ ಕೈಕಾಲಿನ ಚಿತ್ರದ ಬಗೆಯುಂಟೆ? ಇದು ನಿಶ್ಚಯ ವಸ್ತು ಸ್ವರೂಪು. ಮರ್ತ್ಯದ ದೃಕ್ಕು ದೃಶ್ಯಕ್ಕೆ ನಿಶ್ಚಯವಾಗಿಹನು. ಏಕಲಿಂಗ ನಿಷ್ಠವಂತರಲ್ಲಿ ಕಟ್ಟಳೆಯಾಗಿಹನು. ಆತ್ಮಲಕ್ಷ ನಿರ್ಲಕ್ಷ ಗೋರಕ್ಷ ಪಾಲಕ ಮಹಾಪ್ರಭು ಸಿದ್ಧ ಸೋಮನಾಥ ಲಿಂಗವು". ಗೋ.ವ.ಸಂ. ೪೦೧/೧೧.

ಆತ್ಮ ಸಿದ್ಧಿಯನ್ನು ಸಾಧಿಸಲು ವಜ್ರಕಾಯನಾದರೆ ಸಾಲದು, ನಾನಾ ವಿದ್ಯೆ, ಚಮತ್ಕಾರಗಳನ್ನು ಕಲಿತರೂ ಆಗದು ಶರೀರವನ್ನು ಅಂತರಂಗ ಬಹಿರಂಗದಲ್ಲಿ ಶುದ್ಧವಾಗಿರಿಸಿ ಕೊಂಡು, ಶಿವಯೋಗ ಸಾಧನೆಯಲ್ಲಿ ತೊಡಗಬೇಕು. ಹಿಟ್ಟಿನ ಮುದ್ದೆಯಲ್ಲಿ ಚಿತ್ರದ ಕೈಕಾಲು ಮಾಡಿ ಮಧುರವಾದ ತುಪ್ಪದ ಸಾರವನ್ನು ಸೇರಿಸಿ ಬೆಂಕಿಯಲ್ಲಿ ಸುಟ್ಟು ತಿಂದರೆ, ಕಿಚ್ಚಿನಲ್ಲಿ ಮತ್ತೆ ಚಿತ್ರ ಕಾಣಲಾರದು ಎಂಬ ರೂಪಕದ ಮೂಲಕ ಆಧ್ಯಾತ್ಮದ ನಿಜದ ನಿಲುವನ್ನು ಶಿವಯೋಗದ ರಹಸ್ಯವನ್ನು ತಿಳಿಸಿದ್ದಾನೆ ಗೋರಕ್ಷನಾಥ. "ವಿಷಕ್ಕೆ ಅಂಜುವವರಲ್ಲದೆ ಸರ್ಪಕ್ಕೆ ಅಂಜುವರುಂಟೇ ?" "ಕೊಲುವ ವ್ಯಾಘ್ರನಂಗೆ ಅಂಜುವರಲ್ಲದೆ ಸುಲಿದ ಬಣ್ಣಕ್ಕೆ ಅಂಜುವರುಂಟೇ ?" ಎಂಬ ಸಾಮತಿಗಳನ್ನು ತಮ್ಮ ವಚನಗಳಲ್ಲಿ ಪರಿಣಾಮಕಾರಿಯಾಗಿ ಬಳಸಿದ್ದಾರೆ.

ಸಿದ್ಧ ಸಾಧಕರ ಕೇಂದ್ರವಾಗಿದ್ದ ಶ್ರೀಶೈಲಗಿರಿಯಲ್ಲಿ ನಾಥ ಸಂಪ್ರದಾಯದ ಅನೇಕ ಯೋಗಿಗಳು ಗುಹಾವಾಸಿ ಗಳಾಗಿ ಹಠಯೋಗ, ಕುಂಡಲಿನಿ ಸಾಧನೆ ಮಾಡುತ್ತಿದ್ದರು. ವಜ್ರದೇಹಿಯಾಗಿ ತನ್ನ ಶಕ್ತಿ ಪ್ರದರ್ಶನ ಮಾಡಿದ ಗೋರಕ್ಷನಿಗೆ ತಮ್ಮ ಬಯಲು ದೇಹಸಿದ್ಧಿಯನ್ನು ತೋರಿದ ಅಲ್ಲಮಪ್ರಭು ಅನಿಮಿಷ ದೃಷ್ಟಿ ಯೋಗವನ್ನು ತಿಳಿಸುತ್ತಾರೆ. ತನ್ನ ಗುರು ಆದಿನಾಥನೇ, ಅಲ್ಲಮಪ್ರಭುವಿನ ವೇಷದಲ್ಲಿ ಬಂದಿರುವನೆಂದು ಗೋರಕ್ಷ ಶರಣಾಗುತ್ತಾನೆ. ಲಿಂಗಾಂಗ ಸಾಮರಸ್ಯದ ಶಕ್ತಿಯನ್ನು ರಹಸ್ಯವನ್ನು ತಿಳಿದು ಲಿಂಗದೀಕ್ಷೆ ಪಡೆಯುತ್ತಾನೆ. ಮಹಾರಾಷ್ಟ್ರದ ಸಂತ ಜ್ಞಾನೇಶ್ವರರೂ ಗೋರಕ್ಷನ ಶಿವಯೋಗಸಿದ್ಧಾಂತ ಮತ್ತು ಅಲ್ಲಮರ ಅಂತರಂಗ-ಬಹಿರಂಗ ಶುದ್ಧಿ ಅನಿಮಿಷ ದೃಷ್ಟಿಗಳಿಂದ ಪ್ರಭಾವಿತರಾಗಿದ್ದಾರೆ.

"ನಿಮ್ಮಲ್ಲಿ ನೀವು ತಿಳಿದು ನೋಡಿರೆ ಅನ್ಯವಿಲ್ಲ ಕಾಣಿರಣ್ಣಾ! ಅರಿವು ನಿಮ್ಮಲ್ಲಿಯೇ ತದ್ಗತವಾಗಿದೆ ಅನ್ಯಭಾವವ ನೆನೆಯದೆ ತನ್ನೊಳಗೆ ತಾನೆ ಎಚ್ಚರವಿಬಲ್ಲರೆ ತನ್ನಲ್ಲಿಯೆ, ತನ್ಮಯ ಗುಹೇಶ್ವರಲಿಂಗವು" ಎಂದಿದ್ದಾರೆ ಅಲ್ಲಮಪ್ರಭು.

"ಕರಿಯ ತಲೆಯ ಅರಮನೆಯ ಸುರಧೇನು ಹಯನಾಯಿತ್ತು. ಕರೆದುಂಬಾತಂಗೆ ಕೈಕಾಲಿಲ್ಲ, ಕರು ನಾಲ್ವೆರಳಿನ ಪ್ರಮಾಣದಲ್ಲಿಹುದು ಇದ ಕರೆದುಂಬಾತನೆ ದೇವ ಗುಹೇಶ್ವರ" ಎಂಬುದು ಅಲ್ಲಮಪ್ರಭುವಿನ ಯೋಗಸಾಧನೆಯ ಬೆಡಗಿನ ನುಡಿ, ಇದಕ್ಕೆ ಸಂವಾದಿಯಾಗಿ ಗೋರಖನಾಥನು ಸಂಧಾಭಾಷೆಯಲ್ಲಿ ವಚನ ರಚಿಸಿದ್ದಾನೆ. "ಗಗನ ಮಂಡಲದಲ್ಲಿಯ ನಾದಾನು ಸಂದಾನದ ಅಮೃತವ ಸವಿದು ನಿತ್ಯ ತೃಪ್ತನಾದ ಶಿವಯೋಗಿಯ ನಿಬ್ಬೆರಗಿನ ಬಗೆಯನ್ನು" ಗೋರಕ್ಷ ಮತ್ತು ಅಲ್ಲಮರೀರ್ವರೂ ಒಂದೇ ರೀತಿ ಅನುಭವಿಸಿ, ಅಭಿವ್ಯಕ್ತಿಸಿದ್ದಾರೆ. "ಗಗನ ಮಂಡಲದ ಸೂಕ್ಷ್ಮನಾಳದಲ್ಲಿ ಸೋಹಂ ಸೋಹಂ ಎನ್ನುತ್ತಿದ್ದಿತು ಒಂದು ಬಿಂದು, ಅಮೃತದ ವಾರಿಯ ದಣಿಯುಂಡ ತೃಪ್ತಿಯಿಂದ ಗುಹೇಶ್ವರ, ನಿಮ್ಮಲ್ಲಿಯೆ ಎನಗೆ ನಿವಾಸವಾಯಿತ್ತು". ಪ್ರಭುದೇವರ ವಚನಗಳಲ್ಲಿ ನವನಾಥಸಿದ್ಧರು ಮತ್ತು ಅವರ ಹಠಯೋಗ ಹಾಗೂ ವೇಷಭೂಷಣಗಳ ಬಗೆಗೆ ಸಾಕಷ್ಟು ಉಲ್ಲೇಖಗಳಿವೆ.

ಪ್ರಸ್ತುತ ಗೋರಕ್ಷಪಂಥದ ಪ್ರಸಿದ್ಧ ಕ್ಷೇತ್ರಗಳಾದ ಕೇದಾರನಾಥ, ನೇಪಾಳದ ಪಶುಪತಿನಾಥ ರಾಜಸ್ಥಾನದ ಏಕಲಿಂಗೇಶ್ವರ ಮುಂತಾದ ದೇವಾಲಯಗಳಲ್ಲಿ ಕರ್ನಾಟಕದ ಲಿಂಗಾಯುತ ಪರಂಪರೆಯ ಸ್ಥಾನಪತಿಗಳ ರೂಪದಲ್ಲಿ ಆಡಳಿತ ನಡೆಸುತ್ತಿರುವುದು ಮಹತ್ವದ ಸಂಗತಿಯಾಗಿದೆ. ಇವರನ್ನು ಕೇದಾರದಲ್ಲಿ ರಾವಲ್ ಎಂದೂ, ಕೆಲವು ಕಡೆ ಗೋಸಾಯಿಗಳೆಂದೂ ಕರೆಯುತ್ತಾರೆ. ಗೋರಕ್ಷನಾಥನು ನೇಪಾಳ, ರಾಜಸ್ಥಾನ, ಪಂಜಾಬ್, ಬಂಗಾಳ, ಸಿಂಧ್ ಮತ್ತು ದಕ್ಷಿಣ ಭಾರತದಲ್ಲಿ ಸಂಚರಿಸಿದ ದಂತಕಥೆಗಳು, ಪವಾಡಗಳು ಜನಪದರ ಹಾಡುಗಳ ಮೂಲಕ ಜನಜನಿತವಾಗಿವೆ. ನೇಪಾಳದ ರಾಜರ ಕುಲದೇವರು ಗೋರಖನಾತರು, ನಾಥಪರಂಪರೆಯಲ್ಲಿ ಜೋಗಿಣಿಯರೂ ಸಾಧಕರಾಗಿದ್ದಾರೆ. ಉಗ್ರ ಸಾಧಕರಾದ ನಾಥಪಂಥೀಯರು ಸೌಮ್ಯ ಸಾಧಕರಾಗುವ ಹಂತದಲ್ಲಿ ಅಲ್ಲಮಪ್ರಭುವಿನ ಸಂಪರ್ಕದಿಂದಾಗಿ ಲಿಂಗಾಯುತ ತತ್ವಗಳಿಂದ ಪ್ರಭಾವಿತರಾಗಿರುವುದು ಮಹತ್ವದ ಸಂಗತಿಯಾಗಿದೆ. ಮಹಾರಾಷ್ಟ್ರದ ಸಂತ ಜ್ಞಾನದೇವನೂ ಸಹ ತನ್ನ ಗ್ರಂಥಗಳಲ್ಲಿ ಷಡ್ವಿಧಲಿಂಗಗಳ ವರ್ಣನೆ ಮಾಡಿರುವುದು ಈ ಮಾತಿಗೆ ಸಾಕ್ಷಿಯಾಗಿದೆ. ನಾಥಪಂಥದಿಂದ ಹುಟ್ಟಿದ "ವಾರಕರಿ" ಪಂಥವೂ ಲಿಂಗವಂತ ಧರ್ಮದಿಂದ ಪ್ರಭಾವಿತವಾಗಿ ಲಿಂಗವಂತ ತತ್ವಗಳನ್ನು ಅಳವಡಿಸಿಕೊಂಡಿರುವುದನ್ನು ಕಾಣಬಹುದು.

ಅಲ್ಲಮಪ್ರಭುಗಳ ವಚನಗಳಲ್ಲಿ ಶೈವಾಗಮಗಳ ಕ್ರಮವಿಡಿದ ಷಟ್‌ಸ್ಥಲಾಚರಣೆಯ ಅನುಭಾವವಿದೆ. ಇನ್ನುಳಿದ ಶರಣರ ವಚನಗಳಿಗಿಂತಲೂ ವಿಶಿಷ್ಟವಾಗಿದ್ದು ನಿಗೂಢವಾಗಿವೆ. ಸಗುಣ-ನಿರ್ಗುಣ ಸಮನ್ವಯ ತತ್ವ ಪೂರ್ಣ ಸಾಕಾರದ ಕುರುಹು ಹಿಡಿದ ನಿರಾಕಾರ ಪ್ರಾಪ್ತಿಯ ಅಪೂರ್ವ ಯೋಗ ಷಟ್‌ಸ್ಥಲದ ಅಂತಿಮ ಮೆಟ್ಟಿಲು ತುತ್ತತುದಿಯನ್ನು ಸಾಧಿಸಲು ಇಷ್ಟಲಿಂಗ ಪೂಜೆಯೇ ಮೊದಲ ಮೆಟ್ಟಿಲು ಎಂದಿದ್ದಾರೆ. ಶಿವಯೋಗದ ಸಾಧನೆಯಲ್ಲಿ ಬಹಿರಂಗ ಪೂಜೆಗಿಂತ, ಅನಿಮಿಷ ದೃಷ್ಟಿಯೋಗದ ಅಂತರಂಗ ಪೂಜೆಗೆ ಆದ್ಯತೆ. ಅಲ್ಲಮಪ್ರಭು ಮತ್ತು ಗೋರಕ್ಷನಾಥರೀರ್ವರೂ ಜೋತಿರ್ಲಿಂಗದಲ್ಲಿ, ನಿರ್ಗುಣಾರಾಧನೆಯ ಮಹತ್ವವನ್ನು ಸ್ವತಃ ಅನುಭವಿಸಿ, ಏಕಮುಖವಾಗಿ ಬೋಧಿಸಿದ ಮಹಂತರು, ಮಹಾಯೋಗಿಗಳು, ಅಲ್ಲಮಪ್ರಭುದೇವರು ಸಿದ್ಧ ಶಿವಯೋಗಿ ಮಾತ್ರವಲ್ಲದೆ ಬಹುಶ್ರುತ ವಿದ್ವಾಂಸರೂ ಆಗಿದ್ದರು.

ಆಧಾರಸೂಚಿ

೧. ಡಾ. ಗುರುಲಿಂಗ ಕಾಪಸೆ, **'ಚಿಂತಾಮಣಿ'** ೨೦೧೦, ಪ್ರ. ಮಲೆನಾಡು ಲಿಂಗಾಯುತ ಅಧ್ಯಯನ ಪೀಠ, ಆನಂದಪುರ, ಶಿವಮೊಗ್ಗ ಜಿಲ್ಲೆ.

ಅಣ್ಣಿಗೇರಿಯ ಪುರದ ವೀರಭದ್ರ ದೇವಾಲಯ : ಮೂಲತಃ ಶಿವಾಲಯ

ಡಾ. ಹೆಚ್. ಚಂದ್ರಶೇಖರ*

ಮುನ್ನುಡಿ


ಇಂದಿನ ಧಾರವಾಡ ಜಿಲ್ಲೆಯ ನವಲಗುಂದ ತಾಲ್ಲೂಕಿನಲ್ಲಿರುವ ಅಣ್ಣಿಗೇರಿಯು ಒಂದು ಪುರಾತನ ನಗರ. ಇಂದು ಇದು ತಾಲ್ಲೂಕು ಕೇಂದ್ರವಾಗಿರದಿದ್ದರೂ, ವಾಣಿಜ್ಯ ಹಾಗೂ ವಿದ್ಯಾಸಂಸ್ಥೆಗಳಿಗಾಗಿ ಹೆಸರುವಾಸಿಯಾಗಿದೆ. ಇದರ ಜನಸಂಖ್ಯೆ ಈಗ ಸುಮಾರು ೩೦,೦೦೦. ಇಲ್ಲಿಂದ ಒಟ್ಟು ೨೪ ಶಿಲಾಶಾಸನಗಳು ವರದಿಯಾಗಿವೆ (SII Vol. xv)[೧]. ಈ ಊರನ್ನು ಶಾಸನಗಳಲ್ಲಿ ಬೆಳುವಲನಾಡಿನ ರಾಜಧಾನಿ ಪಟ್ಟಣವೆಂದೂ, ಅಣ್ಣಿಗೇರಿ ಎಂದೂ, ಅನ್ನ ತಟಾಕವೆಂದೂ, ದಕ್ಷಿಣದ ವಾರಾಣಾಸಿಯೆಂದೂ ಹೆಸರಿಸಲಾಗಿದೆ. ಬೇರೆ ಬೇರೆ ಶಾಸನಗಳಲ್ಲಿ ಈ ಊರಿನ ದೇವಾಲಯಗಳ ಹೆಸರುಗಳನ್ನು ಉಲ್ಲೇಖಿಸಲಾಗಿದೆ. ಅಮೃತೇಶ್ವರ, ಧೋರೇಶ್ವರ, ನಾಗೇಶ್ವರ, ಚಂಡಿಕಾ ದೇವಾಲಯಗಳು ಉಲ್ಲೇಖಗೊಂಡಿದ್ದರೂ ಅಮೃತೇಶ್ವರ ದೇವಾಲಯವನ್ನು ಈಗಲೂ ನೋಡಬಹುದಾಗಿದೆ.

ಚಂಡಿಕಾ ದೇವಾಲಯ ಈಗ ಇಲ್ಲ. ಹಾಗೆಯೇ ಶಾಸನೋಕ್ತ ಬಸದಿಗಳಿಲ್ಲ. ಈಗ ಇರುವುದು ಪಾರ್ಶ್ವನಾಥ ಬಸದಿ.[೨] ಶಾಸನಸಂಖ್ಯೆ ೯೬ (ಕ್ರಿ.ಶ. ೧೧೫೭)ರಲ್ಲಿ ಉಲ್ಲೇಖಿಸಲ್ಪಟ್ಟ ಧೋರೇಶ್ವರ ದೇವಾಲಯವೂ ಇಲ್ಲ.[೩] ಅಣ್ಣಿಗೇರಿಯಲ್ಲಿ ಸಧ್ಯ ಅಮೃತೇಶ್ವರ ದೇವಾಲಯದ ನಂತರ ಪ್ರಮುಖ ಗುಡಿಯೆಂದರೆ ಪುರದ ವೀರಭದ್ರೇಶ್ವರ ದೇವಾಲಯ ಈ ಪುರದ ವೀರಭದ್ರೇಶ್ವರ ಅಥವಾ ಪುರದ ವೀರಭದ್ರ ದೇವಾಲಯವೇ ಪ್ರಸ್ತುತ ಪ್ರಬಂಧದ ವಸ್ತುವಾಗಿದೆ.

ಪುರದ ವೀರಭದ್ರ ದೇವಾಲಯ

ಅಣ್ಣಿಗೇರಿಯ ಮುನ್ಸಿಪಾಲ್ಟಿಯ ಹಿಂಭಾಗದಲ್ಲಿರುವ ದೇವಾಲಯವನ್ನು ಪುರದ ವೀರಭದ್ರ ದೇವಾಲಯವೆಂದೂ, ಪುರಧೀಶ್ವರ ದೇವಾಲಯವೆಂದು ಸ್ಥಳೀಯರು ಕರೆಯುತ್ತಾರೆ. ಈ ದೇವಾಲಯವು ಕಲ್ಯಾಣ ಚಾಳುಕ್ಯ ಶೈಲಿಯ ದೇವಾಲಯವಾಗಿದ್ದು, ಕಾಲಾಂತರದಲ್ಲಿ, ಅದರಲ್ಲೂ ವಿಶೇಷವಾಗಿ ಕ್ರಿ.ಶ. ೧೯೬೫ರಲ್ಲಿ (ಶಕೆ ೧೮೮೭) ಬಹಳ ಬಗೆಯ ಬದಲಾವಣೆಗಳನ್ನು ಈ ದೇವಾಲಯದ ರಚನೆಯಲ್ಲಿ ಸ್ಥಳೀಯ ಜನರು ತಂದಿದ್ದಾರೆ. ಮೂಲದಲ್ಲಿದ್ದ ಗರ್ಭಗುಡಿ, ನವರಂಗದ ಒಳರಚನೆಯನ್ನು ಉಳಿಸಿಕೊಂಡಿದ್ದಾರೆ. ಆದರೆ ಒಂದು ದೊಡ್ಡದಾದ ಸಭಾಮಂಟಪವನ್ನು ಜೋಡಿಸಲಾಗಿದೆ. ಈ ದೇವಾಲಯದ ಪ್ರಸ್ತುತ ತಲವಿನ್ಯಾಸವನ್ನು ಚಿತ್ರ ಒಂದರಲ್ಲಿ ಕೊಟ್ಟಿದ್ದೇನೆ.

ಈ ಗುಡಿಯು ಪೂರ್ವಾಭಿಮುಖವಾಗಿದೆ. ಮೆಟ್ಟಲುಗಳನ್ನು ಹತ್ತಿದಾಗ ಸಿಗುವುದೇ ಹೊಸ ಸಭಾಮಂಟಪ. ಇದರ ಕಂಬಗಳನ್ನು ಬಾದಾಮಿಯ ತಿಳಿಗೆಂಪು ವರ್ಣದ ಮರಳಗಲ್ಲಿನಿಂದ ನಿರ್ಮಿಸಲಾಗಿದೆ. (Light Pink coloured



ಪುರದ ವೀರಭದ್ರ ದೇವಾಲಯದ ತಲವಿನ್ಯಾಸ (ಚಿತ್ರ ೧)

* 'ಸಂಗಮ', ಎಮ್ ಐ.ಜಿ -೭೭, ೩ನೇ ಕ್ರಾಸ್, ೩ನೇ ಮೇನ್, ಕೆ.ಹೆಚ್.ಬಿ. ಕಾಲೋನಿ, ಬಸವೇಶ್ವರನಗರ, ಬೆಂಗಳೂರು-೫೬೦೦೭೯



ಹೊಸದಾಗಿ ನಿರ್ಮಿಸಿ ಸೇರಿಸಲಾಗಿರುವ ಸಭಾಮಂಟಪ. ಕಂಬಗಳನ್ನು ಬಾದಾಮಿಯ ತಿಳುಗೆಂಪು ವರ್ಣದ ಮರಳುಗಲ್ಲಿನಿಂದ ಕಟೆಯಲಾಗಿದೆ (ಚಿತ್ರ ೨)



ಕದಂಬ ನಾಗರ ಶೈಲಿಯ ಗೋಪುರ ಗರ್ಭಗುಡಿಯ ಮೇಲೆ (ಚಿತ್ರ ೩)




ಹೊಸ ಮಂಟಪದ ಎಡಗೋಡೆಯಲ್ಲಿ ಜೋಡಿಸಲಾಗಿರುವ ವಿಜಯನಗರ ಶೈಲಿಯ ನೃತ್ಯಶಿಲ್ಪ (ಚಿತ್ರ ೪)



ಕಲ್ಯಾಣ ಚಾಳುಕ್ಯ ಶೈಲಿಯ ಪುರಾತನ ಬಾಗಿಲು ಚೌಕಟ್ಟು ನಿಂತಿರುವ ಈಗಿರುವ ಪೂಜಾರಿಯ ಮಗ (ಚಿತ್ರ ೫)



ರಂಗಮಂಟಪದಲ್ಲಿರುವ ಚಾಳುಕ್ಯ ಶೈಲಿಯ ನಾಲ್ಕು ಕಂಬಗಳಲ್ಲಿ ಒಂದು ಕಂಬ (ಚಿತ್ರ ೬)



ರಂಗಮಂಟಪದಲ್ಲಿರುವ ಛತ್ತಿನಲ್ಲಿರುವ ಭುವನೇಶ್ವರಿಯಲ್ಲಿರುವ ಸುಂದರ ಕಮಲದ ಶಿಲ್ಪ (ಚಿತ್ರ ೭)




ಕ್ರಿ.ಶ. ೧೯೬೫ರಲ್ಲಿ ಸ್ಥಾಪಿಸಲಾದ ಹೊಸ ನಂದಿ ಶಿಲ್ಪ (ಚಿತ್ರ ೮)



ಕಲ್ಯಾಣ ಚಾಳುಕ್ಯ ಶೈಲಿಯ ನಂದಿ ಶಿಲ್ಪ ಸಧ್ಯ ಆಲದಮರದ ಕಟ್ಟೆಯ ಮೇಲೆ ತಂದಿಡಲಾಗಿದೆ. ೧೯೬೫ರಲ್ಲಿ ಸ್ಥಳಾಂತರಗೊಂಡಿದೆ ಈ ಶಿಲ್ಪ (ಚಿತ್ರ ೯)



(ಚಿತ್ರ ೧೦)



(ಚಿತ್ರ ೧೧)

sand stone pillars) ಗರ್ಭಗುಡಿಯ ಮೇಲಿನ ಗೋಪುರ ಸುಂದರ ಕದಂಬ ನಾಗರ ಶೈಲಿಯಲ್ಲಿದೆ. ರಂಗ ಮಂಟಪದ ಕುಂಬಿಗಳಲ್ಲಿ ಸುಂದರ ಶಿಲ್ಪಗಳನ್ನು ಜೋಡಿಸಲಾಗಿದೆ. ಈ ದೇವಾಲಯದ ಹೊಸ ಸಭಾ ಮಂಟಪದ ಪಶ್ಚಿಮ ಗೋಡೆಯ ಮೇಲೆ ಹಾಗೂ ದಕ್ಷಿಣದ ಹೊರಗೋಡೆಯ ಮೇಲೆ ಮಿಥುನ ಶಿಲ್ಪಗಳ ಉಬ್ಬು ಶಿಲ್ಪಗಳನ್ನು (Relief Figures) ಕೆತ್ತಲಾಗಿದೆ. ಒಟ್ಟು ೧೪ ಮಿಥುನ ಶಿಲ್ಪಗಳಿವೆ. ಸಭಾಮಂಟಪದ ಒಳಗಿನ ಉತ್ತರ ಗೋಡೆಯಲ್ಲಿ ವಿಜಯನಗರ ಶೈಲಿಯ ಉಬ್ಬು ಶಿಲ್ಪ ಸುಂದರವಾಗಿದೆ. ಈಶ್ವರಲಿಂಗ ಶಿಲ್ಪದ ಮುಂದೆ ದೇವದಾಸಿಯೂ ನರ್ತಿಸುತ್ತಿದ್ದಾಳೆ. ಸಂಯೋಜನೆಯ ದೃಷ್ಟಿಯಿಂದ ಇದೊಂದು ಉತ್ತಮ ಕಲಾಕೃತಿ. ಈ ಹೊಸ ಸಭಾ ಮಂಟಪದ ನೆಲವನ್ನು (Floor) ಹೊಳಪು ನೀಡಿದ ಕಲ್ಲಿನ ಫಲಕಗಳಿಂದ ಸಿಂಗರಿಸಲಾಗಿದೆ. ಆದರೆ ಈ ಬಗೆಯ ಹೊಳಪು ನೀಡಲಾದ ಹಾಸುಗಲ್ಲುಗಳು ಸ್ಟಾರ್ ಹೋಟೆಲ್‌ನ ಬಾತರೂಮನ್ನು ನೆನೆಪಿಸುತ್ತವೆ !! ಇದೊಂದು ಇತ್ತೀಚೆಗೆ ಬೆಳೆಯುತ್ತಿರುವ ಕೆಟ್ಟ ಅಭಿರುಚಿ.

ಈ ಸಭಾಮಂಟಪದ ಪಶ್ಚಿಮದಲ್ಲಿ ಸುಂದರ ಕೆತ್ತನೆಯುಳ್ಳ ಕಲ್ಯಾಣ ಚಾಳುಕ್ಯ ಶೈಲಿಯ ದ್ವಾರಬಂಧ ಇದೆ (ಬಾಗಿಲು ಚೌಕಟ್ಟು) ಇದರ ಎತ್ತರ ಸುಮಾರು ಐದು ಅಡಿಗಳಷ್ಟು, ತಲೆಕಟ್ಟಿನಲ್ಲಿ ಗಜಲಕ್ಷ್ಮಿ ಶಿಲ್ಪ ಇದೆ. ಒಟ್ಟಿನಲ್ಲಿ ಇದೊಂದು ಸುಂದರ ಕಲಾಕೃತಿ, ಬಳಪದ ಕಲ್ಲಿನಲ್ಲಿ ಅರಳಿದೆ. ಈ ಬಾಗಿಲಿನಿಂದ ಪ್ರವೇಶಿಸಿದರೆ ಸಿಗುವುದೇ ನವರಂಗ. ಈಗ ನೋಡಲು ಸಿಗುವ ನಾಲ್ಕು ಕಂಬಗಳನ್ನು ಕಲಾತ್ಮಕವಾಗಿ ಕೆತ್ತಲಾಗಿದೆ. ಕಂಬದ ಬುಡದ ಭಾಗದಲ್ಲಿ ಯಾವ ಕೆತ್ತನೆಯ ಕೆಲಸವಿಲ್ಲ. ಮೇಲಿನ ಭಾಗ ಹಾಗೂ ಬೋದಿಗೆಗಳನ್ನು ಕೆತ್ತುವಲ್ಲಿ ಶಿಲ್ಪಿಯು ತನ್ನ ಕೈ ಚಳಕವನ್ನು ತೋರಿದ್ದಾನೆ. ಮೂಲದಲ್ಲಿ ಇದು ತೆರೆದ ರಂಗಮಂಟಪವಾಗಿರಬಹುದೆಂದು ಸೂಕ್ಷ್ಮವಾಗಿ ಗಮನಿಸಿದರೆ ಗೊತ್ತಾಗುತ್ತದೆ. ಉಳಿದ ಕಂಬಗಳೆಲ್ಲವನ್ನು ಬಿಳಿ ಅಮೃತಶಿಲೆಯ ಫಲಕಗಳಿಂದ ಮುಚ್ಚಲಾಗಿದೆ. ನೆಲದ ಹಾಸಿನಲ್ಲಿ ಸುಣ್ಣದ ಕಲ್ಲಿನ ಕಪ್ಪು ಮತ್ತು ತಿಳಿನೀಲಿ ವರ್ಣದ ಫಲಕಗಳನ್ನು ಜೋಡಿಸಲಾಗಿದೆ. ಕಂಬದ ಎತ್ತರ ಸುಮಾರು ಆರು ಅಡಿಗಳಷ್ಟು ಈ ನಾಲ್ಕು ಕಂಬಗಳ ಮೇಲೆ ಸುಂದರ ಕುಸುರಿ ಕೆಲಸವಿರುವ ಭುವನೇಶ್ವರಿಯ ಕಮಲದ ಫಲಕಗಳನ್ನು ಜೋಡಿಸಲಾಗಿದೆ. ಈ ಭುವನೇಶ್ವರಿಯಲ್ಲಿ ಯಾವ ಮೂರ್ತಿಗಳಿಲ್ಲದಿದ್ದರೂ ಇದು ಕಣ್ಮನ ಸೆಳೆಯುತ್ತದೆ.

ಗೋಣನ್ನೆತ್ತಿ ನೋಡಿ ಆನಂದಿಸಬೇಕಾದಂಥ ಕಲೆ ಇಲ್ಲಿದೆ. ಇದೇ ರಂಗಮಂಟಪದ ಮಧ್ಯದಲ್ಲಿ ಹೊಸದಾಗಿ ಕೆತ್ತಲ್ಪಟ್ಟ ನಂದಿ ಶಿಲ್ಪವನ್ನು ಕ್ರಿ.ಶ. ೧೯೬೫ರಲ್ಲಿ (ಶಕೆ ೧೮೮೭ರಲ್ಲಿ), ಸ್ಥಾಪಿಸಲಾಗಿದೆ. ನೆಲಹಾಸುಗೆ ಮತ್ತು ಹೊಸದಾಗಿ ಸ್ಥಾಪಿಸಲ್ಪಟ್ಟ ನಂದಿಶಿಲ್ಪ ಇವುಗಳನ್ನು ಶ್ರೀ ಗಂಗಾಧರ ವೀರಪ್ಪ ಕೋಳಿವಾಡ ಸಾ॥ ಧಾರವಾಡ ಇವರು ತಮ್ಮ ತಂದೆ ದಿ॥ ವೀರಪ್ಪ ಫ. ಕೋಳಿವಾಡ ಇವರ ಸ್ಮರಣಾರ್ಥ ದಾನ ನೀಡಿದ ಹಣದಿಂದ ಕಟ್ಟಲಾಗಿದೆ ಎಂದು ನಂದಿಶಿಲ್ಪದ ಹಿಂಬದಿಯಲ್ಲಿ ಒಂದು ಅಮೃತಶಿಲೆಯ ಫಲಕದ ಮೇಲೆ ಕೆತ್ತಲಾಗಿದೆ. ಇದೇ ಸ್ಥಳದಲ್ಲಿ ಕ್ರಿ.ಶ. ೧೯೬೫ರವರೆಗೆ ಇದ್ದ ಪುರಾತನ ನಂದಿ ಶಿಲ್ಪವನ್ನು ಎತ್ತಿ ಹೊರಗಡೆ ದೇವಾಲಯದ ಎದುರುಗಡೆ ಇರುವ ಆಲದಮರದ ಅಡಿಯಲ್ಲಿರುವ ಕಟ್ಟೆಯ ಮೇಲೆ ಇಡಲಾಗಿದೆ. ಇದನ್ನು ನಾನು ಸೂಕ್ಷ್ಮವಾಗಿ ಗಮನಿಸಿದ್ದೇನೆ. ಇದೊಂದು ಕಲ್ಯಾಣ ಚಾಳುಕ್ಯ ಶೈಲಿಯ ನಂದಿಶಿಲ್ಪ ಈಗ ಭಗ್ನವಾಗಿದೆ. ಹಾಗೂ ಗಾಳಿ ಮಳೆಗೆ ಸಿಕ್ಕಿ ಚೆಲುವನ್ನು ಕಳೆದುಕೊಂಡರೂ ನಂದಿಯ ಕೊರಳು ಹಾಗೂ ಭುಜದ ಮೇಲೆ ಇರುವ ಗಂಟೆಗಳ ಕೆತ್ತನೆ ತನ್ನ ಮೂಲದ ಸೌಂದರ್ಯಕ್ಕೆ ಸಾಕ್ಷಿ ನೀಡುತ್ತದೆ. ನಂದಿ ಶಿಲ್ಪವನ್ನು ಎಲ್ಲಾ ಕಾಲದಲ್ಲೂ ಶಿವಲಿಂಗದ ಎದುರಿನಲ್ಲಿ ಸ್ಥಾಪಿಸಲಾಗುತ್ತದೆ ಎಂಬುದನ್ನು ನೆನಪಿನಲ್ಲಿಡಬೇಕಾದ ಅಂಶ.

ಈ ರಂಗಮಂಟಪದ ನಂತರ ಗರ್ಭಗುಡಿ ಸಿಗುತ್ತದೆ. ಗರ್ಭಗುಡಿಯಲ್ಲಿ ಸುಮಾರು ಎರಡು ಅಡಿಗಳಷ್ಟು ಎತ್ತರದ ಪೀಠದ ಮೇಲೆ ಸುಮಾರು ಮೂರು ಅಡಿ ಎತ್ತರದ ವಿಜಯನಗರ ಶೈಲಿಯ ವೀರಭದ್ರ ಮೂರ್ತಿಯನ್ನು ಸ್ಥಾಪಿಸಲಾಗಿದೆ. ನಂದಿಯ ಎದುರಿನ ಗರ್ಭಗುಡಿಯಲ್ಲಿ ಶಿವಲಿಂಗ ಇರಲೇಬೇಕು. ಆದರೆ, ಇಲ್ಲಿ ವೀರಭದ್ರ ಶಿಲ್ಪ ಇರುವುದು ಅತ್ಯಂತ ವಿರೋಧಾಭಾಸದ ಸಂಗತಿ. ಕಲ್ಯಾಣ ಚಾಳುಕ್ಯ ಶೈಲಿಯ ಈಶ್ವರ ದೇವಾಲಯ ಗಳಲ್ಲಿ (ಶಿವಾಲಯಗಳಲ್ಲಿ) ಗರ್ಭಗುಡಿಯಲ್ಲಿ ಈಶ್ವರಲಿಂಗ ಇದ್ದರೆ ಎದುರಿನಲ್ಲಿ ನಂದಿಶಿಲ್ಪ ಇರುತ್ತದೆ. ಇದಕ್ಕೆ ಅಪವಾದಗಳೇ ಇಲ್ಲ. ಈ ಕುರಿತು ಮುಂದೆ ಚರ್ಚಿಸುತ್ತೇನೆ.

ತಲೆಬುರುಡೆ ಪತ್ತೆ : ಈ ವೀರಭದ್ರ ದೇವಾಲಯದ ಭಕ್ತರ ನವೀಕರಣ ಪ್ರಕ್ರಿಯೆ ೨೦೧೨ರಲ್ಲಿಯೂ ನಡೆದಿತ್ತು. ಈ ಕಾರ್ಯಕ್ರಮದ ಅನ್ವಯ ಒಂದು ದೀಪಸ್ತಂಭವನ್ನು ನಿಲ್ಲಿಸಲು ಸ್ಥಳೀಯರು ನಿರ್ಧರಿಸಿದರು. ೨೦೧೨ರ ಆರಂಭದಲ್ಲಿ ಸುಮಾರು ೨೧ ಅಡಿ ಎತ್ತರದ ಸುಂದರ ದೀಪಸ್ತಂಭವನ್ನು ಸೂಕ್ಷ್ಮಕಣಗಳ ಬೂದು ಬಣ್ಣದ ಕಣಶಿಲೆಯಲ್ಲಿ (Fine grainal grey granite) ಕಟೆದರು. ಇದನ್ನು ಸ್ಥಾಪಿಸಲೋಸುಗ ಸೂಕ್ತ ಆಳತೆಯ ಒಂದು ಕುಣಿಯನ್ನು (Pit) ತೋಡಿದಾಗ ಒಂದು ತಲೆಬುರುಡೆ ಸಿ

ಅಡಿ ಆಳದಲ್ಲಿ ಸಿಕ್ಕಿತು. (ನೋಡಿ ಉದಯವಾಣಿ ಹಾಗೂ ಕನ್ನಡಪ್ರಭ ವರದಿಗಳು). ಈ ತಲೆ ಬುರುಡೆಯ ಸುತ್ತಲೂ ರುದ್ರಾಕ್ಷಿಮಾಲೆ ಇತ್ತು ಎಂದು ನನಗೆ ಈ ಗುಡಿಯ ಪೂಜಾರಿ ಈಶ್ವರಯ್ಯ ತಂದೆ ವಿರೂಪಾಕ್ಷಯ್ಯ ದಿನಾಂಕ ೨೬-೮-೧೨ರಂದು ಮುಖತಃ ಹೇಳಿದರು. ಆದರೆ ಕ್ರಿ.ಶ. ೨೦೧೯ರಲ್ಲಿ ಸ್ವಲ್ಪ ದೂರದಲ್ಲಿ ಪತ್ತೆಯಾಗಿದ್ದ ಸುಮಾರು ೬೦೦ ತಲೆಬುರುಡೆಗಳ ಹಿನ್ನೆಲೆಯಲ್ಲಿ, ಹೆಚ್ಚು ಪ್ರಚಾರ ಸಿಗಬಾರದೆಂಬ ಉದ್ದೇಶದಿಂದ ಆ ತಲೆಬುರುಡೆಯನ್ನು ರುದ್ರಾಕ್ಷಿ ಸಮೇತ ದೂರದಲ್ಲಿ ಎಸೆದು ನಾಶಗೊಳಿಸಲಾಯಿತು. ಇದರ ಸುದ್ದಿ ಡಿ.ಸಿ. ಅಥವಾ ಇನ್ನಾರೋ ಅಧಿಕಾರಿಗಳಿಗೆ ತಿಳಿದರೆ ತಮ್ಮ ದೀಪಸ್ತಂಭದ ಸ್ಥಾಪನೆಗೆ ಅಡ್ಡಿಯಾಗುತ್ತದೆ ಎಂಬ ಆತಂಕ ಸ್ಥಳೀಯ ಭಕ್ತರಿಗೆ ಇತ್ತು. ಈ ಸ್ತಂಭದ ಬುನಾದಿಯಲ್ಲಿ ಸಿಕ್ಕ ತಲೆಬುರುಡೆ ಮತ್ತು ಎಲವುಗಳ ಚಿತ್ರಸಮೇತ ಉದಯವಾಣಿಯಲ್ಲಿ ವರದಿ ಪ್ರಕಟವಾಗಿದೆ. ಚಿತ್ರವಿಲ್ಲದ ವರದಿ ಕನ್ನಡಪ್ರಭದಲ್ಲಿ ಪ್ರಕಟವಾಗಿದೆ.[೪] ಅಂದರೆ ಕೃಷ್ಣಮೂರ್ತಿ ಮತ್ತಿತರು ಮಂಡಿಸಿದ 'ಡೋಗಿ ಬರದ'ವಾದ ಬಿದ್ದುಹೋಗುವ ಅಥವಾ ಪುನರಾವಲೋಕಿಸುವ ಸಂಭವ ಸ್ಪಷ್ಟವಾಗಿದೆ.[೫] ರಾಜ್ಯ ಪುರಾತತ್ತ್ವ ಇಲಾಖೆಗೆ ನಾನು ಬರೆದರೂ ಈ ಸಂಬಂಧ ಅವರಲ್ಲಿರುವ ವೈಜ್ಞಾನಿಕ ವರದಿಗಳ ಪ್ರತಿಗಳನ್ನು ಸುಮಾರು ಒಂದು ವರ್ಷವಾದರೂ ನನಗೆ ಕೊಟ್ಟಿಲ್ಲ. ಆದ್ದರಿಂದ ನನ್ನ ಅನುಮಾನ ಇನ್ನೂ ಗಟ್ಟಿಗೊಂಡಿದೆ. ಕಲಬುರ್ಗಿಯವರ ಆತ್ಮಾಹುತಿಯ ವಾದಕ್ಕೆ ಪುಷ್ಟಿ ಸಿಕ್ಕಂತಾಗಿದೆ.

ಚರ್ಚೆಗಳು ಮತ್ತು ತೀರ್ಮಾನಗಳು

ಮೇಲೆ ನೀಡಲಾಗಿರುವ ಸ್ವಲ್ಪ ಹೆಚ್ಚಾದ ವಿವರಣೆಗಳನ್ನು ಗಮನದಲ್ಲಿಟ್ಟುಕೊಂಡು ನಾನು ಈಗ ಚರ್ಚೆಗೆ ತೊಡಗುತ್ತೇನೆ.

ಅಣ್ಣಿಗೇರಿಯ ೨೪ ಶಾಸನಗಳಲ್ಲಿ ಎಲ್ಲಿಯೂ ವೀರಭದ್ರ ದೇವಾಲಯದ ಉಲ್ಲೇಖವಾಗಿಲ್ಲ.[೬] ಈ ಶಾಸನಗಳು ಬಹುಪಾಲು ೧೩ನೇ ಶತಮಾನಕ್ಕೆ ಸೇರಿವೆ. ಅಂದರೆ ೧೩ನೇ ಶತಮಾನದವರೆಗೂ ವೀರಭದ್ರಗುಡಿಯು ಅಣ್ಣಿಗೇರಿಯಲ್ಲಿರಲಿಲ್ಲ. ಆದರೆ ಶಾಸನ ಸಂ. ೯೬ (ಕ್ರಿ.ಶ. ೧೧೬೫)ರ ೫೦ನೇ ಸಾಲಿನಲ್ಲಿ 'ಶ್ರೀಮದಕ್ಷಿಣವಾರಾಣಾಸಿ ಶ್ರೀ ಧೋರೇಸ್ವರ ದೇವರ್ಗ್ಗೆ' ದೇವರಂಗಭೋಗ, ದೇಗುಲದ ಜೀರ್ಣೋದ್ಧಾರಕ್ಕಾಗಿ ಭೂಮಿಯನ್ನು ದಂಡನಾಯಕನಾದ ಶ್ರೀಧರಯ್ಯನು ದಾನ ಮಾಡಿದ ಉಲ್ಲೇಖವಿದೆ. ಇಂಥ ಪ್ರಸಿದ್ಧಿಯನ್ನು ಆಗ ಪಡೆದಿದ್ದ ಧೋರೇಶ್ವರ ಎಂಬ ಹೆಸರಿನ ದೇವಾಲಯ ಈಗ ಅಣ್ಣಿಗೇರಿಯಲ್ಲಿಲ್ಲ. ಅಂದರೆ ಕಲ್ಯಾಣ ಚಾಳುಕ್ಯ ಶೈಲಿಯಲ್ಲಿ ಧೋರ ಎಂಬ ವ್ಯಕ್ತಿ ಕಟ್ಟಿದ ಈಶ್ವರ ದೇವಾಲಯ ಈಗಿಲ್ಲ ಎಂದಂತಾಯಿತು. ಆದರೆ, ಕಲ್ಯಾಣ ಚಾಳುಕ್ಯ ಶೈಲಿಯಲ್ಲಿರುವ ವೀರಭದ್ರ ದೇವಾಲಯ ಈಗ ಇಲ್ಲಿದೆ. ಕಲ್ಯಾಣ ಚಾಳುಕ್ಯರ ಕಾಲದಲ್ಲಿ ವೀರಭದ್ರನ ಸ್ವತಂತ್ರವಾದ ಗುಡಿ ಎಲ್ಲಿಯೂ ಇರಲಿಲ್ಲ. ಆದರೆ ಈ ದೇವಾಲಯದ ಗರ್ಭಗುಡಿಯಲ್ಲಿ ವೀರಭದ್ರ ಶಿಲ್ಪ ಇರುವುದು ವಿರೋಧಾಭಾಸ. ೧೪-೧೫ನೇ ಶತಮಾನದಲ್ಲಿ ಪ್ರೌಢದೇವರಾಯ ಚಕ್ರವರ್ತಿ (ಕ್ರಿ.ಶ. ೧೪೨೪-೧೪೪೯)[೭] ಇವರು ವಿಜಯನಗರದಲ್ಲಿ ಆಡಳಿತ ನಡೆಸುತ್ತಿದ್ದಾಗ ಶೈವಧರ್ಮ, ಬಸವಧರ್ಮದ ಡೇರೆಯೊಳಗೆ ಸೇರಿದ ಒಂಟೆಯಾಯಿತು. ಇದೇ ಅವಧಿಯಲ್ಲಿ ವೀರಭದ್ರನ ಆರಾಧನೆ ಪ್ರಖರಗೊಂಡಿತು. ಈ ಪ್ರದೇಶವು ಅವರ ಆಡಳಿತಕ್ಕೊಳಪಟ್ಟಿತ್ತು. ಆಗ, ಬಹುಶಃ ಶಿವಲಿಂಗವನ್ನು ಕಿತ್ತು ವೀರಭದ್ರನ ಶಿಲ್ಪವನ್ನು ಸ್ಥಾಪಿಸಿಲಾಯಿತೆಂದು ಐತಿಹಾಸಿಕ ದೃಷ್ಟಿಯಿಂದ ಪರಿಭಾವಿಸಿದರೆ ತಪ್ಪಾಗದು. ಅದೂ ಅಲ್ಲದೆ ವೀಭದ್ರನನ್ನು ತಮ್ಮ ಗೋತ್ರ ಪುರುಷನೆಂದು ಘೋಷಿಸಿಕೊಳ್ಳುವ ಜಂಗಮರು ಇಂದಿಗೂ ಲಿಂಗಾಯತ ಸಮುದಾಯದ ಮೇಲೆ ಹಿಡಿತ ಇಟ್ಟುಕೊಂಡಿದ್ದಾರೆ. ಇದಕ್ಕೆ ಸಾಕ್ಷಿ ಎಂಬಂತೆ ಈ ಪುರಾತನ ದೇವಾಲಯದ ನವೀಕರಣ ಕಾರ್ಯ ನಮ್ಮ ಕಂಗಳ ಮುಂದೆ ರಾಚುತ್ತದೆ. ಗರ್ಭಗುಡಿಯ ಗೋಡೆಯ ಮೇಲೆ ಜೋಡಿಸಲಾಗಿರುವ ಹೊಳಪು ನೀಡಿದ ಫಲಕಗಳು (White glazed tiles) ಇದೊಂದು ಸ್ಟಾರ್ ಹೋಟೆಲಿನ ಸ್ನಾನಗೃಹದಂತೆ ಕಾಣುವಂತೆ ಕಂಗಳಿಗೆ ರಾಚುತ್ತದೆ. ಈ ಪುರಾತನ ದೇಗುಲದ ಮೇಲೆ ಬಗೆ ಬಗೆಯ ಅತ್ಯಾಚಾರಗಳನ್ನು ವೀರಭದ್ರ ಗೋತ್ರದ ಜನರು ಮಾಡಿದ್ದಾರೆಂದು ಹೇಳದೆ ವಿಧಿಯಿಲ್ಲ. ಇದು ಕಟು ಸತ್ಯ.

ಹೊಸ ದೀಪಸ್ತಂಭದ ಬುನಾದಿಯಲ್ಲಿ ಒಂದು ತಲೆಬುರುಡೆ ಮತ್ತು ರುದ್ರಾಕ್ಷಿಸರ ಪತ್ತೆಯಾಗಿರುವುದು ಕೃಷ್ಣಮೂರ್ತಿಯವರ ವಾದ ಡೋಗಿ ಬರ ಮತ್ತು ಅಣ್ಣಿಗೇರಿ ತಲೆಬುರುಡೆಗಳ ಸಂಬಂಧವನ್ನು ಪುನರಾವಲೋಕನಕ್ಕೆ ಅವಕಾಶ ನೀಡುತ್ತದೆ. ಬಹುಶಃ ಕಲುಬುರ್ಗಿಯವರ ವಾದ ಸರಿಯೆಂದು ಸಧ್ಯಕ್ಕೆ ನನಗೆ ಅನಿಸುತ್ತದೆ.

(ಅಣ್ಣಿಗೇರಿಯ ನನ್ನ ಕ್ಷೇತ್ರ ಕಾರ್ಯಗಳಿಗೆ ಬೆಂಬಲ ನೀಡಿದ ಗದುಗಿನ ಶ್ರೀಗಳಾದ ಡಾ॥ ತೋಂಟಸಿದ್ಧಲಿಂಗ ಮಹಾಸ್ವಾಮಿಗಳನ್ನು ಭಕ್ತಿಪೂರ್ವಕವಾಗಿ ನೆನೆಯುತ್ತೇನೆ. ಕ್ಷೇತ್ರ ಕಾರ್ಯದಲ್ಲಿ ನೆರವಾದ ಸರ್ವಶ್ರೀ ಶಿವಾನಂದ ಪಟ್ಟಣಶೆಟ್ಟಿ, ಚಂಬಣ್ಣ ಹುಬ್ಬಳ್ಳಿ ಹಾಗೂ ಪ್ರೊ. ಎ.ಎನ್. ಹರ್ಲಾಪುರ ಅವರಿಗೆ ನನ್ನ ಧನ್ಯವಾದಗಳು.)

ಆಧಾರಸೂಚಿ

೧. ಜಿ.ಎಸ್. ಗಾಯಿ (ಸಂ), ೧೯೮೬, SII Vol. *dist of bigraphy, Mysore.*

೨. ಸೂರ್ಯನಾಥ ಕಾಮತ್, ಸಂ, ೧೯೯೫, ಧಾರವಾಡ ಜಿಲ್ಲಾ ಗ್ಯಾಸೆಟಿಯರ್, ಬೆಂಗಳೂರು.

೩. ಡಿ.ವಿ. ಪರಮಶಿವಮೂರ್ತಿ, ಸಂ, ೨೦೦೭, ಪ್ರೌಢದೇವರಾಯನ ಶಾಸನಗಳು, ಹಂಪಿ.

೪. **ಉದಯವಾಣಿ ಮತ್ತು ಕನ್ನಡ ಪ್ರಭ** ದಿನಪತ್ರಿಕೆಗಳ ವರದಿಗಳು, ಅನುಕ್ರಮವಾಗಿ ಜೂನ್ ೧೮ ಮತ್ತು ಜೂನ್ ೨೦, ೧೯೧೨.

೫. ಎಂ.ಎಸ್. ಕೃಷ್ಣಮೂರ್ತಿ ಮತ್ತಿತರರು, ೨೦೧೨, ಅಣ್ಣಿಗೇರಿಯಲ್ಲಿ ಪುರಾತತ್ತ್ವ ಉತ್ಖನನ, **ಇತಿಹಾಸ ದರ್ಶನ,** ಸಂಪುಟ ೨೭, ಕರ್ನಾಟಕ ಇತಿಹಾಸ ಅಕಾಡೆಮಿ, ಪುಟ ೧-೪, ಬೆಂಗಳೂರು.

೧೦೦

ಬಾರಕೂರು ಪಟ್ಟಣದ ಹತ್ತು ಕೇರಿಗಳು

ವೀಣಾ ಎನ್.*

ಸೀತಾ ನದಿಯ ದಂಡೆಯ ಮೇಲಿರುವ ಬಾರಕೂರು ಉಡುಪಿಯಿಂದ ಸುಮಾರು ೧೬ ಕಿ.ಮೀ. ದೂರದಲ್ಲಿದೆ. ಬಾರಕೂರು ರಾಜ್ಯವು ಆಳೂಪರು, ಚಾಲುಕ್ಯ, ಹೊಯ್ಸಳ, ವಿಜಯನಗರ ಹಾಗೂ ಕೆಳದಿ ಅರಸರ ಆಳ್ವಿಕೆಗೆ ಒಳಪಟ್ಟಿತು. ಆಳೂಪರ ಕಾಲದಿಂದಲೂ ವ್ಯಾಪಾರ ಮತ್ತು ವಾಣಿಜ್ಯ ಹಾಗೂ ಪ್ರಮುಖ ರಾಜಕೀಯ ಕೇಂದ್ರವೂ ಆಗಿತ್ತು. ತುಳುನಾಡಿನ ಪ್ರಾಚೀನ ಬಂದರುಗಳಲ್ಲಿ ಬಾರಕೂರು ಒಂದಾಗಿದೆ. ವಿಜಯನಗರದ ಅರಸ ಇಮ್ಮಡಿ ದೇವರಾಯನ ಆಳ್ವಿಕೆಯ ಅವಧಿಯಲ್ಲಿ ಈ ವ್ಯಾಪಾರ ಕೇಂದ್ರಕ್ಕೆ ಹೆಚ್ಚು ಪ್ರಾಧಾನ್ಯತೆ ಬಂದಿದ್ದಲ್ಲದೇ ಪ್ರಮುಖ ಆಡಳಿತ ಕೇಂದ್ರವಾಗಿರುವುದನ್ನು ಶಾಸನಗಳು ದೃಢಪಡಿಸುತ್ತವೆ.[೧] ಹಾಗಾಗಿ ಆಡಳಿತದ ಸುಭದ್ರತೆಯ ದೃಷ್ಟಿಯಿಂದ ಅರಸರ ಪರವಾಗಿ ಅವರ ಪ್ರತಿನಿಧಿಗಳು, ಮಾಂಡಳಿಕರು ಈ ಭಾಗವನ್ನು ಆಳಿದ್ದಾರೆ. ಹೀಗೆ ಬಾರಕೂರು ರಾಜ್ಯವಾಗಿ ೧೩-೧೬ನೇ ಶತಮಾನಗಳಲ್ಲಿ ಪರದೇಶಗಳೊಂದಿಗೆ ಇದ್ದ ಸಮುದ್ರ ವ್ಯಾಪಾರಕ್ಕೆ ಬಹಳ ಪ್ರಸಿದ್ಧವಾಗಿದ್ದ ಶ್ರೀಮಂತ ಪ್ರದೇಶವಾಗಿತ್ತು. ವಿಜಯನಗರ ಅರಸರು ತಮ್ಮ ಅಶ್ವದಳಕ್ಕೆ ಬೇಕಾದ ಕುದುರೆಗಳನ್ನು ಪಡೆಯುವ ಸಲುವಾಗಿ ಈ ಪ್ರಾಂತ್ಯವನ್ನು ಗೆದ್ದು ರಾಜ್ಯವನ್ನು ವಿಸ್ತರಿಸಿದರು.[೨] ವಿಜಯನಗರದ ಅರಸರು ವಿದೇಶಗಳೊಂದಿಗೆ, ಅಂದರೆ ಶ್ರೀಲಂಕಾ, ಪೆಗು, ಬರ್ಮಾ, ಓರ್ಮೂಜ್, ಅರೇಬಿಯಾ, ಪೋರ್ಚುಗಲ್, ಚೀನಾ ಅಲೆಗ್ಸಾಂಡ್ರಿಯಾ ಮುಂತಾದ ರಾಷ್ಟ್ರಗಳೊಂದಿಗೆ ವ್ಯಾಪಾರ ಸಂಪರ್ಕ ಹೊಂದಿದ್ದರು. ಸ್ಥಳೀಯ ವ್ಯಾಪಾರಿಗಳು ವಿದೇಶಗಳಿಂದ ಪ್ರಮುಖ ವಸ್ತುಗಳನ್ನು ಆಮದು ಮಾಡಿಕೊಂಡು, ರಾಜಧಾನಿಯೊಳಗೆ ಮಾರಾಟ ಮಾಡುತ್ತಿದ್ದರು. ಹಾಗಾಗಿ ವ್ಯಾಪಾರಿ ಕೇಂದ್ರವಾಗಿದ್ದ ಬಾರಕೂರು ಸಾಂಸ್ಕೃತಿಕವಾಗಿಯೂ ಸಹ ವಿಜಯನಗರ ಕಾಲದಲ್ಲಿ ಬೆಳವಣಿಗೆಯನ್ನು ಹೊಂದಿತು.

ಹೀಗೆ ವ್ಯಾಪಾರ ಚಟುವಟಿಕೆ ಹೆಚ್ಚಾದಂತೆ ಪಟ್ಟಣವು ತನ್ನ ವಿಸ್ತೀರ್ಣವನ್ನು ಹೆಚ್ಚಿಸಿಕೊಳ್ಳತೊಡಗಿತು. ಇಂದಿನ ಆಧುನಿಕ ನಗರಗಳನ್ನು ಹೇಗೆ ಪ್ರತ್ಯೇಕ ಬಡಾವಣೆಗಳು, ಉಪನಗರಗಳನ್ನಾಗಿ ವಿಂಗಡಿಸಿ ಹೆಸರುಗಳನ್ನು ಸೂಚಿಸಿರುವಂತೆ, ೫೦೦ ವರ್ಷಗಳ ಹಿಂದೆ ಹಂಪಿಯಲ್ಲಿದ್ದ ಬಜಾರುಗಳಂತೆಯೇ ಬಾರಕೂರು ಪಟ್ಟಣವನ್ನು ೧೦ ಕೇರಿಗಳಾಗಿ ವಿಭಾಗಿಸಿದ್ದುದನ್ನು ಕಾಣಬಹುದು. ಇಲ್ಲಿ 'ಕೇರಿ' ಎಂಬ ಪದ ಬಜಾರ್, ಬೀದಿ ಎಂಬುದಕ್ಕೆ ಸಮಾನಾರ್ಥವಾಗಿ ಬಳಕೆಯಾಗಿದೆ. ಬಾರಕೂರು ಪಟ್ಟಣದ ೧೦ ಕೇರಿಗಳು ಹೀಗಿವೆ:

೧. ಕೋಟೆಕೇರಿ, ೨. ಮೂಡಕೇರಿ, ೩. ಮಣಿಗಾರಕೇರಿ, ೪. ಚೌಳಿಕೇರಿ, ೫. ಪಾಠಶಾಲಕೇರಿ, ೬. ಬಳೆಗಾರಕೇರಿ ೭. ಭಂಡಾರಕೇರಿ ೮. ಅರಸೀಕೇರಿ ೯. ರಂಗನಕೇರಿ ೧೦. ಹೊಸಕೇರಿ.[೩]


ಬಾರಕೂರು ಪಟ್ಟಣದ ಹತ್ತು ಕೇರಿಗಳಿಗೆ ಈ ಹೆಸರುಗಳು ಬರಲು ಹಲವು ಕಾರಣಗಳಿವೆ. ಅವು ಸ್ಥಳನಾಮ, ವೃತ್ತಿಯಾಧಾರಿತ ಅಥವಾ ಕಸಬುಗಳ ಹಿನ್ನೆಲೆಯಲ್ಲಿ ಹಾಗೂ ಪಟ್ಟಣದ ಭೌಗೋಳಿಕ ವ್ಯಾಪ್ತಿಯ ವಿಸ್ತೀರ್ಣವೂ ಕಾರಣವಾಗಿರಬಹುದು. ಹಾಗಾಗಿ ಕೇರಿಗಳು ಮುಖ್ಯವಾಗಿ ಮಾರುಕಟ್ಟೆ ಕೇಂದ್ರಗಳಷ್ಟೆ ಅಲ್ಲದೇ ಅಂದಿನ ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರಗಳಾಗಿದ್ದುದ್ದು ಗಮನಾರ್ಹ. ಪ್ರತಿಯೊಂದು ಕೇರಿಯೂ ಕೆರೆ, ದೇವಾಲಯಗಳು, ಅದರದೇ ಆದ ಸಂಪ್ರದಾಯ ನೀತಿ ನಿಯಮಗಳನ್ನು ಅನುಸರಿಸಿಕೊಂಡು ಬಂದಿದೆ. ಈ ರೀತಿಯ 'ಕೇರಿ' ಎಂಬ ಪದ್ಧತಿ ಆಳುಪರ ಕಾಲದಲ್ಲಿ ಪ್ರಾರಂಭವಾಗಿದ್ದು, ವಿಜಯನಗರ ಕಾಲದ ಹೊತ್ತಿಗೆ ಅಂತಿಮ ರೂಪರೇಷೆಯನ್ನು ಪಡೆದುಕೊಂಡಿತು. ಈ ಹತ್ತುಕೇರಿಗಳ ಕುರಿತಂತೆ ಕೆಳಗಿನಂತೆ ಚರ್ಚಿಸಲಾಗಿದೆ.

೧. ಕೋಟೆಕೇರಿ: ಈ ಕೇರಿಗೆ ಹೆಸರು ಬರಲು ಕಾರಣ ಆಳುಪರು ನಿರ್ಮಿಸಿದ ಕೋಟೆ ಇಲ್ಲಿದೆ. (ಈ ಕೋಟೆ ಕ್ರಿ.ಶ. ೮-೧೫ನೆಯ ಶತಮಾನಗಳಲ್ಲಿ ಪೂರ್ಣಗೊಂಡಿದೆ) ಕೋಟೆ

* ಅತಿಥಿ ಉಪನ್ಯಾಸಕರು, ಇತಿಹಾಸ ವಿಭಾಗ, ಸರ್ಕಾರಿ ಕಲಾ ಕಾಲೇಜು, ಚಿತ್ರದುರ್ಗ-೫೭೭ ೫೦೧.

ಕೊತ್ತಲಗಳು ಸ್ಥಳೀಯ ಆಡಳಿತವನ್ನು ವ್ಯವಸ್ಥೆಗೊಳಿಸುವಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸುತ್ತವೆ. ಕೌಟಿಲ್ಯನ ಅರ್ಥಶಾಸ್ತ್ರದ ಪ್ರಕಾರ ಕೋಟೆಯಲ್ಲಿ ದಿನಸಿಗಳು, ಆಯುಧಗಳು, ಬೆಲ್ಲ, ತುಪ್ಪ, ಮೊಸರು, ಬೆಣ್ಣೆ, ಹಾಲು ಇವುಗಳನ್ನು ಪ್ರತ್ಯೇಕ ಸ್ಥಳಗಳಲ್ಲಿ ಶೇಖರಿಸಬೇಕೆಂದು ಹೇಳುತ್ತದೆ.[೪] ಈ ಹಿನ್ನೆಲೆಯಲ್ಲಿ ಕೋಟೆಕೇರಿಯೂ ಸಹ ಬಾರಕೂರು ಪಟ್ಟಣದಲ್ಲಿ ಪ್ರಮುಖ ಪಾತ್ರವಹಿಸಿರುವುದು ಗಮನಾರ್ಹ. ಕೋಟೆಗಳು ಕೇವಲ ರಾಜಕೀಯ, ಸೈನಿಕ ಕೇಂದ್ರಗಳಾಗಿರದೆ ಸಾಂಸ್ಕೃತಿಕ ಕೇಂದ್ರಗಳಾಗಿದ್ದುದು ವಿಜಯನಗರದ ಕೋಟೆಗಳಲ್ಲಿಯೂ ಕಾಣಬಹುದು. ಕೋಟೆಯೊಳಗೆ ಹಬ್ಬಹರಿದಿನಗಳು, ಉತ್ಸವಗಳು, ಕ್ರೀಡಾಕೂಟಗಳು ನಡೆಯುತ್ತಿದ್ದವಲ್ಲದೇ, ಅನೇಕ ಬೀದಿ, ಬಜಾರುಗಳಲ್ಲಿ ಕೈಗಾರಿಕಾ ಕೇಂದ್ರಗಳು, ಗುಡಿ ಕೈಗಾರಿಕೆಗಳು ಅಸ್ತಿತ್ವದಲ್ಲಿದ್ದವು. ಈ ಕೇರಿಯಲ್ಲಿದ್ದ ಪ್ರಮುಖ ದೇವಾಲಯಗಳೆಂದರೆ ಮಾರ್ಕಂಡೇಶ್ವರ, ಪಂಚಲಿಂಗೇಶ್ವರ, ಗೋಪಾಲಕೃಷ್ಣ ಪ್ರಮುಖವಾದವು. ಇಲ್ಲಿನ ಹಲವಾರು ಶಾಸನಗಳು ಈ ದೇವಾಲಯ ಮತ್ತು ಮಠಗಳಿಗೆ ದಾನ ನೀಡಿರುವ ಬಗ್ಗೆ ಉಲ್ಲೇಖಿಸುತ್ತವೆ.

೨. ಮೂಡಕೇರಿ: ಇದು ಬಾರಕೂರು ಪಟ್ಟಣದ ಪೂರ್ವ ದಿಕ್ಕಿಗೆ ಇರುವ ಕೇರಿಯಾಗಿದೆ. ಹಾಗಾಗಿ ಈ ಕೇರಿಗೆ ಮೂಡಕೇರಿ ಎಂಬ ಹೆಸರು ಬಂದಿದೆ. ಈ ಕೇರಿಯು ಪ್ರಮುಖ ವ್ಯಾಪಾರಿ ಕೇಂದ್ರವಾಗಿತ್ತು ಎಂಬುದನ್ನು ೨ನೇ ದೇವರಾಯನ ೧೪೩೦ರ ಬಾರಕೂರು ಶಾಸನದಿಂದ ತಿಳಿಯಬಹುದು.[೫] ಈ ಶಾಸನದ ಪ್ರಕಾರ, "ಬಾರಕೂರು ಪಟ್ಟಣದ ೧೦ ಕೇರಿಯ ಒಳಗಣ ಚೌಳಿಯಕೇರಿ ಮತ್ತು ಮೂಡಕೇರಿಯ ವ್ಯಾಪಾರಿಗಳ ನಡುವೆ ವ್ಯಾಪಾರ-ವ್ಯವಹಾರ ವಿಷಯವಾಗಿ ಮನಃಸ್ತಾಪವಾದಾಗ ಅಲ್ಲಿನ ಪ್ರಧಾನಿಯಾಗಿದ್ದ ಚಂಡರಸ ಒಡೆಯರು ಎರಡೂ ಕೇರಿಯ ಮುಖ್ಯಸ್ಥರನ್ನು ಕರೆಯಿಸಿ ನ್ಯಾಯ ತೀರ್ಮಾನಿಸಿ ಸಂಧಾನವೇರ್ಪಡಿಸಿದನು. ಅಕ್ಕಿ, ಗೋಧಿ, ಕಡಲೆ, ಉದ್ದು, ಹೆಸರು, ಎಳ್ಳು, ಕಬ್ಬು, ಶುಂಠಿ, ಬೆಲ್ಲ, ಸಾಂಬಾರು ಪದಾರ್ಥಗಳನ್ನು ಎರಡೂ ಕೇರಿಯವರು ಸಮಾನವಾಗಿ ಹಂಚಿಕೊಳ್ಳಬೇಕೆಂದು, ಆದರೆ ಮೂಡಕೇರಿಯವರು ಮಾತ್ರ ನೂಲಿನ ಸೀರೆಗಳ ವ್ಯಾಪಾರ/ಮಾರಾಟ ಮಾಡಬೇಕೆಂದು ಕಟ್ಟಳೆಯನ್ನು ವಿಧಿಸಿದನು". ಬಹುಶಃ ಹತ್ತಿಯ(ನೂಲಿನ) ಕೈಮಗ್ಗಗಳು ಮೂಡುಕೇರಿಯಲ್ಲಿ ಹೆಚ್ಚಾಗಿದ್ದು, ಅಲ್ಲಿನ ವ್ಯಾಪಾರಿಗಳು ನೂಲಿನ ಸೀರೆಗಳ ಮಾರಾಟಕ್ಕೆ ಏಕಸ್ವಾಮ್ಯವನ್ನು ಪಡೆದಿದ್ದರು ಎಂಬ ಅಂಶವನ್ನು ಶಾಸನದಿಂದ ತಿಳಿಯಬಹುದಾಗಿದೆ. ಈ ಕಟ್ಟಳೆಗೆ ತಪ್ಪಿದರೆ ಅರಮನೆಗೆ ೧೨,೦೦೦ ಹೊನ್ನನ್ನು ತಪ್ಪು ವರಾಹವಾಗಿ ದಂಡವನ್ನು ಕೊಡುತ್ತೇವೆ ಎಂದು ಅಲ್ಲಿನ ವ್ಯಾಪಾರಸ್ಥರು ಸೇರಿ ಕಟ್ಟಳೆಯನ್ನು ಒಪ್ಪಿ ಬರೆದುಕೊಟ್ಟಿರುತ್ತಾರೆ. ಇದರಿಂದಲೂ ಸಹ ಇದೊಂದು ಪ್ರಮುಖ ವ್ಯಾಪಾರ ಕೇಂದ್ರ ಎಂಬುದನ್ನು ಗಮನಿಸಬಹುದು. ಈ ಕೇರಿಯಲ್ಲಿ ಸೋಮನಾಥೇಶ್ವರ, ಗಣಪತಿ, ಗೋಪಾಲಕೃಷ್ಣ ದೇವಾಲಯಗಳಲ್ಲದೆ ಜೈನ ಬಸದಿಯು ಸಹ ಇಲ್ಲಿದೆ.



ಬಾರಕೂರು ಪಟ್ಟಣ, ಹತ್ತು ಕೇರಿಗಳ ನಕ್ಷೆ

೩. ಮಣಿಗಾರಕೇರಿ: ಹೆಸರೇ ಸೂಚಿಸುವಂತೆ ಬೆಲೆ ಬಾಳುವ ಮಣಿಗಳನ್ನು ಮಾರಾಟ ಮಾಡುವ ಕೇಂದ್ರವಾಗಿತ್ತು, ಹಾಗೂ ಇಲ್ಲಿ ಮಣಿಕಾರರೆಂಬ ವೃತ್ತಿಯಾಧಾರಿತ ವ್ಯಾಪಾರಸ್ಥರು ವಾಸಿಸುವ ಕೇರಿಯಾಗಿತ್ತು. ವಿವಿಧರೀತಿಯ ಮಣಿ, ರತ್ನ ಬೆಲೆಬಾಳುವ ಹರಳುಗಳನ್ನು ತಂದು ಮಾರುತ್ತಿದ್ದರು. ಅರೇಬಿಯಾದಿಂದ ವಿಜಯನಗರ ಸಾಮ್ರಾಜ್ಯಕ್ಕೆ ಸಣ್ಣ ಮುತ್ತುಗಳು ರವಾನೆ/ಆಮದಾಗುತ್ತಿತ್ತು. ಈ ಮುತ್ತುಗಳನ್ನು ಕಂಡರೆ ವಿಜಯನಗರದ ಅರಸರಿಗೆ ಬಲುಪ್ರಿಯ ಎಂದು ವಿಜಯನಗರಕ್ಕೆ ಭೇಟಿ ನೀಡಿದ್ದ ವಿದೇಶಿ ಪ್ರವಾಸಿಗರ ವರದಿಗಳಿಂದ ತಿಳಿಯಬಹುದಾಗಿದೆ. ಸಮುದ್ರದೊಳಗೆ ದೊರೆಯುವ ಮುತ್ತುಗಳ ಗುಣಮಟ್ಟ ಮತ್ತು ಬೆಲೆಯನ್ನು 'ಚಿಟಿನಿ' ಎಂದು ವ್ಯಾಪಾರಿಗಳು ನಿರ್ಧರಿಸುತ್ತಿದ್ದರು. ೩ನೇ ದರ್ಜೆಯ ಮುತ್ತನ್ನು ಕೆನರಾ ಐಯಾ ಅಥವಾ 'ಬಿಜನಗರ ಐಯಾ' ಎಂದು ಕರೆಯುತ್ತಿದ್ದರು ಎಂದು ವೆನಿಸ್‌ನ ಸೀಸರ್ ಫೆಡರಿಕ್ ತನ್ನ ವರದಿಯಲ್ಲಿ ತಿಳಿಸಿದ್ದಾನೆ.[೬] ಈ ಮುತ್ತುಗಳನ್ನು ಕೊಂಡು ವ್ಯಾಪಾರಿಗಳು ರಾಜ್ಯದೊಳಗೆ ಆಂತರಿಕ ವ್ಯಾಪಾರ ಮಾಡುತ್ತಿದ್ದರು. ಈ ಕೇರಿಯಲ್ಲಿರುವ ಪ್ರಮುಖ ಸ್ಮಾರಕಗಳೆಂದರೆ ಸೋಮೇಶ್ವರ ದೇವಾಲಯ ಮತ್ತು ಜೈನ ಬಸದಿ. ಈ ಕೇರಿಯು ಜೈನ ಧರ್ಮದ ಕೇಂದ್ರವಾಗಿದೆ.

೪. ಚೌಳಿಕೇರಿ: ಕ್ರಿ.ಶ. ೧೪೩೨ರ ಹೊಸಾಳ ಶಾಸನವು ಚೌಳಿಯ ಬೆಟ್ಟುವಿನ ಮಡಿವಾಳರು, ಬೆಸ್ತರು ಸೇರಿಕೊಂಡು ಮೂರು ವರ್ಷಕ್ಕೆ ಒಮ್ಮೆ ಕೆರೆಯ ಕೆಸರನ್ನು ತೆಗೆದು ಶುದ್ಧಮಾಡಿ, ಆ ಕೆರೆಯ ಜೀರ್ಣೋದ್ಧಾರ ಮಾಡಬೇಕೆಂದು ತಿಳಿಸಿದೆ.[೭] ಚೌಳಿಯ ಬೆಟ್ಟು ಎಂಬ ಪದದಿಂದ ತದನಂತರ ಇದು ಚೌಳಿಕೇರಿಯಾಗಿರಬೇಕು. ವಿಜಯನಗರ ಕಾಲದಲ್ಲಿ ಈ ಕೇರಿಯೂ ಧಾರ್ಮಿಕ ಚಟುವಟಿಕೆಗಳ ತಾಣವಾಗಿತ್ತು.

ಚೌಳಿಕೇರಿಯ ವ್ಯಾಪಾರಿಗಳು ವ್ಯಾಪಾರ ಮತ್ತು ವಾಣಿಜ್ಯ ಕ್ಷೇತ್ರದಲ್ಲಿ ಪ್ರಮುಖ ಪಾತ್ರವಹಿಸಿರುತ್ತಾರೆ. ಸರಕು ಮತ್ತು ಸಾಮಗ್ರಿಗಳು ಘಟ್ಟದ ಮೇಲಿನ ಪ್ರದೇಶದಿಂದ ತಂದು ಚೌಳಿಕೇರಿಯ ಉಗ್ರಾಣದಲ್ಲಿ ಶೇಖರಿಸಿಡುತ್ತಿದ್ದರು. ಆ ನಂತರ ಅದನ್ನು ಬಾರಕೂರಿಗೆ ಸಾಗಿಸುತ್ತಿದ್ದರು. ಈಗಾಗಲೇ ಮೂಡುಕೇರಿಯ ಸಂದರ್ಭದಲ್ಲಿ ಚರ್ಚಿಸಿದಂತೆ ೨ನೇ ದೇವರಾಯನ ಕಾಲದಲ್ಲಿ ವ್ಯಾಪಾರಕ್ಕೆ ಸಂಬಂಧಿಸಿದಂತೆ ನಿಬಂಧನೆಗಳು ಕರಾರುವಕ್ಕಾಗಿದ್ದವು. ಈ ಕೇರಿಯಲ್ಲಿನ ಪ್ರಮುಖ ಸ್ಮಾರಕಗಳೆಂದರೆ ಗಣಪತಿ(ಕಲ್ಲಂಗೆರೆ ಗಣೇಶ), ಶಿವ, ನಾಗರಮಠದ ಕೇಶವ. ಈ ಕೇರಿಯು ನಾಥ ಪಂಥದ ಕೇಂದ್ರವಾಗಿತ್ತು.

೫. ಪಾಠಶಾಲಕೇರಿ: ಹೆಸರೇ ಸೂಚಿಸುವಂತೆ ಇದು ವಿದ್ಯಾ ಕೇಂದ್ರವಾಗಿದ್ದ ಕೇರಿಯಾಗಿತ್ತು. ಅಲ್ಲದೇ ಇಲ್ಲಿ ನೇಯ್ಗೆಯ ವರ್ಗದವರೂ ಸಹ ವಾಸಿಸುತ್ತಿದ್ದರು. ಈ ಕೇರಿಯ ಪ್ರಮುಖ ದೇವಾಲಯ ವೀರಭದ್ರ.

೬. ಬಳೆಗಾರಕೇರಿ: ಬಳೆಗಾರರರು ಈ ಕೇರಿಯಲ್ಲಿ ವಾಸಿಸುತ್ತಿದ್ದರಿಂದ ವೃತ್ತಿಯಾಧಾರಿತವಾಗಿ ಈ ಕೇರಿಗೆ ಬಳೆಗಾರಕೇರಿ ಎಂದು ಹೆಸರು ಬಂದಿತು. ಇಲ್ಲಿ ಬಳೆಗಾರರು ಗಾಜು ಮತ್ತು ಲೋಹಗಳಿಂದ ತಯಾರಿಸಿದ ಬಳೆಗಳನ್ನು ಮಾರಾಟಮಾಡುತ್ತಿದ್ದರು. ಇಂದು ನಾವು ಬೆಂಗಳೂರಿನಲ್ಲಿ ಬಳೆಪೇಟೆ ಎಂದು ಪೇಟೆಯನ್ನು ನೋಡುವ ಹಾಗೆ ಬಾರಕೂರು ಪಟ್ಟಣದಲ್ಲಿ ಬಳೆಗಾರಕೇರಿ ಆ ಪಾತ್ರವನ್ನು ನಿರ್ವಹಿಸುತ್ತಿತ್ತು. ಈ ಕೇರಿಯಲ್ಲಿ ಭೈರವ ದೇವಾಲಯ ಪ್ರಮುಖ ಸ್ಮಾರಕವಾಗಿದೆ.

೭. ಭಂಡಾರಕೇರಿ: ವಿಜಯನಗರ ಕಾಲದಲ್ಲಿ ಬಾರಕೂರು ಮತ್ತು ಮಂಗಳೂರು ಬಂದರುಗಳ ಕಾರಣದಿಂದ ಹೆಚ್ಚುತ್ತಿದ್ದ ಭೂವ್ಯವಹಾರ, ವಾಣಿಜ್ಯ ಚಟುವಟಿಕೆಗಳು ನಾಣ್ಯಗಳ ಮುದ್ರಣದ ಅಗತ್ಯಕ್ಕೆ ಕಾರಣವಾದವು. ಈ ರೀತಿ ವ್ಯವಹಾರ ಸುಗಮಗೊಳಿಸಲು ಸ್ಥಳೀಯವಾಗಿ ನಾಣ್ಯ ಮುದ್ರಿಸಲು ಟಂಕಸಾಲೆಯನ್ನು ಸ್ಥಾಪಿಸಲಾಯಿತು. ಹಾಗಾಗಿ ಬಾರಕೂರಿನ ಟಂಕಸಾಲೆಯಲ್ಲಿ ಅಚ್ಚಾದ ನಾಣ್ಯಕ್ಕೆ 'ಬಾರಕೂರು ಗದ್ಯಾಣ' ಎಂಬ ಹೆಸರಿನಿಂದಲೇ ಚಲಾವಣೆಗೆ ಬಂದಿತು.[೮] ಬಾರಕೂರು ಪಟ್ಟಣದ ಪ್ರಮುಖ ಹಣಕಾಸಿನ ಖಜಾನೆಯ ಸ್ಥಳವಾದ್ದರಿಂದ ಈ ಕೇರಿಗೆ ಭಂಡಾರಕೇರಿ ಎಂಬ ಹೆಸರು ಬಂದಿರುವ ಸಾಧ್ಯತೆಯಿದೆ.

೮. ಅರಸೀಕೇರಿ: ಇದೊಂದು ಪ್ರಮುಖ ವ್ಯಾಪಾರ ಕೇಂದ್ರವಾಗಿದ್ದು, ಸೆಟ್ಟಿಕಾರರು ಎಂಬ ವ್ಯಾಪಾರಿಗಳು ಇಲ್ಲಿನ ವ್ಯಾಪಾರ ವ್ಯವಹಾರ ಚಟುವಟಿಕೆಯಲ್ಲಿ ನಿರತರಾಗಿದ್ದರು. ಒಬ್ಬ ರಾಣಿಯ ಹೆಸರಿನಿಂದ ಈ ಕೇರಿಗೆ ಅರಸೀಕೇರಿ ಎಂದು ಹೆಸರು ಬಂದಿರುವ ಸಾಧ್ಯತೆಯಿದೆ. ಈ ಕೇರಿಯಲ್ಲಿ ಗಣೇಶ ದೇವಾಲಯ ಪ್ರಮುಖ ಸ್ಮಾರಕವಾಗಿದೆ.

೯. ರಂಗನಕೇರಿ: ರಾಜ ಹಾಗೂ ಅವರ ಸಹಚರರು ಅನೇಕ ದೇವಾಲಯಗಳನ್ನು ನಿರ್ಮಿಸಿ ವಿವಿಧ ಹಬ್ಬಗಳನ್ನು ಆಚರಣೆಯಲ್ಲಿ ತಂದಿರುವುದನ್ನು ಇತಿಹಾಸದುದ್ದಕ್ಕೂ ಕಾಣುತ್ತೇವೆ. ಸಂಗೀತ ಮತ್ತು ನೃತ್ಯಕ್ಕೆ ದೇವಾಲಯಗಳು ಆಶ್ರಯತಾಣಗಳಾಗಿದ್ದವು. ಅಲ್ಲದೆ ಈ ಕಾರಣಕ್ಕಾಗಿ ದಾನದತ್ತಿಗಳನ್ನು ನೀಡಿರುವುದಕ್ಕೆ ಶಾಸನಗಳಲ್ಲಿ ಉಲ್ಲೇಖಗಳು ಸಿಗುತ್ತವೆ. ಹಾಗೆಯೇ ಬಾರಕೂರು ಗ್ರಾಮದ ಹರಿಯಪ್ಪನ ಕಾಲದ ಕ್ರಿ.ಶ. ೧೩೮೨ರ ಶಾಸನವು ನೃತ್ಯಗಾರ್ತಿಯರಿಗೆ ಭೂಮಿಯನ್ನು ಕೊಡುಗೆಯಾಗಿ ಕೊಟ್ಟ ವಿವರಣೆ ನೀಡುತ್ತದೆ.[೧೦] ಹಾಗಾಗಿ ಶಾಸನ ಉಲ್ಲೇಖದಿಂದ ಬಹುಶಃ ಇಲ್ಲಿ ನಾಟ್ಯಶಾಲೆ ಇದ್ದಿರಬೇಕು ಎಂಬುದು ಸ್ಪಷ್ಟವಾಗುತ್ತದೆ. ಈ ಕಾರಣದಿಂದ

ರಂಗನಕೇರಿ ಎಂಬ ಹೆಸರು ಬಂದಿರುವ ಸಾಧ್ಯತೆ ಯಿದೆ.

೧೦. ಹೊಸಕೇರಿ: ಬಾರಕೂರು ಪಟ್ಟಣದಲ್ಲಿ ಜನಸಂಖ್ಯೆ ವ್ಯಾಪಾರ ವಾಣಿಜ್ಯ ಚಟುವಟಿಕೆಗಳು ಹೆಚ್ಚಾದಂತೆ ಅದಕ್ಕೆ ಅನುಗುಣವಾಗಿ ಪಟ್ಟಣದ ವಿಸ್ತೀರ್ಣವನ್ನು ಹೆಚ್ಚಿಸಿಕೊಳ್ಳುವ ಕೆಲಸವನ್ನು ಮಾಡಿದರು. ಬಹುಶಃ ಈ ಕಾರಣದಿಂದ ಹೊಸಕೇರಿ ಎಂಬ ಹೆಸರು ಬಂದಿರಬೇಕು. ಆಧುನಿಕ ಕಾಲದಲ್ಲಿ ಇಂದು ನಾವು ಪಟ್ಟಣದ ಮುಂದುವರೆದ ಭಾಗಕ್ಕೆ 'Extension' ಎಂದು ಕರೆಯುವ ಪದ ಕನ್ನಡದಲ್ಲಿ ಬಾರಕೂರು ಪಟ್ಟಣದಲ್ಲಿ ಈ ಮೊದಲೇ ಹೊಸಬೀದಿಗೆ ಹೊಸಕೇರಿ ಎಂದು ಅಲ್ಲಿನ ಜನತೆ ಕರೆದಿದ್ದಿರಬಹುದಾಗಿದೆ.

ಹೀಗೆ ವಿಶಾಲವಾದ ಬಾರಕೂರು ಪಟ್ಟಣವು ವ್ಯಾಪಾರ ವಾಣಿಜ್ಯ ಚಟುವಟಿಕೆಗಳಿಂದ ವಿಜಯನಗರ ಕಾಲದ ಹೊತ್ತಿಗೆ ಪ್ರಮುಖ ಆರ್ಥಿಕ ಕೇಂದ್ರವಾಗಿ ಬೆಳವಣಿಗೆ ಹೊಂದಿತ್ತು. ಇಲ್ಲಿ ಸೆಟ್ಟಿಕಾರರು, ನಕರ, ಹಂಜಮಾನ ಮುಂತಾದ ವ್ಯಾಪಾರಿ ವರ್ಗಗಳಿದ್ದವು. ಅಲ್ಲದೇ ವರ್ತಕರು ವ್ಯಾಪಾರ ಮಾಡುತ್ತಿದ್ದ ವಸ್ತುಗಳ ಹೆಸರಿನಿಂದಲೇ ಆ ವ್ಯಾಪಾರಿಗಳನ್ನು 'ರತುನ ಸೆಟ್ಟಿ', ಸೀರೆ ಸೆಟ್ಟಿ ಎಂದು ಕರೆದಿರುವುದನ್ನು ಶಾಸನಗಳಲ್ಲಿ ಉಲ್ಲೇಖಿತವಾಗಿವೆ. ಈ ಕೇರಿಗಳಲ್ಲಿ ಮುಖ್ಯವಾಗಿ ಒಂದು ವಸ್ತುವಿನ ವ್ಯಾಪಾರಕ್ಕೆ ಹೆಚ್ಚು ಪ್ರಾಧಾನ್ಯತೆಯನ್ನು ನೀಡಿದ್ದರೂ, ಇತರ ವಸ್ತುಗಳು ಸಹ ಲಭ್ಯವಾಗುತ್ತಿದ್ದನ್ನು ಸಹ ಗಮನಿಸ ಬಹುದು. ಈ ವರ್ತಕ ಸಂಘಗಳು ಸಾಮಾಜಿಕವಾಗಿ ಮಾನ್ಯತೆ ಪಡೆದಿದ್ದರ ಜೊತೆಗೆ ಅರಸರಿಗೆ ಆಡಳಿತದಲ್ಲಿ ಸಹಕರಿಸುವ ಕೆಲ ಜವಾಬ್ದಾರಿಗಳನ್ನು ನಿರ್ವಹಿಸುವ ಕಾರ್ಯವನ್ನು ಮಾಡುತ್ತಿದ್ದರು. ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ಬಾರಕೂರು ಪಟ್ಟಣವು ಆ ಕಾಲದಲ್ಲಿ 'Municipal' ಆಡಳಿತ ವನ್ನು ಹೊಂದಿತ್ತು. ಹಾಗಾಗಿ ಇಂದಿನ ನಗರಗಳ ಪ್ರಮುಖ ಬೀದಿಗಳ ಪಾತ್ರವನ್ನು ಈ ಕೇರಿಗಳು ನಿರ್ವಹಿಸಿದ್ದವು ಎಂಬುದು ಗಮನಾರ್ಹ ಅಂಶವಾಗಿದೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಪರಮಶಿವಮೂರ್ತಿ. ಡಿ.ವಿ. (ಸಂ). ೨೦೦೭ **ಪ್ರೌಢದೇವರಾಯನ ಶಾಸನಗಳು**, (ಶಾಸನ ಸಂಖ್ಯೆ ೬೦, ಕ್ರಿ.ಶ. ೧೪೩೦) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ೧೨೭ –೧೩೦.

೨. ಜಯದೇವಪ್ಪ ಜೈನಕೇರಿ. ೧೯೯೪, **ಬಾರಕೂರು ಶಾಸನ-ಒಂದು ಅಧ್ಯಯನ**, ವಿಜಯನಗರ ಅಧ್ಯಯನ, ಸಂಪುಟ-೪, ಪುಟ ೭೦-೭೧.

೩. ಪರಮಶಿವಮೂರ್ತಿ. ಡಿ.ವಿ., ಪೂರ್ವೋಕ್ತ ಪುಟ ೫೬-೫೭.

೪. ಕೃಷ್ಣಭಟ್ಟ, ಕೆ., **ಕೌಟಿಲ್ಯನ ಅರ್ಥಶಾಸ್ತ್ರ**, ಸಮಾಜ ಪುಸ್ತಕಾಲಯ, ಧಾರವಾಡ.

೫. ಪರಮಶಿವಮೂರ್ತಿ. ಡಿ.ವಿ., ಪೂರ್ವೋಕ್ತ ಪುಟ ೧೨೭-೧೩೦.

೬. ನಾಗೇಗೌಡ. ಎಚ್.ಎಲ್., ೨೦೦೬, **ಪ್ರವಾಸಿ ಕಂಡ ಇಂಡಿಯಾ**, ಸಂಪುಟ ೦೨, ಐಬಿಎಚ್ ಪ್ರಕಾಶನ, ಬೆಂಗಳೂರು.

೭. ಪರಮಶಿವಮೂರ್ತಿ.ಡಿ.ವಿ., ಪೂರ್ವೋಕ್ತ.

೮. ಶೈಲಾ. ಟಿ. ವರ್ಮ, ೨೦೦೨, **ತುಳುನಾಡಿನ ಶಾಸನಗಳ ಸಾಂಸ್ಕೃತಿಕ ಅಧ್ಯಯನ**, ಜ್ಞಾನೋದಯ ಪ್ರಕಾಶನ, ಬೆಂಗಳೂರು.

೯. ಗೋಪಾಲ್. ಬಿ.ಆರ್. **ವಿಜಯನಗರ ಶಾಸನಗಳು**, ಸಂಪುಟ ೨.

೧೦. ದಯಾನಂದ ಪಟೇಲ್. ಟಿ., **ವಿಜಯನಗರ ಕಾಲದಲ್ಲಿ ಸಂಗೀತ ಮತ್ತು ನೃತ್ಯ: ಶಾಸನಾಧಾರಿತ ಅಧ್ಯಯನ**, ವಿಜಯನಗರ ಅಧ್ಯಯನ, ಸಂಪುಟ ೬, ಪುಟ ೧೧೧.

೧೦೧

ಸಪ್ತ ಕಾವ್ಯದ ಕವಿ ಗುರು ಬಸವ

ಜಯದೇವಪ್ಪ ಜೈನಕೇರಿ*

ಕವಿ ಗುರುಬಸವನು ಪ್ರೌಢದೇವರಾಯನ ಕಾಲದಲ್ಲಿ ವಿಜಯನಗರಕ್ಕೆ ಬಂದು, ನೂರೊಂದು ವಿರಕ್ತರಲ್ಲಿ ಅಗ್ರಗಣ್ಯನೆನಿಸಿಕೊಂಡು ಅಲ್ಲಿಯೇ ಉಳಿದನೆಂದು ತಿಳಿದುಬರುತ್ತದೆ. ಪ್ರೌಢದೇವರಾಯನ ಕಾಲದಲ್ಲಿ ವಿಜಯನಗರವು ವೀರವಿರಕ್ತರಿಂದ ಕೂಡಿ ಸರ್ವಮತದ ಪಂಡಿತರಿಗೂ ಆಶ್ರಯವಾಗಿದ್ದಿತು. ವೇದ ವೇದಾಂತ, ಆಗಮಗಳಲ್ಲಿ ಪ್ರಾವೀಣ್ಯತೆ ಪಡೆದಿದ್ದ ಕವಿ ಗುರುಬಸವ, ಪ್ರೌಢದೇವರಾಯನ ಆಸ್ಥಾನದಲ್ಲಿ ಪರವಾದಿಗಳೊಂದಿಗೆ ವಾದಮಾಡಿ ಗೆದ್ದು 'ಶಾರದಾಪೀಠ'ವನ್ನೇರಿದ ಉಲ್ಲೇಖ ಕಂಡುಬರುತ್ತದೆ. (ಯೋಗಾಂಗ ವಿಭೂಷಣ ಪುಟ ೪) ನೂರೊಂದು ವಿರಕ್ತರಲ್ಲಿ ಕರಸ್ಥಲದ ನಾಗಿದೇವನೆಂಬ ವೈರಾಗ್ಯ ಮೂರ್ತಿಗೆ ಮಹತ್ತ್ವದ ಸ್ಥಾನವಿದೆ. ಈತ ಕವಿ ಗುರುಬಸವನ ಸಮಕಾಲಿನ ಮತ್ತು ಒಡನಾಡಿ. ಪ್ರೌಢದೇವರಾಯನ ದೀಕ್ಷಾಗುರು. ಪೂರ್ವಾಶ್ರಮದಲ್ಲಿ ಅಕ್ಕಸಾಲೆಯ ನಾಗನೆಂದು ಹೆಸರುಗೊಂಡಿದ್ದ ನಾಗಿದೇವನಿಗೂ ಕರಸ್ಥಲದ ವೀರಣ್ಣೊಡೆಯರು ದೀಕ್ಷಾ ಗುರುಗಳಾಗಿದ್ದರು. ನಾಗಿದೇವನು ಕಾರಣಾಂತರದಿಂದ ಜೀವನದಲ್ಲಿ ಜುಗುಪ್ಸೆಗೊಂಡು ವೈರಾಗ್ಯ ತಾಳಿ ದೇಶ ಸಂಚಾರ ಮಾಡಿ ಪುನಃ ಬಂದು ವೀರಣ್ಣೊಡೆಯರಿಂದ ದೀಕ್ಷೆ ಪಡೆದು ಲಿಂಗಲೀಲೆಯಲ್ಲಿ ಸಾಧನೆ ಮಾಡಿದವನು. ಒಮ್ಮೆ ನಾಗಿದೇವ ಹಂಪೆಯ ಕವಿ ಗುರು ಬಸವನ ಮಠಕ್ಕೆ ಬಂದಾಗ ಪೂಜಾ ನಿರತರಾದ ಗುರು ಬಸವನ ಮನಸ್ಸು ಲಿಂಗದಲ್ಲಿ ಲೀನವಾಗಿಲ್ಲವೆಂಬುದನ್ನು ಸಮ್ಯಕ್ ಜ್ಞಾನದಿಂದ ಅರಿಯುತ್ತಾರೆ. ಅನುಭವದ ನಿಜದರಿವನ್ನು ಅರುಹುತ್ತಾರೆ. ಕವಿ ಗುರು ಬಸವ ನಾಗಿದೇವನಿಗೆ ನಮಿಸುತ್ತಾರೆ. ಗುರು ವಿರಕ್ತರಲ್ಲಿ ಭೇದವಿಲ್ಲವೆಂಬ ಸತ್ಯವನ್ನು ಜಗತ್ತಿಗೆ ತಿಳಿಸುತ್ತಾರೆ.

ಕವಿಗುರುಬಸವನು ಹಂಪೆಯಲ್ಲಿ ಏರಿದ 'ಶಾರದಾಪೀಠ' ಯಾವುದು ಎಂಬ ಪ್ರಶ್ನೆ ಎದುರಾಗುತ್ತದೆ. ಶಂಕರಾಚಾರ್ಯ ಪರಂಪರೆಯಲ್ಲಿ ಬಂದ ಒಂದು ಶಾರದಾಪೀಠವಾಗಿರಬೇಕೆಂದು ಎಮ್.ಎ. ನಾರಾಯಣಶಾಸ್ತ್ರಿಗಳು ತಮ್ಮ ಮನೋವಿಜಯ ಕೃತಿಯ ಮುನ್ನುಡಿಯ ತಿಳಿಸಿದ್ದಾರೆ. ಪರಮ ಗುರುಬಸವೇಶನಧಿಕತರವಾದದಿಂದಿರಡೆ ಶಾರದೆಯ ಪೀಠವನೇರಿ ಗೆಲುವಿನಿಂ ಮರಳಿ ಬಂದಾ 'ಪ್ರೌಢದೇವರ ಮನೆಯೊಳಿರಲೊರ್ವಯೋಗಿ' ಎಂಬ ಉಲ್ಲೇಖ ಕಂಡು ಬರುತ್ತದೆ. ಚಂದ್ರಯೋಗಿ ಎಂಬುವನು ಗುರುಬಸವನೊಡನೆ ವಾದ ಮಾಡಿದನೆಂಬ ಉಲ್ಲೇಖವಿದೆ. ಇತರ ಯೋಗಿಗಳಿಗಿಂತ ತಾನೇ ಮೇಲೆಂಬುದನ್ನು ವಾಗ್ವಾದದ ಮೂಲಕ ಪ್ರತ್ಯಕ್ಷ ತೋರಿಸಿದ ಕವಿಗುರುಬಸವ, ಖೇಚರ ಪವನದಲ್ಲಿದ್ದುಕೊಂಡು ಸಕಲ ರಾಗಂಗಳಂ ಹಾಡಿ ನಿರವಯಲಾದನೆಂಬ ಸಂಗತಿ ತಿಳಿದುಬರುತ್ತದೆ. ಬಯಲೊಳಗೆ ಬಯಲಾಗುವುದೇ ಲಿಂಗಾಯತದ ಅಂತಿಮಗುರಿ. ಗುರುಬಸವನು ಹಂಪೆಯಲ್ಲಿಯೇ ಲಿಂಗದೊಳಗಾದನೆಂದು ತಿಳಿದುಬರುತ್ತದೆ. ಈತನ ಕಾಲ ೧೫ನೇ (೧೪೩೦) ಶತಮಾನವೆಂದು ವಿದ್ವಾಂಸರು ಗುರುತಿಸಿದ್ದಾರೆ. ಸಕಲಶಾಸ್ತ್ರ ಪ್ರವೀಣನೆಂದು ಸಪ್ತಕಾವ್ಯ ಕವಿ ಗುರುಬಸವ ಪ್ರಸಿದ್ಧನಾಗಿದ್ದಾನೆ. ಈತನ ಎಲ್ಲ ಏಳು ಕಾವ್ಯಗಳೂ ಶಾಸ್ತ್ರ ನಿರೂಪಣೆಯನ್ನೇ ಪ್ರಧಾನವಾಗಿ ನಿರೂಪಿಸುತ್ತವೆ. ವೇದಾಂತದ ವಿಷಯವನ್ನು ಕನ್ನಡ ಛಂದಸ್ಸಿನ ವಿವಿಧ ಮಟ್ಟುಗಳಲ್ಲಿ ಕಾವ್ಯಮಯವಾಗಿ ರಚಿಸಿ ಹಾಡಿದ್ದಾನೆ. ಶಾಸ್ತ್ರದಂತಹ ಕ್ಲಿಷ್ಟ ವಿಷಯವನ್ನು ಸಹ ಹೃದಯಂಗಮವಾಗುವಂತೆ ಮಾಡಿದ ಕೀರ್ತಿ ಕವಿಗುರುಬಸವನಿಗೆ ಸಲ್ಲುತ್ತದೆ ಎನ್ನುತ್ತಾರೆ 'ಯೋಗಾಂಗ ವಿಭೂಷಣ' ಕೃತಿಯ ಸಂಪಾದಕರಾದ ಡಾ. ಎಂ.ಎಸ್. ಸುಂಕಾಪುರ ಅವರು. ಯೋಗಾಂಗ ವಿಭೂಷಣ ಕೃತಿ ರಚಿಸಿರುವ ಸಪ್ತ ಕಾವ್ಯದ ಕವಿ ಗುರು ಬಸವ ರಚಿಸಿರುವ ಇನ್ನುಳಿದ ೬ ಕೃತಿಗಳೆಂದರೆ ೧) ಸದ್ಗುರು ರಹಸ್ಯ, ೨) ಕಲ್ಯಾಣೇಶ್ವರ, ೩) ಸ್ವರೂಪಾಮೃತ, ೪) ವೃಷಭಗೀತೆ, ೫) ಅವಧೂತ ಗೀತೆ, ೬) ಮನೋವಿಜಯ. ಇವುಗಳ ಜೊತೆಗೆ ಅನೇಕ ಸ್ವರ ವಚನಗಳನ್ನೂ ರಚಿಸಿದ್ದಾನೆ. ಈತನಿಗೆ ಭಕ್ತಜನ ಮನೋಮಂದಿರ, ಶಿವಯೋಗಿ ಜನಸೇವಿತ ಚರಣಾರವಿಂದ, ಷಟ್‌ಸ್ಥಲಜ್ಞಾನ ಪ್ರಭಾಪುಂಜತಾಂತರಂಗ ವೀರಶೈವ ಮತಸ್ಥಾಪನಾಚಾರ್ಯ ಎಂಬ ಬಿರುದುಗಳಿದ್ದವೆಂದು ವಿರಕ್ತ ತೋಂಟದಾರ್ಯರು ತಿಳಿಸಿದ್ದಾರೆ.

ಕವಿಗುರುಬಸವನ ಸಪ್ತಕಾವ್ಯಗಳು ವೇದಾಂತ ಶಾಸ್ತ್ರವನ್ನು ಸಶಾಸ್ತ್ರೀಯವಾಗಿ ಬೋಧಿಸುತ್ತವೆ. ಲಿಂಗಾಂಗ

* # ೮೭. 'ಶಾಂತಲಾ' ಜಿಲ್ಲಾ ಪಂಚಾಯತ್ ಎದುರು, ಕುವೆಂಪು ರಸ್ತೆ, ಶಿವಮೊಗ್ಗ-೫೭೭೨೦೧.

ಸಾಮರಸ್ಯದ ತಿರುಳನ್ನು ಸಾಮಾನ್ಯರಿಗೂ ತಿಳಿಯುವಂತೆ ಬೋಧಿಸುತ್ತವೆ.

೧) 'ಸದ್ಗುರು ರಹಸ್ಯ' ಈ ಕೃತಿಯಲ್ಲಿ ನಿಜತತ್ವ ಬೋಧೆ ಮಾಡುವ ಮನೋಹರವಾದ ಉತ್ತಮ ಕೃತಿಯಾಗಿದೆ. ಭಾಮಿನಿ ಷಟ್ಪದಿಯಲ್ಲಿದ್ದು ಒಂಭತ್ತು ಉಪದೇಶಗಳನ್ನು ಒಳಗೊಂಡಿದೆ.

'ಕರ್ಪೂರದ ಹೆಣ್ಣಗ್ನಿ ಪುರುಷನಪ್ಪಿದಾಕ್ಷಣ ನೋಡ ನೋಡಲಿಕೊಪ್ಪಡಗಿ ಸಂದಳಿದು ನಿರ್ವಯಲಪ್ಪ ತೆರನಂತೆ ತೆಪ್ಪದೀ ಸದ್ಗುರು ರಹಸ್ಯದೊಳಿಪ್ಪ ಸುಕೃತಾರ್ಥವನು ವೇಧಿಸು ತಿಪ್ಪವರ ತನುವಳಿದು ಮನಮನದೊಳಗೆ ಲಯವಹುದು.'

ಲಿಂಗಾಂಗ ಸಾಮರಸ್ಯದಿಂದ ಬಯಲಿನಲ್ಲಿ ಬಯಲಾಗುವ ನಿಜತತ್ವವೇ ಸದ್ಗುರು ರಹಸ್ಯ ಕೃತಿಯ ಪ್ರಮುಖ ಆಶಯ.

೨) 'ಕಲ್ಯಾಣೇಶ್ವರ' ಪರಿವರ್ಧಿನಿ ಷಟ್ಪದಿಯಲ್ಲಿ ವಿವಿಧ ರಾಗಗಳಲ್ಲಿ ರಚಿತವಾಗಿರುವ ಈ ಕೃತಿ ಷಟ್‌ಸ್ಥಲ ಜ್ಞಾನವನ್ನು ತಿಳಿಸುತ್ತದೆ. ಸ್ಥಲಜ್ಞಾನವನ್ನು ಶಿವಯೋಗ ಕ್ರಿಯೆಯಲ್ಲಿ ಅಳವಡಿಸಿಕೊಂಡವರು ಕಲ್ಯಾಣ ಬಸವೇಶ್ವರರು. ಘನಲಿಂಗವೇ ಮೂರ್ತಿವೆತ್ತ ಬಸವಣ್ಣನವರನ್ನು ನೆನೆದರೆ ಎಲ್ಲರ ಕಲ್ಯಾಣ ಎಂದು ಈ ಕೃತಿಯಲ್ಲಿ ಕವಿ ಸಾರಿದ್ದಾನೆ. ಕಲ್ಯಾಣ ಮಾಡುವ ಈಶ್ವರ ಕಲ್ಯಾಣೇಶ್ವರ ! ಈತನೇ ಕಲ್ಯಾಣದ ಅರಿವಿನ ಜ್ಯೋತಿ ಬಸವೇಶ್ವರ ಎಂದಿದ್ದಾನೆ ಕವಿ.

೩) 'ಸ್ವರೂಪಾಮೃತ' ಜೀವ-ಶಿವರ ಸ್ವರೂಪವನ್ನು ತಿಳಿಸುವ ಸ್ವಾರಸ್ಯಪೂರ್ಣ ಕೃತಿ ಭಾಮಿನಿಷಟ್ಪದಿಯಲ್ಲಿದೆ. ಭಾಷೆ ಸರಳವಾಗಿದ್ದು, ೩ ಪರಿಚ್ಛೇದಗಳು, ೭೭ ಪದ್ಯಗಳಿವೆ ಜೀವ-ಶಿವರು ಭಿನ್ನರಾದರೂ, ಅವರು ಒಂದಾಗುವುದೇ ಮುಕ್ತಿ. ಅದೇ ಜೀವನ್ಮುಕ್ತಿ ಎಂದು ಪ್ರತಿಪಾದಿಸುತ್ತದೆ.

೪) 'ವೃಷಭಗೀತೆ' ವಿವಿಧ ರಾಗಗಳಲ್ಲಿರುವ ವೃಷಭಗೀತೆ ಭೋಗಷಟ್ಪದಿಯಲ್ಲಿದೆ. ಇದೊಂದು ಹೊಸ ಮಾದರಿಯ ಶತಕ ಕೃತಿ. ಷಟ್ಪದಿಯಲ್ಲಿರುವ ವೃಷಭಗೀತೆಯ ಪ್ರತಿಯೊಂದು ಪದ್ಯವೂ 'ಅವ ಕೃತಾರ್ಥನು' ಎಂದು ಕೊನೆಯಾಗಿದೆ.

'ವ್ಯಸನಗುಣ ಷಡೂರ್ಮಿ, ಭ್ರಾಂತಿವಸರ, ಕರ್ಮಕಪಟ
ವೆಸರ ಸಸಿನೆ ಕೇಳದಂತೆ ತನ್ನ
ಕಿಂಕರೌಘಕೆ ವೃಷಭ ತಾನೆ ತನ್ನ ಧರ್ಮವೆಸರನಿಟ್ಟು,
ಕೊಟ್ಟ ಪೂರ್ಣ ವೃಷಭಗೀತೆಯಾ ನಿರೀಕ್ಷೆಗೈವನವ
ಕೃತಾರ್ಥ ಎಂಬುದು ಕವಿಯ ಆಶಯ"

೫) 'ಅವಧೂತ ಗೀತೆ' ನೂರೊಂದು ಚೌಪದಗಳಿಂದ ಕೂಡಿದ ಶತಕ ಕೃತಿ. ಈ ಕೃತಿಯಿಂದಾಗಿ, ಕವಿ ಅವಧೂತ ಪರಂಪರೆಗೆ ಸೇರಿದವನು ಎನ್ನಬಹುದು. ಸ್ವಾನುಭವದ್ವಯ ದಿಂದಾಗಿ ಕವಿ ವಿಶಿಷ್ಟ ಅವಧೂತ ಜ್ಞಾನದಿಂದ, ವಿವಿಧ ಅನುಭವಗಳನ್ನು ಸ್ವಾಯತ ಮಾಡಿಕೊಂಡ ಅವಧೂತ, ಕವಿತೆ ಹೀಗಿದೆ.

"ನಾನಾ ವಿಧವವಧೂತನ ಚಿಹ್ನೆ ಏನೆಂದರಿಯಲು ಬಾರದು
ತನ್ನ, ಜ್ಞಾನೋತ್ತರ ವಿವರಣೆಯೊಳಭಿನ್ನ
ಸಾನಂದವೆ ತಾನಾಗಿಹ ಚೆನ್ನ. ಲಿಂಗಾನಂದದೊಳಗೆ
ಮೈಮರೆವ ಶಿವಯೋಗಿಯೇ" ಅವಧೂತ ಎಂದಿದ್ದಾನೆ
ಕವಿ.

೬) 'ಮನೋ ವಿಜಯ' ಈ ಕೃತಿಯು ಷಟ್ಪದಿಯಲ್ಲಿ ರಚಿತವಾಗಿದ್ದು ಶೈಲಿಯು ಸೊಗಸಾಗಿದೆ. ೯ ಪ್ರಕರಣಗಳಲ್ಲಿ ೩೫೫ ಸುಂದರವಾದ ಪದ್ಯಗಳಿಂದ ಕೂಡಿದೆ. ಅರಿಷಡ್ವರ್ಗ ಗಳನ್ನು ಗೆಲ್ಲುವುದು ಮನಸ್ಸಿನ ನಿಗ್ರಹದಿಂದ ಮಾತ್ರ ಸಾಧ್ಯ ಎಂದು ಕವಿ ಈ ಕೃತಿಯಲ್ಲಿ ನಿರೂಪಿಸಿದ್ದಾನೆ. ಮನಸ್ಸು ಇಂದ್ರಿಯಗಳೊಂದಿಗೆ ಕೂಡಿ ಸದಾ ಚಂಚಲವಾದದ್ದು. ಇಂದ್ರಿಯಗಳನ್ನು ನಿಗ್ರಹಿಸಿ ಮನಸ್ಸನ್ನು ಲಿಂಗದಲ್ಲಿ ಸ್ಥಿರವಾಗಿ ನಿಲ್ಲಿಸುವುದರಿಂದ ಪರಮಾತ್ಮ ಸಾಕ್ಷಾತ್ಕಾರ ಸಾಧ್ಯ. 'ಮನನಿಂದೊಡೆ ಮನದ ಮೊನೆಯ ತುದಿಯಲ್ಲಿ ಪರಮಾತ್ಮ ನನ್ನು ಕಾಣಬಹುದು.' ಮನದ ನಿಗ್ರಹವೇ ಕೈವಲ್ಯ ಸಾಧನೆ ಸಾಧ್ಯ ಕಾರಣ ಈ ಕೃತಿಗೆ 'ಮನೋವಿಜಯ' ಎಂದಿದ್ದಾನೆ ಕವಿ.

'ಯೋಗಾಂಗ ವಿಭೂಷಣ'

ಯೋಗಗಳಿಂದ ವಿಶೇಷವಾಗಿ ಕೂಡಿರುವುದೇ ಯೋಗಾಂಗಭೂಷಣ ಯೋಗಾಂಗಗಳು ಶಿವಯೋಗದಲ್ಲಿ ಲೀನವಾಗಿರುವ ಈ ಕೃತಿ ಗುರುಬಸವ ಕವಿಯ ಚೊಚ್ಚಲು ಕೃತಿ. ಜನನ ಮರಣಚಕ್ರದಲ್ಲಿ ಸಿಕ್ಕು ತೊಳಲುತ್ತಿರುವ ಜೀವನ ದೃಷ್ಟಿ ನಿಜದ ಕಡೆ ಹೊರಳುವಂತೆ ಮಾಡುವ ಗುರುವನ್ನು ಅರಸಿ ಅರಿವು ಹೊಂದಿ ಜ್ಞಾನದ ಅಂತಿಮ ಹಂತವನ್ನು ಏರುವುದು ಲಿಂಗೈಕ್ಯ ಸ್ಥಿತಿ ಸಾಧಿಸುವ ಮಾರ್ಗ ತೋರುವುದು ಈ ಕೃತಿಯ ವಿಶೇಷ. ಆರು ಅಧ್ಯಾಯಗಳಲ್ಲಿ ವಿಸ್ತರಿಸುವ ಕೃತಿ ೨೮೧ ಷಟ್ಪದಿಗಳಿಂದ ಕೂಡಿದೆ. ಬಹುಪಾಲು ಪದ್ಯಗಳು 'ದೇಶಿಕನು' ಎಂಬ ಅಂಕಿತದಿಂದ ಕೊನೆಗೊಂಡಿವೆ. ಮೊದಲ ಪದ್ಯದಲ್ಲಿಯೇ...'ರಾಗವಿರಾಗ ವಿದೂರ ನಿಖಿಲಭವರೋಗ ಚಿಕಿತ್ಸಕ ಬಸವೇಶ್ವರ ಗಮನಾಗಮನಾದಿ ವಿವರ್ಜಿತ ಕರ್ಮಫಲಪ್ರದ ಜಯ ಸತತಂ' ಎಂದು ಬಸವೇಶ್ವರರನ್ನು ಸ್ಮರಿಸಿದ್ದಾರೆ. ಮುಂದಿನೆರಡು ಪದ್ಯಗಳಲ್ಲಿ 'ವೃಷಭೇಂದ್ರಗೆ ನಮಸ್ಕಾರ' ಎಂದು ೪ನೇ ಪದ್ಯದಲ್ಲಿ 'ನಿಲಾಂಬಿಕೆಗೆ ನಮಸ್ಕಾರ' ಎಂದಿದ್ದಾರೆ. ೫ನೇ ಪದ್ಯ ಹೀಗಿದೆ 'ಬಸವೇಶನ ರಾಣಿಯು, ಬಸವೇಶನ ಶಿಶುವನ್ನು ಶಿಷ್ಯರುಗಳ ಬಸವೇಶನ ಪರಿಚಾರಕನು ಸಖರನು ನಿಜ ಪಟ್ಟಣವ, ಬಸವೇಶನ ಭಾರವವ ವಚನಂಗಳ, ಬಸವೇಶನ ದಾಸೋಹವನನುದಿನ ಪಸರಿಸಿ ಕೀರ್ತಿಸಿ ನುಸುಳಿದೆನಾಂ ಭವಮಾಲೆಯ ಜಗದೊಳ್' ಎಂದು ವರ್ಣಿಸುವ ಮೂಲಕ ಬಸವೇಶ್ವರರ, ಪತ್ನಿಯ, ಶಿಷ್ಯರ, ಪರಿಚಾರಕ, ಸಖರ, ವಚನಗಳ, ದಾಸೋಹದ ಕೀರ್ತಿವಾರ್ತೆಯನ್ನು ಹಾಡಿ ಹೊಗಳಿದ್ದಾನೆ ಕವಿ ಗುರುಬಸವ.

ತಂದೆ ಮಗನು ಒಂದೇ ಎಂದಡೆ ಅವರ ಗುಣಸ್ವಭಾವಗಳಲ್ಲಿ ಭಿನ್ನವೇಕೆ? ಎಂದು ಪ್ರಶ್ನಿಸುತ್ತಲೇ ತಂದೆಯ ವೀರ್ಯ, ತಾಯ ಗರ್ಭ ಸೇರಿ ಪಿಂಡವಾಗಿ, ಬಲಿತು ಮಗುವಾಗಿ ಗರ್ಭದಿಂದ ಹೊರಬರುವ ರೀತಿಯನ್ನು ತಿಳಿಸುತ್ತಾರೆ. 'ಷಡ್‌ವೈರಿಗಳ, ಸಪ್ತವ್ಯಸನ, ಅಷ್ಟಮದಗಳಿಗೆ ಒಳಗಾದವರಿಗೆ ಘೋರ ಬದುಕು ತಪ್ಪದು. ಆಸೆಯೇ ಭವಸಂಧನಕ್ಕೆ ಮೂಲ. ಇದನ್ನು ತಿಳಿದು ದುರಾಸೆಯಿಂದ ಮುಕ್ತರಾಗಿ ನಿಜಸುಖದಲ್ಲಿ ನಿಶ್ಚಿಂತವಾಗಿ ಎಂದಿದ್ದಾನೆ. ಕವಿಗುರುಬಸವ ಒಂದೇ ಲಿಂಗವು' 'ಸ್ಥೂಲ ಸೂಕ್ಷ್ಮ ಕಾರಣ' ಶರೀರಗಳಲ್ಲಿ ಇಷ್ಟ, ಪ್ರಾಣ, ಭಾವಲಿಂಗಗಳಾಗಿ ಬೆಳಗುತ್ತಿದೆ. ಈ ಲಿಂಗದ ನೆಲೆಯನ್ನರಿಯಲು ಅಷ್ಟಾಂಗ ಅಳವಡಿಸಿಕೊಂಡು ಅರಿತು ಆಚರಿಸು ಗುರುವೇ ಯೋಗದ ರಹಸ್ಯ ತಿಳಿಸಿ ಉದ್ಧರಿಸುತ್ತಾನೆ ಎನ್ನುತ್ತಾನೆ ಕವಿ ಗುರುಬಸವ. ಸದಾಚಾರ, ಸದ್ವರ್ತನೆ, ಸಜ್ಜನರ ಸಂಗ, ಇವು ನಿಜವಾದ ಶಿವಯೋಗಿಯ ಲಕ್ಷಣಗಳು. ಆಲಸಿ, ಮೂಢಮತಿ, ಹಟವಾದಿ ನಿಷ್ಠುರಿ ಮುಂತಾದವರ ಸಹವಾಸ ಬೇಡ, ಅಂತವರ ಸಹವಾಸ ಸಲ್ಲದು, ಸಾತ್ವಿಕ ಆಹಾರವನ್ನು ಲಿಂಗಕ್ಕರ್ಪಿಸಿ ಪ್ರಸಾದವನ್ನು ಮಿತವಾಗಿ ಸ್ವೀಕರಿಸುವುದೇ ಉತ್ತಮ. ಸಾಕಷ್ಟು ಗಾಳಿಯನ್ನು ನುಂಗಿ, ಬೇಕಾದಷ್ಟು ಜಲವನ್ನು ಕುಡಿದು, ಜೀರ್ಣವಾಗುವಷ್ಟು ಪ್ರಸಾದ ಸ್ವೀಕರಿಸುವುದು ಯುಕ್ತ ಅತಿಯಾದರೆ ದೇಹಕ್ಕೆ ಬಾಧೆ, ಪ್ರಾಣಾಯಾಮ, ಪ್ರತ್ಯಾಹಾರ ಧ್ಯಾನ ಮತ್ತು ಧಾರಣಗಳು ನಾಲ್ಕು ಶಿವತತ್ತ್ವಗಳು ಎಂದಿದ್ದಾನೆ.

ಗುರುಬಸವ ಕವಿಯ ಸಪ್ತ ಕಾವ್ಯಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ, ಆತನ ಎಲ್ಲ ಕಾವ್ಯಗಳೂ ಗುರುಶಿಷ್ಯ ಸಂವಾದ ರೂಪದಲ್ಲಿ ರಚಿತವಾಗಿವೆ. ಸುವಿವೇಕವೆಂಬ ಶಿಷ್ಯನಿಗೆ ದೇಶಿಕರು ಬೋಧೆ ಮಾಡಿದ ಹಾಗೆ ನಿರೂಪಿಸಿದ್ದಾನೆ. ತನ್ನ ಕೃತಿಗಳ ವಿಶಿಷ್ಟತೆ ಕುರಿತು ಕವಿ ಹೀಗೆಂದಿದ್ದಾನೆ. 'ರಸಭಾವಲಂಕಾರದೆಸಕವಿಲ್ಲೆಂದು ಭಾವಿಸಬೇಡ ಭಾವುಕರ್ ಭಾವಿಸುವೊಡೆ ರಸವೇ ಚಿದ್ರಸಭಾವದೆಸೆ ಪೂರ್ಣ ನಿಜಭಾವವಸೆವಲಂಕಾರ ವಾನಂದ ದಿರವು' ಎಂದಿರುವುದು ವಿಶೇಷ, ಕಾವ್ಯ ಶಾಸ್ತ್ರಗಳ ಸಮನ್ವಯ ತನ್ನ ಕೃತಿಗಳಲ್ಲಿ ಸಮರ್ಪಕವಾಗಿ ಮೂಡಿಬಂದಿದೆ ಎಂದಿದ್ದಾನೆ ಕವಿಗುರುಬಸವ.

ಯೋಗಾಂಗ ವಿಭೂಷಣ ಕೃತಿಯ ಮೊದಲ ಅಧ್ಯಾಯದಲ್ಲಿ ಪಿಂಡಾಂಡ ಜ್ಞಾನದ ರಹಸ್ಯವನ್ನು ತಿಳಿಸಿದ್ದಾನೆ. ಈ ಜ್ಞಾನದಿಂದ ಆತ್ಮನಿಗೆ ತನ್ನ ಮೂಲದ ಅರಿವಾಗಿ ಸಂಸಾರ ಹೇಯವೆನಿಸಿ, ದೇಹವನ್ನು ದೇವಾಲಯವನ್ನಾಗಿಸುವತ್ತ ಸಳೆದು ಆತ್ಮನ ಉದ್ಧಾರಕ್ಕೆ ದೇಹ ಶುದ್ಧವಾಗಿರಬೇಕು ಎಂಬ ಅರಿವನ್ನು ಮೂಡಿಸಿದ್ದಾನೆ. ಎರಡನೇ ಅಧ್ಯಾಯದಲ್ಲಿ ಮನ-ಪವನ-ಬಿಂದುಗಳ ಸಂಬಂಧ ತಿಳಿಸಿ ಯೋಗಾಭ್ಯಾಸದಲ್ಲಿ ತೊಡಗಿದ ಭಕ್ತನಿಗೆ ಉತ್ಪತ್ತಿ ಸ್ಥಿತಿ ಲಯಗಳಿಗೆ ಮನಸ್ಸಿನ ಚಂಚಲತೆ ಕಾರಣ ಅದು ಎಲ್ಲರನ್ನೂ ರಭಸದಿಂದ ಕೊಚ್ಚುವ ಶಕ್ತಿಯುಳ್ಳದ್ದು, ಅದನ್ನು ನಿಯಂತ್ರಿಸುವುದೇ ಯೋಗಸಾಧನೆಯ ಮೊದಲ ಹಂತ. ಪವನವೇ ಪ್ರಾಣ ಅದು ರಸಮೂಲಯುಕ್ತವಾಗಿ ಕುಣಿಸುವುದು. ಬಿಂದುವೆಂದರೆ ಪರಮಾಮೃತ ಈ ಮೂರನ್ನು ನಿಯಂತ್ರಿಸಿ, ಧಾರಣ, ಧ್ಯಾನ, ಸಮಾಧಿ ಮೂಲಕ ಸಿದ್ಧಿ ಪಡೆಯಬೇಕು. ಈ ಅರಿವೇ ಶಕ್ತಿ ಎನ್ನುತ್ತಾನೆ ಕವಿ. ಮೂರನೆಯ ಅಧ್ಯಾಯದಲ್ಲಿ ಯಮ, ನಿಯಮ ಆಸನ ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ, ಸಮಾಧಿಗಳೆಂಬ ಅಷ್ಟಾಂಗ ಯೋಗಗಳ ಅನುಷ್ಠಾನದಿಂದ ದೇಹ ಶುದ್ಧಿ ಪರಮಾನಂದ ಹೊಂದುವ ಅವಸ್ಥೆಯನ್ನು ನಿರೂಪಿಸಿದ್ದಾನೆ. ಯೋಗ ಪರಂಪರೆಯಲ್ಲಿ ಹಠಯೋಗ, ರಾಜಯೋಗಗಳು ಪ್ರಮುಖವಾದವು. ಹಠಯೋಗವು ಸಕೀಲಗಳನ್ನೂ ರಾಜಯೋಗವು ಯೋಗದ ರಹಸ್ಯವನ್ನೂ ತಿಳಿಸುತ್ತವೆ. ವೃತ್ತಿಗಿಂತ ಪ್ರಾಣ ಅಧಿಕವೆಂದು ಹಠಯೋಗ ತಿಳಿಸಿದರೆ, ವೃತ್ತಿಯು ಪ್ರಾಣವನ್ನು ಹಿಂಬಾಲಿಸುತ್ತದೆಂದು ನಿರೂಪಿಸುತ್ತದೆ. ಇವೆರಡರಿಂದಲೂ ಶಿವಯೋಗ ಭಿನ್ನ ಎಂದಿದ್ದಾನೆ ಕವಿ. ಮುಂದಿನ ಮೂರು ಅಧ್ಯಾಯಗಳಲ್ಲಿ ಕವಿ ಶಿವಯೋಗದ ಮಹತ್ತ್ವವನ್ನು ವಿಸ್ತರಿಸಿ ಹೇಳಿ ಇದೇ ಲಿಂಗಾಂಗ ಸಾಮರಸ್ಯ ಎಂದಿದ್ದಾನೆ. ಶಿವಜ್ಞಾನ, ಶಿವಭಕ್ತಿ, ಶಿವಧ್ಯಾನ, ಶಿವವ್ರತ, ಶಿವಾರ್ಚನೆ ಪಂಚಪ್ರಕಾರಗಳ ಶಿವಾರ್ಚನೆಗೆ ಮೊದಲ ಸ್ಥಾನ. ಶಿವಯೋಗಕ್ಕೆ ಹಠಯೋಗ ಸಾಧನವಾದರೂ ರಾಜಯೋಗ ಸಾಧಕನನ್ನು ಪೂರ್ಣಸಿದ್ಧಿಯತ್ತ ಕೊಂಡೊಯ್ಯುತ್ತದೆ. ಅಷ್ಟಾಂಗಗಳಿಂದ ಶಿವನನ್ನು ಪೂಜಿಸುವಾಗ ಆ ಅಂಗಗಳೆಲ್ಲ ಲಿಂಗಗಳಾಗುವುವು. ಶಿವಯೋಗದ ವೈಶಿಷ್ಟ್ಯ ಎಂದಿದ್ದಾನೆ ಕವಿ ಬಸವ. ಬದುಕಿನ ಪರಮಗುರಿ 'ಲಿಂಗಾಂಗ ಸಾಮರಸ್ಯ' ಎಂದು ಸ್ಪಷ್ಟಪಡಿಸಿದ್ದಾನೆ ಕವಿ. ಅಲ್ಲಮಪ್ರಭು ತಮ್ಮ ವಚನದಲ್ಲಿ 'ಅಷ್ಟಾಂಗ ಯೋಗದಲ್ಲಿ, ಯಮ, ನಿಯಮಾಸನ, ಪ್ರಾಣಾಯಾಮ, ಪ್ರತ್ಯಾಹಾರವೆಂಬ, ಧ್ಯಾನ ಧಾರಣ, ಸಮಾಧಿಯೆಂಬ ಎರಡು ಯೋಗವುಂಟು ಅಲ್ಲಿ ಅಳಿದು ಕೂಡುವುದು ಒಂದು ಯೋಗ, ಅಳಿಯದೆ ಕೂಡುವುದೊಂದು ಯೋಗ, ಈ ಎರಡೂ ಯೋಗದೊಳಗೆ ಅಳಿಯದೆ ಕೂಡುವ ಯೋಗವರಿದು ಕಾಣಾ ಗುಹೇಶ್ವರಾ'! (೨೫) ಎಂದಿರುವುದು ಕವಿ ಗುರುಬಸವನ ಯೋಗಾಂಗ ವಿಭೂಷಣ ಕೃತಿಗೆ ಪೂರಕವಾಗಿದೆ. ಭಾವ-ಭಾಷೆಗಳ ಸಮನ್ವಯ ಶೈಲಿ ಕವಿಗುರು ಬಸವನದು, ಆತ ಆರಿಸಿಕೊಂಡಿರುವ ವಸ್ತು ಸತ್ವಯುತವಾಗಿದೆ. ರಸವತ್ತಾಗಿ ನಿರೂಪಿತವಾಗಿದೆ. ಪ್ರತಿಭೆ, ಪಾಂಡಿತ್ಯದೊಂದಿಗೆ ಶಾಸ್ತ್ರವೂ ಮೇಳೈಸಿರುವ ಕೃತಿ. ಪರಿವರ್ಧಿನಿ ಷಟ್ಪದಿಯಲ್ಲಿವೆ. ಇವುಗಳು ರಾಗವಾಗಿ ಹಾಡುವಂತೆ ಸಂಯೋಜಿತವಾಗಿದೆ. ಒಟ್ಟಿನಲ್ಲಿ ಕವಿ ಗುರುಬಸವನ ಸಪ್ತ ಕಾವ್ಯಗಳು ವಿಜಯನಗರ, ಕೆಳದಿ ಕಾಲದ ಕನ್ನಡ ಸಾಹಿತ್ಯದ ಪ್ರಮುಖ ಆಕರವಾಗಿ ಅಧ್ಯಯನ ಯೋಗ್ಯವಾಗಿದೆ.

ಕವಿ ಸೋಮರಾಜನ ಕಾವ್ಯೋಕ್ತ ಕನ್ನಿಕಾಪೂಜೆ

ಡಾ. ನಳಿನಿ ವೆಂಕಟೇಶ್*

ಕವಿ ಸೋಮರಾಜನು 'ಶೃಂಗಾರ ಸಾರ' ಎಂಬ ಚಂಪೂ ಕೃತಿಯನ್ನು ರಚಿಸಿದ್ದಾನೆ. ಇದಕ್ಕೆ ಇನ್ನೊಂದು ಹೆಸರಾಗಿ 'ಉದ್ಭಟ ಕಾವ್ಯ' ಎಂದು ಪ್ರಚಾರದಲ್ಲಿದ್ದರೂ ಕಾವ್ಯದಲ್ಲಿ ಅದು ಎಲ್ಲೂ ಉಕ್ತವಾಗಿಲ್ಲ. ಕಾವ್ಯದ ಕೊನೆಯ ಪುಷ್ಪಿಕೆಯಲ್ಲಿ 'ಕರ್ನಾಟಕ ಶೃಂಗಾರ ಸಾರ ಮಹಾ ಪ್ರಬಂಧ' ಎಂದಿದೆ. ಕವಿಯ ಕಾಲ ಕ್ರಿಶ. ೧೫೨೨. ಕವಿಯು ವೀರಶೈವ ಮತಾವಲಂಬಿಯಾಗಿದ್ದು, ಕರಾವಳಿ ತೀರದ ಸಣ್ಣ ರಾಜ್ಯವೊಂದನ್ನು ಆಳುತ್ತಿದ್ದಿರಬೇಕು.

ಸೋಮರಾಜನು ತನ್ನ ಕಾವ್ಯದಲ್ಲಿ ಆಗ ನಡೆಯುತ್ತಿದ್ದ, ಈಗಲೂ ನಡೆಯುತ್ತಿರುವ 'ಕನ್ನಿಕಾಪೂಜೆ'ಯ ವಿವರವನ್ನು ದಾಖಲಿಸಿದ್ದಾನೆ. ಕಾವ್ಯಕ್ಕೆ ಸಹಜವಾದ ವಿವರವಾದ ವರ್ಣನೆಯಿದ್ದರೂ ಪೂಜಾವಿಧಾನ ಮಾತ್ರ ಶಾಸ್ತ್ರಬದ್ಧವಾಗಿದೆ. ಇದು ಸಾತ್ವಿಕ ಪೂಜೆಯಾಗದೆ ತಾಮಸ ಪೂಜಾ ವಿಧಾನವಾಗಿದೆ. ನೈವೇದ್ಯಕ್ಕೆ ಇಡಲಾಗುವ ಮದ್ಯ, ಮಾಂಸದಡಿಗೆಯ ವಿವರವಾದ ವರ್ಣನೆಯಿದೆ. ಕಾವ್ಯದ ಸ್ಥೂಲವಾದ ಕಥೆ ಇಂತಿದೆ.



ಕನ್ನಿಕಾ ಪೂಜೆ.... ಕೋಲ್ಕತ್ತದ ದಕ್ಷಿಣೇಶ್ವರ ದೇವಾಲಯದಲ್ಲಿ ರಾಮನವಮಿ ಪ್ರಯುಕ್ತ ನೂರಾರು ಬಾಲಕಿಯರು ಕನ್ನಿಕಾ ಪೂಜೆಯಲ್ಲಿ ಭಾಗವಹಿಸಿದ ದೃಶ್ಯ

ಕಥಾನಾಯಕ ಉದ್ಭಟದೇವನು ಗುಜರಾತ್ ದೇಶದ ಭಲ್ಲಕೀಪುರದ ದೊರೆ. ಈತನು ಹಂಪೆಯಲ್ಲಿದ್ದ ದೇವಲ ಋಷಿಯ ಆಹ್ವಾನದಂತೆ ಸೈನ್ಯಸಮೇತನಾಗಿ ಹಂಪೆಗೆ ಬಂದನು. ಋಷಿಯ ಯಜ್ಞಕ್ಕೆ ವಿಘ್ನಕಾರಿಯಾಗಿದ್ದ ನಿರ್ಘರ್ಜಾಸುರನನ್ನು ಸಂಹರಿಸಿದನು. ಒಂದು ದಿನ, ಬೇಡನ ಕೈಗೆ ಸಿಕ್ಕಿದ ಗಿಳಿಯೊಂದನ್ನು ಬಂಧಮುಕ್ತಗೊಳಿಸಿ ಉಪಚರಿಸಿದನು. ಅದು ಮನುಷ್ಯರಂತೆ ಮಾತನಾಡುತ್ತ ತನ್ನ ಪೂರ್ವ ಜನ್ಮದ ವೃತ್ತಾಂತವನ್ನು ತಿಳಿಸಿತು. ತಾನು ಚೋಳ ರಾಜಕುಮಾರಿಯ ಬಳಿಯಲ್ಲಿ ಇದ್ದುದಾಗಿಯೂ, ಆಕೆಗೆ ತಕ್ಕ ಪತಿಯನ್ನು ಅರಸುತ್ತಾ ಉದ್ಭಟದೇವನ ಬಳಿಗೇ ಹೊರಟದ್ದುದಾಗಿಯೂ ತಿಳಿಸಿತು. ಗಿಳಿಯ ಮಾತಿನಂತೆ ರಾಜನು ರಾಜಕುಮಾರಿಯನ್ನು ಮದುವೆಯಾದನು. ಉದ್ಭಟದೇವನು ಶಿವಭಕ್ತನಾದುದರಿಂದ, ಇಡೀ ಊರಿನ ಸಹಿತ ಕೈಲಾಸಕ್ಕೆ ತೆರಳಿದನು.

ಗಿಳಿಯು ಮನುಷ್ಯರಂತೆ ಮಾತನಾಡುತ್ತಿದ್ದುದನ್ನು ಕೇಳಿ ಉದ್ಭಟರಾಜನು ಆಶ್ಚರ್ಯದಿಂದ ಆ ಕುರಿತು ಪ್ರಶ್ನಿಸಿದನು. ಗಿಳಿಯು ತನ್ನ ಹಾಗೂ ತನ್ನ ಗುರು ಚಿದಂಗ ಋಷಿಯನ್ನು ಕುರಿತ ಒಂದು ಘಟನೆಯನ್ನು ಹೇಳಿ, ತನಗೆ ಬಂದ ಶಾಪವನ್ನು ಹೇಳುತ್ತದೆ.

ಶುಕ ಎಂಬುದಾಗಿ ನನ್ನ ಹೆಸರು. ಒಂದು ಸಲ ನನ್ನ ಗುರುಗಳಾದ ಚಿದಂಗ ಋಷಿಗಳು ಮಾಡುವ ಈಶ್ವರ ಪೂಜೆಗೆ ಹೂಗಳನ್ನು ತರಲು ವನಕ್ಕೆ ಹೋಗಿ, ಹಿಂದಿರುಗಿ ದೆನು. ಆಗ ನನ್ನ ಮನೋದಾರ್ಢ್ಯವನ್ನು ಪರೀಕ್ಷಿಸಲು ಗುರುವು ಮಹೇಂದ್ರ ಜಾಲವನ್ನು ನಿರ್ಮಿಸಿದನು. ಅದು ಈ ಪರಿ ಇದ್ದಿತು.

ಅಂದು ಹುಣ್ಣಿಮೆಯ ಬೆಳದಿಂಗಳ ರಾತ್ರಿ. ತಂಗಾಳಿಯು ಪರಿಮಳವನ್ನು ಸೂಸುತ್ತಾ ಸುಳಿದಾಡುತ್ತಿತ್ತು. ಅಂತಹ ಮನೋಹರವಾದ ಪರಿಸರದಲ್ಲಿ ಸುಂದರವಾದೊಂದು ಲತಾ ಮಂಟಪವು ಕಣ್ಣಿಗೆ ಬಿತ್ತು. ನಾನಾ ರೀತಿಯ ಹೂಮಾಲೆ ಗಳೊಂದಿಗೆ ಕೆಂಪು ಜಾಜಿಯ ಗೊಂಚಲುಗಳಿಂದ, ಎಳೆಯ ಕೆಂಪಾದ ಮಾವಿನ ಚಿಗುರುಗಳಿಂದ, ಕೆಂಪು ಕಣಿಗಲೆ

* # ೧೫, 'ಮನಸ್ವಿನಿ', ಸ್ನೇಹ ಕಾಲೋನಿ, ಚಿಕ್ಕಲ್ಲಸಂದ್ರ, ಬೆಂಗಳೂರು-೫೬೦ ೦೬೧.

ಹೂವುಗಳ ಮಾಲೆಗಳಿಂದ, ಮನೋಹರವಾದ ಕೆಂಪು ದಾಸವಾಳದ ಹೂಗಳ ತೋರಣದಿಂದ ಆ ಲತಾಮಂಟಪವು ಶೋಭಿಸುತ್ತಿತ್ತು. ಇಂಪಾದ ಗಾನದಿಂದ, ಮಂತ್ರಗಳ ನಾದದಿಂದ ಮೇರೆ ಮೀರಿದ ಸಂತಸದಿಂದ ವಿಲಾಸಗಳಿಂದ ಕೂಡಿತ್ತು. ಸರ್ವಶಾಸ್ತ್ರಗಳ ಶಾಲೆಯಾಗಿ. ಲೀಲೆಯ ತವರ್ಮನೆಯಾಗಿ ಸುಂದರಿಯರಾದ ಬಾಲೆಯರಿಂದ ಆ ಲತಾಮಂಟಪವು ರಂಜಿಸುತ್ತಿತ್ತು.

ಆ ಮಂಟಪದ ಮಧ್ಯದಲ್ಲಿ ಪದ್ಮಾಸನಸ್ಥನಾಗಿ, ವಿಭೂತಿ ಲೇಪಿತವಾದ ಲಲಿತ ಶರೀರವುಳ್ಳವನಾಗಿ, ಮುಕುಳಿತ ನೇತ್ರನಾಗಿ ರುದ್ರಾಕ್ಷಿ ಮಾಲೆಯನ್ನು ಕೈಯಲ್ಲಿ ಹಿಡಿದು ನಕ್ಷತ್ರಗಳ ನಡುವಣ ಚಂದ್ರನಂತೆ ವಾಚಸ್ಪತಿ ನಿಭನಾದ ಗುರು ಚಿದಂಗನು ಶೋಭಿಸುತ್ತಿದ್ದನು.

ಮುಂದೆ ಕನ್ನಿಕಾಪೂಜೆಯ ಕ್ರಮವನ್ನು ಕವಿಯು ಹೀಗೆ ವರ್ಣಿಸುತ್ತಾನೆ. ಕುಂಕುಮದ ಪಂಕದಿಂದ ರಚಿತವಾದ ಕೆಂಪನೆಯ ಮೋಡದ ನಡುವೆ ಚಂದ್ರನಂತೆ, ಕಡುನೀಲಿಯ ಆಗಸದಲ್ಲಿ ಮಿರುಗುವ ಮಿಂಚಿನ ಬಳ್ಳಿಯಂತೆ ಧ್ಯಾನಸ್ಥನಾದ ಚಿದಂಗ ಋಷಿಯ ಎದುರಿನಲ್ಲಿ ಶ್ರೀಚಕ್ರವು ಶೋಭಿಸುತ್ತಿತ್ತು. ಅದು ನಾನಾ ಕುಸುಮಗಳಿಂದ ಅಲಂಕೃತವಾಗಿತ್ತು. ಅದರ ಮಧ್ಯಭಾಗದಲ್ಲಿ ಒಂದು ಪದ್ಮವು ಇದ್ದಿತು.

ವಿಶಾಲವಾದ ಕಣ್ಣುಗಳನ್ನುಳ್ಳ ಮಣಿಮಯ ಹಾರವನ್ನು ಧರಿಸಿದ, ಚಂಗಣಿಗಲೆಯ ಹೂವುಗಳನ್ನು ಮುಡಿದ, ಕೆಂಪು ಕುಂಕುಮವನ್ನಿಟ್ಟು, ಕೆಂಪು ಬಣ್ಣದ ವಸ್ತ್ರವನ್ನು ಧರಿಸಿದ ಸುಂದರಿಯಾದ ಚಲುವೆಯೊಬ್ಬಳು ಸಮಪಾದದ್ವಂದ್ವದಲ್ಲಿ ಶ್ರೀಚಕ್ರಮಧ್ಯದ ಯಂತ್ರಾಬ್ಜವನ್ನು ಮೆಟ್ಟಿ ನಿಂತಳು.

ಇಲ್ಲಿ ಕವಿಯು ಅವಳ ಅಲಂಕಾರದೊಡನೆ ಕೆಂಪು ಬಣ್ಣವನ್ನು ವಿಶೇಷವಾಗಿ ಸೂಚಿಸುತ್ತಾನೆ. ಬೈತಲೆಯಲ್ಲಿರುವ ಕುಂಕುಮರೇಖೆ, ಕೆಂಪಾದ ಸಂಜೆ, ಚಿಗುರಿ ಬೆಳೆದ ಹವಳದ ಬಳ್ಳಿಯಂತಿರುವ ಮಾಣಿಕ್ಯದ ಒಂದೆಳೆ ಸರ, ಕೆಂಪು ಕಲ್ಲಿನಿಂದ ನಿರ್ಮಿಸಿದ ಸರ, ಕುಂಕುಮ ಕೇಸರಿಯ ಬಣ್ಣದಿಂದ ಶೋಭಿಸುವ ಮೃದು ಮಧುರ ಶರೀರ, ಅರಳಿದ ಕೆಂಪು ದಾಸವಾಳದ ಗೊಂಚಲು ಒಡೆದು ಹಬ್ಬಿದ ಎಳೆಯ ಬಳ್ಳಿಯೋ ಎಂಬಂತಿರುವ ತೋಳುಗಳು, ಮುತ್ತುಗದ ಹೂಗಳ (ಕೆಂಪು ಬಣ್ಣ) ನಡುವೆ ಬೆಳೆದ ಮೊಗ್ಗುಗಳೋ ಎಂಬಂತಹ ಮಾಣಿಕ್ಯದ ಉಂಗುರವನ್ನು ಧರಿಸಿದ ಬೆರಳುಗಳು, ಧರಿಸಿದ ಕೆಂಪು ಬಣ್ಣದ ವಸ್ತ್ರ, ಕೆಂಪಾದ ಹಲ್ಲುಗಳ ಮಧುರ ಧ್ವನಿಯುಳ್ಳ ಆ ಬಾಲೆ ಶೋಭಿಸಿದಳು.

ಆ ಚಕ್ರದಲ್ಲಿ ಆಸೀನಳಾಗಿದ್ದ ಕನ್ನಿಕೆಗೆ ಚಿದಂಗ ಗುರುವು ಷೋಡಶೋಪಚಾರಗಳಿಂದ ಪೂಜೆಯನ್ನು ಮಾಡಿದನು. ಚಕ್ರದಲ್ಲಿ ಸುರೆಯಿಂದ ತುಂಬಿದ ಸುವರ್ಣಕುಂಭವಿತ್ತು. ಅಂತೆಯೇ ಪಕ್ವ ಮಾಡಿದ ಮಾಂಸದ ಪಾತ್ರೆಯೂ ಚಕ್ರದೊಳಗಿದ್ದಿತು.

ಅಲ್ಲಿದ್ದ ಮಾಂಸ ದ್ರವ್ಯಗಳನ್ನು ಕುರಿತು ಕವಿಯು ವಿವರಣೆಯನ್ನು ಕೊಡುತ್ತಾನೆ. ಹುಳಿ, ಮೆಣಸು, ಉಪ್ಪು ಸೇರಿಸಿ ಹಿತಕರವಾಗಿ ತಯಾರಿಸಿದ ಖಾದ್ಯವೂ, ಜೀರ್ಣಶಕ್ತಿ ಯನ್ನುಂಟು ಮಾಡುವುದೂ ಸ್ವಾದಿಷ್ಟವಾದುದೂ ಆದ ಮೀನಿನ ಪದಾರ್ಥವು ಶುಭ್ರವಾದ ಪಾತ್ರೆಯೊಂದರಲ್ಲಿ ಶ್ರೀಚಕ್ರದಲ್ಲಿದ್ದಿತು.

ತೊಳೆದು ಶುದ್ಧ ಮಾಡಿದ ಮಾಂಸಕ್ಕೆ ಹದವಾಗಿ ಉಪ್ಪು ಸವರಿ, ಉಕ್ಕರಿಸಿ ಸಾಂಬಾರ ಪದಾರ್ಥಗಳನ್ನು ಸೇರಿಸಿ, ಸಣ್ಣ ಸಣ್ಣ ತುಂಡು ಮಾಡಿ ತುಪ್ಪದಲ್ಲಿ ಹುರಿಯಲು ಅದರ ಸುವಾಸನೆಯು ಎಲ್ಲೆಡೆ ಪಸರಿಸುತ್ತಿದ್ದಿತು. ಕರಿಬೇವಿನ ಎಸಳುಗಳನ್ನು ಸಿಕ್ಕಿಸಿಕೊಂಡು ನಾನಾ ಆಕಾರಗಳಲ್ಲಿ ಮನಸೆಳೆಯುತ್ತ, ಸಣ್ಣ ಕೇದಗೆ ಹೂವಿನ ಒಳ್ಳೆಯ ದಳಗಳ ನಡುವೆ ಅದನ್ನು ಜೋಡಿಸಲು ಆ ಮಾಂಸದ ಪದಾರ್ಥವು ಶೋಭಿಸುತ್ತಿತ್ತು. ಆವಿಯೇಳುತ್ತಾ ಕಂಪುಸೂಸುತ್ತಾ ದಿಕ್ಕು ದಿಕ್ಕುಗಳನ್ನು ಅಡರುತ್ತಿದ್ದ ಮಾಂಸದಡಿಗೆಯ ಪಾತ್ರೆಯು ಚಕ್ರದಲ್ಲಿದ್ದಿತು.

ಹೀಗೆ ರುಚಿಕರವಾಗಿ ಮಾಡಿದ ಅಭಕ್ಷ ಪದಾರ್ಥಗಳೂ, ಅಪೇರು ದ್ರವ್ಯಗಳೂ ಹೇರಳವಾಗಿದ್ದವು. ಅತ್ಯಾನಂದದಿಂದ ಚಿದಂಗ ಮುನಿಯು ಪಾರ್ವತಿಯ ಸ್ತುತಿಯನ್ನು ಮಾಡಿದನು. ನಂತರ ಚಕ್ರದಲ್ಲಿದ್ದ ಸುರೆಯಿಂದ ತುಂಬಿದ ಸುವರ್ಣ ಕುಂಭಕ್ಕೆ ಗುರುವು ದಾಸವಾಳದ ಹೂಗಳಿಂದ ಅರ್ಚಿಸಿದನು. ಸುರೆಯಿಂದ ತುಂಬಿದ ಚಿನ್ನದ ಕೊಡವನ್ನು ಆ ಬಾಲಿಕೆಗೆ ಕೊಟ್ಟನು. ಆಕೆಯು ಸ್ವಲ್ಪ ಕುಡಿದು ಕೊಡಲು, ಚಿದಂಗನು ತಾನೂ ಕುಡಿದು, ಅಲ್ಲಿದ್ದ ಋಷಿಗಳಿಗೂ ಕೊಟ್ಟನು. ಉಳಿದುದನ್ನು ಅಲ್ಲಿದ್ದ ಸುಂದರಿಯರಾದ ಬಾಲಿಕೆಯರಿಗೂ ಕೊಟ್ಟನು. ಇಂದ್ರಜಾಲದ ಸ್ತ್ರೀಯರೆಲ್ಲರೂ ಚೆನ್ನಾಗಿ ಕುಡಿದರು. ಹಾಗೆ ಕುಡಿದ ಆ ಸ್ತ್ರೀಯರು ಜಾರುತ್ತಿರುವ ಸೀರೆ, ಮೆಲ್ಲನೆ ಅಂತರ್ಗತವಾಗುತ್ತಿರುವ ಲಜ್ಜೆ, ಸಡಿಲಗೊಳ್ಳುತ್ತಿರುವ ಕಟಿಸೂತ್ರ, ಉದ್ರೇಕಿತ ಮನಸ್ಸು, ತೇಲುತ್ತಿರುವ ಕಣ್ಣುಗಳು ಇವುಗಳಿಂದೊಡಗೂಡಿದ್ದು ಉಕ್ಕಿ ಬಂದ ನವಸ್ಫೂರ್ತಿಯಿಂದ ಆಡುತ್ತ, ಹಾಡುತ್ತ, ಉಬ್ಬುತ್ತ ಮತ್ತೆ ಮತ್ತೆ ಮದ್ಯಪಾನವನ್ನು ಮಾಡುತ್ತ ಮೈಮರೆತು ಕುಣಿಯುತ್ತಿದ್ದರು. ಇವರೆಲ್ಲರ ಮಧ್ಯೆ ಚಿದಂಗ ಮುನಿಯು ಮುನ್ನ 'ದತ್ತಾತ್ರೇಯನು ಕನ್ಯೆಯರ ನಡುವೆ ಇದ್ದಂತೆ' ಕಪಟದಿಂದಿದ್ದನು.

ಆ ಸ್ತ್ರೀಯರ ನಡುವೆ ಉಲ್ಲಾಸದಿಂದಿದ್ದ ಚಿದಂಗ ಮಹಾಮುನಿಯ ಸ್ಥಿತಿಯನ್ನು ಕಂಡು ಅಚ್ಚರಿಗೊಂಡು 'ಹಿರಿತನವು ಅಡಗಿ, ಭಕ್ತಿ ಬಾಡಿ, ಮೋಹವು ಆವರಿಸಲು, ಇಲ್ಲಿಯವರೆಗೆ ಈ ಋಷಿಶ್ರೇಷ್ಠನನ್ನು ಮಹಾ ಪುಣ್ಯವಂತ ನೆಂದಿದ್ದೆನೇ ಹೊರತು ಈ ರೀತಿ ವರ್ತಿಸುವನೆಂದು

ಭಾವಿಸಿರಲಿಲ್ಲ' ಎಂದುಕೊಂಡ ಶುಕನು ಪೂಜೆಗೆ ತಂದಿದ್ದ ಹೊಸ ಹೂಗಳನ್ನು ಚೆಲ್ಲಿ ದಿಗ್ಭ್ರಮೆಗೊಂಡು ಆ ಮಂಟಪದಲ್ಲಿ ಚಿಂತಿಸುತ್ತಿದ್ದನು.

ತನ್ನ ಶಿಷ್ಯನ ಚಿಂತೆಯನ್ನರಿತ ಚಿದಂಗ ಮುನಿಯು ತಾನು ನಿರ್ಮಿಸಿದ ಇಂದ್ರಜಾಲವನ್ನು ಇಲ್ಲವಾಗಿಸಿ, ತನ್ನ ಶಿಷ್ಯನನ್ನು ಕುರಿತು 'ನಿನಗೆ ಗುರುಭಕ್ತಿ ಸಾಲದು. ಚಂಚಲ ಮನಸ್ಕನಾಗಿ ಗುರುವಿನ ಅವಗುಣಗಳನ್ನು ಪರೀಕ್ಷಿಸುತ್ತೀಯೆ. ನೀನು ನಿನ್ನ ಹೆಸರಿನಂತೆಯೇ 'ಶುಕ'ನೇ ಆಗು ಎಂದು ಶಾಪವನ್ನು ಕೊಟ್ಟನು.

ಕವಿ ಸೋಮರಾಜನು ತನ್ನ ಕಾಲದಲ್ಲಿ ನಡೆಯುತ್ತಿದ್ದ ತಾಂತ್ರಿಕ ಪೂಜೆಯೊಂದನ್ನು ಕುರಿತು ತನ್ನ ಕೃತಿಯಲ್ಲಿ ಉಲ್ಲೇಖಿಸಿದ್ದಾನೆ. ಈ ಬಗೆಯ ಪೂಜೆಯು ಇಂದಿಗೂ ನಡೆಯುತ್ತದೆ.

ಈ ಕವಿಯ ಬಗೆಗೆ ಎತ್ತಿ ಹೇಳಬೇಕಾದ ಇನ್ನೊಂದು ಅಂಶವಿದೆ. ತಾನು ನಂಬಿದ ದೈವವನ್ನಲ್ಲದೆ ಮತ್ತೊಂದು ಮತವನ್ನು, ದೇವರನ್ನು ಅವಹೇಳನ ಮಾಡುವ ತಿರಸ್ಕರಿಸುವ ನಡವಳಿಕೆಗಳನ್ನೇ ಹೆಚ್ಚಿನ ಸಂದರ್ಭಗಳಲ್ಲಿ ಕಾಣುತ್ತೇವೆ. ಆದರೆ ಸೋಮರಾಜನ ಈ ಪದ್ಯವನ್ನು ಗಮನಿಸಬೇಕು.

ಶಿವನೆಂದುತ್ತಮಶೈವರೆಂಬುರುಹನೇತ್ರಂಗೆತ್ತು ತಾಂ
ವೈಷ್ಣವರ್
ಹವಿರನ್ನಪ್ರಿಯನೆಂದು ಭೂಮಿದಿವಿಜರ್ಜೈನರ್ಜಿನಂಗೆತ್ತು ತ
ತಮ್ಮವನೆಂದರ್ಚಿಸಲೊಲ್ದು ಸರ್ವಮುಖದಿಂದಂ
ಪೂಜೆಗೊಂಡಾವಗಂ
ಸುವಿಲಾಸಂಬಡೆದೊಪ್ಪುವಲ್ಲಮನೆ ಬೆಚ್ಚಿರ್ಕೆನ್ನ
ಚಿತ್ತಾಬ್ಜದೊಳ್

"ಉತ್ತಮರಾದ ಶೈವರು ಶಿವನೆಂದು, ವಿಷ್ಣುವೆಂದು ವೈಷ್ಣವರು, ಯಜ್ಞೇಶ್ವರನೆಂದು ಬ್ರಾಹ್ಮಣರು, ಜಿನನೆಂದು ಜೈನರು ಪೂಜಿಸಲಾಗಿ ಈ ಎಲ್ಲ ಮುಖಗಳಿಂದಲೂ ಪೂಜೆಯನ್ನು ಸ್ವೀಕರಿಸಿ ಸಂತೋಷಗೊಳ್ಳುವ ಅಲ್ಲಮನು ನನ್ನ ಹೃದಯಕಮಲದಲ್ಲಿ ಬೆಸುಗೆ ಹಾಕಿದಂತೆ ಸ್ಥಿರವಾಗಿ ನಿಂತಿರಲಿ". 'ಯಂ ಶೈವಾಸಮುಪಾಸತೆ....' ಎಂಬ ಬೇಲೂರು ದೇವಾಲಯದ ಶಾಸನವನ್ನು ನೆನಪಿಸುವ ಕವಿಯು ಈ ಉದಾರ ಮನೋಭಾವ ಹಾಗೂ ಸಮನ್ವಯ ಬುದ್ಧಿಗೆ ಹೃದಯ ತುಂಬಿ ಬರುತ್ತದೆ.

ಕನ್ನಿಕಾಪೂಜೆ ಅಥವಾ ಕುಮಾರಿ ಪೂಜೆ ಎಂಬ ಸಂಪ್ರದಾಯವು ಪ್ರಾಚೀನ ಕಾಲದಿಂದ ನಡೆದುಬಂದಿದೆ. ಇದು ಭಾರತದ ಉತ್ತರ ಭಾಗವಾದ ನೇಪಾಳದಿಂದ ಹಿಡಿದು ದಕ್ಷಿಣದ ಕೇರಳದವರೆಗೆ ಹರಡಿದೆ. ಈ ಸಂಪ್ರದಾಯವು ಯಾವುದೋ ಧರ್ಮಕ್ಕೋ, ಮತಕ್ಕೋ, ಪಂಥಕ್ಕೋ, ಜಾತಿಗೋ ಸೀಮಿತಗೊಳ್ಳದೆ ಭಾರತದ ನಾನಾ ಕಡೆ ಆಚರಣೆಯಲ್ಲಿದೆ. ಆಚರಣೆಯ ವಿಧಾನಗಳಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಗಳಿರಬಹುದು.

ಶ್ರೀಚಕ್ರ

ಸಮಸ್ತ ಬ್ರಹ್ಮಾಂಡದ ಮಹಾರಾಜ್ಞೀ, ಸಕಲ ದೇವತೆಗಳ ಆರಾಧ್ಯದೇವತೆ ಲಲಿತಾಂಬಿಕೆ, ಸಕಲ ಮಂತ್ರಗಳ ಒಡತಿ ಮಹಾತ್ರಿಪುರಸುಂದರಿ ಶ್ರೀಚಕ್ರವಾಸಿನಿ, ಅರವತ್ತುನಾಲ್ಕು ತ್ರಿಕೋಣಗಳು, ಮಧ್ಯದಲ್ಲಿ ಬಿಂದುವು ಶ್ರೀಚಕ್ರದಲ್ಲಿರುತ್ತದೆ. ಐದು ಶಕ್ತಿಚಕ್ರಗಳೂ ನಾಲ್ಕು ಶಿವಚಕ್ರಗಳೂ ಸೇರಿ ಶ್ರೀಚಕ್ರ ನವಚಕ್ರಾತ್ಮಕವಾಗಿರುತ್ತದೆ. ಶಿವಚಕ್ರ ಅಧೋಮುಖವಾದರೆ ಶಕ್ತಿಚಕ್ರ ಊರ್ಧ್ವಮುಖವಾಗಿರುತ್ತದೆ. ಇಪ್ಪತ್ತನಾಲ್ಕು ಪದ್ಮದಳಗಳಿರುತ್ತವೆ. ಶ್ರೀಚಕ್ರವು ರಹಸ್ಯಾತ್ಮಕ ಶ್ರೀಯಂತ್ರವೆನಿಸಿದೆ.

ತಾಮಸಪೂಜೆ

ಶ್ರೀಚಕ್ರವನ್ನು ರಂಗವಲ್ಲಿಯಲ್ಲಿ ರಚಿಸುತ್ತಾರೆ. ಅದಕ್ಕೆ ಅರಿಶಿಣ ಕುಂಕುಮಗಳಿಂದ ಬಣ್ಣವನ್ನು ತುಂಬಲಾಗುತ್ತದೆ. ಒಂದೂವರೆ ವರ್ಷದ ಮೇಲಿನ ೩, ೫, ೭, ೯ ವರ್ಷಗಳೊಳಗಿನ ಅಶೌಚಾದಿಗಳ ತಿಳುವಳಿಕೆಯಿರುವ, ಹೆಣ್ಣು ಮಕ್ಕಳಲ್ಲಿ ಒಬ್ಬಳನ್ನು ಮಂತ್ರಪೂರ್ವಕವಾಗಿ ಕರೆತಂದು ಆ ಚಕ್ರಮಧ್ಯದಲ್ಲಿ ಕೂಡಿಸುತ್ತಾರೆ. ಆ ಹೆಣ್ಣುಮಗುವು ಸುಂದರವಾಗಿದ್ದು, ಯಾವ ಅಂಗಾಂಗವೂ ಊನವಾಗಿರಬಾರದು. ಶ್ರೀದುರ್ಗಾ ಸಪ್ತಶತೀ ಗ್ರಂಥದಲ್ಲಿರುವಂತೆ ಕ್ರಮವಾಗಿ ನವದುರ್ಗೆಯರನ್ನು ಮಂತ್ರಗಳಿಂದ ಆವಾಹಿಸುತ್ತಾರೆ. ಪಾದ್ಯ, ಅರ್ಘ್ಯ, ಆಚಮನಾದಿ ಷೋಡಷೋಪಚಾರಗಳಿಂದ ಕುಮಾರಿಯನ್ನು ಪೂಜಿಸುತ್ತಾರೆ. ನಂತರ ಮದ್ಯ, ಮಾಂಸಾದಿಗಳನ್ನು ನೈವೇದ್ಯವಾಗಿ ಅರ್ಪಿಸಿ ಸಾಕ್ಷಾತ್ ಕುಮಾರಿಗೆ ನೀಡುತ್ತಾರೆ. ಅವಳು ಉಳಿಸಿದುದನ್ನು ಪ್ರಸಾದವೆಂದು ಸ್ವೀಕರಿಸುತ್ತಾರೆ. ಅಲ್ಲಿ ನೆರೆದಿರುವ ಜನರೆಲ್ಲ ಕುಡಿದು ಮತ್ತೇರಿ ಹಾಡು ಕುಣಿತಗಳು ನಡೆಯುತ್ತವೆ. ಈ ಕನ್ಯಾಪೂಜೆಯ ವಿಧಾನವೇ 'ಶೃಂಗಾರಸಾರ' ಕಾವ್ಯದಲ್ಲಿ ವರ್ಣಿತವಾಗಿದೆ.

ಇದರ ಮುಂದುವರಿದ ಭಾಗವಾಗಿ, ಜನರು ಬೆಂಕಿಯ ಮೇಲೆ ಓಡುವುದು, ಕುರಿಕೋಳಿಗಳ ಬಲಿಕೊಟ್ಟು ನೈವೇದ್ಯವನ್ನು ನೀಡುವುದು. ಇದು ಗ್ರಾಮದೇವತೆಯ ಹಬ್ಬವಾಗಿ ಕೌಟುಂಬಿಕವಾಗಿಯೂ, ಗ್ರಾಮದ ಸಮಸ್ತರೂ ಸೇರಿಯೂ ದೇವಿಯನ್ನು ಉಪಾಸನೆ ಮಾಡುವುದು ಪದ್ಧತಿಯಾಗಿ ಬೆಳೆದುಬಂದಿದೆ.

ಈ ವಿಧಾನದ ಕನ್ನಿಕಾಪೂಜೆಯು ಇಂದಿಗೂ ಕೇರಳದಲ್ಲಿ ಪ್ರಸಿದ್ಧವಾಗಿದೆ. ಇದಕ್ಕೆ ಕುಂಡಲಿನೀ ಪೂಜೆ ಎಂದೂ ಕರೆಯುತ್ತಾರೆ.

ಸಾತ್ವಿಕ ಪೂಜೆಯಲ್ಲಿ, ಪೂಜಿಸಿದ ಕುಮಾರಿಗೆ ವಸ್ತ್ರ, ಪುಸ್ತಕ ಹಾಗೂ ಆಟದ ಸಾಮಾನುಗಳನ್ನು ನೀಡಿ ಅವರಿಗೆ ಸಂತೋಷವನ್ನುಂಟು ಮಾಡುತ್ತಾರೆ.

ನೇಪಾಳದಲ್ಲಿ ಕುಮಾರಿ ಪೂಜೆ

ಕುಮಾರಿ ಪೂಜೆಗೆ ಪ್ರಖ್ಯಾತವಾದುದು ನೇಪಾಳ. ಅಲ್ಲಿ ಕುಮಾರಿಯನ್ನು ಆರಿಸಲು ಒಂದು ವಿಶೇಷ ವಿಧಾನವೇ ಇದೆ.

"ನೇಪಾಳದ ಕುಮಾರಿ ಪರಿಕಲ್ಪನೆ ವಿಶಿಷ್ಟವಾದುದು. ನೇವಾರಿಗಳಲ್ಲಿ ಶಾಕ್ಯರ ಬಜ್ರಯಾನೀ ಪಂಥದ (ಬಜ್ರಾಚಾರಿಗಳ) ಜಾತಿಯ ಮೂರು ನಾಲ್ಕು ವರ್ಷದ ಹುಡುಗಿಯನ್ನು 'ಕುಮಾರಿ' ಯಾಗಿ ಆರಿಸುವ ವಿಧಾನ ಹೀಗಿದೆ. ಆ ಹುಡುಗಿಯಲ್ಲಿ ಮೂವತ್ತೆರಡು ಲಕ್ಷಣಗಳಿರಬೇಕು. ಉದಾಹರಣೆಗೆ ಅವಳ ತಲೆಯ ಕೂದಲುಗಳು ನೇರವಾಗಿ ಕೆಳಕ್ಕೆ ಬಲಕ್ಕೆ ಬಾಗಿರಬೇಕು. ಅವಳಲ್ಲಿ ಯಾವ ಅಂಗವೂ ಊನವಾಗಿರಬಾರದು. ಅವಳ ದೇಹದಿಂದ ಎಂದೂ ರಕ್ತ ಒಸರಿರಬಾರದು. ದೇಹದ ಮೇಲೆ ಗಾಯದ ಚಿನ್ಹೆ ಇರಕೂಡದು. ಕತ್ತರಿಸಿದ ಪ್ರಾಣಿಗಳ ತಲೆಗಳು ಭೂತಪ್ರೇಗಳ ವೇಷಧಾರಿಗಳು ತುಂಬಿದ ಕತ್ತಲ ಕೋಣೆಯಲ್ಲಿ, ಕೂಗಾಟ ಚೀರಾಟಗಳ ಮಧ್ಯೆ ಯಾವ ಹುಡುಗಿ ಧೈರ್ಯವಾಗಿ ಇರುವಳೋ ನಡೆಯುವಳೋ ಅವಳನ್ನು 'ಕುಮಾರಿ' ಎಂದು ಆರಿಸಲಾಗುತ್ತದೆ. ಅವಳ ಜಾತಕವು ರಾಜನ ಜಾತಕಕ್ಕೆ ಹೊಂದಬೇಕು. ಅಂದಿನಿಂದ ಆ ಕುಮಾರಿಯ ವಾಸ ಹನುಮಾನ್ ಧೋಕಾ ಬಳಿಯ 'ಕುಮಾರಿ ಘರ್' ನಲ್ಲಿ. ಅವಳನ್ನು 'ಕಾಳಿ'ಯ ಅವತಾರವೆಂದು, ತಲೇಜು ಭವಾನಿ ಅವತಾರವೆಂದು ಜನ ನಂಬಿ ಪ್ರತಿದಿನ ದರ್ಶನ ಮಾಡಿ ಕಾಣಿಕೆ ನೀಡುತ್ತಾರೆ. ಹದಿನೆಂಟನೇ ಶತಮಾನದಲ್ಲಿ ದೊರೆಗಳ ಕುಲದೇವತೆ ತಲೇಜ ನೆವಾರಿ ಹುಡುಗಿಯೊಬ್ಬಳ ಮೈಮೇಲೆ ಬಂದ ದಿನದಿಂದ ಕುಮಾರಿ ಮೆರವಣಿಗೆ ಆರಂಭವಾಯಿತು. ಕುಮಾರಿಯು 'ತಲೇಜು' ದೇವತೆಯ ಮಾನುಷರೂಪವೆಂದೇ ಜನ ನಂಬಿದ್ದಾರೆ".

ಮೆರವಣಿಗೆಯಲ್ಲಿ ಅವಳ ರಥವನ್ನು ಭೈರವ, ಗಣೇಶರು ಎಳೆಯುತ್ತಾರೆ ಎಂಬುದಕ್ಕೆ ಸಾಂಕೇತಿಕವಾಗಿ ಅವಳ ರಥದ ಮುಂದೆ ಭೈರವ, ಗಣೇಶರನ್ನು ಸಂಕೇತಿಸುವ ಇಬ್ಬರು ಹುಡುಗಿಯರು ಕುಳಿತಿರುತ್ತಾರೆ. (ಈ ಮೂವರೂ ಬೌದ್ಧಜಾತಿಯವರೇ).೨

"ಋತುಮತಿಯಾಗದ ಮೂರು ನಾಲ್ಕು ವರ್ಷದ ಧೈರ್ಯವ ಹುಡುಗಿಯನ್ನು ಆರಿಸಿ ಚೀಲದ ಹಣ್ಣಿನ ಜೊತೆ ಮದುವೆ ಮಾಡಿ ಅವಳನ್ನು ಕುಮಾರಿಯನ್ನಾಗಿಸುತ್ತಾರೆ. ಅಂದಿನಿಂದ ಅವಳು ಜನರ ಕಣ್ಣಲ್ಲಿ ಒಬ್ಬ ದೇವತೆ. ಅದನ್ನು The Living Goddess ಎಂದೇ ಬಣ್ಣಿಸಲಾಗುತ್ತದೆ."೬

ಕುಮಾರಿಯು "ಒಂದು ರೀತಿ ಇಡೀ ನೇಪಾಳಕ್ಕೆ Guardian Deity ಅಷ್ಟೇ ಅಲ್ಲ ರಾಜನಿಗೆ ಆಳಲು ಅಧಿಕಾರ ನೀಡುವವಳು ಅವಳು".

"ಕುಮಾರಿಯು ಋತುಮತಿಯಾದ ದಿನದಿಂದ ಅವಳಿಗೆ ಕುಮಾರಿ ಪಟ್ಟ ತಪ್ಪುತ್ತದೆ. ಅವಳ ಜಾಗಕ್ಕೆ ಹಿಂದೆ ಹೇಳಿದ ಕ್ರಮದಲ್ಲಿ ಬೇರೊಬ್ಬ ಹುಡುಗಿಯನ್ನು ಆರಿಸುತ್ತಾರೆ. ಕುಮಾರಿಯಾಗಿದ್ದ ಹುಡುಗಿ ಆ ಹೊತ್ತಿಗೆ ಸಾಕಷ್ಟು ಶ್ರೀಮಂತಳೂ ಆಗಿರುತ್ತಾಳೆ. ಜೀವಂತ ದೇವತೆಯೇ ಆಗಿದ್ದ ಹುಡುಗಿಯನ್ನು ಮದುವೆಯಾಗುವ ಹುಡುಗನಿಗೆ ಧೈರ್ಯ ಬೇಕು. ಕುಮಾರಿಯಾಗಿದ್ದವಳನ್ನು ಮದುವೆಯಾಗುವ ಹುಡುಗ ಸಾಯುತ್ತಾನೆ ಎಂಬ ನಂಬಿಕೆಯೂ ಇರುವುದರಿಂದ ಕುಮಾರಿಯರು ಆಜೀವ ಪರ್ಯಂತ ಅವಿವಾಹಿತೆಯರಾಗಿ ಉಳಿದಿರುವ ಪ್ರಸಂಗಗಳೂ ಉಂಟು".೭

ತಲೇಜು ಅಥವಾ ತುಳಜಾಭವಾನಿ

ತುಳಜಾ ಭವಾನಿಯು ಮೂಲತಃ ಪ್ರಾಚೀನ ಕರ್ನಾಟಕದ ತುಳಜಾಪುರದ ದೇವತೆ (ಈಗ ತುಳಜಾಪುರವು ಮಹಾರಾಷ್ಟ್ರದ ಉಸ್ಮಾನಾಬಾದ್ ಜಿಲ್ಲೆಯಲ್ಲಿದೆ.) ಯೇ ನೇಪಾಳದಲ್ಲಿ 'ತಲೇಜು' ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಕುಮಾರಿಯು ತಲೇಜು ದೇವತೆಯ ಅವತಾರವೆಂದು ನಂಬಿಕೆ.೬

ಅಂತೂ ಇಡೀ ನೇಪಾಳ ದೇಶವೇ ಕುಮಾರಿ ಪೂಜೆಯಲ್ಲಿ ತೊಡಗಿಸಿಕೊಂಡಿರುವುದು ಸ್ವಾರಸ್ಯದ ಸಂಗತಿಯಾಗಿದೆ.

ನಾಥಪಂಥದವರಿಗೂ ಸಹ ಶಕ್ತಿಪೀಠಗಳು ಪವಿತ್ರವಾದುವುಗಳು. ಬಹುಶಃ ದೇವತೆಗಳಲ್ಲೇ ತನ್ನ ಮಡದಿಯನ್ನು ಅತಿಹೆಚ್ಚು ಪ್ರೀತಿಸುವ, ಅಗಲುವ ಹಾಗೂ ಹುಡುಕುವ ದೇವತೆಯೆಂದರೆ ಶಿವನು. ಆತನು ಮಡದಿಯನ್ನು ಸಂಗಾತಿಯಾಗಿ ಭಾವಿಸಿ, ತನಗೆ ತಿಳಿದಿರುವ ರಹಸ್ಯ ವಿದ್ಯೆಗಳನ್ನು ಹಂಚಿಕೊಳ್ಳುವ ದೇವತೆ ಕೂಡ ಕೊನೆಗೆ ಅಗಲಿಕೆಯೇ ಬೇಡವೆಂದು ಆಕೆಯನ್ನು ತನ್ನ ದೇಹದ ಎಡಭಾಗವನ್ನಾಗಿ ಮಾಡಿಕೊಂಡವನು. ಒಮ್ಮೆ ಸತ್ತ ಉಮೆಯ ಶವವನ್ನು ಹೆಗಲ ಮೇಲೆ ಹೊತ್ತುಕೊಂಡು ಶಿವ, ಇಡೀ ಲೋಕವನ್ನೆಲ್ಲ ಹುಚ್ಚನಂತೆ ತಿರುಗುತ್ತಾನೆ. ವಿಷ್ಣುವು ಉಮೆಯ ಶವವನ್ನು ಹಲವು ತುಂಡು ಮಾಡಿ ಭೂಮಿಯ ಮೇಲೆ ಚೆಲ್ಲುತ್ತಾನೆ. ಆಕೆಯ ಅಂಗಾಂಗಗಳು ಬಿದ್ದ ಜಾಗಗಳೆಲ್ಲ ಶಕ್ತಿಪೀಠಗಳಾಗುತ್ತವೆ. ಉಮೆಯ ಹಣೆ ಬಿದ್ದ ಜಾಗ ಬಲೂಚಿಸ್ತಾನದಲ್ಲಿ

ಹಿಂಗ್ಲಜವಾಯಿತು. ಯೋನಿ ಬಿದ್ದ ಜಾಗ ಆಸ್ಸಾಮಿನ ಕಾಮಾಖ್ಯವಾಯಿತು. (ಈಗಲೂ ಇಲ್ಲಿ ಯೋನಿಯಂತಿರುವ ಸೀಳುಬಂಡೆಯೇ ದೇವಿಯ ಆಕಾರ). ಆಕೆಯ ಬೆರಳು ಬಿದ್ದ ಜಾಗ ನೇಪಾಳದ ಪಾಠನ್ ಆಯಿತು ಎಂದು ನಂಬಲಾಗುತ್ತದೆ. ವಾಮಾಚಾರದ ಆಚರಣೆ ಹಾಗೂ ಬಲಿಪದ್ಧತಿ ಇರುವ ಈ ಶಕ್ತಿಪೀಠಗಳೆಲ್ಲ ನಾಥರಿಗೆ ಪವಿತ್ರವಾದುವು".[೭]

"ನಾಥ ಹಿನ್ನೆಲೆಯುಳ್ಳ ಸಿಂಧಗಿಯ ಭೀಮಾಶಂಕರನು ಒಬ್ಬ ಶಾಕ್ತಸಿದ್ಧನ ಜೊತೆ ಬನಶಂಕರಿಯಲ್ಲಿ ಸುರೆಯಿಟ್ಟು 'ಮೂಳಶಕ್ತಿ ಕುಳಸ್ವಾಮಿನಿ' ಆದ ದೇವಿಯ ಉಪಾಸನೆ ಮಾಡುವ ಪ್ರಸಂಗವಿದೆ."[೮]

"ರಾಜ್ಯತ್ವವನ್ನು ಬಿಟ್ಟು ನಾಥದೀಕ್ಷೆ ಪಡೆದ ೧೧ನೇ ಶತಕದ ಕವಿ ಭರ್ತೃಹರಿಯ ಜೊತೆಯಲ್ಲಿದ್ದ ಪಿಂಗಳಾದೇವಿ ಎಂಬ ಯೋಗಿನಿಯ ಪ್ರಸ್ತಾಪವೂ ಬರುತ್ತದೆ. ಪಿಂಗಳಾ ಎಂದರೆ ಕೆಂಬಣ್ಣ. ಈ ಕೆಂಪು ರಕ್ತ ಹಾಗೂ ಬಲಿಪದ್ಧತಿಯ ಸಂಕೇತ".[೯]

ನಾಥರ ಬಾರಾ ಪಂಥಗಳಲ್ಲಿ ಒಂದಾದ ಆಯಿ (=ಕಾಯಿ) ಪಂಥದ ಸ್ಥಾಪಕಿಯಾದ ಭಗವತಿ ವಿಮಲಾ ದೇವಿಯು ಒಬ್ಬ ಯೋಗಿನಿ ಹಾಗೂ ಗೋರಖನ ಶಿಷ್ಯೆ. ಈಕೆ ಬಂಗಾಳದವಳು. ಬಂಗಾಳವು ಶಾಕ್ತರ ಸೀಮೆ. ಈ ಸೀಮೆಗೆ ಹೊಂದಿಕೊಂಡಂತೆ ಶಕ್ತಿಪೀಠಗಳಾದ ಕಾಮಾಖ್ಯ ಹಾಗೂ ದೇವಿಪಾಠನ್‌ಗಳಿವೆ. ಇಡೀ ನೇಪಾಳವೇ ಕುಮಾರಿ ಪೂಜೆಯ ಸೀಮೆ. ಗೋರಖನ ಆಡುಂಬೊಲ ಆಗಿರುವ ನೇಪಾಳದ ಮೃಗಸ್ಥಳಿ ಬೆಟ್ಟದ ಬಳಿ, ಪಶುಪತಿನಾಥನ ಮಡದಿ ಗುಹೇಶ್ವರಿಯ ಆರಾಧನೆಯಿದೆ. ಗುಹೇಶ್ವರಿ ಎಂದರೆ ಯೋನಿಶಿಲ್ಪದ ಪೂಜೆ, ಅದರ ಅರ್ಚಕರು ಅಸ್ಪೃಶ್ಯರು".[೧೦]

ಈ ವಿವರಗಳನ್ನು ನೋಡಿದಾಗ ಎಲ್ಲ ಜಾತಿಯ ಜನರೂ-ಮಹಿಳೆ ಇರಬಹುದು, ಒಂದು ಮಠದ ಯತಿಯಾಗಿರಬಹುದು, ಒಬ್ಬ ರಾಜನಾಗಿದ್ದವನಿರಬಹುದು, ಅಸ್ಪೃಶ್ಯನಿರಬಹುದು. ನಾಥಪಂಥದ ಅನುಷ್ಠಾನವನ್ನು ಕೈಗೊಂಡು ವಾಮಾಚಾರದ ಪೂಜೆಯನ್ನು ನಡೆಸಿರುವುದು ಕಂಡುಬರುತ್ತದೆ.

ತುಳುನಾಡಿನಲ್ಲಿ ಕನ್ಯಾಪೂಜೆ

"**ಸ್ವಾಮಿ ಕೋಲದಲ್ಲಿ ಕನ್ಯಾಪೂಜೆ :** ಋತುಮತಿಯಾದ ಬಾಲೆ ಕನ್ಯೆಯನ್ನು ಸ್ವಾಮಿಯ ಮುಂದೆ 'ಮಣೆಯ' ಮೇಲೆ ಕುಳ್ಳಿರಿಸಿ ಕೆರೆಯಿಂದ ತಂದ ಕುಡಿಕೆಗಳ ನೀರಿನಿಂದ ಅಭಿಷೇಕ ಮಾಡುತ್ತಾರೆ. ಆಕೆಯ ಒದ್ದೆ ಬಟ್ಟೆಯನ್ನು ಅಲ್ಲಿಯೇ ಬದಲಾಯಿಸಿ ಹೊಸ ಬಟ್ಟೆ ಉಡಿಸಿ ಒಡವೆ ಹೂಗಳಿಂದ ಅಲಂಕರಿಸುತ್ತಾರೆ. ಆಮೇಲೆ ಆಕೆಗೆ ಆರತಿ ಎತ್ತಿ, ಸ್ತುತಿ ಹಾಡುತ್ತಾರೆ. ಶೀನ ಪಾಣನ ಪ್ರಕಾರ ಅವಳನ್ನು ಸ್ವಾಮಿ ನಿಂಗಮ್ಮ (ಹೆಣ್ಣು ಸ್ವಾಮಿ ಪ್ರತೀಕವಾಗಿ) ಎಂದು ಪೂಜಿಸುವುದು. ಕುಟುಂಬದ ಅಭಿವೃದ್ಧಿಯು ಹೆಣ್ಣಿನಿಂದ ಆಗುವುದು. ಹಾಗಾಗಿ ಪಾಣರಾಟದ ವಿಧಿಯಲ್ಲಿ ಕನ್ಯಾಪೂಜೆ ಮುಖ್ಯಭಾಗ. ನಂತರ ಅನೇಕ ದೈವಗಳ ಕಟ್ಟುಕಟ್ಟಲೆಯ ಕೋಲನಾಗನಿಗೆ ಕೋಲ ನಡೆಯುತ್ತದೆ. ನಂತರ ಕೋಳಿಪಲ್ಯದೊಂದಿಗೆ ಅಲ್ಲಿ ಬೇಯಿಸಿದ ಊಟವನ್ನು ಮೊದಲು ಅಲ್ಲಿಯೇ ಸತ್ತ ಹಿರಿಯರಿಗೆ 'ಅಗೆಲು' ಬಡಿಸಿ, ಎಲ್ಲ ಸದಸ್ಯರು ಅಲ್ಲಿಯೇ ಊಟವನ್ನು ಮಾಡುತ್ತಾರೆ."

ಸಾಧಾರಣವಾಗಿ ಎಲ್ಲ ಶಕ್ತಿಪೀಠಗಳು ಹಾಗೂ ದೇವಸ್ಥಾನಗಳಲ್ಲಿ ಕುಮಾರಿ ಪೂಜೆಯು ನಡೆಯುತ್ತದೆ. ಅದರಲ್ಲೂ ನವರಾತ್ರಿಯಲ್ಲಿ ವಿಶೇಷವಾಗಿ ಕನ್ಯಾಪೂಜೆಯ ಆಚರಣೆಯಿರುತ್ತದೆ.

ಅಲ್ಲದೆ ಕೆಲವು ಮನೆತನಗಳಲ್ಲಿಯೂ ಈ ಕನ್ಯಾಪೂಜೆಯ ಆಚರಣೆಯಿದೆ. ಸಾಧಾರಣವಾಗಿ ಮದುವೆ, ಮುಂಜಿ ಮುಂತಾದ ಮಂಗಳಕಾರ್ಯಗಳನ್ನು ಮಾಡುವ ಮೊದಲು 'ಪೂಜೀಳ್ಕೆ' ಎಂಬ ಕಾರ್ಯಕ್ರಮವಿರುತ್ತದೆ. ಐದು ಹಾಗೂ ಅದಕ್ಕಿಂತ ಹೆಚ್ಚಿನ ಮುತ್ತೈದೆಯರನ್ನು ಕೂರಿಸಿ ಅವರನ್ನು ಪೂಜಿಸುವ ಪದ್ಧತಿಯಿದೆ. ಆ ಸಂದರ್ಭದಲ್ಲಿ 'ಕೊಡಗೂಸು ಮುತ್ತೈದೆ' ಎಂದು ಕರೆಸಿಕೊಳ್ಳುವ, ಋತುಮತಿಯಾಗದ ಹುಡುಗಿಯರಿಗೆ ಪ್ರಾಧಾನ್ಯತೆ ಇರುತ್ತದೆ. ಒಂದು ಎರಡು ವರ್ಷದ ಹೆಣ್ಣುಮಕ್ಕಳೂ ಆಗಬಹುದು. ಹಿರಿಯ ಮುತ್ತೈದೆಯರಿಗೆ ಮಾಡುವ ಎಲ್ಲ ಶಾಸ್ತ್ರಗಳನ್ನೂ 'ಕೊಡಗೂಸು ಮುತ್ತೈದೆ'ಯರಿಗೂ ಮಾಡುವುದು ಶ್ರೇಷ್ಠ ಎಂಬ ಭಾವನೆಯುಂಟು. ಆದರೆ ಇದು ಸಾತ್ವಿಕ ಪೂಜೆಗೆ ಸೇರುತ್ತದೆ.

ಹೀಗೆ ಭಾರತದೆಲ್ಲೆಡೆ ಒಂದಲ್ಲ ಒಂದು ರೂಪದಲ್ಲಿ ಕುಮಾರಿ ಪೂಜೆ ಆ ಮೂಲಕ ದುರ್ಗೆ, ಕಾಳಿ, ಪಾರ್ವತಿ ಇತ್ಯಾದಿ ಹೆಸರುಗಳಿಂದ ಪ್ರಖ್ಯಾತಳಾದ 'ಶಕ್ತಿ'ಯ ಪೂಜೆಯು ನಡೆಯುತ್ತದೆ. ಅದು ಸಾತ್ವಿಕ ಪೂಜೆಯಾಗಿರಬಹುದು ಅಥವಾ ತಾಮಸ ಪೂಜೆಯಾಗಿರಬಹುದು. ಮೊದಲೇ ಹೇಳಿದಂತೆ ಈ ಪೂಜೆ ಮಾಡಲು ಯಾವ ಧರ್ಮ, ಆ ಜಾತಿ, ಈ ಜಾತಿ, ವೈದಿಕ, ಜೈನ, ಬೌದ್ಧ, ಸ್ಪೃಶ್ಯ, ಅಸ್ಪೃಶ್ಯ ಇತ್ಯಾದಿ ಯಾವುದೂ ಅಡ್ಡಬರುವುದಿಲ್ಲ. ಕೆಲವೊಮ್ಮೆ ಮೇಲೆ ಹೇಳಿದ ಎಲ್ಲವೂ ತಳುಕು ಹಾಕಿಕೊಂಡು ಇಂದಿಗೂ ನಡೆದುಬರುತ್ತಿದೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ದುರ್ಗಾಸಪ್ತಶತಿ ಗ್ರಂಥದಲ್ಲಿ 'ಮೂರ್ತಿರಹಸ್ಯಂ' ಎಂಬ ವಿಭಾಗದಲ್ಲಿ ದೇವಿಯ ವರ್ಣನೆ ಹೀಗಿದೆ. 'ರಕ್ತದಂತಿಕಾ ಎಂಬ ಹೆಸರಿನಿಂದ ದೇವಿಯ ಸರ್ವಭಯ ನಿವಾರಕವಾದ ಸ್ವರೂಪದ ವರ್ಣನೆಯು ಹೀಗಿದೆ.

"ಅವಳು ಕೆಂಪು ಬಣ್ಣದ ವಸ್ತ್ರವನ್ನು ಧರಿಸಿರುತ್ತಾಳೆ. ಅವಳ ಶರೀರದ ಬಣ್ಣವೂ ಕೆಂಪು. ಮತ್ತು ಅವಳ ಅಂಗಗಳಲ್ಲಿರುವ ಎಲ್ಲ ಆಭರಣಗಳೂ ಕೆಂಪು. ಅವಳ ಅಸ್ತ್ರಶಸ್ತ್ರಗಳು, ಕಣ್ಣುಗಳು ತಲೆಯ ಕೂದಲು, ಮೊನಚಾದ ಉಗುರು ಮತ್ತು ಹಲ್ಲುಗಳು ಎಲ್ಲವೂ ರಕ್ತವರ್ಣದವುಗಳು. ಆದ್ದರಿಂದಲೇ ಅವಳು ರಕ್ತದಂತಿಕಾ ಎಂದು ಕರೆಯಲ್ಪಡುತ್ತಾಳೆ". "ಅವಳು ತನ್ನ ನಾಲ್ಕು ಕೈಗಳಲ್ಲಿ ಖಡ್ಗ, ಪಾನಪಾತ್ರೆ, ಒನಕೆ ಮತ್ತು ನೇಗಿಲು ಇವುಗಳನ್ನು ಹಿಡಿದಿರುತ್ತಾಳೆ. ಇವಳೇ ರಕ್ತಚಾಮುಂಡಾ ಮತ್ತು ಯೋಗೇಶ್ವರಿದೇವಿ ಎಂದು ಕರೆಯಲ್ಪಡುತ್ತಾಳೆ". ದೇವಿಯು ರಾಜಸ ಗುಣದವಳಾದುದರಿಂದ ಕೆಂಪು ಬಣ್ಣಕ್ಕೆ ಪ್ರಾಮುಖ್ಯತೆಯಿದೆ. ಶ್ರೀ ದುರ್ಗಾ ಸಪ್ತಶತೀ ಪುಟ ೨೨೧, ೨೨೨.

(ಶ್ರೀ ದುರ್ಗಾಸಪ್ತಶತೀ ದೇವಿ ಮಹಾತ್ಮ್ಯಮ್) ಮತ್ತು ಕೆಲವು ದೇವೀ ಸ್ತೋತ್ರಗಳು, (ಮೂಲ ಮತ್ತು ಭಾವಾರ್ಥ), ಗ್ರಂಥಕಾರರು : ಸ್ವಾಮಿ ಹರ್ಷಾನಂದ.

೨. ಐದನೆಯ ಆಶ್ವಾಸದಲ್ಲಿ ಪದ್ಯ ೧೮ ರಿಂದ ೨೬ರವರೆಗೆ ನಾಲ್ಕು ಸಾಲಿನ ಪದ್ಯಗಳೆಂಬಂತೆ ಮುದ್ರಿತವಾಗಿದೆ. ೨೫ನೇ ಪದ್ಯಕ್ಕೆ ಅಡಿಟಿಪ್ಪಣಿಯಲ್ಲಿ 'ಮೂಲದಲ್ಲಿ ಎರಡು ಸಾಲು ಬಿಟ್ಟುಹೋಗಿದೆ' ಎಂದು ಸೂಚನೆಯಿದೆ. ಆದರೆ ಇದಿಷ್ಟೂ ನಾಲ್ಕು ಸಾಲಿನ ಪದ್ಯಗಳೇ ಅಲ್ಲ. ಇವು ಎರಡೆರಡು ಸಾಲಿನ ರಗಳೆಯಾಗಿದೆ. ಚತುರ್ಮಾತ್ರಾಗಣವು ನಾಲ್ಕು ಇದ್ದು, ಪ್ರತಿ ಎರಡು ಸಾಲುಗಳಲ್ಲಿ ಆದಿಪ್ರಾಸ, ಅಂತ್ಯಪ್ರಾಸಗಳು ಇದೆ. ಇದು ಮಂದಾನಿಲ ರಗಳೆಯಾಗಿದೆ. 'ಉದ್ಭಟ ಕಾವ್ಯ'ವನ್ನು ಮೊದಲು ಸಂಪಾದಿಸಿದ ಶಾಮಾಶಾಸ್ತ್ರಿಯವರೂ ಗುರುತಿಸಿಲ್ಲ. (ಪುಟ ೧೦೦–೧೧೧) ಗದ್ಯಾನುವಾದಕರಾದ ಡಾ. ಎಸ್. ವಿದ್ಯಾಶಂಕರ್ ಅವರೂ ಗುರುತಿಸಿಲ್ಲ. ನೋಡಿ ಪುಟ ೧೪೨–೧೪೪. ಸೋಮರಾಜನ ಉದ್ಭಟ ಕಾವ್ಯ; ಗದ್ಯಾನುವಾದ ಡಾ. ಎಸ್. ವಿದ್ಯಾಶಂಕರ್, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು.

೩. ಚಿದಾನಂದ ಸಮಗ್ರ ಸಂಪುಟ–೭, ಡಾ. ಎಂ. ಚಿದಾನಂದಮೂರ್ತಿ, ಪುಟ ೨೮೨.

೪. ಚಿದಾನಂದ ಸಮಗ್ರ ಸಂಪುಟ–೭, ಡಾ. ಎಂ. ಚಿದಾನಂದಮೂರ್ತಿ, ಪುಟ ೨೮೪.

೫. ಚಿದಾನಂದ ಸಮಗ್ರ ಸಂಪುಟ–೭, ಡಾ. ಎಂ. ಚಿದಾನಂದಮೂರ್ತಿ, ಪುಟ ೨೮೪.

೬ ಚಿದಾನಂದ ಸಮಗ್ರ ಸಂಪುಟ–೭, ಡಾ. ಎಂ. ಚಿದಾನಂದಮೂರ್ತಿ, ಪುಟ ೨೮೫.

೭. ಚಿದಾನಂದ ಸಮಗ್ರ ಸಂಪುಟ–೭, ಡಾ. ಎಂ. ಚಿದಾನಂದಮೂರ್ತಿ, ಪುಟ ೭೮.

೮. ಚಿದಾನಂದ ಸಮಗ್ರ ಸಂಪುಟ–೭, ಡಾ. ಎಂ. ಚಿದಾನಂದಮೂರ್ತಿ, ಪುಟ ೮೦.

೯. ಚಿದಾನಂದ ಸಮಗ್ರ ಸಂಪುಟ–೭, ಡಾ. ಎಂ. ಚಿದಾನಂದಮೂರ್ತಿ, ಪುಟ ೮೧.

೧೦. ಚಿದಾನಂದ ಸಮಗ್ರ ಸಂಪುಟ–೭, ಡಾ. ಎಂ. ಚಿದಾನಂದಮೂರ್ತಿ, ಪುಟ ೮೧.

೧೧. ತುಳುವರ ಮೂಲತಾಣ ಆದಿ ಆಲಡೆ ಇಂದಿರಾಹೆಗ್ಗಡೆ, ಪುಟ ೩೧೯, ಪರಂಪರೆ ಮತ್ತು ಪರಿವರ್ತನೆ.

ಕವಿ ಸರ್ವಜ್ಞ : ಒಂದು ಪುನರ್ ವಿವೇಚನೆ

ಕುಂ.ಬಾ. ಸದಾಶಿವಪ್ಪ*

ಸರ್ವಜ್ಞ ಕವಿಯ ಜನ್ಮ ವೃತ್ತಾಂತ ಮತ್ತು ಕಾವ್ಯದ ಬಗೆಗೆ ಬಹು ಮಂದಿ ಬರೆದಿದ್ದಾರೆ.

ಉತ್ತಂಗಿ ಚನ್ನಪ್ಪನವರ ಪ್ರಕಾರ ಸರ್ವಜ್ಞನ ಜನ್ಮ ವೃತ್ತಾಂತ ಮತ್ತು ಅವನ ಕಾವ್ಯ

ಹಾವೇರಿ ಜಿಲ್ಲೆಯು ಮಾಸೂರು ಗ್ರಾಮದಲ್ಲಿ ಬಸವರಸನೆಂಬ ಆರಾಧ್ಯ ಬ್ರಾಹ್ಮಣ ವಾಸವಾಗಿದ್ದನು. ಅವನಿಗೆ ಮಲ್ಲರಸನೆಂತಲೂ ಕರೆಯಲಾಗಿದ್ದಿತು. ಇವನ ಮಡದಿ ಮಲ್ಲವ್ವನೆಂಬುವಳಿದ್ದಳು. ಅವಳಿಗೆ ಮಕ್ಕಳಾಗದೆ ದುಃಖ ಕಾಡುತ್ತಿದ್ದಿತು. ಅವಳ ದುಃಖವನ್ನು ಅರಿತ ಬಸವರಸ ಒಂದು ಬಾರಿ ಕಾಶಿಗೆ ತೆರಳಿದನು. ಕಾಲು ನಡಿಗೆಯಿಂದ ಪ್ರಯಾಣ ಮಾಡಿ ಕಾಶಿಯನ್ನು ಸೇರಿದನು. ಕಾಶಿಯ ವಿಶ್ವನಾಥನನ್ನು ಪ್ರಾರ್ಥಿಸಿ ತನಗೆ ಒಂದು ಗಂಡು ಮಗುವನ್ನು ಕೊಡಬೇಕೆಂದು ಬೇಡಿದನು. ಅದಕ್ಕೆ ದೇವರು ಪ್ರತ್ಯಕ್ಷವಾಗಿ ವರವನ್ನು ಕೊಟ್ಟು ಒಂದು ಅನ್ನದ ಉಂಡೆಯನ್ನು ಕೊಟ್ಟನು. ಅದನ್ನು ನುಂಗಿ ನೀನು ಮೊದಲು ಎಲ್ಲಿ ಗರ್ಭದಾನ ಮಾಡುವಿಯೋ ಅಲ್ಲಿ ನಿನಗೆ ಒಬ್ಬ ಪುತ್ರ ಜನಿಸುವನು ಎಂದು ಹೇಳಿದನು. ಅಂದಿನಿಂದ ಮರಳಿ ಮಾಸೂರು ಕಡೆ ಪಯಣಿಸಿದನು. ಬರುವಾಗ ದಾರಿಯಲ್ಲಿ ಅಂಬಲೂರು ಗ್ರಾಮದಲ್ಲಿ ಉಳಿದನು. ಅವನಿಗೆ ಆಯಾಸ ಮತ್ತು ಹಸಿವು ಉಂಟಾಗಿದ್ದಿತು. ಅಲ್ಲಿದ್ದ ಕುಂಬಾರ ಮನೆಗೆ ತೆರಳಿ ಹೊಸ ಮಡಿಕೆ ಕುಡಿಕೆಗಳನ್ನು ಪಡೆದು ಪಕ್ಕದಲ್ಲಿದ್ದ ಬಾವಿಗೆ ಹೋಗಿ ನೀರು ಪಡೆದು ಆಹಾರ ಬೇಯಿಸಲು ಪ್ರಾರಂಭಿಸಲು ಗುಡುಗು ಸಿಡಿಲುಗಳಿಂದ ಮಳೆ ಬೀಳಹತ್ತಿತು. ಮೊದಲೇ ಪರಿಚಿತ ಕುಂಬಾರ ಮಾಳಮ್ಮನ ಮನೆ ಸೇರಿದನು. ಅವನಿಗೆ ಊಟ ವ್ಯವಸ್ಥೆ ಮಾಡಿ ಅಲ್ಲಿಯೇ ಮಲಗಲು ಅನುಕೂಲ ಕಲ್ಪಿಸಿದಳು. ಅವಳು ಚಿಕ್ಕವಳೂ ಸುಂದರಿಯೂ ಆಗಿದ್ದಳು. ಅವರೀರ್ವರಲ್ಲಿ ಪ್ರೀತಿ ಉಂಟಾಗಿ ಒಬ್ಬರನ್ನು ಒಬ್ಬರು ತಬ್ಬಿಕೊಂಡು ಮಲಗಿದರು. ಮರುದಿನ ಬಸವರಸನು ತನ್ನ ಊರಿಗೆ ತೆರಳಿದನು. ಕೆಲಕಾಲದ ಬಳಿಕ ಮಾಳಮ್ಮ ಒಂದು ಗಂಡು ಮಗುವಿಗೆ ಜನ್ಮವಿತ್ತಳು. ಮಗು ಬೆಳೆದು ದೊಡ್ಡವನಾಗುತ್ತ ಬಂದಿತು. ಸುಮಾರು ೯-೧೦ ವರ್ಷದವನಾಗಲು ತಂದೆ-ತಾಯಿಗಳಿಗೆ ಅವರ ನಡತೆಯನ್ನು ಖಂಡಿಸುತ್ತ ತಾನು ಈಶ್ವರ ಪುತ್ರನೆಂದು ಹೇಳಿದನು. ಆಗ ಅವರು ಅವನನ್ನು ಮನೆಯಿಂದ ಹೊರಹಾಕಿದರು. ಆಗ ಅವನು ಮನೆ-ಮನೆ ಊರು-ಊರುಗಳನ್ನು ತಿರುಗುತ್ತ ಭಿಕ್ಷೆಬೇಡುತ್ತ ಗುಡಿ, ಮಠ ಛತ್ರಗಳಲ್ಲಿ ರಾತ್ರಿ ಮಲಗುತ್ತಾ ತಿರುಗಿದನು. ಆಗಾಗ ಮೂರು ಸಾಲುಗಳ ಪದ್ಯಗಳನ್ನು ರಚಿಸಿ ಹಾಡುತ್ತಿದ್ದನು. ಅವನ ಕಾಲ ೧೬ನೇ ಶತಮಾನವೆಂದು ಹೇಳಲಾಗಿದೆ. ಈವರೆಗೂ ದೊರೆತ ಪದ್ಯಗಳ ಸಂಖ್ಯೆ ೨೧೦೦-೦೦.

ಸರ್ವಜ್ಞನು ತನ್ನ ಪೂರ್ವ ಜನ್ಮದ ಸರಣಿ ಮಾಡಿದ್ದು ಹೀಗೆ

ಮುನ್ನ ಕೈಲಾಸದಲಿ । ಪನ್ನಗಾಧರನಾಳು ।
ಎನ್ನಯ ಹೆಸರು ಪುಷ್ಪದತ್ತನು ಎಂದು ।
ಮನ್ನಿಪರುದಯದಿ ಸರ್ವಜ್ಞ । (೩ ಚ ಉ)

ಅಂದಿನ ಪುಷ್ಪದತ್ತ । ಬಂದವರರುಚಿಯಾಗಿ ।
ಮುಂದೆ ಆದ ಸಾಲೆ ಸರ್ವಜ್ಞನೆಂದನಿಸಿ ।
ನಿಂದವನು ನಾನೆ ಸರ್ವಜ್ಞ ॥ (೪ ಚ ಉ)

ಸರ್ವಜ್ಞ ರಚಿಸಿದ ವಚನಗಳ ಸಂಖ್ಯೆ

ಏಳು ಕೋಟಿಯ ಕೋಟಿ । ಏಳು ಲಕ್ಷವೆ ಲಕ್ಷ ।
ಏಳು ಸಾವಿರದ ಎಪ್ಪತ್ತು ವಚನಗಳ ।
ಹೇಳಿದೆನು ಕೇಳೊ ಸರ್ವಜ್ಞ । (೨೪ ಚ ಉ)

ಪುಷ್ಪದತ್ತ

ತಮಿಳುನಾಡಿನ ೬೩ ಜನ ನಯನಾರರಲ್ಲಿ ಕೊನೆಗೆ ಬರುವ ನಂಬಿಯಾರು-ನಂಬಿಯಣ್ಣ ಎಂಬುವನು. ಕನ್ನಡ ಕವಿಗಳು ನಂಬಿಯಣ್ಣನೆಂದು ಕರೆದರು. ಇವನು ಕೈಲಾಸದಲ್ಲಿ ಶಿವಮುಡಿಗೆ ಹೂವನ್ನು ತರುವನು. ಅಲ್ಲಿ ಇವನ ಹೆಸರು ಪುಷ್ಪದತ್ತ ಒಂದು ಬಾರಿ ತೋಟದಲ್ಲಿದ್ದಾಗ ಅಲ್ಲಿಗೆ

* ಗೋಸಾಯಿಗುಡ್ಡ, ಹೊಸಪೇಟೆ ರಸ್ತೆ, ಹರಪನಹಳ್ಳಿ, ದಾವಣಗೆರೆ ಜಿಲ್ಲೆ-೫೮೩೧೩೧.



ಮಾಸೂರಿನ ಕಾಶಿ ವಿಶ್ವನಾಥ ದೇವಾಲಯ

ಪಾರ್ವತಿಯು ಇಬ್ಬರು ವಿಳಾಸಿನಿಯ ಕೂಡಿ ಅಲ್ಲಿಗೆ ಬಂದರು ಅವರನ್ನು (ವಿಳಾಸಿನಿಯರನ್ನು) ಕಂಡ ಪುಷ್ಪದತ್ತನು ಅವರಿಗೆ ಮನಸೋತನು. ಇದು ತಿಳಿಯಲು ಶಿವ-ಪಾರ್ವತಿಯರು ಮರ್ತ್ಯಲೋಕದಲ್ಲಿ ಜನಿಸಿ ಭೋಗ ಅನುಭವಿಸಿ, ನಂತರ ಕೈಲಾಸಕ್ಕೆ ಮರಳಲು ಹೇಳಿದರು. (ಇದು ನಂಬಿಯಣ್ಣನ ರಗಳೆಯಲ್ಲಿದೆ).

ವರರುಚಿ

ಶಕ ಪುರುಷ ವಿಕ್ರಮಾದಿತ್ಯನ ಸಭೆಯಲ್ಲಿ ನವರತ್ನಗಳಲ್ಲಿ ಒಬ್ಬನು ಧನ್ವಂತರಿ, ಕ್ಷಪಣಕ, ಅಮರ ಸಿಂಹ, ಶಂಕು, ವೇತಾಲ ಭಟ್ಟ, ಘಟಕರ್ಪರ, ವರಾಹಿಮಿರ, ವರರುಚಿ, ವರರುಚಿಯು ಒಬ್ಬ ಪ್ರಸಿದ್ಧ ಕವಿ ಮತ್ತು ವಯ್ಯಾಕರಣಿಕನು.

ಸರ್ವಜ್ಞ ತನ್ನನ್ನು ತಾನೇ ವೈಭವೀಕರಿಸಿಕೊಳ್ಳು ವನೇ?

ಪುನರ್ಜನ್ಮವನ್ನು ಸರ್ವಜ್ಞನೇ ನಿರಾಕರಿಸುವನು. ಕೆಳಗಿನ ಎರಡು ವಚನಗಳಲ್ಲಿ ನೋಡಿರಿ.

ಸತ್ತ ಬಳಿಕಾ ಜೀವವೆತ್ತ ಹೋಹುದನರಿಯ
ಅತ್ತ ಪರಲೋಕವೆಂಬುವರ ತಲೆಯಲ್ಲಿ
ಪಿತ್ತ ವೇರಿಹುದು ಸರ್ವಜ್ಞ (೩೫೨ ಉ ಚ)

ಸತ್ತು ಹುಟ್ಟುವರೆಂಬ ಮಿಥ್ಯದ ನುಡಿಯೇಕೆ ?
ಬಿತ್ತಿದರೆ ಬೀಜ ಬೆಳೆವಂತೆ ವೃಕ್ಷ ತಾ
ಸತ್ತು ಹುಟ್ಟುವುದೆ ? ಸರ್ವಜ್ಞ (೩೫೩ ಉ ಚ)

ಚನ್ನಪ್ಪ ಉತ್ತಂಗಿಯವರು ತಮ್ಮ ಜೀವನದುದ್ದಕ್ಕೂ ಸರ್ವಜ್ಞ ಕವಿಯ ವಚನಗಳ ಸಂಗ್ರಹ ಕಾರ್ಯವನ್ನು ಮಾಡಿದರು. ಅವರು ಸಂಗ್ರಹಿಸಿದ ವಚನಗಳು ಒಟ್ಟು ೨೧೦೦ ಡಾ॥ ಎಲ್. ಬಸವರಾಜರ ಸಂಗ್ರಹ-೯೩೭, ಸಂಪಾದನೆಯ ಸಿದ್ಧವೀರನ ಸಂಕಲನ-೫೪೯, ಕಿಟೆಲ್ ಕೋಶವಲ್ಲಿ-೧೭೯.

ಆದರೆ ಸರ್ವಜ್ಞನ ವಚನದಲ್ಲಿ ಹೀಗಿದೆ

ಏಳು ಕೋಟಿಯೆ ಕೋಟಿ ಏಳು ಲಕ್ಷವೇ ಲಕ್ಷ ।
ಏಳು ಸಾವಿರದ ಎಪ್ಪತ್ತು ವಚನಗಳ ।
ಹೇಳಿದೆನು ಕೇಳೊ ಸರ್ವಜ್ಞ। (೨೪ ಚ ಉ)

೧) ಕಾಲಜ್ಞಾನ ಪದ್ಧತಿಯ ವಚನಗಳನ್ನು ಈ ಕಾಲದವರು ರಚಿಸಿ ಸೇರಿಸಿದಂತೆ ಕಾಣುವುದು. ಪ್ರಾಚೀನ 'ಪರಮಾರ್ಥ' ಅಂಕಿತದ ಸಂಕಲನದ ಹಸ್ತಪ್ರತಿಯಲ್ಲಿ ಕಾಲಜ್ಞಾನ ವಚನಗಳು ಇರುವುದಿಲ್ಲ.

ಬಸವಣ್ಣನೇ ಅವನಿಗೆ ಹೇಳಿದನೆಂಬುವ ಮಾತು ಸರಿಯಲ್ಲ.

ಚಂದ್ರ ಸೂರ್ಯ ಗ್ರಹಣ ಒಂದೇ ಮಾಸದಿ ಬಂದು
ತಂದೆಯನು ಕಂದನಿರಿದಂತು ಲೋಕಕ್ಕೆ
ಬಂದೀತು ಪ್ರಳಯ ಸರ್ವಜ್ಞ (೧೦೭೮ ಉ ಚ)

ಉತ್ತರ ದಿಕ್ಕಿನಲಿ ಹತ್ತೀತು ಹೆಬ್ಬೇಗೆ
ಸುತ್ತ ಒರಕೊಂಡುಬರುವಾಗ ಜಗವೆಲ್ಲ
ಕತ್ತಲಾದೀತು ಸರ್ವಜ್ಞ॥ (೧೯೭೭ ಉ ಚ)

೧) ಪ್ರವಾದಿಯ ತೆರದಲ್ಲಿ ಜಗತ್ತು ವಿನಾಶದ ಮುನ್ಸೂಚನೆ ಸರ್ವಜ್ಞನಲ್ಲಿ ಬರುವುದು ಸಾಧ್ಯವಿಲ್ಲ ! ಸರ್ವಜ್ಞನ ಹೆಸರಿನಲ್ಲಿ ಯಾರೋ ಕಾಲಜ್ಞಾನಗಳನ್ನು ಸೇರಿಸಿದಂತೆ ಕಾಣುವುದು.

೨) ಬಸವರಸ ಕಾಶಿಗೆ ಹೋಗಿದ್ದನೆಂದರೆ, ಅದು ಕಾಲು ನಡಿಗೆಯಲ್ಲಿ ಮಾಸೂರಿನಿಂದ ರಟ್ಟಿಹಳ್ಳಿ, ಹಲಗೇರಿ, ರಾಣಿಬೆನ್ನೂರು ಹರಿಹರ ಹರಪನಹಳ್ಳಿ, ಹಂಪಿ, ಗುಲ್ಬರ್ಗ ಮುಂದೆ ಕಾಶಿಗೆ ಹೋಗಿರಬೇಕು. ವಾಹನಗಳಿಲ್ಲದ ಕಾಲ; ಕಾಲು ನಡಿಗೆಯಿಂದ ಪ್ರಯಾಣ ಮಾಡುವವರು ಸಮೀಪದ ಮಾರ್ಗದಿಂದ ನಡೆಯುವರು. ಸುತ್ತಿ ಬಳಸಿ ಬರುವುದಿಲ್ಲ. ಕಾಶಿಯಿಂದ ಹಿಂದಕ್ಕೆ ಮರಳುವಾಗ ಬಸವರಸ ಇದೇ ಮಾರ್ಗದಲ್ಲಿ ಬರದೆ ಅಬ್ಬಲೂರಿಗೆ ಏಕೆ ಹೋಗುವನು ?



ಕುಮದ್ವತಿ ನದಿ-ಕುಂಬಾರ ಹೊಳೆ

೩) ಅಬ್ಬಲೂರು ಹಿರೇಕೇರೂರಿಂದ ಈಶಾನ್ಯ ದಿಕ್ಕಿಗೆ ಸು. ೬-೭ ಕಿಲೋಮೀಟರ್ ಅಂತರದಲ್ಲಿದೆ. ಮಾಸೂರು ಸು. ೧೩ ಕಿ.ಮೀ. ನೇರವಾಗಿ ಆಗ್ನೇಯ ದಿಕ್ಕಿಗೆ ಇರುವುದು.

೪) ಅಬ್ಬಲೂರು ಗ್ರಾಮದಲ್ಲಿ ೧೮ ಶಾಸನಗಳಿವೆ. ಅವುಗಳಲ್ಲಿ ಅಬ್ಬಲೂರು ಎಂದೇ ತಿಳಿಸಿದೆ. ಎಲ್ಲೂ ಅಂಬಲೂರು ಎಂದು ತಿಳಿಸಿಲ್ಲ. ಅದೂ ಅಲ್ಲದೆ ಮಾಸೂರಿನ ಸುತ್ತವಿರುವ ಯಾವ ಗ್ರಾಮದಲ್ಲಿಯೂ ಅಂಬಲೂರು ಹೆಸರು ಇರುವುದಿಲ್ಲ.

೫) ಸರ್ವಜ್ಞ ಅಬ್ಬಲೂರಿನಲ್ಲಿ ಜನಿಸಿದ್ದರೆ ಏಕಾಂತ ರಾಮಯ್ಯನನ್ನಾಗಲಿ ಸೋಮೇಶ್ವರ ದೇವರನ್ನಾಗಲಿ ತನ್ನ ವಚನಗಳಲ್ಲಿ ಪ್ರಸ್ತಾಪಿಸುತ್ತಿದ್ದ. ಅದರ ಬದಲು ರಾಮ, ಸೀತೆಯರ ವಿಚಾರವಿರುತ್ತದೆ. ಮಾಸೂರು ಕೋಟೆಯಲ್ಲಿ ರಾಮದೇವರ ದೇವಾಲಯವಿರುವುದು.

೫) ಶ್ರೀ ಉತ್ತಂಗಿ ಚನ್ನಪ್ಪನವರು ಸಂಪಾದಿಸಿದ ಸರ್ವಜ್ಞನ ವಚನಗಳು ೪ ದೇಶವಿಚಾರದ ಪ್ರಸ್ತಾವನೆಯಲ್ಲಿ ಈ ಗ್ರಾಮವು ಈಗಿನ ಅಬಲೂರು ಆಗಿದ್ದ ಪಕ್ಷದಲ್ಲಿ ; ಎಂದು ಅನುಮಾನ ಪಟ್ಟಿರುವರು. ಮಾಸೂರು ಕೋಟೆಯ ಪ್ರವೇಶಕ್ಕೆ ಮೊದಲು ಕಾಣುವ ಮನೆಗಳ ಸಮುದಾಯವೇ ಆಗಿನ ಅಂಬಲೂರು ಇದ್ದಿರಬೇಕು. ಬಳಿಯಲ್ಲಿ ಹರಿದಿರುವ ಕುಮದ್ವತಿ ನದಿ ಒಂದು ಭಾಗಕ್ಕೆ ಕುಂಬಾರ ಹೊಳೆಯೆಂದು ಅಲ್ಲಿಯವರು ಈಗಲೂ ಕರೆಯುವರು. ಪ್ರಾಚೀನ ಕಾಲದಲ್ಲಿ ಅಲ್ಲಿ ಕುಂಬಾರರ ಮನೆಗಳು ಇದ್ದುವೆಂದು ಅಲ್ಲಿಯವರು ಹೇಳುವರು.

೭) ಮಾಸೂರು ಕೋಟೆಯ ಪ್ರವೇಶಕ್ಕೆ ಮೊದಲು ಕೆಲವು ಕಟ್ಟಡಗಳು ಕಾಣುವುವು. ಅವುಗಳಲ್ಲಿ ಒಂದು ಚಾವಡಿ ಮತ್ತೊಂದು ಧರ್ಮಶಾಲೆ. ಚಾವಡಿಯನ್ನು ತೆಗೆದು ಈಗ ಗ್ರಾಮ ಪಂಚಾಯಿತಿ ಕಟ್ಟಡವನ್ನೂ ಧರ್ಮಶಾಲೆಯನ್ನು ಕೆಡವಿ, ಪಶು ಆಸ್ಪತ್ರೆಯನ್ನು ನಿರ್ಮಿಸಿರುವರು. ಚಾವಡಿಗೆ ಅಂಬಲವೆಂದು ಕರೆಯುವರು. ಅದಕ್ಕೇನಾದರೂ ಅಂಬಲೂರು ಎಂದಿರಬೇಕೆ ?

೮) ಕೋಟೆಯ ಉತ್ತರ ದಿಕ್ಕಿನಲ್ಲಿ ಅಗಳ್ತಗಳು ಇರುವುವು. ಮಳೆ ಬಿದ್ದಾಗ ಅಗಳ್ತಗಳು ತುಂಬಿ ಹರಿದಾಗ ಕೋಟೆ ಪ್ರವೇಶ ಮಾಡುವವರಿಗೆ ಕೆಲ ಕಾಲ ಆತಂಕ ಉಂಟಾಗುತ್ತಿತ್ತು. ಅದರಂತೆ ಕಾಶಿಯಿಂದ ಬಂದ ಬಸವರಸನಿಗೆ ಈ ಆತಂಕ ಒದಗಿ ಕೋಟೆಯ ಹೊರಗೆ ಮಾಳಮ್ಮನ ಮನೆಯಲ್ಲಿ ತಂಗಿರಬೇಕು.

ಸರ್ವಜ್ಞ ಕವಿ ಮನೆ ತೊರೆದ ಬಳಿಕ, ಯಾವುದಾದರೊಂದು ವೀರಶೈವ ಮಠದಲ್ಲಿದ್ದು ಗುರುಗಳಿಗೆ ನಿಷ್ಯನಾಗಿ ೧) ವೇದ, ೨) ಪುರಾಣ, ೩) ಪುಣ್ಯಪುರುಷರ ಕಥೆಗಳು, ೪) ಜ್ಯೋತಿಷ್ಯಶಾಸ್ತ್ರ, ೫) ಕಾಮಶಾಸ್ತ್ರ, ೬) ತರ್ಕಶಾಸ್ತ್ರ, ೭) ರಸವಾದ, ೮) ಒಗಟು, ೯) ಜೈನ, ೧೦) ವೈದಿಕ, ೧೧) ವೀರಶೈವ ಧರ್ಮ, ೧೨) ಛಂದಸ್ಸು, ೧೩) ಇತಿಹಾಸ, ೧೪) ವೈದ್ಯ, ೧೫) ಕನ್ನಡ ಭಾಷೆ ಹೀಗೆ ಹಲವಾರು ವಿಚಾರಗಳ ಬಗೆಗೆ ಅಧ್ಯಯನ ಮಾಡಿ ಪಡೆದಿರುವನೆಂಬುದನ್ನು ಅವನ ವಚನಗಳು ಸಾಬೀತುಪಡಿಸುತ್ತವೆ.

ಕಾಲ : ಡಾ. ಎಲ್. ಬಸವರಾಜರಿಗೆ ದೊರೆತ ವೆಂಕನ ಪ್ರತಿ (ನಗಲು ಸರ್ವಜ್ಞನದು) ಅದರಲ್ಲಿ ೭-೩-೧೬೩೬ ಇರುತ್ತದೆ. ಆದ್ದರಿಂದ ಸರ್ವಜ್ಞನ ಕಾಲ ಇದಕ್ಕೂ ಹಿಂದಕ್ಕೆ ಹೋಗುತ್ತದೆ.

ಗುರು ಸರ್ವಜ್ಞನ ಕೃಪೆಯಿಂ
ಪರಮಾಮೃತವೆನಿಸಿ ಮೆ ವ ಗುರು ಬೋಧನೆಯನಿದಂ
ವಿರತ ಮಹಲಿಂಗ ದೇವರು
ವಿರಚಿಸಿದನು ಹರನನುತಿ ಪೂಜಿಸುವರಿಗಂ ॥
(ಗುರುಬೋಧಾಮೃತದಿಂದ)

ಗುರು ಬೋಧಾಮೃತದಲ್ಲಿ ಬಿಟ್ಟಮಂಡೆಯ ಪ್ರಭುದೇವನ ವಿಚಾರವಿದೆ. ಪ್ರಭುದೇವನ ಕಾಲ ಕ್ರಿ.ಶ. ೧೪೭೪. ಇದು ಗುಮ್ಮಳಾಪುರದ ತಾಮ್ರ ಶಾಸನದಲ್ಲಿ ಉಲ್ಲೇಖವಾಗಿದೆ. ಗುಬ್ಬಿ ಮಲ್ಲಣ್ಣನು ಪ್ರಭುದೇವನು ಒಂದೇ ಕಾಲದವರು. ವಿರತ ಮಹಾಲಿಂಗನು ಸರ್ವಜ್ಞನ ಶಿಷ್ಯನಾಗಿದ್ದರೆ, ಮಹಾಲಿಂಗನ ಕಾಲ ಕ್ರಿ.ಶ. ೧೫೦೪ ಆಗುವುದು. ಇದರಿಂದ ಸರ್ವಜ್ಞನ ಕಾಲ ಕ್ರಿ.ಶ. ೧೫೦೦ ಎಂದು ಹೇಳಬೇಕಾಗುತ್ತದೆ.

ನಾಮಕರಣ

'ಸರ್ವಜ್ಞ' ಎಂಬುದು ಅವನ ತಾಯಿ ತಂದೆಯರು ಕರೆದ ನಾಮವಲ್ಲ. ಪ್ರಾಚೀನ ಕಾಲದಲ್ಲಿ ಜನಿಸಿದ ಮಗುವಿಗೆ ತಮ್ಮ ಮನೆದೇವರು, ಇಲ್ಲವೇ ಬಹುಕಾಲ ಆರಾಧಿಸಿದ ದೇವರು ಅಥವಾ ಮನೆಯ ತಾತ, ಮುತ್ತಾತ, ಹೆಣ್ಣಾದರೆ ಅಜ್ಜಿ-ಮುತ್ತಜ್ಜಿಯ ಹೆಸರುಗಳನ್ನು ನಾಮಕರಣ ಮಾಡುತ್ತಿದ್ದರು.

ಬಂಧು ಬಳಗವೂ ಕೂಡಿ । ಹೊಂದು ಜೋಗಳ ಪಾಡಿ।
ಹಿಂದೆ ಸತ್ತವರ ಹೆಸರಿಟ್ಟು ಗುಗ್ಗರಿಯ ।
ತಿಂದು ತೂಗುವರು ಸರ್ವಜ್ಞ (೧೨೮೩) ಉ ಚ

ಬಸವರಸನ ಮನೆ ದೇವರು ಕಾಶಿ ವಿಶ್ವನಾಥ. ಕಾಶಿ ವಿಶ್ವನಾಥ ದೇವಾಲಯ ಮಾಸೂರು ಕೋಟೆಯಲ್ಲಿದೆ. ಬಹುಕಾಲ ಮಕ್ಕಳಿಲ್ಲದ ಬಸವರಸ, ವಿಶ್ವನಾಥ ದೇವರಿಗೆ ಆರಾಧಿಸಿ, ಗಂಡು ಮಗುವನ್ನು ಕುಂಬಾರ ಮಾಳಮ್ಮಳಲ್ಲಿ ಪಡೆದನೆಂದರೆ ಆ ಮಗುವಿಗೆ ನಾಮಕರಣವನ್ನು ವಿಶ್ವನಾಥ-

ವಿಶ್ವೇಶ್ವರ ಈಶ್ವರನೆಂದು ಇಟ್ಟಿರಬೇಕು. ಮಗುವಿನ ಗೆಳೆಯರು [illegible] ಅವನಿಗೆ ಈಶ–ಈಶಪ್ಪನೆಂದು ಕರೆದಿರಬೇಕು.

ಸರ್ವಜ್ಞನು ಸ್ತ್ರೀ ಸುಖ ಕಂಡವನಿರಬೇಕು

ವೇಮನ ಮತ್ತು ಸರ್ವಜ್ಞ ಕವಿಗಳಿಬ್ಬರೂ ತಮ್ಮ ಜೀವನದ ಪೂರ್ವ ಭಾಗದಲ್ಲಿ ಗೃಹಸ್ಥರಾಗಿದ್ದು, ಭೋಗಗಳನ್ನು ಅನುಭವಿಸಿದ ಉತ್ತರ ಭಾಗದಲ್ಲಿ ವಿರಕ್ತರಾಗಿ ಯೋಗಿ ಕವಿಗಳಾಗಿ ಮಾರ್ಪಾಡಾದವರು. ಈರ್ವರೂ ಜೀವಿತದಲ್ಲಿ ವೇಶ್ಯಾ ಸಂಪರ್ಕವುಳ್ಳವರು. ಆದರೆ ತಿರುವಳ್ಳವರ್ ತನ್ನ ಜೀವನದುದ್ದಕ್ಕೂ ಒಳ್ಳೆಯ ಗೃಹಸ್ಥನಾಗಿದ್ದನು. ಅವನ ಮಡದಿ ವಾಸುಕಿ ಉತ್ತಮ ಗೃಹಿಣಿ, ಅವರ ದಾಂಪತ್ಯದ ಬಗ್ಗೆ ಹಲವಾರು ಕಥೆಗಳಿವೆ. ಆದ್ದರಿಂದ ಅವನಿಗೆ ವೇಶ್ಯಾ ಸಂಪರ್ಕದ ಅಗತ್ಯ ಬೀಳಲಿಲ್ಲ.

ವೇದಾಂತಿಗಳು ಮಂತ್ರಯೋಗ, ಹಠಯೋಗ, ರಾಜಯೋಗ, ಲಯಯೋಗ ಎಂದು ನಾಲ್ಕು ಯೋಗಗಳನ್ನು ಹೇಳಿರುವರು. ವೇಮನ, ಸರ್ವಜ್ಞ ಇವರಿಬ್ಬರೂ ಇದಕ್ಕೆ ಭಿನ್ನವಾಗಿ 'ಸಂಸಾರ ಯೋಗ'ವನ್ನು ಬೋಧಿಸಿರುವರು. ಗೃಹಸ್ಥಾಶ್ರಮವನ್ನು ಪ್ರಶಂಸಿಸಿದ್ದಾರೆ.

ಬೆಚ್ಚನೆ ಮನೆಯಾಗಿ ವೆಚ್ಚಕ್ಕೆ ಹೊನ್ನಾಗಿ ।
ಇಚ್ಛೆಯನರಿವ ಸತಿಯಾಗಿ–ಸ್ವರ್ಗಕ್ಕೆ ।
ಕಿಚ್ಚು ಹಚ್ಚೆಂದ ಸರ್ವಜ್ಞ (೧೭೧೧ ಉ ಚ)

ಅಪ್ಪಿ ಸಪ್ಪಾದವಳ । ನಪ್ಪುವನು ಕಡುಹೆಡ್ಡ ।
ತುಪ್ಪವುಂಡೊಗೆದ ಎಲೆನೆಕ್ಕಿನಾಯಿ ಬಾಯ ।
ಚಪ್ಪರಿಸಿದಂತೆ ಸರ್ವಜ್ಞ (೧೯೩೫ ಉ ಚ)

ಬಿದ್ದ ಮೊಲೆಯವಳು ತಾ । ನೆದ್ದೊಡಿ ಬರುವಾಗ ।
ಎದ್ದೆದ್ದು ಬದಿಯ ಬಡಿಯುತ್ತ ಹಾರುವ ।
ಹದ್ದಿನಂತಿಹಳು ಸರ್ವಜ್ಞ (೧೮೬೧ ಉ ಚ)

ಸುಗುಣವಂತು ಕಾಲು ಸಂದತ್ಯೆಯುಂಡಿನ
ಬುದ್ಧಿವಂತು ಲಗುಚು ಪುತ್ರುಲೋಪ್ಪ
ಸ್ವರ್ಗ ಮೇಟಿಕಯ್ಯ ಸಂಸಾರಿ ಕಿಂಕನು

(ಸುಗುಣವತಿಯಾದ ಹೆಂಡತಿಯಾಗಿರಲು ಪುತ್ರರೆಲ್ಲಾ ಬುದ್ಧಿವಂತರಾಗಿ ಒಪ್ಪುತ್ತಿರಲು ಸಂಸಾರಿಗೆ ಸ್ವರ್ಗವೇಕೆ ?) ಇವರಿಬ್ಬರೂ ಗೃಹಿಣಿಯನ್ನು ಹೊಗಳಿದರೂ ಮೋಹವನ್ನು ತೆಗಳಿರುವರು.

ಅಸಿಗಲ್ಲು ಅಡಿಯಾಗಿ ಮಸಗಲ್ಲು ಮೇಲಾಗಿ ।
ಗಸಗಸನೆ ಅರೆವ ಅಕ್ಕನ ಮೋಣಿನ ।
ಕುಶಲವನು ನೋಡ ಸರ್ವಜ್ಞ॥

ಹೀಗೆ ಹೇಳಿದ ಸರ್ವಜ್ಞನ ಮಾತಿಗೆ ಪ್ರತಿಯಾಗಿ ಅವಳ ಅಕ್ಕ ಕೆಳಗಿನಂತೆ ಉತ್ತರ ಕೊಟ್ಟಳು.

ಉಚ್ಚಿಯಾ ಬಚ್ಚಲವ ತುಚ್ಛವೆಂದೆನಬೇಡ ।
ಅಚ್ಚುತ ಬಿದ್ದನಜಬಿದ್ದ ದೇವೇಂದ್ರ ।
ನೆಚ್ಚುತ್ತು ಬಿದ್ದ ಸರ್ವಜ್ಞ॥

ಕೂಡಲೆ ಅವನ ತಲೆ ಸಹಸ್ರ ಹೋಳಾಯಿತು. ಅವನ ಮರಣ ಹೀಗಾಯಿತು ಎಂದು ಹೇಳಿರುವರು ಸ್ತುತಿ–ನಿಂದೆಗಳು ಒಂದೇ ಪದ್ಯದಲ್ಲಿ ಅನೇಕಾವರ್ತಿ ಕಂಡುಬರುವುದೆಂದು ಉತ್ತಂಗಿ ಚನ್ನಪ್ಪನವರು ಹೇಳಿರುವರು. (ಪ್ರಸ್ತಾವನೆ ನೋಡಿರಿ). ಇದು ಕಟ್ಟು ಕಥೆ. ಸರ್ವಜ್ಞನಿಗೆ ಅಕ್ಕ ತಂಗಿಯರಿದ್ದಿಲ್ಲ. ತನಗಿಂತ ಹಿರಿಯ ಸ್ತ್ರೀಯರನ್ನು ಅಕ್ಕರೆಂದು ಸಂಬೋಧಿಸಿರುವನು. ಇವನು ಒಂದು ಕಾಲದಲ್ಲಿ ಹೇಳಿದ ವಚನ ಮತ್ತೊಂದು ಕಾಲದಲ್ಲಿ ಹೇಳಿದ ವಚನದ ವಿರುದ್ಧವಾಗಿರುತ್ತದೆ. ಕಾರಣ ಮೊದಲ ವಚನ ಪ್ರಾಯದಲ್ಲಿ ಹೇಳಿದ್ದು. ಎರಡನೆ ವಚನ ಹಿರಿಯರಾಗಿ ಬುದ್ಧಿ ಪಕ್ವವಾದ ಕಾಲಕ್ಕೆ ಹೇಳಿದ್ದು ; ಈ ರೀತಿ ಅನೇಕ ಉದಾಹರಣೆಗಳು ಕಂಡುಬರುತ್ತವೆ. ದೇಶಾಟನೆ ಮಾಡಿ ಮಾಸೂರಿಗೆ ಮರಳಿದ ಬಳಿಕ ಅಂತ್ಯವಾದಂತೆ ಕಾಣುವುದು. ಅವನ ಸಮಾಧಿ ದೇವಸ್ಥಾನದ ಬಳಿಯಿದೆ. ಶ್ರೀ ಉತ್ತಂಗಿ ಚನ್ನಪ್ಪನವರು ಚರಿತ್ರಾಧಾರವಿಲ್ಲದೆ ಹುಟ್ಟಿಕೊಂಡ ಕಥೆಯಿರಬೇಕೆಂದು ತಮ್ಮ ಪ್ರಸ್ತಾವನೆಯಲ್ಲಿ ತಿಳಿಸಿರುವರು.

ಸರ್ವಜ್ಞನ ಸಮಾಧಿ

ಸರ್ವಜ್ಞ ಕವಿಯು ಕನ್ನಡ ನಾಡಿನಲ್ಲಿ ಅಲೆದಾಡಿ ಕೊನೆಯಲ್ಲಿ ಮಾಸೂರು ಕೋಟೆಯಲ್ಲಿ ಮಡಿದಿರುವನು. ವಿಶ್ವನಾಥ ದೇವಾಲಯದ ಪಕ್ಕದಲ್ಲಿ ಸಮಾಧಿ ಕಾಣುವುದು.

ಅದರ ಬಳಿಯಿರುವ ಪೆಳೆಯಲ್ಲಿ ಸರ್ವಜ್ಞನ ಕಲ್ಲಿನ ಮೂರ್ತಿಯ (ವಿಗ್ರಹ) ೧–೬–೧೯೬೩ ರಂದು ದೊರಕಿತು. ಕುಂಬಾರ ಹೊಳೆಯಲ್ಲಿ ಸರ್ವಜ್ಞನ ತಂದೆ ಬಸವರಸರನ ಕಲ್ಲಿನ ಮೂರ್ತಿಯು ದೊರಕಿದೆ. ಅದನ್ನು ತಂದು ಮಾಸೂರು ಕಾಲೇಜಿನಲ್ಲಿ ಇಟ್ಟಿರುವರು.

ಆಧಾರಸೂಚಿ

೧. ಮದಗಮಾಸೂರಿನ ಮಹಾಕವಿ ಸರ್ವಜ್ಞ ಮಹಾಸಾಧ್ವಿ ಅಕ್ಕಲಮ್ಮನವರ ಪುತ್ರ (ಜ.ಕ. ೩೯–೫) ಎಂ.ಜಿ. ಬೂದಿಹಾಳ ಮಠ.

೨. ಪ್ರಾಚೀನ ಕಾಲದಲ್ಲಿ ಮಾಸೂರ ಮಠಗಳು : ೧) ಕೋರಿಮಠ, ೨) ಹಿರೇಮಠ, ೩) ಗದ್ದಿ ಚನ್ನವೀರಸ್ವಾಮಿ ಮಠ, ೪) ಕ್ಯಾಸನೂರು ಸ್ವಾಮಿ ಮಠ, ೫) ವಿರಕ್ತ ಮಠ.

೩. ಗುರುಬೋಧಾಮೃತ ಗ್ರಂಥದ ಪೀಠಿಕೆಯ ಪುಟ ೧೪ನ್ನು ನೋಡಬಹುದು.

೪. ಡಾ. ಎಸ್. ವಿದ್ಯಾಶಂಕರ್ ರಚಿಸಿದ ಹೀಗೊಬ್ಬ ಸರ್ವಜ್ಞ ಗ್ರಂಥ.

೫. ಸರ್ವಜ್ಞ ಒಂದು ಸಮೀಕ್ಷೆ–೧೯೭೫, ಬೆಂಗಳೂರು ವಿಶ್ವವಿದ್ಯಾಲಯ ಪ್ರಧಾನ ಸಂಪಾದಕರು, ಡಾ. ಜಿ.ಎಸ್. ಶಿವರುದ್ರಪ್ಪ.

೬ ಪ್ರಬಂಧ ಮಂಡಿಸಿದ ಲೇಖಕರು : ತಂಗಿರಾಲ ವೆಂಕಟಸುಬ್ಬರಾವ್.

೭. ಮಾಸೂರಿನ ವಯೋವೃದ್ಧರ ಹೇಳಿಕೆಗಳೂ ಇದನ್ನು ಸಮರ್ಥಿಸುತ್ತವೆ. ಶ್ರೀ ಹ.ಮು. ತಳವಾರ.

೮. ವಿರಕ್ತ ಮಹಾಲಿಂಗ ದೇವನು 'ಗುರುಬೋಧಾಮೃತಂ' ಕಾವ್ಯ ರಚಿಸಿದನು ವಿರಕ್ತ ಮಹಾಲಿಂಗನು ಸರ್ವಜ್ಞನ ಶಿಷ್ಯನೆಂದು ಮೊದಲಿಗೆ ಗುರುತಿಸಿದವರು ಡಾ. ಎಲ್. ಬಸವರಾಜು.

೯. (೧೪೮೦–೧೫೬೫) ಇದಕ್ಕೂ ಸ್ವಲ್ಪ ಮುಂಚೆ ೧೫ನೇ ಶತಮಾನ ಉತ್ತರಾರ್ಧದಲ್ಲಿ (೧೪೫೦ ರಲ್ಲಿ) ಸರ್ವಜ್ಞ ಕವಿ ಜೀವಿಸಿರಲು ಸಾಧ್ಯವೆಂದು ಹೇಳಬಹುದು.

೧೦. ೧೬–ವೇಮನ್ನ–ಸರ್ವಜ್ಞಲು ಪುಟ ೪೫, ಡಾ. ಆರ್. ಶೇಷಶಾಸ್ತ್ರಿ.

೧೧. A Comparative Study of Tiruvalluvar Sarvajna and Vemana - Dr. S. Ramamani, ೧೯೯೧.

೧೨. ವೇಮನ–ಸರ್ವಜ್ಞ ಒಂದು ಸಮೀಕ್ಷೆ, ಡಾ. ಜಿ.ಎಸ್. ಶಿವರುದ್ರಪ್ಪ, ೧೯೭೫.

೧೩. ವೇಮನ–ಸರ್ವಜ್ಞ–ತೆಂಗಿರಾಲು ವೆಂಕಟ ಸುಬ್ಬರಾವ್.

೧೪. ಸರ್ವಜ್ಞನ ವಚನಗಳು, ಉತ್ತಂಗಿ ಚೆನ್ನಪ್ಪ ೧೯೨೨ ರಿಂದ ೧೯೬೦ ರವರೆಗೆ.

೧೫. ಶ್ರೀ ರೆವರೆಂಡ್ ಎಫ್ ಕಿಟಲ್.

೧೬. ಶ್ರೀ ರೆವರೆಂಡ್ ಇ.ಪಿ. ರೈಸ್.

೧೭. ಡಾ. ಎಲ್. ಬಸವರಾಜು.

೧೮. ಪ್ರೊ. ಎಂ.ವಿ. ಸೀತಾರಾಮಯ್ಯ.

೧೯. ಡಾ. ರಾಮಚಂದ್ರೇಗೌಡರು.

೨೦. ಡಾ. ಎಸ್. ವಿದ್ಯಾಶಂಕರ್.

೨೧. ಡಾ. ಎಂ. ಅಕ್ಬರ್ ಅಲಿ.

೨೨. ಡಾ. ಜಿ.ಎಂ. ಅಪ್ಪುರಾವ್.

೨೩. ಶ್ರೀ ಎಸ್.ಎಸ್. ಭೂಸರೆಡ್ಡಿ.

೨೪. ಶ್ರೀ ಜಿ.ಎಂ. ಉಮಾಪತಿಶಾಸ್ತ್ರಿ.

೨೫. ಶ್ರೀ ಬಿ.ಎಂ. ಶಿವಮೂರ್ತಿಶಾಸ್ತ್ರಿ.

೨೬ ಮಾಸೂರು ಚಿತ್ರಗಳು.

೨೭. ಶ್ರೀ ಮನೋಹರ್ ದೇಶಪಾಂಡೆ.

೨೮. ಶ್ರೀ ಹ.ಮು. ತಳವಾರ.

೨೯. ಶ್ರೀ ಮಾಗಡಿ ರಂಗಯ್ಯ.

೩೦. ಜಂಗಮ ಕವಿ ಸರ್ವಜ್ಞ ಡಾ. ಬಿ.ಜಿ. ಚೆನ್ನೇಶಿ.

೩೧. ಡಾ. ರಾಜಶೇಖರ ಜಮಖಂಡಿ ಅವರ ಸಂಗ್ರಹಗಳು.

೩೨. ವೇಮನ ಮತ್ತು ಸರ್ವಜ್ಞ, ಡಾ. ಮಧು ವೆಂಕಾರೆಡ್ಡಿ.

೩೩. ಶಾಂತ ನಿರಂಜನ ವಿರಚಿತ ಅಬ್ಬಲೂರು ಚರಿತೆ, ಸಂಪಾದನೆ : ಎನ್. ಬಸವಾರಾಧ್ಯ.

೩೪. Selected Vachans of Sarvjna, Basavaraj Naik, ೨೦೧೦.

೧೦೪

ಅಪ್ರಕಟಿತ ಕಾವ್ಯ : ಸೊಪ್ಪಿಯ ಬಸವೇಶ್ವರನ ಚಾರಿತ್ರ್ಯ

ಡಾ. ಕೆ. ರವೀಂದ್ರನಾಥ

ಸೊಪ್ಪಿಯ ಬಸವೇಶ್ವರನ ಕುರಿತು ಕೊಟ್ನೂರು ಮಲ್ಲಕವಿಯಿಂದ 'ಸೊಪ್ಪಿಯ ಬಸವೇಶ್ವರ ಚಾರಿತ್ರ್ಯ' ರಚನೆಯಾಗಿದೆ. ಇದು ಕವಿ ಚರಿತೆಯಲ್ಲಿ ಅನುಕ್ತ ಹಾಗೂ ಅಪ್ರಕಟಿತ ಕಾವ್ಯ.

ಕಥಾಸಾರ: ಕಂಚಿಪುರದರಸ ಶಂಕರ ರಾಜ-ಭಾನುಮತಿಯರಿಗೆ ಬಹುದಿನಗಳವರೆಗೆ ಮಕ್ಕಳಾಗದಿರಲು ಶಿವಧ್ಯಾನಸ್ಥರಾಗಿರುತ್ತಾರೆ. ಇದರಿಂದ ಶಿವನೇ ಶಿಶುವಾಗಿ ಹುಟ್ಟುತ್ತಾನೆ. ಆತನೇ ಸಿದ್ಧಬಸವೇಶ. ದಿನಗಳೆದಂತೆ 'ಬಾಲತ್ವ ಭಾವದ ಲೀಲೆಯ ನಟಿಸುತ್ತ ಆಲಿಯೊಳಖಿಳಕೀಲನರಿದು ತನ್ನೋಳೋಲಾಡುತ್ತಾ ಮಗು ಬೆಳೆಯುತ್ತದೆ.' ಸಾಮಾನ್ಯವಾಗಿ ಪುರಾಣಗಳು ಪವಾಡಗಳಿಂದ ಆವೃತ್ತವಾಗಿರುವಂತೆ ಸೊಪ್ಪಿಯ ಬಸವಣ್ಣನ ಲೋಕ ಸಂಚಾರದಲ್ಲಿ ಅನೇಕ ಪವಾಡಗಳನ್ನು ಕವಿ ಬಣ್ಣಿಸುತ್ತಾನೆ. ಆತನ ಕಾಯಕನಿಷ್ಠೆ, ಸದಾಚಾರ, ಸತ್ಶೀಲ, ಸದ್ಭಕ್ತಿಗಳಿಂದ ಸಮಾಜದ ಏಳ್ಗೆಗೆ ದುಡಿದ ಕಾರಣಿಕನಂತೆ ಚಿತ್ರಿತಗೊಂಡಿದ್ದಾನೆ. ಈತನ ಕಾಲವನ್ನು ೧೬ನೇ ಶತಮಾನವೆಂದು ನಿರ್ಣಯಿಸಬಹುದಾಗಿದೆ.

ಕವಿ ವಿಚಾರ: ಈ ಕಾವ್ಯ ಬರೆದ ಕವಿ ಕೊಟ್ನೂರು ಮಲ್ಲಕವಿ. ಈತನ ಕಾಲ ೧೭ನೇ ಶತಮಾನ. ಜೇವರ್ಗಿಯಿಂದ ಗುಲಬರ್ಗಾಕ್ಕೆ ಹೋಗುವ ಮಾರ್ಗದಲ್ಲಿ ಗುಲಬರ್ಗಾ ಸಮೀಪ ಬರುವ 'ಕೊಟ್ನೂರು' ಕವಿಯ ಜನ್ಮ ಸ್ಥಳ. ತನ್ನ ಬಗ್ಗೆ ಹೆಚ್ಚಿನದೇನನ್ನೂ ಈ ಕವಿ ಹೇಳಿಕೊಂಡಿಲ್ಲ. ೭ನೇ ಸಂಧಿ ೨೦೩ನೇ ಪದ್ಯದಲ್ಲಿ 'ಮಹಾಲಿಂಗ ಮಲ್ಲೇಶನೂರ ಕೃಪೆಯಿಂದ ಬಲ್ಲಂತೆ ಸೊಲ್ಲಿಸಿದೆ' ಎಂದಿರುವುದರಿಂದ 'ಮಲ್ಲೇಶ' ಕವಿಯ ಇಷ್ಟ ದೈವವಾಗಿದೆ. 'ಗುರುಕೆಂಚಬಸವನ ಚರಣವ ನಾನು ಬಲಗೊಂಬೆ' ಎಂಬ ಸಂಧಿ ೧೮ ೫ನೇ ಪದ್ಯದ ಕೆಂಚಬಸವನ ಉಲ್ಲೇಖ ಪ್ರತಿ ಸಂಧಿಯ ಆದಿಯಲ್ಲಿ ಬರುವುದರಿಂದ 'ಕೆಂಚ ಬಸವ' ಈತನ ಗುರುವಾಗಿರಬೇಕು.

ಚಾರಿತ್ರಿಕ ಸಂಗತಿಗಳು: ಲಕ್ಕಣ್ಣ ದಂಡೇಶನು ಶಿವತತ್ತ್ವ ಚಿಂತಾಮಣಿಯಲ್ಲಿ ಸೊಪ್ಪಿಯ ಬಸವನನ್ನು ೧೬೭ ೧೬೮ನೇ ಪದ್ಯಗಳಲ್ಲಿ ಸಂಧಿ ೬೮ರಲ್ಲಿ ಹೀಗೆ ಚಿತ್ರಿಸಿದ್ದಾನೆ.

ಧಾರಣೀ ತಳಕೆಸೆವ ಕೊಳುಕುರಿವದೆಂದೆನಿಸು
ವೊರೊಳಿಹನಧಿಕ ಸೊಪ್ಪೆಯ ಬಸವಣ್ಣಯ್ಯಗಳ
ಕಾರಣಿಕ ನೆನುತಲಾ ಮಾರುವರು ನುಡಿವು ತಿರಲದನುಸುರಿ
ತಾಣ ಕೇಳಿ!

ಊರ ಜನರಂ ಕರೆಸಿ ಕೇಳಲವರುಂ ನಿರಾ
ಕಾರ ವಸ್ತುತಿಯೆನಲ್ಕಾ ಬಸವಲಿಂಗನ ವಿ
ಕಾರಗುಣಕರಸಲುಂ ಪೋದ ಬಸವೇಶ್ವರನ
ಚರಣಾಂಬುಜಕ್ಕೆ ಶರಣು ॥

ಬಸವಣ್ಣಯ್ಯ ಪೋಗೆ ಕಂಡು ಸುರಿತಾಣ ನೊ
ಳ್ಪೆಸೆವ ಶಿವಭಕ್ತನಾದೊಡೆ ನೋಳ್ಪೆನೆಂದೆನುತ
ಮೊಸೆದು ದೇವಾಲಯದ ಹೋಗಿಸಿ ಸೊಪ್ಪೆಯ ಹಾಯ್ದಿ
ಕಿಚ್ಚ ನಿಕ್ಕಿದಡಾಗಲು ।

ಹೊಸ ಪರಿಯಲಾ ಶಿವಾಲಯ ಬೇವುತಿರವಾಗ
ಶಶಿಧರನ ಭಕ್ತನುಂ ತನ್ನಂಗಡಿಗೆ ಬಂದ
ಪಶುಕುಲಕೆ ಸೊಪ್ಪೆಯಂ ಕ್ರಮವೀವ ಬಸವಣ್ಣನ
ಚರಣಾಂಬುಕ್ಕೆ ಶರಣು ॥

ಒಪ್ಪದಿಂದೆಂದಿನಂದದಲಿ ತನ್ನಂಗಡಿಯೊ
ಳಪ್ಪನಂ ಕಂಡವರು ಚೋದ್ಯಮಂ ಮಾಡುತಾ
ಸೊಪ್ಪೆಯಂಗಡಿಗೆ ಸುರಿತಾಣನುಂ ಬಂದತಿ ಸಲಾಮಮಂ
ಮಾಡುತಿರಲು

ತಪ್ಪದಿವರೆಮ್ಮ ಕರ್ತಾರನೆಂದೆನುತಲಂ
ತಪ್ರತಿಮ ಭಕ್ತನುಂ ಪೊಗಳಲುಕಿ ಮೆರೆದನೂ
ಸೊಪ್ಪೆಯ ಕಾಯಕದ ಬಸವಣ್ಣ ತಂದೆಗಳ ಚರಣಾಂಬುಜಕ್ಕೆ
ಶರಣು ॥

ಹೀಗಾಗಿ ಲಕ್ಕಣ್ಣನ ದಂಡೇಶನ ಕಾಲಕ್ಕೆ ಈತ ಶರಣ ಸಂಸ್ಕೃತಿಯ ಪರಿಚಾರಕನಂತೆ ತನ್ನನ್ನು ಗುರುತಿಸಿಕೊಂಡಿದ್ದನು. 'ಸಗರನಾಡಿನ ಶಿವಶರಣರು' ಎಂಬ ಕೃತಿಯಲ್ಲಿ ಡಾ. ಶಿವಾನಂದ ವಿರಕ್ತಮಠ ಅವರು ಸೊಪ್ಪಿ ಬಸವಣ್ಣ ತೋಂಟದ ಸಿದ್ಧಲಿಂಗರಿಗಿಂತ ಸ್ವಲ್ಪ ಮುಂಚಿನವನೆಂದು ಅಭಿಪ್ರಾಯ ಪಟ್ಟಿದ್ದಾರೆ. ಶಿವತತ್ತ್ವ ಚಿಂತಾಮಣಿಯ ಪ್ರಕಾರ ಸೊಪ್ಪಿಯ ಬಸವೇಶ್ವರ ಜೇವರ್ಗಿ ತಾಲೂಕಿನ ಕೋಳ್ಕೂರಿನವನು. ಈತನ ಹೆಸರಿನ ದೇವಸ್ಥಾನ ಈಗಲೂ ಅಲ್ಲಿ ಇದೆಯೆಂದು

* ಪ್ರಾಧ್ಯಾಪಕರು, ಹಸ್ತಪ್ರತಿ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ-೫೮೩ ೨೭೬

ಅಭಿಪ್ರಾಯವನ್ನು ಸೊಪ್ಪಿ ಬಸವಣ್ಣನ ಮೂಲದವರಾದ ರಾಯಚೂರಿನ ಡಾ. ಬಸವಲಿಂಗ ಸೊಪ್ಪಿಮಠರು ತಿಳಿಸಿದ್ದಾರೆ.

ಕವಿಯ ಕಾಲ ೧೭ನೇ ಶತಮಾನ ವಿಜಯನಗರ ತಾಳೀಕೋಟೆ ಯುದ್ಧದ ನಂತರ ನಾಡಿನಲ್ಲಿ ಹಿಂದೂ-ಮುಸ್ಲಿಂ ವಿರೋಧಾಭಾವಗಳು ಆಗಾಗ ಹೆಚ್ಚುತ್ತಿರುವ ಸಂದರ್ಭದಲ್ಲಿ 'ಮತೀಯ ಸಾಮರಸ್ಯ' ಸಾರುವ ಬಹುದೊಡ್ಡ ಪ್ರಯತ್ನವನ್ನು ಮಾಡಿದಂತೆ ತೋರುತ್ತದೆ. ಕಾವ್ಯದಲ್ಲಿ ಫಿರೋಜಾಬಾದಿಗೆ ಬಂದು ಫಿರೋಜಾಖಾನನ ಮೇಲೆ ಪ್ರಭಾವ ಬೀರಿದ್ದನ್ನು ವಿವರಿಸುತ್ತದೆ. ಮುಸಲ್ಮಾನ ಮುಲ್ಲಾ ಎಂದರೇನು ಎಂಬುದನ್ನು ಸಾಂಗತ್ಯದಲ್ಲಿ ಹೀಗೆ ವ್ಯಾಖ್ಯಾನಿಸುತ್ತಾನೆ.

ತನುವೆಂಬ ಮುಸಿಯೋಳು ಮನವೆಂಬ ರಸವನ್ನು
ಸನುಮತ ಭಾವದೊಳ್ ನೆಲಸಿ ಘನಗುರುವಿನ
ಧ್ಯಾನ ದನುವಿನೋಳಾಡುವ ವಿನಯವೇ ಮುಸಲ್ಮಾನ
ತನವು
(ಸಂಧಿ ೭ ಪದ್ಯ ೩೯)

ಮೂಲ ಸೂತ್ರವ ಕಂಡು ಕಾಲಕರ್ಮಂಗಳ ಜಾಲವ ಕೆಡಿಸಿ
ಜೀವಗಳ
ಪಾಲಿಸಿ ನಿರಾಳ ಭಾವದೊಳಿಪ್ಪಾ ಲೋಲಾಪದವೇ
ಮುಲ್ಲಾವೆನಲು
(ಸಂಧಿ ೭ ಪದ್ಯ ೪೨)

ಹಸ್ತಪ್ರತಿ ಸ್ವರೂಪ: ಸೊಪ್ಪಿ ಬಸವೇಶ್ವರ ಚಾರಿತ್ರ್ಯದ ೨ ಪ್ರತಿಗಳು, ನನಗೆ ಲಭಿಸಿವೆ. ಗುಲಬರ್ಗಾ ವಿಶ್ವವಿದ್ಯಾನಿಲಯ ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರದಲ್ಲಿರುವ ಪ್ರತಿಯನ್ನು ಸಂಗ್ರಹಿಸಿದೆ. ಇದರ ಮೊದಲ ಸಂಧಿ ೧೩ ಪದ್ಯಗಳು ಮತ್ತು ೫-೬ನೇ ಸಂಧಿ ಇಲ್ಲದೆ. ಅಲ್ಲಲ್ಲಿ ಪ್ರತಿ ಹರಿದುಹೋಗಿದೆ. ಈ ಪ್ರತಿಯ ಕಾಲ ಹಾಗೂ ಪ್ರತಿಕಾರನನ್ನು ಕುರಿತು ಕೊನೆಯಲ್ಲಿ ಹೀಗಿದೆ. 'ಶಾಲಿವಾಹನ ಶಕ ೧೭೬೧ (ಕ್ರಿ.ಶ. ೧೮೩೯) ಶುಕ್ಲನಾಮ ಸಂವತ್ಸರೆ ಮಿತಿ ಭದ್ರಪದ ಸುದ್ಧ ೯ ರೋಜ ಚಂದ್ರವಾರ ದಿವಸ ಗುರುವಿನ....... ಮುಗಿಸಿ ಇದ್ದಿತು. ಯೀ ಪುಸ್ತಕವು ಸೊಪ್ಪಿ ಬಸವೇಶ್ವರ ಪುರಾಣ ಬರದವರುದಾರುಯೆಂದರೆ ಲಿ॥ಗು॥ ಮಾಟಪತಿ ವಿರೂಪಾಕ್ಷಪ್ಪ ಪುತ್ರ ಸಂಗನ ಬಸಯ್ಯನ ಸ್ವರಸ್ತುರಿಯಿ ಪುಸ್ತಕ ಬರೆಸಿಕೊಂ...... ಸೊಪ್ಪಣ್ಣ ಸಂಗನಬಸವ ಪುತ್ರ ಶಿವಪ್ಪನು ಭಕ್ತಿಗೋಸ್ಕರವಾಗಿ ಬರೆಸಿಕೊಂಡಿದ್ದನೂ !

ಇನ್ನೂ ೨ನೇ ಪ್ರತಿ ದೊರೆತದ್ದು ಡಾ. ವೀರಣ್ಣ ರಾಜೂರು ಅವರಿಂದ. ಅವರ ಪಿಎಚ್.ಡಿ. ಮಹಾಪ್ರಬಂಧ 'ಕನ್ನಡ ಸಾಂಗತ್ಯ ಸಾಹಿತ್ಯ' ಕೃತಿಯಲ್ಲಿ ಈ ಸೊಪ್ಪಿ ಬಸವ ಸಾಂಗತ್ಯದ ಹಸ್ತಪ್ರತಿಯನ್ನು ಡಾ. ಶಿವಾನಂದ ಅವರು ನೀಡಿ ಉಪಕರಿಸಿದ್ದಾರೆಂದು ಸ್ಮರಣೆ ಮಾಡುತ್ತಾರೆ.

ಪ್ರಬಂಧ ಸಿದ್ಧತೆಗೆ ತೊಡಗಿರುವ ಸಮಯದಲ್ಲಿ ಹಸ್ತಪ್ರತಿಗೆ ಸಂಬಂಧಿಸಿದಂತೆ ರಾಜೂರ ಅವರನ್ನು ವಿಚಾರಿಸಲಾಗಿ ಶಾಹಬಾದ್ ಕಡೆಯಿಂದ ಇತ್ತೀಚೆಗೆ ಹಸ್ತಪ್ರತಿಯೊಂದು ಬಂದಿದ್ದೆಂದು ನೆರಳಚ್ಚು ಮಾಡಿ ಕಳಿಸಿ ಉಪಕರಿಸಿದ್ದಾರೆ. ಈ ಪ್ರತಿಯ ಪ್ರತಿಕಾರ ಸಂಗಣ್ಣ ಹೀಗೆ ಹೇಳಿಕೊಂಡಿದ್ದಾನೆ.

"ಮೊದಲು ಶ್ರೀ ಶಕೆ ೧೭೪೨ (ಕ್ರಿ.ಶ. ೧೮೨೦) ವಿಕ್ರಮನಾಮ ಸಂವತ್ಸರದ ಚೈತ್ರ ಶುದ್ಧ ೧ ರೋಜ ಬುಧವಾರ ದಿವಸ ಇದೇ ಪ್ಯಾರಸಾಬಾದಿಯಲ್ಲಿಯ ಅಂಗಡಿಗೇರಿ ಹಿರೇಮಠದ ಮುನಯ್ಯ ದೇವರ ಕರಸಂಜಾತ ಸಿದ್ಧಬಸಯ್ಯನವರು ತನ್ನ ಸ್ವಂತಕ್ಕೆ ಬೇಕೆಂದು ಪರ್ವತಾಬಾಧಿಯ ಹಿರೇಮಠದ ಪಟ್ಟದ್ದೇವರು ಶಿವಲಿಂಗಪ್ಪನವರ ಹಸ್ತೋದ್ಭವನಾದ ಸಾತಯ್ಯನವರಿಗೆ ಬರೆಸಿದ ಪ್ರತಿಯನ್ನು ನೋಡಿ ಪ್ಯಾರಸಾಬಾದಿಯ ಸದ್ಭಕ್ತ ಈರಣ್ಣ ಶಿದ್ರಾಮಪ್ಪ ಮುದ್ಗಿ ಮುಕ್ಕಂ ಪ್ಯಾರಾಸಾಬಾದಿ ಅಭಿಲಾಷೆಯಂತೆ ಬ್ರ.ಶ್ರೀ.ಸಿ. ಕಾರ್ತೀಕೇಯ ಶಾಸ್ತ್ರೀ (ಸೊಲ್ಲಾಪುರ ವಾರದ ಮಲ್ಲಪ್ಪನ ಪಾಠಶಾಲೆಯ ಜಗದೀಶಶಾಸ್ತ್ರೀಗಳಿಂದ ಶಿಕ್ಷಣ ಹೊಂದಿದ) ಅಂಬಲಗಿ ಮತ್ತು ಕಲಬುರ್ಗಿ ಇವರು ಶುದ್ಧಗೊಳಿಸಿದರು."

ಕಾರ್ತೀಕೇಯ ಶಾಸ್ತ್ರೀಗಳು ನನಗೆ ಬರೆಯುವುದಕ್ಕೆ ಹೇಳಿದಷ್ಟು ಬರೆದಿದ್ದೇನೆ ಎಂದು "ವಿದ್ವಜ್ಜನ ಕೃತಾಭಿಲಾಷಿ ಸಂಗಣ್ಣ ಸಿದ್ರಾಮಪ್ಪ ಮುದ್ಗಿ (ಶಾ) ಶಾಹಬಾದ ಎಂದು ಹೇಳಿಕೊಂಡಿರುವುದನ್ನು ಗಮನಿಸಿದರೆ ಪ್ರತಿ ಮಾಡಿಸಿದ ಈರಣ್ಣ ಸಿದ್ರಾಮಪ್ಪ ಮುದ್ಗಿ ಮತ್ತು ಪ್ರತಿ ಮಾಡಿದ ಸಂಗಣ್ಣ ಸಿದ್ರಾಮಪ್ಪ ಮುದ್ಗಿ ಅಣ್ಣ ತಮ್ಮಂದಿರಿರಬೇಕು. ಈರಣ್ಣ ಅಭಿಲಾಷೆಯಂತೆ ಅಕ್ಷರ ಜ್ಞಾನವುಳ್ಳ ಸಂಗಣ್ಣನಿಂದ ಪ್ರತಿ ಮಾಡಿಸಿ ಅದರ ಪರಿಷ್ಕರಣದ ಯಜಮಾನಿಕೆಯನ್ನು ಇಲ್ಲವೇ ಉಸ್ತುವಾರಿಯನ್ನು ಕಾರ್ತೀಕೇಯ ಶಾಸ್ತ್ರೀಗಳು ನೋಡಿ ಕೊಂಡಂತೆ ತೋರುತ್ತದೆ.

ಅದೇನೆ ಇರಲಿ ಈ ಎರಡೂ ಪ್ರತಿಗಳ ಪೀಳಿಗೆ ಬೇರೆ. ಗುಲಬರ್ಗಾ ವಿಶ್ವವಿದ್ಯಾಲಯದ ಪ್ರತಿಯದು ೧೮೩೯. ಪ್ಯಾರಾಸಾಬಾದ ಪ್ರತಿಯದು ೧೮೨೦. ಇವುಗಳಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಪ್ರತಿಯ ಪದ್ಯದ ಸಂಖ್ಯೆ ೯೨೦. ಪ್ಯಾರಸಾಬಾದ ಪ್ರತಿಯ ಪದ್ಯದ ಸಂಖ್ಯೆ ೯೫೯ ಅಂದರೆ ೩೯ ಪದ್ಯಗಳು ಹೆಚ್ಚಾಗಿವೆ. ಇದಕ್ಕೆ ಕಾರಣ ದೇಸಿ ಛಂದೋ ಮಟ್ಟುಗಳಾದ ಸಾಂಗತ್ಯ, ತ್ರಿಪದಿ, ಷಟ್ಪದಿ ಮುಂತಾದ ಹಾಡು ಗಬ್ಬಗಳು. ಲಿಪಿಕಾರ ಇಲ್ಲವೇ ಸಹೃದಯರಿಂದ ಪದ್ಯ ಸಂಖ್ಯೆ ಹೆಚ್ಚಾಗುವ ಸಾಧ್ಯತೆಯಿದೆ. ಇದಕ್ಕೆ ನಿದರ್ಶನಗಳು ದೊರೆಯುತ್ತವೆ.

೧೦೫

ಲ್ಯೂಯಿ ರೈಸ್ ಕ್ಯಾಟಲಾಗ್‌ನಲ್ಲಿರುವ ಶೃಂಗೇರಿಯ ಹಸ್ತಪ್ರತಿ ಸೂಚಿ

ಕೆಳದಿ ಗುಂಡಾಜೋಯಿಸ್ ಮತ್ತು ಕೆಳದಿ ವೆಂಕಟೇಶ್ ಜೋಯಿಸ್*

ಪುರಾತನ ಹಸ್ತಪ್ರತಿಗಳು ಅಪಾರ ಜ್ಞಾನಭಂಡಾರಗಳಿಂದ ಕೂಡಿದ್ದು ಐತಿಹಾಸಿಕ ಆಕರಗಳ ಸಾಂಸ್ಕೃತಿಕ ಸಂಪತ್ತುಗಳಾಗಿವೆ. ಇವುಗಳ ಮಹಾತ್ವವನ್ನರಿತ ಪುರಾತತ್ವಜ್ಞರಾಗಿದ್ದ ಲ್ಯೂಯಿಸ್ ರೈಸ್‌ರವರು ಸ್ವಾತಂತ್ರ್ಯ ಪೂರ್ವದಲ್ಲಿಯೇ ಭಾರತದಲ್ಲಿ ಬ್ರಿಟಿಷ್ ಸರಕಾರದೊಂದಿಗೆ ವ್ಯವಹರಿಸಿದ್ದರಿಂದ ಹಸ್ತಪ್ರತಿಗಳ ಸಂರಕ್ಷಣೆಗೆ ೧೮೬೮ ರಲ್ಲಿ ಯೋಜನೆಯನ್ನು ಕೈಗೊಂಡಿತು. ರೈಸ್‌ರವರು ೧೮೮೪ರಲ್ಲಿ ಪ್ರಸಿದ್ಧಪಡಿಸಿದ ಕ್ಯಾಟಲಾಗ್‌ನ ಪೀಠಿಕೆಯಲ್ಲಿ ಇದನ್ನು ನಿರೂಪಿಸಿ

"The present work had its origin in the scheme sanctioned by the Government of India in November 1886 for the discovery and preservation of the records of ancient Sanskrit literature in India. In the distribution of the funds granted for carrying, out that plan Mysore was associated in one circle with Madras; and latter Government in November 1870 placed the services of Dr. Burnel at the disposal of the chief commissioner of Mysore for the examination of Sanskrit manuscripts. But nothing seems to have been done under this arrangement.

Meanwhile, a catalogue containing 608 numbers of the Sanskrit works in the Saraswathi Bhandaram Library of His Highness the Maharaja of Mysore had been compiled under the direction of Colonel G.B. Malleson C.S.L.Guardian to the Maharaja, which was forwarded in October 1869 by the chief commissioner. Mr. L.Bowring C.S.L to the Government of India who sent it through the Bombay Government to Dr. Keilhoru at Poona for report. This gentleman farther in January 1874 sent up a supplementary catalogue of Sanskrit manuscripts in the same library comprising 270 works, some of them being recatalogued from the former list Dr. G. oppert, also who published one volume of the Madras catalogue in 1880 included in it 139 works belonging to the Asthana pandit at Mysore".

ಈ ರೀತಿ ಉಲ್ಲೇಖಿಸಿರುವುದು ಹಸ್ತಪ್ರತಿ ಇತಿಹಾಸದಲ್ಲಿ ಗಮನಾರ್ಹವಾದುದು. ಸ್ವಾತಂತ್ರ್ಯ ಪೂರ್ವದಲ್ಲಿ ಮೈಸೂರು ರಾಜ್ಯವು ಬೆಂಗಳೂರು, ಕೋಲಾರ, ತುಮಕೂರು, ಮೈಸೂರು, ಹಾಸನ, ಕಡೂರು (ಈಗ ಚಿಕ್ಕಮಗಳೂರು ಜಿಲ್ಲೆಯಾಗಿದೆ), ಶಿವಮೊಗ್ಗ, ಚಿತ್ರದುರ್ಗ ಸೇರಿ ಎಂಟು ಜಿಲ್ಲೆಗಳು ಹಾಗೂ ಪ್ರತ್ಯೇಕ ರಾಜ್ಯ ಸ್ಥಾನಮಾನಕ್ಕೆ ಸೇರಿದ್ದ ಕೊಡಗು ಸೇರಿದಂತೆ ಒಟ್ಟು ಒಂಭತ್ತು ಜಿಲ್ಲೆಗಳು ಮಾತ್ರ ಅಸ್ತಿತ್ವದಲ್ಲಿರುವುದನ್ನು ಕಂಡು ಕೊಳ್ಳಬಹುದು. ಸ್ವಾತಂತ್ರ್ಯ ನಂತರ ಮಂಡ್ಯ ಮೈಸೂರಿನಿಂದ ಬೇರ್ಪಟ್ಟು ಪ್ರತ್ಯೇಕ ಜಿಲ್ಲೆಯಾಯಿತು. ರೈಸ್‌ರವರು ಹಸ್ತಪ್ರತಿ ಸಮೀಕ್ಷೆ ನಡೆಸಿ ಸುಮಾರು ೨೯೪೪ ಹಸ್ತಪ್ರತಿಗಳನ್ನು (ಮೈಸೂರು ರಾಜ್ಯ ಮತ್ತು ಕೊಡಗು ಮಾತ್ರ) ದಾಖಲಿಸಿರುವುದು ಕ್ಯಾಟಲಾಗಿನಲ್ಲಿ ಕಂಡು ಬರುತ್ತದೆ. ಬಹುಶಃ ಪುರಾತನ ಹಸ್ತಪ್ರತಿ ಸರ್ವೇಕ್ಷಣೆ ಇತಿಹಾಸದಲ್ಲಿ ಇದು ಮೊಟ್ಟ ಮೊದಲನೆಯ ಪ್ರಯತ್ನವಿರಬಹುದೆಂದು ಊಹಿಸಬಹುದು. ವೈವಿಧ್ಯಮಯವಾದ ಜ್ಞಾನ ಭಂಡಾರಗಳು ತಾಳೆ, ಶ್ರೀತಾಳೆ, (ಲೇಖಾಯಾನ-ತೆಂಗಿನ ಎಲೆ), ಭೂತಾಳೆ? (ಉಲ್ಲೇಖನದಲ್ಲಿದ್ದಂತೆ), ಕಾಗದಗಳಲ್ಲಿ, ದೇವನಾಗರಿ, ನಾಗರ, ಕನ್ನಡ, ತೆಲುಗು, ತಿಗಳಾರಿ ಅಥವಾ (ತುಳು), ಗ್ರಂಥ, ಹಳೆಗನ್ನಡ, ತಮಿಳು, ಮಹಾರಾಷ್ಟ್ರ ಲಿಪಿಗಳಲ್ಲಿರುವ ಕೃತಿಗಳ ಸೂಚಿಯನ್ನು ವೈಜ್ಞಾನಿಕವಾಗಿ ಶೋಧಿಸಿ ದಾಖಲಿಸಿದ್ದು ಅಪೂರ್ವವಾದುದು. ಇದಕ್ಕೆ ರಾಮರಾಯ ರೆಂಬುವರ ಸಹಾಯವನ್ನು ಪಡೆದುಕೊಂಡಿರುವುದನ್ನು ಉಲ್ಲೇಖಿಸಿದ್ದಾರೆ. ಈ ರಾಮರಾಯರ ಇತಿಹಾಸ ಶೋಧನೆ ಈಗ ಅಗತ್ಯ.

ಪ್ರಕೃತ ರೈಸ್‌ರವರ ಕ್ಯಾಟಲಾಗ್‌ನಲ್ಲಿ, ಅವರ ಸಮೀಕ್ಷೆಯಲ್ಲಿ ದಾಖಲಿಸಿದಂತೆ ಶೃಂಗೇರಿಯಲ್ಲಿರುವ

* ಕೆಳದಿ ವಸ್ತು ಸಂಗ್ರಹಾಲಯ ಮತ್ತು ಇತಿಹಾಸ ಸಂಶೋಧನಾಲಯ, (ಕುವೆಂಪು ವಿ.ವಿ.) ಕೆಳದಿ, ಸಾಗರ ತಾಲ್ಲೂಕು-೫೭೭೪೦೧.

(ಸ್ವಾತಂತ್ರ್ಯ ಪೂರ್ವದಲ್ಲಿಯೇ) ೬೪೪ ಹಸ್ತಪ್ರತಿಗಳ ಸೂಚಿಗಳನ್ನು ಮಾತ್ರ ನಿರೂಪಿಸಲಾಗಿದೆ. ಗ್ರಂಥ ಸಂಖ್ಯೆಗಳು ಹಾಗೂ ಹಸ್ತಪ್ರತಿ ಸಾಮಗ್ರಿ ಎಂದು ವಿಭಾಗಿಸಿಕೊಡಲಾಗಿದೆ. (ರೈಸ್‌ರವರೇ ವಿಂಗಡಿಸಿದಂತೆ) ಕ್ಯಾಟಲಾಗ್‌ನಲ್ಲಿ ಕಂಡಂತೆ ಗ್ರಂಥ ಸಂಖ್ಯೆಗಳು.

ವೇದ	೦೪೪	ತರ್ಕ	೨೭೪
ವೇದಾಂಗ	೦೦೩	ಮೀಮಾಂಸ	೦೫೩
ವೇದಲಕ್ಷಣ	೦೦೨	Rules for discussion	೦೦೧
ವೇದಾಂತ	೪೬೫	Against Tarkasastra Evidence	೦೦೩
ಆಗಮ	೦೧೨	ಯೋಗ	೦೨೫
ಉಪನಿಷತ್ತು	೦೫೩	ಧರ್ಮಶಾಸ್ತ್ರ	೩೦೨
ಶ್ರೌತ	೦೨೭	ಪುರಾಣ	೧೧೧
ಬ್ರಾಹ್ಮಣ	೦೦೬	ಇತಿಹಾಸ	೦೭೭
ಅಥರ್ವಣ ಭಾಷ್ಯ	೦೦೧	ಪ್ರಾಕೃತ ವ್ಯಾಕರಣ	೦೦೭
Ekadashi Fast	೦೦೧	ಛಂದಸ್ಸು	೦೧೦
Recitation of Pranava by Yathis	೦೦೧	ಜ್ಯೋತಿಷ	೦೯೯
ವ್ಯಾಕರಣ	೧೦೫	ಅಂಕಗಣಿತ	೦೦೬
ಮಾಹಾತ್ಮ್ಯ	೦೮೬	ಮಂತ್ರ	೦೩೪
Worship of Various Gods	೦೨೦	ಗಣಿತ	೦೦೧
Tantra Sara (On the constsruction of Hindu Pagodas images also on the worship of the latter	001	ಕಾವ್ಯ	೧೯೯
On the worship of the Tulasi plant	೦೦೧	ಚಂಪೂಕಾವ್ಯ	೦೬೧
Rituals	೦೦೩	ನಾಟಕ	೧೧೪
Funeral rights	೦೦೩	ಪ್ರಕರಣ	೦೦೪
Domistic rights	೦೧೮	ಪ್ರಹಸನ	೦೦೧
Gloss on various works	೨೬೯	ಅಲಂಕಾರ	೦೯೧
Praise of Gods and Goddesses	೦೩೩	ಕೋಶ	೦೨೬
The Glory of Devi and Shiva	೦೦೩	ಸಂಗೀತ	೦೦೨
Accounts of Various work	೦೧೯	ವೈದ್ಯಶಾಸ್ತ್ರ	೦೨೪
Explanationof Jaina Sutras	೦೦೧	ಶಿಲ್ಪಶಾಸ್ತ್ರ	೦೨೪
Shatkarmas	೦೦೧	ಭೂಗೋಳ	೦೦೮
Charity	೧	ಶಕುನಶಾಸ್ತ್ರ	೧
Yathidharma	೧	ಸ್ತೋತ್ರ	೪
Grihastha Dharma	೧	Koumudi Katha	೧
Virasaiva Doctrines	೩	Worship of Surya and Shakti	೩

Shaiva Religion	೪	Supremacy of Shiva	೭
Wearing of Linga	೧	Glory of Linga	೧
Virasaiva Religion	೨	Glory of Shiva	೧
Veterinery Science(Aswa Sastra)	೧	Practice of Sapta Mudra Dharma	೧
Against Practice of Mudra Dharma	೩	Kama Shastra (Erotics)	೧

ಹಸ್ತಪ್ರತಿಯ ಸಾಮಗ್ರಿಗಳು, ಸೂಚಿ ಸಂಖ್ಯೆ

ತಾಳೆ	೬೭೫	ಕಾಗದ	೬೧೮
ಶ್ರೀತಾಳೆ	೪೨೪	ಭೂತಾಳೆ	೦೦೧
ತಾಳೆ ಮತ್ತು ಶ್ರೀತಾಳೆ	೦೦೧	ಕಾಗದ ಮತ್ತು ತಾಳೆ	೦೦೩

ಕೃತಿ ಮಾಹಿತಿ, ಸಾಮಗ್ರಿ ಹಾಗೂ ಲಿಪಿಗಳಲ್ಲಿ ವಿಪುಲವಾಗಿ ಖಾಲಿ ಬಿಟ್ಟಿರುವುದು ಕಂಡು ಬರುತ್ತದೆ. ಪ್ರತಿ ೨೦,೨೧,೧೯೮,೧೯೯,೨೦೦,೨೦೧ ಅಸ್ಪಷ್ಟವಾಗಿವೆ.

ಹಸ್ತಪ್ರತಿ ಲಿಪಿ ಸೂಚಿ ಸಂಖ್ಯೆಗಳು

ದೇವನಾಗರಿ	೪೫೪	ದೇವನಾಗರಿ ಮತ್ತು ತೆಲುಗು	೦೦೧
ನಾಗರ	೫೮೬	ನಾಗರ ಮತ್ತು ತೆಲುಗು	೦೦೧
ಕನ್ನಡ	೧೭೧	ನಾಗರ ಮತ್ತು ದೇವನಾಗರಿ	೦೦೮
ತೆಲುಗು	೮೧೫	ತೆಲುಗು ಮತ್ತು ಗ್ರಂಥ	೦೦೪
ತಿಗಳಾರಿ ಅಥವಾ ತುಳು	೦೪೧	ಕನ್ನಡ ಮತ್ತು ನಾಗರ	೦೦೧
ಗ್ರಂಥ	೨೫೮	ತಮಿಳು	೦೦೨
ತೆಲುಗು/ನಾಗರ	೦೦೨	ಮಹಾರಾಷ್ಟ್ರ	೦೦೧
ಹಳೆಕನ್ನಡ	೦೭೭	On gender of works	೦೦೧

ಕ್ಯಾಟಲಾಗ್‌ನಲ್ಲಿ ಕಂಡಂತೆ ಮಠಗಳ ಸರ್ವೇಕ್ಷಣೆ

೧	ಶೃಂಗೇರಿ ಮಠ	೯	ರಾಮಬ್ರಹ್ಮಾನಂದ ಸರಸ್ವತೀ ಮಠ
೨	ಉತ್ತರಾದಿ ಮಠ	೧೦	ತೀರ್ಥಮುತ್ತೂರು ಮಠ
೩	ಕೂಡ್ಲಿ ಮಠ	೧೧	ಅಕ್ಷೋಭ್ಯತೀರ್ಥ ಮಠ
೪	ರಾಮಚಂದ್ರ ಸರಸ್ವತಿ ಮಠ	೧೨	ಮುರಗೀ ಮಠ, ಚಿತ್ರದುರ್ಗ.
೫	ಭೀಮನಕಟ್ಟೆ ಮಠ	೧೩	ಉಪನಿಷದ್ ಬ್ರಹ್ಮೇಂದ್ರ ಮಠ
೬	ಶ್ರವಣಬೆಳಗೊಳ ಜೈನ ಮಠ	೧೪	ಜಂಗಮ ಮಠ, ಮಳಲಿ.
೭	ಬಾಳೇಹೊನ್ನೂರು ಮಠ	೧೫	ಸರಸ್ವತೀ ಭಂಡಾರ, ಮೇಲ್ಕೋಟೆ
೮	ಬೊಮ್ಮರಸಯ್ಯನ ಅಗ್ರಹಾರ		

ಉಪಸಂಹಾರ

ರೈಸರ ಪ್ರಯತ್ನವು ಹಸ್ತಪ್ರತಿ ಸಂಗ್ರಹದ ಇತಿಹಾಸದಲ್ಲಿ ಅಮೂಲ್ಯವಾದುದು. ಆದರೆ ಅವರೊಂದಿಗೆ ಸಮರ್ಥವಾಗಿ ಕ್ಯಾಟಲಾಗ್ ಸಿದ್ಧಪಡಿಸುವ ತಜ್ಞರ ಅಲಭ್ಯತೆಯು ಎದ್ದು ಕಾಣುತ್ತದೆ. ಇದನ್ನು ಪೀಠಿಕೆಯಲ್ಲಿಯೂ ಗಮನಿಸಬಹುದಾಗಿದೆ. ಪೀಠಿಕೆಯಲ್ಲಿಯೇ ಪ್ರತಿಪಾದಿಸಿರುವಂತೆ ಅನೇಕ ಅಡೆತಡೆಗಳಲ್ಲಿಯೂ ಪಟ್ಟು ಬಿಡದೇ ಭಾರತದ ಸಾಂಸ್ಕೃತಿಕ ಜ್ಞಾನ ಭಂಡಾರಗಳನ್ನು ಪರಿಚಯಿಸುವಲ್ಲಿ ವಿದೇಶೀ ವಿದ್ವಾಂಸರ ಈ ಕೃತಿ (Catalogue) ಅಪ್ರಕಟಿತ ಹಸ್ತಪ್ರತಿ ಪ್ರಕಟಣೆ ಆದಿಯಾಗಿ ಅಧ್ಯಯನಾರ್ಥಿಗಳಿಗೆ ಅಮೂಲ್ಯ ಜ್ಞಾನ ಸಂಪತ್ತಾಗಿ ಉಳಿದಂತಾಗಿದೆ ಎಂದರೆ ಅತಿಶಯೋಕ್ತಿಯಾಗಲಾರದು.

೧೦೩

ನಿಜಾಮನ ಕಾಲದ ಹೈದ್ರಾಬಾದ ಕರ್ನಾಟಕದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳು

ಗುರುಪ್ರಕಾಶ ಹೂಗಾರ*

ಬಹಮನಿ ರಾಜ್ಯ ಐದು ಶಾಹಿ ರಾಜ್ಯಗಳಲ್ಲಿ ವಿಭಜನೆ ಹೊಂದಿದ ನಂತರ ಈ ಪ್ರದೇಶಗಳು ಹರಿದು ಹಂಚಿ ಹೋದವು. ಇದೇ ವೇಳೆ ಮೊಗಲರು ದಕ್ಷಿಣ ಭಾರತದ ಮೇಲೆ ದಾಳಿ ನಡೆಸಿದರು. ಮೊಗಲ ಅರಸನಾದ ಔರಂಗಜೇಬನು ಈ ಪ್ರದೇಶಗಳನ್ನು ವಶಪಡಿಸಿಕೊಂಡು ತನ್ನ ಸಾಮ್ರಾಜ್ಯಕ್ಕೆ ಸೇರಿಸಿಕೊಂಡನು. ಈ ದಕ್ಷಿಣ ಪ್ರಾಂತ್ಯದ ಆಡಳಿತ ನೋಡಿಕೊಳ್ಳಲು ಮೀರ್ ಖಮರುದ್ದಿನ್-ಚಿನ್-ಖಲಿಚ್-ಖಾನನನ್ನು ಸುಬೇಧಾರ ನನ್ನಾಗಿ ನೇಮಿಸಿದನು.

ಔರಂಗಜೇಬನ ಮರಣದ ನಂತರ ಬಂದ ಮೊಗಲ ಸಾಮ್ರಾಟ ಮಹಮ್ಮದ ಶಾಹನು ಖಿಲಿಚಖಾನನಿಗೆ "ಆಸಫ ಜಹಾ" ಎಂಬ ಬಿರುದನ್ನು ನೀಡಿದನು. ಮುಂದೆ ಈತನ ವಂಶಜರು " ಆಸಫ ಜಾಹಿ" ಗಳೆಂದು ಪ್ರಸಿದ್ದಿ ಪಡೆದರು. ಇದೇ ವೇಳೆ ಮೊಗಲ ಸಾಮ್ರಾಜ್ಯ ಶಿಥಿಲಗೊಂಡಿದ್ದನ್ನು ಗಮನಿಸಿದ ಈತನು ೧೭೨೪ ರಲ್ಲಿ ಹೈದ್ರಾಬಾದನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ಸ್ವತಂತ್ರ ಆಳ್ವಿಕೆಯನ್ನು ಪ್ರಾರಂಭಿಸಿದನು. ಇದರ ನೆನಪಿಗಾಗಿ "ನಿಜಾಮ-ಉಲ್-ಮುಲ್ಕ" ಎಂಬ ಬಿರುದನ್ನು ಧರಿಸಿದನು. ೧೭೯೬ ರಲ್ಲಿ ಬ್ರಿಟಿಷರು ಮತ್ತು ನಿಜಾಮನ ಮಧ್ಯ ಉಂಟಾದ ಒಪ್ಪಂದದ ಪ್ರಕಾರ ಇಂದು ಹೈದ್ರಾಬಾದ ಕರ್ನಾಟಕ ಎಂದು ಕರೆಯುವ ಬೀದರ, ಗುಲಬರ್ಗಾ, ರಾಯಚೂರು ಜಿಲ್ಲೆಗಳನ್ನು ಬ್ರಿಟಿಷರು ನಿಜಾಮನಿಗೆ ಕಾಣಿಕೆಯಾಗಿ ನೀಡಿದರು. ಹೀಗೆ ಈ ಪ್ರದೇಶವು ೧೭೯೬ ರಿಂದ ೧೯೪೮ ರ ಸೆಪ್ಟೆಂಬರ್ ೧೭ರ ವರೆಗೆ ಏಳು ಜನ ನಿಜಾಮ ಅರಸರ ಆಳ್ವಿಕೆಗೆ ಒಳಪಟ್ಟಿತ್ತು.

ಹೈದ್ರಾಬಾದ ಕರ್ನಾಟಕದ ಶೈಕ್ಷಣಿಕ ಹಿನ್ನೆಲೆಯನ್ನು ಗಮನಿಸಿದಾಗ ಪ್ರಾಚೀನ ಕಾಲದಿಂದಲೂ ಶ್ರೇಷ್ಠ ಪರಂಪರೆ ಹೊಂದಿದ ನಾಡು ಇದಾಗಿತ್ತು. ಕನ್ನಡದ ಪ್ರಥಮ ಉಪಲಬ್ದ ಗದ್ಯಕೃತಿ "ಕವಿರಾಜ ಮಾರ್ಗ" ಇಲ್ಲಿಯೆ ರಚನೆಯಾಗಿದೆ. ಹಿಂದೆ ಈ ಭಾಗದಲ್ಲಿ ಅನೇಕ ಬ್ರಹ್ಮಪುರಿಗಳು, ಘಟಿಕಸ್ಥಾನಗಳು ಅಸ್ಥಿತ್ವದಲ್ಲಿದ್ದವೆಂದು ಶಾಸನಗಳಿಂದ ತಿಳಿದು ಬರುತ್ತದೆ. ಚಿತ್ತಾಪುರ ತಾಲ್ಲೂಕಿನ "ನಾಗಾವಿ" ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯರು, ಮತ್ತು ಹೈಹೆಯರ ಕಾಲದ ಪ್ರಸಿದ್ದ ಶಿಕ್ಷಣ ಕೇಂದ್ರವಾಗಿತ್ತು. ಇಲ್ಲಿ ೨೦೦ ವೇದಾಧ್ಯಯಿಗಳಿಗೆ, ೫೦ ವಿದ್ಯಾರ್ಥಿಗಳು, ಮತ್ತು ೬ ಜನ ಶಿಕ್ಷಕರಿಗೆ ಒಟ್ಟು ೨೫೬ ಜನರಿಗೆ ಉಚಿತ ಊಟ ಮತ್ತು ವಸತಿ ವ್ಯವಸ್ಥೆಯನ್ನು ಮಾಡಲಾಗಿತ್ತು ಎಂಬುದು ಕ್ರಿ.ಶ. ೯೯೫ರ ಹೈಹಯ ಮನೆತನದ ಶಾಸನದಿಂದ ತಿಳಿದುಬರುತ್ತದೆ. ಇದರ ಜೊತೆಗೆ ಕಾಳಗಿ, ಹಲಕರಟಿ, ಸನ್ನತಿ, ನರೋಣ, ನಿಂಬರಗಾ, ಮಾಶಾಳಾ, ಗಂವಾರ, ಏವೂರು, ಹರಸೂರು, ಮುದನೂರು, ಗೊಟ್ಟೂರು ಮುಂತಾದ ಅನೇಕ ಗ್ರಾಮಗಳು ಶಿಕ್ಷಣ ನೀಡುವ ಕಾರ್ಯವನ್ನು ಮಾಡುತ್ತಿದ್ದವು. ಕಲ್ಯಾಣದಲ್ಲಿ ನಡೆದ ಕ್ರಾಂತಿಯ ನಂತರ ವೀರಶೈವ ಮಠಗಳೂ ಶಿಕ್ಷಣ ನೀಡುವ ಪರಂಪರೆಯನ್ನು ಮುಂದುವರೆಸಿದವು. ಬಹಮನಿಯರ ಕಾಲಾವಧಿಯಲ್ಲಿ ಇಸ್ಲಾಂ ಮಾದರಿಯ ಶಿಕ್ಷಣ ಸಂಸ್ಥೆಗಳು ಪ್ರಾರಂಭಗೊಂಡವು. ಮಸೀದಿ, ಮಕ್ತಾಬಗಳಲ್ಲಿ ಪ್ರಾಥಮಿಕ ಶಿಕ್ಷಣವನ್ನು ನೀಡಲಾಗುತಿತ್ತು. ಶಿಕ್ಷಣ ಪ್ರೇಮಿಯಾಗಿದ್ದ ಮಹಮ್ಮದ ಗವಾನನು ೧೪೭೧ರಲ್ಲಿ ಬೀದರನಲ್ಲಿ "ಮಹಮ್ಮದ ಗವಾನ ಏ ಮದ್ರಾಸ" ವನ್ನು ನಿರ್ಮಿಸಿದನು. ಇದು ದಕ್ಷಿಣ ಭಾರತದ ಪ್ರಸಿದ್ಧ ಮಹಾವಿದ್ಯಾಲಯವಾಗಿತ್ತು. ಹೀಗೆ ಹೈದ್ರಾಬಾದ ಕರ್ನಾಟಕ ಪ್ರದೇಶವು ಒಳ್ಳೆಯ ಶೈಕ್ಷಣಿಕ ಪರಂಪರೆ ಹೊಂದಿತ್ತು.

೧೭೨೪ರಲ್ಲಿ ನಿಜಾಮ-ಉಲ್-ಮುಲ್ಕ್‌ನಿಂದ ಆರಂಭವಾದ ಆಸಫಜಾಹಿಗಳ ಆಡಳಿತ ಹಿಂದಿನ ಆಡಳಿತ ಪದ್ದತಿಯನ್ನು ಮುಂದುವರೆಸಿಕೊಂಡು ಬಂದಿತು. ಮರಾಠರು ಮತ್ತು ಹೈದರಾಲಿಯ ದಾಳಿಗಳಿಂದ ತನ್ನ ರಾಜ್ಯವನ್ನು ರಕ್ಷಿಸಿಕೊಳ್ಳಲು ೧೭೯೮ರಲ್ಲಿ ಆಂಗ್ಲರೊಂದಿಗೆ ಒಪ್ಪಂದ ಮಾಡಿಕೊಳ್ಳುವ ಮೂಲಕ ಸಹಾಯಕ ಸೈನ್ಯ ಪದ್ಧತಿಯನ್ನು ಸ್ವೀಕರಿಸಿದನು. ಇದರಿಂದ ಆಂಗ್ಲರ ರಾಜ್ಯಗಳಲ್ಲಾಗುತ್ತಿದ್ದ ಬದಲಾವಣೆಗಳು ಈತನ ರಾಜ್ಯದ ಮೇಲೂ ಪ್ರಭಾವ ಬೀರುತ್ತಿದ್ದವು.

* ಇತಿಹಾಸ ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಜೇವರ್ಗಿ, ಗುಲ್ಬರ್ಗಾ ಜಿಲ್ಲೆ-೫೮೫೧೦೩.

೧೮೫೪ರ ಚಾರ್ಟ ಕಾಯಿದೆ ಭಾರತದಲ್ಲಿ ಸಾರ್ವಜನಿಕ ಶಿಕ್ಷಣ ನೀಡಲು ಅವಕಾಶ ಮಾಡಿಕೊಟ್ಟಿತು. ೧೮೩೫ರಲ್ಲಿ ವಿಲಿಯಮ ಬೆಂಟಿಂಕನ ಕಾಲಾವಧಿಯಲ್ಲಿ ಪಾಶ್ಚಿಮಾತ್ಯ ಮಾದರಿಯ ಶಿಕ್ಷಣ ಪದ್ಧತಿಯ ಬೆಳವಣಿಗೆಗೆ ಅವಕಾಶ ಮಾಡಿಕೊಟ್ಟನು. ಇದರಿಂದ ಭಾರತದ ಮುಂಬೈ, ಮದ್ರಾಸ್, ಮತ್ತು ಬಂಗಾಲ ರಾಜ್ಯಗಳಲ್ಲಿ ಆಂಗ್ಲ ಮಾದರಿಯ ಆಧುನಿಕ ಶಿಕ್ಷಣ ವ್ಯವಸ್ಥೆಯನ್ನು ಜಾರಿಗೊಳಿಸಲಾಯಿತು. ನಿಜಾಮ ಸರಕಾರವು ಆಂಗ್ಲರ ಮಿತ್ರ ರಾಜ್ಯವಾಗಿದ್ದರಿಂದ ಹೈದ್ರಾಬಾದ ರಾಜ್ಯದಲ್ಲಿ ಹೊಸ ಮಾದರಿಯ ಶಿಕ್ಷಣ ನೀಡಲು ಅನುಮತಿಸಿದನು. ನಿಜಾಮನ ಪ್ರಧಾನಿಯಾದ ಸರ್ ಸಾಲರ ಜಂಗ ರಾಜ್ಯದ ಪ್ರತಿಯೊಂದು ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ ಸರಕಾರಿ ಶಾಲೆಗಳನ್ನು ತೆರೆಸಿದನು. ಇಲ್ಲಿ ಉರ್ದು ಮತ್ತು ಇಂಗ್ಲೀಷ ಮಾಧ್ಯಮದಲ್ಲಿ ಕಲಿಸುತ್ತಿದ್ದರು. ಶ್ರೀಮಂತರು, ಉನ್ನತ ಮಧ್ಯಮ ವರ್ಗದವರ ಮಕ್ಕಳು ಈ ಶಾಲೆಗಳಲ್ಲಿ ಶಿಕ್ಷಣ ಪಡೆಯುತ್ತಿದ್ದರು. ಸರಕಾರವೆ ಎಲ್ಲರಿಗೂ ಶಿಕ್ಷಣ ನೀಡುವುದು ಅಸಾಧ್ಯದ ಮಾತಾಗಿತ್ತು. ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಸರಕಾರ ಪ್ರೋತ್ಸಾಹ ನೀಡಿದ್ದರೆ ಜನಸಾಮಾನ್ಯ ರಿಗೂ ಶಿಕ್ಷಣ ನೀಡಬಹುದಾಗಿತ್ತು. ಆದರೆ ನಿಜಾಮ ಸರಕಾರ ಶಿಕ್ಷಣದ ಅಭಿವೃದ್ಧಿಯ ಕಡೆಗೆ ಹೆಚ್ಚಿನ ಗಮನ ನೀಡಲಿಲ್ಲ. ಇಂತಹ ಪರಿಸ್ಥಿತಿಯಲ್ಲಿಯೂ ಕೆಲವು ಕ್ರೈಸ್ತ ಮಿಶನರಿಗಳು ಈ ಭಾಗದಲ್ಲಿ ಮೊದಲು ಪಾಶ್ಚಿಮಾತ್ಯ ಮಾದರಿಯ ಶಾಲೆಗಳನ್ನು ಸ್ಥಾಪಿಸಿದವು. ಇಲ್ಲಿನ ಶೈಕ್ಷಣಿಕ ಅಭ್ಯುದಯಕ್ಕೆ ಈ ಸಂಸ್ಥೆಗಳು ನೀಡಿದ ಕೊಡುಗೆ ಮಹತ್ವದ್ದಾಗಿದೆ.

೧೮೮೭ರಲ್ಲಿ ಸೆಂಟ ಅಣ್ಣಾ ಸಹೋದರಿಯರು ಮುಂದಾಳತ್ವದಲ್ಲಿ "ಸೆಂಟ ಮೇರಿಸ್ ಕಾನ್ವೆಂಟ್ ಶಾಲೆ" ಯನ್ನು ರಾಯಚೂರಿನ ರೈಲ್ವೆ ನಿಲ್ದಾಣದ ಬಳಿ ಪ್ರಾರಂಭಿಸ ಲಾಯಿತು. ಇದು ಹೈದ್ರಾಬಾದ ಕರ್ನಾಟಕದ ಪ್ರಥಮ ಆಂಗ್ಲ ಮಾದರಿಯ ಶಾಲೆಯಾಗಿದೆ. ಆರಂಭದಲ್ಲಿ ಏಳು ವಿದ್ಯಾರ್ಥಿಗಳಿಂದ ಪ್ರಾರಂಭವಾದ ಮಾಧ್ಯಮಿಕ ಶಾಲೆ ಇದಾಗಿತ್ತು. ಇಂಗ್ಲೀಷ್ ಮತ್ತು ಕನ್ನಡ ಮಾಧ್ಯಮದಲ್ಲಿ ಕಲಿಸಲಾಗುತಿತ್ತು. ಇಂದು ರಾಯಚೂರು ಜಿಲ್ಲೆಯ ಒಂದು ಪ್ರತಿಷ್ಠಿತ ವಿದ್ಯಾಸಂಸ್ಥೆಯಾಗಿದೆ. ಮುಂದೆ ೧೮೯೦ ರಲ್ಲಿ ಓರನಸ್ ಬರ್ಗರ್ ಎಂಬುವವರಿಂದ ಗುಲಬರ್ಗಾದ ಐವಾನ–ಶಾಹಿ ರಸ್ತೆಯಲ್ಲಿ "ವಿಜಯ ವಿದ್ಯಾಲಯ" ಎಂಬ ಪ್ರಾಥಮಿಕ ಶಾಲೆಯನ್ನು ಸ್ಥಾಪಿಸಿದರು. ಈ ಶಾಲೆ ೧೩ ವಿದ್ಯಾರ್ಥಿಗಳು, ಇಬ್ಬರು ಶಿಕ್ಷಕರೊಂದಿಗೆ ಪ್ರಾರಂಭಗೊಂಡಿತು. ಮೊದಲು ಇಲ್ಲಿ ಬಾಲಕ, ಬಾಲಕಿಯರಿಗೆ ಶಿಕ್ಷಣ ನೀಡಲಾಗುತಿತ್ತು. ೧೮೯೮ ರಲ್ಲಿ ಇಲ್ಲಿನ ೨೦ ಗಂಡು ಮಕ್ಕಳನ್ನು ರಾಯಚೂರು ಶಾಲೆಗೆ ವರ್ಗಾಯಿಸಲಾಯಿತು. ಇದರಿಂದ ೨೫ ಬಾಲಕಿಯರು ಮಾತ್ರ ಈ ಶಾಲೆಯಲ್ಲಿ ಉಳಿದಿದ್ದರಿಂದ ಇದು ಈ ಭಾಗದ ಪ್ರಥಮ ಕನ್ಯಾ ಶಾಲೆಯಾಯಿತು. ಮುಂದೆ ೧೯೦೭ ರಲ್ಲಿ ಇಲ್ಲಿನ ಪಾದ್ರಿಗಳು ಕನ್ನಡ ಮಾಧ್ಯಮದಲ್ಲಿ ಬೋಧನೆ ಪ್ರಾರಂಭಿಸಿದರು. ೧೯೩೦ರಲ್ಲಿ ಮಾಧ್ಯಮಿಕ ಶಾಲೆಯಾಗಿಯೂ ೧೯೪೦ ರಲ್ಲಿ ಪ್ರೌಢಶಾಲೆಯಾಯಿತು. ಈ ಭಾಗದ ಜನರಿಗೆ ಶಿಕ್ಷಣ ನೀಡುವಲ್ಲಿ ಈ ಶಾಲೆ ವಹಿಸಿದ ಪಾತ್ರ ಅತ್ಯಂತ ಮಹತ್ವದಾಗಿತ್ತು. ಇಂದಿಗೂ ಇದು ಗುಲಬರ್ಗಾದ ಅತ್ಯಂತ ಪ್ರತಿಷ್ಠಿತ ವಿದ್ಯಾ ಸಂಸ್ಥೆಯಾಗಿದೆ.

ಕ್ರಿ.ಶ. ೧೯೦೫ರ ವೇಳೆಗೆ ಭಾರತದಲ್ಲಿ ಸ್ವಾತಂತ್ರ್ಯ ಹೋರಾಟ ತೀವ್ರಗೊಂಡಿತು. ರಾಷ್ಟ್ರೀಯ ನಾಯಕರಾದ ಲಾಲಾ ಲಜಪತರಾವ್, ಬಾಲಗಂಗಾಧರ ತಿಲಕ, ಮತ್ತು ಬಿಪಿನ ಚಂದ್ರಪಾಲ ಪ್ರತಿಪಾದಿಸಿದ ಸ್ವದೇಶಿ ಚಳವಳಿ ವಿದೇಶಿ ವಸ್ತುಗಳ ಬಹಿಷ್ಕಾರ, ರಾಷ್ಟ್ರೀಯ ಶಿಕ್ಷಣ ಮುಂತಾದ ವಿಚಾರಗಳ ಪ್ರಭಾವದಿಂದ ಕರ್ನಾಟದಲ್ಲಿ ಸ್ವದೇಶಿ ಚಳುವಳಿ ತೀವ್ರಗೊಂಡಿತು. ತಿಲಕರ ರಾಷ್ಟ್ರೀಯ ಶಿಕ್ಷಣ ನೀತಿಯಿಂದ ಪ್ರೇರಿತರಾದ ಕರ್ನಾಟಕದ ಅನೇಕ ನಾಯಕರಾದ ಹರ್ಡೇಕರ ಮಂಜಪ್ಪ, ಆಲೂರು ವೆಂಕಟರಾವ, ಮುದುವಿಡು ಕೃಷ್ಣರಾವ್, ಸಕ್ಕರಿ ಬಾಲಾಚಾರ್ಯ ವಿವಿಧ ಭಾಗಗಳಲ್ಲಿ ಸಂಚರಿಸಿ ರಾಷ್ಟ್ರೀಯ ಶಾಲೆಗಳ ಸ್ಥಾಪನೆಯ ಮಹತ್ವವನ್ನು ಕುರಿತು ಜನರಲ್ಲಿ ಜಾಗೃತಿ ಮೂಡಿಸಿದರು. ಈ ಜನಜಾಗೃತಿಯ ಫಲವಾಗಿ ಹೈದ್ರಾಬಾದ ಕರ್ನಾಟಕದ ಜಿಲ್ಲೆಗಳಲ್ಲಿ ರಾಷ್ಟ್ರೀಯ ಶಾಲೆಗಳು ಸ್ಥಾಪನೆಯಾದವು. ಆದರೆ ನಿಜಾಮ ಸರಕಾರವು ಈ ಶಾಲೆಗಳ ಮೇಲೆ ಅನೇಕ ನಿರ್ಬಂಧಗಳನ್ನು ವಿಧಿಸಿತ್ತು. ಅವು ಈ ಕೆಳಗಿನಂತಿವೆ.

೧. ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ಆರಂಭಿಸುವ ಮುನ್ನ ಸರಕಾರದಿಂದ ಅನುಮತಿ ಪಡೆಯುವುದು.
೨. ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವ ಉದ್ದೇಶಗಳನ್ನು ಸರಕಾರಕ್ಕೆ ಸ್ಪಷ್ಟವಾಗಿ ತಿಳಿಸುವುದು.
೩. ಸರಕಾರದಿಂದ ನಿಗದಿಪಡಿಸಿದ ಪಠ್ಯಕ್ರಮವನ್ನು ಬೋಧಿಸುವುದು. ಮತ್ತು ಅದರಲ್ಲಿ ಧಾರ್ಮಿಕ ವಿಷಯ ಗಳನ್ನು ಕಲಿಸಬಾರದು.
೪. ಶಾಲೆಯಲ್ಲಿ ನೇಮಿಸಿಕೊಂಡ ಶಿಕ್ಷಕರ ನೇಮಕ ಮತ್ತು ಅವರ ವಿದ್ಯಾರ್ಹತೆಯನ್ನು ಕುರಿತು ಸರಕಾರಕ್ಕೆ ಮಾಹಿತಿ ನೀಡುವುದು.
೫. ಸರಕಾರದ ಮುಖ್ಯಸ್ಥನಾದ ನಿಜಾಮನಿಗೆ ವಿಧೇಯತೆ ಹೊಂದಿರುವುದು.
೬ ಪ್ರತೀ ವರ್ಷ ಸರಕಾರಕ್ಕೆ ಸಂಸ್ಥೆಯ ಚಟುವಟಿಕೆಗಳ ಸಮಗ್ರ ವಿವರಗಳನ್ನು ಸಲ್ಲಿಸುವುದು.

೭. ಯಾವುದೇ ಶಿಕ್ಷಣ ಸಂಸ್ಥೆ ಸರಕಾರದ ವಿರುದ್ಧವಾಗಿ ನಡೆದುಕೊಂಡರೆ ಆ ಸಂಸ್ಥೆಯ ಮಾನ್ಯತೆಯನ್ನು ರದ್ದುಪಡಿಸುವುದು.

೮. ಸರಕಾರದ ನೀತಿ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು.

ಈ ರೀತಿ ಸರಕಾರದ ಅನೇಕ ಅಡೆತಡೆಗಳ ನಡುವೆಯೂ ಅನೇಕ ಖಾಸಗಿ ಶಿಕ್ಷಣ ಸಂಸ್ಥೆಗಳು ಪ್ರಾರಂಭ ಗೊಂಡವು. ಈ ಶಾಲೆಗಳ ಸ್ಥಾಪನೆಯ ಉದ್ದೇಶಗಳು ಈ ಕೆಳಗಿನಂತಿದ್ದವು.

೧. ಪ್ರಾಚೀನ ಗುರುಕುಲ ಮಾದರಿಯ ಶಿಕ್ಷಣ ನೀಡುವುದು.

೨. ವಿದ್ಯಾರ್ಥಿಗಳಲ್ಲಿ ಧಾರ್ಮಿಕ ಭಾವೈಕ್ಯತೆ, ಮತ್ತು ರಾಷ್ಟ್ರೀಯ ಭಾವನೆಗಳನ್ನು ಬೆಳೆಸುವುದು.

೩. ವಿದ್ಯಾರ್ಥಿಗಳಿಗೆ ಕನ್ನಡ, ಸಂಸ್ಕೃತ, ಹಿಂದಿ, ಇಂಗ್ಲೀಷ್ ಭಾಷೆಗಳಲ್ಲಿ ಶಿಕ್ಷಣ ನೀಡುವುದು.

೪. ವಿದ್ಯಾರ್ಥಿಗಳು ಸ್ವತಂತ್ರವಾಗಿ ಸ್ವಾವಲಂಬನೆಯಿಂದ ಬದಕಲು ಪ್ರೇರೇಪಿಸುವುದು.

೫. ವಿದ್ಯಾರ್ಥಿಗಳ ಮಾನಸಿಕ, ಬೌದ್ಧಿಕ, ಮತ್ತು ದೈಹಿಕ ಮನೋಬಲವನ್ನು ಹೆಚ್ಚಿಸುವುದು.

೬. ವಿದ್ಯಾರ್ಥಿಗಳು ಸ್ವತಂತ್ರವಾಗಿ ಕೃಷಿ, ವ್ಯಾಪಾರ, ಮತ್ತು ಗೃಹ ಕೈಗಾರಿಕೆಗಳನ್ನು ನಡೆಸಲು ಸಶಕ್ತರನ್ನಾಗಿಸುವುದು.

ತತ್ಪರಿಣಾಮವಾಗಿ ಹೈದ್ರಾಬಾದ ಕರ್ನಾಟಕದ ಅನೇಕ ಕಡೆಗಳಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳು ಪ್ರಾರಂಭವಾದವು. ಕರ್ನಾಟಕ ಸ್ವಾತಂತ್ರ ಚಳವಳಿ, ವಿಶೇಷವಾಗಿ ಹೈದ್ರಾಬಾದ ಕರ್ನಾಟಕದ ವಿಮೋಚನಾ ಹೋರಾಟದಲ್ಲಿ ಈ ಸಂಸ್ಥೆಗಳು ವಹಿಸಿದ ಪಾತ್ರ ಅತ್ಯಂತ ಮಹತ್ವದ್ದಾಗಿತ್ತು. ಅವುಗಳ ವಿವರ ಇಂತಿದೆ.

ಮೂಲತಃ ಮಹಾರಾಷ್ಟ್ರದವರಾಗಿದ್ದ ವಿಠ್ಠಲರಾವ ದೇವಗಾಂವಕರವರು ರಾಷ್ಟ್ರೀಯ ಸೇವೆಯನ್ನು ಮಾಡಲು, ವಿದ್ಯಾರ್ಥಿಗಳಲ್ಲಿ ರಾಷ್ಟ್ರೀಯತೆಯನ್ನು ಮೂಡಿಸಲು ೧೯೦೭ ರಲ್ಲಿ **"ನೂತನ ವಿದ್ಯಾಲಯ"** ಶಾಲೆಯನ್ನು ಸ್ಥಾಪಿಸಿದರು. ಇದನ್ನು ಮೊದಲು ಬ್ರಹ್ಮಪುರದ ಶಹಾಬಾದಕರರ ನಿವಾಸದಲ್ಲಿ ಆರಂಭಿಸಲಾಯಿತು. ಗೋವಿಂದರಾವ, ಗಿರಿರಾವ, ಅಣ್ಣಾಘಾಟಗೆಯವರು ಈ ಶಾಲೆಯ ಸ್ಥಾಪನೆಯ ಸಂದರ್ಭ ದಲ್ಲಿ ಉಪಸ್ಥಿತರಿದ್ದರು. ಏಳು ಜನ ವಿದ್ಯಾರ್ಥಿಗಳೊಂದಿಗೆ ಆರಂಭವಾದ ಶಾಲೆಯಲ್ಲಿ ಭವಾನಿಸಿಂಗ ಶಿಕ್ಷಕರಾಗಿದ್ದರು, ತ್ರಿಯಂಭಕರಾವ ಈ ಶಾಲೆಯ ಪ್ರಥಮ ಮುಖ್ಯೋಪಧ್ಯಾಯ ರಾಗಿದ್ದರು. ಶಾಲೆಯ ಶಿಕ್ಷಕರು ಅತ್ಯಂತ ಕಟ್ಟುನಿಟ್ಟಾಗಿದ್ದರು, ವಿದ್ಯಾರ್ಥಿಗಳಿಗೆ ಮಾದರಿಯಾಗಿದ್ದರು. ವಿದ್ಯಾರ್ಥಿಗಳಿಗೆ ಸ್ವರಾಜ್ಯ, ಸ್ವದೇಶಿ, ಸ್ವಾತಂತ್ರ್ಯದ ವಿಚಾರಗಳನ್ನು ಬೋಧಿಸು ತ್ತಿದ್ದರು. ಶಾಲೆಯಲ್ಲಿ 'ವಂದೇ ಮಾತರಂ', ಮತ್ತು ವಲ್ಲಭ ಎಮ್ ತಟ್ಟಿಯವರು ಬರೆದ 'ಮಾತೃಭೂಮಿ ಜನನಿ ನಿನ್ನ' ಎಂಬ ಪ್ರಾರ್ಥನೆ ಗೀತೆಗಳನ್ನು ಹಾಡಲಾಗುತ್ತಿತು. ಈ ಶಾಲೆಯ ಚಟುವಟಿಕೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದ ಸರಕಾರ ಈ ಶಾಲೆಯ ತಪಾಸಣೆಗಾಗಿ ವೀಕ್ಷಕರನ್ನು ಕಳುಹಿಸುತ್ತಿತು. ಈ ಶಾಲೆಯನ್ನು ಸಂದರ್ಶಿಸಿದ ಮುಸ್ಲಿಂ ವೀಕ್ಷಕರು ಸರಕಾರಕ್ಕೆ, ಈ ಶಾಲೆಯು ಇರುವ ಸ್ಥಳ ಸರಕಾರಿ ಶಾಲೆಗೆ ಬಹಳ ಹತ್ತಿರವಿದೆ, ಇಲ್ಲಿನ ವಿದ್ಯಾರ್ಥಿಗಳು ರಾಷ್ಟ್ರೀಯ ವಿಚಾರಗಳಿಂದ ಪ್ರಭಾವಿತರಾಗಿದ್ದಾರೆ. ಆಡಳಿತ ಮಂಡಳಿ ಸದಸ್ಯರು, ಶಿಕ್ಷಕರು ಸರಕಾರ ವಿರೋಧಿ ಚಳವಳಿಯಲ್ಲಿ ಪಾಲ್ಗೊಳ್ಳುತ್ತಾರೆ ಎಂದು ವರದಿ ನೀಡಿತು. ಸರಕಾರ ಈ ವರದಿಯನ್ನು ಜಾರಿಗೊಳಿಸ ಲಿಲ್ಲ.

ನೂತನ ವಿದ್ಯಾಲಯದ ಶಿಕ್ಷಕರಾದ ಶ್ರೀಕಂಠಯ್ಯ, ಕೃಷ್ಣರಾವ ಗೂಡೂರು, ಸದಾಶಿವರಾವ, ಸುಬಾಚಾರ್ಯ ಕೋಟಿ ಮುಂತಾದವರು ತಮ್ಮ ವೃತಿಯ ಜೊತೆಗೆ ಸರಕಾರದ ವಿರುದ್ದ ಸತ್ಯಾಗ್ರಹದಲ್ಲಿ ತೊಡಗಿದ್ದರಿಂದ ಇವರನ್ನು ಬಂಧಿಸಿ ಸೆರೆಮನೆಗೆ ತಳ್ಳಿತು. ನಿಜಾಮ ಸರಕಾರ ಈ ಶಾಲೆಯನ್ನು ಮುಚ್ಚಲು ಅನೇಕ ಸಲ ಪ್ರಯತ್ನಿಸಿತು. ಆದರೆ ಅದರಲ್ಲಿ ಯಶಸ್ವಿಯಾಗಲಿಲ್ಲ. ಒಂದು ಬಾರಿ ಕ್ರಿಶ್ಚಿಯನ ಅಧಿಕಾರಿಯನ್ನು ಈ ಶಾಲೆಯನ್ನು ತಪಾಸಣೆ ಮಾಡಲು ಕಳುಹಿಸಲಾಯಿತು. ಆತ ಈ ಶಾಲೆಗೆ ಭೇಟಿ ನೀಡಿದಾಗ ಇಲ್ಲಿನ ಶಾಲೆಯ ವಿದ್ಯಾರ್ಥಿಗಳ ಶಿಸ್ತು, ಸಮಯ ಪಾಲನೆ, ಶಿಕ್ಷಕರ ಜಾಣ್ಮೆ, ಕರ್ತವ್ಯತತ್ಪರತೆ, ಓಡಿಸಿದ್ದರಿಂದ ಶಾಲೆಯ ಪರವಾಗಿ ವರದಿ ಸಲ್ಲಿಸಿದನು. ಸರಕಾರದ ಈ ಎಲ್ಲಾ ನಿರ್ಬಂಧಗಳ ನಡುವೆಯೂ ಶಾಲೆಯಲ್ಲಿ ಗಣೇಶ ಚತುರ್ಥಿ, ದಸರಾ, ದೀಪಾವಳಿ ಮುಂತಾದ ಸಂದರ್ಭಗಳಲ್ಲಿ ಸರಸ್ವತಿ, ಗಣೇಶನ ಪೂಜೆಯನ್ನು ಮಾಡಲಾಗುತಿತ್ತು. ಇದೆ ವೇಳೆ ಶಾಲೆಗೆ ಹಳೆಯ ವಿದ್ಯಾರ್ಥಿಗಳನ್ನು, ಹಿರಿಯ ನಾಗರಿಕರನ್ನು ಆಮಂತ್ರಿಸ ಲಾಗುತಿತ್ತು. ೧೯೪೮ರ ವರೆಗೂ ನಿಜಾಮ ಸರಕಾರ ಈ ಶಾಲೆಗೆ ಯಾವುದೇ ಸಹಾಯ ಮಾಡದೇ ಇದ್ದರೂ ಜನರ ನಿರಂತರ ಬೆಂಬಲದಿಂದ ಇಂದಿಗೂ ಈ ಸಂಸ್ಥೆ ಗುಲ ಬರ್ಗಾದ ಅತ್ಯಂತ ಪ್ರಸಿದ್ಧ ಶಿಕ್ಷಣ ನೀಡುವ ಕೇಂದ್ರವಾಗಿದೆ.

ಗುಲಬರ್ಗಾದ ಪ್ರಸಿದ್ಧ ವಕೀಲರಾದ ವೆಂಕಟ ಕೃಷ್ಣಾರಾವರವರ ಅವಿರತ ಪ್ರಯತ್ನದ ಫಲವಾಗಿ ೧೯೧೧ ರಲ್ಲಿ ಗುಲಬರ್ಗಾ ಜಿಲ್ಲೆಯ ಚಿಂಚೋಳಿಯಲ್ಲಿ ಉಸ್ಮಾನಿಯಾ ಮಾಧ್ಯಮಿಕ ಶಾಲೆಯು ಆರಂಭವಾಯಿತು. ಈ ಶಾಲೆಯ ಸ್ಥಾಪನೆಯಲ್ಲಿ ಚನ್ನಮಲ್ಲಪ್ಪ ಕಲಬುರ್ಗಿ, ಸಿದ್ದಣ್ಣ ಕಲಬುರ್ಗಿ, ಭಿಮಶೆಟ್ಟಿ ಪಾಟೀಲ್‌ರ ಪಾತ್ರವು ಪ್ರಮುಖವಾಗಿತ್ತು. ಸರಸ್ವತಿ,

ಗಣೇಶ ಸ್ತೋತ್ರದೊಂದಿಗೆ, 'ಭಾರತಾಂಬೆಯಲ್ಲವೆ ನಮ್ಮ ಭೂಮಿ', 'ಕನ್ನಡಾಂಬೆ ನೀನು ಧನ್ಯ', ಮುಂತಾದ ಪ್ರಾರ್ಥನೆ, ನಾಡಗೀತೆ, ದೇಶಭಕ್ತಿ ಗೀತೆಗಳನ್ನು ಹಾಡಿಸುವುದರ ಮೂಲಕ ವಿದ್ಯಾರ್ಥಿಗಳಲ್ಲಿ ನಮ್ಮ ಸಂಸ್ಕೃತಿ, ಪರಂಪರೆಯ ಅರಿವು ಮತ್ತು ದೇಶಭಕ್ತಿ ಮೂಡಿಸುತ್ತಿದ್ದರು. ಶಾಲೆಯ ವಿಶೇಷ ಸಭೆ, ಸಮಾರಂಭಗಳಿಗೆ ವಿದ್ವಾಂಸರು, ಸಮಾಜ ಸುಧಾರಕರು, ರಾಜಕೀಯ ಚಳುವಳಿಗಾರರನ್ನು ಆಮಂತ್ರಿಸುತ್ತಿದ್ದರು. ಸ್ವಾಮಿ ರಮಾನಂದ ತೀರ್ಥ, ರಾಘವೇಂದ್ರರಾವ ದೇಸಾಯಿ, ವಿನಾಯಕರಾವ, ಜಗನ್ನಾಥರಾವ್ ಈ ಶಾಲೆಗೆ ಭೇಟಿ ನೀಡಿದ ಪ್ರಮುಖರಾಗಿದ್ದರು. ಬಿ.ಆರ್. ಶ್ರೀನಿವಾಸರಾವ್ ಈ ಶಾಲೆಯ ಮುಖ್ಯಗುರುಗಳಾಗಿದ್ದರು. ಇಂಗ್ಲೀಷ ಶಿಕ್ಷಣದ ಮಹತ್ವವನ್ನು ವಿದ್ಯಾರ್ಥಿಗಳಿಗೆ ತಿಳಿಸುವ ಕಾರ್ಯವನ್ನು ಮಾಡಿದರು. ಶ್ರೀ ಧರ್ಮಪಾಲ ದೇಶಮುಖರವರು ಈ ಶಾಲೆಗೆ ಆರಂಭದಲ್ಲಿ ೨೫ ರೂ., ನಂತರದಲ್ಲಿ ೫೦/– ರೂಪಾಯಿಗಳ ವಂತಿಗೆ ಯನ್ನು ಪ್ರತಿ ತಿಂಗಳು ನೀಡುತ್ತಿದ್ದರು. ಈ ರಾಜ್ಯದ ಮುಖ್ಯಮಂತ್ರಿಯಾಗಿದ್ದ ವಿರೇಂದ್ರ ಪಾಟೀಲ್, ಜಯತಿರ್ಥ ಪುರಾಣಿಕ, ಶ್ರೀನಿವಾಸಾಚಾರ್ಯ, ಪ್ರೇಮಾಚರ್ಯ ಈ ಶಾಲೆಯ ವಿದ್ಯಾರ್ಥಿಗಳಾಗಿದ್ದರು.

ಹೈದ್ರಾಬಾದ ಕರ್ನಾಟಕದ ರಾಷ್ಟ್ರೀಯ ಹೋರಾಟ ಗಾರರಾಗಿದ್ದ ಪಂಡಿತ ತಾರಾನಾಥರು ೧೯೨೦ರ ಯುಗಾದಿ ಯಂದು ರಾಯಚೂರಿನಲ್ಲಿ "ಮದರಸ–ಇ–ಹಮದರ್ದ್" ಎಂಬ ಮತ್ತೊಂದು ರಾಷ್ಟ್ರೀಯ ಶಾಲೆಯನ್ನು ಆರಂಭಿಸಿದರು. ೧ ರಿಂದ ೪ನೆಯ ತರಗತಿವರೆಗೆ ಅನುಮತಿ ನೀಡಲಾಗಿತ್ತು. ಇದನ್ನು ರಾಯಚೂರಿನ ಕೋಟೆ ಬಳಿಯ ನೌರಂಗ ಧರವಾಜದ ಬಳಿ ಸ್ಥಾಪಿಸಲಾಯಿತು. ನಂತರದಲ್ಲಿ ಮಾಧ್ಯಮಿಕ ಶಿಕ್ಷಣ ನೀಡಲು ಅನುಮತಿ ಪಡೆಯಲಾಯಿತು. ರಾಷ್ಟ್ರೀಯ ಜಾಗೃತಿ, ಯುವಕರಿಗೆ ಸಾವ್ವಲಂಬನೆ, ರಾಷ್ಟ್ರಕ್ಕಾಗಿ ಸತ್ಯ, ಪ್ರೇಮ ಗುಣ ಬೆಳೆಸಿಕೊಳ್ಳುವ ತರಬೇತಿ ಕೇಂದ್ರವಾಗಿತ್ತು. ಹಿಂದೂ–ಮುಸ್ಲಿಂರ ಐಕ್ಯತೆಯ ಕುರಿತು ಬೋಧಿಸಲಾಗುತ್ತಿತ್ತು. ಇಂದಿಗೂ ರಾಯಚೂರ ನಗರದ ಪ್ರತಿಷ್ಠಿತ ವಿದ್ಯಾಲಯ ವಾಗಿದೆ.

೧೯೨೨ರ ಜುಲೈ ೨೭ರಂದು ಶ್ರಾವಣ ಮಾಸದಲ್ಲಿ ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ಕೂಕನೂರಿನಲ್ಲಿ ವಿದ್ಯಾನಂದ ಗುರುಕುಲ ಶಾಲೆಯನ್ನು ಪ್ರಾರಂಭಿಸಲಾಯಿತು. ಈ ಶಾಲೆಯ ಸ್ಥಾಪನೆಯಲ್ಲಿ ಎಚ್. ರಾಮಸ್ವಾಮಿ, ಆರ್.ಬಿ. ದೇಸಾಯಿ ಪ್ರಮುಖ ಪಾತ್ರ ವಹಿಸಿದರು. ಈ ಶಾಲೆಯನ್ನು "ನಿಜಾಮ ಕರ್ನಾಟಕ ಪಾಠಶಾಲೆ" ಎನ್ನುತ್ತಿದ್ದರು. ಮೊದಲು ಇಲ್ಲಿನ ವಿದ್ಯಾರ್ಥಿಗಳು ದೂರದ ರಾಯಚೂರ ಅಥವಾ ಧಾರವಾಡಕ್ಕೆ ಹೋಗಬೇಕಿತ್ತು. ಮಹಾಮಾಯಿ ಎಂಬ ದೇವಾಲಯದಲ್ಲಿ ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದರು. ಹಿಂದಿ, ಕನ್ನಡ ಭಾಷೆಯಲ್ಲಿ ಭಾರತದ ಪರಂಪರೆ, ಗಾಂಧಿ ವಿಚಾರಗಳು, ಶಿಸ್ತು, ಸಂಯಮ, ಸ್ವಾವಲಂಬನೆ ಖಾದಿ ಬಳಕೆ, ಶ್ರಮದಾನ ಮುಂತಾದವುಗಳ ಕುರಿತು ತರಬೇತಿ ನೀಡುತ್ತಿದ್ದರು. ಈ ಶಾಲೆಯಲ್ಲಿ ಕಲಿತ ವಿದ್ಯಾರ್ಥಿಗಳು ಹೈದ್ರಾಬಾದ ಕರ್ನಾಟಕದ ವಿಮೋಚನಾ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಿದರು.

೧೯೩೭ರಲ್ಲಿ ಶಿರೂರು ವಿರಭದ್ರಪ್ಪನವರು ಆಡೂರಿನಲ್ಲಿ "ವಿಶ್ವನಾಥ ರಾಷ್ಟ್ರೀಯ ಶಾಲೆ" ಯನ್ನು ಸ್ಥಾಪಿಸಿದರು. ಇದು ಈ ಭಾಗದ ಮತ್ತೊಂದು ಪ್ರಮುಖ ಶಾಲೆಯಾಗಿದೆ. ಈ ಎಲ್ಲಾ ರಾಷ್ಟ್ರೀಯ ಶಾಲೆಗಳು ಹೈದ್ರಾಬಾದ ಸಂಸ್ಥಾನದ ವಿಮೋಚನಾ ಹೋರಾಟಕ್ಕೆ ಸಾವಿರಾರು ದೇಶಭಕ್ತರನ್ನು, ಸ್ವಯಂಸೇವಕರನ್ನು ನೀಡಿದವು. ಈ ಭಾಗದ ಪ್ರಮುಖ ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಸ್ವಾಮಿ ರಮಾನಂದ ತೀರ್ಥ, ಜನಾರ್ಧನರಾವ ದೇಸಾಯಿ, ಆರ್.ಜಿ. ಜೋಡಪ್ಪ, ವೀರೇಂದ್ರ ಪಾಟೀಲ್, ವಿ.ಪಿ. ದೇವುಲಗಾಂವಕರ ಮುಂತಾದವರು ಈ ಶಾಲೆಯ ಕೊಡುಗೆಗಳು ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ.

ಭಾರತೀಯ ಸಂಸ್ಕೃತಿಯ ಬಗ್ಗೆ ಅಪಾರ ಗೌರವ ಹೊಂದಿದ್ದ ಶಂಕರಣ್ಣ ಸಜ್ಜನರು ಸಂಸ್ಕೃತ ಭಾಷೆಯ ಕುರಿತು ಅಪಾರ ಆಸಕ್ತಿ ವಹಿಸಿ ಯಾದಗಿರಿಯಲ್ಲಿ ೧೯೧೦ ರಲ್ಲಿ "ಶಂಕರಣ್ಣ ಸಜ್ಜನ ಸಂಸ್ಕೃತ ವಿದ್ಯಾಪೀಠ" ವನ್ನು ಸ್ಥಾಪಿಸಿದರು. ಈ ಶಾಲೆಯ ಸ್ಥಾಪನೆಗೆ ೪೦ ಎಕರೆ ಭೂಮಿ ಮತ್ತು ಒಂದು ಲಕ್ಷ ಐವತ್ತು ಸಾವಿರ ರೂಪಾಯಿಗಳನ್ನು ದೇಣಿಗೆ ನೀಡಿದರು. ಕಾಶಿಯಲ್ಲಿ ವಿದ್ಯಾಭ್ಯಾಸ ಮಾಡಿದ ವ್ಯಾಕರಣ ತೀರ್ಥ ಚಂದ್ರಶೇಖರ ಶಾಸ್ತ್ರಿಯವರು ಈ ಶಾಲೆಯ ಪ್ರಾಂಶುಪಾಲರಾಗಿದ್ದರು. ವಿದ್ಯಾರ್ಥಿಗಳಿಗೆ ಉಚಿತ ಊಟ ಮತ್ತು ವಸತಿ ವ್ಯವಸ್ಥೆಯನ್ನು ಮಾಡಲಾಗಿತ್ತು. ಗುರುಮಿಠಕಲ ದಲ್ಲಿರುವ "ರಾಮಗಿರಿ ಮಠ" ಸಂಸ್ಕೃತ ಶಿಕ್ಷಣ ನೀಡುವ ಪ್ರಮುಖ ಕೇಂದ್ರವಾಗಿತ್ತು. ೧೯೧೪ ರಲ್ಲಿ ಆಯ್.ಬಿ. ಬ್ರೂಟ್ಯಕ ಎಂಬುವವರು "ಗ್ರಾಮೀಣ ಶಿಕ್ಷಕರ ತರಬೇತಿ" ಶಾಲೆಯನ್ನು ಗುಲಬರ್ಗಾದಲ್ಲಿ ತೆರೆದರು. ಇದು ಈ ಭಾಗದ ಶಾಲೆಗಳಲ್ಲಿನ ಶಿಕ್ಷಕರಿಗೆ ಸೂಕ್ತ ತರಬೇತಿ ನೀಡಲು ನೆರವಾಯಿತು.

೧೯೧೮ರಲ್ಲಿ ಶರಣಬಸವೇಶ್ವರ ಸಂಸ್ಥಾನದ ಪೀಠಾಧಿಪತಿಗಳಾದ ಶ್ರೀ ದೊಡಪ್ಪ ಅಪ್ಪರವರು ಈ ಭಾಗದ ಜನರಲ್ಲಿ ಓದುವ ಹವ್ಯಾಸ ಬೆಳೆಸುವ ಹಾಗೂ ಶೈಕ್ಷಣಿಕ, ರಾಜಕೀಯ ಪ್ರಜ್ಞೆ ಮೂಡಿಸುವ ಉದ್ದೇಶದಿಂದ ಸಾರ್ವಜನಿಕ ಗ್ರಂಥಾಲಯವನ್ನು ಸ್ಥಾಪಿಸಿದರು. ನಂತರ ೧೯೩೪ ರಲ್ಲಿ ದೊಡಪ್ಪ ಅಪ್ಪರವರು ತಮ್ಮನ್ನು ಅಗಲಿದ ಮಗಳು ಮಹಾದೇವಿಯ ಹೆಸರಿನಲ್ಲಿ "ಮಹಾದೇವಿ ಕನ್ಯಾ ಶಾಲೆ"

ಎಂಬ ಹೆಣ್ಣು ಮಕ್ಕಳ ಶಾಲೆಯನ್ನು ತೆರೆದರು. ಆರಂಭದಲ್ಲಿ ತಾವೇ ತಮ್ಮ ಟಾಂಗದಲ್ಲಿ ವಿದ್ಯಾರ್ಥಿನಿಯರನ್ನು ಶಾಲೆಗೆ ಕರೆತರುವ ಕಳುಹಿಸುವ ವ್ಯವಸ್ಥೆ ಮಾಡುತ್ತಿದ್ದರು. ಶಾಲೆಯ ಮಕ್ಕಳಿಂದ ಯಾವುದೇ ಶುಲ್ಕ ಪಡೆಯದೇ ತಮ್ಮ ಹೊಲದ ಜೋಳವನ್ನು ಮಾರಿ ಶಿಕ್ಷಕರಿಗೆ ವೇತನ ನೀಡುತ್ತಿದ್ದರು. ಇಂದು ಶರಣಬಸವೇಶ್ವರ ವಿದ್ಯಾವರ್ಧಕ ಸಂಸ್ಥೆ ಹತ್ತು ಹಲವು ಶಾಖೆಗಳಾಗಿ ಈ ಭಾಗದ ಜನತೆಗೆ ಶಿಕ್ಷಣ ನೀಡುವ ಕಾರ್ಯ ಮಾಡುತ್ತಿದೆ. ನಿಜಾಮನ ಹೈದ್ರಾಬಾದ ರಾಜ್ಯದಲ್ಲಿದ್ದ ಖಾಸಗಿ ಮತ್ತು ಸರಕಾರಿ ಶಾಲೆಗಳ ವಿವರ ನಿಡುವ ಪಟ್ಟಿ ಇಲ್ಲಿದೆ.

ವರ್ಷ	೧೯೦೧	೧೯೨೧	೧೯೩೧	೧೯೪೧
ಸರಕಾರಿ ಶಾಲೆ	೦೮೪೭	೩೯೮೬	೪೨೮೩	೫೫೦೭
ಖಾಸಗಿ ಶಾಲೆ	೧೮೪೦	೪೦೫೩	೧೦೪೯	೧೪೯೩
ಒಟ್ಟು ಶಾಲೆಗಳು	೨೬೮೭	೮೦೩೯	೫೩೩೨	೭೦೦೦

ಈ ಮೇಲ್ಕಾಣಿಸಿದ ಪಟ್ಟಿಯನ್ನು ಗಮನಿಸಿದಾಗ ಹೈದ್ರಾಬಾದ ರಾಜ್ಯದಲ್ಲಿ ೧೯೦೧ ರಿಂದ ೧೯೨೧ರ ವರೆಗೆ ನಿಜಾಮ ಸರಕಾರ ಖಾಸಗಿ ಶಿಕ್ಷಣ ಸಂಸ್ಥೆಗಳ ಮೇಲೆ ಕಠಿಣ ನಿಯಮಗಳನ್ನು ಹೇರಿರಲಿಲ್ಲ. ಆದರೆ ೧೯೨೧ರ ನಂತರ ಸರಕಾರ ಅನುಸರಿಸಿದ ನೀತಿ ಅನೇಕ ಖಾಸಗಿ ಶಿಕ್ಷಣ ಸಂಸ್ಥೆಗಳು ಮುಚ್ಚಲು ಕಾರಣವಾಯಿತು. ಇಂತಹ ಅನೇಕ ನಿರ್ಬಂಧಗಳ ನಡುವೆ ಈ ಭಾಗದ ಜನತೆಯ ಬಗ್ಗೆ ಕಳಕಳಿ ಹೊಂದಿದ ರಾಜಕೀಯ ನೇತಾರರು, ಶಿಕ್ಷಣ ಪ್ರೇಮಿಗಳು ಇಲ್ಲಿನ ಶೈಕ್ಷಣಿಕ ಅಭ್ಯುಧಯಕೋಸ್ಕರ ಅನೇಕ ಶಾಲೆಗಳನ್ನು ಪ್ರಾರಂಭಿಸಿ ಮುನ್ನಡೆಸಿದರು.

ಮೇಲಿನ ಅಧ್ಯಯನದ ನಂತರ ನಮಗೆ ತಿಳಿದು ಬರುವುದೇನೆಂದರೆ, ಹೈದ್ರಾಬಾದ ಕರ್ನಾಟಕದ ಜಿಲ್ಲೆಗಳಲ್ಲಿ ರಾಯಚೂರು ಮತ್ತು ಬೀದರ ಜಿಲ್ಲೆಗಳಿಗೆ ಹೋಲಿಸಿದರೆ ಗುಲಬರ್ಗಾದ ಶೈಕ್ಷಣಿಕ ಸ್ಥಿತಿ ಉತ್ತಮವಾಗಿತ್ತು. ಆದರೆ ಕರ್ನಾಟಕದ ಇತರ ಭಾಗಗಳಾದ ಮಂಗಳೂರು, ಬೆಂಗಳೂರು, ಮೈಸೂರು, ಧಾರವಾಡ ಜಿಲ್ಲೆಗಳಿಗೆ ಹೋಲಿಸಿದಾಗ ಈ ಭಾಗ ತೀರ ಹಿಂದುಳಿದಿತ್ತು ಎಂದು ತಿಳಿದುಬರುತ್ತದೆ.

೧೯೪೭ನೇ ಆಗಸ್ಟ ೧೫ ರಂದು ಭಾರತ ಸ್ವತಂತ್ರ ಹೊಂದಿದರೂ ಹೈದ್ರಾಬಾದ ಕರ್ನಾಟಕ ನಿಜಾಮನ ರಜಾಕರರ ಹಾವಳಿಯ ವಿರುದ್ಧ ಮತ್ತೆ ೧೯೪೮ರ ಸೆಪ್ಟೆಂಬರ್ ೧೭ ರ ವರೆಗೂ ಅನೇಕ ಯುವಕರು, ನೇತಾರರು, ವಿದ್ಯಾರ್ಥಿಗಳು ತಮ್ಮ ಶಾಲೆ, ಕಾಲೇಜುಗಳನ್ನು ತಿಂಗಳುಗಟ್ಟಲೆ ತೊರೆದು ಅವಿರತ ಹೋರಾಟದ ನಂತರ ಇಲ್ಲಿನ ಜನತೆ ಸ್ವಾತಂತ್ರ್ಯದ ಸವಿಯನ್ನು ಅನುಭವಿಸುವಂತಾಯಿತು. ಈ ಹೋರಾಟದಲ್ಲಿ ಖಾಸಗಿ ಶಾಲೆಗಳಲ್ಲಿ ಕಲಿತ ವಿದ್ಯಾರ್ಥಿಗಳ ಪಾತ್ರ ಬಹಳ ಮುಖ್ಯವಾಗಿತ್ತು. ಈ ಭಾಗ ಇಂದೂ ಶೈಕ್ಷಣಿಕವಾಗಿ ಹಿಂದುಳಿಯಲು ನಿಜಾಮನ ಅನುಸರಿಸಿದ ಖಾಸಗಿ ಶಿಕ್ಷಣ ನೀತಿಯು ಪ್ರಮುಖವಾಗಿತ್ತು ಎನ್ನಬಹುದಾಗಿದೆ.

ಆಧಾರಸೂಚಿ

೧. Bajanthri. K.L: *National Education and Rise of Nationalism in Hyderabad Karnataka*, M. Phil., Disst. G.U.G. 1990.

೨. ದಿವಾಕರ ಆರ್.ಆರ್., **ಕರ್ನಾಟಕ ಪರಂಪರೆ,** ಬೆಂಗಳೂರು.

೩. Raichur, Gulbarga, *Bidar District Gazetteer*, Govt of Mysore, Bangalore.1983.

೪. **ಕಲಬುರ್ಗಿ ಜಿಲ್ಲಾ ಐತಿಹಾಸಿಕ ಮತ್ತು ಸಾಂಸ್ಕೃತಿಕ ಪರಂಪರೆ,** ಕಲಬುರ್ಗಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಗುಲಬರ್ಗಾ, ೨೦೧೧.

೫. Kamath Suryanath U: *Karnataka State Gazetteer*, Bangalore, 1983.

೬. Kate.P.V. : *Maratawada under the Nizams*, Mittle Publications Delhi. 1987.

೭. ಮಹಾಬಲೇಶ್ವರಪ್ಪ.ಜಿ.ಸಿ., **ಹೈದ್ರಾಬಾದ ಕರ್ನಾಟಕದಲ್ಲಿ ರಾಜಕೀಯ ಚಳವಳಿಗಳು,** ಗು.ವಿ.ಗು. ೧೯೯೭.

೮. Mukarji S.N: *History of Education In India*, 1951 .

೯. *Nutan Vidyala Educational Society Platinum Jubli Souvenir Report (1907-1982)*, Gulbarga 1983.

೧೦. Parveen Rukhasana Farooqi : *Education and Learning under Asaf Jahis*, Ph.D. Thesis, K.U.D. 1975.

೧೨. Swamy Ramanand Tirtha : *Memories of Hyderabad Freedom Struggle*, Bombay 1967.

ಸ್ವಾತಂತ್ರಪೂರ್ವ ಕರ್ನಾಟಕದಲ್ಲಿ ಚಿತ್ರಕಲಾ ಶಿಕ್ಷಣ ಸಂಸ್ಥೆಗಳ ಐತಿಹಾಸಿಕ ಹಿನ್ನೆಲೆ

ಡಾ. ಎಸ್.ಸಿ. ಪಾಟೀಲ*

ಭಾರತದಲ್ಲಿ ಕಲಾಶಿಕ್ಷಣ ಪ್ರಾಚೀನ ಕಾಲದಿಂದಲೂ ಗುರುಕುಲ ಪದ್ಧತಿಯಲ್ಲಿ ಬೆಳೆದು ಬಂದಿರುವುದು ಸಾಹಿತ್ಯ, ಶಾಸನ ಮುಂತಾದೆಡೆಗೆ ಉಲ್ಲೇಖಗೊಂಡಿರುವ ಅಂಶಗಳಿಂದ ಸ್ಪಷ್ಟವಾಗುತ್ತದೆ. ೬೪ ಕಲೆಗಳ ವಿದ್ಯಾಭ್ಯಾಸದ ಪ್ರಸ್ತಾಪ ಸಂಸ್ಕೃತ ಕನ್ನಡ ಕಾವ್ಯ ಶಾಸನಗಳಲ್ಲಿ ಕಂಡುಬರುತ್ತದೆ. ಬ್ರಿಟಿಷರು ಭಾರತಕ್ಕೆ ಬಂದನಂತರ ಶಿಕ್ಷಣ ಸುಧಾರಣೆಗಾಗಿ ಅನೇಕ ಆಯೋಗಗಳನ್ನು ರಚಿಸಿ ಹಲವಾರು ಶೈಕ್ಷಣಿಕ ಯೋಜನೆಗಳನ್ನು ಜಾರಿಗೆ ತಂದರು. ಲಲಿತಕಲೆಗಳಿಗೂ ಪ್ರಾಮುಖ್ಯತೆಯನ್ನು ನೀಡಿ ಭಾರತದಲ್ಲಿ ಕೈಗಾರಿಕ ಮತ್ತು ಕರಕುಶಲ ಕಲೆಗಳ ಬೆಳವಣಿಗೆಯ ಹಿನ್ನೆಲೆಯಲ್ಲಿ ನಾಲ್ಕು ಕಲಾಶಾಲೆಗಳನ್ನು ಡಾ. ಹಂಟರ್ ಅವರ ಶಿಫಾರಸ್ಸಿನ ಮೇರೆಗೆ ಪ್ರಾರಂಭಿಸಿದರು.

೧. ೧೮೫೨ರಲ್ಲಿ ಭಾರತದಲ್ಲಿ ಪ್ರಪ್ರಥಮವಾಗಿ ಮದ್ರಾಸ್ (ಚೆನ್ನೈ)ದಲ್ಲಿ ಕೈಗಾರಿಕಾ ಕರಕುಶಲ ಮತ್ತು ಚಿತ್ರಕಲಾ ಶಿಕ್ಷಣ ಕಲಾಶಾಲೆ.
೨. ೧೮೫೪ರ ಜೂನ್ ತಿಂಗಳಲ್ಲಿ ಕಲಕತ್ತಾದಲ್ಲಿ ಸರಕಾರಿ ಚಿತ್ರಕಲಾ ಶಾಲೆ.
೩. ೧೮೫೭ರಲ್ಲಿ ಮುಂಬಯಿಯಲ್ಲಿ ಸರ್ ಜೆ.ಜೆ. ಸ್ಕೂಲ್ ಆಫ್ ಆರ್ಟ್.
೪. ೧೮೭೨ರಲ್ಲಿ ಲಾಹೋರ್‌ನಲ್ಲಿ 'ಮಾಯೊ' ಕರಕುಶಲ ಕಲಾಶಾಲೆ.

ಹೀಗೆ ಬ್ರಿಟಿಷರು ಭಾರತದಲ್ಲಿ ಈ ನಾಲ್ಕು ಶಿಕ್ಷಣ ಸಂಸ್ಥೆಗಳ ಮೂಲಕ ಕಲಾ ಶಿಕ್ಷಣಕ್ಕೆ ಚಾಲನೆ ನೀಡಿದರು. ಸ್ವಾತಂತ್ರ ಪೂರ್ವದಲ್ಲಿ ಕರ್ನಾಟಕದಲ್ಲಿಯೂ ಸಹ ಬ್ರಿಟಿಷ್ ಮಾದರಿಯ ಮೂರು ಕಲಾಸಂಸ್ಥೆಗಳು ಪ್ರಾರಂಭಗೊಂಡು ಬೆಳೆದು ಬಂದಿವೆ. ಅವುಗಳ ಸ್ಥೂಲ ನೋಟವನ್ನು ಇಲ್ಲಿ ವಿವರಿಸಲಾಗಿದೆ.

೦೧. ಕಲೆ ಮತ್ತು ಗುಡಿ ಕೈಗಾರಿಕೆಯ ಚಾಮರಾಜೇಂದ್ರ ತಾಂತ್ರಿಕ ಶಿಕ್ಷಣ ಸಂಸ್ಥೆ, ಮೈಸೂರು

೧೮೯೨ರಲ್ಲಿ ಮೈಸೂರು ಅರಸರಿಂದ ನಜರಬಾದಿನಲ್ಲಿ ಪ್ರಾರಂಭವಾದ ಈ ಸಂಸ್ಥೆಯು ಕಲೆ ಮತ್ತು ಗುಡಿ ಕೈಗಾರಿಕೆಯಲ್ಲಿ ವಿಶೇಷ ಶಿಕ್ಷಣ ನೀಡುವ ಉದ್ದೇಶವನ್ನು ಹೊಂದಿತ್ತು. ಇಲ್ಲಿ ಮರದ ಕೆತ್ತನೆ, ರೇಖಾಚಿತ್ರ ರಚನೆ, ಭಾವಚಿತ್ರದ ರಚನೆ, ವರ್ಣಚಿತ್ರ ರಚನೆ, ಹಿತ್ತಾಳೆ, ತಾಮ್ರ ಮುಂತಾದ ಲೋಹಗಳಲ್ಲಿ ಕೆಲಸ, ಬೆತ್ತದಲ್ಲಿ ಖುರ್ಚಿ, ಮೇಜು ಮುಂತಾದವುಗಳನ್ನು ಸಿದ್ಧಪಡಿಸುವುದು, ಮರದ ಹಲಗೆಗಳಲ್ಲಿ ಚಿತ್ರಗಳನ್ನಾಕುವುದು (ಹುದುಗು ಚಿತ್ರಕಲೆ), ಶಿಲಾ ಶಿಲ್ಪಕಲೆ ಮುಂತಾದ ಹಲವಾರು ವಿಷಯಗಳಲ್ಲಿ ವೃತ್ತಿ ಶಿಕ್ಷಣ, ಪ್ರಾತ್ಯಕ್ಷಿಕೆ ಶಿಕ್ಷಣ ನೀಡುವ ಉದ್ದೇಶವನ್ನು ಈ ಸಂಸ್ಥೆ ಹೊಂದಿತ್ತು. ಮತ್ತು ಮುಖ್ಯವಾಗಿ ಮಕ್ಕಳು ಕಲಿಯುವಾಗಲೇ ಗಳಿಸುವ ಸಾಮರ್ಥ್ಯವನ್ನು ಪಡೆಯುವ ಕಲಿಕೆ, ಗಳಿಕೆಯ ಪ್ರಯೋಗ ಕರ್ನಾಟಕದಲ್ಲಿ ಪ್ರಾರಂಭವಾದದ್ದು ಈ ಸಂಸ್ಥೆಯಿಂದ ಎಂದು ಹೇಳಿದರೆ ತಪ್ಪಾಗಲಾರದು.

೧೯೦೩ರಲ್ಲಿ ಇದನ್ನು ಕೇಂದ್ರೀಯ ಕಲಾ ಶಾಲೆಯನ್ನಾಗಿ ಮಾರ್ಪಡಿಸಲಾಯಿತು. ಮುಂದೆ ೧೯೦೬ರಲ್ಲಿ ಶ್ರೀ ಚಾಮರಾಜೇಂದ್ರ ಒಡೆಯರ್ ಬಹಾದ್ದೂರ ಅವರ ನೆನಪಿನಲ್ಲಿ ಹೊಸ ಕಟ್ಟಡಕ್ಕೆ ಶಿಲಾನ್ಯಾಸ ಮಾಡಲಾಯಿತು. ಆಗಿನ ವೇಲ್ಸ್‌ನ ರಾಜಕುಮಾರ ಚಕ್ರವರ್ತಿ ಜಾರ್ಜ್ ಇದನ್ನು ನೆರವೇರಿಸಿದರು. ೧೯೧೩ರಲ್ಲಿ ಈ ಕಟ್ಟಡ ಸಂಪೂರ್ಣಗೊಂಡು ಹೊಸ ಕಟ್ಟಡಕ್ಕೆ ಈ ತರಬೇತಿ ಸಂಸ್ಥೆ ಸ್ಥಳಾಂತರಗೊಂಡಿತು. ಕರಕುಶಲ ಕೈಗಾರಿಕೆಯ ವಿವಿಧ ವಿಧಾನಗಳಲ್ಲಿ ಶಿಕ್ಷಣ ನೀಡುವುದರ ಜೊತೆಗೆ ತಯಾರಿಕೆ ಮತ್ತು ಪ್ರಾಯೋಗಿಕತೆಯೊಂದಿಗೆ ವಿದ್ಯಾರ್ಥಿಗಳನ್ನು ಸ್ವಾವಲಂಬಿಗಳನ್ನಾಗಿ ಮಾಡಬೇಕೆನ್ನುವುದು ಈ ಸಂಸ್ಥೆಯ ಪ್ರಮುಖ ಉದ್ದೇಶವಾಗಿದೆ. ಇಲ್ಲಿ ವಿವಿಧ ಕರಕುಶಲ ಕಲೆಗಳೊಂದಿಗೆ ರೇಖಾಚಿತ್ರಕಲೆ, ವರ್ಣಚಿತ್ರಕಲೆ ಮತ್ತು ಹುದುಗು ಚಿತ್ರಕಲೆಯ ತರಬೇತಿಯೊಂದಿಗೆ ಸಾಂಪ್ರದಾಯಿಕ ಮೈಸೂರು ಶೈಲಿಯ ಅನೇಕ ಕಲಾಕೃತಿಗಳ ರಚನೆಗೆ ಇಲ್ಲಿ ವಿಶೇಷ ತರಬೇತಿ ನೀಡುವ ಕಾರ್ಯ ನಡೆದಿರುವುದು ಗಮನಾರ್ಹ ಅಂಶವಾಗಿದೆ. ಮುಂದೆ ಈ ಸಂಸ್ಥೆಯು ಚಾಮರಾಜೇಂದ್ರ ದೃಶ್ಯಕಲಾ ಅಕಾಡೆಮಿ (ಕಾವಾ) ಎಂದು ಬದಲಾವಣೆಯಾಯಿತು. ಇಲ್ಲಿ ಪದವಿ ಮತ್ತು

* ಡೀನ್, ಲಲಿತಕಲಾ ನಿಕಾಯ, ಮುಖ್ಯಸ್ಥರು ಮತ್ತು ಪ್ರಾಧ್ಯಾಪಕರು, ದೃಶ್ಯಕಲಾ ವಿಭಾಗ, ಕ.ವಿ.ವಿ., ಹಂಪಿ, ವಿದ್ಯಾರಣ್ಯ-೫೮೩೨೭೬.

ಸ್ನಾತಕೋತ್ತರ ಪದವಿಗಾಗಿ ಚಿತ್ರಕಲೆ, ಶಿಲ್ಪಕಲೆ, ಅನ್ವಯಿಕ ಕಲೆ, ಮುದ್ರಣ ಕಲೆ, ಛಾಯಾಚಿತ್ರ, ಕಲಾ ಇತಿಹಾಸ ಮುಂತಾದ ಕಲೆಗಳ ಕುರಿತು ಬೋಧನೆ ನಡೆಯುತ್ತಿದೆ. ಮೈಸೂರು ವಿಶ್ವವಿದ್ಯಾಲಯದಿಂದ ಮಾನ್ಯತೆ ಹೊಂದಿ ಪ್ರಸ್ತುತ ಕಾಲೇಜು ಕಾರ್ಯನಿರ್ವಹಿಸುತ್ತಿದೆ. ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಖ್ಯಾತಿಯನ್ನು ಗಳಿಸಿದ ಸಂಸ್ಥೆ ಇದಾಗಿದ್ದು. ಇಲ್ಲಿಂದ ಅನೇಕ ಜನ ಪ್ರತಿಭಾವಂತ ಕಲಾವಿದರು ದೇಶ–ವಿದೇಶಗಳಲ್ಲಿ ಹೆಸರು ಮಾಡಿದ್ದಾರೆ.

೦೨. ಅ.ನ.ಸು. ಕಲಾಮಂದಿರ, ಬೆಂಗಳೂರು

ಬೆಂಗಳೂರಿನಲ್ಲಿ ಆಗಸ್ಟ್ ೧೨, ೧೯೧೯ರಲ್ಲಿ ಅ.ನ. ಸುಬ್ಬರಾಯರು 'ಕಲಾಮಂದಿರ, ಎಂಬ ಸಂಸ್ಥೆಯನ್ನು ಪ್ರಾರಂಭಿಸಿದರು. (ಇದೇ ಅವಧಿಯಲ್ಲಿಯೇ ೧೯೧೯ರಲ್ಲಿ ರವೀಂದ್ರನಾಥ ಠಾಕೂರರು ಶಾಂತಿನಿಕೇತನವೆಂಬ ಸಂಸ್ಥೆಯನ್ನು ಕಲ್ಕತ್ತಾದಲ್ಲಿ ಪ್ರಾರಂಭಿಸಿದ್ದು ಈಗ ಅದು ವಿಶ್ವಭಾರತಿ ವಿಶ್ವವಿದ್ಯಾಲಯವಾಗಿ ಬೆಳೆದಿದೆ.) ಬಗೆ ಬಗೆಯ ಬಣ್ಣದ ಬೋರ್ಡ್‌ಗಳು, ರೂಪಚಿತ್ರ ತಯಾರಿಕೆ, ಕಲಾತ್ಮಕ ಖುರ್ಚಿ, ಬೆಂಚುಗಳು, ವಾಣಿಜ್ಯ ಅಂಗಡಿಗಳ ಮುಂದಿನ ತಗಲು ಬೋರ್ಡ್‌ಗಳನ್ನು ಬೆಂಗಳೂರಿಗೆ ಪರಿಚಯಿಸಿದ್ದು ಈ ಕಲಾಮಂದಿರ. ಸ್ವಾತಂತ್ರ್ಯವೇ ಸ್ವರ್ಗ–ಸ್ವಾವಲಂಬನೆಯೇ ಸ್ವಾತಂತ್ರ್ಯದ ಹಾದಿ ಎನ್ನುವ ತತ್ವವನ್ನು ಅನುಸರಿಸಿ ಕೊಂಡು ಬಂದ ಸಂಸ್ಥೆ ಇದಾಗಿದೆ. ಈ ಸಂಸ್ಥೆಯಲ್ಲಿ ಕಲಾಶಿಕ್ಷಣವಲ್ಲದೆ, ಫೋಟೋ ಸ್ಟುಡಿಯೋ, ಫ್ರೇಂ ಕಲಾಕೃತಿ ತಯಾರಿಕೆ, ಸೀರೆಯ ಮೇಲೆ ಬ್ಲಾಕ್ ಪ್ರಿಂಟಿಂಗ್, ಸೈನ್ ಬೋರ್ಡ್ ತಯಾರಿಕೆ, ಬಾಟಿಕ್ ತಯಾರಿಕೆ ಮುಂತಾದವನ್ನು ಕಲಾತ್ಮಕವಾಗಿ ರೂಪಿಸುವ ಬಗ್ಗೆ ಸಾವಿರಾರು ವಿದ್ಯಾರ್ಥಿಗಳಿಗೆ ತರಬೇತಿ ನೀಡಿ ಕಲೆಯ ಮೂಲಕ ಸ್ವಯಂ ಉದ್ಯೋಗದ ಮೂಲಕ ದಾರಿ ತೋರಿಸುವ ಹಿನ್ನೆಲೆಯಲ್ಲಿ ಈ ಸಂಸ್ಥೆ ಪ್ರಾರಂಭಿಕ ಹಂತದಲ್ಲಿ ಕಾರ್ಯನಿರ್ವಹಿಸುತ್ತಾ ಬಂದಿದೆ. ನಂತರದ ದಿನಗಳಲ್ಲಿ ಕಲೆಯ ಗಂಭೀರವಾದ ಅಧ್ಯಯನಕ್ಕೆ ಈ ಸಂಸ್ಥೆ ತೊಡಗಿಕೊಂಡಿರುವುದು ಕಂಡುಬರುತ್ತದೆ. 'ಕಲಾ' ಎಂಬ ಮಾಸಪತ್ರಿಕೆಯ ಮೂಲಕ ಕಲೆಯ ಅನೇಕ ಕುಂದು ಕೊರತೆಗಳ ಬಗ್ಗೆ ಧ್ವನಿಯೆತ್ತಿದವರು ಈ ಸಂಸ್ಥೆಯನ್ನು ಹುಟ್ಟುಹಾಕಿದ ಅ.ನ.ಸು ಅವರು. ಮುಂದೆ ಚಿತ್ರಕಲಾ ಡಿಪ್ಲೊಮಾ ಪರೀಕ್ಷೆಗಾಗಿ ವಿದ್ಯಾರ್ಥಿಗಳನ್ನು ಸಿದ್ಧಗೊಳಿಸುವುದು, ಕಲೆಯ ಕುರಿತಾದ ಹಲವಾರು ವಿಧಾಯಕ ಕಾರ್ಯಕ್ರಮಗಳನ್ನು, ರಾಷ್ಟ್ರಮಟ್ಟದ ಕಲಾ ಶಿಬಿರ, ಪ್ರದರ್ಶನ ಮತ್ತು ಸ್ಪರ್ಧೆಗಳನ್ನು ಏರ್ಪಡಿಸುತ್ತ ಬಂದ ಹಿರಿಮೆ ಈ ಸಂಸ್ಥೆಗಿದೆ. ಈಗ ಬಿ.ವಿ.ಎ. ಪದವಿಯ ಕಲಾಶಿಕ್ಷಣವನ್ನು ಇಲ್ಲಿ ನೀಡಲಾಗುತ್ತಿದೆ.

೦೩. ಹಾಲಭಾವಿ ಸ್ಕೂಲ್ ಆಫ್ ಆರ್ಟ್, ಧಾರವಾಡ

೧೯೩೫ರಲ್ಲಿ ಧಾರವಾಡದಲ್ಲಿ ಶ್ರೀ ಡಿ.ವಿ. ಹಾಲಭಾವಿ ಅವರು ಸ್ಕೂಲ್ ಆಫ್ ಆರ್ಟನ್ನು ಪ್ರಾರಂಭಿಸಿದರು. ಜೆ.ಜೆ. ಸ್ಕೂಲ್ ಆಫ್ ಆರ್ಟ್‌ನಲ್ಲಿ ಅಧ್ಯಯನ ಮಾಡಿ ಬಂದ ಇವರು ಉತ್ತರ ಕರ್ನಾಟಕದಲ್ಲಿ ಕಲಾ ಶಿಕ್ಷಣವನ್ನು ವ್ಯವಸ್ಥಿತವಾಗಿ ನೀಡುವ ಯಾವುದೇ ಸಂಸ್ಥೆಗಳು ಇಲ್ಲದಿರುವುದನ್ನು ಗಮನಿಸಿ ಈ ಸಂಸ್ಥೆಯನ್ನು ಹುಟ್ಟು ಹಾಕಿದರು. ಈ ಸಂಸ್ಥೆಯು ಮುಂಬೈ ಪಬ್ಲಿಕ್ ಟ್ರಸ್ಟ್ ನೋಂದಣಿಯನ್ನು ಪಡೆದಿದೆ. ಕಾಯ್ದೆಯಡಿ ಇಲ್ಲಿ ಈ ಕೆಳಗಿನ ವಿಷಯಗಳನ್ನು ಆಗ ಕಲಿಸಲಾಗುತ್ತಿತ್ತು.

ರೇಖಾ ಚಿತ್ರಕಲೆ, ವರ್ಣ ಚಿತ್ರಕಲೆ, ಅನ್ವಯಿಕ ಕಲೆ, ಛಾಯಾಚಿತ್ರಕಲೆ, ಚಿತ್ರಕಲಾ ಶಿಕ್ಷಕರ ತರಬೇತಿ, ಸಂಗೀತ, ನೃತ್ಯ, ಕರಕುಶಲ ಕಲೆ ಮುಂತಾದವನ್ನು ಶಾಸ್ತ್ರೋಕ್ತವಾಗಿ ಕಲಿಸುವ ವ್ಯವಸ್ಥೆಯನ್ನು ಈ ಸಂಸ್ಥೆ ಪ್ರಾರಂಭಿಕ ಹಂತದಲ್ಲಿ ಮಾಡಿಕೊಂಡು ಬಂದಿದೆ. ಈ ಸಂಸ್ಥೆಯಲ್ಲಿ ಕಲಿತ ವಿದ್ಯಾರ್ಥಿಗಳಿಗೆ ಮುಂಬೈನ ಜೆ.ಜೆ. ಸ್ಕೂಲ್ ಆಫ್ ಆರ್ಟ್ ಪರೀಕ್ಷೆಯನ್ನು ನಡೆಸುತ್ತಿತ್ತು. ನಂತರ ಬಹಳಷ್ಟು ಹೋರಾಟ ಮಾಡಿ ಧಾರವಾಡದಲ್ಲಿಯೇ ಪರೀಕ್ಷಾ ಕೇಂದ್ರವನ್ನು ಪ್ರಾರಂಭಿಸಿದರು. ಮುಂಬೈ ಸರ್ಕಾರವು ೧೯೫೨ರಲ್ಲಿ ಚಿತ್ರಕಲಾ ಶಿಕ್ಷಕರ ಪರೀಕ್ಷೆಗಳನ್ನು ನಡೆಸಲು ಅನುಮತಿಯನ್ನು ನೀಡಿತು. ಆಗ ಕರ್ನಾಟಕದಲ್ಲಿ ಏಕೈಕ ಚಿತ್ರಕಲಾ ಶಿಕ್ಷಕರ ಪರೀಕ್ಷಾ ಕೇಂದ್ರವಾಗಿ ಹಾಲಭಾವಿ ಸ್ಕೂಲ್ ಆಫ್ ಆರ್ಟ್ ಕಾರ್ಯವನ್ನು ನಿರ್ವಹಿಸಿತು. ಇಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಚಿತ್ರಕಲಾ ಶಿಕ್ಷಕರಾಗಿ ನೇಮಕವಾಗುತ್ತ ಬಂದಿರುವುದು ಗಮನಾರ್ಹ ಅಂಶವಾಗಿದೆ.

ಸದ್ಯ ಈ ಕಲಾ ಸಂಸ್ಥೆಯು ಕನ್ನಡ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದು ಬದಲಾದ ಪಠ್ಯಕ್ರಮಕ್ಕನುಗುಣವಾಗಿ ಬಿ.ವಿ.ಎ. ಪದವಿ ಪರೀಕ್ಷೆಯನ್ನು ನಡೆಸುತ್ತಿದೆ. ಈ ಸಂಸ್ಥೆಯಿಂದ ೧೯೬೫ರಲ್ಲಿ "ಆರ್ಟ್‌ಗೀಲ್ಡ್" ಎಂಬ ಕಲಾಪತ್ರಿಕೆಯನ್ನು ಡಿ.ವಿ. ಹಾಲಭಾವಿಯವರು ಪ್ರಾರಂಭಿಸಿ ಕಲೆಯ ಹಲವಾರು ಸಮಸ್ಯೆಗಳನ್ನು ಚರ್ಚಿಸುತ್ತಿದ್ದರು. ಅಲ್ಲದೆ ಹಲವಾರು ಕಲೆಯ ಕುರಿತಾದ ಲೇಖನಗಳನ್ನು ಪ್ರಕಟಿಸುವ ಮೂಲಕ ಹಲವಾರು ಕಲಾ ಬರಹಗಾರರನ್ನು ಕಲಾಪ್ರಪಂಚಕ್ಕೆ ಪರಿಚಯಿಸಿದ ಕೀರ್ತಿ ಈ ಸಂಸ್ಥೆಗೆ ಸಲ್ಲುತ್ತದೆ. ಹಾಲಭಾವಿಯವರು ಕಲಾವಿದರಾಗಿ, ಕಲಾಸಾಹಿತಿಯಾಗಿ ಅನೇಕ ಲೇಖನ ಮತ್ತು ಗ್ರಂಥಗಳನ್ನು ಬರೆದಿದ್ದಾರೆ. ಪ್ರಸ್ತುತ, ಇದು ಮೈಸೂರು ಸುತ್ತೂರು ಮಠದ ಆಡಳಿತಕ್ಕೆ ಒಳಪಟ್ಟು ಜೆ.ಎಸ್.ಎಸ್. ಹಾಲಭಾವಿ ಕಲಾ ಮಹಾವಿದ್ಯಾಲಯ, ಧಾರವಾಡ ಎಂದು ಪುನರ್ ನಾಮಕರಣ

ಗೊಂಡಿದೆ. ಈಗ ಧಾರವಾಡ ತಪೋವನದ ಹತ್ತಿರ ೧೦೦ ಎಕರೆ ವಿಸ್ತಾರವಾದ ಜಾಗದಲ್ಲಿ ಕಾರ್ಯನಿರ್ವಹಿಸುತ್ತಿದೆ.

ಕರ್ನಾಟಕದಲ್ಲಿ ಇದೇ ಮಾದರಿಯ ಅನೇಕ ಖಾಸಗಿ ಸಂಸ್ಥೆಗಳು ೩೦ ಲಲಿತಕಲಾ ಪದವಿ ಕಾಲೇಜು ಮತ್ತು ೪೦ ಲಲಿತಕಲಾ ಡಿಪ್ಲೋಮಾ ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ. ಒಟ್ಟಾರೆ ಭಾರತದಲ್ಲಿ ಬ್ರಿಟೀಷರಿಂದ ಪ್ರಾರಂಭವಾದ ಕರಕುಶಲ ಮತ್ತು ಕಲಾ ಶಾಲೆಗಳು ಮುಂದೆ ಕಾಲೇಜುಗಳಾಗಿ ಈಗ ಸಂಪೂರ್ಣ ವಾಣಿಜ್ಯ ರಹಿತ ಫೈನ್ ಆರ್ಟ್ಸ್ ಕಾಲೇಜುಗಳಾಗಿ ಪರಿವರ್ತನೆಯಾಗಿವೆ. ಅಲ್ಲದೆ, ಹಿಂದೆ ಡಿಪ್ಲೋಮಾಕ್ಕೆ ಸೀಮಿತವಾಗಿದ್ದ ಈ ಸಂಸ್ಥೆಗಳು ಇಂದು ಪದವಿ ಕಾಲೇಜುಗಳಾಗಿ, ಸ್ನಾತಕೋತ್ತರ ಪದವಿ ಎಂ.ಫಿಲ್., ಪಿಹೆಚ್.ಡಿ ಸಂಶೋಧನ ಅಧ್ಯಯನಕ್ಕೆ ಅಣಿಯಾಗಿವೆ. ಆಯಾ ಕಾಲದ ಅಗತ್ಯಕ್ಕೆ ತಕ್ಕಂತೆ ಬದಲಾಗಿವೆ. ಮೇಲೆ ತಿಳಿಸಿದ ಕರ್ನಾಟಕದ ಎರಡು ಕಲಾಶಾಲೆಗಳು ಸಹ ದೃಶ್ಯಕಲೆಯ ಪದವಿ ಹಾಗೂ ಸ್ನಾತಕೋತ್ತರ ಪದವಿಯ ತರಗತಿಗಳನ್ನು ನಡೆಸುತ್ತಿವೆ.

ಹೀಗೆ ಸ್ವಾತಂತ್ರಪೂರ್ವ ಭಾರತದಲ್ಲಿ ಬ್ರಿಟೀಷರು ನಾಲ್ಕು ಚಿತ್ರ ಮತ್ತು ಕರಕುಶಲ ಕಲಾ ಮಹಾವಿದ್ಯಾಲಯಗಳನ್ನು ಭಾರತದ ನಾಲ್ಕು ಪ್ರಮುಖ ವ್ಯವಹಾರಿಕ ಪಟ್ಟಣಗಳಲ್ಲಿ ಪ್ರಾರಂಭಿಸಿದಂತೆ ಕರ್ನಾಟಕದಲ್ಲಿಯೂ ಸಹ ಮೂರು ಪ್ರಮುಖ ಸ್ಥಳಗಳಲ್ಲಿ ಕಲಾಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿ ಲಲಿತಕಲೆಗಳ ಮತ್ತು ಕರಕುಶಲ ಕಲೆಗಳ ಅಭಿವೃದ್ಧಿಗೆ ಪ್ರೋತ್ಸಾಹ ನೀಡಿದ್ದು ಗಮನಾರ್ಹ ಸಂಗತಿಯಾಗಿದೆ. ಇಲ್ಲಿ ಮೈಸೂರು ಅರಸರು ಮೈಸೂರಿನಲ್ಲಿ ಒಂದು ಕಲಾಸಂಸ್ಥೆಯನ್ನು ಪ್ರಾರಂಭಿಸಿದರೆ, ಇನ್ನುಳಿದ ಎರಡು ಕಲಾಸಂಸ್ಥೆಗಳು ಬೆಂಗಳೂರು ಮತ್ತು ಧಾರವಾಡದಲ್ಲಿ ಪ್ರಾರಂಭಗೊಂಡವು. ಇವೆರಡು ಖಾಸಗಿಯಾಗಿ ಕಲಾವಿದರಿಬ್ಬರು ತಮ್ಮ ವೈಯಕ್ತಿಕ ಆಸಕ್ತಿಯಿಂದ ಪ್ರಾರಂಭಿಸಿರುವುದು ಕಂಡುಬರುತ್ತದೆ. ಇಂದಿಗೂ ಈ ಮೂರು ಸಂಸ್ಥೆಗಳು ವ್ಯವಸ್ಥಿತವಾಗಿ ಸಾಕಷ್ಟು ಅಭಿವೃದ್ಧಿಯನ್ನು ಹೊಂದಿ ಕಲಾಶಿಕ್ಷಣವನ್ನು ನೀಡುತ್ತಿವೆ.

ಆಧಾರಸೂಚಿ

೧. ಡಾ. ಎಸ್.ಸಿ. ಪಾಟೀಲ, **ಕರ್ನಾಟಕದ ಜನಪದ ಚಿತ್ರಕಲೆ,** ವೀರಶೈವ ಅಧ್ಯಯನ ಸಂಸ್ಥೆ, ಗದಗ, ಡಂಬಳ, ೧೯೮೩.

೨. ಡಾ. ಎಸ್.ಸಿ. ಪಾಟೀಲ, **ವರ್ಣಸಂಚಯ,** ವಿಜಯ ಲಲಿತಕಲಾ ಮಹಾವಿದ್ಯಾಲಯ, ಇಳಕಲ್, ೨೦೦೧.

೩. ಪಿ.ಆರ್. ತಿಪ್ಪೇಸ್ವಾಮಿ (ಪ್ರ.ಸಂ), **ಚಿತ್ರಕಲಾ ಪ್ರಪಂಚ,** ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೨೦೦೮.

೪. ಡಾ. ಕರೀಗೌಡ ಬೀಚನಹಳ್ಳಿ (ಸಂ), **ಕರಕುಶಲ ಕಲೆಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

೫. ಎ.ಎಂ. ಪ್ರಕಾಶ್, **ಬೆಂಗಳೂರು ಕಲಾ ಮಂದಿರ ಒಂದು ಐತಿಹಾಸಿಕ ಅಧ್ಯಯನ,** ಅಪ್ರಕಟಿತ ಕಿರು ಸಂಶೋಧನ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.

೬. ಬಿ.ಎಂ. ಪಾಟೀಲ, **ಧಾರವಾಡ ಹಾಲಭಾವಿ ಸ್ಕೂಲ್ ಆಫ್ ಆರ್ಟ್ ಒಂದು ಐತಿಹಾಸಿಕ ಅಧ್ಯಯನ,** ಅಪ್ರಕಟಿತ ಕಿರು ಸಂಶೋಧನ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೭. ಪ್ರೊ. ಪಿ.ವಿ. ನಂಜರಾಜ ಅರಸು, **ಮೈಸೂರು ನೂರಿನ್ನೂರು ವರ್ಷಗಳ ಹಿಂದೆ,** ಅಭಿರುಚಿ ಪ್ರಕಾಶನ, ಮೈಸೂರು, ೨೦೦೮.

೮. ಡಾ. ಲಕ್ಷ್ಮೀದೇವಿ ಗವಾಯಿ, **ಕಲಾವಿದ ಎಂ.ವಿ. ಚೆಟ್ಟಿಯವರ ಜೀವನ ಮತ್ತು ಕಲಾಕೃತಿಗಳು ಒಂದು ಅಧ್ಯಯನ,** ವೀರಶೈವ ಅಧ್ಯಯನ ಅಕಾಡೆಮಿ, ಶ್ರೀ ನಾಗನೂರು ರುದ್ರಾಕ್ಷಿಮಠ, ಬೆಳಗಾವಿ, ೨೦೦೩.

ಕರ್ನಾಟಕ ಏಕೀಕರಣಕ್ಕೆ ಬಳ್ಳಾರಿಯ ಕರ್ನಾಟಕ ಸಂಘದ ಕೊಡುಗೆ

*ಟಿ.ಹೆಚ್.ಎಂ. ಬಸವರಾಜ

ಬಳ್ಳಾರಿಯ ಕರ್ನಾಟಕ ಸಂಘವು ಕರ್ನಾಟಕ ಏಕೀಕರಣ ಚಳವಳಿಯಲ್ಲಿ ಮಹತ್ವದ ಪಾತ್ರ ವಹಿಸಿದೆ. ಸುಮಾರು ೯೦ ವರ್ಷಗಳ ಇತಿಹಾಸವಿರುವ ಬಳ್ಳಾರಿಯ ಕರ್ನಾಟಕ ಸಂಘದ ಕೊಡುಗೆ ಕರ್ನಾಟಕ ಏಕೀಕರಣಕ್ಕೆ ಮಹತ್ವದ್ದಾಗಿದೆ, ೧೯೨೦ರ ಅವಧಿಯಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಕನ್ನಡ ಮಾತನಾಡುವವರ ಸಂಖ್ಯೆಯು ಹೆಚ್ಚಿದ್ದರು ಸಹ ಕನ್ನಡ ಶಾಲೆಗಳು ಇರಲಿಲ್ಲ. ತೆಲುಗು ಮಾಧ್ಯಮದ ಶಾಲೆಗಳು ಇದ್ದವು. ಇದನ್ನರಿತ ಕನ್ನಡ ಹೋರಾಟಗಾರರು ಬಳ್ಳಾರಿಯ ವೀರಶೈವ ವಿಧ್ಯಾವರ್ಧಕ ಸಂಘದ ಮೂಲಕ ದಿನಾಂಕ ೮-೦೪-೧೯೨೪ರಂದು ಮೊಟ್ಟಮೊದಲಿಗೆ ಹೀರದ ಸೂಗಮ್ಮ ಕನ್ನಡ ಪ್ರಾಥಮಿಕ ಶಾಲೆಯನ್ನು ಆರಂಭಿಸಿ ಇಡೀ ರಾಜ್ಯಕ್ಕೆ ಮಾದರಿಯಾದರು. ನಂತರ ನಿಧಾನವಾಗಿ ಕರ್ನಾಟಕ ಸಂಘವನ್ನು ಸ್ಥಾಪಿಸಬೇಕೆಂಬ ಆಲೋಚನೆ ಆಡಳಿತ 'ಮಂಡಳಿಯ ಸದಸ್ಯರಿಗೆ ಹೊಳೆಯಿತು. ಈ ಶಾಲೆಯ ಆಡಳಿತ ಮಂಡಳಿಯ ಸದಸ್ಯರಾದ ಟಿ.ಹೆಚ್.ಎಂ. ಹೊಳೆಬಸವ ಶಾಸ್ತ್ರಿಗಳು ೧೯೧೪ರಲ್ಲಿ ಬಳ್ಳಾರಿಯಲ್ಲಿ ಶಿವಾನಂದ ಮುದ್ರಣಾಲಯುವನ್ನು ಸ್ಥಾಪಿಸಿ ನವಸಂದೇಶ ಎಂಬ ಪತ್ರಿಕೆಯಲ್ಲಿ ಕನ್ನಡ ವಾರಪತ್ರಿಕೆ ಪ್ರಾರಂಭಿಸಿದರು. ಸದರಿ ಪತ್ರಿಕೆಯಲ್ಲಿ ಕನ್ನಡ ಹೋರಾಟದ ಹಾಗೂ ಏಕೀಕರಣಕ್ಕೆ ಸಂಬಂಧಪಟ್ಟ ವಿಷಯಗಳನ್ನು ಪ್ರಕಟಿಸಿ ಎಲ್ಲಾ ಕನ್ನಡಿಗರಿಗೆ ಹಂಚುತ್ತಿದ್ದರು.

ಶ್ರೀಮಾನ್ ಕಡಪ ರಾಘವೇಂದ್ರ ರಾಯರು ೧೮೯೦ರ ದಶಕದಲ್ಲಿ ಆರಂಭಿಸಿದ ಏಕೀಕರಣ ಚಳವಳಿ ಅವರ ನಿಧನದ ನಂತರ ಸ್ವಲ್ಪ ಕುಂಠಿತವಾಗಿತ್ತು. ಇದನ್ನರಿತ ಕನ್ನಡ ಹೋರಾಟಗಾರರು ದಿನಾಂಕ ೧೩-೦೧-೧೯೩೩ರಂದು ಬಳ್ಳಾರಿಯಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಕರ್ನಾಟಕ ಸಂಘದ ಅವಶ್ಯಕತೆಯಿದೆ ಎಂದು ತೀರ್ಮಾನಮಾಡಿ ಜಿಲ್ಲೆಯ ಪುರೋಭಿವೃದ್ಧಿಯ ಕಡೆಗೆ ಲಕ್ಷಕೊಟ್ಟು ಕರ್ನಾಟಕ ಸಂಘದ ಸ್ಥಾಪನೆಯ ಮಹತ್ ಕಾರ್ಯದಲ್ಲಿ ತಾವುಗಳೆಲ್ಲಾ ಭಾಗಿಗಳಾಗಬೇಕಾಗಿ ವಿನಯ ಪೂರ್ವಕವಾಗಿ ಬೇಡಿಕೊಂಡಿರುವವರಾದ ಸರ್ವದರ್ಶನ ತೀರ್ಥ ವೈ. ನಾಗೇಶ್‌ಶಾಸ್ತ್ರಿಗಳು ಬಳ್ಳಾರಿ ಜಿಲ್ಲಾ ಬೋರ್ಡ್ ಅಧ್ಯಕ್ಷರಾದ ರಾವ್‌ಬಹದ್ದೂರ್ ವೈ. ಮಹಾಬಲೇಶ್ವರಪ್ಪನವರು ಗಮಕ ಕಲಾಪಿದ ಜೋಳದರಾಶಿ ದೊಡ್ಡನಗೌಡರು, ಏಕೀಕರಣ ಶಾಸ್ತ್ರೀ ಎಂದೇ ಹೆಸರಾಗಿದ್ದ ಹಡಗಲಿ ತಾಲ್ಲೂಕು ಮಾಗಳದ ಚಂದ್ರಶೇಖರಶಾಸ್ತ್ರೀ ನ್ಯಾಯವಾದಿ ಟಿ.ಹೆಚ್.ಎಂ. ಸದಾಶಿವಯ್ಯನವರು, ಮಾ. ಸಂತ್ಯವಂತರಾವ್, ಕೋರಿ ಸೂಗೂರಪ್ಪ ಟಿ.ಹೆಚ್.ಎಂ. ಶಿವಯ್ಯ, ಎಸ್.ಆರ್. ವಟ್ಟಂ, ಕೆ. ಗುರುರಾಜರಾವ್, ಎಸ್. ಗೋವಿಂದಾಚಾರ್ ಇನ್ನು ಮುಂತಾದ ಗಣ್ಯರು ಸಭೆಯಲ್ಲಿ ಮಾತನಾಡುತ್ತಾ ಕರ್ನಾಟಕ ಸಾಮ್ರಾಜ್ಯಲಕ್ಷ್ಮಿಯ ಹೃದಯ ಸ್ಥಾನವೆಂದರೆ ನಮ್ಮ ಬಳ್ಳಾರಿ ಮಂಡಲವೆಂದು ಹುರಿದುಂಬಿಸಿದರು. ಎಂದೆಂದಿಗೂ ಮರೆಯಲಾಗದಂತಹ ಮತ್ತು ಆಸೇತು ವಿಂಧ್ಯಾಚಲದವರೆಗೂ ತನ್ನ ವಿಜಯಭೇರಿ ನಿನಾದದಿಂದ ದೇಶವನ್ನೆಲ್ಲಾ ಧಿಮಿಗುಟ್ಟಿಸಿದ ವಿಜಯನಗರ ಸಾಮ್ರಾಜ್ಯದ ತವರು ಮನೆಯೆಂದರೆ ನಮ್ಮ ಬಳ್ಳಾರಿ ಮಂಡಲವು. ಈ ಪುಣ್ಯ ಭೂಮಿಯಲ್ಲಿ ಒಂದಾನೊಂದು ಕಾಲದಲ್ಲಿ ಚಿನ್ನದ ಹೊಗೆಯಾಡುತ್ತಿತ್ತು, ಸರಸ್ವತಿಯು ನಲಿದಾಡುತ್ತಿದ್ದಳು, ಸೌಭಾಗ್ಯಲಕ್ಷ್ಮಿ ಸುಳಿದಾಡುತ್ತಿದ್ದಳು, ವೀರನರೇಂದ್ರರು ಆಳಿ ಹೋದರು, ಕಪಿಲತಾಮಕರು ತಮ್ಮ ಸ್ವರ್ಗೀಯ ಗೀತೆಗಳನ್ನು ಹಾಡಿದರು. ಪಂಡಿತರಿಗೂ, ತತ್ವಜ್ಞಾನಿಗಳಿಗೂ, ಲಲಿತ ಕಲಾ ಸಂಪನ್ನರಿಗೂ ಇದು ಆಶ್ರಯ ಸ್ಥಾನವಾಗಿದ್ದಿತು. ಅತ್ಯುನ್ನತ ಸೌಭಾಗ್ಯ ವೈಭವ ಶಿಖರವನ್ನು ಅಲಂಕರಿಸಿತ್ತು.

ಇಂದು ನಮ್ಮ ನಾಡಿನ ಸೌಭಾಗ್ಯ ಕುಂಕುಮವು ಅಳಿಸಿ ಹೋಗಿರುವುದು ಪೂರ್ವ ಸಂಸ್ಕೃತಿ ಮಾಯವಾಗಿರುವುದು, ಸಂಪತ್ತು ಕೈ ಬಿಟ್ಟು ಹೋಗಿರುವುದು, ಬಡತನ ಬೀಡಾಗಿರುವುದು, ಇಲ್ಲಿಯವರು ನಿರ್ವೀರ್ಯರಾಗಿರುವರು, ತಮ್ಮ ಅಸ್ತಿತ್ವವನ್ನು ಕಳೆದುಕೊಂಡಿರುವರು. ಪರ ಸಂಸ್ಕೃತಿಯ

* ೩೭/೨೫ ವಿದ್ಯಾಗಿರಿ, ಅಗ್ನಿಶಾಮಕ ದಳದ ಹಿಂಭಾಗ, ಬಳ್ಳಾರಿ ಕ್ಲಬ್ ಹತ್ತಿರ, ಬಳ್ಳಾರಿ-೫೮೩೧೦೪.

ವ್ಯಾಮೋಹಕ್ಕೆ ಬಿದ್ದು ತಾವು ಯಾರೆಂಬುವುದನ್ನು ಸಹ ಮರೆತು ಹೋಗಿರುವರು. ಹೃದಯ ಸ್ಥಾನಕ್ಕೆ ರೋಗ ತಗುಲಿದರೆ ಇಡೀ ದೇಹವೇ ಹೇಗೆ ಶೂನ್ಯವಾಗಿ ಹೋಗುವುದೋ, ಅದೇ ರೀತಿ ನಮ್ಮ ಬಳ್ಳಾರಿ ಜಿಲ್ಲೆಯ ಸದ್ಯದ ಅವನತಿಯ ಸ್ಥಿತಿಯು ಇಡೀ ಕರ್ನಾಟಕವನ್ನು ಹದೆಗೆಡಿಸಿರುವುದು, ನಾವು ಕೆಟ್ಟಿರುವುದಲ್ಲದೆ ನಮ್ಮ ದೆಸೆಯಿಂದ ಇಡೀ ಕರ್ನಾಟಕವೇ ಕಳೆಗುಂದಿರುವುದು.

ಇದರ ಮೇಲಿಂದ ಕರ್ನಾಟಕದ ಸಂಸ್ಕೃತಿಯ ಪುನರುಜ್ಜೀವನ ಮಹತ್ವದ ಕಾರ್ಯದಲ್ಲಿ ನಮ್ಮ ಉತ್ತರಾದಿತ್ವವು ಎಷ್ಟಿರುವುದೆಂಬುದು ವ್ಯಕ್ತವಾಗುವುದು. ಆ ಜವಾಬ್ದಾರಿಯನ್ನು ನಾವು ನಿರ್ವಹಿಸಿಕೊಳ್ಳದೇ ಹೋದರೆ ಕನ್ನಡ ನಾಡಿನ ಪ್ರಗತಿಯು ನಮ್ಮಿಂದಲೇ ನಿಂತಿತೆಂಬ ದೊಡ್ಡ ಅಪವಾದಕ್ಕೆ ಗುರಿಯಾಗುವೆವು. ತಮ್ಮನ್ನು ತಾವೇ ಮರೆತು ಇತರರಿಗೆ ಗುಲಾಮರಾಗಿರುವವರೆಂದು ನಮ್ಮ ಕನ್ನಡ ಸಹೋದರರೇ ನಮ್ಮ ಕಡೆ ಬೆರಳು ಮಾಡಿ ತೋರಿಸಲು ಮಾರ್ಗವಾಗುವುದು. ಹಿಂದಣ ಸುದ್ಧಿಯನ್ನು ಎತ್ತಿಕೊಂಡು ಹಿತ್ತಲಲ್ಲಿ ಅಳುವವರ ಮಾತುಗಳೆಲ್ಲ ಇಂದಿನ ಮತ್ತು ಮುಂದಣದ ಬುನಾದಿಯದು. ಹಿಂದಣವನ್ನು ಬಿಟ್ಟು ಕಾಣದಿರುವುದು ಎಲ್ಲಾ ವಿಷಯಗಳಲ್ಲೂ ನಮ್ಮ ಅಭ್ಯುದಯವಾಗಬೇಕೆಂದರೆ ಮೊಟ್ಟ ಮೊದಲ ಸ್ವರೂಪ ಜ್ಞಾನವಾಗಬೇಕು. ಅರ್ಥಾತ್ ನಾವು ಕನ್ನಡಿಗರು ಎಂಬುದನ್ನು ಮನಗಾಣಬೇಕು, ಹಿಗ್ಗಬೇಕು. ನಮ್ಮದು ಉಚ್ಚ ಸಂಸ್ಕೃತಿಯೆಂದು ಹೆಮ್ಮೆ ಪಡಬೇಕು. ನಮ್ಮ ಸಂಸ್ಕೃತಿಯ ಪರಿಜ್ಞಾನವೇ ನಮಗಿಲ್ಲದೇ ಹೋದರೆ ಅದರ ಬಗ್ಗೆ ನಾವು ಹೆಮ್ಮೆ ಪಡುವುದೆಂತು? ಅದರಂತೆಯೇ ನಮ್ಮ ಜೀವನ ಕ್ರಮವನ್ನು ತಿದ್ದಿಕೊಳ್ಳುವುದೆಂತು? ಯಾವುದೊಂದು ಜನಾಂಗದ ಸಂಸ್ಕೃತಿಗೂ, ಅವರ ಮಾತೃಭಾಷೆಗೂ ಅತ್ಯಂತ ನಿಕಟ ಸಂಬಂಧವಿದ್ದು ಆ ಜನಾಂಗದ ಸಂಸ್ಕೃತಿಯ ಪರಿಚಯವಾಗಬೇಕಾದರೆ ಅವರ ಮಾತೃಭಾಷೆಯ ಪರಿಚಯವಾಗಲಿಕ್ಕೇಬೇಕು. ನಮ್ಮ ದೌರ್ಭಾಗ್ಯ ಪ್ರಭಾವದಿಂದ ನಮ್ಮ ತಾಯ್ನಾಡಿನ ಪರಿಚಯವೇ ನಮಗಿಲ್ಲವಾಗಿದ್ದು ನಮ್ಮ ಸಂಸ್ಕೃತಿಯ ಪರಿಚಯವೆಂತಾಗಬೇಕು? ನಾವು ಸುಸಂಸ್ಕೃತರೆಂದು ಯಾರು ಹೇಗೆ ಕರೆಯಬೇಕು. ನಮ್ಮ ಶಿಕ್ಷಣವು ನಮ್ಮ ಮಾತೃಭಾಷೆಯಲ್ಲಾದರೇನೆ ನಮ್ಮ ಸಂಸ್ಕೃತಿಯ ಪರಿಚಯವು ನಮಗಾಗಿ ಕಳೆದುಹೋದ ಅಸ್ತಿತ್ವವನ್ನು ಪುನಃ ದೊರಕಿಸಿಕೊಂಡಾಗಿ ಸುಸಂಸ್ಕೃತ ಜನಾಂಗದ ಏಕತೆಯಲ್ಲಿ ನಾವು ಸೇರುವೆವು. ಕಾರಣ ಮೊಟ್ಟಮೊದಲು ನಮ್ಮ ಬಳ್ಳಾರಿ ಜಿಲ್ಲೆಯ ಮೂಲೆ ಮೂಲೆಗಳಲ್ಲೂ ಕನ್ನಡ ಭಾಷೆಯ ಪ್ರಚಾರ ಆಗಬೇಕು. ಕನ್ನಡ ವಾಙ್ಮಯದ ಪ್ರಚಾರವಾಗಬೇಕು. ಇಂದಿನಿಂದ ಕನ್ನಡ ಸಂಸ್ಕೃತಿಯು ತನ್ನಷ್ಟಕ್ಕೆ ತಾನೆ ಪುನರುಜ್ಜೀವಿತವಾಗುವುದು. ನಾವು ಕನ್ನಡಿಗರು ನಮ್ಮ ಸಂಸ್ಕೃತಿಯು ಉಚ್ಚತಮವಾದುದು ಎಂಬ ಸ್ವಾಭಿಮಾನ ಪೂರಿತ ಭಾವನೆಯು ನಮ್ಮ ಜಿಲ್ಲೆಯವರಲ್ಲಿ ನೆಲೆಗೊಳ್ಳಬೇಕು. ಕೆಲವು ಚಾರಿತ್ರಿಕ ಘಟನೆಗಳ ಕಾರಣಗಳಿಂದ ನಮ್ಮ ತಾಯ್ನುಡಿಯನ್ನು ಅನ್ಯಭಾಷೆಯ ಮೋಹದ ಜಾಲದಲ್ಲಿ ಬಿದ್ದಿರುವೆವು. ನಮ್ಮ ಸಂಸ್ಕೃತಿಯನ್ನು ಮರೆತು ಅನ್ಯ ಸಂಸ್ಕೃತಿಯಲ್ಲಿ ಲೋಲಾಡುತ್ತಿರುವೆವು. ಸ್ವಭಾಷೆಯ ಮತ್ತು ಸ್ವಸಂಸ್ಕೃತಿಯ ಪುನರುಜ್ಜೀವನವಾಗಬೇಕಾದರೆ ನಮ್ಮ ಜಿಲ್ಲೆಯಲ್ಲಿಯೇ ದೊಡ್ಡ ಆಂದೋಲನವೇ ಏಳಬೇಕಾಗಿರುವುದು. ಈ ಆಂದೋಲನಕ್ಕೆ ಸಂಘಶಕ್ತಿಯ ಪ್ರಾಥಮಿಕ ಶಿಕ್ಷಣ ತಾಯ್ನುಡಿಯಾದ ಕನ್ನಡ ಭಾಷೆಯಲ್ಲಿ ಆಗಬೇಕೆಂಬ ನಮ್ಮ ದೀರ್ಘಕಾಲದ ರೋದನವು ಅರಣ್ಯ ರೋದನವಾಗಿರುವುದಕ್ಕೆ ನಮ್ಮ ಸಂಘದಲ್ಲಿ ಬಲವಿಲ್ಲದಿದ್ದುದು ಕಾರಣವು. ಇಷ್ಟೊಂದು ಅಲ್ಪಕಾರ್ಯವು ನಮ್ಮಿಂದ ನೆರವೇರದೆ ಹೋದಲ್ಲಿ ದೊಡ್ಡ ಪ್ರಶ್ನೆಯಾದ ಕರ್ನಾಟಕ ಪ್ರಾಂತ ರಚನೆ, ಕರ್ನಾಟಕ ವಿಶ್ವವಿದ್ಯಾಲಯದ ನಿರ್ಮಾಣ ಮುಂತಾದ ನಮ್ಮ ಕನಸುಗಳು ಬರೀ ಕನಸುಗಳಾಗಿ ಉಳಿಯುವುದರಲ್ಲಿ ಸಂದೇಹವಿಲ್ಲ. ಕಾರಣ ಕರ್ನಾಟಕ ಸಂಘದ ಬಲವನ್ನು ಸಂಗ್ರಹಿಸುವುದಕ್ಕಾಗಿ ನಮ್ಮ ಬಳ್ಳಾರಿಯಲ್ಲಿ ಕರ್ನಾಟಕ ಸಂಘವೆಂಬ ಸಂಸ್ಥೆಯ ಅವಶ್ಯಕತೆಯಿದೆ ಎಂದು ತಾರೀಖು ೧೩-೦೧-೧೯೩೫ರಲ್ಲಿ ಬಳ್ಳಾರಿಯಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ತೀರ್ಮಾನಿಸಲಾಯಿತು.

ದಿನಾಂಕ ೮-೦೨-೧೯೩೫ರಂದು ಸಭೆ ಸೇರಿ ಬಳ್ಳಾರಿಯಲ್ಲಿ ಕರ್ನಾಟಕ ಸಂಘದ ಸ್ಥಾಪನೆಯಾಯಿತು. ಇಲ್ಲಿಯ ವೀರಶೈವ ಶಾಲೆಯ ಸಭಾಂಗಣದಲ್ಲಿ ವಿದ್ವಾನ್ ಪಂಡಿತ ವೈ.ನಾಗೇಶಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಬಳ್ಳಾರಿ ಜಿಲ್ಲಾ ಬೋರ್ಡ್ ಅಧ್ಯಕ್ಷರಾದ ವೈ.ಮಹಾಬಲೇಶ್ವರಪ್ಪನವರನ್ನು ಬಳ್ಳಾರಿ ಜಿಲ್ಲಾ ಕರ್ನಾಟಕ ಸಂಘದ ಅಧ್ಯಕ್ಷರಾಗಿ ಆರಿಸಿದರು. ಎಸ್.ಆರ್.ವಟ್ಟಂ ಹಾಗೂ ಕೆ.ಗುರುರಾಜ್‌ರಾವ್ ಇವರನ್ನು ಉಪಾಧ್ಯಕ್ಷರನ್ನಾಗಿ ಆರಿಸಿದರು. ಟಿ.ಹೆಚ್.ಎಂ. ಶಿವಯ್ಯನವರನ್ನು ಕಾರ್ಯದರ್ಶಿಯಾಗಿ ಹಾಗೂ ಎಸ್. ಗೋವಿಂದಾಚಾರ್ಯರನ್ನು ಸಹಕಾರ್ಯದರ್ಶಿಯಾಗಿ ಆರಿಸಲಾಯಿತು. ಸಂಘವು ಅಸ್ತಿತ್ವಕ್ಕೆ ಬಂದ ಮೇಲೆ ದಿನಾಂಕ ೨೪-೦೨-೧೯೩೫ನೇ ಭಾನುವಾರ ಸಾಯಂಕಾಲ ೬.೧೦ಗಂಟೆಗೆ ಇಲ್ಲಿಯ ವೀರಶೈವ ಶಾಲೆಯಲ್ಲಿ ಸಾರ್ವಜನಿಕ ಸಭೆ ಸೇರಿ ಕರ್ನಾಟಕ ಸಂಘದ ವತಿಯಿಂದ ಏಕೀಕರಣ ಹೋರಾಟಕ್ಕೆ ಸಿದ್ಧತೆ ಮಾಡಿಕೊಳ್ಳಲಾಯಿತು. ನವದೆಹಲಿಯಲ್ಲಿರುವ ವೈಸರಾಯರ ಆಪ್ತ ಕಾರ್ಯದರ್ಶಿಗೆ ಪತ್ರ ಬರೆದು ಕರ್ನಾಟಕ ಪ್ರಾಂತ ರಚನೆಗೆ ಒಪ್ಪಿಗೆ ಕೊಡಬೇಕೆಂದು ಪತ್ರ

ಬರೆಯಲಾಯಿತು. ಕರ್ನಾಟಕ ಸಂಘದ ವತಿಯಿಂದ ಕರ್ನಾಟಕ ಸಪ್ತಾಹದ ಸಾಹಿತ್ಯೋತ್ಸವವನ್ನು ದಿನಾಂಕ ೨೨-೦೨-೧೯೩೫ರಿಂದ ೨೮-೦೬-೧೯೩೫ರ ವರೆಗೆ ಪೂರ್ತಿಯಾಗಿ ಬಳ್ಳಾರಿಯ ಪುರಭವನದಲ್ಲಿ ಅತ್ಯಂತ ಉತ್ಸಾಹದಿಂದಲೂ ಅಭಿಮಾನದಿಂದಲೂ ನಡೆಸಿದ್ದರು. ಬಳ್ಳಾರಿ ನಗರದ ನಿವಾಸಿಗಳಿಗೂ ಸುತ್ತಮುತ್ತಲಿನ ಊರುಗಳಿಂದ ಆಗಮಿಸಿದ ಜನರಿಗೆ ಒಂದು ಹೊಸ ಮಾದರಿಯ ಹಬ್ಬದಂತಿತ್ತು. ಕರ್ನಾಟಕ ಪ್ರಾಂತದ ಪ್ರಾರಂಭೋತ್ಸವವನ್ನು ರಂಗನಾಥ್. ರಾಮಚಂದ್ರ ದಿವಾಕರ್ ಪರವಾಗಿ ಧಾರವಾಡದ ಮುದುವೇಡು ಕೃಷ್ಣರಾಯರು ಕನ್ನಡದ ವೀರ ಘರ್ಜನೆಯ ಸಿಂಹನಾದದಿಂದ ಪ್ರಾರಂಭೋತ್ಸವ ಮಾಡುತ್ತಾ ಬಳ್ಳಾರಿಯು ಕರ್ನಾಟಕದ ಗಡಿನಾಡಲ್ಲ ನಡುನಾಡು, ಅಚ್ಚಕನ್ನಡ ನಾಡು ಬಳ್ಳಾರಿ ಜಿಲ್ಲೆಯ ತರುಣರೇ ಕನ್ನಡ ಸಂಸ್ಕೃತಿಯನ್ನು ಕಾಪಾಡಲು ನಡುಗಟ್ಟಿ ನಿಲ್ಲಿರಿ ಎಂದು ಉದ್ಘಾರತೆಗೆದರು. ಅಧ್ಯಕ್ಷತೆಯನ್ನುವಹಿಸಿದ ಬೆಲ್ಲೋಣಿ ಭೀಮರಾಯ ವಕೀಲರು ಹಾಗೂ ಗಮಕಿಗಳಾದ ಜೋಳದರಾಶಿ ದೊಡ್ಡನಗೌಡರು ಏಕೀಕರಣದ ಬಗ್ಗೆ ಮಾತನಾಡಿದರು. ೨೪-೦೬-೧೯೩೫ರಂದು ಅಧ್ಯಕ್ಷತೆಯನ್ನು ಆರ್ಕಾಟ್ ಭೀಮಚಾರ್ಯರು ವಹಿಸಿದ್ದರು. ಪರಿವೀಕ್ಷಕರಾಗಿ ವಿದ್ವಾನ್ ವೈ. ನಾಗೇಶಶಾಸ್ತ್ರಿಗಳು. ಎಂ.ಜಿ. ವೆಂಕಟೇಶ್ವರಯ್ಯ ಇವರು ಆಗಮಿಸಿದ್ದರು. ಏಕೀಕರಣದ ಚರ್ಚೆಯ ನಂತರ ಉಪಸಂಹಾರದಲ್ಲಿ ಶಕುಂತಲ ನಾಟಕದ ಕೆಲವು ದೃಶ್ಯಗಳನ್ನು ಸುಶ್ರಾವ್ಯವಾಗಿ ಹಾಡಿದರು. ೨೬-೦೬-೧೯೩೫ ಮಂಗಳವಾರ ಹಿಂದೂಸ್ಥಾನದಲ್ಲಿ ಕರ್ನಾಟಕದ ಸ್ಥಾನ ಎಂಬ ವಿಷಯವನ್ನು ಧಾರವಾಡದ ಕರ್ನಾಟಕ ಇತಿಹಾಸ ಸಂಶೋದನ ಮಂಡಲದ ರಾಜಪುರೋಹಿತರು ಮುಖ್ಯ ಭಾಷಣಕಾರರಾಗಿ ಮಾತನಾಡಿ ದರು. ಅಂದಿನ ಅಧ್ಯಕ್ಷತೆಯನ್ನು ಕನಕಪುರ ಗುರುರಾಜ ರಾಯರು ವಹಿಸಿದ್ದರು. ದಿನಾಂಕ ೨೬-೦೬-೧೯೩೫ ಬುಧವಾರ ಪ್ರಾತಃ ಕಾಲ ೭ ಗಂಟೆಯಿಂದ ೯.೩೦ ಗಂಟೆಯ ವರೆಗೆ ಸಿಂದಗಿರಿಯಲ್ಲಿ ಬಾವಿಯಲ್ಲಿ ಈಜುವ ಸ್ಪರ್ಧೆ ಮತ್ತು ಜಲಸ್ಥಂಭದ ಪ್ರದರ್ಶನಗಳು ನಡೆದವು. ಸಾಯಂಕಾಲ ೫ ಗಂಟೆಗೆ ಮಹಿಳೆಯರ ದಿನ ಹೊಸಪೇಟೆಯ ಡಾ॥ ಸಾವಿತ್ರಿಬಾಯಿ ನಾಗನಗೌಡ ಇವರು ಕರ್ನಾಟಕದಲ್ಲಿ ಸ್ತ್ರೀಯರ ಸ್ಥಾನ ಎಂಬ ವಿಷಯದ ಬಗ್ಗೆ ಮಾತನಾಡಿದರು. ಅಧ್ಯಕ್ಷತೆಯನ್ನು ಜಿಷನ್ ರತ್ನ ಕೃಷ್ಣವೇಣಮ್ಮ ನವರು ವಹಿಸಿದ್ದರು. ೨೭-೦೬-೧೯೩೫ ಗುರುವಾರ ಸಾಯಂಕಾಲ ೫.೩೦ ಗಂಟೆಗೆ ಕನ್ನಡ ಸಾಹಿತ್ಯವು ಮತ್ತು ವೀರಶೈವ ಕವಿಗಳು ಎಂಬ ವಿಷಯದ ಬಗ್ಗೆ ದಾವಣಗೆರೆಯ ಪ್ರೇಮದ ಬಳ್ಳಿಯ ಬಳಗದ ಮಲ್ಲಾಬಾದಿ ವೀರಭದ್ರಪ್ಪನವರು ಮುಖ್ಯ ಭಾಷಣಕಾರರಾಗಿ ಮಾತನಾಡಿದರು. ನಂತರ ಅಧ್ಯಕ್ಷತೆ ವಹಿಸಿದ್ದ ವಿದ್ವಾನ್ ಸರ್ವದರ್ಶನ ತೀರ್ಥ ವೈ. ನಾಗೇಶ ಶಾಸ್ತ್ರಿಗಳು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಏಕೀಕರಣದ ಗೊತ್ತು-ಗುರಿಗಳನ್ನು ವಿವರಿಸಿದರು. ಕೊನೆಯ ದಿನ ೨೮-೦೬-೧೯೩೫ ಶುಕ್ರವಾರ ವಿದ್ಯಾರಣ್ಯರ ಪುಣ್ಯತಿಥಿಯನ್ನು ಆಚರಿಸಲಾಯಿತು. ಅಧ್ಯಕ್ಷತೆಯನ್ನು ವೈ. ಮಹಾಬಲೇಶ್ವರಪ್ಪ ನವರು ವಹಿಸಿದ್ದರು. ಮುಖ್ಯ ಭಾಷಣಕಾರರಾಗಿ ಧಾರವಾಡದ ಖ್ಯಾತ ಸಾಹಿತಿ ರಂಗನಾಥ್ ರಾಮಚಂದ್ರದಿವಾಕರ್ ಆಗಮಿಸಿದ್ದರು. ಮೇಲಿನ ಎಲ್ಲಾ ಕಾರ್ಯಕ್ರಮಗಳನ್ನು ಬಳ್ಳಾರಿ ಜಿಲ್ಲಾ ಕರ್ನಾಟಕ ಸಂಘದ ಕಾರ್ಯದರ್ಶಿಗಳಾದ ಟಿ.ಹೆಚ್.ಎಂ. ಶಿವಯ್ಯನವರು ನೆರವೇರಿಸಿ ಏಕೀಕರಣದ ಬಗ್ಗೆ ಸಮಾಲೋಚನೆ ಮಾಡಿದ ಎಲ್ಲಾ ಕನ್ನಡಿಗರಿಗೂ ಅಭಿನಂದಿಸಿದರು. ದಿನಾಂಕ ೧೪-೧೦-೧೯೩೬ರಂದು ವಾರ್ಡ್ಲಾ ಹೈಸ್ಕೂಲಿನಲ್ಲಿ ಕರ್ನಾಟಕ ಸಂಘದ ಸಭೆ ಸೇರಿ ಬಿ.ಎಂ. ಶ್ರೀಕಂಠಯ್ಯ ಪ್ರೊಫೆಸರ್ ಸೆಂಟ್ರಲ್ ಕಾಲೇಜು, ಇವರು ಕನ್ನಡದ ಹೆಮ್ಮೆ ಎಂಬ ವಿಷಯದ ಬಗ್ಗೆ ಭಾಷಣ ಮಾಡುತ್ತಾ ಏಕೀಕರಣ ಹೋರಾಟದಲ್ಲಿ ಎಲ್ಲರೂ ಭಾಗವಹಿಸಬೇಕೆಂದು ಮನವಿ ಮಾಡಿದರು. ಈ ಸಭೆಯ ಅಧ್ಯಕ್ಷತೆಯನ್ನು ಶ್ರೀಯುತ ಆರ್ಕಾಟ್ ಭೀಮಾಚಾರ್ಯರು ವಹಿಸಿದ್ದರು. ದಿನಾಂಕ ೧೫-೧೦-೧೯೩೬ನೇ ಬುಧವಾರ ವೀರಶೈವ ಶಾಲೆಯಲ್ಲಿ ಬಿ.ಎಂ. ಶ್ರೀಕಠಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಈ ಸಭೆಯಲ್ಲಿ ಕರ್ನಾಟಕ ಸಂಘದ ಸಹ ಕಾರ್ಯದರ್ಶಿಗಳಾದಗಿದ್ದ ಗೋವಿಂದಾಚಾರ್ಯರು ಧಾರವಾಡದಲ್ಲಿ ಪರಲೋಕ ವಾಸಿಯಾದ ಪ್ರಯುಕ್ತ ದುಃಖ ಪ್ರದರ್ಶನ ಸಭೆ ನಡೆಯಿತೆಂದು ಕಾರ್ಯದರ್ಶಿಯಾದ ಟಿ.ಹೆಚ್.ಎಂ. ಶಿವಯ್ಯನವರು ತಿಳಿಸಿರುತ್ತಾರೆ. ದಿನಾಂಕ ೧೨-೧೧-೧೯೩೭ರಂದು ಮುನಿಸಿಪಾಲಿಸಿಟಿ ಹೈಸ್ಕೂಲಿನಲ್ಲಿ ವೈ. ಮಹಾಬಲೇಶ್ವರಪ್ಪ ನವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಸಾಹಿತ್ಯ ಸಮ್ಮೇಳನ ಜರುಗಿಸಲು ಕಾರ್ಯನಿರ್ವಾಹಕ ಕಮಿಟಿಯನ್ನು ಮಾಡಲು ನಿರ್ಧರಿಸಿದರು. ದಿನಾಂಕ ೧೪-೧೧-೧೯೩೭ ರಂದು ೧೨ ಜನರುಳ್ಳ ಕಾರ್ಯಕಾರಿ ಸಮಿತಿಯನ್ನು ರಚಿಸಲಾಯಿತು ಹಾಗೂ ಈ ಸಮ್ಮೇಳನದಲ್ಲಿ ಕರ್ನಾಟಕ ಏಕೀಕರಣಕ್ಕೆ ಹೋರಾಟ ಮಾಡಲು ತೀರ್ಮಾನಿಸಲಾಯಿತು. ವೈ. ಮಹಾಬಲೇಶ್ವರಪ್ಪ, ಜಿ. ಭೀಮರಾವ್, ಜಿ. ತಿಮ್ಮಪ್ಪ ಎಸ್.ಎಂ. ಸಿಂದಗಿ, ಜಿ.ಎಂ. ರೇವಣ್ಣಸಿದ್ಧಯ್ಯ, ಮೇಟಿ ದೊಡ್ಡಪ್ಪ ಎಸ್. ಗವಿಸಿದ್ದಪ್ಪ ಎಂ. ಭೀಮಸೇನಾಚಾರ್, ಹೆಚ್. ಬಸವನಗೌಡ, ಕೆ. ಗುರುರಾಜರಾವ್, ಶಿವಚನ್ನ ಬಸವಸ್ವಾಮಿ, ಎನ್.ಆರ್. ಗಂಗಾವತಿ. ಇದೇ ಸಂಭರ್ಧದಲ್ಲಿ ಕರ್ನಾಟಕ ಸಂಘದ

ಕಾರ್ಯದರ್ಶಿಗಳಾದ ಟಿ.ಹೆಚ್. ಶಿವಯ್ಯನವರು ಮೂರುದಿನ ನಾಡಹಬ್ಬವನ್ನು ಆಚರಿಸಲು ಅಂಗೀಕರಿಸಿದರು. ದಿನಾಂಕ ೭-೦೮-೧೯೩೫ರಂದು ಬೆಂಗಳೂರಿನ ಕ.ಸಾ.ಪ. ಕಾರ್ಯದರ್ಶಿ ಎಂ.ವಿ. ಸೀತಾರಾಮಯ್ಯನವರು ಬಳ್ಳಾರಿ ಜಿಲ್ಲೆಯ ಕರ್ನಾಟಕ ಸಂಘದ ಕಾರ್ಯದರ್ಶಿಯಾದ ಟಿ.ಹೆಚ್.ಎಂ. ಶಿವಯ್ಯನವರಿಗೆ ಪತ್ರ ಬರೆದು ತಾವು ಅಭಿಮಾನವಿಟ್ಟು ಕಳುಹಿಸಿ ಕೊಟ್ಟ ಸಂಘದ ಕರ್ನಾಟಕ ಸಪ್ತಾಹದ ವರದಿ ತಲುಪಿದೆ. ಇದು ಅಖಂಡ ಕರ್ನಾಟಕಕ್ಕೆ ಸಂಬಂಧಿಸಿದ್ದರಿಂದ ಇದನ್ನು ಪರಿಷತ್ತಿನ ಪತ್ರಿಕೆಯಲ್ಲಿ ಪ್ರಕಟಿಸುವುದಾಗಿ ಕೇಳಿ ತರಿಸಿಕೊಂಡಿದ್ದೇವೆ. ಕಾರಣ ತಮ್ಮ ಕರ್ನಾಟಕ ಸಂಘವನ್ನು ನಮ್ಮ ಪರಿಷತ್ತಿನಲ್ಲಿ ವಿಲೀನದಿನಾಂಕ ೧೨-೧೧-೧೯೩೭ರಂದು ಮುನಿಸಿಪಾಲಿಟಿ ಹೈಸ್ಕೂಲಿನಲ್ಲಿ ವೈ.ಮಹಾಬಲೇಶ್ವರಪ್ಪ ಅಧ್ಯಕ್ಷತೆಯಲ್ಲಿ ಕರ್ನಾಟಕ ಸಾಹಿತ್ಯ ಸಮ್ಮೇಳನ ಜರುಗಿಸಲು ಕಾರ್ಯನಿರ್ವಾಹಕ ಕಮಿಟಿಯನ್ನು ಮಾಡಲು ನಿರ್ಧರಿಸಿದರು. ದಿನಾಂಕ ೧೪-೧೧-೧೯೩೭ರಂದು ೧೨ ಜನರುಳ್ಳ ಕಾರ್ಯಕಾರಿ ಸಮಿತಿಯನ್ನು ರಚಿಸಲಾಯಿತು. ಈ ಸಮ್ಮೇಳನದಲ್ಲಿ ಕರ್ನಾಟಕ ಏಕೀಕರಣಕ್ಕೆ ಹೋರಾಟ ಮಾಡಲು ತೀರ್ಮಾನಿಸಲಾಯಿತು. ವಿಲೀನಗೊಳಿಸಬೇಕೆಂದು ಕೇಳಿಕೊಂಡಿದ್ದರು. ಎರಡು ಸಂಸ್ಥೆಗಳು ಪರಸ್ಪರ ಕಲೆತು ಕನ್ನಡದ ಸೇವೆಯನ್ನು ಹಾಗೂ ಏಕೀಕರಣ ಹೋರಾಟವನ್ನು ಮಾಡುವಂತಾಗಿಸಬೇಕೆಂದು ನಾನು ಈ ಸಂದರ್ಭದಲ್ಲಿ ತಮಗೆ ಸೂಚಿಸಲು ಇಚ್ಛಿಸುತ್ತೇನೆ.

ಬಳ್ಳಾರಿಯಲ್ಲಿ ಕನ್ನಡದ ಚಳವಳಿ ಜೋರಾಗಿ ನಡೆಯುತ್ತಿದೆ ಎಂದು ಕೇಳಿ ಅತ್ಯಂತ ಸಂತೋಷವಾಗಿದೆ. ನಿಮ್ಮ ಕರ್ನಾಟಕ ಸಂಘದ ವತಿಯಿಂದ ಹಮ್ಮಿಕೊಂಡ ಏಕೀಕರಣ ಹೋರಾಟ ಯಶಸ್ವಿಯಾಗಲೆಂದು ಹಾರೈಸಿದರು. ಕರ್ನಾಟಕ ಸಂಘದ ಅಧ್ಯಕ್ಷರಾಗಿದ್ದ ವೈ. ಮಹಾಬಲೇಶ್ವರ ನವರ ಬಹುಮುಖ ಪ್ರತಿಭೆಯನ್ನು ಕನ್ನಡ ಸೇವೆಯನ್ನು ಗುಣಗೌರವ ಪ್ರತಿಷ್ಠೆಯನ್ನು ಔದಾರ್ಯ, ಗಾಂಭೀರ್ಯಾರಿ ವರ್ಚಸ್ಸಿನಿಂದ ಕೂಡಿದ ವ್ಯಕ್ತಿತ್ವವನ್ನು ಮನಗಂಡ ಅಂದಿನ ಆಂಗ್ಲರ ಸಾರ್ವಭೌಮರ ಸರ್ಕಾರ ಮೂರಸಲ ಅವರನ್ನು ಗೌರವಿಸಿದರು. ೧೯೩೫ರಲ್ಲಿ ಜಾರ್ಜ್ ಸಾರ್ವಭೌಮರ ಸ್ಮಾರಕ ಪದಕವನ್ನಿತ್ತು, ೧೯೩೭ರಲ್ಲಿ ಎಡ್ವರ್ಡ್ ಸಾರ್ವಬೌಮರ ಪಟ್ಟಾಭಿಷೇಕ ಸ್ಮಾರಕ ಪದಕವನ್ನಿತ್ತು ಮತ್ತು ೧೯೪೨ರಲ್ಲಿ 'ರಾವ್‌ಬಹುದ್ದೂರ್' ಎಂಬ ಪ್ರಶಸ್ತಿಯನ್ನಿತ್ತು ಗೌರವಿಸಿದರು. ಆಗ ಬಳ್ಳಾರಿ ನಾಗರಿಕರು ಹಿಗ್ಗಿನ ಹಬ್ಬವನ್ನೇ ಆಚರಿಸಿದರು. ೧೫-೦೭-೧೯೪೨ರಂದು ಮದ್ರಾಸ್ ಗವರ್ನರ್ ಆಗಿದ್ದ. ಸರ್. ಆರ್ಥರ್ ಹೋಪರ್ ಬಳ್ಳಾರಿಗೆ ದಯಮಾಡಿಸಿ ತಮ್ಮ ಭಾಷಣದ ನಂತರ ಮಹಾಬಲೇಶ್ವರಪ್ಪನವರಿಗೆ ರಾವ್‌ಬಹುದ್ದೂರ್ ಬಿರುದನ್ನು ಸ್ವಹಸ್ತದಿಂದ ನೀಡಿ ಪ್ರಶಂಸಿದರು. ಅವರ ಯೋಗ್ಯತೆಯನ್ನು ಪರದೇಶದ ಪರಕೀಯರು ಗುರ್ತಿಸಿ ಗೌರಪಿಸಿದರೆ, ಸ್ವತಂತ್ರ ಭಾರತದ ಸ್ವದೇಶದ ಸ್ವಕೀಯರು ಗುರುತಿಸಲಿಲ್ಲವೆಂಬುದು ವಿಷಾದದ ಮಾತು.

ಅಡಿಟಿಪ್ಪಣಿಗಳು

೧. **ಕರ್ನಾಟಕ ಏಕೀಕರಣ ಇತಿಹಾಸ,** ಡಾ. ಹೆಚ್.ಎಸ್. ಗೋಪಾಲರಾವ್.

೨. **ಕರ್ನಾಟಕ ಏಕೀಕರಣ ಸಿದ್ಧಿ ಮತ್ತು ಸಾಧನೆ,** ಡಾ. ಸೂರ್ಯನಾಥ್ ಕಾಮತ್.

೩. **ಕರ್ನಾಟಕ ಏಕೀಕರಣ,** ನ್ಯಾಯಾಧೀಶ ಕೋ. ಚನ್ನಬಸಪ್ಪ.

೪. ಹಳೆಯ ಪತ್ರಿಕೆಗಳು ಮತ್ತು ೧೯೩೫-೩೬ ನವಸಂದೇಶ ಪತ್ರಿಕೆಗಳು.

೫. **ಕರ್ನಾಟಕ ಏಕೀಕರಣದಲ್ಲಿ ಕರ್ನಾಟಕ ಸಂಘಗಳ ಪಾತ್ರ,** ಡಾ. ಜಯದೇವಪ್ಪ ಜೈನಕೇರಿ. ಇತಿಹಾಸ ದರ್ಶನ ಸಂಪುಟ ೨೮/೨೦೦೯.

೧೦೮

ಅಥಣಿ ಪುರಸಭೆ

ಡಾ. ಮಿಸ್. ಎಮ್.ಎಮ್. ಗೊಂದಿ*

ಬೆಳಗಾಂವ ಜಿಲ್ಲೆಯ **ಅಥಣಿಯನ್ನು** ಕ್ರಿ.ಶ. ೧೬೩೯ರಲ್ಲಿ ಜರ್ಮನಿ ಪ್ರವಾಸಿಗ ಮಂಡೆಲ್ ಸ್ಲೂ ಎಂಬಾತ ಅಥಣಿಗೆ 'ಅಟ್ಟನಿ' ಎಂದು ಕರೆದಿದ್ದಾನೆ. ಆಂಗ್ಲ ಪ್ರವಾಸಿಗ ಪ್ಲೇಮರನು ಅಥಣಿಗೆ 'ಹಟ್ಟೇನಿ' ಎಂದರೆ ಹಸ್ತಿನಿ (ಹೆಣ್ಣಾನೆ)ಯಿಂದ ಅಸ್ತಿನಿ, ಅಧನಿ–ಅಥಣಿ ಆಗಿರಬೇಕೆಂದು ಹೇಳಿದ್ದಾರೆ. ಬೆಳವಡ ನಾಡಿನಲ್ಲಿರುವ ಅಥಣಿ ಅಥೇನ್ಸನಷ್ಟೆ ಖ್ಯಾತ (ವ್ಯಾಪಾರಿ) ಪಟ್ಟಣವಾಗಿರುವುದರಿಂದ ಈ ನಗರಕ್ಕೆ ಅಥೆನ್ಸ್ ಎಂದಾಗಿರಬೇಕು ಎಂದು ಬಿ.ಎಂ. ಶ್ರೀಕಂಠಯ್ಯನವರು ಹೇಳಿದ್ದಾರೆ. ಪ್ರಾಚೀನ ಕಾಲದಲ್ಲಿ ಬೆಳವಲ ನಾಡಿನಲ್ಲಿ ಅಥಣಿ ಅಂತರ್ಗತವಾಗಿದ್ದಿತು.

೧೯೫೬ರ ಭಾಷಾವಾರು ಪ್ರಾಂತ್ಯ ವಿಂಗಡನೆಗೆ ಮುಂಚೆ ಬೆಳಗಾಂವ ಬಾಂಬೆ ಪ್ರಾಂತ್ಯಕ್ಕೆ ಸೇರಿತ್ತು ೧೮೩೦ರ ಪೂರ್ವದಲ್ಲಿ ಮರಾಠರ ಅಧೀನದಲ್ಲಿತ್ತು. ನಂತರ ಬ್ರಿಟಿಷರು ಭಾರತ ಸರ್ಕಾರದ ಆದೇಶಕ್ಕೆ ಒಳಪಡಿಸಿದರು. ಕ್ರಿ.ಶ. ೧೮೩೬ ಏಪ್ರಿಲ್ ೨೮ರಂದು ಬಾಂಬೆ ಸರ್ಕಾರ ಧಾರವಾಡ ಕಲೆಕ್ಟೋರೆಟನ್ನು ಉತ್ತರ ಮತ್ತು ದಕ್ಷಿಣ ಎಂದು ಎರಡು ಭಾಗವಾಗಿಸುವ ನಿರ್ಧಾರ ಕೈಕೊಂಡಿದ್ದು ಅದರಂತೆಯೆ ಅಂದಿನ ಧಾರವಾಡ ಕಲೆಕ್ಟರುಗಳಾದ ಮಿ. ಡನಲೋಪ ಧಾರವಾಡ ಮತ್ತು ಬೆಳಗಾಂವ ಕಲೆಕ್ಟೋರೇಟ ಎಂದು ವಿಭಾಗಿಸಿದನು. ಮೇ ೩, ೧೮೩೬ರಂದು ಎ. ರ‍್ಯಾವನ್ಸ್ ಸ್ಕ್ರಾಪ್ ಪ್ರಥಮ ಅಸಿಸ್ಟೆಂಟ್ ಕಲೆಕ್ಟರ್ ಆಗಿ ಅಧಿಕಾರ ವಹಿಸಿಕೊಂಡರು.

ಕರ್ನಾಟಕದಲ್ಲಿ ನಗರಾಡಳಿತ ಪದ್ಧತಿ ಪ್ರಾಚೀನ ಕಾಲದಿಂದಲೂ ಜಾರಿಯಲ್ಲಿತ್ತು. ಬಾಂಬೆ ಕರ್ನಾಟಕದಲ್ಲಿ ೧೮೫೦ರ ಕಾಯ್ದೆಯ ೨೬ನೆಯ ನಿಯಮದಂತೆ ನಗರ ಸಭೆಗಳು ಅಸ್ತಿತ್ವಕ್ಕೆ ಬಂದವು. ಈ ನಿಯಮದಡಿಯಲ್ಲಿ ನಗರದ ಪ್ರಜೆಗಳು ತಮ್ಮ ನಗರಗಳಲ್ಲಿ ಪುರಸಭೆಗಳನ್ನು ಸ್ಥಾಪಿಸುವ ಮತ್ತು ತೆರಿಗೆಯನ್ನು ನೀಡುವುದರ ಬಗ್ಗೆ ಜನಾಭಿಪ್ರಾಯ ಸಂಗ್ರಹಿಸಿ ಲಿಖಿತ ರೂಪದಲ್ಲಿ ಸರ್ಕಾರಕ್ಕೆ ಮನವಿ ಸಲ್ಲಿಸಬೇಕಾಗಿತ್ತು. ಅದರಂತೆ ಸಂಗ್ರಹಿಸಿದ ತೆರಿಗೆಯನ್ನು ಸಾರ್ವಜನಿಕ ಕಾರ್ಯಗಳಿಗೆ ಬಳಸುತ್ತಿದ್ದರು. ೧೮೬೨ರಲ್ಲಿ ಜಾರಿಗೆ ಬಂದ ಇನ್ನೊಂದು ಕಾನೂನು ಈ ಹಿಂದೆ ನೇಮಕಗೊಂಡಿದ್ದ ನಗರಸಭೆಯ ಆಯುಕ್ತರ ಅಧಿಕಾರವನ್ನು ಹೆಚ್ಚಿಸಿ ಅವರಿಗೆ ಆಸ್ಪತ್ರೆ, ಶಾಲೆ, ರಸ್ತೆ, ನೀರು, ಸರಬರಾಜು ಮಾಡಲು ಅಧಿಕಾರ ನೀಡಿತು. ಸರಕಾರಿ ಅಧಿಕಾರಿಗಳಾದ ಮಾಮಲೆದಾರ ಮತ್ತು ಮಹಲದಾರರು ನಗರಸಭೆಯ ಸಮಿತಿಯ ಸದಸ್ಯರಾದರು. ಹೀಗೆ ನೇಮಕ ಗೊಂಡ ಅಧಿಕಾರಿಗಳ ಸಂಖ್ಯೆ ಒಟ್ಟು ಸದಸ್ಯರ ೧/೩ ದಷ್ಟು ಮೀರಿರಬಾರದೆಂದು ಸೂಚಿಸಲಾಯಿತು ನಂತರ ೧೪-೦೫-೧೮೭೪ರಂದು ಇನ್ನೊಂದು ಕಾನೂನು ಜಾರಿಗೆ ಬಂದಿತು. (ಬಾಂಬೆ ಕಾನೂನು) ಏಪ್ರಿಲ್ ೧೯೦೧ರಿಂದ ಬೊಂಬಾಯಿ ಜಿಲ್ಲೆಗಳ, ೧೯೦೧ರ ಕಾನೂನು–೩ ಜಾರಿಗೆ ತಂದರು. ಅದರಂತೆಯೆ ಪುನಃ ನಗರಸಭೆಗಳು ವಿಂಗಡಿಸಿ ಅವುಗಳ ಕಾರ್ಯಕ್ಕಾಗಿ ಕೆಲವು ಸಮಿತಿಗಳನ್ನು ರಚಿಸಲಾಯಿತು ೧೯೨೫ರ ನಗರಸಭೆಯ ಕಾನೂನು ಪ್ರಕಾರ ಪ್ರಥಮ ಬಾರಿಗೆ ಹರಿಜನರ ಮಹಿಳೆಯರಿಗೆ, ಹಿಂದುಳಿದ ವರ್ಗವರಿಗೆ, ಭಾರತೀಯ ಕ್ರಿಶ್ಚಿಯನ್ನರಿಗೆ ಸದಸ್ಯರ ಸ್ಥಾನವನ್ನು ಮೀಸಲಿಡಲಾಯಿತು. ಈ ರೀತಿಯಾಗಿ ೧೯೪೭ರವರೆಗೆ ಬೇರೆ ಬೇರೆ ಕಾನೂನುಗಳು ಜಾರಿಯಾದವು.

ಪುರಸಭೆ ಸ್ಥಾಪನೆ

ನಗರಸಭೆ ಅಥವಾ ಮುನ್ಸಿಪಾಲ್ಟಿಗಳು ಸ್ವತಂತ್ರ ಪೂರ್ವದ ಸುಮಾರು ನೂರು ವರ್ಷಗಳ ಮೊದಲು ಬಾಂಬೆ ಪ್ರಾಂತದಲ್ಲಿ ಅಸ್ತಿತ್ವದಲ್ಲಿದ್ದ ಸ್ಥಳೀಯ ಸಂಸ್ಥೆಗಳು ಮುನಿಸಿಪಲ್ ಕಮಿಟಿಗಳನ್ನು ರಚಿಸುವುದಕ್ಕಿಂತ ಪೂರ್ವದಲ್ಲಿ ಅಂದರೆ ೧೮೩೨ಕ್ಕಿಂತ ಮುಂಚೆ ಬಾಂಬೆ ಸರಕಾರ ಬೆಳಗಾಂವ ಸೈನಿಕ ನೆಲೆಯಲ್ಲಿ ನಾಗರಿಕ ಸೌಲಭ್ಯಗಳನ್ನು ಒದಗಿಸಲು ಕಂಟೋನ ಮೆಂಟ ಬೋರ್ಡನ್ನು ಸ್ಥಾಪಿಸಿತು. ಪ್ರೆಸಿಡೆನ್ಸಿ ಪಟ್ಟಣಗಳ ಹೊರತಾಗಿ ಇತರ ಪಟ್ಟಣಗಳಲ್ಲಿ ಮುನಿಸಿಪಲ್ ಸಂಸ್ಥೆಗಳನ್ನು ಸ್ಥಾಪಿಸುವ ನಿಟ್ಟಿನಲ್ಲಿ ೧೮೨೪ರಲ್ಲಿ ಕಾನೂನು ಬಂಗಾಲದಲ್ಲಿ ಜಾರಿಯಾಯಿತು. ಇದಕ್ಕೆ ಬೆಂಗಾಲ ಕಾನೂನು ಎಂದು

* ಎಸ್.ಎಸ್.ಎಂ.ಎಸ್. ಕಾಲೇಜ್, ಅಥಣಿ-೫೯೧೩೦೪.

ಕರೆದರು. ಈ ಕಾನೂನಿನ್ವಯ ಯಾವುದೇ ಪಟ್ಟಣದಲ್ಲಿ ೨/೩ ಭಾಗ ನಾಗರಿಕರು ಮುನಿಸಿಪಾಲ್ಟಿ ಸ್ಥಾಪನೆಗೆ ಸರಕಾರಕ್ಕೆ ಕೋರಿಕೆ ಸಲ್ಲಿಸಿದಲ್ಲಿ ಆ ಪಟ್ಟಣದಲ್ಲಿ ಮುನಿಸಿಪಲ್ ಸಂಸ್ಥೆ ಸ್ಥಾಪಿಸಬಹುದಿತ್ತು ಈ ಕಾನೂನಿಗೆ ಸ್ಪಂದಿಸಿದ ಬಾಂಬೆ ಕರ್ನಾಟಕದ ಮೊದಲ ಪಟ್ಟಣಗಳೆಂದರೆ ಧಾರವಾಡ ಮತ್ತು ಬೆಳಗಾಂವ. ೧೮೫೦ರಲ್ಲಿ ಈಸ್ಟ್ ಇಂಡಿಯಾ ಕಂಪೆನಿಯು ಎಲ್ಲ ಪ್ರಾಂತ ಪಟ್ಟಣಗಳಲ್ಲಿ ಮುನಿಸಿಪಾಲ್ಟಿಗಳ ಸ್ಥಾಪನೆಗೆ ಜಾರಿಯಲ್ಲಿ ತರಲಾದ ಪ್ರಥಮ ಕಾನೂನಾಗಿದೆ. ೧೮೫೦ ಕಾಯಿದೆ ಅನ್ವಯ ಜಿಲ್ಲಾ ಕಲೆಕ್ಟರನು ನಗರಸಭೆ ಅಧ್ಯಕ್ಷನನ್ನಾಗಿ ನೇಮಿಸಲಾಯಿತು ತಾಲ್ಲೂಕಿನ ಡೆಪ್ಯೂಟಿ ಕಲೆಕ್ಟರನನ್ನು ಉಪಾಧ್ಯಕ್ಷನನ್ನಾಗಿ ನೇಮಕ ಮಾಡಲಾಯಿತು. ೧೨ ಜನ ಸದಸ್ಯರನ್ನು ಪ್ರತಿನಿಧಿಗಳನ್ನಾಗಿ ಆಯ್ಕೆ ಮಾಡಿ ಒಂದು ಕಮಿಟಿಯನ್ನು ರಚಿಸಲಾಯಿತು. ಈ ಪ್ರತಿನಿಧಿಗಳನ್ನು ಪದನಿಮಿತ್ತ (ಎಕ್ಸ್ ಆಫೀಸ್) ಸದಸ್ಯರನ್ನಾಗಿ ನೇಮಿಸ ಲಾಯಿತು ಪಟ್ಟಣದ ವಿವಿಧ ಓಣಿಗಳಲ್ಲಿ ಉಪ ಕಮೀಷನರ ರನ್ನು ನೇಮಕ ಮಾಡಿದರು.

ಬೆಳವಣಿಗೆ

೧೮೫೦ರ ಕಾಯ್ದೆಯ ನಂತರ ೧೮೬೨ರಲ್ಲಿ ಮತ್ತೊಂದು ಮುನಿಸಿಪಲ್ ಕಾಯಿದೆ ಜಾರಿಯಾಯಿತು. ಆ ಪ್ರಕಾರ ಆಯಾ ಜಿಲ್ಲಾ ಕಲೆಕ್ಟರ್, ಸಹಾಯ ಕಲೆಕ್ಟರರು, ಮಾಮಲೇದಾರರು, ಮಹಾಲೇಖಾಧಿಕಾರಿಯವರು ಮುಂತಾದ ಹಿರಿಯ ಅಧಿಕಾರಿಗಳು ಮುನಿಸಿಪಾಲ್ಟಿಯ ಪದನಿಮಿತ್ತ ಸದಸ್ಯರಾದರು. ಕಂದಾಯ ಇಲಾಖೆಯ ಅಧಿಕಾರಿಗಳಲ್ಲದೆ ಸರಕಾರದ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳಾದ ಇಂಜಿನಿಯರ್. ಶಿಕ್ಷಣ ಇಲಾಖೆಯ ಡೆಪ್ಯೂಟಿ ಇನ್ಸ್‌ಪೆಕ್ಟರ್ ಮುಂತಾದವರನ್ನು ಪದನಿಮಿತ್ತ ಸದಸ್ಯರನ್ನಾಗಿ ನೇಮಿಸಲಾಯಿತು. ಅಲ್ಲದೆ ಕೆಲವು ಆಯ್ದ ಸಮಾಜಗಳ ಮುನಿಸಿಪಲ್ ತೆರಿಗೆಯನ್ನು ಕೊಡುತ್ತಿದ್ದ ಗಣ್ಯ ನಾಗರಿಕರನ್ನು ಸಹ ನೇಮಕ ಮಾಡಲಾಗುತ್ತಿತ್ತು. ಎಲ್ಲ ಸದಸ್ಯರನ್ನು ಮುನಿಸಿಪಲ್ ಸದಸ್ಯರೆಂದೇ ಕರೆಯುತ್ತಿದ್ದರು. ಅಂದು ನಗರಸಭೆಯ ಕರ್ತವ್ಯಗಳೆಂದರೆ ನಾಗರಿಕ ಆರೋಗ್ಯ, ರಸ್ತೆ ನೈರ್ಮಲ್ಯ ಬೀದಿ ದೀಪ ವ್ಯವಸ್ಥೆಗಳು. ಅಂದಿನ ಆದಾಯದ ಮೂಲಗಳೆಂದರೆ ಮನೆ ಪಟ್ಟಿ, ಎತ್ತಿನಗಾಡಿ ಪಟ್ಟಿ ಹೊರಗಿನಿಂದ ಬರುವ ಸರಕುಗಳ ಮೇಲೆ ಜಕಾತಿ (ಆಕ್ಟ್ರಾಯ) ಪ್ರಮುಖವಾಗಿದ್ದವು.

೧೮೭೩ರಲ್ಲಿ ಸರಕಾರ ಬಾಂಬೆ ಜಿಲ್ಲಾ ಮುನಿಸಿಪಾಲ್ಟಿ ಗಳ ಕಾನೂನು ಜಾರಿ ಮಾಡಿದ್ದು ಈ ಕಾನೂನಿನನ್ವಯ ೧೦,೦೦೦ ಜನಸಂಖ್ಯೆಗೆ ಸಿಟಿ ಮುನಿಸಿಪಾಲ್ಟಿಯಂದು, ೨೦೦೦ ಜನ ಸಂಖ್ಯೆಗಿಂತ ಕಡಿಮೆ ಇಲ್ಲದ ಪ್ರದೇಶಗಳನ್ನು 'ಟೌನ್ ಮುನಿಸಿಪಾಲ್ಟಿ'ಗಳೆಂದು ವರ್ಗೀಕರಿಸಲಾಯಿತು. 'ಸಿಟಿ ಮುನಿಸಿಪಾಲ್ಟಿಗಳಲ್ಲಿ' ೨/೩ ಭಾಗ ಸದಸ್ಯರು ಸರಕಾರದಿಂದ ನಾಮಕರಣ ಹೊಂದಿದ ಅಧಿಕಾರೇತರರಾಗಿದ್ದರೆ ಉಳಿದಂತೆಯೇ ೧/೩ ಭಾಗ ಸರಕಾರದ ಪದನಿಮಿತ್ತ ಸದಸ್ಯರಾಗಿದ್ದರು. ೧೮೭೩ರ ಕಾಯ್ದೆ ಅನ್ವಯ ಬೆಳಗಾಂವ ನಗರ ಸಭೆಯು ೧೮೮೩ರಂದು (ಎ.೧) ಸಿಟಿ ಮುನಿಸಿಪಾಲ್ಟಿ ಆಯಿತು. ೧೮೭೩ರ ಕಾನೂನಿನಲ್ಲಿ ಚುನಾವಣೆಯ ಮೂಲಕ ಸದಸ್ಯರನ್ನು ಆಯ್ಕೆ ಆಡುವ ಪದ್ಧತಿಯನ್ನು ಅಳವಡಿಸಲಾಗಿತ್ತು.

೧೮೮೪ರ ಪೂರಕ ಮುನಿಸಿಪಲ್ ಕಾಯಿದೆ ಅನ್ವಯ ನಗರ ಸಭೆಗಳಲ್ಲಿ ಚುನಾಯಿತ ಸದಸ್ಯರ ಸಂಖ್ಯೆಯನ್ನು ಕನಿಷ್ಠ ಅರ್ಧಕ್ಕೆ ಹೆಚ್ಚಿಸಲಾಯಿತು ಹಿಂದೆ ವಿಂಗಡಿಸಿದ್ದ ಸಿಟಿ ಮತ್ತು ಟೌನ್ ಎಂಬ ನಗರ ಸಭೆಗಳ ವರ್ಗೀಕರಣವನ್ನು ತಾತ್ಕಾಲಿಕವಾಗಿ ತೆಗೆದು ಹಾಕಲಾಯಿತು ೧೯೦೧ರ ಬಾಂಬೆ ಜಿಲ್ಲಾ ಮುನಿಸಿಪಾಲ್ಟಿ ಕಾನೂನಿನನ್ವಯ ನಗರಸಭೆಗೆ ತನ್ನದೆ ಆದ ಅಧ್ಯಕ್ಷರನ್ನು ಚುನಾಯಿಸುವ ಅಧಿಕಾರ ನೀಡಲಾಯಿತು ಸದಸ್ಯರ ಕಾಲಾವಧಿ ಮೂರು ವರ್ಷ ಎಂದು ನಿಗದಿ ಪಡಿಸಲಾಯಿತು.

ನಗರ ಸಭೆಯ ಕರ್ತವ್ಯಗಳನ್ನು ಕಡ್ಡಾಯ ಹಾಗೂ ಐಚ್ಛಿಕ ವಿಂಗಡಿಸಲಾಯಿತು. ಪ್ರತಿ ನಗರಸಭೆಗೆ ಸ್ಥಾಯಿ ಸಮಿತಿ (ಸ್ಟ್ಯಾಂಡಿಂಗ್ ಕಮಿಟಿ) ರಚನೆಯನ್ನು ಕಡ್ಡಾಯ ಗೊಳಿಸಲಾಯಿತು. ೧೯೦೧-೧೯೧೧ ಚೀಫ್ ಆಫೀಸರ್ (ಮುಖ್ಯ ಕಾರ್ಯನಿರ್ವಾಹಕ) ಅಧಿಕಾರಿಯನ್ನು ನೇಮಿಸಲು ಅವಕಾಶ ನೀಡಲಾಯಿತು. ೧೯೨೫ರಲ್ಲಿ ಬಾಂಬೆ ಭರೋ ಮುನಿಸಿಪಾಲ್ಟಿ ಕಾನೂನು ಜಾರಿಯಾಯಿತು. (ಭರೋ ಎಂದರೆ ಇಂಗ್ಲೆಂಡಿನಲ್ಲಿ ಪಾರ್ಲಿಮೆಂಟಿಗೆ ಪ್ರತಿನಿಧಿಗಳನ್ನು ಆಯ್ಕೆ ಮಾಡುವ ಅಧಿಕಾರವಿರುವ ನಗರಗಳು), ಈ ಕಾನೂನಿನ್ವಯ ದೊಡ್ಡ ನಗರ ಸಭೆಗಳಿಗೆ ಹೆಚ್ಚಿನ ಅಧಿಕಾರ ನೀಡಿದರು. ಬೆಳಗಾಂವಿ ನಗರಸಭೆ ಭರೋ ನಗರಸಭೆ ಎಂದು ಕರೆದರು. ೧೮೬೨ರಲ್ಲಿ ಬೆಂಗಳೂರು ನಗರ, ದಂಡು ಪ್ರದೇಶ ಮತ್ತು ಮೈಸೂರು ನಗರಗಳಲ್ಲಿ ಇವು ಪ್ರಾಯೋಗಿಕವಾಗಿ ಸ್ಥಾಪನೆಯಾಗಿ ಮುಂದೆ ಮೈಸೂರು ಪ್ರಾಂತ್ಯದಲ್ಲಿ ೧೮೬೨ರಲ್ಲಿ ಇತರ ಜಿಲ್ಲಾ ಕೇಂದ್ರಗಳಲ್ಲೂ ನಗರಸಭೆಗಳು ಸ್ಥಾಪನೆಯಾದವು ಬೆಳಗಾಂವ ಜಿಲ್ಲೆಯ ಅಂದಿನ ತಾಲ್ಲೂಕುಗಳೆಂದರೆ ಬೆಳಗಾಂವ, ಖಾನಾಪೂರ, ಚಂದಗಡ, ಸಂಪಗಾಂವ, ಪರಸಗಡ, ಗೋಕಾಕ, ರಾಮದುರ್ಗ, ಚಿಕ್ಕೋಡಿ, ಹುಕ್ಕೇರಿ, ಅಥಣಿ ಮತ್ತು ರಾಯಭಾಗ, ಅಥಣಿಯಿಂದ ಈಶಾನ್ಯಕ್ಕೆ ೨೦ ಮೈಲಿ ಅಂತರದಲ್ಲಿರುವ ಸಾಂಗಲಿ ಜಿಲ್ಲೆ, ಜತ್ತ ತಾಲ್ಲೂಕಿನ ಉಮ್ರಾಣಿ ಶಾಸನ 'ಕರಹಾಡ-ವೆಂಚಾಸಾಡಿಂ-ಗುರುಭೂಷಣ ದಂತಿರೀ ಕಳಂಬಡೆ' ಎಂದು ಉಲ್ಲೇಖವಿದೆ.

ಅಥಣಿ ಮತ್ತು ಕಾಗವಾಡ ಎರಡು ವಿಧಾನಸಭಾ ಮತಕ್ಷೇತ್ರ ವ್ಯಾಪ್ತಿಯಲ್ಲಿವೆ. ಜಿಲ್ಲಾ ಪಂಚಾಯ್ತಿ ಮತಕ್ಷೇತ್ರಗಳು ೩೬. ಅಥಣಿ ಬೆಳಗಾಂವಿಯಿಂದ ೧೪೦ ಕಿ.ಮೀ. ದೂರದಲ್ಲಿದೆ. ಅಥಣಿ ನಗರದ ಜನಸಂಖ್ಯೆ ೨೦೦೧ರ ಜನಗಣತಿ ಪ್ರಕಾರ ೩೯೨೩೩ (ಗಂಡು ೧೯,೯೧೪, ಹೆಣ್ಣು ೧೯,೨೩೧) ಅಥಣಿ ಪಟ್ಟಣದ ಸಾಕ್ಷರತೆ ಪ್ರಮಾಣ ೭೭.೭% (ಗಂಡು-೮೭.೧%, ಹೆಣ್ಣು-೬೮.೨%) ಇರುತ್ತದೆ. ಅಥಣಿ ಪುರಸಭೆ ಕ್ರಿ.ಶ. ೧೮೫೩ರಲ್ಲಿ ಸ್ಥಾಪನೆಯಾಗಿದೆ. ಪುನಃ ಪುರಸಭೆ ಸ್ಥಾಪನೆಯಾದದ್ದು ೧೮೫೩ರಲ್ಲಿಯೇ, ಆದರೆ ಇಂದು ಪುನಃ ಪುರಸಭೆ ಮಹಾನಗರಪಾಲಿಕೆಯಾಗಿದೆ. ಅಥಣಿ ಪುರಸಭೆ ವ್ಯಾಪ್ತಿಯಲ್ಲಿ ೨೩ ವಾರ್ಡುಗಳಿದ್ದು ೨೩ ಚುನಾಯಿತ ಸದಸ್ಯರು ಹಾಗೂ ಐದು ನಾಮನಿರ್ದೇಶಕ ಸದಸ್ಯರಿರುತ್ತಾರೆ ಈ ಪುರಸಭೆ ವ್ಯಾಪ್ತಿಯಲ್ಲಿ ಸುಪ್ರಸಿದ್ಧ ಸಿದ್ಧೇಶ್ವರ ದೇವಸ್ಥಾನ ಮತ್ತು ಶ್ರೀ ಮುರುಗೇಂದ್ರ ಶಿವಯೋಗಿಗಳ ಮಠ ಇರುತ್ತದೆ. ಅಥಣಿ ತಾಲ್ಲೂಕು ವ್ಯಾಪ್ತಿಯಲ್ಲಿ ಕೃಷ್ಣಾ ಕೆಂಪವಾಡ ಮತ್ತು ರೇಣುಕಾ ಸಕ್ಕರೆ ಕಾರ್ಖಾನೆಗಳಿವೆ. ಅಥಣಿ ಪುರಸಭೆ ಮೊದಲು ಎಂ.ಜಿ. ಮಾರ್ಕೆಟಿನಲ್ಲಿತ್ತು. ೧೯೮೩ರಲ್ಲಿ ಇಂದಿನ ಅಂಬೇಡ್ಕರ್ ವೃತ್ತ ಇರುವ ಭವನಕ್ಕೆ ಬಂದಿತು.

ತೆರಿಗೆ ಪದ್ಧತಿ : ಪುರಸಭೆ, ನಗರಸಭೆಗಳು ವಿಧಿಸುವ ಮಹತ್ತ್ವದ ತೆರಿಗೆಯೆಂದರೆ ಅಕ್ಟ್ರಾಯ ತೆರಿಗೆಯಾಗಿತ್ತು. ಮೂಲತಃ ನಗರಗಳಿಗೆ ಪ್ರವೇಶಿಸುವ ಎಲ್ಲ ವಸ್ತುಗಳ ಮೇಲೆ ಇದನ್ನು ಸಂಗ್ರಹಿಸುತ್ತಿದ್ದರು. ಕ್ರಿ.ಶ. ೧೮೫೦ರಿಂದ ದಕ್ಷಿಣ ಭಾರತದಲ್ಲಿ ಕಡ್ಡಾಯವಾಗಿ ಜಾರಿಯಾಯಿತು ಇದರಡಿಯಲ್ಲಿ ಬರುವ ಪ್ರಮುಖ ವಸ್ತುಗಳೆಂದರೆ ಭಾರತದ ಆಹಾರ ಪದಾರ್ಥಗಳು, ಮಾಂಸಕ್ಕಾಗಿ ಕೊಲ್ಲುತಿದ್ದ ಪ್ರಾಣಿಗಳು ಉರುವಲು ಕಟ್ಟಿಗೆ, ಕಟ್ಟಡ ನಿರ್ಮಾಣ ಸಾಮಾನು, ತಂಬಾಕು, ಉಪ್ಪು, ಗಾಂಜಾ ಮುಂತಾದವುಗಳು ಮತ್ತು ಅಬಕಾರಿ, ತೆರಿಗೆಗೆ ಒಳಪಡುವ ವಸ್ತುಗಳು ಮತ್ತು ಸಾರಾಯಿಗೆ ಈ ತೆರಿಗೆ ವಿನಾಯಿತಿ ಇತ್ತು. ೧೮೭೭ರಿಂದ ಇದು ಕಡ್ಡಾಯ ವಾಯಿತು. ಮನೆ ಅಂಗಡಿ ಮತ್ತು ಸ್ಟಾಲ್‌ಗಳ ಮೇಲೆ ಶೇಕಡಾ ೧ರಷ್ಟು ಗಾಂಜಾ, ಬಂಗ, ಬೋಜ ಮಾರಾಟಕ್ಕೆ ನೀಡಿದ ಪರವಾನಿಗೆ ಪತ್ರದ ಮೇಲೆ ೫೦ ರೂಪಾಯಿ ವಿಧಿಸುತ್ತಿದ್ದರು. ಸಾಂಕ್ರಾಮಿಕ ರೋಗಗಳು ಬಂದಾಗ ತಡೆಯಲು ರಸ್ತೆ ಅಗಲೀಕರಣಕ್ಕೆ ಒಳಚರಂಡಿ ಯೋಜನೆ ಮುಂತಾದ ಕಾರ್ಯಗಳನ್ನು ಕೈಗೊಳ್ಳಲು ಪುರಸಭಾ ಅಭಿವೃದ್ಧಿ ಸಮಿತಿ ನಿರ್ವಹಿಸುತ್ತಿತ್ತು ತಂಬಾಕು ಮತ್ತು ನಶೆಯ ಪದಾರ್ಥಗಳ ಮಾರಾಟವನ್ನು ಅಧಿಕ ಲೈಸೆನ್ಸ್ ಶುಲ್ಕ ನೀಡುವವರಿಗೆ ನೀಡುತ್ತಿದ್ದರು. ಆದರೆ ಈಗ ಅಥಣಿ ಪುರಸಭೆಯಲ್ಲಿ ಅಕ್ಟ್ರಾಯ ತೆರಿಗೆಯನ್ನು ನಿಲ್ಲಿಸಿದೆ.

*** ಅಥಣಿ ಪುರಸಭೆಯ ತೆರಿಗೆ ಪದ್ಧತಿಗಳು**

೧. ಸಾರ್ವಜನಿಕರ ಮೇಲೆ ವಿಧಿಸಿದ ತೆರಿಗೆ.

೨. ಪುರಸಭೆ ಆಸ್ತಿ.

೩. ಕೇಂದ್ರ ಸರಕಾರದ ಅನುದಾನ.

೪. ಇತರ ಮೂಲಗಳಿಂದ ಸಂಗ್ರಹವಾದ ಆದಾಯ.

*** ಸಾರ್ವಜನಿಕರ ಮೇಲೆ ವಿಧಿಸಿದ ತೆರಿಗೆಗಳೆಂದರೆ-೧.**

೧. ಭೂ ತೆರಿಗೆ/ಕಟ್ಟಡ ಮನೆ ತೆರಿಗೆ.

೨. ವಾಹನ (೨೦೦ ರೂ)/ದೋಣಿ/ಪ್ರಾಣಿಗಳ ಮೇಲಿನ ತೆರಿಗೆ

೩. ನೈರ್ಮಲ್ಯೀಕರಣ ತೆರಿಗೆ.

೪. ನೀರಿನ ತೆರಿಗೆ.

೫. ದೀಪದ ತೆರಿಗೆ ಬರಗಾಲ ನಿಧಿ : ೧೨ ಲಕ್ಷ ರೂಪಾಯಿ (ಮುಂತಾದವುಗಳು)

ಅಥಣಿ ಪುರಸಭೆಯು ೧. ನೀರಿನ ತೆರಿಗೆಯಲ್ಲಿ ಎರಡು ಪ್ರಕಾರ. ೧. ಕಮರ್ಶಿಯಲ್ ಟ್ಯಾಕ್ಸ ಉದಾ: ಮೊದಲು ಅದರ ಪ್ರಮಾಣ ೯೦ ರೂ. ಇದ್ದರೆ ೨೦೧೨ರಲ್ಲಿ ೧೬೦ ರೂಪಾಯಿ. ಲಾಡ್ಜ ಹೋಟೇಲ್ ಮತ್ತು ಬ್ರಹತ ಅಂಗಡಿ ೧೬೦ ತಿಂಗಳಿಗೆ.

೨. ರೆಸಿಡೆನ್ಸಿಯಲ್ ತೆರಿಗೆ : ಮೊದಲು ೪೫ ರೂಪಾಯಿ ಇದ್ದರೆ ಈಗ ೮೦ ರೂಪಾಯಿ.

ಬ. ವಾಣಿಜ್ಯ ತೆರಿಗೆ : ಅಥಣಿ ಪುರಸಭೆ ವಿಧಿಸುವ ವಾಣಿಜ್ಯ ತೆರಿಗೆಗಳು ಕೈಗಾರಿಕೆ ಮತ್ತು ಗುಡಿ ಕೈಗಾರಿಕೆಗಳು **ಉದಾಹರಣೆ :** ಚರ್ಮಾಲಯದ ಮೇಲೆ ವಿಧಿಸಿದ ತೆರಿಗೆ ಅಂಗಡಿಗಳ ತೆರಿಗೆ ಸಣ್ಣ ಅಗಂಡಿಗಳಿಗೆ ೧೦೦ ದೊಡ್ಡ ಅಂಗಡಿಗೆ ೫೦೦-೧೦೦೦ ರೂ.

ಕ. ಕಟ್ಟಡಗಳು : ಕಲ್ಯಾಣ ಮಂಟಪ, ಗುಜರಾತ ಮಂಗಲ ಕಾರ್ಯಾಲಯ ಶಿವಣಗಿ ಸಾಂಸ್ಕೃತಿ ಭವನ ವಾರ್ಷಿಕ : ೫೦೦೦%. ಇತರ ಟ್ಯಾಕ್ಸಗಳು: ಅಭಿವೃದ್ಧಿ ಕರ-ಪ್ಲಾಟ್ ತೆರಿಗೆ, ಖಾತಾ ಬದಲಾವಣೆ-ಉದಾ: ೩ರೂ. ಟ್ಯಾಕ್ಸ. ಮನೆತೆರಿಗೆ ನೀರಿನ ತೆರಿಗೆ ಲೈಸನ್ಸ್ ತೆರಿಗೆ ಅಂಗಡಿ ಲೈಸೆನ್ಸ ಬಾಡಿಗೆ ಬಿಲ್ಡಿಂಗ್ ಪರ್ಮಿಶನ್-೨೦೦೦ ಟ್ಯಾಕ್ಸ ಇ.ಡೆಲಿ ಟ್ಯಾಕ್ಸ : ಹಣ್ಣು ಮಾರುವರರು, ಕಾಯಿಪಲ್ಲೆ ಮಾರುವವರು- ಪ್ರತಿದಿನ : ೫ರಿಂದ ೧೦ ರೂಪಾಯಿ.

ನೀರಿನ ೧ ಟ್ಯಾಂಕರ್‌ಗೆ ೨೫೦ ರೂಪಾಯಿ ಟ್ಯಾಕ್ಸ.

ನಳ ಜೋಡಣೆಗೆ ಹೊಸ ಕನೆಕ್ಷನ್ : ೨೦೦೦-೩೦೦೦.

* **ಯೋಜನೆಗಳು :** ಎಸ್.ಸಿ. ಎಸ್.ಟಿ. ೨೨.೭೫ ಯೋಜನೆ–

ರಾಜೀವ ಗಾಂಧಿ ಯೋಜನೆ.

ಸ್ವರ್ಣಜಯಂತಿ ಶಹರಿ ರೋಜಗಾರ ಯೋಜನೆ

ವಾಜಪೇಯಿ ನಗರ ವಸತಿ ಯೋಜನೆ (ನಮ್ಮ ಮನೆ ಪ್ಲಾನ್)

ಆಶ್ರಯ ಯೋಜನೆ

೭.೨೫ ಯೋಜನೆ (ಬಡವರಿಗೆ, ಅಂಗವಿಕಲರಿಗೆ)

* ಸ್ವಸಹಾಯ ಸಂಘಗಳು – ೨೦,೦೦೦ ರೂ. ಸಾಲವನ್ನು ಹೆಣ್ಣು ಮಕ್ಕಳಿಗೆ ಕೊಡುತ್ತದೆ.

ಜಾಗ್ರತಾ ಶಿಬಿರಗಳು – ಆರೋಗ್ಯ ಭಾವೈಕ್ಯತೆ ರಾಷ್ಟ್ರೀಯ ಹಬ್ಬಗಳು ಉದ್ಯೋಗ–ಅಧ್ಯಯನ ಪ್ರವಾಸ ಕೈಗೊಳ್ಳುತ್ತಾರೆ.

ಇಲ್ಲಿ ರಾಷ್ಟ್ರೀಯ ಭಾವೈಕ್ಯತಾ ಸ್ವಯಂ ಸೇವಾ ಟ್ರಸ್ಟ್ ಕೆಲಸ ಮಾಡುತ್ತಿದೆ.

ಕರ್ನಾಟಕ ನಾಗರಿಕ ಸೇವೆಗಳ ಖಾತ್ರಿ ಅಧಿನಿಯಮ ೨೦೧೧ ಅಡಿ ಸಕಾಲ ಸಹಾಯವಾಣಿ ಕೇಂದ್ರವಿದೆ.

ಕೇಂದ್ರ ಸರಕಾರವು ಜನರ ಪುನರುಜ್ಜೀವನಕ್ಕಾಗಿ ೧.೧/೨ ಕೋಟಿ ರೂ. ಬಿಡುಗಡೆಯಾಗಿದೆ.

ಸಿ.ಎಮ್. ಫಂಡ್ : ೫ ಕೋಟಿ ಸ್ಯಾಂಕ್ಷನ್

ಜನನ ಮರಣ ದಾಖಲಾಪತ್ರ ಕಾರ್ಯವು ಭೂಮಿಯ ಉತಾರ ಮುಂತಾದವು ಇಲ್ಲಿ ನಡಯುತ್ತಿವೆ. ಹೀಗೆ ಅಥಣಿ ಪುರಸಭೆ ವೈವಿಧ್ಯಮಯವಾದ ಕಾರ್ಯ ಮಾಡುತ್ತಿದೆ.

Athani purasabhe Dae : Dec (1-1853) Receipet charges: 1881-82 31st March

Toll and Well Tax	House Tax	Micellainious	People	Octory Tax	Assessed Tax	Total
233 Rs.	54 Rs.	186 Rs.	11.196	838 Rs.	3 Rs.	1276.

ಆಧಾರಸೂಚಿ

೧. ಕ್ಷೇತ್ರಕಾರ್ಯ : ಪುರಸಭೆಯವರಿಂದ ಮಾಹಿತಿ.

೨. **ಸುವರ್ಣ ಸೌಗಂಧ,** ಪುಟ ೫೪, ೨೦೦೫.

೩. **ಅಥಣಿ ತಾಲ್ಲೂಕಿನ ಸಮಗ್ರ ದರ್ಶನ,** ಸಂ : ವಿ.ಎಸ್. ಮಾಳಿ, ಪುಟ ೨೨೯, ೨೦೦೭.

೪. **ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ತ್ವ,** ಸಂ. ಡಾ. ಆರ್. ಗೋಪಾಲ್, ಪುಟ ೫೦೨, ೬೭೨–೬೭೬, ೨೦೧೦, ಮೈಸೂರು.

೫. **ಬೆಳಗಾವಿ ಜಿಲ್ಲಾ ಗ್ಯಾಸೆಟಿಯರ್,** ಪುಟ ೭೨೫, (ಜೇಮ್ಸ್ ಕ್ಯಾಂಪಬೆಲ್ ಪ್ರಥಮ ಮುದ್ರಣ ೧೮೮೪ (ಪರಿಷ್ಕೃತ ಆವೃತ್ತಿ ೨೦೦೪).

೬. **ಧಾರವಾಡ ಜಿಲ್ಲಾ ಇತಿಹಾಸ ಮತ್ತು ಪುರಾತತ್ತ್ವ,** ಸಂ. ಡಾ. ಆರ್. ಗೋಪಾಲ್, ಪುಟ ೨೩೪–೨೩೫.

ಸ್ವಾತಂತ್ರ್ಯ ಚಳವಳಿಗೆ ಹರಿಹರ ತಾಲ್ಲೂಕಿನ ಕೊಡುಗೆ–ಹೊಸ ಬೆಳಕು (೧೯೨೦–೧೯೪೭)

ಕೃಷ್ಣಮೂರ್ತಿ ಸಿ.ಎನ್.*

ಭಾರತದ ಸ್ವಾತಂತ್ರ್ಯ ಚಳವಳಿಯಲ್ಲಿ ಹರಿಹರ ತಾಲ್ಲೂಕು ಪ್ರಮುಖ ಪಾತ್ರವಹಿಸಿದೆ, ದೇಶದ ದಾಸ್ಯ ಬಿಡಿಸುವ ಸ್ವಾತಂತ್ರ್ಯಾಂದೋಲನ ಕಾರ್ಯದಲ್ಲಿ ತನ್ನದೂ ಒಂದಿಷ್ಟು ಪಾಲನ್ನು ಪಡೆದಿರುವುದು ಹರಿಹರ ತಾಲ್ಲೂಕಿನ ಅಭಿಮಾನದ ವಿಷಯವೇ ಆಗಿದೆ. ಇಡೀ ದೇಶವೇ ಎದ್ದುನಿಂತ ಕಾಲ, ರಾಷ್ಟ್ರೀಯ ಭಾವನೆಗಳು, ಉದ್ರೇಕ, ಉತ್ಸಾಹ ತುಂಬಿದ ವಾತಾವರಣ, ಜನರು ಸರ್ವಸ್ವವನ್ನು ತ್ಯಾಗಮಾಡಲಿಕ್ಕೆ ಪ್ರೇರಣೆಗೊಂಡರು.

ಈ ಸ್ವಾತಂತ್ರ್ಯಾಂದೋಲನಕ್ಕೆ ಪ್ರೇರಣೆಗಳೂ ಅನೇಕ. ಉತ್ಸಾಹಿ ಯುವಕರು ಬೇರೆ ಕಡೆ ನಡೆಯುತ್ತಿದ್ದ ಹೋರಾಟದ ಲೇಖನಗಳನ್ನು ಪತ್ರಿಕೆಗಳಲ್ಲಿ ಓದಿ ಮತ್ತು ವಿದ್ಯಾಭ್ಯಾಸಕ್ಕಾಗಿ ನಗರಗಳಿಗೆ(ದೊಡ್ಡ–ದೊಡ್ಡ ನಗರಗಳು) ಹೋದಾಗ ಅಲ್ಲಿ ನಡೆಯುತ್ತಿರುವ ಹೋರಾಟವನ್ನು ಕಣ್ಣಾರೆ ನೋಡಿ, ಅನೇಕ ನೇತಾರರ ಭಾಷಣಗಳನ್ನು ಕೇಳಿ ಪ್ರೇರಣೆಗೊಂಡು ಉತ್ಸಾಹಿತರಾಗಿ ಇಲ್ಲಿಯ ಜನರನ್ನು ಸಂಘಟಿಸಿ ಬ್ರಿಟಿಷ್ ಆಡಳಿತದ ವಿರುದ್ಧ ಹೋರಾಟ ಪ್ರಾರಂಭಿಸಿದರು. ಅವರುಗಳಲ್ಲಿ ಈ ಚಳವಳಿಗಳ ಸ್ಥಳೀಯ ನಾಯಕರುಗಳಾದ ಹರಿಹರದ ಗುಂಡೂರಾಯರು, ಎಸ್. ನಿಜಲಿಂಗಪ್ಪ, ಎನ್.ಎಂ. ಚಂದ್ರಶೇಖರಯ್ಯ ಮತ್ತು ಅಣಜಿಮಠದ ಕೊಟ್ರಯ್ಯನವರ ನಾಯಕತ್ವದಲ್ಲಿ ಗಾಂಜಿವೀರಪ್ಪ, ನಾರಾಯಣರಾವ್, ಜಿ. ಗೋವಿಂದಪ್ಪ, ಸಿದ್ದಪ್ಪ, ಕೆ.ಹೆಚ್. ಪಟೇಲರು, ಚನ್ನವೀರಪ್ಪ, ಪಿ. ಬಸವನಗೌಡ್ರು, ಬೋಂಗಾಳೆ ಕೃಷ್ಣ ರಾವ್, ಬೋಂಗಾಳೆ ಪುಂಡಲೀಕ್‌ರಾವ್, ಕೊಟ್ರಪ್ಪ ಮುಂತಾದವರು ಕ್ರಿಯಾಶೀಲರಾಗಿ ಕೆಲಸ ಮಾಡಿದ್ದಾರೆ. ಈ ಹೋರಾಟಗಳು ಹರಿಹರ, ಗೂತ್ತೂರು, ಕೊಂಡಜ್ಜಿ, ಮಲೆಬೆನ್ನೂರು, ಕಮಲಾ ಪುರ, ಭಾನುವಳ್ಳಿ, ಹೊಳೆಸಿರಗೆರೆ, ನಂದಿಗಾವಿ, ಇಂಗಳ ಗೊಂದಿ ಮುಂತಾದ ಗ್ರಾಮಗಳಿಗೆ ಈ ಚಳವಳಿಯ ಬಿಸಿ ತಟ್ಟಿತು.

ಹರಿಹರ ತಾಲ್ಲೂಕಿನ ಸ್ವಾತಂತ್ರ್ಯ ಚಳವಳಿಯ ಗತಿ

೧. ತಿಲಕರ ಸಂಘ ಸ್ಥಾಪನೆ

ಸ್ವಾತಂತ್ರ್ಯದ ಕಹಳೆಯ ಕೂಗು ಆರಂಭವಾದದ್ದು 'ತಿಲಕ ಸಂಘ' ಎನ್ನುವ ಒಂದು ಸಂಘದಿಂದ. ಹರಿಹರ ಗುಂಡೂರಾಯರೆಂಬ ಉತ್ಸಾಹಿಗಳೊಬ್ಬರು ವಿದ್ಯಾರ್ಥಿಯಾದಾಗಿನಿಂದಲೂ ತಿಲಕರ ಲೇಖನ, ಭಾಷಣಗಳಿಂದ ಮತ್ತು ಮಾತುಗಳಿಂದ (The Aim of the Indian people should be the attainment of Swaraj. Tilak Declared, "Swaraj is my birth right and I shall have it") ಹಾಗೂ ತಿಲಕರ ಪತ್ರಿಕೆಗಳಿಂದ ಪ್ರಭಾವಿತರಾಗಿ ಚಿತ್ರದುರ್ಗದ ಅಯ್ಯಣ್ಣನ ಪೇಟೆಯಲ್ಲಿ ೧೯೨೦ರಲ್ಲಿ 'ತಿಲಕ ಸಂಘ'ವನ್ನು ಸ್ಥಾಪಿಸಿದರು.[೧] ಈ ಸಂಘದ ಉದ್ದೇಶ ಜನರಲ್ಲಿ ರಾಷ್ಟ್ರೀಯತೆ ಮತ್ತು ದೇಶಭಕ್ತಿಯನ್ನು ಮೂಡಿಸುವುದು ಮತ್ತು ಕ್ರಾಂತಿಕಾರಿ ಹೋರಾಟ ಮಾಡಲು ಪ್ರೇರಣೆ ನೀಡುವುದಾಗಿದ್ದಿತು. ಆದ್ದರಿಂದ ಈ ಸಂಘವು ಪುಸ್ತಕಾಲಯ, ವಾಚನಾಲಯವೊಂದನ್ನು ಸ್ಥಾಪಿಸಿ, ವೃತ್ತಪತ್ರಿಕೆಗಳನ್ನು ತರಿಸಿ ಓದುವ ಹವ್ಯಾಸವನ್ನು ಜನರಲ್ಲಿ ಮೂಡಿಸಿತು. ಸಾರ್ವಜನಿಕ ಸಭೆಗಳನ್ನು ನಡೆಸುವುದು, ದೇಶದ ನಾನಾ ಭಾಗಗಳಿಂದ ಪ್ರಸಿದ್ಧ ಹೋರಾಟಗಾರರನ್ನು ಕರೆಸಿ ಕ್ರಾಂತಿಕಾರಿಕ ಭಾಷಣವನ್ನು ಮಾಡಿಸುವುದು, ಖಾದಿ ಪ್ರಚಾರ ಮುಂತಾದ ಚಟುವಟಿಕೆಗಳನ್ನು ನಡೆಸುತ್ತಿತ್ತು. ಈ ಸಂಘವು ಚಿತ್ರದುರ್ಗ ಜಿಲ್ಲೆಯ ದಾವಣಗೆರೆ, ಹರಿಹರ ತಾಲ್ಲೂಕುಗಳಲ್ಲಿ ತನ್ನ ಪ್ರಭಾವ ಬೀರಿತ್ತು.

ಎಂ. ವೆಂಕಟಕೃಷ್ಣಯ್ಯ, ಆಲೂರು ವೆಂಕಟರಾಯರು, ಡಿ.ಕೆ. ಭಾರದ್ವಾಜ್, ಡಾ. ಎನ್.ಎಸ್. ಹರ್ಡೇಕರ್, ಮುದವೀಡು ಕೃಷ್ಣರಾಯರು ಮುಂತಾದವರನ್ನು ಕರೆಸಿ ಭಾಷಣಗಳನ್ನು ಮಾಡಿಸಿ ಜನರನ್ನು ಜಾಗೃತಿಗೊಳಿಸಿತು.

* ಸಂಶೋಧನಾ ವಿದ್ಯಾರ್ಥಿ, ಹರಿಹರ–೫೭೭೬೦೧.

ಆ ಸಮಯದಲ್ಲಿ ಹರಿಹರ ತಾಲ್ಲೂಕಿನ ಜನರು ತಾಲ್ಲೂಕಿನ ತುಂಬಾ ಸ್ವದೇಶಿ ವಸ್ತುಗಳ ಬಳಕೆ, ಖಾದಿ ವಸ್ತುಗಳ ಬಳಕೆ, ಮತ್ತು ಹರಿಕಥೆ, ಪೌರಾಣಿಕ ಕಥೆಗಳನ್ನು, ಗಣಪತಿ ಉತ್ಸವಗಳನ್ನೂ, ಲಾವಣಿಗಳನ್ನೂ ಕೂಡಾ ಸ್ವಾತಂತ್ರ್ಯಾಂದೋಲನದ ಪ್ರಚಾರ ಮಾಧ್ಯಮಗಳನ್ನಾಗಿಸಿ ಕೊಂಡರು.[೨] ಹೀಗೆ ತಿಲಕ ಸಂಘವು ಸ್ವಾತಂತ್ರ್ಯಾಂದೋಲನದ ಕಿಡಿಗಳನ್ನು ಎಬ್ಬಿಸುವುದರಲ್ಲಿ ಪ್ರಮುಖ ಪಾತ್ರವಹಿಸಿತು.

೨. ಸ್ವದೇಶಿ ಚಳವಳಿ

ಸ್ವದೇಶಿ ಚಳವಳಿಯನ್ನು ೧೯೦೫ ಆಗಸ್ಟ್ ೭ರಂದು ಕಲ್ಕತ್ತಾದ ಟೌನ್ ಹಾಲ್ ಮೈದಾನದಲ್ಲಿ ನಡೆದ ಐತಿಹಾಸಿಕ ಸಭೆಯಲ್ಲಿ ಅಧಿಕೃತವಾಗಿ ಘೋಷಿಸಲಾಯಿತು. 'ಸ್ವದೇಶಿ ಎಂದರೆ ಭಾರತೀಯ ವಸ್ತುಗಳನ್ನೇ ಉಪಯೋಗಿಸಿ, ಬ್ರಿಟಿಷ್ ವಸ್ತುಗಳನ್ನು ಬಹಿಷ್ಕರಿಸುವುದು.' ಹರಿಹರದಲ್ಲಿ ಸ್ವದೇಶಿ ಚಳವಳಿಯಲ್ಲಿ ಒತ್ತಿ ಹೇಳಲಾದ ಪ್ರಮುಖ ಅಂಶ 'ಸ್ವಾವಲಂಬನೆ' ಅಥವಾ 'ಆತ್ಮಶಕ್ತಿ'ಯ ಪ್ರತಿಪಾದನೆ ಸ್ವಾವಲಂಬನೆಯ ಅರ್ಥದಲ್ಲಿ ಸ್ವದೇಶಿ ಅಥವಾ ಸ್ಥಳೀಯ ಉದ್ದಿಮೆಗಳ ಸ್ಥಾಪನೆಯೂ ಆಗಿತ್ತು. ೧೯೨೨ರಲ್ಲಿ ಹರಿಹರದಲ್ಲಿ ಸಾಹುಕಾರ್ ಮೂರ್ಖಲ್ ಮಾಲಿಂಗಪ್ಪನವರು ಹತ್ತಿ ಗಿರಣಿ, ಶೇಂಗಾ ಗಿರಣಿಯನ್ನು ಸ್ಥಾಪಿಸಿದರು. ಹತ್ತಿ ಗಿರಣಿಗಳು, ಸಾಬೂನು ಮತ್ತು ಬೆಂಕಿ ಕಡ್ಡಿ ಕಾರ್ಖಾನೆಗಳು, ಚರ್ಮಶಾಲೆಗಳು, ಬ್ಯಾಂಕುಗಳು, ಮಣ್ಣಿನವಸ್ತುಗಳ (ಕುಂಬಾರಿಕೆ) ಗುಡಿ ಕೈಗಾರಿಕೆಗಳು, ಖಾದಿ ಗ್ರಾಮೋದ್ಯೋಗಗಳು, ಖಾದಿ ಬಟ್ಟೆ ಕೇಂದ್ರಗಳು, ಅಲ್ಲದೇ ಹತ್ತಿ, ಶೇಂಗಾ, ಬೀಜ ತೆಗೆಯುವ ಗಿರಣಿಗಳು ಇದ್ದವು.[೩] ವಿದೇಶಿ (ಬ್ರಿಟಿಷರ) ವಸ್ತುಗಳನ್ನು ನಿಷೇಧಿಸುವದು, ಅವುಗಳನ್ನು ಸುಟ್ಟು ಹಾಕುವುದು, ಸರ್ಕಾರಿ ಶಾಲೆಗಳನ್ನು (English Education) ತೊರೆದು ಸ್ವದೇಶಿ ಮಾದರಿಯ ಖಾಸಗಿ ಶಾಲೆಗಳಲ್ಲಿ ಮತ್ತು ಗುರುಕುಲ ಮತ್ತು ಅಗ್ರಹಾರಗಳಲ್ಲಿ ಸ್ವದೇಶಿ ಭಾಷೆಯಲ್ಲಿ ವಿದ್ಯಾಭ್ಯಾಸ ಮಾಡುವುದು, ಜನಪ್ರಿಯ ಸಾಂಪ್ರದಾಯಿಕ ಹಬ್ಬ, ಜಾತ್ರೆ, ಜಾನಪದ ಸಂಗೀತ, ನಾಟಕಗಳು ಜನಸಾಮಾನ್ಯರಿಗೆ ಸಂದೇಶ ಮುಟ್ಟಿಸುವ ಸಾಧನಗಳಾಗಿ ಬಳಕೆಗೆ ಬಂದವು. ದೇಶಭಕ್ತಿ ಗೀತೆಗಳು ಸಹಾ ಸ್ವದೇಶಿ ಚಳವಳಿಗೆ ಪ್ರೇರಣೆಯಾದವು.

೩. ಹರ್ಡೇಕರ್ ಮಂಜಪ್ಪನವರ ಆಶ್ರಮ ಸ್ಥಾಪನೆ

ಕರ್ನಾಟಕದ ಗಾಂಧಿ ಎಂದೇ ಹೆಸರಾದ ಹರ್ಡೇಕರ್ ಮಂಜಪ್ಪನವರು ೧೯೨೩ರಲ್ಲಿ ಹರಿಹರದ ಉತ್ತರದ ದಿಕ್ಕಿಗೆ ೨ ಮೈಲಿ ದೂರದಲ್ಲಿರುವ ಗುತ್ತೂರು ಗ್ರಾಮದ ಬಳಿಯಲ್ಲಿ ಒಂದು ಆಶ್ರಮವನ್ನು ಸ್ಥಾಪಿಸಿ ಅಲ್ಲಿ ಸಾವಿರಾರು ಸತ್ಯಾಗ್ರಹಿಗಳಿಗೆ ಸ್ವಾತಂತ್ರ್ಯ ಹೋರಾಟದ ಮನೋಭಾವನೆ ಮತ್ತು ರಾಷ್ಟ್ರಾಭಿಮಾನದ ಬಗ್ಗೆ ತರಬೇತಿಯನ್ನು ನೀಡುತ್ತಿದ್ದರು.[೪]

೪. ಹರಿಹರಕ್ಕೆ ಗಾಂಧೀಜಿಯವರ ಭೇಟಿ

೧೯೨೭ರ ಆಗಸ್ಟ್ ೧೩ರಂದು ಮಹಾತ್ಮ ಗಾಂಧೀಜಿಯವರು ಹರಿಹರಕ್ಕೆ ಭೇಟಿಕೊಟ್ಟಂತ್ತಾ ಸಂದರ್ಭದಲ್ಲಿ ಹರಿಹರ ತಾಲ್ಲೂಕಿನಿಂದ ಸಹಸ್ರಾರು ಸಂಖ್ಯೆಯಲ್ಲಿ ಜನರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಗಾಂಧೀಜಿಯವರು ಸ್ವಾತಂತ್ರ್ಯ ಚಳವಳಿಯ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿ ಬ್ರಿಟಿಷರ ವಿರುದ್ಧ ಅಹಿಂಸಾತ್ಮಕವಾಗಿ ಹೋರಾಟ ಮಾಡಿ ಎಂದು ಕರೆ ನೀಡಿದರು. ನಂತರ ಹರಿಹರದ ಪ್ರಮುಖ ದೇವರಾದ ಹರಿಹರೇಶ್ವರನ ದರ್ಶನ ಪಡೆದು 'ಹರಿಹರದ ಜನತೆಗೆ ಹರಿ ಮತ್ತು ಹರ ಸೇರಿ ಸಮತಾವಾದವನ್ನು ಬೆಳಸಲಿ' ಎಂಬುದಾಗಿ ನುಡಿದರು.[೫]

೫. ಕಾನೂನು ಭಂಗ ಚಳವಳಿ

ಹರಿಹರ ತಾಲ್ಲೂಕಿನಲ್ಲಿ ಕಾನೂನು ಭಂಗ ಚಳವಳಿ ತನ್ನದೇ ಆದ ಸ್ವರೂಪವನ್ನು ಪಡೆದುಕೊಂಡಿದೆ. ಸ್ವದೇಶಿ ವಸ್ತುಗಳನ್ನು ಬಳಕೆ ಮಾಡುವುದು, ಮಣ್ಣಿನವಸ್ತುಗಳ (ಕುಂಬಾರಿಕೆ) ಗುಡಿ ಕೈಗಾರಿಕೆಗಳನ್ನು ಸ್ಥಾಪಿಸಿಕೊಂಡು ಗೃಹಬಳಕೆಗೆ ತಯಾರಿಸಿಕೊಳ್ಳುವುದು, ಉಪ್ಪಿನಕರ ನಿರಾಕರಣೆ ಮಾಡುವುದು, ರೈತರು ಕಂದಾಯ ಕಟ್ಟುವುದನ್ನು ನಿರಾಕರಿಸುವುದು, ಸರ್ಕಾರಿ ಅಧಿಕಾರಿಗಳು ಸಂಗ್ರಹಿಸಿದ ಕಂದಾಯದ ಹಣವನ್ನು ಲೂಟಿ ಮಾಡುವುದು ಈ ರೀತಿಯಲ್ಲಿ ತಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸಿದರು. ಆದ್ದರಿಂದ ಹರಿಹರದಲ್ಲಿ ಪೋಲೀಸ್ ಠಾಣೆ ಸ್ಥಾಪನೆ ಮತ್ತು ಹರಲಾಪುರದ ಬಳಿ ಬ್ರಿಟಿಷ್ ಸೈನ್ಯವನ್ನು ಇಡಲಾಯಿತು. ಆದ್ದರಿಂದ ಹರಲಾಪುರವನ್ನು ಈಗಲೂ ದಂಡಿನ ಪ್ರದೇಶವೆಂದು ಕರೆಯುತ್ತಾರೆ. ಬ್ರಿಟಿಷರ ದಂಡು ಹರಿಹರದಲ್ಲಿದ್ದರೂ ಈ ಭಾಗದ ಸ್ವಾತಂತ್ರ್ಯದ ಕಿಚ್ಚನ್ನು ಹತ್ತಿಕ್ಕದೇ ಮೊಳಕೆಯೊಡೆಯಲು ಕಾರಣವಾಯಿತು.

೬. ಅರಣ್ಯ ಸತ್ಯಾಗ್ರಹ ೧೯೩೯

ಕರ್ನಾಟಕದಲ್ಲಿ ಪ್ರಪ್ರಥಮ ಬಾರಿಗೆ ೧೮ ಸೆಪ್ಟಂಬರ್ ೧೯೩೯ರಂದು ಅರಣ್ಯ ಸತ್ಯಾಗ್ರಹವನ್ನು ಚಿತ್ರದುರ್ಗ ಜಿಲ್ಲೆಯ ತುರುವೆನೂರು ಎಂಬ ಗ್ರಾಮದಲ್ಲಿ ಬಳ್ಳಾರಿಸಿದ್ದಮ್ಮ, ಮತ್ತು ನಾಗರತ್ನಮ್ಮ ಹಿರೇಮಠ್ ಪ್ರಾರಂಭಿಸಿದರು. ೧೯೩೯ರಲ್ಲಿ ಅರಣ್ಯ ಸತ್ಯಾಗ್ರಹದಲ್ಲಿ ಹರಿಹರ ತಾಲ್ಲೂಕಿನಲ್ಲಿ ಎರಡು ಗುಂಪುಗಳಾಗಿ ಅನೇಕ ವಿದ್ಯಾರ್ಥಿಗಳು ಮತ್ತು ಯುವಕರು ಭಾಗವಹಿಸಿದರು. ಅವುಗಳೇಂದರೆ.

೧ ಹರಿಹರ ನಗರ ಪ್ರದೇಶದ ಗುಂಪು.

೨ ಹರಿಹರ ತಾಲ್ಲೂಕಿನ ಗ್ರಾಮೀಣ ಪ್ರದೇಶದ ಗುಂಪು.[೬]

ಈ ಅರಣ್ಯ ಸತ್ಯಾಗ್ರಹವು ಹರಿಹರ ತಾಲ್ಲೂಕಿನ ಪ್ರಮುಖ ಪ್ರದೇಶಗಳಾದ ಹರಿಹರ, ನಂದಿಗಾವಿ, ಕಮಲಾಪುರ, ಇಂಗಳಗೊಂದಿ, ಕಡರನಾಯಕನಹಳ್ಳಿ, ಕೊಮ್ಮಾರನಹಳ್ಳಿ, ಮಲೆಬೆನ್ನೂರು, ಹೊಳೆಸಿರಿಗೆರೆ ಇನ್ನು ಮುಂತಾದ ಪ್ರದೇಶಗಳಲ್ಲಿ ನಡೆಯಿತು. ಪ್ರಮುಖವಾಗಿ, ಎನ್.ಎಂ. ಚಂದ್ರಶೇಖರಯ್ಯ, ಉಗ್ರಪ್ಪ, ಕೆ.ಎಚ್. ಪಟೇಲರು, ಜಿ. ಗೋವಿಂದಪ್ಪ, ಸಿದ್ದಪ್ಪಗೌಡ್ರು, ಪಿ. ಬಸವನಗೌಡ್ರು, ಇನ್ನೂ ಮುಂತಾದ ಹೋರಾಟಗಾರರು, ಈ ಅರಣ್ಯ ಸತ್ಯಾಗ್ರಹದಲ್ಲಿ ಭಾಗವಹಿಸಿದರು. ಇವರು ಈಚಲು ಮರಗಳನ್ನು ಕಡಿಯುವುದು, ಸರಾಯಿ ಅಂಗಡಿಗಳ ಮುಂದೆ ಪಿಕೆಟಿಂಗ್ ಮಾಡುವುದು, ತಂಬಾಕು ಬೆಳೆಯನ್ನು ನಾಶಪಡಿಸುವುದು, ಕಳ್ಳಭಟ್ಟಿಯನ್ನು ಬಹಿಷ್ಕರಿಸುವುದು ಮತ್ತು ಮದ್ಯ ಪಾನವನ್ನು ಸಂಪೂರ್ಣವಾಗಿ ವಿರೋಧಿಸಿದರು. ಈ ರೀತಿಯಲ್ಲಿ ಹರಿಹರ ತಾಲ್ಲೂಕಿನಲ್ಲಿ ಅರಣ್ಯ ಸತ್ಯಾಗ್ರಹವು ಸ್ವಾತಂತ್ರ್ಯ ಚಳವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದೆ. ಈ ಚಳವಳಿಯ ನಂತರವೇ ಹರಿಹರ ತಾಲ್ಲೂಕಿನಾದ್ಯಂತ ಸ್ವಾತಂತ್ರ್ಯ ಹೋರಾಟ ಹೆಚ್ಚಾಗತೊಡಗಿತು.

೭. ಹರಿಹರಕ್ಕೆ ಡಾ॥ ಬಾಬು ರಾಜೇಂದ್ರ ಪ್ರಸಾದ್ ಭೇಟಿ

೧೯೪೯ರಲ್ಲಿ ತುಂಗಭದ್ರಾ ನದಿ ತೀರದ ಗುತ್ತೂರು ಬಳಿ ಕಾಂಗ್ರೆಸ್ ಅಧಿವೇಶನ ನಡೆಯಿತು, ಈ ಮಹತ್ವದ ಅಧಿವೇಶನಕ್ಕೆ ರಾಷ್ಟ್ರಪತಿ ಡಾ. ಬಾಬುರಾಜೇಂದ್ರ ಪ್ರಸಾದ್ ಆಗಮಿಸಿದ್ದರು.[೭] ಶ್ರೀ ಹೆಚ್. ಸಿದ್ಧಯ್ಯನವರು ಸಭೆಯ ಅಧ್ಯಕ್ಷತೆ ವಹಿಸಿದ್ದರು, ಹರಿಹರದ ಸುತ್ತಮುತ್ತಲಿನ ಕಾಂಗ್ರೆಸ್ ಕಾರ್ಯಕರ್ತರು ಪಾಲ್ಗೊಂಡು ದೇಶದ ಸ್ವಾತಂತ್ರ್ಯದ ಬಗ್ಗೆ ಚರ್ಚೆನಡೆಸಿದರು. ಹರಿಹರ ತಾಲ್ಲೂಕಿನಿಂದ ಹನಗವಾಡಿಯ ಹೆಚ್. ಸಿದ್ಧವೀರಪ್ಪ, ಕೊಂಡಜ್ಜಿ ಬಸಪ್ಪ, ಎನ್.ಎಂ. ಚಂದ್ರಶೇಖರಯ್ಯ, ಪಿ. ಬಸವನಗೌಡ್ರು ಇನ್ನೂ ಅನೇಕ ಕಾಂಗ್ರೆಸ್ ಕಾರ್ಯಕರ್ತರು ಭಾಗವಹಿಸಿದ್ದರು.

೮. ೧೯೪೨ರ ಭಾರತ ಬಿಟ್ಟು ತೊಲಗಿ

೧೯೪೨ರ ಆಗಸ್ಟ್ ೦೮ರಂದು ಕಾಂಗ್ರೆಸ್ ಮುಂಬಯಿಯಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸಮಿತಿಯನ್ನು ಕೂಡಿಸಿ, ಕ್ವಿಟ್ ಇಂಡಿಯಾ ಚಳವಳಿಯನ್ನು ಸಂಘಟಿಸಲು ನಿರ್ಧರಿಸಿತು. ಆದರೆ ಮಹಾತ್ಮ ಗಾಂಧೀಜಿ ಮತ್ತು ಚಳವಳಿಯ ಪ್ರಮುಖ ನಾಯಕರನ್ನು ಸರ್ಕಾರವು ಬಂಧಿಸಿದ್ದರಿಂದ ಮಹಾತ್ಮ ಗಾಂಧೀಜಿಯವರು 'ಬ್ರಿಟಿಷರೇ ಭಾರತವನ್ನು ಬಿಟ್ಟು ತೊಲಗಿ' ಎಂದು ಕರೆ ಕೊಟ್ಟರು. ಆಗ ೧೯೪೨ರಲ್ಲಿ ಕ್ವಿಟ್ ಇಂಡಿಯಾ ಚಳವಳಿಯನ್ನು ಹರಿಹರದಲ್ಲಿ ಜನಸಾಮಾನ್ಯರು, ವಿದ್ಯಾರ್ಥಿಗಳು, ಕಾರ್ಮಿಕರುಗಳು, ರೈತರು ಪ್ರಮುಖ ಪಾತ್ರ ವಹಿಸಿ ಹೋರಾಟವನ್ನಾರಂಭಿಸಿದರು.[೮] ಕ್ರಾಂತಿಕಾರಿಗಳಾಗಿದ್ದ ಎನ್.ಎಂ. ಚಂದ್ರಶೇಖರಯ್ಯ, ಜಿ. ಗೋವಿಂದಪ್ಪ, ಸಿದ್ದಪ್ಪ, ಚನ್ನವೀರಪ್ಪ, ಪಿ. ಬಸವನಗೌಡ್ರು, ಕೊಟಿಗಿ ಸಿದ್ದಲಿಂಗಪ್ಪ, ಕೆ.ಹೆಚ್. ಪಟೇಲರು ಮುಂತಾದ ಅನೇಕ ನಾಯಕರಿಂದ ಹರಿಹರದಲ್ಲಿ ಈ ಚಳವಳಿಯು ಅನೇಕ ವಿಧ್ವಂಸಕ ಕೃತ್ಯಗಳು ಮತ್ತು ಹಿಂಸಾತ್ಮಕವಾಗಿ ಹೋರಾಟ ಮಾಡುತ್ತಾ ರೈಲು ಕಂಬಿಗಳನ್ನು ಕೀಳುವುದು, ನಿಲ್ದಾಣಗಳಿಗೆ ಬೆಂಕಿ ಹಚ್ಚುವುದು, ಟೆಲಿಗ್ರಾಫ್ ತಂತಿಗಳನ್ನು ಕತ್ತರಿಸುವುದು, ಸರ್ಕಾರಿ ಕಛೇರಿಗಳಿಗೆ ಬೆಂಕಿ ಇಕ್ಕುವುದು, ಸರ್ಕಾರಿ ಅಧಿಕಾರಿಗಳು ಸಂಗ್ರಹಿಸಿದ ಕಂದಾಯದ ಹಣವನ್ನು ಲೂಟಿ ಮಾಡುವುದು, ಅಂಚೆ ಸೇವೆಗೆ ಅಡ್ಡಿ ಮಾಡುವುದು, ಶಾಲೆಗಳಿಗೆ ಬೀಗ ಹಾಕಿ ವಿದ್ಯಾರ್ಥಿಗಳು ಶಾಲೆಯನ್ನು ಬಿಟ್ಟು ಚಳವಳಿಯಲ್ಲಿ ಪಾಲ್ಗೊಳ್ಳುವುದು, ಸರ್ಕಾರಿ ಕಛೇರಿಗಳ ಮೇಲೆ ಧ್ವಜಾರೋಹಣ ಮಾಡುವುದು, ಪೊಲೀಸರ ಮೇಲೆ ಹಲ್ಲೆ ಮುಂತಾದ ವಿಧ್ವಂಸಕ ಕೃತ್ಯಗಳನ್ನು ನಡೆಸಲಾಯಿತು. ಈ ಚಳವಳಿಯನ್ನು ಹತ್ತಿಕ್ಕಲು ಚಳವಳಿಯ ಹೋರಾಟಗಾರರನ್ನು ಬಂಧಿಸಲಾಯಿತು ಮತ್ತು ಗೋಲಿಬಾರ್ ನಡೆಸಲಾಯಿತು. ಆ ಸಂದರ್ಭದಲ್ಲಿ ಅನೇಕ ಜನರು ಗಾಯಗೊಂಡರು.[೯] ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ಹೋರಾಟ ಮಾಡಿ ಹರಿಹರ ತಾಲ್ಲೂಕು ಕ್ವಿಟ್ ಇಂಡಿಯಾ ಚಳವಳಿಯಲ್ಲಿ ತನ್ನದೇ ಆದ ವಿಶಿಷ್ಟ ಹೋರಾಟವನ್ನು ಮಾಡಿದೆ.

೯. ೧೯೪೭ರ ಮೈಸೂರು ಚಲೋ ಚಳವಳಿ

ಕರ್ನಾಟಕದ ಪರಿಸ್ಥಿತಿಯು 'ಮಳೆ ಹನಿ ನಿಂತರೂ ಮರದ ಹನಿ ನಿಲ್ಲಲಿಲ್ಲ" ಎಂಬಂತಾಯಿತು. ದೇಶ ಸ್ವಾತಂತ್ರ್ಯಗೊಂಡರೂ ದೇಶಿಯ ಸಂಸ್ಥಾನಗಳಲ್ಲಿ ಇನ್ನೂ ಬ್ರಿಟಿಷರ ಗುಲಾಮರಂತಿದ್ದ ದೇಶೀಯ ಅರಸರೇ ರಾಜ್ಯವಾಳುತ್ತಿದ್ದರು. ಆದ್ದರಿಂದ ಮೈಸೂರು ಸಂಸ್ಥಾನದಲ್ಲಿ ಅದೇ ಪರಿಸ್ಥಿತಿಯಿಂದ ಮೈಸೂರಿನಲ್ಲಿ ಚಳವಳಿ ಆರಂಭವಾಯಿತು. ಆದ್ದರಿಂದ ಮೈಸೂರು ಸಂಸ್ಥಾನದ ಪ್ರಜೆಗಳಿಗೆ ತಾವು ಬ್ರಿಟಿಷರಿಂದ ಸ್ವಾತಂತ್ರ್ಯಗೊಂಡು ಮೈಸೂರು ಸಂಸ್ಥಾನದವರ ಗುಲಾಮರಾಗಿರುತ್ತೇವೆ ಎಂಬ ಭಾವನೆ ಮೂಡಿತು. ಆದರೆ ಜವಾಬ್ದಾರಿ ಸರ್ಕಾರವು ಸ್ಥಾಪನೆಯಾಗಲಿಲ್ಲ. ಈ ಹಳೆಯ ಮೈಸೂರು ಪ್ರದೇಶದಲ್ಲಿ ಕಾಂಗ್ರೆಸ್ಸಿನ ಉತ್ಸಾಹದಿಂದ ಭಾರತ ಸ್ವಾತಂತ್ರ್ಯವಾದ ನಂತರ ಮೈಸೂರು ಸಂಸ್ಥಾನವು ಭಾರತದ ಒಕ್ಕೂಟದಲ್ಲಿ ಸೇರುವಂತೆ ಮಹಾರಾಜರ ಮೇಲೆ ಒತ್ತಾಯ ತರುವುದಕ್ಕೆ ಮೈಸೂರು ಕಾಂಗ್ರೆಸ್ 'ಮೈಸೂರು ಚಲೋ ಚಳವಳಿ' ಹೂಡಬೇಕಾಯಿತು. ಆಗ ಮೈಸೂರು ಕಾಂಗ್ರೆಸ್ ೧೯೪೭ರ ಸೆಪ್ಟಂಬರ್ ೧ ರಂದು ಮೈಸೂರು ಚಲೋ ಚಳವಳಿಯನ್ನು ಕೈಗೊಂಡಿತು. ಆಗಿನ ಮೈಸೂರು ಸಂಸ್ಥಾನದ ದೌರ್ಜನ್ಯವನ್ನು

ಎದುರಿಸಲು ಮೈಸೂರು ರಾಜ್ಯದ ಬೆಂಗಳೂರು, ಕೋಲಾರ, ಮಂಡ್ಯ, ಹಾಸನ, ಚಿತ್ರದುರ್ಗ, ತುಮಕೂರು, ದಾವಣಗೆರೆ ಮೊದಲಾದ ಕರ್ನಾಟಕದ ಇತರೆ ಕಡೆಗಳಲ್ಲಿ ನಡೆದಂತೆ ಚಳವಳಿ ಹರತಾಳಗಳು ಪ್ರಾರಂಭವಾದವು. ಮೈಸೂರು ಸಂಸ್ಥಾನದ ಕೊನೆಯ ಪ್ರಾಂತ್ಯವಾಗಿದ್ದ ಹರಿಹರದಲ್ಲಿ ಮತ್ತು ಈ ತಾಲ್ಲೂಕಿನ ಗ್ರಾಮಗಳಾದ ಗುತ್ತೂರು, ಕೊಂಡಜ್ಜಿ, ಮಲೆಬೆನ್ನೂರು, ಕಮಲಾಪುರ, ಭಾನುವಳ್ಳಿ, ಹೊಳೆಸಿರಿಗೆರೆ, ಇಂಗಳಗೊಂದಿ ಮುಂತಾದ ಗ್ರಾಮಗಳಿಗೆ ಈ ಚಳವಳಿಯ ಬಿಸಿತಟ್ಟಿತು.[೧೦] ಆದ್ದರಿಂದ ಹರಿಹರ ತಾಲ್ಲೂಕಿನ ಸ್ವಾತಂತ್ರ್ಯ ಹೋರಾಟಗಾರರಾದ ಎನ್.ಎಂ. ಚಂದ್ರಶೇಖರಯ್ಯ ಮತ್ತು ಅಣಜಿಮಠ ಕೊಟ್ರಯ್ಯನವರ ನಾಯಕತ್ವದಲ್ಲಿ ಗಾಂಜಿವೀರಪ್ಪ, ನಾರಾಯಣರಾವ್, ಜಿ. ಗೋವಿಂದಪ್ಪ, ಸಿದ್ದಪ್ಪ, ಕೆ.ಹೆಚ್. ಪಟೇಲರು, ಚನ್ನವೀರಪ್ಪ, ಪಿ. ಬಸವನಗೌಡ್ರು, ಬೋಂಗಾಳೆ ಕೃಷ್ಣರಾವ್, ಬೋಂಗಾಳೆ ಪುಂಡಲೀಕ್ ರಾವ್, ಕೊಟ್ರಪ್ಪ ಇನ್ನು ಮುಂತಾದ ಅನೇಕ ಹೋರಾಟಗಾರರು ಮೈಸೂರು ಚಲೋ ಚಳವಳಿಯಲ್ಲಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಎಸ್. ನಿಜಲಿಂಗಪ್ಪನವರು 'ಆರ್ಕಾಟ್ ಬಾಯ್ ಕಾಟ್, ತಂಬೂಚೆಟ್ಟಿ ಚಟ್ಟಕಟ್ಟಿ' ಎಂದು ಘೋಷಣೆ ಕೂಗಿದರು. ಆನಂತರ ಮೈಸೂರಿನಲ್ಲಿ ಅಕ್ಟೋಬರ್ ೯ರಂದು ಮಾತುಕತೆಗಳು ಪ್ರಾರಂಭವಾದವು. ಈ ಸಂದರ್ಭ ಶ್ರೀ ಜಯಚಾಮರಾಜ ಒಡೆಯರು, ಆಪ್ತ ಕಾರ್ಯದರ್ಶಿ ತಂಬೂಚೆಟ್ಟಿ, ಮತ್ತು ದಿವಾನರಾದ ರಾಮಸ್ವಾಮಿ ಮೊದಲಿಯರ್ ಹಾಗೂ ಮೈಸೂರು ಕಾಂಗ್ರೆಸ್‌ನ ಜೊತೆ ಮಾತುಕತೆಗಳು ನಡೆದು ಕೆ.ಸಿ. ರೆಡ್ಡಿ ಮತ್ತು ಎಸ್. ನಿಜಲಿಂಗಪ್ಪನವರ ನೇತೃತ್ವದಲ್ಲಿ ಅಕ್ಟೋಬರ್ ೨೪ ರಂದು ವಿಜಯದಶಮಿಯ ದಿನ ಸಂಸ್ಥಾನದಲ್ಲಿ ತಾತ್ಕಾಲಿಕ ಪ್ರಜಾ ಸರ್ಕಾರವು ಅಧಿಕಾರಕ್ಕೆ ಬಂದಿತು. ಶ್ರೀ ಜಯಚಾಮರಾಜ ಒಡೆಯರು ಮೈಸೂರು ರಾಜ್ಯದ ರಾಜ ಪ್ರಮುಖರಾದರು.

ಆಧಾರಸೂಚಿ

೧. ಪಿ. ಯಶೋಧ ರಾಜಶೇಖರಪ್ಪ, ಸ್ವಾತಂತ್ರ್ಯ ಇತಿಹಾಸದ ಪುಟಗಳಲ್ಲಿ ಚಿತ್ರದುರ್ಗ ಜಿಲ್ಲೆ, **ದವನಸಿರಿ,** ಪುಟ ಸಂಖ್ಯೆ ೫೧.
೨. ಗೌಡ್ರು ಸಿದ್ದಪ್ಪನವರು, ಸಂದರ್ಶನ, ದಿನಾಂಕ: ೦೮-೦೩-೨೦೧೨.
೩. ಗೌಡ್ರು ಸಿದ್ದಪ್ಪನವರು, ಸಂದರ್ಶನ, ದಿನಾಂಕ: ೦೮-೦೩-೨೦೧೨.
೪. ಬಳ್ಳೇಕೆರೆ ಹನುಮಂತಪ್ಪ, **ಹರಿಹರ ತಾಲ್ಲೂಕು ದರ್ಶಿನಿ,** ಪುಟ ಸಂಖ್ಯೆ ೨೧.
೫. ಯು.ಎಸ್. ಸಂಗನಾಳ ಮಠ, **ದಾವಣಗೆರೆ ಪರಿಸರದಲ್ಲಿ ಗಾಂಧೀಜಿ,** ಪುಟ ಸಂಖ್ಯೆ ೧೭೦.
೬ ಜಿ. ಗೋವಿಂದಪ್ಪನವರು, ಸಂದರ್ಶನ, ದಿನಾಂಕ: ೨೫-೦೩-೨೦೧೨.
೭. ಬಳ್ಳೇಕೆರೆ ಹನುಮಂತಪ್ಪ, **ಹರಿಹರ ತಾಲ್ಲೂಕು ದರ್ಶಿನಿ,** ಪುಟ ಸಂಖ್ಯೆ ೨೧.
೮. ಎನ್.ಎಂ. ಚಂದ್ರಶೇಖರಯ್ಯನವರು, ಸಂದರ್ಶನ, ದಿನಾಂಕ: ೦೪-೦೩-೨೦೧೨.
೯. ಜಿ. ಗೋವಿಂದಪ್ಪನವರು, ಸಂದರ್ಶನ, ದಿನಾಂಕ: ೨೫-೦೩-೨೦೧೨.
೧೦. ಎನ್.ಎಂ. ಚಂದ್ರಶೇಖರಯ್ಯನವರು, ಸಂದರ್ಶನ, ದಿನಾಂಕ: ೦೪-೦೩-೨೦೧೨.

೧೧೧

ಕೋಲಾರದ ಸೂಫಿ ಸಂತ ಹಜರತ್ ಖ್ವಾಜಾ ಸೈಯದ್ ಉಸ್‌ಮಾನ್‌ಶಾವಲ್ಲಿ[RH]

ಡಾ. ಶಾಹೀನಾಬಾನು*

ಪ್ರಸ್ತಾವನೆ

ಕೋಲಾರ ದಕ್ಷಿಣ ಕರ್ನಾಟಕದ ಒಂದು ಪ್ರಮುಖ ಜಿಲ್ಲೆಯಾಗಿದೆ. ಕೋಲಾರದಲ್ಲಿ ಹಜರತ್ ಖ್ವಾಜಾ ಸೈಯದ್ ಉಸ್‌ಮಾನ್‌ಶಾವಲ್ಲಿ[RH] ೧೪ನೇ ಶತಮಾಣದಲ್ಲಿ ಸೂಫಿ ಪಂಥ ಪ್ರಚಾರ ಮಾಡಿದರು. ಅವರ ದರ್ಗಾ ಕೋಲಾರ ಬೆಟ್ಟದ ಮೇಲಿದೆ. ಕೋಲಾರ ಬೆಂಗಳೂರಿನ ಪೂರ್ವಕ್ಕಿದೆ. ಇದರ ಮತ್ತೊಂದು ಪ್ರಾಚೀನ ಹೆಸರು ಕುವಲಾಲ. ಇದು ಗಂಗರ ಮೊದಲ ರಾಜಧಾನಿಯಾಗಿತ್ತು.

ಹಜರತ್ ಖ್ವಾಜಾ ಸೈಯದ್ ಉಸ್‌ಮಾನ್ ಶಾವಲಿ ಮೂಲಭೂತವಾಗಿ ಅರಬ್ ದೇಶದ ನಿವಾಸಿ. ಅವರು ಅಲ್ಲಿಂದ ೧೪ನೇ ಶತಮಾನದಲ್ಲಿ ಭಾರತ ದೇಶಕ್ಕೆ ವಲಸೆ ಬಂದರು. ಹೀಗೆ ವಲಸೆ ಬಂದ ಸೂಫಿ ಸಂತರ ಕೋಲಾರ ಬೆಟ್ಟದ ಮೇಲೆ ನೆಲಸಿದರು. ಇವರು ಹಜರತ್ ಸೈಯದಿನ ಕುತ್ಬುಶಾಫೆಂರಿ ಕೋಲಾರ ಸೂಫಿ ಸಂತರ ಸಮಕಾಲೀನ ಸೂಫಿ ಸಂತರಾಗಿದ್ದರು. ಅವರ ದರ್ಗಾ ಕ್ಲಾಕ್‌ಟಾವರ್ ಮುಂಭಾಗದಲ್ಲಿದೆ. ಇವರು ಕೋಲಾರದ ಬೆಟ್ಟದ ಮೇಲೆ ಒಂದು ಗುಹೆಯಲ್ಲಿ ದೇವರ ನೆನಪು ಮತ್ತು ತಪಸ್ಸಿನಲ್ಲಿ ಹಲವು ತಿಂಗಳುಗಳ ಕಾಲ ತೊಡಗಿದ್ದರು.

ಇಂದಿಗೂ ಆ ಗುಹೆ ಇವರ ದರ್ಗಾದ ಸ್ವಲ್ಪ ದೂರ ದಲ್ಲಿದೆ. ಇವರು ವಾಸವಾಗಿದ್ದಾಗ ಬೆಟ್ಟದ ಸುತ್ತಮುತ್ತ ಅರಣ್ಯ ನೆಲೆಗೊಂಡಿತ್ತು. ಇಲ್ಲಿ ಮನುಷ್ಯರ ಸುಳಿವು ಇರಲಿಲ್ಲ. ಇಲ್ಲಿ ಕಾಡುಪ್ರಾಣಿಗಳು ವಿಶೇಷವಾಗಿ ಹುಲಿಗಳು ಇವರ ಸುತ್ತಮುತ್ತ ಅಡ್ಡಾಡುತ್ತಿದ್ದವು. ಇವರು ಎಲ್ಲ ಕಾಡುಪ್ರಾಣಿಗಳ ಜೊತೆ ಒಳ್ಳೆಯ ಸಂಬಂಧ ಬೆಳೆಸಿದ್ದರು. ಇವರಿಗೆ ಪ್ರಾಣಿಗಳು ಆಹಾರ ವಸ್ತುಗಳನ್ನು ಸರಬರಾಜು ಮಾಡುತ್ತಿದ್ದವು. ಇವರು ಗುಪ್ತ ಮಾರ್ಗದ ಮುಖಾಂತರ ಗುಟ್ಟುವಾದ ಹಜರತ್ ಸೈಯದಿನ ಕುತ್ಬುಶಾ ಫೌರಿ ಇವರಿಗೆ ಭೇಟಿ ಮಾಡುತ್ತಿದ್ದು (ಇಂದಿಗೂ ಕೋಲಾರ ಕರ್ನಾಟಕದ ಪ್ರಸಿದ್ಧ ಸೂಫಿ ಕೇಂದ್ರವಾಗಿದೆ).

ಅವರು ಅನೇಕ ಪವಾಡಗಳನ್ನು (ಕರಾಮತ್) ಮಾಡಿದರು. ಅವರ ಪವಾಡಗಳಲ್ಲಿ ಮುಖ್ಯ ಪವಾಡಗಳು ಈ ಕೆಳಕಂಡಂತಿದೆ.

ಒಮ್ಮೆ ಅವರು ತಮ್ಮ ಪವಿತ್ರ ಕೈ ಮೂಲಕ ಬೆಟ್ಟದ ಮೇಲೆ ಇರುವ ಕಲ್ಲನ್ನು ಒತ್ತಿದ್ದರು. ಆ ಕಲ್ಲಿನಿಂದ ನೀರು ಚಿಮ್ಮಲು ಆರಂಭವಾಗಿ ಇಂದಿಗೂ ಆ ಮೂಲ ಸ್ಥಳದಿಂದ ನೀರು ಹರಿಯುತ್ತಿದೆ. ಈಗ ಈ ಪ್ರಸಿದ್ಧ ಸ್ಥಳ ಅಂತರ್‌ಗಂಗೆ ಗೈಮುಖ್ (Gaimukh) ಎಂಬ ಹೆಸರುಗಳಿಂದ ಪ್ರಸಿದ್ಧ ವಾಗಿದೆ. ಬೆಟ್ಟದ ಮೇಲಿಂದ ಹರಿದುಬರುವ ನೀರು ತುಂಬ ಶುದ್ಧ, ಸ್ವಚ್ಛ, ಸಿಹಿ, ತಂಪು ಗುಣವನ್ನು ಹೊಂದಿರುತ್ತದೆ. ಇವರ ಭಕ್ತರು ಕಂಡಿರುವ ಪ್ರಕಾರ ಇಂದಿಗೂ ಪ್ರತಿ ಶುಕ್ರವಾರ ರಾತ್ರಿ ಸುಮಾರು ೩ ಗಂಟೆಗೆ ಹುಲಿ ಬಂದು ತನ್ನ ಬಾಲದಿಂದ ದರ್ಗಾದ ಸುತ್ತಾಮುತ್ತಾ ಕಸಗೂಡಿಸಿ ಹೋಗುತ್ತದೆ.

ಕ್ರಿ.ಶ. ೧೪೨೪ ರಲ್ಲಿ ಈ ಮಹಾಮಹಿಮಾ ಪುರುಷ ಸೂಫಿ ಸಂತರ ಸುಮಾರು ೧೦೫ ವರ್ಷ ವಯಸ್ಸಿನಲ್ಲಿ ದೇವರ ಶಕ್ತಿಯಿಂದ ಜೀವಂತವಾಗಿ, ಸ್ವಯಂ ಇಚ್ಛೆಯಿಂದ ಗೋರಿಯಲ್ಲಿ ಅಥವಾ ಸಮಾಧಿಯಾದರು. ಇವರನ್ನು ಹೂಳಿದ ಎಪ್ಪತ್ತಾರು (೭೬) ವರ್ಷಗಳ ನಂತರ ಧಾರ್ಮಿಕ ಭಕ್ತಿಯುಳ್ಳ ದಂಪತಿಗಳ ಕನಸಿನಲ್ಲಿ ಭಕ್ತರಾಗಲು ಅವರಿಗೆ ತಿಳಿಸಿ ತಮ್ಮ ಸಮಾಧಿಗೆ ಭೇಟಿ ನೀಡಲು ಮಾರ್ಗದರ್ಶನ ನೀಡಿದರು. ಆ ದಂಪತಿಗಳು ಕಡುಬಡವರು ಬೆಂಗಳೂರಿನಲ್ಲಿ ವಾಸವಾಗಿದ್ದರು. ಅವರು ಆ ಸೂಫಿಸಂತರ ಸಮಾಧಿಗೆ ಭೇಟಿಯಾದ ನಂತರ ಶ್ರೀಮಂತರಾದರು. ಅವರು ಕ್ರಿ.ಶ. ೧೫೦೨ರಲ್ಲಿ ಹಜರತ್ ಉಸಮಾನಶಾವಲಿ ದರ್ಗಾ ಕಟ್ಟಿದರು.

ಇವರ ದರ್ಗಾ ಸುಮಾರು ಏಳು ಎಕರೆ ಅರಣ್ಯ ಭೂಮಿಯಲ್ಲಿ ವಿಸ್ತಾರವಾಗಿದೆ. ಇವರು ದರ್ಗಾ ಸ್ಥಾಪನೆ

* ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಮಹಾರಾಣಿ ಕಲಾ ಕಾಲೇಜು, ಬೆಂಗಳೂರು–೫೬೦ ೦೦೧.





ಯಿಂದ ಬೆಟ್ಟದ ಮೇಲೆ ಏಳು ಹಳ್ಳಿಗಳು ಅಥವಾ ಗ್ರಾಮಗಳು ಸ್ಥಾಪನೆಯಾಗಿದೆ. ಅವುಗಳು, ೧. ಕುಂಚಪುರವ್ (Kunchapuram), ೨. ಶಿವಗಂಗೆ (Shivagange), ೩. ತೆರಹಳ್ಳಿ (Therahalli), ೪. ಕುಪ್ಪಳ್ಳಿ (Kuppalli), ೫. ಕೊಟ್ಟಪ್ಪಳಿ (Kottappalli) ಮತ್ತು ೬. ಪಾಪರಾಯನಹಳ್ಳಿ (Paparayanahalli). ಇವರ ದರ್ಗಾ ಹತ್ತಿರ ಪಾಪರಾಯನ ಹಳ್ಳಿ ಸ್ಥಾಪನೆಯಾಗಿದೆ. ಈ ಹಳ್ಳಿಗಳಲ್ಲಿ ವಾಸವಾಗಿರುವ ಜನರಿಗೆ ಯಾವುದೇ ಹೆದರಿಕೆ, ಭಯ, ದಿಗಿಲು, ಗಾಬರಿಯಿಲ್ಲ. ಅವರಿಗೆ ಈ ಸೂಫಿ ಸಂತರು ರಕ್ಷಣೆ ನೀಡುತ್ತಿದ್ದಾರೆ (ಇಲ್ಲಿ ಒಂದು ಆಶ್ಚರ್ಯಕರವಾದ ವಿಷಯವೇನೆಂದರೆ, ತೆರಹಳ್ಳಿ ಯಲ್ಲಿ ಹೊಯ್ಸಳರ, ವಿಜಯನಗರ ದೇವಾಲಯಗಳು, ಸಾಧುಗಳ ಸಮಾಧಿಗಳು ಪತ್ತೆಯಾಗಿದೆ). ಈ ದರ್ಗಾದ ವಿಶೇಷ ಗುಣವೇನೆಂದರೆ, ಈ ದರ್ಗಾಗೆ ಗುಮ್ಮಟ (Domb) ಇಲ್ಲ, ಹಲವು ಚಿಕ್ಕ ಚಿಕ್ಕ ಮಿನಾರುಗಳಿವೆ. ಈ ದರ್ಗಾದ ಮುಂಭಾಗದಲ್ಲಿ ಮಸೀದಿ ಕಟ್ಟಿದ್ದಾರೆ. ಇಲ್ಲಿ ಒಂದು ಸಿಹಿ ನೀರಿನ ಬಾವಿ ಸಹ ಇದೆ. ಸುತ್ತಮುತ್ತಾ ವಾಸವಾಗಿರುವ ಜನರ ಪ್ರಕಾರ ಈ ನೀರಿಗೆಲ್ಲಿ ಕಾಯಿಲೆ ವಾಸಿ ಮಾಡುವ ಶಕ್ತಿ ಇದೆ.

೧೪ನೇ ಶತಮಾನದಿಂದ ಸಾವಿರಾರು ಭಕ್ತರು ಬೆಟ್ಟ ಹತ್ತಿ ಈ ಸೂಫಿಸಂತರಿಗೆ ಗೌರವ ಸಲ್ಲಿಸುತ್ತಾರೆ. ಭಿನ್ನ ಧರ್ಮ, ಜನಾಂಗ, ಭಾಷೆ, ಆಚಾರ–ವಿಚಾರವುಳ್ಳ ಜನ ಇರಲು ಈ ಸೂಫಿಸಂತರೇ ಕಾರಣ. ಅವರಲ್ಲಿ ಏಕತೆ ನೆರವಾಗಿದೆ. ಭೂತ ಬಿಡಿಸುವುದು, ಖಾಯಿಲೆ ನಿವಾರಿಸುವುದು, ಬಂಜೆತನ ನಿವಾರಿಸುವುದು, ಹುಚ್ಚು ಬಿಡಿಸುವುದು ಇತ್ಯಾದಿಗಳನ್ನು ಪವಾಡಗಳ ಮೂಲಕ ಮಾಡುತ್ತಿದ್ದರು. ಇವರು ಬೇಸಾಯದಲ್ಲಿ ನಿರತರಾಗಿದ್ದಾರೆ.

ದರ್ಗಾದ ಆರ್ಥಿಕ ಪ್ರಭಾವ : ಈ ಸೂಫಿಸಂತರ ಆಶೀರ್ವಾದದಿಂದ ಬೆಟ್ಟದ ಮೇಲೆ ಎಲ್ಲ ರೀತಿಯ ಹಣ್ಣು ಗಿಡಗಳು, ಸಸ್ಯಗಳು ಬೆಳೆದಿವೆ. ಇಲ್ಲಿ ವಾಸವಾಗಿವ ಹಳ್ಳಿ ಜನರು ಭಕ್ತರಿಗೆ ಹಣ್ಣುಗಳು, ಸಸ್ಯಗಳನ್ನು ಮಾರಾಟ ಮಾಡುತ್ತಾರೆ. ಈ ಪ್ರದೇಶದಲ್ಲಿ ಕೃಷಿ, ಪಶುಪಾಲನೆ ಜನರ ಪ್ರಧಾನ ಉದ್ಯೋಗವಾಗಿದೆ. ಭತ್ತ, ರಾಗಿ, ಹತ್ತಿ, ಎಣ್ಣೆಕಾಳುಗಳು, ಹಣ್ಣು, ತರಕಾರಿಗಳು ಮುಖ್ಯ ಬೆಳೆಗಳಾಗಿವೆ. ಮೇಕೆ, ಹಸು, ಎತ್ತು, ಕುರಿ, ಎಮ್ಮೆ, ಕೋಳಿ, ನಾಯಿ ಸಾಕುತ್ತಿದ್ದಾರೆ. ಈ ಸಾಕುಪ್ರಾಣಿಗಳು ಅವರಿಗೆ ಸಂಪತ್ತುಗಳಾಗಿವೆ.

ಉರುಸ್ : ಇವರ ಉರುಸ್ (ವಾರ್ಷಿಕ ಜಾತ್ರೆ) ಪ್ರತಿ ವರ್ಷ ೨೭, ೨೮ ಮತ್ತು ೨೯ನೇ ಏಪ್ರಿಲ್ (April) ಮಾಹೆ ಯಲ್ಲಿ ಆಚರಿಸುತ್ತಾರೆ.

ಈಗ ಪ್ರತಿದಿನ ನೂರಾರು ಜನ ಭಕ್ತರು ದರ್ಗಾಗೆ ಬಂದು ಹೋಗುತ್ತಾರೆ. ಕ್ಲಾಕ್‌ಟಾವರ್‌ನಿಂದ ಇಲ್ಲಿಗೆ ಸರ್ಕಾರಿ ಬಸ್‌ನ ಸೌಲಭ್ಯವಿದ್ದು ಬೆಳಿಗ್ಗೆ ೮, ೧೦ ಮತ್ತು ಮಧ್ಯಾಹ್ನ ೧೨ ಗಂಟೆಗೆ ಇವೆ.



ಬೆಟ್ಟದಡಿಯಲ್ಲಿ ಒಂದು ದೇವಾಲಯ, ಮಸೀದಿ, ಜಿಂಕೆಪಾರ್ಕ್, ಅರಬಿಕ್ ಮದರಸ (Arabic Madarasa) ಸೂಫಿಸಂತರು ಗುಲ್ಜಾರ್‌ಅಲಿಶಾ ಕ್ವಾದ್ರಿ ಸರ್ವರಿ, ಸೈಯದ್ ಫಕರುಲ್ಲಾ ಶಾ ಕ್ವಾದ್ರಿ (ಮಸ್ತಾನ್), ಕಲೀಫ ಹಜರತ್ ಸುಲ್ತಾನ್ ಇಸ್ಕಂದರ್ ಅಲಿಶಾ ಹುಸೈನಿ ಕ್ವಾದ್ರಿ ಸರ್ವರಿ ಹಾಗೂ ಮಸ್ತಾನಿಮ ಇವರ ದರ್ಗಾಗಳು ಇವೆ.

ಆಧಾರಸೂಚಿ

೧. Hazrath Syed Fakhrulla Jalal Shah Qadiri, Kalam-E-Fakhar, Samdani Graphics Press, Mysore, 2009, P.5.

೨. Hazrath Syed Shaikh Khadar Jalal Chishti[RH], Kalam-E-Nazar, Samdani Grapics Press, Mysore, 2010, P.3.

೩. Zareen Taj, Dastana-Hazrath Syed Fakhrulla Jalal Shah Qadiri[RH], Mysore, 1982, P.53.

೪. Hazrath Syed Shaikh Jaffar-Siddiq Jalal, Hazrath Syed Fakhrulla Jalal-Shah Qadiri Ka-Zindagi Ka Halath (Mysore), 1960, P.8.

೫. Wakf Board Report of Kolar District, 2010.

೬ Karnataka State Board of Wakfs Annual Report, 2009-2010.

೭. Wakf Board Gazetteer of Koalr District.

೮. Kolar District Gazeetteer, Bangalore, 1968.

೯. Kolar Gille, Published by Government of Karnataka Publicity Department, 1966.

ರಹಮತ್ ತರಿಕೆರೆ, ಕರ್ನಾಟಕದ ಸೂಫಿಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೮.

೧೦. Abdul Jabbar Malkapuri- Fi-Tazkiral Auliya-I, Deccan, Hyderabad, 1913.

೧೧. Sunday Herald Newspaper, Moonscape in Kolar, 02.04.2011, P.IV (Metro Life)

೧೨. Abdul Razak, Dictionary of the Technical Terms of Sufism, Calcutta, 1845.

೧೧೨

ಕರ್ನಾಟಕದಲ್ಲಿ ಬ್ರಹ್ಮಕುಮಾರಿ ಈಶ್ವರಿಯ ವಿಶ್ವವಿದ್ಯಾಲಯದ ಆಧ್ಯಾತ್ಮಿಕ, ಧಾರ್ಮಿಕ ಕೊಡುಗೆಗಳು

ದೇವರಾಜ ಜೆ. ಬಾಗಾವಾಡಿ*

ಮನುಕುಲಕ್ಕೆ ಹೊಸಬೆಳಗು, ಹೊಸ ಜೀವನ, ಹೊಸ ಯುಗದ ದಾರಿ ತೋರಲು ಸ್ಥಾಪನೆಯಾದ ಸಂಸ್ಥೆ "ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರಿಯ ವಿಶ್ವವಿದ್ಯಾಲಯ" ಹೆಸರೆ ಸೂಚಿಸುವಂತೆ ಮಾನವ ಕುಲಕೋಟಿಗೆ ತಂದೆ ಪ್ರಜಾಪಿತ ಬ್ರಹ್ಮ (Adam) ಸೃಷ್ಟಿ ರಚನೆಗೆ ಕಾರಣಿ ಪುರುಷ ಈ ಬ್ರಹ್ಮನ ಮೂಲಕ ನಿರಾಕಾರನಾದ ಶಿವನು ಹೊಸಯುಗ ಸೃಷ್ಟಿಸಲು ಜ್ಞಾನ-ಯೋಗದ ವಿದ್ಯೆ ಕಲಿಸುವನು. ಆ ವಿದ್ಯೆ ಕಲಿಯುವವರೆಲ್ಲ ಬ್ರಹ್ಮನ ಮಾನಸ ಪುತ್ರರು ಅರ್ಥಾತ್ ಬ್ರಹ್ಮಾ ಕುಮಾರ, ಬ್ರಹ್ಮಾಕುಮಾರಿಯರು, ಈಶ್ವರನೆ ತಿಳಿಸಿದ ಸಹಜ ಜ್ಞಾನ, ಸಹಜ ರಾಜಯೋಗ ವಿದ್ಯೆ, ಈ ವಿದ್ಯೆ ಕಲಿಸುವ ಸ್ಥಳಕ್ಕೆ ಈಶ್ವರಿಯ ವಿಶ್ವವಿದ್ಯಾಲಯ ಎಂದು ಕರೆಯುವರು. ಈ ಸಂಸ್ಥೆಯನ್ನು ಮುನ್ನಡೆಸುವವರು ಮಹಿಳೆಯರೇ ಆಗಿದ್ದಾರೆ. ಬ್ರಹ್ಮಾಕುಮಾರಿ ಈಶ್ವರಿಯ ವಿಶ್ವವಿದ್ಯಾಲಯವು ಸಂಪೂರ್ಣ ಮಹಿಳೆಯರಿಂದಲೆ ನಡೆಸಲ್ಪಟ್ಟು ಸಹಜ ಜ್ಞಾನ-ಸಹಜ ರಾಜಯೋಗ ಅಭ್ಯಾಸ ಮಾಡುವಲ್ಲಿ ಸ್ತ್ರೀಪುರುಷರಿಗೆ ಸಮಾನ ಅವಕಾಶಗಳುಂಟು.

ಸಂಸ್ಥೆಯ ಸ್ಥಾಪನೆ: ೧೯೩೬-೩೭

ಪ್ರಸ್ತುತ ಈಶ್ವರಿಯ ವಿಶ್ವವಿದ್ಯಾಲಯವು ೧೯೩೭ರಲ್ಲಿ ಕರಾಚಿಯ ಸಿಂದ್ ಹೈದರಾಬಾದ (ಈಗ ಪಾಕಿಸ್ಥಾನದಲ್ಲಿದೆ) ನಲ್ಲಿ ಸ್ಥಾಪನೆಯಾಯಿತು. ಈ ಸಂಸ್ಥೆಯ ಸ್ಥಾಪಕ 'ಪ್ರಜಾಪಿತಾ ಬ್ರಹ್ಮ ಅಥವಾ ಪಿತಾಶ್ರೀ ಬ್ರಹ್ಮಾರವರು' ಇವರ ಪೂರ್ವಾಶ್ರಮದ ಹೆಸರು 'ದಾದಾ ಲೇಖರಾಜ' ಎಂದು ಇವರು ಸಿಂದ್ ಹೈದರಾಬಾದದಲ್ಲಿ ಸುಪ್ರಸಿದ್ಧ ವಜ್ರದ ವ್ಯಾಪಾರಿಯಾಗಿದ್ದರು. ವಿಷ್ಣುವಿನ ಪರಮ ಭಕ್ತರಾಗಿದ್ದರು. ಇವರು ತಮ್ಮ ಆಧ್ಯಾತ್ಮಿಕ ಮಾರ್ಗದರ್ಶನಕ್ಕಾಗಿ ೧೨ ಜನ ಗುರುಗಳನ್ನು ಮಾಡಿಕೊಂಡಿದ್ದರು. ಮನೆಯಲ್ಲಿಯೇ ಪ್ರತಿದಿನ ಸತ್ಸಂಗ ನಡೆಸುತ್ತಿದ್ದರು. ವಜ್ರದ ವ್ಯಾಪಾರದಿಂದ ಅಪಾರ ಸಂಪತ್ತನ್ನು ಗಳಿಸಿದ್ದರು. ಇದರಿಂದ ಇವರಿಗೆ 'ನವಕೋಟಿ ನಾರಾಯಣ' ಎಂದು ಅಂದಿನ ಜನರು ಕರೆಯುತ್ತಿದ್ದರು. ದಾನ, ಧರ್ಮ ಪರೋಪಕಾರ ಮಾಡುವದರಲ್ಲಿ ಎತ್ತಿದ ಕೈ ಹಾಗಾಗಿ ಇವರನ್ನು ಸಿಂದ ಪ್ರಾಂತದಲ್ಲಿ ಪ್ರೀತಿಯಿಂದ 'ಲಕ್ಕಿಬಾಬು' ಎಂಥಲೂ ಕರೆಯುತ್ತಿದ್ದರು. ದಾದಾ ಲೇಖರಾಜರು ತಮ್ಮ ವಜ್ರದ ವ್ಯಾಪಾರದ ನಿಮಿತ್ಯ ಅಂದಿನ ಅನೇಕ ಸಂಸ್ಥಾನಿಕ ರಾಜಮಹಾರಾಜರೊಂದಿಗೆ ನಿಕಟ ಸಂಬಂಧ ಹೊಂದಿದ್ದರು. ಅದರಲ್ಲೂ ಉದಯಪುರದ ಮಹಾರಾಜರು ಇವರನ್ನು ಕುರಿತು ಹೀಗೆ ಹೇಳುತ್ತಿದ್ದರು. 'ದಾದಾರವರೇ ನಿಮ್ಮಲ್ಲಿ ರಾಜರಿಗಿರ ಬೇಕಾದ ಎಲ್ಲ ಗುಣಗಳೂ ಇವೆ. ಭಗವಂತ ನಿಮ್ಮನ್ನು ರಾಜರಾಜರನ್ನಾಗಿ ಮಾಡುವ ಬದಲು ನನ್ನನ್ನು ರಾಜನನ್ನಾಗಿ ಮಾಡಿಬಿಟ್ಟಿದ್ದಾನೆ' ಇಂತಹ ವಿಶಿಷ್ಠ ವ್ಯಕ್ತಿತ್ವವನ್ನು ಹೊಂದಿದ್ದರು.

ದಾದಾ ಲೇಖರಾಜರು ೬೦ನೇ ಇಳಿಯ ವಸ್ಸಿನಲ್ಲಿದ್ದಾಗ 'ಓಂ ಮಂಡಲಿ' ಎಂಬ ಹೆಸರಿನಿಂದ **ಸತ್ಸಂಗ** ಪ್ರಾರಂಭವಾಗಿತ್ತು. ಒಂದು ದಿನ ಈ ಸತ್ಸಂಗದಲ್ಲಿ ಕುಳಿತುಕೊಂಡಿದ್ದ ದಾದಾಲೇಖರಾಜರು ಇದ್ದಕಿದ್ದ ಹಾಗೆ ತಕ್ಷಣ ಎದ್ದು ತಮ್ಮ ದೇವರ ಕೊಠಡಿಯಲ್ಲಿ ಹೋಗಿ ಧ್ಯಾನಸಕ್ತರಾಗಿ ಕುಳಿತು ಬಿಟ್ಟರು. ಎಷ್ಟೊ ಹೊತ್ತಿಗೆ ದಾದಾರವರು ಯೋಗಾವಸ್ಥೆಯಿಂದ ಕೆಳಗೆ ಇಳಿದರು. ಅಂದಿನಿಂದ ಅವರ ಚರ್ಯೆ ವಿಶೇಷ ಬದಲಾವಣೆಗೆ ಒಳಗಾಯಿತು.

'ಓಂ ಮಂಡಲಿಯೆ' ಬ್ರಹ್ಮಾಕುಮಾರಿ ಈಶ್ವರಿಯ ವಿಶ್ವ ವಿದ್ಯಾಲಯವಾದದ್ದು

ದಾದಾ ಲೇಖರಾಜರು 'ಓಂ ಮಂಡಲಿ' ಎಂಬ ಹೆಸರಿನಿಂದ ಈ ಮೊದಲೇ ಸತ್ಸಂಗ ಪ್ರಾರಂಭವಾಗಿತ್ತು. ಅದು ಬೆಳೆದು ೨೦೦ ಜನರಿಂದ ೩೦೦ ಜನರವರೆಗೆ ಸತ್ಸಂಗದಲ್ಲಿ ಭಾಗವಹಿಸುತ್ತಿದ್ದಾರೆ. ಆಗ ಸಿಂಧ ಪ್ರಾಂತದಲ್ಲಿ ಒಂದು ವಿಚಿತ್ರ ಘಟನೆ ಜರುಗಿತು. ಒಮ್ಮಿಂದೊಮ್ಮಲೇ (ಏಕಾಏಕಿ) ಅನೇಕ ಜನರಿಗೆ ವಿಷ್ಣುವಿನ ಸಾಕ್ಷಾತ್ಕಾರ, ನಿರಾಕಾರ ಜ್ಯೋತಿಯ ಸಾಕ್ಷಾತ್ಕಾರ ಹಾಗೂ ದಾದಾ ಲೇಖರಾಜ

* ಶಿಕ್ಷಕರು, ಕೆ ಜಿ ಎಸ್. ತಾಳಿಕೋಟಿ, ತಾ. ಮುದ್ದೇಬಿಹಾಳ, ವಿಜಾಪುರ ಜಿಲ್ಲೆ-೫೮೬೨೧೪

(ಪಿತಾಶ್ರೀ ಬ್ರಹ್ಮಾಬಾಬಾ) ರವರ ಸಾಕ್ಷಾತ್ಕಾರಗಳು ನಡೆದವು. ಇದೊಂದು ಸಿಂಧ ಇತಿಹಾಸದಲ್ಲೆ ಅತ್ಯದ್ಭುತ ಚಮತ್ಕಾರಿ ಘಟನೆ. ಹೀಗಾಗಿ ಸಾಕ್ಷಾತ್ಕಾರವಾದವರೆಲ್ಲ ಬ್ರಹ್ಮಾ ಬಾಬಾ ರವರ ಬಳಿ ಬಂದು ಶರಣಾಗತಿಯಾದರು. ಅವರೆಲ್ಲ ಅಗರ್ಭ ಶ್ರೀಮಂತ ಕುಟುಂಬ (Royal Family) ದವ ರಾಗಿದ್ದರು. ೧೯೩೭-೩೮ರ ಮಧ್ಯ ಈ ಸತ್ಯ ಘಟನೆ ನಡೆಯಿತು. ಬಾಬಾರ ಬಳಿಗೆ ಬಂದವರೆಲ್ಲ ಜ್ಞಾನಯೋಗದಲ್ಲಿ ಮಗ್ನರಾಗ ತೊಡಗಿದರು. ಅವರಲ್ಲಿ ಕೆಲವರು ತಮ್ಮ ತನು, ಮನ ಧನ ಸಂಪತ್ತು ಸಮೇತವಾಗಿ ಶರಣಾದರು. (Surrander) ಅವರೆಲ್ಲರಿಗೂ ಬಾಬಾರವರು ವಸತಿ, ಊಟ, ಹಾಗೂ ಚಿಕ್ಕಮಕ್ಕಳಿಗೆ ಹಾಸ್ಟೆಲ್ ವ್ಯವಸ್ಥೆ ಶಿಕ್ಷಣ ನೀಡುತ್ತಾ ಜೊತೆಗೆ ಭಗವಂತನ ಮಹಾವಾಕ್ಯಗಳ ಅಧ್ಯಯನ ಮಾಡು ತ್ತಿದ್ದರು. ೧೯೪೫ ರಲ್ಲಿ ಜಾಗತಿಕ ೨ನೇ ಮಹಾಯುದ್ದವು ನಡೆಯಿತು, ಆಗ ಸುಮಾರು ೩೫೦ ರಿಂದ ೪೦೦ ಜನ ಸ್ತ್ರೀ-ಪುರುಷರು ಒಂದೇ ಸ್ಥಳದಲ್ಲಿ ಕುಳಿತು ಅಖಂಡ ಯೋಗ ತಪಸ್ಸನ್ನು ಸತತ ೧೪ ವರ್ಷಗಳವರೆಗೆ ನಡೆಸಿದರು.

ಪಾಕಿಸ್ಥಾನದಿಂದ ಹಿಂದುಸ್ಥಾನದೆಡೆಗೆ-೧೯೫೦

೧೯೫೦ ರಲ್ಲಿ ಈ ಸಂಸ್ಥೆಯನ್ನು ಸಿಂಧ್ ಹೈದರಾಬಾದದಿಂದ ಕರಾಚಿಗೆ ಸ್ಥಳಾಂತರಿಸಲಾಯಿತು. ಆಗ ೧೯೪೭ ರಲ್ಲಿ ಭಾರತ ಮತ್ತು ಪಾಕಿಸ್ಥಾನ ವಿಭಜನೆಯ ಸಂದರ್ಭದಲ್ಲಿ ಈ ಸಂಸ್ಥೆಯ ಸದಸ್ಯರ ಸಂಬಂಧಿಕರೆಲ್ಲ ಭಾರತಕ್ಕೆ ವಲಸೆ ಬಂದರು. ಆದರೆ ಸಂಸ್ಥೆ ಮಾತ್ರ ಮುಸ್ಲಿಂ ಸರಕಾರದ ಸಂಪೂರ್ಣ ರಕ್ಷಣೆಯಲ್ಲಿ ಪಾಕಿಸ್ತಾನದಲ್ಲಿಯೇ ಉಳಿಯಿತು. ಆದರೆ ಮುಂದೆ ಈ ಸಂಸ್ಥೆಯನ್ನು ಭಾರತಕ್ಕೆ ವರ್ಗಾಯಿಸಬೇಕೆಂದು ಆಗ ವಲಸೆ ಬಂದ ಸದಸ್ಯರ ಸಂಬಂಧಿಕರೆಲ್ಲ ಆಹ್ವಾನ ನೀಡಿದರು. ೧೯೫೦ ರಲ್ಲಿ ಎಲ್ಲ ಸದಸ್ಯರು ಬ್ರಹ್ಮಾ ಬಾಬಾರವರು ಕರಾಚಿಯಿಂದ ಹಡಗು ಏರಿ ಭಾರತದ 'ಓಖಾ' ಬಂದರಕ್ಕೆ ಬಂದು ಇಳಿದರು. ಭಾರತದಲ್ಲಿ ಪ್ರಾಚೀನ ಕಾಲದ ತಪೋಭೂಮಿಯಾದ ಅಬು ಪರ್ವತಕ್ಕೆ ಬಂದರು.

ಭಾರತದ ಅರಾವಳಿ ಪರ್ವತ (ಮೌಂಟ ಅಬು) ದಲ್ಲಿ ಅಂತರರಾಷ್ಟ್ರಿಯ ಕೇಂದ್ರ: ೧೯೫೪

ಪರ್ವತದಲ್ಲಿ (ಅರಾವಳಿ ಪರ್ವತ ಶ್ರೇಣಿ) 'ಬ್ರಿಜ್‌ಕೋಟ' ಇದು ಮಹಾರಾಜರ ಬೇಸಿಗೆಯ ಅರಮನೆ (summer palace) (ಭೂತ ಬಂಗಲಾ) ಹಿಡಿದು, ಯೋಗ ಸಾಧನೆ ಮುಂದುವರೆಸಿದರು. ೩ ವರ್ಷದ ನಂತರ ಆರಾವಳಿ ಪರ್ವತ ಶ್ರೇಣಿಗಳ ಮಧ್ಯದಲ್ಲಿ ಸ್ಥಳವನ್ನು ಆಯ್ಕೆ ಮಾಡಿ ಅಲ್ಲಿ ಪಿತಾಶ್ರೀಯವರು ಕುಟಿರ ನಿರ್ಮಿಸಿದರು. ನಂತರ 'ಪಾಂಡವ ಭವನ' ಇದು ೧೯೫೪ ರಲ್ಲಿ ಅಂತರರಾಷ್ಟ್ರೀಯ ಕೇಂದ್ರವಾಗಿ ಸ್ಥಾಪನೆಯಾಯಿತು. ನಂತರ ರಾಜಯೋಗ ಭವನ, (ಹಿಸ್ಟರಿಹಾಲ್) ಓಂಶಾಂತಿ ಭವನ, ನಂತರ, ಜ್ಞಾನಸರೋವರ, ಶಾಂತಿವನ, ಪೀಸ್ ಪಾರ್ಕ ಅಧ್ಯಾತ್ಮಿಕ ವಸ್ತು ಸಂಗ್ರಾಲಯ ಅರಾವಳಿ ಪರ್ವತ ಶ್ರೇಣಿ ಪರಿದಷ್ಟು ಎತ್ತರ ಎತ್ತರ ಗಿರಿ ಶಿಖರಗಳು ಮೈಚಾಚಿಕೊಂಡಿರುವ ಮಧುರ ಸಂಗಮವಾಗಿದೆ. ಅಲ್ಲಿರುವ ನಕ್ಕಿ ಸರೋರ, ದಿಲ್‌ವಾಡಾ ಮಂದಿರ, ಅದರದೇವಿ ಮಂದಿರ, ಕುಮಾರಿ ಮಂದಿರ, ಅಂಬಾ ಮಾತಾಮಂದಿರ, ಅಚಲಘರ ಮುಂತಾದ ಮಂದಿರಗಳ ಸಮೂಹವೇ ಇಲ್ಲಿ ಕಾಣಬಹುದು. ಪ್ರಾಚೀನ ಕಾಲದ ಋಷಿ ಶೃಂಗವಾದ ಈ ತಾಣದಲ್ಲಿ ಪ್ರಕೃತಿಯ ಮಧ್ಯ ಮೇಳೈಸಿಕೊಂಡಿರುವ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರಿಯ ವಿಶ್ವವಿದ್ಯಾಲಯವು ಇಂದು ಜಗತ್ ಪ್ರಸಿದ್ದವಾಗಿ ಬೆಳೆದು ನಿಂತಿದೆ. ಅಲ್ಲಿರುವ ಗುರು ಶಿಖರವೂ ಇಡೀ ಅರಾವಳಿ ಪರ್ವತ ಶ್ರೇಣಿಗಳಲ್ಲಿಯೇ ಅತ್ಯಂತ ಎತ್ತರವಾದ ಶಿಖರವಾಗಿದೆ. ಅಲ್ಲಿ ಒಮ್ಮೆ ಹೋಗಿ ನೋಡಿದರೆ ಜಗದ ಶೂನ್ಯತೆ, ಶೂನ್ಯದಲ್ಲಿ ನಿಶೂನ್ಯತೆ ಬಯಲಲ್ಲಿ ಮಹಾಬಯಲು, ಮಹೋನ್ನತಿಯ ಅನುಭವವಾಗುವದು.

ದೇಶ-ವಿದೇಶಗಳಲ್ಲಿ ಈಶ್ವರಿಯ ಸೇವೆ-೧೯೫೪- ೧೯೬೯

ಪಾಂಡವ ಭವನದಲ್ಲಿ ಅಂತರರಾಷ್ಟ್ರಿಯ ಕೇಂದ್ರ ಸ್ಥಾಪಿಸಿದ ಮೇಲೆ ಭಾರತದ ಸಾರ್ವಜನಿಕರ ಕೋರಿಕೆಯ ಮೇರೆಗೆ ಭಾರತದ ಮೂಲೆ ಮೂಲೆಗಳಲ್ಲಿ ವಿವಿಧ ರಾಜ್ಯಗಳಲ್ಲಿ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ಸ್ಥಾಪನೆ ಗೊಂಡವು. ೧೯೫೪-೧೯೫೫ ರಲ್ಲಿ ಜಪಾನಿನಲ್ಲಿ ನಡೆದ ೨ನೇ ವಿಶ್ವಧಾರ್ಮಿಕ ಸಮ್ಮೇಳನ (The world Religion Conference) ಕ್ಕೆ ಆಹ್ವಾನ ಸಿಕ್ಕಿತು. ಆಗ ೩ ಜನ ಪ್ರತಿನಿಧಿ ಭಾಗವಹಿಸಿದ್ದರು. ಅಲ್ಲಿಂದಲೇ ೩ ಜನ ಪ್ರತಿನಿಧಿಗಳಿಗೆ ಹಾಂಕಾಂಗ, ಸಿಂಗಪೂರ್, ಇಂಡೋನಿಶಿಯಾ, ಮಲೇಶಿಯಾ ಗಳಿಂದ ಆಹ್ವಾನ ಸಿಕ್ಕಿತು. ಹೀಗಾಗಿ ದೇಶ, ವಿದೇಶಗಳಲ್ಲಿ ರಾಜಯೋಗ ಶಿಕ್ಷಣ ಪ್ರಾರಂಭವಾಯಿತು. ಇತ್ತ ಪಾಂಡವ ಭವನದಲ್ಲಿ ಪಿತಾಶ್ರೀ ಬ್ರಹ್ಮಾ ಬಾಬಾರವರು ತಮ್ಮ ಸ್ವಂತ ಕೈಯಿಂದ ಪತ್ರ ಬರೆದು ಎಲ್ಲ ಮಕ್ಕಳಿಗೂ (ಸಾಧಕರಿಗೆ) ಕಳಿಸು ತ್ತಿದ್ದರು. ಆಗ ಮುಖ್ಯ ಆಡಳಿತಾಧಿಕಾರಿಯನ್ನಾಗಿ ಜಗದಂಭಾ ಸರಸ್ವತಿ ಅಥವಾ ಮಾತೇಶ್ವರಿ ಮಮ್ಮಾರವರು ನೇಮಿಸಲ್ಪಟ್ಟಿದ್ದರು. ಕರ್ನಾಟಕದ ಮುಖ್ಯ ಸಂಚಾಲಕಿಯರನ್ನಾಗಿ ರಾಜಯೋಗಿ ಬ್ರಹ್ಮಾಕುಮಾರಿ ದಾದಿ ಹೃದಯ ಪುಷ್ಪಾಜಿ ಯವರನ್ನು ನೇಮಿಸಿದರು. ಅಂದಿನಿಂದಲೇ ಕರ್ನಾಟಕದ ಸೇವೆಯ ಬೀಜ ಅಂಕುರಿಸಿತು. ಚಿಕ್ಕ ವಯಸ್ಸಿನಲ್ಲಿಯೆ ದಾದಿ ಹೃದಯ ಪುಷ್ಪಾ ಅವರು ಜ್ಞಾನ ಯೋಗದಲ್ಲಿ ಅನುಭವಿ ಗಳಾಗಿದ್ದರು. ಅವರು ಸಿಂಧಪಾಂತದ ಮೂಲ ನಿವಾಸಿಗಳು

ಅಗರ್ಭ ಶ್ರೀಮಂತ ಕುಟುಂಬ (Royal Family soul) ಪರಿವಾರದವರಾಗಿದ್ದರು.

ಕರ್ನಾಟಕದಲ್ಲಿ ಈಶ್ವರೀಯ ಸೇವೆ ಪ್ರಾರಂಭ

ಮೌಂಟ ಅಬು ಪರ್ವತಕ್ಕೆ ಸಂಸ್ಥೆ ಸ್ಥಳಾಂತರಗೊಂಡ ಮೇಲೆ ಹೃದಯ ಪುಷ್ಪಾ ದಾದಿಯರು ದಿನಾಲು ಪರ್ವತ ಶಿಖರದ (ಬಾಬಾ ಪಹಡ)ದ ಮೇಲೆ ಹೋಗಿ ಸಮತಲ ಪೀಠದ ಮೇಲೆ ಕುಳಿತು ಸುಖವಾಗಿ ಯೋಗ ಸಮಾಧಿಯಲ್ಲಿ ಹೋಗುತ್ತಿದ್ದರು. ಹೀಗೆ ಪ್ರತಿದಿನ ಯೋಗಭ್ಯಾಸದಲ್ಲಿ ನಿರತರಾದ ದಾದಿಗೆ ಒಂದು ದಿನ ಒಮ್ಮಿಂದೊಮ್ಮೆಲೆ ಅವರಿಗೆ ಕರ್ನಾಟಕ ಹಾಗೂ ದಕ್ಷಿಣ ಭಾರತದಲ್ಲಿ ಸೇವೆ ಮಾಡಲು ಪ್ರೇರಣೆ ಉಂಟಾಯಿತು. ಆಗ ಪಿತಾಶ್ರೀ ಬ್ರಹ್ಮಾ ಬಾಬಾರವರೊಂದಿಗೆ ಸಮಾಲೋಚಿಸಿದರು. ಬಾಬಾ ಅವರು ದಾದೀಜಿಯವರಿಗೆ ಬಾಂಬೆಯವರಿಗೆ ರೈಲು ಟಿಕೇಟು ತೆಗೆದು ಕೈಯಲ್ಲಿ ಕೇವಲ ೫ ರೂಪಾಯಿ ಕೊಟ್ಟು ಕರ್ನಾಟಕದಲ್ಲಿ ಈಶ್ವರಿಯ ಸೇವೆ ಮಾಡಲು ಅವರ ಲೌಕಿಕ ಅಕ್ಕ ಲಚುಮಿ ದಾದಿಯನ್ನು ಕಳುಹಿಸಿದರು. ಮಹಾನಗರಕ್ಕೆ ಭವಿಷ್ಯ ಚೈತನ್ಯ ದೇವತೆಯಾದ ಮಹಾನ್ ತಪಸ್ವಿ, ರಾಜಯೋಗಿನಿ ಹೃದಯ ಪುಷ್ಪಾ ದಾದೀಜಿಯವರನ್ನು ಬೆಂಗಳೂರು ನಗರ ಸ್ವಾಗತಿಸಿತು.

ಹೃದಯ ಪುಷ್ಪಾಜಿಯವರ ರಾಜಯೋಗದ ಎಲ್ಲ ಲಕ್ಷಣಗಳು ಜೀವನದಲ್ಲಿ ಮೇಳೈಸಿಕೊಂಡಿವೆ. ಬೆಂಗಳೂರಿನಲ್ಲಿ ಕೆಲವು ದಿನಗಳವರೆಗೆ ತಮ್ಮ ಲೌಕಿಕ ಸಹೋದರಿಯಾದ ಲಚಮಿಯ ಮನೆಯಲ್ಲಿದ್ದು, ೩ ಜನಮಾತೆಯರಿಗೆ ಪ್ರಥಮವಾಗಿ ಈಶ್ವರೀಯ ಸಂದೇಶ ತಿಳಿಸಿದರು. ಆ ೩ ಜನ ಮಾತೆಯರೆಂದರೆ ಪತಿಯ ವಿಯೋಗದಿಂದ ದುಃಖದಲ್ಲಿದ್ದ ಸುಂದರಿ ಮಾತಾ, ಗಂಡ ಸತ್ತ ದುಃಖದಲ್ಲಿದ್ದ ರಾಧಾಮಾತಾ, ಮತ್ತು ಲಕ್ಷ್ಮಣ ಮಾತಾ ಈ ೩ ಜನ ಮಾತೆಯರಿಗೆ ಜ್ಞಾನ ಪಕ್ಕಾ ಮಾಡಿದರು. ಲಕ್ಷ್ಮಣ ಮಾತಾಳ ಮಗಳು ಚಿಕ್ಕ ಕುಮಾರಿ ರೋಜಿ ಜ್ಞಾನದಲ್ಲಿ ಮುಂದುವರೆದರು. ದಿನಾಲು ಸಾಯಂಕಾಲ ಲಚುಮಿ ಮನೆಯಲ್ಲಿ ಜ್ಞಾನಯೋಗದ ಚರ್ಚೆ ನಡೆಯುತ್ತಿತ್ತು. ನಂತರ ಬೆಂಗಳೂರಿನ ಕಂಟೋನ್ ಮೆಂಟ್ ತೊಪ್ಪು ಮೊದಲಿಯಾರ ಬೀದಿಯಲ್ಲಿ ತಿಂಗಳಿಗೆ ೧೮ ರೂಪಾಯಿಗೆ ನೆಲ ಅಂತಸ್ತಿನ ಮೇಲೆ ಇರುವ ಒಂದು ಚಿಕ್ಕ ಕೋಣೆ ಬಾಡಿಗೆಗೆ ಹಿಡಿದರು. ಅದರಲ್ಲಿ ಕೇವಲ ೫ ರಿಂದ ೬ ಜನ ಕೂಡುವಷ್ಟು ಸ್ಥಳಾವಕಾಶವಿತ್ತು. ಆರ್ಥಿಕವಾಗಿ ತೊಂದರೆಯಲ್ಲಿದ್ದಾಗ ದ್ರೌಪದಿ ಮಾತೆ, ಪಂಜಾಬಿ ಮಾತೆ, ಕಾಂತಿ ಮಾತೆ, ವೃದ್ಧ ಮಾತೆ ಪಾರ್ವತಿ, ಹೀಗೆ ಅನೇಕ ಮಾತೆಯರು ಆಗಮಿಸಿ ಜ್ಞಾನ – ಸಹಜ ರಾಜಯೋಗದಲ್ಲಿ ಮುಂದುವರೆದು ಈ ಸಂಸ್ಥೆಗೆ ಸಹಾಯ ನೀಡಿದರು. ಇವರೆಲ್ಲರೂ ಮೌಂಟ ಅಬುವಿಗೆ ಹೋಗಿ ಭಗವಂತನ ಮಿಲನ(ಬೆಟ್ಟಿ)ಮಾಡಿ ಬಂದರು.

ಬೆಂಗಳೂರಿನಲ್ಲಿ ಜಗದಂಬಾ ಸರಸ್ವತಿ (ಮಮ್ಮಾ)

೧೯೫೪ ರಲ್ಲಿ ಈ ಜ್ಞಾನ ಯೋಗದ ಮುಖ್ಯ ಯಜ್ಞಮಾತೆಯಾದ ಜಗದಂಬಾ ಸರಸ್ವತಿ (ಮಮ್ಮಾ) ರವರು ಬೆಂಗಳೂರಿಗೆ ಪಿತಾಶ್ರೀ ಆಜ್ಞೆಯ ಮೇರೆಗೆ ಆಗಮಿಸಿದರು. ಅವರನ್ನು ಸ್ವಾಗತಿಸಲು ಕೀ ಬಹನ, ರೋಜಿ, ಲಕ್ಷ್ಮಣ ಮಾತಾ, ದ್ರೌಪದಿ ಮಾತಾರೊಂದಿಗೆ ಕಾರಿನಲ್ಲಿ ಹೃದಯ ಪುಷ್ಪಾಜಿಯವರು ಬಂದಿದ್ದರು. ಮಮ್ಮಾರವರನ್ನು ಬರಮಾಡಿಕೊಂಡು ಒಂದು ಸುಂದರ ಮನೆಯಲ್ಲಿ ಇಳಿದುಕೊಳ್ಳಲು ಮಮ್ಮಾರವರಿಗೆ ವ್ಯವಸ್ಥೆ ಮಾಡಲಾಗಿತ್ತು. ಆದರೆ ಸರಳ, ಸಾದಾ ಜೀವನ ಅಧ್ಯಾತ್ಮಿಕದ ಮೇರು ಶಿಖರಕ್ಕೇರಿದ ಯೋಗಿಣಿ ಮಾತೇಶ್ವರಿ ಮಮ್ಮಾರಿಗೆ ಆ ಭವ್ಯ ಮನೆ ಮನಸ್ಸಿಗೆ ಹಿಡಿಸಲಿಲ್ಲ. ಅದೇ ೧೮ ರೂಪಾಯಿ ಬಾಡಿಗೆ ಮನೆಯ ಚಿಕ್ಕ ಕೊಠಡಿಯೇ ಭಗವಂತನ ಭವ್ಯ ಅರಮನೆ ಎನಿಸಿತು. ಕೆಲದಿನ ಮಮ್ಮಾರವರು ಬೆಂಗಳೂರಲ್ಲಿದ್ದು, ಅಬು ಪರ್ವತಕ್ಕೆ ತೆರಳಿದರು. ಇತ್ತ ಸತ್ಸಂಗಕ್ಕೆ ಬರುವವರ ಸಂಖ್ಯೆ ದಿನೆ ದಿನೆ ಹೆಚ್ಚಾಗುತ್ತಾ ಬಂತು. ಹೃದಯಪುಷ್ಪಾದಾದಿಯವರು ಬೆಂಗಳೂರಿನ ಸಂಪಿಗೆ ರೋಡ್‌ನಲ್ಲಿ ೧೫೦ ರೂ. ಗೆ ದೊಡ್ಡದೊಂದು ಮನೆಯನ್ನು ಬಾಡಿಗೆ ಹಿಡಿದರು. ಆಗ ತಮಿಳುನಾಡಿನ ಅನೇಕ ಸಹೋದರಿಯರು ಸಹೋದರರು ಸತ್ಸಂಗಕ್ಕೆ ಬರತೊಡಗಿದರು. ತಮಿಳು ಮೂಲದ ಪರಂಧಾಮ ಎಂಬ ಸಹೋದರ, ಅಂಗನಬಾಯಿ, ಬೂಪಣ್ಣ ,ಪತ್ನಿ ಬೋಜಿ ಮಾತಾ ಇವರೆಲ್ಲರೂ ಬೆಂಗಳೂರಿನಲ್ಲಿ ಈಶ್ವರೀಯಜ್ಞಾನ ಪ್ರಸಾರ ಮಾಡಲು ಸಹಯೋಗ ನೀಡಿದರು. ಆಗ ಸತ್ಸಂಗಕ್ಕೆ ಬರುವವರು ಮತ್ತಷ್ಟು ಸಂಖ್ಯೆ ಬೆಳೆಯಿತು. ನೆಹರು ನಗರದಲ್ಲಿ ೨೭೫ ರೂ.ಗೆ ಮನೆಯೊಂದು ಬಾಡಿಗೆ ತೆಗೆದುಕೊಂಡರು. ಸ್ಥಳಾಂತರಗೊಂಡ ಆಶ್ರಮದಲ್ಲಿ ತಮಿಳುನಾಡು, ಕೇರಳ, ಆಂಧ್ರಪ್ರದೇಶ, ಕಾಸರಗೋಡಿನ ಅನೇಕರ ಈಶ್ವರೀಯ ಜ್ಞಾನ ಪಡೆದರು. ೧೯೬೪ ರಲ್ಲಿ ೨ನೇ ಬಾರಿ ಮಮ್ಮಾ ಮತ್ತೆ ಬೆಂಗಳೂರಿಗೆ ಆಗಮಿಸಿದರು. ಆಗ ಈಶ್ವರಿಯ ಸೇವೆ ಅಪಾರವಾಗಿ ಬೆಳೆದಿತ್ತು. ೨ ತಿಂಗಳವರೆಗೆ ಮಾತೇಶ್ವರಿ ಬೆಂಗಳೂರಿನಲ್ಲಿದ್ದು, ಅನೇಕರಿಗೆ ಆಧ್ಯಾತ್ಮಿಕ ಯೋಗಬಲ, ಸ್ಫೂರ್ತಿ ತುಂಬಿ ಸರ್ವರನ್ನು ಈಶ್ವರೀಯ ಸೇವೆಯಲ್ಲಿ ಸಮರ್ಥರನ್ನಾಗಿ ಮಾಡಿ ಅಬುಪರ್ವತಕ್ಕೆ ತೆರಳಿದರು. ಬೆಂಗಳೂರಿನಲ್ಲಿ ಎಲ್ಲ ಕಡೆ ಜ್ಞಾನಕ್ಕೆ ಬಂದ ಆದಿರತ್ನರಾದ ಕರುಣಬಾಯಿ , ಬಸವರಾಜ, ಮೃತ್ಯುಂಜಯ, ಮೀರಾಬಹನ, ಮೈಸೂರಿನ ಲಕ್ಷ್ಮೀಬಹನ, ಶಾರದಮ್ಮ, ಪ್ರೇಮಲಿಂಗ, ಮಹಾದೇವ, ಡಾ. ನರಸಯ್ಯ, ಮಧುಬಾಯಿ, ಮರಿಯಪ್ಪಣ್ಣ, ಜಯಲಕ್ಷ್ಮೀ, ಸೀತಾರಾಂ, ಜೈಕಿಶನಬಾಯಿ, ರಂಗಮ್ಮ, ಹರಿನಾಥ, ಅಪ್ಪಾಜಿ, ತುಕಾರಾಂ, ಸೂರ್ಯನಾರಾಯಣ,

ಮುನಿಸ್ವಾಮಿ, ಧನಲಕ್ಷ್ಮೀ, ಲೀಲಾವತಿ, ಕಮಲಮ್ಮ, ಲತಾ, ರಮಾ, ಸುಬಧ್ರಾ, ಶಾರದಾ, ಉಷಾಬೇಹನ, ಸುನಿತಾಬಹನ, ಶಾಮಲಾ ಮುಂತಾದವರು ಜ್ಞಾನದ ಅಲೌಕಿಕ ಜನ್ಮಪಡೆದು ಈಶ್ವರೀಯ ಸೇವೆಗೆ ನಿಮಿತ್ಯರಾದರು.

೧೯೬೪ ರಲ್ಲಿ ಜಯನಗರ ಕುಚಲಂಬಾ ಕಲ್ಯಾಣ ಮಂಟಪದಲ್ಲಿ ಅಧ್ಯಾತ್ಮಿಕ ಚಿತ್ರಪ್ರದರ್ಶನ ನಡೆಯಿತು. ಅದರ ಉದ್ಘಾಟನೆಯನ್ನು ಅಂದಿನ ರಾಜ್ಯಪಾಲ ವಿ.ವಿ. ಗಿರಿಯವರು ನೆರವೇರಿಸಿದರು. ದಾದಿ ಪ್ರಕಾಶಮಣಿ, ಮನಮೋಹಿನಿ ದಾದೀಜಿ ಆಗಮಿಸಿದ್ದರು. ಇದೆ ಸಂದರ್ಭದಲ್ಲಿ ಕನ್ನಡ ಭಾಷೆಯಲ್ಲಿ ಅನೇಕ ಈಶ್ವರೀಯ ಗ್ರಂಥಗಳು ಬಿಡುಗಡೆ ಯಾದವು. ಅವುಗಳಲ್ಲಿ "ಬ್ರಹ್ಮಾಬಾಬಾರವರ ಅದ್ಭುತ ಜೀವನ ಚರಿತ್ರೆ," ಪ್ರಕಟಗೊಂಡಿತು.

ಮೀರಾ ಮತ್ತು ಲಕ್ಷ್ಮಿ ಬಹನ: ಬೆಂಗಳೂರಿನಲ್ಲಿ ಈ ಸಹೋದರಿಯರು ಅಲೌಕಿಕ ಜನ್ಮ ಪಡೆದು ಈಶ್ವರೀಯ ಸೇವೆಯಲ್ಲಿ ಮುಂದುವರೆದರು. ಮೈಸೂರ ದಸರಾದಲ್ಲಿ ಚಿತ್ರಪ್ರದರ್ಶನ ನಡೆಯಿತು. ಕೋರ್ಸುಗಳು ಪ್ರಾರಂಭಗೊಂಡವು. ಅದಕ್ಕಾಗಿ "ಗೀತಾಮಂದಿರ" ದೊರೆಯಿತು. ಚಿಕ್ಕದೊಂದು ಮನೆ ಮಾಡಿ ಈಶ್ವರೀಯ ಸೇವೆ ಪ್ರಾರಂಭವಾಯಿತು. ಮೀರಾ ಎನ್ನುವ ಸಹೋದರಿ ತನ್ನ ಜೀವನ ಸಮರ್ಪಿಸಿಕೊಂಡು, ಗಯಾನಾ ಸಿಂಗಪೂರ, ಜಾಂಬಿಯಾ, ಆಫ್ರಿಕಾ, ಆಸ್ಟ್ರೇಲಿಯಾ ಮುಂತಾದ ದೇಶಗಳಲ್ಲಿ ರಾಜಯೋಗ ಶಿಕ್ಷಣವನ್ನು ಆಕಾಶವಾಣಿ, ದೂರದರ್ಶನ ಪತ್ರಿಕೆಗಳಲ್ಲಿ ಈಶ್ವರೀಯ ಸೇವೆ ಮಾಡಿದರು. ಇನ್ನೂ ಲಕ್ಷ್ಮಿ ಬಹನ ಅವರು ಮೈಸೂರು ಸೇವೆಗೆ ಕಾರಣರಾಗಿ ನೂರಾರು ಕೇಂದ್ರಗಳನ್ನು ಸ್ಥಾಪಿಸಿ ಅಪಾರವಾದ ಈಶ್ವರೀಯ ಸೇವೆ ಮಾಡಿದ್ದಾರೆ.

ಮೃತ್ಯಂಜಯಭಾಯಿ, ಕರುಣಾಭಾಯಿ : ಮೃತ್ಯಂಜಯ ಭಾಯಿಯವರು ಮೌಂಟಅಬುವಿನಲ್ಲಿ ಶಿಕ್ಷಣ ವಿಭಾಗದ (Education wing) ಮುಖ್ಯಸ್ಥರಾಗಿ, ಕರುಣಾಭಾಯಿ ಯವರು ಸಮೂಹ ಮಾಧ್ಯಮಗಳ (Media wing) ದೇಶ-ವಿದೇಶಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಮೈಸೂರ ಮಹಾರಾಜ ಜಯಚಾಮರಾಜೇಂದ್ರ ಒಡೆಯರಿಗೆ ಈಶ್ವರೀಯ ಸಂದೇಶ

ದಾದೀಜಿಯವರು ಮೈಸೂರ ಮಹಾರಾಜರನ್ನು ಭೆಟ್ಟಿಯಾಗಲು ಪ್ರಯತ್ನಿಸಿದರು. ೨ನೇ ಬಾರಿಗೆ ಮಹಾರಾಜರ ಬೆಟ್ಟಿಯಾಯಿತು. ಮಹಾರಾಜರಾದ ಜಯಚಾಮರಾಜೇಂದ್ರ ಒಡೆಯರ ಅವರು ಹೃದಯ ಪುಷ್ಪಾ ದಾದೀಜಿಯವರನ್ನು ನೋಡಿ ತುಂಬಾ ಪ್ರಭಾವಿತರಾಗಿ ಭಕ್ತಿಶ್ರದ್ಧೆ ಹಾಗೂ ವಿನೂತ ಭಾವನೆಯಿಂದ "ತಮಗೆ ಏನು ಬೇಕಾಗಿದೆ ಮಹಾ ತಾಯಿ ಯವರೇ?" ಎಂದು ಕೇಳಿದರು. ಆಗ ದಾದೀಜಿಯವರು ಒಡೆಯರಿಗೆ ಈಶ್ವರಿಯ ವಿಶ್ವವಿದ್ಯಾಲಯದ ಪರಿಚಯ ಹಾಗೂ ಪರಮಾತ್ಮನ ದಿವ್ಯ ಪರಿಚಯ ನೀಡಿ, ಈಶ್ವರಿಯ ಅಧ್ಯಾತ್ಮಿಕ ಚಿತ್ರಪ್ರದರ್ಶನಕ್ಕೆ ಒಂದು ನೆಲೆ ಕೊಡಬೇಕೆಂದು ಕೇಳಿದರು. ಮಹಾರಾಜರು ಈಶ್ವರೀಯ ಸಾಹಿತ್ಯ ಕೃತಿಗಳನ್ನು ಪರಿಶೀಲಿಸುತ್ತ ಒಳ್ಳೆದು, ತಾಯಿಯವರೆ ತಮಗೆ ಒಂದು ಅರಮನೆ ಅವಶ್ಯವಾಗಿ ನೀಡಿದ್ದೇನೆ .... ಈ ಜ್ಞಾನ ತುಂಬಾ ಒಳ್ಳೆಯದಿದೆ." ಎಂದು ಹೇಳಿ ಒಂದು ನಟಿಯನ್ನು ಅನುಗ್ರಹಿಸಿ ನಂತರ ಮಂತ್ರಿಗಳಿಂದ ೨ ಕೆಂಪು ಝರಿಯ ಶಾಲುಗಳನ್ನು ತರಿಸಿ ದಾದೀಜಿಯವರಿಗೆ ಗೌರವಾದರಗಳೊಂದಿಗೆ ಸನ್ಮಾನಿಸಿದರು. ಇದೊಂದು ಅವಿಸ್ಮರಣಿಯ ಘಟನೆ. ದಾದೀಜಿಯವರು ಮೌಂಟ ಅಬುವಿಗೆ ಹೋದಾಗ ಮೈಸೂರ ಮಹಾರಾಜರು ನೀಡಿದ ಎರಡರಲ್ಲಿ ಒಂದು ಶಾಲನ್ನು ಪಿತಾಶ್ರೀ ಬ್ರಹ್ಮಾಬಾಬಾರವರಿಗೆ ನೀಡಿದರು. ಇದರಿಂದ ಮೈಸೂರಿನಲ್ಲಿ ಈಶ್ವರೀಯರು ಸೇವೆಗೆ ನಾಂದಿಯಾಯಿತು.

ಬೆಂಗಳೂರು ಮಹಾಮೇಳದ ಪಕ್ಷಿ ನೋಟ: ೧೯೭೪ ರಲ್ಲಿ ಬೆಂಗಳೂರಿನ ಸುಭಾಸ ನಗರದ ಮೈದಾನದಲ್ಲಿ ಏರ್ಪಟ್ಟ ಭಾರಿ ಪ್ರಮಾಣದ ಈಶ್ವರೀಯ ಮೇಳಗಳು ಹಾಗೂ ಪ್ರದರ್ಶನ ಇತಿಹಾಸ ಪ್ರಸಿದ್ಧವಾಗಿದೆ. ಈ ಮೇಳದಲ್ಲಿ ಭಾರತದ ಎಲ್ಲ ರಾಜ್ಯಗಳಲ್ಲಿ ಈಶ್ವರೀಯ ಸೇವಾ ಕೇಂದ್ರಗಳನ್ನು ತೆರೆದಿದ್ದು ವಿಶೇಷ. ಅವರೆಲ್ಲರೂ ಈ ಮೇಳದಲ್ಲಿ ಭಾಗವಹಿಸಿದ್ದರು. ಏಕ ಕಾಲಕ್ಕೆ ೩ ಲಕ್ಷ ಜನರಿಗೆ ಶಿವನ ಸಂದೇಶ ಮುಟ್ಟಿಸ ಲಾಯಿತು. ಇದೆ ಸಮಯದಲ್ಲಿ ಬೆಂಗಳೂರ ಮೈಸೂರ, ಹುಬ್ಬಳ್ಳಿ, ಬೆಳಗಾಂವ, ಗುಲಬರ್ಗಾಗಳಲ್ಲಿ ಉಪವಲಯಗಳನ್ನು ಪ್ರಾರಂಭಿಸಲಾಯಿತು. ಈ ಎಲ್ಲ ಉಪವಲಯಗಳಲ್ಲಿ ಬೃಹತ್ ಪ್ರಮಾಣದ ಆಧ್ಯಾತ್ಮಿಕ ಮೇಳಗಳನ್ನು, ಸಮ್ಮೇಳನಗಳನ್ನು ನಡೆಸಲಾಯಿತು. ಆಗ ನೂರಾರು, ಬ್ರಹ್ಮಾ ಕುಮಾರ, ಬ್ರಹ್ಮಾಕುಮಾರಿಯರು ಅಲೌಕಿಕ ಜನ್ಮ ಪಡೆದು ಸೇವೆಗೆ ನಿಮಿತ್ಯರಾದರು. ಆಗ ೭ ಮ್ಯೂಜಿಯಂ, ೩೦ ಸೇವಾ ಕೇಂದ್ರಗಳು ೪೦ ಉಪಸೇವಾ ಕೇಂದ್ರಗಳು, ೮೫ ಜನ ಸಮರ್ಪಿತ ಸಹೋದರ, ಸಹೋದರಿಯರು, ಜ್ಞಾನದಲ್ಲಿ ಮುಂದುವರೆದರು. ಬ್ರಹ್ಮಾಕುಮಾರಿಯರು ಕನ್ಯಾಕುಮಾರಿ ಯಿಂದ ದೇಹಲಿವರೆಗೂ ಪಾದಯಾತ್ರೆ, ಬೆಳಗಾಂವಿ, ಉಪವಲಯದಿಂದ ದೇಹಲಿಯವರೆಗೆ ಸೈಕಲ್ ಯಾತ್ರೆಗಳು ಐತಿಹಾಸಿಕ ಪ್ರಸಿದ್ಧಿ ಪಡೆದಿವೆ.

೧೯೮೮ ರಲ್ಲಿ ಬೆಂಗಳೂರಿನ ಟೌನ್‌ಹಾಲಿನಲ್ಲಿ ಮತ್ತು ರವೀಂದ್ರ ಕಲಾಭವನದಲ್ಲಿ ನಡೆದ ಅಂತರರಾಷ್ಟ್ರೀಯ ವಿಜ್ಞಾನಿಗಳ ಮಹಾಸಮ್ಮೇಳನದಲ್ಲಿ ಸಮಾಗಮದಲ್ಲಿ ಬೃಹತ್ ವೇದಿಕೆಯಾಗಿದ್ದು ದೇಶ, ವಿದೇಶಿಗಳಿಂದ ವಿಜ್ಞಾನಿಗಳು

ಆಗಮಿಸಿದ್ದರು. ಮೌಂಟ ಅಬುವಿನಿಂದ ದಾದೀ ಪ್ರಕಾಶಮಣಿ, ದಾದೀಚಂದ್ರಮಣಿ, ಜಗದೀಶ ಚಂದ್ರ ಹಸೀಜಾ ಮುಂತಾದವರು ಆಗಮಿಸಿದ್ದರು. "ಶಾಂತಿಶಕ್ತಿ ಮತ್ತು ವಿಜ್ಞಾನ ಶಕ್ತಿ" ಸಮಾಗಮನದಿಂದ ವಿಶ್ವದಲ್ಲಿ ವಿಶ್ವಶಾಂತಿ ಸ್ಥಾಪನೆ ಸಾಧ್ಯವೆಂದು ದೃಢಪಟ್ಟಿತು.

ಕರ್ನಾಟಕದಲ್ಲಿ ಉಪವಲಯಗಳ ಸ್ಥಾಪನೆ

೧. **ಬೆಂಗಳೂರು ಉಪವಲಯ:** ವಿಶ್ವಶಾಂತಿ ರಾಜಯೋಗ ಭವನ: ೧೯೮೦ ರಲ್ಲಿ ದೀದಿ ಮನಮೋಹಿನಿ, ಹಾಗೂ ಮೋಹಿನಿ ಬಹನ ಅವರು ಈ ಭವನಕ್ಕೆ ಅಡಿಗಲ್ಲು ಹಾಕಿದರು. ಇದು ಬನ್ನೇರುಘಟ್ಟದ ಪ್ರಶಾಂತ ರೋಡಿನಲ್ಲಿದೆ. ಇದರಲ್ಲಿ ವಿಶಾಲವಾದ ಯೋಗ ಮಂದಿರ, ಧ್ಯಾನ ಧಾಮ, ಶಕ್ತಿಭವನ, ಭಂಡಾರಗಳು ಇವೆ. ಭಾರತದಲ್ಲಿಯೇ ಅತೀ ಎತ್ತರವಾದ "ಶಿವಲಿಂಗ" ನಿರ್ಮಾಣಗೊಂಡಿದೆ. ಅಧ್ಯಾತ್ಮಿಕ ವಸ್ತುಸಂಗ್ರಾಲಯ ಇದರಿಂದ ಸಹಸ್ರ ಸಹಸ್ರ ಆತ್ಮಗಳ ಕಲ್ಯಾಣವಾಗಿದೆ. ಲಕ್ಷ, ಲಕ್ಷ ಆತ್ಮಗಳಿಗೆ ಈಶ್ವರನ ಸಂದೇಶ ಪಡೆದಿದ್ದಾರೆ.

ಮೈಸೂರ ಉಪವಲಯ: ಮೈಸೂರಿನ ಚಾಮುಂಡಿ ಬೆಟ್ಟದಲ್ಲಿ ಆಧಾತ್ಮಿಕ ವಸ್ತು ಸಂಗ್ರಹಾಲಯ, ಲಿಂಗದೇವ ಕೊಪ್ಪ ಇಲವಾಲದಲ್ಲಿ ೧೧ ಎಕರೆ ವಿಶಾಲವಾದ ಸ್ಥಳದಲ್ಲಿ ಯೋಗಭವನ ರಾಜಯೋಗಿ ಲಕ್ಷ್ಮಿ ಬಹನರವರು ನಿರ್ಮಾಣ ಮಾಡಿದ್ದಾರೆ. ಈ ಯೋಗ ಭವನದಲ್ಲಿ ನೈತಿಕ, ಆಧ್ಯಾತ್ಮಿಕ ಮೌಲ್ಯಗಳ ರಾಜಯೋಗ ತರಬೇತಿಗಳನ್ನು ನಡೆಸಲಾಗುವದು. ಕೇರಳ, ಕಾಸರಗೋಡು, ತಮಿಳು ನಾಡಿನವರೆಗೆ ಈಶ್ವರಿಯ ಸೇವೆ ತನ್ನ ಬಾಹುಗಳನ್ನು ಚಾಚಿದೆ. ಸಧ್ಯದಲ್ಲಿ ನೂರಾರು ಮುಖ್ಯ ಸೇವಾ ಕೇಂದ್ರಗಳು ಉಪಸೇವಾ ಕೇಂದ್ರಗಳು, ಸಹಸ್ರ ಜನ ಸಮರ್ಪಿತ ಸಹೋದರ ಸಹೋದರಿಯರು ಈಶ್ವರೀಯ ಸೇವೆಯನ್ನು ಮಾಡುತ್ತಿರುವರು.

ಹುಬ್ಬಳ್ಳಿ ಉಪವಲಯ: ಡಾ॥ ಬಿ.ಕೆ. ಬಸವರಾಜ ರಾಜಋಷಿಗಳು ೧೯೭೪ ರಲ್ಲಿ ದಾದಿ ಹೃದಯ ಪುಷ್ಪರವರ ನೆರವಿನಿಂದ ಹುಬ್ಬಳ್ಳಿ ಸೇವೆ ಪ್ರಾರಂಭಿಸಿದರು. ಅದಕ್ಕೆ ಹುಬ್ಬಳ್ಳಿ ಮಹಾದಾನಿ ಶಿವಪ್ಪ ಜಿಗಳೂರವರು ತಮ್ಮ ೫ ಅಂತಸ್ತಿನ ಕಟ್ಟಡದ ಬಹುಭಾಗ ನೀಡಿದರು. ಅದರಿಂದ ಈಶ್ವರಿಯ ಸೇವೆ ಪ್ರಾರಂಭವಾಯಿತು. "ಯಲ್ಲಾಪೂರದ ರಾಜಯೋಗ ತಪೋವನ"ದಲ್ಲಿ ಕರ್ನಾಟಕ ಸರಕಾರ ಶಾಲಾ ಶಿಕ್ಷಕರಿಗೂ ಅಧಿಕಾರಿಗಳಿಗೂ ನೈತಿಕ ಶಿಕ್ಷಣ ನೀಡುವ ೩ ವಾರಗಳ ತರಬೇತಿ ನೀಡಲಾಯಿತು. ಸಾವಿರಾರು ಜನರಿಗೆ ಊಟ, ವಸತಿಯ ವ್ಯವಸ್ಥೆ ಇದೆ. "ವಿಶ್ವನವ ನಿರ್ಮಾಣ" ಮಾಸಪತ್ರಿಕೆ ಜನಪ್ರಿಯವಾಗಿದೆ. ನೂರಾರು ಮುಖ್ಯ ಸೇವಾ ಕೇಂದ್ರಗಳು, ಉಪಸೇವಾ ಕೇಂದ್ರಗಳು, ಸಹಸ್ರಾರು ಸಮರ್ಪಿತ ಶಿಕ್ಷಕ, ಶಿಕ್ಷಕಿಯರು ಈಶ್ವರೀಯ ಸೇವೆ ಮಾಡುತ್ತಿದ್ದಾರೆ.

ಬೆಳಗಾಂವ ಉಪವಲಯ: ಹೃದಯ ಪುಷ್ಪಾ ದಾದಿಯವರು ಬೆಳಗಾಂವ ಮೇಳ ಮಾಡಿ ಅಲ್ಲಿ ಮಹಾದೇವ ಅಣ್ಣನವರು, ಉಷಾ ಬಹನ, ಶಾಮಲಾ, ರಮಾ ಅಕ್ಕಾ ಅವರನ್ನು ನಿಮಿತ್ತ ಮಾಡಿದರು. ನಂತರದಲ್ಲಿ ಉಪವಲಯದ ಮುಖ್ಯ ಸಂಚಾಲಕಿಯರಾದ ಬಿ.ಕೆ. ಅಂಬಿಕಾ ಅಕ್ಕನವರು ನಡೆಸಿಕೊಂಡು ಹೋಗುತ್ತಿರುವರು. ಬಿ.ಕೆ. ಸುಶಿಲಾ, ಬಿ.ಕೆ. ನೀಲಮ್ಮ, ಬಿ.ಕೆ. ಮೀರಾ, ಬಿ.ಕೆ. ಯಮುನಾ, ಬಿ.ಕೆ. ಪದ್ಮಾ ಸೇವೆಗೆ ನಿಮಿತ್ಯರಾದರು. ಮುದ್ದೇಬಿಹಾಳದಲ್ಲಿ ನಾರಾಯಣ ಭೋಸಲೆಯವರು "ಓಂ ಶಾಂತಿ ಭವನ" ನಿರ್ಮಾಣ ಮಾಡಲು ನಿಮಿತ್ಯರಾದರು. ಇದರ ಉದ್ಘಾಟಣೆಗೆ ಪ್ರಕಾಶಮಣಿ ದಾದೀಜಿಯವರು ಹಾಗೂ ಮೋಹಿನಿ ಬಹನರವರು ಮೌಂಟ ಅಬುದಿಂದ ಆಗಮಿಸಿದ್ದರು. ರಾಜಯೋಗಿ ಅಂಬಿಕಾ ಬೇಹನಜಿಯವರ ಅಧ್ಯಕ್ಷತೆಯಲ್ಲಿ ಬೆಳಗಾಂವದಲ್ಲಿ ನಡೆದ "ವಿಶ್ವಶಾಂತಿ ಮಹೋತ್ಸವ"ದಲ್ಲಿ ಒಂದು ಲಕ್ಷಕ್ಕಿಂತಲೂ ಅಧಿಕ ಜನ ಭಾಗವಹಿಸಿ ಈಶ್ವರಿಯ ಸಂದೇಶ ಪಡೆದರು. ಜಗತ್ತಿನ ಅತೀ ದೊಡ್ಡ ಪ್ರಚಾರ ಫಲಕ ನಿರ್ಮಿಸಿದ್ದು, "Book of Limica" ಪುಸ್ತಕದಲ್ಲಿ ದಾಖಲಾಗಿದೆ. ಈ ವಲಯದಲ್ಲಿ ನೂರಾರು ಮುಖ್ಯಕೇಂದ್ರಗಳು, ಉಪಕೇಂದ್ರಗಳಿದ್ದು, ಸಹಸ್ರಾರು ಸಂಖ್ಯೆಯಲ್ಲಿ ಸಮರ್ಪಿತ ಸಹೋದರ/ಸಹೋದರಿಯರು ಸೇವೆ ಸಲ್ಲಿಸುತ್ತಿದ್ದಾರೆ.

ಗುಲಬರ್ಗಾ ಉಪವಲಯ: ಮಧುಬನದ ಆದೇಶದಂತೆ ದಾದೀಜಿಯವರು ಗುಲಬರ್ಗಾ ಉಪವಲಯಕ್ಕೆ ಪ್ರೇಮಸಿಂಗ, ಅಣ್ಣ ವಿಜಯಕ್ಕ ನಿಮಿತ್ಯರಾದರು. ಇದರ ಮುಖ್ಯ ಕೇಂದ್ರ ಜಗತ್ತ ಬಡಾವಣೆಯಲ್ಲಿ "ಸತ್ಯತೀರ್ಥ" ಈ ಹೆಸರಿನಿಂದ ಇದೆ. ವಲಯದಲ್ಲಿ ನೂರಾರು ಮುಖ್ಯ ಕೇಂದ್ರಗಳು ಉಪಕೇಂದ್ರಗಳು ಸಹಸ್ರಾರು ಸಂಖ್ಯೆಯಲ್ಲಿ ಸಮರ್ಪಿತ ಸಹೋದರ/ಸಹೋದರಿಯರು ಇದ್ದಾರೆ.

ಸೋಲಾಪುರ ಉಪವಲಯ : ಈ ವಲಯದ ಮುಖ್ಯ ಕೇಂದ್ರವು ಸೋಲಾಪುರದ ಶಿವಾಜಿನಗರದಲ್ಲಿದೆ. ಮುಖ್ಯ ಸಂಚಾಲಕಿಯರನ್ನಾಗಿ ರಾಜಯೋಗಿ ಬ್ರಹ್ಮಾಕುಮಾರಿ ಸೋಮಪ್ರಭಾ ಅವರನ್ನು ನೇಮಿಸಿದರು. ಈ ವಲಯದಲ್ಲಿ ನೂರಾರು ಮುಖ್ಯ ಕೇಂದ್ರಗಳು, ಉಪಕೇಂದ್ರಗಳು, ಅನೇಕ ಸಮರ್ಪಿತ ಸಹೋದರ/ಸಹೋದರಿಯರು ಇದ್ದಾರೆ.

ಮಹಿಳೆಯರಿಂದಲೇ ಮುನ್ನಡೆದ ಸಂಸ್ಥೆ:– ಸಂಸ್ಥೆಯ ಬೃಹತ್ ವಿಭಾಗಗಳನ್ನು ಸಂಪೂರ್ಣ ಜವಾಬ್ದಾರಿಯನ್ನು ಸಹೋದರಿಯರೇ ನಿರ್ವಹಿಸುತ್ತಾರೆ. ಪ್ರತಿಯೊಂದು ಕೇಂದ್ರದ ಮುಖ್ಯ ಸಂಚಾಲಕಿಯರು ಮಹಿಳೆಯರೆ ಆಗಿದ್ದಾರೆ.

ಜಗತ್ತಿನಲ್ಲಿಯೇ ಮಹಿಳೆಯರು ಮುನ್ನಡೆಸುವ ಏಕೈಕ ಸಂಸ್ಥೆ ಈಶ್ವರಿಯ ವಿಶ್ವವಿದ್ಯಾಲಯ.

ಮಾಂಗನೇಸೆ ಮರನಾ ಭಲಾ: ಪಿತಾಶ್ರೀ ಬ್ರಹ್ಮಬಾಬಾರವರು ಎಲ್ಲ ಬ್ರಹ್ಮಕುಮಾರ, ಬ್ರಹ್ಮಾ ಕುಮಾರ, ಬ್ರಹ್ಮಕುಮಾರಿಯರಿಗೆ, ನೀಡಿದ ಶ್ರೀಮತವೆಂದರೆ, "ಮಾಂಗನೇಸೆ ಮರನಾ ಭಲಾ" ಅಂದರೆ "ಬೇಡುವದಕ್ಕಿಂತ ಸಾಯುವದು ಲೇಸು" ಎಂದು ಜಗತ್ತಿನಲ್ಲಿಯೇ ಭಿಕ್ಷೆ ಬೇಡಲಾರದ ಆಧ್ಯಾತ್ಮಿಕ ಸಂಸ್ಥೆ ಅಂದರೆ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ಎಂದು ಖಡಾ ಖಂಡಿತ ಹೇಳಬಹುದು. ಇಲ್ಲಿ ದಕ್ಷಿಣೆ, ದರ್ಶನ ಚಾರ್ಜು, ಪೋಗಾಪಟ್ಟಿ, ಪ್ರಸಾದ ಪಟ್ಟಿ, ತಲೆಪಟ್ಟಿ, ಇತರೆ ಯಾವ ಪಟ್ಟಿಗಳು ಇಲ್ಲ. ಯಜ್ಞದ ಪ್ರಾರಂಭದಲ್ಲಿ ಎಂತಹ ಕಡುಕಷ್ಟಗಳು ಬಂದರೂ ಯೋಗ ಬಲದಿಂದ ಗೆದ್ದು ಬಂದಿದ್ದಾರೆ ಎಂಬುದಕ್ಕೆ ದಾದೀಜಿಯವರ ಜೀವನವೇ ಸಾಕ್ಷಿ. ಹಾಗೂ ಪ್ರತಿಯೊಬ್ಬ ಬ್ರಹ್ಮಾಕುಮಾರ, ಬ್ರಹ್ಮಾಕುಮಾರಿಯರ ಅನುಭವಗಳೇ ಸಾಕ್ಷಿ. **ಸರ್ವಧರ್ಮ ಸಮನ್ವಯ, ಯುವ ಜನರ ಸೇವೆ ಕೋಮ** ಸೌಹಾರ್ಧತೆಯನ್ನು ಮೂಡಿಸುವುದು. ಉಚಿತ ವೈದ್ಯಕೀಯ ನೆರವು ಶಾಲಾ ಶಿಕ್ಷಕರಿಗೆ ನೈತಿಕ ಶಿಕ್ಷಣ, ಕೈದಿಗಳ ಮನ ಪರಿವರ್ತನೆ, ಮೂಢನಂಬಿಕೆ ದೂರ ಮಾಡುವ ಸೇವೆ. ವಿಶ್ವಶಾಂತಿ ಬೃಹತ್ ಕಲ್ಪನೆ.

ಈಶ್ವರೀಯ ವಿಶ್ವವಿದ್ಯಾಲಯದ ಗುರಿ ಮತ್ತು ಉದ್ದೇಶಗಳು

೧. ಈಶ್ವರಿಯ ಜ್ಞಾನ ಹಾಗೂ ರಾಜಯೋಗದಿಂದ ಪ್ರತಿಯೊಬ್ಬ ಮಾನವನು ಸರ್ವಗುಣ ಸಂಪನ್ನನನ್ನಾಗಿಸುವುದು. ೨) ಹೊಸ ಪ್ರಪಂಚ ಸ್ಥಾಪಿಸುವುದು. ೩) ಮಾನವರಲ್ಲಿ ಆಧ್ಯಾತ್ಮಿಕ ಜಾಗ್ರತಿ ಉಂಟು ಮಾಡುವುದು. ೪) ರಾಜಯೋಗದಿಂದ ಗೃಹಸ್ಥ ಜೀವನದಲ್ಲಿ ಸುಖ ಶಾಂತಿಯನ್ನು ಸ್ಥಾಪಿಸುವುದಾಗಿದೆ. ೫) ವಿಶ್ವಭ್ರಾತೃತ್ವವನ್ನು ನಮ್ಮಲ್ಲಿ ಅಳವಡಿಸಿಕೊಂಡು ಬೇರೆಯವರಿಗೂ ಕಲಿಸುವದು. ಸರ್ವರ ಸಹಯೋಗದಿಂದ ಸುಖಮಯ ಸಂಸಾರ ಸ್ಥಾಪಿಸುವದು.

ಕಲಿಸುವ ವಿಷಯಗಳು

ಪ್ರಾರಂಭದಲ್ಲಿ ಜಿಜ್ಞಾಸುಗಳಿಗೆ ಆತ್ಮ, ಪರಮಾತ್ಮ, ಸೃಷ್ಟಿಚಕ್ರ, ಆತ್ಮಗಳ ಉತ್ಥಾನ ಹಾಗೂ ಪತನದ ಕತೆ, ಸತ್ಯಭಗವದ್ಗೀತೆ, ತ್ರಿಮೂರ್ತಿ ರಹಸ್ಯ, ರಾಜಯೋಗ, ಇವುಗಳನ್ನು ೪ ಭಾಗ ಮಾಡಿ ೧. ಜ್ಞಾನ, ೨. ಯೋಗ, ೩. ಧಾರಣೆ ಸೇವೆ ಎಂದು ಹೇಳಬಹುದು. ಪಾತಂಜಲಿ ಅಷ್ಟಾಂಗ ಯೋಗದಲ್ಲಿ ಅನುಕ್ರಮವಾಗಿ ಬರುವವು. ರಾಜಯೋಗದ ೪ ಆಧಾರ ಸ್ತಂಭಗಳಾದ ಬ್ರಹ್ಮಚರ್ಯ ೨) ಸತ್ಸಂಗ ೩) ಶುದ್ಧ ಅನ್ನ ಸೇವನೆ (ಪ್ರಾತ್ಯಾಹಾರ) ೪) ದೈವಿ ಗುಣಗಳ ಧಾರಣೆ. ೧. ಜ್ಞಾನ (Abstinence) ೨. ನಿಯಮ (Observance of rule) ೩. ಆಸನ (Physical postures) ೪. ಪ್ರಾಣಾಯಾಮ (withdrawal) ೫. ಧಾರಣೆ Holding of mind) ೬. ಧ್ಯಾನ (Concentration) ೭. ಸಮಾಧಿ ಮತ್ತು ೪ ನಿಯಮಗಳಾದ ೧) ಅಹಿಂಸೆ (Non violence) ೨) ಬ್ರಹ್ಮಚರ್ಯ (celibacy) ೩. ಸತ್ಯ (Truth) ೪. ಅಸ್ತೆಯ (Non stealing) ೫. ಅಸಂಗ್ರಹ (Non storing) ಮೇಲೆ ಹೇಳಿದ ಎಲ್ಲ ಯಮ ನಿಯಮಗಳು ಸಹಜ ರಾಜಯೋಗದಲ್ಲಿ ಸ್ವಾಭಾವಿಕವಾಗಿ ಒಳಗೊಂಡಿರುವವು.

ಕೊನೆಯ ಮಾತು

ಪಿತಾಶ್ರೀ ಬ್ರಹ್ಮಾಹಾರವು ಅವ್ಯಕ್ತವಾದ ನಂತರ ರಾಜಯೋಗಿನಿ ದಾದಿ ಪ್ರಕಾಶಮಣಿ ಅವರ ಸಂಚಾಲತ್ವದಲ್ಲಿ ಈಶ್ವರೀಯ ವಿದ್ಯಾಲಯವು ವಿಶ್ವವ್ಯಾಪ್ತಿಯಾಗಿ ಜಾಗತಿಕ ಮಟ್ಟದಲ್ಲಿ ಬೆಳೆದಿರುವ ಈ ಸಂಸ್ಥೆ ೨೦೦ಕ್ಕೂ ಅಧಿಕ ರಾಷ್ಟ್ರದಲ್ಲಿ ೮,೫೦೦೦ಕ್ಕೂ ಅಧಿಕ ಸೇವಾ ಕೇಂದ್ರವನ್ನು ೧೫,೦೦೦ಕ್ಕೂ ಅಧಿಕ ಉಪಸೇವಾ ಕೇಂದ್ರಗಳನ್ನು ತೆರೆದಿದೆ. ೯ ಲಕ್ಷ ಜನರು ಪ್ರತಿನಿತ್ಯ ಸಹಜ ಜ್ಞಾನ ಸಹಜ ರಾಜಯೋಗದಲ್ಲಿ ಸಾಧನೆ ಮಾಡುತ್ತಾ ಮುಂದುವರೆಯುತ್ತಿದ್ದಾರೆ. ದಾದಿ ಪ್ರಕಾಶಮಣಿ ೨೦೦೮ ಅಗಸ್ಟ್ ೨೫ರಂದು ಅವ್ಯಕ್ತವಾದ ತರುವಾಯ ದಾದಿ ಜಾನಕಿಜಿಯವರು ವರ್ತಮಾನ ಸಮಯದಲ್ಲಿ ಸಂಚಾಲತ್ವವನ್ನು ವಹಿಸಿದ್ದಾರೆ. ಪ್ರತಿ ಜಿಲ್ಲೆ ತಾಲ್ಲೂಕಾ. ಹೋಬಳಿ, ಗ್ರಾಮಮಟ್ಟದಲ್ಲಿಯೂ ಸೇವಾ ಕೇಂದ್ರಗಳು ಸ್ಥಾಪಿತವಾಗಿವೆ. ಗೀತಾಚಾರ್ಯ ಹೇಳುವಂತೆ ಯತ್ರ ಯೋಗೇಶ್ವರಃ ಕೃಷ್ಣೋ ಯತ್ರ ಪಾರ್ಥೋ ಧನುರ್ಧರ/ ತತ್ರ ಶ್ರೀ ರ್ವಿಜಯೋ ಭೂತಿರ್ಧ್ರುವಾ ನೀತಿರ್ಮತಿರ್ಮವ// ಎಲ್ಲಿ ಯೋಗೀಶ್ವರ ಶ್ರೀಕೃಷ್ಣನಿದ್ದಾನೋವೋ ಅಲ್ಲಿ ಪಾರ್ಥನಿದ್ದಾನೆ. ಇವರಿಬ್ಬರೂ ಎಲ್ಲಿದ್ದಾರೋ ಅಲ್ಲಿ ವಿಜಯಶ್ರೀ ಇದೆ ಎಂದು ಹೇಳುತ್ತಾನೆ. ಹಾಗೆ ಎಲ್ಲಿ ಬ್ರಹ್ಮಾ ಕುಮಾರ, ಬ್ರಹ್ಮಾಕುಮರಿಯರಿದ್ದಾರೂ ಅಲ್ಲಿ ಭಗವಂತನ ಸಾನಿಧ್ಯವಿದ್ದು, ಸತ್ಯ ಜ್ಞಾನ, ಸಹಜ ರಾಜಯೋಗದಿಂದ ವಿಜಯಶ್ರೀ ತಾನಾಗಿಯೇ ಬರುವಳು ಎಂದು ತಿಳಿಯುವುದೇ ಅಚಲವಾದ ನೀತಿ, ಅದೇ ಪರಮಾತ್ಮನ ಶ್ರೀಮತವಾಗಿದೆ.

ಆಧಾರಸೂಚಿ

೧. ರಾಯಯೋಗಿಣಿ, ಪ್ರೊ. ಜಿ.ಎಚ್. ಹನ್ನೆರಡಮಠ.

೨. *Who's who.*

೩. ಪ.ಗು.ಹ.ರವರ ವಚನ ಸಂಪುಟ.

೪. **ಭಗವದ್ಗೀತೆ,** ಗೀತಾ ಪ್ರೆಸ್, ಗೊರಖಪುರ.

೫. ನೆರವು : ಬಿ.ಕೆ. ಲಕ್ಷ್ಮಿ ಜಿ, ಮೈಸೂರು, ಬಿ.ಕೆ. ರಾಜಋಷಿ ಬಸವರಾಜ, ೧. ಬಿ.ಕೆ.ಅಂಬಿಕಾಜಿ. ಬೆಳಗಾಂವ ೨. ಬಿ.ಕೆ. ಸುಶಿಲಾಜಿ. ೩. ಬಿ.ಕೆ. ಸುವರ್ಣಾ. ೪. ಬಿ.ಕೆ. ಯಮುನಾಜಿ ೫. ಎಸ್.ಎನ್. ನೀರಲಗಿ, ೬ ಸಿದ್ದು. ಎಸ್. ನಾಗೂರ. ೭ ಎಸ್.ಎಸ್. ನೂಲಿಕಾರ, ೮. ಆರ್.ಬಿ. ದಾನಿ, ಶಿಕ್ಷಕರು. ೯. ಎ.ಬಿ. ಪಾಟೀಲ. ಮುಖ್ಯ ಗುರುಗಳು.

೧೧೩

ನಾಯಕರ ಪದ್ಧತಿ ವ್ಯಾಖ್ಯೆಗಳು : ಮರುಪರಿಶೀಲನೆ

ಡಾ. ಡಿ.ಎನ್. ಯೋಗೀಶ್ವರಪ್ಪ*

ವಿಜಯನಗರ ಸಾಮ್ರಾಜ್ಯದ ಆಡಳಿತ ವ್ಯವಸ್ಥೆಯಲ್ಲಿ ನಾಯಕರ ಪಾತ್ರ ಬಹಳ ಮುಖ್ಯವಾಗಿದೆ. ಸೈನಿಕ ಮತ್ತು ರಾಜಕೀಯ ಕ್ಷೇತ್ರದಲ್ಲಿ ಪ್ರಭಾವಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಗಣ್ಯ ವ್ಯಕ್ತಿಗಳನ್ನು "ನಾಯಕರು" ಎಂದೇ ಸಾಮಾನ್ಯವಾಗಿ ಭಾವಿಸಲಾಗಿದೆ. ಇವರು ವಿಶೇಷವಾಗಿ ತುಳುವ ಸಂತತಿಯವರ ಕಾಲದಲ್ಲಿ, ಆ ಸಾಮ್ರಾಜ್ಯದ ಕೀರ್ತಿಯನ್ನು ಉತ್ತುಂಗ ಶಿಖರಕ್ಕೇರಿಸಿದವರು. ಇಂತಹ ನಾಯಕರ ಬಗೆಗೆ, ಸಂಶೋಧನಾ ವಲಯದಲ್ಲಿ ಸ್ಥೂಲವಾಗಿ ಸಾಕಷ್ಟು ಕೆಲಸಗಳಾಗಿದ್ದರೂ ಸೂಕ್ಷ್ಮ ವಿಷಯಗಳಾದ ನಾಯಕ ಪದದ ವ್ಯಾಖ್ಯೆ ಯಾರನ್ನು ನಾಯಕ ಎಂದು ಗುರ್ತಿಸಬೇಕು? ಅವರ ಕೌಟುಂಬಿಕ ಹಿನ್ನೆಲೆ ಏನು ? ಚಕ್ರವರ್ತಿಯೊಂದಿಗೆ ಅವರ ಸಂಬಂಧ ಹೇಗಿತ್ತು ? ಮೊದಲಾದವುಗಳ ಬಗ್ಗೆ ಇನ್ನೂ ಸ್ಪಷ್ಟ ಅಭಿಪ್ರಾಯಕ್ಕೆ ಬರಲು ಸಾಧ್ಯವಾಗಿಲ್ಲ. ಇದರಲ್ಲಿ ನಾಯಕ ವ್ಯವಸ್ಥೆಗೆ ತಳಹದಿಯಾಗಬಲ್ಲ ಅದರ ವ್ಯಾಖ್ಯೆ ಮತ್ತು ಮೂಲವನ್ನು ಕೈಗೆತ್ತಿಕೊಂಡು ಈ ಲೇಖನದಲ್ಲಿ ಚರ್ಚಿಸುವ ಪ್ರಯತ್ನ ಮಾಡಿದ್ದೇನೆ. ಇದಕ್ಕೆ ಪೂರಕವಾಗಿ ನಾಯಕ ವ್ಯಾಖ್ಯೆಗಳ ಹಿಂದಿನ ಅಧ್ಯಯನಗಳನ್ನು ಗಮನಿಸುತ್ತಾ ಅವುಗಳಲ್ಲಿನ ವಿವಾದಾತ್ಮಕ ಅಂಶಗಳನ್ನು ಚರ್ಚಿಸಿ, ಭವಿಷ್ಯದ ಸಂಶೋಧನೆಗೆ ಮಾರ್ಗ ನೀಡುವ ಪ್ರಯತ್ನ ಈ ಲೇಖನವಾಗಿದೆ.

ಇದುವರೆಗಿನ ಸಂಶೋಧನೆಗಳ ಪ್ರಕಾರ ವಿಜಯನಗರ ಸಾಮ್ರಾಜ್ಯದ ಐತಿಹಾಸಿಕ ಸಂಶೋಧನೆ ಕೈಗೊಂಡವರಲ್ಲಿ ರಾಬರ್ಟ್‌ಸೀವೆಲ್‌ನೇ ಮೊದಲಿಗೆ ಎನ್ನುವುದು ಎಲ್ಲರಿಗೂ ಗೊತ್ತಿರುವ ಸಂಗತಿಯೇ ಆಗಿದೆ. ಇವನ ಕೃತಿ "ಎ ಫಾರ್‌ಗಾಟನ್ ಎಂಪೈರ್". ೧೯೦೦ರಲ್ಲಿ ಪ್ರಕಟವಾಗಿದ್ದು ಅದರಲ್ಲಿ ಅವನು ತನ್ನ ಸಂಶೋಧನೆಗೆ ಸಂಸ್ಕೃತ ಶಾಸನಗಳು ಮತ್ತು ದೇಶೀಯ ಭಾಷೆಯ ಶಾಸನಗಳ ಜೊತೆಗೆ ಪೋರ್ಚುಗೀಸ್ ಯಾತ್ರಿಕರಾದ ಪಯಸ್, ನ್ಯೂನಿಜ್‌ರ ಬರಹಗಳನ್ನೂ ಉಪಯೋಗಿಸಿಕೊಂಡಿದ್ದಾನೆ. ಈ ಪೋರ್ಚುಗೀಸ್ ಯಾತ್ರಿಕರ ಬರಹಗಳನ್ನು ತನ್ನ ಕೃತಿಯ ಅನುಬಂಧದಲ್ಲಿ ಇಂಗ್ಲೀಷ್ ಭಾಷೆಗೆ ತರ್ಜುಮೆ ಮಾಡಿ ನೀಡಿದ್ದಾನೆ. ಈ ದಾಖಲೆಗಳು ನಾಯಕರ ಬಗ್ಗೆ ಮಾಹಿತಿ ನೀಡಿವೆ. ಅದರ ಪ್ರಕಾರ

"ಸೈನಿಕ ಸೇವೆ ಮತ್ತು ವಾರ್ಷಿಕ ಕಾಣಿಕೆಯನ್ನು ವಿಜಯನಗರ ಸಾಮ್ರಾಜ್ಯಕ್ಕೆ ನೀಡುವ ಷರತ್ತಿನ ಮೇರೆಗೆ ಚಕ್ರವರ್ತಿಯಿಂದ ಭೂಪ್ರದೇಶಗಳನ್ನು ಪಡೆಯುತ್ತಿದ್ದವರಿಗೆ ಕ್ಯಾಪ್ಟನ್‌ಗಳು ಎಂದು ಕರೆಯಲಾಗುತ್ತಿತ್ತು." **(ಸೀವೆಲ್ ೧೯೦೦: ಪುಟ. ೩೭೩)**

"All the lands belongs to the king and from his hand the **captains** hold it. They also pay to him every year sixty lakhs of rents as royal dues" **(Sewell 1900: page 379, 373)**

ಇಂಗ್ಲೀಷಿನ ಕ್ಯಾಪ್ಟನ್ ಪದಕ್ಕೆ ನಾಯಕ, ಮುಂದಾಳು, ದಳಪತಿ ಎಂಬ ಅರ್ಥವನ್ನು ಶಬ್ದಕೋಶಗಳು ನೀಡಿವೆ. ಸೀವೆಲ್‌ರು ನೀಡಿರುವ "ಕ್ಯಾಪ್ಟನ್"ಗೆ ಸಂಬಂಧಿಸಿದ ವಿವರವನ್ನು ಶಾಸನಗಳಲ್ಲಿ ಉಲ್ಲೇಖವಾಗಿರುವ 'ನಾಯಕ', 'ನಾಯಂಕರ', 'ನಾಯಕತನ'ವನ್ನು, ಅಮರನಾಯಕಕ್ಕೆ ಸಂವಾದಿಯಾಗಿ ಸ್ಥಳೀಯ ಸಂಶೋಧಕರು ಉಪಯೋಗಿಸಿಕೊಂಡು ನಾಯಕಕ್ಕೆ ವ್ಯಾಖ್ಯಾನವನ್ನು ನೀಡಲು ಪ್ರಯತ್ನಿಸಿದ್ದಾರೆ. ಅವರಲ್ಲಿ ಇದನ್ನು ಮೊಟ್ಟ ಮೊದಲು ಬಳಸಿಕೊಂಡವರು ಎನ್. ವೆಂಕಟರಮಣಯ್ಯನವರಾಗಿದ್ದಾರೆ. ನ್ಯೂನಿಜ್‌ನ ಕ್ಯಾಪ್ಟನ್‌ಗೆ ಸಂಬಂಧಿಸಿದ ಹೇಳಿಕೆಯನ್ನು ಅವರು ವಿಜಯನಗರ ಸಾಮ್ರಾಜ್ಯದ ಆಡಳಿತ ವ್ಯವಸ್ಥೆಯ ತಮ್ಮ ಸಂಶೋಧನೆಗೆ ನೆಲೆಗಟ್ಟನ್ನಾಗಿ ಮಾಡಿಕೊಂಡರು. ನ್ಯೂನಿಜ್‌ನ ಹೇಳಿಕೆ ಪೋರ್ಚುಗೀಸ್ ಭಾಷೆಯಲ್ಲಿದ್ದುದನ್ನು, ಸೀವೆಲ್‌ನು ಇಂಗ್ಲೀಷ್‌ಗೆ ತರ್ಜುಮೆ ಮಾಡಿ ಬಳಸಿದ "ಕ್ಯಾಪ್ಟನ್" ಎಂಬ ಪದಕ್ಕೆ ಸಂವಾದಿಯಾಗಿ ವೆಂಕಟರಮಣಯ್ಯನವರು ನಾಯಕ ಅಥವಾ ನಾಯಕತನ ಅಥವಾ ನಾಯಂಕರವನ್ನು ಕಲ್ಪನೆಯಾಗಿ ರೂಪಿಸಿಕೊಂಡು ಅದಕ್ಕೆ ಅವರು ಸೇನಾಸೇವೆ ಮತ್ತು ವಾರ್ಷಿಕ ಕಪ್ಪ ನೀಡುವ ಷರತ್ತಿನ ಮೇರೆಗೆ ಭೂಪ್ರದೇಶಗಳನ್ನು ನೀಡುವ ರಾಜಕೀಯೋ ಮಿಲಿಟರಿ ವ್ಯವಸ್ಥೆಗೆ ಸಮೀಕರಿಸಿದ್ದಾರೆ. ಆದ್ದರಿಂದ ಅವರು "ಚಕ್ರವರ್ತಿಯಿಂದ ಭೂಮಿಯನ್ನು

* ಸಹ ಪ್ರಾಧ್ಯಾಪಕರು, ಮುಖ್ಯಸ್ಥರು, ಇತಿಹಾಸ ವಿಭಾಗ, ಸಿದ್ಧಗಂಗಾ ಮಹಿಳಾ ಕಾಲೇಜು, ತುಮಕೂರು-೫೭೨೧೦೧

ಗೇಣಿಗಾಗಿ ಪಡೆಯುತ್ತಿದ್ದ ವ್ಯಕ್ತಿಗಳನ್ನು ಅಮರನಾಯಕರೆಂದೂ; ಬಹಳ ಸಂಕ್ಷಿಪ್ತವಾಗಿ ಅವರನ್ನು ನಾಯಕರೆಂದೂ ಕರೆಯಲಾಗುತ್ತಿತ್ತು." **(ವೆಂಕಟರಮಣಯ್ಯ ೨೦೧೦ : ಪು. ೧೭೨)**

ಕನ್ನಡ ಭಾಷೆಯಲ್ಲಿನ ಶಾಸನಗಳಲ್ಲಿ ಉಲ್ಲೇಖಿತವಾದ ನಾಯಕತನವು ತೆಲುಗಿನಲ್ಲಿ ನಾಯಂಕರ ಮತ್ತು ತಮಿಳು ಭಾಷೆಯಲ್ಲಿ ನಾಯಕ್ಕತ್ತನಂಗೆ ಸಮಾನವಾಗಿದೆ. ವೆಂಕಟರಮಣಯ್ಯನವರು ನಾಯಕ ಪದಕ್ಕೆ ಪರ್ಯಾಯವಾಗಿ ಅಮರನಾಯಕ ಎಂದು ಹೆಚ್ಚಾಗಿ ಬಳಸಿದ್ದಾರೆ. ಇದಕ್ಕೆ ಅವರು ನೀಡುವ ಕಾರಣ 'ರಾಯವಾಚಕಮು' ಎಂಬ ತೆಲುಗು ಕೃತಿಯಲ್ಲಿನ ವಿವರಗಳು. **(ವೆಂಕಟರಮಣಯ್ಯ ೨೦೧೦ : ಪು. ೧೭೦–೧೭೧)** ಆದರೂ ಶಾಸನಗಳಲ್ಲಿ ನಾಯಂಕರ ಪದವೇ ಹೆಚ್ಚಾಗಿ ಬಳಕೆಯಾಗಿರುವುದನ್ನು ಅವರೇ ಗುರ್ತಿಸಿದ್ದಾರೆ. ಆದ್ದರಿಂದ ಅವರು ಇವೆರಡರ ನಡುವೆ ಏನೂ ವ್ಯತ್ಯಾಸ ಇಲ್ಲ ಎಂಬಂತೆ ಬಳಸಿರುವುದು ಖಚಿತವಾಗುತ್ತದೆ. ಆದರೆ ನಾಯಕ ಮತ್ತು ಅಮರನಾಯಕ ಮಧ್ಯೆ ಇರುವ ಭಿನ್ನತೆಯನ್ನು ಗುರ್ತಿಸಿರುವ ಟಾಲ್ಬಾತ್‌ರು ನಾಯಂಕರ ಹಕ್ಕುಗಳು ಸಾಮಾನ್ಯವಾಗಿ ಸೀಮೆಗೆ ಅನ್ವಯಿಸಿದರೆ, ಅಮರವು ಒಂದೇ ಗ್ರಾಮದ ಸಂಬಂಧದಲ್ಲಿ ಕಾಣಿಸಿಕೊಳ್ಳುತ್ತದೆ ಎಂದರೂ ಕೊನೆಗೆ ತಮ್ಮ ತೀರ್ಮಾನವನ್ನು ಅಸ್ಪಷ್ಟವಾಗಿಯೇ ಉಳಿಸಿದ್ದಾರೆ **(ಟಾಲ್ಬಾತ್ ೨೦೦೧ b : ಪು. ೨೫೩)** ಸುಬ್ಬರಾಯಲುರವರು ಅಮರಂ ಎನ್ನುವುದು ಸಾಮಾನ್ಯವಾಗಿ ಕೆಳಹಂತದ ನಾಯಕನನ್ನು ಮತ್ತು ಅವನ ಕಡಿಮೆ ಭೂಪ್ರದೇಶವನ್ನು ಹೇಳುತ್ತದೆ ಎನ್ನುವರು **(ಸುಬ್ಬರಾಯಲು ೧೯೯೬ : ಪು. ೭೭)** ಇವರ ದೃಷ್ಟಿಕೋನದಲ್ಲಿ ಅಮರಂ ಎನ್ನುವುದು ನಾಯಕ ತನ್ನ ಅಧೀನದಲ್ಲಿರುವವನಿಗೆ ನೀಡುವ ಉಂಬಳಿಗೆ ಸಂಬಂಧಿಸಿದ್ದರೆ, ನಾಯಂಕರ ಎನ್ನುವುದು ರಾಜನಿಂದ ನೇರವಾಗಿ ಉಂಬಳಿ ಪಡೆದ ನಾಯಕನಿಗೆ ನಿರ್ದೇಶಿಸುತ್ತಾರೆ. ಆದ್ದರಿಂದ ನಾಯಕ ಮತ್ತು ಅಮರ ನಾಯಕರ ನಡುವೆ ಸ್ವಲ್ಪ ಮಟ್ಟಿನ ಭಿನ್ನತೆ ಇದ್ದುದು ಕಂಡು ಬರುತ್ತದೆ. ಹೀಗೆ ವೆಂಕಟರಮಣಯ್ಯನವರ ವ್ಯಾಖ್ಯೆಯನ್ನು ಪುನರ್ ಪರಿಶೀಲಿಸಬೇಕಾದ ಅಗತ್ಯತೆ ಇದೆ.

ವೆಂಕಟರಮಣಯ್ಯನವರು ಪ್ರತಿಪಾದಿಸಿದ ನಾಯಂಕರ ವ್ಯವಸ್ಥೆಯು ವಿಜಯನಗರ ಆಡಳಿತ ವ್ಯವಸ್ಥೆಯ ಬಹುಮುಖ್ಯ ಅಂಗವಾದ ನಾಯಕ ಅಧ್ಯಯನದಲ್ಲಿ ಮೊದಲ ಮತ್ತು ಬಹು ಪ್ರಮುಖವಾದ ಬೆಳವಣಿಗೆಯಾಗಿದೆ. ಅನೇಕ ವಿದ್ವಾಂಸರು ಇಂತಹ ಅಧ್ಯಯನವನ್ನು ಕೈಗೆತ್ತಿಕೊಂಡು ತಮ್ಮದೇ ಆದ ದೃಷ್ಟಿಕೋನದಲ್ಲಿ 'ನಾಯಕ'ಕ್ಕೆ ವ್ಯಾಖ್ಯಾನವನ್ನು ನೀಡಿದ್ದಾರೆ. ಅವುಗಳನ್ನು ಸಂಗ್ರಹಿಸಿ ನಾನು ಈ ಕೆಳಗೆ ಕಾಲಾನುಕ್ರಮದಲ್ಲಿ ನೀಡಿದ್ದೇನೆ.

೧. ಸಾಲೆತೋರೆ (೧೯೩೪ರಲ್ಲಿ) "ದಂಡನಾಯಕರ ಅಧೀನಕ್ಕೊಳಪಟ್ಟ ಇತರೆ ಅಧಿಕಾರಿ ವರ್ಗವನ್ನು ನಾಯಕ" ಎಂದು ಕರೆಯುವರು. **(ಸಾಲೆತೊರೆ ೧೯೩೪: I : ಪು. ೨೬೭)**

೨. ಟಿ.ವಿ. ಮಹಾಲಿಂಗಂ (೧೯೪೨ರಲ್ಲಿ) "ರಾಜನಿಂದ ಯಾರು ಭೂಮಿಯನ್ನು ಪಡೆದಿರುತ್ತಾರೋ ಅವರೇ ನಾಯಕರು" **(ಟಿ.ವಿ. ಮಹಾಲಿಂಗಂ ೧೯೪೨ : ಪು. ೧೯೫)**

೩. ಜೆ.ಡಿ.ಎಂ. ಡೆರ್ರೆಟ್‌ರವರು (೧೯೫೭ರಲ್ಲಿ) ೧೧ನೇ ಶತಮಾನದ ಶಾಸನಗಳಲ್ಲಿ ಉಲ್ಲೇಖವಾದ ನಾಯಕ ಪದವನ್ನು ಪರಿಗಣಿಸಿ ಅವರನ್ನು ಸೈನಿಕ ಸೇವೆ ನೀಡುವ ಇಂಗ್ಲೀಷರ ಕ್ಯಾಪ್ಟನ್‌ಗಳಿಗೆ ಹೋಲಿಸುತ್ತಾರೆ" **(ಜೆ.ಡಿ.ಎಂ. ಡೆರ್ರೆಟ್ ೧೯೫೭ : ಪು. ೨೫)**

೪. ಎ. ಕೃಷ್ಣಸ್ವಾಮಿಯವರು (೧೯೬೪ರಲ್ಲಿ) ನಾಯಕ ಎಂಬುದು ಸೈನ್ಯದ ಮುಖಂಡನ ಹೆಸರು ಅವನು ಭೂ ಹಿಡುವಳಿ ಪ್ರದೇಶವನ್ನು ಪಡೆದಿರಬೇಕು ವೈಯಕ್ತಿಕ ಹೆಸರಿನ ಜೊತೆಗೆ ನಾಯಕ ಎಂಬ ಗೌರವಾನ್ವಿತ ಪದವೂ ಸೇರಿರಬೇಕು. **(ಎ. ಕೃಷ್ಣಸ್ವಾಮಿ ೧೯೬೪ : ಪು. ೧೮೦)**

೫. ಡಿ.ಸಿ. ಸರ್ಕಾರ್‌ರವರು (೧೯೬೬ರಲ್ಲಿ) "ಸೈನಿಕ ಸೇವೆಯ ಷರತ್ತಿನ ಮೇರೆಗೆ ವಿಜಯನಗರ ಚಕ್ರವರ್ತಿಗಳಿಂದ ಭೂಮಿಯನ್ನು ಪಡೆಯುವವರೇ ನಾಯಕರು" **(ಡಿ.ಸಿ. ಸರ್ಕಾರ್ ೧೯೬೬ : ಪು. ೨೧೪)**

೬. ಬರ್ಟನ್‌ಸ್ಟೇನ್ (೧೯೮೦ರಲ್ಲಿ) ನಾಯಕ ಎಂಬುದು ಪ್ರಬಲ ಯೋಧನ ಸಾಮಾನ್ಯ ಬಿರುದು ಅವನು ರಾಜನ ಪರವಾಗಿ ಎಲ್ಲಾ ಯುದ್ಧಗಳಲ್ಲಿ ಭಾಗವಹಿಸಬೇಕು. ಆದರೆ ಅವನು ಅಲ್ಲ ಸಮಯದಲ್ಲೂ ಸ್ವತಂತ್ರವಾಗಿ ತನ್ನ ಪ್ರಾಂತ್ಯದಲ್ಲಿ ಹಕ್ಕುಗಳನ್ನು ಚಲಾಯಿಸುವನು. **(ಬರ್ಟನ್‌ಸ್ಟೇನ್ ೧೯೮೦ : ಪು. ೪೦೮)**

೭. ಶಿವಣ್ಣ ಕೆ.ಎಸ್ (೧೯೮೩ರಲ್ಲಿ) ಸಾರ್ವಭೌಮರ ಗೇಣಿದಾರರನ್ನು ನಾಯಕರು ಎಂದಿದ್ದು ಗೇಣಿ ಪ್ರದೇಶಗಳು ವಂಶಪಾರಪರ್ಯವಾದವುಗಳಲ್ಲ. **(ಕೆ.ಎಸ್. ಶಿವಣ್ಣ ೧೯೮೩ : ಪು. ೩೯)**

೮. ಶಿಶಿರ್ ಕುಮಾರ್‌ಪಾಂಡೆ (೧೯೮೮ರಲ್ಲಿ) ನಾಯಕರು ಮಿಲಿಟರಿ ಯೋಧರು. ಅವರಿಗೆ ನಾಯಕ ತನವು ಸೇನಾಬಲ ಮತ್ತು ನಾಯಕತ್ವದ ಗುಣಗಳಿಂದ ಪ್ರಾಪ್ತವಾಗುತ್ತಿತ್ತು. **(ಶಿಶಿರ್ ಕುಮಾರ್‌ಪಾಂಡೆ, ೧೯೮೮: ಪು. ೧೦೫)**

೯. ವ್ಯಾಗನಾರ್ ಫಿಲಿಫ್ ಬಿ. (೧೯೯೩ರಲ್ಲಿ) "ಯೋಧರನ್ನು ಅಮರ ನಾಯಕರೆಂದು ಅವರನ್ನು ಸೇನಾಬಲದ ಅಧೀನವರ್ತಿಯಂತೆ ಚಿತ್ರಿಸಲಾಗಿದ್ದು ಅವನಿಗೆ ಭೂಪ್ರದೇಶವನ್ನು ಕೊಡುವುದರ ಜೊತೆಗೆ ಅದರಿಂದ ಬಂದ ಆದಾಯದಲ್ಲಿ ತನ್ನ ಸೈನ್ಯದ ನಿರ್ವಹಣೆ ಮಾಡಿ ನಿರ್ದಿಷ್ಟಪಡಿಸಿದ ಭಾಗವನ್ನು ವಿಜಯನಗರ ಚಕ್ರವರ್ತಿಗೆ ನೀಡಬೇಕಾಗಿತ್ತು". **(ವ್ಯಾಗನಾರ್ ಫಿಲಿಫ್ ಬಿ ೧೯೯೩: ಪು. ೧೦೧-೧೦೨, ೧೯೮-೨೦೦)**

೧೦. ನೊಬುರು ಖರಾಷಿಮಾ (೨೦೦೨ರಲ್ಲಿ) ನಾಯಕ ಎಂದರೆ ಬಿರುದು. ಅಥವಾ ಅವನಿಗೆ ನಾಯಕತನದಿಂದ ಸೀಮೆಯು ಪ್ರಾಪ್ತವಾಗಿರಬೇಕು ಅಥವಾ ರಾಜ ಮತ್ತು ಪ್ರಜೆಗಳ ಮಧ್ಯೆ ಮಧ್ಯವರ್ತಿ ಯಾಗಿ ಕೆಲಸ ಮಾಡಬೇಕು. ಈ ಮೂರರಲ್ಲಿ ಯಾವು ದಾದರೂ ಒಂದು ಅರ್ಹತೆ ಇದ್ದರೆ ಅವನನ್ನು ನಾಯಕ ಎನ್ನಬಹುದು. **(ನೊಬುರು ಖರಾಷಿಮಾ. ೨೦೦೨ : ಪು. ೭೫-೮೫)**

೧೧. ಓ ಓತಾ ನೊಬುಹಿರೋ (೨೦೦೮ರಲ್ಲಿ) ವಿಜಯ ನಗರ ಸಾಮ್ರಾಜ್ಯದಲ್ಲಿ ನಾಯಕತನದ ಮೂಲಕ ಭೂಉಂಬಳಿ ಪಡೆದುಕೊಂಡವರಿಗೆ ನಾಯಕರೆನ್ನಬಹುದು. ವೈಯಕ್ತಿಕ ಹೆಸರಿನ ಜೊತೆಗೆ ನಾಯಕ ಪದವಿದ್ದವರೆಲ್ಲ ನಾಯಕರೆನಿಸಿಕೊಳ್ಳಲು ಸಾಧ್ಯವಿಲ್ಲ. **(ಓ ಓತಾ ನೊಬುಹಿರೋ ೨೦೦೮ : ಪು. ೬೬)**

೧೨. ಲಕ್ಷ್ಮಣ್ ತೆಲಗಾವಿ (೨೦೦೯ರಲ್ಲಿ) ನಾಯಕ ಮೂಲತಃ ಸೈನಿಕ ಸೇವೆಯನ್ನು ಸಲ್ಲಿಸುವ ಮುಖಂಡ ಇದಕ್ಕಾಗಿ ಅವನಿಗೆ ಅಮರಂ ಅಥವಾ ಶಾಶ್ವತ ಉಂಬಳಿಯನ್ನು ಹಾಕಿ ಕೊಡಲಾಗುತ್ತಿತ್ತು. ಅಂದರೆ ಸಾಮ್ರಾಜ್ಯಕ್ಕೆ ಅಥವಾ ಸರ್ಕಾರಕ್ಕೆ ನಿಯಮಿತವಾಗಿ ಸೈನ್ಯವನ್ನು ನಿರ್ದಿಷ್ಟ ಸಂಖ್ಯೆಯ ಕಾಲಾಳು ಹಾಗೂ ಆನೆ ಕುದುರೆ ಇತ್ಯಾದಿ ಸೇನಾ ಸಾಮಾಗ್ರಿಗಳನ್ನು ಪೂರೈಸುವ ಕರಾರಿನ ಮೇಲೆ ರಾಜನಿಂದ ಒಂದು ಅಥವಾ ಹಲವು ಗ್ರಾಮಗಳನ್ನು ಉಂಬಳಿ/ಇನಾಮಾಗಿ ಪಡೆದುಕೊಳ್ಳುತ್ತಿದ್ದ ಸ್ಥಳೀಯ ಅಧಿಕಾರಿಯೇ ಈ ನಾಯಕ. ನಾಯಕತನ ಅಥವಾ ನಾಯಂಕರಮ್ ವ್ಯವಸ್ಥೆ ಎಂದರೆ ಇದೇ. **(ತೆಲಗಾವಿ, ಲಕ್ಷ್ಮಣ್. ೨೦೦೯ : ಪು. ೨೩)**

೧೩. ಡಿ.ಎನ್. ಯೋಗೀಶ್ವರಪ್ಪ (೨೦೧೧ರಲ್ಲಿ) ನಾಯಕತನಕ್ಕಾಗಿ ರಾಜನಿಂದ ಭೂಮಿಯನ್ನು ಪಡೆದು ಅವನ ನಿಯಂತ್ರಣದಲ್ಲಿ ತನಗೆ ವಹಿಸಿದ ಪ್ರದೇಶದಲ್ಲಿ ಸಣ್ಣರಾಜರಂತೆ ಆಳ್ವಿಕೆ ಮಾಡುತ್ತಿದ್ದವರನ್ನು ನಾಯಕರು ಎಂದು ಕರೆಯಬಹುದು. ವೈಯಕ್ತಿಕ ಹೆಸರಿನ ಜೊತೆ ನಾಯಕ ಪದ ಸೇರಿದವರೆಲ್ಲ ನಾಯಕರಾಗುವುದಿಲ್ಲ. **(ಡಿ.ಎನ್. ಯೋಗೀಶ್ವರಪ್ಪ. ೨೦೧೧ : ಪು. ೯೦)**

ಮೇಲ್ಕಾಣಿಸಿದ ಎಲ್ಲ ಬಹುಪಾಲು ವ್ಯಾಖ್ಯೆಗಳು ನಾಯಕರನ್ನು ಸೇನಾ ವಿಭಾಗಕ್ಕೆ ಸಂಬಂಧಿಸಿದ ವ್ಯಕ್ತಿಯಾಗಿ ಸ್ವೀಕರಿಸಿವೆ. ಇದರಲ್ಲಿ ಯಾವುದೇ ಭಿನ್ನಾಭಿಪ್ರಾಯಗಳಿಲ್ಲ. ಆದರೆ ಯಾರನ್ನು ನಾಯಕ ಎಂದು ಕರೆಯಬೇಕೆನ್ನುವುದರ ಬಗೆಗೆ ಏಕಭಿಪ್ರಾಯವಿಲ್ಲ. ಎಲ್ಲಾ ವಿದ್ವಾಂಸರು ತಮ್ಮ ವ್ಯಾಖ್ಯೆಗೆ ಸೀವೆಲ್‌ರ ಕೃತಿಯಲ್ಲಿನ ಪೋರ್ಚುಗೀಸ್ ಬರಹವನ್ನು ಇಲ್ಲವೆ ಆ ಬರಹವನ್ನು ಮೊಟ್ಟ ಮೊದಲಬಾರಿಗೆ ನಾಯಕ ವ್ಯವಸ್ಥೆಗೆ ಸಂವಾದಿಯಾಗಿ ಬಳಸಿದ ಎನ್. ವೆಂಕಟರಮಣಯ್ಯ ನವರ ಕೃತಿಯನ್ನು ಆಕರವಾಗಿ ಬಳಸಿಕೊಂಡಿರುವುದು ಸ್ಪಷ್ಟವಾಗುತ್ತದೆ.

ಯಾರನ್ನು ನಾಯಕರಾಗಿ ಗುರ್ತಿಸಬೇಕು ಎನ್ನುವ ಅಭಿಪ್ರಾಯದಲ್ಲಿ ಮೇಲ್ಕಾಣಿಸಿದ ವ್ಯಾಖ್ಯೆಗಳಲ್ಲಿ ಒಮ್ಮತವಿಲ್ಲ. ಕೆಲ ಸಂಶೋಧಕರು ವೈಯಕ್ತಿಕ ಹೆಸರಿನ ಜೊತೆ ನಾಯಕ ಪದವಿದ್ದವರನ್ನೆಲ್ಲಾ ನಾಯಕರೆಂದು ಪರಿಗಣಿಸಬಹುದು ಎಂದು ಹೇಳಿದರೆ ಇನ್ನು ಕೆಲವರು ಅದು ಸಾಧ್ಯವಾಗದು. ಕೇವಲ ನಾಯಕತನಕ್ಕಾಗಿ ರಾಜನಿಂದ ಭೂಮಿಯನ್ನು ಪಡೆದುಕೊಂಡವರು ಮಾತ್ರ ನಾಯಕರಾಗುವರು ಮತ್ತು ಅವರು ಮಾತ್ರ ನಾಯಕ ವ್ಯವಸ್ಥೆಯಲ್ಲಿ ಬರುವರು ಎಂದು ಹೇಳುವರು. **(ಓ. ಓತಾ ಮತ್ತು ಡಾ. ಡಿ.ಎನ್. ಯೋಗೀಶ್ವರಪ್ಪ)** ಮತ್ತು ಕೆಲವರು ಭೂ ಹಿಡುವಳಿ ಪ್ರದೇಶ ಪಡೆದಿರುವ ಜೊತೆಗೆ ಅವನ ಹೆಸರಿನೊಂದಿಗೆ ನಾಯಕ ಪದವೂ ಸೇರಿರಬೇಕು ಎನ್ನುವರು. **(ಕೃಷ್ಣಸ್ವಾಮಿ ಎ)**

ಆರಂಭಿಕ ನಾಯಕ ಅಧ್ಯಯನಗಳು ಕೇವಲ ಪೋರ್ಚುಗೀಸ್ ಯಾತ್ರಿಕರ ಬರಹಗಳ ಆಧಾರದ ಮೇಲೆ ನಿಂತಿವೆ. ವೆಂಕಟರಮಣಯ್ಯನವರೂ ಕೂಡ ನಾಯಂಕರ ಎಂಬ ಪದವನ್ನು ಆರಂಭಿಕ ವಸಾಹತುಶಾಹಿ ಕಾಲದಲ್ಲಿ ಸಂಗ್ರಹಿಸಲಾದ ಸ್ಥಳೀಯ ದಾಖಲೆಯಾದ ಶಾಸನಗಳಿಂದ ತೆಗೆದುಕೊಂಡಿದ್ದಾರೆ. ಅಲ್ಲದೆ ಅವರು ನಾಯಂಕರ ವ್ಯವಸ್ಥೆಯನ್ನು ಕುರಿತು ಚರ್ಚಿಸುವಾಗ ಸಮಕಾಲೀನ ಶಾಸನಗಳನ್ನು ಉಪಯೋಗಿಸಿ ಸಮರ್ಥನೆ ನೀಡಿರುವುದು ಕಡಿಮೆ ಪ್ರಮಾಣದಲ್ಲಿದೆ. ಇವರ ನಂತರ ಈ ವ್ಯವಸ್ಥೆಯನ್ನು ಕುರಿತು ಹೆಚ್ಚು ಮಾತನಾಡಿರುವ ಕೃಷ್ಣಸ್ವಾಮಿಯವರು ಶಾಸನಗಳನ್ನು ಹೆಚ್ಚಾಗಿ ಇದಕ್ಕಾಗಿ ಬಳಸಿರುವುದು ಕಂಡು ಬರುತ್ತದೆ. ಇದು ನಿಜವಾಗಿಯೂ ನಾಯಕ ಅಧ್ಯಯನದಲ್ಲಿ ಒಂದು ಮಹತ್ತರವಾದ ತಿರುವು. ಆದಾಗ್ಯೂ ಇವರು ಶಾಸನಗಳನ್ನು ಉಪಯೋಗಿಸಿರುವ ರೀತಿಯಿಂದಾಗಿ ನಾಯಕ ಪದಕ್ಕೆ ನೀಡಿರುವ ವ್ಯಾಖ್ಯೆಯು ಮಸುಕಾಗಿದ್ದು ಸ್ಪಷ್ಟವಾಗಿಲ್ಲ.

ಏಕೆಂದರೆ ಕೃಷ್ಣಸ್ವಾಮಿಯವರಿಗಿಂತ ಮೊದಲು ನಾಯಕ ಎಂಬ ಪದವನ್ನು ವಿಜಯನಗರಾಡಳಿತ ವ್ಯವಸ್ಥೆಯಲ್ಲಿ ರಾಜನಿಂದ ಯಾರು ನಾಯಕತನಕ್ಕಾಗಿ ಭೂ ಪ್ರದೇಶಗಳನ್ನು ಪಡೆದಿದ್ದರೋ ಅವರನ್ನು ನಿರ್ದೇಶಿಸಲು ಬಳಸಲಾಗುತ್ತಿತ್ತು. ಆದರೆ ಇದಕ್ಕೆ ಪ್ರತಿಯಾಗಿ ಕೃಷ್ಣಸ್ವಾಮಿಯವರು ತಮಿಳು ನಾಡಿನಲ್ಲಿ ನಾಯಕ ವ್ಯವಸ್ಥೆಯನ್ನು ಕುರಿತು ಹೇಳುವಾಗ ಅಲ್ಲಿನ ತಮಿಳು ಶಾಸನಗಳನ್ನೆಲ್ಲಾ ಗಣನೆಗೆ ತೆಗೆದುಕೊಂಡು ಅದರಲ್ಲಿ ಉಲ್ಲೇಖವಾಗುವ ವ್ಯೆಯಕ್ತಿಕ ಹೆಸರಿನ ಜೊತೆಗೆ ನಾಯಕ ಎಂಬ ಗೌರವಾನ್ವಿತ ಪದ ಸೇರಿಕೊಂಡಿದ್ದವರನ್ನೂ ಮತ್ತು ನಾಯಕತನದ ಭೂ ಹಿಡುವಳಿ ಪ್ರದೇಶ ಪಡೆದು ಕೊಂಡಿದ್ದವರನ್ನು ಒಂದೇ ಗುಂಪಿಗೆ ಸೇರಿಸಿ ನಾಯಕರೆನ್ನು ತ್ತಾರೆ. ಇದರಲ್ಲಿ ಕೆಲವರು ಮಾತ್ರ ನಾಯಕತನದ ಭೂ ಹಿಡುವಳಿ ಪ್ರದೇಶ ಪಡೆದುಕೊಂಡಿರುವುದು ನಿಜವಾದರೂ ಅವರ ವಾದವಾದ ವ್ಯೆಯಕ್ತಿಕ ಹೆಸರಿನ ಜೊತೆಗೆ ನಾಯಕ ಪದ ಸೇರಿದವರನ್ನು ನಾಯಕರ ಗುಂಪಿಗೆ ಸೇರಿಸುವುದು ಅಷ್ಟಾಗಿ ನ್ಯಾಯ ಸಮ್ಮತವೆನಿಸುವುದಿಲ್ಲ. ಕೃಷ್ಣಸ್ವಾಮಿಯವರು ಎಲ್ಲೆಲ್ಲಿ ನಾಯಕ ಎಂಬ ಬಿರುದು ಕಂಡುಬರುತ್ತದೋ ಅಲ್ಲಲ್ಲಿ ನಾಯಕತನ ಇರುತ್ತದೆ ಎಂಬುದಕ್ಕೆ ಮುದ್ರೆಯನ್ನು ಒತ್ತಿದ್ದಾರೆ. **(ಸುಬ್ಬರಾಯಲು ೧೯೯೬ : ಪು. ೭೪)** ಇವರ ನಂತರದ ವಿದ್ವಾಂಸರು ನಾಯಕ ಎಂಬ ಅದೇ ಬಿರುದಿಗೆ ಪ್ರಾಮುಖ್ಯತೆ ನೀಡುತ್ತಾ ಅದನ್ನು ತಮ್ಮದೇ ಆದ ರೀತಿಯಲ್ಲಿ ಸಮರ್ಥನೆ ಮಾಡಲು ಅನೇಕ ವಾದಗಳನ್ನು ಮಂಡಿಸಿದರು. ಅವರಲ್ಲಿ ಸ್ಟೇನ್ ಮತ್ತು ನೊಬುರು ಖರಾಷಿಮಾ ಬಹಳ ಪ್ರಮುಖ ರಾಗಿದ್ದಾರೆ.

ವಸಾಹತು ಪೂರ್ವ ದಕ್ಷಿಣ ಭಾರತ ರಾಜ್ಯಗಳ ಸ್ವರೂಪ ವಾದ ಸೆಗ್ಮೆಂಟರಿಸ್ಟೇಟ್ (ತುಂಡು ರಾಜ್ಯ)ನ ಕಲ್ಪನೆಯನ್ನು ಪ್ರತಿಪಾದಿಸಿದ್ದ ಬರ್ಟನ್ ಸ್ಟೇನ್‌ರವರ ಕೃತಿಯಲ್ಲಿ ನಾಯಕರನ್ನು ಗುರ್ತಿಸಲು ಹೆಸರಿನ ಜೊತೆಗೆ ಇರುವ ನಾಯಕ ಎಂಬ ಪದವನ್ನು ಪ್ರಾಯೋಗಿಕ ಮಾನದಂಡವಾಗಿ ಆಯ್ಕೆ ಮಾಡಿಕೊಂಡಿರುವುದು ಕಂಡುಬರುತ್ತದೆ. ನಾಯಕತನಕ್ಕಾಗಿ ಭೂ ಹಿಡುವಳಿ ಪ್ರದೇಶವನ್ನು ಪಡೆದಿರುವ ವ್ಯಕ್ತಿಗಳನ್ನು ನಿರ್ದೇಶಿಸಲು ನಾಯಕ ಪದವನ್ನು ನಿರ್ದಿಷ್ಟವಾಗಿ ಬಳಸಿ ದ್ದರೂ ಆ ಪದಕ್ಕೆ ಅವರು ನೀಡಿರುವ ಅರ್ಥವು ಅಸ್ಪಷ್ಟ ವಾಗಿದೆ. ಏಕೆಂದರೆ ಸ್ಟೇನ್‌ರು ವ್ಯೆಯಕ್ತಿಕ ಹೆಸರಿನ ಜೊತೆ ನಾಯಕ ಎಂಬ ಗೌರವಾನ್ವಿತ ಹೆಸರನ್ನು ಹೊಂದಿರುವವರನ್ನು ಆ ಗುಂಪಿಗೆ ಸೇರಿಸಿದ್ದಾರೆ.

ಕೃಷ್ಣಸ್ವಾಮಿಯವರು ಪಟ್ಟಿಮಾಡಿದ ಸಮಕಾಲೀನ ವಿಜಯನಗರ ಶಾಸನಗಳನ್ನು ಆಧರಿಸಿ ಸ್ಟೇನ್‌ರು ಚಕ್ರವರ್ತಿ ಗಳೊಂದಿಗೆ ನಾಯಕರ ಸಂಬಂಧ ಸುವ್ಯವಸ್ಥಿತ ಅಥವಾ ಸಾಂಸ್ಥಿಕವಾಗಿರಲಿಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತಾರೆ. ಪೋರ್ಚುಗೀಸ್ ಬರಹಗಳಲ್ಲಿನ ಕ್ಯಾಪ್ಟನ್ ಬಗೆಗೆ ಬರ್ಟನ್ ಸ್ಟೇನ್‌ರು (ನಾಯಕರ ಊಳಿಗಮಾನ್ಯ ವಿಶ್ಲೇಷಣೆಗೆ ಬೆಂಬಲ ವಾಗಿ ಉಪಯೋಗಿಸಿಕೊಳ್ಳುವ ವಿಷಯಕ್ಕೆ) ಅದರ ನೈಜತೆ ಯನ್ನು ಪ್ರಶ್ನಿಸುತ್ತಾ ಅದು ಪೋರ್ಚುಗೀಸ್ ಪ್ರವಾಸಿಗರ ಕನ್ನಡಕದ ಮೂಲಕ ತಿರುಚಿ ಹೇಳುವ ಒಂದು ರೂಪ ಎನ್ನುವರು. ಅದು ಯೂರೋಪ್ರ ಮಾದರಿಯ ರಾಜಕೀಯ ಸಂಘಟನೆಯ ಕಾಲ್ಪನಿಕ ಮೋಡಗಳಿಂದ ಮುಸುಕಾಗಿದೆ. **(ಬರ್ಟನ್ ಸ್ಟೇನ್ ೧೯೮೦ : ೩೭೫–೬, ೩೯೬–೮)**

ಅವರ ಪ್ರಕಾರ ನಾಯಕರು ಪ್ರಾಥಮಿಕವಾಗಿ ತಮ್ಮದೇ ಆದ ಹಕ್ಕುಳ್ಳ ಸ್ಥಳೀಯ ಆಕರ್ಷಕ ಶಕ್ತಿ (local magnates) ಮತ್ತು ಅವರಿಗೆ ವಿಜಯನಗರ ಚಕ್ರವರ್ತಿಗಳ ರಾಜಕೀಯ ಮತ್ತು ಸೇನಾ ವಿಭಾಗದ ಸಹಭಾಗಿತ್ವವಿದೆ. ಇದರಿಂದ ಅವರು ತಮ್ಮ ಹಿತಾಸಕ್ತಿಗಳನ್ನು ರಕ್ಷಿಸಿಕೊಳ್ಳಲು ಸಾಧ್ಯ.

ಚಕ್ರವರ್ತಿಗಳು ಬಲಶಾಲಿಯಾದ ಕೆಲವು ದೊಡ್ಡ ನಾಯಕರನ್ನು ತಮ್ಮ ಸೇನಾ ಏಜೆಂಟರನ್ನಾಗಿ ಪ್ರಾಂತ್ಯಗಳಿಗೆ ಕಳುಹಿಸುತ್ತಿದ್ದರು. ಆದರೆ ಅವರು ತಮ್ಮ ಪ್ರಾಂತ್ಯದಲ್ಲಿ ಆಳವಾಗಿ ಬೇರು ಬಿಟ್ಟ ನಂತರ ಸ್ವತಂತ್ರ್ಯವಾಗಿ ವರ್ತಿಸುತ್ತಿದ್ದರು. **(ಬರ್ಟನ್ ಸ್ಟೇನ್ ೧೯೮೦ : ಪು. ೪೦೭–೪೧೦)** ಒಟ್ಟಾರೆ ನಾಯಕರು ಸಾಂಪ್ರದಾಯಿಕವಾಗಿ ವಿಧೇಯರಾಗಿದ್ದರೂ, ರಾಜಕೀಯವಾಗಿ ಸ್ವಯಮಾಧಿಪತ್ಯವುಳ್ಳ ಭಾಗವಾಗಿರುವುದ ರಿಂದ ಇದು "ಸೆಗ್ಮೆಂಟರಿ ಸ್ಟೇಟ್" ಆಗಿ ರಚಿತವಾಗಿದೆ.

ಬರ್ಟನ್ ಸ್ಟೇನ್‌ರು ಆರಂಭದಲ್ಲಿ ಹಿಂದಿನ ಅಧ್ಯಯನ ಗಳನ್ನಾಧರಿಸಿ ನಾಯಂಕರ ವ್ಯವಸ್ಥೆ ಎಂಬ ಪದವನ್ನು ಬಳಸುತ್ತಿದ್ದರು. ಆದರೆ ಅವರ ಅಧ್ಯಯನವು ವಿಸ್ತರಿಸಿದಾಗ ಪ್ರಾಯಶಃ ಮೊಟ್ಟಮೊದಲ ಬಾರಿಗೆ ನಾಯಂಕರ ವ್ಯವಸ್ಥೆಗೆ ಪ್ರತಿಯಾಗಿ ನಾಯಕರ ವ್ಯವಸ್ಥೆ ಎಂದು ಕರೆಯಲಾರಂಭಿಸಿ ದರು. ಏಕೆಂದರೆ ಅವರು ತಮ್ಮ ಅಧ್ಯಯನವು ವಿಸ್ತಾರವಾದಾಗ ವ್ಯೆಯಕ್ತಿಕ ಹೆಸರಿನ ಜೊತೆಗೆ ನಾಯಕ ಬಿರುದು ಇರುವವರ ನ್ನೆಲ್ಲಾ ನಾಯಕರು ಎಂದು ಪರಿಗಣಿಸಿ ಹೇಳಿದಾಗ ಅವರು ಈ ಬದಲಾವಣೆಯನ್ನು ಮಾಡಿಕೊಳ್ಳಲೇಬೇಕಾಗಿತ್ತು. ಈ ಸಂದರ್ಭದಲ್ಲಿ ಅವರು ಕೃಷ್ಣಸ್ವಾಮಿಯವರನ್ನು ಅನುಸರಿಸಿದ ರೆನ್ನಬಹುದು.

ವಿಜಯನಗರ ಸಾಮ್ರಾಜ್ಯದಲ್ಲಿ ಅನೇಕ ನಾಯಕರು ಸಾರ್ವಭೌಮರಿಗೆ ಅವಿಧೇಯರಾಗಿ ಮತ್ತು ತಮಗೆ ನೀಡಿದ ಪ್ರದೇಶದಲ್ಲಿ ಸ್ವತಂತ್ರವಾಗಿ ವರ್ತಿಸುತ್ತಿದ್ದರು ಎಂದು ಸ್ಟೇನ್‌ರು ವಾದಿಸಿದ್ದಾರೆ. ಆದರೆ ಇಂಥಹವರನ್ನು ಹೇಗೆ ನಿಯಂತ್ರಣದಲ್ಲಿ ಇಟ್ಟುಕೊಳ್ಳುತ್ತಿದ್ದರು? ಎಂಬ ಪ್ರಶ್ನೆಗೆ ಕೃಷ್ಣಸ್ವಾಮಿಯವರು ಪ್ರತಿಪಾದಿಸುವ "ನಾಯಕರನ್ನು ನಿಯಂತ್ರಿಸಲು ಗವರ್ನರು

ಗಳನ್ನು ನೇಮಕ ಮಾಡಲಾಗುತ್ತಿತ್ತು". ಎನ್ನುವಲ್ಲಿ ಉತ್ತರವನ್ನು ಕಂಡುಕೊಂಡಿದ್ದಾರೆ. ಅಂದರೆ ಅವರು ಬಹುಪಾಲು ನಾಯಕರು ಬ್ರಾಹ್ಮಣೇತರರೇ ಆಗಿದ್ದು ಅವರನ್ನು ನಿಯಂತ್ರಣ ದಲ್ಲಿಟ್ಟುಕೊಳ್ಳಲು ರಾಜ್ಯದ ಆಯಕಟ್ಟಿನ ಸ್ಥಳದ ಕೋಟೆಗಳಿಗೆ ಬ್ರಾಹ್ಮಣ ವರ್ಗಕ್ಕೆ ಸೇರಿದ ದಂಡ ನಾಯಕರನ್ನು ನೇಮಕ ಮಾಡಿಕೊಳ್ಳುತ್ತಿದ್ದರು. [**ಬರ್ಟನ್ ಸ್ಟೇನ್ ೧೯೮೦ : ಪು. ೪೧೦– ೪೧೩**]

ಈ ವಾದದಲ್ಲಿ ಸ್ಟೇನ್ ಮತ್ತು ಕೃಷ್ಣಸ್ವಾಮಿಯವರು ಒಂದೇ ರೀತಿ ಅರ್ಥೈಸಿಕೊಂಡಿದ್ದರೂ ಸ್ಟೇನ್‌ರು ಗೌರ್‍ನರಿಗೆ ದೇಶೀಯ ಭಾಷೆಯ ದುರ್ಗಡಣಾಯಕ ಎಂಬ ಪದವನ್ನು ಉಪಯೋಗಿಸಿಕೊಂಡಿರುವುದರಿಂದ ವೆಂಕಟರಮಣಯ್ಯ ನವರ ಅಭಿಪ್ರಾಯಕ್ಕೆ ಮನ್ನಣೆ ನೀಡಿದ್ದಾರೆ. (ಕೃಷ್ಣಸ್ವಾಮಿ ಯವರು ಮಹಾಮಂಡಲೇಶ್ವರ ಎಂದು ಗವರವ್ನರ್‌ನಿಗೆ ಕರೆದಿದ್ದಾರೆ.)

ಬರ್ಟನ್ ಸ್ಟೇನ್‌ರ ನಂತರ ನೊಬುರು ಖರಾಷಿಮಾ ರವರು ನಾಯಕ ಅಧ್ಯಯನವನ್ನು ಕೈಗೊಂಡ ಪ್ರಮುಖ ರಾಗಿದ್ದಾರೆ. ಇಬ್ಬರ ನಡುವೆ ನಾಯಕ ವ್ಯಾಖ್ಯೆಯಲ್ಲಿ ಸಾಮ್ಯತೆ ಇದ್ದರೂ ಖರಾಷಿಮಾರವರು ನಾಯಕರನ್ನು ಊಳಿಗಮಾನ್ಯ ರಾಜರು ಎಂದು ಕರೆಯುತ್ತಾರೆ. ಇದಕ್ಕೆ ಅವರು ಎರಡು ಅಂಶಗಳನ್ನು ಪಟ್ಟಿಮಾಡಿದ್ದಾರೆ.

೧) ನಾಯಕರಿಗೆ ರಾಜನು ಭೂಪ್ರದೇಶಗಳನ್ನು ನೀಡುವು ದರ ಮೂಲಕ ಅವರ ಆಳ್ವಿಕೆಯನ್ನು ಕ್ರಮಬದ್ಧ ಗೊಳಿಸುವುದು.

೨) ನಾಯಕರು ತಮಗೆ ನೀಡಿದ ಭೂ ಪ್ರದೇಶದ ಉತ್ಪತ್ತಿಯ ನಿರ್ವಹಣೆ ಮೇಲೆ ಕೆಲವು ಹಕ್ಕುಗಳನ್ನು ಪಡೆದುಕೊಳ್ಳುವುದರ ಮೂಲಕ ತಮ್ಮ ಅಧಿಕಾರವನ್ನು ಬಲಗೊಳಿಸಿಕೊಳ್ಳುವುದು. (**ಖರಾಷಿಮಾ ೧೯೯೨ : ಪು. ೩೭**)

ಇವರ ಅಭಿಪ್ರಾಯದಲ್ಲಿ ನಾಯಕ ವ್ಯವಸ್ಥೆಯು ಊಳಿಗ ಮಾನ್ಯ ಪದ್ಧತಿಯ ಸಾಮಾಜಿಕ ವಿನ್ಯಾಸದ ರಾಜಕೀಯ ದೃಷ್ಟಿಕೋನವಾಗಿದೆ. ಇವರಲ್ಲಿ ಊಳಿಗಮಾನ್ಯ ಗಣ್ಯರಾದ ನಾಯಕರು ಊಳಿಗಮಾನ್ಯತೆ ಮತ್ತು ಉಪಊಳಿಗ ಮಾನ್ಯತೆಯ ಮೂಲಕ ಸಂಘಟಿತರಾಗಿದ್ದು ಅದರ ತುದಿಯಲ್ಲಿ ಚಕ್ರವರ್ತಿ ಇದ್ದನು.

ಇವರಿಬ್ಬರು ನಾಯಕ ಪದಕ್ಕೆ ನೀಡಿರುವ ವ್ಯಾಖ್ಯಾನವು ವಿಜಯನಗರ ರಾಜ್ಯಾಡಳಿತದ ಅಧ್ಯಯನದ ದೃಷ್ಟಿಕೋನವನ್ನು ವಿಸ್ತರಿಸಿದೆ. ಇದು ವಿಜಯನಗರ ಇತಿಹಾಸ ಲೇಖನ ಕಲೆಗೆ ಮೌಲ್ಯಯುತವಾದ ಕೊಡುಗೆ ನೀಡಿದೆ. ಇದರಿಂದ ಇದು ವರೆಗೂ ಕಡೆಗಣಿಸಲ್ಪಟ್ಟಿದ್ದ ಪ್ರಾಂತಗಳ ಸಮಾಜೋ ರಾಜಕೀಯ ಚಿತ್ರಣ ಹಾಗೂ ಸ್ಥಳೀಯ ಸಮಾಜ ಮತ್ತು ಕೇಂದ್ರ ರಾಜಪ್ರಭುತ್ವದ ನಡುವಿನ ಸಂಬಂಧದ ಕ್ಷೇತ್ರವು ಪ್ರಾಮುಖ್ಯತೆ ಪಡೆದುಕೊಂಡಿತು. ಬರ್ಟನ್ ಸ್ಟೇನ್‌ರ "ವಿಜಯನಗರ ರಾಜ್ಯಾಡಳಿತ ಮೇಲಿನ ಅಧ್ಯಯನವು ಪ್ರಮುಖ ರಾಜಕೀಯ ವ್ಯಕ್ತಿಗಳನ್ನು ಮೀರಿದ್ದು ಮತ್ತು ಅವರ ದೃಷ್ಟಿಕೋನವು ಇಡೀ ಸಮುದಾಯದ ಚಿತ್ರಣದ ಚೌಕಟ್ಟಿಗೆ ಬದಲಾಗಿದೆ. ಅದರಲ್ಲಿ ಆ ಪ್ರಮುಖ ವ್ಯಕ್ತಿಗಳೂ ಸೇರಿಕೊಳ್ಳುವರು. (**ಬರ್ಟನ್ ಸ್ಟೇನ್ ೧೯೮೦ : ಪು. ೩೯೮, ೩೯೯**)

ಆದರೂ ಅವರಿಬ್ಬರೂ ನಾಯಕರಿಗೆ ನೀಡಿರುವ ವ್ಯಾಖ್ಯಾನವು ಬಹಳ ವಿಶಾಲವಾಗಿದೆ. ಅವರ ವ್ಯಾಖ್ಯೆಯಲ್ಲಿ ರಾಜಕೀಯ ಮತ್ತು ಸಾಮಾಜಿಕ ಮನ್ನಣೆಗಳಿಸಿದ ಭಿನ್ನಮಾದರಿಯ ವ್ಯಕ್ತಿಗಳು ಒಳಗೊಳ್ಳುವರು. ಸ್ಟೇನ್‌ರು ಸ್ವತಃ "ನಾಯಕರಲ್ಲಿ ಸಮಾಜೋ ರಾಜಕೀಯ ಸ್ವರೂಪದಲ್ಲಿ ಭಿನ್ನತೆ ಇರುವುದನ್ನು ಒಪ್ಪಿಕೊಳ್ಳುವರು" ಅವರು ವಿಜಯನಗರ ಸೇನೆಯ ಜೊತೆ ಯಾವುದೇ ಸಂಬಂಧವಿರದ ಸ್ಥಳೀಯ ಜನಪ್ರಿಯ ವ್ಯಕ್ತಿಯು ನಾಯಕ ಬಿರುದನ್ನು ಧರಿಸುತ್ತಾನೆ ಎಂದಿದ್ದಾರೆ. (**ಬರ್ಟನ್ ಸ್ಟೇನ್ ೧೯೮೦ : ಪು. ೪೩೪**) ಆದರೆ ಖರಾಷಿಮಾರವರು ನಾಯಕರಲ್ಲಿ ಶ್ರೇಣೀಕೃತ ವ್ಯವಸ್ಥೆ ಇತ್ತು. ಎಲ್ಲ ನಾಯಕರೂ ವಿಜಯನಗರ ಸಾಮ್ರಾಜ್ಯದ ರಾಜಕೀಯ ವ್ಯವಸ್ಥೆಯಲ್ಲಿ ಒಂದೇ ರೀತಿಯ ಸ್ಥಾನಮಾನ ಪಡೆದಿರಲಿಲ್ಲ ಎನ್ನುತ್ತಾರೆ. ಆದ್ದರಿಂದ ಇವರಿಬ್ಬರೂ ರಾಜಕೀಯ ಸ್ಥಾನಮಾನ ದಲ್ಲಿ ಯಾರನ್ನು ನಾಯಕರನ್ನಾಗಿ ಪರಿಗಣಿಸಬೇಕೆಂಬ ವಿಚಾರದಲ್ಲಿ ಭಿನ್ನತೆ ಇರುವುದನ್ನು ಪರೋಕ್ಷವಾಗಿ ಯಾದರೂ ಒಪ್ಪಿಕೊಂಡಂತಾಯಿತು. ಆದರೆ ಇದನ್ನು ತೀವ್ರವಾಗಿ ಪರಿಗಣಿಸದೆ ಇಬ್ಬರು ವೈಯಕ್ತಿಕ ಹೆಸರಿನ ಜೊತೆ ನಾಯಕ ಪದ ಸೇರಿರುವ ವ್ಯಕ್ತಿಗಳನ್ನೆಲ್ಲಾ ಒಟ್ಟುಗೂಡಿಸಿ ವಿಜಯನಗರದ ರಾಜ್ಯಾಡಳಿತದ ಸ್ವರೂಪವನ್ನು ವ್ಯಾಖ್ಯಾನಿಸಲು ಪ್ರಯತ್ನಿಸಿ ದ್ದಾರೆ. ಆದರೆ 'ನಾಯಕ' ಬಿರುದು ನಿಜವಾಗಿಯೂ ವಿಜಯ ನಗರ ರಾಜ್ಯಾಡಳಿತದಲ್ಲಿ ನಿರ್ದಿಷ್ಟ ಸ್ಥಾನಮಾನದ ಗುರುತಾಗಿತ್ತೇ ಎನ್ನುವುದು ಪ್ರಶ್ನೆಯಾಗಿಯೇ ಉಳಿಯುತ್ತದೆ.

ನಾಯಂಕರ ವ್ಯವಸ್ಥೆಯ ಮೇಲಿರುವ ಆರಂಭಿಕ ಅಧ್ಯಯನಗಳು ಸಮಕಾಲೀನ ಶಾಸನಗಳನ್ನು ಪೂರ್ಣವಾಗಿ ಅಭ್ಯಸಿಸದೆ ಕೇವಲ ಪೋರ್ಚುಗೀಸರ ದಾಖಲೆಗಳ ಮೇಲೆ ಅವಲಂಬಿತವಾಗಿವೆ. ಎಂಬುದನ್ನು ಈಗಾಗಲೇ ನೋಡಿದ್ದೇವೆ. ಆದರೆ ಈ ವ್ಯವಸ್ಥೆಗೆ ಸಂಬಂಧಿಸಿದ ಮೂಲಭೂತ ವಿಷಯ ಗಳಾದ ನಾಯಕರಿಗೆ ನೀಡುವ ಭೂ ಪ್ರದೇಶದ ವಿಸ್ತೀರ್ಣ, ಅದರ ಭೌಗೋಳಿಕ ವಿಭಾಗ ಮತ್ತು ಪ್ರತಿಯೊಂದರ ಕಾಲಾವಧಿ

ಇನ್ನೂ ಅಸ್ಪಷ್ಟವಾಗಿಯೇ ಇದೆ. ಇಂತಹ ವಿಷಯಗಳನ್ನು ಸ್ಪಷ್ಟಪಡಿಸದೆ ಈ ವ್ಯವಸ್ಥೆಯನ್ನು ಯೂರೋಪಿನ ಊಳಿಗಮಾನ್ಯ ಪದ್ಧತಿಗೆ ಹೋಲಿಕೆ ಮಾಡಿ ನೋಡುತ್ತಿರುವುದು ಅಷ್ಟೇನು ಸಮಂಜಸವಾಗಿ ಕಾಣುವುದಿಲ್ಲ. ಇಂತಹ ಅಧ್ಯಯನ ವನ್ನು ಆಕ್ಷೇಪಿಸಿದ ಬರ್ಟನ್ ಸ್ಟೇನ್‌ರವರು ಆಕರ ವಸ್ತುಗಳ ಅಪೂರ್ಣವಾದ ಅರ್ಥ ವಿವರಣೆಯನ್ನು ಮರೆಮಾಚಲು ಯೂರೋಪಿನ ಊಳಿಗಮಾನ್ಯ ಪದ್ಧತಿಯ ಕಲ್ಪನೆಯನ್ನು ಉಪಯೋಗಿಸಿಕೊಂಡಿದ್ದಾರೆ. **(ಬರ್ಟನ್ ಸ್ಟೇನ್ ೧೯೮೦ : ಪು. ३೭೪)** ಆದಾಗ್ಯೂ ಸ್ಟೇನ್‌ರು ನಾಯಕ ವ್ಯವಸ್ಥೆಯ ಮೇಲಿನ ತಮ್ಮ ಅಭಿಪ್ರಾಯವನ್ನು ಆಕರ ವಸ್ತುಗಳನ್ನು ಸಂಪೂರ್ಣವಾಗಿ ಪರೀಕ್ಷಿಸುವುದರ ಮೂಲಕ ಸಮರ್ಥನೆ ಮಾಡಿಕೊಳ್ಳಲು ವಿಫಲರಾಗಿದ್ದಾರೆ. ಅವರ ಅಭಿಪ್ರಾಯದಂತೆ ಆಗ ವಿಜಯನಗರದಲ್ಲಿ ಪರಿಣಾಮಕಾರಿಯಾದ ರಾಜಕೀಯ ಚೌಕಟ್ಟು ಅಸ್ತಿತ್ವದಲ್ಲಿ ಇರಲಿಲ್ಲ. ವಿಜಯನಗರ ಚಕ್ರವರ್ತಿಗಳು ನಾಯಕರನ್ನೇ ತಮ್ಮ ಮಧ್ಯವರ್ತಿಗಳನ್ನಾಗಿ ಮಾಡಿಕೊಂಡಿದ್ದರು. ಆ ನಾಯಕರು ರಾಜನಿಂದ ಎಲ್ಲಿಗೆ ಸೇನಾ ಏಜಂಟರಾಗಿ ಹೋಗಿರುತ್ತಿದ್ದರೋ ಅಲ್ಲಿ ಬಹುಬೇಗ ಸ್ವತಂತ್ರ ಅಧಿಕಾರ ಸ್ಥಾಪಿಸುತ್ತಿದ್ದರು. **(ಬರ್ಟನ್ ಸ್ಟೇನ್ ೧೯೮೦ : ಪು. ४೦೮)** ಎನ್ನುವರು. ಇದಕ್ಕೆ ವ್ಯತಿರಕ್ತವಾಗಿ ಖರಾಷಿಮಾರವರು "ವಿಜಯನಗರ ಚಕ್ರವರ್ತಿಗಳು ನಾಯಕರ ಮೇಲೆ ಪರಿಣಾಮಕಾರಿಯಾಗಿ ನಿಯಂತ್ರಣ ಹೊಂದಿದ್ದರು ಎನ್ನುವರು. ಅವರು ತಮ್ಮ ದೃಷ್ಟಿಕೋನವನ್ನು ನಾಯಕತನದ ಪ್ರದೇಶಗಳ ಕಡೆಗೆ ಹರಿಸಿ ಅದು ನಾಯಕ ಮತ್ತು ರಾಜನ ನಡುವೆ ಸಂಪರ್ಕವನ್ನು ಕಲ್ಪಿಸುವ ಕೊಂಡಿ ಎಂದು ಹೇಳುತ್ತಾ ಶಾಸನಗಳ ಉಲ್ಲೇಖದ ಪಟ್ಟಿಯನ್ನೇ ಕಾಲಾನುಕ್ರಮವಾಗಿ ನೀಡುವರು **(ಖರಾಷಿಮಾ ೨೦೦೨ : ಪು. ೭೫)**

ಈ ಎಲ್ಲಾ ವಿದ್ವಾಂಸರ ಕೃತಿಗಳನ್ನು ಅಭ್ಯಾಸ ಮಾಡಿದ ಓ. ಓತಾ ನೊಬುಹಿರೋ ಮತ್ತು ಡಿ.ಎನ್. ಯೋಗೀಶ್ವರಪ್ಪನವರು ಬರ್ಟನ್‌ಸ್ಟೇನ್ ಮತ್ತು ಖರಾಷಿಮಾವರು ಪ್ರತಿಪಾದಿಸಿದ ನಾಯಕ ವ್ಯಾಖ್ಯೆಯನ್ನು ಅಲ್ಲಗಳೆದಿದ್ದಾರೆ. ಪ್ರಸ್ತುತ ಲೇಖನದ ಲೇಖಕನ ಅಭಿಪ್ರಾಯದಂತೆ ಇವರಿಬ್ಬರೂ ಪ್ರತಿಪಾದಿಸುವ ನಾಯಕ ವ್ಯವಸ್ಥೆಯು ನಾಯಂಕರ ವ್ಯವಸ್ಥೆಗಿಂತ ಭಿನ್ನವಾದುದು.

ಸ್ಟೇನ್ ಮತ್ತು ಖರಾಷಿಮಾ ಅರ್ಥೈಸಿಕೊಂಡಿರುವಂತೆ ವೈಯಕ್ತಿಕ ಹೆಸರಿನ ಜೊತೆ ನಾಯಕ ಹೆಸರು ಇರುವವರೆಲ್ಲಾ ನಾಯಕರಾಗುತ್ತಾರೆ ಮತ್ತು ನಾಯಕ ವ್ಯವಸ್ಥೆಯಲ್ಲಿ ಬರುವರು. ಆದರೆ ಇದನ್ನು ಗಮನಿಸಿದಾಗ ಶಾಸನಗಳಲ್ಲಿ ಉಲ್ಲೇಖಿತವಾಗುವ ನಾಯಕ ಹೆಸರನ್ನು ಧರಿಸಿದ ವ್ಯಕ್ತಿಗಳು ಶಾಸನಗಳ ಸಂಖ್ಯೆಗಿಂತ ಹೆಚ್ಚಾಗುವರು ಇದು ಸಾಧ್ಯವೇ? ಹೆಸರಿನ ಕೊನೆಯಲ್ಲಿ ನಾಯಕ ಬಿರುದು ಹೊಂದಿರುವವರೆಲ್ಲಾ ನಾಯಕರಾಗಲು ಸಾಧ್ಯವಿಲ್ಲ ಏಕೆಂದರೆ ವಿಜಯನಗರ ರಾಜ್ಯಾಡಳಿತ ವ್ಯವಸ್ಥೆಯಲ್ಲಿ ಅಂಥಹವರಿಗೆ ಸ್ಥಾನವಿರಲಿಲ್ಲ.

ವಿಜಯನಗರ ಕಾಲದಲ್ಲಿ ವಿಶೇಷವಾಗಿ ತುಳುವ ವಂಶದ ಚಕ್ರವರ್ತಿಗಳ ಕಾಲದಲ್ಲಿ ನಾಯಂಕರ ವ್ಯವಸ್ಥೆಯು ಒಂದು ಕ್ರಮಬದ್ಧವಾದ ರಾಜಕೀಯ ವ್ಯವಸ್ಥೆಯಾಗಿ ನಡೆಯುತ್ತಿತ್ತು ಅದರಲ್ಲಿ ರಾಜರು ಕೆಲ ಸಾಹಸಿಗಳಿಗೆ ನಾಯಕತನಕ್ಕೆ ಭೂ ಪ್ರದೇಶಗಳನ್ನು ಅಥವಾ ಸೀಮೆಯನ್ನು ಪಾಲಿಸಲು ನೀಡುತ್ತಿದ್ದರು. ಈ ರೀತಿ ನಾಯಕತನಕ್ಕೆ ಭೂ ಪ್ರದೇಶಗಳನ್ನು ಅಥವಾ ಸೀಮೆಗಳನ್ನು ಪಡೆಯುತ್ತಿದ್ದ ವ್ಯಕ್ತಿಗಳನ್ನು ನಾಯಕರೆಂದು ಕರೆಯುವುದು ಹೆಚ್ಚು ಸೂಕ್ತ. ಕೇವಲ ಹೆಸರಿನ ಕೊನೆಯಲ್ಲಿ ನಾಯಕ ಎಂಬ ಪದವಿದ್ದರೆ ಸಾಲದು ಅವರು ನಾಯಕತನಕ್ಕೆ ಭೂ ಪ್ರದೇಶಗಳನ್ನು ಪಡೆದ ಮೇಲೆಯೇ ನಾಯಕರಾಗುತ್ತಾರೆ. ಇಂಥಹವರಿಗೆ ಮಾತ್ರ ವಿಜಯನಗರ ರಾಜ್ಯಾಡಳಿತ ವ್ಯವಸ್ಥೆಯಲ್ಲಿ ಅದರಲ್ಲೂ ತುಳುವ ವಂಶದ ಕಾಲದಲ್ಲಿ ಪ್ರಾಧಾನ್ಯತೆ ಇತ್ತು. ಅದೇ ರೀತಿ ಕೆಲವರಿಗೆ ತಮ್ಮ ಹೆಸರಿನ ಜೊತೆ ನಾಯಕ ಎಂಬ ಪದ ಇಲ್ಲದಿದ್ದರೂ ಅವರು ನಾಯಂಕರ ವ್ಯವಸ್ಥೆಯಲ್ಲಿ ಸ್ಥಾನ ಪಡೆದುಕೊಂಡಿದ್ದರು. ಏಕೆಂದರೆ ಅಂಥಹವರು ಚಕ್ರವರ್ತಿಯಿಂದ ನಾಯಕತನಕ್ಕೆ ಭೂ ಪ್ರದೇಶಗಳನ್ನು ಪಡೆದುಕೊಂಡಿದ್ದರು **(ಡಿ.ಎನ್. ಯೋಗೀಶ್ವರಪ್ಪ ೨೦೧೧ : ಪು. ೧೦೮, ೧೧೦)** ಆದುದರಿಂದ ನಾಯಕತನಕ್ಕೆ ಭೂ ಪ್ರದೇಶಗಳನ್ನು ಪಡೆದವರೆಲ್ಲಾ ನಾಯಕ ಬಿರುದನ್ನು ಹಾಕಿಕೊಳ್ಳಬೇಕೆಂಬ ನಿಯಮವೇನೂ ಇರಲಿಲ್ಲ ಎನ್ನಬಹುದು.

ಒಟ್ಟಾರೆ ಹೇಳುವುದಾದರೆ ೧೯೬೪ರಲ್ಲಿ ಕೃಷ್ಣಸ್ವಾಮಿಯವರು ಹೆಸರಿನ ಜೊತೆ ನಾಯಕ ಬಿರುದು ಇದ್ದವರನ್ನೆಲ್ಲಾ ವಿಜಯನಗರದ ನಾಯಂಕರ ವ್ಯವಸ್ಥೆಗೆ ಸೇರಿಸಿ ವ್ಯಾಖ್ಯಾನ ಮಾಡಿದ ನಂತರ ಅದೇ ಮಾರ್ಗವನ್ನನುಸರಿಸಿದ ಬರ್ಟನ್ ಸ್ಟೇನ್‌ರು ೧೯೮೦ರಲ್ಲಿ ಕೃಷ್ಣಸ್ವಾಮಿಯವರ ಅಭಿಪ್ರಾಯವನ್ನು ಅನುಮೋದಿಸುತ್ತಾ ನಾಯಂಕರ ವ್ಯವಸ್ಥೆಯನ್ನು ನಾಯಕ ವ್ಯವಸ್ಥೆಯಾಗಿ ಮಾರ್ಪಡಿಸಿದರು. ಅನಂತರ ಬಂದಂತಹ ಖರಾಷಿಮಾರವರು (೨೦೦೨ರಲ್ಲಿ) ನಾಯಕ ವ್ಯಾಖ್ಯೆಯನ್ನು ವಿಭಜಿಸಿ ಅದರಲ್ಲಿ ಯಾವುದಾದರೂ ಒಂದು ಅಂಶವಿದ್ದರೆ ಅವರನ್ನು ನಾಯಕರೆಂದು ಕರೆಯುವುದು ಸೂಕ್ತ ಎಂದು ಹೇಳುತ್ತಾ ಕೃಷ್ಣಸ್ವಾಮಿ ಮತ್ತು ಬರ್ಟನ್‌ಸ್ಟೇನ್‌ರವರ ಪ್ರತಿಪಾದನೆಯನ್ನು ಒಪ್ಪಿಕೊಂಡಿದ್ದಾರೆ. ಪ್ರೊ. ಲಕ್ಷ್ಮಣ್ ತೆಲಗಾವಿಯವರು ಕೂಡಾ ಇವರನ್ನೇ ಅನುಸರಿಸಿದ್ದಾರೆ.

ಆದರೆ ಇತ್ತೀಚೆಗೆ ನೊಬುಹಿರೋ ಓ. ಓತಾ ಮತ್ತು ಡಿ.ಎನ್. ಯೋಗೀಶ್ವರಪ್ಪನವರು ವೈಯಕ್ತಿಕ ಹೆಸರಿನ ಜೊತೆ

ನಾಯಕ ಹೆಸರುಳ್ಳವರೆಲ್ಲಾ ವಿಜಯನಗರ ರಾಜ್ಯಾಡಳಿತ ವ್ಯವಸ್ಥೆಯಲ್ಲಿ ಪ್ರಮುಖ ಪಾತ್ರವಹಿಸಲು ಸಾಧ್ಯವಿಲ್ಲ ಎಂದಿದ್ದಾರೆ. ರಾಜನಿಂದ ನಾಯಕತನಕ್ಕಾಗಿ ಭೂಪ್ರದೇಶಗಳನ್ನು ಪಡೆದಿರಬೇಕು ಅಂಥವರಿಗೆ ಮಾತ್ರ ನಾಯಕ ವ್ಯವಸ್ಥೆಯಲ್ಲಿ ಸ್ಥಾನ ನೀಡಬಹುದು ವಿಜಯನಗರ ಶಾಸನಗಳಲ್ಲಿ ದಾಖಲಾಗಿರುವ ತೆಲುಗಿನ 'ನಾಯಂಕರ', ಕನ್ನಡದ 'ನಾಯಕತನ' ಅಥವಾ ತಮಿಳಿನ 'ನಾಯಕ್ಕತನಂ' ಪದಗಳಿಗೆ ಪರ್ಯಾಯವಾಗಿ ಸ್ಟೆನ್ ಮತ್ತು ಖರಾಷಿಮಾ ಬಳಸಿದ 'ನಾಯಕ ವ್ಯವಸ್ಥೆ' ಅಷ್ಟಾಗಿ ಸಮಂಜಸವೆನಿಸುವುದಿಲ್ಲ. ಏಕೆಂದರೆ ಆ ವ್ಯವಸ್ಥೆಯಲ್ಲಿ ವೈಯಕ್ತಿಕ ಹೆಸರಿನ ಜೊತೆಗೆ ನಾಯಕ ಹೆಸರಿರುವರೆಲ್ಲಾ ಸೇರಿಕೊಳ್ಳುವರು. ಆದುದರಿಂದ ಅದಕ್ಕೆ ಬದಲಾಗಿ ನಾಯಂಕರ ಅಥವಾ ನಾಯಕತನ ವ್ಯವಸ್ಥೆಯೆಂದು ಕರೆದರೆ ಸೂಕ್ತವಾಗುತ್ತದೆ. ಆರಂಭದ ಅಧ್ಯಯನಗಳೂ ಕೂಡ ಇದನ್ನೇ ಪ್ರಸ್ತಾಪಿಸಿವೆ.

ಆಧಾರಸೂಚಿ

೧. **Saletore B.A-**1934-Social and Political Life in Vijaynagar Empire-2 vols-Madras-B.G. Paul & Com.

೨. **Mahalingam T.V-**1942-Administration and Social Life under Vijaynagar-Madras : Uni Madras.

೩. **Derret J.D.M** : 1957-The Hoysalas, A Medieval Royal Family-New Delhi-Oxford Uni press.

೪. **Krishnaswamy A** : 1964-The Tamil Country under Vijaynagar-Annamalai Nagar : Annamalai Uni.

೫. **Circar D.C** : 1966-Indian ephigraphical Glossary-Delhi.

೬ **Burten Stein** : 1980. Peasant State and Society in Medieval South India-Oxford-Oxford Uni. Press. 1989: Vijaynagar, Cambridge-Cambridge Uni Press.

೭. **Shivanna K.S** : 1983. The Agrarian System of Karnataka (1336-1761) Mysore. Prasaranga, Uni of Mysore.

೮. **Shishir Kumar Pandlay** : 1988-Nayaka System in Medieval Andhra in K.K Das Gupta, PK Bhattacharya (Ed) Shraddanjali, D C Circar Commemoration Volume, Delhi, Sandeep Prakashana

೯. **Wagoner Phillip B** : 1993-Tidings of the king : A Translation and Ethno Historical Analysis of the Rayavachakamu, Honolulu, Uni of Hawali Press

೧೦. **Karashima Noburu** :2002-A Concordance of Nayakas : The Vijayanagar inscriptions in South India, New Delhi : Oxford Uni. Press.

೧೧. **Ota Nobuhiro** : 2008-A Study of Two Nayaka Families in the Vijayanagar Kingdom in the Sixteenth Century in memoirs of the Research development of the Toyo Bunko, 66 : 103-129.

೧೨. **Lakshman Telagavi** : 2009-Vijayanagarada Amara Nayakaru Mattu Palegararu in Virupakshi Poojarihalli (Ed) Charitre Adyayana Vol. 4 issue 2. Vidyaranya (Prasaranga Kannada Uni. (in Kannada)

೧೩. **Yogishwarappa D.N.-**2011-Charitreya Putagalu (Kannada Book) Bangalore C.V.G. India.

೧೪. **Subbarayalu Y** : 1996-Socio political formation of South India Vijayanagar Period in KKN Karup (ed) New Dimensions in South Indian History : Felicitation Volume in Honour of Dr. M.R. Raghava varier calicut : Association for peasant studies, uni of Calicut, 66-95.

೧೫. **Karashima N-**1992-Towards a New formation South Indian Society under Vijayanagar rule. New Delhi : Oxford Uni Press.

೧೬. **Venkataramanayya N.-**2010-Studies in the history of the Third dynasty of Vijayanagar (repri) Delhi. Gian publishing House. (Originally Publish Madras 1935)
2007-Vijayanagar : origin of the city and the Empire (repri) New Delhi : Asian educational services (originally published in 1933).

೧೭. **Tolbot, Cynthia-**2001-A-precolonial India in practice society region and identity in Medieval Andhra. New Delhi, Oxford Uni press.
2001-B-The Nayakas of Vijayanagar Andhra : A preliminary prosography in Kenneth R Hall (ed) structure and society in early South India, Oxford Uni press.

೧೮. **Robert Sewell-** 1900-A forgotten empire II edition, London, reprint Asian Publishers, Delhi 1962.

ಜಮಖಂಡಿ ತಾಲ್ಲೂಕಿನ ನೇಕಾರಿಕೆ ಸಾಂಸ್ಕೃತಿಕ ಪರಂಪರೆ

ಎನ್.ವ್ಹಿ. ಅಸ್ಕಿ*

ಕರ್ನಾಟಕದ ಸಾಂಸ್ಕೃತಿಯ ಹಿರಿಮೆಯನ್ನು ಮೆರೆದ ಪ್ರಮುಖ ಪಟ್ಟಣಗಳಲ್ಲಿ ಜಮಖಂಡಿಯೂ ಒಂದು. ಸ್ವಾತಂತ್ರ್ಯ ನಂತರದ ಅವಿಭಜಿತ ೧೧ ತಾಲ್ಲೂಕುಗಳಲ್ಲಿ ಪ್ರಮುಖ ತಾಲೂಕು ಹಾಗೂ ಉಪವಿಭಾಗೀಯ ಸ್ಥಳವಾಗಿ ಅಗಸ್ಟ ೧೫-೧೯೯೭ ರಿಂದ ಬಾಗಲಕೋಟ ಜಿಲ್ಲೆಯ ಪ್ರಮುಖ ತಾಲೂಕು ಹಾಗೂ ಉಪವಿಭಾಗ ಸ್ಥಳವಾಗಿದೆ.

ಪ್ರಾಚೀನ ಕಾಲದಲ್ಲಿ ಅಖಂಡ ವಿಜಾಪೂರ ಜಿಲ್ಲೆ ಬರಪೀಡಿತ ಜಿಲ್ಲೆಯಾದ್ದರಿಂದ ಬೃಹತ ಕೈಗಾರಿಕೆಗಳು ಇಲ್ಲಿ ಬೆಳೆದು ಬರಲಿಲ್ಲ ಆದರೆ ಸಣ್ಣ ಪ್ರಮಾಣದ ಕೈಗಾರಿಕೆಗಳಾದ ಹತ್ತಿ ಬಟ್ಟೆ ತಯಾರಿಕೆಗೆ ಪ್ರಾಧಾನ್ಯತೆ ಇತ್ತು.

ಬಾದಾಮಿ ಚಾಲುಕ್ಯರ ಕಾಲದಲ್ಲಿ ಪಟ್ಟೆಗಾರ (ರೇಷ್ಮೆ ನೆಯ್ಗೆ) ಉದ್ಯೋಗ ಪ್ರಮುಖವಾಗಿದ್ದು ಬಾದಾಮಿ ಚಾಲುಕ್ಯರ ಕಾಲದ (೭೯೩) ಶಾಸನದಲ್ಲಿ ಪಟ್ಟೆಗಾರರ ಶ್ರೇಣಿಯ ಉಲ್ಲೇಖವಿದೆ.

ಆದಿಲ್ ಷಾಹಿಗಳ ಕಾಲದಲ್ಲಿ ನೇಕಾರರಿಗೆ ಕೆಲವು ತೆರಿಗೆ ವಿನಾಯಿತಿ ನೀಡಿದ್ದರು. ದಖನ್ನಿನ ಮಸ್ಲಿನ ಬಟ್ಟೆ ತುಂಬಾ ಜನಪ್ರಿಯವಾಗಿತ್ತು ಹಾಗೂ ಕಚ್ಚಾ ರೇಷ್ಮೆಯನ್ನು ಚೈನಾದಿಂದ ಆಮದು ಮಾಡಿಕೊಳ್ಳಲಾಗುತ್ತಿತ್ತು ಇದು ಪ್ರಾಚೀನ ಇತಿಹಾಸವಾದರೆ. ಇಂದಿನ ಬಾಗಲಕೋಟ ಜಿಲ್ಲೆಯಲ್ಲಿ ಅದು ಜಮಖಂಡಿ ತಾಲೂಕಿನ ರಬಕವಿ-ಬನಹಟ್ಟಿಯಲ್ಲಿ ನೇಕಾರಿಕೆ ಪ್ರಮುಖ ಉದ್ಯೋಗವಾಗಿದೆ. ನೇಕಾರಿಕೆಯ ಬದುಕು ಮತ್ತು ಸಂಸ್ಕೃತಿ ಪರಸ್ಪರ ಅವಲಂಬಿತವಾಗಿರುವ ಎರಡು ಬಹು ಮೌಲಿಕ ಸಂಗತಿಗಳು ಇವೆರಡರ ಮಧ್ಯ ಅವಿನಾಭಾವ ಸಂಬಂಧವಿದೆ.

ಇಲ್ಲಿ ನೇಕಾರರ ಬದುಕಿನ ಸಾಂಸ್ಕೃತಿಕ ಪರಂಪರೆ ಗುರುತಿಸುವ ಪ್ರಯತ್ನ ನನ್ನದು.

ಕೃಷಿಯ ನಂತರ ಹೆಚ್ಚು ಉದ್ಯೋಗ ಅವಕಾಶಗಳನ್ನು ನೀಡಿದ ಉದ್ದಿಮೆ ಎಂದರೆ ಜವಳಿ ಉದ್ದಿಮೆ ಈ ಜವಳಿ ಕಾರ್ಮಿಕರಲ್ಲಿ ಸಂಘಟಿತ ಕಾರ್ಮಿಕರು ಮತ್ತು ಅಸಂಘಟಿತ ಕಾರ್ಮಿಕರು ಎಂದು ಎರಡು ವಿಧ. ದೊಡ್ಡ ಮಿಲ್ಲುಗಳಲ್ಲಿ ದುಡಿಯುವವರು ಸಂಘಟಿತ ಕಾರ್ಮಿಕರು ಇವರು ಒಂದು ಸಂಘ ಕಟ್ಟಿಕೊಂಡಿರುತ್ತಾರೆ ಅದಕ್ಕೆ ಪದಾಧಿಕಾರಿಗಳು ಇರುತ್ತಾರೆ. ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ನ್ಯಾಯಯುತ ಹೋರಾಟ ಮಾಡುತ್ತಾರೆ. ಸರಕಾರದ ಸೌಲಭ್ಯ ಪಡೆಯುತ್ತಾರೆ.

ಅಸಂಘಟಿತ ಕಾರ್ಮಿಕರ ಸಂಖ್ಯೆ ಅಧಿಕವಾಗಿರುತ್ತದೆ. ಭಾರತದಲ್ಲಿ ಕೈಮಗ್ಗ ಉದ್ಯಮಕ್ಕೆ ಸುಧೀರ್ಘ ಶ್ರೇಷ್ಠ ಪರಂಪರೆ ಇದೆ. ದೇಶದ ೩೦ ಲಕ್ಷ ನೇಕಾರ ಕುಟುಂಬಗಳಲ್ಲಿ ೧೦೨ ಲಕ್ಷ ನೇಕಾರರು ಈ ಉದ್ಯಮವನ್ನೆ ಅವಲಂಬಿಸಿದ್ದಾರೆ. ಇದರಲ್ಲಿ ೨೦% ರಷ್ಟು ಸಂಘಟಿತ ೮೦% ರಷ್ಟು ಅಸಂಘಟಿತ ಕಾರ್ಮಿಕರಿದ್ದಾರೆ. ದೇಶದಲ್ಲಿ ಉತ್ಪಾದನೆಯಾಗುತ್ತಿರುವ ಬಟ್ಟೆಯಲ್ಲಿ ೩೦% ರಷ್ಟು ಕೈಮಗ್ಗಗಳಿಂದ ಪ್ರತಿ ವರ್ಷ ೧೫೦೦ ಕೋಟಿ ಮೌಲ್ಯದ ಬಟ್ಟೆಗಳನ್ನು ರಫ್ತು ಮಾಡಲಾಗುತ್ತದೆ.

ಜಮಖಂಡಿ ತಾಲೂಕಿನಲ್ಲಿ ನೇಕಾರಿಕೆ ಎರಡು ರೀತಿಯಲ್ಲಿ ನಡೆಯುತ್ತದೆ ಒಂದು ಕೈಮಗ್ಗಗಳು ಎರಡನೆಯದು ಯಂತ್ರಚಾಲಿತ ಮಗ್ಗ ಅಥವಾ ಪವರ್ ಲೂಮ್‌ಗಳು. ತಾಲೂಕಿನಲ್ಲಿ ಎರಡೂ ರೀತಿಯ ಮಗ್ಗಗಳು ಉತ್ಪಾದನೆಯಲ್ಲಿ ತೊಡಗಿವೆ.

ಜಮಖಂಡಿ ತಾಲೂಕಿನಲ್ಲಿ ನೇಕಾರಿಕೆಗೆ ಹುನ್ನೂರು, ರಬಕವಿ, ಬನಹಟ್ಟಿ, ತೇರದಾಳ, ರಾಂಪೂರ, ಹೊಸೂರು, ಹನಗಂಡಿ, ಹಳಿಂಗಳಿ, ನಾವಲಗಿ, ಸಿದ್ದಾಪೂರ, ಚಿನಗುಂಡಿ, ಜಗದಾಳ, ಕಂದಗನೂರು, ತುಂಗಳ, ಮರೆಗುದ್ದಿ, ಆಸಂಗಿ, ಹುಲ್ಯಾಳ, ಹಿಪ್ಪರಗಿ, ಚಿಮ್ಮಡ ಮುಂತಾದವು ಅವುಗಳಲ್ಲಿ ರಬಕವಿ-ಬನಹಟ್ಟಿ ಪ್ರಮುಖವಾಗಿವೆ.

ಪ್ರಾರಂಭದ ಹಂತದಲ್ಲಿ ಕುಣಿಮಗ್ಗು (ತಗ್ಗಿನ ಮಗ್ಗ Pit loom) ಗಳಿದ್ದವು. ಕ್ರಮೇಣ ರಟಲ್ ಮಗ್ಗಗಳು ಬಂದವು. ಈಗ ಸುಧಾರಿತ ವಿದ್ಯುತ್ ಮಗ್ಗಗಳಿವೆ.

* ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಜಮಖಂಡಿ-೫೮೭೩೦೧.

"ಇಳಕಲ್ ಸೀರೆ ಪ್ರಸಿದ್ಧ, ಬನಹಟ್ಟಿಯ ಪತ್ತಲುಗಳ ಪ್ರಸಿದ್ಧ" ಎಂಬಂತೆ ರಬಕವಿ-ಬನಹಟ್ಟಿ ನಗರ ನೇಕಾರಿಕೆಯಲ್ಲಿ ರಾಜ್ಯದಲ್ಲಿಯೇ ಮಂಚೂಣಿಯಲ್ಲಿದೆ. ರಬಕವಿ-ಬನಹಟ್ಟಿ ನಗರಗಳಲ್ಲಿ ಅಂದಾಜು ೨೦೦೦ ಕೈಮಗ್ಗಗಳಿವೆ ಖಾಸಗಿ ಜವಳಿ ಉದ್ಯಮ ಜೊತೆ ನಿಗಮ ಸ್ಪರ್ಧಿಸುವುದು ಸಾಧ್ಯವಾಗುತ್ತಿಲ್ಲ ಕೈಮಗ್ಗಗಳಿಗೆ ಕೈತುಂಬ ಕೆಲಸವಿಲ್ಲದಂತಾಗಿದೆ.

ಆದರೆ ರಬಕವಿ-ಬನಹಟ್ಟಿ, ರಾಂಪೂರ, ಹೊಸೂರು ನಗರಸಭೆಯ ವ್ಯಾಪ್ತಿಯಲ್ಲಿ ಅಂದಾಜು ೪ ಸಾವಿರ ವಿದ್ಯುತ ಮಗ್ಗಗಳಿದ್ದು ಆಧುನಿಕ ಬೇಡಿಕೆಗೆ ತಕ್ಕಂತೆ ಇಲ್ಲಿಯೂ ನೇಕಾರರು ನೇಕಾರಿಕೆಯಲ್ಲಿ ಬಹಳಷ್ಟು ಸುಧಾರಣೆಗಳನ್ನು ಮಾಡಿಕೊಂಡು ಜವಳಿ ಉದ್ದಿಮೆಯಲ್ಲಿ ಗಮನಾರ್ಹ ಪ್ರಗತಿ ಹೊಂದಿದ್ದಾರೆ.

ನೇಕಾರಿಕೆಯಲ್ಲಿ ತೊಡಗಿದ ಕುಟುಂಬಗಳು ಹೀಗಿವೆ. ೧) ದೇವಾಂಗ ೨) ರಸಶಕುಲ ಸಾಲಿ ೩) ಪಟ್ಟೆಗಾರರು ೪) ಮುಸ್ಲಿಂ ೫) ತೋಟಗೇರಿಗಾ ೬) ಹಿರೇ ಕುರುಹಿನ ಶೆಟ್ಟಿ ೭) ಚಿಕ್ಕ ಕುರುಹಿನ ಶೆಟ್ಟಿ

ಮೇಲಿನ ಎಲ್ಲ ತೆರದ ಜನರು ಸೈಜಿಂಗ, ವೈಂಡಿಂಗ, ಬಣ್ಣ ಹಾಕುವುದು, ಕಂಡಿಕೆ ಸುತ್ತುವುದು, ಹನಿಗೆ ಕೆಚ್ಚುವುದು, ಬೀಮು-ದಡಿ ಸುತ್ತುವುದು, ಗೊಂಡೆ ಕಟ್ಟುವುದು, ಗಳಿಗೆ ಹಾಕುವುದು ಮುಂತಾದ ಉಪಕಸುಬುಗಳು ನೇಕಾರಿಕೆಗೆ ಸಂಬಂಧಿಸಿವೆ. ಮೊದಲು ಒಂದೆರಡು ರಾಜ್ಯಗಳಿಗೆ ಹೋಗುತ್ತಿದ್ದ ರಬಕವಿ-ಬನಹಟ್ಟಿ ಪತ್ತಲುಗಳು ಇಂದು ರಾಷ್ಟ್ರ ಮಟ್ಟದ ವ್ಯಾಪ್ತಿಯನ್ನು ಪಡೆದಿವೆ. ನೂಲಿನ ಸೀರೆಗಳಿಗೆ ಇಂದು ಬೇಡಿಕೆ ಹೆಚ್ಚಿದೆ. ಆಕರ್ಷಕ ವಿನ್ಯಾಸದ, ದೊಡ್ಡಂಚಿನ, ಬೊಂಬಾಟ ಸೆರಗಿನ ಸೀರೆಗಳು ಸಿದ್ಧಗೊಳ್ಳುತ್ತಿವೆ. ಎಂಬ್ರಾಯಿಡರಿ ಮಶಿನಗಳು ಬಂದಿವೆ. ಮಿಂಚಿನೆಳೆಯ ಕಸೂತಿ, ಬುಟ್ಟೊ, ಎಂಬ್ರಾಯಿಡರಿಯಿಂದ ಝುಗಮಗಿಸುವ ಪತ್ತಲುಗಳು ಈ ಭಾಗದಲ್ಲಿ ಉತ್ಪಾದನೆಯಾಗಿತ್ತಿವೆ.

ಹೀಗೆ ನೇಕಾರಿಕೆಗೆ ಸಾಂಸ್ಕೃತಿಕವಾದ ಪರಂಪರೆಯಿದೆ. ಕಾಡು ಮಾನವನನ್ನು ನಾಡ ಮಾನವನನ್ನಾಗಿ ಪರಿವರ್ತಿಸಿ ಆತನಿಗೆ ನಾಗರಿಕ 'ಉಡುಪು' ದಯಪಾಲಿಸಿದ ಶ್ರೇಯಸ್ಸು ನೇಕಾರ ಬಂಧುವಿಗೆ ಸಲ್ಲಬೇಕು ನೇಕಾರನಿಲ್ಲದ ಸಮಾಜ ಊಹಾತೀತ ನಮಗೆ ಗೊತ್ತಿರುವಂತೆ ಮನುಷ್ಯ ಪ್ರಾಣಿ ಮಾತ್ರ ಬಟ್ಟೆ ತೊಡುತ್ತದೆ. ಒಂದು ಕ್ಷಣ ಯೋಚಿಸಿ ನೋಡಿದರೆ ಇನ್ನುಳಿದ ಪ್ರಾಣಿಗಳೊಂದಿಗೆ ಮನುಷ್ಯ ಪ್ರಾಣಿ ಮರ್ಯಾದೆಯ ಅಂತರ ಕಾಯ್ದುಕೊಂಡು ಬರುವಲ್ಲಿ ನೇಕಾರ ಮಹಾನುಭಾವನ ನೆರವು ಇದೆ ಹೀಗೆ ನಮ್ಮೆಲ್ಲರ ಬದುಕಿಗೆ ಬಟ್ಟೆ ಕರುಣಿಸಿ ನಮ್ಮ ನಾಗರಿಕ ಜೀವನ ಸಹ್ಯವಾಗುವಂತೆ ಮಾಡಿದ ನೇಕಾರರ ಕೊಡುಗೆ ಸಾಮಾನ್ಯವಾದುದಲ್ಲ.

ವಿಶ್ವ ಸಂಸ್ಕೃತಿಯಲ್ಲಿ ಭಾರತೀಯ ನೇಕಾರರಿಗೆ ಮೊದಲ ಸ್ಥಾನವಿದೆ. ನೇಕಾರಿಕೆಯನ್ನು ಒಂದು ಸವಾಲೆಂಬಂತೆ ಸ್ವೀಕರಿಸಿ ಆ ಕಾಯಕದಲ್ಲಿ ಅದ್ಭುತವಾದ ಕಲೆಯನ್ನು ಅರಳಿಸಿದರು. ನಕ್ಷೆ ಬಿಡಿಸಿದ, ಕುಸುರಿ ಕೆಲಸಗಳಿಂದ ಕಣ್ಮನ ಸೆಳೆಯುವ ಬಣ್ಣ ಬಣ್ಣದ ಚಿತ್ತಾರದ ಕೋಮಲ ಬಟ್ಟೆ ನೇಯುವಲ್ಲಿ ಭಾರತೀಯ ನೇಕಾರರಿಗೆ ವಿಶ್ವಮಾನ್ಯತೆ ಇದೆ. ಕಡ್ಡಿ ಪೆಟ್ಟಿಗೆಯಲ್ಲಿ ಇಡಬಹುದಾದಷ್ಟು ನಾಜೂಕಾದ ಸೀರೆಯನ್ನು ಹಿಂದಿನವರು ತಯಾರಿಸಿದ್ದನ್ನು ಇತಿಹಾಸ ದಾಖಲಿಸಿದೆ. ರಬಕವಿ-ಬನಹಟ್ಟಿ ಸೀರೆಗಳಿಗೆ ಮನಸೋಲುವ ಆಧುನಿಕ ಸ್ತ್ರೀಯರು ಈಗಲೂ ಹೆಚ್ಚಾಗಿದ್ದಾರೆ.

ಇಷ್ಟೆಲ್ಲಾ ಇದ್ದರೂ ನೇಕಾರನ ಬದುಕು ಹಸನಾಗಿಲ್ಲ. ನೇಕಾರನ ಬದುಕು ಕಷ್ಟದ ಬದುಕಾಗಿದೆ. 'ಸಟಲ್-ಪಟಲ್' ಸಂಜೀಕ ಜ್ವಾಳಿಲ್ಲ, ನೇಕಾರನ ಹೆಂಡತಿ ಅರೆಬೆತ್ತಲೆ, ಎದ್ದರೆ ಎಳೆಕಮ್ಮಿ, 'ಅಡಿವ್ಯಾಗ ಆಡ ಮಳ್ಳ ಊರಾಗ ಜಾಡ ಮಳ್ಳ' ಎಂಬಿತ್ಯಾದಿ ಮಾತುಗಳು ನೇಕಾರನ ಸ್ಥಿತಿಗತಿಗೆ ಹಿಡಿದ ಕೈಗನ್ನಡಿಯಾಗಿವೆ.

ಬನಹಟ್ಟಿಯಲ್ಲಿ ವಿದ್ಯುತ್ ಮಗ್ಗಗಳ ಮಾಲಿಕರ ಸಂಘ ಇರುವಂತೆಯೇ ಕಾರ್ಮಿಕರ ಸಂಘವು ಇದೆ. ಆಗಾಗ ಸೈಜಿಂಗ ಕಾರ್ಮಿಕರ, ಬಣ್ಣ ಹಾಕುವವರ, ನೂಲು ಸುತ್ತುವವರ ಹೀಗೆ ಅನೇಕ ಮುಷ್ಕರ ನಡೆದೆ ಇರುತ್ತವೆ. ಮತ್ತೆ, ಮತ್ತೆ ಇಂತಹ ಮುಷ್ಕರಗಳು ನಡೆದಾಗ ಸಿಕ್ಕ ಅಲ್ಪ ತೃಪ್ತಿ ಮತ್ತೆ ಕಾರ್ಯದಲ್ಲಿ ತೊಡಗುವಂತೆ ಮಾಡುತ್ತದೆ.

ಪವರ್‌ಲೂಮ್ ಉದ್ಯೋಗದಲ್ಲಿ ನೇಕಾರರ ಸಂಖ್ಯೆ ಹೆಚ್ಚು. ಒಬ್ಬ ನೇಕಾರನು ಸಾಮಾನ್ಯವಾಗಿ ಒಂದು ದಿವಸದಲ್ಲಿ ೯ ವಾರ ಉದ್ದದ (೫ ಮೀಟರ್) ಮೂರು ಸೀರೆಗಳನ್ನು ನೇಯುತ್ತಾನೆ. ಒಂದು ಸೀರೆಗೆ ೨೫ ರೂ. ದಂತೆ ಒಂದು ದಿವಸಕ್ಕೆ ರೂ. ೭೫ ಪಡೆಯುತ್ತಾನೆ. ಇಂತಹ ಒಬ್ಬ ನೇಕಾರನ ತಿಂಗಳ ಪಗಾರ ೨೦೦೦ ರೂ ಯಿಂದ ೨೫೦೦ ರೂ. ಗಳಷ್ಟಾಗುತ್ತದೆ. ಮಹಿಳೆ ಕಂಡಿಕೆ ಸುತ್ತುವ ಕೆಲಸ ಮಾಡಿದರೆ ಒಂದು ವಾರಕ್ಕೆ ಸುಮಾರು ೩೦೦ ರೂ. ಯಂತೆ ತಿಂಗಳಿಗೆ ೧೨೦೦ ರೂ. ಯಿಂದ ೧೫೦೦ ರೂ. ದವರಗೆ ಆದಾಯ ಪಡೆಯುತ್ತಾರೆ. ಗಂಡ ಹೆಂಡತಿ ಇಬ್ಬರು ದುಡಿದರೆ ಆ ಕುಟುಂಬದ ಆದಾಯ ಸುವಾರು ೪೦೦೦ ರೂ. ಗಳಷ್ಟಾಗುತ್ತದೆ. ಇವರಿಬ್ಬರ ಆರೋಗ್ಯ ಸರಿ ಇದ್ದರೆ ಆ ಲೆಕ್ಕ ಸರಿಹೊಂದುತ್ತದೆ. ಇಬ್ಬರಲ್ಲಿ ಒಬ್ಬರು ಆರೋಗ್ಯ ಸರಿ ಇಲ್ಲದಿದ್ದರೆ ಆದಾಯಕ್ಕೆ ಕತ್ತರಿ ಖಚಿತ. ಕುಟುಂಬದ ವೆಚ್ಚ ಸರಿದೂಗಿಸಬೇಕಲ್ಲ? ಆಗ ಮನೆಯಲ್ಲಿಯ ಮಕ್ಕಳು ದುಡಿಯುವುದು ಅನಿವಾರ್ಯ ಇದೆ ಕಾರಣಕ್ಕೆ ಅವರ ಶೈಕ್ಷಣಿಕ ಸ್ಥಿತಿಗತಿ ಅಷ್ಟಕಷ್ಟೆ ಇದೆ.

ಬಹಳಷ್ಟು ಮಕ್ಕಳು ಶಾಲೆಗೆ ಹೋಗುವುದಿಲ್ಲ ಆದ್ದರಿಂದ ಅವರಲ್ಲಿ ಸಾಕ್ಷರತೆ ಕಡಿಮೆ. ತಂದೆ-ತಾಯಿ ಶಾಲೆಗೆ ಹೋಗಿಲ್ಲ ಹೀಗಾಗಿ ಶಿಕ್ಷಣದ ಮಹತ್ವ ಅವರಿಗೆ ಗೊತ್ತಿಲ್ಲ ಅವರು ಮಕ್ಕಳಿಗೆ ಶಾಲೆಗೆ ಕಳುಹಿಸುವ ಬಗ್ಗೆ ಚಿಂತನ ಮಾಡುವುದಿಲ್ಲ. ಆದರೆ ಇತ್ತೀಚಿನ ಸರ್ಕಾರದ ಅನೇಕ ಯೋಜನೆಗಳಾದ ಬಿಸಿ ಊಟ, ಸಮವಸ್ತ್ರ ಪಠ್ಯ ಪುಸ್ತಕ, ಉಚಿತ ಸೈಕಲ್ ಯೋಜನೆಗಳಿಂದ ನೇಕಾರ ಕುಟುಂಬ ಶಿಕ್ಷಣದತ್ತ ಮುಖಮಾಡಿ ನಿಂತಿದೆ.

ಬಣ್ಣ ಹಾಕುವ ಉದ್ಯೋಗದಲ್ಲಿರುವ ಕಾರ್ಮಿಕರಿಗೆ ಬಣಗಾರರೆನ್ನತ್ತಾರೆ. ಒಬ್ಬ ಬಣ್ಣಗಾರ ಒಂದು ದಿನದಲ್ಲಿ ಸರಾಸರಿ ೭೦ ರಿಂದ ೮೦ರ ನೂಲಿಗೆ ಬಣ್ಣ ಹಾಕುತ್ತಾನೆ ೫ ನೂಲಿಗೆ ಬಣ್ಣ ಹಾಕಲು ೧೨.೫ ರೂ ಪಗಾರ ಸರಾಸರಿಯಾಗಿ ಒಬ್ಬ ಬಣ್ಣಗಾರನು ಒಂದು ವಾರಕ್ಕೆ ೧೨೦೦ ರೂ. ಪಗಾರ ಪಡೆಯುತ್ತಾನೆ. ಅಂದರೆ ಅವನ ಪಗಾರ ಒಂದು ತಿಂಗಳಿಗೆ ೪೮೦೦ ರೂ. ಇದು ಹೆಚ್ಚು ಶ್ರಮದಾಯಕ ಕೆಲಸ 'ಕರುಳು ಕಿತ್ತು ಬರುವಂತ ನೂಲು ಹಿಂಡಬೇಕಾತೈತ್ರಿ' ಎಂದು ಹೇಳುವಾಗ ಬಣ್ಣ ಹಾಕಲು ಬೇಕಾಗುವ ದೈಹಿಕ ಸಾಮರ್ಥ್ಯದ ಬಗ್ಗೆ ತಿಳಿಯುತ್ತದೆ. ರಾಸಾಯನಿಕ ವಸ್ತುಗಳೊಡನೆ ಸದಾಕಾಲ ಬೆಂಕಿಯೊಡನೆ ಕಾರ್ಯ ನಿರ್ವಹಿಸುವ ಇವರು ಬೇಗ ಅನಾರೋಗ್ಯಕ್ಕೆ ತುತ್ತಾಗಿ ಬೇಗ ಮುಪ್ಪಿಗೆ ತೆರಳುವ ಇವರ ಸ್ಥಿತಿ ಯಾರಿಗೂ ಬೇಡ. ಯಾವುದೇ ಚಟಗಳಿಲ್ಲದೆ ಒಳ್ಳೆಯ ಆಹಾರ ಸೇವಿಸುವ ಬಣಗಾರರು ಮಾತ್ರ ಈ ಉದ್ಯೋಗದಲ್ಲಿ ಬಹಳ ಕಾಲ ಮುಂದುವರೆಯುತ್ತಾರೆ 'ನೇಕಾರನು ಎಳೆಯೊಡನೆ ದುಡಿದು ಎಳೆಯಂತೆ ಸಣ್ಣಗಾಗುತ್ತಾನೆ' ಎಂಬ ಮಾತು ಸತ್ಯವಾಗಿಯೇ ತೋರುತ್ತದೆ. ಇತ್ತೀಚಿಗೆ ನೇಕಾರರರಿಗೆ ಸರಕಾರ ಅನೇಕ ಯೋಜನೆಗಳನ್ನು ಘೋಷಿಸಿದೆ ಅದನ್ನು ಪಡೆಯಬೇಕಾದರೆ ಜಾತಿ ಬೇಧ ಮರೆತು ನೇಕಾರರೆಲ್ಲ ಒಂದಾದರೆ ಮಾತ್ರ ಸಾಧ್ಯ ಹಾಗೂ ಇಂದು ಅದರ ಅವಶ್ಯಕತೆ ಇದೆ.

ಆದರೂ ಅನ್ನವನಿಕ್ಕುವ ರೈತನಂತೆ ವಸನವ ನೀಡುವ ನೇಕಾರ ತನ್ನ ಕಷ್ಟ ಕಾರ್ಪಣ್ಯದ ಜೀವನಕ್ಕಾಗಿ ಎಂದೂ ವ್ಯಸನ-ವ್ಯಥೆಪಟ್ಟವನಲ್ಲ ತಾನು ನಂಬಿಕೊಂಡು ಬಂದ ಬದುಕಿನ ಮೌಲ್ಯಗಳಾದ ದೈವಭಕ್ತಿ, ಸದಾಚಾರ, ದಾಸೋಹ, ಕಾಯಕ ನಿಷ್ಠೆಗಳಿಗೆ ಯಾವತ್ತು ಭ್ರಷ್ಟನಾದವನಲ್ಲ. ಸಾತ್ವಿಕತೆಯಲ್ಲಿ ಬದುಕಿನ ಸಾರ್ಥಕತೆ ಕಾಣುವ ಸುಸಂಸ್ಕೃತ ಮನಸ್ಸು ಆತನದು.

ಸಾಂಪತ್ತಿಕವಾಗಿ ಆತ ಸೋತಿರಬಹುದು ಆದರೆ ಸಾಂಸ್ಕೃತಿಕವಾಗಿ ಆತನದು ತುಂಬಾ ಶ್ರೀಮಂತಿಕೆಯ ಬದುಕು 'ಮನೆ ನೋಡಾ ಬಡವರದು ಮನ ನೋಡಾ ಘನವದು' ಎಂಬ ಮಾತಿಗೆ ಜೀವಂತ ಸಂತೃಪ್ತದ ಬದುಕು ನೇಕಾರದ್ದಾಗಿದೆ 'ಕರಿಯ ನಿತ್ತಡೆ ಒಲ್ಲೆ, ಸಿರಿಯ ನಿತ್ತಡೆ ಒಲ್ಲೆ, ಹಿರಿದಪ್ಪ ರಾಜ್ಯವನ್ನಿತ್ತಡೆ ಒಲ್ಲೆ ನಿಮ್ಮ ಶರಣರ ಸೂಳ್ನುಡಿಯ ಒಂದರಗಳಿಗೆ ಇತ್ತಡೆ ನಿಮ್ಮನಿತ್ತ ಕಾಣಾ' ಎಂದು ಹಾಡಿದ ವಚನಕಾರ ಜೇಡರ ದಾಸಿಮಯ್ಯ ಕೂಡಾ ನೇಕಾರಿಕೆ ಕಾಯಕದವನು. ಜೇಡರ ದಾಸಿಮಯ್ಯ, ಸಂತ ಕಬೀರ ದಾಸರಂಥ ನೇಯ್ಗೆ ಕಾಯಕ ಕುಟುಂದಿಂದ ಬಂದು ನೂರಾರು ಮಹಾನುಭಾವರು ತಮ್ಮ ನೇಕಾರಿಕ ಸಮಾಜಕ್ಕೆ ನೀಡಿದ ಸಾಂಸ್ಕೃತಿಕ ಕೊಡುಗೆಗಳು ಒಂದು ಲೇಖನದ ತೆಕ್ಕೆಗೆ ನಿಲುಕಲಾರದಷ್ಟಿವೆ.

ಆಧಾರಸೂಚಿ

೧. ಕಟ್ಟಿ ವೆಂಕಟರಂಗೋ: **ಗ್ಯಾಸೆಟಿಯರ್,** ಮುಂಬೈ ಇಲಾಖೆಗೆ ಸೇರಿದ ಕರ್ನಾಟಕ ಭಾಗದ್ದು.

೨. **ಭಾರತದ ಗ್ಯಾಸೆಟಿಯರ್ ಕರ್ನಾಟಕ ರಾಜ್ಯ,** ವಿಜಾಪೂರ ಜಿಲ್ಲೆ.

೩. **ನೇಕಾರ ಬದುಕು ಹಾಗೂ ಸಾಂಸ್ಕೃತಿಕ ನೆಲೆಗಳು,** ಮಲ್ಲಿಕಾರ್ಜುನ ಹುಲಗಬಾಳಿ.

೪. **ಕೃಷಿ ಮತ್ತು ನೇಕಾರಿಕೆ,** ಜಿ.ಎಸ್. ವಡಗಾಂವಿ.

೫. **ನೇಕಾರಿಕೆಯಲ್ಲಿ ತೊಡಗಿದವರ ಆರ್ಥಿಕ ಸ್ಥಿತಿಗತಿಗಳು,** ಎಂ.ಎಸ್. ಬದಾಮಿ.

೬ ಪತ್ರಿಕಾ ಲೇಖನಗಳು.

೧೧೫

ಹಿರೇಕುಂಬಿಯ ಅಪ್ರತಿಮ ಹೋರಾಟಗಾರ ಹಾಗೂ ರಾಜಕೀಯ ಮುತ್ಸದ್ಧಿ : ಶ್ರೀ ಗವಿಸಿದ್ಧಪ್ಪ ಬೆಳವಡಿ

ಮಹೇಶ ಬಿ. ಅಂಗಡಿ*

ಕೃಷ್ಣೆ ಘಟಪ್ರಭೆಯ ಮಡಿಲಲ್ಲಿ ಕಾಡಿನ ಹಸಿರುಡುಗೆಯಿಂದ ಕಂಗೊಳಿಸುವುದು ಬೆಳಗಾವಿಯ ಸಾಂಸ್ಕೃತಿಕ ಬಳುವಳಿಯನ್ನು, ವೀರ ಪರಂಪರೆಯನ್ನು ವಿಶಿಷ್ಟವಾಗಿ ಬೆಳೆಸಿಕೊಂಡು, ಉಳಿಸಿಕೊಂಡು ಬಂದುದು ಬೆಳಗಾವಿ. ದೇಶದ ಸ್ವಾತಂತ್ರ್ಯಕ್ಕಾಗಿ, ದೇಶದಲ್ಲಿ ಮೊದಲ ಸಲ ಬ್ರಿಟೀಷರ ವಿರುದ್ಧ ರಣ ಕಹಳೆಯೂದಿದ ವೀರ ಮಹಿಳೆ ರಾಣಿ ಕಿತ್ತೂರ ಚೆನ್ನಮ್ಮ ನಾಡಿನ ರಕ್ಷಣೆಗಾಗಿ ಜೀವದ ಹಂಗುದೊರೆದು ಹೋರಾಡಿದ ವೀರರಾಣಿ ಬೆಳವಡಿಮಲ್ಲಮ್ಮ, ಬ್ರಿಟೀಷ ಆಳರಸರ ಎದೆ ನಡುಗಿಸಿದ ಶೂರ ಸಂಗೊಳ್ಳಿ ರಾಯಣ್ಣನಿಗೆ ಜನ್ಮ ಕೊಟ್ಟಿದ್ದು ಬೆಳಗಾವಿ ಜಿಲ್ಲೆ. ಅನೇಕ ಸ್ವಾತಂತ್ರ್ಯ ಯೋಧರನ್ನು, ಸಮಾಜ ಸುಧಾರಕರನ್ನು ಧಾರೆಯೆರೆದಿದೆ. ಅಂತಹ ಚಿರಸ್ಮರಣೀಯರಲ್ಲಿ ಸ್ವಾತಂತ್ರ್ಯ ಹೋರಾಟಗಾರ, ರಾಜಕೀಯ ಮುತ್ಸದ್ಧಿ, ಶಿಕ್ಷಣ ಪ್ರೇಮಿ ಸಮಾಜ ಸುಧಾರಣೆಯ ಹರಿಕಾರನಾದ ಶ್ರೀ ಗವಿಸಿದ್ಧಪ್ಪ ಬೆಳವಡಿ ಒಬ್ಬರು.

ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ಬೆಳವಡಿ ಗ್ರಾಮದಿಂದ ಸವದತ್ತಿ ತಾಲ್ಲೂಕಿನ ಹಿರೇಕುಂಬಿ ಗ್ರಾಮಕ್ಕೆ ಬಂದು ವಾಸವಾಗಿದ್ದ ಸಿದ್ದಪ್ಪ ಹಾಗೂ ಸಿದ್ದಮ್ಮ (ಮರಾರಿ)ಬೆಳವಡಿ ದಂಪತಿಗಳ ಉದರದಲ್ಲಿ ೩೦-೮-೧೯೧೨ರಲ್ಲಿ ಗವಿಸಿದ್ದಪ್ಪ ಜನಿಸಿದರು. ಈ ಗಂಡು ಮೆಟ್ಟಿನ ನೆಲದ ಗುಣವೊ ಏನೋ ಅವರನ್ನು ದಿಟ್ಟ ಸ್ವಾತಂತ್ರ್ಯ ಯೋಧರಲ್ಲಿ ಒಬ್ಬರಾಗುವಂತೆ ಮಾಡಿತು.

ಪ್ರಾಥಮಿಕ ಶಿಕ್ಷಣವನ್ನು ಹಿರೇಕುಂಬಿಯಲ್ಲಿ ಓದಿದ್ದ ಗವಿಸಿದ್ದಪ್ಪನವರು ಮುಂದಿನ ಶಿಕ್ಷಣ ಕೈಗೊಳ್ಳದೆ ಬೈಲಹೊಂಗಲ ತಾಲೂಕಿನ ಗೋವನಕೊಪ್ಪದ ರಾಷ್ಟ್ರೀಯ ಶಾಲೆಯಲ್ಲಿ ಜಿಲ್ಲಾ ಬೋರ್ಡಿನಿಂದ ಆಯ್ಕೆಯಾಗಿ ಶಿಕ್ಷಕರಾಗಿ ಸೇವೆ ಆರಂಭಿಸಿದರು. ಆದರೆ ಸ್ವಾತಂತ್ರ್ಯ ಸಂಗ್ರಾಮ ಕಾವು ಹೆಚ್ಚಾದಂತೆ ಶಾಲೆಗೆ ರಾಜಿನಾಮೆ ನೀಡಿ ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿದರು. ಗಂಗಾಧರ ದೇಶಪಾಂಡೆ ಅಣ್ಣಾಗುರುಜಿಯವರ ಸಹವರ್ತಿಗಳಾದ ಸ್ವಾತಂತ್ರಯೋಧರು, ಕಾಂಗ್ರೆಸ್ ಕಾರ್ಯಕರ್ತರಾದ ವೆಂಕರೆಡ್ಡಿ ಹೂಲಿಯವರನ್ನು ತಮ್ಮ ರಾಜಕೀಯ ಗುರು ಎಂದು ಭಾವಿಸಿದ್ದರು ಅಲ್ಲದೆ. ಹಿರೇಕುಂಬಿಯಲ್ಲಿ ಶ್ರೀ ಗವಿಯಪ್ಪ ಬೆಳವಡಿ, ಶ್ರೀ ಅಡಿವೆಪ್ಪ ಹೂಲಿ, ಶ್ರೀ ಚೆನ್ನಪ್ಪ ಬಡಿಗೇರ, ಬಸಪ್ಪ ಗಾಣಿಗೇರ, ಪಾರ್ವತಮ್ಮ ಜಡಿ, ಕಾಳವ್ವ ಚ. ಬಡಿಗೇರ, ಬಸಲಿಂಗಪ್ಪ ವಾಂಗಿ ಹಾಗೂ ಆತ್ಮೀಯ ಸ್ನೇಹಿತರು ಹಾಗೂ ಮಾರ್ಗದರ್ಶಿಗಳು ಆದ ಶ್ರೀ ದೊಡ್ಡಪ್ಪ ಗೋರಾಬಾಳ ಮುಂತಾದವರನ್ನೊಳಗೊಂಡ ಒಂದು ಸ್ವತಂತ್ರ ಚಳುವಳಿಗಾರರ ಪಡೆಯನ್ನೆ ಸಿದ್ಧಮಾಡಿ ಎಲ್ಲೆಲ್ಲೂ ಸ್ವಾತಂತ್ರ್ಯ ಚಳುವಳಿಯ ಕಿಡಿಯನ್ನು ಹತ್ತಿಸಿದರು. ಉತ್ಸಾಹಿ ತರುಣರ ಈ ಪಡೆಗೆ ಹೊದೆಲೆಲ್ಲಾ ಯಶಸ್ಸು ಹಾಗೂ ಜೈಲುವಾಸ ಅದೇಷ್ಟು ಬಾರಿ ಜೈಲುವಾಸ ಅನುಭವಿಸಿದ್ದರೊ ಅವರಿಗೆ ಗೊತ್ತು!

ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ ಗವಿಸಿದ್ದಪ್ಪ ಚಳುವಳಿಯು ಉಪ್ಪಿನ ಸತ್ಯಾಗ್ರಹ, ಪ್ರಭಾತಪೇರಿ ಮತ್ತು ಪ್ರಚಾರಾಂದೊಲನ, ಈಚಲ ಗಿಡಗಳ ಸಂಹಾರ, ಪಿಕೆಟಿಂಗ್, ಧ್ವಜಾರೋಹಣ ಮತ್ತು ಚುಣಾವಣೆ ಬಹಿಷ್ಕಾರ, ಕರ ನಿರಾಕರಣ ಸಮರ ಮುಂತಾದ ಸ್ವರೂಪ ಪಡೆದುಕೊಂಡಿತು ಬೆಳಗಾವಿ ಜಿಲ್ಲೆಯಲ್ಲಿ ಸೆರೆ-ಸೆಂದಿ ಅಂಗಡಿಗಳ ಮುಂದೆ ಪಿಕೆಟಿಂಗ್ ಹಾಗೂ ಸೆಂದಿ ಕಪಾಲಿಗಳನ್ನು ಹರಿದು ಹಾಕುವ ಕಾರ್ಯ ನಡೆಯಿತು. ಕೆಲವು ಸ್ಥಳಗಳಲ್ಲಿ ಶೆಂದಿ ಅಂಗಡಿಗಳಿಗೆ ಒಂಟೆಗಳ ಮೇಲಿಂದ ಹೋಗುವ ಶೆಂದಿ ತುಂಬಿದ ಚರ್ಮದ ಚೀಲಗಳನ್ನು ಕೊಯ್ದು ಜನರು ಈ ಅನೀತಿಯ ವ್ಯಾಪಾರಕ್ಕೆ ವಿಘ್ನಗಳನ್ನೊಂಟು ಮಾಡಿದರು. ಬಂಡಿಗಳ ಮೇಲೆ ತುಂಬಿ ಹೋಗುವ ಪೀಪೆಗಳನ್ನೊಡೆದು ಹಾಕಿದರು. ಹುಬ್ಬಳ್ಳಿಯಿಂದ ಹೊರಟ ಹಿಂದೂಸ್ತಾನಿ ಸೇವಾದಲದ ಪರಶರಾಮ ಪಥಕದವರು ಹೂಲಿ, ಹಿರೇಕುಂಬಿ, ಸವದತ್ತಿ ಉಗರಗೊಳ್ಳ ಮುಂತಾದ ಕಡೆಗೆ ಹೋಗಿ ಮದ್ಯಪಾನ ನಿಷೇಧ ಕುರಿತು. ಪ್ರಚಾರ ಮಾಡಿದರು ಇದರಲ್ಲಿ ಗವಿಸಿದ್ದಪ್ಪ ಹಾಗೂ ಅವರ

* ಶಿರಸ್ತೇದಾರರು, ದಿವಾಣಿ ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ, ಸವದತ್ತಿ, ಬೆಳಗಾವಿ-೫೯೧೧೧೦.

ಯುವ ಪಡೆ ಅತಿ ಉತ್ಸಾಹದಿಂದ ಪಾಲ್ಗೊಂಡರು.ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕುನಂತರ ಹೈದರಾಬಾದ ನಿಜಾಮರು ಭಾರತದ ಒಕ್ಕೂಟದಲ್ಲಿ ವಿಲೀನವಾಗಲು ಒಪ್ಪಲಿಲ್ಲ ಹೈದರಾಬಾದ ರಾಜ್ಯ ಕಾಂಗ್ರೇಸ್ಸಿಗರ ಸತ್ಯಾಗ್ರಹ ಪ್ರಾರಂಭ ವಾಯಿತು. ಖಾಸಗಿ ಪ್ಯಾರಾಮಿಲಿಟರಿ ಪಡೆಯಾದ ರಜಾಕಾರರಿಂದ ಸ್ವಾತಂತ್ರ್ಯ ಹೋರಾಟಗಾರರ ದಮನ ಕಾರ್ಯ, ಪ್ರಜಾಪೀಡೆ ನಡೆಯಿತು. ಭಾರತದ ಅಂದಿನ ಗೃಹ ಮಂತ್ರಿಯಾದ 'ಉಕ್ಕಿನ ಮನುಷ್ಯ' ಸರ್ದಾರ್ ವಲ್ಲಭಾಯಿ ಪಟೇಲರು ೧೯೪೮ ಸಪ್ಟಂಬರ ೧೩ರಂದು ನೇರ ಪೋಲಿಸ್ ಕಾರ್ಯಚರಣೆ ನಡೆಯಿತು ಹೈದರಾಬಾದ ರಾಜ್ಯವು ಭಾರತದಲ್ಲಿ ವಿಲೀನವಾಗಲು ಸುಮಾರು ಒಂದು ವರ್ಷದುದ್ದಕ್ಕೂ ನಡೆದ ಹೋರಾಟದಲ್ಲಿ ಗವಿಸಿದ್ದಪ್ಪ ಹಾಗೂ ಅವರ ಅಪ್ರತೀಮ ವೀರ ಸಹೋದರ ಗವಿಯಪ್ಪ ಭಾಗವಹಿಸಿ ಅದರಲ್ಲಿ ಗವಿಯಪ್ಪ ತಮ್ಮ ಕೈಯನ್ನು ಕಳೆದುಕೊಂಡು ತಮ್ಮ ಶೌರ್ಯ ಮೆರೆದಿರುವುದನ್ನು ಕಾಣಬಹುದು.

ಸ್ವಾತಂತ್ರ್ಯ ನಂತರ ಶ್ರೀ ಗವಿಸಿದ್ದಪ್ಪನವರು ಮುಂಬಯಿ ಪ್ರಾಂತದಿಂದ ವಿಧಾನ ಪರಿಪತ್ತಿಗೆ ಎರಡು ಬಾರಿ ಸದಸ್ಯರಾಗಿ ಜನಸೇವೆ ಮಾಡಿದ್ದಾರೆ. ತಮ್ಮ ಕ್ಷೇತ್ರದಾದ್ಯಂತ ಶಿಕ್ಷಣಕ್ಕೆ ಒತ್ತು ನೀಡಿ ಅನೇಕ ಕಡೆ ಶಾಲಾ-ಕಾಲೇಜುಗಳನ್ನು ಸ್ಥಾಪಿಸಿದರು. ಹಿರೇಕುಂಬಿ ಗ್ರಾಮವನ್ನು ಆದರ್ಶ ಗ್ರಾಮ ಮಾಡುವಲ್ಲಿ ಅವರದು ಪ್ರಧಾನ ಪಾತ್ರ.

ಗವಿಸಿದ್ದಪ್ಪನವರು ಸಮಾಜ ಸುಧಾರಣೆಗಾಗಿ ಹಾಗೂ ತಮ್ಮ ಜನಾಂಗದ ಶ್ರೇಯೋಭಿವೃದ್ಧಿಗಾಗಿ ಅವಿರತರವಾಗಿ ಶ್ರಮಿಸಿದ್ದ ನ್ನು ಕಾಣಬಹುದು ಕರ್ನಾಟಕ ಕುರುಬ ಜನಾಂಗದ ವ್ಯಕ್ತಿಯೋರ್ವ ಪ್ರಪ್ರಥಮವಾಗಿ ವಿಧಾನ ಪರಿಷತ್ತು ಪ್ರವೇಶಿಸಿದ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಕುರುಬ ಸಂಘ ಬೆಂಗಳೂರಿನ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಉತ್ತರ ಕರ್ನಾಟಕದ ಮೂಲೆ ಮೂಲೆಗಳಲ್ಲಿ ಸಂಚರಿಸಿ ಜನಾಂಗದ ಜಾಗ್ರತೆಗಾಗಿ ಶ್ರಮಿಸಿದರು. ಮಾನ್ಯ ಶ್ರೀ ಬಿ.ಡಿ. ಜತ್ತಿಯವರು ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದ ಸಮಯದಲ್ಲಿ ಬೆಳೆಗಾವಿಯ ಜಿಲ್ಲಾಧಿಕಾರಿಯವರ ಪ್ರಾಂಗಣದಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನ ಕಂಚಿನ ಮೂರ್ತಿಯನ್ನು ಪ್ರತಿಷ್ಠಾಪಿಸಿದರು. ಕುರಿ ಸಾಕಾಣಿಕೆ ಮತ್ತು ಅದಕ್ಕೆ ಪೂರಕವಾಗಿ ಕಂಬಳಿ ನೇಯುವ ಕಾಯಕಕ್ಕೆ ಅನುಕೂಲವಾಗಲು ಸುಮಾರು ನೂರಕ್ಕೂ ಹೆಚ್ಚು ಕಂಬಳಿ ಮಾರಾಟ ಮಳಿಗೆಗಳನ್ನು ಸಹಕಾರಿ ಸಂಘಗಳ ಮುಖಾಂತರ ಸ್ಥಾಪಿಸಿದರು. ಇದನ್ನು ಮನಗಂಡ ಕರ್ನಾಟಕ ಸರಕಾರ ೧೯೬೭ ರಲ್ಲಿ ಅಖಿಲ ಭಾರತ ಉಣ್ಣೆ ಉತ್ಪಾದನಾ ಸೋಸೈಯಿಟಿಯ ಅಧ್ಯಕ್ಷರಾಗಿ ಆಯ್ಕೆ ಮಾಡಿತು. ಅಷ್ಟೆ ಅಲ್ಲದೆ ೨೨-೧೦-೧೯೫೫ ರಲ್ಲಿ ನಡೆದ ಅಖಿಲ ಭಾರತ ಕುರುಬರ ಸಂಘಟನೆಗಳ ಅಧ್ಯಕ್ಷರಾಗಿ. ಸದಸ್ಯರಾಗಿ ಕಾರ್ಯಕರ್ತರಾಗಿ ತಮ್ಮ ಸೇವೆ ಸಲ್ಲಿಸಿದ್ದಾರೆ.

ಶ್ರೀಯುತರು ೯-೩-೧೯೮೩ ರಲ್ಲಿ ಅನಾರೋಗ್ಯದಿಂದ ತೀರಿಕೊಂಡರು. ಇಂತಹ ಅಪ್ರತಿಮ ಹೋರಾಟಗಾರ ಹಾಗೂ ರಾಜಕೀಯ ಮುತ್ಸದ್ಧಿಯಾದ ಗವಿಸಿದ್ದಪ್ಪ ಬೆಳವಡಿಯವರ ಚಳುವಳಿ ಹಾಗೂ ಹಲವಾರು ಚಟುವಟಿಕೆ ಗಳು ಇನ್ನೂ ಹೆಚ್ಚಿನ ವಿಷಯಗಳು ಬೆಳಕಿಗೆ ಬರಬೇಕಾಗಿದೆ ಈ ನಿಟ್ಟಿನಲ್ಲಿ ಇದು ಒಂದು ಪ್ರಾರಂಭಿಕ ಪ್ರಯತ್ನವೆನ್ನಬಹುದು.

ಆಧಾರಸೂಚಿ

೧. **ಕನಕರಶ್ಮಿ ತ್ರೈಮಾಸಿಕ ಪತ್ರಿಕೆ,** ಜನೆವರಿ-ಮಾರ್ಚ ೨೦೦೧.

೨. **ಹಾಲಮತ ವ್ಯಾಸಂಗ,** ಸಂ. ಎಫ್.ಟಿ ಹಳ್ಳಿಕೇರಿ.

೩. ಮುಂಬೈ ಕರ್ನಾಟಕದಲ್ಲಿ ಸವಿನಯ ಕಾನೂನು ಭಂಗ ಚಳುವಳಿ, ಡಾ. ಜ.ಎ. ಬಿರಾದಾರ.

ಮಡಿಕೇರಿ ಪಟ್ಟಣದ ನಗರೀಕರಣ : ವಸಾಹತುಷಾಹಿ ಅನುಭವ (ಕ್ರಿ.ಶ. ೧೮೩೪-೧೯೪೭)

ಡಾ. ಮೀನಾಕ್ಷಿ ಎಂ.ಎಂ.*

ವಸಾಹತುಷಾಹಿ ಆಡಳಿತದಲ್ಲಿ ರೂಪುಗೊಂಡ ಮಡಿಕೇರಿ ಪಟ್ಟಣದ ನಗರೀಕರಣದ ಪ್ರಕ್ರಿಯೆಯನ್ನು ಈ ಪ್ರಬಂಧದಲ್ಲಿ ಚರ್ಚಿಸಲಾಗಿದೆ. ಮಡಿಕೇರಿಯು ದೀರ್ಘಕಾಲ ವಿದೇಶಿ ಆಳ್ವಿಕೆಗೊಳಪಟ್ಟು (ಕ್ರಿ.ಶ. ೧೮೩೪-೧೯೪೭) ವಿವಿಧ ರೀತಿಯ ವಿಶಿಷ್ಟ ಅನುಭವಗಳಿಗೆ ತೆರೆದುಕೊಂಡಾಗ ತನ್ನ 'ಪುರಾತನ' ಲಕ್ಷಣಗಳನ್ನು ಕಳೆದುಕೊಂಡು ನಗರೀಕರಣವನ್ನು ಅನುಭವಿಸುತ್ತದೆ. ಈ ಅವಧಿಯು ಕೊಡಗಿನ ಇತಿಹಾಸದಲ್ಲಿ ಒಂದು ಮುಖ್ಯ ಘಟ್ಟವಾಗಿರುತ್ತದೆ. ನಗರ ಹಾಗೂ ನಗರೀಕರಣದ ಇತಿಹಾಸದ ಹಾಗೂ ಪ್ರಕ್ರಿಯೆಯ ಅಧ್ಯಯನವು ಇಂದು ಸಮಾಜಶಾಸ್ತ್ರಜ್ಞರನ್ನು, ಇತಿಹಾಸಕಾರರನ್ನು ಹಾಗೂ ಇತರೇ ಜ್ಞಾನ ಶಿಸ್ತುಗಳ ಪರಿಣತರನ್ನು ಆಕರ್ಷಿಸುತ್ತಿದೆ; ಏಕೆಂದರೆ ಮಾನವ ಸಮಾಜದ ವಿಕಾಸದಲ್ಲಿ ನಗರಗಳು ಒಂದು ನಿರ್ಧಿಷ್ಠ ಹಂತ ಎಂದು ಇಂದು ಭಾವಿಸಲಾಗಿದ್ದು, ಒಂದು ನಿರ್ಧಿಷ್ಠ ಸಮಾಜವನ್ನು ಅದರ ಸಾಮಾಜಿಕ ಹಾಗೂ ಆರ್ಥಿಕ ಹಿನ್ನಲೆಯ ಸಂಧರ್ಭದಲ್ಲಿ ಅರ್ಥೈಸಿಕೊಳ್ಳಲು ಇದರ ಅವಶ್ಯಕತೆ ಇದೆ ಎಂಬ ಅರಿವು ಸಂಶೋಧಕರಲ್ಲಿ ಮೂಡುತ್ತಿದೆ.

ನಮ್ಮ ನಾಗರೀಕತೆಯಲ್ಲಿ ಪಟ್ಟಣವು ಅಪಾರ ಪ್ರಾಮುಖ್ಯತೆಯನ್ನು ಹೊಂದಿದ್ದರೂ ನಾಗರತೆ (ಅರ್ಬನಿಸಂ)ಯ ಸ್ವರೂಪ ಹಾಗೂ ನಗರೀಕರಣದ ಪ್ರಕ್ರಿಯೆಯು ಕುರಿತು ನಮ್ಮ ಅರಿವು ಅತ್ಯಲ್ಪವಾದುದು ಎಂದು ಲೂಯಿಸ್ ವಿರ್ಥ್ ೧೯೩೮ರಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯ ಇಂದೂ ಕೂಡ ಸತ್ಯವೆನಿಸುತ್ತದೆ.[೧]

ಸಾಮಾಜಿಕವಾಗಿ ಮಿಶ್ರಿತ ವ್ಯಕ್ತಿಗಳು, ಶಾಶ್ವತವಾಗಿ, ದಟ್ಟವಾಗಿ ವಾಸಿಸುವ ತುಲನಾತ್ಮಕವಾಗಿ ವಿಸ್ತಾರವಾದ, ಹಾಗೂ ವಸತಿನೆಲೆಯೇ ನಗರವೆಂದು ವಿರ್ಥ್ ಹೇಳುತ್ತಾನೆ. ಅವನು 'ನಾಗರತೆಯನ್ನು ಒಂದು ಜೀವನ ಪದ್ಧತಿಯಾಗಿ ವಿಶ್ಲೇಷಣೆ ಮಾಡುತ್ತಾನೆ. ಒಂದು ಪಟ್ಟಣ ಅಥವಾ ನಗರದ ಪ್ರಧಾನ ಲಕ್ಷಣವೆಂದರೆ ಸಣ್ಣ ಪ್ರದೇಶದಲ್ಲಿ ಅತೀ ಹೆಚ್ಚು ಜನಸಾಂದ್ರತೆಯಿರುವುದು, ಹಾಗೂ ಕೃಷಿಯೇತರ ಕಸುಬುದಾರರು ಹೆಚ್ಚು ಕಂಡುಬರುವುದು. ಮನುಷ್ಯ-ಪ್ರದೇಶ ಇವುಗಳ ನಿಷ್ಪತ್ತಿ (ratio) ಹಾಗೂ ವೃತ್ತಿಯ ಮಿಶ್ರರೂಪತೆಗಳು, ನಗರ ಮತ್ತು ಹಳ್ಳಿ, ಪಟ್ಟಣ ಹಾಗೂ ಗ್ರಾಮಗಳ ನಡುವಿನ ವ್ಯತ್ಯಾಸದ ನೆಲೆಗಟ್ಟಾಗಿರುತ್ತದೆ.

ನಗರೀಕರಣದಲ್ಲಿ ವಸಾಹತುಷಾಹಿಯ ಪ್ರಭಾವವನ್ನು ೧. ಆಧುನಕತೆ (ಅಂದರೆ ಕೈಗಾರಿಕೆ ಹಾಗೂ ಪಟ್ಟಣ), ೨. ಪಾಶ್ಚಿಮಾತ್ಯ (ಬ್ರಿಟಿಷರ) ಮತ್ತು ೩. ವಸಾಹತು (ರಾಜಕೀಯ ಹಾಗೂ ಸಾಮಾಜಿಕವಾಗಿ ಪ್ರಬಲವಾಗಿರುವ) ಶಕ್ತಿಯ ಪ್ರಭಾವವಾಗಿ ಅಧ್ಯಯನ ಮಾಡಲಾಗುತ್ತಿದೆ. ಈ ಅರ್ಥದಲ್ಲಿ 'ಅಧುನಿಕ'ತೆಯು ತಂತ್ರಜ್ಞಾನ ಮತ್ತು ಅದಕ್ಕೆ ಸಂಬಂಧಿಸಿದ ಸಾಮಾಜಿಕ ಹಾಗೂ ಆರ್ಥಿಕ ಆಯಾಮಗಳಾಗಿ 'ಪಾಶ್ಚಿಮಾತ್ಯ'ವು ಒಂದು ಸಾಂಸ್ಕೃತಿಕ ಅಂಶವಾಗಿ ಹಾಗೂ ವಸಾಹತುಷಾಹಿಯು ಒಂದು ಶಕ್ತಿ ಸಂಬಂಧದ ರೂಪವಾಗಿ ಹೊರಹೊಮ್ಮುವುದನ್ನು ಕಾಣಬಹುದು.[೨]

ಹಲವು ಬರವಣಿಗೆಗಳಲ್ಲಿ ನಗರೀಕರಣದ ಕುರಿತು ನಮಗೆ ಎರಡು 'ಮಾದರಿಗಳು' ಅಥವಾ ಸೈದ್ಧಾಂತಿಕ ದೃಷ್ಟಿಕೋನಗಳು ದೊರೆಯುತ್ತವೆ; ಅವುಗಳೆಂದರೆ ಒಂದು ಬ್ರಿಟಿಷರ ಪ್ರಭಾವವನ್ನು 'ಪಾಸಿಟಿವ್' ಲಕ್ಷಣವಾಗಿ ಹಾಗೂ ಎರಡು, ವಸಹಾತುಷಾಹಿ ಹೇರಿಕೆಯು ಸ್ಥಳೀಯ ವಿಕಸನ ಪ್ರಕ್ರಿಯೆಗಳನ್ನು ವಿಕೃತಗೊಳಿಸುವ ಅಂಶವಾಗಿ ಪ್ರತಿಬಿಂಬಿಸುದನ್ನು ಕಾಣುತ್ತೇವೆ. ಈ ಮಾದರಿಗಳು ಮಡಿಕೇರಿಯು ಒಂದು 'ಕಲೋನಿಯಲ್' ಪಟ್ಟಣವಾಗಿ ವಿಕಾಸಗೊಳ್ಳುವ ಪ್ರಕ್ರಿಯೆಯ ಅಧ್ಯಯನಕ್ಕೆ ಸಹಕಾರಿಯಾಗುತ್ತದೆ. ರೋಡೆಸ್ ಮರ್ಫಿ, ರೆಡ್‌ಫೀಲ್ಡ್ ಮತ್ತು ಸಿಂಗರ್ ಹಾಗೂ ಎಸ್‌ಜೋಬರ್ಗ್ ಎಂಬ ಪರಿಣತರು ಈ ಮಾದರಿಗಳನ್ನು ಚರ್ಚಿಸುತ್ತಾರೆ.[೩]

ಮಡಿಕೇರಿಯನ್ನು ವಶಪಡಿಸಿಕೊಂಡ ಬ್ರಿಟಿಷರಿಗೆ ಕೊಡಗು ಯುದ್ಧತಂತ್ರ ಹಾಗೂ ರಕ್ಷಣೆಯ ದೃಷ್ಟಿಯಿಂದ ತಮ್ಮ ಹತೋಟಿಯಲ್ಲಿಯೇ ಅದನ್ನು ಶಾಶ್ವತವಾಗಿ ಇರಿಸಿಕೊಳ್ಳುವ ಯೋಜನೆಯನ್ನು ಮಾಡಿದರು. ಮಡಿಕೇರಿಯು ಭೌಗೋಳಿಕವಾಗಿ ಅತೀ ಎತ್ತರದಲ್ಲಿದ್ದು, ಸಮುದ್ರಕ್ಕೆ

* ಸಹಾಯಕ ಉಪನ್ಯಾಸಕಿ, ವಿಶ್ವವಿದ್ಯಾಲಯ ಕಾಲೇಜು, ಮಂಗಳೂರು-೫೭೫೦೦೧-೫೭೫೦೦೧.

ಸಮೀಪದಲ್ಲಿದ್ದುದರಿಂದ ಬ್ರಿಟಿಷರು ಅದನ್ನು ದಕ್ಷಿಣ ಭಾರತದಲ್ಲಿಯೇ ಅತ್ಯಂತ ಭದ್ರವಾದ ನೆಲೆಯೆಂದು ಭಾವಿಸಿ, ಕೊಡಗು, ಪ್ರಾಂತ್ಯ ಹಾಗೂ ಮಡಿಕೇರಿಯನ್ನು ರಾಜಮನೆತನಕ್ಕೆ ಮತ್ತೆ ಹಿಂದಿರುಗಿಸದೆ ತಮ್ಮ ವಶದಲ್ಲಿಯೇ ಶಾಶ್ವತವಾಗಿ ಇರಿಸಿಕೊಳ್ಳಲು ನಿರ್ಧರಿಸಿದರು.[೪] ಕೊಡಗನ್ನು ಭಾರತ ಸರ್ಕಾರದ ನೇರ ಆಡಳಿತಕ್ಕೆ ಒಳಪಡಿಸಿ ಅದನ್ನು "ನಾನ್-ರೆಗ್ಯುಲೇಷನ್" ಪ್ರಾಂತ್ಯವನ್ನಾಗಿ ಪರಿವರ್ತಿಸಿ, ಘಟ್ಟದ ಕೆಳಗಣ ಪ್ರದೇಶಗಳಾದ ಅಮರ-ಸುಳ್ಯ ಘಟಕಗಳನ್ನು ಆ ಪ್ರಾಂತ್ಯದಿಂದ ಪ್ರತ್ಯೇಕಿಸಿ, ಇಂದು ಕಂಡುಬರುವ ಕೊಡಗಿನ ಗಡಿಗಳನ್ನು ಸೃಷ್ಟಿಸಿದರು.[೫] ಕ್ರಿ.ಶ. ೧೮೩೪ರಲ್ಲಿ ಕೊಡಗನ್ನು ವಶಪಡಿಸಿಕೊಂಡ ಬ್ರಿಟಿಷರು, ಆ ಜಿಲ್ಲೆಯನ್ನು ಇನ್ನೆಂದೂ ರಾಜಾಡಳಿತಕ್ಕೊಳಪಡಿಸುವುದಿಲ್ಲ ಹಾಗೂ ಕೊಡಗರ ಅವರಿಗೆ ಹಾಗೂ ಧಾರ್ಮಿಕ ಪದ್ಧತಿಗಳನ್ನು ಇನ್ನು ಮುಂದೆಯೂ ಗೌರವಿಸಲಾಗುವುದೆಂದು ಅವರಿಗೆ ಭರವಸೆಯನ್ನು ನೀಡಿದರು. ಅಂತೆಯೇ, ಹಾಲೇರಿ ರಾಜಮನೆತನದ ಸದಸ್ಯರನ್ನು ಕೊನೆಯ ರಾಜ ಹಾಗೂ ಅವನ ಮಗಳು ಗೌರಮ್ಮನನ್ನು ಸೇರಿದಂತೆ ಕೊಡಗಿನಿಂದ ಶಾಶ್ವತವಾಗಿ ಬನಾರಸಿಗೆ ವರ್ಗಾಯಿಸಿದರು.[೬] ಕೊಡಗಿನಲ್ಲಿ ರಾಜನ ಅಸ್ತಿತ್ವ ಬ್ರಿಟಿಷ್ ವಿರೋಧಿ ದಂಗೆಗೆ ಮೂಲವಾಗಬಹುದೆಂಬ ಹೆದರಿಕೆಯೂ ಕಾರಣವಾಗಿರಬಹುದು.

ಅರಸೊತ್ತಿಗೆಯ ಕೇಂದ್ರ ಸ್ಥಾನವಾಗಿದ್ದ ಮಡಿಕೇರಿಯು 'ಮರ್ಕರಾ'ವಾಗಿ ಜಿಲ್ಲೆಯ ರಾಜಧಾನಿಯಾಗಿ ಮುಂದುವರಿಯಿತು. ಹೀಗಾಗಿ ಮಡಿಕೇರಿಯು ಆಡಳಿತಾತ್ಮಕವಾಗಿ ಸೈನಿಕವಾಗಿ ಮತ್ತು ರಾಜಕೀಯ ಕೇಂದ್ರವಾಗಿ ಮಹತ್ವವನ್ನು ಪಡೆದುಕೊಳ್ಳುತ್ತಾ ಬೆಳೆಯತೊಡಗಿತು. ಬ್ರಿಟಿಷರ ದಾಖಲೆಗಳಲ್ಲಿ ಮಡಿಕೇರಿಯನ್ನು ವ್ಯವಸ್ಥಿತವಾಗಿ, ಯೋಜಿತ ರೀತಿಯಲ್ಲಿ ಪುನರ್ ರೂಪಿಸಲು ಬ್ರಿಟಿಷರು ನಿರ್ಧರಿಸಿದ್ದರೆ, ಅದಕ್ಕೊಂದು ಮಾಸ್ಟರ್ ಪ್ಲಾನ್ ಇದ್ದಿತೆ ಎಂಬ ಬಗ್ಗೆ ಮಾಹಿತಿಯು ಲಭ್ಯವಿಲ್ಲ.

೧೮೧೨ರಲ್ಲಿ ಮಡಿಕೇರಿಯಲ್ಲಿ ೩೦೦ ಮನೆಗಳಿದ್ದ ಪಟ್ಟಣವು, ನಗರೀಕರಣಕ್ಕೆ ಒಳಗಾಗುತ್ತಿದ್ದಂತೆ ಜನಸಂಖ್ಯೆಯು ವೃದ್ಧಿಯಾಗಿ ಅದು ೧೮೭೦ರ ವೇಳೆಗೆ ೮,೧೪೭ಕ್ಕೆ ಮುಟ್ಟಿತು.[೭]

ಮಡಿಕೇರಿಯ ಆಡಳಿತವನ್ನು ಸ್ಥಳೀಯವಾಗಿ ನಿಭಾಯಿಸಲು ೧೮೭೦ರಲ್ಲಿ ಮುನಿಸಿಪಾಲಿಟಿಯನ್ನು ಸ್ಥಾಪಿಸಲಾಯಿತು ಮತ್ತು ೧೯೦೧ರಲ್ಲಿ ಜಿಲ್ಲಾ ಬೋರ್ಡನ್ನು ಸ್ಥಾಪಿಸಲಾಯಿತು. ಸೈನಿಕ ಕೋಟೆಯಾಗಿದ್ದ ಮಡಿಕೇರಿಗೆ ಆಂತರಿಕ ಬೆದರಿಕೆಗಳು ಕಡಿಮೆಯಾಗುತ್ತಿದ್ದಂತೆ, ೧೮೩೭ರಿಂದ ಅಲ್ಲಿ ನೆಲೆಸಿದ್ದ ಮದ್ರಾಸು ಕಾಲಾಳುದಳ (ಇನ್‌ಫೆಂಟ್ರಿ)ಯ ಒಂದು ತುಕಡಿಯನ್ನು ೧೮೮೩ರಲ್ಲಿ ವಾಪಾಸು ಕರೆಸಿಕೊಳ್ಳಲಾಯಿತು.

ಟಿಪ್ಪುವಿನ ಕಾಲದಲ್ಲಿ ನಿರ್ಮಿಸಲ್ಪಟ್ಟ ಮಡಿಕೇರಿ ಕೋಟೆಯನ್ನು ಆಂಗ್ಲರ ಅಭಿರುಚಿ ಹಾಗೂ ಅವಶ್ಯಕತೆಗಳಿಗೆ ತಕ್ಕಂತೆ ದುರಸ್ತಿಗೊಳಿಸಲಾಯಿತಲ್ಲದೆ, ಅದಕ್ಕೆ ಗಡಿಯಾರ ಗೋಪುರವನ್ನು ಕೂಡ ಸೇರಿಸಲಾಯಿತು. ೧೯೧೨ರಲ್ಲಿ 'ಪಟ್ಟಾಭಿಷೇಕ ಉದ್ಯಾನವನ'ವನ್ನು ಸೇರಿಸಲಾಯಿತು.

ಮಡಿಕೇರಿಯು ಜಿಲ್ಲೆಯ ಕೇಂದ್ರಸ್ಥಾನವಾಗಿ ಪರಿವರ್ತನೆಗೊಳ್ಳುತ್ತಿದ್ದಂತೆ ಅಲ್ಲಿ ಅನೇಕ ಆಡಳಿತ ಕಛೇರಿಗಳು ವ್ಯವಸ್ಥಿತವಾಗಿ ಪ್ರಾರಂಭವಾದವು. ಮಡಿಕೇರಿಯನ್ನು ಜಿಲ್ಲಾ ಕೇಂದ್ರವಾಗಿ ಅಭಿವೃದ್ಧಿಪಡಿಸಲು ರೂಪುರೇಷೆಗಳನ್ನು ತಯಾರಿಸಲಾಯಿತು. ಬ್ರಿಟಿಷ್ ಸೂಪರಿಡೆಂಟ್, ಮುಂದೆ ಕಮೀಷನರ್ ಹಾಗೂ ಚೀಫ್ ಕಮೀಷನರ್, ಸಬ್‌ಕಲೆಕ್ಟರ್, ತಹಶೀಲ್ದಾರ್, ಅಸಿಸ್ಟೆಂಟ್ ಪೊಲೀಸ್ ಸೂಪರಿಡೆಂಟ್, ಸಿವಿಲ್ ಸರ್ಜನ್, ಪುರಸಭೆ ಅಧಿಕಾರಿಗಳು, ಜಿಲ್ಲಾ ನ್ಯಾಯಾಧೀಶ, ಮುಖ್ಯ ಅರಣ್ಯಾಧಿಕಾರಿಗಳು, ಸೈನಿಕ ಅಧಿಕಾರಿಗಳು, ಸ್ಕೂಲ್ ಇನ್ಸ್‌ಪೆಕ್ಟರ್ ಮುಂತಾದವರ ಕಛೇರಿಗಳು ಹಂತಹಂತವಾಗಿ ಸ್ಥಾಪನೆಗೊಂಡವು. ಶಿಕ್ಷಣ ಸಂಸ್ಥೆಗಳು, ಕ್ರೈಸ್ತ ಮತಪ್ರಚಾರಕ ಸಂಘಗಳು, ಮುದ್ರಣಾಲಯಗಳು, ಮನರಂಜನಾ ಕ್ಲಬ್‌ಗಳು, ಪ್ಲಾಂಟರುಗಳ ಸಂಘಗಳು, ಗಾಲ್ಫ್‌ಕ್ಲಬ್‌ಗಳು, ಚರ್ಚುಗಳು, ಅಂಚೆತಂತಿ ಹಾಗೂ ಟೆಲಿಗ್ರಾಫ್ ಕಛೇರಿಗಳು, ಪ್ರವಾಸಿ ತಂಗುದಾಣಗಳು ಇವೇ ಮುಂತಾದ ಕಟ್ಟಡಗಳು ಕಾಲಕ್ರಮೇಣ ಸೇರಿಸಲ್ಪಟ್ಟು ಮಡಿಕೇರಿಯು ಒಂದು ಆಕರ್ಷಕ ಪಟ್ಟಣವಾಗಿ ಗಿರಿಧಾಮವಾಗಿ ಬೆಳೆಯತೊಡಗಿತು.

ಬ್ರಿಟಿಷ್‌ರ ಕಾಲದಲ್ಲಿ ಮಡಿಕೇರಿಯು ತೆರೆದುಕೊಂಡು ಪರಿವರ್ತನೆಗೊಳ್ಳಲು ಬಲವಾದ ಇನ್ನೊಂದು ಕಾರಣವೆಂದರೆ, ಆಂಗ್ಲರ ಆಕ್ರಮಣಕೆಯು ವಿಶಾಲ ಭಾರತ ಉಪಖಂಡವನ್ನು ಒಳಗೊಂಡಿದ್ದು ಅವರ ವಶದಲ್ಲಿದ್ದ ಎಲ್ಲಾ ಭಾಗಗಳು ವಸಾಹತುಶಾಹಿಯ ಹಿತಾಸಕ್ತಿಯ ಕಾರಣಗೋಸ್ಕರ ಒಂದರೊಡನೆ ಇನ್ನೊಂದು ಸಂಪರ್ಕವನ್ನು ಸಾಧಿಸಬೇಕಾಗಿದ್ದುದು. ಮಡಿಕೇರಿಯು ಹೇಗೆ ೧೮೭೦ರವರೆಗೆ ಬೆಳೆಯಿತು ಎಂಬುವುದ ಕುರಿತು ರೆ!!ರಿಕ್ಟರ್ ಸುಂದರ ಚಿತ್ರಣ ನೀಡುತ್ತಾನೆ.

ಕಾಫಿ ತೋಟಗಳು ಮಡಿಕೇರಿಯ ಸುತ್ತುಮುತ್ತಲು ಹರಡಿಕೊಂಡು ಬೆಳೆಯುತ್ತಿರುವುದು ಮತ್ತು ಮಡಿಕೇರಿಯ ಬಜಾರ್‌ಗಳು ಕೂಲಿ-ಕಾರ್ಮಿಕರಿಂದ ತುಂಬಿರುವುದರ ಕುರಿತು ಅವನು ಬರೆಯುತ್ತಾ, ರೈತರು ಗರೀಬರಾಗಿದ್ದು ಕೈಬೀಸಿ ಆಕರ್ಷಿಸುವ ಅಂಗಡಿಗಳು ರೈತರನ್ನು ಬುದ್ಧಿಹೀನರಂತೆ ಖರ್ಚು ಮಾಡಲು ಪ್ರೇರೇಪಿಸಿ ಅವರನ್ನು ಆರ್ಥಿಕವಾಗಿ ಇನ್ನಷ್ಟು ಕೃಶರನ್ನಾಗಿ ಮಾಡುತ್ತಿದೆ ಎಂದು ಅಭಿಪ್ರಾಯ ಪಡುತ್ತಾನೆ.

[illegible]ರು, ಕೋಟೆಯನ್ನು ಕೇಂದ್ರವಾಗಿಟ್ಟುಕೊಂಡು ಅವರ ಸುತ್ತಮುತ್ತಲು ತಮ್ಮ ವಿವಿಧ ಇಲಾಖೆಗಳ ಆಡಳಿತ ಕಛೇರಿಗಳು, ಐರೋಪ್ಯರ ವಸತಿನೆಲೆಗಳು, ಸೈನಿಕ ವಸತಿ ನೆಲೆಗಳು, ಶಿಕ್ಷಣ ಸಂಸ್ಥೆಗಳು ಇತ್ಯಾದಿಗಳನ್ನು ಸೃಷ್ಟಿಸುತ್ತಾ ಸಾಗಿದರು. ಕೋಟೆಯೊಳಗೆ ಅರಮನೆಯು ಸೂಪರಿಡೆಂಟನ ಕಛೇರಿಯಾಯಿತು. ಇಂಗ್ಲಿಷ್ ಚರ್ಚು ಕೂಡ ಕಟ್ಟಲ್ಪಟ್ಟಿತು. ಕೋಟೆಯ ಹೊರಗಡೆ ದಕ್ಷಿಣದ ಬೆಟ್ಟದ ಇಳಿಜಾರಿನಲ್ಲಿ ರೆಜಿಮೆಂಟಲ್ ಆಸ್ಪತ್ರೆ ಮತ್ತು ಸಮಾನಾಂತರ ಸಾಲಿನಲ್ಲಿ, ಪೂರ್ವ ಹಾಗೂ ಪಶ್ಚಿಮದ ಗಾಳಿಯಿಂದ ಆಶ್ರಯ ದೊರೆಯುವ ರೀತಿಯಲ್ಲಿ, ಸಿಪಾಯಿಗಳಿಗಾಗಿ, ಹಂಚುಗಳಿಂದ ಕಟ್ಟಿದ ಲೈನ್‌ಗಳು ಮತ್ತು ಅದರೊಂದಿಗೆ ರೆಜಿಮೆಂಟ್‌ಲ್ ಬಜಾರ್, ಮುಂದೆ ಗೌಳಿಗರ ಗ್ರಾಮವನ್ನು ಆಯೋಜಿಸಿದರು. ಲೈನ್‌ಗಳ ನೈಋತ್ಯಕ್ಕೆ ಪೆರೇಡ್ ಮೈದಾನ ಮತ್ತು ವಿಹಾರ ಸ್ಥಳವನ್ನು ನಿರ್ಮಿಸಿದರು ರೆಜಿಮೆಂಟಲ್ ವಾದ್ಯ ಮೊಳಗುವಾಗ ಮಡಿಕೇರಿಯ ಜನರು ಆ ಸ್ಥಳಕ್ಕೆ ಹೋಗುತ್ತಿದ್ದರು. ಅದರ ಕೊನೆಯಲ್ಲಿ ರಾಜಾಸೀಟ್ ಇದ್ದು ಅದರ ಇನ್ನೊಂದು ಮೂಲೆಯಲ್ಲಿ ಪ್ರೊಟೆಸ್ಟಂಟ್ ಜನರ ರುದ್ರಭೂಮಿಯನ್ನು ಮಾಡಲಾಯಿತು. ಮೂರು ಘಟ್ಟಗಳ ರಸ್ತೆಗಳು ಸೇರುವೆಡೆ ಸೈಂಟ್ ಮೈಕಲನ ರೋಮನ್ ಕೆಥೋಲಿಕ್ ಚರ್ಚು ಕಟ್ಟಲ್ಪಟ್ಟಿತು. ಅದಕ್ಕಿಂತ ಸ್ವಲ್ಪ ಮುಂದೆ ಫ್ರೇಸರ್‌ಪೇಟೆ (ಕುಶಾಲನಗರ)ಯ ದಾರಿಯಲ್ಲಿ ಸ್ಥಳೀಯ ಅಂಗಡಿಗಳು ಹಾಗೂ ಅಬ್ಕಾರಿ ಗೋಡಾನ್‌ಗಳನ್ನು ಉದ್ದವಾದ ಸರತಿಯಲ್ಲಿ ಕಟ್ಟಲಾಯಿತು. ಅದರ ಹಿಂದೆ ಸ್ವಲ್ಪ ಒಳಗೆ ಸರ್ವಾಜನಿಕ ಔಷಧಾಲಯವನ್ನು ಕಟ್ಟಲಾಯಿತು. ಅದಕ್ಕೆ ಎದುರಾಗಿ ರಸ್ತೆಯ ಇನ್ನೊಂದೆಡೆ, ಪ್ರವಾಸಿಗರ ತಂಗುದಾಣವನ್ನು ನಿರ್ಮಿಸ ಲಾಯಿತು. ರಿಕ್ಟರ್ (೧೮೭೦)ನ ಪ್ರಕಾರ ಅಲ್ಲಿ ಸೌಲಭ್ಯಗಳ ಕೊರತೆಯಿದ್ದರೂ, ಅಲ್ಲಿಂದ ಕೊಡಗಿನ ಸುಂದರ ಪ್ರಕೃತಿ ದೃಶ್ಯಗಳನ್ನು ಕಾಣಬಹುದಿತ್ತು. ಅಲ್ಲಿಂದ ಮುಂದೆ ಮೊದಲ ಮೈಲುಕಲ್ಲಿನ ಬಳಿ ಲೋಕೋಪಯೋಗಿ ಇಲಾಖೆಯ ಕಛೇರಿ ಯನ್ನು ಕಟ್ಟಲಾಯಿತು. ಅಲ್ಲಲ್ಲಿ ಕಾಡಿನ ಮೂಲೆಗಳಲ್ಲಿ, ದಿಬ್ಬ–ದಿಣ್ಣೆಗಳ ಮೇಲೆ ಸುಂದರ, ರಮಣೀಯ ದೃಶ್ಯಗಳನ್ನು ಕಾಣುವಂತೆ, ಆದರೆ ಮೂನ್‌ಸೂನ್ ಮಾರುತಗಳನ್ನು ಧೈರ್ಯ ವಾಗಿ ಎದುರಿಸುವ ರೀತಿಯಲ್ಲಿ ಐರೋಪ್ಯರ ಮನೆಗಳನ್ನು ಕಟ್ಟಲಾಯಿತು. ಸೂಪರಿಡೆಂಟನ ಕಛೇರಿಯ ಎದುರು ಅಂಚೆ ಕಛೇರಿ ಮತ್ತು ಜೈಲು ಉದ್ಯಾನವನ್ನು ನಿರ್ಮಿಸ ಲಾಯಿತು. ಅದರ ಕೆಳಗೆ ಓಂಕಾರ ದೇವಸ್ಥಾನವಿದ್ದು, ಕೊಡಗ ಅಧಿಕಾರಿ ಗಳು ಹಾಗೂ ಬ್ರಾಹ್ಮಣರು, ಮರಗಿಡಗಳಿಂದ ಕೂಡಿದ ಪ್ರದೇಶದಲ್ಲಿ ವಾಸಸ್ಥಾನಗಳನ್ನು ಹೊಂದಿದ್ದರು. ಕೋಟೆಯ ಉತ್ತರಭಾಗದಲ್ಲಿ ಒಂದು ಸಣ್ಣ ಪ್ರದೇಶದಲ್ಲಿ ಟೆಲಿಗ್ರಾಫ್ ಕಛೇರಿಯನ್ನು ತೆರೆಯಲಾಯಿತು.[೮]

ಹಾಗೆಯೇ ಅಗಲವಾದ ಏರಿಯ ಮೇಲೆ ಸಾಗಿ ಮಹದೇವಪೇಟೆಯನ್ನು ತಲುಪಬಹುದಿತ್ತು. ಇಲ್ಲಿ ಮೂರು ಬೀದಿಗಳಿದ್ದು ಎರಡು ಸಮಾನಾಂತರವಾಗಿ ಸಾಗುತ್ತಾ, ಇನ್ನೊಂದು ಪಟ್ಟಣದ ಕಡೆಯಿಂದ ಎಡಕ್ಕೆ ಹೋಗುತ್ತಿತ್ತು. ಇಲ್ಲಿ ಸ್ಯಾಪರ್ಸ್ ಮತ್ತು ಮೈನರ್ಸ್‌ರ ಲೈನ್‌ಗಳನ್ನು ಕಟ್ಟಲಾಯಿತು. ೧೮೬೦ರ ದಶಕದಲ್ಲಿ ಈ ಪೇಟೆಗೆ ಇನ್ನೊಂದು ತುಂಡು ಜಾಗವನ್ನು ವಸತಿಗಾಗಿ ಸೇರ್ಪಡೆ ಮಾಡುವ ಪ್ರಯತ್ನ ಮಾಡಲಾಯಿತು; ಅದರೆ ಅದು ಬಹಳ ಕಾಲದವರೆಗೆ ಯಶಸ್ವಿಯಾಗಲಿಲ್ಲ. ಆ ಹೊಸ ಭಾಗವನ್ನು ವಿಕ್ಟೋರಿಯಾ ರಾಣಿಯ ಗೌರವಾರ್ಥ 'ರಾಣಿಪೇಟೆ' ಎಂದು ಕರೆಯಲು ನಿರ್ಧರಿಸಲಾಯಿತು.

೧೮೫೦ರ ದಶಕದಲ್ಲಿ ಹೊದಿಕೆ ಹೊಂದಿದ ಮಣ್ಣಿನ ಗುಡಿಸಲುಗಳನ್ನೊಳಗೊಂಡು ಹೀನಾವಸ್ಥೆಯಲ್ಲಿದ್ದ ಈ ಪ್ರದೇಶವು ಮುಂದೆ ರಿಕ್ಟರ್ ಹೇಳುವಂತೆ ಕಾಫಿ ಬೆಳೆ ಯಿಂದುಂಟಾದ ಅಪಾರ ಲಾಭದಿಂದಾಗಿ ಸಂಪದಭಿವೃದ್ಧಿ ಯನ್ನು ಕಾಣಲು ಪ್ರಾರಂಭಿಸಿತು. ೧೮೭೦ರ ವೇಳೆಗೆ ಅಲ್ಲಿ ೮೫೦ ಮನೆಗಳಿದ್ದು, ಅವುಗಳಲ್ಲಿ ೨೮೧ ಮನೆಗಳು ಹಂಚಿನ ಸೂರನ್ನು ಹೊಂದಿದ್ದು, ಇಟ್ಟಿಗೆಯಿಂದ ನಿರ್ಮಿಸಲ್ಪಟ್ಟಿದ್ದವು. ರಿಕ್ಟರ್‌ನ ಪ್ರಕಾರ ಸೈನ್ಯವನ್ನು ಹೊರತುಪಡಿಸಿ, ಸುಮಾರು ೪೩ ಭಿನ್ನ, ಭಿನ್ನ ಜಾತಿಗಳು ಈ ಪ್ರದೇಶದಲ್ಲಿ ವಾಸವಾಗಿದ್ದುವು. ಅದರೆ ಯಾವ ಕೊಡವನು ಪೇಟೆಯಲ್ಲಿ ಜೀವಿಸುತ್ತಿರಲಿಲ್ಲ. ಪೇಟೆ–ಸುಭೇದಾರನ ಕಛೇರಿಯನ್ನು ಇಲ್ಲಿ ಸ್ಥಾಪಿಸಲಾಗಿತ್ತು. ಅದರ ಹಿಂದೆ ರಾಜರ ಗದ್ದಿಗೆಗಳಿದ್ದವು.[೯]

ಕ್ಯಾಪ್ಟನ್ ಕೋಲ್ ಸೂಪರ್‌ಡೆಂಟನ ನಿರ್ದೇಶನದಲ್ಲಿ ಸಹಾಯಕ ಸೂಪರ್‌ಡೆಂಟನಾಗಿದ್ದ ಮೆಕಂಜಿಯು ಪೇಟೆಯ ಆರೋಗ್ಯ ನೈರ್ಮಲ್ಯಕರಣದಲ್ಲಿ ವ್ಯವಸ್ಥೆಯನ್ನು ತರಲು ಪ್ರಯತ್ನಿಸಿದನು. ಬೀದಿಗಳನ್ನು ವಿಸ್ತಾರಗೊಳಿಸಿ, ಸ್ವಚ್ಛವಾಗಿ ಇಡಲು ಕ್ರಮ ಕೈಕೊಳ್ಳಲಾಯಿತು. ಪೇಟೆಗೆ ಶುಭ್ರ ನೀರಿನ ಸರಬರಾಜಿಗಾಗಿ ಎರಡು ಟ್ಯಾಂಕ್‌ಗಳನ್ನು ನಿರ್ಮಿಸಲಾಯಿತು; ಹಲವು ಬಾವಿಗಳು ಹಾಗೂ ಸಣ್ಣ ತೊರೆಗಳು ಕೂಡ ನೀರು ಪೂರೈಕೆಯನ್ನು ಮಾಡುತ್ತಿದ್ದವು. ಮಡಿಕೇರಿಯ 'ಶುಕ್ರವಾರ ಸಂತೆ'ಯು ಜನರಿಗೆ ಬೇಕಾದ ದಿನ ನಿತ್ಯಬಳಕೆಯ ವಸ್ತುಗಳನ್ನು ಪೂರೈಸುತ್ತಿದ್ದವು. ಮಾಪಿಳ್ಳೆಗಳು, ನಂಜರಾಜಪಟ್ಟಣ ಹಾಗೂ ಮೈಸೂರಿನ ವ್ಯಾಪಾರಿಗಳು, ಕೊಡಗಿನ ಸ್ಥಳೀಯ ವ್ಯಕ್ತಿಗಳು, ಸಣ್ಣಪುಟ್ಟ ವ್ಯಾಪಾರಿಗಳು ಈ ಸಂತೆಯಲ್ಲಿ ತಾವು ಬೆಳೆದ, ತಯಾರಿಸಿದ, ಹಾಗೂ ಅಮದು ಮಾಡಿಕೊಂಡ ವಸ್ತುಗಳನ್ನು ಮಾರುತ್ತಿದ್ದರು. ಹೆಂಡದಂಗಡಿಗಳು ಆಕರ್ಷಿತ ಹೊರಕವಚ ಗಳನ್ನೊಂದಿದ ಬ್ರ್ಯಾಂಡಿ ಬಾಟಲಿಗಳಿಂದ ಜನರನ್ನು ಆಕರ್ಷಿಸುತ್ತಿದ್ದುವೆಂದು ರಿಕ್ಟರ್ ಬರೆಯುತ್ತಾನೆ.[೧೦]

ಪಟ್ಟಣದ ಪೂರ್ವಕ್ಕೆ ಸಮತಟ್ಟಾದ ದಿಬ್ಬದ ಮೇಲೆ ಸರ್ಕಾರಿ ಸೆಂಟ್ರಲ್ ಸ್ಕೂಲನ್ನು ನಿರ್ಮಿಸಲಾಯಿತು. ಅಲ್ಲಿ ಕೆಲವು ಖಾಸಗಿ ವಸತಿ ನಿಲಯಗಳು ಇದ್ದು ಅವು ಎದ್ದು ಕಾಣುವಂತಿದ್ದವು.

ಮಡಿಕೇರಿಯ ಪಶ್ಚಿಮ ಕೊನೆಯು ಸ್ಯಾಪರ್ಸ್ ಹಾಗೂ ಮೈನರ್ಸ್‌ರ ವಸತಿನೆಲೆಗಳನ್ನು ಹೊಂದಿದ್ದವು. ಕೆಲವೆಡೆ ಕೆಲವು ಸಾರ್ವಜನಿಕ ಕಛೇರಿಗಳಿದ್ದು ಆ ದೂರದ ಪ್ರದೇಶಗಳು ಚಟುವಟಿಕೆಗಳಿಂದ ಕೂಡಿರುವಂತೆ ಮಾಡಲು ಕೆಲವು ಐರೋಪ್ಯರ ಅಂಗಡಿಗಳನ್ನು ಕೂಡ ಸ್ಥಾಪಿಸಲಾಯಿತು. ಮಡಿಕೇರಿಯು ಗುಡ್ಡ-ಬೆಟ್ಟಗಳ ಲಕ್ಷಣದಿಂದ ಕೂಡಿರುವುದರಿಂದ ಫ್ರೇಸರ್‌ಪೇಟೆ ಮತ್ತು ಮಂಜರಾಬಾದಿನಲ್ಲಿ ಕಂಡು ಬರುವ ರಸ್ತೆಗಳು ಇರಲಿಲ್ಲ; ಆದರಿಂದ ವೈವಿಧ್ಯಮಯವಾದ ವಿಹಾರಗಳಿಗೆ ಅವಕಾಶವಿಲ್ಲವೆಂದು ರಿಕ್ಟರ್ ಬರೆಯುತ್ತಾನೆ. ಹೀಗೆ ಮಡಿಕೇರಿ ಪಟ್ಟಣವು ೧೮೩೪ರಿಂದ ೧೮೭೦ರವರೆಗೆ ಅವಧಿಯಲ್ಲಿ ಒಂದು ಪಟ್ಟಣವಾಗಿ ವಿಕಾಸವಾಗುವುದನ್ನು ಕಾಣಬಹುದು. ಅಂದಿನ ರೂಪುರೇಷೆಗಳು ಇಂದೂ ಕೂಡ ಹೆಚ್ಚು ಬದಲಾಗಿಲ್ಲ.

ಕೊಡಗನ್ನು ವ್ಯಾಪಾರ, ವ್ಯವಹಾರ ಹಾಗೂ ಸಾಮಾನ್ಯ ಆಡಳಿತದ ಅನುಕೂಲತೆಯ ದೃಷ್ಟಿಯಿಂದ ಹೊರ ಪ್ರಪಂಚದ ಸಂಪರ್ಕಕ್ಕೆ ತೆರೆದಿಡುವ ಉದ್ದೇಶದಿಂದ ಬ್ರಿಟಿಷರು ಹಲವು ಹೊರ ಪ್ರದೇಶಗಳಿಗೆ ನೇರ ರಸ್ತೆ ಸಂಪರ್ಕವನ್ನು ಏರ್ಪಡಿಸುವ ಪ್ರಯತ್ನಕ್ಕೆ ಕೈಹಾಕಿದರು. ೧೮೩೪ರಲ್ಲಿ ಬ್ರಿಟಿಷರು ಕೊಡಗನ್ನು ತಮ್ಮ ವಶಕ್ಕೆ ಪಡೆದುಕೊಂಡಾಗ ರಸ್ತೆಗಳು 'ಪುರಾತನ' ಸ್ಥಿತಿಯಲ್ಲಿದ್ದು ಚಕ್ರಗಳಿರುವ ಬಂಡಿಗಳು, ಎತ್ತುಗಾಡಿಗಳ ಬಳಕೆಯು ಸಾಧ್ಯವಿರಲಿಲ್ಲ. ಪರ್ವತ ಪ್ರದೇಶಗಳ ರಾಜರು ತಮ್ಮ ಪ್ರಾಂತ್ಯಕ್ಕೆ ಭದ್ರತೆಯನ್ನೊದಗಿಸುವ ಅಲೋಚನೆಯಿಂದ ಹಾಗೂ ಭೀತಿಯನ್ನು ನಿವಾರಿಸುವ ಉದ್ದೇಶದಿಂದ ಸಂಪರ್ಕ ಒದಗಿಸುವ ದಾರಿಗಳನ್ನು ಸುಸ್ಥಿತಿಯಲ್ಲಿಡುತ್ತಿರಲಿಲ್ಲ. ಹೀಗಾಗಿ, ರಿಕ್ಟರ್ ಹೇಳುವಂತೆ ರಾಜರ ಕಾಲದಲ್ಲಿ ಮಡಿಕೇರಿಗೆ ಬರುವ ಕೆಲವು ನೇರ ಹಾಗೂ ಬಳಕೆಯೋಗ್ಯ ರಸ್ತೆಗಳು ಮುಚ್ಚಲ್ಪಟ್ಟು ಅವುಗಳ ಮೂಲಕ ಪ್ರಯಾಣವು ನಿಷೇಧಿಸಲ್ಪಟ್ಟಿತು. ಬ್ರಿಟಿಷರು, ಸೈನಿಕ ಹಾಗೂ ರಕ್ಷಣೆಯ ಕಾರಣಗಳಿಗೆ ಹೆಚ್ಚು ಒತ್ತು ನೀಡಿ ರಸ್ತೆ ನಿರ್ಮಾಣ ಕಾರ್ಯವನ್ನು ಕೈಗೊಂಡರು. ೧೮೩೭ರಲ್ಲಿ ನಡೆದ ಕೆನರಾ-ಕೊಡಗು ದಂಗೆ ಅಥವಾ ಅಮರ ಸುಳ್ಯದಂಗೆಯು ರಸ್ತೆನಿರ್ಮಾಣ ಕಾರ್ಯಕ್ಕೆ ಇನ್ನಷ್ಟು ಇಂಬು ನೀಡಿದವು. ಕ್ರಮೇಣ, ಕಾಫಿ ತೋಟಗಳ ತೆರೆಯುವಿಕೆ ಕೊಡಗಿನ ಒಳ ಹಾಗೂ ಹೊರ ಪ್ರದೇಶಗಳಿಗೆ ಸಂಪರ್ಕವೇರ್ಪಡಿಸಲು ಹೆಚ್ಚಿನ ಉತ್ತೇಜನ ನೀಡಿದವು.

ಮೈಸೂರಿಗೆ ಸಂಪರ್ಕ ಕಲ್ಪಿಸುವ ಕುಶಾಲನಗರ ಮತ್ತು ಮಡಿಕೇರಿ ಹೆದ್ದಾರಿಯನ್ನು ೧೮೩೭ರಲ್ಲಿ ಸರ್ಕಾರದ ಸ್ಯಾಪರ್ಸ್ ಘಟಕವು ಪೂರ್ಣಗೊಳಿಸಿತು. ಮಡಿಕೇರಿಯಿಂದ ಸಂಪಾಜೆ ಘಾಟ್ ಮೂಲಕ ಮಂಗಳೂರಿಗೆ ಸಂಪರ್ಕ ಒದಗಿಸುವ ದಾರಿಯ ನಿರ್ಮಾಣ ೧೮೩೭ರಲ್ಲಿ ಪ್ರಾರಂಭವಾಗಿ ಪೂರ್ಣಗೊಳ್ಳಲು ಹಲವು ವರ್ಷಗಳನ್ನು ತೆಗೆದುಕೊಂಡಿತು. ಈ ರಸ್ತೆಯ ನಿರ್ಮಾಣದ ಉಸ್ತುವಾರಿಯಲ್ಲಿದ್ದ ಫಾಸ್ಟ್ ಎನ್ನುವ ಯುವ ಇಂಜಿನಿಯರ್ ಮಲೆಜ್ವರಕ್ಕೆ ತುತ್ತಾಗಿ ತೀರಿಕೊಂಡಾಗ ಅವನ ಹೆಸರನ್ನೆ ಘಾಟ್ ರಸ್ತೆಗೆ (ಫಾಸ್ಟ್ ಘಾಟ್) ಇಡಲಾಯಿತು. ಇದೇ ರೀತಿ ಮಡಿಕೇರಿ - ಹಾಸನ, ಮಡಿಕೇರಿ-ವಿರಾಜಪೇಟೆ, ಕಣ್ಣೂರು ಮಾರ್ಗಗಳನ್ನು ಕೂಡ ಸುಧಾರಿಸಲಾಯಿತು.[೧೧] ಈ ಎಲ್ಲಾ ರಸ್ತೆ ನಿರ್ಮಾಣದಲ್ಲಿ ಉಂಟಾದ ವೆಚ್ಚವನ್ನು ಸರಿದೂಗಿಸಲು ಕರಾವಳಿ ಪ್ರದೇಶದಲ್ಲಿ ಉಪ್ಪಿನ ಕರವನ್ನು ಏರಿಸಲಾಯಿತು. ಈ ರಸ್ತೆಗಳು ಮಡಿಕೇರಿಯು ಕಾಫಿ ತೋಟ ಮಾಲಿಕರ ವ್ಯಾಪಾರ, ವ್ಯವಹಾರ, ಹಣಕಾಸು, ಮನರಂಜನೆ, ರಾಜಕೀಯ ವ್ಯವಹಾರ ಕೇಂದ್ರವಾಗಿ ಬೆಳೆಯಲು ಕಾರಣವಾಯಿತು.

ಅಂತೆಯೇ ಮಡಿಕೇರಿಯನ್ನು ಆಂತರಿಕವಾಗಿ ಕೊಡಗಿನ ವಿವಿಧ ಮೂಲೆಗಳಿಗೆ ಸಂಪರ್ಕಿಸಲು ಸೋಮವಾರಪೇಟೆ, ವಿರಾಜಪೇಟೆ, ಭಾಗಮಂಡಲ, ಸುಳ್ಯ-ಭಾಗಮಂಡಲ ಮುಂತಾದ ಯೋಜನೆಗಳನ್ನು ಕೂಡ ಸರ್ಕಾರ ಕೈಗೊತ್ತಿಕೊಂಡು ಕಾರ್ಯಗತ ಮಾಡಲಾರಂಭಿಸಿತು.

ಮಡಿಕೇರಿ ಹಾಗೂ ಕೊಡಗಿನ ಪರಿವರ್ತನೆಗೆ ಕಾರಣವಾದ ಇನ್ನೊಂದು ಮಹತ್ತರ ಅಂಶವೆಂದರೆ ಕಾಫಿತೋಟಗಳ ಉಗಮ. ರಾಜರ ಕಾಲದಲ್ಲಿ ಕಾಫಿ ಬೆಳೆಯುವಿಕೆ ಇದ್ದರೂ ಅದು ಸಣ್ಣಪ್ರಮಾಣದಲ್ಲಿದ್ದು ಕಾಫಿಯು ಜನರ ದಿನನಿತ್ಯದ ಬಳಕೆಯ ಪಾನೀಯವಾಗಿರಲಿಲ್ಲ. ಬ್ರಿಟಿಷರ ಆಗಮನವು ಐರೋಪ್ಯ ಬಂಡವಾಳಗಾರರನ್ನು ಕೊಡಗಿಗೆ ಕೈಬೀಸಿ ಕರೆಯಿತು. ಕೊಡಗನ್ನು ತಮ್ಮ ಅಧೀನದಲ್ಲಿಯೇ ಉಳಿಸಿಕೊಳ್ಳುವ ಬ್ರಿಟಿಷರ ನಿರ್ಧಾರಕ್ಕೆ, ಈ ಜಿಲ್ಲೆಯಲ್ಲಿದ್ದ ಪ್ಲಾಂಟೇಷನ್ ಉದ್ಯಮಕ್ಕೆ ಪೂರಕವಾದ ಪ್ರಕೃತಿ ಹಾಗೂ ವಾತಾವರಣ ಎಂದು ಕೆಲವು ಇತಿಹಾಸಕಾರರು (ಐ.ಎಂ. ಮುತ್ತಣ್ಣ, ಕೆ.ಕೆ.ಎನ್. ಕುರುಪ್, ಮುಂತಾದವರು) ಅಭಿಪ್ರಾಯಪಡುತ್ತಾರೆ. ಮಡಿಕೇರಿ ಕೇಂದ್ರಪ್ರದೇಶದ ಸುತ್ತಮುತ್ತಲೂ ಹಲವು ಮೈಲು ದೂರದವರೆಗೆ ಐರೋಪ್ಯ ಕಾಫಿತೋಟಗಳು ಅಸ್ತಿತ್ವಕ್ಕೆ ಬಂದವು; ಈ ಉದ್ಯಮವು ಸ್ಥಳೀಯ ಕೊಡಗರಿಗೂ ಸ್ಫೂರ್ತಿ ನೀಡಿತು; ಅವರೂ ಕೂಡ ತಮ್ಮ ಬಾಣೆ ಪ್ರದೇಶಗಳನ್ನು ಕಾಫಿತೋಟಗಳಾಗಿ ಪರಿವರ್ತಿಸಿದಾಗ ಹೆಚ್ಚು ಆದಾಯ ದೊರೆಯತೊಡಗಿತು. ಕಾಫಿ ಉದ್ಯಮವು ಕೂಲಿಕಾರ್ಮಿಕ

ರನ್ನು, ಬಂಡವಾಳಗಾರರನ್ನು, ವ್ಯಾಪಾರಿಗಳನ್ನು, ಹಣ ಲೇವಾದೇವಿಗಾರರನ್ನು, ಹೊಸ ತಂತ್ರಜ್ಞಾನವನ್ನು ಕೊಡಗಿಗೆ ಆಕರ್ಷಿಸಿತು. ವಾಣಿಜ್ಯ ಬೆಳೆಯ ಆರಂಭವು ಪಟ್ಟಣಗಳ ಪ್ರಗತಿ ಹಾಗೂ ನಗರೀಕರಣಕ್ಕೆ ಅವಕಾಶ ನೀಡಿತು. ಆದಾಯ ವೃದ್ಧಿಯಾದಾಗ ಜನರು ತಮ್ಮ ಪ್ರಾಶಸ್ತ್ಯಗಳನ್ನು ಪುನರ್ರೂಪಿಸಿಕೊಂಡರು. ಇದು ಶಿಕ್ಷಣವನ್ನು, ಸರ್ಕಾರಿ ಹುದ್ದೆಗಳನ್ನು ಬಯಸಲು, ಪಾಶ್ಚಿಮಾತ್ಯ ಸಾಮಾಜಿಕ, ಸಾಂಸ್ಕೃತಿಕ ಮೌಲ್ಯಗಳನ್ನು ಅಳವಡಿಸಿಕೊಳ್ಳಲು ಇಂಬು ನೀಡಿದಾಗ ನಗರೀಕರಣವು ಇವುಗಳ ಅಭಿವ್ಯಕ್ತಿಯಾಗಿ ಅಸ್ತಿತ್ವಕ್ಕೆ ಬಂದಿತು.

ಆಧುನಿಕ ಶಿಕ್ಷಣ ಜಾರಿಯು ಮಡಿಕೇರಿಯ ಪರಿವರ್ತನೆಗೆ ಇನ್ನೊಂದು ಉತ್ತೇಜಕ ಶಕ್ತಿಯಾಯಿತು. ಪಾಶ್ಚಿಮಾತ್ಯ ಮಾದರಿಯ ಶಿಕ್ಷಣದ ಜಾರಿ ಹಾಗೂ ಶಿಕ್ಷಣ ಸಂಸ್ಥೆಗಳ ಸ್ಥಾಪನೆಯು, ಕಾಫಿ ತೋಟಗಳ ಉಗಮ ಮತ್ತು ಬೆಳವಣಿಗೆಯೊಂದಿಗೆ ಸಾಗಿದಾಗ ಹೊಸ ಮೂಲದಿಂದ ಆದಾಯ ಪಡೆದ ಕೊಡಗರು ಆಂಗ್ಲ ಶಿಕ್ಷಣಕ್ಕೆ ಹಾತೊರೆಯುವುದನ್ನು ಕಾಣಬಹುದು. ಮಡಿಕೇರಿಯ ಸೆಂಟ್ರಲ್ ಸ್ಕೂಲ್‌ನಲ್ಲಿ ಮುಂದೆ ಉನ್ನತ ದರ್ಜೆಗಳ ತರಗತಿಗಳು ಪ್ರಾರಂಭಗೊಂಡು ಮಡಿಕೇರಿಯು ಶಿಕ್ಷಣದ ಕೇಂದ್ರವಾಯಿತು. ಜಮೀನುದಾರರು, ಜಮ್ಮಭೂಮಿ ಹಿಡುವಳಿದಾರರು, ಕಾಫಿ ಪ್ಲಾಂಟರ್‌ಗಳು, ಸಾರ್ವಜನಕ ಅಧಿಕಾರಿಗಳು, ಮುಂತಾದವರ ಮಕ್ಕಳು ಮಡಿಕೇರಿಗೆ ಬರಲಾರಂಭಿಸಿದರು. ೧೮೧೫ – ೧೮೧೭ರಲ್ಲಿ ಕೊಡಗಿನ ಸರ್ವೇ ಮಾಡಿದ ಲೆಫ್ಟಿನೆಂಟ್ ಕೊನೊರ್‌ನು ಕೊಡಗಿನ ಶಿಕ್ಷಣದ ವ್ಯವಸ್ಥೆ ಕುರಿತು ಬರೆಯುತ್ತಾ, ಪ್ರಾಣಿ ಸಾಕಾಣಿಕೆಗೆ ಅಂಟಿಕೊಂಡಿರುವ ಕೊಡಗರ ಒಂದೇ ಶಿಕ್ಷಣವೆಂದರೆ ಆ ಕುರಿತು ಬಳಕೆಯೋಗ್ಯ ಜ್ಞಾನವನ್ನು ಪಡೆದುಕೊಳ್ಳುವುದೆಂದು ಹೇಳುತ್ತಾನೆ.[೧೨] ಆದರೆ ಆ ಪರಿಸ್ಥಿತಿಯು ೧೮೬೦ರ ವೇಳೆಗೆ ಬದಲಾಗತೊಡಗಿತು.

೧೮೬೦ರ ದಶಕದಲ್ಲಿ ಕೊಡಗಿನ ೬೫ ಮುಖ್ಯಸ್ಥರು ಶಿಕ್ಷಣದ ಸುಧಾರಣೆಗಾಗಿ ಬ್ರಿಟಿಷ್ ಸರ್ಕಾರಕ್ಕೆ ಮನವಿಯೊಂದನ್ನು ನೀಡುತ್ತಾರೆ. ಮನವಿಯಲ್ಲಿ ಕೊಡಗಿಗೆ ಬಂದಿರುವ ಐರೋಪ್ಯ ವಲಸೆಗಾರರ ಉಪಸ್ಥಿತಿಯಿಂದಾಗಿ ತಮ್ಮ ಮಕ್ಕಳಿಗೆ ಆಂಗ್ಲ ಶಿಕ್ಷಣದ ಅವಶ್ಯಕತೆ ಇಮ್ಮಡಿಯಾಗಿದೆ ಎನ್ನುತ್ತ ಮಡಿಕೇರಿಯಲ್ಲಿ ಶಾಲೆಗಳನ್ನು ಕಟ್ಟಲು ಸಹಾಯ ನಿಧಿಯನ್ನು ನೀಡುವ ವಾಗ್ದಾನವನ್ನು ಮಾಡುತ್ತಾರೆ. ಈ ಮನವಿಯನ್ನು 'ರಾಷ್ಟ್ರೀಯ' ಮನವಿಯೆಂದು ಕಬ್ಬನ್ನು ಪರಿಗಣಿಸಿ ಅದನ್ನು ಪುರಸ್ಕರಿಸುತ್ತಾರೆ. ಹೀಗೆ ಬ್ರಿಟಿಷ್ ಆಡಳಿತದಲ್ಲಿ ಮಡಿಕೇರಿ ಶೈಕ್ಷಣಿಕ ಕೇಂದ್ರವಾಗಿ ಬೆಳೆಯಲು ಪ್ರಾರಂಭಿಸುತ್ತದೆ. ಇದೇ ಸಂದರ್ಭದಲ್ಲಿ ಬಾಸೆಲ್ ಪ್ರೊಟೆಸ್ಟ್ಯಾಂಟ್ ಮಿಷನ್ ಕೂಡ ಹರ್ಮನ್ ಮ್ಯೊಗ್ಲಿಂಗ್‌ನ ನೇತೃತ್ವದಲ್ಲಿ, ಮುಂದೆ ರಿಕ್ಟರ್, ಮಾರ್ಡೆನ್‌ನ ಸ್ಪರ್ಧೆಯಲ್ಲಿ ಹಲವು ಶೈಕ್ಷಣಿಕ ಸುಧಾರಣೆಗಳು ಜಾರಿಗೆ ಬಂದು ಮಡಿಕೇರಿಯ ಸೆಂಟ್ರಲ್ ಸ್ಕೂಲ್ ಪ್ರತಿಷ್ಠಿತ ಸ್ಥಾನವನ್ನು ಪಡೆಯುತ್ತದೆ. ಆದರೆ ಮಡಿಕೇರಿಯಲ್ಲಿ ಸ್ವಾತಂತ್ರ್ಯ ದೊರೆಯುವರೆಗೂ ಪದವಿ ಕಾಲೇಜನ್ನು ಪ್ರಾರಂಭಿಸಲು ಬ್ರಿಟಿಷರು ಆಸಕ್ತಿವಹಿಸಲಿಲ್ಲ. ಶಿಕ್ಷಣ ವೃದ್ಧಿ, ಅದರಿಂದುಂಟಾದ ಅರಿವು ಪಟ್ಟಣದ ಸಂಸ್ಕೃತಿಯನ್ನು ಹುರಿದುಂಬಿಸುತ್ತದೆ.

ಆಂಗ್ಲ ಶಿಕ್ಷಣದ ಪ್ರಭಾವದಿಂದ ಮಧ್ಯಮವರ್ಗ ಸೃಷ್ಟಿಯಾದಾಗ ಕೊಡಗಿನಲ್ಲಿ ರಾಜಕೀಯ ಆಕಾಂಕ್ಷೆಗಳು ಪುಟಿಯ ತೊಡಗಿದವು. ಮುಖ್ಯವಾಗಿ ಮಡಿಕೇರಿ ಪಟ್ಟಣವು ಅಂತಹ ಜಾಗೃತಿಯ ಕೇಂದ್ರವಾಯಿತು. ಲ್ಯಾಂಡ್ ಹೋಲ್ಡರ್ಸ್ ಸಂಘವು ೨೦ನೇ ಶತಮಾನದ ಆರಂಭದಲ್ಲಿ ಅಸ್ತಿತ್ವಕ್ಕೆ ಬಂದು, ಅದು ಕಮೀಷನರನ ದರ್ಪಿಷ್ಠ ಆಳ್ವಿಕೆಯನ್ನು ಪ್ರಶ್ನಿಸ ತೊಡಗಿತು. ಹೀಗಾಗಿ, ೧೯೨೪ರಲ್ಲಿ ಕೊಡಗು ಶಾಸನ ಸಭೆಯು ಅಸ್ತಿತ್ವಕ್ಕೆ ಬಂದಿತು. ಕೊಡಗನ್ನು ದೂರದ ಬೆಂಗಳೂರಿನಿಂದ ಉಸ್ತುವಾರಿ ಮಾಡುವುದು ಕಷ್ಟವೆಂದು ತೋರಿಬಂದುದರಿಂದ, ವಸಾಹತುಶಾಹಿ ಆಡಳಿತವು ೧೯೪೦ರಲ್ಲಿ ಮುಖ್ಯ ಕಮೀಷನರನ ಕಛೇರಿಯನ್ನು ಕೂಡ ಮಡಿಕೇರಿಗೆ ವರ್ಗಾಯಿಸಿತು.

ಆದರೆ ಮಡಿಕೇರಿಯು ಕ್ರಮೇಣ ರಾಷ್ಟ್ರೀಯವಾದ ಬೆಳವಣಿಗೆಯ ಕೇಂದ್ರವೂ ಆಗ ತೊಡಗಿತು ಹಲವಾರು ಚಳುವಳಿಗಳು ಆಗಾಗ್ಗೆ ನಡೆಯ ತೊಡಗಿದವು. ಪತ್ರಿಕೆಗಳು ಹೊರ ಬಂದವು, ಸಾಹಿತ್ಯಿಕ ಬೆಳವಣಿಗೆಗಳು ಕೂಡ ಆರಂಭಗೊಂಡು ನಗರೀಕರಣಕ್ಕೆ ಇನ್ನೊಂದು ಆಯಾಮವನ್ನು ಒದಗಿಸಿತು. ಆದರೆ ನಾನಾ ಕಾರಣಗಳಿಂದಾಗಿ ಸ್ವಾತಂತ್ರ್ಯ ಹೋರಾಟವು ದುರ್ಬಲವಾಗಿತ್ತು.

ಹೀಗೆ ವಸಾಹತುಶಾಹಿ ಕಾಲದಲ್ಲಿ ಮಡಿಕೇರಿಯ ವ್ಯವಸ್ಥಿತವಾಗಿ ಬೆಳೆದು ನಗರೀಕರಣವನ್ನು ಹೊಂದಿ ಪಟ್ಟಣವಾಯಿತು. ಎಲ್ಲಾ ಕಡೆ ಕಂಡು ಬರುತ್ತಿದ್ದ ಆಧುನಿಕ ತಂತ್ರಜ್ಞಾನ, ಹೊಸಶಿಕ್ಷಣ ಹಾಗೂ ಹೊಸ ಆಡಳಿತದ ವಿಧಾನಗಳು ಮಡಿಕೇರಿಯಲ್ಲಿಯೂ ಪರಿವರ್ತನೆಗೆ ಎಡೆಮಾಡಿಕೊಟ್ಟಿತ್ತು. ಆಧುನೀಕರಣ ಹಾಗೂ ನಗರೀಕರಣದ ನಡುವಿನ ಸಂಬಂಧ, ನಗರ ರಾಜಕೀಯದ ಕಾರ್ಯಭಾರ, ಪ್ರಭಾವಶಾಲಿ ಸ್ಥಳೀಯ ವರ್ಗಗಳು, ಪುರಸಭೆ ಮತ್ತು ಅದರ ಆಡಳಿತ ಮುಂತಾದುವು ಈ ಪ್ರಕ್ರಿಯೆಯ ಮೇಲೆ ಪರಿಣಾಮ ಬೀರಿದವು. ವಸಾಹತುಶಾಹಿಯ ಆಡಳಿತವು ಪಟ್ಟಣದ ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಜೀವನದ ಮೇಲೆ ಪ್ರಭಾವ ಬೀರಿದಾಗ ಆ ಪ್ರದೇಶದ ಜಾತಿ ಹಾಗೂ ಪದ್ಧತಿಗಳೊಂದಿಗೆ ನೇಯಲ್ಪಟ್ಟ ಸಾಂಪ್ರದಾಯಿಕ, ಸಾಂಸ್ಕೃತಿಕ ಜೀವನವು

ಕದಡಲ್ಪಟ್ಟಿತು. ಚಿಂತನಶೀಲ ಮಧ್ಯಮ ವರ್ಗ, ಬಂಡವಾಳವಾದ ಹಾಗೂ "ಕಲೋನಿಯಲ್ ಆಧುನಿಕತೆ"ಯು ಮಡಿಕೇರಿಯ ನಗರೀಕರಣಕ್ಕೆ ಹೆಚ್ಚಿನ ಉತ್ತೇಜನವನ್ನು ನೀಡಿದವು.

ಆದರೆ ಮಡಿಕೇರಿಯ ನಗರೀಕರಣದಲ್ಲಿ ಕಾಣುವ ದ್ವಂದ್ವವೆಂದರೆ ಒಂದೆಡೆ ಆಧುನೀಕರಣ ಹಾಗೂ ಇನ್ನೊಂದೆಡೆ ಅನಭಿವೃದ್ಧಿ. ನಗರೀಕರಣವು ಮಡಿಕೇರಿಯನ್ನು ಒಂದು ಶೋಷಣಾಧಾರಿತ ವಸಾಹತುಷಾಹಿ ಆಡಳಿತದ ಮುಖ್ಯ ಕೇಂದ್ರವನ್ನಾಗಿ ಮಾಡುತ್ತದೆ; ಕೊಡಗನ್ನು ಪಾಶ್ಚಿಮಾತ್ಯ ಮಾರುಕಟ್ಟೆಯ ಶಕ್ತಿಗಳೊಂದಿಗೆ, ಅಧೀನ ಸ್ಥಿತಿಯಲ್ಲಿ ವಿಲೀನಗೊಳಿಸಿ 'ಮಿಗತೆ'ಯನ್ನು ಸೆಳೆದುಕೊಳ್ಳಲು ಅವಕಾಶ ಮಾಡಿಕೊಡುತ್ತದೆ.

ಇಂದು ಕೂಡ ಮಡಿಕೇರಿಯ ನಗರೀಕರಣದ ಪ್ರಕ್ರಿಯೆಯಲ್ಲಿ ವಸಾಹತಷಾಹಿಯ ಪ್ರಭಾವ ಮುಂದುವರಿಯುತ್ತಿರುವುದನ್ನು ಕಾಣಬಹುದು. ಅಂದು ರೈಲು ಸಂಪರ್ಕವನ್ನು ಏರ್ಪಡಿಸುವ ಒತ್ತಡವಿದ್ದರೂ ಹಲವು ಕಾರಣಗಳು ಅದು ಉಂಟಾಗಲು ಅವಕಾಶ ನೀಡಲಿಲ್ಲ. ಇಂದೂ ಕೂಡ ರೈಲು ಮಾರ್ಗದ ಜೋಡಣೆಗೆ ವಿರೋಧ ಕಂಡುಬರುತ್ತಿದೆ.

ಹೀಗೆ ಮಡಿಕೇರಿಯು ವಸಾಹತುಷಾಹಿ ಕಾಲದಲ್ಲಿ ನಗರೀಕರಣದ ಪ್ರಕ್ರಿಯೆಗೆ ವಿಶಿಷ್ಟ ಈಡಾಯಿತು ಎನ್ನಬಹುದು.

ಆಧಾರಸೂಚಿ ಹಾಗೂ ಟಿಪ್ಪಣಿಗಳು

೧. Louis Wirth, 'Urbanism as a way of life' *American Journal of Sociology*, vol. 44, No. 1, July, 1938; p. 1.

೨. Kenneth Ballhatchet and John Harnison (eds.), *The City in South India*, London, 1980, p. 7.

೩. Mohana Krishna Rai, *'Urbanisation of Mangalore – A Colonial Experience'*, (1799 –1947), Unpublished Ph.D thesis submitted to Mangalore University, 2003, p. 6.

೪. C.H. Philips, *William Bentinak*, Vol. I, p. 700.

೫. I.M. Muthanna, *A Tiny Model State of South India*, Pollibetta, 1953,p35.

೬ B.N. Sri Sathyan, *Coorg District*, *Mysore Steate Gazetteer*, Bangalore,1965,p.74.

೭. Ibid., p.79.

೮. G. Richter, *Gazetteer of Coorg*, Natural Features of the country and the Social and Political condition of its Inhabitants, 1870 (1984), New Delhi, p. 370.

೯. G.Richter.,op.cit., p.372.

೧೦. G.Richter, op.cit., p.372.

೧೧. *Kodagu Gazetteer*, Govt. of Karnataka, Bangalore, 1992, p. 450.

೧೨. Lieutnant Cannor, *Memoir of the Codagu Survey commonly written Koorg*, Part II, Bangalore, 1870, p. 41.

೧೩. *Report on Education in Coorg from 1834–1882*, by Lewis Rice, District Records Office, Madikeri, p. 4.

೧೧೬

ಗಾಜಿನ ಮೇಲಿನ ಶೃಂಗಾರ ಚಿತ್ರಗಳು

ಡಾ. ಎನ್.ಎಂ. ಅಂಗಡಿ*

೧೮-೧೯ನೇ ಶತಮಾನದ ಅವಧಿಯು ಸಂಪೂರ್ಣ ಪಾಶ್ಚಿಮಾತ್ಯರ ಪರಮಾವಧಿ. ಶಿಕ್ಷಣ, ವ್ಯಾಪಾರ, ಅಧಿಕಾರ ಸಂಪೂರ್ಣ ವಿದೇಶಿಯರ ಕೈವಶದಲ್ಲಿದ್ದವು. ಹೀಗಾಗಿ ಭಾರತೀಯರು ಇವರಿಗೆ ಹೊಂದಿಕೊಂಡು ಹೋಗ ಬೇಕಾಗಿತ್ತು. ಅಲ್ಲದೇ ಇವರ ದೌರ್ಜನ್ಯಗಳನ್ನು ಅನುಭವಿಸ ಬೇಕಾಗಿತ್ತು. ಇಂಥ ಸಮಕಾಲೀನ ಸಂದರ್ಭದಲ್ಲಿ ಕಲಾವಿದರ ಸಂವೇದನೆಗಳು ಕೂಡ ಇವರ ಭಾವಾಭಿವ್ಯಕ್ತಿಗೆ ಸ್ಪಂದಿಸು ತ್ತಿದ್ದವೆಂದು ಈ ಗಾಜಿನ ಮೇಲಿನ ಚಿತ್ರಗಳು ತಿಳಿಸುತ್ತವೆ.

ಇಲ್ಲಿ ಸಂಯೋಜಿತಗೊಂಡಿರುವ ಸ್ತ್ರೀ-ಪುರುಷ ಪ್ರತಿಮೆ ಗಳು ಪರಸ್ಪರ ಪ್ರೇಮಾಲಾಪಣೆ ಮಾಡುತ್ತಿರುವ ವೈವಿಧ್ಯಮಯ ಭಾವಭಂಗಿಗಳಲ್ಲಿ ಭಿತ್ತರಗೊಂಡಿವೆ. ಕೆಲವು ಚಿತ್ರಗಳಲ್ಲಿ ಪ್ರೇಮಿಗಳು ಕುಳಿತ ಭಂಗಿಗಳಲ್ಲಿದ್ದಾರೆ. ಪ್ರೇಮಿಗಳ ವಸ್ತ್ರಾಭರಣ ಗಳು ಒಂದಕ್ಕಿಂತ ಒಂದು ಭಿನ್ನವಾಗಿವೆ. ಚಿತ್ರ-೧ರಲ್ಲಿ ಪ್ರೇಮಿ ಗಳು ಅಲಂಕೃತ ಮಂಚದ ಮೇಲೆ ಕುಳಿತು ಒಬ್ಬರನ್ನೊಬ್ಬರು ಬಳಸಿಕೊಂಡು ಯಾವುದೋ ಯೋಚನೆಯಲ್ಲಿರುವಂತೆ ಬಿಂಬಿತಗೊಂಡಿದ್ದಾರೆ. ಇಲ್ಲಿ ಸ್ತ್ರೀಯು ಅತಿಯಾದ ಅಲಂಕಾರ ಮಾಡಿಕೊಂಡು ಪ್ರೇಮಿಯನ್ನು ರಂಜಿಸುವಂತೆ ಚಿತ್ರಿತಗೊಂಡಿ ದ್ದಾಳೆ. ಚಿತ್ರ-೨ರಲ್ಲಿ ಪ್ರೇಮಿಗಳ ಭಾವ ಭಂಗಿಗಳು ನೋಡುಗ ನನ್ನು ರಂಜಿಸುವಂತೆ ಸಂಯೋಜಿತಗೊಂಡಿದ್ದು ಪ್ರೇಮಿಯು ಪ್ರಿಯತಮೆಯನ್ನು ಗಟ್ಟಿಯಾಗಿ ಕೈ ಹಾಗೂ ಕಾಲುಗಳಿಂದ ಬಳಸಿ ಮೋಹಿಸುತ್ತಿರುವಂತೆ ಕಲ್ಪಿತಗೊಂಡಿದ್ದಾರೆ. ಚಿತ್ರ-೩ರಲ್ಲಿ ಪ್ರೇಮಿಯು ಪ್ರಿಯತಮೆಯನ್ನು ಬರಸೆಳೆದು ಮುದ್ದಿಸು ತ್ತಿದ್ದರೆ ಸ್ತ್ರೀಯು ಲಜ್ಜೆತನದಿಂದ ಪ್ರೇಮಿಯು ತೋಳಿನಲ್ಲಿ ಬಂಧಿಯಾಗಿದ್ದಾಳೆ. ಚಿತ್ರ-೪ರಲ್ಲಿ ಪ್ರೇಮಿಯು ಪ್ರಿಯತಮೆ ಯನ್ನು ಕೈಗಳಿಂದ ಬರಸೆಳೆಯುತ್ತಿದ್ದಾನೆ. ಚಿತ್ರ-೫ರಲ್ಲಿ ಪ್ರಿಯತಮನು ಅಲಂಕೃತ ಕುರ್ಚಿಯ ಮೇಲೆ ಕುಳಿತಿದ್ದು ಕೈಯಲ್ಲಿ ಕಮಲದ ಹೂವನ್ನು ಹಿಡಿದು ಪ್ರೇಮನಿವೇದನೆ ಮಾಡುತ್ತಿದ್ದಂತೆ ಚಿತ್ರಿತಗೊಂಡಿದ್ದಾನೆ. ಇಲ್ಲಿ ಪ್ರಿಯತಮೆಯು ಅವನಿಗೆ ಹತ್ತಿರವಾಗಿ ನಿಂತು ಪ್ರೇಮಾಲಾಪನೆ ಮಾಡುತ್ತಿರುವ ಹಾಗೂ ಛಾಯಾಚಿತ್ರಕ್ಕೆ ಫೋಸ್ ಕೊಡುತ್ತಿರುವಂತೆ ಚಿತ್ರಿತ ಗೊಂಡಿದ್ದಾಳೆ. ಚಿತ್ರ-೬ರಲ್ಲಿ ಪ್ರೇಮಿಗಳಿಬ್ಬರೂ ಒಬ್ಬರಿಗೊಬ್ಬರು ಮೈತಾಗಿಸಿಕೊಂಡು ನಿಂತಿರುವ ಹಾಗೂ ಛಾಯಾಚಿತ್ರಕ್ಕೆ ಫೋಸ್ ಕೊಡುತ್ತಿರುವಂತೆ ಚಿತ್ರಿತಗೊಂಡಿದ್ದಾರೆ. ಇಲ್ಲಿ ಸ್ತ್ರೀಯ ಉಡುಪುಗಳು ವೈವಿಧ್ಯತೆಯಿಂದ ಕೂಡಿವೆ. ಅವಳ ಜಡೆಯಿಂದ ಪಕ್ಷಿಯ ರೆಕ್ಕೆ ಸಂಯೋಜಿತಗೊಂಡಿದ್ದು ಯಾವುದೋ ವೇಷ ಹಾಕಿದ ನಟನಾಭಂಗಿಯಲ್ಲಿದ್ದಾಳೆ. ಈ ಆರು ಚಿತ್ರಗಳಲ್ಲಿ ಪ್ರೇಮಿಗಳು ಪರಸ್ಪರ ಅಪ್ಪುಗೆ, ಪ್ರೇಮಾಲಾಪಣೆ, ಏಕಾಂತಭಾವ, ರತಿಭಾವ, ಶೃಂಗಾರಭಾವನೆಗಳು ಉದ್ದೀಪನಗೊಂಡಿವೆ.

ಪಾಶ್ಚಾತ್ಯ ಶೃಂಗಾರ ಕಲ್ಪನೆಯನ್ನು ಅನುಕರಿಸುವ ಈ ಚಿತ್ರಗಳು ದೃಶ್ಯಾನುಭವದ ಗ್ರಹಿಕೆಗೆ ಚೈತನ್ಯ ತುಂಬುತ್ತವೆ. ರಸಾನುಭವದಲ್ಲಿ ಶೃಂಗಾರಕ್ಕೆ ಪ್ರಾಧಾನ್ಯತೆ ಇದೆ. ಶೃಂಗಾರ ಭಾವವು ಗಂಡು ಹೆಣ್ಣುಗಳ ಸಂಗಮ ಹಾಗೂ ಸಂಭ್ರಮವನ್ನು ಉದ್ದೀಪಿಸುತ್ತದೆ. ಆ ಉದ್ದೀಪನ ಭಾವನೆಗಳು ಈ ಚಿತ್ರಗಳ ಗಂಡು ಹೆಣ್ಣುಗಳ ಪ್ರತಿಮೆಗಳಲ್ಲಿ ದೃಘೋಚರಗೊಡಿವೆ. ದಂಪತಿಗಳ ನೈತಿಕ ಶೃಂಗಾರ ಸಂಭ್ರಮ ಹಾಗೂ ಪ್ರೇಮಿಗಳ ಕಳ್ಳತನದ ಶೃಂಗಾರ ಸಂಭ್ರಮದ ಅನುಭಾವವು ಈ ಗಾಜಿನ ಚಿತ್ರಗಳಲ್ಲಿ ಒಡಮೂಡಿವೆ. ಈ ಚಿತ್ರಗಳಲ್ಲಿ ಭಾವಗಳ ಗ್ರಹಿಕೆ ಏನೇ ಇದ್ದರೂ ಪ್ರತಿಮೆಗಳ ಬಾಹ್ಯ ಸ್ವರೂಪವು ಅವರ ವ್ಯಕ್ತಿತ್ವವನ್ನು ತಿಳಿಯಪಡಿಸುತ್ತವೆ. ಅಲ್ಲದೇ ವೈಭವದ ಬದುಕನ್ನು ನಿದರ್ಶಿಸುತ್ತವೆ.

ಈ ಮೇಲೆ ತಿಳಿಸಿದಂತೆ ಬ್ರಿಟಿಷ ಅಧಿಕಾರಿಗಳು ಅಧಿಕಾರ ಚಲಾವಣೆಯ ಜೊತೆಗೆ ಅವರ ಶೃಂಗಾರ ಚೇಷ್ಟೆಗಳು ಸಹ ಭಾರತೀಯರ ಜೊತೆಗೆ ಬೆಸುಗೊಂಡಿದ್ದವು. ಇಲ್ಲಿನ ಪುರುಷ ಪ್ರತಿಮೆಗಳು ಸಂಪೂರ್ಣ ಬ್ರಿಟಿಷ ಅಧಿಕಾರಿಗಳ ವೇಷಭೂಷಣಗಳನ್ನು ಹಾಗೂ ದೈಹಿಕ ದರ್ಪಗಳನ್ನು ಸೂಚಿಸುತ್ತವೆ. ಬೆಲೆಬಾಳುವ ಉಡುಪುಗಳು, ಬೆಲೆಬಾಳುವ ಆಭರಣಗಳು ಹಾಗೂ ಬೆಲೆ ಬಾಳುವಂತಹ ಬಳಸುತ್ತಿದ್ದ ವಸ್ತುಗಳು ಅವರ ಮೌಲ್ಯವನ್ನು ತಿಳಿಸುತ್ತವೆ. ಸ್ತ್ರೀ ಪ್ರತಿಮೆಗಳು ಸಂಪೂರ್ಣ ಭಾರತೀಯ ಹೆಣ್ಣಿನ ದೈಹಿಕ ಲಕ್ಷಣಗಳನ್ನು ಹೊಂದಿದ್ದು ವೇಷ ಭೂಷಣಗಳೂ ಸಹ ಭಾರತೀಯತೆಯನ್ನು

* ಅಧ್ಯಾಪಕರು, ಶಿಲ್ಪ ಮತ್ತು ವರ್ಣಚಿತ್ರಕಲಾ ವಿಭಾಗ, ಕನ್ನಡ ವಿ.ವಿ., ಹಂಪಿ-೫೮೩೨೭೬.

ಪ್ರತಿನಿಧಿಸುತ್ತವೆ. ಬೆಲೆ ಬಾಳುವಂತಹ ಸೀರೆ, ಕುಪ್ಪಸ, ಲಂಗ, ರವಿಕೆ ಕುಸರಿ ಚಿತ್ತಾರಗಳಿಂದ ಕೂಡಿದ ದುಪ್ಪಟಗಳು, ವಪ್ಪಾಗಿ ಬಾಚಿಕಟ್ಟಿದ ತುರುಬು, ಅದಕ್ಕೆ ಆಭರಣಗಳ ಅಲಂಕಾರದ ಭೂಷಣ, ಕಂಠಾಭರಣಗಳು, ಕರ್ಣಾಭರಣಗಳು, ಮುತ್ತಿನ ಹಾಗೂ ಚಿನ್ನದ ಬಳೆಗಳು, ನಡುವಿನಲ್ಲಿ ಚಿನ್ನದ ಡಾಬು, ಕೈ ಹಾಗೂ ಕಾಲುಗಳ ಬೆರಳುಂಗುರಗಳು ಚಿನ್ನದ ತೋಡೆಗಳು ಅಲಂಕೃತಗೊಂಡಿರುವುದನ್ನು ಗಮನಿಸಿದರೆ ಆ ಕಾಲದ ಶ್ರೀಮಂತ ಮಹಿಳೆಯನ್ನು ತೋರಿಸುವುದಲ್ಲದೇ ನಮ್ಮ ಭಾರತೀಯ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ. ಇಲ್ಲಿ ಆರ್ಥಿಕ ಶ್ರೀಮಂತಿಕೆಯ ಜೊತೆಗೆ ಭಾರತೀಯ ಸ್ತ್ರೀ ಸಂಪ್ರದಾಯದ ಶ್ರೀಮಂತಿಕೆಯನ್ನು ಸಾರುತ್ತವೆ.

ಗಾಜಿನ ಮೇಲಿನ ಚಿತ್ರಗಳ ಕೆಲವು ಸ್ತ್ರೀಪ್ರತಿಮೆಗಳಲ್ಲಿ ಉಡುಪುಗಳು ವೈವಿಧ್ಯಮವಾಗಿ ರೂಪುಗೊಂಡಿವೆ. ವಿದೇಶಿ ಸಂಪ್ರದಾಯದ ಮಿನಿ ಸ್ಕರ್ಟ್ಸ್, ಸಾಕ್ಸ್ ಹಾಗೂ ಶೂಸ್‌ಗಳನ್ನು ಹೊಂದಿದ್ದು ತಲೆಯ ಮೇಲೆ ವಿಶಿಷ್ಟ ಟೊಪ್ಪಿಗೆಯನ್ನು ಹೊಂದಿದೆ. ಈ ಟೊಪ್ಪಿಗೆಗೆ ಪಕ್ಷಿಯ ಪುಚ್ಛವನ್ನು ಅಲಂಕರಿಸಲಾಗಿದೆ. ಕೆಲವು ಚಿತ್ರಗಳಲ್ಲಿ ಸ್ತ್ರೀಯ ಹಿಂದೆ ಪಕ್ಕಿಯ ರೆಕ್ಕೆಗಳನ್ನು ಸಂಯೋಜಿಸಲಾಗಿದೆ. ಈ ರೀತಿಯ ಸ್ತ್ರೀ ಪ್ರತಿಮೆಗಳು ನಾಟಕದ ಪಾತ್ರಧಾರಿಗಳಂತೆ ಕಲ್ಪಿತಗೊಂಡಿವೆ. ಕಲಾವಿದರು ಚಿತ್ರದ ಸೌಂದರ್ಯ ದೃಷ್ಟಿಯಿಂದ ವಿಶಿಷ್ಟ ವಸ್ತುಗಳನ್ನು ಸಂಯೋಜನೆ ಮಾಡಿರಬಹುದು. ಚಿತ್ರಗಳನ್ನು ಭಾರತೀಯ ಚಿತ್ರಕಲಾವಿದರೇ ರಚಿಸಿದ್ದರೂ ಸಹ ಐರೋಪ್ಯರ ಪ್ರಭಾವ ಎದ್ದು ತೋರುತ್ತದೆಯಲ್ಲದೇ ಅವರ ಆಶಯದಿಂದಲೂ ಕೂಡಿವೆ.

ಚಿತ್ರಗಳ ಪ್ರತಿಮೆಗಳು ಷಡಂಗ ಸೂತ್ರಗಳಿಂದ ರೂಪಿತಗೊಂಡಿಲ್ಲವಾದರೂ ನೋಡುಗನನ್ನು ಭಾವುಕನನ್ನಾಗಿ ನಿಲ್ಲಿಸುತ್ತವೆ. ಶೃಂಗಾರ ಭಾವವು ಸ್ಫುರಿಸುತ್ತದೆ. ಈ ಪ್ರತಿಮೆಗಳಲ್ಲಿ ಕಪ್ಪು ವರ್ಣದ ರೇಖೆಯದೇ ಪ್ರಧಾನ ಪಾತ್ರ. ರೇಖೆಯ ಸ್ಥೂಲತೆ, ಸೂಕ್ಷ್ಮತೆ ಹಾಗೂ ಚಲನೆಯ ಗತಿಯಿಂದ ಕಲಾವಿದನ ತಾಳ್ಮೆ ಹಾಗೂ ನಿಖರ ಪ್ರಜ್ಞೆಯನ್ನು ತಿಳಿಯಪಡಿಸುತ್ತದೆ. ಮಿತವಾದ ವರ್ಣಗಳಿಂದ ಸಂಯೋಜಿತಗೊಂಡ ಈ ಪ್ರತಿಮೆಗಳು ವ್ಯಕ್ತಿಗಳ ಮೈಕಾಂತಿಯನ್ನು ಕಲ್ಪಿತಗೊಳಿಸುತ್ತವೆ. ಈ ಹಂತದಲ್ಲಿ ಕಲಾವಿದನ ತಾಳ್ಮೆ ಹಾಗೂ ಸೌಂದರ್ಯ ಪ್ರಜ್ಞೆ ನಿಜಕ್ಕೂ ಅಭೂತ ಪೂರ್ವವಾದದ್ದು ಯಾಕೆಂದರೆ ನೈಜವಾದ ಗಾಜಿನ ಮೇಲ್ಮೈ ಮೇಲೆ ದುಂಡುತನದ ಛಾಯೆ ತರುವುದು ಕಷ್ಟಸಾಧ್ಯ. ಅಲ್ಲಿ ಕಲಾವಿದನ ಕೈಚಳಕದ ಅನುಭವ ಪ್ರಜ್ಞೆಯನ್ನು ಬೇಡುತ್ತದೆ. ಕಲಾವಿದನು ಪ್ರತಿಮೆಗಳ ಶಿರಭಾವಕ್ಕೆ ತೋರಿದಷ್ಟು ಆಸ್ಥೆಯನ್ನು ಇನ್ನುಳಿದ ಭಾಗಗಳಿಗೆ ನೀಡಿಲ್ಲವೆಂದು ಹೇಳಬಹುದು. ಅಲ್ಲಿ ಮೂಡಿ ಬಂದ ನೈಜತೆ ಹಾಗೂ ಸೂಕ್ಷ್ಮತೆಯ ವಿವರಗಳು ಇನ್ನುಳಿದ ಭಾಗಗಳಲ್ಲಿ ಮೂಡಿ ಬಂದಿಲ್ಲ. ಆದರೆ ಒಟ್ಟಾರೆ ಪ್ರತಿಮೆಗಳು ನೋಡುಗನನ್ನು ಗಮನ ಸೆಳೆಯುತ್ತವೆ. ಚಿತ್ರದ ಹಿನ್ನೆಲೆಯಲ್ಲಿ ಸಂಯೋಜಿತಗೊಂಡಿರುವ ಪರದೆಗಳ ವಿನ್ಯಾಸ, ಕಂಬಗಳ ವಿನ್ಯಾಸ, ನೆಲಹಾಸಿನ ವಿನ್ಯಾಸ ಹಾಗೂ ಫರ್ನಿಚರ್‌ಗಳ ವಿನ್ಯಾಸಗಳು ಆ ಸಮಕಾಲೀನ ವ್ಯಕ್ತಿಗಳ ಶ್ರೀಮಂತಿಕೆಯನ್ನು ವೈಭವೀಕರಿಸುತ್ತವೆ. ಬಹುತೇಕ ಈ ಕಲೆಯ ಚಿತ್ರರಚನಾಕಾರರು ಶ್ರೀಮಂತ ಅಧಿಕಾರಿಗಳ ಆಶ್ರಯದಲ್ಲಿದ್ದುಕೊಂಡು ಅವರ ಆಶಯದಂತೆ ಚಿತ್ರರಚನೆ ಮಾಡಿಕೊಡುತ್ತಿದ್ದರು. ಯಾಕೆಂದರೆ ಆ ಕಾಲದ ಶ್ರೀಮಂತರು ತಮ್ಮ ಅಧಿಕಾರದ ಜೊತೆಗೆ ಇಂಥ ಕಲಾವಿದರಿಗೆ ಆಶ್ರಯ ನೀಡಿ ತಮ್ಮ ವೈಭವವನ್ನು ಪ್ರದರ್ಶಿಸುತ್ತಿದ್ದಿರಬೇಕು. ಕೆಲವೊಂದು ಚಿತ್ರಗಳಲ್ಲಿ ವಿದೇಶಿ ಗಾಜಿನ ಲ್ಯಾಂಪ್‌ಗಳು ಸಂಯೋಜಿತಗೊಂಡಿದ್ದು, ವರ್ಣಮಯ ಗಾಜುಗಳಿಂದ ಹೊರಹೊಮ್ಮುವ ವರ್ಣಛಾಯೆಯು ವಾಸ್ತುವಿನ ಒಳಾಂಗಣವನ್ನು ಸುಂದರಮಯಗೊಳಿಸುತ್ತಿದ್ದವು. ಈಗಲೂ ಇಂಥ ಕ್ಯಾಂಡಲ್ ಬಲ್ಬ್‌ಗಳು. ನೆಲ್ಲಿಕಾಯಿ ಆಕಾರದ, ಸಿಲಿಂಡರ ಆಕಾರದ, ಚಂಡಿನಾಕಾರದ ಹಾಗೂ ವಿವಿಧ ಭುಜಾಕೃತಿಗಳ ಆಕಾರಗಳಲ್ಲಿ ರಚನೆಗೊಂಡಿದ್ದನ್ನು ತಿಳಿಯುತ್ತವೆ. ಅಂದರೆ ಗಾಜನ್ನು ಪ್ರಯೋಜನ ಮೂಲವಾಗಿ ಬಳಸಿಕೊಂಡರೂ ಸಹ ಕಲಾತ್ಮಕತೆಯು ಅನಾವರಣಗೊಂಡಿದೆ.

ಗಾಜಿನ ಮೇಲಿನ ಚಿತ್ರಗಳಲ್ಲಿ ಇನ್ನೊಂದು ವಿಶೇಷತೆ ಏನೆಂದರೆ ಮೆರಗು ಕಾಗದಗಳ ಬಳಕೆ, ಇಲ್ಲಿ ಕಲಾವಿದರು ೨೪ ಕ್ಯಾರೆಟ್ ಅಂಶದ ಚಿನ್ನದ ಹಾಳೆಯನ್ನು ಕೆಲವೊಂದು ಚಿತ್ರಗಳಲ್ಲಿ ಬಳಸಿಕೊಂಡಿರುವುದು ವಿಶೇಷತೆಯೆನಿಸುತ್ತದೆ. ಬಹುತೇಕ ಗಾಜಿನ ಚಿತ್ರಕಾರರು ಸಾಂಪ್ರದಾಯಿಕ ಚಿತ್ರರಚನೆಯಲ್ಲಿ ಬಳಸಿಕೊಂಡಿರುವರು. ಇಲ್ಲಿ ಕಲಾವಿದರು ಚಿತ್ರಗಳ ವಿಷಯ ವಿವೇಚನೆ ವಸ್ತುಗಳ ಬಳಕೆ ಹಾಗೂ ಪ್ರತಿಮೆಗಳ ವ್ಯಕ್ತಿತ್ವವನ್ನು ಶೃಂಗಾರದ ಅಂತರ ಭಾವವನ್ನು ನಿರೂಪಿಸುವಂತೆ ಅಭಿವ್ಯಕ್ತಪಡಿಸಿದ್ದಾರೆ.

ಗಾಜಿನ ಚಿತ್ರಗಳು ಬಹುತೇಕ ಅಲಂಕಾರದ ನೆಲೆಯಲ್ಲಿ ಸಿದ್ಧಗೊಂಡಿರುವುದರಿಂದ ಮನೆಯ ರಚನೆಗನುಗುಣವಾಗಿ ಅಂದಚಂದವನ್ನು ಆ ಸಮಕಾಲೀನ ಸಂದರ್ಭದಲ್ಲಿ ಹೆಚ್ಚಿಸಿದ್ದವು. ಈ ಗಾಜಿನ ಚಿತ್ರಗಳಲ್ಲಿನ ದಂಪತಿಗಳ ಸರಸದ ದೃಶ್ಯಗಳು ಶೃಂಗಾರ ಪ್ರಿಯರಿಗೆ, ಚಿತ್ರರಸಿಕರಿಗೆ ರಸಾನುಭವವನ್ನು ಕೊಡುತ್ತದೆಯಲ್ಲದೆ ಆ ಕಾಲದ ಶ್ರೀಮಂತರ ರಸಿಕತೆಯನ್ನು ಮೌಲೀಕರಿಸುತ್ತವೆ.

೧೧೮

ಮೂರ್ ಎಡ್ವರ್ಡ್, ೧೭೭೧-೧೮೪೮

ಡಾ. ಲೀಲಾ. ಬಿ.*

ಹಿನ್ನೆಲೆ

ಇಂಗ್ಲೀಷರಿಗೆ ಮಂಗಳೂರಿನ ಒಪ್ಪಂದ ಅಷ್ಟೇನೂ ಆಶಾದಾಯಕವಾಗಿರಲಿಲ್ಲ. ಮೈಸೂರು ಹುಲಿ ಟಿಪ್ಪು ಪ್ರಭಾವ ಶಾಲಿಯಾಗಿದ್ದ ಫ್ರೆಂಚ್‌ರೊಡಗೂಡಿ ಸ್ನೇಹ ಬೆಳೆಸಲು ಯತ್ನಿಸಿದ್ದ. ಕಾರನ್‌ವಾಲೀಸ್ ಗೌರ್‍ನರ್ ಜನರಲ್ ಆದಾಗ ಟಿಪ್ಪುವನ್ನು ಸೋಲಿಸಲು ಯತ್ನಿಸಿದ. ಟಿಪ್ಪು ತಿರುವಾಂಕೂರ್ ರಾಜನನ್ನು ಯುದ್ಧದಲ್ಲಿ ತೊಡಗಿಸಿದ. ಅವನು ಬ್ರಿಟಿಷರ ಸ್ನೇಹಿತ. ಇದೇ ನೆಪವಾಗಿ ಕಾರನ್‌ವಾಲೀಸ್ ಒಂದು ಒಕ್ಕೂಟ ರಚನೆಯಲ್ಲಿ ತೊಡಗಿಸಿಕೊಂಡ. ಟಿಪ್ಪುಸುಲ್ತಾನ್ ಇಷ್ಟರವರೆಗೆ ಒಂಟಿಯಾಗಿ ಹೋರಾಡಿದ್ದನು. ಆದರೆ ಒಕ್ಕೂಟಕ್ಕೆ ಇಂಬು ಕೊಟ್ಟವರೇ ಮರಾಟರು ಮತ್ತು ನೈಜಾಮ. ಇದು ಟಿಪ್ಪುವಿನ ಧೈರ್ಯವನ್ನು ಕುಂದಿಸಿತು. ಕೊನೆಯಲ್ಲಿ ಶ್ರೀರಂಗಪಟ್ಟಣದ ಯುದ್ಧದಲ್ಲಿ ಟಿಪ್ಪು ಸೋತು ತೇಜೋವಧೆ ಹೊಂದಿದ. ಶ್ರೀರಂಗ ಪಟ್ಟಣದಲ್ಲಿ ಒಡಂಬಡಿಕೆ ಶಾಂತಿ, ಸಂಧಾನ ಮಾಡಿಕೊಳ್ಳ ಬೇಕಾಯ್ತು. ಬ್ರಿಟಿಷರಿಗೆ ಅರ್ಧ ರಾಜ್ಯ ಕೊಡಲು ಒಪ್ಪಿ ೩೩ ಮಿಲಿಯನ್ ರೂಪಾಯಿ ಪರಿಹಾರ ಧನ ಕೊಡಬೇಕಾಯಿತು. ಟಿಪ್ಪುವಿಗೆ ಭಾರಿ ಹೊಡೆತ ಬಿದ್ದಿದ್ದರೂ ಮತ್ತೆ ಎದೆಗುಂದದೆ ಯುದ್ಧಕ್ಕೆ ಸಜ್ಜಾದ. ಈ ಮೇಲ್ಕಂಡ ವಿವರಗಳು ಎಲ್ಲರಿಗೂ ಗೊತ್ತಿರುವ ವಿಷಯವಾದರೂ, ಶತ್ರುಗಳು ಯುದ್ಧದಲ್ಲಿ ಮಾಡಿಕೊಂಡ ಒಕ್ಕೂಟ ಮತ್ತು ಕೈಗೊಂಡ ಧ್ವಂಸಕಾರಿ ಯತ್ನಗಳು ಮತ್ತು ಒಕ್ಕೂಟ ಪಡೆದ ಲಾಭ ಮತ್ತು ಪ್ರಲೋಭನ, ಮತ್ತು ದೇಶೀಯರ ನಡೆವಳಿಕೆ. ಇವೆಲ್ಲದರ ವಿವರ Moore, Edward, ಬರೆದಿರುವ A Narmative of the operations of Captain Littles Detachment and a Mahratta Army Commanded by Purseram Bhow during the late confedaracy in India against the Nawab Tippu sultan Bahadur 1794 ಪುಸ್ತಕದಲ್ಲಿ ದೊರಕುವುದು.

ಬಹು ಚಿಕ್ಕ ಪ್ರಾಯದಲ್ಲೇ ಮೂರ್ ಎಡ್ವರ್ಡ್ (೧೭೮೨) ಇಂಗ್ಲೆಂಡಿನಿಂದ ಭಾರತಕ್ಕೆ ಬಂದು ಈಸ್ಟ್ ಇಂಡಿಯಾ ಕಂಪೆನಿಯಲ್ಲಿ ಸೈನ್ಯಾಧಿಕಾರಿಯಾಗಿ ಸೇರಿದರು ಮತ್ತು ಸ್ಥಳೀಯ ಭಾಷೆಯಲ್ಲಿ ಪಾಂಡಿತ್ಯ ಹೊಂದಿದರು. ೧೭೮೨ ಕೇವಲ ಸಿಪಾಯಿ ತಂಡದಲ್ಲಿ ತರಬೇತಿ ಹೊಂದಿದವರು ೧೭೯೦ರಲ್ಲಿ ಕ್ಯಾಪ್ಟನ್ ಆದರು. ಜಾನ್ ಲಿಟಲ್‌ರವರು ಮರಾಠರ್ ಸೈನ್ಸದ್ ಮುಖ್ಯಸ್ಥರಾಗಿದ್ದರು.

ಎಡ್ವರ್ಡ್ ಮೂರ್ ಜಾನ್ ಲಿಟಲ್‌ರವರ ಒಡಗೂಡಿ, ಟಿಪ್ಪುಸುಲ್ತಾನನ ವಿರುದ್ಧ ಮಾಡಿದ್ದ ಒಕ್ಕೂಟದಲ್ಲಿ ಪಾಲ್ಗೊಂಡು, ಧಾರವಾಡದ ಮುತ್ತಿಗೆಯಲ್ಲಿ ಭಾಗವಹಿಸಿದರು. ಮೂರ್‌ರವರಿಗೆ ದೊರಿದುರ್ಗದಲ್ಲಿ (ಬೆಂಗಳೂರಿನ ಹತ್ತಿರ ಇದೆ) ಬಲವಾದ ಪೆಟ್ಟು ಬಿದ್ದುದರಿಂದ ಸ್ವಲ್ಪ ಕಾಲ ಯುದ್ಧದಲ್ಲಿ ಭಾಗವಹಿಸಲಿಲ್ಲ. ಮತ್ತೆ ೧೭೯೧ರಲ್ಲಿ ನಡೆದ ಸಮರದಲ್ಲಿ ಭಾಗಿಯಾದರು. ಯುದ್ಧದಲ್ಲಿ ತಮ್ಮ ಶೌರ್ಯ ಪರಾಕ್ರಮವನ್ನು ತೋರಿ 'ಗಾಜನೂರು' (ಶಿವಮೊಗ್ಗದ ಹತ್ತಿರ ಇದೆ) ಯುದ್ಧದ ಪರಾಕ್ರಮಿ ಎಂದೆನಿಸಿಕೊಂಡರೂ, ಯುದ್ಧದಲ್ಲಾದ ಗಾಯದ ನೋವಿನಿಂದ ಮರಳಿ ವಾಪಸ್ ಹೋಗಬೇಕಾಯಿತು.

ಸ್ವತಃ ಬರಹಗಾರರಾದ ಮೂರ್ ಎಡ್ವರ್ಡ್, ತಮ್ಮ ಯುದ್ಧದ ಅನುಭವಗಳನ್ನು ದಾಖಲಿಸಿರುತ್ತಾರೆ. ಈ ಪುಸ್ತಕ ನೈಜವಾಗಿ ಅನುಭವದಿಂದ ಬರೆದಿದ್ದು ಆದ್ದರಿಂದ ಮಹತ್ವ ಪಡೆಯುತ್ತೆ. ಈ ಕೃತಿ ಆ ಕಾಲದಲ್ಲಿ ಕೇವಲ ೪೦ ಪ್ರತಿಗಳು ಪ್ರಿಂಟಾಗಿ ವಿತರಿಸಿದ್ದರಿಂದ ಬಹುತೇಕ ಯಾವ ಗ್ರಂಥಾಲಯ ದಲ್ಲೂ ದೊರಕುವದಿಲ್ಲ. ಆದ್ದರಿಂದ ಮಹತ್ವಾಗಿದೆ. ಮತ್ತು ಕರ್ಣಾಟಕದ ಚರಿತ್ರೆಗೆ ಅಭ್ಯಾಸ ಮಾಡಬೇಕಾದ ಪುಸ್ತಕವಾಗಿದೆ.

ಕೃತಿ ಪರಿಚಯ

ಈ ಪುಸ್ತಕ ಬರೆದು ಸುಮಾರು ೨೧೮ ವರುಷವಾಗಿದೆ. ಐನೂರು ಪುಟಗಳ ಈ ಪುಸ್ತಕ ಈಸ್ಟ್ ಇಂಡಿಯಾ ಕಂಪೆನಿಯ ಸೈನ್ಯಾಧಿಕಾರಿಯಾದ ಮೂರ್ ಎಡ್ವರ್ಡ್‌ರವರ ಅನುಭವದ ದಾಖಲೆ. ಬಹಳಷ್ಟು ಹಳೇ ಇಂಗ್ಲಿಷ್ ಪದಗಳನ್ನು ಹೊಂದಿದ್ದು ಸುಲಭವಾಗಿ ಓದಲು ಸಾಧ್ಯವಿಲ್ಲ. ೨೬ ಅಧ್ಯಾಯಗಳಿರುವ ಈ ಪುಸ್ತಕದಲ್ಲಿ ಹಲವಕ್ಕೆ ಟಿಪ್ಪಣಿಗಳಿವೆ. ಮತ್ತು ಅನುಬಂಧ (Appendix) ಇದೆ (ಈಸ್ಟ್ ಇಂಡಿಯಾ ಕಂಪನಿ ಮತ್ತು

* ಫ್ಲಾಟ್ ೪೬, 'ಶ್ಯಾಮಲ', ಮೊದಲನೇ ಮಹಡಿ, ಮಾಟುಂಗ (ಡಾನ್ ಬಾಸ್ಕೊ ಸ್ಕೂಲ್ ಹಿಂಬಾಗ), ಮಾತುಂಗಾ, ಮುಂಬೈ-೪೦೦೦೧೯


The
MARCHES
of
CAPTAIN LITTLE'S DETACHMENT,
and of
PURSERAM BHOW'S ARMY,
During the late CONFEDERACY in INDIA
against
TIPPOO SULTAN;
Narrative of the Operations
Constructed chiefly from Authentic and Original
SURVEYS and MATERIALS,
MAJOR RENNELL,
to whom this MAP is INSCRIBED
By his much obliged, and most obedient Servant,
Edward Moor
TIPPOO
NIZAM

ಮರಾಠರಿಗೆ ಆದ ಒಪ್ಪಂದ ಈಸ್ಟ್ ಇಂಡಿಯಾ ಕಂಪೆನಿ ಮತ್ತು ಗ್ರೇಹಾಮ್ ಯುದ್ಧಕ್ಕೆ ಮೊದಲು ಮಾಡಿಕೊಂಡ ಒಪ್ಪಂದ (ಇವೆ) ಮತ್ತೊಂದು ಕುತೂಹಲಕಾರಿಯಾದ ವಿಷಯ. ಟಿಪ್ಪು ಹೊರಡಿಸಿದ ನಾಣ್ಯಗಳು ಮತ್ತು ವಿವರವಾದ ನಾಣ್ಯದ ಟಿಪ್ಪಣಿ ಬಹಳ ಉಪಯೋಗವಾಗಿದೆ ಮತ್ತೊಂದು ಹೆಚ್ಚುಗಾರಿಕೆ ವಿಷಯ ಆಕಾರಾದಿ ಅನುಕ್ರಮಣಿಕೆ.

ಮೊದಲಿನ ಮೂರು ಅಧ್ಯಾಯಗಳು ಒಕ್ಕೂಟವು ಧಾರವಾಡದ ಮೇಲೆ ಮಾಡಿದ ಮುತ್ತಿಗೆ ವಿಷಯವನ್ನು ವಿವರವಾಗಿ ತಿಳಿಸಿದೆ. ಪರಶುರಾಮ್ ಭಾವು ಮರಾಠರ ಮುಖ್ಯಾಧಿಕಾರಿ ಕರ್ನಲ್ ಫ್ರೆಡಿರಿಕ್‌ರವರ ಮರಣವನ್ನು ವಿವರವಾಗಿ ಕೊಟ್ಟಿದೆ. ಧಾರವಾಡದ ಕೋಟೆಗಳ ವಿವರಣೆ ಇದೆ.

ಆರನೆಯ ಅಧ್ಯಾಯದಲ್ಲಿ ಶ್ರೀರಂಗಪಟ್ಟಣದ ಕೋಟೆ, ಸಿಂಹಾವಲೋಕನ ಮತ್ತು ಅಲ್ಲಿ ಒಕ್ಕೂಟದ ಎಲ್ಲಾ ಬಣ ಸೇರಿತ್ತು. ಒಕ್ಕೂಟದ ಬಣ ಶ್ರೀರಂಗಪಟ್ಟಣದಿಂದ ಬೆಂಗಳೂರಿಗೆ ಪಯಣಿಸಿದ ವಿಸ್ತಾರವಾದ ವರ್ಣನೆ ಇದೆ. ಮರಾಠರ ಅಶ್ವದಳದ ನೈಪುಣ್ಯತೆ ಸಿಕ್ಕುತ್ತದೆ. ಬೆಂಗಳೂರಿನಲ್ಲಿ ಇದ್ದುದರಿಂದ ಅಧಿಕಾರಿಗಳಿಗೆ ಸುತ್ತಮುತ್ತ ಇದ್ದ ಕೋಟೆಗಳ ಪರಿಚಯವಾಯ್ತು.

ಮಳೆಗಾಲದಲ್ಲಿ ಸೈನ್ಯಗಳು ಬೇರೆ ಬೇರೆಯಾಗಿ ಶತ್ರುಗಳನ್ನು ಎದುರಿಸಲು ತಯಾರಿಕೆ ನಡೆಸಿದರು. ಹರಿಪಂತ, ಮರಾಠರ ಸೈನ್ಯ ಮತ್ತು ನೈಜಾಮನ ಸೈನ್ಯ ಲಾರ್ಡ್ ಕಾರನ್ ವಾಲೀಸ್ ಜೊತೆಗಿದ್ದು, ಪರಶುರಾಮ್ ಭಾವು ಮತ್ತು ಕ್ಯಾಪ್ಟನ್ ಲಿಟಿಲ್‌ರವರ ಪ್ರತ್ಯೇಕಿಸಿದ ದಳಗಳು ಸೇರಿ ಚಿತ್ರದುರ್ಗದ ಕಡೆ ಹೊರಟವು. ಸೈನ್ಯಗಳು 'ದೂರಿದುರ್ಗದ ಕೋಟೆ' [ಟಿಪ್ಪುವಿಗೆ ಸೇರಿತ್ತು] ಬೆಂಗಳೂರು ಹತ್ತಿರ ಇದೆ. ಸುಲಭವಾಗಿ ಆಕ್ರಮಿಸಬಹುದೆಂದು ಮರಾಠರು ತಿಳಿದಿದ್ದರು. ಆದರೆ ಅದು ಬಲಿಷ್ಟವದ ಕೋಟೆ. ಈ ಕೋಟೆಯ ಸುತ್ತಲಿದ್ದ ಸೈನಿಕರು ಶತ್ರುಗಳನ್ನು ಗುಂಡು ಹಾರಿಸಿ ಎದುರಿಸಿದರು. ಲೆಫ್ಟಿನೆಂಟ್ ಮೂರ್ ಮತ್ತು ಹಲವು ಸಿಪಾಯಿಗಳು ಗಾಯಗೊಂಡರು. ಯುದ್ಧ ಮುಂದುವರಿಸಿ 'ಸಿರಾ' ಕೋಟೆಯಲ್ಲಿ ಹಲವಾರು ದಿವಸ ತಂಗಿ, ಹರಿಪಂತನ ಸೈನ್ಯ ಸಿರಾವನ್ನು ಆಕ್ರಮಿಸಿತು.

ಸಿಪಾಯಿಗಳಿಗೆ ಬೇಸರವಾದಾಗ ಅವರನ್ನು ಸಂತೃಸಲು ಒಂದು ರೂಪಾಯಿ ಭತ್ಯ ಕೊಟ್ಟು ಕ್ಯಾಪ್ಟನ್ ಲಿಟಲ್ ಸಂತೋಷ ಪಡಿಸಿದ ವಿವರ ಸಿಕ್ಕುತ್ತದೆ. ಮತ್ತು ಹರಿಹಾಲ್ ಈಗಿನ ಹರಿಹರ ಎಂದು ಊಹಿಸಬಹುದು. ತುಂಗಭದ್ರೆಯ ಪೂರ್ವ ದಿಕ್ಕಿನಲ್ಲಿದೆ. ಸೈನ್ಯದ ಬೀಡು ಇಲ್ಲಿತ್ತು. ಹರಿಹಾಲ್ ಬಗ್ಗೆ ಹಲವು ಮಾಹಿತಿ ದೊರಕುವದು. ಇಲ್ಲಿಂದ ಯಾವ ವ್ಯಾಪಾರವೂ ಅಷ್ಟಾಗಿ ನಡೆಯದಿದ್ದರೂ ಇಲ್ಲಿ ಸ್ವಯಂ ಪ್ರೇರಿತರಾಗಿ ಜನ ತಮ್ಮ ಬಟ್ಟೆ ತಾವೇ ನೂಲುತ್ತಾರೆ ಮತ್ತು ವ್ಯವಸಾಯವನ್ನು ಮಾಡುತ್ತಾರೆ. ಮತ್ತೊಂದು ಕುತೂಹಲಕಾರಿ ಯಾದ ಸಂಗತಿ, ಬರೆಯುವ ಪೇಪರ್ ಉತ್ಪಾದನೆ. ಆದರೆ ಇದರ ಮಾರಾಟವಾಗದಿರಲು ಕಾರಣ, ಇದರ ಗುಣಮಟ್ಟ ಪೇಪರ್ ಪಲ್ಪ ಹೇಗೆ ಮಾಡುತ್ತಿದ್ದರೆಂಬ ವರ್ಣನೆ ಸಿಗುತ್ತದೆ. ಹಳೇ ಬಟ್ಟೆ, ಹಳೇ ಟೆಂಟ್ ಅದೂ ಇಲ್ಲದಿದ್ದರೆ ಮರದ ತೊಗಟೆಯನ್ನು ನೆನಸಿ, ಸರಿಯಾಗಿ ಕಲೆಸಿ ಅದಕ್ಕೆ ಸರಿಯಾಗಿ ಸುಣ್ಣ ಸೇರಿಸಿ ದ್ರವಕೋಶದಲ್ಲಿ ಇಡುವರು. ಆಮೇಲೆ ಇದನ್ನು ಒಣಗುವುದಕ್ಕೆ ಇಡುವರು. ಗೋಂದಿನ ನೀರಿಗೆ ಕುಟ್ಟಿದ ಪಲ್ಪ ಹಾಕುವುದು. ಇಂಕಾ ಗೋಂದಿನ ಮರಗಳು ಹಲವಾರು ಇಲ್ಲಿ ಇವೆ. ಇದಕ್ಕೆ ಬಾಬುಲ್ ಮರ ಎನ್ನುತ್ತಾರೆ. ಸ್ಥಳೀಯರಿಗೆ ಇದರ ಪರಿಚಯವಿದೆ. ಗೋಂದು ಪೇಟೆಯಲ್ಲಿ ಖರೀದಿಗೆ ಸಿಕ್ಕುತ್ತದೆ.

ಶತ್ರುಗಳು ಮುಂದೆ ಶಿವಮೊಗ್ಗೆಯ ಕಡೆ ಪಯಣಿಸಿದ್ದು ಮತ್ತು ಅತ್ಯಂತ ಬಲಿಷ್ಟವಾದ ಶಿವಮೊಗ್ಗೆಯ ಕೋಟೆಯನ್ನು ಆಕ್ರಮಿಸಿದ್ದ ವಿವರ ಇದೆ. ಹರಿಹಾಲ್, ಹೂಲಿಹೊನಾರೆ ಮತ್ತು ಶಿವಮೊಗ್ಗ ಮೂರನ್ನೂ ಹೋಲಿಸಿದರೆ ಬೆಟ್ಟಗುಡ್ಡಗಳಲ್ಲಿ ಕಡಿಮೆ ನೀರಿದ್ದಲ್ಲಿ ಹೊಡೆದಾಟುವುದು ಕಷ್ಟವಿಲ್ಲವೆಂಬ ಅಭಿಪ್ರಾಯ ಬರುತ್ತದೆ ಎಂದು ದಾಖಲಿಸಿದೆ. ಶಿವಮೊಗ್ಗಿಯನ್ನು ಮರಾಠರು ಲೂಟಿ ಮಾಡಿ ಹಲವು ಪ್ರದೇಶಗಳನ್ನು ಸುಟ್ಟಿರುವದು ಮತ್ತು ಹಲವುದರ ಪುನರ್ವಸತಿ ಮತ್ತು ಹೊಸಪೇಟೆಗ ಆರಂಭ ಇವುಗಳು ಕಂಡುಬಂದು ಜೊತೆಗೆ ರಸ್ತೆಗಳು ದುರಸ್ತಿಯಾಗಿರುವ ಸಂಗತಿ ತಿಳಿದುಬರುತ್ತದೆ. ಕ್ಯಾಪ್ಟನ್ ಲಿಟರ್‌ರವರ ನೇತೃತ್ವದಲ್ಲಿ ಗಾಯಗೊಂಡು ಖಾಯಿಲೆಯಿಂದ ಬಳಲುತ್ತಿರುವ ಹಲವಾರು ಸರದಾರರನ್ನು ಹರಿಹಾಲ್‌ಗೆ ಕಳುಹಿಸಿದರು. ಲೆಫ್ಟಿನೆಂಟ್ ಮೂರ್ ಗಾಯಗೊಂಡಿದ್ದರು. ಅವರಿಗೆ ವಿಪರೀತ ಪೆಟ್ಟಾಗಿತ್ತು ಲೆಫ್ಟಿನೆಂಟ್ ಫೀಲ್ಡ್‌ರವರು ಆರೋಗ್ಯ ಸುಧಾರಣೆಗೆಂದು ಪಯಣಿಸಿದರು. ಹೀಗೆ ಸೈನ್ಯ ಸಾಕಷ್ಟು ನಷ್ಟ ಅನುಭವಿಸಿತು.

ಕಾಲ ಕಾಲಕ್ಕೆ ವಿಪರೀತ ಕಟ್ಟುಕಕೆಯಾಯಿತು. ಬ್ರಾಹ್ಮಣರೆಲ್ಲಾ ಮಲಿನವಾದಂತೆ ವರ್ತಿಸಿದರು. ತುಂಗಭದ್ರೆ ಹತ್ತಿರ ಇದ್ದರೂ ಎಲ್ಲರನ್ನೂ ಶುದ್ಧ ಮಾಡುವಳೆಂಬ ನಂಬಿಕೆ ಇರಲಿಲ್ಲ. ಪರಶುರಾಮ್ ಭಾವು. ತುಂಗ ಮತ್ತು ಭದ್ರ ನದಿ ಸೇರುವ ಕಡೆ ಇದ್ದ ಹಳ್ಳಿಯಲ್ಲಿ ಹತ್ತು ಸಾವಿರ ಬೆಲೆ ಬಾಳುವ ಚಿನ್ನ, ಬೆಳ್ಳಿ ಬ್ರಾಹ್ಮಣರಿಗೆ ದಕ್ಷಿಣೆ ಕೊಟ್ಟು ಸ್ವಲ್ಪಮಟ್ಟಿಗೆ ಪಾರಾದ. ಆದರೆ ಇದನ್ನು ಅಸ್ತ್ರವಾಗಿಟ್ಟುಕೊಂಡು ಮುಸಲ್ಮಾನರೂ ಮತ್ತು ಕೆಳವರ್ಗದ ಹಿಂದುಗಳು ಆಗಾಗ ಹಂಗಿಸುತ್ತಿದ್ದರು. ಆ ಕಾಲದ ಜಾತಿ ಪದ್ಧತಿ ಬಂಧನದಿಂದ ಪರಶುರಾಮ್ ಭಾವು ಸಂಗಡ ಯಾರೂ ಸಹಕರಿಸಲು ಸಿದ್ಧರಿರಲಿಲ್ಲ. ಪೂರ್ಣ ಸ್ವಚ್ಛತೆಗೆ ಭಾವು ಅಣಿಯಾದ.

ಶಿವಮೊಗ್ಗಿಯ ಕೋಟೆ ದಾಟಿ ಸೈನ್ಯ ಮುಂದುವರಿದಾಗ ಹಲವು ವಿಸ್ಮಯಕಾರಿ ವಿಷಯಗಳು ಕಂಡುಬಂದವು. ಇಲ್ಲಿನ ಸ್ಮಶಾನ ವರ್ಣನೆ ಸಿಕ್ಕುತ್ತದೆ.

ಹೆಣಗಳನ್ನು ಹೂಳಿ ಅದರ ಮೇಲೆ ಚಿಕ್ಕ ಚಿಕ್ಕ ಕಲ್ಲುಗಳನ್ನು ಅಳವಡಿಸಿರುವುದರಿಂದ ಅದನ್ನು ಸಿಪಾಯಿಗಳು ಹಾಸಿಗೆಯಂತೆ ಉಪಯೋಗಿಸುತ್ತಾರೆ ಮತ್ತು ಅದರ ಮೇಲೆ ನಿದ್ರಿಸುವರು. ಶಿವಮೊಗ್ಗದ ಹತ್ತಿರ ಇರುವ ಗಾಜನೂರು ಯುದ್ಧದಲ್ಲಿ ಎಡ್‌ವರ್ಡ್ ಮೂರ್‌ರವರು ಭಾಗಿಯಾಗಿದ್ದರು. (೨೯.೧೨.೧೭೯೧). ಗಾಜನೂರು ಯುದ್ಧದಲ್ಲಿ ಅತ್ಯಂತ ಪರಾಕ್ರಮಿ ಎನಿಸಿ ಬ್ರಿಟಿಷರ ಮೆಚ್ಚಿಗೆಗೆ ಪಾತ್ರರಾದರೂ ಟಿಪ್ಪುವಿನ ಬಲಿಷ್ಟ ಸೈನ್ಯಕ್ಕೆ ಸೋಲಬೇಕಾಯಿತು. ಯುದ್ಧದಲ್ಲಿ ಆದ ಗಾಯದಿಂದ ಮೂರ್‌ರವರು ತಮ್ಮ ಊರಿಗೆ ತೆರಳ ಬೇಕಾಯಿತು. ತಮ್ಮ ಸುದೀರ್ಘ ರಜೆಯಲ್ಲಿ ನೋವಿನಿಂದ ಬಳಲಿದ್ದರೂ ತಮ್ಮ ಅನುಭವವನ್ನು ದಾಖಲಿಸಿದರು (೧೭೯೪).

ಗಾಜನೂರು ಯುದ್ಧದಲ್ಲಿ ಭಾಗಿಯಾದ ಶಿವಮೊಗ್ಗಿಯಲ್ಲಿ ಟಿಪ್ಪು ಮತ್ತು ಶತ್ರುಗಳ ಹಲವಾರು ಶಸ್ತ್ರಾಸ್ತ್ರಗಳು ನೆಲದ ಮೇಲೆ ಬಿಟ್ಟುಹೋಗಿರುವುದು ಕಂಡುಬರುತ್ತೆ. ಮತ್ತೊಂದು ಸುರಂಗಮಾರ್ಗದಲ್ಲಿ ಹಲವಾರು ಹೆಣಗಳನ್ನು ಹೂಳಿರುವುದು ಕಂಡುಬಂದಿದೆ. ಮತ್ತೊಂದು ವಿಸ್ಮಯಕಾರಿ ಸಂಗತಿಯನ್ನು ತಿಳಿಸಿದ್ದಾರೆ.

ತರಿಕೆರೆಗೆ ಹದಿಮೂರು ಮೈಲು ದೂರವಿರುವ (Ajjampur) ಅಜ್ಜಂಪುರದಲ್ಲಿ ಒಂದು ಚಿಕ್ಕ ಕೋಟೆ ಇದೆ. ಇಲ್ಲಿ ಒಂದು ದೊಡ್ಡ ಮರ ಇದೆ. ಈ ಮರಕ್ಕೆ ಹಲವಾರು ಘಂಟೆ ಕಟ್ಟಿದೆ. ಇದನ್ನು ಇಲ್ಲಿನ ನಾಗರೀಕರ ನಂಬಿಕೆಯಿಂದ ಕಟ್ಟಿದ್ದು. ಇದನ್ನು ಆಂಗ್ಲರು ಮುಟ್ಟಬಾರ ದೆಂದೂ ಮಲಿನವಾಗುವುದೆಂದು ನಂಬಿಕೆ. ಆದರೆ ಸಿಪಾಯಿಗಳು ತಮಗೆ ಬೇಕೆಂದು ಹಲವು ಘಂಟೆಗಳನ್ನು ತೆಗೆದುಕೊಂಡರು. ಇದರಿಂದ ಕುಲದೇವತೆಗೆ ಅವಮಾನ ವಾಗುತ್ತದೆಂದೂ ಮತ್ತು ಅವಳು ಕೋಪಗೊಳ್ಳುವಳೆಂದೂ ಅದರ ಪರಿಣಾಮ. ಹಸು ಎತ್ತುಗಳ ಮೇಲೆ ಆಗುತ್ತದೆಂದು ಸ್ಥಳೀಯರು ಭೀತರಾದರು. ಆದರೆ ಸೈನಿಕರು ಕೇಳುವರೆ ? ಇಂತಹದೆಂದು ಹಲವಾರು ನಂಬಿಕೆಗಳ ಬಗ್ಗೆ ಪ್ರಸ್ತಾಪವಿದೆ.

ಹೇರೂರಿನ ಕಿಲ್ಲೇದಾರನ ಶೌರ್‍ಯದ ಪ್ರಸ್ತಾಪಿಸಿದೆ. ಕಿಲ್ಲೇದಾರ ಎಷ್ಟೇ ವಿನಂತಿಸಿದರೂ ಬಾಗಿಲು ತೆಗೆಯದೆ ಶತ್ರುಗಳಿಗೆ ಏನನ್ನೂ ಸಿಗದ ಹಾಗೆ ನೋಡಕೊಂಡ. ಆದ್ದರಿಂದ ಅಡಜಮ್‌ಪುರದಲ್ಲಿ ಶತ್ರುಗಳಿಗೆ ಆಹಾರ ಸಿಕ್ಕಿಲ್ಲಿ. ರಹದಾರಿ ಪತ್ರ ತೋರಿಸಿದ್ದರಿಂದ ಗೇಟಿನೊಳಗೆ ಮತ್ತು ಧಾನ್ಯ ಆಹಾರ ಸಿಗುವ ಸ್ಥಳವನ್ನು ತೋರಿಸಿದ. ಸೈನ್ಯಕ್ಕೆ ಸ್ವಲ್ಪ ಕಾಲ ಸಮಾಧಾನವಾಯ್ತು. ಅಷ್ಟರಲ್ಲಿ ಶ್ರೀರಂಗಪಟ್ಟಣದಲ್ಲಿ ಸಂಧಾನ ಶುರುವಾಗಿತ್ತು. ಸುತ್ತಮುತ್ತ ಬೆಟ್ಟದ ಪ್ರದೇಶದಲ್ಲಿರುವ ಹೇರೂರು ಸಾಕಷ್ಟು ಬಿಡು ಬೀಸಾಗಿ ಸೈನ್ಯ ಕಂಗಾಲು ಅವಕಾಶವಿದೆ. ಹೇರೂರು ಪರಶುರಾಮ್ ಭಾವುಗೆ ಶರಣಾಗತಿಯಾಗಿದೆ. ಇದಿಷ್ಟು ತಾವು ಕೈಕೊಂಡ ಯುದ್ಧಗಳ ಮತ್ತು ಸಾಮಾಜಿಕ ಸಂಕ್ಷಿಪ್ತ ವರದಿ.

ಎಡವರ್ಡ್ ಮೂರ್ 'ಟಿಪ್ಪುಸುಲ್ತಾನ್' ಬಗ್ಗೆ ತಮ್ಮ ಅನಿಸಿಕೆಗಳನ್ನು ಮತ್ತು ಹಲವು ಮುಖ್ಯ ಅಧಿಕಾರಿಗಳ ಅಭಿಪ್ರಾಯವನ್ನು ಕೂಡ ಸುಧೀರ್ಘವಾಗಿ ಬರೆದಿದ್ದಾರೆ.

ಎಲ್ಲಾ ದೇಶದ ಪ್ರಮುಖ ನೇಕಾಗಳ ಹಾಗೆ ಟಿಪ್ಪುಸುಲ್ತಾನ ತನ್ನ ದೇಶವನ್ನು ವಿಸ್ತರಿಸಬೇಕು ಎಂಬ ಮಹದಾಸೆ ಹೊಂದಿದ್ದ. ಬಲಿಷ್ಟನಾದ ಟಿಪ್ಪುಗೆ ಆಂತರಿಕ ಶಕ್ತಿ ಇತ್ತು. ಅಪರಾಧಿಗಳಿಗೆ ಕ್ರೂರ ಶಿಕ್ಷೆ ವಿಧಿಸುತ್ತಿದ್ದ. ಅವನು ಸ್ವತಃ ಕ್ರೌರ್ಯ ಸ್ವಭಾವದವನೆಂದು ಹೇಳುವುದು ಕಷ್ಟ Major Renell ಪ್ರಕಾರ 'ಟಿಪ್ಪುಸುಲ್ತಾನ್ ಅತ್ಯಂತ ಮಹತ್ವಾಕಾಂಕ್ಷೆ ಉಳ್ಳವನು ಮತ್ತು ಅವನಿಗೆ ಯುದ್ಧ ಮತ್ತು ಹಣಕಾಸಿನ ಚತುರತೆ ಇದೆ. ಅದಕ್ಕೆ ಅವನು ಯಾವ ರೀತಿಯ ಕ್ರೌರ್ಯವನ್ನಾದರೂ ಎಸಗುವನು ಮತ್ತು ಪಟ್ಟು ಬಿಡದೆ ತನ್ನ ಕಾರ್ಯಯೋಜನೆಗೆ ಅಂಟಿಕೊಂಡಿರುವನು. ಹಿಂದೂಸ್ತಾನದ ಸ್ಥಳೀಯ ರಾಜರಲ್ಲಿ ಟಿಪ್ಪುಸುಲ್ತಾನ್ ಅತ್ಯಂತ ಬಲಿಷ್ಟವಾದ ಮತ್ತು ಪ್ರಭಾವಶಾಲಿ ವ್ಯಕ್ತಿ. ಅವನ ಪ್ರಜೆಗಳು ಅವನನ್ನು ಒಪ್ಪಿಕೊಂಡರೆ ಮಾತ್ರ ಅವನ ಆಳ್ವಿಕೆ ಮುಂದುವರಿಯಲು ಸಾಧ್ಯ.

ಮೇಲ್ಕಂಡ ಹೇಳಿಕೆಯನ್ನು ಗಮನಿಸಿದಾಗ ಅವನ ಸೈನ್ಯಾಧಿಕಾರಿಗಳು ಕೂಡಲೇ ಶತ್ರುಪಡೆಯನ್ನು ಸೇರುವರೆಂಬ ಅಭಿಪ್ರಾಯ ಬರುತ್ತೆ. ಆದರೆ ಟಿಪ್ಪುವಿನ ಸೈನಿಕರು ಅತ್ಯಂತ ವಿಧೇಯ ಮತ್ತು ನಂಬಿಕೆ ದೃಢ ನಿಷ್ಠೆ ಉಳ್ಳವರು. ಅವರು ಧೈರ್ಯದಲ್ಲಿ ಎಂದೂ ಕುಂದಿಲ್ಲ.

ಟಿಪ್ಪು ಸಮರ್ಥನಾದರೂ ಬ್ರಿಟಿಷರ ವಿರುದ್ಧ ಏಕೈಕಿಯಾಗಿ ಹೋರಾಡಲು ಅಸಮರ್ಥನಾದ. ಸ್ಥಳೀಯ ರಾಜರು ಕೂಡ ಅವನಿಗೆ ಸಹಕರಿಸಲಿಲ್ಲ. ಬ್ರಿಟೀಷರ ಒಕ್ಕೂಟದೊಂದಿಗೆ ಟಿಪ್ಪು ಒಂಟಿಯಾಗಿ ಹೋರಾಡಿದ. ಮರಾಠರ ಬಲಿಷ್ಠ ಸೇನೆ, ಸಹಕಾರ ಬ್ರಿಟಿಷರಿಗಿತ್ತು. ಬ್ರಿಟಿಷರ ಉತ್ತಮ ಸೇನೆ, ಸೈನಿಕರ ಶಿಸ್ತು, ಮೇಲ್ವಿಚಾರಣೆ ಮತ್ತು ಅದೃಷ್ಟ ಎಲ್ಲಾ ಸೇರಿ ಟಿಪ್ಪು ಸೋತು. ಬ್ರಿಟಿಷ್ ಸೈನ್ಯ ಅಸಂಖ್ಯಾತ ಐಶ್ವರ್ಯ ಪಡೆಯಿತು.

ಮೂರ್‌ರವರು ಮುಂದುವರೆಸಿ 'ಟಿಪ್ಪು ಒಬ್ಬ ಸಮರ್ಥ ಮುತ್ಸದ್ಧಿ. ಯಾವ ಒಬ್ಬ ನಾಗರಿಕ ಒಂದು ರಾಜ್ಯವನ್ನು ವೀಕ್ಷಿಸಿದಾಗ ಅಲ್ಲಿ ಕಂಡುಬಂದ ಜನರ ನಡೆನುಡಿ, ಉತ್ಸಾಹ,

ವ್ಯಾಪಾರ ವ್ಯವಹಾರ ಮತ್ತು ಪ್ರಜೆಗಳಿಗೆ ಉಂಟಾಗಿರುವ ಸಂತೋಷ ವ್ಯಕ್ತವಾಗುತ್ತೆ. ಟಿಪ್ಪುವಿನ ಊರಿನಲ್ಲಿ ಹಲವು ಕಾಲ ತಂಗುವ ಅವಕಾಶವಿದ್ದ ನಮಗೆ ಕಂಡಿದ್ದು ಟಿಪ್ಪುವಿನ ತೃಪ್ತ ಪ್ರಜೆಗಳು. ಅವರ ಬಾಯಲ್ಲಿ ಯಾವ ಕೆಟ್ಟ ಮಾತುಗಳು ಕೇಳಿಬರಲಿಲ್ಲ. ಇದಕ್ಕೆ ಹಲವಾರು ಕಾರಣವಿರಬಹುದು. ಶತ್ರುಗಳು ಆಗಲೇ ರಾಜ್ಯವನ್ನು ಆಕ್ರಮಿಸಿದ್ದರು. ಶತ್ರುಗಳ ಅಧೀನದಲ್ಲಿದ್ದರೂ ಸಮಯ ಒದಗಿಬಂದಾಗ ತಮ್ಮ ನಿಷ್ಠೆಯನ್ನು ರಾಜನಿಗೆ ತೋರಿಸಲು ಸಿದ್ಧರಿದ್ದರು. ಟಿಪ್ಪುವಿನ ಬಗ್ಗೆ ಬರೆದಿರುವ ಮತ್ತೊಬ್ಬ ಕರ್ತೃ Major Dirom 'ಟಿಪ್ಪುವಿನ ಸೈನ್ಯ ಬಹಳ ಶಿಸ್ತಿನದು. ಅವನ ಪ್ರಜೆಗಳು ಒಬ್ಬ ನಿರಂಕುಶ ಅಧಿಕಾರಿಯ ಕೆಳಗಿದ್ದರೂ ಅವನು ಪ್ರಜೆಗಳ ಯೋಗಕ್ಷೇಮಕ್ಕೂ ಮನಗೊಟ್ಟಿರುವನು. ಅವನು ತನ್ನ ವಿರೋಧಿಗಳಿಗೆ ಮಾತ್ರ ಶತ್ರು ಅವನ ಮತ್ತೊಂದು ಗುಣ, ದೈವಭಕ್ತ ಮತ್ತು ತನ್ನ ಮತದ ಅಭಿಮಾನಿ.

ಎಡ್‌ವರ್ಡ್ ಮೂರ್ ಪುಸ್ತಕದಲ್ಲಿ ಉತ್ತರಾರ್ಧದಲ್ಲಿ ತಾವು ಕಂಡ ಹಲವಾರು ಸಾಮಾಜಿಕ ವಿಷಯಗಳ ಟಿಪ್ಪಣಿ ಇದೆ. ಅವು ಅತ್ಯಂತ ಸ್ವಾರಸ್ಯವಾಗಿದೆ. ಎಲೆ ಅಡಿಕೆ ಬೆಳೆಯುವ ಪ್ರದೇಶ, ಎಲೆ, ಅಡಿಕೆ ತಿನ್ನುವುದರಿಂದ ಆಗುವ ಉಪಯೋಗ ತುಲಾಭಾರ ತೂಗುವಿಕೆಯ ಚಾರಿತ್ರಿಕ ಹಿನ್ನೆಲೆ, ಲಿಂಗಪೂಜೆ, ತೆಂಗಿನ ಮರದ ಹಿನ್ನೆಲೆ ಮತ್ತು ಉಪಯೋಗ, ಲಿಂಗಪೂಜೆ ಅದರಭಿಮಾನಿಗಳು ಅದರ ವಿವರ, ಇನ್ನೂ ಹಲವಾರು ವಿಷಯಗಳ ಮೇಲೆ ಬೆಳಕು ಚೆಲ್ಲುವ ವಿಷಯಗಳಿವೆ. ಆದರೆ ಸ್ಥಳಾಭಾವದ ಸಂಕೋಚದಿಂದ ವಿವರಿಸಿಲ್ಲ.

ಎಡ್‌ಮೂರ್‌ರವರ ಇತರ ಕೃತಿಗಳು

ಮುಂಬೈನಲ್ಲಿ ಕಮೀಷನರ್ ಜನರಲ್ ಆಗಿದ್ದ ಎಡಿವರ್ಡ್ ಮೂರ್ ೧೯೧೦ರಲ್ಲಿ ನಿವೃತ್ತಿ ಹೊಂದಿದರು. ಅವರು ಮಿಲಿಟರಿ ಕ್ರಮವನ್ನು ನಿಯಮವಾಗಿ ನಡೆಸಲು ವಿಷಯ ಸಂಗ್ರಹಿಸಿ ಒಂದು ಕೈಪಿಡಿ ತಯಾರಿಸಿದರು. ಈ ಪುಸ್ತಕವನ್ನು ಸರ್ಕಾರವೇ ಪ್ರಕಟ ಮಾಡಿತು. ಇದಕ್ಕೆ ಪ್ರೇರಣೆ ಕೊಟ್ಟವರು ಲಾರ್ಡ್ ಡಂಕನ್. ಈ ಪುಸ್ತಕ ೧೮೦೦ರಲ್ಲಿ ಪೂರ್ಣಗೊಂಡಿತು. ಸರ್ಕಾರ ಈ ಪುಸ್ತಕಕ್ಕೆ ೧೦,೦೦೦ ರೂಪಾಯಿ ಬಹುಮಾನ ಕೊಟ್ಟಿತು. ಇದು ಪುಸ್ತಕಕ್ಕೆ ದೊರೆತ ಮನ್ನಣೆ. ಉನ್ನತ ಸೇವೆಗಾಗಿ ಮೂರ್‌ರವರಿಗೆ ಸ್ಪೆಷಲ್ ಪೆನ್‌ಷನ್ ದೊರಕಿತು.

೧೮೦೧ರಲ್ಲಿ ಎಡವರ್ಡ್ ಮೂರ್ 'Hindu Patheon' ಎಂಬ ಪುಸ್ತಕ ಬರೆದರು. 'ಸರ್ವದೇವ ಮಂದಿರ' ಹಲವಾರು ವರ್ಷಗಳು ಪ್ರಯತ್ನಪಟ್ಟು, ಪ್ರಾಚ್ಯಶಾಸ್ತ್ರ ಪಂಡಿತರೊಡಗೂಡಿ, ಮಾಡಿದ ಪತ್ರವ್ಯವಹಾರ, ಸಮಾಲೋಚನೆ, ಮುಖ್ಯವಾಗಿ ವಿಲಿಯಂ ಜೋನ್ಸ್‌ರೊಡನೆ ದೀರ್ಘಕಾಲದ ಸಂವಾದದಿಂದ ತಯಾರಾದ ಪುಸ್ತಕ. ತನ್ನ ನೈಜತೆಯಿಂದ ಹಲವಾರು ಮುದ್ರಣ ಕಂಡಿತು.

ಇದರಲ್ಲಿ ಇರುವ ಅಧ್ಯಾಯಗಳಲ್ಲಿ, ಬ್ರಹ್ಮ, ಶಿವ, ದಕ್ಷ, ಗರುಡ, ಬುದ್ಧಾವಕಾಶ, ವೀರಭದ್ರ ಕಾರ್ತೀಕ, ಇವುಗಳ ವಿಶ್ಲೇಷಣೆಗಳೊಂದಿಗೆ ಅತ್ಯಂತ ಸುಂದರವಾದ ರೇಖಾಚಿತ್ರಗಳಿವೆ ಮತ್ತು ದೇವತೆಗಳ ಹಲವು ಅವಕಾಶಗಳು ಅತ್ಯಂತ ಸುಂದರವಾಗಿ ನಿರೂಪಿಸಿದೆ.

ಮತ್ತೊಂದು "Hindu Infanticide", 1811 ಹೊರಬಂತು. ಶಿಶುಹತ್ಯೆ ಮತ್ತು ಅದನ್ನು ತಗ್ಗಿಸಲು ಕೈಗೊಂಡ ಪ್ರಯತ್ನಗಳು ಆ ಕಾಲದಲ್ಲಿ ಅತ್ಯಂತ ಮುಖ್ಯವಾಗಿತ್ತು. ಇಂದಿಗೂ ಉತ್ತರ ಭಾರತದಲ್ಲಿ ಈ ಕರಾಳ ಪದ್ಧತಿ ಮುಂದುವರಿದಿರುವುದನ್ನು ಕಾಣುತ್ತೇವೆ. ಆದ್ದರಿಂದ ಇಂದಿಗೂ ಈ ಪುಸ್ತಕ ಕೈಗನ್ನಡಿಯಾಗಿದೆ.

Orienal Fragments 1834 ರಲ್ಲಿ ಹೊರಬಂತು. ಇದರಲ್ಲಿ Gems ಅಂದರೆ ರತ್ನ ಕಲ್ಲುಗಳು ವಜ್ರ ಇವುಗಳ ವ್ಯಾಖ್ಯಾನ ಮತ್ತು ಹಿಂದೂ ಪುರಾಣ ಸಾಹಿತ್ಯ ಇವೆಲ್ಲದರ ವರ್ಣನೆ ಇದೆ.

೧೮೨೯ರಲ್ಲಿ 'The Gentle Sponge' ಪುಸ್ತಕ ಹೊರಬಂತು. Gentle Sponge ನಲ್ಲಿ 'Suffolk Words and Phrases' ವಿವರಿಸಿದೆ.

ಕೊನೆಯದಾಗಿ ಎಡ್‌ವರ್ಡ್ ಮೂರ್‌ರವರು ಆ ಕಾಲದ ಪ್ರಸಿದ್ಧ Rees 'Encyclopedia' ದಲ್ಲಿ ಕೂಡ ಹಲವಾರು ಲೇಖನಗಳನ್ನು ಬರೆದಿದ್ದಾರೆ.

ಮೂರ್‌ರವರು ಹಲವಾರು ಸಂಘ, ಸಂಸ್ಥೆಗಳ ಸದಸ್ಯತ್ವವನ್ನು ಹೊಂದಿದ್ದರು. ಮುಖ್ಯವಾಗಿ ಏಷ್ಯಾಟಿಕ್ ಸೊಸೈಟಿ, ಕಲ್ಕತ್ತಾ (೧೭೯೬) ರಾಯಲ್ ಏಷ್ಯಾಟಿಕ ಸೊಸೈಟಿ ಲಂಡನ್ ಮತ್ತು ಮುಂಬೈನ ಏಷ್ಯಾಟಿಕ್ ಸೊಸೈಟಿ ಮೆಂಬರ್ ಕೂಡ ಆಗಿದ್ದರು. ಇದಲ್ಲದೆ ಹಲವಾರು ಸಂಘ ಸಂಸ್ಥೆಗಳು, ಇಂಗ್ಲೆಂಡ್, ಫ್ರಾನ್ಸ್ ಇಂಡಿಯಾದಲ್ಲಿ ಸದ್ಯತ್ವವನ್ನು ಹೊಂದಿದ್ದರು.

ಇಷ್ಟೆಲ್ಲಾ ಬರೆದ ಎಡ್‌ವರ್ಡ್ ಮೂರ್ ಒಬ್ಬ ಸಿಪಾಯಿ ಮತ್ತು ಅವನ ಜೀವನ ಎದುರು ಬೀಳುವರೊಡನೆ ಹೊಡೆದಾಟ ಮತ್ತು ಸೈನಿಕರ ಶಿಬಿರದಲ್ಲಾಗಿದೆ. ಆದ್ದರಿಂದ ಅವರಿಂದ ಯಾವುದೇ ಕಾವ್ಯ ಮಾಧುರ್ಯವನ್ನು ಅಪೇಕ್ಷಿಲು ಸಾಧ್ಯವಿಲ್ಲವೆಂದು ಅವರು ನಮ್ಮ ಸುದೀರ್ಘವಾದ ಪುಸ್ತಕದ [The operatiunc........Nawab Tippu Sultan Bahadur) ಮುನ್ನುಡಿಯಲ್ಲಿ ಬರೆದಿರುತ್ತಾರೆ.

ಸುರಪುರ ಸಂಸ್ಥಾನದಲ್ಲಿ ನಿಷ್ಠಿ ಸಹೋದರರ ಪಾತ್ರ

ಶುಭಾ*

ಸುರಪುರ ಪ್ರದೇಶವು ಪ್ರಾಚೀನ ಕಾಲದಿಂದಲೂ ಮತ್ತು ಐತಿಹಾಸಿಕ ದೃಷ್ಟಿಯಿಂದಲೂ ಬಹಳ ಮಹತ್ವ ಪಡೆದುಕೊಂಡಿದೆ. ಇತಿಹಾಸ ಪೂರ್ವ ಕಾಲದಿಂದಲೂ ಈ ಪ್ರದೇಶದ ಸುತ್ತಮುತ್ತ ಅನೇಕ ಪ್ರಾಚೀನ ಅವಶೇಷಗಳು ದೊರೆತಿವೆ. ದೊರೆತಿರುವ ಅವಶೇಷಗಳು ಈ ಪ್ರದೇಶದಲ್ಲಿ ಇತಿಹಾಸ ಪೂರ್ವದ ಜನವಸತಿ ಇತ್ತೆಂಬುದಕ್ಕೆ ಮಾಹಿತಿ ನೀಡುತ್ತವೆ. ಸುರಪುರಕ್ಕೆ ಸಂಬಂಧಿಸಿದಂತೆ ಈ ಭಾಗದ ರಾಜಕೀಯ ಇತಿಹಾಸ ಕಲ್ಯಾಣ ಚಾಳುಕ್ಯರಿಂದ ಆರಂಭವಾಗುತ್ತದೆ. ಕಲ್ಯಾಣ ಚಾಳುಕ್ಯರು, ಕಳಚೂರಿಗಳು, ದೇವಗಿರಿಯ ಸೇವುಣರು, ಬ್ರಿಟಿಷರು ಸುರಪುರದ ಅರಸರು (ಸಂಸ್ಥಾನ) ಮತ್ತು ಹೈದರಾಬಾದಿನ ನಿಜಾಂರ ಆಳ್ವಿಕೆಗೊಳಪಟ್ಟಿತ್ತು. ಆದರೆ ಸುರಪುರವನ್ನಾಳಿದ ರಾಜಮನೆತನಗಳಲ್ಲಿ ಸುರಪುರ ಸಂಸ್ಥಾನವು ಪ್ರಮುಖವಾಗಿದೆ. ಹೀಗೆ ಅನೇಕ ರಾಜಮನೆ ತನಗಳು ಈ ಪ್ರದೇಶದಲ್ಲಿ ಆಡಳಿತ ನಡೆಸಿ ಸಾಂಸ್ಕೃತಿಕ ಜೀವನದ ಮೇಲೆ ತಮ್ಮದೆಯಾದ ಪ್ರಭಾವವನ್ನು ಬೀರಿದೆ ಎಂಬುದನ್ನು ಸುರಪುರ ಪ್ರದೇಶದಲ್ಲಿ ದೊರೆತಿರುವ ಶಾಸನಗಳಿಂದ ತಿಳಿಯಬಹುದು.

ಇಂದಿನ ಯಾದಗಿರಿ ಜಿಲ್ಲೆಯ ತಾಲ್ಲೂಕುಗಳಲ್ಲಿ ಪ್ರಮುಖವಾದುದು ಸುರಪುರ. ಗುಡ್ಡಗಳಿಂದ ಆವೃತವಾಗಿರುವ ಸುರಪುರವು ನಿಸರ್ಗದ ದುರ್ಗದಂತಿದೆ. ಪಿಡ್ಡ ನಾಯಕನು ಈ ಸ್ಥಳದ ಮಹತ್ವವನ್ನು ಕಂಡು ತನ್ನ ರಾಜಧಾನಿಯನ್ನು ಮಾಡಿದ್ದುದು ಆತನ ಜಾಣ್ಮೆಯನ್ನು ತೋರಿಸುತ್ತದೆ. ಕ್ರಿ.ಶ. ೧೬೩೬–೧೮೫೮ರವರೆಗೆ ಗೋಸಲ ವಂಶದ ನಾಯಕರು ಸುರಪುರ ಸಂಸ್ಥಾನದಲ್ಲಿ ಆಳ್ವಿಕೆ ಮಾಡಿದರು. ಸುರಪುರ ಸಂಸ್ಥಾನವು ವಿಜಯನಗರ ಸಾಮ್ರಾಜ್ಯದ ಕಾಲಕ್ಕೆ ಒಂದು ಚಿಕ್ಕ ಸಂಸ್ಥಾನವಾಗಿತ್ತು. ಇಲ್ಲಿನ ಬೇಡ ನಾಯಕರು ಪಾಳೇಯಗಾರರಾಗಿದ್ದರು. ವಿಜಯನಗರ ಸಾಮ್ರಾಜ್ಯದ ಪತನಾನಂತರ ಸುರಪುರ ಪ್ರದೇಶ ಬಿಜಾಪುರ ಸುಲ್ತಾನರ ಅಧೀನಕ್ಕೊಳಪಟ್ಟಿತ್ತು. ಬಿಜಾಪುರದ ಆದಿಲ್‌ಶಾಹಿಯ ಮದದಾನೆಯ ಮದವನ್ನಿಳಿಸಿದ ಸುರಪುರದ ಗಡ್ಡಿಪಿಡ್ಡ ನಾಯಕನ ಶೌರ್ಯಕ್ಕೆ ಮೆಚ್ಚಿ ಆತನಿಗೆ ಕೆಲವು ಊರುಗಳನ್ನು ಉಂಬಳಿ ಹಾಕಿಕೊಟ್ಟನು. ಅಂದಿನಿಂದ ಸುರಪುರದ ನಾಯಕರು ಸ್ವತಂತ್ರ ಅರಸರೆಂದು ಘೋಷಿಸಿಕೊಂಡು ಸ್ವತಂತ್ರವಾಗಿ ಕ್ರಿ.ಶ. ೧೬೩೬–೧೮೫೭ರವರೆಗೆ ೧೧ ಜನ ಅರಸರು ಆಳ್ವಿಕೆ ಮಾಡಿದರು. ಸುರಪುರ ಸಂಸ್ಥಾನವು ಧರ್ಮ, ಸಾಹಿತ್ಯ, ಸಂಗೀತ, ಕಲೆ ಮತ್ತು ವಾಸ್ತುಶಿಲ್ಪ ಮತ್ತು ಚಿತ್ರಕಲೆ ಮುಂತಾದ ಕ್ಷೇತ್ರಗಳಲ್ಲಿ ಗಣನೀಯ ಬೆಳವಣಿಗೆಯನ್ನು ಹೊಂದಲು ಪ್ರಮುಖ ಕಾರಣರಾದವರು ಸುರಪುರ ಸಂಸ್ಥಾನದ ಅರಸರು ಮತ್ತು ಮಂತ್ರಿಗಳು.

ಅರಸರ ಅಧೀನದಲ್ಲಿ ಸ್ಥಳೀಯ ಆಡಳಿತವನ್ನು ನಿರ್ವಹಿಸುತ್ತಿದ್ದ ಮಂತ್ರಿಗಳು ಬಹುಮಟ್ಟಿಗೆ ಅರಸರು ಕೈಗೊಂಡು ರಾಜ್ಯ ವಿಸ್ತರಣಾ ನೀತಿ, ಲೋಕೋಪಯೋಗಿ ಕಾರ್ಯಗಳು ಮತ್ತು ಆಂತರಿಕ ಕಲಹಗಳು ಶಮನಗೊಳಿಸುವ ಕಾರ್ಯಗಳಲ್ಲಿ ನೇರವಾಗಿ ರಾಜ್ಯದಲ್ಲಿ ಶಾಂತಿ, ನೆಮ್ಮದಿ ನೆಲೆಗೊಳ್ಳಲು ಕಾರಣರಾಗಿದ್ದಾರೆ. ಅಂತಹವರಲ್ಲಿ ನಿಷ್ಠಿ ಮನೆತನದ ಸಹೋದರರಾದ ಕಡ್ಲೆಪ್ಪ ಮತ್ತು ವೀರಪ್ಪನವರು ಪ್ರಮುಖರಾಗಿದ್ದಾರೆ. ಸುರಪುರ ಸಂಸ್ಥಾನದ ದೊರೆಗಳಾದ ೩ನೇ ಪಾಮನಾಯಕ ಮತ್ತು ೨ನೇ ವೆಂಕಟಪ್ಪ ನಾಯಕನ ಅವಧಿಯಲ್ಲಿ ಮಂತ್ರಿಗಳಾಗಿ ಕಾರ್ಯನಿರ್ವಹಿಸಿದರು. ಇವರು ಪ್ರಾಮಾಣಿಕರು, ರಾಜಕೀಯ ಚತುರರು ಮತ್ತು ದೂರದೃಷ್ಟಿಯುಳ್ಳವರು ಆಗಿದ್ದರು. ಇವರ ಅಧಿಕಾರಾವಧಿಯಲ್ಲಿ ಸುರಪುರ ಸಂಸ್ಥಾನ ಅತ್ಯಂತ ಉಚ್ಚಯ ಸ್ಥಿತಿಯನ್ನು ತಲುಪಿತ್ತು. ಇವರು ಕೈಗೊಂಡ ಪ್ರಜಾಹಿತ ಕಲ್ಯಾಣ ಕಾರ್ಯಗಳು ಅರಸರಿಂದ ಹಿಡಿದು ಸಾಮಾನ್ಯ ಜನತೆಯ ಮೆಚ್ಚುಗೆಗೂ ಪಾತ್ರವಾಗಿದ್ದರು. ಅವರು ನಿರ್ಮಿಸಿದ ಅನೇಕ ಬಾವಿಗಳು, ಮಠಗಳು, ದಾಸೋಹ ಕೇಂದ್ರಗಳು, ನ್ಯಾಯದ ಕಟ್ಟೆಗಳು ಇಂದಿಗೂ ಸುರಪುರದಾದ್ಯಂತ ನೋಡಲು ಸಿಗುತ್ತವೆ.

ನಿಷ್ಠಿ ಎಂಬ ಹೆಸರಿನ ಮೂಲ : ನಿಷ್ಠಿ ಎಂಬ ಹೆಸರಿನ ಮೂಲ ಮತ್ತು ಅದರ ಮೂಲಸ್ಥಳವನ್ನು ಅವಲೋಕಿಸಿದಾಗ ನಿಷ್ಠಿ ಕಡ್ಲಪ್ಪ ಮತ್ತು ವೀರಪ್ಪನವರ ಮೂಲ ಸ್ಥಳ ಗುಲಬರ್ಗಾ

* ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊಪ್ಪಳ–೫೮೩೨೩೧.

ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಸುಲೇಪೇಟ ಆಗಿದೆ. ಈ ಮನೆತನದ ಮೂಲಪುರುಷ ಸಂಗಪ್ಪ ಪಟ್ಟಣಶೆಟ್ಟಿ, ಆತನ ಪತ್ನಿ ನೀಲಮ್ಮ ಸಂಗಪ್ಪ ಅವರು ಪ್ರಸಿದ್ಧ ವರ್ತಕರಾಗಿದ್ದರು. ದೂರದ ಊರುಗಳಿಂದ ಸಾಮಾನುಗಳನ್ನು ತಂದು ವ್ಯಾಪಾರ ಮಾಡುತ್ತಿದ್ದರು. ಇವರಿಗೆ ೩ ಜನ ಮಕ್ಕಳಿದ್ದರು ಅವರೆಂದರೆ ಕಡ್ಲಪ್ಪ, ವೀರಪ್ಪ ಹಾಗೂ ಮಲ್ಲಿಕಪ್ಪ ತಂದೆಯಂತೆ ಮಕ್ಕಳು ಗುಣಶೀಲರಾಗಿ ಬೆಳೆದರು. ಕಾಲಾನಂತರದಲ್ಲಿ ಕಡ್ಲಪ್ಪ ಮತ್ತು ವೀರಪ್ಪನವರು ಸುರಪುರ ಸಂಸ್ಥಾನಕ್ಕೆ ಬಂದು ನಿಷ್ಠಿ ಹೆಸರು ಪಡೆದು ಸಚಿವರಾಗಿ ಸೇವೆ ಸಲ್ಲಿಸಿದರು. ಇವರ ಮನೆತನಕ್ಕೆ ನಿಷ್ಠಿ ಎಂಬ ಹೆಸರು ಬರಲು ಕಾರಣವೇನೆಂದರೆ ಕಡ್ಲಪ್ಪ ಮತ್ತು ವೀರಪ್ಪ ಎಂಬ ಸಹೋದರರು ಸುರಪುರ ಸಂಸ್ಥಾನದ ಮಂತ್ರಿಗಳಾಗಿ ಅತ್ಯಂತ ಪ್ರಾಮಾಣಿಕತೆ, ನಿಷ್ಠೆಯಿಂದ ರಾಜ ಮನೆತನದೊಂದಿಗೆ ಸಂಬಂಧ ಹೊಂದಿದ್ದರಿಂದ ನಿಷ್ಠಿ ಎಂಬ ಹೆಸರು ಬಂದಿತೆಂದು ಹೇಳಬಹುದು.

ನಿಷ್ಠಿ ಕಡ್ಲಪ್ಪನವರು : ಕಡ್ಲಪ್ಪನವರು ವೀರಶೈವ ಧರ್ಮದ ತತ್ತ್ವಗಳನ್ನು ಕಟ್ಟುನಿಟ್ಟಾಗಿ ಆಚರಣೆಗೆ ತಂದವರಲ್ಲದೆ, ಶ್ರೇಷ್ಠ ಧಾರ್ಮಿಕ ಮಹಾಪುರುಷರಾಗಿದ್ದರು. ಸುರಪುರ ದೊರೆಗಳಾದ ಮೂರನೇ ಪಾಮನಾಯಕನ ಆಳ್ವಿಕೆಯಲ್ಲಿ ಸುರಪುರ ಸಂಸ್ಥಾನದ ಮಂತ್ರಿಯಾಗಿ ಕಾರ್ಯನಿರ್ವಹಿಸಿದರು. ನಿಷ್ಠಿ ಕಡ್ಲಪ್ಪನವರು ರಾಜ ಮನೆತನದ ಕಾರ್ಯಗಳನ್ನು ದಕ್ಷತೆಯಿಂದ ನಿರ್ವಹಿಸುವುದರ ಜೊತೆಗೆ ಶರಣ ಸಂಸ್ಕೃತಿಯನ್ನು ಸಗರನಾಡಿನಾದ್ಯಂತ ಬಿತ್ತರಿಸಿದರು. ಇವರು ಪ್ರಜಾಹಿತ ಮಂತ್ರಿಗಳಾಗಿದ್ದರಿಂದ ಪ್ರಜೆಗಳ ಕಲ್ಯಾಣಕ್ಕಾಗಿ ಅನೇಕ ಲೋಕೋಪಯೋಗಿ ಕಲ್ಯಾಣ ಕಾರ್ಯಗಳನ್ನು ಕೈಗೊಳ್ಳುವ ಮೂಲಕ ಪ್ರಜೆಗಳ ಮೆಚ್ಚುಗೆಗೆ ಪಾತ್ರರಾದರು. ೧೦೧ ಬಾವಿಗಳನ್ನು, ಅನೇಕ ಮಠಗಳನ್ನು ಸ್ಥಾಪಿಸುವ ಮೂಲಕ ಅನ್ನ ದಾಸೋಹ, ಜ್ಞಾನ ದಾಸೋಹಕ್ಕೆ ವ್ಯವಸ್ಥೆ ಮಾಡಿದರು. ಇವರು ಕಟ್ಟಿಸಿದ ಮಠ, ಬಾವಿಗಳು ರಚನೆಯಲ್ಲಿ ಶಿಲ್ಪಕಲೆಯ ವೈಶಿಷ್ಟತೆ ಎದ್ದುಕಾಣುತ್ತದೆ. ವಿಶಿಷ್ಟ ಶಿಲ್ಪಕಲೆಯಿಂದ ಕೂಡಿದ ಬಾವಿಗಳನ್ನು ರಂಗಂಪೇಟ ಮತ್ತು ಸತ್ಯಂಪೇಟಗಳಲ್ಲಿ ಈಗಲೂ ಕಾಣಬಹುದು.

ಕಡ್ಲಪ್ಪನವರು ಸ್ಥಾಪಿಸಿದ ಮಠಗಳನ್ನು ಇಂದಿಗೂ ಕೂಡ ಸಗರನಾಡು ಹಾಗೂ ನೆರೆಯ ಪ್ರದೇಶಗಳಲ್ಲಿ ಅಸ್ತಿತ್ವದಲ್ಲಿರುವುದನ್ನು ಗುರುತಿಸಬಹುದಾಗಿದೆ. ಈ ಮಠಗಳು ಇಂದಿಗೂ ಕೂಡಾ ಜ್ಞಾನ ಮತ್ತು ಅನ್ನ ದಾಸೋಹ ಪರಂಪರೆಯನ್ನು ಮುಂದುವರೆಸಿಕೊಂಡು ಬಂದಿದೆ. ಇವರು ಸ್ಥಾಪಿಸಿದ ಮಠಗಳಲ್ಲಿ ಸುರಪುರದ ಕಬಾಡಗೇರಿ ಓಣಿಯಲ್ಲಿರುವ ಕಡ್ಲಪ್ಪನವರ ಮಠ, ಮುದ್ನೂರಿನ ಹಾಳದ ನಾಗನೂರ ಮಠ, ಸುರಪುರದ ಪಂಚಾಂಗ ಮಠ, ಯಾಳಗಿ ಮಠ, ಸೂಗೂರೇಶ್ವರ ಮಠ, ಬಿಲಶೆಟ್ಟಿಹಾಳ ಮಠ ಪ್ರಮುಖವಾಗಿದೆ. ಹೀಗೆ ಕಡ್ಲಪ್ಪನವರು ಸ್ಥಾಪಿಸಿದ ಮಠಗಳೆಲ್ಲವು ಇಂದು ಸುಸ್ಥಿತಿಯಲ್ಲಿಲ್ಲ, ಕೆಲವೊಂದು ಜೀರ್ಣಾವಸ್ಥೆ ತಲುಪಿದರೆ ಮತ್ತೆ ಕೆಲವು ಬಿದ್ದುಹೋಗಿವೆ. ಈ ಮಠಗಳ ಸ್ಥಾಪನೆಯ ಮೂಲಕ ನಿಷ್ಠಿ ಕಡ್ಲಪ್ಪನವರು ಜನತೆಯ ದೈಹಿಕ ಮತ್ತು ಭೌತಿಕ ಹಸಿವನ್ನು ನೀಗಿಸುವುದರಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ ಈ ಮಠಗಳೂ ಕೇವಲ ಧಾರ್ಮಿಕ ಕೇಂದ್ರಗಳಾಗಿರದೇ, ಸಾಹಿತ್ಯಿಕ, ಶೈಕ್ಷಣಿಕ ಕೇಂದ್ರಗಳಾಗಿಯೂ ಮಹತ್ವದ ಪಾತ್ರವಹಿಸಿದ್ದವು.

ಮೂರನೇ ಪಾಮನಾಯಕ ಮತ್ತು ನಿಷ್ಠಿ ಕಡ್ಲಪ್ಪನವರು ರಾಜಾಶ್ರಯದಿಂದ ಇದರ ಕಾಲದಲ್ಲಿ ಸಾಹಿತ್ಯ ಕ್ಷೇತ್ರದಲ್ಲಿ ಪ್ರಗತಿಯನ್ನು ಕಾಣಬಹುದು. ಮಹಾಮೂರ್ತಿ ಎಂಬ ವಿದ್ವಾಂಸರು 'ಅಷ್ಟಾವರಣ ತಿಲಕ' ಕೃತಿಯನ್ನು ಬರೆದರು. ಸ್ವತಃ ವಿದ್ವಾಂಸರು ಆದ ೩ನೇ ಪಾಮ ನಾಯಕರು 'ಭಾರ್ಗವ ಪುರಾಣವನ್ನು ರಚಿಸಿದರು. ಇವರ ಆಸ್ಥಾನದಲ್ಲಿದ್ದ ವಿದ್ವಾಂಸರೆಂದರೆ ಅಣ್ಣಯ್ಯ ದೀಕ್ಷಿತ, ಶ್ರೀನಿವಾಸಾಚಾರ್ಯರು ಪ್ರಮುಖರಾಗಿದ್ದಾರೆ. ಈ ರೀತಿ ನಿಷ್ಠಿ ಕಡ್ಲಪ್ಪನವರು ಸಾಹಿತ್ಯ, ಕಲೆ ಮತ್ತು ಸಂಸ್ಕೃತಿ ಉಳಿಯಬೇಕೆನ್ನುವ ಹಂಬಲದಿಂದ ಮಂತ್ರಿಗಳಾಗಿ ವಿದ್ವಾಂಸರನ್ನು ಪ್ರೋತ್ಸಾಹಿಸಿದರೆಂದೆ ಹೇಳಬಹುದು.

ಹೀಗೆ ಕಡ್ಲಪ್ಪನವರ ಆಡಳಿತಾವಧಿಯು ಸುಭಿಕ್ಷೆ, ಶಾಂತಿ, ಶಿಲ್ಪಕಲೆ ಮತ್ತು ಚಿತ್ರಕಲೆಗಳಿಗೆ ಪ್ರೋತ್ಸಾಹ ನೀಡಿದ್ದರಿಂದ ಮೂರನೇ ಪಾಮನಾಯಕರ ಕಾಲವನ್ನು ಸುವರ್ಣಯುಗವೆಂದೆ ಹೇಳಬಹುದು. ಕಡ್ಲಪ್ಪನವರು ಸ್ವಾಮಿ ನಿಷ್ಠರಾಗಿ ಪ್ರಜಾಹಿತ ಚಿಂತಕರಾಗಿ ಸದಾಚಾರ ಸಂಪನ್ನರಾಗಿ ನಾಡು ನುಡಿಗೆ ಶ್ರಮಿಸಿ, ನಿಸ್ವಾರ್ಥ ಸೇವೆಗೈದವರಲ್ಲಿ ಪ್ರಮುಖರಾಗಿದ್ದಾರೆ. ಸಮಸ್ತ ಪ್ರಜೆಗಳ ಪ್ರೀತಿಗೆ ಪಾತ್ರರಾಗಿ ಪೂಜ್ಯರೆನಿಸಿಕೊಂಡರು. ಹೀಗೆ ಸುರಪುರ ಸಂಸ್ಥಾನದ ಶ್ರೇಯೋಭಿವೃದ್ಧಿಗಾಗಿ ದುಡಿದು ತಮ್ಮ ಜೀವಿತ ಅವಧಿಯ ಕೊನೆಯ ದಿನಗಳಲ್ಲಿ ಗುರು–ಲಿಂಗ ಜಂಗಮರ ಸೇವೆಯಲ್ಲಿ ನಿರತರಾಗಿ ಲಿಂಗೈಕ್ಯರಾದರು. ಇಂದಿಗೂ ಸುರಪುರದಲ್ಲಿ ನಿಷ್ಠಿ ಕಡ್ಲಪ್ಪನವರ ಮಠದಲ್ಲಿ ಇವರ ಸಮಾಧಿಯಿದೆ ಇವರ ಸಮಾಧಿಗೆ ಪ್ರತಿದಿನ ಪೂಜೆ ಮಾಡಲಾಗುತ್ತದೆ.

ನಿಷ್ಠಿ ವೀರಪ್ಪನವರು : ಮೂರನೇ ಪಾಮನಾಯಕ ಮತ್ತು ೨ನೇ ವೆಂಕಟಪ್ಪ ನಾಯಕನ ಆಳ್ವಿಕೆಯಲ್ಲಿ ನಿಷ್ಠಿ ಕಡ್ಲಪ್ಪನವರ ಸಹೋದರರಾದ ವೀರಪ್ಪನವರು ಚತುರ ಹಾಗೂ ದಕ್ಷ ರಾಜಕಾರಣಿಯಾಗಿ, ಚಾಣಾಕ್ಷ ಮಂತ್ರಿಯಾಗಿ ಕರ್ತವ್ಯ ನಿರ್ವಹಿಸಿದರು. ಕಡ್ಲಪ್ಪನವರು ಹೆಚ್ಚಾಗಿ ಧಾರ್ಮಿಕ ಕಾರ್ಯಗಳಲ್ಲಿಯೇ ನಿರತರಾದರೇ, ವೀರಪ್ಪನವರು ರಾಜಕಾರ್ಯದಲ್ಲಿ

ನಿರತರಾದರು. ಎರಡನೇ ವೆಂಕಟಪ್ಪನಾಯಕ ವಯಸ್ಸಿನಲ್ಲಿ ನಿಷ್ಠಿ ವೀರಪ್ಪನವರಿಗಿಂತ ಚಿಕ್ಕವರಾಗಿದ್ದರು. ಹಾಗಾಗಿ ರಾಜ್ಯದ ಎಲ್ಲ ಆಗು-ಹೋಗುಗಳನ್ನು ನಿಷ್ಠಿ ವೀರಪ್ಪನವರೇ ನೋಡಿಕೊಂಡು ಹೋಗುತ್ತಿದ್ದರು. ಎರಡನೇ ವೆಂಕಟಪ್ಪ ನಾಯಕನು ನಿಷ್ಠಿ ವೀರಪ್ಪನವರನ್ನು ಅಣ್ಣಾ ಎಂದೇ ಸಂಬೋಧಿಸುತ್ತಿದ್ದರು. ಇವರಿಬ್ಬರ ಸಂಬಂಧ ಅನ್ಯೋನ್ಯವಾಗಿತ್ತು. ನಿಷ್ಠಿ ವೀರಪ್ಪನವರ ಸಲಹೆ-ಸೂಚನೆಗಳಿಲ್ಲದೆ ವೆಂಕಟಪ್ಪ ನಾಯಕನು ಯಾವ ಕಾರ್ಯವನ್ನು ಮಾಡುತ್ತಿರಲಿಲ್ಲ.

ನಿಷ್ಠಿ ವೀರಪ್ಪನವರು ತಮ್ಮ ದಕ್ಷ ಆಡಳಿತದಿಂದ, ಲೋಕ ಕಲ್ಯಾಣ ಕಾರ್ಯಗಳಿಂದ ಸಗರನಾಡಿನ ಜನತೆಯ ಮನಸನ್ನು ಗೆದ್ದುಕೊಂಡರು ಜನತೆಗಾಗಿ ಧಾರ್ಮಿಕ ಕೇಂದ್ರಗಳನ್ನು ಕಟ್ಟಿಸಿದರು. ಜನಹಿತ ಕಾರ್ಯಗಳಲ್ಲಿ ಸದಾ ನಿರತರಾಗಿದ್ದರು. ಅನೇಕ ಸ್ಮರಣೀಯ ಕಾರ್ಯಗಳನ್ನು ಮಾಡುವ ಮೂಲಕ ಸುರಪುರ ಸಂಸ್ಥಾನದ ಅಭಿವೃದ್ಧಿಗಾಗಿ ಕೈಗೊಂಡ ಪ್ರಗತಿಪರ ಕಾರ್ಯಯೋಜನೆಗಳೆಂದ.

ಭೂ ಕಂದಾಯ ಪದ್ಧತಿ : ರಾಜಕಾರ್ಯದಲ್ಲಿ ಚತುರ ಮತಿಯಾಗಿದ್ದ ನಿಷ್ಠಿ ವೀರಪ್ಪನವರು ಸಂಸ್ಥಾನದ ಎಲ್ಲ ಭೂಮಿಗಳನ್ನು ಮಾಪನ ಮಾಡಿ ರಾಜ್ಯದಲ್ಲಿ 'ಮುಲ್ಕಿ ವ್ಯವಸ್ಥೆ'ಯನ್ನು ಅಳವಡಿಸಿ ಹೊಲಗಳ ಮೇಲೆ ಭೂಕಂದಾಯವನ್ನು ನಿರ್ದಿಷ್ಟಪಡಿಸಲಾಯಿತು. ಈ ಹೊಸ ಪದ್ಧತಿಯು 'ನಿಷ್ಠಿ ವೀರಪ್ಪನವರ ಸಂಚಣಿ' ಎಂದು ಪ್ರಸಿದ್ಧಿ ಪಡೆದಿದೆ.

ಜಕಾತಿ ಪದ್ಧತಿ : ನಿಷ್ಠಿ ವೀರಪ್ಪನವರು ಹೊಸದಾಗಿ ಭೂಮಿಯ ಜಕಾತಿ ಮಹಲು, ಸಿಂದಿ ಮಹಲು, ವೀಳ್ಯದೆಲೆ, ತಂಬಾಕು, ಎಣ್ಣೆ ಈ ಎಲ್ಲ ಭೂಮಿಗಳನ್ನು ಹರಾಜು ಮಾಡಿ ಇಂಥವರೇ ಇಂತಿಷ್ಟು ದರದಂತೆ ಮಾರಬೇಕೆಂದು ಗೊತ್ತುಪಡಿಸಿದರು. ಸುರಪುರ ಪಟ್ಟಣಕ್ಕೆ ಮಾರಾಟ ತರುವ ವಸ್ತುಗಳ ಮೇಲೆ "ಜಕಾತಿ ಪದ್ಧತಿ' ಜಾರಿಗೆ ತಂದರು. ಅವುಗಳೆಂದರೆ,

ಪಲ್ಲೇಕಾಯಿ ೧ ಮಣಕ್ಕೆ-ಜಕಾತಿ ೪ ಸೇರು.

ಹಣ್ಣು ಹಂಪಲುಗಳು ೧೦೦ ಹಣ್ಣುಗಳು-೧ ಎತ್ತಿನ ಒಜ್ಜಗೆ.

ಜೋಳ (ಧಾನ್ಯಗಳು) ವಿತ್ತಿಗೆ - ೬ ಸೇರು.

ಕಿರಾಣಿ ಸಾಮಾನುಗಳು (ಸಕ್ಕರೆ, ಉತ್ತತ್ತಿ, ಅಡಿಕಿ) - ೧ ವಿತ್ತಿನ ಭಾರ ೧೨ ಜಕಾತಿ ಸೇರು.

ಹುಲ್ಲಿನ ಹರಾಜಿನ ಉತ್ತನ್ನ ಸರ್ಕಾರಕ್ಕೆ.

ಕೆರೆ-ಬಾವಿ, ಅರಮನೆಗಳ ಸ್ಥಾಪನೆ : ಮಂತ್ರಿ ವೀರಪ್ಪನವರು ಡೊಣ್ಣಿಗೇರಿ, ಸಿದ್ದನಕೆರೆ, ಸಗರದ ಕೆರೆ, ಹಸನಾಪುರ, ರುಕ್ಮಾಪುರ, ವೆಂಕಟಾಪುರ, ಹೆಪ್ಪಾಳ, ಬಾಚಿಮಟ್ಟಿ, ವಜ್ಜಲ, ಸತ್ಯಂಪೇಟ, ಹೊಸಕೇರಿ ಮುಂತಾದ ಸ್ಥಳಗಳಲ್ಲಿ ಕೆರೆಗಳನ್ನು ಮತ್ತು ಭಾವಿಗಳನ್ನು ಕಟ್ಟಿಸಿದರಲ್ಲದೆ ಹೊಸಕೇರಿಯಲ್ಲಿ ಅರಸರು ಬೇಟೆಗೆಂದು ಬಂದಾಗ ಇಳಿದುಕೊಳ್ಳಲು ಒಂದು ಅರಮನೆಯನ್ನು ನಿರ್ಮಿಸಿದ ಕೀರ್ತಿ ವೀರಪ್ಪನವರಿಗೆ ಸಲ್ಲುತ್ತದೆ.

ಬೀಘೇದ ಕಟ್ಟೆಗಳು : ನಿಷ್ಠಿ ವೀರಪ್ಪನವರು ಸಗರನಾಡಿನ ಪ್ರಮುಖ ಊರುಗಳಲ್ಲಿ ಬೀಘೇದ ಕಟ್ಟೆಗಳನ್ನು ಕಟ್ಟಿಸಿದರು. ಬೀಘೇದ ಕಟ್ಟೆಗಳೆಂದರೆ ಭೂಮಿಯನ್ನು ಅಳೆಯಲು ಉಪಯೋಗಿಸುವಂತಹ ಮಾಪನದ ಸಾಧನಗಳು. ಹಳ್ಳಿಯಲ್ಲಿ ಭೂಮಿಯ ಸಂಬಂಧದಲ್ಲಿ ಕಲಹಗಳುಂಟಾದರೆ ಈ ಬೀಘೇದ ಕಟ್ಟೆಯ ಸುತ್ತಲೂ ಹಗ್ಗ ಹಿಡಿದು ಅದರಿಂದ ಭೂಮಿಯನ್ನು ಅಳೆಯುತ್ತಿದ್ದರು. ಹೀಗೆ ಭೂಮಿಯನ್ನು ಅಳೆಯುವ ಮೂಲಕ ತಮ್ಮಲ್ಲಿಯ ನ್ಯಾಯವನ್ನು ಪರಿಹರಿಸಿಕೊಳ್ಳುವದೇ ಈ ಬೀಘೇದ ಕಟ್ಟೆ ಕಟ್ಟಿಸಿದ ಉದ್ದೇಶವಾಗಿದೆ. ಭೂಮಿಯ ಸಂಬಂಧದಲ್ಲಿದ್ದ ನ್ಯಾಯವನ್ನು ಪರಿಹರಿಸಿಕೊಳ್ಳುವುದಕ್ಕಾಗಿ ಕಟ್ಟಲ್ಪಟ್ಟಿದೆ.

ನ್ಯಾಯದ ಕಟ್ಟೆಗಳು : ಈ ನ್ಯಾಯದ ಕಟ್ಟೆಗಳು ಹಳ್ಳಿಗಳಲ್ಲಿ ನಡೆಯುವ ಸಣ್ಣಪುಟ್ಟ ಕಲಹಗಳ ನಿರ್ಮೂಲನಕ್ಕಾಗಿ ಕಟ್ಟಿಸಿದಂತಹವು. ನಿಷ್ಪಕ್ಷಪಾತ ದೃಷ್ಟಿಯುಳ್ಳ ವೀರಪ್ಪನವರು ಜನರು ಇಂಥ ಕಟ್ಟೆಗಳ ಮೇಲೆ ಕುಳಿತುಕೊಂಡು ನ್ಯಾಯ ನಿರ್ಣಯ ಮಾಡಿಕೊಳ್ಳಲಿ ಎಂದು ಇದನ್ನು ಕಟ್ಟಿಸಿದರು. ಜನರು ಈ ಕಟ್ಟೆಗಳನ್ನು ಪೂಜ್ಯ ದೃಷ್ಟಿಯಿಂದ ಕಾಣುತ್ತಿದ್ದರು. ಜನ ತಾವು ಮಾಡಿದ ತಪ್ಪುಗಳನ್ನು ತಿದ್ದಿಕೊಂಡು ನೆಮ್ಮದಿಯಿಂದ ಬಾಳುವಂತೆ ಮಾಡುವಲ್ಲಿ ಈ ಕಟ್ಟೆಗಳು ಪ್ರಮುಖ ಪಾತ್ರವಹಿಸಿದವು.

ಕೃಷ್ಣಾ ಮೇಲ್ದಂಡೆ ಯೋಜನೆ : ಕರ್ನಾಟಕ ಸರ್ಕಾರವು ಇಂದು ವಿಶ್ವಬ್ಯಾಂಕಿನ ನೆರವು ಪಡೆದು ೬೦೦ ಕೋಟಿ ರೂ. ವೆಚ್ಚದಿಂದ ಕೃಷ್ಣ ನದಿ ನಿರ್ಮಿಸುತ್ತಿರುವ ಭವ್ಯ ನೀರಾವರಿ ಯೋಜನೆ ಅಂದು ನಿಷ್ಠಿ ವೀರಪ್ಪನವರು ಯೋಚಿಸಿದ ಫಲವಾಗಿದೆ. ಅಂದು ನಿಷ್ಠಿ ವೀರಪ್ಪನವರು ಕೃಷ್ಣಾ ನದಿಗೆ ದೊಡ್ಡದಾದ ಒಡ್ಡನ್ನು ಕಟ್ಟಿಸಿ ಸುರಪುರ ಹಾಗೂ ವಾನಗೇರಿ ಕೋಟೆಗಳ ಹೊರಬದಿಯ ಕಂದಕಗಳಿಗೆ ನೀರನ್ನು ತರುವ ಯೋಜನೆ ಮಾಡಿದ್ದರು. ಈ ನೀರಿನಿಂದ ಸುರಪುರದಿಂದ ಸುತ್ತಮುತ್ತಲಿನ ೧೦೫ ಗ್ರಾಮಗಳ ಭೂಮಿಗೆ ನೀರಾವರಿ ಆಗುವುದೆಂದು ಅಂದಾಜು ಮಾಡಿ ಕಾರ್ಯವನ್ನು ಪ್ರಾರಂಭಿಸಿದರು. ಈ ಕಾರ್ಯಕ್ಕೆ ಆಗ ಸಂಸ್ಥಾನಕ್ಕೆ ೬ ಲಕ್ಷ ರೂ. ವೆಚ್ಚವಾಗಬಹುದೆಂಬ ಎಣಿಕೆ ಮಾಡಿದರು ಆದರೆ ಈ ಹಣದ ಅಭಾವದಿಂದ ಈ ಕಾರ್ಯ ಅಂದು ನೆರವೇರಲಿಲ್ಲ. ಇಂದು ಇದು ಬೃಹತ್ ನೀರಾವರಿ ಯೋಜನೆಯಾಗಿ ನೇರವೇರುತ್ತಲಿರುವುದು ಈ ನಾಡಿನ ಭಾಗ್ಯ ಎಂದೇ ಹೇಳಬಹುದು. ಈ

ಯೋಜನೆಯು ತಿಳಿಯಲು ಅಂದು ಯೋಜನೆಗೈದ ಮಾತ್ರ ನಿಷ್ಠಿ ವೀರಪ್ಪನವರಿಗೆ ಸಲ್ಲುತ್ತದೆ.

ಸುರಪುರ ಸಂಸ್ಥಾನದ ರಾಜ್ಯರಕ್ಷಣೆಗಾಗಿ ದಂಡಿನ ಸೈನ್ಯ ವ್ಯವಸ್ಥೆ, ಕುದುರೆ ಪಾಗಗಳು- ದೇವಾಪುರ-೧೨೦, ಗೋಗಿತಾಣ-೧೦೦, ನಗನೂರು-೧೫೦, ವಡಗೇರಿ-೧೦೦, ತಿಂಥಣಿ-೧೦೦, ಕಕ್ಕೇರಿ, ರಾಯನ ಪಾಳ್ಯೆ-೧೫೦, ಕೋಳಿಹಾಳ-೧೫೦, ನರಬೋಳಿ-೫೦, ದೋರನಹಳ್ಳಿ-೫೦, ಆನೆಗಳು-೧೮, ಸವಾರಿ ತಡಿ-೮, ಪಾಯದ ಬ್ಯಾಡರೆ-೧೨೦೦೦, ದಖನೇರು-೩೬, ಕೋಟೆಗಾರರು-೧೨೦೦, ಗಾರದಿ-೮೦೦, ರಾಮಬಾಣ ದವರು-೨೦, ಸಿಬ್ಬಂದಿ ಬೇಡರು-೧೨೦೦, ಸುರಪುರ ಪೇಟೆಯಲ್ಲಿ ಚೋರ ಅಗಸಿ-೨೫೦, ಸುರಪುರ ತಳವಾರರು-೫೪. ಈ ಎಲ್ಲ ಜನರು ಸರಕಾರಿ ಸಂಬಳದಿಂದ ಇದ್ದರು.

ಸಾಂಸ್ಕೃತಿಕ ಕ್ಷೇತ್ರದಲ್ಲಿ ಸಾಧನೆಗಳು : ನಿಷ್ಠಿ ವೀರಪ್ಪನವರು ಸಾಂಸ್ಕೃತಿಕ ಕ್ಷೇತ್ರದಲ್ಲಿ ಕೂಡಾ ಅನೇಕ ಸಾಧನೆಗಳನ್ನು ಕೈಗೊಂಡಿದ್ದಾರೆ. ಇವರು ಸಾಂಸ್ಕೃತಿಕ ಕ್ಷೇತ್ರದಲ್ಲಿ ತಮ್ಮದೇ ಆದ ವೈಶಿಷ್ಟ್ಯತೆಯನ್ನು ಹೊಂದಿದ್ದಾರೆ. ಜಗತ್ಪ್ರಸಿದ್ಧ ಚಿತ್ರಕಲಾವಿದ ಗರುಡಾದ್ರಿ ಇವರ ಕಾಲದಲ್ಲಿ ಇದ್ದರು ಆಸ್ಥಾನದಲ್ಲಿ ಅನೇಕ ಸಂಸ್ಕೃತ, ತೆಲುಗು ಹಾಗೂ ಕನ್ನಡ ಪಂಡಿತರು, ಕವಿಗಳು ಆಶ್ರಯ ಪಡೆದಿದ್ದರು. ಅವರಲ್ಲಿ ಸುರಪುರದ ಆನಂದದಾಸರು ಪ್ರಮುಖರಾಗಿದ್ದಾರೆ.

ವಾಗನಗೇರಿ ಹಾಗೂ ಸುರಪುರದ ಸುತ್ತಲೂ ಇವರು ಕಟ್ಟಿಸಿದ ಭವ್ಯವಾದ ಕೋಟೆಗಳು ಈಗಲೂ ಇವೆ. ಪಟ್ಟಣದ ಮಧ್ಯದಲ್ಲಿರುವ ಗೋಪಾಲಸ್ವಾಮಿ ದೇವಾಲಯ ಇವರ ಕಾಲದಲ್ಲಿಯೇ ನಿರ್ಮಾಣಗೊಂಡಿದೆ. ಇವರ ಇಷ್ಟದೇವರಾದ ಮರಡಿ ಮಲಕಪ್ಪನ ದೇವಾಲಯದ ಒಂದು ಭಾಗವನ್ನು ಕಟ್ಟಿಸಿದ್ದಾರೆ. ಇದನ್ನು ಅಖಂಡವಾದ ಒಂದೇ ಬಂಡೆಗಲ್ಲಿನ ಮೇಲೆ ನಿರ್ಮಿಸಲಾಗಿದೆ. ಶ್ರೀ ಶೈಲದ ಚನ್ನಮಲ್ಲಿಕಾರ್ಜುನ ದೇವಾಲಯದಂತಿದೆ. ಜೇವರ್ಗಿಯ ಶ್ರೀ ಷಣ್ಮುಖ ಶಿವಯೋಗಿಗಳ ಮಠದಲ್ಲಿ ಒಂದು ಕಲ್ಯಾಣಿಯನ್ನು ಕಟ್ಟಿಸಿ, ದೇವಾಲಯದ ಗೋಪುರಕ್ಕೆ ತಮ್ಮ ಹೆಸರಿನಲ್ಲಿ ಕಳಸ ಜಾಗಟೆಗಳನ್ನು ಭಕ್ತಿಯ ಕಾಣಿಕೆಯಾಗಿ ನೀಡಿದ್ದಾರೆ. ಶ್ರೀಮಠದ ಮಹಾದ್ವಾರದ ಮುಂದಿನ ಪರಸೆಗಲ್ಲಿನ ಮೇಲೆ 'ನಿಷ್ಠಿ ವೀರಪ್ಪನವರು ಕಟ್ಟಿಸಿದ್ದು' ಎಂಬ ಶಿಲಾಲೇಖ ಇದೆ. ಸುರಪುರ ತಾಲ್ಲೂಕಿನ ಗೋನಾಳದಲ್ಲಿ ೩ ಗುಡಿಗಳನ್ನು ನಿರ್ಮಿಸಿದ್ದಾರೆ. ತಿಂಥಣಿಯಲ್ಲಿ ನಿರ್ಮಿಸಿದ ದೇವಾಲಯ ಇಂದು ಹಿಂದೂ ಮುಸ್ಲಿಂರ ಭಾವೈಕ್ಯತೆಯ ಸಂಕೇತವಾಗಿದೆಯಲ್ಲದೆ ಪ್ರಮುಖ ಯಾತ್ರಾಸ್ಥಳವಾಗಿದೆ. ಸುರಪುರವು ಸುತ್ತಲು ಗುಡ್ಡಗಳಿಂದ ಆವೃತವಾಗಿದೆ. ನಿಷ್ಠಿ ವೀರಪ್ಪನವರು ಸುರಪುರ ಪಟ್ಟಣದ ಸುತ್ತಲು ೫೨ ಭವ್ಯವಾದ ಹೆಬ್ಬಾಗಿಲುಗಳನ್ನು ನಿರ್ಮಿಸಿ ಸುತ್ತಲೂ ಗುಡ್ಡದ ಮೇಲೆ ತೋಪುಗಳನ್ನು ಇರಿಸಿದ್ದಾರೆ. ನಿಷ್ಠಿ ವೀರಪ್ಪನವರು ಕೈಗೊಂಡ ಜನಸೇವೆ, ಪರೋಪಕಾರ, ಧರ್ಮ ಪ್ರಸಾರದಂತಹ ಗುರುತರವಾದ ಕಾರ್ಯಗಳಲ್ಲಿ ತೊಡಗಿ ಜನಪ್ರಿಯರಾಗತೊಡಗಿದರು. ಇದನ್ನು ಕಂಡು ಕೆಲವು ದ್ರೋಹಿಗಳು ಅಸೂಯೆ ಪಟ್ಟು ವೀರಪ್ಪನವರು ತಮ್ಮ ಭಂಡಾರದಲ್ಲಿನ ಹಣವನ್ನು ತೆಗೆದುಕೊಂಡು ಮಠಗಳನ್ನು ಕಟ್ಟಿಸುತ್ತಿದ್ದಾರೆ. ಇದರಿಂದ ದಾಸೋಹ ನಡೆಸುತ್ತಿದ್ದಾರೆ. ಇದರಿಂದ ವೀರಶೈವರ ಸಂಖ್ಯೆ ಹೆಚ್ಚಾಗಿ ಅವರು ಪ್ರಬಲರಾಗುತ್ತಿದ್ದಾರೆ ಎಂದು ಎರಡನೇ ವೆಂಕಟಪ್ಪ ನಾಯಕನಿಗೆ ಚಾಡಿ ಹೇಳಿದರು. ಮೊದಲು ಎರಡನೇ ವೆಂಕಟಪ್ಪ ನಾಯಕ ನಂಬಲಿಲ್ಲವಾದರೂ ನಂತರ ಅನುಮಾನ ಶುರುವಾಯಿತು ಹೀಗೆ ಅನೇಕ ವಿಷಯಗಳಿಂದ ಇವರಿಬ್ಬರ ಮಧ್ಯೆ ವಿರಸ ಉಂಟಾಗಿ ಎರಡನೇ ವೆಂಕಟಪ್ಪ ನಾಯಕನು ನಿಷ್ಠಿ ವೀರಪ್ಪನನ್ನು ಸೆರೆಹಿಡಿಯಲಾಯಿತು. ನಿಷ್ಠಿ ವೀರಪ್ಪನವರನ್ನು ಸೆರೆಯಲ್ಲಿ ಟ್ಟಿದ್ದನ್ನು ವಿರೋಧಿಸಿ ಸಗರನಾಡಿನ ಜನ ವೆಂಕಟಪ್ಪ ನಾಯಕನ ವಿರುದ್ಧ ದಂಗೆಯೆದ್ದರು. ನಂತರ ತಪ್ಪಿನ ಅರಿವಾಗಿ ಎರಡನೇ ವೆಂಕಟಪ್ಪ ನಾಯಕ ಪಶ್ಚಾತ್ತಾಪ ಪಟ್ಟುಕೊಂಡು ಅವರನ್ನು ಸೆರೆಯಿಂದ ಮುಕ್ತಗೊಳಿಸಿದನಲ್ಲದೆ ಪುನಃ ಮಂತ್ರಿಯಾಗಬೇಕೆಂದು ಕೇಳಿಕೊಂಡನು. ೨ನೇ ವೆಂಕಟಪ್ಪನವರ ಮಾತನ್ನು ನಿರಾಕರಿಸಿದ ವೀರಪ್ಪನವರು ರಾಜಕಾರ್ಯ ತಮಗೆ ಸಾಕೆಂದು ಅವರು ಮುಂದೆ ಅರಮನೆಯತ್ತ ಸುಳಿಯಲಿಲ್ಲ. ತಮ್ಮಲ್ಲಿದ್ದ ಸಂಸ್ಥಾನಕ್ಕೆ ಸಂಬಂಧಿಸಿದ ಎಲ್ಲ ಕಾಗದಗಳನ್ನು ಹಾಗೂ ಮಹತ್ವದ ನಕಾಶೆಗಳನ್ನು ಒಬ್ಬ ಸೇವಕನ ಜೊತೆ ಕಳುಹಿಸಿದರು. ಈ ರೀತಿ ಸಂಸ್ಥಾನದೊಂದಿಗೆ ಸಂಪೂರ್ಣವಾಗಿ ಸಂಬಂಧವನ್ನು ಕಡಿದುಕೊಂಡ ವೀರಪ್ಪನವರು ಗುರು, ಲಿಂಗ, ಜಂಗಮರ ಪೂಜೆಯಲ್ಲಿ ನಿರತರಾಗಿ ಕ್ರಿ.ಶ. ೧೮೦೨ ರಲ್ಲಿ ಲಿಂಗೈಕ್ಯರಾದರು. ಇದು ವೀರಪ್ಪನವರು ಸ್ವಾಭಿಮಾನಿಗಳು ಮತ್ತು ಸೂಕ್ಷ್ಮಮತಿಗಳಾಗಿದ್ದರೆಂಬುದನ್ನು ತಿಳಿಯುತ್ತದೆ.

ನಿಷ್ಠಿ ವೀರಪ್ಪನವರು ಸೇವಕನ ಕೈಯಲ್ಲಿ ಕಳುಹಿಸಿದ ಕಾಗದ ಪತ್ರಗಳು ಎರಡನೇ ವೆಂಕಟಪ್ಪ ನಾಯಕನಿಗೆ ತಲುಪದೆ ಒಬ್ಬ ದೇಶದ್ರೋಹಿಯ ವಶವಾದವು. ಇದೇ ವೇಳೆಗೆ ಬ್ರಿಟಿಷರು ಚಿಕ್ಕ ಪುಟ್ಟ ಸಂಸ್ಥಾನಗಳನ್ನು ವಶಪಡಿಸಿಕೊಳ್ಳತೊಡಗಿದರು. ಸುರಪುರದ ಸುತ್ತಲೂ ಎತ್ತರವಾದ ಬೆಟ್ಟ ಹಾಗೂ ಭದ್ರವಾದ ಕೋಟೆಗಳಿದ್ದುದರಿಂದ ಸುರಪುರ ಸಂಸ್ಥಾನ ಬ್ರಿಟಿಷರ ವಶವಾಗಿರಲಿಲ್ಲ. ಆದರೆ ಪಶ್ಚಿಮ ಭಾಗದಲ್ಲಿ ಸುರಪುರ ಪಟ್ಟಣವನ್ನು ರಕ್ಷಿಸುವ ಯಾವುದೇ ಭದ್ರತೆಯಿರಲಿಲ್ಲ ಇದು ನಿಷ್ಠಿ ವೀರಪ್ಪನವರಿಗೆ ತಿಳಿದಿತ್ತು. ಹಾಗಾಗಿ ಅವರು ಸೇವಕನ ಕೈಯಲ್ಲಿ ಕಳಿಸಿದ ನಕ್ಷೆಯ ಒಂದು ಕಡೆಗೆ "ಸಂಸ್ಥಾನದ

ಕೋಟೆ ಸುತ್ತಲೂ ಭದ್ರವಿದ್ದು ಪಶ್ಚಿಮ ದಿಕ್ಕಿಗೆ ಮಾತ್ರ ಭದ್ರವಿಲ್ಲ. ಆ ದಿಕ್ಕಿಗೆ ಎತ್ತರವಾದ ಬೆಟ್ಟವಿದೆ. ಅದರ ಮೇಲಿನಿಂದ ವೈರಿಗಳು ಪಟ್ಟಣದೊಳಗೆ ತೋಪು ಹಾರಿಸಬಹುದು. ಆದ್ದರಿಂದ ವೈರಿಗಳು ಒಳನುಗ್ಗದಂತೆ ಆ ಬೆಟ್ಟವನ್ನು ಕೊರೆಯಿಸಿರಿ" ಎಂದು ರಾಜನಿಗೆ ಬರೆದಿದ್ದರು. ದೇಶದ್ರೋಹಿ ವಶಪಡಿಸಿಕೊಂಡ ಸಂಸ್ಥಾನದ ಕಾಗದ ಪತ್ರಗಳು ಬ್ರಿಟಿಷರ ವಶವಾದವಲ್ಲದೆ ಅವರು ಗುಪ್ತ ಮಾರ್ಗದಿಂದ ಸಂಸ್ಥಾನದೊಳಗೆ ನುಗ್ಗಿ ಅದನ್ನು ತಮ್ಮ ವಶ ಮಾಡಿಕೊಂಡರು. ಸಂಸ್ಥಾನದ ರಕ್ಷಣೆಗಾಗಿ ಈ ರೀತಿ ನಕ್ಷೆಯನ್ನು ಸಿದ್ಧಪಡಿಸಿದವರಾರು ಎಂಬುದನ್ನು ತಿಳಿದುಕೊಳ್ಳಲು ಬ್ರಿಟಿಷರಿಗೆ ಕುತೂಹಲವುಂಟಾಯಿತು. ನಂತರ ನಿಷ್ಠಿ ವೀರಪ್ಪನವರೆಂದು ತಿಳಿಯಿತು. ವೀರಪ್ಪನವರ ಚಾಣಾಕ್ಷತನ ಜಾಣ್ಮೆಯನ್ನು ಮೆಚ್ಚಿ ಬ್ರಿಟಿಷರು ನಿಷ್ಠಿ ವೀರಪ್ಪನವರ ವಂಶಜರಿಗೆ ಮುತ್ತಕೋಡ ಜಾಹಗೀರ ಹಾಕಿ ಕೊಟ್ಟರು. ಅಂದಿನಿಂದ ಇಂದಿನವರೆಗೆ ಅವರ ಮನೆತನದವರಿಗೆ ನಿಷ್ಠಿ ಜಹಗೀರದಾರ ಎಂದು ಕರೆಯುವುದುಂಟು. ಸುಮಾರು ೫೦ ವರ್ಷಗಳ ಕಾಲ ಸುರಪುರ ಸಂಸ್ಥಾನದ ರಾಜಕೀಯ, ಸಾಂಸ್ಕೃತಿಕ, ಧಾರ್ಮಿಕ, ಕ್ಷೇತ್ರದಲ್ಲಿ ನಿಷ್ಠ ಸಹೋದರರು ಮಾಡಿದ ಸಾಧನೆ ಅಭೂತಪೂರ್ವವಾದದ್ದು. ಅವರು ಸಗರನಾಡಿನ ಸಮಸ್ತ ವೀರಶೈವ ಸಮಾಜದ ಶ್ರೇಯಸ್ಸಿಗಾಗಿ ಆ ಧರ್ಮದ ಜಾಗೃತಿಗಾಗಿ ಊರಿಗೊಂದರಂತೆ ಮಠಗಳನ್ನು, ಬಾವಿಗಳನ್ನು ನಿರ್ಮಿಸಿದರು. ಇವರು ತಮ್ಮ ಅಧಿಕಾರಾವಧಿಯಲ್ಲಿ ಕೈಗೊಂಡ ಕಾರ್ಯಗಳು ಸುರಪುರ ಸಂಸ್ಥಾನದ ಅಭಿವೃದ್ಧಿಗೆ ಪೂರಕವಾಗಿದೆಯಲ್ಲದೆ ನಮ್ಮ ಇಂದಿನ ಪೀಳಿಗೆಗೆ ಆದರ್ಶಪ್ರಾಯವಾಗಿದೆ. ಈ ಎಲ್ಲ ಅಂಶಗಳನ್ನು ಗಮನಿಸಿದಾಗ ಒಂದು ನಾಡಿನ ಚರಿತ್ರೆ ಎಷ್ಟು ಮುಖ್ಯವೋ ಅದರಂತೆ ವ್ಯಕ್ತಿಯ ಬದುಕಿಗೆ ಆತನ ಚರಿತ್ರೆಯು ಅಷ್ಟೇ ಮುಖ್ಯವಾಗಿದೆ. ಸುರಪುರ ಸಂಸ್ಥಾನದ ಇತಿಹಾಸದಲ್ಲಿ ನಿಷ್ಠಿ ಸಹೋದರರು ರಚನಾತ್ಮಕ ಕಾರ್ಯಗಳನ್ನು ಮಾಡುವ ಮೂಲಕ ಪ್ರಮುಖವಾದ ಸ್ಥಾನವನ್ನು ಪಡೆದಿದ್ದಾರೆ. ಹಾಗಾಗಿ ಸುರಪುರ ಸಂಸ್ಥಾನದ ಅಭಿವೃದ್ಧಿಗಾಗಿ ಮಹತ್ತರ ಪಾತ್ರವಹಿಸಿದ ನಿಷ್ಠಿ ಸಹೋದರರ ಜೀವನ ಮತ್ತು ಸಾಧನೆಗಳ ವಸ್ತು ನಿಷ್ಠ ಅವಲೋಕನ ನಡೆಯಬೇಕಾಗಿದೆ. ಈ ಮಂತ್ರಿಗಳ ಬಗ್ಗೆ ಮುಂದಿನ ಪೀಳಿಗೆಗೆ, ಇವರು ಕೈಗೊಂಡಿರುವ ಕಾರ್ಯಗಳ ಪುನರ್ ನೆನಪಿಸಿ ಮುಂದಿನ ಅಧ್ಯಯನ, ಸಂಶೋಧನೆಗಳಿಗೆ ಸ್ಫೂರ್ತಿಯಾಗಲು ಹೊಸ ದೃಷ್ಟಿಕೋನದಿಂದ ಹೊಸ ಹೊಸ ಚಿಂತನೆಗೆ ಒಳಪಡಿಸಿ ಲಭ್ಯವಿರುವ ಆಧಾರಗಳಿಂದ ಪುನರ್ ರಚಿಸುವುದು ಅವಶ್ಯಕವಾಗಿದೆ. ಬಹು ಸತ್ಯಗಳ ಕಡೆಗೆ ಮುಖ ಮಾಡಿರುವ ಇಂದಿನ ಬದಲಾದ ಅಧ್ಯಯನ ಕ್ರಮವನ್ನು ಅಳವಡಿಸಿಕೊಳ್ಳುವುದರ ಮೂಲಕ ಒಂದು ಪ್ರದೇಶದ ಹಾಗೂ ವ್ಯಕ್ತಿಯ ಚರಿತ್ರೆಯನ್ನು ಕಟ್ಟುವ ಪ್ರಯತ್ನ ಮಾಡಲಾಗಿದೆ.

ಆಧಾರಸೂಚಿ

೧. ಭಾಸ್ಕರರಾವ್ ಮೂಡಬೂಳ, **ಮರೆತು ಹೋದ ಸುರಪುರ ಇತಿಹಾಸ**, ಎಸ್.ಜಿ. ಪ್ರೊಸೆಸ, ಬೆಂಗಳೂರು, ೨೦೦೧.

೨. ಈಶ್ವರಯ್ಯ ಮಠ, **ವಚನ ವಾಹಿನಿ**, ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು, ಸುರಪುರ, ೨೦೦೪.

೩. ಡಾ. ಈಶ್ವರಯ್ಯ ಮಠ **ನೆನಹು ತುಂಬಿ** ಸ್ಮರಣ ಸಂಚಿಕೆ.

೪. ಡಾ. ಈಶ್ವರಯ್ಯ ಮಠ **ಬಸವ ಸಾಗರ**, ಸ್ಮರಣ ಗ್ರಂಥ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಗುಲ್ಬರ್ಗ, ೨೦೦೬.

೫. ಕಪಟರಾಳ ಕೃಷ್ಣರಾಯ **ಸುರಪುರ ಸಂಸ್ಥಾನದ ಇತಿಹಾಸ**, ಆರ್. ಸಿದ್ಧಯ್ಯ, ಬೆಂಗಳೂರು, ೧೯೭೭.

೬. ಕೃಷ್ಣಾ. ಎ., **ತವನಿಧಿ** ಸ್ಮರಣ ಸಂಚಿಕೆ, ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು, ಸುರಪುರ, ೧೯೯೬.

೭. ಕೃಷ್ಣಾಮಾಚಾರ್ಯ. ಜಿ., **ಮರೆಯಲಾಗದ ಸುರಪುರ ರಾಜರ ಚರಿತ್ರೆ**, ಶ್ರೀಮತಿ ರಂಜನಾ ಪ್ರಕಾಶ್ ಚಂದ್ ಜೈನ್, ಸುರಪುರ, ೨೦೦೩.

೮. ಹನುಮಾಕ್ಷಿ ಗೋಗಿ, **ಸುರಪುರ ತಾಲ್ಲೂಕಿನ ಶಾಸನಗಳು**, ೧೯೯೫.

೧೨೦

ಚನ್ನಪಟ್ಟಣದ ಬೊಂಬೆ ತಯಾರಿಕೆ ಉದ್ಯಮದ ಇತಿಹಾಸ

ಡಾ. ಹೆಚ್.ಎಸ್. ಬಸವೇಗೌಡ*

ಕರ್ನಾಟಕ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಕಾಲಘಟ್ಟದಲ್ಲಿ 'ಚನ್ನಪಟ್ಟಣ' ತಾಲ್ಲೂಕು ತನ್ನ ಹೆಜ್ಜೆ ಗುರುತುಗಳನ್ನು ಮೂಡಿಸಿದೆ.[೧] ಬಯಲು ಸೀಮೆ ಎಂದು ಪ್ರಸಿದ್ಧಿ ಪಡೆದಿರುವ ರಾಮನಗರ ಜಿಲ್ಲೆಯ 'ಚನ್ನಪಟ್ಟಣ' ಒಂದು ಪ್ರಮುಖ ತಾಲ್ಲೂಕು ಕೇಂದ್ರ, ವಿಭಿನ್ನ ಜಾನಪದ ಸಂಸ್ಕೃತಿಗೆ ತವರೂರಾದ ಚನ್ನಪಟ್ಟಣ ಸಾಂಸ್ಕೃತಿಕವಾಗಿ ಹಾಗೂ ಐತಿಹಾಸಿಕವಾಗಿ ಬಹು ಶ್ರೀಮಂತವಾಗಿದೆ.[೨] ಕರ್ನಾಟಕದ ವೈವಿಧ್ಯಮಯ ಸಾಂಸ್ಕೃತಿಕ ದಾಖಲೆಗಳಲ್ಲಿ ತನ್ನ ಕಾಣಿಕೆಯ ಇರುವಿಕೆಯನ್ನು ಪಡಿಮೂಡಿಸಿ 'ಬಣ್ಣದ ಬೊಂಬೆಯ ನಗರಿ' ಎಂದೆ ಖ್ಯಾತಿ ಹೊಂದಿರುವ ಇದು ಜಗತ್ತಿನಲ್ಲೇ ಆಟದ ಸಾಮಾನುಗಳಲ್ಲಿ ವಿಶಿಷ್ಟತೆ ಮತ್ತು ಸೊಬಗನ್ನು ಮೆರೆದಿದೆ. ಪೌರಾಣಿಕ ಮಹತ್ವವನ್ನು ಹೊಂದಿರುವುದಲ್ಲದೆ ಐತಿಹಾಸಿಕವಾಗಿ ವಿಶಿಷ್ಟ ಪಾತ್ರ ನಿರ್ವಹಿಸಿದೆ. ಸಂಗೀತಗಾರರಿಗೆ, ಕಲಾಕಾರರಿಗೆ, ವಿದ್ವಾಂಸರು, ಕವಿಗಳಿಗೆ, ದಾರ್ಶನಿಕರಿಗೆ ಜನ್ಮ ನೀಡಿತಲ್ಲದೆ ಧಾರ್ಮಿಕ, ರಾಜಕೀಯ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ರಂಗಗಳಲ್ಲಿ ಭಿನ್ನ ಪರಂಪರೆಯನ್ನು ಸೃಷ್ಟಿಸಿದೆ. ಅರೆ ಮಲೆನಾಡಿನಂತಿರುವ ಇದು ಕರಕುಶಲ ಕೈಗಾರಿಕೆಗಳಿಗೆ ಹೆಸರುವಾಸಿಯಾಗಿದೆ.[೩]

ಚನ್ನಪಟ್ಟಣ ತಾಲ್ಲೂಕು ಪುರಾಣೇತಿಹಾಸ ಕಾಲದಲ್ಲಿಯೂ ಹೆಸರುವಾಸಿಯಾದ ನಾಡು. ಇಲ್ಲಿನ ಮಣ್ಣಿನ ಮಹಿಮೆಯು ರಾಜಕೀಯ, ಸಾಹಿತ್ಯ, ಸಂಸ್ಕೃತಿಯನ್ನು ಸಮೃದ್ಧಗೊಳಿಸಲು ತನ್ನದೇ ಆದ ಕೊಡುಗೆಯನ್ನು ನೀಡಿದೆ ಎಂಬುದು ಗಮನಾರ್ಹ. ಈ ನೆಲದಲ್ಲಿ ಹುಟ್ಟಿ ಬೆಳೆದವರು ಇತಿಹಾಸದಲ್ಲಿ ಹಾಸು ಹೊಕ್ಕಾಗಿದ್ದಾರೆ. ಕ್ರಿ.ಶ. ೩೫೦ರಿಂದ ಕ್ರಿ.ಶ. ೧೦೦೪ರವರೆಗೆ ಈ ನಾಡಿನ ಬಹುಭಾಗವನ್ನು ಆಳಿದ ಗಂಗರು ಹಲವು ವರ್ಷಗಳ ಕಾಲ ಈ ತಾಲ್ಲೂಕಿನ ಮಂಕುಂದವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದ್ದಾರೆ. ಅವರಲ್ಲಿ ದಡಿಗ, ಮಾಧವ, ಶ್ರೀಪುರುಷ ಸೇರಿದಂತೆ ಸ್ವತಃ ಸಾಹಿತಿಗಳಾಗಿ ಮೆರೆದಿದ್ದಾರೆ. ೧೫ನೆಯ ಶತಮಾನದಲ್ಲಿ ದಾಸ ಪರಂಪರೆಯು ಹುಟ್ಟಿ ಬೆಳೆದಿದ್ದು ಇಲ್ಲಿಂದಲೇ. ವ್ಯಾಸರಾಜರು, ಶ್ರೀಪಾದರಾಜರು, ದಾಸ ಶ್ರೇಷ್ಠರನೇಕರಿಗೆ ಗುರುಗಳಾಗಿದ್ದುಕೊಂಡು ದಾಸ ಸಾಹಿತ್ಯ ಸೃಷ್ಟಿಯ ಜೊತೆಗೆ, ಆ ಪರಂಪರೆಗೆ ನೀರೆರೆದು ಪೋಷಣೆ ಮಾಡಿರುವುದು ಗಮನಾರ್ಹ. ಪುರಂದರದಾಸರು, ಕನಕದಾಸರು ಈ ನೆಲವನ್ನು ಸ್ಪರ್ಶಿಸಿದ್ದಾರೆ.[೪] ಈ ಎಲ್ಲಾ ದೃಷ್ಟಿಕೋನಗಳಿಂದ ಚನ್ನಪಟ್ಟಣದ ಇತಿಹಾಸದ ಅಧ್ಯಯನವು ಆಸಕ್ತಿದಾಯಕವಾಗಿದೆ.

ಕರಕುಶಲ ಉದ್ದಿಮೆಗಳಲ್ಲಿ ಮುಖ್ಯವಾಗಿ ಮರದ ಬೊಂಬೆ ತಯಾರಿಕೆ, ರೇಷ್ಮೆ ನೂಲು ತಯಾರಿಕೆ, ಹರಳು ಉದ್ದಿಮೆ ಹಾಗೂ ವೀಣೆ ತಂತಿಗಳ ತಯಾರಿಕಾ ಉದ್ದಿಮೆಗಳಿಗೆ ಈ ತಾಲ್ಲೂಕು ಆಶ್ರಯತಾಣವಾಗಿದೆ. ಜಾಗತಿಕವಾಗಿ ಖ್ಯಾತಿ ಮಾಡಿರುವ ಈ ಮರದ ಬೊಂಬೆಗಳ ತಯಾರಿಕಾ ಉದ್ಯಮವು ಚನ್ನಪಟ್ಟಣದ ಸಾಂಸ್ಕೃತಿಕ ಕೊಡುಗೆಗಳಲ್ಲಿ ಒಂದಾಗಿದೆ. ವಿವಿಧ ಕರಕುಶಲ ಉದ್ದಿಮೆಗಳ ಪರಿಚಯದೊಂದಿಗೆ ಅವುಗಳ ಕೊಡುಗೆಯನ್ನು ವಿವಿಧ ರಾಜ್ಯಗಳ, ದೇಶಗಳ ಜನರಲ್ಲಿ ಬಿತ್ತುವ ಮಹತ್ವ ವನ್ನೊಂದಿದೆ. ಕರಕುಶಲತೆಯು ಈ ನಾಡಿನ ಸಂಸ್ಕೃತಿ ಮತ್ತು ಪರಂಪರೆಯ ಭಾಗವಾಗಿದೆ.

ಚನ್ನಪಟ್ಟಣದಲ್ಲಿ ಹುಟ್ಟಿ ವಿವಿಧ ಕ್ಷೇತ್ರದಲ್ಲಿ ದುಡಿಮೆ ಮಾಡಿದವರು ಬಗೆದಷ್ಟೂ ಲಭ್ಯವಾಗುತ್ತಾರೆ. ಈ ತಾಲ್ಲೂಕಿನಲ್ಲಿ ಜಾನಪದ ಕಲೆ, ಕಲಾವಿದರು ಸಮೃದ್ಧವಾಗಿದ್ದಾರೆ.[೫] ಹೀಗೆ ಸಾಂಸ್ಕೃತಿಕ ಗರಿಮೆಯನ್ನು ಹೊಂದಿರುವ ಚನ್ನಪಟ್ಟಣ ವ್ಯಾಪಾರ-ವಾಣಿಜ್ಯ, ಕಲೆ, ಸಾಹಿತ್ಯ, ವಿವಿಧ ಧರ್ಮಗಳಿಗೆ ತಾಣವಾಗಿದೆ ಅದರಲ್ಲೂ ಚನ್ನಪಟ್ಟಣವು ಕರಕುಶಲತೆಗೆ ಹೆಸರುವಾಸಿಯಾಗಿದ್ದು ಅದು ಮರದ ಆಟಿಕೆಗಳಿಗೆ ಪ್ರಸಿದ್ಧವಾಗಿದೆ. ಚನ್ನಪಟ್ಟಣದ ಗೊಂಬೆಗಳು ತಮ್ಮ ಸೌಂದರ್ಯ, ವೈವಿಧ್ಯತೆ ಮತ್ತು ಉತ್ತಮ ಗುಣಮಟ್ಟದಿಂದಾಗಿ ಆಬಾಲವೃದ್ಧರಾದಿಯಾಗಿ ಎಲ್ಲರನ್ನು ಆಕರ್ಷಿಸುತ್ತವೆ.

ಚನ್ನಪಟ್ಟಣದ ಬೊಂಬೆಗಳನ್ನು ತಯಾರಿಸುವ ಕುಶಲ ಕರ್ಮಿಗಳು ಚಿತ್ರಕಾರರೆಂಬ ಸಮುದಾಯಕ್ಕೆ ಸೇರಿದವರು. ಈ ಉದ್ಯಮವು ವಿವಿಧ ಜನಾಂಗದವರ ಜೀವನಾಧಾರ

* ಸಹಾಯಕ ಪ್ರಾಧ್ಯಾಪಕರು, ಮಹಿಳಾ ಸರ್ಕಾರಿ ಕಾಲೇಜು, ಮದ್ದೂರು, ಮಂಡ್ಯ ಜಿಲ್ಲೆ.

ವಾಗಿದೆ. ಅತ್ಯಂತ ಸೂಕ್ಷ್ಮ ನವಿರಾದ ಕೆಲಸಗಳನ್ನು ಇಲ್ಲಿನ ಕುಶಲಕರ್ಮಿಗಳು ನಿರ್ವಹಿಸುವುದಲ್ಲದೆ, ಗುಲಗಂಜಿ ಗಾತ್ರದ ಬೊಂಬೆಗಳಿಂದ ದೊಡ್ಡ ಪ್ರಾಣಿಗಳವರೆಗೆ ತಯಾರಿಸುತ್ತಾರೆ. ಅನೇಕ ಗೃಹಾಲಂಕಾರ ಗೃಹೋಪಯೋಗಿ ವಸ್ತುಗಳು ತಯಾರಾಗುವುದಲ್ಲದೆ ವಿದೇಶಗಳಿಗೂ ರಫ್ತಾಗುತ್ತವೆ. ತಾಲ್ಲೂಕಿನ ಇತರ ಕರಕುಶಲ ಕೈಗಾರಿಕೆಗಳಲ್ಲಿ ಬೇವೂರಿನ ಮಣ್ಣಿನ ಕುಡಿಕೆ, ಬಿದಿರು ಬುಟ್ಟಿಗಳನ್ನು ಹೆಣೆಯುವ ಮೇದರು, ಮರದ ಬಾಚಣಿಗೆ ತಯಾರಿಸುವ ದೊಂಬರು ಇಲ್ಲಿ ಕಂಡು ಬರುತ್ತಾರೆ. ಡಾ॥ ಫ್ರಾನ್ಸಿಸ್ ಬುಕನಾನ್ ಪ್ರವಾಸ ಕೈಗೊಂಡಾಗ ಇಲ್ಲಿ ಗಾಜಿನ ಸಾಮಾನು ಗಳನ್ನು, ಬಳೆಗಳನ್ನು, ವೀಣೆಯ ತಂತಿಗಳನ್ನು, ಬಿದಿರಿನಿಂದೆಣೆದ ಸಾಮಾನುಗಳನ್ನು ತಯಾರಿಸುತ್ತಾರೆಂದು ಉಲ್ಲೇಖಿಸಿದ್ದಾನೆ.[೬] ಇವಷ್ಟೇ ವೃತ್ತಿಗಳಲ್ಲದೆ ಕೃಷಿಯನ್ನು ಪ್ರಧಾನವಾಗಿ ಅವಲಂಬಿಸಿರುವ ಒಕ್ಕಲಿಗರು ಮತ್ತು ಬ್ರಾಹ್ಮಣ, ವೀರಶೈವ, ಜೈನ, ದಾಸಬಣಜಿಗ, ಕುರುಬ, ಉಪ್ಪಾರ, ಕುಂಬಾರ ಮುಂತಾದ ಸಮುದಾಯಗಳು ಇಲ್ಲಿ ವಾಸವಾಗಿವೆ.[೭] ಹೀಗೆ ವಿವಿಧ ಪ್ರಾಂತಗಳಿಂದ ಬಂದ ಜನರು ಈ ನಾಡಿನಲ್ಲಿ ಬಂದು ನೆಲೆಗೊಂಡಿದ್ದಾರೆ. ಅದರಲ್ಲೂ ಜೀವನದಲ್ಲಿ ನೆಲೆ ನಿಲ್ಲಲು ವೃತ್ತಿಯನ್ನು ಅರಸಿ ಬಂದವರು, ತಮ್ಮ ಕರಕುಶಲತೆಯ ಕೈಚಳಕವನ್ನು ಬಿತ್ತ ಬಂದವರು, ತಮ್ಮ ಪ್ರತಿಭೆಯ ಪ್ರಸಾರಕ್ಕಾಗಿ ನೆಲೆಯರಸಿ ಬಂದವರು ಹೀಗೆ ವಿವಿಧ ಉದ್ದೇಶಗಳಿಗಾಗಿ ವಿವಿಧ ಧರ್ಮದ ಜನರು ಈ ನೆಲದಲ್ಲಿ ವಾಸಿಸುತ್ತಿದ್ದು ಇವರ ಕೊಡುಗೆ ಇಲ್ಲಿನ ಸಾಂಸ್ಕೃತಿಕ, ಆರ್ಥಿಕ ಅಭಿವೃದ್ಧಿಗೆ ಅಮೂಲ್ಯವಾಗಿದ್ದು ಚನ್ನಪಟ್ಟಣದ ಕೀರ್ತಿಯನ್ನು ಎತ್ತಿ ಹಿಡಿದಿದೆ.

ಚನ್ನಪಟ್ಟಣದಲ್ಲಿ ಮರದ ಬೊಂಬೆಗಳ ತಯಾರಿಕೆಯು ಪ್ರಮುಖವಾಗಿದ್ದು, ಇಂದು ದೇಶ ವಿದೇಶಗಳಲ್ಲಿ ಬಹು ಬೇಡಿಕೆ ಹೊಂದಿದೆ. ಮನುಷ್ಯನಲ್ಲಿರುವ ಕೌಶಲ್ಯವು ಆತನ ಕರಗಳಿಂದ ಬಿಂಬಿತವಾಗುವುದನ್ನೇ ಕರಕುಶಲ ಕಲೆ ಎನ್ನಬಹುದು. 'ರಸಾನುಭವವನ್ನು ಉಂಟು ಮಾಡಬಹುದಾದ ಯಾವುದೇ ರಚನೆ ಅಥವಾ ಸೃಷ್ಟಿಯನ್ನು ನಾವು ಕಲೆ' ಎಂದು ಗುರುತಿಸುತ್ತೇವೆ. ನಮ್ಮ ನಿತ್ಯದ ಬದುಕಿನಲ್ಲಿ ಹಾಸುಹೊಕ್ಕಾಗಿ ಹೆಣೆದುಕೊಂಡಿರುವ ಕಲೆಗಳಲ್ಲಿ ಕೆಲವನ್ನು ಕುಶಲಕಲೆಗಳು ಎಂದು ಕರೆಯುವುದುಂಟು. ಆನಂದ ಮೂಲವಾದ ಕಲೆಗಳನ್ನು 'ಲಲಿತ ಕಲೆ' ಎಂದೂ, ಉಪಯುಕ್ತತೆ ಮೂಲವಾದುದನ್ನು 'ಕುಶಲಕಲೆ' ಎಂದು ಗುರುತಿಸುತ್ತೇವೆ. ಈ ಉಪಯುಕ್ತ ಕಲೆಗಳನ್ನು ಈಚೆಗೆ ಕರಕುಶಲ ಕಲೆಗಳು ಎಂದೂ ಗುರುತಿಸುತ್ತಿದ್ದೇವೆ. ಅಂದರೆ ಇವು ಯಂತ್ರ ನಿರ್ಮಿತ ವಸ್ತುಗಳಿಗಿಂತ ಭಿನ್ನವಾದವುಗಳು ಮತ್ತು ದೇಶೀಯ ರಚನೆಗಳು ಎಂಬುದನ್ನು ಸೂಚಿಸಲು ಈ ಪದ ರೂಢಿಯಲ್ಲಿ ಬಂದಿದೆ. ಈಚೆಗೆ ಯಾಂತ್ರೀಕರಣದ ಫಲವಾಗಿ ಯಂತ್ರ ನಿರ್ಮಿತಿಗಳಿಗಿಂತ ಭಿನ್ನವಾದ ಮಾನವ ನಿರ್ಮಿತ ಕಲಾ ವಸ್ತುಗಳನ್ನು ಕರಕುಶಲ ಕಲೆಗಳು ಎಂದು ಹೇಳಲಾಗಿದೆ.[೮] ಕರಕುಶಲ ವಸ್ತುಗಳು ಮಾನವ ಬದುಕಿಗಾಗಿ ಸೃಷ್ಟಿಸಿದ ವಸ್ತುಗಳು. ಇವುಗಳ ಸೃಷ್ಟಿಯ ಜೊತೆಗೆ ಅವನ ಸೌಂದರ್ಯ ಪ್ರಜ್ಞೆಯೂ ಜಾಗೃತವಾಗಿದ್ದುದರಿಂದ ಅವುಗಳ ರಚನೆ ಕೇವಲ ಉಪಯೋಗಕ್ಕೆ ಸೀಮಿತವಾಗುಳಿಯಲಿಲ್ಲ. ಪ್ರಕೃತಿಯ ರಮಣೀಯ ದೃಶ್ಯಗಳಲ್ಲಿ, ಹರಿವ ನೀರಿನ ಝುರಿಯಲ್ಲಿ, ಹಣ್ಣಿನ ಬಣ್ಣದಲ್ಲಿ, ಕಲ್ಲುಗಳ ವಿನ್ಯಾಸದಲ್ಲಿ ಇರಬಹುದಾದ ಸೌಂದರ್ಯವನ್ನು ಗಮನಿಸಿದ ಮಾನವನ ಕಲಾತ್ಮಕ ಪ್ರಜ್ಞೆಯೂ ಜಾಗೃತಗೊಂಡು ಈ ಕಲಾತ್ಮಕ ಪ್ರಜ್ಞೆಯು ಹತ್ತು ಹಲವು ರೂಪಗಳಲ್ಲಿ ಪ್ರಕಟಗೊಂಡಿತ್ತು. ಯಂತ್ರ ನಾಗರಿಕತೆಯ ಪ್ರವೇಶಕ್ಕೆ ಪೂರ್ವದಲ್ಲಿ ಮನುಷ್ಯ ತಾನೇ ನಿರ್ಮಿಸಿಕೊಂಡ ವಸ್ತುಗಳನ್ನು ತರುವಾಯದ ದಿನಗಳಲ್ಲಿ ಉಪಯೋಗದ ವಸ್ತುಗಳು ಎಂದು ಗುರುತಿಸುವುದಕ್ಕೆ ಬದಲಾಗಿ ಅವುಗಳ ಕಲಾತ್ಮಕತೆಯ ಕಡೆಗೆ ಹೆಚ್ಚು ಶ್ರದ್ಧೆಯನ್ನು ಕೇಂದ್ರೀಕರಿಸಿದ್ದಾನೆ ಎಂದೆನಿಸುತ್ತದೆ.[೯]

ಚನ್ನಪಟ್ಟಣ ಅಲ್ಲಿನ ಬೊಂಬೆಗಳಿಂದಾಗಿ "ಬೊಂಬೆಗಳ ನಗರ" (ಟಾಯ್ಸ್ ಸಿಟಿ) ಎಂಬ ಹೆಸರು ಪಡೆದಿದೆ.[೧೦] ಚನ್ನಪಟ್ಟಣದ ಕರಕುಶಲತೆಗಳಲ್ಲಿ ರೇಷ್ಮೆ ನೂಲು ತೆಗೆಯುವುದು, ನೇಯ್ಗೆ, ಮಣ್ಣಿನ ಮಡಿಕೆ, ಕುಡಿಕೆಗಳ ತಯಾರಿಕೆ, ಬಿದಿರಿನಿಂದ ಬುಟ್ಟಿ, ಮೊರಗಳನ್ನು ಹೆಣೆಯುವುದು, ಮರದ ಆಟಿಕೆಗಳ ತಯಾರಿಕೆ ಪ್ರಮುಖವಾಗಿ ಕಂಡು ಬಂದರೂ ದೇಶ ವಿದೇಶಗಳಲ್ಲಿ ಚನ್ನಪಟ್ಟಣದ ಕೀರ್ತಿ ಧ್ವಜವನ್ನು ಹಾರಿಸುತ್ತಿರುವ ಈ ಬಣ್ಣದ ಬೊಂಬೆಗಳ ಉದ್ದಿಮೆ ಬಹು ಮಹತ್ವದ್ದಾಗಿದೆ.

ಕವಿ ಜಿ.ಪಿ. ರಾಜರತ್ನಂರವರ 'ಚನ್ನಪಟ್ಟಣದ ಬಣ್ಣದ ಬೊಂಬೆ' ಕವನದ ಸಾಲುಗಳು ಚನ್ನಪಟ್ಟಣದ ವೈಶಿಷ್ಟ್ಯಕ್ಕೆ ಹಿಡಿದ ಕನ್ನಡಿ. ನೋಡುಗರ ಮನಸೂರೆಗೊಂಡು ಇವುಗಳ ದರ್ಶನ ಮಾತ್ರದಿಂದಲೇ ಕವಿತೆ ರಚಿಸುವ ಮಟ್ಟಿಗೆ ಈ ಬೊಂಬೆಗಳು ಸ್ಫೂರ್ತಿ ನೀಡುತ್ತವೆ ಎಂದರೆ ಇವುಗಳ ಬಗ್ಗೆ ಮತ್ತೇನನ್ನು ಹೇಳಬೇಕಿಲ್ಲ. ನಮ್ಮ ಪೂರ್ವಜರ ಕರ ಕೌಶಲ್ಯವನ್ನು ಇವುಗಳು ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ಕೊಂಡೊಯ್ಯುತ್ತಿವೆ.

ಬೊಂಬೆಗಳ ತಯಾರಿಕೆ ಉದ್ಯಮದ ಚಾರಿತ್ರಿಕ ಹಿನ್ನೆಲೆ

ಚನ್ನಪಟ್ಟಣದ ಬೊಂಬೆ ತಯಾರಿಕೆಗೆ ಸುಮಾರು ೨೦೦ ರಿಂದ ೨೫೦ ವರ್ಷಗಳ ಇತಿಹಾಸವಿದೆ.[೧೧] ಚನ್ನಪಟ್ಟಣದ ಚಾರಿತ್ರಿಕ ಹಿನ್ನೆಲೆಯನ್ನು ಗಮನಿಸಿದಾಗ ಈ ಪ್ರದೇಶವನ್ನು

ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದ ಗಂಗರು, ಚೋಳರು, ಹೊಯ್ಸಳರು, ಪಾಳೆಯಗಾರರು ಹೀಗೆ ಚನ್ನಪಟ್ಟಣವನ್ನಾಳಿದ ಈ ರಾಜಮನೆತನಗಳು ಇಲ್ಲಿನ ಕರಕುಶಲ ಕೈಗಾರಿಕೆಗೆ ಹೆಚ್ಚಿನ ಪ್ರೋತ್ಸಾಹವನ್ನು ನೀಡಿದಂತೆ ಕಂಡು ಬರುವುದಿಲ್ಲ. ಆದರೆ ಈ ರಾಜಮನೆತನಗಳ ಆಳ್ವಿಕೆಯ ವೇಳೆ ನಿರ್ಮಾಣಗೊಂಡ ಕೆಲವು ದೇವಾಲಯಗಳು, ಶಿಲ್ಪಗಳು, ಮೂರ್ತಿಗಳು ಮುಂದೆ ಈ ಕರಕುಶಲತೆಯ ಕೈಗಾರಿಕೆಗಳಲ್ಲಿ ವಿವಿಧ ಭಂಗಿಯ, ವಿವಿಧ ರೂಪದ ಬೊಂಬೆಗಳ ತಯಾರಿಕೆಗೆ ಸ್ಫೂರ್ತಿಯಾಗಿರಬಹುದೆಂದು ಊಹಿಸಬಹುದು. ನಂತರದ ಕಾಲದಲ್ಲಿ ಈ ಪ್ರದೇಶವು ಹೈದರಾಲಿ ಮತ್ತು ಟಿಪ್ಪುಸುಲ್ತಾನ್ ಆಳ್ವಿಕೆಗೆ ಒಳಪಟ್ಟಾಗ ಈ ಕರಕುಶಲ ಉದ್ದಿಮೆಗೆ ಪ್ರೋತ್ಸಾಹ ದೊರೆಯಿತು. ಅದರಲ್ಲೂ ಟಿಪ್ಪುವಿನ ಬೆಂಬಲ ಅಪಾರ ಪ್ರಮಾಣದಲ್ಲಿ ದೊರಕಿರುವುದು ತಿಳಿದು ಬರುತ್ತದೆ. ಮೈಸೂರು ಅರಸರ ಆಳ್ವಿಕೆಯ ಮಧ್ಯಂತರದಲ್ಲಿ ಮೈಸೂರು ಪ್ರಾಂತ ವನ್ನಾಳಿದ ಹೈದರಾಲಿ ಮತ್ತು ಟಿಪ್ಪು ಸುಲ್ತಾನರ ಆಳ್ವಿಕೆಗೆ ಚನ್ನಪಟ್ಟಣವು ಒಳಗಾಗಿತ್ತು. ಟಿಪ್ಪುವಿನ ಆಳ್ವಿಕೆಯ ವೇಳೆಗಾಗಲೆ ಬಹುವಾಗಿ ಹರಡಿದ್ದ ಈ ಕಲೆಗೆ ಹೈದರಾಲಿ 'ಮತ್ತು ಟಿಪ್ಪು ಸುಲ್ತಾನ್ ವಿಶೇಷ ಆಸ್ಥೆ ವಹಿಸಿದರು.[೧೨]

ಹಾಲೆಮರ

ಚನ್ನಪಟ್ಟಣದಲ್ಲಿ ಬೊಂಬೆಗಳ ತಯಾರಿಕೆ ಜನ್ಮ ಪಡೆದ ಬಗ್ಗೆ ನಿರ್ದಿಷ್ಟ ಕಾರಣಗಳು ದೊರೆಯುವುದಿಲ್ಲ. ಸುಮಾರು ೨೫೦ ವರ್ಷಗಳ ಇತಿಹಾಸವಿರುವ ಈ ಉದ್ದಿಮೆಯ ಉಗಮಕ್ಕೆ ಸಂಬಂಧಿಸಿದಂತೆ, ಬದುಕಿನುದ್ದಕ್ಕೂ ಇದೇ ವೃತ್ತಿಯನ್ನು ಅವಲಂಬಿಸಿ ಜೀವನ ಸವೆಸಿರುವ ಹಿರಿಯರು ಹೇಳುವ ಪ್ರಕಾರ ಮೈಸೂರು ಅರಸರ ಆಳ್ವಿಕೆಗೆ ಒಳಪಟ್ಟಿದ್ದ ಚನ್ನಪಟ್ಟಣದಲ್ಲಿ ಬೊಂಬೆ ತಯಾರಿಕೆಗೆ ಬೇಕಾದ ಕಚ್ಚಾವಸ್ತು ಹಾಲೆಮರ ಈ ಭಾಗದಲ್ಲಿ ಯಥೇಚ್ಚವಾಗಿ ದೊರೆಯು ತ್ತಿದ್ದುದು. ಬೊಂಬೆ ತಯಾರಿಕಾ ಕಲೆಯನ್ನು ಜಪಾನ್‌ನಲ್ಲಿ ಕರಗತ ಮಾಡಿಕೊಂಡಿದ್ದ ವಿದೇಶದಿಂದ ಬಂದ ಮುಸಲ್ಮಾನ ವ್ಯಕ್ತಿಯೊಬ್ಬ ಇಲ್ಲಿನ ಮೃದುವಾದ ಹಾಲೆಮರಗಳನ್ನು ಗುರ್ತಿಸಿ ಈ ಕಲೆಯನ್ನು ಇಲ್ಲಿ ಬಿತ್ತಿದರು. ಕೆಲಸವಿಲ್ಲದ ಹಲವಾರು ಕೈಗಳಿಗೆ ನೀಡಿದ ಈ ಕಲೆ ಬಡತನದಲ್ಲಿದ್ದ ಎಷ್ಟೋ ಕುಟುಂಬ ಗಳಿಗೆ ಮರು ಜೀವನ ನೀಡಿತು.[೧೩]

ಚನ್ನಪಟ್ಟಣದ ಸುತ್ತಮುತ್ತಲ ಪ್ರದೇಶಗಳಲ್ಲಿ ಈಗಲೂ ದೊರೆಯುವ ಹಾಲೆಮರವನ್ನು ಗಮನಿಸಿದರೆ ಅಂದಿನ ಕಾಲಕ್ಕೆ ಈ ಮರಗಳ ದೊರೆಯುವಿಕೆ ಯಥೇಚ್ಚವಾಗಿತ್ತು ಎಂಬುದು ಸ್ಪಷ್ಟವಾಗುತ್ತದೆ. ಚನ್ನಪಟ್ಟಣದ ಚಾರಿತ್ರಿಕ ಹಿನ್ನೆಲೆಯ ಪ್ರಕಾರ ಇಲ್ಲಿ ಬೆಳೆದ ದಾಸ ಪರಂಪರೆಯ ಸಾಹಿತ್ಯದಲ್ಲಿ ಈ ಕರಕುಶಲತೆಯ ಬಗೆಗಿನ ಉಲ್ಲೇಖವಿದೆ ಎಂದು ಹೇಳಲಾಗುತ್ತದೆ. ಇದನ್ನು ಗಮನಿಸಿದಾಗ ಚನ್ನಪಟ್ಟಣದ ಕರಕುಶಲತೆಯ ಇತಿಹಾಸವು ಬಹಳ ಪ್ರಾಚೀನ ಕಾಲಕ್ಕೆ ಹೋಗುವುದರಿಂದ ಅದರ ಹಿನ್ನೆಲೆಯು ಅರಿವಾಗುತ್ತದೆ. ಆದರೆ ಇದಕ್ಕೆ ನಿಖರ ಆಧಾರಗಳ ಕೊರತೆ ಇದ್ದು ನಮಗೆ ಈವರೆಗಿನ ದಾಖಲೆಗಳ ಪ್ರಕಾರ ಈ ಕರಕುಶಲತೆಯು, ಟಿಪ್ಪುಸುಲ್ತಾನನ ಕಾಲದಲ್ಲಿ ಸುಲ್ತಾನನ ಪ್ರೋತ್ಸಾಹದಿಂದಾಗಿ ಒಂದು ಪ್ರಮುಖ ಉದ್ಯಮವಾಗಿ ಬೆಳವಣಿಗೆ ಹೊಂದಿತು.

ಬೊಂಬೆಗಳ ತಯಾರಿಕಾ ಕಲೆಯ ಪರಿಚಯ

ಲಭ್ಯ ಮೂಲಗಳ ಪ್ರಕಾರ ಕರಕುಶಲತೆಯ ಉಗಮ ಪ್ರಾಚೀನತೆಯನ್ನು ಕೆದಕಿದಾಗ ಚನ್ನಪಟ್ಟಣದಲ್ಲಿ ಬೊಂಬೆ ತಯಾರಿಕೆ ಉದ್ದಿಮೆಯು ಮೊದಲಿಗೆ ಬಾವಸ್‌ಮಿಯಾ ಎಂಬ ಮುಸಲ್ಮಾನ್ ವ್ಯಕ್ತಿಯಿಂದ ಆರಂಭಗೊಂಡಿರುವುದು ತಿಳಿದು ಬರುತ್ತದೆ.[೧೪] ಈ ವ್ಯಕ್ತಿ ಮೂಲತಃ ಚನ್ನಪಟ್ಟಣದವರಲ್ಲ, ತಾನು ವಿದೇಶದಲ್ಲಿ ಕರಗತ ಮಾಡಿಕೊಂಡಿದ್ದ ಕಲೆಯನ್ನು ಇಲ್ಲಿ ಆರಂಭಿಸಿದರು. ಇದಕ್ಕೆ ಪೂರಕವಾಗಿ ಅವರಿಗೆ ಪ್ರೇರಕವಾಗಿದ್ದ ಅಂಶವೆಂದರೆ ಈ ಪ್ರದೇಶದಲ್ಲಿ ಬಹು ವಿಸ್ತಾರವಾಗಿ ಹರಡಿದ್ದ ಹಾಲೆಮರ. ಅರಣ್ಯ ಸಂಪತ್ತುಗಳಲ್ಲಿ ಒಂದಾದ ಈ ಹಾಲೆಮರವು ಬೊಂಬೆಗಳ ತಯಾರಿಕೆಗೆ ಅಥವಾ ಮರದ ಆಟಿಕೆಗಳಿಗೆ ಬಹು ಉಪಯೋಗಿ ಯಾಗಿರುವುದು ಅದರ ಮೃದುತ್ವದ ಗುಣದಿಂದ. ಈ ಮರವು ಬಹು ಮೃದುವಾಗಿದ್ದು ಬೇಕಾದ ಆಕಾರಕ್ಕೆ ಅನುಗುಣ ವಾಗಿ ಮರದ ವಸ್ತುಗಳನ್ನು ಸಿದ್ಧಪಡಿಸಲು ಸಾಧ್ಯವಾಗುತ್ತದೆ. ಹಾಗಾಗಿ ಈ ಹಾಲೆಮರದ ವಿಶೇಷತೆಯಿಂದಾಗಿ ಈ ಪ್ರದೇಶದಲ್ಲಿ ಕರಕುಶಲತೆ ಅಭಿವೃದ್ಧಿಯಾಗಿರಬಹುದು. ಆರಂಭದಲ್ಲಿ ಬಾವಸ್‌ಮಿಯಾರವರು ಈ ಉದ್ದಿಮೆಯನ್ನು ಸಣ್ಣ ವೃತ್ತಿಯಾಗಿ ಆರಂಭಿಸುವುದರ ಮೂಲಕ ಇಲ್ಲಿಯ ಇತರೆ ಜನಸಮೂಹಕ್ಕೂ ಈ ಕಲೆಯನ್ನು ಪರಿಚಯಿಸಿ ಕೊಟ್ಟರು. ಪ್ರಾರಂಭದಲ್ಲಿ ಈ ಬೊಂಬೆಗಳ ತಯಾರಿಕೆಗೆ ಯಾವ ಯಂತ್ರಗಳ ಬಳಕೆಯೂ ಇರಲಿಲ್ಲ. ಮೊದಲು ಯಾವ ಯಂತ್ರ ಶಕ್ತಿಯನ್ನು ಬಳಸದೆ ಕೈಗಳಿಂದ ಚಾಲನೆಯಾಗುವ ಲೇತ್‌ಗಳನ್ನು ಬಳಸಿ ಇವುಗಳನ್ನು ತಯಾರಿಸಲಾಗುತ್ತಿತ್ತು.

ಆರಂಭದಲ್ಲಿ ಈ ಕರಕುಶಲತೆಯಲ್ಲಿ ತಯಾರಾಗುತ್ತಿದ್ದ ಪ್ರಮುಖ ವಸ್ತುಗಳೆಂದರೆ ಪೆನ್, ಮಣಿ ಹಾಗೂ ಸಣ್ಣ ಸಣ್ಣ ಬೊಂಬೆಗಳು. ಇವುಗಳಿಗೆ ಬಣ್ಣ ನೀಡುವ ಕಲೆಯೂ ಸಹ ಸ್ವಾಭಾವಿಕವಾಗಿ ದೊರೆಯುವ ಪ್ರಾಕೃತಿಕ ಮೂಲದ ಬಣ್ಣಗಳನ್ನೆ ಆಧರಿಸಿತ್ತು. ಹಾಲೆಮರಗಳು ಬಹು ಮೃದುವಾಗಿದ್ದು, ಕುಟ್ಟೇ ಬರದ ಗುಣ ಹೊಂದಿದ್ದರಿಂದ ದೊಡ್ಡ ದೊಡ್ಡ ಕೊಂಬೆಗಳನ್ನು ಚಿಕ್ಕ ಚಿಕ್ಕ ತುಂಡುಗಳಾಗಿ ತಯಾರಿಸುತ್ತಿದ್ದರು. ನಂತರ ತಿರುಗಣೆಗೆ ಕೊಟ್ಟು ಬೇಕಾದ

ಆಕಾರಕ್ಕೆ ತಂದು, ವಿವಿಧ ಬಣ್ಣದ ಅರಗುಗಳನ್ನು ಹಚ್ಚಲು ಬಿಲ್ಲಿನಾಕಾರದ ತಿರುಗಣೆಯನ್ನು ಉಪಯೋಗಿಸುತ್ತಿದ್ದರು. ಇದರಿಂದ ಅರಗು ಸುಲಭವಾಗಿ ಕರಗಿ ಬಣ್ಣದ ಆಟದ ಸಾಮಾನುಗಳಿಗೆ ಹರಡಿಕೊಳ್ಳುತ್ತಿದ್ದುದರಿಂದ ಇವುಗಳ ಬೆಳವಣಿಗೆ ಶೀಘ್ರಗತಿಯಲ್ಲಿ ಆಯಿತು.[೧೫] ನಂತರದ ಕಾಲದಲ್ಲಿ ಟಿಪ್ಪು, ಮುಸ್ಲಿಂ ಜನಾಂಗದ ಬಹು ಭಾಗ ಈ ವೃತ್ತಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರಿಂದ ಅದರ ಬಗ್ಗೆ ವಿಶೇಷ ಆಸಕ್ತಿ ವಹಿಸಿ ಪ್ರೋತ್ಸಾಹಿಸಿದನು.

ಟಿಪ್ಪು ಕಾಲದಲ್ಲಿ ಚನ್ನಪಟ್ಟಣದ ಕರಕುಶಲತೆಯು ಸಾಕಷ್ಟು ಅಭಿವೃದ್ಧಿ ಹೊಂದಿರುವುದು ಕಂಡುಬರುತ್ತದೆ. ಚನ್ನಪಟ್ಟಣದ ಬಹುಪಾಲು ಮುಸ್ಲಿಂ ಜನಾಂಗ ಈ ವೃತ್ತಿಯನ್ನು ಅವಲಂಬಿಸಿದ್ದು ಸಹ ಟಿಪ್ಪು ಈ ಉದ್ದಿಮೆಗೆ ಒತ್ತಾಸೆ ನೀಡಲು ಕಾರಣವಾಗಿರಲೂಬಹುದು. ಟಿಪ್ಪುವಿನ ನಂತರ ಈ ಭಾಗವನ್ನಾಳಿದ ಮೈಸೂರಿನ ಒಡೆಯರು ಮೈಸೂರು ಸಂಸ್ಥಾನದ ವಿವಿಧ ಭಾಗಗಳಲ್ಲಿ ಕರಕುಶಲ ತರಬೇತಿ ಕೇಂದ್ರಗಳನ್ನು ಸ್ಥಾಪಿಸಿ ಜನತೆಗೆ ಸೂಕ್ತ ತರಬೇತಿ ಕೊಡುವುದರ ಮೂಲಕ ಈ ಕಲೆಗೆ ಬೆನ್ನೆಲುಬಾಗಿದ್ದರು.

ಆನಂತರ ಈ ಕರಕುಶಲತೆಯು ಚನ್ನಪಟ್ಟಣದ ಪ್ರಮುಖ ಉದ್ಯಮವಾಗಿ ಮಾರ್ಪಾಟಾಯಿತು. ಕ್ರಿ.ಶ. ೧೮೯೭ರಲ್ಲಿ ಮೈಸೂರಿನ ನಜರಾಬಾದಿನಲ್ಲಿ ಪ್ರಾರಂಭವಾದ ಚಾಮರಾಜೇಂದ್ರ ತಾಂತ್ರಿಕ ಸಂಸ್ಥೆಯು ಈ ಉದ್ಯಮದ ಕ್ಷಿಪ್ರಗತಿಯ ಬೆಳವಣಿಗೆಗೆ ಕಾರಣವಾಯಿತು. ಕಲಾ ಹಾಗೂ ಗುಡಿ ಕೈಗಾರಿಕೆಯಲ್ಲಿ ವಿಶೇಷ ಶಿಕ್ಷಣ ತರಬೇತಿ ನೀಡುವ ಉದ್ದೇಶದಿಂದ ಕ್ರಿ.ಶ. ೧೯೦೩ರಲ್ಲಿ ಇದನ್ನು ಕೇಂದ್ರೀಯ ಕಲಾ ಶಾಲೆಯನ್ನಾಗಿ ಮಾರ್ಪಡಿಸಲಾಯಿತು.[೧೭] ಇದೇ ಅವಧಿಯಲ್ಲಿ ಚನ್ನಪಟ್ಟಣದ ಕರಕುಶಲತೆಯ ಬೆಳವಣಿಗೆಗೆಂದೇ ಹುಟ್ಟಿಕೊಂಡ ಪ್ರಪ್ರಥಮ ತರಬೇತಿ ಕೇಂದ್ರವೆಂದರೆ, ಕ್ರಿ.ಶ. ೧೯೦೨ರಲ್ಲಿ ಆರಂಭವಾದ ಕುಶಲಕರ್ಮಿ ತರಬೇತಿ ಸಂಸ್ಥೆ. ಈ ತರಬೇತಿ ಸಂಸ್ಥೆಯಿಂದ ಹೆಚ್ಚು ಹೆಚ್ಚು ಜನ ತರಬೇತಿ ಹೊಂದಿ ತಮ್ಮನ್ನು ಈ ವೃತ್ತಿಯಲ್ಲಿ ತೊಡಗಿಸಿಕೊಂಡರು. ಕೇವಲ ಚನ್ನಪಟ್ಟಣದ ಪಟ್ಟಣದ ವ್ಯಾಪ್ತಿಯಲ್ಲಿದ್ದ ಈ ಕುಶಲತೆ ಹಳ್ಳಿ ಹಳ್ಳಿಗೂ ಹಬ್ಬಿತ್ತು. ತರಬೇತಿ ಕೇಂದ್ರದ ಲಾಭ ಪಡೆದ ಜನತೆ ತಮ್ಮ ಸ್ಥಳಗಳಲ್ಲಿ ಅವುಗಳನ್ನು ತಯಾರಿಸಿ ಪಟ್ಟಣಕ್ಕೆ ತಂದು ಮಾರಾಟ ಮಾಡುವಷ್ಟರ ಮಟ್ಟಿಗೆ ಬೆಳವಣಿಗೆ ಕಂಡಿತು. ಆದರೆ ಇಂದು ಬೇರೆ ಉದ್ಯಮಗಳ ಪ್ರಭಾವ ಈ ಕರಕುಶಲ ಕೇಂದ್ರದ ಮೇಲೆ ಆಗಿದ್ದು ಇಂದು ಈ ತರಬೇತಿ ಸಂಸ್ಥೆಯು ವಿದ್ಯಾರ್ಥಿಗಳ ಕೊರತೆಯನ್ನು ಅನುಭವಿಸುತ್ತಿದೆ. ಆದರೂ ಈವರೆಗೆ ಸಾವಿರಾರು ವಿದ್ಯಾರ್ಥಿಗಳಿಗೆ ತರಬೇತಿ ನೀಡಿ ಕರಕುಶಲ ಉದ್ಯಮದ ಬೆಳವಣಿಗೆಗೆ ಕಾರಣವಾಗಿದೆ.

ನಾಲ್ವಡಿ ಕೃಷ್ಣರಾಜ ಒಡೆಯರ ಆಳ್ವಿಕೆಯ ಕಾಲದಲ್ಲಿ ದಿವಾನರಾಗಿದ್ದ ಸರ್. ಎಂ. ವಿಶ್ವೇಶ್ವರಯ್ಯನವರು ಈ ಕರಕುಶಲ ಉದ್ದಿಮೆಯ ಅಭಿವೃದ್ಧಿಗೆ ಶ್ರಮಿಸಿದರು. ಕ್ರಿ.ಶ. ೧೯೧೩ರಲ್ಲಿ ಮೈಸೂರು ಬ್ಯಾಂಕ್ ಸ್ಥಾಪಿಸಿದರು. ಬೆಂಗಳೂರಿನ ಶಾಖೆ ಆರಂಭವಾದ ೬ ತಿಂಗಳುಗಳಲ್ಲಿಯೇ ಚನ್ನಪಟ್ಟಣದಲ್ಲಿ ಅದರ ಒಂದು ಶಾಖೆ ಆರಂಭವಾದುದು ಇಲ್ಲಿನ ಕರಕುಶಲ ಕೈಗಾರಿಕೆಗಳಿಗೆ ಪ್ರೋತ್ಸಾಹ ದೊರೆಯಲು ಕಾರಣವಾಯಿತು. ಈ ವೇಳೆಗಾಗಲೇ ಇಲ್ಲಿನ ಕರಕುಶಲತೆಯ ಅಭಿವೃದ್ಧಿಗಾಗಿ ಹೆಚ್ಚು ಹೆಚ್ಚು ಕುಶಲಕರ್ಮಿಗಳನ್ನು ತಯಾರು ಮಾಡಲು ಸ್ಥಾಪನೆಯಾಗಿದ್ದ ಕುಶಲಕರ್ಮಿ ತರಬೇತಿ ಸಂಸ್ಥೆಯಲ್ಲಿ ಸುತ್ತಮುತ್ತಲ ಹಳ್ಳಿಗಳಿಂದ ವಿದ್ಯಾರ್ಥಿಗಳನ್ನು ಕ್ರೋಢೀಕರಿಸಿ ಅವರಿಗೆ ಶಿಷ್ಯ ವೇತನ ನೀಡುವುದರ ಜೊತೆಗೆ ತರಬೇತಿ ನೀಡಲಾಗುತ್ತಿತ್ತು. ಅಷ್ಟೇ ಅಲ್ಲದೆ ಈ ತರಬೇತಿ ಸಂಸ್ಥೆಯಲ್ಲಿ ತಯಾರಾದ ವಸ್ತುಗಳನ್ನು ವರ್ಷಕ್ಕೆ ಒಮ್ಮೆ ಹರಾಜು ಹಾಕುವುದರ ಮೂಲಕ ಮಾರಾಟ ಮಾಡಲಾಗುತ್ತಿತ್ತು. ಈ ಕಾರಣಗಳಿಂದಾಗಿ ಈ ಕರಕುಶಲ ಉದ್ಯಮವು ದಿನದಿಂದ ದಿನಕ್ಕೆ ಹೆಚ್ಚು ಹೆಚ್ಚು ಬೆಳವಣಿಗೆ ಕಾಣಲು ಸಾಧ್ಯವಾಯಿತು. ಕುಶಲಕರ್ಮಿಗಳು ಹೆಚ್ಚಾದಂತೆಲ್ಲಾ ಚನ್ನಪಟ್ಟಣದ ಅಕ್ಕಪಕ್ಕದ ಗ್ರಾಮಗಳಾದ ನೀಲಸಂದ್ರ, ಹೊಂಗನೂರು, ಸಿಂಗರಾಜಿಪುರ, ಬ್ಯಾಡರಹಳ್ಳಿ, ಸುಣ್ಣಘಟ್ಟ, ಎಲೆಕೇರಿಗಳಲ್ಲಿ ಪಟ್ರೆ* ಕೆಲಸ ಚುರುಕಾಯಿತು. ಅಂದರೆ ಈ ಮರದ ವಸ್ತುಗಳ ತಯಾರಿಕೆಯಲ್ಲಿ ತಯಾರಾಗುವ ಸಣ್ಣ ಸಣ್ಣ ವಸ್ತುಗಳೆಲ್ಲ ಮನುಷ್ಯ ಬಲದಿಂದ ನಡೆಯುವ ಲೇತ್‌ಗಳಲ್ಲಿ ಆಗುತ್ತಿದ್ದವು.

ಕ್ರಿ.ಶ. ೧೯೦೨ರಲ್ಲಿ ತಮ್ಮದೇ ಆದ ಅಂಗಡಿಯನ್ನು ಆರಂಭಿಸಿದ ಕೆ. ಅಬ್ದುಲ್‌ಕರೀಮ್‌ರವರು ತಾಲ್ಲೂಕಿನ ವಾಜರ ಬೀದಿಯಲ್ಲಿ ಸಣ್ಣದಾಗಿ ಫ್ಯಾಕ್ಟರಿ ಆರಂಭಿಸಿ ಅದರಲ್ಲಿ ಉತ್ಪನ್ನವಾದ ವಸ್ತುಗಳನ್ನು ಅಂಗಡಿಯಲ್ಲಿ ಮಾರಾಟ ಮಾಡುತ್ತಿದ್ದರು. ಕರೀಮ್‌ರವರು ೧೯೨೪ರಲ್ಲಿ ಅಂದಿನ ಮಹಾರಾಜ ಜಯಚಾಮರಾಜೇಂದ್ರ ಒಡೆಯರ್‌ರವರಿಗೆ ಒಂದು ಪೆನ್‌ಸ್ಟ್ಯಾಂಡ್ ಮಾಡಿಕೊಟ್ಟಾಗ ಅದಕ್ಕೆ ಪ್ರತಿಯಾಗಿ ಮಹಾರಾಜರು ೫೦ ರೂ.ಗಳ ಚೆಕ್ ನೀಡಿದರಂತೆ. ಈ ರೀತಿ ಕುಶಲ ಕರ್ಮಿಗಳಿಗೆ ಬಹುಮಾನ ನೀಡಿ ಅವರನ್ನು ಉತ್ತೇಜಿಸಿದಂತೆ ಕಂಡುಬರುತ್ತದೆ. ಹೀಗೆ ವಿವಿಧ ಕಡೆಗಳಿಂದ ಸಿದ್ಧವಾಗಿ ಬಂದ ಈ ಸಾಮಾನುಗಳನ್ನು ಉದಾಹರಣೆಗೆ ಗೊಂಬೆಗಳ ಪುಟ್ಟ ಪುಟ್ಟ ಕಾಲುಗಳು, ಕೈಗಳು, ಕಿವಿ, ಮೂಗು

* ಪಟ್ರೆ : ಬೊಂಬೆಗಳ ತಯಾರಿಕೆಗೆ ಮಾನವ ಬಲದಿಂದ ನಡೆಯುತ್ತಿದ್ದ ಯಂತ್ರಗಳಿಗೆ ಪಟ್ರೆಗಳೆಂದು ಕರೆಯಲಾಗುತ್ತದೆ.

ಇತ್ಯಾದಿಗಳನ್ನು ಒಗ್ಗೂಡಿಸಿ ಉದ್ದಿಮೆದಾರರು ಅವುಗಳನ್ನು ಸಿದ್ಧಗೊಳಿಸಿ ಬೊಂಬೆಯ ರೂಪ ಕೊಡುತ್ತಿದ್ದರು.

ಜಪಾನಿ ತಂತ್ರಜ್ಞಾನದ ಬಳಕೆ

ನೆಲಮಂಗಲದ ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರದಲ್ಲಿ ಸೇವೆ ಸಲ್ಲಿಸುವಾಗ ಸಯ್ಯದ್ ನಿಜಾಮರವರಿಗೊಂದು ಸುವರ್ಣಾವಕಾಶ ಒದಗಿ ಬಂತು. ನವದೆಹಲಿಯ ಕರಕುಶಲ ಸಮಿತಿಯು ಕೊಲಂಬೋ ಯೋಜನೆಯಡಿ ೧೯೫೯ರಲ್ಲಿ ಸಯ್ಯದ್ ನಿಜಾಂರವರನ್ನು ಜಪಾನಿನಲ್ಲಿ ನಡೆಯುವ ಆರು ತಿಂಗಳ ಪ್ರಾಯೋಗಿಕ ತರಬೇತಿಗೆ ಆಯ್ಕೆ ಮಾಡಿತು. ಜಪಾನಿನಿಂದ ಹಿಂದಿರುಗಿದ ನಂತರ ೧೯೬೧ರವರೆಗೆ ಮೈಸೂರು ಸರ್ಕಾರದ ಕೈಗಾರಿಕಾ ಇಲಾಖೆಯ ಜೊತೆ ಕೆಲಸ ನಿರ್ವಹಿಸಿದ ಇವರು ಜಪಾನಿ ತಂತ್ರಜ್ಞಾನವು ಭಾರತದಲ್ಲಿ ಅಭಿವೃದ್ಧಿಯಾಗಬೇಕೆಂದು ಆಗ್ರಹಿಸಿದರು.[೧೮]

ಜಪಾನಿ ತಂತ್ರಜ್ಞಾನದ ಪರಿಚಯ ಪಡೆದ ಇವರಿಗೆ ಕರಕುಶಲ ವಸ್ತುಗಳ ತಯಾರಿಕೆಯಲ್ಲಿ ಕೈಯಿಂದ ಮಾಡಿದ ವಸ್ತುಗಳಿಗೂ ಯಂತ್ರದಿಂದ ಮಾಡಿದ ವಸ್ತುಗಳಿಗೂ ಇದ್ದ ವ್ಯತ್ಯಾಸದಿಂದಾಗಿ ಈ ಕಲೆಯ ಅಭಿವೃದ್ಧಿಗೆ ಯಂತ್ರಗಳ ಬಳಕೆಯ ಅಗತ್ಯವನ್ನು ಮನಗಂಡು ಸರ್ಕಾರಕ್ಕೆ ತರಬೇತಿ ಕೇಂದ್ರಗಳಿಗೆ ಯಂತ್ರಗಳ ಅಗತ್ಯತೆಯನ್ನು ಒತ್ತಿ ಹೇಳಿದರೆನ್ನಲಾಗಿದೆ. ಆರು ತಿಂಗಳ ತಮ್ಮ ತರಬೇತಿ ಅವಧಿಯಲ್ಲಿ ನಿಜಾಂರವರು ಜಪಾನಿನ ನಗರದಲ್ಲಿ ಮರದ ವಸ್ತುಗಳ ತಯಾರಿಕೆಗೆ ಬಳಸುತ್ತಿದ್ದ ಯಂತ್ರಗಳು ನಿಖರವಾದ ಅಳತೆಗಳನ್ನೊಳಗೊಂಡ ಒಂದೇ ರೀತಿಯ ವಸ್ತುಗಳ ತಯಾರಿಕೆಗೆ ಸಹಾಯಕವಾಗುತ್ತಿದ್ದುದನ್ನು ಮನಗಂಡರು. ಈ ಮರದ ಬೊಂಬೆಗಳ ಮೇಲೆ ಬಣ್ಣ ಮೂಡಿಸಿ ಅವುಗಳ ಆಕರ್ಷಣೆಯನ್ನು ಹೆಚ್ಚಿಸುವುದನ್ನು ಅಭ್ಯಸಿಸಿದರು. ಹೀಗೆ ಮರವನ್ನು ಹದ ಮಾಡುವ ಅವುಗಳಿಂದ ತನಗೆ ಬೇಕಾದ ಆಕಾರಕ್ಕೆ ಮರವನ್ನು ಸಿದ್ಧಪಡಿಸುವ ಯಾಂತ್ರೀಕೃತ ಲೇತ್‌ಗಳ ಬಳಕೆಯ ಅಗತ್ಯತೆ ಮತ್ತು ಮಹತ್ವವನ್ನು ಕಂಡುಕೊಂಡ ನಿಜಾಂರವರು ಪ್ರಾಯಶಃ ಜಪಾನಿ ತಂತ್ರಜ್ಞಾನಕ್ಕೆ ಮಾರುಹೋಗಲು ಕಾರಣವಾಗಿರಬಹುದು. ಅದೇನೇ ಇರಲಿ ಕರಕುಶಲ ಉದ್ದಿಮೆಗಳಲ್ಲಿ ಯಂತ್ರಗಳ ಬಳಕೆಯು ಕೊಲಂಬೋ ಯೋಜನೆಯಡಿ ಜಪಾನಿನ ಶಿಜೋಕ ನಗರದಲ್ಲಿ ನೀಡಿದ ತರಬೇತಿಯಿಂದಲೇ ಎಂದರೆ ತಪ್ಪಾಗಲಾರದು. ಹೀಗೆ ಚನ್ನಪಟ್ಟಣದ ಬೊಂಬೆಗಳ ತಯಾರಿಕಾ ಇತಿಹಾಸದಲ್ಲಿ ಲೇತ್ ಯಂತ್ರಗಳ ಆರಂಭ ನಿಜಾಂನಿಂದ ಆರಂಭವಾಯಿತು. ತದ ನಂತರ ಈ ಉದ್ದಿಮೆ ಹಿಂದಿಗಿಂತಲೂ ಚುರುಕಾಗಿ ವಸ್ತುಗಳ ಉತ್ಪಾದನೆಯಲ್ಲಿ ತೊಡಗಿತು. ಸಯ್ಯದ್ ನಿಜಾಂರವರು ತಮ್ಮಲ್ಲಿ ಉತ್ಪಾದನೆಯಾಗುವ ವಸ್ತುಗಳಿಗೆ 'Mysore Pride Products' ಎನ್ನುವ ಹೆಸರಿನಲ್ಲಿ ಒಂದು ಉದ್ದಿಮೆ ಪ್ರಾರಂಭಿಸಿದರು.

ಜನಪ್ರಿಯ ವೃತ್ತಿಯಾಗಿ ಬೊಂಬೆ ತಯಾರಿಕೆ

ವಿಶ್ವವ್ಯಾಪಿ ಜನಪ್ರಿಯಗೊಂಡಿರುವ ಚನ್ನಪಟ್ಟಣದ ಬೊಂಬೆಗಳು ಆಬಾಲವೃದ್ಧರ ಮನಸೂರೆಗೊಂಡಿವೆ. ಇಂತಹ ಬೊಂಬೆಗಳ ತಯಾರಿಕಾ ವೃತ್ತಿಯು ಇಂದು ಯಾವುದೇ ಒಂದು ವರ್ಗಕ್ಕೆ ಮೀಸಲಾದ ವೃತ್ತಿಯಾಗಿಲ್ಲ. ಆರಂಭದಲ್ಲಿ ಕೇವಲ ಮುಸ್ಲಿಂ ಜನಾಂಗದವರು ಮಾತ್ರವೇ ಈ ವೃತ್ತಿಯಲ್ಲಿ ತೊಡಗಿಕೊಂಡಿರುವುದು ಗೋಚರವಾಗುತ್ತದೆ. ಇದಕ್ಕೆ ಮುಖ್ಯವಾಗಿ ವಿದೇಶದಿಂದ ಕರಗತ ಮಾಡಿಕೊಂಡಿದ್ದ ಕಲೆಯನ್ನು ಬಿತ್ತರಿಸುವಲ್ಲಿ ಪ್ರಯತ್ನಪಟ್ಟ ಮುಸಲ್ಮಾನ ವ್ಯಕ್ತಿ ನೀಡಿದ ತರಬೇತಿಯು ಕಾರಣವಾಗಿರಲೂಬಹುದು ಹಾಗೂ ಯಾವುದೇ ನಿರ್ಬಂಧವಿಲ್ಲದೆ ಯಥೇಚ್ಛವಾಗಿ ದೊರೆಯುತ್ತಿದ್ದ ಹಾಲೆಮರಗಳು ಈ ಸಮುದಾಯದವರು ಹೆಚ್ಚಾಗಿ ಬೊಂಬೆ ತಯಾರಿಕೆಯಲ್ಲಿ ತೊಡಗಲು ಸಹಕಾರಿಯಾಯಿತು. ಕೇವಲ ಗೃಹೋಪಯೋಗಿ ಹಾಗೂ ಸಣ್ಣಪುಟ್ಟ ಬೊಂಬೆಗಳ ತಯಾರಿಕೆಗೆ ಮಾತ್ರ ಮೀಸಲಾಗಿದ್ದ ಈ ವೃತ್ತಿಯು ಮುಂದಿನ ದಿನಗಳಲ್ಲಿ ಹೊಸ ಹೊಸ ವಸ್ತುಗಳ ಉತ್ಪಾದನೆಯಲ್ಲಿ ತೊಡಗಿದಂತೆ ಸ್ಥಳೀಯ ಬೇಡಿಕೆಯ ಜೊತೆಗೆ ಹೊರನಾಡಿನಲ್ಲಿಯೂ ಬೇಡಿಕೆಗಳು ಹೆಚ್ಚಾದಂತೆ ಈ ವೃತ್ತಿಯ ಅವಲಂಬಿತ ವರ್ಗ ಹೆಚ್ಚುತ್ತಾ ಸಾಗಿರುವುದು ಗಮನಾರ್ಹ. ಈ ವೇಳೆಗೆ ಕಡಿಮೆ ಖರ್ಚಿನಲ್ಲಿ ತನ್ನ ಕೌಶಲದಿಂದ ನಿರ್ಮಿತಗೊಳ್ಳುತ್ತಿದ್ದ ವಸ್ತುಗಳು ಲಾಭದಾಯಕವಾಗಿ ಜೀವನೋಪಾಯಕ್ಕೆ ಅನುಕೂಲವಾದಾಗ ಇತರೆ ಸಮುದಾಯಗಳಾದ ಪರಿಶಿಷ್ಟ ಜಾತಿ, ಪಂಗಡದವರು, ವಿಶ್ವಕರ್ಮರು, ಉಪ್ಪಾರರು, ಬಣಜಿಗರು, ಒಕ್ಕಲಿಗರು ಸಹ ಈ ವೃತ್ತಿಯಲ್ಲಿ ತೊಡಗಿಕೊಂಡರು. ಈ ಬೊಂಬೆಗಳ ವ್ಯಾಪಾರ ದಿನೇ ದಿನೇ ಹೆಚ್ಚಿದಂತೆಲ್ಲಾ ಬೊಂಬೆಗಳ ಬಿಡಿ ಭಾಗಗಳ ತಯಾರಿಕೆಯು ತಾಲ್ಲೂಕಿನ ನೀಲಕಂಠನಹಳ್ಳಿ, ಸುಣ್ಣಘಟ್ಟ, ಹೊಂಗನೂರು, ಕರಿಯಪ್ಪನ ದೊಡ್ಡಿಗಳಲ್ಲಿ ನೆಲೆಸಿರುವ ಜನರ ಮುಖ್ಯ ವೃತ್ತಿಯಾಯಿತು. ಸ್ವಾತಂತ್ರ್ಯಾನಂತರದಲ್ಲಿ ಚುರುಕುಗೊಂಡ ವಿದೇಶಿ ವ್ಯಾಪಾರದಿಂದಾಗಿ ಬ್ರಾಹ್ಮಣರಾದಿಯಾಗಿ ಎಲ್ಲಾ ವರ್ಗಗಳ ಜನರು ಈ ವೃತ್ತಿಯಲ್ಲಿ ತೊಡಗಿಕೊಂಡರು. ಆದರೆ ನಂತರದ ದಿನಗಳಲ್ಲಿ ಕಚ್ಚಾ ವಸ್ತುಗಳ ಕೊರತೆ ಹಾಗೂ ಇತರೆ ಆಟಿಕೆಗಳ ಪೈಪೋಟಿಯಿಂದಾಗಿ ಈ ಮರದ ಬೊಂಬೆಗಳಿಗೆ ಬೇಡಿಕೆ ಕಡಿಮೆಯಾದಂತೆ ಜನರು ಇತರೆ ವೃತ್ತಿಗಳನ್ನು ಅವಲಂಬಿಸಿ ನಡೆದರೂ ಬಹಳಷ್ಟು ಹಿಂದಿನಿಂದಲೂ ಕೈ ಹಿಡಿದು ನಡೆಸಿರುವ ವೃತ್ತಿಯನ್ನು ಬಿಡದವರು

ಇಂದಿಗೂ ಅದನ್ನು ಮುಂದುವರೆಸಿಕೊಂಡು ಬರುತ್ತಿದ್ದು ಅದರಲ್ಲಿಯೂ ಮುಸ್ಲಿಂರು ಪ್ರಧಾನರಾಗಿದ್ದಾರೆ.

ಆರಂಭದಲ್ಲಿ ಈ ಪ್ರದೇಶದಲ್ಲಿ ಉತ್ಪನ್ನವಾದ ವಸ್ತುಗಳು ಸ್ಥಳೀಯ ಮಾರುಕಟ್ಟೆಗಳಲ್ಲಿ ಮಾರಾಟವಾಗುತ್ತಿದ್ದವು. ಪ್ರಾರಂಭದಲ್ಲಿ ಉತ್ಪನ್ನವಾಗುತ್ತಿದ್ದ ಲಟ್ಟಣಿಗೆಗಳು ಗೃಹೋಪಯೋಗಿ ವಸ್ತುವಾದುದರಿಂದ ಸ್ಥಳೀಯವಾಗಿ ಅವುಗಳ ಕೊಳ್ಳುವಿಕೆ ಹೆಚ್ಚಾಯಿತು ಜೊತೆಗೆ ಪೆನ್ ಹೋಲ್ಡರ್ಸ್‌ಗಳು ಬರೆಯಲು ಅನುಕೂಲವಾಗುತ್ತಿದ್ದರಿಂದ ಈ ವಸ್ತುಗಳಿಗೆ ಬೇಡಿಕೆ ಉಂಟಾಯಿತು. ಇಲ್ಲಿಂದಾಚೆಗೆ ಈ ಕರಕುಶಲ ವಸ್ತುಗಳ ವ್ಯಾಪಾರ ಹೆಚ್ಚಾಯಿತೆಂದರೆ ತಪ್ಪಾಗಲಾರದು. ವ್ಯಾಪಾರ ಅಭಿವೃದ್ಧಿಯಾದಂತೆಲ್ಲಾ ಉತ್ಪನ್ನಗಳನ್ನು ಮಾರಾಟ ಮಾಡಲು ಅಕ್ಕ-ಪಕ್ಕದ ಊರುಗಳಿಗೆ ತಯಾರಕರು ಹೊತ್ತು ತಿರುಗುವುದು ಸಾಮಾನ್ಯವಾಯಿತು. ಆ ನಂತರದಲ್ಲಿ ಈ ಮರದ ಆಟಿಕೆಗಳು, ಬೊಂಬೆಗಳನ್ನು ಅಲ್ಲಲ್ಲಿ ನಡೆಯುವ ವಾರದ ಸಂತೆಗಳಲ್ಲಿ, ಜಾತ್ರೆಗಳಲ್ಲಿ ಮಾರಾಟ ಮಾಡುವುದು ಸಾಮಾನ್ಯವಾದಂತೆ ಇವು ಜನಪ್ರಿಯಗೊಂಡವು. ಕೈಗಾರಿಕಾಭಿವೃದ್ಧಿಯು ಟಿಪ್ಪುವಿನ ಆಡಳಿತದ ಕಾಲದಲ್ಲಿ ಆತನ ತಂದೆ ಹೈದರನ ಕಾಲಕ್ಕಿಂತಲೂ ಉತ್ತಮ ಸ್ಥಿತಿಯಲ್ಲಿತ್ತು ಕೈಗಾರಿಕಾಭಿವೃದ್ಧಿಯಂತೆಯೇ ವಾಣಿಜ್ಯಾಭಿವೃದ್ಧಿಯೂ ಆಗಿತ್ತು. ದೇಶ-ವಿದೇಶಗಳೆರಡೂ ಕಡೆ ವ್ಯಾಪಾರ ಸಂಪರ್ಕ ಸಮೃದ್ಧಗೊಂಡಿತ್ತು. ಫ್ರಾನ್ಸ್, ಟರ್ಕಿ, ಚೀನಾ, ಇರಾನ್ ಮೊದಲಾದ ದೂರದ ದೇಶಗಳೊಂದಿಗೆ ವ್ಯಾಪಾರ ಸಂಪರ್ಕವಿತ್ತು.[೧೯] ಹೀಗೆ ಟಿಪ್ಪುವಿನ ಕಾಲದಲ್ಲಿ ಈ ಉತ್ಪನ್ನಗಳು ಸ್ಥಳೀಯವಾಗಿ ಮಾರಾಟವಾಗುತ್ತಿದ್ದವಲ್ಲದೆ ವಿದೇಶಗಳಿಗೂ ರಫ್ತಾಗುತ್ತಿದ್ದವು.

ನಾಲ್ವಡಿ ಕೃಷ್ಣರಾಜ ಒಡೆಯರ ನಂತರದ ಅವಧಿಯಲ್ಲಿ ಈ ಕರಕುಶಲ ವಸ್ತುಗಳ ವ್ಯಾಪಾರವು ದ್ವಿಗುಣಗೊಂಡಿರುವುದು ಕಂಡುಬರುತ್ತದೆ. ಮೃದು ಹಾಲೆ ಮರಗಳ ಬಳಕೆಯಿಂದ ಉತ್ತಮವಾಗಿ ರೂಪುಗೊಳ್ಳುತ್ತಿದ್ದ ಈ ಬೊಂಬೆಗಳು ತಮ್ಮ ವರ್ಣ ಸೌಂದರ್ಯದಿಂದ ಮೈಸೂರು ಅರಸರ ಗಮನ ಸೆಳೆದವು. ಬೊಂಬೆಗಳಿಗೆ ಮನಸೋತ ಒಡೆಯರು ಮುಂದೆ ಇವುಗಳನ್ನು ವಸ್ತು ಪ್ರದರ್ಶನಗಳಲ್ಲಿ ಪ್ರದರ್ಶಿಸಲು ಅನುಕೂಲ ಮಾಡಿಕೊಟ್ಟರು. ಇದರಿಂದಾಗಿ ಅದರ ವ್ಯಾಪಾರ ವಾಣಿಜ್ಯದ ಅಭಿವೃದ್ಧಿಗೆ ಸಹಕಾರಿಯಾಯಿತು. ದೇಶದ ಮೂಲೆ-ಮೂಲೆಗಳಿಂದ ದಸರಾ ವೀಕ್ಷಣೆಗೆ ಬರುತ್ತಿದ್ದ ಜನ ವಸ್ತು ಪ್ರದರ್ಶನದಲ್ಲಿನ ಮರದ ಆಟಿಕೆಗಳನ್ನು ನೋಡಿ ಸಂತೋಷಗೊಂಡು ಅವುಗಳನ್ನು ತಮ್ಮೊಡನೆ ಕೊಂಡೊಯ್ದರು. ಅಲ್ಲಿಂದಾಚೆಗೆ ಕೇವಲ ಸ್ಥಳೀಯ ಮಟ್ಟದಲ್ಲಿ ಮಾತ್ರ ಪರಿಚಿತವಾಗಿದ್ದ ಈ ಬೊಂಬೆಗಳು ಬೇರೆ ಬೇರೆ ರಾಜ್ಯಗಳಿಗೂ ಪರಿಚಿತವಾದಾಗ ಇದನ್ನು ನೋಡಲು ಈ ಕುಶಲತೆಯನ್ನು ಕಲಿಯಲು ಹಾಗೆಯೇ ಈ ವಸ್ತುಗಳನ್ನು ಕೊಳ್ಳಲು ಜನರು ಮುಂದಾದರು. ಇನ್ನೂ ಕೆಲವರು ಈ ವಸ್ತುಗಳ ಕೊಳ್ಳುವಿಕೆ-ಮಾರುವಿಕೆಯಲ್ಲಿ ಲಾಭ ಸಂಪಾದನೆಯ ದೃಷ್ಟಿಯಿಂದ ಇದರ ವ್ಯಾಪಾರ ವಹಿವಾಟಿನಲ್ಲಿ ತೊಡಗಿದರು.

ಗೊಂಬೆಗಳನ್ನು ಹೊರದೇಶಗಳಿಗೆ ಮುಂಬೈ ಖಾಸಗಿ ಮಧ್ಯವರ್ತಿಗಳಾದಂಥ ಎಕ್ಸ್‌ಪೋರ್ಟ್ ಕ್ರಿಯೇಶನ್, ಸಾಂಗ್ಲಿ ಎಕ್ಸ್‌ಪೋರ್ಟ್, ಮಂಗಲ್ ಎಕ್ಸ್‌ಪೋರ್ಟ್‌ಗಳ ಮೂಲಕ ರಫ್ತು ಮಾಡಲಾಗುತ್ತದೆ. ಸ್ಥಳೀಯವಾಗಿ ಮಾರಾಟ ಮಳಿಗೆಗಳ ಮುಖಾಂತರ ಮತ್ತು ಹೊರ ರಾಜ್ಯಗಳಿಗೆ ಆರ್ಡರ್‌ಗಳನ್ನು ಪಡೆದು ಅವರ ಅವಶ್ಯಕತೆಗೆ ತಕ್ಕಂತೆ ಗೊಂಬೆಗಳು ಮತ್ತು ಆಟಿಕೆಗಳನ್ನು ಪೂರೈಸಲಾಗುತ್ತದೆ. ಈ ಕೈಗಾರಿಕೆಯು ವರ್ಷಕ್ಕೆ ಸುಮಾರು ೩ ರಿಂದ ೫ ಕೋಟಿಗಳ ವಿದೇಶಿ ವಿನಿಮಯವನ್ನು ಮತ್ತು ಸ್ಥಳೀಯವಾಗಿ ಸುಮಾರು ೧೪ ಕೋಟಿಯಿಂದ ೨ ಕೋಟಿ ರೂ.ಗಳಷ್ಟು ಆದಾಯವನ್ನು ನೀಡುತ್ತದೆ. ಈ ಕೈಗಾರಿಕೆಯು ಸಾಮಾನ್ಯ ಕಾರ್ಮಿಕ ವರ್ಗಕ್ಕೆ ಸುಮಾರು ಶೇ. ೫೦ರಷ್ಟು ಉದ್ಯೋಗ ಅವಕಾಶಗಳನ್ನು ನೀಡುತ್ತಿದ್ದು ಪ್ರತಿ ಕಾರ್ಮಿಕನು ಸುಮಾರು ೨೫೦ ರೂ.ಗಳಿಂದ ೪೫೦ ರೂ.ಗಳಷ್ಟು ಪ್ರತಿದಿನ ಪಡೆದು ಜೀವನ ನಿರ್ವಹಿಸುತ್ತಿದ್ದಾನೆ. ಈ ಕೈಗಾರಿಕೆಯಲ್ಲಿ ಮಹಿಳೆಯರು, ಪುರುಷರು ಮತ್ತು ಎಲ್ಲಾ ಸಮುದಾಯದ ಜನರು ದುಡಿಯುತ್ತಿದ್ದಾರೆ.[೨೦] ಹೀಗೆ ಬೊಂಬೆ ತಯಾರಿಕೆಯು ಒಂದು ಪ್ರಮುಖ ವಾಣಿಜ್ಯ ಉದ್ಯಮವಾಗಿ ಬೆಳೆದಿದೆ.

ಉಪಸಂಹಾರ

ಮೈಸೂರು ಸಂಸ್ಥಾನದ ಕರಕುಶಲತೆಗಳಲ್ಲಿ ಬಹು ಮುಖ್ಯವಾಗಿ ಚನ್ನಪಟ್ಟಣದಲ್ಲಿನ ಮರದ ಬೊಂಬೆಗಳ/ಆಟಿಕೆಗಳ ತಯಾರಿಕೆಯು ಪ್ರಮುಖ ಉದ್ಯಮಗಳಲ್ಲಿ ಒಂದಾಗಿದೆ. ಯಾವುದೇ ನೀರಾವರಿಯ ಆಶ್ರಯವಿಲ್ಲದೆಯೂ ಬಂಜರು ಭೂಮಿಯಲ್ಲಿಯೂ ಸಹ ಬೆಳೆಯಬಹುದಾದ ಮರ ಈ ಹಾಲೆಮರ. ಬಹಳ ಸುಲಭವಾಗಿ ಲಭ್ಯವಾಗುತ್ತಿದ್ದ ಈ ಮರವನ್ನು ಅವಲಂಬಿಸಿ ಬದುಕು ಸವೆಸುತ್ತಿದ್ದವರು ಬಹಳಷ್ಟು ಮಂದಿ. ತಮ್ಮ ಜೀವನೋಪಾಯಕ್ಕಾಗಿ ಈ ಮರಗಳಿಂದ ಸಣ್ಣ-ಪುಟ್ಟ ಗೊಂಬೆಗಳು, ಆಟಿಕೆಗಳನ್ನು ಸಿದ್ಧಪಡಿಸುತ್ತಿದ್ದ ಕುಶಲಕರ್ಮಿಗಳು ಅದರ ಬೇಡಿಕೆ ಹೆಚ್ಚಾದಂತೆ ನಮ್ಮ ಸಂಸ್ಕೃತಿಯ ಪ್ರತಿಬಿಂಬವಾಗುವಂತಹ ರಚನೆಗಳಲ್ಲಿ ತೊಡಗಿದರು. ಬಾವಸ್‌ಮಿಯಾ ಎಂಬ ಮುಸಲ್ಮಾನ ವ್ಯಕ್ತಿಯಿಂದ ಆರಂಭವಾದ ಈ ಕುಶಲತೆಯು ಕೇವಲ ಸಣ್ಣಪುಟ್ಟ ಗೃಹೋಪಯೋಗಿ ವಸ್ತುಗಳ ತಯಾರಿಕೆಗೆ ಸೀಮಿತವಾಗಿದ್ದು ನಂತರದ ದಿನಗಳಲ್ಲಿ ಇದಕ್ಕೆ ರಾಜ-ಮಹಾರಾಜರ ಪ್ರೋತ್ಸಾಹ ದೊರೆತಾಗ ಈ ಮರದ ವಸ್ತುಗಳ ಉತ್ಪಾದನೆಯು

ವಿಸ್ತಾರಗೊಂಡಿರುವುದು ಕಂಡುಬರುತ್ತದೆ. ನಂತರ ಸ್ವಾತಂತ್ರ್ಯ ನಂತರದಲ್ಲಿ ಸರ್ಕಾರವು ವಹಿಸಿದ ಆಸಕ್ತಿಯಿಂದಾಗಿ ತಂತ್ರಜ್ಞಾನದ ಅಳವಡಿಕೆಯಾದಾಗ ಈ ಉದ್ದಿಮೆಯ ಕ್ಷೇತ್ರವು ವಿಸ್ತಾರವಾಯಿತು. ಅಲ್ಲದೆ ಉದ್ದಿಮೆಯು ನಮ್ಮ ಸಂಸ್ಕೃತಿಯನ್ನು ಉಳಿಸಿ ಬೆಳೆಸುವಲ್ಲಿ ಸಹಕಾರಿಯಾಗಿದೆ.

ಮಕ್ಕಳ ಆಟಿಕೆಗಳು ವಿಶ್ವ ಮಾನ್ಯವಾಗಿದೆ. ಇದಕ್ಕೆ ಪೂರಕವಾದ ಮತ್ತೊಂದು ಅಂಶವೆಂದರೆ ಅದಕ್ಕೆ ಉಪಯೋಗಿಸುವ ಬಣ್ಣ. ಯಾವುದೇ ಅಪಾಯಕಾರಿ ರಾಸಾಯನಿಕಗಳಿಲ್ಲದ, ಪ್ರಾಕೃತಿಕ ಬಣ್ಣಗಳನ್ನು ಈ ಆಟಿಕೆಗಳಿಗೆ ಬಳಸುತ್ತಿರುವುದು ಇವುಗಳ ಬೇಡಿಕೆಗಳನ್ನು ಇಮ್ಮಡಿಗೊಳಿಸಿದೆ. ಈ ಆಟಿಕೆಗಳಲ್ಲಿರುವ ನೇತಾಡುವ ಮಂಗನನ್ನು ನೋಡಿದರೆ ಮಕ್ಕಳಿಗೆ ಕಪಿಚೇಷ್ಟೆಯ ನೆನಪು ಬರುವುದು ಸಹಜ. ನಾಲ್ಕು ಚಕ್ರದ ಗಾಡಿಗಳು, ಪ್ರಾಣಿ–ಪಕ್ಷಿಗಳು, ವಿವಿಧ ಜಾನಪದ ಕಲೆಗಳನ್ನು ಬಿಂಬಿಸುವ ಡೊಳ್ಳು ಕುಣಿತ, ಯಕ್ಷಗಾನ ಇತ್ಯಾದಿ ಗೊಂಬೆಗಳು ಮಕ್ಕಳಿಗೆ ಆಟದ ಜೊತೆಗೆ ಜ್ಞಾನದ ಪಾಠವನ್ನೂ ನೀಡುತ್ತಿವೆ. ಒಂದು ಕಾಲಕ್ಕೆ ಯಥೇಚ್ಛವಾಗಿದ್ದ ಪ್ರಾಣಿ–ಪಕ್ಷಿಗಳ ಸಂಖ್ಯೆ ಇಂದು ಇಳಿಮುಖವಾಗುತ್ತಿವೆ. ಅದರಲ್ಲೂ ಇಂದಿನ ಆಧುನಿಕತೆ ಹಾಗೂ ತಂತ್ರಜ್ಞಾನವು ಪ್ರಾಣಿ–ಪಕ್ಷಿಗಳ ಅಳಿವಿಗೆ ಕಾರಣವಾಗುತ್ತಿದ್ದು, ಅವುಗಳ ಪ್ರತಿಬಿಂಬವಾದ ಈ ಬೊಂಬೆಗಳು ಮಾತ್ರವೇ ಉಳಿದುಕೊಂಡಿವೆ. ಮಾನವನ ದುರಾಸೆಯಿಂದಾಗಿ ಎಷ್ಟೋ ಪ್ರಾಣಿ ಸಂಕುಲ ಅವನತಿ ಹೊಂದುತ್ತಿದ್ದು ನಮ್ಮ ಮುಂದಿನ ಜನಾಂಗಕ್ಕೆ ಅವುಗಳ ಚಿತ್ರ ಮಾತ್ರವೇ ಉಳಿಯಬಹುದು. ಇಂತಹ ಸಂದರ್ಭದಲ್ಲಿ ಈ ಮರದ ಆಟಿಕೆಗಳ ಉದ್ಯಮದ ಕೊಡುಗೆ ಅಪಾರ ಏಕೆಂದರೆ ಪ್ರಾಣಿಗಳನ್ನು ತಮ್ಮ ಕೌಶಲ್ಯದಿಂದ ಮರಗಳಲ್ಲಿ ಚಿತ್ರಿಸುತ್ತಿರುವ ಈ ಉದ್ದಿಮೆ ಮುಂದಿನ ಜನಾಂಗಕ್ಕೆ ಚಿತ್ರಕ್ಕಿಂತಲೂ ಪ್ರಭಾವಿಕಾರಿಯಾಗಿ ಪ್ರಾಣಿಗಳನ್ನು ಮಕ್ಕಳು ಸ್ಪರ್ಶಿಸಿ ತಿಳಿಯುವಂತೆ ಮಾಡಿವೆ. ಹಾಗೆಯೇ ಇಂದು ಮಾನವನ ಅತಿಯದ ಮೊಬೈಲೆಗಳ ಬಳಕೆಯಿಂದಾಗಿ ಎಷ್ಟೋ ಪಕ್ಷಿ ಸಂಕುಲಗಳು ಕಣ್ಮರೆಯಾಗುತ್ತಿವೆ. ಉದಾ: ಸುಮಾರು ೧೦–೧೫ ವರ್ಷಗಳ ಹಿಂದೆ ಬಹುಸಂಖ್ಯೆಯಲ್ಲಿದ್ದ ಗುಬ್ಬಚ್ಚಿಗಳು ಇಂದು ನಮಗೆ ಕಾಣ ಸಿಗುತ್ತಿಲ್ಲವೆಂದರೆ ನಮ್ಮ ಮುಂದಿನ ಪೀಳಿಗೆಗೆ ಅವುಗಳನ್ನು ಊಹಿಸುವುದು ಅಸಾಧ್ಯ. ಆದರೆ ಈ ಉದ್ದಿಮೆಯ ಫಲವಾಗಿ ಈ ಪಕ್ಷಿಗಳು ಬೊಂಬೆಗಳ ರೂಪದಲ್ಲಿ ಜೀವಂತ ಉಳಿಯುವಂತಾಗಿವೆ. ಕುಶಲ ಕರ್ಮಿಗಳು ತಯಾರಿಸುವ ಗಿಳಿ, ನವಿಲು, ಕೊಕ್ಕರೆ, ಗುಬ್ಬಚ್ಚಿ, ಕೋಳಿ ಇತರೆ ಪಕ್ಷಿಗಳು ಭವಿಷ್ಯದ ಮಕ್ಕಳಿಗೆ ಬೊಂಬೆಗಳ ರೂಪದಲ್ಲಿ ಕಾಣ ಸಿಗಲಿರುವ ಪಕ್ಷಿ ಸಂಕುಲಗಳಾಗಿವೆ. ಈ ನಿಟ್ಟಿನಲ್ಲಿ ಈ ಉದ್ದಿಮೆಯನ್ನು ಬೆಳೆಸುವುದು ಅಗತ್ಯವಾಗಿದೆ. ಈಗಾಗಲೇ ವಿದೇಶಗಳಲ್ಲಿ ಇಂತಹ ಪ್ರಾಣಿ ಪಕ್ಷಿಗಳ ಬೊಂಬೆಗಳನ್ನು ಇಟ್ಟು ಶಿಕ್ಷಣಕ್ಕೆ ಬಳಸಿಕೊಳ್ಳುತ್ತಿರುವುದಕ್ಕೆ ಇತ್ತೀಚಿಗಷ್ಟೆ ಚನ್ನಪಟ್ಟಣದಿಂದ ಯುರೋಪಿಗೆ ರಫ್ತಾದ ಪ್ರಾಣಿಗಳ ಬೊಂಬೆಗಳು ಸಾಕ್ಷಿಯಾಗಿವೆ. ಹೀಗೆ ಆಟದ ಜೊತೆಗೆ ಜ್ಞಾನಕ್ಕೆ ಮಾರ್ಗವಾಗುತ್ತಿವೆ ಚನ್ನಪಟ್ಟಣದ ಚೆನ್ನದ ಗೊಂಬೆಗಳು. ಎಂಟು–ಹತ್ತು ತಿಂಗಳ ವಯಸ್ಸಿನ ಮಗುವು ಹೆಜ್ಜೆ ಇಡಲು ಪ್ರಯತ್ನಿಸುವಾಗ ಅದರ ನಡಿಗೆಗೆ ಸಹಾಯಕವಾಗಲು ಇಂದು ಬಳಸುವ Walker ಈ ಕರಕುಶಲ ಉದ್ದಿಮೆಯ ಕೊಡುಗೆ ಎಂದರೆ ತಪ್ಪಾಗಲಾರದು. ಏಕೆಂದರೆ ಮರದಲ್ಲಿ ಬಳಕೆಯಲ್ಲಿದ್ದ ಮೂರು ಚಕ್ರದ ಗಾಡಿಯ ಆಧುನಿಕ ರೂಪಾಂತರವೇ ಇಂದಿನ Walker ಇಂದಿನ ತಂತ್ರಜ್ಞಾನವು ಅಂದೇ ಬಳಕೆಯಲ್ಲಿದ್ದದನ್ನು ಗಮನಿಸಿದರೆ ಕುಶಲಕರ್ಮಿಗಳ ಕಲಾ ನೈಪುಣ್ಯತೆ ನಮಗೆ ತಿಳಿದುಬರುತ್ತದೆ. ಇಂದು ಶೈಕ್ಷಣಿಕ ಕ್ಷೇತ್ರದಲ್ಲಿ ಬೋಧನಾ ಸಾಮಗ್ರಿಗಳಾಗಿ ಬಳಕೆಯಾಗುತ್ತಿರುವುದು ಅವುಗಳ ಮಹತ್ವವನ್ನು ತಿಳಿಸುತ್ತದೆ. ಒಟ್ಟಾರೆ ಚನ್ನಪಟ್ಟಣದ ಬೊಂಬೆ ತಯಾರಿಕೆಯ ಉದ್ಯಮವು ಕರ್ನಾಟಕ ಸಂಸ್ಕೃತಿ ಮತ್ತು ಪರಂಪರೆಯನ್ನು ಪ್ರತಿನಿಧಿಸುವ ಉದ್ಯಮವಾಗಿದೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ಪರಾಮರ್ಶನ ಗ್ರಂಥಗಳು

೧. ಕರೀಗೌಡ ಬೀಚನಹಳ್ಳಿ :'ಕನ್ನಡ ವಿಶ್ವವಿದ್ಯಾಲಯ, ವಿಶ್ವಕೋಶ–೨, ಕರಕುಶಲ ಕಲೆಗಳು', ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

೨. ಕೃಷ್ಣೇಗೌಡ, ಹೆಚ್. ಮತ್ತು ವೇ.ನಾರಾಯಣಸ್ವಾಮಿ:'ಕಣ್ವಸಿರಿ ಸ್ಮರಣ ಸಂಚಿಕೆ', ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು, ಚನ್ನಪಟ್ಟಣ, ೨೦೧೧.

೩. ಚಕ್ಕಲೂರು ಚನ್ನಪ್ಪ :'ಜನಪದವಾಣಿ', ಚನ್ನಪ್ಪ, ಚಕ್ಕಲೂರು, ಚನ್ನಪಟ್ಟಣ–೨೦೧೧.

೪. ನಂಜರಾಜ ಅರಸು, ಪಿ.ವಿ. :'ಮೈಸೂರು: ನೂರಿನ್ನೂರು ವರ್ಷಗಳ ಹಿಂದೆ', ಅಭಿರುಚಿ ಪ್ರಕಾಶನ, ಸರಸ್ವತೀಪುರಂ, ಮೈಸೂರು, ೨೦೦೬.

೫. ಬಸವರಾಜು, ಎಸ್. :'ಚೈತ್ರ ವಾರ್ಷಿಕ ಸಂಚಿಕೆ', ಶ್ರೀ ಹೊಂಬೇಗೌಡ, ಶಿಕ್ಷಣ ಸಂಸ್ಥೆ (ರಿ), ಶ್ರೀ ಕುವೆಂಪು ಪ್ರಥಮ ದರ್ಜೆ ಕಾಲೇಜು, ಕೆಂಗಲ್, ಚನ್ನಪಟ್ಟಣ, ೨೦೦೮.

೬. ಬೈರೇಗೌಡ, ಎಂ. ಮತ್ತು ತಾ.ಸಿ. ತಿಮ್ಮಯ್ಯ :**'ಅರ್ಕಾವತಿ ಸ್ಮರಣ ಸಂಚಿಕೆ'**, ಅಖಿಲ ಭಾರತ ೬೭ನೇ ಕನ್ನಡ ಸಾಹಿತ್ಯ ಸಮ್ಮೇಳನ, ಕನಕಪುರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು-೧೮, ೧೯೯೯.

೭. ರಾಜಪ್ಪ, ಡಿ.ಸಿ. :**'ಮೈಸೂರು ರಾಜ್ಯದಲ್ಲಿ ವಾಣಿಜ್ಯ ಮತ್ತು ಕರಕುಶಲ ಕಲೆಗಳು (೧೮೦೦-೧೮೮೧)'** ಅಕ್ಷರ ಪ್ರಕಾಶನ, ಹೆಗ್ಗೋಡು ಸಾಗರ, ಕರ್ನಾಟಕ, ೧೯೯೫.

೮. Suryanath.U. Kamath :'*Karnataka State Gazetteer, Bangalore, Rural District,*' Govt. of Karnataka Publication, Bangalore,1989

೯. Francis Buchanan: '*Journey from Madras through the countries of Mysore, Canara and Malabar*', Vol-1, London, 1807.

೧೦. Hazrath Syed Nizam :'*Autography of Hazrath Syed Nizam*' Unpublished.**(Footnotes)**

ಆಧಾರಸೂಚಿ

೧. ಎಂ. ಬೈರೇಗೌಡ, ಮತ್ತು ತಾ.ಸಿ. ತಿಮ್ಮಯ್ಯ (ಸಂ.), **'ಅರ್ಕಾವತಿ'**, ಪುಟ ೨೭೫.

೨. ಬಿ.ಟಿ. ಚಿಕ್ಕಪುಟ್ಟೇಗೌಡ ಮತ್ತು ಆರ್.ವಿ. ನಾರಾಯಣ (ಸಂ.), **'ಕನಕ ಸಂಪದ'**, ಪುಟ ೯೨.

೩. ಎಂ. ಬೈರೇಗೌಡ ಮತ್ತು ತಾ.ಸಿ. ತಿಮ್ಮಯ್ಯ (ಸಂ.), ಪುಟ ೨೭೫.

೪. ಹೆಚ್. ಕೃಷ್ಣೇಗೌಡ ಮತ್ತು ದೇ. ನಾರಾಯಣಸ್ವಾಮಿ (ಸಂ.), ಪುಟ XVII.

೫. ಅದೇ. ಪುಟ XIX.

೬. ಎಂ. ಬೈರೇಗೌಡ ಮತ್ತು ತಾ.ಸಿ. ತಿಮ್ಮಯ್ಯ (ಸಂ.), ಪುಟ ೨೮೨.

೭. ಅದೇ, ಪುಟ ೨೯೪.

೮. ಕರೀಗೌಡ ಬೀಚನಹಳ್ಳಿ (ಸಂ.), **'ಕನ್ನಡ ವಿಶ್ವ ವಿದ್ಯಾಲಯ ವಿಶ್ವಕೋಶ-೨ ಕರಕುಶಲ ಕಲೆಗಳು,'** ಪುಟ ೧.

೯. ಅದೇ, ಪುಟ ೫೦.

೧೦. ಹೆಚ್. ಕೃಷ್ಣೇಗೌಡ ಮತ್ತು ದೇ. ನಾರಾಯಣಸ್ವಾಮಿ (ಸಂ.), ಪುಟ ೨೮.

೧೧. ಅದೇ, ಪುಟ ೨೮.

೧೨. ಅದೇ, ಪುಟ ೨೯.

೧೩. ಅದೇ, ಪುಟ ೨೮.

೧೪. ಎಸ್. ಬಸವರಾಜು, (ಸಂ.), **'ಚೈತ್ರ'**, ಪುಟ ೯.

೧೫. ಡಿ.ಸಿ. ರಾಜಪ್ಪ, (ಸಂ.), **'ಮೈಸೂರು ರಾಜ್ಯದಲ್ಲಿ ವಾಣಿಜ್ಯ ಮತ್ತು ಕರಕುಶಲ ಕಲೆಗಳು'**, ಪುಟ ೩೨.

೧೬. ಹೆಚ್. ಕೃಷ್ಣೇಗೌಡ, ಮತ್ತು ದೇ. ನಾರಾಯಣಸ್ವಾಮಿ (ಸಂ.), **'ಕಣ್ಣಸಿರಿ'**, ಪುಟ ೨೯.

೧೭. ಪಿ.ವಿ. ನಂಜರಾಜ ಅರಸು (ಸಂ.), **'ಮೈಸೂರು ನೂರಿನ್ನೂರು ವರ್ಷಗಳ ಹಿಂದೆ'**, ಪು.೨೨೩.

೧೮. Autography of Hazarath Syed Nizam, P.1-2.

೧೯. ಕೆ.ಎಸ್. ರಮಾ, **'ಜೀವನ ಚರಿತ್ರೆ ಮಾಲೆ-೧೨ ಮೈಸೂರು ಹುಲಿ ಟಿಪ್ಪು ಸುಲ್ತಾನ್'**, ಪುಟ ೬೩.

೨೦. ಎಲ್. ಬಸವರಾಜು (ಸಂ.), **'ಚೈತ್ರ'**, ಪುಟ ೯.

ಅವಸಾನದ ಅಂಚಿನಲ್ಲಿರುವ ಗಡಿಭಾಗದ ವಾಡಗಳು

ಡಾ. ಸಂತೋಷ ಹಾನಗಲ್ಲ*

ಡೆಕ್ಕನಿನ ಐತಿಹಾಸಿಕ ಬದುಕಿನಲ್ಲಿ ಕರ್ನಾಟಕ ಹಾಗೂ ಮಹಾರಾಷ್ಟ್ರಗಳು ಮಹತ್ವದ ಕೊಡುಗೆ ನೀಡಿವೆ. ಆಧುನಿಕ ಯುಗದ ಪ್ರಾರಂಭದಲ್ಲಿ ಮಹಾರಾಷ್ಟ್ರದ ಪೇಶ್ವ ಮನೆತನದ ಹಾಗೂ ಕರ್ನಾಟಕದ ದೇಸಾಯಿ, ದೇಶಮುಖ, ದೇಶಪಾಂಡೆ ಮನೆತನಗಳು ತಮ್ಮ ಸೀಮಿತ ಜಹಗೀರುಗಳಲ್ಲಿ ಕಲೆ, ಸಂಸ್ಕೃತಿ, ನ್ಯಾಯ, ಆಡಳಿತ, ವಾಸ್ತು, ಶಿಕ್ಷಣ ಇತ್ಯಾದಿಗಳಿಗೂ ತಮ್ಮನ್ನು ತಾವೇ ಸಮರ್ಪಿಸಿಕೊಂಡಿವೆ. ಅಂಥ ಚಿಕ್ಕಪುಟ್ಟ ಹಾಗೂ ಮಧ್ಯಮ ಆಡಳಿತದ ಮೆರೆಗಳಲ್ಲಿ ಬೆಳಗಾವಿ ಜಿಲ್ಲೆಯ ಗಡಿಭಾಗದ ವಾಡೆಗಳು ಹೆಸರುವಾಸಿಗಳಾಗಿವೆ.

ಬಾದಾಮಿ ಚಾಲುಕ್ಯರ ಸಾಮ್ರಾಜ್ಯದ ಭಾಗವಾಗಿ ರಾಷ್ಟ್ರಕೂಟರ ಹಾಗೂ ಕಲ್ಯಾಣ ಚಾಲುಕ್ಯರ ಆಡಳಿತ ಘಟಕವಾಗಿ ಯಾದವರ ಆಳ್ವಿಕೆಯ ಮೂಲಕ ಸಾಗಿಬಂದು, ಬಹುಮನಿ ರಾಜ್ಯದ ಪ್ರಾಂತವಾಗಿ ನಂತರ ಆದಿಲ್‌ಷಾಹಿ ಸುಲ್ತಾನರು ಮೆರೆದ ಶ್ರೇಯಸ್ಸು ಈ ಬೆಳಗಾವಿ ಜಿಲ್ಲೆಗೆ ಇದೆ. ನಂತರ ಮೊಘಲ ಸಾಮ್ರಾಜ್ಯದ ಪ್ರಾಂತವಾಗಿ ಮಾರ್ಪಟ್ಟ ಈ ಜಿಲ್ಲೆಯು ಮರಾಠಾ ಪೇಶ್ವೆಗಳ ಪ್ರದೇಶದ ಪ್ರಮುಖ ಭಾಗವಾಗಿತ್ತು. ಮುಂದೆ ಬ್ರಿಟೀಷರ ಕಾಲದಲ್ಲಿ ಜಿಲ್ಲಾ ಪ್ರದೇಶವೆಂದು ಪರಿಗಣಿಸಲ್ಪಟ್ಟು ಸ್ವಾತಂತ್ರ ಪಡೆಯಿತು. ಈ ಜಿಲ್ಲೆಯು ಒಟ್ಟು ಹತ್ತು ತಾಲ್ಲೂಕುಗಳನ್ನೊಳಗೊಂಡಿದೆ. ಅವುಗಳಲ್ಲಿ ಗಡಿಭಾಗದ ರಾಯಭಾಗ, ಚಿಕ್ಕೋಡಿ, ಅಥಣಿ ತಾಲ್ಲೂಕುಗಳಲ್ಲಿ ವಾಡೆಗಳನ್ನು ಕಾಣಬಹುದು. ಆ ವಾಡೆಗಳೆಂದರೆ ಅಥಣಿ ತಾಲ್ಲೂಕಿನ ಮಂಗಸೂಳಿ (ಪವಾರ) ವಾಡೆ, ಕೊಕಟನೂರು ದೇಸಾಯಿಯರ ವಾಡೆ, ಚಿಕ್ಕೋಡಿ ತಾಲ್ಲೂಕಿನ ನಿಂಬಾಳ್ಕರ ವಾಡೆ, ನನದಿಕರ ವಾಡೆ, ಅಂಕಲಿ (ಶಿಥೋಳೆ) ವಾಡೆ, ರಾಯಭಾಗ ತಾಲ್ಲೂಕಿನ ಚಿಂಚಲಿ ವಾಡೆ.

ವಾಡೆ, ವಾಡಾ ಇವು ಕ್ರಮವಾಗಿ ಕನ್ನಡ ಮತ್ತು ಮರಾಠಿ ಭಾಷೆಯಲ್ಲಿ ಬಳಕೆಯಾಗುತ್ತಿರುವ ಪದಗಳು ಇವು ಒಂದೇ ಮೂಲದಿಂದ ಬೆಳೆದ ಪದಳಗೆಂಬುದು ಸ್ಪಷ್ಟ. ಪ್ರಾಚೀನ ಕನ್ನಡದಲ್ಲಿ 'ಮಾಡ' ಎಂಬುದಕ್ಕೆ ಉಪ್ಪರಿಗೆ ಮನೆ ಎಂಬ ಅರ್ಥವಿದೆ. ಒಟ್ಟಾರೆ ಕನ್ನಡದ ಮಾಡ ಶಬ್ದದಿಂದ ವಾಡೆ, ವಾಡಾ ಪದಗಳು ಹುಟ್ಟಿಕೊಂಡಂತಿವೆ. ಇಂಥ ದೊಡ್ಡ ದೊಡ್ಡ ರಾಜ ಮಹಾರಾಜರಿಂದ ಉಂಬಳಿಯಾಗಿ ಪಡೆದು ಅಧಿಕಾರವನ್ನು ನಡೆಸುವ ಧನಿಗಳು ವಾಸಿಸುವ ಮನೆಯೇ ವಾಡೆಗಳು.

ಸ್ವಾತಂತ್ರ್ಯ ಪೂರ್ವದ ಭಾರತದಲ್ಲಿ ಸುಮಾರು ಐದನೂರಾ ಅರವತ್ತೆಂಟು ದೇಸಗತಿಗಳಿದ್ದವು. ಈ ದೇಸಗತಿಯರು ವಾಸಿಸಲಿಕ್ಕೆ ಮನೆಗಳನ್ನು ಕಟ್ಟಿಕೊಂಡಿದ್ದರು. ಆ ಮನೆಗಳೇ ವಾಡೆಗಳು. ಇವರುಗಳು ವಿಜಯನಗರ ಸಾಮ್ರಾಜ್ಯ, ಬಿಜಾಪುರ ಆದಿಲ್‌ಷಾಹಿ, ಮರಾಠರ, ಬ್ರಿಟೀಷರಿಂದ ಉಂಬಳಿಯಾಗಿ ಹತ್ತು, ಇಪ್ಪತ್ತು ಹಳ್ಳಿಗಳನ್ನು ಪಡೆದುಕೊಂಡು ಆಳ್ವಿಕೆ ಮಾಡುವ ಅಧಿಕಾರ ವರ್ಗದವರು ವಾಸಿಸುವ ತಾಣಗಳೇ ವಾಡೆಗಳು. ಸ್ವಾತಂತ್ರ್ಯದ ಪೂರ್ವದಲ್ಲಿ ಸುಮಾರು ಐದನೂರಾ ಅರವತ್ತೆಂಟು ವಾಡೆಗಳಿದ್ದವುವೆಂಬುದು ಖಚಿತವಾಗಿದೆ. ಆದರೆ ಇಂದಿನ ಜಾಗತೀಕರಣ, ಆಧುನಿಕರಣ ಹಾಗೂ ಶಹರೀಕರಣದಿಂದ ಇಂಥ ವೈವಿಧ್ಯಮಯ ಕಟ್ಟಡಗಳು, ಇತಿಹಾಸವನ್ನು ಸಾರಿ ಹೇಳುವ ಬೃಹತ್ ವಾಡೆಗಳು ಇಂದು ಕಣ್ಮರೆಯಾಗುತ್ತಿವೆ.

ಮಂಗಸೂಳಿ ಅಥಣಿ ತಾಲ್ಲೂಕು ಕೇಂದ್ರದಿಂದ ೨೫ ಕಿ.ಮೀ. ಅಂತರದಲ್ಲಿದ್ದು ಈ ಗ್ರಾಮವು ಕರ್ನಾಟಕ ರಾಜ್ಯದ ಅಂತಿಮ ಗ್ರಾಮವಾಗಿದೆ. ಇಲ್ಲಿಯ ಜನರು ಕನ್ನಡ ಹಾಗೂ ಮರಾಠಿ ಭಾಷೆಗೆ ಒಳಪಟ್ಟಿದ್ದಾರೆ. ಈ ಗ್ರಾಮದ ಪೂರ್ವದಿಕ್ಕಿನಲ್ಲಿ ವಿಜಾಪುರ ಜಿಲ್ಲೆ, ದಕ್ಷಿಣದಲ್ಲಿ ರಾಯಭಾಗ ತಾಲ್ಲೂಕು, ಆಗ್ನೇಯ ದಿಕ್ಕಿಗೆ ಜಮಖಂಡಿ ತಾಲ್ಲೂಕು ಸುತ್ತುವರೆದಿವೆ. ಪವಾರ ವಾಡೆಯೆಂದೇ ಪ್ರತೀತಿ ಪಡೆದ ವಾಡೆ ಈಗ ಸಂಪೂರ್ಣ ಬಿದ್ದು ನೆಲಸಮವಾಗಿದೆ. ವಾಡೆಯ ಕಟ್ಟಡದ ಆವರಣದಲ್ಲಿ ಕೇವಲ ವಾಡೆಯ ಕಲ್ಲುಗಳು, ಮಣ್ಣಿನ ದಿಬ್ಬ ಹಾಗೂ ವಾಡೆಯ ರಕ್ಷಣೆಗೆ ಕಟ್ಟಿದ ಗೋಡೆ (compoung wall) ನ್ನು ನೋಡಬಹುದಾಗಿದೆ. ವಾಡೆ ಆವರಣದಲ್ಲಿ ದಟ್ಟವಾದ ಗಿಡಗಳಿದ್ದುದರಿಂದ, ಆವರಣದ ಒಳಗಡೆ ಹೋಗಲು ಆಗುವುದಿಲ್ಲ. ಈ ವಾಡೆಯ ಮನೆತನದ ಶ್ರೀಮಾನ್ ಡಿ.ಬಿ.

* ಇತಿಹಾಸ ಅಧ್ಯಾಪಕರು, ಎಸ್.ಜಿ.ವಿ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಬೈಲಹೊಂಗಲ, ಬೆಳಗಾವಿ ಜಿಲ್ಲೆ-೫೯೧೧೦೨

ಪವಾರವೆಂಬ ವ್ಯಕ್ತಿ ಕರ್ನಾಟಕ ಸರಕಾರದಲ್ಲಿ ಮಂತ್ರಿಯಾಗಿದ್ದು, ಶ್ರೀಮತಿ ಇಂದಿರಾಗಾಂಧಿಯವರಿಗೆ ನಿಕಟ ಸಂಪರ್ಕದ ವ್ಯಕ್ತಿಯಾಗಿದ್ದರು.

ಕೋಕಟನೂರು ಗ್ರಾಮವು ಅಥಣಿ ತಾಲ್ಲೂಕು ನಗರದಿಂದ ಮೂವತ್ತು ಕಿ.ಮೀ. ಅಂತರದ ಕೃಷ್ಣಾ ನದಿ ತೀರದಲ್ಲಿದೆ. ಕೋಕಟನೂರು ವಾಡೆಯ ಮುಖ್ಯಸ್ಥರು ಕುಡಒಕ್ಕಲಿಗ ಸಮಾಜಕ್ಕೆ ಸೇರಿದವರಾಗಿದ್ದು, ಈ ಭಾಗದಲ್ಲಿ ಅವರು ಪ್ರಮುಖರಾಗಿದ್ದಾರೆ. ಕೊಕಟನೂರು ವಾಡೆಯು ಉತ್ತರಾಭಿಮುಖವಾಗಿದ್ದು, ವಾಡೆ ಸಂಪೂರ್ಣ ಬಿದ್ದು ನಾಶವಾಗಿದೆ. ಇಲ್ಲಿ ವಾಡೆಯ ಕುರುಹಾಗಿ ವಾಡೆಯ ಮುಖ್ಯ ಪ್ರವೇಶದ್ವಾರ ಅದರ ಒಳಗಡೆ ಕಚೇರಿಯ ಒಂದು ಗೋಡೆ ಹಾಗೂ ವಾಡೆಯ ಲಕ್ಷ್ಮಿಯ ಸ್ಥಳವನ್ನು ಕಾಣಬಹುದು. ವಾಡೆಯನ್ನು ಕರಿಕಲ್ಲಿ (Deccan trap) ನಿಂದ ನಿರ್ಮಿಸಲಾಗಿದ್ದು, ವಾಡೆಯ ಕರಿಕಲ್ಲು, ಗಚ್ಚಿನಿಂದ ನಿರ್ಮಿಸುವ ಗೋಡೆಗಳಾಗಿದ್ದರಿಂದ ಇಂದಿಗೂ ನೋಡಲು ಸಿಗುತ್ತವೆ. ಆದರೆ ವಾಡೆಯ ಒಳಗಿನ ಎಲ್ಲ ಭಾಗವು ಬಿದ್ದು ನೆಲಸಮಗೊಂಡಿದೆ. ವಾಡೆಯ ವಾರಸುದಾರರುಗಳು ವಾಡೆಯ ಆವರಣದಲ್ಲಿ ಒಂದು ಮೂಲೆಯಲ್ಲಿ ಮನೆಯನ್ನು ಕಟ್ಟಿಕೊಂಡು ವಾಸಿಸುತ್ತಿದ್ದಾರೆ.

ನಿಪ್ಪಾಣಿಯ ನಿಂಬಾಳ್ಕರ ವಾಡೆ ಚಿಕ್ಕೋಡಿ ತಾಲ್ಲೂಕಿನಿಂದ ಉತ್ತರಕ್ಕಿದೆ. ನಿಪ್ಪಾಣಿ ನಗರವು ಕರ್ನಾಟಕ ಹಾಗೂ ಮಹಾರಾಷ್ಟ್ರಗಳ ಈಗಿನ ರಾಜಕೀಯ ಸೀಮೆಗಳ ಗಡಿ ಪ್ರದೇಶವಾಗಿದ್ದು, ಕರ್ನಾಟಕದಲ್ಲಿ ಉಳಿದುಕೊಂಡಿದೆ. ಅದರ ಅಕ್ಷಾಂಶ ೧೬-೨೩' (ಉ) ಹಾಗೂ ರೇಖಾಂಶ ೭೪-೨೬' (ಪೂ) ದಲ್ಲಿ ಹಬ್ಬಿಕೊಂಡಿದ್ದು, ಸಮುದ್ರ ಸಪಾಟಿಯಿಂದ ೨,೬೦೦ ಫೂಟ್ (ಪ್ರ. ೮೦೦ ಮೀಟರ್) ಎತ್ತರದಲ್ಲಿದೆ. ಇದನ್ನು ಮರಾಠ, ಪೇಶ್ವೆ ಹಾಗೂ ಆದಿಲ್‌ಷಾಹರು ಆಳಿದ ಪರಿಣಾಮವಾಗಿ ಮರಾಠಿ, ಕನ್ನಡ ಹಾಗೂ ಉರ್ದು ಈ ಜನರ ಜನಭಾಷೆಯಾಗಿದೆ. ಈ ನಗರವು ಸಾಮಾನ್ಯವಾಗಿ ನೀರಿನ ಸಮಸ್ಯೆಯನ್ನು ಅನುಭವಿಸುತ್ತಿರುವುದರಿಂದ ಇದಕ್ಕೆ ನಿಪ್ಪಾಣಿಯೆಂದು ಹೆಸರು ಬಂದಿದೆ. ನಿಪ್ಪಾಣಿಯೆಂಬ ಶಬ್ದದ ಅರ್ಥವೇ 'ನೀರು' (ಕನ್ನಡ) ಹಾಗೂ ಪಾಣಿ (ಮರಾಠಿ) ಯೆಂದು ನೀರಿಗಾಗಿಯೇ ಒತ್ತು ಕೊಡುವ ವ್ಯಾಕರಣದ ಶಬ್ದವಿದು. ಇದು ನೀರಿನ ಬಗ್ಗೆ ಇರುವ ಮಹತ್ವವನ್ನು ಒಂದು ಕಡೆ ಹೇಳುತ್ತಿದ್ದರೆ, ಮನ್ನಡ ಹಾಗೂ ಮರಾಠಿ ಭಾಷೆಗಳ ಸಂಗಮವನ್ನು ಮತ್ತೊಂದು ಕಡೆ ಸಂಕೇತಿಸುತ್ತದೆ. ನಿಪ್ಪಾಣಿ ನಗರದ ಸಂಸ್ಥಾಪಕ 'ಸರದಾರ ಶ್ರೀಮಂತ ಸಿಧೋಜಿರಾವ್ ನಿಂಬ್ಬಾಳಕರ ಈ ವಾಡೆ ಹಾಗೂ ಕಿಲ್ಲೆಗಳನ್ನು ಕಟ್ಟಿಸಿದನು. (ಕ್ರಿ.ಶ. ೧೮೦೩-೧೮೩೯) ಶ್ರೀಮಂತ ಸಿದ್ದೀಜಿರಾವ್ ನಿಂಬ್ಬಾಳಕರ ಸಮರ್ಥ ಯೋಧನಾಗಿರುವುದರಿಂದ ನಿಪ್ಪಾಣಿಯ ಘನತೆಯನ್ನು ಸುತ್ತಲಿನ ರಾಜ್ಯಗಳಾದ 'ಪೇಶ್ವೆ' ಹಾಗೂ 'ನಿಜಾಮ'ರ ಸಮಾಂತರವಾಗಿ ಬೆಳಸಿದ್ದನ್ನು ಕಾಣಬಹುದು. ಇಲ್ಲಿ ಕಟ್ಟಿಸಿದ ಕೋಟೆ ಹಾಗೂ ಅದರಲ್ಲಿಯ ವಾಡೆಯು, ವಾಡೆಗಳಲ್ಲಿ ರಾಜನೆಂದು ಕರೆಯಲ್ಪಡುವಂತಹ (King Among Wada's) ಪುಣೆಯ ಪೇಶ್ವೆಯರ 'ಶನಿವಾರ ವಾಡೆ'ಯನ್ನು ಹೋಲುತ್ತದೆ.

ವಾಡೆಯ ರಚನೆ : ಈ ವಾಡೆಯನ್ನು ಕಟ್ಟುವಾಗ, ಪೂರ್ವಭಾವಿಯಾಗಿ ಈ ಪ್ರದೇಶದ ಹವಾಮಾನದ ನಿಯಂತ್ರಕಗಳು ಅಂದರೆ ಉಷ್ಣಾಂಶ, ತೇವಾಂಶ, ಶೀತಾಂಶ ಹಾಗೂ ವರ್ಷಾಂಶಗಳನ್ನು ಗಣನೆಗೆ ತೆಗೆದುಕೊಂಡು ಈ ವಾಡೆಗೆ ಬಾಧೆಬಾರದಂತೆ ಕಟ್ಟಲಾಗಿದೆ. ಗಾಳಿಬೀಸುವ ಪರಿ (Wind Flow), ಭೂತಳ (Topography) ಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ. ಈ ಗಣನೆಯಿಂದ ವಾಡೆಯ ಎಲ್ಲ ಅಂಗಣಗಳಲ್ಲಿ ಹವಾಮಾನದ ಅನುಕೂಲಕರ ವಾತಾವರಣವನ್ನು ಉಂಟು ಮಾಡಲು ಅವಕಾಶ ನೀಡುತ್ತದೆ. ಸಾಮಾನ್ಯವಾಗಿ ಪರಂಪರಗತವಾಗಿ ಉಪಯೋಗಿಸುವಂತ ಹಾಗೂ ಸುತ್ತಲೂ ದೊರೆಯುವಂತ ಕಟ್ಟಡದ (Building Materials) ಸಾಮಗ್ರಿಗಳ ಬಗ್ಗೆ ವಿಶೇಷವಾದ ಗುಣಮೌಲ್ಯಗಳನ್ನು ಕಾಯ್ದುಕೊಳ್ಳಲಾಗಿದೆ. ಕಟ್ಟಡ ನಿರ್ಮಾಣದ ಅಭಿಯಾಂತ್ರಿಕ ಕಲೆ (Engineering Skill) ರಚನಾ ವಿಧಾನ ಹಾಗೂ ಅವಶ್ಯಕ ವಿನ್ಯಾಸದ ಅಳವಡಿಕೆಗಳ ಬಗ್ಗೆ ವಿಶೇಷವಾಗಿ ಗಮನಹರಿಸಲಾಗಿದೆ.

ವಾಡೆಯ ವಿನ್ಯಾಸ ಹಾಗೂ ವಾಸ್ತು : ಪ್ರವೇಶದ್ವಾರಕ್ಕೆ 'ಲಿಖಿ' (Lakhi) ದರವಾಜಾಯೆಂದು ಹೆಸರು. ಇದರಲ್ಲಿ ಅಳವಡಿಸಲಾದ ದ್ವಾರಬಂಧದಲ್ಲಿ ಎರಡು ಬದಿಗೆ ಸುಂದರವಾದ ಕಂಬಗಳನ್ನು ಜೋಡಿಸಲಾಗಿದ್ದು, ಅವುಗಳ ಮೇಲೆ ಪಕಳಿಯ ದುಂಡನೆಯ ಸರಮಾಲೆಯಂತೆ ಕಾಣುವ ಕಮಾನನ್ನು ನಿರ್ಮಿಸಲಾಗಿದೆ. ಈ ಕಮಾನು ಮೊಘಲ ಹಾಗೂ ಮರಾಠಾ ವಾಸ್ತುಕಲೆಯ ಅಂಶವನ್ನು ಹೊಂದಿದೆ. ಹಾಗಾಗಿ ಬಾಗಿಲಿನ ಎಡ ಹಾಗೂ ಸೌಂದರ್ಯವನ್ನು ತಂದಿದೆ. ಬಾಗಿಲಿನ ಎಡ ಹಾಗೂ ಬಲಬದಿಗಳ ಮುಂಬದಿಗಳಿಗೆ 'ಎರಡು' ಗೋಡೆಯಿಂದ ಹೊರಚಾಚಿದ ಮಂಟಪಗಳು ಜೋಡಿಸಲ್ಪಟ್ಟಿವೆ. ಇವು ಪ್ರವೇಶದ್ವಾರದಲ್ಲಿ ನಿಯಮಿಸಲ್ಪಟ್ಟ ಕಾವಲುಗಾರರ ಕೋಣೆ ಎಂದು ಪ್ರತೀತ. ಈ ಬಾಗಿಲಿಗೆ ಮತ್ತೊಂದು ಚಿಕ್ಕದಾದ 'ದಿಂಡಿ ದರವಾಜಾ'ವೆಂಬ ಬಾಗಿಲನ್ನು ಅಳವಡಿಸಲಾಗಿದೆ.

ಈ ಚಿಕ್ಕ ಬಾಗಿಲನ್ನು ದೊಡ್ಡ ಬಾಗಿಲು ಮುಚ್ಚಿದಾಗ ಮಾತ್ರ ಪ್ರವೇಶಕ್ಕೆ ಉಪಯೋಗಿಸಲಾಗುತ್ತಿತ್ತು. ಇದನ್ನು ಅಲ್ಲಲ್ಲಿ

ನಿಯಮಿಸಲಟ್ಟ ಕಾವಲುಗಾರನು ನಿಯಂತ್ರಿಸುತ್ತಿದ್ದನು. ಈ ಬಾಗಿಲವಾಡದ ಮೇಲೆ ಹವೆ ನಿಯಂತ್ರಣಕ್ಕಾಗಿ 'ಝರೊಖಾ' (ಒಳಕಿಂಡಿಗಳು) ಗಳನ್ನು ಅಳವಡಿಸಲಾಗಿದೆ.

ಮೊದಲನೆಯ ಒಳಾಂಗಣ : ಈ ಒಳಾಂಗಣವು ವಿನ್ಯಾಸದಲ್ಲಿ ಚೌಕಾಗಿದ್ದು, ಅದರ ಮಧ್ಯದಲ್ಲಿ ಕಮಾನಾಕಾರದ ಕಾರಂಜಿ ಇದೆ. ಈ ಕಾರಂಜಿಯ ಬದಿಯಲ್ಲಿ ಎತ್ತರದಲ್ಲಿರುವ ಹೌದುಗಳಿಂದ ನೀರಿನ ಇಳಿಜಾರಾದ ಹರಿವು ಪದ್ಧತಿಯಿಂದ ನೀರನ್ನು ಕಾರಂಜಿಗೆ ಹರಿಬಿಡಲಾಗುತ್ತಿತ್ತು. ಈ ಅಂಗಣದ ಗೋಡೆಗಳು ಎತ್ತರವಾಗಿದ್ದು, ಅಲ್ಲಲ್ಲಿ ಸಮಾನಂತರದಲ್ಲಿ ಕಟ್ಟಲಾದ ಮಾಡುಗಳು (Niches) ಇದ್ದು ಇವುಗಳನ್ನು ಹಬ್ಬ ಹುಣ್ಣಿಮೆಗಳಲ್ಲಿ ದೀಪಾಲಂಕಾರಕ್ಕಾಗಿ ಪಣತಿಗಳನ್ನು ಇರಿಸಿ ದೀಪೋತ್ಸವವಾಗಿ ಬೆಳಗಿಸುತ್ತಿದ್ದರು. ಈ ಮೊದಲನೆಯ ಅಂಗಣದ ಎದುರಿಗೆ ಕಾಣುವುದೇ ವಿಶಾಲವಾದ 'ಸರದಹಾಲ್' (Judiciary Court).

ಸರದಹಾಲ್ : ಇದೊಂದು ಮುಖಭಾಗವನ್ನು ತೆರೆದಿಟ್ಟ ಮೊದಲನೆಯ ಅಂಗಣವನ್ನು ನೋಡುವ, ವಿನ್ಯಾಸದಲ್ಲಿ ಚೌಕಾದ, ಸುಂದರವಾದ ಕಂಬಗಳು ಹಾಗೂ ಬೋದುಗೆ ಗಳಿರುವ ವಾಡೆಯ ಮಹತ್ವದ ಅಂಗವಿದು. ಇದರ ಸುತ್ತಲೂ ಅತಿಥಿಗಳಿಗಾಗಿ ವಸತಿ ಸೌಕರ್ಯವನ್ನು ಒದಗಿಸುವ ಕೋಣೆಗಳಿವೆ. ಈ ಕೋಣೆಗಳನ್ನು ಹಾಗೂ ಮಧ್ಯದಲ್ಲಿರುವ 'ಸರದಹಾಲ್'ಅನ್ನು ಜೋಡಿಸುವ ಪಡಶಾಲೆ ಇದ್ದು, ಇದು ಬೇಸಿಗೆಯಲ್ಲಿ ತಂಪಾದ ಹವೆಯನ್ನು ನೀಡುವ ವಾತಾನುಕೂಲ ವಾಗಿ ಇದ್ದುದರಿಂದ ರಾತ್ರಿಯಲ್ಲಿ ಚಂದ್ರಮನ ಬೆಳಂದಿಗಳನ್ನು ಸವಿಯಲು ಹಾಗೂ ಮಲಗಿಕೊಳ್ಳಲು ಉಪಯೋಗಿಸಲ್ಪಡು ತ್ತಿತ್ತು. ಈ ಅಂಗಣವು ಸುಂದರವಾಗಿ ಕೆತ್ತಲ್ಪಟ್ಟ ಕಲ್ಲುಗಳಿಂದ ರಚಿಸಿದ ಕಾರಂಜಿಯಿಂದ ಶೋಭಿಸಲ್ಪಟ್ಟಿದೆ. ಈ ಕಾರಂಜಿ ಯಿಂದ ಸುಗಂಧವು ಹರಡುವ ಏರ್ಪಾಡು ಮಾಡಿದ್ದರಿಂದ ಅಲ್ಲಿಯ ವಾಸಿಕರಿಗೆ ಹಾಗೂ ಅತಿಥಿಗಳಿಗೆ ಆಹ್ಲಾದವನ್ನು ಹಾಗೂ ದೈವಿಕಭಾವನೆಯನ್ನು ಉಂಟು ಮಾಡುತ್ತಿತ್ತು. ದೇವರ ಕೋಣೆಯು ಈ ಅಂಗಣದ ಪಶ್ಚಿಮ ಭಾಗದ ಮಧ್ಯದಲ್ಲಿ ಪೂರ್ವಮುಖಿಯಾಗಿ ಕಟ್ಟಲ್ಪಟ್ಟಿದೆ (ದೇವಘರ್). ಈ ದೇವಕೋಣೆಯ ಹಿಂದೆ ಸಂಗ್ರಹ ಕೋಣೆಯು (Store room) ಜೋಡಿಸಲ್ಪಟ್ಟಿದೆ. ರಾತ್ರಿಯ ಸಮಯದಲ್ಲಿ ಬೆಳಕಿನ ಸೌಂದರ್ಯವನ್ನು ಹೆಚ್ಚಿಸಲು ಪರಂಪರಾಗತವಾಗಿ ಬಂದ ಹಾಗೂ ನೇತಾಡುವ ತೂಗುದೀಪಗಳನ್ನು (ಗಾಜಿನ ಚೌಕಟ್ಟಿನಲ್ಲಿ ಕೂಡ್ರಿಸಿ) ಬಳಸಲಾಗುತ್ತಿತ್ತು.

ಈ ಎರಡನೆಯ ಅಂಗಣವನ್ನು ದಾಟಿದ ಮೇಲೆ ಅತ್ಯಂತ ಒಳಗಡೆಗೆ ಇರುವುದೇ ಮಹಿಳೆಯರ ವಸತಿ ತಾಣ (Private Zenana). ಈ ಝುನಾನಾದಲ್ಲಿ ಮಹಿಳೆಯರಿಗೆ ಪ್ರಿಯವಾಗುವಂತೆ ಹಾಗೂ ಆಕರ್ಷಕವಾಗುವಂತೆ, ಕಾಣುವಂತೆ ಅಂದವಾಗಿ ಕೊರೆದ ಕಾಷ್ಠಶಿಲ್ಪಗಳನ್ನು ಹಾಗೂ ಅಲಂಕಾರಿಕ ವಾಸ್ತು ಅಂಗಗಳನ್ನು ಅಳವಡಿಸಲಾಗಿದೆ. ಇಲ್ಲಿ ವೈಯಕ್ತಿಕವಾಗಿ ಆರಾಧನೆ ಮಾಡುವ ಪೂಜಾ ಕೋಣೆಯೊಂದು ಪೂರ್ವಕ್ಕೆ ಮುಖಮಾಡಿದ್ದು, ಇವು ಈ ಮಹಿಳಾ ಪ್ರಾಂಗಣದಲ್ಲಿ ಧಾರ್ಮಿಕ ಹಾಗೂ ದೈವತ್ವದ ವಾತಾವರಣವನ್ನುಂಟು ಮಾಡುತ್ತದೆ. ಇಲ್ಲಿ ಕೇವಲ ಹೆರಿಗೆಗಾಗಿ (ಬಾಣಂತಿ ಕೋಣೆ) ಉಪಯೋಗಿಸುವ ಕೋಣೆಯೊಂದು ಇದೆ. ವಾಯುವ್ಯ ದಿಕ್ಕಿನಲ್ಲಿ ಪಾಕಶಾಲೆ (ಅಡುಗೆ ಶಾಲೆ) ಇದೆ. ಈ ಪ್ರಾಂಗಣದ ಮಧ್ಯದಲ್ಲಿ ಸುಂದರವಾದ ಹಾಗೂ ಪಾರಂಪರ್ಯದ ಪಡಸಾಲೆಯ ಕೋಣೆಗಳ ಮುಂದುಗಡೆ ಅಲ್ಲಲ್ಲಿ ತೂಗುಮಂಚ ಗಳನ್ನು ಅಳವಡಿಸಲಾಗಿದೆ. ಇವುಗಳನ್ನು ವಾಡೆಯ ಮಹಿಳೆ ಯರು ಹಾಗೂ ಮಕ್ಕಳು ಉಪಯೋಗಿಸಿ ಆನಂದಿಸುತ್ತಿದ್ದರು.

ಸಂಕ್ಷಿಪ್ತವಾಗಿ ಹೇಳಬೇಕಾದರೆ ಈ ನೆಲಂತಸ್ತಿನ (Ground Floor) ವಿನ್ಯಾಸಕಾರರು ವಾಡೆಗಳಿಗೆ ಇರಬೇಕಾದ ಅವಶ್ಯಕ ಅಂಗಗಳನ್ನು ಜೋಡಿಸಲು ಸಾಕಷ್ಟು ಜಾಣತನವನ್ನು ಉಪಯೋಗಿಸಿದ್ದಾರೆ. ಈ ಭೂ-ಅಂತಸ್ತಿನ ಸಾಮಾನ್ಯವಾದ ರಕ್ಷಣೆಗಾಗಿ ಗಟ್ಟಿಮುಟ್ಟಾದ ಗೋಡೆಯನ್ನಂತು ಉಪಯೋಗಿಸ ಲಾಗಿದೆ. ನ್ಯಾಯ ಹಾಗೂ ಆಡಳಿತದ ದೃಷ್ಟಿಯನ್ನು ಇಟ್ಟುಕೊಂಡು ಸಾಮಾನ್ಯ ಪ್ರಜೆಗಳಿಗೂ ಒಡೆಯನ ದರ್ಶನ ವನ್ನು ಕೂಡಲೇ ದೊರೆಯುವಂತೆ ಮಾಡಲು ಸರದಹಾಲ್ (Judiciary Court) ಅನ್ನು ನಿರ್ಮಿಸಲಾಗಿದೆಯಲ್ಲದೇ, ವಾಡೆಯ ಒಡೆಯನಲ್ಲಿ ಸೌಹಾರ್ದ ಭೇಟಿಗಾಗಿ ಬರುವಂತಹ ಅತಿಥಿಗಳಿಗೆ ವಸತಿಗಾಗಿ ಒಳ್ಳೆಯ ಕೋಣೆಗಳನ್ನು ಕೂಡ ನಿರ್ಮಿಸಲಾಗಿದೆ. ಅಲ್ಲದೇ ದೈವಭಾವವನ್ನು ಮೂಡಿಸಲು ದೇವರ ಕೋಣೆ, (ದೇವರಘರ) ಪಾಠಶಾಲೆ, ದಿನಸಿ ಕೋಣೆ (Provision Room) ಹಾಗೂ ವಾಡೆಯ ಮಹಿಳೆಯರಿಗೆ ಮಕ್ಕಳಿಗೆ ಅವರ ಗೃಹಕಾರ್ಯಗಳಿಗೆ, ಧಾರ್ಮಿಕ ಕಾರ್ಯ ಗಳಿಗೆ, ಆಟಪಾಠಗಳಿಗೆ ಇನ್ನಿತರ ಚಟುವಟಿಕೆಗಳಿಗೆ ಅನುಕೂಲ ವಾಗಲೆಂದು ಇವೇ ಅಂಗಣಗಳನ್ನು ನಿರ್ಮಿಸಲಾಗಿದೆ. ಈ ಎಲ್ಲಾ ಗುಣಮೌಲ್ಯಗಳನ್ನು ಈ ಭೂ-ಅಂತಸ್ತನ್ನು ವಿನ್ಯಾಸಿಸುವ ಹಾಗೂ ರಚಿಸುವ ಪ್ರಕ್ರಿಯೆಯಗಳಲ್ಲಿ ಗಮನಹರಿಸಲಾಗಿದೆ. ಹಾಗಾಗಿ ಇಡಿ ವಾಡೆಯ ಬದುಕಿಗೆ ಹಾಗೂ ಅದರ ಚಲನೆಗೆ ಅವಶ್ಯವಾದ ಹಾಗೂ ಅನುಕೂಲಕರವಾದ ವಿನ್ಯಾಸದ ಅಂಗಗಳನ್ನು ಚಾಚು ತಪ್ಪದಂತೆ ಪ್ರಯೋಗಿಸಲಾಗಿದೆ.

ಮೊದಲನೆ ಅಂತಸ್ತು (First Floor) : ಈ ಮೊದಲನೆಯ ಮಹಡಿ ವಿನ್ಯಾಸವು ಹೆಚ್ಚು ಕಡಿಮೆ ಭೂ-ಅಂತಸ್ತಿನಂತೆ ಇದೆ. ಇಲ್ಲಿಯೂ ಕೂಡ ಮಧ್ಯದಲ್ಲಿ 'ದರ್ಬಾರ ಹಾಲ್' ಎಂದು ಕರೆಯಲ್ಪಡುವ ಸ್ವಲ್ಪ ಎತ್ತರದ ಕಟ್ಟೆಯು

ಮೇಲೆ 'ಹಜಾರ್' ಇದೆ. ಈ ಹಜಾರಿನ ಸುತ್ತಲೂ ಕೋಣೆಗಳಿವೆ. ಈ ಕೋಣೆಗಳು ಹಜಾರಿನ ಪಾತಳಿಗಿಂತ ಸ್ವಲ್ಪ ಕೆಳಮಟ್ಟದಲ್ಲಿವೆ. ಈ ಹಜಾರಿನಲ್ಲಿ ಒಡೆಯ ಹಾಗೂ ಆತನ ಮಂತ್ರಿ ಮಂಡಳದ ಸದಸ್ಯರ 'ಬೈಠಕ್' ಗಳಾಗುತ್ತಿದ್ದವು. ಈ ವ್ಯವಸ್ಥೆಯು ರಾಜ್ಯಾಡಳಿತದ ಮಹತ್ವದ ವಿಷಯಗಳನ್ನು ಗೋಪ್ಯವಾಗಿ ಚರ್ಚಿಸಲು ಅನುಕೂಲವಾಗುತ್ತಿತ್ತು. ಗೋಡೆಗಳ ಕಮಾನು ಹಾಗೂ ಮಾಡುಗಳಲ್ಲಿ ಸುಂದರವಾದ ವರ್ಣಚಿತ್ರಗಳನ್ನು ಬಿಡಿಸಲಾಗಿದೆ. ಈ ಚಿತ್ರಗಳು ಒಡೆಯನ ವಿವಿಧ ಜೀವನ ಶೈಲಿಯನ್ನು ತೋರಿಸುತ್ತವೆ. ವಿವಿಧ ಕಮಾನು ಹಾಗೂ 'ಛತ್ತಿ'ನ ಒಳಗಡೆಯ ಭಾಗವು ಕಾಷ್ಠ ವಾಸ್ತು ಅಂಗಗಳಿಂದ ಶೋಭಿಸುತ್ತಿದೆ. ಈ ದರ್ಬಾರ ಹಾಲ್ ಪೂರ್ವ ದಿಕ್ಕಿನಲ್ಲಿ ತನ್ನ ಮೈದೆರೆದಿರುವದರಿಂದ ಬೆಳಕು ಹಾಗೂ ಶುದ್ಧ ಹವೆಗೆ ಅನುಕೂಲವಾಗಿದೆ.

ಇಲ್ಲಿ ಅಷ್ಟಕೋನಾಕೃತಿಯ (Railings) ಕಬ್ಬಿಣದ ಕೊಳವೆಗಳ ಚೌಕಟ್ಟು ಇದ್ದು, ಇದು ದರ್ಬಾರ್ ಕಟ್ಟೆಯನ್ನು ಸುತ್ತುವರೆದಿದೆ. ವಾಯುವೇ ಹಾಗೂ ಆಗ್ನೇಯ ಮೂಲೆಗಳಲ್ಲಿ ಕೋಣೆಗಳಿದ್ದು ಅವುಗಳಲ್ಲಿ ಸೇವಕಿಯರು (ದಾಸಿಯರು) ವಾಸಿಸುತ್ತಿದ್ದರು. ಅಲ್ಲದೇ ಅತಿಥಿ ಕೋಣೆಗಳ ಎರಡನೆಯ ಹಾಗೂ ಮೂರನೆಯ ಅಂಗಣಗಳಲ್ಲಿ ರಚಿಸಲಾಗಿದೆ. ಮೂರನೆಯ ಅಂಗಣದ ಬಗ್ಗೆ ಹೇಳುವುದಾದರೆ, ಆಗ್ನೇಯ ಭಾಗದಲ್ಲಿ ಸ್ನಾನದ ಕೋಣೆಯಿದ್ದು, ಇದು ಕೇವಲ ರಾಣಿಯರಿಗೆ ಮಾತ್ರ ಉಪಯೋಗಿಸಲ್ಪಡುತ್ತಿತ್ತು. ರಾಣಿಯರ ವಸತಿ ಕೋಣೆಯನ್ನು ಕಣ್ಸೆಳೆಯುವ ವರ್ಣಚಿತ್ರಗಳೊಂದಿಗೆ ಸುಂದರ ಬೆಳಕು ಹಾಗೂ ಶುದ್ಧ ಹವೆ ಈ ಕೋಣೆಯನ್ನು ಚೆನ್ನಾಗಿ ಪ್ರಸರಿಸುತ್ತಿದ್ದವು.

ಇಡಿಯಾಗಿ ನೋಡಿದಲ್ಲಿ ಈ ಮೊದಲು ಅಂತಸ್ತು ಭೂ-ಅಂತಸ್ತಿಗಿಂತ ವೈಭವೋಪೇತವಾಗಿದ್ದು ವಾಡೆಯ ಸೌಂದರ್ಯವನ್ನು ಹೆಚ್ಚಿಸಿದೆ. ಇದು ಸೀಮಿತ ಹಾಗೂ ಮಹತ್ವದ ಆಡಳಿತದ ನಿರ್ಣಯಗಳನ್ನು ತೆಗೆದುಕೊಳ್ಳುವ ಗುಪ್ತಸ್ಥಾನವಾಗಿತ್ತು.

ಈ ಎರಡನೇ ಅಂತಸ್ತಿನ ವಾಸಕ್ಷೇತ್ರವು ಕಡಿಮೆ ಇದೆ. ಏಕೆಂದರೆ ಇಲ್ಲಿ ಕೇವಲ ವಾಡೆಯ ಒಡೆಯರ ಕೋಣೆ ಮಾತ್ರ ಇದೆ. ಕೆಳಗಡೆಯ ಆಯುಧ ಕೋಣೆಯಿಂದ ಮೇಲೆರುವ ಕಟ್ಟಡಗಳಿಂದ ಈ ಎರಡನೆಯ ಅಂತಸ್ತಿನಲ್ಲಿರುವ ಒಡೆಯನ ಕೋಣೆಗೆ ಪ್ರವೇಶ ಮಾಡಲು ಅನುಕೂಲವಿದೆ. ಪುಟ್ಟ ಪುಟ್ಟ ಜಾಲಂಧ್ರಗಳು ಈ ಕೋಣೆಗೆ ಬೆಳಕು ಹಾಗೂ ಶುದ್ಧ ಹವೆಯನ್ನು ತರುತ್ತವೆ. ಈ ಕೋಣೆಯ ಮೇಲೆ ಇರುವ ಶುದ್ಧ ಹವೆಯನ್ನು ತರುತ್ತವೆ. ಕೋಣೆಯ ಮೇಲೆ ಇರುವ ಜಲಮಂದಿರದ ಛತ್ತು (Slab) ಈ ಕೋಣೆಗೆ ಆಹ್ಲಾದಕರವಾದ ಹವೆಯ ನಿಯಂತ್ರಣವನ್ನು ನೀಡುತ್ತದೆ. ಹೀಗಾಗಿ ಒಡೆಯನ ಈ ಕೋಣೆಯು ಬೇಸಿಗೆಯಲ್ಲಿಯೂ ಕೂಡಾ ಹಿತಕರವಾದ ಹವೆಯ ವಾತಾವರಣವನ್ನು ಹರಡುತ್ತದೆ (Good thermal Insulation). ರಾಜ ಅಥವಾ ಒಡೆಯ ನೆಂದರೆ ಆ ರಾಜ್ಯದ ಅಥವಾ ಆ ಪ್ರದೇಶದ ಹೃದಯವಿದ್ದಂತೆ. ಆ ಅಮೂಲ್ಯವಾದ ಹೃದಯವನ್ನು ರಕ್ಷಿಸಲು ಇಂಥ ಸರ್ವಾನುಕೂಲ ವ್ಯವಸ್ಥೆ ಅವಶ್ಯ.

ಮೂರನೆಯ ಅಂತಸ್ತು (ಜಲಮಂದಿರ) : ಇಲ್ಲಿ ಕೇವಲ ವಾಡೆಯ ಒಡೆಯನಿಗಾಗಿ ಸ್ನಾನ ಮಾಡುವ ನೀರಿನ ಕೊಳವಿದೆ (Bathing Tarnk). ಇದು ಒಡೆಯನ ಅತ್ಯಂತ ಏಕಾಂತತೆಯ ಸ್ಥಳವಾಗಿದ್ದು ಕೇವಲ ಒಡೆಯ, ಒಡತಿಗಾಗಿ ಉಪಯೋಗ ದಲ್ಲಿತ್ತು. ಇದು ಆಕಾಶಕ್ಕೆ ತೆರೆದಿಟ್ಟ ಸ್ನಾನದ ಕೊಳವಾಗಿತ್ತು. ಸುತ್ತಲಿನ ತಡೆಗೋಡೆ (Parpate Wall) ಯಲ್ಲಿ ಸಾಲಾಗಿ ಚಿಕ್ಕ ಚಿಕ್ಕ ತೆರೆದ ಮಾಡುಗಳಿದು ಅವುಗಳಿಂದ ತಂಪಾದ ಹವೆಯ ಸಿಂಚನವಾಗುತ್ತಿತ್ತು. ಈ ಅಂತಸ್ತಿನ ನಾಲ್ಕು ಮೂಲೆಗಳಲ್ಲಿ ದುಂಡನೆಯ ಛತ್ರಿಯಾಕಾರದ ಛತ್ತುಗಳನ್ನು ಹೊತ್ತ ಮಂಟಪಗಿದ್ದುವು. ಈ ಸ್ನಾನದ ಕೊಳವು ನೀರು ಸೋರದಹಾಗೆ (Water Proofing) ಗಚ್ಚು ಗಾರೆಗಳಿಂದ ತೀಡಲಾಗಿದೆ. ಆದಾಗಲೇ ಮೇಲೆ ಹೇಳಿದಂತೆ ಈ ಸ್ನಾನ ಗೃಹದ ಛತ್ತು ಕೆಳಗಡೆ ಇರುವ ಅಂದರೆ ಎರಡನೆಯ ಅರಸನ ಕೋಣೆಯನ್ನು ತಂಪಾಗಿ ಇರಿಸುತ್ತದೆ.

ವಾಸ್ತು ವಿಶೇಷತೆ ಹಾಗೂ ಕಟ್ಟಡಕ್ಕೆ ಬಳಸಿದ ಪದಾರ್ಥಗಳು : ಡೆಕ್ಕನಿನಲ್ಲಿ (ದಕ್ಷಿಣ ಭಾರತ) ಉಷ್ಣತೆ ಹೆಚ್ಚು ಅದರ ತೀಕ್ಷ್ಣತೆಯನ್ನು ಕಡಿಮೆಗೊಳಿಸಲು ಹಾಗೂ ಬದುಕಲು ಅನುಕೂಲತೆಯನ್ನು ಮಾಡಲು ಈ ಪ್ರದೇಶದ ಅರಮನೆಗಳಲ್ಲಿ ಹಾಗೂ ವಾಡೆಗಳಲ್ಲಿ ಪರಂಪರೆಯ ವಾಸ್ತುಶಾಸ್ತ್ರ ಅಧಿನಿಯಮಗಳನ್ನು ಅಳವಡಿಸಲಾಗಿದೆ. ಪ್ರಸ್ತುತ ನಿಪ್ಪಾಣಿಯ ವಾಡೆಯಲ್ಲಿಯೂ ಕೂಡ ಈ ನಿಯಮಗಳನ್ನು ಪಾಲಿಸಲಾಗಿದೆ. ವಾಡೆಯು ಚೌರಸ್ ಆಕಾರವಾಗಿದ್ದು, ಈ ಮುಖ್ಯ ಚೌರಸದಲ್ಲಿ ಮೂವತ್ತೊಂಬತ್ತು ಪುಟ್ಟ ಚೌರಸಗಳನ್ನು ಮಾಡಿ ವಿಭಾಗಿಸಲಾಗಿದೆ. ಪೂರ್ವ ದಿಕ್ಕಿನಲ್ಲಿ ಪ್ರವೇಶದ್ವಾರ, ಮಧ್ಯದಲ್ಲಿ ಆಕಾಶಕ್ಕೆ ತೆರಮುಕೊಂಡಿರುವ (Open to Sky) ಭಾಗ ಅಂದರೆ ಬ್ರಹ್ಮಸ್ಥಾನ, ಪಶ್ಚಿಮಕ್ಕೆ ದೇವಗೃಹ ಹಾಗೂ ಪಾಠಶಾಲೆ, ಉತ್ತರಕ್ಕೆ ನೀರಿನ ಸಂಗ್ರಹ ಮತ್ತು ದಕ್ಷಿಣಕ್ಕೆ ಹೂದೋಟಗಳು ನಿರ್ಮಿತವಾಗಿದೆ. ಕಟ್ಟಡ ನಾಲ್ಕು ಬದಿಗೆ ಸುಲಭವಾಗಿ ತಿರುಗಾಡಲು ಪಥಗಳು ಹಾಗೂ ಪವಿತ್ರ ಸ್ಥಳಗಳಲ್ಲಿ (Auspiclout Zones) ಪ್ರವೇಶಗಳನ್ನು ಬಿಡಲಾಗಿದೆ. ನೀರಿನ ವ್ಯವಸ್ಥೆಯಂತು ಆವರಣಗೊಂಡ ನಳಿಕೆಗಳಲ್ಲಿ (Conduct Pipes) ಎಲ್ಲ ಕಡೆಗೂ ನೀರು ಹರಿಯುವಂತೆ

ಜೋಡಿಸಲಾಗಿದೆ. ಸಾಮಾನ್ಯವಾಗಿ ಗೋಡೆಯನ್ನು ಸಾಕಷ್ಟು ಅಗಲವಾಗಿ ಕಟ್ಟಿಸಿ ಅದರ ಮಧ್ಯದಲ್ಲಿ ಅಂರವನ್ನು ಇಟ್ಟು ಮೇಲಿನ ಅಂತಸ್ತಿಗೆ ಹೋಗಲು ಕಟ್ಟೆಗಳನ್ನು ಕಟ್ಟಲಾಗಿದೆ. ಈ ರೀತಿ ಗೋಡೆಯ ಮಧ್ಯದಲ್ಲಿ ಅಂತರ ಬಿಡುವುದರಿಂದ ಇಡಿಯಾದ ಆ ಕಟ್ಟಡದಲ್ಲಿ ಹವೆ ನಿಯಂತ್ರಣವಾಗುತ್ತದೆ. ವಿಶಿಷ್ಟ ಸ್ಥಗಳಲ್ಲಿ ಜಾಲಂಧ್ರಗಳನ್ನು ಅಳವಡಿಸಿರುವುದರಿಂದ ಬೆಳಕು ಹಾಗೂ ಶುದ್ಧ ಹವೆ ಒಳಸೇರುತ್ತದೆ.

ಕಟ್ಟಡಕ್ಕೆ ಬಳಸಿದ ಕಲ್ಲುಗಳು (ಕರಿಕಲ್ಲು, ಕೆಂಪುಕಲ್ಲು, ಸಂಗಮುರಿಕಲ್ಲು) ಇಟ್ಟಿಗೆಗಳು (ಸುಟ್ಟ ಹಾಗೂ ಮಣ್ಣಿನ) ಕಚ್ಚಾ ಇಟ್ಟಿಗೆ, ಋತುಮಾನಗಳಿಂದ ಗಟ್ಟಿಯಾದ ಕಟ್ಟಿಗೆ, (Seasonad Wood) ಒಳ್ಳೆಯ ಬಿದಿರು, ಕಬ್ಬಿಣದ ಸಲಾಕೆಗಳು ಇತ್ಯಾದಿ. ನುರಿತ ಅಭಿಯಾಂತ್ರಿಕನ ಮಾರ್ಗದರ್ಶನ, ಗಾವಂಡಿಗಳು, ಸುತಾರರು, (carpenters) ಕಮ್ಮಾರರು, ವಡ್ಡರು, ಸಾರಿಗೆ ಚಕ್ಕಡಿಯವರು ಬಣ್ಣ ಬಳೆಯುವರು, ಒಳ್ಳೆಯ ಕೆಲಸಗಾರರು (Meason's) ದಿನಗೂಲಿಗಳು, ಆಳುಗಳನ್ನು ಇತ್ಯಾದಿ ವರ್ಗದವರನ್ನು ಬಳಸಿಕೊಂಡು ನಿರ್ಮಿಸಲಾಗಿದೆ. ಅಲ್ಲದೇ ಇಲ್ಲಿಂದ ೧೭ ಕಿ.ಮೀ. ದೂರದ ಕೊಂಗೊಳ್ಳಿಯೆಂಬ ಸ್ಥಳದಿಂದ ಇದಕ್ಕೆ ಕಲ್ಲನ್ನು ಪೂರೈಸಿದ ಗಣಿಗಳಿವೆ. ಸುಣ್ಣ (ಬಿಳಿ, ಹಸಿರು, ಕೆಂಪು) ವನ್ನು ವಾಡೆಗೆ ಬಳಸಿದ್ದಾರೆ.

ವಾಡೆಯ ವಿನ್ಯಾಸ ಹಾಗೂ ವಾಸ್ತು : ಐದು ಬರುಜಗಳುಳ್ಳ (Watch Tower) ಕಾಟೆದರವಾಜಾದಿಂದ ತಿರುವು ಮುರವಾದ ಪಥದ ಮೂಲಕ ಒಳಗೆ ಹೋದರೆ ನಗಾರಖಾನ ದೊರೆಯುತ್ತದೆ. ಇದು ವಾಡೆಯ ಎರಡನೆಯ ಪ್ರವೇಶದ್ವಾರ ಇಲ್ಲಿಂದಲೇ ವಾಡೆಯ ಒಡೆಯನು ಒಳಗೆ ಬರುವಾಗ ಅಥವಾ ಹೊರಗೆ ಹೋಗುವಾಗ ನಗಾರಿಗಳ ಸಪ್ಪಳದ ಮೂಲಕ ಸಂದೇಶ ಕಳುಹಿಸಲಾಗುತ್ತಿತ್ತು. ಈ ವ್ಯವಸ್ಥೆಯಿಂದ ವಾಡೆಯ ಒಳಗಡೆ ಇರುವ ಹಾಗೂ ವಾಡೆಯ ಹೊರಗಡೆ ಇರುವ ಜನರು ಜಾಗೃತರಾಗುತ್ತಿದ್ದರು.

ವಾಡೆಯು ಸುಭದ್ರ ತಳಪಾಯದ ಮೇಲೆ ನಿಂತಿದ್ದು ಅದರ ತಳಪಾಯ ಹಾಗೂ ಮೇಲೆರುವ ಗೋಡೆಗಳಿಗೂ ಸುಲಭವಾಗಿ ದೊರೆಯುವ ಪ್ರಕೃತಿದತ್ತವಾದ ಕರಿಕಲ್ಲುಗಳನ್ನು (Decan Trap) ಉಪಯೋಗಿಸಲಾಗಿದೆ. ಈ ಕರಿಕಲ್ಲಿನ ಗುಣಮೌಲ್ಯವು ಅತ್ಯಂತ ಕಠಿಣದಾಯಕವಾಗಿದೆ. ಅಂಥ ಕಲ್ಲನ್ನು ಹೇರಳವಾಗಿ ಬಳಸಿರುವುದರಿಂದ ವಾಡೆಗೆ ಗಟ್ಟಿತನ ಬಂದಿದೆ.

ಈ ಪ್ರವೇಶದ್ವಾರಕ್ಕೆ 'ಲಖಿ' (Lakhi) ದರವಾಜಾಯೆಂದು ಹೆಸರು ಇದರಲ್ಲಿ ಅಳವಡಿಸಲಾದ ದ್ವಾರಬಂಧದಲ್ಲಿ ಎರಡು ಬದಿಗೆ ಸುಂದರವಾದ ಕಂಬಗಳನ್ನು ಜೋಡಿಸಲಾಗಿದ್ದು, ಅವುಗಳ ಮೇಲೆ ಕಮಲದ ಪಕಳಿಯ ದುಂಡನೆಯ ಸರಮಾಲೆಯಂತೆ ಕಾಣುವ ಕಮಾನನ್ನು ನಿರ್ಮಿಸಲಾಗಿದೆ. ಈ ಕಮಾನು ಮೊಘಲ ಹಾಗೂ ಮರಾಠಾ ವಾಸ್ತುಕಲೆಯ ಅಂಶವನ್ನು ಹೊಂದಿದೆ. ಬಾಗಿಲಿನ ಎಡ ಹಾಗೂ ಬಲಬದಿಗಳ ಮುಂಬದಿಗಳಿಗೆ 'ಎರಡು' ಗೋಡೆಯಿಂದ ಹೊರಚಾಚಿದ ಮಂಟಪಗಳು ಜೋಡಿಸಲ್ಪಟ್ಟಿವೆ. ಇವು ಪ್ರವೇಶದ್ವಾರದಲ್ಲಿ ನಿರ್ಮಿಸಲ್ಪಟ್ಟ ಕಾವಲುಗಾರರ ಕೋಣೆ ಎಂದು ಪ್ರತೀತ. ಈ ಬಾಗಿಲಿಗೆ ಮತ್ತೊಂದು ಚಿಕ್ಕದಾದ 'ಜಿಡ್ಡಿ ದರವಾಜಾ' ವೆಂಬ ಬಾಗಿಲನ್ನು ಅಳವಡಿಸಲಾಗಿದೆ.

ಇಂಥ ವೈಭವೋಪೇತವಾದ ವಾಡೆ ಇಂದು ಅವಸಾನದ ಅಂಚಿನಲ್ಲಿದೆ. ಇದಕ್ಕೆ ನಾನಾ ಕಾರಣಗಳಾದರೇ, ಸ್ವತಃ ವಂಶಸ್ಥರೇ ನಿಷ್ಕಾಳಜಿ ವಹಿಸುತ್ತಿದ್ದಾರೆ. ಅಲ್ಲದೆ ಅವರ ಇತಿಹಾಸದ ಬಗ್ಗೆ ಅವರಿಗೆ ಗೌರವವಿಲ್ಲದಾಗಿದೆ. ಹಾಗೂ ಇಂದು ಪ್ರಜಾಪ್ರಭುತ್ವದ ದವಡೆಗೆ ಸಿಲುಕಿ, ಪರಸ್ಪರ ಕಲಹಗಳಿಂದ ಇಂದು ನಿಪ್ಪಾಣಿ ವಾಡೆಯು ಸಣ್ಣ ಸಣ್ಣ ಮನೆಗಳಾಗಿ ಗೋಚರಿಸುತ್ತಿದೆ.

ನನದಿ ಚಿಕ್ಕೋಡಿಯಿಂದ ನೈರುತ್ಯಕ್ಕೆ ಇಪ್ಪತ್ತೆರಡು ಕಿ.ಮೀ. ಅಂತರದಲ್ಲಿದ್ದು, ನದಿ ಸರಕಾರವು ಮೂಲತಃ ನಿಪ್ಪಾಣಿ ಸಿದ್ದೋಜಿ ರಾವ್ ನಿಂಬಾಳ್ಕರ ಮನೆತನದ ಒಂದು ಭಾಗವಾಗಿದೆ. ವಾಡೆಯು ಉತ್ತರಾಭಿಮುಖವಾದ ದ್ವಾರವನ್ನು ಬಿಟ್ಟರೇ ಬೇರೆ ಇನ್ನಾವುದೇ ವಾಡೆಯ ಅವಶೇಷಗಳು ಕಾಣಲು ಸಿಗುವದಿಲ್ಲ. ವಾಡೆ ಒಳಗಡೆ ಸಂಪೂರ್ಣ ಬಿದ್ದು ಹೋಗಿದೆ. ವಾಡೆಯ ಮಹಾದ್ವಾರ ಮುಂದೆ ವಾಡೆಯ ವಾರಸುದಾರರುಗಳು ಚಿಕ್ಕಪುಟ್ಟ ಮನೆಗಳನ್ನು ಕಟ್ಟಿಸಿ ವಾಸವಾಗಿದ್ದಾರೆ.

ಅಂಕಲಿಯು ಚಿಕ್ಕೋಡಿಯವರ ಹದಿನೈದು ಕಿ.ಮೀ. ಅಂತರದಲ್ಲಿದೆ. ಅಂಕಲಿ ವಾಡೆಯು ಸಿಥೋಳಿ ಮಹಾರಾಜರ ಸ್ವತ್ತಾಗಿದೆ. ವಾಡೆಯು ನೋಡಲಿಕ್ಕೆ ಬಹು ಸುಂದರ ಕಟ್ಟಡ ಹೊಂದಿದೆ. ಆದರೆ ಯಾವುದೇ ವ್ಯವಸ್ಥೆಯಿಲ್ಲ. ನೋಡಲಿಕ್ಕೆ ಪೂವಾಭಿಮುಖವಾಗಿದ್ದು ಕರಿಕಲ್ಲಿ (Deccam Trap) ನಿಂದ ಮತ್ತು ಗಚ್ಚಿನಿಂದ ನಿರ್ಮಿಸಲಾಗಿದ್ದು, ವಾಡೆಯ ಸುತ್ತಲು ರಕ್ಷಣಾ ಗೋಡೆಯನ್ನು ಕಾಣುತ್ತೇವೆ. ಈ ರಕ್ಷಣಾ ಗೋಡೆಗಳಿಗೆ ಹೂಡೆ (Water Tower)ಗಳನ್ನು ನಿರ್ಮಿಸಲಾಗಿದೆ. ಇವುಗಳು ಇಂದಿಗೂ ಸುಸ್ಥಿತಿಯಲ್ಲಿವೆ. ವಾಡೆಯ ಮುಖ್ಯಸ್ಥರು ಮೂಲತಃ ಮಧ್ಯಪ್ರದೇಶದ 'ಗ್ವಾಲಿಯರ್' ಪ್ರದೇಶದವರು. ವಾಡೆಯನ್ನು ಕಟ್ಟಿಸಿದವರು 'ಶ್ರೀ ಅಪ್ಪಾಜಿರಾವ್ ಸಿಥೋಳೆ'ಯವರು. ವಾಡೆಯ ಇಂದಿಗೂ ಗಟ್ಟಿಮುಟ್ಟಾಗಿದೆ. ಆದರೆ ವಾಡೆಯನ್ನು ನೋಡಿಕೊಳ್ಳುವರ ಅಭಾವ ವಾಡೆಯ ವಾರಸುದಾರರು ಬಹಳ ಕಡಿಮೆ ವಾಡೆಯಲ್ಲಿ ವಾಸಿಸುತ್ತಾರೆ. ಆದ್ದರಿಂದ ವಾಡೆಯು ಹಾಳು ಬಿದ್ದಿದೆ.

ರಾಯಭಾಗ ತಾಲ್ಲೂಕಿನ ಜಾಧವ ದೇಸಾಯಿವರ ಮಾಲೀಕತ್ವದ ಚಿಂಚಲಿ ವಾಡೆ ಬಹು ಸುಂದರವಾದ ಕಟ್ಟಡವಾಗಿದೆ. ರಾಯಭಾಗ ತಾಲ್ಲೂಕು ಕೇಂದ್ರದಿಂದ ಇಪ್ಪತ್ತು ಕಿ.ಮೀ. ಅಂತರದಲ್ಲಿದೆ. ವಾಡೆಯು ಪೂರ್ವಾಭಿಮುಖವಾಗಿದ್ದು, ಸುಮಾರು ಎರಡು ಎಕರೆ ಜಮೀನಿನಲ್ಲಿ ವಾಡೆಯ ಆವರಣವಿದೆ. ವಾಡೆಯ ಮುಖ್ಯಸ್ಥರು ಮರಾಠಿಗರಾಗಿದ್ದು, ಮಹಾರಾಷ್ಟ್ರದಲ್ಲಿ ವಾಸಿಸುತ್ತಾರೆ. ಆದ್ದರಿಂದ ಆಗೊಮ್ಮೆ ಈಗೊಮ್ಮೆ ವಾಡೆಗೆ ಬಂದು ಹೋಗುತ್ತಾರೆ. ಇದರಿಂದ ವಾಡೆಯ ವ್ಯವಸ್ಥೆ ಸರಿಯಾಗಿಲ್ಲ.

ವಾಡೆಗಳನ್ನು ವಾಸ್ತು ದೃಷ್ಟಿಯಿಂದ ನೋಡುವವಾದರೆ, ವಾಡೆಗಳು ಗೃಹ್ಯ ವಾಸ್ತುವಿನಲ್ಲಿ ಬರುತ್ತವೆ. ವಾಡೆ ಆವರಣ ಸುಮಾರು ಐದರಿಂದ ಹತ್ತು ಎಕರೆ ಜಮೀನು ವಿಸ್ತೀರ್ಣ ಹೊಂದಿದೆ. ವಾಡೆಗಳ ನಿರ್ಮಾಣದಲ್ಲಿ ನಾಯಕನ ಶ್ರೀಮಂತಿಕೆಯಾಗಲಿ ಅಥವಾ ಬಡತನ, ದಾರಿದ್ರ್ಯತೆಯಾಗಲಿ ತೋರಿ ಬಂದಿಲ್ಲ. ವಾಡೆದೊಳಗಿನ ಮುಂದಿನ ಕಮಾನು, ಕುದರೆಯ ಲಾಯ, ಇಂಡೋಸಾರ್ಸನಿಕ್ ಮಾದರಿಯಲ್ಲಿ ಹೊಂದಿವೆ, ವಾಡೆಗಳ ಕಂಬುಗಳು, ಚೌಸಪ್ಪಿ, ಸದರದ ಚಲುವಿಕೆಗೆ ಮನಸೋಲದವರೇ ಇಲ್ಲ. ವಾಡೆಗಳ ಕಟ್ಟಡಗಳಲ್ಲಿ ಬಾಗಿಲು, ಕಿಟಕಿ, ಮಾಡ ಮುಂತಾದವುಗಳು ಸೋಲದಲ್ಲಿಲ್ಲ, ಜಂತಿ ಅಥವಾ ತೊಲಿಗಳು ಬಾಗಿಲಿಗೆ ಅಡ್ಡಲಾಗಿಲ್ಲ. ಪೂರ್ವಕ್ಕೆ ಹಾಗೂ ಉತ್ತರಕ್ಕೆ ಹೆಚ್ಚು ಜಾಗ ಬಿಡುವುದು, ಈಶಾನ್ಯಕ್ಕೆ ನೀರನ್ನು ಸಂಗ್ರಹಿಸುವುದು ಮುಂತಾದವುಗಳಿಂದ ವಾಡೆಗಳು ವಾಸ್ತು ದೃಷ್ಟಿಯಿಂದ ಶ್ರೀಮಂತಿಕೆಯನ್ನು ಮೆರೆಯುತ್ತವೆ. ಇಂಥ ವಾಡೆಗಳು ವಾಡೆಗಳ ಮಾಲೀಕರ ಅಂತಸ್ತು, ಮರ್ಯಾದೆ ಹಾಗೂ ಸಾಹಸಿ ಪ್ರವೃತ್ತಿಗೆ ಮೂಕ ಸಾಕ್ಷಿಯಾಗಿವೆ.

ಮರಾಠರು, ಲಿಂಗಾಯತರು, ಬ್ರಾಹ್ಮಣರು, ಬೇಡರು ಮುಂತಾದ ಮನೆತನದವರು ವಾಡೆಯ ಮುಖ್ಯಸ್ಥರಾಗಿದ್ದಾರೆ. ವಾಡೆಗಳ ಬದುಕನ್ನು ಇಡಿಯಾಗಿ ನೋಡಿದಾಗ ಅವು ಸದುದ್ದೇಶದಿಂದ ಕಟ್ಟಲ್ಪಟ್ಟದ್ದು, ತಮ್ಮ ಉಚ್ಛ್ರಾಯ ಕಾಲದಲ್ಲಿ ರಾಜವೈಭವದಿಂದ ಮೆರೆದವು. ತಮ್ಮ ರಾಜಕೀಯ ವ್ಯವಸ್ಥೆಯಲ್ಲಿ ಸೀಮಿತ ಆಡಳಿತದ ಕೇಂದ್ರವೆನಿಸಿ, 'ಸ್ವಹಿತ' ಮತ್ತು ಪ್ರಜಾಹಿತ' ಗಳ ಧ್ಯೇಯವನ್ನು ಇಟ್ಟುಕೊಂಡು ತಮ್ಮ ತಮ್ಮ ಪ್ರಜೆಗಳಿಗೆ ನ್ಯಾಯದ ಸೌಲಭ್ಯ ಬದುಕನ್ನು ನೀಡಿದವು. ವಾಡೆಯ ಮುಖ್ಯಸ್ಥನು ಕಂದಾಯ ಅಧಿಕಾರಿಯಾಗಿ, ನ್ಯಾಯಾಧೀಶನಾಗಿ, ಸೈನಿಕ ಮುಖ್ಯಸ್ಥನಾಗಿ ಕಾರ್ಯ ನಿರ್ವಹಿಸುತ್ತಿದ್ದನು.

ಹೀಗೆ ವಾಡೆಗಳು ರಾಜ ಮತ್ತು ಪ್ರಜೆಗಳ ಮಧ್ಯದ ಸಂಪರ್ಕದ ಸೇತುವೆಯಾಗಿ, ಸಮಾಜ ಒಬ್ಬ ಪ್ರತಿಷ್ಠಿತ ಕರ್ತೃತ್ವ ಶಕ್ತಿಯ ವ್ಯಕ್ತಿಯ ಬದುಕಿನ ವಾಸಸ್ಥಾನವಾಗಿ, ಕಲೆ ಮತ್ತು ವಾಸ್ತುಗಳ ಬೀಡಾಗಿ ಹಾಗೂ ರಾಜ್ಯ ಮತ್ತು ಗ್ರಾಮಗಳನ್ನು ಜೋಡಿಸುವ ರಾಜಕೀಯ ಕೊಂಡಿಯಾಗಿ ಕಾರ್ಯ ನಿರ್ವಹಿಸಿವೆ.

ಇಂಥ ವೈಶಿಷ್ಟತೆಯನ್ನು ಹೊಂದಿ, ವೈಭವೋಪೇತವಾಗಿ ಅಧಿಕಾರ ನಡೆಸಿದ ವಾಡೆಗಳು ಇಂದು ಶಾಪದ ಅಂಚಿನಲ್ಲಿವೆ, ವಾಡೆ ಮನೆತನಗಳ ಉತ್ತಾರಾಧಿಕಾರಿಗಳಲ್ಲಿ ದಾಯಾದಿ ಕಲಹಗಳು, ಸ್ವಾತಂತ್ರ್ಯದ ತರುವಾಯ ಪ್ರಜಾಪ್ರಭುತ್ವದ ದವಡೆಗೆ ಸಿಲುಕಿ, ದುರ್ವ್ಯಸನಿಗಳಾಗಿ ತಮ್ಮ ಆಸ್ತಿ ಮಾರಾಟ ಇಂಥಹ ಪರಿಸ್ಥಿತಿಯಲ್ಲಿ ಅವರ ವತನಕಿಯ ಪ್ರಶ್ನೆ ಅವರಿಗೆ ಬಗೆಹರಿಯಲಾರದ ಗಗನ ಕುಸುಮವಾಗಿದೆ. ಅರ್ಥಾತ್ ವಾಡೆಗಳ ದರ್ಪ, ಪ್ರತಿಷ್ಠೆಗಳು ಕೇವಲ ವಾಡೆಗಳ ಹೊತ್ತಿಗೆಗಳಲ್ಲಿ ಮಾತ್ರ ಸೀಮಿತಗೊಂಡಿವೆ. ಹೀಗೆ ವಾಡೆಗಳ ಸ್ಮೃತಿಪಟಲ ನಿಸ್ತೇಜಗೊಂಡು ವಾಡೆಗಳು ಬಿದ್ದು ನೆಲಸಮವಾಗುತ್ತ ಇತಿಹಾಸದಲ್ಲಿ ಸಂಗಮವಾಗುತ್ತಿವೆ.

ಬೃಹದಾಕಾರದ ವಾಡೆಗಳ ನಿರ್ವಹಣೆಯು ವಾರಸುದಾರರಿಗೆ ಅಸಾಧ್ಯವಾಗಿದೆ. ತಮ್ಮ ತಮ್ಮ ಮೂಲ ವಾಡೆಗಳ ಬಗ್ಗೆ ಅರಿವಿಲ್ಲದೆ ಹೊರಗೆ ವಾಸಿಸುತ್ತಿದ್ದಾರೆ. ಇದರಿಂದ ಕೆಲ ವಾಡೆಗಳು ಬಿದ್ದು ಅನಾಥವಾಗಿದ್ದು, ಇನ್ನು ಕೆಲವು ಅವಸಾನದ ಅಂಚಿನಲ್ಲಿರುವ ವಾಡೆಗಳು ತಮ್ಮ ಗತವೈಭವವನ್ನು ಸಾರಿ ಹೇಳುವ ಹಂಸಗೀತೆಗಳಾಗಿವೆ. ಇಂಥ ಬಿದ್ದ ವಾಡೆಗಳಲ್ಲಿ ಕಳ್ಳರ, ದರೋಡೆಕೋರರ ಹಾಗೂ ಸ್ಥಳೀಯರ ಕಳ್ಳತನದಿಂದ ಇಂದು ವಾಡೆಗಳು ಸಂಪೂರ್ಣ ನಾಶ ಹೊಂದುತ್ತಿವೆ. ಸ್ಥಳೀಯರು ಕೇವಲ ಸಮಯಸಾಧಕರಾಗಿದ್ದರಿಂದ ತಮ್ಮ ತಮ್ಮ ನಾಯಕರುಗಳ ಬಗ್ಗೆ ಸ್ವಲ್ಪವೂ ಅರಿಯದೆ ವಾಡೆಗಳನ್ನು ನಿರ್ಲಕ್ಷಿಸುತ್ತಿದ್ದಾರೆ.

ವಾಡೆಗಳು ಕೇವಲ ಕಲ್ಲು ಮಣ್ಣಿನ ಕಟ್ಟಡವಾಗಿರದೇ, ಅವುಗಳು ಆಡಳಿತ, ಸಂಗೀತ, ನೃತ್ಯ, ಮನರಂಜನೆ, ಧಾರ್ಮಿಕ ಕಾರ್ಯಗಳ ಹಾಗೂ ಆಪತ್ ಕಾಲದಲ್ಲಿ ಆಶ್ರಯ ನೀಡುವ ತಾಣಗಳಾಗಿದ್ದವು. ವಾಡೆಗಳು ಕೇವಲ ಸದ್ಗುಣ ವ್ಯಕ್ತಿಗಳ ಗಣಿಯಾಗದೆ, ಸುಖ ದುಃಖ, ದುಮ್ಮಾನದ, ಈರ್ಷೆಯ, ಮೋಸದ, ಅಸಹನೀಯ, ಅಸತ್ಯರ, ಸ್ವಾರ್ಥದ ವ್ಯಕ್ತಿಗಳ ಬೀಡುಗಳು ಆಗಿದ್ದವು.

ಈ ವಾಡೆಗಳ ವೀಕ್ಷಣೆಯಲ್ಲಿ ದಾಖಲಿಸುವಾದರೇ, ಉಪಯುಕ್ತವಾದ ವಿನ್ಯಾಸ ಹಾಗೂ ರಚನೆಯನ್ನು ಅಳವಡಿಸುವವರೊಂದಿಗೆ ಸುತ್ತಲಿನ ಪರಿಸರದಲ್ಲಿ ದೊರೆಯುವ ಕಟ್ಟಡದ ಪದಾರ್ಥಗಳನ್ನು ವಿಪುಲವಾಗಿ ಬಳಸಿದ್ದಾರೆ. ಸೌರಶಕ್ತಿ, ಗಾಳಿ, ನೀರು, ಬೆಳಕು ಹಾಗೂ ಪರಿಶುದ್ಧ ವಾತಾವರಣಗಳಿಗೆ ವಿಶೇಷವಾದ ಯಾವುದೇ ಯಾಂತ್ರಿಕ ಕಲೆಯನ್ನು

ಉಪಯೋಗಿಸದೆ, ಸರಳ ಹಾಗೂ ಸುಂದರ ಕಟ್ಟಡದ ಶೈಲಿ ಅಳವಡಿಸಲಾಗಿದೆ. ಇಂಥ ಕಾರ್ಯಕ್ಕೆ ಅನುಭವಿಕ ಯಾಂತ್ರಿಕತೆಯನ್ನು, ಕಟ್ಟಡ ರಚಿಸುವ ನೈಪುಣ್ಯತೆಯನ್ನು (ವಡ್ಡರು, ವಿಶ್ವಕರ್ಮರು), ಪಾರಂಪರ್ಯದಲ್ಲಿ ಬಂದ ಬಳುವಳಿಯನ್ನು ಇಲ್ಲಿ ಉಪಯೋಗಿಸಲಾಗಿದೆ. ಇಂಥ ಆಸಕ್ತಿಕರ ಕಾರ್ಯಗಳು ಮುಂಬರುವ ಜನಾಂಗಗಳಿಗೂ ಕೂಡ ಉಪಯೋಗಿಸಲು ಪ್ರೇರೇಪಿಸುತ್ತದೆ.

ಇವುಗಳು ವಾರಸದಾರರದಿಂದ, ಸ್ಥಳೀಯರಿಂದ ಹಾಗೂ ಸರಕಾರದ ಆಡಳಿತದಿಂದ ಇಂತಹ ಐತಿಹಾಸಿಕ ಸ್ಮಾರಕಗಳು ನಿರ್ಲಕ್ಷ್ಯಗೊಂಡಿವೆ. ಸರಕಾರದ ಸಂಪೂರ್ಣ ನಿರ್ಲಕ್ಷ್ಯ, ವಾರಸುದಾರರ ದಾಯಾದಿ ಕಲಹಗಳಿಂದ, ಟೆನೆಂಟ ಕಾಯ್ದೆಯಿಂದ ವಾಡೆಗಳು ಅವನತಿಯ ಅಂಚಿನಲ್ಲಿವೆ. ಅಲ್ಲದೇ ವಾಡೆಗಳ ಬಗ್ಗೆ ಅಧ್ಯಯನ ಕೊರತೆ, ಸಂಶೋಧಕರ ಕೊರತೆ, ವಾಡೆಗಳ ಬಗ್ಗೆ ಸಮ್ಮೇಳನ, ವಿಚಾರ ಸಂಕಿರಣಗಳ ಅಭಾವದಿಂದ ಜನಸಾಮಾನ್ಯರಿಗೆ ವಾಡೆಗಳ ಪ್ರಾಮುಖ್ಯತೆಯ ಅರಿವು ಇಲ್ಲದಾಗಿದೆ.

ಪರಂಪರೆ, ಗುಣಮೌಲ್ಯ, ಆದರ್ಶ ಇವುಗಳೆಲ್ಲವೂ ಸದೃಢ ಸಮಾಜವನ್ನು ಹಾಗೂ ಕೌಶಲ್ಯದ ಪ್ರಜೆಗಳನ್ನು ನಿರ್ಮಾಣ ಮಾಡುತ್ತವೆ. ಪರಂಪರಾಗತವಾಗಿ ಬಂದ ಗುಣಾತ್ಮಕ ಕಲೆಗಳನ್ನು, ಸೌಧಗಳನ್ನು, ಅರಮನೆಗಳನ್ನು, ಕೋಟೆಗಳನ್ನು, ವಾಡೆಗಳನ್ನು ಹಳೆಯವು ಎಂದು ಮರೆಯುವಂತಿಲ್ಲ. ಹಾಗೂ ನಿಕೃಷ್ಟ ಮಾಡುವಂತಿಲ್ಲ. ಅವುಗಳ ಬದುಕಿನಲ್ಲಿ ಏನೋ ಜೀವನದ ಸಂದೇಶವಿದೆ ಹಾಗೂ ಶಾಶ್ವತತೆಯು ಇದೆ.

ಆಧಾರಸೂಚಿ

೧. Dr. S.K. Joshi, *Defence Archtecture in early Karnataka.*

೨. ಡಾ. ಸಂತೋಷ ಹಾನಗಲ್ಲ, **ಬೆಳಗಾವಿ ಜಿಲ್ಲೆಯ ವಾಡೆಗಳು, ಒಂದು ಅಧ್ಯಯನ,** ಪಿ.ಹೆಚ್.ಡಿ. ಮಹಾಪ್ರಬಂಧ, ೨೦೦೮.

೩. ಡಾ. ಎಸ್.ಕೆ. ಜೋಶಿ, **ಬೆಳಗಾವಿ ಜಿಲ್ಲೆಯ ಕೋಟೆ ಕೊತ್ತಲುಗಳು,** ಇತಿಹಾಸ ದರ್ಶನ, ೨೪, ಬೆಂಗಳೂರು.

೪. ಡಾ. ಸಂತೋಷ ಹಾನಗಲ್ಲ, **ನಿಪ್ಪಾಣಿ ವಾಡೆಯ ಒಂದು ಅವಲೋಕನ,** ಇತಿಹಾಸ ದರ್ಶನ, ೨೪, ಬೆಂಗಳೂರು.

೫. ಡಾ. ಎಸ್.ಸಿ. ಕಲ್ಯಾಣಿ, ಸಂಶೋಧಕರು, ಸಂದರ್ಶನ, ಬಾಗಲಕೋಟೆ.

೬ ಡಾ. ಎಸ್.ಕೆ. ಜೋಶಿ, **ಪುರಾತತ್ವವಿದ ಸಂದರ್ಶನ,** ಧಾರವಾಡ.

೭. ಡಾ. ಚನ್ನಬಸಪ್ಪ, **ಕರ್ನಾಟಕದ ಕೋಟೆ ಕೊತ್ತಲಗಳು,** ಪ್ರಕಾಶನ, ಬೆಂಗಳೂರು.

೧೨೨

ಬೆಂಗಳೂರಿನ ಶಾಸ್ತ್ರಿನಗರದಲ್ಲಿ ಬಾಲಾಂಬಿಕಾ ದೇವಾಲಯ

ಡಾ. ಬೆಂ.ಶಾ. ಶ್ಯಾಮಲಾ ರತ್ನಕುಮಾರಿ*

ಬೆಂಗಳೂರಿನ ಯಡಿಯೂರು–ನಾಗಸಂದ್ರ ಗ್ರಾಮದ ನರಸಿಂಹಯ್ಯ ಲೇಔಟ್ (ಇಂದಿನ ಶಾಸ್ತ್ರಿನಗರ)ನ ೯ನೇ ಮುಖ್ಯರಸ್ತೆಯಲ್ಲಿದೆ ಬಾಲಾಂಬಿಕಾ ದೇವಾಲಯ. ಈಗ್ಗೆ ೪೦ ವರ್ಷಗಳ ಹಿಂದೆ ಇಲ್ಲಿ ಮಾರಿಯಮ್ಮನ ಗುಡಿ ಚಪ್ಪಡಿಕಲ್ಲಿನ ಒಪ್ಪಾರದಲ್ಲಿ ಇದ್ದಿತು. ನಾಗರಹುತ್ತ ಹಾಗೂ ಮಾರಿಯಮ್ಮನ ಸಂಕೇತವಾಗಿ ಮೂರು ಕಲ್ಲುಗಳು ಮಾತ್ರವಿದ್ದು ಬಲಿ ನೀಡಿ ಪೂಜೆಯನ್ನು ಸಲ್ಲಿಸಲಾಗುತ್ತಿದ್ದಿತು. ನಾಗೇಶ ಶಾಸ್ತ್ರಿಗಳು ಪಾಳು ಬಿದ್ದಿದ್ದ ಮಾರಿಯಮ್ಮ ಗುಡಿಯಿರುವ ಸ್ಥಳದಲ್ಲಿ ನೂತನವಾಗಿ ದೇವಿಗೆ ದೇವಾಲಯವನ್ನು ನಿರ್ಮಿಸಲು ಸಂಕಲ್ಪ ಮಾಡಿದಾಗ ಶ್ರೀ ಮಾರಮ್ಮ ದೇವಸ್ಥಾನ ಸೇವಾ ಮಂಡಲಿ ಅಸ್ತಿತ್ವಕ್ಕೆ ಬಂದಿತು. ರಾಜರಾಜೇಶ್ವರಿ ನಗರದಲ್ಲಿರುವ ಶ್ರೀ ರಾಜರಾಜೇಶ್ವರಿ ದೇವಾಲಯದ ಅಧಿಕಾರಿ ವರ್ಗದವರನ್ನು ಸಂಪರ್ಕಿಸಿ ಸಮಾಲೋಚನೆ ನಡೆಸಿ ಮಾರಮ್ಮ ದೇವಾಲಯದ ಪುನರ್ ನಿರ್ಮಾಣ ಕಾರ್ಯವನ್ನು ಕೈಗೊಂಡು ೧೯೮೬ರಲ್ಲಿ ನೂತನ ಕಟ್ಟಡ ನಿರ್ಮಾಣಗೊಂಡು ಗುಡಿಯಲ್ಲಿ ಮಾರಮ್ಮನ ಸ್ಥಾನದಲ್ಲಿ ಬಾಲಾಂಬಿಕಾ ಎಂಬ ಹೆಸರಿನಲ್ಲಿ ದೇವಿಯ ವಿಗ್ರಹ ಪ್ರತಿಷ್ಠಾಪನೆಗೊಂಡಿತು. ವಿದ್ಯಾರಣ್ಯಪುರದ ಕಾಳಿಕಾ ದುರ್ಗಾಪರಮೇಶ್ವರಿ ದೇವಸ್ಥಾನದ ಅರ್ಚಕರಾದ ಶ್ರೀ ರಾಮಾಶಾಸ್ತ್ರಿಯವರಿಂದ ದಿ॥ ಕೃಷ್ಣನಾಯ್ಡು, ವೆಲ್ಲೂರಿನ ಪತಿರಾಜ ಮುಂದಾಳುಗಳಾಗಿ ದೇವಾಲಯ ನಿರ್ಮಾಣ ಕಾರ್ಯದಲ್ಲಿ ಮುಖ್ಯಪಾತ್ರ ವಹಿಸಿದರು. ನೂತನ ಕಟ್ಟಡದ ಶಂಕುಸ್ಥಾಪನೆಯನ್ನು ಅಂದಿನ ವಿಧಾನಸಭಾ ಸದಸ್ಯರಾಗಿದ್ದ ಎಂ. ಚಂದ್ರಶೇಖರ್ ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಆ ಸಂದರ್ಭದಲ್ಲಿ ಭಾಗವಹಿಸಿದ್ದವರು ನಗರಸಭಾ ಸದಸ್ಯರಾಗಿದ್ದ ಶ್ರೀ ಯಂ. ಆರ್ಯಮಿತ್ರ ಅವರು ೨೦೧೦ರಲ್ಲಿ ದೇವಾಲಯವನ್ನು ವಿಸ್ತರಿಸಿ ಕುಂಬಾಭಿಷೇಕ ಮಾಡಿ ನೂತನ ಬಾಲಾಂಬಿಕಾ ದೇವತಾ ಪ್ರತಿಷ್ಠೆಯನ್ನು ಕೈಲಾಸಾಶ್ರಮದ ಜಯೇಂದ್ರ ಸ್ವಾಮೀಜಿಯವರು ನೆರವೇರಿಸಿದರು. ದೇವಾಲಯದ ನಿರ್ವಹಣೆಯನ್ನು ಶ್ರೀ ಬಾಲಾಂಬಿಕಾ ಸೇವಾ ಮಂಡಲಿಯು ಸುರೇಶನಾಯ್ಡು (ಅಧ್ಯಕ್ಷರು), ವೆಂಕಟೇಶ (ಕಾರ್ಯದರ್ಶಿ) ಅವರ ನೇತೃತ್ವದಲ್ಲಿ ಯಶಸ್ವಿಯಾಗಿ ಕಾರ್ಯಗತಗೊಳಿಸುತ್ತಿದೆ.

ದೇವಾಲಯವು ಆಯತಾಕಾರವಾಗಿದೆ. ತಳವಿನ್ಯಾಸದಲ್ಲಿ ಆಯತಾಕಾರದ ಕೈಸಾಲೆ, ಕೈಸಾಲೆಯಲ್ಲಿ ಬಾಲಾಂಬಿಕಾ ದೇವಿಯ ಗರ್ಭಗುಡಿಯ ಮುಂದೆ ಚಿನ್ನದ ಲೇಪ ಹೊಂದಿರುವ ಲೋಹದ (ಹಿತ್ತಾಳೆಯ) ಧ್ವಜಸ್ತಂಭ, ಪ್ರದಕ್ಷಿಣಾ ಪಥದೊಂದಿಗೆ ಗಣೇಶ, ಬಾಲಾಂಬಿಕಾ, ಸುಬ್ರಹ್ಮಣ್ಯಸ್ವಾಮಿಗೆ ಪ್ರತ್ಯೇಕವಾಗಿ ಮೂರು ಗರ್ಭಗುಡಿಗಳು ಒಂದರ ಪಕ್ಕದಲ್ಲಿದ್ದು ಪ್ರತ್ಯೇಕವಾಗಿ ದ್ರಾವಿಡ ಶೈಲಿಯ ವಿಮಾನ ಗೋಪುರಗಳನ್ನು ಹೊಂದಿವೆ. ಪ್ರದಕ್ಷಿಣಾ ಪಥದಲ್ಲಿ ದಕ್ಷಿಣ ದಿಕ್ಕಿನಲ್ಲಿ ಗರ್ಭಗುಡಿಯ ಹೊರಗೋಡೆಯಲ್ಲಿ ದಕ್ಷಿಣಾಮೂರ್ತಿ (ಶಿವ)ಯ ಶಿಲ್ಪವಿದೆ. ಗರ್ಭಗುಡಿಗಳ ಪ್ರಸ್ತರ ಭಾಗದಲ್ಲಿ ಸಪ್ತಮಾತೃಕೆಯರಾದ ಬ್ರಾಹ್ಮೀ ಮಾಹೇಶ್ವರೀ, ಕೌಮಾರೀ, ವೈಷ್ಣವೀ, ವಾರಾಹೀ, ಇಂದ್ರಾಣಿ ಹಾಗೂ ಚಾಮುಂಡಿಯ ಬಿಡಿ ಶಿಲ್ಪಗಳನ್ನು ಅಳವಡಿಸಲಾಗಿದೆ. ವಿಮಾನ ಗೋಪುರಗಳೂ, ಸಪ್ತಮಾತೃಕಾ ವಿಗ್ರಹಗಳು ವರ್ಣರಂಜಿತವಾಗಿವೆ. ಸುಬ್ರಹ್ಮಣ್ಯಸ್ವಾಮಿಯ ಗರ್ಭಗುಡಿಯ ಪಕ್ಕದಲ್ಲಿ ಹಳೆಯ ಬಾಲಾಂಬಿಕಾ ಪ್ರತಿಮೆಯನ್ನು ಸಿಮೆಂಟಿನ ಮಂಟಪದಲ್ಲಿ ಇಡಲಾಗಿದೆ.

ಕೈಸಾಲೆಯ ಬಲಭಾಗದಲ್ಲಿ ಅಷ್ಟಕೋನ ಪೀಠದ ಮೇಲಿರುವ ನಾಗರಕಲ್ಲುಗಳು ವೈವಿಧ್ಯಮಯವಾಗಿವೆ. ಏಕ ಹೆಡೆಯ ನಾಗರ, ಏಳು ಹೆಡೆಯ ನಾಗರ, ನಾಗದಂಪತಿಗಳು ಇತ್ಯಾದಿ. ಅದರ ಮುಂಭಾಗದಲ್ಲಿ ಬಲಮೂಲೆಯಲ್ಲಿ ನವಗ್ರಹ ಶಿಲ್ಪಗಳು ಅಷ್ಟಕೋನ ಪೀಠದ ಮೇಲಿವೆ. ನವಗ್ರಹಗಳನ್ನು ಅವರವರ ವಾಹನಗಳ ಮೇಲೆ ಪತ್ನೀ ಸಮೇತರಾಗಿ ನಿಲ್ಲಿಸಲಾಗಿವೆ ಕೃಷ್ಣ ಶಿಲೆಯ ಈ ಶಿಲ್ಪಗಳೆಲ್ಲವೂ ಸುಂದರ ಮುಖಭಾವ, ಪ್ರಮಾಣಬದ್ಧತೆಯಿಂದ ಕಂಗೊಳಿಸುತ್ತಿವೆ.

ದೇವಿ ಬಾಲಾಂಬಿಕಾ : ಶ್ರೀ ತತ್ತ್ವನಿಧಿ, ದೇವಿಪುರಾಣದ ಲಲಿತೋಪಾಖ್ಯಾನದಲ್ಲಿ ದೇವಿ ಬಾಲಾಂಬಿಕೆಯ ಬಗ್ಗೆ ವಿವರಗಳು ದೊರೆಯುವುವು. ಅದರ ಪ್ರಕಾರ ಭಂಡಾಸುರನೆಂಬ ರಾಕ್ಷಸನನ್ನು ಸಂಹಾರ ಮಾಡಲು ಲಲಿತಾ ತ್ರಿಪುರ ಸುಂದರಿಯಾಗಿ ಶಿವೆಯು ಆವಿರ್ಭವಿಸಿದಳು. ಭಂಡಾಸುರನ ಪುತ್ರರನ್ನು ಕೊಲ್ಲಲು ಲಲಿತಾದೇವಿಯ ಸಹಾಯಕ್ಕಾಗಿ ಅವಳ

* ೨೭(೯), 'ವಿಶಾಲಾಕ್ಷ ಕೃಪ', ೨ನೇ ಬ್ಲಾಕ್, ೨ನೇ ಮುಖ್ಯರಸ್ತೆ, ಪರಮಹಂಸ ರಸ್ತೆ, ತ್ಯಾಗರಾಜನಗರ, ಬೆಂಗಳೂರು-೫೬೦೦೨೮.

ಕುಮಾರಿಯಾಗಿ ಹುಟ್ಟಿದ ಏಳು ದಿನಗಳಲ್ಲೇ ಒಂಭತ್ತು ವರ್ಷದ ಬಾಲೆಯಾಗಿ ಉದಿಸಿ ಬಂದವಳು ಬಾಲಾಂಬಿಕಾ.

ಬಾಲಾಂಬಿಕೆಯ ವರ್ಣನೆ ಮಾಡುವ ಮಂತ್ರವು ಇಂತಿದೆ:

'ಅರುಣ ಕಿರಣ ಜಾಲೈರಂಜಿತಾ ಸಾವಕಾಶಾ
ವಿಧೃತ ಜಪಮೇಕಾ ಪುಸ್ತಕಾಭಾರವೇ ಹಸ್ತಾ ।
ನಿವಸತು ಹೃದಿ ಬಾಲಾ ನಿತ್ಯ ಕಲ್ಯಾಣ ರೂಪಾ ॥'

'ಮಾಲಾ ಸೃಣೀ ಪುಸ್ತಕ ಪಾಶಹಸ್ತಾಂ
ಬಾಲಾಂಬಿಕಾಂ ಶ್ರೀ ಲಲಿತಾಂ ಕುಮಾರೀಮ್ ।
ಕುಮಾರ ಕಾಮೇಶ್ವರ ಕೇಳಿಲೋಲಾಂ
ನಮಾಮಿ ಗೌರೀಂ ನವವರ್ಷ ದೇವ್ಯಾಮ್ ॥'

ಗರ್ಭಗುಡಿಯಲ್ಲಿರುವ ಬಾಲಾಂಬಿಕಾ ದೇವಿಯ ಮೂರ್ತಿಯು ಸುಮಾರು ಮೂರೂವರೆ–ನಾಲ್ಕು ಅಡಿ ಎತ್ತರದ ಕೃಷ್ಣಶಿಲೆಯಲ್ಲಿ ಕಂಡರಿಸಿರುವ ಆಸೀನ ಚತುರ್ಭುಜ ಶಿಲ್ಪವಾಗಿದೆ. ದೇವಿಯು ತನ್ನ ಮೇಲಿನ ಬಲಹಸ್ತದಲ್ಲಿ ಡಮರುಗವನ್ನು ಕೆಳಗಿನ ಬಲಹಸ್ತದಲ್ಲಿ ಖಡ್ಗವನ್ನು, ಮೇಲಿನ ಎಡಹಸ್ತದಲ್ಲಿ ಪಾಶವನ್ನು ಹಾಗೂ ಕೆಳಗಿನ ಎಡಹಸ್ತದಲ್ಲಿ ಪಾನಪಾತ್ರೆಯನ್ನು ಹಿಡಿದಿದ್ದು, ಸಿಂಹವಾಹನಿಯಾಗಿದ್ದಾಳೆ. ಶಿರದ ಮೇಲ್ಭಾಗದಲ್ಲಿ ಜ್ವಾಲೆಯೂ, ಅದರ ಹಿಂಭಾಗದಲ್ಲಿ ಹಾವಿನ ಐದು ಹೆಡೆಗಳೂ ಕಂಡುಬರುತ್ತವೆ. ಶೈವಾಗಮ ರೀತ್ಯಾ ತಂಜಾವೂರಿನ ಶಿಲ್ಪಿಗಳು ದ್ರಾವಿಡ ಶಿಲ್ಪ ಪದ್ಧತಿಯಂತೆ ದೇವಿಯ ಪ್ರತಿಮೆಯನ್ನು ಕಡೆದಿದ್ದಾರೆ.

ಇದೇ ಲಕ್ಷಣಗಳನ್ನು ಬಾಲಾಂಬಿಕಾ ದೇವಿಯ ಹಳೆಯ ವಿಗ್ರಹವೂ ಹೊಂದಿದೆ. ಎತ್ತರದಲ್ಲಿ ಮಾತ್ರ ವ್ಯತ್ಯಾಸವಿದೆ. ಎರಡು–ಎರಡೂವರೆ ಅಡಿ ಎತ್ತರವಿದೆ. ಶ್ರೀ ಬಾಲಾಂಬಿಕಾ ದೇವಿಯ ಮೂಲ ಕ್ಷಣಗಳಿಗೂ ಮತ್ತು ಈಗ ದೇವಾಲಯದಲ್ಲಿ ಪ್ರತಿಷ್ಠಿತವಾಗಿರುವ ಬಾಲಾಂಬಿಕಾದೇವಿಯ ಲಕ್ಷಣಗಳಿಗೂ ಸಾಕಷ್ಟು ವ್ಯತ್ಯಾಸಗಳು ಕಂಡುಬರುತ್ತಿವೆ. ಮೂಲ ಲಕ್ಷಣಗಳಲ್ಲಿ ದೇವಿಯ ಶಿರದ ಮೇಲ್ಭಾಗದಲ್ಲಿ ನಾಗರಹೆಡೆಯನ್ನಾಗಲೀ ಕೈಗಳಲ್ಲಿರುವ ಪಾನಪಾತ್ರೆ, ಡಮರುಗ ಮತ್ತು ಖಡ್ಗವನ್ನು ಹೇಳಿಲ್ಲ. ಬದಲಿಗೆ ಪುಷ್ಪ ಅಥವಾ ಪುಷ್ಪಮಾಲೆ, ಜಪಮಾಲೆ, ಪುಸ್ತಕಗಳನ್ನು ಕರಗಳಲ್ಲಿ ಹಿಡಿದಿರುವಳೆಂದು ಹೇಳಿದೆ. ಈ ಲಕ್ಷಣ ವ್ಯತ್ಯಾಸಗಳಿಗೆ ಕಾರಣ ಪ್ರಾಯಶಃ ಹಿಂದೆ ಇಲ್ಲಿದ್ದ ಮಾರಮ್ಮ ದೇವತೆಯ ಸ್ಥಾನದಲ್ಲಿ ಶ್ರೀ ಬಾಲಾಂಬಿಕಾ ವಿಗ್ರಹವನ್ನು ಪ್ರತಿಷ್ಠಾಪಿಸಿರುವುದರಿಂದ ಎನಿಸುತ್ತದೆ. ಚೈತ್ರ ಹುಣ್ಣಿಮೆಯ ನಂತರದ ಭಾನುವಾರ ಇಲ್ಲಿ ಮೂರು ದಿನಗಳ ಕಾಲ ನಡೆಯುವ ಕರಗೋತ್ಸವ, ಅಂಬಲಿಸೇವೆ ಈ ಊಹೆಯನ್ನು ದೃಢಪಡಿಸುತ್ತದೆ. ಈಗ ಶೈವಾಗಮ ರೀತ್ಯಾ ಬೊಮ್ಮೂರಕಮ್ಮೆ ಸ್ಮಾರ್ತ ಸಂಪ್ರದಾಯದ ಶ್ರೀ ಮೋಹನ್ ಶರ್ಮಾ ಪ್ರಧಾನ ಅರ್ಚಕರಾಗಿ ಪೂಜಾದಿ ಕೈಂಕರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ಈ ದೇವಾಲಯದಲ್ಲಿನ ಇನ್ನೊಂದು ಶಿಲ್ಪಕಲಾ ವಿಶೇಷವೆಂದರೆ ಹೊಯ್ಸಳ ಕಲಾಶೈಲಿಯಲ್ಲಿ ಗಜ, ಸಿಂಹ, ಪುಷ್ಪ, ಹಂಸಗಳಿಂದ ಕೂಡಿದ ಅಡ್ಡಪಟ್ಟಿಕೆಗಳನ್ನು ಕೃಷ್ಣಶಿಲೆಯಲ್ಲಿ ಕಂಡರಿಸಿ ಗರ್ಭಗುಡಿಗಳ ಅಧಿಷ್ಠಾನ ಭಾಗದಲ್ಲಿ ಅಡಕಿಸಿಡಲಾಗಿದೆ. ದ್ವಾರಶಾಖೆಯ ಪಕ್ಕದಲ್ಲಿ ನಾಗದಂಪತಿಗಳ ಶಿಲ್ಪವನ್ನು ಕದಂಬ ಶೈಲಿಯಲ್ಲಿ ಕಂಡರಿಸಿ ಅಡಕಿಸಿಡಲಾಗಿದೆ. ಈ ಶಿಲ್ಪಪಟ್ಟಿಕೆಗಳನ್ನು ಸುರಾಲಿ (ದ.ಕ. ಜಿಲ್ಲೆ)ನ ಶಿಲ್ಪಿ ದಂಪತಿಗಳಾದ ಶ್ರೀಮತಿ ರತ್ನಾ ಮತ್ತು ಶ್ರೀ ವೆಂಕಟರಮಣ ಭಟ್ ರೂಪಿಸಿಕೊಟ್ಟಿದ್ದಾರೆ.

ತಂಜಾವೂರಿನ ವರ್ಣಚಿತ್ರಕಲಾ ಶೈಲಿಯಲ್ಲಿ ದೇವಾಲಯದ ಒಳಭತ್ತಿನ ಭಾಗ ಮತ್ತು ದೇವಾಲಯದ ಹೊರಗೋಡೆಗಳಲ್ಲಿ ವರ್ಣರಂಜಿತ ಚಿತ್ರಗಳು ಶೋಭಾಯಮಾನವಾಗಿವೆ. ದೇವಾಲಯದ ಮೂರು ಗರ್ಭಗುಡಿಗಳ ಮುಂಭಾಗದ ಒಳಭತ್ತಿನಲ್ಲಿ ಎಡಭಾಗದಲ್ಲಿ ಧನವನ್ನು ಧಾರೆಯಾಗಿ ಸುರಿಸುತ್ತಿರುವ ಧನಲಕ್ಷ್ಮಿ ಮತ್ತು ಬಲಭಾಗದಲ್ಲಿ ಶಿವನಿಗೆ ಭಿಕ್ಷೆ ನೀಡುತ್ತಿರುವ ಅನ್ನಪೂರ್ಣೆಯರ ಚಿತ್ರಗಳಿವೆ. ಕೈಸಾಲೆಯ ಒಳ ಅಂಚಿನುದ್ದಕ್ಕೂ ವಸ್ತ್ರಪರದೆಯ, ಗಿಳಿಗಳ, ಹಂಸಗಳ ಚಿತ್ರಗಳನ್ನು ಅಲಂಕರಣವಾಗಿ ಚಿತ್ರಿಸಲಾಗಿದೆ. ಕೈಸಾಲೆಯ ಈಶಾನ್ಯ ಮೂಲೆಯಲ್ಲಿರುವ ನವಗ್ರಹ ಶಿಲ್ಪಗಳ ಪಾರ್ಶ್ವದ ಎಡಭತ್ತಿನಲ್ಲಿ ವರ್ಣರಂಜಿತ ದ್ವಾದಶ ರಾಶಿಚಕ್ರ ಚಿತ್ರವನ್ನು ಬಿಡಿಸಲಾಗಿದೆ. ಹೊರಭಿತ್ತಿಯ ಮೇಲೆ ಬುದ್ಧ, ಶಂಕರ, ರಾಮಾನುಜ, ಮಧ್ವ ಮುಂತಾದ ಧಾರ್ಮಿಕ ಮಹಾಪುರುಷರ ಚಿತ್ರಗಳನ್ನೂ ಚಿತ್ರಿಸಲಾಗಿದೆ.

ಹೀಗೆ ಬಾಲಾಂಬಿಕಾ ದೇವಾಲಯವು ಬೆಂಗಳೂರಿನ ಈ ಭಾಗದಲ್ಲಿ ಇತ್ತೀಚೆಗೆ ನಿರ್ಮಿತವಾದುದಾದರೂ ವಿಶಿಷ್ಟವಾದ ವಾಸ್ತುಕಲೆ, ಶಿಲ್ಪಕಲೆ, ವರ್ಣಚಿತ್ರಕಲೆಗಳನ್ನು ದ್ರಾವಿಡ, ಹೊಯ್ಸಳ, ಕದಂಬ, ಕರಾವಳಿ ಶೈಲಿಗಳಲ್ಲಿ ರೂಪಿಸಿರುವ ಶಿಷ್ಟ, ಪರಿಶಿಷ್ಟ, ಶಾಸ್ತ್ರಸಮ್ಮತ ಮತ್ತು ಜಾನಪದ ಪೂಜೆ, ಉತ್ಸವ, ಆಚರಣೆಗಳನ್ನು (ಅಭಿಷೇಕ, ಹೋಮ, ಕರಗ, ರಥೋತ್ಸವ) ನಡೆಸುವುದರ ಮೂಲಕ ಜನಸಮೂಹವನ್ನು ತನ್ನತ್ತ ಆಕರ್ಷಿಸಿ ಭಕ್ತವೃಂದಕ್ಕೆ ಸಂತೃಪ್ತಿ ಸಂತೋಷಗಳನ್ನು ನೀಡುತ್ತಿದೆ.

[ಈ ದೇವಾಲಯದ ಬಗ್ಗೆ ಮಾಹಿತಿಯನ್ನು ನೀಡಿದ ಅರ್ಚಕರಿಗೂ, ವಿಶ್ವಸ್ಥ ಮಂಡಲಿಯ ಅಧಿಕಾರಿಗಳಿಗೂ, ಕ್ಷೇತ್ರ ಕಾರ್ಯದಲ್ಲಿ ಸಹಕಾರ ನೀಡಿದವರಿಗೆ ನನ್ನ ಕೃತಜ್ಞತಾಪೂರ್ವಕ ವಂದನೆಗಳು ಸಲ್ಲುತ್ತವೆ.]

೧೨೩

ಎಸ್. ನಿಜಲಿಂಗಪ್ಪ ಅಧ್ಯಕ್ಷತೆಯ ತುಮಕೂರಿನ ಮೈಸೂರು ಕಾಂಗ್ರೆಸ್ ವಿಶೇಷ ಅಧಿವೇಶನ:ಒಂದು ವಿಶ್ಲೇಷಣೆ

ಡಾ. ಎಚ್. ಕೃಷ್ಣೇಗೌಡ*

ಭಾರತ ಸ್ವಾತಂತ್ರ್ಯ ಚಳವಳಿಯ ಭಾಗವೇ ಆಗಿರುವ ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಚಳವಳಿ ಅನೇಕ ಆಯಾಮಗಳನ್ನ ನಿಧಾನವಾಗಿಯಾದರೂ ಪ್ರಕಟಿಸಿತು[೧]. ಇದಕ್ಕೆ ನಿದರ್ಶನವಾಗಿ ಸಂಸ್ಥಾನದಲ್ಲಿ ಜರುಗಿರುವ ಅನೇಕ ಘಟನೆಗಳು, ಸಭೆ, ಸಮಾವೇಶಗಳನ್ನು ಕಾಣಬಹುದು.

ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ ಚಟುವಟಿಕೆಗಳು ಆರಂಭದಿಂದಲೂ ಬ್ರಿಟೀಷ್ ಭಾರತಕ್ಕೆ ಮಾತ್ರ ಸೀಮಿತವಾಗಿದ್ದವು. ದೇಶೀಯ ಸಂಸ್ಥಾನಗಳ ರಾಜರು ಭಾರತೀಯರೇ ಆಗಿದ್ದರಿಂದ ಆಯಾ ರಾಜ್ಯ ಜನರ ಯೋಗಕ್ಷೇಮದ ಹೊಣೆಗಾರಿಕೆ ಅವರಿಗೆ ಸೇರಿದ್ದೆಂದು ಕಾಂಗ್ರೆಸ್ ಧುರೀಣರ ಭಾವನೆಯಾಗಿತ್ತು. ಪರಿಣಾಮವಾಗಿ ಅಖಿಲ ಭಾರತ ಕಾಂಗ್ರೆಸ್ ಶಾಖೆಗಳನ್ನು ದೇಶೀಯ ಸಂಸ್ಥಾನಗಳಲ್ಲಿ ಆರಂಭಿಸಿರಲಿಲ್ಲ. ಆಂಗ್ಲ ಭಾರತದಲ್ಲಿ ಕಾಂಗ್ರೆಸ್ ಕಾರ್ಯ ಚಟುವಟಿಕೆಯಿಂದಾಗಿ ಜನರಲ್ಲಿ ತಮ್ಮ ಹಕ್ಕುಗಳನ್ನು ಅರಿಯುವಂತಹ ಜಾಗೃತಿ ಮೂಡುತ್ತಿದ್ದರೂ, ದೇಶೀ ರಾಜರ ಸಂಸ್ಥಾನಗಳಲ್ಲಿ ಜನಜಾಗೃತಿ ಮೂಡಿರಲಿಲ್ಲ. ೧೯೨೦ರಲ್ಲಿ ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನ ನಾಗಪುರದಲ್ಲಿ ಜರುಗಿ ಇಲ್ಲಿ ಕಾಂಗ್ರೆಸ್ ಸಂಸ್ಥೆಯನ್ನು ಭಾಷಾ ಆಧಾರದ ಮೇಲೆ ೨೧ ಪ್ರಾಂತೀಯ ಕಾಂಗ್ರೆಸ್ ಸಂಸ್ಥೆಗಳನ್ನಾಗಿ ಪುನರ್ರಚಿಸಲಾಯಿತು.[೨] ಅದರಂತೆ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಕರ್ನಾಟಕದಲ್ಲಿ ಪ್ರಾರಂಭಗೊಂಡು ಗಂಗಾಧರರಾವ್ ದೇಶಪಾಂಡೆಯವರು ಪ್ರಥಮಾಧ್ಯಕ್ಷರಾದರು. ೧೯೨೧ರಲ್ಲಿ ಮೈಸೂರು ಸಂಸ್ಥಾನದ ಕಾಂಗ್ರೆಸ್ ಶಾಖೆಯನ್ನು "ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ" ಎಂದು ಪರಿಗಣಿಸುವುದರ ಮೂಲಕ ಆರಂಭಿಸಲಾಯಿತು. ಎಸ್.ಎಸ್. ಸೆಟ್ಲೂರ ಪ್ರಥಮ ಅಧ್ಯಕ್ಷರಾದರು. ಆದರೂ ಇದು ಸಂಸ್ಥಾನದಲ್ಲಿ ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸುವುದಕ್ಕೆ ಅವಕಾಶವಿರಲಿಲ್ಲ. ೧೯೨೮ರ ಕಲ್ಕತ್ತಾ ಕಾಂಗ್ರೆಸ್ ಅಧಿವೇಶನದಲ್ಲಿ, ಸಂಸ್ಥಾನಗಳ ಆಂತರೀಕ ವ್ಯವಹಾರಗಳಲ್ಲಿ ಕಾಂಗ್ರೆಸ್ ಭಾಗವಹಿಸಬಾರದೆಂಬ ನಿರ್ಬಂಧವನ್ನು ತೆಗೆದುಹಾಕಲಾಯಿತು. ನಂತರದಲ್ಲಿ ಮೈಸೂರು ಸಂಸ್ಥಾನದ ಹೋರಾಟಗಾರರು ಮೈಸೂರು ಕಾಂಗ್ರೆಸ್ ಎಂಬ ಸ್ವತಂತ್ರವಾದ ಹೊಸ ಸಂಸ್ಥೆ ಆರಂಭಿಸಲು ತೀರ್ಮಾನಿಸಿದರು. ಮೈಸೂರು ಕಾಂಗ್ರೆಸ್‌ಗೆ ಸಂಬಂಧಿಸಿದಂತೆ ನೀತಿ ನಿಯಮಗಳನ್ನು ಲಕ್ಷ್ಮೀನಾರಾಯಣ ಭಟ್ಟರು, ದೊಡ್ಡಸ್ವಾಮಯ್ಯಂಗಾರರು, ಗೋಪಾಲಸ್ವಾಮಯ್ಯಂಗಾರರು ರಚಿಸಿದರು[೩]. ೧೯೩೮ರ ಮಾರ್ಚ್‌ನಲ್ಲಿ ಮೈಸೂರಿನ ಮರ್ಲೆ ನಾರಾಯಣಪ್ಪನವರ ಮನೆಯಲ್ಲಿ ಸೇಲಂ ಕಾಂಗ್ರೆಸ್ ನಾಯಕ ಎಸ್. ವೆಂಕಟಪ್ಪಚಟ್ಟಿಯಾರ್ ಅವರಿಂದ 'ಮೈಸೂರು ಕಾಂಗ್ರೆಸ್' ಉದ್ಘಾಟನೆಯಾಯಿತು. ಟಿ. ಸಿದ್ಧಲಿಂಗಯ್ಯ ಪ್ರಥಮ ಅಧ್ಯಕ್ಷರಾಗಿ ನೇಮಕಗೊಂಡರು. ಇದರ ಮೊದಲ ಅಧಿವೇಶನ ೧೯೩೮ರ ಏಪ್ರಿಲ್‌ನಲ್ಲಿ ಟಿ. ಸಿದ್ಧಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ಶಿವಪುರದಲ್ಲಿ ನಡೆಯಿತು.[೪] ಎರಡನೇ ಅಧಿವೇಶನ ೧೯೩೯ ಏಪ್ರಿಲ್‌ನಲ್ಲಿ ಹೆಚ್.ಸಿ. ದಾಸಪ್ಪನವರ ಅಧ್ಯಕ್ಷತೆಯಲ್ಲಿ ವಿಧುರಾಶ್ವತ್ಥದಲ್ಲಿ ಜರುಗಿತು.[೫] ಮೂರನೇ ಅಧಿವೇಶನ ಶಿವಮೊಗ್ಗ ಹತ್ತಿರದ ಅಜಾದ್‌ನಗರದಲ್ಲಿ ೧೯೪೦ರ ಮೇ ತಿಂಗಳಿನಲ್ಲಿ ಕೆ.ಟಿ. ಭಾಷ್ಯಂ ಅಧ್ಯಕ್ಷತೆಯಲ್ಲಿ ಜರುಗಿತು[೬] ನಾಲ್ಕನೇ ಅಧಿವೇಶನ, ಚಿಕ್ಕಮಗಳೂರಿನ ಹರಿಹರದ ಬಳಿ ಇರುವ ಹರಳಾಪುರದ ವಿನೋಬ ನಗರದಲ್ಲಿ ೧೯೪೧ರಲ್ಲಿ ಹೆಚ್. ಸಿದ್ದಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು.[೭] ಐದನೇ ಅಧಿವೇಶನ ಚನ್ನಪಟ್ಟಣ ಬಳಿಯ ತಿಟ್ಟಮಾರನಹಳ್ಳಿಯಲ್ಲಿ ಟಿ. ಸುಬ್ರಹ್ಮಣ್ಯಂ ಅಧ್ಯಕ್ಷತೆಯಲ್ಲಿ ೧೯೪೨ರಂದು ಜರುಗಿತು.[೮] ನಂತರದಲ್ಲಿ ವಿಶೇಷ ಅಧಿವೇಶನಗಳು ಜರುಗಿ ಅವುಗಳಲ್ಲಿ ೧೯೪೫ರಲ್ಲಿ ಎಸ್. ನಿಜಲಿಂಗಪ್ಪ ನವರ ಅಧ್ಯಕ್ಷತೆಯಲ್ಲಿ ತುಮಕೂರಿನಲ್ಲಿ ಜರುಗಿದ ಮೈಸೂರು ಕಾಂಗ್ರೆಸ್‌ನ ವಿಶೇಷ ಅಧಿವೇಶನ ಬಹಳ ಪ್ರಮುಖವಾದುದಾಗಿದೆ. ೧೯೪೫ರ ಜೂನ್ ೧೬, ೧೭ ಮತ್ತು ೧೮ರಂದು ಜರುಗಿದ ತುಮಕೂರಿನ ಮೈಸೂರು ಕಾಂಗ್ರೆಸ್ ವಿಶೇಷ ಅಧಿವೇಶನ ಮೈಸೂರು ರಾಜಕಾರಣಕ್ಕೆ ಹೊಸ ನೆಲೆ ಸೃಷ್ಟಿಸಿಕೊಟ್ಟಿ

* ಸಹ ಪ್ರಾಧ್ಯಾಪಕರು, ಇತಿಹಾಸ ಸ್ನಾತಕೋತ್ತರ ಅಧ್ಯಯನ ಕೇಂದ್ರ, ಮಹಿಳಾ ಸರ್ಕಾರಿ ಕಾಲೇಜು, ಮಂಡ್ಯ-೫೭೧೪೦೧.

ಅರಸೊತ್ತಿಗೆಯ ನಿಷ್ಠೆಗೆ ಸವಾಲೆಸೆದ ಒಂದು ಘಟನೆ ಮಾತ್ರ ಅಲ್ಲ, ಮೈಸೂರಿನ ಭವಿಷ್ಯದ ರಾಜಕಾರಣಕ್ಕೆ ಹೊಸ ಚಿಂತನೆಗಳ ನೆಲೆಗಟ್ಟನ್ನು ರೂಪಿಸಿಕೊಟ್ಟಂತಹ ಅಧಿವೇಶನವಿದು. ಸಾಮ್ರಾಜ್ಯಶಾಹಿ ಹಾಗೂ ಪ್ರಭುತ್ವಶಾಹಿ ವ್ಯವಸ್ಥೆ ಕುಸಿದು ಬೀಳುವ ಎಲ್ಲಾ ಮುನ್ಸೂಚನೆಗಳು ಹೋರಾಟಗಾರರಿಗೆ ಕಂಡು ಬಂದದ್ದರಿಂದ ಹೊಸ ವ್ಯವಸ್ಥೆಯ ಪರವಾಗಿ ಹೊಸ ಹೊಸ ಕನಸು ಕಾಣುವ ಸಂದರ್ಭವೂ ಇದಾಗಿತ್ತು. ಆ ಕಾರಣದಿಂದಾಗಿ ತುಮಕೂರಿನ ಅಧಿವೇಶನವನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

ತುಮಕೂರಿನಲ್ಲಿ ಮೈಸೂರು ಕಾಂಗ್ರೆಸ್‌ನ ವಿಶೇಷ ಅಧಿವೇಶನವನ್ನು ದಿನಾಂಕ ೧೫–೦೬–೧೯೪೫ ರಿಂದ ೧೭–೦೬–೧೯೪೫ ರವರೆಗೆ ಮೂರು ದಿವಸಗಳ ಕಾಲ ಏರ್ಪಡಿಸಲಾಗಿತ್ತು. ಮೊದಲನೇ ದಿವಸ, ಗೃಹಕೈಗಾರಿಕೆ ಹಾಗೂ ಸ್ವದೇಶಿ ವಸ್ತುಪ್ರದರ್ಶನದ ಉದ್ಘಾಟನೆ, ಎರಡನೆ ದಿವಸ ಧ್ವಜಾರೋಹಣದೊಡನೆ ಸಾರ್ವಜನಿಕ ಸಭೆ, ಮೂರನೇ ದಿವಸ ಸಬ್‌ಜೆಕ್ಟ್ ಕಮಿಟಿ ಸಭೆ ಏರ್ಪಡಿಸಲು ನಿರ್ಧರಿಸಿ, ಇದರ ಪೂರ್ವಭಾವಿ ಸಿದ್ಧತೆಗಾಗಿ ಸ್ವಾಗತ ಸಮಿತಿಯೊಂದನ್ನು ನೇಮಿಸಲಾಯಿತು. ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ಬಿ.ಸಿ. ನಂಜುಂಡಯ್ಯನವರನ್ನು, ಜನರಲ್ ಸೆಕರೇಟರಿಯಾಗಿ, ಹಾಲಿ ಮೈಸೂರು ಕಾಂಗ್ರೆಸ್ ಅಧ್ಯಕ್ಷ ಟಿ. ಸುಬ್ರಹ್ಮಣ್ಯಂ, ಸದಸ್ಯರಾಗಿ ಮಾಲಿಮರಿಯಪ್ಪ, ಗುಬ್ಬಿ ಹುಚ್ಚಪ್ಪ (ವರ್ತಕ ಸಂಘದ ಅಧ್ಯಕ್ಷ) ರತ್ನಮ್ಮ ಮಾಧವರಾವ್‌ರನ್ನು ನೇಮಿಸಲಾಯಿತು.

ಸ್ವಾಗತ ಸಮಿತಿಯೂ ಸಮಾವೇಶಕ್ಕೆ ಸಂಬಂಧಿಸಿದಂತಹ ಸಂಪನ್ಮೂಲ ಸಂಗ್ರಹಿಸಿ ಎಲ್ಲಾ ರೀತಿಯ ಸಿದ್ಧತೆಗಳನ್ನು ಮಾಡಿಕೊಂಡು, ಸ್ವದೇಶಿ ವಸ್ತು ಪ್ರದರ್ಶನವನ್ನು ತುಮಕೂರಿನ ಜಯದೇವ ಹಾಸ್ಟೆಲ್‌ನಲ್ಲಿ ಏರ್ಪಡಿಸಿ ಮದ್ರಾಸ್‌ನ ಬುಲು ಸುಶಾಂಭಮೂರ್ತಿಯವರಿಂದ ಉದ್ಘಾಟಿಸಲು ತೀರ್ಮಾನಿಸಿ ಸಾರ್ವಜನಿಕ ಸಭೆ ಹೊಸ ಬಸ್‌ಸ್ಟ್ಯಾಂಡ್ ಮೈದಾನದಲ್ಲಿ ಹಾಗೂ ಸಬ್‌ಜೆಕ್ಟ್ ಸಮಿತಿ ಸಭೆಯನ್ನು ರಾಜ ಟಾಕೀಸ್‌ನಲ್ಲೂ ನಡೆಸಲು ನಿರ್ಧರಿಸಿತು[೯].

ದಿನಾಂಕ ೧೫–೦೬–೧೯೪೫ರಂದು ಶ್ರೀ ಜಯದೇವ ಹಾಸ್ಟೆಲ್‌ನಲ್ಲಿ ಐದು ದಿನಗಳವರೆಗೆ ಏರ್ಪಡಿಸಿದ್ದ ಸ್ವದೇಶಿ ವಸ್ತು ಪ್ರದರ್ಶನವನ್ನು ಬುಲುಸುಶಾಂಭಮೂರ್ತಿ ಉದ್ಘಾಟಿಸಿ, ಆಕಾಶವಾಣಿಯಲ್ಲಿ ವೈಸ್‌ರಾಯ್‌ಯವರು ಮಾಡಿದ ಭಾಷಣವನ್ನು ಟೀಕಿಸಿದರು. ಯುದ್ಧದಲ್ಲಿ ತೊಡಗಿರುವ ಇಂಗ್ಲೆಂಡ್ ಭಾರತದೆಡೆಗೆ ಗಮನ ಹರಿಸಬೇಕು, ಬಂಧಿಸಲ್ಪಟ್ಟಿರುವ ಎಲ್ಲಾ ಕಾಂಗ್ರೆಸಿಗರನ್ನು ಬಿಡುಗಡೆಗೊಳಿಸಬೇಕು. ಆಹಾರದ ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ಶ್ರಮಿಸಬೇಕೆಂದು ಹೇಳಿದರು. ಮೈಸೂರು ಕಾಂಗ್ರೆಸ್, ಸಂಸ್ಥಾನದಲ್ಲಿ ಗೃಹಕೈಗಾರಿಕೆಗಳ ಅಭಿವೃದ್ಧಿಗೆ ಗಮನಹರಿಸಿ, ಸ್ವಾವಲಂಬನೆ ಸಾಧಿಸಬೇಕೆಂದರು. ನಂತರ ವಿದ್ಯಾರ್ಥಿ ಸ್ವಯಂಸೇವಕರು ವಂದೇ ಮಾತರಂ ಗೀತೆ ಹಾಡುವುದರ ಮೂಲಕ ಸಭೆ ಮುಕ್ತಾಯವಾಯಿತು. ಕೊಲ್ಲೂರು ಸುಬ್ಬರಾವ್, ಅಂಬ್ಬೆಪಲ್ಲಿ ಸತ್ಯನಾರಾಯಣರಾವ್ ಮುಂತಾದ ಗಣ್ಯರು ಉಪಸ್ಥಿತರಿದ್ದರು.

ಮೊದಲ ದಿನದ ಸಂಜೆ, ಅಧಿವೇಶನದ ಅಧ್ಯಕ್ಷರಾದ ಎಸ್. ನಿಜಲಿಂಗಪ್ಪನವರನ್ನು ತುಮಕೂರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಬೇಕೆಂದು ನಿರ್ಧರಿಸಲಾಗಿತ್ತು. ತುಮಕೂರಿನ ಪ್ರಥಮ ನ್ಯಾಯಾಧೀಶರು ಮೈಸೂರು ಪೊಲೀಸ್ ಆ್ಯಕ್ಟ್ ಸೆಕ್ಷನ್ ೪೫ರ ಆಫ್ ಅಡಿಯಲ್ಲಿ ನಗರದಲ್ಲಿ ಆರು ತಿಂಗಳವರೆಗೆ ಯಾವುದೇ ಮೆರವಣಿಗೆ ನಡೆಸಬಾರದೆಂದು ನಿಷೇಧಾಜ್ಞೆ ಹೊರಡಿಸಿದ್ದರು. ಸಂಸ್ಥಾನದ ಸರ್ಕಾರ ಹಾಗೂ ನ್ಯಾಯಾಧೀಶರ ಕ್ರಮವನ್ನು ಟೀಕಿಸಿದ ಟಿ. ಸುಬ್ರಹ್ಮಣ್ಯಂ ಸಂಜೆ ೭–೩೦ರ ವೇಳೆಗೆ ವಿನೋಧ ಟಾಕೀಸ್‌ನಲ್ಲಿ ಎಸ್. ನಿಜಲಿಂಗಪ್ಪನವರಿಗೆ ತುಮಕೂರಿನ ಜನತೆಯ ಪರವಾಗಿ ಹೃದಯಪೂರ್ವಕ ಸ್ವಾಗತ ಕೋರಿ, ಮೈಸೂರು ಪೇಟ ತೊಡಿಸಿ ಯಶಸ್ವಿಯಾಗಿ ಮೈಸೂರು ಕಾಂಗ್ರೆಸ್ ಮುನ್ನಡೆಸಬೇಕೆಂದು ಮನವಿ ಮಾಡಿದರು. ಮಂಡಿ ವರ್ತಕರಾದ ಚಂದ್ರಶೇಖರಯ್ಯನವರು ಜವಾಬ್ದಾರಿ ಸರ್ಕಾರ ಸ್ಥಾಪನೆಗಾಗಿ ಮತ್ತು ಜನರ ಒಳಿತಿಗಾಗಿ ಶಾಂತಿಯುತವಾಗಿ ಹೋರಾಡಬೇಕೆಂದರು. ಅಂತಿಮವಾಗಿ ಎಸ್. ನಿಜಲಿಂಗಪ್ಪನವರು ಮಾತನ್ನಾಡಿ ಗಾಂಧೀಜಿಯವರ ತತ್ವ ಹಾಗೂ ಕಾಂಗ್ರೆಸ್‌ನ ನೀತಿಗಳಿಗೆ ಭಂಗ ತರದ ರೀತಿ ಮುನ್ನಡೆಯುವ ಭರವಸೆ ನೀಡಿ, ಸ್ವಾಗತ ಕೋರಿದ್ದಕ್ಕೆ ಅಭಿಮಾನದ ವಂದನೆಗಳನ್ನು ಸಲ್ಲಿಸಿದರು.

ದಿನಾಂಕ ೧೬–೦೬–೧೯೪೫ರ ಎರಡನೇ ದಿನದಂದು ಮುಂಜಾನೆ ಹೊಸ ಬಸ್‌ಸ್ಟ್ಯಾಂಡ್ ಮೈದಾನದಲ್ಲಿ ಸಾರ್ವಜನಿಕ ಸಭೆ, ಧ್ವಜಾರೋಹಣ ಹಾಗೂ ವಿದ್ಯಾರ್ಥಿ ಸ್ವಯಂಸೇವಕರು 'ವಿಜಯಿ ವಿಶ್ವತಿ ರಂಗಾಪ್ಯಾರಾ' ಎಂಬ ಗೀತೆಯನ್ನು, ಸ್ವಯಂಸೇವಕಿ ಶ್ರೀಮತಿ ರತ್ನಮ್ಮ ಮಾಧವರಾವ್ 'ವಂದೇಮಾತರಂ' ಗೀತೆ ಹಾಡುವುದರ ಮೂಲಕ ಪ್ರಾರಂಭವಾಯಿತು. ಟಿ. ಸುಬ್ರಹ್ಮಣ್ಯಂ ಮೈಸೂರು ಧ್ವಜವನ್ನು, ಎಸ್. ನಿಜಲಿಂಗಪ್ಪ ಕಾಂಗ್ರೆಸ್ ಧ್ವಜ ಆರೋಹಣವನ್ನು ಮಾಡಿದರು. ನಿಜಲಿಂಗಪ್ಪನವರು ಕಾಂಗ್ರೆಸ್ ಧ್ವಜದ ಮಹತ್ವವನ್ನು ಕುರಿತು ಮಾತನ್ನಾಡಿದರು. ಬ್ರಿಟೀಷ್ ವೈಸರಾಯ್ ನಿಲುವು ಟೀಕಿಸಿ, ನ್ಯಾಯಾಧೀಶರು ಹೊರಡಿಸಿರುವ ನಿರ್ಬಂಧಕಾರಿ ಆದೇಶಗಳನ್ನು ಖಂಡಿಸಿದರು. ಟಿ. ಸುಬ್ರಮ್ಮಣ್ಯಂ, ದಿನದ ಕಾರ್ಯಕ್ರಮಗಳನ್ನು ವಿವರಿಸಿದರು. ಜಯಕಾರದೊಡನೆ ಸಭೆ ಬೆಳಿಗ್ಗೆ

೯-೪೫ಕ್ಕೆ ಮುಕ್ತಾಯಗೊಂಡಿತು. ಸುಮಾರು ೬೦೦ ಜನ ಪುರುಷರು ಹಾಗೂ ಮಹಿಳೆಯರು ಭಾಗವಹಿಸಿದ್ದರು.

ತುಮಕೂರಿನ ಮಂಡಿಪೇಟೆಯಲ್ಲಿದ್ದ ರಾಜಾ ಟಾಕೀಸ್ ಥಿಯೇಟರ್‌ನಲ್ಲಿ ಮಧ್ಯಾಹ್ನ ೩-೧೫ಕ್ಕೆ ಸಬ್‌ಜೆಕ್ಟ್ ಕಮಿಟಿ ಸಭೆ ಪ್ರಾರಂಭವಾಯಿತು. ಎಸ್. ನಿಜಲಿಂಗಪ್ಪ, ಟಿ. ಸುಬ್ರಹ್ಮಣ್ಯಂ, ಕೆ.ಟಿ. ಭಾಷ್ಯಂ, ಹೆಚ್. ಸಿದ್ಧಯ್ಯ, ಹೆಚ್.ಸಿ. ದಾಸಪ್ಪ ಕೆಂಗಲ್ ಹನುಮಂತಯ್ಯ, ಹೆಚ್.ಕೆ. ವೀರಣ್ಣಗೌಡ, ಕೆ.ಆರ್. ಮಾಧವರಾವ್, ಹಂಜೇರಪ್ಪ, ಕಲ್ಲೂರು ಸುಬ್ಬರಾವ್ ಸ್ವಾಗತಸಮಿತಿ ಸದಸ್ಯರು, ಸ್ವಯಂಸೇವಕರು, ಆಹ್ವಾನಿತರು ಭಾಗವಹಿಸಿದ್ದರು. ಶ್ರೀಮತಿ ರತ್ನಮ್ಮಮಾಧವರಾವ್ ಪ್ರಾರ್ಥನೆಯೊಡನೆ ಸಭೆ ಪ್ರಾರಂಭವಾಯಿತು. ಟಿ. ಸುಬ್ರಮಣ್ಯ ಮಾತನಾಡಿ ಕಾಂಗ್ರೆಸ್ ಮತ್ತು ಸಂಸ್ಥಾನದ ನಡುವೆ ಜವಾಬ್ದಾರಿ ಸರ್ಕಾರ ಸ್ಥಾಪನೆ ಹಾಗೂ ಮಂತ್ರಿಗಳನ್ನು ನೇಮಿಸಿ ಕೊಳ್ಳುವುದರ ಸಂಬಂಧ ಜರುಗಿದ ಮಾತುಕತೆಗಳು ಹಾಗೂ ವಿಫಲತೆಯನ್ನು ಕುರಿತು ವಿವರಿಸಿದರು. ಅಧಿವೇಶನದ ಅಧ್ಯಕ್ಷರಾದ ಎಸ್. ನಿಜಲಿಂಗಪ್ಪನವರು ಮಾತನ್ನಾಡಿ, ಸಮಾವೇಶಕ್ಕಾಗಿ ಶ್ರಮಿಸಿದ ಟಿ. ಸುಬ್ರಹ್ಮಣ್ಯಂರವರನ್ನು ಶ್ಲಾಘಿಸಿದರು. ನಿಷೇಧಾಜ್ಞೆ ಇರುವುದರಿಂದ ಎಲ್ಲರೂ ಶಾಂತಿಯಿಂದ ವರ್ತಿಸಿ ಸಮಾವೇಶದ ಯಶಸ್ವಿಗೆ ನೆರವಾಗ ಬೇಕೆಂದರು. ಸಭೆಯಲ್ಲಿ ಈ ಕೆಳಕಂಡ ನಿರ್ಣಯಗಳನ್ನು ಚರ್ಚಿಸಿ ಸರ್ವಾನುಮತದಿಂದ ಅಂಗೀಕರಿಸಲಾಯಿತು.

ಆ ಸಂದರ್ಭದಲ್ಲಿ ೧೯೪೨ರ ಕ್ವಿಟ್ ಇಂಡಿಯಾ ಚಳವಳಿ ಅಂಗವಾಗಿ ಭಾಗವಹಿಸಿ ದೇಶಕ್ಕಾಗಿ ಪ್ರಾಣತೆತ್ತವ ರನ್ನೂ, ಜೈಲು ಶಿಕ್ಷೆ ಅನುಭವಿಸಿದವರನ್ನೂ ಸ್ಮರಿಸಿಕೊಳ್ಳ ಲಾಯಿತು.

ಈ ವಿಶೇಷ ಅಧಿವೇಶನದಲ್ಲಿ ಕಸ್ತೂರಬಾ ಗಾಂಧೀ ಅಬ್ದುಲ್ ಖಲಾಂ ಅಜಾದ್ ಮಹದೇವ ದೇಸಾಯಿ ಆರ್.ಎಸ್. ಪಂಡಿತ್, ಎಸ್. ಸತ್ಯಮೂರ್ತಿ, ನಾರಾಯಣರಾವ್ ಜೋಷಿ, ಹನುಮಂತರಾವ್ ಕೌಜಲಗಿ, ಮಹದೇವರಾವ್ ಕಬ್ಬೂರ್, ಯಲಹಂಕ ವೀರಭದ್ರಪ್ಪ, ಮೈಸೂರಿನ ಎಂ.ವಿ. ಪುಟ್ಟಸ್ವಾಮಿ, ಮಳವಳ್ಳಿ ಗೋಪಾಲನಾಯಕ್ ಮುಂತಾದ ಮಹನೀಯರ ಸಾವಿಗೆ ಶೋಕ ವ್ಯಕ್ತಪಡಿಸಲಾಯಿತು.

ಈಸೂರಿನ ಘಟನೆಯಲ್ಲಿ ನೇಣುಗಂಬವೇರಿದವರಿಗೆ, ಶಿಕ್ಷೆಗೊಳಗಾದವರಿಗೆ, ಶ್ರವಣಬೆಳಗೊಳ, ತಿಪಟೂರು ಘಟನೆಯಲ್ಲಿ ನೊಂದವರಿಗೆ ಶೋಕ ವ್ಯಕ್ತಪಡಿಸಲಾಯಿತು.

ಸೆರೆಮನೆಯಲ್ಲಿರುವ ಎಲ್ಲಾ ರಾಜಕೀಯ, ಖೈದಿಗಳನ್ನು ಬಿಡುಗಡೆ ಮಾಡಬೇಕೆಂದು ಒತ್ತಾಯಿಸಲಾಯಿತು.

ಗಾಂಧೀಜಿಯವರ ರಚನಾತ್ಮಕ ಕಾರ್ಯಗಳನ್ನು ಮುಂದುವರಿಸಲು ತೀರ್ಮಾನಿಸಲಾಯಿತು. ನಂತರ ಸಭೆ ರಾತ್ರಿ ಏಳು ಗಂಟೆಗೆ ಮುಕ್ತಾಯಗೊಂಡಿತು.

ರಾತ್ರಿ ಎಂಟು ಗಂಟೆಗೆ ಸಾರ್ವಜನಿಕ ಸಭೆಯು ಹೊಸ ಬಸ್‌ಸ್ಟ್ಯಾಂಡ್ ಮೈದಾನದಲ್ಲಿ ರಾಷ್ಟ್ರಗೀತೆ ಹಾಗೂ 'ವಂದೇ ಮಾತರಂ' ಗೀತೆಯೊಡನೆ ಪ್ರಾರಂಭಗೊಂಡಿತು. ಸುಮಾರು ೧೫೦೦ ಜನ ಪುರುಷರು ಹಾಗೂ ೫೦೦ ಜನ ಸ್ತ್ರೀಯರು ಭಾಗವಹಿಸಿದ್ದರು. ಮಾಲಿ ಮರಿಯಪ್ಪನವರು ಎಲ್ಲರಿಗೂ ಸ್ವಾಗತ ಕೋರಿದರು. ಕೆ.ಟಿ. ಭಾಷ್ಯಂ, ಹೆಚ್.ಸಿ. ದಾಸಪ್ಪ, ಹೆಚ್. ಸಿದ್ಧಯ್ಯ ಮಾತನಾಡಿ ಎಸ್. ನಿಜಲಿಂಗಪ್ಪನವರ ಸರಳ ಸಜ್ಜನಿಕೆಯನ್ನು ಬಣ್ಣಿಸಿದರು. ಸ್ವಾಗತ ಸಮಿತಿಯ ಬಿ.ಸಿ. ನಂಜುಂಡಪ್ಪ ಮಾತನಾಡಿ, ಅಧಿವೇಶನದ ಯಶಸ್ಸಿಗೆ, ಸೈಯ್ಯದ್ ಮಹಮದ್, ಗಂಗಾಧರರಾವ್ ದೇಶಪಾಂಡೆ, ಎಸ್.ಎಸ್. ಪರ್ವೀಕರ್, ಮುತ್ತುರಂಗ ಮುದಲಿಯಾರ್, ಡಿ.ಹೆಚ್. ಚಂದ್ರಶೇಖರಯ್ಯ ಅವರು ಕಳುಹಿಸಿರುವ ಸಂದೇಶ ವಾಚಿಸಿದರು. ನಿಜಲಿಂಗಪ್ಪನವರು ಅಧ್ಯಕ್ಷೀಯ ನುಡಿಗಳ ನ್ನಾಡುತ್ತಾ ಕೇಂದ್ರದಲ್ಲಿ ಜನಪ್ರಿಯ ಸರ್ಕಾರ ರಚಿಸಲು ಸೆರೆಮನೆಯಲ್ಲಿರುವ ಎಲ್ಲಾ ನಾಯಕರನ್ನು ಬಿಡುಗಡೆ ಮಾಡಬೇಕು, ಸ್ವಾತಂತ್ರ್ಯ ಚಳವಳಿ ಈ ಸ್ಥಿತಿ ತಲುಪಲಿಕ್ಕೆ ತಮ್ಮ ತನುಮನ ಸಮರ್ಪಿಸಿರುವವರಿಗೆಲ್ಲ ನನ್ನ ನಮನಗಳನ್ನು ಸಲ್ಲಿಸುತ್ತೇನೆ ಎಂದರು.[೧೦]

ದಿನಾಂಕ ೧೭-೦೬-೧೯೪೫ ರಂದು ಅಧಿವೇಶನದ ಅಂತಿಮ ದಿನದ ಕಾರ್ಯಕ್ರಮಗಳು ಧ್ವಜವಂದನೆಯೊಡನೆ ಮುಂಜಾವಿನಲ್ಲಿ ಪ್ರಾರಂಭಗೊಂಡವು. ಹೊಸ ಬಸ್ ಸ್ಟ್ಯಾಂಡ್ ಮೈದಾನದಲ್ಲಿ ಪ್ರಾರಂಭಗೊಂಡ ಸಭೆಯಲ್ಲಿ ೪೦೦ಕ್ಕೂ ಹೆಚ್ಚು ಜನ ಭಾಗವಹಿಸಿದ್ದರು. ಹೆಚ್. ಸಿದ್ಧಯ್ಯನವರು ಮಾತನ್ನಾಡಿ ಶೀಘ್ರದಲ್ಲಿಯೇ ಮಹಾರಾಜರು ಜವಾಬ್ದಾರಿ ಸರ್ಕಾರ ದಯಪಾಲಿಸುತ್ತಾರೆಂದು ನಂಬೋಣ ಎಂದರು. ಮಾಲಿ ಮರಿಯಪ್ಪನವರು ಮಾತನಾಡಿ ನಾವೆಲ್ಲರೂ ಐಕ್ಯತೆಯಿಂದ ಕೆಲಸ ಮಾಡಿದರೆ ಜಯ ಕಟ್ಟಿಟ್ಟ ಬುತ್ತಿ ಎಂದರು. ಬೆಳಿಗ್ಗೆ ೯-೩೦ಕ್ಕೆ ಸಭೆ ಮುಕ್ತಾಯಗೊಂಡಿತು. ತುಮಕೂರಿನ ರಾಜ ಟಾಕೀಸ್‌ನಲ್ಲಿ ಪೂರ್ವಾಹ್ನ ೧೦-೪೫ಕ್ಕೆ ಎಸ್. ನಿಜಲಿಂಗಪ್ಪ ನವರ ಅಧ್ಯಕ್ಷತೆಯಲ್ಲಿ ಸಬ್‌ಜೆಕ್ಟ್ ಕಮಿಟಿ ಸಭೆ ಪ್ರಾರಂಭ ವಾಯಿತು. ಹೆಚ್.ಕೆ. ವೀರಣ್ಣಗೌಡ, ಕೆ.ಟಿ. ಭಾಷ್ಯಂ, ಕೆ.ಸಿ. ರೆಡ್ಡಿ, ಕೆ. ಪಟ್ಟಾಭಿರಾಮನ್, ಹೆಚ್.ಸಿ. ದಾಸಪ್ಪ, ಮುಂತಾದ ೭೫ ಜನ ಕಾಂಗ್ರೆಸ್ ಮುಖಂಡರು ಭಾಗವಹಿಸಿದ್ದು, ಅನೇಕ ವಿಷಯಗಳನ್ನು ಚರ್ಚಿಸಿ ನಿರ್ಣಯ ತೆಗೆದುಕೊಂಡರು. ಹೆಚ್. ಸಿದ್ಧಯ್ಯನವರು ಮಾತನ್ನಾಡಿ ಸಂಸ್ಥಾನದ ಸರ್ಕಾರ ಕಾಂಗ್ರೆಸಿಗರ ವಿರುದ್ಧ ಹೊರಡಿಸಿರುವ ೪೫ ಎಂ.ಪಿ.ಆರ್. ಒಳಗೊಂಡಂತೆ ಎಲ್ಲಾ ನಿಷೇದಾಜ್ಞೆಗಳನ್ನು ಹಿಂತೆಗೆದು ಕೊಂಡು ಕೂಡಲೇ ಸೆರೆಯಲ್ಲಿರುವವರನ್ನೆಲ್ಲ ಬಿಡುಗಡೆ ಮಾಡಬೇಕೆಂದರು. ಎಲ್ಲರೂ ಕರತಾಡನದ ಮುಖಾಂತರ

ಇದನ್ನು ಅಂಗೀಕರಿಸಿದರು. ಕೆ.ಜಿ.ಎಫ್. ಹಾಗೂ ಬೆಂಗಳೂರಿನ ಕಾರ್ಮಿಕರ ವಿರುದ್ಧ ವಿಧಿಸಿರುವ ಆರೋಪ, ಶಿಕ್ಷೆಗಳನ್ನು ರದ್ದುಗೊಳಿಸಿ ಅವರ ಕುಟುಂಬಗಳು ಬೀದಿ ಪಾಲಾಗುವುದನ್ನು ತಪ್ಪಿಸಬೇಕೆಂಬ ನಿರ್ಣಯವನ್ನು ಕೆ.ಆರ್. ಮಾಧವರಾವ್ ನೇತೃತ್ವದಲ್ಲಿ ಅಂಗೀಕರಿಸಲಾಯಿತು. ಕಾರ್ಮಿಕ ನಾಯಕರಾದ ಕೆ.ಎಸ್. ಕುಮಾರನ್, ೪೫ ಎಂ.ಪಿ.ಆರ್. ನಿಂದಾಗಿ ನಾವು ಅಧ್ಯಕ್ಷರನ್ನ ಮೆರವಣಿಗೆಯಲ್ಲಿ ಕರೆತರಲು ಸಾಧ್ಯವಾಗಲಿಲ್ಲ. ಈ ನಿರ್ಬಂಧವನ್ನು ಧಿಕ್ಕರಿಸಲು ಇದೇ ಸುಸಂದರ್ಭ ಇದರ ವಿರುದ್ಧ ಹೋರಾಟವನ್ನು ಅಧಿವೇಶನ ಮುಗಿದ ಮರುದಿನದಿಂದಲೇ ಪ್ರಾರಂಭ ಮಾಡೋಣ ಎಂದರು. ಟಿ. ಸುಬ್ರಹ್ಮಣ್ಯಂ ಮತ್ತು ಕೆ.ಟಿ. ಭಾಷ್ಯಂ ನಾವು ಮುಂದೆ ಜವಾಬ್ದಾರಿ ಸರ್ಕಾರ ಸ್ಥಾಪನೆಗಾಗಿ ಸೆಣಸಬೇಕಾಗಿದೆ, ಅದು ನಮ್ಮ ಮುಖ್ಯ ಗುರಿಯಾಗಲಿ ಎಂದರು. ಮೂರು ವರ್ಷಗಳ ಹಿಂದೆ ಹೊರಡಿಸಿದ್ದ ಕೆಲವು ನಿಷೇದಾಜ್ಞೆಗಳನ್ನು ಸರ್ಕಾರ ಮುಂದುವರಿಸುತ್ತಿದೆ, ಕೆಲವರಿಗೆ ಇವುಗಳಿಂದ ತುಂಬಾ ತೊಂದರೆಯಾಗಿದೆ, ಸದ್ಯದ ಪರಿಸ್ಥಿತಿ ತಿಳಿಯಾಗಿರುವುದರಿಂದ ಅವೆಲ್ಲವನ್ನು ಹಿಂತೆಗೆದುಕೊಳ್ಳುವಂತೆ ಒತ್ತಾಯಿಸಲಾಯಿತು.

ಪ್ರಸ್ತುತ ಸಭೆಯು ಹೊಳೆನರಸಿಪುರ ಹಾಗೂ ನೆಹರೂ ನಗರದ ಅಧಿವೇಶನಗಳಲ್ಲಿ ತೆಗೆದುಕೊಂಡಿದ್ದ ತೀರ್ಮಾನದಂತೆಯೇ ಇಲ್ಲಿಯೂ ತಕ್ಷಣ ಜವಾಬ್ದಾರಿ ಸರ್ಕಾರ ಸ್ಥಾಪನೆಗೆ ಒತ್ತಾಯಿಸುತ್ತದೆ ಎಂದು ಕೆ.ಟಿ. ಭಾಷ್ಯಂ ನಿರ್ಣಯ ಸೂಚಿಸಿದರು. ಎನ್.ಸಿ. ತಿಮ್ಮಾರೆಡ್ಡಿ ಇದಕ್ಕೆ ಧ್ವನಿಗೂಡಿಸಿದರು.

ಈ ವಿಶೇಷ ಅಧಿವೇಶನದ ಮೂಲಕ ಸರ್ಕಾರಕ್ಕೆ ಎಚ್ಚರಿಕೆ ನೀಡಲಾಗುತ್ತಿದೆ. ಕಾಂಗ್ರೆಸ್ಸಿಗರೊಡನೆ ಸಮಸ್ಯೆಯ ಇತ್ಯರ್ಥಕ್ಕೆ ಸಹಕರಿಸಬೇಕು, ಇಲ್ಲವಾದಲ್ಲಿ ಇದಕ್ಕೆ ದುಬಾರಿ ಬೆಲೆ ತೆರಬೇಕಾಗುತ್ತದೆ ಎಂದು ಸಭೆ ನಿರ್ಣಯಿಸಿತು. ಸಭೆಯಲ್ಲಿ ಕಳೆದ ಮೂರು ವರ್ಷಗಳ, ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದ ಬೆಳವಣಿಗೆಗಳನ್ನು ಚರ್ಚಿಸಿ ಯುದ್ಧದಿಂದಾಗಿ ಭಾರತಕ್ಕಾಗಿರುವ ನಷ್ಟ, ಜನರು ಅನುಭವಿಸಿರುವ ತೊಂದರೆಗಳನ್ನು ಸರಿಪಡಿಸಿ ಭಾರತವನ್ನು ಪುನರ್ನಿರ್ಮಿಸ ಬೇಕಾದರೆ ಜವಾಬ್ದಾರಿ ಸರ್ಕಾರ ಅತ್ಯಗತ್ಯ, ಸಂಸ್ಥಾನದಲ್ಲಿ ದಿವಾನರು ಹಾಗೂ ಮಹಾರಾಜರು ಸಹಕರಿಸಿ ಜನರ ಸರ್ಕಾರ ಸ್ಥಾಪನೆಗೆ ಅನುವು ಮಾಡಿಕೊಡಬೇಕೆಂದು ಕೆ. ಹನುಮಂತಯ್ಯನವರು ನಿರ್ಣಯಿಸಿದರು. ಮೇಲಿನ ತೀರ್ಮಾನಗಳೊಡನೆ ಸಭೆ ಅಪರಾಹ್ನ ೨-೧೦ಕ್ಕೆ ಮುಕ್ತಾಯವಾಯಿತು.

ಮೂರನೇ ದಿವಸದ ಅಂತಿಮ ಸಭೆ ಸಂಜೆ ೭-೪೦ಕ್ಕೆ ಬಸ್‌ಸ್ಟ್ಯಾಂಡ್ ಮೈದಾನದಲ್ಲಿ ಏರ್ಪಟ್ಟು ಸುಮಾರು ೨೦೦೦ ಜನ ಭಾಗವಹಿಸಿದ್ದರು. ಅಧಿವೇಶನದ ಅಧ್ಯಕ್ಷರಾದ ಎಸ್. ನಿಜಲಿಂಗಪ್ಪನವರು ಸಬ್‌ಜೆಕ್ಟ್ ಕಮಿಟಿಯಲ್ಲಿ ತೆಗೆದುಕೊಂಡ ನಿರ್ಣಯಗಳನ್ನು ಜನರಿಗೆ ತಿಳಿಸಿದರು. ಎನ್.ಸಿ. ತಿಮ್ಮಾರೆಡ್ಡಿ ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮಗಳನ್ನು ಕುರಿತು ವಿವರಿಸಿದರು. ಕೆ. ಹನುಮಂತಯ್ಯನವರು ಮತ್ತೊಮ್ಮೆ ಜವಾಬ್ದಾರಿ ಸರ್ಕಾರ ಸ್ಥಾಪನೆಗೆ ಒತ್ತಾಯಿಸಿದರು. ಅಂತಿಮವಾಗಿ ಅಧಿವೇಶನದ ಅಧ್ಯಕ್ಷರು ಮುಂದಿನ ಸಮಾವೇಶ ಹಾಸನದಲ್ಲಿ ಜರುಗುವುದೆಂದು ಘೋಷಿಸಿದರು.[೧೧] ರಾತ್ರಿ ೧೦ ಗಂಟೆಗೆ ವಂದೇ ಮಾತರಂ ಹಾಗೂ ಜಯಕಾರಗಳೊಡನೆ ಅಧಿವೇಶನದ ಕೊನೆ ಸಭೆ ಮುಕ್ತಾಯಗೊಂಡಿತು.

ಈ ಅಧಿವೇಶನದ ಮುಖ್ಯ ಫಲಿತಾಂಶವೆಂದರೆ ಎಸ್. ನಿಂಜಲಿಂಗಪ್ಪ ನೇತೃತ್ವದಲ್ಲಿ ಜರುಗಿದ ಈ ವಿಶೇಷ ಅಧಿವೇಶನ ಸಂಸ್ಥಾನದ ನಾಯಕರ ಸಂಘಟನೆಗೆ ಜವಾಬ್ದಾರಿ ಸರ್ಕಾರ ಸ್ಥಾಪನೆ ಚಳುವಳಿ ಕಾವು ಇಮ್ಮಡಿಸುವುದಕ್ಕೆ ಪೂರಕವಾಯಿತು. ಗಾಂಧೀಜಿಯವರ ಕಾರ್ಯಕ್ರಮ, ಹೋರಾಟ, ಶಾಂತಿ, ಶಿಸ್ತು, ಸಮನ್ವಯತೆಗಳನ್ನು ಬಿಂಬಿಸಿತು. ಎಸ್. ನಿಜಲಿಂಗಪ್ಪನವರ ಮೇರು ವ್ಯಕ್ತಿತ್ವ ಈ ಅಧಿವೇಶನದಿಂದ ಹೊರಹೊಮ್ಮಿತು. ಅಷ್ಟೇ ಅಲ್ಲದೆ ಪ್ರಭುತ್ವವಾದಿ ಹಾಗೂ ಅಧಿಕಾರಶಾಹಿ ಕ್ರಮಗಳನ್ನು ಪ್ರತಿಭಟಿಸುವ ಮೂಲಕ ಜನಾಭಿಪ್ರಾಯವನ್ನು ಮನ್ನಿಸಬೇಕಾದ ಒತ್ತಡವನ್ನು ಹುಟ್ಟುಹಾಕಿತು. ಮೈಸೂರು ಚಲೋ ಚಳವಳಿಗೆ ವಿಸ್ತಾರ ಹಾಗೂ ಒಗ್ಗಟ್ಟಿನ ನೆಲೆಗಟ್ಟನ್ನು ಸೃಷ್ಟಿಸಿಕೊಟ್ಟಿತು. ಮಿಗಿಲಾಗಿ ಮುಂದಿನ ಕರ್ನಾಟಕ ರಾಜಕಾರಣಕ್ಕೆ ದಿಕ್ಸೂಚಿಯಾಗಿ ಗಂಭೀರವಾಗಿ ಹೋರಾಟ ರೂಪಿಸಲು ವೇದಿಕೆ ಹುಟ್ಟು ಹಾಕಿತು.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಡಾ. ಸೂರ್ಯನಾಥ ಕಾಮತ್, (ಪ್ರ.ಸಂ.) **ಬೆಂಗಳೂರು ಗ್ರಾಮಾಂತರ ಜಿಲ್ಲಾ ಗ್ಯಾಸೆಟಿಯರ್,** ಪುಟ-೬೫, ಕರ್ನಾಟಕ ಸರ್ಕಾರ-೧೯೮೯.

೨. ಪ್ರೊ. ಕೆ. ವೀರತಪ್ಪ, **ಮೈಸೂರು ಸಂಸ್ಥಾನದಲ್ಲಿ ಸ್ವಾತಂತ್ರ್ಯ ಚಳವಳಿ,** ವಿಜಯರವಿ ಪ್ರಕಾಶನ, ಬೆಂಗಳೂರು-೧೯೭೭, ಪುಟ ೧೦೦.

೩. ಪ್ರೊ. ಡಿ. ಲಿಂಗಯ್ಯ, **ಸತ್ಯಾಗ್ರಹಿಗಳ ಸಂದರ್ಶನ,** ದಿನಕರ ಪ್ರಕಾಶನ ೧೯೯೮, ಎಂ.ಎನ್. ಜೋಹಿಕ್ಷರ ಸಂದರ್ಶನ ಪುಟ ೨೭.

೪. ಪೂರ್ವೋಕ್ತ, ಪುಟ ೪೫, ೫. ಅದೇ., ಪುಟ ೬೬. ೬. ಅದೇ, ಪುಟ ೮೪., ೭. ಅದೇ, ಪುಟ ೯೪., ೮.ಅದೇ, ಪುಟ ೧೦೧.

೯. Special Branch Abstract, No. 23/45, Date 9-6-1945, Page 95, Regional Archives, Mysore.

೧೦. Special Branch Abstract, No. 24/45, Date 16-6-1945, page 99-101, Regional Archives, Mysore.

೧೧. Special Branch Abstract, No. 25/45, Date 23-6-1945, page 106-109, Regional Archives, Mysore.

೧೨೪

ಚಿಕ್ಕಮಗಳೂರು ಜಿಲ್ಲೆಯಲ್ಲಿ ಬ್ಯಾಂಕಿಂಗ್ ಉದ್ಯಮದ ಆರಂಭ ಮತ್ತು ಬೆಳವಣಿಗೆ ಪ್ರಾಥಮಿಕ ಹಂತದ ಸಮೀಕ್ಷೆ

ಎಂ.ಬಿ. ಪಾಟೀಲ್*

ಇಂದು ಆಧುನಿಕ ಬ್ಯಾಂಕಿಂಗ್ ವ್ಯವಸ್ಥೆ ಒಂದು ಉದ್ಯಮವಾಗಿ ಬೆಳೆದಿದ್ದು ದೇಶದ ಆರ್ಥಿಕ ಮುನ್ನಡೆಯಲ್ಲಿ ಅತ್ಯಂತ ಸಕ್ರಿಯವಾದ ಪಾತ್ರವನ್ನು ವಹಿಸುತ್ತಿದೆ. ಸ್ವಾತಂತ್ರ್ಯದ ಇತ್ತೀಚಿನ ದಶಕಗಳಲ್ಲಿ ಬ್ಯಾಂಕಿಂಗ್ ಉದ್ಯಮ ಸಮಾಜಮುಖಿ ಯಾಗಿ ರೂಪಗೊಂಡಿದ್ದು ವ್ಯಕ್ತಿಯ ಮತ್ತು ಸಮಷ್ಟಿಯ (Micro and Macro) ಆರ್ಥಿಕ ಮುನ್ನಡೆಯಲ್ಲಿ ಸಕ್ರಿಯವಾಗಿ ಸ್ಪಂದಿಸುವ ಮೂಲಕ ಈ ಹಿಂದಿನ ಪರಿಕಲ್ಪನೆಯಾಗಿದ್ದ (Class Banking) ಆಯ್ದ ಕೆಲವರಿಗೆ ಮೀಸಲಾಗಿದ್ದ ವ್ಯವಸ್ಥೆ ಇಂದು (Mass Banking) ಸಾರ್ವತ್ರಿಕ ಬ್ಯಾಂಕಿಂಗ್ ವ್ಯವಸ್ಥೆಯಾಗಿ ಮುಂದುವರೆಯುತ್ತಿದೆ. ಇಂದು ಬ್ಯಾಂಕಿಂಗ್ ಸೇವೆ ಸಾರ್ವತ್ರಿಕ ಸೇವೆಯಾಗಿದ್ದು ಜನಸಾಮಾನ್ಯರಿಗೂ ದೊರೆಯುತ್ತಿದೆ. ಕರ್ನಾಟಕವನ್ನು ಒಳಗೊಂಡಂತೆ ಭಾರತದಲ್ಲೂ ಸಂಘಟಿತ ವಲಯದ (Organised Sector) ಬ್ಯಾಂಕಿಂಗ್ ವ್ಯವಸ್ಥೆಯ ಆರಂಭದ ಹೆಜ್ಜೆ ಗುರುತುಗಳನ್ನು ೧೮ನೇ ಶತಮಾನದ ಆರಂಭದ ದಶಕಗಳಿಂದ ದಾಖಲೆಗಳ ಮೂಲಕ ಗುರುತಿಸಬಹುದು. ಉತ್ತರ ಭಾರತದಲ್ಲಿ ೧೮೬೫ರ ಸುಮಾರಿಗೆ ಖಾಸಗಿ ವಲಯದ ಬ್ಯಾಂಕುಗಳು ಆರಂಭ ಗೊಂಡವು.

ಈಸ್ಟ್ ಇಂಡಿಯಾ ಕಂಪೆನಿಯ ಹಣಕಾಸು ಮತ್ತು ಆಡಳಿತದ ಸಹಭಾಗಿತ್ವದಲ್ಲಿ ೧೮೦೬ ರಲ್ಲಿ ಕಲಕತ್ತಾದಲ್ಲಿ ಆರಂಭಗೊಂಡ Bank of Bengal; ೧೮೪೦ರಲ್ಲಿ ಬೊಂಬಾಯಿಯಲ್ಲಿ ಆರಂಭಗೊಂಡ Bank of Bombay; ಮತ್ತು ೧೮೪೩ರಲ್ಲಿ ಮದ್ರಾಸಿನಲ್ಲಿ ಆರಂಭಗೊಂಡ ಈ Bank of Madras; ಈ ಮೂರು ಪ್ರೆಸಿಡೆನ್ಸಿ ನಗರ (Presidency towns) ಗಳಲ್ಲಿ ಆರಂಭಗೊಂಡ ಅಂದಿನ ಬ್ಯಾಂಕಿಂಗ್ ವ್ಯವಸ್ಥೆ ಬದಲಾದ ಆಡಳಿತಾತ್ಮಕ ಮತ್ತು ರಾಜಕೀಯ ಸನ್ನಿವೇಶಗಳಿಗೆ ಹೊಂದಿಕೊಂಡು ಆರಂಭದಲ್ಲಿ ಅನೇಕ ಏರಿಳಿತಗಳನ್ನು ಅನುಭವಿಸಿ, ಇಂದು ಸರ್ಕಾರದ ನಿಯಂತ್ರಣದಲ್ಲಿ (ರಾಷ್ಟ್ರೀಕರಣಗೊಂಡು) ಮುಂದು ವರೆಯುತ್ತಿದೆ.

ಮುಂಬಾಯಿ ಕರ್ನಾಟಕ ಪ್ರದೇಶದಲ್ಲಿ ಮುಂಬಾಯಿ ಪ್ರೆಸಿಡೆನ್ಸಿ ಬ್ಯಾಂಕಿನ ಒಂದು ಶಾಖೆಯನ್ನು ೧೮೬೩ ರಲ್ಲಿ ಧಾರವಾಡದಲ್ಲಿ ಆರಂಭಿಸಲಾಯಿತು. ಇದೇ ಕರ್ನಾಟಕದಲ್ಲಿ ಆರಂಭಗೊಂಡ ಪ್ರಥಮ ಸಂಘಟಿತ ವಲಯದ ಸರ್ಕಾರಿ ಬ್ಯಾಂಕು ಎಂದು ಹೇಳಬಹುದು. ಸ್ಥಳೀಯ ಕಾಟನ್ ರಫ್ತು ವ್ಯಾಪಾರ ಅನುಕೂಲತೆಗೆ ಈ ಶಾಖೆಯನ್ನು ಆರಂಭಿಸ ಲಾಯಿತು. ಅದರಂತೆ ಹಳೇ ಮೈಸೂರು ಪ್ರದೇಶದಲ್ಲಿ (ದಕ್ಷಿಣ ಕರ್ನಾಟಕ) ಬೆಂಗಳೂರಿನ ದಂಡು ಪ್ರದೇಶದಲ್ಲಿ ೧೮೬೫ರಲ್ಲಿ ಮದ್ರಾಸ್ ಪ್ರೆಸಿಡೆನ್ಸಿ ಬ್ಯಾಂಕಿನ ಒಂದು ಶಾಖೆಯನ್ನು ಆರಂಭಿಸಲಾಯಿತು. ಕಾಲಕ್ರಮೇಣ ಈ ಎರಡೂ ಬ್ಯಾಂಕುಗಳು ಇಂದಿನ ಕರ್ನಾಟಕದ ವಿವಿಧ ಪ್ರಮುಖ ವಾಣಿಜ್ಯ ನಗರಗಳಲ್ಲಿ ಅಂದಿನ ಯುರೋಪಿನ ವ್ಯಾಪಾರಿ ಕಂಪೆನಿಗಳಿಗೆ, ಸ್ಥಳೀಯ ವ್ಯಾಪಾರಿಗಳಿಗೆ, ಕೈಗಾರಿಕೆಗಳಿಗೆ ಅನುಕೂಲವಾಗುವ ದೃಷ್ಟಿಯಿಂದ ಶಾಖೆಗಳನ್ನು ಆರಂಭಿಸಿದವು. ಉದಾ: ಮಂಗಳೂರು (೧೮೬೮), ಬೆಳಗಾವಿ (೧೮೬೭), ಹುಬ್ಬಳ್ಳಿ (೧೮೭೦), ಕುಮಟಾ (೧೮೭೨), ಬಳ್ಳಾರಿ (೧೮೭೬).

ಸರ್ಕಾರಿ ವಲಯದ ಈ ಬ್ಯಾಂಕ್‌ಗಳು ಅಲ್ಲದೇ ಖಾಸಗಿ ವಲಯದಲ್ಲಿಯೂ (Joint Stock Company) ಕೂಡು ಬಂಡವಾಳ ಸಂಸ್ಥೆಗಳನ್ನು ಅಂದಿನ (೧೮೬೬) ಕಂಪೆನಿ ಕಾನೂನಿನನ್ವಯ ರಚಿಸಿಕೊಂಡು ಬ್ಯಾಂಕಿಂಗ್ ಉದ್ಯಮ ಗಳನ್ನು ಸ್ಥಳೀಯವಾಗಿ ಆರಂಭಿಸಲಾಯಿತು. ಅಂದಿನ ಬ್ಯಾಂಕಿಂಗ್ ಉದ್ಯಮ ಇಂದಿನಂತೆ ಭಾರತೀಯ ರಿಜರ್ವ್ ಬ್ಯಾಂಕ್ ೧೯೩೫ರಲ್ಲಿ ಆರಂಭ ಆಗುವವರೆಗೆ ಅತಿಯಾದ ನಿಯಂತ್ರಣ, ನಿಬಂಧನೆ ಮುಂತಾದವುಗಳಿಗೆ ಒಳಪಟ್ಟಿರಲಿಲ್ಲ. ಅಂದಿನ ಕಂಪೆನಿಗಳು ಕೈಗೊಂಡ ಅನೇಕ ವ್ಯವಹಾರಗಳ ಪೈಕಿ ಅಂದರೆ ಉತ್ಪಾದನೆ, ವಿತರಣೆ, ವ್ಯಾಪಾರ, ಲೇವಾದೇವಿ

* # ೩೫೬, ಶ್ರೀ ರೇಣುಕಾ, ಸಿ.ಟಿ. ಬೆಡ್, ೬ನೇ ಕ್ರಾಸ್, ಬನಶಂಕರಿ ೨ನಧ ಹಂತ, ಬೆಂಗಳೂರು-೫೬೦೦೭೦.

ಮುಂತಾದವುಗಳೊಂದಿಗೆ ಪೂರಕವಾಗಿ ಬ್ಯಾಂಕಿಂಗ್ ವ್ಯವಹಾರಗಳನ್ನು ನಿರ್ವಹಿಸುತ್ತಿದ್ದವು. ಭಾರತದಲ್ಲೂ ಪ್ರಥಮ ನಿಯಂತ್ರಣ ಆರಂಭಗೊಂಡದ್ದು ೧೯೪೯ರಲ್ಲಿ ಜಾರಿಯಲ್ಲಿ ಬಂದ ಬ್ಯಾಂಕಿಂಗ್ ಕಂಪೆನಿಗಳ ನಿಯಂತ್ರಣ ಕಾನೂನಿನ ಅನ್ವಯ.

ರಾಜ್ಯದಲ್ಲಿ ಖಾಸಗಿ ವಲಯದಲ್ಲಿ ಮೂಡಿಬಂದ ಪ್ರಥಮ ವಾಣಿಜ್ಯ ಬ್ಯಾಂಕುಗಳು ಎಂದರೆ ಬೆಂಗಳೂರಿನಲ್ಲಿ ಆರಂಭಗೊಂಡ ಬೆಂಗಳೂರು ಬ್ಯಾಂಕ್ (ಲಿ). ೧೮೬೮ ಮತ್ತು ಮೈಸೂರು ಬ್ಯಾಂಕ್ ಕಾರ್ಪೊರೇಷನ್ (೧೮೬೮) ಈ ಎರಡೂ ಪ್ರಥಮ ಖಾಸಗಿ ವಲಯದ ಬ್ಯಾಂಕ್‌ಗಳು ಹೊಂದಿದ್ದ ಬಂಡವಾಳ ಅನುಕ್ರಮವಾಗಿ ರೂ. ೭ ಲಕ್ಷ ಮತ್ತು ೨ ಲಕ್ಷ ಎಂದು ದಾಖಲೆಗಳಿಂದ ತಿಳಿದುಬರುವದು. ಈ ರೀತಿ ಕರ್ನಾಟಕದ ವಿವಿಧ ಭಾಗಗಳಿಗೂ ಸ್ಥಳೀಯ ಆಸಕ್ತ ವರ್ತಕರಿಂದ, ಉದ್ಯಮಗಳಿಂದ, ಪ್ರಜ್ಞಾವಂತ ನಾಗರಿಕರಾದ ವಕೀಲರು, ಇಂಜಿನಿಯರ್, ವೈದ್ಯರು, ಭೂಮಾಲೀಕರು, ಸಮಾಜ ಸೇವಕರು, ಧಾರ್ಮಿಕ ಮುಖಂಡರು, ರಾಜಕೀಯ ನಾಯಕರು, ಕ್ರೈಸ್ತ ಮಿಶನರಿಗಳು, ತಮ್ಮದೇ ಆದ ಸಮಾಜದ ಅನುಕೂಲತೆಗೆ ಭಾಷೆ, ಸಮುದಾಯ, ಪ್ರಾದೇಶಿಕತೆ ಮುಂತಾದ ಭಾವನಾತ್ಮಕ ವಿಚಾರಗಳಿಂದ ಸಮುದಾಯದ ಸಂಘಟನೆಗಳ ಮೂಲಕ ಖಾಸಗಿ ವಲಯದಲ್ಲಿ ಬ್ಯಾಂಕುಗಳನ್ನು ಪ್ರವರ್ತಿಸಿದರು, ಈ ಮನೋವೃತ್ತಿ ಕನಾಟಕ ಬ್ಯಾಂಕಿಂಗ್ ಉದ್ಯಮದ ತೊಟ್ಟಿಲು ಎಂದು ಕರೆಯಲಾಗುವದು. ಈ ಉದ್ಯಮ ರಾಜ್ಯಾದ್ಯಂತ ವ್ಯಾಪಕವಾಗಿ ಬೆಳೆದು ಬರಲು ಇದ್ದ ಇನ್ನೊಂದು ಪ್ರಮುಖ ಕಾರಣ ಎಂದರೆ ಆ ಸಮಯದಲ್ಲಿ (೧೯೦೫) ರಾಷ್ಟ್ರವ್ಯಾಪಿಯಾಗಿ ಹರಡಿದ್ದ ಸ್ವದೇಶಿ ಚಳವಳಿಯ ಪ್ರಭಾವವೂ ಕೂಡ ದಟ್ಟವಾಗಿತ್ತು.

ಇದರ ಇನ್ನೊಂದು ಅಡ್ಡ ಪರಿಣಾಮ ಎಂದರೆ ಅನಾರೋಗ್ಯಕರ ಪೈಪೋಟಿಯಿಂದ ನಾಯಿಕೊಡೆಗಳಂತೆ ವಿಪುಲ ಸಂಖ್ಯೆಯಲ್ಲಿ ಆರಂಭಗೊಂಡ ಈ ಹಣಕಾಸು ಸಂಸ್ಥೆಗಳು ಅನೇಕ ಕಾರಣಗಳಿಂದ, ಗುಣಾತ್ಮಕವಾಗಿ, ಆರ್ಥಿಕ ಬದ್ಧತೆ, ಸ್ಥಿರತೆ, ವೃತ್ತಿಪರತೆ, ನೈಪುಣ್ಯತೆ ಇಲ್ಲದೇ ಇದ್ದುದರಿಂದ ಬಹುಪಾಲು ಸಂಸ್ಥೆಗಳು ಹೆಚ್ಚು ಕಾಲ ಬದುಕಿ ಉಳಿಯಲು ಸಾಧ್ಯವಾಗಲ್ಲ. ವಿಶ್ಲೇಷಿಸಬಹುದು. ಮೊದಲನೆಯ ಜಾಗತಿಕ ಯುದ್ಧ ಕಾಲ ೧೯೧೪–೧೮ರ ನಂತರದ ಜಾಗತಿಕ ಆರ್ಥಿಕ ಹಿನ್ನಡೆ. ೧೯೨೯–೩೦ರ ಅವಧಿಯಲ್ಲಿ ಬಹುಪಾಲು ಸಂಸ್ಥೆಗಳು ಮುಂದುವರೆಯಲು ಸಾಧ್ಯವಾಗಲಿಲ್ಲ ಎಂದು ಇದೇ ಸಂದರ್ಭದಲ್ಲಿ ಸಹಕಾರ ಚಳವಳಿಯ ವ್ಯಾಪಕತೆಯಿಂದ ಸರ್ಕಾರದ ಪ್ರೋತ್ಸಾಹದಾಯಕ ನೀತಿಯಿಂದ ಸ್ಥಳೀಯ ನಗರ, ಅರೆನಗರ ಪ್ರದೇಶಗಳಲ್ಲಿ ವ್ಯವಸಾಯೇತರ ಉದ್ದೇಶಗಳಿಗೆ ಸಾಲ ನೀಡುವ ಕ್ರೆಡಿಟ್ ಸೊಸೈಟಿಗಳು, ಅರ್ಬನ್ ಬ್ಯಾಂಕುಗಳು ಆರಂಭಗೊಂಡವು. ಅರ್ಬನ್ ಬ್ಯಾಂಕ್‌ಗಳು ಪ್ರಬಲವಾಗಿದ್ದ ಪ್ರದೇಶಗಳಲ್ಲಿ ಖಾಸಗಿ ಬ್ಯಾಂಕುಗಳು ವ್ಯಾಪಕವಾಗಿ ಮೂಡಿಬರಲಿಲ್ಲ.

ಜಿಲ್ಲೆಯಲ್ಲಿ ಉದ್ಯಮದ ಆರಂಭ

ಈ ಜಿಲ್ಲೆಯಲ್ಲಿ ವಾಣಿಜ್ಯ ಬ್ಯಾಂಕಿಂಗ್ ಉದ್ಯಮದ ಆರಂಭವನ್ನು ೧೯೧೪ರಲ್ಲಿ ಸುಪ್ರಸಿದ್ಧ ಧಾರ್ಮಿಕ ಕೇಂದ್ರ ಶೃಂಗೇರಿ ಶಾರದಾ ಬ್ಯಾಂಕ್ C class B Non Schedule Bank ಮತ್ತು ಶ್ರೀಮಠಕ್ಕೂ ಯಾವುದೇ ರೀತಿಯ ಸಂಬಂಧದೊಂದಿಗೆ ಗುರುತಿಸಬಹುದು. ಈ ಬ್ಯಾಂಕಿನ ಸ್ಥಾಪನೆಗೆ ಇರುವ ಬಗ್ಗೆ ಹೆಚ್ಚಿನ ಮಾಹಿತಿಯು ಲಭ್ಯವಾದಲ್ಲಿ ಅದೊಂದು ಹೊಸ ಅಧ್ಯಯನಕ್ಕೆ ಅವಕಾಶವಾಗುವುದು. ಕೇವಲ ಸ್ಥಳೀಯ ಪುಣ್ಯಕ್ಷೇತ್ರದ ಅದಿದೇವತೆಯ ಭಾವನಾತ್ಮಕ ಸಂಬಂಧದಿಂದ ಹಣಕಾಸು ಸಂಸ್ಥೆಗೆ ಆ ಹೆಸರನ್ನೇ ಆಯ್ಕೆ ಮಾಡಿರಬಹುದು.

ಉದಾಹರಣೆ : ನಂಜನಗೂಡಿನಲ್ಲಿ ೧೮೮೫ರಲ್ಲಿ ಆರಂಭಗೊಂಡ ಸ್ಥಳೀಯ ಶ್ರೀಕಂಠೇಶ್ವರ ಹೆಸರಿನ ಬ್ಯಾಂಕಿನಿಂದ ವ್ಯಕ್ತವಾಗುವುದು. ಇವು ಕೇವಲ ಉದಾಹರಣೆಗಳು. ಇದೇ ಸಮಯದಲ್ಲಿ ಜಿಲ್ಲಾ ಕೇಂದ್ರ ಚಿಕ್ಕಮಗಳೂರಿನಲ್ಲಿ ೧೯೧೪ ರಲ್ಲಿ ಅಂದಿನ ರಾಜ್ಯ ಸರ್ಕಾರದಿಂದ ಪ್ರಮಾಣಿಸಲ್ಪಟ್ಟ ಮೈಸೂರು ಬ್ಯಾಂಕ್‌ನ (೧೯೧೩) ಒಂದು ಶಾಖೆಯನ್ನು ಆರಂಭಿಸಲಾಯಿತು.

ಶೃಂಗೇರಿ ಮೂಲದ ಶ್ರೀ ಶಾರದಾ ಬ್ಯಾಂಕ್ ಸುಮಾರು ೪೮ ವರ್ಷಗಳ ಸುದೀರ್ಘ ಸೇವೆಯ ನಂತರ ೧೯೬೨ ಕರ್ನಾಟಕ ಬ್ಯಾಂಕಿನೊಂದಿಗೆ ವಿಲೀನವಾಯಿತು. ವಿಲೀನ ಪೂರ್ವದಲ್ಲಿ ಶ್ರೀ ಶಾರದಾ ಬ್ಯಾಂಕು ಜಿಲ್ಲೆಯ ಜಯಪುರ, ತರಿಕೇರೆ, ಕೊಪ್ಪ ಮತ್ತು ಕಳಸಗಳಲ್ಲಿ ಒಂದೊಂದು ಶಾಖೆಗಳನ್ನು ಹೊಂದಿತ್ತು ಎಂದು ತಿಳಿದು ಬರುವದು. ಆದರೆ ಹಣಕಾಸಿನ ಬಗ್ಗೆ ವಿವರಗಳು ತಿಳಿದುಬರುವುದಿಲ್ಲ. ಆದರೆ ಜನಸಾಮಾನ್ಯರಲ್ಲಿ ಉಳಿತಾಯ ಮನೋಭಾವನೆ ಬೆಳೆಸಲು ಸಹಾಯಕವಾಗುವಂತೆ ಸಣ್ಣ ಉಳಿತಾಯ ಯೋಜನೆಯೊಂದನ್ನೇ ಆರಂಭಿಸಿತ್ತು. ತದನಂತರ ೧೯೨೩ರಲ್ಲಿ ಕೊಪ್ಪದಲ್ಲಿ ಕೊಪ್ಪ ಬ್ಯಾಂಕ್ ಎಂಬ ಸಂಸ್ಥೆಯನ್ನು ಆರಂಭಿಸಲಾಯಿತು. ಆದರೆ ಅದು ಕಾರ್ಯರೂಪದಲ್ಲಿ ಬರಲಿಲ್ಲ. ನಂತರ ಜಿಲ್ಲೆಯ ಪ್ರಮುಖ ವಾಣಿಜ್ಯ ಕೇಂದ್ರ ತರಿಕೇರಿಯಲ್ಲಿ ಮಲೆನಾಡ ಕಮರ್ಷಿಯಲ್ ಬ್ಯಾಂಕಿಂಗ್ ಕಾರ್ಪೊರೇಷನ್ [Malnad Commercial Banking Corporation] ಎಂಬ ಕಂಪೆನಿಯನ್ನು ೧೯೩೩ ಡಿಸೆಂಬರ್‌ನಲ್ಲಿ ಆರಂಭಿಸಲಾಯಿತು.

ಈ ಸಂಸ್ಥೆಯ ಸುಮಾರು ೩೨ ವರ್ಷಗಳ ಸೇವೆಯ ನಂತರ ೧೯೬೫ರಲ್ಲಿ State Bank of Mysore ನೊಂದಿಗೆ ವಿಲೀನವಾಯಿತು. ಈ ಬ್ಯಾಂಕು ನರಸಿಂಹರಾಜಪುರದಲ್ಲಿ ತನ್ನ ಒಂದು ಶಾಖೆಯನ್ನು ಹೊಂದಿತ್ತು ಎಂದು ತಿಳಿದುಬರುವುದು. ಈ ಜಿಲ್ಲೆಯಲ್ಲಿ ಆರಂಭಗೊಂಡು ಅವಸಾನ ಹೊಂದಿದ ಈ ಮೇಲಿನ ಬ್ಯಾಂಕ್‌ಗಳು ಅಲ್ಲದೇ ನೆರೆಯ ದಕ್ಷಿಣ ಕನ್ನಡ ಜಿಲ್ಲೆಯ ಮೂಲದ ಕೆನರಾ ಬ್ಯಾಂಕ್ ೧೯೩೨ರಲ್ಲಿ, ಸಿಂಡಿಕೇಟ್ ಬ್ಯಾಂಕ್ ೧೯೪೪ರಲ್ಲಿ ಜಿಲ್ಲಾ ಕೇಂದ್ರ ಚಿಕ್ಕಮಗಳೂರಿನಲ್ಲಿ ಶಾಖೆಗಳನ್ನು ಆರಂಭ ಮಾಡಿದರೆ, ಬೆಂಗಳೂರು ಮೂಲದ ವೈಶ್ಯ ಬ್ಯಾಂಕ್ ೧೯೪೬ ಜೂನ್‌ನಲ್ಲಿ ಕಡೂರಿನಲ್ಲಿ ವ್ಯವಹಾರಗಳನ್ನು ಆರಂಭ ಮಾಡಿತು. ೧೯೪೭ರ ಪೂರ್ವದಲ್ಲಿ ಜಿಲ್ಲೆಯಲ್ಲಿ ಆರು ವಾಣಿಜ್ಯ ಬ್ಯಾಂಕುಗಳ ಶಾಖೆಗಳು ಕಾರ್ಯ ನಿರ್ವಹಿಸುತ್ತಿದ್ದವು. ಮಂಗಳೂರು ಮೂಲದ ಜಯಲಕ್ಷ್ಮಿ ಬ್ಯಾಂಕ್ (೧೯೨೩) ೧೯೬೭ರಲ್ಲಿ ವಿಜಯ ಬ್ಯಾಂಕಿನೊಂದಿಗೆ ವಿಲೀನಗೊಂಡಿತು. ವಿಲೀನ ಪೂರ್ವದಲ್ಲಿ ಅದು ಜಿಲ್ಲೆಯಲ್ಲಿ ಬೀರೂರು, ಮೂಡಿಗೆರೆ ಸುತ್ತು ಚಿಕ್ಕಮಗಳೂರುಗಳಲ್ಲಿ ಶಾಖೆಗಳನ್ನು ಹೊಂದಿತ್ತು ಎಂದು ದಾಖಲೆಗಳಿಂದ ತಿಳಿದು ಬರುವುದು. ರಾಜ್ಯ ಪುನರ್ ರಚನೆಯ ನಂತರದ ವರ್ಷ ೧೯೫೭ರಲ್ಲಿ ಸಿಂಡಿಕೇಟ್ ಬ್ಯಾಂಕ್ ಜಿಲ್ಲೆಯು ತನ್ನ ಎರಡನೆಯ ಶಾಖೆಯನ್ನು ಶೃಂಗೇರಿಯಲ್ಲಿ ಕರ್ನಾಟಕ ಬ್ಯಾಂಕ್ ಕೊಪ್ಪದಲ್ಲಿ ಆರಂಭಿಸಿದರೆ ಮದ್ರಾಸ್ ಮೂಲದ ಇಂಡಿಯನ್ ಬ್ಯಾಂಕ್ ೧೯೫೯ರಲ್ಲಿ ಚಿಕ್ಕಮಗಳೂರಿನಲ್ಲಿ ಶಾಖೆಗಳನ್ನು ಆರಂಭ ಮಾಡಿದವು.

ಜಿಲ್ಲೆಯ ಅತ್ಯಂತ ಹಳೆಯ ಕೂಡು ಬಂಡವಾಳ ಸಂಸ್ಥೆ (Join Stock Co.,) ಲಭ್ಯ ಇರುವ ಮಾಹಿತಿಯ ಪ್ರಕಾರ ಇಂದಿನ ನ.ರಾ.ಪುರ (ನರಸಿಂಹರಾಜಪುರ) ಅಂದಿನ ಎಡೆಹಳ್ಳಿ ಅಗ್ರಹಾರದಲ್ಲಿ ೧೮೮೫ರಲ್ಲಿ 'ಯಡೆಹಳ್ಳಿ ನೇಟಿವ ಧರ್ಮಾಭಿವೃದ್ಧಿ ಕಂಪೆನಿ' ಎಂಬ ಕೂಡುಬಂಡವಾಳ ಸಂಸ್ಥೆಯು ರೂ. ೨೦,೦೦೦ ಅಧಿಕೃತ (೪೦೦೦ ವಿವಿಧ ಮುಖಬೆಲೆಯ ರೂ. ೨ ರಿಂದ ೭) ಬಂಡವಾಳದೊಂದಿಗೆ ಆರಂಭಗೊಂಡಿತ್ತು. ಅದರ ಮೂಲ ಉದ್ದೇಶ ಕೇವಲ ಮದುವೆ, ಉಪನಯನ ಮುಂತಾದ ಧಾರ್ಮಿಕ ಕಾರ್ಯಗಳಿಗೆ ಸದಸ್ಯರಿಗೆ ಹಣಕಾಸಿನ ನೆರವು ನೀಡುವುದಾಗಿತ್ತು. ಈ ಸಂಸ್ಥೆ ಅಂದಿನ ಕಂಪೆನಿ ಕಾನೂನು ೧೮೬೬ರ ಅನ್ವಯ ನೊಂದಾಯಿಸಲ್ಪಟ್ಟಿತ್ತು. ಹೆಚ್ಚಿನ ವಿವರಗಳು ಈ ಸ್ಥಳೀಯ ಕಂಪೆನಿಯ ಬಗ್ಗೆ ಲಭ್ಯ ಇರುವುದಿಲ್ಲ. ಇಂದಿನ ಸಾಮಾಜಿಕ ಬ್ಯಾಂಕಿಂಗ್ ಪರಿಕಲ್ಪನೆಯ ಉದ್ದೇಶ ಆಗಲೇ ಕಾರ್ಯ ರೂಪದಲ್ಲಿ ಬಂದಿತ್ತು.

ವ್ಯವಸಾಯ ಬ್ಯಾಂಕುಗಳು (Land Credit Banks)

ಭಾರತದಲ್ಲಿ ಪ್ರಪ್ರಥಮವಾಗಿ ೧೯೦೪ರಲ್ಲಿ ಸಹಕಾರಿ ಕಾನೂನಿನ ಅನ್ವಯ ವ್ಯವಸಾಯ ಪತ್ತಿನ (Agriculture Credit) ಸ.ಸ. ರಚನೆಯ ಮೂಲಕ ಬಡ ರೈತಾಪಿ ಜನರಿಗೆ ಕಡಿಮೆ ಬಡ್ಡಿ ದರದಲ್ಲಿ ಭೂಮಿಯ ಆಧಾರದ ಮೇಲೆ ಸುಲಭ ಸಾಲ ಸೌಲಭ್ಯ ಒದಗಿಸುವ ಒಂದು ವ್ಯವಸ್ಥೆಯನ್ನು ಸರ್ಕಾರದ ಆಶ್ರಯದಲ್ಲಿ ವ್ಯವಸ್ಥಿತವಾಗಿ ಆರಂಭಿಸಲಾಯಿತು. ಈ ವ್ಯವಸ್ಥೆ ಅನೇಕ ಬದಲಾವಣೆಗಳೊಂದಿಗೆ ಮುಂದುವರೆದು ಸಹಕಾರ ಚಳವಳಿಯಾಗಿ ಇಂದಿಗೂ ನಡೆದುಕೊಂಡು ಬರುತ್ತಿದೆ. ಸಹಕಾರ ವ್ಯವಸ್ಥೆ ಜಾರಿಯಲ್ಲಿ ಬರುವ ಹಲವಾರು ದಶಕಗಳ ಪೂರ್ವದಲ್ಲಿ, ಅಂದಿನ ಬ್ರಿಟೀಷ್ ಸರ್ಕಾರ ಭಾರತದ ರೈತರ ಸ್ಥಿತಿಗತಿ ಸುಧಾರಿಸಲು ಮತ್ತು ಖಾಸಗಿ ಸಾಹುಕಾರರ ಆರ್ಥಿಕ, ಸಾಮಾಜಿಕ ಶೋಷಣೆಯಿಂದ ಬಡ ರೈತರನ್ನು ದೂರ ಮಾಡಲು ಸುಧಾರಣಾ ಕ್ರಮವಾಗಿ ತಕಾವಿ ಸಾಲ ಕಾನೂನು ೧೮೭೬ರಿಂದ ಆರಂಭಗೊಂಡು ೧೮೮೪ರ ರೈತರ ವ್ಯವಸಾಯ ಸಾಲಗಳ ಕಾನೂನುವರೆಗೆ ಹಲವಾರು ಕಾನೂನುಗಳನ್ನು ಜಾರಿಯಲ್ಲಿ ತರಲಾಯಿತು. ಆದರೆ ಈ ಕಾನೂನಿನ ಪರಿಣಾಮ ನಿರೀಕ್ಷಿತ ಮಟ್ಟದಲ್ಲಿ ರೈತರ ಸಂಕಷ್ಟಗಳನ್ನು ದೂರ ಮಾಡಲಿಲ್ಲ.

ಈ ದಿಶೆಯಲ್ಲಿ ದೇಶಾದ್ಯಂತ ಅನೇಕ ಸಂಘಟಿತ ಪ್ರಯತ್ನಗಳು ನಡೆದವು. ಮಹಾರಾಷ್ಟ್ರದ ಪುರಂದರೆಯಲ್ಲಿ ನ್ಯಾಯಮೂರ್ತಿ ರಾನಡೆ ಮತ್ತು ವಿಲಿಯಂ ವೆಡರ್‌ಬರ್ಗ್ ಅವರಿಂದ ವ್ಯವಸಾಯ ಬ್ಯಾಂಕುಗಳು ಆರಂಭಿಸಲ್ಪಟ್ಟವು. ಅಂದಿನ ಮಾದರಿ ಮೈಸೂರು ಸರ್ಕಾರವೂ ಸಹ ೧೮೮೪ರಲ್ಲಿ ಸಹಕಾರ ಚಳವಳಿಯ ೧೦ ವರ್ಷ ಮೊದಲಿಗೆ ದಿವಾನ್ ಶೇಷಾದ್ರಿ ಅಯ್ಯರ್ ಅವರ ಕಾಲದಲ್ಲಿ ಈ ಹೊಸ ತಳಿಯ ಬ್ಯಾಂಕುಗಳನ್ನು ಪ್ರಾಯೋಗಿಕವಾಗಿ ರಾಜ್ಯಾದ್ಯಂತ ಆರಂಭಿಸಲಾಯಿತು. ಅಂದಿನ ದಿನಗಳಲ್ಲಿ ಇದೊಂದು ಹೊಸ ಬಗೆಯ ಅಂದರೆ ಅರೆ ಸಹಕಾರಿ ವ್ಯವಸ್ಥೆ ಮತ್ತು ಅರೆ ಕಂಪೆನಿ ವ್ಯವಸ್ಥೆ (Corporate) ಎರಡನ್ನೂ ಒಳಗೊಂಡ ಒಂದು ಮಿಶ್ರತಳಿಯ ಜನೋಪಕಾರಿ ವ್ಯವಸಾಯಕ್ಕೆ ಬೇಕಾದ ಸಾಲ ಸೌಲಭ್ಯಗಳನ್ನು ಸುಲಭವಾಗಿ ಸರ್ಕಾರದಿಂದ ಒದಗಿಸುವ ಪೂರಕ ವ್ಯವಸ್ಥೆಯಾಗಿತ್ತು. ಈ ಸಂಸ್ಥೆಗಳಿಗೆ ಸರ್ಕಾರ ಸಾಲ ರೂಪದಲ್ಲಿ ಅತ್ಯಂತ ಕಡಿಮೆ ಬಡ್ಡಿಯಲ್ಲಿ ಶೇ. ೪ರ ದರದಲ್ಲಿ ಬಂಡವಾಳ ಒದಗಿಸುತ್ತಿತ್ತು. ಈ ಸಂಸ್ಥೆಗಳು ಸದಸ್ಯರಿಗೆ ಜಮೀನು ಆಧಾರದ ಮೇಲೆ ಸರ್ಕಾರದ ಬಡ್ಡಿ ದರಕ್ಕಿಂತ ಸ್ವಲ್ಪ ಹೆಚ್ಚಿನ ಬಡ್ಡಿಗೆ (ಶೇ. ೫) ಸಾಲ ಒದಗಿಸುತ್ತಿತ್ತು. ಸದಸ್ಯರಿಂದಲೂ ಠೇವಣಿ ಸಂಗ್ರಹಿಸಲಾಗುತ್ತಿತ್ತು. ಸದಸ್ಯರು

ಯಾವುದೇ ಷೇರು ಬಂಡವಾಳ ಮತ್ತು ಡಿವಿಡೆಂಡ್ ಹೊಂದಲು ಅವಕಾಶ ಇರಲಿಲ್ಲ. ಈ ಸಂಸ್ಥೆಗಳ ಕಾರ್ಯನಿರ್ವಹಣೆ ಸರ್ಕಾರದ ಅನೇಕ ರಿಯಾಯತಿಗಳನ್ನು ಒದಗಿಸಿತ್ತು. ಇದು ಒಂದು ಸಹಕಾರ ಸಂಸ್ಥೆಯಂತೆ ಸ್ವಯಂ ಆಸಕ್ತಿಯಿಂದ ಯಾವುದೇ ಅಧಿಕ ಲಾಭಾಂಶ ಇಲ್ಲದೇ ಕಾರ್ಯ ನಿರ್ವಹಿಸುವ ಸಾಮೂಹಿಕ ಹಣಕಾಸು ಸಂಸ್ಥೆಯಾಗಿತ್ತು.

ಮೈಸೂರು ಸಂಸ್ಥಾನದ ಈ ಒಂದು ಪ್ರಯತ್ನವು ಯುರೋಪ್ ದೇಶಗಳ ರಾಜಕೀಯ ಮತ್ತು ಆರ್ಥಿಕ ಪಂಡಿತರ ಪ್ರಶಂಸೆಗೆ ಪಾತ್ರವಾಗಿತ್ತು. ಈ ರೀತಿಯ ಪ್ರಥಮ ಬ್ಯಾಂಕು ೧೮೯೪ರಲ್ಲಿ ಶ್ರೀರಂಗಪಟ್ಟಣ ತಾಲ್ಲೂಕಿನ ಪಾಲಹಳ್ಳಿಯಲ್ಲಿ ಎರಡನೆಯ ಸಂಸ್ಥೆ ೧೮೯೭ರಲಿ ನಂಜನಗೂಡಿನಲ್ಲಿ ಆರಂಭಿಸಲಾಯಿತು. ೧೯೦೧ರಲ್ಲಿ ಸರ್ಕಾರದ ಸಮೀಕ್ಷೆಯ ಪ್ರಕಾರ ರಾಜ್ಯಾದ್ಯಂತ ಇಂತಹ ೬೨ ವ್ಯವಸಾಯ ಬ್ಯಾಂಕುಗಳು ಆರಂಭಗೊಂಡವು. ಅತ್ಯಂತ ಹೆಚ್ಚಿನ ಸಂಖ್ಯೆಯ ಬ್ಯಾಂಕುಗಳು ೧೮ ಶಿವಮೊಗ್ಗ ಜಿಲ್ಲೆಯಲ್ಲಿ ಇದ್ದವು. ೧೮೬೦ರ ಕಂಪನಿ ಕಾನೂನಿನನ್ವಯ ಈ ಸಂಸ್ಥೆಗಳನ್ನು ರಚಿಸಲಾಗಿತ್ತು. ಅಂದಿನ ಕಡೂರು ಜಿಲ್ಲೆಯಲ್ಲಿ ಇಂತಹ ಮೂರು ಬ್ಯಾಂಕುಗಳು ಇದ್ದುದಾಗಿ ತಿಳಿದುಬರುವದು. [೧೯೪೭ರಲ್ಲಿ ಜಿಲ್ಲೆಯ ಹೆಸರನ್ನು ಚಿಕ್ಕಮಗಳೂರು ಎಂದು ಬದಲಾಯಿಸಲಾಯಿತು].

ಮೇಲಿನ ೬೨ ಬ್ಯಾಂಕುಗಳ ಪೈಕಿ ಎರಡು ಬ್ಯಾಂಕುಗಳು ಸಕಲೇಶಪುರ (ಹಾಸನ ಜಿಲ್ಲೆ) ಮತ್ತು ಇನ್ನೊಂದು ಚಿಕ್ಕಮಗಳೂರಿನಲ್ಲಿ ಕೇವಲ ಇಂಡಿಯನ್ ಕಾಫೀ ಬೆಳೆಗಾರರ ಅನುಕೂಲತೆಗಾಗಿ ಅಂದರೆ ಅವರ ಹಳೆಯ ಸಾಲ ತೀರಿಸಲು [ಯುರೋಪಿನ್ನರಿಂದ ಕಾಫೀ ತೋಟ ಖರೀದಿಗೆ ಮಾಡಿದ ಸಾಲ] ಮತ್ತು ಅದರ ಅಭಿವೃದ್ಧಿಗೆ ಸುಲಭ ಸಾಲವನ್ನು ಒದಗಿಸಲಾಗುತ್ತಿತ್ತು.

ಸಂಸ್ಥೆಗಳ ಅವಸಾನ

ಇಂತಹ ಒಂದು ಜನೋಪಯೋಗಿ ವ್ಯವಸ್ಥೆ ಮುಂಬರುವ ವರ್ಷಗಳಲ್ಲಿ ಸಂಸ್ಥೆಗಳ ಶ್ರೀಮಂತ ಸದಸ್ಯರಿಂದ ದುರುಪಯೋಗವಾಗಿ ಅನಿವಾರ್ಯವಾಗಿ ಈ ಸಂಸ್ಥೆಗಳನ್ನು ಮುಚ್ಚಬೇಕಾಯಿತು ಎಂಬುದು ತುಂಬಾ ವಿಷಾದದ ಸಂಗತಿಯಾಗಿತ್ತು. ಕಾರಣ ಈ ಸಂಸ್ಥೆಗಳು ಸದಸ್ಯರಿಗೆ ಶೇ. ೫ರಿಂದ ೬ರ ದರದಲ್ಲಿ ಸಾಲ ನೀಡುತ್ತಿದ್ದವು. ಶ್ರೀಮಂತ ರೈತರು, ದೊಡ್ಡ ಹಿಡುವಳಿದಾರರು ಈ ಸಂಸ್ಥೆಯಿಂದ ಪಡೆದ ಸಾಲವನ್ನು ಹೊರಗಿನ ಹೆಚ್ಚಿನ ಬಡ್ಡಿಯ ಲೇವಾದೇವಿಗೆ ಉಪಯೋಗಿಸಿಕೊಂಡು ಸಂಸ್ಥೆಯ ಸಾಲದ ಬಾಕಿ ಹೆಚ್ಚಿಸಿಕೊಂಡು ಸರ್ಕಾರದಿಂದ ಪಡೆದ ಸಾಲವನ್ನು ಈ ಸಂಸ್ಥೆಗಳು ಮರುಪಾವತಿ ಮಾಡುವಲ್ಲಿ ಅಲಕ್ಷ್ಯ ಮಾಡಿದ್ದರಿಂದ ಮತ್ತು ಈ ಸಂಸ್ಥೆಗಳ ಮೇಲೆ ಸರ್ಕಾರದ ಸೂಕ್ತ ನಿಯಂತ್ರಣ ಇಲ್ಲದೇ ಇದ್ದುದರಿಂದ ಕ್ರಮೇಣವಾಗಿ ಈ ಸಂಸ್ಥೆಗಳ ಸಂಖ್ಯೆ ಕಡಿಮೆಯಾಗುತ್ತಾ ೧೯೧೭ರ ಸುಮಾರಿಗೆ ಈ ಸಂಸ್ಥೆಗಳಲ್ಲಿ ಬಹುಪಾಲು ಸಮಾಪನಗೊಂಡವು. ೧೯೦೫ರ ಸುಮಾರಿಗೆ ಕಾಫೀ ಬ್ಯಾಂಕುಗಳು ಸಮಾಪನಗೊಂಡವು.

ಈ ಮಧ್ಯದಲ್ಲಿ ರಾಜ್ಯದಲ್ಲಿ ಸಹಕಾರಿ ಚಳವಳಿಯ ಸ್ವಭಾವ ಆಳವಾಗಿ ಬೇರೂರಲು ಆರಂಭಿಸಿದ್ದರಿಂದ ಮತ್ತು ಸರ್ಕಾರ ಸಹಕಾರ ಚಳುವಳಿಗೆ ಹೆಚ್ಚಿನ ಪ್ರೋತ್ಸಾಹ ದೊರೆಯುವಂತಾಯಿತು. ಇದೇ ಸಂದರ್ಭದಲ್ಲಿ ೧೯೧೦ ಸೆಪ್ಟಂಬರ್‌ನಲ್ಲಿ ಜಿಲ್ಲೆಯಲ್ಲಿ ತೋಟದ ಬೆಳೆಗಳಾದ ಚಹ, ಕಾಫೀ, ರಬ್ಬರ್, ಕೋಕೋ, ಮೆಣಸು ಮುಂತಾದ ಬೆಳೆಗಾರರಿಗೆ ಹಣಕಾಸಿನ ನೆರವು ಒದಗಿಸಲು ಸಹಾಯಕ ವಾಗುವಂತೆ Mysore Planters Suppy Co. ಚಿಕ್ಕಮಗಳೂರಿನಲ್ಲಿ ನೊಂದಾಯಿಸಲ್ಪಟ್ಟಿತು. ಈ ಸಂಸ್ಥೆ ವ್ಯಾಪಾರದ ಜೊತೆಗೆ ಬ್ಯಾಂಕುಗಳ ವ್ಯವಹಾರವನ್ನು ನಿರ್ವಹಿಸಿತ್ತು. ಈ ಕಂಪೆನಿ ಹೊಂದಿದ್ದ ಷೇರು ಬಂಡವಾಳ ರೂ. ೬೦೦೦ ಎಂದು ತಿಳಿದುಬರುವುದು.

ಸಹಕಾರಿ ವಲಯದ ಬ್ಯಾಂಕಿಂಗ್

ಮೈಸೂರು ಸಹಕಾರಿ ಕಾನೂನು ೧೯೦೫ (Mysore Co-op Societies Regulation 111 1905) ಜಾರಿಯೊಂದಿಗೆ ಮೈಸೂರು ಸಂಸ್ಥಾನದಲ್ಲಿ ದೇಶದ ಇತರೆ ಭಾಗಗಳಿಗಿಂತ ಹೆಚ್ಚು ಪ್ರಗತಿಪರ ಮತ್ತು ನಗರ ಪ್ರದೇಶಗಳಲ್ಲಿ ವ್ಯವಸಾಯೇತರ ಉದ್ದೇಶಗಳಿಗೆ ಸಾಲ ನೀಡುವ ಉದ್ದೇಶ ದಿಂದ ಕೂಡಿದ ಸಹಕಾರಿ ಸಂಸ್ಥೆಗಳನ್ನು ರಚಿಸಲು ಕಾನೂನಿನಲ್ಲಿ ಅವಕಾಶ ಮಾಡಿಕೊಡಲಾಗಿತ್ತು. ಮೇಲಾಗಿ ಸರ್ಕಾರ, ಸಹಕಾರ ಸಂಘಗಳ ಆರಂಭಕ್ಕೆ ಅನೇಕ ಪ್ರೋತ್ಸಾಹ ದಾಯಕ ಕ್ರಮಗಳನ್ನು ರೂಪಿಸಿತ್ತು. ಇದರಿಂದ ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಹಕಾರ ಚಳವಳಿಯು ಆಳವಾಗಿ ಮತ್ತು ವ್ಯಾಪಕವಾಗಿ ಹರಡಲು ಅನುಕೂಲವಾಯಿತು.

ಜಿಲ್ಲೆಯ ತರಿಕೆರೆ ತಾಲ್ಲೂಕಿನ ಕೂಡಲೂರು ಗ್ರಾಮದಲ್ಲಿ ಆರಂಭಗೊಂಡ ಆದಿಕರ್ನಾಟಕ ಪತ್ತಿನ ಸ.ಸ. ಮೈಸೂರು ರಾಜ್ಯದಲ್ಲಿಯೇ ಇಂತಹ ಒಂದು ಪ್ರಥಮ ಪ್ರಯತ್ನವಾಗಿತ್ತು ಎಂದು ದಾಖಲೆಗಳಿಂದ ತಿಳಿದುಬರುವುದು. ಇನ್ನು ಸಹಕಾರ ವಲಯದ ಬ್ಯಾಂಕಿಂಗ್‌ಗೆ ಸಂಬಂಧಪಟ್ಟಂತೆ ೧೯೦೬ರಲ್ಲಿ ಕಳಸದಲ್ಲಿ, ೧೯೦೭ರಲ್ಲಿ ಕಡೂರಿನಲ್ಲಿ, ೧೯೧೦ ಮತ್ತು ೧೯೧೬ರಲ್ಲಿ ಚಿಕ್ಕಮಗಳೂರಿನಲ್ಲಿ ಸಹಕಾರಿ ವಲಯದಲ್ಲಿ ಅರ್ಬನ್ ಬ್ಯಾಂಕಿಂಗ್ ಸಂಸ್ಥೆಗಳು ಮೂಡಿಬಂದವು.

೧೯೨೧ರಲ್ಲಿ ಕಡೂರು ಜಿಲ್ಲಾ ಕೇಂದ್ರ ಪ್ರಥಮವಾಗಿ ಸಹಕಾರಿ ಬ್ಯಾಂಕನ್ನು ಆರಂಭಿಸಲಾಯಿತು. ೧೯೫೫ರಲ್ಲಿ ಪುನರ್ ರಚಿಸಲಾಯಿತು. ೧೯೩೦ರಲ್ಲಿ ಕೊಪ್ಪ ಮತ್ತು ಕರಿಮನೆಯಲ್ಲಿ ಪ್ರಥಮವಾಗಿ ವ್ಯವಸಾಯ ಅಭಿವೃದ್ಧಿಗೆ ದೀರ್ಘಾವಧಿ ಸಾಲ ನೀಡುವ ಜಮೀನು ಅಡಮಾನ ಬ್ಯಾಂಕ್‌ಗಳು [ಇಂದು ವ್ಯವಸಾಯ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳು] ಆರಂಭಗೊಂಡವು. ಈ ರೀತಿ ಸಹಕಾರ ವಲಯದಲ್ಲಿಯೂ ಈ ಜಿಲ್ಲೆ ಉತ್ತಮ ಬ್ಯಾಂಕಿಂಗ್ ಸೇವೆಯನ್ನು ಹೊಂದಿರುವುದು.

ಗ್ರಾಮೀಣ ಉಳಿತಾಯ ಬ್ಯಾಂಕುಗಳು

ಗ್ರಾಮೀಣ ಪ್ರದೇಶಗಳಲ್ಲಿ ಉಳಿತಾಯ ಮನೋಭಾವನೆಯನ್ನು ಪ್ರೇರೇಪಿಸುವ ಮೂಲಕ ಬಂಡವಾಳ ಸಂಗ್ರಹಣೆ ಮಾಡಲು ಪೂರಕವಾಗುವಂತೆ ಕನಿಷ್ಠ ಮೂರುನೂರು (೩೦೦) ಜನಸಂಖ್ಯೆ ಇರುವ ಗ್ರಾಮಗಳನ್ನು ಆಯ್ಕೆ ಮಾಡಿಕೊಂಡು ೧೯೧೫ರ ಸುಮಾರಿಗೆ ಈ ಯೋಜನೆಯನ್ನು ಪ್ರಾಯೋಗಿಕವಾಗಿ ಅಂದಿನ ಮೈಸೂರು ಸರ್ಕಾರ ಆಯ್ದ ಐದು ಜಿಲ್ಲೆಗಳಲ್ಲಿ ಆರಂಭಿಸಿತು. ಆ ಪೈಕಿ ಕಡೂರು ಒಂದು ಜಿಲ್ಲೆಯಾಗಿತ್ತು. ಈ ಯೋಜನೆಯನ್ನು 'ಚಕ್ರವರ್ತಿ ಯೋಜನೆ' ಎಂದು ಕರೆಯಲಾಯಿತು. (ರಾಜ್ಯದ ಅಂದಿನ ಆರ್ಥಿಕ ಕಾರ್ಯದರ್ಶಿ) ಈ ಯೋಜನೆಯ ಅನ್ವಯ ಪ್ರತಿ ವ್ಯಕ್ತಿಯಿಂದ ತಿಂಗಳಿಗೆ ಕನಿಷ್ಠ ಒಂದು ಆಣೆ ಇಂದ ಗರಿಷ್ಠ ಐದು ರೂಪಾಯಿವರೆಗೆ ಠೇವಣಿ ಸಂಗ್ರಹ ಮಾಡಬಹುದಾಗಿತ್ತು. ಈ ರೀತಿ ಹುಂಡಿ ರೂಪದ ಉಳಿತಾಯದ ಹಣದಲ್ಲಿ ತಿಂಗಳಿಗೆ ಕನಿಷ್ಠ ನಾಲ್ಕು ಆಣೆಯಿಂದ ಗರಿಷ್ಠ ಒಂದೂ ರೂಪಾಯಿವರೆಗೆ ಹಿಂದಕ್ಕೆ ಪಡೆಯಬಹುದಾಗಿತ್ತು ಈ ಯೋಜನೆಯಲ್ಲಿ ತೊಡಗಿದ ಏಜೆಂಟರಿಗೆ ಸರ್ಕಾರವೇ ತನ್ನ ಹಣದಿಂದ ಕಮೀಷನ್ ನೀಡುತ್ತಿತ್ತು. ಈ ಯೋಜನೆಯನ್ನು ತಾಲ್ಲೂಕಿನ ಖಜಾನೆಗಳು ಟ್ರೆಜರಿ ಇಲಾಖೆ ನೋಡಿಕೊಳ್ಳುತ್ತಿತ್ತು. ಈ ಯೋಜನೆಯನ್ನು ೧೯೨೨-೨೩ರ ಸುಮಾರಿಗೆ ನಿಲ್ಲಿಸಲಾಯಿತು.

ಆಧಾರಸೂಚಿ

೧. R.A. Jyengas, *The Economic out look of Mysore*, Madras, 1917.

೨. **ಚಿಕ್ಕಮಗಳೂರು ಮತ್ತು ರಾಜ್ಯ ಗ್ಯಾಸೆಟಿಯರ್ ಸಂಪುಟಗಳು**, ಕರ್ನಾಟಕ ಸರ್ಕಾರದ ಪ್ರಕಟನೆಗಳು, ಬೆಂಗಳೂರು.

೩. **ಕರ್ನಾಟಕದಲ್ಲಿ ಬ್ಯಾಂಕುಗಳ ಹುಟ್ಟು ಮತ್ತು ಬೆಳವಣಿಗೆ**, ಡಾ. ನವೀನಚಂದ್ರ ಕೆ. ತಿಂಗಳಾಯ, ಬೆಂಗಳೂರು-೧೯೮೬.

೪. ಸಹಕಾರ ಇಲಾಖೆಯ ವಾರ್ಷಿಕ ವರದಿ ಮತ್ತು ಪತ್ರ ವ್ಯವಹಾರದಿಂದ ಕಲೆ ಹಾಕಿದ ಮಾಹಿತಿ.

೫. **ಇತಿಹಾಸ ದರ್ಶನ**, ಸಂಪುಟಗಳಲ್ಲಿನ ಲೇಖನಗಳು, ಎಂ.ಬಿ. ಪಾಟೀಲ.

೧೨೫

ಮಂಡ್ಯ ಜಿಲ್ಲೆಯ ಕೆಲವು ಶಾಸನಗಳ ವೈಶಿಷ್ಟ್ಯಗಳು

ಲಿಂಗರಾಜು*

ಮಂಡ್ಯ ಜಿಲ್ಲೆಯ ಒಂದು ಸಾವಿರಕ್ಕೂ ಹೆಚ್ಚಿನ ಶಾಸನ ಗಳಲ್ಲಿ ನಿರೂಪಿತವಾಗಿರುವ ರಾಜಕೀಯ, ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಅಂಶಗಳನ್ನು, ಒಂದು ಸಾವಿರದ ಮೂರು ನೂರು ವರ್ಷಗಳಲ್ಲಿ ಜನರು ಬಾಳಿ ಬೆಳೆದ ರೀತಿ-ನೀತಿಯನ್ನು ವಸ್ತುನಿಷ್ಠವಾಗಿ ಕ್ರಮಬದ್ಧವಾಗಿ ಅಧ್ಯಯನ ಮಾಡಬೇಕಾದುದ್ದು ಪ್ರಸ್ತುತ ಅತ್ಯಗತ್ಯವಾಗಿದೆ. ಮಂಡ್ಯ ಜಿಲ್ಲೆಯ ಕೆಲವು ಶಾಸನಗಳ ವೈಶಿಷ್ಟ್ಯಗಳ ಸ್ಥೂಲ ಪರಿಚಯವನ್ನು ಪುನರ್ ಪರಿಶೀಲಿಸುವ ಪ್ರಯತ್ನವನ್ನು ಈ ಪ್ರಬಂಧದ ಮೂಲಕ ಮಾಡಲಾಗಿದೆ. ಕ್ರಿ.ಶ. ೭೧೩ರ ಶಿವಮಾರನ (ಮಂ.೩೫) ಹಲ್ಲೆಗೆರೆ ತಾಮ್ರ ಶಾಸನವೇ ಈ ಜಿಲ್ಲೆಯ ಅತ್ಯಂತ ಪ್ರಾಚೀನ ಶಾಸನವಾಗಿದ್ದರೆ. ಕ್ರಿ.ಶ. ೧೯೭೬ರ ಮೈಸೂರು ಅರಸರ ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದ ಆದಿ ಚುಂಚನಗಿರಿ ಶಾಸನವೇ ಇತ್ತೀಚಿನದಾಗಿದೆ.

೧. ಜಿಲ್ಲೆಯ ಮೊದಲ ಅಧಿಕೃತ ಶಾಸನ ಹಲ್ಲೆಗೆರೆ ಶಾಸನ

ಸಾವಿರದ ಮುನ್ನೂರು ವರ್ಷಗಳ ಶಾಸನೇತಿಹಾಸ ಹೊಂದಿರುವ ಮಂಡ್ಯ ಜಿಲ್ಲೆಯಲ್ಲಿ ಕಂಡುಬರುವ ಅಧಿಕೃತ ಶಾಸನಗಳಲ್ಲಿ ಅತ್ಯಂತ ಪ್ರಾಚೀನವಾದುದ್ದು ಹಲ್ಲೆಗೆರೆ (ಮಂ. ೩೫) ಶಾಸನ. ಶಕ. ೬೩೫ರ ಜೇಷ್ಠ ಪೂರ್ಣಿಮೆಯ ಅಂದರೆ ೧೩ನೇ ಜೂನ್ ಕ್ರಿ.ಶ. ೭೧೩ರ ಒಂದನೆಯ ಗಂಗರಾಜನ ಸಂತತಿಯ ಶಿವಮಾರನ ತಾಮ್ರ ಶಾಸನ. ಇದು ಅವನ ಆಳ್ವಿಕೆಯ ೩೪ನೇ ವರ್ಷವೆಂದು ಸೂಚಿಸುತ್ತದೆ. ಮಂಡ್ಯ ತಾಲ್ಲೂಕು ಹಲ್ಲೆಗೆರೆಯಲ್ಲಿ ಕಂಡುಬಂದ ಸಂಸ್ಕೃತ ಲಿಪಿಯ ಆನೆ ಚಿಹ್ನೆಯ ಶಾಸನದಲ್ಲಿ ಸಮೀಪದ ಕೆರಗೋಡು ಮತ್ತು ಇತರೆ ಕೆಲವು ಗ್ರಾಮಗಳನ್ನು ಹಲವರಿಗೆ ದಾನವಾಗಿತ್ತ ಸಂಗತಿಯನ್ನು ತಿಳಿಸುತ್ತದೆ. ಪಲ್ಲವ ಯುವರಾಜನ ಮಕ್ಕಳಾದ ಜಯ ಮತ್ತು ವೃದ್ಧಿ ಎಂಬುವರ ಕೋರಿಕೆಯ ಮೇರೆಗೆ ಈ ದಾನವನ್ನು ನೀಡಲಾಯಿತ್ತೆಂದು ತಿಳಿಸಿದೆ.

೨. ಕೆರೆಗಳ ನಿರ್ಮಾಣಕ್ಕೆ ಸಂಬಂಧಿಸಿದ ಪೂರಿಗಾಲಿ ಶಾಸನ

ಪೂರಿಗಾಲಿ ಶಾಸನ ಪುವಗಾಮದ ಪನ್ನಿರ್ವರು (ಹನ್ನೆರಡು) ಗಂಗರಸ ಶ್ರೀಪುರುಷನ ಕಾಲದಲ್ಲಿ ಕೊಂಗಣಿ ಕೆರೆಯನ್ನು ಕಟ್ಟಸುದುದು (ಮವ-೧೨೨) ಜಿಲ್ಲೆಯ ಅತ್ಯಂತ ಪ್ರಾಚೀನ ಕೆರೆಯೆಂದು ತಿಳಿದುಬರುತ್ತದೆ. ಅಂತೆಯೇ ತೀರ ಇತ್ತೀಚಿನ ಉಲ್ಲೇಖವೆಂದರೆ ಕ್ರಿ.ಶ. ೧೮೪೭ರಲ್ಲಿ ಮಂಡ್ಯ ತಾಲ್ಲೂಕಿನ ಆಮೀಲ ಕಾಶ್ಯಗೋತ್ರದ ತಿರುಕುಡಿ ಶ್ರೀನಿವಾಸ ರಾವು ಮಂಡ್ಯದಲ್ಲಿ 'ಪ್ರಾಣದೇವರ ದೇವಸ್ಥಾನ ಸರೋವರ ಜನಗಳಿಗೆ ಉಪಯೋಗಕ್ಕಾಗಿ' ಕಟ್ಟಿಸಿದುದು (ಮಂ.೦೧) ಎಂದು ತಿಳಿದುಬರುತ್ತದೆ. ಮಂಡ್ಯ ಜಿಲ್ಲೆಯ ಶಾಸನಗಳು ಸುಮಾರು ೧೫೦ ಕೆರೆ ಕಟ್ಟೆಗಳನ್ನು ಉಲ್ಲೇಖಿಸುತ್ತವೆ.

೩. ಪ್ರಾಚೀನ ಅಗ್ರಹಾರಕ್ಕೆ ಸಂಬಂಧಿಸಿದ ಹಲ್ಲೆಗೆರೆ ಶಾಸನ

ಮಂಡ್ಯ ಜಿಲ್ಲೆಯಲ್ಲಿ ಅನೇಕ ಅಗ್ರಹಾರಗಳ, ಪುರಗಳ, ಪಟ್ಟಣಗಳ ಸ್ಥಾಪನೆ ಮತ್ತು ನಿರ್ಮಾಣದ ಕೆಲಸ ನಡೆಯಿತ್ತೆಂದು ಶಾಸನಗಳಿಂದ ಗೊತ್ತಾಗುತ್ತದೆ. ಅಗ್ರಹಾರಗಳ ಸ್ಥಾಪನೆಗೆ ಸಂಬಂಧಿಸಿದಂತೆ ಅತ್ಯಂತ ಪ್ರಾಚೀನ ಉಲ್ಲೇಖವೆಂದರೆ ಹಲ್ಲೆಗೆರೆ (ಮಂ. ೩೫) ಶಾಸನ. ಕ್ರಿ.ಶ. ೭೧೩ರ ಈ ಶಾಸನದಿಂದ ಪಲ್ಲವ ಯುವರಾಜನ ಮಕ್ಕಳಾದ ಜಯ ಮತ್ತು ವೃದ್ಧಿ ಎಂಬುವವರ ಕೋರಿಕೆಯ ಮೇರೆಗೆ ಕೆರಗೋಡು ಮತ್ತು ಇತರೆ ಕೆಲವು ಗ್ರಾಮಗಳನ್ನು ಹಲವರಿಗೆ ದಾನವಾಗಿತ್ತು 'ಪಲ್ಲವ ತಟಾಕ'ವೆಂಬ ಗ್ರಾಮವನ್ನು ಅಗ್ರಹಾರವಾಗಿ ಪರಿವರ್ತಿಸಿದ್ದುದನ್ನು ತಿಳಿಸುತ್ತದೆ. ಇಂಥ ಸುಮಾರು ಅರವತ್ತು ಅಗ್ರಹಾರಗಳನ್ನು ಜಿಲ್ಲೆಯ ಶಾಸನಗಳ ಅಧ್ಯಯನದಿಂದ ಪಟ್ಟಿಮಾಡಬಹುದು.

೪. ಕನ್ನಡ ಭಾಷೆ ಹಾಗೂ ಜೈನ ಧರ್ಮದ ಪ್ರಾಚೀನತೆಗೆ ಸಂಬಂಧಿಸಿದ ದೇವರಹಳ್ಳಿ ಶಾಸನ : ಗಂಗರಸ ಶ್ರೀಪುರುಷನ ದೇವರಹಳ್ಳಿ ಶಾಸನದಲ್ಲಿರುವ "ದಾಣ್ಮ ಸಮುದ್ರದಾ ವಯಲು....ಮೂವತ್ತಾ ಒನ್ದು ಮನೆಯ ಮನೆ ತಾಣಂ" ಎಂಬ ಭಾಗ ಜಿಲ್ಲೆಯ ಶಾಸನಗಳಲ್ಲಿನ ಅತೀ ಪ್ರಾಚೀನ ಕನ್ನಡ ರೂಪ. ಇದು ಸುಮಾರು ೮ನೇ ಶತಮಾನದ ಕನ್ನಡ ಭಾಷಾ ರೂಪವನ್ನು ಪ್ರತಿನಿಧಿಸುತ್ತದೆ. ಹೊಯ್ಸಳರ ಕಾಲ ಕನ್ನಡ ಲಿಪಿ ಮತ್ತು ಭಾಷಾ ಸೌಂದರ್ಯ ಹಾಗೂ ನಿರೂಪಣೆಯ ಸೊಗಸಿನ ದೃಷ್ಟಿಯಿಂದ ಸುವರ್ಣಯುಗ ವೆನಿಸಿದೆ.

೫. ನಾಯಿಯೊಂದರ ಸ್ಮರಣಾರ್ಥವಿರುವ ಆತಕೂರು ಶಾಸನ : ತಕ್ಕೋಲಂ ಯುದ್ಧದ ಬಗ್ಗೆ ವಿವರ ನೀಡುವ ಮದ್ದೂರು ತಾಲ್ಲೂಕಿನ (ಮ. ೪೨) ಆತಕೂರು ಗ್ರಾಮದ ಚಲ್ಲೇಶ್ವರ ದೇವಾಲಯದ ಬಳಿಯಿದ್ದು, ಈಗ ಬೆಂಗಳೂರು ವಸ್ತು ಸಂಗ್ರಹಾಲಯದಲ್ಲಿರುವ ವಸ್ತು ಶಾಸನ ಕರ್ನಾಟಕದ ಪ್ರಸಿದ್ಧ ಶಾಸನಗಳಲ್ಲೊಂದು (ಕ್ರಿ.ಶ. ೯೫೦) ಈ ಶಾಸನವು ಮೂಲತಃ ನಾಯಿಯೊಂದರ ವೀರ ಮರಣದ ಸ್ಮರಣಾರ್ಥ ಹಾಕಿಸಿದ ವೀರಗಲ್ಲೂ ಹೌದು. ಇದರಲ್ಲಿ ಬರುವ ಐತಿಹಾಸಿಕ ವಿವರಗಳು ಮಹತ್ವದಿಂದ ಕೂಡಿವೆ.

"ಕನ್ನರದೇವ, ಚೋಳನಂ ಕಾದುವನ್ದು, ಬೂತುಗಂ ರಾಜಾದಿತ್ಯನಂ ಬಿಸುಗೆಯೆ ಕಳನಾಗಿ ಸುರಿಗಿಱಿದು ಕಾದು ಕೊನ್ದು" ಎಂದಿದೆ. ಅಂದರೆ ರಾಜಾಧಿತ್ಯನು ಆನೆಯ ಮೇಲೆ ಕುಳಿತು ಯುದ್ಧ ಮಾಡುತ್ತಿದ್ದಾಗ ಬೂತುಗನು ಅಂಗರಕ್ಷಕ ಮಣಾಲೆರನು ಶತ್ರುವಿನ ಅಂಬಾರಿಯನ್ನೇರಿ ಅದನ್ನು ಯುದ್ಧರಂಗವಾಗಿ ಪರಿವರ್ತಿಸಿ, ತನ್ನ ಸುರಗಿಯಿಂದ ರಾಜಾದಿತ್ಯನನ್ನು ಇರಿದು ಕೊಂದನು.

* ಇತಿಹಾಸ ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಮಹಾವಿದ್ಯಾಲಯ, (ಸ್ವಾಯತ್ತ), ಮಂಡ್ಯ-೫೭೧೪೦೧

ಮಣಲಾರನ ಪರಾಕ್ರಮ ರಾಷ್ಟ್ರಕೂಟ ಚಕ್ರವರ್ತಿ ಕನ್ನರನ ಮೆಚ್ಚಿಗೆಗೂ ಪಾತ್ರವಾಯಿತು. ಚಕ್ರವರ್ತಿಯು ಮಣಲಾರನಿಗೆ ಕಾಳಿ ಎಂಬ ತನ್ನ ಬೇಟೆ ನಾಯಿಯನ್ನು, ಮೆಚ್ಚಿಕೊಟ್ಟ ನಾಯಿ ಕಾಳಿಯು ಹಂದಿಯೊಂದಿಗೆ ಹೋರಾಡುವಾಗ ಅಸುನೀಗಿತು. ತಾನು ಸಾಯುವ ಮುನ್ನ ಹಂದಿಯನ್ನು ಕೊಂದಿತು. ಇಂತಹ ವಿರೋಚಿತ ಮರಣವಪ್ಪಿದ ನಾಯಿಯ ಸ್ಮರಣಾರ್ಥವಾಗಿ ಅದರ ಒಡೆಯ ಮಣಲಾರನು ಆತಕೂರಿನಲ್ಲಿ ಒಂದು ಶಾಸನದ ಕಲ್ಲನ್ನು ಹಾಕಿಸಿದನು.

೬. ಚೋಳರ ಕಾಲಕ್ಕೆ ಸಂಬಂಧಿಸಿದ ಶಾಸನ : ಚೋಳರ ಕಾಲಕ್ಕೆ ಸಂಬಂಧಿಸಿದಂತೆ ಸುಮಾರು ಎಂಟು ಶಾಸನಗಳು ಜಿಲ್ಲೆಯಲ್ಲಿ ದೊರೆತಿವೆ. ಇವುಗಳಲ್ಲಿ ಅತ್ಯಂತ ಪ್ರಾಚೀನವಾದುದು ಚಿನಕುರುಳಿ ಶಾಸನ (ಪಾ.ಪು. ೫೧) ಇದು ರಾಜ ರಾಜ ಚೋಳನಿಗೆ ನೇರವಾಗಿ ಸಂಬಂಧಿಸಿಲ್ಲವಾದರೂ ಆ ಕಾಲದಲ್ಲಿ ಈ ಪ್ರದೇಶದ ಮೇಲೆ ಆತನ ಆಳ್ವಿಕೆಯಲ್ಲಿದ್ದುದು ಕಂಡುಬರುತ್ತದೆ. ಮಂಡ್ಯಜಿಲ್ಲೆಯ ಹಳೆಬೂದನೂರು ಶಾಸನದಲ್ಲಿ (ಮಂ. ೫೩) ಗಂಗರ ರಕ್ಕಸಗಂಗನು ೧೦೨೪ರಲ್ಲಿ ರಾಜೇಂದ್ರನ ಮಾಂಡಲೀಕ ನಾಗಿದ್ದನೆಂದು ಉಲ್ಲೇಖಿಸಲಾಗಿದೆ. ಆಗ ಮಂಡ್ಯವು ಚೋಳರ ಮುಡಿಗೊಂಡ ಚೋಳಮಂಡಲಕ್ಕೆ ಸೇರಿದ್ದು ಕನ್ನಯ್ಯನ ಮಗ ರಾಜೇಂದ್ರಚೋಳನ ಒಳನಾಡಿನಲ್ಲಿತ್ತೆಂದು ತಿಳಿದುಬರುತ್ತದೆ. ರಾಜ್ಯ ವಿಸ್ತರಣೆಯಲ್ಲಿ ತೊಡಗಿದ ಚೋಳರಿಗೆ ಗಂಗವಾಡಿಯ ಬಹುಭಾಗ ಸ್ವಲ್ಪಕಾಲ ಅಧೀನವಾಗಬೇಕಾಯಿತು. ಈ ಶಾಸನದಿಂದ ಚೋಳ ರಾಜ್ಯದ ವಿಸ್ತಾರ ಹಾಗೂ ಕರ್ನಾಟಕದ ಮೇಲೆ ಚೋಳರ ಆಳ್ವಿಕೆಯ ಹಿಡಿತವಿತ್ತೆಂದು ಸ್ಪಷ್ಟವಾಗುತ್ತದೆ.

೭. ವಿಷ್ಣುವರ್ಧನನ ಅರಸಿಯರಿಗೆ ಸಂಬಂಧಿಸಿದ ಶಾಸನಗಳು : ವಿಷ್ಣುವರ್ಧನನ ಅರಸಿಯರಲ್ಲಿ ನಾಲ್ವರನ್ನು ಮಂಡ್ಯ ಜಿಲ್ಲೆಯ ಶಾಸನಗಳು ಉಲ್ಲೇಖಿಸುತ್ತವೆ. ಪೆರಿಯರಸಿ ಪಟ್ಟಮಹಾದೇವಿ ಶಾಂತಲದೇವಿ (೧೧೧೭ರ ಮಾಳಗೂರು ಶಾಸನ (ಕೃ.ಪೇ. ೬೬, ಸಂ. ೦೬) ಇತ್ಯಾದಿ) ಪಲ್ಲವ ರಾಜಪುತ್ರಿ ಬಮ್ಮಲದೇವಿ. (೧೧೩೪ರ ನಾ.ಮ. ಶಾಸನ ಸಂ. ೦೭), ಪಟ್ಟ ಮಹಿಷಿ ಲಕ್ಷ್ಮಾದೇವಿ (೧೧೬೫ರ ಲಾಲನಕೆರೆ ಶಾಸನ (ನಾ.ಮಂ–೬೩, ಸಂ. ೦೭) ಇತ್ಯಾದಿ) ಹಾಗೂ ಕೊಂಗಾಳ್ವ ರಾಜಪುತ್ರಿ ಚಂದಲದೇವಿ (೧೨ನೇ ಶತಮಾನದ ಶ್ರವಣಹಳ್ಳಿ ಶಾಸನ (ಕೃ.ಪೇ.–೨೧, ಸಂ. ೦೬) ಹಾಗೂ ಈತನ ಅನೇಕ ಬಿರುದುಗಳನ್ನು ಶಾಸನಗಳು ಉಲ್ಲೇಖಿಸುತ್ತವೆ.

೮. ಪೀಡ ಪರಿಹಾರಕ್ಕೆ ಸಂಬಂಧಿಸಿದ ಮದ್ದೂರು ಶಾಸನ

ಚಿತ್ರಕವಿತ್ವವಿರುವ ಅಪರೂಪದ ಶಾಸನವೊಂದು ಮದ್ದೂರಿನ (ಮ.೧೬.) ಕ್ರಿ.ಶ. ೧೦–೧೧ನೇ ಶತಮಾನದ ನರಸಿಂಹಸ್ವಾಮಿಯ ಗುಡಿಯಲ್ಲಿದೆ. ಅದು 'ದ್ವಾದಶದಲಪದ್ಮ' ಎಂಬ ಬಂಧ ಚಿತ್ರ ಜಾತಿಗೆ ಸೇರಿದ್ದಾಗಿದೆ. ಅದರಲ್ಲಿ ಎರಡು ಸಂಸ್ಕೃತ ಶ್ಲೋಕಗಳಿವೆ.

ತೇ ಮಹೇನ್ಪ್ರರಮಾ ಭಾತೇತೇ ಭಾಮಾ ರಮತೇ ಮತೇ।
ತೇಮತೇ ನಿರ್ಭಯಾ ಜಾತೇ ತೇ ಜಾಯಾ ಮಮ ಹೇ ಮತೇ॥
ರಾಜತೇ ನಿರ್ಭಯಂ ಶ್ರೀ ರಾರಾ ಶ್ರೀಯಂ ಸ್ಯಾತಿಭಾಸುರಾ
ರಾಸುಭಾ ವರ್ದ್ಧತೇ ಸುರಾರಾಶೂತೇ ತವ ತೇ ಜರಾಂ॥

ಇವುಗಳಲ್ಲಿ ಮೊದಲ ಶ್ಲೋಕದ ತೇ ಎಂಬ ಅಕ್ಷರ ಕರ್ಣಿಕೆಯಲ್ಲಿದ್ದು, ಇದು ದಳಗಳೊಂದಿಗೆ ಸೇರಿ ೮ ಸಲ ಆವೃತ್ತಿಗೊಳ್ಳುತ್ತದೆ. ಹೀಗೆಯೇ ಎರಡನೆಯ ಶ್ಲೋಕದ 'ರಾ' ಎಂಬ ಅಕ್ಷರ ಸಹ" ಎಂದು ಹೇಳುತ್ತಾ ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ ಅವರು, ಈ ಶ್ಲೋಕಗಳಿಂದ ನಿರ್ಮಾಣ ವಾಗುವ ಚಿತ್ರವನ್ನು ತಮ್ಮ ಕನ್ನಡ ಚಿತ್ರಕಾವ್ಯ ಎಂಬ ಗ್ರಂಥದಲ್ಲಿ (ಪು. ೪೭೬) ಕೊಟ್ಟಿದ್ದಾರೆ. ಈ ಶ್ಲೋಕಗಳು ಲಕ್ಷ್ಮೀದೇವಿಯ ಸ್ತೋತ್ರವನ್ನೂ ಒಳಗೊಂಡಿದೆ. ಈ ಚಿತ್ರಬಂಧವನ್ನು ಮದ್ದೂರಿನ ಪರಿಸರದ ಜನರು ಪೀಡಾಪರಿಹಾರಕ ಬಂಧ ವೆಂದೇ ತಿಳಿದು, ರಕ್ಷಾ ಯಂತ್ರಗಳಲ್ಲಿ ರೇಖಿಸಿ ಕಟ್ಟಿಕೊಳ್ಳುತ್ತಾರೆ. ಲಕ್ಷ್ಮೀದೇವಿಯ ಸ್ತೋತ್ರವಿರುವಾಗ ಪೀಡಾ ಪರಿಹಾರಕವಲ್ಲದೆ ಮತ್ತೇನು?

೯. ಸ್ವಾರಸ್ಯಕರವಾದ ಸಂಗತಿಯನ್ನು ನಿರೂಪಿಸುವ ಅಳೀಸಂದ್ರ ಶಾಸನ : ಕ್ರಿ.ಶ. ೧೧೮೩ಕ್ಕೆ ಸೇರಿದ ಅಳೀಸಂದ್ರ ಶಾಸನ (ನಾಮಂ.೭೨) ಬೇರೆ ಬೇರೆ ಕಾಲದ ಘಟನೆಗಳನ್ನು ಉಲ್ಲೇಖಿಸುವ ಒಂದು ಸಂಕೀರ್ಣ ಶಾಸನ, ಇದರಲ್ಲಿ ಅತ್ಯಂತ ಸ್ವಾರಸ್ಯಕರವಾದ ಸಂಗತಿಯೊಂದು ನಿರೂಪಿತವಾಗಿದೆ. ಎರೆಯಂಗನ ಮಗ ಒಂದನೆಯ ಬಲ್ಲಾಳನು ಮರಿಯಾನೆ ದಂಡನಾಯಕ ಹಾಗೂ ಚಾಮವ್ವೆ ದಂಡನಾಯಕಿತಿ ದಂಪತಿಗಳ "ಮೂವರು ಕನ್ಯೆಯರನ್ನು ಒಂದೇ ಹಸೆಯೊಳು" ವಿವಾಹ ಮಾಡಿಸಿದ ಸಂಗತಿ ಅಥವಾ ತಾನೇ ಈ ಮೂವರು ಕನ್ಯೆಯರನ್ನು ಒಂದೇ ಹಸೆಯ ಮೇಲೆ ಮದುವೆಯಾದ ಸಂಗತಿ ಶಾಸನದ ಕುತೂಹಲಕಾರಿ ಅಂಶವಾಗಿದೆ. ಈ ಹೆಣ್ಣು ಮಕ್ಕಳ ಬಗ್ಗೆ ಶಾಸನ ಹೀಗೆ ಹೇಳುತ್ತದೆ. "ಮರಿಯಣ್ಣದಂಡ ನಾಯಕನ ದ್ವಿತೀಯ ಲಕ್ಷ್ಮೀ ಸಮಾನೆಯರಪ್ಪ ಚಾಮವೆ ದಂಡನಾಯಕಿತಿಗಂ ಪುಟ್ಟಿದ ಪದುಮಲದೇವಿ, ಚಾಮಲದೇವಿ, ಬೊಪ್ಪಾದೇವಿಯರಿನ್ತಿ ಮೂವರಂ ಶಾಸ್ತ್ರಗೀತ ನೃತ್ಯದಲು ಪ್ರವುಡೆಯರುಂ ಮೂರುರಾಯರ ಕಟಕ ಪಾತ್ರ ಜಗದಳೆಯ ರೆನಿಸಿ ಬಳೆಯಲಾ ಮೂವರು ಕನ್ಯೆಕೆಯರನೊಂದೇ ಹಸೆಯಾಳು ಬಲ್ಲಾಳದೇವಂ ವಿವಾಹಮಾಡಿ ಸಕವರ್ಷಂ ೧೦೨೫ನೆಯ ಸುಭಾನು ಸಂವತ್ಸರದ ಕಾರ್ತಿಕ ಶುದ್ಧ ದಶಮಿ ಬೃಹವಾರದಂದು ಮೊಲೆವಾಲರಿಣಕ್ಕೆ ಮರಿಯಣ್ಣ ದಂಡನಾಯಕಂಗೆ ಸಿಂಧಗೆರೆಯ ಎರಡನೆಯ ಪರ್ಯ್ಯಾಯ ದಲು ಪ್ರಭೂತ್ವ ಸಹಿತಂ ನೆಲೆಯಾಗಿ ಪುನರ್ಧಾರಾ ಪೂರ್ವಕಂ ಕೊಟ್ಟು" ಎಂದಿದೆ. ಅನೇಕರು ವಿಶ್ಲೇಷಿಸಿರುವಂತೆ ಅವರೆಲ್ಲರನ್ನೂ ಆತನೇ ವಿವಾಹವಾಗಲಿಲ್ಲ: ಒಂದೇ ಹಸೆಯಲ್ಲಿ ಮೂರು ಮದುವೆಗಳು ನಡೆಯುವ ವ್ಯವಸ್ಥೆ ಮಾಡಿಸಿದ. ಈ ಚಾಮವ್ವೆ ದಂಡನಾಯಕಿತಿ ಹೊಯ್ಸಳ ಮಹಾಪ್ರಧಾನಿ ಗಂಗರಾಜನ ಸೋದರಿ, ಮರಿಯಣ್ಣ ದಂಡನಾಯಕನ ಎರಡನೆಯ ಹೆಂಡತಿ. ಈ ದಂಡನಾಯಕ ನನ್ನು ಎರೆಯಂಗನ ಪತ್ನಿ ಏಚಲದೇವಿ ಮಗನಂತೆ ಬೆಳಸಿ ಅಧಿಕಾರ ಕೊಟ್ಟು ಮದುವೆಯನ್ನೂ ಮಾಡಿಸಿದಳು.

೧೦. ಧರ್ಮ ಸಂರಕ್ಷಣೆಗಾಗಿ ಆತ್ಮಾರ್ಪಣೆ ಮಾಡಿ ಕೊಂಡಿರುವುದಕ್ಕೆ ಸಂಬಂಧಿಸಿದ ರಾಯಿಸೆಟ್ಟಿಪುರದ ಶಾಸನ : ಕ್ರಿ.ಶ. ೧೧೨೫ರ ರಾಯಸೆಟ್ಟಿಪುರದ ಶಾಸನವು (ಮಂ. ೩೪) ಧರ್ಮ ಸಂರಕ್ಷಣೆಗಾಗಿ ಆತ್ಮಾರ್ಪಣೆ ಮಾಡಿಕೊಂಡ ಅಪರೂಪದ ಘಟನೆಯೊಂದನ್ನು ತಿಳಿಸುತ್ತದೆ. ಕೆರಗೋಡು ನಾಡಿಗೆ ಸೇರಿದ ಬಿದಿರುಕೋಟೆಯ ಮಲ್ಲೆಯನಾಯಕ ಮತ್ತು ಸೋಮೇಯ ನಾಯಕ ಎಂಬಿಬ್ಬರು ತಮ್ಮ ಹಳ್ಳಿಯನ್ನು ಶಿವಪುರವಾಗಿ ಪರಿವರ್ತಿಸಿ ಅದನ್ನ ಶಿವಭಕ್ತರಿಗೆ ದತ್ತಿ ನೀಡಿದರು. ಆದರೆ ೨೦ ವರ್ಷಗಳ ತರುವಾಯ ಅಂದರೆ ಕ್ರಿ.ಶ. ೧೨೫೧ರಲ್ಲಿ ಹೊಯ್ಸಳ ಸೋಮೇಶ್ವರನು ಕಣ್ಣಾನೂರಿನಿಂದ ಆಳುತ್ತಿದ್ದಾಗ ಮಾದೆಯನಾಯಕನೆಂಬಾತನು ಅದು ಶಿವಪುರವಾಗುವುದನ್ನು ಬಲವಾಗಿ ವಿರೋಧಿಸಿದನು. ಇದರಿಂದ ಶಿವಭಕ್ತರು ತಮಗೆ ಲಭಿಸಿದ್ದ ವೃತ್ತಿಗಳನ್ನು ಅನುಭವಿಸಲು ಅಡ್ಡಿಯಾಯಿತೆಂದು ತೋರುತ್ತದೆ. ಈ ಸಂಗತಿ ಅಲ್ಲಿನ ಶಿವಭಕ್ತರನ್ನು ಕಂಗೆಡಿಸಿತು. ಆಗ ವೀರಮಲ್ಲಯ್ಯ ನೆಂಬಾತನು ತನ್ನ ಕುತ್ತಿಗೆಯನ್ನು

ಕೊಯ್ದುಕೊಂಡನು. ಈ ಮೂಲಕ ಅವನ ಪ್ರಾಣಾರ್ಪಣೆಯೇ ನಡೆದು ಹೋಯಿತೋ ಏನೋ. ಈ ಘಟನೆಯಿಂದ ಮಾದೆಯ ನಾಯಕನು ಮಣಿಯಬೇಕಾಯಿತು. ಶಿವಪುರವನ್ನು ಶಿವಭಕ್ತರಿಗೆ ಬಿಟ್ಟು ಕೊಟ್ಟನು. ಅದಕ್ಕೆ ಅವರು ಸೋಮನಾಥಪುರ ಎಂದು ಹೆಸರಿಟ್ಟನು.

೧೧. **ಯಾದವಗಿರಿ ಕೋಟೆಗೆ ಇಬ್ಬರು ದಂಡ ನಾಯಕರು ರಕ್ಷಾಪಾಲಕರಾಗಿದ್ದಕ್ಕೆ ಸಂಬಂಧಿಸಿದ ಶಾಸನ:** ಕ್ರಿ.ಶ. ೧೧೮೯ರ ತೊಣ್ಣೂರಿನ ಶಾಸನದಲ್ಲಿ (ಪಾಂ.ಪು. ೭೪) ದಂಡನಾಯಕ ಅಚ್ಯುತಿಂಮಯ್ಯ ಹಾಗೂ ವೀರಯ್ಯ ಎಂಬುವವರು ಯಾದವಗಿರಿಯ ಕೋಟೆಯ ರಕ್ಷಾಪಾಲಕ ರಾಗಿದ್ದಾಗ, ಅವರ ಮಕ್ಕಳಾದ ಸೀಲಯ್ಯ, ಚಾಮಯ್ಯರವರು ತಮ್ಮ ಕೋಟೆಯ ಹೊಲಗಾಹುವೃತ್ತಿಯನ್ನು ಆಳುತ್ತಿದ್ದರು. ಅವರು ತೊಂಡನೂರು ಅಗ್ರಹಾರದ ಗಡಿಯಲ್ಲಿದ್ದ ನಖರೇಶ್ವರ ದೇವರಿಗೆ ಭೂದಾನ ಮಾಡಿದರು ಎಂದು ಹೇಳಿದೆ. ಈ ಸಂಗತಿಯನ್ನು ಕುರಿತು "ಯಾದವಗಿರಿಯ ಕೋಟೆಗೆ ಇಬ್ಬರು ದಂಡನಾಯಕರು ರಕ್ಷಾಪಾಲಕರಾಗಿದ್ದರೆಂಬುದು ಕುತೂಹಲ ಕರವಾದ ಅಂಶ. ಅವರಿಬ್ಬರ ಮಕ್ಕಳು ಕೋಟೆಯ ಹೊಲಗಾಹು ವೃತ್ತಿಯನ್ನು ಆಳುತ್ತಿದ್ದರೆಂದಿದೆ. ಕೋಟೆಯ ಹೊಲಗಾಹು ವೃತ್ತಿ ಎಂದರೆ ಕೋಟೆಯ ಪ್ರದೇಶ (ಹೊಲ ಪ್ರದೇಶ) ಕಾಯಲು ನೀಡಲಾದ ವೃತ್ತಿ ಎಂದು ಅರ್ಥೈಸ ಬಹುದು" ಎಂದು ವಿದ್ವಾಂಸರು (ಎಪಿಗ್ರಾಫಿಯ ಕರ್ನಾಟಕ ಸಂಪುಟ ೦೬, ಪೀಠಿಕೆ) ಹೇಳಿದ್ದಾರೆ.

೧೨. **ವೀತಾಯುಧವ್ರತಧಾರಿ ಸಳನಿಗೆ ಸಂಬಂಧಿಸಿದ ಗೋವಿಂದನಹಳ್ಳಿ ಶಾಸನ :** ಗೋವಿಂದನಹಳ್ಳಿಯ ಪಂಚಲಿಂಗೇಶ್ವರ ದೇವಾಲಯದ ಕ್ರಿ.ಶ. ೧೨೩೭ರ ಶಾಸನವು (ಕೃಪೇ. ೩೯) ಹೊಯ್ಸಳ ವಂಶದ ಆರಂಭವನ್ನು ಕುರಿತಾದ ಕಥೆ. ಇತರ ಶಾಸನೋಕ್ತ ಕಥೆಗಳಿಗಿಂತ ಭಿನ್ನವಾಗಿರುವುದನ್ನು ವಿದ್ವಾಂಸರು ಗುರ್ತಿಸಿದ್ದಾರೆ. (ಎಪಿಗ್ರಾಫಿಯಾ ಕರ್ನಾಟಕ, ಸಂಪುಟ. ೦೬, ಪೀಠಿಕೆ) ಸಳನೆಂಬ ಅರಸನು ಒಮ್ಮೆ ತನ್ನ ಕುಲದೇವತೆಯಾದ ವಾಸಂತಿಕಾ ದೇವಿಯನ್ನು ಪೂಜಿಸಲು ಶಶಕಪುರಕ್ಕೆ ಹೋದನು. ಅಲ್ಲಿ ವೀತಾಯುಧವ್ರತಧಾರಿಯಾಗಿ ದೇವಿಯನ್ನು ಆರಾಧಿಸಿ ದನು. ತರುವಾಯ ಮುನಿಯನ್ನು ಸತ್ಕರಿಸಿದನು. (ಯಾವುದೇ ಆಯುಧಗಳನ್ನು ತನ್ನಲ್ಲಿ ಇಟ್ಟುಕೊಳ್ಳದೆ ಮಾಡುವ ವ್ರತಕ್ಕೆ ವೀತಾಯುಧವ್ರತ ಎಂದು ಹೆಸರು.) ಆ ಹೊತ್ತಿನಲ್ಲಿ ಹುಲಿಯೊಂದು ಅಲ್ಲಿಗೆ ಬಂದಿತು. 'ಹೊಯ್ಸಳ' ಎಂದು ಮುನಿಯು ಸಳನಿಗೆ ಆದೇಶ ನೀಡಿ ಸಲಾಕೆಯೊಂದನ್ನು ಕೊಟ್ಟನು. ಅದನ್ನು ಉಪಯೋಗಿಸಿ ಸಳನು ಹುಲಿಯನ್ನು ಕೊಂದನು. ಅದೇ ಕಾರಣವಾಗಿ ಆ ವಂಶಕ್ಕೆ ಹೊಯ್ಸಳವೆಂಬ ಹೆಸರು ಬಂದಿತು ಎಂದು ಅಲ್ಲಿ ಹೇಳಿದೆ.

೧೩. **ಸ್ವಾಮಿನಿಷ್ಠೆಯ ಪರಕಾಷ್ಠತೆಯ ಪ್ರತೀಕ ಗರುಡರಾದವರಿಗೆ ಸಂಬಂಧಿಸಿದ ಶಾಸನ:** ಅಧಿಕಾರಿಗಳೂ ಪ್ರಜೆಗಳೂ ಅರಸನಿಗೆ ನಿಷ್ಠರಾಗಿದ್ದರು ಅರಸನಿಗಾಗಿ ರಾಜ್ಯಕ್ಕಾಗಿ ಪ್ರಾಣಾರ್ಪಣೆಗೆ ಹಿಂಜರಿಯು ತ್ತಿರಲಿಲ್ಲ. ಗರುಡ ಪದ್ಧತಿಯಂತೂ ಸ್ವಾಮಿನಿಷ್ಠೆಯ ಪರಮಾವಧಿ. ಅಗ್ರಹಾರ ಬಾಚಹಳ್ಳಿಯ ಶಾಸನವೊಂದು (ಕೃ.ಪೇ. ೮೪) ೧೨೯೧ರ(೧೨೫೬) ಅಗ್ರಹಾರಬಾಚಹಳ್ಳಿ ಶಾಸನ, ಸಂಪುಟ ೦೬) ಹೊಯ್ಸಳ ಅರಸನೊಡನೆ ಗರುಡರಾದವರ ವಂಶಾವಳಿಯನ್ನೇ ನೀಡುತ್ತದೆ. ಹೊಯ್ಸಳ ಎರೆಯಂಗನಿಗೆ ಗರುಡರಾದವರು ಗಂಡನಾರಾಯಣಸೆಟ್ಟಿ ಮತ್ತು ಆತನ ಹೆಂಡತಿ ಮಾರವ್ವೆನಾಯಕಿತಿ: ಬಿಟ್ಟಿದೇವ ಅಥವಾ ವಿಷ್ಣುವರ್ಧನನಿಗೆ ಹೊಯಿಸಳಸೆಟ್ಟಿ ಮತ್ತು ಮಾಚವ್ವೆನಾಯಕಿತಿ: ಒಂದನೆಯ ನರಸಿಂಹನಿಗೆ ಕೊರೆಯನಾಯಕ, ಮಾರವ್ವೆ, ಚಿಕ್ಕ ಮಾದವ್ವೆ ಹಾಗೂ ಏಳು ಜನ ಲೆಂಕರು; ಇಮ್ಮಡಿ ಬಳ್ಳಾಳನಿಗೆ ಶಿವನೆಯನಾಯಕ ಮತ್ತು ಐದು ಜನ ಲೆಂಕರು, ಸೋಮೇಶ್ವರ ಮೃತನಾದಾಗ ಕಂನೆಯನಾಯಕ, ಜಾಮವ್ವೆ, ಕಲ್ಲವ್ವೆ, ಜವನವ್ವೆ, ಹತ್ತು ಮಂದಿ ಲೆಂಕಿತಿಯರು ಹಾಗೂ ಇಪ್ಪತ್ತೊಂದು ಮಂದಿ ಲೆಂಕರು 'ಅರುವಾರಿ ಗರುಡನಪ' ಭಾಷೆಯನ್ನು ಪೂರೈಸಿದರು. ಹಾಗೆಯೇ ಮುಮ್ಮಡಿ ನರಸಿಂಹನೊಡನೆ ರಂಗೆಯನಾಯಕ, ಕೇತವ್ವೆ, ಹೊನ್ನವ್ವೆ, ಮಂಚವ್ವೆ, ಹತ್ತು ಜನ ಲೆಂಕಿತಿಯರು ಮತ್ತು ಇಪ್ಪತ್ತೊಂದು ಮಂದಿ ಲೆಂಕರು ಗರುಡರಾಗಿ ವೀರಸ್ವರ್ಗಕ್ಕೆ ಸಂದರೆಂದು ತಿಳಿದು ಬರುತ್ತದೆ. ಇದರಿಂದ ಜೀವನದಲ್ಲಿ ಗರುಡ ಸಂಪ್ರದಾಯ ಎಷ್ಟರಮಟ್ಟಿಗೆ ಹಾಸು ಹೊಕ್ಕಾಗಿತ್ತೆಂದು ವಿಧಿತವಾಗುತ್ತದೆ. ಹೀಗೆ ಒಂದೇ ಗ್ರಾಮಕ್ಕೆ ಸೇರಿದ ಒಂದೇ ಮನೆತನದ ಏಳು ತಲೆಮಾರಿನವರು ಆತ್ಮಾರ್ಪಣೆ ಮಾಡುವುದರ ಮೂಲಕ ಯುದ್ಧದಲ್ಲಿ ಮಡಿದ ಹೊಯ್ಸಳ ಅರಸ ಎರೆಯಂಗನಿಂದ ಸೋಮೇಶ್ವರನವರೆಗಿನ ಚಕ್ರವರ್ತಿಗಳ ಆತ್ಮಕ್ಕೆ ಶಾಂತಿಕೋರಿ ಗರುಡರಾದ ಹೃದಯವಿದ್ರಾವಕ ವಿಚಾರವನ್ನು ದಾಖಲಿಸ ಲಾಗಿದೆ. ಈ ಗ್ರಾಮದಲ್ಲಿರವ ಗರುಡ ಸ್ತಂಭಗಳು ಹೊಯ್ಸಳರ ಅರಸನಿಗೆ ಪ್ರಾಣ ತ್ಯಾಗ ಮಾಡಿದ ಸ್ಮಾರಕಗಳಾಗಿವೆ.

೧೪. **ಧಾರ್ಮಿಕ ಸಹಿಷ್ಣುತೆಗೆ ಪ್ರತೀಕವಾಗಿರುವ ಸಿಂಧಘಟ್ಟ ಶಾಸನ :** ಕ್ರಿ.ಶ. ೧೫೩೭ರ ಸಿಂಧಘಟ್ಟದ ಶಾಸನದಲ್ಲಿ (ಕೃ.ಪೇ. ೯೨) ಬಾಬುಸೆಟ್ಟಿಯೆಂಬಾತನು ಸಿಂಧಘಟ್ಟದ ಒಳಕೇರಿಯಲ್ಲಿ ಕಲ್ಲಿನ ಮಸೀದಿಯೊಂದನ್ನು ಕಟ್ಟಿಸಿದನು. ಅದಕ್ಕೆ ರಂಗೈನಾಯಕನು ಶಿವಪುರ ಗ್ರಾಮವನ್ನೂ ಹಬೀಬನ ಒಂದು ಮನೆಯನ್ನೂ ೧೪ ಗದ್ಯಾಣಗಳು ಹಾಗೂ ಅದರ ಮೇಲಣ ಕಾಣಿಕೆಯನ್ನು ಸರ್ವಮಾನ್ಯವಾಗಿ ಬಿಟ್ಟನೆಂದು ಹೇಳಿದೆ. ಈ ಕಾರ್ಯವು ಹಿಂದುಗಳ ಧಾರ್ಮಿಕ ಸಹಿಷ್ಣುತೆಗೆ ಸಾಕ್ಷಿಯಾಗಿದೆ. ಅಲ್ಲಿನ ಮಸೀದಿಯನ್ನು 'ಕಲ್ಲಮಸೀತಿಯ ದೇವಸ್ಥಾನ' ಎಂದು ಕರೆದಿರುವುದು ಗಮನಾರ್ಹ ಸಂಗತಿ. ಸಾಮಾನ್ಯವಾಗಿ ಪ್ರಜೆಗಳು ತಮ್ಮದಲ್ಲದ ಇತರ ಧರ್ಮವನ್ನು ಪೂಜ್ಯ ಭಾವನೆ ಯಿಂದ ಕಾಣುತ್ತಿದ್ದರು ಎಂಬುದಕ್ಕೆ ಈ ಶಾಸನ ನಿದರ್ಶನ ವಾಗಿದೆ.

೧೫. **ದಿವ್ಯ ಪರೀಕ್ಷೆ ಮೂಲಕ ನ್ಯಾಯ ತೀರ್ಪಿಗೆ ಸಂಬಂಧಿಸಿದ ಶಾಸನಗಳು :** ದೇವಸ್ಥಾನಗಳಲ್ಲಿ ನಡೆಯುವ ದಿವ್ಯಗಳ ಕುರಿತ ಶಾಸನ ಹಾಗೂ ಸಾಹಿತ್ಯ ಕೃತಿಗಳಲ್ಲಿ ಸಾಕಷ್ಟು ವಿವರಗಳು ಸಿಗುತ್ತವೆ. ಅಪರಾಧ ನಿರ್ಣಯಕ್ಕೆ ಮನುಷ್ಯ ನಿರ್ಮಿತಿಯ ಯಾವ ಸಾಕ್ಷಿಯೂ ಇಲ್ಲವಾದಾಗ ದೈವವನ್ನು ಆಶ್ರಯಿಸುವ ಪದ್ಧತಿ ಇತ್ತು. ಈ ಕಾರಣಕ್ಕಾಗಿ ಅದನ್ನು ದಿವ್ಯ ಎಂದು ಕರೆದಿದ್ದಾರೆ. ಕನ್ನಡ ಶಾಸನಗಳಲ್ಲಿ ಕೋಶ, ರಿವಿ ತಂಡುಲ, ಅಗ್ನಿ, ತಪ್ತಮಾಷ, ಜಲ, ವಿಷ, ಎಂಬ ಏಳು ದಿವ್ಯಗಳನ್ನು ಹೇಳಲಾಗಿದೆ. ಹೀಗೆ ಸಪ್ತ ದಿವ್ಯಗಳಿಂದ ಬರುತ್ತಿದ್ದ ಆದಾಯವನ್ನು ದೇವಾಸ್ಥಾನದ ಧರ್ಮಕಾರ್ಯಗಳಿಗೆ ಬಳಸಬೇಕೆಂದು ಹಲವು ಶಾಸನಗಳು ಹೇಳುತ್ತವೆ. ಸಾಮಾಜಿಕ ಜೀವನದಲ್ಲಿ ಸತ್ಯ-ಅಸತ್ಯಗಳ ನಡುವಿನ ಹೋರಾಟವನ್ನು ಪ್ರತಿಬಿಂಬಿಸು ವುದಕ್ಕೆ ಬೆಂಕಿಯನ್ನು ಹಿಡಿಯುವಂತಹ ಭಯಾನಕ ಪರೀಕ್ಷೆಗೆ ಗುರಿಯಾಗ ಬೇಕಾಗಿದ್ದಿತು. ಇಂತಹ ಕ್ರಮಕ್ಕೆ ದಿಯ ಅಥವಾ ದಿವ್ಯ ಎಂದು ಹೆಸರು. ಇಂತಹ ಘಟನೆಗೆ ಮಂಡ್ಯ ತಾಲ್ಲೂಕಿನ ಎರಡು ಶಾಸನಗಳು ನಿದರ್ಶನವಾಗಿವೆ.

(ಎ). ಗರುಡನಹಳ್ಳಿ ಹಾಗೂ ಮರಡಿಪುರ ಗ್ರಾಮಸ್ಥರ ನಡುವಿನ ಗಡಿ ವಿವಾದಕ್ಕೆ ಸಂಬಂಧಿಸಿದ ಶಾಸನ

ಮಂಡ್ಯ ತಾಲ್ಲೂಕಿನ ದೊಡ್ಡ ಗರುಡನಹಳ್ಳಿ ಶಾಸನವನ್ನು (ಮಂ. ೨೫) 'ಜಯಪತ್ರ ಶಾಸನ' ಎಂದು ವರ್ಣಿಸಲಾಗಿದೆ. ಕ್ರಿ.ಶ. ೧೨೭೦

ದೊಡ್ಡ ಗರುಡನಹಳ್ಳಿ ಶಾಸನ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಕುತೂಹಲಕರವಾದ ಘಟನೆ ಯೊಂದನ್ನು ನಿರೂಪಿಸಿದೆ. ಕಾಡುವಿಟ್ಟಿಯೊಡನೆ ಯುದ್ಧದಲ್ಲಿ ಹೋರಾಡಿದ ವೀರನೊಬ್ಬನಿಗೆ ಹೊಯ್ಸಳ ಅರಸ ಮೂರನೆಯ ನರಸಿಂಹನು ಗರುಡನಹಳ್ಳಿಯಲ್ಲಿ ಭೂದಾನ ನೀಡಿದ. ಆದರೆ ಮರಡಿಪುರದ ಜನರು ತಾಮ್ರ ಶಾಸನ ವೊಂದನ್ನು ತೋರಿಸಿ ಆ ಭೂಮಿ ತಮಗೆ ಸೇರಿದ್ದೆಂದು ವಾದಿಸಿ, ಬಲತ್ಕಾರದಿಂದ ಎಲ್ಲೆ ಕಲ್ಲುಗಳನ್ನು ನೆಡಲಾಗಿದೆ ಯೆಂದು ದೂರಿತ್ತರು. ಪರಿಣಾಮವಾಗಿ ಗರುಡನಹಳ್ಳಿ ಹಾಗೂ ಮರಡಿಪುರ ಗ್ರಾಮಸ್ಥರ ನಡುವೆ ಗಡಿ ವಿವಾದ ಉಂಟಾದಾಗ, ಗರುಡನಹಳ್ಳಿಯ ಗ್ರಾಮಸ್ಥರ ಪರವಾಗಿ ಕಂನ್ನೆಯನೆಂಜಾತ ಭೂಮಿ ತಮಗ ಸೇರಿದ್ದೆಂದು ಹೇಳಿ ಈ ಭೂವಿವಾದದ ಬಗ್ಗೆ '**ಸಿರಪತ್ರ**' ವನ್ನು ಬರೆಸಿ, ಹೊಯ್ಸಳ ಅರಸ ಮುಮ್ಮಡಿ ವೀರ ನರಸಿಂಹನ ಸಮ್ಮುಖದಲ್ಲಿ ದೋರಸಮುದ್ರದ ಹೊಯ್ಸಳೇಶ್ವರ ಸನ್ನಿಧಿಯಲ್ಲಿದ್ದ ದಿವ್ಯ(ದಿಯ-ಬೆಂಕಿ) ಹಿಡಿದು ಸತ್ಯವನ್ನು ಸ್ಥಿರಪಡಿಸಿದನೆಂದು ತಿಳಿಸುತ್ತದೆ. ಹೀಗೆ ನ್ಯಾಯ ತೀರ್ಮಾನ ಕನ್ನಯ್ಯನ ಹಾಗೂ ಗರುಡನಹಳ್ಳಿಯ ಪರವಾಗಿ ನಿರ್ಣಯವಾಗುವುದು. ಈ ಪ್ರಕರಣದಲ್ಲಿ ತನ್ನ ಗ್ರಾಮದ ಪರವಾಗಿ ದಿವ್ಯ ಪರೀಕ್ಷೆಗೆ ತನ್ನನ್ನೇ ಈಡು ಮಾಡಿಕೊಂಡ ಕನ್ನಯ್ಯನ ನಿಲುವು ವ್ಯಕ್ತಿ ಹಾಗೂ ವೈಯಕ್ತಿಕ ಹಿತಕ್ಕಿಂತ ಊರಿನ\ಗ್ರಾಮದ ಪರವಾಗಿ ಪಣವೊಡ್ಡಿದ್ದು ಆದರ್ಶನೀಯ ವಾಗಿದೆ.

(ಬಿ). ದೇವರ ಹಾಗೂ ದೇವಸ್ಥಾನದ ಪೂಜಾರಿಕೆಯ ಹಕ್ಕನ್ನು ನಿರ್ಧರಿಸುವುದಕ್ಕೆ ಸಂಬಂಧಿಸಿದ ಶಾಸನ

ಇಂತಹ ಕುತೂಹಲಕಾರಿಯಾದ ಮತ್ತೊಂದು ದಿವ್ಯವೊಂದು ಕ್ರಿ.ಶ. ೧೬೫೪ರ ಮಂಡ್ಯದ ಗುತ್ತಲಿನ (ಮಂ. ೬೩) ತಾಮ್ರ ಶಾಸನದಲ್ಲಿದೆ. ಈ ವಿವಾದವು ದೇವರ ಹಾಗೂ ದೇವಸ್ಥಾನದ ಪೂಜಾರಿಕೆಯ ಹಕ್ಕು ಯಾರಿಗೆ ಸೇರಿದ್ದೆಂದು ತೀರ್ಮಾನಿಸುವ ವ್ಯಾಜ್ಯವಾಗಿದೆ. ಅರ್ಕಗುಪ್ತಿ ಪುರವಾದ ಗುತ್ತಲಿನ ಬ್ರಾಹ್ಮಣರಿಗೂ ಅಲ್ಲಿನ ಕೆಲವು ದೇವರು ಗಳ ಪೂಜೆಯನ್ನು ನೆರವೇರಿಸುತ್ತಿದ್ದ ಕೆಂಪು ಅರ್ಕವೊಡೆಯ ರಿಗೂ ದೇವಾಲಯದ ಪೂಜೆಯ ಹಕ್ಕು ತಮಗೆ ಸಿಗಬೇಕೆಂಬ ವ್ಯಾಜ್ಯ ತಲೆದೋರಿತ್ತು. ಆ ಮೂರು ಸ್ಥಳೀಯ ಪಾಳೇಗಾರ ಶಿವೋಜಿನಾಯಕ ಮತ್ತು ಅಮಲ್ದಾರ್ ವೆಂಕಟಪ್ಪನಾಯಕರ ಬಳಿಗೆ ಮುಟ್ಟಿತು. ಈ ವಿವಾದ ಬಗೆಹರಿಸಲು ಮಹಾನಾಡಿ ನವರು, ಶಾನುಭೋಗರು, ಹಾಗೂ ಕೆಲವು ಪ್ರಮುಖ ವ್ಯಕ್ತಿಗಳು ಸೇರಿ ವ್ಯಾಜ್ಯ ಬಗೆಹರಿಸಲು ದಿವ್ಯದ ಮೂಲಕ ವಿವಾದವನ್ನು ಪರಿಹರಿಸಬೇಕೆಂದು ತೀರ್ಮಾನಿಸಿದರು. ಅರ್ಕವೊಡೆಯನು ಮೂರು ಬಾರಿ ಕುದಿಯುವ ತುಪ್ಪದಲ್ಲಿ ಕೈ ಅದ್ದಿ ಜಯಶೀಲ ನಾದನು ಎಂದು ಅದರಲ್ಲಿ ಹೇಳಿದೆ. "ಮೂರು ಬಾರಿ ಪವಾಡ ಗೆದ್ದ" ಎಂಬ ಮಾತು ಅಲ್ಲಿ ಬಂದಿದೆ. ನಂತರ ನ್ಯಾಯ ತೀರ್ಮಾನ ಕೈಗೊಂಡು ದೇವಾಲಯಗಳ ಆಸ್ತಿಯ ಉಸ್ತುವಾರಿ ಹಾಗೂ ಪೂಜಾರಿಕೆ ಹಕ್ಕನ್ನು ದಿವ್ಯ ಪರೀಕ್ಷೆಯಲ್ಲಿ ಗೆದ್ದ ಅರ್ಕಿವೊಡೆಯನಿಗೆ ನೀಡುತ್ತಾರೆ. ಶಾಸನಗಳಲ್ಲಿ 'ಪಾಳೆಗಾರ' ಎಂಬ ಪದವು ಕಂಡುಬಂದಿರುವುದು ವಿಶೇಷವಾದ ಹಾಗೂ ಗಮನಾರ್ಹವಾದ ಸಂಗತಿಯೆನಿಸಿದೆ.

೧೬. ಮಂಡ್ಯದ ಪ್ರಾಚೀನ ಹೆಸರಿಗೆ ಸಂಬಂಧಿಸಿದ ಶಾಸನಗಳು

ಮುಖ್ಯವಾಗಿ '**ಮಂಡಯ**' ಎಂಬುದು ಮಂಡ್ಯದ ಪ್ರಾಚೀನ ಹೆಸರಾಗಿತ್ತು. ಶಾಸನಗಳಲ್ಲಿರುವ ಮಂಡೆಯ, ಮಂಟೆಯ. ಮಂಠೆಯ. ಮಂಡ್ಯ ಎಂಬ ವಿವಿಧ ಬಗೆಯ ರೂಪಗಳು ದೊರೆತರೂ ಅವುಗಳ ಅರ್ಥವೇನೆಂಬುದನ್ನು ತಿಳಿಯಬೇಕಾಗಿದೆ. ಮಂಡ್ಯದ ಪ್ರಾಚೀನ ಹೆಸರಿನ ಉಲ್ಲೇಖ ಎ) **ಮೊದಲಿಗೆ ೧೨೬೭ರಲ್ಲಿ ಬೈರಾಪುರ** (ಕೃ.ಪೇ. **೯೮) ಶಾಸನದಿಂದ** (ಹಿರ್‍ಯ್ಯಭಂಡಾರದ ಮಂಡೇಯದ ಮಾರೆಯನಾಯ್ಕಂಗೇಉ ಪ್ರೀತಿದಾನವಾಗಿ ಕೊಟ್ಟ ಶಾಸನಪತ್ರ, ಪುಟ-೮೧, ಎ.ಕ. ಸಂಪುಟ-೦೬) ತಿಳಿದುಬರುತ್ತದೆ.

ಬಿ). ಮಂಡಯ ಹೆಸರಿನ ಹೊಸಬೂದನೂರು ಶಾಸನ

ಕ್ರಿ.ಶ. ೧೨೭೬ರ ಮಂಡ್ಯ ಸಮೀಪದ ಹೊಸ ಬೂದನೂರು ಗ್ರಾಮದ (ಮಂ. ೫೬) ಹೊಯ್ಸಳ ಮೂರನೇ ನರಸಿಂಹನ ಆಳ್ವಿಕೆಯ ದೇವದಾನದ ಶಾಸನವೊಂದರಲ್ಲಿ ಶ್ರೀಮದ್‌ಅನಾದಿಅಗ್ರಹಾರಂ ಮಂಡಯದ ಮಹಾಜನಂಗಳು ಎಂಬ ಉಕ್ತಿಯನ್ನು ಉಲ್ಲೇಖಿಸಿದೆ. ಮಂಡ್ಯವು ಈ ಅವಧಿ ಯಲ್ಲಿ ಒಂದು ಅಗ್ರಹಾರವಾಗಿತ್ತೆಂಬ ವಿಷಯವನ್ನು ಹೊರ ಚೆಲ್ಲುತ್ತದೆ. ಈ ಶಾಸನದಲ್ಲಿ ಭೂಮಿಯನ್ನು ದೇವಾಲಯಕ್ಕೆ ದಾನವಾಗಿ ನೀಡುವುದರೊಂದಿಗೆ ರೈತರ ಹಿತಾಸಕ್ತಿಯನ್ನು ಕಾಪಾಡಿಕೊಂಡಿರುವುದಕ್ಕೆ ಸ್ಪಷ್ಟವಾದ ನಿದರ್ಶನವಿದೆ. ದೇವಾಲಯದ ಪೂಜೆ ಅಮೃತಪಡಿಗಳಿಗಾಗಿ ದಾನಿಯು ಕೆಲವರಿಂದ ಭೂಮಿಯನ್ನು ಕೊಂಡರೂ ಈ ವ್ಯವಹಾರದಲ್ಲಿ ಒಡೆತನ ಬದಲಾವಣೆಯಾಯಿತೇ ಹೊರತು ಒಂದೆ ಮಾಡು ತ್ತಿದ್ದ ಉಳುಮೆಯ ವೃತ್ತಿಯಲ್ಲಿ ಯಾವ ಬದಲಾವಣೆಯೂ ಆಗಿರಲಿಲ್ಲ. ಆದ್ದರಿಂದ ಬಂದ ಆದಾಯದಲ್ಲಿ ಮಹಾಜನಗಳು ಕೆರೆಕಟ್ಟೆಗಳನ್ನು ಕಟ್ಟಿಸಿಕೊಳ್ಳಬಹುದಾಗಿತ್ತು.

ಸಿ). ಮಂಠೆಯ ಹೆಸರಿನ ಮಂಡ್ಯ ಶಾಸನ: ಮಂಡ್ಯದ (ಮಂ. ೦೭)

ಕ್ರಿ.ಶ. ೧೫೧೬ರ ತಾಮ್ರಪಟ ಶಾಸನವು ವಿಜಯನಗರದ ಕೃಷ್ಣದೇವರಾಯನ ಆಳ್ವಿಕೆಗೆ ಸೇರಿದ್ದು, ಮಂಠೆಯ ಗ್ರಾಮವನ್ನು ಕೃಷ್ಣರಾಯಪುರವೆಂದು ಕರೆದು, ಇದರ ಜೊತೆಗೆ ಶ್ರೀರಂಗ ಪಟ್ಟಣ ಸೀಮೆಯ ಸಣ್ಣ ಹಳ್ಳಿಗಳಾದ ಚಿಕ್ಕಮಂಠೆಯ, ಕಲ್ಲಹಳ್ಳಿ, ಹೊಸಹಳ್ಳಿ, ತೊಂಡಸೇಹಳ್ಳಿ ಮತ್ತು ಕೋನೆಹಳ್ಳಿಗಳನ್ನು ಗೃಹಪರ್ವತ ದಾನವನ್ನಾಗಿ ತನ್ನ ಗುರುವಾದ ವರದಾ ಚಾರ್ಯರ ಮಗ ಗೋವಿಂದರಾಜನಿಗೆ ನೀಡಿದ ಬಗ್ಗೆ ಈ ಶಾಸನದಲ್ಲಿ ದಾಖಲಿಸಲಾಗಿದೆ. ಕೃಷ್ಣದೇವರಾಯನ ಕಾಲದಲ್ಲಿ ಮಂಡ್ಯಕ್ಕೆ ಕೃಷ್ಣರಾಯಪುರವೆಂದು ಪ್ರತಿ ನಾಮಕರಣ ಮಾಡಿದರೂ ಅದೇಕೋ ಬಳಕೆಗೆ ಬರಲಿಲ್ಲ.

೧೭. ಕೃಷ್ಣದೇವರಾಯನ ರಾಣಿ ಚಿನ್ನದೇವಿಗೆ ಸಂಬಂಧಿಸಿದ ಕಾಮಿಡಿಹಳ್ಳಿ ಶಾಸನ

ಕಾಮಿಡಿಹಳ್ಳಿ (ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ), ಗ್ರಾಮದ ಬಸವನಗುಡಿಯ ಎದುರಿನ ಶಿಲಾಶಾಸನವು ಕ್ರಿ.ಶ. ೧೫೨೧, ಏಪ್ರಿಲ್ ೧೭, ಬುಧವಾರ) ತ್ರುಟಿತವಾಗಿದ್ದು, ಕಾಲವನ್ನು ಶಕವರ್ಷಂಗಳು ೧೪೪೩ನೆಯ ವೃಷಭಸಂವತ್ಸರದ ವಯಿಶಾಖ ಸು. ೧೧ ಬುಧವಾರದಲು ಎಂದು ನೀಡಿದ್ದು, ಇದು ಕ್ರಿ.ಶ. ೧೫೨೧ ಏಪ್ರಿಲ್ ೧೭, ಬುಧವಾರಕ್ಕೆ ಸಮನಾಗುತ್ತದೆ. ಈ ಅವಧಿಯಲ್ಲಿ ಕೃಷ್ಣದೇವರಾಯನ ರಾಣಿವಾಸದ ಚಿಂನಾದೇವಿಯಂಮನು ಹಂಪಿಗೆ ಆಗಮಿಸಿದ್ದ ತೊಂಟದಮಠದ ನಿರಂಜನದೇವರು ಮತ್ತು ಮಲ್ಲಿಕಾರ್ಜುನ ದೇವರ ಸೇವಾರ್ಥ ವೀರಪ್ಪೊಡೆಯರ ನಾಯಕತನಕ್ಕೆ ಸಂದ ನಾಗಮಂಗಲ ಸ್ಥಳದ, ದಡಿಗದ ಸೀಮೆಯ ಕಾಮಿಡಿಹಳ್ಳಿಯನ್ನು ದಾನವಾಗಿ ನೀಡಿದ ವಿಷಯ ತಿಳಿದುಬರುತ್ತದೆ. ಶಾಸನದಲ್ಲಿ ದಾನ ಪಡೆದಿರುವ ತೋಂಟದಮಠದ ನಿರಂಜನದೇವನು ಸುಪ್ರಸಿದ್ಧ

ವೀರಶೈವ ಯತಿ ಎಡೆಯೂರಿನ ತೋಂಟದ ಸಿದ್ದಲಿಂಗೇಶ್ವರರೇ ಆಗಿದ್ದಾರೆ. ಈ ಕಾಮಿಡಿಹಳ್ಳಿಗೆ ಪೂರ್ವದ ಹೆಸರಾದ ಬಸವೋಜಯ್ಯಂಗಳಪುರವೆಂದು ಮರುಹೆಸರಿಟ್ಟು ಈ ದಾನವನ್ನು ಬಿಡಲಾಗಿದೆ. ವಿದೇಶಿ ಪ್ರವಾಸಿಗರಾದ ಪಾಯೆಸ್ ಮತ್ತು ನ್ಯೂನಿಜ್‌ರವರು ಚಿನ್ನಾದೇವಿಯನ್ನು ವೇಶ್ಯೆಯೆಂದು, ನೃತ್ಯಗಾರ್ತಿಯೆಂದೂ ಹೇಳಿರುವ ಸಂಗತಿಯನ್ನು ತಿರಸ್ಕರಿಸಲು ಈ ಶಾಸನದಲ್ಲಿರುವ ಮಾಹಿತಿ ಸಹಕಾರಿಯಾಗಿದೆ. ಇವಳು ವಿಜಯನಗರದ ಅಧಿಕಾರಿಗಳ ಕುಟುಂಬದವಳೆಂದು ತಿಳಿದುಬರುತ್ತದೆ. ಈ ಶಾಸನ ದೊರೆತ ಸ್ಥಳವು ತೋಂಟದ ಸಿದ್ದಲಿಂಗೇಶ್ವರರ ಎಡೆಯೂರಿಗೆ ಸುಮಾರು ಹದಿನೈದು ಕಿ.ಮೀ. ದೂರದಲ್ಲಿದೆ. ಈ ಶಾಸನಶಿಲ್ಪದ ಭಾಗದಲ್ಲಿ ಸಿದ್ದಲಿಂಗೇಶ್ವರರ ಕೈಯಲ್ಲಿ ಇಷ್ಟಲಿಂಗವನ್ನು ಹಿಡಿದು ಧ್ಯಾನಸ್ಥರಾಗಿರುವಂತೆ ಚಿತ್ರಿಸಿದೆ. ಈ ಶಾಸನದ ಪ್ರಕಾರ ಇವನು ಶ್ರೀರಂಗಪಟ್ಟಣವನ್ನಲ್ಲದೆ ನಾಗಮಂಗಲ ಸ್ಥಳವನ್ನೂ ಆಳುತ್ತಿದ್ದ ವಿಷಯವಿದೆ. ಆದರೆ ಈ ಶಾಸನ ವೀರಪ್ಪೊಡೆಯನನ್ನು ರಾಣಿ ಚಿನ್ನಾದೇವಿಯ ತಂದೆಯೆಂದು ಉಲ್ಲೇಖಿಸಿದೆ. ಇವಳ ಮುತ್ತಾತ ಚೊಕ್ಕಣ್ಣನಾಯಕ, ತಾತ ಚಿಕ್ಕಣನಾಯಕ ತಂದೆ ವೀರಪ್ಪೊಡೆಯನೆಂದು ತಿಳಿದುಬರುತ್ತದೆ. ಇವನಿಗೂ ಸೇನಾಸಮುದ್ರ ಸಾಳುವ ಗಜಸಿಂಹನೆಂಬ ಬಿರುದಿದೆ.

ರಾಣಿ ತಿರುಮಲದೇವಿಯೂ ಶ್ರೀರಂಗಪಟ್ಟದ ಅರಸ ವೀರಪ್ಪೊಡೆಯನ ಮಗಳೆಂದು ಈವರೆಗೂ ನಂಬಲಾಗಿದೆ. ರಾಣಿ ಚಿನ್ನಾದೇವಿಯ ತಂದೆಯೂ ವೀರಪ್ಪೊಡೆಯನೆಂದು ಶಾಸನದಲ್ಲಿ ನಮೂದಿಸಿದೆ. ಈ ಇಬ್ಬರೂ ವೀರಪ್ಪೊಡೆಯರು ಒಬ್ಬರೇ ಅಥವಾ ಬೇರೆ ಬೇರೆಯೇ ಎಂಬುದನ್ನು ಗಮನಿಸ ಬೇಕಾಗಿದೆ. ತಾತನ ಹೆಸರೂ ಚಿಕ್ಕನಾಯಕ, ಚಿಕ್ಕೊಡೆಯ ನೆಂದು ಇದೆ. ಈ ಇಬ್ಬರೂ ಒಬ್ಬನೇ ಮಕ್ಕಳೇ ಆಗಿದ್ದರೆ ಎಂಬ ಪ್ರಶ್ನೆ ಹುಟ್ಟುತ್ತದೆ. ಈವರೆಗಿನ ನಂಬಿಕೆಯ ಪ್ರಕಾರ ಮಂತ್ರಿ ತಿಮ್ಮರಸನು ಚಿನ್ನಾದೇವಿಯು ಶಾಸ್ತ್ರದ ಪ್ರಕಾರ ಪಟ್ಟದರಸಿಯಾಗಲೂ ಸಾಧ್ಯವಿಲ್ಲವೆಂದು ಅರಸನ ಮಗಳಾದ ತಿರುಮಲಾದೇವಿಯನ್ನು ಮೊದಲಿಗೆ ಕೃಷ್ಣದೇವರಾಯನಿಗೆ ವಿವಾಹ ಮಾಡಿಸಿದನೆಂದಿದೆ. ಈ ಕಾರಣದಿಂದ ಇಬ್ಬರೂ ವೀರೊಪ್ಪೊಡೆಯರ ಮಕ್ಕಳಲ್ಲವೆಂದಾಗುತ್ತದೆ. ಆಗ ನಾಗಮಂಗಲ ಭಾಗದ ವೀರಪ್ಪೊಡೆಯ ಮತ್ತು ಶ್ರೀರಂಗ ಪಟ್ಟಣದ ವೀರಪ್ಪೊಡೆಯ ಭಿನ್ನವಾಗುತ್ತಾರೆ. ಅಥವಾ ರಾಣಿ ಚಿನ್ನಾದೇವಿಯು ತಿರುಮಲಾದೇವಿಯ ತಂದೆಯನ್ನು ಗೌರವದಿಂದ ತನ್ನ ತಂದೆಯೆಂದು ಹೇಳಿಕೊಂಡಿರುವಳೇ ಈ ಬಗ್ಗೆ ಇನ್ನೂ ಹೆಚ್ಚಿನ ಚರ್ಚೆಯಾಗಬೇಕಾಗಿದೆ.

೧೮. ಮೈಸೂರಿನ ಚಾಮರಾಜೇಂದ್ರ ಒಡೆಯರಿಗೆ ಸಂಬಂಧಿಸಿದ ಮದ್ದೂರು ಶಾಸನ

ಕ್ರಿ.ಶ. ೧೬೨೩ರ ಮದ್ದೂರಿನ (ಮ. ೬೪) ತಾಮ್ರಶಾಸನ ರಾಮದೇವರಾಯನನ್ನು ಹೆಸರಿಸಿದ್ದರೂ ಮೈಸೂರು ಚಾಮರಾಜೇಂದ್ರನನ್ನು 'ಶ್ರೀರಂಗಪಟ್ಟಣ ಖ್ಯಾತ ಭೋಜ ಸಿಂಹಾಸನಾಧಿಪ' ಎಂದು ಹೇಳಿದೆ. ಈ ವೇಳೆಗಾಗಲೇ ಮೈಸೂರು ಒಡೆಯರು ವಿಜಯನಗರದ ಅರಸರ ಮಾಂಡಲೀಕರಾಗಿದ್ದರೂ, ಶ್ರೀರಂಗಪಟ್ಟಣದಲ್ಲಿ ಆಡಳಿತ ನಡೆಸುತ್ತಿದ್ದರೆಂಬ ವಿಚಾರ ಸ್ಪಷ್ಟವಾಗಿ ತಿಳಿದುಬರುತ್ತದೆ.

೧೮. ಹೈದರ್‌ನ ಏಳಿಗೆಗೆ ಸಂಬಂಧಿಸಿದ ಚಟ್ಟಂಗರೆ ಶಾಸನ

ಇಮ್ಮಡಿ ಕೃಷ್ಣರಾಜ ಒಡೆಯರ ಕಾಲದ ಕೃಷ್ಣರಾಜಪೇಟೆ ತಾಲ್ಲೂಕಿನ ಚಟ್ಟಂಗೆರೆ (ಕೃ.ಪೇ. ೧೦೨) ಗ್ರಾಮಕ್ಕೆ ಸೇರಿರುವ ಹಾಗೂ ಕನ್ನಡ ಭಾಷೆಯಲ್ಲಿರುವ ಕ್ರಿ.ಶ. ೧೭೫೯ರ ಮೂರು ಶಾಸನಗಳಲ್ಲಿ ಅರಸರು 'ಹೈದರಾಲಿ ಬಹದ್ದೂರರಿಗೆ' ಚಟ್ಟಂಗೆರೆ (ಚಟ್ಟನಗೆರೆ) ಗ್ರಾಮವನ್ನು ಕೊಟ್ಟನೆಂದು ಹೇಳಿದೆ. ಮೊದಲನೆಯ ಶಾಸನದಲ್ಲಿ ತೊಣ್ಣೂರಿನ ನಿಲಾ ಮಶೂದ ಖಾದರಿ ದರಗಾದಲ್ಲಿ ನಡೆಸುವ ಪವಿತ್ರ ಧರ್ಮಕ್ಕೆ ಅಂದರೆ ಅವರ ಆಹಾರ ದಾನಕ್ಕೆ ಈ ಗ್ರಾಮವನ್ನು ದಾನ ಮಾಡಲಾಯಿತೆಂದು ಹೇಳಿದೆ. ಎರಡನೆಯ ಶಾಸನದಲ್ಲಿ ಗ್ರಾಮದ ಹುಟ್ಟುವಳಿಯ ಜೊತೆಗೆ ಅಡಿಕೆ ತೋಟದ ಹುಟ್ಟುವಳಿಯನ್ನು ದಾನ ಮಾಡಲಾಯಿತೆಂದಿದೆ. ಈ ತೋಟವನ್ನು ಹೈದರ್ ಅಲಿಯು ೩೩೦೦ ವರಹಗಳಿಗೆ ಕೊಂಡು ದಾನ ಮಾಡಿದನು. ಮೂರನೆಯ ಶಾಸನದಲ್ಲಿ ಫಕೀರನ ಪ್ರಸ್ತಾಪವಿದೆ. ಬಹುಶಃ ಅವರಿಗೂ ಇಂತಹ ವ್ಯವಸ್ಥೆಯನ್ನು ಮಾಡಲಾಯಿತು. ಶಾಸನದ ಕಾಲಾವಧಿ ವೇಳೆಗಾಗಲೇ ದಳವಾಯಿ ನಂಜರಾಜಯ್ಯನು ಹೈದರ್‌ಅಲಿಗೆ ನವಾಬ್ ಹೈದರ್ ಅಲಿ ಬಹದ್ದೂರ್ ಎಂಬ ಬಿರುದನ್ನಿತ್ತಿದ್ದ, ಈ ಬಿರುದನ್ನೇ ಈ ಶಾಸನಗಳಲ್ಲಿ ಹೇಳಿದೆ.

೧೯. ಹೈದರಾಲಿಯ ನಿಧನ ಮತ್ತು ಆತನ ಗೋರಿಗೆ ಸಂಬಂಧಿಸಿದ ಗುಂಬಜ್ ಶಾಸನ

ಶ್ರೀರಂಗಪಟ್ಟಣದ (ಶ್ರೀ. ಪ. ೫೯) ಗುಂಬಜ್‌ಗೆ ಸೇರಿದ ಪಶ್ಚಿಮ ಗೋಡೆಯ ಮೇಲಿರುವ ಕ್ರಿ.ಶ. ೧೭೮೨ರ ಶಾಸನವು ಹೈದರಾಲಿಯ ನಿಧನವನ್ನು ಮತ್ತು ಆತನ ಬೃಹತ್ ಗೋರಿಯ ನಿರ್ಮಾಣವನ್ನು ಸೂಚಿಸುತ್ತದೆ.

೨೦. ರಾಮಾನುಜಾಚಾರ್ಯರಿಗೆ ಸಂಬಂಧಿಸಿದ ಪಡುವಲ ಪಟ್ಟಣ ಶಾಸನ

ಕ್ರಿ.ಶ. ೧೯ನೇ ಶತಮಾನಕ್ಕೆ ಸೇರಿದ್ದೆನ್ನಬಹುದಾದ ಪಡುವಲಪಟ್ಟಣದ ಶಾಸನವೊಂದರಲ್ಲಿ (ನಾ. ಮಂ. ೧೮) ರಾಮಾನುಜಾಚಾರ್ಯರು ಆ ಊರಿನಲ್ಲಿ ತಪ್ಪಸ್ಸು ಮಾಡು ತ್ತಿದ್ದರೆಂದು ಹೇಳಿದೆ. ಅಲ್ಲಿನ ಪಾಂಡವಪುರ ಕಲ್ಲು ಬಂಡೆಯ ಒಳಪಾರ್ಶ್ವದಲ್ಲಿ ಸುಣ್ಣದಲ್ಲಿ ಬರೆದಿರುವ ಶಾಸನವದು. "ಕಾಳೊ ಯುಕ್ತಿ ಸಂವತ್ಸರದ ಶ್ರಣಶ್ತುಲು ರಾಮಾನುಜಾಚಾರ್ಯರು ಇಲ್ಲಿಗೆ ಬಂದು ತಪಸ್ಸು ಮಾಡುತಯಿಧರೆ, ಯಿವರಸೇವೆ ಮಾಡಿದವರಿಗೆ ಸ್ವರ್ಗ ಉಂಟು. ಯಿದಬರದಾತ ಹಟ್ಟದ ಹಾರ್‍ಯ ಗಲುಡರ ನಾಯಾಯಣಯ್ಯ" ಎಂಬುದು ಆ ಶಾಸನದ ಪೂರ್ಣಪಾಠ. ಈ ಮಾತು ನಿಜವಾಗಿದ್ದಲ್ಲಿ ಹಿಂದೆ ಪಡುವಲಪಟ್ಟಣವು ಒಂದು ಧಾರ್ಮಿಕ ಕೇಂದ್ರವಾಗಿತ್ತೆಂದೂ, ವಿಶಿಷ್ಟದ್ವೈತ ತತ್ವದ ಆಚಾರ್ಯ ಪುರುಷರಾದ ಶ್ರೀ ಮದ್ರಾಮಾನುಜಾಚಾರ್ಯರ ಪಾದ ಸ್ಪರ್ಶದಿಂದ ಪುನೀತವಾದ ಭೂಮಿಯೆಂದೂ ಹೇಳಬಹುದಾಗಿದೆ.

ಒಟ್ಟಾರೆ ನಮ್ಮನಾಡಿನ ಜನಜೀವನವನ್ನು ಅರಿಯ ಬೇಕಾದರೆ ಶಾಸನಗಳಿಗಿಂತ ಉತ್ತಮವಾದ ಸಾಧನಗಳಿಲ್ಲ. ಸಾಮಾಜಿಕ ಅಧ್ಯಯನದಲ್ಲಿ ಶಾಸನಗಳಿಂದ ಒದಗುವ ಸಹಾಯ, ವಿಷಯದ ವಿಪುಲತೆ, ವೈವಿಧ್ಯತೆ ಅಸಂಖ್ಯಾತವಾದುದು.

೧೨೬

ಚಿತ್ರದುರ್ಗ ಕೋಟೆಯ ರಕ್ಷಣೆಯಲ್ಲಿ ಬತೇರಿಗಳ ಪಾತ್ರ

ಡಾ. ಎಸ್. ತಿಪ್ಪೇಸ್ವಾಮಿ*

ರಕ್ಷಣಾ ವಾಸ್ತುವೆಂದರೆ ಕೇವಲ ಕೋಟೆಗೋಡೆ ಮಾತ್ರವಲ್ಲ. ಕೋಟೆಯೊಂದಿಗೆ ಹತ್ತುಹಲವು ಅಂಗಗಳಿವೆ. ಅವುಗಳೆಂದರೆ ಬುರುಜು, ಬತೇರಿ, ಕೊತ್ತಲ, ಕಂದಕ, ಮಹಾದ್ವಾರ, ದಿಡ್ಡಿ, ಕಾವಲುಗೋಪುರಗಳು ರಕ್ಷಣಾ ವಾಸ್ತುವಿನ ಭಾಗಗಳಾಗಿದ್ದರೆ, ದೇವಾಲಯಗಳು, ನೀರಿನ ಆಶ್ರಯಗಳು, ಗರಡಿಮನೆ, ಮದ್ದಿನಮನೆ, ಸೈನಿಕ ನೆಲೆ, ಅರಮನೆ, ಕೋಟೆಯ ಬಿತ್ತಿಶಿಲ್ಪ, ವೀರಗಲ್ಲು, ಕಣಜ ಮುಂತಾದವುಗಳು ರಕ್ಷಣಾವಾಸ್ತುವಿಗೆ ಪೋಷಕವಾದ ಸ್ಮಾರಕಗಳಾಗಿವೆ. ಔಪಯೋಗಿಕವಾಗಿ ಕೋಟೆಯ ಅಂಗಗಳು ಪರಸ್ಪರ ಒಂದನೊಂದು ಅವಲಂಬಿಸಿರುತ್ತವೆ. ಇವು ಬಹುಪಯೋಗಿ ಸ್ಮಾರಕಗಳಾಗಿವೆ.

ಲೇಖನದ ಶೀರ್ಷಿಕೆ ಹೇಳುವಂತೆ ಇದು ಚಿತ್ರದುರ್ಗ ಕೋಟೆಯ ರಕ್ಷಣಾ ವಾಸ್ತು ರಚನೆಯ ಪ್ರಮುಖ ಅಂಗ ಭಾಗಗಳಲ್ಲೊಂದಾದ ಬತೇರಿಗಳ, ವಾಸ್ತು ವೈಶಿಷ್ಟ್ಯತೆಯ ತಂತ್ರಗಳನ್ನು ಕುರಿತದ್ದಾಗಿದೆ. ಯುದ್ಧ ತಂತ್ರ ಹಾಗೂ ಕೋಟೆಯ ಅಂದವನ್ನು ಹೆಚ್ಚುಸುವ ದೃಷ್ಟಿಯಿಂದ ನಿರ್ಮಿಸಿದ ಇಂತಹ ಸ್ಮಾರಕಗಳು ರಕ್ಷಣಾ ವಾಸ್ತು ರಚನೆಯಲ್ಲಿ ನಿರ್ವಹಿಸುತ್ತಿದ್ದ ಪಾತ್ರ ಅತ್ಯಂತ ಗಮನಾರ್ಹ. ವಿಶೇಷವಾಗಿ ಚಿತ್ರದುರ್ಗದ ಕೋಟೆಯೊಳಗೆ ನಿರ್ಮಿಸಿರುವ ಈ ಬತೇರಿಗಳು, ಅಂದಿನ ರಕ್ಷಣಾ ವಾಸ್ತು ರಚನೆಯ ಮಹತ್ವ, ವ್ಯಾಪ್ತಿ, ಈ ಪರಿಸರದ ಬದುಕು, ಆಳ್ವಿಕೆಯ ಸಾಮರ್ಥ್ಯ, ಆಡಳಿತವನ್ನಲ್ಲದೆ, ಚಿತ್ರದುರ್ಗ ಪಾಳೆಗಾರರ ಸಾಂಸ್ಕೃತಿಕ ಹಾಗೂ ಸಾಮಾಜಿಕ ಇತಿಹಾಸದ ಮೇಲೆ ಹೊಸ ಬೆಳಕನ್ನು ಚೆಲ್ಲುತ್ತವೆ. ಈ ಸ್ಮಾರಕಗಳನ್ನು ನಿರ್ಮಾಣ ಮಾಡಿರುವ ಹಿನ್ನೆಲೆ, ಉದ್ದೇಶ, ರಚನೆ, ವಿನ್ಯಾಸ, ಪ್ರಾಮುಖ್ಯತೆ, ಮತ್ತಿತರ ಅಂಶಗಳನ್ನು ಪ್ರಸ್ತುತ ಲೇಖನದಲ್ಲಿ ತಿಳಿದುಕೊಳ್ಳಲು ಯತ್ನಿಸಲಾಗಿದೆ.

ಬತೇರಿಗಳ ರಚನೆ

ಕೋಟೆಯ ವಿನ್ಯಾಸ ಸೂತ್ರದಿಂದ, ಸಾಮಾನ್ಯವಾಗಿ ವೃತ್ತಾಕಾರವಾಗಿ ಹಾಗೂ ಎತ್ತರವಾಗಿರುವ ವಾಸ್ತು ರಚನೆಗಳೇ ಬತೇರಿಗಳು. ಕೆಲವು ಕಡೆ ಬುರುಜು ಅಥವ ಕೊತ್ತಲಗಳನ್ನು, ಬತೇರಿಗಳೊಂದಿಗೆ ಗೊಂದಲವಾಗಿ ಬಳಸಲಾಗಿದೆ. ಆದರೆ ವಾಸ್ತವವಾಗಿ ಬುರುಜು ಎನ್ನುವುದು ಕೋಟೆಗೆ ಹೊಂದಿಕೊಂಡು ನಿರ್ಮಿಸಲಾಗುವ ಅವಿಭಾಜ್ಯ ಅಂಗ. ಕೊತ್ತಲಗಳು ಕೋಟೆಗೆ ಹೊಂದಿಕೊಂಡಂತೆಯು ಅಥವಾ ಸ್ವತಂತ್ರವಾಗಿಯೂ ನಿರ್ಮಾಣವಾಗುವವು. ಬತೇರಿಗಳು ಕಾವಲು ಗೋಪುರಗಳ ಕಾರ್ಯವನ್ನು ನಿರ್ವಹಿಸುವುದರಿಂದ ಇವುಗಳನ್ನು ಅವಶ್ಯಕತೆಗೆ ತಕ್ಕಂತೆ ಕೋಟೆಯ ಸಮೀಪ ಸ್ವತಂತ್ರ ಕಟ್ಟಡದಂತೆಯು ನಿರ್ಮಿಸಲಾಗುವುದು. ಸಾಮಾನ್ಯವಾಗಿ ಇವುಗಳನ್ನೇ ನಾವು ಬತೇರಿಗಳೆಂದು ಕರೆಯುತ್ತೇವೆ. ಇವುಗಳನ್ನು ಕೋಟೆಯಿಂದ ಪ್ರತ್ಯೇಕಗೊಳಿಸಿ ನಿರ್ಮಾಣ ಮಾಡಿರುವುದನ್ನು ಚಿತ್ರದುರ್ಗದ ಕೋಟೆಯಲ್ಲಿ ಸ್ಪಷ್ಟವಾಗಿ ಗುರುತಿಸಬಹುದು.

ಚಿತ್ರದುರ್ಗದ ಕೋಟೆಯಲ್ಲಿ ವಿಶಿಷ್ಟವಾದ ಬತೇರಿಗಳನ್ನು ಯುದ್ಧ ತಂತ್ರಕ್ಕನುಗುಣವಾಗಿ ರಚಿಸಲಾಗಿದೆ. ಪ್ರಾರಂಭದಲ್ಲಿ ಸರಳ ರಚನೆಯಿಂದ ನಿರ್ಮಾಣಗೊಂಡ ಈ ಬತೇರಿಗಳನ್ನು ಕ್ರಮೇಣ ಒಂದು ವಿಶಿಷ್ಟ ತಂತ್ರಕ್ಕನುಗುಣವಾಗಿ ಮಾರ್ಪಡಿಸಿರುವುದನ್ನು ಸೂಕ್ಷ್ಮವಾಗಿ ಗಮನಿಸಬಹುದು. ಅನೇಕ ಕಡೆ ಪ್ರಾಚೀನ ಕಲ್ಲಿನ ಬುರುಜುಗಳ ಮೇಲೆ ೧೦ ಅಡಿ ಎತ್ತರದವರೆಗೆ ಇಟ್ಟಿಗೆ ಮತ್ತು ಗಾರೆಯನ್ನು ಬಳಸಿ ಬತೇರಿಗಳನ್ನು ಎತ್ತರಗೊಳಿಸಲಾಗಿದೆ. ಈ ಬತೇರಿಗಳ ಮೇಲೆ ಪಹರೆ ಗೃಹಗಳು, ಕೋವಿ ಕಿಂಡಿಗಳು, ಫಿರಂಗಿ ಗೂಡುಗಳನ್ನು ಕ್ರಮವಾಗಿ ರಚಿಸಿದ್ದಾರೆ. ಸಾಮಾನ್ಯವಾಗಿ ಪಹರೆ ಗೃಹಗಳು, ಅನುಕೂಲವಾಗಿ ಒಬ್ಬ ಸೈನಿಕನು ನಿಲ್ಲುವಷ್ಟು ಸ್ಥಳಾವಕಾಶವನ್ನು ಹೊಂದಿರುತಿತ್ತು. ಇವುಗಳು ವಿವಿಧ ದಿಕ್ಕುಗಳಿಗೆ ಅಭಿಮುಖವಾಗಿರುವಂತೆ ನಿರ್ಮಿಸಲಾಗುತಿತ್ತು. ಇವುಗಳ ವಿಸ್ತಾರ ಒಂದು ಅಥವಾ ಎರಡು ಅಂಕಣಗಳಷ್ಟಿದ್ದು, ಒಂದು ಪ್ರವೇಶ ದ್ವಾರವನ್ನು ಹೊಂದಿರುತ್ತವೆ. ಪಹರೆ ಗೃಹದ ಮೇಲ್ಭಾಗವನ್ನು ಗಾರೆಯಿಂದ ಅಲಂಕೃತಗೊಳಿಸಲಾಗಿದೆ. ಮಳೆಯ ನೀರು ಮತ್ತು ಬಿಸಿಲಿನಿಂದ ಒಳಗಿರುವವರಿಗೆ ರಕ್ಷಣೆ ನೀಡುವಂತೆ

* ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಕಲಾ ಕಾಲೇಜು, ಚಿತ್ರದುರ್ಗ-೫೭೭೫೦೧.

ಇವುಗಳನ್ನು ರಚಿಸಲಾಗಿದೆ. ಅಲ್ಲದೆ, ಪಹರೆ ಗೂಡುಗಳಲ್ಲಿ ತಂಪಾದ ವಾತಾವರಣವಿರುವಂತೆ ವಿಶಿಷ್ಟ ರಚನೆಯನ್ನು ಮಾಡಲಾಗಿದೆ. ಈ ಪಹರೆಗಳಿಗೆ ಚೌಕಾಕಾರ ಮತ್ತು ವೃತ್ತಾಕಾರದ ಕೋವಿಕಿಂಡಿಗಳಿವೆ. ಇವು ಒಳಭಾಗದಲ್ಲಿ ೪.೧ ಇಂಚು, ಹೊರಭಾಗದಲ್ಲಿ ೮.೧ ಇಂಚು ಅಗಲವಿದ್ದು, ೧೦.೧ ಇಂಚು ಉದ್ದವಾಗಿರುವಂತೆ ರಚಿಸಲಾಗಿದೆ. ಈ ಕಿಂಡಿಗಳ ಅಗಲ ಕಿರಿದಾಗಿದ್ದು, ತನ್ಮೂಲಕ ಸುತ್ತಲಿನ ಪರಿಸರವನ್ನು ಯಥೇಚ್ಛವಾಗಿ ವೀಕ್ಷಿಸಲು ಅನುಕೂಲಿಸುತ್ತದೆ. ಇವುಗಳನ್ನು ೧೦° ಕೋನದಲ್ಲಿ ರಚಿಸಿದ್ದಾರೆ. ಚೌಕಾಕಾರದ ಕೋವಿ ಕಿಂಡಿಗಳು ಒಳಭಾಗದಲ್ಲಿ ೪.೧ ಇಂಚು, ಹೊರಭಾಗದಲ್ಲಿ ೮ ಇಂಚು ಅಗಲವಿದ್ದು, ಉದ್ದ ೧೧.೧ ಇಂಚು ಇರುವಂತೆ ರಚಿಸಲಾಗಿದ್ದು, ಇಲ್ಲಿಯೂ ೧೦°ಯನ್ನು ಕಾಯ್ದು ಕೊಳ್ಳಲಾಗಿದೆ.

ಚಿತ್ರದುರ್ಗದ ಕೋಟೆಯ ಮೊದಲೆರೆಡು ಆವರಣಗಳು ನೆಲಮಟ್ಟದಲ್ಲಿದ್ದು, ಇಲ್ಲಿಯೂ ಅನೇಕ ಬತೇರಿಗಳಿವೆ. ಉದಾ; ಜೋಡು ಬತೇರಿ ಅಥವಾ ಅಕ್ಕತಂಗಿ ಬತೇರಿ, ಕಳ್ಳಗುಹೆ ಬತೇರಿ, ಶೃಂಗೇರಿ ಮಠದ ಹತ್ತಿರದ ಬತೇರಿ, ಸುಣ್ಣದ ಗುಮ್ಮಿನ ಬತೇರಿ ಇತ್ಯಾದಿ ಬತೇರಿಗಳಿವೆ. ಈ ಬತೇರಿಗಳ ಮೇಲೆ ಚಿಕ್ಕ ಚಿಕ್ಕ ಪಹರೆ ಗೂಡುಗಳನ್ನು ನಿರ್ಮಿಸಿ ಬೆಟ್ಟದ ಮೇಲಿರುವ ಉಳಿದ ಆವರಣಗಳ ಪ್ರಮುಖ ಬತೇರಿಗಳಿಗೆ ವೀಕ್ಷಣಾಸಂಪರ್ಕವನ್ನು ಕಲ್ಪಿಸಲಾಗಿದೆ. ವಿಶೇಷತೆಯೆಂದರೆ ಒಂದೊಂದು ಕಿಂಡಿಗಳು ನಿರ್ದಿಷ್ಟಪಡಿಸಿದ ಬತೇರಿಗೆ ವೀಕ್ಷಣಾಸಂಪರ್ಕವನ್ನು ಹೊಂದಿವೆ. ಪಹರೆಗೃಹದ ಪಕ್ಕದಲ್ಲಿ ೫ ಅಡಿ ಎತ್ತರದ ಕೈಪಿಡಿಗೋಡೆ ರಚಿಸಿದ್ದಾರೆ. ಕೈಪಿಡಿ ಗೋಡೆಗಳಲ್ಲಿ ಒಳಭಾಗದ ಓರೆ ಎತ್ತರ ೪೮ ಇಂಚು ಹೊರಭಾಗದಲ್ಲಿ ೭ ಇಂಚು ಹಾಗೂ ೧೯೬ ಇಂಚು ಉದ್ದವಿರುವಂತೆ, ಫಿರಂಗಿ ಗೂಡುಗಳನ್ನು ಗಾರೆಗಚ್ಚುಗಳಿಂದ ರಚಿಸಿದ್ದಾರೆ. ಈ ಫಿರಂಗಿ ಗೂಡುಗಳು ೨೦° ಕೋನದಲ್ಲಿವೆ.

ನಿರ್ಮಾಣದಲ್ಲಿ, ಬತೇರಿಗಳ ಗಾತ್ರಕ್ಕೆ ತಕ್ಕಂತೆ ಕಲ್ಲುಗಳನ್ನು ಬಳಸಿದ್ದಾರೆ. ಕೋಟೆ ಗೋಡೆಗೆ ಬಳಸಿರುವ ಕಲ್ಲುಗಳೇ ಇಲ್ಲಿ ಹೆಚ್ಚಾಗಿ ಬಳಸಲ್ಪಟ್ಟಿವೆ. ಕೆಲವು ಕಡೆ ಕೆಳಭಾಗದಲ್ಲಿ, ಭದ್ರತೆಗಾಗಿ ಸುತ್ತಲು ೪ ರಿಂದ ೬ ಅಡಿಯವರೆಗೆ ಗೋಡೆಯನ್ನು ಕಟ್ಟಿ ಇದರ ಮೇಲ್ಭಾಗದಲ್ಲಿ ಚಿಕ್ಕ ಚಿಕ್ಕ ಕಲ್ಲುಗಳು ಹಾಗೂ ಮಣ್ಣನ್ನು ತುಂಬಿ ಗೋಡೆಯನ್ನು ನಿರ್ಮಿಸಿರುವುದು ಕಂಡುಬರುತ್ತದೆ. ಮತ್ತೆ ಕೆಲವು ಬತೇರಿಗಳಲ್ಲಿ ಗೋಡೆಯ ಒಳಭಾಗದಲ್ಲಿ ಗಚ್ಚುಮಣ್ಣನ್ನು ಹಂತ ಹಂತವಾಗಿ ಭರ್ತಿ ಮಾಡಿರುವುದು ಕಂಡುಬರುತ್ತದೆ. ಬತೇರಿಯ ಮೇಲ್ಭಾಗ ಹಾಗೂ ಹೊರ ಭಾಗವನ್ನು ಗಾರೆಯಿಂದ ಅಲಂಕೃತ ಗೊಳಿಸಿರುವುದು ಕೆಲವು ಬತೇರಿಗಳಲ್ಲಿ ಕಂಡುಬರುತ್ತದೆ. ಹೀಗೆ ಬತೇರಿಯ ರಚನೆಯಲ್ಲಿ ಅನೇಕ ರೀತಿಯ ವಿನ್ಯಾಸ ಮತ್ತು ತಂತ್ರದ ಲಕ್ಷಣಗಳನ್ನು ಅಳವಡಿಸಿರುವುದನ್ನು ಈ ಕೋಟೆಗಳಲ್ಲಿ ಕಾಣಬಹುದು.


ಚಿತ್ರದುರ್ಗದ ಬೆಟ್ಟವು ಸಪ್ತಶಿಖರಗಳಿಂದ ಕೂಡಿದೆ. ಇದರ ವಿವಿಧ ಭಾಗಗಳಲ್ಲಿ ನಿರ್ಮಿಸಿರುವ ದ್ವಾರಬಾಗಿಲು, ಅರಮನೆ, ಕಂದಕ, ಖಜಾನೆ, ಬುರುಜು ಕಣಿವೆ ಪ್ರದೇಶ ಗಳೊಡನೆ ಸಂಪರ್ಕ ಸಾಧಿಸಲು ಸಪ್ತಶಿಖರಗಳ ಮೇಲ್ಭಾಗ ದಲ್ಲಿ ಹಾಗೂ ಆಯಕಟ್ಟಿನ ಸ್ಥಳಗಳಲ್ಲಿ ಬತೇರಿಗಳನ್ನು ಸ್ಥಾಪಿಸ ಲಾಗಿದೆ. ಇವುಗಳನ್ನು ಹೆಚ್ಚಾಗಿ ಕೋಟೆಗೋಡೆಯಿಂದ ಪ್ರತ್ಯೇಕಗೊಳಿಸಿ ಕಟ್ಟಿರುವುದು ಗಮನಾರ್ಹ. ಈ ಕೋಟೆಯಲ್ಲಿ ನಿರ್ಮಿಸಿರುವ ಬತೇರಿಗಳಿಂದ ನಮಗೆ ಸ್ಪಷ್ಟವಾಗುವ ಅಂಶ ವೆಂದರೆ, ಗಿರಿದುರ್ಗಗಳಲ್ಲಿ ಬತೇರಿಗಳನ್ನು ಕೋಟೆಯಿಂದ ಪ್ರತ್ಯೇಕಿಸಿ, ಆಯಕಟ್ಟಿನ ಜಾಗಗಳಲ್ಲಿ ನಿರ್ಮಿಸಿದ್ದಾರೆಂಬುದು ಸ್ಪಷ್ಟವಾಗುತ್ತದೆ. ಅಲ್ಲದೆ ಇವುಗಳು ಮುಖ್ಯವಾಗಿ ಕೋಟೆಗೆ ಲಗ್ಗೆಹಾಕಲು ಬರುವ ಶತ್ರುಗಳನ್ನು ದೂರದಿಂದಲೇ ವೀಕ್ಷಿಸಿ ಅಪಾಯದ ಸಂಕೇತಗಳನ್ನು ಅರಿಯಲು ಇವು ಸಹಾಯಕ ವಾಗಿದ್ದವು ಹಾಗೂ ಒಂದು ಬತೇರಿಯಿಂದ ಮತ್ತೊಂದು



ತುಪ್ಪದ ಕೊಳದ ಬತೇರಿ



ಕಹಳೆ ಬತೇರಿ



ಬತೇರಿಗಳ ನಕ್ಷೆ



ಬತೇರಿಗಳ ರಚನೆಯ ತಂತ್ರಗಾರಿಕೆಯ ನೋಟ

ಬತೇರಿಗೆ ಸಂಪರ್ಕ ಸೇತುವೆಯಾಗಿ ಇವು ಕಾರ್ಯ ನಿರ್ವಹಿಸುತ್ತಿದ್ದವು.

ಇಲ್ಲಿ ಗಮನಿಸಬೇಕಾದ ಮುಖ್ಯ ಸಂಗತಿ ಎಂದರೆ, ಚಿತ್ರದುರ್ಗ ಕೋಟೆಯಲ್ಲಿ ನಿರ್ಮಾಣ ಮಾಡಿರುವ ಬತೇರಿಗಳನ್ನು, ಕೇವಲ ಚಿತ್ರದುರ್ಗ ಕೋಟೆಯ ರಕ್ಷಣೆಯ ಉದ್ದೇಶವನ್ನಷ್ಟೇ ಇಟ್ಟುಕೊಂಡು ನಿರ್ಮಾಣ ಮಾಡಿಲ್ಲ. ಉದಾ: ಕಹಳೆ ಬತೇರಿ, ನೆಲ್ಲಿಕಾಯಿ ಸಿದ್ದಪ್ಪನ ಬತೇರಿ, ರಣ ಬತೇರಿ, ಝುಂಡ ಬತೇರಿ ಇತ್ಯಾದಿ ಬತೇರಿಗಳು, ಚಿತ್ರದುರ್ಗ ಕೋಟೆ ಪರಿಸರದ ರಕ್ಷಣೆಯನಷ್ಟೇ ಅಲ್ಲದೇ ದೂರದ ಗಡಿ ಪ್ರದೇಶಗಳನ್ನು ಸಹ ರಕ್ಷಿಸುತ್ತಿದ್ದವು. ಇಂತಹ ಬತೇರಿಗಳ ಸಹಾಯದಿಂದ ಗಡಿಪ್ರದೇಶಗಳಿಂದ ಅಪಾಯದ ಸಂಕೇತಗಳನ್ನು ಕೇಂದ್ರಭಾಗಕ್ಕೆ ತಲುಪಿಸಿಕೊಳ್ಳುವ, ಇಲ್ಲವೆ ಕಳುಹಿಸುವ ಉದ್ದೇಶಗಳನ್ನಿಟ್ಟುಕೊಂಡು ಮಾಡಿಕೊಂಡ ವ್ಯಸ್ಥೆಗಳಾಗಿದ್ದವೆಂಬುದು, ಅವುಗಳ ರಚನೆ ಮತ್ತು ವಿನ್ಯಾಸಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಸ್ಪಷ್ಟವಾಗುತ್ತದೆ. ಈ ಹಿನ್ನೆಲೆಯಲ್ಲಿ ಗಡಿದುರ್ಗ ಮತ್ತು ಕೇದ್ರಭಾಗಕ್ಕೆ ವೀಕ್ಷಣೆ ಕಲ್ಪಿಸಿಕೊಳ್ಳಲು ಮಧ್ಯೆ ಮಧ್ಯೆ ಕಾವಲು ಬತೇರಿ (ಕಾವಲು ಗೋಪುರ) ಗಳನ್ನು ನಿರ್ಮಿಸಿರುವುದನ್ನು ಜಿಲ್ಲೆಯಾದ್ಯಂತ ಇಂದಿಗೂ ಕಾಣಬಹುದು. ಇಂತಹ ರಚನೆಗಳಿಗೆ ತವಗ, ಹುಡೇವು ಇತ್ಯಾದಿ ಹೆಸರುಗಳಿವೆ. ಈ ರಚನಾ ಕ್ರಮವು ರಕ್ಷಣಾ ವಾಸ್ತುವಿನ ಬೆಳವಣಿಗೆಯಲ್ಲಿ ಪ್ರಮುಖ ಘಟ್ಟವಾಗಿದೆ.

ಸ್ಥಳದುರ್ಗಗಳಲ್ಲಿ, ಕೋಟೆಯ ಬುರುಜುಗಳನ್ನೇ ಎತ್ತರವಾಗಿ ಬತೇರಿಗಳಂತೆ ರಚಿಸುತ್ತಿದ್ದರು. ಗಿರಿದುರ್ಗ ಮತ್ತು ಸ್ಥಳದುರ್ಗಗಳ ಮಧ್ಯೆ ಸಂಪರ್ಕ ಸಾಧಿಸಲು ಇವು ನೆರವಾಗುತ್ತಿದ್ದವು. ರಾಜರು ಇವುಗಳನ್ನು ಸಹ ಕೋಟೆಯೆಂದೇ ಪರಿಗಣಿಸಿ, ಸದಾ ಶಸ್ತ್ರಸಜ್ಜಿತ ಸೈನಿಕರ ತುಕಡಿಗಳನ್ನು ಇಡುತ್ತಿದ್ದದ್ದು ಗಮನಾರ್ಹ ಸಂಗತಿಯಾಗಿದೆ. ಹಾಗಾಗಿ ಬತೇರಿಗಳು ಕೇವಲ ಸೂಚನಾ ಗೋಪುರಗಳಾಗಿರದೆ ಸುಸಜ್ಜಿತ ಸೈನ್ಯದ ತುಕಡಿಯನ್ನು ಹೊಂದಿದ್ದ ಸಣ್ಣ ಸಣ್ಣ ಸೇನಾ ಘಟಕಗಳಾಗಿದ್ದವು. ಇದಕ್ಕೆ ಪೂರಕವಾಗಿ ನೇರ್ಲಹಳ್ಳಿಯಲ್ಲಿ ಕಾವಲು ಗೋಪುರದ ಮೇಲೆ ೭೬ ಇಂಚು ಉದ್ದ, ೯ ಇಂಚಿನ ಸುತ್ತಳತೆ ಹೊಂದಿರುವ ಹುಲಿಮುಖವನ್ನು ಹೊಂದಿರುವ ಚಿಕ್ಕ ಫಿರಂಗಿಯೊಂದು ಇರುವುದನ್ನು ಈಗಲೂ ಕಾಣಬಹುದು. ಈ ಕಾರ್ಯಕ್ಕೆ ಅನುಗುಣವಾಗಿ ಬತೇರಿಗಳನ್ನು ಪರಸ್ಪರ ದೃಷ್ಟಿಗೆ ಗೋಚರವಾಗುವಂತೆ ನಿರ್ಮಿಸಲಾಗುತಿತ್ತು. ಒಂದೆಡೆ ನೀಡಿದ ಸೂಚನೆಯನ್ನು ತಕ್ಷಣವೇ ಮತ್ತೊಂದೆಡೆಗೆ ಸೂಚಿಸುವುದರ ಮೂಲಕ, ಒಂದೇ ಸರಣಿಯಾಗಿ ಸೂಚನೆಯನ್ನು ಒಂದು ಕೋಟೆಯಿಂದ ಮತ್ತೊಂದು ಕೋಟೆಗೆ ನೀಡಲಾಗುತಿತ್ತು. ಉದಾಹರಣೆಗೆ, ಚಿತ್ರದುರ್ಗದಿಂದ ಸೂಚನೆಗಳನ್ನು, ಸುತ್ತಲೂ ನಿರ್ಮಿಸಲಾಗಿದ್ದ ಬತೇರಿಗಳ ಮೂಲಕ ಉಳಿದ ಕೋಟೆಗಳಗೆ ನೀಡುತ್ತಿದ್ದುದು ತಿಳಿದು ಬರುತ್ತದೆ. ಈ ಕೋಟೆಯ ಉತ್ತರಕ್ಕಿರುವ ತುರುವನೂರು ಮತ್ತು ಇದರ ನಡುವೆ ಗೋನೂರು, ವೀರ ಮದಕೇರಿಪುರ, ಕೂನಬೇವುಗಳು ಎಂಬ ಊರುಗಳಲ್ಲಿ ಕಾವಲು ಎತ್ತರವಾದ ಬತೇರಿಗಳನ್ನು ನಿರ್ಮಿಸಲಾಗಿದೆ. ಇದೇ ರೀತಿ ಚಿತ್ರದುರ್ಗದ ವಾಯವ್ಯ ದಿಕ್ಕಿಗಿರುವ ಸಿದ್ಧವ್ವನದುರ್ಗದ ಕೋಟೆಗೂ ಮತ್ತು ಚಿತ್ರದುರ್ಗದ ನಡುವೆ ಸೀಬಾರದ ಗುಡ್ಡ, ಆಯಿತೋಳುಗಳಲ್ಲಿ ಕಾವಲು ಗೋಪುರಗಳಿವೆ. ದಕ್ಷಿಣದಲ್ಲಿ ಕುಂಚಿಗನಾಳ್, ಐಮಂಗಲ ಮತ್ತು ಭರಮಗಿರಿಗಳಲ್ಲಿರುವ ಕಾವಲು ಗೋಪುರಗಳಿಂದ ಹಿರಿಯೂರು ಕೋಟೆಗೆ ಸೂಚನೆ ನೀಡಲಾಗುತ್ತಿತ್ತು. ಈಶಾನ್ಯಕ್ಕೆ ಮೊಳಕಾಲ್ಮೂರು ಕೋಟೆಗೆ ನನ್ನಿವಾಳದ ಗುಡ್ಡ, ತಳುಕಿನ ಗುಡ್ಡ, ನೇರ್ಲಹಳ್ಳಿಗಳಲ್ಲಿ ಬತೇರಿಗಳನ್ನು ನಿರ್ಮಿಸಿರುವುದನ್ನು ಕಾಣಬಹುದು.

ಕೆಲವು ಸಂದರ್ಭಗಳಲ್ಲಿ ಪ್ರಾಕೃತಿಕ ಗುಡ್ಡಗಳನ್ನೇ ಬತೇರಿಗಳ ಉದ್ಯೋಗಕ್ಕೆ ಬಳಸಿರಬಹುದೆಂದು ಹೇಳುವುದಕ್ಕೆ ಉಚಿತವಾದ ಆಧಾರಗಳು ಸಿಗುತ್ತವೆ. ನೈಸರ್ಗಿಕ ಗುಡ್ಡಗಳ ಆಕಾರ ಮತ್ತು ಎತ್ತರಗಳಿಂದ ಇವುಗಳನ್ನು ಬಳಸುತ್ತಿದ್ದರೆಂದು ತಿಳಿಯಬಹುದಾಗಿದೆ. ಪಶ್ಚಿಮ ದಿಕ್ಕಿಗಿರುವ ಭರಮಣ್ಣನಾಯಕನದುರ್ಗ ಮತ್ತು ಚಿತ್ರದುರ್ಗದ ನಡುವೆ ಹಿರೇಕಂದವಾಡಿ ಮತ್ತು ಈಚಲನಾಗೇನಹಳ್ಳಿಯ ಪ್ರಾಕೃತಿಕ ಗುಡ್ಡಗಳನ್ನೂ ಮತ್ತು ನೈರುತ್ಯ ದಿಕ್ಕಿಗಿರುವ ಹೊಸದುರ್ಗ, ಸಿಂಗೇನಹಳ್ಳಿ, ಕೋಟೆಗಳ ಮಧ್ಯೆ, ರಾಮಗಿರಿ, ದೊಡ್ಡಗುಡ್ಡಗಳನ್ನು ಕಾವಲು ಗೋಪುರಗಳನ್ನಾಗಿ ಬಳಸಿಕೊಂಡಿರುವುದನ್ನು ಕಾಣಬಹುದು. ಇದೇ ಪದ್ಧತಿಯನ್ನು ಗಡಿ ಕೋಟೆಗಳ ನಡುವೆಯೂ ಬಳಸುತ್ತಿದ್ದರು. ಮೊಳಕಾಲ್ಮೂರಿನಿಂದ ಗಡಿಕೋಟೆಗಳಾದ ಬ್ರಹ್ಮಗಿರಿ, ಲುಂಕಪ್ಪನ ಗುಡ್ಡ, ಸಂತೆಗುಡ್ಡ, ಗುಡ್ಡದಹಳ್ಳಿ, ಕೆಳಗಿನಕಣಿವೆ, ಮೇಗಳಕಣಿವೆ ಮುಂತಾದ ಕಡೆ ಬತೇರಿಗಳನ್ನು ಕಾಣಬಹುದು.

ಈ ಬತೇರಿಗಳಿಂದ ಹಗಲು ವೇಳೆಯಲ್ಲಿ ವಿವಿಧ ಬಣ್ಣದ ಭಾವುಟಗಳನ್ನು ಹಾರಿಸಿ ಮತ್ತು ರಾತ್ರಿ ವೇಳೆಯಲ್ಲಿ ವಿವಿದ ಬಣ್ಣಗಳ ಜ್ವಾಲೆಯನ್ನು ಹತ್ತಿಸುವ ಮುಖಾಂತರ ಅಪಾಯದ ಸಂಕೇತಗಳನ್ನು ರಾಜಧಾನಿಗಳಿಗೆ ಕೊಡುತ್ತಿದ್ದರೆಂಬುದು ಸಾಹಿತ್ಯಗಳಿಂದ ತಿಳಿದುಬರುತ್ತದೆ. ಈ ರೀತಿಯ ಅಪಾಯದ ಸಂಕೇತಗಳು ಬಂದ ತಕ್ಷಣವೇ ಶಸ್ತ್ರಸಜ್ಜಿತ ಸೈನ್ಯವನ್ನು ರಾಜನು ಅಲ್ಲಿಗೆ ಕಳುಹಿಸಿ ಪರಿಸ್ಥಿತಿಯನ್ನು ಸುಧಾರಿಸಬಹುದಾಗಿತ್ತು.

ಚಿತ್ರದುರ್ಗದ ಕೋಟೆಯಲ್ಲಿ ಇಂತಹ ಬತೇರಿಗಳು ಸುಮಾರು ೫೦೦ ಕ್ಕೂ ಹೆಚ್ಚು ಸಂಖ್ಯೆಲ್ಲಿದ್ದವೆಂದೂ ಹೇಳಲಾಗುತ್ತಿದೆಯಾದರೂ, ಇಂದು ನಮಗೆ ನೋಡಲು ಹಾಗೂ ಗುರುತಿಸಲು ಸಿಗುವ ಬತೇರಿಗಳು ಕೇವಲ ನೂರನ್ನು ದಾಟುವುದಿಲ್ಲವೆನಿಸಿತ್ತದೆ. ಬಹು ಸಂಖ್ಯೆಯಲ್ಲಿರುವ ಬತೇರಿಗಳನ್ನು ಸೈನಿಕರು ಸುಲಭವಾಗಿ ಗುರುತಿಸುವ ಸಲುವಾಗಿ ವಿವಿಧ ಹೆಸರುಗಳಿಂದ ಕರೆದಿರುವುದ ಅತ್ಯಂತ ಗಮನಾರ್ಹ. ಇವುಗಳಲ್ಲಿ ಮುಖ್ಯವಾದವುಗಳೆಂದರೆ ನೆಲ್ಲಿಕಾಯಿ ಸಿದ್ಧಪ್ಪನ ಬತೇರಿ, ರಣಬತೇರಿ, ಲಾಲ್‌ಬತೇರಿ, ತುಪ್ಪದಕೊಳ ಬತೇರಿ, ಕಹಳೆ ಬತೇರಿ, ಬಸವನಬತೇರಿ ಹಾಗೂ ಝುಂಡಾ ಬತೇರಿ, ವನಕೆ ಕಿಂಡಿ ಬತೇರಿ, ಸಿಹಿನೀರಿನ ಹೊಂಡ ಬತೇರಿ, ತಣ್ಣೀರು ಹೊಂಡದ ಬತೇರಿ, ಗುಡ್ಡದ ಬತೇರಿ, ದುಂಡುನಾಗರ ಸುತ್ತಿನ ಬತೇರಿ, ಛಾಪಿನ ಕಿಲ್ಲೆ ಬತೇರಿ, ಸುಣ್ಣದ ಗುಮ್ಮಿನ ಬತೇರಿ, ಸಾವಂತ್ರಿ ಗುಡ್ಡದ ಬತೇರಿ, ಓಡಂಬೇಶ್ವರಿ ಬತೇರಿ ಇತ್ಯಾದಿ ಬತೇರಿಗಳಿವೆ. ಕೆಲವು ಬತೇರಿಗಳ ಹೆಸರುಗಳಿಂದಲೇ ಆ ಬತೇರಿ ನಿರ್ಮಾಣದ ಉದ್ದೇಶ ನಮಗೆ ಸ್ಪಷ್ಟವಾಗುತ್ತದೆ. ಉದಾ: ಕಹಳೆ ಬತೇರಿ, ಝುಂಡಾ ಬತೇರಿ, ತುಪ್ಪದ ಕೊಳದ ಬತೇರಿ.

ಪ್ರಮುಖ ಬತೇರಿಗಳು

ಬೆಟ್ಟದ ದಕ್ಷಿಣ ಭಾಗದಲ್ಲಿ ಅತ್ಯಂತ ಎತ್ತರವಾದ ಪ್ರದೇಶದ ಮೇಲೆ ನಿರ್ಮಿಸಿರುವ ಬತೇರಿಯೇ ನೆಲ್ಲಿಕಾಯಿ ಸಿದ್ಧಪ್ಪನ ಬತೇರಿ. ವಿನ್ಯಾಸದಲ್ಲಿ ಇದು ವೃತ್ತಾಕಾರವಾಗಿದೆ. ಈ ಬತೇರಿಯ ಮುಂಭಾಗದಲ್ಲಿ ಹುಟ್ಟು ಬಂಡೆಯೊಂದರ ಮೇಲೆ ನೆಲ್ಲಿಕಾಯಿ ಗಾತ್ರದ ಲಿಂಗವನ್ನು ಕೊರೆದು, ಪಕ್ಕದಲ್ಲಿಯೇ ಒಂದು ಚಿಕ್ಕದಾದ ಸಿದ್ಧೇಶ್ವರದೇವಾಲಯುವನ್ನು ನಿರ್ಮಿಸಿರುವುದರಿಂದ, ಈ ಬತೇರಿಗೆ ನೆಲ್ಲಿಕಾಯಿ ಸಿದ್ಧಪ್ಪನ ಬತೇರಿ ಎಂಬ ಹೆಸರು ಬಂದಿದೆ. ಈ ಬೆಟ್ಟ ಪರಿಸರವು ಕಲ್ಲುಬಂಡೆಗಳಿಂದ ಕೂಡಿದ ದುರ್ಗಮ ಪ್ರದೇಶವಾಗಿದೆ. ಗೋಪಾಲಸ್ವಾಮಿ ದೇವಸ್ಥಾನದ ಹಿಂಭಾಗದಲ್ಲಿರುವ ನಾಗರ ಸುತ್ತಿನ ಕೋಟೆಯಿಂದ ಹಾಗೂ ಲಾಲ್‌ಬತೇರಿಯಿಂದಲೂ ಈ ಬತೇರಿಗೆ ಬರಲು ಮಾರ್ಗಗಳಿವೆ. ಈ ಬಂಡೆಗಳ ಮಧ್ಯೆ ನೂರಾರು ಗುಹೆಗಳಿವೆ. ಬತೇರಿಯು ಉತ್ತರದಕ್ಷಿಣವಾಗಿ ೪೧ ಅಡಿ ಪೂರ್ವ ಪಶ್ಚಿಮವಾಗಿ ೩೫ ಅಡಿ ಇದ್ದು, ೪ ಮೀ. ಎತ್ತರವಿದೆ. ಈ ಬತೇರಿ ಸಮುದ್ರ ಮಟ್ಟದಿಂದ ೩೨೯೯ ಅಡಿ ಎತ್ತರದ ಪ್ರದೇಶದಲ್ಲಿದೆ. ಇಡಿ ಕೋಟೆಯ ಪ್ರದೇಶದಲ್ಲಿ ಅತ್ಯಂತ ಎತ್ತರವಾದ ಬತೇರಿ ಇದಾಗಿದೆ. ಇದೊಂದು ಆಯಕಟಿನ ಪ್ರದೇಶವಾಗಿದ್ದು, ಇಲ್ಲಿಂದ ಚಿತ್ರದುರ್ಗ ಬೆಟ್ಟದ ಪರಿಸರವೆಲ್ಲವನ್ನು ವೀಕ್ಷಿಸಿಸಬಹುದಾಗಿದೆ. ಇದರಿಂದ ಕೋಟೆಗೆ ಲಗ್ಗೆ ಹಾಕಲು ಬರುವಂತ ಶತ್ರುಗಳನ್ನು ಬಹು ದೂರದಿಂದಲೇ ವೀಕ್ಷಿಸಿ, ಕೋಟೆಯೊಳಗಿರುವ ಅಧಿಕಾರಿಗಳಿಗೆ ಸಂದೇಶ ನೀಡಲು ಈ ಬತೇರಿಯನ್ನು ನಿರ್ಮಿಸಿರುವುದು ಸ್ಪಸ್ಟವಾಗುತ್ತದೆ.

ನೆಲ್ಲಿಕಾಯಿ ಸಿದ್ಧಪ್ಪನ ಬತೇರಿಯಿಂದ, ಹತ್ತಿರವಿರುವ ಬೆಟ್ಟಗುಡ್ಡದ ಸಾಲುಗಳು, ಕಣಿವೆ ಪ್ರದೇಶಗಳು ಕಂಡುಬರುತ್ತವೆ. ಪಶ್ಚಿಮದಲ್ಲಿ ಹೊಳಲ್ಕೆರೆ ಬೆಟ್ಟದ ಸಾಲು, ಕಂದವಾಡಿ ಗುಡ್ಡ, ವಾಯುವ್ಯಕ್ಕೆ ಸೀಬಾರದ ಕಣಿವೆ ಉತ್ತರದಲ್ಲಿ ರಂಗವ್ವನಹಳ್ಳಿ ಗುಡ್ಡಗಳು, ಈಶಾನ್ಯದಲ್ಲಿ ಜಟಂಗಿರಾಮೇಶ್ವರ, ಮೊಳಕಾಲ್ಮೂರು ಗಿರಿಶ್ರೇಣಿಗಳು, ಪೂರ್ವದಲ್ಲಿ ತಳುಕಿನಗುಡ್ಡ, ನಿಡುಗಲ್ಲು ಮುಂತಾದ ಬೆಟ್ಟದ ಸಾಲುಗಳನ್ನು ಈ ಬತೇರಿಯಿಂದ ವೀಕ್ಷಿಸಬಹುದು. ಈ ಪ್ರದೇಶಗಳಲ್ಲಿ ಚಿತ್ರದುರ್ಗದ ಪಾಳೇಗಾರ ಗಡಿ ಪ್ರದೇಶಗಳು ಸಹ ಇರುವುದು ಗಮನಾರ್ಹ ಸಂಗತಿ. ಚಿತ್ರದುರ್ಗದ ಪಾಳೆಯಗಾರರು ಮೇಲ್ಕಂಡ ಎಲ್ಲಾ ಗುಡ್ಡಗಳನ್ನು ಒಳಗೊಂಡಂತೆ ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸಿದ್ದ ಸಂದರ್ಭದಲ್ಲಿ, ಈ ಬತೇರಿಯ ಮೇಲಿನಿಂದಲೇ ಅಪಾಯಗಳನ್ನು ಅರಿಯಲು ಸಹಾಯಕವಾಗುತ್ತಿತ್ತು.

ಪಶ್ಚಿಮ ದಿಕ್ಕಿನ ಕೋಟೆಯ ಕೊನೆಯ ಹಾಗೂ ವ್ಯವಸ್ಥಿತವಾದ ಬತೇರಿಗಳಲ್ಲಿ ರಣಬತೇರಿಯೂ ಒಂದು. ಈ ಬತೇರಿಯನ್ನು ರಣಮಂಡಲದ ಬತೇರಿ ಎಂತಲೂ ಕರೆಯುತ್ತಾರೆ. ಇದು ಸಮುದ್ರ ಮಟ್ಟದಿಂದ ೩೧೬೬ ಅಡಿ ಎತ್ತರದಲ್ಲಿದೆ. ಯುದ್ಧದ ಸಂದರ್ಭದಲ್ಲಿ ಈ ಬತೇರಿಯ ಮೇಲಿಂದ ರಣಕಹಳೆಯನ್ನು ಊದುತ್ತಿದ್ದರೆಂದು ಹೇಳಲಾಗಿದೆ. ಇದು ಆಯಕಟ್ಟಿನ ಸ್ಥಳದಲ್ಲಿ ನಿರ್ಮಾಣಗೊಂಡಿದೆ. ಪೂರ್ವ ಪಶ್ಚಿಮವಾಗಿ ೨೫ ಮೀ. ಹಾಗೂ ಉತ್ತರ ದಕ್ಷಿಣವಾಗಿ ೧೯ ಮೀ. ವಿಶಾಲವಾಗಿರುವ ಈ ಬತೇರಿಯು ೩ ಮೀ. ಎತ್ತರವಾಗಿದೆ. ಬತೇರಿಗೆ ೨x೩ ಅಡಿಗಳ ದಪ್ಪದ ಕಲ್ಲುಗಳನ್ನು ಬಳಸಿದ್ದಾರೆ. ಇದರ ಸುತ್ತ ಇರುವ ಕೋಟೆಗೆ ರಣಮಂಡಲದ ಕೋಟೆಯ ಸುತ್ತು ಎಂದು ಹೇಳಲಾಗಿದೆ. ಈ ಬತೇರಿಯ ಮೇಲಿನಿಂದ ಅರಮನೆಯ ಅವಶೇಷಗಳು, ಗೋಪಾಲಸ್ವಾಮಿ ಹೊಂಡ, ಝಂಡಾ ಬತೇರಿ, ಭೀಮನ ಕಲ್ಲು, ಬಸವನ ಬುರುಜು, ಚಂದ್ರವಳ್ಳಿ ಪ್ರದೇಶ, ದವಳಪ್ಪನ ಗುಡ್ಡ, ಕೆಂಪಯ್ಯನ ಕೋಟೆ, ಓತನ ಕಲ್ಲು, ಜೋಗಿಮಟ್ಟಿ, ಕಂದವಾಡಿ ಗುಡ್ಡ ಮೊದಲಾದ ಪ್ರದೇಶಗಳನ್ನು ವೀಕ್ಷಿಸಬಹುದು.

ಲಾಲ್‌ಬತೇರಿಯು ಅರಮನೆ ಪಾಳಿನ ದಕ್ಷಿಣದ ಬೆಟ್ಟದ ಮೇಲಿದೆ. ಇದು ಸಮುದ್ರ ಮಟ್ಟದಿಂದ ೩೧೧೦ ಅಡಿ ಎತ್ತರದಲ್ಲಿದೆ. ಇದಕ್ಕೆ ಕೆಂಪು ಬತೇರಿ ಬೆಟ್ಟ ಎಂಬ ಹೆಸರಿದೆ. ಕೆಂಪು ವರ್ಣದ ಶಿಲೆಗಳಿಂದ ಕಟ್ಟಿರುವ ಈ ಬತೇರಿಯು ತುಂಬಾ ಸುಂದರವಾಗಿದೆ. ಲಾಲ್ ಬತೇರಿಯ ವಿನ್ಯಾಸವು ಅರ್ಧ ಚಂದ್ರಾಕಾರವಾಗಿದ್ದು, ಇದರ ವಲಯವು ೫೦ ಮೀಟರ್ ನಷ್ಟಿದೆ. ಇದರ ಎತ್ತರ ೧೦ ಅಡಿ ಇದೆ. ಬತೇರಿಗೆ ೨೮x೯ ಇಂಚಿನ ಕಲ್ಲುಗಳನ್ನು ಬಳಸಲಾಗಿದೆ. ಇಲ್ಲಿಂದ ಆಗ್ನೇಯ ದಿಕ್ಕಿನಲ್ಲಿರುವ ಜೋಗಿಮಟ್ಟಿ, ಕುಂಚಿಗನಹಾಳ್ ಕಣಿವೆ, ಪೂರ್ವ ದಿಕ್ಕಿಗೆ ರಾಮದೇವರ ಒಡ್ಡು, ತಿಮ್ಮಣ್ಣ ನಾಯಕನ ಕೆರೆ, ಹೊರಸುತ್ತಿನ ಕೋಟೆಗಳು, ಪಹರೆ ಗೃಹಗಳು ಕಂಡುಬರುತ್ತವೆ.

ಬೆಟ್ಟದ ಮಧ್ಯಭಾಗದಲ್ಲಿ ದ್ವೀಪದಂತಿರುವ ಅರ್ಧ ಗೋಳಾಕಾರದ ಸೀಳು ಬಂಡೆಯೊಂದರ ಮೇಲೆ ಇರುವ ಬತೇರಿಗೆ ತುಪ್ಪದಕೊಳ ಬತೇರಿ ಎಂದು ಕರೆಯಲಾಗಿದೆ. ಈ ಬತೇರಿಯು ಸಮುದ್ರ ಮಟ್ಟದಿಂದ ೨೮೭೮ ಅಡಿ ಎತ್ತರದಲ್ಲಿದೆ. ಬತೇರಿಯೊಳಗೆ ಕೊರೆದಿರುವ ಕಲ್ಲುಬಾವಿ ಇದೆ. ಬೃಹನ್ಮಠದ ಹಿಂಭಾಗದಿಂದ ಈ ಕಡಿದಾದ ಬಂಡೆಯನ್ನು ಹತ್ತಲು ೧೪೯ ಹೆಜ್ಜೆಗಳನ್ನು ಕೊರೆದಿದ್ದಾರೆ. ಮೊದಲನೇ ಹೆಜ್ಜೆಯ ಬಳಿ ಇಬ್ಬರು ಭಕ್ತರ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ಒಂದು ಹೆಜ್ಜೆಯಿಂದ ಮತ್ತೊಂದು ಹೆಜ್ಜೆಗೆ ಕನಿಷ್ಟ ಒಂದು ಅಡಿ ಅಂತರವಿದೆ. ಇವುಗಳನ್ನು ಸ್ಥಳೀಯರು ಕುದುರೆ ಹೆಜ್ಜೆಗಳೆಂದು ಕರೆಯುತ್ತಾರೆ. ಈ ಗುಡ್ಡದಮೇಲೆ ಮೇಲೆ ವೃತ್ತಾಕಾರದ ವಿಶಾಲವಾದ ಬತೇರಿಯಿದೆ. ಅದರ ಮೇಲೆ ಅರ್ಧ ಹೂತುಹೋದ ಕಲ್ಲು ಮಂಟಪದ ಅವಶೇಷಗಳಿವೆ. ಬತೇರಿಗೆ ಹೊಂದಿಕೊಂಡಂತೆ ೮ ಅಡಿ ಆಳದ ದೋಣೆಯಿದೆ. ಇವುಗಳ ಸಮೀಪದಲ್ಲಿ ತುಪ್ಪದ ಕೊಳವೆಂದು ಕರೆಯುಲ್ಪಡುವ ಬಾವಿಯಿದೆ. ಈ ಬಾವಿಯ ೨೫ ಅಡಿ ಆಳವಿದ್ದು, ೪ ಅಡಿ ೧೦ ಅಂಗುಲ ಅಗಲವಿದೆ. ಬಾವಿಯನ್ನು ಗಾರೆ ಮತ್ತು ಇಟ್ಟಿಗೆಗಳನ್ನು ಬಳಸಿ ನಿರ್ಮಿಸಲಾಗಿದೆ. ಬಾವಿಯೊಳಗೆ ಇಳಿಯಲು ೧೪ ಮೆಟ್ಟಿಲುಗಳಿದ್ದು, ಬಾವಿಯ ಮೇಲ್ಭಾಗವನ್ನು ೮ ಕಲ್ಲು ತೊಲೆಗಳಿಂದ ಮುಚ್ಚಿ ಗಾರೆ ಹಾಕಲಾಗಿದೆ. ಗಾಳಿ ಬೆಳಕಿಗೆ ಮೂರು ಕಿಂಡಿಗಳನ್ನು ಕಲ್ಲುಗಳ ಮಧ್ಯೆ ಬಿಟ್ಟಿದ್ದಾರೆ. ಇಲ್ಲಿರುವ ಎಲ್ಲಾ ವ್ಯವಸ್ಥೆಗಳನ್ನು ಗಮನಿಸಿದರೆ ಇದು ಮದ್ದಿನ ಮನೆ ಅಥವಾ ಮದ್ದು ಸಂಗ್ರಹ ಕೋಣೆಯಾಗಿತ್ತೆನ್ನಬಹುದು.

ಈ ಬತೇರಿಯು ಕಡಿದಾದ ಬಂಡೆಯ ಮೇಲಿರುವುದರಿಂದ ತುರ್ತು ಪರಿಸ್ಥಿತಿಗಳಲ್ಲಿ ಬೇಗನೆ ಶಸ್ತ್ರಾಸ್ತ್ರಗಳನ್ನು ಪೂರೈಸಲು ಸಾಧ್ಯವಾಗದೆ ಇರುತ್ತಿದ್ದರಿಂದ ಮುಂಜಾಗ್ರತಾ ಕ್ರಮವಾಗಿ ಇಲ್ಲಿರುವ ಕೋಣೆಯೊಳಗೆ ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಿಡುತ್ತಿದರಬೇಕು. ಇಲ್ಲಿರುವ ಕಡಿದಾದ ಬಂಡೆಯ ಮೇಲೆ ಕೋಟೆ ಹತ್ತುವ ಕಠಿಣ ತರಬೇತಿಯನ್ನು ಹಿಂದೆ ಸೈನಿಕರಿಗೆ ಕೊಡುತ್ತಿದ್ದರೆಂದು ಹೇಳಲಾಗಿದೆ. ಬಹುಶಃ ಈ ಸಂದರ್ಭದಲ್ಲಿ ಈ ಬಂಡೆಯ ಮೇಲೆ ತುಪ್ಪವನ್ನು ಅಥವಾ ಎಣ್ಣೆಯನ್ನು ಸವರುತ್ತಿದ್ದರಿಂದ ತುಪ್ಪದ ಕೊಳದ ಬತೇರಿ ಎಂಬ ಹೆಸರು ಬಂದಿರುವ ಸಾಧ್ಯತೆ ಇದೆ. ಈ ಬತೇರಿಯಿಂದ ಅರಮನೆ ಪ್ರದೇಶ, ಒನಕೆಕಿಂಡಿ ಸಾಲು, ರಣಬತೇರಿ, ಕಹಳೆ ಬತೇರಿ, ಲಾಲ್‌ಬತೇರಿ, ಝಂಡಾ ಬತೇರಿ ಬಸವನ ಬತೇರಿ, ಭೀಮನ ಬಂಡೆ-ಹೀಗೆ ಕೋಟೆಯ ಇಡೀ ಸುತ್ತಲಿನ ಪ್ರದೇಶವನ್ನು ವೀಕ್ಷಿಸಬಹುದಾಗಿದೆ.

ಬಸವನ ಬತೇರಿಯ ದಕ್ಷಿಣ ಭಾಗಕ್ಕೆ ಮತ್ತು ಅರಮನೆಯ ಪಾಳಿನ ಪೂರ್ವ ಬೆಟ್ಟದ ಮೇಲಿರುವ ಬತೇರಿಯೇ ಕಹಳೆ ಬತೇರಿ. ಈ ಬತೇರಿಯು ಸಮುದ್ರ ಮಟ್ಟದಿಂದ ೨೮೭೩ ಅಡಿ ಎತ್ತರದಲ್ಲಿದೆ. ಕಹಳೆ ಬತೇರಿಯನ್ನು ಹತ್ತಲು ದುರ್ಗಮವಾದ ದಾರಿಯಿದೆ. ಹೆಸರೇ ಹೇಳುವಂತೆ ಈ ಬತೇರಿಯ ಮೇಲೆ ಕಹಳೆಯನ್ನು ಊದಲಾಗುತಿತ್ತು. ಈ ಬತೇರಿಯು ಆಯಕಟ್ಟಿನ ಸ್ಥಳದಲ್ಲಿ ಇದೆಯಲ್ಲದೆ, ಬೆಟ್ಟದ ಉಳಿದ ಬುರುಜು ಬತೇರಿಗಳಿಂದ ವೀಕ್ಷಣಾ ಸಂಪರ್ಕವನ್ನು ಕಲ್ಪಿಸಿಕೊಂಡಿದೆ. ಪೂರ್ವ ದಿಕ್ಕಿನಲ್ಲಿ ಸುಮಾರು ೧೫ ಕಿ.ಮೀ. ದೂರದಲ್ಲಿರುವ ನನ್ನಿವಾಳದ ಏಕಶಿಲಾ ಬೆಟ್ಟವು ಇಲ್ಲಿಗೆ ಗೋಚರಿಸುತ್ತದೆ. ಅದೇ ರೀತಿ ಕುಂಚಿಗನಾಳ್ ಬತೇರಿ ಕಣಿವೆ, ಕಿರುಬನಕಲ್ಲು ಬತೇರಿ,

ಚೋಳಗುಡ್ಡದ ಬತೇರಿ, ಗೋನೂರು ಬತೇರಿ–ಹೀಗೆ ದೂರ ಬೆಟ್ಟದ ಬುರುಜು ಬತೇರಿಗಳು ಕಹಳೆ ಬತೇರಿಗೆ ವೀಕ್ಷಣಾ ಸಂಪರ್ಕವನ್ನು ಕಲ್ಪಿಸಿಕೊಂಡಿವೆ.

ಶತ್ರು ಸೈನ್ಯದ ಸುಳಿವು ತಿಳಿದಕೂಡಲೇ ನಿರ್ದಿಷ್ಟಪಡಿಸಿದ ಬಣ್ಣದ ಜ್ವಾಲೆಯನ್ನು ದೂರದ ಬುರುಜುಗಳ ಮೇಲಿದ್ದ ಪಹರೆಯವರು ಹಚ್ಚುತ್ತಿದ್ದರು. ಇದನ್ನು ಗಮನಿಸಿದ ಕಹಳೆ ಬತೇರಿಯ ಕಾವಲುಗಾರನು ತಕ್ಷಣವೇ ತನ್ನ ಕಹಳೆಯನ್ನು ಊದಿ ಪಶ್ಚಿಮದ ತಗ್ಗಿನಲ್ಲಿರುವ ಅರಮನೆಗೆ ಸೂಚನೆ ಕೊಡುತ್ತಿದ್ದನು. ಇದರಿಂದ ರಾಜನು ತಕ್ಷಣವೇ ಆಕ್ರಮಣವನ್ನು ಎದುರಿಸಲು ಕ್ರಮ ಕೈಗೊಳ್ಳಲು ಸಾಧ್ಯವಾಗುತ್ತಿತ್ತು. ಹಾಗೆಯೇ ಬೆಟ್ಟ ಪರಿಸರದ ಯಾವ ಭಾಗದಿಂದಲಾದರೂ ಅಪಾಯ ಸಂಭವಿಸಿದರು ಸಹ ಆ ಭಾಗದಲ್ಲಿ ಸ್ಥಾಪಿಸಲಾಗಿದ್ದ ಬುರುಜುಗಳ ಮೇಲಿನ ಸೈನಿಕರು ಕೂಡಲೆ ಸಂಕೇತಗಳ ಮೂಲಕ ಕಹಳೆ ಬತೇರಿಯವನಿಗೆ ತಿಳಿಸುತ್ತಿದ್ದರು. ಆಗ ತಕ್ಷಣವೇ ಕಹಳೆಯವನು ಕಹಳೆಯನ್ನು ಊದುತ್ತಿದ್ದನು. ಈ ಸಂಕೇತದ ಕಹಳೆಯು ಚಿತ್ರದುರ್ಗ ಬೆಟ್ಟವನ್ನೆಲ್ಲಾ ಪ್ರತಿಧ್ವನಿಸುತ್ತಿತ್ತು. ಮೊದಲೇ ಜಾಗೃತಗೊಂಡು ಶತ್ರುಗಳ ಆಗಮನವನ್ನೇ ನಿರೀಕ್ಷಿಸುತ್ತಿದ್ದ ಸೈನಿಕರಿಗೆ ಈ ಧ್ವನಿಯು ಮುನ್ನೆಚ್ಚರಿಕೆಯಾಗುತಿದ್ದಲ್ಲದೆ ದಾಳಿಯನ್ನುಎದುರಿಸಲು ಸಕಲ ರೀತಿಯಲ್ಲಿ ಸನ್ನದ್ಧರಾಗಲು ಸಹಾಯಕವಾಗುತಿತ್ತು. ಈಗೆ ಶತ್ರುಗಳ ಬಗ್ಗೆ ಸುಲಭವಾಗಿ ಮಾಹಿತಿಯನ್ನು ಕ್ಷಣಾರ್ದದಲ್ಲಿ ತಲುಪಿಸುವುದು ಕಹಳೆ ಬತೇರಿಯ ವೈಶಿಷ್ಟ್ಯವಾಗಿದೆ.

ಭೀಮನಕಲ್ಲು ಬೆಟ್ಟದ ಪೂರ್ವಭಾಗದಲ್ಲಿ ಝುಂಡಾ ಬತೇರಿಯಿದೆ. ಏಕನಾಥೇಶ್ವರಿ ಮಂದಿರದ ಹಿಂಭಾಗದಲ್ಲಿರುವ ಕಾಲು ಹಾದಿಯ ಮೂಲಕ ಇಲ್ಲಿಗೆ ತಲುಪಬಹುದು. ಇಲ್ಲಿ ಆಳ್ವಿಕೆ ಮಾಡುವವರು ಸದಾ ಇಲ್ಲಿ ಅವರ ಧ್ವಜ ಹಾರಿಸುವ ಕಾರಣ ಈ ಬತೇರಿಗೆ ಝುಂಡಾ ಬತೇರಿ ಎಂಬ ಹೆಸರು ಬಂದಿದೆ. ಶತ್ರುಗಳು ಕೋಟೆಯನ್ನು ಸಂಪೂರ್ಣ ಗೆದ್ದರೂ, ಕೋಟೆಯ ಮೇಲೆ ತಮ್ಮ ಧ್ವಜವನ್ನು ಆರಿಸುವವರೆಗೂ ಜಯವನ್ನು ಘೋಷಿಸಲಾಗುತ್ತಿರಲಿಲ್ಲ. ಈ ಕಾರಣದಿಂದ ಇಂತಹ ಧ್ವಜ ವೇದಿಕೆ ಅಥವಾ ಬತೇರಿಗಳನ್ನು ವಿಶೇಷವಾಗಿ ಶತ್ರು ಸೈನಕರು ಇಲ್ಲಿಗೆ ನುಸುಳದಂತೆ ಅಪಾಯಕಾರಿ ದುರ್ಗಮ ಪ್ರದೇಶಗಳಲ್ಲಿ ನಿರ್ಮಿಸುತ್ತಿದ್ದರು. ಧ್ವಜಸ್ತಂಭಕ್ಕೆ ಹಗ್ಗಗಳನ್ನು ಕಟ್ಟಲು ನೆಲದ ಆಳಕ್ಕೆ ಬಡಿದಿರುವ ಕಬ್ಬಿಣದ ಬಳೆಗಳನ್ನು ಈಗಲೂ ಇಲ್ಲಿ ಕಾಣಬಹುದು.

ಧ್ವಜವನ್ನು ಹಾರಿಸಲು ನಿರ್ಮಿಸಿದ ಬತೇರಿಯು ಆಕಾರದಲ್ಲಿ ಹಡಗನ್ನು ಹೋಲುತ್ತದೆ. ಇದರ ಪೂರ್ವಕ್ಕೆ ಕುದುರೆ ಲಾಳಾಕಾರದ ವಿನ್ಯಾಸವುಳ್ಳ ಬತೇರಿಯಿದೆ. ವಿಶೇಷತೆಯೆಂದರೆ ಇದನ್ನು ಸಂಪೂರ್ಣವಾಗಿ ಇಟ್ಟಿಗೆಯಲ್ಲಿ ನಿರ್ಮಿಸಲಾಗಿದೆ. ಈ ಬತೇರಿಯಿಂದ ಝುಂಡಾ ಬತೇರಿಗೆ ಹೋಗಲು ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ. ಈ ಬತೇರಿಗೂ, ಝುಂಡಾ ಬತೇರಿಗೂ ನಡುವೆ ೪–೫ ಅಡಿ ಅಂತರವಿದ್ದು, ಈ ಪ್ರದೇಶದಲ್ಲಿ ಎರಡೂ ಬಂಡೆಗಳಿವೆ. ಈ ಬಂಡೆಗಳು ಸುಮಾರು ೪೦ ಅಡಿ ಎತ್ತರವಾಗಿವೆ. ಈ ಎರಡು ಬಂಡೆಗಳ ಮಧ್ಯ ಚಪ್ಪಡಿ ಕಲ್ಲುಗಳನ್ನು ಹಾಕಿ ಮಾರ್ಗವನ್ನು ನಿರ್ಮಿಸಲಾಗಿದೆ. ಯುದ್ಧ ಸಂದರ್ಭದಲ್ಲಿ ಈ ಚಪ್ಪಡಿಗಳನ್ನು ಉರುಳಿಸಿ ಮಾರ್ಗಕ್ಕೆ ತಡೆಯೊಡ್ಡಿದಾಗ, ಶತ್ರುಗಳಿಗೆ ಝುಂಡಾ ಬತೇರಿಯನ್ನು ತಲುಪುವುದಾಗಲೀ, ಧ್ವಜವನ್ನು ಕೆಡಹುವುದಾಗಲೀ, ದುಸ್ಸಾಧ್ಯವಾಗುತಿತ್ತು. ಧ್ವಜದ ವೇದಿಕೆಯ ಸುತ್ತಲೂ ಬಲವಾದ ರಕ್ಷಣಾ ಗೋಡೆಯನ್ನು ಕಟ್ಟಲಾಗಿದೆ. ಈ ಬತೇರಿಯ ಉತ್ತರಕ್ಕೆ ಎರಡು ಹಂತಗಳಲ್ಲಿ ಕೋಟೆ ಗೋಡೆಯನ್ನು ಕಾಣಬಹುದು. ಝುಂಡಾ ಬತೇರಿಯಿಂದ ಕೋಟೆಯ ಪೂರ್ವ ಭಾಗ ಮತ್ತು ಉತ್ತರ ಭಾಗವನ್ನು ವೀಕ್ಷಿಸಬಹುದಾಗಿದೆ. ಇಲ್ಲಿಂದ ಕಹಳೆ ಬತೇರಿಗೆ ನೇರವಾದ ವೀಕ್ಷಣಾ ಸಂಪರ್ಕವಿದೆ.

ಝುಂಡಾ ಬತೇರಿಯ ಹಿಂಭಾಗದಲ್ಲಿ ಎರಡು ಸುತ್ತಿನ ಕೋಟೆಯಿದೆ. ಈ ಕೋಟೆಯ ಗೋಡೆ ೨೦ ಅಡಿ ಎತ್ತರವಾಗಿದ್ದು, ರಕ್ಷಣಾ ದೃಷ್ಟಿಯಿಂದ ವಿಶೇಷವಾದ ತಾಂತ್ರಿಕತೆಯನ್ನು ಅಳವಡಿಸಲಾಗಿದೆ. ಸಿಹಿನೀರು ಹೊಂಡದ ಬತೇರಿಗೆ ವಿರುದ್ಧ ದಿಕ್ಕಿನಲ್ಲಿ ಅನೇಕ ಬುರುಜು ಬತೇರಿಗಳಿವೆ. ಈ ಕೋಟೆಯ ಸಾಲು ಮತ್ತು ಸಿಹಿನೀರಿನ ಹೊಂಡದ ಬತೇರಿಗಳು ಭೀಮನ ಕಲ್ಲು ಬೆಟ್ಟದ ಹಿಂಭಾಗದಲ್ಲಿರುವುದರಿಂದ ಮುಖ್ಯವಾಗಿ ಅರಮನೆಯ ಪ್ರದೇಶ, ಕಹಳೆ ಬತೇರಿ, ರಣಬತೇರಿ, ಝುಂಡಾ ಬತೇರಿಗಳಾವುವೂ ಕಾಣದಂತೆ ಭೀಮನ ಗುಡ್ಡದ ಸಾಲು ಅಡ್ಡವಿದೆ. ಈ ಕಾರಣದಿಂದ ಇಲ್ಲಿರುವ ಕೋಟೆ ಸಾಲುಗಳ ಮಧ್ಯೆ ಚಿಕ್ಕ ದಿಡ್ಡಿಬಾಗಿಲನ್ನು ನಿರ್ಮಿಸಿ ದಿಡ್ಡಿಬಾಗಿಲನ ಮುಂಭಾಗದಲ್ಲಿ ೧೦ ಮೀ. ಎತ್ತರವಿರುವ ೭೦ ಮೀ. ಸುತ್ತಳತೆ ಹೊಂದಿರುವ ವಿಶೇಷವಾದ ಬತೇರಿಯನ್ನು ನಿರ್ಮಿಸಲಾಗಿದೆ. ಇದರ ಹಿಂಭಾಗದ ಬೆಟ್ಟದ ಕಲ್ಲನ್ನು ಸೀಳಿ ಕಹಳೆ ಬತೇರಿಗೆ ಸಂಪರ್ಕ ಕಲ್ಪಿಸಿಕೊಂಡಿರುವುದು ವಿಸ್ಮಯವೇ ಸರಿ. ಕೋಟೆಯ ಉತ್ತರ ಹಾಗೂ ವಾಯುವ್ಯ ಭಾಗವನ್ನು ಈ ಭಾಗದಿಂದಲೇ ವೀಕ್ಷಿಸಿ ಸಂಕೇತಗಳನ್ನು ಕಹಳೆ ಬತೇರಿಗೆ ಕೊಡುತ್ತಿದ್ದರೆನ್ನಬಹುದು. ಒಟ್ಟಾರೆ ಈ ಬತೇರಿಗಳು ಚಿತ್ರದುರ್ಗದ ಕೋಟೆಯ ರಕ್ಷಣೆಯಲ್ಲಿ ಅತ್ಯಂತ ಮಹತ್ತರ ಪಾತ್ರವನ್ನು ವಹಿಸುತ್ತಿದ್ದವೆಂದು ಹೇಳಬಹುದು.

ಬೆಳಗಾವಿಯಲ್ಲಿ ಶೋಧವಾದ ಕಂಚಿನ ಶಿವನ ವಿಗ್ರಹದ ನಂದಿ

ಡಾ. ಎಸ್.ಕೆ. ಮೇಲಕಾರ*

ಬೆಳಗಾವಿ ನಗರದ ಬಾಪೂಜಿ ನಗರದಲ್ಲಿ ಶೈವ ಭಕ್ತರೊಬ್ಬರ ಅಧೀನದಲ್ಲಿ ಶಿವನ ವಿಗ್ರಹವಿದ್ದು ಅದನ್ನು ಕರ್ನಾಟಕ ವಿಶ್ವವಿದ್ಯಾಲಯದ ನಿವೃತ್ತ ಸಹಾಯಕ ಕುಲಸಚಿವರಾದ ಶ್ರೀ ಟಿ.ಎಫ್. ನಾಗಲಾವಿ ಇವರ ಸಹಾಯ ದಿಂದ ನನ್ನ ಸಂಶೋಧನ ಅಧ್ಯಯನಕ್ಕೆ ದೊರಕಿರುತ್ತದೆ ಇದೊಂದು ಶಿವನ ವಿಗ್ರಹವಾಗಿರುತ್ತದೆ. ಶಿವನು ಸಮಭಂಗಿಯಲ್ಲಿ ನಿಂತಿದ್ದಾನೆ. ಇದೊಂದು ಕಂಚಿನ ದುಂಡು ವಿಗ್ರಹ, ಇದರ ಎತ್ತರ ೧೫ ಇಂಚು ಶಿವನು ಚತುರ್ಭುಜಧಾರಿ ಈತನಗೆ ನೀಳವಾದ ಮೂಗು, ಅಗಲವಾದ ಕಣ್ಣು ಬುಜಕ್ಕೆ ತಾಗಿದ ಕಿವಿಗಳು ತಲೆಯ ಮೇಲೆ ಆಕರ್ಷಣೀಯ ಎತ್ತರದ ಕಿರೀಟ ಮುಕುಟಗಳಿವೆ ಕಿರೀಟದ ಹಿಂದೆ ಸುಂದರವಾದ ಹೂವಿನ ಚಕ್ರದ ಅಲಂಕರಣವಿದೆ. ಎದೆಯ ಮೇಲೆ ಜನಿವಾರವಿದೆ ಮೇಲಿನ ಎಡಗೈಯಲ್ಲಿ ತ್ರಿಶೂಲ ಮತ್ತು ಬಲಗಡೆಯ ಮೇಲಿನ ಕೈಯಲ್ಲಿ ಡಮರಿದೆ. ಇನ್ನೆರಡು ಹಸ್ತಗಳಲ್ಲಿ ಕ್ರಮವಾಗಿ ಅಭಯ ಮತ್ತು ವರದ ಮುದ್ರೆಯಲ್ಲಿವೆ. ಅದರಲ್ಲಿ ರೇಖಾಚಿತ್ರಗಳಿವೆ. ಶಿವನು ವೃತ್ತಾಕಾರ ಪೀಠದ ಮೇಲೆ ನಿಂತಿದ್ದಾನೆ. ಈ ಪೀಠವು ಚೌಕ ಪೀಠದ ಮೇಲಿದೆ. ಎತ್ತರದ ಕಿರೀಟವು ಚೋಳರ ಲಕ್ಷಣವನ್ನು, ವೃತ್ತಾಕಾರ ಪೀಠ ವಿಜಯನಗರ ಶೈಲಿಯನ್ನು ಹೊಂದಿರುತ್ತವೆ. ಕಾಲಮಾನದ ದೃಷ್ಠಿಯಿಂದ ಗಮನಿಸಲಾಗಿ; ಅದರ ತ್ರಿಶೂಲ ಅಲಂಕಾರ, ಸಮಭಂಗಿ ಇನ್ನಿತರ ಲಕ್ಷಣಗಳು ಸು. ಕ್ರಿ.ಶ. ೧೭ನೇ ಶತಮಾನವನ್ನು ಸೂಚಿಸುತ್ತವೆ. ಈ ಶಿಲ್ಪದ ವಸ್ತ್ರ ಆಯುಧ ಲಕ್ಷಣಗಳ ಆಧಾರದಿಂದ ಇದೊಂದು ಸುಮಾರು ಮುನ್ನೂರು ವರ್ಷಗಳ ಪ್ರಾಚೀನದ್ದೆಂದು ಗುರ್ತಿಸಲಾಗಿದೆ. ಇದಲ್ಲದೆ ಈ ಶಿಲ್ಪವು ಶಿವನದಾಗಿದ್ದು ಇದೊಂದು ಶೈವ ಸಂಪ್ರದಾಯಕ್ಕೆ ಸೇರಿದ ವಿಗ್ರಹವಾಗಿರುತ್ತದೆ. ಎಂದು ಹೇಳಬಹುದಾಗಿದೆ.

ಶೈವ ಧರ್ಮವು ಭಾರತದಲ್ಲಿ ಇತರ ಧರ್ಮಗಳಿಗಿಂತ ಪ್ರಾಚೀನವಾದುದೆಂದು ಇತಿಹಾಸಕಾರರು ಒಪ್ಪಿದ್ದಾರೆ. ಭಾರತದ ಅತ್ಯಂತ ಪ್ರಾಚೀನ ಸಂಸ್ಕೃತಿಯಾದ ಸಿಂಧೂ ನಾಗರಿಕತೆಯಲ್ಲಿ ಶಿವನು ಬಹಳ ಪ್ರಮುಖವಾದ ಪಾತ್ರವನ್ನು ಹೊಂದಿದ್ದು ತದನಂತರದ ಕಾಲದಲ್ಲಿ ಶಿವನ ಶಿಲ್ಪಗಳು ಕಲ್ಲಿನಲ್ಲಿ, ವಿಗ್ರಹಗಳನ್ನು ಮಾಡಿಸಿ ಪೂಜಿಸುವ ಪರಂಪರೆ ಭಾರತದಲ್ಲಿ ಸುಮಾರು ಕ್ರಿ.ಪೂ.೨೦೦೦ ವರ್ಷಗಳ ಹಿಂದೆ ಅಂದರೆ ಐದು ಸಾವಿರಗಳ ಹಿಂದೆಯೇ ಭಾರತದಲ್ಲಿ ಶಿವನನ್ನು ಶಿಲ್ಪದಲ್ಲಿ ರೂಪಿಸುವ ಪದ್ಧತಿಯು ಪ್ರಚಾರದಲ್ಲಿದ್ದಿತು.

ಕರ್ನಾಟಕದಲ್ಲಿ ಶಾತವಾಹನರು, ಕದಂಬರು, ಬಾದಾಮಿ ಚಾಲುಕ್ಯರು, ಗಂಗರು, ರಾಷ್ಟ್ರಕೂಟರು,



ಮುಂಭಾಗ

* ಕನ್ನಡ ಸಂಶೋಧನ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೩೦೦೩.



ಹಿಂಭಾಗ

ನೊಳಂಬರ ಕಾಲದಲ್ಲಿ ಶಿವನ ಶಿಲ್ಪಗಳು ಬೆಳಕಿಗೆ ಬಂದಿವೆ. ಹೊಯ್ಸಳರ ಕಾಲದಲ್ಲಿ ನಪಿರಾದ ನಾಜುಕಿನ ಬೆಣ್ಣೆಯ ಮುದ್ದೆಯಂತಹ ಬಳಪದ ಕಲ್ಲಿನಲ್ಲಿ ಶಿವನ ಶಿಲ್ಪಗಳನ್ನು ಮಾಡಿಸಿದರು. ಈ ಹೊಯ್ಸಳರ ನಂತರ ಕರ್ನಾಟಕದಲ್ಲಿ ವಿಜಯನಗರದ ಅರಸರು, ಪಾಳೆಯಗಾರರು, ನಾಯಕರು, ಚೋಳರ ಕಾಲದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಶಿವನ ಶಿಲ್ಪಗಳು ಕಂಚು ಮತ್ತು ಕಲ್ಲಿನಲ್ಲಿ ನಿರ್ಮಾಣ ಮಾಡಿ ಪೂಜಿಸುವ ಪದ್ಧತಿ ಬೆಳೆದು ಬಂದಿದ್ದು ಪ್ರಸ್ತುತ ಬೆಳಗಾವಿಯಲ್ಲಿ ದೊರೆತ ಕಂಚಿನ ಶಿಲ್ಪದ ಲಕ್ಷಣವನ್ನು ಆಧರಿಸಿ ಇದು ೧೫–೧೬ನೆಯ ಶತಮಾನದ್ದೆಂದು ಅಭಿಪ್ರಾಯಕ್ಕೆ ಬರಲಾಗಿದೆ.

[ಕೃತಜ್ಞತೆಗಳು: ಈ ಶಿಲ್ಪ ಅಧ್ಯಯನಕ್ಕೆ ಅವಕಾಶ ಕಲ್ಪಿಸಿದ ಕುಲಸಚಿವರು ನಿವೃತ್ತ ಸಹಾಯಕ ಕುಲಸಚಿವರು (ಟಿ.ಎಫ್. ನಾಗಲಾಪಿ) ಇದರ ಅಧ್ಯಯನಕ್ಕೆ ಸಹಾಯ ಮಾಡಿದ ಡಾ. ಆರ್.ಎಂ. ಷಡಕ್ಷರಯ್ಯ ನವರಿಗೂ ಕೃತಜ್ಞತೆಗಳು.]

ಆಧಾರಸೂಚಿ

೧. ಡಾ. ಎ.ವಿ.ನರಸಿಂಹಮೂರ್ತಿ, ೨೦೧೦, ಕರ್ನಾಟಕದ ಪುರಾತತ್ವ ಕೆಲವು ಅಧ್ಯಯನಗಳು : ಪ್ರಸಾರಾಂಗ, ಕರ್ನಾಟಕ ರಾಜ್ಯ ಮತ್ತು ವಿಶ್ವವಿದ್ಯಾಲಯ, ಮೈಸೂರು.

ಹಳಂಗಳಿಯಲ್ಲಿ ಶೋಧವಾದ ಪಾರ್ಶ್ವನಾಥ ಮೂರ್ತಿ

ಡಾ. ಎಸ್.ಕೆ. ಮೇಲಕಾರ* ಪ್ರೊ. ಎಂ.ಎನ್. ಬೆನ್ನೂರ**

ಬಾಗಲಕೋಟ ಜಿಲ್ಲೆಯ ಜಮಖಂಡಿ ತಾಲೂಕಿನ ಹಳಂಗಳಿ ಗ್ರಾಮ ಜಮಖಂಡಿಯಿಂದ ೨೭ ಕಿ.ಮೀ. ದೂರ ಹಾಗೂ ತೇರದಾಳದಿಂದ ೬ ಕಿ.ಮೀ. ಅಂತರದಲ್ಲಿದೆ. ಈ ಗ್ರಾಮದ ಪಶ್ಚಿಮ ದಿಕ್ಕಿನ ಭದ್ರಗಿರಿ ಬೆಟ್ಟದಲ್ಲಿ ಕ್ರಿ.ಶ. ೧೭ನೇ ಶತಮಾನದ ಪಾರ್ಶ್ವನಾಥ ಭಗವಾನ ಮೂರ್ತಿಯೂ ಪತ್ತೆಯಾಗಿದೆ. ಕೃಷ್ಣನದಿ ತೀರದ ಪ್ರದೇಶವಾದ ಹಳಂಗಳಿ ಅತ್ಯಂತ ಪ್ರಾಚೀನ ಇತಿಹಾಸವನ್ನು ತನ್ನ ಮಡಿಲಿನಲ್ಲಿ ಹುದುಗಿಸಿಕೊಂಡಿದೆ. ಕಾರಣ ಭದ್ರಗಿರಿ ಬೆಟ್ಟಕ್ಕೆ ಹೊಂದಿ ಕೊಂಡಿರುವ ಇತಿಹಾಸ ಪೂರ್ವಕಾಲದ ಬೃಹತ್ ಶಿಲಾಯುಗದ ಪ್ರಮುಖ ತಾಣವಾಗಿತ್ತು ಎಂಬುದಕ್ಕೆ ಇಲ್ಲಿಯ ಶಿಲಾಗೋರಿಗಳೇ ಅದಕ್ಕೆ ಸಾಕ್ಷಿಯಾಗಿವೆ.

ಸಾ॥ ಅ.ಸುಂದರವರು ಕೃಷ್ಣಾನದಿಯ ತೀರದ ಪ್ರದೇಶಗಳಾದ ಬೆಳಗಾವಿ ಮತ್ತು ಬಾಗಲಕೋಟ ಜಿಲ್ಲೆಗಳಲ್ಲಿ ಪುರಾತತ್ವ ನೆಲೆಗಳನ್ನು ಗುರುತಿಸಿ ಅದರ ಬಗ್ಗೆ ವಿಶ್ಲೇಷಿಸಿದ್ದಾರೆ. ಹಳಂಗಳಿಯು ಕಲ್ಯಾಣದ ಚಾಲುಕ್ಯರ ಸಾಮಂತರಾದ ಸವದತ್ತಿಯ ರಟ್ಟರ ಕೊನೆಯ ಶ್ರೇಷ್ಠ ಅರಸ IVನೇ ಕಾರ್ತಿವಿರ್ಯನ ಉಪರಾಜಧಾನಿ ತೇರದಾಳ–೧೨ರ ಪ್ರದೇಶದಲ್ಲಿ ಬರುವ ಗ್ರಾಮವಾಗಿತ್ತು. ತೇರದಾಳದಲ್ಲಿರುವ ನೇಮಿನಾಥ ಬಸದಿಯು ಕಾರ್ತಿವಿರ್ಯನ ಕಾಲದಲ್ಲಿ ಕಟ್ಟಲ್ಪಟ್ಟಿದೆ. ತೇರದಾಳದಿಂದ ೬ ಕಿ.ಮೀ. ದೂರದಲ್ಲಿರುವ ಹಳಂಗಳಿಯಲ್ಲಿ ಇಂದಿಗೂ ಜೈನರೇ ಬಹುಸಂಖ್ಯಾತರಾಗಿದ್ದಾರೆ. ಹಾಗೆಯೇ ಹಳಂಗಳಿಯಲ್ಲಿ ಎರಡು ಜೈನ ಬಸದಿಗಳು ಹಾಗೂ ಅನೇಕ ಶಿಲ್ಪಮೂರ್ತಿಗಳು ಗೋಚರಿಸುತ್ತವೆ.[ಇದು ಬಾಗಲಕೋಟ ಜಿಲ್ಲಾ ಶಾಸನ ಸೂಚಿ, ಬಿಜಾಪುರ ಜಿಲ್ಲಾ ಗೆಜಿಟಿಯರ್‌ದಲ್ಲಿ ಉಲ್ಲೇಖಿಸಿದೆ]

ಪಾರ್ಶ್ವನಾಥ ಭಗವಾನ ಮೂರ್ತಿಯು ದಿನಾಂಕ ೫.೯.೨೦೧೨ರಂದು ಹಳಂಗಳಿಯ ಭದ್ರಗಿರಿ ಬೆಟ್ಟದಲ್ಲಿ ಪತ್ತೆಯಾಗಿದೆ. ಈ ಬೆಟ್ಟದಲ್ಲಿ ಜೆ.ಸಿ.ಬಿ ಯಂತ್ರದಿಂದ ಜೈನ ಮುನಿಗಳಾಗಿ ಗುಂಪಾಗಳನ್ನು ನಿರ್ಮಿಸಲು ನೆಲ



ಮೂರ್ತಿಯ ಲಕ್ಷಣಗಳು

ಅಗೆಯುತ್ತಿರುವ ಸಂದರ್ಭದಲ್ಲಿ ಈ ವಿಗ್ರಹ ಶೋಧವಾಗಿದೆ. ೬ ಅಡಿ ಆಳ ೨.೫ ಅಡಿ ಅಗಲವಾಗಿರುವ ಆಯತಾಕಾರದಲ್ಲಿ ಶಿಲಾಗೋರಿಯ ಪಕ್ಕದಲ್ಲಿ ಮೂರ್ತಿ ಪತ್ತೆಯಾಗಿದ್ದು, ಶ್ರೀ ೧೦೮ ಮುನಿಕುಲರತ್ನಭೂಷಣ ಮಹಾರಾಜರ ನೇತೃತ್ವದಲ್ಲಿ ಊರಿನ ಶ್ರಾವಕ-ಶ್ರಾವಕಿಯರು ಬಿಳಿ ವಸ್ತ್ರ ಧರಿಸಿ ಗ್ರಾಮದಲ್ಲಿ ಭವ್ಯವಾದ ಮೆರವಣಿಗೆಯನ್ನು ಮಾಡುವ ಮೂಲಕ ಈ ಮೂರ್ತಿಯನ್ನು ಆರಾಧಿಸಿ ಸಂರಕ್ಷಿಸಿದ್ದಾರೆ.

ಅಮೃತಶಿಲೆಯಿಂದ ನಿರ್ಮಿತವಾದ ಪಾರ್ಶ್ವನಾಥ ಭಗವಾನ ಮೂರ್ತಿಯ ಚಿಕ್ಕದಾದ ಪೀಠದಲ್ಲಿ ಮೇಲೆ ಪದ್ಮಾಸನದಲ್ಲಿ ಕುಳಿತಿದಿದ್ದಾನೆ. ಈ ಮೂರ್ತಿಯ ಎಡ ಪೀಠದಲ್ಲಿ ದೇವನಾಗರಿ ಲಿಪಿಗಳಿವೆ. ಈ ಲಿಪಿಯ ಶೈಲಿ ಕ್ರಿ.ಶ. ೧೬ರಿಂದ ೧೭ನೇ ಶತಮಾನದ ಮೊಗಲರ ಕಾಲಕ್ಕೆ ಸೇರಿರುತ್ತದೆ. ಲಿಪಿಗಳು ಅಸ್ಪಷ್ಟವಾಗಿದ್ದು, ಯಾ-ಪ-ಎಂಬ ಲಿಪಿ ಅಕ್ಷರಗಳು ಗೋಚರಿಸಿದ್ದು ಉಳಿದ ಅಕ್ಷರಗಳು ಅಸ್ಪಷ್ಟವಾಗಿರುವುದರಿಂದ ಇದು ಯಾಪನಿಯ ಸಂಘಕ್ಕೆ ಸೇರಿದ ದುಂಡು ಶಿಲ್ಪಮೂರ್ತಿ ಯಾಗಿದೆ. ಧ್ಯಾನಸಕ್ತ ತೀರ್ಥಂಕರನ ಮೂರ್ತಿಯ ಕೈ ಕೆಳಗೆ ರಂಧ್ರವಿದೆ. ಅಗಲವಾದ ಭುಜ, ಕಿವಿಗಳು ಭುಜವನ್ನು ಸ್ಪರ್ಶಿಸಿವೆ. ಅರ್ಧ

* ಕನ್ನಡ ಸಂಶೋಧನ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦೦೦೩.

** ಎಸ್.ಟಿ.ಸಿ. ಕಾಲೇಜ, ಬನಹಟ್ಟಿ ಜಿ. ಬಾಗಲಕೋಟೆ.


ತೆರೆದ ಕಣ್ಣುಗಳಿಂದ ನಾಶಿಕಾಗ್ರವನ್ನು ವೀಕ್ಷಿಸುವಂತಿದೆ. ಮೂಗು ದಪ್ಪ ಹಾಗೂ ಚಪ್ಪಟೆಯಾಗಿದೆ. ಗುಂಗುರು ಕೂದಲಗಳಿರುವ ಮೂರ್ತಿಯ ತಲೆಯ ಮೇಲ್ಭಾಗದಲ್ಲಿ ಸರ್ಪದ ಹೆಡೆಯ ಭಾಗವಿದ್ದು ಅದು ತ್ರುಟಿತಗೊಂಡಿದೆ. ಆದರೆ ಮೂರ್ತಿಯ ತಲೆ ಹಾಗೂ ಬೆನ್ನಿನಲ್ಲಿ ಹಾವಿನ ಹೊಟ್ಟೆ ಮತ್ತು ಬಾಲದ ಚಿಹ್ನೆಗಳು ಕಂಡು ಬರುತ್ತವೆ. ಈ ಹಿನ್ನಲೆಯಾಗಿ ಮೂತಿ ಶಿಲ್ಪದ ಲಕ್ಷಣಗಳನ್ನು ನೋಡಿದಾಗ ಇದು ಪಾರ್ಶ್ವನಾಥನ ಮೂರ್ತಿ ಯಾಗಿದೆ ಎಂಬುದು ಸ್ಪಷ್ಟವಾಗಿದೆ. ಮುಖ ದುಂಡಾಗಿದೆ. ಮೂರ್ತಿಯ ಎತ್ತರ ೯ ಇಂಚು, ೭ ಇಂಚು ಅಗಲವಾಗಿದೆ.

ಹಳಂಗಳಿಯಲ್ಲಿ ಶ್ರೀ ೧೦೮ ಮುನಿಕುಲರತ್ನಭೂಷಣ ಮಹಾಜನರು ಚತುರ್ಮಾಸ ಮಾಡುತ್ತಿರುವ ಸಂದರ್ಭದಲ್ಲಿ ಈ ಮೂರ್ತಿ ಶೋಧವಾಗಿದೆ. ಮುನಿಗಳನ್ನು ಹಾಗೂ ಊರಿನ ಹಿರಿಯ ನಾಗರಿಕರನ್ನು ಮೌಖಿಕ ವಿಧಾನ ಅಳವಡಿಸಿಕೊಂಡಾಗ, ಕ್ರಿ.ಪೂ. ೨ ಮತ್ತು ೩ನೇ ಶತಮಾನದಲ್ಲಿ ಮುನಿಗಳಾದ ಆಚಾರ್ಯ ಭದ್ರಬಾಹು ಉತ್ತರ ಭಾರತದಲ್ಲಿ ಕ್ಷಾಮ ತಲೆದೋರಿದಾಗ ದಕ್ಷಿಣದ ಶ್ರವಣಬೆಳಗೊಳಕ್ಕೆ ಹೋಗುವಾಗ ತಮ್ಮ ೭೭೨ ಯತಿಗಳನ್ನು ಜೊತೆಗೆ ಹಳಿಂಗಳಿಯ ಬೆಟ್ಟದಲ್ಲಿ ಚತುರ್ಮಾಸ ಕಳೆದಿದ್ದರು ಎಂಬುದು ಅವರ ಅಭಿಪ್ರಾಯವಾಗಿದೆ. ಹೀಗಾಗಿ ಈ ಬೆಟ್ಟಕ್ಕೆ ಇಂದಿಗೂ ಭದ್ರಗಿರಿ ಬೆಟ್ಟವೆಂದೆ ಕರೆಯುತ್ತಾರೆ. ಈ ಬೆಟ್ಟದಲ್ಲಿ ಅನೇಕ ಬೃಹತ್ ಶಿಲಾಗೋರಿಗಳು ಮತ್ತು ಜೈನ ಗುಂಪಾಗಳು (ಮುನಿಗುಂಪಾ) ಕಂಡು ಬರುತ್ತವೆ.

ಹಳಂಗಳಿಯ ಭದ್ರಗಿರಿಯ ಬೆಟ್ಟದ ಪೂರ್ವಭಾಗದಲ್ಲಿ ಬಹು ಪ್ರಾಚೀನದ ಅಂದರೆ ಕ್ರಿ.ಶ. ೧೨ನೇ ಶತಮಾನದ ಕೋಟೆ ಇದ್ದು, ಅದು ಶಿಥಿಲಗೊಂಡಿದೆ. ಕೋಟೆ ಕೆಂಪು ಕಲ್ಲು ಹಾಗೂ ಮಣ್ಣಿನಿಂದ ಕಟ್ಟಲ್ಪಟ್ಟಿದೆ. ಕೋಟೆಯ ನಾಲ್ಕು ಭಾಗದಲ್ಲಿ ಬುರುಜುಗಳು ಕಂಡುಬಂದಿದೆ. ಕೋಟೆಯ ಕೆಳಭಾಗದಲ್ಲಿ ಪ್ರಾಚೀನ ಪರಂಪರೆಯಿಂದ ಬೆಳೆದು ಬಂದ



ಜೀರ್ಣೋದ್ಧಾರಗೊಂಡ ಕೆರೆ ಇದೆ. ಹಳಿಂಗಳಿಯಲ್ಲಿ ಪ್ರಾಚೀನ ಶಿವನ ದೇವಾಲಯವಿದ್ದು, ಆ ದೇವಾಲಯದ ವಾಸ್ತು ಲಕ್ಷಣವನ್ನು ವೀಕ್ಷಿಸಿದಾಗ ಅದು ಜೈನಬಸದಿಯ ಲಕ್ಷಣವನ್ನು



ಹೋಲುತ್ತದೆ. ಅದರ ಗರ್ಭಗೃಹದಲ್ಲಿ ಇತ್ತೀಚಿಗೆ ಶಿವಲಿಂಗವನ್ನು ಪ್ರತಿಷ್ಠಾಪಿಸಿದ್ದಾರೆ. ಅಂದರೆ ೧೨ನೇ ಶತಮಾನದ ನಂತರ ಅನೇಕ ಗ್ರಾಮಗಳಲ್ಲಿ ಇಂತಹ ಬೆಳವಣಿಗೆಗಳಾಗಿರುವುದು ಕಂಡು ಬರುತ್ತದೆ.

ನಮ್ಮ ಈ ಕ್ಷೇತ್ರಕಾರ್ಯದಲ್ಲಿ ಭಾಗವಹಿಸಿ ಈ ಮೂರ್ತಿಶಿಲ್ಪ ಅಧ್ಯಯನಕ್ಕೆ ಲೇಖನಕ್ಕೆ ಸಹಾಯ ಮಾಡಿದ ಡಾ. ರು.ಮ.ಷಡಕ್ಷರಯ್ಯ ಡಾ. ಎಸ್.ಜಿ. ಚಲವಾದಿಯವರು ಹಾಗೂ ಶ್ರೀ ೧೦೮ ಮುನಿಕುಲರತ್ನಭೂಷಣ ಮಹಾರಾಜರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇವೆ.

[ನೆರವು: ಡಾ. ಆರ್.ಎಂ. ಷಡಕ್ಷರಯ್ಯ, ಡಾ. ಎಸ್.ಜಿ. ಚಲವಾದಿ.]

ಆಧಾರಸೂಚಿ

೧. ಡಾ. ಆರ್. ಮುನಿಸ್ವಾಮಿ ೧೯೯೯ ಬಿಜಾಪುರ ಜಿಲ್ಲೆಯ ಗ್ಯಾಜೆಟಿಯರ್, ಕರ್ನಾಟಕ ರಾಜ್ಯ ಗ್ಯಾಜೆಟಿಯರ್ ವಿಭಾಗ, ಬೆಂಗಳೂರು.

೨. ಕರ್ನಾಟಕ ಇತಿಹಾಸ ದರ್ಶನ ಸಂಪುಟಗಳು, ಕರ್ನಾಟಕ ಇತಿಹಾಸ ಅಕ್ಯಾಡೆಮಿ, ಬೆಂಗಳೂರು.

೩. ಪ್ರೊ. ಬಿ. ಷೇಕಅಲಿ (ಸಂ)–೧೯೯೭ ಕರ್ನಾಟಕ ಚರಿತ್ರೆ, ಸಂಪುಟ ೧ ಕ.ವಿ.ವಿ., ಹಂಪಿ.

೪. ಡಾ. ಅ.ಸುಂದರ ಕರ್ನಾಟಕ ಇತಿಹಾಸ ಪೂರ್ವ ಕಾಲದ ನೆಲೆಗಳು ಲೇಖನ ಮತ್ತು ದಕ್ಷಿಣ ಭಾರತದ ಬೃಹತ್ ಶಿಲಾ ಗೋರಿಗಳ ಅಧ್ಯಯನ ಎಂಬ ಗ್ರಂಥ.

೫. ಅಣ್ಣಾರಾಯ ಮಿರ್ಜಿ ಕರ್ನಾಟಕದಲ್ಲಿ ಜೈನ ಧರ್ಮ.

೬. ಡಾ. ಚಿದಾನಂದ ಮೂರ್ತಿ ೧೯೯೬ ಕ.ಶಾ.ಸಾಂಸ್ಕೃತಿಕ ಅಧ್ಯಯನ ಪ್ರಸಾರಂಗ ಮೈಸೂರು.


ಶಿರಾ-ರತ್ನಗಿರಿಯ ರಾಜ ರಂಗಪ್ಪನ ಅಪ್ರಕಟಿತ ತಾಮ್ರಶಾಸನ

ಡಾ. ಎಸ್.ವೈ. ಸೋಮಶೇಖರ್*

ಕರ್ನಾಟಕದ ಚರಿತ್ರೆಯಲ್ಲಿ ವಿಜಯನಗರೋತ್ತರ ಕಾಲದ ಆಳ್ವಿಕೆಯಲ್ಲಿ ನಾಯಕ ಅರಸರ ಪಾತ್ರ ತುಂಬಾ ಹಿರಿದು. ಈ ಅವಧಿಯಲ್ಲಿ ಅನೇಕರು ಸಾಮಂತರಾಗಿ ಹಾಗೂ ಸ್ವತಂತ್ರವಾಗಿ ಆಳ್ವಿಕೆ ನಡೆಸಿದ್ದಾರೆ. ಇವರಲ್ಲಿ ಚಿತ್ರದುರ್ಗ ಮತ್ತು ತುಮಕೂರು ಪರಿಸರದಲ್ಲಿ ಆಳ್ವಿಕೆ ಮಾಡಿ ತಮ್ಮದೇ ಆದ ಕೊಡುಗೆಗಳನ್ನು ನೀಡಿದವರಲ್ಲಿ ಹರತಿ ನಾಯಕರು ಪ್ರಮುಖರಾಗಿರುವರು. ಈ ಹರತಿ ಮನೆತನವು ಅನೇಕ ಕವಲುಗಳಲ್ಲಿ ಬೇರೆ ಬೇರೆಯಾಗಿ ಆಳಿರುವುದನ್ನು ಕಾಣಬಹುದು. ಅವರಲ್ಲಿ ಶಿರಾ-ರತ್ನಗಿರಿ ಮನೆತನವೂ ಮುಖ್ಯವಾಗಿದೆ.

ಶಿರಾ-ರತ್ನಗಿರಿ ಮನೆತನವು ಆರಂಭದಲ್ಲಿ ರತ್ನಗಿರಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಡಳಿತ ನಡೆಸಿದ್ದರು. ನಂತರ ಇವರು ಶಿರಾವನ್ನು ತಮ್ಮ ಕೇಂದ್ರವನ್ನಾಗಿ ಮಾಡಿಕೊಂಡು ಆಡಳಿತ ನಡೆಸಿದುದನ್ನು ಕಾಣಬಹುದು. ಈ ಮನೆತನದ ರಂಗಪ್ಪರಾಜನಿಗೆ ಸಂಬಂಧಿಸಿದ ತಾಮ್ರಪಟವೊಂದು ನಾನು ಕೈಗೊಂಡ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಬೆಳಕಿಗೆ ಬಂದಿದೆ. ಇದು ಶಿರಾ-ರತ್ನಗಿರಿ ನಾಯಕ ಅರಸರ ಮೂಲನೆಲೆ, ಮನೆತನ, ಮೂಲಪುರುಷನಲ್ಲದೆ ಇವರು ಸ್ಥಾಪಿಸಿದ ಗ್ರಾಮ, ಕೋಟೆ, ದೇವಾಲಯಗಳ ವಿವರಗಳನ್ನು ಸ್ಪಷ್ಟಪಡಿಸುತ್ತಿರುವುದು ಗಮನಾರ್ಹ. ಹಾಗೆಯೇ ದೇವಾಲಯದ ಪೂಜಾರಿಕೆ ವಿಷಯದಲ್ಲಿ ಉಂಟಾದ ಮೇಲ್ವರ್ಗಗಳ ಮನಸ್ತಾಪವೂ ಇಲ್ಲಿ ಪ್ರಕಟವಾಗಿರುವುದು ಗಮನೀಯ.

ತಾಮ್ರಪಟ ವಿವರ: ಪ್ರಸ್ತುತ ತಾಮ್ರಪಟವು ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲೂಕಿನ ಮಸ್ಕಲ್ ಗ್ರಾಮದಲ್ಲಿ ಕಂಡುಬಂದಿದೆ. ಇದನ್ನು ಗ್ರಾಮದ ವಾಲ್ಮೀಕಿ ಸಮುದಾಯದ ಕೆ. ಪಾಂಡುರಂಗಪ್ಪ ಎಂಬುವವರ ಮನೆಯಲ್ಲಿದ್ದು, ಶ್ರೀ ಎಂ.ಎ. ವೆಂಕಟೇಶ್ ಎಂಬುವವರ ಸಹಕಾರದಿಂದ ಬೆಳಕಿಗೆ ಬರಲು ಸಾಧ್ಯವಾಗಿದೆ. ಈ ತಾಮ್ರಪಟದ ಉದ್ದ ಸುಮಾರು



೧೩ ಇಂಚು, ೯ ಇಂಚು ಅಗಲವಾಗಿದೆ. ತಾಮ್ರಪಟದ ಎರಡೂ ಕಡೆಗಳಲ್ಲಿ ಶಾಸನವಿದೆ. ಮುಂಭಾಗದಲ್ಲಿ ೨೭ ಸಾಲುಗಳು, ಹಿಂಭಾಗದಲ್ಲಿ ೧೦ ಸಾಲುಗಳಿವೆ. ಭಾಷೆ ಹಾಗೂ ಲಿಪಿ ಕನ್ನಡವಾಗಿದ್ದು, ಸುಲಭವಾಗಿ ಓದುವಂತಿದೆ.

ತಾಮ್ರಪಟದ ಮೇಲ್ಭಾಗದಲ್ಲಿ **'ಶ್ರೀ ರಾಜ ರಂಗಪ್ಪ ರಾಜಸಂಸ್ಥಾನ ಶಿರಾ-ರತ್ನಗಿರಿ'** ಎಂಬುದಾಗಿ ವೃತ್ತದಲ್ಲಿ ಬರೆಯಲಾಗಿದೆ. ಈ ಶಾಸನದಲ್ಲಿ ಎರಡು ಕಾಲಗಳ ಉಲ್ಲೇಖಗಳಿವೆ. ಒಂದನೆಯದು ಕ್ರಿ.ಶ. ೧೯೩೩ನೇ ಜುಲೈ ೧೨ ಎಂಬುದು. ಇನ್ನೊಂದು ಶಾಲಿವಾಹನ ಶಕವರುಷ


* ಸಹಾಯಕ ಪ್ರಾಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ-೫೮೩ ೨೭೬.

೧೦೫೦ನೇ ರಾಕ್ಷಸನಾಮ ಸಂವತ್ಸರ ಕಾರ್ತಿಕ ಶು ೧೦ ಎಂದಿರುವುದು.

ಈ ತಾಮ್ರಶಾಸನವನ್ನು ಅಂಬಲಗೆರೆಯ ನಿರ್ಮಾಣದ ಸಂದರ್ಭದಲ್ಲಿ ಹಾಕಿಸಿದ್ದುದು ಸ್ಪಷ್ಟವಾಗುತ್ತದೆ. ಆದರೆ ಈ ಮೂಲ ಶಾಸನದ ಪ್ರತಿಯನ್ನು ಮಸ್ಕಲ್ ಗ್ರಾಮದ ಅಂಬಲ ನಾಯ್ಕನ ಮಗ ದಾಸನಾಯ್ಕ, ತಿಮ್ಮನಾಯ್ಕ ಹಾಗೂ ಹುಚ್ಚರಂಗನಾಯ್ಕನ ಮಗ ರಂಗನಾಯ್ಕರ ಕೋರಿಕೆಯ ಮೇರೆಗೆ ಕಾಪಿ(ಪ್ರತಿ) ಮಾಡಿಸಿಕೊಟ್ಟ ಸಂಗತಿ ಆರಂಭದಲ್ಲಿ ಮತ್ತು ಕೊನೆಯಲ್ಲಿ ದಾಖಲಿಸಲಾಗಿದೆ. ಉಳಿದ ಭಾಗವು ಮೂಲದಂತೆ 'ಶ್ರೀ ಸಾರ್ವಾಡೇಶ್ವರ ಪ್ರಸನ್ನ' ಎಂಬುದಾಗಿ ಆರಂಭಗೊಂಡಿದೆ. ಇದರ ಕಾಲವನ್ನು ಶಾ.ಶಕ ೧೦೫೦ ಎಂದು ಹೇಳಿದೆ. ಈ ಕುರಿತು ಹೆಚ್ಚಿನ ಅಧ್ಯಯನ ಅಗತ್ಯವಿದೆ.

ಶಾಸನದ ಮಹತ್ವ

ಈ ತಾಮ್ರಶಾಸನವು ಶಿರಾ–ರತ್ನಗಿರಿ ಮನೆತನದ ಮೂಲಪುರುಷ ತಿಪ್ಪನಾಯ್ಕನೆಂದು ಹೇಳಿದೆ. ಅಲ್ಲದೆ ಇವರು ವಿಜಯನಗರ ರಾಜ್ಯದಿಂದ ಬಂದವರೆಂದೂ ತಿಳಿಸುತ್ತದೆ. ಈ ತಿಪ್ಪನಾಯ್ಕನು ಹರ್ತಿ ಸಾರ್ವಾಟದಿಂದ ಬಂದವನೆಂದೂ ಇವನೊಂದಿಗೆ ಲಚ್ಚಮೊನೇರ ಬೊಮ್ಮನಾಯ್ಕ ಹಾಗೂ ಕಾಮನಾಯ್ಕನ ಸಂತತಿಯವರು ಬಂದರೆಂದೂ ದೃಢಪಡಿಸುತ್ತದೆ. ಅಲ್ಲದೆ ತಿಪ್ಪನಾಯ್ಕನು ಸ್ಥಾಪಿಸಿದ ಗ್ರಾಮ, ಕೋಟೆ ಮತ್ತು ದೇವಾಲಗಳ ವಿವರವನ್ನೂ ಇಲ್ಲಿ ಕಾಣಬಹುದು. ತಿಪ್ಪನಾಯ್ಕನು ಮೊದಲಿಗೆ ಅಂಕಸಮುದ್ರದ ಕೋಟೆಯನ್ನು ನಿರ್ಮಿಸಿ, ನಂತರ ಹರ್ತಿ ಗ್ರಾಮವನ್ನು ಸ್ಥಾಪಿಸಿ ಅಲ್ಲಿ ಸಾರ್ವಡೇಶ್ವರಸ್ವಾಮಿ ಹಾಗೂ ವೀರಭದ್ರ ದೇವರ ದೇವಸ್ಥಾನಗಳನ್ನು ನಿರ್ಮಾಣ ಮಾಡಿದನೆಂದು ಹೇಳಿದೆ. ಈ ದೇವಾಲಯಗಳನ್ನು ಇಂದಿಗೂ ಹರತಿ ಗ್ರಾಮದಲ್ಲಿ ಕಾಣಬಹುದು. ವಾಸ್ತುಶೈಲಿಯನ್ನು ಗಮನಿಸಿದರೆ ಈ ದೇವಾಲಯಗಳ ಕಾಲವೂ ಇದಕ್ಕೆ ಸರಿಹೊಂದುತ್ತದೆ. ಹಾಗೆಯೇ ಹರತಿ ಗ್ರಾಮಕ್ಕೆ ಸ್ವಲ್ಪವೇ ದೂರದಲ್ಲಿರುವ



ಅಂಬಲಗೆರೆ ಗ್ರಾಮವನ್ನು ಇದೇ ಸಂದರ್ಭದಲ್ಲಿ ಸ್ಥಾಪಿಸಿ ಅಲ್ಲಿ ತನ್ನ ಮನೆದೇವರಾದ ರಂಗಸ್ವಾಮಿ ದೇವಾಲಯವನ್ನು ನಿರ್ಮಾಣ ಮಾಡಿದನೆಂದೂ ಸ್ಪಷ್ಟಪಡಿಸುತ್ತದೆ. ಅಂಬಲಗೆರೆಯ ರಂಗನಾಥಸ್ವಾಮಿ ದೇವಾಲಯವು ವಿಜಯನಗರ ಶೈಲಿಯಲ್ಲಿರುವ ಈ ಭಾಗದ ಸುಂದರವಾದ ದೇವಾಲಯವಾಗಿದೆ. ಸದಾಶಿವರಾಯನ (EC-XI, Hiriyur-21, 1554AD) ಕಾಲದಲ್ಲಿ ಈ ರಂಗನಾಥ(ಶಾಸನದಲ್ಲಿ ತಿರುವೇಂಗಳನಾಥ ದೇವರಿಗೆ ಎಂದಿದೆ) ದೇವರಿಗೆ ಉಪರಿಕರಹಳ್ಳಿ ಪ್ರತಿನಾಮವಾದ ವೆಂಗಳಾಪುರವನ್ನು ದಾನ ಮಾಡಿದ ವಿವರವುಳ್ಳ ಶಿಲಾಶಾಸನವಿದೆ. ಇದಕ್ಕೆ ಪೂರಕವೆನ್ನುವಂತೆ ಕ್ರಿ.ಶ. ೧೫೧೭ರ ಶ್ರೀ ಕೃಷ್ಣದೇವರಾಯನ ಕಾಲದ ಶಾಸನದಲ್ಲಿ (EC-XI, Hiriyur-36, 1517AD) ಶ್ರೀಮನ್ಮಹಾನಾಯಕಾಚಾರ್ಯ ಹರತ್ಯೆಮಂಗಳ ತಿಪ್ಪಳನಾಯ್ಕ ಎಂಬ ಹೆಸರಿನ ಉಲ್ಲೇಖವಿದೆ. ಇದರಿಂದ ಶ್ರೀಕೃಷ್ಣದೇವರಾಯನ ಕಾಲದಲ್ಲಿ ತಿಪ್ಪನಾಯ್ಕನು ಹರತಿ ಮತ್ತು ಐಮಂಗಳದ ಆಡಳಿತವನ್ನು ನೋಡಿಕೊಳ್ಳುತ್ತಿದ್ದನೆಂಬುದು ಶಿಲಾಶಾಸನ ಮತ್ತು ಪ್ರಸ್ತುತ ತಾಮ್ರಪಟಗಳ ಬರಹಗಳಿಂದ ಸ್ಪಷ್ಟವಾಗುತ್ತದೆ. ಈ ಹೊತ್ತಿಗೆ ಹರತಿ ಮತ್ತು ಐಮಂಗಳಗಳು ಆಡಳಿತದ ಪ್ರಮುಖ ಕೇಂದ್ರಗಳಾಗಿದ್ದವು. ಈ ಹಿನ್ನೆಲೆಯಲ್ಲಿ ರಂಗನಾಥಸ್ವಾಮಿ ದೇವಾಲಯವು ಅಂಬಲಗೆರೆಯಲ್ಲಿ ಶ್ರೀಕೃಷ್ಣದೇವರಾಯನ ಕಾಲದ ಹೊತ್ತಿಗೆ ತಿಪ್ಪನಾಯ್ಕನ ನೇತೃತ್ವದಲ್ಲಿ ನಿರ್ಮಾಣವಾಗಿರುವುದನ್ನು ಖಚಿತಪಡಿಸಬಹುದು.

ತಿಪ್ಪನಾಯ್ಕನು ಅಂಬಲಗೆರೆ ಗ್ರಾಮ ಮತ್ತು ದೇವಾಲಯಗಳನ್ನು ಕಟ್ಟಿಸಿ ಅಲ್ಲಿನ ನಾಯಕತನ, ಗೌಡಿಕೆ, ರಂಗನಾಥಸ್ವಾಮಿ ದೇವಾಲಯದ ಯಜಮಾನಿಕೆ ಹಾಗೂ ಪೂಜಾರಿಕೆಯ ಕಾರ್ಯಗಳಿಗೆ ವಾಲ್ಮೀಕಿ ಮತದ ಹಾಗೂ ಬೊಮ್ಮನಾಯ್ಕ, ಕಾಮನಾಯ್ಕನ ಸಂತತಿಯವನಾದ ರಂಗನಾಯ್ಕನಿಗೆ ವಹಿಸುತ್ತಾನೆ. ಆದರೆ ಇವುಗಳಲ್ಲಿ ದೇವಾಲಯದ ಪೂಜಾಕಾರ್ಯಕ್ಕೆ ವಾಲ್ಮೀಕಿ ಮತದವರನ್ನು ನೇಮಿಸಿದುದು ಮೇಲ್ವರ್ಗದ ಶಿವಾಚಾರ (ಲಿಂಗಾಯತ) ದವರು ಮತ್ತು ಬ್ರಾಹ್ಮಣರು ವಿರೋಧಿಸಿದ ವಿವರವಿದೆ. ಅಲ್ಲದೆ ಈ ಕುರಿತು ತಿಪ್ಪನಾಯ್ಕನಿಗೆ ಅರಿಕೆ ಮಾಡಿಕೊಳ್ಳುವ ಪ್ರಸಂಗವನ್ನು ಶಾಸನದಲ್ಲಿ, 'ವಾಲ್ಮಿಕರ ಕೈಯಲ್ಲಿ ತೀರ್ಥ ಪ್ರಸಾದ ತೆಗೆದುಕೊಳ್ಳುವುದು ಹೇಗೆ' ಎಂದು ಹೇಳಿದೆ. ಆಗ ತಿಪ್ಪನಾಯ್ಕನು ಅವರ ಮನವಿಯನ್ನು ಪುರಸ್ಕರಿಸಿ ಬ್ರಾಹ್ಮಣ ವರ್ಗಕ್ಕೆ ಸೇರಿದ ಕೋಟೆಕೆರೆಯ ಶಿಮರಾಯ ಕೇಶವಪ್ಪ ಎಂಬುವನನ್ನು ಕರೆಸಿಕೊಂಡು ಅವನಿಗೆ ದೇವರ ಪೂಜೆ ಮಾಡಿಕೊಂಡು ಹೋಗಲು ನೇಮಿಸುತ್ತಾನೆ. ಆದರೆ ರಂಗನಾಯ್ಕನಿಗೆ ಗ್ರಾಮದ ಗೌಡಿಕೆ, ನಾಯಕತನ,

ದೇವಾಲಯದ ಯಜಮಾನಿಕೆಗಳನ್ನು ಪುತ್ರಪೌತ್ರ ಪಾರಂಪರ್ಯವಾಗಿ ಅನುಭವಿಸಿಕೊಂಡು ಹೋಗುವಂತೆ ಆದೇಶಿಸಿ ಈ ಶಾಸನವನ್ನು ಹಾಕಿಸಿದುದಾಗಿ ತಿಳಿದುಬರುತ್ತದೆ.

ತಾಮ್ರಶಾಸನದ ಕೊನೆಯಲ್ಲಿ ಎಂದಿನಂತೆ ಶಾಪಾಶಯ ವಿದೆ. ಇದರಲ್ಲಿ 'ಈ ದಾನಪತ್ರದ ಕರಾರಿಗೆ ಯಾರಾದರೂ ತಪ್ಪಿದಲ್ಲಿ ಕಾಶಿಯಲ್ಲಿ ಗೋಹತ್ಯೆ ಮಾಡಿದ ಹಾಗೆ, ಕ್ಷತ್ರಿಯ ಕುಲದ ಅರಸುಗಳು ಅಲ್ಲಾಯೆಂದಲ್ಲಿ ಸಿಂಹಾಸನಕ್ಕೆ ದ್ರೋಹ ಮಾಡಿದ ಹಾಗೆ' ಎಂದಿದೆ. ಕೊನೆಯಲ್ಲಿ ಸಂಸ್ಕೃತ ಶ್ಲೋಕವಾದ 'ಸ್ವಹಾಸಾದ್ವಿಗುಣುನಾಂ ಪುಣ್ಯಂ ಪರದತ್ತಾನುಪಾಲನಂ ಪರದತ್ತಾಪಹಾರೇನಾ ಸ್ವದತ್ತಂ ನಿಷ್ಫಲಂಭವೇತ್' ಎಂಬುದಾಗಿದೆ. ಶ್ಲೋಕದ ನಂತರ ಕಂಸದಲ್ಲಿ ನಮ್ಮ ಹಿರಿಯರು ಕೊಟ್ಟಿರುವ ದಾನಪತ್ರದ ಕಾಪಿಯನ್ನು ನಿಮಗೆ ಕೊಟ್ಟಿರುತ್ತೇವೆ. ಅಸಲಿಗೆ ಸರಿಯಾಗಿರುತ್ತೆ ಎಂದು ಮಕ್ಕಾಂ ತಾವರಗೆರೆ ಸಂಸ್ಥಾನದ ವೆಂಕಟರಮಣಪ್ಪ, ರಾಜರಂಗಪ್ಪರಾಜ ಶಿರಾ ರತ್ನಗಿರಿ ಎಂಬುದಾಗಿ ನಮೂದಿಸಲಾಗಿದೆ. ಇದು ಮೂಲ ಶಾಸನದ ಪ್ರತಿಯನ್ನು ನಕಲು ಮಾಡಿಕೊಟ್ಟ ತಾಮ್ರಪಟವೆಂಬುದು ಸ್ಪಷ್ಟವಾಗುತ್ತದೆ. ಇಲ್ಲಿ ಉಲ್ಲೇಖವಾಗಿರುವ ರಾಜರಂಗಪ್ಪನು ಕ್ರಿ.ಶ. ೧೭೫೬ರಿಂದ ೧೭೭೮ರವರೆಗೆ ಶಿರಾದಿಂದ ಆಳ್ವಿಕೆ ಮಾಡಿದ ಹರತಿ ಮನೆತನದ ನಾಯಕರ ಅರಸನಾಗಿದ್ದು, ಪ್ರಸ್ತುತ ತಾಮ್ರಪಟವು ೧೮ನೇ ಶತಮಾನದಲ್ಲಿ ಸಿದ್ಧಗೊಂಡಿರುವುದು ಸ್ಪಷ್ಟವಾಗುತ್ತದೆ.

ತಾಮ್ರಶಾಸನದ ಮೂಲ ಪಾಠ ಈ ಕೆಳಕಂಡಂತಿದೆ:

ಶ್ರೀ
ರಾಜ ರಂಗಪ್ಪ
ರಾಜ ಸಂಸ್ತಾನ
ಶಿರಾ ರತ್ನಗಿ
ರಿ
ಶ್ರೀಮನ್‌ಮಹಾಮಂಡಲೇಶ್ವರ ಅರ್ತಿಸಂಮೇಟ್‌ಸರ್ಜಸಂ
ಸ್ಥಾನ ಶಿರಾ ರತ್ನಗಿರಿ ರಾಜ ರಂಗಪ್ಪ ರಾಜರು ಸನ್ ೧೯೩೩ನೆ ಯಿ
ಸ್ವಿ ಜುಲೈ ತಾರೀಕು ೧೨ರಲ್ಲು ಹಿರಿಯೂರ ತಲ್ಲೂಕ ಮಸ್ಕಲ್ ಗ್ರಾಂ
ಮದಲ್ಲಿರುವ ಅಂಬಲನಾಯ್ಕನ ಮಗ ದಾಸನಾಯ್ಕ॥ ಅಂಬಲನಾಯ್ಕನ ಮ
ಗ ತಿಮ್ಮನಾಯ್ಕ॥ ಹುಚ್ಚರಂಗನಾಯ್ಕನ ಮಗ ರಂಗನಾಯ್ಕ ಯಿವರುಗಳು ನಮ್ಮ
ಲ್ಲಿ ಹಾಜರಾಗಿ ಅಂಬಲಗೆರೆ ಗುಡಿಕಟ್ಟಿನ ಅಂದರೆ। ರಂಗನಾಥಸ್ವಾಮಿ ವಿಷಯ
ದಲ್ಲಿ ನಮ್ಮ ಹಿರಿಯವರು ಕೊಟ್ಟಿರುವ ದಾನಪತ್ರ। ಕಾಫಿ ಕೇಳಿಕೊಂಡಿದ್ದರಿಂ
ದ ನಮ್ಮಲ್ಲಿ॥ ಸಮಸ್ತಾನದವರು ಕೊಟ್ಟಿರುವುದೇನೆಂದರೆ॥ ಶ್ರೀ ಸಾರ್ವ್ವದೇಶ್ವರ ಪ್ರ
ಸನ್ನ॥ ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ವರ್ಷಂಗಳು ೧೦೫೦ ನೆ ರಾ
ಕ್ಷಸನಾಮ ಸಮ್ಮತ್ಸರದ ಕಾರ್ತಿಕ ಶುದ್ದ ೧೦ಯಲ್ಲು ವಿಜಯನಗರದ ರಾಜ್ಯದಿಂ
ದ ಬಂದಂತಾವರು॥ ಮೂಲಪುರುಷರು॥ ರಾಜ ವಜ್ಜೀರ ತಿಪ್ಪನಾಯ್ಕ ಬಂದು ಅಂಕಸ
ಮುದ್ರವೆಂಬೊ ಕೋಟೆಯನ್ನಿ ಕಟ್ಟಿಸಿ ತರುವಾಯ। ಅರ್ತಿಯಂಬೊ ಗ್ರಾಮ ನಿ
ರ್ಮಣ ಮಾಡಿದರು। ಅಲ್ಲಿ ಸಾರ್ವದೇಶ್ವರಸ್ವಾಮಿ ನಿರ್ಮಾಣ ಮಾಡಿಸಿದರು॥ ವೀರಭ
ದ್ರ ದೇವರ ದೇವಸ್ತಾನ ನಿರ್ಮಾಣ ಮಾಡಿಸಿದರು॥ ಅಲ್ಲಿಂದ ಅಂಬಲಗೆರೇ ಗ್ರಾಮ ನಿರ್ಮಾ
ಣ ಮಾಡಿದರು॥ ಅಲ್ಲಿ ಮನೇದೇವರು ರಂಗಸ್ವಾಮಿ ದೇವರ ನಿರ್ಮಾಣ ಮಾಡಿಸಿದರು॥ ಆ
ನು ಗ್ರಾಮಕ್ಕೆ ಗೌಡರ ನೆಮ॥
ಕ ಮಾಡಬೇಕೆಂದು ಯೊಚನೆ ಮಾಡಿ। ತಮ್ಮ ಸಂಗಡ ಹರ್ತಿ ಸಾರ್ವ್ವಟದಿಂದ ಬಂ
ದಂತಾವರು। ಲಚ್ಚಮೊನೊರು ಬೊಮ್ಮನಾಯ್ಕ॥ ಕಾಮನಾಯ್ಕನ ಸಂತತಿಯವರು
॥ರಂಗನಾಯ್ಕನ ಕರಿಸಿ ಯಿಗ್ರಾಮದ ಗೌಡಿಕೆ ಮಾಡಿಕೊಂಡು ಹೊಗು ಯಂಬುದಾಗಿ ನೇ
ಮಕಾ ಮಾಡಿದರು॥ ಯಿಾಚೆಗೆ ಶಿವಾಚಾರದವರು ಬ್ರಾಂಹಣರು ಸಹಾ॥ ಮಹಾರಾ
ಜೇ ಶ್ರಿಯವರಿಗೆ ಅರಿಕೆ ಮಾಡಿದ್ದು॥ ವಾಲ್ಮಿಕರ ಕೈಯಲ್ಲಿ ತೀರ್ಥ ಪ್ರಸಾದ ತೆಗೆದು
ಕೊಳ್ಳುವದು ಹೇಗೆ ಯಂಬದಾಗಿ ಅರಿಕೆ ಮಾಡಿಕೊಂಡಿದ್ದರಿಂದ ಕೊಟಿಕೆರೆ ಶೆಮೊ
ರಾಯ ಕೇಶವಪ್ಪ ಯಂಬುವರನ್ನು ಕರಸಿ॥ ನಿವು ರಂಗನಾಯ್ಕ ಹೇಳಿದ ಮೊರಿಗೆ॥
ದೇವರ ಪೂಜೆ ಮಾಡಿಕೊಂಡು ಹೊಗಿರಿ। ಬಂದಂತಾವರಿಗೆ ತೀರ್ಥ ಪ್ರಸಾದ ಕೊಟ್ಟು
ಕೊಂಡು ಹೊಗಿರಿ ಯಂಬುದಾಗಿ ನಿರ್ಮಾನ ಮಾಡಿಸಿದರು। ರಂಗನಾಯ್ಕನ ಕರೆದು
ಗ್ರಾಮದ ಗೌಡಿಕೆ ಕೆಲಸ ನಾಯ್ಕತನದ ಕೆಲಸ ದೇವಸ್ತಾನದ ಯಜ

ಹಿಂಭಾಗ

ಮಾನಿಕೆ ಕೆಲಸ ನಿಮ್ಮ ಪುತ್ರಪೌತ್ರ ಪಾರಂಪರ್ಯವಾಗಿ ಅನುಭವಿಸಿ
ಕೊಂಡು ಸರ್ಕರದ ಚಾಕರಿ ಮಾಡಿಕೊಂಡು ಹೋಗು ಯೆಂಬುದಾಗಿ॥ ಬರಸಿ
ಕೊಟ್ಟ ದಾನಪತ್ರ ॥ಸಹಿ॥ ಯಿದಕ್ಕೆ ಯಾರಾದರೂ ಅಲ್ಲಾಯಂದಲ್ಲಿ
॥ ಕಾಸಿಯಲ್ಲಿ ಗೊಹತ್ಯ ಮಾಡಿದ ಹಾಗೆ॥ ಕ್ಷತ್ರಿಕುಲದ ಅರಸುಗಳು ಅ
ಲ್ಲಾಯಂದಲ್ಲಿ ಸಿಂಹಾಸನಕ್ಕೆ ದ್ರೊಹ ಮಾಡಿದ ಹಾಗೆ॥
ಸ್ವಹಾಸ್ತಾದ್ವಿಗುಣುನಾಂ ಪುಣ್ಯಾಂ॥ ಫರದತ್ತಾನುಪಾಲನಂ॥ ಪರದ
ತ್ತಾಪಹಾರೇನಾ॥ ಸ್ವದತ್ತಂ ನಿಷ್ಫಲಂಭವೇತ್॥ ((ನಮ್ಮ ಹಿರಿಯವರು ಕೊ
ಟ್ಟಿರುವ ದಾನಪತ್ರ ಕಾಫಿಯನ್ನು ನಿಮಗೆ ಕೊಟ್ಟಿರುತ್ತೆವೆ॥ ಅಸಲಿಗೆ
ಸರಿಯಾಗಿರುತ್ತೆ॥ ((ಮಕ್ಕಾಂ ತಾವರಗೆರೆ॥ ಸಂಸ್ತಾನದ ॥ಪಾ॥ ವೆಂಕ
ಟರವಣಪ್ಪ॥ ರಾಜರಂಗಪ್ಪ ರಾಜ ಶಿರಾ ರತ್ನಗಿರಿ))



ಯಾದಗಿರಿ, ದಿನಾಂಕ : ೨-೨-೨೦೧೩, ಪರಂಪರೆ ಉಳಿಸಿ ಕಾರ್ಯಕ್ರಮ : ಹುಣಸಗಿ ಪೊಲೀಸ್ ಪಾಟೀಲ ಪ್ರತಿಷ್ಠಾನ (ನೋಂ) ಹುಣಸಗಿ.





ಪರಂಪರೆ ಉಳಿಸಿ ಕಾರ್ಯಕ್ರಮ, ಚಿತ್ರದುರ್ಗ.



ಕರ್ನಾಟಕ ಇತಿಹಾಸ ಅಕಾದೆಮಿ (ರಿ).

ಬಿ.ಎಂ.ಶ್ರೀ. ಕಲಾಭವನ ಆವರಣ, ೩ನೇ ಮುಖ್ಯರಸ್ತೆ, ನರಸಿಂಹರಾಜಾ ಕಾಲೋನಿ

ಬೆಂಗಳೂರು – ೫೬೦ ೦೧೯

೨೦೧೨ನೆಯ ಸಾಲಿನ ವಾರ್ಷಿಕ ವರದಿ

ಪ್ರಿಯ ಸದಸ್ಯ ಬಂಧುಗಳೇ,

ಕರ್ನಾಟಕ ಇತಿಹಾಸ ಅಕಾದೆಮಿಯ ೨೭ನೆಯ ವಾರ್ಷಿಕ ಸಮ್ಮೇಳನಕ್ಕಾಗಿ ನಾವೆಲ್ಲಾ ಬೆಂಗಳೂರಿನ ಮಿಥಿಕ್ ಸೊಸೈಟಿಯ ಸಭಾಂಗಣದಲ್ಲಿ ಸಮಾವೇಶಗೊಂಡಿದ್ದೇವೆ. ಕಳೆದ ಎರಡೂವರೆ ದಶಕಗಳಿಂದ ಅಕಾದೆಮಿಯ ಅಭ್ಯುದಯದಲ್ಲಿ ನಿರಂತರವಾಗಿ ಸಹಕರಿಸುತ್ತಾ ಬಂದಿರುವ ಎಲ್ಲರಿಗೂ ಅನಂತ ಧನ್ಯವಾದಗಳು. ಕಳೆದ ೨೬ ಸಮ್ಮೇಳನಗಳಿಗೆ ಆಶ್ರಯ ನೀಡಿ ಅಕಾದೆಮಿಯನ್ನು ಪೋಷಿಸಿರುವ ಎಲ್ಲಾ ಸಂಘ ಸಂಸ್ಥೆ ಹಾಗೂ ಧರ್ಮಪೀಠಗಳಿಗೆ ಅಕಾದೆಮಿಯು ಕೃತಜ್ಞವಾಗಿದೆ.

ಐತಿಹಾಸಿಕ ಪರಂಪರೆ ಉಳಿಸಿ – ೨೦೧೨

೨೦೧೨ರ ಸಾಲಿನ 'ಐತಿಹಾಸಿಕ ಪರಂಪರೆ ಉಳಿಸಿ' ಸಪ್ತಾಹದ ಉದ್ಘಾಟನಾ ಸಮಾರಂಭವನ್ನು ದಿನಾಂಕ ೧೬.೦೮.೨೦೧೨ರ ಗುರುವಾರ ಸಂಜೆ ೫.೦೦ ಗಂಟೆಗೆ ಬೆಂಗಳೂರಿನ ಬಸವನಗುಡಿಯಲ್ಲಿರುವ ನ್ಯಾಷನಲ್ ಕಾಲೇಜಿನ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ವರ್ಷವೂ ಎಂದಿನಂತೆ 'ಐತಿಹಾಸಿಕ ಪರಂಪರೆ ಉಳಿಸಿ' ಸಪ್ತಾಹ ಕಾರ್ಯಕ್ರಮಕ್ಕೆ ಕರ್ನಾಟಕ ರಾಜ್ಯ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆಯ ಆರ್ಥಿಕ ಸಹಯೋಗ ದೊರೆತಿತ್ತು. ಡಾ. ಕೂ.ಸ. ಅಪರ್ಣ ಮತ್ತು ಸಂಗಡಿಗರ ಪ್ರಾರ್ಥನೆ ಹಾಗೂ ಜಿ.ವಿ. ಸತ್ಯನಾರಾಯಣರಾವ್ ಅವರ ಲಾವಣಿ ಗಾಯನದೊಂದಿಗೆ ಕಾರ್ಯಕ್ರಮವು ಆರಂಭವಾಯಿತು. ಅಕಾದೆಮಿಯ ಅಧ್ಯಕ್ಷರಾದ ಡಾ: ದೇವರಕೊಂಡಾರೆಡ್ಡಿ ಅವರು ಸಭೆಗೆ ಸ್ವಾಗತ ಕೋರಿ ಪ್ರಾಸ್ತಾವಿಕ ಭಾಷಣ ಮಾಡಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ನ್ಯಾಷನಲ್ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷರಾದ ಪ್ರೊ. ಎ.ಎಚ್. ರಾಮರಾವ್ ಅವರು 'ಐತಿಹಾಸಿಕ ಪರಂಪರೆ ಉಳಿಸಿ' ಸಪ್ತಾಹವನ್ನು ಜ್ಯೋತಿ ಬೆಳಗಿಸುವ ಮೂಲಕ ವಿಧಿವತ್ತಾಗಿ ಉದ್ಘಾಟಿಸಿ, ನಾಡು-ನುಡಿ ಸಂಸ್ಕೃತಿಗಳ ಬಗ್ಗೆ ಚಿಂತನಾಶೀಲ ಮಾತುಗಳನ್ನು ಆಡಿದರು. ರಾಜ್ಯ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆಯ ಆಯುಕ್ತರಾದ ಶ್ರೀ ಕೆ.ಆರ್. ರಾಮಕೃಷ್ಣ, ಕೆ.ಎ.ಎಸ್ ಅವರು ಈ ಸಂದರ್ಭಕ್ಕೆಂದೇ ಕಲಾವಿದ ದಿವಂಗತ ಅ.ಲ. ನರಸಿಂಹನ್ ಅವರು ಅಕಾದೆಮಿಗಾಗಿ ಸಿದ್ಧಪಡಿಸಿದ್ದ ವಿಶೇಷ ಛಿತ್ತಚಿತ್ರ ವಿನ್ಯಾಸವನ್ನು ಅನಾವರಣ ಮಾಡಿ, ಚಾರಿತ್ರಿಕ ದಾಖಲೆಗಳನ್ನು ರಕ್ಷಿಸಿ, ಮುಂದಿನ ಪೀಳಿಗೆಗೆ ಉಳಿಸಿಕೊಡಬೇಕಾದ, ಸಂಘ-ಸಂಸ್ಥೆ, ಶಾಲಾ ಕಾಲೇಜುಗಳು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆಯೊಂದಿಗೆ ಮಾಡಬಹುದಾದ ಕಾರ್ಯಗಳ ಅಂಶಗಳನ್ನು ಸಭೆಗೆ ಮನವರಿಕೆ ಮಾಡಿಕೊಟ್ಟರು.

ಕರ್ನಾಟಕ ಇತಿಹಾಸ ಅಕಾದೆಮಿಯ ಬೆಂಗಳೂರು ಘಟಕವು ಡಾ: ಇಂದಿರಾ ಹೆಗ್ಡೆ ಅವರ ಅಧ್ಯಕ್ಷತೆಯಲ್ಲಿ ಎಂದಿನಂತೆ ಬೆಂಗಳೂರು ನಗರದ ಪ್ರೌಢಶಾಲೆ, ಪದವಿ ಪೂರ್ವ ಹಾಗೂ ಪದವಿ ಕಾಲೇಜು ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ ಪ್ರಬಂಧ ಹಾಗೂ ಭಾಷಣ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ನ್ಯಾಷನಲ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಪ್ರೊ. ಎ.ಎಚ್. ರಾಮರಾವ್ ಅವರು ಬಹುಮಾನ ಹಾಗೂ ಪ್ರಶಸ್ತಿ ಪತ್ರಗಳನ್ನು ನೀಡಿದರು. ಅಕಾದೆಮಿಯ ಗೌರವಾಧ್ಯಕ್ಷರಾದ ಡಾ. ಸೂರ್ಯನಾಥ ಯು. ಕಾಮತ್ ಅವರು ಸಭೆಯನ್ನು ಉದ್ದೇಶಿಸಿ ಭಾಷಣ ಮಾಡಿದರು. ಅನಂತರ ಪಾರಿತೋಷಕಗಳನ್ನು ಪ್ರಾಯೋಜಿಸಿದ ಪ್ರಾಯೋಜಕರಿಗೆ ಗೌರವಾದರವನ್ನೂ, ಸ್ಪರ್ಧಾ ಕಾರ್ಯಕ್ರಮಗಳಲ್ಲಿ ಸಹಕರಿಸಿದ ಸ್ವಯಂ ಸೇವಕರಿಗೆ ಕೃತಜ್ಞತೆಯನ್ನು ಸಲ್ಲಿಸಲಾಯಿತು.

ಅಕಾದೆಮಿಯ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮಕ್ಕೆ ಸ್ಥಳಾವಕಾಶ ನೀಡಿದ ಬಸವನಗುಡಿ ನ್ಯಾಷನಲ್ ಕಾಲೇಜಿನ ಆಡಳಿತ ವರ್ಗಕ್ಕೆ ಅಕಾದೆಮಿಯು ಕೃತಜ್ಞತೆ ಸಲ್ಲಿಸಿತು. ಪ್ರಧಾನ ಕಾರ್ಯದರ್ಶಿ ಶ್ರೀ ರಾಜೇಂದ್ರಪ್ಪ ನಿರೂಪಣೆ ಮಾಡಿದರು. ಈ ಕಾರ್ಯಕ್ರಮವು ಯಶಸ್ವಿಯಾಗುವಲ್ಲಿ ಸಹಕರಿಸಿದ ಸರ್ವರಿಗೂ ಅಕಾದೆಮಿಯ ಕಾರ್ಯದರ್ಶಿ ಡಾ. ಪಿ.ವಿ. ಕೃಷ್ಣಮೂರ್ತಿ ಅವರು ವಂದನೆ ಅರ್ಪಿಸುವುದರೊಂದಿಗೆ ಕಾರ್ಯಕ್ರಮವು ಮುಕ್ತಾಯಗೊಂಡಿತು.

ಬೆಂಗಳೂರು ನಗರದಲ್ಲಿ ಕರ್ನಾಟಕ ಇತಿಹಾಸ ಅಕಾದೆಮಿಯು ವತಿಯಿಂದ ರಾಜ್ಯ ಮಟ್ಟದಲ್ಲಿ 'ಐತಿಹಾಸಿಕ ಪರಂಪರೆ ಉಳಿಸಿ ಸಪ್ತಾಹ' ಕಾರ್ಯಕ್ರಮವು ಉದ್ಘಾಟನೆಗೊಂಡು ಸದರಿ ವರ್ಷದ ವಿಶೇಷ ಭಿತ್ತಿಪತ್ರಗಳ ಅನಾವರಣದ ನಂತರ, ರಾಜ್ಯದಾದ್ಯಂತ ವಿವಿಧ ಸ್ಥಳಗಳಲ್ಲಿ 'ಐತಿಹಾಸಿಕ ಪರಂಪರೆ ಉಳಿಸಿ' ಕಾರ್ಯಕ್ರಮಗಳು ನಡೆದಿವೆ. ಅಕಾದೆಮಿಯಿಂದ ಸದಸ್ಯರ ಅಪೇಕ್ಷೆಯಂತೆ ಅಗತ್ಯವಿರುವ ಭಿತ್ತಿಪತ್ರ, ಸಂಬಂಧಿತ ಸಾಹಿತ್ಯ ಹಾಗೂ ಪ್ರಚಾರ ಪತ್ರಗಳನ್ನು ಸದಸ್ಯರಿಗೆ ಮುಂಚಿತವಾಗಿ ಕಳುಹಿಸಲಾಗಿತ್ತು. ಆ ಪ್ರಕಾರ ಅಕಾದೆಮಿಯ ಸದಸ್ಯರು, ಇತಿಹಾಸ ಆಸಕ್ತರು ಹಾಗೂ ಸಂಘ ಸಂಸ್ಥೆಗಳು ನಾಡಿನಾದ್ಯಂತ ವರ್ಷದುದ್ದಕ್ಕೂ 'ಐತಿಹಾಸಿಕ ಪರಂಪರೆ ಉಳಿಸಿ' ಕಾರ್ಯಕ್ರಮವನ್ನು ಹಮ್ಮಿಕೊಂಡು ಆಚರಿಸಿದ ಕಾರ್ಯಕ್ರಮಗಳ ವಿವರವನ್ನಿಲ್ಲಿ ಸಂಕ್ಷಿಪ್ತವಾಗಿ ನೀಡಲಾಗಿದೆ.

ದಿನಾಂಕ ೦೬.೦೯.೨೦೧೨

ವಿದ್ಯಾಪ್ರಸಾರಕ ಮಂಡಲದ ಶ್ರೀ ಎಸ್.ಆರ್. ನರಸಾಪೂರ ಕಲಾ ಮತ್ತು ಶ್ರೀ ಎಂ.ಬಿ. ಶಿರೂರ ವಾಣಿಜ್ಯ ಮಹಾವಿದ್ಯಾಲಯ, ಬಾಗಲಕೋಟೆಯ ಎಲ್ಲಾ ವಿಭಾಗಗಳೂ ಸೇರಿ ದಿನಾಂಕ ೦೬.೦೯.೨೦೧೨ರಂದು ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮವನ್ನು ನಡೆಸಿವೆ. ಶ್ರೀಮತಿ ಸರಳಾಬಾಯಿ ಭಾಗವತ ಸಭಾ ಭವನದಲ್ಲಿ ನಡೆದ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಡಾ: ಬಿ. ರಾಜಶೇಖರಪ್ಪ, ಉಪಾಧ್ಯಕ್ಷರು, ಕರ್ನಾಟಕ ಇತಿಹಾಸ ಅಕಾದೆಮಿ ಅವರು ಆಗಮಿಸಿ ಇತಿಹಾಸದ ಮಹತ್ವವನ್ನು ವಿವರಿಸಿದರು. ವಿದ್ಯಾರ್ಥಿ ಉಪಾಧ್ಯಾಯರ ಪಾತ್ರ ಐತಿಹಾಸಿಕ ಪರಂಪರೆ ಉಳಿಸುವಲ್ಲಿ ಎಷ್ಟು ಮುಖ್ಯವಾದುದೆಂದು ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಎಸ್.ಬಿ. ಸತ್ಯನಾರಾಯಣ, ವಿದ್ಯಾ ಪ್ರಸಾರಕ ಮಂಡಳದ ಗೌರವ ಕಾರ್ಯದರ್ಶಿಗಳು ವಹಿಸಿದ್ದರು. ಡಾ: ಡಿ.ಜಿ. ಕುಲಕರ್ಣಿ ಸಂಘಟಕರಾಗಿದ್ದರು. ಶ್ರೀಮತಿ ಎಸ್.ಆರ್. ವಿರ್ಜಿ, ಪ್ರಾಂಶುಪಾಲರು ಕಾರ್ಯಕ್ರಮದ ಯಶಸ್ವಿಗೆ ಕಾರಣರಾದರು. ಐತಿಹಾಸಿಕ ಸ್ಮಾರಕಗಳ ಚಿತ್ರ ಬಿಡಿಸುವ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಗಿತ್ತು. ಪ್ರೊ: ಜಿ. ಜೆ. ಮೊರಬ, ಪ್ರೊ: ಎಚ್.ಎಸ್. ಗಿಡಗಂಟಿ, ಎನ್.ಎಸ್.ಎಸ್. ಕಾರ್ಯಕ್ರಮಾಧಿಕಾರಿಗಳು ಉಪಸ್ಥಿತರಿದ್ದರು.

ದಿನಾಂಕ ೧೮.೧೦.೨೦೧೨

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಕನ್ನಡ ಸಂಶೋಧನ ಸಂಸ್ಥೆಯು ತನ್ನ ಸಂಸ್ಥೆಯಲ್ಲಿ ದಿನಾಂಕ ೧೮.೧೦.೨೦೧೨ರಂದು ಸಂಶೋಧನ ಮಂಡಲದ ಉದ್ಘಾಟನೆಯೊಂದಿಗೆ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗದ ಅಧ್ಯಕ್ಷರಾದ ಡಾ. ಎಸ್.ಕೆ. ಕಲ್ಲೋಳಿಕರ ಅವರು ಉದ್ಘಾಟಿಸಿ ಇತಿಹಾಸ ಅಧ್ಯಯನ, ಸಂರಕ್ಷಣೆ ಕುರಿತು ಮಾತನಾಡಿದರು. ಮುಖ್ಯ ಅತಿಥಿಗಳಾಗಿ ಡಾ. ಆರ್.ಎಂ. ಷಡಕ್ಷರಯ್ಯ, ನಿವೃತ್ತ ಪ್ರಾಧ್ಯಾಪಕರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಅವರು ಐತಿಹಾಸಿಕ ಪರಂಪರೆಯ ಮಹತ್ವ ಅವುಗಳ ಅಧ್ಯಯನ ಸಂರಕ್ಷಣಾ ಜವಾಬ್ದಾರಿಯನ್ನು ಕುರಿತು ವಿವರ ನೀಡಿದರು. ಪ್ರೊ. ಎಸ್.ಬಿ. ಹಿರೇಮಠ, ನಿರ್ದೇಶಕರು (ಪ್ರ), ಕನ್ನಡ ಸಂಶೋಧನಾ ಸಂಸ್ಥೆ ಅವರು ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದ ಸಂಯೋಜಕರಾಗಿ ಡಾ. ಎಸ್.ಕೆ. ಮೇಲಕಾರ, ಅಕಾದೆಮಿಯ ಕಾರ್ಯಕಾರಿ ಸಮಿತಿ ಸದಸ್ಯರು ಇವರು ಕಾರ್ಯಕ್ರಮದ ರೂಪುರೇಷೆ ಯೋಜಿಸಿದರು. ದಾನಯ್ಯ ಒಡೆಯರ್ ಸುನೀತಾ ವಸ್ತ್ರದ, ಕಾರ್ಯದರ್ಶಿಗಳು ಉಪಸ್ಥಿತರಿದ್ದರು.

ದಿನಾಂಕ ೨೩.೧೨.೨೦೧೨

ಬಳ್ಳಾರಿಯ ದಿವಂಗತ ಟಿ.ಹೆಚ್.ಎಂ. ಶಿವಯ್ಯನವರ ೧೦೫ನೇ ವರ್ಷದ ಜ್ಞಾಪಕಾರ್ಥಕವಾಗಿ ದಿನಾಂಕ ೨೩.೧೨.೨೦೧೨ರಂದು ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮವನ್ನು ಬಹಳ ಅದ್ದೂರಿಯಾಗಿ ಹಮ್ಮಿಕೊಳ್ಳಲಾಯಿತು. ಕರ್ನಾಟಕ ಏಕೀಕರಣ ಹೋರಾಟಗಾರ ಧರ್ಮಜ್ಞಶೇಖರ ನ್ಯಾಯಮೂರ್ತಿ ಟಿ.ಎಚ್.ಎಂ. ಸದಾಶಿವಯ್ಯನವರ ವೇದಿಕೆಯಲ್ಲಿ 'ಹರಪನಹಳ್ಳಿ ಭೀಮವ್ವನ ಹಾಡುಗಳು' ಎಂಬ ಕಾರ್ಯಕ್ರಮದಲ್ಲಿ ಪರಿಮಳ ಭಜನಾ ಮಂಡಳಿ ಮತ್ತು ಸುಧಾಮೃತ ಭಜನಾ ಮಂಡಳಿಯ ಮಹಿಳಾ ಸದಸ್ಯರು ಭೀಮವ್ವನ ಹಾಡುಗಳನ್ನು ಸುಶ್ರಾವ್ಯವಾಗಿ ಹಾಡಿದರು. ಭೀಮವ್ವನ ಕೃಷ್ಣದಾಸ, ನಳಚರಿತ್ರೆ, ರತಿಕಲ್ಯಾಣ, ಶಕುಂತಲಾ ಹಾಡು ಮುಂತಾದವುಗಳನ್ನು ಹಾಡಿದರು. ಶ್ರೀ ರಾಜಾ ಎಸ್. ಬ್ರಹ್ಮಣ್ಯತೀರ್ಥಚಾರ್, ಧರ್ಮಾಧಿಕಾರಿ, ರಾಘವೇಂದ್ರಮಠ, ಬಳ್ಳಾರಿ ಇವರ ಸಾನಿಧ್ಯ ವಹಿಸಿದ್ದರು. ಡಾ. ಕರಿಬಸವರಾಜೇಂದ್ರ ಮಹಾಸ್ವಾಮಿಗಳು, ಉರವಕೊಂಡಮಠ ಬಳ್ಳಾರಿ ಇವರ ಸಮ್ಮುಖದಲ್ಲಿ ಶ್ರೀ ಕೆ. ನೀಲಗಿರಿರಾವ್ ಅವರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮವು ನಡೆಯಿತು.

ವಿದ್ವಾನ್ ಶ್ರೀ ಹತ್ರಿಬೆಳಗಲ್ ಕೃಷ್ಣಾಚಾರ್ಯ ಮತ್ತು ಕೃಷ್ಣಮೂರ್ತಿ ಆಚಾರ್ ಅವರ ಉಪಸ್ಥಿತಿಯಲ್ಲಿ ಗೆಳೆಯರ ಬಳಗದ ಮಹಿಳಾ ಸದಸ್ಯರಿಂದ ಉದ್ಘಾಟನೆಗೊಂಡ ಕಾರ್ಯಕ್ರಮ ಬಳ್ಳಾರಿಯ ಹಲವಾರು ಮುಖ್ಯ ಅತಿಥಿಗಳ ಆಗಮನದೊಂದಿಗೆ ಅದ್ದೂರಿಯಾಗಿ ನಡೆಯಿತು. ಅದಲ್ಲದೆ ಸ್ಥಳೀಯ ವಿದ್ವಾಂಸರನ್ನು ಗುರುತಿಸಿ ೨೧ ಜನರಿಗೆ ಸನ್ಮಾನಿಸಲಾಯಿತು. ಈ ಕಾರ್ಯಕ್ರಮವನ್ನು ಅಕಾದೆಮಿಯ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಟಿ.ಎಚ್.ಎಂ. ಬಸವರಾಜ ಅವರು ತಮ್ಮ ಮನೆಯಂಗಳದಲ್ಲಿ ನಡೆಸಿರುವುದು ಶ್ಲಾಘನೀಯ.

ದಿನಾಂಕ ೨೯.೧೨.೨೦೧೨

ಕರ್ನಾಟಕ ಇತಿಹಾಸ ಅಕಾದೆಮಿ ಜಿಲ್ಲಾ ಘಟಕ, ಗದಗ ಹಾಗೂ ಗದಗ ಸಹಕಾರಿ ಜವಳಿ ಗಿರಣಿಯ ಸ್ವತಂತ್ರ ಪದವಿಪೂರ್ವ ಮಹಾವಿದ್ಯಾಲಯ, ಹುಲಕೋಟಿ ಇವರ ಸಂಯುಕ್ತ ಆಶ್ರಯದಲ್ಲಿ ದಿನಾಂಕ ೨೯.೧೨.೨೦೧೨ರಂದು ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮ ನಡೆಯಿತು. ಪದಪಿ ಪೂರ್ವ ಕಾಲೇಜಿನ ಅಧ್ಯಕ್ಷರಾದ ಶ್ರೀ ಡಿ.ಬಿ. ಓದುಗೌಡರ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಪ್ರೊ. ಜೆ.ಎಂ. ರೇವಡಿಹಾಳ, ಪ್ರಾಚಾರ್ಯರು(ನಿ), ಕೆ.ಎಲ್.ಇ. ಕಾಲೇಜು, ಚಿಕ್ಕೋಡಿ ಇವರು ಭಾರತೀಯ ಇತಿಹಾಸ ಸಂಸ್ಕೃತಿಯ ಮಹತ್ವವನ್ನು ತಿಳಿಸಿದರು. ಶ್ರೀ ಅ.ದ. ಕಟ್ಟೀಮನಿ, ಇತಿಹಾಸ ಸಂಶೋಧಕರು ಇವರು ಐತಿಹಾಸಿಕ ಪರಂಪರೆ ಮಹತ್ವ ಕುರಿತು ವಿವರಿಸಿದರು. ಅಧ್ಯಕ್ಷತೆಯನ್ನು ಪ್ರಾ.ಪಿ. ವಾಯ್. ಹರ್ಲಾಪುರ ಇವರು ವಹಿಸಿದ್ದರು. ಕರ್ನಾಟಕ ಇತಿಹಾಸ ಅಕಾದೆಮಿ, ಕೇಂದ್ರ ಘಟಕದ ಪದಾಧಿಕಾರಿಯಾದ ಪ್ರೊ. ಕೆ.ಎಂ. ಗರಗ ಅವರ ನೇತೃತ್ವದಲ್ಲಿ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು ಹಾಗೆಯೇ ಅಕಾದೆಮಿಯ ಕೇಂದ್ರ ಘಟಕದ ಸದಸ್ಯರು ಹಾಗೂ ಗದಗ ಜಿಲ್ಲಾ ಘಟಕದ ಸದಸ್ಯರೂ ಭಾಗವಹಿಸಿದ್ದರು.

ದಿನಾಂಕ ೩೧.೦೧.೨೦೧೩

ಕರ್ನಾಟಕ ಇತಿಹಾಸ ಅಕಾದೆಮಿ (ರಿ) ಬೆಂಗಳೂರು ಮತ್ತು ಎಸ್.ಜೆ.ಎಂ. ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಚಂದ್ರವಳ್ಳಿ, ಚಿತ್ರದುರ್ಗ ಇವರುಗಳ ಸಂಯುಕ್ತ ಆಶ್ರಯದಲ್ಲಿ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮವು ದಿನಾಂಕ ೩೧.೦೧.೨೦೧೩ರಂದು ನೆರವೇರಿತು. ಡಾ. ಶಿವಮೂರ್ತಿ ಮುರುಘಾ ಶರಣರು, ಬೃಹನ್ಮಠ, ಚಿತ್ರದುರ್ಗ ಇವರು ಕಾರ್ಯಕ್ರಮವನ್ನು ಉದ್ಘಾಟಿಸಿದ್ದಲ್ಲದೆ, ಪ್ರೊ. ಬಿ.ಎಸ್. ಉಮಾಮಹೇಶ್ವರ ಅವರು ಬರೆದ ಭಾರತದ ಚರಿತ್ರೆ ಪುಸ್ತಕವನ್ನು ಬಿಡುಗಡೆ ಮಾಡಿದರು. ಪುಸ್ತಕವನ್ನು ಕುರಿತು ಡಾ: ಬಿ.ಪಿ. ಕುಮಾರ್, ಸಹಪ್ರಾಧ್ಯಾಪಕರು, ದಾವಣಗೆರೆ ಇವರು ಮಾತನಾಡಿದರು. ಐತಿಹಾಸಿಕ ಪರಂಪರೆ ಉಳಿಸುವಲ್ಲಿ ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಪಾತ್ರ ಎಂಬ ವಿಷಯಾವಲೋಕನವನ್ನು ಡಾ. ಸಿ.ಬಿ. ಪಾಟೀಲ್, ನಿವೃತ್ತ ಉಪಸರ್ವೇಕ್ಷಣಾ ಅಧೀಕ್ಷಕರು, ಬೆಂಗಳೂರು ಇವರು ಮಾಡಿಕೊಟ್ಟರು. ಐತಿಹಾಸಿಕ ಪರಂಪರೆ ಮಹತ್ವ, ಭಾರತೀಯ ಕಾನೂನುವ್ಯವಸ್ಥೆ, ಅಂತರರಾಷ್ಟ್ರೀಯ ಚಿಂತನೆಗಳು, ಐತಿಹಾಸಿಕ ಪರಂಪರೆ, ಸಂಸ್ಕೃತಿಯನ್ನು ಕಟ್ಟುವಲ್ಲಿ ವಿದ್ಯಾರ್ಥಿಗಳ ಮತ್ತು ಉಪಾಧ್ಯಾಯರ ಪಾತ್ರ ಕುರಿತು ವಿವರಿಸಿದರು. ಮುಖ್ಯ ಅತಿಥಿಗಳಾಗಿ ಡಾ. ಬಿ. ರಾಜಶೇಖರಪ್ಪ, ಉಪಾಧ್ಯಕ್ಷರು, ಕರ್ನಾಟಕ ಇತಿಹಾಸ ಅಕಾದೆಮಿ ಅವರು ಐತಿಹಾಸಿಕ ಪರಂಪರೆಯ ಮಹತ್ವವನ್ನು ವಿಷದವಾಗಿ ವಿವರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರೊ. ಎಂ.ಜಿ. ಶಶಿಧರ, ಕಾಲೇಜಿನ ಪ್ರಾಂಶುಪಾಲರು ವಹಿಸಿದ್ದರು. ಡಾ. ಪಿ. ಶಿವಲಿಂಗಪ್ಪ, ಪ್ರಾಚಾರ್ಯರು, ಎಸ್.ಜೆ.ಎಂ. ಪದವಿ ಪೂರ್ವ ಕಾಲೇಜು ಇವರ ಉಪಸ್ಥಿತಿಯಲ್ಲಿ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮವು ವಿಜೃಂಭಣೆಯಿಂದ ನಡೆಯಿತು.

ದಿನಾಂಕ ೦೨.೦೨.೨೦೧೩

ಕರ್ನಾಟಕ ಇತಿಹಾಸ ಅಕಾದೆಮಿ (ರಿ) ಬೆಂಗಳೂರು ಮತ್ತು ಹುಣಸಗಿ ಪೊಲೀಸ್ ಪಾಟೀಲ ಪ್ರತಿಷ್ಠಾನದ ಸಹಯೋಗದಲ್ಲಿ ದಿನಾಂಕ ೦೨.೦೨.೨೦೧೩ರಂದು ಯಾದಗಿರಿಯ ಲಿಂಗರಾಜ ಸ್ಮಾರಕ ಪ್ರೌಢಶಾಲೆಯಲ್ಲಿ "ಐತಿಹಾಸಿಕ ಪರಂಪರೆ ಉಳಿಸಿ" ಕಾರ್ಯಕ್ರಮವನ್ನು ನಡೆಸಲಾಯಿತು. ಕಾರ್ಯಕ್ರಮವನ್ನು ಕ್ಷೇತ್ರ ಸಮನ್ವಯಾಧಿಕಾರಿ ಮಾರುತಿ ಹುಜರತಿ ಅವರು ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಶ್ರೀ ಗುರು ಹಂಪಯ್ಯಸ್ವಾಮಿ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಲಿಂಗಪ್ಪ ಸಿರಗೋಳ ವಹಿಸಿದ್ದರು. ಅಕಾದೆಮಿಯ ಸದಸ್ಯರಾದ ಶ್ರೀ ಗುರುಪ್ರಸಾದ್ ವೈದ್ಯ ಅವರು ಐತಿಹಾಸಿಕ ಪರಂಪರೆ ಬಗ್ಗೆ ವಿಶೇಷ ಉಪನ್ಯಾಸ ಮಾಡಿದರು. ಬಸವನಗೌಡ ಪಾಟೀಲ ಅವರು ಸಂಗ್ರಹಿಸಿದ ನಾಣ್ಯ, ತಾಳೆಗರಿ ಹಾಗೂ ವಿಶ್ವನಾಥಯ್ಯ ಚತುರಾಚಾರ್ಯಮಠ ಇವರು ಸಂಗ್ರಹಿಸಿದ್ದ ಹಸ್ತಪ್ರತಿಗಳ ಪ್ರದರ್ಶನವನ್ನು ಏರ್ಪಡಿಸಿತ್ತು. ಜಿಲ್ಲಾ ಕನ್ನಡ

ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಶ್ರೀ ಸಿದ್ದಪ್ಪಹೊಟ್ಟಿ, ಪ್ರತಿಷ್ಠಾನದ ಸದಸ್ಯರಾದ ಶ್ರೀ ಭೀಮನಗೌಡ ಪಾಟೀಲ ಅವರು ಉಪಸ್ಥಿತರಿದ್ದರು.

ದಿನಾಂಕ ೨೫.೦೨.೨೦೧೩

ಕರ್ನಾಟಕ ಇತಿಹಾಸ ಅಕಾದೆಮಿ (ರಿ) ಬೆಂಗಳೂರು ಹಾಗೂ ಗದಗ ಜಿಲ್ಲಾ ಘಟಕವು ಸಂಯುಕ್ತವಾಗಿ ನಡೆಸಿದ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮವು ದಿನಾಂಕ ೨೫.೦೨.೨೦೧೩ರಂದು ಹುಲಕೋಟಿಯ ಸಹಕಾರಿ ಶಿಕ್ಷಣ ಸಂಸ್ಥೆಯ ಪದವಿ ಮಹಾವಿದ್ಯಾಲಯದ ಸಹಯೋಗದಲ್ಲಿ ನಡೆಯಿತು. ಕರ್ನಾಟಕ ಇತಿಹಾಸ ಅಕಾದೆಮಿಯ ಅಧ್ಯಕ್ಷರಾದ ಡಾ. ದೇವರಕೊಂಡಾರೆಡ್ಡಿ ಅವರು ಕಾರ್ಯಕ್ರಮ ಉದ್ಘಾಟಿಸಿದರು. ಇತಿಹಾಸ ಮತ್ತು ಸಂಸ್ಕೃತಿಯ ಅಧ್ಯಯನಕ್ಕೆ ಶಾಸನಗಳ ಮಹತ್ವ, ಆಧುನಿಕ ವಿದ್ಯಾಭ್ಯಾಸದಲ್ಲಿ ಇತಿಹಾಸ, ಶಾಸನ–ಸಂಶೋಧಕರ ಕೊರತೆಗಳ ಬಗ್ಗೆ ತಿಳಿಸಿದರು. ಅತಿಥಿಗಳಾಗಿ ಆಗಮಿಸಿದ್ದ ಶಾಸನತಜ್ಞೆ ಶ್ರೀಮತಿ ಹನುಮಾಕ್ಷಿ ಗೋಗಿ ಅವರು ಮಾತನಾಡಿ ಐತಿಹಾಸಿಕ ಪರಂಪರೆ ಪ್ರಕೃತಿ ಸಂಸ್ಕೃತಿಗಳ ಮಹತ್ವವನ್ನು ತಿಳಿಸಿದರು. ಸಹಕಾರಿ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯ ಅಧ್ಯಕ್ಷರಾದ ಆರ್.ಕೆ. ಹಬೀಬ ಅವರು ಐತಿಹಾಸಿಕ ಮಹತ್ವ ತಿಳಿಸಿದರು. ಪ್ರಾ ಉಮೇಶ್ ಬಾರಕೇರ ಅವರು, ಅಕಾದೆಮಿ ಜಿಲ್ಲಾ ಘಟಕದ ಅಧ್ಯಕ್ಷ ಡಾ. ವೈ.ಆರ್. ಭೀಲೇರಿ ಅವರೂ ಸಹ ಮಾತನಾಡಿದರು. ಕರ್ನಾಟಕ ಇತಿಹಾಸ ಅಕಾದೆಮಿಯ ಸದಸ್ಯರಾದ ಡಾ. ಎಮ್.ಎಸ್. ನರೇಗಲ್ಲ, ಅ.ದ. ಕಟ್ಟೀಮನಿ, ಪ್ರೊ. ಶಕುಂತಲಾ ಸಿಂಧೂರ, ದೇವೇಂದ್ರಮಾದವನವರ, ಡಾ. ಅಪ್ಪಣ್ಣಹಂಜೆ, ಪಿ.ಎಫ್. ಕುರುಬರ, ಶಶಿಕಾಂತ ಕೊರ್ಲಹಳ್ಳಿ, ಹೇಮಾ ಪಾಟೀಲ್ ಮುಂತಾದವರು ಉಪಸ್ಥಿತರಿದ್ದರು. ಪ್ರೊ: ಕೆ.ಎಂ. ಗರಗ ಅವರು ಕಾರ್ಯಕ್ರಮ ರೂಪಿಸುವುದರೊಂದಿಗೆ ಯಶಸ್ವಿಗೆ ಕಾರಣರಾದರು.

ಇಪ್ಪತ್ತಾರನೆಯ ವಾರ್ಷಿಕ ಸಮ್ಮೇಳನ

ಕರ್ನಾಟಕ ಇತಿಹಾಸ ಅಕಾದೆಮಿಯು ಶ್ರೀಮದ್ ಜಗದ್ಗುರು ಆದಿಶಂಕರಾಚಾರ್ಯ ಮಹಾಸಂಸ್ಥಾನಮ್ ದಕ್ಷಿಣಾಮ್ನಾಯ ಶ್ರೀಶಾರದಾಪೀಠಂ, ಶೃಂಗೇರಿ ಹಾಗೂ ರಾಜ್ಯ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯದ ಸಹಯೋಗದೊಂದಿಗೆ ೨೦೧೨ರ ಸೆಪ್ಟೆಂಬರ್ ೨೨ ರಿಂದ ಸೆಪ್ಟೆಂಬರ್ ೨೪ರವರೆಗೆ ಮೂರು ದಿನಗಳ ಕಾಲ ಹಮ್ಮಿಕೊಂಡಿದ್ದ ೨೬ನೇ ವಾರ್ಷಿಕ ಸಮ್ಮೇಳನಕ್ಕೆ ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠ, ಶೃಂಗೇರಿ ಆಶ್ರಯ ನೀಡಿತ್ತು.

ಉದ್ಘಾಟನಾ ಸಮಾರಂಭ:– ದಿನಾಂಕ ೨೨.೦೯.೨೦೧೨ರ ಬೆಳಗ್ಗೆ ೧೦.೦೦ ಗಂಟೆಗೆ ಶ್ರೀ ಡಿ.ಹೆಚ್. ಶಂಕರಮೂರ್ತಿ, ಮಾನ್ಯ ಸಭಾಪತಿಗಳು, ವಿಧಾನ ಪರಿಷತ್ತು, ಕರ್ನಾಟಕ ಸರ್ಕಾರ ಅವರು ಜ್ಯೋತಿ ಬೆಳಗಿಸಿ ಸಮ್ಮೇಳನವನ್ನು ಉದ್ಘಾಟಿಸಿ ಉದ್ಘಾಟನಾ ಭಾಷಣವನ್ನು ಮಾಡಿದರು. ಡಾ. ಪಿ.ವಿ. ಕೃಷ್ಣಮೂರ್ತಿ ಹಾಗೂ ಶ್ರೀ ಜಿ.ಕೆ. ದೇವರಾಜಸ್ವಾಮಿ, ಸಂಪಾದಿತ **ಇತಿಹಾಸ ದರ್ಶನ ಸಂಪುಟ** ೨೭ನೆಯ ವಾರ್ಷಿಕ ಸಂಚಿಕೆಯನ್ನು ಪದ್ಮಶ್ರೀ ಡಾ. ವಿ.ಆರ್. ಗೌರಿಶಂಕರ್, ಆಡಳಿತಾಧಿಕಾರಿಗಳು, ಶ್ರೀಮದ್ ಜಗದ್ಗುರು ಆದಿಶಂಕರಾಚಾರ್ಯ ಮಹಾಸಂಸ್ಥಾನಮ್, ದಕ್ಷಿಣಾಮ್ನಾಯ ಶ್ರೀಶಾರದಾಪೀಠಂ, ಶೃಂಗೇರಿ ಅವರು ಬಿಡುಗಡೆ ಮಾಡಿ ಮಾತನಾಡಿದರು. ಶ್ರೀ ಕೆ.ಆರ್. ರಾಮಕೃಷ್ಣ, ಆಯುಕ್ತರು, ಕರ್ನಾಟಕ ರಾಜ್ಯ ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಅವರು ಡಾ. ಬಾ.ರಾ. ಗೋಪಾಲ್ ಪ್ರಶಸ್ತಿಯನ್ನು ಶಾಸನ ತಜ್ಞರಾದ **ಶ್ರೀ ಸೀತಾರಾಮ ಜಾಗೀರದಾರ್** ಅವರಿಗೆ ಪ್ರಧಾನ ಮಾಡಿದರು. ಈ ಸಂದರ್ಭದಲ್ಲಿ ಡಾ. ಕರುಣಾ ವಿಜಯೇಂದ್ರ ಸನ್ಮಾನಿತರ ಕಿರು ಪರಿಚಯವನ್ನು ಸಭೆಗೆ ಮಾಡಿಕೊಟ್ಟರು. ಬೈಸಾನಿ ರುಕ್ಮಣಮ್ಮ ರತ್ನಂಶೆಟ್ಟಿ ನೆನಪಿನಲ್ಲಿ ನೀಡುವ **'ಇತಿಹಾಸ ಸಂಸ್ಕೃತಿ ಶ್ರೀ'** ಪ್ರಶಸ್ತಿಯನ್ನು ಮೊದಲ ಬಾರಿಗೆ ಖ್ಯಾತ ಇತಿಹಾಸ ತಜ್ಞರಾದ **ಪ್ರೊ ಲಕ್ಷ್ಮಣ್‌ತೆಲಗಾವಿ** ಅವರಿಗೆ ಬಿ.ಆರ್.ಆರ್. ಚಾರಿಟಬಲ್ ಟ್ರಸ್ಟ್ ಅಧ್ಯಕ್ಷರಾದ ಶ್ರೀ ಬಿ.ಆರ್. ಸುಬ್ಬಣ್ಣ, ಕಾರ್ಯದರ್ಶಿ ಅಶೋಕ್‌ಕುಮಾರ್ ಸಹೋದರರು ಪ್ರಧಾನ ಮಾಡಿದರು. ಸನ್ಮಾನಿತರ ಕಿರುಪರಿಚಯವನ್ನು ಶ್ರೀ ಎಂ.ಬಿ. ಪಾಟೀಲರವರು ಸಭೆಗೆ ಮಾಡಿಕೊಟ್ಟರು. ಇದೇ ಸಂದರ್ಭದಲ್ಲಿ ಶ್ರೀ ಅಶೋಕ್‌ಕುಮಾರ್ ಅವರು ಮಾತನಾಡಿ 'ಇತಿಹಾಸ ಸಂಸ್ಕೃತಿ ಶ್ರೀ' ಪ್ರಶಸ್ತಿಯನ್ನು ನೀಡುತ್ತಿರುವ ಬಗ್ಗೆ ವಿವರಿಸಿದರು. ಈ ಸಂದರ್ಭದಲ್ಲಿ **'ಅವಿಸ್ಮರಣೀಯ ಸಾಧಕ ಕೆ. ಅಭಿಶಂಕರ್'** (ಸಂಪಾದನೆ : ಶ್ರೀ ಎಂ. ಬಿ. ಪಾಟೀಲ) ಹಾಗೂ **'ಆರನೇಯ ವಿಕ್ರಮಾದಿತ್ಯನ ಶಾಸನಗಳ ಸಾಂಸ್ಕೃತಿಕ ಅಧ್ಯಯನ'** (ಲೆ. ಡಾ. ಡಿ.ಎಂ. ನಾಗರಾಜ್) ಗ್ರಂಥಗಳನ್ನು ಡಾ. ಎ.ಕೆ. ಶಾಸ್ತ್ರಿ ಅವರು ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ವೇದಿಕೆಯನ್ನು ಅಲಂಕರಿಸಿದ್ದ ನಿಕಟಪೂರ್ವ ಸಮ್ಮೇಳನಾಧ್ಯಕ್ಷರಾದ ಡಾ. ಎಚ್.ಎಸ್. ಗೋಪಾಲರಾವ್ ಅವರು ಮಾತನಾಡಿದರು.

ಸಮ್ಮೇಳನಾಧ್ಯಕ್ಷರಾದ ಡಾ. ಎಸ್.ವಿ. ವೆಂಕಟೇಶಯ್ಯ ಅವರ ಕಿರುಪರಿಚಯವನ್ನು ಡಾ. ಜಯಮ್ಮ ಕರಿಯಣ್ಣ ಅವರು ಸಭೆಗೆ ಮಾಡಿಕೊಟ್ಟ ನಂತರ, ಅಕಾದೆಮಿಯ ೨೬ನೆಯ ಸಮ್ಮೇಳನದ ಸರ್ವಾಧ್ಯಕ್ಷ ಪದವಿಯ ಗೌರವಕ್ಕೆ ಪಾತ್ರರಾಗಿದ್ದ ಪುರಾತತ್ವವಿದರು ಮತ್ತು ಸಂಶೋಧಕರೂ ಆದ ಡಾ. ಎಸ್. ವಿ. ವೆಂಕಟೇಶಯ್ಯ ಅವರು ಕರ್ನಾಟಕದ ಚಾರಿತ್ರಿಕ ಪುರಾತತ್ವ ನೆಲೆ, ಚಾರಿತ್ರಿಕ ವಾಸ್ತುಶಿಲ್ಪಗಳ ಉತ್ಖನನ ಮತ್ತು ಸಂರಕ್ಷಣೆಗಳ ಬಗ್ಗೆ ತಮ್ಮ ಕಾರ್ಯಾನುಭವದೊಂದಿಗೆ ವಿಷಯವನ್ನು ಕುರಿತು ತಿಳಿಸಿ ಮುಂದೆ ಆಗಬೇಕಾಗಿರುವ ಸಂಶೋಧನೆಗಳ ಬಗ್ಗೆ ಬೆಳಕು ಚೆಲ್ಲಿದರು. ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಅಕಾದೆಮಿಯ ಅಧ್ಯಕ್ಷರಾದ ಡಾ. ದೇವರಕೊಂಡಾರೆಡ್ಡಿ ಅವರು ವಹಿಸಿದ್ದರು. ಉದ್ಘಾಟನಾ ಸಮಾರಂಭದಲ್ಲಿ ಹಿಂದಿನ ಸಮ್ಮೇಳನದ ನಂತರ ಪಿಎಚ್.ಡಿ./ಡಿ.ಲಿಟ್ ಪದವಿ ಗೌರವಕ್ಕೆ ಪಾತ್ರರಾದವರಿಗೆ ಶ್ರೀ ಕೆ.ಆರ್. ರಾಮಕೃಷ್ಣ, ಆಯುಕ್ತರು, ಕರ್ನಾಟಕ ರಾಜ್ಯ ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅವರು ಸನ್ಮಾನಿಸಿದರು. ಕುಮಾರಿ ಶಾರದಾ, ಶ್ರೀವಿಜಯ ಅವರ ಪ್ರಾರ್ಥನೆಯೊಂದಿಗೆ ಈ ಸಮಾರಂಭವು ಆರಂಭಗೊಂಡು, ಅಕಾದೆಮಿಯ ಅಧ್ಯಕ್ಷರಾದ ಡಾ. ದೇವರಕೊಂಡಾರೆಡ್ಡಿ ಅವರು ಪ್ರಾಸ್ತಾವಿಕ ನುಡಿಯೊಂದಿಗೆ ಸ್ವಾಗತ ಕೋರಿದರೆ, ಶ್ರೀ ರಾಜೇಂದ್ರಪ್ಪ, ಪ್ರಧಾನ ಕಾರ್ಯದರ್ಶಿ, ಕರ್ನಾಟಕ ಇತಿಹಾಸ ಅಕಾದೆಮಿ ಇವರು ವಂದನೆ ಸಲ್ಲಿಸಿದ್ದು, ಡಾ. ಉಷಾರಾಣಿ ಈ ಕಾರ್ಯಕ್ರಮದ ನಿರ್ವಹಣೆ ಮಾಡಿದರು.

ಪಿಎಚ್‌ಡಿ ಮತ್ತು ಡಿ.ಲಿಟ್ ಪದವಿ ಪಡೆದ ಸನ್ಮಾನಿತರು

ಕ್ರ ಸಂ.	ಪಿಎಚ್.ಡಿ./ಡಿ.ಲಿಟ್ ಪದವಿ ಪಡೆದವರ ಹೆಸರು	ಮಾರ್ಗದರ್ಶಕರ ಹೆಸರು	ವಿಷಯ	ವಿಶ್ವವಿದ್ಯಾಲಯ
೧	ಡಾ.ಹೆಚ್.ಎಸ್.ಕಾಳಸ್ವಾಮಿ	ಡಾ. ಜಿ. ಕರಿಯಪ್ಪ, ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ	ಚಿಕ್ಕಮಗಳೂರು ಜಿಲ್ಲೆಯ ಶಾಸನಗಳು ಒಂದು ಸಾಂಸ್ಕೃತಿಕ ಅಧ್ಯಯನ	ಮೈಸೂರುವಿ.ವಿ. ೨೦೧೧
೨	ಡಾ. ಕನಕತಾರ	ಡಾ. ವೈ.ಹೆಚ್. ನಾಯಕವಾಡಿ ಇತಿಹಾಸ ವಿಭಾಗ	ಮೈಸೂರು ಸಂಸ್ಥಾನದಲ್ಲಿ ಸಂಗೀತದ ಬೆಳವಣಿಗೆಗಳು	ಮೈಸೂರು ವಿ.ವಿ. ೨೦೧೧
೩	ಡಾ. ಅನ್ನಪೂರ್ಣ ಎಸ್. ಗೋಸ್ವಾಳ	ಡಾ. ಎಫ್.ಟಿ. ಹಳ್ಳಿಕೇರಿ ಹಸ್ತಪ್ರತಿ ವಿಭಾಗ	ಹಾಲು ಮತ ಅಧ್ಯಯನದ ಆಕರಗಳು ಸ್ವರೂಪ ಮತ್ತು ವಿಶ್ಲೇಷಣೆ	ಕನ್ನಡ ವಿ.ವಿ., ಹಂಪಿ ೨೦೧೧
೪	ಡಾ. ಕೆ.ಸಿ. ಮಹೇಂದ್ರ ಕುಮಾರ್	ಡಾ.ಹನುಮನಾಯಕ್ ಇತಿಹಾಸ ವಿಭಾಗ	ಹಾಸನ ಜಿಲ್ಲೆಯ ಅರಸು ಮನೆತನಗಳು (ಕ್ರಿ.ಶ. ೧೫೦೦–೧೮೦೦)	ಮಂಗಳೂರು ವಿ.ವಿ. ೨೦೧೨
೫	ಡಾ. ಪಿ. ಜಯರಾಮ್	ಡಾ. ಎಂ.ಜಿ. ಮಂಜುನಾಥ್ ಕನ್ನಡ ವಿಭಾಗ	ಕನ್ನಡ ಶಾಸನಗಳ ಸಾಹಿತ್ಯಕ ಅಧ್ಯಯನ ನಗರಗಳ ದ್ವಂದ್ವಾತ್ಮಕತೆ	ಮೈಸೂರು ಹಂಪಿ ೨೦೧೧
೬	ಡಾ. ಅರುಣಕುಮಾರ್ ಎಸ್.ಆರ್.	ಡಾ. ಪಾದೇಕಲ್ಲು ವಿಷ್ಣುಭಟ್ಟ ಭಾಷಾ ನಿಕಾಯ	ಸಿರಿ ಅಲಡೆಗಳು ಹಾಗೂ ಆಚರಣೆಗಳು ಒಂದು ಸಾಂಸ್ಕೃತಿಕ ಅಧ್ಯಯನ	ಕನ್ನಡ ವಿ.ವಿ., ಹಂಪಿ ೨೦೧೧
೭	ಡಾ. ಎಚ್. ಕೃಷ್ಣೇಗೌಡ	ಡಾ. ಮುನಿರಾಜಪ್ಪ ಇತಿಹಾಸ ವಿಭಾಗ	ಭಾರತ ಸ್ವಾತಂತ್ರ್ಯ ಚಳುವಳಿಯಲ್ಲಿ ಬೆಂಗಳೂರು ಜಿಲ್ಲೆಯ ಪಾತ್ರ	ಬೆಂಗಳೂರು ವಿ.ವಿ. ೨೦೧೨

೨೬ನೇ ಸಮ್ಮೇಳನದಲ್ಲಿ ನಡೆದ ಗೋಷ್ಠಿಗಳು: ಮೂರು ದಿನ ನಡೆದ ಈ ಸಮ್ಮೇಳನದಲ್ಲಿ ೨೨.೦೯.೨೦೧೨ರ ಮಧ್ಯಾಹ್ನ ೨ ಗಂಟೆಯಿಂದ ೨೪.೦೯.೨೦೧೨ರ ಸಂಜೆ ೪ ಗಂಟೆಯವರೆಗೆ ಶೃಂಗೇರಿಯಲ್ಲಿ ಎರಡೂ ಸಭಾಂಗಣವಲ್ಲಿ ನಡೆದ ೧೮ ಸಮಾನಾಂತರ ಗೋಷ್ಠಿಗಳಲ್ಲಿ ಒಟ್ಟು ೧೫೦ಕ್ಕೂ ಹೆಚ್ಚು ಸಂಪ್ರಬಂಧಗಳು ಮಂಡನೆಯಾದವು.

ಸಮಾರೋಪ ಸಮಾರಂಭ:– ದಿನಾಂಕ ೨೪.೦೯.೨೦೧೨ರಂದು ಸಂಜೆ ೪.೪೫ ಗಂಟೆಗೆ ಸಮಾರೋಪ ಸಮಾರಂಭವು ಅಕಾದೆಮಿಯ ಸದಸ್ಯರಾದ ಡಾ. ಲಲಿತಾಂಬ ಅವರ ಪ್ರಾರ್ಥನೆಯೊಂದಿಗೆ ಆರಂಭವಾಯಿತು. ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ರಾಜೇಂದ್ರಪ್ಪ ಆರಂಭದಲ್ಲಿ ಸ್ವಾಗತ ಕೋರಿದರು. ಪ್ರತಿನಿಧಿಗಳು ಮಾತನಾಡಿ ತಮ್ಮ ಸದಭಿಪ್ರಾಯ ವ್ಯಕ್ತಪಡಿಸಿ ಆಶ್ರಯದಾತರಿಗೆ ಕೃತಜ್ಞತೆ ಸಲ್ಲಿಸಿದರು. ಈ ಸಮ್ಮೇಳನಕ್ಕೆ ಶೃಂಗೇರಿ ಜಗದ್ಗುರುಗಳ ಅನುಪಸ್ಥಿತಿಯಲ್ಲಿಯೂ ಉತ್ತಮ ಊಟೋಪಚಾರದ ಆತಿಥ್ಯ ಎಲ್ಲಾ ಸಹಕಾರ ನೀಡಿದ ಪದ್ಮಶ್ರೀ ಡಾ. ವಿ. ಆರ್. ಗೌರಿಶಂಕರ್, ಆಡಳಿತಾಧಿಕಾರಿಗಳು, ಶೃಂಗೇರಿ ಪೀಠಂ ಅವರಿಗೆ, ಶೃಂಗೇರಿಯ ಜಗದ್ಗುರು ಚಂದ್ರಶೇಖರ ಭಾರತಿ ಮೆಮೋರಿಯಲ್ ಕಾಲೇಜಿನ ಪ್ರಾಂಶುಪಾಲರಾದ ಡಾ. ವೀರಪ್ಪಗೌಡ ಅವರಿಗೂ ಸನ್ಮಾನಿಸಿ, ಅಕಾದೆಮಿಯ ಅಧ್ಯಕ್ಷರಾದ ಡಾ. ದೇವರ ಕೊಂಡಾರೆಡ್ಡಿ ಅವರು ಮಾತನಾಡಿದರು.

ಸಮ್ಮೇಳನಾಧ್ಯಕ್ಷ ಡಾ. ಎಸ್.ವಿ. ವೆಂಕಟೇಶಯ್ಯ ಅವರು ಸಮ್ಮೇಳನ ಯಶಸ್ವಿಯಾಗಿರುವುದಕ್ಕೆ ತಮ್ಮ ಹರ್ಷ ವ್ಯಕ್ತಪಡಿಸಿ, ಮುಂದೆ ಇನ್ನೂ ಹೆಚ್ಚಿನ ಕಾರ್ಯ ಜವಾಬ್ದಾರಿಯ ಬಗ್ಗೆ ತಿಳಿಸಿದರು. ಅಕಾದೆಮಿಯ ಸದಸ್ಯರಾದ ಡಾ. ಎ.ಕೆ. ಶಾಸ್ತ್ರಿ ಅವರು ಸಮಾರೋಪ ಭಾಷಣ ಮಾಡಿದರು. ಅಧ್ಯಕ್ಷರಾದ ಡಾ. ದೇವರ ಕೊಂಡಾರೆಡ್ಡಿ ಅವರು ಸಭೆಯನ್ನು ಉದ್ದೇಶಿಸಿ ಭಾಷಣ ಮಾಡಿದರು. ಡಾ. ಎಚ್.ಎಲ್. ಶ್ರೀನಿವಾಸಮೂರ್ತಿ, ಕಾರ್ಯಕ್ರಮದ ನಿರೂಪಕರಾಗಿದ್ದರು. ಕಾರ್ಯದರ್ಶಿ ಡಾ. ಟಿ.ಪಿ. ಕೃಷ್ಣಮೂರ್ತಿ ಮಾತನಾಡಿ ಈ ಸಮ್ಮೇಳನವು ಯಶಸ್ವಿಯಾಗುವಲ್ಲಿ ಸಹಕರಿಸಿರುವ ಸರ್ವರಿಗೂ ವಂದನಾರ್ಪಣೆ ಮಾಡುವುದರೊಂದಿಗೆ ೨೬ನೇಯ ವಾರ್ಷಿಕ ಸಮ್ಮೇಳನವು ಮುಕ್ತಾಯಗೊಂಡಿತು.

ಸರ್ವಸದಸ್ಯರ ಸಭೆಯ ವರದಿ – ೨೦೧೨

ದಿನಾಂಕ ೨೯–೦೯–೨೦೧೨ರ ಶನಿವಾರದಂದು ಸಂಜೆ ೬–೩೦ಕ್ಕೆ, ಅಕಾದೆಮಿಯ ೨೬ನೆಯ ವಾರ್ಷಿಕ ಸಮ್ಮೇಳನದ ಸಭಾಸ್ಥಾನವಾದ ಶೃಂಗೇರಿಯ ಶ್ರೀ ಶಾರದಾಪೀಠದ ಸಭಾಭವನದಲ್ಲಿ ಆ ಮೊದಲೇ ಸರ್ವಸದಸ್ಯರಿಗೂ ಪತ್ರಮುಖೇನ ತಿಳಿಸಿದ್ದ ಪ್ರಕಾರ ಅಕಾದೆಮಿಯ ಅಧ್ಯಕ್ಷರಾದ ಡಾ॥ ದೇವರಕೊಂಡಾರೆಡ್ಡಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸರ್ವಸದಸ್ಯರ ಸಭೆಯ ನಡವಳಿಕೆಗಳು ಈ ಕೆಳಕಂಡಂತಿವೆ.

ಸಭೆಯಲ್ಲಿ ೧೧೯ ಸದಸ್ಯರು ಹಾಜರಿದ್ದರು. ಅವರ ಸಹಿ ಇರುವ ಪಟ್ಟಿಯನ್ನು ಈ ವರದಿಯ ಜೊತೆಗೆ ಲಗತ್ತಿಸಲಾಗಿದೆ. ಸರ್ವಸದಸ್ಯರ ಸಭೆಯ ಕಾರ್ಯಸೂಚಿ ತಿಳುವಳಿಕೆ ಪತ್ರವನ್ನು ಅಂಚೆಯ ಮೂಲಕ ಎಲ್ಲ ಸದಸ್ಯರಿಗೂ ಮೊದಲೇ ಕಳುಹಿಸಲಾಗಿತ್ತು. ಅದನ್ನು ಪ್ರಧಾನ ಕಾರ್ಯದರ್ಶಿ ಶ್ರೀ ಎಸ್. ರಾಜೇಂದ್ರಪ್ಪ ವಾಚಿಸಿದರು. ಅಧ್ಯಕ್ಷರಾದ ಡಾ. ದೇವರಕೊಂಡಾರೆಡ್ಡಿ ಅವರು ಸಭೆಯನ್ನು ಆರಂಭಿಸಲು ಹಾಜರಿದ್ದ ಸದಸ್ಯರ ಅನುಮತಿ ಕೋರಿದರು. ಸರ್ವಸದಸ್ಯರ ಸಭೆಯ ಆರಂಭಕ್ಕೆ ಅನುಮೋದನೆ ನೀಡಬಹುದೆಂಬ ಡಾ. ಎಸ್.ಎಲ್. ಶ್ರೀನಿವಾಸಮೂರ್ತಿ ಅವರ ಸೂಚನೆಯನ್ನು ಡಾ. ಎಸ್.ಕೆ. ಜೋಷಿ ಅನುಮೋದಿಸಿದರು. ಸರ್ವಸದಸ್ಯರೂ ಸಭೆಯ ಆರಂಭಕ್ಕೆ ಒಮ್ಮತದಿಂದ ಅನುಮೋದನೆ ನೀಡಿದರು.

ಸರ್ವಸದಸ್ಯರ ಸಭೆಯು ಡಾ. ಲಲಿತಾಂಬ ಅವರ ಪ್ರಾರ್ಥನೆಯೊಂದಿಗೆ ಆರಂಭವಾಯಿತು. ಅನಂತರ ಸಭೆಯಲ್ಲಿ ಹಾಜರಿದ್ದ ಎಲ್ಲ ಸದಸ್ಯರನ್ನೂ ಡಾ. ಬಿ. ರಾಜಶೇಖರ ಸ್ವಾಗತಿಸಿದರು. ಕಳೆದ ಸರ್ವಸದಸ್ಯರ ಸಭೆಯ ನಂತರ ಈವರೆಗೆ ನಿಧನರಾಗಿರುವ ಅಕಾದೆಮಿಯ ಸದಸ್ಯರ ಹಾಗೂ ಗಣ್ಯರ ನಿಧನಕ್ಕಾಗಿ ಸಭೆಯು ಒಂದು ನಿಮಿಷ ಮೌನಾಚರಣೆಯ ಮೂಲಕ ಶ್ರದ್ಧಾಂಜಲಿ ಅರ್ಪಿಸಿತು. ಶ್ರದ್ಧಾಂಜಲಿಗೆ ಪಾತ್ರರಾದವರ ಹೆಸರುಗಳು ಈ ಕೆಳಕಂಡಂತಿವೆ.

ಶ್ರದ್ಧಾಂಜಲಿ ಅರ್ಪಣೆ

ಕಳೆದ ವರ್ಷದಿಂದ ಇಂದಿನವರೆಗೆ ದಿವಂಗತರಾದ ನಾಡಿನ ಗಣ್ಯರಾದ ಸರ್ವಶ್ರೀ ೧) ಎಸ್. ಬಂಗಾರಪ್ಪ–ಮಾಜಿ ಮುಖ್ಯಮಂತ್ರಿಗಳು, ೨) ಜಿ.ನಾರಾಯಣ, ೩) ಪ್ರೊ. ಎಚ್.ಆರ್. ದಾಸೇಗೌಡ, ೪) ಎನ್. ನರಸಿಂಹಯ್ಯ–ಕಾದಂಬರಿಕಾರರು, ೫) ಡಾ. ಎಲ್. ಬಸವರಾಜ್–ಸಾಹಿತಿಗಳು, ೬) ಎಚ್.ವಿ. ಸಾವಿತ್ರಮ್ಮ, ೭) ಶಂ.ಗು. ಬಿರಾದಾರ, ೮) ಪಿ.ಎಸ್. ಸುಬ್ಬರಾವ್–ಪತ್ರಕರ್ತರು, ೯) ಸುದರ್ಶನ ದೇಸಾಯಿ–ಕಾದಂಬರಿಕಾರರು ಮೊದಲಾದವರಿಗೆ ಸರ್ವಸದಸ್ಯರ ಸಭೆಯು ಒಂದು ನಿಮಿಷ ಮೌನ ಆಚರಿಸುವ ಮೂಲಕ ಶ್ರದ್ಧಾಂಜಲಿ ಅರ್ಪಿಸಲಾಯಿತು.

೨೦೧೧ನೆಯ ಸಾಲಿನ ವರದಿ

೨೦೧೧ನೆಯ ಸಾಲಿನ ವಾರ್ಷಿಕ ವರದಿಯನ್ನು ಪ್ರಧಾನ ಕಾರ್ಯದರ್ಶಿ ಎಸ್. ರಾಜೇಂದ್ರಪ್ಪ ಮಂಡಿಸಿದರು. ವಾರ್ಷಿಕ ವರದಿಯ ಮುದ್ರಿತ ಪ್ರತಿಗಳನ್ನು ಸಭೆಯ ಆರಂಭದಲ್ಲೇ ಹಾಜರಿದ್ದ ಎಲ್ಲ ಸದಸ್ಯರಿಗೂ ವಿತರಿಸಲಾಗಿತ್ತು. ಅದರ ವಾಚನದ ಅವಶ್ಯಕತೆ ಇಲ್ಲವೆಂದು ಹಾಜರಿದ್ದ ಸದಸ್ಯರೆಲ್ಲ ಘೋಷಿಸಿದರು.

೨೦೧೧ನೆಯ ಸಾಲಿನ ವರದಿಯನ್ನು ಸ್ವೀಕರಿಸಬಹುದೆಂಬ ಬೆಂಗಳೂರಿನ ಶ್ರೀ ಎಂ.ಬಿ. ಪಾಟೀಲ ಅವರ ಸೂಚನೆಯನ್ನು ಡಾ. ಮುರುಗೇಶಿ ಅವರು ಅನುಮೋದಿಸಿದರು.

೨೦೧೧ನೆಯ ಸಾಲಿನ ಪರಿಶೋಧಿತ ಲೆಕ್ಕ ಪತ್ರ ಮಂಡನೆ

೨೦೧೧ನೆಯ ಸಾಲಿನ ವರದಿಯ ಜೊತೆಗೆ ೨೦೧೧ನೆಯ ಸಾಲಿನ ಪರಿಶೋಧಿತ ಲೆಕ್ಕಪತ್ರಗಳ ಮುದ್ರಿತ ಪ್ರತಿಗಳನ್ನು ಸದಸ್ಯರಿಗೆ ನೀಡಲಾಗಿತ್ತು. ಅದನ್ನು ಕೋಶಾಧಿಕಾರಿ ಡಾ. ತುಳಸಿರಾಮ ನಾಯಕ್ ಮಂಡಿಸಿದರು. ೨೦೧೧ನೆಯ ಸಾಲಿನ

ಪರಿಶೋಧಿತ ಲೆಕ್ಕಪತ್ರಗಳನ್ನು ಒಪ್ಪಬಹುದೆಂಬ ಸೂಚನೆಯನ್ನು ಸುಮತೀಂದ್ರ ನಾಡಿಗ್ ನೀಡಿದರು. ಆ ಸೂಚನೆಯನ್ನು ಡಾ. ಸಾಮಕ್ ಅವರು ಅನುಮೋದಿಸಿದರು.

೨೦೧೨-೨೦೧೩ನೆಯ ಸಾಲಿನ ಮುಂಗಡ ಲೆಕ್ಕಪತ್ರಗಳು

೨೦೧೧ನೆಯ ಸಾಲಿನ ಪರಿಶೋಧಿತ ಲೆಕ್ಕಪತ್ರಗಳ ಜೊತೆಗೆ ೨೦೧೨-೧೩ನೆಯ ಸಾಲಿನ ಮುಂಗಡ ಲೆಕ್ಕಪತ್ರಗಳ ಪ್ರತಿಗಳನ್ನೂ ಸದಸ್ಯರಿಗೆ ನೀಡಲಾಗಿತ್ತು. ಅದನ್ನು ಕೋಶಾಧಿಕಾರಿಗಳಾದ ಡಾ. ತುಳಸಿರಾಮ ನಾಯಕ್ ಮಂಡಿಸಿದರು.

೨೦೧೨-೧೩ನೆಯ ಸಾಲಿನ ಮುಂಗಡ ಆಯವ್ಯಯವನ್ನು ಒಪ್ಪಬಹುದೆಂದು ಡಾ. ಚಂದ್ರಶೇಖರ್ ಸೂಚಿಸಿದರು. ಆ ಸೂಚನೆಯನ್ನು ಶ್ರೀ ಎಂ.ಎನ್. ಪ್ರಭಾಕರ್ ಅನುಮೋದಿಸಿದರು. ಸರ್ವಸದಸ್ಯರ ಅನುಮೋದನೆಯೂ ದೊರೆಯಿತು.

೨೦೧೨ನೆಯ ಸಾಲಿಗೆ ಆಡಿಟರ್ ನೇಮಕ

ಈವರೆಗೆ ಅಕಾದೆಮಿಯ ಲೆಕ್ಕಪತ್ರಗಳನ್ನು ಪರಿಶೋಧಿಸಿ ಕೊಟ್ಟಿರುವ ಶ್ರೀ ಕೆ.ಪಿ. ಆಚಾರ್ಯ ಅಂಡ್ ಕಂಪನಿ, ಬೆಂಗಳೂರು ಅವರನ್ನೇ ೨೦೧೨ನೆಯ ಸಾಲಿನ ಲೆಕ್ಕಪತ್ರಗಳ ಪರಿಶೋಧನೆಗೂ ರೂ. ೧೦,೦೦೦/- ಸಂಭಾವನೆಯನ್ನು ನೀಡಿ ನೇಮಿಸಿಕೊಳ್ಳಬಹುದೆಂಬುದನ್ನು ಶ್ರೀ ಎಂ.ಜಿ.ಪಾಟೀಲ್ ಸೂಚಿಸಿದರು. ಆ ಸೂಚನೆಯನ್ನು ಶ್ರೀ ಸು.ಕಂ. ಗೋವರ್ಧನ್ ಅನುಮೋದಿಸಿದರು. ಸರ್ವಸದಸ್ಯರೂ ಇದನ್ನು ಅನುಮೋದಿಸಿದರು.

೨೦೧೨-೧೩ ಹಾಗೂ ೨೦೧೩-೧೪ನೆಯ ಸಾಲಿಗೆ ಕಾರ್ಯಕಾರೀ ಸಮಿತಿಯ ಆಯ್ಕೆ

೨೦೧೦ರಲ್ಲಿ ಜರುಗಿದ ಅಕಾದೆಮಿಯ ೨೪ನೆಯ ವಾರ್ಷಿಕ ಸಮ್ಮೇಳನದ ಸಂದರ್ಭದಲ್ಲಿ ನಡೆದಿದ್ದ ಸರ್ವಸದಸ್ಯರ ಸಭೆಯಲ್ಲಿ ಮುಂದಿನ ಎರಡು ವರ್ಷದ ಅವಧಿಗೆ ಆಯ್ಕೆಯಾಗಿದ್ದ ಕಾರ್ಯಕಾರೀ ಸಮಿತಿಯ ಅಧಿಕಾರಾವಧಿಯು ಪೂರ್ಣಗೊಳ್ಳಲಿರುವ ಕಾರಣದಿಂದ ಮುಂದಿನ ಎರಡು ವರ್ಷಗಳ ಅಂದರೆ ೨೦೧೨-೧೩ ಮತ್ತು ೨೦೧೩-೧೪ನೆಯ ಸಾಲಿಗೆ ಹೊಸದಾಗಿ ಕಾರ್ಯಕಾರಿ ಸಮಿತಿಯ ಆಯ್ಕೆ ಆಗಬೇಕಾಗಿದ್ದು, ಆ ಬಗ್ಗೆ ತಿಳುವಳಿಕೆಯನ್ನು ಸರ್ವಸದಸ್ಯರ ಸಭೆಯ ಸುತ್ತೋಲೆಯಲ್ಲಿ ತಿಳಿಸಲಾಗಿತ್ತು. ಇದನ್ನು ಗಮನಿಸಿದ್ದ ಸದಸ್ಯರಲ್ಲಿ ಒಬ್ಬರಾದ ಬೆಂಗಳೂರಿನ ಶ್ರೀ ಸು.ಕಂ. ಗೋವರ್ಧನ್ ಅವರು ತಾವು ಸಿದ್ಧಪಡಿಸಿದ್ದ ೧೯ ಜನರ ಹೆಸರಿನ ಪಟ್ಟಿಯೊಂದನ್ನು ಪ್ರಸ್ತುತ ಪಡಿಸಿದರು. ಆ ಪಟ್ಟಿಯಲ್ಲಿದ್ದ ಸದಸ್ಯರ ಹೆಸರುಗಳು ಈ ಕೆಳಕಂಡಂತಿವೆ.

ಶ್ರೀಯುತರು

೧. ಡಾ. ದೇವರಕೊಂಡಾರೆಡ್ಡಿ, ಬೆಂಗಳೂರು
೨. ಡಾ. ಎಂ.ಜಿ. ನಾಗರಾಜ್, ಬೆಂಗಳೂರು
೩. ಡಾ. ಬಿ. ರಾಜಶೇಖರಪ್ಪ, ಚಿತ್ರದುರ್ಗ
೪. ಡಾ.ಎಚ್.ಎಸ್. ಗೋಪಾಲರಾವ್, ಅರಸಿನಕುಂಟೆ
೫. ಶ್ರೀ ಎಂ.ಬಿ. ಪಾಟೀಲ್, ಬೆಂಗಳೂರು
೬. ಡಾ. ಎ.ಕೆ. ಶಾಸ್ತ್ರಿ, ಶಿರಸಿ
೭. ಡಾ. ಪಿ.ವಿ. ಕೃಷ್ಣಮೂರ್ತಿ, ಬೆಂಗಳೂರು
೮. ಶ್ರೀ ಎಸ್. ರಾಜೇಂದ್ರಪ್ಪ, ಬೆಂಗಳೂರು
೯. ಶ್ರೀ ಶಾಶ್ವತಸ್ವಾಮಿ ಮುಕ್ಕುಂದಿಮಠ, ಸಿಂಧನೂರು
೧೦. ಶ್ರೀ ದೇವರಾಜಸ್ವಾಮಿ, ಬೆಂಗಳೂರು
೧೧. ಡಾ. ಜಯಮ್ಮ ಹೆಚ್. ಕರಿಯಣ್ಣ, ಬೆಂಗಳೂರು
೧೨. ಶ್ರೀ ಟಿ.ಎಚ್.ಎಂ. ಬಸವರಾಜ್, ಬಳ್ಳಾರಿ
೧೩. ಶ್ರೀ ಮಂಜುನಾಥ ರಾಮಕೃಷ್ಣ ಹೆಗಡೆ, ಹಾವೇರಿ
೧೪. ಡಾ. ಎಚ್.ಎಸ್. ಉಷಾರಾಣಿ, ಮೈಸೂರು.
೧೫. ಪ್ರೊ: ಜಿ.ಕೆ. ಮಲ್ಲಿಕಾರ್ಜುನಪ್ಪ, ದಾವಣಗೆರೆ
೧೬. ಡಾ. ಅಮರೇಶ್ ಯತಗಲ್, ಬಿಜಾಪುರ
೧೭. ಡಾ. ಬಾಲಕೃಷ್ಣ ಹೆಗ್ಡೆ, ಶಿವಮೊಗ್ಗ
೧೮. ಡಾ. ಮುರುಗೇಶಿ, ಉಡುಪಿ
೧೯. ಶ್ರೀ ಎಂ. ಗರಗ, ಗದಗ

ಹೆಸರುಗಳನ್ನು ಓದಿದಾಗ ಸಭೆಯಲ್ಲಿ ಹಾಜರಿದ್ದವರು ಎದ್ದು ನಿಂತು ಪರಿಚಯಿಸಿಕೊಂಡರು. ಆಗ ಸರ್ವಸದಸ್ಯರು ೧೯ ಸದಸ್ಯರ ಹೆಸರನ್ನು ಅನುಮೋದಿಸಿದರು. ಅಲ್ಲದೇ ಉಳಿದೊಂದು ಆಯ್ಕೆಸದಸ್ಯ ಹಾಗೂ ಮೂವರು ಆಹ್ವಾನಿತ ಸದಸ್ಯರನ್ನು ನಾಮಕರಣ ಮಾಡಲು ಕಾರ್ಯಸಮಿತಿಗೆ ಸರ್ವಸದಸ್ಯರ ಸಭೆ ಅನುಮತಿ ನೀಡಿತು. ಈ ಪಟ್ಟಿಗೆ ಒಪ್ಪಿಗೆಯನ್ನು ಡಾ. ಎಸ್.ಎಲ್. ಶ್ರೀನಿವಾಸಮೂರ್ತಿ ಸೂಚಿಸಿದಾಗ, ಶ್ರೀ ಮುರುಳಿ ಅದನ್ನು ಅನುಮೋದಿಸಿದರು. ಅಲ್ಲದೆ ಡಾ. ಸೂರ್ಯನಾಥ

ಕಾಮತ್ ಅವರನ್ನು ಅಕಾದೆಮಿಯ ಗೌರವಾಧ್ಯಕ್ಷರನ್ನಾಗಿ ಸರ್ವಸದಸ್ಯರ ಸಭೆಯಲ್ಲಿ ಮುಂದುವರೆಯುವಂತೆ ಸರ್ವಸದಸ್ಯರ ಕೋರಿಕೆಯಂತೆ ನಿರ್ಣಯ ಕೈಗೊಳ್ಳಲಾಯಿತು. ಇದನ್ನು ಶ್ರೀ ಎಂ.ಜಿ. ಪಾಟೀಲ್ ಸೂಚಿಸಿದಾಗ, ಡಾ. ಚಂದ್ರಶೇಖರ್ ಅನುಮೋದಿಸಿದರು.

ಅಕಾದೆಮಿಯ ೨೭ನೇ ವಾರ್ಷಿಕ ಸಮ್ಮೇಳನ

ಅಕಾದೆಮಿಯ ೨೭ನೆಯ ವಾರ್ಷಿಕ ಸಮ್ಮೇಳನವನ್ನು ನಡೆಸಿಕೊಡುವ ಬಗ್ಗೆ ಯಾವುದೇ ಮಠ, ಸಂಘ-ಸಂಸ್ಥೆ, ಇತರರಿಂದ ಈವರೆಗೆ ಆಹ್ವಾನ ಬಂದಿಲ್ಲ. ಮನವಿಯು ಬಂದಲ್ಲಿ ಯೋಚಿಸಿ ಸ್ವೀಕರಿಸುವ ಹಾಗೂ ಮುಂದಿನ ಸರಿಯಾದ ಕ್ರಮ ಕೈಗೊಳ್ಳಲು ಸರ್ವಸದಸ್ಯರ ಕಾರ್ಯಕಾರಿ ಸಮಿತಿಗೆ ಅಧಿಕಾರ ನೀಡಿದರು.

ಅಧ್ಯಕ್ಷರ ಭಾಷಣ

ಸರ್ವಸದಸ್ಯರ ಸಭೆಯ ಅಧ್ಯಕ್ಷತೆ ವಹಿಸಿದ್ದ ಡಾ. ದೇವರಕೊಂಡಾರೆಡ್ಡಿ ಅವರು ಅಕಾದೆಮಿಯ ೨೬ನೆಯ ವಾರ್ಷಿಕ ಸಮ್ಮೇಳನವನ್ನು ನಡೆಸಲು ಅವಕಾಶ ಕಲ್ಪಿಸಿ, ಆಶ್ರಯ ನೀಡಿದ ಶ್ರೀ ಶೃಂಗೇರಿ ಜಗದ್ಗುರುಗಳಿಗೆ ಶ್ರೀಮಠದ ಎಲ್ಲಾ ಆಡಳಿತ ವರ್ಗಕ್ಕೆ, ಪದ್ಮಶ್ರೀ ಡಾ. ಗೌರಿಶಂಕರ್ ಅವರಿಗೆ ಹಾಗೂ ಸಹಕರಿಸಿದ ಎಲ್ಲಾ ಗಣ್ಯರಿಗೆ ಧನ್ಯವಾದಗಳನ್ನು ತಿಳಿಸಿದರು. ಸ್ಥಳೀಯ ಕಾಲೇಜಿನ ಪ್ರಾಂಶುಪಾಲರಾದ ಡಾ. ವೀರಪ್ಪಗೌಡ ಅವರಿಗೆ ಹಾಗೂ ಇತಿಹಾಸ ಉಪನ್ಯಾಸಕರಾದ ಶ್ರೀ ಪ್ರಕಾಶ್‌ರವರು ಹೆಚ್ಚಿನ ಸಹಕಾರ ನೀಡಿ ಕಾರ್ಯಕ್ರಮ ಯಶಸ್ವಿಯಾಗುವುದಕ್ಕೆ ಸಹಕಾರಿಯಾಗಿದ್ದನ್ನು ಸ್ಮರಿಸಿ ಅವರಿಗೆ ಧನ್ಯವಾದಗಳನ್ನು ತಿಳಿಸಿದರು. ಪ್ರೊ. ಶೇಷಗಿರಿರಾವ್, ನಿವೃತ್ತ ಪ್ರಾಧ್ಯಾಪಕರು, ಇವರು ಅಕಾದೆಮಿಯ ಬ್ಲಾಗ್ ಸಿದ್ಧಪಡಿಸಿ, ಅಕಾದೆಮಿಯ ಪರವಾಗಿ ನಿರ್ವಹಿಸುತ್ತಿದ್ದಾರೆ. ಅಕಾದೆಮಿಯ ಕಾರ್ಯಚಟುವಟಿಕೆಗಳು ಇಂತಹ ಸಮೂಹ ಮಾಧ್ಯಮದಲ್ಲಿ ಬರಬೇಕಾದ ಅವಶ್ಯಕತೆ ಪ್ರಸ್ತುತವಾಗಿದೆ. ಅಕಾದೆಮಿಗೆ ಸಂಬಂಧಿಸಿದ ಆಡಿಯೋ, ವಿಡಿಯೋ, ಛಾಯಾಚಿತ್ರ, ಮಾಹಿತಿ ಇತ್ಯಾದಿಗಳನ್ನು ಬ್ಲಾಗ್‌ನಲ್ಲಿ ನೀಡಲಾಗುವುದು. ಅಕಾದೆಮಿಯ ಅಧ್ಯಕ್ಷರ ಗಮನಕ್ಕೆ ವಿಷಯವನ್ನು ತಿಳಿಸಿ ಚರ್ಚಿಸಿ ಬ್ಲಾಗ್ ನಿರ್ವಹಿಸುವಂತೆ ಸೂಚಿಸಲಾಗಿದೆ. ಇದಕ್ಕಾಗಿ ಶೇಷಗಿರಿರಾವ್‌ರವರು ಶ್ರಮವಹಿಸುತ್ತಿದ್ದಾರೆ. ಅವರಿಗೆ ಅಕಾದೆಮಿಯ ಪರವಾಗಿ ಧನ್ಯವಾದಗಳನ್ನು ಅರ್ಪಿಸಿದರು ಮತ್ತು ಅಕಾದೆಮಿಯ ಪ್ರಗತಿಗೆ ಸದಸ್ಯರ ಸಹಕಾರವೇ ಮುಖ್ಯವೆಂದು ತಿಳಿಸಿ ಮುಂದೆಯೂ ಸಹಕಾರ ನೀಡುವಂತೆ ಕೋರಿ ಧನ್ಯವಾದ ತಿಳಿಸಿದರು.

ಕೃತಜ್ಞತೆಗಳು

ಅಕಾದೆಮಿಯ ೨೬ನೆಯ ವಾರ್ಷಿಕ ಸಮ್ಮೇಳನಕ್ಕೆ ಆಶ್ರಯ ನೀಡಿ, ಎಲ್ಲ ಸದಸ್ಯರಿಗೂ ಸಂತೋಷವಾಗುವಂತೆ ಸಮರ್ಥವಾಗಿ ಸಮ್ಮೇಳನವನ್ನು ನಡೆಸಿಕೊಟ್ಟ, ಶ್ರೀಮದ್‌ಜಗದ್ಗುರು ಆದಿಶಂಕರಾಚಾರ್ಯ ಮಹಾಸಂಸ್ಥಾನಮ್ ದಕ್ಷಿಣಾಮ್ನಾಯ ಶ್ರೀ ಶಾರದಾಪೀಠಮ್, ಶೃಂಗೇರಿ ಇವರು ಆಶ್ರಯ ನೀಡಿ ಮತ್ತು ಸಹಕರಿಸಿದ ಎಲ್ಲರಿಗೂ ಕಾರ್ಯದರ್ಶಿಗಳಾದ ಶ್ರೀ ರಾಜೇಂದ್ರಪ್ಪ ಅವರು ಧನ್ಯವಾದಗಳನ್ನು ಸಲ್ಲಿಸಿದರು.

೨೦೧೨-೧೩ ಹಾಗೂ ೨೦೧೩-೧೪ಕ್ಕಾಗಿ ರೂಪುಗೊಂಡ ೧೪ನೇ ಕಾರ್ಯಕಾರಿ ಸಮಿತಿ ಸಭೆ

ದಿನಾಂಕ ೨೩-೦೯-೨೦೧೨ರಂದು ಭಾನುವಾರ ಸಂಜೆ ೬.೩೦ಕ್ಕೆ ಶ್ರೀ ಶೃಂಗೇರಿಯಲ್ಲಿ ಜರುಗಿದ ೨೬ನೆಯ ವಾರ್ಷಿಕ ಸಮ್ಮೇಳನದ ಸಭಾಂಗಣದಲ್ಲಿ ಡಾ. ದೇವರಕೊಂಡಾರೆಡ್ಡಿ ಅವರ ಅಧ್ಯಕ್ಷತೆಯಲ್ಲಿ ನಡೆದ ಹದಿನಾಲ್ಕನೆಯ ಕಾರ್ಯಕಾರಿ ಸಮಿತಿಯ ಮೊದಲ ಸಭೆಯ ನಡಾವಳಿಗಳು.

ಕಾರ್ಯಕ್ರಮ ಸೂಚಿ

೧. ಹೊಸ ಕಾರ್ಯಕಾರೀ ಸಮಿತಿಯ ಪದಾಧಿಕಾರಿಗಳ ಆಯ್ಕೆ.

೨. ಕಾರ್ಯಕಾರಿ ಸಮಿತಿಗೆ ನಾಮಕರಣ ಸದಸ್ಯರ ಆಯ್ಕೆ.

೩. ಅಧ್ಯಕ್ಷರ ಅನುಮತಿಯ ಮೇರೆಗೆ ಇತರ ವಿಚಾರಗಳು.

ಸಭೆಯಲ್ಲಿ ಹಾಜರಿದ್ದ ಕಾರ್ಯಕಾರಿ ಸಮಿತಿ ಸದಸ್ಯರುಗಳೆಂದರೆ ಸರ್ವಶ್ರೀಗಳಾದ

೧. ಶ್ರೀ ಶಾಶ್ವತಸ್ವಾಮಿ ಮುಕ್ಕುಂದಿಮಠ
೨. ಡಾ. ಎಂ.ಜಿ. ನಾಗರಾಜ್
೩. ಡಾ. ಬಾಲಕೃಷ್ಣ ಹೆಗಡೆ
೪. ಡಾ. ದೇವರಕೊಂಡಾರೆಡ್ಡಿ
೫. ಡಾ. ಪಿ.ವಿ. ಕೃಷ್ಣಮೂರ್ತಿ
೬. ಡಾ. ಅಮರೇಶ ಯತಗಲ್
೭. ಡಾ. ಜಯಮ್ಮ ಹೆಚ್. ಕರಿಯಣ್ಣ
೮. ಪ್ರೊ: ಜಿ.ಕೆ. ದೇವರಾಜಸ್ವಾಮಿ
೯. ಡಾ. ಬಿ. ರಾಜಶೇಖರಪ್ಪ
೧೦. ಶ್ರೀ ಮಲ್ಲಿಕಾರ್ಜುನಪ್ಪ
೧೧. ಶ್ರೀ ಮಂಜುನಾಥ ರಾಮಕೃಷ್ಣ ಹೆಗಡೆ
೧೨. ಡಾ. ಮುರುಗೇಶಿ
೧೩. ಟಿ.ಎಚ್.ಎಂ. ಬಸವರಾಜ್
೧೪. ಶ್ರೀ ಎಂ.ಬಿ. ಪಾಟೀಲ್
೧೫. ಡಾ. ಎ.ಕೆ. ಶಾಸ್ತ್ರಿ
೧೬. ಶ್ರೀ ಎಸ್. ರಾಜೇಂದ್ರಪ್ಪ

ಸಭೆಯ ನಡಾವಳಿಗಳು

೧. ಸಭೆಯ ಅಧ್ಯಕ್ಷತೆಯನ್ನು ವಹಿಸಲು ಡಾ. ದೇವರಕೊಂಡಾರೆಡ್ಡಿ ಅವರನ್ನು ಕೋರಲಾಯಿತು. ಸಭೆಯಲ್ಲಿದ್ದ ಎಲ್ಲಾ ಸದಸ್ಯರನ್ನು ಶ್ರೀ ಎಸ್. ರಾಜೇಂದ್ರಪ್ಪ ಸ್ವಾಗತಿಸಿದರು.

೨. ಕಳೆದ ಎರಡು ವರ್ಷಗಳ ಅವಧಿಯಲ್ಲಿ ಅಕಾದೆಮಿಯ ಕಾರ್ಯಚಟುವಟಿಕೆಗಳನ್ನು ಅತ್ಯಂತ ಯಶಸ್ವಿಯಾಗಿ ಹಾಗೂ ಸಮರ್ಪಕವಾಗಿ ನಿರ್ವಹಿಸಿರುವ ಹಿಂದಿನ ಕಾರ್ಯಕಾರೀ ಸಮಿತಿಗೆ ಧನ್ಯವಾದಗಳೊಡನೆ ವಂದನೆ ಸಲ್ಲಿಸಲಾಯಿತು.

೩. ಮುಂದಿನ ಎರಡು ವರ್ಷಗಳ ಅವಧಿಗೆ ಆಯ್ಕೆಯಾಗಿರುವ ಕಾರ್ಯಕಾರಿ ಸಮಿತಿ ಸದಸ್ಯರಿಗೆ ಸ್ವಾಗತ ಕೋರಲಾಯಿತು.

೪. ಹೊಸ ಕಾರ್ಯಕಾರಿ ಸಮಿತಿಯು ಮುಂದಿನ ಎರಡು ವರ್ಷಗಳ ಅವಧಿಗೆ ಈ ಕೆಳಕಂಡ ಪದಾಧಿಕಾರಿಗಳನ್ನು

ಸರ್ವಾನುಮತದಿಂದ ಆಯ್ಕೆ ಮಾಡಿತು. ಅಲ್ಲದೆ ಡಾ. ಸೂರ್ಯನಾಥಕಾಮತ್‌ರವರು ಮುಂದೆ ಅಕಾದೆಮಿಯ ಗೌರವಾಧ್ಯಕ್ಷರಾಗಿ ಮುಂದುವರೆಯಬೇಕೆಂದು ಸರ್ವಸದಸ್ಯರು ಒಮ್ಮತದಿಂದ ಸರ್ವಸದಸ್ಯರ ಸಭೆಯಲ್ಲಿ ಒತ್ತಾಯಿಸಿ ಒಪ್ಪಿಸಿದ್ದರು. ಅದರಂತೆ ಅವರ ಹೆಸರನ್ನು ಗೌರವಾಧ್ಯಕ್ಷ ಸ್ಥಾನಕ್ಕೆ ಕಾರ್ಯಕಾರಿ ಸಮಿತಿಯು ಸರ್ವಾನುಮತದಿಂದ ಸ್ವೀಕರಿಸಿತು.

೧) ಅಧ್ಯಕ್ಷರು – ಡಾ. ದೇವರಕೊಂಡಾರೆಡ್ಡಿ
ಸೂಚನೆ : ಡಾ. ಎಂ.ಜಿ. ನಾಗರಾಜ್
ಅನುಮೋದನೆ: ಶ್ರೀ ಎಂ.ಬಿ. ಪಾಟೀಲ್

೨) ಉಪಾಧ್ಯಕ್ಷರು –ಅ. ಡಾ. ಎಂ.ಜಿ. ನಾಗರಾಜ್
ಸೂಚನೆ : ಶ್ರೀ ಜಿ.ಕೆ. ದೇವರಾಜಸ್ವಾಮಿ
ಅನುಮೋದನೆ: ಡಾ. ಜಯಮ್ಮ ಹೆಚ್.ಕರಿಯಣ್ಣ

ಆ. ಡಾ. ಬಿ. ರಾಜಶೇಖರಪ್ಪ
ಸೂಚನೆ : ಡಾ. ದೇವರಕೊಂಡಾರೆಡ್ಡಿ
ಅನುಮೋದನೆ : ಶಾಶ್ವತಸ್ವಾಮಿ ಮುಕ್ಕುಂದಿಮಠ

೩) ಪ್ರಧಾನ ಕಾರ್ಯದರ್ಶಿ – ಶ್ರೀ ಜಿ.ಕೆ. ದೇವರಾಜಸ್ವಾಮಿ
ಸೂಚನೆ : ಡಾ. ದೇವರಕೊಂಡಾರೆಡ್ಡಿ
ಅನುಮೋದನೆ : ಡಾ. ಬಿ. ರಾಜಶೇಖರಪ್ಪ

೪) ಕಾರ್ಯದರ್ಶಿಗಳು – ಅ. ಡಾ. ಪಿ.ವಿ. ಕೃಷ್ಣಮೂರ್ತಿ
ಸೂಚನೆ : ಶ್ರೀ ಎಂ.ಬಿ. ಪಾಟೀಲ್
ಅನುಮೋದನೆ : ಪ್ರೊ: ಜಿ.ಕೆ. ಮಲ್ಲಿಕಾರ್ಜುನ

ಆ. ಡಾ. ಜಯಮ್ಮ ಹೆಚ್. ಕರಿಯಣ್ಣ
ಸೂಚನೆ : ಶ್ರೀ ಜಿ.ಕೆ. ದೇವರಾಜಸ್ವಾಮಿ
ಅನುಮೋದನೆ : ಡಾ. ಎಂ.ಜಿ. ನಾಗರಾಜ್

೫) ಕೋಶಾಧಿಕಾರಿ – ಶ್ರೀ ಎಂ. ಬಿ. ಪಾಟೀಲ್
ಸೂಚನೆ : ಡಾ. ದೇವರಕೊಂಡಾರೆಡ್ಡಿ
ಅನುಮೋದನೆ : ಡಾ. ಜಯಮ್ಮ ಎಚ್.ಕರಿಯಣ್ಣ

ಆಹ್ವಾನಿತ ಸದಸ್ಯರನ್ನಾಗಿ ಈ ಕೆಳಕಂಡ ಸದಸ್ಯರನ್ನು ಕಾರ್ಯಕಾರೀ ಸಮಿತಿಯು ನಾಮಕರಣ ಮಾಡಿತು.

೧) ಡಾ. ಸ್ಮಿತಾ ಸುರೇಬಾನಕರ್
೨) ಡಾ. ಯೋಗೀಶ್ವರಪ್ಪ
೩) ಡಾ. ಎಸ್.ಕೆ. ಮೇಲಾಕಾರ
೪) ಡಾ. ಬಿ.ಶಾ. ಶಾಮಲಾ ರತ್ನಕುಮಾರಿ
೫) ಡಾ. ಕೆ. ರವೀಂದ್ರನಾಥ್

ಮುಂದಿನ ಕಾರ್ಯಕಾರಿ ಸಭೆಯಲ್ಲಿ ಹೈದರಾಬಾದ್ ಕರ್ನಾಟಕದ ಸದಸ್ಯರೊಬ್ಬರನ್ನು ಕಾರ್ಯಕಾರಿ ಸಮಿತಿಯ ಉಳಿದೊಂದು ಸ್ಥಾನಕ್ಕೆ ಸದಸ್ಯರನ್ನಾಗಿ ನಾಮಕರಣ ಮಾಡಿಕೊಳ್ಳಲು ತೀರ್ಮಾನಿಸಲಾಯಿತು.

ಕಾರ್ಯಕಾರಿ ಸಮಿತಿ ಸಭೆಗೆ ಪ್ರಧಾನ ಕಾರ್ಯದರ್ಶಿಗಳು ವಂದಿಸುವುದರೊಂದಿಗೆ ಸಭೆ ಮುಕ್ತಾಯವಾಯಿತು.

ಕಾರ್ಯಕಾರಿ ಸಮಿತಿಯ ಸದಸ್ಯರು

ಕ್ರ.ಸಂ.	ಹೆಸರು ಮತ್ತು ವಿಳಾಸ	ವಯಸ್ಸು	ವೃತ್ತಿ	ಧಾರಣ ಮಾಡಿರುವ ಪದನಾಮ
೧.	ಡಾ. ದೇವರಕೊಂಡಾರೆಡ್ಡಿ. #೩೫/೧. ೨೦ನೇ ಮುಖ್ಯರಸ್ತೆ. ವೆಂಕಟೇಶ್ವರ ಬಡಾವಣೆ. ಬಿ.ಟಿ.ಎಂ. ೧ನೇ ಹಂತ. ಬೆಂಗಳೂರು – ೫೬೦ ೦೬೮.	೬೪	ನಿವೃತ್ತ ಪ್ರಾಧ್ಯಾಪಕರು	ಅಧ್ಯಕ್ಷರು
೨.	ಡಾ. ನಾಗರಾಜ್. ಎಂ.ಜಿ #೨೨೨೧. ೬೮ನೇ ಅಡ್ಡರಸ್ತೆ. ೫ನೇ ಬ್ಲಾಕ್. ರಾಜಾಜಿನಗರ. ಬೆಂಗಳೂರು – ೫೬೦ ೦೧೦.	೮೨	ಸಾಹಿತಿಗಳು ಮತ್ತು ಸಂಶೋಧಕರು	ಉಪಾಧ್ಯಕ್ಷರು
೩.	ಡಾ. ರಾಜಶೇಖರಪ್ಪ. ಬಿ ಪ್ರಾಂಶುಪಾಲರು (ನಿ). ೨ನೇ ಅಡ್ಡರಸ್ತೆ (ಪಶ್ಚಿಮ). ಜೆ.ಸಿ.ಆರ್. ಬಡಾವಣೆ. ಚಿತ್ರದುರ್ಗ – ೫೭೭ ೫೦೧	೬೪	ಕನ್ನಡ ಪ್ರಾಧ್ಯಾಪಕರು ಪ್ರಾಂಶುಪಾಲರು (ನಿ)	ಉಪಾಧ್ಯಕ್ಷರು
೪.	ದೇವರಾಜಸ್ವಾಮಿ. ಜಿ. ಕೆ. #೫೬. 'ತ್ರಯೀ'. ಮೈಸೂರು ಲ್ಯಾಂಪ್ಸ್ ಲೇಔಟ್. ಚೆನ್ನನಾಯಕನಪಾಳ್ಯ. ೨ನೇ ಹಂತ. ನಾಗಸಂದ್ರ ಅಂಚೆ. ಬೆಂಗಳೂರು – ೫೬೦ ೦೭೩.	೫೩	ಕನ್ನಡ ಉಪನ್ಯಾಸಕರು	ಪ್ರಧಾನ ಕಾರ್ಯದರ್ಶಿ
೫.	ಡಾ. ಕೃಷ್ಣಮೂರ್ತಿ. ಎ.ಪಿ #೩೭. ೩ನೇ ಅಡ್ಡರಸ್ತೆ. ಸುಬ್ಬಣ್ಣ ಲೇಔಟ್. ಹರಿನಗರ ಕ್ರಾಸ್. ಬೆಂಗಳೂರು – ೫೬೦ ೦೬೨.	೬೦	ನಿವೃತ್ತ ಇಂಜನಿಯರ್ ವಿಮಾನ ಕಾರ್ಖಾನೆ ಬೆಂಗಳೂರು	ಕಾರ್ಯದರ್ಶಿ
೬	ಡಾ. ಜಯಮ್ಮ ಹೆಚ್. ಕರಿಯಣ್ಣ 'ಆಶೀರ್ವಾದ'. ನಂ.೪೫೩. ೧೩ನೇ ಮುಖ್ಯರಸ್ತೆ. ವಿಜಯನಗರ ೨ನೇ ಹಂತ. ಬೆಂಗಳೂರು–೫೬೦೦೪೦	೭೨	ನಿವೃತ್ತ ಮ್ಯಾನೇಜರ್ ಲೋಕೋಪಯೋಗಿ ಇಲಾಖೆ. ಬೆಂಗಳೂರು	ಕಾರ್ಯದರ್ಶಿ
೭	ಪಾಟೀಲ್ ಎಂ.ಬಿ. ನಂ.೩೫೬.'ಶ್ರೀ ರೇಣುಕ'. ೬ನೇ ಕ್ರಾಸ್. ಚನ್ನಮ್ಮನಕೆರೆ ಅಂಗಳ. ಬನಶಂಕರಿ ೨ನೇ ಹಂತ. ಬೆಂಗಳೂರು–೫೬೦೦೭೦	೭೩	ನಿವೃತ್ತ ಮುಖ್ಯ ಸಂಪಾದಕರು ಕರ್ನಾಟಕ ಗ್ಯಾಸೆಟಿಯರ್. ಬೆಂಗಳೂರು	ಕೋಶಾಧಿಕಾರಿ
೮.	ಡಾ. ಗೋಪಾಲರಾವ್. ಎಚ್.ಎಸ್ 'ಸ್ಮೃತಿ ಸ್ಪಂದ'. #೧೪೪. ಅರಸಿನಕುಂಟೆ. ನೆಲಮಂಗಲ ತಾ: ಬೆಂಗಳೂರು ಗ್ರಾಮಾಂತರ–೫೬೨೧೨೩	೬೫	ಸರ್ಕಾರಿ ನಿವೃತ್ತ ಇಂಜನಿಯರ್. ಕ.ವಿ.ಪ್ರ. ನಿಗಮ. ಬೆಂಗಳೂರು	ಸದಸ್ಯರು

ಕ್ರ.ಸಂ.	ಹೆಸರು ಮತ್ತು ವಿಳಾಸ	ವಯಸ್ಸು	ವೃತ್ತಿ	ಧಾರಣ ಮಾಡಿರುವ ಪದನಾಮ
೯.	ರಾಜೇಂದ್ರಪ್ಪ. ಎಸ್ #೫೯೬೮, ಡಾ: ರಾಜಕುಮಾರ್ ವೃತ್ತ, ಕೆಂಗೇರಿ ಉಪನಗರ, ಬೆಂಗಳೂರು – ೫೬೦ ೦೬೦.	೫೬	ಸಂಪಾದಕರು ಕರ್ನಾಟಕ ಗ್ಯಾಸೆಟಿಯರ್, ಬೆಂಗಳೂರು	ಸದಸ್ಯರು
೧೦.	ಡಾ: ಬಾಲಕೃಷ್ಣ ಹೆಗಡೆ, ಉಪನ್ಯಾಸಕರು, ಇತಿಹಾಸ ವಿಭಾಗ, ಕಮಲಾ ನೆಹರು ಮಹಿಳಾ ಕಾಲೇಜು, ಕೆ.ಟಿ. ಶಾಮಯ್ಯಗೌಡ ರಸ್ತೆ, ಶಿವಮೊಗ್ಗ – ೫೭೭ ೨೦೧		ಇತಿಹಾಸ ಉಪನ್ಯಾಸಕರು ಬೆಂಗಳೂರು	ಸದಸ್ಯರು
೧೧.	ಶ್ರೀ ಬಸವರಾಜ. ಟಿ. ಎಚ್.ಎಂ. #೫೬/೩೫, ವಿದ್ಯಾಗಿರಿ, ಅಗ್ನಿಶಾಮಕದಳದ ಹಿಂಭಾಗ, ಬಳ್ಳಾರಿ ಕ್ಲಬ್ ಹತ್ತಿರ, ಬಳ್ಳಾರಿ – ೫೮೩೧೦೪.	೬೩	ನಿವೃತ್ತ ಅಧಿಕಾರಿಗಳು	ಸದಸ್ಯರು
೧೨.	ಶ್ರೀ ಮಂಜುನಾಥ ರಾಮಕೃಷ್ಣ ಹೆಗಡೆ, ಉಪನ್ಯಾಸಕರು, ಪ್ರಣವ ನಿಲಯ, ಕೊಪ್ಪಗೊಂಡನಕೊಪ್ಪ, ತಿಳವಳ್ಳಿ ಅಂಚೆ, ಹಾನಗಲ್ಲ ತಾ:, ಹಾವೇರಿ–೫೮೧೧೨೦	೫೦	ಉಪನ್ಯಾಸಕರು	ಸದಸ್ಯರು
೧೩.	ಶ್ರೀ ಅಮರೇಶ ಯತಗಲ್, ಪ್ರಾಧ್ಯಾಪಕ ಇತಿಹಾಸ ವಿಭಾಗ, ವಚನಸಂಗಮ ಸ್ನಾತಕೋತ್ತರ ಕೇಂದ್ರ, ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ, ತೊರವಿ, ಬಿಜಾಪುರ – ೫೮೬೧೦೮	೩೯	ಇತಿಹಾಸ ಉಪನ್ಯಾಸಕರು	ಸದಸ್ಯರು
೧೪	ಪ್ರೊ. ಮಲ್ಲಿಕಾರ್ಜುನ. ಜೆ.ಕೆ. #೩೮೯೭/೧೦, ೧೩ನೇ ಅಡ್ಡರಸ್ತೆ, ತರಳಬಾಳು ಬಡಾವಣೆ, ವಿದ್ಯಾನಗರ, ದಾವಣಗೆರೆ – ೫೭೭೦೦೫	೪೯	ಉಪನ್ಯಾಸಕರು	ಸದಸ್ಯರು
೧೫	ಪ್ರೊ: ಶಾಶ್ವತಸ್ವಾಮಿ ಮುಕ್ಕುಂದಿಮಠ ವಿಶ್ರಾಂತ ಪ್ರಾಂಶುಪಾಲರು, ಪಟೇಲ್‌ವಾಡಿ, ಸಿಂಧನೂರು, ರಾಯಚೂರು ಜಿಲ್ಲೆ – ೫೮೪೧೨೮	೬೪	ನಿವೃತ್ತ ಪ್ರಾಂಶುಪಾಲರು	ಸದಸ್ಯರು
೧೬	ಡಾ: ಉಷಾರಾಣಿ. ಎಚ್.ಎಸ್. #೪೩೩, 'ಇ' ಬ್ಲಾಕ್, ಜೆ.ಪಿ. ನಗರ, ಮೈಸೂರು–೫೭೦೦೦೮	೫೫	ಉಪನ್ಯಾಸಕರು	ಸದಸ್ಯರು
೧೭	ಡಾ: ಶಾಸ್ತ್ರಿ, ಎಂ. ಕೆ. ಭವಾನಿ ಬಿಲ್ಡಿಂಗ್, ಹೊಸ ಮಾರ್ಕೆಟ್ ಯಾರ್ಡ್ ಬಳಿ, ಸಿರಸಿ, ಉತ್ತರ ಕನ್ನಡ ಜಿಲ್ಲೆ – ೫೮೧೪೦೨	೭೩	ಉಪನ್ಯಾಸಕರು	ಸದಸ್ಯರು
೧೮	ಶ್ರೀ ಮುರಿಗೆಪ್ಪ. ಓ. ಉಪನ್ಯಾಸಕರು, ಎಂ.ಎಸ್.ಆರ್.ಎಸ್. ಕಾಲೇಜು, ಶಿರ್ವ, ಉಡುಪಿ – ೫೭೪೧೧೬		ಉಪನ್ಯಾಸಕರು	ಸದಸ್ಯರು

ಕ್ರ.ಸಂ	ಹೆಸರು ಮತ್ತು ವಿಳಾಸ	ವಯಸ್ಸು	ವೃತ್ತಿ	ಧಾರಣ ಮಾಡಿರುವ ಪದನಾಮ
೧೯	ಡಾ: ಮೇಲಾಕರ. ಎಸ್.ಕೆ. ಮ್ಯೂಸಿಯಂ ಕ್ಯುರೇಟರ್, ಕನ್ನಡ ಸಂಶೋಧನಾ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – ೫೮೦೦೦೩	೪೭	ವಸ್ತು ಸಂಗ್ರಹಾಲಯದ ಅಧಿಕಾರಿ	ಸದಸ್ಯರು
೨೦	ಡಾ. ಶ್ವೇತಾ ಬಿ. ಸುರೇಬಾನಕರ, ಫ್ಲಾಟ್ ನಂ. ೬೯೦, 'ಶ್ರೀನಿವಾಸ', ೫ನೇ ಅಡ್ಡರಸ್ತೆ, ಭಾಗ್ಯನಗರ, ಬೆಳಗಾವಿ – ೫೯೦೦೦೬	೫೨	ಇತಿಹಾಸ ಉಪನ್ಯಾಸಕರು	ಸದಸ್ಯರು
೨೧.	ಡಾ. ಯೋಗೀಶ್ವರಪ್ಪ. ಡಿ.ಎನ್ ಇತಿಹಾಸ ವಿಭಾಗದ ಮುಖ್ಯಸ್ಥರು, ಸಿದ್ಧಗಂಗಾ ಮಹಿಳಾ ಕಾಲೇಜು, ತುಮಕೂರು – ೫೭೨೧೦೧.	೪೯	ಇತಿಹಾಸ ಉಪನ್ಯಾಸಕರು	ಸದಸ್ಯರು
೨೨	ಡಾ: ಶ್ಯಾಮಲಾ ರತ್ನಕುಮಾರಿ. ಬಿ. ಕಾ ೫೨೭(೯), 'ವಿಶಾಲಾಕ್ಷಿ ಕೃಪ', ೨ನೇ ಬ್ಲಾಕ್, ೨ನೇ ಮುಖ್ಯರಸ್ತೆ, ಪರಮಹಂಸ ರಸ್ತೆ, ತ್ಯಾಗರಾಜನಗರ, ಬೆಂಗಳೂರು – ೫೬೦೦೨೮.	೬೨	ಇತಿಹಾಸ ಉಪನ್ಯಾಸಕರು (ನಿ)	ಸದಸ್ಯರು
೨೩.	ಶ್ರೀ ಕಲ್ಲಪ್ಪ ಮಹಾದೇವಪ್ಪ ಗರಗ, ಜೆ.ಸಿ.ಟಿ.ಎಂ. ಪಿ.ಯು. ಕಾಲೇಜು, ಹುಲಕೋಟಿ, ಗದಗ – ೫೮೨೨೦೫	೪೩	ಇತಿಹಾಸ ಉಪನ್ಯಾಸಕರು	ಸದಸ್ಯರು
೨೪.	ಶ್ರೀ ರವೀಂದ್ರನಾಥ. ಕೆ. ಅಧ್ಯಾಪಕರು, ಹಸ್ತಪ್ರತಿ ಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ, ಬಳ್ಳಾರಿ – ೫೮೩೨೭೬		ಇತಿಹಾಸ ಉಪನ್ಯಾಸಕರು	ಸದಸ್ಯರು

ಕಾರ್ಯಕಾರಿ ಸಮಿತಿ ಸಭೆಗಳು

೨೦೧೨ರ ಸಾಲಿನಲ್ಲಿ ಅಕಾದೆಮಿಯ ಕಾರ್ಯಕಾರಿ ಸಮಿತಿಯ ಸಭೆಗಳು ಒಟ್ಟು ೩ ಬಾರಿ ನಡೆದಿದೆ. ಸದಸ್ಯರು ಕಾರ್ಯಕಾರಿ ಸಮಿತಿಯ ಸಭೆಗಳಲ್ಲಿ ಖುದ್ದು ಹಾಜರಿದ್ದು ಅಥವಾ ಪತ್ರದ ಮೂಲಕ ಇಲ್ಲವೇ ದೂರವಾಣಿ, ಎಸ್.ಎಂ.ಎಸ್. ವಿದ್ಯುನ್ಮಾನಟಪಾಲು ಮೂಲಕ ಸೂಚನೆ, ಒಪ್ಪಿಗೆಗಳನ್ನು ನೀಡಿ ಅಕಾದೆಮಿಯ ಯಶಸ್ಸಿಗೆ ಸಹಕರಿಸುತ್ತಿದ್ದಾರೆ. ಅದಕ್ಕಾಗಿ ಅವರಿಗೆ ಧನ್ಯವಾದಗಳು.

ಅಕಾದೆಮಿಯ ಸದಸ್ಯ ಬಲ

ಈ ಸಮ್ಮೇಳನದ ಆರಂಭದ ವೇಳೆಗೆ ಕರ್ನಾಟಕ ಇತಿಹಾಸ ಅಕಾದೆಮಿಯ ಸದಸ್ಯತ್ವ ಬಲ ಈ ಕೆಳಕಂಡಂತಿದೆ

ಆಜೀವ	ಸಾಮಾನ್ಯ	ಸಂಸ್ಥೆ	ಒಟ್ಟು
೧೬೦೪	೦೩	೪೯	೧೬೫೬

ಅಕಾದೆಮಿಯ ಜಿಲ್ಲಾ ಘಟಕಗಳು

ಬೆಂಗಳೂರು ನಗರ ಜಿಲ್ಲಾ ಘಟಕ: ಡಾ. ಇಂದಿರಾ ಹೆಗಡೆ ಅವರ ಅಧ್ಯಕ್ಷತೆಯಲ್ಲಿ ಹಾಗೂ ಶ್ರೀ ಗುರುಪ್ರಸಾದ್ ಕಾರ್ಯದರ್ಶಿತ್ವದಲ್ಲಿ ಬೆಂಗಳೂರು ಘಟಕವು ಕಾರ್ಯ ನಿರ್ವಹಿಸುತ್ತಿದ್ದು ಎಂದಿನಂತೆ ಈ ವರ್ಷವೂ ಕೂಡ ಅದು ನಗರದ ಪ್ರೌಢಶಾಲೆ, ಪದವಿ ಪೂರ್ವ, ಪದವಿ ಕಾಲೇಜುಗಳಲ್ಲಿ ವ್ಯಾಸಂಗಾರ್ಥಿಗಳಿಗೆ ಪ್ರಬಂಧ ಹಾಗೂ ಭಾಷಣ ಸ್ಪರ್ಧೆಗಳನ್ನು ಏರ್ಪಡಿಸಿ ಬಹುಮಾನ ಪಾರಿತೋಷಕಗಳನ್ನು ನೀಡಿ ಪ್ರೋತ್ಸಾಹಿಸುತ್ತಿದೆ. ಈ ಸ್ಪರ್ಧೆಗಳಿಗಾಗಿ ಡಾ. ಜಿ.ಎಸ್. ದೀಕ್ಷಿತ್, ಡಾ.ಸೂರ್ಯನಾಥ ಕಾಮತ್, ಶ್ರೀ ಅಂಗದ, ಶ್ರೀಮತಿ ಎ.ಪಿ. ವರಮಹಾಲಕ್ಷ್ಮಿ ಮತ್ತು ಶ್ರೀ ಜಿ. ರಾಮಣ್ಣ ಹಾಗೂ ಶ್ರೀಮತಿ ಇಂದಿರಾ ಇವರ ಹೆಸರಿನಲ್ಲಿ ಪರ್ಯಾಯ ಪಾರಿತೋಷಕಗಳನ್ನು ನೀಡಲಾಗುತ್ತಿದೆ. ಶ್ರೀ ದಯಾನಂದ ಸಾಗರ್ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ ಶ್ರೀ ಗಾಳಿಸ್ವಾಮಿ ಅವರು ಶ್ರೀ ಅಂಗದ್ ಸ್ಮಾರಕ ಪರ್ಯಾಯ ಪಾರಿತೋಷಕ ಪ್ರಾಯೋಜಿಸಿ ಸಹಕರಿಸುತ್ತಿದ್ದಾರೆ.

೨೦೧೨-೧೩ ಹಾಗೂ ೨೦೧೩-೧೪ಕ್ಕೆ ಹೊಸ ಕಾರ್ಯಕಾರಿ ಸಮಿತಿಯನ್ನು ಬೆಂಗಳೂರು ಘಟಕವು ರಚಿಸಿಕೊಂಡಿದ್ದು, ಡಾ. ಇಂದಿರಾ ಹೆಗಡೆ ಅಧ್ಯಕ್ಷರಾಗಿ, ಡಾ. ಪಾಂಡುಕುಮಾರ್ ಮತ್ತು ಶ್ರೀ ವೇಮಗಲ್ ಸೋಮಶೇಖರ್ ಅವರು ಉಪಾಧ್ಯಕ್ಷರಾಗಿ, ಶ್ರೀ ಗುರುಪ್ರಸಾದ್, ಶ್ರೀಮತಿ ಸೀತಾರಾವ್ ಅವರು ಕಾರ್ಯದರ್ಶಿಗಳಾಗಿ ಸರ್ವಾನುಮತದಿಂದ ಆಯ್ಕೆಯಾಗಿದ್ದಾರೆ. ಅನಂತಪದ್ಮನಾಭ, ಗುಜ್ಜಾರಪ್ಪ, ಆದಪ್ಪ ಪಾಸೋಡಿ, ಚಂದ್ರಶೇಖರ್, ವೆಂಕಟೇಶ್‌ರವರು ಕಾರ್ಯಕಾರಿ ಸಮಿತಿಯ ಸದಸ್ಯರಿದ್ದು, ಘಟಕವು ಕ್ರಿಯಾಶೀಲವಾಗಿ ಕಾರ್ಯ ನಿರ್ವಹಿಸುತ್ತಿದೆ.

ಬೆಂಗಳೂರು ಜಿಲ್ಲಾ ಘಟಕವು "ಐತಿಹಾಸಿಕ ಪರಂಪರೆ ಉಳಿಸಿ" ಆಂದೋಲನವನ್ನು ಹೆಚ್ಚು ಪರಿಣಾಮಕಾರಿಯಾಗಿಸಲೂ ವಿಶೇಷವಾಗಿ ಆಸ್ಥೆವಹಿಸಿ ಅಂತರ ಪ್ರೌಢಶಾಲೆ, ಅಂತರ ಕಾಲೇಜು ಪ್ರಬಂಧ ಮತ್ತು ಭಾಷಣ ಸ್ಪರ್ಧೆ ಕುರಿತಾಗಿ ಬೆಂಗಳೂರಿನ ಶಾಲಾ ಕಾಲೇಜುಗಳಲ್ಲಿ ಪ್ರಚಾರ ನೀಡಿತು. ಸ್ಪರ್ಧಾ ಕಾರ್ಯಕ್ರಮಗಳು ಬೆಂಗಳೂರಿನ ನ್ಯಾಷನಲ್ ಕಾಲೇಜು, ಬಸವನಗುಡಿಯಲ್ಲಿ ದಿನಾಂಕ ೨೯.೦೭.೨೦೧೨ರಂದು ನಡೆಯಿತು. ಈ ಬಾರಿ ಇಂಜಿನಿಯರಿಂಗ್ ಕಾಲೇಜು ವಿದ್ಯಾರ್ಥಿಗಳು ಭಾಗವಹಿಸಿದ್ದು ವಿಶೇಷವಾಗಿತ್ತು. ಇದೇ ಕಾಲೇಜಿನಲ್ಲಿ ೧೬ನೇ ಆಗಸ್ಟ್ ೨೦೧೨ರಂದು 'ಐತಿಹಾಸಿಕ ಪರಂಪರೆ ಉಳಿಸಿ' ಕಾರ್ಯಕ್ರಮದಲ್ಲಿ ಸ್ಪರ್ಧಾ ವಿಜೇತರಿಗೆ ಬಹುಮಾನಗಳನ್ನು ನೀಡಲಾಯಿತು.

ಬೆಂಗಳೂರು ಜಿಲ್ಲಾ ಘಟಕವು ಡಾ: ಇಂದಿರಾ ಹೆಗಡೆ ಅವರ ನೇತೃತ್ವದಲ್ಲಿ ಕೋಲಾರ ಜಿಲ್ಲೆಯ ಆವನಿ ಕುರುಡುಮಲೆ, ಮುಳುಬಾಗಿಲುಗಳಿಗೆ ಒಂದು ದಿನದ ಪ್ರವಾಸವನ್ನು ಹಮ್ಮಿಕೊಂಡಿತ್ತು. ವಿಶೇಷ ಬಸ್ ವ್ಯವಸ್ಥೆ ಮಾಡಲಾಗಿದ್ದು ಅಕಾದೆಮಿಯ ೩೦ ಸದಸ್ಯರು ಪಾಲ್ಗೊಂಡಿದ್ದರು. ಡಾ. ದೇವರ ಕೊಂಡಾರೆಡ್ಡಿಯವರು ಹಾಜರಿದ್ದು ಸ್ಥಳಗಳ ಐತಿಹಾಸಿಕ ಮಹತ್ವ, ವಾಸ್ತುಶಿಲ್ಪಗಳ ಬಗ್ಗೆ ವಿಶೇಷವಾಗಿ ತಿಳಿಸುವ ಮೂಲಕ ಸದಸ್ಯರಿಗೆ ಐತಿಹಾಸಿಕ ತಾಣಗಳ ಬಗ್ಗೆ ಕುತೂಹಲವನ್ನು ಮೂಡಿಸಿದರು.

ಹೊಸಪೇಟೆ ತಾಲ್ಲೂಕು ಘಟಕ. ಡಾ. ಕೆ.ಎಂ. ಸುರೇಶ್, ಡಾ. ಎಂ. ಕೊಟ್ರೇಶ್, ಡಾ. ಟಿ. ಮಂಜುನಾಥ, ಡಾ. ಕೆ. ರವೀಂದ್ರನಾಥ ಮತ್ತಿತರ ಸ್ನೇಹಿತರೊಡಗೂಡಿ ಬೇರೆ ಬೇರೆ ಸ್ಥಳಗಳಲ್ಲಿ ಐತಿಹಾಸಿಕ ಪರಂಪರೆ ಉಳಿಸಿ ಸಪ್ತಾಹಗಳನ್ನು ಎಂದಿನಂತೆ ನಡೆಸಿಕೊಂಡು ಬರುತ್ತಿದೆ.

ಉಡುಪಿ ಜಿಲ್ಲಾ ಘಟಕ : ಡಾ. ಜಗದೀಶ್ ಶೆಟ್ಟಿ ಅವರ ಅಧ್ಯಕ್ಷತೆಯಲ್ಲಿ ಸ್ಥಳೀಯವಾಗಿ ಶಾಲಾ ಕಾಲೇಜುಗಳಲ್ಲಿ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮಗಳನ್ನು ಆಯೋಜಿಸಿ ಐತಿಹಾಸಿಕ ಅರಿವನ್ನು ಜಾಗೃತಗೊಳಿಸುವ ಕೆಲಸವನ್ನು ಮಾಡುತ್ತಿದೆ.

ಶಿವಮೊಗ್ಗ ಜಿಲ್ಲಾ ಘಟಕ:- ಜೆಕ್ಕಿನ ಕಲ್ಮಠದ ಸ್ವಾಮೀಜಿಯವರ ಪೋಷಣೆಯಲ್ಲಿ ಶ್ರೀ ಎಚ್.ಎಂ. ಚಂದ್ರಶೇಖರಪ್ಪ (ಅಧ್ಯಕ್ಷರು), ಶ್ರೀ ಜಯದೇವಪ್ಪ ಜೈನಕೇರಿ (ಪ್ರಧಾನ ಕಾರ್ಯದರ್ಶಿ), ಡಾ. ಎಸ್.ಜಿ. ಸಾಮಕ್, ಡಾ. ಬಿ. ಜಗದೀಶ್, ಡಾ. ಕೆಳದಿ ವೆಂಕಟೇಶ್ ಜೋಯಿಸ್, ಡಾ. ಕೆಳದಿ ಗುಂಡಾಜೋಯಿಸ್, ಡಾ. ಜಿ.ಪಿ. ಕಲ್ಲಾಪುರ ಮುಂತಾದವರ ಸಹಭಾಗಿತ್ವದಲ್ಲಿ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮಗಳ ಜೊತೆಗೆ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದೆ.

ಮೈಸೂರು ಜಿಲ್ಲಾ ಘಟಕ (ಮಂಡ್ಯ ಜಿಲ್ಲೆಯೂ ಸೇರಿ):- ಈ ಘಟಕವು ಕಾರ್ಯಾರಂಭ ಮಾಡಿದ್ದು, ಪ್ರೊ. ಚಂದ್ರರಾಜೇ ಅರಸ್ ಅವರ ಗೌರವಾಧ್ಯಕ್ಷತೆಯಲ್ಲಿ ಡಾ. ಎಚ್.ಎಸ್. ಉಷಾರಾಣಿ (ಕಾರ್ಯಾಧ್ಯಕ್ಷೆ), ಶ್ರೀ ತೈಲೂರು ವೆಂಕಟಕೃಷ್ಣ,

ಡಾ. ಟಿ.ಪಿ. ಇಂದಿರಾ, ಡಾ. ಎಸ್. ಸದಾಶಿವ (ಉಪಾಧ್ಯಕ್ಷ), ಡಾ. ಟಿ.ಪಿ. ಸುಧಾರಾಣಿ (ಪ್ರಧಾನ ಕಾರ್ಯದರ್ಶಿ), ಶ್ರೀ ಎಚ್.ಡಿ. ಹರೀಶ್ ಹಾಗೂ ಪ್ರೊ. ನಯೀಂ ಉರ್ ರೆಹಮಾನ್ (ಸಹ ಕಾರ್ಯದರ್ಶಿಗಳು) ಹಾಗೂ ಟಿ.ಎಸ್. ಸುಭದ್ರ ಖಜಾಂಚಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇತಿಹಾಸ ಕಾರ್ಯಾಗಾರ ಮಾಸಿಕ ಉಪನ್ಯಾಸ, ಐತಿಹಾಸಿಕ ಸ್ಥಳಗಳಿಗೆ ಪ್ರವಾಸ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಚಾರಿತ್ರಿಕ ಅರಿವನ್ನು ಮೂಡಿಸಲು ಶ್ರಮಿಸುತ್ತಿದೆ.

ಬೆಳಗಾವಿ ಜಿಲ್ಲಾ ಘಟಕ: ಡಾ. ಸ್ಮಿತಾ ಸುರೇಬಾನಕರ್, ಶ್ರೀ ಜಿ. ಆಯ್‌ಚನಗೋಡಿ, ಡಾ. ಎಚ್.ಬಿ. ಕೋಲಕಾರ, ಡಾ. ಬಿ.ಆರ್. ಹಂದೂರು, ಶ್ರೀ ಮಂಜುನಾಥ ಹಡ್ಲಿ ಮುಂತಾದವರ ನೇತೃತ್ವ ಮತ್ತು ಚಚಡಿಯ ಸರ್ಕಾರ ಪ್ಲಿಜಿ. ದೇಸಾಯಿ ಫೌಂಡೇಷನ್ ಅಧ್ಯಕ್ಷ ಶ್ರೀ ನಾಗರಾಜ ಈಶಪ್ಪನಾಯಕದೇಸಾಯಿ ಅವರ ಸಹಕಾರದೊಂದಿಗೆ ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿದೆ.

ಕೃತಜ್ಞತೆಗಳು

ಕರ್ನಾಟಕ ಇತಿಹಾಸ ಅಕಾದೆಮಿಯನ್ನು ಸೋದರ ಸಂಸ್ಥೆ ಎಂಬಂತೆ ಪರಿಗಣಿಸಿ ಸಹಕರಿಸುತ್ತಾ ಬಂದಿರುವ ಕರ್ನಾಟಕ ರಾಜ್ಯ ಪ್ರಾಚ್ಯವಸ್ತು ಮತ್ತು ವಸ್ತು ಸಂಗ್ರಹಾಲಯ ನಿರ್ದೇಶನಾಲಯದ ನಿರ್ದೇಶಕರು, ಅಧಿಕಾರಿಗಳು ಹಾಗೂ ಸಿಬ್ಬಂದಿ, ಅಕಾದೆಮಿಯ ವಾರ್ಷಿಕ ಸಮ್ಮೇಳನ ಸಂದರ್ಭದಲ್ಲಿ ವಸ್ತು ಪ್ರದರ್ಶನ ಏರ್ಪಡಿಸಿ ಸಹಕರಿಸುತ್ತಿರುವ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗ, ೨೦೧೨ರ 'ಐತಿಹಾಸಿಕ ಪರಂಪರೆ ಉಳಿಸಿ' ಸಪ್ತಾಹ ಕಾರ್ಯಕ್ರಮದ ಉದ್ಘಾಟನಾ ಸಮಾರಂಭಕ್ಕೆ ಆಶ್ರಯ ನೀಡಿ ಸಹಕರಿಸಿರುವ ಬೆಂಗಳೂರಿನ ನ್ಯಾಷನಲ್ ಕಾಲೇಜು, ಬಸವನಗುಡಿಯ ಆಡಳಿತ ಮಂಡಳಿ, ಅಧಿಕಾರಿ ಮತ್ತು ಸಿಬ್ಬಂದಿ ವರ್ಗ, ಬೆಂಗಳೂರಿನ ದಿ ಮಿಥಿಕ್ ಸೊಸೈಟಿಯ ಪದಾಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗ, ಬಿ.ಎಂ.ಶ್ರೀ ಪ್ರತಿಷ್ಠಾನದ ಪದಾಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗ, ಶ್ರೀ ಬೈಸಾನಿ ರುಕ್ಮಣಮ್ಮ ರತ್ನಂಶೆಟ್ಟಿ ಕುಟುಂಬದ ಸೇವಾ ಟ್ರಸ್ಟ್‌ನ ಶ್ರೀ ಅಶೋಕ್‌ಕುಮಾರ್, ವಾಗ್ದೇವಿ ಮುದ್ರಣಾಲಯದ ಶ್ರೀ ಪ್ರಭು ಮತ್ತು ಸಿಬ್ಬಂದಿ ವರ್ಗ, ಶ್ರೀ ದಯಾನಂದ ಸಾಗರ್ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ ಶ್ರೀ ಗಾಳಿಸ್ವಾಮಿ, ಡಾ: ಬಾ.ರಾ. ಗೋಪಾಲ್ ಪ್ರಶಸ್ತಿಗೆ ದತ್ತಿ ನೀಡಿರುವ ಡಾ. ಬಾ.ರಾ. ಗೋಪಾಲ್ ಕುಟುಂಬ ವರ್ಗ, ಸಮ್ಮೇಳನಾಧ್ಯಕ್ಷರ ಗೌರವ ಸ್ಮರಣ ಫಲಕವನ್ನು ಪ್ರಾಯೋಜಿಸಿರುವ ಶ್ರೀ ಕೆ. ಅಭಿಶಂಕರ ಕುಟುಂಬ ವರ್ಗ, 'ಇತಿಹಾಸ ಸಂಸ್ಕೃತಿಶ್ರೀ' ಪ್ರಶಸ್ತಿಯನ್ನು ಪ್ರಾಯೋಜಿಸುತ್ತಿರುವ ಬೈಸಾನಿ ಶ್ರೀಮತಿ ರುಕ್ಮಣಮ್ಮ ಶ್ರೀ ರತ್ನಂಶೆಟ್ಟಿ ಟ್ರಸ್ಟಿನವರಿಗೆ, ಡಾ. ಬಾ.ರಾ. ಗೋಪಾಲ್ ಪ್ರಶಸ್ತಿಯ ಸ್ಮರಣ ಫಲಕವನ್ನು ಪ್ರಾಯೋಜಿಸುತ್ತಾ ಬಂದಿರುವ ಶ್ರೀ ವೇಮಗಲ್ ಸೋಮಶೇಖರ್, ಇತಿಹಾಸ ದರ್ಶನ ವಾರ್ಷಿಕ ಸಂಚಿಕೆಯ ಮುದ್ರಣಕ್ಕೆ ಆಶೀರ್ವಾದಪೂರ್ವಕವಾಗಿ ಪ್ರತಿ ವರ್ಷದಂತೆ ಈ ವರ್ಷವೂ ರೂ. ೨೫,೦೦೦/- (ಇಪ್ಪತ್ತೈದು ಸಾವಿರ ರೂಪಾಯಿಗಳು) ನೆರವು ನೀಡಿರುವ ಬಾಳೇಹೊನ್ನೂರಿನ ಶ್ರೀಮದ್ರಂಭಾಪುರಿ ಮಹಾಸಂಸ್ಥಾನದ ಜ.ಶ್ರೀ ಪ್ರಸನ್ನ ರೇಣುಕ ವೀರಸೋಮೇಶ್ವರ ರಾಜ ದೇಶಿಕೇಂದ್ರಶಿವಾಚಾರ್ಯ ಮಹಾಸ್ವಾಮೀಜಿ ಅವರಿಗೆ ಅಕಾದೆಮಿಯ ೨೮ನೆಯ ವಾರ್ಷಿಕ ಸಮ್ಮೇಳನಕ್ಕೆ ಆಶ್ರಯ ನೀಡಿ ಸಮ್ಮೇಳನದ ಯಶಸ್ವಿಗೆ ಕಾರಣರಾದ ಶ್ರೀಮದ್ ಜಗದ್ಗುರು ಆದಿಶಂಕರಾಚಾರ್ಯ ಮಹಾ ಸಂಸ್ಥಾನಂ ದಕ್ಷಿಣಾಮ್ನಾಯ ಶಾರದಾ ಪೀಠಂ ಶೃಂಗೇರಿಯ ಜಗದ್ಗುರುಗಳಿಗೆ ಮತ್ತು ಆಡಳಿತಾಧಿಕಾರಿಗಳಾದ ಪದ್ಮಶ್ರೀ ಡಾ. ವಿ.ಆರ್. ಗೌರಿಶಂಕರ್ ಅವರಿಗೆ, ಇತರ ಕಾರ್ಯಕರ್ತರಿಗೂ ಅಕಾದೆಮಿಯು ಆಭಾರಿಯಾಗಿದೆ. ಇತಿಹಾಸ ದರ್ಶನ ಸಂಚಿಕೆಯ ೨೮ನೇಯ ಸಂಪುಟವನ್ನು ಸಂಪಾದಿಸಿ ಕೊಟ್ಟಿರುವ ಸಂಪಾದಕರಾದ ಡಾ. ಪಿ.ವಿ. ಕೃಷ್ಣಮೂರ್ತಿ ಹಾಗೂ ಶ್ರೀ ರಾಜೇಂದ್ರಪ್ಪ. ಎಸ್. ಅವರಿಗೆ ಸಂಪುಟವನ್ನು ಸುಂದರವಾಗಿ ಮುದ್ರಿಸಿಕೊಟ್ಟಿರುವ ಲಕ್ಷ್ಮೀ ಮುದ್ರಣಾಲಯದ ಮಾಲೀಕರು ಹಾಗೂ ಸಿಬ್ಬಂದಿ ವರ್ಗದವರಿಗೆ ಅಕಾದೆಮಿಯು ಆಭಾರಿಯಾಗಿದೆ.

ಕಾರ್ಯಕಾರಿ ಸಮಿತಿಯ ಅನುಮತಿ ಮೇರೆಗೆ

ಡಾ. ದೇವರಕೊಂಡಾರೆಡ್ಡಿ
ಅಧ್ಯಕ್ಷರು

ಡಾ. ಎಂ.ಜಿ. ನಾಗರಾಜ್
ಡಾ. ಬಿ. ರಾಜಶೇಖರಪ್ಪ
ಉಪಾಧ್ಯಕ್ಷರುಗಳು

ಶ್ರೀ ಜಿ.ಕೆ. ದೇವರಾಜಸ್ವಾಮಿ
ಪ್ರಧಾನ ಕಾರ್ಯದರ್ಶಿ

ಶ್ರೀ ಎಂ.ಬಿ. ಪಾಟೀಲ
ಕೋಶಾಧಿಕಾರಿ

ಡಾ. ಪಿ.ವಿ. ಕೃಷ್ಣಮೂರ್ತಿ
ಡಾ. ಜಯಮ್ಮ ಹೆಚ್. ಕರಿಯಣ್ಣ
ಕಾರ್ಯದರ್ಶಿಗಳು

೨೦೧೨-೧೩ನೇ ಸಾಲಿನ ದಾನಿಗಳು

೧.	ಶ್ರೀ ರಂಭಾಪುರಿ ಮಠ, ಬಾಳೆಹೊನ್ನೂರು	೨೫,೦೦೦.೦೦
೨.	ಶ್ರೀ ಟಿ.ಎಚ್.ಎಂ. ಬಸವರಾಜ್, ಬಳ್ಳಾರಿ	೧,೦೦೦.೦೦
೩.	ಶ್ರೀ ಪಾವಗಡ ಚೆಲುವರಾಜ್, ಪಾವಗಡ	೧,೦೦೦.೦೦
೪.	ಡಾ. ಬಿ.ವಿ. ಸುಧಾಮಣಿ, ಮೈಸೂರು	೧,೦೦೧.೦೦
೫.	ಡಾ. ಹರಿಹರ ಶ್ರೀನಿವಾಸರಾವ್, ಬೆಂಗಳೂರು	೫೦೦.೦೦
೬.	ಡಾ. ಆ.ಲ. ನರಸಿಂಹನ್, ಬೆಂಗಳೂರು (ದಿವಂಗತ)	೩,೦೦೦.೦೦
೭	ಶ್ರೀ ಕೆ.ಎಸ್. ಮಂಜು, ಬೆಂಗಳೂರು	೧,೦೦೦.೦೦
೮.	ಶ್ರೀ ಪುಟ್ಟಣ್ಣ, ಮಲ್ಲೇಶ್ವರಂ	೪,೦೦೦.೦೦
		೩೬,೫೦೧.೦೦

ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮಗಳು



ವಿದ್ಯಾಪ್ರಸಾರಕ ಮಂಡಲದ ಶ್ರೀ ಎಸ್.ಆರ್. ನರಸಾಪುರ ಕಲಾ ಮತ್ತು ಶ್ರೀ ಎಂ.ಬಿ. ಶಿರೂರು ವಾಣಿಜ್ಯ ಮಹಾವಿದ್ಯಾಲಯ, ಬಾಗಲಕೋಟೆ ದಿನಾಂಕ: ೬-೯-೧೨



ಎಸ್.ಎಸ್. ಕಲಾ ಹಾಗೂ ಟಿ.ಪಿ. ವಿಜ್ಞಾನ ಮಹಾವಿದ್ಯಾಲಯ ಸಂಕೇಶ್ವರ, ಮುಖ್ಯ ಅತಿಥಿಗಳು : ಶ್ರೀ ಎಸ್.ಎಲ್. ಪೂಜಾರ್



ಉಣಸಗಿ ಪೊಲೀಸ್ ಪಾಟೀಲ್ ಪ್ರತಿಷ್ಠಾನ ಮತ್ತು ಶ್ರೀ ಗುರು ಪಂಪಯ್ಯ ಸ್ವಾಮಿ ವಿದ್ಯಾಸಂಸ್ಥೆ ಆಶ್ರಯ



ಉಣಸಗಿ ಪೊಲೀಸ್ ಪಾಟೀಲ್ ಪ್ರತಿಷ್ಠಾನ ಮತ್ತು ಶ್ರೀ ಗುರು ಪಂಪಯ್ಯ ಸ್ವಾಮಿ ವಿದ್ಯಾಸಂಸ್ಥೆ ಆಶ್ರಯ



ಗದಗ ಜಿಲ್ಲಾ ಘಟಕ ಕಾರ್ಯಕ್ರಮದಲ್ಲಿ ಅಕಾದೆಮಿಯ ರಾಜ್ಯಾಧ್ಯಕ್ಷ ದೇವರಕೊಂಡಾರೆಡ್ಡಿ, ಪ್ರೊ. ಕೆ.ಎಂ. ಗರಗ, ಡಾ. ವೈ.ಆರ್. ಬೇಲೇರಿ
ಶ್ರೀಮತಿ ಹನುಮಾಕ್ಷಿ ಗೋಗಿ, ಶ್ರೀ ಆರ್.ಕೆ. ಹಬೀಬ, ಡಾ. ವ್ಹಿ.ಕೆ. ದ್ಯಾಮನಗೌಡರ ಮುಂತಾದವರು.



ಶ್ರೀ ಶಿವಮೂರ್ತಿ ಮುರುಘಾ ಶರಣರಿಂದ ಉದ್ಘಾಟನೆ
ಎಸ್.ಜೆ.ಎಂ. ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಚಂದ್ರವಳ್ಳಿ, ಚಿತ್ರದುರ್ಗ



ಐತಿಹಾಸಿಕ ಪರಂಪರೆ ಉಳಿಸಿ ಸಪ್ತಾಹ ಭಿತ್ತಿ ಪತ್ರ



ISBN-978-81-921255-3-4
9 788192 125534